CONTENTS

TO THE

KARNATAKA LEGISLATIVE ASSEMBLY DEBATES

Volume — VIII [1 to 5]

(೧೮ನೇ ಸೆಪ್ಟೆಂಬರ್ ೧೯೯೧ರಿಂದ ೨೦ನೇ ಸೆಪ್ಟೆಂಬರ್ ೧೯೯೧ರವರೆಗೆ ಮತ್ತು ೨೫ನೇ ಸೆಪ್ಟೆಂಬರ್ ಮತ್ತು ೨೬ನೇ ಸೆಪ್ಟೆಂಬರ್ ೧೯೯೧)

ಬುಧವಾರ, ೧೮ನೇ ಸೆಪ್ಟೆಂಬರ್ ೧೯೯೧
ಭಾದ್ರಪದ ೨೭, ಶಕ ೧೯೧೩

1. ಸಂತಾಪ ಸೂಚನೆ 1
2. ವಿತ್ತೀಯ ಕಾರ್ಯಕಲಾಪಗಳು.
   1991-92ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ ಮತ್ತು ಸಂಬಂಧಪಟ್ಟ ಸಚಿವರಿಂದ ಉತ್ತರ ಹಾಗೂ ಮತಕ್ಕೆ ಹಾಕುವುದು (ಬೇಡಿಕೆಯ ಸಂಖ್ಯೆ 45, 46, 47 49, 5, 48, 36, 35) 1-64
3. ಲೋಕೋಪಯೋಗಿ ಸಚಿವರಿಂದ ಉತ್ತರ 64-85
4. ಮುಖ್ಯಮಂತ್ರಿಗಳಿಂದ ಉತ್ತರ 85-115
5. ಮೀನುಗಾರಿಕೆ ಸಚಿವರಿಂದ ಉತ್ತರ 115-23
6. ಸಣ್ಣ ನೀರಾವರಿ ಮಂತ್ರಿಗಳಿಂದ ಉತ್ತರ 123-31
7. ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳಿಂದ ಉತ್ತರ 131-55
8. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು 155-72
9. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. 172-243
10. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ 243

ಗುರುವಾರ, ೧೯ನೇ ಸೆಪ್ಟೆಂಬರ್ ೧೯೯೧
ಭಾದ್ರಪದ ೨೮, ಶಕ ೧೯೧೩

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು. 245-286
2. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು 286
3. ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು 286-357

4. ಚುಕ್ಕೆ ಗುರ್ತಿನ ಮತ್ತು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರ ಬಾರದಿರುವ ಬಗ್ಗೆ ಪ್ರಸ್ತಾಪ. 357
5. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು
ಅ) ಭದ್ರಾ ಬಲದಂಡೆ ಕಾಲುವೆಯ ಚಾನೆಲ್ ಒಡೆದುಹೋಗಿ ರೈತರ ಜಮೀನು ಹಾಳಾಗಿರುವುದು 358-59
ಆ) ಪ್ರವಾಹಪೀಡಿತ ಪ್ರದೇಶಗಳಿಗೆ ಪರಿಹಾರ ಕೊಡುವುದು 359
ಇ) ಸಹಕಾರಿ ಸಂಘಗಳ ಚುನಾವಣೆ 359-61
6) ಅರ್ಜಿಗಳನ್ನೊಪ್ಪಿಸುವುದು 361
7) ವಿತ್ತೀಯ ಕಾರ್ಯಕಲಾಪಗಳು -
1991-92ನೇ ಸಾಲಿನ ಅನುದಾನ ಬೇಡಿಕೆಗಳ ಮಂಡನೆ ಹಾಗೂ ಚರ್ಚೆ. 361-493

ಶುಕ್ರವಾರ ೨೦ನೇ ಸೆಪ್ಟೆಂಬರ್ ೧೯೯೧
ಭಾದ್ರಪದ ೨೯, ಶಕ ೧೯೧೩

1. ವಿತ್ತೀಯ ಕಾರ್ಯಕಲಾಪಗಳು
ಎ) 1991-92ನೇ ಸಾಲಿನ ಆಹಾರ ಮತ್ತು ನಾಗರೀಕ ಪೂರೈಕೆ, ಸಾರಿಗೆ, ಕಾರ್ಮಿಕ, ಕಂದಾಯ ಮತ್ತು ಸಣ್ಣ ಉಳಿತಾಯ ಇಲಾಖೆಗಳ ಬೇಡಿಕೆಗಳ ಮೇಲಿನ ಚರ್ಚೆ (ಮುಂದುವರಿದುದು) 495-500
ಮಂತ್ರಿಗಳ ಹೇಳಿಕೆ
ಭದ್ರಾ ಬಲದಂಡೆ ನಾಲೆ ಒಡೆದು ರೈತರಿಗೆ ತೊಂದರೆಯಾಗಿರುವುದು 500-03
1991-92ನೇ ಸಾಲಿನ ಅನುಪೂರಕ ಬೇಡಿಕೆಗಳ ಮೇಲಿನ ಸಾಮಾನ್ಯ ಚರ್ಚೆ 503-53
2. ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರಿಂದ ಉತ್ತರ 553-67
3. ಸಾರಿಗೆ ಸಚಿವರಿಂದ ಉತ್ತರ 567-96
4. ಕಾರ್ಮಿಕ ರಾಜ್ಯಮಂತ್ರಿಯವರಿಂದ ಉತ್ತರ 596-612
5. ಸಹಕಾರ ಸಚಿವರಿಂದ ಉತ್ತರ 612-27
6. ಕಂದಾಯ ಸಚಿವರಿಂದ ಉತ್ತರ 627-49
7. ಸಣ್ಣ ಉಳಿತಾಯ ರಾಜ್ಯ ಮಂತ್ರಿಯವರಿಂದ ಉತ್ತರ 650-51
8. ಮುಖ್ಯಮಂತ್ರಿಗಳಿಂದ ಉತ್ತರ 651
9. ಬೇಡಿಕೆ ಸಂಖ್ಯೆ 669
II ಇಲಾಖೆಗಳ ಬೇಡಿಕೆ ಮೇಲಿನ ಚರ್ಚೆ ಮತ್ತು ಮತಕ್ಕೆ ಹಾಕುವುದು 669-73
25 ರಾಜ್ಯದ ಅಬಕಾರಿ 674
27 ಪೋಲೀಸ್ ಮತ್ತು ಅಗ್ನಿಶಾಮಕ ದಳ 674-75

28 ಜೈಲು 675
11 ಲೇಖನ ಸಾಮಗ್ರಿ ಮತ್ತು ಮುದ್ರಣ 675
12 ಉಚ್ಚ ಶಿಕ್ಷಣ 675
15 ಪ್ರಾಥಮಿಕ ಶಿಕ್ಷಣ 675
16 ಸೆಕಂಡರಿ ಶಿಕ್ಷಣ 675-76
37 ರಾಜ್ಯ ವಿಧಾನ ಮಂಡಲ 676
38 ನ್ಯಾಯ ಪರಿಪಾಲನೆ 676
1 ಭೂಸಾರ ಮತ್ತು ಜಲರಕ್ಷಣೆ ವ್ಯವಸಾಯ 676
2 ಖುಷ್ಕಿ ಭೂಮಿ ಅಭಿವೃದ್ಧಿ 676
3 ತೋಟಗಾರಿಕೆ 676-77
4 ಪಶುಸಂಗೋಪನಾ ಮತ್ತು ಡೈರಿ ಅಭಿವೃದ್ಧಿ 677
44 ಯೋಜನಾ ಇಲಾಖೆಯ ಅಭಿಯಾಚನಗಳು ಇತ್ಯಾದಿ 677
10 ರೇಷ್ಮೆ ವ್ಯವಸಾಯ 677
6 ಉದ್ಯಮಗಳು (ಚಿಕ್ಕಪುಟ್ಟ ಉದ್ಯಮಗಳು 677-78
ಸಹಕಾರ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯ ಹೊರತು)
9 ಸಹಕಾರ ಉದ್ಯಮಗಳು 678
8 ಚಿಕ್ಕ ಪುಟ್ಟ ಉದ್ಯಮಗಳು 678
7 ಗಣಿಗಳು ಮತ್ತು ಭೂ ವಿಜ್ಞಾನ 678
60 ಹರಿಜನ ಗಿರಿಜನ ಮತ್ತು ಹಿಂದುಳಿದ
ವರ್ಗದವರ ಕಲ್ಯಾಣ
61 ಮಹಿಳಾ ಮತ್ತು ಮಕ್ಕಳ ಕಲ್ಯಾಣ 678-79
31 ವೈದ್ಯಕೀಯ ಕುಟುಂಬ ಕಲ್ಯಾಣ ಮತ್ತು
ಜನಾರೋಗ್ಯ ಸೇವೆಗಳು 679
29. ವಾರ್ತಾ ಮತ್ತು ಪ್ರವಾಸೋಧ್ಯಮ 679
14 ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ 679
13 ಯುವಜನ ಸೇವೆ 679
24 ಅರಣ್ಯ 679-80
III ಬೇಡಿಕೆಗಳ ಮೇಲೆ ಚರ್ಚೆ ಮಾಡಲು ಸಾಕಷ್ಟು
ಕಾಲಾವಕಾಶ ದೊರೆಯದಿರುವ ಬಗ್ಗೆ ಚರ್ಚೆ. 680-91
IV ಶಾಸನ ರಚನಾ ಕಾರ್ಯಕಲಾಪಗಳು 691-711
ಮಂಡನೆ ಮತ್ತು ಪರ್ಯಾಲೋಚನಾ ಪ್ರಸ್ತಾವ
1991 ನೇ ಇಸವಿಯ ಕರ್ನಾಟಕ ಧನ ವಿನಿಯೋಗ
(ನಂ. 2) ವಿಧೇಯಕ.
V ಚುಕ್ಕೆ ಗುರ್ತಿನ ಮತ್ತು ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ
ನೀಡಲಾದ ಉತ್ತರಗಳು. 711-801
VI ಸಭೆಯ ಮುಂದಿಡಲಾದ ಕಾಗದಪತ್ರಗಳು 801

ಬುಧವಾರ, 25ನೇ ಸೆಪ್ಟೆಂಬರ್ 1991
ಆಶ್ವಯುಜ ೪, ಶಕ ೧೯೧೩

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು. 811-51
2. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು. 851
3. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. 853-66
4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು. 866-68

ವಿಷಯ

1) ಕರ್ನಾಟಕ ರಾಜ್ಯದ ನರ್ಸಿಂಗ್ ಅಸೋಷಿಯೇಶನ್‌ನವರು ಸತ್ಯಾಗ್ರಹ ಮಾಡುತ್ತಿರುವುದರ ಕುರಿತು 866-68
2) ಬೆಳಗಾವಿ, ಹುಬ್ಬಳಿ ಮತ್ತು ರಾಜ್ಯದ ವಿವಿಧ ಭಾಗಗಳಲ್ಲಿ ಗಣೇಶನ ಮೂರ್ತಿ ವಿಸರ್ಜನೆ ಸಮಯದಲ್ಲಿ ನಡೆಧ ಗಲಭೆ 868-80
3) ಹಾಸನದಲ್ಲಿ ಕಾಲೇಜು ವಿದ್ಯಾರ್ಥಿಗಳ ಮುಷ್ಕರ. 880-82

5 ಮುಖ್ಯಮಂತ್ರಿಗಳ ಹೇಳಿಕೆ. 882-88

ವಿಷಯ

ರೈತರ ಸಾಲ ಮನ್ನಾ ವಿಚಾರ ಮತ್ತು ರಸಗೊಬ್ಬರದ ವಿತರಣೆ ಬಗ್ಗೆ.

6. ನಿಯಮ 334ರ ಮೇರೆಗೆ 882-88

ವಿಷಯ

1) ಬ್ರಹ್ಮಾವರ ಪೋಲೀಸ್ ಠಾಣೆ ವ್ಯಾಪ್ತಿಯಲ್ಲಿ ಮೇ ತಿಂಗಳಿನಲ್ಲಿ ನಡೆದ ಕೊಲೆ ಪ್ರಕರಣ. 888-89
2) ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಪ್ಯಾಲೆಸ್ ರಸ್ತೆಯ ಕೆಲಸದ ಬಗ್ಗೆ. 890-91
3) ಅರಕಲಗೂಡು ತಾಲ್ಲೂಕು ಕೊಣನೂರು ಆರಕ್ಷಕ ಠಾಣೆ ವ್ಯಾಪ್ತಿಗೆ ಸೇರಿದ ಶ್ರೀ ಗೋಡು ಗ್ರಾಮದ ಶ್ರೀ ಬಸಪ್ಪನವರ ಮಗ ಬಸವರಾಜಪ್ಪನವರ ಜಮೀನಿನಲ್ಲಿ ಅಡಿಕೆಮರಗಳು, ಬಾಳೆಮರಗಳು ಮತ್ತು ತೆಂಗಿನ ಮರಗಳನ್ನು ಕೆಲವು ದುಷ್ಕರ್ಮಿಗಳು ಕಡಿದುಹಾಕಿರುವುದು. 891-93
4) ಬೆಳಗಾಂ ಜಿಲ್ಲೆಯ ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕಿನಲ್ಲಿ ಲಿಫ್ಟ್ ಇರಿಗೇಷನ್ ಯೋಜನೆ 893-94
5) ಕೋಲಾರ ಜಿಲ್ಲಾ ರೈತರಿಗೆ ವಿದ್ಯುಚ್ಛಕ್ತಿ ಅಭಾವದಿಂದ ತೊಂದರೆಯಾಗಿರುವುದು. 894-95
6) ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ, ಕೊಪ್ಪ, ಎನ್.ಆರ್. ಪುರ ತಾಲ್ಲೂಕಿನಲ್ಲಿ ಅಧಿಕ ಮಳೆಯಿಂದ ಪ್ರವಾಹ ಬಂದು ಅನೇಕ ರೈತರಿಗೆ ತೊಂದರೆಯಾಗಿರುವುದು. 895

ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕ 1990
(ಜಂಟಿ ಪರಿಶೀಲನಾ ಸಮಿತಿ ಅವಧಿ ವಿಸ್ತರಣೆಯ
ಬಗ್ಗೆ ಪ್ರಸ್ತಾವ) 897-98

8. ಶಾಸನ ರಚನಾ ಕಾರ್ಯಕಲಾಪಗಳು
ಎ) ವಿಧೇಯಕಗಳ ಮಂಡನೆಗೆ ಅನುಮತಿ ಕೋರಿಕೆ 898-908
1) ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ
ನಿರ್ಮಾಣಗಳನ್ನು ಸಕ್ರಮಗೊಳಿಸುವ ವಿಧೇಯಕ 1991
ಬಿ) ಪರ್ಯಾಲೋಚನಾ ಪ್ರಸ್ತಾವ
1) ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ)
ವಿಧೇಯಕ 1991 908-920
2) ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ)
ವಿಧೇಯಕ 1991 920-23
3) 1991ರ ಕರ್ನಾಟಕ ಪೌರ ನಿಗಮಗಳ
(ತಿದ್ದುಪಡಿ) ವಿಧೇಯಕ 923-27

9. ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಅಲ್ಪ
ಕಾಲಾವಧಿ ಚರ್ಚೆ (ಮುಂದುವರಿದುದು) 927
ವಿಷಯ
ರಾಜ್ಯದಲ್ಲಿ ಇತ್ತಿಚಿಗೆ ಬಿದ್ದ ಭಾರಿ ಮಳೆ ಹಾಗೂ ನೆರೆ
ಹಾವಳಿಯಿಂದ ಹಾನಿ 928-73

10. ಪ್ರಕಟಣೆ 973-88

ಗುರುವಾರ, 26ನೇ ಸೆಪ್ಟೆಂಬರ್ 1991
ಆಶ್ವಯುಜ ೫, ಶಕ ೧೯೧೩

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ
ಮೂಲಕ ನೀಡಲಾದ ಉತ್ತರಗಳು. 983-1031

2. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು. 1031-33

3. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ
ನೀಡಲಾದ ಉತ್ತರಗಳು. 1033-77

4. 13-9-1991ರ ಚುಕ್ಕೆ ರಹಿತ ಪ್ರಶ್ನೋತ್ತರಗಳು. 1078-93

5. ಸಭೆಯ ಮುಂದಿಡಲಾದ ಕಾಗದಪತ್ರಗಳು. 1093-95

6. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾವಿಸಲಾದ ವಿಷಯ
ವಿಷಯ
ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯಲ್ಲಿ ವಿದ್ಯುಚ್ಛಕ್ತಿ
ಮಂಡಲಿಯ ಅಧ್ಯಕ್ಷರ ಪತ್ನಿಯವರು ಜನಮನ ಶೀರ್ಷಿಕೆಯಲ್ಲಿ
ಬರೆದಿರುವ ಪತ್ರದ ಬಗ್ಗೆ. 1095-99

7. ನಿಲುವಳಿ ಸೂಚನೆ:
ವಿಷಯ :

1. ಬಿ.ಆರ್. ಪ್ರಾಜೆಕ್ಟ್ ಹತ್ತಿರ ಭದ್ರಾ ಬಲದಂಡೆ ನಾಲೆ ಒಡೆದುಹೋಗಿರುವುದು. 1100-02
2. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿರತಕ್ಕಂಥ ಅವ್ಯವಹಾರಗಳು ಮತ್ತು ಗುಲ್ಬರ್ಗಾ ಜಿಲ್ಲಾಪರಿಷತ್ ಸದಸ್ಯರು ಹಾಗೂ ಸ್ಥಾಯಿ ಸಮಿತಿಯ ಅಧ್ಯಕ್ಷರು ಕೊಲೆಯಾಗಿರುವುದು. 1102-03

8. ಅರ್ಜಿಗಳನ್ನೊಪ್ಪಿಸುವುದು. 1103-04

9. ನಿಯಮ \334ರ ಮೇರೆಗೆ :

1. ರಾಜಾಜಿನಗರದ 6ನೇ ಬಡಾವಣೆಯಲ್ಲಿ ರಸ್ತೆ ದಾಟುವುದಕ್ಕೆ ಬಹಳಷ್ಟು ತೊಂದರೆಯಾಗುತ್ತಿರುವುದು. 1104-06
2. ಕನಕಪುರ ತಾಲ್ಲೂಕು ಸಾತನೂರು ಹೋಬಳಿ ಹರಿಹರ ಕೆರೆ ನಿರ್ಮಾಣ ಕಾರ್ಯ 1106
3. ಕರ್ನಾಟಕ ರಾಜ್ಯದಲ್ಲಿ ಖಾಸಗಿ ಬಸ್ಸುಗಳಿಗೆ ರಹದಾರಿ ನೀಡುವುದರ ಕುರಿತು 1107
4. ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸಲು ಕಾಲದ ಮಿತಿಯನ್ನು ಗೊತ್ತುಮಾಡಿರುವುದು. 1107-08
5. ಮೂಡಿಗೆರೆ ತಾಲ್ಲೂಕಿನ ಕಳಸಾ ಮಂಡಲ ಪಂಚಾಯ್ತಿಗೆ ಸೇರಿದ ಕಳಸಾಕ್ಕೆ ಕುಡಿಯುವ ನೀರಿನ ಯೋಜನೆ. 1108
6. ಮೈಸೂರು ನಗರದ ಸುತ್ತಮುತ್ತಲಿರುವ ಪ್ರದೇಶವನ್ನು "ಹಸಿರು ಪಟ್ಟಿ " ವಲಯವೆಂದು ಗುರುತಿಸಿರುವುದು. 1108-09
7. ಬೆಳಗಾವಿ ತಾಲ್ಲೂಕಿನ ನಾವಗೆ ಎಂಬಲ್ಲಿ ಜೀತ ಪದ್ಧತಿ ಕಂಡುಬಂದಿದ್ದು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದು. 1109
8. ಸುಳ್ಯ ತಾಲ್ಲೂಕಿನ ಸುಳ್ಯ ನಗರ ನೀರು ಸರಬರಾಜು ಯೋಜನೆ. 1109-10

10. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ.
ವಿಷಯ :
ಮೈಸೂರು ದಸರಾಹಬ್ಬದ ವ್ಯವಸ್ಥೆಯ ಬಗ್ಗೆ ವಿರೋಧಪಕ್ಷದ ಮುಖಂಡರನ್ನು ಕರೆದು ಮಾತನಾಡದಿರುವುದರ ಬಗ್ಗೆ ಪ್ರಸ್ತಾಪ. 1110-12

11. ಶಾಸನ ರಚನಾ ಕಾರ್ಯಕಲಾಪಗಳು :
ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.
ಎ) ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ 1991 1112-70
ಬಿ) ಕರ್ನಾಟಕ ನಗರ ಪ್ರದೇಶದಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮ ಗೊಳಿಸುವ ವಿಧೇಯಕ 1991 1170-71

12. ರಾಜ್ಯದಲ್ಲಿ ಇತ್ತೀಚೆಗೆ ಬಿದ್ದ ಭಾರಿ ಮಳೆಯಿಂದ ಹಾಗೂ ನೆರೆ ಹಾವಳಿಯಿಂದ ಹಾನಿ ಉಂಟಾಗಿರುವುದರ ಬಗ್ಗೆ ಕಂದಾಯ ಮಂತ್ರಿಗಳಿಂದ ಉತ್ತರ 1171-90

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ, ೧೮ನೇ ಸೆಪ್ಟೆಂಬರ್ ೧೯೯೧, ಭಾದ್ರಪದ ೨೭, ಶಕ ೧೯೧೩

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೦.೧೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣರವರು) ಪೀಠವನ್ನು ಅಲಂಕರಿಸಿದರು.

ಸಂತಾಪ ಸೂಚನೆ

ಅಧ್ಯಕ್ಷರು : ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಕಾಪು ಸಂಜೀವ ಶೆಟ್ಟಿ ಅವರು ದಿನಾಂಕ ೧೩ನೇ ಸೆಪ್ಟೆಂಬರ್, ೧೯೯೧ ರಂದು ಕುಂದಾಪುರದಲ್ಲಿ ನಿಧಾನರಾದ ಸುದ್ದಿಯನ್ನು ನೊಂದ ಮನಸ್ಸಿನಿಂದ ಸದನಕ್ಕೆ ತಿಳಿಸುತ್ತಿದ್ದೇನೆ.

ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದ ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದು, 1978 ರಿಂದ 1983ರವರೆಗೆ ಆರನೆ ವಿಧಾನ ಸಭೆಯ ಸದಸ್ಯರಾಗಿ ಕುಂದಾಪುರ ಕ್ಷೇತ್ರವನ್ನು ಪ್ರತಿನಿಧಿಸಿ ಸೇವೆ ಸಲ್ಲಿಸಿರುತ್ತಾರೆ. ಕಾಳಾವರ ಸಹಕಾರ ಸಂಘದ ಸ್ಥಾಪಕ ಅಧ್ಯಕ್ಷರಾಗಿ, ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕರಾಗಿ, ಸೌತ್ ಕೆನರಾ ತೋಟಗಾರಿಕಾ ಸಂಘದ ನಿರ್ದೇಶಕರಾಗಿ ಹಾಗೂ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ನಿರ್ದೇಶಕರಾಗಿಯೂ ಸಹ ಸೇವೆ ಸಲ್ಲಿಸಿರುವುದರ ಜೊತೆಗೆ ಶಿಕ್ಷಣ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಯೂ ಗಣನೀಯ ಸೇವೆ ಸಲ್ಲಿಸಿರುವ ಕೀರ್ತಿ ಶ್ರೀಯುತರದಾಗಿರುತ್ತದೆ.

ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸದಸ್ಯರು ಮೌನ ಆಚರಿಸಿದ ನಂತರ)

ದಿವಂಗತರ ಕುಟುಂಬ ವರ್ಗದವರಿಗೆ ಈ ಸಭೆ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಕಳುಹಿಸಿಕೊಡಲಾಗುವುದು.

ವಿತ್ತೀಯ ಕಾರ್ಯಕಲಾಪಗಳು

1991-92ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ. (ಬೇಡಿಕೆಯ ಸಂಖ್ಯೆ 45, 46, 47, 49, 5, 48, 36, 35) (ಪಿ.ಡಬ್ಲ್ಯು.ಡಿ ನೀರಾವರಿ, ವಿದ್ಯುಚ್ಛಕ್ತಿ ಮತ್ತಿತರ ಇಲಾಖೆಗಳ ಬೇಡಿಕೆಗಳು)

+ ಶ್ರೀ ಯು.ಕೆ. ಶಾಮಣ್ಣ (ಶೃಂಗೇರಿ) : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಕಳೆದ ಒಂದೂವರೆ ದಿವಸದಿಂದ ಈ ಪಿಡಬ್ಲ್ಯುಡಿ ಇಲಾಖೆ ಮತ್ತು ಸಣ್ಣ ನೀರಾವರಿ,

ನಾನಾದರೂ ಹೆಚ್ಚಿನ ವಿಚಾರಗಳನ್ನು ಹೇಳದೆ ನನ್ನ ಕ್ಷೇತ್ರಕ್ಕೆ ಸೀಮಿತವಾಗಿರುವಂಥ ಸ್ವಲ್ಪ ವಿಚಾರಗಳನ್ನು ತಮ್ಮ ಮುಖಾಂತರವಾಗಿ ಸರ್ಕಾರದ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಅಧ್ಯಕ್ಷರೆ, ತಮಗೆ ತಿಳಿದಹಾಗೆ, ಈ ನನ್ನ ಕ್ಷೇತ್ರ ಮೂರು ತಾಲ್ಲೂಕುಗಳನ್ನು ಒಳಗೊಂಡಿರುವಂಥ ಕ್ಷೇತ್ರ. ಕೊಪ್ಪ, ಶೃಂಗೇರಿ ಮತ್ತು ಎನ್.ಆರ್.ಪುರ ಮೂರು ತಾಲ್ಲೂಕುಗಳನ್ನು ಒಳಗೊಂಡಿದೆ. ಮಲೆನಾಡು ಮೂಲೆಯಲ್ಲಿ ರಾಷ್ಟ್ರದ ಚಿರಾಪುಂಜಿಯ ಎರಡನೇ ಭಾಗವಾಗಿರುವಂಥ ಆಗುಂಬೆಯ ಹತ್ತಿರ ಇರುವಂಥ ಕ್ಷೇತ್ರ. ಅತೀ ಹೆಚ್ಚಿನ ಮಳೆ ಬೀಳುವಂಥ ಪ್ರದೇಶ ಎಂದು ಹೇಳಿದರೆ ತಪ್ಪಿಲ್ಲ. ಈಗಾಗಲೇ ನನ್ನ ಕ್ಷೇತ್ರದಲ್ಲಿ 175 ಇಂಚು ಮಳೆ ಬಿದ್ದಿರುವಂತಾದ್ದು ಸರ್ಕಾರದ ಗಮನಕ್ಕೆ ಬಂದಿದೆ. ಅದರಲ್ಲಿಯೂ ಕಳೆದ ಸಾರಿ 27-8-1991ರಂದು ಬಹಳವಾಗಿ ಪ್ರವಾಹ ಬಂದು ಆವೊತ್ತು 8 ಗಂಟೆಗಳೊಳಗೆ 14 ಇಂಚುಗಳಷ್ಟು ಮಳೆ ಬಿದ್ದಿರುವಂಥ ದಾಖಲೆಯನ್ನು ಸ್ಥಾಪನೆ ಮಾಡಿರುವಂಥ ಪ್ರದೇಶ ನನ್ನ ಕ್ಷೇತ್ರ. 14 ಇಂಚು ಮಳೆ ಬಿದ್ದಾಗ ಬಹುಷಃ ಮಲೆನಾಡಿನ ಗುಡ್ಡಗಾಡು ಚಿತ್ರ ಗಮನಿಸಿದಾಗ ಎಲ್ಲಾ ನೀರು ಸಹ ರಸ್ತೆಯ ಮೇಲೆ ಬಂದು ಮೋರಿಗಳು, ಸೇತುವೆಗಳು, ಅನೇಕ ಭಾಗಗಳಲ್ಲಿ ಕೊಚ್ಚಿ ಹೋಗಿವೆ. ಕೆಲವು ಕಡೆ ರಸ್ತೆಗಳು ತುಂಡಾಗಿ, ಇವೊತ್ತು ವಾಹನ ಸಂಚಾರಕ್ಕೂ ಸಹ ಅಡ್ಡಿಯಾಗಿರುವಂತಾದ್ದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ನಾನಾದರೂ ಈ ಸಂದರ್ಭದಲ್ಲಿ ತಿಳಿದುಕೊಂಡಿದ್ದೇನೆ. ಜೊತೆಗೆ ರೈತರಿಗೆ ಆಗಿರುವಂಥ ಲುಕ್ಸಾನುಗಳು, ಅವರ ಜಮೀನು ಸಹ ಲಾಸ್ ಆಗಿರುವಂತಾದ್ದು ತಮ್ಮ ಗಮನಕ್ಕೆ ಬಂದಿದೆ.

ರೈತರಿಗೆ ಅಲ್ಪಸ್ವಲ್ಪ ಕಣ್ಣೀರನ್ನೊರೆಸುವಂಥ ರೂಪದಲ್ಲಿ ಹಣವನ್ನು ಕೊಟ್ಟಿದೆ. ಈಗ ಹಣದ ಮೂಲಕ ಪರಿಹಾರ ಮಾಡಿದೆಯೇ ಹೊರತು ಅಲ್ಲಿ ನಡೆದಿರತಕ್ಕಂಥ ಲಾಸನ್ನು ಇದುವರೆಗೂ ತುಂಬಿಕೊಟ್ಟಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತು ನನ್ನ ಕ್ಷೇತ್ರದಲ್ಲಿ ಬಹುಶ: ಕಲ್‌ವರ್ಟ್‌ಗಳು ಮತ್ತು ಬ್ರಿಡ್ಜ್‌ಗಳು ಏನಿವೆ, ಅದರಲ್ಲಿ ಮೂರು ಬ್ರಿಡ್ಜ್‌ಗಳು ಕೊಚ್ಚಿಹೋಗಿವೆ. ಅದರಿಂದಾಗಿ ಡೀವಿಯೇಷನ್ ತೆಗೆದುಕೊಂಡು ಬೇರೆ ಕಡೆಯಿಂದ ಹೋಗಬೇಕಾಗಿದೆ. ಮಲೆನಾಡಿನಲ್ಲಿ ಸಾಮಾನ್ಯವಾಗಿ 10-15 ಕಿಲೋಮೀಟರ್‌ನಷ್ಟು ಸುತ್ತಿಕೊಂಡು ಆ ಪ್ರದೇಶಗಳಿಗೆ ಹೋಗಿ ತಲುಪುವಂಥ ವ್ಯವಸ್ಥೆ ಇದೆ. ಇವೊತ್ತು ನಾವು ನೇರವಾಗಿ ಕೊಪ್ಪ ಮತ್ತು ಆಗುಂಬೆಗೆ ಹೋಗುವಂಥ ಮಧ್ಯದಲ್ಲಿ ಎರಡು ಸೇತುವೆಗಳು ಬಿರುಕು ಬಿಟ್ಟಿರುವ ಕಾರಣದಿಂದ ಕಷ್ಟದಲ್ಲಿ ಬೇರೆ ಕಡೆಯಿಂದ ಹೋಗುವಂಥ ವ್ಯವಸ್ಥೆ ಇದೆ. ಆದ್ದರಿಂದ, ಆದಷ್ಟು ಬೇಗ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಇದನ್ನು ಸರಿಪಡಿಸಿಕೊಡತಕ್ಕ ವ್ಯವಸ್ಥೆಯ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಈಗ ಸೌತ್‌ಕೆನರಾ ಮತ್ತು ನಮ್ಮ ಶಿವಮೊಗ್ಗ ಮಾರುಕಟ್ಟೆಗಳಿಗೆ ಹೋಗುವಂಥ ಮುಖ್ಯ ಹೆದ್ದಾರಿಗಳಲ್ಲಿ ಆಗುವಂತಾದ್ದು ತಾವು ಗಮನಸಬೇಕೆಂದು ಹೇಳುತ್ತೇನೆ. ಇವೊತ್ತು ಮಳೆ ಬಿದ್ದಿರುವುದರಿಂದ, ಇನ್ನೊಂದು ಅಡಚಣೆ ಏನೆಂದರೆ, ಅಲ್ಲಿ ಹ್ಯೂಮ್‌ಪೈಪ್ ಹಾಕಿರವುದರಿಂದ, ನೀರು ಅಷ್ಟಾಗಿ ಹೋಗಲಿಕ್ಕೆ ಸಾಧ್ಯವಿಲ್ಲದೆ ಇರುವ ಪರಿಸ್ಥಿತಿ ಇದೆ. ಅಲ್ಲಿ ಕಸ, ಕಡ್ಡಿ ಪೈಪುಗಳಿಗೆ ಅಡ್ಡ ಕುಳಿತಾಗ ಬಹುಶ: ಅವೆಲ್ಲಾ ಕೊಚ್ಚಿಹೋಗಿ,ಮಧ್ಯದ ರಸ್ತೆಗಳು ಹಾಳಾಗಿ ಹೋಗಿರುವುದಕ್ಕೆ ಕಾರಣವಾಗಿದೆ. ಆದ್ದರಿಂದ, ನಾನಾದರೂ ಹೇಳುವುದು ಏನೆಂದರೆ, ಮಲೆನಾಡು ಭಾಗದಲ್ಲಿ ಹ್ಯೂಮ್‌ಪೈಪ್‌ಗಳನ್ನು ಹಾಕುವುದು ಬೇಡ, ವೆಂಟ್‌ವಾಲ್ಸ್‌ನ್ನು ಹಾಕುವುದರ ಮೂಲಕ ಸೇತುವೆಗಳನ್ನು ಕಟ್ಟಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮಾನ್ಯ ಅಧ್ಯಕ್ಷರು, ನಮ್ಮ ಚಿಕ್ಕಮಗಳೂರಿನಿಂದ ನಮ್ಮ ಜಿಲ್ಲಾ ಕೇಂದ್ರವಾದಂಥ ಚಿಕ್ಕಮಗಳೂರು ಮೂಲಕ ನನ್ನ ಊರಿಗೆ ಹೋಗಬೇಕಾದರೆ 60 ಕಿಲೋಮೀಟರ್ ರಸ್ತೆ ಉದ್ದದಲ್ಲಿ ನಾವು ವಾಹನ ಸಂಚಾರವನ್ನು ಮಾಡಿಕೊಂಡು ಹೋಗಬೇಕಾಗುತ್ತದೆ. ಬಹುಶ: 60 ಕಿಲೋಮೀಟರ್ ಹೋಗುವುದಕ್ಕೆ ಸುಮಾರು ಮೂರು ಗಂಟೆಗಿಂದ ಕಡಿಮೆ ಯಾವ ವಾಹನವು ಹೋಗಲಿಕ್ಕೆ ಸಾಧ್ಯವಿಲ್ಲ. ಅಲ್ಲಿಗೆ ನಮ್ಮ ರಸ್ತೆಯ ಗುಣಮಟ್ಟ ಯಾವರೀತಿ ಇದೆ ಎನ್ನುವುದು ಅರ್ಥವಾಗುತ್ತದೆ. ಆ ರಸ್ತೆ ಭಾಗದಲ್ಲಿ ಟಾರ್‌ನಿಂದ ಕೆಳಗಡೆ ಇಳಿದರೆ, ಮತ್ತೊಂದುಕಡೆ ಮತ್ತೊಂದು ವಾಹನಗಳು ಮೇಲೆ ಬರಲಿಕ್ಕೆ ಸಾಧ್ಯವಿಲ್ಲದೇ ಇರುವಂಥ ಪ್ರಸಂಗಗಳು ಬಹಳ ಇದೆ. ಬಹುಶ: ಒಬ್ಬ ವ್ಯಕ್ತಿ ಸೈಕಲ್‌ನಿಂದ ಹೋದರೂ 15 ಕಿಲೋಮೀಟರ್ ಅವನು ಒಂದು ಗಂಟೆಗೆ ಧಾರಾಳವಾಗಿ ಹೋಗುವಂಥ ಒಂದು ವ್ಯವಸ್ಥೆ ಇದೆ. ಅಂದರೆ ಸುಮಾರು 20 ಕಿಲೋಮೀಟರ್ ಸ್ಪೀಡ್‌ನಲ್ಲಿ ನಾವು ಹೋಗುವಂಥ ವ್ಯವಸ್ಥೆ ನಮ್ಮ ಜಿಲ್ಲಾ ಕೇಂದ್ರದ ರಸ್ತೆಗಳಲ್ಲಿ ಇದೆ. ಆದ್ದರಿಂದ, ಅದರ ಬಗ್ಗೆ ಹೆಚ್ಚಿನ ಒಂದು ಆದ್ಯತೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈಗಾಗಲೇ 3 ಕ್ಷೇತ್ರಗಳ ವಿಚಾರವನ್ನು ನಾನು ತಮ್ಮ ಮುಂದೆ ಹೇಳಿದ್ದೇನೆ. ನನ್ನ ಕ್ಷೇತ್ರದಲ್ಲಿ ಸುಮಾರು 400 ಕಿ. ಮೀ. ರಸ್ತೆ ಬರುತ್ತದೆ. ಇವತ್ತು ಸರ್ಕಾರ ಪ್ರತಿಯೊಬ್ಬ ಶಾಸಕರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ 40 ಲಕ್ಷ ರೂ. ಗಳ ಕಾಮಗಾರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕೆಂದು ಹೇಳಿದ್ದಾರೆ. 400 ಕಿ. ಮೀ ರಸ್ತೆ ರಿಪೇರಿಗಾಗಲಿ, ಅಥವಾ 100 ಕಿ.ಮೀ. ರಸ್ತೆ ರಿಪೇರಿಗಾಗಲಿ ಎಷ್ಟು ಹಣ ವೆಚ್ಚವಾಗುತ್ತದೆಂಬುದನ್ನು ಮಾನ್ಯ ಲೋಕೋಪಯೋಗಿ ಖಾತೆಯ ಮಂತ್ರಿಗಳು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ಭಾಗದಲ್ಲಿ ಬಹಳಷ್ಟು ವಾಹನಗಳ ಸಂಚಾರ ಇದೆ. ಇವತ್ತು ಕುದುರೆ ಮುಖದ ಮುಖಾಂತರ ಸೌತ್ ಕೆನರಾದಿಂದ ಕರೆಕಟ್ಟೆ ಮಾರ್ಗವಾಗಿ ಶೃಂಗೇರಿ, ಶಿವಮೊಗ್ಗ ರೂಟ್‌ನಲ್ಲಿ ಹೋಗತಕ್ಕಂಥ ಮಾರ್ಗಗಳಿವೆ. ಈ ರಸ್ತೆಗಳಲ್ಲಿ ಯಾರೂ ಕೂಡ ಹೋಗುವುದಕ್ಕಾಗುವುದಿಲ್ಲ. ಏಕೆಂದರೆ ರಸ್ತೆಯ ಮಧ್ಯದಲ್ಲೇ ನೀರಿನ ಜಲ ಮೇಲೆ ಬರುತ್ತಿದೆ. ನಮ್ಮ ಗ್ರಾಮೀಣ ಭಾಷೆಯಲ್ಲಿ ಹೇಳುವುದಾದರೆ ಇದಕ್ಕೆ ಕ್ರಂಪ ಎದ್ದಿದೆ ಎಂದು ಹೇಳುತ್ತಾರೆ. 2 ಚಕ್ರಗಳು ಹೋಗತಕ್ಕ ದಾರಿಯಲ್ಲಿ ಸಂಪೂರ್ಣವಾಗಿ ಕೆಸರು ತುಂಬಿ ಮೇಲೆ ಇದ್ದಂಥ ಜೆಲ್ಲಿ ಕೆಳಗಡೆ ಹೋಗಿದೆ ಎನ್ನತಕ್ಕದ್ದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇದೇ ರೀತಿ ನಮ್ಮ ಭಾಗದಲ್ಲಿ ಕಳೆದ 3 ವರ್ಷಗಳಿಂದ ಸತತವಾಗಿ ಪ್ರವಾಹ ಬರುತ್ತಿದೆ. ಫ್ಲಡ್ ಡ್ಯಾಮೇಜ್ ವರ್ಕ್ಸ್‌ಗಾಗಿ ನಮಗೆ ಇದುವರೆಗೂ ಹಣವನ್ನೇ ಕೊಟ್ಟಿಲ್ಲ, ಫ್ಲಡ್ ಡ್ಯಾಮೇಜ್ ವರ್ಕ್ಸ್‌ಗೆ ದುಡ್ಡನ್ನು ಕೊಡದೇ ಇರುವುದರಿಂದ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರತಕ್ಕ ರಸ್ತೆಗಳು ಸಂಪೂರ್ಣವಾಗಿ ನಾಶವಾಗಿ ಹೋಗಿವೆ. ಇದಕ್ಕೆ ಇನ್ನೊಂದು ಕಾರಣ ಏನೆಂದರೆ, ಬಹುಶ: ಗ್ಯಾಂಗ್‌ಮನ್‌ಗಳು 1ಕಿ.ಮೀ. ಗೆ ಇಂತಿಷ್ಟು ಜನ ಗ್ಯಾಂಗ್‌ಮನ್‌ಗಳನ್ನು ಕೊಡಬೇಕೆಂಬುದು ಕೇವಲ ಪುಸ್ತಕದಲ್ಲಿ ಮತ್ತು ಕಾನೂನಿನಲ್ಲಿದೆಯೇ ಹೊರತು ಕಾರ್ಯತ: ಅಷ್ಟು ಜನ ಅಲ್ಲಿ ಕೆಲಸಮಾಡುತ್ತಿಲ್ಲ. ಈ ಗ್ಯಾಂಗ್‌ಮನ್‌ಗಳಿಗೆ 800-900 ರೂ.ಗಳ ಸಂಬಳವನ್ನು ಕೊಡುತ್ತಿದ್ದೀರಿ. ಯಾವ ರಸ್ತೆಗೆ, ಯಾವ ಗ್ಯಾಂಗ್‌ಮನ್ ನನ್ನು ಬಿಡಬೇಕೆಂಬ ವಿವೇಚನೆ ಇಲ್ಲ. ಇವತ್ತು ನಮ್ಮ ಮಲೆನಾಡು ಭಾಗದಲ್ಲಿ 11 ಗಂಟೆಗೆ ಗ್ಯಾಂಗ್‌ಮನ್‌ಗಳು ಕೆಲಸಕ್ಕೆ ಹೋಗಿ ಮತ್ತೆ 3 ಗಂಟೆಗೆ ಮನೆಗೆ ಬರುತ್ತಿದ್ದಾರೆ. ಅವರು ಕೆಲಸಕ್ಕೆ

ಇವೆರಡೇ ಅವರ ಕೆಲಸ. ಅವರು ಏನು ಮಾಡುತ್ತಾರೆ. ಎಂದು ನೋಡುವುದಕ್ಕೆ ಸೂಪರ್‌ವೈಸರ್ಸ್‌ಹೋಗುತ್ತಿಲ್ಲ. ಅಲ್ಲಿ ಮೇಸ್ತ್ರಿಗಳೂ ಕೂಡ ಇಲ್ಲ ಎಂದು ನಾನು ಬಹಳ ನೊಂದು ಹೇಳುತ್ತಿದ್ದೇನೆ. ಫ್ಲಡ್ ಡ್ಯಾಮೇಜಿಗೆ ಸಂಬಂಧಪಟ್ಟಂತೆ 1989-90 ರಲ್ಲಿ 10 ಕೋಟಿ ರೂಪಾಯಿ, 90-91ರಲ್ಲಿ ಸುಮಾರು 11 ಕೋಟಿ ರೂಪಾಯಿ, 91-92ಕ್ಕೆ 13 ಕೋಟಿ ರೂಪಾಯಿ ಲಾಸ್ ಆಗಿದೆ ಎನ್ನತಕ್ಕ ವರದಿಯನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದೆ. ಆದರೆ ಇದುವರೆಗೂ ಫ್ಲಡ್ ಡ್ಯಾಮೇಜಿಗೆ ಸಂಬಂಧಪಟ್ಟಂತೆ ನಮಗೆ ಹಣ ಬಂದಿಲ್ಲ, ಎನ್ನತಕ್ಕ ಮಾತನ್ನು ನಾನು ಬಹಳ ವ್ಯಸನದಿಂದ ಹೇಳುತ್ತಿದ್ದೇನೆ. ದಯವಿಟ್ಟು ಈ ಹಣವನ್ನು ಆದಷ್ಟು ಬೇಗ ಬಿಡುಗಡೆ ಮಾಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇನೆ.

ಇನ್ನು ನಮ್ಮ ಮಲೆನಾಡಿನ ಪ್ರದೇಶದಲ್ಲಿ ಡಾಂಬರ್‌ನ್ನು ಹಾಕತಕ್ಕ ವ್ಯವಸ್ಥೆ ಏನಿದೆ ಅದರ ಬಗ್ಗೆ ಹೇಳುವುದಾದರೆ, ಮಲೆನಾಡಿನಲ್ಲಿ ಅದರಲ್ಲೂ ನನ್ನ ಕ್ಷೇತ್ರದಲ್ಲಿ ವರ್ಷದಲ್ಲಿ 6 ತಿಂಗಳು ಮಾತ್ರ ಟಾರ್ ಹಾಕಬಹುದು. ಡಿಸೆಂಬರ್‌ನಲ್ಲಿ ಪ್ರಾರಂಭಮಾಡಿದರೆ ಏಪ್ರಿಲ್ ತಿಂಗಳ ಕೊನೆಯೊಳಗೆ ಟಾರನ್ನು ಹಾಕಿ ಮುಗಿಸಬೇಕಾಗುತ್ತದೆ. ಏಕೆಂದರೆ ಅಲ್ಲಿಯ ಹವಾಮಾನವೇ ಆ ರೀತಿ ಇದೆ. ಮಳೆ ಬಂದಾಗ ಟಾರನ್ನು ಹಾಕಿದರೆ ಅದು ಹಾಗೆಯೇ ಎದ್ದುಹೋಗುತ್ತದೆ. ಈಗ ಅಲ್ಲಿ ಮಳೆ ಬರುತ್ತಿದೆ. ಅಲ್ಲಿ ಜೂನ್ ತಿಂಗಳವರೆಗೂ ಟಾರ್ ಹಾಕುತ್ತಿರುತ್ತಾರೆ. ಅದನ್ನು ದಯವಿಟ್ಟು ನಿಲ್ಲಿಸಬೇಕು. ಬೇಸಿಗೆ ಕಾಲದಲ್ಲಿ ಮಾತ್ರ ಟಾರನ್ನು ಹಾಕಿಸುವಂಥ ವ್ಯವಸ್ಥೆ ಆಗಬೇಕು. ಹಿಂದೆ ನಾವು ಚಿಕ್ಕವರಿದ್ದಾಗ ನೋಡಿದ್ದೇವೆ. ಒಂದು ಸಾರಿ ಟಾರನ್ನು ಹಾಕಿದರು ಕೊನೇಪಕ್ಷ 5-10 ವರ್ಷಗಳಾದರೂ ಶಾಶ್ವತವಾಗಿರುತ್ತಿತ್ತು. ಇದು ಎಲ್ಲರಿಗೂ ಗೊತ್ತಿದೆ. ನನ್ನ ಕ್ಷೇತ್ರದಲ್ಲಿ ಕಳೆದ ವರ್ಷ ಶೃಂಗೇರಿ ಟೌನ್‌ನಲ್ಲಿ ಲೋಕೋಪಯೋಗಿ ರಸ್ತೆಗೆ ಹಾಕಿರತಕ್ಕ ಟಾರಿನ ವ್ಯವಸ್ಥೆಯನ್ನು ಕೇಳಿದರೆ ಅದನ್ನು ಹೇಳುವುದಕ್ಕೆ ಬಹಳ ನೋವಾಗುತ್ತದೆ.

ಅದೇ ರೀತಿ ಎಲ್ಲಾ ರಸ್ತೆಗಳಿಗೂ ಟಾರನ್ನು ಹಾಕಿದರೆ ಇರತಕ್ಕ ಹಣವೆಲ್ಲಾ ಮುಗಿದುಹೋಗುತ್ತದೆ. ಏಕೆಂದರೆ ಇತ್ತೀಚೆಗೆ ಬರತಕ್ಕ ಟಾರ್‌ನಲ್ಲಿ ಸಂಪೂರ್ಣವಾಗಿ ಸ್ಟ್ರೆಂಗ್ತ್ ಇಲ್ಲ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ. 3 ರೀತಿಯ ಟಾರ್ ಬರುತ್ತಿದೆ. ಒಂದು ಬ್ಯಾರಲ್‌ಗಳಲ್ಲಿ ಬರುತ್ತಿದೆ, ಇನ್ನೊಂದು ದೊಡ್ಡ ಟ್ರಕ್ಕರ್‌ಗಳಲ್ಲಿ ಬರುತ್ತಿದೆ, ಮತ್ತೊಂದು ಲಯಸ್ ಟಾರ್ ಕೂಡ ಬರುತ್ತಿದೆ. ಇದರಲ್ಲಿ ಕ್ವಾಲಿಟಿ ಟಾರ್ ಯಾವುದು, ನಾನ್ ಕ್ವಾಲಿಟಿ ಟಾರ್ ಯಾವುದು ಎಂಬುದು ಯಾರಿಗೂ ಕೂಡ ಗೊತ್ತಾಗುವುದಿಲ್ಲ. ಆದುದರಿಂದ ನಾನು ತಮಗೆ ಹೇಳುತ್ತಿದ್ದೇನೆ. ಕಳೆದ ಸಾರಿ ಹಾಕಿದಂಥ ಟಾರ್ ಈ ಸಾರಿ ಸಂಪೂರ್ಣವಾಗಿ ಎದ್ದುಹೋಗಿ ಅಲ್ಲಿ ಗುಂಡಿಗಳು ಬಿದ್ದಿವೆ. ಶೃಂಗೇರಿ ಟೌನ್‌ನಲ್ಲಿ ಸ್ವಾತಂತ್ರ್ಯ ದಿನಾಚರಣೆಯ ದಿವಸ ಗ್ರಾಹಕರು ರಸ್ತೆಗಳಲ್ಲಿ ಉಂಟಾಗಿರತಕ್ಕ ಗುಂಡಿಗಳಲ್ಲಿ ತೆಂಗಿನ ಸಸಿಗಳನ್ನು ನೆಟ್ಟಿದ್ದಾರೆ. ಇದು ನಿಮ್ಮ ಇಲಾಖೆ ವತಿಯಿಂದ ಟಾರನ್ನು ಹಾಕಿಸಿರತಕ್ಕ ವೈಖರಿ ಇದನ್ನು ನಾವು ಸರಿಪಡಿಸದಿದ್ದರೆ ನಾವು ಮುಂದೆ ನಗೆಪಾಟಲಿಗೆ ಗುರಿಯಾಗಬೇಕಾಗುತ್ತದೆಂಬುದನ್ನು ತಮಗೆ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಇವತ್ತು ಟಾರ್‌ನ ಕ್ವಾಲಿಟಿ ಸರಿಯಾಗಿ ಹಾಕದೇ ಹೋದರೆ 1ಕಿ.ಮೀ. ರಸ್ತೆಗೆ 1ಲಕ್ಷ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಅಲ್ಲಿ ಹಾಕತಕ್ಕ ಟಾರ್ 1 ಕಿ.ಮೀ. ಗೆ 70 ಬ್ಯಾರೆಲ್ ಎಂದು ನಿಯಮ ಇದೆ. ಬಹುಶ: ಟಾರನ್ನು ಹಾಕುವ ಸಂದರ್ಭದಲ್ಲಿ ನಿಮ್ಮ ಇಲಾಖೆಯ ಎಷ್ಟು ಜನ ಇಂಜಿನಿಯರ್‌ಗಳು ಅಲ್ಲಿರುತಾರೆ. ಎಷ್ಟು ಜನ ಅಲ್ಲಿ ಹೋಗಿ ಸೂಪರ್‌ವಿಷನ್

ಈ ಕೆಲಸ ಕಂಟ್ರಾಕ್ಟರ್ ಮತ್ತು ರೋಡ್ ರೋಲರ್‌ಗಳ ಡ್ರೈವರ್‌ಗಳ ಕೈಯಲ್ಲಿದೆ. ನನ್ನ ಗಮನಕ್ಕೆ ಬಂದಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ತಾರ್ ಒಂದು ಕಿಲೋಮೀಟರ್‌ಗೆ ಇಷ್ಟು ಬ್ಯಾರಲ್ ಹಾಕಬೇಕೆಂದು ಹೇಳುವಂಥ ವ್ಯವಸ್ಥೆ ಇಲ್ಲದಿರುವುದರಿಂದ ತಾರು ಅದಕ್ಕೆ ಬೀಳುವಂಥ ಜೆಲ್ಲಿಮಾತ್ರ ಒಂದು ಇಂಚು ಎಂದು ಹೇಳುತ್ತಿದ್ದಾರೆ. ಆದರೂ ಚಿಂತೆ ಇಲ್ಲ ಅದರಲ್ಲಿ ತಾರು ಸಂಪೂರ್ಣವಾಗಿ ನೆನೆದಿದ್ದರೆ ಸಾಕು. ನೆನೆಯುವುದಿಲ್ಲ. ಒಂದು ಸಾರಿ ಹಾಕಿ ತಿರುಗಿಸುವುದರೊಳಗಾಗಿ ಅದನ್ನು ತೆಗೆದುಹಾಗಿಬಿಟ್ಟಿರುತ್ತಾರೆ. ಮತ್ತೆ ರೋಲರ್ ಮಾಡುವಂಥ ವ್ಯವಸ್ಥೆಯನ್ನು ನೋಡುತ್ತಿದ್ದೇವೆ. ಆದ್ದರಿಂದ ಈ ವ್ಯವಸ್ಥೆಯನ್ನು ನಿಲ್ಲಿಸಿ ನಿಜವಾಗಿಯೂ ಹಾಕುವಂಥ ಗುಣಮಟ್ಟವನ್ನು ತಾವು ಉತ್ತಮಪಡಿಸಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಇಚ್ಛಪಡುತ್ತೇನೆ.

(ಶ್ರೀಮತಿ ಮೋಟಮ್ಮನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇದಕ್ಕೆ ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ಏತಕ್ಕೆಂದರೆ ರೋಡ್‌ರೋಲರ್ ಮೇಸ್ತ್ರಿ ಮತ್ತು ಅವರೇ ಕಂಟ್ರಾಕ್ಟರ್ಸ್ ಎಂದು ಹೇಳಿಕೊಳ್ಳುತ್ತಾರೆ. ನಾನು ನನ್ನ ಕ್ಷೇತ್ರದಲ್ಲಿರುವಂಥ ಬದ್ರಿಕಟ್ಟೆ ಎನ್ನುವ ಪ್ರದೇಶಕ್ಕೆ ಹೋಗಿ ನೋಡುವಂಥ ಸಂದರ್ಭದಲ್ಲಿ ತಾರು ಹಾಕುವುದಕ್ಕೆ ಮರಳು ಹಾಕಬೇಕಾಗುತ್ತದೆ ಆ ಮರಳು ಎಲ್ಲಿತ್ತು ಎಂದರೆ ಪಕ್ಕದಲ್ಲಿಯೇ ಇದ್ದಂಥ, ರಸ್ತೆ ಬಂದಿಯಕಡೆ ಗುಡ್ಡೆ ಮಾಡಿರುವಂಥ ಮಣ್ಣನ್ನೇ ಹಾಕಿ ತಾರುಹಾಕುವಂಥ ವ್ಯವಸ್ಥೆಯನ್ನು ನಾನು ನೋಡಿದ್ದೇನೆ. ಇಂಥ ಒಂದು ಅವ್ಯವಸ್ಥೆಯನ್ನು ತಾವು ನಿಜವಾಗಿಯೂ ನಿಲ್ಲಿಸಬೇಕೆಂದು ಈ ಸಂದರ್ಭದಲ್ಲಿ ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಮಲೆನಾಡಿನ ಪ್ರದೇಶವಾಗಿರುವಂಥ ನನ್ನ ಭಾಗದಲ್ಲಿ ಅನೇಕ ಬಿಲ್ಡಿಂಗ್‌ಗಳನ್ನು ಕಟ್ಟಿದ್ದಾರೆ. ನಾನು ಮಾನ್ಯ ಇಂಜಿನೀಯರುಗಳನ್ನು ಕಳಕಳಿಯಿಂದ ಪ್ರಾರ್ಥನೆ ಮಾಡಿ ಕೊಳ್ಳುವುದಾದರೂ ಇಷ್ಟೇ. ಮಲೆನಾಡು ಭಾಗದಲ್ಲಿ ಅಲ್ಲಿಯ ಹವಾಮಾನಕ್ಕೆ ಅನುಗುಣವಾಗಿ ಕಟ್ಟಡಗಳನ್ನು ಕಟ್ಟುವಂಥ ವ್ಯವಸ್ಥೆಯನ್ನು ಇಂಜಿನೀಯರ್ಸ್ ಮಾಸ್ಟರ್‌ಪ್ಲಾನ್ ಮಾಡಬೇಕೆಂದು ಹೇಳುತ್ತೇನೆ. ಏತಕ್ಕೆಂದರೆ ಕೊಪ್ಪದಲ್ಲಿ ಹೊಸದಾಗಿ ಕಟ್ಟಿರುವಂಥ ಒಂದು ಆಸ್ಪತ್ರೆ ಕಟ್ಟಡ. ಇವತ್ತು ಅದು ಸಂಪೂರ್ಣವಾಗಿ ಸೋರುತ್ತಿದೆ. ಮೊನ್ನೆ ಶ್ರೀಮತಿ ಮೋಟಮ್ಮನವರು ಮಾತನಾಡುವಾಗ ಹೇಳಿದ್ದಾರೆ, ಗ್ರಾಮಸೇವಕರ ಕಟ್ಟಡಗಳನ್ನು ಅಲ್ಲಿ ಪ್ಲಾಟ್ ರೂಪದಲ್ಲಿ ಮಾಡಿದ್ದಾರೆ. ಮಲೆನಾಡಿನಲ್ಲಿ ಸಾಮಾನ್ಯವಾಗಿ 150 ಇಂಚು ಮಳೆ ಬೀಳುವಂಥ ಪ್ರದೇಶದಲ್ಲಿ ಪ್ಲಾಟ್ ರೂಮ್‌ಗಳನ್ನು ಆರ್‌ಸಿಸಿ ಹಾಕಿ ಕಟ್ಟಿದರೆ, ಬಹುಶಃ ನೀರು ಕೆಳಗಡೆ ಬರುತ್ತದೆಯೇ ಹೊರತು ಹೊರಗಡೆ ಹೋಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಾಗೆ ಆಸ್ಪತ್ರೆಯಲ್ಲಿ ರೋಗಿಗಳು ಮಲಗಿದ್ದರೆ ಅವರ ಮೇಲುಗಡೆ ಸೋರುತ್ತಿರುತ್ತದೆ. ಮಳೆನೀರು ಸೋರುತ್ತಿರುವುದರ ಜೊತೆಗೆ ಎಲೆಕ್ಟ್ರಿಫಿಕೇಷನ್ ಯಾವ ರೀತಿ ಮಾಡಿದ್ದಾರೆಂದರೆ ಅದು ಸಂಪೂರ್ಣವಾಗಿ ಸಾಕಷ್ಟು ಕೆಟ್ಟಿದೆ. ಯಾವಕಡೆ ಗೋಡೆಯನ್ನು ಮುಟ್ಟಿದರೂ ಕೂಡ ಕರೆಂಟ್ ಒಡೆಯುತ್ತದೆ. ಮಲೆನಾಡು ಭಾಗದಲ್ಲಿ ಟೈಲ್‌ರೂಫನ್ನು ಪ್ರಪೋಸ್ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ.

ಇನ್ನು ಅನೇಕ ಬಿಲ್ಡಿಂಗ್ ಅಭಿವೃದ್ಧಿಕಾರ್ಯ ಆಗಬೇಕಾಗಿದೆ. ಅಲ್ಲಿರುವ ಹಳೇ ಬಿಲ್ಡಿಂಗ್‌ಗಳು ಅಂದರೆ ಪಿ.ಡಬ್ಲ್ಯುಡಿ. ಕ್ವಾಟರ್ಸ್‌ಗಳು ಕೆಲವು ಜಿಲ್ಲಾಪರಿಷತ್ತಿಗೆ ಸೇರಿದೆ ಎಂದು ಕೆಲವು ಪಿ.ಡಬ್ಲ್ಯುಡಿಗೆ ಸೇರಿದಂಥವು ಎಂದು ಜಿಜ್ಞಾಸೆಯಲ್ಲಿದ್ದರೂ 25-30 ವರ್ಷಗಳಿಂದ ಡಾಕ್ಟರ್ಸ್ ಕ್ವಾಟರ್ಸ್ ಆಗಲಿ ಅಥವಾ ಲೋಕೋಪಯೋಗಿ ಇಲಾಖೆಗೆ

ಸೇರಿದಂಥ ಕಟ್ಟಡಗಳು ಬೀಳುವಂಥ ಮಟ್ಟದಲ್ಲಿದೆ ರಿಪೇರಿಯಾಗಿಲ್ಲ. ಅದನ್ನು ತಾವು ಗುರುತಿಸಬೇಕಾಗುತ್ತದೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಹಾಗೆಯೇ ನಮ್ಮ ಮಲೆನಾಡು ಭಾಗವಾಗಿರುವಂಥ ಎನ್‌ಆರ್‌ಪುರ ಪ್ರದೇಶದಲ್ಲಿ ಬಹುಶಃ ಊಸ್‌ಕಲ್ ಊರಿಗೆ ಹೋಗುವಂಥ ರಸ್ತೆಯಲ್ಲಿ ಬ್ರಿಡ್ಜ್ ಈಗಾಗಲೇ ಮೂರು ವರ್ಷಗಳಿಂದ ಸೇತುವೆ ಹೊಸ ಕಟ್ಟಡವನ್ನು ಕಟ್ಟುತ್ತಿರುವುದರಿಂದ ರಸ್ತೆಯನ್ನು ಕಟಾಫ್ ಮಾಡಿ ಹಾಗೆ ಬಿಟ್ಟಿದ್ದಾರೆ. ಯಾರನ್ನೇ ಕೇಳಿದರು ಅದಕ್ಕೆ ಹಣವಿಲ್ಲ, ಅದು ನಮಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಹಾಗಾದರೆ ಈ ರೀತಿಯಲ್ಲಿ ಹೇಗೆ ರಸ್ತೆಯನ್ನು ಕಟ್ ಮಾಡಿದ್ದೀರೆಂದು ಹೇಳಿದರೆ ಅದು ಐದು ಸಾವಿರ ರೂಪಾಯಿ ಪ್ರೊಪೋಸಲ್ಸ್ ಇತ್ತು, ಅದರ ಮೂಲಕವಾಗಿ ಇವತ್ತು ಹೊಸದಾಗಿ ಸೇತುವೆ ಕಟ್ಟುವುದಕ್ಕೋಸ್ಕರ ನಾವು ಕಟಾಫ್ ಮಾಡಿದ್ದೇವೆನ್ನುವ ಮಾತನ್ನು ಕೇಳಿದ್ದೇವೆ. ಬಹುಶಃ ಐದು ಸಾವಿರ ರೂಪಾಯಿಗಳಿಗೆ ಯಾವ ಒಂದು ಹೊಸ ಕಾಮಗಾರಿಗಳನ್ನಾಗಲಿ ಅಥವಾ ಅದರಲ್ಲಿಯೂ ಬ್ರಿಡ್ಜನ್ನು ಕಟ್ಟುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಅದು ಯಾವ ಒಂದು ಬಜೆಟ್‌ಗೂ ಸೇರಿಲ್ಲ. ಅದನ್ನು ಭದ್ರಾ ಅಚ್ಚುಕಟ್ಟು ಯೋಜನೆಯ ಮುಖಾಂತರವಾಗಿ ಪ್ರಾರಂಭ ಮಾಡಿದ್ದಾರೆ. ನಾನು ಅನೇಕ ಭಾಗಗಳಲ್ಲಿ ವಿಚಾರಿಸಿದಾಗ ಅದರಲ್ಲಿ ಹಣ ಇಲ್ಲವೆಂದು ಹೇಳುವಂಥದ್ದನ್ನು ತಿಳಿದಿದ್ದೇನೆ. ಆ ಸೇತುವೆ ಇಲ್ಲದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಬಹಳ ಜನರಿಗೆ ತೊಂದರೆಯಾಗಿದೆ.

ಮಾನ್ಯ ಮುಖ್ಯ ಮಂತ್ರಿಗಳನ್ನು ನಾನು ಕೇಳಿದೆ, ಕೊನೆಪಕ್ಷ ಆ ಊರಿನ ಜನರಿಗೆ ಒಂದು ದೋಣಿಯನ್ನಾದರೂ ಕೊಡಿ ಎಂದು. ಆದರೆ ಅವರು ದೋಣಿ ಬೇಡ ಒಂದು ಸೇತುವೆಯನ್ನು ಕೊಡುವಂಥ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದರು. ಆದ್ದರಿಂದ ದಯವಿಟ್ಟು ಅದಕ್ಕೆ ತಾವು ಆದ್ಯತೆಯನ್ನು ಕೊಡಬೇಕೆಂದು ಹೇಳಿ ತಮ್ಮ ಮೂಲಕ ನಾನು ಪ್ರಾರ್ಥನೆ ಮಾಡುತ್ತೇನೆ.

ಇನ್ನು ಅನೇಕ ಜನ ಕಂಟ್ರಾಕ್ಟರ್ಸ್ ಏನಿದ್ದಾರೆ ಅವರ ಬಗ್ಗೆಯೂ ಸಹ ಕಡಿವಾಣವನ್ನು ಹಾಕಬೇಕಾಗುತ್ತದೆ. ಇವತ್ತು ಕಂಟ್ರಾಕ್ಟರ್ಸ್ ಎಂದರೆ ಬಹುಶಃ ನಾವೆಲ್ಲ ಪುಕ್ಕಸಟ್ಟೆ ಕೆಲಸ ಮಾಡಿಕೊಡುತ್ತೇವೆಂದು ತಿಳಿದುಕೊಂಡಿರುವಂತಿದೆ. ಏನೋ ಅವರ ಆಬ್ಲಿಗೇಷನ್‌ನಲ್ಲಿರುವಂತೆ ಹೇಳಿಕೊಳ್ಳುತ್ತಿರುತ್ತಾರೆ. ಇದು ಒಂದು ನಾಣ್ಣುಡಿಯಾಗಿದೆ ಏನ್ರಿ ದುಡ್ಡು ಕೊಡುತ್ತಿಲ್ಲ, ದುಡ್ಡು ಕಾಲಕ್ಕೆ ಸರಿಯಾಗಿ ಬರುವುದಿಲ್ಲ, ನಾವೇ ಇನ್‌ವೆಸ್ಟ್ ಮಾಡಿಕೊಳ್ಳಬೇಕಾಗಿರುತ್ತದೆಂದು ಹೇಳುತ್ತಾರೆ. ಕಂಟ್ರಾಕ್ಟರ್ಸ್ ನಮ್ಮ ದುಡ್ಡಿನಲ್ಲಿ ಕೆಲಸ ಮಾಡುವುದಕ್ಕೆ ಅವರ ಆಬ್ಲಿಗೇಷನ್ ನಮಗೆ ಏನು ಬೇಕಾಗಿಲ್ಲವೆಂದು ಹೇಳುವಂಥದ್ದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಲ್ಲದೆ ಬಿಲ್ಡಿಂಗ್‌ಗಳಿಗೆ ಹಾಕುವಂಥ ಮೆಟೀರಿಯಲ್ಸ್ ಚೆನ್ನಾಗಿರುತ್ತದೆಯೇ ಎನ್ನುವುದನ್ನು ನೋಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಬಹುಶಃ ಮಲೆನಾಡಿನಲ್ಲಿ ಹೆಂಚು ನಾಟ ಹಾಕುವಾಗ ಈ ಬಕಾಸಿ ಮತ್ತು ರಿಪೀಸ್ ಎಂದು ಹೇಳುತ್ತಾರೆ, ರ್‍ಯಾಪ್ಟರ್ಸ್ ಅಂಡ್ ಖರ್‌ಲೈನ್ಸ್ ಅವುಗಳ ಗುಣಮಟ್ಟವನ್ನು ಕಾಯ್ದುಕೊಂಡಿಲ್ಲ. ಇವತ್ತು ಜಂಗಲ್‌ವುಡ್ ಹಾಕಿದರೆ ಸಾಕೆಂದು ಹೇಳುವ ಮಟ್ಟಕ್ಕೆ ಬಂದಿದೆ. ಮೊನ್ನೆ ಒಂದು ಬಿಲ್ಡಿಂಗ್‌ನ್ನು ನೋಡಿದಾಗ ನಮ್ಮ ಕಾಫಿತೋಟದಲ್ಲಿ ಸಿಲ್ವರ್ ಗಿಡಗಳು ಇವೆ, ಆ ಸಿಲ್ವರ್ ಗಿಡದ ಫರ್ಲಿನ್ಸ್ ಹಾಕಿರುವುದನ್ನು ಮತ್ತು ರೀಪರ್ಸ್‌ನ್ನು ಹಾಕಿರುವುದನ್ನು ನಾವು ನೋಡಿದ್ದೇವೆ.

ಅದು ಒಂದೇ ವರ್ಷಕ್ಕೆ ಸಂಪೂರ್ಣವಾಗಿ ನಾಶವಾಗುವ ಮಟ್ಟಕ್ಕೆ ಬರುತ್ತದೆಂದರೆ ತಪ್ಪಲ್ಲ. ಅದರ ಕ್ವಾಲಿಟಿ ಆ ರೀತಿ ಇರುವುದರಿಂದ ಅದು ಜಂಗಲ್ ವುಡ್‌ಗೆ ಸೇರಿದ್ದಾಗಿದೆ. ಆದ್ದರಿಂದ ಅಲ್ಲಿ ಏನು ವುಡ್ ಹಾಕುತ್ತಿದ್ದಾರೆ ಅದನ್ನು ಹಾರ್ಡ್

ಉಡ್ ಹಾಕುವ ವ್ಯವಸ್ಥೆ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಇವತ್ತು ಮಲೆನಾಡು ಅಭಿವೃದ್ಧಿಯ ಬಗ್ಗೆ ಸಾಮಾನ್ಯವಾಗಿ ಏನು ನಮ್ಮ ಭಾಗದ ಇಂಜಿನಿಯರ್‌ಗಳು ಹೇಳುತ್ತಾರೆ ಅದನ್ನು ಕೇಳಿಕೊಂಡು ಹೋಗುವ ವ್ಯವಸ್ಥೆಗೆ ಬರಬಾರದೆಂದು ಹೇಳುತ್ತೇನೆ. ಏಕೆಂದರೆ ಯಾವ ರಸ್ತೆಗೆ ಎಷ್ಟು ಹಣ ಇಟ್ಟಿದೆ ಎಷ್ಟು ಖರ್ಚು ಮಾಡಬಹುದೆಂದು ಶಾಸಕರುಗಳಿಗೆ ಗೊತ್ತಿಲ್ಲ. ಯಾವ ರಸ್ತೆಗೆ ಎಷ್ಟು ಹಣ ಇಟ್ಟಿದೆ. ಅದನ್ನು ಏತಕ್ಕೆ ಖರ್ಚು ಮಾಡಿಲ್ಲವೆಂದು ಗೊತ್ತಿಲ್ಲ. ಎನ್.ಎಂ.ಆರ್. ನಲ್ಲಿ ಎಷ್ಟು ಹಣ ಇದೆ ಎಂದು ಹೇಳುವುದನ್ನು ತಮ್ಮ ಮೂಲಕ ತಿಳಿಯಬಯಸುತ್ತಿದ್ದೇನೆ. ನಮ್ಮ ಭಾಗದಲ್ಲಿ ಏನು ಅಭಿವೃದ್ಧಿ ಕಾರ್ಯ ಆಗಬೇಕು ಅದು ಶೀಘ್ರವಾಗಿ ಆಗಬೇಕಾದರೆ ನನಗನ್ನಿಸುತ್ತದೆ. ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್ ಸ್ಥಾಪನೆ ಮಾಡಿ ತನ್ಮೂಲಕ ಹಣ ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದ್ದಾರೆ.

ಅದು ಸ್ವಾಗತಾರ್ಹವಾದುದು. ಅದೇನಾದರೂ ಕಾರ್ಯಕ್ರಮ ಕೈಗೊಂಡು ಉತ್ತಮ ಮಟ್ಟದಲ್ಲಿ ಕೆಲಸ ಮಾಡಿದರೆ ಮಲೆನಾಡು ಉತ್ತಮ ಮಟ್ಟದಲ್ಲಿ ಅಭಿವೃದ್ಧಿ ಆಗುತ್ತದೆಂದು ಆಸೆ ಹೊಂದಿದ್ದೇವೆ. ನನ್ನ ಕ್ಷೇತ್ರ ಮತ್ತು ಶ್ರೀಮತಿ ಮೋಟಮ್ಮನವರ ಕ್ಷೇತ್ರವಾದ ಮೂಡಿಗೆರೆ ಹಾಗೂ 5 ತಾಲ್ಲೂಕುಗಳನ್ನು ತಮ್ಮ ಭಾಗದಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಅದಕ್ಕೆ ಹಣ ಬಿಡುಗಡೆ ಮಾಡಿ ಏನು ಅಭಿವೃದ್ಧಿ ಕಾರ್ಯ ಆಗಬೇಕೆಂದು ಹೇಳುವುದಕ್ಕೆ ನಮ್ಮಗಳ ಒಂದು ತೀರ್ಮಾನಕ್ಕೆ ಬಿಟ್ಟು, ಅದರ ಮೂಲಕವಾಗಿ ಹಣಕೊಟ್ಟು ಅಭಿವೃದ್ಧಿ ಕಾರ್ಯವನ್ನು ಉತ್ತಮವಾಗಿ ಮಾಡಿಸಬೇಕೆಂದು ಹೇಳಲಿಷ್ಟು ಪಡುತ್ತಿದ್ದೇನೆ. ಈ ಇಲಾಖೆಯ ಬಗ್ಗೆ ಇಷ್ಟು ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತಾ ನಮ್ಮ ಸಣ್ಣ ನೀರಾವರಿ ಇಲಾಖೆಯ ಮಂತ್ರಿಯಾಗಿರುವವರು ನಮ್ಮ ಜಿಲ್ಲೆಯವರು ಆಗಾದ್ದಾರೆ ಮತ್ತು ಸ್ವತಃ ವ್ಯವಸಾಯಗಾರನಾಗಿದ್ದಾರೆ. ಅವರಿಗೆ ಮಲೆನಾಡಿನ ಚಿತ್ರ ಚೆನ್ನಾಗಿ ಗೊತ್ತಿದೆ. ಅವರು ಬಹುಶಃ ಬಹಳ ವರ್ಷಗಳಿಂದಲೂ ಏನು ಲಿಫ್ಟ್ ಇರಿಗೇಷನ್ ಮೂಲಕ ಆಗುವಂತಹ ಕಾಮಗಾರಿಗಳಲ್ಲಿ, ನನ್ನ ಕ್ಷೇತ್ರದಲ್ಲಿ ಬಹಳಷ್ಟು ಕಾಮಗಾರಿಗಳು ಹೆಸರುಗಳ ಪಟ್ಟಿ ಅವರ ಇಲಾಖೆಯಲ್ಲಿ ಸೇರಿಕೊಂಡಿದೆ, ಅದಕ್ಕೆ ಮಂಜೂರಾತಿ ಸಿಕ್ಕಿದೆ. ಆದರೆ ಏನೂ ಪ್ರಯೋಜನವಾಗಿಲ್ಲ. ಕೆಲಸ ಆಗಬೇಕಾಗಿದೆ. ಕೆಲಸದಲ್ಲಿ ಬಹಳ ಹಿಂದೆ ಬಿದ್ದಿದೆ. ನಾನು ತಾಲ್ಲೂಕು ಅಭಿವೃದ್ಧಿ ಮಂಡಲಿಯ ಸದಸ್ಯನಾಗಿ ಕೆಲಸ ಮಾಡುವಾಗ ಬಂಡಿಗಡಿ ಮತ್ತು ಬಂಕಲಾಪುರ ಎಂದು ಹೇಳುವ ಎರಡು ಊರುಗಳಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಂ ಅನ್ನು ಕಾರ್ಯಗತ ಮಾಡುತ್ತೇವೆಂದು ಆ ಕಾಲದಿಂದ ಜನರಿಗೆ ಹೇಳುತ್ತಾ ಬಂದಿದ್ದೇವೆ. ಇನ್ನೂ ಹೇಳುತ್ತಾ ಹೋದರೆ ಸುಳ್ಳು ಆಗುತ್ತದೆ. ಜನ ನಂಬುವುದಿಲ್ಲ.

ಆದ್ದರಿಂದ ಕೂಡಲೇ ಆ ಕಾರ್ಯಕ್ರಮವನ್ನು ಜಾರಿಗೆ ಕೊಡುವ ವ್ಯವಸ್ಥೆಯನ್ನು ಮಾನ್ಯ ಮಂತ್ರಿಗಳು ಮೂಡಿಸುತ್ತಾರೆಂದು ಭಾವಿಸಿದ್ದೇನೆ. ಅವರಿಗೂ ಸಹ ಆರ್ಥಿಕತೆಯಲ್ಲಿ ತೊಂದರೆ ಇದೆ. ವರ್ಲ್ಡ್ ಬ್ಯಾಂಕ್‌ನಿಂದ ಹಣ ಮಂಜೂರಾಗಿಲ್ಲವೆಂದು ಹೇಳಿದ್ದಾರೆ. ಅವೆಲ್ಲವನ್ನು ಅವರು ಸರಿದೂಗಿಸಿಕೊಂಡು ಕೆಲಸ ಮಾಡುತ್ತಾರೆಂದು ಹೇಳುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದು ಇಷ್ಟಪಡುತ್ತಿದ್ದೇನೆ. ನಮ್ಮ ಮಲೆನಾಡಿನ ಕೆ.ಇ.ಬಿ. ವಿಚಾರದಲ್ಲಿ ಎರಡು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ. ಮಲೆನಾಡಿನಲ್ಲಿ ಇವತ್ತು ಏನು ಕಷ್ಟ ಬಂದಿದೆ ಎಂದರೆ ಸೀಮೆ ಎಣ್ಣೆ ಇಲ್ಲ. ಅಡಿಗೆ ಅನಿಲ ಇಲ್ಲ, ಎಲೆಕ್ಟ್ರಿಕ್ ದೀಪ ಇಲ್ಲ, ಚಿಮಣಿ ಬುಡ್ಡಿ ಇಲ್ಲ, ಸೀಮೆ ಎಣ್ಣೆ ಹಾಕಿ ರಾತ್ರಿ ದೀಪ ಹಚ್ಚುವ ವ್ಯವಸ್ಥೆಗೆ ಎಲೆಕ್ಟ್ರಿಸಿಟಿ ಬಂತಲ್ಲ ಎಂದು ಚಿಮಣಿ ಬುಡ್ಡಿಯನ್ನು ಎಸೆದು ಇವತ್ತು ಅದೂ ಇಲ್ಲ, ಕ್ಯಾಂಡಲ್ ಕೊಳ್ಳುವುದಕ್ಕೆ ಕಾಸ್ಟಿ ಸಾಮಾನ್ಯ

ಜನರಿಗೆ ಎಟಕದ ವಸ್ತುವಾಗಿದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಈ ಇಲಾಖೆ ಮಲೆನಾಡು ಭಾಗದ ಜನರಿಗೆ ವರವಾಗುವ ಬದಲು ಶಾಪವಾಗಿ ತಟ್ಟಿದೆ ಎಂದರೆ ತಪ್ಪಾಗುವುದಿಲ್ಲ. ವಿದ್ಯುತ್ ಯಾವ ವೇಳೆಯಲ್ಲಿ ಬರುತ್ತದೋ ಹೋಗುತ್ತದೋ ಗೊತ್ತಿಲ್ಲ. ಸೀತೂರು ಎಂಬ ಪ್ರದೇಶದಲ್ಲಿ ನಾಗರಮಕ್ಕಿ ಎಂಬ ಹಳ್ಳಿ ಇದೆ. ಅಲ್ಲಿ 6 ತಿಂಗಳಿಂದ ಕರೆಂಟ್ ಇಲ್ಲ. ಕಂಬ ಬಿದ್ದಿದೆ, ಹಾಕುವ ವ್ಯವಸ್ಥೆ ಮಾಡಿಲ್ಲ. ಏತಕ್ಕೆ ಹಾಕಿಲ್ಲವೆಂದು ಕೇಳಿದರೆ ಕಂಬ ಕೊಡಿಸಿ, ಮೆಟೀರಿಯಲ್ ಕೊಡಿಸಿದರೆ ಹಾಕಲಿಕ್ಕೆ ಸಾಧ್ಯವೆಂದು ಹೇಳುತ್ತಾರೆ.

ಬಹುಶಃ ನಾನು ಹಾಗೂ ನನ್ನ ಸಹಶಾಸಕಮಿತ್ರರು ಎಲ್ಲರೂ ಇವತ್ತಿನ ಸ್ಪೀಕರ್ ಮೋಟಮ್ಮನವರ ಜೊತೆಯಲ್ಲಿ ಸಹ ನಾವು ಕೆ.ಇ.ಬಿ. ಆಫೀಸಿಗೆ ಹೋಗಿ ಕೇಳಿದಾಗ ನಾವು ಎಲ್ಲಾ ಮೆಟೀರಿಯಲ್ಸ್ ಕೊಟ್ಟಿದ್ದೇವೆ. ಏತಕ್ಕೆ ಹಾಕಿಲ್ಲ ಎಂದು ತಿಳಿಯುತ್ತೇವೆ ಎಂದು ಹೇಳಿದರು. ಆದರೆ ಇದುವರೆಗೆ ಆ ಕೆಲಸ ಮಾಡಲಿಲ್ಲ. ಈಗಾಗಲೇ ಅದು ನಡೆದು 15-20 ದಿವಸದ ಹಿಂದೆ ರಿಪೇರಿ ಮಾಡಿದ್ದಾರೆ. ಬಹುಶಃ ಎಷ್ಟು ದಿವಸ ಕರೆಂಟ್ ಇರುತ್ತದೋ ಗೊತ್ತಿಲ್ಲ. ಏಕೆಂದರೆ ಯಾವ ಮೆಟೀರಿಯಲ್ಸ್ ಇಲ್ಲ. ಯಾರು ಕೊಡಬೇಕು ಎಲ್ಲಿಂದ ಕೊಡಬೇಕು ಎಂಬ ಬಗ್ಗೆ ಇಲಾಖೆ ಮುಖಾಂತರ ಸಮಸ್ಯೆ ಬಗೆಹರಿಸಿಕೊಳ್ಳಬೇಕೇ ಹೊರತು ನಾವು ಬಂದು ಬೆಂಗಳೂರಿನಲ್ಲಿ ಅಥವಾ ಚಿಕ್ಕಮಗಳೂರಿನಲ್ಲಿ ನಿಂತು ಲಾರಿ ತುಂಬಿಸಿ ಕಳುಹಿಸುವ ವ್ಯವಸ್ಥೆ ನಮಗೆ ಬಿಟ್ಟಿದ್ದಲ್ಲ. ಇದು ಅಧಿಕಾರಿಗಳಿಗೆ ಬಿಟ್ಟಿರತಕ್ಕ ವ್ಯವಸ್ಥೆ. ಇದನ್ನು ಅವರು ಮಾಡಬೇಕು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಇನ್ನು ಲೈನ್‌ಮನ್‌ಗಳ ಸಮಸ್ಯೆ ಬಗ್ಗೆ ಹೇಳುತ್ತೇನೆ. ನನ್ನ ಊರಿನಲ್ಲಿ ನನ್ನ ಮಂಡಲ ವ್ಯಾಪ್ತಿಯಲ್ಲಿ ಲೈನ್ ಮನ್‌ಗಳ ಸಮಸ್ಯೆ ಬಗ್ಗೆ ಹೇಳುತ್ತೇನೆ. ನನ್ನ ಊರಿನಲ್ಲಿ ನನ್ನಮಂಡಲ ವ್ಯಾಪ್ತಿಯಲ್ಲಿ ಲೈನ್‌ಮನ್ ಗಳು ಏನು ಎರಡು ದಿನ ಇರಬೇಕಾಗಿದೆ. ಅದೂ ಇರದೆ ಅವರು ಬಹುಶಃ ಅಲ್ಲಿಂದ 12 ಕಿಲೋಮಿಟರ್ ಆಚೆ ಇರತಕ್ಕ ಕೊಪ್ಪ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿ ವಾಸವಾಗಿದ್ದು ಬೆಳಗ್ಗೆ 9-10 ಗಂಟೆಗೆ ಬಂದು ಪುನಃ ಮೂರು ಗಂಟೆಗೆ ವಾಪಸ್ ಹೆಡ್‌ಕ್ವಾರ್ಟರ್ಸ್‌ಗೆ ಹೋಗುವ ವ್ಯವಸ್ಥೆ ಇಟ್ಟುಕೊಂಡಿದ್ದಾರೆ. ಲೈನ್‌ಮನ್ ಡ್ಯೂಟಿ ಏನು, ಅವರು ಏನು ಕೆಲಸ ಮಾಡಬೇಕು. ಅವರಿಗೆ ನೀವು ಏತಕ್ಕೆ ಹೀಗೆ ಹೆದರಬೇಕು ಎಂಬ ಪ್ರಶ್ನೆಯನ್ನು ಕೇಳುತ್ತಾ ಆ ಬಿಗುಮಾನವನ್ನು ನಾವು ಇಟ್ಟುಕೊಳ್ಳದೇ ಹೋದರೆ ಬಹುಶಃ ಮುಂದೆ ಬರುವ ದಿವಸಗಳಲ್ಲಿ ಲೈನ್‌ಮನ್‌ಗಳು ತಂತಿ ಕಂಬಕ್ಕೆ ಹತ್ತುವ ಕೆಲಸವನ್ನೂ ನಿಲ್ಲಿಸುತ್ತಾರೆ ಎಂಬ ಅನಿಸಿಕೆ ಇದೆ. ಆದ್ದರಿಂದ ಈ ಬಗ್ಗೆ ತಾವು ಹೆಚ್ಚಿನ ಗಮನ ಕೊಟ್ಟು ಅವರನ್ನು ಎಲ್ಲಿ ಪೋಸ್ಟ್ ಮಾಡಿದ್ದೀರೋ ಆ ಭಾಗದಲ್ಲೇ ಅವರು ಇರುವಂಥ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ನಾಗರಮಕ್ಕಿ ಎಂಬ ಊರಿಗೆ ಆರು ತಿಂಗಳಿಂದ ಕರೆಂಟ್ ಇಲ್ಲ ಎಂದು ನಾವು ಏನು ಹೇಳಿದ್ದೇವೆ ಅಲ್ಲಿ ಆರು ತಿಂಗಳಿಗೆ ಸಂಬಂಧಪಟ್ಟಂತೆ ಪ್ರತಿ ತಿಂಗಳು ಮೀಟರ್ ಛಾರ್ಜನ್ನು ಸಂಪೂರ್ಣವಾಗಿ ವಸೂಲಿ ಮಾಡಿಕೊಂಡು ಹೋಗುತ್ತಿದ್ದಾರೆ. ಬಹುಶಃ ಆ ಊರಿನವರಿಗೆ ಉತ್ತರ ಹೇಳುವುದಕ್ಕಾಗುತ್ತಿಲ್ಲ. ಆರು ತಿಂಗಳಿಂದ ಲೈನ್‌ಇಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಲೈನ್ ಇಲ್ಲದ ಮೇಲೆ ಕರೆಂಟ್ ನಮಗೆ ಎಲ್ಲಿದೆ, ನಾವು ಏತಕ್ಕೆ ಕರೆಂಟ್ ಚಾರ್ಜ್ ಕೊಡಬೇಕು ಎಂದು ಪ್ರಶ್ನೆ ಮಾಡಿದ್ದಾರೆ, ಆದ್ದರಿಂದ ಈ ಎಲ್ಲಾ ಸಮಸ್ಯೆಗಳನ್ನು ತಾವು ಬಗೆಹರಿಸಬೇಕೆಂದು ಈ ಸಂದರ್ಭದಲ್ಲಿ

ಹೇಳುತ್ತೇನೆ. ಇನ್ನು ಮಲೆನಾಡಿನಲ್ಲಿ ಭಾಗ್ಯಜ್ಯೋತಿ ಸ್ಕೀಮುಗಳನ್ನು ಕೊಡುವ ವ್ಯವಸ್ಥೆ ಬಹುಶಃ ಎಲ್ಲಾ ಭಾಗದಲ್ಲಿ ಮುಗಿದಿದೆ ಎಂದು ರಿಪೋರ್ಟ್ ನಾನು ಕೇಳಿದ್ದೇನೆ. ನನ್ನ ಭಾಗದಲ್ಲಿ 203 ಹ್ಯಾಮ್ಲೆಟ್ ವಿಲೇಜಸ್‌ಗೆ ಕರೆಂಟ್ ಹೋಗಿಲ್ಲ. ಅವರಿಗೆ ಹೊಸ ಯೋಜನೆ ಹಾಕಿ ಅಲ್ಲಿಗೆ ಕರೆಂಟ್ ಕೊಡುವ ವ್ಯವಸ್ಥೆಮಾಡಬೇಕು. ಈಗಾಗಲೇ ಏನು ಭಾಗ್ಯಜ್ಯೋತಿ ಕೊಟ್ಟಿದ್ದೇವೆ ಅಲ್ಲಿ 15 ಜನಗಳಿಗೆ ಮಾತ್ರ ಒಂದು ತಾಂಡಾದಲ್ಲಿ ಕೊಡುವ ವ್ಯವಸ್ಥೆ ಇದೆ. ಆದ್ದಿರಂದ ಈಗ ಎಲ್ಲ ಕಡೆ ಕೊಟ್ಟಾಗಿದೆ ಎಂದು ಹೇಳಬಾರದು,

ಬಹುಶಃ 100-150 ಮನೆಗಳಿದ್ದರೂ 15 ಮನೆಗಳಿಗಿಂತ ಹೆಚ್ಚು ಕೊಡುವುದಕ್ಕೆ ವ್ಯವಸ್ಥೆ ಇಲ್ಲ. ಆ 15 ಮನೆಯನ್ನು 40 ಮನೆಗಳಿಗಾದರೂ ಏರಿಸಬೇಕು. ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನೂ ಅನೇಕ ಮಲೆನಾಡಿನ ಗುಡ್ಡಗಾಡು ಪ್ರದೇಶದಲ್ಲಿ ಅದರಲ್ಲೂ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ ಇರುವ ಪ್ರದೇಶದಲ್ಲಿ ಇವತ್ತು ಆರ್. ಇ.ಸಿ. ಯೋಜನೆ ಮೂಲಕವಾಗಿ ಏನು ಲೈನ್‌ಗಳು ಹೋಗಿದೆಯೋ ಅದು ಅನೇಕ ಕಡೆ ನಿಂತಿದೆ. ಸಂಪೂರ್ಣವಾಗಿ ಹೋಗುವ ವ್ಯವಸ್ಥೆ ಮಾಡಿ ಆರ್. ಇ.ಸಿ. ಯೋಜನೆಯಿಂದ ಹೆಚ್ಚು ಪ್ರಯೋಜನವಾಗುವುದಕ್ಕೆ ತಾವು ಸಹಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ಕ್ಷೇತ್ರವಾದ ಕೊಪ್ಪಕ್ಕೆ ಈಗಾಗಲೇ ಎಲೆಕ್ಟ್ರಿಕಲ್ ಸಬ್ -ಡಿವಿಷನ್‌ಓಪನ್ ಮಾಡಬೇಕೆಂದು ಬೇಡಿಕೆ ಇಟ್ಟಿದ್ದೆ. ಈಗಾಗಲೇ ಅದನ್ನು ಮಾಡಿದ್ದಾರೆ. ಆದರೆ ಅಲ್ಲಿ ಲಾರಿ ಯಾಗಲೀ ಜೀಪ್ ಆಗಲೀ ಕೊಡುವಂಥ ವ್ಯವಸ್ಥೆಯೂ ಸಹ ಈ ಯೋಜನೆಯಲ್ಲಿ ಅಳವಡಿಸಿದೆ. ನಮಗೆ ಹಳೇ ಜೀಪನ್ನು ಕೊಟ್ಟಿದ್ದಾರೆ. ಹಾಗಾದರೆ ಹೊಸ ಜೀಪ್ ಎಲ್ಲಿ ಹೋಯಿತು? ಎಂದು ನಮ್ಮ ಭಾಗದ ಜನ ಕೇಳುತ್ತಿದ್ದಾರೆ. ಹಳೇ ಲಾರಿಯನ್ನು ಮಲೆನಾಡಿಗೆ ಕೊಟ್ಟಿದ್ದಾರೆ. ಹೊಸ ಲಾರಿ ಎಲ್ಲ ಹೋಯಿತು. ಎಂಬ ಪ್ರಶ್ನೆ ಬರುತ್ತದೆ. ಆದ್ದರಿಂದ ಯಾವ ಸಬ್ -ಡಿವಿಷನ್ ಹೊಸದಾಗಿ ಪ್ರಾರಂಭವಾಗುತ್ತದೋ ಅಲ್ಲಿ ಹೊಸದಾಗಿ ವಾಹನವನ್ನು ಕಳುಹಿಸಬೇಕೆಂಬ ವಿಚಾರವನ್ನು ತಮ್ಮ ಮುಂದಿಟ್ಟು ಈ ಎಲ್ಲ ವಿಚಾರಗಳ ಬಗ್ಗೆ ಸೂಕ್ತ ಗಮನ ಹರಿಸಿ ಮಲೆನಾಡಿನನ ಜನರಿಗೆ ಸಹಕಾರವನ್ನು ಕೊಡಬೇಕೆಂದು ಮತ್ತೊಮ್ಮೆ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಂಡು ನನಗೆ ನಾಲ್ಕು ಮಾತುಗಳನ್ನು ಆಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಈರಪ್ಪ ಮಾರೇಪ್ಪ ಶೆಡ್‌ಶ್ಯಾಲಲಾ (ಅಥಣಿ) : ಮಾನ್ಯ ಅಧ್ಯಕ್ಷಿಣಿಯರೆ, ನಮ್ಮ ಬೆಳಗಾಂ ಜಿಲ್ಲೆಯು ನೀರಾವರಿ ದೃಷ್ಟಿಯಿಂದ ಬಹಳ ಹಿಂದುಳಿದಿದೆ. ಬೆಳಗಾಂ ಜಿಲ್ಲೆಯಲ್ಲಿ ದೊಡ್ಡ ದೊಡ್ಡ ನದಿಗಳಾದ ಕೃಷ್ಣ, ಮಲಪ್ರಭ, ಘಟಪ್ರಭ ನದಿಗಳು ಹರಿದಿದ್ದರೂ ಸಹ ಅವುಗಳ ಸದುಪಯೋಗವನ್ನು ನಾವು ಇಲ್ಲಿಯವರೆಗೆ ಸಾಕಷ್ಟು ಮಾಡಿಕೊಂಡಿಲ್ಲ . ಈ ಮಲಪ್ರಭ, ಘಟಪ್ರಭ, ಮಾದಾಯಿ, ಹಿಪ್ಪರಗಿ ಯೋಜನೆಗಳು ಬಹಳ ದಿನಗಳ ಹಿಂದೆ ಪ್ರಾರಂಭವಾಗಿದ್ದರೂ ಪೂರ್ಣವಾಗದೆ ಅಷ್ಟಕ್ಕೇ ಉಳಿದು ಆ ಯೋಜನೆಗಳು ಸದುಪಯೋಗ ನಮ್ಮ ಭಾಗದ ಜನರಿಗೆ ಆಗಿಲ್ಲ.

10.40 ಎ.ಎಂ.

ನಮ್ಮ ಕ್ಷೇತ್ರ ಅಥಣೆಯಲ್ಲಿ ಕೃಷ್ಣಾ ನದಿ ಹರಿಯುತ್ತದೆ. ಕೃಷ್ಣ ನದಿಗೆ ಹಿಪ್ಪರಗಿ ಬ್ಯಾರೇಜ್ ಎನ್ನುವ ಯೋಜನೆಯನ್ನು 1970-71 ನೇ ಇಸವಿಯಲ್ಲಿ ಸರ್ಕಾರ ಪ್ರಾರಂಭಮಾಡಿತು. ಆದರೆ ಇದುವರೆಗೂ 20 ವರ್ಷಗಳಾದರೂ ಅದು ನನೆಗುದಿಗೆ ಬಿದಿದೆ. ಆ ಯೋಜನೆಗೆ ವರ್ಷಕೆ 1 ಕೋಟಿ 60 ಲಕ 70 ಲಕಗಳ ಗ್ರಾಂಟ್

ಬರುತ್ತದೆ. ಆದರೆ ಇದರಲ್ಲಿ 50 ರಿಂದ 60 ಲಕ್ಷದವರೆಗೆ, ಎಸ್ಟಾಬ್ಲಿಷಮೆಂಟ್‌ಗೇ ಖರ್ಚಾಗಿ ಯೋಜನೆ ಇನ್ನೂ ಪ್ರಗತಿದಾಯಕವಾಗಿಲ್ಲ, ಬರುವ 1 ಕೋಟಿಯಲ್ಲಿ ಅರ್ಧ ಮುಕ್ಕಾಲು ಭಾಗ ಎಸ್ಟಾಬ್ಲಿಷ್ ಮೆಂಟ್‌ಗೆ ಹೋಗುವುದರಿಂದ ಯೋಜನೆ ಸಲುವಾಗ ಹಣ ಖರ್ಚಾಗುವುದಿಲ್ಲ, ಆದ್ದರಿಂದ ಈ ಯೋಜನೆ ಸಲುವಾಗಿ ಸರ್ಕಾರ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿ ಈ ಯೋಜನೆಯನ್ನು ತ್ವರಿತಗತಿಯಲ್ಲಿ ಮಾಡಬೇಕು. ಈ ಯೋಜನೆಯಲ್ಲಿ ಸುಮಾರು 80 ಮಿಟರ್ ಪಾಯ ಹಾಕಿದರೆ ಸಾಕಷ್ಟು ನೀರು ನಿಲ್ಲಿಸಿ ಅಲ್ಲಿ ಸೌಕರ್ಯ ಒದಗಿಸಲು ಶಕ್ಯವಾಗುತ್ತದೆ. ನಮ್ಮ ಸರ್ಕಾರ ಪ್ರತಿ ವರ್ಷ ಕುಡಿಯುವ ನೀರಿನ ಸಲುವಾಗಿ 2ರಿಂದ 3ಕೋಟಿ ರೂಪಾಯಿಗಳನ್ನು ಮಹಾರಾಷ್ಟ್ರದವರಿಗೆ ಕೊಟ್ಟು ಕುಡಿಯುವ ನೀರನ್ನು ತೆಗೆದುಕೊಳುತ್ತಿರತಕ್ಕ ಪರಿಸ್ಥಿತಿ ಇದೆ.

ನಮ್ಮ ಸರ್ಕಾರ ಅಲ್ಲಿ ತಳಪಾಯ ಹಾಕಿದರೆ ಕುಡಿಯುವ ನೀರಿನ ಸಲುವಾಗಿಯಾದರೂ ಸ್ವಲ್ಪ ನೀರು ಅಲ್ಲಿ ನಿಂತು ಜನರಿಗೆ ಅನುಕೂಲವಾಗುತ್ತದೆ. ನೀರಾವರಿ ಮಂತ್ರಿಗಳು ನಮ್ಮ ಬೆಳಗಾಂ ಜಿಲ್ಲೆಯವರೇ ಆಗಿದ್ದಾರೆ, ಅವರು ರೈತಕುಟುಂಬದಿಂದ ಬಂದಿದ್ದಾರೆ. ಅವರು ಈಗಾಗಲೇ ಎಲ್ಲಾ ಯೋಜನೆಗಳಿಗೆ ಪ್ರತ್ಯಕ್ಷವಾಗಿ ಭೇಟಿ ಕೊಟ್ಟಿದ್ದಾರೆ. ಯೋಜನೆಗಳು ಯಾವಹಂತದಲ್ಲಿ ನಿಂತಿದೆ ಎನ್ನುವ ಬಗ್ಗೆ ಸಾಕಷ್ಟು ಪರಿಚಯ ಅವರಿಗೆ ಇದೆ. ಇವತ್ತು ಹಿಪ್ಪರಗಿ ಬ್ಯಾರೇಜ್ ಕೆಲಸ ಕೇವಲ ಟೆಕ್ನಿಕಲ್ ಸ್ಯಾಂಕ್ಷನ್ ಸಲುವಾಗಿಯೇ ನಿಂತಿದೆ. ಸರ್ಕಾರ ಕಳೆದ 4 ವರ್ಷಗಳಿಂದ ಟೆಕ್ನಿಕಲ್ ಸ್ಯಾಂಕ್ಷನ್ ಏನುಕೊಡುತ್ತಾರೆ? 1988-89 ರಿಂದ ಈ ಯೋಜನೆ ಏಕೆ ಪೆಂಡಿಂಗ್ ಇದೆ? ಟೆಕ್ನಿಕಲ್ ಸ್ಯಾಂಕ್ಷನ್‌ಗಾಗಿಯೇ ಪೆಂಡಂಗ್ ಇದೆಯೇ? ಸರ್ಕಾರ ಟೆಕ್ನಿಕಲ್ ಸ್ಯಾಂಕ್ಷನ್‌ಗೆ 4ವರ್ಷ ತೆಗೆದುಕೊಳ್ಳುವುದರಲ್ಲಿ ಅರ್ಥವಿಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಿ ಆ ಬಗ್ಗೆ ಫೈಲ್ ತರಿಸಿ ಟೆಕ್ನಿಕಲ್ ಸ್ಯಾಂಕ್ಷನ್‌ಗೆ ಏನಾದರೂ ಅಡಚಣೆ ಇದ್ದರೆ ಅದನ್ನು ಪ್ರತ್ಯಕ್ಷವಾಗಿ ಪರಿಶೀಲನೆ ಮಾಡಿ ಅದು ಕಾರ್ಯಗತ ಆಗುವ ಕಡೆ ಗಮನಹರಿಸಬೇಕೆಂದು ಹೇಳುತ್ತೇನೆ. ನಮ್ಮ ಅಥಣಿ ಕ್ಷೇತ್ರದ ಪಕ್ಕದಲ್ಲಿ ಮಹಾರಾಷ್ಟ್ರ ಸರ್ಕಾರದವರು ಒಂದು ಟಾಕರೆ ಎನ್ನುವ ಯೋಜನೆಯನ್ನು ಕೈಗೆತ್ತಿಕೊಂಡಿದ್ದಾರೆ.ಇದು ಅಥಣಿ ತಾಲ್ಲೂಕಿನ ಗಡಿಗೆ ಹೊಂದೇ ಇದೆ. ಮಹಾರಾಷ್ಟ್ರ ಸರ್ಕಾರದವರು ಯುದ್ಧೋಪಾದಿಯಲ್ಲಿ ಅಲ್ಲಿ ಸುಮಾರು 300 ಕೋಟಿ ರೂಪಾಯಿಗಳ ಯೋಜನೆಯನ್ನು ಹಾಕಿಕೊಂಡಿದ್ದಾರೆ.

ಈ ವಿಚಾರವಾಗಿ ನಾನು ಆರಿಸಿ ಬಂದ 2 ವರ್ಷದಿಂದ ಸರ್ಕಾರಕ್ಕೆ ಈ ಒಂದು ವಿಷಯವನ್ನು ವಿನಂತಿ ಮಾಡಿಕೊಂಡೇ ಬಂದಿದ್ದೇನೆ. ಅದೇನೆಂದರೆ ನಮ್ಮ ಸರ್ಕಾರದವರೂ ಈ ಯೋಜನೆಯಲ್ಲಿ ಸ್ವಲ್ಪ ಹಣವನ್ನು ತೊಡಗಿಸಿ ಅದರಲ್ಲಿ ಪಾಲುದಾರರಾದರೆ ನಮಗೂ ಒಂದು ಕೆನಾಲ್ ಬರುತ್ತದೆ. ನಾವು ಪಾಲುದಾರರಾಗಿ ನಮಗೂ ಕೆನಾಲ್ ಬಂತೆಂದರೆ ಅಥಣಿ ತಾಲ್ಲೂಕಿನ ಸುಮಾರು 25 ಹಳ್ಳಿಗಳಿಗೆ ನೀರಾವರಿ ಯೋಜನೆಯಾಗುತ್ತದೆ. ನಾನು ಆರಿಸಿಬಂದಮೇಲೆ ಮೇಲಿಂದ ಮೇಲೆ ಈ ಬಗ್ಗೆ ಒತ್ತಡ ತರುತ್ತಿದ್ದೇನೆ.ಆದರೆ ಸರ್ಕಾರ ಇದರ ಬಗ್ಗೆ ಬಗ್ಗೆ ಏನೂ ಮಾಡಿಲ್ಲ. ನನ್ನ ವಿನಂತಿ ಏನೆಂದರೆ ಮಹಾರಾಷ್ಟ್ರದ ಜೊತೆ ಮಾತನಾಡಿ ಟಾಕರ್ ಯೋಜನೆಯ ರೂಪು ರೇಷೆಗಳನ್ನು ತರಿಸಿ ನಮ್ಮ ಸರ್ಕಾರ ಅದರಲ್ಲಿ ಎಷ್ಟು ಹಣ ಕೊಡಬೇಕು. ಅದನ್ನು ಕೊಟ್ಟು ಯೋಜನೆಯ ಸದುಪಯೋಗವನ್ನು ನಮ್ಮ ಭಾಗದ ಜನರೂ ಮಾಡಿಕೊಳ್ಳಬಹುದಾಗಿದೆ. ಈ ಬಗ್ಗೆ ಸರ್ಕಾರ ಗಮನಹರಿಸಬೇಕು. ಇನ್ನು ಹಿಪ್ಪರಗ್ ಬ್ಯಾರೇಜ್‌ದು 1970-71 ರಲ್ಲಿ ಎಸ್ಟಿಮೇಟ್ 21 ಕೋಟಿ ಇದ್ದು ಈಗ ಆಯೋಜನೆಯ

ಆದ್ದರಿಂದ ನನ್ನ ವಿನಂತಿ ಏನೆಂದರೆ ಈ ಯೋಜನೆ ಮಾಡಿಷ್ಟೆ ಮಾಡಿ ಕನಿಷ್ಟ ನೀರು ನಿಲ್ಲಿಸುವ ಸಲುವಾಗಿಯಾದರೂ ವ್ಯವಸ್ಥೆಮಾಡಬೇಕು. ಹಿಂದಿನ ಮಂತ್ರಿಗಳುಈ ಬಗ್ಗೆ 55 ಕೋಟಿ ರೂಪಾಯಿಯ ಎಸ್ಟಿಮೇಟ್ ಮಾಡಿದ್ದರು. ಅಲ್ಲಿ ನೀರನ್ನು ನಿಲ್ಲಿಸಿದರೆ ರೈತರು ಸ್ವಂತ ಖರ್ಚಿನಲ್ಲಿ ಅಥವಾ ಸಹಕಾರಿ ಸಂಘಗಳ ಮುಖಾಂತರ ಪೈಪ್‌ಲೈನ್ ಹಾಕಿಕೊಂಡು ನದಿ ನೀರನ್ನು ಉಪಯೋಗ ಮಾಡಿಕೊಳ್ಳುತ್ತಾರೆ. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯ ವಿನಂತಿ ಮಾಡುತ್ತೇನೆ. ಬೆಳಗಾಂ ಜಿಲ್ಲೆಯ ಯೋಜನೆಗಳಾದ ಮಲಪ್ರಭಾ, ಘಟಪ್ರಭಾ, ಮಹದಾಯಿ, ಹಿಪ್ಪರಗಿ ಬ್ಯಾರೇಜಿನಂತಹ ಯೋಜನೆಗಳ ಬಗ್ಗೆ ಮಾನ್ಯಮಂತ್ರಿಗಳು ಫೈಲ್ ತರಿಸಿ ಯೋಜನೆ ಪೂರ್ಣಗೊಳ್ಳುವ ಬಗ್ಗೆ ಪ್ರತ್ಯಕ್ಷವಾಗಿ ಲಕ್ಷವಹಿಸಿ ಬೆಳಗಾಂ ಜಿಲ್ಲೆಗೆಸುಖ ಸೌಲಭ್ಯಗಳನ್ನು ಒದಗಿಸಿಕೊಂಡುವ ಕಡೆಗೆ ಗಮನ ಕೊಡಬೇಕೆಂದು ಮನವಿಮಾಡಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

+ ಶ್ರೀ ಎಸ್. ಹೆಚ್. ಕೌಜಲಗಿ : (ಬೈಲಹೊಂಗಲ) ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಹಿರಿಯ ಸದಸ್ಯರುಗಳು ಮಾನ್ಯ ಮಂತ್ರಿಗಳು ಮಂಡಿಸಿದ ತಕ್ಕ ಬೇಡಿಕೆಗಳ ಬಗ್ಗೆ ಮಾತನಾಡಿದ್ದಾರೆ. ನಾನು ಬೇಡಿಕೆಗಳನ್ನು ವಿರೋಧಿಸಿ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರು ಬೇಡಿಕೆಗಳನ್ನು ವಿರೋಧ ಮಾಡಿ ಮಾತನಾಡುವುದಾದರೆ, ಬಜೆಟ್ ಮಂಜೂರು ಮಾಡುವುದಾದರೂ ಹೇಗೆ? ಅವರು ಸಪೋರ್ಟ್ ಮಾಡಿದರೆ ಬಜೆಟ್‌ನಲ್ಲಿ ಹಣವನ್ನು ಮಂಜೂರು ಮಾಡುತ್ತೇವೆ

ಶ್ರೀ ಎಸ್.ಹೆಚ್. ಕೌಜಲಗಿ : ನಮ್ಮ ಸರ್ಕಾರ ಬೇಡಿಕೆಗಳನ್ನು ಇಟ್ಟಾಗ ನಾವು ಸಪೋರ್ಟ್ ಮಾಡಿಯೇ ಮಾಡುತ್ತೇವೆ. ನನ್ನ ಸಮಯ ಹೋಗುತ್ತದೆ ಮಧ್ಯೆ ಯಾರೂ. ಮಾತನಾಡಬೇಡಿ. ಉತ್ತರ ಕರ್ನಾಟಕ ಭಾಗದಲ್ಲಿ ಬರತಕ್ಕ ಮಲಪ್ರಭ, ಘಟಪ್ರಭ ಹಾಗೂ ಕೃಷ್ಣಾನದಿಯ ಪ್ರಾಜೆಕ್ಟ್‌ಗಳು ಎಷ್ಟು ವರ್ಷಗಳಿಂದ ನಡೆಯುತ್ತಿವೆ, ಅವು ಯಾವ ಪ್ರಕಾರವಾಗಿ ಯಾವ ಹಾದಿಯಲ್ಲಿ ನಡೆಯುತ್ತಿವೆ ಎಂಬುದನ್ನು ಮಾನ್ಯ ಮಂತ್ರಿಗಳಿಗೆ ತಿಳಿಸುತ್ತೇನೆ. 1964 ನೇ ಇಸವಿಯಲ್ಲಿ ಪ್ರಾರಂಭವಾದ ಮಲಪ್ರಭ ಯೋಜನೆ ಇವತ್ತಿನವರೆಗೂ ಮುಗಿದಿಲ್ಲವೆಂದು ಹೇಳಿದರೆ ಇದು ಅತಿಶಯೋಕ್ತಿ ಆಗಲಿಕ್ಕಿಲ್ಲ. ಇದು ಸರ್ಕಾರಕ್ಕೆ ಸಹಿತ ಭೂಷಣವಲ್ಲವೆಂದು ಹೇಳಬಹುದು. ಏಕೆಂದರೆ ಈ ಯೋಜನೆಯಿಂದ ಬೆಳಗಾಂ ಜಿಲ್ಲೆಗೆ ಹಾಗೂ ಧಾರವಾಡ ಜಿಲ್ಲೆಯಲ್ಲಿ ಬರಗಾಲಕ್ಕೆ ತುತ್ತಾಗುವ ಪ್ರದೇಶಗಳಲ್ಲಿ ನೀರಾವರಿ ಮಾಡುವ ಉದ್ದೇಶದಿಂದ ಅಂದು ಮಲಪ್ರಭ ಯೋಜನೆ ಪ್ರಾರಂಭವಾಯಿತು. ಪ್ರಾರಂಭವಾದಾಗಿನಿಂದ ಇವತ್ತಿನ ತನಕ ನೀರು ಬಿಜಾಪುರ ಜಿಲ್ಲೆಗೆ ಮುಟ್ಟುವ ಕೆಲಸವಾಗಿಲ್ಲ, ಅದರ ಬಗ್ಗೆ ತಾವು ವಿಚಾರ ಮಾಡಬೇಕು. ಏತಕ್ಕೆ ಆಗಿಲ್ಲ, ಅದಕ್ಕೆ ಕಾರಣವೇನೆಂದರೆ ಆಯವ್ಯಯದಲ್ಲಿ ಇಡತಕ್ಕ ಹಣ ಕಡಿಮೆ. ಹೆಚ್ಚಿಗೆ ಹಣವನ್ನು ಬಜೆಟ್‌ನಲ್ಲಿ ಒದಗಿಸಿದರೆ ಯಾವುದಾದರೂ ಕೆಲಸ ಆಗುತ್ತದೆ. ಈ ವರ್ಷ ಬಜೆಟ್‌ನಲ್ಲಿ ಕೇವಲ 12 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಅದಕ್ಕೆ ಹಿಂದಿನ ರೇಟ್ ಪ್ರಕಾರ 260 ಕೋಟಿ ರೂಪಾಯಿ ಬೇಕು. 260 ಕೋಟಿ ರೂಪಾಯಿಗಳು ಬೇಕಾಗುವ ಕಡೆ 12 ಕೋಟಿ ರೂಪಾಯಿಗಳನ್ನು ಇಟ್ಟರೆ ಯಾವ ಪ್ರಕಾರ ಕೆಲಸ ಮುಗಿಯಬೇಕೆಂಬುದನ್ನು ತಾವು ವಿಚಾರ ಮಾಡಿ. ಇದೇ ಸಂದರ್ಭದಲ್ಲಿ

ರೈತರು ಇದ್ದಾರೆ. ಪುನರ್ವಸತಿ ಗ್ರಾಮಗಳಲ್ಲಿ ಇದುವರೆಗೆ ಯಾವುದೇ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿಲ್ಲವೆಂದು ನಾನು ಹೇಳಬಹುದು.

ನಿಜವಾಗಿಯೂ ಆ ಊರುಗಳಿಗೆ ಹೋದರೆ ಅಲ್ಲಿ ರಸ್ತೆಗಳಿಲ್ಲ, ಗಟಾರಗಳಿಲ್ಲ, ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಎಲೆಕ್ಟ್ರಿಸಿಟಿ ವ್ಯವಸ್ಥೆ ಇಲ್ಲ ಹಾಗೂ ಒಂದು ಶಾಖೆ ಸಹಿತ ಇಲ್ಲ, ಒಂದು ಶಾಲೆಯನ್ನು 1964ರಲ್ಲಿ ಕಟ್ಟಿಸಿದ್ದಾರೆ. ಅದು ಇವತ್ತಿನ ದಿವಸ ಸೋರುತ್ತಿದೆ. ಅದನ್ನು ರಿಪೇರಿ ಮಾಡಬೇಕಾದರೆ ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರು ಮಾಡಬೇಕೆಂದು ಹೇಳುತ್ತಾರೆ. ನಾನು ಒಂದು ಉದಾಹರಣೆ ಹೇಳಬೇಕಾದರೆ, ಬೈಲಹೊಂಗಲ ತಾಲ್ಲೂಕಿನಲ್ಲಿ ಸಂಗೊಳ್ಳಿ ಎಂಬ ಗ್ರಾಮದಲ್ಲಿ 8 ಕೋಣೆಗಳುಳ್ಳ ಶಾಲೆಯನ್ನು ಕಟ್ಟಿದ್ದಾರೆ. 8ಕೊಠಡಿಗಳುಳ್ಳ ಶಾಲೆಯನ್ನು ಕಟ್ಟಿದರೂ ಸಹಿತ ಇವತ್ತಿನವರೆಗೂ ಅದನ್ನು ಅಕ್ವೈರ್ ಮಾಡಿಲ್ಲ. ಹುಡುಗರು ಆ ಶಾಲೆಯಲ್ಲಿ ಕೂಡುವ ಪರಿಸ್ಥಿತಿ ಉಂಟಾಗಿಲ್ಲ. ನಾನು ಸರ್ಕಾರಕ್ಕೆ ಮೊದಲಿನಿಂದಲೂ ಹೇಳುತ್ತಿದ್ದೇನೆ. ಆ ಶಾಲೆಯನ್ನಾದರೂ ಕೆಡವಿ ಅದೇ ಜಾಗದಲ್ಲಿ ಹೊಸದಾಗಿ ಕಟ್ಟಡ ಕಟ್ಟಿರಿ ಎಂದು. ಮಾನ್ಯ ಪುಟ್ಟಸ್ವಾಮಿಗೌಡರು ಫೈಲ್ ಮೇಲೆ ಆರ್ಡರ್ ಮಾಡಿದರೂ ಕೂಡ ಇವತ್ತಿನ ತನಕ ಯಾವುದೇ ಕಾರ್ಯಕ್ರಮವನ್ನು ಕೈಗೊಂಡಿಲ್ಲ.

ಇದನ್ನು ತಾವು ವಿಚಾರ ಮಾಡಿ. ಬೆಳಗಾಂನಲ್ಲಿ ಚೀಫ್ ಇಂಡಿನಿಯರ್ ಇರಿಗೇಷನ್ ಅವರ ಆಫೀಸ್ ಇದೆ. ಅಲ್ಲಿ ಎಷ್ಟೊಂದು ತ್ವರಿತಗತಿಯಿಂದ ಕೆಲಸ ನಡೆಯುತ್ತದೆ ಎನ್ನುವುದು ತಮಗೆ ಗೊತ್ತಿದೆ. ಅದರ ಬಗ್ಗೆ ಹೆಚ್ಚಿಗೆ ಹೇಳಿದರೆ, ಬೆಳಗಾಂ ಜಿಲ್ಲೆಯ ಒಬ್ಬ ಶಾಸಕನಾಗಿ ನನಗೆ ನಾಚಿಕೆ ಅನಿಸುತ್ತದೆ. ನಾನು ಅದರ ಬಗ್ಗೆ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಕಳೆದ ಮೂರು ವರ್ಷಗಳಿಂದ ಕೂಡಾ ಛೇರ್‌ಮನ್‌ರು ಇಲ್ಲ. ಮೂರು ವರ್ಷಗಳಿಂದ ಛೇರ್‌ಮನ್‌ರು ಇಲ್ಲವೆಂದರೆ ಕೆಲಸ ಯಾವ ಪ್ರಕಾರ ಆಗಬೇಕು? ಅಲ್ಲಿಗೆ ಒಬ್ಬರು ಅಡ್ಮಿನಿಸ್ಟ್ರೇಟರ್ ಸಹಿತ ಹಾಕುವುದಕ್ಕೆ ತಯಾರಾಗಿಲ್ಲ. ದೇವರ ಗುಡಿಯಲ್ಲಿ ದೇವರೆ ಇಲ್ಲ ಹಾಗಾದರೆ ಕೆಲಸ ಯಾವ ಪ್ರಕಾರವಾಗಿ ಆಗಬೇಕು? ತಾವು ನಮ್ಮ ಜಿಲ್ಲೆಯವರೆಂದು ನಮಗೊಂದು ಹೆಮ್ಮೆ ಇತ್ತು.

ನಮ್ಮ ಜಿಲ್ಲೆಯಲ್ಲಿ ನೀರಾವರಿ ಕೆಲಸ ಕಾರ್ಯಗಳು ಈ ಪ್ರಕಾರ ನಡೆದರೆ ಬೇರೆ ಕಡೆ ಯಾವ ಪ್ರಕಾರ ನಡೆಯುತ್ತವೆ. ಎಂಬುದನ್ನು ತಾವು ವಿಚಾರ ಮಾಡಬೇಕು. ಪುನರ್ವಸತಿ ಗ್ರಾಮಗಳು ಏನಿವೆ ಆ ಗ್ರಾಮಗಳಿಗೆ ರಸ್ತೆ, ನೀರು, ದೀಪದ ವ್ಯವಸ್ಥೆಯನ್ನು ಮಾಡಿಸಬೇಕು. ಡಿವಿಜನಲ್ ಕಮಿಷನರ್ ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದರು. ಏನೇ ಮಾಡಿದರೂ ಸಹಿತ ಏನೂ ಆಗುವುದಿಲ್ಲ. ಕಮಿಟಿಗಳನ್ನು ನೇಮಿಸುತ್ತಾರೆ. ಆ ಕಮಿಟಿಯಿಂದ ರಿಪೋರ್ಟ್ ಬರಲಿಯೆಂದು ಹೇಳುತ್ತಾರೆ. ಆ ಕಮಿಟಿ ರಿಪೋರ್ಟ್ ಬರುವುದಿಲ್ಲ, ಅದು ಅಕ್ಸೆಪ್ಟ್ ಆಗುವುದಿಲ್ಲ. ಬೆಳಾಗಂ ಸವದತ್ತಿ ಬೈಲಹೊಂಗಲ ಮತ್ತು ರಾಮದುರ್ಗ ಈ ನಾಲ್ಕು ತಾಲ್ಲೂಕುಗಳಲ್ಲಿ ವರ್ಕ್ಸ್ ಪ್ರಪೋಸ್ ಮಾಡಿದ್ದಾರೆ. ಅದಕ್ಕೆ ದೀಡ್ ಕೋಟಿ ರೂಪಾಯಿ ಹಣ ಬೇಕಾಗುತ್ತದೆ. ಇವತ್ತಿನ ತನಕ ದೀಡ್ ಕೋಟಿ ರೂಪಾಯಿ ಹಣವನ್ನು ಸರ್ಕಾರ ಬಿಡುಗಡೆ ಮಾಡುವುದಕ್ಕೆ ಆಗಿಲ್ಲ, ಹೀಗಾಗಿ ನಾನು ತಮ್ಮನ್ನು ಕೇಳಿಕೊಳ್ಳುವುದು ಏನೆಂದರೆ, ದಯವಿಟ್ಟು ಡಿವಿಜನಲ್ ಕಮೀಷನರ್ ಅವರು ಪ್ರಪೋಸ್ ಮಾಡಿದಂಥ ಕೆಲಸಗಳನ್ನು ತಾವು ತೆಗೆದುಕೊಳ್ಳಬೇಕು. ಈ ಪ್ರದೇಶಗಳಿಗೆ ಮೇಲಿಂದ ಮೇಲೆ ಹೆಚ್ಚಾಗಿ ಭೇಟಿ ಕೊಟ್ಟು, ಅವರ ಸಂಕಷ್ಟಗಳನ್ನು ತಾವು ತಿಳಿದುಕೊಂಡು ಪರಿಹರಿಸತಕ್ಕಂಥ

ಇನ್ನು ಮೇಲೆ, ಮಲಪ್ರಭಾ ಯೋಜನೆ ಬಗ್ಗೆ ಎಲ್ಲರೂ ಹೇಳಿದ್ದಾರೆ, ನೀರು ಕಡಿಮೆ ಯಾಗುತ್ತಿದೆ. ನಾವು ಮಾದಾಯಿಯಿಂದ ನೀರು ತರುತ್ತೇವೆ ಎಂದು ಪ್ರತಿಯೊಬ್ಬರೂ ಹೇಳಿದರು. ಬಹಳ ಸಂತೋಷ. ಮಾನ್ಯ ಮುಖ್ಯಮಂತ್ರಿಗಳು ಸಹಿತ ಮಾದಾಯಿ ಪ್ರಾಜೆಕ್ಟ್‌ಗೆ ಅಡಿಗಲ್ಲು ಇಡುವುದಕ್ಕೆ ಡೇಟ್ ಕೂಡ ಫಿಕ್ಸ್ ಆಯಿತು. ಆದರೆ ದುರಾದೃಷ್ಟವಶಾತ್ ಎಲೆಕ್ಷನ್ ಡೇಟ್‌ಡಿಕ್ಲೇರ್ ಆದ ಸಲುವಾಗಿ ಅವರು ಬರಲಿಲ್ಲ. ನಾನು ಪ್ರಶ್ನೆ ಹಾಕಿದ್ದ, ಮಾದಾಯಿ ಪ್ರಾಜೆಕ್ಟ್‌ಗೆ ಎಷ್ಟು ಟಿ.ಎಂ.ಗೆ ಬರುತ್ತೆ ಎಂದು ಅದಕ್ಕೆ ಉತ್ತರ ಕೊಡುತ್ತಾ '1991-92' ಸಾಲಿನಲ್ಲಿ ಇಂತಹ ಯೋಜನೆಗೆ ಹಣ ಒದಗಿಸಲಾಗಿರುವುದಿಲ್ಲ. ಎಂದು ಹೇಳಿದರು. ನಾನು ಹೇಳಿದರೆ ಉತ್ತರ ಕರ್ನಾಟಕದ ಬಗ್ಗೆ ಟೀಕೆ ಮಾಡುತ್ತಾರೆ ಎಂದು ನಮಗೆ ಹೇಳುತ್ತಾರೆ. ಆದರೆ ನ್ಯಾಯವಾಗಿ ಸಿಗತಕ್ಕಂಥ, ಉತ್ತರ ಕರ್ನಾಟಕಕ್ಕೆ ಸಿಗಬೇಕಾದಂಥ ಹಣ ಕೊಡಿರಿ. ದಯವಿಟ್ಟು ಹೆಚ್ಚು ಕೊಡಬೇಡಿ. ಹೆಚ್ಚಿಗೆ ಕೊಟ್ಟು ನೀವು ಅಪವಾದ ತೆಗೆದುಕೊಳ್ಳುವುದಕ್ಕೆ ಹೋಗಬೇಡಿ. ನ್ಯಾಯವಾಗಿ ಸಿಗಬೇಕಾದಂಥ ಅಪ್ರೂವ್ ಆದದ್ದು ಕೊನೆಯ ಪಕ್ಷ ಕೊಡಿರಿ. ತಾವು ಶಾಸಕರಾಗಿ ಹೇಳಿದ್ದೀರಿ ಮತ್ತು ಮಂತ್ರಿಯಾಗಿ ಬಂದನಂತರ ಸಹಿತ ಹೇಳಿದ್ದೀರಿ. ಮೊದಾಯಿ ಯೋಜನೆಗೆ ಹೆಚ್ಚು ಹಣ ಒದಗಿಸಿಕೊಡುತ್ತೇವೆಂದು ಹೇಳಿದ್ದೀರಿ. ನನ್ನ ಹತ್ತಿರ ಪ್ರೆಸ್ ಕಟ್ಟಿಂಗ್ಸ ಇವೆ. ಅದನ್ನೆಲ್ಲ ಹೇಳುವುದಕ್ಕೆ ನನಗೆ ಹೆಚ್ಚಿಗೆ ವೇಳೆ ಇಲ್ಲ.

ಚೇರ್ಮನ್ : ಹತ್ತು ನಿಮಿಷ ಆಯಿತು.

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ : ಅವರ ಹತ್ತಿರ ಪ್ರೆಸ್ ಕಟಿಂಗ್ಸ್ ಇದೆಯೆಂದು ಹೇಳುತ್ತಾರೆ. ಅದನ್ನು ಅವರು ನನಗೆ ಕಳಿಸಿಕೊಡಲಿ.

ಶ್ರೀ ಶಿವಾನಂದ ಎಚ್. ಕೌಜಲಗಿ : ಕಳಿಸಿಕೊಡುತ್ತೇನೆ. ಕೃಷ್ಣಾ ಮೇಲ್ದಂಡೆ ಯೋಜನೆಗೆ ಈ ವರ್ಷ 107 ಕೋಟಿ ಕೋಟಿ ರೂಪಾಯಿ ಇಟ್ಟಿದ್ದಾರೆ. ಇವತ್ತಿನ ತನಕ, ಸೆಪ್ಟಂಬರ್ ತಿಂಗಳ ತನಕ ಖರ್ಚಾದ ಹಣ 46 ಕೋಟಿ ರೂಪಾಯಿಗಳು.

ಸಿಬ್ಬಂದಿ ವೆಚ್ಚ ಹಿಡಿದುಕೊಂಡು ಇಷ್ಟು ಖರ್ಚಾಗಿದೆ ಇದರಿಂದ ಇನ್ನು ಮುಂದೆ ಏನು ಉಪಯೋಗ ಬೀಳುತ್ತದೆ? ಅದೇ ಪ್ರಕಾರ ಹಿಪ್ಪರಿಗಿಗೆ 1 ಕೋಟಿ 50 ಲಕ್ಷ ಕೊಟ್ಟಿದ್ದಾರೆ ಇಷ್ಟು ಹಣ ಇಟ್ಟರೂ ಸಹಿತ ಡೆವಲಪ್‌ಮೆಂಟ್ ಸಲುವಾಗಿ ಒಂದು ಆಣೆ ಸಹಿತ ಖರ್ಚಾಗಿಲ್ಲ. ಆಫಿಸಿಗೆ ಖರ್ಚಾಗಿದ್ದರೆ ಸಂಬಳ ಸಲುವಾಗಿ ಇದು ಖರ್ಚಾಗಿದೆಯೇ ವಿನಹ ಬೇರೆ ಯಾವುದಕ್ಕೂ ಇಲ್ಲ ಆಗಿದೆ ಎಂದು ಹೇಳಿ ತಪ್ಪಾಗಿದ್ದರೆ ತಿದ್ದಿಕೊಂಳ್ಳುವುದಕ್ಕೆ ನಾನು ತಯಾರಿದ್ದೇನೆ. ಇದೇ ಪ್ರಕಾರ ಮಲಪ್ರಭಾ ಯೋಜನೆಗೆ 12 ಕೋಟಿ ಕೊಟ್ಟರೂ ಸಹಿತ ಒಂದು ಆಣೆ ಸಹಿತ ಡೆವಲಪ್‌ಮೆಂಟ್ ಸಲುವಾಗಿ ಖರ್ಚಾಗಿಲ್ಲ ಒಂದು ಕೆನಲ್ ರಿಪೇರಿ ಇಲ್ಲ ಒಂದು ಕೆನಲ್ ಡಿಶಿಲ್ಟಿಂಗ್ ಇಲ್ಲ. ಈ ರೀತಿ ಆಗುತ್ತಿದ್ದರೆ ಮುಂದೆ ಯಾವ ಪ್ರಕಾರ ಮಾಡಬೇಕು ಹಾಗೆಯೇ ಮಾರ್ಕಂಡಯ್ಯ ನದಿಗೆ 104 ಕೋಟಿ ಬೇಕು. ಇಷ್ಟು ಬೇಕಾಗಿದ್ದಾಗ ಇವತ್ತಿನ ತನಕ ಒಂದು ಪೈಸೆ ಸಹಿತ ಬಜೆಟ್‌ನಲ್ಲಿ ಇಟ್ಟಿಲ್ಲ. 16 ನೂರು ಕೋಟಿ ಇಟ್ಟು ಫಸ್ಟ್ ಸ್ಟೇಜ್ ಕೃಷ್ಣಾ ಬರುವ ಹೊತ್ತಿಗೆ ಖರ್ಚು ಮಾಡದೇ ಇದ್ದರೆ ಕಾವೇರಿಗೆ ಯಾವ ಪ್ರಕಾರ ಆಯಿತು ಅದೇ ಪ್ರಕಾರ ಕೃಷ್ಣಾಗೂ ಕೂಡ ಆಗುತ್ತದೆ ಎಂದು ನಾನು ಹೇಳುತ್ತೇನೆ. ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಯಾವ ಪ್ರಕಾರವಾಗಿ ಕೃಷ್ಣಗೆ ಅನ್ಯಾಯವಾಗುತ್ತಿದೆ ಎನ್ನುವುದರ ಬಗ್ಗೆ ಒಂದು ಅಗ್ರ ಲೇಖನ ಬಂದಿದೆ. ತಮಗೆ

ತೆಗೆದುಕೊಳ್ಳಬೇಕಾಗಿಲ್ಲವೆಂದು ಭಾವಿಸುತ್ತೇನೆ. ನಾನು ಹಿಂದೆ ಕೂಡ ಹೇಳಿದ್ದೆ ಮಲಪ್ರಭಾ ಘಟಪ್ರಭಾ ಯೋಜನೆಯಲ್ಲಿ ಹಳೆಯ ಟ್ರಕ್‌ಗಳು ಇವೆ.

1920ನೇ ಇಸವಿಯಿಂದ ಅವುಗಳು ಹಾಗೆಯೇ ಬಿದ್ದಿವೆ. ಅವುಗಳನ್ನು ಮಾರಿದರೆ ಸರ್ಕಾರಕ್ಕೆ ಹಣ ಬರುತ್ತದೆ. ಅದಕ್ಕೆ ಒಬ್ಬ ಚೀಫ್ ಇಂಜಿನಿಯರ್ ಇದ್ದಾರೆ. ಅವರು ಏನು ಕೆಲಸ ಮಾಡುತ್ತಾರೋ ಗೊತ್ತಿಲ್ಲ ದಯವಿಟ್ಟು ಅವುಗಳನ್ನು ಮಾರುವಂಥ ವ್ಯವಸ್ಥೆ ಮಾಡಬೇಕು. ಮತ್ತೆ ನಾನು ಹೆಚ್ಚಿಗೆ ವೇಳೆ ತೆಗೆದುಕೊಳ್ಳದೆ ಇವತ್ತಿನ ದಿವಸ ಎಲ್ಲ ನೀರಾವರಿ ಯೋಜನೆಗಳಿಗೆ ಹೆಚ್ಚಿಗೆ ಹಣ ಒದಗಿಸಿರಿ. ಈ ಆಯವ್ಯಯದಲ್ಲಿ ಇರುವಂಥ ಹಣವನ್ನು ದಯವಿಟ್ಟು ಕೊಡಬೇಕು. ತಮಗೆ ಒಳ್ಳೆಯ ಕೆಲಸ ಮಾಡುವಂಥ ಹುಮ್ಮಸ್ಸು ಇದೆ.

ಉತ್ತರ ಕರ್ನಾಟಕದವರು ಒಬ್ಬನು ನೀರಾವರಿ ಮಂತ್ರಿಗಳಾಗಿದ್ದಿರಿ ನೀವು ಒಳ್ಳೆಯ ಕೆಲಸ ಮಾಡಿ ನಮ್ಮ ಜಿಲ್ಲೆ ಒಳ್ಳೆಯ ಹೆಸರು ತಂದು ತಮಗೆ ಅನುಕೂಲ ಮಾಡುವುದಕ್ಕೆ ಅವಕಾಶ ಇದೆ ನಿಮಗೆ ಒಳ್ಳೆಯ ಸೆಕ್ರಟರಿಯವರು ಇದ್ದಾರೆ Secretary-II ix one of the best officers. He can do better work.

ಇಂತಹವರನ್ನು ಕೂಡಿಕೊಂಡು ಒಳ್ಳೆಯ ಕೆಲಸ ಮಾಡಿ. ಅದೇಪ್ರಕಾರ ಮಾರ್ಕಂಡೇಯ ಹಿಪ್ಪರಗಿ ಯೋಜನೆಗಳೇನಿವೆ ಇವುಗಳಿಗೆ ಸಂಬಂಧಪಟ್ಟಂತೆ ಎಲ್ಲಾ ಕೆಲಸ ಮಾಡಿ ಹೋದ ವರ್ಷ ಪ್ರತಿಯೊಬ್ಬ ಎಂ.ಎಲ್.ಎ. ಗೂ 12 ಲಕ್ಷ ಗ್ರಾಂಟ್ ಕೊಟ್ಟಿದ್ದೀರಿ ಈ ವರ್ಷವೂ ಅದರಂತೆಯೇ 12 ಲಕ್ಷ ರೂಪಾಯಿಗಳ ಗ್ರಾಂಟ್ ರೆಗ್ಯುಲರ್ ಪಿ.ಡಬ್ಲ್ಯು.ಡಿ ನಲ್ಲಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಏನಿದೆ ಇದನ್ನು ಕ್ಲೋಸ್ ಮಾಡಬೇಕೆಂದು ಕೈಮುಗಿದಿ ಕೇಳಿಕೊಳ್ಳುತ್ತೇನೆ. ಏಕೆಂದರೆ ಒಂದು ಕೋಟಿ ಮೂವತ್ತೇಳು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಇವತ್ತಿನವರೆಗೂ ಒಂದೂ ಕೆಲಸ ಪ್ರಾರಂಭ ಮಾಡದಂಥ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಏನಿದೆ ಇದು ಬಿಳಿಯ ಆನೆ ಆಗಿದೆ ದಯಮಾಡಿ ಇದರಿಂದ ಹೆಸರು ಕೆಡಿಸಿಕೊಳ್ಳಬೇಡಿ. ಇದನ್ನು ಕ್ಲೋಸ್ ಮಾಡಿ ಅಲ್ಲಿರುವ ಜನರಿಗೆ ಸಂಬಳ ಕೊಡುವ ಬದಲು ಈ ಕೆಲಸಕ್ಕೆ ರೊಕ್ಕ ಕೊಟ್ಟರೆ ಏನಾದರೊಂದು ಆಗಬಹುದು ಇದರಿಂದ ಮೈನರ್ ಇರಿಗೇಷನ್‌ಗೆ ಅನುಕೂಲವಾಗುತ್ತದೆಂದರೂ ತಪ್ಪಾಗಲಿಕ್ಕಿಲ್ಲ ಒಂದೇ ಒಂದು ಇರಿಗೇಷನ್ ಟ್ಯಾಂಕ್ ಚಿಕ್ಕಬುದಗನೂರು ಎಂಬಲ್ಲಿ ಟೆಕ್ನಿಕಲ್ ಸ್ಯಾಂಕ್ಷನ್ ಸಲುವಾಗಿ ಬಹಳ ವರ್ಷಗಳಿಂದ ನಿಮ್ಮ ಆಫೀಸಿನಲ್ಲಿಯೇ ಉಳಿದಿದೆ. ದಯಮಾಡಿ ಅದನ್ನು ಶುರು ಮಾಡಿ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ನಡೆದಿದೆ ಎಂದು ತೇರಿಸಿಕೊಡಿ ಎಂದು ಹೇಳಿ ಇನ್ನು ಹೆಚ್ಚಿಗೆ ಸಮಯ ತೆಗೆದುಕೊಳ್ಳದೆ ಇವತ್ತಿನದಿವಸ ಸಭಾಧ್ಯಕ್ಷಣಿಯವರು ಅವಕಾಶ ಕೊಟ್ಟಿದ್ದಾಕ್ಕಾಗಿ ಅವರಿಗೆ ಅಭಿನಂದನೆ ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ): ಮಾನ್ಯ ಸಭಾಧ್ಯಕ್ಷಿಣಿಯವರೇ ಸದನದ ಮುಂದೆ ಇರತಕ್ಕಂಥ ಲೋಕೋಪಯೋಗಿ ರಸ್ತೆಗಳು ಮತ್ತು ಸೇತುವೆಗಳು ವಿಧ್ಯುಚ್ಛಕ್ತಿ ಮೀನುಗಾರಿಕೆ ಸಣ್ಣನೀರಾವರಿ ಮುಂತಾದ ಬೇಡಿಕೆಗಳ ಬಗ್ಗೆ ನನ್ನ ಸಂಪೂರ್ಣ ಬೆಂಬಲವನ್ನು ತೋರಿಸುತ್ತಾ ನನ್ನ ಕ್ಷೇತ್ರಕ್ಕೆ ಹಾಗೂ ಬೆಂಗಳೂರು ನಗರಕ್ಕೆ ಸಂಭಂಧಪಟ್ಟಂತೆ ಕೆಲವು ವಿಷಯಗಳನ್ನು ಹೇಳುವುದಕ್ಕೆ

ಶ್ರೀ ಆರ್.ವಿ. ದೇಶಪಾಂಡೆ: ಈ ಡಿಮ್ಯಾಂಡ್ ಈಗಾಗಲೇ ಪಾಸ್ ಆಯಿತೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಸಂಬಂಧಪಟ್ಟ ಸಚಿವರುಗಳು ಸದನದಲ್ಲಿ ಇರುವುದು ಬೇಡವೆಂದು ತೀರ್ಮಾನ ಆಗಿದ್ದರೆ ನಾಳೆ ಏನು ಮಾಡಬೇಕೆಂದು ನಾವೂ ಕೂಡ ತೀರ್ಮಾನ ಮಾಡಿಕೊಳ್ಳಬೇಕಾಗುತ್ತದೆ. ಈ ಸರ್ಕಾರ ಇದೆಯೋ ಇಲ್ಲವೋ ಕೊನೆಯಪಕ್ಷ ಮಂತ್ರಿಗಳು ತಮ್ಮ ಇಲಾಖೆಗೆ ಸಂಬಂಧಪಟ್ಟ ಬೇಡಿಕೆ ಬಂದಾಗ ಇರುವುದು ಬೇಡವೇ? ಎನರ್ಜಿ ಮಂತ್ರಿಗಳು ಬಂದಿಲ್ಲ ಮೀನುಗಾರಿಕೆ ಮಂತ್ರಿಗಳು ಬಂದಿಲ್ಲ ಯಾರಿಗೂ ಸೀರಿಯಸ್‌ನೆಸ್ ಇಲ್ಲ. ಈ ಸರ್ಕಾರ ಇದೆಯೆಂದು ತಿಳಿದುಕೊಳ್ಳಬೇಕೇ? ನಾವು ಯಾವುದಕ್ಕಾಗಿ ಚರ್ಚೆ ಮಾಡಬೇಕೋ ನನಗೆ ಅರ್ಥವಾಗುವುದಿಲ್ಲ. ಈ ಸಂರ್ಭದಲ್ಲಿ ಅವರು ಬರುವುದು ಬೇಡವೇ? ನನಗನಿಸುತ್ತದೆ ಕಳೆದ 40 ವರ್ಷಗಳ ಕರ್ನಾಟಕ ವಿಧಾನ ಸಭೆಯ ಚರಿತ್ರೆಯಲ್ಲಿಯೇ ಡಿಮ್ಯಾಂಡ್ಸ್ ಚರ್ಚೆಯಾಗದ ರೀತಿಯಲ್ಲಿ ಪಾಸ್ ಆಗುವುದಕ್ಕೆ ವಿರೋಧಪಕ್ಷದವರು ಒಪ್ಪಿರುವುದು ಇದೇ ಮೊದಲನೇಯಬಾರಿ. ಇವತ್ತು 5-5ನಿಮಿಷ ಮಾನ್ಯ ಸದಸ್ಯರು ತಮ್ಮ ತಮ್ಮ ಕ್ಷೇತ್ರಗಳ ಬಗ್ಗೆ ಮಾತನಾಡುತ್ತಾರೆ. ಈ ಸಂದರ್ಭದಲ್ಲಿ ಮಂತ್ರಿಗಳು ಇದ್ದು ನೋಟ್ ಮಾಡಿಕೊಂಡು ಸಮಸ್ಯೆಯನ್ನು ಬಗೆಹರಿಸಲಿ ಮಂತ್ರಿಗಳೇ ಇಲ್ಲಿ ಕುಳಿತುಕೊಳ್ಳಲಿಲ್ಲವೆಂದರೆ ಇನ್ನು ಅಧಿಕಾರಿಗಳು ನಿಮ್ಮ ಮಾತನ್ನು ಹೇಗೆ ಕೇಳುತ್ತಾರೆ? ಇದು ನನಗೆ ಅರ್ಥವಾಗುವುದಿಲ್ಲ. ನಾವೆಲ್ಲಾ ಇಲ್ಲಿ ಸುಮ್ಮನೇ ಕುಳಿತುಕೊಂಡಿದ್ದೇವೆ ಇದಕ್ಕೆ ಜವಾಬ್ದಾರರು ಯಾರು?

ಶ್ರೀ ಡಿ.ಬಿ. ಚಂದ್ರೇಗೌಡ: ಆ ಮಂತ್ರಿಗಳನ್ನು ಕರೆದುಕೊಂಡು ಬರುವುದಕ್ಕೆ ಕೆ.ಎಸ್.ಆರ್.ಟಿ.ಸಿ. ಬಸ್ ಬೇಡವೆ?

SRI AZEEZ SAIT : Sir, it is accepted convention in this House. It is the joing responsibility of the Council of Ministers.

SRI R. V. DESHPANDE : It is a demand to a particular Department. The Power Minister should be here.

SRI AZEEZ SAIT : The concerned Departmental officers are there. they are noting down the points.

ಶ್ರೀ ಡಿ.ಬಿ. ಚಂದ್ರೇಗೌಡ: ಕೆ.ಎಸ್.ಆರ್.ಟಿ.ಸಿ. ಬಸ್ ಕಳಿಸಿ ಪವರ್ ಮಿನಿಸ್ಟರನ್ನು ಈ ಸದನಕ್ಕೆ ಕರೆದುಕೊಂಡು ಬರಬೇಕಾಯಿತು.

ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ): ಮಾನ್ಯಸಭಾಧ್ಯಕ್ಷಿಣಿಯವರೇ ಸದನದ ಮುಂದೆ ಇರತಕ್ಕ ಬೇಡಿಕೆಗಳನ್ನು ನಾನು ಬೆಂಬಲಿಸಿ ಬೆಂಗಳೂರು ನಗರಕ್ಕೆ ಮತ್ತು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ನಾನು ತಮ್ಮ ಮುಂದೆ ಇಡುವುದಕ್ಕೆ ಇಚ್ಛೆ ಪಡುತ್ತೇನೆ. ಪ್ರಥಮವಾಗಿ ನಮ್ಮ ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್ ಏನಿದೆ ಈ ಕೆ.ಇ.ಬಿ.ಗೂ ಮತ್ತು ಬೆಂಗಳೂರು ಮಹಾನಗರ ಪಾಲಿಕೆಗೂ ಯಾವುದೇ ನಗರಕ್ಕೆ ಸಂಬಂಧಪಟ್ಟಂಥೆ ಪ್ಲಾನಿಂಗ್ ಆಗಿರಲಿ ಎಕ್ಸಿಕ್ಯೂಷನ್ ಸಮಯವೇ ಆಗಿರಲಿ ಸೂಕ್ತ ಮಟ್ಟದಲ್ಲಿ ಸರಿಯಾದ ಕೋಆರ್ಡಿನೇಷನ್ ಇಲ್ಲದೇ ಸಾಕಷ್ಟು ಜನತೆಗೆ ತೊಂದರೆ ಆಗುವುದರ ಜೊತೆಗೆ ಆರ್ಥಿಕವಾಗಿ ಸಾಕಷ್ಟು ನಷ್ಟವಾಗುತ್ತಾ ಇದೆ. ಈ ರೂಪದಲ್ಲಿ ಕೂಡ ಸರ್ಕಾರದ ಹಣ ಸೋರಿ ಹೋಗುತ್ತಿದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಸಾಧಾರಣವಾಗಿ ನಾಗರೀಕರ ಮನೆಗಳ ಮುಂದೆ ದೊಡ್ಡ ದೊಡ್ಡ ಟ್ರಾನ್ಸ್‌ಫಾರ್ಮರ್‌ಗಳನ್ನು ಇನ್‌ಸ್ಟಾಲ್ ಮಾಡುವಾಗ ಜನತೆಯ ಅಭಿಪ್ರಾಯವನ್ನು ಪಡೆಯುವುದಿಲ್ಲ. ನಗರ ಬೆಳೆಯುತ್ತಾ ಬೆಳೆಯುತ್ತಾ ಇರಬೇಕಾದರೆ ಜನಸಂಖ್ಯೆ ಬೆಳೆಯುತ್ತಾ ಇರಬೇಕಾಗಿದ್ದರೆ ನಾಗರೀಕರ ಅಪೋತ್ತರಗಳು ಬೆಳೆಯುತ್ತಾ ಇರಬೇಕಾಗಿದ್ದರೆ ಈ

ಟ್ರಾನ್ಸ್‌ಫಾರ್ಮರ್‌ಗಳು ಏನಿದೆ ಇವು ಜನತೆಯ ಜೀವನಕ್ಕೆ ಅಡ್ಡ ಬರುವಂತಹ ಒಂದು ಸಾಧನವಾಗಿ ಬರುತ್ತಿವೆ. ಟ್ರಾನ್ಸ್‌ಫಾರ್ಮರ್‌ಗಳನ್ನು ಈ ಕಂಜೆಸ್ಟಡ್ ಏರಿಯಾ ಎಂದು ಏನು ಹೇಳುತ್ತೇವೆ. ಆ ಜಾಗದಿಂದ ಶಿಫ್ಟ್ ಮಾಡಬೇಕೆಂದು ಹೇಳಿ ಎಷ್ಟೇ ಕೇಳಿಕೊಂಡರೂ ಕೂಡಾ ಇವು ಅಪಘಾತಕ್ಕೆ ಕಾರಣವಾಗುತ್ತದೆ ಜನತೆಯ ಜೀವನಕ್ಕೆ ಕಷ್ಟವಾಗುತ್ತದೆ.

ಇದನ್ನು ತೆಗೆಯಬೇಕೆಂದು ಹೇಳಿ ನಮ್ಮ ಕ್ಷೇತ್ರದಲ್ಲಿ ಎಷ್ಟೇ ಹೇಳಿದರೂ ಕೂಡ ಕೆ.ಇ.ಬಿ. ಅಧಿಕಾರಿಗಳು ಸ್ವಲ್ಪವೂ ಗಮನ ಕೊಡುವುದಿಲ್ಲ ಮತ್ತು ಏನಾದರೂ ಗಮನ ಕೊಡುವಂತಹ ಸಂಧರ್ಬ ಬಂದರೆ ಅದಕ್ಕೆ ಆಗುವ ಲಕ್ಷಾಂತರ ರೂಪಾಯಿಗಳ ಖರ್ಚನ್ನು ಸುತ್ತಮುತ್ತಲ ಮನೆಯವರೆಲ್ಲಾ ಕಟ್ಟಿಕೊಡಬೇಕು ಇಲ್ಲ ನಗರಪಾಲಿಕೆಯವರು ಕಟ್ಟಿಕೊಡಬೇಕೆಂದು ಹೇಳುತ್ತಾರೆ. ಈ ಒಂದು ಜನ ವಿರೋಧಿ ನೀತಿ ಏನಿದೆ ಅದನ್ನು ಮಾನ್ಯ ಮಂತ್ರಿವರ್ಯರು ಗಮನಕ್ಕೆ ತೆಗೆದುಕೊಂಡು ಈ ಕೆ.ಇ.ಬಿ. ಆಡಳಿತ ವರ್ಗಕ್ಕೆ ಸೂಕ್ತ ಡೈರೆಕ್ಷನ್ ಕೊಡಬೇಕು. ಜನತೆಗೆ ಇಂತಹ ಟ್ರಾನ್ಸ್‌ಫಾರ್ಮರ್‌ಗಳಿಂದ ತೊಂದರೆಯಾಗುತ್ತಿದೆ ಎಂದು ಹೇಳಿದರೆ ಅದನ್ನು ಶಿಫ್ಟ್ ಮಾಡಲೇಬೇಕು: ಅದೂ ಕೆ.ಇ.ಬಿ. ಖರ್ಚಿನಲ್ಲೇ ಮಾಡಬೇಕು. ಮಾವತರಹ ಕೆ.ಇ.ಬಿ. ಖರ್ಚಿನಲ್ಲಿ ಅನ್‌ಪ್ಲಾನ್ಡ್ ಅನ್‌ಸೈಟಿಫಿಕ್ ಬೇಸಿಸ್ ಮೇಲೆ ಇಂತಹ ಇನಸ್ಟಲೇಷನ್ ಮಾಡುತ್ತಾರೋ ಅದನ್ನು ಸ್ಥಳಾಂತರ ಮಾಡುವುದಕ್ಕೂ ಅವರು ಖರ್ಚು ಮಾಡಲೇ ಬೇಕು. ಹಾಗೆ ಮಾಡದೇ ಹೋದರೆ ನಾನಾದರೂ ಹೇಳುತ್ತೇನೆ ಇದು ನಗರಪಾಲಿಕೆ ಜವಾಬ್ದಾರಿಯೇ ಅಥವಾ ಕೆ.ಇ.ಬಿ. ಜವಾಬ್ದಾರಿಯೇ ಎಂಬುದನ್ನು ನಾವು ಗಮನಿಸುವುದಕ್ಕೆ ಸಾಧ್ಯ ಇಲ್ಲ ಅದರ ವಿರುದ್ಧ ಜನತೆಯನ್ನು ಸಂಘಟನೆ ಮಾಡಿ ಒಂದು ಹೋರಾಟ ಮಾಡಬೇಕಾದಂಥ ಸನ್ನಿವೇಶ ಬರುತ್ತದೆ. ಅದಕ್ಕೆ ಅವಕಾಶ ಮಾಡಿಕೊಡಬೇಡಿ ಎಂದು ಹೇಳಿ ನಾನು ಬಹಳ ಜವಾಬ್ದಾರಿಯುತವಾಗಿ ಹೇಳಬಯಸುತ್ತೇನೆ.

ಉಧಾಹರಣೆಗೆ ಸಂಪಂಗಿ ರಾಮನಗರದಲ್ಲಿ ಫಸ್ಟ್ ಮೇನ್ ರೋಡ್‌ನಲ್ಲಿ ಇರುವ ಟ್ರಾನ್ಸ್‌ಫಾರ್ಮರ್ ತೆಗೆಯಬೇಕೆಂದು ಸುತ್ತ ಮುತ್ತಲ ಮನೆಯವರು ಕೇಳುತ್ತಿದ್ದಾರೆ. ನಾನೂ ಕಾಗದ ಬರೆದು ಕಳುಹಿಸಿದ್ದೇನೆ. ಆದರೆ ಸಂಬಂಧಪಟ್ಟ ಎಂಜಿನಿಯರ್‌ಗಳು ಇರಲಿ ಅಥವಾ ಬೇರೆ ಯಾರೇ ಆಗಿರಲಿ ಆ ವಿಷಯದಲ್ಲಿ ಗಮನಹರಿಸಿದಂತೆ ಕಾಣುತ್ತಿಲ್ಲ. ಇಷ್ಟರಲ್ಲೇ ತೀವ್ರವಾಗಿ ಗಮನಹರಿಸದೇ ಹೋದರೆ ಟ್ರಾನ್ಸ್‌ಫಾರ್ಮರ್ ಸ್ಥಳಾಂತರ ಮಾಡದೇ ಹೋದರೆ ನಾನೇ ಖುದ್ದಾಗಿ ಹೋರಾಟ ಮಾಡಬೇಕಾಗಿ ಬರುತ್ತದೆ ಎಂದು ಈ ಸಮಯದಲ್ಲಿ ಹೇಳಬಯಸುತ್ತೇನೆ. ಅದಕ್ಕಾಗಿ ನಗರಪಾಲಿಕೆಯವರ ಜೊತೆಗೆ ಈ ಕೆ.ಇ.ಬಿ.ಯವರು ಹೊಂದಾಣಿಕೆ ಜನತೆಯ ಒಂದು ಒಳ್ಳೆಯದಕ್ಕಾಗಿ ಇಲ್ಲದಂತಾಗಿದೆ ಎಂದು ಹೇಳಿ ನಾನು ಭಾವಿಸುತ್ತೇನೆ. ಈಗ ಮತ್ತೊಂದು ವಿಷಯ ಎಂದು ಹೇಳಿದರೆ ಪವರ್ ಸಪ್ಲೈ ವಿಚಾರ. ನನ್ನ ಕ್ಷೇತ್ರದಲ್ಲಿ ಸಾಕಷ್ಟು ವಿವರ್ಸ್ ಕಮುನಿಟಿಯವರು ಇದ್ದಾರೆ. ಮನೆಮನೆಗೂ ಅವರು ಲೂವರ್ಸ್ ಹಾಕಿಕೊಂಡು ದಿನಚರಿ ಅವರು ಜೀವನೋಪಾಯ ಮಾಡಿಕೊಂಡು ಹೋಗುತ್ತಿದ್ದಾರೆ. ಅವರಿಗೆ ಎಷ್ಟರಮಟ್ಟಿಗೆ ಸೈಂಟಿಫಿಕ್ ಆಗಿ ಪವರ್ ಸಪ್ಲೈ ಮಾಡಬೇಕಾಗಿದೆ ಅವರ ಜೀವನೋಪಾಯಕ್ಕೆ ತೊಂದರೆಯಾಗದ ರೀತಿಯಲ್ಲಿ ಒಂದು ರೇಷನಲ್ ಅಪ್ರೋಚ್ ಇಲ್ಲ ಸೈಂಟಿಫಿಕ್ ಅಪ್ರೋಚ್ ಇಲ್ಲ ಮಾನವೀಯತೆಯ ಭಾವನೆ ಇಟ್ಟುಕೊಂಡು ಅದನ್ನು ಸ್ಟಡಿ ಮಾಡಿ ಅಸೆಸ್ ಮಾಡಿ ತೀರ್ಮಾನಕ್ಕೆ ಬಂದಹಾಗೆ ಕಾಣುತ್ತಾ ಇಲ್ಲ. ಯದ್ವಾತದ್ವಾ ಪವರ್ ನಿಲ್ಲಿಸುತ್ತಾರೆ. ಇದರಿಂದ ಒಂದು ಸಣ್ಣ ಕೈಗಾರಿಗೆ ಉದ್ದಿಮೆಗಳಿಗೆ ಬಹಳ ಕಷ್ಟವ ಆಗುತ್ತಿದೆ. ಅವರು ಸಾಕಷ್ಟು ದರಾಖಾಸುತಗಳನು ಕೊಡುತಿದಾರೆ ನಾವು ಹೇಳುತಿದೇವೆ ಅವಕೆ

ಅಂತಹವರಿಗೆಲ್ಲಾ ಅವರ ಜೀವನೋಪಾಯಕ್ಕೆಂದು ಈ ಹೇಳಿ ಈ ಉದ್ಯೋಗವನ್ನು ಮಾಡುತ್ತಾ ಇರಬೇಕಾದರೆ ಅದಕ್ಕೆ ತೊಂದರೆ ಬರುವಹಾಗೆ ಮಾಡಿದಗೆ ಆ ವಿಷಯದಲ್ಲಿ ಹೇಳಬಯಸುತ್ತೇನೆ ಜನತೆಯನ್ನು ಸಂಘಟನೆ ಮಾಡಿ ಈ ಕೆ.ಇ.ಬಿ. ವಿರುದ್ಧ ಬಹಳ ಹೋರಾಟ ಮಾಡಬೇಕಾಗಿ ಬರುತ್ತದೆ. ಈಗ ನಾನು ಬಹಳ ಜವಾಬ್ದಾರಿಯುತವಾಗಿ ಮುನ್ನೆಚ್ಚರಿಕೆಯನ್ನು ಕೊಡಬಯಸುತ್ತೇನೆ. ಈಗ ನಾನು ಜವಾಬ್ದಾರಿಯುತವಾಗಿ ಮುನ್ನೆಚ್ಚರಿಕೆ ಕೊಡುತ್ತೇನೆ ಎನ್ನುವ ಮಾತನ್ನು ಹೇಳಬಯಸುತ್ತಿದ್ದೇನೆ.

ಇನ್ನು ಲೋಕೋಪಯೋಗಿ ಇಲಾಖೆ ಬಗ್ಗೆ ನಾನು ಹಿಂದಿನ ವರ್ಷ ಕೂಡ ಸಾಕಷ್ಟು ಮಾತನಾಡಿದ್ದೇನೆ. ನಮ್ಮ ಸ್ನೇಹಿತರು ಕೆಲವರು ಹೇಳುತಿದ್ದರು. ನೀವು ಮಾತನಾಡುತ್ತೀರಿ ಅಂದರೆ ಏನು ಮಾಡುವುದು ಮಾತನಾಡಿದ್ದೆ ಮಾತನಾಡುವುದು ಮಾತನಾಡಿದ್ದೆ ಮಾತನಾಡಬೇಕು ಈ ವಿಷಯದಲ್ಲಿ ಉತ್ಸಾಹಭರಿತವಾದ ಒಂದು ರೆಸ್ಪಾನ್ಸ್ ಬರುವಹಾಗೆ ಕಾಣುತ್ತಿಲ್ಲವೆಂದು ನಾನೀದರೂ ಕೂಡ ಅದೇ ಭಾವನೆಯಲ್ಲಿದ್ದೇನೆ ಒಂದಲ್ಲ ಸಾಕಷ್ಟು ದೃಷ್ಟಿಯಲ್ಲಿ ಆ ವಿಷಯವನ್ನು ನಾನು ಹೇಳಬಯಸುತ್ತೇನೆ ಇದು ಬಹಳ ಸಣ್ಣ ವಿಷಯ ಸರ್ಕಾರ ತನ್ನದೇ ಆದ ನೌಕರರು ಯಾರಿದ್ದಾರೆ ಅದರಲ್ಲೂ ಹೆಚ್ಚು ವಿಧಾನ ಸೌಧದ ಸುತ್ತಮುತ್ತಲು ಆಡಳಿತ ಶಾಖೆಗಳಲ್ಲಿ ಕೆಲಸ ಮಾಡತಕ್ಕಂಥವರು ಶಿವಾಜಿ ನಗರ ಕ್ಷೇತ್ರದಲ್ಲಿ ಅವರಿಗೆ ವಸತಿ ಸೋಕರ್ಯಮಾಡಿ ಕೊಟ್ಟಿದ್ದಾರೆ ಅದನ್ನು ಸೌಲಭ್ಯ ಸೌಕರ್ಯ ಎಂದು ಹೇಳುವುದಕ್ಕೆ ನನಗೆ ನಾಚಿಕೆಯಾಗುತ್ತದೆ. ಹೇಗೋ ದೊಡ್ಡಿಯಲ್ಲಿ ದನಗಳನ್ನು ಕಟ್ಟಿದ ಹಾಗೆ. ಸಿ.ಓ.ಡಿ ಕ್ವಾರ್ಟರ್‌ಸ್‌ಗಳನ್ನು ಹೋಗಿ ನೋಡಿ ಆ ಮನೆಗಳನ್ನು ನೋಡಿ ಸರ್ಕಾರಿ ನೌಕರರಿಗೆ ಕೊಟ್ಟಿರುವ ಮನೆಗಳು ಎಂತಾದ್ದು ಎಂದು ಹೇಳಿ ಕುಮಾರಕೃಪಾ ಹಿಂದಗಡೆ ಇವೆ.

ಅಲ್ಲಿ ಗೆಸ್ಟ್‌ಗಳದೆ ಸಾಕಷ್ಟು ಸೇವೆ ಮಾಡುತ್ತಾರೆ ಸರ್ಕಾರಕ್ಕೆ ಸೇವೆ ಮಾಡುತ್ತಾರೆ ಅಲ್ಲಿ ವಸತಿ ಗೃಹಗಳು ಇವೆ. ಆ ಜನರ ಜೀವನ ಯಾವ ತರಹ ನಡೆಯುತ್ತದೆ. ನಮ್ಮ ಪೋಲೀಸ್ ಕ್ವಾರ್ಟರ್‌ಸ್‌ಗಳಿಗೆ ಹೋಗಿ ನೋಡಿ ಕೇವಲ ಶಿವಾಜಿ ನಗರ ಕ್ಷೇತ್ರದಲ್ಲಿ ಕ್ರಸೆಂಟ್ ರೋಡಿನಲ್ಲಿರುವ ಕ್ವಾಟ್ರರ್ಸ್‌ಗಳು ಈ ಕ್ಷೇತ್ರದಲ್ಲಿರುವ ಮನೆಗಳು ಏನಿವೆ ನೌಕರರಿಗೆ ನಾವು ಕೊಟ್ಟಿರತಕ್ಕಂಥ ಮನೆಗಳು ಅವು ತುಂಬಾ ಡಿಲಾಪಿಲೇಟೆಡ್ ಕಂಡೀಷನ್‌ನಲ್ಲಿ ಇವೆ. ಮಳೆ ಬಂದರೆ ಸೋರುತ್ತದೆ ಯಾವ ಸಮಯದಲ್ಲಿ ಯಾವ ಭಾಗ ಕುಸಿದು ಬೀಳುತ್ತದೆಂದು ಹೇಳುವುದಕ್ಕೆ ಸಾಧ್ಯವಿಲ್ಲ ಮನೆ ಮುಂದ ಲೈಟ್ ಇಲ್ಲ ಮನೆಗೆ ಹೋಗುವುದಕ್ಕೆ ರಸ್ತೆಯಲ್ಲಿ ದಾರಿ ದೀಪ ಇಲ್ಲ ಕುಡಿಯುವ ನೀರಿಗೆ ಸೌಕರ್ಯ ಇಲ್ಲ ಒಳಚರಂಡಿ ವ್ಯವಸ್ಥೆ ಇಲ್ಲ ಮಳೆ ನೀರು ಹರಿದು ಹೋಗುವುದಕ್ಕೆ ಇರಲಿ ಮನೆಗಳಿಂದ ನೀರು ತೆಗೆದು ಹಾಕಿದಂತಹ ಕೊಚ್ಚೆನೀರು ಆಗಲಿ ಅಲ್ಲಿ ಒಳಚರಂಡಿ ವ್ಯವಸ್ಥೆ ಆಗಲಿ ಯಾವುದೇ ವಿಧದಲ್ಲಿ ಇಲ್ಲ. ಬಹಳ ನಿರ್ಲಕ್ಷ್ಯತನದಿಂದ ನಮ್ಮ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ನೋಡುತಿದ್ದಾರೆಂದು ನಾನು ಬಹಳ ದುಃಖದಿಂದ ಹೇಳಬಯಸುತ್ತೇನೆ. ಮಾನ್ಯ ಪುಟ್ಟಸ್ವಾಮಿಗೌಡರು ಲೋಕೋಪಯೋಗಿ ಮಂತ್ರಿಗಳಾಗಿದ್ದಾಗ ಸ್ಥಳಪರೀಕ್ಷೆ ಮಾಡಿಸಿದ್ದೆ ಪಾಪ ಅವರು ಮನೆ ಮನೆಗ ಬಂದು ನೋಡಿ ಜನರ ಮಾತು ಕೇಳಿದರು. ಆಗ ಕೆಲವು ತೀರ್ಮಾನಗಳನ್ನು ತೆಗೆದುಕೊಂಡರು ಈ ತೀರ್ಮಾನಗಳು ಕಾರ್ಯಗತಕ್ಕೆ ಇದುವರೆಗೂ ಸರಿಯಾಗಿ ಆಗಿಲ್ಲ ಅದಕ್ಕೆ ಸೂಕ್ತವಾದ ಕ್ರಮಗಳನ್ನು ಡಿಪಾರ್ಟ್‌ಮೆಂಟ್‌ನವರು ತೆಗೆದುಕೊಂಡಿಲ್ಲ ತದನಂತರ ಇದೇ ಸದನದಲ್ಲಿ ಬಡ್ಜೆಟ್ ಸ್ಪೀಚ್ ಸಮಯದಲ್ಲಿ ಮುಖ್ಯಮಂತ್ರಿಗಳಿಗೆ ನೇರವಾಗಿ ಒಂದು ಅಪೀಲು ಮಾಡಿಕೊಂಡೆ ಸಾಕಷ್ಟು ಹಣ ತಾವು ಒದಗಿಸಿಲ್ಲ ಬಜೆಟ್ ಪ್ರಾವಿಜನ್‌ನಲ್ಲಿ ಈ ಸರ್ಕಾರಿ ನೌಕರರಿಗೆ ಕ್ವಾರ್ಟರ್‌ಸ್‌ಗೆ ಮಾಡಿಲ್ಲ. ಇಂಜನಿಯರ್ಸ್‌ನ್ನು ಕೇಳಿದರೆ

ಬಜೆಟ್ ಪ್ರಾವಿಜನ್‌ನಲ್ಲಿ ಪ್ರವೈಡ್ ಮಾಡಬೇಕಾದರೆ ಮನೆಗಳಲ್ಲಿ ವಾಸ ಮಾಡುವ ಬಡಪಾಯಿ ಸರ್ಕಾರಿ ನೌಕರರು ಮಾಡಬೇಕೇನು? ಇದನ್ನು ಮಂತ್ರಿಗಳು ಮುಖ್ಯಮಂತ್ರಿಗಳು ನೇರವಾಗಿ ಮಡಬೇಕಾ? ಇಲ್ಲಾ ಜವಾಬ್ದಾರಿ ಸ್ಥಾನದಲ್ಲಿರುವ ಮೇಲಿನ ಅಧಿಕಾರಿಗಳು ಆಗಲಿ ಅವರ ಸಹಾಯಕ ಅಧಿಕಾರಿಗಳು ಆಗಲಿ ದಿಪಾರ್ಟ್‌ಮೆಂಟ್ ಮಾಡಬೇಕಾಗಿದೆಯೇ? ಇನ್ನು ಯಾರು ಮಾಡಬೇಕಾಗುತ್ತದೆ. ಹೇಳಿ ಆ ಕ್ಷೇತ್ರದ ಶಾಸಕರು ಅಥವಾ ಎಂ.ಪಿ.ಗಳು ಹೋಗಿ ಆಫೀಸ್‌ಗಳಲ್ಲಿ ಬೆಳಿಗ್ಗೆಯಿಂದ ರಾತ್ರಿವರೆಗೂ ಕೈ ಜೋಡಿಸಿಕೊಂಡು ಈ ಕೆಲಸ ಮಾಡಿ ಎಂದು ಕೇಳಿಕೊಳ್ಳಬೇಕಾಗುತ್ತೆ? ಇದನ್ನು ಇಂದಿನ ಮಂತ್ರಿವರ್ಯರು ತೀವ್ರವಾಗಿ ಗಮನಿಸಬೇಕು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತವಾದ ಡೈರೆಕ್ಷನ್ ತಕ್ಷಣ ಕೊಡಬೇಕೆಂದು ಹೇಳುತ್ತೇನೆ ಎಷ್ಟು ವಸತಿ ಗೃಹಗಳು ಇವೆ ಅದಕ್ಕೆ ಸಾಕಷ್ಟು ಬಜೆಟ್ ಪ್ರಾವಿಜನ್ ಮಾಡಬೇಕು ಅದನ್ನು ಸೇರಿಸಿಕೊಳ್ಳಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಛೇರ್ಮನ್: ಮುಗಿಸಿ 10 ನಿಮಿಷ ಆಯಿತು.

ಶ್ರೀ ಎ.ಕೆ. ಅನಂತಕೃಷ್ಣ: ನಾನು ಇನ್ನು ಪ್ರಾರಂಭ ಮಾಡಿಲ್ಲ.

ಛೇರ್ಮನ್: ತುಂಬಾ ಜನ ಮಾತನಾಡುವವರಿದ್ದಾರೆ.

ಶ್ರೀ ಎ.ಕೆ. ಅನಂತಕೃಷ್ಣ: ಈ ಜನಗಳ ಸುಖ ದುಃಖ ತಾವು ಹೇಳಿದರೆ ನಾನು ಕೈ ಬಿಡುತ್ತೇನೆ. ಆ ಜನಗಳಿಗೆ ನಾವು ನೇರವಾಗಿ ಕೈ ಬಿಡಿ ಅಂತ ಹೇಳುತ್ತೇವೆ. ಈ ಜನರ ಸುಖ ದುಃಖ ನಾನು ಹೇಳುತ್ತಿದ್ದೇನೆ.

ಅಸಂಬದ್ಧವಾದ ಮಾತು ನಾನು ಹೇಳಲಿಲ್ಲ.

11.10 ಎ.ಎಂ.

ಛೇರ್ಮನ್: ಅಸಂಬದ್ಧತೆಯಲ್ಲ ಮನ್ಯ ಸದಸ್ಯರು ಬ್ರೀಫ್ ಆಗಿ ಟೈಮ್ ಅನುಸರಿಸಿ ಮಾತನಾಡಿದರೆ ಒಳ್ಳೆಯದು.

ಶ್ರೀ ಎ.ಕೆ. ಅನಂತಕೃಷ್ಣ: ಮಾನ್ಯ ಉಪಾಧ್ಯಕ್ಷಿಣಿಯವರೆ ತಾವು ಇದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ನಾನು ಅಲ್ಲಿನ ಬಡಪಾಯಿಗಳ ನೌಕರರ ವಿಷಯವಾಗಿ ಹೇಳುತ್ತಿದ್ದೇನೆ ಬೇರೆ ಯಾವುದೂ ಮಾತನಾಡುತ್ತಿಲ್ಲ. ಯಾವ ಆರೋಪವನ್ನು ಯಾರ ಮೇಲೂ ಮಾಡುತ್ತಿಲ್ಲ.

ಉಪಾಧ್ಯಕ್ಷರು: ಅರೋಪದ ಪ್ರಶ್ನೆಯಲ್ಲ ಟೈಮ್.

ಶ್ರೀ ಎ.ಕೆ. ಅನಂತಕೃಷ್ಣ: ಏನು ಮಾಡಲಿ ಮತ್ತೆ? ಆ ಜನಕ್ಕೆ ಎರಡು ವರ್ಷಗಳಿಂದ ಈ ಸದನದಲ್ಲಿ ಪ್ರಾಮಿಸ್ ಮಾಡುತ್ತಾ ಇದ್ದೀರಾ ಅಶ್ಯೂರೆನ್ಸ್ ಕೊಡುತ್ತಾ ಇದ್ದೀರಾ ಅದನ್ನು ಮಾಡಿಲ್ಲವಲ್ಲ? ಮತ್ತೆ ಅದನ್ನು ಮಾಡಿದರೆ ನಾನು ಎದ್ದು ನಿಂತು ಮಾತನಾಡಬೇಕಾದ ಅವಶ್ಯಕತೆ ಇರಲಿಲ್ಲ.

ಉಪಾಧ್ಯಕ್ಷರು: 5 ನಿಮಿಷದಲ್ಲಿ ಬೇಗ ಮುಗಿಸಿ ದಯವಿಟ್ಟು.

ಶ್ರೀ ಎ.ಕೆ. ಅನಂತಕೃಷ್ಣ: ಆಮೇಲೆ ಲೆಂಟ್ ಆಫೀಸರ್ಸ್ ವಿಷಯ ಹೇಳುತ್ತೇನೆ. ಬೆಂಗಳೂರು ನಗರದಾದ್ಯಂತ ತುಂಬಿಹೋಗಿದ್ದಾರೆ - ಬಿ.ಡಿ.ಎ. ಆಗಿರಲಿ ಹೌಸಿಂಗ್ ಹೋರ್ಡ್ ಆಗಿರಲಿ ಕೆ.ಇ.ಬಿ. ಆಗಿರಲಿ ವಾಟರ್ ಸಪ್ಲೈ ಆಗಿರಲಿ ಅದರಲ್ಲೂ ಬೆಂಗಳೂರು ಮಹಾನಗರಪಾಲಿಗೆಯಲ್ಲಿ ಚೀಫ್ ಇಂಜಿನೀಯರ್ ನಿಂದ ಹಿಡಿದು ಸಾಕಷ್ಟು ಜನರನ್ನು ಕಳುಹಿಸಿಕೊಡುತ್ತಾರೆ. ಇವರನ್ನು ನೇಮಕ ಮಾಡಬೇಕಾಗಿದ್ರೆ ಕಳಿಸ

ಬೇಕಾಗಿದ್ರೆ ಅವರ ಸರ್ವೀಸ್ ಅನುಭವ ಏನಿದೆ? ಅವರ ಸ್ಪೆಷಲೈಸೇಷನ್ ಅವರ ಕಮಿಟ್‌ಮೆಂಟ್ ಅವರನ್ನು ಕಳುಹಿಸಿದ ಮೇಲೆ ಅವರು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ ಮಾಡುತ್ತಾರೆನ್ನುವ ಮುಂದಾಲೋಚನೆ ಇಲ್ಲ. ಕಳಿಸಿದ ಮೇಲೂ ಅಲೋಚನೆ ಇಲ್ಲ ಈ ರೀತಿ ಯಾವುದೋ ಒಂದು ಎಮರ್ಜೆನ್ಸಿ ಸಿಚುಯೇಷನ್ ಬಂದರೆ ಬೆಂಗಳೂರಿನಲ್ಲಿ ಅಂಥಾ ಸುಚಿಯೇಷನ್‌ನಲ್ಲಿ ಒಂದು ಕಾಂಪಿಟೆಂಟ್ ಇಂಜಿನಿಯರನ್ನು ನಾನಂತೂ ಕಣ್ಣಾರೆ ನೋಡಿದ್ದಿಲ್ಲ, ಬಹಳ ವರ್ಷಗಳಿಂದ ನಾನು ನೋಡುತ್ತಿದ್ದೇನೆ. Except treating Bangalore as a junk-yard for corrupt unethical people to who will be posted here.

ಬೇರೆ ಯಾವುದನ್ನು ನೋಡಿಲ್ಲ ಅದನ್ನು ಕೈಬಿಡಬೇಕೆಂದು ಪದೇ ಪದೇ ನಾನು ಹೇಳುತಿದ್ದೇನೆ. ಮೊನ್ನೆ ನೋಡಿ ಒಂದು ಸಣ್ಣ ಕಲ್ವರ್ಟ್ ಮಳೆ ಬಂದು ಕಿತ್ತುಹೋಯಿತು ಎಂದರೆ ಅದನ್ನು ಸರಿಯಾಗಿ ರೀಕನ್‌ಸ್ಟ್ರಕ್ಟ್ ಮಾಡಬೇಕೆಂದು ಆ ಜನ ಕೇಳಿಕೊಳ್ಳುತ್ತಿದ್ದರು ಅವರ ಮಾತನ್ನು ಕೇಳದ ಇಂಜಿನೀಯರ್ ತಮ್ಮ ಕೆಲಸ ಮಾಡದೆ ಕಮಿಷನರ್ ಮೇಲೆ ಹಲ್ಲೆ ಮಾಡಿದರು ಜನ ಏತಕ್ಕೆ ಆಯಿತು? ಈ ರೀತಿಯಾಗಿ ಬೆಂಗಳೂರು ನಗರದಾದ್ಯಂಥ ಜನ ಅಧಿಕಾರಿಗಳ ಮೇಲೆ ಎಂ.ಎಲ್.ಎ.ಗಳ ಮೇಲೆ ಕಾರ್ಪೋರೇಟರ್‌ಗಳ ಮೇಲೆ ಬೀಳಬೇಕಾಗಿ ಬರಬೇಕೇನು? ಇದು ಏತಕ್ಕೆ ಅಗುತ್ತಿದ್ದೆಯೆಂದು ತೀವ್ರವಾಗಿ ಯೋಚನೆ ಮಾಡಬೇಕು. ಯಾರು ಇಂಜಿನೀಯರ್ ಕ್ವಾಲಿಫೈಡ್ ಆಗಿ ಬರುತ್ತಾರೋ ಆತ ಇಂಜಿನೀಯರ್ ಕೆಲಸ ಮಾಡಬೇಕು ಪ್ರಾಪರ್ ಪ್ಲನಿಂಗ್ ಇರಬೇಕು ಪ್ರಾಪರ್ ಡಿಸೈನ್ ಇರಬೇಕು. ಪ್ರಾಪರ್ ಎಕ್ಸಿಕ್ಯೂಷನ್ ಇರಬೇಕು ಅದು ಸರಿಯಾದ ರೀತಿಯಲ್ಲಿ ಮತ್ತು ಸರಿಯಾದ ಸಮಯದಲ್ಲಿ ಮಾಡಬೇಕು. ಅದು ಮಾಡದೇಹೋದರೆ ಏನಾಗುತ್ತದೆ. ಆ ಗತಿಯಾಗುತ್ತದೆ. ಮತ್ತೊಂದು ಉಪಾಹರಣೆ ಬೇಳುತ್ತೇನೆ. ಪ್ಯಾಲೇಸ್ ರೋಡ್‌ನಲ್ಲಿ ವಸಂತ ನಗರದಿಂದ ಆ ಕಡೆ ಸ್ಯಾಂಕಿ ರೋಡ್‌ಗೆ ಬರಬೇಕಾಗಿದೆ ಅಲ್ಲಿ ಒಂದು ರೈಲ್ವೆ ಬ್ರಿಡ್ಜ್ ಕಟ್ಟಿದ್ದಾರೆ. ಅದರ ಕೆಲಗಡೆಯಿಂದ ರಸ್ತೆ ಹೋಗಬೇಕಾಗಿದೆ ಅಲ್ಲಿ ಆಗಿದು ಆಯಿತು ಎಲ್ಲಾ ಮುಗಿದುಹೋಯಿತು. ಆದರೆ ಈ ಕಡೆ ಜನ ಅಕಡೇ ಹೋಗೋಹಾಗಿಲ್ಲ ಆ ಕಡೆ ಜನ ಈ ಕಡೆ ಬರೋ ಹಾಗಿಲ್ಲ ವಾಹನ ಸಂಚಾರ ಸಾಧ್ಯವಿಲ್ಲ. ನಾವು ಇಲ್ಲಿಂದ ಚೀಫ್ ಇಂಜನಿಯರನ್ನು ಕಳುಹಿಸಿಕೊಡುತ್ತೇವಲ್ಲಾ? ಗೌರ್ನಮೆಂಟ್‌ನಿಂದ ಆ ಚೀಫ್ ಇಂಜನೀಯರ್‌ಗೆ ಪ್ರಾಪರ್ ಪ್ಲಾನಿಗ್ ಇದೆಯೋ ಅದರ ಮೇಲೆ ಏನಾದರೂ ಹತೋಟಿ ಇದಯೇ? ಲ್ಯಾಂಡ್ ಅಕ್ವೆರ್ ಮಾಡಿಕೊಳ್ಳಬೇಕು ಮಾಡಿಕೊಂಡ ಮೇಲೆ ಕೆಲಸ ಶುರು ಮಾಡೋಣವೆಂದು ಯೋಚನೆ ಇದ್ದೆಯೇ? ಅದು ಅಕ್ವೆಸಿಷನ್ ಆಗಿ ಪೊಶಿಷನ್ ಬರುವುದಕ್ಕೆ ಸರಿಯಾಗಿ ಅದನ್ನು ಎಕ್ಸಿಕ್ಯೂಟ್ ಮಾಡುವಂಥ ಒಂದು ಕೆಲಸ ಮಾಡೋಣ ಎನ್ನಂತ ಯೋಚನೆ ಇದೆಯೇ? It there any coordination between the physical self and their mind and the interest for the City and citizen of Bangalore?

ಇದನ್ನು ನಾನು ಹೇಳಹೋದರೆ ನಾನು ಬೇಜಾಬ್ದಾರಿಯಿಂದ ಬಂದುಹೋಗುವ ಕೆಲಸ ವಾಗುತ್ತದೆ ಇದನ್ನು ನಾನು ಪ್ರಶ್ನೆ ಹಾಕಿದರೆ ಅದಕ್ಕೆ ಸರಿಯಾಗಿ ಉತ್ತರ ಬರುತ್ತಿಲ್ಲ ಇಲ್ಲಿ ಮಾತನಾಡುವುದಕ್ಕೆ ಸಮಯವಿಲ್ಲವೆಂದರೆ ನಾವು ಏನು ಮಾಡಬೇಕು ಜನಗಳ ಗತಿ ಏನೆಂದು ಅರ್ಥಮಾಡಿಕೊಳ್ಳಬೇಕು. we are here running an administration to serve the people of this state and as for as I am concerned, my City and my constituency.

ಅದು ಕೈಬಿಟ್ಟುಹೋಯಿತೆಂದರೆ ಏನು ಮಾಡಬೇಕು. ಅದರಿಂದ ನಾನು ಹೇಳಬೇಕಾಗಿ ಬರುತ್ತದೆ ತಮ್ಮಲ್ಲಿ ಹೇಳುತ್ತಿದ್ದೇನೆ. There is need for proper concentration on the part of application and commitment of these Engineers for the job that an engineer has got to execute and not engineers of all sorts of interests for corruption and immorality.

ಇದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇಲ್ಲಿ ಮತ್ತೊಂದು ಮಾತನ್ನು ಹೇಳುತ್ತೇನೆ. ಇಲ್ಲಿಂದ ಯಾರು ಯಾರು ಕಳಿಸಿಕೊಡುತ್ತೇವೆ.

ಉಪಾಧ್ಯಕ್ಷರು: ದಯವಿಟ್ಟು ಮುಗಿಸಬೇಕು.

ಶ್ರೀ ಎ.ಕೆ. ಅನಂತಕೃಷ್ಣ: ಯಾರು ಯಾರನ್ನು ಕಳುಹಿಸಿಕೊಡುತ್ತಾರೋ ಅವರು ಅದೇ ಆರ್ಗನೈಸೇಷನ್‌ಲ್ಲಿ ಅಬ್ಸಾರ್ಬ್ ಆಗುವುದಕ್ಕೆ ಪ್ರಯತ್ನ ಮಾಡುತ್ತಾರೆ. ನಾವು ಇಲ್ಲಿಂದ ಲೈಟ್ ಆಫೀಸರ್ ಎಂದು ಕಳುಹಿಸಿಕೊಡುತ್ತೇವೆಯೋ ಅವರು they want to get absorbed in the local institution, local authorty.

ವಾಪಸ್ ಪೇರೆಂಟ್ ಡಿಪಾರ್ಟ್‌ಮೆಂಟ್‌ಗೆ ಬರಬೇಕು ಎಂಬ ಯೋಚನೆ ಇಲ್ಲ. ಎಷ್ಟು ಕರಪ್ಷನ್ ಪ್ರ್ಯಾಕ್ಟೀಸ್ ಮಾಡಬೇಕೋ ಅದಕ್ಕೆ ನೇರವಾಗಿ ಮೇಲಾಧಿಕಾರಿಗಳ ಸಂಪರ್ಕ ಇಟ್ಟುಕೊಳ್ಳಬೇಕೋ ಪೊಲಟಿಕಲ್ ಇನ್‌ಫ್ಲುಯನ್ಸ್‌ಗೆ ಸಮೀಪವಾಗಿರಬೇಕೋ ಆ ಒಂದೇ ಯೋಜನೆಯನ್ನು ಮಾಡುತ್ತಿರುವ ಕಾರಣದಿಂದ ದಿನವೆಲ್ಲ ಕಂಟ್ರಾಕ್ಟರಿಂದ ಕಲೆಕ್ಷನ್ ಬಿಟ್ಟರೆ actual committed execution of work ಅನ್ನುವುದು ಇಲ್ಲವೇ ಇಲ್ಲ ಈ ವಿಷಯದಲ್ಲಿ ನಾವು ಹತೋಟಿಯನ್ನು ಇಟ್ಟುಕೊಳ್ಳಬೇಕೆಂಬ ಮಾತನ್ನು ನಾನು ಪದೇಪದೇ ಹೇಳುತ್ತಿದ್ದೇನೆ. ನನಗೆ ವೈಯಕ್ತಿಕವಾಗಿ ಯಾರ ಮೇಲೂ ಕೋಪವಿಲ್ಲ. ಬಹಳ ಜನ ಅಧಿಕಾರಿಗಳಿಗೆ ನನ್ನ ಹೆಸರು ಕೂಡ ಗೊತ್ತಿಲ್ಲ. ಅವರ ಮುಖಗಳು ಕೂಡ ಗೊತ್ತಿಲ್ಲ ಆದರೆ ನಗರದಲ್ಲಿ ನಡೆಯುತ್ತಿರುವುದನ್ನು ನಾನು ಕಣ್ಣಾರೆ ನೋಡುತ್ತಿದ್ದೇನೆ. ಜನಗಳು ಬಂದು ನನ್ನ ಮುಂದೆ ಹೇಳುವುದನ್ನು ನೋಡುತ್ತಿದ್ದೇನೆ! ಅವರ ಪ್ರತಿನಿಧಿಯಾಗಿ ಹೇಳಬೇಕುದ ವಿಷಯವನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಅದನ್ನು ಸಂಬಂಧಪಟ್ಟ ಮಂತ್ರಿಗಳು ತಾಳ್ಮೆಯಿಂದ ಕೇಳಬೇಕು. ಬೆಂಗಳೂರಿನಲ್ಲಿ ಮಳೆಗಾಲ ಬಂದಾಗ ಎಲ್ಲಾ ಕಲ್ವರ್ಟಗಳು ಬಿದ್ದು ಹೋಗುತ್ತವೆ. ಎಲ್ಲ ಡ್ರೈನೇಜ್‌ಗಳು ಮುಚ್ಚಿ ನೀರು ಹರಿಯುತ್ತದೆ ಛೇರ್ಮನ್: ಅನಂತಕೃಷ್ಣರವರೆ ತಾವು ಬೇಗ ಮುಗಿಸಿ.

ಶ್ರೀ ಎ.ಕೆ. ಅನಂತಕೃಷ್ಣ: ಅವುಗಳನ್ನು ಕಟ್ಟುವಂತಹ ಪ್ರಯತ್ನ ಇದುವರೆಗೂ ನಡೆದಿಲ್ಲ. ಉದಾಹರಣೆಗೆ ಶಿವಾಜಿನಗರ ಕ್ಷೇತ್ರದಲ್ಲಿ ಒಂದು ಮೇನರಚಾನಲ್ ಇದೆ. ಅದು ವರ್ಷಾನುಗಟ್ಟಲೆಯಿಂದ ರಿಪೇರಿ ಮಾಡಿ ಎಂದು ಹೇಳುತ್ತಿದ್ದರು ಇದುವರೆಗೂ ಮಾಡಿಲ್ಲ. ರೀಕನ್‌ಸ್ಟ್ರಕ್ಟ್ ಮಾಡಿಲ್ಲ ಮಾಡುವ ಪ್ರಯತ್ನ ಕಮೀಷನರ್ ಅಥವಾ ಚೀಫ್ ಇಂಜಿನಿಯರ್ ರವರಿಂದ ಆಗಿಲ್ಲ. ಜನಗಳೆಲ್ಲ ಮಕ್ಕಳೆಲ್ಲ ಕೊಚ್ಚಿಕೊಂಡು ಹೋದಮೇಲೆ ಆಮೇಲೆ ಕಣ್ಣು ತೆರೆಯುತ್ತಾರೆಯೆ? ಈ ಅಂಡರ್‌ಗ್ರೌಂಡ್ ಡ್ರೈನೇಜ್ ಸಿಸ್ಟಂನಲ್ಲೂ ಆಮೇಲೆ ಕಣ್ಣು ತೆರೆಯುತ್ತಾರೆಯೇ? ಈ ಅಂಡರ್‌ಗ್ರೌಂಡ್ ಡ್ರೈನೇಜ್ ಸಿಸ್ಟಮ್‌ನಲ್ಲೂ ಪ್ರಾಪರ್ ಕೋ ಆರ್ಡನೇಷನ್ ನಗರಸಭೆಯ ಚೀಫ್ ಇಂಜಿನಿಯರಿಗೂ ವಾಟರ್ ಸಪ್ಲೈ ಡೀಪಾರ್ಟ್‌ಮೆಂಟ್‌ನವರಿಗೂ ಇಲ್ಲ ಅನ್ನುವುದನ್ನು ಹೇಳುತ್ತಿದ್ದೇನೆ. ರಸ್ತೆಗಳ ಮೇಲೆ ನೀರು ಓವರ್ ಫ್ಲೋ ಆಗುತ್ತಿದ್ದರೆ ನಮ್ಮ ಇಂಜಿನಿಯರ್‌ಗಳು ರಸ್ತೆಗಳಲ್ಲಿ ಅಲೆಯುತ್ತಿರುವುದನ್ನು ಬಿಟ್ಟು, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಹೇಳಿ ಕೆಲಸ

ಇದರಿಂದ ಜನಗಳಿಗೆ ಕಷ್ಟವಾಗುತ್ತಾರೆ. ಇದನ್ನೆಲ್ಲಾ ಯಾರು ಹೇಳಬೇಕಾಗಿದೆ. ನಾನು ಹೇಳಬೇಕಾದದ್ದು ಬಹಳ ಇದೆ. ಮಾನ್ಯ ಮಂತ್ರಿಗಳು ಡಿಪಾರ್ಟ್‌ಮೆಂಟ್‌ನವರ ಮೇಲೆ ಸಾಕಷ್ಟು ಉಸ್ತುವಾರಿಯನ್ನು ಮಾಡಬೇಕಾಗುತ್ತದೆ ಅವರಿಗೆ ಸಾಕಷ್ಟು ಡೈರೆಕ್ಷನ್ ಕೊಡಬೇಕಾಗಿದೆ. ಅದಕ್ಕೆ ಸಂಬಂಧಪಟ್ಟ ಇಲಾಖೆಗೆ ಯಾರುಯಾರು ರಿಕ್ರೂಟ್ ಆಗಿದ್ದಾರೆ ಯಾರು ಟ್ರಾನ್ಸ್‌ಫರ್ ಆಗಿ ಬಂದಿದ್ದಾರೆ ಅವರ ಮೇಲೆ ಸಾಕಷ್ಟು ಹತೋಟಿಯನ್ನು ಇಟ್ಟುಕೊಂಡು ಲೋಕಲ್ ಬಾಡೀಸ್ ಕೆಲಸವನ್ನು ಮಾಡಿಸಿಕೊಡಬೇಕೆಂದು ಹೇಳಿ ತಾವು ನನಗೆ ಇಷ್ಟು ಮಾತನಾಡಲು ಅವಕಾಸ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್ಮನ್: ಮಾನ್ಯ ಸದಸ್ಯರುಗಳಲ್ಲಿ ಒಂದು ವಿನಂತಿ ಏಕೆಂದರೆ 11-30ಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ ಇನ್ನು ಮಾತನಾಡುವವರು 5-6 ಜನ ಇದ್ದೀರಿ ಟೈಂ ಕನ್‌ಸಿಯನ್ ಇಟ್ಟುಕೊಂಡು ಮಾತನೀಡಬೇಕು ಒಬ್ಬೊಬ್ಬರಿಗೆ 5-5 ನಿಮಿಷ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಒಂದು ನಿಮಿಷ ಕೊಟ್ಟುಬಿಡಿ, ಕೈಮುಗಿದು ಕುಳಿತು ಬಿಡುತ್ತೇನೆ.

ಛೇರ್ಮನ್: ಎಲ್ಲರಿಗೂ ಅವಕಾಶ ಸಿಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಬೇಡಿಕೆಗೆ ಕೈಮುಗಿದು ಪ್ರಾರ್ಥನೆ ಸಲ್ಲಿಸುತ್ತೇವೆ.

ಛೇರ್ಮನ್: ತಾವು ಮೊದಲೇ ಯೋಚನೆ ಮಾಡಬೇಕಾಗಿತ್ತು. ಸಮಯವನ್ನು ಇಲ್ಲಿ ಕುಳಿತುಕೊಂಡು ನಾವುಗಳೇ ತಿಂದು ಹಾಕಿರುವುದು. ಈಗ ನಾವು ಯಾರನ್ನು ಕೇಳುವುದು.

ಶ್ರೀ ವಾಟಾಳ್ ನಾಗರಾಜ್: ತಾವು ಗಂಟೆ ಭಾರಿಸುವುದನ್ನು ನಾವು ಕೇಳಿದರೆ ಎದೆ ನಡುಗುತ್ತದೆ. ಈ ರೀತಿಯಾಗಿ ನೀವು ಗಂಟೆಯನ್ನು ಭಾರಿಸಬೇಡಿ ಸ್ವಲ್ಪ ನಮಗೆ ಅವಕಾಶ ಕೊಡಿ. ನಮ್ಮನ್ನು ದಿಕ್ಕು ತಪ್ಪಿಸಬೇಡಿ.

ಛೇರ್ಮನ್: ಸಮಯ ಗಮನದಲ್ಲಿಟ್ಟುಕೊಂಡು ಮಾತನಾಡಿದರೆ ಆ ಹೆದರಿಕೆ ಬರುವುದೇ ಇಲ್ಲ.

+ ಶ್ರೀ ಮಂಜುನಾಥ ಸಿ ಕನ್ನೂರ್ (ಶಿಗ್ಗಾಂ): ಮಾನ್ಯ ಅಧ್ಯಕ್ಷರೆ ನಾನು ಲೋಕೋಪಯೋಗಿ ಇಲಾಖೆಯ ಸಚಿವರು ನೀರಾವರಿ ಇಲಾಖೆಯ ಸಚಿವರು ಹಾಗೂ ವಿದ್ಯುಚ್ಛಕ್ತಿ ಇಲಾಖೆಯ ಸಚಿವರುಗಳು ಮಂಡಿಸಿದಂತಹ ಬೇಡಿಕೆಗಳನ್ನು ಸ್ವಾಗತಿಸುತ್ತಾ ಒಂದೆರಡು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಮೊದಲನೇಯದಾಗಿ ನೀರಾವರಿ ಇಲಾಖೆಯ ಬಗ್ಗೆ ಮಾತನಾಡಬೇಕೆಂದರೆ ಇವತ್ತಿನ ದಿವಸ ಈ ನೀರಾವರಿಯ ಹಕ್ಕನ್ನು ನಮ್ಮ ಕರ್ನಾಟಕ ರಾಜ್ಯದವರು ಎಷ್ಟು ಪಾಲನ್ನು ಉಪಯೋಗ ಮಾಡಿಕೊಳ್ಳಬೇಕಾಗಿತ್ತೋ ಅಷ್ಟು ಪಾಲನ್ನು ನಾವು ಪಯೋಗ ಮಾಡಿಕೊಂಡಿಲ್ಲ ಎಂದು ಹೇಳಲಿಕ್ಕೆ ನನಗೆ ದುಃಖವಾಗುತ್ತದೆ. ಪಂಡಿತ್ ಜವಾಹರಲಾಲ್ ನೆಹರುರವರು ಪ್ರಾಧಾನಿ ಮಂತ್ರಿಗಳಾಗಿದ್ದಾಗ ಶ್ರೀ ಎನ್.ಡಿ ಗುಲಾಬಿ ಎಂಬುವರ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ರಚಿಸಿ ಕರ್ನಾಟಕ ಮಹಾರಾಷ್ಟ್ರ ಆಂದ್ರಪ್ರದೇಶಗಳಿಗೆ ಎಷ್ಟು ಟಿ.ಎಂ.ಸಿ. ನೀರನ್ನು ಉಪಯೋಗಮಾಡಿಕೊಳ್ಳಬೇಕು ಎನ್ನುವಂತಹ ಒಂದು ರೂಪುರೇಷೆಯನ್ನು ಅವರು

ಆ ಪ್ರಕಾರವಾಗಿ ಇವತ್ತಿನ ದಿವಸ ಈ ಕರ್ನಾಟಕ ರಾಜ್ಯದಲ್ಲಿ ಸುಮಾರು 732 ಟಿ.ಎಂ.ಸಿ. ನೀರು ಲಭ್ಯ ಆಗಬೇಕಾಗಿತ್ತು. ಈ ಒಂದು ವಿಚಾರದ ಪ್ರಕಾರ ಇವತ್ತು ಕೇವಲ ಅಲಮಟ್ಟಿ ಮತ್ತು ನಾರಾಯಣಪುರ ಅಣೆಕಟ್ಟುಗಳಿಗೆ ಕೇವಲ 80 ಟಿ.ಎಂ.ಸಿ. ನೀರು ಉಪಯೋಗ ಮಾಡಲಾಗಿದೆ ಇನ್ನು ಗುಲ್ಬರ್ಗದ ಹತ್ತಿರ ಸುಮಾರು 2-3ಯೋಜನೆಗಳಿಗೆ 780ಟಿ.ಎಂ.ಸಿ. ನೀರಿನ ಸಾಮರ್ಥ್ಯವನ್ನು ನಾವು ಪಡೆದುಕೊಳ್ಳಬಹುದು ಇನ್ನು, ಉಳಿದಂತಹ 450ಟಿ.ಎಂ.ಸಿ. ನೀರಿನ ಹಕ್ಕನ್ನು ನಾವು ನೀರಾವರಿ ಯೋಜನೆಗಳಿಗೆ ಸೂಮಾರು 2000 ಇಸವಿಯೊಳಗೆ ಉಪಯೋಗ ಮಾಡಿಕೊಳ್ಳಲಿಕ್ಕೆ ಅಸಮರ್ಥರಾಗುತ್ತೇವೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇವತ್ತಿನ ದಿವಸ ಕಾವೇರಿ ಕಣಿವೆ ಯೋಜನೆಯ ಬಗ್ಗ ಆಗಲಿ ಮತ್ತು ಕೃಷ್ಣ ಯೋಜನೆಯ ಬಗ್ಗೆ ಆಗಲಿ ಅನೇಕ ವರ್ಷಗಳಿಂದ ಪ್ರಾರಂಭವಾದಂತಹ ಯೋಜನೆಗಳು ಇನ್ನು ಸಂಪೂರ್ಣವಾಗಿ ಇವತ್ತು ಮುಗಿದಿಲ್ಲ ಅವತ್ತಿನ ದಿವಸ ಸಿಮೆಂಟ್ ಬೆಲೆ 7 ರೂಪಾಯಿ ಇದ್ದಿದ್ದು ಇವತ್ತು 100 ರೂಪಾಯಿಗೆ ಒಂದು ಚೀಲ ಇರತಕ್ಕ ಸಂದರ್ಭ ಬಂದಿದೆ. ಇನ್ನಾದರೂ ಕೂಡ ಇವತ್ತಿನ ದಿವಸ ನಾವು ಸರಿಯಾದ ಹಣವನ್ನು ಈ ನೀರಾವರಿ ಯೋಜನೆಗಳಿಗೆ ಕೊಟ್ಟು ಈ ಯೋಜನೆಗಳನ್ನು ನಾವು ಮುಗಿಸಿಕೊಳ್ಳುತ್ತಿಲ್ಲ ಅಂದರೆ ದುಃಖಕರವಾದಂತಹ ಸಂಗತಿಯಾಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಕರ್ನಾಟಕ ರಾಜ್ಯ ಈ ವಿಚಾರದಲ್ಲಿ ಹೇಗೆ ಹಿಂದೆ ಬಿದ್ದಿದ್ದೆ ಆದೇ ರೀತಿಯಾಗಿ ನಮ್ಮ ಅಕ್ಕಪಕ್ಕದ ರಾಜ್ಯಗಳಾದ ಮಹಾರಾಷ್ಟ್ರವಾಗಲಿ ಆಂಧ್ರಪ್ರದೇಶದವರಾಗಲಿ ಹಿಂದೆ ಬಿದ್ದಿರುವುದಿಲ್ಲ ಆಂಧ್ರಪ್ರದೇಶದಲ್ಲಿ ಸುಮಾರು 706 .5 ಟಿ.ಎಂ.ಸಿ. ನೀರು ಸಿಗಬೇಕಾಗಿತ್ತು. ಆ ಹಕ್ಕನ್ನು ಅವರು ಹಿಂದೆ ಕೇಂದ್ರ ಸರಕಾರದಲ್ಲಿ ಕೆ.ಎಲ್.ರಾವ್‌ರವರು ಸಚಿವರಾಗಿದ್ದಾಗ 800 ಟಿ.ಎಂ.ಸಿ. ನೀರಿನ ಹಕ್ಕು ಇದೆ ಎಂದು ಸಮರ್ಥಿಸಿಕೊಂಡು ಆ 800 ಟಿ.ಎಂ.ಸಿ. ನೀರನ್ನು ಅವರು ಉಪಯೋಗಿಸಿಕೊಂಡಿದ್ದಾರೆ.

ಅದೇ ರೀತಿಯಲ್ಲಿ ಮಹಾರಾಷ್ಟ್ರ ರಾಜ್ಯದಲ್ಲಿ 643.5ಟಿ.ಎಂ.ಸಿ. ನೀರು ಸಿಗಬೇಕಾಗಿತ್ತು ಅವರು 500 ಟಿ.ಎಂ.ಸಿ. ನೀರು ಗುಲಾಬಿ ಆಯೋಗದವರ ಪ್ರಕಾರ ಸಿಕ್ಕದ್ದರಿಂದ ಆ ಒಂದು ಸಂಪೂರ್ಣ ಹಕ್ಕನ್ನು ಅವರೂ ಕೂಡ ಉಪಯೋಗ ಮಾಡುಕೊಂಡಿದ್ದಾರೆ ಇವೊತ್ತು ಕೃಷ್ಣನದಿಯ ಉಪನದಿಯಾದ ಕೊಯಿನ ನದಿಗೆ ಕೂಡ ಮಹಾರಾಷ್ಟ್ರರವರು ಅಣೆಕಟ್ಟನ್ನು ಕಟ್ಟಿ ಒಂದು ಹನಿ ನೀರನ್ನು ಕೂಡ ಇವೊತ್ತು ಕೊಡದೇ ಇರತಕ್ಕಂಥ ಒಂದು ಯೋಜನೆಯನ್ನು ಅವರು ಮಾಡಿದ್ದಾರೆ. ಇಂಥ ಪರಿಸ್ಥಿತಿಯನ್ನು ನಾವು ವಿವಿಧ ರಾಜ್ಯಗಳಿಗೆ ತುಲನೆ ಮಾಡಿ ನೋಡಿದಾಗ ನಮ್ಮ ಸರಕಾರದವರು ನೀರಾವರಿ ವಿಚಾರದಲ್ಲಿ ಮಾಡಿರತಕ್ಕಂಥ ಯೋಜನೆಗಳನ್ನು ನೋಡಿದರೆ ಇದೊಂದು ರೀತಿಯಲ್ಲಿ ಆಮೆಯ ನಡಿಗೆ ಆಗಿದೆ ಎಂದು ಹೇಳಬಯಸುತ್ತೇನೆ. ಇವೊತ್ತು ನಮ್ಮ ಭಾಗದಲ್ಲಿ ತುಂಗಾ ಮೇಲ್ದಂಡೆ ಯೋಜನೆಯನ್ನು ಜಾರಿಗೆ ತರಬೇಕಾಗಿದೆ. ನೀರಿನ ಹಕ್ಕನ್ನು ನಮಗೆ ಪಡೆಯಲಿಕ್ಕೆ ಸಾಧ್ಯವಿದ್ದರೂ ಕೂಡ ಅನೇಕ ಆಯೋಗಗಳು ಅದರ ಬಗ್ಗೆ ಬರೆದಿದ್ದರೂ ಕೂಡ ತುಂಗ ಮೇಲ್ದಂಡೆ ಯೋಜನೆಯನ್ನು ಏಕೆ ಜಾರಿಗೆ ತುರುತ್ತಾ ಇಲ್ಲ ಎಂದು ವಿಶೇಷತಃ ಧಾರವಾಡ ಜಿಲ್ಲೆಯ ದಕ್ಷಿಣ ಭಾಗದ ಬಹುತೇಕ ಎಲ್ಲಾ ತಾಲ್ಲೂಕುಗಳ ಜನರು ಕೇಳುತ್ತಾ ಇದ್ದಾರೆ.

ತುಂಗ ಮೇಲ್ದಂಡೆ ಯೋಜನೆಯ ವಿಚಾರವಾಗಿ ನಾನು ಮೊನ್ನೆ ಒಂದು ಪ್ರಶ್ನೆಯನ್ನು ಹಾಕಿದ್ದೆ ಅದಕ್ಕೆ ಲಿಖಿತ ರೂಪವಾಗಿ ಉತ್ತರ ಬಂದಿದೆ. ಈ ಯೋಜನೆಯನು ಜಾರಿಗೆ ತರುವಾಗ ಮಾಲತಿ ಜಲಾಶಯನವನು ಬಿಟು ಈ

ಜಲಾನಯನವನ್ನು ಏಕೆ ಬಿಡುತ್ತಾರೆ ಅಂದರೆ ನಮಗೆ ಇವೊತ್ತು ಸಂಶಯ ಬರುತ್ತಾ ಇದೆ ಇದು ಮಾನ್ಯ ವಿರೋಧಿಪಕ್ಷದ ನಾಯಕರಾದ ಚಂದ್ರೇಗೌಡರ ಮತ ಕ್ಷೇತ್ರವಾದ ತೀರ್ಥಹಳ್ಳಿಯಲ್ಲಿ ಕೆಲವು ಜಮಿನುಗಳು ಮುಳುಗಡೆಯಾಗುವುದರಿಂದ ಆ ಯೋಜನೆಯನ್ನು ಕೈಬಿಟ್ಟಿದ್ದಾರೆ ಎಂಬ ಸಂಶಯವನ್ನು ನಾವು ವ್ಯಕ್ತಪಡಿಸುತ್ತೇವೆ. ಇವೊತ್ತು ಶಿವಮೊಗ್ಗ ಜಿಲ್ಲೆಯಲ್ಲಿ ನಮ್ಮ ಮುಖ್ಯಮಂತ್ರಿಗಳು ಇರುವುದರಿಂದ ಈ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಹಿಂದುಮುಂದು ನೋಡುತ್ತಾ ಇದ್ದಾರೆ ಎಂಬ ಮಾತನ್ನು ಹೇಳಬಯಸುತ್ತೇನೆ. ಇವತ್ತು ಮಾಲತಿ ಜಲಾನಯನವನ್ನು ತುಂಗಾ ಮೇಲ್ದಂಡೆ ಯೋಜನೆಯನ್ನು ಜಾರಿಗೆ ತಂದರೆ ರಾಣೆಬೆನ್ನೂರಿನಿಂದ ಹಿಡಿದು ಕೊಪ್ಪಳದ ವರೆಗೆ ಆಗತಕ್ಕಂಥ ಈ ಒಂದು ಯೋಜನೆ ವಿಶೇಷವಾಗಿ ನನ್ನ ಮತ ಕ್ಷೇತ್ರವಾದಂಥ ಶಿಗ್ಗಾಂ ಸವಣೂರು ಬ್ಯಾಡಗಿ ಶಿರಪಟ್ಟಿ ಮುಂಡರಾಗಿ ಕೊಪ್ಪಳದ ವರೆಗೆ ಇರತ್ತಂಥ ವಿವಿಧ ತಾಲ್ಲೂಕುಗಳು ಈ ಯೋಜನೆಯಿಂದ ಇವೊತ್ತು ರೈತರು ವಂಚಿತರಾಗುತ್ತಾರೆ. ಇದರಿಂದ ಅಪಾರವಾದಂಥ ಸಂಪತ್ತನ್ನು ಗಳಿಸಿಕೊಳ್ಳುವಂಥ ಜನತೆಗೆ ಮೋಸ ಮಾಡಿದಹಾಗೆ ಆಗುತ್ತದೆ ಎಂದು ಹೇಳ ಬಯಸುತ್ತೇನೆ. ಆ ದೃಷ್ಟಿಯಿಂದ ಇವೊತ್ತು ನಾನು ನೀರಾವರಿ ಸಚಿವರನ್ನು ಕಳಕಳಿಯಿಂದ ಕೇಳಿಕೊಳ್ಳುತ್ತಾ ಇದ್ದೇನೆ. ಈ ಯೋಜನೆಯನ್ನು ಜಾರಿಗೆ ತರುವಾಗ ಈ ಯೋಜನೆಯನ್ನು ಕೇಂದ್ರ ಸರಕಾರದವರು ಶಿಫಾರಸ್ಸು ಮಾಡುವಾಗ ಈ ನಮ್ಮ ಮಾಲತಿ ಜಲಾನಯನವನ್ನು ಒಳಗೊಂಡು ಆ ಯೋಜನೆಯನ್ನು ಶಿಫಾರಸ್ಸು ಮಾಡಿದ್ದಾದರೆ ನಿಜವಾಗಿಯೂ ನಾವು ಒಳ್ಳೆಯ ಕೆಲಸವನ್ನು ಮಾಡಿದ ಹಾಗೆ ಆಗುತ್ತದೆ ಅನ್ನತಕ್ಕ ಮಾತನ್ನು ಹೇಳಬಯಸುತ್ತೇನೆ ನೀರಾವರಿ ಇಲಾಖೆಯಲ್ಲಿ ಏತನೀರಾವರಿ ನಿಗಮ ಇದೆ ಆ ಬಗ್ಗೆ ಅನೇಕ ಸದಸ್ಯರು ಕೂಡ ಮಾತನೀಡಿದ್ದಾರೆ. ಈ ಏತನೀರಾವರಿ ನಿಗಮ ಯಾವರೀತಿಯಾಗಿದೆ ಅಂದರೆ ಹಿಂದಿನ ಸರಕಾರದವರು ಈ ನಿಗಮವನ್ನು ರಚಿಸಿ ಬಡ ರೈತರಿಗೆ ಹಣವನ್ನು ತುಂಬಲು ಆಗದಂಥ 100ಕ್ಕೆ 25 ರಷ್ಟು ಹಣವನ್ನು ಕಟ್ಟಬೇಕೆಂಬ ನಿಯಮವನ್ನು ರಚಿಸಿ ದೊಡ್ಡ ಹೊರೆಯನ್ನು ರೈತರ ಬಗ್ಗೆ ಮಾಡಿದ್ದಾರೆ ಇದರಿಂದಾಗಿ ಈ ಸಂಸ್ಥೆಯಾದಾಗಿನಿಂದ ಯಾವ ಯೋಜನೆಗಳೂ ಕಾರ್ಯಗತವಾಗಿಲ್ಲ ನನ್ನ ಕ್ಷೇತ್ರದಲ್ಲಿಯೂ ಕೂಡ ಅನೇಕ ಯೋಜನೆಗಳನ್ನು ನಾವು ಮಾಡಬೇಕಾಗಿತ್ತು.

ಉದಾಹರಣೆಗೆ ಇವೊತ್ತು ಪುನಿನಹಳ್ಳಿಯಲ್ಲಿ ಒಂದು ಏತನಿರಾವರಿ ಯೋಜನೆ ಹೀರೆಹಳ್ಳಿಯಲ್ಲಿ ಕೂಡ ಒಂದು ಏತನೀರಾವರಿ ಯೋಜನೆ ಮಾಡಿ ಇದುವರೆಗೆ ಅರ್ಧದಷ್ಟು ಹಣವನ್ನು ಖರ್ಚು ಮಾಡಿ ಆ ಯೋಜನೆಗಳನ್ನು ಕೈಬಿಟ್ಟಿದ್ದಾರೆ. ಹೊಸದಾಗಿ ಕಳತ್ತೂರು ಎನ್ನುವ ಹಳ್ಳಿ ಇದೆ ಅದು ವರದಾನದಿ ದಂಡೆಯ ಮೇಲೆ ಇರುವ ಗ್ರಾಮವಾಗಿರುವುದರಿಂದ ಅಲ್ಲಿಯ ರೈತರು ಕೂಡ ಮಾನ್ಯ ಸಚಿವರಿಗೆ ಈ ಯೋಜನೆಯನ್ನು ಮಾಡಿಕೊಡಿ ಇದರಿಂದ ಸುಮಾರು 4-5 ಸಾವಿರ ಎಕರೆ ಜಮೀನಿಗೆ ನೀರಾವರಿ ಆಗುತ್ತದೆ ರೈತರಿಗೆ ಅನುಕೂಲವಾಗುತ್ತದೆ ಎಂಬ ಮಾತನ್ನು ಅವರಿಗೂ ಕೂಡ ನಿವೇದಿಸಿಕೊಂಡಿದ್ದಾರೆ. ಈ ದೆಶೆಯಲ್ಲಿ ನಾನು ಕೂಡ ಅನೇಕ ಮನವಿಗಳನ್ನು ಕೊಟ್ಟಿದ್ದೇನೆ. ಆದರೆ ಈ ಏತನೀರಾವರಿ ನೀಗಮದಿಂದ ಈ ಕೆಲಸಗಳು ಆಗುವುದಿಲ್ಲ, ಎಂಬ ಮಾತನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಆ ದೃಷ್ಟಿಯಿಂದ ಈ ಸಂಸ್ಥೆಯನ್ನು ಕೂಡಲೇ ರದ್ದು ಮಾಡಬೇಕು ಜೊತೆಗೆ ಚಿಕ್ಕ ನೀರಾವರಿ ವಿಭಾಗಕ್ಕೆ ಎಲ್ಲಾ ಕೆಲಸಗಳನ್ನು ಹಸ್ತಾಂತರಿಸಿ ಮೂಲಕ ಈ ಕೆಲಸಗಳನ್ನು ಕೈಗೆತ್ತಿಕೊಂಡರೆ ಬಹಳ ಒಳ್ಳೆಯದಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇಂದು ಚಿಕ್ಕ ನೀರಾವರಿ ಯೋಜನೆಗಳಿಗಾಗಲಿ ಯಾವುದೇ

ಕೇಂದ್ರಸರ್ಕಾರದಿಂದ ನೀರಾವರಿ ಬಾಂಡ್‌ಗಳನ್ನು ಪಡೆದುಕೊಳ್ಳಬೇಕು, ಹಾಗೆಯೇ ವಿದ್ಯುತ್ ಇಲಾಖೆಗೆ ಕೂಡ ವಿದ್ಯುತ್‌ಗಾಗಿ ಬಾಂಡ್‌ಗಳನ್ನು ಪಡೆದುಕೊಂಡು ಈ ಯೋಜನೆಗಳನ್ನು ಕೂಡಲೇ ಕಾರ್ಯಗತವಾಡುವುದು ಬಹಳ ಒಳ್ಳೆಯದೆಂದು ಹೇಳಬಯುತ್ತೇನೆ. ಇನ್ನು ಇಂಜಿನಿಯರ್‌ಗಳ ಬಗ್ಗೆ ಒಂದೆರಡು ಮಾತು ಹೇಳುತ್ತೇನೆ. ಹಿಂದೆ ಪಂಡಿತ್ ಜವಾಹರಲಾಲ್‌ನೆಹರು ಹೇಳಿದಂತೆ "Engineres are the pillars of the nation. ಎಂದು ಹೇಳುತ್ತಿದ್ದರು. ಆದರೆ ಇಂದು ಏನಾಗಿದೆ. ನಮ್ಮ ರಾಜ್ಯದಲ್ಲಿ ಒಬ್ಬ ಚೀಫ್ ಇಂಜಿನಿಯರ್ ಇದ್ದುದು ಇಂದು 52 ಚೀಫ್ ಇಂಜಿನಿಯರ್ ಇದ್ದೂ ಕೂಡ ಇಲಾಖೆಗೆ ಮಿಸಲಾಗಿರುವ ಹಣದ ಅರ್ಧದಷ್ಟು ಅದಕ್ಕೂ ಮೇಲ್ಪಟ್ಟು ಸಿಬ್ಬಂದಿ ಮತ್ತಿತರ ಕಾರ್, ಎಸ್ಟಾಬ್ಲಿಷ್ಮೆಂಟ್‌ಗೆ ಖರ್ಚು ಮಾಡಲಾಗುತ್ತಿದೆ. ಆದರೆ ಇಂಜಿನಿಯರ್‌ಗಳನ್ನು ನೋಡಿದರೆ ಅವರ ಕೆಲಸ ಹೇಗಿದೆ ಎಂದರೆ ನಮ್ಮ ರಾಜ್ಯದಲ್ಲಿ ಅವರಿಗೆ ಮೇಯಲಕ್ಕಿ ಹಸನಾದ ಹುಲ್ಲುಗಾವಲಾಗಿದೆ. ಎಂದು ಹೇಳಿದರೆ ತಪ್ಪಾಗಲಾರದು. ಅನೇಕ ಶಾಸಕ ಮಿತ್ರರೂ ಕೂಡ ಸರ್ಕಾರದಲ್ಲಿ ಇಂಜಿನಿಯರ್‌ಗಳ ಬಗ್ಗೆ ವರ್ಗಾವರ್ಗಿ ವಿಷಯದಲ್ಲಿ ನನ್ನ ವೈಯಕ್ತಿಕ ಅಭಿಪ್ರಾಯದ ಪ್ರಕಾರ ನಾವು ಯಾರೂ ಶಿಫಾರಸ್ಸು ಪತ್ರ ಕೊಡುವ ಅವಶ್ಯಕತೆ ಇಲ್ಲವೆಂದು ಹೇಳಬಹುಸುತ್ತೇನೆ. ನ್ಯಾಯಾಂಗ ಇಲಾಖೆಯಲ್ಲಿ ಯಾವ ರೀತಿಯಾಗಿ ಶಾಸಕರ ಹಸ್ತಕ್ಷೇಪ ಇಲ್ಲವೋ ಆ ರೀತಿಯೇ ಈ ಇಲಾಖೆಯನ್ನೂ ಪ್ರತ್ಯೇಕವಾಗಿಟ್ಟುಕೊಂಡು ನೀರಾವರಿ ಮತ್ತು ಇತರ ಕೆಲಸಗಳು ಸಲೀಸಾಗಿ ಸರ್ವಾಂಗೀಣವಾಗಿ ಅಭಿವೃದ್ಧಿಗಾಗಿ ಪ್ರಯತ್ನ ಮಾಡುವುದು ಬಹಳ , ಅವಶ್ಯಕ ಇದೆ. ಇನ್ನು ರಸ್ತೆಗಳ ಬಗ್ಗೆ ಮಾತನಾಡಬೇಕೆಂದರೆ ರಸ್ತೆಗಳು ಗ್ರಾಮೀಣ ಮಟ್ಟದಲ್ಲಿ ಸಂಪೂರ್ಣವಾಗ ನಾದುರಸ್ತಿಯಾಗಿವೆ.

ನಮ್ಮ ರಾಜ್ಯದ ಶೇಕಡ 90ರಷ್ಟು ಜನ ಗ್ರಾಮೀಣ ಭಾಗದಲ್ಲಿರುವುದರಿಂದ ಅವುಗಳನ್ನು ಸುಧಾರಿಸಿ ಅವರಿಗೆ ಅನುವು ಮಾಡಿಕೊಡುವುದು ಅವಶ್ಯಕತೆ ಇದೆ. ಅದೇ ರೀತಿಯಾಗಿ ಹುಬ್ಬಳ್ಳಿ ಧಾರವಾಡ ಮಹಾನಗರಗಳು ರಾಜ್ಯದ ಎರಡನೇ ದೊಡ್ಡ ನಗರಗಳಾಗಿವೆ. ಅಲ್ಲಿನ ಹೆದ್ದಾರಿಗಳನ್ನು ನೋಡಿದಾಗ ಕಾರ್ಪೋರೇಷನ್ ಲಿಮಿಟ್ ನಲ್ಲಿ ಬರುವ ರಸ್ತೆಗಳನ್ನು ನೋಡಿದಾಗ ಅವುಗಳ ಹೀನಾಯ ಪರಿಸ್ಥಿತಿ ನೋಡಿದರೆ ಬಹಳ ದುಃಖವಾಗುತ್ತದೆ. ಸರ್ಕಾರ ಕೇಳಿದರೆ ಅವು ಕಾರ್ಪೋರೇಷನ್ ವ್ಯಾಪ್ತಿಗೆ ಬರುತ್ತವೆಂದು ಹೇಳುತ್ತಾರೆ, ಕಾರ್ಪೋರೇಷನ್‌ನಲ್ಲಿ ದುಡ್ಡಿಲ್ಲದೆ ನಗರಗಳ ರಸ್ತೆಗಳೆಲ್ಲ ಕೆಟ್ಟಿವೆ. ಆದ್ದರಿಂದ ಕಾರ್ಪೋರೇಷನ್‌ನ್ನು ಬಿಟ್ಟು ಸರ್ಕಾರವೇ ನೇರವಾಗ ರಾಷ್ಟ್ರೀಯ ಹೆದ್ದಾರಿಯಿರಲಿ. ರಾಜ್ಯ ಹೆದ್ದಾರಿಯಿರಲಿ ನಗರ ಪ್ರದೇಶಗಳ ರಸ್ತೆಗಳನ್ನು ಕೈಗೆತ್ತಿ ಕೊಂಡು ಕೆಲಸ ಮಾಡುವುದು ಬಹಳ ಅವಶ್ಯಕವಿದೆ. ಇನ್ನು ಸವಣೂರು ಸೆರೆವಾಡ ಎಂಬ ರಸ್ತೆ ಇದೆ ಧಾರವಾಡ ಜಿಲ್ಲೆಯಲ್ಲಿ ದೊಡ್ಡ ರಸ್ತೆ ಅದು. ಜಿಲ್ಲಾಪರಿಷತ್ತ್ ಒಂದು ಠರಾವು ಮಾಡಿಕಳಿಸಿಕೊಟ್ಟಿದೆ. ಈ ರಸ್ತೆಯನ್ನು ಮೇಲ್ದರ್ಜೆಗೆ ಗೇರಿಸಿ ಸರ್ಕಾರ ಕೈಗೆತ್ತಿಕೊಂಡು ಕೆಲಸ ಮಾಡಬೇಕೆಂದು ಹೇಳಿದೆ ಆ ದುಸ್ಥಿತಿಯಿಂದ ಅನೇಕ ಬಸ್‌ಗಳ ಸಂಚಾರ ಕೂಡ ಸ್ಥಗಿತಗೊಂಡಿದ್ದು ಆ ಭಾಗದಲ್ಲಿ ರೈತರ ಹರತಾಳ ಮಾಡಿದ್ದಾರೆ. ಈ ರಸ್ತೆ ಉದ್ದ 40 ಕಿ.ಮಿ. ಕೂಡಲೇ ಅದನ್ನು ಕೈಗೆತ್ತಿಕೊಂಡು ಅದನ್ನು ಮಾಡುವುದಕ್ಕೆ ಮುಂದೆ ಬರಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕೊನೆಯದಾಗಿ ವಿದ್ಯುತ್ ಇಲಾಖೆಯ ಬಗ್ಗೆ ಹೇಳಬೇಕೆಂದರೆ ನನ್ನ ಮತ ಕ್ಷೇತ್ರದಲ್ಲಿ ಶಿಗ್ಗಾಂ ಸುವಣೂರು ಸೊಲ್ಲಾಪುರ ವ್ಯಾಪ್ತಿಯಲ್ಲಿ 33 ಕೆವಿ. ಸ್ಟೇಶನ್‌ಗಳಿವೆ ಇದರಿಂದ ವಿದ್ಯುತ್ ಸರಬರಾಜು ತುಂಬಾ ಕಡಿಮೆ ಅಲ್ಲಿನ ವಿದ್ಯಾರ್ಥಿಗಳಿಗೆ

ಸರಬರಾಜು ಕಡಿತವಾಗಿದೆ. ಓದಲಿಕ್ಕೂ ಆಗದು ವಿದ್ಯಾರ್ಥಿಗಳಿಗೆ ಅದನ್ನೂ ನೋಡಲು ಖುದ್ದಾಗಿ ವಿದ್ಯುತ್ ಸಚಿವರಾಗಲಿ ಅಧಿಕರಿಗಳಿಗಾಗಲಿ ಬಂದು ನೋಡಬೇಕು. 110 ಕವಿ ಸ್ಟೇಶನ್ ಮಾಡಬೇಕೆಂದು ಅನೇಕ ಮನವಿಗಳನ್ನು ಕೊಟ್ಟರೂ ಆ ಕೆಲಸವಾಗಿಲ್ಲ. ಆ ದೃಷ್ಟಿಯಿಂದ 110 ಕೆವಿ ಸ್ಟೇಶನ್‌ಗಳನ್ನು ಸ್ಥಾಪಿಸುವುದಕ್ಕೆ ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಇನ್ನು ಕೊನೆಯದಾಗಿ ನಾವು ಪ್ರತಿ ಹಳ್ಳಿಗಳಿಗೆ ಚುನಾವಣೆಯ ಕಾಲದಲ್ಲಿ ಹೋದಾಗ ಅವರು ಕೇಳುತ್ತಿರತಕ್ಕಂಥದ್ದು ಏನೆಂದರೆ ನಮಗೆ ಮೂಲಭೂತ ಸೌಲಭ್ಯವಾದಂಥ ಒಂದು ದೀಪವನ್ನು ಕೊಡಿ ಎಂದು ಇದನ್ನು ಕೂಡ ಪೂರೈಸುವುದಕ್ಕೆ ನಮಗೆ ಆಗುತ್ತಿಲ್ಲ ಆದರೆ ಅದು ಏನೇ ಇರಲಿ ಇವತ್ತು ನಾವು ಕೈಗಾರಿಕೋದ್ಯಮಿಗಳಿಗೆ ವಿದ್ಯುತ್ ಸರಬರಾಜು ಮಾಡುವುದನ್ನು ಸ್ವಲ್ಪ ಪ್ರಮಾಣದಲ್ಲಿ ಕಡಿಮೆ ಮಾಡಿದರೂ ಕೂಡ ಆ ಹಳ್ಳಿಗಳಲ್ಲಿ ವಾಸವಾಗಿರತಕ್ಕಂಥ ಬಡ ರೈತರುಗಳಿಗೆ ದುರ್ಬಲ ವರ್ಗದವರಿಗೆ ಇವತ್ತು ಬೀದಿ ದೀಪಗಳನ್ನು ಕೊಡುವ ವ್ಯವಸ್ಥೆಯನ್ನು ನಾವು ಮಾಡಬೇಕು. ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿಕೂಡಲೇ ಈ ಕಾರ್ಯಕ್ರಮಗಳನ್ನು ಮಾಡಬೇಕು. ಎಂಬ ಮಾತನ್ನು ಹೇಳುತ್ತೇನೆ. ಇನ್ನು....

ವೈಸ್ ಛೇರ್ಮನ್ : ಕೊನೆಯದಾಗಿ ಎಂದು ಹೇಳಿ ಮುಂದೆ ಎಳೆಯುವುತ್ತಿದ್ದೀರಿ. ದಯಮಾಡಿ ಮುಕ್ತಾಯ ಮಾಡಬೇಕು.

ಶ್ರೀ ಮಂಜುನಾಥ್ ಸಿ. ಕುನ್ನೂರ್ : ನಾನು ಈಗಾಗಲೇ ಹೇಳಿದ ವಿಷಗಳನ್ನು ಮಾನ್ಯ ಸರ್ಕಾರದವರು ಗಮನ ಹರಿಸಿ ಹೆಚ್ಚು ಆಸಕ್ತಿಯನ್ನು ವಹಿಸಿ ಈ ಕೆಲಸಗಳನ್ನು ಕೂಡಲೇ ಕೈಗೆ ಎತ್ತಿ ಕೊಳ್ಳಬೇಕು ಎಂಬ ಮಾತನ್ನು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಿನಯಕುಮಾರ ಸೊರಕೆ (ಪುತ್ತೂರು) : ಮಾನ್ಯ ಉಪಾಧ್ಯಕ್ಷಿಣಿಯವರೇ. ಲೋಕೋಪಯೋಗಿ ಸಚಿವರು, ನೀರಾವರಿ ಸಚಿವರು, ವಿದ್ಯುಚ್ಛಕ್ತಿ ಸಚಿವರು ಹಾಗೂ ಮಿನುಗಾರಿಕಾ ಸಚಿವರು ಇಟ್ಟಂಥ ಬೇಡಿಕೆಯನ್ನು ಸ್ವಾಗತಿಸುತ್ತಾ, ನಮ್ಮ ಜಿಲ್ಲೆಗೆ ಸೀಮಿತವಾದಂಥ ಕೆಲವು ವಿಚಾರಗಳನ್ನು ಈ ಸಂದರ್ಭದಲ್ಲಿ ಮಾನ್ಯ ಸಚಿವರು ಗಮನಕ್ಕೆ ತುರವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ. ಲೋಕೋಪಯೋಗಿ ಸಚಿವರು ಇಲಾಖೆಗೆ ಹೊಂದಿಕೊಂಡು 1978ನೇ ಇಸವಿಯಿಂದ ಕರ್ನಾಟಕ ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಗಳ ರಚನೆಯ ಹೆಚ್ಚಿನ ರಸ್ತೆಗಳನ್ನು ಸೇರಿಸುವಂಥ ಒಂದು ಕಾರ್ಯಕ್ರಮ ಏನು ನಡೆದಿಲ್ಲ. ಇದರಲ್ಲಿ ನಮ್ಮ ಮಂಗಳೂರು, ಕೊಡಗು ಮೈಸೂರು, ಈ ರಸ್ತೆಗಳನ್ನು ಕೂಡ ರಾಷ್ಟ್ರೀಯ ಹೆದ್ದಾರಿಯಾಗಿಲ್ಲ ಈಗಾಗಲೇ ರಾಜ್ಯಸರ್ಕಾರದಿಂದ ಇದಕ್ಕೆ ಶಿಫಾರಸ್ಸು ಆಗಿದ್ದರೂ ಕೂಡ ಇನ್ನು ಕೂಡ ಇದನ್ನು ಸೇರ್ಪಡೆ ಮಾಡುವಂಥ ಕೆಲಸ ಕಾರ್ಯಗಳು ಆಗಿಲ್ಲ. ಆ ಒಂದು ರಸ್ತೆಯ ಬಗ್ಗೆ ಕೇಂದ್ರಸರ್ಕಾರಕ್ಕೆ ಹೆಚ್ಚಿನ ರೀತಿಯ ಒಂದು ಒತ್ತಡವನ್ನು ತಂದು ರಾಷ್ಟ್ರೀಯ ಹೆದ್ದಾರಿಯಾಗಿ ನಿರ್ಮಾಣ ಮಾಡುವುದಕ್ಕೆ ಕಾರ್ಯಕ್ರಮವನ್ನು ಹಮ್ಮಿಕ್ಕೊಳ್ಳಬೇಕು ಎಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ನಾನುಕೇಳಿಕೊಳ್ಳುತ್ತಾ ಪುತ್ತೂರು ಬೈಪಾಸ್ ರಸ್ತೆಯ ಮಟ್ಟಿಗೆ ಸಾಧಾರಣ ಹತ್ತು ವರ್ಷಗಳಿಂದ ಪುತ್ತೂರು ಸಬ್‌ಡಿವಿಜನ್ ಸೆಂಟರ್ ಆಗಿದ್ದರೂ ಕೂಡಾ ದಿವಸಕ್ಕೆ ಒಂದೆರಡು ಅಪಘಾತಗಳು ಪುತ್ತೂರು ಪಟ್ಟಣದಲ್ಲಿ ಸಂಭಪಿಸುತ್ತವೆ. ಈ ಸಂದರ್ಭದಲ್ಲಿ ಬೈಪಾಸ್ ರಸ್ತೆಯ ಮಟ್ಟಿಗೆ ಕಳೆದ ಐದು ವರ್ಷಗಳಿಂದಲೂ ನಾನು ಶಾಸಕವಾದ ನಂತರವೂ ಕೂಡ

ಪೂರ್ತಿಯಾಗಿದೆ. ಕೆಲವು ಪ್ರಾರಂಭ ಮಾಡಲಿಕ್ಕೆ ಹಣವನ್ನು ಬಜೆಟ್‌ನಲ್ಲಿ ಒದಗಿಸಿಕೊಡಬೇಕು ಎಂದು ಕೇಳಿಕೊಂಡು ಸಾಕಷ್ಟು ಒತ್ತಡವನ್ನು ತಂದಿದ್ದರು ಕೂಡ, ಈ ಬೈಪಾಸ್ ರಸ್ತೆಗಳ ಜೋಡಣೆ ಆಗಲಿಲ್ಲ ಎಂದು ಹೇಳಿದರೆ ಹೆಚ್ಚಿನಂತ ಯಾವುದಕ್ಕೆ ಇವತ್ತು ಆಧ್ಯತೆಯನ್ನು ಕೊಡುತ್ತೀರಿ ಎಂದು ತಾವೇ ಅರ್ಥ ಮಾಡಿಕೊಳ್ಳಬೇಕು.

ಈ ವಾರ್ಷಿಕ ವರ್ಷದಲ್ಲಿ 88 ಲಕ್ಷ ರೂಪಾಯಿಗಳ ಬೈಪಾಸ್ ರಸ್ತೆಯ ರಚನೆಗೆ ಏನು ಮೊಬಲಗು ಇದೆ, ಇದರಲ್ಲಿ 1:3ಗ್ರಾಂಟನ್ನು ಜೋಡಣೆ ಮಾಡತಕ್ಕಂಥ ಕೆಲಸ ಕಾರ್ಯಗಳನ್ನು ನಾವು ಅಳವಡಿಸಿಕೊಂಡು ಶೀಘ್ರವಾಗಿ ಈ ಕಾಮಗಾರಿಯನ್ನು ಪ್ರಾರಂಭ ಮಾಡುವುದಕ್ಕೆ ತಾವು ಅವಕಾಶವನ್ನು ಕಲ್ಪಿಸಿ ಕೊಡಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಪಿ.ಡಬ್ಲ್ಯೂಡಿ ರಸ್ತೆಗಳು ಯಾವ ರೀತಿಯ ಹಂತದಲ್ಲಿದೆ ಎಂದು ಹೇಳಿದರೆ ಜಿಲ್ಲಾ ಪರಿಷತ್ತಿನ ಒಂದು ವ್ಯವಸ್ಥೆ ಆದ ನಂತರ ಪಿ.ಡಬ್ಲ್ಯೂ.ಡಿ ಇಲಾಖೆಯ ಬಗ್ಗೆ ಹೆಚ್ಚಿನ ರಸ್ತೆಗಳು ಇದಕ್ಕೆ ಹಸ್ತಾಂತರ ಆದ ನಂತರ ಪಿ.ಡಬ್ಲ್ಯೂ.ಡಿ ರಸ್ತೆಗಳು ರಿಪೇರಿ ಆಗುವಂಥ ಪರಿಸ್ಥಿತಿಯಲ್ಲಿಯೇ ಇಲ್ಲ. ವಾಹನಗಳು ಅದರಲ್ಲಿಯೂ ಕೂಡ ಹೆಚ್ಚಾಗಿ ಮಲೆನಾಡು ಪ್ರದೇಶಗಳಲ್ಲಿ ಹೆಚ್ಚಿನ ಮಳೆ ಇರುವಂಥ ಸಂದರ್ಭಗಳಲ್ಲಿ ಇವತ್ತು ಅದಕ್ಕೆ ರಿಪೇರಿಗೆ ಬೇಕಾದಂಥ ಹಣವನ್ನು ಕೊಡದೇ ಇರುವಂಥ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಈ ಸಂದರ್ಭಗಳಲ್ಲಿ ಇದಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟು ಈಗಾಗಲೇ ತಾವು ತಮ್ಮ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿವರ್ ಮುಖಾಂತರ ನಲವತ್ತು ಲಕ್ಷ ರೂಪಾಯಿಗಳ ಒಂದು ಪ್ರಪೋಸಲ್ಸ್‌ನ್ನು ಕಳುಹಿಸಬೇಕು ಎಂದು ತಾವುಏನು ಕೇಳಿಕೊಂಡಿದ್ದೀರಿ, ಅದೂ ಕೂಡ 92-93 ನೇ ಇಸವಿಗೆ. 92-93ನೇ ಇಸವಿಗೆ ಪ್ರಪೋಸಲ್ಸ್‌ನ್ನು ನೀವು ಕೇಳಿದರೆ 91-92ರಲ್ಲಿ ನಾವು ಏನು ಆ ರಸ್ತೆಯಲ್ಲಿ ವಾಹನ ನಡೆಸಬೇಕು? ಈ ಕಾರ್ಯಕ್ರಮಗಳನ್ನು ಈ ವಾರ್ಷಿಕ ವರ್ಷದಲ್ಲಿಯೇ 91-92 ನೇ ವಾರ್ಷಿಕ ವರ್ಷದಲ್ಲಿಯೇ ನಡೆಸುವಂಥ ಕಾರ್ಯಕ್ರಮವನ್ನು ತಾವು ಹಮ್ಮಿಕ್ರೊಳ್ಳಬೇಕೆಂದು ತಮ್ಮ ಹತ್ತಿರ ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ.

ನಮ್ಮ ಜಿಲ್ಲೆಯಲ್ಲಿ ದೊಡ್ಡ ನೀರಾವರಿಗೆ ಅವಕಾಶವಿಲ್ಲ ಏತ ನೀರಾವರಿಗೆ ಸಾಕಷ್ಟು ಅವಕಾಶಗಳಳು ಇದ್ದರೂ ಕೂಡ ಅದರ ಮಟ್ಟಿಗೆ ಈ ಇಲಾಖೆಯು ಅಷ್ಟೊಂದು ಗಮನವನ್ನು ಕೊಡಲಿಲ್ಲ. ಕಳೆದ ವರ್ಷದಲ್ಲಿ ಹಲವಾರು ಕಾಮಗಾರಿಗಳು ದಕ್ಷಿಣ ಕನ್ನಡ ಜಿಲ್ಲೆಗೆ ಲಿಫ್ಟ್ ಇರಿಗೇಶನ್ನಿಗೆ ಬಡ್ಜೆಟ್‌ನಲ್ಲಿ ಸೇರ್ಪಡೆಯಾಗಿದ್ದರೂ ಕೂಡ, ಕಾಮಗಾರಿಗಳು ಆಗಲಿಲ್ಲ, ರೈತರಿಗೆ ಅವಶ್ಯಕತೆ ಇರುವಂತಹ ಹಲವಾರು ಲಿಫ್ಟ ಇರಿಗೇಷನ್‌ಗೆ ಸಂಬಂಧ ಪಟ್ಟಂತೆ ಪಟ್ಟಿಯನ್ನು ಕೊಟ್ಟಿದ್ದೇವೆ. ಮಂತ್ರಿಗಳು ಇದಕ್ಕೆ ತಡಮಾಡಬಾರದು ಶೀಘ್ರವಾಗಿ ಈ ಕಾರ್ಯಕ್ರವನ್ನು ಹಮ್ಮಿಕ್ರೊಳ್ಳಬೇಕು. ಈ ವಾರ್ಷಿಕ ವರ್ಷದಲ್ಲಿ ಅದನ್ನು ಪೂರ್ತಿ ಮಾಡುವಂತಹ ಕಾರ್ಯಕ್ರಮವನ್ನು ಹಮ್ಮಿಕ್ರೊಂಡು ಮಾಡಬೇಕು. ನಾವೇನು ಕೊಟ್ಯಾಂತರ ರೂಪಾಯಿಗಳನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಕೇಳುತ್ತಿಲ್ಲ, ರೈತರಿಗೆ ಪ್ರಯೋಜವಾಗುವಂತಹ ಲಿಫ್ಟ ಇರಿಗೇಶನ್ ಮಟ್ಟಿಗೆ ನಾವು ಹಣವನ್ನು ಕೇಳಿದ್ದೇವೆ. ತಾವು ಇದರ ಬಗ್ಗೆ ಶೀಘ್ರವಾಗಿ ವಿಧಾನ ಸಭಾ ಅಧಿವೇಶನ ಮುಗಿದ ಕೂಡಲೇ ತಮ್ಮ ಪ್ರವಾಸವನ್ನುನಮ್ಮ ಜಿಲ್ಲೆಗೆ ಹಾಕಿಕೊಂಡು, ಆ ಕಾಮಗಾರಿಗಳನ್ನು ಪ್ರಾರಂಭ ಮಾಡಲಿಕ್ಕ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ತಮ್ಮ ಮೂಲಕ ಸಚಿವರು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಕೆ.ಇ.ಬಿ.ಗೆ ಹೊಂದಿಕೊಂಡಂತೆ ನಮ್ಮ ಜಿಲ್ಲೆಯಲ್ಲಿ ಚೀಫ್ ಇಂಜಿನಿಯರ್ ಆಫಿಸ್ ಇದೆ. ಆದರೆ ಸರ್ಕಾಲ್ ಆಫೀಸ್ ಇಲ್ಲ. ಸರ್ಕಲ್ ಆಫೀಸಿಗೆ ಶಿವಮೊಗ್ಗಕ್ಕೆ ಹೋಗಬೇಕು.ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ

ಯಾವುದೇ ತೀರ್ಮಾನವನ್ನು ಕೈಗೊಂಡಿಲ್ಲ. ಪುತ್ತೂರಿನಲ್ಲಿ ಡಿವಿಜನ್ ಆಫೀಸ್ ಪ್ರಾರಂಭವಾಗಬೇಕೆಂದು, ಕೆ.ಇ.ಬಿ. ಯ ಛೇರ್ಮನ್ ರವರು ನಮ್ಮ ಜಿಲ್ಲೆಗೆ ಬಂದಾಗ ಹೇಳಿಕೆಕೂಡ ಕೊಟ್ಟಿದ್ದಾರೆ. ಆ ಡಿವಿಜನ್ ಆಫೀಸನ್ನು ಪ್ರಾರಂಭ ಮಾಡುವಂಥ ಕಾರ್ಯಕ್ರಮವನ್ನು ಕೂಡಲೇ ಹಮ್ಮಿಕ್ಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಿಗೆ ಕೇಳಿಕೊಳ್ಳುತ್ತೇನೆ.

ಹಿಂದಿನ ಸರ್ಕಾರ ವಿದ್ಯುತ್ ದೀಪವನ್ನು ಹಾಕಿಸುತ್ತೇವೆಂಬ ಕಾರ್ಯಕ್ರಮವನ್ನು ಹಾಕಿಕೊಂಡಿತ್ತು. ಈ ಕಾರ್ಯಕ್ರಮದ ಮುಖಾಂತರ ಇವತ್ತು ಕಂಬ ಜೋಡಣೆ ಮಾಡುವಂಥ ಕಾರ್ಯಕ್ರಮವಾಗಲಿ ಬ್ಯಾಂಕಿನ ಮೂಲಕ ಸವಲತ್ತುಗಳನ್ನು ಕೊಡುವ ಕಾರ್ಯಕ್ರಮ ಇತ್ತು. ಒಂದೊಂದು ತಾಲ್ಲೂಕುಗಳಲ್ಲಿ 500 ಮನೆಗಳಿಗೆ ವಿದ್ಯುತ್ತನ್ನು ಕೊಡುವ ಕಾರ್ಯಕ್ರಮವಿತ್ತು. ಈಚಿನ ವರ್ಷದಲ್ಲಿ ಆ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಕೈಬಿಟ್ಟಿರುವುದನ್ನು ನಾವು ಕಾಣುತ್ತಿದ್ದೇನೆ. ಆ ಕಾರ್ಯಕ್ರಮವನ್ನು ಪುನಃ ಹಾಕಿಕೊಂಡು ಇದರ ಮುಖಾಂತರ ವಿದ್ಯುದ್ದೀಕರಣ ಮಾಡುವಂತಹ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮೀನುಗಾರಿಗೆ ಹೊಂದಿಕೊಂಡತೆ ಈಗ ಹಲವಾರು ಜನ ಮಂತ್ರಿಗಳಾದವರು ಇಲ್ಲಿ ಸದಸ್ಯರಾಗಿದ್ದಾರೆ. ಮಾನ್ಯ. ಬೈರೇಗೌಡರು ನಿನ್ನೆ ಭಾಷಣ ಮಾಡುತ್ತಿದ್ದರು. ಹಲವಾರು ಸಲ ಮಿನುಗಾರಿಕಾ ಮಂತ್ರಿಯಾಗಿ ಅವರು ಸಹ ನಮ್ಮ ಜಿಲ್ಲೆಗೂ ಹಲವರೂ ಸಲ ಭೇಟಿಯನ್ನು ಕೊಟ್ಟಿದ್ದಾರೆ. ಡ್ರಜಿಂಗ್‌ನ ವಿಚಾರ ಇವತ್ತಿನ ನಿನ್ನೆಯ ಬೇಡಿಕೆಯಲ್ಲ. ಮಾನ್ಯ ಶಾಸಕರಾದ ಇದಿನಬ್ಬನವರು ಪ್ರತಿ ಅಧಿವೇಶನದಲ್ಲಿಯೂ ಆ ಬೇಡಿಕೆಯನ್ನು ಇಟ್ಟು ಅದಕ್ಕೆ ಒಂದೇ ರೀತಿಯ ಉತ್ತರ ಬರುತ್ತಿದೆ. ಡ್ರಜಿಂಗ್‌ನ ವಿಚಾರ ಪತ್ರಿಕೆಯಲ್ಲಿ ಬರುತ್ತದೆ. ಜನರು ಕೂಡ ಬೇಡಿಕೆಯನ್ನು ಇಡುತ್ತಾರೆ. ಎಷ್ಟೋ ಜನರು ಪ್ರಾಣವನ್ನು ಕಳೆದುಕೊಳ್ಳುವಂತಹ ಪ್ರಸಂಗವು ಆಗಿದೆ. ಈಗಿನ ಮೀನುಗಾರಿಗಾ ಸಚಿವರಾದ ಮಾನ್ಯ ಬೆಳ್ಳಿಯಪ್ಪನವರು ಬಹಳ ಅನುಭವವುಳ್ಳವರಾಗಿದ್ದಾರೆ. ಇದರ ಬಗ್ಗೆ ತ್ವರಿತವಾಗಿ ಕಾರ್ಯಕ್ರಮವನ್ನು ಹಾಕಿಕೊಂಡು ಈ ತೊಂದರೆಯನ್ನು ನಿವಾರಿಸಬೇಕೆಂದು ಮನವಿ ಮಾಡಿಕೊಂಡುಕೊಳ್ಳುತ್ತೇನೆ ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್ ಮಲೆನಾಡು ಪ್ರದೇಶ ಅಭಿವೃದ್ಧಿ ಕಾರ್ಯಕ್ರಮದ ಮಟ್ಟಿಗೆ ಒಂದು ಬೋರ್ಡ್ ರಚನೆ ಮಾಡುತ್ತೇವೆಂದು ಹೇಳಿ ಹಿಂದ ಬಜೆಟ್ ಮಂಡನೆ ಮಾಡದಿದಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ. ಇದರ ಮಟ್ಟಿಗೆ ಇದುವರೆಗೂ ಯಾವುದೇ ಕಾರ್ಯಕ್ರಮ ನಡೆದಿಲ್ಲ. ಅದನ್ನು ಶೀಘ್ರವಾಗಿ ರಚನೆ ಮಾಡಬೇಕು. ಈ ಪ್ರದೇಶದ ಅಭಿವೃದ್ಧಿ ಕಾರ್ಯಕ್ಕೆ ಬೇರೆ ಬೇರೆ ಕಾರ್ಯಕ್ರಮಗಳನ್ನು ಹಮ್ಮಿ ಕೊಂಡು ಹೋಗಬೇಕೆಂದು ಈ ಸಂದರ್ಭದಲ್ಲಿ ನಾನು ಮನವಿ ಮಾಡಿಕೊಂಡು ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ : (ಉಲ್ಲಾಳ) ಸನ್ಮಾನ್ಯ ಅಧ್ಯಕ್ಷಣಿಯವರೆ, ನಾಲ್ಕು ಬೇಡಿಕೆಗಳು ಇವೆ. ಈ ಬೇಡಿಕೆಗಳನ್ನು ನಾನು ಬೆಂಬಲಿಸಿ ಎರಡು ಮಾತುಗಳನ್ನು ಹೇಳಲಿಕ್ಕೆ ಅಪೇಕ್ಷೆ ಪಡುತ್ತಿದ್ದೇನೆ. ನಾನೇನು ಸ್ಥೂಲವಾಗಿ ಮಾತನಾಡುವುದಿಲ್ಲ, ಏಕೆಂದರೆ ಅವಕಾಶವಿಲ್ಲ, ಸಮಯವಿಲ್ಲ.

ಶ್ರೀ ವಾಟಾಳ್ ನಾಗರಾಜ್: ಬರೀ ಕಾಂಗ್ರೆಸ್‌ವರಿಗೆ ಕೊಡ್ತಿದ್ದೀರಿಲ್ಲಾ ಈ ಕಡೆಯವರಿಗೆ ಏಕೆ ಕೊಡುತ್ತಿಲ್ಲ. ನನಗೆ ಅರ್ಥವಾಗುತ್ತಿಲ್ಲ. ಅವರಿಗೆ ಪಾರ್ಟಿಮೀಟಿಂಗ್ ಇರುತ್ತದೆ. ಪಾರ್ಟಿಮೀಟಿಂಗ್‌ನಲ್ಲಿ ಹೇಳುವುದಕ್ಕೆ ಸಾಕಷ್ಟು ಅವಕಾಶವಿರುತ್ತದೆ. ಇಲ್ಲಿ ವಿರೋಧಪಕ್ಷದವರಿಗೆ ಅವಕಾಶ ಕೊಡಿ ಅಂದತೆ- ಕೊಡುವುದಿಲ್ಲ.

ಛೇರ್ಮನ್ : ವಿರೋಧ ಪಕ್ಷದ ಕಡೆಯವರು 206 ನಿಮಿಷ ತೆಗೆದುಕೊಂಡು ಮಾತನಾಡಿದ್ದೀರಿ.

ಶ್ರೀ ಬಾಬುಗಾಡ ರುದ್ರನಗೌಡ ಪಾಟೀಲ್: ರೈತಸಂಘಕ್ಕೆ ಎಷ್ಟು ಕೊಟ್ಟಿದ್ದೀರಿ.

ಛೇರ್ಮನ್ : ರೈತಸಂಘದವರು ಇಲ್ಲಿ ಬನ್ನಿಕೋಡ್ ಹೆಸರು ಇದೆ. ಆದರೆ ಅವರು ಇಲ್ಲಿ ಇಲ್ಲ.

ಶ್ರೀ ಬಾಬಾಗೌಡ ರುದ್ರನಗೌಡ ಪಾಟೀಲ್ : ಅವರು ರೈತದ ಸಂಘ ಅಲ್ಲ, ಅವವ ಜನತಾದಳ ಸ್ವಲ್ಪ ಅದನ್ನು ತಿದ್ದುಪಡಿ ಮಾಡಿಕೊಳ್ಳಿ.

ಛೇರ್ಮನ್ : ರೈತಸಂಘದವರು ತಾವು ಹೆಸರು ಯಾರು ಕೊಟ್ಟಿಲ್ಲ ಅವರಿಗೆ ಅವಕಾಶ ಕೊಡುತ್ತೇನೆ.

(ಗೊಂದಲ)

11.40 ಎ.ಎಂ.

ಅಧ್ಯಕ್ಷಣೆಯವರು : ನೀವು ಮಾತನಾಡಲು 206 ನಿಮಿಷಗಳ ಸಮಯವನ್ನು ತೆಗೆದುಕೊಂಡಿದ್ದೀರಿ. ಈ ಕಡೆ ಬಹಳ ಕಡಿಮೆ ಸಮಯವನ್ನು ತೆಗದುಕೊಂಡಿದ್ದಾರೆ. 5-10 ನಿಮಿಷದಲ್ಲಿ ಅವರು ಮಾತನಾಡಿ ಮುಗಿಸಿದ್ದಾರೆ. ಎಲ್ಲಾ ಸೇರಿದರೆ ಒಟ್ಟು 50 ನಿಮಿಷವಾಗಿರಬಹುದು. ರೈತ ಸಂಘದವರು ಮಾತನಾಡುವವರಿದ್ದಾರೆ. ಅವರಿಗೂ ಅವಕಾಶ ಕೊಡೋಣ.ತಾವು ದಯಮಾಡಿ ಕುಳಿತುಕೊಳ್ಳಿ. ಸಮಯವನ್ನು ಹಾಳು ಮಾಡುವುದು ಬೇಡ. ಇದಿನಬ್ಬನವರು ಮಾತನಾಡಲಿ.

ಶ್ರೀ ವಾಟಾಳ್ ನಾಗರಾಜ್ : ನಮಗೆ ಮಾತನಾಡಲು ಒಂದು ಗಂಟೆಯಾದರೂ ಅವಕಾಶ ಕೊಡಿ. ಯಾವಾಗ ಕೊಡುತ್ತೀರಿ?

ಉಪಾಧ್ಯಕ್ಷಿಣೆಯವರು : ಒಂದು ಗಂಟೆಯೇ? ಹನ್ನೆರಡು ಗಂಟೆಗೆ ಉತ್ತರವಾಗಬೇಕು.

ಶ್ರೀ ವಾಟಾಳ್ ನಾಗರಾಜ್: ನಾವು ಉತ್ತರಕ್ಕೆ ಅವಕಾಶ ಕೊಡುವುದಿಲ್ಲ.

+ ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಳ): ಆದ್ದರಿಂದ ಮಾನ್ಯ ಅಧ್ಯಕ್ಷಿಣೆಯವರೇ ನಾನು ಸ್ಥೂಲವಾಗಿ ಮಾತನಾಡುವುದಕ್ಕೆ ಅಪೇಕ್ಷೆ ಪಡುವುದಿಲ್ಲ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂಥ ವಿಷಯವನ್ನು ಮಾತ್ರ ಮಾತನಾಡುವುದಕ್ಕೆ ಬಯಸುತ್ತೇನೆ ಅಭಿವೃದ್ಧಿ ಮಾಡುತ್ತೇನೆಂದು ಹೇಳಿ ಮಾಡದೇ ಇರುವಂಥದ್ದನ್ನು ಮಾತ್ರ ತಮ್ಮ ಮುಂದೆ ನಿವೇದಿಸಿಕೊಳ್ಳುತ್ತಿದ್ದೇನೆ. ಮೊದಲು ನಾನು ಮೀನುಗಾರಿಕೆ ಇಲಾಖೆಗೆ ಸಂಬಂದಪಟ್ಟಂತೆ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. 300 ಕಿಲೋಮೀಟರ್ ಕರಾವಳಿ ಇದ್ದರೂ ಕೂಡ ಇಷ್ಟು ದೊಡ್ಡ ಮೀನುಗಾರಿಗೆ ಇಲಾಖೆ ಇದ್ದರೂ ಕೂಡ ಮೀನುಗಾರರಿಗೆ ಸರಿಯಾದಂತ ಸಹಾಯ ಉಪಕಾರ ಸಿಗಲಿಲ್ಲ ಎನ್ನುವುದನ್ನು ಬಹಳ ಬೇಸರದಿಂದ ಹೇಳುತ್ತಿದ್ದೇನೆ.

ನಾನು ಮೀನುಗಾರರ ಮಧ್ಯೆ ಇರುವಂಥವರು. ಸಮುದ್ರ ಬದಿಯಲ್ಲಿ ಇರುವಂಥವನು ಅವರ ಕಷ್ಟ ಸುಖಗಳನ್ನು ಚೆನ್ನಾಗಿ ಅರಿತಿದ್ದೇವೆ 24 ಗಂಟೆಗಳೂ ಅವರು ಸಮುದ್ರದಲ್ಲಿ ದುಡಿದು ಕಷ್ಟಪಟ್ಟು ಜೀವನ ಮಾಡುವಂಥವರು. ಅವರಿಗೆ ಮಳೆ ಬಂದರೆ ತಪಾಸು ಬಂದರೆ ಮೇಲೆ ನೀಲಿ ಗಗನ ಕಳೆಗೆ ನೀರು ಕಡಲನ್ನು ಬಿಟ್ಟು ಏನೂ ಇಲ್ಲ. ಇಂಥ ಜನರಿಗೆ ಉಪಕಾರದ ಕೆಲಸವನ್ನು ಆದಷ್ಟು ನಿಧಾನವಾಗಿ ಮಾಡುತ್ತಿದ್ದಾರೆ

ಇದರ ಬಗ್ಗೆ ಹೇಳುತ್ತಲೇ ಬರುತ್ತಿದ್ದೇನೆ. ಇದರ ಬಗ್ಗೆ ಹೇಳಿದ್ದು ಇದರ ಬಗ್ಗೆ ಪ್ರಶ್ನೆಯನ್ನು ಕೇಳಿದ್ದು ಸ್ಥಳಕ್ಕೆ ಮಂತ್ರಿಗಳು ಬಂದು ನೋಡಿದು ಅಧಿಕಾರಿಗಳು ಬಂದು ನೋಡಿದ್ದು ಇನ್ನಿತರು ಬಂದು ನೋಡಿದ್ದು ಇದಕ್ಕೆ ಖರ್ಚಾದ ಹಣವನ್ನು ಕೂಡಿಸಿಟ್ಟಿದ್ದರೆ ಅರ್ಧಾಂಶ ಕೆಲಸವಾದರೂ ಆಗುತ್ತಿತ್ತೋ ಏನೋ ಎಂದನಿಸುತ್ತದೆ. ಬರುವುದೂ ನೋಡುವುದು ಬರುವುದೂ ನೋಡುವುದು ಎಂಥದ್ದನ್ನು ನೋಡುವುದೋ ಎಂಥದ್ದನ್ನು ಮಾಡುವುದೋ ಆ ಪರಮಾತ್ಮನಿಗೇ ಗೊತ್ತು ಈ ಹೂಳು ಎತ್ತದೇ ಇರುವುದರಿಂದ ಏನು ಆಯಿತು. ಅಲ್ಲಿ, ಮರಳು ದಿಣ್ಣೆಗೆ ತಾಗಿ 25 ಜನರು ಸತ್ತರು. ಎಷ್ಟೋ ನೌಕೆಗಳು ಮುಳುಗಿ ಹೋಗಿವೆ. ಅಲ್ಲದೆ ವರ್ಷಕ್ಕೊಬ್ಬರು ಮೀನುಗಾರಿಕೆ ಮಂತ್ರಿಗಳು ಬರುತ್ತಾರೆ. ಅವರು ಮೀನು ಏನು ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಮೊದಲೇ ಹೋಗುತ್ತಾರೆ. ಬೈರೇಗೌಡರು ಬಂದರು ಒಂದು ವರ್ಷ ಕೃಷ್ಣ ರೆಡ್ಡಿಯವರು ಬಂದರು ಒಂದು ವರ್ಷ ರಘುಪತಿ ಬಂದರು ಒಂದು ವರ್ಷ ನರಸಿಂಹಮೂರ್ತಿಯವರು ಬಂದರು ಒಂದು ವರ್ಷ ಈಗ ನಮ್ಮ ಬೆಳ್ಳಿಯಪ್ಪನವರು ಬಂದಿದ್ದಾರೆ. ಅವರು ಶಾಶ್ವತವಾಗಾಲಿ ಎಂದು ನಾನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಶಾಶ್ವತವಾಗಿ ಎಂದರೆ ಎಷ್ಟು ವರ್ಷ ಇರಬೇಕು?

ಶ್ರೀ ಬಿ.ಎಂ. ಇದಿನಬ್ಬ: ಶಾಶ್ವತವಾಗಿ ಎಂದರೆ ಮೀನುಗಾರಿಕೆ ಇಲಾಖೆಗೆ ಹೊಂದಿಕೊಂಡು ಏನಾದರೂ ಒಂದಿಷ್ಟು ಅಭಿವೃದ್ಧಿ ಕೆಲಸ ಮಾಡಲಿ ಎಂದು ಆದ್ದರಿಂದ ಈ ಹೂಳು ಎತ್ತುವಂಥ ಕೆಲಸವನ್ನು ಆದಷ್ಟು ಶೀಘ್ರವಾಗಿ ಮಾಡಿಸಬೇಕೆಂದು ಮಾನ್ಯ ಮಂತ್ರಿಯವರಿಗೆ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇದಕ್ಕೆ ಎಂಟು ಕೋಟಿ ರೂಪಾಯಿ ಬೇಕೆಂದು ಹೇಳಿದ್ದಾರೆ ಎಷ್ಟೇ ಆಗಲಿ ಈ ಮೀನುಗಾರರ ಜೀವನವನ್ನು ಹಸನುಗೊಳಿಸುವುದಕ್ಕೆ ಅವರಿಗೆ ಈ ಹಾನಿಯನ್ನು ತಪ್ಪಿಸುವುದಕ್ಕೆ ಎಷ್ಟು ಕೋಟಿ ಹಣ ಖರ್ಚಾದರೂ ಈ ಕೆಲಸವನ್ನು ತಾವು ತುರ್ತಾಗಿ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ 12 ದಿವಸಗಳ ದರಣಿ ನಡೆಯಿತು. ಇದರಲ್ಲಿ ನಾನು ಶ್ರೀಮತಿ ಮನೋರಮ ಮದ್ವರಾಜ್‌ರವರು ಇನ್ನಿತರ ಎಂ.ಎಲ್.ಎ.ಗಳು ಧರಣಿ ಕುಳಿತೆವು ಈ ಕೆಲಸವನ್ನು ಮಾಡಿಸುತ್ತವೆಂದು ಧರಣಿಯನ್ನು ನಿಲ್ಲಿಸಿಬಿಟ್ಟರು. ಆದರೆ ಇಲ್ಲಿಯವರೆಗೆ ಆ ಕೆಲಸ ಆಗಿಲ್ಲ. ಅದ್ದರಂದ ಈ ಹೂಳು ಎತ್ತುವಂಥ ಕೆಲಸವನ್ನು ಕೆಲಸವನ್ನು ಅತಿ ಶೀಘ್ರವಾಗಿ ಮಾಡಿಸಬೇಕೆಂದು ಮಾನ್ಯ ಮೀನುಗಾರಿಕೆ ಸಚಿವರಲ್ಲಿ ಭಿನ್ನವಿಸುಕೊಳ್ಳುತ್ತೇನೆ. ಅಂದು ಬೈರೇಗೌಡರು ಮಂತ್ರಿಗಳಾಗಿದ್ದಾಗ ನಾನು ಒಂದು ಪ್ರಶ್ನೆ ಕೇಳಿದ್ದೆ, ನೀವು 20 ಮೀನುಗಳ ಹೆಸರನ್ನು ಹೇಳಿದರೆ ನಿಮಗೆ ಶಹಭಾಷ್ ಹೇಳುತ್ತೇನೆ ಎಂದು ಅವರಿಗೆ ಹೇಳುವುದಕ್ಕೆ ಆಗಲಿಲ್ಲ. ಮೀನುಗಾರಿಕೆ ಮಂತ್ರಿಯವರಿಗೆ ಮೀನಿನ ಹೆಸರುಗಳು ಗೊತ್ತಿರಬೇಕು ಮೀನಿನ ರುಚಿ ಗೊತ್ತಿರಬೇಕು. ಮೀನನ್ನು ಅಡಿಗೆ ಮಾಡಿದರೆ ಬರುವಂತ ಪರಿಮಳ ಎಷ್ಟು ಘಮಘಮ ಎಷ್ಟು ಸುಖಾಂತ ಎನ್ನುವುದು ಗೋತ್ತಿರಬೇಕು. ಮೀನುಗಾರರು ಒದಗಿಸಿಕೊಡುವ ಲಾಭವನ್ನು ಪಡೆಯುವುದೂ ನಮಗೆ ಗೊತ್ತಿರಬೇಕು. ಆದರೆ ನಮ್ಮ ಬೆಳ್ಳಿಯಪ್ಪನವರಿಗೆ ಇದೆಲ್ಲಾ ಗೊತ್ತಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆದ್ದರಿಂದ ಅವರು ನಮ್ಮ ಊರಿಗೆ ಬಂದು ಒಂದೆರಡು ದಿವಸ ಇದ್ದು ಮೀನುಗಾರರನ್ನು ಕರೆದು ಅವರ ಕಷ್ಟಗಳನ್ನು ವಿಚಾರಿಸಿ ಅದನ್ನು ಬಗೆಹರಿಸಿಕೊಂಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ ಅದೇ ರೀತಿ ಬೆಂಗರೆ ಎಂದು ಇದೆ. ಇದು ಮಂಡಲ ಪಂಚಾಯಿತಿಗೂ ಸೇರಿಲ್ಲ ಜಿಲ್ಲಾ ಪರಿಷತ್ತಿಗೂ ಸೇರಿಲ್ಲ ಮಂಗಳೂರು ನಗರ ಪಾಲಿಕೆಗೂ ಸೇರಿಲ್ಲ. ಸುಮಾರು 15000

ಬರುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಮಾತನಾಡಲು ಬಹಳಷ್ಟು ಉಂಟು. ಆದರೆ ಸಮಯ ಹೆಚ್ಚು ಆದರೆ ಸಮಯ ಹೆಚ್ಚು ಇಲ್ಲ, ಎಲ್ಲರೂ 15-20 ನಿಮಿಷ ಗಂಟೆ ಮಾತನಾಡಿದ್ದಾರೆ. ನಾನು ಅತ್ಯಂಥ ಕಳಕಳಿಯಿಂದ ಸರ್ಕಾರದಲ್ಲಿ ಕೇಳಿಕೊಳ್ಳುವುದೇನೆಂದರೆ ಈ ಮೀನುಗಾರರು ಸಂಕಷ್ಟಗಳನ್ನು ಆದಷ್ಟು ಬೇಗನೆ ಸರ್ಕಾರ ಪರಿಹರಿಸಬೇಕು ಅವರಿಗೆ ಕೊಡಬೇಕಾದಂಥ ಸವಲತ್ತುಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಶ್ರೀಮತಿ ಮೋಟಮ್ಮನವರು ಪೀಠದಲ್ಲಿ ಉಪಸ್ಥಿತರಿದ್ದರು)

ಇನ್ನು ಕೆ.ಇ.ಬಿ. ವಿಚಾರವಾಗಿ ನಮ್ಮ ಕ್ಷೇತ್ರದ ಕೊಣಜಿಯಲ್ಲಿ ಕೆ.ಇ.ಬಿ. ಸಬ್ ಸ್ಟೇಶನ್ ಇದೆ ಆದರೇ ಸಿಬಂಧಿ ಇಲ್ಲದುದರಿಂದ ಉಳ್ಳಾಲ ಕ್ಷೇತ್ರಕ್ಕೆ ಎರಡು ಗಂಟೆಗೊಮ್ಮೆ ಕಣ್ಣುಮುಚ್ಚಾಲೆ ಆಡುವುದು ಕತ್ತಲೆ ಬರುವುದು, ರಾತ್ರಿ ವಿದ್ಯುತ್ ಹೋದರೆ ಬೆಳಿಗ್ಗೆಯವರೆಗೆ ಬರುವುದಿಲ್ಲ ಕಾರಣ ಹತ್ತು ಕಲೋಮೀಟರ್‌ವರೆಗೆ ಹೋಗುವಂಥ ವ್ಯವಸ್ಥೆ ಇಲ್ಲ ನಮ್ಮ ಉಳ್ಳಾಲದಲ್ಲಿರತಕ್ಕಂಥ ಕೆ.ಇ.ಬಿ. ಆಫೀಸಿಗೆ ಒಂದು ಜೀಪ್ ಇಲ್ಲ, ಸಲದಕ್ಕೆ ಸಬ್ ಸ್ಟೇಶನ್‌ನಲ್ಲಿ ಒಬ್ಬ ಸಿಬ್ಬಂದಿಯನ್ನು ಸಹಾ ನೇಮಕ ಮಾಡಲಿಲ್ಲ ಇದರ ಬಗ್ಗೆ ನಾನು ಮಂತ್ರಿಗಳಲ್ಲಿ ಮೂರು ವರ್ಷಗಳಿಂದ ಕೇಳುತ್ತಿದ್ದೇವೆ. ಈಗ ತಾವು ಒಂದು ಸ್ವಲ್ಪ ಸಮಯವಾದರೂ ಕೂಡ ಹಿಂದೆ ಹೇಳಿದ್ದನ್ನೇ ಹೇಳಬೇಕಾಗುತ್ತದೆ. ಮೂರು ವರ್ಷಗಳಿಂದ ಮಾಡದಂಥ ಕೆಲಸವನ್ನು ತಾವು ಮಾಡಿ ಮುಗಿಸುತ್ತೀರೆಂಬ ಭರವಸೆ ನನಗಿದೆ. ಇನ್ನು ಕಡಲ ಕೊರತೆ ಬಗ್ಗೆ ಇಡೀ ಉಳ್ಳಾಲ ಹೋಯಿತು ಕರಾವಳಿ ಎಲ್ಲಾ ಹೋಯಿತು. ಸಣ್ಣ ನೀರಾವರಿ ಮಂತ್ರಿಗಳು ಜೂನ್ 15ರಂದು ಬಂದು ನೋಡಿ ಬಹಳ ಬೇಜಾರು ಪಟ್ಟು ಅವರು ಹೇಳಿದರು ಕಡಲ ಬದಿಯಲ್ಲಿರಕ್ಕಂಥವರು ಹೇಗೆ ಕೂತುಕೊಂಡಿದ್ದಾರೆ? ಈ ಸಮುದ್ರದ ಮೊರೆಥ ಸಮುದ್ರದ ಶಬ್ದ ಕೇಳಿ ನಮಗೆ ಭಯವಾಗುತ್ತಿದೆ ಎಂದರು ಅಂಥ ಪರಿಸ್ಥಿತಿಯಲ್ಲಿ ಇಡೀ ಕಡಲ ಕೊರೆತವಾಗುತ್ತಿದೆ. ಅದಕ್ಕಾಗಿ ಅಲ್ಲಿಗೆ 31 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಎಲ್ಲಾವೂ ತತ್ಕಾಲಿಕ ಕೇರಳದಲ್ಲಿರುವಂಥ ಶಾಶ್ವತ ತಡೆಗೋಡೆಯನ್ನು ತಾವು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಈ ಬಗ್ಗೆ ತಾವು ಉತ್ತರದಲ್ಲಿ ಹೇಳಬೇಕು. ಅಲ್ಲಿರುವ ಜನಗಳ ಕಷ್ಟವನ್ನು ಯಾವ ರೂಪದಲ್ಲೂ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ.

ಕಡಲಿನ ಮೊರತ ಮೊಳಗಿತ್ತು
ಕಡಲಿನ ಕೊರೆತ ಹೆಚ್ಚಿತ್ತು ಉಳ್ಳಾಲ ಪಟ್ಟಣ ನಡುಗಿತ್ತು
ಮೊರೆತದಿ ಅರ್ಧ ಭಾಗ ಮೂಳುಗಿತ್ತು
ಜನತೆಯ ದುಃಖ ಹೆಚ್ಚಿತ್ತು
ತಡೆಗೋಡೆ ನಾಟಕ ನಡೆದಿತ್ತು
ಶಾಶ್ವತ ತಡೆಗೋಡೆ ಬೇಕಿತ್ತು
ಅದು ಮಾಡುವುದೇ ಮಂತ್ರಿಗಳ ತಾಕತ್ತು.

ಆ ತಾಕತ್ತನ್ನು ಸಣ್ಣ ನೀರಾವರಿ ಮಂತ್ರಿಗಳು ತೋರಿಸಿಕೊಡುತ್ತಾರೆಂಬ ಬಯಕೆ ನನಗಿದೆ ಆದುದರಿಂದ ಸಮುದ್ರಕ್ಕೆ ಕಲ್ಲಾಕುವುದಕ್ಕೆ 31 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ನಮ್ಮ ಮಿತ್ರರೊಬ್ಬರು ಹೇಳಿದರು ಸಮುದ್ರಕ್ಕೆ ಕಲ್ಲನ್ನು ಹಾಕುವುದು ಬೆಟಕೆ ಮಣು ಹೊರುವದು ಎರಡೂ ಒಂದೇ ಅಂತ ಅದು ನಿಜವಾಗಿಯೂ

ಹೌದು. ಎಲ್ಲಾ ಸಮುದ್ರದ ಕೊರೆತಕ್ಕೆ ಹೋಗುತ್ತದೆ ಪುನಃ ಕಲ್ಲು ಹಾಕುತ್ತಾರೆ ಮರುವರ್ಷ ಕಲ್ಲಿರುವುದಿಲ್ಲ ಎಲ್ಲಾ ಕೊರೆದುಕೊಂಡು ಹೋಗುತ್ತಾದೆ ಇನ್ನು ಪಿ.ಡಬ್ಲೂ.ಡಿ. ಇಲಾಖೆಯಲ್ಲಿ ಒಂದೆರಡು ವಿಷಯಗಳು ಅತಿ ಪ್ರಮುಖವಾಗಿರುವುದರಿಂದ ನಾನು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ ನಮ್ಮ ರಸ್ತೆಗಳೆಲ್ಲಾ ಹಾಳಾಗಿದೆ. ಎಲ್ಲಾ ರಸ್ತೆಗಳು ಜಿಲ್ಲಾ ರಸ್ತೆಗಳು ಜಿಲ್ಲಾ ಪರಿಷತ್ತ್‌ಗಳ ಸ್ವಾಧಿನದಲ್ಲಿದೆ ಅದನ್ನೆಲ್ಲಾ ತಾವು ಪೀ.ಡಬ್ಲೂ.ಡಿ.ಗೆ ತೆಗೆದುಕೊಳ್ಳಬೇಕು ಎಲ್ಲಾ ಎಂ.ಎಲ್.ಎ.ಗಳು ಬೇಕಾದರೆ ಬರೆದು ಕೊಡುತ್ತೇವೆ. ಏಕೆಂದರೆ ನಮಗೆ ಊರಿಗೆ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಜನರು ನಮ್ಮ ಮೇಲೆ ಕಲ್ಲನ್ನು ಬೀಸಾಡಿದಂಥ ಪರಿಸ್ಥಿತಿ ಉಂಟು ಆ ಮಾರ್ಗದಲ್ಲಿ ಹೋಗಲಿಕ್ಕೆ ಸಾಧ್ಯವಿಲ್ಲ. ಅವರು ಬೀಳುವುದು ಎಂ.ಎಲ್.ಎ ಮೇಲೆ ಮಾರಿಯ ಕಣ್ಣು ಹೋತನ ಮೇಲೆ ಎಂದ ಹಾಗೆ ಯಾವಗಾದರೂ ನಾವು ಸಿಕ್ಕಿಬೀಳುತ್ತೇವೆ ನಮ್ಮ ಮೇಲೆ ಅವರು ಸವಾರಿ ಮಾಡುತ್ತಿದ್ದಾರೆ. ಆದುದರಿಂದ ಜಿಲ್ಲಾ ಪರಿಷತ್ ವ್ಯಾಪ್ತಿಯೊಳಗಿರುವ ಎಲ್ಲಾ ರಸ್ತೆಗಳನ್ನು ತಾವು ಪಿಡಬ್ಲೂಡಿಗೆ ತೆಗೆದುಕೊಂಡು ಉಪಕಾರ ಮಾಡಿದರೆ ಅಭಿವೃದ್ದಿ ಕೆಲಸ ನಮ್ಮ ಊರಿನಲ್ಲಿ ಆಯಿತೆಂದೇ ಲೆಕ್ಕ ತಡೆಗೋಡೆ ನಿರ್ಮಾಣಕ್ಕಾಗಿ ಒಂದು ಕೋಟಿ 80 ಲಕ್ಷ ರೂಪಾಯಿಗಳನ್ನು ತಾವು ಸ್ಯಾಂಕ್ಷನ್ ಮಾಡಿದ್ದೀರಿ ಟೆಂಡರ್ ಕಾಂಟ್ರಾಕ್ಟ್ ಕೊಟ್ಟಿದ್ದಾರೆ. ಇನ್ನೂ ಕೆಲಸವಾಗಿಲ್ಲ. ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣ ಸಂಕಟ ಅಂದಹಾಗೆ ಅಲ್ಲಿಯ ಜನರು ಪ್ರಾಣಸಂಕಟದಲ್ಲಿ ತೊಳಲಾಡುತ್ತಿದ್ದಾರೆ.

ಇದಕ್ಕಾಗಿ ಹಣ ಸ್ಯಾಂಕ್ಷನ್ ಆಗಿದೆ ಟೆಂಡರ್ ಕರೆದಿದ್ದಾರೆ ಕಾಂಟ್ರಾಕ್ಟ್ ಕೊಟ್ಟಿದ್ದಾರೆ ಕೆಲಸ ಮಾಡುತ್ತಿಲ್ಲ ಕೆಲಸ ಮಾಡಿದರೆ ಕಡಲ ಕೊರೆತ ಕಡಿಮೆಯಾಗುತ್ತದೆಂದು ತಜ್ಞರು ಹೇಳುತ್ತಾರೆ ಅದನ್ನು ತಾವು ಮಾಡಬೇಕು. ಅದು ಮಾತ್ರವಲ್ಲದೆ ಇಂಜಿನಿಯರ್ಸ್ ಕಂಟ್ರಾಕ್ಟರ್ಸ್ ಸರಿ ಇದ್ದರೆ ಸರ್ಕಾರದ ಉದ್ದೇಶ ಒಳ್ಳೆಯದಾಗಿದೆ ಒಳ್ಳೆ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕುತ್ತಿದ್ದೀರಿ ಆದರೆ ದೇವರು ಕೊಟ್ಟರು ಪೂಜಾರಿ ಬಿಡ ಅಂದಹಾಗೆ ನಿಮ್ಮ ಅಧಿಕಾರಿಗಳು ಮಾಡುವುದಿದ್ದರೆ ಅವರು ನಿಧಾನವಾಗಿ ಕೆಲಸ ಮಾಡಿದರೆ ಅವರು ಯಾವುದು ಮುಟ್ಟದಿದ್ದರೆ ಅವರ ದರ್ಪ ಅವರ ಅಹಂಕಾರವನ್ನು ತೋರಿಸಿದರೆ ನಾವೇನು ಮಾಡಲಿಕ್ಕೆ ಸಾಧ್ಯ? ಸರ್ಕಾರದ ಅಭಿಪ್ರಾಯ ಒಳ್ಳೆಯದು ಒಳ್ಳೆಯ ಸಜೆಷನ್ ಮಾಡುತ್ತದೆ. ಆದುದರಿಂದ ಆಗ ಬೇಕಾದ ಕಾರ್ಯದ ಬಗ್ಗೆ ಆದಷ್ಟು ಗಮನ ಇಡಬೇಕೆಂದು ಹೇಳಿ ಇವೊತ್ತು ಆಗತಕ್ಕಂಥ ಕೆಲಸಗಳೆಲ್ಲ ಕಳಪೆ ಒಂದು ವರ್ಷದಲ್ಲಿ ಬಿದ್ದುಹೋಗುತ್ತಿದ್ದಾವೆ. ಸೇತುವೆಗಳು ಬಿದ್ದುಹೋಗುತ್ತವೆ ರಸ್ತೆಗಳು ಹಾಳಾಗುತ್ತದೆ. ಆದುದರಿಂದ ಕಡೆಯದಾಗಿ ಪಿಡಬ್ಲೂಡಿ ಕಟ್ಟಡಗಳ ಮತ್ತು ಸೇತುವೆಗಳ ಬಗ್ಗೆ ಬರೆದಿರತಕ್ಕಂಥ ನಾಲ್ಕು ಸಾಲುಗಳ ಕವನವನ್ನು ತಮ್ಮ ಮುಂದೆ ಓದಿ ಕವನದಲ್ಲಿರುವಂತೆ ತಾವು ಮಾಡುತ್ತೀರಿ ಅಂತಹ ಸಾರರ್ಥ್ಯ ತೋರಿಸಬೇಕೆಂದು ಹೇಳಿ ನನ್ನ ಕವನವನ್ನು ಓದುವುದಕ್ಕೆ ಪ್ರಾರಂಭಿಸುತ್ತೇನೆ.

ಅಧ್ಯಕ್ಷಿಣಿಯವರು: ನೀವು ಭಾಷಣಕ್ಕೆ ಬದಲಾಗಿ ಎಲ್ಲಾ ಇಲಾಖೆಗಳ ಬಗ್ಗೆ ಒಂದು ಕವನ ಬರೆದು ಓದಿದ್ದರೆ ಮುಗಿದುಹೋಗುತ್ತಿತ್ತು.

ಶ್ರೀ ಬಿ.ಎಂ. ಇದಿನಬ್ಬ:

ರಸ್ತೆ ಸೇತುವೆಗಳ ನಿರ್ಮಾಣ ಈಗ ಅತ್ಯಂಥ ಕಳಪೆ
ಸಿಮೆಂಟ್ ಇಲ್ಲವೇ ಇಲ್ಲ ಬರಿ ಮಾರಳಿನಾ ತೇಪೆ!
ನಿರ್ಮಾಣವಾಗಿ ಮರುವರ್ಷ ಎಲ್ಲವೂ ಹಾಳು
ರಸ್ತೆ ಹೊಂಡಗಳ ರಾಶಿ ಸರಕಾರದ ಹಣ ಪೋಲು!

ಕೆಲ ಇಂಜಿನಿಯರರೇ (ಎಲ್ಲರೂ ಅಲ್ಲ) ಹಣದ ಮೋಹ
ಕೆಲ ಕಂಟ್ರಾಕ್ಟರರ ಕಣ ನುಂಗುವ ದಾಹ
ಜನಸಾಮಾನ್ಯರ ಪಾಲಿಗೆ ಇದು ಮೋಸ!
ಇದು ಸರಕಾರಕ್ಕೆ ಅನುದಿನವೂ ತ್ರಾಸ!
ಇಂಥ ವಂಚಕರನ್ನು ಕಪ್ಪು ಪಟ್ಟಿಯಲ್ಲಿ ಹಾಕಿ
ಮಾನ್ಯ ಅಶ್ವತ್ಥರೆಡ್ಡಿಯವರೆ ಭ್ರಷ್ಟರನು ಪಾತಾಳಕ್ಕೆ ನೂಕಿ.
ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ (ಕಿತ್ತೂರು): ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ ನಾನು ವಿಧಿಇಲ್ಲದೆ ಈ ನೀರಾವರಿ ಲೋಕೋಪಯೋಗಿ ಮತ್ತು ವಿದ್ಯುತ್‌ಚ್ಛಕ್ತಿ ಇಲಾಖೆಗಳ ಮೇಲಿನ ಬೇಡಿಕೆಯನ್ನು ಸಾರಾಸಗಟಾಗಿ ವಿರೋಧ ಮಾಡುತ್ತೇನೆ. ಕಾರಣವೇನೆಂದರೆ ಈ ಕನ್‌ವಿನ್‌ಷನಲ್ ಬಜೆಟ್ ಇದೆಯಲ್ಲ ಇದನ್ನು ಯಾವು ಯಾವ ರೀತಿ ಮಾಡುತ್ತಾರೋ ನನಗೆ ಗೊತ್ತಿಲ್ಲ ಸ್ವಲ್ಪ ಸಾಮಾನ್ಯವಾದ ದಾರಿಯನ್ನು ಇಟ್ಟುಕ್ಕೊಂಡು ಈ ಬಜೆಟನ್ನು ತಂದಿದ್ದರೆ ನಾವು ಅದನ್ನು ಒಪ್ಪಿಕೊಳ್ಳಬಹುದಾಗಿತ್ತು. ಜಿಲ್ಲಾವಾರು ಹಂಚಿಕೆ ಆ ಜಿಲ್ಲೆ ಸಣ್ಣದಾಗಿರುತ್ತೋ ಅಥವಾ ದೊಡ್ಡದಾಗಿರುತ್ತೋ ಗೊತ್ತಿಲ್ಲ ತಾಲ್ಲೂಕುವಾರು ಹಂಚಿಕೆ ಆ ತಾಲ್ಲೂಕು ದೊಡ್ಡದಾಗಿರುತ್ತದೆ ಅಥವಾ ಸಣ್ಣದಾಗಿರುತ್ತೋ ಗೊತ್ತಿಲ್ಲ ಕೇಳಿದರೆ ಹೌದು ನಿಮ್ಮ ಜಿಲ್ಲೆಗೆ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಉತ್ತರ ಕರ್ನಾಟಕಕ್ಕೆ ಮೊದಲಿನಿಂದಲೂ ಅನ್ಯಾಯವಾಗಿದೆ. ಅನ್ಯಾಯ ಮಾಡಿರುವುದನ್ನು ನೋಡಿದರೆ ಇಲ್ಲಿಯವರೆಗೆ ನಾವು ಹೇಗೆ ಅದನ್ ಸಹಿಸಿಕೊಂಡೆವು ಎಂಬುದನ್ನು ನೆನಪಿಸಿಕೊಳ್ಳಬೇಕಾಗಿದೆ ನಮ್ಮ ಉತ್ತರ ಕರ್ನಾಟಕದ ಶಾಸಕರಿಗೆ ತಿಳುವಳಿಕೆ ಇಲ್ಲವೆಂದಲ್ಲ ಆದರೂ ನಾವುಗಳು ಗುಲು ಗುಲು ಮಾತನಾಡತಕ್ಕದಕ್ಕೆ ಹೋಗುವುದಿಲ್ಲ. ಆ ವಹಿವಾಟು ನಮ್ಮಲ್ಲಿಲ್ಲ ಆ ಸಂಸ್ಕೃತಿಯಲ್ಲಿ ನಾವು ಹುಟ್ಟಿ ಬಂದಿಲ್ಲ. ಆದರೆ ಈವತ್ತು ಅವರುಗಳು ಮಾತನಾಡುವುದಿಲ್ಲವೆಂದು ಹೇಳಿ ಅವರುಗಳಿಗೆ ರಾಜಕೀಯ ಜ್ಞಾನ ಇಲ್ಲವೇನೋ ಎಂದು ತಿಳಿದುಕೊಂಡು ಇದ್ದ ಎಲ್ಲಾ ಸಂಪನ್ಮೂಲವನ್ನು ಬೇರೆ ಕಡೆ ಹಾಕಿ ನಮ್ಮ ಉತ್ತರ ಕರ್ನಾಟಕಕ್ಕೆ ಅನ್ಯಾಯ ಮಾಡಿದ್ದೀರಿ ಕರ್ನಾಟಕದ ಸಂಪತ್ತು ಬಹುತೇಕವಾಗಿ ಉತ್ತರ ಕರ್ನಾಟಕದಿಂದ ಬಂದಿದ್ದು ಬೆಳಗಾಂ ಜಿಲ್ಲೆಯ ಬಗ್ಗೆ ಹೇಳುವುದಾದರೆ ಅಲ್ಲಿ 6-8 ಸಕ್ಕರೆ ಕಾರ್ಖಾನೆಗಳಿವೆ ಅದರಲ್ಲಿ 6 ಕಾರ್ಖಾನೆಗಳು ಚಾಲ್ತಿ ಇವೆ ಈಗ ಎರಡು ನಡೆಯುತ್ತಿದೆ ಸುಮಾರು 500 ಕೋಟಿ ರೂಪಾಯಿ ಒಂದೇ ವ್ಯವಹಾರದಿಂದ ಬರುತ್ತದೆ ಅದು ಮೊಲ್ಯಾಸಸ್ ನಿಂದ ಇರಬಹುದು ಪರ್‌ಚೇಸ್‌ಟ್ಯಾಕ್ಸ್ ನಿಂದಾಗಿರಬಹುದು ಆದರೆ ಆ ಜಿಲ್ಲೆಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ. ಧೈರ್ಯದಿಂದ ಹೇಳಿ ನೋಡೋಣ ಸಕ್ಕರೆ ಜಿಲ್ಲೆ ಎಂದು ತಲೇನು ಕಡಿಯೋದು ಕಿಂಜೇನು ಕಡಿಯೋದು ನಾವು ಎಷ್ಟು ಸಹಿಸಿಕೊಳ್ಳಬೇಕು. ನಾವು ಬಹಳಷ್ಟು ಹೇಳಿದ್ದೇವೆ. ಸಕ್ಕರೆ ಕಾರ್ಖಾನೆಗೆ ಹೋಗುವ ರಸ್ತೆ ಕೆಟ್ಟುಹೋಗಿದೆ. ಅಲ್ಲಿ ಪ್ರತಿದಿನ ಸವಾರಾರು ಗಾಡಿಗಳು ಒಂದೇ ರಸ್ತೆಯಲ್ಲಿ ಓಡಾಡುತ್ತಿವೆ. ಬೇಕಾದಷ್ಟು ರೆವಿನ್ಯೂ ಕೊಡುತ್ತೇವೆ. ಅದನ್ನು ಸರಿ ಮಾಡಿ ಎಂದರೆ ಯಾರು ಅದರ ಬಗ್ಗೆ ಲಕ್ಷೆಯನ್ನು ಕೊಟ್ಟಿಲ್ಲ ಇಷ್ಟೇ ಅಲ್ಲ ಇಂಜಿನಿಯರ್‌ಗಳನ್ನು ನೇಮಕಾತಿ ಮಾಡುತ್ತಿದ್ದಾರೆ. ಬಹುತೇಕವಾಗಿ ಬೆಂಗಳೂರಿನ ಜನರನ್ನು ಹಳ್ಳಿ ಮಕ್ಕಳು ಕರ್ನಾಟಕ ಅಭಿವೃದ್ಧಿಗೆ ನಮ್ಮ ಭಾಗದ ಅಭಿವೃದ್ಧಿಗೆ ನಮ್ಮನ್ನು ನೇಮಕಾತಿ ಮಾಡಿಕೊಳ್ಳಬೇಕೆಂದು ಹೇಳಿದರೆ ಮಾರ್ಕ್ಸ್ ಕಡಿಮೆ ಇದೆ ಎಂದು ಹೇಳಬಹುದು ನಿಮ್ಮ ನಗರದ ಜನರು ಅವರ

ಸಂಸ್ಕೃತಿಯ ಹಿನ್ನೆಲೆಯಲ್ಲಿ ಬೆಳೆದವರು ಅವರು ಮಾರ್ಕ್ಸ್ ಸ್ಟೇಟ್‌ಮೆಂಟ್ ದೊಡ್ಡದಿರುತ್ತದೆ. ನಮ್ಮ ಹಳ್ಳಿಯ ಮಕ್ಕಳ ಮಾರ್ಕ್ಸ್ ಸ್ಟೇಟ್ ಮೆಂಟ್ ಸಣ್ಣದಾಗಿರುತ್ತದೆ. ಅವರಿಗೆ ಸಮಾಜಿಕ ಜ್ಞಾನವಿದೆ ಕಳಕಳಿಇದೆ ಎನ್ನುವುದನ್ನು ಸರ್ಕಾರದ ಮರೆತಂತಿದೆ ಮಾರ್ಕ್ಸ್ ಕಡಿಮೆ ಇದೆ ಎಂದು ಹೇಳಿ ನಮ್ಮ ಹಳ್ಳಿಯ ಮಕ್ಕಳನ್ನು ನೇಮಕಾತಿ ಮಾಡಿಕೊಳ್ಳುವುದನ್ನು ಬಿಡಿ ನಿಮಗೆ ಕಳಕಳಿ ಕಡಿಮೆಯುಯಿತ್ತು.

ಬೆಂಗಳೂರು ನಗರಗಳ ಜನರನ್ನು ನಾನು ಎಲ್ಲರನ್ನೂ ಸಾರಾಸಗಟಾಗಿ ಆರೋಪ ಮಾಡುತ್ತಿಲ್ಲ ಕಂಪ್ಯೂಟರ್ ಯುಗದ ಕಲ್ಪನೆ ಮಾಡುವಂಥ ಜನರನ್ನು ತೆಗೆದುಕೊಂಡು ಆ ಬಾಬಿಗೆ ಹೆಚ್ಚು ಹಣವನ್ನು ಖರ್ಚು ಮಾಡಿದ್ದರಿಂದ ದೇಶದ ಅಭಿವೃದ್ಧಿ ಕುಂಟಿತವಾಯಿತ್ತು. ಇದು ಪಕ್ಷಪಾತದ ಧೋರಣೆಯೆಂದು ನಾನು ಹೇಳಲು ಹೋಗುವುದಿಲ್ಲ. ನಮ್ಮನ್ನು ಅಲಕ್ಷ್ಯ ಮಾಡಿದ್ದೀರಿ. ನಮಗೆ ಅನ್ಯಾಯ ಮಾಡಿದ್ದೀರಿ. ನಮ್ಮ ಜಿಲ್ಲೆಯಿಂದ ಬಂದ ಅನೇಕ ಮಂತ್ರಿಗಳು ಮಾತನಾಡಿದರು. ಇವರು ಬೆಂಗಳೂರಿಗೆ ಬಂದಮೇಲೆ ಬಹುತೇಕ ಇಲ್ಲಿಯೇ ಉಳಿಯುತ್ತಾರೆಂಬ ಅನುಮಾನ ಸಂಶಯ ನನಗಿದೆ. ನಮ್ಮ ವಿಷಯಕ್ಕೆ ಆಧ್ಯತೆ ಕೊಟ್ಟಿಲ್ಲ ಮಾರನೆಯ ದಿನ ಮಾನ್ಯ ಮಂತ್ರಿಗಳಾದ ಮಲ್ಲಾರಿಗೌಡರು ಲಂಕೇಶ್ವರಕ್ಕೆ ಬರುತ್ತಾರೆ. ನಾವು ಹೋಗಿ ಕೇಳಿಕೊಂಡು ಬರಬೇಕಾಗಿದೆ. ಈಗ ನಮ್ಮ ಹಕ್ಕಿನದನ್ನು ಹೇಳುತ್ತಿದ್ದೇನೆ. ನಿಮ್ಮ ಉಪಕಾರ ನಮಗೆ ಬೇಕಾಗಿಲ್ಲ ನಮ್ಮ ಹಕ್ಕಿನ ವಿಷಯವನ್ನು ಕೊಡಲು ಕೇಳುತ್ತಿದ್ದೇನೆ. ಕೃಷ್ಣಾ ನೀರಾವರಿಗೆ ಕೃಷ್ಣ ಬೇಸಿನ್‌ಗೆ ಎಷ್ಟು ಕೊಟ್ಟಿದ್ದೀರಿ? ಕಾವೇರಿಯ ಬಗ್ಗೆ ನನ್ನದೇನು ಅಭ್ಯಂತರವಿಲ್ಲ ಅದನ್ನು ಸಹ ಉಳಿಸಿಕೊಳ್ಳಬೇಕು. ನಮ್ಮ ಹಕ್ಕಿನ ವಿಷಯವನ್ನು ಕೊಡಿ ಎಂದು ಕೇಳಲು... ಉತ್ತರ ಕರ್ನಾಟಕ ಒಂದೇ ಅಲ್ಲಿರುವ ಪೋಟೆನ್‌ಷಿಯಾಲಿಟಿಯನ್ನು ಬಳಸಿ ಕೊಂಡಿದ್ದಿದ್ದ ಬಹುಶಃ ಇಂತಹ ಎರಡು ಕರ್ನಾಟಕವನ್ನು ಕಟುತ್ತಿದ್ದೇವು ಹಣವಿಲ್ಲ ಹಣವಿಲ್ಲ ಹೇಗೆ ಹಣ ಸಿಗುತ್ತದೆ.

ನಿಮಗೆ ಕನ್‌ವೆನಷನಲ್ ಬಜೆಟಿಂಗ್ ಎಂದು ಹೇಳುತ್ತಿದ್ದೀರಿ. ಎಲ್ಲಿ ಹಣ ಖರ್ಚುಮಾಡಬೇಕು ಎನ್ನುವ ಭಾವನೆ ನಿಮ್ಮಲ್ಲಿ ಇಲ್ಲವೇ ಇಲ್ಲ. ಇದಕ್ಕೆ ಸಾಮಾನ್ಯ ಜ್ಞಾನ ಬರಬೇಕೆಲ್ಲ. ಸುಮ್ಮನೆ ಹಣವಿಲ್ಲವೆಂದರೆ ಹೇಗೆ ಸಾಧ್ಯ? ಯಾವ ಯಾವ ಬಾಬಿನಲ್ಲಿ ಖರ್ಚುಮಾಡುವುದಕ್ಕೆ ಸಾಧ್ಯವಿದೆ ಅನ್ನುವುದನ್ನು ವಿಚಾರ ಮಾಡಿ ನೋಡಿ. ನಮಗೆ ಬೇಕಾದರೆ ಸಹಕಾರ ಕೊಟ್ಟರೆ ಯಾವ ಯಾವ ಬಾಬಿನೊಳಗೆ ಕಡಿಮೆ ಖರ್ಚು ಮಾಡಬೇಕೆಂದು ಹೇಳುತ್ತೇವೆ. ಶೋಕಿ ಸಂಸ್ಕೃತಿಯನ್ನು ಬೆಳೆಸುವುದಕ್ಕೆ ಬೇಕಾದಷ್ಟು ಹಣವನ್ನು ಖರ್ಚುಮಾಡುತ್ತೀರಲ್ಲಾ ಅದನ್ನೆಲ್ಲಾ ಕಡಿಮೆ ಮಾಡುವುದಕ್ಕೆ ಆಗುವುದಿಲ್ಲವೆ? ತಾವು ಅದನ್ನು ವಿಚಾರ ಮಾಡಿ, ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಮತ್ತೊಂದು ನನ್ನ ಅನಿಸಿಕೆಯೆಂದರೆ' ಶಾಸಕರು ಹೇಳುವ ಮಾತಿಗೆ ತಾವು ಲಕ್ಷ್ಯ ಕೊಡಬೇಕು. ಆದರೆ ತಾವು ರೆಸ್‌ಪಾನ್ಸ್ ಕೊಡುವುದಿಲ್ಲ. ಮಂತ್ರಿಗಳು ಸುಮ್ಮನೆ ಆಕಾಶ ನೋಡುತ್ತೀರಿ, ಹೊರಗಡೆ ಹೋಗುತ್ತೀರಿ. ಛಾ ಕುಡಿಯಲಿಕ್ಕೆ ಹೋಗುತ್ತೀರಿ. ಶಾಸಕರುಗಳಾದ ನಾವು ನಾಟಕದೊಳಗೆ ಮಾತನಾಡುವ ಹಾಗೆ ಮಾತನಾಡುತ್ತೇವೆ. ಇದರಿಂದ ನೀವು ಏನು ಮಾಡುವ ಹಾಗೆ ಕಾಣಿಸುವುದಿಲ್ಲ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಹೊಸ ಶಾಸಕರು ನಾವೇನಾದರೂ ತಪ್ಪು ಮಾತನಾಡಿದರೆ ನಮಗೆ ನೀವು ತಿಳುವಳಿಕೆ ಹೇಳಬೇಕು. ನಾವು ಸುಮ್ಮನೆ ಅರ್ಥವಿಲ್ಲದೆ ಮಾತನಾಡಿಕೊಂಡು ಹೋದರೆ ಏನು ಪ್ರಯೋಜನ ? ಇಲ್ಲವೆಂದರೆ ನಮ್ಮ ಸಲಹೆಗಳನ್ನು ನೀವು ತೆಗೆದುಕೊಳ್ಳಿ. ಏನಾದರೂ ಹೊಸ ಪ್ರಯೋಗ ಮಾಡುವುದಕ್ಕೆ ನಿಮಗೆ ಧೈರ್ಯವಿದೆಯೇನು? ಕರ್ನಾಟಕ ಇರಿಗೇಷನ್ ಆಕ್ಟ್ 1965 ಕಾಲುವೆಗಳೆಲ್ಲಾ, ಕೆಟ್ಟು ಹೋಗಿದ್ದಾವೆ, ಅವುಗಳನ್ನು ರಿಪೇರಿ ಮಾಡುವುದಕ್ಕೆ ತಮಗೆ ಸಾಧ್ಯವಾಗಿಲ್ಲ, ಅದಕ್ಕೇನಾದರೂ ಒಂದು ಅಮೆಂಡ್‌ಮೆಂಟ್

ತೆಗೆದುಕೊಂಡು ಬನ್ನಿ. The rules don't provide for irrigation management for farmers organisation...

ನೀವೇ ಎಲ್ಲಾ ಮಾಡುತ್ತೀರಿ ? ಬರೀ ಸರ್ಕಾರ ಅಧಿಕಾರಿಗಳು ಇದ್ದರೆ ಸಾಲದು ಅದಕ್ಕೆ ಜನರ ಸಹಕಾರವೂ ಬೇಕು. ಸೂರತ್‌ನ ಹತ್ತಿರ ಮೋಹಿನಿ ವಾಟರ್ ಕೋ-ಅಪರೇಟಿವ್ ಸೊಸೈಟಿ ಅನ್ನತಕ್ಕ ಒಂದು ಪ್ರಯೋಗ ಮಾಡುತ್ತಿದ್ದಾರೆ. ನೀವು ಹೋಗಿ ಅದನ್ನು ನೋಡಿಕೊಂಡು ಬನ್ನಿ. ರೈತರ ಇನ್‌ವಾಲ್‌ಮೆಂಟ್ ರೈತರ ಪಾರ್ಟಿಸಿಪೇಷನ್ ಇದ್ದಾರೆ ಅದು ಯಾವ ರೀತಿ ಕೆಲಸ ಮಾಡುತ್ತದೆ ಎನ್ನುವುದನ್ನು ನೀವು ಸ್ವಲ್ಪ ಅನುಭವದಿಂದ ತಿಳಿದುಕೊಂಡು ಬನ್ನಿ. ನವಲಗೊಂಡ ತಾಲ್ಲೂಕಿನಲ್ಲಿ ಒಂದು ಸೊಸೈಟಿ ಹೋದವರ್ಷದಿಂದ ಕೆಲಸಮಾಡುತ್ತಿದೆ. ಅಲ್ಲಿ ನೀರು ಪೋಲಾಗುವುದಿಲ್ಲ. ಟೇ ಲ್ಯಾಂಡ್‌ವರೆಗೂ ನೀರು ಹೋಗುತ್ತದೆ. ಆಮೇಲೆ ಖರ್ಚು ಎಷ್ಟಾಗುತ್ತದೆಂದರೆ ಈ ಸರ್ಕಾರದವರು ಅಷ್ಟೇ ಕೆಲಸಕ್ಕೆ ಎಷ್ಟು ಖರ್ಚುಮಾಡುತ್ತಾರೋ ಅದರಲ್ಲಿ ಅರ್ಧದಷ್ಟು ಖರ್ಚುಮಾಡಿದ್ದಾರೆ. ಇದು ಲಾಭವಾಗುವುದಿಲ್ಲವೆ? ಈ ಪ್ರಕಾರ ನೀವು procurement of water in bulk, irrigation management by farmers organisation...

ಈ ಎರಡರ ಬಗ್ಗೆ ಒಂದು ಅಮೆಂಡ್‌ಮೆಂಟ್ ತೆಗೆದುಕೊಂಡು ಬಂದು ಒಂದು ಪ್ರಯೋಗವನ್ನು ಮಾಡಿ ಎಂದು ಕೇಳಿಕೊಳ್ಳುತ್ತಿದ್ದೇನೆ. ನಮ್ಮ ಉತ್ತರಕರ್ನಾಟಕದ ಯೋಜನೆಗಳಿಗೆ ತಾವು ಹಣ ಕೊಟ್ಟಿಲ್ಲ, ಈಗಲಾದರೂ ತಾವು ಕಣ್ಣು ತೆರೆದು ನೋಡಿದರೆ ಸಾಧ್ಯವಿದೆ. ನಮ್ಮಲ್ಲಿ ಹರಿನಾಲವೆಂಬ ಒಂದು ಪ್ರಾಜೆಕ್ಟ್ ಇದೆ. ಬಹುತೇಕ ಅಧಿಕಾರಿಗಳಿಗೆ ಶಾಸಕರುಗಳಿಗೆ ಮತ್ತು ಮಾನ್ಯ ಮಂತ್ರಿಗಳಿಗೆ ಗೊತ್ತಿದೆ. ಅಲ್ಲಿ 10-20 ಲಕ್ಷ ರೂಪಾಯಿಗಳ ಬಿಲ್ಡಿಂಗ್ ಕಟ್ಟಿದರು. ಅದು ಬ್ರಿಟಿಷ್ ಕಾಲದಲ್ಲಿ ಯೋಜನೆ ತಯಾರಾದುದಂತೆ. ಇಲ್ಲಿಯತನಕ ಗುರುತು ಸಹ ಇಲ್ಲ, ಅಲ್ಲಿ ಎಲ್ಲಾ ಬಿದ್ದು ಹೋಗಿದೆ. ಬಿಲ್ಡಿಂಗ್ ಕಟ್ಟಿ ಇಪ್ಪತ್ತು ವರ್ಷವಾಗಿದೆ. ಅದು ಏಕೆ ಬಿದ್ದು ಹೋಯಿತೆಂದು ಗೊತ್ತಿಲ್ಲ. ಈಗಲಾದರೂ ತಾವು ಸ್ವಲ್ಪ ಕಣ್ಣು ತೆರೆದು ಸ್ವಲ್ಪ ಹಣ ಖರ್ಚುಮಾಡಿ ಈ ಯೋಜನೆಯನ್ನು ಪ್ರಾರಂಭ ಮಾಡುತ್ತೀರಾ ಎಂದು ಕೇಳಿಕೊಳ್ಳುತ್ತಿದ್ದೇನೆ. ಅದು ಆಗದಿದ್ದರೆ ಸ್ವಲ್ಪ ಖರ್ಚು ಇಲ್ಲದೆ. ನೀರಾವರಿಗೆ ಅನುಕೂಲ ಮಾಡಿಕೊಡುವಂಥಾದ್ದಕ್ಕೆ ಪ್ರಯತ್ನ ಮಾಡುತ್ತೀರಾ ಎಂದು ಸಣ್ಣ ನೀರಾವರಿಯ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ. ಹೊಸ ಕೆರೆಗಳನ್ನು ಕಟ್ಟಿಸುವುದನ್ನು ನಿಲ್ಲಿಸಿಬಿಡಿ.

ಏಕೆಂದರೆ ನಮ್ಮ ಹಿರಿಯರು ನಮಗೆ ಸುಮಾರು ಅರವತ್ತು ಸಾವಿರ ಕೆರೆಗಳನ್ನು ಕಟ್ಟಿ ಹೋಗಿದ್ದಾರೆ. ಅದರಲ್ಲಿ ಹೂಳು ತುಂಬಿಬಿಟ್ಟಿದೆ. ಕೆಲವು ಕೆರೆಗಳು ಒಡೆದು ಹೋಗಿವೆ. ಇದ್ದ ಕರೆಗಳಲ್ಲಿರುವ ಕಸವನ್ನು ತೆಗೆದರೆ ಬೇಕಾದಷ್ಟು ನೀರು ನಿಲ್ಲುತ್ತದೆ. ಅದನ್ನು ಬಿಟ್ಟು ನೀವು ಹೊಸ ಕೆರೆಗಳಿಗೆ ಖರ್ಚುಮಾಡುವುದಕ್ಕೆ ಹೊರಟ್ಟಿದ್ದೀರಿ. ಆ ಕಾರಣ ಹೊಸ ಕೆರೆಗಳನ್ನು ಕಟ್ಟುವುದಕ್ಕೆ ಹೋಗಬೇಡಿ. ಇದ್ದ ಕೆರೆಗಳಲ್ಲಿರುವ ಹೂಳನ್ನು ತೆಗೆದರೆ ಕೆರೆಯಲ್ಲಿ ಬೇಕಾದಷ್ಟು ನೀರು ನಿಲ್ಲುತ್ತದೆ. ಅಂಡರ್‌ಗ್ರೌಂಡ್ ವಾಟರ್ ಟೇಬಲ್ ಮೇಲೆ ಬರುತ್ತದೆ. ಇದರಿಂದ ರೈತರು ಬೋರ್ ಹಾಕಿಸಿಕೊಂಡು ಬದುಕುತ್ತಾರೆ, ನಿಮ್ಮ ದೊಡ್ಡ ಯೋಜನೆಗಳು ಕೈಗೂಡುವುದಿಲ್ಲ. ಅದು ಎರಡು ಸಾವಿರ ಇಸವಿಯೊಳಗೆ ಬಹುಶಃ ನಮ್ಮ ಹಕ್ಕಿನ ನೀರನ್ನು ಬಳಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆ ಕಾರಣ ಕೆರೆಗಳ ಹೂಳನ್ನು ತೆಗೆಸಿದರೆ ರೈತರು ಬೋರ್ ಹಾಕಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಎಂದು ನಾನು ಮಾನ್ಯ ಸಣ್ಣ ನೀರಾವರಿಗೆ ಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ. ಕೆಲವು ಕಡೆ ದೊಡ್ಡ ನೀರಾವರಿ ಬಾವಿಯಿಂದ ಕಾಲುವೆಗೆ ಹರಿದು ಹೋಗಿದೆ. ಅಪ್ಪರ್ ಕೌಂಟರ್‌ನಲ್ಲಿ ನೀರಾವರಿಯಾಗಿಲ್ಲ ಅಲ್ಲಿರುವ

ಕಸವನ್ನು ಲಿಫ್ಟ್ ಮಾಡಿದರೆ ನೀವು ಹೊಸ ಡ್ಯಾಮ್‌ನ್ನು ಕಟ್ಟಬೇಕಾಗಿಲ್ಲ. ಅಪ್ಪರ್ ಕೌಂಟರ್‌ಗಳಿಗೆ ಸೇರಿದ ಅವರ ಕಮಾಂಡೋ ಏರಿಯಾದೊಳಗೆ ನೀರಾವರಿ ಮಾಡಿಕೊಟ್ಟರೆ, ಚೆನ್ನಾಗಿರುತ್ತದೆಂದು ತಿಳಿದುಕೊಂಡಿದ್ದೇನೆ. ಅದರ ಬಗ್ಗೆ ತಾವು ಯೋಚನೆ ಮಾಡಿ ನಾನು ರೈತರ ಪ್ರತಿನಿಧಿ ನೀರವಾಗಿ ನನಗೆ ಸಂಬಂಧಿಸಿದರು. ನಾನು ಅನಾವಶ್ಯಕವಾಗಿ ಮಾತನಾಡುವುದಿಲ್ಲ. ನನ್ನ ಸಲಹೆ ಬೇಡವೆಂದರೆ ನಾನು ಕುಳಿತುಕೊಳ್ಳುತ್ತೇನೆ. ಏತ ನೀರಾವರಿ ನಮ್ಮ ಜಿಲ್ಲೆಯಲ್ಲಿ ಬೇಕಾದಷ್ಟು ನೋಡಿದ್ದೇನೆ. ಪಂಪುಹೌಸ್ ಕಟ್ಟಿದ್ದೀರಿ. ನೂರು ಹಾರ್ಸ್ ಪವರ್ ಇನ್ನೂರು ಹಾಸ್ ಪವರ ಮೋಟಾರ್ ಕೊಡಿಸಿದ್ದೀರಿ. ಅರ್ಧಕ್ಕೆ ಪೈಪ್‌ಲೈನ್ ಹಾಕಿದ್ದೀರಿ. ಇನ್ನು ಅರ್ಧಕ್ಕೆ ಪೈಪ್‌ಲೈನ್ ಹಾಕದೇ ಉಳಿದಿವೆ. ಬೆಳಗಾಂ ಪಕ್ಕದಲ್ಲಿರತಕ್ಕಂಥ ಬಳ್ಳಾರಿ ನಾಲೆಯಿಂದಲೇ ಕೆಳಗಾ ಗ್ರಾಮಕ್ಕೆ ಸೇರಿದ ಸಾವಿರಾರು ಏಕರೆಗೆ ನೀರಾವರಿ ಆಗುವಂತಹ ಅನುಕೂಲವಿದೆ. ಅದು ನಾಲ್ಕು ವರ್ಷವಾಗಿದೆ ಮೋಟರ್ ಕೂರಿಸಿದ್ದೀರಿ, ಪೈಪ್‌ಲೈನ್ ಹಾಕಿದಿರಿ, ಇನ್ನು 3-4 ಕೋಟಿ ಪೈಪ್‌ಲೈನ್ ಹಾಕತಕ್ಕಂಥದ್ದಕ್ಕೆಲ್ಲಾ ಲಕ್ಷಾಂತರ ರೂಪಾಯಿ ಇನ್‌ವೆಸ್ಟ್‌ಮೆಂಟ್ ಮಾಡಿದ್ದು ಸುಳ್ಳು. ಅದರಿಂದ ಏನು ಪ್ರಯೋಜನ ಇಲ್ಲ, ಮತ್ತೆ ಹೊಸ ಏತ ನೀರಾವರಿಗೆ ಮರ್ಜ್ ಮಾಡುವುದಕ್ಕೆ ಹೊರಟಿದ್ದೀರಿ, ಮಲಪ್ರಭಾದ ಹತ್ತಿರ ಇಟ್ಟಿಗೆ ಎಂಬ ಗ್ರಾಮವಿದೆ. ಈ ಮಲಪ್ರಭಾ ನದಿಯಿಂದ ಒಂದು ಏತನೀರಾವರಿ ಇದೆ. ಈ ಇಟ್ಟಿಗೆ ಗ್ರಾಮಕ್ಕೆ ಸುಮಾರು ಮೂರು ಸಾವಿರ ಏಕರೆಗೆ ನೀರಾವರಿಗೆ ಉಪಯೋಗುವಂತಾದ್ದು.

ಅಲ್ಲಿಯೂ ಇದೇ ಪರಿಸ್ಥಿತಿ ಇದೆ. ಅಲ್ಲಿಯೂ ಪಂಪ್ ಹೌಸ್ ಇದೆ. ಮೋಟಾರ್ ಕೂರಿಸಿದ್ದೀರಿ. ಅರ್ದಕ್ಕೆ ಪೈಪ್‌ಲೈನ್ ಹಾಕಿದ್ದೀರಿ. ಇನ್ನೂ ಅರ್ಧಕ್ಕೆ ಪೈಪ್‌ಲೈನ್ ಹಾಕಲಿಕ್ಕೆ ಆಗಿಲ್ಲ, ಅಷ್ಟಾಗಿ ಅಲ್ಲಿ ನೀರಾವರಿ ಇಲ್ಲ. ಮತ್ತೊಂದು ದೇವರಸಿಗೆ ಇದು ಅರ್ಧಕ್ಕೆ ನಿಂತಿದೆ. ಈ ರೀತಿ ಅರ್ಧಕ್ಕೆ ನಿಂತವುಗಳಿಗೆ ಲಕ್ಷಾಂತರ ರೂಪಾಯಿ ಈಗಾಗಲೇ ಇನ್‌ವೆಸ್ಟ್‌ಮೆಂಟ್ ಮಾಡಿದ್ದೀರಿ. ಇನ್ನು ಸ್ವಲ್ಪ ಅಂದರೆ ರೂಪಾಯಿನಲ್ಲಿ ಹತ್ತು ಪೈಸೆಯಷ್ಟು ಖರ್ಚು ಮಾಡಿದರೆ ಎಷ್ಟೋ ಅನುಕೂಲವಾಗುತ್ತಿತ್ತು. ತಮಗೆ ಅರ್ಧಕ್ಕೆ ನಿಂತ ಯೋಜನೆಗಳನ್ನು ಮುಂದುವರೆಸುತ್ತೇವೆ, ಕಂಪ್ಲೀಟ್ ಮಾಡುತ್ತೇನೆ ಎನ್ನುವ ವಿಚಾರ ಹೇಳುತ್ತಿದ್ದೀರಿ. ಇನ್ನು ಈ ರಸ್ತೆಗಳ ಬಗ್ಗೆ ನಮ್ಮ ಮಾನ್ಯ ಲೋಕೋಪಯೋಗಿ ಇಲಾಖೆ ಮಂತ್ರಿಗಳಿಗೆ ನಾನು ವಿನಂತಿಮಾಡಿಕೊಳ್ಳುವುದೇನೆಂದರೆ, ತಮಗೆ ಸಕ್ಕರೆ ಕಾರ್ಖಾನೆಗಳಿಂದ ಹಣ ಬೇಕಾದಷ್ಟು ಬರುತ್ತಿದೆ. ಪ್ರತಿದಿವಸ ನೂರಾರು ಚಕ್ಕಡಿ ಅಚ್ಚು ಮುರಿದುಕೊಂಡರೂ, ಟ್ರಾಕ್ಟರ್ ಆಕ್ಸಲ್ ಮುರಿದುಕೊಂಡರೂ, ಆಕ್ಸಿಡೆಂಟ್‌ಗಳು ಸಾಕಷ್ಟು ಆದರೂ ಆ ಕಡೆ ತಾವು ಗಮನಹರಿಸಿಲ್ಲ. ಈಗಾಲಾದರೂ ಕೂಡ ಸಕ್ಕರೆ ಕಾರ್ಖಾನೆ ವ್ಯಾಪ್ತಿಯಲ್ಲಿ ಬರುವಂಥ ರಸ್ತೆಗಳನ್ನಾದರೂ ರಿಪೇರಿ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಈ ರಸ್ತೆಗಳ ರಿಪೇರಿ ಆಗುವವರೆಗೆ ಐ.ಬಿ.ಗಳನ್ನು ಹೊಸದಾಗಿ ಕಟ್ಟಿಸುವುದಕ್ಕೆ ಬಂದ್ ಮಾಡುತ್ತೀರಾ ಎಂದು ಕೇಳಲಿಕ್ಕೆ ಇಷ್ಟಪಡುತ್ತೇನೆ. ರಸ್ತೆ ರಿಪೇರಿಗೆ ದುಡ್ಡ ಇಲ್ಲ ಎಂದು ಹೇಳಿ, ಐ.ಬಿ.ಗಳನ್ನು ಕಟ್ಟಿಸುವಂತಾದ್ದು ನಡೆಯುತ್ತದೆ. ಅದೇನೋ ಚಂದ್ರಮಹಲ್, ಇಂದ್ರಮಹಲ್ ಕಟ್ಟಿಸಲಿಕ್ಕೆ ಹಣ ಖರ್ಚುಮಾಡಲಿಕ್ಕೆ ಹೋಗುತ್ತಿದ್ದೀರಿ. ಇಲ್ಲಿ ಜನರಿಗೆ ಓಡಾಡಲಿಕ್ಕೆ ರಸ್ತೆಗಳು ಇಲ್ಲ. ಕರ್ನಾಟಕದಲ್ಲಿ ಶಾಸಕರುಗಳು ರಸ್ತೆ, ರಸ್ತೆ, ಎಂದು ಹೇಳುವಂತಾದ್ದು ನಿಲ್ಲುವವರೆಗಾದರೂ ಈ ಐ.ಬಿ.ಗಳನ್ನು ಕಟ್ಟಬಾರದೆಂದು ನನ್ನ ಸಲಹೆ. ನಮ್ಮ ಸಲಹೆ ಬೇಕಾದರೆ ಮಾನ್ಯ ಮಾಡಿ, ಇಲ್ಲದೇ ಇದ್ದರೆ ಐ.ಬಿ.ಗಳನ್ನೇ ಕಟ್ಟಿಬಿಡಿ. ಇನ್ನು ಎಲೆಕ್ಟ್ರಿಸಿಟಿ ಬಗ್ಗೆ ಒಂದು ಮಾತು ಹೇಳಬೇಕಾಗುತ್ತದೆ. ಈ ಬಗ್ಗೆ ನಾನು ಹೆಚ್ಚು ಹೇಳಲಿಕ್ಕೆ ಹೋಗುವುದಿಲ್ಲ. ಅದು ಅಷ್ಟು ಅಸ್ತವ್ಯಸ್ಥವಾಗಿದೆ. ನಮ್ಮ ಹಳ್ಳಿಗಾಡಿನ

ಜೀವನಕ್ಕೆ ನೆರವಾಗುವಂತಾದ್ದು ಈ ಇಲಾಖೆಗಿಂತ ಮತ್ತೊಂದು ಇಲ್ಲ, ಆದರೆ ಈಗ ಏನಾಗುತ್ತಿದೆ, ವೋಲ್ಟೇಜ್ ಫ್ಲಕ್ಚುಯೇಷನ್‌ನಿಂದ ನಮ್ಮ ಕರೆಂಟ್ ಮೋಟಾರ್‌ಗಳು ಸುಟ್ಟುಹೋಗುತ್ತಿವೆ. ಈಗ ತಾವು ಕರೆಂಟ್, ಇಷ್ಟು ಹೊತ್ತು ಕೊಡುತ್ತೇವೆ, ಅಷ್ಟು ಹೊತ್ತು ಕೊಡುತ್ತೇವೆಂದು ಹೇಳುವಂತಾದ್ದು ಮುಖ್ಯವಲ್ಲ, ತಾವು ವೋಲ್ಟೇಜ್ ಸರಿಯಾಗಿ ಕೊಡಲಿಲ್ಲ ಅಂದರೆ, ಬಹಳ ಕಷ್ಟವಾಗುತ್ತದೆ. ರೈತರು 16-20 ಸಾವಿರ ರೂಪಾಯಿ ಸಾಲ ಮಾಡಿಕೊಂಡು ಕರೆಂಟ್ ಮೋಟಾರ್‌ತಂದಿರುತ್ತಾರೆ. ಅದು ಸುಟ್ಟುಹೋಯಿತು ಅಂದರೆ, ಆತ ಮತ್ತೆ ಎರಡೆರಡು ವರ್ಷಗಳ ಕಾಲ ಜೀತ ದುಡಿಯಬೇಕಾಗುತ್ತದೆ. ಆ ಕಾರಣ ತಾವು ವೋಲ್ಟೇಜ್ ಸರಿಯಾಗಿ ಕೊಡಬೇಕು ಮತ್ತು ಸರಿಯಾದಂಥ ನಿಗದಿತ ಕಾಲದಲ್ಲಿ ಕರೆಂಟ್ ಕೊಡುವ ವ್ಯವಸ್ಥೆ ಮಾಡಬೇಕು. ಮಹಾರಾಷ್ಟ್ರದಲ್ಲಿ ವಾರಾಬಂದಿ ಎಂದು ಮಾಡಿದ್ದಾರೆ. ಒಂದು ದಿವಸ ಪೂರ್ತಿ ಕಡೆ ಮಾಡಿಬಿಡಲಿ ತೊಂದರೆಯಾಗುವುದಿಲ್ಲ ಇನ್ನುಳಿದ ಆರು ದಿವಸಗಳಾದರೂ ಸರಿಯಾಗಿ ಕೊಡುವಂಥ ವ್ಯವಸ್ಥೆಯಾಗಬೇಕು. ಅದಕ್ಕೋಸ್ಕರ ಅಲ್ಲಿಯ ಅನುಭವವನ್ನಾದರೂ ತಿಳಿದುಕೊಂಡು ಬನ್ನಿ. ಇನ್ನು ನೀರಾವರಿ ಪಂಪ್‌ಸೆಟ್ಟುಗಳಿಗೆ, ಹಾರ್ಸ್‌ಪವರ್ ಮೇಲೆ ಫ್ಲ್ಯಾಟ್‌ರೇಟ್ ಎಂದು ಮೊದಲು ಮಾಡಿದಿರಿ. ನಮ್ಮ ಹುಕ್ಕೇರಿ, ಚಿಕ್ಕೋಡಿ, ತಾಲ್ಲೂಕಿನೊಳಗೆ ರೈತರು ಸತ್ತುಕೆಟ್ಟು, ತಾವೇ ಹಣ ಕೂಡಿಸಿಕೊಡುವಂಥ ಪ್ರಯತ್ನಮಾಡಿದರೂ ಅಲ್ಲಿ ಫ್ಲ್ಯಾಟ್ ರೇಟು ಇಲ್ಲ, ನೀವು ಯೂನಿಟ್ ಮೇಲೆ ಹಣ ಕೊಡಬೇಕೆಂದು ಅವರಿಗೆ ಮಾಡುತ್ತೀರಿ. ಅದೇ ಬಣ್ಣದ ಕಾರಂಜಿಯನ್ನಚ್ಚಿ ಕೊಂಡವರಿಗೆಲ್ಲಾ ರಿಯಾಯ್ತಿ ಕೊಡುತ್ತೀರಿ, ಫ್ಲಂ ಲೈಟ್ ಹಾಕಿಕೊಂಡು ಕ್ರಿಕೆಟ್ ಆಡುವವರಿಗೆ ಎಲೆಕ್ಟ್ರಿಸಿಟಿ ಕೊಡುತ್ತೀರಿ. ರೈತರು ಕಬ್ಬು ಬೆಳೆದು ತಂದು ನಿಮಗೆ ಸಕ್ಕರೆ ಕೊಡುತ್ತಾರೆ. ನಿಮಗೆ ರೆವಿನ್ಯೂ ಕೂಡುತ್ತಾರೆ, ಅಂತಹವರಿಗೆ ಈ ರೀತಿ ಯೂನಿಟ್ ಮೇಲೆ ಚಾರ್ಜ್ ಮಾಡುತ್ತೀರಿ. ಇವೊತ್ತು ರೈತರು ನಾಲ್ಕಾರು ಜನರು ಕೂಡಿ 15-20 ಹಾರ್ಸ್‌ಪವರ್ ಮೋಟಾರ್ ಇಟ್ಟುಕೊಂಡು ನೀರಾವರಿ ಮಾಡಬೇಕೆಂದು ಇದ್ದರೆ ಅವರಿಗೆ ಫ್ಲ್ಯಾಟ್6 ರೇಟು ಇರಬೇಕು, ಯೂನಿಟ್ ಮೇಲೆ ಇರಬಾರದೆಂದು ನನ್ನ ವಿಚಾರ ಇದೆ. ಇನ್ನು ಕೆ.ಇ.ಬಿ. ಬಗ್ಗೆ ಹೇಳಬೇಕೆಂದರೆ, ಅಲ್ಲಿ ಜೀಪ್ ಇಲ್ಲ, ಟ್ರಕ್ ಇಲ್ಲ, ಬೈಲಹೊಂಗಲದಲ್ಲಿ ವ್ಯವಸ್ಥೆ ಎಷ್ಟು ಹದಗೆಟ್ಟಿದೆ ಎಂದು ನೋಡಲಿಕ್ಕೆ ಮಾನ್ಯ ಮಂತ್ರಿಗಳು ವಿಶೇಷವಾಗಿ ವಿಸಿಟ್ ಮಾಡಿ ತನಿಖೆ ಮಾಡಬೇಕೆಂದು ಹೇಳಿ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ. ಕೂಶಾಲ (ಸುಳ್ಯ) : ಮಾನ್ಯ ಸಭಾಧ್ಯಕ್ಷಿಣಿಯವರೆ, ಲೋಕೋಪಯೋಗಿ ಇಲಾಖೆ, ಮತ್ತು ನೀರಾವರಿ ಇಲಾಖೆ ಬೇಡಿಕೆಗಳ ಬಗ್ಗೆ ಎರಡು ಮಾತುಗಳನ್ನಾಡಲಿಕ್ಕೆ ಇಷ್ಟಪಡುತ್ತೇನೆ. ಬಹುಶಃ ಹಿಂದೆ ಪ್ರತಿ ಕ್ಷೇತ್ರಗಳನ್ನು ಪ್ರತಿನಿಧಿಸುವಂಥ ಶಾಸಕರಿಗೆ 1985ರ ಮೊದಲು ಒಬ್ಬೊಬ್ಬ ಶಾಸಕರಿಗೆ, ಕಡೇ ಪಕ್ಷ 5 ರಸ್ತೆ ಕಾಮಗಾರಿ, 5 ಸೇತುವೆ ಕಾಮಗಾರಿಗಳನ್ನು ಕೊಡುವಂಥ ಪದ್ಧತಿ ಇತ್ತು ಎಂದು ತಿಳಿದುಬರುತ್ತದೆ. ಆದರೆ, ನಾವು ಪ್ರತಿನಿದಿಸಿದ ಮೇಲೆ 1985ರ ನಂತರ ಈ ಐದು ಕಾಮಗಾರಿ ಕೊಡುವ ಬದಲಾಗಿ ಎರಡೆರಡು ಕಾಮಗಾರಿಗಳನ್ನು ಕೊಡುತ್ತಿದ್ದರೆ ಬಹುಶಃ ಆರೇಳು ವರ್ಷಕ್ಕೆ ನಮ್ಮ ಕ್ಷೇತ್ರಗಳಲ್ಲಿ ಸುಮಾರು 15 ರಸ್ತೆಗಳು, 14 ಸೇತುವೆಗಳು ನಿರ್ಮಾಣವಾಗುತ್ತಿದ್ದವು ಎನ್ನುವ ಮಾತನ್ನು ಹೇಳುತ್ತಿದ್ದೇನೆ. 1985ರಿಂದ 1987ರವರೆಗೆ ಜಿಲ್ಲಾಪರಿಷತ್ ಮತ್ತು ಲೋಕೋಪಯೋಗಿ ಇಲಾಖೆಯೊಳಗೆ ಈ ಒಂದು ಜಿಲ್ಲಾಪರಿಷತ್ ಅಸ್ತಿತ್ವಕ್ಕೆ ಬಂದಿದ್ದರಿಂದ ಕೆಲವು ತೊಂದರೆಗಳು ಆದ್ದರಿಂದ, 1987 ರಿಂದ 1989 ರವರೆಗೆ ಲೋಕೋಪಯಾಗಿ ಇಲಾಕೆಯಲ್ಲಿಯಾಗಲಿ, ಜಿಲ್ಲಾ ಪರಿಷತ್‌ನಿಂದಾಗಲಿ, ರಸ್ತೆ ಮತ್ತು ಸೇತುವೆ ಕಾಮಗಾರಿಗಳನು [illegible]

ನನ್ನ ಕ್ಷೇತ್ರದಲ್ಲಿ ರಸ್ತೆಗಳು ಮತ್ತು ಸೇತುವೆಗಳ ಕಾಮಗಾರಿಗಳಿಗೆ ತೊಂದರೆಯಾಗುತ್ತಿರುವುದನ್ನು ತಾವು ಗಮನಿಸಬೇಕು. ಇದೇ ರೀತಿ ತಮ್ಮ ಉತ್ತರದಲ್ಲಿ ರಾಜ್ಯದಲ್ಲಿರುವ ರಸ್ತೆಗಳಿಗೋಸ್ಕರ ಸುಮಾರು 68-70 ಕೋಟಿ ರೂ. ಹಣ ನೀಡಬೇಕಾಗುತ್ತದೆಂದು ಹೇಳಿದ್ದೀರಿ. ಆದರ ಬದಲು ರಸ್ತೆ ಮತ್ತು ಸೇತುವೆಗಳನ್ನು ಸೇರಿಸಿ 30-40 ಕೋಟಿ ರೂ.ಗಳನ್ನು ಮಾತ್ರ ಬಿಡುಗಡೆ ಮಾಡುತ್ತಿರುವುದರಿಂದ ಒಂದೊಂದು ಕ್ಷೇತ್ರದಲ್ಲಿ ಕನಿಷ್ಟ 50 ಲಕ್ಷ ರೂ.ಗಳ ಕಾಮಗಾರಿಗಳನ್ನೂ ಕೂಡ ಕಳೆದ 2 ವರ್ಷಗಳಿಂದ ತೆಗೆದುಕೊಳ್ಳುವುದಕ್ಕಾಗುತ್ತಿಲ್ಲ. ಅಂದರೆ ತಾವು ಕೊಡುತ್ತಿಲ್ಲ. ಆದ್ದರಿಂದ ಇನ್ನಾದರೂ ಇಂಥ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ನಾನು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ. ಇದೇ ರೀತಿ ಜಿಲ್ಲಾ ಪರಿಷತ್ತು ಮತ್ತು ಲೋಕೋಪಯೋಗಿ ಇಲಾಖೆಯಿಂದ ಆಗುತ್ತಿರುವಂಥ ತೊಂದರೆಯಿಂದಾಗಿ, ಸರ್ಕಾರದವರು ಜಿಲ್ಲಾ ಪರಿಷತ್ತುಗಳಿಗೆ ಕೊಡುತ್ತಿರುವ ಹಣದಲ್ಲಿ ನಮ್ಮ ಕ್ಷೇತ್ರದಲ್ಲಿರತಕ್ಕ ದೊಡ್ಡ ರಸ್ತೆ ಕಾಮಗಾರಿಗಳನ್ನಾಗಲಿ ಅಥವಾ ಸೇತುವೆ ಕಾಮಗಾರಿಗಳನ್ನಾಗಲಿ ಕೈಗೊಳ್ಳುವುದಕ್ಕೆ ಕಷ್ಟವಾಗಿರುವುದರಿಂದ ಈ ರಸ್ತೆಯನ್ನು ಮೇಲ್ದರ್ಜೆಗೆ ಏರಿಸುವಂಥ ಯೋಜನೆಯನ್ನು ಇಟ್ಟುಕೊಂಡಿದೆಯೆಂದು ತಿಳಿದುಬಂದಿದೆ. ಈ ವಿಚಾರ ಕಳೆದ 2 ವರ್ಷದಿಂದ ಸರ್ಕಾರದಲ್ಲಿ ನೆನೆಗುದಿಗೆ ಬಿದ್ದಿದೆ. ಇಂಥ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸುವ ಕಾರ್ಯಕ್ರಮವನ್ನು ಸರ್ಕಾರ ಇಟ್ಟುಕೊಂಡರುದರಿಂದ ಒಬ್ಬೊಬ್ಬ ಶಾಸಕರ ಕ್ಷೇತ್ರದಲ್ಲಿ 30-40 ಕಿ.ಮೀ. ರಸ್ತೆಗಳ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಪ್ರಸ್ತಾವನೆ ಸರ್ಕಾರದಲ್ಲಿದೆ. ಇದುವರೆಗೂ ಈ ಅಭಿವೃದ್ಧಿ ಕಾಮಗಾರಿಗಳಿಗೆ ಸರ್ಕಾರ ಹಣವನ್ನೊಳಗಿಸದೇ ಇರುವುದರಿಂದ ನಮ್ಮ ಕ್ಷೇತ್ರದಲ್ಲಿ ಕಾಮಗಾರಿ ಕೆಲಸ ಕುಂಠಿತವಾಗಿರುತ್ತದೆ. ಇದರಿಂದಾಗಿ ಶಾಸಕರು ನಮ್ಮ ನಮ್ಮ ಕ್ಷೇತ್ರಗಳಲ್ಲಿ ಮತದಾರರನ್ನು ಭೇಟಿ ಮಾಡಲು ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿದ್ದೇವೆ. ಇದೇ ರೀತಿ ನೆರೆಹಾವಳಿಯಿಂದ ನೊಂದಿರತಕ್ಕ ನಮ್ಮ ಭಾಗದ ಜನರಿಗೆ ಸರ್ಕಾರ ಇದುವರೆಗೂ ಹಣವನ್ನು ಬಿಡುಗಡೆ ಮಾಡಿಲ್ಲ. 1989-90 ರಲ್ಲಿ 10 ಕೋಟಿ ರೂ. ಡ್ಯಾಮೇಜ್ ಆಗಿದ್ದರೆ, ಇದಕ್ಕೆ ಇನ್ನೂ ಹಣವನ್ನೇ ಸರ್ಕಾರ ಬಿಡುಗಡೆ ಮಾಡಿಲ್ಲ. 90-91ರ ಸಾಲಿನಲ್ಲಿ ಸುಮಾರು 11 ಕೋಟಿ ರೂ.ಗಳಷ್ಟು ನಷ್ಟ ಈ ನೆರೆ ಹಾವಳಿಯಿಂದ ಆಗಿದೆ. ಇದಕ್ಕೂ ಕೂಡ ಸರ್ಕಾರ ಹಣವನ್ನು ಕೊಟ್ಟಿಲ್ಲ. 91-92ರಲ್ಲಿ ಸುಮಾರು 13ಕೋಟಿ ರೂ.ಗಿಂತ ಹೆಚ್ಚು ನಷ್ಟ ನೆರೆಹಾವಳಿಯಿಂದ ಆಗಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೊಡಗು ಜಿಲ್ಲೆಯನ್ನು ಹಾದು ಬರತಕ್ಕ ರಾಜ್ಯ ಹೆದ್ದಾರಿಯಾದ ಬಂಟ್ವಾಳ್ ಮೈಸೂರು ರಸ್ತೆಯಲ್ಲಿ ಸುಮಾರು 105 ಕಿ.ಮೀ ರಸ್ತೆಯಲ್ಲಿ ವಾಹನಗಳ ಸಂಚಾರವನ್ನು ಬಿಟ್ಟರೆ ಮನುಷ್ಯರು ಯಾರೂ ಕೂಡ ಸಂಚಾರ ಮಾಡುವುದಕ್ಕಾಗದೇ ಇರುವ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಆದ್ದರಿಂದ ಈ ರಸ್ತೆಯ ರಿಪೇರಿಗಾಗಿ ತುರ್ತಾಗಿ ಹಣವನ್ನೊಳದಗಿಸುವಂತೆ ಸಂಬಂಧಪಟ್ಟ ಮಂತ್ರಿಗಳನ್ನು ಒತ್ತಾಯಿಸುತ್ತೇನೆ. ಇದರ ಜೊತೆಗೆ ಪೆಟ್ರೋಲ್ ಸರ್‌ಚಾರ್ಜ್‌ನಿಂದ ಬರಬೇಕಾದ ಸುಮಾರು 15.5 ಕೋಟಿ ರೂಪಾಯಿ ಹಣ ನಮ್ಮ ರಾಜ್ಯಸರ್ಕಾರಕ್ಕೆ ಬಂದಿಲ್ಲ. ಇದು ಕಳೆದ 3 ವರ್ಷಗಳಿಂದಲೂ ಬಂದಿಲ್ಲ. ಇದರಿಂದ ಸುಮಾರು 45-47 ಕೋಟಿ ರೂ.ಗಳಷ್ಟು ಕಾಮಗಾರಿ ನಮ್ಮ ರಾಜ್ಯದಲ್ಲಿ ನಡೆಯದೆ ತೊಂದರೆ ಆಗಿರುವುದನ್ನು ನಾವು ನೋಡುತ್ತಿದ್ದೇವೆ. ಆದ್ದರಿಂದ ಕೇಂದ್ರದಿಂದ ಬಿಡುಗಡೆ ಆಗಬೇಕಾದ ಹಣವನ್ನು ನಮ್ಮ ಸರ್ಕಾರದವರು ತುರ್ತಾಗಿ ತರಿಸಿಕೊಂಡು ರಾಜ್ಯದ ಅಭಿವೃದ್ಧಿ ಕಾಮಗಾರಿಗಳಿಗೆ ತೊಡಗಿಸಬೇಕು ಎಂದು ಸಂಬಂಧಪಟ್ಟ ಇಲಾಖೆಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಇದೇ ರೀತಿ ರಸ್ತೆಯ ಮೇನ್‌ಟೆನೆನ್ಸ್‌ಗೆ ಅಂದರೆ ಪಿ.ಡಬ್ಲ್ಯು.ಡಿ. ಮತ್ತು ಎಂ.ಡಿ.ಆರ್.ರಸ್ತೆಗೆ 1ಕಿ.ಮೀ.ಗೆ ಸರ್ಕಾರದಿಂದ ಅಥವಾ ಆರ್ಥಿಕ ಇಲಾಖೆಯಿಂದ 28 ಸಾವಿರ ರೂ.ಗಳಂತೆ ಕೊಡಬೇಕಾಗುತ್ತದೆ. ಆದರೆ 28 ಸಾವಿರ ರೂ.ಗಳಂತೆ ಕೊಡುವ

ಬದಲು 13 ಸಾವಿರ ರೂ.ಗಳಂತೆ ಕೊಡುತ್ತಿರುವುದರಿಂದ ರಸ್ತೆಯ ಮೇನ್‌ಟೆನೆನ್ಸ್ ಕೆಲಸ ಆಗುತ್ತಿಲ್ಲ.

ಇವರು ಕೊಡತಕ್ಕ 13 ಸಾವಿರ ರೂ.ಗಳಲ್ಲಿ ಸಿಬ್ಬಂದಿ ವೆಚ್ಚಕ್ಕೆ ಸುಮಾರು 6 ಸಾವಿರ ರೂ. ಖರ್ಚಾಗುತ್ತದೆ. ಇನ್ನುಳಿದ ಕೇವಲ 7 ಸಾವಿರಗಳಲ್ಲಿ ಯಾವ ರೀತಿ ಮೇಟೆನೆನ್ಸ್ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಇಂಥ ಸಂದರ್ಭದಲ್ಲಿ ಈ ಬಾಬಿಗೆ ಎಷ್ಟು ಹಣವನ್ನು ಕೊಡಬೇಕೋ ಅಷ್ಟು ಹಣವನ್ನೂ ನಿಗದಿತವಾಗಿ ಕೊಟ್ಟರೆ ಮಾತ್ರ ಈ ರಸ್ತೆಗಳನ್ನು ಮೇನ್‌ಟೇನೆನ್ಸ್ ಮಾಡುವುದಕ್ಕೆ ರಿಪೇರಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದೇ ರೀತಿ ಹಳೆಯ ರಸ್ತೆಗಳಿಗೆ 1 ಕಿ.ಮೀ.ಗೆ 9000-13000 ರೂ.ಗಳವರೆಗೆ ಅಭಿವೃದ್ಧಿ ಕೆಲಸಕ್ಕೆ ಸರ್ಕಾರ ಹಣವನ್ನು ಕೊಡಬೇಕಾಗುತ್ತದೆ. ಆದರೆ ಆರ್ಥಿಕ ಇಲಾಖೆಯವರು ಇಷ್ಟು ಹಣವನ್ನು ಕೊಡದೆ ಕೇವಲ 5000 ರೂ.ಗಳಂತೆ ಮಾತ್ರ ಕೊಡುತ್ತಿದ್ದಾರೆ. ಇದರಲ್ಲಿ ಸಿಬ್ಬಂದಿ ಖರ್ಚನ್ನು ಕಳೆದರೆ ಇನ್ನೆ 1 ಕಿ.ಮೀ.ಗೆ 2-3 ಸಾವಿರ ಮಾತ್ರ ಉಳಿಯುತ್ತದೆ. ಇಷ್ಟು ಹಣದಲ್ಲಿ ಕಾಮಗಾರಿ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಇಂಥ ಸಂದರ್ಭದಲ್ಲಿ ನಿಗದಿಯಾದ ಹಣವನ್ನು ಒದಗಿಸಿದರೆ ಮಾತ್ರ ರಸ್ತೆ ಮತ್ತು ಸೇತುವೆಗಳ ಕಾಮಗಾರಿಯನ್ನು ಉತ್ತಮ ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಬಯಸುತ್ತೇನೆ. ಇದೇ ರೀತಿ ರಸ್ತೆ ತೆರಿಗೆಯ ವಸೂಲಿಯಿಂದ ಸುಮಾರು 300 ಕೋಟಿ ರೂ.ಗಳು ಆದಾಯ ಬರುತ್ತದೆ. ಇಷ್ಟು ಹಣವನ್ನು ರಸ್ತೆ ನಿರ್ಮಾಣಕ್ಕೆ ಉಪಯೋಗ ಮಾಡದೆ ಕೇವಲ ಮೂರನೇ ಒಂದು ಭಾಗ ಅಂದರೆ 100 ಕೋಟಿ ರೂ.ಗಳನ್ನು ಒದಗಿಸಿದರೆ ಇದರಿಂದ ರಸ್ತೆ ನಿರ್ಮಾಣ ಕಾರ್ಯ ಸಾಧ್ಯವಾಗುವುದಿಲ್ಲ. ನಿಗದಿತ ಪ್ರಮಾಣದಲ್ಲಿ ಹಣವನ್ನು ಒದಗಿಸಿದರೆ ಮಾತ್ರ ಕಾಮಗಾರಿಗಳನ್ನು ಅಂದರೆ ರಸ್ತೆ ಸೇತುವೆ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆಂದು ಮಾನ್ಯ ಕಾಮಗಾರಿ ಸಚಿವರ ವಿನಂತಿಮಾಡಿಕೊಳ್ಳುತ್ತೇನೆ.

12.10 ಪಿ.ಎಂ.

ಅದೇ ರೀತಿಯಲ್ಲಿ ಇವತ್ತು ಗಡಿಪ್ರದೇಶ ಅಭಿವೃದ್ಧಿ ಯೋಜನೆ ಕಾರ್ಯಕ್ರಮ ನಿಜವಾಗಿಯೂ ಒಂದು ಸಂತೋಷದ ವಿಷಯವಾಗಿದೆ. ಇವತ್ತು ನಮ್ಮ ಸರ್ಕಾರ ಉತ್ತಮವಾದ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕ್ರೊಂಡಿದೆ. ಅದರಲ್ಲೂ ಕೂಡ ಗಡಿ ಪ್ರದೇಶ ಅಭಿವೃದ್ಧಿ ಯೋಜನೆಯ ಕಾಮಗಾರಿಯನ್ನು ತೆಗೆದುಕೊಂಡು ಗಡಿ ಪ್ರದೇಶದಲ್ಲಿ ಬರುವಂಥ ತಾಲ್ಲೂಕುಗಳಲ್ಲಿ ಬಹುಶಃ ಒಂದು ತಾಲ್ಲೂಕ್ಕಿಗೆ 25 ಲಕ್ಷ ರೂಪಾಯಿಗಳ ಕಾಮಗಾರಿಗಳನ್ನು ಅಳವಡಿಸಿದ್ದಾರೆ. ಆದರೆ ಇದು ಪ್ರಮುಖವಾಗಿ ಆ ಕ್ಷೇತ್ರದ ಶಾಸಕರು ಅತಿ ಪ್ರಾಧಾನ್ಯತೆಯನ್ನು ಕೊಡಬೇಕಾದಂಥ ಕೆಲವು ಕಾಮಗಾರಿಗಳಿಗೆ ಮಾತ್ರ ಇವತ್ತು ಆಸಕ್ತಿಯನ್ನು ವಹಿಸಿದರೆ ನಮ್ಮ ಕ್ಷೇತ್ರದ ಅಭಿವೃದ್ಧಿಗೆ ಸಹಕಾರಿಯಾಗುತ್ತದೆಂದು ನನ್ನ ಭಾವನೆ. ಅದಕ್ಕೆ ಕೆಲವು ನಾರ್ಮ್ಸ್ ಅಥವಾ ನಿಯಮಗಳನ್ನು ಅಳವಡಿಸಿರುವುದರಿಂದ ಇವತ್ತು ನಮ್ಮ ಕ್ಷೇತ್ರದಲ್ಲಿ ಕೆಲವು ಕಾಮಗಾರಿಗಳು ಅತ್ಯಗತ್ಯವಾಗಿ ಆಗಬೇಕಾದ ಕಾಮಗಾರಿಗಳನ್ನು ನಮ್ಮ ಕ್ಷೇತ್ರದಲ್ಲಿ ಪೂರೈಸಲಿಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಈ ನಾರ್ಮ್ಸ್ ನಿಯಮಗಳು ಏನಿವೆ ಅದನ್ನು ಸ್ವಲ್ಪ ಸಡಿಲಿಕೆ ಮಾಡಬೇಕಾಗುತ್ತದೆ. ಉದಾಹರಣೆಗೆ ಇವತ್ತು ನಮ್ಮ ಕ್ಷೇತ್ರದಲ್ಲಿ ಅದರಲ್ಲೂ ಹೆಚ್ಚಿಗೆ ಮಲೆನಾಡು ಪ್ರದೇಶಗಳಲ್ಲಿ ರಸ್ತೆ ಮತ್ತು ಸೇತುವೆಗಳಿಗೆ ಅತಿ ಪ್ರಾಮುಖ್ಯತೆಯನ್ನು ಕೊಡಬೇಕಾಗುತ್ತದೆ. ಆದರೆ ಕ್ಷೇತ್ರದ ಶಾಸಕರಿಂದ ಗಡಿ ಪ್ರದೇಶದ ಅಭಿವೃದ್ಧಿ ಯೋಜನೆಯಲ್ಲಿ ನಮಗೆ ಬೇಕಾದ ಕಾಮಗಾರಿಗಳನ್ನು ಅದರ ಪಟ್ಟಿಯನ್ನು ಸಲ್ಲಿಸಬೇಕೆಂದು ಕೇಳಿದರೆ ನಾವು ಕೆಟ್ಟು

ಕಾರಣ ಈ ನಿಯಮಗಳ ತೊಂದರೆಯಿಂದಾಗಿ ಶಾಸಕರ ಹೆಸರಿನಲ್ಲಿ ಆ ಪಟ್ಟಿಯನ್ನು ಅಲ್ಲಿಯೇ ಮಾಡಿ ನಿಯಮಗಳನ್ನು ಅಳವಡಿಸಿದ್ದರಿಂದ ಬಹುಶಃ ನಮಗೆ ಪ್ರಾತಿನಿಧ್ಯ ಸಿಕ್ಕುತ್ತಿಲ್ಲ.

ಆ ಕ್ಷೇತ್ರದಲ್ಲಿ ಅತಿ ತುರ್ತಾಗಿ ಆಗಬೇಕಾದಂಥ ಕಾಮಗಾರಿಗಳನ್ನು ಕೈಗೊಳ್ಳಲಿಕ್ಕೆ ಆಗುತ್ತಿಲ್ಲ. ಅದಕ್ಕೆ ಗಡಿ ಪ್ರದೇಶದಲ್ಲಿರುವ ಶಾಸಕರಿಗೆ ಆ ಕ್ಷೇತ್ರದಲ್ಲಿ ಅತಿ ಪ್ರಾಮುಖ್ಯವೆಂದು ಯಾವ ಕೆಲಸವನ್ನು ಅವರು ಪಟ್ಟಿಮಾಡಿಕೊಡುತ್ತಾರೋ ಆ ಕೆಲಸಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಆ ನಿಯಮಗಳನ್ನು ಸಡಿಲಕ್ಕೆ ಮಾಡಬೇಕೆಂದು ಹೇಳಿ ನಾನು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ. ಅದೇ ರೀತಿಯಲ್ಲಿ ಇವತ್ತು ಎ.ಪಿ.ಎಂ.ಸಿ ರಸ್ತೆಗೆ ಕಳೆದ ಎರಡು ವರ್ಷದಿಂದ ನಮ್ಮ ಬೇಡಿಕೆಯ ಪಟ್ಟಿಯನ್ನು ಸಲ್ಲಿಸಲಾಗಿದೆ. ಆದರೆ ಸರ್ಕಾರ ಈ ಕೃಷಿ ಇಲಾಖೆಯಿಂದ ರೆಗ್ಯುಲೇಟೆಡ್ ಮಾರ್ಕೆಟ್ ಸಂಸ್ಥೆಯಿಂದ ಬರತಕ್ಕಂಥ ಹಣವನ್ನು ಇನ್ನೂ ಕೂಡ ಒದಗಿಸಿಲ್ಲ. ಈ ಒಂದು ರಸ್ತೆ ಕಾಮಗಾರಿಗಳ ಬಗ್ಗೆ ಪ್ರಸ್ತಾವನೆಯನ್ನು ಕಳುಹಿಸಿದ್ದರೂ ಕೂಡ ಸರ್ಕಾರ ಇನ್ನು ಅದಕ್ಕೆ ಆಸಕ್ತಿಯ್ನು ವಹಿಸುತ್ತಿಲ್ಲ. ಈ ಇಲಾಖೆಯಿಂದ ಹಣವನ್ನು ಒದಗಿಸದೆ ಇವತ್ತು ಅದಕ್ಕೂ ಕೂಡ ಕೆಲವು ನಿಯಮಗಳನ್ನು ಮಾಡಿದ್ದಾರೆ. ಮತ್ತೆ ಕೆಲವು ಮಾರ್ಕೆಟಿಂಗ್ ಯಾರ್ಡ್‌ಗಳಿಗೆ ಸಂಬಂಧಪಟ್ಟಂತೆ ಯಾರ್ಡನ್ನು ಮಾತ್ರ ನಾವು ಅಭಿವೃದ್ಧಿ ಪಡಿಸುತ್ತೇವೆನ್ನುವ ಮಾತನ್ನು ಹೇಳುತ್ತಿದ್ದಾರೆ. ಅದರೆ ಇವತ್ತು ಗ್ರಾಮೀಣ ಪ್ರದೇಶಗಳಲ್ಲಿರತಕ್ಕಂಥ ಕೃಷಿಕರು ಒಂದು ತಾಲ್ಲೂಕ್ಕಿನ ಮಾರ್ಕೆಟ್‌ಯಾರ್ಡಿಗೆ ಬರಬೇಕಾದರೆ ಹಲವಾರು ಕಿಲೋಮೀಟರ್ಸ್ ಗ್ರಾಮಾಂತರ ಪ್ರದೇಶದ ರಸ್ತೆಯನ್ನು ಬಳಸಿಕೊಂಡು ಅವರ ಕೃಷಿ ಫಸಲನ್ನು ಮಾರ್ಕೆಟ್‌ಯಾರ್ಡಿಗೆ ಸಾಗಿಸಬೇಕಾಗಿದೆ. ಆದ್ದರಿಂದ ಈವತ್ತು ಈ ಒಂದು ಮಾರ್ಕೆಟ್ ಯಾರ್ಡಿಗೆ ಸಂಪರ್ಕ, ಅಥವಾ ಲಿಂಕ್ ರಸ್ತೆಗಳನ್ನು ಕೂಡ ಈ ಒಂದು ಯೋಜನೆಯಲ್ಲಿ ಅಳವಡಿಸಬೇಕೆನ್ನುವಂಥ ಪ್ರಸ್ತಾವನೆಯನ್ನು ಇವತ್ತು ಮಲೆನಾಡು ಅಭಿವೃದ್ಧಿ ಬಗ್ಗೆ ಮಾತನಾಡುವಾಗ ಕೆಲವು ಸದಸ್ಯರು ಹೇಳಿದ್ದಾರೆ. ಮಲೆನಾಡು ಅಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳನ್ನು ಈಗಾಗಲೇ ಸರ್ಕಾರ ಕೈಗೆ ಎತ್ತಿಕೊಳ್ಳುವಂಥ ಯೋಚನೆ ಮಾಡಿದೆ.

ಇದಕ್ಕಾಗಿ ಸಂಬಂಧಪಟ್ಟಂತೆ ಒಂದು ಬಜೆಟ್‌ನ್ನು ಸರ್ಕಾರದ ಮುಂದೆ ಸಿದ್ಧತೆ ಪಡಿಸಿತ್ತು. ಆದರೆ ಇನ್ನೂ ಕೆಲವು ತಾಲ್ಲೂಕುಗಳನ್ನು ಈ ಯೋಜನೆಯಲ್ಲಿ ಅಳವಡಿಸಿಕೊಳ್ಳಬೇಕೆನ್ನುವ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಂಡು ಈಗಾಗಲೇ ಸಂಬಂಧಪಟ್ಟ ಕ್ಷೇತ್ರಗಳ ಅಭಿವೃದ್ಧಿ ಅಧಿಕಾರಿಗಳಿಂದ ಕಳೆದ 6 ತಿಂಗಳಿಂದ ಈ ವಿಷಯಕ್ಕೆ ಸಂಬಂಧಪಟ್ಟಂತೆ ವಿವರಗಳನ್ನು ಮತ್ತು ಅದಕ್ಕೆ ಸಂಬಂಧಪಟ್ಟಂಥ ದಾಖಲೆಗಳನ್ನು ಒದಗಿಸಿಕೊಡಬೇಕೆಂದು ಕೇಳಿಕೊಂಡಿದ್ದರೂ ಕೂಡ ಇನ್ನೂ ಕೂಡ ಇದರ ಕ್ಷೇತಾಭಿವೃದ್ಧಿ ಅಧಿಕಾರಿಗಳಿಂದ ಪ್ರಸ್ತಾಪ ಬಂದಿಲ್ಲ. ಈ ಯೋಜನೆಯನ್ನು ಅತಿ ತುರ್ತಾಗಿ ತೆಗೆದುಕೊಳ್ಳುವ ಕ್ರಮವನ್ನು ಕೈಗೊಂಡು ಇದು ಅತಿ ಶೀಘ್ರದಲ್ಲಿ ಕೈಗೊಳ್ಳುವಂಥ ನಾನು ಈ ಮೂಲಕ ಸಂಬಂಧಪಟ್ಟ ಸಚಿವರನ್ನು ಒತ್ತಾಯಿಸುತ್ತೇನೆ.

ಅದೇ ರೀತಿಯಲ್ಲಿ ಇನ್ನಿತರ ಬಾಬುಗಳಲ್ಲಿ ಬಹುಶಃ ನಾವು ಆಗಾಗ್ಗೆ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಬಗ್ಗೆ ಸೇತುವೆಗಳ ಬಗ್ಗೆ ಹಣವನ್ನು ಕೇಳುತ್ತಿರುವಾಗ ಆರ್ಥಿಕ ಇಲಾಖೆ ಈ ಹಣವನ್ನು ಒದಗಿಸುತ್ತಿಲ್ಲ. ಆರ್ಥಿಕ ಇಲಾಖೆಯಲ್ಲಿ ಹಣವಿಲ್ಲವೆನ್ನುವ ಮಾತುಗಳನ್ನು ಇವತ್ತು ನಾವು ಕೇಳುತ್ತಿದ್ದೇವೆ. ಆದರೆ ಆಯಾ ಶೀರ್ಷಿಕೆಯಲ್ಲಿ ಅಥವಾ ಆಯಾ ಭಾಗದಲ್ಲಿ ಎಷ್ಟು ಕಾಮಗಾರಿಗಳಿವೆಯೋ

ಮಾಡದೆ ಆ ಹಣ ಲ್ಯಾಪ್ಸ್‌ಆಗುವಂಥ ಮತ್ತು ಆ ಕ್ಷೇತ್ರದಲ್ಲಿ ಕಾಮಗಾರಿಗಳು ಕೂಡ ಲ್ಯಾಪ್ಸ್ ಆಗುವುದನ್ನು ನಾವು ಕಾಣುತ್ತಿದ್ದೇವೆ. ನಿಜವಾಗಿಯೂ ಆಯಾ ಬಾಬ್ತಿನಿಂದ ಒದಗಿಸಿದಂಥ ಹಣವನ್ನು ತುರ್ತಾಗಿ ಆಯಾ ಬಾಬುಗಳಲ್ಲಿ ಒದಗಿಸಿದಂಥ ಮೊತ್ತವನ್ನು ನೀಡುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇವತ್ತು ಪ್ರತಿಯೊಂದು ಕ್ಷೇತ್ರದಲ್ಲಿ ಪ್ರತಿಯೊಬ್ಬ ಶಾಸಕರಿಗೂ ಕೂಡ ಕಡಿಮೆ ಪಕ್ಷ 50 ಲಕ್ಷ ರೂಪಾಯಿಗಳ ಕಾಮಗಾರಿಗಳನ್ನು ಮುಂದಿನ ಆಯವ್ಯಯದಲ್ಲಿ ಅಳವಡಿಸಿಕೊಂಡು ಆ ಬಗ್ಗೆ ಸಹಕರಿಸಬೇಕೆಂದು ಕೂಡ ಈ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಇನ್ನು ವಿದ್ಯುತ್ ಇಲಾಖೆಯ ಬಗ್ಗೆ ಹೆಚ್ಚು ಹೇಳುವುದಕ್ಕೆ ಬಯಸುವುದಿಲ್ಲ. ವಿದ್ಯುತ್ ಇಲಾಖೆಯಲ್ಲಿ ಕಳಪೆಮಟ್ಟದ ಮೆಟೀರಿಯಲ್ಸ್ ಉಪಯೋಗಿಸುತ್ತಿದ್ದಾರೆ. ಖಾಸಗಿ ಬಳಕೆದಾರರ ಟ್ರಾನ್ಸ್‌ಮಿಷನ್‌ಗಳನ್ನು ಉತ್ತಮವಾದ ಲೋಹದಿಂದ ಮಾಡಿದಂಥ ಮೆಟೀರಿಯಲ್ಸ್ ಅಳವಡಿಸುತ್ತಾರೆ. ಆದರೆ ಸರ್ಕಾರದಿಂದ ಅಳವಡಿಸಿಕೊಂಡು ಮಾಡುವಂಥ ಉತ್ತಮತರದ ಸಾಮಗ್ರಿಗಳನ್ನು ಒದಗಿಸುತ್ತಿಲ್ಲ. ಇದರಿಂದ ಷಾರ್ಟ್ ಸರ್ಕ್ಯೂಟ್ ಆಗಿ ಪ್ರಾಣಹಾನಿಯಾಗುವ ಪ್ರಸಂಗಗಳನ್ನು ಕಾಣುತ್ತಿದ್ದೇವೆ. ಹರಿಜನ ಗಿರಜನರಿಗೆ ಭಾಗ್ಯಜ್ಯೋತಿ ಕಾರ್ಯಕ್ರಮ ಏನಿದೆ ಇದರ ಪ್ರಕಾರ 60 ಅಡಿ ದೂರದ ಕಂಬದಿಂದ ಬಲ್ಬನ್ನು ಕೊಡುವ ಕಾರ್ಯಕ್ರಮ ಇದೆ. ಆದರೆ ಮಲೆನಾಡು ಪ್ರದೇಶದಲ್ಲಿ 60 ಅಡಿ ದೂರಕ್ಕೆ ಮನೆ ಸಿಗುವುದು ವಿರಳ. ಅಂಥ ಸಂದರ್ಭದಲ್ಲಿ ಈ ಕಾನೂನನ್ನು ಸಡಿಲಿಸಿ ಕಂಬದ ಅವಶ್ಯಕತೆಯನ್ನು ನೋಡಿಕೊಂಡು ಒಂದೆರಡು ಕಂಬಗಳನ್ನು ಅಳವಡಿಸಿಕೊಂಡು ವಿದ್ಯುತ್ ಸರಬರಾಜು ಮಾಡುವ ಕಾಮಗಾರಿಗಳನ್ನು ಮಾಡಿದರೆ ಗ್ರಾಮೀಣ ಜನರಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಹರಿಜನ ಗಿರಿಜನರಿಗೆ ಸಂಬಂಧಪಟ್ಟ ಯೋಜನೆಯಲ್ಲಿ ಒಂದು ಮನೆಗೆ 500 ರೂಪಾಯಿ ವೆಚ್ಚದಲ್ಲಿ ವಿದ್ಯುತ್ ಕೊಡುವ ಕಾರ್ಯಕ್ರಮವನ್ನು ಹಿಂದಿನಿಂದ ಹಾಕಿಕೊಂಡಿದ್ದರೂ ಇವತ್ತು 5 ಸಾವಿರ ರೂಪಾಯಿ ಆದರೂ 3-4 ಬಲ್ಬ್‌ಗಳನ್ನು ಹಾಕುವುದಕ್ಕೆ ಸಾಧ್ಯವಿಲ್ಲ. ಇಂಥ ಸಂದರ್ಭದಲ್ಲಿ 500 ರೂಪಾಯಿಗಳ ಬದಲಿಗೆ 5 ಸಾವಿರ ರೂಪಾಯಿ ಹಣ ಒದಗಿಸಿ ಅವರಿಗೆ ಆ ಒಂದು ಸವಲತ್ತನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನೀರಾವರಿ ಇಲಾಖೆ ಬಗ್ಗೆ ಹೇಳುವುದಾದರೆ...

ಛೇರ್ಮನ್ : ನಿಮಗೆ ಸಮಯ ನಿಗದಿ ಮಾಡಿರುವುದು 5 ನಿಮಿಷ, ಅಷ್ಟರಲ್ಲಿ ನೀವು ಎಲ್ಲಾ ಇಲಾಖೆಯ ಬಗ್ಗೆ ಮಾತನಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಕುಶಾಲ : ನೀರಾವರಿ ಇಲಾಖೆಯಲ್ಲಿ ಸರ್ಕಾರ ಕಾರ್ಪೋರೇಷನ್‌ಗಳ ನೇಮಕದೊಂದಿಗೆ ಇನ್ನೂ ಕಾರ್ಯಕ್ರಮಗಳನ್ನು ಹಾಕಿಕೊಳ್ಳದೆ ಕೃಷಿ ಮತ್ತು ನೀರಾವರಿ ಕಾರ್ಯಕ್ರಮಗಳು ಬಹಳಷ್ಟು ಹಿಂದೆ ಬಿದ್ದಿವೆ. ಸರ್ಕಾರದಲ್ಲಿ ನೀರಾವರಿಗೆ ಹೆಚ್ಚಿನ ಆದ್ಯತೆ ಕೊಟ್ಟರೂ ಕೂಡ ನೀರಾವರಿ ಯೋಜನೆಗಳನ್ನು ಕೈಗೊಳ್ಳದೆ ಮೀನಾಮೇಷ ಎಣಿಸುತ್ತಿರುವುದನ್ನು ಕಾಣುತ್ತಿದ್ದೇವೆ. ಕೃಷಿಗೆ ಹೆಚ್ಚಿನ ಆದ್ಯತೆ ಕೊಡಬೇಕಾಗಿದೆ. ನನ್ನ ಸೂಳ್ಯ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಪುತ್ತೂರು ತಾಲ್ಲೂಕಿನ ಕಡಸ ಕಂದಾಯ ಹೋಬಳಿಯಲ್ಲಿ ಬರುವ 5 ಗ್ರಾಮಗಳು ಇವೆ. ಆ ಪ್ರದೇಶದಲ್ಲಿ ಬರುವ ಕುಮುದಾ ನದಿಗೆ ಏತ ನೀರಾವರಿ ಕಾರ್ಯಕ್ರಮವನ್ನು ಅಳವಡಿಸಿ 3900 ಎಕರೆಗೆ ನೀರೊದಗಿಸುವ ಪ್ರಸ್ತಾವನೆ ಕಳೆದ ಎರಡು ವರ್ಷಗಳಿಂದ ಹಾಗೇ ಇದೆ. ಸಂಬಂಧಪಟ್ಟ ಇಲಾಖೆಯವರು ಸರ್ವೆ ಕೆಲಸ ಮಾಡಿದ್ದಾರೆ

ಜಮೀನಿಗೆ ನೀರೊದಗುವ ಮತ್ತು 2 ಸಾವಿರ ಕುಟುಂಬದವರಿಗೆ ಅನುಕೂಲವಾಗುವ ಯೋಜನೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೇರೆಲ್ಲೂ ಇಲ್ಲ. ಅಂಥ ಉತ್ತಮವಾದ ಸವಲತ್ತು ಸಿಗುವ ಅವಕಾಶ ಅಲ್ಲಿ ಇದೆ. ಅದಕ್ಕೆ ಸರ್ಕಾರ ನೇರವಾಗಿ ಕೈಗೊಳ್ಳಬೇಕೆಂದು ಕೇಳಿಕೊಂಡು ಅಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಜಿಲ್ಲಾ ಪ್ರತಿನಿಧಿಗಳೊಬ್ಬರಿಗಾದರೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾತನಾಡುವುದಕ್ಕೆ ಅವಕಾಶ ಸಿಗಲಿಲ್ಲವೆಂದು ಕಾಂಗ್ರೆಸ್‌ನವರು ಸಭಾತ್ಯಾಗ ಮಾಡುವುದಾದರೆ ಸಂತೋಷ, ನನ್ನದೇನು ಅಭ್ಯಂತರವಿಲ್ಲ.

ಛೇರ್ಮನ್ : ವಾಟಾಳ್ ನಾಗರಾಜ್ ಅವರೆ, ಬೇಸರ ಮಾಡಿಕೊಳ್ಳಬೇಡಿ. ತಾವು ಹತ್ತು ನಿಮಿಷದಲ್ಲಿ ಮುಗಿಸಬೇಕು. ನಿಮ್ಮ ನಂತರ ಮಂತ್ರಿಗಳು ಉತ್ತರ ಕೊಡಬೇಕಾಗಿದೆ. ನಿಮಗೆ ಹೆಚ್ಚಿಗೆ ಸಮಯ ಕೊಟ್ಟಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರಿಗೆ ಹತ್ತು ನಿಮಿಷ ಬೇಡ, ೬ ನಿಮಿಷ ಸಾಕು. ಎಲ್ಲರಿಗೂ ೫ ನಿಮಿಷ ಕೊಟ್ಟು ಇವರಿಗೆ ಏಕೆ ಹತ್ತು ನಿಮಿಷ?

ಶ್ರೀ ವಾಟಾಳ್ ನಾಗರಾಜ್: ಎಷ್ಟು ಸಯಮ ಹೆಚ್ಚಿಗೆ ಕೊಟ್ಟಿದ್ದೀರಿ?

ಛೇರ್ಮನ್ : ಪೀಠಿಕೆ ಬಿಟ್ಟು ಪಾಯಿಂಟ್ ಬೈ ಪಾಯಿಂಗ್‌ಗೆ ಬನ್ನಿ ,ಸಮಯ ಸರಿಹೋಗುತ್ತದೆ.

ಶ್ರೀ ವಾಟಾಳ್ ನಾಗಾರಜ್ : ಮಾನ್ಯ ಅಧ್ಯಕ್ಷಿಣಿಯವರು ಹೇಗೆ ಮಾತನಾಡಬೇಕು, ಏನು ಮಾತನಾಡಬೇಕೆಂದು ಹೇಳುತ್ತಿದ್ದಾರಲ್ಲ.

ಛೇರ್ಮನ್ : ಸಮಯ ಸದುಪಯೋಗವಾಗುತ್ತದೆಂದು ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಿಕ್ಕಿದ್ದು ದುರುಪಯೋಗ ಎಂದು ತಿಳಿದುಕೊಂಡಿದ್ದೀರಾ?

ಛೇರ್ಮನ್ : ಹೇಗಾದರೂ ಅಂಕಕೊಳ್ಳಿ ಮಾತನಾಡಿ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷಿಣಿಯವರೆ, ನೀವು ಹಿಮಾಲಯ ಪರ್ವತದಂತಹ ಇಲಾಖೆಯನ್ನು ಕೊಟ್ಟು ಹತ್ತು ನಿಮಿಷದಲ್ಲಿ ಮಾತನಾಡಿ ಎಂದರೆ ಹೇಗೆ? ಇದು ಸಮಗ್ರವಾಗಿ ಸಂಪೂರ್ಣ ರಾಮಾಯಣ ಇದ್ದಹಾಗೆ. ಈಗ ಶುರು ಮಾಡಿದರೆ ನಾಳೆ ರಾತ್ರಿ ಮುಗಿಯುವ ಪರಿಸ್ಥಿತಿ. ಹತ್ತು ನಿಮಿಷದಲ್ಲಿ ಮುಗಿಸಿ ಅಂದರೆ ನನಗೆ ಮುಜುಗರವಾಗುತ್ತದೆ. ಆದರೂ ಹತ್ತು ನಿಮಿಷದಲ್ಲಿ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೆ, ನಮ್ಮ ನಾಮಪ್ಪನವರು ಘಟೋದ್ಗಜ ಇದ್ದಹಾಗೆ ಇದ್ದಾರೆ. ಆ ಇಲಾಖೆಗೆ ಅಷ್ಟೇ ಕಾಯಕಲ್ಪ ಕೊಡಬೇಕೆಂದು ಅವರಲ್ಲಿ ವಿನಂತಿ ಮಾಡುತ್ತೇನೆ. ನನಗೆ ವೈಯಕ್ತಿಕವಾಗಿ ಅವರ ಬಗ್ಗೆ ತುಂಬಾ ಅಭಿಮಾನ ಇದೆ.

ಛೇರ್ಮನ್ : ಹೀಗೆಲ್ಲಾ ಮಾತನಾಡಿ ನಿಮ್ಮ ಸಮಯ ಬೇರೆಯವರಿಗೆ ಕೊಡುತ್ತೀರಿ ಅಷ್ಟೆ.

ಶ್ರೀ ಬಿ.ಎಸ್. ಶಿವನಂಜಪ್ಪ : ನಿಮಗೆ ಯಾರ ಬಗ್ಗೆ ಗೌರವ ಇಲ್ಲ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಶಿವನಂಜಪ್ಪನ ಬಗ್ಗೆ ಇಲ್ಲ ಎಂದು ಹೇಳುವುದಕ್ಕೆ ಯಾರೂ ಸಾಧ್ಯವಿಲ್ಲ. ಮಾನ್ಯ ಅಧ್ಯಕ್ಷರೆ ತಮ್ಮ ಬಗ್ಗೆ (ಅಧ್ಯಕ್ಷಪೀಠದಲ್ಲಿದ್ದ ಶ್ರೀಮತಿ ಮೋಟಮ್ಮನವರನ್ನು ಕುರಿತು) ನನಗೆ ಗೌರವ ಇದೆ. ಮಾನ್ಯ ಅಧ್ಯಕ್ಷರೆ, ದಯಮಾಡಿ ತಾವು ಮಧ್ಯೆ ಸ್ವಲ್ಪ ಈ ಗಂಟೆ ಶಬ್ದ ನನ್ನ ಕಿವಿಗೆ ಕೇಳದಹಾಗೆ ಮಾಡಿ, ಬೇಗ ಮುಗಿಸುತ್ತೇನೆ. ಈ ಬೇಡಿಕೆಗಳ ಬಗ್ಗೆ ನಮಗಂತೂ ಒಳ್ಳೆಯ ಅಭಿಪ್ರಾಯ ಇಲ್ಲ. ಇದನ್ನು ನಾವು ಇಲ್ಲಿ ವಿರೋಧಪಕ್ಷದಲ್ಲಿ ಕುಳಿತಿದ್ದೇವೆ ಎಂದು ಸಂಪೂರ್ಣವಾಗಿ ವಿರೋಧ ಮಾಡುತ್ತಿಲ್ಲ ನಾವು. ಪ್ರಾಮಾಣಿಕವಾಗಿ ವಿರೋಧ ಮಾಡುತ್ತಿದ್ದೇವೆ. ನಿನ್ನೆ ಶ್ರೀಮಾನ್ ಬೈರೇಗೌಡರು ಮಾತನಾಡುವಾಗ ಕರ್ನಾಟಕದಲ್ಲಿ ಜಾತಿ ಆಧಾರದ ಮೇಲೆ ಅಭಿವೃದ್ಧಿ ಕಾರ್ಯಗಳು ನಡೆಯುತ್ತವೆ, ಉತ್ತರ ಕರ್ನಾಟಕದಲ್ಲಿ ಬೇರೆ, ಮೈಸೂರೇ ಬೇರೆ ಎಂಬ ವಾದವನ್ನು ಮಂಡಿಸುವುದಕ್ಕೆ ಹೊರಟರು. ನನಗನ್ನಿಸುತ್ತದೆ, ಇದು ಸಮಗ್ರ ಕರ್ನಾಟಕ. ಈ ಸಮಗ್ರ ಕರ್ನಾಟಕದಲ್ಲಿ ನಾವೆಲ್ಲರೂ ಇದ್ದೇವೆ.

ಇದರಲ್ಲಿ ನಾವು ಈ ಭಾಗ ಬೇರೆ ಆ ಭಾಗ ಬೇರೆ ಎನ್ನತಕ್ಕ ಚರ್ಚೆ ಇವತ್ತು ಒಂದು ಅಪಸ್ವರ ಯಾರಿಂದಲೂ ಬರಬಾರದು. ಸಮಗ್ರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಯಾವುದೇ ಸರ್ಕಾರ ಇರಲಿ, ಯಾರೇ ಮುಖ್ಯಮಂತ್ರಿ ಇರಲಿ ನಾಲ್ಕೂವರೆ ಕೋಟಿ ಕನ್ನಡಿಗರ ಹಿತವನ್ನು ಕಾಪಾಡತಕ್ಕ ದೃಷ್ಟಿ ನಮ್ಮ ಸರ್ಕಾರಕ್ಕೆ ಬರಬೇಕು ಎಂದು ನಾನು ಅತ್ಯಂತ ಕಳಕಳಿಯಿಂದ ಈ ಮಾತನ್ನು ಹೇಳುತ್ತೇನೆ. ಕರ್ನಾಟಕ ಏಕೀಕರಣ ಅನೇಕರ ಶ್ರಮದ, ತ್ಯಾಗದ ಬಲಿದಾನದ ಹೋರಾಟದ ಫಲ. ಆದರಿಂದ ಈ ಒಂದು ಏಕೀಕರಣ ಆಯಿತು. ಯಾವುದೋ ಒಂದು ಸಣ್ಣ ಕ್ಷುಲ್ಲಕವಾದ ವಿಚಾರದಲ್ಲಿ ನಮ್ಮ ನಮ್ಮ ಮನಸ್ಸಿನ ಭಾವನೆಗಳನ್ನು ಬದಲಾವಣೆ ಮಾಡತಕ್ಕ ವಿಚಾರಕ್ಕೆ ನಾವು ಹೋಗಬಾರದು ಎಂದು ಈ ಸಭೆಯಲ್ಲಿ ಹೇಳುತ್ತೇನೆ.

ನಾವು ಈ ನೀರಾವರಿ ಯೋಜನೆಯಲ್ಲಾಗಲೀ ಲೋಕೋಪಯೋಗಿ ಇಲಾಖೆಯಲ್ಲಾಗಲೀ ರಸ್ತೆಗಳ ಅಭಿವೃದ್ಧಿಯಲ್ಲಾಗಲೀ ಏನಾಗಿದೆ ಎಂಬುದನ್ನು ಸಮಗ್ರವಾಗಿ ಚಿಂತನೆ ಮಾಡಬೇಕಾದುದು ಅತ್ಯಂತ ಪ್ರಮಾಣಿಕ ಪ್ರಯತ್ನ. ಉತ್ತರ ಕರ್ನಾಟಕದಲ್ಲಿ, ನಿಜ. ನಾನು ಹಳೆಯ ಮೈಸೂರಿನ ಕಡೆ ಇದ್ದ ಅನೇಕ ಉತ್ತರ ಕರ್ನಾಟಕದ ಭಾಗಗಳನ್ನು ನೋಡಿದ್ದೇನೆ. ಅಲ್ಲಿ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ನಾನು ಆ ಕಡೆಯವರಿಗೆ ಅನುಕೂಲ ಮಾಡಿದರಲ್ಲ ಎಂಬ ಭಾವನೆಯಿಂದ ಹೇಳುವುದಕ್ಕೆ ಹೋಗುವುದಿಲ್ಲ. ಈ ಸಂದರ್ಭದಲ್ಲಿ ನಾವು ಕರ್ನಾಟಕವನ್ನು ಬೇರೆ ರೀತಿಯಲ್ಲಿ ಆತ್ಮೀಯತೆಯಿಂದ, ಹೃದಯದಿಂದ ಹೊಂದಿಕೊಂಡಿದ್ದೇವೆ. ಅದೇ ರೀತಿ ಹೊಂದಿಕೊಳ್ಳುವ ರೀತಿಯಲ್ಲಿ ನಾವೆಲ್ಲಾ ಕೆಲಸ ಮಾಡಬೇಕಾಗಿದೆ. ಯಾವುದೇ ಸರ್ಕಾರ ಬಂದರೂ ಸಮಗ್ರ ಕರ್ನಾಟಕದ ಹಿತವನ್ನು ಕಾಪಾಡುವ ಬಗ್ಗೆ ನಾವು ಚಿಂತನೆ ಮಾಡಬೇಕಾಗಿದೆ. 2 ಸಾವಿರದ ವರ್ಷಕ್ಕೆ ಕೃಷ್ಣಾ ಯೋಜನೆಗಳು ಮುಗಿಯಬೇಕು. ಆ ಸಮಗ್ರವಾದಂಥ ನೀರನ್ನು ನಾವು ಉಪಯೋಗಿಸಿಕೊಳ್ಳಬೇಕು. 2000 ವರ್ಷ ಬಹಳ ದೂರದಲ್ಲಿ ಏನೂ ಇಲ್ಲ, ಅತೀ ವೇಗವಾಗಿ ಬರುತ್ತಿದೆ. ಈ ಬಗ್ಗೆ ನಮ್ಮ ನಿರ್ಧಾರಗಳಲ್ಲಿ ಸರ್ಕಾರದ ನಿರ್ಧಾರಗಳಲ್ಲಿ ಪ್ರಾಮಾಣಿಕತೆ ಇರಬೇಕು. ಈ ಸದನದಲ್ಲಿ ನಿಂತು ನಾವು ಹಣವನ್ನು ಖರ್ಚು ಮಾಡುತ್ತೇವೆ, ಏನು ಬೇಕಾದರೂ ಮಾಡುತ್ತೇವೆ ಎಂದು ಹೇಳುವ ಬದಲು ಒಂದು ಪ್ರಾಮಾಣಿಕ ಪ್ರಯತ್ನ ಏನೂ, ಎಷ್ಟು ಹಣವನ್ನು ಖರ್ಚು ಮಾಡಿದರೆ ಸಾಧ್ಯ ಎಂಬು ಬಗ್ಗೆ ಪ್ರಾಮಾಣಿಕ ಚಿಂತನೆ ನಮ್ಮಲ್ಲಿ ಇವತ್ತು ಆಗಬೇಕಾಗಿದೆ. ತಮಗೆ ಹೇಳುತ್ತೇನೆ, ನಾಗಾರ್ಜುನ ಸಾಗರ ಕಟ್ಟುವಾಗ ಆಂಧ್ರದಲ್ಲಿ ನಾಲ್ಕನೇ ದರ್ಜೆ ಕೆಲಸಗಾರರೂ ಸಹ ನಮ್ಮ ಸಂಬಳವನ್ನು ವರ್ಷಗಟ್ಟಲೆ ಬೇಕಾದರೂ ಬಿಟ್ಟು

ನಮ್ಮ ಕನ್ನಡಿಗರು ಮಾಡಬೇಕಾಗಿದೆ. ಕರ್ನಾಟಕದ ಜನ ಇವತ್ತು ನಮ್ಮ ಸಂಬಳವನ್ನು ಬಿಟ್ಟುಕೊಡಬೇಕು. ಆ ಒಂದು ಛಲ ನಮ್ಮ ರಾಜ್ಯದ ಜನಕ್ಕೆ ಬರಬೇಕಾಗಿದೆ.

ಬರೀ ಕೇವಲ ಸರ್ಕಾರಕ್ಕೆ ಅಥವಾ ಯಾವುದೋ ಮಂತ್ರಿಗಳಿಗೆ ಅಲ್ಲ, ಸಮಗ್ರವಾಗಿ ಇಡೀ ರಾಜ್ಯದ ಜನತೆಗೆ ಇವತ್ತು ಕೃಷ್ಣಾ ಯೋಜನೆಯನ್ನು ಮುಗಿಸಬೇಕಾದರೆ ಏನು ಕ್ರಮವನ್ನು ಕೈಗೊಳ್ಳಬೇಕು ಎಂಬ ಬಗ್ಗೆ ಪ್ರಾಮಾಣಿಕವಾದ ಚಿಂತನೆ ಮಾಡಬೇಕಾಗಿದೆ. ಇದರ ಜೊತೆಗೆ ಶ್ರೀಮಾನ್ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಮೈಸೂರುನಲ್ಲಿ ಆಂಧ್ರಪ್ರದೇಶದ ಮುಖ್ಯಮಂತ್ರಿ ಶ್ರೀ ಚೆನ್ನಾರೆಡ್ಡಿಯವರು, ಮಹಾರಾಷ್ಟ್ರದ ಮುಖ್ಯಮಂತ್ರಿಯವರು ಮೂರು ಜನರೂ ಸೇರಿ ನಾವು 2000 ವರ್ಷದ ಒಳಗೆ ನಾವು ಏನು ಮಾಡಬೇಕು, 2000 ಇಸವಿ ಆದಮೇಲೆ ನಾವು ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಏನು ಮಾಡಬೇಕೆನ್ನುವ ಚಿಂತನೆ, ಪ್ರಾಮಾಣಿಕವಾದ ಪ್ರಯತ್ನವನ್ನು ಮೈಸೂರಿನಲ್ಲಿ ಪ್ರಾರಂಭವಾಯಿತು. ಅದಾದನಂತರ ತಿರುಪತಿಯಲ್ಲಿ ಸಭೆ ನಡೆಯಬೇಕಂಬ ಯೋಚನೆ ಇತ್ತು. ಅಲ್ಲಿ ನಡೆಯಿತು. ಮೊದಲು ತಿರುಪತಿ ಹಾಗೂ ನಂತರ ಮೈಸೂರಿನಲ್ಲಿ ಎಂದು ಕಾಣುತ್ತದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನನಗೆ ತಿಳಿದು ಪ್ರಕಾರ ಮೊದಲು ತಿರುಪತಿಯಲ್ಲಿ ಅನಂತರ ಮೈಸೂರಿನಲ್ಲಿ.

ಶ್ರೀ ವಾಟಾಳ್ ನಾಗರಾಜ್ : ಇರಲಿ ಬಿಡಿ. ನಾನು ತಮ್ಮಲ್ಲಿ ಕಳಕಳಿ ಮಾಡುವುದು ಏನೆಂದರೆ ಇದು ಬಹಳ ಗಂಭೀರವಾದ ಪ್ರಶ್ನೆ.

ಶ್ರೀ ಹೆಚ್. ಏಕಾಂತಯ್ಯ : ಮೊದಲು ತಿರುಪತಿ ಆಮೇಲೆ ಮೈಸೂರು.

ಶ್ರೀ ವಾಟಾಳ್ ನಾಗರಾಜ್ : ಅದು ಸರಿ. ಇನ್ನು ಮುಂದೇನೂ ತಿರುಪತಿ ಆಗಬಾರದು. ತಿರುಪತಿ ಎನ್ನುವುದು ಬಹಳ ಪವಿತ್ರವಾದ ಸ್ಥಳ. ಅದನ್ನು ಬೇರೆ ಅಪಾರ್ಥದಲ್ಲಿ ನಾವು ಮಾತನಾಡತಕ್ಕದ್ದಲ್ಲ. ಆ ಸ್ಥಳದ ಬಗ್ಗೆ ನಮಗೆ ಗೌರವ ಇದೆ. ನಾವು ಇವತ್ತು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಈಗಿನ ಮುಖ್ಯಮಂತ್ರಿಗಳು ಈ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೋ ನಮಗೆ ಗೊತ್ತಿಲ್ಲ. ತಾವು, ಆಂಧ್ರ ಹಾಗೂ ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಜೊತೆ ಮಾತುಕತೆ ನಡೆಸಿದ್ದೀರಾ? ಈ ಬಗ್ಗೆ ಮುಖ್ಯಮಂತ್ರಿಗಳ ನಿಲುವು ಏನು ? ಯಾವತ್ತು ಎಲ್ಲಿ ಸೇರುತ್ತಾರೆಂದು ನಮಗೆ ಗೊತ್ತಿಲ್ಲ. ಇನ್ನು 8-10 ದಿನಗಳಲ್ಲಿ ಈ ಸದನ ಮುಗಿಯುತ್ತದೆ. ಯಾವ ವಿಚಾರವೂ ಗೊತ್ತಿಲ್ಲ. ಆದುದರಿಂದ ತಾವು ಪ್ರಾಮಾಣಿಕವಾಗಿ ಇದರ ಬಗ್ಗೆ ಒಂದು ಸಭೆ ಸೇರುವುದಕ್ಕೆ ಮತ್ತು 2 ಸಾವಿರ ವರ್ಷದ ನಂತರ ನಮಗೆ ಏನು ಅಪಾಯ ಒದಗುತ್ತದೆನ್ನುವ ಚಿಂತನೆ ಇದೆ, ಆ ಚಿಂತನೆಯ ಒಂದು ರೂಪದಲ್ಲಿ ಆ ಒಂದು ಸೂತ್ರದ ಆಧಾರದ ಮೇಲೆ ನಾವು ಏನಾದರೂ ಒಂದು ಹೊಸ ಯೋಚನೆಯನ್ನು ನಿಮ್ಮ ಮಾತುಕತೆಯ ಫಲಶೃತಿಯಿಂದ ಪಡೆದುಕೊಳ್ಳುರುದಾದರೆ ನಮಗೆ ನಿಜಕ್ಕೂ ಕರ್ನಾಟಕದ ಹಿತದೃಷ್ಟಿಯಿಂದ ಅನುಕೂಲವಾಗುತ್ತದೆಂದು ನಾನು ಅಂದುಕೊಂಡಿದ್ದೇನೆ. ದಯಮಾಡಿ ಮೂರೂ ಜನ ಮುಖ್ಯಮಂತ್ರಿಗಳು ಸೇರತಕ್ಕ ಕಾಲ ಬಹಳ ಬೇಗ ಬರಲಿ ಎಂದು ಕಳಕಳಿಯಿಂದ ಹೇಳುತ್ತಿದ್ದೇನೆ. ಕಾವೇರಿ ಬಗ್ಗೆ ಈ ಸಭೆಯಲ್ಲಿ ನಡೆದದ್ದು ತಮಗೇ ಗೊತ್ತಿದೆ. ಅಧ್ಯಕ್ಷರೇ, ಆ ದಿನ ನ್ಯಾಯಮಂಡಲಿಯ ಬಗ್ಗೆ ನಾನೊಬ್ಬನೇ ಇಲ್ಲ ವಿರೋಧ ಮಾಡಿದೆ. ಆಗ ಮುಖ್ಯಮಂತ್ರಿಗಳಾಗಿದ್ದ ವೀರೇಂದ್ರ ಪಾಟೀಲರು ಒಂದು ಮಾತನ್ನು ಹೇಳುತ್ತಿದ್ದರು. ಯಾಕನ್ನು ಬೇಕಾದರೂ ಒಪ್ಪಿಸಬಹುದು

ಚಳುವಳಿ, ಚಳುವಳಿ ಎಂದು ಹೇಳುತ್ತಿರುತ್ತಾರೆ, ಅವರನ್ನು ಒಪ್ಪಿಸುವುದಕ್ಕೆ ಕಷ್ಟ ಎಂದು. ಅವರು ಹಿರಿಯರು. ಅವರ ಬಗ್ಗೆ ನನಗೆ ಬಹಳ ಗೌರವ ಇದೆ. ರಾಜ್ಯದ ಬಗ್ಗೆ ಚಿಂತನೆ ಕಳಕಳಿ ಇತ್ತು. ಅದರ ಬಗ್ಗೆ ನನ್ನ ತಕರಾರು ಇಲ್ಲ. ನಾನು ತಮಗೆ ಏನು ಹೇಳುತ್ತಿದ್ದೇನೆಂದರೆ, ಯಾವುದೇ ನ್ಯಾಯ ಮಂಡಲಿಯಾಗಲೀ, ಯಾವುದೇ ತೀರ್ಪಾಗಲೀ ನಮ್ಮ ಹಕ್ಕನ್ನು ಕಸಿದುಕೊಳ್ಳತಕ್ಕ ನಿರ್ಧಾರಕ್ಕೆ ಬರುವುದಾದರೆ ಕರ್ನಾಟಕದಲ್ಲಿ ರಕ್ತಪಾತವಾದರೂ ಚಿಂತೆ ಇಲ್ಲ, ಒಂದು ಹನಿ ನೀರನ್ನು ಬೇರೆಯವರಿಗೆ ಬಿಡತಕ್ಕ ಪ್ರಶ್ನೆ ಇಲ್ಲವೇ ಇಲ್ಲ. ನೀವು ಯಾವ ರೀತಿ ಬೇಕಾದರೂ ವಾದ ಮಾಡಿ, ಎಲ್ಲಿಂದಾದರೂ ವಾದ ಮಾಡಿ. ಈ ಸಭೆಯಲ್ಲಿ ನಾನು ನ್ಯಾಯಮಂಡಲಿ ಬೇಡ ಎಂದು ಹೇಳಿದೆ.

ಇವತ್ತು ಬಂದಿರುವ ಮಧ್ಯಂತರ ತೀರ್ಪು ನಾನು ಕನ್ನಡಿಗರ ಮರಣ ಶಾಸನವಾಗಿದೆ. ಮರಣ ಶಾಸನಕ್ಕೆ ನ್ಯಾಯಮಂಡಲಿಯವರು ಸಹಿ ಹಾಕಿದ್ದಾರೆ. ಈ ಒಂದು ದೃಷ್ಟಿಯಿಂದ ಹೇಳುತ್ತಿದ್ದೇನೆ. ನಾವು ಜನ, ಕಾವೇರಿ ಅಂಚಿನಲ್ಲಿ ಇರತಕ್ಕ ಜನ ಒಂದು ತೊಟ್ಟು ನೀರನ್ನು ಬಿಡುವುದಕ್ಕೆ ಸಿದ್ಧರಿಲ್ಲ. ಇದರ ಬಗ್ಗೆ ತೀವ್ರ ನಿರಂತರವಾದ ಚಳುವಳಿ ನಡೆದರೂ ಚಿಂತೆ ಇಲ್ಲ. ಅದಕ್ಕೆ ನಾವು ತಯಾರಾಗಿದ್ದೇವೆನ್ನುವ ಮಾತನ್ನು ಈ ಮೂಲಕ ಹೇಳುತ್ತಿದ್ದೇನೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಮಧ್ಯಸ್ಥಿಕೆ ವಹಿಸಿ ಕರ್ನಾಟಕ ಮತ್ತು ತಮಿಳುನಾಡಿನ ಇಬ್ಬರು ಮುಖ್ಯಮಂತ್ರಿಗಳನ್ನು ಕೂರಿಸಿ ಒಂದು ಒಳ್ಳೆಯ ವಾತಾವರಣದಲ್ಲಿ ಇದನ್ನು ತೀರ್ಮಾನ ಮಾಡಬೇಕೆಂದು ತಮ್ಮ ಮೂಲಕ ಕೇಳುತ್ತಿದ್ದೇನೆ. ಈಗಿನ ಮುಖ್ಯಮಂತ್ರಿಗಳೂ ಸಹಾ ಹೇಳಿದ್ದಾರೆ. ಇವತ್ತೂ ಕೂಡ ತಮಿಳುನಾಡಿನ ಜೊತೆ ಮಾತುಕತೆಯಾಡುವುದಕ್ಕೆ ಸಿದ್ಧರಿದ್ದೇವೆಂದು ಹೇಳುತ್ತಿದ್ದಾರೆ ಸಿದ್ಧ ಎಂದು ಹೇಳಿಕೆ ಕೊಡುವುದು ಅಲ್ಲ. ಇವರು ತಮಿಳುನಾಡಿನ ಮುಖ್ಯಮಂತ್ರಿಗಳ ಜೊತೆ ಸಂಪರ್ಕ ಮಾಡಿದ್ದಾರೆಯೇ? ಮಾತುಕತೆ ಆಡಿದ್ದಾರೆಯೇ? ಇದು ಅತ್ಯಂತ ಮುಖ್ಯ. ಅವರ ಜೊತೆ ಮಾತನಾಡಿ ಅವರು ಏನು ಹೇಳುತ್ತಾರೆಂದು ಕೇಳಿ. ಇವರಿಬ್ಬರ ನಡುವೆ ಆಗಿಲ್ಲ ಎಂದರೆ ಕೇಂದ್ರ ಸರ್ಕಾರಕ್ಕೆ ಉಳಿದಿರತಕ್ಕದ್ದು ಪ್ರಧಾನಮಂತ್ರಿಯವರು ಈ ಬಗ್ಗೆ ಮಧ್ಯೆ ಪ್ರವೇಶ ಮಾಡಿ ನಮ್ಮ ಈ ಒಂದು ಹಕ್ಕಿನ ರಕ್ಷಣೆಗೆ ನ್ಯಾಯ ದೊರಕಿಸಿ ಕೊಡುವುದಕ್ಕೆ ಮುಖ್ಯಮಂತ್ರಿಗಳು ಏನು ಈಗ ಸರ್ವ ಪಕ್ಷದ ನಿಯೋಗ ಹೋಗುತ್ತಿದ್ದೇವೆ.

ಈ ನಿಯೋಗದಲ್ಲೂ ಕೂಡ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡತಕ್ಕ ಒಂದು ಕಾರ್ಯಕ್ರಮವನ್ನು ಕೂಡ ನಮ್ಮ ನಿಯೋಗದಲ್ಲಿ ಸೇರಿಸಬೇಕೆಂದು ನಾನು ಹೇಳುತ್ತಿದ್ದೇನೆ. ಈ ಸಭೆಯ ಮೂಲಕ ಈ ದೇಶದ ಪ್ರಧಾನಮಂತ್ರಿಯವರನ್ನು ಪ್ರಾರ್ಥನೆ ಮಾಡಿ ಒತ್ತಾಯ ಮಾಡುತ್ತಿದ್ದೇನೆ ನಮಗೆ ಕಾವೇರಿ ಟ್ರಿಬ್ಯೂನಲ್ ಮಧ್ಯಂತರ ಆಜ್ಞೆಯಿಂದ ಅನ್ಯಾಯವಾಗಿದೆ. ಈ ಅನ್ಯಾಯವನ್ನು ಸರಿಪಡಿಸುವುದಕ್ಕೆ ನಾವು ಪ್ರಧಾನಮಂತ್ರಿಗಳು ಒಬ್ಬರೇ ಅಲ್ಲ, ದೆಹಲಿಯಲ್ಲಿರತಕ್ಕ ರಾಷ್ಟ್ರದ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರುಗಳಿಗೆ ಈ ಸಭೆಯ ಮೂಲಕ ಕೈಮುಗಿದು ಪ್ರಾರ್ಥನೆ ಮಾಡುತ್ತಿದ್ದೇನೆ. ನಮಗೆ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸಬೇಕೆಂದು ಕಾವೇರಿಯ ಬಗ್ಗೆ ಏನು ಅನ್ಯಾಯವಾಗಿದೆ ಎನ್ನುವ ಪರಿಸ್ಥಿತಿಯನ್ನು ಅರಿವು ಮೂಡಿಸುವುದಕ್ಕೆ ಸರಿಯಾದ ವ್ಯವಸ್ಥೆಯನ್ನು ನೀವು ಮಾಡುತ್ತಿಲ್ಲ. ಇದರ ಬಗ್ಗೆ ನಾನು ತಮಗೆ ಪ್ರಮುಖವಾಗಿ ಹೇಳುತ್ತಿದ್ದೇನೆ. ಕಾವೇರಿಯ ವಿಚಾರದಲ್ಲಿ ಒಂದು ಕಿರು ಹೊತ್ತಿಗೆಯನ್ನು ಮುದ್ರಣ ಮಾಡಿ ಏನು ಅನ್ಯಾಯ ನಡೆದಿದೆ. ನಮ್ಮ ಪರಿಸ್ಥಿತಿ ಏನು? ನಾವು ಎಷ್ಟು ವ್ಯವಸಾಯ ಮಾಡಿದ್ದೇವೆ, ತಮಿಳುನಾಡಿನವರು ಎಷ್ಟು ವ್ಯವಸಾಯ ಮಾಡಿದ್ದಾರೆ, ನಮಗೆ ಎಷ್ಟು ಅನ್ಯಾಯವಾಗಿದೆಯೆಂದು ಹೇಳತಕ್ಕ

ಪಕ್ಷಗಳ ಮುಖಂಡರುಗಳಿಗೆ ಕೊಡುವ ಮೂಲಕ, ತಿಳಿಸಿ, ನಮ್ಮ ಹಕ್ಕು ಏನಿದೆ ಎನ್ನುವುದನ್ನು ತಿಳಿಸುವುದರಲ್ಲಿ ನಾವು ವಿಫಲರಾಗಿದ್ದೇವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರು ಕಾವೇರಿ ನದಿ ನೀರಿನ ವಿಚಾರದಲ್ಲಿ ಬಹಳ ಡಿಟೇಲ್ ಆಗಿ ಹೋಗುವುದು ಸರಿಯಲ್ಲವೆಂದು ನನ್ನ ಭಾವನೆ. ಮಾನ್ಯ ವಾಟಾಳ್‌ನಾಗರಾಜ್‌ರವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ತಾವು ಅದನ್ನು ನಿಲ್ಲಿಸಬೇಕೆಂದು ನಾನು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನನಗೆ ಗೊತ್ತಿಲ್ಲವೆ ? ನನಗೆ ಅಷ್ಟು ಜವಾಬ್ದಾರಿ ಇಲ್ಲವೆ? ಕಾವೇರಿ ನದಿ ನೀರಿನ ಬಗ್ಗೆ ನನಗೆ ಎಷ್ಟು ಜವಾಬ್ದಾರಿ ಇದೆಯೆಂಬುದು ಮಾನ್ಯ ಮಂತ್ರಿಗಳಾದ ಮಲ್ಲಾರಿಗೌಡರಿಗೆ ಗೊತ್ತಿದೆ.

ಛೇರ್ಮನ್ : ಮಾನ್ಯ ವಾಟಾಳ್ ನಾಗರಾಜ್‌ರವರೆ, ತಾವು ಕಾವೇರಿಯ ಬಗ್ಗೆ ಮಾತನಾಡುವುದಾದರೆ ಸರಿ. ಈಗಾಗಲೇ ತಮ್ಮ ಸರದಿಯಲ್ಲಿ 10 ನಿಮಿಷಗಳು ಮುಗಿಯುತ್ತಾ ಬಂತು.

ಶ್ರೀ ವಾಟಾಳ್ ನಾಗರಾಜ್ : ಆಯಿತು, ಮುಗಿಯಲಿ, ನಾನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುತ್ತಿದ್ದೇನೆ, ಈ ಬಗ್ಗೆ ಅನೇಕರು ಕೇಂದ್ರದಲ್ಲಿ ಅದರಲ್ಲೂ ದೆಹಲಿಗೆ ಬರತಕ್ಕ ಪತ್ರಕರ್ತರು ಕರ್ನಾಟಕಕ್ಕೆ ಏನೋ ಅನ್ಯಾಯ ಮಾಡಿರಬೇಕು, ಕೇಂದ್ರದಲ್ಲಿರತಕ್ಕ ರಾಜಕಾರಣಗಳಿಗೂ ಏನೋ ಅನ್ಯಾಯ ನಡೆದಿರಬೇಕು ಎನ್ನುವ ಭಾವನೆ ಬಂದಿರತಕ್ಕದ್ದು ತಮಗೂ ಗೊತ್ತಿದೆ, ಅದು ರಾಜ್ಯಸರ್ಕಾರಕ್ಕೂ ಗೊತ್ತಿದೆ, ಆದ್ದರಿಂದ ಈ ಭಾವನೆಯನ್ನು ಹೋಗಲಾಡಿಸುವುದಕ್ಕೆ ಪ್ರಾಮಾಣಿಕವಾಗಿ ನಾವೇನಿದ್ದೇವೆ. ನಮಗೆ ಎಷ್ಟು ನ್ಯಾಯ ದೊರಕಬೇಕು ಎನ್ನುವ ಬಗ್ಗೆ ಚಿಂತನೆಯಾಗಬೇಕು. ಅದರ ಬಗ್ಗೆ ಒಂದು ಕಿರುಹೊತ್ತಿಗೆ ಜೊತೆಗೆ ಸಮರ್ಥರ ಒಂದು ನಿಯೋಗ ದೆಹಲಿಯಲ್ಲಿ ಕುಳಿತು ಅಲ್ಲಿ ಎಲ್ಲರನ್ನು ಭೇಟಿ ಮಾಡಿ ನಮ್ಮ ವಾದ ಏನು? ನಮ್ಮ ಪರಿಸ್ಥಿತಿ ಏನು ಎಂಬುದನ್ನು ಚಿಂತನೆ ಮಾಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರಕ್ಕೆ ತಿಳಿಸುತ್ತಿದ್ದೇನೆ.

ಇನ್ನು ಅನೇಕ ಯೋಜನೆಗಳಿಗೆ ಜನ ಅಡಿಗಲ್ಲುಗಳನ್ನು ಹಾಕಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ವರುಣಾ ನಾಲೆ ಇದೆ. ಈ ವರುಣಾ ನಾಲೆಗೆ ವರ್ಷಕ್ಕೆ ಸ್ವಲ್ಪ ಸ್ವಲ್ಪ ಭಿಕ್ಷೆ ಕೊಟ್ಟಹಾಗೆ ಹಣವನ್ನು ಕೊಡುತ್ತಾರೆ. ಈ ತರಹ ಹಣವನ್ನು ಕೊಟ್ಟರೆ ಅದು ಯಾವ ಕಾಲಕ್ಕೆ ಮುಗಿಯುವುದು? ಇದನ್ನು ಯಾವತ್ತು ಮುಗಿಸಬೇಕೆಂದು ಇದ್ದೀರಿ? ವರುಣಾ ನಾಲೆಯ ಬಗ್ಗೆ ಒಂದು ಚಿಂತನೆ ಬೇಡವೆ ? ಯಾವತ್ತು ಮುಗಿಸುತ್ತೀರಿ ಎನ್ನುವ ಬಗ್ಗೆ ಒಂದು ಕಾಲಮಿತಿಯನ್ನು ಮಾಡಿರಿ. ದಿವಂಗತ ದೇವರಾಜ ಅರಸ್‌ರವರನ್ನು ಇವತ್ತು ಈ ಸಭೆಯಲ್ಲಿ ನೆನಸಿಕೊಳ್ಳಬೇಕು. ಅವರ ಪ್ರಮಾಣಿಕ ಪ್ರಯತ್ನದಿಂದ ವರುಣಾ ನಾಲೆ ಆಗಿದೆ. ವರುಣಾ ನಾಲೆಯ ಕೆಲಸವನ್ನು ಮಾಡುತ್ತಿಲ್ಲ. ಕಪಿಲ ಎರಡನೆಯ ಹಂತದ ಕೆಲಸಕ್ಕೆ ರಾಮಕೃಷ್ಣ ಹೆಗಡೆಯವರು ಅಲ್ಲಿ ಹೋಗಿ ಅಡಿಗಲ್ಲು ಹಾಕಿ ಬಂದರು. ಇವತ್ತಿನವರೆಗೂ ಆ ಅಡಿಗಲ್ಲು ಎಲ್ಲಿ ಹೋಯಿತೋ ಗೊತ್ತಿಲ್ಲ. ಕಪಿಲ 2ನೇ ಹಂತದ ಕೆಲಸ ಏನಾಯಿತು ಎಂಬುದು ಸಹ ಗೊತ್ತಿಲ್ಲ, ಅದರ ಬಗ್ಗೆ ಹಣವನ್ನು ಸಹ ಇಟ್ಟಿಲ್ಲ. ಇದೇನು ಬೇಜವಾಬ್ದಾರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾವು ಹಾಕಿದ ಅಡಿಗಲ್ಲುಗಳನ್ನು ಕಿತ್ತುಹಾಕುವ ಒಂದು ಕಾರ್ಯಕ್ರಮವನ್ನು ಇವರು ಹಾಕಿಕೊಂಡಿದ್ದಾರೆ. ಅಡಿಗಲ್ಲು ಎಲ್ಲಿ ಹೋಯಿತು [illegible]

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಸಿಂಧ್ಯಾರವರೇ ನಿಮ್ಮ ಕಾಲದಲ್ಲಿ 150 ಅಡಿಗಲ್ಲುಗಳನ್ನು ಮಾನ್ಯ ದೇವೇಗೌಡರು ಹಾಕಿದರು. ತಾವು ಐದು ವರ್ಷಗಳಲ್ಲಿ ಬರೀ ಅಡಿಗಲ್ಲು ಹಾಕುವ ಕೆಲಸ ಮಾಡಿದಿರಿ. ಅಡಿಗಲ್ಲು ಹಾಕಿದ ಮೇಲೆ ಅದಕ್ಕೆ ರೊಕ್ಕ ಕೊಡಬೇಕು. ನಿಮ್ಮ ರಾಜ್ಯಭಾರದಲ್ಲಿ ಏನು ಅಡಿಗಲ್ಲುಗಳನ್ನು ಹಾಕಿದ್ದೀರಿ ಅದರಿಂದ ಒಂದು ಭವನವನ್ನೆ ಕಟ್ಟಿಸಬಹುದು ಅಷ್ಟು ಅಡಿಗಲ್ಲುಗಳನ್ನು ಹಾಕಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ನಾವು ಹಾಕುವ ಶಂಕುಸ್ಥಾಪನಾ ಅಡಿಗಲ್ಲುಗಳಿಗೆ ಮರ್ಯಾದೆ ಬರಬೇಕು. ಇಲ್ಲದಿದ್ದರೆ ಅಡಿಗಲ್ಲುಗಳನ್ನು ಹಾಕತಕ್ಕ ಕೆಲಸಕ್ಕೆ ಹೋಗಬಾರದು. ಈ ರಾಜ್ಯದಲ್ಲಿ ಬಂದ ಸರ್ಕಾರಗಳೆಲ್ಲವೂ ಅಡಿಗಲ್ಲುಗಳನ್ನು ಹಾಕಿರತಕ್ಕದ್ದು ಎಷ್ಟು? ಯಾವ್ಯಾವ ಯೋಜನೆಗೆ ಯಾವ್ಯಾವ ತಾಲ್ಲೂಕಿನಲ್ಲಿ ಯಾವ್ಯಾವ ಜಿಲ್ಲೆಯಲ್ಲಿ ಅಡಿಗಲ್ಲುಗಳನ್ನು ಏತಕ್ಕೆ ಹಾಕಿದ್ದಾರೆಂಬುದನ್ನು ತನಿಖೆ ಮಾಡಿಸುವುದಕ್ಕೆ ಒಂದು ಆಯೋಗವನ್ನು ರಚನೆ ಮಾಡಬೇಕಾಗುತ್ತದೆ. ಅಡಿಗಲ್ಲುಗಳು ಎಲ್ಲೆಲ್ಲಿ ಇವೆ ಅವುಗಳನ್ನೆಲ್ಲ ಒಂದು ಕಡೆ ಕಿತ್ತು ಹಾಕಿದರೆ ಅದು ಪರ್ವತಾಕಾರವಾಗಿ ಬೆಳೆಯುತ್ತದೆ.

12.40 ಪಿ.ಎಂ.

ಆದ್ದರಿಂದ ತಮಗೆ ನಾನು ಹೇಳುತ್ತೇನೆ ಏನೆಂದರೆ, ಈ ಶಂಕುಸ್ಥಾಪನಾ ಎನ್ನುವುದಕ್ಕಾದರೂ ಒಂದು ಗೌರವ ಬೇಕು. ಈ ಅಡಿಗಲ್ಲುಗಳನ್ನು ಹಾಕಬೇಕಾದರೆ ನಾವು ಚಿಂತನೆ ಮಾಡಬೇಕು. ಈ ಯೋಜನೆ ಏನು, ಎಷ್ಟು ಹಣ ಇಟ್ಟಿದ್ದೇವೆ, ಇದಕ್ಕೆ ಎಷ್ಟು ಹಣ ಖರ್ಚು ಮಾಡುತ್ತೇವೆ. ಈ ವರ್ಷ ಎಷ್ಟು, ಮುಂದಿನ ವರ್ಷ ಎಷ್ಟು. ಇದು ಯಾವುದೂ ಇಲ್ಲದೆ ಯಾರದೋ ಒತ್ತಡಕ್ಕೆ ಮಣಿದು ಅಡಿಗಲ್ಲು ಹಾಕಿಬಿಡುವುದು ಎಂದರೆ ಅದು ನಾಯಿನರಿಗಳಿಗೆ ವಾಸಸ್ಥಾನ ಆಗಬಹುದೇ ಹೊರತು ಅನೇಕ ಅಡಿಗಲ್ಲುಗಳು, ನೂರಕ್ಕೆ ಎಂಭತ್ತು ಭಾಗದಷ್ಟು ಇವತ್ತು ಈ ಅಡಿಗಲ್ಲುಗಳನ್ನು ನೆಲಕಚ್ಚಿವೆ. ಈ ಅಡಿಗಲ್ಲುಗಳ ಪರಿಸ್ಥಿತಿ ಹೀಗಿದೆ.

ಕಪಿಲಾ ಎರಡನೇ ಹಂತದ ಬಗ್ಗೆ ಸರ್ಕಾರ ತೀವ್ರವಾದ ಕಳಕಳಿಯನ್ನು ಇಟ್ಟುಕೊಳ್ಳಬೇಕು. ಸರ್ಕಾರ ಇದಕ್ಕೆ ಹಣ ಇಡಬೇಕು. ಆ ಭಾಗದ ಗುಂಡ್ಲುಪೇಟೆ, ಚಾಮರಾಜನಗರ, ನಂಜನಗೂಡು ಜನ ಇದ್ದಾರೆ. ಪಾಪ ಈ ವಿಚಾರದಲ್ಲಿ ಅವರು ನಮ್ಮ ಜೊತೆ ಸೇರುತ್ತಾರೆ. ಈ ವಿಚಾರದಲ್ಲಿ ಹಿಂದೆ ಬೀಳುವುದಿಲ್ಲ, ಅವರು ಎಷ್ಟು ಜೋರು ಜೋರಾಗಿ ಕೂಗಿದ್ದಾರೆ, ಇವತ್ತು ಏಕೆ ಹಿಂದೆ ಬೀಳುತ್ತಾರೆ? ಅವರು ಪ್ರಾಮಾಣಿಕವಾಗಿ ನಮ್ಮ ಜೊತೆ ಸೇರುತ್ತಾರೆ. ಅವರು ಎಷ್ಟು ದಿವಸಗಳಿಂದ ಈ ಮಾತನ್ನು ಹೇಳಿದ್ದಾರೆ. ಈ ಯೋಜನೆ ಏನಾಯಿತು ಇದರ ಬಗ್ಗೆ ಏನು ಮಾಡಬೇಕು ಎಂದು ಚಿಂತನೆ ಮಾಡಿ ಕಪಿಲಾ 2ನೇ ಹಂತ ಬರುವುದರಿಂದ ಬೆಂಗಾಲಾಗಿರತಕ್ಕಂಥ ಗುಂಡ್ಲುಪೇಟೆ, ಚಾಮರಾಜನಗರ, ನಂಜನಗೂಡು ಈ ಪ್ರದೇಶಕ್ಕೆ ಸ್ವಲ್ಪವಾದರೂ ನೀರಿನ ತಂಪನ್ನು ಕೊಡಿ ಎಂದು ನಾನು ಸರ್ಕಾರವನ್ನು ತಮ್ಮ ಮೂಲಕ ಬೇಡುತ್ತಿದ್ದೇನೆ. ಬಡತನದಿಂದ ಇಲ್ಲಿನ ಜನರು ಕಾಡಿನಲ್ಲಿ ಇದ್ದ ಹಾಗೆ ಇದ್ದಾರೆ. ಆದ್ದರಿಂದ ಸರ್ಕಾರ ಕೂಡಲೇ, ಈ ಸಾರಿಯಾದರೂ ಎಷ್ಟಾಗುತ್ತೋ ಅಷ್ಟು ಹಣವನ್ನು ಕೊಡಬೇಕು. ಮಾನ್ಯ ಪುಟ್ಟಸ್ವಾಮಿಗೌಡರು ಹೇಳಿದ್ದರು. ತಮ್ಮನ್ನು ಕೂಡ ನಾನು ಪ್ರಾರ್ಥನೆ ಮಾಡುತ್ತಿದ್ದೇನೆ. ತಾವು ಇದರ ಬಗ್ಗೆ ಚಿಂತನೆ ಮಾಡಬೇಕು.

ಛೇರ್ಮನ್ : 15 ನಿಮಿಷ ಆಯಿತು. ಬೇಗ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್ : ರೈಲ್ವೆಗೆ ನೇರವಾದ ಸಂಬಂಧ ಇಲ್ಲದೇ ಇದ್ದರೂ ಕೇಂದ್ರದ ರೈಲ್ವೆ ಮಂಡಳಿಗೆ ರೈಲ್ವೆ ಇಲಾಖೆಗೆ ನಮ್ಮ ಸಹಕಾರ ಇದ್ದೇ ಇದೆ. ನಮ್ಮ ಬೆಂಗಳೂರು ನಗರಕ್ಕೆ ವರ್ತುಲ ರೈಲು ಬೇಕು ಎಂದರೆ, ನೀವು ಹಣ

ಕೊಟ್ಟರೆ, ನಾವು ರೈಲು ಕೊಡುತ್ತೇವೆ ಎಂದು ಹೇಳ್ತಾರಲ್ಲ, ಇದು ಎಂಥ ಪರಿಸ್ಥಿತಿ? ಬೊಂಬಾಯಿಗೆ ಹೀಗೆ ಮಾಡಿದ್ದರೇ, ಕೇರಳಕ್ಕೆ, ಆಂಧ್ರಕ್ಕೆ ಹೀಗೆ ಮಾಡಿದ್ದರೇ, ಕಲ್ಕತ್ತಾಕ್ಕೆ ಹೀಗೆ ಮಾಡಿದ್ದರೇ, ಯಲಹಂಕಾ ಬಂಗಾರಪೇಟೆ ಮಧ್ಯೆ ಒಂದು ಸಣ್ಣ ರೈಲು. ಹಳ್ಳಿಗಾಡಿನ ರೈಲು ರೈಲನ್ನು ಕೀಳುವ ಸಂದರ್ಭದಲ್ಲಿ ದೊಡ್ಡ ಹೋರಾಟ ಮಾಡಿ ಅದನ್ನು ಉಳಿಸಿದ್ದು ಆಯಿತು. ಇದನ್ನು ಬ್ರಾಡಗೇಜ್ ಮಾಡಿ ಎಂದು ನಿರಂತರವಾಗಿ ಒತ್ತಾಯ ಮಾಡುತ್ತಲೇ ಇದ್ದೇವೆ.

ಇದರ ಬಗ್ಗೆ ಚಿಂತನೆ ಇಲ್ಲ, ಮೈಸೂರು-ಬೆಂಗಳೂರು ಬ್ರಾಡ್‌ಗೇಜ್, ಮಧುದಂಡವತೆಯವರು, ಮುಖ್ಯಮಂತ್ರಿ ಅರಸು ಅವರು ಇದ್ದಾಗ ಇದೇ ರೈಲುನಿಲ್ದಾಣದಲ್ಲಿ ಅಡಿಗಲ್ಲು ಹಾಕಿದರು. ಎಷ್ಟು ವರ್ಷ ಆಯಿತು ? ಇವತ್ತಿನವರೆಗೆ ನಮಗೆ ಕೇಂದ್ರ ಸರ್ಕಾರದವರು ಭಿಕ್ಷೆ ಕೊಟ್ಟಹಾಗೆ ಕೊಡುತ್ತಿದ್ದಾರೆ. ಆದರೂ ಬ್ರಾಡ್‌ಗೇಜ್ ಮಾಡಲಿಲ್ಲ. ಚಾಮರಾಜನಗರ ಮೆಟ್ಟುಪಾಳ್ಯದ್ದು ಆಗಲಿಲ್ಲ, ಹುಬ್ಬಳ್ಳಿ ಕಾರವಾರದ್ದು ಆಗಲಿಲ್ಲ, ಕೊಟ್ಟೂರಿನದ್ದು ಆಗಲಿಲ್ಲ. ಒಂದು ಇಂಚು ರೈಲು ನಮಗೆ ಆಗಲಿಲ್ಲ. ಆರು ಜನ ರೈಲ್ವೆ ಮಂತ್ರಿಗಳು ಬಂದುಹೋದರು. ಸಿ.ಎಂ. ಪೂಣಚ ಅವರಿಂದ ಹಿಡಿದು ಜಾಫರ್ ಷರೀಫ್ ವರೆಗೆ ಆರು ಜನ ರೈಲ್ವೆ ಮಂತ್ರಿಗಳಾದರೂ ಒಂದಿಂಚು ರೈಲು ಏನಾದರೂ ನಮಗೆ ಕೊಟ್ಟಿದ್ದಾರೆಯೆ? ಕೇಂದ್ರ ಸರ್ಕಾರದ ಈ ಮಲತಾಯಿ ಧೋರಣೆಯನ್ನು ನಮ್ಮ ರಾಜ್ಯದ ಕನ್ನಡಿಗರು ಸಹಿಸಿಕೊಂಡಿರಬೇಕೇ? ಇದಕ್ಕಾಗಿ ನಿರಂತರವಾಗಿ ಕೇಂದ್ರ ಸರ್ಕಾರದ ವಿರುದ್ಧ ದೊಡ್ಡ ಯುದ್ಧವನ್ನೇ ಸಾರಬೇಕಾಗುತ್ತದೆ. ಒಂದಲ್ಲ ಒಂದ ರೀತಿಯಲ್ಲಿ ಕರನಿರಾಕರಣ ಚಳುವಳಿಯನ್ನು ಮಾಡಬೇಕಾಗಿದೆ. ಕೇಂದ್ರದ ಮಂತ್ರಿಗಳನ್ನು ತಡೆಹಿಡಿಯಬೇಕಾಗುತ್ತದೆ. ಕೇಂದ್ರದ ಸಂಪರ್ಕವನ್ನು ಕಡಿದುಹಾಕಬೇಕಾಗುತ್ತದೆ. ಅಲ್ಲಿಯವರೆಗೆ ನಮ್ಮ ಚಳುವಳಿ ಹೋಗದಿದ್ದರೆ ನಮ್ಮನ್ನು ಯಾರೂ ಕೇಳುವುದಿಲ್ಲ. ಇವತ್ತು ದಕ್ಷಿಣದ ರೈಲ್ವೆ ಎಂದರೆ ತಮಿಳು ನಾಡು, ಕೇರಳ, ಮತ್ತು ಆಂಧ್ರ. ಇವು ಮೂರೇ ದಕ್ಷಿಣ ರೈಲ್ವೆಗಳು. ಇನ್ನು ಯಾವುದೂ ಬೆಂಗಳೂರು ರಸ್ತೆ, ಅವರ ಕಣ್ಣಿಗೆ ಬಿದ್ದೇ ಇಲ್ಲ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಲೋಕೋಪಯೋಗಿ ಇಲಾಖೆ ಸಚಿವರು ಗಮನಿಸಬೇಕು, ಮೈಸೂರು ಇನ್ನು ಕೊಂಕಣರೈಲ್ವೆ ಬಗ್ಗೆ ಹೇಳಬೇಕೆಂದರೆ ಅದು ದೊಡ್ಡ ಇತಿಹಾಸ, ಸಧ್ಯ ಏನೋ ಸಂತೋಷ. ನಮ್ಮ ಕಡೆಯಿಂದ ಲೈನು ಶುರುವಾಗಬೇಕೆಂದು ಹೇಳಿದ್ದಾರೆ. ಸ್ವಲ್ಪ ದೂರ ಲೈನಾದರೂ ಸಿಗಲಿ. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ ಭಾರಿ ಮೋಸ ಮಾಡುತ್ತಿದ್ದಾರೆ.

ಕೇಂದ್ರ ರೈಲ್ವೆ ಇಲಾಖೆಯನ್ನು ನಾನು ಈ ಸದನದ ಮೂಲಕ ಒತ್ತಾಯ ಮಾಡುತ್ತೇನೆ. ಒಂದು ಶ್ವೇತಪತ್ರವನ್ನು ಅವರು ಹೊರಡಿಸಲಿ. ಆಗ ಕರ್ನಾಟಕಕ್ಕೆ ಎಷ್ಟು ಲೈನು ಕೊಟ್ಟಿದ್ದಾರೆ ಎಂದು ಗೊತ್ತಾಗುತ್ತದೆ. ಆಂಧ್ರಕ್ಕೆ ಎಷ್ಟು ಲೈನು ಕೊಟ್ಟಿದ್ದೀರಿ, ತಮಿಳುನಾಡಿಗೆ ಎಷ್ಟು ಕೊಟ್ಟಿದ್ದೀರಿ, ಕೇರಳಕ್ಕೆ ಎಷ್ಟು ಕೊಟ್ಟಿದ್ದೀರಿ ಎಂದು ಬರಲಿ. ಇದರ ಬಗ್ಗೆ ಚರ್ಚೆ ನಡೆಯಲಿ, ರಾಷ್ಟ್ರೀಯ ಚಿಂತನೆಯಾಗಲಿ. ರಾಷ್ಟ್ರ ಎಲ್ಲಾ ಒಂದೇ ಎಂದು ಹೇಳುವಾಗ ನಮ್ಮನ್ನು ಬೇಕೆಂದೇ ಎಲ್ಲಾ ವಿಚಾರಗಳಲ್ಲಿ ತುಳಿಯುತ್ತಾ ಇದ್ದರೆ ನಮ್ಮ ಪರಿಸ್ಥಿತಿ ಎಲ್ಲಿಗೆ ಹೋಗಬೇಕು? ನಮ್ಮ ಬಗ್ಗೆ ಏಕೆ ಈ ನಿರ್ದಯ? ಕರ್ನಾಟಕ ಯಾರಿಗೂ ಬೇಡವಾದಂಥ ಸ್ಥಳವೋ ? ನಾನು ನಮ್ಮ ಪಾರ್ಲಿಮೆಂಟ್ ಸದಸ್ಯರನ್ನು ಈ ಮೂಲಕ ಕೇಳಿಕೊಳ್ಳುತ್ತೇನೆ. ನಾನು ಅವರನ್ನು ವೈಯಕ್ತಿಕವಾಗಿ ಟೀಕೆ ಮಾಡುವುದಕ್ಕೆ ತಯಾರಿಲ್ಲ. ನಿಮ್ಮ ಕರ್ತವ್ಯ ಏನು? ನೀವು ಏನು ಮಾಡಿದ್ದೀರಿ? ತಮಿಳುನಾಡಿನಲ್ಲಿ ಪಾರ್ಲಿಮೆಂಟ್ ಸದಸ್ಯರು ತಮ್ಮ ರಾಜ್ಯದ ಸಮಸ್ಯೆ ಬಂದಾಗ ಪಕ್ಷಭೇದ ಮರೆತು ದೊಡ್ಡ ಯುದ್ಧ ಮಾಡಿದರು. ಆಂಧ್ರದಲ್ಲೂ ಹೀಗೆ ಮಾಡುತ್ತಾರೆ. ರಾಜಕೀಯ ಬದಿಗೊತ್ತಿ ಅವರು ರಾಜೀನಾಮೆ ಕೊಟ್ಟರು.

ಆದರೆ, ನಮ್ಮಲ್ಲಿ ರಾಜೀನಾಮೆ ಪ್ರಶ್ನೆ ಬಂದಾಗ ಏತಕ್ಕೆ ಕೊಡಬೇಕು ಎನ್ನುತ್ತಾರೆ. ಕಾವೇರಿ ಬಗ್ಗೆ ರಾಜೀನಾಮೆ ಕೊಡಿ ಎಂದರೆ ಒಬ್ಬರೂ ತಯಾರಾಗಿಲಿಲ್ಲ. ಒಬ್ಬ ಮಂತ್ರಿಯೂ ತಯಾರಿಲ್ಲ, ಒಬ್ಬ ಲೋಕಸಭಾ ಸದಸ್ಯರೂ ತಯಾರಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಲೋಕಸಭಾ ಸದಸ್ಯರು ಇಲ್ಲಿ ಇಲ್ಲ. ನಡವಳಿಕೆ ಬಗ್ಗೆ ಯಾವುದೇ ವಿಧದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಇಲ್ಲಿ ಪ್ರಸ್ತಾಪ ಮಾಡತಕ್ಕದ್ದು ಸರಿ ಅಲ್ಲ. ಏಕೆಂದರೆ ಒಬ್ಬ ಶಾಸಕನ ನಡವಳಿಕೆಗಳ ಬಗ್ಗೆ ಲೋಕಸಭೆಯಲ್ಲಿ ಚರ್ಚೆ ಮಾಡಿದರೆ ಎಷ್ಟು ಅಪಕೃತವಾಗುತ್ತದೆ, ಮತ್ತು ಎಷ್ಟು ಇರ್ರೆವಲೆಂಟ್ ಆಗುತ್ತದೆಯೋ ಹಾಗೆ ಲೋಕಸಭಾ ಸದಸ್ಯರ ಬಗ್ಗೆ ಮಾತನಾಡಿದರೆ ಆಗುತ್ತದೆ. ಅವರು ಹೇಗೆ ನಡೆದುಕೊಳ್ಳಬೇಕು ಎನ್ನುವುದರ ಬಗ್ಗೆ ನಾವು ಎಲ್ಲಿ ಕುಳಿತುಕೊಂಡು ನೀತಿ ಹೇಳುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ಅವರ ನಡವಳಿಕೆಗಳ ಬಗ್ಗೆ ಹೇಳಲಿಲ್ಲ. ಇವತ್ತು ಅನೇಕ ಪತ್ರಿಕೆಗಳಲ್ಲಿ ನೋಡುತ್ತೇವೆ. ಸರ್ಕಾರ ಉರುಳಿಸುವುದು, ಸರ್ಕಾರ ಉಳಿಸುವುದು ಇದಕ್ಕೆ ಮನವಿ ಕೊಡುತ್ತಿದ್ದಾರೆಯೇ ಹೊರತು ನಮ್ಮ ರಾಜ್ಯದ ಸಮಸ್ಯೆ ಏನು ಎಂದು ಯಾರಿಗೆ ಬೇಕಾಗಿದೆ? ಅವರ ನಡವಳಿಕೆಗಳ ಬಗ್ಗೆ ನಾನು ಹೇಳುತ್ತಿಲ್ಲ. ನಾನು ಯಾರ ಬಗ್ಗೆಯೂ ವೈಯಕ್ತಿಕವಾಗಿ ಮಾತನಾಡುತ್ತಿಲ್ಲ. ನಾನು ಸುಮಾರು ಐದು ಲೋಕಸಭೆಗಳನ್ನು ನೋಡಿಕೊಂಡು ಬರುತ್ತಿದ್ದೇನೆ. ನಮ್ಮ ಪರಿಸ್ಥಿತಿ ಏನಾಗಿದೆ? ಲೋಕಸಭೆಯಲ್ಲಿ ಕರ್ನಾಟಕವನ್ನು ಕೇಳುವವರೆ ಗತಿಯಿಲ್ಲ, ಕರ್ನಾಟಕ ಧ್ವನಿ, ಕರ್ನಾಟಕದ ಕೂಗು ಕೇಳುವವರೇ ಗತಿಯಿಲ್ಲ. ನಮ್ಮಿಂದ ಆಯ್ಕೆಯಾಗಿ ಲೋಕಸಭಾ ಸದಸ್ಯರು ಹೋಗಿದ್ದಾರೋ ಇಲ್ಲವೋ ಎನ್ನತಕ್ಕಂಥ ಅನುಮಾನ, ಭಯ ಮೂಡುತ್ತಿದೆ. ಆದ್ದರಿಂದ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ನಮ್ಮ ಸರ್ಕಾರದವರು ಶಕ್ತಿಯುತವಾಗಿ, ಧೈರ್ಯದಿಂದ ರಾಜ್ಯದ ಚಿಂತನೆಯ ಬಗ್ಗೆ ಕೇಂದ್ರದ ಜೊತೆಯಲ್ಲಿ ಹೋರಾಟ ಮಾಡಬೇಕೆಂದು ಈ ಸದನದ ಮೂಲಕ ಕಳಕಳಿಯಿಂದ ಅವರಲ್ಲಿ ಮನವಿ ಮಾಡುತ್ತಿದ್ದೇನೆ. ಇನ್ನು ಮೈಸೂರು, ಬೆಂಗಳೂರು ರಸ್ತೆ ಬಗ್ಗೆ ಮಾನ್ಯ ಮಂತ್ರಿಗಳಿಗೆ ಒಂದು ಸಲಹೆಯನ್ನು ಕೊಡುತ್ತೇನೆ.

ಛೇರ್ಮನ್ : ಇದು ನಮ್ಮ ಕೊನೆಯ ಸಲಹೆ ಆಗಬೇಕು.

ಶ್ರೀ ವಾಟಾಳ್ ನಾಗರಾಜ್ : ಇನ್ನು ನಾಲ್ಕು ಸಲಹೆಗಳನ್ನು ಕೊಡುತ್ತಿದ್ದೇನೆ. ಮೈಸೂರು ಬೆಂಗಳೂರು - ನಡುವಣ 140 ಕಿಲೋಮೀಟರ್ ರಸ್ತೆಯ ಬಗ್ಗೆ ತಾವು ಒಂದು ಚಿಂತನೆ ಮಾಡಬೇಕು. ಮೈಸೂರಿನ 80 ಕಿಲೋಮೀಟರ್ ದೂರದಲ್ಲಿ ಎಂಥ ಪವಿತ್ರವಾದಂಥ ಸ್ಥಳಗಳು, ಮಹದೇಶ್ವರನ ಬೆಟ್ಟ, ಬಿಳಿಗಿರಿರಂಗನಾಥಸ್ವಾಮಿ ಬೆಟ್ಟ, ಬಂಡಿಪುರ, ಈ ಕಡೆ ನಾಗರಹೊಳೆ, ರಂಗನತಿಟ್ಟು, ನಂಜುಂಡೇಶ್ವರ ಇವೆಲ್ಲ ಸಾಂಸ್ಕೃತಿಕವಾದಂಥ ಕೇಂದ್ರಗಳು. ಮೈಸೂರಿನ ಸುತ್ತಲೂ ಈ ರಸ್ತೆಗಳ ಅಭಿವೃದ್ಧಿ ಜೊತೆಗೆ ಮೈಸೂರು-ಬೆಂಗಳೂರು ಜೋಡಿ ರಸ್ತೆಗಳನ್ನು ತಾವು ಮಾಡಿ. ಇದನ್ನು ಮಾಡುವುದರಿಂದ ಮೈಸೂರು ಎಂದರೆ ಕರ್ನಾಟಕದ ಒಂದು ಸಾಂಸ್ಕೃತಿಕ ರಾಜಧಾನಿಗಿಂತ ಹೆಚ್ಚಾಗಿ ದೇಶವಿದೇಶಗಳಿಂದ ಅನೇಕ ಜನ ಮೈಸೂರನ್ನು ನೋಡುವುದಕ್ಕೆ ಬರತಕ್ಕ ಪದ್ಧತಿ ಇದೆ. ಅದಕ್ಕೋಸ್ಕರ ನಾನು ತಮಗೆ ಹೇಳುತ್ತಿದ್ದೇನೆ. ಒಂದು ಆದರ್ಶವಾದ ಜೋಡಿರಸ್ತೆಯನ್ನು ಮಾಡಿ ಇತ್ತೀಚೆಗೆ ಹೇಮಾವತಿ ಕಾವೇರಿಯಲ್ಲಿ ಭಾರಿ ದೊಡ್ಡ ಪ್ರವಾಹ ಬಂತು. ಈ ಪ್ರವಾಹದಲ್ಲಿ ದ್ವಂದ್ವ ಆಯಿತು. ಮಾನ್ಯ ನೀರಾವರಿ ಸಚಿವರು ಹೇಳಿದರು, ಈ ಸಮಸ್ಯೆಯನ್ನು ಸಮಗ್ರವಾಗಿ ತನಿಖೆ ನಡೆಸುತ್ತೇನೆ ಎಂದು. ಶ್ರೀ ಮಲ್ಲಾರಿಗೌಡ ಪಾಟೀಲರೆ, ಹೇಮಾವತಿಯಲ್ಲಿ ಪ್ರವಾಹ ಬಂತಲ್ಲ, ಆ ಪ್ರವಾಹದಲ್ಲಿ

ಮನೆಗಳು ಕೊಚ್ಚಿಕೊಂಡು ಹೋದವು. ನಿರಪರಾಧಿಗಳು ಸತ್ತರು. ಪ್ರಾಣ ಹಾನಿಯ ಜೊತೆಗೆ ಎಲ್ಲ ರೀತಿಯ ಹಾನಿಗಳೂ ಆದವು. ಇದರ ಬಗ್ಗೆ ಇದುವರೆಗಾದರೂ ಸರ್ಕಾರದ ಚಿಂತನೆ ಇದೆಯೆ? ಖಂಡಿತ ಇಲ್ಲ. ಈ ಬಗ್ಗೆ ತನಿಖೆ ಮಾಡಿಸಿದಿರೋ ಇಲ್ಲ, ಮಾಡಿಲ್ಲ. ಪರಿಹಾರ ಕಾರ್ಯ ಸಂಪೂರ್ಣ ಕುಂಠಿತ. ವಿಳಂಬ ಈ ಬಗ್ಗೆ ತಾವು ಚಿಂತನೆ ಮಾಡಿದ್ದೀರಾ? ಇದರ ಬಗ್ಗೆ ಚಿಂತನೆ ಮಾಡಬೇಕೆಂದು ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ.

ಇವತ್ತು ಇಡೀ ಕರ್ನಾಟಕದ ರಸ್ತೆಗಳ ಬಗ್ಗೆ ಒಂದೇ ಒಂದು ಮಾತಿನಲ್ಲಿ ಹೇಳಬೇಕೆಂದರೆ ಇದು ನರಕ. ನರಕಕ್ಕೆ ಯಾರಾದರೂ ಹೋಗಬೇಕೆಂದರೆ ಕರ್ನಾಟಕದ ರಸ್ತೆಯ ಮೇಲೆ ಪ್ರಯಾಣ ಮಾಡಬೇಕು. ಕರ್ನಾಟಕದ ರಸ್ತೆಯ ಮೇಲೆ ಪ್ರಯಾಣ ಮಾಡಿದರೆ ನರಕದ ಅನುಭವಾಗುತ್ತದೆ. ಇದೊಂದೇ ಸಾಕ್ಷಿ. ಇದರ ಬಗ್ಗೆ ನಾನು ಸಮಗ್ರವಾಗಿ ಹೋಗುವುದಿಲ್ಲ, ಗಡಿ ಪ್ರದೇಶಗಳ ಬಗ್ಗೆ ನಾನು ಸರಕಾರಕ್ಕೆ ಹೇಳುತ್ತೇನೆ. ಶ್ರೀಮಾನ್ ವೀರೇಂದ್ರಪಾಟೀಲರು ಸರಕಾರ ಇದ್ದಾಗ 5 ಕೋಟಿ ಇಟ್ಟಿದ್ದರು. ಈಗ ಇವರು 10 ಕೋಟಿ ಮಾಡಿದ್ದಾರೆ. ಇದು ಒಂದು ತಾಲ್ಲೂಕಿಗೆ 25 ಲಕ್ಷ ಬರುತ್ತದೆ. ನಾನು ಏನು ಹೇಳುತ್ತೇನೆ ಎಂದರೆ, ಕರ್ನಾಟಕ ರಾಜ್ಯದ ಸಮಗ್ರ ಗಡಿ ಪ್ರದೇಶಗಳ ಅಭಿವೃದ್ಧಿಗಾಗಿ ಸರಕಾರ, ಅದರಲ್ಲೂ ಹಿಂದುಳಿದಿರತಕ್ಕಂಥ ತಾಲೋಕುಗಳು ಯಾವುವು ಎಂದು ಗುರುತಿಸಿ, ಸರಕಾರ ಕನಿಷ್ಠ ಒಂದು ವರ್ಷಕ್ಕೆ 50ಕೋಟಿ ರೂಪಾಯಿಗಳನ್ನಾದರೂ ಇಡಬೇಕು. ಗಡಿ ಪ್ರದೇಶದಲ್ಲಿ 35 ತಾಲ್ಲೂಕುಗಳು ಬರುತ್ತವೆ. ಇಷ್ಟಾದರೂ ಹಣ ಇಡಬೇಕೆಂದು ಹೇಳಿ ಪ್ರಾಮಾಣಿಕವಾಗಿ ಒತ್ತಾಯ ಮಾಡುತ್ತಿದ್ದೇನೆ.

(ಸನ್ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಅಧ್ಯಕ್ಷರೆ, ಮೊನ್ನೆ ಇದ್ದಕ್ಕಿದ್ದಹಾಗೆ, ಶಾಸನಸಭೆ ನಡೆಯುತ್ತಿದ್ದರೂ ಕೂಡ, ನಮ್ಮ ರಾಮಪ್ಪನವರು ವಿದ್ಯುಚ್ಛಕ್ತಿ ಇಲಾಖೆಯವರು, ಪ್ರತಿದಿನ 45 ನಿಮಿಷಗಳ ಕಾಲ ವಿದ್ಯುಚ್ಛಕ್ತಿ ನಿಲ್ಲಿಸುತ್ತೇವೆ ಎಂದು ಹೇಳಿಬಿಟ್ಟರು. ತಾವು ಇದನ್ನು ಸಭೆಯಲ್ಲಾದರೂ ಹೇಳಿ ಚರ್ಚೆ ನಡೆಸಿದ್ದರೆ, ನಿಲ್ಲಿಸಬೇಕೇ ಬೇಡವೇ ಎಂದು ಹೇಳಬಹುದಾಗಿತ್ತು. ಇದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ, ಇದರ ಬಗ್ಗೆ ಚಿಂತನೆ ಮಾಡಬೇಕು, ನಾನು ಯಾರನ್ನೂ ಆಕ್ಷೇಪಣೆ ಮಾಡುವುದಕ್ಕೆ ಹೋಗುವುದಿಲ್ಲ, ಈಗಾಗಲೇ ಸೊರಗಿರುವ ಪರಿಸ್ಥಿತಿಯಲ್ಲಿ ಜನ ತೊಂದರೆಗೆ ಸಿಕ್ಕಿದ್ದಾರೆ. ನಿಮ್ಮ ಇಲಾಖೆಗೆ 334 ಕೋಟಿ ರೂಪಾಯಿಗಳ ಸಾಲ ಬರಬೇಕೆಂದು ಹೇಳಿದ್ದೀರಲ್ಲ, ಅದನ್ನು ಯಾವ ರೀತಿ ವಸೂಲು ಮಾಡುತ್ತೀರಿ. ಒಂದು ಕಡೆ ಈ 334 ಕೋಟಿ ರೂಪಾಯಿಗಳ ಸಾಲ ವಸೂಲು ಮಾಡುವುದಕ್ಕೆ ನಿಮ್ಮಿಂದ ಆಗುವುದಿಲ್ಲ, ಇನ್ನೊಂದು ಕಡೆ ಒಬ್ಬ ಬಡವ 5 ರೂಪಾಯಿ ಕಟ್ಟಲಿಲ್ಲ ಎಂದರೆ, ತಕ್ಷಣ ನಿಂತುಕೊಂಡು ಪ್ಲಗ್ ಕಿತ್ತು ಹಾಕುತ್ತೀರಿ. 334 ಕೋಟಿ ರೂಪಾಯಿ ಯಾವ ಕಾರಣಕ್ಕಾಗಿ ಬಾಕಿ ಇದೆ, ಇದನ್ನು ಹೇಗೆ ವಸೂಲು ಮಾಡುತ್ತೀರಿ, ನಿಮ್ಮ ಸರಕಾರದಲ್ಲಿ ವಸೂಲು ಮಾಡುವ ವಿಧಾನ ಏನು ಇದೆ ಎಂಬುದನ್ನು ನೀವು ದಯವಿಟ್ಟು ಹೇಳಬೇಕು. ಪರಿಸ್ಥಿತಿ ಹಾಗಾಗಿದೆ. ಈ ಸಂದರ್ಭ ಬಂದಾಗ ತಮಗೆ ಹೇಳುತ್ತಿದ್ದೇನೆ,

ನನ್ನ ತಾಲ್ಲೂಕಿನ ಬಗ್ಗೆ ಪ್ರಶ್ನೆ ಹಾಕಿದ್ದೆ, ಅದಕ್ಕೆ ಉತ್ತರ ಕೂಡಾ ಬಂದಿದೆ, ಈ ಸದನದಲ್ಲಿ ಅನೇಕಬಾರಿ ಹೇಳಿದ್ದೇನೆ, ಇವತ್ತು ಚಾಮರಾಜನಗರ ಕಗ್ಗತ್ತಲಿನಲ್ಲಿ ಇದೆ, ಗುಂಡಲುಪೇಟೆ, ಕಗ್ಗತ್ತಲಿನಲ್ಲಿ ಇದೆ, ಇದರ ಬಗ್ಗೆ ಅವರೂ ಹೇಳಿದ್ದಾರೆ, ನಾನೂ ಹೇಳಿದ್ದೇನೆ. ನಿಮ್ಮ ಮಂಡಲಿಯ ಅಧ್ಯಕ್ಷರನ್ನು ಹತ್ತಾರು ಭಾರಿ ಭೇಟಿ

ಮಾಡಿದ್ದೇನೆ. ಅನುಕೂಲ ಮಾಡುತ್ತೇವೆಂದು ಭರವಸೆ ಬಂದಿದೆ. ಆದರೆ ಅನುಕೂಲ ಪ್ರಾಮಾಣಿಕವಾಗಿ ಆಗಲ್ಲ, ಬೇಗನೆ ಅನುಕೂಲ ಮಾಡಬೇಕು. ಹಿಂದೆ ವಿದ್ಯುಚ್ಛಕ್ತಿ ಮಂತ್ರಿಗಳಾಗಿದ್ದ ಪುಟ್ಟಸ್ವಾಮಿಗೌಡರು ಇದರ ಬಗ್ಗೆ ಒಂದು ಸಭೆಯನ್ನು ಕರೆದು ಚಿಂತನೆ ಮಾಡಬೇಕೆಂದು ಹೇಳಿ, ಕೆಲವು ಸೂತ್ರಗಳನ್ನು ಹೇಳಿದ್ದರು. ಆ ಸೂತ್ರಗಳು ಯಾವುವೂ ಆಗಿಲ್ಲ, ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಅಲ್ಲಿ ಕಗ್ಗತ್ತಲು ಆಗಿದೆ. ಇಡೀ ಗಡಿ ಪ್ರದೇಶ ತಮಿಳುನಾಡಿಗೆ ಸೇರಿದ ತಾಳವಾಡಿ ಗಡಿ ಪ್ರದೇಶ ಕಗ್ಗತ್ತಲಿನಲ್ಲಿ ಇದೆ. ತಾವು ದಯವಿಟ್ಟು ಪ್ರಾಮಾಣಿಕವಾಗಿ ಕೆಲಸ ಮಾಡಿ, 334 ಕೋಟಿ ರೂಪಾಯಿಗಳನ್ನು ವಸೂಲು ಮಾಡುವುದಕ್ಕೆ ಸಮಗ್ರವಾಗಿ ಚಿಂತನೆ ಮಾಡಿ, ನೀವು ಎಷ್ಟು ಆಕಾರವಾಗಿದ್ದೀರೋ ಎಷ್ಟು ಶಕ್ತಿಯುತವಾಗಿ ಇದ್ದೀರೋ ನಿಮ್ಮ ಇಲಾಖೆಯಲ್ಲೂ ಅಷ್ಟೇ ಶಕ್ತಿಯುತವಾಗಿ ಕೆಲಸ ಮಾಡಿದರೆ ಬಹುಶಃ ರಾಮಪ್ಪನವರು ಬಂದಿದ್ದಕ್ಕೂ, ಸರಕಾರಕ್ಕೂ, ನಿಮಗೂ ಕೀರ್ತಿ ಬರುತ್ತದೆ ಎಂಬ ಮಾತನ್ನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರು ಬಂದಿದ್ದಾರೆ, ಘಂಟೆ ಬಾರಿಸುತ್ತಿದ್ದಾರೆ, ಬಹಳ ಕಷ್ಟ ಎಂಬ ಮಾತನ್ನು ಹೇಳಿ, ಇದರ ಬಗ್ಗೆ ಚಿಂತನೆ ಮಾಡಬೇಕೆಂದು ಹೇಳುತ್ತೇನೆ. ಕೊನೆಯಾಗಿ ಮಾನ್ಯ ಅಧ್ಯಕ್ಷರೇ, ಈ ವಿದ್ಯುಚ್ಛಕ್ತಿ ಇಲಾಖೆಯ ವರದಿ ಏನಿದೆ ಇದು ಇಂಗ್ಲಿಷ್‌ನಲ್ಲಿದೆ.

ಶ್ರೀ ಎಂ. ರಾಮಪ್ಪ : ನೆಕ್ಸ್ಟ್ ಟೈಮ್ ಕನ್ನಡದಲ್ಲಿ ಕೊಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಸಂತೋಷ, ನೀವು ಮಾಡಿದಿರಿ ಎಂದು ಹೇಳುವುದಿಲ್ಲ, ನೀವು ಮಂತ್ರಿಯಾಗುವುದಕ್ಕಿಂತ ಮುಂಚಿತವಾಗಿಯೇ ಇದು ಮುದ್ರಣವಾಗಿದೆ. ಈಗ ಇದು ಆಯಿತು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಇದು ಅನೇಕ ಸಾರಿ ಈ ಸದನದಲ್ಲಿ ಆಗಿದೆ. ಅನೇಕ ಇಲಾಖೆಯವರಿಗೆ ಇಂಗ್ಲಿಷ್ ಜಾಡ್ಯ ಇದೆ. ಇನ್ನೂ ನಮಗೆ ಅನೇಕ ವರದಿಗಳು ಬಂದಿವೆ, ನೀವು ನೋಡಬೇಕು. ಕೆಲವು ಜಿಲ್ಲಾ ಪರಿಷತ್ ವರದಿಗಳು ಕಂತೆಕಂತೆಯಾಗಿ ಇಂಗ್ಲಿಷ್‌ನಲ್ಲಿ ಬಂದಿವೆ, ಕೆಲವು ಜಿಲ್ಲಾ ಪರಿಷತ್ ವರದಿಗಳು ಕಂತೆಕಂತೆಯಾಗಿ ಇಂಗ್ಲೀಷ್‌ನಲ್ಲಿ ಬಂದಿವೆ. ಕೆಲವು ಜಿಲ್ಲಾ ಪರಿಷತ್‌ನವರು ಲಂಡನ್‌ನಿಂದ ಆಗತಾನೆ ಇಳಿದು ಬಂದಹಾಗೆ ಮಾಡಿದ್ದಾರೆ. ನಿಮ್ಮ ಇಲಾಖೆಯಲ್ಲಿ ಕನ್ನಡದ ಬಗ್ಗೆ ಕಾಳಜಿ ಸ್ವಲ್ಪವೂ ಇಲ್ಲ, ತಮ್ಮ ಆಡಳಿತ ಭಾಷೆ ಕನ್ನಡ ಎಂದು ಹೇಳುತ್ತೀರಿ. ಸಮಗ್ರವಾಗಿ ಆಡಳಿತ ಕನ್ನಡದಲ್ಲಿ ನಡೆಯಬೇಕೆಂದು ಹೇಳುತ್ತೀರಿ. ಆದರೆ ಕೆಲವು ಮಂತ್ರಿಗಳಿಗೆ ಇದರ ಬಗ್ಗೆ ಜವಾಬ್ದಾರಿ ಆದುದರಿಂದ ಇನ್ನು ಮುಂದಾದರೂ ಇದರ ಬಗ್ಗೆ ಚಿಂತನೆಯನ್ನು ಮಾಡಿ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ಇದು ಸುಂದರವಾಗಿ ಮುದ್ರಣವಾಗಿರುವ ಪ್ರಸಕ್ತ ಇಂಗ್ಲೀಷ್‌ನಲ್ಲಿರುವುದರಿಂದ ಇದನ್ನು ಹರಿದು ಹಾಕಿ ಪ್ರತಿಭಟನೆ ಮಾಡಬೇಕಾಗಿದೆಯೆಂದು ತಮ್ಮ ಮೂಲಕ ಹೇಳುತ್ತಿದ್ದೇನೆ. ಇನ್ನು ಮುಂದಾದರೂ ಸರಕಾರದ ಇಲಾಖೆಯವರು ಕನ್ನಡದ ಬಗ್ಗೆ ಗೌರವ ಇಡಬೇಕು, ಕನ್ನಡದಲ್ಲಿ ಆಡಳಿತ ವರದಿಗಳನ್ನು ಮಂಡಿಸಬೇಕು. ಇದು ಕರ್ನಾಟಕ ರಾಜ್ಯ ಎಂದು ತಿಳಿದುಕೊಳ್ಳಬೇಕು, ಇದು ಬೇರೆ ರಾಜ್ಯ ಎಂದು ತಿಳಿದುಕೊಳ್ಳಬಾರದು.

(ವರದಿಯ ಪುಸ್ತಕವನ್ನು ಹರಿದು ಹಾಕಿದರು)

ಶ್ರೀ ಎಂ. ರಾಮಪ್ಪ : ಬೇರೆ ಭಾಷೆಯ ಮೇಲೆ ದ್ವೇಷ ಇರಬಾರದು ಎಂದು ಹೇಳಿರಿ, ನೀವು ಈ ಕೆಲಸ ಮಾಡುತ್ತೀರಿ ಎಂದು ಹೇಳಿದರೆ ಬಹಳ ಶೋಚನೀಯ ಎನಿಸುತ್ತದೆ ನಿಮ್ಮ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ಶ್ರೀಮಾನ್ ರಾಮಪ್ಪನವರೇ ಹೇಳಬೇಕು. ನಮ್ಮ ಮನೆಗೆ ಬಂದು ನೀರು ಬೇಕೆಂದು ಕೇಳಿ ನೀರು ಕುಡಿದು ನೀರು ಕುಡಿದಾದ

ಗ್ರಂಥಾಲಯ, ವಿಧಾನ ಸೌಧ, ಬೆಂಗಳೂರು
ದಿನಾಂಕ........

ಮೇಲೆ ಇದು ನಮ್ಮ ಮನೆ ಮನೆಯಿಂದ ಹೊರಗೆ ಹೋಗ್ತಿದ್ದೇವೆ ಹೇಗೆ? ಇದು ಕರ್ನಾಟಕದಲ್ಲಿ ನಡೆಯುತ್ತಿದೆ. ಕರ್ನಾಟಕದಲ್ಲಿ ಪರಭಾಷೆಯವರ ದಾಳಿ ಎಲ್ಲಿಯವರೆಗೆ ಹೋಗಿದೆ ಅಂದರೆ ನಾವು ಬದುಕುವುದಕ್ಕೆ ಸಾಧ್ಯವಿಲ್ಲ. ಈ ಬಗ್ಗೆ ಸಮಗ್ರ ಚಿಂತನೆ ಆಗಬೇಕು. ಅದನ್ನು ನಾನು ಇಲ್ಲಿ ಬೆರೆಸುವುದಕ್ಕೆ ಹೋಗುವುದಿಲ್ಲ. ಈ ಬಗ್ಗೆ ಪರಿಣಾಮಕಾರಿಯಾದ ಚಿಂತನೆ ಮಾಡಬೇಕೆನ್ನುವ ಮಾತನ್ನು ಹೇಳುತ್ತೇನೆ. ಇಲಾಖೆಯವರಿಗೆ ತಾವು ಹೇಳಬೇಕು. ತಮಗೆ ಈ ಸದನಕ್ಕೆ...

ಅಧ್ಯಕ್ಷರು : ಇಲಾಖೆಗೆ ಏನು ತೊಂದರೆ? ಸರ್ಕಾರಕ್ಕೆ ಏನು ತೊಂದರೆ ಆಗಿದೆ. ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್ ಆಗಲಿ ಮತ್ತೊಂದು ಇಲಾಖೆಯೇ ಆಗಲಿ ಕನ್ನಡದಲ್ಲಿ ಚಿಂತನೆ ಮಾಡಬೇಕು, ಕನ್ನಡದಲ್ಲಿ ಯೋಚನೆ ಮಾಡಬೇಕು, ಕನ್ನಡದಲ್ಲ ಅಚ್ಚುಹಾಕಿಸಬೇಕು, ಕನ್ನಡದಲ್ಲಿ ಬರೆಯಬೇಕು, ಎನ್ನತಕ್ಕಂಥ ಕಳಕಳಿ ಅಂತಹ ಕಳಕಳಿ ಬರಬೇಕಾದರೆ ಏನು ಮಾಡಬೇಕು ನಾವು? ಇಂತಹ ಪರಿಸ್ಥಿತಿಗೆ ಏತಕ್ಕೆ ಅವಕಾಶ ಮಾಡಿಕೊಡುತ್ತೀರಿ ಸರ್ಕಾರದವರು.

ಶ್ರೀ ಎಂ. ರಾಮಪ್ಪ : ಬರುವ ವರ್ಷ ಕನ್ನಡದಲ್ಲಿ ಮಾಡಿಯೇ ಮಾಡುತ್ತೇವೆ. ಆದರೆ ಪರಭಾಷೆ ಮೇಲೆ ದ್ವೇಷ ಬೇಡ.

ಅಧ್ಯಕ್ಷರು : ನಿಮ್ಮ ಇಲಾಖೆ ಆಫೀಸರ್ಸ್‌ಗೆ ಸರಿಯಾಗಿ ವಿವೇಕ ಹೇಳಿ.. ಪರಭಾಷೆ ಮೇಲೆ ದ್ವೇಷ ಇರಬಾರದು ಅದೇ ರೀತಿ ಕನ್ನಡ ಭಾಷೆಯ ಮೇಲೆ ಅಭಿಮಾನ ಸಹ ಇರಬೇಕು.

ಶ್ರೀ ವಾಟಾಳ್ ನಾಗರಾಜ್ : ಎಲ್ಲಿ ಅಭಿಮಾನ ಅಲ್ಲ. ಅಲ್ಲಿ ನನ್ನ ದ್ವೇಷ. ನಿರಂತರವಾಗಿ ಕಳೆದ 30 ವರ್ಷಗಳಿಂದ ಹೋರಾಟ ಮಾಡಿಕೊಂಡು ಬಂದಿದ್ದೇವೆ. ತಮಗೆ ಗೊತ್ತಿದೆ. ನಾನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುತ್ತೇನೆ. ಸರ್ಕಾರ ಇನ್ನು ಮುಂದಕ್ಕೆ ಎಚ್ಚರಿಕೆ ವಹಿಸಬೇಕು. ತಾವು ಬೆಲ್ ಮಾಡುವುದಕ್ಕಿಂತ ಮುಂಚಿತವಾಗಿ ಕುಳಿತುಕೊಳ್ಳಬೇಕೆಂದು ಇದ್ದೆ ಆದರೆ ಅದು ಸಾಧ್ಯವಾಗಲಿಲ್ಲ.

ಅಧ್ಯಕ್ಷರು : ಅದು ನಿಮ್ಮ ಜಾಯಮಾನಕ್ಕೆ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅಷ್ಟು ಬೇಗ ಕುಳಿತುಕೊಳ್ಳುವುದು ನನ್ನ ಜಾಯಮಾನಕ್ಕೂ ಬಂದಿಲ್ಲವೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಸವರಾಜಪಾಟೀಲ್ ಅಟ್ಟೂರು : ಮಾನ್ಯ ಅಧ್ಯಕ್ಷರೇ, ಹೈದ್ರಾಬಾದ್ ಕರ್ನಾಟಕ ಭಾಗದಿಂದ ಯಾರೂ ಮಾತನಾಡಿಲ್ಲ. 5 ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು : ಇಲ್ಲಿ ಎಮೋಷನಲ್ ಇಂಟಿಗ್ರೇಷನ್ ಆಗಿದೆ, ಹೈದ್ರಾಬಾದ್ ಕರ್ನಾಟಕ ಅಂತ ಅಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ವಿಶಾಲ ಕರ್ನಾಟಕ ಆಗಿದೆ.

ಅಧ್ಯಕ್ಷರು : ಬಹಳ ಜನ ಮಾನ್ಯ ಸದಸ್ಯರು ಮಾತನಾಡುವವರಿದ್ದಾರೆ. ಅಲ್ಲ ವೀರಭದ್ರಪ್ಪನವರು ಮಾತನಾಡಬೇಕೆಂದು ಇದ್ದಾರೆ. ಅವರು ನಮ್ಮ ಜಿಲ್ಲೆಯಲ್ಲಿ ಯಾರೂ ಮಾತನಾಡಿಲ್ಲವೆಂದು ಹೇಳುತ್ತಿದ್ದಾರೆ. ತುಮಕೂರು ಜಿಲೆಯಿಂದ ಯಾರೂ ಮಾತನಾಡಿಲ್ಲ, ತುಮಕೂರು, ಚಿತ್ರದುರ್ಗ ಜಿಲ್ಲಾಪರಿಷತ್ತಿಗೆ ಹೋಗಬೇಕಷ್ಟೇ, ಜಿಲ್ಲಾವಾರು ಮಾತನಾಡುವುದಕ್ಕೆ ಇಲ್ಲಿ ಬೇಡಿಕೆಗಳ ಬಗ್ಗೆ ರಾಜ್ಯ ಮಟ್ಟದಲ್ಲಿ ಮಾತನಾಡುತ್ತಿರುವುದು.

ಶ್ರೀ ಬಿ.ಎಚ್. ಬನ್ನಿಕೋಡ್ : ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆಗಳ ಬಹಳ ಮುಖ್ಯವಾದ ಇಲಾಖೆಗಳ, ಅದಕ್ಕೆ ಅವಕಾಶ ಮಾಡಿ ಕೊಡಿ.

ಅಧ್ಯಕ್ಷರು : ಒಬ್ಬೊಬ್ಬರು ಸಲಹೆ ಕೊಡಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಬಜೆಟ್ ಬಂದಾಗ ಅವಕಾಶ ಕೊಡುತ್ತೇನೆಂದು ತಾವು ಹೇಳುತ್ತಾ ಬಂದಿದ್ದೀರಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಇದು ಬಹಳ ಪ್ರಮುಖವಾದ ವಿಷಯ ಆಗಿರುವುದರಿಂದ ಎಲ್ಲರಿಗೂ ಅವಕಾಶ ಕೊಡಬೇಕು.

ಅಧ್ಯಕ್ಷರು : ಡಾ. ಚೌಧರಿ ತಾವು ಮಾತನಾಡಿ. 5 ನಿಮಿಷ...

ಡಾ. ಚೌಧರಿ ರಾಯ ಗೊಂಡಪ್ಪ ಭೀಮಣ್ಣ (ಸಿಂಧಗಿ) : ಮಾನ್ಯ ಅಧ್ಯಕ್ಷರೇ ಸದನದಲ್ಲಿ ಮಂಡಿಸಿರುವ ಬೇಡಿಕೆಗಳಿಗೆ ವಂದನೆಗಳನ್ನು ಸಲ್ಲಿಸುತ್ತಾ ನಾನು ಮತಕ್ಷೇತ್ರಕ್ಕೆ ಸೀಮಿತವಾಗಿ ನಾಲ್ಕು ಸಮಸ್ಯೆಗಳನ್ನು ಸದನದ ಮುಂದೆ ಇಡಲು ಬಯಸುತ್ತೇನೆ. ಮೊದಲನೆಯದಾಗಿ ಲೋಕೋಪಯೋಗಿ ಇಲಾಖೆ ಬಗ್ಗೆ ಮುಖ್ಯವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನನ್ನ ಮತಕ್ಷೇತ್ರದ ರಸ್ತೆಗಳ ಬಗ್ಗೆ ನಾನು ಒಂದೆರಡು ಮಾತನ್ನು ಹೇಳಬೇಕಾಗುತ್ತದೆ. ಬಹಳ ಜನ ಮಾನ್ಯ ಸದಸ್ಯರು ಈಗಾಗಲಲೇ ರಸ್ತೆಗಳ ಬಗ್ಗೆ ಮಾತನಾಡಿದ್ದಾರೆ. ಆದರೆ ನನ್ನ ಮತಕ್ಷೇತ್ರದ ರಸ್ತೆಗಳು ಅತ್ಯಂತ ಶೋಚನೀಯವಾದ ಪರಿಸ್ಥಿತಿಯಲ್ಲಿ ಇವೆ. ನನ್ನ ಮತಕ್ಷೇತ್ರದಲ್ಲಿ ಸುಮಾರು 102 ಹಳ್ಳಿಗಳು ಇದ್ದು ಅಲ್ಲಿನ ರಸ್ತೆಗಳ ಬಗ್ಗೆ ಹೇಳುವುದಾದರೆ ಅನೇಕ ಹಳ್ಳಿಗಳಿಗೆ ರಸ್ತೆಗಳೇ ಇಲ್ಲ. ಇದ್ದಂತಹ ರಸ್ತೆಗಳು ಶೋಚನಿಯವಾದ ಪರಿಸ್ಥಿತಿಯಲ್ಲಿವೆ. ಲೋಕೋಪಯೋಗಿ ಇಲಾಖೆ ರಸ್ತೆಗಳ ಜಿಲ್ಲಾಪರಿಷತ್ತಿನ ರಸ್ತೆಗಳಿಗಿಂತ ಕನಿಷ್ಟವಾಗಿವೆ ಎನ್ನುವ ಮಾತನ್ನು ನಾನು ಬಹಳ ದುಃಖದಿಂದ ಹೇಳುತ್ತೇನೆ.

ಲೋಕೋಪಯೋಗಿ ಇಲಾಖೆಗೆ ಬಳಪಡುವ ರಸ್ತೆಗಳ ದುರಸ್ತಿ ಕಾರ್ಯ ಯಾವಾಗ ನಡೆದಿದೆ ಎಂಬುದನ್ನು ಮಾನ್ಯಸಚಿವರು ಹೇಳಬೇಕು. ನನ್ನ ಮತ ಕ್ಷೇತ್ರದಲ್ಲಿ ಜನರು ಈ ರಸ್ತೆಗಳ ಬಗ್ಗೆ ಬಹಳ ಕಂಗಾಲಾಗಿದ್ದಾರೆ. ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯವರು ಒಂದೊಂದಾಗಿ ಬಸ್‌ಗಳ ಓಡಾಟವನ್ನು ನಿಲ್ಲಿಸುತ್ತಿದ್ದಾರೆ. ಸಿಂಧಗಿ ತಾಲ್ಲೂಕು ಒಳ್ಳೆಯ ವ್ಯಾಪಾರಿ ಕೇಂದ್ರ. ರಸ್ತೆ ದುರಸ್ತಿಯಾಗದೆ ಅದು ಸಂಪರ್ಕ ಕಳೆದುಕೊಳ್ಳ ತೊಡಗಿದೆ. ಅದೂ ಅಲ್ಲದೆ ನಮ್ಮ ರಸ್ತೆಗಳನ್ನು ನೋಡಿ ಜನರು ಹೆಣ್ಣು ಕೂಡ ಕೊಡುವುದಕ್ಕೆ ಹಿಂದುಮುಂದು ನೋಡುತ್ತಿದ್ದಾರೆ. ನಮ್ಮ ಮತ ಕ್ಷೇತ್ರಕ್ಕೆ. ಆದ್ದರಿಂದ ಮಾನ್ಯ ಅಧ್ಯಕ್ಷರೆ ಈ ರಸ್ತೆಗಳ ಬಗ್ಗೆ ಎಷ್ಟು ಹೇಳಿದರೂ ಕಡಿಮೆ ಇದೆ. ನನ್ನ ಮತ ಕ್ಷೇತ್ರ 224ನೇ ಮತ ಕ್ಷೇತ್ರ. ಅದ್ದರಿಂದಲೇ ಇದೊಂದು ಕಡೆಗಣಿಸಲ್ಪಟ್ಟಿದೆಯೆಂದು ನನಗೆ ಸಂಶಯ ಬರುತ್ತಿದೆ. ಈಗ ನನ್ನ ಮತ ಕ್ಷೇತ್ರದ ಜನರು ತಾಳ್ಮೆಗೆಟ್ಟವರಾಗಿ ಈಗ ಸತ್ಯಾಗ್ರಹ ನಡೆಸಬೇಕೆಂಬ ವಿಚಾರ ಕೂಡ ನಡೆಸಿದ್ದಾರೆ.

ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತವೆ ಎನ್ನುವುದನ್ನು ದಯಮಾಡಿ ತಿಳಿಸಬೇಕು. ನಮಗೇನೂ ಡಾಂಬರ್ ರಸ್ತೆ ಬೇಡ. ಎಲ್ಲಿ ನೋಡಿರೂ ಮೊಳಕಾಲು ಮಟ್ಟದ ಗುಂಡಿಗಳಿರುತ್ತವೆ. ಏರುಪೇರು ನಡೆದಾಡುವುದಕ್ಕೆ ಕೂಡ ಬಾರದ ಸ್ಥಿತಿಯಲ್ಲಿ ನಮ್ಮ ರಸ್ತೆಗಳು ಇವೆ. ಇದರಿಂದ ಅಪಘಾತಗಳ ಸಂಖ್ಯೆ ಬಹಳಷ್ಟು ಹೆಚ್ಚಾಗಿದೆ. 12 ಲಕ್ಷ ನಮ್ಮ ಶಾಸಕರ ಬಜೆಟ್ ಒಂದು ಏನು ಇರುತ್ತದೆ? ಆ ಬಜೆಟ್ ಯಾವ ರೀತಿಯಿಂದ ಸುಧಾರಣೆಯಾಗಿದೆ ಎನ್ನುವುದು ಹೊಳೆಯುತ್ತಿಲ್ಲ. ಅದರಿಂದ ಏನೇನೂ ಉಪಯೋಗವಾಗಿಲ್ಲ, 5 ರಸ್ತೆಗಳಿಗೆ 12 ಲಕ್ಷ ರೂಪಾಯಿ

ಹಾಕಿದ್ದಾರೆಯೆಂದು ಅಧಿಕಾರಿಗಳು ಹೇಳುತ್ತಾರೆ. ಆದರೆ, 5ಲಕ್ಷ ಹೇಗೆ ಹಂಚಿಹಾಕಿದ್ದಾರೋ? ಯಥಾಸ್ಥಿತಿ ಕಾಯ್ದುಕೊಂಡು ಬರುತ್ತಿದೆ. ಆದ್ದರಿಂದ ಕನಿಷ್ಟ ತಮ್ಮ ಇಲಾಖೆಯಲ್ಲಿ ಬರುವಂಥ ಎಲ್ಲಾ ರಸ್ತೆಗಳನ್ನು ಮಾಡಿಸುವುದಕ್ಕಾಗದಿದ್ದರೂ, ಒಂದು ಪ್ರಮುಖವಾದ ರಸ್ತೆ ಇದೆ. ಸಿಂಧಗಿಯಿಂದ ಕಲ್ಕೇರಿ ರಸ್ತೆ, ಸುಮಾರು 35 ಕಿಲೋಮೀಟರ್ ಇದೆ. ಇದು ಬಹಳ ಮುಖ್ಯವಾದ ರಸ್ತೆ. ಕಲ್ಕೇರಿಯು 10 ಸಾವಿರ ಜನಸಂಖ್ಯೆಯುಳ್ಳ ಊರಾಗಿದ್ದು ಅದು ಬಳ್ಳಾರಿ, ಗುಲ್ಬರ್ಗಾ, ಹುಬ್ಬಳ್ಳಿ ಮುಂತಾದ ಕಡೆಯಿಂದ ಮಹತ್ವದ ಬಸ್‌ಗಳು ಓಡುತ್ತವೆ. ಕನಿಷ್ಟ ಈ ರಸ್ತೆಯನ್ನಾದರೂ ಸುಧಾರಣೆ ಮಾಡಿದರೆ ನಮಗೆ ಮಹದುಪಕಾರ ಮಾಡಿದಹಾಗಾಗುತ್ತದೆ. ಇನ್ನೊಂದು ಸಿಂಧಗಿ ಬಸ್‌ಸ್ಟ್ಯಾಂಡ್ ಎದುರುಗಡೆ ಇರುವಂಥಾದ್ದು. ಇದು ಜೇವರ್ಗಿ ಮತ್ತು ಚಿಕ್ಕೋಡಿ ರಸ್ತೆ. ಇದು ಪೂರ್ತಿ ಮಾಡುವುದು ಬೇಡ, ತುಂಡು ರಸ್ತೆಯಾದರೂ ಮಾಡಬೇಕು. ನಮ್ಮ ಊರಿಗೆ ಬಂದ ಜನ ಈ ರಸ್ತೆ ನೋಡಿ ಏನು ಗಲೀಜಾಗಿದೆಯೆಂದು ನಗುತ್ತಿದ್ದಾರೆ. ಆದ್ದರಿಂದ ಈ ಶೋಚನೀಯ ಸ್ಥಿತಿಯಲ್ಲಿರುವ ಈ ರಸ್ತೆ ಅಂದರೆ, ಬಸ್‌ಸ್ಟ್ಯಾಂಡ್ ಮುಂದಿನ ರಸ್ತೆ ಹಾಗೂ ಕಲ್ಕೇರಿ ಮತ್ತು ಸಿಂಧಗಿ ರಸ್ತೆ ಸುಮಾರು 35 ಕಿಲೋಮೀಟರ್. ಈ ಎರಡು ಮಾಡಿಕೊಟ್ಟರೆ ನಮಗೆ ಅತ್ಯಂತ ಉಪಕಾರ ಮಾಡಿದಂತಾಗಾಗುತ್ತದೆ. ನಮ್ಮಲ್ಲಿ 91-92ನೇ ಸಾಲಿನ ಬಜೆಟ್‌ನಲ್ಲಿ ಕೂಡ ರಸ್ತೆ ಅಗಲ ಮಾಡುವಿಕೆ, ಸಿ.ಡಿ.ವರ್ಕ್ಸ್, ಸೇತುವೆ ನಿರ್ಮಾಣ ಮುಂತಾದ ಕಾಮಗಾರಿಗಳ ಸಲುವಾಗಿ ಸುಮಾರು 45 ಲಕ್ಷ ರೂಪಾಯಿಗಳ ಅಂದಾಜು ಪತ್ರ ಸಲ್ಲಿಸಲಾಗಿದೆ. ಈ ಅಂದಾಜು ಪತ್ರಿಕೆ ಈ ಎಲ್ಲಾ ರಸ್ತೆಗಳಿಗೆ ಹಾಕಿದರೆ ಮತ್ತೆ ಅದೇ ತರಹ ತಿರುಪತಿ ಕಷ್ಟದಂಗಾತ್ತದೆ.

ಆದ್ದರಿಂದ ಇದು ಆಗಗೊಡದೆ ಕೇವಲ ಒಂದೇ ರಸ್ತೆಗಾದರೂ, ಕಲ್ಕೇರಿ ಅಥವಾ ರಸ್ತೆಗೆ ಹಾಕಿದರೆ ಸ್ವಲ್ಪವಾದರೂ ಉಪಯೋಗವಾಗುತ್ತದೆಂದು ಇಲಾಖೆ ಮುಗಿದ ನಂತರ ಏನು ಇವತ್ತು ವಿದ್ಯುಚ್ಛಕ್ತಿ ಇಲಾಖೆ ಇದೆ? ಅದರ ಬಗ್ಗೆ ಹೇಳುತ್ತಾನೆ. ಮೊನ್ನೆ ತುಮಕೂರಿನಲ್ಲಿ ಸತ್ಯಾಗ್ರಹ ಆಯಿತು. ಅಸಮರ್ಪಕ ವಿದ್ಯುತ್ ಪೂರೈಕೆ ಮತ್ತ ಲೋ ವೋಲ್ಟೇಜ್ ಈ ಎರಡೂ ಸರ್ವೇಸಾಮಾನ್ಯವಾಗಿಬಿಟ್ಟಿದೆ. ಈ ಎರಡು ಸಮಸ್ಯೆಗಳೇನಿವೆ ಇವುಗಳನ್ನು ಸುಧಾರಣೆ ಮಾಡಬೇಕೆಂದು ಮಾನ್ಯ ಇಂಧನ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ. ಇನ್ನೊಂದು ಸಮಸ್ಯೆ ನನ್ನ ಮತ ಕ್ಷೇತ್ರಕ್ಕೆ ಸಂಬಂಧಿಸಿದ್ದು ಎಂದರೆ, ಈ ಕಲ್ಕೇರಿ ಎಂದು ನಾನು ಏನು ಹೇಳಿದೆ ಅದು ದೊಡ್ಡ ಊರು. ಅಲ್ಲಿಗೆ ಬೇರೆ ತಾಲ್ಲೂಕಿನಿಂದ ವಿದ್ಯುತ್ ಸಪ್ಲೈ ಆಗುತ್ತದೆ. ಅಲ್ಲಿ ವಿದ್ಯುತ್ ಇದೆಯೆಂದು ಗೊತ್ತಾಗುವುದು ಹೇಗೆಂದರೆ, ಕೇವಲ ಬಲ್ಬನಲ್ಲಿ ಮಾತ್ರ ಕೆಂಪು ಒಂದು ಸೂಜಿ ತರಹ ಕಂಡರೆ ಕಾಣುತ್ತದೆ. ವೋಲ್ಟೇಜ್ ಬರುವುದಿಲ್ಲ. ಊರಿಗೆ ವಿದ್ಯುತ್ ಇದೆಯೆಂದು ತಿಳಿದುಕೊಳ್ಳಲಿಕ್ಕೆ ಆ ಕೆಂಪು ಸೂಜಿ ತರಹ ಬಲ್ಬನಲ್ಲಿರುತ್ತದೆ. ಅದರಿಂದ ನಾವು ತಿಳಿದುಕೊಳ್ಳಬೇಕಾಗುತ್ತದೆ. ಟ್ಯೂಬಲೈಟ್ಸ್ ಅಂತೂ ಯಾವುವೂ ಹತ್ತುವ ಹಾಗಿಲ್ಲ.

ಆದುದರಿಂದ ಅಲ್ಲಿಗೆ 33 ಕಿ.ವ್ಯಾಟ್ಸ್ ಸ್ಟೇಷನ್ ಸ್ಯಾಂಕ್ಷನ್ ಆಗಿದೆ. ಅದಕ್ಕೆ 32 ಲಕ್ಷ ರೂಪಾಯಿಯನ್ನು ಮಂಜೂರು ಮಾಡಿ ಸುಮಾರು ದಿವಸವಾಯಿತು. ಆದರೆ ಆ ಇಲಾಖೆಯಲ್ಲಿ ಕೆಲಸವನ್ನು ಏಕೋ ಕೈಗೆತ್ತಿಕೊಳ್ಳುತ್ತಿಲ್ಲ. ಬೇಕಾದಷ್ಟು ಸಲ ಅಧಿಕಾರಿಗಳನ್ನು ಕೇಳಿದರೂ ಅವರು ಉದಾಸೀನ ಭಾವನೆಯನ್ನು ತೋರಿಸುತ್ತಿದ್ದಾರೆ. ಆದ್ದರಿಂದ 33 ಕಿ.ವ್ಯಾಟ್ಸ್ ಸ್ಟೇಷನ್ ಅನ್ನು ಕಲ್ಕೆರೆಯಲ್ಲಿ ಬೇಗನೆ ಸ್ಥಾಪಿಸಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇದೇ ಊರಿಗೆ ಸೆಕ್ಷನ್ ಆಫೀಸ್ ಆಗಬೇಕೆಂದು ಬೇಡಿಕೆ ಇದೆ. ಏಕೆಂದರೆ ಇಲ್ಲಿ ಬಿಲ್ ತುಂಬಬೇಕಾದರೆ ಮತ್ತು

ಹೋಗಬೇಕಾಗುತ್ತದೆ. ಆದ್ದರಿಂದ ಸೆಕ್ಷನ್ ಆಫೀಸ್ ಆಗಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು 11 ಕೆ.ವ್ಯಾಟ್ಸ್ ಸ್ವಿಚ್ ಗೇರ್ ಇದೆ. ಇದನ್ನು ಸುಮಾರು 25 ವರ್ಷಕ್ಕೊಮ್ಮೆ ಇದನ್ನು ಬದಲಾಯಿಸುತ್ತಾರೆ. ಇದು ಸಿಂಧಗಿಯಲ್ಲಿದೆ. ಇದ್ದುದ್ದು 25 ವರ್ಷಗಳದ್ದು ಎನ್‌ಜಿಇಎಫ್ ನವರದ್ದು, ಅದನ್ನು ಇನ್ನುವರೆಗೂ ಬದಲಾಯಿಸಿಲ್ಲ. ಒಮ್ಮೆ ಅದಕ್ಕೆ ಬೆಂಕಿಯೂ ಕೂಡ ಬಿದ್ದಿತ್ತು. ಅಲ್ಲಿ ಕೆಲಸ ಮಾಡುತ್ತಿರುವವರು ಜೀವದ ಭಯದಿಂದ ಕೆಲಸ ಮಾಡುತ್ತಿದ್ದಾರೆ. ಇದನ್ನು ಒಳ್ಳೆಯ ಮಾಡ್ರನ್ ಎಕ್ಯುಪ್‌ಮೆಂಟ್ ಹಾಕಿ ರಿಪ್ಲೇಸ್‌ಮೆಂಟ್ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಸಿಂಧಗಿಯಲ್ಲಿ ಕ್ಯಾಪ್ಯಾಸಿಟಿಯನ್ನು ಇನ್‌ಕ್ರೀಸ್ ಮಾಡಬೇಕು. ಏಕೆಂದರೆ ಪ್ರತಿ ವರ್ಷ ನ್ಯೂ ಲೋಡ್ ಆಡ್ ಆಗುತ್ತಿದೆ. ಆದ್ದರಿಂದ ವೋಲ್ಟೇಜ್ ಹೋಗುತ್ತಿದೆ. ಆದ್ದರಿಂದ ತಾವು ಕನಿಷ್ಟ ಸಿಂಧಗಿಗೆ 10 ಎಂ.ವಿ. ಇಲ್ಲದಿದ್ದರೂ 5 ಎಂ.ವಿ. ಅಡಿಷನ್ ಮಾಡಿ ಪವರ್ ಸಪ್ಲೈ ಇಂಪ್ರೂವ್ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ನೀರಾವರಿ ಪಂಪುಸೆಟ್ಟುಗಳ ಟ್ರಾನ್ಸ್‌ಫಾರ್‌ಮರ್‌ಗಳು ಸುಟ್ಟುಹೋಗುತ್ತಿವೆ. ಅದನ್ನು ರೀಪ್ಲೇಸ್‌ಮೆಂಟ್ ಮಾಡಬೇಕಾದರೆ 1-2 ತಿಂಗಳುಗಳು ಹಿಡಿಯುತ್ತದೆ. ಹೀಗಾದರೆ ರೈತರ ಗತಿ ಏನು?

ಆದ್ದರಿಂದ ಮೇಲಿಂದ ಮೇಲೆ ಟ್ರಾನ್ಸ್‌ಫಾರ್‌ಮರ್‌ಗಳಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಟ್ರಾನ್ಸ್‌ಫಾರ್‌ಮರ್‌ಗಳು ಸುಟ್ಟಾಗ ಅದನ್ನು ತಕ್ಷಣ ರಿಪ್ಲೇಸ್‌ಮೆಂಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಐ.ಪಿ. ಸೆಟ್ಟುಗಳ ಪೊಟೆನ್‌ಷಿಯಲ್ ಏನಿದೆ ಅದು ಸಿಂಧಗಿಗೆ ಹೆಚ್ಚಾಗಿದೆ. ಅದಕ್ಕಾಗಿ ಯಾವಾಗಲೂ ವಿದ್ಯುತ್ ಇಲಾಖೆಯಲ್ಲಿ ಕೇಳಿದರೂ ಮೆಟಿರಿಯಲ್ಸ್ ಅಂದರೆ, ಕೇಬಲ್ಸ್, ಕಟೌಟ್ಸ್, ಪೋಲ್ಸ್ ಏನಿವೆ. ಇದನ್ನು ನಮಗೆ ಯಾವಾಗ ಸಪ್ಲೈ ಮಾಡುತ್ತಾರೋ ಗೊತ್ತಿಲ್ಲ. ನಾನು ಒಂದು ವರ್ಷದಿಂದ ಕೇಳಿದರೂ ಈ ಮೆಟಿರಿಯಲ್ಸ್ ಇಲ್ಲ ಎಂದು ಹೇಳುತ್ತಿದ್ದಾರೆ. ಏಕೆ ಮೆಟಿರಿಯಲ್ಸ್ ಸಪ್ಲೈ ಆಗುತ್ತಿಲ್ಲ. ಮೆಟಿರಿಯಲ್ಸ್ ಸಪ್ಲೈ ಆದರೂ ಕಳಪೆ ಮಟ್ಟದ ಮೆಟಿರಿಯಲ್ಸ್ ಸಪ್ಲೈ ಆಗುತ್ತದೆ. ಆದ್ದರಿಂದ ಇದನ್ನು ತ್ವರಿತವಾಗಿ ಹೋಗಲಾಡಿಸಬೇಕು. ಇನ್ನು ಲೈನ್ ಮ್ಯಾನ್‌ಗಳ ಕೊರತೆ ಇದೆ. ಅವರು ಹೇಳಿದ್ದುದು ಅಕ್ಷರಸಹ ಸತ್ಯವಿದೆ. ನಮ್ಮಲ್ಲಿ ಲೈನ್‌ಮ್ಯಾನ್‌ಗಳಿಗೆ ಹೆದರಿ ಅವರುಗಳನ್ನು ವರ್ಗಾವಣೆ ಮಾಡಿಲ್ಲ. ಅವರು 10-15 ವರ್ಷಗಳಿಂದಲೂ ಇದ್ದಾರೆ. ಅವರನ್ನು ಕೂಡಲೆ ವರ್ಗಾವಣೆ ಮಾಡಬೇಕು. ಇದಲ್ಲದೆ ಸ್ವಲ್ಪ ಲೈನ್‌ಮ್ಯಾನ್‌ಗಳನ್ನು ಕೂಡಲೇ ರಿಕ್ರೂಟ್‌ಮೆಂಟ್ ಮಾಡಿ ಪೋಸ್ಟಿಂಗ್ಸ್ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಕೆಲವು ಲಮಾಣಿ ತಾಂಡಗಳಿಗೆ ವಿದ್ಯುತ್ ಪೂರೈಕೆ ಇರುವುದಿಲ್ಲ. ಸ್ವಲ್ಪ ತಂಡಗಳಿಗೆ ವಿದ್ಯುತ್ ಪೂರೈಕೆ ಇದೆ. ಅಂತಹ ತಾಂಡಗಳಿಗೆ ವಿದ್ಯುತ್ ಪೂರೈಕೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಇರಿಗೇಷನ್ ಬಗ್ಗೆ ಒಂದೆರಡು ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು : ಇರಿಗೇಷನ್ ಬಗ್ಗೆ ಸಾಕಷ್ಟು ಸದಸ್ಯರುಗಳು ಮಾತನಾಡಿದ್ದಾರೆ.

ಶ್ರೀ ಆರ್.ಬಿ. ಚೌಧುರಿ : ನಮ್ಮ ಮತಕ್ಷೇತ್ರದ್ದು ಹೇಳಬೇಕು.

ಅಧ್ಯಕ್ಷರು : ಹೇಳಿ.

ಶ್ರೀ ಆರ್.ಬಿ. ಚೌಧುರಿ : ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಇಂಡಿ ಬ್ರಾಂಚ್ ಕೆನಾಲ್ ಕೆಲಸ ತ್ವರಿತವಾಗಿ ಆಗುತ್ತಿಲ್ಲ.

ಅಧಿಕಾರಿಗಳ ಉದಾಸೀನತೆಯಿಂದ ಹೀಗಾಗಿದೆ ಎಂದು ದೂರನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಜೇವರ್ಗಿ, ಶಹಪುರ, ಬ್ರಾಂಚ್ ನೋಡಿದರೆ ಒಂದೂ ಕೆಲಸವೂ ನಮ್ಮ ಬ್ರಾಂಚ್‌ನಲ್ಲಿ ಆಗಿಲ್ಲ, ಇದರಿಂದ ಈಗಾಗಲೇ ನಾವು ಬಹಳ ಭೂಮಿಯನ್ನು ಕಳೆದುಕೊಂಡಿದ್ದೇವೆ. ನಮ್ಮಲ್ಲಿ ಇರಿಗೇಷನ್‌ಆದರೂ ಎರಡೂವರೆ-ಮೂರು ಲಕ್ಷ ಎಕರೆಗೆ ಮಾತ್ರ ಇರಿಗೇಷನ್ ಆಗುತ್ತದೆ.

1.10 ಪಿ.ಎಂ.

ಹಾಗೆಯೇ ನಮ್ಮ ಭಾಗದ ಮುಳವಾದ ಏತ ನೀರಾವರಿ ಯೋಜನೆ ಬಹಳ ದಿವಸಗಳಿಂದ ನಮಗೆ ಕನಸಾಗಿಯೇ ಉಳಿದಿದೆ. ಅದನ್ನು ಪ್ರಾರಂಭ ಮಾಡಬೇಕಾದರೆ ಜಾಕ್‌ವೆಲ್‌ನ್ನಾದರೂ ಕೂರಿಸಿ ಬೇಕಾಗುತ್ತದೆ. ಈ ಬಗ್ಗೆ ಇರುವ ನಮ್ಮ ಆಸೆಯನ್ನು ತಾವುಗಳು ಪೂರೈಸುತ್ತೀರಿ ಎಂದು ಭಾವಿಸುತ್ತೇನೆ. ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ.ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ) : ಸನ್ಮಾನ್ಯ ಸಭಾಧ್ಯಕ್ಷರೆ, ಇವೊತ್ತು ಬಹಳ ದೊಡ್ಡ ಇಲಾಖೆಗಳಾದಂಥ ನೀರಾವರಿ, ಲೋಕೋಪಯೋಗಿ ಮತ್ತು ಸಣ್ಣ ನೀರಾವರಿ ಹಾಗೂ ವಿದ್ಯುಚ್ಛಕ್ತಿ ಮುಂತಾದ ಇಲಾಖೆಗಳ ಬಗ್ಗೆ ಇಟ್ಟಿರುವ ಬೇಡಿಕೆಗಳನ್ನು ಬೆಂಬಲಿಸುತ್ತಾ ನಾನು ಕೆಲವು ಸಲಹೆಗಳನ್ನು ಕೊಡಲು ಇಷ್ಟಪಡುತ್ತೇನೆ. ಇರಿಗೇಷನ್ ವಿಚಾರದಲ್ಲಿ ಈಗಾಗಲೇ ಬಹಳಷ್ಟು ಜನ ಸ್ನೇಹಿತರು ಮಾತನಾಡಿದ್ದಾರೆ. ನಾವು ಕಾವೇರಿ ಬೇಸಿನ್ ಪ್ರದೇಶದಿಂದ ಬಂದಿರತಕ್ಕಂಥ ಜನರು. ಮಂಡ್ಯ, ಮೈಸೂರು, ಹಾಸನ, ತುಮಕೂರು ಹೀಗೆ ನಾಲ್ಕೈದು ಜಿಲ್ಲೆಗಳು ಸಂಪೂರ್ಣವಾಗಿ ಕಾವೇರಿ ಬೇಸಿನ್‌ನಲ್ಲಿ ಏನಿದೆಯೋ ಅವರೆಲ್ಲರೂ ಈ ಅಣೆಕಟ್ಟುಗಳ ಮೇಲೆ ಅವಲಂಬಿರತಕ್ಕಂಥ ಜನ. ಈಗಾಗಲೇ ಕಾವೇರಿ ಬೇಸಿನ್‌ನಲ್ಲಿ ಹೇಮಾವತಿ ಅಣೆಕಟ್ಟು ಆಗಿದೆ, ಹಾರಂಗಿ ಅಣೆಕಟ್ಟು ಆಗಿದೆ, ಕಬಿನಿ ಅಣೆಕಟ್ಟು ಆಗಿದೆ, ಹಾರಂಗಿಯಲ್ಲಿ ಸುಮಾರು ಎರಡು ಲಕ್ಷ ಎಕರೆ ಪ್ರದೇಶಗಳು ಈಗಾಗಲೇ ಅಚ್ಚುಕಟ್ಟು ಪ್ರದೇಶಕ್ಕೆ ಬಂದಿರತಕ್ಕಂಥಾದ್ದು ಇದೆ.

ಒಟ್ಟಾರೆ ಕಾವೇರಿ ಬೇಸಿನ್ ಏನಿದೆ ಅದರಲ್ಲಿ ಒಟ್ಟು 20 ಲಕ್ಷ ಎಕರೆ ಪ್ರದೇಶವು ಅಚ್ಚುಕಟ್ಟಿಗೆ ಬಂದಿರತಕ್ಕಂಥಾದ್ದನ್ನು ನಾವು ಇರಿಗೇಷನ್ ಇಲಾಖೆಯ ಮೂಲಕ ಕಂಡುಕೊಂಡಿದ್ದೇವೆ. 11 ಲಕ್ಷ ಎಕರೆ ಈಗಾಗಲೇ ಅಚ್ಚುಕಟ್ಟಿಗೆ ಬಂದಿರತಕ್ಕಂಥಾದ್ದು ಇನ್ನೂ ಸುಮಾರು 10 ಲಕ್ಷ ಎಕರೆ ಬರತಕ್ಕಂಥಾದ್ದು ಇದೆ. ಇದಕ್ಕೆ ಸಾಕಷ್ಟು ಹಣವನ್ನು ಸರಕಾರದವರು ಕೊಡಬೇಕಾಗಿದೆ. ನಾವು ಬಹಳ ವರ್ಷಗಳಿಂದ ಈ ಬಗ್ಗೆ ಪದೇ ಪದೇ ಕೇಳುತ್ತಾ ಇದ್ದೇವೆ. ಹಾರಂಗಿ ಯೋಜನೆಯಾಗಲಿ, ಕಾವೇರಿ ಬೇಸಿನ್ ಆಗಲಿ, ವಿರೋಧ ಮಾಡಿರುವುದರಿಂದ ಕೇಂದ್ರ ಸರಕಾರದವರಿಂದ ಇಂಥ ಯೋಜನೆಗಳಿಗೆ ಸಾಕಷ್ಟು ಹಣ ಸಿಗುತ್ತದೆ. ಇದಕ್ಕಾಗಿ ರಾಜ್ಯ ಸರಕಾರದವರು ನೇರವಾಗಿ ಇದನ್ನು ವಿನಿಯೋಗ ಮಾಡಬೇಕಾದಂಥ ಪರಿಸ್ಥಿತಿಯನ್ನು ನಾವು ನೋಡುತ್ತಾ ಇದ್ದೇವೆ. ಸಾಕಷ್ಟು ಹಣವನ್ನು ರಾಜ್ಯಸರಕಾರದವರು ಖರ್ಚು ಮಾಡಿದ್ದಾರೆ. ಕಳೆದ 10-15 ವರ್ಷಗಳಿಂದ ಕಾವೇರಿ ಬೇಸಿನ್‌ನಲ್ಲಿ ಇನ್ನೂ ಉಳಿದಿರತಕ್ಕಂಥ 10 ಲಕ್ಷ ಎಕರೆ ಪ್ರದೇಶವನ್ನು ಅಚ್ಚುಕಟ್ಟಿಗೆ ಒಳಪಡಿಸಬೇಕಾಗಿದರೆ ಸುಮಾರು 1,300ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಅಂದಾಜು ಮಾಡಲಾಗಿದೆ. ಆ ಒಂದು ಅಂದಾಜಿಗೆ ಈ ಘನ ಸದನವು ಸಂಪೂರ್ಣವಾದಂಥ ಒಪ್ಪಿಗೆಯನ್ನು ಕೊಡಬೇಕಾಗಿದೆ.

ಮಾನ್ಯ ಅಧ್ಯಕ್ಷರೆ, ಮೈಸೂರು, ಮಂಡ್ಯ, ಜಿಲ್ಲೆಗಳಲ್ಲಿನ ಇತರ ಎಲ್ಲಾ ಕೆಲಸವನ್ನು

ಹೇಳಬಯಸುತ್ತೇನೆ. ನನ್ನ ಕ್ಷೇತ್ರದಲ್ಲಿ ಕಾವೇರಿ ಬೇಸಿನ್‌ನಲ್ಲಿ ಬರತಕ್ಕಂಥ ಹಾರಂಗಿ ಯೋಜನೆಗೆ ಸಂಬಂಧಪಟ್ಟಂಥ ಲಿಫ್ಟ್‌ಇರಿಗೇಷನ್ ಯೋಜನೆ ಒಂದಿದೆ. ಕರಟಿಕ್ಕನ ಕೆರೆ ಏತನೀರಾವರಿ ಯೋಜನೆಯನ್ನು ಯಾವಾಗ ಹಾರಂಗಿ ಅಣೆಕಟ್ಟನ್ನು ಸ್ಥಾಪನೆ ಮಾಡಿದ್ದಾರೋ ಅವೊತ್ತೆ ಈ ಯೋಜನೆ ಕೂಡ ಮಂಜೂರು ಆಗಿದೆ. ಟೆಕ್ನಿಕಲ್ ಅಪ್ರೂವಲ್ ಕೂಡ ಆಗಿದೆ. ಹುಣಸೂರು, ಪಿರಿಯಾಪಟ್ಟಣ, ಅರಕಲಗೂಡು, ಈ ಮೂರು ತಾಲ್ಲೂಕುಗಳಿಗೆ ಇದರಿಂದ ಅನುಕೂಲ ಆಗುತ್ತದೆ. ಹಾರಂಗಿಯಲ್ಲಿ 30 ಸಾವಿರ ಎಕರೆ ಪ್ರದೇಶಕ್ಕೆ ಇದರಿಂದ ಅನಕೂಲವಾಗುತ್ತದೆ. ಇದಕ್ಕೆ ಮಾನ್ಯ ರಾಮಕೃಷ್ಣ ಹೆಗಡೆಯವರು, ದೇವೇಗೌಡರು ಶಂಕುಸ್ಥಾಪನೆ ಮಾಡಿದ್ದರು, ಇದಕ್ಕೆ ಬೇಕಾದ ಕಾಲುವೆ ಕೆಲಸವನ್ನು ಕೂಡ ಮಾಡಿದ್ದಾರೆ. ಆದರೆ ಯಾವ ಕಾರಣಕ್ಕಾಗಿ ಕೆಲಸ ನಿಂತಿವೆ ಎಂಬುದು ಗೊತ್ತಾಗುತ್ತಿಲ್ಲ. ಸುಮಾರು 5-6 ಕಿ.ಮೀ. ಉದ್ದದ ಕೆಲಸ ಮಾಡಿ 10 ರಿಂದ 25 ಲಕ್ಷ ರೂಪಾಯಿಗಳವರೆಗೆ ಹಣವನ್ನು ಕೂಡ ಖರ್ಚು ಮಾಡಿದ್ದಾರೆ. ಇದರ ಒಟ್ಟು ಅಂದಾಜು ಸುಮಾರು 40 ಕೋಟಿ ರೂಪಾಯಿಗಳು ಆಗುತ್ತವೆ. ಇದರಿಂದಾಗಿ 40 ಸಾವಿರ ಎಕರೆ ಅಚ್ಚುಕಟ್ಟಿಗೆ ಬರುತ್ತದೆ. ಇದಕ್ಕಾಗಿ ಒಂದು ಎಕರೆಗೆ 10 ಸಾವಿರ ರೂ.ಗಳು ಖರ್ಚಾಗುತ್ತವೆ. ಒಂದು ಎಕರೆಗೆ 15 ಸಾವಿರಗಳ ಖರ್ಚು ಬಂದಿರತಕ್ಕಂಥ ನಿದರ್ಶನಗಳು ಇವೆ. ಈ ಒಂದು ಪ್ರಾಜೆಕ್ಟ್ ನಿಂತಿರುವುದರಿಂದ ನಮ್ಮ 2-3 ತಾಲ್ಲೂಕುಗಳಿಗೆ ಬಹಳ ಅನ್ಯಾಯ ಮಾಡಿದಂತಾಗಿದೆ. ಇದನ್ನು ಸರಿಪಡಿಸಬೇಕಾದರೆ, ಕೆಲಸವನ್ನು ಕೈಗೆತ್ತಿಕೊಳ್ಳಬೇಕಾಗಿದೆ. ಈ ಸರಕಾರ ಹೊಸದಾಗಿ ಬಂದಾಗ ಹಣಕಾಸಿನ ಮಂತ್ರಿಗಳನ್ನು ಲೋಕೋಪಯೋಗಿ ಇಲಾಖೆ ಮಂತ್ರಿಗಳನ್ನು ಕರೆದುಕೊಂಡು ಹೋಗಿ, ಈ ಲಿಫ್ಟ್ ಇರಿಗೇಷನ್‌ಗಳನ್ನು ಬಗ್ಗೆ ತೋರಿಸಿದ್ದೇವೆ.

ಆಗ ಅವರು ಸಂಪೂರ್ಣವಾಗಿ ಈ ಕೆಲಸವನ್ನು ನೆರವೇರಿಸುತ್ತೇವೆ ಎಂಬ ಆಶ್ವಾಸನೆಯನ್ನು ಕೂಡ ಕೊಟ್ಟಿದ್ದರು. ಅಷ್ಟರಲ್ಲಿಯೇ ಅವರ ಪೋರ್ಟ್‌ಫೋಲಿಯೋ ಬದಲಾಯಿತು. ಈಗ ಆ ಸ್ಥಾನಕ್ಕೆ ಮಾನ್ಯ ಮಲ್ಲಾರಿಗೌಡ ಪಾಟೀಲರು ಬಂದಿದ್ದಾರೆ. ಅವರನ್ನು ಕೂಡ ಸ್ಥಳಕ್ಕೆ ಕರೆದುಕೊಂಡು ಹೋಗಿ ಇದರ ಅವಶ್ಯಕತೆ ಇದೆಯೆಂದು ಹೇಳಿದ್ದೇವೆ. ಅವರೂ ಕೂಡ ನಮಗೆ ಭರವಸೆಯನ್ನು ಕೊಟ್ಟಿದ್ದಾರೆ. ಆದರೆ ಅದು ಇನ್ನೂ ಭರವಸೆಯಾಗಿಯೇ ಉಳಿದಿದೆ. ಈ ಮೂರು ತಾಲ್ಲೂಕುಗಳ ಜನರಿಗೆ ತಾವು ಅನ್ಯಾಯ ಮಾಡಬಾರದು. ಈ ಒಂದು ಯೋಜನೆಯನ್ನು ಮಾಡುವುದರಿಂದ 30 ಸಾವಿರ ಎಕರೆ ಪ್ರದೇಶ ಅಚ್ಚುಕಟ್ಟಿಗೆ ಬರುತ್ತದೆ ಎನ್ನುವ ಅಂಶ ಸರಕಾರದವರು ಜ್ಞಾಪಕದಲ್ಲಿಟ್ಟು ಕೊಳ್ಳಬೇಕಾಗಿದೆ ಎಂದು ಹೇಳಬಯಸುತ್ತೇನೆ. ಮೈನರ್‌ಇರಿಗೇಷನ್‌ಗೆ ಸಂಬಂಧಪಟ್ಟ ನಮ್ಮ ತಾಲ್ಲೂಕಿನ ರೈತರ ಕೆರೆ ಎಂಬ ಪ್ರಾಜೆಕ್ಟ್‌ನ್ನು ಕೂಡ ಮಾಡಲು ನಮ್ಮ ಮಂತ್ರಿಗಳು ಅಂದಾಜುನ್ನು ತಯಾರು ಮಾಡಿದ್ದಾರೆ. ಇದಕ್ಕೆ ಸುಮಾರು 70 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರೆ, 800 ಎಕರೆ ಪ್ರದೇಶವು ಅಚ್ಚುಕಟ್ಟಿಗೆ ಬರುತ್ತದೆ ಎಂಬ ಒಂದು ಅಂದಾಜು ಇದೆ. ಇದರಿಂದ ಕೆಲವು ಹೋಬಳಿಗಳಿಗೂ ಅನುಕೂಲವಾಗುತ್ತದೆ. ಈ ಕೆಲಸವನ್ನು ಕೂಡ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಡಿಸ್‌ಪ್ಯೂಟ್ ಇರತಕ್ಕ ಸಂದರ್ಭದಲ್ಲಿ ಸಂಪೂರ್ಣವಾಗಿ ನಾವು ನೀರನ್ನು ಉಪಯೋಗಿಸಕೊಳ್ಳ ಬೇಕಾಗಿದೆ. ಈ ನೀರಾವರಿಯ ಅಚ್ಚುಕಟ್ಟನ್ನು ಹೆಚ್ಚಿಸಲು ಯೋಜನೆಗಳಿಗಾಗಿ ಹೆಚ್ಚು ಹಣವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಲೋಕೋಪಯೋಗಿ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ಬಗ್ಗೆ ನಮ್ಮ ಸ್ನೇಹಿತರನೇಕರು ಮಾತನಾಡಿದ್ದಾರೆ. ರಸ್ತೆಗಳ

ರಸ್ತೆಗಳು ಕೂಡ ಕೆಟ್ಟಪರಿಸ್ಥಿತಿಯಲ್ಲಿದೆ. ಎಲ್ಲಿಯೂ ಜನರು, ವಾಹನಗಳು ಸರಿಯಾಗಿ ಓಡಾಡುವಂಥ ಪರಿಸ್ಥಿತಿಯಲ್ಲಿಲ್ಲ. ಜಿಲ್ಲಾಪರಿಷತ್ ಅಸ್ತಿತ್ವಕ್ಕೆ ಬಂದ ಮೇಲೆ ಪಿಡಬ್ಲ್ಯೂನವರ ಉಸ್ತುವಾರಿಯಲ್ಲಿದ್ದಂಥ ರಸ್ತೆಗಳು ಜಿಲ್ಲಾಪರಿಷತ್‌ಗೆ ವರ್ಗಾಯಿಸಿದರು. ಇದರಿಂದ ಈ ರಸ್ತೆಗಳೆಲ್ಲವೂ ಅಧ್ವಾನಕ್ಕೊಳಗಾಯಿತು. ಈ ಬಗ್ಗೆ ಲೋಕೋಪಯೋಗಿ ಇಲಾಖೆಯವರು ಕೂಡ ತಮ್ಮ ವರದಿಯನ್ನು ಕೊಡುತ್ತಾ ಇದ್ದಾರೆ. ಇದನ್ನು ಮಾನ್ಯ ಸಚಿವರು ಗಣನೆಗೆ ತೆಗದುಕೊಳ್ಳಬೇಕು. ಈಗ ಜಿಲ್ಲಾಪರಿಷತ್‌ನವರಿಗೆ ಕೊಟ್ಟ ರಸ್ತೆಗಳನ್ನು ಪುನಃ ತಮ್ಮ ಇಲಾಖೆಗೆ ವಾಪಸ್ ತೆಗೆದುಕೊಂಡು ಸಾಕಷ್ಟು ಹಣವನ್ನು ಒದಗಿಸಿ, ಇವುಗಳನ್ನು ಸರಿಪಡಿಸಿಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರ ನನ್ನ ಹಾಗೂ ಮಾನ್ಯ ಬೆಳ್ಳಿಯಪ್ಪನವರ ಕ್ಷೇತ್ರಕ್ಕೆ ಸಂಬಂಧಪಟ್ಟದ್ದುದು. ಅಲ್ಲಿ ಒಂದು ಬ್ರಿಡ್ಜ್‌ನ್ನು ಸರಕಾರದವರು ಮಂಜೂರು ಮಾಡಿದ್ದು, ನಾವೆಲ್ಲರೂ ಹೋಗಿ ಫೌಂಡೇಶನ್ ಕೂಡ ಹಾಕಿದ್ದಾಗಿದೆ. ಇದರ ಅಂದಾಜು 30 ಲಕ್ಷ ರೂಪಾಯಿಗಳು ಈಗಾಗಲೇ 15 ಲಕ್ಷ ರೂಪಾಯಿಗಳಷ್ಟು ಕೆಲಸಕ್ಕಾಗಿ ಖರ್ಚು ಮಾಡಿದ್ದಾರೆ. ಇನ್ನು 10 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ, ಈ ಬ್ರಿಡ್ಜ್ ತಯಾರಾಗುತ್ತದೆ. ಇದರಿಂದ ಹೆಬ್ಬಾಲೆ ಮತ್ತು ಪಿರಿಯಪಟ್ಟಣಕ್ಕೆ ಸಂಪರ್ಕವನ್ನು ಕಲ್ಪಿಸುತ್ತದೆ. ಆದ್ದರಿಂದ ಇದನ್ನು ತ್ವರಿತವಾಗಿ ಪೂರೈಸಿಕೊಡಬೇಕೆಂದು ಕೇಳಿಕೊಳ್ಳುತ್ತೇವೆ. ಹಾಗೆಯೇ ಸೂಳೆಕೋಟೆ ಬ್ರಿಡ್ಜ್‌ನ್ನು ಸರಕಾರದವರು ಕನ್‌ಸ್ಟ್ರಕ್ಷನ್ ಕಾರ್ಪೋರೇಶನ್‌ನವರಿಗೆ ವಹಿಸಿಕೊಟ್ಟದ್ದು ಅದು ಸರಕಾರದ ವಶದಲ್ಲಿದ್ದಂಥ ಸಂದರ್ಭದಲ್ಲಿ ಕೆಲಸವನ್ನು ಮಾಡುತ್ತಿದ್ದರು. ಯಾವಾಗ ಬ್ರಿಡ್ಜ್‌ಕೂಡ ಜಿಲ್ಲಾಪರಿಷತ್‌ನವರಿಗೆ ವಹಿಸಿದರು ಆಗ ಅವರಿಂದ ಹಣ ಬಂದಿಲ್ಲ. ಹಾಗಾಗಿ ಈ ಕೆಲಸ ಹಾಗೆಯೇ ನಿಂತಿದೆ. ಆದ್ದರಿಂದ ಇದನ್ನು ಸರಕಾರದವರು ಜಿಲ್ಲಾಪರಿಷತ್‌ನವರಿಂದ ವಾಪಸ್ ತೆಗೆದುಕೊಂಡು ಅದನ್ನು ಪೂರ್ಣಗೊಳಿಸುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಇರಿಗೇಶನ್ ಇಲಾಖೆಯಲ್ಲಿರತಕ್ಕಂಥ ಕೆಲವು ಲೋಪದೋಷಗಳನ್ನು ಹೇಳಬೇಕಾಗುತ್ತದೆ. ಅಲ್ಲಿ ಭ್ರಷ್ಟಾಚಾರ ಎಷ್ಟರಮಟ್ಟಿಗೆ ನಡೆಯುತ್ತಿದೆ ಎಷ್ಟರ ಮಟ್ಟಿಗೆ ಅನೀತಿ ನಡೆಯುತ್ತಿದೆ ಎಂಬುದನ್ನು ಎಲ್ಲರೂ ಕಂಡಿರತಕ್ಕಂಥ ವಿಚಾರವೇ ಆಗಿದೆ. ನಾವು ಇದನ್ನು ಕಣ್ಣಾರೆ ಕಂಡೂ ಕೂಡ ಕಣ್ಣಿಲ್ಲದ ಮೂಕರಾಗಿ ಕುಳಿತಿದ್ದೇವೆ. ಮಲ್ಲಾರಿಗೌಡ ಪಾಟೀಲರು ಬಂದಂತ ಕಾಲದಲ್ಲಾಗಲೀ, ಅಶ್ವತ್ಥರೆಡ್ಡಿ ಯವರು ಬಂದಂತ ಕಾಲದಲ್ಲಾಗಲೀ, ಬಂಗಾರಪ್ಪನವರು ಬಂದಂತ ಕಾಲದಲ್ಲಾಗಲೀ ಪ್ರಾರಂಭವಾದದ್ದು ಅಲ್ಲ. ಇದು ಬಹಳ ವರ್ಷಗಳಿಂದ ನಡೆದುಕೊಂಡು ಬರುತ್ತಾ ಇದೆ.

ಮಾನ್ಯ ದೇವೇಗೌಡರು ಇದ್ದಾಗಲೂ ಭ್ರಷ್ಟಾಚಾರವನ್ನು ನಾನು ನಿರ್ಮೂಲನ ಮಾಡುತ್ತೇನೆಂದು ಏನು ಹೇಳುತ್ತಿದ್ದರು. ಅವರು ಕೂಡ ನಿಲ್ಲಿಸುವುದಕ್ಕೆ ಆಗಲಿಲ್ಲ. ಇಲ್ಲಿ ಪರ್‌ಸೆಂಟೇಜ್‌ನ್ನು ಮಾಡಿದ್ದಾರೆ. ಕೆಲಸ ಕೊಡತಕ್ಕಂಥಾದ್ದರಲ್ಲಿ, ಬಿಲ್‌ಗಳನ್ನು ಮಾಡುವುದಕ್ಕಾಗಲೀ, ಹೀಗೆ ಬೇರೆ ಬೇರೆ ಹಂತದಲ್ಲಿ 100 ರೂ.ಗಳಿಗೆ 50 ರೂಪಾಯಿಗಳನ್ನು ಕಮೀಷನ್ನಾಗಿ ತೆಗೆದುಕೊಳ್ಳುತ್ತಾರೆ. ಈ ಭ್ರಷ್ಟಾಚಾರವನ್ನು ನಿಲ್ಲಿಸಬೇಕು. ಈಗ ಹೊಸದಾಗಿ ಎಂಟ್ರೆಸ್ಟ್‌ಮೆಂಟ್ ಅಂತ ಹುಟ್ಟಿದೆ. ಕೆಲಸ ಕೊಡಬೇಕಾದರೆ ಇಂಜಿನೀಯರ್‌ಗೆ ಒಂದು ಕೆಲಸದಲ್ಲಿ 5-10 ಪರ್‌ಸೆಂಟ್ ಕೊಟ್ಟರೆ ಮಾತ್ರ ಕೆಲಸ ಇಲ್ಲವಾದರೆ ಇಲ್ಲ. ಪರ್ಸೆಂಟ್ ಕೊಟ್ಟಾದಮೇಲೆ ಅವನು ಎಸ್ಟಿಮೇಟನ್ನು ತಯಾರು ಮಾಡಬೇಕು. ಅದಕ್ಕೆ 5 ಪರ್‌ಸೆಂಟ್ ಕೊಡಬೇಕು. ಮತ್ತೆ ಎಸ್ಟಿಮೇಟನ್ನು ಮಾಡಿದಮೇಲೆ ಬಿಲ್ ಮಾಡತಕ್ಕಂಥದ್ದು ಮತ್ತು ಹೀಗೆ ಅನೇಕ ಹಂತದಲ್ಲ, ಸುಮಾರು 50

ಇದೆಯೋ, ಇದಕ್ಕೇ ಹಣ ಹೋಗುತ್ತಿದೆ. ಇದು ಸಾಕಷ್ಟು ಮಟ್ಟಿಗೆ ಸುಧಾರಣೆ ಆಗಬೇಕಾಗುತ್ತದೆ.

ಇದು ಸುಧಾರಣೆ ಆಗದೇ ಹೋದರೆ ಬಹುಶಃ ದೇಶದಲ್ಲಿ ಜನರೇ ಒಂದು ರೀತಿಯಾದಂಥ ಭ್ರಷ್ಟಾಚಾರ ಎಲ್ಲಾ ಇಲಾಖೆಯಲ್ಲೂ ಕೂಡ ಇರತಕ್ಕಂಥದ್ದನ್ನು ನಾವು ನೋಡಿದ್ದೇವೆ. ಇದು ಹೆಚ್ಚಿಗೆ ಪಿ.ಡಬ್ಲ್ಯೂಡಿ ಯಲ್ಲಿ ಇದೆ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದನ್ನು ನಿವಾರಣೆ ಮಾಡಬೇಕು. ಮತ್ತು ಒಂದು ಭರವಸೆಯನ್ನು ಸರ್ಕಾರ ಬಂದಂಥ ದಿವಸಗಳಲ್ಲಿ ಕೊಟ್ಟಿತ್ತು. 18 ಲಕ್ಷ ರೂಪಾಯಿಗಳನ್ನು ಶಾಸಕರಿಗೆ ಕೊಟ್ಟಿದ್ದೇವೆ. ಅದರಲ್ಲಿ ಕೆಲಸವನ್ನು ಮಾಡಬೇಕು ಎಂದು ಹೇಳಿದರು. ನಾವಂತೂ ಅದನ್ನು ಕಾಣಲಿಲ್ಲ, ಯಾವ ಕೆಲಸ ಕೂಡ ಆಗಿಲ್ಲ. 18 ಲಕ್ಷ ರೂಪಾಯಿಗಳು ಹೋಗಲಿ, ಎಂಟು ಲಕ್ಷ ರೂಪಾಯಿಗಳ ಕೆಲಸ ಕೂಡ ಪಿ.ಡಬ್ಲ್ಯೂಡಿ ಮುಖಾಂತರ ಆಗಿಲ್ಲ, ಮತ್ತೆ ಈಗ ಹೊಸ ಪ್ರಪೋಸಲ್ಸ್ ಬೇರೆ ತೆಗೆದುಕೊಂಡಿದ್ದಾರೆ, 40 ಲಕ್ಷ ರೂಪಾಯಿಗಳ ಒಂದು ಅಂದಾಜನ್ನು ತಯಾರು ಮಾಡಿ, ಮೂರು ವರ್ಷದಲ್ಲಿ ಅದನ್ನು ಹಂತ ಹಂತವಾಗಿ ಕೊಡತಕ್ಕಂಥದ್ದು.

ಇದರ ಬಗ್ಗೆ ನಾವು ಡಿಪಾರ್ಟ್‌ಮೆಂಟ್‌ನಲ್ಲಿ ಕೇಳಿದಾಗ ಇದಕ್ಕೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಕನ್‌ಕರೆನ್ಸ್ ಕೊಟ್ಟಿಲ್ಲ. ಆದುದರಿಂದ ಇದು ಕಷ್ಟವಾಗಬಹುದು ಎನ್ನತಕ್ಕ ಮಾತನ್ನು ಕೂಡ ಹೇಳಿದ್ದಾರೆ. ಇದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. 18 ಲಕ್ಷ ರೂಪಾಯಿ ಮತ್ತು 40 ಲಕ್ಷ ರೂಪಾಯಿಗಳ ಪ್ರಾಜೆಕ್ಟ್ ಏನು ಇದೆಯೋ, ಇದನ್ನು ತಾವು ತಯಾರು ಮಾಡಿ ಜನತೆಯ ಮುಂದೆ ಹೋಗುವುದಕ್ಕೆ ನಮಗೆ ಅವಕಾಶ ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಕೆ.ಇ.ಬಿ. ಬಗ್ಗೆ ಒಂದೆರಡು ಮಾತುಗಳನ್ನು ನನ್ನ

ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಕೆ.ಇ.ಬಿ. ಬಗ್ಗೆ, ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟಂತೆ ಒಂದು ಪ್ರಶ್ನೆಯನ್ನು ಕೂಡ ಹಾಕಿದ್ದೆ. ನಮ್ಮ ತಾಲ್ಲೂಕಿನಲ್ಲಿ ಎಷ್ಟು ಗ್ರಾಮಗಳಿಗೆ ಈ ಎಲೆಕ್ಟ್ರಿಫಿಕೇಷನ್ ಇಲ್ಲ ಎನ್ನತಕ್ಕಂಥದ್ದರ ಬಗ್ಗೆ ಕೇಳಿದ್ದೆ. ಅದಕ್ಕೆ ಸುಮಾರು 60 ಗ್ರಾಮಗಳಿಗೆ ಎಲೆಕ್ಟ್ರಿಫಿಕೇಷನನ್ನು ಕೊಟ್ಟಿಲ್ಲ ಎನ್ನತಕ್ಕಂಥ ಉತ್ತರವನ್ನು ನನ್ನ ಪ್ರಶ್ನೆಗೆ ಕೊಟ್ಟಿದ್ದಾರೆ. ಅದಕ್ಕೆ ನಾನು ಮಾನ್ಯ ಕೆ.ಇ.ಬಿ. ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ, ಇಂಥ ಒಂದು ನಾಗರೀಕ ಜಗತ್ತಿನಲ್ಲಿಯೂ ಕೂಡ ನಾವು ಗ್ರಾಮಗಳಿಗೆ ಎಲೆಕ್ಟ್ರಿಫಿಕೇಶನ್ ಆಗಲಿ, ನೀರಾನ್ನಾಗಲಿ ಬಹಳ ಅವಶ್ಯಕವಾಗಿರತಕ್ಕಂಥ ಈ ಎರಡು ಕೆಲಸಗಳನ್ನು ಮಾಡದೇ ಹೋದರೆ ಬಹುಶಃ ನಾವು ಈ ಸರ್ಕಾರದಲ್ಲಿ, ಪ್ರಜಾಪ್ರಭುತ್ವದಲ್ಲಿ ಇರುವುದಕ್ಕೆ ಆಗತ್ತಿಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಏನು ಈ 40 ಹಳ್ಳಿಗಳಿಗೆ ಎಲೆಕ್ಟ್ರಿಫಿಕೇಶನ್ ಇಲ್ಲ, ನಾವು ಹೋದ ಸಂದರ್ಭದಲ್ಲಿ ನಮಗೆ ಕತ್ತಲೆಯನ್ನು ಜನರು ತೋರಿಸುತ್ತಾರೆ, ನೋಡಿ ಸ್ವಾಮಿ, ಸ್ವಾತಂತ್ರ್ಯ ಬಂದು 40 ವರ್ಷಗಳಾದರೂ ಕೂಡ ನಮಗೆ ಈ ಒಂದು ಎಲೆಕ್ಟ್ರಿಫಿಕೇಶನ್ ಬಳಕನ್ನು ಕಾಣತಕ್ಕಂಥ ಶಕ್ತಿ ಇಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ.

ಅದಕ್ಕೆ ತಾವು ದಯಮಾಡಿ ಏನು 44-45 ಹಳ್ಳಿಗಳು ಇದ್ದಾವೋ, 45 ಹಳ್ಳಿಗಳಿಗೂ ಕೂಡ ಸಂಪೂರ್ಣವಾಗಿ ಎಲೆಕ್ಟ್ರಿಫಿಕೇಶನನ್ನು ಕೊಡಬೇಕು. ಜನರು ಏನು ಪಟ್ಟಣಗಳಲ್ಲಿ ಬಾಳುತ್ತಿದ್ದಾರೊ ಅಷ್ಟು ಬಾಳುವುದಕ್ಕೆ ಅವಕಾಶ ಬೇಕಾಗಿಲ್ಲ, ಒಟ್ಟಿನಲ್ಲಿ ನಾವು ಎಲೆಕ್ಟ್ರಿಫಿಕೇಶನನ್ನು ಕಾಣುತ್ತಿದ್ದೇವೆಂದು ಅವರಿಗೆ ಮನದಟ್ಟು ಆಗಬೇಕು ಎನ್ನುವ ದೃಷ್ಟಿಯಿಂದ ಈ ಒಂದು ಎಲೆಕ್ಟ್ರಿಫಿಕೇಶನನ್ನು ಮಾಡಿಕೊಡಬೇಕೆ ಎಂದು ಹೇಳಿ

ಮಾನ್ಯ ಅಧ್ಯಕ್ಷರು ಇಷ್ಟು ಹೊತ್ತು ಮಾತನಾಡಲಿಕ್ಕೆ ನನಗೆ ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವ ಕಲ್ಯಾಣ) : ಮಾನ್ಯ ಅಧ್ಯಕ್ಷರೇ ನಮ್ಮ ನೀರಾವರಿ ಮತ್ತು ಲೋಕೋಪಯೋಗಿ, ಸಣ್ಣ ನೀರಾವರಿ ಇಲಾಖೆಗಳ ಬೇಡಿಕೆಗಳನ್ನು ವಿರೋಧ ಮಾಡುತ್ತಾ ಇಲ್ಲಿ ಕೆಲವು ಮಹತ್ವದ ವಿಚಾರಗಳನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಕರ್ನಾಟಕ ರಾಜ್ಯವು ನೀರಾವರಿ ಪ್ರದೇಶಕ್ಕೆ ಬಹಳ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗದಂಥದ್ದು ನಮ್ಮೆಲ್ಲರ ಕರ್ತವ್ಯ. ನಮ್ಮ ರಾಜ್ಯ ಇಂಜಿನಿಯರುಗಳ ತವರುಮನೆ ಎನ್ನತಕ್ಕಂಥ ಹೆಸರನ್ನು ಪಡೆದಂಥದ್ದು. ಇಡೀ ದೇಶದಲ್ಲಿಯೇ ನಮ್ಮ ರಾಜ್ಯವು ಇಂಜಿನಿಯರುಗಳ ತಂತ್ರಜ್ಞರುಗಳಿಗೆ ಪ್ರಸಿದ್ಧಿಯನ್ನು ಪಡೆದಂಥ ನಾಡು. ಆದರೆ ನಾವು ಬೇರೆ ರಾಜ್ಯಗಳಿಗೆ ತುಲನಾತ್ಮಕವಾಗಿ ನೋಡಿದಾಗ ನಮ್ಮ ರಾಜ್ಯವು ನೀರಾವರಿ ಪ್ರದೇಶದಲ್ಲಿ ಹಿಂದೆ ಉಳಿದಿದೆ.

ಯಾವ ಪ್ರಮಾಣದಲ್ಲಿ ನೀರಾವರಿಯನ್ನು ನಾವು ಮಾಡಿಕೊಳ್ಳಬೇಕಾಗಿತ್ತೋ ಆ ಪ್ರಮಾಣದಲ್ಲಿ ಮಾಡಿಕೊಳ್ಳುವುದಕ್ಕೆ ಆಗಿಲ್ಲ. ಇವತ್ತಿನ ದಿವಸ ವಿಧಾನಸಭೆಯಲ್ಲಿ ಇದರ ಬಗ್ಗೆ . ಚಿಂತನೆ ಮಾಡಬೇಕಾದಂಥದ್ದು ಅಗತ್ಯ ಇದೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. ಮಹಾರಾಷ್ಟ್ರ ರಾಜ್ಯವು ಸಣ್ಣ ಸಣ್ಣ ನೀರಾವರಿಯಲ್ಲಾಗಲಿ, ಸಣ್ಣ ಸಣ್ಣ ಕೆರೆಗಳಲ್ಲಾಗಲಿ, ಮಧ್ಯಮ ನೀರಾವರಿಗಳಲ್ಲಾಗಲಿ, ದೊಡ್ಡ ನೀರಾವರಿಯಲ್ಲಾಗಲಿ, ಆ ರಾಜ್ಯದವರು ಎಷ್ಟು ಆದ್ಯತೆಯನ್ನು ಕೊಟ್ಟು ಅಲ್ಲಿನ ರೈತರಿಗೆ ಭೂಮಿಗೆ ಕೊಡಬೇಕು ಎನ್ನುವ ಒಂದು ಕಾರ್ಯಕ್ರಮದ ಅಡಿಯಲ್ಲಿ ಸಾಕಷ್ಟು ನೀರಾವರಿ ಪ್ರದೇಶವನ್ನು ಅವರುಗಳು ಮಾಡಿದ್ದಾರೆ.

ನಮ್ಮ ಕರ್ನಾಟಕವನ್ನು ತುಲನಾತ್ಮಕ ದೃಷ್ಟಿಯಿಂದ ನೋಡಿದಾಗ ನಾವು ಬಹಳ ಹಿಂದೆ ಬಿದ್ದಿದ್ದೇವೆಂಬ ಮಾತನ್ನು ಹೇಳಬೇಕಾಗುತ್ತದೆ. ನಮ್ಮ ದೇಶದಲ್ಲಿ ಪಂಜಾಬ್ ಹರಿಯಾಣದಲ್ಲಿ ನೀರಾವರಿ ಕೆರೆಗಳನ್ನು ಕಟ್ಟಿಸಿ, ಭೂಮಿಗೆ ನೀರನ್ನು ಕೊಡುತ್ತಿದ್ದಾರೆ. ಅದೇ ಪ್ರಕಾರ ನಾವೂ ಕೂಡ ಕಳಕಳಿಯ ಚಿಂತನೆಯನ್ನು ಮಾಡುವುದು ಅಗತ್ಯವಿದೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತಿದ್ದೇನೆ. ಸಾಕಷ್ಟು ಸಲಹೆಗಳನ್ನು ಈ ಬಗ್ಗೆ ಮಾನ್ಯ ಸದಸ್ಯರುಗಳು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅದರಲ್ಲಿ ಪ್ರಮುಖವಾಗಿ ಕಾವೇರಿ ಬೇಸಿನ್, ಕೃಷ್ಣ ಬೇಸಿನ್ ಬಗ್ಗೆ ಇಲ್ಲ ವಾದವಿವಾದವನ್ನು ಮಾಡುವುದು ಬೇಡ.

ಕಾವೇರಿ ಮತ್ತು ಕೃಷ್ಣ ಬೇಸಿನ್‌ಗಳಿಗೆ ಸಂಬಂಧಿಸಿದ ನೀರಾವರಿ ಯೋಜನೆಗಳಿಗೆ ಸರ್ಕಾರದವರು ಹೆಚ್ಚಿನ ಆದ್ಯತೆಯನ್ನು ಕೊಟ್ಟು ಸಂಪೂರ್ಣವಾದಂತಹ ಒಂದು ಟೈಮ್ ಬಾಂಡ್ ಪ್ರೋಗ್ರಾಂ ಅನ್ನು ಫಿಕ್ಸ್ ಮಾಡಿ ಕೆಲಸ ಮಾಡಬೇಕೆಂದು ನಾನು ಪ್ರತಿವರ್ಷದ ಬಜೆಟ್‌ನಲ್ಲೂ ಹೇಳುತ್ತಿದ್ದೇನೆ. ಟೈಮ್‌ಬಾಂಡ್ ಪ್ರೋಗ್ರಾಂ ಅನ್ನು ಏತಕ್ಕೆ ಫಿಕ್ಸ್ ಮಾಡಬಾರದು? ಮಹಾರಾಷ್ಟ್ರ ರಾಜ್ಯದಲ್ಲಿ ನೀರಾವರಿಗೆ ಸಂಬಂಧಪಟ್ಟಂತೆ ವಿಚಾರಗಳಲ್ಲಿ ಅಲ್ಲಿನ ಸರ್ಕಾರದವರು ಟೈಮ್‌ಬಾಂಡ್ ಪ್ರೋಗ್ರಾಂ ಅನ್ನು ಫಿಕ್ಸ್ ಮಾಡಿ ಅಧಿಕಾರಿಗಳಿಗೆ ರೆಸ್‌ಫಾನ್ಸಿಬಿಲಿಟಿ ಫಿಕ್ಸ್ ಮಾಡುವಂತಹ ಕರ್ತವ್ಯವನ್ನು ಆ ಸರ್ಕಾರದವರು ಮಾಡುತ್ತಿದ್ದಾರೆ.

ಅದೇ ಪ್ರಕಾರ ನಾವು ಯೋಜನೆ ಫಿಕ್ಸ್‌ಮಾಡಿ, ಈ ಯೋಜನೆಗಳಿಗೆ ಎಷ್ಟು ಹಣ ಬೇಕೆಂಬುದನ್ನು ನಿಗಧಿ ಮಾಡಿಕೊಂಡು ಅಷ್ಟು ಹಣವನ್ನು ಕೊಡುವಂತಹ

ಹೇಳಲಿಕ್ಕೆ ಬಯಸುತ್ತೇನೆ. ಇವತ್ತು ಹಣಕಾಸಿನ ಕೊರತೆಯಿಂದಾಗಿ ನೀರಾವರಿ ಯೋಜನೆಗಳನ್ನು ಸಂಪೂರ್ಣವಾಗಿ ಮಾಡಲಿಕ್ಕೆ ಆಗುತ್ತಿಲ್ಲ. ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಕಾರಂಜಿ ನೀರಾವರಿ ಯೋಜನೆ ಇದೆ. ಅಪ್ಪರ್ ಅಮರ್‌ಜಾ ಪ್ರಾಜೆಕ್ಟ್ ಇದೆ, ಹಿರಿಯಾಳ ಪ್ರಾಜೆಕ್ಟ್ ಇದೆ. ಮುಲ್ಲಾ ಇದೆ, ಬೆಣ್ಣೆತೊರೆ ಇದೆ, ಚುರುಕಿ ನಾಲಾ ಇದೆ. ಈ ಯೋಜನೆಗಳಿಗೆ ಸಾಕಷ್ಟು ವರ್ಷಗಳಿಂದ ಇಲಾಖೆಯವರು ಅನ್ಯಾಯವನ್ನು ಮಾಡಿಕೊಂಡು ಬಂದಿದ್ದಾರೆನ್ನತಕ್ಕ ಮಾತನ್ನು ಹೇಳಿದರೆ ತಪ್ಪಾಗುವುದಿಲ್ಲ. ಈ ಯೋಜನೆಗಳಿಗೆ ಹೆಚ್ಚಿನ ಹಣವನ್ನು ಪ್ರತಿವರ್ಷದ ಬಜೆಟ್‌ನಲ್ಲಿ ಕೊಡುವಂತಹ ಕಾರ್ಯಕ್ರಮವನ್ನು ತಾವು ಜಾರಿಗೆ ತರಬೇಕಾಗುತ್ತದೆ. ಹೈದರಾಬಾದ್ ಕರ್ನಾಟಕದ ಗಡಿನಾಡು ಪ್ರದೇಶ ಬಹಳ ಹಿಂದುಳಿದಿರುವುದರಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಆದರೆ ಆ ಗಡಿನಾಡು ಪ್ರದೇಶಗಳು ಮುಂದೆ ಬರಬೇಕಾದರೆ ಆ ಭಾಗದಲ್ಲಿರತಕ್ಕ ಯೋಜನೆಗಳಿಗೆ ಕೆರೆ ಕಾಲುವೆಗಳಿಗೆ ಹೆಚ್ಚಿನ ಹಣವನ್ನು ಬಜೆಟ್‌ನಲ್ಲಿ ಕೊಟ್ಟು ಇದನ್ನು ಕಾರ್ಯಗತ ಮಾಡಲಿಕ್ಕೆ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡಬೇಕು. ನಮ್ಮ ಕಾರಂಜಿ ಯೋಜನೆಗೆ ಕೊಟ್ಟಂತಹ ಹಣವನ್ನು ಇವತ್ತು ಖರ್ಚು ಮಾಡಲಿಕ್ಕೆ ಆಗಲಿಲ್ಲ. 9 ಕೋಟಿಯನ್ನು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಏನು ಕೊಟ್ಟಿದ್ದರು. ಆ ಹಣವನ್ನು ಬೇರೆ ಕಡೆ ಅಂದರೆ ಸಕ್ಕರೆ ಕಾರ್ಖಾನೆಗೆ ವರ್ಗಾವಣೆ ಮಾಡಿರುವುದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಇವತ್ತು ಕಾರಂಜ ಯೋಜನೆಗೆ ಕೊಟ್ಟಂತಹ ಹಣವನ್ನು ಸಂಪೂರ್ಣವಾಗಿ ಖರ್ಚು ಮಾಡುವುದಕ್ಕೆ ಸರ್ಕಾರದವರು ವಿಫಲರಾಗಿದ್ದಾರೆಂಬ ಮಾತನ್ನು ಹೇಳುವುದು ಅಗತ್ಯವಿದೆ ಎಂದು ಹೇಳಲಿಕ್ಕೆ ಬಯಸುತ್ತೇನೆ. ಶ್ರೀಮಾನ್ ಬಂಗಾರಪ್ಪನವರು ಮುಖ್ಯಮಂತ್ರಿಯಾದ ಮೇಲೆ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಹೆಚ್ಚಿನ ಹಣಕಾಸಿನ ನೆರವು ಕೊಡುತ್ತೇವೆ. ಆ ಯೋಜನೆಯನ್ನು ಆದ್ಯತೆಯ ಮೇರೆಗೆ ಮಾಡುತ್ತೇವೆಂದು ಅವರು ಬೀದರ್ ಜಿಲ್ಲೆಗೆ ಭೇಟಿ ಕೊಟ್ಟಂತಹ ಕಾಲದಲ್ಲಿ ಭರವಸೆಯನ್ನು ಕೊಟ್ಟಿದ್ದರು. ಕಾರಂಜಿ ಯೋಜನೆಗೆ ಕೊಟ್ಟಂತಹ 9 ಕೋಟಿ ರೂಪಾಯಿ ಹಣವನ್ನು ಬೇರೆ ಕಡೆಗೆ ವರ್ಗಾವಣೆ ಮಾಡಬೇಕಾದಂತಹ ಪರಿಸ್ಥಿತಿ ಏಕೆ ಬಂತು ಎಂದು ಸರ್ಕಾರವನ್ನು ಕೇಳುತ್ತೇನೆ. ಮಾನ್ಯ ಮಲ್ಲಾರಿಗೌಡ ಪಾಟೀಲರು ಇದರ ಬಗ್ಗೆ ಹೆಚ್ಚಿನ ಕಾರ್ಯಕ್ರಮವನ್ನು ತೆಗೆದುಕೊಂಡರು. ಮಾನ್ಯ ದೇವೇಗೌಡರು ನೀರಾವರಿ ಮಂತ್ರಿಯಾಗಿದ್ದಂತಹ ಕಾಲದಲ್ಲಿ ನಮ್ಮ ಹೈದರಾಬಾದ್ ಕರ್ನಾಟಕದಲ್ಲಿ ಬರುವಂಥ ಸಣ್ಣ ಸಣ್ಣ ಮಧ್ಯಮ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಗುಲ್ಬರ್ಗದಲ್ಲಿ ಒಂದು ನೀರಾವರಿ ವಲಯವನ್ನು ರಚನೆ ಮಾಡಿದರು. ನಾವೆಲ್ಲರೂ ತುಂಗಭದ್ರ ಜಲಾನಯನಕ್ಕೆ ಹೋಗಬೇಕಾಗಿತ್ತು. ಇಂತಹ ಒಂದು ಸಮಸ್ಯೆಯನ್ನು ಪರಿಹಾರ ಮಾಡಿಸಿ, ಹಿಂದೆ ಇದ್ದಂತಹ ಸರ್ಕಾರದವರು ನೀರಾವರಿಗೆ ಮತ್ತು ರಸ್ತೆಗಳನ್ನು ಮಾಡುವುದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದಾರೆ.

ಅದೇ ಪ್ರಕಾರವಾಗಿ ಈಗಿನ ಸರ್ಕಾರದವರು ಕೂಡ ಹೈದರಾಬಾದ್ ಭಾಗದ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಹಣಕಾಸನ್ನು ಬಿಡುಗಡೆ ಮಾಡಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ. ಎರಡನೆಯದಾಗಿ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಕಾರಂಜಿ ನೀರಾವರಿ ಯೋಜನೆಗಳಿಗೆ ಕಾಡ ಮಾಡಬೇಕೆಂಬ ಮಾತನ್ನು ಕೂಡ ಹೇಳಿದ್ದರು. ಆದರೆ ಇದುವರೆಗೂ ಕೂಡ ಕಾರಂಜಿ ನೀರಾವರಿ ಯೋಜನೆಗೆ ಕಾಡ ಮಾಡಲಿಕ್ಕೆ

ಎಂಬುದನ್ನು ತಾವು ಸ್ಪಷ್ಟವಾಗಿ ಬೇಡಿಕೆಗೆ ಉತ್ತರ ಕೊಡುವಾಗ ಇದನ್ನು ಹೇಳಬೇಕೆಂದು ತಮ್ಮಲ್ಲಿ ಕೇಳುತ್ತಿದ್ದೇನೆ.

ಕಾರಂಜ ಯೋಜನೆಯಡಿಯಲ್ಲಿ ಬಹಳಷ್ಟು ಜನ ಬಡ ರೈತರು ಫಲವತ್ತಾದ ಭೂಮಿಯನ್ನು ಕಳೆದುಕೊಂಡಿದ್ದಾರೆ. ಅಲ್ಲಿ ಬಹಳಷ್ಟು ಜನ ವಿದ್ಯಾವಂತರು ನಿರುದ್ಯೋಗಿಗಳಾಗಿದ್ದಾರೆ. ಅವರಿಗೆ ಉದ್ಯೋಗವನ್ನು ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಸಹ ಹೇಳಿದ್ದಾರೆ. ತಾವು ಕೂಡ ಮೊನ್ನೆ ನಾನು ಪ್ರಶ್ನೆಯನ್ನು ಕೇಳಿದಾಗ ಅದಕ್ಕೆ ಉತ್ತರವನ್ನು ಹೇಳಿದ್ದೀರಿ. ಆದ್ದರಿಂದ ಭೂಮಿಯನ್ನು ಕಳೆದುಕೊಂಡಂಥ ಏಳು ಗ್ರಾಮಗಳ ಜನರಿಗೆ ಉದ್ಯೋಗವನ್ನು ಕೊಡುವಂತಹ ಕಾರ್ಯಕ್ರಮವನ್ನು ಮಾಡಬೇಕು. ಕಾಡಾದಲ್ಲಿ ಜನರಿಗೆ ಸೇರಿಸಿಕೊಳ್ಳುವುದಕ್ಕೆ ಅವಕಾಶ ಸಿಗಬಹುದೆಂದು ನಾನು ಕೇಳಲಿಕ್ಕೆ ಬಯಸುತ್ತೇನೆ. ಬಹಳಷ್ಟು ವಿಚಾರಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ.

ಸಣ್ಣ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಇವತ್ತು ಏನಾಗಿದೆ ಅಂದರೆ ದೊಡ್ಡ ದೊಡ ಕೆರೆಗಳ ನಿರ್ಮಾಣಕ್ಕೆ ಸಾಕಷ್ಟು ಸಮರ್ಪಕವಾಗಿ ಅವರಿಗೆ ಹಣವನ್ನು ಕೊಡುತ್ತಿಲ್ಲ. ಈ ರೀತಿಯಾಗಿ ದೊಡ್ಡ ಕೆರೆಗಳು ಮಧ್ಯಮ ನೀರಾವರಿ ಯೋಜನೆಗಳಾಗಲಿ, ದೊಡ್ಡ ನೀರಾವರಿ ಯೋಜನೆಗಳಾಗಲಿ ಸಮಯಕ್ಕೆ ಸರಿಯಾದ ರೀತಿಯಲ್ಲಿ ಕೆಲಸ ಮಾಡಲಿಕ್ಕೆ ಆಗುತ್ತಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ರೈತರಿಗೆ ಒಳ್ಳೆಯ ಕೆಲಸವನ್ನು ನಾವು ಮಾಡಬೇಕಾಗಿದ್ದರೆ, ರೈತರಿಗೆ ಅಭಿವೃದ್ಧಿಗೆ ಮಾಡಬೇಕಾಗಿದ್ದರೆ ಸಣ್ಣ ನೀರಾವರಿಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಪ್ರತಿಪಾದನೆ ಮಾಡಲಿಕ್ಕೆ ಬಯಸುತ್ತೇನೆ.

ನಮ್ಮ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಸಣ್ಣ ನೀರಾವರಿಗೆ ಹೆಚ್ಚು ಆದ್ಯತೆ ಕೊಡುವಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೆವು. ಪ್ರತಿಯೊಂದು ಹೋಬಳಿ ಮಟ್ಟದಲ್ಲಿ, ಗ್ರಾಮಗಳ ಮಟ್ಟದಲ್ಲಿ ಸಣ್ಣ ಸಣ್ಣ ಕೆರೆಗಳನ್ನು ಮಾಡುವಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೆವು. ಈ ಸರ್ಕಾರ ಬಂದ ಮೇಲೆ ಸಣ್ಣ ನೀರಾವರಿಯ ಒಂದು ಹೊಸ ವರ್ಕ್‌ನ್ನೂ ಕೂಡ ತೆಗೆದುಕೊಂಡಿಲ್ಲ. ಇಡೀ ರಾಜ್ಯದಲ್ಲಿ ಸಣ್ಣ ನೀರಾವರಿಗೆ ಹೆಚ್ಚಿನ ಆದ್ಯತೆ ಕೊಡಬೇಕು. ಮುಂಬರುವ ದಿವಸದಲ್ಲಿ ಜನರಿಗೆ ನೀರಾವರಿ ಯೋಜನೆಗಳಿಗೆ ಮೂಲಕ ಪ್ರಗತಿ ಮಾಡಬೇಕಾದರೆ ದೊಡ್ಡ ಕೆರೆಗಳಿಗಿಂತ ಸಣ್ಣ ಸಣ್ಣ ಕೆರೆಗಳನ್ನು ನಮ್ಮ ಗ್ರಾಮೀಣ ಮಟ್ಟದಲ್ಲಿ ಮಾಡಿ ಗ್ರಾಮೀಣ ಪ್ರದೇಶದ ಜನರಿಗೆ ಅನುಕೂಲ ಮಾಡಿಕೊಡಬೇಕು.

ಇದಕ್ಕಾಗಿ ಸಣ್ಣ ನೀರಾವರಿ ಇಲಾಖೆಗೆ ಹೆಚ್ಚಿನ ಹಣ ಸಹಾಯವನ್ನು ಒದಗಿಸಿಕೊಡಬೇಕೆಂದು ಮುಖ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ. ಇನ್ನು ಮಾನ್ಯ ಅಧ್ಯಕ್ಷರೇ, ನಮ್ಮ ಭಾಗದ ರೋಡ್‌ಗಳು ಸರಿ ಇಲ್ಲ, ಉತ್ತರ ಕರ್ನಾಟಕದ ರಸ್ತೆಗಳ ನಿರ್ಮಾಣ, ಅದರಲ್ಲಿ ವಿಶೇಷವಾಗಿ ಗಡಿನಾಡು ಪ್ರದೇಶವಾದ ಬೀದರ್‌ನಲ್ಲಿ ರಸ್ತೆಗಳ ನಿರ್ಮಾಣ ಸರಿಯಾಗಿಲ್ಲ, ಪ್ರತಿಯೊಂದು ಜಿಲ್ಲೆಗೆ ಹೋದರೆ ನಿಮಗೆ ಕಷ್ಟವೇನೆಂದು ಗೊತ್ತಾಗುತ್ತದೆ. ನಾನು ಲೋಕೋಪಯೋಗಿ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ, ಹೈದರಾಬಾದ್ ಕರ್ನಾಟಕದ ಮುಖ್ಯವಾದ ರಸ್ತೆಗಳಿಗೆ ಟಾರ್ ಹಾಕಿಸುವಂಥ ಕೆಲಸವಾಗಬೇಕು.

ತಾಲ್ಲೂಕು ಮಟ್ಟ ಮತ್ತು ಗ್ರಾಮೀಣ ಮಟ್ಟಕ್ಕೆ ಸೇರುವಂಥ ರಸ್ತೆಗಳಿಗೆ ಹೆಚ್ಚಿನ ಹಣಕಾಸಿನ ನೆರವನ್ನು ನೀಡಿ ಅಲ್ಲಿನ ರಸ್ತೆಗಳನ್ನು ಒಂದು ಉತ್ತಮವಾದ ರಸ್ತೆಗಳನ್ನಾಗಿ ಮಾಡಬೇಕೆಂದು ಕೇಳಿಕೊಳ್ಳಬಯಸುತ್ತೇನೆ. ಎರಡನೆದಾಗಿ ಹೈದರಾಬಾದ್ ಕರ್ನಾಟಕ

ಅಭಿವೃದ್ಧಿ ಮಂಡಳಿ ಎಂದು ತಾವು ಏನು ರಚನೆ ಮಾಡಿದ್ದೀರಿ, ಅದಕ್ಕೆ ಒಬ್ಬ ರಾಜ್ಯ ಮಂತ್ರಿಯನ್ನು ನೇಮಕ ಮಾಡಬೇಕೆಂದು ಕೋರುತ್ತೇನೆ. ಹೈದರಾಬಾದ್-ಕರ್ನಾಟಕದ ಭಾಗದಲ್ಲಿ ಇರುವಂಥ ಕಾಮಗಾರಿಗಳನ್ನು ಸರ್ಕಾರದ ವತಿಯಿಂದ ಯಶಸ್ವಿಯಾಗಿ ಮಾಡಬೇಕಾದರೆ, ಒಬ್ಬ ರಾಜ್ಯ ಮಂತ್ರಿಯನ್ನು ಈ ಮಂಡಳಿಗೆ ನೇಮಕ ಮಾಡುವುದು ಸೂಕ್ತವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ, ಹಾಗೂ ಇದಕ್ಕಾಗಿ ಮುಖ್ಯ ಮಂತ್ರಿಯವರನ್ನು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ. ಏಕೆಂದರೆ ಕೇಂದ್ರ ಸರ್ಕಾರದ ಹಲವಾರು ಯೋಜನೆಗಳು ನೆನೆಗುದಿಗೆ ಬೀಳುತ್ತಿವೆ.

ಯಾವ ರೀತಿ ಮಹಾರಾಷ್ಟ್ರ ಸರ್ಕಾರದವರು ತಮಗೆ ಸಂಬಂಧಪಟ್ಟ ಕೇಂದ್ರದಲ್ಲಿ ಇರುವಂಥ ಫೈಲುಗಳನ್ನು ವಿಲೇವಾರಿ ಮಾಡಿಸಿಕೊಳ್ಳಲು ಒಂದು ಕಛೇರಿಯನ್ನು ದೆಹಲಿಯಲ್ಲಿ ತೆರೆದಿದ್ದಾರೋ, ಅದೇ ಪ್ರಕಾರ ನಾವು ಕೂಡ ದೆಹಲಿಯಲ್ಲಿ ಒಂದು ಕಛೇರಿಯನ್ನು ತಾವೂ ಸ್ಥಾಪನೆ ಮಾಡಿ, ಈ ಪ್ರದೇಶದ ಯೋಜನೆಗಳ ಬಗ್ಗೆ ಕೇಂದ್ರ ಸರ್ಕಾರದಿಂದ ಫೈಲುಗಳನ್ನು ವಿಲೇವಾರಿ ಮಾಡಿಸುವುದಕ್ಕೆ ಸರ್ಕಾರ ಒಪ್ಪಬೇಕೆಂದು ಹಾಗೂ ಈ ಯೋಜನೆಗಳನ್ನು ಕಾರ್ಯಗತಗೊಳಿಸಬೇಕೆಂದು ಕೇಳಿಕೊಳ್ಳುತ್ತೇವೆ. ನಮ್ಮ ಸರ್ಕಾರ ಇದ್ದಾಗ ನೀರಾವರಿ ಕೆಲಸಕ್ಕಾಗಿ ಎರಡು ಕೋಟಿ ರೂ.ಗಳನ್ನು ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿತು. ಈ ಸರ್ಕಾರ ಏನು ಮಾಡುತ್ತಿದೆ ಗೊತ್ತಿಲ್ಲ.

ಬೆಂಗಳೂರು ನಗರದಂಥ ದೊಡ್ಡ ರಾಜಧಾನಿಯಲ್ಲಿ ಒಂದು ನೀರಾವರಿ ಭವನವನ್ನು ಮಾಡಬೇಕು. ಕೇಂದ್ರದಲ್ಲಿ ಪ್ರತಿಯೊಂದು ಇಲಾಖೆಗೆ ಒಂದೊಂದು ಭವನ ಇದೆ. ನೀರಾವರಿ ಭವನ ಮಾಡಿದರೆ, ಬೇರೆ ಬೇರೆ ಭಾಗದಿಂದ ಬಂಥಂಥ ಜನರಿಗೆ ನೀರಾವರಿ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಅನುಕೂಲವಾಗುತ್ತದೆ. ಆದುದರಿಂದ, ಬೆಂಗಳೂರಿನಲ್ಲಿ ನೀರಾವರಿ ಭವನ ಎಂದು ಒಂದು ಕಟ್ಟಡವನ್ನು ಮಾಡಬೇಕೆಂದು ಮುಖ್ಯ ಮಂತ್ರಿಯವರಲ್ಲಿ ಬೇಡಿಕೊಳ್ಳುತ್ತೇನೆ. ಕೊನೆಯದಾಗಿ ನನ್ನ ಮತಕ್ಷೇತ್ರದ ಚುರ್ಕಿನಾಳ ಪ್ರಾಜೆಕ್ಟ್ ಸಾಕಷ್ಟು ಹಣ ಕೊಡುತ್ತಿಲ್ಲ, ಬಹಳ ವರ್ಷಗಳಿಂದ ಈ ಕೆಲಸ ನೆನೆಗುದಿಗೆ ಬಿದ್ದಿದೆ. ಕೆಲಸ ಸರಿಯಾಗಿ ನಡೆಯುತ್ತಿಲ್ಲ, ಈಗ ಕರ್ನಾಟಕ ಪವರ್ ಕಾರ್ಪೋರೇಷನ್‌ಗೆ ಕಾಂಟ್ರ್ಯಾಕ್ಟ್ ಕೊಟ್ಟಿದ್ದೀರಿ. ಅವರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ವಿಳಂಬ ರೀತಿಯಲ್ಲಿ ಕೆಲಸ ನಡೆಯುತ್ತಿದೆ. ಇದನ್ನು ತ್ವರಿತಗತಿಯಲ್ಲಿ ಮಾಡುವಂತೆ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಆಡಳಿತ ಪಕ್ಷದ ಮಾನ್ಯ ಸದಸ್ಯರೊಬ್ಬರು : ಸನ್ಮಾನ್ಯ ಸದಸ್ಯರು ನೀರಾವರಿ ಮಂತ್ರಿಗಳಾಗಿದ್ದಾಗ ಎಷ್ಟು ಕೆರೆಗಳನ್ನು ಮಾಡಿದರು ಎಂಬುದನ್ನು ತಿಳಿಸಬೇಕು?

ಶ್ರೀ ಬಸವರಾಜು ಪಾಟೀಲ್ ಅಟ್ಟೂರು : ನಾಲ್ಕು ತಿಂಗಳು ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ರಾಜ್ಯ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಆದರೆ ಇಂಡಿಪೆಂಡೆಂಟ್ ಪೋರ್ಟ್ ಫೋಲಿಯೋ ಇರಲಿಲ್ಲ.

ಆಗಲೂ ಕೂಡ ನನ್ನ ಅಧಿಕಾರಾವಧಿಯಲ್ಲಿ ನಾನು ಸಾಕಷ್ಟು ಕೆಲಸ ಮಾಡಿದ್ದೇನೆ.

ಆಡಳಿತ ಪಕ್ಷದ ಮಾನ್ಯ ಸದಸ್ಯರೊಬ್ಬರು : ಅವರು ನೀರಾವರಿ ಮಂತ್ರಿ ಆಗಿರಲಿಲ್ಲ, ಬರೀ ಬೀದರ್ ಮಂತ್ರಿಯಾಗಿದ್ದರು ಅಷ್ಟೇ. ನೀರಾವರಿ ಫೈಲುಗಳು ಅವರ ಹತ್ತಿರ ಹೋಗುತ್ತಿತ್ತೋ ಇಲ್ಲವೋ ಅವರು ಏನು ಮಾಡುತ್ತಾರೆ!

ಒಬ್ಬ ಮಾನ್ಯ ಸದಸ್ಯರು : ನೀವು ಗುಲ್ಬರ್ಗಕ್ಕೆ ಮಾತ್ರ ಸೀಮಿತವಾಗಿದ್ದೀರೇನು?

ಶ್ರೀ ವಾಟಾಳ್ ನಾಗರಾಜ್ : ನಿಮಗೆ ಸರ್ಕಾರದ ಕಡತಗಳು ಏನಾದರೂ ಬರುತ್ತಿತ್ತೋ? ನಮ್ಮ ಭಾಷೆಯಲ್ಲಿ ಕಡತ ಬೇರೆ ಕಡಿತ ಬೇರೆ.

ಶ್ರೀ ಬಸವರಾಜು ಪಾಟೀಲ್ ಅಟ್ಟೂರು : ಆದ್ದರಿಂದ ಮಾನ್ಯ ಅಧ್ಯಕ್ಷರೇ ನಮ್ಮ ಭಾಗದಲ್ಲಿ ಇರುವಂಥ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಬೀದರ್ ಜಿಲ್ಲೆಯಲ್ಲಿ ಸುಮಾರು 15 ದಿವಸದಿಂದ ವಿದ್ಯುಚ್ಛಕ್ತಿ ತೊಂದರೆಯಾಗಿದೆ. ಸುಮಾರು 700-800 ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿವೆ. ರೈತರು ಬಹಳ ತೊಂದರೆಯಲ್ಲಿದ್ದಾರೆ. ಇದರ ಬಗ್ಗೆ ಎಲ್‌ಎ ಕ್ವೆಸ್ಚನ್ ಹಾಕಿದ್ದೆ, ರಿಪ್ಲೈ ಬರಲಿಲ್ಲ. ಕಾಲಿಂಗ್ ಲಿಟೆನ್‌ಷನ್ ಹಾಕಿದ್ದೆ, ಅದೂ ಬರಲಿಲ್ಲ. ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳು ಇಲ್ಲೇ ಇದ್ದಾರೆ. ನಮ್ಮ ಬೀದರ್ ಜಿಲ್ಲೆಯಲ್ಲಿ ಸುಮಾರು 700-800 ಎಕರೆ ನೀರಾವರಿ ಪ್ರದೇಶ ಇದ್ದು, ಇದರಲ್ಲಿ ಬಹಳಷ್ಟು ಬಾವಿಯ ಸಹಾಯದಿಂದ ಬೆಳೆಯನ್ನು ಬೆಳೆಯುತ್ತಿದ್ದಾರೆ. ಬಾವಿಗಳಿಗೆ ಮೋಟಾರ್‌ಗಳನ್ನು ಅಳವಡಿಸಲಾಗಿದ್ದು, ಸರಿಯಾದ ವಿದ್ಯುಚ್ಛಕ್ತಿ ಇಲ್ಲದೇ ರೈತರು ತೊಂದರೆಗೆ ಒಳಗಾಗಿದ್ದಾರೆ. ಹೈದರಾಬಾದ್ ಕರ್ನಾಟಕ ಏರಿಯಾದಲ್ಲಿ ಇರುವಂಥ ರಾಯಚೂರು ಪವರ್‌ಸ್ಟೇಷನ್‌ನ ಮೂರನೇ ಹಂತದ ಕೆಲಸವನ್ನು ಬೇಗನೆ ಪ್ರಾರಂಭ ಮಾಡಿಸಿ ರಾಯಚೂರು ಮತ್ತು ಬೀದರ್-ಹುಮ್ನಾಬಾದ್‌ಗೆ 15 ಕೋಟಿ ರೂ.ಗಳ ಹೊಸ ಲೈನ್‌ನ್ನು ಏನು ಮಂಜೂರು ಮಾಡಿಕೊಟ್ಟಿದ್ದಾರೆ, ಈ ಕೆಲಸವನ್ನು ತ್ವರಿತಗತಿಯಲ್ಲಿ ತೆಗೆದುಕೊಂಡು ನಮ್ಮ ಬೀದರ್ ಜಿಲ್ಲೆಯ ವಿದ್ಯುತ್ ಅಭಾವವನ್ನು ಪರಿಹರಿಸಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ, ಅಪ್ಪರ್ ಮುಲ್ಲಾಮಾರಿ ಯೋಜನೆಯಡಿಯಲ್ಲಿ ಶರಣಗ ಎನ್ನುವ ಒಂದು ವಿಲ್ಲೇಜ್‌ಗೆ ಸೇರಿದ ಪೂರ್ಣ ಜಮೀನು ನೀರಾವರಿ ಕೆರೆಯಲ್ಲಿ ಮುಳುಗಡೆಯಾಗಿ ರೈತರು ಬಹಳ ಕಷ್ಟದಲ್ಲಿದ್ದಾರೆ. ಅದಕ್ಕೆ ಒಂದು ಲಿಫ್ಟ್ ಇರಿಗೇಷನ್ ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಯವರನ್ನು ಕೇಳಿದ್ದೆ. ದಯವಿಟ್ಟು ಈ ವರ್ಷದ ಬಜೆಟ್‌ನಲ್ಲಿ ಅಪ್ಪರ್ ಮುಲ್ಲಾಮಾರಿ ಯೋಜನೆಯಡಿಯಲ್ಲಿ ಇದನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಅಪ್ಪರ್ ಮುಲ್ಲಾಮಾರಿ ಯೋಜನೆಯ ಸಬ್ ಡಿವಿಜನ್ ವರ್ಕ್‌ನ್ನು ಬೇರೆ ಕಡೆ ವರ್ಗಾವಣೆ ಮಾಡಿದರು. ಒಂದು ಕೋಟಿ ರೂ.ಗಳ ಕೆಲಸವನ್ನು ಅಲ್ಲಿ ಮಾಡದೇ ಇದ್ದಾಗ, ವರ್ಗಾವಣೆ ಮಾಡುವ ಅವಶ್ಯಕತೆ ಇರಲಿಲ್ಲ. ಆದ್ದರಿಂದ ದಯಮಾಡಿ ಇದನ್ನು ವರ್ಗಾವಣೆ ಮಾಡಬಾರದು. ಸಂಪೂರ್ಣವಾಗಿ ಒಂದು ಕೋಟಿ ರೂ.ಗಳ ಕೆಲಸವನ್ನು ಮುಗಿಸದ ಹೊರತು ಈ ಸಬ್‌ಡಿವಿಜನನ್ನು ಬೇರೆ ಕಡೆ ವರ್ಗಾವಣೆ ಮಾಡಬಾರದೆಂದು ಕೇಳಿಕೊಳ್ಳುತ್ತೇನೆ. ಇನ್ನು ಬಿಜಾಪುರ ಜಿಲ್ಲೆಯಲ್ಲಿ ಮುಳವಾಡಿ ನೀರಾವರಿ ಯೋಜನೆಗೆ ಜನಗಳಿಂದ ಬಹಳಷ್ಟು ಒತ್ತಡ ಇದೆ. ಈ ಯೋಜನೆಗೆ ಈ ವರ್ಷದ ಬಜೆಟ್‌ನಲ್ಲಿ ಹೆಚ್ಚಿನ ಹಣವನ್ನು ಕೊಡಬೇಕೆಂದು ಕೇಳಿಕೊಂಡು, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸಭೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 2-30 ಗಂಟೆಗೆ ಸಮಾವೇಶಗೊಳ್ಳಲಿದೆ.

(ಸಭೆಯು ಮಧ್ಯಾಹ್ನ 2.45 ಕ್ಕೆ ಪುನಃ ಸಮಾವೇಶಗೊಂಡಿತು, ಸಭಾಧ್ಯಕ್ಷ ಶ್ರೀ ಎಸ್.ಎಂ. ಕೃಷ್ಣರವರು ಅಧ್ಯಕ್ಷ ಪೀಠದಲ್ಲಿದ್ದರು)

ಶ್ರೀ ಎ.ವಿ. ಉಮಾಪತಿ : ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಲೇ ಇಲ್ಲ, ದಯಮಾಡಿ ನನಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ಇನ್ನೂ ಅನೇಕ ಮಾನ್ಯ ಸದಸ್ಯರುಗಳು ಮಾತನಾಡುವವರು ಇದ್ದಾರೆ ತಾವು ಅವಕಾಶ ಮಾಡಕೊಡುತ್ತೇನೆಂದು ಹೇಳಿದ್ದೀರಿ. ದಯಮಾಡಿ ಅವಕಾಶ ಮಾಡಿಕೊಡಬೇಕು. ಮೊನ್ನೆಯ ದಿವಸ ಕೂಡ ಗ್ರಾಮೀಣಾಭಿವೃದ್ಧಿ ಇಲಾಖೆಯ ಬೇಡಿಕೆ ಚರ್ಚೆ ಮಾಡುವಾಗ ಹೀಗೆಯೇ ಆಯಿತು. ಇವತ್ತು ಸಹ ಹಾಗೇ ಆಗಿದೆ.

ಅಧ್ಯಕ್ಷರು : ನಾಳೆ ಮಾತನಾಡಿ.

ಶ್ರೀ ಬಿ.ಹೆಚ್. ಬನ್ನಕೋಡ್ : ನಾಳೆ ಎಂದು ಬರೆದು ಇಟ್ಟುಬಿಡುವುದು. ನಾಳೆ ಎಂದು ಗಿಲಟಿನ್ ಹಾಕಿ ಬಿಡ್ತಾರೇನೋ?

ಅಧ್ಯಕ್ಷರು : ನಾಳೆ 19ನೇ ತಾರೀಖು ತಾನೇ?

ಶ್ರೀ ಅಜೀಜ್ ಸೇಠ್ : ಈಗ ನನ್ನ ಸಬ್ಜೆಕ್ಟ್ ಬಗ್ಗೆ ಮಾತನಾಡುತ್ತೇನೆಂದು ಅವರು ಹೇಳಿದ್ದಾರೆ.

ಅಧ್ಯಕ್ಷರು : ಉಮಾಪತಿಯವರೆ, ನಾಳೆ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎ.ವಿ. ಉಮಾಪತಿ : ಕ್ಲಾರಿಫಿಕೇಶನ್‌ಗಾದರೂ ಅವಕಾಶ ಮಾಡಿಕೊಡಬೇಕು.

ಶ್ರೀ ಬಸವರಾಜ ರಾಯ ರೆಡ್ಡಿ : ದಯಮಾಡಿ ಕ್ಲಾರಿಫಿಕೇಷನ್‌ಗೆ ಸ್ವಲ್ಪ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು.

+ ಶ್ರೀ ಬಿ.ಹೆಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ ಡಿಮ್ಯಾಂಡ್ ನಂಬರ್ 45, 46,ಹಾಗೂ 47 ಈ ಬೇಡಿಕೆಗಳನ್ನು ಸದನದ ಮುಂದೆ ಒಪ್ಪಿಸಿದ್ದೇನೆ. ಸಾಕಷ್ಟು ಸದಸ್ಯರು ಮಾತನಾಡಿದ್ದಾರೆ. ಅದರಲ್ಲೂ ಹೆಚ್ಚಿನದಾಗಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಚಂದ್ರೇಗೌಡರು ಕೆಲವು ಸಲಹೆಗಳನ್ನು ಮಾಡಿದ್ದಾರೆ. ಅವರು ತಮ್ಮ ಕ್ಷೇತ್ರದಲ್ಲಿ ಏನೂ ಕೆಲಸ ಆಗಿಲ್ಲವೆಂದು ಹೇಳಿದರು. ಒಂದು ಮತ ಕ್ಷೇತ್ರದಲ್ಲಿ 12 ಲಕ್ಷ ರೂಪಾಯಿಗಳ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುವಂತಹ ಕೆಲಸ ಆಗಬೇಕಾಗಿದೆ. ಅದು ಆಗಿಲ್ಲ ಎಂದು ಹೇಳಿದ್ದಾರೆ. ಕೆಲವು ಕೆಲಸಗಳನ್ನು ಮಾಡಿದ್ದೇವೆ. ಅವರು ಕಳಸ ಹೊರನಾಡು ರಸ್ತೆಯಲ್ಲಿ ಒಂದು ಕಾಲುವೆ ಕಟ್ಟಬೇಕು ಎಂದು ಕೇಳಿದ್ದಾರೆ. ಅದನ್ನು ಕಟ್ಟಲು ಸುಮಾರು 30 ಲಕ್ಷ ರೂಪಾಯಿಗಳು ಮಂಜೂರು ಮಾಡಲಾಗಿದೆ ಮತ್ತು 12 ಲಕ್ಷ ರೂಪಾಯಿ ವೆಚ್ಚದಲ್ಲಿ ಕೂಡ ಜೋಗ್-ಭಟ್ಕಲ್ ರಸ್ತೆ, ಸುಮಾರು 37 ಲಕ್ಷ ಮತ್ತು 75 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಡಾಂಬರ್ ಮಾಡಲು ಕೊಟ್ಟಿದ್ದೇವೆ. ಸಿರಸಿ-ಸಿದ್ಧಾಪುರ ರಸ್ತೆಗೆ 25 ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿ ಕೆಲಸ ಪ್ರಾರಂಭ ಮಾಡಿದ್ದೇವೆ. ಸಾಗರ-ಬಾಳೆಬೆಲೆ ರಸ್ತೆಗೆ ಸುಮಾರು 95 ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದೇವೆ. ಶ್ರೀಮಾನ್ ಚಂದ್ರೇಗೌಡರು ಹೇಳಿದ್ದಾರೆ. ಶರಾವತಿ ಬ್ರಿಡ್ಜ್‌ನಲ್ಲಿ ದೊಡ್ಡ ವಾಹನಗಳು ಹೋಗುತ್ತಿವೆ ಎಂದೂ, ಅಲ್ಲಿ ಬಹಳಷ್ಟು ಲಂಚ ಕೊಟ್ಟು, ಬಸ್‌ಗಳನ್ನು ಮತ್ತು ಲಾರಿಗಳನ್ನು ಬಿಡುತ್ತಿದ್ದಾರೆಂದು ಎಂದು ಹೇಳಿದರು. ಆ ತರಹ ಆಗುವುದಿಲ್ಲ, ಅಲ್ಲಿ ಫ್ರೇಮ್‌ಗಳನ್ನು ಹಾಕಿಸಿದ್ದೇವೆ. ದೊಡ್ಡ ಬಸ್‌ಗಳನ್ನು ಆಗಲಿ ಅಥವಾ ಲಾರಿಗಳನ್ನಾಗಲೀ ಹೋಗುವುದಕ್ಕೆ ಆಸ್ಪದ ಕೊಟ್ಟಿಲ್ಲ, ಅಲ್ಲಿ ಮಿನಿ ಬಸ್ ಸರ್ವೀಸ್ ಮಾಡಿ ಪ್ರಯಾಣಕ್ಕೆ ಅನುಕೂಲ ಮಾಡಿದ್ದೇವೆ. ಆಮೇಲೆ ಮಾನ್ಯ ವಿರೋಧಿ ಪಕ್ಷದ ನಾಯಕರಾದ ಶ್ರೀಮಾನ್

ಚಂದ್ರೇಗೌಡರು ನಮ್ಮ ಇಲಾಖೆಯ ಬೈಫರ್‌ಕೇಶನ್ ವಿಷಯದಲ್ಲಿ ಸಾಕಷ್ಟು ಚರ್ಚೆ ಮಾಡಿದ್ದಾರೆ.

ಅದರ ವಿಷಯದಲ್ಲಿ ನಾನು ನಮ್ಮ ಸ್ನೇಹಿತರೂ ಭಾರಿ ಹಾಗೂ ಮಧ್ಯಮ ನೀರಾವರಿ ಸಚಿವರಾದ ಶ್ರೀಮಾನ್ ಮಲ್ಲಾರಿ ಗೌಡರ ಜೊತೆಯಲ್ಲಿ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಸಾಧಕ ಬಾಧಕಗಳನ್ನು ತಿಳಿದು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಈ ಸದನಕ್ಕೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಟ್ರಾನ್ಸ್‌ಫರ್ ವಿಷಯದಲ್ಲಿ ಹೇಳಿದ್ದಾರೆ. 1990-91ರಲ್ಲಿ ಸುಮಾರು 3200 ಚಿಲ್ಲರೆ ಅಸಿಸ್ಟೆಂಟ್ ಇಂಜಿನಿಯರ್ಸ್, ಎಕ್ಸಿಕ್ಯೂಟೀವ್ ಇಂಜಿನಿಯರುಗಳನ್ನು ಟ್ರಾನ್ಸ್‌ಫರ್ ಮಾಡಿದ್ದರು, ಒಟ್ಟು ಇರತಕ್ಕವರು 10,700 ಇಂಜಿನಿಯರ್ಸ್ ಇದ್ದಾರೆ. 25 ಸಾವಿರ ಬೇರೆ ಎಸ್ಟಾಬ್ಲಿಷ್‌ಮೆಂಟ್ ಇದೆ. ಒಟ್ಟು 37 ಸಾವಿರ ಜನ ಕೆಲಸಗಾರರು ಇದ್ದಾರೆ. ಅದರಲ್ಲಿ ಈ ವರ್ಷ 1991-92ರಲ್ಲಿ 1200 ಜನರನ್ನು ಮಾತ್ರ ಟ್ರಾನ್ಸ್‌ಫರ್ ಮಾಡಿದ್ದೇವೆ. ಅದರಿಂದ ಹೋದ ವರ್ಷಕ್ಕೆ ಲೆಕ್ಕ ಮಾಡಿದರೆ ಬಹಳಷ್ಟು ಕಡಿಮೆ. ಇದರಿಂದ ಯಾವ ತರಹದ ಪರಿಸ್ಥಿತಿಯೂ ಬಿಗಡಾಯಿಸಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೂ ಕೆಲವು ಮಾನ್ಯ ಸದಸ್ಯರುಗಳು ಒಳ್ಳೆಯ ಸಲಹೆಗಳನ್ನೂ ಕೊಟ್ಟಿದ್ದಾರೆ. ನಮ್ಮ ಮಾನ್ಯ ಅನಂತಕೃಷ್ಣ ಅವರು ಕೂಡ ಬೆಂಗಳೂರು ನಗರ ಪಾಲಿಕೆಯ ವಿಷಯದಲ್ಲಿ ಸಾಕಷ್ಟು ಹೇಳಿದ್ದಾರೆ. ಅದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ಆದರೂ ಕೂಡ ಅವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ನೌಕರರ ವಸತಿ ಗೃಹ, ಕುಡಿಯುವ ನೀರಿನ ವ್ಯವಸ್ಥೆ, ಚರಂಡಿ ವ್ಯವಸ್ಥೆ ಇದನ್ನೆಲ್ಲಾ ಹೇಳಿದ್ದಾರೆ. ಆದರೆ, ವಸತಿಗಳನ್ನು ರಿಪೇರಿ ಮಾಡುವುದಕ್ಕೆ ನಾವು ಈಗಾಗಲೇ ಆದೇಶ ಕೊಟ್ಟಿದ್ದೇವೆ. ಸುಮಾರು 35 ಲಕ್ಷ ರೂಪಾಯಿ ಆಗಬಹುದು ಎಂಬ ಅಂದಾಜು ಆಗಿದೆ.

ಮಾನ್ಯ ಇದಿನಬ್ಬರವರು ಕೂಡ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಜಿಲ್ಲಾಪರಿಷತ್ ರಸ್ತೆಗಳನ್ನು ಪಿಡಬ್ಲ್ಯೂಡಿ ರಸ್ತೆಗಳನ್ನಾಗಿ ಮಾರ್ಪಾಡು ಮಾಡಬೇಕು, ಒಳ್ಳೆಯ ಕೆಲಸವು ಇಲಾಖೆಯವರಿಂದ ಆಗಬೇಕೆಂದು ಹೇಳಿದ್ದಾರೆ. ಆದರೆ ಕಡೆಯಲ್ಲಿ ಇಂಜಿನೀಯರ್ಸ್ ಕೆಲಸವನ್ನು ಚೆನ್ನಾಗಿ ಮಾಡುವುದಿಲ್ಲ ಎಂದು ಕೂಡ ಹೇಳಿದ್ದಾರೆ. ಎರಡೂ ಅಭಿಪ್ರಾಯಗಳನ್ನು ಅವರೇ ಕೊಟ್ಟಿದ್ದಾರೆ. ಅವರ ಸೂಚನೆಯಂತೆ ಅವರ ಕೆಲಸಗಳು ಏನಿವೆ ಜಿಲ್ಲಾಪರಿಷತ್‌ನಿಂದ ಅಪ್‌ಗ್ರೇಡ್ ಮಾಡುವುದಕ್ಕೆ ಎಷ್ಟು ಸಾಧ್ಯ ಇದೆ. ಸುಮಾರು 30 ರಿಂದ 40 ಕಿ.ಮಿ. ತೆಗೆದುಕೊಳ್ಳ ಬೇಕೆಂದರೆ, ಆ ಉದ್ದೇಶವನ್ನು ಪೂರ್ಣ ಮಾಡಬೇಕಾದರೆ ಒಂದು ಸಲಹೆಯನ್ನು ಕೇಳಿದ್ದೇವೆ, ಆ ಶಾಸಕರು ಕೆಲವು ರಸ್ತೆಗಳನ್ನು ಬರೆದುಕೊಡಬೇಕೆಂದು ಕೇಳಿದ್ದೇವೆ, ಅದು ಎಲ್ಲಾ ಬಂದ ಮೇಲೆ, ಅದನ್ನು ಜಿಲ್ಲಾಪರಿಷತ್ತಿನಿಂದ ಪಿಡಬ್ಲ್ಯೂಡಿಗೆ ತೆಗೆದುಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಮಾನ್ಯ ಬಾಬಾಗೌಡ ಪಾಟೀಲರು ಹೇಳುತ್ತಾ ಸಕ್ಕರೆ ಕಾರ್ಖಾನೆಗಳಿಂದ ಸರಕಾರಕ್ಕೆ ಸಾಕಷ್ಟು ಆದಾಯ ಬರುತ್ತದೆ, ಆದರೆ ಸರಕಾರದವರು ರಸ್ತೆಗಳನ್ನು ಮಾತ್ರ ರಿಪೇರಿ ಮಾಡಿಸುವುದಿಲ್ಲ ಎಂದು ಹೇಳಿದ್ದಾರೆ. ಅದನ್ನು ಕೂಡ ಪರಿಶೀಲಿಸುತ್ತೇನೆ. ಆ ಕಾರ್ಯಕ್ಕೆ ಆದ್ಯತೆಯನ್ನು ಕೊಡುತ್ತೇವೆ ಎಂದು ಮಾನ್ಯ ಅಧ್ಯಕ್ಷರ ಮೂಲಕ ಅವರಿಗೆ ತಿಳಿಸಬಯಸುತ್ತೇನೆ.

ಮಾನ್ಯ ಮಂಜುನಾಥ ಕೊಣ್ಣೂರ್‌ರವರು ಕೂಡ ರಸ್ತೆಗಳ ವಿಚಾರದಲ್ಲಿ ಸಾಕಷ್ಟು ಹೇಳಿದ್ದಾರೆ. ದೊಡ್ಡರಸ್ತೆಗಳ ಬಗ್ಗೆ ಹೇಳಿದ್ದಾರೆ. ರಾಷ್ಟ್ರೀಯ ಹೆದ್ದಾರಿಗಳನ್ನು ಮಾಡುವುದು, ಆ ಕುರಿತು ಕೇಂದ್ರ ಸರಕಾರಕ್ಕೆ ಕಳುಹಿಸಿಕೊಡುವ ಬಗ್ಗೆ ಹೇಳಿದ್ದಾರೆ. ಆ ಪ್ರಯತ್ನವನ್ನು ನಾವು ಮಾಡುತ್ತೇವೆ. ನಾವು ನಮ್ಮ ರಾಜ್ಯದಲ್ಲಿ ಸುಮಾರು 13 ರಾಷ್ಟ್ರೀಯ

ಹೆದ್ದಾರಿಗಳನ್ನು ಗುರುತಿಸಿ, ಕೇಂದ್ರಕ್ಕೆ ಕಳುಹಿಸಿದ್ದೇವೆ. ಆದರೆ ಕೇಂದ್ರಸರಕಾರದ ವತಿಯಿಂದ ಇದುವರೆಗೆ ಯಾವುದೇ ಅನುಮತಿ ಸಿಕ್ಕಿಲ್ಲ ಮತ್ತು ಯಾವುದೇ ಗ್ರ್ಯಾಂಟ್ ಕೂಡ ಬಂದಿಲ್ಲ. ಒಂದು ಎಕ್ಸಪರ್ಟ್ ಕಮಿಟಿ ಮಾಡಿ, ದೊಹರಾ ಎಂದು ಹೇಳಿ, ಅವರು ಕೂಡ ಎರಡು ರಾಷ್ಟ್ರೀಯ ಹೆದ್ದಾರಿಗಳನ್ನು ಗುರುತಿಸಿ, ಕೇಂದ್ರ ಸರಕಾರಕ್ಕೆ ರೆಕಮಂಡ್ ಮಾಡಿದ್ದಾರೆ. Ministry of Surface Transport ಆದರೆ ಅದು ಸ್ಯಾಂಕ್ಷನ್ ಆಗಿ ಬಂದಿಲ್ಲ ಮತ್ತು 1985-86 ರಲ್ಲಿದ್ದಂಥ ಕೇಂದ್ರ ಸರಕಾರದ ಮಂತ್ರಿಗಳಾಗಿದ್ದ ಶ್ರೀ ಉನ್ನಿಕೃಷ್ಣನ್‌ರವರು ಎರಡು ಹೆದ್ದಾರಿಗಳನ್ನು ರೆಕಮಂಡ್ ಮಾಡಿದ್ದಾರೆ ಅದೂ ಕೂಡ ಸಾಂಕ್ಷನ್ ಆಗಿ ಬಂದಿಲ್ಲ. ಅವುಗಳೆಲ್ಲವುಗಳ ಬಗ್ಗೆ ತುಂಬಾ ಪ್ರಯತ್ನ ಮಾಡಿ ಸೂಕ್ತ ರೀತಿಯಲ್ಲಿ ಕೇಂದ್ರ ಸಚಿವರಿಗೆ ಬರೆದಿದ್ದಾರೆ. ಅದನ್ನು ನಾವೂ ಪರ್‌ಸ್ಯೂ ಮಾಡಿ ಸಾಧ್ಯವಾದಷ್ಟು ಜಾಗ್ರತೆ ಕೇಂದ್ರ ಸಚಿವರನ್ನು ಭೇಟಿ ಮಾಡಿ ಒಂದು ಅಥವಾ ಎರಡನ್ನಾದರೂ ರಾಷ್ಟ್ರೀಯ ಹೆದ್ದಾರಿಗಳನ್ನು ಸ್ಯಾಂಕ್ಷನ್ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಇವೊತ್ತು ನಮ್ಮ ರಾಷ್ಟ್ರೀಯ ಹೆದ್ದಾರಿಗಳು, ಬೇರೆ ಪ್ರದೇಶಗಳಲ್ಲಿರತಕ್ಕಂಥವುಗಳಿಗೆ ಲೆಕ್ಕ ಹಾಕಿದರೆ, ನಮ್ಮಲ್ಲಿರತಕ್ಕಂಥ ಸರಾಸರಿ ಬಹಳ ಕಡಿಮೆ ಇದೆ ಎಂಬುದು ನಮ್ಮ ಭಾವನೆ ಇದೆ.

ನಮ್ಮಲ್ಲಿ ಸುಮಾರು ಎರಡು ಸಾವಿರ ಕಿ.ಮೀ. ಇದೆ. ಇದು 1991ನೇ ಇಸವಿಯ ಹೊತ್ತಿಗೆ ಸುಮಾರು 3 ಸಾವಿರ ಕಿ.ಮೀ.ವರೆಗೆ ಇರಬೇಕಾಗಿತ್ತು, ಆದರೆ ನಮ್ಮಲ್ಲಿ ಇನ್ನೂ ಒಂದು ಸಾವಿರ ಕಿ.ಮೀ. ವರೆಗೆ ಕಡಿಮೆ ಇದೆ. 2002ನೇ ಇಸವಿಯೊಳಗಾಗಿ ಸುಮಾರು ನಾಲ್ಕು ಸಾವಿರ ಕಿ.ಮೀ, ಆಗಬೇಕೆಂದು ನಿಯಮ ಇದೆ. ಆದರೆ ನಿಯಮದ ಪ್ರಕಾರ ಕೇಂದ್ರ ಸರಕಾರದವರು ನಮಗೆ ಸಾಂಕ್ಷನ್ ಮಾಡಿಲ್ಲ. ಆ ಬಗ್ಗೆ ಸೂಕ್ತ ಪ್ರಯತ್ನಗಳನ್ನು ಮಾಡುತ್ತೇವೆ. ಎಂದು ಈ ಸದನಕ್ಕೆ ಅಧ್ಯಕ್ಷರ ಮುಖಾಂತರ ತಿಳಿಸಬಯಸುತ್ತೇನೆ.

ಶಾಸಕರಾದ ಶ್ರೀ ಕುಶಾಲ್‌ರವರು ಕೂಡ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ರಸ್ತೆಗಳನ್ನು ರಿಪೇರಿ ಮಾಡಿಸಬೇಕು ಮತ್ತು ಕೇಂದ್ರ ಸರಕಾರದಿಂದ ಸಿಆರ್‌ಎಫ್ ಎಂದು ಹೇಳಿ ಈ ಪೆಟ್ರೋಲ್ ಮಾರುವುದರಿಂದ ಏನು ಸುಂಕ ಬರುತ್ತದೆ. ಆ ಸುಂಕದಿಂದ ಸುಮಾರು 45 ಕೋಟಿ ರೂಪಾಯಿಗಳಷ್ಟು ಕೇಂದ್ರ ಸರಕಾರದವರು ನಮಗೆ ಕೊಡಬೇಕಾದುದು ಬಾಕಿ ಇದೆ. ಹೀಗೆ ಕೊಡಬೇಕಾದ ಹಣವನ್ನು ಅವರು ನಮಗೆ ಮೂರು ವರ್ಷಗಳಿಂದ ಕೊಟ್ಟಿಲ್ಲ, ನಾವು ಕೇಳಿದ್ದೇವೆ, ಆದರೆ ಅವರಿಂದ ಯಾವುದೇ ಉತ್ತರವೂ ಬಂದಿಲ್ಲ. ಅದು ಬಂದರೆ ಏನು 45 ಕೋಟಿ ರೂಪಾಯಿಗಳ ಬಿಡುಗಡೆ ಆಗುತ್ತದೆ, ಅದನ್ನು ರಸ್ತೆಗಳ ರಿಪೇರಿಗೆ ಮತ್ತು ಎಲ್ಲಾ ತರವಾದ ಮೈಂಟೇನೆನ್ಸ್‌ಗೆ ಬಳಸಬಹುದು ಎಂದು ಭಾವಿಸಿದ್ದೇನೆ, ಅದರ ಬಗ್ಗೆ ಪ್ರಯತ್ನ ಮಾಡುತ್ತೇನೆ ಎಂದು ಹೇಳಬಯಸುತ್ತೇನೆ.

ಇನ್ನು ಶ್ರೀ ವಾಟಾಳ್‌ನಾಗರಾಜ್‌ರವರು ಕೂಡ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಬೆಂಗಳೂರು ಮೈಸೂರು ರಸ್ತೆಯನ್ನು ಡಬಲ್‌ರೋಡ್ ಮಾಡಬೇಕೆಂದು ಕೇಳಿದ್ದಾರೆ. ಆದರೆ ಸರಕಾರದ ವಿಚಾರದಲ್ಲಿ ಆ ಬಗ್ಗೆ ಎಕ್ಸ್‌ಪ್ರೆಸ್ ರೈಲ್ವೆ ಮಾಡಬೇಕೆಂದು ಹೇಳಿ ಒಂದು ಉದ್ದೇಶ ಇದೆ. ಅದಕ್ಕೆ ಸುಮಾರು 200 ಕೋಟಿ ರೂಪಾಯಿಗಳ ವೆಚ್ಚ ಆಗುತ್ತದೆ. ಅದನ್ನು ಖಾಸಗಿಯಾಗಿ ಮಾಡಬೇಕೆ? ಅಥವಾ ಸರಕಾರದ ವತಿಯಿಂದ ಮಾಡಬೇಕೆ ಎಂಬ ಬಗ್ಗೆ ಇನ್ನೂ ತೀರ್ಮಾನ ಮಾಡಿಲ್ಲ, ಅದಕ್ಕಾಗಿ ಒಂದು

ಎಕ್ಸ್‌ಪರ್ಟ್ ಕಮಿಟಿಯನ್ನು ಕೂಡ ಮಾಡಿದ್ದೇವೆ. ಅದಕ್ಕೆ ಅಡಿಶನಲ್ ಚೀಫ್ ಸೆಕ್ರೇಟರಿಯವರು ಅಧ್ಯಕ್ಷರಾಗಿದ್ದಾರೆ.

ಇದರ ಬಗ್ಗೆ ಕೆಲವು ಟೆಂಡರ್ ಕೂಡ ಕಾಲ್ಫರ್ ಮಾಡಿದ್ದರು. ವಿಚಾರ ಮಾಡಿ ಪ್ರೈವೇಟ್‌ನವರಿಗೆ ಕೊಡಬೇಕೆಂದು ಸರ್ಕಾರದ ಮನಸ್ಸಿನಲ್ಲಿದೆ, ಗುಜರಾತದ ಸರ್ಕಾರ ಕೂಡ ಇಂತಹ ಎಕ್ಸ್‌ಪ್ರೆಸ್‌ರೈಲನ್ನು ಅಹಮದಾಬಾದಿನಿಂದ ಬರೋಡಕ್ಕೆ ಮಾಡಿಸಿದೆ. ಅದನ್ನು ನೋಡಿಕೊಂಡು ಬರುವುದಕ್ಕೆಂದು ನಮ್ಮ ತಜ್ಞರು ಹೋಗಿದ್ದರು. ಅದರ ವಿಷಯದಲ್ಲಿ ಸಾಕಷ್ಟು ಚರ್ಚೆ ನಡೆದಿದ್ದು ನಮ್ಮ ಅಡಿಶನಲ್ ಚೀಫ್ ಸೆಕ್ರೆಟರಿ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗ್ ಕರೆದು ಅದರ ಸಾಧಕಬಾಧಕಗಳನ್ನು ಅರಿತು ಕೊಂಡು ಏನಾದರೂ ಮಾಡಿ ಈ ಎಕ್ಸ್‌ಪ್ರೆಸ್ ಹೈವೇ ಮಾಡಬೇಕೆಂದು ಸರ್ಕಾರಕ್ಕೆ ಆಸೆ ಇದೆ. ಮತ್ತು ವಾಟಾಳರು ಹೇಳಿದ ಡಬಲ್ ರಸ್ತೆ ಅವೆರಡರಲ್ಲಿ ಒಂದಾದರೂ ಮಾಡಬೇಕು. ಇದರಿಂದ ಬೆಂಗಳೂರು ಮೈಸೂರುಗಳ ಮಧ್ಯೆ ರಸ್ತೆ ಅಂತರ 139 ಕಿ.ಮೀ. ಇದ್ದು, ರೈಲ್ ಮಾರ್ಗವಾದರೆ 10 ಕಿ.ಮೀ. ಕಡಿಮೆಯಾಗುತ್ತದೆ. ನ್ಯಾಷನಲ್ ಹೈವೇನಲ್ಲಿ ಈ ವರ್ಷ ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್‌ನಿಂದ ಅಂಕೋಲಾದಿಂದ ಹುಬ್ಬಳ್ಳಿಗೆ 65 ಕೋಟಿ ಕೊಟ್ಟಿದ್ದಾರೆ, ಅದರಲ್ಲಿ 40 ಕೋಟಿ ಸಾಲ, 25 ಕೋಟಿ ಸರ್ಕಾರದ್ದು. ಈ ಮೂರು ವರ್ಷದಲ್ಲಿ ಅದನ್ನು ಪೂರೈಸಬೇಕೆಂದು ಆಜ್ಞೆ ಇದೆ. ಅದರ ಪ್ರಕಾರ ಇವತ್ತು ಕೆಲಸ ನಡೆದಿದೆ. ಹೋದ ವರ್ಷ 6 ಕೋಟಿ ಖರ್ಚಾಗಿದೆ. ಉಳಿದ ಕೆಲಸವನ್ನು ಇನ್ನೆರಡು ವರ್ಷದಲ್ಲಿ ಪೂರೈಸಿ, ಅಂಕೋಲಾ ಮತ್ತು ಹುಬ್ಬಳ್ಳಿ ರಸ್ತೆ ಆದ ಮೇಲೆ ಬಳ್ಳಾರಿ ಕೂಡ ಮಾಡಬೇಕೆಂದು ಉದ್ದೇಶ ಸರ್ಕಾರಕ್ಕಿದೆ. ಅದಕ್ಕೆ ಏಶ್ಯನ್ ಡೆವಲಪ್‌ಮೆಂಟ್ ಬ್ಯಾಂಕಿನವರು ಸಾಲ ಕೊಡಲು ಒಪ್ಪಿದ್ದಾರೆ. ಇಂದು ಎಲ್ಲಾ ಸದಸ್ಯರು ರಸ್ತೆಗಳ ವಿಷಯದಲ್ಲಿ ಮಾತಾಡಿದ್ದಾರೆ. ಎಲ್ಲಿ ರಸ್ತೆ ಸರಿಯಾಗಿಲ್ಲವೋ ಅಲ್ಲಿನ ಜನಗಳು ಅನುಕೂಲತೆ ವಿದ್ಯೆ ಎಲ್ಲದರಲ್ಲೂ ಹಿಂದುಳಿದಿದ್ದಾರೆಂಬ ಭಾವನೆ ಬರುತ್ತದೆ. ಆ ಭಾವನೆ ಬರದಂತೆ ಮಾಡುವುದು ಸರ್ಕಾರದ ಉದ್ದೇಶ.

ಪ್ರತಿಯೊಂದು ಮತಕ್ಷೇತ್ರದಲ್ಲಿ ಕೂಡ 40 ಲಕ್ಷ ಕೆಲಸ ತೆಗೆದುಕೊಂಡು ಅದರಲ್ಲಿ ಮೂರು ವರ್ಷದಲ್ಲಿ 40 ಕಿ.ಮೀ. ಉದ್ದದ ರಸ್ತೆ ಅಥವಾ 40 ಲಕ್ಷ ರೂ.ಗಳ ಒಳ್ಳೆಯ ರಸ್ತೆ ನಿರ್ಮಾಣ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕಿದೆ. ಅದಕ್ಕೆ ಸಾಕಷ್ಟು ಹಣ ಬೇಕಾಗಿದೆ. ಹಣದ ಕೊರತೆ ಸ್ವಲ್ಪ ಕಾಣಿಸುತ್ತಿದೆ. ಅದನ್ನು ಸರಿದೂಗಿಸಬೇಕಾದರೆ ನಾನು ಮೊದಲೇ ಹೇಳಿದಂತೆ ನಮಗೆ ಸಿಆರ್‌ಎಫ್‌ನಿಂದ 45 ಕೋಟಿ ರೂ. ಬರಬೇಕಾಗಿದೆ. ಅದು ಬಂದರೆ ಇದೆಲ್ಲವನ್ನೂ ತೆಗೆದುಕೊಳ್ಳಲು ಅನುಕೂಲವಾಗುತ್ತದೆಂದು ಈ ಸಭೆಗೆ ಹೇಳಬಯಸುತ್ತೇನೆ. ಇಂದಿನ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿ ಕೂಡ 22 ಸಾವಿರ ಹಳ್ಳಿಗಳಿವೆ. ಹ್ಯಾಮ್ಲೆಟ್‌ಗಳನ್ನು ಬಿಟ್ಟು. ಆದರೂ ಇನ್ನೂ ಎಷ್ಟೋ ಅಂದರೆ 108 ಹಳ್ಳಿಗಳಿಗೆ ಸಂಪರ್ಕವೇ ಇಲ್ಲ, ಯಾವ ತರಹದ ಸಂಪರ್ಕವೂ ಇಲ್ಲ, ಅವನ್ನು ಗುರ್ತಿಸಿ ಏನಾದರೂ ಮಾಡಿ ಸಂಪರ್ಕ ಕಲ್ಪಿಸುವ ಉದ್ದೇಶ ಸರ್ಕಾರಕ್ಕಿದೆ. ಅದನ್ನು ಈ ವರ್ಷ ತೆಗೆದುಕೊಳ್ಳಬೇಕೆಂಬ ವೈಯುಕ್ತಿಕ ಅಭಿಪ್ರಾಯ ನನ್ನದು. ಇನ್ನು ಶೃಂಗೇರಿಯ ಶಾಮಣ್ಣನವರು, ಶೃಂಗೇರಿಯಲ್ಲಿ ಮಲೆನಾಡು ಏರಿಯಾವಾದ್ದರಿಂದ ರಸ್ತೆ ಬಹಳ ಕೆಟ್ಟಿದೆ. ಅದರ ಕ್ಷೇತ್ರದ ವ್ಯಾಪ್ತಿಗೆ ಮೂರು ತಾಲ್ಲೂಕು ಬಂದು ಸೇರುತ್ತದೆಂದು, ಈ ಸರ್ಕಾರದ ವತಿಯಿಂದ ಏನು ರಸ್ತೆಗಳು ನಿರ್ಮಾಣವಾಗಿವೆ, ಅವು ಸಾಲದೆಂದು ಹೇಳಿದ್ದಾರೆ, ಅದನ್ನೆಲ್ಲ ಪರಿಗಣನೆಗೆ ತೆಗೆದುಕೊಂಡು ಸಾಕಷ್ಟು ಪ್ರಾತಿನಿಧ್ಯ ಕೊಟ್ಟು ರಿಪೇರಿ ಮಾಡಿಸಲು ಅನುಕೂಲ ಮಾಡಿಕೊಡುತ್ತೇನೆ ಮತ್ತು ಫ್ಲಡ್ ರಿಲೀಫ್‌ನಲ್ಲಿ 90-91ರಲ್ಲಿ 10 ಕೋಟಿಯಷ್ಟು ಕೆಲಸದ ರಸ್ತೆಗಳು ಹಾಳಾಗಿವೆ. 91-92ರಲ್ಲಿ ಹೆಚ್ಚಿನ

ಮಳೆಯಿಂದ 13 ಕೋಟಿ 50 ಲಕ್ಷದಷ್ಟು ಹಾಳಾಗಿವೆ. ಇದಕ್ಕೆ ಸರ್ಕಾರದ ಹಣವನ್ನು ಕೇಳಿದ್ದೇನೆ. ಇನ್ನೂ ಅದು ಬಿಡುಗಡೆಯಾಗಿಲ್ಲ, ಅದು ಬಿಡುಗಡೆಯಾದ ಕೂಡಲೇ ಫ್ಲಡ್ ರಿಲೀಫ್ ಬಾಬ್ತಿನಲ್ಲಿ ಕೆಲಸವನ್ನು ಕೈಗೆತ್ತಿಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಸನ್ಮಾನ್ಯ ಸದಸ್ಯರಾದ ರಾಮಸ್ವಾಮಿಯವರು ಕೂಡ ಸ್ವಲ್ಪ ಖಾರವಾಗಿ ಮಾತನಾಡಿದ್ದಾರೆ. ಈ ಇಂಜಿನಿಯರಿಂಗ್ ಸೆಲೆಕ್ಷನ್ ವಿಷಯದಲ್ಲಿ ಹೇಳಿದ್ದಾರೆ, ಅದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ಸುಮಾರಾಗಿ 1961 ರಿಂದ 1991 ನೇ ಇಸವಿಯವರೆಗೂ ಕೂಡ ಆ ಕೆಲಸ, ಏನು ನೇರವಾದ ರೆಕ್ರೂಟ್‌ಮೆಂಟ್ ಏನು ಇದೆ, ನೇರವಾಗಿ ತೆಗೆದುಕೊಳ್ಳತಕ್ಕಂಥದ್ದು ಆ ಕಾರ್ಯ ನಡೆದಿಲ್ಲ, 1961ನೇ ಇಸವಿಗಿಂತ ಮೊದಲು 100 ಜನ ಇಂಜಿನಿಯರುಗಳನ್ನು ತೆಗೆದುಕೊಂಡರೆ ಅದರಲ್ಲಿ 60 ಭಾಗ ಪ್ರಮೋಷನ್ಸ್ ಮೇಲೆ, 40 ಭಾಗ ಡೈರೆಕ್ಟ್ ರೆಕ್ರೂಟ್‌ಮೆಂಟ್ ಎಂದು ಹೇಳಿ ಒಂದು ಪಾಲಿಸಿ ಇತ್ತು. ಅದನ್ನೆಲ್ಲಾ ಸುಪ್ರೀಂಕೋರ್ಟ್ ಮತ್ತು ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್ ಎಲ್ಲದಕ್ಕೂ ಹೋಗಿ ಒಂದು ನಿರ್ಧಾರಕ್ಕೆ ಬಂದಿದ್ದಾರೆ. ನೂರಕ್ಕೆ 75 ಭಾಗ ಪ್ರಮೋಷನ್ ಮೇಲೆ, 20 ಭಾಗ ಡೈರೆಕ್ಟ್ ರೆಕ್ರೂಟ್‌ಮೆಂಟ್, 5ಭಾಗ ಇನ್ ಸರ್ವೀಸ್‌ನಲ್ಲಿರತಕ್ಕಂಥವರಿಗೆ ಕಾಂಪ್ಯುಟಿಟೀವ್ ಎಕ್ಸಾಮಿನೇಷನ್ ಮಾಡಿ ಅವರಿಗೆ ಪ್ರಮೋಷನ್ಸ್ ಕೊಡಬೇಕು ಎಂದು ಸರ್ಕಾರದ ಉದ್ದೇಶ. ಮತ್ತು ಅದನ್ನೂ ಕೋರ್ಟ್‌ಕೂಡಾ ಅಂಗೀಕಾರ ಮಾಡಿದೆ. ಮತ್ತು ಅದೇ ರೀತಿ ಮೊನ್ನೆ 50 ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ಸ್‌ಗೆ ಕೂಡ ಕಾಂಪಿಟೀಷನ್ ಎಕ್ಸಮಿನೇಷನ್ ನಡೆದಿದೆ, ಪರೀಕ್ಷೆಯಲ್ಲಿ ಪಾಸಾದವರು ಇಂಟರ್‌ವ್ಯೂವನ್ನು ಫೇಸ್ ಮಾಡಿದ್ದಾರೆ. ಓರಲ್ ಟೆಸ್ಟ್‌ಗೋಸ್ಕರ ಮಾಡಿದ್ದರು. ಅದರಲ್ಲಿ, ಪಾಸಾಗಿರತಕ್ಕಂಥವರು ಹೆಚ್ಚಿನ ಅಂಕಗಳನ್ನು ಪಡೆದಿರತಕ್ಕಂಥವರುಗಳಿಗೆ ಇಂಜಿನಿಯರ್ ಹುದ್ದೆಗಳನ್ನು ಕೊಟ್ಟಿದ್ದಾರೆ, ಅದರ ರೋಸ್ಟರ್ ಸಿಸ್ಟಂ ಪ್ರಕಾರವಾಗಿ ಕೊಟ್ಟಿದ್ದಾರೆ.

ಇದು ಕರ್ನಾಟಕ ಲೋಕಸೇವಾ ನಿಯಮದ ಪ್ರಕಾರ, ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ, ಆದರೂ ಕೂಡ ಕೆಲವು ದೂಷಣೆಗಳನ್ನು, ಕೆಲವು ತಪ್ಪುಗಳನ್ನು ಕಂಡುಹಿಡಿದು ಹೇಳಿದ್ದಾರೆ. ಅದು ಎಷ್ಟುಮಾತ್ರ ನಿಜವೋ, ಅಥವಾ ಸತ್ಯಕ್ಕೆ ದೂರವಾಗಿದೆಯೋ ಗೊತ್ತಾಗುವುದಿಲ್ಲ, ಆದರೂ ಕೂಡ ಅದನ್ನು ಸರ್ಕಾರ ವಿಚಾರ ಮಾಡಿ ಏನು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವುದನ್ನು ಪ್ರಯತ್ನ ಮಾಡುತ್ತೇನೆ. ಮತ್ತು ಅದಕ್ಕೆ ನಮ್ಮ ಸರ್ಕಾರದ ವತಿಯಿಂದ ಏನು ಆಗಬೇಕಾಗಿದೆ, ಅದರ ಬಗ್ಗೆ ವಿಚಾರ ಮಾಡುತ್ತೇನೆ ಎಂದು ಹೇಳಿ ಈ ಸಂದರ್ಭದಲ್ಲಿ ಅಧ್ಯಕ್ಷರ ಮುಖಾಂತರ ಸದನಕ್ಕೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತಿನ ಸಂದರ್ಭದಲ್ಲಿ ಪ್ರಮೋಷನ್ಸ್ ಏನು ಇದೆ, ಸುಮಾರು 10-20 ವರ್ಷಗಳಿಂದ ಸರ್ವೀಸ್ ಮಾಡಿರುವವರು ಇದ್ದಾರೆ, ಅಸಿಸ್ಟೆಂಟ್ ಇಂಜಿನಿಯರ್ಸ್ ಇದ್ದಾರೆ, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ಸ್ ಕೂಡ ಇದ್ದಾರೆ, ಜೂನಿಯರ್ಸ್ ಇಂಜಿನಿಯರ್ಸ್ ಇದ್ದಾರೆ, ಅವರೆಲ್ಲರಿಗೂ ಕೂಡ ಟೈಮ್ ಬಾಂಡ್ ಪ್ರಮೋಷನ್ಸ್ ಪ್ರಕಾರ ಶೀಘ್ರದಲ್ಲಿಯೇ ಅವರೆಲ್ಲರಿಗೂ ಕೂಡ ಪ್ರಮೋಷನನ್ನು ಕೊಡುತ್ತೇವೆ ಎಂದು ಸದನಕ್ಕೆ ತಿಳಿಸುವುದಕ್ಕೆ ನನಗೆ ಸಂತೋಷವೆನಿಸುತ್ತದೆ. ಅಸಿಸ್ಟೆಂಟ್ ಇಂಜನಿಯರುಗಳು, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರುಗಳ ಪೋಸ್ಟ್‌ಗಳಿಗೆ 1200 ಜನರಿಗೆ ಪ್ರಮೋಷನ್ಸ್ ಸಿಗುತ್ತದೆ. ಅತೀ ಶೀಘ್ರದಲ್ಲಿಯೇ ಆ ಲಿಸ್ಟನ್ನು ಅನೌನ್ಸ್ ಮಾಡುತ್ತೇವೆ. ಕೆಲವರು ಬಹಳ ಸೀನಿಯರ್ ಇದ್ದಾರೆ, ಅವರ ವೆರಿಫಿಕೇಶನ್ ಮಾಡಿ ಏನು ಚರಿತ್ರೆ ಅವರದು,

ಅವರು ಒಳ್ಳೆಯವರೋ, ಅಲ್ಲವೋ ಎಲ್ಲವನ್ನೂ ಪರೀಕ್ಷೆ ಮಾಡಿ ಸರ್ವೀಸ್ ಕಂಡೀಷನ್ಸ್ ಎಲ್ಲವನ್ನೂ ಫುಲ್‌ಫಿಲ್ ಮಾಡಿದಂಥ 90 ಜನ ಅಸಿಸ್ಟೆಂಟ್

ಇಂಜಿನಿಯರುಗಳಿಗೂ ಕೂಡ ಅತೀ ಶೀಘ್ರದಲ್ಲಿಯೇ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರುಗಳಿಗೆ ಪ್ರಮೋಶನನ್ನು ಕೊಡುವುದಕ್ಕೆ ಸರ್ಕಾರಕ್ಕೆ ಇಚ್ಛೆ ಇದೆ. ಅದನ್ನು ಜಾಗ್ರತೆ ಕೊಡುತ್ತೇವೆ ಎಂದು ಹೇಳಿ ಅಧ್ಯಕ್ಷರ ಮುಖಾಂತರ ಸದನಕ್ಕೆ ತಿಳಿಸುವುದಕ್ಕೆ ಬಯಸುತ್ತೇನೆ. ಸನ್ಮಾನ್ಯ ಸ್ನೇಹಿತರಾದ ಸೊರಕೆಯವರು ಕೂಡ ಅವರ ಕ್ಷೇತ್ರದ ವಿಷಯದಲ್ಲಿ ಮಾತನಾಡಿದ್ದಾರೆ. ಬಹಳ ನೊಂದ ಮನಸ್ಸಿನಿಂದ ಹೇಳಿದ್ದಾರೆ. ಸುಮಾರು 5 ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದೇನೆ, ಯಾವುದೋ ಒಂದು ರಸ್ತೆ ಅದು ಬಜೆಟ್‌ನಲ್ಲಿ ಸೇರಿಲ್ಲ ಎಂದು ಹೇಳಿದ್ದಾರೆ. ಸಾಮಾನ್ಯವಾಗಿ ಇವತ್ತಿನ ಸಂದರ್ಭದಲ್ಲಿ ಸದಸ್ಯರು ಕೊಟ್ಟಿರತಕ್ಕಂಥ ಸಲಹೆಗಳನ್ನು ಸ್ವೀಕರಿಸಿದರೆ ಎಲ್ಲಾ ರಸ್ತೆಗಳೂ ಕೂಡ ನೂರಕ್ಕೆ 90 ಭಾಗ ಜಿಲ್ಲಾಪರಿಷತ್ತಿಗೆ ಸೇರುವಂಥ ರಸ್ತೆಗಳು. ಅವುಗಳನ್ನು ದುರಸ್ತಿ ಮಾಡಬೇಕಾದರೆ ನಮಗೆ ಕಾಯ್ದೆ ಅಡ್ಡ ಬರುತ್ತದೆ ಮತ್ತು ಹಣದ ಮುಗ್ಗಟ್ಟು ಕೂಡ ಇದೆ. ಅದಕ್ಕೋಸ್ಕರ ಇವೆಲ್ಲಾ ಬೇಡಿಕೆಗಳನ್ನು ರಸ್ತೆಗಳ ರಿಪೇರಿ, ಮತ್ತು ಸೇತುವೆಗಳ ರಿಪೇರಿಗೆ ಅವುಗಳನ್ನು ನಿವಾರಣೆ ಮಾಡಬೇಕಾದರೆ ಆ ರಸ್ತೆಗಳನ್ನು ಅಪ್‌ಗ್ರೇಡ್ ಮಾಡಿ ಪಿ.ಡಬ್ಲ್ಯೂ.ಡಿ.ಗೆ ತೆಗೆದುಕೊಳ್ಳಬೇಕು ಎಂಬುವುದು ಸರ್ಕಾರದ ಉದ್ದೇಶ. ಆದುದರಿಂದ ಪ್ರತಿಯೊಬ್ಬ ಶಾಸಕರಿಗೂ ಕೂಡ ಅವರ ಮತಕ್ಷೇತ್ರದಲ್ಲಿ ಸುಮಾರು 40 ಕಿಲೋ ಮೀಟರ್ ಕೊಟ್ಟು ಅದನ್ನು ಅಫ್‌ಗ್ರೇಡ್ ಮಾಡಬೇಕು ಎನ್ನುವ ಆಸೆ ಇದೆ.

ಎಲ್ಲಾ ರೀತಿಯಲ್ಲಿ ದುರಸ್ತಿ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ. ಅದೇರೀತಿ ಶ್ರೀಮಾನ್ ಸೊರಕೆಯವರು ಹೇಳಿರತಕ್ಕ ರಸ್ತೆ ಜಿಲ್ಲಾಪರಿಷತ್ತಿಗೆ ಸೇರಿದೆ. ಜಿಲ್ಲಾಪರಿಷತ್ತಿಗೆ ಸೇರಿದ್ದನ್ನು ಅಪ್‌ಗ್ರೇಡ್ ಮಾಡಿ ಸರ್ಕಾರಕ್ಕೆ ತೆಗೆದುಕೊಂಡು ಸರ್ಕಾರದಿಂದ ದುರಸ್ತಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆಂದು ಅಧ್ಯಕ್ಷರ ಮುಖಾಂತರ ಈ ಸದನಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹಳ ಪ್ರಾಮುಖ್ಯವಾದಂತಹ ವಿಷಯವೆಂದರೆ ಎಲ್ಲಾ ಮತಕ್ಷೇತ್ರದಲ್ಲಿಯೂ ಎಂಡಿಆರ್ ರೋಡ್ಸ್, ಆರ್ಡಿನರಿ ಡಿಸ್ಟ್ರಿಕ್ಟ್ ರೋಡ್ಸ್, ಸ್ಟೇಟ್ ಹೈವೇ ರೋಡ್ಸ್‌ಗಳು ಇವೆಲ್ಲವೂ ಕೂಡ ಮಳೆಯಿಂದ ಬಹಳ ಹಾನಿಯಾಗಿವೆ. ಈ ರಸ್ತೆಗಳಲ್ಲಿ ಓಡಾಡಲು ಆಗುವುದಿಲ್ಲ. ಬಸ್ ಸಂಚಾರಕ್ಕೂ ಅನುಕೂಲ ಇಲ್ಲವೆಂದು ಎಲ್ಲಾ ಶಾಸಕರ ಮನಸ್ಸಿನಲ್ಲಿಯೂ ಮನದಟ್ಟಾಗಿದೆ. ಸರ್ಕಾರ ಅದಕ್ಕೆ ಹೆಚ್ಚಿನ ಆಸಕ್ತಿ ವಹಿಸಿ ಅವೆಲ್ಲ ರಸ್ತೆಗಳನ್ನು ಕೂಡ ಇದೇ ವರ್ಷ ರಿಪೇರಿ ಮಾಡಲು ಪ್ರಯತ್ನ ಮಾಡುತ್ತದೆ. ಕೇಂದ್ರಸರ್ಕಾರದಿಂದ ನಮಗೆ ಸುಮಾರು 45 ಕೋಟಿ ರೂಪಾಯಿ ಸಿ.ಆರ್.ಎಫ್.ಫಂಡ್ ಬರಬೇಕಾಗಿದೆ.

ಅದು ಬಂದ ತಕ್ಷಣ ಎಲ್ಲಾ ಕಾರ್ಯಗಳನ್ನು ಹಂತಹಂತವಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ನಮ್ಮ ಇಲಾಖೆಯಲ್ಲಿ ಕನ್ಸ್ಟ್ರಕ್ಷನ್ ಕಾರ್ಪೊರೇಷನ್ ಇದೆ. ಅದರಲ್ಲಿ ಸುಮಾರು 22 ಕೋಟಿ ರೂಪಾಯಿಯನ್ನು ಒಂದು ವರ್ಷಕ್ಕೆ ಟರ್ನ್‌ಓವರ್ ಮಾಡುತ್ತೇವೆ. ಅದರಿಂದ 34 ಲಕ್ಷ ರೂಪಾಯಿ ಆದಾಯಬಂದಿದೆ. ಬೇರೆ ಖಾಸಗಿ ಗುತ್ತಿಗೆದಾರರಿಗೆ ಕೊಡುವುದಕ್ಕಿಂತ ಮೊದಲು ನಮ್ಮ ಸರ್ಕಾರದ ವತಿಯಿಂದ ನಮ್ಮ ಇಂಜಿನಿಯರ್‌ಗಳಿಂದಲೇ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡಿ ಅದರ ಉದ್ದೇಶವನ್ನು ಸಾಧನೆ ಮಾಡಿದ್ದೇವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ರಾಜ್ಯದಲ್ಲಿ ನೀರಾವರಿ ಸೌಲಭ್ಯಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂಬುದು ಎಲ್ಲರ ಅಭಿಪ್ರಾಯ ಇದೆ. ಅದರಂತೆ ಆದ್ಯತೆ ಕೊಟ್ಟಿದ್ದಾರೆ. ಅದರ ಜೊತೆಗೆ ಬ್ರಿಡ್ಜ್‌ಗಳಿಗೂ ರಸ್ತೆಗಳ ನಿರ್ಮಾಣಕ್ಕೆ ಸರ್ಕಾರ ಸಾಕಷ್ಟು ಹಣವನ್ನು ಕೊಟ್ಟಿದೆ. ಪಿ.ಡಬ್ಲ್ಯೂ.ಡಿ. ಫಂಡ್‌ನಿಂದ ಜಿಲ್ಲಾಪರಿಷತ್ತಿಗೆ ಸುಮಾರು 60 ಕೋಟಿ ರೂಪಾಯಿಯನ್ನು ರಸ್ತೆ

ನಿರ್ಮಾಣಕ್ಕೆ, ರಸ್ತೆ ಮೆಂಟೇನೆನ್ಸ್‌ಗೆ ಕೊಟ್ಟಿದ್ದೇವೆ. 40ಕಿ.ಮೀ. ರಸ್ತೆಯನ್ನು ಜಿಲ್ಲಾಪರಿಷತ್ತಿನಿಂದ ಅಪ್‌ಗ್ರೇಡ್‌ಗೋಸ್ಕರ ಪಿ.ಡಬ್ಲ್ಯೂ.ಡಿ - ಇಲಾಖೆಗೆ ಟ್ರಾನ್ಸ್‌ಫರ್ ಮಾಡಿಸಿದ್ದೇವೆ. ನಮಗೂ ಕೂಡ ಅಷ್ಟೆ ಹಣ ವಾಪಸ್ಸು ಬರುತ್ತದೆ. ಆದ್ದರಿಂದ ಹೆಚ್ಚಿನ ಕೆಲಸವನ್ನು ಮಾಡಿಸುವುದಕ್ಕೆ ನಮ್ಮ ಇಲಾಖೆಗೆ ಸಾಧ್ಯವಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ನಮ್ಮಲ್ಲಿ ಸಾಕಷ್ಟು ಜನ ಇಂಜಿನಿಯರ್ಸ್ ಇದ್ದಾರೆ, ಅವರಲ್ಲಿ ಸಾಕಷ್ಟುಜನ ಒಳ್ಳೆಯವರಲ್ಲ ಎಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಆದರೆ ಅಷ್ಟೆ ಜನ ಒಳ್ಳೆಯವರೂ ಇದ್ದಾರೆ.

ಸರ್ ಎಂ. ವಿಶ್ವೇಶ್ವರಯ್ಯನವರು, ಮತ್ತು ವಿಧಾನ ಸೌಧವನ್ನು ಕಟ್ಟಿಸಿದವರು ಇಂಜಿನಿಯರ್ ಆಗಿದ್ದಾರೆ. ಕಾಳಿ, ಸೂಪಾ, ಅಣೆಕಟ್ಟುಗಳನ್ನು ನೋಡಿದರೆ ಇಂಜಿನಿಯರ್‌ಗಳು ಎಷ್ಟು ಬುದ್ಧಿವಂತರು ಎಷ್ಟು ಕೆಲಸವನ್ನು ಮಾಡಿದ್ದಾರೆಂಬುದು ಅರ್ಥವಾಗುತ್ತದೆ. ಆದರೆ ಕೆಲವರು ಕೆಟ್ಟವರು ಇದ್ದಾರೆ. ಇಲ್ಲ ಎಂದು ಹೇಳುವುದಿಲ್ಲ. ಅಂತಹವರಿಗೆ ನಾವು ಶಿಕ್ಷೆಯನ್ನು ಕೊಡುವುದರಲ್ಲಿ ನಾವು ಹಿಂದುಮುಂದು ನೋಡುವುದಿಲ್ಲ. ಒಳ್ಳೆಯವರಿಗೆ ರಿವಾರ್ಡ್ ಕೊಡುತ್ತಾರೆ. ಪೋಲೀಸ್ ಇಲಾಖೆಯಲ್ಲಿ ಕೊಡುತ್ತಾರೆ., ಶಿಕ್ಷಣ ಇಲಾಖೆಯಲ್ಲಿ ಕೊಡುತ್ತಾರೆ. ನಮ್ಮ ಇಲಾಖೆಯಲ್ಲಿಯೂ ಕೂಡ ಒಳ್ಳೆಯ ಇಂಜಿನಿಯರ್‌ಗಳಿಗೆ, ಒಳ್ಳೆಯ ಮೇಧಾವಿಗಳಿಗೆ ಪ್ರಮಾಣಿಕ ಅಧಿಕಾರಿಗಳಿಗೆ ರಿವಾರ್ಡ್ ಕೊಟ್ಟು, ಅವರಿಗೆ ಪ್ರೋತ್ಸಾಹ ಕೊಡಬೇಕೆಂಬುದು ನನ್ನ ಭಾವನೆಯಾಗಿದೆ. ಆ ಕೆಲಸವನ್ನು ನಾವು ಮಾಡಬೇಕೆಂದಿದ್ದೇವೆ. ತಾವೆಲ್ಲರೂ ಅದಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ಅಧ್ಯಕ್ಷರ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ರುಕ್ಮಯ್ಯ ಪೂಜಾರಿಯವರೂ ಕೂಡ ರಸ್ತೆ ನಿರ್ಮಾಣದ ವಿಷಯದಲ್ಲಿ ಹೇಳಿದ್ದಾರೆ ಮತ್ತು ಒಳ್ಳೆಯ ರಸ್ತೆಗಳನ್ನು ಮಾಡಿಸಬೇಕೆಂದು ಕೋರಿದ್ದಾರೆ. ನಮ್ಮ ಕರ್ನಾಟಕದಲ್ಲಿ ಇದಕ್ಕಾಗಿ ಅಂದರೆ ರಸ್ತೆಗಳ ಮೇನ್‌ಟೆನೆನ್ಸ್‌ಗೆ ಸುಮಾರು 68 ಕೋಟಿ ರೂಪಾಯಿಗಳು ಬೇಕಾಗಿದ್ದು, ನಮಗೆ ಬಂದಿರುವುದು ಕೇವಲ 40 ಕೋಟಿ ರೂ.ಗಳು ಮಾತ್ರ. ಬಿಲ್ಡಿಂಗ್‌ಗೋಸ್ಕರ ನಾವು 40 ಕೋಟಿ ರೂ.ಗಳನ್ನು ಕೇಳಿದ್ದೆವು ಆದರೆ, ನಮಗೆ ಕೊಟ್ಟಿರುವುದು ಹತ್ತು ಕೋಟಿ ಚಿಲ್ಲರೆ ರೂ.ಗಳು ಮಾತ್ರ. ಇದು ನಮಗೆ ಏನೂ ಕೂಡ ಸಾಲದು. ಸೆಂಟ್ರಲ್‌ನ ಸಿ.ಆರ್.ಎಫ್. ಫಂಡ್ ಮತ್ತು ರೆಗ್ಯೂಲೇಟೆಡ್ ಮಾರ್ಕೆಟ್‌ನಿಂದ ಹಣವನ್ನು ಕೊಡಬೇಕೆಂದು ಸರ್ಕಾರವನ್ನು ಕೇಳಿದ್ದೇವೆ. ಯೋಜನಾ ಇಲಾಖೆ ಮತ್ತು ಹಣಕಾಸು ಇಲಾಖೆಯವರೊಡನೆ ಇದರ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೇವೆ. ರೆಗ್ಯೂಲೇಟಡ್ ಮಾರ್ಕೆಟ್‌ನವರು ಹಣವನ್ನು ಒದಗಿಸಿದರೆ, ಅವರಿಗೆ ಸೇರುವಂಥ ರಸ್ತೆಗಳನ್ನು ಒಳ್ಳೆಯ ರೀತಿಯಲ್ಲಿ ದುರಸ್ತಿ ಮಾಡಿಸಬಹುದಾಗಿದೆ. ಅವರನ್ನು ಕೂಡ ಹಣ ಕೇಳಿದ್ದೇವೆ. ಯೋಜನಾ ಇಲಾಖೆಯವರು ಇದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ ಎಂದು ನನ್ನ ಭಾವನೆ. ಇದರಿಂದ ರೈತರಿಗೂ ಅನುಕೂಲವಾಗುತ್ತದೆಂದು ತಿಳಿದಿದ್ದೇನೆ. ಇವತ್ತು ಹೈದರಾಬಾದ್-ಕರ್ನಾಟಕ ಏರಿಯಾದಲ್ಲಿ ಸಾಕಷ್ಟು ಕಾಮಗಾರಿಗಳನ್ನು ತೆಗೆದುಕೊಂಡಿದ್ದೇವೆ. ಬಹಳ ಹಿಂದುಳಿದ ಪ್ರದೇಶಗಳಾದಂಥ ಬಳ್ಳಾರಿ, ಬೀದರ್, ಗುಲ್ಬರ್ಗ, ರಾಯಚೂರು ಜಿಲ್ಲೆಗಳಲ್ಲಿ ಏನೂ ಅಭಿವೃದ್ಧಿ ಕೆಲಸವಾಗಿಲ್ಲವೆಂದು ಶ್ರೀಮಾನ್ ಚವಾಣ್‌ರವರು ಕೇಳಿದ್ದಾರೆ.

1991-92ನೇ ಸಾಲಿಗೆ ಸುಮಾರು 22 ಕೋಟಿ 71 ಲಕ್ಷ ರೂಪಾಯಿಗಳನ್ನು ಇದಕ್ಕಾಗಿಯೇ ಇಟ್ಟಿದ್ದೇವೆ ಹಾಗೂ ಇದನ್ನು ಖರ್ಚು ಮಾಡಿ ರಸ್ತೆಗಳನ್ನು ನಿರ್ಮಾಣ ಮಾಡುತ್ತಿದ್ದೇವೆ. ಕೆಲಸ ಈಗಾಗಲೇ ಪ್ರಾರಂಭವಾಗಿದೆ. ಹೊಸ ಕಟ್ಟಡಗಳನ್ನು ಕಟ್ಟುವುದಕ್ಕೆ ಸುಮಾರು 5 ಕೋಟಿ [illegible]

ಈಗಾಗಲೇ ನಡೆಯುತ್ತಿದೆ. ಮೂರು ವರ್ಷದಲ್ಲಿ ಸುಮಾರು 65 ಕೋಟಿ 85 ಲಕ್ಷ ರೂ.ಗಳನ್ನು ಖರ್ಚು ಮಾಡಬೇಕಾಗಿದೆ. ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಸರ್ಕಾರದ ವತಿಯಿಂದ ಸಾಕಷ್ಟು ಹಣವನ್ನು ಸಹಾಯ ಮಾಡಿದ್ದೇವೆ. ಇಲ್ಲಿಯ ಎಲ್ಲಾ ಕೆಲಸಗಳು ಪ್ರಾರಂಭವಾಗಿದೆ. ನಾಲ್ಕು ಜಿಲ್ಲೆಗಳಲ್ಲಿ ಹೆಚ್ಚಿನ ಕೆಲಸವಾಗುತ್ತಿದೆ. ಅದರ ಜೊತೆಗೆ ರೂರಲ್ ಡೆವಲಪ್‌ಮೆಂಟ್ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ಹೈದರಾಬಾದ್-ಕರ್ನಾಟಕ ಏರಿಯಾಗೆ 50 ಲಕ್ಷ ರೂ.ಗಳ ಸಹಾಯವಿದೆ. ಸರ್ಕಾರ ಪ್ರತಿಯೊಂದು ಮತಕ್ಷೇತ್ರಕ್ಕೂ 50 ಲಕ್ಷ ರೂ.ಗಳನ್ನು ಕೊಡಬೇಕೆನ್ನುವ ಉದ್ದೇಶವನ್ನು ಇಟ್ಟುಕೊಂಡಿದ್ದಾರೆ. ಅದನ್ನು ಕೊಟ್ಟರೆ ಬಹಳ ಹಿಂದುಳಿದ ಪ್ರದೇಶವಾದುದರಿಂದ ತುಂಬಾ ಅನುಕೂಲವಾಗುತ್ತದೆ ಎಂದು ನನ್ನ ಭಾವನೆ.

ಶ್ರೀ ಶಿವಶೇಖರಪ್ಪ ಗೌಡ ಶಿರವಾಳ್ : ಮಾನ್ಯ ಅಧ್ಯಕ್ಷರೇ, ರೆಗ್ಯುಲರ್ ಬಜೆಟ್‌ನಲ್ಲಿ ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಏನೂ ಹಣವನ್ನು ಒದಗಿಸಿಲ್ಲ. ಇದರ ಬಗ್ಗೆ ಮಂತ್ರಿಯವರು ಉತ್ತರ ಕೊಡಬೇಕು?

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ, ಈ ಹೈದರಾಬಾದ್ ಕರ್ನಾಟಕ ಏರಿಯಾಗೆ ಏನು ದುಡ್ಡು ಕೊಡುತ್ತೀರಿ, ಅದು ಅಬೋವ್ ದಿ ಅಲೋಕೇಷನ್ ಆಗಬೇಕಿತ್ತು. ನಾರ್ಮಲ್ ಅಲೋಕೇಷನ್ ಬಿಟ್ಟು ಮಾಡಬೇಕು ನೀವು. ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಎಂದರೆ ಬೇರೆ ಜಿಲ್ಲೆಗಳಿಗೆ ಕೊಡುವಂಥ ನಾರ್ಮಲ್ ಅಲೋಕೇಷನ್ ಬಿಟ್ಟು, ಇದಕ್ಕೆ ಬೇರೆ ಎಷ್ಟು ಹಣವನ್ನು ಒದಗಿಸಿದ್ದೀರಿ ಎಂಬುದನ್ನು ತಿಳಿಸಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಜಿ.ಹೆಚ್. ಅಶ್ವಥರೆಡ್ಡಿ : ಈ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ 50 ಲಕ್ಷ ರೂ.ಗಳನ್ನು ಅಭಿವೃದ್ಧಿ ಮಾಡಲೆಂದು ಒದಗಿಸಿದ್ದೇವೆ. ಇದು ಹಿಂದುಳಿದ ಪ್ರದೇಶವಾದುದರಿಂದ, ಇದಕ್ಕೆ ಸಾಕಷ್ಟು ಕೊಟ್ಟಿದ್ದೇವೆ. ಹೆಚ್ಚು ಕೊಟ್ಟರೆ ಅದನ್ನು ಉಪಯೋಗ ಮಾಡುವುದಕ್ಕಾಗುವುದಿಲ್ಲ. ಎಲ್ಲಾ ಕೆಲಸವನ್ನು ಒಟ್ಟಿಗೆ ಮಾಡುವುದಕ್ಕೆ ಆಗುವುದಿಲ್ಲ. ಈಗ ಕೊಟ್ಟಿರುವ ಹಣದಲ್ಲಿ ಮೂರು ವರ್ಷದಲ್ಲಿ ಈ ಪ್ರದೇಶದ ಎಲ್ಲಾ ಕೆಲಸಗಳು ಮುಗಿಯುತ್ತದೆ ಹಾಗೂ ಈ ಪ್ರದೇಶ ಸರ್ವತೋಮುಖವಾಗಿ ಪ್ರಗತಿಯಾಗುತ್ತದೆಂದು ಹೇಳುತ್ತೇನೆ.

3.15 ಪಿ.ಎಂ.

(ಅಧ್ಯಕ್ಷರ ಪೀಠದಲ್ಲಿ ಶ್ರೀಮತಿ ದಮಯಂತಿ ಬೋರೇಗೌಡರವರು ಉಪಸ್ಥಿತರಿದ್ದರು)

ರೆಗ್ಯುಲರ್ ಅಲೋಕೇಷನ್ ಎಷ್ಟಿದೆಯೆಂದು ಅವರೂ ಕೂಡ ಕೇಳಿದ್ದಾರೆ. ಅದನ್ನು ಕೊಡುತ್ತೇನೆ. ಇದರ ಬಗ್ಗೆ ಶ್ರೀ ಕುಶಾಲ ಮತ್ತು ಶಾಮಣ್ಣನವರು ಪ್ರಸ್ತಾವನೆ ಮಾಡಿದ್ದರು. ನ್ಯಾಷನಲ್ ಹೈವೇನಲ್ಲಿ ರಸ್ತೆ ದುರಸ್ತಿಗೋಸ್ಕರ ಸುಮಾರು ಒಂದು ಕಿಲೋಮೀಟರ್‌ಗೆ ಪರ್ ಇಯರ್‌ಗೆ 29,000 ರೂಪಾಯಿಗಳನ್ನು ಕೊಡುತ್ತೇವೆ. ಆದರೆ, ಎಂಡಿಆರ್ ರಸ್ತೆಗಳಿಗೆ ಸುಮಾರು 13,000 ರೂಪಾಯಿಗಳನ್ನು ಕೊಡುತ್ತೇವೆ. ಅದರಲ್ಲಿ, ಎಸ್ಟಾಬ್ಲಿಶ್‌ಮೆಂಟ್ ಖರ್ಚು ಎಲ್ಲಾ ಹೋದರೆ ಇನ್ನು 9,000 ಮಾತ್ರ ಉಳಿಯುತ್ತದೆ. ಆ ಪೀರೆಡ್ ಕೂಡಾ ಬಹಳ ಡಿಫರೆನ್ಸ್ ಇದೆ. ಆದುದರಿಂದ, ರಸ್ತೆಗಳು ಹಾಳಾಗುತ್ತದೆಂದು ನನ್ನ ಭಾವನೆ. ಅಲ್ಲದೆ, ಇದಕ್ಕಾಗಿ ಇನ್ನು ಹೆಚ್ಚು ಹಣ ಕೊಡಬೇಕೆಂದು ಸರ್ಕಾರಕ್ಕೆ ಕೇಳಿದ್ದೇನೆ, ಸರ್ಕಾರದಿಂದ ಹಣ ಬಂದ ತಕ್ಷಣ ಪರ್ ಕಿಲೋಮೀಟರ್ ರಿಪೇರಿಗಾಗಿ– ಮೇಂಟನೆನ್ಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.ಮತ್ತು ಹಳೆಗಳು ಹಾಳಾದ ಬಿಲ್ಡಿಂಗ್‌ಗೆ ಏನು ಪರ್ಸಂಟೇಜ್ ಇಟ್ಟಿದರು– 10-20 ವರ್ಷದಿಂದ

ಏನು ಕೊಡುತ್ತಿದ್ದರು, ಅದೇ ಪರ್ಸಂಟೇಜ್‌ಗೆ ಈಗಲೂ ಕೊಡುತ್ತಿದ್ದಾರೆ. ಅದು ಸಾಲದು, ಕಟ್ಟಡ ರಿಪೇರಿಗೋಸ್ಕರ ಹಣ ಹೆಚ್ಚು ಮಾಡಬೇಕಾಗಿದೆ. ಕಾಸ್ಟ್ ಆಫ್ ಮೆಟೀರಿಯಲ್ಸ್ ಜಾಸ್ತಿಯಾಗಿರುವುದರಿಂದ ನಾನು ಸರ್ಕಾರಕ್ಕೆ ಕೇಳಿದ್ದೇನೆ. ಇನ್ನು ಅಂತರರಾಜ್ಯ ರಸ್ತೆಗಳನ್ನು ನಿರ್ಮಾಣ ಮಾಡಬೇಕು, ದುರಸ್ತಿ ಕಾರ್ಯಕ್ರಮಗಳನ್ನು ಮಾಡಬೇಕು ಅದನ್ನು ಕೂಡ ನಾವು ಸೇರಿಸಿದ್ದೇವೆ. ಈ ವರ್ಷ ಕೇಂದ್ರ ಸರ್ಕಾರದಿಂದ ನಮಗೆ ನೂರರಷ್ಟು ಸಾಲ ಬರುತ್ತದೆ ಮತ್ತು ರಾಜ್ಯ ಸರ್ಕಾರದಿಂದ 1991-92ನೇ ಸಾಲಿಗೆ ಇದಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನು ಇಡಲಾಗಿದೆ.

ಶ್ರೀಮಾನ್ ಬೈರೇಗೌಡರು ಬೆಂಗಳೂರು-ಕಡಪ ರಸ್ತೆ ಕೇಳಿದ್ದರು. ಅದನ್ನು ರೆಕಮೆಂಡ್ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಆ ಕೆಲಸವನ್ನೂ ಮಾಡುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಬೈರೇಗೌಡರು ಇಲ್ಲಿ ಬಂದಿಲ್ಲ. ಇನ್ನು ಕೆಲವು ಆರ್ಥಿಕ ಪ್ರಾಮುಖ್ಯತೆ ಇರತಕ್ಕಂಥ ರಸ್ತೆಗಳು ಮತ್ತು ಅಂತರರಾಜ್ಯ ರಸ್ತೆಗಳ ಅಭಿವೃದ್ಧಿಗೆ ನಮ್ಮ ಸರ್ಕಾರ ಶೇಕಡ 50 ರಷ್ಟು ಹಣ ಕೊಡುತ್ತದೆ, ಮತ್ತು ಕೇಂದ್ರ ಸರ್ಕಾರವು ಶೇಕಡ 50 ರಷ್ಟು ಅನುದಾನ ಕೊಡುತ್ತದೆ. ಕೆಲಸ ಮಾಡುವುದಕ್ಕೆ ಆದೇಶ ಕೊಟ್ಟಿದ್ದೇವೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು 13 ರಾಜ್ಯ ಹೆದ್ದಾರಿಗಳನ್ನು ಸೇರಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೇವೆ. ಈ ವಿಷಯದಲ್ಲಿ ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳು ಕೂಡ ಕೇಂದ್ರ ಸರ್ಕಾರದ ಟ್ರಾನ್ಸ್‌ಪೋರ್ಟ್ ಮಿನಿಸ್ಟರ್‌ಗೆ ಬರೆದಿದ್ದಾರೆ. ವರ್ಷವೇ ಆಗಲಿಕ್ಕೆ ಸಾಧ್ಯವಾದಷ್ಟು ಪ್ರಯತ್ನ ಮಾಡಿ, ಸಂಬಂಧಪಟ್ಟ ಮಂತ್ರಿಗಳನ್ನು ನೋಡಿ, ಒಂದು ಅಥವಾ ಎರಡನ್ನಾದರೂ ಸಹಾ ಈ ವರ್ಷವೇ ಸ್ಯಾಂಕ್ಷನ್ ಮಾಡಿಸುತ್ತೇವೆಂದು ಅಧ್ಯಕ್ಷರ ಮುಖಾಂತರ ಈ ಸದನಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಸ್ತೆಗಳು ಕೆಲವು ರೂಪದಲ್ಲಿ ಜಿಲ್ಲಾ ಪರಿಷತ್‌ಗಳಿಗೆ ಹೋಗಿದೆ. ಜಿಲ್ಲಾ ಪರಿಷತ್‌ಗಳ ವ್ಯಾಪ್ತಿಯಲ್ಲಿರುವ ರಸ್ತೆಗಳು ಮಿನಿಮಮ್ ನೀಡ್ ಪ್ರೋಗ್ರಾಂ, ಇಂಟಿಗ್ರೇಟೆಡ್ ರೂರಲ್ ಡೆವಲಪ್‌ಮೆಂಟ್ ಪ್ರೋಗ್ರಾಂ. ಸೇತುಬಂಧನ ಇವೆಲ್ಲವೂ ಜಿಲ್ಲಾ ಪರಿಷತ್ತಿಗೆ ಬಂದಿವೆ, ಇವುಗಳನ್ನು ಪಿ.ಡಬ್ಲ್ಯೂ.ಡಿ. ಇಲಾಖೆ ವ್ಯಾಪ್ತಿಗೆ ಒಳಪಡಿಸಿ, ಕೆಲಸವನ್ನು ಸಮರ್ಪಕವಾಗಿ ಮಾಡಬೇಕೆಂದು ಸರ್ಕಾರದ ಉದ್ದೇಶವಿದೆ. ಅದಕ್ಕಾಗಿ ಎಲ್ಲರೂ ಕೂಡ ಒಪ್ಪಿಗೆ ಕೊಡಬೇಕೆಂದು ನಾನು ತಮ್ಮಲ್ಲಿ ಕೇಳುತ್ತಿದ್ದೇನೆ.

ನಮ್ಮಲ್ಲಿ ಸುಮಾರು 7488 ಹಳ್ಳಿಗಳಲ್ಲಿ ಕಚ್ಚಾರಸ್ತೆಗಳಿವೆ. ಅಂದರೆ ಸುಮ್ಮನೆ ರಸ್ತೆಗಳಿವೆ. ಓಡಾಡಲು ಅಲ್ಲಿ ಆಗುವುದಿಲ್ಲ. ಇನ್ನು ರಸ್ತೆಗಳೆ ಇಲ್ಲದ ಹಳ್ಳಿಗಳ ಸಂಖ್ಯೆ 208. ಇದನ್ನು ಗಮನದಲ್ಲಿಟ್ಟುಕೊಂಡು ನಮ್ಮ ಇಲಾಖೆಯು ಒಂದು ವಿಶೇಷವಾದ ಕಾರ್ಯಕ್ರಮವನ್ನು ಹಾಕಿ, ಸರ್ಕಾರದ ವತಿಯಿಂದ ಇದನ್ನು ಮಾಡಿಸಬೇಕೆಂದು ಉದ್ದೇಶವಿದೆ. ಮತ್ತು ಈ ಬೇಡಿಕೆಯ ಮೇಲೆ ಸಾಕಷ್ಟು ಸದಸ್ಯರು ಇಲ್ಲಿ ಕೊಟ್ಟಿರತಕ್ಕ ಸಲಹೆಗಳನ್ನು ಪರಿಗಣಿಸಿ... ನಮ್ಮ ಬೇಡಿಕೆಯನ್ನು ತಾವುಗಳೆಲ್ಲರೂ ಕೂಲಂಕಷವಾಗಿ ಚರ್ಚೆಮಾಡಿ ಸಲಹೆಗಳನ್ನು ಮಾಡಿದ್ದೀರೆಂದು ನನ್ನ ಭಾವನೆ. ತಾವೆಲ್ಲರೂ ಕೂಡ ಈ ಬೇಡಿಕೆಗೆ ಒಪ್ಪಿಗೆಯನ್ನು ಕೊಡುತ್ತೀರೆಂದು ಈ ಸದನವನ್ನು ಕೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಸಭಾಧ್ಯಕ್ಷರೆ, ಈ ಇಲಾಖೆಯ ಬೇಡಿಕೆಗಳ ಮೇಲಿನ ಚರ್ಚೆಯನ್ನು ಪ್ರಾರಂಭಿಸಿದ ಅಪರಾಧಕ್ಕಾಗಿ ಈಗ ನಾನೇ ಒಂದು ರೀತಿಯಲ್ಲಿ ನನ್ನ ಮನಸ್ಸಿಗೆ ಕ್ಷಮೆಯನ್ನು ಕೇಳಬೇಕಾಗಿದೆ. ಕೆಲವು ಬೇಸಿಕ್ ಇಶ್ಯೂಗಳನ್ನು ಕೇಳಿದ್ದೆ. ಉಳಿದ ವಿಚಾರಗಳಾದ.. ಈ ಅಭಿವೃದ್ಧಿ ಕಾರ್ಯಗಳಿಗೆ [illegible]

ಅದು ಬೇರೆ ವಿಚಾರ. ಬಹಳ ಮುಖ್ಯವಾಗಿರತಕ್ಕ ವಿಚಾರವೇನೆಂದರೆ bifurcation of major irrigation and P.W.D.

ಇರತಕ್ಕಂತಹ ದ್ವಂದ್ವದಿಂದಾಗಿ ಆಡಳಿತಯಂತ್ರ ಸ್ಥಗಿತವಾಗಿದೆ ಎನ್ನತಕ್ಕ ಮಾತನ್ನು ಹೇಳುತ್ತಾ, ನೀವು ಮಂತ್ರಿಗಳಾಗಿ ಮಾಡಿರತಕ್ಕ ಆಜ್ಞೆಯನ್ನು ಕಾರ್ಯದರ್ಶಿ ಮತ್ತು ಕಾರ್ಯದರ್ಶಿ 1 ಮತ್ತು 2 ರಲ್ಲಿ ಇರತಕ್ಕ ವ್ಯತ್ಯಾಸದಿಂದಾಗಿ ಸುಮಾರು 30-40 ಜನ ಇಂಜಿನಿಯರ್‌ಗಳು ಇನ್ನೂ ವೈಟಿಂಗ್ ಲಿಸ್ಟ್‌ನಲ್ಲಿದ್ದಾರೆ. ಇದರಿಂದಾಗಿ ಸರ್ಕಾರಕ್ಕೆ ಸುಮಾರು 4-5 ಲಕ್ಷ ರೂಪಾಯಿ ಹಾನಿಯಾಗಿದೆ. ಇದಕ್ಕೆ ಯಾರು ಹೊಣೆಗಾರರು? ಯಾರು ಜವಾಬ್ದಾರರು? ಇದನ್ನು ಯಾರು ವಹಿಸಿಕೊಡುತ್ತಾರೆ. ಈ ವಿಚಾರದಲ್ಲಿ ಸ್ವಲ್ಪ ಬೆಳಕನ್ನು ಚೆಲ್ಲಿ ಎಂದು ಹೇಳಿದ್ದೆ ಅದಕ್ಕೆ ಉತ್ತರವಿಲ್ಲ. ನಾವು ಇಲಾಖೆಯ ಅತ್ಯಂತ ಮೇಲಿರತಕ್ಕಂತಹ ಅಧಿಕಾರಿಗಳ ಬಗ್ಗೆ ಕೆಲವು ಅಪಾದನೆಗಳನ್ನು ಮಾಡಿದ್ದೆವು ಅದಕ್ಕೆ ಉತ್ತರವಿಲ್ಲ, ಇವುಗಳು ಬೇಸಿಕ್ ಆಗಿ ಆಗಬೇಕಾಗಿರತಕ್ಕದ್ದು. ಬಾಕಿ ವಿವರಗಳಿಗೆ ನಾನು ಹೋಗುವುದಿಲ್ಲ, ರಸ್ತೆ ಮಾಡುತ್ತೀರೋ ಅಥವಾ ಬಿಡುತ್ತೀರೋ ಅದು ಸಾರ್ವತ್ರಿಕವಾಗಿ ಹೇಳತಕ್ಕ ಉತ್ತರವಾಗುತ್ತದೆ. ಆದರೆ ಆಡಳಿತಾತ್ಮಕವಾದ ವ್ಯವಸ್ಥೆಯಲ್ಲಿ ಸರ್ಕಾರದ ಚಿಂತನೆ ಏನು? ಈ ಇಲಾಖೆಯನ್ನೇನಾದರೂ ಒಟ್ಟಿಗೆ ಇಟ್ಟುಕೊಳ್ಳುತ್ತೀರೋ ಅಥವಾ ಒಡೆಯುತ್ತೀರೋ, ಎರಡು ಭಾಗವನ್ನಾಗಿ ಮಾಡುತ್ತೀರೋ ದಯಮಾಡಿ ಹೇಳಿ. ಏಕೆಂದರೆ ಬೈಫರ್‌ಕೇಷನ್ ಆಫ್ ದಿ ಡಿಪಾರ್ಟ್‌ಮೆಂಟ್ ಬಗ್ಗೆ ಸರ್ಕಾರದ ನಿಲುವು ಏನು? I would like to know what is your stand about the bifurcation of the Department.

ಶ್ರೀ ಜಿ.ಹೆಚ್. ಅಶ್ವತ್‌ರೆಡ್ಡಿ : ವಿರೋಧ ಪಕ್ಷದ ನಾಯಕರು ತಡವಾಗಿ ಬಂದರು, ಆ ವಿಷಯದಲ್ಲಿ ನಾನು ಹೇಳಿದ್ದೇನೆ. ಅದರ ಬಗ್ಗೆ ನಾನು ನನ್ನ ಮಿತ್ರರಾದ ಭಾರಿ ಮತ್ತು ಮಧ್ಯಮ ನೀರಾವರಿಯ ಸಚಿವರಾದ ಮಲ್ಲಾರಿಗೌಡ ಪಾಟೀಲ್‌ರೊಂದಿಗೆ ವಿಚಾರ ಮಾಡಿ ನಮ್ಮ ಇಲಾಖೆಗೆ ಏನು ಅದರಿಂದ ಒಳ್ಳೆಯದಾಗುತ್ತದೆಯೇ ಅದನ್ನು ಮಾಡುತ್ತೇವೆಂದು ನಾನು ಮೊದಲೇ ಹೇಳಿದ್ದೇನೆ. ಮತ್ತೆ ಸುಮಾರು 30-40 ಜನ ಇಂಜಿನಿಯರ್‌ಗಳು ವರ್ಗಾವಣೆಯಾಗಿದ್ದಾರೆ. ಅದರಿಂದ 4-5 ಲಕ್ಷ ಹಣ ಸರ್ಕಾರಕ್ಕೆ ಖರ್ಚಾಗಿದೆ ಎಂದು ಏನು ಹೇಳಿದ್ದಾರೋ ಅದು ನಿಜವಾಗಿಯೂ ಆಗಿಲ್ಲ, ಅವರುಗಳೆಲ್ಲರೂ ಕೆಲಸ ಮಾಡುತ್ತಿದ್ದಾರೆ. ಅದರ ಬಗ್ಗೆ ನಾವು ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬಂದ ನಮ್ಮ ಇಲಾಖೆಗೆ ಏನು ಒಳ್ಳೆಯದನ್ನು ಮಾಡಬೇಕೋ, ಸರ್ಕಾರಕ್ಕೆ ಏನು ಒಳ್ಳೆಯದನ್ನು ಮಾಡಬೇಕೋ ಅದಕ್ಕೆ ಪ್ರಯತ್ನ ಮಾಡುತ್ತೇವೆ. ಅತೀ ಶೀಘ್ರದಲ್ಲಿಯೇ ಮಾಡುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಅಶ್ವತ್‌ರೆಡ್ಡಿಯವರು ಬಹಳ ಹಿರಿಯ ಸಚಿವರಾಗಿ ಈ ಮೇಜರ್ ಇಷ್ಯೂ ಇದೆ. ನಿಮ್ಮ ಡಿಮ್ಯಾಂಡ್ಸ್‌ನಲ್ಲಿ ಹೇಳದಿದ್ದಾಗ.. ನಾವು ಕುಳಿತು ಚರ್ಚೆ ಮಾಡುತ್ತೇವೆ ಎಂದು ಹೇಳುವುದಾಗಿದ್ದರೆ ನಾವು ಏಕೆ ಇಲ್ಲಿ ಚರ್ಚೆ ಮಾಡಬೇಕು? ಸದನದಲ್ಲಿ ಚರ್ಚೆ ಮಾಡತಕ್ಕದ್ದು ಸರ್ಕಾರದ ಉದ್ದೇಶ.. ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಸರ್ಕಾರದ ಆಲೋಚನೆ ಏನು? ಇದು ಬೇಸಿಕ್ ಪ್ರಶ್ನೆ. ನಾನು ವರ್ಗಾವಣೆ ಬಗ್ಗೆ ಹೇಳುವಾಗ, ಇದರ ಬಗ್ಗೆ ನಿಮಗೆ ಸಾಕಷ್ಟು ವಿವರಣೆಯನ್ನು ಕೊಟ್ಟಿದ್ದೇನೆ. 3-8-91ರಲ್ಲಾದ ವರ್ಗಾವಣೆ, ಏನಾಯಿತು, 9-8-91 ರಲ್ಲಾದ ವರ್ಗಾವಣೆ ಏನಾಯಿತು, 23-8-91ರಲ್ಲಿ ಕಾರ್ಯದರ್ಶಿ, Iರವರು ಮಾಡಿದಂತಹ ವರ್ಗಾವಣೆಯನ್ನು ಕಾರ್ಯದರ್ಶಿ-2 , ರವರು ಸೂಚನೆಯನ್ನು ಕೊಟ್ಟು ಅವರುಗಳನು ಕೆಲಸಕೆ. ಹೋಗಬೇಡಿ ಎಂದು ಹೇಳಿದಾರೆ. ಇದರಲ್ಲಿ ಏನಾದರೂ

ಸತ್ಯಾಂಶ ಇದೆಯೋ? Please take us into confidence, ಏನಾದರೂ ಉತ್ತರ ಬೇಕಲ್ಲ. This House is entitled to know about the policy matters.

ಮೂವರು ಮಂತ್ರಿಗಳು ಕುಳಿತು ತೀರ್ಮಾನ ಮಾಡುವುದಿಲ್ಲ. This is a policy decision, major decision and a policy matter. ನೀವು ಅದನ್ನು ಡಿಮ್ಯಾಂಡ್ಸ್‌ನಲ್ಲಿ ಹೇಳದಿದ್ದರೆ ನಮ್ಮ ರೋಧನವೆಲ್ಲಾ ಬರೀ ಅರಣ್ಯರೋಧನವಾಗುತ್ತದೆ. ನಾವು ಏನು ಸುಮ್ಮನೆ ಹೇಳಬೇಕು ಎನ್ನುವ ಬಾಯಿ ಚಪಲಕ್ಕೆ ಹೇಳಿದ್ದಲ್ಲ ಇದು. ಸಾರ್ವತ್ರಿಕವಾಗಿ ಜನಕ್ಕೆ ಗೊತ್ತಾಗಬೇಕು. ಇದೊಂದು ಪ್ರತಿಷ್ಟಿತಾ ಇಲಾಖೆ, ಈ ಇಲಾಖೆಯ ಪ್ರತಿಷ್ಠೆ ಬರಬರುತ್ತಾ ಕಡಿಮೆಯಾಗುತ್ತಿದೆ. ಇದಕ್ಕೆ ಕಾರಣ ನಿಮ್ಮಲ್ಲಿರುವ ವ್ಯತ್ಯಾಸ, ದ್ವಂದ್ವಗಳು. ನಾನು ಅದನ್ನು ವಿಚಾರ ಮಾಡವುದಕ್ಕೆ ಹೋಗುವುದಿಲ್ಲ. For this basic question ನಿಮ್ಮ ಚಿಂತನೆಯೇನು? ಮತ್ತು ನಾನು ಅನೇಕ ವಿಚಾರದ ಬಗ್ಗೆ ಕೋಟ್ ಮಾಡಿ, ಮೂರು ವಿಚಾರಗಳನ್ನು ಹೇಳಿದ್ದೇನೆ. ಒಂದು ನೋಟೀಸ್ ನಂ.ಡಿಪಿಆರ್ 11 ಎಸ್ಎಎನ್ 87 ದಿನಾಂಕ : 16-12-1985 ಮತ್ತು ಆರ್ಡರ್ ನಂ. ಡಿಪಿಆರ್ 11 ಬೆಂಗಳೂರು ದಿನಾಂಕ : 13-6-1991 ಇದನ್ನು ಕೂಡ ನಾನು ಕೋಟ್ ಮಾಡಿದ್ದೇನೆ. ನೀವು ಇದಕ್ಕೆ ಉತ್ತರ ಹೇಳದಿದ್ದರೆ ನಾವು ಏನು ಮಾಡಬೇಕು? ವಿಚಾರಣೆ ಏನಾಯ್ತು? ಅಧಿಕಾರಿಗಳ ಮೇಲೆ ಇರುವಂತಹ ಮೂರು ಪ್ರಕರಣಗಳನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಆ ವಿಚಾರಣೆ ಏನಾಯಿತ್ತು. ಅದರ ಪರಿಣಾಮವೇನು? ಫಲಿತಾಂಶವೇನು?

ಶ್ರೀ ಜಿ.ಎಚ್. ಅಶ್ವತ್‌ರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ ಸರ್ಕಾರದ ವಿಷಯದಲ್ಲಿ ಜನಗಳಿಗೆ ಒಳ್ಳೆಯದು ಆಗಬೇಕು ಎನ್ನುವ ಉದ್ದೇಶದಿಂದ ನಾವು ಈ ಕೆಲಸವನ್ನು ಮಾಡುತ್ತಿದ್ದೇವೆ. ತಾವು ಹೇಳಿದ ಪ್ರಕಾರ 1972 ನೇ ಇಸವಿಯಲ್ಲಿ ಬೈಫರ್‌ಕೇಶನ್ ಆರ್ಡರ್ ಆಗಿತ್ತು, ಆದರೆ ಇಂಪ್ಲಿಮೆಂಟೇಷನ್ ಆಗಿಲಿಲ್ಲವೆಂದು. ಈಗಲೂ ಸಹ ನಾನು ಅದನ್ನು ಆತುರದಲ್ಲಿ ಮಾಡದೆ ನಮ್ಮ ಸಹೋದ್ಯೋಗಿಗಳ ಜೊತೆ ಮಾತನಾಡಿ ಸೂಕ್ತವಾದ ಕ್ರಮವನ್ನು ತೆಗೆದುಕೊಂಡು ಅದರಲ್ಲಿ ನಮ್ಮ ಸರ್ಕಾರಕ್ಕೆ, ನಮ್ಮ ಇಲಾಖೆಗೆ ಮತ್ತು ಜನಗಳಿಗೆ ಒಳ್ಳೆಯದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮತ್ತೊಂದು ಎಂದರೆ ಅಧಿಕಾರಿಗಳ ವಿಷಯದಲ್ಲಿ ಸರ್ಕಾರದ ವತಿಯಿಂದ ಅವರಿಗೆ ಮೂರು ಇಂಕ್ರಿಮೆಂಟ್‌ಗೆ ತೊಂದರೆಯಾಗಿದೆ. ಉಳಿದ ಕೇಸ್ ಸರ್ಕಾರದ ಮುಂದೆ ಇದೆಯೆಂದು ಹೇಳಿದ್ದಾರೆ. ನಾನು ಈ ಸದನಕ್ಕೆ ಇದರ ಬಗ್ಗೆ ಹೇಗೆ ಹೇಳಬೇಕು. ನೀವೆ ಹೇಳಿ, ಅಧ್ಯಕ್ಷರೆ, ನಮ್ಮ ಇಲಾಖೆಯ ವಿಷಯದಲ್ಲಿ ತಾವು ಅಷ್ಟೊಂದು ಆತುರ ಪಡಬೇಕಾಗಿಲ್ಲ. ನಾನು ಮತ್ತು ಮಲ್ಲಾರಿಗೌಡರು ಸೇರಿ ಇದರ ಬಗ್ಗೆ ಒಂದ ಡಿಸೆಷನ್ ತೆಗೆದುಕೊಂಡು ನಿಮಗೆ ಬೇಕಾದರೆ ಒಂದು ವಾರದಲ್ಲಿ ಉತ್ತರವನ್ನು ಕಳುಹಿಸಿಕೊಡುತ್ತೇನೆ. ಅಲ್ಲಿಯತನಕ ತಾವು ತಾಳ್ಮೆಯಿಂದ ಇದ್ದರೆ ಒಳ್ಳೆಯದು.

ಶ್ರೀ ಕರಿಯಣ್ಣ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಹುದ್ದೆಗಳಿಗೆ ಡೈರೆಕ್ಟಾಗಿ ರಿಕ್ರೂಟ್‌ಮೆಂಟ್ ನಾವು ಮಾಡಿಕೊಂಡಿದ್ದೇವೆಂದು ಹೇಳಿದರು. ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಹರಿಜನಗಿರಿಜನ ಅಭ್ಯರ್ಥಿಗಳು ಹೆಚ್ಚಿಗೆ ಮಾರ್ಕ್ಸ್ ತೆಗೆದುಕೊಂಡರೆ ಅವರನ್ನು ಡೈರೆಕ್ಟಾಗಿ ಅಪಾಯಿಂಟ್‌ಮೆಂಟ್ ಕೊಡಬೇಕೆಂದು ಒಂದು ನಿಯಮಾವಳಿಯ ರಚನೆಯಾಗಿ ಅದನ್ನು ಸರ್ಕಾರವೂ ಒಪ್ಪಿ ಆಯಾ ಇಲಾಖೆಗಳಿಗೆ ಹುಡುಗರನ್ನು ಕೊಟ್ಟಿದ್ದರು. ಆದರೆ ನೀವು ಆ ಹುಡುಗರಿಗೆ ಅಪಾಯಿಂಟ್‌ಮೆಂಟ್ ಕೊಡದೆ, ನೇರವಾಗಿ ಅಪಾಯಿಂಟ್‌ಮೆಂಟ್ ಆಗಿದ್ದಕ್ಕೆ ತಾವು

ಮಾಡಬೇಕೆಂದು ಇದ್ದೀರಾ? ಈ ಕಾನೂನು ರದ್ದು ಮಾಡಿ ಅದೇ ಕಾನೂನು ಎತ್ತಿ ಹಿಡಿಯುತ್ತೀರಾ? ಅದರಬಗ್ಗೆ ತಾವು ಸ್ಪಷ್ಟವಾದ ನಿಲುವನ್ನು ಕೊಡಬೇಕು.

ಶ್ರೀ ಜಿ.ಎಚ್. ಅಶ್ವಥ್‌ರೆಡ್ಡಿ : ಮಾನ್ಯ ಅಧ್ಯಕ್ಷಿಣಿಯವರೇ, ಈ ಪ್ರಶ್ನೆ ನಮ್ಮ ಇಲಾಖೆಗೆ ಸಂಬಂಧಪಟ್ಟಿಲ್ಲ. ಆದರೂ ಕೂಡ ನಾನು ಉತ್ತರ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕರಿಯಣ್ಣ : ನಿಮ್ಮ ಇಲಾಖೆಗೆ ಸಂಬಂಧಪಟ್ಟಿದೆ. ಸರ್ಕಾರದಲ್ಲಿ ಚರ್ಚೆಯಾಗಿ, ಆಯಾ ಇಲಾಖೆಯವರೇ ಎಲ್ಲೆಲ್ಲಿ ಹೆಚ್ಚಿಗೆ ಮಾರ್ಕ್ಸ್ ಬಂದಿದೆಯೋ ಅಂಥ ಅಭ್ಯರ್ಥಿಗಳಿಗೆ ಡೈರೆಕ್ಟಾಗಿ ಅಪಾಯಿಂಟ್‌ಮೆಂಟ್ ಕೊಡಬೇಕೆಂದು ಹೇಳಿದ್ದಾರೆ. ನಿಮ್ಮ ಸೆಕ್ರೆಟರಿಯವರು ಸಧ್ಯಕ್ಕೆ ಯಾವುದೇ ನೌಕರಿಯಿಲ್ಲವೆಂದು ತಡೆ ಹಿಡಿದಿದ್ದಾರೆ. ಇದಕ್ಕೆ ರಿಕ್ರೂಟ್‌ಮೆಂಟ್ ಆಗಿದೆ. ನೀವು ರಿಕ್ರೂಟ್‌ಮೆಂಟ್ ಕೆ.ಪಿ.ಸಿ.ಯಿಂದ ಕೇಳಿದ್ದೀರಿ. ನೇರವಾಗಿ ಅಪಾಯಿಂಟ್‌ಮೆಂಟ್ಸ್ ಕೊಡದೆ ನಮಗೆ ಸಂಬಂಧಪಟ್ಟಿಲ್ಲರೆಂದು ಹೇಳುತ್ತಿದ್ದೀರಿ.

ಶ್ರೀ ಜಿ.ಎಚ್. ಅಶ್ವಥರೆಡ್ಡಿ : ಇಲಾಖೆಗೆ ಸಂಬಂಧಪಟ್ಟಿಲ್ಲ, ಸರ್ಕಾರಕ್ಕೆ ಸಂಬಂಧಪಟ್ಟಿದೆ.

ಶ್ರೀ ಕರಿಯಣ್ಣ : ನಿಮ್ಮ ಇಲಾಖೆಗೆ ಸಂಬಂಧಪಟ್ಟಿದೆ, ನಿಮ್ಮ ಇಲಾಖೆಗೆ ಕೊಟ್ಟಿದ್ದಾರೆ ತಾವು ಗಮನಿಸಿ, ಹೈಕೋರ್ಟ್‌ನಿಂದಲೂ ವೆಕೇಟ್ ಆಗಿದೆ, ಸುಪ್ರೀಂ ಕೋರ್ಟ್‌ನಿಂದಲೂ ವೆಕೇಟ್ ಆಗಿದೆ. ಸರ್ಕಾರ ಇದಕ್ಕೆ ಒಪ್ಪಿದೆ. ಇಂಟರ್‌ವ್ಯೂ ಮಾಡಿದೆ, ಸಂಬಂಧಪಟ್ಟ ಇಲಾಖೆಗಳಿಗೆ ಕೊಟ್ಟಿದೆ. ಎರಡು ಇಲಾಖೆಯವರು ಅಪಾಯಿಂಟ್‌ಮೆಂಟ್ ಕೊಟ್ಟಿದ್ದಾರೆ. ನಿಮ್ಮ ಇಲಾಖೆ ಯಾವ ಪೋಸ್ಟ್ ವೇಕೆಂಟ್ ಇಲ್ಲ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಈಗ ವೇಕೆಂಟ್ ಇದೆ. ಕೆ.ಪಿ.ಸಿ. ಯಿಂದ ಕರೆಯುತ್ತಿದ್ದೀರಿ. ಆದ್ದರಿಂದ ನೀವು ಏಕೆ ಅವರಿಗೆ ಡೈರಕ್ಟಾಗಿ ಅಪಾಯಿಂಟ್‌ಮೆಂಟ್ ಕೊಡುತ್ತಾ ಇಲ್ಲ.

ಶ್ರೀ ಜಿ.ಹೆಚ್. ಅಶ್ವಥರೆಡ್ಡಿ : ಅಧ್ಯಕ್ಷರೆ, ಫಸ್ಟ್‌ಕ್ಲಾಸ್ ರ‍್ಯಾಂಕ್ ಬಂದಂಥ ಷೆಡ್ಯೂಲ್ಡ್ ಕ್ಯಾಸ್ಟ್, ಹುಡುಗರಿಗೆ ಕೊಡಬೇಕೆಂದು ಆದೇಶವಿರುವುದು ನನಗೆ ಗೊತ್ತಿದೆ. ಇದು ಬೇರೆ ಡಿಪಾರ್ಟ್‌ಮೆಂಟಿನಲ್ಲಿ ಕೊಟ್ಟಿದ್ದಾರೆ. ಇದರಲ್ಲಿ ವೇಕೆನ್ಸಿ ಇದ್ದರೆ ನೀವು ಹೇಳಿದ ಪ್ರಕಾರ ಸರಿ. ಈಗ ಏನು 50 ಸೀಟುಗಳನ್ನು ಕೊಟ್ಟಿದ್ದಾರೆ ಇವೆಲ್ಲಾ ಸುಪ್ರೀಮ್ ಕೋರ್ಟಿಗೆ ಹೋಗಿ ಅಲ್ಲಿ ಬಂದಿರತಕ್ಕದ್ದು ಅದರಲ್ಲಿ ನೀವು ಹೇಳಿದ ಹಾಗೆ ಫಸ್ಟ್‌ಕ್ಲಾಸ್ ಬಂದವರಿಗೆ ಕೊಡಬೇಕೆಂದು ಅಲ್ಲ ಖಾಲಿ ಇರತಕ್ಕಂಥ ಹುದ್ದೆಗಳಲ್ಲಿ, ಬೇರೆ ಡಿಪಾರ್ಟ್‌ಮೆಂಟಿನಲ್ಲಿ ಕೊಟ್ಟಿದ್ದಾರೆ. ಡೈರೆಕ್ಟ್ ರೆಕ್ರೂಟ್‌ಮೆಂಟಿನಲ್ಲಿ ಇವೊತ್ತು ಏನು 150 ಜನ ತೆಗೆದುಕೊಂಡಿದ್ದಾರೆ, ಅದರಲ್ಲೂ ಕೂಡ ಷೈಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಕೊಟ್ಟಿದ್ದಾರೆ.

ಶ್ರೀ ಕರಿಯಣ್ಣ : ಈಗ ಫಸ್ಟ್‌ಕ್ಲಾಸ್ ಬಂದವರಿಗೆ ನೇರವಾಗಿ ಕೊಡುತ್ತೇವೆ ಎನ್ನುವುದು ಇದೆ. ಕೆಪಿಎಸ್‌ಸಿ ವಿಚಾರ ಬಿಡಿ, ಪಿಎಸ್‌ಸಿ ಯಲ್ಲಿ ನಡೆಯತಕ್ಕ ಅನ್ಯಾಯ ತಾವೇ ಹೇಳಿದ್ದೀರಿ. ಪಿಎಸ್‌ಸಿ ನಮ್ಮ ವ್ಯಾಪ್ತಿಗೆ ಬರುವುದಿಲ್ಲವೆಂದು ತಾವೇ ಹೇಳಿದ್ದೀರಿ, ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಪಿಎಸ್‌ಸಿ ಯಲ್ಲಿ ಹೆಚ್ಚಿನ ಮಾರ್ಕ್ಸ್ ತೆಗೆದಿರತಕ್ಕವನಿಗೆ ಕಡಿಮೆ ಮಾರ್ಕ್ಸ್ ಕೊಟ್ಟು ಕಡಿಮೆ ಮಾರ್ಕ್ಸ್ ತೆಗೆದಿರತಕ್ಕವನಿಗೆ ಹೆಚ್ಚಿಗೆ ಮಾರ್ಕ್ಸ್ ಸೆಲೆಕ್ಟ್ ಮಾಡಿದ್ದಾರೆ. ಅಂತೆಹವರನ್ನು ನೀವು ಸರ್ಕಾರದಲ್ಲಿ ತೆಗೆದುಕೊಳ್ಳುತ್ತೀರಾ. ಕೆಪಿಎಸ್‌ಸಿ ಸ್ವತಂತ್ರವಾದ ಸಂಸ್ಥೆ ನಾವು ಪ್ರಶ್ನೆ ಮಾಡುವ ಹಾಗೆ

ಸರ್ಕಾರ ನೌಕರಿಗೆ ತೆಗೆದುಕೊಳ್ಳುತ್ತೀರಿ. ಆ ತರಹ ಆಗಿದೆ. ತಾವು ಲಿಸ್ಟ್ ತರಿಸಿಕೊಂಡು ನೋಡಿ. ಈಗ ನಿಮ್ಮಲ್ಲಿ 89ಪರ್‌ಸೆಂಟ್ ಇರುವ ಮೆರಿಟ್ ಸ್ಟೂಡೆಂಟ್‌ಗೆ ಕೊಡಬೇಕೆಂದು ಸರ್ಕಾರ ರೆಕಮಂಡ್ ಮಾಡಿರುವುದು ನಿಮ್ಮ ಕೈಯಲ್ಲಿದೆ. ಆದರೆ ಅಲ್ಲಿ ಅವರಿಗೆ ಸೆಲೆಕ್ಟ್ ಮಾಡಲಿಲ್ಲ.

ಶ್ರೀ ಜಿ.ಹೆಚ್. ಅಶ್ವತರೆಡ್ಡಿ : ಸನ್ಮಾನ್ಯ ಸದಸ್ಯರ ಆತಂಕ ನನಗೆ ಅರ್ಥವಾಗುತ್ತದೆ. ಪಿಎಸ್‌ಸಿ ಸೆಲೆಕ್ಷನ್‌ನಲ್ಲಿ, ಡೈರೆಕ್ಟ್ ರೆಕ್ರೂಟ್‌ಮೆಂಟಿನಲ್ಲಿ ಏನು ಅವ್ಯವಹಾರ ನಡೆದಿದೆ, ಪರ್‌ಸೆಂಟೇಜ್ ಜಾಸ್ತಿ ಬಂದವರಿಗೆ ಕಡಿಮೆ ಕೊಡುವುದು ಏನು ಇದೆ. ಅದರ ಬಗ್ಗೆ ಕೋರ್ಟ್ ಇದೆ. ನಾನು ನೋಡಿಲ್ಲ, ನೀವು ಸಹ ನೋಡಿಲ್ಲ, ಹೇಳಿದ ಮಾತನ್ನು ಕೇಳಿದ್ದೇವೆ. ಅದಕ್ಕೆ ಸರ್ಕಾರ ಏನು ಮಾಡಲಿಕ್ಕೆ ಸಾಧ್ಯ. ವಿಚಾರಣೆ ಮಾಡಬಹುದು ಅಷ್ಟೆ. ಆದರೆ ಎವಿಡೆನ್ಸ್ ಆದರೂ ಬೇಕು. ನೀವು ಕೋರ್ಟಿಗೆ ಹೋದರೆ ಅದನ್ನು ರುಜುವಾತು ಮಾಡಿದರೆ ಅದಕ್ಕೆ ಏನಾದರೂ ಒಂದು ಉತ್ತರ ಸಿಕ್ಕುತ್ತದೆ. ನೀವು ಹೇಳಿದ ಪ್ರಕಾರ ಎಸ್‌ಸಿಎಸ್‌ಟಿಯವರಿಗೆ ಡೈರೆಕ್ಟ್ ರೆಕ್ರೂಟ್‌ಮೆಂಟ್ ಕೊಡುವುದು ಏನಿದೆ ಅದನ್ನು ಪರಿಶೀಲನೆ ಮಾಡಿಸುತ್ತೇನೆ.

ಶ್ರೀಮತಿ ಮೋಟಮ್ಮ : ಅಧ್ಯಕ್ಷಣಿಯವರೆ, ಮಾನ್ಯ ಮಂತ್ರಿಗಳು ಅದನ್ನು ಸರಿಯಾಗಿ ಅರ್ಥಮಾಡಿ ಕೊಳ್ಳಲಿಲ್ಲ ಎಂದು ಕಾಣುತ್ತದೆ. ಏಕೆಂದರೆ, ಸರ್ಕಾರದ ಆದೇಶ ಏನಿತ್ತು, ಅಂತಹ ಒಂದು ಕಾನೂನು ಏನು ಮಾಡಿದರು, ಹರಿಜನಗಿರಿಜನ ವಿದ್ಯಾರ್ಥಿಗಳಿಗೆ ಟೆಕ್ನಿಕಲ್ ಎಜುಕೇಷನ್‌ನಲ್ಲಿ ಆಗಲಿ, ಯಾವುದೇ ಎಜುಕೇಷನ್‌ನಲ್ಲಿ ಆಗಲಿ, ಒಳ್ಳೆಯ ಮಾರ್ಕ್ಸ್ ತೆಗೆದುಕೊಂಡಿದ್ದರೆ, ಫಸ್ಟ್ ಕ್ಲಾಸ್ ರ್‍ಯಾಂಕ್ ತೆಗೆದುಕೊಂಡಿದ್ದರೆ, ಅವರಿಗೆ ಪಿ.ಎಸ್‌ಸಿಯಲ್ಲಿ ಸಂದರ್ಶನ ಕರೆದು ಆಯ್ಕೆ ಮಾಡುವುದು ಸೆಪರೇಟ್. ಇವರನ್ನು ಸಂದರ್ಶನ ಇಲ್ಲದೆ, ಇಂಟರ್‌ವ್ಯೂ ನಡೆಸದೆ, ನಿಮ್ಮ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗೆ ನೇಮಕ ಮಾಡಿಕೊಳ್ಳಬೇಕು ಎನ್ನುವ ಒಂದು ಆದೇಶವನ್ನು ನೀವು ಪಾಲಿಸಬೇಕು. ಏಕೆಂದರೆ, ನಿಮ್ಮ ಇಲಾಖೆಯಲ್ಲಿ ಈಗ ಕೆಲವು ಖಾಲಿ ಹುದ್ದೆಗಳನ್ನು ತುಂಬಬೇಕೆಂದು ಹೇಳಿ ಸಂದರ್ಶನ ಕರೆದಿದ್ದೀರಿ. ಹಾಗೆ ಕರೆಯಬೇಕಾದರೆ ಈಗ ಹರಿಜನಗಿರಿಜನ ವಿದ್ಯಾರ್ಥಿಗಳು ಏನು ರ್‍ಯಾಂಕ್ ಪಡೆದಿದ್ದಾರೆ ಅಥವಾ ಹೈಯೆಸ್ಟ್ ಮಾರ್ಕ್ಸ್ ತೆಗೆದುಕೊಂಡಿದ್ದಾರೆ ಅವರಿಗೆ ಅನ್ಯಾಯವಾಗಬಾರದು, ಅವರಿಗೆ ನೀವು ಫಸ್ಟ್ ಪೋಸ್ಟಿಂಗ್ಸ್ ಕೊಟ್ಟು ಮತ್ತೆ ಉಳಿದುದಕ್ಕೆ ನೀವು ಸಂದರ್ಶನ ನಡೆಸಿ. ನಿಮ್ಮಲ್ಲಿ ಈಗ ಏನು ಪೋಸ್ಟ್‌ಗಳು ಖಾಲಿ ಇದೆ, ಅಷ್ಟಕ್ಕೂ ಅವರಿಗೆ ತೆಗೆದುಕೊಳ್ಳುವುದಿಲ್ಲ.

ಶ್ರೀ ಜಿ.ಹೆಚ್. ಅಶ್ವತ ರೆಡ್ಡಿ : ಶ್ರೀಮತಿ ಮೋಟಮ್ಮನವರು ಹೇಳಿದ ಪ್ರಕಾರ ಎಸ್‌ಸಿಎಸ್‌ಟಿ ಪ್ರತಿಭಾವಂತ ವಿದ್ಯಾರ್ಥಿಗಳು ಏನಿದ್ದಾರೆ ಅವರಿಗೆ ಡೈರೆಕ್ಟ್ ಸೆಲೆಕ್ಷನ್ ಮಾಡಬೇಕೆಂದು ಸರ್ಕಾರದ ಪರಿಶೀಲನೆಯಲ್ಲಿದೆ. ಅದಕ್ಕೆ ಶೀಘ್ರವಾಗಿ ಕ್ರಮತೆಗೆದುಕೊಳ್ಳುತ್ತೇನೆಂದು ನಾನು ಅಧ್ಯಕ್ಷರ ಮುಖೇನ ಹೇಳುತ್ತೇನೆ.

(ಗೊಂದಲ)

ಶ್ರೀ ಎಸ್.ಹೆಚ್.ಕೌಜಲಗಿ : ಅಧ್ಯಕ್ಷರೆ, ಶಾಸಕರ ಕ್ಷೇತ್ರದಲ್ಲಿ 12 ಲಕ್ಷ ರೂಪಾಯಿ ಕೆಲಸ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ಅದರ ಬಗ್ಗೆ ಏನಾಗಿದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಜಿ.ಹೆಚ್. ಅಶ್ವತರೆಡ್ಡಿ : ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಕೌಜಲಗಿಯವರು ಒಂದು ವಿಷಯ ಪ್ರಸ್ತಾಪ ಮಾಡಿ ಕೇಳಿದ್ದಾರೆ. ಹೋದ ವರ್ಷ 12 ಲಕ್ಷ ರೂಪಾಯಿ ಕೆಲಸ [illegible]

ತೆಗೆದುಕೊಂಡಿದೆ. ಸುಮಾರು 10 ಕೋಟಿ ರೂಪಾಯಿ ಖರ್ಚುಮಾಡಿದೆ, ಇನ್ನೂ 15ಕೋಟಿ ರೂಪಾಯಿ ಈ ವರ್ಷ ಖರ್ಚು ಮಾಡುತ್ತದೆ. ಆ ವರ್ಷವೂ ಕೂಡ 1991-92ರಲ್ಲಿ 42 ಕಿಲೋಮೀಟರ್ಸ್ ತೆಗೆದುಕೊಂಡು, 40 ಲಕ್ಷ ರೂಪಾಯಿ ಕೆಲಸ ಕೊಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ. ಪ್ರತಿಯೊಂದು ಮತ ಕ್ಷೇತ್ರದಲ್ಲೂ ಈ ರೀತಿ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ. ಈ ಬಗ್ಗೆ ಎಲ್ಲಾ ಶಾಸಕರ ಕಡೆಯಿಂದಲೂ ಡೀಟೈಲ್ಸ್ ತರಿಸಿಕೊಂಡು ಅವರ ಒಪ್ಪಿಗೆಯನ್ನು ಪಡೆದು ಎರಡು ವರ್ಷಗಳಲ್ಲಿ ಬಹು ಭಾಗ ರಸ್ತೆ ಮಾಡಿ, ಸುಮಾರು 40 ಲಕ್ಷ ರೂಪಾಯಿ ಖರ್ಚು ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ತಾವು ಮತ್ತೊಂದು ಪ್ರಿವಿಲೇಜ್ ಹಾಕುವುದಕ್ಕೆ ಅವಕಾಶ ಕೊಡಬೇಡಿ. ದಯವಿಟ್ಟು ಇನ್ನೊಂದು ಸಾರಿ ವೆರಿಫೈ ಮಾಡಿ, ನಾನು ಕೇಳಿದ ಪ್ರಶ್ನೆಗೆ ಉತ್ತರವನ್ನು ಹೇಳಿ ನಾನು ಕೇಳಿದ್ದುದು ನಿಮಗೆ ಇನ್ನೊಂದು ಸಲ ಪ್ರಿಸೈಸ್ ಆಗಿ ಬರೆದುಬಿಟ್ಟಿದ್ದೇನೆ ಈಗ ಪಿ.ಡಬ್ಲ್ಯುಡಿ ಮಿನಿಸ್ಟರು ಮಾಡಿರುವ ಆರ್ಡರನ್ನು ಸೆಕ್ರೆಟರಿ II ಹಿಡಿದಿಟ್ಟು... ದಯವಿಟ್ಟು ನೋಡಿ, ನೀವು ಇಲ್ಲ ಎಂದು ಹೇಳಿಬಿಟ್ಟಿದ್ದೀರಿ. 30-40ಜನ ಇಂಜಿನಿಯರ್ಸ್ ವೈಟಿಂಗ್‌ನಲ್ಲಿದ್ದಾರೆ, ನಾನು ಜವಾಬ್ದಾರಿಯಿಂದ ಈ ಮಾತನ್ನು ಹೇಳುತ್ತಿರುವುದು. ಸರ್ಕಾರದ ಖಜಾನೆಗೆ ಆಗುತ್ತಿರುವ ನಷ್ಟ ಎಂದು ಹೇಳಿದೆ, ನಾಲ್ಕೈದು ಲಕ್ಷ, ಇಲ್ಲ ಎಂದು ಅಂದುಬಿಟ್ಟಿರಿ. ಹೊಣೆಗಾರಿಕೆ ಯಾರ ಮೇಲೆ ಹೊರಿಸುತ್ತೀರಿ. ಅಂತ ಕೇಳಿದೆ. ಅದೂ ಇಲ್ಲ. ಏಕೆಂದರೆ, ಇದೇ ಅಲ್ಲ ಅಂದರೆ ಅದು ಎಲ್ಲಿ ಇರುತ್ತದೆ. ಮತ್ತೆ ಈ ಇಂಜಿನಿಯರ್ಸ್ ಕೆಲಸಕ್ಕೆ ಹಾಜರಾಗದೆ ಕೆಲಸಗಳು ಸ್ಥಗಿತವಾಗಿ ನಷ್ಟವಾಗುತ್ತಿರುವ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳಿದೆ. ದಯಮಾಡಿ ಈ ಒಂದು ಇನ್‌ಫರ್‌ಮೇಷನ್ ತರಿಸಿ ಹೇಳಿ. ಇಲ್ಲದಿದ್ದರೆ, ಮತ್ತೆ ನಾನು ಒಂದು ಸಲ ನಿಮ್ಮ ಮೇಲೆ ಪ್ರಿವಿಲೇಜ್ ಹಾಕುವುದು ಅದು ಸರಿಯಲ್ಲ. ಅದಕ್ಕೆ ಅವಕಾಶ ಕೊಡಬೇಡಿ. ಅದಕ್ಕೆ ಸರಿಯಾದ ಉತ್ತರವನ್ನೂ ತರಿಸಿ ಏನಾದರೂ ಒಂದು ಹೇಳಿ, ಏನೂ ಇಲ್ಲ ಅಂದರೆ ನಾನು ಆಪಾದನೆ ಅಂತ ಮಾಡಲಿಲ್ಲ. I brought it to your notice through this house for the purpose of correcting the papers.

ಶ್ರೀ ಜಿ.ಹೆಚ್. ಅಶ್ವತರೆಡ್ಡಿ : ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದರಲ್ಲಿ ಯಾವುದೇ ಭಿನ್ನಾಭಿಪ್ರಾಯವೂ ಇಲ್ಲ. ತಾವು ಹೇಳಿರತಕ್ಕದ್ದೆಲ್ಲಾ ಸತ್ಯವಿದೆ. ಆದರೆ, ನಾನು ಮೊದಲೇ ಹೇಳಿದೆ, ತಮಗೆ ತಾಳ್ಮೆ ಇರಬೇಕು ಎಂದು. ಇದರ ಬಗ್ಗೆ ನಾವಿಬ್ಬರೂ ಕುಳಿತು ಸಾಕಷ್ಟು ಚರ್ಚೆಮಾಡಿ ಒಳ್ಳೆಯ ಕೆಲಸಮಾಡಿದ್ದೇವೆ. 1 ವಾರದಲ್ಲಿ ನಿಮಗೆ ರಿಪ್ಲೈ ಕೊಡುತ್ತೇನೆಂದು ನಾನು ಹೇಳಿದ್ದೇನೆ. ಮತ್ತೆ ಅದನ್ನೇ ಏತಕ್ಕೆ ಹೇಳುತ್ತಿದ್ದೀರಿ ?

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ, ಶಿವಮೊಗ್ಗಾದಲ್ಲಿ ಕುವೆಂಪು ರಂಗಮಂದಿರಕ್ಕೆ ಸುಮಾರು 25-30 ಲಕ್ಷ ರೂ.ಗಳನ್ನು ಖರ್ಚುಮಾಡಿದ್ದೀರಿ. ಇದು ಅರ್ಧಕ್ಕೇ ನಿಂತಿದೆ. ಇದೇರೀತಿ ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡಕ್ಕೂ ಸುಮಾರು 25-30 ಲಕ್ಷ ರೂ. ಖರ್ಚುಮಾಡಿದ್ದೀರಿ. ಆಗೂ ಕೂಡ ಅರ್ಧಕ್ಕೇ ನಿಂತಿದೆ. ದಯವಿಟ್ಟು ಇದಕ್ಕೆ ಬೇಕಾಗಿರತಕ್ಕ ಹಣವನ್ನು ಬೇಗನೆ ಬಿಡುಗಡೆ ಮಾಡಿ ಈ ವರ್ಷ ಈ ಎರಡೂ ಕಟ್ಟಡಗಳನ್ನು ಪೂರ್ತಿಮಾಡಿಸಿ ಏಕೆಂದರೆ ಲಕ್ಷಾಂತರ ರೂಪಾಯಿಗಳನ್ನು ನೀವು ಖರ್ಚುಮಾಡಿದ್ದೀರಿ. ಆದರೆ ಎಲ್ಲಾ ಅರ್ಧಂಬರ್ಧ ಕೆಲಸವಾಗಿವೆ.

ಇಂಥಾದ್ದು ರಾಜ್ಯದಾದ್ಯಂತ ಬಹಳಷ್ಟು ಕಟ್ಟಡಗಳಿವೆ. ಆದ್ದರಿಂದ ಮೊದಲು ಇಂಥ ಅರ್ಧದಲ್ಲಿ ನಿಂತಿರತಕ್ಕ ಕಟ್ಟಡಗಳಿಗೆ ಆದ್ಯತೆಯನ್ನು ಕೊಡಿ. ಶಿವಮೊಗ್ಗದ ಕುವೆಂಪು ರಂಗಮಂದಿರವನ್ನು ಮತ್ತು ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡಗಳನ್ನು ಪೂರ್ಣ ಮಾಡುವುದಕ್ಕೆ ಬೇಕಾದಂಥ ದುಡ್ಡನ್ನು ಬಿಡುಗಡೆ ಮಾಡಿಕೊಡುತ್ತೀರಾ?

ಶ್ರೀ ಜಿ.ಹೆಚ್. ಅಶ್ವತರೆಡ್ಡಿ : ಕುವೆಂಪು ರಂಗಮಂದಿರ ಮತ್ತು ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡಗಳು ಎರಡೂ ಕೂಡ ಅರ್ಧದಲ್ಲಿ ನಿಂತಿವೆ ಎಂದು ತಾವು ಹೇಳಿದ್ದೀರಿ. ಇವುಗಳನ್ನು ಪೂರ್ಣ ಮಾಡುವುದಕ್ಕೆ ಎಷ್ಟು ಹಣ ಬೇಕೋ ಅಷ್ಟನ್ನೂ ಪೂರ್ಣವಾಗಿ ಒದಗಿಸಿ ಈ ಕೆಲಸ ಈ ವರ್ಷದಲ್ಲೇ ಮುಗಿಯುವಂತೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ್ : ಮಾನ್ಯ ಲೋಕೋಪಯೋಗಿ ಖಾತೆಯ ಮಂತ್ರಿಗಳು ಈ ಕಡೆ ಸ್ವಲ್ಪ ಗಮನಕೊಡಿ. ನಮ್ಮ ಕ್ಷೇತ್ರದಲ್ಲಿ ನಮ್ಮನ್ನೆಲ್ಲಾ ಜನ ಹರಾಜು ಹಾಕುತ್ತಿದ್ದಾರೆ. ನೀವು ಅಲ್ಲಿ ಬಂದು ನೋಡಿದರೆ ಗೊತ್ತಾಗುತ್ತದೆ. ಸವಣೂರು ರಸ್ತೆ ಅತಿ ಪ್ರಾಮುಖ್ಯವಾದುದು. ಈ ರಸ್ತೆಯನ್ನು ಧಾರವಾಡ ಜಿಲ್ಲಾ ಪರಿಷತ್ತಿನವರು ಬಿಟ್ಟುಕೊಟ್ಟರೂ ಕೂಡ ಸರ್ಕಾರದವರು ಆ ಕಡೆ ಗಮನ ಹರಿಸಿದ್ದಾರೋ ಇಲ್ಲವೋ ನಮಗೆ ಗೊತ್ತಿಲ್ಲ, ಆ ಕ್ಷೇತ್ರದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಬಂದ್ ಆಗಿವೆ. ರಾಷ್ಟ್ರೀಯ ಹೆದ್ದಾರಿಯನ್ನು ಬಿಟ್ಟರೆ ಇದು ಅತಿ ಪ್ರಮುಖವಾದ ರಸ್ತೆ. ಆದುದರಿಂದ ಇದನ್ನು ಯಾವಾಗ ಮಾಡಿಸುತ್ತೀರೆಂಬುದನ್ನು ಹೇಳಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಹೆಚ್. ಅಶ್ವತರೆಡ್ಡಿ : ಮಾನ್ಯ ಅಧ್ಯಕ್ಷರೆ, ಜಿಲ್ಲಾ ಪರಿಷತ್ತಿನ ರಸ್ತೆಯ ವಿಚಾರದಲ್ಲಿ ಬಹಳ ತೊಂದರೆಯಾಗಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ...

(ಈ ಹಂತದಲ್ಲಿ ಅನೇಕ ಮಾನ್ಯ ಸದಸ್ಯರು ಅಲ್ಲಲ್ಲೇ ಗುಂಪುಕೂಡಿ ಮಾತನಾಡುತ್ತಿದ್ದರು.)

ಶ್ರೀ ಬಸವರಾಜರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, * * * * ತಾವು ಯಾವ ಸದಸ್ಯರನ್ನು ಕರೆಯುತ್ತೀರೆಂಬುದನ್ನು ದಯವಿಟ್ಟು ಹೇಳಿ. ಎಲ್ಲರೂ ಎದ್ದುನಿಂತು ಮಾತನಾಡಿದರೆ ಮಂತ್ರಿಗಳು ಉತ್ತರ ಕೊಡಲಿಕ್ಕೆ ಸಾಧ್ಯವಿಲ್ಲ. ನಾವು ಪ್ರಶ್ನೆ ಕೇಳಲಿಕ್ಕೆ ಸಾಧ್ಯವಿಲ್ಲ. ಸದನ ಒಂದು ಆರ್ಡರ್‌ನಲ್ಲಿರಬೇಕು. ತಾವು ಯಾರನ್ನು ಕರೆಯುತ್ತೀರಿ ಆ ಸದಸ್ಯರು ಕ್ಲಾರಿಫಿಕೇಷನ್ ಕೇಳುವುದು ಉತ್ತಮ. ದಯವಿಟ್ಟು ಅವರ ಹೆಸರನ್ನು ಕರೆಯಬೇಕು ಇಲ್ಲದಿದ್ದರೆ ಎಲ್ಲಾ ಸದಸ್ಯರೂ ಎದ್ದು ನಿಲ್ಲುತ್ತಾರೆ. ಸಚಿವರು ಉತ್ತರ ಕೊಡುವುದಕ್ಕಾಗುವುದಿಲ್ಲ. ಮತ್ತು ನಮಗೂ ಕೂಡ ಕಷ್ಟವಾಗುತ್ತದೆ.

ಶ್ರೀ ಜಿ.ಹೆಚ್. ಅಶ್ವತರೆಡ್ಡಿ : ಜಿಲ್ಲಾ ಪರಿಷತ್ತಿನ ಯಾವುದೋ ಒಂದು ರಸ್ತೆ ವಿಚಾರವನ್ನು ಮಾನ್ಯ ಜುಟ್ಟಲ್‌ರವರು ಹೇಳಿದರು. ಅದು ಬಹಳ ಪ್ರಮುಖವಾದ ರಸ್ತೆಯಂತೆ, ಮಾನ್ಯ ಸದಸ್ಯರು ಅದನ್ನು ಪ್ರತ್ಯೇಕವಾಗಿ ಬರೆದುಕೊಟ್ಟರೆ, ಅದಕ್ಕೆ ಏನು ಹಣವನ್ನು ಕೊಡಬೇಕೋ ಕೊಡಿಸಿ, ದುರಸ್ತಿ ಮಡಿಸುತ್ತೇನೆ. ಮತ್ತು ಅಪ್‌ಗ್ರೇಡ್ ಮಾಡುವುದಕ್ಕೆ ಸೇರುತ್ತದೆಯೇ ಇಲ್ಲವೇ ಎಂಬುದನ್ನೂ ಪರಿಶೀಲಿಸಿ, ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ ಅವರು ದಯವಿಟ್ಟು ಬರೆದು ಕೊಡಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರಾದ ರಾಯರೆಡ್ಡಿಯವರು ಮಾತನಾಡುತ್ತಾ, ಇದು ಒಂದು ಫಿಷ್ ಮಾರ್ಕೆಟ್ ಎಂದು ಹೇಳಿದರು. ಮಾನ್ಯ ರಾಯರೆಡ್ಡಿಯವರು ಹೇಳಿದ ಮಾತು ಕಡತದಲ್ಲಿ ಹೋಗಿದ್ದರೆ ಅದನ್ನು ದಯವಿಟ್ಟು ತೆಗೆಸಬೇಕು.

ಶ್ರೀ ಬಸವರಾಜ ರಾಯರೆಡ್ಡಿ ; ಫಿಷ್ ಮಾರ್ಕೆಟ್ ಆಗಿದೆ ಎಂದು ಹೇಳಲಿಲ್ಲ, ಫಿಷ್ ಮಾರ್ಕೆಟ್‌ನ ಹಾಗೆ ಆಗುತ್ತಿದೆ....

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಅಂಥ ಮಾತನ್ನು ಆಡಬಾರದು. ಅದು ಅನ್‌ಪಾರ್ಲಿಮೆಂಟರಿ ವರ್ಡ್ ಆಗುತ್ತದೆ.

(ಗೊಂದಲ)

ಛೇರ್ಮನ್ : ಹಾಗಿದ್ದರೆ ಕಡತದಿಂದ ತೆಗೆದುಹಾಕುತ್ತೇನೆ. ಜವಾಬ್ದಾರಿ ಸದಸ್ಯರು ಈ ರೀತಿ ಮಾತನಾಡಿದ್ದರೆ ಹೇಗೆ? ಅದನ್ನು ಕಡತದಿಂದ ತೆಗೆದುಹಾಕಿದೆ.

(ಗೊಂದಲ)

+ ಅಧ್ಯಕ್ಷರ ಆದೇಶದ ಮೇರೆಗೆ ತೆಗೆದುಹಾಕಲಾಗಿದೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷಣಿಯವರೇ ಮಾನ್ಯ ಸಚಿವರು ಹೈದರಾಬಾದ್ ಕರ್ನಾಟಕ ಜಿಲ್ಲೆಗಳಿಗೆ ಬಹಳಷ್ಟು ಹಣವನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಹೈದರಾಬಾದ್ ಕರ್ನಾಟಕಕ್ಕೆ ಕೊಟ್ಟಿರತಕ್ಕಂಥ ಅಮೌಂಟ್ ಎಷ್ಟು? ರೆಗ್ಯುಲರ್ ಅಲೋಕೇಷನ್ ಎಷ್ಟು? ಆಮೇಲೆ ನಮ್ಮ ಬಾರ್ಡರ್ ಡೆವಲಪ್‌ಮೆಂಟ್‌ನಲ್ಲಿ ಬಳ್ಳಾರಿ ಜಿಲ್ಲೆಗೆ ಯಾವ ಹಣವೂ ಬಂದಿಲ್ಲ, ರೋಡ್ಸ್ ಸರಿಯಾಗಿಲ್ಲದಿರುವುದರಿಂದ ಡಕಾಯಿತಿಗಳು ಬಹಳ ಜಾಸ್ತಿಯಾಗುತ್ತಿವೆ. ಆದ ಕಾರಣ ಬಾರ್ಡರ್ ಡೆವಲಪ್‌ಮೆಂಟ್ ಬೋರ್ಡ್‌ನಿಂದ ಎಷ್ಟು ಹಣವನ್ನು ತಾವು ಕೊಡಿಸುತ್ತೀರೆಂದು ಕೇಳುತ್ತಿದ್ದೇನೆ.

ಶ್ರೀ ಬಾಬುರಾವ್ ಚಿಂಚನಸೂರ್ : ಮಾನ್ಯ ಅಧ್ಯಕ್ಷಣಿಯವರೇ, ಸರ್ಕಾರ ಬಹಳ ಒಳ್ಳೆಯ ಕೆಲಸವನ್ನು ಮಾಡುತ್ತಿದೆ. ಆದರೆ ಕರ್ನಾಟಕ ರಾಜ್ಯದಲ್ಲಿ ಚಿತ್ತಾಪುರ ಒಂದು ದೊಡ್ಡ ಡಿಸ್ಟ್ರಿಕ್ಟ್ ಆಗಿದೆ. ಇದು ಒಂದು ಅಂಡಮಾನ್ ನಿಕೋಬಾರ್ ತಾಲ್ಲೂಕಿನಲ್ಲಿರುವಂತಿದೆ. ಇಲ್ಲಿಯವರೆಗೆ ಅಲ್ಲಿ ಒಂದು ಎತ್ತಿನಬಂಡಿಯೂ ಕೂಡ ರಸ್ತೆಯಲ್ಲಿ ಸರಿಯಾಗಿ ತಿರುಗಾಡುವಂತಿಲ್ಲ. ಬಸ್‌ಅಂತೂ 25 ವರ್ಷಗಳಿಂದ ಬರುತ್ತಿಲ್ಲ. ಹೀಗಿರುವುದರಿಂದ ಮಾನ್ಯ ಲೋಕೋಪಯೋಗಿ ಮಂತ್ರಿಗಳನ್ನು ಈ ಚಿತ್ತಾಪುರ ತಾಲ್ಲೂಕಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರೆಂದು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹರ್ಷಕುಮಾರಗೌಡ : ಕೆ.ಆರ್. ಆಸ್ಪತ್ರೆ ಮೈಸೂರಿನಲ್ಲಿ ಒಂದು ಔಟ್‌ಪೇಶೆಂಟ್ ಬಿಲ್ಡಿಂಗ್‌ನ್ನು ಈಗ 5-6 ವರ್ಷಗಳ ಹಿಂದೆ ಕಟ್ಟಿದರು. ಅದನ್ನು ತಂತ್ರಜ್ಞರು ಪೂರ್ಣ ಮಾಡಬೇಕೆಂದು ಹೇಳಿದರು. 70 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರೂ ಸುಮಾರು ಆರುವರ್ಷದಿಂದ ಆ ಕಟ್ಟಡ ಹಾಗೆಯೇ ಉಳಿದಿದೆ. ಕಟ್ಟಡವನ್ನು ದುರಸ್ತಿ ಮಾಡುತ್ತೀರಾ, ಇಲ್ಲ ಬೀಳಿಸುತ್ತೀರಾ, ನಾಶಮಾಡುತ್ತೀರಾ ಎಂದು ಕೇಳಿದರೆ ಅದನ್ನು ಕಟ್ಟಿಸುತ್ತೇವೆಂದು ಪದೇಪದೇ ಮಂತ್ರಿಗಳು ಹೇಳುತ್ತಿರುತ್ತಾರೆ. ನಾನು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಅದರ ಬಗ್ಗೆ ಯಾವ ನಿರ್ಧಾರ ತೆಗೆದುಕೊಳ್ಳುತ್ತೀರಿ, ತುರ್ತಾಗಿ ಕಟ್ಟಡವನ್ನು ನಿರ್ಮಾಣ ಮಾಡುತ್ತೀರಾ? ಕೋರ್ಟಿನಲ್ಲಿಯೂ ಕೂಡ ಇಷ್ಯೂ ಬಂದಿದೆ. ಅದರ ಬಗ್ಗೆ ಸೂಕ್ತ ನಿರ್ಣಯ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ ಕಳೆದ ಆಯವ್ಯಯ ಪತ್ರದಲ್ಲಿ ಪ್ರತಿ ತಾಲ್ಲೂಕಿಗೆ 50ಕಿಲೋಮೀಟರ್ ರಸ್ತೆಗಳನ್ನು ಜಿಲ್ಲಾ ಪ್ರಮುಖರಸ್ತೆಗಳನ್ನಾಗಿ ಪರಿವರ್ತನೆ ಮಾಡಿ ಲೋಕೋಪಯೋಗಿ ಇಲಾಖೆ ಮೂಲಕ ತೆಗೆದುಕೊಳ್ಳುತ್ತೇವೆಂದು

ಹೇಳಿದ್ದಾರೆ. ಇವತ್ತು ಒಂದು ವರ್ಷ ಕಳೆಯುತ್ತಾ ಬಂದರೂ ಒಂದು ಕಿಲೋಮೀಟರ್ ರಸ್ತೆಯನ್ನೂ ಕೂಡ ಲೋಕೋಪಯೋಗಿ ಇಲಾಖೆಯವರು ಯಾವುದೇ ತಾಲ್ಲೂಕಿನಿಂದ ತೆಗೆದುಕೊಂಡಿಲ್ಲ.

ಅದರ ಬಗ್ಗೆ ಮಾನ್ಯಸಚಿವರು ಯಾವಾಗ ಜಿಲ್ಲಾಪರಿಷತ್ತಿನ ರಸ್ತೆಗಳನ್ನು ಪರಿವರ್ತನೆ ಮಾಡುತ್ತೀರಿ ಎಂಬುದನ್ನು ತಿಳಿಸಬೇಕು. ಎರಡನೆಯದು ಪ್ರತಿ ಕ್ಷೇತ್ರಕ್ಕೆ ತಾವು 12 ಲಕ್ಷ ರೂಪಾಯಿಗಳನ್ನು ಈ ವರ್ಷದಲ್ಲಿ ಕೊಡುತ್ತೇವೆಂದು ಹೇಳಿದ್ದಿರಿ. ಅದನ್ನು ಕೊಡುತ್ತೀರಾ? ಎ.ಪಿ.ಎಂ.ಸಿ ವ್ಯವಸಾಯೋತ್ಪನ್ನ ಮಾರ್ಕೆಟ್ ಸಮಿತಿಯ ರಿಸರ್ವ್ ಫಂಡ್ ಏನು ಇದೆ, ಆ ಒಂದು ಫಂಡ್‌ನಿಂದ ಕೂಡ ನಾವು ಹಣವನ್ನು ತೆಗೆದುಕೊಂಡು ಪ್ರತಿಯೊಂದು ತಾಲ್ಲೂಕಿಗೆ ಕಾಮಗಾರಿಗಳಿಗೆ ಹಣವನ್ನು ಕೊಡುತ್ತೇವೆಂದು ಹೇಳಿದ್ದಿರಿ, ಯಾವ ಒಂದು ಟಿ.ಎ.ಪಿ.ಎಂ.ಪಿ.ಸಿ. ರಿಸರ್ವ್‌ಫಂಡ್‌ನಿಂದ ಕೂಡ ಒಂದು ಪೈಸೆ ಹಣವನ್ನು ತೆಗೆದುಕೊಂಡಿಲ್ಲ. ಅದರ ಬಗ್ಗೆಯೂ ಕೂಡ ದಯವಿಟ್ಟು ತಾವು ಹೇಳಬೇಕು. ಕೊನೆಯದಾಗಿ ಲೋಕೋಪಯೋಗಿ ಸಚಿವರು ಹೇಳಿದರು. ರಾಜ್ಯದ ಹೆದ್ದಾರಿ ನಂಬರಿ 42 ಕಾರವಾರ ಬಳ್ಳಾರಿ ರಸ್ತೆ ಏನಿದೆ ಮತ್ತು ಕಾರವಾರದಿಂದ ಹುಬ್ಬಳ್ಳಿಯವರೆಗೆ ಏಷ್ಯಾ ಅಭಿವೃದ್ಧಿ ಬ್ಯಾಂಕ್ ನೆರವಿನಿಂದ ಮೊದಲನೆ ಯೋಜನೆಯನ್ನು ಕೈಗೆ ತೆಗೆದುಕೊಂಡು ಮೂರು ವರ್ಷವಾಯಿತು. ಎರಡನೆಯ ಹಂತದ ಕೆಲಸ ಹುಬ್ಬಳ್ಳಿಯಿಂದ ಬಳ್ಳಾರಿಗೆ ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ. ಅದು ಈ ವರ್ಷ ಪ್ರಾರಂಭವಾಗಬೇಕಾಗಿತ್ತು. ಏಕೆ ಪ್ರಾರಂಭ ಮಾಡಲಿಲ್ಲ ಯಾವಾಗ ಪ್ರಾರಂಭ ಮಾಡುತ್ತೀರೆನ್ನುವುದನ್ನು ಕೂಡ ತಾವು ಉತ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ.

3.45 ಪಿ.ಎಂ.

ಶ್ರೀ ಬಿ.ಹೆಚ್. ಬನ್ನಿಕೋಡ್ : ನೂರಾರು ವರ್ಷಗಳಿಂದ ರಸ್ತೆ ಬದಿಗೆ ನೆರಳು ಆಗಲಿಕ್ಕೆ ಹಾಕಿದ್ದ ಗಿಡಗಳನ್ನು ರಕ್ಷಣೆ ಮಾಡುತ್ತಿದ್ದವರು ಲೋಕೋಪಯೋಗಿ ಇಲಾಖೆಯವರು. ಅವರ ನಿರ್ವಹಣೆಯಲ್ಲಿ ಹಾಳಾಗುತ್ತಿರಲಿಲ್ಲ. ಸರ್ಕಾರದವರು ರಸ್ತೆ ಬದಿಯ ಗಿಡಗಳನ್ನು ರಕ್ಷಣೆ ಮಾಡುವ ಜವಾಬ್ದಾರಿಯನ್ನು ಅರಣ್ಯ ಇಲಾಖೆಗೆ ಕೊಟ್ಟರೆ ಇವತ್ತಿನ ದಿವಸ ರಾಕ್ಷಸರಾಗಿ ಸಂಪೂರ್ಣವಾಗಿ ಹಾಳು ಮಾಡುತ್ತಿದ್ದಾರೆ, ಅವು ಉಳಿಯುತ್ತಿಲ್ಲ. ಸಾಮಾನ್ಯವಾಗಿ ಲೋಕೋಪಯೋಗಿ ಇಲಾಖೆಯವರು ರಸ್ತೆ ಕೆಲಸಕಾರ್ಯಗಳ ಸಲುವಾಗಿ ಆಗಾಗ ಅಡ್ಡಾಡುತ್ತಿದ್ದು ಗಿಡಮರಗಳನ್ನು ರಕ್ಷಣೆ ಮಾಡುತ್ತಿದ್ದರು. ಇವತ್ತು ಅರಣ್ಯ ಇಲಾಖೆಯವರು ಭಕ್ಷಣೆ ಮಾಡುತ್ತಿದ್ದಾರೆ. ಆದ್ದರಿಂದ ರಸ್ತೆ ಬದಿಯ ಗಿಡಗಳನ್ನು ರಕ್ಷಣೆ ಮಾಡುವುದಕ್ಕೆ, ರಸ್ತೆಗಳ ನಿರ್ವಹಣೆ ಮಾಡತಕ್ಕ ಲೋಕೋಪಯೋಗಿ ಇಲಾಖೆಯವರಿಗೆ ಜವಾಬ್ದಾರಿ ವಹಿಸಿಕೊಡಬೇಕು. ಇಲ್ಲದಿದ್ದರೆ ರಸ್ತೆ ಪಕ್ಕದ ಜಮೀನ್ದಾರರಿಗೆ ಗಿಡಗಳ ಪಟ್ಟಾ ಕೊಟ್ಟು ಗಿಡಗಳನ್ನು ರಕ್ಷಣೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಎಂ.ವಿ. ವೆಂಕಟಪ್ಪ : ನಮ್ಮ ಅಸೆಂಬ್ಲಿ ಕ್ಷೇತ್ರಕ್ಕೆ ರಸ್ತೆ ಮಾಡಿಸುವ ಸಲುವಾಗಿ ಹೋದ ವರ್ಷ 12 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. ಕೆಲವು ಕ್ಷೇತ್ರಗಳಿಗೆ 18 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಕೆಲವು ಕ್ಷೇತ್ರಗಳಿಗೆ 12 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಈ ರೀತಿ ಶಾಸಕರಲ್ಲಿ ತಾರತಮ್ಯ ತೋರುವುದಕ್ಕಿಂತ ಹೋದ ವರ್ಷ 12 ಲಕ್ಷ ರೂಪಾಯಿಗಳನ್ನು ಏನು ಕೊಟ್ಟು ಕೆಲಸ ಮಾಡಿಸಿದ್ದೀರಿ, ಅದರ ಜೊತೆಗೆ ಈ ವರ್ಷ ಪುನಃ 12 ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಹೋದ ವರ್ಷ 12 ಲಕ್ಷ ರೂಪಾಯಿ ಕೊಟ್ಟವರಿಗೆ ಈ ವರ್ಷವೂ 12 ಲಕ್ಷ ರೂಪಾಯಿಗಳನ್ನು ಕೊಡತಕ್ಕ ವ್ಯವಸ್ಥೆ ಮಾಡುತೀರಾ?

ಶ್ರೀ ಷಫಿ ಅಹಮದ್ : ಕಳೆದ ಅಧಿವೇಶನದಲ್ಲಿ ನೆಲಮಂಗಲ-ತುಮಕೂರು ನ್ಯಾಷನಲ್ ಹೈವೇ ಕೆಲಸವನ್ನು ಪ್ರಾರಂಭಿಸುವುದಾಗಿ ಸಚಿವರು ಹೇಳಿದ್ದರು. ಉತ್ತರ ಕೊಡುವಾಗ ಅದರ ಬಗ್ಗೆ ಏನೂ ವಿವರ ಕೊಡಲಿಲ್ಲ, ಆ ರಸ್ತೆಯ ಕೆಲಸವನ್ನು ಯಾವಾಗ ಶುರು ಮಾಡುತ್ತೀರಿ?

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ : ಸೇಡಂ ಮತಕ್ಷೇತ್ರದಲ್ಲಿ ಆಂಧ್ರ ಗಡಿ ಪ್ರಾಂತ್ಯದ ರಸ್ತೆಗಳು ಬಹಳ ಹೀನ ಸ್ಥಿತಿಯಲ್ಲಿವೆ. ನೆರೆ ರಾಜ್ಯದ ಅಭಿವೃದ್ಧಿ ನೋಡಿದರೆ ಗಡಿ ಪ್ರಾಂತ್ಯದ ಜನರು ನಮ್ಮನ್ನು ದೂಷಿಸುತ್ತಾರೆ. ಇದನ್ನು ತಪ್ಪಿಸಲು ಗಡಿ ಪ್ರಾಂತ್ಯದ ಅಭಿವೃದ್ಧಿಯ ಹಣದಲ್ಲಿ ಈ ರಸ್ತೆಗಳನ್ನು ದುರಸ್ತಿ ಮಾಡುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಹೆಚ್. ಅಶ್ವತ ರೆಡ್ಡಿ : ಮಾನ್ಯ ಹರ್ಷಕುಮಾರಗೌಡರು ಹೇಳಿದರು, ಮೈಸೂರು ಕೆ.ಆರ್.ಆಸ್ಪತ್ರೆ ಪಕ್ಕದಲ್ಲಿ 80 ಲಕ್ಷ ರೂಪಾಯಿ ಖರ್ಚು ಮಾಡಿ ಏನು ಒಂದು ಕಟ್ಟಡ ಕಟ್ಟಿದೆ, ಆ ಬಿಲ್ಡಿಂಗ್‌ನ್ನು ಡೆಮಾಲಿಷ್ ಮಾಡಬೇಕೆಂದು ಕೆಲವು ಜನ ಅಭಿಪ್ರಾಯಿಸುತ್ತಾರೆ, ಮತ್ತೆ ಕೆಲವರು ಅದನ್ನು ವಿಸ್ತರಣೆ ಮಾಡಿ ಕಟ್ಟಡವನ್ನು ಪೂರ್ಣ ಮಾಡಬೇಕೆಂದು ಹೇಳುತ್ತಾರೆ, ಆ ಬಗ್ಗೆ ಸರ್ಕಾರದ ನಿಲುವು ಏನು ಎಂದು ಕೇಳಿದ್ದಾರೆ. ಆ ವಿಷಯದಲ್ಲಿ ಕೋರ್ಟ್ಗೆ ಹೋಗಿರುವುದರಿಂದ ಸರ್ಕಾರ ಕ್ರಮ ಕೈಗೊಳ್ಳುವುದಕ್ಕೆ ಬರುವುದಿಲ್ಲ.

ಶ್ರೀ ಕೆ. ಹರ್ಷಕುಮಾರ ಗೌಡ : ಕೋರ್ಟಿಗೆ ಹೋಗಿರುವುದು ಇಲಾಖೆಯವರು ಡಿಸ್‌ಪ್ಯೂಟ್ ಇರತಕ್ಕದ್ದು ಇಲಾಖೆ ಮತ್ತು ಕಂಟ್ರಾಕ್ಟರ್ ನಡುವೆ. ಇಲಾಖೆಯವರಿಗೆ ಸ್ಥಳೀಯ ಶಾಸಕರು ಒತ್ತಾಯ ಮಾಡಿದ್ದಾರೆ. ಮಾನ್ಯ ಪುಟ್ಟಸ್ವಾಮಿಗೌಡರು ಈ ಇಲಾಖೆಯ ಮಂತ್ರಿಗಳಾಗಿದ್ದಾಗ ಒತ್ತಾಯ ಮಾಡಿದ್ದಾರೆ. ಇಲಾಖೆಯವರು ಕಂಟ್ರಾಕ್ಟರ್ ಮೇಲೆ ಕೇಸ್ ಹಾಕಿ ಇವತ್ತು ಅದು ಕೋರ್ಟಿನಲ್ಲಿದೆ ಎಂದರೆ ಸಮಸ್ಯೆ ಬಗೆಹರಿಯುತ್ತದೆಯೇ? ಆ ಕಟ್ಟಡ ನಿರ್ಮಾಣ ಕಾರ್ಯವನ್ನು ಪೂರ್ಣ ಮಾಡಬೇಕು ಅದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಜಿ.ಹೆಚ್. ಅಶ್ವತ ರೆಡ್ಡಿ ; ಆ ಪ್ರಶ್ನೆಯನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಚಿತ್ತಾಪುರ ಕ್ಷೇತ್ರಕ್ಕೆ ಎಷ್ಟು ಹಣ ಕೊಟ್ಟಿದ್ದೀರೆಂದು ಕೇಳಿದ್ದಾರೆ. ಅದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. ಆಮೇಲೆ ಆ ವಿವರ ಕೊಡುತ್ತೇನೆ.

ಶ್ರೀ ಬಾಬುರಾವ್ ಚಿಂಚನ್ಸೂರ್ : ಅಲ್ಲಿ ಒಂದು ಎತ್ತಿನ ಬಂಡಿ ಕೂಡ ಹೋಗುವ ಪರಿಸ್ಥಿತಿ ಇಲ್ಲ. ದಯಮಾಡಿ ಅಸೆಂಬ್ಲಿ ಮುಗಿದ ಮೇಲೆ ಚಿತ್ತಾಪುರಕ್ಕೆ ತಾವೇ ಖುದ್ದಾಗಿ ಬಂದು ರಸ್ತೆಗಳ ಸ್ಥಿತಿಗತಿಯನ್ನು ಪರಿಶೀಲನೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು : ಅಸೆಂಬ್ಲಿ ಆದ ಮೇಲೆ ಹೋಗಿಬನ್ನಿ.

ಶ್ರೀ ಜಿ.ಹೆಚ್. ಅಶ್ವತ ರೆಡ್ಡಿ : ಹೋಗಿಬರುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿಯವರು : ಅಂಕೋಲಾ, ಹುಬ್ಬಳ್ಳಿ ಮತ್ತು ಬಳ್ಳಾರಿ ರಸ್ತೆಗಳನ್ನು ಏಷ್ಯನ್ ಡೆವಲಪ್ಮೆಂಟ್ ಬ್ಯಾಂಕ್‌ನಿಂದ ಕೊಟ್ಟಿರತಕ್ಕ ಅನುದಾನದ ಪ್ರಕಾರ ಈ ವರ್ಷವೇ ಪೂರ್ಣ ಮಾಡಬೇಕೆಂದು ಇದೆ, ಅದರಂತೆ ಮಾಡಬೇಕೆಂದು ಹೇಳಿದರು. ಆ ತರಹ ಇಲ್ಲ, ಈ ವರ್ಷ ಅಥವಾ ಮುಂದಿನ ವರ್ಷ

ಅಂಕೋಲಾದಿಂದ ಹುಬ್ಬಳ್ಳಿಗೆ ಬರತಕ್ಕ ರಸ್ತೆ ಸುಮಾರು 65 ಕೋಟಿ ರೂಪಾಯಿ ವೆಚ್ಚದಲ್ಲಿ ಆಗುತ್ತಿದೆ. ಅದು ಕಂಪ್ಲೀಟ್ ಆದಮೇಲೆ ಕೊಡುತ್ತೇವೆಂದು ಏಷ್ಯನ್ ಡೆವಲಪ್ಮೆಂಟ್ ಬ್ಯಾಂಕಿನವರು ಹೇಳಿದ್ದಾರೆ ಅದು ಬಂದ ತಕ್ಷಣ ಹುಬ್ಬಳ್ಳಿಯಿಂದ ಬಳ್ಳಾರಿಗೆ ರಸ್ತೆ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಸವರಾಜ ರಾಯರೆಡ್ಡಿ : 50 ಕಿಲೋಮೀಟರ್ ಜಿಲ್ಲಾ ಪ್ರಮುಖ ರಸ್ತೆ ಮಾಡಬೇಕೆಂದು ಆಯವ್ಯಯ ಪತ್ರದಲ್ಲಿ ಹೇಳಿದ್ದೀರಿ. ಅದರ ಬಗ್ಗೆ ತಾವು ಹೇಳಬೇಕು.

ಶ್ರೀ ಜಿ.ಎಚ್. ಅಶ್ವತರೆಡ್ಡಿ : ಅಧ್ಯಕ್ಷರೆ, 40 ಕಿಲೋಮೀಟರ್ ಒಂದು ಅಸೆಂಬ್ಲಿ ಕ್ಷೇತ್ರದಲ್ಲಿ ತೆಗೆದುಕೊಳ್ಳಬೇಕೆಂದು ಇದೆ. ಅದು ಪರಿಶೀಲಿಸಿ ಹಣ ನಮ್ಮ ಕೈಯಲ್ಲಿದ್ದರೆ ಮಾಡುತ್ತೇವೆ.

ಶ್ರೀ ಬಸವರಾಜ ರಾಯರೆಡ್ಡಿ : ಆಯವ್ಯಯ ಪತ್ರದಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಹೇಳಿದ್ದರಿಂದ ನಾನು ಹೇಳಿದೆ. ಪರಿಶೀಲನೆ ಪ್ರಶ್ನೆ ಇಲ್ಲವೇ ಇಲ್ಲ ಇಲ್ಲಿ.

ಶ್ರೀ ಜಿ.ಎಚ್. ಅಶ್ವತರೆಡ್ಡಿ : ರೆಗ್ಯುಲೇಟೆಡ್ ಮಾರ್ಕೆಟ್ ರಿಸರ್ವ್ ಫಂಡ್ಸ್‌ನಿಂದ ರೈತರಿಗೆ ಅನುಕೂಲವಾಗುವ ರಸ್ತೆ ಮಾಡಬೇಕೆಂದು ಆಲೋಚನೆ ಇದೆ. ಅದರ ಬಗ್ಗೆ ನಾವು ಪ್ರಯತ್ನ ಮಾಡಿ ಮೀಟಿಂಗ್ ಕೂಡ ಕಂಡಕ್ಟ್ ಮಾಡಿದ್ದೇವೆ. ಕೊಡುತ್ತೇವೆಂದು ಅವರು ಒಪ್ಪಿಕೊಂಡಿದ್ದಾರೆ. ಕೊಡುವುದಕ್ಕಿಂತ ಮೊದಲೇ ಕೇಳುವುದು ಬೇಡ. ಬಂದನಂತರ ಎಷ್ಟೆಷ್ಟು ಹಣ ಬಂದಿದೆ ಎಂದು ಹೇಳುತ್ತೇವೆ. ರೆಡ್ಡಿಯವರು ಸೇಡಂನಿಂದ ಬಾರ್ಡರ್ ರೋಡ್ಸ್ ಇಂಪ್ರೂವ್ಮೆಂಟ್‌ಗೆ ಏನು ಮಾಡಿದೆ ಎಂದು ಕೇಳಿದ್ದಾರೆ. ಅದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ, ಸುಮಾರು 25 ಲಕ್ಷ ರೂಪಾಯಿ ಡೆಪ್ಯೂಟಿ ಕಮಿಷನರ್ಸ್‌ಗೆ ಬರುತ್ತದೆ. ಅವರಿಗೆ ಒಂದೊಂದು ತಾಲ್ಲೂಕಿಗೆ ಬಾರ್ಡರ್ ರೋಡ್ಸ್‌ಗೆ 25 ಲಕ್ಷ ರೂಪಾಯಿ ರಿಪೇರಿ ಮಾಡುವುದಕ್ಕೆ ಕೊಟ್ಟಿದ್ದಾರೆ. ನಮ್ಮ ವ್ಯಾಪ್ತಿಗೆ ಅದು ಬರುವುದಿಲ್ಲ. ತುಮಕೂರಿನ ಮಾನ್ಯ ಸದಸ್ಯರಾದ ಷಫಿ ಅಹಮದ್ ಅವರು ನ್ಯಾಷನಲ್ ಹೈವೇ ಬಗ್ಗೆ ಕೇಳಿದ್ದಾರೆ. ನೆಲಮಂಗಲ - ತುಮಕೂರು ನಡುವೆ ನ್ಯಾಷನಲ್ ಹೈವೇ ಕೆಲಸ ನಡೆಯುತ್ತಿದೆ . ಕೆಲಸ ನಿಂತಿಲ್ಲ, ನೆಲಮಂಗಲದವರೆಗೆ ಕೆಲಸ ನಡೆದಿದ್ದು ನೆಲಮಂಗಲದಿಂದ ತುಮಕೂರಿನವರೆಗೆ ಕೆಲಸ ನಡೆಯುತ್ತಿದೆ. ಅದು ನಿಲ್ಲುವುದಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ರಸ್ತೆ ಬದಿಯಲ್ಲಿರತಕ್ಕ ಗಿಡಗಳ ಬಗ್ಗೆ ಹೇಳಲಿಲ್ಲ, ಅದು ಬಹಳ ಮಹತ್ವದ ಪ್ರಶ್ನೆ.

ಶ್ರೀ ಜಿ.ಎಚ್. ಅಶ್ವತರೆಡ್ಡಿ : ಬನ್ನಿಕೋಡ್ ಅವರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ.. ನ್ಯಾಷನಲ್ ಹೈವೇ ಮತ್ತು ಸ್ಟೇಟ್ ಹೈವೇ ರಸ್ತೆ ಪಕ್ಕದಲ್ಲಿರತಕ್ಕ ಮರಗಳನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಕೊಟ್ಟಿದ್ದೇವೆ. ಅವರೇ ಅದನ್ನು ಉಳಿಸಬೇಕಾಗುತ್ತದೆ. ಆದರೆ ಅವರೇ ಅದನ್ನು ಹಾಳು ಮಾಡಿದ್ದಾರೆಂದು ಆಪಾದನೆ ಮಾಡಿದ್ದಾರೆ. ಅದನ್ನು ಪರಿಶೀಲಿಸಿ ಲೋಕೋಪಯೋಗಿ ಇಲಾಖೆಯಲ್ಲೇ ಇಟ್ಟುಕೊಂಡರೆ ಒಳ್ಳೆಯದು ಎಂದು ಹೇಳಿದ್ದಾರೆ. ತಮ್ಮ ಅಬಿಪ್ರಾಯ ತಿಳಿದುಕೊಂಡು ಫಾರೆಸ್ಟ್ ಡಿಪಾರ್ಟ್‌ಮೆಂಟಿನಿಂದ ನಮ್ಮ ಇಲಾಖೆಗೆ ಟ್ರಾನ್ಸ್‌ಫರ್ ಮಾಡಿಸುತ್ತೇವೆ. ಅಲ್ಲೇ ಇದ್ದರೆ ಒಳ್ಳೆಯದು ಎಂದರೆ ಅಲ್ಲೇ ಇರಿಸುತ್ತೇವೆ. ಸದಸ್ಯರ ಅಬಿಪ್ರಾಯ ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಹೋದರೆ ಹಾಳಾಗುತ್ತದೆ ಎಂದು. ಅದನ್ನು ಪರಿಶೀಲಿಸುತ್ತೇನೆ. ನಮ್ಮ ಬಳ್ಳಾರಿ ಸ್ನೇಹಿತರಾದ ವೀರಭದ್ರಪ್ಪನವರು ಒಂದು ವಿಚಾರ ಹೇಳಿದ್ದಾರೆ. ಆ ಭಾಗದಲ್ಲಿ ಕೆಲಸಗಳು ಆಗಿಲ್ಲ ಎಂದು ಹೇಳಿದ್ದಾರೆ. ಹೈದರಾಬಾದ್ ಡೆವಲಪ್ಮೆಂಟ್

ಏರಿಯಾದಲ್ಲಿ ಕೆಲಸಗಳು ಆದಷ್ಟು ಯಾವ ಭಾಗದಲ್ಲೂ ಆಗಿಲ್ಲ ಎಂದು ನಾನು ಧೈರ್ಯವಾಗಿ ಹೇಳುತ್ತೇನೆ. ಏಕೆಂದರೆ ಅದು ಬಹಳ ಹಿಂದುಳಿದ ಪ್ರದೇಶ. ನಾರ್ಮಲ್ ಬಜೆಟ್‌ನಲ್ಲಿ ಗುಲ್ಬರ್ಗಕ್ಕೆ 33.8 ಕೋಟಿ, ರಾಯಚೂರಿಗೆ 26.17 ಬಳ್ಳಾರಿಗೆ 5.26 ಮತ್ತು 36.46 ಬೀದರ್‌ಗೆ 10.25 ಮತ್ತು 17.25 ಕೊಟ್ಟಿದ್ದಾರೆ.

ಶ್ರೀ ಅಲ್ಲಮ್ ವೀರಭದ್ರಪ್ಪ : ಈ ಅಮೌಂಟ್ ಹೈದರಾಬಾದ್ ಡೆವಲಪ್ಮೆಂಟ್ ಬೋರ್ಡಿನಿಂದ ಖರ್ಚು ಮಾಡಿದ್ದಾರೆ. ರೆಗ್ಯುಲರ್ರಾಗಿ ಪಿ.ಡಬ್ಲ್ಯೂ.ಡಿ.ಯಿಂದ ಅಲೋಕೇಷನ್ ಆಗಿಲ್ಲ. ಬಳ್ಳಾರಿ ಬ್ಯಾಕ್‌ವರ್ಡ್ ಆಗಿರುವುದರಿಂದ ಬೇರೆ ಜಿಲ್ಲೆ ಜೊತೆಗೆ ಸಮಾನತೆ ಮಾಡುವುದಕ್ಕೋಸ್ಕರ ಹೈದರಾಬಾದ್ ಡೆವಲಪ್ಮೆಂಟ್ ಫಂಡ್ಸ್ ಕೊಟ್ಟಿದ್ದಾರೆ, ಅದನ್ನೇ ರೆಗ್ಯುಲರ್ ಬಜೆಟ್ಟಾಗಿ ಕೊಟ್ಟರೆ ಹೆಚ್ಚು ಅನುಕೂಲವಾಗುತ್ತದೆ. ನಮ್ಮ ನಾಲ್ಕು ಜಿಲ್ಲೆಗಳಿಗೆ ರೆಗ್ಯುಲರ್ ಬಜೆಟ್ ಅಲೋಕೇಷನ್ ಆಗಿಲ್ಲ. ಎರಡನೆಯ ಪ್ರಶ್ನೆ ಬಳ್ಳಾರಿ ಜಿಲ್ಲೆ ಮತ್ತು ಬಳ್ಳಾರಿ ತಾಲ್ಲೂಕ್ ಸುತ್ತಮುತ್ತಲಿಂದ ಬಳ್ಳಾರಿಗೆ ಬರಬೇಕಾದರೆ ಆಂಧ್ರ ಬಾರ್ಡರ್‌ನಿಂದಲೇ ಬರಬೇಕು. ಬಾರ್ಡರ್ ಡೆವಲಪ್ಮೆಂಟ್ ಆಗಿಲ್ಲ. ಇದರಿಂದ ಬಹಳಷ್ಟು ಡಕಾಯಿತಿ ಆಗುತ್ತಿದೆ. ಆದ್ದರಿಂದ ಸುತ್ತಮುತ್ತ ರೋಡ್ಸ್ ಸರಿ ಮಾಡುವುದಕ್ಕೆ ಏನಾದರೂ ಅಲೋಕೇಷನ್ ಮಾಡುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಜಿ.ಹೆಚ್. ಅಶ್ವತರೆಡ್ಡಿ : ಸರ್ಕಾರ ಅದನ್ನು ಕೊಟ್ಟಿದೆ, ಬಾರ್ಡರ್ ಏರಿಯಾ ಅಲೋಕೇಷನ್ ಡೆಪ್ಯುಟಿ ಕಮೀಷನರ್‌ರವರು ಆ ಜಿಲ್ಲೆಯವರಿಗೆ ಕೊಡಬೇಕು.. ತಾವು ಜಿಲ್ಲಾ ಡೆಪ್ಯುಟಿ ಕಮೀಷನರ್‌ರವರನ್ನು ಕೇಳಿ. ಬಾರ್ಡರ್ ರೋಡ್ಸ್ ಡೆವಲಪ್‌ಮೆಂಟ್‌ಗೆ ತಾವು ಕೇಳಬೇಕು. ತಾವು ಕೇಳಿದರೆ ಅವರು ಕೊಡುವುದಕ್ಕೆ ಸದಾ ಸಿದ್ದ. ಆದರೆ, ನಮ್ಮ ವೀರಭದ್ರಪ್ಪನವರು ರಸ್ತೆ ಚೆನ್ನಾಗಿ ಇಲ್ಲದಿದ್ದರೆ ದರೋಡೆ ಆಗುತ್ತದೆ ಎಂದು ಹೇಳುತ್ತಿದ್ದಾರೆ ಅದು ತಪ್ಪು. ರಸ್ತೆ ಚೆನ್ನಾಗಿ ಇರುವ ಕಡೆಯೂ ದರೋಡೆ ಆಗುತ್ತದೆ. ಆದ್ದರಿಂದ ಅದಕ್ಕೂ ಇದಕ್ಕೂ ಸಂಬಂಧ ಇಲ್ಲ. ಇವತ್ತು ರಸ್ತೆ ಚೆನ್ನಾಗಿ ಇಲ್ಲ ಎಂದರೆ ಅವರು ದರೋಡೆ ಮಾಡೋದು ಕಷ್ಟ.

ರಸ್ತೆ ಸರಿಯಿಲ್ಲದಿದ್ದರೆ ದರೋಡೆ ಕಡಿಮೆ ಆಗುತ್ತದೆಂದು ನನ್ನ ವೈಯುಕ್ತಿಕ ಅಭಿಪ್ರಾಯ. ಮತ್ತೆ ವೆಂಕಟಪ್ಪನವರು ಎಂಎಲ್‌ಎ ಗ್ರಾಂಟ್ 1990-91ರಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 12 ಲಕ್ಷ ಕೊಟ್ಟಿದ್ದೀರಿ ಎಂದು ಹೇಳಿದ್ದಾರೆ. ಕೆಲವು ಕಡೆ ಇದು 18 ಲಕ್ಷ ಕೂಡ ಆಗಿದೆ. ಇದರಲ್ಲಿ ತಾರತಮ್ಯ ಏನೂ ಆಗಿಲ್ಲ. ಸ್ವಲ್ಪ ಬಾಯಿ ಇರುವವರು ಜೋರು ಮಾಡಿ ಸ್ವಲ್ಪ ಹೆಚ್ಚು ಕೆಲಸ ಮಾಡಿಸಿರಬಹುದು. ಒಟ್ಟಿನಲ್ಲಿ ಎಲ್ಲಾ ಕಡೆ ಮಿನಿಮಮ್ 12 ಲಕ್ಷ ರೂಪಾಯಿಗಳ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಹೋದ ವರ್ಷದ್ದು ಹೇಳಿದ್ದೇವೆ, ಈ ವರ್ಷ ಉಳಿದದ್ದು ಕೆಲಸ ಮಾಡುತ್ತೇವೆ. ಈ ವರ್ಷ 40 ಕಿ.ಮೀ. ಸೇರಿಸಬೇಕೆಂದು ನಾವು ಪ್ರಯತ್ನ ಮಾಡಿದೆವು, 40 ಲಕ್ಷ ರೂಪಾಯಿಯಲ್ಲಿ 2-3 ವರ್ಷದಲ್ಲಿ 40 ಕಿ.ಮೀ. ಪಕ್ಕಾ ರಸ್ತೆ ಮಾಡಿಸುತ್ತೇವೆಂದು ಹೇಳಿದೆವು. ಇವತ್ತು ಹಣದ ಪರಿಸ್ಥಿತಿ ಯಾವ ರೀತಿ ಇದೆ ಎಂದು...

ಶ್ರೀ ವಾಟಾಳ್ ನಾಗರಾಜ್ : ಬಂಡವಾಳ ಇಲ್ಲದ ಬಡಾಯಿ ಇದು ದುಡ್ಡು ಎಲ್ಲಿದೆ ಹೇಳಿ, ಸುಮ್ಮನೆ ಹೇಳುತ್ತೀರಿ ಅಷ್ಟು ಮಾಡುತ್ತೇವೆ ಇಷ್ಟು ಮಾಡುತ್ತೇವೆಂದು. ಹಣ ಇಲ್ಲ ಎಂದು ಹೇಳಿ, ಇಲ್ಲಿ ನಿಮ್ಮ ಸಹಾಯಕ್ಕೆ ಯಾರೂ ಬರುತ್ತಿಲ್ಲದಿರುವುದನ್ನು ನೋಡಿ ನನಗೆ ಚಿಂತನೆಯಾಗಿದೆ. ಯಾವ ಅಧಿಕಾರಿಗಳೂ ನಿಮಗೆ ಚೀಟಿಯನ್ನು ಕಳುಹಿಸುತ್ತಾ ಇಲ್ಲ. ನಿಮ್ಮ ಮುಖ್ಯ ಮಂತ್ರಿಗಳೂ ನಿಮ್ಮನ್ನು ನೋಡುತ್ತಾ ಇಲ್ಲ. ಆದಕ್ಕೇ ನಾನು ನಿಮಗೆ ಪ್ರಶ್ನೆ ಕೇಳುವುದಕ್ಕೆ ಹೋಗಿಲ್ಲ, ಪ್ರತಿಯೊಂದನ್ನೂ ಮಾಡುತ್ತೇನೆ

ಎಂದು ಹೇಳುತ್ತಿದ್ದೀರಿ. ದಯಮಾಡಿ ತಮ್ಮ ಹತ್ತಿರ ಹಣ ಎಷ್ಟು ಇದೆ ಅದರ ಬಗ್ಗೆ ಹೇಳಿ? ಒಬ್ಬರೂ ಈಗ ತಮ್ಮ ರಕ್ಷಣೆಗೆ ಬರುತ್ತಾ ಇಲ್ಲ.

ಅಧ್ಯಕ್ಷರು : ಈಗ ನಾನು ಮಂತ್ರಿಗಳ ಸಹಾಯಕ್ಕೆ ಹೋಗುತ್ತೇನೆ. ಸಾಕು ವಿಮ್ಮದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಎರಡು ನಿಮಿಷ ನನಗೆ ಮಾತನಾಡಲು ಅವಕಾಶ ಕೊಡಿ

ಅಧ್ಯಕ್ಷರು : ಇನ್ನೂ ಪ್ರಶ್ನೋತ್ತರ ವೇಳೆ ಪ್ರಾರಂಭ ಮಾಡಬೇಕಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಯಾವ ವಿಷಯದ ಬಗ್ಗೆಯೂ ನನಗೆ ಮಾತನಾಡುವುದಕ್ಕೆ ಅವಕಾಶ ಸಿಗಲಿಲ್ಲ, ಈಗ ಕ್ಲಾರಿಫಿಕೇಷನ್ ಕೇಳುವುದೂ ಬೇಡ ಎಂದರೆ ಬಿಡಿ.

ಅಧ್ಯಕ್ಷರು : ಆಯಿತು, ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಕಳೆದ ಒಂದು ವಾರದಿಂದ ಯಾವುದೇ ಬೇಡಿಕೆ ಮೇಲೆ ಕಾಲದ ಅಭಾವದಿಂದ ಮಾತನಾಡುವುದಕ್ಕೆ ಅವಕಾಶ ಸಿಗಲಿಲ್ಲ. ನಾನು ಒಬ್ಬ ಎಂಜಿನಿಯರ್ ಆಗಿ ಪಿಡಬ್ಲ್ಯೂಡಿ, ಇರಿಗೇಷನ್ ಪವರ್ ಬಗ್ಗೆ ಸಲಹೆ ಕೊಡಬೇಕೆಂದರೆ ಸಮಯ ಸಿಗಲಿಲ್ಲ, ಕ್ಲಾರಿಫಿಕೇಷನ್ ಮೂಲಕ ತಾವು ಮಾತನಾಡಲು ಅವಕಾಶ ಕೊಟ್ಟಿರುವುದಕ್ಕೆ ಧನ್ಯವಾದಗಳು.

ಶ್ರೀ ಎಸ್. ಬಂಗಾರಪ್ಪ : ತಾವು ಮೆಕ್ಯಾನಿಕಲ್ಲೋ, ಸಿವಿಲ್ಲೋ?

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಸಿವಿಲ್, ಎಲೆಕ್ಟ್ರಿಕಲ್, ಮೆಕಾನಿಕಲ್, ಎಲೆಕ್ಟ್ರಾನಿಕ್ಸ್ ನಾಲ್ಕನ್ನೂ ತೆಗೆದುಕೊಂಡಿದ್ದೇನೆ.

SRI AZEEX SAIT : Jack of all.

SRI P.G.R.SINDIA : I am master of Engineering . ಅದು ಬಿಡಿ. ಇವತ್ತು ರೋಡ್ಸ್ ಮೈಂಟೆನೆನ್ಸ್‌ಗೆ ಕೊಡತಕ್ಕ ಹಣ ಬಹಳ ಕಡಿಮೆ ಇದೆ. ಸುಪ್ರೀಮ್ ಕೋರ್ಟ್‌ನಲ್ಲಿ ಆರ್ಡರ್ ಪ್ರಕಾರ ಗ್ಯಾಂಗ್‌ಮೆನ್‌ಗಳ ಸಂಬಳ ಜಾಸ್ತಿ ಮಾಡಿರುವುದರಿಂದ ಕೊಡತಕ್ಕ ಹಣವೆಲ್ಲಾ ಗ್ಯಾಂಗ್‌ಮೆನ್‌ಗಳ ಸಂಬಳಕ್ಕೆ ಹೋಗುತ್ತದೆ. ಗುಂಡಿ ಮುಚ್ಚುವುದಕ್ಕೆ ಹಣ ಇಲ್ಲ. ಇವತ್ತು ರೋಡ್ ಮೇಂಟೆನೆನ್ಸ್ ಗ್ರಾಂಟ್‌ನ್ನು ಜಾಸ್ತಿ ಮಾಡುವುದಕ್ಕೆ ಆಗುತ್ತದೆಯೋ ಇಲ್ಲವೋ ಎನ್ನುವ ಬಗ್ಗೆ ನಿರ್ದಿಷ್ಟವಾದ ಉತ್ತರ ನನಗೆ ಬೇಕು. ಎರಡನೆಯದಾಗಿ ಆನ್ಯೂಯಲ್ ಮೈಟೆನೆನ್ಸ್ ವರ್ಕ್ಸ್‌ಗೆ ಏನು ಹಣವನ್ನು ಅಲಾಟ್ ಮಾಡುತ್ತೀರಿ, ಅದು ಖರ್ಚಾಗತಕ್ಕದ್ದು ಮಾರ್ಚಿ ತಿಂಗಳಲ್ಲಿ ಮಾತ್ರ ಏಕೆ? ಮಾರ್ಚ್ ತಿಂಗಳ 30 ಹಾಗೂ 31ರಂದು ಮಾತ್ರ ಎಂಜಿನಿಯರಿಂಗ್ ಆಫೀಸ್‌ಗಳು ರಾತ್ರಿ ಏಕೆ ಕೆಲಸ ಮಾಡುತ್ತವೆ? ಡಿಸೆಂಬರ್, ನವೆಂಬರ್. ಜನವರಿಯಲ್ಲಿ ಇದನ್ನು ಖರ್ಚು ಮಾಡುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳುವುದಕ್ಕಾಗುತ್ತದೆಯೇ? ನಾವು ಬಡ್ಜೆಟ್‌ನಲ್ಲಿ ಇಂತಿಂಥ ಬಾಬಿಗೆ ಎಂದು ಒಂದಿಷ್ಟು ಹಣವನ್ನು ಇಡುತ್ತೇವೆ. ಅದಕ್ಕೆ ಅಡ್ಮಿನಿಸ್ಟ್ರೇಷನ್ ಅಪ್ರೂವಲ್, ಟೆಕ್ನಿಕಲ್ ಸ್ಯಾಂಕ್ಷನ್, ಮತ್ತೊಂದು ಮಗದೊಂದು ಎಂದು ಹೇಳಿ ಡಿಸೆಂಬರ್ ತಿಂಗಳವರೆಗೆ ಹೋಗುತ್ತದೆ.

ಸ್ಟೀಲ್ ಇತರೆ ಮೆಟೀರಿಯಲ್ಸ್ ತೆಗೆದುಕೊಂಡು ಇಟ್ಟುಕೊಂಡರೂ ಕೆಲಸ ಪ್ರಾರಂಭವಾಗುವುದಿಲ್ಲ. ಸ್ಟೀಲ್ ಓವರ್ ವರ್ಕ್ಸ್ ಎಂದು ಹೇಳಿ ಮುಂದಿನ ವರ್ಷ ತೆಗೆದುಕೊಳ್ಳುತ್ತಾರೆ. ಮುಂದಿನ ವರ್ಷ ಹಣ ಖರ್ಚಾಗದಿದ್ದರೆ ಮತ್ತೆ ಎರಡು-ಮೂರು ವರ್ಷ ಮುಂದಕ್ಕೆ ಹೋಗುತ್ತದೆ. ಸಿಮೆಂಟ್, ಸ್ಟೀಲ್ ಎಲ್ಲಾ ವಸ್ತುಗಳು ಅಲ್ಲೇ ಬಿದ್ದಿರುತ್ತದೆ.. ಜಲ್ಲಿ ಅಲ್ಲಿಯೇ ಬಿದ್ದಿರುತ್ತದೆ. ಈ ಸಿಸ್ಟಮ್‌ನ್ನು ಚೇಂಜ್ ಮಾಡಭೇಕೆಂದು ನಾನು ಮೊದಲಿನಿಂದಲೂ ಹೇಳಿಕೊಂಡು ಬಂದಿದ್ದೇನೆ. ಅದಕ್ಕೋಸ್ಕರ ನಾನು ತಮಗೆ ಸಲಹೆ ಮಾಡುತ್ತಿದ್ದೇನೆ. ನಮ್ಮಲ್ಲಿ ಒಳ್ಳೆಯ ಇಂಜಿನಿಯರ್‌ಗಳು ಇದ್ದಾರೆ. ನಾಲ್ಕೈದು ಜನರ ಚೀಫ್ ಇಂಜಿನಿಯರ್‌ಗಳ ಒಂದು ಸಮಿತಿಯನ್ನು ಮಾಡಿ. ನಾವು ಸರ್ಕಾರದಿಂದ ಮೂರನೆಯ ಒಂದು ಭಾಗ ಬಜೆಟನ್ನು ಯಾವುದಕ್ಕೆ ಅಲಾಟ್ ಮಾಡುತ್ತೇವೆ ಅದು ಕಾಸ್ಟ್ ಆಫ್ ಎಸ್ಕಲೇಷನ್ ಜಾಸ್ತಿಯಾಗಿ 10 ಲಕ್ಷ ರೂಪಾಯಿಗಳಲ್ಲಿ ಆಗತಕ್ಕ ಕೆಲಸ ಒಂದು ಕೋಟಿ ರೂಪಾಯಿ ಆಗುತ್ತದೆ. ಅದಕ್ಕೋಸ್ಕರ ಐದಾರು ಜನ ಚೀಫ್ ಇಂಜಿನಿಯರ್‌ಗಳ ಒಂದು ಸಮಿತಿಯನ್ನು ಮಾಡಿ, ಹೈ ಪವರ್ ಕಮಿಟಿ ಎಂತಲೇ ಮಾಡಿ, ಅವರು ವರ್ಕಬಲ್ ಸಲ್ಯೂಷನ್ ಸಜೇಷನ್ ಕೊಡುವುದಕ್ಕೆ ಅನುಕೂಲವಾಗುತ್ತದೆ. ಒಂದು ಕಮಿಟಿಯನ್ನು ಮಾಡುವುದಕ್ಕೆ ಸಾಧ್ಯವೆ?

ಶ್ರೀ ಜೆ.ಹೆಚ್. ಅಶ್ವತ ರೆಡ್ಡಿ : ವಿರೋಧ ಪಕ್ಷದ ಉಪನಾಯಕರಾದ ಮಾನ್ಯ ಸಿಂಧ್ಯಾರವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಬಜೆಟ್ ಅಲೋಕೇಷನ್‌ನಲ್ಲಿ ಯಾವುದೇ ಕೆಲಸಕ್ಕೆ ರಸ್ತೆ ರಿಪೇರಿ ಮೆಂಟೇನೆನ್ಸ್ ಆಗಲಿ ಅದು ಯಾವುದೇ ಆಗಲಿ ಅದಕ್ಕೆ ಮೂರನೆಯ ಒಂದು ಭಾಗ ಕೊಡುತ್ತಾರೆ. ಆದರಿಂದ ಮುರ್ನಾಲ್ಕು ತಿಂಗಳು ಕೆಲಸ ನಡೆದು ಅದು ಮುಂದಿನ ವರ್ಷಕ್ಕೆ ಕ್ಯಾರಿಓವರ್ ಆಗುತ್ತದೆ. ಮೆಟೀರಿಯಲ್ ಹಾಳಾಗುತ್ತದೆ ಕೆಲಸ ಕೂಡ ಆಗುವುದಿಲ್ಲವೆನ್ನುವ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಇದು ಬಹಳ ಸೂಕ್ತವಾದ ಸಲಹೆ. ಹೈ ಪವರ್ ಕಮಿಟಿ ಮಾಡಿ ಆ ಕೆಲಸವನ್ನು ಒಂದೇ ವರ್ಷದಲ್ಲಿ ಮಾಡುವುದಕ್ಕೆ ಆಗುತ್ತದೆಯೇ ಎನ್ನುವುದನ್ನು ನೋಡಬೇಕು, ಕಾರಣ, ಬೇಡಿಕೆ ಜಾಸ್ತಿ ಇದೆ ಹಣದ ಮುಗ್ಗಟ್ಟು ಇದೆ. ಆದರೂ ಕೂಡ ಅವರ ಸಲಹೆಯನ್ನು ಪರಿಶೀಲನೆ ಮಾಡಿ ಒಂದು ಸೂಕ್ತವಾದ ಹೈ ಪವರ್ ಕಮಿಟಿಯನ್ನು ಮಾಡಿ ಒಂದೇ ವರ್ಷದಲ್ಲಿ ಕೆಲಸ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಅದು ಆಗದಿದ್ದರೆ ಆಗುವುದಿಲ್ಲವೆಂದು ಹೇಳೋಣ. ತಮ್ಮ ಸಲಹೆಯನ್ನು ಬಹಳ ಸಂತೋಷದಿಂದ ಸ್ವೀಕರಿಸಿ ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

+ ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಸದನದ ಒಪ್ಪಿಗೆಗಾಗಿ ಮಂಡಿಸಿರತಕ್ಕ ಹಲವಾರು ಬೇಡಿಕೆಗಳ ಮಧ್ಯೆ ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ಮೆಂಟೇನೆನ್ಸ್ ಅಂಡ್ ಡಿಸ್ಟ್ರಿಬ್ಯುಷನ್ ಅದಕ್ಕೆ ಸಂಬಂಧಪಟ್ಟಿರತಕ್ಕ ಭೇಡಿಕೆಗಳನ್ನು ಕೂಡ ಸದನದ ಮುಂದೆ ಒಪ್ಪಿಗೆಗಾಗಿ ಇವೆ. ನಾನು ತಮ್ಮ ಮುಖಾಂತರ ಈ ಸದನ ಅದಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಅದಕ್ಕೆ ಕಾರಣಗಳು ಎರಡು ಆಧಾರದ ಮೇಲೆ. ಒಂದು ವಿದ್ಯುಚ್ಛಕ್ತಿಗೆ ಸಂಬಂಧಪಟ್ಟಂತೆ, ಎರಡು ಭಾಗಗಳನ್ನು ಮಾಡಿಕೊಂಡಿದ್ದೇವೆ. ನಮ್ಮ ರಾಷ್ಟ್ರದಲ್ಲಿ ಅನೇಕ ರಾಜ್ಯಗಳಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ಅದರ ಮೆಂಟೇನೆನ್ಸ್ ಅಂಡ್ ಡಿಸ್ಟ್ರಿಬ್ಯುಷನ್ ಅದಕ್ಕೆ ಒಂದೊಂದೇ ಬೋರ್ಡ್ ಕೆಲವರು ಇಟ್ಟುಕೊಂಡಿದ್ದಾರೆ. ಕಡಿಮೆ ರಾಜ್ಯಗಳಲ್ಲಿ ನಾನು ತಿಳಿದ ಹಾಗೆ ವಿದ್ಯುತ್ ಉತ್ಪಾದನೆಗೆ ಒಂದು ಸಂಸ್ಥೆಯನ್ನು ಇಟ್ಟಿದ್ದರೆ, ಮೆಂಟೇನೆನ್ಸ್ ಅಂಡ್ ಡಿಸ್ಟ್ರಿಬ್ಯೂಷನ್‌ಗೆ ಎಲೆಕ್ಟ್ರಿಸಿಟಿ ಬೋರ್ಡ್ ಎಂದು ಬೇರೆ ಬೇರೆ ಇಟ್ಟಿರತಕ್ಕದ್ದನ್ನು ನಾವು ಕಾಣುತ್ತೇವೆ. ಕರ್ನಾಟಕ ರಾಜ್ಯದಲ್ಲಿ ನಮ್ಮರಾಜ್ಯಕ್ಕೆ ಸೀಮಿತಗೊಳಿಸಿ ಹೇಳುವುದಾದರೆ, ನಾವು ಕರ್ನಾಟಕ ಪವರ್ ಕಾರ್ಪೋರೇಷನ್ ಅನ್ನು ವಿದ್ಯುತ್ ಉತ್ಪಾದನೆಗೆ

ಸಂಬಂಧಪಟ್ಟ ಹಾಗೆ ಒಂದು ಕಾರ್ಪೋರೇಷನ್ ನಾವು ಹೊಂದಿದ್ದೇವೆ. ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್ ಏನಿದೆ ಅದು ಮೆಂಟೇನೆನ್ಸ್ಅಂಡ್ ಡಿಸ್ಟ್ರಿಬ್ಯೂಷನ್ ಇದಕ್ಕೆ ಸಂಬಂಧಪಟ್ಟ ಹಾಗೆ ಇಟ್ಟುಕೊಂಡಿದ್ದೇವೆ. ಕಾರ್ಯವ್ಯಾಪ್ತಿ ವಿದ್ಯುಚ್ಛಕ್ತಿ ಉತ್ಪಾದನೆಗೆ ಪವರ್ ಕಾರ್ಪೋರೇಷನ್ ಮೀಸಲಾಗಿದ್ದರೆ, ಮೆಂಟೇನೆನ್ಸ್ ಅಂಡ್ ಡಿಸ್ಟ್ರಿಬ್ಯೂಷನ್‌ಗೆ ಎಲೆಕ್ಟ್ರಿಸಿಟಿ ಬೋರ್ಡ್ ಇದೆ. ವಿದ್ಯುಚ್ಛಕ್ತಿಗೆ ಸಂಬಂಧಪಟ್ಟಂತೆ.

ಅದರಲ್ಲಿ ಮೊದಲು ಮಾನ್ಯ ವಿರೋಧಪಕ್ಷದ ನಾಯಕರು, ಅನೇಕ ಜನ ಮಾನ್ಯ ಸದಸ್ಯರುಗಳು, ಶ್ರೀಮತಿ ಮೋಟಮ್ಮನವರು, ಬಂಟ್ವಾಳ ಶಾಸಕರು ಮತ್ತು ಅನೇಕ ಜನ ಶಾಸಕ ಮಿತ್ರರು ಮಾತನಾಡಿಸಿದ್ದಾರೆ. ಈ ಸದನದಲ್ಲಿ, ಈ ವಿಷಯ ಪದೇಪದೇ ಚರ್ಚೆಗೆ ಬಂದಿದೆ. ವಿದ್ಯುಚ್ಛಕ್ತಿ ಉತ್ಪಾದನೆಗೆ ಹೆಚ್ಚಿನ ಒತ್ತನ್ನು ಕೊಡಬೇಕು, ಗಮನವನ್ನು ಕೊಡಬೇಕು, ಹಣವನ್ನು ಹೆಚ್ಚಿಗೆ ಕೊಡಿಸಬೇಕು ಎನ್ನತಕ್ಕಂಥ ಒತ್ತಡ ಸಹಜವಾಗಿ ಪದೇಪದೇ ಬಂದಿದೆ. ಎಲ್ಲಾ ಮಾನ್ಯ ಸದಸ್ಯರ ಈ ಅಭಿಪ್ರಾಯವನ್ನು ಸರ್ಕಾರ ಸದಾಕಾಲ ಸ್ವೀಕರಿಸುತ್ತಲೇ ಬಂದಿದೆ. ಆದರೆ, ನಾವು ಒಂದನ್ನು ಹೇಳಿಕೊಂಡು ಬಂದಿದ್ದೇವೆ. ಏನೆಂದರೆ, ಹಣಕಾಸಿನ ಆದ್ಯತೆಯನ್ನು ಅನುಸರಿಸಿ, ನಾವು ವಿದ್ಯುಚ್ಛಕ್ತಿ ಉತ್ಪಾದನೆಗೆ ಹೆಚ್ಚಿನ ಒತ್ತನ್ನು ಕೊಡುತ್ತಾ ಹೋಗುತ್ತೇವೆ, ಹೋಗುತ್ತೇವೆ ಎನ್ನುವ ಮಾತನ್ನು ಆಡಿದ್ದೇವೆ. ಆದರೆ, ಕಳೆದ ಒಂದು ವರ್ಷದಿಂದ ಇತ್ತೀಚೆಗೆ, ಈ ನೀತಿಯನ್ನು ಬದಲಾವಣೆ ಮಾಡತಕ್ಕ ವಿಚಾರದಲ್ಲಿ, ರಾಜ್ಯಸರ್ಕಾರದವರು ತೀರ್ಮಾನ ಮಾಡಿದ್ದೇವೆ. ಅದಕ್ಕನುಗುಣವಾಗಿ, ಪವರ್ ಕಾರ್ಪೋರೇಷನ್ ಬೋರ್ಡ್‌ನಲ್ಲೂ ಕೂಡ ಕೆಲವು ನಿರ್ಣಯಗಳನ್ನು ಮಾಡಿದ್ದೇವೆ. ವಿದ್ಯುಚ್ಛಕ್ತಿ ಉತ್ಪಾದನೆಗೆ ಸಂಬಂಧಪಟ್ಟಂತೆ, ಸರ್ಕಾರಿ ಸ್ವಾಮ್ಯದಲ್ಲಿರತಕ್ಕ, ನಮ್ಮ ಕಾರ್ಪೋರೇಷನ್ ಮುಖಾಂತರ, ಅಂದರೆ, It is a corporation formed under the companies' Law.

ಅದರ ಮುಖಾಂತರ ಬಂಡವಾಳವನ್ನು ಹೂಡಿ, ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವ ಪ್ರಯತ್ನಕ್ಕೆ ಹೋಗುತ್ತಿದ್ದೇವೆ. ನಮಗೆ ಗೊತ್ತಿದೆ, ನಾವು ಎಷ್ಟೇ ಸರ್ಕಾರಿ ಹಣವನ್ನು ತೆಗೆದುಕೊಂಡು ಹೋಗಿ ಹಾಕಿದರೂ ಕೂಡ, ಅದು ಹೈಡಲ್ ಎಲೆಕ್ಟ್ರಿಕ್ ಜನರೇಷನ್ ಇರಬಹುದು. ಪವರ್ ಜನರೇಷನ್ ಇರಬಹುದು, ಥರ್ಮಲ್ ಪವರ್ ಜನರೇಷನ್ ಇರಬಹುದು, ಇತ್ತೀಚೆಗೆ ಯಲಹಂಕದಲ್ಲಿರತಕ್ಕ ಡೀಸೆಲ್ ಪವರ್ ಜನರೇಷನ್ ಇರಬಹುದು ಅಥವಾ atomic power generation in Kaiga, Karwar District ಅದೇ ಇರಬಹುದು. ಈ ರೀತಿಯಾಗಿರತಕ್ಕ ವಿಚಾರದಲ್ಲಿ ಹಲವಾರು ಎಡರುತೊಡರುಗಳನ್ನು ಎದುರಿಸುತ್ತಿದ್ದೇವೆ. ಆದರೆ, ಈ ವಿದ್ಯುಚ್ಛಕ್ತಿ ಉತ್ಪಾದನೆಯ ನೀತಿ ಮತ್ತು ರೀತಿ ಏನಿದೆ ಇದು ಸಾಲದು ಎನ್ನತಕ್ಕಂಥ ಭಾವನೆ ನಮಗೆಲ್ಲರಿಗೂ ಗೊತ್ತಿದೆ. ಏಕೆಂದರೆ, ವಿದ್ಯುಚ್ಛಕ್ತಿ ಬೇಡಿಕೆ ಕೈಗಾರಿಕಾ ವಲಯ, ಆಮೇಲೆ ಮನೆಯಲ್ಲಿ ಉಪಯೋಗ ಮಾಡತಕ್ಕ ವಿದ್ಯುಚ್ಛಕ್ತಿ, ಅದು ಮಂಡಲ್ ಪಂಚಾಯಿತಿ ಇರಬಹುದು, ರೈತರ ಪಂಪುಸೆಟ್ಟುಗಳು ಇತ್ಯಾದಿ, ಇತ್ಯಾದಿ. ಈ ಬೇಡಿಕೆಗಳನ್ನು ನಾವು ನೋಡಿದಾಗ, ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈಗ ವಿದ್ಯುಚ್ಛಕ್ತಿ ಉತ್ಪಾದನೆಯನ್ನು ನಾವು ಎಷ್ಟು ಮಾಡುತ್ತಿದ್ದೇವೆ. ಈಗಾಗಲೇ ಎಷ್ಟು ಇದೆ, ವ್ಯತ್ಯಾಸ - ಎಷ್ಟು ಬರುತ್ತದೆ ಎನ್ನತಕ್ಕಂಥಾದ್ದು ಮತ್ತು ನಾವು ಈ ವ್ಯತ್ಯಾಸವನ್ನು ಸರಿಯಾಗಿಸುವುದಕ್ಕೆ ಏನು ಕಾರ್ಯಕ್ರಮ ಹಾಕಿದರೆ ಒಳ್ಳೆಯದು ಎನ್ನತಕ್ಕಂತಾದ್ದು ನಾವು ಒಂದು ನೀತಿಯನ್ನು ಸದನದಲ್ಲಿ ಪ್ರಕಟಣೆ ಮಾಡಿದ್ದೇವೆ. ಇದೇ ನೀತಿಯನ್ನ ಅನುಸರಿಸಿ, ಪವರ್ ಕಾರ್ಪೋರೇಷನ್‌ನಲ್ಲೂ ಕೂಡ, of which I am the Chairman, ಅಲ್ಲಿ ತೀರ್ಮಾನ ಮಾಡಿದ್ದೇವೆ. ಖಾಸಗಿ ವಲಯದವರೂ ಬಂದು, ವಿದ್ಯುಚ್ಛಕ್ತಿ ಉತ್ಪಾದನೆಗೆ [illegible]

ಈಗಾಗಲೇ ಪ್ರಸ್ತಾಪ ಮಾಡಿದ್ದೇವೆ. ಈ ವಿದ್ಯುಚ್ಛಕ್ತಿ ಉತ್ಪಾದನೆಗೆ, ಸರ್ಕಾರಿ ಮತ್ತು ಖಾಸಗಿ ಎರಡರಲ್ಲೂ ತೆಗೆದುಕೊಂಡು ಹೋಗದಿದ್ದರೆ, ಬೇಡಿಕೆ, ಕೈಗಾರಿಕೆ, ರೈತಾಪಿವರ್ಗ ಇತ್ಯಾದಿ, ಇತ್ಯಾದಿ ವಲಯಗಳಿಗೆ ಎಷ್ಟು ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಬೇಕೋ ಅಷ್ಟು ನಮ್ಮಿಂದ ಮಾಡುವುದಕ್ಕಾಗುವುದಿಲ್ಲ ಎನ್ನತಕ್ಕ ತೀರ್ಮಾನಕ್ಕೆ ಈಗಾಗಲೇ ಬಂದಿದ್ದೇವೆ.

ಗ್ರಾಮೀಣ ಪ್ರದೇಶ. ಪಟ್ಟಣ ಮತ್ತು ನಗರ ಪ್ರದೇಶಗಳು. ಕೈಗಾರಿಕೆಗೆ ಸಂಬಂಧಪಟ್ಟಂತೆ ಒಂದು ಮಾತನ್ನು ಹೇಳುವದಾಗಿದ್ದರೆ, ಸುಮಾರು ದಶಕದ ಮುಂಚೆ ಎಷ್ಟು ಕೈಗಾರಿಕೆ ಬೆಳವಣಿಗೆಯಾಗಿತ್ತೋ, ಅಷ್ಟು ಅನಂತರ ಬೆಳವಣಿಗೆಯಾಗಿಲ್ಲ. ಅಂಕಿಅಂಶಗಳನ್ನು ನೋಡಿದರೆ ತಮಗೆಲ್ಲರಿಗೂ ವೇದ್ಯವಾಗತಕ್ಕ ವಿಚಾರ. ಇತ್ತೀಚೆಗೆ, the liberalised policy announced by the Government of India in respect of starting of few industries, ಇದೂ ಕೂಡ ಹೆಚ್ಚಿಗೆ ರಫ್ತು ವಲಯಕ್ಕೆ ಹೆಚ್ಚು ಒತ್ತನ್ನು ಕೊಡತಕ್ಕದ್ದು ಅಂದರೆ, ಎಕ್ಸ್‌ಪೋರ್ಟ್‌ಗೆ ಗಮನಕೊಡತಕ್ಕ ವಲಯ, ನಾವು ಇದನ್ನು ಮಾಡಬೇಕೆಂದರೂ, ನಮಗೆ ವಿದ್ಯುಚ್ಛಕ್ತಿ ಬೇಕು. ನಾವು ಇದಕ್ಕಾಗಿಯೇ ಇಂಡಿಯಾ ಸರ್ಕಾರಕ್ಕೆ ಹೇಳಿದ್ದೇವೆ. ಖಾಸಗೀ ವಲಯದವರಿಗೂ ಬಂಡವಾಳ ಹೂಡುವುದಕ್ಕೆ ಅವಕಾಶ ಇರುವುದು, ಅಂದರೆ, ಅವರು ನಮ್ಮ ದೇಶದವರು ಇರಬಹುದು, ಎನ್.ಆರ್.ಐ ಇರಬಹುದು, ಯಾವುದೇ ಹಣ ಇರಬಹುದು, ಯಾವುದೇ ಬ್ಯಾಂಕ್ ಇರಬಹುದು. ಹಣ ತೊಡಗಿಸುವುದಕ್ಕೆ ಬಂದರೆ, ಮುಕ್ತ ಅವಕಾಶ ಇರಲಿ, ಇದಕ್ಕೆ ದಾರಿ ಬೇಕು ಎನ್ನುವಂಥಾದ್ದು. ಪವರ್ ಕಾರ್ಪೋರೇಷನ್‌ನಿಂದ ಕೆಲವು ಅರ್ಜಿಗಳನ್ನು ಕರೆದೆವು. ಪವರ್ ಕಾರ್ಪೋರೇಷನ್‌ಗೆ ಕೆಲವು ಅರ್ಜಿಗಳು ಬಂದಿವೆ. ಒಂದು ಏನೆಂದರೆ, 1948ರ ಸೆಂಟ್ರಲ್ ಪವರ್ ಆಕ್ಟ್ ಏನಿದೆ, ಇದನ್ನು ಅಮೆಂಡ್‌ಮೆಂಟ್ ಮಾಡದಿದ್ದರೆ, ಯಾವುದೇ ರಾಜ್ಯಸರ್ಕಾರಕ್ಕೂ ಈ ಹಕ್ಕು ಬರುವುದಿಲ್ಲ, ಪ್ರೈವೇಟ್ ಸೆಕ್ಟಾರ್‌ನವರು ಬಂದು ಹಣವನ್ನು ತೊಡಗಿಸುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಇವತ್ತಿನ ಪತ್ರಿಕೆ ನೋಡಿದ್ದೇವೆ, ಲೋಕಸಭೆಯಲ್ಲೂ ಅಮೆಂಡ್‌ಮೆಂಟ್ ತಂದಿದ್ದಾರೆ. 1948ರ ಪವರ್ ಆಕ್ಟ್‌ಗೆ ಅಮೆಂಡ್‌ಮೆಂಟ್ ತಂದಿದ್ದಾರೆ.

It is badly required by all the States in he whole of the country. ಇದು ಅರ್ಜೆಂಟಾಗಿ ಆಗಬೇಕು. ರಾಜ್ಯಸಭೆಯಲ್ಲೂ ಇವತ್ತು ಹೋಗಿರಬೇಕು. ಅಲ್ಲಿಯೂ ಪಾಸ್ ಆಗುತ್ತದೆ. ಎಂದು ಇಟ್ಟುಕೊಳ್ಳೋಣ. ನಮಗೆ, ಕೇಂದ್ರದ ಈ ಕಾನೂನಿಗೆ ತಿದ್ದುಪಡಿ ತಂದಮೇಲೆ ಪ್ರತಿ ರಾಜ್ಯಸರ್ಕಾರದವರೂ ಕೂಡ, ಖಾಸಗೀ ವಲಯದವರು ಬಂದು ಹಣವನ್ನು ತೊಡಗಿಸಿ, ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುವುದಕ್ಕೆ ಗಮನಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಹಕ್ಕು, ರಹದಾರಿ ಆಯಾ ರಾಜ್ಯಸರ್ಕಾರಕ್ಕೆ ಬರುತ್ತದೆ. ಇದೇ ನೀತಿಗೋಸ್ಕರ ನಾವು ಹೆಚ್ಚಿನ ಒತ್ತಡವನ್ನು ಸೆಂಟ್ರಲ್ ಪವರ್ ಮಿನಿಸ್ಟರ್ಸ್ ಸಮ್ಮೇಳನದಲ್ಲಿ, ಮುಖ್ಯಮಂತ್ರಿಗಳ ಸಭೆಯಲ್ಲಿ ಮಾತನಾಡತಕ್ಕಸಂದರ್ಭ ಬಂದಾಗ, ಮತ್ತು ಖಾಸಗಿಯಾಗಿ ಸಚಿವರ ಹತ್ತಿರ ಮತ್ತು ಪ್ರಧಾನ ಮಂತ್ರಿಯವರ ಹತ್ತಿರ ಪದೇಪದೇ ಈ ಒತ್ತಡವನ್ನು ತಂದಿದ್ದೇವೆ. ತಮ್ಮ ಸರ್ಕಾರ ಇದ್ದಾಗಲೂ ಇದು ನಡೆದುಕೊಂಡು ಬಂದಿದೆ. Our luck. That is now passed in the Lok Sabha yesterday.

ರಾಜ್ಯಸಭೆಯಲ್ಲೂ ಕೂಡ ಪಾಸ್ ಆಗುತ್ತದೆ, ಬಹಳ ಸಂತೋಷದ ವಿಚಾರ. ಇದಾದಮೇಲೆ ನಿನ್ನೆ ಇಲ್ಲಿಯ ಚೇಂಬರ್ ಆಫ್ ಕಾಮರ್ಸ್‌ನವರು ಬಂದಿದ್ದರು.

ಹಣವನ್ನು ತೊಡಗಿಸುತ್ತೇವೆ. ವಿದ್ಯುಚ್ಛಕ್ತಿ ಉತ್ಪಾದನೆಗೆ ನೆರವಾಗುತ್ತೇವೆಂದು ಹೇಳಿದರು. ಆದರೆ ಈ ಪವರ್ ಆಕ್ಟ್ ಅಮೆಂಡ್‌ಮೆಂಟ್ ಆಗದೇ ನಮಗೆ ಅವಕಾಶ ಬರುವುದಿಲ್ಲವೆಂದು ಹೇಳಿದಮೇಲೆ, ಹಾಗೆಯೇ ನಿಲ್ಲಿಸಿದರು, ಮತ್ತೆ ಲೋಕಸಭೆಯಲ್ಲಿ ಇಂಟ್ರಡ್ಯೂಸ್ ಆಗಿದೆ, ಇನ್ನೇನು ಪಾಸ್ ಆಗುತ್ತದೆಂದು ಅವರೂ ಕೂಡ ಹೇಳಿದರು. That is what exactly we went immediately. ಇದು ಆದರೆ, ನಮಗೆ ಹಣವನ್ನು ತೊಡಗಿಸುವುದಕ್ಕೆ ಅನುಕೂಲವಾಗುತ್ತದೆ. ಇದಕ್ಕೆ ದಾರಿಯಾಗುತ್ತದೆ ಎಂದು ಸೂಕ್ಷ್ಮವಾಗಿ ಈ ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಈ ಕಾನೂನು ಈಗ ಆಗುತ್ತಿದೆ, ಈ ಸಂದರ್ಭದಲ್ಲಿ ಒಂದೇ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ವರ್ಷ ಮಾನ್‌ಸೂನ್ ಪರವಾಗಿಲ್ಲ, ಸುಮಾರಾಗಿ ಎಲ್ಲಾ ಜಲವಿದ್ಯುತ್ ಯೋಜನೆಗಳು ತುಂಬಿವೆ, ಕಾಳಿ-ಸೂಪಾ ಒಂದು ಬಿಟ್ಟು. ಅದೂ ಕೂಡ 20-25 ಪರ್ಸೆಂಟ್ ಕೊರತೆ ಎನ್ನುವುದು ನಮ್ಮ ಭಾವನೆ. ಶೇಕಡ 75-80 ಪರ್ಸೆಂಟ್ ತುಂಬಿರತಕ್ಕ ವರದಿ ನಮ್ಮ ಹತ್ತಿರ ಇದೆ. ಉಳಿದಿರತಕ್ಕ ಜಲವಿದ್ಯುತ್ ಯೋಜನೆಗಳು ತುಂಬಿವೆ. ಯಾವ ಯಾವ ಜಲವಿದ್ಯುತ್ ಯೋಜನೆಗಳು ಇವೆ, ಅವೆಲ್ಲವೂ ತುಂಬಿಕೊಂಡಿವೆ. ಇವೆಲ್ಲವೂ ವಿದ್ಯುಚ್ಛಕ್ತಿಯನ್ನು ಶಕ್ತಿಮೀರಿ ಉತ್ಪಾದನೆ ಮಾಡಿ ಕೊಡಲು, ಈ ವರ್ಷ ದೇವರ ದಯೆಯಿಂದ, ಸಂಪೂರ್ಣವಾದ ಸರ್ವಶಕ್ತಿ ನಮಗೆ ಬಂದಿದೆ.

ಈಗ ತಮ್ಮ ಕ್ಷೇತ್ರ ಹಾಗೂ ಸ್ವಾಮಿರಾವ್ ಕ್ಷೇತ್ರದ್ದೇ ತೆಗೆದುಕೊಂಡರೆ, ಉದಾಹರಣೆಗೆ ವಾರಾಹಿ ಪ್ರಾಜೆಕ್ಟ್, Sharavathi Hydro-Electric Project, ಬಹಳ ಸಹಾಯ ಈಗಾಗಲೇ ಮಾಡಿದೆ. Sharavathi Tail Raise Project ಇದು ತುಂಬಾ ಉಪಯುಕ್ತ ಆಗಿದೆ. ಮಾನ್ಯ ವಿರೋಧಪಕ್ಷದ ನಾಯಕರು ಬಹಳ ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಜಲವಿದ್ಯತ್ ಯೋಜನೆಗಳು ತುಂಬಿರುವುದರಿಂದ, ನೀರಿನ ಗೇಟ್ ಓಪನ್ ಮಾಡಿದ್ದೇವೆ. ಏಕೆಂದರೆ, ನೀರನ್ನು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ, ಇದರಿಂದ ಅಪಾಯವೂ ಹೌದು, ಈ ನೀರನ್ನು ಉಪಯೋಗ ಮಾಡುವುದಕ್ಕೆ ಯೋಜನೆ ಸಿದ್ಧವಾಗಿರಬೇಕು ಎಂಬುದೇ ನಮ್ಮ ಒಟ್ಟಾರೆ ಅಭಿಪ್ರಾಯ. ನಾನು ಸಂಪೂರ್ಣವಾಗಿ ತಮ್ಮ ಅಭಿಪ್ರಾಯವನ್ನು ಅನುಮೋದನೆ ಮಾಡುತ್ತೇನೆ. ಶರಾವತಿ ಟೇಲ್‌ರೇಸ್ ಪ್ರಾಜೆಕ್ಟ್ ಏನಿದೆ, ಇದರ ಬಗ್ಗೆ ಸ್ವಲ್ಪ ತಕರಾರು ಬಂತು. ಹೈಕೋರ್ಟಿನಲ್ಲಿ ಜಡ್ಜಮೆಂಟ್ ಬರೆದುಬಿಟ್ಟರು, ಯಾರೋ, ಪರಿಸರ ತಜ್ಞರು ಕೇಸ್ ಹಾಕಿದರು. ಸೆಂಟ್ರಲ್ ಗವರ್ನಮೆಂಟ್‌ನವರು ಹೋಗಿ ಮತ್ತೊಂದು ಸಾರಿ ನೋಡಿ ಎಂದು ಹೇಳಿದರು ಸೆಂಟ್ರಲೇ ಗವರ್ನಮೆಂಟ್ ನೋಡಿ ಒಪ್ಪಿಗೆಯಾಗಿ ಬಂದಿರತಕ್ಕಂಥಾದ್ದು. ನಾವು ಸುಪ್ರೀಂಕೋರ್ಟಿಗೆ ಹೋಗಿದ್ದೇವೆ. ನಮ್ಮ ಪ್ರಾಜೆಕ್ಟ್ ಕೆಲಸ ಮುಂದುವರಿಸುವುದಕ್ಕೆ, ಸುಪ್ರೀಂಕೋರ್ಟಿನವರು ಅನುವು ಮಾಡಿಕೊಟ್ಟಿದ್ದಾರೆ.

ಆದರೆ, ಮಳೆಗಾಲ ಕೆಲಸಮಾಡುವುದಕ್ಕೆ ಬರುವುದಿಲ್ಲ, ಏಕೆಂದರೆ ನೀರು ತುಂಬಿರುತ್ತದೆ. ಈಗಾಗಲೇ ಕೆಲವು ಕೋಟಿ ರೂಪಾಯಿಗಳ ಹಣವನ್ನು ಶರಾವತಿ ಟೇಲ್‌ರೇಸ್‌ಗಾಗಿ ಖರ್ಚುಮಾಡಿದ್ದೇವೆ. ನಾನು ಆ ಎಲ್ಲಾ ವಿವರಗಳಿಗೆ ಹೋಗುವುದಿಲ್ಲ, ಏಕೆಂದರೆ, ಕಾಲದ ಅಭಾವದಿಂದ ಸೂಕ್ಷ್ಮವಾಗಿ ಹೇಳಿದ್ದೇನೆ. ಇದರ ಕಾರ್ಯಕ್ರಮವನ್ನು ಮುಂದುವರಿಸುತ್ತೇವೆ. ಈ ವಿಚಾರದಲ್ಲಿ ಮಧ್ಯೆ ಸಿಕ್ಕಿದ್ದೇವೆ. ಒಂದು ಪ್ರಕೃತಿ ಹಾಳಾಗಬಾರದು, ಪರಿಸರ ಹಾಳಾಗಬಾರದು, ಎಕಾಲಜಿ ಹಾಳಾಗಬಾರದು, ಆದರೆ, ಈ ಯೋಜನೆಗಳು ಕೂಡ ಬರಬೇಕು. ನಾವು ಈ ಯೋಜನೆ ಮಾಡಬೇಕಾದರೂ ಕೆಲವು ಭಾಗಗಳು ಮುಳುಗಡೆಯಾಗುತ್ತವೆ, ಇದು ಅನಿವಾರ್ಯ. ಯಾವುದೇ ರಾಜ್ಯದಲ್ಲೂ ಕೂಡ ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವಾಗ ...

ಆದರೆ, ಬಹುಭಾಗ ಮುಳುಗಡೆ ಮಾಡಿ, ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಹೋದರೆ ಅನ್ಯಾಯವಾಗುತ್ತದೆ, ಇದಕ್ಕೆ ಅವಕಾಶ ಕೊಡಬಾರದು, ಉದಾಹರಣೆಗೆ ಬೇಡ್ತಿ ಯೋಜನೆ ಬೇಡ್ತಿ ಯೋಜನೆ, ಇದು ಕ್ಲಿಯರೆನ್ಸ್ ಫ್ರಮ ಗವರ್ನಮೆಂಟ್ ಆಫ್ ಇಂಡಿಯಾ, ಈಗಾಗಲೇ ರೆಡಿಯಾಗಿರತಕ್ಕ ಯೋಜನೆ. ಹಲವಾರು ಕಾರಣಗಳಿಂದ ಪರಿಸರ ತಜ್ಞರು ತಕರಾರು ಮಾಡಿದ್ದಾರೆ ಎನ್ನುವ ಕಾರಣದಿಂದ, ಕಮಿಟಿಗಳು, ಅವುಗಳ ಮೇಲೆ ಮತ್ತೊಂದು ಕಮಿಟಿ, ಟೆಕ್ನಿಕಲ್ ಕಮಿಟಿ, ಇವೆಲ್ಲಾ ಆಗಿ, ಆಗಿ, ಅವರ ಅಭಿಪ್ರಾಯ ಬಂದು, ಬಂದು ಆ ಕಡೆ, ಈ ಕಡೆ ಎನ್ನತಕ್ಕಂಥ ವಿಚಾರದಲ್ಲಿ ಅದು ಕುಳಿತುಕೊಂಡಿದೆ.

4.15 ಪಿ.ಎಂ.

ಕೊನೆಯಪಕ್ಷ ಕ್ಲಿಯರ್ ಆಗಿರತಕ್ಕಂಥ ಯೋಜನೆಯನ್ನಾದರೂ ನಾವು ಮಾಡದಿದ್ದರೆ ವಿಧ್ಯುಚಕ್ತಿ ಉತ್ಪಾದನೆ ಮಾಡಬೇಕು ಮಾಡಬೇಕು ಎಂಬ ಪ್ರಶ್ನೆಗೆ ಉತ್ತರ ಎಲ್ಲಿಂದ ಸಿಗುವುದಕ್ಕೆ ಸಾಧ್ಯವಾಗುತ್ತದೆ. ನಾವು ಏನು ಹೇಳುತ್ತೇವೆ ಗೌರ್ನಮೆಂಟ್ ಆಫ್ ಇಂಡಿಯಾದಲ್ಲಿ ಯೋಜನೆಗಳು ಪೆಂಡಿಗ್ ಇವೆ ಕ್ಲಿಯರೆನ್ಸ್ ಸಿಕ್ಕಿಲ್ಲ ಕ್ಲಿಯರೆನ್ಸ್ ಕೊಡಬೇಕೆಂಬ ಒತ್ತಡವನ್ನು ಒಂದು ಕಡೆ ಮಾಡುತ್ತೇವೆ ಮತ್ತೊಂದು ಕಡೆ ಕ್ಲಿಯರ್ ಆಗಿರುವುದನ್ನು ತೆಗೆದುಕೊಳ್ಳುತ್ತಿಲ್ಲ ಇದಕ್ಕೆ the out standing example is Bedthi itself. ಕ್ಲಿಯರ್ ‌- ಆಗಿರತಕ್ಕ ಇಂತಹ ಯೋಜನೆಗಳನ್ನು ನಾವು ತೆಗೆದುಕೊಳ್ಳುವಂತಹ ತೀರ್ಮಾನವನ್ನು ಮಾಡದಿದ್ದರೆ ವಿಧ್ಯುಚಕ್ತಿಯ ಒಟ್ಟಾರೆ ಉತ್ಪಾದನೆ ಇಷ್ಟಾಗಬೇಕು ಎಂಬ ಪ್ರಶ್ನೆಗೆ ಉತ್ತರ ಬಲುದೂರ ಉಳಿಯುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ ಇದೇ ಸಂದರ್ಭದಲ್ಲಿ ಸರಪಾಡಿ ಯೋಜನೆಯ ಬಗ್ಗೆ ಬಂಟವಾಳದ ಶಾಸಕ ಮಿತ್ರರು ಮಾತನಾಡಿದ್ದಾರೆ ಶಂಭೂರು ಎಂಬ ಸ್ಥಳ ಕಾಲೋನಿ ಮಾಡತಕ್ಕ ಸ್ಥಳ ಇದ್ಯಾದಿ ವಿಚಾರ ಹೇಳಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಂಡು ತೀರ್ಮಾನ ಮಾಡೋಣ ಎಂದು ಇದರ ಬಗ್ಗೆ ಒಂದು ಮಾತನ್ನು ಪ್ರಸ್ತಾಪ ಮಾಡುತ್ತೇನೆ. ಇನ್ನು ಇಲ್ಲಿರತಕ್ಕಂಥ ಸಣ್ಣ ಪುಟ್ಟ ಜಲವಿದ್ಯುತ್ ಯೋಜನೆಗಳು ಮಾಡಾಯಿ ಡೈವರ್ಷನ್ ಸ್ಕೀಮ್ ಮಾಡಬೇಕು ಇವತ್ತು ನೀರಾವರಿಗೆ ಪ್ರಾಮುಖ್ಯತೆ ಕೊಡೋಣ ಕುಡಿಯುವ ನೀರು ಹುಬ್ಬಳ್ಳಿ ಧಾರವಾಡ ಕಾರ್ಪೋರೇಷನ್ ಏರಿಯಾಕ್ಕೆ ಬರಬೇಕಾಗಿದೆ ಕೆಲವು ಜಲ ವಿದ್ಯುತ್ ಯೋಜನೆಗಳ ಮುಖಾಂತರ ವಿದ್ಯುಚ್ಚಕ್ಕೆ ಉತ್ಪಾದನೆ ಮಾಡುತ್ತೇವೆ.

ಉದ್ಹಾಹರಣೆಗೆ Varahi ಮಲ್ಟಿಪರ್ಪಸ್ ಪ್ರಾಜೇಕಟ್ಸ್‌ಗೆ ನಾವು ಹೆಚ್ಚು ಗಮನ ಕೊಡತಕ್ಕ ಅವಶ್ಯಕತೆ ಇದೆ ಒಟ್ಟಾರೆ ಎಕನಾಮಿಕ್ ಗ್ರೋತ್ ಬರಬೇಕೆಂದರೆ ಆರ್ಥಿಕ ಅಭಿವೃದ್ಧಿ ಬರಬೇಕೆಂದರೆ ಇಂತಹ ಮಲ್ಟಿಪರ್ಪಸ್ ಪ್ರಾಜೆಕಟ್ಸ್‌ಗೆ ಹೆಚ್ಚಿನ ಗಮನ ಕೊಡುವ ಅವಶ್ಯಕತೆ ಇದೆ ಎಂದು ನಾನು ಭಾವಿಸುತ್ತೇನೆ. ಒಂದು ದೃಷ್ಟಿಯಿಂದ ಜಲವಿದ್ಯುತ್ ಯೋಜನೆಗಳು ಚಿಕ್ಕದೇ ಇರಬಹುದು ದೊಡ್ಡದೇ ಇರಬಹುದು ಮತ್ತೊಂದು ಇರಬಹುದು ಮೊನ್ನೆ ದಿನ ಚರ್ಚೆ ಮಾಡುವ ಕಾಲದಲ್ಲಿ ಚೈನಾದಲ್ಲಿ ಇಂತಹ ಇನ್ನೂರು ಚಿಲ್ಲರೆ ಜಲವಿಧ್ಯುತ್ ಯೋಜನೆಗಳನ್ನು ಪ್ರಾರಂಭ ಮಾಡಿದ್ದಾರೆ ಎಂಬುದು ನಮ್ಮ ಗಮನಕ್ಕೆ ಬಂತು ಆ ವಿವರಗಳನ್ನು ತರಿಸಿಡಿ ಎಂದು ನಾನು ಅಧಿಕಾರಿಗಳಿಗೆ ತಿಳಿಸಿದ್ದೇನೆ. ದೊಡ್ಡದೊಡ್ಡ ಯೋಜನೆ ಕಟ್ಟಿ ಮುಳುಗಡೆ ಮಾಡುವುದಕ್ಕಿಂತ ಇದನ್ನೂ ನೋಡಬಹುದು ಅದನ್ನು ಮಾಡಬೇಕಾದ ಸಂದರ್ಭ ಬಂದರೆ ಮಾಡೋಣ ಆದರೆ ಸಣ್ಣಪುಟ್ಟ ಯೋಜನೆಗಳು 5 ಮೇಗಾವ್ಯಾಟ್ ಇರಬಹುದು 2 ಮೆಗಾವ್ಯಾಟ್ ಇರಬಹುದು 10 ಮೆಗಾ ವ್ಯಾಟ್ ಇರಬಹುದು ಎಷ್ಟೇ ಇರಬಹುದು ಸಣ್ಣ ಸಣ್ಣ

ಯೋಜನೆಗಳು ಏನು ಇವೆ ಸುಮಾರಾಗಿ ಪಶ್ಚಿಮಘಟ್ಟಗಳು ಹೋಗತಕ್ಕಂಥ ನಮ್ಮಕೊಡಗು ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆ ಶಿವಮೊಗ್ಗ ಕಾರವಾರ ಮತ್ತು ಖಾನಾಪುರ ತಾಲೋಕು ಒಳಗೊಂಡಿರತಕ್ಕಂಥ ಭಾಗಗಳು ಇದರಲ್ಲಿ ಹೆಚ್ಚಾಗಿ ಬರುತ್ತವೆ. ಸಣ್ಣ ಪುಟ್ಟ ಜಲವಿದ್ಯುತ್ ಯೋಜನೆಗಳು ಅಲ್ಲೇ ಅಲ್ಲದೆ ಬಯಲು ಸೀಮೆ ಕಡೆ ಎಲ್ಲೆಲ್ಲಿ ನೀರಾವರಿ ಯೋಜನೆ ಮಾಡಿ ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟುತ್ತೇವೆ ಅಲ್ಲೂ ಕೂಡ ಜಲವಿದ್ಯುತ್ ಯೋಜನೆಯನ್ನು ಮಾಡಿ ಸಣ್ಣಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಮಾಡಿಕೊಂಡರೆ ಅಕ್ಕಪಕ್ಕದಲ್ಲಿರುವ ಹಲವಾರು ಭಾಗಗಳನ್ನು ಕವರ್ ಮಾಡುವುದ್ಕಕೆ ಉಪಯೋಗವಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಈ ರೀತಿ ಸರಕಾರದ ವಿಚಾರ ಇದೆ ಇಂತಹ ಸಣ್ಣ ಜಲವಿದ್ಯುತ್ ಯೋಜನೆಗಳಿಗೆ ಸಂಪೂರ್ಣ ಪಟ್ಟಿ ತಯಾರು ಮಾಡುವುದಕ್ಕೋಸ್ಕರ ನಾವು ಪವರ್ ಕಾರ್ಪೊರೇಷನ್ ಬೋರ್ಡ್ ಮೀಟಿಂಗ್‌ನಲ್ಲಿ ಚರ್ಚೆ ಮಾಡಿದ್ದೇವೆ. ಯೋಜನೆಗಳ ಬಗ್ಗೆ ಪಟ್ಟಿ ತಯಾರು ಮಾಡತಕ್ಕಂಥ ವಿಚಾರವನ್ನು ಸರಕಾರದ ಮುಂದೆ ಇಟ್ಟುಕೊಂಡಿದ್ದೇವೆ.

ಶ್ರೀ ಡಿ.ಬಿ.ಚಂದ್ರೇಗೌಡ: ಸಣ್ಣ ವಿದ್ಯುತ್ ಯೋಜನೆಗಳಿಗೆ ಸುಮಾರು 128 ಕ್ಷೇತ್ರಗಳನ್ನು ಗುರುತಿಸಿದೆ. ಹಳೆಯ ಪಟ್ಟಿ ಇದೆ ದಯವಿಟ್ಟು ಅದನ್ನು ತರಿಸಿ ನೋಡಿ.

ಶ್ರೀ ಎಸ್. ಬಂಗಾರಪ್ಪ: ಅದು ಇದೆ ಲೇಟೆಸ್ಟ್ ಆಗಿ ಅಂಕಿ ಅಂಶಗಳು ವ್ಯತ್ಯಾಸ ಇದೆ ಎಂಬ ಕಾರಣದಿಂದ ನಾವು ಮಾಡಿಕೊಂಡಿದ್ದೇವೆ. ಮೊದಲು ಗುರುತು ಮಾಡಿಕೊಂಡಿದ್ದು ಹೆಚ್ಚಾಗಿ ವೆಸ್ಟನ್ ಘಾಟ್ಸ್ ಪ್ರದೇಶದಲ್ಲಿ ಬರುತ್ತದೆ ಇತ್ತೀಚೆಗೆ ಬಯಲು ಸೀಮೆ ಪ್ರದೇಶದಲ್ಲಿ ಅಣೆಕಟ್ಟು ನಿರ್ಮಾಣ ಮಾಡುತ್ತೇವಲ್ಲ ಅಲ್ಲಿಯೂ ಕೂಡ ಇಂತಹ ಸಣ್ಣಜಲವಿದ್ಯುತ್ ಯೋಜನೆ ಮಾಡುವುದ್ಕಕೆ ಬರುತ್ತವೆ ಎಂಬ ವಿಚಾರ ಇರುವುದರಿಂದ ಆ ಪಟ್ಟಿಗೆ ಇದನ್ನು ಸೇರಿಸಿಕೊಳ್ಳಬೇಕಾಗಿದೆ. ಅದ್ಕಕೆ ಇನ್ನೂ ಸೇರಿಸಿ ಕರೆಕ್ಟಾಗಿ ಕಾರ್ಪೊರೇಷನ್ ಬೋರ್ಡ್ ಮುಂದೆ ಇಡಬೇಕೆಂದು ನಾವು ತಿಳಿಸಿದ್ದೇವೆ. Super Thermal power plant to be established at Mangalore. This will be assisted financially by USSR.

ತಮಗೆ ಗೊತ್ತಿರುವಹಾಗೆ ಈಗ ಗೌರ್ನಮೆಂಟ್ ಆಫ್ ಇಂಡಿಯಾದಿಂದ ಅಂತಿಮ ಅಂಕಿತ ತೆಗೆದುಕೊಂಡು ಬರಬೇಕು. ಕಮಿಟಿ ಎಲ್ಲಾ ಪೂರ್ತಿಯಾಗಿ ಆಪ್ರೂವ್ ಮಾಡಿರುತ್ತದೆ. ಈ ಸೂಪರ್ ಥರ್ಮಲ್ ಪವರ್ ಪ್ಲಾಂಟ್‌ಗೆ ಸಾಕಷ್ಟು ಒತ್ತಡ ತಂದಿದ್ದೇವೆ ಈಗ ಅದು ಬರಬೇಕು ರಾಯಚೂರಿನಲ್ಲಿ ಇರತಕ್ಕಂಥದ್ದು ತಮಗೆ ಗೊತ್ತಿದೆ. ಕೋಲ್‌ಬೇಸ್ಡ್‌ಪವರ್ ಪ್ರಾಜೆಕ್ಟ್ ಎಲ್ಲಿದೆ ಅಲ್ಲಿ ಪದೆ ಪದೆ ನಮಗೆ ರೈಲಿನಿಂದ ತಡವಾಗುತ್ತದೆ ಅವೇಲಬಿಲಿಟಿ ಆಫ್ ಕೋಲ್ ಇವೆಲ್ಲದರಿಂದ ಕೂಡ ತೊಂದರೆ ಬರತಕ್ಕದ್ದು ಇದೆ.ಇತ್ತೀಚೆಗೆ ಮತ್ತೊಂದು ವಿಚಾರ ಆಸ್ಟ್ರೇಲಿಯ ಚೈನಾ ಮತ್ತು ದೇಶದ ಕೋಲ್‌ಗಿಂತ ನಮ್ಮ ದೇಶದಲ್ಲಿರತಕ್ಕಂಥ ಕೋಲ್‌ನಲ್ಲಿ ಆಶ್ ಪರ್ಸೆಂಟೇಜ್ ಜಾಸ್ತಿ ಇದೆ ಎನ್ನತಕ್ಕಂಥ ಅಭಿಪ್ರಾಯ ಪದೇ ಪದೇ ಬರುತ್ತಿದೆ ನಮಗೆ ಇದರಿಂದ ಲಾಸ್ ಜಾಸ್ತಿಯಾಗುತ್ತದೆ. ಅಲ್ಲಿಗೆ ಪ್ರೊಡಕ್ಷನ್ ಯುನಿಟ್ ಕಾಸ್ಟ್ ಎನು ಬರುತ್ತದೆ ಅದು ನಮಗೆ ಜಾಸ್ತಿಯಾಗುತ್ತದೆ. ಇದು ನಾಳೆ ಬಳಕೆದಾರರ ಮೇಲೆ ಅನಿವಾರ್ಯವಾಗಿ ಹಾಕತಕ್ಕಂಥ ವಿಚಾರ. ಚೈನಾ ಕೋಲ್ ತುಂಬಾ ಚೆನ್ನಾಗಿ ಬರುತ್ತದೆ ಎಂದು ಕೇಳಿದ್ದೇನೆ ಆಸ್ಟ್ರೇಲಿಯಾ ದೇಶದವರು ಅನ್‌ಸರ್ಟನ್ ಕಂಡೀಷನ್ಸ್ ಮೇಲೆ ನಾವು ಕೋಲ್ ಕೊಡುತ್ತೇವೆಂದು ಹೇಳಿದ್ದಾರೆ.

ಕಾಂಟ್ಯಾಕ್ಟ್ ಮಾಡಿ ಆ ವಿಚಾರವನ್ನು ತರುತ್ತಿದ್ದಾರೆ ನಾವು ಎರಡೂ ಕಡೆ ಪರಿಶೀಲಿಸುತ್ತಿದ್ದೇವೆ. ಹೇಗೆ ಮಾಡಬೇಕು? ಕೋಲ್ ಯಾವುದು ಇದ್ದರೆ ಒಳ್ಳೆಯದು. ಇದು ನಮಗೆ ಲೆಸ್ ಕಾಸ್ಟ್ ಯಾವುದರಲ್ಲಿ ಮಾಡಬಹುದು ಪ್ರೊಡಕ್ಷನ್‌ನಲ್ಲಿ ಯುನಿಟ್ ಕಾಸ್ಟ್ ಎಷ್ಟು ಕಡಿಮೆ ಮಾಡಬಹುದು ಎನ್ನತಕ್ಕಂಥ ವಿಚಾರದಲ್ಲಿ ಕೂಡ ನಾವು ಯೋಚನೆ ಮಾಡುತ್ತಿದ್ದೇವೆ. ಇದು ಇನ್ನು ಪರಿಶೀಲನಾ ಹಂತದಲ್ಲಿದೆ ಆಯಾ ದೇಶದ ವಿವರ ತರಿಸಿ ನಾವು ಮಾಡಬೇಕು. On the invitation of the China Government, ನಮ್ಮ ಎಂ.ಡಿ ಯವರು ಮತ್ತು ಬೇರೆ ಆಫೀಸರ್ಸ್ ಕೂಡಾ ಹೋಗುತ್ತಿದ್ದಾರೆ. ಚೈನಾಗೆ ಅವರು ಬೇರೆದ್ದಕ್ಕೆ ಕರೆದಿದ್ದಾರೆ ಅವರು ಹೋದಾಗ ಆ ಸಂದರ್ಭದಲ್ಲಿ ಕೋಲ್ ವಿಚಾರ ಮಾತ್ತೊಂದು ಕೂಡ ಸ್ಟಡೀ ಮಾಡಿಕೊಂಡು ಬನ್ನಿ ಎನ್ನತಕ್ಕಂಥ ವಿಚಾರ ಕೂಡ ನಾವು ಈಗಾಗಲೇ ಅವರಿಗೆ ತಿಳಿಸಿದ್ದೇವೆ. ಆಸ್ಟ್ರೇಲಿಯಾ ದೇಶದ ವಿವರಗಳೆಲ್ಲಾ ಪಡೆಯಿರಿ ಎನ್ನತಕ್ಕಂಥಾದ್ದನ್ನು ತಿಳಿಸಿದ್ದೇನೆ. ಆಮೇಲೆ ಇದನ್ನು ತೀರ್ಮಾನ ಸರ್ಕಾರದವರು ಕಾರ್ಪೊರೇಷನ್‌ನವರು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಕೈಗಾ ಬಗ್ಗೆ ಗೌರ್ನಮೆಂಟ್ ಆಫ್ ಇಂಡಿಯಾಗೆ ಬರುತ್ತದೆ. ಈ ಬಗ್ಗೆ ನಾನು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. This is a very good project ತಮ್ಮ ಜಿಲ್ಲೆ ಕಾರವಾರ ಜಿಲ್ಲೆ ಇದು ಅದರೆ ನಿಮ್ಮ ಕಡೆಗೆ ಕರ್ನಾಟಕ ರಾಜ್ಯಕ್ಕೆ ಒಟ್ಟಾರೆ ವಿದ್ಯುಚ್ಛಕ್ತಿ ಉತ್ಪಾದನೆಗೆ ಅನುಕೂಲವಾಗುತ್ತದೆ , ಎನ್ನತಕ್ಕಂಥ ವಿಚಾರ ಕೂಡ ಹೌದು. ಇನ್ನು ಯಲಹಂಕದಲ್ಲಿ ಡೀಜಲ್ ಪವರ್ ಉತ್ಪಾದನೆ ಮಾಡತಕ್ಕಂಥದ್ದಕ್ಕೆ ಕ್ರಮ ತ್ವರಿತಗತಿಯಲ್ಲಿ ನಡೆಯುತ್ತಿದೆ. ಇದಲ್ಲದೆ ಇನ್ನು ಕೂಡ ಕೆಲವು ಡೀಜಲ್ ಬೇಸ್ಡ್ ಪವರ್ ಜನರೇಶನ್ಸ್ ಬಗ್ಗೆ ಈಗಾಗಲೇ ಗಮನ ಕೊಟ್ಟಿದ್ದೇವೆ. ನಿಜ ಕೆಲವು ಸಾರಿ ಪ್ರೊಡಕ್ಷನ್ ದೃಷ್ಟಿಯಿಂದ ಕಾಸ್ಟ್ ಜಾಸ್ತಿಯಾಗುತ್ತದೆ ಇವೆಲ್ಲಾ ಜಲವಿದ್ಯುತ್ ಕಟ್ಟಿ ಮಾಡುವುದಕ್ಕೆ ಕೂಡ ಆಗುವುದಿಲ್ಲ ಬಹಳ ಕಷ್ಟವಾಗುತ್ತದೆ

ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ನೆನಪು ಮಾಡಿದರೆ ಒಳ್ಳೆಯದು ಶರಾವತಿ ಪ್ರಾಜೆಕ್ಟ್‌ನಲ್ಲಿ ತಲೆಕಳಲೆ ಡ್ಯಾಮ್ ಎನಿದೆ ಇದಕ್ಕೆ ನಾವು ಬಜೆಟ್‌ನಲ್ಲಿ ಸುಮಾರು 60 ಕೋಟಿ ರೂಪಾಯಿಗಳನ್ನು ಈಗಾಗಲೇ ಇರಿಸಿದ್ದೇವೆ with an intention to construct a new dam altogether. ಏಕೆಂದರೆ ನಾನು ಇದನ್ನು ಹಿಂದೆ ಶಾಸನಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ. ಈ ಡ್ಯಾಮ್ ಹತ್ತಿರ ಹೋದರೆ ಒಳಗೆ ಸೋರಿಕೆಯಾಗತಕ್ಕಂಥ ನೀರು ಆ ಸೌಂಡ್ ನಮಗೆ ಡ್ಯಾಮ್ ಮೇಲೆ ನಿಂತು ಕೊಂಡರೆ ಕೇಳಿಸುತ್ತದೆ. ನಮಗೆ ಉದ್ದಕ್ಕೂ ಕೇಳಿಸುತ್ತದೆ. ಪುಣ್ಯಕ್ಕೆ ಆ ಡ್ಯಾಮ್ ಇನ್ನು ಏನೂ ಆಗಿಲ್ಲ ಅದು ಒಂದು ಸಂತೋಷ ಅಲ್ಲಿ ಗ್ರೋಟಿಂಗ್ ವರ್ಕ್ ನಡೆಯುತ್ತದೆ. ಅಂದರೆ ತೂತಾಗಿರತಕ್ಕಂಥಾದ್ದನ್ನು ಮುಚ್ಚತಕ್ಕಂಥ ಕೆಲಸ ಇತ್ತೀಚೆಗೆ ನಾವು ಪರದೇಶಕ್ಕೆ ನಮ್ಮ ಅಫೀಸರ್ಸ್‌ನ್ನು ಕಳುಹಿಸಿದ್ದೇವೆ. ವರಲ್ಡ್ ಫೇಮಸ್ ಎಕ್ಸ್‌ಪರ್ಟ್ಸ್ ಅನ್ನು ತೆಗೆದುಕೊಂಡಿದ್ದೇವೆ. ಸುಮಾರು 12-14 ಕೋಟಿ ರೂಪಾಯಿಗಳಲ್ಲಿ ಈಗ ಇರತಕ್ಕಂಥಾ ಡ್ಯಾಮನ್ನೇ ಬ್ಯೂಟಿಫುಲ್ ಆಗಿ ಗ್ರೋಟಿಂಗ್ ಅಲ್ಲಿ ಹೊಸ ಒಂದು ಫೀಟ್‌ನಲ್ಲಿ ಬೇರೆ ರೀತಿಯಾಗಿ ನಮ್ಮ ಇಂಜನೀಯರ್ಸ್ ಏನಿದ್ದಾರೆ ಅವರ ಒಪ್ಪಿನಿಯನ್ ಪ್ರಕಾರ ಮಾಡುವುದಕ್ಕೆ ಬರುತ್ತದೆ. ಸುಮಾರು 80 ಪರ್ಸೆಂಟ್ ಹೊರಗಡೆ ನಿಂತುಕೊಂಡೇ ನಾವು ಕೆಲಸ ಮಾಡಬಹುದು ನೀರಿನಲ್ಲಿ ಮುಳುಗತಕ್ಕಂಥ ಅವಶ್ಯಕತೆ ಇಲ್ಲ ಇನ್ನು 10-20 ಪರ್ಸೆಂಟ್ ನೀರಿನ ಒಳಗೆ ಹೋಗಿ ಬೇಸ್‌ನಲ್ಲಿ ಮಾಡಬೇಕಾಗುತ್ತದೆ ಎನ್ನತಕ್ಕಂಥ ಅಭಿಪ್ರಾಯ ವನ್ನು ಎಕ್ಸ್‌ಪರ್ಟ್ಸ್‌ವನ್ನು ಕೊಟ್ಟಿದ್ದಾರೆ.

ನಾವು ಅದರ ಮೇಲೆ ಹೋಗತಕ್ಕಂಥಾದ್ದು ಅವರೊಬ್ಬರ ಅಭಿಪ್ರಾಯದ ಮೇಲೆ ನಾವು ಹೋಗುತ್ತಿಲ್ಲ ವರಲ್ಡ್ ಫೇಮಸ್ ಎಕ್ಸ್‌ಪರ್ಟ್ಸ್ ಒಪಿನಿಯನ್ ಅನ್ನು ನಾವು ತೆಗೆದುಕೊಂಡು ಕೂಡ ವಿಚಾರ ಮಾಡುತ್ತಿದ್ದೇವೆ. ಸುಮಾರು 60ಕೋಟಿ ರೂಪಾಯಿಗಳನ್ನು ಹೊಸದಾಗಿ ತಲಕಳಲ್ ಡ್ಯಾಮ್ ಮಾಡುವುದಕ್ಕೆ ಇಟ್ಟಿದ್ದೇವೆ. ಆದರೆ ಇದಕ್ಕೆ ನಾವು ಏತಕ್ಕೆ ಹೋಗಬಾರದು? ಇದು ಸಹ ಸ್ಟ್ರಾಂಗ್ ಆಗಿ ನಿಲ್ಲುತ್ತದೆ ಎನ್ನತಕ್ಕಂಥ ಅಭಿಪ್ರಾಯ ಈಗಾಗಲೇ ಕೊಟ್ಟಿದ್ದಾರೆ. ಅನೇಕ ಜನ ಇಂಜಿನೀಯರ್ಸ್ ಕೂಡ ಇಲ್ಲಿಗೆ ಬಂದು ನೋಡಿಕೊಂಡು ಹೋಗಿದ್ದಾರೆ. we are not only saving about Rs 40 to 45 crores, ಇದರಲ್ಲಿ ಉಳಿಸಿದಂತಹ ಹಣ ಬೇರೆ ಪ್ರಾಜೆಕ್ಟ್‌ಗಳಿಗೆ ತೊಡಗಿಸಬಹುದು. ಜೊತೆಗೆ ಇರುವ ಡ್ಯಾಮ್ ಅನ್ನು ಸ್ಟ್ರೆಗನ್ ಮಾಡಬಹುದು ಅದರ ಸಂಪೂರ್ಣ ಆಯಸ್ಸು ಏನಿದೆ ನಾವು ಅದನ್ನು ಉಳಿಸಬಹುದು ಎನ್ನತಕ್ಕಂಥ ಅಭಿಪ್ರಾಯವನ್ನು ಅವರು ಕೊಟ್ಟಿದ್ದಾರೆ. ನಾವು ಪವರ್ ಕಾರ್ಪೋರೇಷನ್ ಮುಖಾಂತರ ತೀರ್ಮಾನ ಮಾಡುತ್ತೇವೆ ಈಗ ಇರತಕ್ಕಂಥಾದ್ದನ್ನೇ ಬಲಪಡಿಸಬೇಕೆನ್ನುವ ತೀರ್ಮಾನಕ್ಕೆ ಅಂತಿಮವಾಗಿ ಬರುತ್ತಿದ್ದೇವೆ. ಇದಕ್ಕೆ 60 ಕೋಟಿ ರೂಪಾಯಿಗಳನ್ನು ಇರಿಸಿದ್ದೇವೆ for the construction of a new alternative dam ಕಾಂಕ್ರಿಟ್ ಡ್ಯಾಮನ್ನು ರಷ್ಯಾ ಅಮೇರಿಕಾದಲ್ಲಿ ಕಟ್ಟಿದ್ದಾರೆ ನಮ್ಮ ದೇಶದಲ್ಲಿ ಒಂದು ಎಕ್ಸ್‌ಪರ್ಟ್ ಏತಕ್ಕೆ ಕಟ್ಟಬಾರದು? ಎನ್ನುವ ಅಭಿಪ್ರಾಯ ಮೊದಲು ಇತ್ತು ವರ್ಲ್ಡ್ ಫೇಮಸ್ ಈ ಅಭಿಪ್ರಾಯ ಕೊಟ್ಟ ಮೇಲೆ ಆರ್ಡರ್ ಡ್ಯಾಮ್ ಕಟ್ಟೋಣ ಎನ್ನುವ ಅಭಿಪ್ರಾಯಕ್ಕೆ ಬಂದಿದ್ದೇವೆ ಈ ಸಂದರ್ಭದಲ್ಲಿ ನಮಗೆ ಡೀಜಲ್ ಬೇಸ್ಡ್ ಜನರೇಟರ್ಸ್‌ಗೆ ಹೆಚ್ಚಿನ ಅವಶ್ಯಕತೆ ಇದೆ ಬೀದರ್ ಮತ್ತೊಂದು ಕಡೆ ಮಾಡಬೇಕಾಗಿದೆ ಅದರ ಒಂದು ಪಟ್ಟಿಯೇ ಇದೆ. ಪವರ್ ಕಾರ್ಪೋರೇಷನ್ ಮೂಲಕ ಈ ಕಾರ್ಯಕ್ರಮ ಹಾಕಿಕೊಳ್ಳಲಾಗುವುದು.

ಇನ್ನು ಈ ವರ್ಷ ಮಳೆ ಚೆನ್ನಾಗಿ ಬಿದ್ದರುವುದರಿಂದ ರಿಸರ್ವಾಯರ್‌ಗಳು ತುಂಬಿವೆ ಸೂಪಾದ್ದು 558.10 ಮೀಟರ್‌ವರೆಗೂ ನೀರು ಹೋಗಿದೆ. ಅದು ಕಟ್ಟಿದ ಮೇಲೆ ಹೈಯಸ್ಟ್ ಇಲ್ಲಿಯವರೆಗೂ ನೀರು ತುಂಬಿರತಕ್ಕದ್ದು. It is the maximum record of the waterlevel stored this year. ಆಮೇಲೆ ವರಾಹಿನಲ್ಲಿಯೂ ಕೂಡ ಇನ್‌ಪ್ಲೋ ಚೆನ್ನಾಗಿದೆ ಲಿಂಗನಮಕ್ಕಿಗೆ ಅಮೇಲೆ Unit No3. of Raichur Thermal Plant, mostly druing the course of this month. ಈ ತಿಂಗಳು ಅಥವಾ ಮುಂದಿನ ತಿಂಗಳಲ್ಲಿ ಅದನ್ನು ಸ್ಟಾರ್ಟ್ ಮಾಡುತ್ತೇವೆ. ರಾಯಚೂರಿನಲ್ಲಿ ಪ್ರಾರಂಭ ಮಾಡತಕ್ಕಂಥಾದ್ದು ರೆಡಿಯಾಗುತ್ತಿದೆ. ಆಮೇಲೆ The electrcity that could be generated from these statons under the control of KPC including that of Mahathma Gandhi Hydro-electric station would be around 38 Mega Units per day.

ನಮಗೆ ಅಷ್ಟು ಬರುತ್ತದೆ 13,300 Million Units up to the end of June, 1992 3,500 Million Units from the central share ಅದುಬೇರೆ ನಮಗೆ ಬಂದು ಸೇರುತ್ತದೆ 16,000 Million Units till the end of June, 1992, ನಮಗೆ ಸಿಗುತ್ತೆ ಎಂದು ಅಂದಾಜು ಮಾಡಿ ಇಟ್ಟಿಕೊಂಡಿದ್ದೇವೆ ಆಮೇಲೆ ಎಲೆಕ್ಟ್ರಿಸಿಟಿ ಡಿಮ್ಯಾಂಡ್ ಎಷ್ಟು ಇದೆ ಅಂದರೆ 19 ಸಾವಿರ ಮಿಲಿಯನ್ ಯೂನಿಟ್ ನಮಗೆ ಇರತಕಂತ್ತಾದ್ದು 16 ಸಾವಿರ ಅಲ್ಲಿ ಡಿಫರೆನ್ಸ್ ಎಷ್ಟು ಬರುತ್ತದೆ? ಇನ್ನು 3 ಸಾವಿರ ಮಿಲಿಯನ್ ಯೂನಿಟ್ಸ್ ಶಾರ್ಟೇಜ್ ಬೀಳುತ್ತದೆ ನಾನು ಈ ಪಾಯಿಂಟ್ ಹೇಳುವುದಕ್ಕೋಸ್ಕರ ಪೂರ್ವಭಾವಿಯಾಗಿ ಈ ವಿಚಾರವನ್ನು ಹೇಳಿದ್ದು ಇದರಲ್ಲಿ total generating installed capacity in the state is 2,760 Mega watts.

ಈಗ ಇರತಕ್ಕಂಥಾದ್ದು Raichur Thermal Power Station Unit No.3 with 210 Mega watts capacity being commissioned during the course of this month. the following is the programme of generation in the state which are under the control of KPC and KEB ಕೆ.ಇ.ಬಿ. ಎರಡೂ ಸೇರಿ ಇರುವಂಥಾದ್ದು ಕೆ.ಇ.ಬಿ.ನಲ್ಲಿ ಶಿವನಸಮುದ್ರ ಸೇರಿ ಎರಡು ಮೂರು ಸಣ್ಣ ಪುಟ್ಟು ಕೆ.ಇ.ಬಿ.ನಲ್ಲೇ ಉಳಿದುಕೊಂಡಿವೆ. ಪವರ್ ಜನರೇಷನ್ ಕೆ.ಇ.ಬಿ.ನೇ ಉಪಯೋಗ ಮಾಡುತ್ತಿದ್ದೇವೆ 91Ë92 ಕ್ಕೆ 41 ಮೆಗಾವಾಟ್ ಅಲ್ಲಿ ಇದ್ದರೆ ಈಗ 92-93 ಕ್ಕೆ 145.35 ಮೆಗಾವಾಟ್ಸ್ ನಮಗೆ 96-97ಕ್ಕೆ 365 ಮೆಗಾವಟ್ಸ್ ಪ್ರೋಗ್ರಾಂನ್ನು ನಾವು ಹಾಕಿಕೊಂಡಿದ್ದೇವೆ. By the end of 1996-97 the installed capacity of 4306.35 Mega watts, will be capable of producing 19,153 Million Units.ಆವಾಗ ಆಗುತ್ತದೆ ಇಷ್ಟು ನಮಗೆ ಶಾರ್ಟೇಜ್ ಪವರ್ ಜನರೇಷನ್ ಈಗಿರತಕ್ಕಂಥಾದ್ದು ಎಷ್ಟು ಡಿಮ್ಯಾಂಡ್ ಇದೆ? ಎಷ್ಟು ಡಿಫರೆನ್ಸ್ ಇದೆ? ನಮ್ಮ ಪ್ರೋಗ್ರಾಮ್ ಏನು? ಎನ್ನುವುದನ್ನು ತಮಗೆ ತಿಳಿಸಿದ್ದೇನೆ. ಆಮೇಲೆ during the coming 8th five-year plan period ನಲ್ಲಿ ಕಂಪ್ಲೀಟ್ ಎಫರ್ಟ್ಸ್ ನಾವು ಮಾಡುತ್ತೇವೆ ಪವರ್ ಜನರೇಷನ್ ಇಲ್ಲದಿದ್ದರೆ ನಾವು ಏನು ಮಾಡುವುದಕ್ಕಾಗುವುದಿಲ್ಲ. ಎನ್ನುವ ತೀರ್ಮಾನಕ್ಕೆ ನಾವು ಈ ಸಂತರ್ಭದಲ್ಲಿ ಬಂದಿದ್ದೇವೆ. ಇದರ ಜೊತೆಗೆ ಕರ್ನಾಟಕ ಪವರ್ ಕಾರ್ಪೋರೇಷನ್ ಏನಿದೆ? ಅದು ಪ್ರಾಫಿಟ್‌ನಲ್ಲಿದೆ ಇದು ಸಂತೋಷದ ಸಂಗತಿ ಪವರ್ ಕಾರ್ಪೋರೇಷನ್ ಪ್ರಾಫಿಟ್ ಮಾಡುವುದಕ್ಕೆ ಪ್ರಾರಂಭ ಮಾಡಿದೆ we are not under loss at all. During 1988-89 it was Rs.14 crores. As per provisional accounts of 1989-90 the profit is Rs. 38 crores. As per provisional accounts for 1990-91 the profit is rs 84 crores. As on 31.3.91 the KPC has to receive about Rs. 134 crores from KEB including interest forbelatedpayment ಆದರೆ ರಾಮಪ್ಪನವರು ನಮಗೆ ಹಣವನ್ನು ಕಳುಹಿಸಿಕೊಡಬೇಕು.ಕೆ.ಇ.ಬಿ. 134 ಕ್ರೋರ್ಸ್ ಅದು ಇನ್‌ಕ್ಲೂಡಿಂಗ್ ಇಂಟರೆಸ್ಟ್ ಎಲ್ಲಾ ಸೇರಿ ಹೇಳಿದ್ದೇನೆ ಅಷ್ಟು ಬರಬೇಕಾಗುತ್ತದೆ ಅದರಲ್ಲಿ 91-92ಕ್ಕೆ KPC has a budget for the current year, of Rs 790 crores. out of which the capital expenditure is Rs 254 crores as against the plan allocation of Rs 235 crores 235 ಕೋಟಿ ರೂಪಾಯಿಗಳನ್ನು ನಾವು ಪ್ಲಾನ್ ಅಲೋಕೇಶನ್‌ನಲ್ಲಿ ಮಾಡಿಟ್ಟುಕೊಂಡಿದ್ದೇವೆ.

ಈ ಎಕ್ಸಪೆಂಡಿಚರ್ relates to ಮೇಜರ್ ಆನ್ ಗೋಯಿಂಗ್ ಪ್ರಾಜೆಕ್ಟ್ ಏಕೆಂದರೆ ಅವರು ಕಂಪ್ಲೀಟ್ ಮಾಡಿಕೊಳ್ಳಬೇಕು. Kali Nadi HydroËelectric project, Stage-2 Sharavathi tailraise project ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ Rachur Thermal power station Unit No.4 Substatial protion of revenue expenditure ಏನು ಇದೆ. it is on account of coal for Raichur Thermal plant. ನಾನು ಅದಕ್ಕೆ ಹೇಳಿದೆ ಈ ಕೋಲ್ ಬೇಸ್ಥನಿಂದ ಕಾಸ್ಟ್ ಪ್ರೈಸ್ ವರ್ಕ್‌ಟ್ ಆಗುತ್ತದೆ ಮ್ನವ ಮಾತನ್ನು ಹೇಳಿದ್ದೇನೆ. That amounts to approximately Rs 200 crores ಈ ಒಂದು ಥರ್ಮಲ್‌ನಲ್ಲಿ ಹೊರಟು ಹೋಗುತ್ತದೆ. ಏಕೆಂದರೆ ಕೋಲ್ ಕಾಸ್ಟ್ ತಮಗೆ ಗೊತ್ತಿದೆ. The KPC is expecting a revenue of Rs 496 crores in the current year from the sale of energy to KEB. ಪವರ್ ಜನರೇಟ್‌ಮಾಡಿ ಕೆ.ಇ.ಬಿ.ಗೆ ಕೊಡುತ್ತೇವೆ. ನಮಗೆ ಇಷ್ಟು ಪ್ರಾಫಿಟ್ ಬರುತ್ತದೆ ಇಷ್ಟು ರೆವಿನ್ಯೂ

ಬರುತ್ತದೆ ಎಂದು ಲೆಕ್ಕ ಹಾಕಿಕೊಂಡಿದ್ದೇವೆ ಆ ಮೇಲೆ ಫೈನಾನ್ಸಿಯಲ್ ಇನ್ಸ್‌ಸ್ಟಿಟ್ಯೂಷನ್‌ನಿಂದ 55ಕೋಟಿ ರೂಪಾಯಿ ಹಣ ಲೈಫ್ ಇನ್ಸುರೆನ್ಸ್ ಕಾರ್ಪೊರೇಷನಿಂದ ಐ.ಡಿ.ಬಿ. ಪವರ್ ಫೈನಾನ್ಸ್ ಕಾರ್ಪೋರೇಷನ್ ಲಿಮಿಟೆಡ್ ಅದರಿಂದ ನಾವು ಸಂಪೂರ್ಣವಾದ ಹಣವನ್ನು ತೆಗೆದುಕೊಳ್ಳಬೇಕು ಎನ್ನತಕ್ಕ ವಿಚಾರವನ್ನು ಇಟ್ಟುಕೊಂಡಿದ್ದೇವೆ. ಈ ಸಂದರ್ಭದಲ್ಲಿ ಮೈಸೂರು ಪವರ್ ಕಾರ್ಪೋರೇಷನ್ ಏನು ಇದೆ.

ಪ್ರೈವೇಟ್ ಸೆಕ್ಟರ್ ಪಾರ್ಟಿಸಿಪೇಷನ್ ಅನ್ನು ಕೂಡ ನಾವು ಗಮನದಲ್ಲಿ ಏನಾದರೂ ಇಟ್ಟು ಸೆಂಟ್ರಲ್ ಎಲೆಕ್ಟ್ರಿಸಿಟಿ ಆಕ್ಟ್ ಅಮೆಂಡ್ ಆದ ಕೂಡಲೇ ಪವರ್ ಜನರೇಷನ್‌ಗೆ ದೊಡ್ಡ ಪ್ರಮಾಣದಲ್ಲಿ ಹೋಗುವುದಕ್ಕೆ ಸಾಧ್ಯ ಆಗುತ್ತದೆ. ನಾವು ನೆಕ್ಸ್ಟ್ ಇಯರಿಗೆ ಟ್ಯಾಂಜಿಬಲ್ ರಿಸಲ್ಟ್ಸ್ ಐ ಥಿಂಕ್ ಬಹಳ ಹೆಡ್ ವೇ ತೋರಿಸಬಹುದು ಎನ್ನುವ ನಂಬಿಕೆಯನ್ನು ಇಟ್ಟುಕೊಂಡಿದ್ದೇವೆ ತಮಗೆ ಗೊತ್ತಿದೆ Maharastra is a surplus state. Tamil Nadu is a surplus state. Andhra Pradesh is a surplus state. ನಾವು ಮಾತ್ರ lagging behind like anything.ನಾವು ಸುಮ್ಮನೇ ಕುಳಿತುಕೊಂಡರೆ ಏನೂ ಆಗುವುದಿಲ್ಲ ಅದ್ದರಿಂದ ಪ್ರೈವೇಟ್ ಪಾರ್ಟಿಸಿಪೇಷನ್ ಅನಿವಾರ್ಯ ಎನ್ನತಕ್ಕ ದೃಷ್ಟಿಯಿಂದ ನಾನು ಈ ವಿಚಾರ ಮಾಡಿದೆ ತಾವು ಕೂಡ ಬೆಂಬಲ ಕೊಟ್ಟಿದ್ದೀರಿ. ಎರಡೂ ಕೂಡ ಪ್ರೈವೇಟ್ ಸೆಕ್ಟರ್ ಪಾರ್ಟಿಸಿಪೇಷನ್ ವಿಚಾರದಲ್ಲಿ as a matter of princple ನಾವು ಅದನ್ನು ಇಟ್ಟುಕೊಂಡು ಹೋಗುಬೇಕು ಎನ್ನತಕ್ಕ ಅಭಿಪ್ರಾಯವನ್ನು ಇಟ್ಟುಕೊಂಡಿದ್ದೇವೆ. ಈ ಸಂದರ್ಭದಲ್ಲಿ ನಾನು ಯಲಹಂಕದ ವಿಚಾರವಾಗಿ ತಿಳಿಸಿದ್ದೇನೆ ಡೀಸಲ್‌ನಿಂದ ಜನರೇಟ್ ಮಾಡತಕ್ಕದ್ದು ನಮ್ಮ ಷೆಡ್ಯೂಲ್ ಪ್ರೋಗ್ರೆಸ್ ಚೆನ್ನಾಗಿ ನಡೆಯುತ್ತದೆ ಫಸ್ಟ್ ಮೆಷಿನ್ ಫ್ರಾನ್ಸ್ ನಿಂದ ಶಿಪ್‌ಮೆಂಟ್ ಈಗಾಗಲೇ ನಡೆದಿದೆ. It is arriving in Bangalore by the end of this month. ಈ ತಿಂಗಳ ಕೊನೆಯಲ್ಲಿ ಅಲ್ಲಿಂದ ನಮಗೆ ಫಸ್ಟ್ ಎಕ್ವಿಪ್‌ಮೆಂಟ್ ಬರುತ್ತಾ ಇದೆ. ಇನ್ನು ಉಳಿದಿರತಕದ್ದು. ಆನಂತರ ಬರುತ್ತಿದೆ. ನಾವು coming ಮಾರ್ಚ್ 1st ಹೋತ್ತಿಗೆ ಯಾಲಹಂಕದಲ್ಲಿ ಕಮೀಷನ್ ಮಾಡಬೇಕು ಎನ್ನುವ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಇದಲ್ಲದೇ ಪ್ರತಿ ತಿಂಗಳೂ ಒಂದೊಂದು ಮೆಷಿನ್ ಅನ್ನು ಕಮೀಷನ್ ಮಾಡಿಕೊಂಡು ಹೋಗಬೇಕು ಎನ್ನುವ ವಿಚಾರ ಇದೆ. One machine will be commissioned every month. By the end of September, 1992 it will have a capacity of 120 Mega Watts totally to augment the power shortage in Bangalore city. ಅದಕ್ಕೆ ನಾವು ಹೆಚ್ಚಿಗೆ ಉಪಯೋಗ ಮಾಡಬೇಕು ಎನ್ನುವ ವಿಚಾರವನ್ನು ಇಟ್ಟುಕೊಂಡಿದ್ದೇವೆ.

ಇದಲ್ಲದೇ ನಾವು through KEB ವರ್ಲ್ಡ್ ಬ್ಯಾಂಕ್ ಏಡ್‌ನಿಂದ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಅದು 400 ಕೆ.ವಿ. ಲೈನ್ ಹಾಕತಕ್ಕದ್ದು ಪ್ಲಸ್ ಸಬ್ ಸ್ಟೇಷನ್ 220 ಕೆ.ವಿ. ಲೈನ್ ಪ್ಲಸ್ ಸಬ್ ಸ್ಟೇಷನ್ ಇದನ್ನು ಮಾಡುವುದರಿಂಧ ಬೆಟರ್ ವೋಲ್‌ಟೇಜ್ ಕೊಡುವುದಕ್ಕೆ ಅನುಕೂಲವಾಗುತ್ತದೆ ಆ ಮೇಲೆ ಅನ್ ಇಂಟರ್‌ಪ್ಟೆಡ್ ಪವರ್ ಸಪ್ಲೈ ಕೊಡುವುದಕ್ಕೆ ನಮಗೆ ಅನುಕೂಲವಾಗುತ್ತದೆ in most backward area like Hyderabad Karnataka area ಸೇರಿ ಹೊಸದಾಗಿ ಈ ಕಡೆ ಕೂಡ ದೊಡ್ಡ ಕೆವಿ ಲೈನ್ ಹಾಕುತ್ತಿದ್ದೇವೆ ಆಮೇಲೆ ಕಿಬ್ಬನಹಳ್ಳಿ ಕ್ರಾಸ್ ಹತ್ತಿರ ಮಾನ್ಯ ನಾರಾಯಣ ಅವರ ಕ್ಷೇತ್ರ ಅವರು ಹೇಳಿದರು.

ಶ್ರೀ ನಾರಾಯಣ: ಅಂತರಸಹಳ್ಳಿ ಮತ್ತು ಬೇಳೂರ್‌ಗೂ ಹಾಕಬೇಕು.

ಶ್ರೀ ಎಸ್.ಬಂಗಾರಪ್ಪ: ನಾನು ಈಗಾಗಲೇ ಉದಾಹರಣೆ ಹೇಳಿದೆ. There is a very big list. ಚೇಳೂರು ಇತ್ಯಾದಿ ಹಲವಾರು ಕೋಟಿ ರೂಪಾಯಿ ಖರ್ಚಿನಲ್ಲಿ ಒಂದೊಂದು ಕೆ.ವಿ. ಲೈನ್ ತೆಗೆದುಕೊಳ್ಳದೇ ಹೋದರೆ ನಾವು ಎಷ್ಟು ಬಂದರೂ ಕೂಡ ರಿಪೇರಿ ಮಾಡುವುದಕ್ಕೆ ಆಗುವುದಿಲ್ಲ ವೋಲ್ಟೇಜ್ ಟ್ರಾನ್ಸ್‌ಫಾರ್ಮರ್ ಇದನ್ನೆಲ್ಲಾ ನಾವು ಕಂಟ್ರೋಲ್ ಮಾಡಿಕೊಳ್ಳಬೇಕು ಎಂದರೆ ನಾವು ಅನ್ ಇಂಟರಿಪ್ಟೆಡ್ ಪವರ್ ಸಪ್ಲೈ ಕೊಡಬೇಕು ಎಂದು ಇದ್ದರೆ ನಾವು ಟ್ರಾನ್ಸ್‌ಫಾರ್ಮರ್ ಆದಿಯಾಗಿ ಪ್ರತಿ ಶೆಡ್ಯೂಲ್ ಪ್ರಕಾರ ಹೋಗದೇ ಇದ್ದರೆ ಕಷ್ಟ ಆಗುತ್ತದೆ ಎಂದು ತೀರ್ಮಾನ ಮಾಡಿದ್ದೇವೆ.

ನಾವು ಈಗಾಗಲೇ ನಾವು ವರ್ಲ್ಡ್ ಬ್ಯಾಂಕ್ ನೆರವು ಮತ್ತೊಂದು ತೆಗೆದುಕೊಂಡು ಮಾಡಿದ್ದೇವೆ ಮೊನ್ನೆ ತಾನೆ ಸರಕಾರದವರು 65 ಕೋಟಿ ರೂಪಾಯಿಗಳಿಗೆ ಹಣವನ್ನು ಕೊಡುವುದಕ್ಕೆ ನಾವು ಜವಾಬ್ದಾರಿಯನ್ನು ತೆಗೆದುಕೊಂಡಿದ್ದೇವೆ. ಮದ್ಯೆ ಮದ್ಯೆ ಎಲ್.ಐ.ಸಿ. ಯವರು ಸರಕಾರದವರು ಹಣವನ್ನು ಕೊಡುತ್ತಲೇ ಇದ್ದೇವೆ ಆದರೆ ಕೆ.ಇ.ಬಿ. ಯಿಂದ ಲಾಸ್ ಲಾಸ್ ಲಾಸ್ ಎನ್ನತಕ್ಕಂಥ ಮಾತನ್ನು ಪದೇ ಪದೇ ಕೇಳುತ್ತಾ ಇದ್ದೇವೆ. ನಾನು ಕೆ.ಇ.ಬಿ.ಯ ಹಿಂದಿನ ಚರಿತ್ರೆಯ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ ಆದರೆ ಈ ವರ್ಷ ಮಾತ್ರ ಒಂದು ಸಂತೋಷದ ಸುದ್ದಿ ಇದೆ. ಈಗ ಅಂಕಿಅಂಶಗಳು ಸಿದ್ದವಾಗಿಲ್ಲ ಸಂಪೂರ್ಣವಾದ ಅಂಕಿಅಂಶಗಳನ್ನು ಈ ಸದನಕ್ಕೆ ಮುಂದಿನ ಸಾರಿಯಾದರೂ ಕೊಡಬೇಕೆಂಬುದು ನನ್ನ ಇಚ್ಛೆ ಈಗ ಲಾಭವನ್ನು ಗಳಿಸಿಕೊಂಡು ಹೋಗತಕ್ಕಂಥ ಲಕ್ಷಣವನ್ನು ನಾವು ನೋಡುತ್ತಾ ಇದ್ದೇವೆ. ಈಗ ಲಾಭನಷ್ಟದ ವಿಚಾರ ಒಂದು ಕಡೆ ಇರಲಿ ಇವೋತ್ತು ರೈತರ ಪಂಪುಸೆಟ್ಟುಗಳು ಕಳೆದ ವರ್ಷ ಫೈನಾನ್ಶಿಯಲ್ ಇಯರ್‌ಗೆ ಎನ್‌ರ್‌ಜೈಸ್ ಮಾಡುವುದಕ್ಕೆ 40 ಸಾವಿರ ಇದ್ದುದು 60 ಸಾವಿರಕ್ಕೆ ಏರಿಸಿದ್ದೇವೆ. ಸುಮಾರು 70 ಸಾವಿರ ಚಿಲ್ಲರೆ ಪಂಪ್‌ಸೆಟ್‌ಗಳಿಗೆ ನಾವು ಎನ್‌ರ್‌ಜೈಸ್ ಮಾಡಿದ್ದೇವೆ. ಈ ವರ್ಷ ಕೂಡ 60-70 ಸಾವಿರದ ವರೆಗೆ ಎನ್‌ರ್‌ಜೈಸ್ ಮಾಡುವ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಆದರೂ ತಮಗೆಲ್ಲ 65-70 ಸಾವಿರಕ್ಕೆ ಮತ್ತು ನಾವು ಹೋಗುತ್ತೇವೆ. ತಮಗೆಲ್ಲ ಗೊತ್ತಿರುವ ಹಾಗೆ ನಾವು ಮಾತನಾಡುತ್ತಾ ಇರುತ್ತೇವೆ

ಅಲ್ಲಿ ಬೋರ್‌ವೆಲ್‌ಗಳನ್ನು ತೆಗೆಸುತ್ತಾ ಇರುತ್ತಾರೆ ಎಕ್ಸ್‌ಟ್ರಾ ಭಾರ ಬರುತ್ತಾ ಇರುತ್ತದೆ. ಹೀಗಾಗಿ ಲೈನ್ ಮೇಲೆ ಲೋಡ್ ಜಾಸ್ತಿಯಾಗುತ್ತಲೇ ಇರುತ್ತದೆ. ಬೆಂಗಳೂರು ಜಿಲ್ಲೆ ಕೋಲಾರ ಜಿಲ್ಲೆ ತುಮಕೂರು ದಾರವಾಡ ಜಿಲ್ಲೆ ಹೀಗೆ ಎಲ್ಲಾ ಜಿಲ್ಲೆಗಳಿಂದಲೂ ಈ ಬಗ್ಗೆ ಕಂಪ್ಲೈಂಟ್ ಬರುತ್ತಲೇ ಇದೆ. ಇದು ಲೋಡ್ ಜಾಸ್ತಿ ಆಗುವುದರಿಂದ ಮತ್ತು ಅನೇಕ ಕಡೆಗಳಲ್ಲಿ ಭಾವಿಗಳು ಆಗುತ್ತಿರುವುದರಿಂದ ನಾವು ವರ್ಲ್ಡ್‌ಬ್ಯಾಂಕ್ ನೆರವಿನಿದಲೋ ಸರಕಾರದ ಸಹಾಯದಿಂದಲೋ ಏನಾದರೂ ವ್ಯವಸ್ಥೆ ಮಾಡದಿದ್ದರೆ ಆಗುವುದಿಲ್ಲ ಅದಕ್ಕಾಗಿ ದೊಡ್ಡ ಪ್ರಮಾಣದಲ್ಲಿ ನಾವು ಆ ಕೆಲಸವನ್ನು ತೆಗೆದುಕೊಂಡಿದೇವೆ. ಕರೆಂಟ್ ಕೊರತೆಯಿಂದಾಗಿ ಇಂಡಸ್ಟ್ರೀಯಲ್ ಗ್ರೋತ್ ನಮ್ಮಲ್ಲಿ ಹಾಗೆಯೇ ನಿಂತಿದೆ. ಅದಕ್ಕಾಗಿ libaralised policy announced by the Government of India.ಏನು ಇದೆ ಅದರ ಹಿನ್ನೆಲೆಯಲ್ಲಿ ನಾವು ಕೂಡ ಸಿಂಗಲ್‌ವಿಂಡೋ ಯೋಜನೆಯನ್ನು ಹಾಕಿ ಅನುಕೂಲ ಮಾಡಿಕೊಡಬೇಕು ಇಂಡಸ್ಟ್ರೀಗಳು ನಮ್ಮಲ್ಲಿ ಜಾಸ್ತಿ ಆಗಬೇಕು. ಕರ್ನಾಟಕಕ್ಕೆ ಬೇಕಾದಷ್ಟು ಜನರು ಬಂದು ಇಂಡಸ್ಟ್ರೀಸ್ ಸೆಟಪ್ ಮಾಡಬೇಕು ಅದು ಬೆಂಗಳೂರಿಗೆ ಮಾತ್ರ ಅಲ್ಲ ರಾಜ್ಯದ ಬೇರೆ ಕಡೆಗಳಲ್ಲಿಯೂ

ಮಾಡಿದೇವೆ. ಇಂಡಸ್ಟ್ರೀಸ್ ವಿಚಾರದಲ್ಲಿ ಕೇಂದ್ರದವರು ಪಾಲಿಸಿ ಏನಿದೆ ಅದರ ಹಿನ್ನೆಲೆಯಲ್ಲಿ ನಾವು ಕೂಡ ನಮ್ಮ ಕೆಲವು ಪಾಲಿಸೀಸ್‌ಗಳನ್ನು ತೆಗೆದುಕೊಂಡು ಅದನ್ನು ಅನೌನ್ಸ್ ಮಾಡಿದ್ದೇವೆ. Liberalised policy announced by Government of India.ಅದರ ಪ್ರಕಾರ ಸಿಂಗಲ್‌ವಿಂಡೋ ಏಜನ್ಸಿ ಕೂಡ ಒಂದು ಇದರಿಂದ ನಮಗೆ ಸಮಯದ ಉಳಿತಾಯ ಆಗುತ್ತದೆ ಮತ್ತು ಈ ಕಂಬರ್‌ಸಮ್ ಪ್ರೋಸೀಜರ್‌ನ್ನು ಕೂಡ ನಾವು ಅವಾಯಡ್ ಮಾಡಿದಂತಾಗುತ್ತದೆ. ಇದನ್ನು ಮಾಡುವುದರಿಂದಾಗಿ ಅನೇಕ ಜನ ಅಪ್ಲಿಕೆಂಟ್ಸ್ ಮುಂದೆ ಬರುವ ಬಗ್ಗೆ ತಮ್ಮ ಅಭಿಲಾಶೆಯನ್ನು ತೋರಿಸಿದ್ದಾರೆ. ಹಾಗೆ ಮಾಡಬೇಕಾದರೆ ಅವರಿಗೆ ಸಪ್ಲೈ ಮಾಡುವುದಕ್ಕೆ ಪವರ್‌ನ್ನು ರೆಡಿ ಮಾಡಿ ಇಟ್ಟುಕೊಳ್ಳಬೇಕು.

ಪವರ್ ಇಲ್ಲದಿದ್ದರೆ ಎಷ್ಟೇ ಪ್ರೋಸಿಜರ್ಸ್ ಸಿಂಪ್ಲಿಫೈ ಮಾಡಿದರೂ ಪ್ರಯೋಜನವಿಲ್ಲ. ಈ ದೃಷ್ಟಿಯಿಂದ ಜಾಸ್ತಿ ಪವರ್ ಜನರೇಷನ್‌ಗೆ ನಾವು ಹೆಚ್ಚು ಗಮನ ಕೊಡಬೇಕು. ಹಾಗೆಯೇ ವೋಲ್ಟೇಜ್ ಚೆನ್ನಾಗಿ ಬರಬೇಕೆಂಬ ದೃಷ್ಟಿಯಿಂದ ನಾವು ಇಂಡಸ್ಟ್ರೀಯಲ್ ಗ್ರೋಥ್‌ಗೆ ಕೂಡ ಹೆಚ್ಚು ಗಮನ ಕೊಡಬೇಕೆಂದು ಇಟ್ಟುಕೊಂಡಿದ್ದೇವೆ. ಅನಂತರ ಈ ಟಿ ಅಂಡ್ ಟಿ ಲಾಸಸ್ ಇದು ತಮಗೆಲ್ಲ ಗೊತ್ತಿರತಕ್ಕಂಥ ವಿಚಾರ. 1990-91ಕ್ಕೆ ಸುಮಾರು ಎಷ್ಟು ಅಸೆಸ್ ಮಾಡಿದ್ದಾರೆ ಅಂದರೆ 19.6 ಪರ್‌ಸೆಂಟ್ ಅದು ಆಲ್‌ಇಂಡಿಯಾ ಲೇವಲ್ ಇರುವುದು 23 ಪರ್‌ಸೆಂಟ್ ಇಲ್ಲಿ ನಮ್ಮ ಗುರಿ ಇರುವುದು ಪ್ರತಿವರ್ಷ every year at least it should be reduced by half purcent. ಎನ್ನುವ ವಿಚಾರವನ್ನು ನಾವು ಇಟ್ಟುಕೊಂಡು ಸುಮಾರಾಗಿ by the end of 8th five year plan period ನಲ್ಲಿ ಅದನ್ನು 16ಪರ್‌ಸೆಂಟ್‌ಗೆ ನಾವು ತಂದು ನಿಲ್ಲಿಸಬೇಕು ಎಂಬ ಉದ್ದೇಶವನ್ನು ಇಟ್ಟು ನಾವು ಈ ಮೆಂಟೇನೆನ್ಸ್ ಡಿಸ್ಟ್ರೀಬ್ಯೂಶನ್ ವಿಚಾರಗಳ ಬಗ್ಗೆ ಹೆಚ್ಚಿನ ಗಮನವನ್ನು ಹರಿಸುತ್ತಾ ಇದ್ದೇವೆ. ಟ್ರಾನ್ಸಮಿಶನ್ಸ್ ಟ್ರಾನ್ಸ್‌ಫಾರ್ಮರ್ಸ್ ಕೆಲವು ಹಳೆಯದಾಗಿಬಿಟ್ಟಿವೆ ಅವುಗಳು ರಿಪೇರಿ ಮಾಡುವುದಕ್ಕೆ ಕೂಡ ಬರುವುದಿಲ್ಲ. ಪತ್ರಿಕಯೆಲ್ಲಿ ಬಂದ ಸುದ್ಧಿ ಆಧರಿಸಿ, ಮಾನ್ಯ ಸದಸ್ಯರೊಬ್ಬರು ಭಾಷಣಮಾಡಿದರು. ಶರಾವತಿ ವ್ಯಾಲಿ ಪ್ರಾಜೆಕ್ಟ್‌ನಲ್ಲಿ ಯಾರೊ ಒಬ್ಬ ಮಾಡಿದ ತಪ್ಪಿನಿಂದ ಎರಡು ಕೋಟಿ ರೂ.ಗಳಷ್ಟು ಹಾನಿಯಾಗಿದೆ ಎಂದು ಹೇಳಿದ್ದರು, ಅದು ಸರಿಯಲ್ಲ, ಅದು ತೊಂದರೆಯಾಗಿ ನಿಂತಿರುವುದು ನಿಜ. ಅದು ಯಾರ ತಪ್ಪಿನಿಂದಲೂ ಆದದ್ದಲ್ಲ. ಅದು 25 ವರ್ಷಗಳಿಗಿಂತಲೂ ಹೆಚ್ಚು ಹಳೆಯದ್ದಾಗಿದೆ. ಅದು ತಾನಾಗಿಯೇ ನಿಂತಿರತಕ್ಕಂಥದ್ದು. ಈಗ ಅದನ್ನು ರಿಪೇರಿ ಮಾಡುತ್ತಿದ್ದಾರೆ. ಅದಷ್ಟು ಬೇಗ ಅದನ್ನು ರಿಪೇರಿ ಮಾಡಿ ಮತ್ತೆ ಅದನ್ನು ಕಮಿಶನ್ ಮಾಡುವುದಕ್ಕೆ ನಾವು ಹೆಚ್ಚಿನ ಗಮನವನ್ನು ಕೊಡುತ್ತೇವೆ.

ಇನ್ನು ಸ್ಟ್ರೀಟ್‌ಲೈಟ್ಸ್ ಕೊಡುವ ವಿಚಾರದಲ್ಲಿ, ಲೋಕಲ್ ಬಾಡಿ ಲೈಕ್ ಮಂಡಲ್ ಪಂಚಾಯಿತಿ ಅದರ ಬಗ್ಗೆ ಇರೋದು. ಅವುಗಳ ಚಾರ್ಜ್ ಯಾರು ಕಟ್ಟಬೇಕು, ಹೇಗೆ ಕಟ್ಟಬೇಕು ಎಂಬುದೆಲ್ಲ ತಮಗೆ ಗೊತ್ತಿದೆ, ಫಾರ್, ಎಗೆನೆಸ್ಟ್ ಅಭಿಪ್ರಾಯಗಳು ಸಾಕಷ್ಟಿವೆ. ಅದನ್ನು ಏನು ಮಾಡಬೇಕೆಂಬ ಅಭಿಪ್ರಾಯ ತಾವು ಕೊನೆಯಲ್ಲಿ ಕೊಡ್ತೀರಿ, ಕೊಟ್ಟಾದಮೇಲೆ ಅದನ್ನು ಅಂತಿಮವಾಗಿ ವಿಚಾರ ವಿನಿಮಯ ಮಾಡಬೇಕು. ಇವತ್ತು, ಹಣ ಯಾರೂ ಕಟ್ಟುತ್ತಾ ಇಲ್ಲ, ಎಲೆಕ್ಟ್ರಿಸಿಟಿ ಬೋರ್ಡ್ ಗತಿಯೇನಾಗಬೇಕು? These are all the matters that are ragging our brains. ಎಂಬ ಭಾವನೆಯಿಂದ ಈ ಮಾತನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಇನ್ನು ಐಪಿ ಸೆಟ್‌ಗೆ ಸಪ್ಲೈ ಮಾಡುವ ಪವರ್ ಇದೇನಿದೆ ಇದು ...

ಟೋಟಲ್ ಪವರ್ ಕನ್‌ಶಂಪಷನ್ ಇಂದಿ ಸ್ಟೇಟ್ 30ಪರ್ಸೆಂಟ್ ನಾವು ಕೊಡಬೇಕಾದರೆ ಈಗಾಗಲೇ ಹಲವಾರು ಕನ್‌ಸೇಶನ್ಸ್ ಕೊಡುವ ಕೆಲಸ ನಾವು ಮಾಡಿದ್ದೇವೆ ತಮ್ಮ ಕಾಲದಲ್ಲೂ ಒಂದು ರೀತಿ ಕನ್‌ಶೀಶನ್ ಕೊಟ್ಟಿದ್ದೀರಿ, ಆಮೇಲೆ ನಾವು ಕೊಟ್ಟಿದ್ದೇವೆ, ಕೋಆಪರೇಟೀವ್ ಸೊಸೈಟೀಸ್ಗೆ ಕೊಟ್ಟಿದ್ದೇವೆ, ಕೋಆಪರೇಟೀವ್ ಸೊಸೈಟೀಸ್‌ನಲ್ಲಿ ರಿಜಿಸ್ಟರಾಗದೆ ಬೇರೆ ಕೆಲವು ಬಂದಿರುವುದು, ಸಚಿವ ಶ್ರೀ ರಾಮಪ್ಪನವರು ಆ ವಿಚಾರಕ್ಕೆ ಉತ್ತರ ಕೊಡುತ್ತಾರೆ.

ಕೆಲವು ಅಸೋಶಿಯೇಶನ್ಸ್ ಪಾರ್ಟನರ್ ಶಿಪ್ ಆಕ್ಟ್ ಪ್ರಕಾರ ರಿಜಿಸ್ಟರ್ ಮಾಡಿಕೊಂಡಿದ್ದಾರೆ, ಬೇರೆ ಕಾನೂನು ಪ್ರಕಾರ ಮಾಡಿಕೊಂಡಿದ್ದಾರೆ ಅವರು ಏನು ಹೇಳುತ್ತಾರೆ ಸ್ವಾಮಿ, ನಾವು ಈ ರೀತಿ ಮಾಡಿಕೊಂಡುಬಿಟ್ಟಿದ್ದೇವೆ ನಮಗೂ ರಿಯಾಯಿತಿ ಕೊಡಿ ಎಂದಾಗ ಅದು ಬೆಳಗಾಂ ಜಿಲ್ಲೆಯಲ್ಲಿ ಬಹಳ ಇದೆ. ಇದರ ಬಗ್ಗೆ ಅನೇಕ ಸದಸ್ಯರು ಬಂದು ಸರ್ಕಾರದ ಮುಂದೆ ಹೇಳಿದ್ದಾರೆ ಆ ವಿರರಗಳು ರಾಮಪ್ಪನವರಿಗೆ ಗೊತ್ತಿದೆ, ಅದಕ್ಕೆ ಅವರು ಉತ್ತರ ಕೊಡ್ತಾರೆ. ಈ ರೀತಿ ನಾವು ಕನ್‌ಸಿಶನ್ ಕೊಟ್ಟರೆ ಸುಮಾರು 1 ಕೋಟಿ ರೂ. ಲಾಸಾಗಬಹುದೆಂಬ ಅಂದಾಜು ಕೂಡ ನಾವು ಮಾಡಿದ್ದೇವೆ. ಕೌಜಲಗಿಯವರೇ ಹೆಚ್ಚಾಗಿ ಉಪಯೋಗ ಆಗೋದು ನಿಮ್ಮ ಬೆಳಗಾಂ ಜಿಲ್ಲೆಗೆ. ಓಕೆ. ರೈತರಿಗೆ ಕೊಡುವುದು. ಇಲ್ಲಿರುವ ಪ್ರಶ್ನೆ ನಾವು ಐಪಿ ಸೆಟ್‌ಗೆ ಕೊರತೆ ಮಾಡುವಹಾಗಿಲ್ಲ, ಆದ್ದರಿಂದಲೇ ಹೆಚ್ಚಿನ ಪವರ್ ಇರುವ ಕೆಇಬಿ ಲೈನನ್ನು ಹಾಕುವುದಕ್ಕಾಗಿ ನಾವು ಮ್ಯಾಸೀವ್ ಸ್ಕೇಲ್ನಲ್ಲಿ ಹೋಗುತ್ತಾ ಇದ್ದೇವೆ. ಹಾಗೆ ಹೋಗಬೇಕೆಂದರೆ ಎನ್‌ಜಿಇಎಫ್, ಟ್ರಾನ್ಸ್‌ಫಾರ್ಮರ್, ಮೊನ್ನೆ ತಾನೇ ಕೋಲಾರ ಜಿಲ್ಲೆಯ ಸಚಿವ ಶಾಸಕ ಮಿತ್ರರು ಎಲ್ಲ ಬಂದಿದ್ದರು. ಎಲ್ಲಾ ಪಕ್ಷದ ಮುಖಂಡರು ಮೊನ್ನೆ ಬಂದಿದ್ದರು, ನಾನೂ ವಿದ್ಯುತ್ ಸಚಿವರು ಒಟ್ಟಿಗೆ ಭೇಟಿ ಮಾಡಿದ್ದೆವು, ಅವರು ಏನು ಹೇಳುತ್ತಾರೆ ಎಂದರೆ ನಮಗಿಷ್ಟು ತೊಂದರೆಯಾಗಿದೆ ಅದೆಂಥದೋ ಒಂದು ಲೈನ್, ಅದು ಮರೆತುಹೋಯಿತು, ಅದನ್ನು ನಮಗೆ ಹಾಕಿಕೊಟ್ಟರೆ ನಮಗೆ ಸರಿಯಾಗುತ್ತದೆ ಎಂದು. ನಾನು ಈಗಾಗಲೇ ಕೆಇಬಿ ಚೇರ್ಮನ್‌ಗೆ ಹೇಳಿದ ತಕ್ಷಣ ನಿನ್ನೆ ವರ್ಕ್ ಆಗಲೇ ಸ್ಟಾರ್ಟಾಗಿಬಿಟ್ಟಿದೆ. ಅದನ್ನು ಹಾಕುವುದರಿಂದ ವೋಲ್ಟೇಜ್‌ಗೆ ಜಾಸ್ತಿಯಾಗುತ್ತದೆ. ಎನ್‌ಜಿಇಎಫ್‌ನವರು ಎರಡು ದಿವಸದಲ್ಲಿ ಕೊಡ್ತೇವೆ ಅಂದಿದ್ದಾರೆ ಅದಕ್ಕಾಗಿ ಮೊದಲು ಲೈನ್ ಹಾಕಿ ಎಂಬ ಆದೇಶವನ್ನು ಕೆಇಬಿಗೆ ನಾವು ಕೊಟ್ಟಿದ್ದೇವೆ. ಇದನ್ನು ಮಾಡುವುದರಿಂದ ಇಂದು ಕುಡಿಯುವ ನೀರಿಗೆ, ರೈತರಿಗೆ ಏನು ತೊಂದರೆಯಾಗ್ತದೆ ಅದನ್ನೂ ನಿವಾರಿಸಬಹುದು ಬೋರ್‌ವೆಲ್‌ಗಳು 400, 500, 600 ಅಡಿವರೆಗೂ ಹೋಗಿವೆ, ಏಕೆಂದರೆ ವಾಟರ್‌ಟೇಬಲ್ ಕೆಳಗೆ ಹೋಗಿದೆ. ಈ ವರ್ಷ ಪ್ರಾರಂಭದಲ್ಲಿ ಬಿತ್ತನೆಯಾಯಿತು ಆದರೆ ಮತ್ತೆ ಮಳೆ ಹೊರಟುಹೋಗಿಬಿಟ್ಟಿದೆ. ತುಮಕೂರು ಜಿಲ್ಲೆಯಲ್ಲಿ ಕೆಲವು ಭಾಗದಲ್ಲಿ ಇನ್ನೂ ಬಿತ್ತನೆಯಾಗಿಲ್ಲ, ಜಯಚಂದ್ರರವರ ಕ್ಷೇತ್ರ, ನಾರಾಯಣರವರ ಪಕ್ಕದ ಕ್ಷೇತ್ರ ಅಲ್ಲೊಂದೆರಡು ತಾಲೂಕಿನಲ್ಲಿ ಬಿತ್ತನೆಯಾಗಿಲ್ಲ, ಕುಡಿಯುವ ನೀರಿಗೆ ಇನ್ನೆಷ್ಟು ಅಭಾವ ಬರಬಹುದೆಂದು ನಮಗೆ ಅಂದಾಜು ಮಾಡಬಹುದು. We are in the midst of the rainy season. ಈ ಮಧ್ಯೆ ಇದ್ದರೂ ಯೋಚನೆ ಮಾಡಬೇಕಾದ ಸಂದರ್ಭ. ಪುಣ್ಯಕ್ಕೆ ಮೊನ್ನೆ ಕೂಡ ಮಳೆಬಿದ್ದಿದೆ, ಈ ಕಡೆ ಇನ್ನೂ ಮಳೆಬರುವ ಲಕ್ಷಣ, ಮದ್ರಾಸ್ ಕಡೆ ಬರುವ ಮಾನ್‌ಸೂನ್ ನಮಗಿರುವುದರಿಂದ ಮಳೆ ಚೆನ್ನಾಗಿ ಬೀಳಲಿ ಎಂದು ನಮ್ಮ ಆಸೆ. ಸರಿಯಾಗಿ ಕೆರೆಕಟ್ಟೆ ತುಂಬಿಕೊಂಡರೆ ನಾಳೆ ವಾಟರ್‌ಟೇಬಲ್ ಮೇಲಕ್ಕೆ ಬರಬಹುದು. ಈ ಸಂದರ್ಭದಲ್ಲಿ ನಾವು ಜಾಸ್ತಿ ಪವರ್ ಕನೆಕ್ಷನ್ ಕೊಡಬೇಕು, ಮೂರು ಕಂಬಗಳವರೆಗೆ ಎಂದು ಏನಿತು ಕೆಇಬಿದು ಅದನು 5 ಕಂಬಗಳವರೆಗೆ ಎಂದು ಬೋರ್ಡಿನಲ್ಲಿ ನಾವು

ತೀರ್ಮಾನಿಸಿ ಕನೆಕ್ಷನ್ ಕೊಡುವುದಕ್ಕೆ ಒಂದು ಕಂಬ ಹೆಚ್ಚುಕಮ್ಮಿಯಾದರೂ ಕೊಟ್ಟುಬಿಡಿ ಎಂದು ಬರಗಾಲದ ದೃಷ್ಟಿಯಿಂದ ತಿಳಿಸಿದ್ದೇವೆ. ಇನ್ನು ಕೆಇಬಿಯಲ್ಲಿ ಸಾಮಾನುಗಳ ಖರೀದಿ ವಿಚಾರದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮಾತಾಡಿರುವುದು ನನಗೆ ಗೊತ್ತು.

4.45 ಪಿ.ಎಂ.

ಅದು ತಂತಿ ಇರಬಹುದು, ಮತ್ತೊಂದು ಸಾಮಾನು ಇರಬಹುದು, ಅದು ಏನೇ ಇರಬಹುದು, ಏನು ಮಾಡಿದರೂ ಕೂಡ ಇದರಲ್ಲಿ ಕಾನೂನನ್ನು ಬಿಟ್ಟು ಏನೂ ಮಾಡಿಲ್ಲ. ಛೇರ್ಮನ್ ಕೂಡ ಅಲ್ಲಿ ಖರೀದಿಯನ್ನು ಮಾಡುವ ಹಾಗೆ ಇಲ್ಲ. There is a Committee specifically meant for this under his chairmanship only.

ಟೆಂಡರನ್ನು ಓಪನ್ ಆಗಿ ಕರೆಯತಕ್ಕಂಥ ಪದ್ಧತಿ. ಲೋಯರ್ ಟೆಂಡರ್ ಯಾರು ಇದ್ದಾರೆ, ಅದನ್ನು ನೋಡಿ ಕೊಟ್ಟಿರತಕ್ಕಂಥದ್ದು ಒಂದು ಪದ್ಧತಿ. ಅದರಲ್ಲಿ ಪಬ್ಲಿಕ್ ಸೆಕ್ಟರ್ ಅಂಡರ್ಟೇಕಿಂಗ್ಸ್‌ನ್ನು ಗಮನದಲ್ಲಿ ಇಡತಕ್ಕಂಥದ್ದು, ಆಮೇಲೆ ಎಸ್‌ಎಸ್‌ಐ ಯೂನಿಟ್ಸ್, ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಅದು ಒಂದು ಆರ್ಡರ್ ಕೂಡ ಇದೆ. ಪ್ರೈಯಾರಿಟಿಯನ್ನು ಅದಕ್ಕೆ ಕೊಡಬೇಕು ಎನ್ನತಕ್ಕ ವಿಚಾರ ಕೂಡ ಇದೆ.

ಅದರ ಪ್ರಕಾರ ಮಾತ್ರ ಖರೀದಿ ಮಾಡಿದ್ದೇವೆಯೇ ವಿನಹ ಕಾನೂನನ್ನು ಬಿಟ್ಟು ಯಾವುದೇ ಖರೀದಿಯನ್ನು ಕೂಡ ಇದರಲ್ಲಿ ಮಾಡಿಲ್ಲ. ಅದುದರಿಂದ ತಮ್ಮ ಗ್ರಹಿಕೆ, ಕೆಲವು ಕಾರಣಗಳ ಮೇಲೆ ಏನಾದರೂ ಇದ್ದರೆ ಅದು ಸರಿಯಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ತಮ್ಮ ಸಲಹೆ ಏನಾದರೂ ಇದ್ದರೆ ಕೊಡಿ, ಇನ್ನುಬಿಗಿ ಮಾಡುವುದಕ್ಕೆ ಅಥವಾ ಯಾವ ರೀತಿ ಮಾಡಬೇಕಾಗಿದೆಯೋ ಅಥವಾ ಕ್ವಾಲಿಟಿಯ ವಿಚಾರದಲ್ಲಿ we are not technically qualified people. There are other persons meant for that. ನಾವು ಅವರಿಗೆ ಹೇಳೋಣ. ಆದರೆ ಟೆಂಡರ್ಸನ್ನು ಬಿಟ್ಟು, ನಾವು ಮಾಡುವುದಕ್ಕೆ ತಯಾರಾಗಿಲ್ಲ. ಪ್ರತಿಯೊಂದಕ್ಕೂ ಟೆಂಡರ್ ಕರೆದು ಮಾತ್ರ ಮಾಡತಕ್ಕಂಥ ಆದೇಶ ಇವತ್ತು ಎಲೆಕ್ಟ್ರಿಸಿಟಿ ಬೋರ್ಡ್‌ಗೆ ಇದೆ. ಬೋರ್ಡ್‌ನವರು ಕೂಡ ಹಾಗೆಯೇ ಮಾಡಿಕೊಂಡು ಹೋಗುತ್ತಿದ್ದರೆ. ತಮ್ಮಿಂದ ಸಲಹೆಗಳು ಬಂದರೆ ಸರ್ಕಾರ ಅವುಗಳನ್ನು ಸ್ವೀಕಾರ ಮಾಡಿ, ಕೆ.ಇ.ಬಿ.ಗೆ ಕೊಡುವುದಕ್ಕೆ ಸಿದ್ಧವಾಗಿದೆಯೆಂದು ಈ ಸಂದರ್ಭದಲ್ಲಿ ತಮಗೆ ತಿಳಿಸುತ್ತಿದ್ದೇನೆ. ಇನ್ನು ನಮಗೆ ಕುದುರೆಮುಖದಿಂದ ಬರತಕ್ಕಂಥ ಹಣ ಇವತ್ತು ಎಷ್ಟಿದೆ ಎಂದರೆ ಇದು ತಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿರತಕ್ಕಂಥದ್ದು. ಅವರಿಂದ ಬರತಕ್ಕಂಥ ಹಣ Rs. 123.91 crore.

ಆ ಹಣ ಬಂದುಬಿಟ್ಟಿದ್ದರೆ ಎಷ್ಟೋ ನಮಗೆ ಅನುಕೂಲ ಆಗುತ್ತಿತ್ತು. 123.91 ಕೋಟಿ ಅಂದರೆ ಸುಮಾರು 124 ಕೋಟಿ ರೂಪಾಯಿ ಹಣ ಬರಬೇಕು. ಅದು ಡಿಸ್‌ಪ್ಯೂಟ್‌ನಲ್ಲಿ ಹೋಗಿ ಕುಳಿತುಕೊಂಡಿದೆ. ಈ ಹಣ ನಮಗೆ ಬರುತ್ತಿಲ್ಲ. ಅವರ ಮತ್ತು ನಮ್ಮ ಕೆ.ಇ.ಬಿ ಮಧ್ಯೆ ಬೇಕಾದಷ್ಟು ಮೀಟಿಂಗ್‌ಗಳು ನಡೆದಿದೆ. ಅವರು ಡಿಸ್‌ಪ್ಯೂಟನ್ನು ಸೆಟ್ಲ್ ಮಾಡುವ ವಿಚಾರದಲ್ಲಿ ಅಂತಿಮ ತೀರ್ಮಾನಕ್ಕೆ ಕೂಡ ಬಂದಿಲ್ಲ. ಮಾತುಕತೆಯನ್ನು ಮುಂದುವರೆಸತಕ್ಕಂಥ ಸಂದರ್ಭದಲ್ಲಿದ್ದಾರೆ. ಇನ್ನೂ ಅಂತಿಮ ತೀರ್ಮಾನಕ್ಕೆ ಬಂದಿಲ್ಲ. ಹಿಂದೆ ತಮಗೆ ಗೊತ್ತಿರುವ ಹಾಗೆ ಭದ್ರಾವತಿಯ ವಿ. ಐ. ಎಸ್. ಎಲ್. ಗೆ ಹಣ ಕೊಡುವುದಕ್ಕೆ ಶಕ್ತಿ ಇರಲಿಲ್ಲ. ಈಗ ತಾವು ಅದಕ್ಕೆಲ್ಲಾ ರೀಹ್ಯಾಬಿಲಿಟೇಷನ್ ಪ್ರೋಗ್ರಾಮ್ ಆದಮೇಲೆ ಪ್ರಾಮ್ಪ್ಟ್ ಆಗಿ ಪೇಮೆಂಟ್ ವಿ. ಐ. ಎಸ್. ಎಲ್. ಗೆ ...

settling arrears due from the local bodies and water supply installations.

ಬಾಕಿ ಏನೇನು ಎಷ್ಟು ಲೋಕಲ್ ಬಾಡೀಸ್ ಕಟ್ಟತಕ್ಕಂಥದ್ದು ಇದೆ, ಅದನ್ನು ಸರ್ಕಾರದವರು ಕೆ. ಇ. ಬಿ. ಗೆ ಕಟ್ಟತಕ್ಕಂಥ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಅದೇ ರೀತಿ ವಾಟರ್ ಸಪ್ಲೈ ಇನ್ಸ್ಟಲೇಷನ್ಸ್ ಎಲ್ಲೆಲ್ಲಿ ಇದೆ, ಇದರಿಂದಲೂ ಕೂಡ ಕರೆಕ್ಟ್ ಆಗಿ ಹಣ ಕೆ. ಇ. ಬಿ. ಗೆ ಬರುತ್ತಿದೆ ಎಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಾನು ಸ್ಥೂಲವಾಗಿ ಕೆ. ಇ. ಬಿ. ಬಗ್ಗೆ ಹೇಳಿದ್ದೇನೆ.ಅನೇಕ ಜನ ಬಹಳಷ್ಟು ಪೋಸ್ಟ್‌ಗಳು ಖಾಲಿ ಕೆ. ಇ. ಬಿ.ಯಲ್ಲಿ ಎಂದು ಹೇಳಿದರು. ಕೆಲಸಕಾರ್ಯಗಳನ್ನು ದೊಡ್ಡ ಪ್ರಮಾಣದಲ್ಲಿ ಮಾಡುವುದಕ್ಕೆ ವಿಶ್ವಬ್ಯಾಂಕನ ಏಡ್‌ನ್ನು ತೆಗೆದುಕೊಂಡು ಹೋಗುತ್ತಿದ್ದೇವೆ. ಸುಮಾರು ಆರು ಸಾವಿರ ವೇಕೆನ್ಸೀಸ್ all classes of vacancies ಅವೆಲ್ಲವೂ ಕೂಡ ಇದೆ. ನಾವು ಅದನ್ನು ಸಂಪೂರ್ಣವಾಗಿ ತುಂಬಬೇಕು. ಆಮೇಲೆ ಡಿಪಾರ್ಟ್‌ಮೆಂಟ್‌ನಲ್ಲಿ ಸರಿಯಾಗಿ ಮ್ಯಾನೇಜ್ ಮಾಡದೇ ಇದ್ದರೆ ನಾವು ಏನು ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ವಿಶ್ವಬ್ಯಾಂಕ್‌ನಿಂದ ಹಾಕಿಕೊಳ್ಳುತ್ತೇವೆ, ಅವುಗಳನ್ನು ಮಾಡಿ ಮುಗಿಸುವುದಕ್ಕೆ ಸಾಧ್ಯವಾಗುವುದಿಲ್ಲ, ಅದಕ್ಕೆ ಹಂತ ಹಂತವಾಗಿ ಹೋಗಬೇಕಾಗಿದೆ. ಒಂದೇ ಸಾರಿಗೆ ಕರೆಯುವ ಹಾಗೆ ಇಲ್ಲ, ಏಕೆಂದರೆ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಹೋಗಬೇಕಾಗಿದೆ. ನಮಗೆ ವಿಶ್ವಬ್ಯಾಂಕ್‌ನಿಂದ ಏಡ್ ಬಂದ ಬಂದ ಹಾಗೆ ತುಂಬಿಕೊಂಡು ಹೋಗಬೇಕು. ಇದನ್ನು ಒಂದೇ ಸಾರಿ ತುಂಬಿಬಿಟ್ಟರೆ ಬರೀ ಸಂಬಳವನ್ನು ಕೊಡುವುದು ಆಗುತ್ತದೆ.

ಇಷ್ಟು ಮಾತನ್ನು ಈ ಸಂದರ್ಭದಲ್ಲಿ ಸ್ಥೂಲವಾಗಿ ತಿಳಿಸಿದ್ದೇನೆ. ಕಾಲದ ಅಭಾವ ಇದೆ. ವಿವರಗಳಿಗೆ ನಾನು ಹೋಗಿಲ್ಲ. ಎಲೆಕ್ಟ್ರಿಸಿಟಿ ಬೋರ್ಡ್‌ದು ಬಹಳ ದೊಡ್ಡ ಸಬ್ಜೆಕ್ಟ್ ಇದೆ. ಇದರ ಬಗ್ಗೆ ಕೂಡ ಮಾತನಾಡಬೇಕಾಗುತ್ತದೆ. ನಾವು ಅದಕ್ಕೆ ಉತ್ತರವನ್ನು ಕೂಡ ಕೊಡಬೇಕಾಗುತ್ತದೆ. ಮಾನ್ಯ ರಾಮಪ್ಪನವರು ಅವರು ಒಂದೆರಡು ವಿಚಾರದಲ್ಲಿ ಮಾತ್ರ ಈಗ ಪ್ರಸ್ತಾಪಮಾಡುತ್ತಾರೆ. ಈಗ ನಾನು ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ : ಸನ್ಮಾನ್ಯ ಅಧ್ಯಕ್ಷರೇ, ನಾನು ಎರಡು ವಿಚಾರವನ್ನು ಪ್ರಸ್ತಾಪ ಮಾಡಿದೆ. ಲಿಂಗನಮಕ್ಕಿ ಜಲಾಶಯದಲ್ಲಿ ವ್ಯರ್ಥವಾಗಿ ಹೋಗಿರತಕ್ಕಂಥ ನೀರು, ಅದರ ಮರು ಉಪಯೋಗಕ್ಕೆ, ಒಂದು ಭಾಗ, ನಾನು ಪ್ರಸ್ತಾಪ ಮಾಡಿದ ಮತ್ತೊಂದು ಭಾಗ 1757 ಲೆವೆಲ್‌ಗೆ 13.6.91 ರಲ್ಲಿ ಏನು ಇತ್ತೋ 14-7-91 ಕ್ಕೆ ನೀರು ಬರುವುದಕ್ಕೆ ಪ್ರಾರಂಭವಾಗುವುದಕ್ಕೆ ಮುಂಚೆ ಏನು ಸುಮಾರು 20 ಅಡಿಗಿಂತ ಹೆಚ್ಚು ನೀರನ್ನು ಬಳಕೆ ಮಾಡಿಕೊಳ್ಳುವುದಕ್ಕೆ ಸಾಧ್ಯ ಇತ್ತು.

ಅದನ್ನು ಬಳಕೆ ಮಾಡದೆ ರಾಜ್ಯಕ್ಕೆ ನಷ್ಟ ಆಗಿದೆ, ಅದನ್ನು ನೀವು ವಿಚಾರಣೆ ಮಾಡಿಸಿ, ಇದಕ್ಕೆ ಜವಾಬ್ದಾರರು ಯಾರು ಎಂದು ಹೇಳಿದೆ.Upto 1825 level - 200 ರಿಂದ 250, ಬಹಳ ಅಂದರೆ, ಹೆಚ್ಚು 300 ಮಿಲಿಯನ್‌ಗೆ ಉಪಯೋಗಕ್ಕೆ ಬೇಕಾದಷ್ಟು ಮಾತ್ರ ಮುಂದಿನ ವರ್ಷಕ್ಕೆಂದು ಇಟ್ಟುಕೊಂಡು ಅಷ್ಟೊಂದು ನೀರನ್ನು ಬಳಸುತ್ತೇವೆ. ಈ ಸಾರಿ ಬಳಸದೆ ಇರುವ ಕಾರಣ ನನ್ನ ಲೆಕ್ಕಕದಂತೆ ಸುಮಾರು 500 ಮಿಲಿಯನ್ ಯುನಿಟ್‌ಗಿಂತ ಹೆಚ್ಚು ವಿದ್ಯುಚ್ಛಕ್ತಿ ಬಳಕೆ ಆಗಬೇಕಾಗಿತ್ತು. ಆಗಿಲ್ಲ. ದಯವಿಟ್ಟು ಇದನ್ನು ವಿಚಾರಣೆ ಮಾಡಿಸಿದರೆ ಸತ್ಯಾಸತ್ಯತೆಗಳು ಹೊರಬರಬೇಕು. ನಾನು ಇಲ್ಲಿ ಜನರೇಟರ್ ಸುಟ್ಟು ಹೋಗಿದೆ. ಸಾಧಾರಣವಾಗಿ ಸುಟ್ಟು ಹೋಗುವುದು ಬೇರೆ,

ಜವಾಬ್ದಾರಿಯುತವಾದಂತಹ ಆಪಾದನೆಯನ್ನು ಮಾಡಿದ್ದೇನೆ. ಈ ಎರಡು ವಿಚಾರಗಳಲ್ಲಿ ತಾವು ತನಿಖೆಯನ್ನು ಮಾಡಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತೊಂದು ಈ ಖರೀದಿಯಲ್ಲಿ ಎರಡು ರೂಪವನ್ನು ಹೇಳಿದ್ದೇನೆ. ಅಗತ್ಯಕ್ಕಿಂತ ಮೂರು ಪಟ್ಟು ಹೆಚ್ಚು ಸಾಮಗ್ರಿಯನ್ನು ಈ ಸಾರಿ ಖರೀದಿ ಮಾಡಿದ್ದಾರೆ. ಅದು ಒಂದು ಭಾಗ. ಎರಡನೆಯ ಭಾಗ, ಲೋಯೆಸ್ಟ್ ಟೆಂಡರಿಗೆ ಕೊಡದೆ ಅದನ್ನು ಸೆಕೆಂಡ್ ಹೈಯೆಸ್ಟ್‌ಗೊ ಅಥವಾ ಫಸ್ಟ್ ಹೈಯೆಸ್ಟ್‌ಗೊ ಕೊಟ್ಟಿದ್ದಾರೆಂಬುದು ನನ್ನ ಭಾವನೆ. ಈ ಮೂರು ವಿಚಾರಗಳು ಜೊತೆಗೆ ಟ್ರಾನ್ಸ್‌ಫಾರ್ಮರ್ ಸುಟ್ಟುಹೊಗುವುದಕ್ಕೆ, under the Electricity Act itself, a transformer's life is about 35 years.

ನಮ್ಮಲ್ಲಿ ಅದಕ್ಕೆ ಹೆಚ್ಚು ಕೆಲಸ ಕೊಡುವುದು,ಮತ್ತು ಕ್ವಾಲಿಟಿ ಇಲ್ಲದೆ ಇರತಕ್ಕ ಟ್ರಾನ್ಸ್‌ಫಾರ್‌ಮರ್‌ಗಳನ್ನು ಕೊಂಡುಕೊಳ್ಳುವುದರಿಂದ 7-8 ಸಾವಿರ ಟ್ರಾನ್ಸ್‌ಫಾರ್‌ಮರ್‌ಗಳು ಪ್ರತಿ ವರ್ಷ ಸುಟ್ಟುಹೋಗುತ್ತದೆ.ಇದರಿಂದ ವಿದ್ಯುಚ್ಛಕ್ತಿ ಇಲಾಖೆಗೆ ನಷ್ಟವಾಗುತ್ತದೆ. ಈ ಮೂರು ಬಾಬುಗಳಲ್ಲಿ ವಿಶೇಷವಾದ ತನಿಖೆಯನ್ನು ಮಾಡಿಸಬೇಕೆಂದು ನನ್ನ ಪ್ರಾರ್ಥನೆ.

ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, As far as SAHP level is concerned, ಅದಕ್ಕೆ ಸಂಬಂಧಪಟ್ಟಂತೆ ಮಾನ್ಯ ವಿರೋಧಪಕ್ಷದ ನಾಯಕರಾದ ಚಂದ್ರೇಗೌಡರ ಅಭಿಪ್ರಾಯವನ್ನು ಗುರ್ತುಮಾಡಿಕೊಂಡು ಇಟ್ಟುಕೊಂಡಿದ್ದೇನೆ. ನೀರು ಬಿಟ್ಟಿರುವ ಲೆವಲ್ ನನಗೆ ಜ್ಞಾಪಕವಿಲ್ಲ, ಅದೇನು ಎನ್ನುವುದನ್ನು , ನೋಡಿ ನಾನು ತಿಳಿಸುತ್ತೇನೆ. ಹಾಗೆನಾದರೂ ಇನ್ನು ತುಂಬುವುದಕ್ಕಿಂತ ಮುಂಚೆಯೇ 1-4-79ಗೆ ಗಮದಲ್ಲಿಟ್ಟು ಮಾಡುತ್ತಾ ಹೋದರೆ, ಲಾಸ್ ಆಗಿರಬಹುದು ಎಂದು ಸಹಜವಾಗಿ ಬರುತ್ತದೆ. ಆದ್ದರಿಂದ ಅದನ್ನು ನೋಡಿ ಎಷ್ಟು ಏನು ಎಂಬುದನ್ನು ನಾನು ವಿಚಾರ ಮಾಡಿ ತಮಗೆ ತಿಳಿಸುತ್ತೇನೆ. ಅನಂತರ ಜನರೇಟರ್ ಸುಟ್ಟಿರುವ ಬಗ್ಗೆ ಎನ್‌ಕ್ವೈರಿ ಮಾಡಿಸಬೇಕಾಗುತ್ತದೆ. ನಾನು ಅದನ್ನು ಮಾಡಿಸುತ್ತೇನೆ. ಇನ್ನು ಬಹಳ ಮುಖ್ಯವಾಗಿರತಕ್ಕದ್ದು ಟ್ರಾನ್ಸ್‌ಫಾರ್‌ಮರ್‌ಗಳೇ ಕೈಕೊಟ್ಟಿರುವುದು ಗಮನದಲ್ಲಿದೆ. ಇನ್ನು ಕೆಲವು ಹಾದಿಯಲ್ಲಿ ಅವುಗಳು ಹೋಗಿಬಿಡುತ್ತದೆ ಎಂಬ ಭಾವನೆ ಬಂದಿದೆ. ಸಪ್ಲೈ ಮಾಡುವವರು ಯಾರ್‍ಯಾರು ಇದ್ದಾರೆ ಅದು ಎನ್. ಜಿ. ಇ. ಎಫ್. ನವರು ಇರಬಹುದು, ಮತ್ತೊಬ್ಬರದು ಇರಬಹುದು, ಅವರು ಕ್ವಾಲಿಟಿಯ ಬಗ್ಗೆ ನೀಗ ಕೊಡದೆ ಇದ್ದರೆ, ನಾವು ಇಷ್ಟು ಸಾಲ ಮಾಡಿ, ವರ್ಲ್ಡ್ ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡು ಹಾಕಿ, ನಾಳೆ ಟ್ರಾನ್ಸ್‌ಫಾರ್‌ಮರ್ ಕೆಟ್ಟು ಹೋದರೆ ಅದರ. ಗತಿ ಏನು ಎನ್ನುವ ವಿಚಾರದ ಬಗ್ಗೆ ನಾವು ಈಗಾಗಲೇ ಚರ್ಚೆ ಮಾಡಿದ್ದೇವೆ. ಇದಕ್ಕೆ ಹೆಚ್ಚಿನ ಗಮನ ಕೊಡತಕ್ಕ ಅವಶ್ಯಕತೆ ಇದೆ ಎನ್ನುವುದನ್ನು ಒಪ್ಪುತ್ತೇನೆ. ಆ ಬಗ್ಗೆ ಆದೇಶ ಕೊಡುತ್ತೇನೆ. ಇನ್ನು ಟೆಂಡರ್ ವಿಚಾರದಲ್ಲಿ ಅಗತ್ಯಕ್ಕಿಂತ ಹೆಚ್ಚು ಸಾಮಾನುಗಳನ್ನು ಖರೀದಿ ಮಾಡಿರುತ್ತಾರೆ. ಆ ಪಟ್ಟಿಯನ್ನು ನಾನು ನೋಡಿದ್ದೇನೆ. ನಾನು ಇನ್ನೊಂದು ಸಾರಿ ನೋಡುವುದಕ್ಕೂ I don't hesitate.

ಆದರೆ ನಾವು ಒಂದು ಕಡೆ ಮ್ಯಾಸಿವ್ ವರ್ಕ್ ತೆಗೆದುಕೊಳ್ಳುತ್ತಿದ್ದೇವಲ್ಲಾ ಒಂದು ಕಡೆ ನಾವು ತೆಗೆದುಕೊಳ್ಳಬೇಕು, ತೆಗೆದುಕೊಳ್ಳದೆ ಇದ್ದರೆ ಕೆಲಸ ಮಾಡುವುದಕ್ಕಾಗುವುದಿಲ್ಲ. ತಮ್ಮ ಅಭಿಪ್ರಾಯವನ್ನು ನಾನು ತಪ್ಪು ತಿಳಿದುಕೊಂಡು ಮಾತನಾಡುತ್ತಿಲ್ಲ. ಜಾಸ್ತಿಯಾಗಿ ಹೋಗಬೇಕೆಂದರೆ, ಜಾಸ್ತಿಯಾಗಿ ತೆಗೆದುಕೊಳ್ಳಲೇ ಬೇಕು. ಆದರೆ ಅಗತ್ಯಕ್ಕಿಂತ ಹೆಚ್ಚಾಗಿ ಎಂದು ತಾವು ಹೇಳಿದ್ದೀರಿ, ಅದನ್ನು ನಾನು ನೋಡುತ್ತೇನೆ. ಅಲ್ಲಿ ಎಷ್ಟು ರಿಕ್ವೈರ್‌ಮೆಂಟ್ ಇದೆ including 440 to 220 KV

ಗ್ರಂಥಾಲಯಂ, ವಿಧಾನ ಸೌಧ, ಬೆಂಗಳೂರು

ಮತ್ತೊಂದು ಇರಬಹುದು, ಅದು ಅಗತ್ಯಕ್ಕಿಂತ ಜಾಸ್ತಿ ಇತ್ತೇ? ಹೇಗೆ ಎಂದು ನಾವು ವಿಚಾರ ಮಾಡುತ್ತೇವೆ. ಏಕೆಂದರೆ ಬೋರ್ಡ್ ... ಹೋಗಿದೆ ... ಒಂದೂ ಕೂಡ ಅವರು ಮಾಡುವ ಹಾಗಿಲ್ಲ. ತಾವು ಹೇಳಿರತಕ್ಕ ಮಾತನ್ನು ನೋಡಿಕೊಂಡು ನಾವು ವಿಚಾರ ಮಾಡದೇ ಹೋದರೆ ಏನು ಗೊತ್ತಾಗುವುದಿಲ್ಲ. As far as the rate is concerned. ಯಾವುದೇ ಟೆಂಡರ್ ಆದರೂ ಲೋಯಿಸ್ಟ್ ಟೆಂಡರಿಗೆ ಕೊಡತಕ್ಕದ್ದು ಕಾನೂನು ವಿಧಿವಿಧಾನವನ್ನು ನಾವು ಮೊದಲಿನಿಂದಲೂ ಅನುಸರಿಸಿಕೊಂಡು ಬಂದಿದ್ದೇವೆ.

ಆದರೆ ಯಾರು ಲೋಯೆಸ್ಟ್ ಟೆಂಡರ್ ಕೊಟ್ಟಿರುತ್ತಾರೋ ಅವರ ಚರಿತ್ರೆಯನ್ನು ನಾವು ನೋಡಬೇಕಾಗಿದೆ. ಬರೀ ಲೋಯೆಸ್ಟ್ ಟೆಂಡರ್ ಎಂದು ನೋಡಿಕೊಂಡು ಹೋದರೆ ಅನೇಕ ಸಲ ನಾವು ತೊಂದರೆಗೆ ಸಿಕ್ಕಿಕೊಂಡಿರುವುದು ನಮ್ಮ ಗಮನದಲ್ಲಿದೆ. ಏಕೆಂದರೆ,the background of the company or the person who comes forward with the lowest tender. ಕೂಡ ಮಿಸ್‌ಯೂಸ್ ಆಗುವುದಕ್ಕೆ ಸಾಧ್ಯವಿದೆ. ಏಕೆಂದರೆ ಅವನ ಬ್ಯಾಕ್‌ಗ್ರಾಂಡ್ಸ್ ನಮಗೆ ಗೊತ್ತಿರುವುದಿಲ್ಲ. ಇಲ್ಲಿ ಕೊಟ್ಟಿರುವಂಥ ಆದೇಶದ ಪ್ರಕಾರ,ಬೋರ್ಡ್ ತೀರ್ಮಾನದ ಪ್ರಕಾರ, ಹಾಗೆ ಆಗುವುದಕ್ಕೆ ನಾವು ಅವಕಾಶ ಕೊಟ್ಟಿಲ್ಲ. ಒಂದು ವೇಳ ಹಾಗೇನಾದರೂ ಕೊಟ್ಟಿದ್ದರೆ, ಫಸ್ಟ್, ಸೆಕೆಂಡ್ ಹೈಯೆಸ್ಟ್‌ಗೆ ಏನಾದರೂ ಕೊಟ್ಟಿದ್ದರೆ ಲೋಯೆಸ್ಟ್ ಬಿಟ್ಟು ಅದಕ್ಕೆ ಕಾರಣವೇನು ಎಂಬುದನ್ನು ನೋಡಬೇಕು. Why we have rejected? ಅದನ್ನು ನೋಡಿ ತಮಗೆ ತಿಳಿಸುತ್ತೇನೆ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೆ, ಕುದುರೆಮುಖ ಪ್ರಾಜೆಕ್ಟ್ ಸಾಕಷ್ಟು ಲಾಭದಾಯಕವಾಗಿ ನಡೆಯುತ್ತಿದೆ. ಇಲ್ಲಿಂದ ಕೆ.ಇ. ಬಿ. ಗೆ ಒಂದು ಕೋಟಿ ರೂಪಾಯಿಗಳ ಬಾಕಿ ಬರಬೇಕೆಂದು ಮಾನ್ಯ ಮುಖ್ಯಮಂತ್ರಿಯವರು ತಮ್ಮ ರಿಪ್ಲೈಯಲ್ಲಿ ಹೇಳಿದ್ದಾರೆ. ಬಾಕಿಯನ್ನು ವಸೂಲು ಮಾಡುವುದರಲ್ಲಿ ಇಲಾಖೆಯವರಿಗೆ ಇರುವ ತೊಂದರೆ ಏನು ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಅದು ಒಂದು ಕೋಟಿಯಲ್ಲ, ತಪ್ಪಾಗಿ ಭಾವಿಸಿದ್ದೀರಿ. ಅದು 123.91 ಕೋಟಿ ರೂ. ಗಳು, ರೌಂಡ್ ಫಿಗರ್ ಹೇಳಬೇಕೆಂದರೆ 124 ಕೋಟಿ ರೂ. ಗಳು ಇದು ಸ್ವಲ್ಪ ಡಿಸ್‌ಪ್ಯೂಟ್‌ನಲ್ಲಿದೆ. ಇದಕ್ಕೆ ಹಲವಾರು ಕಾರಣಗಳು ಇವೆ. ಇದರ ಬಗ್ಗೆ ಮಾತುಕತೆ ಈಗಲೂ ನಡೆಯುತ್ತಿದೆ. ಬಾಕಿ ಇರುವ ಅರ್ಧ ಮೊತ್ತವನ್ನಾದರೂ ಕೊಟ್ಟರೆ ಕೆಇಬಿಗೆ ಸ್ವಲ್ಪ ಶಕ್ತಿ ಬರುತ್ತದೆ. ಈ ಫಿಗರ್‌ನ್ನು ಇಂಟರೆಸ್ಟ್ ಸೇರಿಸಿಕೊಂಡೇ ನಾವು ಹೇಳುತ್ತಿರುವುದು, ಇಂಟರೆಸ್ಟ್ ಬಿಟ್ಟು ಲೆಕ್ಕ ಹಾಕುವುದಕ್ಕೆ ಆಗುವುದಿಲ್ಲ. Interest, that runs to some hundreds of crores.

ಶ್ರೀಮತಿ ಮೋಟಮ್ಮ : ಭಾಗ್ಯ ಜ್ಯೋತಿಯಲ್ಲಿ ಕೆಇಬಿಯವರಿಗೆ ಹಣಬಾಕಿ ಇದ್ದರೆ, ಇಮಿಡಿಯೇಟ್ ಆಗಿ ಕನೆಕ್ಷನ್ ತೆಗೆದು ಹಾಕುತ್ತಾರೆ. ಇಂಥ ದೊಡ್ಡ ಪ್ರಾಜೆಕ್ಟ್‌ಗಳಲ್ಲಿ ಕೋಟಿಗಟ್ಟಲೆ ಹಣ ಬಾಕಿ ಇದ್ದರೂ, ಅದರ ಬಗ್ಗೆ ಮರ್ಸಿ ತೋರಿಸುವುದರಲ್ಲಿ ಅರ್ಥವಿದೆಯೇ?

ಶ್ರೀ ಎಸ್. ಬಂಗಾರಪ್ಪ : ಪೇಮೆಂಟ್ ಮಾಡಬೇಕೆಂದು ಅವರ ಮೇಲೆ ಒತ್ತಡ ಹಾಕುತ್ತಿದ್ದೇವೆ.

ಶ್ರೀ ಆರ್. ವಿ. ದೇಶಪಾಂಡೆ : ಕರ್ನಾಟಕ ಪವರ್ ಕಾರ್ಪೊರೇಷನ್ನಿನ ಹೈಡಲ್ ಯೋಜನೆಗಳು ಸಾಕಷ್ಟು ಬಂದಿದ್ದು ನಮ್ಮ ಉತ್ತರ ಕರ್ನಾಟಕ ಜಿಲ್ಲೆಯಲ್ಲೇ. ಪವರ್‌ನ ಬಹಳ ಅವಶ್ಯಕತೆ ಇದೆ. ಅಗ್ರಿಕಲ್ಚರ್ ಆಗಲೀ, ಇಂಡಸ್ಟ್ರಿಯಾಗಲೀ, ಬೆಳೆಯಬೇಕಾದರೆ ಅಲ್ಲಿ ಪವರ್ ಬೇಕು. ಇದೆಲ್ಲಾ ಆಗುವಾಗ, ರಿಹ್ಯಾಬಿಲಿಟೇಷನ್‌ನ್ನು ನಾವು

ಸಂಪೂರ್ಣವಾಗಿ ನೆಗ್ಲೆಕ್ಟ್ ಮಾಡಿದ್ದೇವೆ. ಎಲ್ಲಿಯತನಕ ಸರ್ಕಾರ ರಿಹ್ಯಾಬಿಲಿಟೇಷನ್‌ಗೆ ಪ್ರೈಯಾರಿಟಿ ಕೊಡುವುದಿಲ್ಲ, ಅಲ್ಲಿಯತನಕ ಜನ ಈ ಯೋಜನೆಗಳಿಗೆ ಸಹಕಾರ ಮಾಡುವುದಕ್ಕೆ ಸಾಧ್ಯವಿಲ್ಲ. ನಮ್ಮ ಸರ್ಕಾರ ಇದ್ದಾಗ, ಖೋಡ್‌ಸೇರಿ ಡ್ಯಾಮ್ ಆಗಬಾರದೆಂದು ವಿರೋಧ ಇತ್ತು. ಮಂತ್ರಿಯಾಗಿ ನಾನೇ ಸ್ಥಳಕ್ಕೆ ಹೋಗಿ ಜನರಿಗೆ ಕನ್‌ವಿನ್ಸ್ ಮಾಡಿದೆ. ನೀವು ಕೋ ಆಪರೇಟ್ ಮಾಡಿ. ನಿಮಗೆ ಏನು ಬೇಕಾದರೂ ರಿಹ್ಯಾಬಿಲಿಟೇಷನ್ ಮಾಡಿ ಕೊಡುತ್ತೇವೆ ಎಂದು ಹೇಳಿದ ನಂತರ ಜನರು ಕೋಆಪರೇಟ್ ಮಾಡಿದರು. ತಪ್ಪು ತಿಳಿದುಕೊಳ್ಳಬಾರದು. ನಾನು ನಿಮ್ಮ ಮೇಲೆ ಆಪಾದನೆ ಮಾಡುತ್ತಿಲ್ಲ. ಕಳೆದ ಎರಡು ವರ್ಷದಲ್ಲಿ ಎರಡು ರಿಹ್ಯಾಬಿಲಿಟೇಷನ್ ಕಮಿಟಿ ಮೀಟಿಂಗ್‌ಗಳು ಕೂಡ ಆಗಿಲ್ಲ. ರಿಹ್ಯಾಬಿಲಿಟೇಷನ್ ಕೆಲಸ ಸ್ಟ್ಯಾಂಡ್‌ಸ್ಟಿಲ್ ಆಗಿದೆ. ಆದ್ದರಿಂದ ತಾವು ಅದಷ್ಟು ಮಟ್ಟಿಗೆ ರಿಹ್ಯಾಬಿಲಿಟೇಷನ್‌ಗೆ ಪ್ರೈಯಾರಿಟಿ ಕೊಡಬೇಕು.

ಪ್ರೈಯಾರಿಟಿ ಕೊಡದಿದ್ದರೆ, ಯಾವ ಕೆಲಸವೂ ಕೂಡ ಆಗುವುದಿಲ್ಲ. ಕೈಗಾ ಪ್ರಾಜೆಕ್ಟ್ ಆಗುತ್ತಿದೆ. ಇದು ಪ್ರಾರಂಭವಾಗುವ ಸಂದರ್ಭದಲ್ಲಿ ನಾವು ಒಂದು ಕಂಡೀಷನ್ ಹಾಕಿದ್ದೆವು. ಈ ಪ್ರಾಜೆಕ್ಟಿನಡಿಯಲ್ಲಿ ಯಾರು ಭೂಮಿಯನ್ನು ಕಳೆದಕೊಳ್ಳುತ್ತಾರೆ, ಅಂಥವರ ಮನೆಯಲ್ಲಿ ಒಬ್ಬರಿಗೆ ಕೆಲಸ ಕೊಡಬೇಕೆಂದು, ಅದೇ ಪ್ರಾಕಾರ ಕರ್ನಾಟಕ ಪವರ್ ಕಾರ್ಪೊರೇಷನ್ ಎಲ್ಲೆಲ್ಲಿ ಲ್ಯಾಂಡ್ ಅಕ್ವೈರ್ ಮಾಡಿಕೊಳ್ಳುತ್ತದೆ, ಅಲ್ಲಿ ಈ ರೀತಿಯಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಇದನ್ನು ಪರಿಶೀಲನೆ ಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಇನ್ನು ಬೇಡ್ತಿ ಪ್ರಾಜೆಕ್ಟ್‌ಬಗ್ಗೆ. ಈ ಬೇಡ್ತಿ ಪ್ರಾಜೆಕ್ಟ್ ಬಗ್ಗೆ ವಿರೋಧ ಏಕೆ ಇದೆಯೆಂದು ತಾವು ತಿಳಿದುಕೊಳ್ಳಬೇಕು. ಮುಖ್ಯವಾಗಿ ಇಕಾಲಾಜಿಕಲ್ ಬ್ಯಾಲೆನ್ಸ್ ತಪ್ಪಿ ಹೋಗಬಹುದು. ಉತ್ತರ ಕರ್ನಾಟಕ ಜಿಲ್ಲೆಯಲ್ಲಿ ಸಾಕಷ್ಟು ಡ್ಯಾಮ್‌ಗಳು ಬಂದಿವೆ. ಒಂದು ಕಡೆ ಶರಾವತಿ ಇದೆ, ಮತ್ತೊಂದು ಕಡೆ ಕೈಗಾ ಇದೆ, ಇನ್ನೊಂದು ಕಡೆ ಖೋಡ್‌ಸೇರಿ ಡ್ಯಾಮ್ ಬರುತ್ತದೆ. ಬೇಡ್ತಿ ಯೋಜನೆಯನ್ನು ತಾವು ಕೈ ಬಿಡುವುದು ಬಹಳ ಒಳ್ಳೆಯದು. ಅದಕ್ಕಿಂತ ಮುಂಚೆ ತಾವು ಅಲ್ಲಿ ಬಂದು ಪರಿಶೀಲನೆ ಮಾಡುವುದು ಒಳ್ಳೆಯದು. ನ್ಯಾಚುರಲ್ ಬ್ಯಾಲನ್ಸ್ ಯಾವ ಪ್ರಕಾರ ಹೋಗಬಹುದು, ಇಕಾಲಾಜಿಕಲ್ ಬ್ಯಾಲೆನ್ಸ್ ಯಾವ ಪ್ರಕಾರ ಆಗಬಹುದು ಎನ್ನುವುದರ ಬಗ್ಗೆ ತಾವು ವಿಚಾರ ಮಾಡಬೇಕು ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

(ಅಧ್ಯಕ್ಷರಾದ ಎಸ್. ಎಂ. ಕೃಷ್ಣರವರು ಪೀಠದಲ್ಲಿ ಉಪಸ್ಥಿತರಿದ್ದರು)

ಈಗಾಗಲೇ ಎಲೆಕ್ಟ್ರಿಸಿಟಿ ಆಕ್ಟ್ ಅಮೆಂಡ್ ಆಗಿದೆ. ದಾಂಡೇಲಿ ಡ್ಯಾಮ್ ಕೆಲಸ-ನಿಂತಿದೆ. ದಾಂಡೇಲಿ ಡ್ಯಾಮನ್ನು ಪ್ರೈವೇಟ್ ಸೆಕ್ಟರ್‌ನಲ್ಲಿ ಮಾಡಬೇಕೆಂದು ನಮ್ಮ ಸರ್ಕಾರ ಇದ್ದಾಗ ಒಂದು ವಿಚಾರ ಇತ್ತು. ಆ ಕೆಲಸ ಪ್ರಾರಂಭ ಮಾಡಿದರೆ ಅಲ್ಲಿ ಹೆಚ್ಚು ಭೂಮಿ ಮುಳುಗಡೆಯಾಗುವುದಿಲ್ಲ. ಅಂದರೆ, ಜನರಿಗೆ ತೊಂದರೆಯಾಗುವುದಿಲ್ಲ. ಸ್ವಲ್ಪ ಭೂಮಿ ಮುಳುಗಡೆಯಾಗುತ್ತದೆ. ಆದರೆ, ಜನರ ವಸತಿಗೆ ತೊಂದರೆಯಾಗುವುದಿಲ್ಲ, ಅಗ್ರಿಕಲ್ಚರಲ್ ಲ್ಯಾಂಡ್‌ಗೆ ಎಫೆಕ್ಟ್ ಆಗುವುದಿಲ್ಲ. ಪ್ರೈಯಾರಿಟಿ ಮೇಲೆ ತೆಗೆದುಕೊಂಡರೆ ಹೆಚ್ಚಿನ ಪವರ್ ಜನರೇಷನ್ ಮಾಡುವುದಕ್ಕೆ ಸಾಧ್ಯವಾಗಬಹುದು. ತಮಗೆ ಗೊತ್ತಿರುವಂತೆ ಉತ್ತರ ಕನ್ನಡ ಜಿಲ್ಲೆಯಲ್ಲಿ ನಾವು ವಿದ್ಯುಚ್ಛಕ್ತಿ ನಿರ್ಮಾಣ ಮಾಡುತ್ತೇವೆ. ಆದರೆ, ನಮ್ಮ ಜಿಲ್ಲೆಯಲ್ಲಿರತಕ್ಕ ಪರಿಸ್ಥಿತಿ ಬಹಳ ಕೆಟ್ಟದಾಗಿದೆ. ಇವೊತ್ತು ಪೋಲ್ಸ್ ಇಲ್ಲ, ಕಂಡಕ್ಟರ್ಸ್ ಇಲ್ಲ. ರೆಕಾರ್ಡ್ ಪ್ರಕಾರ ಎಲ್ಲಾ ಹಳ್ಳಿಗಳು ಎಲೆಕ್ಟ್ರಿಫೈ ಆಗಿದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದರೆ, ನಮ್ಮ ಕಡೆ ಹ್ಯಾಮ್ಲೆಟ್ಸ್, ಮಜಿರೆಗಳ ಸಂಖ್ಯೆ ಹೆಚ್ಚು, ಮಲೆನಾಡಿನ ಪರಿಸ್ಥಿತಿ ತಮಗೆ ಗೊತ್ತಿದೆ ...

ಮುಜಿರೆಗಳು ಹೆಚ್ಚು, ಈಗ ಮಜಿರೆಯನ್ನು ಎಲೆಕ್ಟ್ರಿಫೈ ಮಾಡುವ ಯೋಜನೆ ಹಾಕಿಕೊಳ್ಳುತ್ತೇವೆಂದು ಹೇಳಿದ್ದಾರೆ. ಮೊನ್ನೆ ನಾನು ಕೇಳಿದಾಗ ಈ ಯೋಜನೆಗೆ ದುಡ್ಡು ಬಂದಿಲ್ಲ. ಹಾಗಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಮಜಿರೆ ಎಲೆಕ್ಟ್ರಿಫಿಕೇಶನ್‌ಗೆ, ಹ್ಯಾಮ್ಲೆಟ್ ಎಲೆಕ್ಟ್ರಿಫಿಕೇಶನ್, ಮಾಡುವುದಕ್ಕೆ, ಸರ್ಕಾರ ಪ್ರೈಯಾರಿಟಿ ಕೊಟ್ಟು, ವಾರ್ ಫೂಟಿಂಗ್‌ನಲ್ಲಿ ವಾರ್ ಫೂಟಿಂಗ್‌ನಲ್ಲಿ ಮಾಡಬೇಕೆಂದು ಹೇಳಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ, ರಿಹ್ಯಾಬಿಲಿಟೇಶನ್ ಪ್ರೋಗ್ರಾಂ ವಿಚಾರ ಏನು ಹೇಳಿದ್ದಾರೆ, ಅದನ್ನು ಮರೆತುಬಿಟ್ಟಿದ್ದೆ. ನೆನಪು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳು. ಇವೊತ್ತು ನಾವೇನು ಒಂದು ಪ್ರೋಗ್ರಾಂ ಮಾಡುತ್ತೇವೆಂದರೆ, ಅವರನ್ನು ತೆಗೆದುಕೊಂಡು ಹೋಗಿ, ಅಲ್ಲಿಗೆ ಬಿಟ್ಟು ಬರುತ್ತೇವೆ. ಸರಿಯಾಗಿ ಅವರಿಗೆ ಆಲ್ಟರ್‌ನೇಟೀವ್ ಆಗಿ, ಜಮೀನು ಕೊಡುವುದು ಇರಬಹುದು, ಮನೆ ಕೊಡುವುದು ಇರಬಹುದು, ಪರಿಹಾರ ಧನ ಕೊಡುವುದು ಇರಬಹುದು,ಕೆಲಸ ಕೊಡುವುದು ಇರಬಹುದು. ಉದಾಹರಣೆಗೆ ವಾರಾಹಿ ತೆಗೆದುಕೊಳ್ಳೋಣ. ಅಗ್ರಿಕಲ್ಚರಲ್ ಮಿನಿಸ್ಟರ್ ಇದ್ದಾಗಲೂ ಕೂಡ ಕಮಿಟಿ ಮಾಡಿ, ಮೀಟಿಂಗ್ಸ್ ಮಾಡಿ ಕೆಲವು ತೀರ್ಮಾನ ಮಾಡಿದ್ದೇವೆ. ಇಂಥ ಯೋಜನೆಗಳಲ್ಲಿ ಜಮೀನು ಮುಳುಗಡೆಯಾಗಿ ಯಾರು ಜಮೀನುಗಳನ್ನು ಕಳೆದಕೊಂಡಿರುತ್ತಾರೆ, ಮನೆ ಇರಬಹುದು. ಜಮೀನು ಇರಬಹುದು, ಮತ್ತೊಂದು ಇರಬಹುದು, ಅವರಿಗೆ ನಾವು ಪರಿಹಾರ ಧನ ಕೊಡುವುದರ ಜೊತೆಗೆ, ಅಲ್ಲಿಯೇ ಎಸ್‌ಎಸ್‌ಎಲ್‌ಸಿ, ಡಿಪ್ಲೊಮೊ, ಗ್ರಾಜುಯೇಟ್ ಮತ್ತೊಂದು ಓದಿಕೊಂಡಿದ್ದರೆ, ನೀವು ಬೇರೆ ಯುವಕರನ್ನು ತರುವ ಬದಲು ಅಲ್ಲಿರತಕ್ಕವರಿಗೆ ಆದ್ಯತೆ ಕೊಟ್ಟು, ಅವರಿಗೆ ನೌಕರಿ ಕೊಡಿ. Those who have lost their properties.

ಈ ತರಹದ ಒಂದು ಉದ್ದೇಶ ಇಟ್ಟುಕೊಂಡು ನಾವು ತೀರ್ಮಾನ ಮಾಡತಕ್ಕಂಥ ಅವಶ್ಯಕತೆ ಇದೆ. At least, one person in one family. This programme should not only be applicable to power projects ಏಕೆಂದರೆ, ಹಣವನ್ನು ಒಬ್ಬ ಮನುಷ್ಯನ ಕೈಯಲ್ಲಿ ಕೊಟ್ಟರೆ ಹಣ ಉಳಿಯುವುದಿಲ್ಲ. ಆಸ್ತಿ ಇದ್ದರೆ ಉಳಿಯುತ್ತದೆ. ಅದೇ ಹಿಂದಿರತಕ್ಕ ಒಂದು ನೀತಿಯ ಪ್ರಶ್ನೆ.

ಆದುದರಿಂದ, ನಾನು ತಮ್ಮ ಮಾತನ್ನು ಒಪ್ಪುತ್ತೇನೆ. ಯಾವುದೇ ಒಂದು ಯೋಜನೆಯಲ್ಲಿ ನಾವು ಭೂಮಿಯನ್ನು ಮುಳುಗಡೆ ಮಾಡಿದರೆ, ಯಾರ ಭೂಮಿ ಮುಳುಗಡೆಯಾಗಿರುತ್ತದೆ ಅವರಿಗೆ ಆಧ್ಯತೆ ಕೊಟ್ಟು, ನೌಕರಿ ಕೊಟ್ಟರೆ ಅವರು ಜೀವನ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇಂತಿಷ್ಟು ಎಂದು ಹಣ ನಿಗಧಿಮಾಡುತ್ತೇವೆ. ಅದು ಸಾಕಾಗುವುದಿಲ್ಲವೆಂದು ಹೇಳುತ್ತಾರೆ. Under section 18 of the enhancement of the compensation ಗೆ land acquisition Act ಹಾಕುತ್ತಾರೆ, ಮತ್ತು ಸ್ವಲ್ಪ ಜಾಸ್ತಿ ಹಣ ಕೊಡುತ್ತೇವೆ. ಮೊದಲೇ 100% ಹಣ ತೆಗೆದುಕೊಳ್ಳುತ್ತಾರೆ. ಆ ಹಣವನ್ನು ತೆಗೆದುಕೊಂಡು ಕಟ್ಟುವುದರೊಳಗೆ ಇನ್ನೊಂದು ಸಾರಿ ಕೋರ್ಟ್ ವ್ಯವಹಾರ ಮಾಡಲಿಕ್ಕೆ ಮಧ್ಯದಲ್ಲಿ ವ್ಯತ್ಯಾಸವಾಗುತ್ತದೆ. ಏಕೆಂದರೆ, ಟೈಮ್ಸ್ ಲ್ಯಾಂಪ್ಸ್ ಆಗುತ್ತದೆ, ಬಹಳ ವ್ಯತ್ಯಾಸವಾಗುತ್ತದೆ. ಇದು ನಮ್ಮ ಕಟು ಅನುಭವ. ಈ ವಿಚಾರದ ಹಿನ್ನೆಲೆಯಲ್ಲಿ ನನಗನ್ನಿಸುತ್ತದೆ ನಾವು ಹಣ ನಾಲ್ಕು ರೂಪಾಯಿ ಜಾಸ್ತಿ ಕೊಟ್ಟರೂ ಅದೇನೂ ಆಗುವುದಿಲ್ಲ. ಲೇಟ್ ಮಾಡಿದಷ್ಟು ತೊಂದರೆಯಾಗುತ್ತದೆ. ಆಸ್ತಿ ಕಳೆದು ಕೊಂಡವರಿಗೆ ಆದ್ಯತೆ ಕೊಟ್ಟು ನೌಕರಿಯನ್ನು ಕೊಡಿಸಬೇಕು. ಮೊನ್ನೆ ನಮ್ಮ ಪ್ರೊಫೆಸರ್‌ರವರು, ಮಿತ್ರರಾದ ಸುಂದರೇಶನ್‌ರವರು, ರೈತ ಸಂಘದ ಪ್ರತಿನಿಧಿಗಳು ಶಿವಮೊಗ್ಗಕ್ಕೆ ಬಂದಿದ್ದರು. ಈ ವಿಷಯದ ಬಗ್ಗೆ ಸುಮಾರು ಐದು ಜನ ನಮಗೆ ಹೇಳಿದರು. ಅದರಲ್ಲಿ

ಐದು ಜನ ಕೂಡ ಫಿಸಿಕಲಿ ಹ್ಯಾಂಡಿಕ್ಯಾಪ್ಡ್. ಆಸ್ತಿ ಕಳೆದುಕೊಂಡಿರುವ ದೃಷ್ಟಿಯಿಂದ ಅವರು ತಿಳಿಸಿದರು. ನಾವು ಅದರ ಬಗ್ಗೆ ಪವರ್ ಕಾರ್ಪೊರೇಷನ್ ಎಂ. ಡಿ. ಯವರಿಗೆ ಕೊಟ್ಟು ಈಗಾಗಲೇ ತಿಳಿಸಿದ್ದೇನೆ.

ಪ್ರೊ : ಎಂ. ಡಿ. ನಂಜುಂಡಸ್ವಾಮಿ : (ಧಾರವಾಡ -ಗ್ರಾಮಾಂತರ) : ಮಾನ್ಯ ಸಭಾಧ್ಯಕ್ಷರೆ, ಮುಖ್ಯಮಂತ್ರಿಗಳು, ಭೂಮಿ ಕಳೆದುಕೊಂಡವರಿಗೆ ಪರಿಹಾರ ಕೊಡುವ ವಿಚಾರವಾಗಿ ಮಾತನಾಡುತ್ತಿದ್ದಾರೆ. ಉದ್ಯೋಗ, ಆದ್ಯತೆ ಮೇಲೆ ಕೊಡುವುದಾಗಿ ಹೇಳುತ್ತಿದ್ದಾರೆ. ನಾನು ಕೇಳುತ್ತಿರುವುದು ಉದ್ಯೋಗವನ್ನು ಕಡ್ಡಾಯವಾಗಿ ಕೊಡಲೇಬೇಕು ಎನ್ನುವಂತ ಒಂದು ಕಾನೂನನ್ನು ಮಾಡುವುದಕ್ಕೆ ಮನಸ್ಸು ಮಾಡುತ್ತೀರಾ? ನಿಮ್ಮ ಮರ್ಜಿಯಲ್ಲಿ ಅವರು ಬದುಕುವುದಕ್ಕೆ ಆಗುವುದಿಲ್ಲ, ಏಕೆಂದರೆ, ವಾರಾಹಿಯಲ್ಲಿ ಭೂಮಿ ಕಳೆದುಕೊಂಡು ಎಷ್ಟು ವರ್ಷವಾಯಿತು. ಸುಮಾರು 80-90 ಜನ ಪಧವೀಧರರು ಕಾಯುತ್ತಿದ್ದಾರೆ. ಅವರಿಗೆ ನಾವು ಇನ್ನು ಉದ್ಯೋಗ ಕೊಟ್ಟಿಲ್ಲ, ಆದುದರಿಂದ, ಭೂಮಿ ಕಳೆದುಕೊಂಡವರಿಗೆ ಒಂದು ಹಕ್ಕು ಬರುವ ರೀತಿ ಒಂದು ಕಾನೂನು ಮಾಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ : ಪ್ರೊಫೆಸರ್ ಅವರಿಗೆ ವ್ಯಾಖ್ಯಾನಕ್ಕೆ ಬಿಟ್ಟರೆ ರೈತ ವರ್ಗಕ್ಕೆ right to work ಕಾನ್ಸ್ಟಿಟ್ಯೂಶನಲ್ ರೈಟ್ ತರಬೇಕು ಎನ್ನತಕ್ಕ......

Prof. M.D. NanjundaSwamy : They should get it as a matter of right, not at your discretion, nor at your mercy because they have sacrificed their land for social purpose and for a public purpose.

ಶ್ರೀ ಎಸ್. ಬಂಗಾರಪ್ಪ : ಐ ಅಗ್ರಿ. ಏಕೆಂದರೆ, ರೈತ ವರ್ಗವನ್ನು ತರಬೇಕೆಂದು ಜನರಲ್ ಆಗಿ ಮಾತನಾಡಬೇಕಾದರೆ right to work, I agree in principle, especialy for those who have lost their properties for the purpose of public projects irrigation projects and power projects. As a matter of principle I agree.

ಪವರ್ ಜನರೇಶನ್ ಆದಾಗೆಲ್ಲಾ, ಭೂಮಿ ಕಳೆದುಕೊಂಡಾಗ ಒಂದು ಕಾನೂನನ್ನು ಕಂಪಲ್‌ಸರಿಯಾಗಿ ಮಾಡಬೇಕು ಎನ್ನತಕ್ಕಂಥ ಒಂದು ವಿಚಾರ. ನನಗನ್ನಿಸುತ್ತದೆ. ಇದನ್ನು ಮಾಡದಿದ್ದರೆ ಬಹಳ, ಜನರಿಗೆ ತೊಂದರೆಯಾಗುತ್ತದೆ. As a matter of principle I agreee ಅದನ್ನು ಯಾವ ರೀತಿ ವರ್ಕ್‌ಔಟ್ ಮಾಡಬೇಕೆನ್ನುವುದರ ಬಗ್ಗೆ ಕುಳಿತುಕೊಂಡು ವಿಚಾರ ಮಾಡಿ, ಅದನ್ನು ಮಾಡಬೇಕೆಂಬ ಅವಶ್ಯಕತೆ ಇದೆಯೆಂದು ನಾನು ಭಾವಿಸುತ್ತೇನೆ. ಅದರ ಬಗ್ಗೆ ವಿಚಾರ ಮಾಡೋಣ.

ಕೆಲಸ ಕೊಡುವುದರ ಬಗ್ಗೆ ಹೇಳಿದ್ದೇನೆ, ಅದನ್ನು ವಿಚಾರ ಮಾಡಿ ಕೊಡಬೇಕಾಗುತ್ತದೆ. ಆಮೇಲೆ ಯಾರು ಅಂಗವಿಕಲರಾಗಿದ್ದಾರೆ. Those who are in the dire necessity of employment educated persons. ಅವರಿಗೆ ಮಿನಿಮಮ್ ಆಗಿ ಕೊಡತಕ್ಕ ವಿಚಾರವನ್ನು ನೋಡೋಣ. ವರಾಹಿ ಪ್ರಾಜೆಕ್ಟ್..

ಶ್ರೀ ಬಿ. ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ತಾವು ಈ ಮುಳುಗಡೆ ಪ್ರದೇಶದಿಂದ ಬಂದಿರತಕ್ಕ ಜನರ ಸಮಸ್ಯೆಗಳನ್ನು ಅಭ್ಯಾಸ ಮಾಡಿರುವವರು, ಅವರ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಚಿಂತನೆ ಮಾಡಿದಂತಹ ಜನ. ನೀವು ಏನು ಅನೇಕ ವರ್ಷಗಳಿದ ಇವರುಗಳ ಸಮಸ್ಯೆಯನ್ನು ಬಗೆಹರಿಸಬೇಕೆಂಬ ಶಕ್ತಿ ಕೊಡಲಿಲ್ಲವೆಂದು ಯೋಚನೆ ಮಾಡಿದಂತವರು ಈಗ ದೈವಿಕವಾಗಿ ನೀವು ರಾಜ್ಯದ ಮುಖ್ಯಮಂತ್ರಿಯಾಗಿ ಕುಳಿತಿದ್ದೀರಿ. ನೀವು ಕಾನೂನನ್ನೇನು ಮಾಡಬೇಡಿ. ಈ ರೀತಿ

ಮುಳುಗಡೆಯಾಗಿರತಕ್ಕ ಪ್ರದೇಶದಿಂದ ಬಂಧಿರತಕ್ಕ ಜನರಿಗೆ ಉದ್ಯೋಗ ಕೊಡುವುದಿರಬಹುದು, ಮನೆ ಕೊಡುವುದಿರಬಹುದು, ವಿದ್ಯುತ್ ಕೊಡುವುದಿರಬಹುದು, ಜಮೀನು ಕೊಡುವುದು ಇರಬಹುದು ಅವರು ಬದುಕಲು ಬೇಕಾಗಿರತಕ್ಕ ಕನಿಷ್ಟ ಸೌಲಭ್ಯಗಳನ್ನು ಒದಗಿಸಿ ಕೊಡುವುದಕ್ಕೆ ಕಾರ್ಯಪ್ರವೃತ್ತರಾಗುತ್ತೇವೆ ಎಂಬ ಮಾತನ್ನು ನೇರವಾಗಿ ಹೇಳಿ. ಏನು ಸಮಸ್ಯೆ ನಮ್ಮ ಕಣ್ಮುಂದೆ ಇದೆ ಅದನ್ನು 2-3 ತಿಂಗಳಲ್ಲಿ ಮುಗಿಸಬೇಕು ಎಂದು ಹೇಳಿದಾಗ ನಿಮ್ಮ ಕಳಕಳಿಗೆ ಅರ್ಥಬರುತ್ತದೆ. ಈ ವಿಚಾರ ಏನು ಇದೆ ಅದು ಆಗಬೇಕು. ನಿಮಗೆ ದೇವರು ಶಕ್ತಿಯನ್ನು ಕೊಟ್ಟಿದ್ದಾರೆ. ಈಗ ಮಾಡುತ್ತೀರಾ? ಇದರಲ್ಲಿ 10 ಹೆಜ್ಜೆ ಮುಂದೆ ಹೋಗುವುದಕ್ಕೆ ಸಂಕಲ್ಪ ಮಾಡಿದ್ದೇನೆ. ಇದನ್ನು ಮಾಡುತ್ತೇವೆಂದು ನಿಶ್ಚಿತವಾಗಿ ನಿಮ್ಮ ಕಾರ್ಯಕ್ರಮ ಹೇಳುತ್ತೀರಾ?

ಶ್ರೀ ಎಸ್. ಬಂಗಾರಪ್ಪ : ಪ್ರೊಫೆಸರ್‌ರವರ ಪ್ರಶ್ನೆಗೂ ನಿಮ್ಮ ಪ್ರಶ್ನೆಗೂ ವ್ಯತ್ಯಾಸವೇನಿಲ್ಲ. ಎರಡೂ ಒಂದೆ. ಆಗಿದೆ. ಈಗ ವಿಷಯವೇನೆಂದರೆ, ಯಾರು ಆಸ್ತಿಯನ್ನು ಕಳೆದಕೊಂಡಿದ್ದಾರೆ ಅವರಿಗೆ ಪರಿಹಾರವನ್ನು ಕೊಡತಕ್ಕ ಒಂದು ಕಾನೂನನ್ನು ಮಾಡಬೇಕಾಗಿದೆ. ನಾವು ಲೀಗಲ್‌ಲ್ಲಾಗಿ ವಿಚಾರ ಮಾಡಬೇಕಾಗಿದೆ. ಪ್ರಾಪರ್ಟಿಯನ್ನು ಕಳೆದುಕೊಂಡವರಿಗೆ ಪರಿಹಾರ ಕೊಡುವುದರಲ್ಲಿ ಮೂಲಭೂತ ನೀತಿ ಇರಬೇಕು. ಇದರಲ್ಲಿ ವ್ಯತ್ಯಾಸವಿರಬಾರದು. ನಾವು ಅದನ್ನು ಇಟ್ಟುಕೊಂಡು ಮಾತನಾಡುತ್ತಿಲ್ಲ. ಇಲ್ಲಿ ಕಾನೂನಿನ ತೊಂದರೆಯಾಗದ ಹಾಗೆ ನೋಡಿಕೊಳ್ಳುವುದು ನಿಮ್ಮ ಜವಾಬ್ದಾರಿ. That is why I said, as a matter of principle I totally agree; legalldy it should be done. So let us get it examined and issue the order.

ಎನ್ನತಕ್ಕ ಮಾತನ್ನು ಹೇಳಿದ್ದೇನೆ. ಇದನ್ನು ಮಾಡುವುದು ಹೇಗೆ ಎನ್ನುವುದರ ಬಗ್ಗೆ ವಿಚಾರ ಮಾಡುತ್ತೇನೆಂದು ಹೇಳಿದ್ದೇನೆ. ಲೀಗಲ್ ವಿಚಾರವನ್ನು ಗಮನದಲ್ಲಿಟ್ಟುಕೊಂಡು ನಾನು ಹೇಳಿದ್ದೇನೆ. ಅದನ್ನು ಪರಿಶೀಲನೆ ಮಾಡಲಾಗುತ್ತದೆ. ಅದು ಬರುತ್ತದೆ. ಏನು ತೊಂದರೆಯಾಗುವುದಿಲ್ಲವೆಂದರೆ ಆಜ್ಞೆಯನ್ನು ಹೊರಡಿಸೋಣ.

ಆಮೇಲೆ ಬೇಡ್ತಿ ಬಗ್ಗೆ ಹೇಳಿದ್ದೀರಿ. ಈವತ್ತು ಯಾರು ಈ ಪ್ರಕೃತಿ ವಿಚಾರದಲ್ಲಿ ಗಮನವಿಟ್ಟು ಎಕಾಲಜಿ, ಎನ್ವಿರಾನ್‌ಮೆಂಟ್ ಅದನ್ನು ಗಮನದಲ್ಲಿಟ್ಟುಕೊಂಡು ಹೇಳಿದ್ದಾರೋ ಅದಕ್ಕೆ ಪೂರಕವಾಗಿ ಹೇಳಿದ್ದೇನೆ. ಅದನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತಾ ಹೋಗೋಣ ಟೆಕ್ನಿಕಲ್ ಸಮಿತಿಯ ಬಗ್ಗೆ ಕೂಡ ವಿಚಾರ ಮಾಡಿ ಬೇಡ್ತಿ ಯೋಜನೆ ಬಗ್ಗೆ ತೀರ್ಮಾನ ಮಾಡಬೇಕು. ಆದರೆ ಇದು ಕ್ಲಿಯರ್ ಆಗಿರತಕ್ಕ ಯೋಜನೆ. ಕ್ಲಿಯರ್ ಆಗಿರತಕ್ಕ ಯೋಜನೆಯನ್ನು ಪ್ರಾರಂಭ ಮಾಡದೆ ಹಾಗೆ ಇಟ್ಟರೆ ನಾವು ದಡ್ಡರಾಗುವುದು ನಿಜ. ಇದು ನಮ್ಮ ಪವರ್ ಕಾರ್ಪೊರೇಷನ್ ಮತ್ತು ಸರ್ಕಾರದ ನೀತಿಯಾಗಿ ಮಾತನಾಡುತ್ತಿದ್ದೇನೆ. Better we take up that project. ಆದರೆ ಲೆವೆಲ್ ಎಷ್ಟು ಇರಬೇಕು, ಹೇಗೆ ಇರಬೇಕು, ಹೇಗೆ ಮಾಡಬೇಕು ಎನ್ನುವುದನ್ನು ನೋಡಿಕೊಳ್ಳೋಣ. ಆದರೆ ಈ ಯೋಜನೆಯನ್ನು ಬೇಡ ಎಂದರೆ ಎಲ್ಲಾ ವಿಷಯಗಳಿಗೂ ಕೊನೆ ಎಳೆದಂತೆ.

ಶ್ರೀ ಆರ್. ವಿ. ದೇಶಪಾಂಡೆ : ಅಧ್ಯಕ್ಷರೇ, ನಾನು ಹೇಳುವುದೇನೆಂದರೆ ಈ ಯೋಜನೆಯನ್ನು ಮಾಡುವುದಕ್ಕೆ ಮೊದಲು ಇದರ ಬಗ್ಗೆ ಏನು ವಿರೋಧ ಬರುತ್ತಿದೆ, ಅಂದರೆ ಎಕಾಲಜಿ ಬ್ಯಾಲೆನ್ಸ್ ಇರುವುದಿಲ್ಲ, ಅಲ್ಲಿ ಸುತ್ತಾಮುತ್ತ ಈ ಯೋಜನೆಗಳು ಬರುತ್ತಿವೆ; ಅದರ ಬಗ್ಗೆ ಯೋಚಿಸಬೇಕು; ರಕ್ಷಣೆಯ ಉದ್ದೇಶದಿಂದ ಅದು ಸರಿಯಲ್ಲ ವೆಂದು ಹೇಳಿದಾರೆ.

ಶ್ರೀ ಆರ್. ಎನ್. ನಾಯಕ್ : ಎಕಾಲಜಿಕಲ್ ಬ್ಯಾಲೆನ್ಸ್ ಬಗ್ಗೆ ಬೇರೆ ಕಡೆ ಇಲ್ಲವೆ?

ಶ್ರೀ ಆರ್.ವಿ. ದೇಶಪಾಂಡೆ : ನಾವು ತ್ಯಾಗ ಮಾಡಿದ್ದೇವೆ. ನಮ್ಮಲ್ಲಿ ಡ್ಯಾಂಗಳಿಗಾಗಿ ಬಹಳ ತ್ಯಾಗ ಮಾಡಿದ್ದೇವೆ.

(ಗೊಂದಲ)

ಶ್ರೀ ಆರ್. ಎನ್. ನಾಯಕ್ : ನಿಮ್ಮ ಅಡಿಕೆ ತೋಟಕ್ಕೆ ಬೇಕಾದರೆ ಕಾಂಪನ್‌ಸೇಷನ್ ಜಾಸ್ತಿ ಕೇಳಿ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ಆರ್. ಎನ್. ನಾಯಕರಿಗೆ ಇದರ ಬಗ್ಗೆ ಎಷ್ಟು ಚಿಂತನೆ ಇದೆ?

ಶ್ರೀ ಆರ್. ಎನ್. ನಾಯಕ್ : ನಾನು ಹೇಳುತ್ತಿದ್ದೇನೆ ಬೇಡ್ತಿ ಯೋಜನೆ ಆಗಲೇಬೇಕು.

ಶ್ರೀ ಎಸ್. ಬಂಗಾರಪ್ಪ : ಸನ್ಮಾನ್ಯ ಅಧ್ಯಕ್ಷರೇ ಇದು ಕ್ಲಿಯರ್ ಆಗಿರತಕ್ಕಂಥ ಪ್ರಾಜೆಕ್ಟ್ ವರ್ಷಗಟ್ಟಲೆ ಕ್ಲಿಯರೆನ್ಸಗಾಗಿ ಕಾದಿರುತ್ತೇವೆ. ಬೇಡ್ತಿ ಯೋಜನೆಯನ್ನು ತೆಗೆದುಕೊಳ್ಳಬೇಕೆಂಬುದು ಸರ್ಕಾರದ ನೀತಿ. ಆದರೆ ಯಾವ ರೀತಿ ತೆಗೆದುಕೊಳ್ಳಬೇಕು, ಹೇಗೆ ಹೋಗಬೇಕೆಂಬುದನ್ನು ವಿಚಾರ ಮಾಡೋಣ.

ಶ್ರೀ ಆರ್. ಎನ್. ನಾಯಕ್ : ಮತ್ತೊಬ್ಬರು ಬಂದರೆ ಇನ್ನೊಂದು ಕಥೆ ಹೇಳುತ್ತಾರೆ. ಬೇಗನೆ ತೆಗೆದುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ : ಆಯಿತು, ತಾವು ಮಜಿರೆ ಗ್ರಾಮಗಳ ಬಗ್ಗೆ ಮಾತನಾಡಿದ್ದೀರಿ. ಪವರ್ ಕೊಡಬೇಕಾದರೆ ನಾವು ರೆವಿನ್ಯೂ ಗ್ರಾಮಗಳಿಗೆ ಮಾತ್ರ ಕೊಟ್ಟು ನಿಲ್ಲಿಸಿ ಬಿಡುತ್ತೇವೆ. ಒಂದೊಂದು ಗ್ರಾಮಕ್ಕೆ 4-5-6 ಮಜಿರೆ ಗ್ರಾಮಗಳಿವೆ. ಮಲೆನಾಡಿನಲ್ಲಿ ಹೆಚ್ಚು, ನನ್ನ ತಾಲ್ಲೂಕಿನಲ್ಲಿ ಒಂದು ಗ್ರಾಮಕ್ಕೆ ಆರು ಮಜಿರೆ ಗ್ರಾಮಗಳಿವೆ. ಮುಖ್ಯ ಗ್ರಾಮಕ್ಕಿಂತ ಮಜಿರೆ ಗ್ರಾಮಗಳು ದೊಡ್ಡದಾಗಿವೆ. ಅದಕ್ಕೂ ಕೂಡ ಕೆಲವು ಕಡೆ ಕೊಟ್ಟಿದ್ದಾರೆ. ಮಜಿರೆ ಗ್ರಾಮಗಳಿಗೆ ಅರವತ್ತು ಸಾವಿರ ರೂಪಾಯಿ ಇದ್ದುದ್ದನ್ನು ಒಂದು ಲಕ್ಷಕ್ಕೆ ಏರಿಸಿದ್ದೇವೆ. ಬೋರ್ಡ್ ತೀರ್ಮಾನ ಮಾಡಿ ಒಂದು ಲಕ್ಷಕ್ಕೆ ಏರಿಸಿದ ಮೇಲೆ ಮಜಿರೆ ಗ್ರಾಮಗಳನ್ನು ಕೂಡ ಕವರ್ ಮಾಡುತ್ತಿದ್ದೇವೆ. ಬಾಕಿ ಉಳಿದಿರತಕ್ಕಂಥ ಮಜಿರೆ ಗ್ರಾಮಗಳ ಬಗ್ಗೆ ಒಂದು ನಿರ್ಣಯ ತೆಗೆದುಕೊಂಡು ಈ ವರ್ಷವೇ ಮುಗಿಸತಕ್ಕಂಥ ಯೋಜನೆ ಸರ್ಕಾರ ಇಟ್ಟುಕೊಂಡಿದೆ. I thank you very much for having reminded me about that.

Sri. D.B. Chandregowda : It is not a question of money. ನೀವು 60 ಸಾವಿರ ರೂಪಾಯಿ ಇದ್ದುದ್ದನ್ನು ಒಂದು ಲಕ್ಷಕ್ಕೆ ಏರಿಸಿದ್ದೀರಲ್ಲಾ.

You have to consider the value of rupee ater devaluation. ಏಕೆಂದರೆ ಇವತ್ತು ರೂಪಾಯಿ ವಾಲ್ಯೂ ಎಷ್ಟು ಕಡಿಮೆಯಾಗಿದೆ. ಎಷ್ಟಾಗುತ್ತದೆಂದು ಲೆಕ್ಕಹಾಕಿ.

ನೀವು ಮಜಿರೆ ಗ್ರಾಮಕ್ಕೆ ಕೊಡಬೇಕು ಎನ್ನತಕ್ಕದ್ದನ್ನು ಪ್ರಿನ್ಸಿಪಲ್ ತೀರ್ಮಾನ ತೆಗೆದುಕೊಳ್ಳಿ, ಅದಕ್ಕೆ financial tag ಹಾಕಬೇಡಿ.

ಶ್ರೀ ಎಸ್. ಬಂಗಾರಪ್ಪ : ನಾನು ಏನು ಹೇಳಿದ್ದೇನೆಂದರೆ ಉಳಿದಿರತಕ್ಕಂಥ ಮಜಿರೆ ಗ್ರಾಮಗಳು ಯಾವುದೇ ಇರಬಹುದು. ಈ ಆರ್ಥಿಕ ವರ್ಷದಲ್ಲಿ ಈ ಎಲ್ಲಾ ಗ್ರಾಮಗಳಿಗೂ ಕೊಡಬೇಕು ಎನ್ನುವ ಯೋಜನೆಯನ್ನು ಇಟ್ಟುಕೊಂಡಿದ್ದೇವೆ. ಒಂದು ಲಕ್ಷ ರೂಪಾಯಿಯನ್ನು ನಾವು ಗರಿಷ್ಠವಾಗಿ ಇಟ್ಟಿದ್ದೇವೆ. ಅದನ್ನು ಕೂಡ ನಾವು ಕೆಲವೊಮ್ಮೆ ರಿವೈಸ್ ಮಾಡಬೇಕಾಗುತ್ತದೆ. ಅದು ಸಂದರ್ಭ ಬಂದಾಗ ಮಾಡೋಣ. ಏಕೆಂದರೆ ಶ್ರೀ ರೆಡ್ಡಿಯವರು ಈ ಜನತಾ ಹೌಸಿಂಗ್ ಮನೆಗಳು ಕೂಡ ದೊಡ್ಡ ದೊಡ್ಡ ಊರಾಗಿದ್ದಾವೆಂದು ಹೇಳಿದ್ದಾರೆ. ಅವು ಲೆಕ್ಕಕ್ಕೆ ಇಲ್ಲ. ಅದು ಲಂಬಾಣಿತಾಂಡ ಇರಬಹುದು,ಹರಿಜನರು ಇರಬಹುದು. ಯಾರೇ ಇರಬಹುದು ಅವನ್ನು ಕೂಡ ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ವಿ. ದೇಶಪಾಂಡೆ : ದಾಂಡೇಲಿ ಡ್ಯಾಮ್ ಬರುತ್ತದೆ ಅದರಲ್ಲಿ ಹೆಚ್ಚು ರಿಹ್ಯಾಬಿಲಿಟೇಷನ್ ಪ್ರಶ್ನೆ ಇಲ್ಲ. ಅಲ್ಲಿ ಸ್ವಲ್ಪವೂ ಅಗ್ರಿಕಲ್ಚರ್ ಲ್ಯಾಂಡ್ ಹೋಗುವುದಿಲ್ಲ. ಪ್ರಾಜೆಕ್ಟ್ ಕೆಲಸ ನಿಂತಿದೆ. ಆ ಕೆಲಸ ನಿಂತರೆ ತೊಂದರೆಯಾಗುತ್ತದೆ. ಇದರಿಂದ ವಿದ್ಯುಚ್ಛಕ್ತಿ ಜನರೇಟ್ ಆಗುತ್ತದೆ. ಅದು ಪ್ರೈವೇಟ್ ಸೆಕ್ಟಾರ್‌ನಲ್ಲಿ ಮಾಡಬೇಕೆಂದು ನಮ್ಮ ಸರ್ಕಾರವಿದ್ದಾಗ ವಿಚಾರ ಇತ್ತು. ಆದರೆ ಗೌರ್‍ನಮೆಂಟ್ ಪ್ರಾಬ್ಲಮ್‌ನಿಂದ ಎಲೆಕ್ಟ್ರಿಸಿಟಿ ಆ್ಯಕ್ಟ್‌ಗೆ ಅಮೆಂಡ್‌ಮೆಂಟ್ ಆಗದೇ ಹಾಗೆಯೇ ಉಳಿದಿತ್ತು. ಹಾಗಾಗಿ ಅದಕ್ಕೆ ಈಗ ಹೆಚ್ಚಾಗಿ ಪ್ರೈಯಾರಿಟಿ ಕೊಡುತ್ತೀರೋ ಇಲ್ಲವೋ ಎಂದು ಕೇಳುತ್ತಿದ್ದೇನೆ. ರಿಹ್ಯಾಬಿಲಿಟೇಷನ್ ವಿಚಾರದಲ್ಲಿ ಕೇವಲ ನೌಕರಿ ಅಷ್ಟೆ ನಾನು ಹೇಳಲಿಲ್ಲ, ನಾನು ಏನು ಸಜೆಸ್ಟ್ ಮಾಡುತ್ತಿದ್ದೇನೆಂದರೆ ಪ್ರಾಜೆಕ್ಟ್ ಕ್ಲಿಯರಾಗಿ ಆದನಂತರ ಆ ಪ್ರಾಜೆಕ್ಟ್ ಶುರುವಾಗುವುದಕ್ಕೆ ಮುಂಚೆ ರಿಹ್ಯಾಬಿಲಿಟೇಷನ್ ಕೆಲಸ ಶುರುವಾಗಬೇಕು. ಪ್ರಾಜೆಕ್ಟ್ ಆಗುವುದಕ್ಕೆ ಮುಂಚೆ ರಿಹ್ಯಾಬಿಲಿಟೇಷನ್ ನೋಡಿದರೆ ಜನರು ಶಿಷ್ಟ ಆಗುತ್ತಾರೆ. ಅದರ ಬಗ್ಗೆ ನಾನು ತಮ್ಮ ಗಮನವನ್ನು ಸೆಳೆಯುತ್ತೇನೆ.

Sri. S. Bangarappa : The second suggestion is very good suggestion for action. Certainly, the Govt. will keep in mind your good suggestion. As far as fir. natter is concerned, ದಾಂಡೇಲಿ ಡ್ಯಾಮ್ ಬಗ್ಗೆ ತಾವು ಏನು ಹೇಳಿದ್ದೀರಿ. ಅದರ ವಿವರಗಳನ್ನು ನಾನು ಇನ್ನೂ ಸ್ಟಡಿ ಮಾಡಿಲ್ಲ. ಅದನ್ನು ಸ್ಟಡಿ ಮಾಡಿದ ನಂತರ ಕಾರ್ಯಕ್ರಮ ಹಾಕಿಕೊಳ್ಳುತ್ತೇನೆ. ಪ್ರೈವೇಟ್ ಸೆಕ್ಟಾರ್‌ನಲ್ಲಿ ಬರಬೇಕೆಂದು ತಾವು ಏನು ಸಲಹೆ ಮಾಡಿದಿರಿ. ಅದು ಆ್ಯಕ್ಟ್‌ಗೆ ಅಮೆಂಡ್‌ಮೆಂಟ್ ಆಗುತ್ತಿರುವುದರಿಂದ ಅದನ್ನು ತೆಗೆದುಕೊಳ್ಳುವ ವಿಚಾರವನ್ನು ಮಾಡೋಣ. ಅದು ನಮ್ಮ ಗಮನದಲ್ಲಿದೆ. ಪಟ್ಟಿಗೆ ಸೇರಿಸೋಣ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ನಮ್ಮ ಒಟ್ಟು ಪವರ್ ಜನರೇಟರ್‌ನಲ್ಲಿ 42% of our power generated is given to High Tension Industrial Units; 9% of our power generated is given to All Electric Homes.

ಅಂದರೆ 51 ಪರ್ಸೆಂಟ್, ನಾನು ಏನು ಪವರ್ ಜನರೇಟ್ ಮಾಡುತ್ತೇವೆ. ಅದು ಹೈ ಟೆನ್‌ಷನ್‌ಗೆ ಮತ್ತು ಅಲ್ ಎಲೆಕ್ಟ್ರಿಕಲ್ ಹೋಗೆ ಹೋಗುತ್ತದೆ. ಈಗ ಹೈಟೆನ್‌ಷನ್ ಇಂಡಸ್ಟ್ರೀಸ್‌ನಲ್ಲಿ ಇಡೀ ಕರ್ನಾಟಕ ರಾಜ್ಯದಲ್ಲಿ, 25-30 ಯೂನಿಟ್‌ಗಳಿರಬಹುದು. 10 ಸಾವಿರ ಜನಕ್ಕೆ ಅಥವಾ 7 ಸಾವಿರ ಜನಕ್ಕೆ ಕೆಲಸ ಕೊಡಬಹುದು. ಬರೀ 31 ಪರ್ಸೆಂಟ್ ಮಾತ್ರ ನೀವು ಕೊಡುತ್ತಾ ಇರತಕ್ಕಂಥದ್ದು. ಗ್ರಾಮಾಂತರ ಪ್ರದೇಶಗಳಲ್ಲಿ ಮಾತ್ರ ಸ್ಟ್ರೀಟ್ ಲೈಟ್ಸ್‌ಗಾಗಿ ಖರ್ಚುಮಾಡುತ್ತಾ ಇರುವುದು [illegible]

ಸದಸ್ಯರು ಪರ್ಟಿಕ್ಯಲರ್ಲಿ ಪ್ರೊ: ನಂಜುಂಡಸ್ವಾಮಿಯವರು ಇದನ್ನು ಬಹಳ ದಿವಸದಿಂದ ಹೇಳಿಕೊಂಡು ಬಂದಿದ್ದಾರೆ, ನಾವು ಸಹ ಹೇಳಿದ್ದೇವೆ. 41 ಪರ್ಸೆಂಟ್ ಹೈ ಟೆನ್‌ಷನ್ ಇಂಡಸ್ಟ್ರೀಸ್‌ಗೆ ಕೊಡುತ್ತಿದ್ದೀರಿ, ಇದನ್ನು 25 ಪರ್ಸೆಂಟ್ ಕಡಿಮೆ ಮಾಡಿ.

5.15 ಪಿ.ಎಂ.

ಇನ್ನು 15 ಪರ್‌ಸೆಂಟ್ ಪವರ್ ಏನು ಉಳಿಯುತ್ತದೆ, ಅದನ್ನು ಐ.ಪಿ. ಸೆಟ್‌ಗಳಿಗೆ ಅಥವಾ ಬೇರೆ ಕನ್‌ಸಮ್ಪ್‌ಷನ್‌ಗೆ ಏತಕ್ಕೆ ಕೊಡಬಾರದು ? ಇದು ಸರ್ಕಾರದ ನೀತಿಯ ಪ್ರಶ್ನೆ. ಇದರ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕೆಂದು ನನ್ನ ಒತ್ತಾಯ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ಉಪ ನಾಯಕರು ಹೇಳಿರತಕ್ಕದ್ದನ್ನು ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆ. ಗುಡ್ ಸಜೆಷನ್. ಅದನ್ನು ಗಮನದಲ್ಲಿಟ್ಟು ನಾವು ತೀರ್ಮಾನ ಮಾಡುತ್ತೇವೆ.

ಶ್ರೀ ಹೆಚ್. ಏಕಾಂತಯ್ಯ : ಅಧ್ಯಕ್ಷರೇ, ಈಗ ಕೆಲವು ಪಟ್ಟಣ ಪ್ರದೇಶಗಳಿಗೆ ಗ್ರಾಮಾಂತರ ಪ್ರದೇಶವೂ ಸೇರಿದಂತೆ ಕೆಲವು ಗ್ರಾಮಗಳಿಗೆ ವಿದ್ಯುತ್ ಪೂರೈಕೆ ಮಾಡುವಾಗ ಸಂಬಂಧಪಟ್ಟಂಥ ತಹಶೀಲ್ದಾರ್‌ರವರಿಂದ ತಾವು ಸರ್ಟಿಫಿಕೇಟ್ ತರಬೇಕೆಂಬ ಮಾತನ್ನು ಹೇಳುತ್ತೀರಿ. ಈಗ ಏನಾಗಿದೆ, ಮೂರ್‍ನಾಲ್ಕು ತಿಂಗಳು ಅಥವಾ ಐದು ತಿಂಗಳುಗಳಿಂದಲೂ ನೂರಾರು ಜನ ವಿದ್ಯುತ್ ಬಳಕೆದಾರರು ಕಾಯುತ್ತಿದ್ದಾರೆ. ಈ ಕಡೆ ತಹಶೀಲ್ದಾರ್‌ರವರು ಸರ್ಟಿಫಿಕೇಟ್ ಕೊಡುವುದಿಲ್ಲ, ಆ ಕಡೆ ನಗರಾಭಿವೃದ್ಧಿ ಯೋಜನೆಯವರು ಸರ್ಟಿಫಿಕೇಟ್ ಕೊಡುವುದಿಲ್ಲ.ಹೀಗಾಗಿ ಪಟ್ಟಣ ಪ್ರದೇಶದ ಭಾಗದಲ್ಲಿರುವಂಥ ಹಳ್ಳಿಗಳೇನಿದೆ ಮತ್ತೆ ಡೆವಲಪ್‌ಮೆಂಟ್ ಅಥಾರಿಟಿ ವ್ಯಾಪ್ತಿಗೆ ಏನು ಸೇರುತ್ತವೆ, ಆ ಹಳ್ಳಿಯಲ್ಲಿರುವಂಥ ರೈತರಿಗೆ ಮತ್ತು ಮನೆಗಳನ್ನು ಯಾರು ಕಟ್ಟಿಕೊಂಡು ವಿದ್ಯುಚ್ಛಕ್ತಿ ಪೂರೈಕೆಗೆ ಅರ್ಜಿ ಹಾಕಿದ್ದಾರೆ ಅವರುಗಳಿಗೆ ವಿದ್ಯುಚ್ಛಕ್ತಿ ಸಿಕ್ಕುವಂಥ ಪರಿಸ್ಥಿತಿ ಇಲ್ಲ. ಈ ಬಗ್ಗೆ ನಾನು ನಾಲ್ಕೈದು ತಿಂಗಳಿಂದ ಪತ್ರ ಬರೆದಿದ್ದೇನೆ, ಸಂಬಂಧಪಟ್ಟ ಡೆಪ್ಯುಟಿ ಕಮೀಷನರ್‌ರವರು ಪತ್ರ ಬರೆದಿದ್ದಾರೆ. ಸುಮಾರು ಐದು ತಿಂಗಳುಗಳಿಂದ ಒಂದು ಕ್ಲಾರಿಫಿಕೇಷನ್ ಸರ್ಕಾರದಿಂದ ಬರಲಿಕ್ಕೆ ಸಾಧ್ಯವಾಗಲಿಲ್ಲ, ಅದ್ದರಿಂದ, ನೀವು ಇದರ ಬಗ್ಗೆ ಸ್ಪಷ್ಟವಾದಂಥ ನಿರ್ದೇಶನವನ್ನು ಸಂಬಂಧಪಟ್ಟವರಿಗೆ ಕಳುಹಿಸಿ ಯಾರಿಗೆ ಸರ್ಟಿಫಿಕೇಟ್ ಕೊಡಲಿಕ್ಕೆ ಅಧಿಕಾರ ಇದೆ, ಅಥವಾ ಇಲ್ಲ ಎನ್ನುವುದನ್ನು ಹೇಳಬೇಕು. ಇದನ್ನು ಹೇಳಿದಿದ್ದರೆ ಬಹಳ ಕಷ್ಟವಾಗುತ್ತದೆ. ನೂರಾರು ಜನ ವಿದ್ಯುತ್ ಪೂರೈಕೆಗೆ ಕಾಯ್ದು, ಮನೆ ಕಟ್ಟಿಕೊಂಡು ಬೆಳಕು ಇಲ್ಲದೆ ಇದ್ದಾರೆ. ಇದೇ ರೀತಿ ಪಟ್ಟಣ ಪ್ರದೇಶದಲ್ಲಿಯೂ ಇದ್ದಾರೆ. ಇದರ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ತಿಳಿಸಬೇಕು.

ಶ್ರೀ ಎಸ್. ಬಂಗಾರಪ್ಪ : ನನಗನಿಸುವುದು, ನೀವು ಯಾವುದು ಹೇಳುತ್ತಿದ್ದೀರಿ ಅಂದರೆ, ಚಿತ್ರದುರ್ಗ ಟೌನ್ ಏನಿದೆಯಲ್ಲ, ಅಲ್ಲಿ ಲಾರಿಗಳು ನಿಲ್ಲುತ್ತವೆಯಲ್ಲ, ನ್ಯಾಷನಲ್ ಹೈವೇ ಹೋಟೆಲ್ ಅದರ ಬಲಗಡೆ ಒಂದು ರೋಡ್ ಹೋಗುತ್ತದೆ, ನಾನು ಆ ಗ್ರಾಮಕ್ಕೆ ಹೋಗಿ ಬಂದಿದ್ದೇನೆ. ಆ ಗ್ರಾಮ ಗಮನದಲ್ಲಿಟ್ಟುತಾವು ಹೇಳಿರಬೇಕೆಂದು ನನ್ನ ಭಾವನೆ.

ಶ್ರೀ ಎ. ಕೃಷ್ಣಪ್ಪ : ಅಧ್ಯಕ್ಷರೇ, ಈ ಸಮಸ್ಯೆ ಎಲ್ಲಾ ಕಡೆ ಇದೆ. ಬೆಂಗಳೂರಿನಲ್ಲಿ ಇದೇ ಸಮಸ್ಯೆ ಇದೆ. ಕಾಮನ್ ಪ್ರೊಸೀಜರ್ ಮಾಡಿದ್ದಾರೆ

ಶ್ರೀ ಎಸ್. ಬಂಗಾರಪ್ಪ : ಅದನ್ನು ಲಿಬರಲೈಸ್ ಮಾಡುತ್ತೇನೆ ನಂತರ ನಿಮಗೆ ತಿಳಿಸುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ಈಗ ಏನಾಗಿದೆ ಅಂದರೆ, ತಾವು ಸಂಬಂಧಪಟ್ಟ ತಹಶೀಲ್ದಾರ್‌ರವರ ಹತ್ತಿರ ಸರ್ಟಿಫಿಕೇಟ್ ತೆಗೆದುಕೊಂಡು ಬನ್ನಿ, ನಾವು ವಿದ್ಯುತ್ ಪೂರೈಕೆ ಮಾಡುತ್ತೇವೆ. ಇಲ್ಲದಿದ್ದರೆ, ಕೊಡುವುದಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ, ತಾವು ಸ್ಪಷ್ಟವಾಗಿ ಕೆಇಬಿ ಅವರಿಗಾದರೂ ಆದೇಶ ಕೊಡಿ, ತಹಶೀಲ್ದಾರ್‌ರವರಿಗಾದರೂ ಕೊಡಿ.

ಶ್ರೀಎಸ್. ಬಂಗಾರಪ್ಪ : ಅದರ ಬಗ್ಗೆ ನಾನು ತಿಳಿಸುತ್ತೇನೆ. ಅದು ಎಲ್ಲರಿಗೂ ಅಪ್ಲೈ ಆಗುತ್ತದೆ.

ಶ್ರೀ ಪಿ. ಎಸ್. ರಾಣೆ : ಪ್ರತಿಯೊಂದು ಗ್ರಾಮದಲ್ಲೂ 15 ಜನರಿಗಿಂತ ಹೆಚ್ಚು ಫಲಾನುಭವಿಗಳನ್ನು ತೆಗೆದುಕೊಳ್ಳಬಾರದೆಂದು ಒಂದು ನಿಯಮ ಇದೆ. 15 ಕ್ಕಿಂತಲೂ ಹೆಚ್ಚು ಭಾಗ್ಯಜ್ಯೋತಿ ಯೋಜನೆಯಲ್ಲಿ ವಿದ್ಯುತ್ ಪೂರೈಸಲಿಕ್ಕೆ ಬರುವುದಿಲ್ಲ. ಮಲೆನಾಡಿನ ಅನೇಕ ಹಳ್ಳಿಗಳಲ್ಲಿ ಹೆಚ್ಚಾಗಿ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರು ಇರತಕ್ಕಂಥ ಭಾಗದಲ್ಲಿ ಒಂದು ಗ್ರಾಮದಲ್ಲಿ 15 ಅಲ್ಲ, 100ಕ್ಕಿಂತಲೂ ಹೆಚ್ಚು ಅರ್ಹ ಫಲಾನುಭವಿಗಳು ಅಲ್ಲಿ ಸಿಕ್ಕುತ್ತಾರೆ. ಅಂತಹ ಪ್ರಸಂಗದಲ್ಲಿ ಭಾಗ್ಯಜ್ಯೋತಿ ಯೋಜನೆ ಒಳಗೆ ಯಾವುದೇ ಅರ್ಹ ಜನರಿಗೆ ಪ್ರಯೋಜನ ಸಿಕ್ಕುತ್ತಿಲ್ಲ. ಆದ್ದರಿಂದ, ಒಂದು ಗ್ರಾಮಕ್ಕೆ 15 ಜನರಿಗಿಂತ ಹೆಚ್ಚು ಜನರನ್ನು ತೆಗೆದುಕೊಳ್ಳಬಾರದೆಂದು ಎನ್ನುವ ಈ ಒಂದು ನಿರ್ಬಂಧ ಏನಿದೆ ಅದನ್ನು ಸರ್ಕಾರ ಸಡಿಲಗೊಳಿಸುತ್ತದೆಯೇ? ಎರಡನೆಯದು, ಮಾನ್ಯ ಸದಸ್ಯರಾದ ದೇಶಪಾಂಡೆಯವರು ರಿಹ್ಯಾಬಿಲಿಟೇಷನ್ ಬಗ್ಗೆ ಹೇಳಿದರು, ಬೇರೆ ಬೇರೆ ಜಲವಿದ್ಯುತ್ ಯೋಜನೆಗಳಲ್ಲಾಗಿರಲಿ, ಅಥವಾ ಯಾವುದೇ ಯೋಜನೆಗಳಲ್ಲಾಗಿರಲಿ, ಈ ರಿಹ್ಯಾಬಿಲಿಟೇಷನ್ ಏನಾಗಿದೆ ಅಂದರೆ, ಆಬ್ಲಿಗೇಟರಿ ಫಂಕ್ಷನ್ ಎಂದು ಸರ್ಕಾರ ಅದನ್ನು ಪರಿಗಣಿಸುವುದಿಲ್ಲ, ಅದು it should be a part and parccel of that project.

ಈ ಸರ್ಕಾರ ಅದರ ಬಗ್ಗೆ ಈ ರೀತಿಯ ನಿರ್ಣಯ ತೆಗೆದುಕೊಂಡಾಗ ಮಾತ್ರ ಆ ಜನರಿಗೆ ನ್ಯಾಯ ಒದಗಿಸಿಕೊಡಲಿಕ್ಕೆ ಆಗುತ್ತದೆ ಇಲ್ಲದಿದ್ದರೆ, ಇವೊತ್ತು ಯೋಜನೆಗಳು ಮುಕ್ತಾಯವಾಗಿ 10-15 ವರ್ಷಗಳಾದರೂ ಸಹ, ಅದರಿಂದ ನಿರಾಶ್ರಿತಗೊಂಡಂಥ ಜನರಿಗೆ ಪುನರ್ವಸತಿ ಸೌಲಭ್ಯ ಕಲ್ಪಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಅನೇಕ ಅಧಿಕಾರಿಗಳು ಏನು ಮಾಡುತ್ತಾರೆಂದರೆ, ಯೋಜನೆ ಪ್ರಾರಂಭವಾಗುವಾಗ ಅಧಿಕಾರಿಗಳಿಗೆ ಬೇಕಾಗಿರುವಂಥ, ಸವಲತ್ತುಗಳನ್ನು ಪೂರ್ತಿಯಾಗಿ ಮಾಡಿಕೊಳ್ಳುತ್ತಾರೆ. ಆದರೆ, ಆ ಯೋಜನೆಗೆ ಕಾರಣಕರ್ತರಾದ ಜನರಿಗೆ ಪುನರ್‌ವಸತಿ ಕಲ್ಪಿಸುವಲ್ಲಿ ಮಾತ್ರ ಯಾವುದೇ ಒಂದು ಆದ್ಯತೆಯನ್ನು ಕೊಡುವುದಿಲ್ಲ.ಆದ್ದರಿಂದ, ಸರ್ಕಾರ ಆ ಬಗ್ಗೆ ಅದೊಂದು ಯೋಜನೆಯ ಅವಿಭಾಜ್ಯ ಅಂಗವನ್ನಾಗಿ ಪರಿಗಣಿಸುವಂಥ ವಿಚಾರವನ್ನು ಮಾಡುತ್ತದೆಯೇ ಎಂದು ನಾನು ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಎರಡನೆಯದು ಬಹಳ ಒಳ್ಳೆಯ ಸಲಹೆ. ಮಾನ್ಯ ದೇಶಪಾಂಡೆಯವರು ಏನು ಹೇಳಿದ್ದಾರೆ ಅದಕ್ಕೆ ಪೂರಕವಾಗಿರತಕ್ಕ ವಿಚಾರ. ಈ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಕ್ರಮ ತೆಗೆದುಕೊಳ್ಳುತ್ತೇನೆ. ಇದು ಪಾರ್ಟ್ ಅಂಡ್ ಪಾರ್ಸಲ್ ಆಫ್ ದಿ ಪ್ರಾಜೆಕ್ಟ್. ಇದು ಬಹಳ ಉಪಯೋಗವಾಗುತ್ತದೆಂದು ಹೇಳಿದ್ದಾರೆ. ಕ್ರಮ ತೆಗೆದುಕೊಳ್ಳುವುದಕ್ಕೆ ಇದು ಬಹಳ ಒಳ್ಳೆಯ ಸಲಹೆ. ಇದು ತುಂಬಾ ಒಳ್ಳೆಯದೆಂದು ನಾನು ಭಾವಿಸಿದ್ದೇನೆ. ಈ ವಿಚಾರವನ್ನು ನಾನು ಮರೆತಿದ್ದೆ. ಇದನ್ನು ನೆನಪುಮಾಡಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು. ಮೊದಲು 15 ಮನೆ ಒಂದು ಗ್ರಾಮಕ್ಕೆ ಎಂದು ಇದ್ದುದು ನಿಜ...

ಪ್ರೊ : ಎಂ. ಡಿ. ನಂಜುಂಡಸ್ವಾಮಿ : ಮಾನ್ಯ ಮುಖ್ಯ ಮಂತ್ರಿಗಳು ಒಂದು ನಿಮಿಷ ಅವಕಾಶವನ್ನು ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ : ಇದಕ್ಕೆ ನಾನು ಉತ್ತರವನ್ನು ಕೊಡುತ್ತೇನೆ.

ಪ್ರೊ : ಎಂ. ಡಿ. ನಂಜುಂಡಸ್ವಾಮಿ : ಮಾನ್ಯ ಸದಸ್ಯರಾದ ರಾಣೆಯವರು ಏನು ಹೇಳಿದ್ದಾರೆ ಅದಕ್ಕೆ ಸೇರಿಸಿ ಒಂದು ಮಾತನ್ನು ಹೇಳುತ್ತೇನೆ. ಅವರು ಪಾರ್ಟ್ ಅಂಡ್ ಪಾರ್ಸೆಲ್ ಆಫ್ ದಿ ಪ್ರಾಜೆಕ್ಟ್ ಎಂದು ಹೇಳಿದ್ದಾರೆ. ಮಹಾರಾಷ್ಟ್ರದಲ್ಲಿ ಒಂದು ಕಾನೂನು ಮಾಡಿದ್ದಾರೆ. ಅಧ್ಯಕ್ಷರೆ, Acquisition is immediately followed by payment of compensation and then work is taken up. ಮಹಾರಾಷ್ಟ್ರದಲ್ಲಿರುವಂತೆ ತಾವೂ ಇಂಥ ಒಂದು ಕಾನೂನನ್ನು ಮಾಡಿದರೆ ಈ ಸಮಸ್ಯೆ ಬಗೆಹರಿಯುತ್ತದೆ.

ಶ್ರೀ ಎಸ್. ಬಂಗಾರಪ್ಪ : ಇದು ಒಳ್ಳೆಯ ಸಲಹೆ. ಇದನ್ನು ಗಮನದಲ್ಲಿಟ್ಟುಕೊಂಡು ಮಹಾರಾಷ್ಟ್ರದಿಂದ ಇದು ಯಾವ ರೀತಿ ಇದೆಯೆಂದು ತರಿಸಿಕೊಂಡು ನೋಡುತ್ತೇವೆ. ಒಳ್ಳೆಯದಿದ್ದರೆ ಅದನ್ನು ಮಾಡೋಣ. ಏತಕ್ಕೆ ಮಾಡಬಾರದು. ಆದುದರಿಂದಲೇ ಒಳ್ಳೆಯ ಸಲಹೆಗಳನ್ನು ನಾವು ಸ್ವಾಗತಮಾಡುತ್ತೇವೆ. ಭಾಗ್ಯಜ್ಯೋತಿಯ ಬಗ್ಗೆ ಮಾನ್ಯ ಸದಸ್ಯರಾದ ರಾಣೆಯವರು ಹೇಳಿದ್ದಾರೆ. 1 ಗ್ರಾಮಕ್ಕೆ 15 ಮನೆಗಳಿಗಿಂತ ಹೆಚ್ಚಿಗೆ ಹೋಗಬಾರದು ಎಂದು ಇದ್ದುದ್ದನ್ನು ಈಗ ನಾವು 25 ಮನೆಗಳಿಗೆ ಏರಿಸಿರತಕ್ಕದ್ದೂ ಅಷ್ಟೇ ನಿಜ. 15 ಇದ್ದುದ್ದನ್ನು ನಾವು 25ಕ್ಕೇ ಏರಿಸಿದ್ದೇವೆ. ಜೊತೆಗೆ ಜನತಾ ಕಾಲೋನಿಗಳೆಂದು ಮಾನ್ಯ ರೆಡ್ಡಿಯವರು ಏನು ಹೇಳಿದರು ಅದನ್ನೂ ಕೂಡ ನಾವು ಸೇರಿಸಿದ್ದೇವೆ. ಕೆಲವು ಸಂದರ್ಭಗಳಲ್ಲಿ 25 ಮನೆಗಳಿಗಿಂತಲೂ ಹೆಚ್ಚಿಗೆ ಬರತಕ್ಕ ಪರಿಸ್ಥಿತಿ ಇದೆ. ಅದನ್ನು ನಾವು ಕನ್ಸಿಡರ್ ಮಾಡಿ ಇನ್ನೂ ಹೆಚ್ಚಿಗೆ ಮಾಡುವುದಕ್ಕೂ ಕೂಡ..

ಶ್ರೀ ಆರ್. ವಿ. ದೇಶಪಾಂಡೆ : ಹಳ್ಳಿಗಳಲ್ಲಿರುವವರು ಬಹಳ ಬಡವರು. ಆದ್ದರಿಂದ ಅವರಿಗೆ ಇದನ್ನು ಎಕ್ಸೆಂಪ್ಟ್ ಮಾಡಿ.

ಶ್ರೀ ಎಸ್. ಬಂಗಾರಪ್ಪ : ಜಾಸ್ತಿ ಮಾಡತಕ್ಕ ವಿಚಾರವನ್ನೂ ವಿಚಾರ ಮಾಡೋಣ. ಇನ್ನೊಂದು ವಿಚಾರ ಏನೆಂದರೆ ಹಿಂದೆ ಭಾಗ್ಯಜ್ಯೋತಿ ದೀಪವನ್ನು ಕೊಟ್ಟು 1 ಬಲ್ಬ್ ಇದ್ದುದ್ದನ್ನು 2-3 ಬಲ್ಬ್‌ಗಳನ್ನು ಹಾಕಿ ಉಪಯೋಗ ಮಾಡಿದರು. ಈಗ ನಾವು ಯಾರೂ ಕೂಡ ಅವುಗಳನ್ನು ತೆಗೆಯುವುದಕ್ಕೆ ಬರುವುದಿಲ್ಲ. ಬಿಲ್ಲುಗಳ ಬಾಕಿ ವಸೂಲಿಗೋಸ್ಕರ ನೋಟೀಸ್ ವಗೈರೆ ಹೋಗಿ ನೀವು ಹಣ ಕಟ್ಟಬೇಕೆಂದು ಡಿಮ್ಯಾಂಡ್ ನೋಟೀಸ್ ಕೂಡ ಹೋದವು. ಕೆಲವುಕಡೆ ಡಿಸ್‌ಕನೆಕ್ಟ್ ಕೂಡ ಮಾಡಿದರು. ಈ ಕೆ. ಇ. ಬಿ. ಯಿಂದ ನಾವು ಒಂದು ಆರ್ಡರನ್ನು ಹೊರಡಿಸಿ ಕಳುಹಿಸಿಕೊಟ್ಟಿದ್ದೇವೆ. ಈ ವಿಚಾರವನ್ನು ನಾನು ಹಿಂದೆ ಈ ಸದನದಲ್ಲಿ ಕೂಡ ಹೇಳಿದ್ದೆ. ಆ ರೀತಿ ಯಾವ್ಯಾವು ಡಿಸ್‌ಕನೆಕ್ಟ್ ಆಗಿವೆ ಅವೆಲ್ಲಕ್ಕೂ ಕನೆಕ್ಷನ್ಸ್ ಕೊಡಬೇಕೆಂದು ಆದೇಶ ಹೊರಡಿಸಿ ಅದರಂತೆ ಕನೆಕ್ಷನ್ಸ್ ಕೊಡಿಸಿದ್ದೇವೆ. ಇನ್ನೂ ಒಂದು ವೇಳೆ ಯಾವುದಾದರೂ ಬಾಕಿ ಇದ್ದರೆ ಅದನ್ನು ನನ್ನ ಗಮನಕ್ಕೆ ತನ್ನಿ. ಇದು ಹಿಂದಿನ ತೀರ್ಮಾನ. ಇದರ ಜೊತೆಗೆ ಕೂಲಿ ಮಾಡತಕ್ಕ ವರ್ಗದವರಿಂದ ಬಾಕಿಯನ್ನು ವಸೂಲು ಮಾಡತಕ್ಕ ಅವಶ್ಯಕತೆ ಇಲ್ಲ. ಅವರದ್ದು ಎಷ್ಟು ಬಾಕಿ ಇದೆ ಅದನ್ನು ಬೋರ್ಡಿನವರ ಮುಂದಿಡಬೇಕೆಂದು ನಾವು ತಿಳಿಸಿದ್ದೇವೆ. ಆದುದರಿಂದ ಹಳೆಯ ಬಾಕಿ ಏನಿದೆ ಅದರ ವಸೂಲಾತಿಗೆ ಯಾವುದೇ ಕ್ರಮವನ್ನೂ ನಾವು ತೆಗೆದುಕೊಂಡಿಲ್ಲ, ಎರಡನೆಯದಾಗಿ ಡಿಸ್‌ಕನೆಕ್ಟ್ ಆಗಿರುವುದಕ್ಕೆ ಕನೆಕ್ಷನ್ಸ್ ಕೊಡಿಸಿದ್ದೇವೆ. ಇನ್ನೂ ಬಾಕಿ ಯಾವುದಾದರೂ ಇದ್ದರೆ ಅದಕ್ಕೂ ಕೂಡ ನಾವು ಕನೆಕ್ಷನ್ಸ್

ಕೊಡಿಸುತ್ತೇವೆ. ಆ ಬಡ ವರ್ಗದವರಿಗೆ ಏನೇನೂ ತೊಂದರೆ ಆಗದ ರೀತಿಯಲ್ಲಿ ನಾವು ನೋಡಿಕೊಳ್ಳುತ್ತೇವೆ. ಜೊತೆಗೆ ಈಗ ನಾವು 15ರಿಂದ 25ಕ್ಕೆ ಏನು ಏರಿಸಿದ್ದೇವೆ ಅದನ್ನು ಇನ್ನೂ ಜಾಸ್ತಿ ಮಾಡುತ್ತೇವೆ. 50 ಮನೆಗಳನ್ನು ನಾವು ಕಟ್ಟಿಸಿದ್ದರೆ ಅವರಿಗೂ ದೀಪಗಳನ್ನು ಹಾಗೆಯೇ ಕೊಡಿಸಬೇಕಾಗುತ್ತದೆ. 50 ಮನೆಗಳಿಗೂ ನಾವು ದೀಪಗಳನ್ನು ಕೊಡತಕ್ಕದ್ದು ಬಹಳ ಒಳ್ಳೆಯದು. ಇವತ್ತು ಮಾನ್ಯ ಪ್ರೊಫೆಸರ್‌ರವರಿಗೆ ನೆನಪಿರಬಹುದು. ಯಾವುದಾದರೂ ಒಂದು ಸಿಕ್ ಇಂಡಸ್ಟ್ರೀಸ್ ಇದ್ದರೆ, ಅದನ್ನು ರೈಟ್ ಆಫ್ ಮಾಡುತ್ತೇವೆ. Why not these houses which belong to the poorer sectionofthesociety.ಆದುದರಿಂದ ಈ ಅಂಶವನ್ನು ಕೂಡ ನಾವು ಗಮನದಲ್ಲಿಟ್ಟುಕೊಂಡು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕರಿಯಣ್ಣ : ಇನ್ನೂ ದೊಡ್ಡ ಗ್ರಾಮಗಳು ಇದ್ದಾವೆ.

ಶ್ರೀ ಎಸ್. ಬಂಗಾರಪ್ಪ : 50ಕ್ಕೂ ಕೂಡ ನಾವು ಒಪ್ಪಿಕೊಳ್ಳುತ್ತೇವೆಂದು ನಾನು ಹೇಳಿದ್ದೇನಲ್ಲಾ.

ಶ್ರೀ ಕರಿಯಣ್ಣ : ಆಗಬಹುದು.

ಶ್ರೀ ಎಂ. ತಮ್ಮಣ್ಣ : ಸುಮಾರು 10-15 ಸಾವಿರದವರೆಗೆ ಹರಿಜನರು ಸಾಮೂಹಿಕ ವ್ಯವಸಾಯವನ್ನು ಮಾಡುತ್ತಿದ್ದಾರೆ. ಅಂಥವರು ದುಡ್ಡು ಕಟ್ಟಿಲ್ಲ ಎಂದು ಕೆ. ಇ. ಬಿ. ಯವರು ಡಿಸ್‌ಕನೆಕ್ಟ್ ಮಾಡಿರತಕ್ಕ ಕೇಸುಗಳು ಬಹಳಷ್ಟು ಇವೆ. ಅವರ ಬಗ್ಗೆ ಕೂಡ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಗಂಗಾಕಲ್ಯಾಣ ಮತ್ತಿತರ 2-3 ವಿಚಾರಗಳ ಬಗ್ಗೆ ಮಾನ್ಯ ರಾಮಪ್ಪನವರು ಉತ್ತರ ಕೊಡುತ್ತಾರೆ.

ಶ್ರೀ ಗೋಪಿನಾಥ ಆರ್. ಸಾಂಡ್ರ : ಪವರ್ ಜನರೇಷನ್‌ಗೆ ಅತಿ ಹೆಚ್ಚಿನ ಪ್ರಾಶಸ್ತ್ಯ ಕೊಡುತ್ತೇವೆ..

ಅಧ್ಯಕ್ಷರು : ಪವರ್ ಬಗ್ಗೆ ಉಳಿದುದನ್ನು ಮಾನ್ಯ ರಾಮಪ್ಪನವರು ಉತ್ತರ ಕೊಡುತ್ತಾರೆ. ಅದಾದಮೇಲೆ ತಾವು ಕೇಳಿ.

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ನಾನು ಬಹಳ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ಎಲ್ಲಾ ವಿಚಾರಗಳನ್ನೂ ಹೇಳಿದ್ದಾರೆ. ಆದರೆ ಗಂಗಾಕಲ್ಯಾಣ, ಆದಮೇಲೆ ರೈತರು ಪಂಪ್‌ಸೆಟ್ಟುಗಳನ್ನು ಏನು ಮಾಡಿಕೊಂಡಿದ್ದಾರೆ ಅವರಿಗೆಲ್ಲಾ ಒಂದು ರೇಟನ್ನು ಫಿಕ್ಸ್ ಮಾಡಬೇಕೆಂದು ನಾವು ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ.

ಮಾನ್ಯ ಬಾಬಗೌಡರು ಹೇಳಿದಹಾಗೆ ನನಗೆ ಬಹಳ ಸಂತೋಷವಾಯಿತು. ನಾವು ಕೂಡ ಅದನ್ನೇ ಮನಸ್ಸಿನಲ್ಲಿ ಅಂದುಕೊಂಡಿದ್ದೆವು. ಅವರು ಹೇಳಿದ್ದೆಲ್ಲ ಮಾಡಿದ್ದೇವೆಂದು ಹೇಳುವುದಿಲ್ಲ, ಅವರು ತಮ್ಮ ಅಭಿಪ್ರಾಯವನ್ನು ಹೇಳುತ್ತಾ ಒಳ್ಳೆಯ ಸಲಹೆಗಳನ್ನೂ ಕೂಡ ಕೊಟ್ಟಿದ್ದಾರೆ. ಒಂದೊಂದುಸಾರಿ ನಾವು ಮಾನ್ಯ ಸದಸ್ಯರು ಕೊಟ್ಟ ಸಲಹೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಕೆಲವರು ಸುಮ್ಮನೆ ಟೀಕೆಗಳನ್ನು ಕೂಡ ಮಾಡುತ್ತಿರುತ್ತಾರೆ. ಆ ಟೀಕೆಗಳನ್ನು ಮಾಡುವುದಕ್ಕೆ ಮುಂಚೆ ಸಲಹೆಗಳನ್ನು ಕೊಡುವುದನ್ನು ನಾವು ಸ್ವೀಕಾರ ಮಾಡುತ್ತೇವೆ. ಅದಕ್ಕೆ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮಾನ್ಯ ಶ್ರೀ ಮತಿ ಮೋಟಮ್ಮನವರು ನಮ್ಮ ಕೆ.ಇ.ಬಿ. ಬಗ್ಗೆ ಹೇಳಿದರು ಅವರಿಗೆ ಕೆ.ಇ.ಬಿ.

ಯೂನಿಯನ್‌ಮೇಲೆ ಒಂದು ಕಲ್ಪನೆ ಇದೆ. ಅವರು ಸರಿಯಾಗಿ ಕೆಲಸ ಮಾಡುವುದಿಲ್ಲ ಆದರೆ ಅಲ್ಲಿ ಎಲ್ಲರೂ ಕೆಟ್ಟವರಿದ್ದಾರೆಂದು ನಾನು ಹೇಳುವುದಿಲ್ಲ. ಕೆಲವರು ಇದ್ದಾರೆ. ನಾನು ಅಂಥವರಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂದೆಮುಂದೆ ನೋಡಲಿಕ್ಕೆ ಹೋಗುವುದಿಲ್ಲ, ನಾವು ಕ್ರಮ ತೆಗೆದುಕೊಳ್ಳತ್ತೇವೆ. ಅಂಥವರ ಪಟ್ಟಿಯನ್ನು ಕೊಟ್ಟರೆ ಯೂನಿಯನ್ ಅವರ ಹೆಸರನ್ನು ಕೊಟ್ಟರೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂದೆಮುಂದೆ ನೋಡುವುದಿಲ್ಲ ಯೂನಿಯನ್‌ನವರೆಂದರೆ ಪರದೇಶದವರಾಗುವುದಿಲ್ಲ. ಅವರು ನಮ ದೇಶದವರೇ ಇರುತ್ತಾರೆ. ಅವರನ್ನು ಒಂದುವಿಧವಾಗಿ ಬೇರೆ ರೀತಿಯಲ್ಲಿ ನೋಡಬಾರದೆಂದು ಹೇಳಿದೆ. ಅವರ ಬಗ್ಗೆ ನಿಮಗೆ ತಪ್ಪು ಕಲ್ಪನೆ ಇದೆಯೋ ಏನೋ ಎನ್ನುವ ಅಭಿಪ್ರಾಯ ಕೂಡ ಇದೆ. ಅವರ ಬಗ್ಗೆ ಸರಿಯಾದ ರೀತಿಯಲ್ಲಿ ಕೆಲಸ ಮಾಡುವಂತೆ ಪ್ರಯತ್ನ ಮಾಡೋಣ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೇ ಕಲ್ಪನೆ ಅಥವಾ ಅವರ ಬಗ್ಗೆ ದ್ವೇಶ ಇದೆ ಎನ್ನುವ ದೃಷ್ಟಿಯಿಂದ ನಾನು ಮಾತನಾಡಲಿಲ್ಲ ನಾನು ಹೇಳಿದೇ ಕೆ.ಇ.ಬಿ. ಯೂನಿಯನ್‌ನವರು ಕೆ.ಇ.ಬಿ. ಆಡಳಿತದಲ್ಲಿ ಕೈ ಹಾಕುತ್ತಿದ್ದಾರೆಂದು., ಆಡಳಿತದಲ್ಲಿ ಕೈ ಹಾಕುವುಧಕ್ಕೆ ಅವರಿಗೆ ಅಧಿಕಾರ ಇಲ್ಲ, ಯೂನಿಯನ್ ಅವರ ಸಮಸ್ಯೆಗಳು ಬಂದರೆ ಮಾತ್ರ ಫೈಟ್ ಮಾಡಬೇಕು. ಬೇರೆ ಬೇರೆ ಇಲಾಖೆಗಳಲ್ಲೂ ಎಂಪ್ಲಾಯಿಸ್ ಅಸೋಸಿಯೇಷನ್ ಇದೆ. ಆದರೆ ಅವರ ಇಂಟರ್ ಫಿಯರೆನ್ಸ್ಇಲ್ಲ. ಇಂಟರ್‌ಫಿಯರೆನ್ಸ್ ಹೇಗೆ ಮಾಡುತ್ತಾರೆ ಎನ್ನುವ ಬಗ್ಗೆ ಒಂದು ಎಕ್ಸಾಂಪಲ್ ಕೊಟ್ಟು ಹೇಳಿದೆ. ಸೀಸನಲ್ ಟ್ರಾನ್ಸ್‌ಫರ್ ಮಾಡಿದ್ದನ್ನು ಚಿಕ್ಕಮಗಳೂರು ಎಕ್ಸಿಕ್ಯುಟೀವ್ ಇಂಜಿನೀಯರ್ ಅಲ್ಲಿಯ ಯೂನಿಯನ್ ಒತ್ತಡ ಹಾಕಿ ಮಾಡಿದರು. ಅಲ್ಲಿಗೆ ಒಬ್ಬ ಜೆ.ಇ. ಪೋಸ್ಟನ್ನು ಮಾಡಿದರು ಎನ್ನುವುದನ್ನು ನಾನು ಸಾಬೀತು ಮಾಡಿ ಹೇಳಿದೆ ನಾನು ಏನು ಅವರ ಮೇಲೆ ದ್ವೇಶ ಇಟ್ಟುಕೊಂಡಿಲ್ಲ ಆಮೇಲೆ ಪ್ರತಿಯೊಂದು ಜಿಲ್ಲೆಯಲ್ಲೂ ಸಹ ಯೂನಿಯನ್‌ರವರು ಏನಿದ್ದಾರೆ ಅವರಿಗೆ ಟ್ರಾನ್ಸ್‌ಫರ್ ಇಲ್ಲವಂತೆ ಲೈನ್‌ಮ್ಯಾನ್‌ಗಳು ಅಲ್ಲಿಯ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರ ಹಿಡಿತಕ್ಕೆ ಸಿಕ್ಕುವುದಿಲ್ಲ; ಏತಕ್ಕೆಂದರೆ ಯೂನಿಯನ್ ಎಂದು ಹೇಳುತ್ತಾರೆ.

ಆದ್ದರಿಂದ ಲೈನ್‌ಮೆನ್ ಮೇಲೂ ಕ್ರಮ ತೆಗೆದುಕೊಳ್ಳುವಂತಿಲ್ಲ, ಹಳ್ಳಿಗಳಿಗೆ ಕೇಳಿ ಅಲ್ಲಿ ಟಿ.ಪಿ.ಎಸ್. ಮೀಟಿಂಗ್‌ನಲ್ಲಿ ಇದೇ ಬರುವುದು ಆ ಲೈನ್‌ಮೆನ್ ಹಾಕಿ ಈ ಲೈನ್‌ಮೆನ್‌ಹಾಕಿ ಅವನು ಸರಿಯಿಲ್ಲ ಇವನು ಸರಿಯಿಲ್ಲ. ಟ್ರಾನ್ಸ್‌ಫಾರ್ಮರ್ ಸುಟ್ಟು ಹೋಯಿತೆಂದರೆ ಅದನ್ನು ನೋಡಲು ಲೈನ್‌ಮೆನ್ ಇರುವುದಿಲ್ಲ. ಲೈನ್‌ಮೆನ್ ಇರುವುಧಿಲ್ಲ ಲೈನ್‌ಮೆನ್ ನಮ್ಮ ಹಿಡಿತದಲ್ಲಿಲ್ಲ ಮಾತೆತ್ತಿದರೆ ಯೂನಿಯನ್‌ಎಂದು ಹೇಳುತ್ತಾರೆ ಅದಕ್ಕೋಸ್ಕರ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ವೆಂದು ಹೇಳುತ್ತಾರೆ. ನನಗೇನು ಅವರಮೇಲೆ ದ್ವೇಷ ಕಲ್ಪನೆ ಏನು ಇಲ್ಲ ಅವರು ನಮ್ಮ ರಾಷ್ಟ್ರದವರೇ ನಮ್ಮ ರಾಜ್ಯದವರೇ ತಾವು ಈ ಬಗ್ಗೆ ಸರಿಯಾಗಿ ಹೇಳಬೇಕೆಂದು ಹೇಳುತ್ತೇನೆ.

ಶ್ರೀ ಕರಿಯಣ್ಣ: ಮಾನ್ಯ ಅಧ್ಯಕ್ಷರೇ, ನಿಮ್ಮ ಜಿಲ್ಲೆಯದು ಒಂದೇ ಸಮಸ್ಯೆಯಲ್ಲ ಎಲ್ಲರ ಸಮಸ್ಯೆಯೂ ಅದೇ ಆಗಿದೆ. ನಮ್ಮ ಇಂಜಿನಿಯರುಗಳು ಜಿಲ್ಲೆಯಲ್ಲಿ ಕೆಲವು ಲೈನ್‌ಮೆನ್‌ಗಳಿಂದ ಈ ರೀತಿ ಆಗುತ್ತಿದೆ ನೀವು ವರ್ಗಾವಣೆ ಮಾಡಿ ಎಂದರೆ ಯೂನಿಯನ್‌ನವರು ಹೇಳಿದ ಹಾಗೆ ನಾವು ಮಾಡಬೇಕೆಂದು ಹೇಳುತ್ತಾರೆ ನಾವು ಹೇಳಿದ್ದನ್ನೂ ಮಾಡುವಂತಿಲ್ಲ, ಅವರದೇ ಮಾಡಬೇಕೆಂದು ಹೇಳುತ್ತಾರೆ. ಸೂಪರಿಂಟೆಂಡೆಂಟ್ ಇಂಜಿನಿಯರ್ ಹೇಳಿದರು. ಆದ್ದರಿಂದ ಮಾನ್ಯ ರಾಮಪ್ಪನವರು ಹೇಳಿದಹಾಗೆ

ಯೂನಿಯನ್‌ನವರು ನಮ್ಮವರೇ ಆದರೆ ದಯವಿಟ್ಟು ಸಮಸ್ಯೆಯ ಬಗ್ಗೆ ಪರಿಶೀಲನೆ ಮಾಡಿ.

ಶ್ರೀ ಎಂ ರಾಮಪ್ಪ: ಕ್ರಮ ತೆಗೆದುಕೊಳ್ಳುತ್ತೇವೆ ಅಡ್ಮಿನಿಸ್ಟ್ರೇಷನ್ ಆ್ಯಕ್ಷನ್ ತೆಗೆದುಕೊಳ್ಳುವುದಕ್ಕೆ ನಾವು ಯಾವುದೇ ಹಿಂದೆಮುಂದೆ ನೋಡುವುದಿಲ್ಲ ಇನ್ನು ಗಂಗಾಕಲ್ಯಾಣ ಇದನ್ನು ಕೂಡ ಒಂದು ಫ್ಲಾಟ್‌ರೇಟ್ ಮಾಡಬೇಕೆಂದು ನಮ್ಮ ಅಭಿಪ್ರಾಯವಿದೆ. ಮಾಡುತ್ತೇವೆ. ಇದಕ್ಕೆ ತಾವೆಲ್ಲರೂ ಕೂಡ ಒಪ್ಪಿಗೆ ಕೊಡಬೇಕೆಂದು ಹೇಳುತ್ತೇನೆ. ನಾನು ಇನ್ನೂ ಮಾತನಾಡಬೇಕೆಂದಿದ್ದೆ. ಆದರೆ ನಮ್ಮ ನಾಯಕರೇ ಎಲ್ಲಾ ಮಾತನಾಡಿದ್ದಾರೆ.

ಶ್ರೀ ಬಿ.ಎಚ್. ಬನ್ನಿಕೋಡ್ : ಐ.ಪಿ. ಸೆಟ್‌ಗಳಿಗೆ ಮತ್ತು ಗಂಗಾಕಲ್ಯಾಣ ಇದಕ್ಕೆ ಹೆಚ್ಚು ಮಾಡುತ್ತೀರಾ ಅಥವಾ ಕಡಿಮೆ ಮಾಡುತ್ತೀರೋ ಅದನ್ನು ಮಾನ್ಯ ಸಚಿವರು ಹೇಳಬೇಕು. ಒಂದು ರೇಟ್ ಎಂದರೆ ಹೆಚ್ಚು ಮಾಡುತ್ತೀರಾ ಅಥವಾ ಕಡಿಮೆ ಮಾಡುತ್ತೀರಾ?

ಶ್ರೀ ಎಂ ರಾಮಪ್ಪ: ಒಂದು ಹಾರ್ಸ್ ಪವರ್ ಲೆಕ್ಕದ ಪ್ರಕಾರ ನೀವು ಏನು ರೈತರಿಗೆ ಕೊಟ್ಟಿದ್ದೀವಿ ನಿಮ್ಮಕಾಲದಲ್ಲಿ ಎಷ್ಟು ಮಾಡಿದ್ದೀರಿ ಅದನ್ನು ನೋಡಬೇಕಾಗುತ್ತದೆ. ವಿಚಾರಮಾಡಿ ಮಾಡುತ್ತೇವೆ ತಾವು ಅಪ್ಪಣೆಯನ್ನು ಕೊಡಬೇಕು ನಮ್ಮ ಈ ಒಂದು ಬಿಲ್ಲನ್ನು ಪಾಸ್ ಮಾಡಿಕೊಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ರಾಮಪ್ಪನವರು ಹೇಳಿರತಕ್ಕದ್ದು ಒಂದು ವಿಚಾರ. ಬೆಳಗಾಂ ಜಿಲ್ಲೆಯಲ್ಲಿ ಮಾನ್ಯ ಮಿತ್ರರು ಬೇರೆ ಬೇರೆ ವಿಚಾರ ಹೇಳಿದ್ದಾರೆ. ಕೋ ಆಪರೇಟೀವ್ ಸೊಸೈಟೀಸ್ ಆ್ಯಕ್ಟ್ ಪ್ರಕಾರ ಏನು ಸೊಸೈಟಿಗಳು ರಿಜಿಸ್ಟರ್ ಆದವು ಅವುಗಳಿಗೆ ಫ್ಲಾಟ್‌ರೇಟ್ 250 ರೂಪಾಯಿಗಳು ಎಂದು ಗೊತ್ತು ಮಾಡಿ ಅನೌನ್ಸ್ ಮಾಡಿದೆ. ಬೆಳಗಾಂ ಜಿಲ್ಲೆ ಮತ್ತೊಂದು ಕಡೆ ಅಸೋಸಿಯೇಷನ್ ಮಾಡಿಕೊಂಡಿದ್ದಾರೆ. ಅವರು ಈ ರೀತಿ ನಮಗೂ ಮಾಡಿಕೊಡಿ ಎಂದು ಕೇಳುತ್ತಿದ್ದಾರೆ. ಒಂದೇ ಒಂದು ಕಂಡೀಷನ್ ರಾಮಪ್ಪನವರು ಹೇಳಿದ್ದುದು. ಅದನ್ನೇ ಅಸೋಸಿಯೇಷನ್ ಎಂಬುದಕ್ಕೆ ಸರ್ಕಾರಿ ದಾಖಲೆಗಳು ಇರಬೇಕಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆ, ರಿಜಿಸ್ಟ್ರೇಷನ್ ಆಗಿರಲೇಬೇಕು. ಇಲ್ಲದಿದ್ದರೆ, ಮೋಸ ಮಾಡುತ್ತಾರೆ ಎನ್ನುವ ಪ್ರಶ್ನೆ ಅಲ್ಲ, ಅವಾರ್ಡ್ ಮಾಡುವುದಕ್ಕೋಸ್ಕರ ಎಲ್ಲರೂ ಸೇರಿಕೊಂಡು ನಾವು ಅಲ್ಲಿದ್ದೇವೆಂದು ಹೇಳಿ ಅರ್ಜಿ ಕೊಡುವುದು ಇಲ್ಲಿದ್ದೇವೆಂದು ಹೇಳಿ ಅರ್ಜಿ ಕೊಡುವುದು, ಬೆಳಿಗ್ಗೆ ಎದ್ದರೆ ಅದೇ ಆಗುತ್ತದೆ. ಅದಕ್ಕೋಸ್ಕರ ರಿಜಿಸ್ಟರ್ಡ್ ಸಂಘ ಸಂಸ್ಥೆಗಳ ಮುಖಾಂತರ ಬಂದರೆ, ಕೋ ಆಪರೇಟೀವ್ ಆ್ಯಕ್ಟ್ ಪ್ರಕಾರ ಬೇರೆಯವರಿಗೆ ಏನು ಫ್ಲಾಟ್‌ರೇಟ್ ಗೊತ್ತು ಮಾಡಿಕೊಟ್ಟಿದ್ದೇವೆ ಅದೇ ರೀತಿ ಇವರಿಗೂ ಮಾಡಿಕೊಡುತ್ತೇವೆ.

ಶ್ರೀ ಎ.ಬಿ. ಜಕನೂರು : ಅಸೋಸಿಯೇಷನ್ ಮಾಡಿದರೆ ಕೊಡುತ್ತೇವೆಂದು ಹೇಳಿದರಲ್ಲ, ಅದಕ್ಕೆ ಉದಾಹರಣೆ ಹೇಳುತ್ತೇನೆ. ನಾವು 4-5 ಜನ ಅಣ್ಣತಮ್ಮಂದಿರು ಇದ್ದೇವೆ; ನಾವು ಬೇರೆ ಬೇರೆ ಪಂಪ್‌ಸೆಟ್‌ಗಳನ್ನು ಇಟ್ಟುಕೊಳ್ಳುತ್ತೇವೆ. ನೀವು 10 ಹೆಚ್.ಪಿ. ಪಂಪ್‌ಸೆಟ್‌ಗೆ ಏನು 60 ರೂಪಾಯಿ ಗೊತ್ತು ಮಾಡಿದ್ದೀರಿ. ಅದನ್ನು ಯಾವುದೇ ೧೦ ಹೆಚ್.ಪಿ. ಪಂಪ್‌ಸೆಟ್‌ಗೆ ಗೊತ್ತು ಪಡಿಸಬೇಕೆಂದು ಹೇಳುತ್ತೇನೆ.

ವ್ಯವಸಾಯದ ಉದ್ದೇಶಕ್ಕೋಸ್ಕರ ಉಪಯೋಗಿಸತಕ್ಕ ಎಲ್ಲಾ 10ಹೆಚ್.ಪಿ. ಪಂಪ್‌ಸೆಟ್‌ಗಳಿಗೂ ಈ ಒಂದು ಫ್ಲಾಟ್‌ರೇಟನ್ನು ಗೊತ್ತು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಎಸ್. ಬಂಗಾರಪ್ಪ : ನಾನು ಹೇಳತಕ್ಕದ್ದು ಇಷ್ಟು. ವಿವರಗಳು ಏನು ಎಂದು ಮಾತನಾಡಿ ತೀರ್ಮಾನ ಮಾಡುವುದಕ್ಕೆ ಸರ್ಕಾರ ತಯಾರಿದೆ. ಕೋ ಆಪರೇಟೀವ್ ಸೊಸೈಟೀಸ್ ಆ್ಯಕ್ಟ್ ಪ್ರಕಾರ ರಿಜಿಸ್ಟಾರ್ಡ್ ಆದ ಸಂಘ ಸಂಸ್ಥೆಗಳಿಗೆ ಏನು ಕನ್‌ಸೆಷನ್ ಕೊಟ್ಟಿದ್ದೇವೆ ಅದನ್ನು ಕೇಳುತ್ತಿದ್ದಾರೆ. ಅದಕ್ಕೆ ವಿವರಗಳನ್ನು ವಿಚಾರ ಮಾಡಿ ಮಾಡೋಣ.

ಶ್ರೀ ಗೋಪಿನಾಥ ಆರ್ ಸಾಂಡ್ರ : ಮಾನ್ಯ ಮುಖ್ಯ ಮಂತ್ರಿಗಳು ಪವರ್ ಜನರೇಷನ್‌ಗೆ ಅತೀ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಬೆಳಗಾಂ ಜಿಲ್ಲೆಯಲ್ಲಿರತಕ್ಕ ಮಾದಾಯಿ ನೀರನ್ನು ಬಳಸಿಕೊಂಡು ಮೈಸೂರ್ ಪವರ್ ಕಾರ್ಪೊರೇಷನ್‌ನಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಿಬೇಕೆಂದು ಯೋಜನೆ ಹಾಕಿಕೊಂಡಿದ್ದರೂ, ಅದನ್ನು ಕಾರ್ಯಾಚರಣೆಗೆ ತರುವ ಬಗ್ಗೆ ಇದುವರೆಗೆ ಎಲ್ಲಿಯೂ ಒಂದು ಚಕಾರ ಶಬ್ದ ಬಂದಿಲ್ಲ. ಆ ಯೋಜನೆಯನ್ನು ಡ್ರಾಪ್ ಮಾಡಿದಿರೋ ಅಥವಾ ಅದನ್ನು ಕಾರ್ಯಗತ ಮಾಡಬೇಕೆಂಬ ವಿಚಾರ ಇದೆಯೋ?

ಶ್ರೀ ಎಸ್. ಬಂಗಾರಪ್ಪ : ನಾವು ಡ್ರಾಪ್ ಮಾಡಿದ್ದೇವೆಂದು ಹೇಳಲಿಲ್ಲ, ಮಾನ್ಯ ಸದಸ್ಯರು ಉತ್ತರವನ್ನು ಸಂಪೂರ್ಣವಾಗಿ ಕೇಳಲಿಲ್ಲವೆಂದು ಭಾವನೆ. ಉತ್ತರ ಅರ್ಧಂಬರ್ಧ ಆದಮೇಲೆ ಬಂದಿರಬೇಕು. ಮಾದಾಯಿ ಯೋಜನೆ ಬಗ್ಗೆ ಹೇಳಿದೆ. it is a diversion scheme to Mala Prabha ಮೊದಲು ನಾನು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಅವರು ಹಣ ಇಟ್ಟಿಲ್ಲವೆಂದು ಹೇಳುವುದು ಇದ್ದರೆ, ಈ ಸದನ ಮುಗಿಯುವುದರೊಳಗೆ ಎಷ್ಟು ಹಣ ಇಟ್ಟಿದ್ದೇವೆ ಎಂಬುದನ್ನು ಪ್ರಕಟ ಮಾಡುತ್ತಿದ್ದೇವೆ. ಇದನ್ನು ಇರಿಗೇಷನ್ ಸಚಿವರು ಮಾಡುತ್ತಾರೆ, ಇಲ್ಲದಿದ್ದರೆ ಅಪ್ರೋಪ್ರಿಯೇಷನ್ ಬಿಲ್ ಬಂದಾಗ ಮಾಡುತ್ತೇವೆ.

ಶ್ರೀ ಪಿ. ಬಸವರಾಜ್ : ನಮ್ಮ ಕ್ಷೇತ್ರದಲ್ಲಿ 90 ಐಸ್ ಪ್ಲಾಂಟ್‌ಗಳು ಇವೆ. ಕೆ.ಇ.ಬಿ.ಯವರು 3 ತಿಂಗಳ ಡಿಪಾಸಿಟ್ ಕಟ್ಟಿಲ್ಲವೆಂದು ಫ್ಯೂಸ್ ತೆಗೆಯಲಿಕ್ಕೆ ನೋಟೀಸ್ ಕೊಟ್ಟಿದ್ದಾರೆ. ಐಸ್ ಪ್ಲಾಂಟ್‌ಗಳು ಫಿಷರೀಸ್‌ಗೆ ಪೂರಕವಾಗಿವೆ. ಹಿಡಿದ ಮೀನನ್ನು ಪ್ರಿಸರ್‌ವೇಷನ್‌ಗೆ ಮಾಡಬೇಕೆಂದರೆ ಐಸ್ ಪ್ಲಾಂಟ್ ಅಗತ್ಯವಾಗಿ ಬೇಕಾಗುತ್ತದೆ. ಈ ನೋಟೀಸ್‌ನಿಂದ ಐಸ್ ಪ್ಲಾಂಟನ್ನು ಮುಚ್ಚುವ ಪರಿಸ್ಥಿತಿ ಬಂದಿದೆ. ಅವರು ಏನು ಹೇಳುತ್ತಾರೆಂದರೆ 3 ತಿಂಗಳ ಡಿಪಾಸಿಟ್ ತೆಗೆದುಕೊಳ್ಳುವುದು ಸರಿಯಲ್ಲ. 12 ತಿಂಗಳ ಒಂದು ಆವರೇಜ್ ತೆಗೆದುಕೊಂಡು ಆ ರೀತಿಯಲ್ಲಿ ಡಿಪಾಜಿಟ್ ಕೇಳಿದರೆ ಕೊಡುವುದಕ್ಕೆ ತಯಾರಿದ್ದೇವೆ. ಆದರೆ ಇವರು ಅತ್ಯಧಿಕ ಡಿಪಾಜಿಟ್ ಕೇಳುತ್ತಿದ್ದಾರೆ. ಮತ್ತು ನಾವು ಕೊಡಲಿಕ್ಕೆ ತಯಾರಿದ್ದೇವೆ. ಈಗ ಫ್ಯೂಸ್6 ತೆಗೆಯುವುದಕ್ಕೆ ಏನು ನೋಟೀಸ್ ಕೊಟ್ಟಿದ್ದಾರೆ ಅದನ್ನು ಹಿಂತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ, ಇದು ಎಲ್ಲಾ ಫ್ಯೂಸ್‌ಗೂ ಅಷ್ಟೆ ಆಗುತ್ತದೆ. ಫ್ಯೂಸ್ ತೆಗೆದಿದ್ದಾರೆ ಎಂದರೆ ಅದು ಒಂದು ಫ್ಯೂಸ್ ಅಲ್ಲ, ಪಂಪ್‌ಸೆಟ್ ಫ್ಯೂಸ್ ಬರುತ್ತದೆ, ನಾಳೆ ಮತ್ತೊಂದು ಬರುತ್ತದೆ. ಇದು ಎಲ್ಲದಕ್ಕೂ ಅಷ್ಟೆ ಆಗುತ್ತದೆ. ಎಲ್ಲದಕ್ಕೂ ಒಂದೇ ನೀತಿ. ಎಲ್ಲಾ ಹಣ ಕಟ್ಟದೇ ಇರುವವರಿಗೆ ಪೂರ್ತಿ ಬಿಡುತ್ತಾ ಹೋದರೆ ಕೆ.ಇ.ಬಿ ಈಗಲೇ ಲಾಸ್‌ನಲ್ಲಿ ಇರತಕ್ಕದ್ದು ಮುಂದೆ

ಏತಕ್ಕೂ ಬರುವುದಿಲ್ಲ. ಮಾನ್ಯ ಬಸವರಾಜ್, ಬ್ರಹ್ಮಾವರ ಶಾಸಕರಿಗೆ ಪ್ರಾರ್ಥನೆ, ದಯಮಾಡಿ ಅವರಿಂದ ಹಣ ಕಟ್ಟಿಸಿ. ಮೊದಲು ಅರ್ಧಂಬರ್ಧ ಮುಕ್ಕಾಲು ಹಣ ಕಟ್ಟಿಸಿದರೆ ಕನೆಕ್ಷನ್ ಕೊಡುವ ವಿಚಾರ ಮಾಡುತ್ತೇವೆ ನಾವು. ಏನೂ ಇಲ್ಲದೆ ಫ್ಯೂಸ್ ಕಟ್ಟಿಸಿದರೆ ಕನೆಕ್ಷನ್ ಕೊಡುವ ವಿಚಾರ ಮಾಡುತ್ತೇವೆ ನಾವು. ಏನು ಇಲ್ಲದೆ ಫ್ಯೂಸ್ ಕೊಡಿಸಿ ಎಂದರೆ ನೀವು ಹೇಳುತ್ತಿರಿ. ನಾವು ಕೇಳುತ್ತಾ ಇರುತ್ತೇವೆ. ಕನೆಕ್ಷನ್ ಮಾತ್ರ ಬರುವುದಕ್ಕಾಗುವುದಿಲ್ಲ. ಕೆ.ಇ.ಬಿ. ಹಣಕಾಸಿನ ಪರಿಸ್ಥಿತಿ ಅಷ್ಟು ಬಲಿಷ್ಟವಾಗಿಲ್ಲ.

+ ಶ್ರೀ ಎ.ಎಂ. ಬೆಳ್ಳಿಯಪ್ಪ (ಮೀನುಗಾರಿಕೆ ಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ನಾನು ಮೊನ್ನೆ ಈ ಸಭೆಯಲ್ಲಿ ಮಂಡಿಸಿದ 5 ಮತ್ತು 48ನೇ ನನ್ನ ಬೇಡಿಕೆ ಏನಿದೆ ಮೀನುಗಾರಿಕೆ ಬಂದರು ಮತ್ತು ಒಳನಾಡು ಜಲಸಾರಿಗೆ ಆ ಬೇಡಿಕೆಗಳನ್ನು ಈ ಸಭೆ ಪಾಸ್ ಮಾಡಿಕೊಡಬೇಕೆಂದು ಕೇಳಿಕೊಂಡು ಕೆಲಸ ಮಾತುಗಳನ್ನು ಮಾತ್ರ ಆಡುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ನಮ್ಮ ಶಾಸಕಮಿತ್ರರಾದ ಶ್ರೀಮಾನ್ ರುಕ್ಮಯ್ಯಪೂಜಾರಿಯವರು ಇನ್‌ಲ್ಯಾಂಡ್ ವಾಟರ್ ಟ್ರಾನ್ಸ್‌ಪೋರ್ಟ್ ವಿಚಾರ ಮಾತನಾಡಿದರು. ಅವರು ಒಂದು ಕಡೆ ದೋಣಿ ಬಿಡುವ ಸ್ಥಳದಲ್ಲಿ ಒಂದು ದೋಣಿ ಮಳೆಗಾಲದಲ್ಲಿ ಮಗುಚಿಹೋಗಿ 28 ಜನ ಸತ್ತುಹೋದರು ಎಂದು ಆಪಾದನೆ ಮಾಡಿದರು. ಹೌದು. 16-9-91ರಲ್ಲಿ ದೋಣಿ ಮಗುಚಿ ಮುಂದಿ ಹೋಗಬೇಕಾದ ದೋಣಿಯಲ್ಲಿ ಪ್ರೈವೇಟ್ ಕಂಟ್ರಾಕ್ಟರ್ ಸುಮಾರು 28 ಜನರನ್ನು ಕೂಡಿಸಿ ಹೋದ ಕಾರಣ, ಮಳೆ ಜೋರಾಗಿದ್ದು ಬಿರುಗಾಳಿ ಇದ್ದು ಆ ಸಂದರ್ಭದಲ್ಲಿ ಕೆಲವರು ಕೊಡೆ ಹಿಡಿದುಕೊಂಡಿದ್ದರಿಂದ ದೋಣಿ ಮುಳುಗಿಹೋಯಿತು. ಅದು ಬಂಟ್ವಾಳ್ ತಾಲ್ಲೂಕು ಪಂಚಾಯಿತಿ ನಡೆಸುತ್ತಿದ್ದ ದೋಣಿ. ಸರ್ಕಾರ ಈ ದೋಣಿಯನ್ನು ಸರ್ಕಾರದ ಇಲಾಖೆಯ ಮೂಲಕ ನಡೆಸಬೇಕು ಎಂಬ ಅಭಿಪ್ರಾಯದಿಂದ ಇವತ್ತು ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಒಂದು ಯೋಜನೆಯನ್ನು ಕಳುಹಿಸಿದೆ. ಕೆಲವೇ ದಿನಗಳಲ್ಲಿ ಅದು ಸ್ಯಾಂಕ್ಷನ್ ಆಗಿ ಬರಬಹುದು. ನಂತರ ಡಿಪಾರ್ಟ್‌ಮೆಂಟಿನಿಂದ ದೋಣಿ ಹಾಕಿಸುವಂಥ ಆಶ್ವಾಸನೆ ಕೊಡುತ್ತಿದ್ದೇನೆ. With regard to my Fisheries Department, and also about fishermen, only two hon.Members i.e. Sri C. Byregowda and Sri Idinabbba spoke. Others did not uttered anything about it. Even my respected Hon.Leader of the Opposition, Mr. D.B. Chandregowda in his lucrative argument for $2\frac{1}{2}$ hours, did not speak a single word in my Department's favour.

(ಶ್ರೀ ಬಿ.ಎಂ. ಇದಿನಬ್ಬ ಅವರು ಅಧ್ಯಕ್ಷ ಪೀಠದಲ್ಲಿದ್ದರು)

ನನ್ನ ಡಿಪಾರ್ಟ್‌ಮೆಂಟ್ ವಿಷಯ ಏನೂ ಮಾತನಾಡಲಿಲ್ಲ, ಏತಕ್ಕೋಸ್ಕರ ಈ ತರಹ ಒಂದು ಅಸಡ್ಡೆ ಈ ಡಿಪಾರ್ಟ್‌ಮೆಂಟ್ ಮೇಲೆ ಎಂಬುದು ಒಂದು ಪ್ರಶ್ನೆ. ನನ್ನ ಡಿಪಾರ್ಟ್‌ಮೆಂಟ್, ಮೀನುಗಾರಿಕೆ ಇಲಾಖೆ the most nutritious food it supplies to the people.

ನಾಲ್ಕು ಕೋಟಿ ಜನಗಳಿಗೆ ಪೌಷ್ಟಿಕ ಆಹಾರವನ್ನು ಸಪ್ಲೈ ಮಾಡುತ್ತಿದೆ. ಕಡಿಮೆ ಬೆಲೆಯಲ್ಲಿ ಸಪ್ಲೈ ಮಾಡುತ್ತಿದೆ. ಅದರ ಮೇಲೆ so many people are being employed in this Department.

ನಿರುದ್ಯೋಗ ಸಮಸ್ಯೆಯನ್ನು ಕೂಡ ತೀರ್ಮಾನ ಮಾಡುವಂಥ ಒಂದು ಇಲಾಖೆ ಇದು. ಅದಕ್ಕಿಂತ ಹೆಚ್ಚಾಗಿ 38 ಕೋಟಿ 11 ಲಕ್ಷ ರೂಪಾಯಿ ವಿದೇಶಿ ವಿನಿಮಯವನ್ನು ಈ ಕರ್ನಾಟಕ ರಾಜ್ಯದಲ್ಲಿ ತಂದುಕೊಡುವಂಥ ಡಿಪಾರ್ಟ್‌ಮೆಂಟ್ ನನ್ನ ಡಿಪಾರ್ಟ್‌ಮೆಂಟ್. ಏತಕ್ಕೋಸ್ಕರ ಈ ಮೀನುಗಾರಿಕಾ ಇಲಾಖೆಯನ್ನು ಇಷ್ಟು ಅಸಡ್ಡೆಯಾಗಿ ಕಾಣುತ್ತಾರೋ ಗೊತ್ತಿಲ್ಲ.

ಒಬ್ಬ ಮಾನ್ಯ ಸದಸ್ಯರು : ಎಲ್ಲಾ ಮಾನ್ಯ ಸದಸ್ಯರಿಗೂ ಒಂದು ಸಲ ಮೀನಿನ ಊಟ ಕೊಡಿಸಿಬಿಡಿ. ಆಗ ಎಲ್ಲರೂ ಮಾತನಾಡುತ್ತಾರೆ.

ಶ್ರೀ ಎ.ಎಂ. ಬೆಳ್ಳಿಯಪ್ಪ : ಏಕೆ ಹೇಳುತ್ತಿದ್ದೇನೆಂದರೆ ಇಷ್ಟು ಜನ ತಿಳಿದಂತಹ ಸ್ನೇಹಿತರು ಇರುವಾಗ ಬರೀ ಭೈರೇಗೌಡರು, ವಿನಯಕುಮಾರ್ ಸೊರ್ಕೆಯವರು ಮಾತ್ರ ಧ್ವನಿಗೂಡಿಸಿದರು. ಬೇರೆ ಯಾರೂ ಮೀನುಗಾರಿಕೆ ವಿಷಯವಾಗಿ ಮಾತನಾಡಲಿಲ್ಲ. ಬಂದರಿನ ವಿಷಯವಾಗಿ ಹೇಳಲಿಲ್ಲ. ಈ ಇಲಾಖೆ ಸರ್ಕಾರಕ್ಕೆ ಸುಮಾರು ಒಂದೂವರೆ ಕೋಟಿಯಷ್ಟು ಆದಾಯವನ್ನು ತಂದುಕೊಡುತ್ತಿವೆ. ಆದರೂ ಕೂಡ nobody talked about that. And people are also not kind to my Department and to my fisheries. Everywhere the people are killing fish.

ಇವತ್ತು ಕೈಗಾರಿಕೆಗಳು ಹೊರಹಾಕುವ ಮಲಿನ ನೀರಿನಿಂದಾಗಿ ನದಿ, ಕೆರೆಗಳಲ್ಲಿನ ನೀರು ಕಲುಷಿತಗೊಂಡು ಮೀನುಗಳು ಸಾಯುತ್ತಿವೆ. ಇದು ನಿಜ ಅಲ್ಲವೇ ವಾಟಾಳ್ ನಾಗರಾಜ್ ಅವರೇ?

ಶ್ರೀ ವಾಟಾಳ್ ನಾಗರಾಜ್ : ಬಂಗಾರಪ್ಪನವರ ಭಾಷಣ ಕೇಳಿಯಾಯಿತು. ಈಗ ಬೆಳ್ಳಿಯಪ್ಪನವರ ಭಾಷಣ ಕೇಳುವ ಸೌಭಾಗ್ಯ ನಮಗೆ ದೊರಕಿದೆ.

ಶ್ರೀ ಎ.ಎಂ. ಬೆಳ್ಳಿಯಪ್ಪ : ಕೈಗಾರಿಕೆಗಳ ಪೊಲ್ಯೂಷನ್‌ನಿಂದಾಗಿ ಬೇಕಾದಷ್ಟು ಮೀನುಗಳು ಸತ್ತುಹೋಗುತ್ತಿವೆ. ಮಲೆನಾಡಿನ ಹತ್ತಿರ ಬೇಕಾದಷ್ಟು ಪೆಸ್ಟಿಸೈಡ್ಸ್ ಹಾಕಿ ಕೆರೆಯಲ್ಲಿರುವ ನೀರು ಕಲುಷಿತಗೊಂಡು ಮೀನುಗಳು ಸಾಯುತ್ತಿವೆ. ಕಳೆದ 20 ದಿವಸಗಳಿಂದ ನಮ್ಮ ಕರ್ನಾಟಕ ಮೀನುಗಳಿಗೆ ರಾಜ್ಯದಲ್ಲಿ ಹಿಂದೆಂದೂ ಬರದ ಒಂದು ಡಿಸೀಸ್ ಬಂದೆರಗಿದೆ. ಅದಾವುದೋ ಸಿಂಡ್ರೋಮ್ ಎನ್ನುವ ರೋಗ ತಗುಲಿದ್ದು ಈ ಬಗ್ಗೆ ತಜ್ಞರನ್ನು ದೆಹಲಿಯಿಂದ, ಟ್ರಿವೆಂಡ್ರಮ್‌ನಿಂದ ಕರೆಯಿಸಿ ತಪಾಸಣೆ ಕೆಲಸವನ್ನು ಮಾಡಲಾಗುತ್ತಿದೆ. ಕಾವೇರಿ ಬೇಸಿನ್‌ನಲ್ಲಿರುವ ಮೀನುಗಳಿಗೆ ಈ ರೋಗ ತಗುಲಿ ಸಾಯುತ್ತಿದೆ. ಆದರೂ ಕೂಡ nobody is bothered about Fisheries. Nobody is bothered about my Department. This is the position of my Department.

ನಮ್ಮ ಮೀನುಗಾರಿಕಾ ಇಲಾಖೆಗೆ 8 ಕೋಟಿ ರೂಪಾಯಿ ಕೇಳಿದ್ದೇವೆ. ಬಹುಶಃ ನಮ್ಮ ಈ ಖಾತೆಯಲ್ಲಿ ಒಂದು ವರ್ಷಕ್ಕೆ 20 ರಿಂದ 25 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಇಂಡೋ ಡ್ಯಾನಿಶ್‌ಏಡ್, ಎನ್‌ಸಿಡಿಸಿ ಏಡ್ಸ್ ಮತ್ತು ಇಎಫ್‌ಸಿ ಏಡ್ಸ್ ಎಲ್ಲವನ್ನೂ ಉಪಯೋಗಿಸಿಕೊಂಡು ಕನಿಷ್ಟ ಪಕ್ಷ 25 ಕೋಟಿ ರೂಪಾಯಿಗಳನ್ನು ಈ ಇಲಾಖೆಯಲ್ಲಿ ನಾನು ಖರ್ಚು ಮಾಡುತ್ತಿದ್ದೇವೆ. ಹಾಗೂ ನಾವು 38 ಕೋಟಿ 11 ಲಕ್ಷ ರೂಪಾಯಿಗಳನ್ನು ಮೀನುಗಾರಿಕೆಯಿಂದ ಸಂಪಾದನೆ ಮಾಡುತ್ತಿದ್ದೇವೆ. ನಮ್ಮಲ್ಲಿ ಕರಾವಳಿ ಮೀನುಗಾರಿಕೆಯಿಂದ 1 ಲಕ್ಷ 86 ಸಾವಿರ ಟನ್ ಹಾಗೂ ಒಳನಾಡು ಮೀನುಗಾರಿಕೆಯಿಂದ 60ಸಾವಿರ ಟನ್ ಮತ್ಸ್ಯ ಉತ್ಪಾದನೆಯಾಗುತ್ತಿದೆ. ಇನ್ನೂ ಹೆಚ್ಚಿನ ಇನ್‌ಫ್ರಾಸ್ಟ್ರಕ್ಚರ್ ಕ್ರಿಯೇಟ್ ಮಾಡಿ ಹೆಚ್ಚು ಇನ್‌ವೆಸ್ಟ್ ಮಾಡಿದರೆ

ಇದಕ್ಕಿಂತಲೂ 20 ಪಾಲು ವಿದೇಶೀ ವಿನಿಮಯವನ್ನು ನಾವು ಈ ಇಲಾಖೆಯಿಂದ ಸಂಪಾದಿಸುಬಹುದಾಗಿದೆ. ಈ ಇಲಾಖೆ 1957 ರಲ್ಲೇ ಪ್ರಾರಂಭವಾದರೂ, ವರ್ಷೇ ವರ್ಷೇ 20 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ ಇಲಾಖೆ ಬಗ್ಗೆ ಅಸಡ್ಡೆ ಜಾಸ್ತಿಯಾಗಿದೆ. ಏನೋ ಇದೆ, ಹೇಗೋ ಇದೆ, ಹೇಳೋರಿಲ್ಲ, ಕೇಳೋರಿಲ್ಲವಾಗಿ ಹೇಗೋ ನಡೆಯುತ್ತಿದೆ.

ಶ್ರೀ ಎಂ.ಪಿ. ವೆಂಕಟೇಶ್ : 10 ಕೋಟಿ ರೂಪಾಯಿ ಏನು ಖರ್ಚು ಮಾಡುತ್ತೀರಿ ಅದನ್ನು ನಿಮ್ಮ ಇಲಾಖೆ ವತಿಯಿಂದ ಖರ್ಚು ಮಾಡುತ್ತೀರೋ ಅಥವಾ ಪಿಡಬ್ಲ್ಯೂಡಿ ಇಲಾಖೆ ವತಿಯಿಂದ ಖರ್ಚು ಮಾಡಿಸುತ್ತೀರೋ?

ಶ್ರೀ ಎ.ಎಂ. ಬೆಳ್ಳಿಯಪ್ಪ : ಅದನ್ನು ಆಮೇಲೆ ಹೇಳುತ್ತೇನೆ. ನಮ್ಮ ಮೀನುಗಾರಿಕೆ ಇಲಾಖೆಯಲ್ಲಿ ಕರಾವಳಿ ಮೀನುಗಾರಿಕೆ ಹಾಗೂ ಒಳನಾಡು ಮೀನುಗಾರಿಕೆ ಎಂದು ಎರಡು ಡಿವಿಜನ್ ಇದೆ. ಬೈರೇಗೌಡರೂ ಈ ಖಾತೆಯನ್ನು ಹಿಂದೆ ವಹಿಸಿಕೊಂಡಿದ್ದರು. ಕರಾವಳಿ ಮೀನುಗಾರಿಕೆ ಬಗ್ಗೆ ಅವರು ಬೇಸರಪಟ್ಟುಕೊಂಡು ಹೇಳಿದರು. ಮೀನು ಉತ್ಪಾದನೆಯಲ್ಲಿ ನಾವು ಹಿಂದುಳಿದಿದ್ದೇವೆ ಎಂದು ಹೇಳಿದರು. ಆದರೆ ಈಗ ಆ ಪರಿಸ್ಥಿತಿ ಇಲ್ಲ, ಆದಷ್ಟು ಮಟ್ಟಿಗೆ ಇಂಪ್ರೂವ್ ಆಗುತ್ತಾ ಇದೆ. ಬಹುಶಃ ಅವರ ಕಾಲದಲ್ಲಿ ಹಾಗೆ ಇದ್ದದ್ದು ಕಳೆದ 3-4 ವರ್ಷಗಳಲ್ಲಿ ಇದು ಇಂಪ್ರೂವ್ ಆಗಿದೆ.

5.45 ಪಿ.ಎಂ.

ತಗಡಿ ಎನ್ನುವ ಸ್ಥಳದಲ್ಲಿ 12 ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿ, ಇಂಡೋ ಡ್ಯಾನಿಷ್ ಸ್ಕೀಮ್‌ನ್ನು ಮಾಡಿದ್ದೇವೆ. ಇನ್ನೊಂದು ಸ್ಥಳದಲ್ಲಿ ಕುಮಟ ಅಂಕೋಲವೆಂದು ಹೇಳುವಂತಹ ತಾಲ್ಲೂಕುಗಳಲ್ಲಿ ಸುಮಾರು 65 ಮೀನುಗಾರರ ಕುಟುಂಬಗಳಿಗೆ ಬೇಕಾದಂತಹ ಎಲ್ಲಾ ಸೌಕರ್ಯಗಳನ್ನು ಮಾಡಿದ್ದೇವೆ. ತಗಡಿ ಎಂಬಲ್ಲಿ ಈ ಕೆಲಸ ಮಾಡುತ್ತಿದ್ದೇವೆ. ಇಲ್ಲಿ ಸುಮಾರು 12 ಕೋಟಿ ರೂಪಾಯಿ ಖರ್ಚಾಗಿದೆ. ಅಲ್ಲಿ ಫಿಶಿಂಗ್ ಹಾರ್ಬರ್ ಆಗಿದೆ. ಫಿಶಿಂಗ್ ಲ್ಯಾಂಡ್ ಸೆಂಟರ್ ಆಗಿದೆ. ಹಾರ್ಬರ್‌ನಲ್ಲಿ ಮಾರ್ಕೆಟಿಂಗ್ ಸೆಂಟರ್ ಆಗಿದೆ. ಮೀನುಗಾರರಿಗೆ ಅವರ ವ್ಯಾಪಾರಕ್ಕೆ ಏನೆಲ್ಲಾ ಬೇಕೋ ಅದನ್ನೆಲ್ಲ ಕಂಪ್ಲೀಟ್ ಮಾಡಿದ್ದೇವೆ. ಅದರ ಮೇಲೆ ಇಂಡೋ ಡ್ಯಾನಿಷ್ ಸರ್ಕಾರದವರು ಹಾರ್ಬರ್‌ನಲ್ಲಿ ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡಲಿಕ್ಕೆ 2 ಕೋಟಿ ರೂಪಾಯಿಗಳ ಹಡಗನ್ನು ಕಳುಹಿಸಿದ್ದಾರೆ. 18.25 meters, Ship that is otherwise called exploratory Ship. ಆ ಶಿಪ್‌ನಿಂದ ತುಂಬಾ ಆಳ ಸಮುದ್ರಕ್ಕೆ ಹೋಗಿ, ಸುಮಾರು 262ಅಡಿ ಆಳಕ್ಕೆ ಹೋಗಿ ಹೊಸ ಹೊಸ ನಮೂನೆಯ ಮೀನುಗಳನ್ನು ಇವತ್ತು ಮೀನುಗಾರರು ಹಿಡಿಯುತ್ತಿದ್ದಾರೆ. ನಮ್ಮ ಡಿಪಾರ್ಟ್‌ಮೆಂಟ್‌ನ ಇನ್‌ಫರ್‌ಮೇಶನ್ ಪ್ರಕಾರವಾಗಿ ಈವೊಂದು ಶಿಪ್ ಮೂಲಕ ಇವತ್ತು ಕರ್ನಾಟಕ ರಾಜ್ಯದಲ್ಲಿ ಎಂದೂ ಸಿಗದಂತಹ ಇವತ್ತಿನವರೆಗೂ ಸಿಗದ ಎರಡು ವೆರೈಟಿ ಮೀನುಗಳು ಸಿಕ್ಕಿವೆ. ಒಂದು ಕಾಟ್ರಿಯಲ್ ಮತ್ತೊಂದು ಅದರ ಹೆಸರು ಗೊತ್ತಿಲ್ಲ. ಇಂತಹ ಮೀನುಗಳನ್ನು ಕೂಡ ನಾವು ಹಿಡಿದಿದ್ದೇವೆ. ಅದೇ ರೀತಿ ಬ್ಲಾಕ್‌ಯಿಷ ವಾಟರ್ ಸ್ಕೀಮ್ ಎಂದು ಶುರು ಮಾಡಿದ್ದೇವೆ. ಅದನ್ನು ಕಾರವಾರದಲ್ಲಿ ಶುರು ಮಾಡಿದ್ದೇವೆ. ಬ್ಲಾಕಿಷ್ ವಾಟರ್ ಸ್ಕೀಮ್ ಬಹಳ ದೊಡ್ಡ ಪ್ರಯೋಜನಕಾರಿಯಾದ ಒಂದು ಸ್ಕೀಮ್ ಆಗಿದೆ. ಸೀಗಡಿ ಉತ್ಪಾದನೆಯನ್ನು ಮಾಡಲಿಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ತಗ್ಗಾದ ಪ್ರದೇಶದಲ್ಲಿ ಉಪ್ಪುನೀರು ನಿಲ್ಲುವ ಸ್ಥಳಗಳಲ್ಲಿ ಸೀಗಡಿ ಸಾಕುವಂಥ ವ್ಯವಸ್ಥೆ ಇತ್ತು. ಇವತ್ತು ಏನಾಗಿದೆ ಅಂದರೆ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನಡ ಜಿಲ್ಲೆಯಲ್ಲಿ ಸುಮಾರು 8 ಸಾವಿರ ಹೆಕ್ಟೇರ್ ಬ್ಲಾಕ್ಯ್‌ಯಿಸ್ ವಾಟರ್ ಇದೆ.

ಅದರಲ್ಲಿ 4 ಸಾವಿರ ಹೆಕ್ಟೇರ್‌ನಲ್ಲಾದರೂ ಸೀಗಡಿ ಮರಿಗಳನ್ನು ಬೆಳೆಸಬಹುದು. ಕುಮಟಾದಲ್ಲಿ ಹೊನ್ನಾಳಿಯೆಂದು ಹೇಳುವಂತಹ ಜಾಗದಲ್ಲಿ ಸುಮಾರು 33 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಒಂದು hatchery ಮಾಡಿದ್ದೇವೆ ಪ್ರಾನ್ಸ್ ಹಾಚ್ಯುರಿ ಮಾಡಲಾಗಿದೆ. ಅದರಿಂದ ಸುಮಾರು 2-3 ತಿಂಗಳುಗಳಲ್ಲಿ 1 ಕೋಟಿ ಮೀನಿನ ಉತ್ಪಾದನೆ ಮಾಡುತ್ತಿದ್ದೇವೆ.

ಇವತ್ತು 300 ಎಕರೆ ಜಾಗದಲ್ಲಿ ಸೀಗಡಿ ಮೀನು ಉತ್ಪಾದನೆ ಮಾಡಬೇಕೆಂದು ಕೆಲಸಕಾರ್ಯಗಳನ್ನು ಹಮ್ಮಿಕ್ಕೊಂಡಿದ್ದೇವೆ. ಈ ದಿಸೆಯಲ್ಲಿ 12 ಜನರನ್ನು ತರಪೇತು ಮಾಡಿದ್ದೇವೆ. ಸುಮಾರು 17 ಹೆಕ್ಟೇರ್ ಜಾಗದಲ್ಲಿ ನಾವು ಕೆಲಸ ಶುರು ಮಾಡಿದ್ದೇವೆ. ಈ ವಿಷಯದಲ್ಲಿ ಹೇಳಬೇಕಾದರೆ ಒಳ್ಳೆಯ ಯೋಜನೆಗಳಿವೆ. ಉತ್ತರ ಕನ್ನಡ ಜಿಲ್ಲೆಗೆ ದಕ್ಷಿಣ ಕನ್ನಡ ಜಿಲ್ಲೆಯ ಸ್ವಲ್ಪ ಭಾಗ ಬ್ಲಾಕ್‌ಯಿಸ್ ವಾಟರ್ ನಲ್ಲಿ ಸೀಗಡಿ ಉತ್ಪಾದನೆ ಮಾಡಲಾಗುತ್ತಿದೆ. ಮೊದಲು ಇದನ್ನು ಕಂಡುಹಿಡಿದದ್ದು ಮಲೇಷಿಯಾ ಜಪಾನ್ ಮತ್ತು ಥೈವಾನ್ ಇದು 10 ವರ್ಷಗಳ ಹಿಂದೆ ನಮ್ಮ ದೇಶಕ್ಕೆ ಬಂತು. ಇದು ಮೊದಲು ಚೈನಾದಲ್ಲಿ ಶುರುವಾಯಿತು. ಆಮೇಲೆ ನಮ್ಮ ದೇಶಕ್ಕೆ ಬಂತು. ಚೈನಾದೇಶದಲ್ಲಿ 2 ಲಕ್ಷ ಸ್ಕೈಯರ್ ಕಿಲೋಮೀಟರ್ ಲ್ಯಾಂಡ್‌ನಲ್ಲಿ ಮಾಡುತ್ತಿದ್ದಾರೆ. ನಮ್ಮ ಭಾರತದಲ್ಲಿ 14 ಲಕ್ಷ ಸ್ಕೈಯರ್ ಕಿಲೋಮೀಟರ್ ಪ್ರದೇಶದಲ್ಲಿ ಮಾಡಲಾಗುತ್ತಿದೆ. ಅದರಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ 8 ಸಾವಿರ ಸ್ಕೈಯರ್ ಕಿಲೋಮೀಟರ್ ಲ್ಯಾಂಡ್‌ನಲ್ಲಿ ಉತ್ಪಾದನೆ ಮಾಡಲಾಗುತ್ತಿದೆ. ಚೈನಾದಲ್ಲಿ ಥೈವಾನ್‌ನಲ್ಲಿ ಜಪಾನ್‌ನಲ್ಲಿ, ಮಲೇಷಿಯಾದಲ್ಲಿ ಮೀನುಮರಿ ಮತ್ತು ಸೀಗಡಿ ಉತ್ಪಾದನೆಯನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆಸಿದ್ದಾರೆ. ಅದರ ಅಂಕಿಅಂಶಗಳನ್ನು ನೋಡಿದರೆ ಡೆನ್ಮಾರ್ಕ್‌ನಲ್ಲಿ ಒಂದು ಹೆಕ್ಟೇರ್ ಬ್ಲಾಕ್‌ಯಿಸ್ ವಾಟರ್‌ನಲ್ಲಿ 40 ಟನ್ ಸೀಗಡಿಯನ್ನು ಉತ್ಪಾದನೆ ಮಾಡುತ್ತಿದ್ದಾರೆ. ಆಂಧ್ರಪ್ರದೇಶದಲ್ಲಿ 20 ಟನ್ ಉತ್ಪಾದನೆ ಮಾಡುತ್ತಿದ್ದಾರೆ. ಒಂದು ಟನ್ನಿಗೆ ಒಂದು ಲಕ್ಷ ರೂಪಾಯಿ ಬೆಲೆ. ಬ್ಲಾಕ್‌ಯಿಸ್ ವಾಟರ್ ಸ್ಕೀಮ್‌ನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚೆನ್ನಾಗಿ ಕೆಲಸ ಮಾಡಿದರೆ ನಮ್ಮ ಮೀನುಗಾರರು ಯಾವ ರೀತಿಯ ಉತ್ಪಾದನೆಯನ್ನು ತೆಗೆದುಕೊಳ್ಳಬಹುದು ಎನ್ನುವುದನ್ನು ತಾವು ಆಲೋಚನೆ ಮಾಡಬೇಕಾಗಿದೆ. ಇದರ ಬಗ್ಗೆ ಹೆಚ್ಚಿನ ಗಮನಕೊಟ್ಟು ಈ ಒಂದು ವಿಷಯದಲ್ಲಿ ಜನರಿಗೆ ನಾವು ಒಂದು ಅಭಿಪ್ರಾಯವನ್ನು ಕೊಡಬೇಕಾಗಿದೆ. ಈ ತರಹದಲ್ಲಿ ನಾವು ನಮ್ಮ ಕರಾವಳಿ ಪ್ರದೇಶದಲ್ಲಿ ಬೇಕಾದಷ್ಟು ರೀತಿಯಿಂದ ಕೆಲಸ ಮಾಡುತ್ತಿದ್ದೇವೆ. ಇನ್ನೂ ಬೇಕಾದಷ್ಟು ಕೆಲಸ ಮಾಡಲಿಕ್ಕೆ ಉಂಟು. ಬೇಕಾದಷ್ಟು ಹೊಸದಾದ ದೋಣಿಗಳು ಬಂದಿವೆ. purseseine Boats, Trawlers, Gil Netters ಇಂತಹ ದೋಣಿಗಳು ಬಂದಿವೆ. ಇದರ ಮೂಲಕ ಬೆಸ್ತರು, ಮೀನುಗಾರರು ಒಂದು ಲಕ್ಷ 86 ಸಾವಿರ ಕೆಜಿ ಮೀನು ಹಿಡಿಯುತ್ತಿದ್ದಾರೆ. ಇನ್ನೂ ಹೆಚ್ಚಿನ ಮಟ್ಟಿಗೆ ಇನ್‌ಫ್ರಾಸ್ಟ್ರಕ್ಚರ್ಸ್ ಕೊಟ್ಟರೆ ಹೆಚ್ಚು ಮೀನು ಹಿಡಿಯುತ್ತಾರೆ. ಇದರಿಂದ ಜನರ ಆರ್ಥಿಕ ಪರಿಸ್ಥಿತಿ ಉತ್ತಮವಾಗುತ್ತದೆ ಎಂದು ಹೇಳಿ....

ಶ್ರೀ ವಾಟಾಳ್ ನಾಗರಾಜ್ : ರೂಚಿಯಾದ ಮೀನುಗಳು ಯಾವುವು? ನಿಮಗೆ ಇಷ್ಟವಾದ ಮೀನು ಯಾವುದು?

ಶ್ರೀ ಎ.ಎಂ. ಬೆಳ್ಳಿಯಪ್ಪ : ನನಗೆ ಹೆಚ್ಚು ರುಚಿಯಾದದ್ದು ಬಂಗಡೆ.

ಶ್ರೀ ಆರ್. ದಯಾನಂದರಾವ್ : ವಾಟಾಳ್ ನಾಗರಾಜ್ ಅವರಿಗೆ ಮೀನಿನ ರುಚಿ ಗೊತ್ತಿದೆಯೇ?

ಶ್ರೀ ವಾಟಾಳ್ ನಾಗರಾಜ್ : ರುಚಿಯಾದ ಮೀನುಗಳು ಎಂದರೆ, ಅದು ಯಾವಾವುದು ಎಂದು ಕೇಳೋಣ ಅಂತ ಅಷ್ಟೆ. ಮಂತ್ರಿಗಳು ತಿನ್ನತಕ್ಕಂಥ ಮೀನುಗಳು ಯಾವ್ಯಾವುದು? ಮುಖ್ಯಮಂತ್ರಿಗಳು ತಿನ್ನತಕ್ಕಂಥ ಮೀನುಗಳು ಯಾವ್ಯಾವುದು? ನಿಮ್ಮ ನಿಮ್ಮ ಅನುಭವ ಕೇಳೋಣ ಎಂದು ಅಷ್ಟೆ.

ಶ್ರೀ ಎ.ಎಂ. ಬೆಳ್ಳಿಯಪ್ಪ : ಒಳನಾಡಿನಲ್ಲಿ ಸಿಗುವಂಥ ಮೀನುಗಳು ಒಳನಾಡು ಪ್ರದೇಶದಲ್ಲಿ ಇರುವಂಥ ಜನರಿಗೆ ಬಹಳ ರುಚಿ. ಸಮುದ್ರ ತೀರದಲ್ಲಿ ಇರುವವರಿಗೆ ಸಮುದ್ರದಲ್ಲಿ ಬೆಳೆಸುವ ಮೀನೇ ಬೇಕು. ನನಗೆ ಪಾಂಫ್ರೆಟ್ ಕೊಟ್ಟರೆ ಖುಷಿಯಾಗುವುದಿಲ್ಲ. ಕೆರೆಯಲ್ಲಿ ಸಿಗುವ ಕುಚ್ಚಲು ಮೀನು ಇದೆ. ಆ ಮೀನು ನನಗೆ ಬಹಳ ಇಷ್ಟ. ಶ್ರೀ ಇದಿನಬ್ಬ ಅವರನ್ನು ಕೇಳಿದರೆ ಅವರಿಗೆ ಸಮುದ್ರದ ಮೀನೇ ಬೇಕು.

ಶ್ರೀ ವಾಟಾಳ್ ನಾಗರಾಜ್ : (ಸಭಾಧ್ಯಕ್ಷರ ಸ್ಥಾನದಲ್ಲಿದ್ದ ಶ್ರೀ ಇದಿನಬ್ಬ ಅವರನ್ನು ಉದ್ದೇಶಿಸಿ) ತಮಗೆ ಯಾವ ಮೀನು ರುಚಿ?

ಚೇರಮನ್ : ಎಷ್ಟೋ ಮೀನುಗಳು ಇವೆ. ಅಂಜಲ್, ಮಾಂಜಿ, ಬಂಗಡೆ, ಸೀಗಡಿ ಒಂದಕ್ಕಿಂತ ಒಂದು ಒಳ್ಳೆಯದು, ಒಂದಕ್ಕಿಂತ ಒಂದು ರುಚಿಯಾಗಿದೆ.

ಶ್ರೀ ಎ.ಎಂ. ಬೆಳ್ಳಿಯಪ್ಪ : ಒಳನಾಡು ಮೀನಿನ ಬಗ್ಗೆ ಮಾತನಾಡುವುದಕ್ಕೆ ನಾನು ಇಷ್ಟಪಡುತ್ತೇನೆ. ನಮ್ಮ ಒಳನಾಡಿನಲ್ಲಿ ಹೆಚ್ಚಿಗೆ ಮೀನನ್ನು ಬೆಳೆಸಬಹುದು. ದುರಾದೃಷ್ಟಕ್ಕೆ ನಮ್ಮ ತಾಪತ್ರಯ ಏನಾಗಿದೆ ಎಂದರೆ...

ಶ್ರೀ ಆರ್.ಎನ್. ನಾಯಕ್ : ತಾವು ಬಹಳ ಚೆನ್ನಾಗಿ ಹೇಳುತ್ತಿದ್ದೀರಿ. ತಾವು ಮೀನಿನ ಬಗ್ಗೆ ಮಾತನಾಡುವುದನ್ನು ಕೇಳಿದರೆ ನನಗೆ ಈಗಲೇ ಊಟಕ್ಕೆ ಹೋಗಬೇಕೆಂದು ಅನ್ನಿಸಿದೆ.

ಶ್ರೀ ವಾಟಾಳ್ ನಾಗರಾಜ್ : ಮೀನಿನ ಬಗ್ಗೆ ಮಾತನಾಡುವುದಕ್ಕೇ ಎಷ್ಟು ರುಚಿ ಇರಬೇಕಾದರೆ ಇನ್ನು, ಮೀನು ತಿನ್ನುವುದಕ್ಕೆ ಎಷ್ಟು ರುಚಿ ಇರಬಹುದು?

ಶ್ರೀ ಎ.ಎಂ. ಬೆಳ್ಳಿಯಪ್ಪ : ಕರ್ನಾಟದಲ್ಲಿ ಜಲಾನಯನ ಪ್ರದೇಶ is a very rich source. 4 ಲಕ್ಷ 51 ಸಾವಿರ ಹೆಕ್ಟೇರ್ಸ್ ಜಲಾನಯನ ಪ್ರದೇಶ ನಮ್ಮ ಕರ್ನಾಟಕದಲ್ಲಿದೆ. 2 ಲಕ್ಷ 37 ಸಾವಿರ ಹೆಕ್ಟೇರ್ಸ್ ಕೆರೆ, ಕುಂಟೆ ಇರತಕ್ಕಂಥ ಪ್ರದೇಶ.

ಶ್ರೀ ಬಸವರಾಜ ರಾಯರೆಡ್ಡಿ : ಸಾಕಷ್ಟು ವೇಳೆಯಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಅವರ ಮಾತು ಬಹಳ ರುಚಿಯಾಗಿದೆ. ಅವರು ಮಾತನಾಡಲಿ.

ಶ್ರೀ ಎ.ಎಂ. ಬೆಳ್ಳಿಯಪ್ಪ : ಇನ್ನು ಐದು ನಿಮಿಷದಲ್ಲಿ ನಾನು ಮುಗಿಸುತ್ತೇನೆ. ನಾನು ಆಗಲೇ ಹೇಳಿದ ಹಾಗೆ 4 ಲಕ್ಷ 51 ಸಾವಿರ ಎಕರೆ ಇಷ್ಟು ಇದ್ದರೂ ಸಹ ಮೀನುಸಾಕಾಣಿಕೆಗೆ ಬೇಕಾದಷ್ಟು ಮೀನು ಮರಿಗಳು ಇಲ್ಲ. ಮೀನು ಮರಿಗಳ ಉತ್ಪಾದನೆ ಆಗಬೇಕಾಗಿದೆ. ಕರ್ನಾಟದಲ್ಲಿ ಮೀನು ಮರಿಗಳನ್ನು ಬಿಡಬೇಕಾದರೆ, ಸುಮಾರು 80ಕೋಟಿ ಮೀನುಮರಿಗಳು ಬೇಕು. 25-30ವರ್ಷಗಳಿಂದ ಡಿಪಾರ್ಟ್‌ಮೆಂಟ್‌ನವರು ಇಷ್ಟೊಂದು ವ್ಯವಹಾರ ಮಾಡಿಕೊಂಡು ಬಂದರೂ ಕೂಡ, ಇವತ್ತು 10 ಕೋಟಿ ಮೀನುಮರಿಗಳನ್ನು ಮಾತ್ರ ಪ್ರೊಡ್ಯೂಸ್ ಮಾಡುತ್ತಿದ್ದಾರೆ. that means 1/10 of the total requirement. ನಮ್ಮಲ್ಲಿ ಸುಮಾರು 28-30 ಮೀನುಮರಿಗಳು ಉತ್ಪಾದನಾ ಕೇಂದ್ರಗಳಿವೆ. ಮೀನು ಅಭಿವೃದ್ಧಿ ಕಾರ್ಪೊರೇಷನ್ ಇದೆ, ತುಂಗಭದ್ರಾ ಬೋರ್ಡ್ ಇದೆ ಮತ್ತು ಡಿಪಾರ್ಟ್‌ಮೆಂಟ್ ಕೆಲಸ ಮಾಡುತ್ತಾ ಇದೆ. ಇಷ್ಟೆ ಇದ್ದರೂ ಕೂಡ

ನಮಗೆ 80 ಕೋಟಿ ಬೇಕಾಗಿದೆ. 25-30 ವರ್ಷಗಳಿಂದ 10 ಕೋಟಿ ಮಾತ್ರ ಪ್ರಡ್ಯೂಸ್ ಮಾಡುತ್ತಿದ್ದೇವೆ.

ಅದೇಕ್ಕೋಸ್ಕರ ಇವತ್ತಿನದಿವಸ ಸರ್ಕಾರ ಇಂತಹ ಒಂದು ತೀರ್ಮಾನ ತೆಗೆದುಕೊಂಡಿದೆ. ಈ ಮೀನು ಅಭಿವೃದ್ಧಿ ಕಾರ್ಪೊರೇಷನ್ ಏನಿದೆ, ಇದನ್ನು ಅಬಾಲಿಷ್ ಮಾಡಬೇಕು. ಇದರಿಂದ ಸುಮಾರು 1 ಕೋಟಿ 71 ಲಕ್ಷ ಹಾಳಾಗಿದೆ, ಲೂಟಿಯಾಗಿದೆ. ಮತ್ತೆ ಎಲ್ಲಾ ಕೆರೆಗಳನ್ನೂ ಮತ್ತು ಮೀನುಗಾರಿಕಾ ನಿಗಮಗಳನ್ನು ಖಸಗೀಕರಣ ಮಾಡಬೇಕೆಂಬ ತೀರ್ಮಾನವನ್ನು ತೆಗೆದುಕೊಂಡಿದೆ. ಈ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ. ಈ ಡೆವಲಪ್‌ಮೆಂಟ್ ಕಾರ್ಪೊರೇಷನ್ ಆಬಾಲಿಷ್ ಆಗಿದೆ, ಇನ್ನೂ ಖಸಗಿಯವರಿಗೆ ಕೊಟ್ಟಿಲ್ಲ. ಖಾಸಗಿಯವರ ಮೂಲಕ ಇನ್ನೂ ಜಾಸ್ತಿ ಮೀನುಮರಿಗಳನ್ನು ಪ್ರೊಡ್ಯೂಸ್ ಮಾಡಬಹುದೆಂಬುದು ನಮ್ಮ ಅಭಿಪ್ರಾಯ. ಮತ್ತು ಇನ್ನೊಂದು ಅಭಿಪ್ರಾಯವೇನೆಂದರೆ, 5 ಲಕ್ಷ ರೂಪಾಯಿಗಳ ಒಂದು ಸ್ಕೀಮ್ ಹಾಕಿಕೊಂಡು...

ಶ್ರೀ ಪಿ.ಜಿ.ಆರ್. ಸಿಂಧ್ಯ : ತಾವು ಏನು ಹೇಳುತ್ತಿದ್ದೀರಿ ಎಂದರೆ, ಮೀನು ಅಭಿವೃದ್ಧಿ ಕಾರ್ಪೊರೇಷನ್‌ನಲ್ಲಿ ಕಳೆದ ವರ್ಷದಲ್ಲಿ 1 ಕೋಟಿ 71 ಲಕ್ಷ ಲೂಟಿಯಾಗಿದೆ, ಆದ್ದರಿಂದ ಇದನ್ನು ಪ್ರೈವೇಟ್‌ನವರಿಗೆ ಮಾರಾಟ ಮಾಡುತ್ತೇವೆ. ಎಂಬ ತೀರ್ಮಾನವನ್ನು ಸರ್ಕಾರ ಮಾಡಿದೆ ಎಂಬ ಅರ್ಥದಲ್ಲಿ ಹೇಳುತ್ತಿದ್ದೀರಿ. ಒಂದೇ ಒಂದು ವಿವರ ಕೊಡಿ. ಮೀನು ಅಭಿವೃದ್ಧಿ ಕಾರ್ಪೊರೇಷನ್‌ನವರು, ನಮ್ಮ ನೀರಾವರಿ ಪ್ರಾಜೆಕ್ಟ್‌ಗಳು ಇವೆಯಲ್ಲ, ಅದು ಹೇಮಾವತಿ ಇರಬಹುದು, ನಾರಾಯಣಪುರ ಇರಬಹುದು, ಮತ್ತೊಂದು ಇರಬಹುದು, ಡ್ಯಾಮ್ ಕೆಳಗೆ ಇರತಕ್ಕ 40-50 ಎಕರೆ ಜಮೀನ್‌ನಲ್ಲಿ ಫಿಷ್ ಪಾಂಡ್‌ಗಳನ್ನು ಕಟ್ಟಿ ನೀರನ್ನು ಬಿಟ್ಟು ಎಲ್ಲಾ ನೀರಾವರಿ ಯೋಜನೆಯಗಳಲ್ಲೂ ಮಾಡಿದ್ದಾರೆ. ಈ ಜಮೀನನ್ನೂ ಪ್ರೈವೇಟ್‌ನವರಿಗೆ ಕೊಡುತ್ತಿದ್ದೀರಾ ಅಥವಾ ಬರೀ ಮೀನು ಮರಿ ಮಾಡುವುದಕ್ಕೆ ಮಾತ್ರ ಪರ್ಮಿಷನ್ ಕೊಡುತ್ತಿದ್ದೀರಾ ಎನ್ನುವುದನ್ನು ದಯವಿಟ್ಟು ಹೇಳಿ.

ಶ್ರೀ ಎ.ಎಂ. ಬೆಳ್ಳಿಯಪ್ಪ : ಅದನ್ನು ಕೊಡುವುದಿಲ್ಲ. 5 ವರ್ಷ, 7 ವರ್ಷ ಗುತ್ತಿಗೆ ಕೊಡುತ್ತಿದ್ದೇವೆ. ಇದನ್ನು ಖಾಸಗೀಕರಣ ಮಾಡಿ, ಕೆಲವು ಪಾಂಡ್ಸ್‌ಗಳನ್ನು ಮಾತ್ರ ಅವರಿಗೆ ಕೊಡುತ್ತಿದ್ದೇವೆಯೇ ಹೊರತು, ಎಲ್ಲಾ ಪಾಂಡ್ಸ್‌ಗಳನ್ನು ಅವರಿಗೆ ಕೊಡುವುದಿಲ್ಲ. ಸರ್ಕಾರದವರು 20-25 ಕೆರೆಗಳನ್ನು ಮತ್ತು 20-25 hatchery ponds ಇಟ್ಟುಕೊಳ್ಳುತ್ತೇವೆ. 10-18 ಪಾಂಡ್ಸ್‌ಗಳನ್ನು ಕೊಡುತ್ತಿದ್ದೇವೆ. ಯಾವುದು ಎಕನಾಮಿಕಲ್ ಅಲ್ಲ ಎಂದು ನಮ್ಮ ಮನಸ್ಸಿಗೆ ಅಭಿಪ್ರಾಯ ಬರುತ್ತದೆ ಅಂತಹವುಗಳನ್ನು ಮಾತ್ರ ಕೊಡುತ್ತೇವೆ. ಈ ಪ್ರೈವೇಟ್‌ನವರಿಗೆ ಕೊಡತಕ್ಕ ಲಿಸ್ಟ್‌ನ್ನು ತಮಗೆ ಕೊಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿಮಗೆ ಖಾಸಗೀಕರಣ ಮಾಡಿ ಎಂದು ಹೇಳಿದವರು ಯಾರು? ಪ್ರೈವೇಟ್‌ನವರಿಗೆ ಮಾರಾಟ ಮಾಡಿ ಎಂದು ಹೇಳಿದವರು ಯಾರು? ಏನಾದರೂ ಟೆಕ್ನಿಕಲ್ ಕಮಿಟಿ ಮಾಡಿದ್ದೀರಾ? ಕೇವಲ ನೀವು ಹೌಸ್‌ನಲ್ಲಿ ಬಂದು ಖಾಸಗೀಕರಣ ಮಾಡುತ್ತಿದ್ದೇವೆ, ಎಲ್ಲಾ ಮಾರಾಟ ಮಾಡುತ್ತಿದ್ದೇವೆ ಎಂದರೆ ಅರ್ಥ ಏನು? ಇದರಿಂದ ನಿಮ್ಮ ಮೇಲೆ ಆಪಾದನೆ ಬರುತ್ತದೆ. ಅಲ್ಲಿರತಕ್ಕ ಜಮೀನಿನಲ್ಲಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಪಾಂಡ್ಸ್‌ಗಳನ್ನು ಕಟ್ಟಿದ್ದೀರಿ. 1 ಕೋಟಿ 70 ಲಕ್ಷ ಕಳೆದ ವರ್ಷ ಲೂಟಿ ಆಗಿದೆಯೇ ಅಥವಾ ಅದರ ಹಿಂದೆ ಆಗಿದೆಯೇ, ಇದು ಏಕೆ ಆಯಿತು, ಏನಾಯಿತು? ಯಾವ ರೀತಿ ಮಾಡಿದರೆ ಉಪಯೋಗವಾಗುತ್ತದೆ ಎನ್ನುವ ವಿಚಾರದಲ್ಲಿ ತಜ್ಞರ ಸಮಿತಿಯನ್ನು ರಚನೆ ಮಾಡಿ. ಇದಾದಮೇಲೆ 2-3

ತಿಂಗಳಲ್ಲಿ ಈ ಕಮಿಟಿ ರಿಪೋರ್ಟ್ ಬಂದಮೇಲೆ, ಕೇವಲ ಮರಿಗಳನ್ನು ಮಾಡಲಿಕ್ಕೆ ಮಾತ್ರ ಪ್ರೈವೇಟ್‌ನವರಿಗೆ ಕೊಡಿ.

ಶ್ರೀ ಎ.ಎಂ. ಬೆಳ್ಳಿಯಪ್ಪ : ಸರ್ಕಾರಕ್ಕೆ ಬೇಕಾದ ರಿಪೋರ್ಟ್‌ಗಳನ್ನು ಈಗಾಗಲೇ ತರಿಸಿಕೊಂಡು ಒಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಅದರ ಪ್ರಕಾರವಾಗಿ ನಾವು ಕೊಡುತ್ತಿರುವುದು, Only lease right for 5 years, 7 years, 2 years like that. We don't give the land. We don't give the buildings. Except the right to rear the fisher lings in those ponds, we don't give anything else.

ಶ್ರೀ ಎಂ.ಪಿ. ವೆಂಕಟೇಶ್ : 50 ಫಿಷ್ ಪಾಂಡ್ಸ್‌ಗಳಲ್ಲಿ 20ನ್ನು ಅವರಿಗೆ ಕೊಡುತ್ತೀರಿ. ಇನ್ನು 30 ನೀವು ಮಾಡುತ್ತೀರಿ. ಇದರಿಂದ ನಿಮ್ಮ ಮೀನುಗಳನ್ನೇ ಅಲ್ಲಿ ತೆಗೆದುಕೊಂಡು ಹೋಗಿ ಹಾಕಿಕೊಳ್ಳುತ್ತಾರೆ. ಇದಕ್ಕೆ ಏನು ಮಾಡುತ್ತೀರಿ. ಒಂದು ಡ್ಯಾಮ್ ಪಕ್ಕದಲ್ಲಿ ಫಿಷ್ ಪಾಂಡ್ 100 ಇರುತ್ತವೆ, ಇವುಗಳೆಲ್ಲವನ್ನೂ ಸಂಪೂರ್ಣವಾಗಿ ಕೊಡುತ್ತೀರೋ, ಇವುಗಳಲ್ಲಿ ಅರ್ಧ ಕೊಡುತ್ತೀರೋ. ಒಂದು ವೇಳೆ ನೀವು ಅರ್ಧ ಕೊಟ್ಟರೆ, ನೀವು ಸಾಕಿದ ಮೀನುಮರಿಗಳನ್ನೇ ಅವರು ತೆಗೆದುಕೊಂಡು ಹೋದರೆ, ದುರುಪಯೋಗವಾಗುವುದಿಲ್ಲವೇ?

SRI A.M. BELLIAPPA : Because we are purchasing the fisher lings. ಅವರು ಸಾಕಿದ ಮೀನುಮರಿಗಳನ್ನು ನಾವೇ ತೆಗೆದುಕೊಳ್ಳುತ್ತೇವೆ, ಸರ್ಕಾರ ಬೆಲೆಗೆ ನಾವೇ ತೆಗೆದುಕೊಳ್ಳುತ್ತೇವೆ. ಜೊತೆಗೆ, ಅವರು ಹೊರಗಡೆ ಕೊಡದಹಾಗೆ ಅಗ್ರಿಮೆಂಟ್ ಮಾಡಿಕೊಳ್ಳುತ್ತೇವೆ.

ಶ್ರೀ ಎಂ.ಪಿ. ವೆಂಕಟೇಶ್ :ಫಿಷ್ ಪಾಂಡ 100 ಇದ್ದಾಗ, ಇವುಗಳಲ್ಲಿ ಅರ್ಧ ಲೀಸ್‌ಗೆ ಕೊಡುತ್ತೀರಿ. ಅವರು ನಿಮ್ಮ ಮೀನುಮರಿಗಳನ್ನೇ, ನಿಮಗೆ ಕೊಟ್ಟರೆ....

(ಗೊಂದಲ)

ಚೇರ್ಮನ್ : ಮಧ್ಯೆ ಕೇಳಬೇಡಿ, ಮಾನ್ಯ ಮಂತ್ರಿಗಳು ಮುಂದುವರೆಸಲಿ.

ಶ್ರೀ ಎ.ಎಂ. ಬೆಳ್ಳಿಯಪ್ಪ : ಸನ್ಮಾನ್ಯ ಅಧ್ಯಕ್ಷರೇ, ಈ ರೀತಿ ಒಳನಾಡು ಮೀನುಗಾರಿಕೆಯಲ್ಲಿ ಕೂಡ ಹೆಚ್ಚಿನ ಅಭಿವೃದ್ಧಿ ಮಾಡುವ ಯೋಜನೆ ಇದೆ. ಈ ಯೋಜನೆಯನ್ನು ಯಾರ ಮೂಲಕ ನಾವು ನಿಭಾಯಿಸುತ್ತೇವೆ, ಎಂದರೆ, ಪವರ್‌ಮನ್ ಕೋ-ಅಪರೇಟೀವ್ ಸೊಸೈಟಿಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡವರಿಗೆ ಸೇರಿದ ಕೋ-ಆಪರೇಟೀವ್ ಸೊಸೈಟಿಗಳು, ಈ ಒಂದು ಮೀನುಗಾರಿಕೆಯಲ್ಲಿ ಡಿಗ್ರಿ ಪಡೆದ ನಿರುದ್ಯೋಗಿಗಳು, ನಿರುದ್ಯೋಗಿ ಪದವೀಧರರು ಇಂತಹವರಿಗೆಲ್ಲಾ ಕೊಟ್ಟು ಅವರ ಮೂಲಕವಾಗಿ, ಕೆರೆಗಳು, ಫಿಷ್ ಪಾಂಡ್ಸ್ ಇವುಗಳಲ್ಲಿ ಮೀನುಮರಿಗಳ ಉತ್ಪಾದನೆ ಹಾಗೂ ಮೀನು ಸಾಕಾಣಿಕೆ ಮಾಡಿ ಅದಷ್ಟು ಮಟ್ಟಿಗೆ ಉತ್ಪಾದನೆಯನ್ನು ಜಾಸ್ತಿ ಮಾಡಬೇಕೆಂಬ ವಿಚಾರ ಇದೆ. ಇದಕ್ಕೆ ಕೇಂದ್ರ ಸರಕಾರದಿಂದ, ಎನ್‌ಸಿಡಿಸಿಯಿಂದ ಮತ್ತು ರಾಜ್ಯಸರಕಾರದಿಂದ ಕೂಡ ಹಲವಾರು ತರದಲ್ಲಿ ಹಣವನ್ನು ಅವರಿಗೆ ಕೊಟ್ಟು, ಸಬ್ಸಿಡಿ ರೇಟ್‌ನಲ್ಲಿ, ಬ್ಯಾಂಕ್ ಮೂಲಕ ಲೋನ್ ರೂಪದಲ್ಲಿ ಈ ಹಣವನ್ನು ಕೊಟ್ಟು, ಅದರ ಮೂಲಕ ಮೀನುಗಳ ಉತ್ಪಾದನೆಯನ್ನು ಜಾಸ್ತಿ ಮಾಡಬೇಕೆಂದು ನಿರ್ಣಯ ತೆಗೆದುಕೊಂಡು ಆ ರೀತಿ ಕೆಲಸ ಮಾಡುತ್ತಿದ್ದೇವೆ. ನಾನು ಹೇಳಿದಹಾಗೆ ಇನ್‌ಲ್ಯಾಂಡ್ ವಾಟರ್‌ನಲ್ಲಿ 65 ಸಾವಿರ ಮೆಟ್ರಿಕ್ ಟನ್ ಮೀನು ಉತ್ಪಾದನೆ ಆಗುವಂತಹದ್ದು ಇದ್ದು, ಪ್ರಯತ್ನ ಪಟ್ಟರೆ ಇನ್ನೂ ಹೆಚ್ಚು ಉತ್ಪಾದನೆ ಮಾಡಬಹುದೆಂದು ಹೇಳುತ್ತೇನೆ.

ಇನ್ನು ಪೋರ್ಟ್ಸ್ ವಿಷಯ ಸ್ವಲ್ಪ ಮಾತನಾಡುತ್ತೇನೆ. ಇದರ ಬಗ್ಗೆ ಯಾರೂ ಮಾತನಾಡಲಿಲ್ಲ. ಈಗ ನಮ್ಮ ರಾಜ್ಯದ 19 ಪೋರ್ಟ್‌ಗಳಲ್ಲಿ 6 ಪೋರ್ಟ್‌ನ್ನು ಡಿನೋಟಿಫೈ ಮಾಡಿರುತ್ತಾರೆ. ಏತಕ್ಕೆಂದರೆ ವ್ಯಾಪಾರ ಸರಿಯಾಗಿ ಆಗುತ್ತಿಲ್ಲ ಹಾಗೂ ಇನ್‌ಕಮ್ ಬರುತ್ತಿಲ್ಲ ಎಂಬ ಕಾರಣಕ್ಕೆ ಮಾಡಿದ್ದಾರೆ. ಈಗ ನಾವು ಪುನಃ ನಾಲ್ಕು ಪೋರ್ಟ್‌ಗಳನ್ನು ಡಿನೋಟಿಫೈ ಮಾಡುವುದಕ್ಕೆ ರೆಕಮೆಂಡ್ ಮಾಡಿರುತ್ತೇವೆ. ಏತಕ್ಕೆಂದರೆ ಟ್ರೇಡ್ ಆಗುತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದನ್ನೂ ಪ್ರೈವೇಟ್‌ನವರಿಗೆ ಕೊಟ್ಟು ಬಿಡಿ.

ಶ್ರೀ ಎ.ಎಂ. ಬೆಳ್ಳಿಯಪ್ಪ : ಇದನ್ನು ಪ್ರೈವೇಟ್‌ನವರಿಗೆ ಕೊಡುವುದಕ್ಕೆ ಆಗುವುದಿಲ್ಲ. ಮೀನು ಸಾಕಾಣಿಕೆ ವಿಷಯದಲ್ಲಿ ಕೊಟ್ಟಿದ್ದು ಬೇರೆ. ಪೋರ್ಟ್ ವಿಚಾರದಲ್ಲಿ ಇದು ಆಗುವುದಿಲ್ಲ. ಮಂಗಳೂರು ಹಳೇಬಂದರು, ಕಾರವಾರ ಇಂತಹ ಒಟ್ಟು 9 ಬಂದರುಗಳು ನಮ್ಮ ಕೈಯಲ್ಲಿ ಕೆಲಸ ಮಾಡುತ್ತಿವೆ. ಇದರಿಂದ 1 ಕೋಟಿ 6 ಲಕ್ಷ ರೂಪಾಯಿ ಇನ್‌ಕಮ್ ಬರುತ್ತಿದೆ. ಸನ್ಮಾನ್ಯ ಅಧ್ಯಕ್ಷರ ಸ್ಥಾನದಲ್ಲಿ ಕುಳಿತಿರುವ ಇದಿನಬ್ಬರವರು ಮಾತನಾಡುವಾಗ ಡ್ರೆಡ್ಜಿಂಗ್ ಮಾಡಿಲ್ಲ ಎಂಬ ವಿಷಯ ಹೇಳಿದರು.

ಚೇರ್‌ಮನ್ (ಶ್ರೀ ಬಿ.ಎಂ. ಇದಿನಬ್ಬ) : ಇದು ಬಹಳ ಮುಖ್ಯ. ಅಳಿವೆ ಬಾಗಿಲಿನಲ್ಲಿ ಹೂಳು ತೆಗೆಯುವ ವಿಚಾರ ಅತ್ಯಂತ ಮುಖ್ಯ.

ಶ್ರೀ ಎ.ಎಂ. ಬೆಳ್ಳಿಯಪ್ಪ : ಮಂಗಳೂರು ಪೋರ್ಟ್‌ನಲ್ಲಿ ಡ್ರೆಡ್ಜಿಂಗ್ ಆಗಿಲ್ಲ ಮೀನುಗಾರರಿಗೆ ದೊಡ್ಡ ತೊಂದರೆಯಾಗಿದೆ ಎಂಬ ವಿಷಯವನ್ನು ಮಾನ್ಯ ಇದಿನಬ್ಬವರು ಮಾತನಾಡುವಾಗ ಹೇಳಿದರು. 1984ನೇ ಇಸವಿಯಿಂದ ಇದರ ಬಗ್ಗೆ ಸರಕಾರ ಯೋಚನೆ ಮಾಡುತ್ತಿದೆ. 1984-85 ರಲ್ಲಿ ಯೋಚನೆ ಮಾಡಿ, 1986 ರಲ್ಲಿ ಟೆಂಡರ್ ಕರೆದಾಗ ಆ ವರ್ಷ ಯಾವುದೇ ಟೆಂಡರ್ ಬರಲಿಲ್ಲ. ಆಮೇಲೆ ೮೮-೮೯ರಲ್ಲಿ ಡ್ರೆಡ್ಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾದವರು ಒಂದು ಡ್ರೆಡ್ಜಿಂಗ್ ಮೆಷಿನ್ ತಂದು ಬಿಟ್ಟು, ಎಕ್ಸ್‌ಪರ್ಟ್ಸ್ ಮೂಲಕ ಹೂಳೆತ್ತುವ ಕೆಲಸ ಮಾಡಿದರೂ ಕೂಡ ಅದನ್ನು ಮಾಡುವುದಕ್ಕೆ ಆಗಲಿಲ್ಲ. ಡ್ರೆಡ್ಜರ್ ಕೂಡ ಸಮುದ್ರದಲ್ಲಿ ಮುಳುಗಿ ಕೆಳಗೆ ಹೋಯಿತು. ಆಕಸ್ಮಿಕವಾಗಿ, ಅಲ್ಲಿದ್ದ ಆಫೀಸರ್ಸ್‌ನ್ನು ಸೇವ್ ಮಾಡಬೇಕಾಯಿತು. ಸೇವ್ ಆದರು. ಕಡೆಗೆ ಸರಕಾರ ಒಂದು ತೀರ್ಮಾನ ತೆಗೆದುಕೊಂಡಿತು ಟೆಕ್ನಿಕಲ್ ಅಡ್ವೈಸ್ ಪ್ರಕಾರ ಈ ಹೂಳೆತ್ತುವ ಕೆಲಸ ಮಾಡಬೇಕಾದರೆ, ನಾವು ಬ್ರೇಕ್‌ವಾಟರ್ಸ್‌ನ್ನು ಕಟ್ಟದೇ ಹೋದರೆ ಇದು ಸಾಧ್ಯವಾಗುವುದಿಲ್ಲ ಎಂಬ ತೀರ್ಮಾನಕ್ಕೆ ಬಂದು, ಓಲ್ಡ್ ಮಂಗಳೂರು ಬಂದರಿನಲ್ಲಿ ಸದರನ್ ಪೋರ್ಷನ್‌ನಲ್ಲಿ 380 ಮೀಟರ್ಸ್, ನಾರ್ಥರ್ನ್ ಸೈಡ್‌ನಲ್ಲಿ 580 ಮೀಟರ್ಸ್ ಗೋಡೆ ಕಟ್ಟದೇ ಹೋದರೆ, ಟೈಡಲ್ ವೇವ್ಸ್ ಶಾಂತಿ ಮಾಡದೇ ಹೋದರೆ, ಟ್ರಾನ್ಸ್‌ಸ್ಪಿರಿಟಿ ತರದೇ ಹೋದರೆ, ಡ್ರೆಡ್ಜಿಂಗ್ ಮಾಡುವುದಕ್ಕೆ ಸಾಧ್ಯ ಇಲ್ಲ, ಹೂಳೆತ್ತುವುದಕ್ಕೆ ಸಾಧ್ಯ ಇಲ್ಲ ಎಂಬ ತೀರ್ಮಾನ ತೆಗೆದುಕೊಂಡು ಆ ಪ್ರಕಾರವಾಗಿ ಇವತ್ತು ನಾವು ಬ್ರೇಕ್ ವಾಟರ್ಸ್ ಅಂದರೆ ಅಲೆ ತಡೆಗೋಡೆ ಕಟ್ಟುವಂತಹ ತೀರ್ಮಾನ ತೆಗೆದುಕೊಂಡು, ಕಳೆದ ವರ್ಷ ಜ್ಯೋತಿ ಕಂಪೆನಿಗೆ 1 ಕೋಟಿ 85 ಲಕ್ಷ ರೂಪಾಯಿಗಳಿಗೆ ಕಾಂಟ್ರಾಕ್ಟ್ ಕೊಟ್ಟು 40 ಮೀಟರ್ಸ್ ಗೋಡೆಯನ್ನು ಮಾತ್ರ ಇವತ್ತು ನಾರ್ಥರ್ನ್ ಸೈಡಿನಲ್ಲಿ ಕಟ್ಟಿದ್ದೇವೆ. ಇನ್ನು ಬಾಕಿ ಇರುವ ಕೆಲಸವನ್ನು ಕಟ್ಟಲಿಕ್ಕೆ ಅಟ್‌ಲೀಸ್ಟ್ ಮಾರ್ಚ್ 1993ರ ಒಳಗೆ ಈ ಕೆಲಸ ಆಗುತ್ತದೆ. ಮಾನ್ಯ ಸಭಾಧ್ಯಕ್ಷರೇ ನಾನು ಈಗಾಗಲೇ ಪುನಃ ಒಂದು ಮೀಟಿಂಗ್ ನಾಳೆ ನಾಡಿದ್ದು 20ನೇ ತಾರೀಖಿಗೆ ಕರೆದಿದ್ದೇನೆ.

ಛೇರ್ಮನ್ : ಆ ಕೆಲಸ ಬಹಳ ನಿಧಾನವಾಗಿ ಮಂದಗತಿಯಲ್ಲಿ ನಡೆಯುತ್ತಿದೆ.

ಶ್ರೀ ಎ.ಎಂ. ಬೆಳ್ಳಿಯಪ್ಪ : ಅದಕ್ಕೆ ಕಾರಣ ಟೆಕ್ನಿಕಲ್ ಡಿಫಿಕಲ್ಟಿ ಇತ್ತು. ನಮ್ಮಲ್ಲಿ ದುಡ್ಡು ರೆಡಿಯಾಗಿದೆ. ಆದರೆ ಕೆಲವು ಕಾರಣಗಳಿಂದ ತಡವಾಗಿದೆ. ಅದಷ್ಟು ಬೇಗ ಈ ಕೆಲಸವನ್ನು ಮಾಡಲಿಕ್ಕೆ ನಾನು ಆಶ್ವಾಸನೆ ಕೊಡುತ್ತೇನೆ. ನಮ್ಮ ಆಫೀಸರ್ಸ್ ಜೊತೆ ಮಾತನಾಡುತ್ತೇನೆ. ಇನ್ನು ಎರಡು ವರ್ಷಗಳಲ್ಲಿ 93ನೇ ಇಸವಿ ಮಾರ್ಚಿ ತಿಂಗಳೊಳಗೆ ಇದನ್ನು ಕಟ್ಟುವಂತಹ ತೀರ್ಮಾನವನ್ನು ನಾವು ತೆಗೆದುಕೊಂಡಿದ್ದೇವೆ. ಆದ್ದರಿಂದ ನನ್ನ ಈ ಬೇಡಿಕೆಗಳಿಗೆ ತಮ್ಮೆಲ್ಲರ ಸಂಪೂರ್ಣ ಸಹಕಾರ ಕೊಟ್ಟು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

\+ ಶ್ರೀ ಕೆ.ಎನ್. ಮಲ್ಲಿಕಾರ್ಜುನ ಪ್ರಸನ್ನ : (ಸಣ್ಣ ನೀರಾವರಿ ಸಚಿವರು) ಮಾನ್ಯ ಅಧ್ಯಕ್ಷರೇ....

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ ನಾವು ಬೆಳಿಗ್ಗೆ 10 ಗಂಟೆಗೆ ಬಂದಿದ್ದೇವೆ. ಇನ್ನು ಎಷ್ಟು ಹೊತ್ತು ಕುಳಿತುಕೊಳ್ಳಬೇಕು?

ಶ್ರೀ ಕೆ.ಎನ್. ಮಲ್ಲಿಕಾರ್ಜುನ ಪ್ರಸನ್ನ : ನಾನು 5 ನಿಮಿಷದಲ್ಲಿ ಮುಗಿಸಿಬಿಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಅದು ಹೇಗೆ ಸಾಧ್ಯ?

ಶ್ರೀ ಕೆ.ಎನ್. ಮಲ್ಲಿಕಾರ್ಜುನ ಪ್ರಸನ್ನ : ಇಲ್ಲಾ ಮುಗಿಸಿಬಿಡುತ್ತೇನೆ. ಮಾನ್ಯ ಅಧ್ಯಕ್ಷರೇ 1991-92ನೇ ಸಾಲಿನ ಆಯವ್ಯಯ ಅಂದಾಜು ಆ ಸಭೆಯಲ್ಲಿ ಏನು ಮಂಡಿಸಿದ್ದೇವೆ ಈ ಸಂದರ್ಭದಲ್ಲಿ ನಮ್ಮ ಮಿತ್ರರಾದ ಅನೇಕ ಜನ ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ವಿರೋಧಪಕ್ಷದ ಸದಸ್ಯರು ನಮ್ಮ ಮಿತ್ರರು ಒಳ್ಳೆಯಸಲಹೆ ಕೊಟ್ಟಿದ್ದಾರೆ. ಈ ಸಣ್ಣ ನೀರಾವರಿ ಇಲಾಖೆಯಲ್ಲಿ 423 ಕೆರೆಗಳು ಇವೆ. ಆ ಕೆರೆಗಳ ಪರಿಸ್ಥಿತಿ ಬಗ್ಗೆ ನಾನು ಮಾತನಾಡುತ್ತೇನೆ. ಈ ಬಗ್ಗೆ ಮಾನ್ಯ ಸದಸ್ಯರು ಸಹ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ತೂಬು ಸರಿಯಾಗಿಲ್ಲ, ಅವು ರಿಪೇರಿ ಆಗಿಲ್ಲ ಕೆರೆಗಳಲ್ಲಿ ಹೂಳು ತೆಗಿಸಿಲ್ಲ. ವ್ಯಾಲಿ ಮತ್ತು ಕೆರೆ ಅಂಗಳ ಎನ್‌ಕ್ರೋಚ್ ಮಾಡಿಕೊಂಡಿದ್ದಾರೆ. ಇತ್ಯಾದಿ ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಏರ್ಪಾಡು ಮಾಡುತ್ತೇವೆ. ಇನ್ನು ತೂಬು ರಿಪೇರಿ ಮತ್ತು ಎಲ್ಲಾ ಕೆರೆಗಳ ರಿಪೇರಿಯು ಸಹ ಮಾಡಲು 50 ಲಕ್ಷ ರೂಪಾಯಿಗಳ ಹಣ ಇಟ್ಟಿದ್ದೇವೆ. ಖಂಡಿತವಾಗಿಯೂ ಸಹ ನಾವು ಈ ಕೆಲಸ ಮಾಡಬೇಕಾಗಿದೆ. ಮಾನ್ಯ ಸದಸ್ಯರಿಗೆ ಗೊತ್ತಿದೆ ಕೆರೆಗಳಲ್ಲಿ ನೀರು ನಿಲ್ಲುವುದಿಲ್ಲ. ಅಂಗಳದಲ್ಲಿ ನೀರು ನಿಲ್ಲುವುದಿಲ್ಲ. ನೀರು ಸೋರಿ ಹೋಗುತ್ತಿದೆ. ಏಕೆಂದರೆ ಕೆರೆಯ ತೂಬಿನಲ್ಲಿ ನೀರು ಕೆಳಕ್ಕೆ ಹೋಗುತ್ತಿವೆ. ಇದನ್ನು ವಿಚಾರ ಮಾಡಬೇಕು. ಇದಕ್ಕೆ ನಾವು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಸುಮಾರು 423 ಕೆರೆಗಳು ನಮ್ಮಲ್ಲಿವೆ. ಜಿಲ್ಲಾಪರಿಷತ್ತಿನಲ್ಲಿ ಸುಮಾರು 33 ಸಾವಿರ ಕೆರೆಗಳು ಇವೆ. ಆ ಕೆಲಸವನ್ನು ನಾವೇ ಕೈಗೆತ್ತಿಕೊಳ್ಳುವ ಸಂದರ್ಭ ಇದೆ. ಆದರೆ ಜಿಲ್ಲಾಪರಿಷತ್ತಿನಿಂದ ಇನ್ನು ನಮಗೆ ಬಂದರೆ ಅದನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಭರವಸೆ ನಾನು ಕೊಡುತ್ತೇನೆ. ಇನ್ನು ಕೆರೆಗಳಲ್ಲಿ ಹೂಳು ಎತ್ತುವ ಕಾರ್ಯಕ್ರಮವನ್ನು ಸಹ ನಾವು ತೆಗೆದುಕೊಂಡಿದ್ದೇವೆ. ಈ ವರ್ಷ 3 ಕೋಟಿ ರೂಪಾಯಿಗಳ ಹಣವನ್ನು ಇದಕ್ಕಾಗಿ ತೆಗೆದಿರಿಸಿದ್ದೇವೆ. ತೆಗೆದಿರಿಸಿದ ಹಣ ಖರ್ಚು ಮಾಡುತ್ತೇವೆ. ಮೈನರ್ ಇರಿಗೇಶನ್ ಡಿಪಾರ್ಟ್‌ಮೆಂಟ್‌ನಲ್ಲಿ. ಬಹುತೇಕವಾಗಿ ಹಿಂದೆ ತೆಗೆದಿರಿಸಿದ್ದ ಹಣ ಖರ್ಚಾಗುತ್ತಿರಲಿಲ್ಲ. ಆದರೆ ಈ ಸಾರಿ ನಾವು ಜೆ.ಸಿ.ಬಿ.ಮಿಷನ್ 4 ಕೊಂಡುಕೊಂಡು [illegible]

ನಾಲ್ಕು ಡಿವಿಜನ್ಸ್‌ಗೆ ಕೊಟ್ಟು ಯಾವ ರೀತಿಯಲ್ಲಿ ಕೆಲಸ ನಡೆಯುತ್ತಿದೆ ಎನ್ನುವ ಪ್ರಸ್ತಾವನೆ ಸಹ ಕಳುಹಿಸಿದ್ದೇವೆ. ಬಹುತೇಕವಾಗಿ ಇನ್ನು ಎರಡು ತಿಂಗಳಲ್ಲಿ ಈ ಕೆಲಸ ಪ್ರಾರಂಭ ಆಗಬಹುದು. ಈ ಮಾತನ್ನು ನಾನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ. ಇನ್ನು ಕೆರೆಗಳ ವ್ಯಾಲಿ ಮತ್ತು ಎನ್‌ಕ್ರೋಚ್‌ಮೆಂಟ್ಸ್ ಬಗ್ಗೆಯೂ ಸಹ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ನಾವು ಹೊಸ ಕೆರೆಗಳನ್ನು ತೆಗೆದುಕೊಳ್ಳುವುದಕ್ಕೆ ಸಹ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಈ ವರ್ಷ ಸುಮಾರು 155 ಲಕ್ಷ ರೂಪಾಯಿಗಳು $\frac{1}{3}$ ಹಣ ಹೊಸ ಕೆರೆಗಳ ನಿರ್ಮಾಣಕ್ಕೆ ಖರ್ಚು ಮಾಡತಕ್ಕಂಥ ವ್ಯವಸ್ಥೆ ಇಟ್ಟುಕೊಂಡಿದ್ದೇವೆ. ಇದಕ್ಕಾಗಿ ಸಾಕಷ್ಟು ಹಣ ಇಟ್ಟಿದ್ದೇವೆ.

ಇನ್ನು ಅಣೆಕಟ್ಟು ಮತ್ತು ಫಿಕ್ಸ ಬಂದಾರ್ಸ್ ಚಾನಲ್ಸ್ ಹೂಳು ಎತ್ತುವುದಕ್ಕೆ ಜಾಸ್ತಿ ದುಡ್ಡು ಇಟ್ಟಿಲ್ಲ ಆದರೂ ಸಹ ಅಡಿಶನಲ್ ಗ್ರ್ಯಾಂಟ್ ತೆಗೆದುಕೊಂಡು ಕೃಷ್ಣಾ ಜಲಾಶಯ ಮತ್ತು ಕಾವೇರಿ ಜಲಾಶಯದಲ್ಲಿ ಬಂಕಾರ್ಸ್ ಹಾಕುವುದರಿಂದ ನೀರು ಸಂಗ್ರಹವಾಗುತ್ತದೆ. ಈ ಕಾರ್ಯಕ್ರಮ ಬೇಕೆಂದು ಜನ ಕೇಳುತ್ತಿದ್ದಾರೆ. ಈ ಕೆಲಸ ಮಾಡಬೇಕೆನ್ನುವ ಅಭಿಪ್ರಾಯವನ್ನು ನಾವು ಹೊಂದಿದ್ದೇವೆ. ನೀರು ತಡೆದು ನಿಲ್ಲಿಸುವುದರಿಂದ ಯಾವಾಗ ಬೇಕಾದರೂ ಉಪಯೋಗ ಮಾಡಬಹುದು. ಕಡಿಮೆ ಖರ್ಚಿನಲ್ಲಿ ಮಾಡಬಹುದು. . ಆಮೇಲೆ ಹಳೆಯ ಲಿಫ್ಟ್ ಇರಿಗೇಷನ್ ಮಾಡಿ 20-30 ವರ್ಷಗಳಾಗಿದೆ ಅದರ ಸಾಮರ್ಥ್ಯ ಕಡಿಮೆ ಆಗಿದೆ. ಆದ್ದರಿಂದ ಇದನ್ನು ಹಂತ ಹಂತವಾಗಿ ರೀಪ್ಲೇಸ್ ಮಾಡುವ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಇದಕ್ಕೆ 60 ಲಕ್ಷ ರೂಪಾಯಿಗಳು ಇಟ್ಟಿದ್ದೇವೆ.

ಇನ್ನು ಲಿಫ್ಟ್ ಇರಿಗೇಷನ್ ಬಗ್ಗೆ ನಮ್ಮ ಮಿತ್ರರು ಅನೇಕರು ಬಹಳ ಖಾರವಾಗಿ ಮಾತನಾಡಿದ್ದಾರೆ. ತಮಗೆಲ್ಲಾ ಗೊತ್ತಿದೆ ಸ್ವಾಮಿ. 1986ರಲ್ಲಿ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಪ್ರಾರಂಭವಾಯಿತು. ಅಲ್ಲಿಂದ 89ರ ತನಕ ಅದು ಏನೂ ಕೆಲಸ ಮಾಡಲಿಲ್ಲ. ಅದು ಏಕೆ ಕೆಲಸ ಮಾಡಲಿಲ್ಲವೆಂದು ತಮಗೆ ಗೊತ್ತು. ಮಾನ್ಯ ಸಿಂಧ್ಯ ಮಿತ್ರರಿಗೆ ಗೊತ್ತಿರಬಹುದು. ಆಮೇಲೆ 90ರಿಂದ ನಾವು ಕೆಲಸ ಚಾಲು ಮಾಡಿದ್ದೇವೆ. ಈಗ ಸುಮಾರು 3 ಕೋಟಿ ರೂಪಾಯಿಗಳಿಗಿಂಥಾ ಹೆಚ್ಚು ಹಣ ಎಸ್ಟಾಬ್ಲಿಷ್‌ಮೆಂಟ್‌ಗೆ ವ್ಯಯವಾಗಿದೆ. ಅದೂ ನನಗೆ ಗೊತ್ತಿದೆ. ನಾನು ಈಗ ಆ ಲಿಫ್ಟ್ ಇರಿಗೇಷನ್ ಕ್ರಮವನ್ನು ಟ್ರ್ಯಾಕ್‌ಗೆ ತಂದಿಟ್ಟಾಗಿದೆ. ಈಗ ಸ್ಟಾರ್ಟ್ ಮಾಡತಕ್ಕಂಥ ಕಾರ್ಯಕ್ರಮ ಮಾತ್ರ ಉಳಿದಿದೆ. ಆದರೂ ಸಹಿತ ನಾವು ಬಹಳ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಲಿಫ್ಟ್ ಇರಿಗೇಷನ್‌ನಲ್ಲಿ ಇವತ್ತಿನ ದಿವಸ ಕಾವೇರಿ ಬೇಸಿನ್‌ನಲ್ಲಿ 17 on going works ಇದೆ. ಕೃಷ್ಣಾದಲ್ಲಿ 4 ಇದೆ. ಹಾಗೂ ಕಾವೇರಿ ಬೇಸಿನ್‌ನಲ್ಲಿ 31 ಸ್ಕೀಮ್‌ಗಳು ಮತ್ತು ಕೃಷ್ಣಾ ಬೇಸಿನ್‌ನಲ್ಲಿ 12 ಸ್ಕೀಮುಗಳು ಪೂರ್ಣಗೊಂಡಿದ್ದು ಆಗಲೇ ನಬಾರ್ಡ್‌ಗೆ ಕೊಟ್ಟಿದ್ದೇವೆ. ನಬಾರ್ಡ್‌ನಲ್ಲಿರತಕ್ಕಂಥ bottlenecks ಅದನ್ನು ಬಾಂಬೆಗೆ ಹೋಗಿ ನಿವಾರಣೆ ಮಾಡಿದ್ದೇವೆ. PIR (Preliminary Investigation Report). ಬಗ್ಗೆ ಕಾವೇರಿ ಬೇಸಿನ್‌ನಲ್ಲಿ 139 ಗುರುತಿಸಿದ್ದೇವೆ, ಕೃಷ್ಣಾದಲ್ಲಿ 21 ಗುರುತಿಸಿದ್ದೇವೆ. ಮತ್ತು ಅಂಡರ್ ಇನ್‌ವೆಸ್ಟಿಗೇಷನ್ನಲ್ಲಿರತಕ್ಕಂತವು ಕಾವೇರಿಯಲ್ಲಿ 165 ಇವೆ. ಕೃಷ್ಣಾದಲ್ಲಿ 237 ಇವೆ. ಕೆಲವರು ಹೇಳಿದ ಹಾಗೆ ಲಿಫ್ಟ್ ಇರಿಗೇಷನ್‌ನ್ನು ಮುಚ್ಚುವ ಒಂದು ಅಭಿಪ್ರಾಯ ನಮಗಿಲ್ಲ. ಏಕೆಂದರೆ ಈಗಾಗಲೇ ಸಾಕಷ್ಟು ಕಾರ್ಯಕ್ರಮ ತೆಗೆದುಕೊಂಡಾಗಿದೆ. ಇನ್ನು ಸ್ವಲ್ಪ ದಿವಸದಲ್ಲಿ ಒಂದು ಎರಡು ತಿಂಗಳಲ್ಲಿ ಅನೇಕ ಪ್ರಾಜೆಕ್ಟ್‌ಗಳನ್ನು ಮುಗಿಸುತ್ತಿದ್ದೇವೆ. ನಬಾರ್ಡ್‌ನವರ ನಾರಮ್ಸ್ ಪ್ರಕಾರ ಎಷ್ಟು ಬೇಕಾದರೂ ಹಣ

ಕೊಡಲು ಒಪ್ಪಿಕೊಂಡಿದ್ದಾರೆ. ಅವರ ನಾರಮ್ಸ್ ಪ್ರಕಾರ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಈ ಸದನದಲ್ಲಿ ಹೇಳುತ್ತೇನೆ. ನಾನು ಉತ್ತರ ಕರ್ನಾಟಕಕ್ಕೆ ಹೋಗಿದ್ದಾಗ ಲಿಫ್ಟ್ ಇರಿಗೇಷನ್‌ಗೆ ಕೋ-ಆಪರೇಟಿವ್ ಸಿಸ್ಟಮ್‌ನಲ್ಲಿ ತಾವುಗಳು ಸಬ್ಸಿಡಿ ಕೊಡುತ್ತೀರಾ ಎನ್ನುವ ಮಾತು ಬಂತು. ಅದನ್ನೂ ಸಹಿತಾ ನಾವು ತೀವ್ರವಾಗಿ ಪರಿಶೀಲಿಸತಕ್ಕಂಥ ಕಾರ್ಯಕ್ರಮ ಹಾಕಿಕೊಂಡಿದ್ದೇವೆಂದು ಹೇಳಬಯಸುತ್ತೇನೆ. ಮತ್ತೆ ಇನ್ನೊಬ್ಬರು ಸದಸ್ಯರು ಸಲಹೆ ಕೊಟ್ಟಿದ್ದಾರೆ, ಖಾಲಿ ಕೆರೆಗೆ, ರೇನ್ ಪ್ಯಾಟ್ರನ್ ಚೇಂಜ್ ಆಗಿರತಕ್ಕಂಥ ಈ ಕಾಲದಲ್ಲಿ ಈ ವರ್ಷ ಮಳೆ ಬಿದ್ದಿವೆ. ಎಲ್ಲಾ ಕೆರೆ ತುಂಬಿವೆ. ಆದರೆ ವರ್ಷೇ ವರ್ಷೇ ಎಲ್ಲಾ ಕೆರೆಗಳು ತುಂಬದೇ ಇರತಕ್ಕಂಥ ಪರಿಸ್ಥಿತಿ ಬಂದಿದೆ. ಈಗ ಲಿಫ್ಟ್ ಮಾಡಿ ಈ ಕೆರೆ ತುಂಬಿಸತಕ್ಕಂಥ ಅವಕಾಶ ಮಾಡಿಕೊಡುತ್ತೀರಾ ಎನ್ನುವುದಕ್ಕೆ ನಬಾರ್ಡ್‌ನಿಂದ ನಕರಾತ್ಮಕವಾದಂಥ ಉತ್ತರ ಬಂದಿದೆ.

ಆದರೂ ಸಹಿತ ನಾವು ಪ್ರಯತ್ನ ಮಾಡುತ್ತಿದ್ದೇವೆ. ಏಕೆಂದರೆ ಲಿಫ್ಟ್ ಇರಿಗೇಷನ್ ನೀರು ಹಣದ ನೀರು, ಸುಮ್ಮನೆ ಸ್ಟೋರೇಜ್ ಮಾಡತಕ್ಕಂಥಾದ್ದು ಬೇಡ ಎಂದು technical opinion ಇದೆ. ಆ ಕಾರಣ ನಬಾರ್ಡನಲ್ಲಿ ವ್ಯವಹಾರ ಮಾಡುತ್ತಿದ್ದೇವೆಂದು ಹೇಳಬಯಸುತ್ತೇನೆ. ಏನು ನಮ್ಮ ಮಿತ್ರರು ಹೇಳಿದರು, ಫೀಸಿಬಿಲಿಟಿ 3500 ರೂ ಅದು ಸಾಲದು. ಬಹಳ ಹಿಂದೆ ಅದು ನಿಷ್ಕರ್ಷೆ ಆದಂಥಾದ್ದು ಈಗ ಹೆಚ್ಚು ಮಾಡಬೇಕೆಂದು. ಅದರ ಬಗ್ಗೆ ಸಹಿತ ನಾವು ನಬಾರ್ಡ್‌ನಲ್ಲಿ ವ್ಯವಹಾರ ಮಾಡುತ್ತಿದ್ದೇವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ನಮ್ಮ ಕಡಲಕೊರೆತ, ಇಲ್ಲಿಗೆ ನನ್ನನ್ನು ಕರೆದುಕೊಂಡು ಹೋಗಿದ್ದಿರಿ, ಸುಮಾರು ಒಂದು ದಿವಸದಲ್ಲಿ ಇಡೀ ಉತ್ತರ ಕರ್ನಾಟಕ ಜಿಲ್ಲೆ ತಿರುಗಿ ಬಂದಿದ್ದೇನೆ. ನಿಜವಾಗಲೂ ಸಹಿತ ಬಹಳ ಭಯಂಕರವಾದಂಥ ಒಂದು ದೃಷ್ಯ. ಬಹುತೇಕ ಸದಸ್ಯರು ಅದನ್ನು ನೋಡಿದರೆ ಗೊತ್ತಾಗುತ್ತದೆ. ಅದಕ್ಕೂ ಸಹಿತಾ ಹೆಚ್ಚಾಗಿ ದುಡ್ಡು ಇಟ್ಟಿದ್ದೇವೆ. ಎರಡು ಕೋಟಿ ಇಟ್ಟಿದ್ದೇವೆ. ಎರಡು ಕೋಟಿಯಿಂದ ಏನಾಗುವುದಿಲ್ಲವೆಂದು ಗೊತ್ತಿದೆ. ಕೇರಳದಲ್ಲಿ ಕಡಲ ತೀರದಲ್ಲಿ ಕೇಂದ್ರ ಸರ್ಕಾರದ ಸಹಾಯದಿಂದ cement slab ಹಾಕಿರತಕ್ಕಂಥ ಒಂದು ಕಾರ್ಯಕ್ರಮ ಇದೆ. ಅದೇ ರೀತಿಯಾಗಿ ಇಲ್ಲೂ ಮಾಡಲು 40 ಕೋಟಿ ರೂಪಾಯಿಗಳ ಮತ್ತೆ 15 ಕೋಟಿ ರೂಪಾಯಿಗಳ ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಅದರ ಬಗ್ಗೆ ಸಹಿತ ಕೇಂದ್ರ ಸರ್ಕಾರ ಒಂದು ಸಹಾನುಭೂತಿಯಿಂದ ಪರಿಶೀಲಿನೆ ಮಾಡತಕ್ಕಂಥ ಕಾರ್ಯಕ್ರಮ ಇಟ್ಟುಕೊಂಡಿದ್ದೇವೆ.

ಇದರ ಬಗ್ಗೆ ನಾನು ವಿ.ಸಿ. ಶುಕ್ಲಾರವರ ಜೊತೆಯಲ್ಲಿ ಸಹಿತಾ ಮಾತನಾಡಿದ್ದೇನೆ. ಅವರು, ಇದನ್ನು ಪರಿಶೀಲಿಸಿ ಆದಷ್ಟು ಬೇಗ ಮಾಡಿಕೊಡುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಮತ್ತು ತಾವು ಒಂದು ಪದವನ್ನು ಚೆನ್ನಾಗಿ ಹೇಳಿದ್ದೀರಿ, ನಿಮಗೆ ತಾಕತ್ ಇದ್ದರೆ ಮಾಡಿ ಎಂದು. ನೀವು ಬೇರೆ ಅಭಿಪ್ರಾಯದಲ್ಲಿ ಇದನ್ನು ಹೇಳಲಿಲ್ಲವೆಂದು ಗೊತ್ತು. ನಿಜವಾಗಲೂ ಸಹಿತ ನಮಗೆ ಮಾಡತಕ್ಕಂಥ ಮನಸ್ಸು ಇದೆ. ಖಂಡಿತಾ ಮಾಡಿಕೊಡುತ್ತೇವೆ. ನಾನು ಇವತ್ತು ಹೋಗಿ ಬಡ ಜನರ, ಹಿಂದುಳಿದ ವರ್ಗದವರ ಒಂದು ಕಠಿಣ ಸ್ಥಿತಿಯನ್ನು ನೋಡಿಕೊಂಡು ಬಂದಿದ್ದೇನೆ. ಆದ್ದರಿಂದ ಇದರ ಬಗ್ಗೆ ನನಗೆ ಮುತುವರ್ಜಿ ಇದೆ. ಖಂಡಿತವಾಗಿ ಮತ್ತೊಮ್ಮೆ ದೆಹಲಿಗೆ ಹೋಗಿ ಇದರ ಬಗ್ಗೆ ಪ್ರಸ್ತಾವನೆ ಮಾಡಿ ಆದಷ್ಟು ಹಣವನ್ನು ಬಿಡುಗಡೆ ಮಾಡುವುದಕ್ಕೆ ಏರ್ಪಾಡು ಮಾಡಿಕೊಡುತ್ತೇನೆಂದು ಈ ಸಮಯದಲ್ಲಿ ಹೇಳಬಯಸುತ್ತೇನೆ ಮತ್ತು ಸದಸ್ಯರಾದ ಹಾಗೂ ನನ್ನ ಮಿತ್ರರಾದ ಚಂದ್ರೇಗೌಡರು ಅನೇಕ ಕಾರ್ಯಕ್ರಮಗಳನ್ನು ಹೇಳಿದ್ದಾರೆ. ಅವರು ಲಿಫ್ಟ್ ಇರಿಗೇಷನ್ ಬಗೆ ಹೇಳಿದಾರೆ. ಫೀಸಿಬಿಲಿಟಿ ಬಗೆ

ವರ್ಕ್ ಹೌಟ್ ನಡೆಯುತ್ತಿದೆ. Preliminary Investigation Report ನಡೆಯುತ್ತಿದೆ. ಅದರಲ್ಲಿ ಫೀಸಿಬಿಲಿಟಿ ಬಂದರೆ ಖಂಡಿತಾ ಅದನ್ನು ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಸದಸ್ಯರಾದ ಮನೋಹರ್ ತಹಶೀಲ್ದಾರ್‌ರವರು ಅವರ ಕಾನ್ಸಿಟ್ಯೂಯೆನ್ಸಿಯಲ್ಲಿ ಲಿಫ್ಟ್ ಇರಿಗೇಷನ್ ಅನ್ನು ಮೈನರ್ ಇರಿಗೇಷನ್ ಮೂಲಕ ಮಾಡಬೇಕೆಂದು ಹೇಳಿದ್ದಾರೆ. ಅವನ್ನು ಸಹಿತಾ ಆದಷ್ಟು ಬೇಗನೆ ಮಾಡಿಕೊಡತಕ್ಕಂಥ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ. ಆಮೇಲೆ ಶ್ರೀಮತಿ ಮೋಟಮ್ಮನವರು ನಮ್ಮ ಜಿಲ್ಲೆಯವರು. ಅವರು ಹೇಳಿದರು ಮಂತ್ರಿಗಳಿಗೆ ಗೊತ್ತಿಲ್ಲವೆಂದು ನಾನು ಹೇಳಿದ್ದೇನೆ, ಗೊತ್ತಿಲ್ಲವೆಂದು ಹೇಳಿಲ್ಲ, ಅವರು ತಪ್ಪು ತಿಳಿದುಕೊಂಡಿದ್ದಾರೆ. ನಮ್ಮ ವ್ಯಾಪ್ತಿಗೆ ಬರತಕ್ಕಂಥ ಬಹುತೇಕ ಮತ್ತು ಜಿಲ್ಲಾಪರಿಷತ್ತಿಗೆ ಬರತಕ್ಕಂಥ ಕೆರೆಗಳು ಇವೆ. ನನ್ನ ವ್ಯಾಪ್ತಿಗೆ ಬರತಕ್ಕಂಥ ಕೆರೆಗಳೇನಿವೆ ಅವುಗಳನ್ನು ಖಂಡಿತವಾಗಿ ನಾನು ಮಾಡಿಸಿಕೊಡುತ್ತೇನೆಂದು ಹೇಳಿದ್ದೇನೆ.

ಅದರ ಬಗ್ಗೆ ಈಗಾಗಲೇ ಆದೇಶ ಕಳುಹಿಸಿಕೊಟ್ಟಿದ್ದೇವೆ. ಆಮೇಲೆ ಮಾನ್ಯ ಕೌಜಲಗಿಯವರು ಬೂದನೂರು ಟ್ಯಾಂಕ್ ಬಗ್ಗೆ ಮಾತನಾಡಿದ್ದಾರೆ. ಆ ಸ್ಕೈಟ್ ಬದಲಾಯಿಸಿ ಎಸ್ಟಿಮೇಟ್ ಆಗುತ್ತಿದೆ. ಅದನ್ನೂ ಸಹಿತ ಕೈಗೆತ್ತಿಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳಿ ಇನ್ನು ನಮ್ಮ ಕಾಳಮರೀಗೌಡರು ಹೇಳಿದ್ದಾರೆ. ಒಂದು ಕೆರೆ ಅವರಿಗೆ ಮಂಜೂರಾಗಿದೆ. ಅದನ್ನು ಸಹಿತಾ ತಕ್ಷಣ ತೆಗೆದುಕೊಳ್ಳುತ್ತೇವೆಂದು ಹೇಳಿ, ಈ ಎಲ್ಲಾ ಕಾರ್ಯಕ್ರಮಗಳನ್ನು ಸಹಿತ ಮಾಡುವುದಕ್ಕೆ ನಿಮ್ಮ ಸಹಕಾರ, ಬೆಂಬಲ ಬೇಕೆಂಬ ಮಾತನ್ನು ಹೇಳಿ 1991-92ನೇ ಸಾಲಿನ ಆಯವ್ಯಯದಲ್ಲಿ ಮಂಡಿಸಿರತಕ್ಕಂಥ ಸಣ್ಣ ನೀರಾವರಿ ಅಂದಾಜು ವೆಚ್ಚವನ್ನು ತಾವು ಒಪ್ಪಿಗೆ ಕೊಡಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

6.15 ಪಿ.ಎಂ.

ಶ್ರೀ ಆರ್. ಗೋಪೀನಾಥ ಆರ್ ಸಾಂಡ್ರ : ಉತ್ತರ ಕರ್ನಾಟಕದಲ್ಲಿ ಲಿಫ್ಟ್ ಇರಿಗೇಷನ್ ಮಾಡುತ್ತೇವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸಣ್ಣ ನೀರಾವರಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಮಾನ್ಯ ಮಂತ್ರಿಗಳ ಗಮನಕ್ಕೆ ಈಗಾಗಲೇ ಬಂದಿರಬಹುದು. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ವಿಶ್ವ ಬ್ಯಾಂಕಿನಿಂದ ಸಾಲವನ್ನು ಪಡೆದು ಸುಮಾರು 6-7 ಕೆರೆಗಳ ಕೆಲಸ ಆಗುತ್ತಾ ಇದೆ. ಈ ಕೆಲಸಗಳು ಒಂದೆರಡು ವರ್ಷದಿಂದ ನಿಂತು ಹೋಗಿದೆ. ತಾವು ಬಂದು ನೋಡಿಕೊಂಡು ಹೋಗಿದ್ದೀರಾ ಎಂದು ತಾವು ಬಂದ ನಂತರ ತಿಳಿದು ಬಂತು. ಒಂದು ಕೆರೆ ಕಟ್ಟುತ್ತಾ ಇದ್ದಾಗಲೇ ಸಂಪೂರ್ಣವಾಗಿ ಒಡೆದುಕೊಂಡು ಹೊರಟು ಹೋಗಿದೆ. ಸಂಪೂರ್ಣವಾಗಿ ಒಡೆದು ಕೊಂಡು ಹೋಗಿದೆ. ಮತ್ತೆ ಅದೇನೋ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್‌ಗೋ ಎಕ್ಸಿಕ್ಯೂಟೀವ್ ಇಂಜಿನಿಯರ್‌ಗೋ ತಾವು ಸಸ್ಪೆನ್‌ಷನ್‌ನಲ್ಲ ಇಟ್ಟಿದ್ದೀರಿ. ಈಗ ಈ ಕೆರೆ ಕೆಲಸ ಮತ್ತೆ ಪ್ರಾರಂಭ ಆಗಬೇಕು ಇದು ಒಂದು. ಎರಡನೆಯದು ನನ್ನ ಪ್ರಶ್ನೆ ಅಂದರೆ ಈಗ ಬೈರಮಂಗಲ ಅಚ್ಚುಕಟ್ಟು ಮತ್ತು ಇನ್ನೂ ಒಂದು ದೊಡ್ಡ ಕೆರೆ ಇದೆ. ನನ್ನ ತಾಲ್ಲೂಕಿನಲ್ಲಿ ಈ ಎರಡೂ ಕೆರೆಗಳ ಕೆಳಗಡೆ ಇರತಕ್ಕ ತೂಬುಗಳ ರಿಪೇರಿ ಕೆಲಸ, ಕಾಲುವೆ ರಿಪೇರಿ ಸುಮಾರು ವರ್ಷಗಳಿಂದ ಆಗುತ್ತಾ ಇಲ್ಲ, ನಮ್ಮ ತಾಲ್ಲೂಕಿನ ಶಾಸಕರು, ನಮ್ಮ ಜಿಲ್ಲಾಯವರು ಬಂದು ತಮಗೆ ಮನವಿ ಕೊಡುತ್ತಿದ್ದೇವೆ. ರಾಮನಗರ, ಚನ್ನಪಟ್ಟಣ, ಕನಕಪುರ, ಸಾತನೂರು ನಾವೆಲ್ಲೂ ಕ್ಷೇತ್ರದವರು ಕೇಳಿಕೊಳ್ಳುತ್ತಿರುವುದು ಏನೆಂದರೆ ಈಗ ಇಷ್ಟೊಂದು ಮಳೆ ಬಿದ್ದು ಅಲ್ಲಿ ನೀರು ಹರಿದುಹೋಗುತ್ತಿದೆ. ಹರಿದು

ಹೋಗಿ ಬೈರಮಂಗಲ ಕೆರೆ ತುಂಬಿದರೂ ರೈತರ ನೀರಾವರಿ ಕೆಲಸ, ರೈತರು ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ನಾವು ಅಧಿಕಾರಿಗಳ ಹತ್ತಿರ ಹೋಗುತ್ತೇವೆ. ಹೋದರೆ, ಅವರ ಹೆಸರುಗಳನ್ನು ಹೇಳುವುದಕ್ಕೆ ಆಗುವುದಿಲ್ಲ, ಅವರು ಹೇಳುತ್ತಾರೆ. ನಮಗೆ ದುಡ್ಡು ಇಲ್ಲ ಏನು ಮಾಡುವುದು ಎಂದು ನೀವು ಹೇಳುತ್ತೀರಿ. ಎಷ್ಟು ದುಡ್ಡು ಬೇಕಾದರೂ ಕೊಡುತ್ತೇವೆ ಎಂದು. ನಾನು ನಿಮ್ಮನ್ನು ಕೇಳುವುದು ಇಷ್ಟೇ. ಈ ಒಂದು ಒಡೆದು ಹೋಗಿರತಕ್ಕ ಕೆರೆಯ ಕೆಲಸ ಮತ್ತೆ ಪ್ರಾರಂಭ ಮಾಡಬೇಕು. ಎರಡನೆಯದು ಬೈರಮಂಗಲ ಕೆರೆಯ ತೂಂಬು ರಿಪೇರಿ ಮಾಡಿದರೆ ಅಚ್ಚುಕಟ್ಟಿನ ರೈತರಿಗೆ ಅನುಕೂಲ ಆಗುವ ರೀತಿಯಲ್ಲಿ ಐದು ಲಕ್ಷವೋ ಅಥವಾ ಹತ್ತು ಲಕ್ಷವೋ ಈ ವರ್ಷ ಹಣ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಪ್ರಸನ್ನ : ವಿರೋಧ ಪಕ್ಷದ ಉಪನಾಯಕರು ಬಹಳ ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಅವರ ಕಾನ್ಸ್‌ಸ್ಟಿಟುಯೆನ್ಸಿಯಲ್ಲಿ ಏನು ಆಯಿತು ಎನ್ನುವ ವಿಚಾರ ಮೊನ್ನೆ ಪೇಪರ್‌ನಲ್ಲಿ ಬಂತು. ಇನ್ನು ಕೆರೆ ಉಪಯೋಗಕ್ಕೆ ಬಂದಿಲ್ಲ. ಅಂತಾದ್ದು ಒಡೆದು ಹೋದಾಗ ನಾನು ಹೋಗಿ ಸಂಬಂಧಪಟ್ಟವರನ್ನು ತಪ್ಪೋ ರೈಟೋ ಸಸ್ಪೆಂಡ್ ಮಾಡಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ವಿಚಾರಣೆ ಮಾಡಿ

ಶ್ರೀ ಕೆ.ಎನ್. ಮಲ್ಲಿಕಾರ್ಜುನ ಪ್ರಸನ್ನ : ವಿಚಾರಣೆ ಮಾಡುತ್ತೇನೆ. ಇನ್ನೂ ಒಂದು ಅಭಿಪ್ರಾಯ ಉಳ್ಳವನಾಗಿದ್ದೇನೆ. ಕೆರೆ ಪೂರ್ತಿ ಮಾಡಿದರೆ ಸಾಲದು. ಕೆರೆಗೆ ನೀರನ್ನು ಬಿಟ್ಟು, ನೀರನ್ನು ಉಳಿಸತಕ್ಕ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆನ್ನುವುದರಲ್ಲಿ ನನಗೆ ಅಪಾರವಾದ ನಂಬಿಕೆ ಇದೆ. ಖಂಡಿತವಾಗಿ ಮಾಡಬೇಕು. ಇವೆಲ್ಲ ಛಾನಲ್‌ಗಳು ವರ್ಲ್ಡ್ ಬ್ಯಾಂಕಿನಿಂದ ಆಗಿರತಕ್ಕವು. ಈ ಸಾರಿ ನಾವು 380 ಲಕ್ಷ ರೂಪಾಯಿ ಇಟ್ಟಿದ್ದೇವೆ. ಈಗ ಏನು ಆಗಿದೆ? ವರ್ಲ್ಡ್ ಬ್ಯಾಂಕಿನಿಂದ ದುಡ್ಡು ಬರುವುದು ನಿಂತು ಹೋಗಿದೆ. ನಮ್ಮದುರಿನಲ್ಲಿ ಕೆಲಸ ಪ್ರಾರಂಭ ಮಾಡಬೇಕಾಗಿದೆ. ಇಂತಹ ಪರಿಸ್ಥಿತಿ ಬಂದಿದೆ. ಗ್ರಾಂಟ್ ಹೋದ ವರ್ಷ ಇರಲಿಲ್ಲ. ಆದರೆ ಈ ವರ್ಷ ನಾವು 380.10 ಲಕ್ಷ ರೂಪಾಯಿ ಇಟ್ಟಿದ್ದೇವೆ. ಖಂಡಿತವಾಗಿ ನಾನು ಕೆರೆ ಕೆಲಸ ಮಾಡಿಸಿಕೊಡುತ್ತೇನೆ. ನಿಜವಾಗಿ ಸಹ ರೈತರಿಗೆ ಬರೇ ಕೆರೆಯಲ್ಲಿ ನೀರು ಇದ್ದರೆ ಸಾಲದು. ರೈತರ ಜಮೀನಿಗೆ ಹೋಗಿ ಉಳುವೆ ಮಾಡತಕ್ಕ ಕಾರ್ಯಕ್ರಮ ಆಗಬೇಕು ಎಂಬ ಅಭಿಪ್ರಾಯ ಉಳ್ಳವನಾಗಿದ್ದೇನೆ.

ಶ್ರೀ ಕೆ.ಹೆಚ್. ಹನುಮೇಗೌಡ : ಕಾವೇರಿ ವಾಟರ್ ಬೇಸಿನ್‌ನಲ್ಲಿ ಸುಮಾರು ಒಂದೂವರೆ ವರ್ಷದಿಂದ ಸುಮಾರು 30 ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್ ರೆಡಿ ಮಾಡಿ ಇಟ್ಟುಕೊಂಡಿದ್ದಾರೆ. ನಾನು ಹೋಗಿ ಮೊನ್ನೆಯ ದಿವಸ ಆಫೀಸ್‌ನಲ್ಲಿ ವಿಚಾರಿಸಿದೆ. ಗ್ರಾಂಟ್ ಕೊಟ್ಟಿಲ್ಲ ಒಂದು ಕೆಲಸ ಮಾಡುವುದಕ್ಕೆ ಆಗಿಲ್ಲ ಎಂದು ಹೇಳಿದರು. ಆಫೀಸ್ ಸ್ಟ್ಯಾಫ್‌ನ ಮೇಂಟೇನೆನ್ಸ್, ಸಂಬಳ ವಗೈರೆಯ ಖರ್ಚಿಗಾಗಿ ಎರಡು ಕೋಟಿ ರೂಪಾಯಿ ಕೊಟ್ಟಿದ್ದಾರೆ. ಎರಡು ಕೋಟಿ ರೂಪಾಯಿ ಅದಕ್ಕೇ ಖರ್ಚು ಆಗಿದೆ. ಮುವತ್ತು ಪ್ರಾಜೆಕ್ಟ್‌ಗೆ ಒಂದು ಒಂದೂವರೆ ವರ್ಷದಿಂದ ದುಡ್ಡು ಇಲ್ಲದೆ ಗ್ರಾಂಟ್ ಕೊಡದೆ ನಿಂತು ಹೋಗಿವೆ. ಈ ಮೂವತ್ತು ಪ್ರಾಜೆಕ್ಟ್‌ಗಳನ್ನು ಯಾವಾಗ ಪ್ರಾರಂಭ ಮಾಡಿ ಯಾವಾಗ ಮುಗಿಸುತ್ತೀರಿ ಎಂದು ದಯಮಾಡಿ

ತಿಳಿಸಬೇಕು

ಶ್ರೀ ಮಲ್ಲಿಕಾರ್ಜುನ ಪ್ರಸನ್ನ : ಈಗ ನಬಾರ್ಡ್‌ನಲ್ಲಿ ಬಾಟಲ್‌ನೆಕ್ ಎಲ್ಲಾ ಮುಗಿದಿದೆ. ನಬಾರ್ಡ್ ಅಂದರೆ ಬಹುತೇಕ ಜನಕ್ಕೆ ಬಹಳ ಭಯ ಇದೆ. ಬಹಳ ದೊಡ್ಡದು, ಏನೂ ರೂಲ್ಸ್ ಹೇಳುತ್ತಾರೆ ಎಂದು ಆದರೆ ಅಲ್ಲಿರತಕ್ಕವರೂ ನಮ್ಮವರೇ. ನಮ್ಮ ಕನ್ನಡಿಗರೇ ನಾಯಕರು ಇದ್ದಾರೆ. ಇವತ್ತು ನಮ್ಮ ಕರ್ನಾಟಕದ ನಾಯಕರು ಇದ್ದಾರೆ. ಅವರು ಸಹಾನುಭೂತಿಯಿಂದ ನಮ್ಮ ಸಮಸ್ಯೆಗಳನ್ನು ಪರಿಶೀಲನೆ ಮಾಡುತ್ತಿದ್ದಾರೆ. ಅವರಲ್ಲಿ ಹೋಗಿ ನಾನು ಒಂದು ದಿವಸ ಕುಳಿತು ಮಾತನಾಡಿದ್ದೇನೆ. ಬಹುತೇಕವಾಗಿ ಎಲ್ಲಾ ಬಾಟಲ್‌ನೆಕ್ಸ್ ತೀರ್ಮಾನ ಆಗಿದೆ. ತೀರ್ಮಾನ ಆದ ಮೇಲೆ ಇವತ್ತು ಪ್ರಿಲಿಮಿನರಿ ಇನ್‌ವೆಸ್ಟಿಗೇಷನ್ ರಿಪೋರ್ಟ್ ಆಗಿರತಕ್ಕದ್ದು ಅನೇಕ ಯೋಜನೆಗಳು ನಮ್ಮ ಹಾಸನ ಜಿಲ್ಲೆಯಲ್ಲಿ ಹೆಚ್ಚಿನ ರೀತಿಯಲ್ಲಿ ಅಳವಡಿಸಿದ್ದೇವೆ. ಅದರೆ ಇದನ್ನು ತೆಗೆದುಕೊಳ್ಳಬೇಕಾದರೆ ನಮಗೆ ಫೀಸಿಬಿಲಿಟಿ ಬೇಕು. ಫೀಸಿಬಿಲಿಟಿ ಯಾವಾಗ ಬರುತ್ತದೆ, ಖಂಡಿತವಾಗಿ ನಾವು ಹಂತಹಂತವಾಗಿ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ನಮ್ಮ ನಬಾರ್ಡ್‌ನ ಛೇರ್ಮನ್ ಅವರು ಎಷ್ಟು ಬೇಕಾದರೂ ದುಡ್ಡು ಕೊಡುತ್ತೇವೆ ನಿಮಗೆ ಎನ್ನತಕ್ಕ ಮಾತನಾಡಿದ್ದಾರೆ. ಈಗ ಖಂಡಿತವಾಗಿ ಫೀಸಿಬಿಲಿಟಿ ಬಂದಮೇಲೆ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ : ಫೀಸಿಬಿಲಿಟಿ ಬಂದಿದೆ. ಸರ್ವೇ ಮಾಡಿದ್ದಾರೆ, ಎಸ್ಟಿಮೇಟ್ ಸಹ ಮಾಡಿದ್ದಾರೆ. ಟೆಂಡರ್ ಕರೆದಿದ್ದಾರೆ ದುಡ್ಡು ಇಲ್ಲದೆ ಕಾರ್ಯ ನಿಂತಿದೆ. ದಯಮಾಡಿ ಸಚಿವರು ಹೇಳಬೇಕು. ಕೆಲಸ ಇಲ್ಲದೆ ಪೂರ್ತಿ ದುಡ್ಡು ಅವರಿಗೆ ಕೊಡುವುದಕ್ಕೆ ಆಗುತ್ತದೆ. ಕೆಲಸ ಶುರು ಮಾಡಿ ಎಂದರೆ ಫೀಸಿಬಿಲಿಟಿ ಇಲ್ಲ ಎಂದು ಹೇಳುತ್ತೀರಲ್ಲ ಸ್ವಾಮಿ.

ಶ್ರೀ ಆರ್.ವಿ. ದೇಶಪಾಂಡೆ : ಇಬ್ಬರೂ ನಿಂತರೆ ಹೇಗೆ?

ಶ್ರೀ ಕೆ.ಹೆಚ್. ಹನುಮೇಗೌಡ : ಟೆಂಡರ್ ಕರೆದು ಎಲ್ಲಾ ಆಗಿ ಹೋಗಿದೆ. ದುಡ್ಡು ಇಲ್ಲದೇ ಕೆಲಸ ಆಗಿಲ್ಲ, ಫೀಸಿಬಿಲಿಟಿ ಇಲ್ಲ, ಕೆಲಸ ಮಾಡಿಲ್ಲ ಎಂದು ಹೇಳುವುದು ಅದೆಲ್ಲ ಕೆಲಸಕ್ಕೆ ಬಾರದ ಮಾತು. ಎಲ್ಲಾ ಆಗಿ ಹೋಗಿದೆ. ದುಡ್ಡು ಯಾವಾಗ ಕೊಡುತ್ತೀರಿ ಕೆಲಸ ಯಾವಾಗ ಶುರು ಮಾಡುತ್ತೀರಿ ಹೇಳಿ.

ಶ್ರೀ ಮಲ್ಲಿಕಾರ್ಜುನ ಪ್ರಸನ್ನ : ಪರಿಶೀಲನೆ ಮಾಡುತ್ತೇನೆ.

ವೈಸ್ ಛೇರ್ಮನ್ : ಮಾನ್ಯ ಯಡಿಯೂರಪ್ಪನವರು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಈ ಇಲಾಖೆಯ ಬೇಡಿಕೆ ಬಗ್ಗೆ ಮಾತನಾಡಿಯೇ ಇಲ್ಲ, ಕಳೆದ ಐದಾರು ವರ್ಷದ ಹಿಂದೆ ಒಂದು ಕೆಲಸ. ಶಿಕಾರಿಪುರ ತಾಲ್ಲೂಕಿನ ಸನ್ಯಾಸಿ ಕೊಪ್ಪ ಲಿಫ್ಟ್ ಇರಿಗೇಷನ್ ಕೆಲಸ ಆಗಬೇಕು ಎಂತು ಹೇಳಿ ಬಜೆಟ್‌ನಲ್ಲಿ ಸೇರಿತ್ತು. ಅದು 18 ಆಯಿತು, 20 ಆಯಿತು ಈಗ 35 ಲಕ್ಷ 40ಕ್ಕೆ ಬಂದಿದೆ. ಸುಮಾರು ನಾಲ್ಕೈದು ಎಕರೆ ನೀರಾವರಿಯಾಗಿತ್ತೆ ಬಡವರಿಗೆ ಅನುಕೂಲವಾಗುವ ಯೋಜನೆ ಅದು. ಅದೇ ರೀತಿ ತುಂಬದಕೊಟ್ಟೆ ಹತ್ತಿರ ಒಂದು ಲಿಫ್ಟ್ ಇರಿಗೇಷನ್ ಎರಡೂ ಶಿಕಾರಿಪುರ ತಾಲೂಕಿನಲ್ಲಿ ಅತ್ಯಂತ ಅಗತ್ಯವಾಗಿ ಆಗಬೇಕಾಗುತ್ತದೆ. ಮಾನ್ಯ ಪುಟ್ಟಸ್ವಾಮಿಗೌಡರ ಕಾಲದಿಂದ ನಾವು ಕೇಳಿಕೊಂಡು ಬಂದೆವು. ಬೇರೆ ಬೇರೆ ಕಾರಣಕ್ಕೆ ಆಗಲಿಲ್ಲ. ನಾನು ತಮ್ಮನ್ನು ಕೇಳ್ತೇನೆ. ಬಜೆಟ್‌ನಲ್ಲಿ ಸೇರಿ ಆ ಕೆಲಸ ಆಗಬಹುದೆಂದು ಎಂದಾದಮೇಲೆ ಈಗ ಫೀಜಿಬಿಲಿಟಿ ಇಲ್ಲ ಎಂದು ಕುಂಟುನೆಪ ಹೇಳುವ ಹಾಗಾಯಿತು. ತಾವು ಅದಕ್ಕೆ ಡೈರೆಕ್ಷನ್ ಕೊಟ್ಟಿದ್ದೇವೆ ಅಂತ ಉತ್ತರದಲ್ಲಿ ಹೇಳಿದ್ದೀರಿ ಈ ವರ್ಷ ಇದನ್ನು ಕೆಲಸ ಪ್ರಾರಂಭ ಮಾಡತೀರಾ? ಈ ಎರಡೂ ಲಿಫ್ಟ್ ಇರಿಗೇಷನ್?

ಎರಡನೆಯದು ಈ ಶಿಕಾರಿಪುರ ತಾಲೂಕಿನಲ್ಲಿ ಹುಣಸೇಕಟ್ಟೆ ಗ್ರಾಮದ ಹತ್ತಿರ ಮುಳುಗಡೆಯಾದಂಥ ರೈತರು ಬಂದು ಸೇರಿಕೊಂಡಿದ್ದಾರೆ. ಅಲ್ಲಿ ಎಂಟ್ತೊಂಬತ್ತು ಲಕ್ಷದ ಅಂದಾಜಿನಲ್ಲಿ ಹುಣಸೇಕಟ್ಟೆ ಹತ್ತಿರ ಹೊಸ ಕೆರೆ ನಿರ್ಮಾಣ ಮಾಡುವಂಥದು ಸ್ಯಾಂಕ್ಷನಾಗಿತ್ತು, ಜಿಲ್ಲಾಪರಿಷತ್ತಿನಿಂದ ಆಗಬೇಕಾಗಿತ್ತು, ಬೇರೆಬೇರೆ ಕಾರಣದಿಂದ ಅದು ನಿಂತುಹೋಗಿದೆ. ಅದರಿಂದ ಈ ಎರಡು ಲಿಫ್ಟ್ ಇರಿಗೇಷನ್ ಈ ವರ್ಷ ಪ್ರಾರಂಭ ಮಾಡಬೇಕು ಮತ್ತು ಹುಣಸೇಕಟ್ಟೆ ಕೆರೆಗೆ ಹಣ ಮಂಜೂರು ಮಾಡಿಸಿ ಕೆಲಸ ಮಾಡಿಸಿಕೊಡತ್ತೀರಾ ಸ್ವಾಮಿ?

ಶ್ರೀ ಕೆ.ಎನ್. ಮಲ್ಲಿಕಾರ್ಜುನ ಪ್ರಸನ್ನ : ಸನ್ಯಾಸಿ ಕೊಪ್ಪದ ಬಗ್ಗೆ ನಾನು ಆಗಲೇ ಮಾತಾಡಿದ್ದೇನೆ ಖಂಡಿತವಾಗಿ ನಾನು ಆಫೀಸರ್ಸನ್ನು ಅಲ್ಲಿಗೆ ಕಳುಹಿಸುತ್ತಾ ಇದ್ದಾನೆ, ಇನ್ನು 15 ದಿವಸದಲ್ಲಿ ನಮ್ಮ ಆಫೀಸರ್ಸ್ ಬಂದು ನೋಡಿ ಪ್ರಿಲಿಮಿನರಿ ರಿಪೋರ್ಟ್ ಕೊಡುತ್ತಾರೆ ನನಗೆ, ಅದನ್ನು ನಾನು ನೋಡಿ ಸಾಧ್ಯವಾದರೆ ಖಂಡಿತ ಮಾಡಿಕೊಡ್ತೀನಿ ಅಂತ ಭರವಸೆ ಕೊಡ್ತೇನಿ, ಆಗಲೇ ನಾವು ಮಾತಾಡಿದ್ದೇವೆ ನಿಮ್ಮ ಕೂಡ. ಅದರ ಬಗ್ಗೆ ತಮಗೆ ಕಾಳಜಿ ಬೇಡ. ಹುಣಸೇಕಟ್ಟೆ ಬಗ್ಗೆ ನನ್ನ ವ್ಯಾಪ್ತಿಗೆ ಬರುವುದಾದರೆ ನಾನು ಮಾಡಿಕೊಡುತ್ತೇನೆ. ಅದು ಜಿಲ್ಲಾಪರಿಷತ್ ವ್ಯಾಪ್ತಿಗೆ ಬಂದರೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಗೋಪಿನಾಥ ಆರ್ ಸಾಂದ್ರ : ಅಧ್ಯಕ್ಷರೇ, ಸಚಿವರು ಏತ ನೀರಾವರಿ ಉತ್ತರ ಕರ್ನಾಟಕದಲ್ಲಿ ಎಳ್ಳಷ್ಟು ಕೆಲಸ ಆಗಿಲ್ಲ, ಮಾಡಬೇಕು ಅಂತ ಹೇಳಿ ಯೋಜನೆ ಹಾಕಿಕೊಂಡಿದ್ದರು, ಅವನ್ನೂ ಪೂರ್ತಿ ಕಾರ್ಯಗತ ಮಾಡುತ್ತಾ ಇಲ್ಲ ಲಿಫ್ಟ್ ಇರಿಗೇಷನ್ಸ್ ಆಫ್ ಉತ್ತರ ಕರ್ನಾಟಕ ಯಾವುವು ಫೀಸಬಲ್ ಇವೆ ಅವನ್ನು ಮಾಡಲಿಕ್ಕೆ ಯಾವಾಗ ಕೆಲಸ ಪ್ರಾರಂಭಿಸುತ್ತೀರಿ? ಅದಕ್ಕೆ ಹಣ ಎಷ್ಟು ತೆಗೆದಿಟ್ಟಿದ್ದೀರಿ ನಿಮ್ಮ ಬಜೆಟ್‌ನಲ್ಲಿ ದಯಮಾಡಿ ಹೇಳ್ತೀರಾ?

ಶ್ರೀ ಕೆ.ಎನ್. ಮಲ್ಲಿಕಾರ್ಜುನ ಪ್ರಸನ್ನ : ಅಧ್ಯಕ್ಷರೇ, ಕೃಷ್ಣಾ ಬೇಸಿನ್‌ನಲ್ಲಿ ಅನ್‌ಗೋಯಿಂಗ್ ವರ್ಕ್ಸ್ ನಾಲ್ಕದೆ ಬಹುತೇಕ ಸ್ವಲ್ಪ ದಿವಸದಲ್ಲೇ ಮುಗಿಯುತ್ತದೆಂದು ಕಾಣುತ್ತದೆ. ಅವರು ಏನೂ ತಗೊಂಡಿಲ್ಲ ಎಂದರು, ಅದು ಬಹಳ ಅನ್ಯಾಯದ ವಿಚಾರ ಎಂದು ಈ ಸಂದರ್ಭದಲ್ಲಿ ಹೇಳಿಬಿಟ್ಟು ಇನ್ನು ಪ್ರೈಮರಿ ಇನ್‌ವೆಸ್ಟಿಗೇಷನ್ ರಿಪೋರ್ಟ್ 21 ಆಗಿದೆ ಅದನ್ನು ನಾವು ಸಬ್‌ಮಿಟೆಡ್ ಟು ನಬಾರ್ಡ್, ಅದೂ ಸಹ ಕ್ಲಿಯರ್‌ಆಗುತ್ತಿವೆ. ಕೆಲಸ ಆಗಲೇ ಶುರುವಾಗಿದೆ. ನಾನು ಅಥಾರಿಟಿಯಿಂದ ಹೇಳುತ್ತಿದ್ದೇನೆ.

ಶ್ರೀ ಗೋಪಿನಾಥ ಆರ್ ಸಾಂಡ್ರಾ : ಅಧ್ಯಕ್ಷರೆ, ಸಚಿವರು ಕೆಲಸ ಪ್ರಾರಂಭವಾಗಿದೆ ಎಂದು ಹೇಳುತ್ತಾ ಇದ್ದಾರೆ, ಎಲ್ಲೆಲ್ಲಿ ಆಗಿದೆ ಯಾವ್ಯಾವ ಊರಿನಲ್ಲಾಗಿದೆ ದಯಮಾಡಿ ಹೇಳುತ್ತೀರಾ?

ಶ್ರೀ ಕೆ.ಎನ್. ಮಲ್ಲಿಕಾರ್ಜುನ ಪ್ರಸನ್ನ : ಆಮೇಲೆ ವಿವರ ಹೇಳುತ್ತೇನೆ ನಿಮಗೆ.

ಶ್ರೀ ಆರ್.ವಿ. ದೇಶಪಾಂಡೆ : ಅಧ್ಯಕ್ಷರೇ, ಈಗಾಗಲೇ ಸದಸ್ಯರು ನಿಮ್ಮ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಆದಷ್ಟು ಬೇಗನೆ ಮುಚ್ಚಿದರೆ ಒಳ್ಳೆಯದೆಂದು ಸಲಹೆ ಮಾಡಿದ್ದಾರೆ. ನಮ್ಮ ಸರ್ಕಾರ ಇದ್ದಾಗ ಅದು ಆಗಿತ್ತು, ಯಾವ ಉದ್ದೇಶದಿಂದ ಅದು ಮಾಡಿದ್ದೆವೊ ಅದು ಸಫಲವಾಗಲಿಲ್ಲ ನಮ್ಮ ಜಿಲ್ಲೆಯಲ್ಲಿ ಯಾವುದು ದೊಡ್ಡ ನೀರಾವರಿ ಮಾಡಲು ಸಾಧ್ಯವಿಲ್ಲ. ಏನಿದ್ದರೂ ಸಣ್ಣ ನೀರಾವರಿ ಅಥವಾ ಲಿಫ್ಟ್

ಇರಿಗೇಷನ್ ಪ್ರಾಧಾನ್ಯತೆ ಕೊಡಬೇಕಾಗುತ್ತದೆ. ಅಂತಹ 38 ಯೋಜನೆಗಳನ್ನು ಐಡೆಂಟಿಫೈ ಮಾಡಿದ್ದಾರೆ ನಮ್ಮ ಸರ್ಕಾರ ಇದ್ದಾಗ 18 ಯೋಜನೆಗಳನ್ನು ಬಜೆಟ್‌ನಲ್ಲಿ ಹಾಕಿದ್ದೆವು. ಆದರೆ ಇವತ್ತಿನವರೆಗೆ ಒಂದು ಯೋಜನೆನೂ ಕೆಲಸಕ್ಕೆ ಬರಲಿಲ್ಲ ಹಾಗಾಗಿ ತಮ್ಮನ್ನು ಕೇಳುತ್ತಿದ್ದೇನೆ ವಿನಯದಿಂದ, ಈ ಲಿಫ್ಟ್ ಇರಿಗೇಶನ್ ಕಾರ್ಪೊರೇಷನ್ ಮುಚ್ಚುವ ಬಗ್ಗೆ ಸರ್ಕಾರ ಕಾರ್ಯಕ್ರಮ ಏನು? ಎರಡನೆಯದು ಉತ್ತರಕನ್ನಡದಲ್ಲಿ ಈ ಲಿಫ್ಟ್ ಇರಿಗೇಶನ್ ಯೋಜನೆ 38 ಏನು ಐಡೆಂಟಿಫೈ ಆಗಿವೆ ಅದರಲ್ಲಿ 18 ಬಜೆಟ್‌ನಲ್ಲಿ ಬರುತ್ತಾ ಇವೆ. ಅವನ್ನು ಯಾವಾಗ ಶುರುಮಾಡ್ತೀರಿ. ಅದನ್ನು ಇಲಾಖೆಯಿಂದಲೇ ಮಾಡಬಹುದು. ಮೂರನೆಯದು ಉತ್ತರ ಕನ್ನಡ ಜಿಲ್ಲೆಯಲ್ಲಿ ಸಣ್ಣ ನೀರಾವರಿ ನಮ್ಮದು. ತಾವು ಹೇಳಿದಾಗೆ ಅಲ್ಲಿ ಹೂಳು ತೆಗೆಯಲ್ಲಿಕ್ಕೂ ರೊಕ್ಕ ಇಲ್ಲ ಇಂತಹ ಪರಿಸ್ಥಿತಿಯಲ್ಲಿ ಇಂದು ರೈತರ ಮೇಲೆ ಇರಿಗೇಷನ್ ಟ್ಯಾಕ್ಸ್ ಹಾಕುತ್ತಿದ್ದಾರೆ ಆ ಸಲುವಾಗಿ ಏನು ಕ್ರಮ ತೆಗೆದುಕೊಳ್ತೀರಿ ಹೇಳಬೇಕು?

ಶ್ರೀ ಕೆ.ಎನ್. ಮಲ್ಲಿಕಾರ್ಜುನ ಪ್ರಸನ್ನ : ಲಿಫ್ಟ್ ಇರಿಗೇಶನ್ ಕಾರ್ಪೊರೇಷನ್, ಮೈನರ್ ಇರಿಗೇಶನ್ ಕಾರ್ಪರೇಷನ್ ಬಹಳ ವ್ಯತ್ಯಾಸ ಆಗಿದೆ ಎಂದು ಗೊತ್ತಿದೆ ತಾವು ಮಂತ್ರಿಯಾಗಿದ್ದಿರಿ. ಲಿಫ್ಟ್ ಇರಿಗೇಶನ್ ಕಾರ್ಪೊರೇಷನ್‌ಗಳು ಸಾಲ ತೆಗೆದುಕೊಂಡು ಮಾಡುವಂಥದು, ರೈತರು ಮತ್ತೆ ಸಾಲ ವಾಪಸ್ ಕೊಡುವಂಥಾದ್ದು 25 ಪರ್ಸೆಂಟ್ ಸರ್ಕಾರ ಸಬ್ಸಿಡಿ ಕೊಡುತ್ತದೆ. ಮೈನರ್ ಇರಿಗೇಷನ್ ಕಾರ್ಪೊರೇಷನ್ ಪೂರಾ ಸರ್ಕಾರದ ವತಿಯಿಂದ ನಡೆಯುವುದು. ಸಧ್ಯಕ್ಕೆ ಈ ವರ್ಷ ನಾವು ಯಾವುದೂ ಲಿಫ್ಟ್ ಇರಿಗೇಶನ್ ಅಂಡರ್ ಮೈನರ್ ಇರಿಗೇಶನ್ ತೆಗೆದುಕೊಳ್ತಾ ಇಲ್ಲ ಆದರೆ ಲಿಫ್ಟ್ ಇರಿಗೇಶನ್ ಕಾರ್ಪೊರೇಷನ್‌ನಲ್ಲಿ ಏನೇನು ಗುರ್ತು ಮಾಡಿದ್ದೇವೋ ಅದನ್ನು ಆದ್ಯತೆ ಮೇರೆಗೆ ಖಂಡಿತ ತೆಗೆದುಕೊಳ್ತೇವೆ ಎಂದು ಭರವಸೆ ಕೊಡ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಹೂಳು ತೆಗೆಯುವ ಬಗ್ಗೆ ಏನು? ಯಾವ ಕೆಲಸಾನೂ ನಡೆಯುತ್ತಿಲ್ಲ, ಆದರೂ ಟ್ಯಾಕ್ಸ್ ಹಾಕುತ್ತಿದ್ದೀರಿ ಅದರ ಬಗ್ಗೆ ಏನು? ಮಲೆನಾಡು ಎಲ್ಲ ಜಿಲ್ಲೆಯಲ್ಲಿ ಆ ಸಮಸ್ಯೆ ಇದೆ.

ಶ್ರೀ ಕೆ.ಎನ್ ಮಲ್ಲಿಕಾರ್ಜುನ ಪ್ರಸನ್ನ : ಮೆಶಿನ್ ತೆಗೆದುಕೊಳ್ಳಲು ಪ್ರಸ್ತಾವನೆ ಕಳಿಸಿದ್ದೇವೆ. ಸ್ವಲ್ಪ ದಿವಸದಲ್ಲಿ ಒಂದೊಂದು ಡಿವಿಜನ್‌ಗೆ ಒಂದೊಂದು ಕಳಿಸ್ತಾ ಇದ್ದೇನೆ ಎಂದು ಹೇಳಿದ್ದೇವೆ. ಈ ಬಾಬ್ತು ೩ ಕೋಟಿ ಹಣ ಇದೆ.

ಡಾ. ಎನ್.ಬಿ. ಮಾನ್ಯ ನಂಜಪ್ಪ : ಅಧ್ಯಕ್ಷರೇ, ಮೈನರ್ ಇರಿಗೇಶನ್ ಏನು ಕೆರೆಗಳು ಎನ್‌ಕ್ರೋಚ್‌ಮೆಂಟ್ ಆಗಿದೆಯೋ ಅದನ್ನು ಬಿಡಿಸಲು ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ ಎಂದರು. ಈಗ ನಮಗೆಲ್ಲರಿಗೂ ಗೊತ್ತಿರುವಂತೆ ಹೆಚ್ಚೂ ಕಡಿಮೆ ಎಲ್ಲಾ ಟ್ಯಾಂಕ್‌ಗಳ ಮುಂಭಾಗದಲ್ಲಿ ಎಲ್ಲರೂ ಉತ್ತಿ ಆಲ್‌ಮೋಸ್ಟ್ ಅರ್ಧ ಕೆರೆ ಒಳಗೆ ಅಕ್ಯುಪೈ ಮಾಡಿಕೊಂಡು ಅದರಲ್ಲಿ ಬೆಳೆ ಬೆಳೆಯುವ ಜೊತೆಗೆ ಪರ್ಮನೆಂಟ್ ಟ್ರೀಸ್‌ಗಳನ್ನು ಹಾಕುತ್ತಿದ್ದಾರೆ. ಇದಕ್ಕೆ ನೀವು ಯಾವ ತರಹದ ಕ್ರಮ ತೆಗೆದುಕೊಂಡು ಅವನ್ನು ಎವಿಕ್ಟ್ ಮಾಡಿಸಲು ಸಾಧ್ಯ? ಅದನ್ನು ಕಂಪ್ಲೀಟಾಗಿ ನಿಲ್ಲಿಸಬೇಕಾದರೆ ನಾವು ಯೋಚಿಸಿದಂತೆ ಅದರ ಮುಂಭಾಗದಲ್ಲಿ ಸುತ್ತ ಬೌಂಡರಿ ಬರುವ ಕಡೆ ಒಂದು ರೋಡ್ ಮಾಡಿಸಿ ಅದರಿಂದ ಒಳಗಡೆ ಬರದ ಹಾಗೆ ಅಥವಾ ಫೆನ್ಸಿಂಗ್ ಮಾಡಲು ಸಾಧ್ಯವಿಲ್ಲ ಆದ್ದರಿಂದ ಒಂದು ಅಪ್ರೋಚ್ ರಸ್ತೆ ಮಾಡಿದರೆ ಉಪಯೋಗಕ್ಕೂ ಬರುತ್ತದೆ ಮತ್ತು ಒತ್ತುವರಿಯೂ ಸ್ಟಾಪ್ ಆಗುತ್ತದೆ. ಇದರ ಬಗ್ಗೆ ತಮ್ಮ ಉತ್ತರವೇನು?

ಶ್ರೀ ಕೆ.ಎನ್. ಮಲ್ಲಿಕಾರ್ಜುನ ಪ್ರಸನ್ನ : ಅಧ್ಯಕ್ಷರೇ, ತಮಗೆ ಗೊತ್ತಿರುವಂತೆ ಹಿಂದೆ ಇರಿಗೇಶನ್ ಆಫೀಸರ್‌ಗೆ ಮ್ಯಾಜಿಸ್ಟೇರಿಯರ್ ಪವರ್ ಇತ್ತು ಆದರೆ ಈಗ ತೆಗೆದಿದ್ದಾರೆ ಮತ್ತೆ ನಾವು ಮ್ಯಾಜಿಸ್ಟ್ರೇರಿಯಲ್ ಪವರ್ಸ್ ಕೊಡಬೇಕು ಎಂದು ಇಲಾಖೆ ಮನಸ್ಸು ಮಾಡುತ್ತಿದೆ. ಏಕೆಂದರೆ ಮ್ಯಾಜಿಸ್ಟ್ರೇರಿಯಲ್ ಪವರ್ ಇಲ್ಲದಿದ್ದರೆ ಎವಿಕ್ಷನ್ ಕಷ್ಟವಾಗ್ತದೆ, ಅದಕ್ಕೆ ಬೇರೆ ಇಲಾಖೆಯವರು ಬರಬೇಕು, ಅವರು ಇಂಟರೆಸ್ಟ್ ತೆಗೆದುಕೊಳ್ಳಬೇಕು, ಅದೆಲ್ಲಾ ಆಗಬೇಕು. ಆ ಕಾರಣದಿಂದ ಇರಿಗೇಶನ್ ಆ ಫೀಸರ್‌ಗೆ ಮ್ಯಜಿಸ್ಟೇರಿಯಲ್ ಪವರ್ ಕೊಡಬೇಕೆಂದು ಮನಸ್ಸು ಮಾಡುತ್ತಾ ಇದ್ದೇವೆ. ತಾವು ಹೇಳಿದಂತೆ ಸುತ್ತು ರಸ್ತೆ ಮಾಡಿ ಬೌಂಡರಿ ಫಿಕ್ಸ್ ಮಾಡುವುದು ಸೂಕ್ತ ಎಂದು ಹೇಳಿರುವುದು ಒಳ್ಳೆಯ ಸಲಹೆ. ಡಿಸಿಲ್ಟಿಂಗ್ ಮಾಡುವ ಮೆಶಿನ್ ಬಂದ ಮೇಲೆ ತಮ್ಮ ಬೌಂಡರಿ ಸುತ್ತ ಬಂಡ್ ಹಾಕಬೇಕೆಂಬ ಯೋಚನೆ ನಾವು ಮಾಡ್ತಾ ಇದೇವೆ ಎಂದು ತಿಳಿಸುತ್ತಿದ್ದೇನೆ.

ಶ್ರೀ ಬಾಬುರಾವ್ ಚಿಂಚನಸ್ಸೂರ್ : ಚಿತ್ತಾಪುರ ತಾಲ್ಲೂಕಿನಲ್ಲಿ ಮರುಗಳಿ ಏತ ನೀರಾವರಿ ಸಂಪೂರ್ಣ ಸ್ಥಗಿತಗೊಂಡಿದೆ. 20 ವರ್ಷಗಳಿಂದ ಇದು ನಿಂತುಬಿಟ್ಟಿದೆ. ಸರ್ಕಾರ ಇದರ ಬಗ್ಗೆ ಇಲ್ಲಿಯತನಕ ಎಷ್ಟು ವೆಚ್ಚ ಮಾಡಿದೆ ಮತ್ತು ಈ ಕೆಲಸವನ್ನು ಯಾವಾಗ ಪ್ರಾರಂಭಿಸಿ ಎಷ್ಟು ದಿವಸದಲ್ಲಿ ಮುಗಿಸುತ್ತೀರಿ ಎಂದು ಸಚಿವರು ತಿಳಿಸಬೇಕು.

ಶ್ರೀ ಕೆ.ಎನ್. ಮಲ್ಲಿಕಾರ್ಜುನ ಪ್ರಸನ್ನ: ಮಾನ್ಯ ಅಧ್ಯಕ್ಷರೆ, ಅವರು ಪ್ರಶ್ನೆ ಕೇಳಿದನ್ನೇ ಕೇಳಿದರೆ ನಾನು ಹೇಗೆ ಉತ್ತರಿಸಲಿ? ಕೆಲಸ ಪ್ರಾರಂಭ ಮಾಡಿಸುತ್ತೇವೆ.

ಅಧ್ಯಕ್ಷರು : ಚಿತ್ತಾಪುರ ಶಾಸಕರೆ, ತಾವು ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತಾರೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಅಧ್ಯಕ್ಷರೇ, ಸೇಡಂ ಮತಕ್ಷೇತ್ರದಲ್ಲಿ ನಿಜಾಂ ಕಾಲದಲ್ಲಿ ನಿರ್ಮಾಣವಾಗಿರುವ ಕೆರೆಗಳು ಒಡೆದುಹೋಗಿ 16 ವರ್ಷಗಳಾದರೂ ಸಹ ಇಲ್ಲಿಯವರೆಗೆ ಅವು ದುರಸ್ತಿಯಾಗಿಲ್ಲ ಅದರ ಬಗ್ಗೆ ನಾನು ಪತ್ರ ವ್ಯವಹಾರ ಮಾಡಿದರೂ ಸಹ ದುರಸ್ತಿ ಮಾಡಿಲ್ಲ. ದುರಸ್ತೆ ಕೆಲಸ ಮಾಡಿದರೆ ಕಡಿಮೆ ಖರ್ಚಿನಲ್ಲಿ ಸಾವಿರಾರು ಎಕರೆ ನೀರಾವರಿಯಾಗಿ ಬಡ ರೈತರಿಗೆ ಲಾಭವಾಗುತ್ತದೆ. ಅದರ ಸಲುವಾಗಿ ನಾನು ತಮ್ಮ ಮೂಲಕ ಸಚಿವರನ್ನು ಈ ಕೆರೆಗಳನ್ನು ದುರಸ್ತಿ ಮಾಡಲು ವಿನಂತಿಸುತ್ತೇನೆ.

ಶ್ರೀ ಕೆ.ಎನ್. ಮಲ್ಲಿಕಾರ್ಜುನ ಪ್ರಸನ್ನ : ಮಾನ್ಯ ಅಧ್ಯಕ್ಷರೇ, ನಾವು ಸುಮಾರು ಐವತ್ತು ಲಕ್ಷ ರೂಪಾಯಿಗಳನ್ನು ಕೆರೆಯ ರೆಸ್ಟೂರೇಷನ್ ಮತ್ತು ರಿಪೇರಿಗೆ ಎಂದು ನಾವು ಹಣವನ್ನು ಇಟ್ಟಿದ್ದೇವೆ. ಬಹುತೇಕ ಅದನ್ನು ಖರ್ಚು ಮಾಡತಕ್ಕಂಥ ಮನಸ್ಸು ಕೂಡ ಇದೆ. ಮಾನ್ಯ ಸದಸ್ಯರುಗಳು ಏನು ಒಂದನ್ನು ಹೇಳಿದ್ದಾರೆ. ಅದನ್ನು ಬರೆದುಕೊಟ್ಟರೆ ಅದನ್ನು ನಾನು ಖಂಡಿತವಾಗಿಯೂ ಮಾಡಿಕೊಡುತ್ತೇನೆ.

ಅಧ್ಯಕ್ಷರು : ಈಗ ಇನ್ನೊಬ್ಬ ಮಂತ್ರಿಗಳು ರಿಪ್ಲೈಯನ್ನು ಕೊಡಬೇಕು. ಈಗ ಶ್ರೀಯುತ ಮಲ್ಲಾರಿಗೌಡ ಎಸ್. ಪಾಟೀಲ್.

+ ಶ್ರೀ ಎಸ್. ಮಲ್ಲಾರಿಗೌಡ ಎಸ್. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ನಾನು ಮಂಡಿಸಿರತಕ್ಕಂಥ 35ನೇ ನಂಬರ್ ಬೇಡಿಕೆಯ ಮೇಲೆ ಅಂದರೆ ಭಾರಿ ಮತ್ತು ಮಧ್ಯಮ ನೀರಾವರಿ ಬೇಡಿಕೆಯ ಮೇಲೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರಿಂದ ಹಿಡಿದು 19 ಜನ ಮಾನ್ಯ ಶಾಸಕರುಗಳು ಈ ಒಂದು ಇಲಾಖೆಯ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ.

ಈ ಇಲಾಖೆಯ ಮೇಲೆ ಪ್ರಾರಂಭದಲ್ಲಿ ವಿರೋಧ ಪಕ್ಷದ ನಾಯಕರು ಮಾತನಾಡುವ ಕಾಲಕ್ಕೆ, ಇಲಾಖೆಯಲಿರತಕ್ಕಂಥ ನೀರಾವರಿ ಕಾರ್ಯದರ್ಶಿಗಳ ಮೇಲೆ ಕೆಲವೊಂದು ಆಪಾದನೆಗಳು ಇದೆ, ಅದರ ಬಗ್ಗೆ ಸರ್ಕಾರದ ನಿಲುವೇನು ಎನ್ನತಕ್ಕಂಥ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ.

ನಾನು ಈ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನು ಅವರ ಬಗ್ಗೆ ಮಾತ್ರ ಹೇಳುತ್ತೇನೆ. ಏನು ಅವರ ಮೇಲೆ ಲೋಕಾಯುಕ್ತದಲ್ಲಿ ಒಂದು ಆಪಾದನೆ ಇತ್ತು, ಅದರ ಬಗ್ಗೆ ಲೋಕಾಯುಕ್ತದವರು ಅವರ ಮೇಲೆ ಆಪಾದನೆ ಸಾಬೀತಾಗಿಲ್ಲ. ಅದರ ಬಗ್ಗೆ ಸರ್ಕಾರ ನಿರ್ಣಯವನ್ನು ಮಾಡಬೇಕು ಎನ್ನತಕ್ಕಂಥ ಅಭಿಪ್ರಾಯವನ್ನು ವ್ಯಕ್ತಮಾಡಿದರು. ಅದರ ನಂತರ ಮೂರು ಇನ್‌ಕ್ರಿಮೆಂಟ್ ಬಗ್ಗೆ ವಿರೋಧ ಪಕ್ಷದ ನಾಯಕರು ಹೇಳಿದರು. ಅದು ಅವರ ಬಗ್ಗೆಯೂ ಕೂಡ ನ್ಯಾಯಾಲಯದಲ್ಲಿರುವುದರಿಂದ ಕೂಡ ಏನೂ ನಾವು ತೀರ್ಮಾನ ಮಾಡುವುದಕ್ಕೆ ಆಗಲಿಲ್ಲ ಎಂದು ಈ ವಿಷಯದಲ್ಲಿ ಇಷ್ಟನ್ನು ಮಾತ್ರ ಹೇಳುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರೇ ಹಿಂದೆ ನೀರಾವರಿ ಮಂತ್ರಿಗಳಾಗಿದ್ದರು. ನನ್ನ ಅನಿಸಿಕೆಯ ಪ್ರಕಾರ ಬಹಳ ಒಳ್ಳೆಯ ಸಲಹೆಗಳನ್ನು ಅವರ ಮಾಡಬಹುದು, ನನಗೆ ಏನಾದರೂ ಸೂಚನೆಗಳನ್ನು ನೀಡಬಹುದು ಎಂದು ನಾನು ಅಭಿಪ್ರಾಯವನ್ನು ವ್ಯಕ್ತಮಾಡಿದ್ದೆ. ಆದರೆ ಏನೋ, ನನ್ನ ದುರ್ದೈವ ಎಂದು ಭಾವಿಸಿದ್ದೇನೆ. ವಿರೋಧ ಪಕ್ಷದ ನಾಯಕರು ಅದನ್ನೆಲ್ಲಾ ಹೇಳುವುದನ್ನು ಬಿಟ್ಟು ಸಣ್ಣ ಸಣ್ಣ ವಿಷಯಗಳನ್ನು ಮಂಡನೆ ಮಾಡಿದ್ದು ನನಗೇನೂ ಅಷ್ಟೊಂದು ಹಿಡಿಸಲಿಲ್ಲ.

ಈ ಕಾರ್ಯದರ್ಶಿಯವರು ರಾಷ್ಟ್ರ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಮೂರು ನಾಲ್ಕು ಪ್ರಶಸ್ತಿಗಳನ್ನು ಕೂಡ ಪಡೆದಿದ್ದಾರೆ. ಏನೋ ಅವರ ಮೇಲೆ ಒಂದು ಸಣ್ಣ ತಪ್ಪಾಗಿದ್ದರೆ ಅವರನ್ನು ಇಷ್ಟೊಂದು ಕಡೆಗಣಿಸಿ ಈ ಸದನದಲ್ಲಿ ಇಷ್ಟೊಂದು ಬಹಳಷ್ಟು ಸಣ್ಣ ರೀತಿಯಲ್ಲಿ ಮಾತನಾಡುವುದು ಸರಿಯಲ್ಲ ಎನ್ನತಕ್ಕಂಥ ಭಾವನೆಯನ್ನು ವ್ಯಕ್ತಮಾಡಿ, ಅದನ್ನು ನಾನು ಇಲ್ಲಿಗೆ ಬಿಡುತ್ತೇನೆ. ಈ ಇಲಾಖೆಯ ಬಗ್ಗೆ ಒಂದು ಮಾತನ್ನು ನಾನು ಹೇಳಲೇಬೇಕಾಗುತ್ತದೆ. 1956 ರಿಂದ ಹೊಸ ಕರ್ನಾಟಕ ಆದಮೇಲೆ ಈಗ ನಾನು 27ನೇ ಮಂತ್ರಿಯಾಗಿದ್ದೇನೆ. 42 ವರ್ಷದಲ್ಲಿ 27 ನೆಯವನು ನಾನು.

ಶ್ರೀ ಆರ್.ವಿ. ದೇಶಪಾಂಡೆ : ಇದನ್ನು ಯಾವಾಗ ಲೆಕ್ಕ ಮಾಡಿದಿರಿ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಅದನ್ನು ಹೇಳಬೇಕಲ್ಲ. ಈ ಮಾತನ್ನು ನಾನು ಏತಕ್ಕೆ ಹೇಳುತ್ತೇನೆ ಎಂದರೆ ಮಾನ್ಯ ಬೈರೇಗೌಡರು ಒಂದು ಮಾತನ್ನು ಹೇಳಿದರು.

ಮಾನ್ಯ ಮುಖ್ಯಮಂತ್ರಿಗಳು ಅವರು ಬೇರೆ ಸಮಾಜದವರು. ಲಿಂಗಾಯಿತ ಸಮಾಜದವರಿಗೆ ಮತ್ತು ಯಾರು ಗೌಡರು ಇದ್ದಾರೆ, ಆ ಪ್ರದೇಶಗಳ ಅಭಿವೃದ್ಧಿ ಮಾಡಲಿಕ್ಕೆ ಅವರಿಗೆ ಮನಸ್ಸಿಲ್ಲ ಎನ್ನತಕ್ಕಂಥ ಅಭಿಪ್ರಾಯವನ್ನು ಅವರು ವ್ಯಕ್ತಮಾಡಿದರು. ಈ 27 ಜನ ಮಂತ್ರಿಗಳಲ್ಲಿ ಹೆಚ್ಚಿನ ಗಾತ್ರದಲ್ಲಿರತಕ್ಕಂಥ ಮಂತ್ರಿಗಳ ಹೆಸರನ್ನು ನಾನು ಓದುತ್ತೇನೆ. ಮಾನ್ಯ ವೀರೇಂದ್ರ ಪಾಟೀಲರು, ಸುಮಾರು ನಾಲ್ಕು ವರ್ಷಗಳ ಕಾಲ ಈ ಒಂದು ಇಲಾಖೆಯನ್ನು ಪಡೆದಿದ್ದರು. ಪಿಡಬ್ಲ್ಯೂಡಿ ಮತ್ತು ಇರಿಗೇಷನ್‌ನ್ನು ಪಡೆದಿದ್ದರು. ಮಾನ್ಯ ದೇವರಾಜ ಅರಸ್‌ರವರು ಸುಮಾರು ಆರು ವರ್ಷಗಳ ಕಾಲ ಪಡೆದಿದ್ದರು. ತದನಂತರ ಈ ಹೋರಾಟ ಏನು ಆಯಿತಲ್ಲಾ, ಅದು ವಿರೋಧ ಪಕ್ಷದ ಉಪನಾಯಕರಾದ ಸಿಂಧ್ಯಾರವರಿಗೆ ಅದು ಗೊತ್ತು. ಈ ಸದನದಲ್ಲಿ ಹಿರಿಯ

ಸದಸ್ಯರಾಗಿದ್ದ ಈಗ ಪಾರ್ಲಿಮೆಂಟ್ ಸದಸ್ಯರಾಗಿರುವ ಮಾನ್ಯ ದೇವೇಗೌಡರು ಈ ಇಲಾಖೆಯನ್ನು ಆರು ವರ್ಷಗಳವರೆಗೆ ವಹಿಸಿಕೊಂಡಿದ್ದರು.

ಅವರು ಯಾವ ಸಮಾಜಕ್ಕೆ ಸೇರಿದವರು. ಅವರು ಏತಕ್ಕೆ ಈ ಸಮಾಜದ ಬಗ್ಗೆ ಇಷ್ಟೊಂದು ಘೋರವಾದ ಅನ್ಯಾಯವನ್ನು ಮಾಡಿದರು ಎಂದು ನಾನು ಕೇಳಿದರೆ ಉತ್ತರ ಅವರ ಕಡೆಯಿಂದ ಏನು ಬರುತ್ತದೆ? ಯಾರಾದರೂ ಮಂತ್ರಿಗಳು ಆದಮೇಲೆ ಅವರು ಒಂದು ಸಮಾಜಕ್ಕೋಸ್ಕರ ಯಾವುದಾದರೂ ಕೆಲಸ ಮಾಡುತ್ತಾರೆ ಎಂದು ಹೇಳಿದರೆ ಅವರು ಮಂತ್ರಿಗಳಾಗಲಿಕ್ಕೆ ಸಾಧ್ಯವಿಲ್ಲ. ಎಲ್ಲಾ ಸಮಾಜದ ಜನರನ್ನು ಕಾರ್ಯರೂಪದಲ್ಲಿ ಹಾಗೂ ಕಾರ್ಯವ್ಯಾಪ್ತಿಯಲ್ಲಿ ತಂದು ಎಲ್ಲಾ ಸಮಾಜಕ್ಕೂ ಕೆಲಸವನ್ನು ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳ ಮೇಲೆ ಮಾನ್ಯ ಬೈರೇಗೌಡರು ಏನೊಂದು ಈ ಛಾರ್ಜನ್ನು ಮಾಡಿದ್ದಾರೆ, ಈ ಛಾರ್ಜ್ ಸರಿಯಿಲ್ಲ ಎನ್ನತಕ್ಕಂಥ ಭಾವನೆಯಲ್ಲಿ ಈ ಮಾತನ್ನು ನಾನು ಹೇಳುತ್ತಿದ್ದೇನೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು, ಬೈಫರ್‌ಕೇಷನನ್ನು ಏತಕ್ಕೆ ಮಾಡುತ್ತೀರಿ? ಇದಕ್ಕೆ ಏನು ಕಾರಣ? ಎಂದು ಕೇಳಿದರು. ಈ ಬೈಫರ್‌ಕೇಷನನ್ನು ಮಾಡುವುದು, ಇದು ನಾನು ಬಂದಮೇಲೆ ಆದಂಥ ವಿಷಯವಲ್ಲ. 1977 ರಿಂದ ಇದು ಪ್ರಾರಂಭವಾಗಿದೆ. 1977 ರಿಂದ ಪ್ರಾರಂಭವಾಗಿ ನಾನು ಬಂದಮೇಲೆ ಡಿಪಾರ್ಟ್‌ಮೆಂಟ್ಸ್ ಇವತ್ತಿನ ದಿನ ಬೇರೆ ಬೇರೆ ಕ್ಯಾಬಿನೆಟ್ ದರ್ಜೆಯ ಮಂತ್ರಿಗಳು ಇರುವುದರಿಂದ ಮಾನ್ಯ ಮುಖ್ಯಮಂತ್ರಿಗಳಾಗಲಿ ಅಥವಾ ಪಿ.ಡಬ್ಲ್ಯೂಡಿ ಮಂತ್ರಿಗಳಾಗಲೀ ನಮ್ಮ ಇಲಾಖೆಯಲ್ಲಿ ಹತೋಟಿಯನ್ನು ನಾವು ಇಡಬೇಕಾಗುತ್ತದೆ.

ಯಾರು ಕ್ಯಾಬಿನೆಟ್ ಮಂತ್ರಿ, ಪಿಡಬ್ಲ್ಯೂಡಿ ಮಂತ್ರಿ ಇದ್ದಾರೆ, ಅವರು ಅವರ ಇಲಾಖೆಯ ಮೇಲೆ ಹತೋಟಿ ಇಡಬೇಕಾಗುತ್ತದೆ. ನನ್ನ ಇಲಾಖೆಯ ಮೇಲೆ ನಾನು ಹತೋಟಿ ಇಡಬೇಕಾಗುತ್ತದೆ. ಸುಮಾರು 19 ಜನ ಚೀಫ್ ಇಂಜಿನಿಯರ್ ಇರತಕ್ಕ ಇಲಾಖೆ ನನ್ನ ಇಲಾಖೆ. ಅದರ ಜೊತೆಗೆ 5 ಜನ ಕಾಡಾದಲ್ಲಿರತಕ್ಕ ಹಾಗೂ ಇನ್ನು ಉಳಿದಿರತ್ಕ ಸುಮಾರು 26 ಜನ ಚೀಫ್ ಇಂಜಿನಿಯರ್ ಹುದ್ದೆಗೆ ಅನುಗುಣವಾಗಿ ಅಧಿಕಾರಿಗಳು ಈ ಇಲಾಖೆಯಲ್ಲಿರತಕ್ಕ ಒಂದು ದೊಡ್ಡ ಇಲಾಖೆ. ಈ ಇಲಾಖೆಯನ್ನು ನೀವು ಏಕೆ ಬೇರ್ಪಡಿಸುವುದು ಎಂಬ ಅಭಿಪ್ರಾಯವನ್ನು ವ್ಯಕ್ತ ಮಾಡಿದರು. ಇದರ ಹಿನ್ನೆಲೆಯಲ್ಲಿ ಕೆಲವು ವಿಷಯ ಹೇಳಬೇಕಾಗುತ್ತದೆ. ಈ ಇಲಾಖೆಯನ್ನು ಬೇರ್ಪಡಿಸಬೇಕು ಎಂದು ಈ ನಿರ್ಣಯ ಸಚಿವ ಸಂಪುಟದಲ್ಲಿ ನಿರ್ಣಯ ಆಗಿದೆ. ಆಮೇಲೆ ಈ ಇಲಾಖೆಯನ್ನು ಬೇರ್ಪಡಿಸದೇ ಹೋದರೆ ಜಾಗತಿಕ ಬ್ಯಾಂಕಿನ ನೆರವು ಪಡೆಯಲಿಕ್ಕೆ ಕೂಡ ಸ್ವಲ್ಪ ಮಟ್ಟಿಗೆ ಏನಾದರೂ ತೊಂದರೆ ಆಗತಕ್ಕ ಸಂದರ್ಭ ಇತ್ತು.

ಇಡೀ ದೇಶದಲ್ಲಿ ನನ್ನ ತಿಳುವಳಿಕೆ ಪ್ರಕಾರ ಸುಮಾರು 14 ರಾಜ್ಯಗಳಲ್ಲಿ ನೀರಾವರಿ ಇಲಾಖೆ ಬೇರೆ ಆಗಿದೆ. ರಾಷ್ಟ್ರಮಟ್ಟದಲ್ಲಿ ಬೇರೆ ಬೇರೆ ರಾಜ್ಯದಲ್ಲಿ ಸುಮಾರು 14 ರಾಜ್ಯಗಳಲ್ಲಿ ಬೇರೆ ಇಲಾಖೆ ಆಗಿದೆ. ಕರ್ನಾಟಕದಲ್ಲಿ ಆದರೆ ಏಕೆ ಅನ್ಯಾಯ ಆಗುತ್ತದೆ? ನಾವು ನೀರಾವರಿ ಇಲಾಖೆಯನ್ನು ಬಹಳಷ್ಟು ಕಡೆಗಾಣಿಸಿದ್ದೇವೆ. ನೀರಾವರಿ ಇಲಾಖೆಯಲ್ಲಿ ಕೆಲಸ ಆಗುತ್ತಾ ಇಲ್ಲ, ಈ ಸಂದರ್ಭ ಬಂದಾಗ ಈ ವಿಷಯವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದಂತಹ ಕಾಲಕ್ಕೆ ಹೇಳಿದ್ದನ್ನು ಇಲ್ಲಿ ಪ್ರಸ್ತಾವನೆ ಮಾಡಿ ಇಲ್ಲಿಗೆ ಬಿಡುತ್ತೇನೆ. ಈ ಸಂದರ್ಭದಲ್ಲಿ ಒಂದು ಮಾತನ್ನು ನಾನು ಹೇಳಲೇಬೇಕಾಗುತ್ತದೆ. ಕಾವೇರಿ ವಿವಾದ ಬಂದಾಗ ಈ ಸದನದಲ್ಲಿರತಕ್ಕ ಎಲ್ಲಾ ಮಾನ್ಯ ಸದಸ್ಯರುಗಳು, ಪಕ್ಷ ಭೇದ ಭಾವವನ್ನು ಮರೆತು, ಜಾತಿಯನ್ನು

ನಾನು ಅವರೆಲ್ಲರಿಗೂ ಕೂಡ ಹಾಗೂ ಕನ್ನಡ ನಾಡಿನ ಸಮಸ್ತ ಜನರಿಗೂ ಅಧಿಕಾರಿಗಳಿಗೂ ಸದನದಲ್ಲಿರತಕ್ಕ ಎಲ್ಲಾ ಮಾನ್ಯ ಸದಸ್ಯರೂ, ತಮಗೂ ಕೂಡ ಧನ್ಯವಾದಗಳನ್ನು, ಅಭಿನಂದನೆಗಳನ್ನು ಸಲ್ಲಿಸಬೇಕಾಗುತ್ತದೆ. ಅದು ಬಹಳ ವಿಶೇಷವಾದ ಸಂದರ್ಭ ಇತ್ತು. ಇದರಲ್ಲಿ ಏನಾದರೂ ನಾವು ಬೇರೆ ಬೇರೆ ಪಕ್ಷದವರು ಬೇರೆ ಬೇರೆ ವಿಷಯಗಳಿಗೆ ಹೋಗಿದ್ದರೆ ಅದು ಸರಿಯಾದ ವಾತಾವರಣ ಆಗುತ್ತಾ ಇರಲಿಲ್ಲ. ಆ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳುತ್ತಿದ್ದೇನೆ. ಈ ಸಲ ಏನಾಗಿದೆ? ಸುದೈವದಿಂದ ಕರ್ನಾಟಕದಲ್ಲಿ ಒಳ್ಳೆಯ ಮಳೆ ಬಂದಿದೆ. 30 ವರ್ಷದಲ್ಲಿ ಯಾವ ಕೆರೆಗಳು, ಯಾವ ನೀರಾವರಿಯ ದೊಡ್ಡ ಯೋಜನೆಗಳೂ ತುಂಬಿರಲಿಲ್ಲ ಈಗ ಎಲ್ಲಾ ಕೆರೆಗಳು ಮತ್ತು ದೊಡ್ಡ ಯೋಜನೆಗಳು ಗಾತ್ರದಲ್ಲಿ ನೀರು ತುಂಬಿ ಹರಿಯುತ್ತಿವೆ. ಇಂತಹ ಒಂದು ಸಂದರ್ಭ ಇದ್ದಾಗ ಈ ವಿವಾದ ಬರಬಾರದಿತ್ತು.

ಆದರೆ ಅನಿವಾರ್ಯವಾಗಿ ಈ ವಿವಾದವನ್ನು ನಾವು ಎದುರಿಸಬೇಕಾಗಿದೆ. ಆ ಹಿನ್ನೆಲೆಯಲ್ಲಿ ಈಗಾಗಲೇ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗಿತ್ತೋ ಆ ಎಲ್ಲಾ ಕಾರ್ಯಕ್ರಮಗಳನ್ನು ನಾವು ತೆಗೆದುಕೊಂಡಿದ್ದೇವೆ. ನೀರಾವರಿ ಇಲಾಖೆಯ ಬಗ್ಗೆ ಸರ್ವೇಸಾಮಾನ್ಯ ಜನರಲ್ಲಿ ಅಷ್ಟು ಪ್ರಚಾರ ಇಲ್ಲವೆಂದು ನನ್ನ ಭಾವನೆ ಆಗಿದೆ. ನಾನು ಸಚಿವನಾದ ಮೇಲೆ ಕರ್ನಾಟಕದಲ್ಲಿರತಕ್ಕ ಕಾವೇರಿ ಬೇಸಿನ್ ಮತ್ತು ಕೃಷ್ಣ ಬೇಸಿನ್‌ನಲ್ಲಿ ಪ್ರವಾಸ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇನೆ. ಸುಮಾರು ಎಲ್ಲಾ ಯೋಜನೆಗಳಿಗೂ ಭೇಟಿ ಕೊಟ್ಟಿದ್ದೇನೆ, ಭೇಟಿ ಅನಿವಾರ್ಯವಾಗಿತ್ತು. ಅದಕ್ಕೆ ಕಾರಣ ಬೇರೆ. ರಾಜ್ಯದಲ್ಲಿರತಕ್ಕ ನೀರಾವರಿ ಯೋಜನೆಗಳ ಮೇಲೆ ಒಂದು ವಿಶೇಷವಾದ ಕಾರ್ಯಕ್ರಮ ನಡೆಯುತ್ತಿದೆಯೇ ಎಂಬ ಸಂಶಯ ಇತ್ತು. ಆ ಹಿನ್ನೆಲೆಯಲ್ಲಿ ಆ ಎಲ್ಲಾ ಯೋಜನೆಗಳ ಸುರಕ್ಷತೆಯ ದೃಷ್ಟಿಯಿಂದ ನಾನು ಒಂದು ವಿಶೇಷವಾದ ಭೇಟಿಯನ್ನು ಕೊಟ್ಟಿದ್ದೇನೆ.

ಅನಿವಾರ್ಯವಾಗಿ ನಾನು ಈ ಮಾತನ್ನು ಹೇಳಬೇಕಾಗುತ್ತದೆ, ಬಹಳ ದುಃಖದಿಂದ ಹೇಳಬೇಕಾಗಿದೆ. ಇಂತಹ ಒಂದು ಪರಿಸ್ಥಿತಿ ನಮ್ಮ ಕನ್ನಡ ನಾಡಿಗೆ ಬರಬಾರದಿತ್ತು. ಆದರೆ ಅನಿವಾರ್ಯವಾಗಿ ಈ ಒಂದು ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ಈ ಮಾತನ್ನು ಇಲ್ಲಿಗೇ ನಿಲ್ಲಿಸುತ್ತೇನೆ. ಇನ್ನು ವಿಶೇಷವಾದ ಪ್ರಚಾರ ಏಕೆ ಆಗಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತಿದ್ದೇನೆ ಎಂದರೆ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಸರ್ವೇಸಾಮಾನ್ಯ ಜನರಿಗೆ ಈ ನೀರಾವರಿ ಇಲಾಖೆ ಏನು ಕೆಲಸ ಮಾಡಿದೆ ಎನ್ನತಕ್ಕ ಪ್ರಚಾರ ಇಲ್ಲದೇ ಹೋದರೆ ಅದು ಸರಿಯಾದಂತಹ ಕೆಲಸ ಆಗಲಿಕ್ಕಿಲ್ಲ ಎನ್ನತಕ್ಕ ಅಭಿಪ್ರಾಯ ನನ್ನದಾಗಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ವಿವಾದ ಪ್ರಾರಂಭ ಆದಾಗ ನನ್ನ ಅನಿಸಿಕೆ ಪ್ರಕಾರ ಸಣ್ಣ ಮಗುವಿನಿಂದ ಹಿಡಿದು ದೊಡ್ಡವರವರೆಗೆ ಕೂಡ ಈ ವಿವಾದದ ಹಿನ್ನೆಲೆಯಲ್ಲಿ ಒಂದು ಅನುಕಂಪ ಎಲ್ಲಾ ಪ್ರದೇಶಗಳಲ್ಲಿ ಬರಬೇಕಾಗಿತ್ತು. ಆ ಅನುಕಂಪವನ್ನು ಇನ್ನೂ ನಾವು ನಿರ್ಮಾಣ ಮಾಡಿಲ್ಲ ಎಂಬ ಆತಂಕ ಚುಚ್ಚುತನ ಕೂಡ ನನ್ನಲ್ಲಿ ಬಂದಿದೆ ಎನ್ನುವ ಹಿನ್ನೆಲೆಯಲ್ಲಿ ನಾನು ಈ ಮಾತನ್ನು ಆಡುತ್ತಿದ್ದೇನೆ.

ನಮ್ಮ ನೀರಿನ ಗಾತ್ರವನ್ನು ನಾವು ನೋಡಿದಾಗ, ಸುಮಾರು 3440 ಟಿ.ಎಂ.ಸಿ. ನೀರು ನಮಗೆ ಲಭ್ಯ ಇದೆ. ಆದರೆ ದುರ್ದೈವದಿಂದ ಅದರಲ್ಲಿ ಎರಡು ಸಾವಿರ ಟಿ.ಎಂ.ಸಿ. ನೀರು ಪಶ್ಚಿಮ ಘಟ್ಟದಲ್ಲಿ ಹರಿದು ಹೋಗುತ್ತದೆ. ಈಗಾಗಲೇ ನಾವು ಪಶ್ಚಿಮ ಘಟ್ಟದಲ್ಲಿ ಹೋಗತಕ್ಕ ನೀರು ಬಿಟ್ಟು ಸುಮಾರು 784 ಟಿ.ಎಂ.ಸಿ ನೀರನ್ನು ನಮ್ಮ ಬಳಕೆಗೆ ತೆಗೆದುಕೊಂಡಿದ್ದೇವೆ. ಆ ದೃಷ್ಟಿಯಿಂದ ಇನ್ನೂ ಹೆಚ್ಚಿನ ಒಂದು

ಕೆಲಸವನ್ನು ಇದರಲ್ಲಿ ನಾವು ಮಾಡಬೇಕಾಗಿದೆ. ಈ ಸಂದರ್ಭದಲ್ಲಿ ಕಾವೇರಿ ಜಲಾನಯನ ಪ್ರದೇಶ ಇರಬಹುದು, ಕೃಷ್ಣಾ ಜಲಾನಯನ ಪ್ರದೇಶ ಇರಬಹುದು. ವಿರೋಧ ಪಕ್ಷವರಾಗಲೀ ಅಥವಾ ಸಾರ್ವಜನಿಕರಾಗಲೀ ಈ ಕಾರ್ಯಕ್ರಮಗಳನ್ನು ಎಷ್ಟು ಬೇಗ ಮುಗಿಸುತ್ತೀರಿ ಎನ್ನತಕ್ಕ ಪ್ರಶ್ನೆಯನ್ನು ಎಲ್ಲರೂ ಸದನದಲ್ಲಿಯೂ, ಹೊರಗಡೆಯೂ ಕೂಡ ಕೇಳುತ್ತಿದ್ದಾರೆ.

ಈ ಸಂದರ್ಭದಲ್ಲಿ ಒಂದು ಮಾತನ್ನು ನಾನು ಹೇಳಬೇಕಾಗುತ್ತದೆ. ಅದು ಏನೆಂದರೆ ನಾವು ಮನಸ್ಸು ಮಾಡಿದರೆ ಮಾತ್ರ ಇದು ಸಾಧ್ಯ ಆಗುತ್ತದೆ. ಕಾಂಗ್ರೆಸ್ ಸರ್ಕಾರ ಬಂದಿದೆ. ನಿಮ್ಮ ಕಡೆ ಮಾಡುವುದಕ್ಕೆ ಆಗುತ್ತದೆಯೋ ಇಲ್ಲವೋ ಎನ್ನುವ ಅಭಿಪ್ರಾಯ ನೀವು ಕೇಳಬಹುದು. ನಾನು ಒಬ್ಬನೇ ಇರುವುದರಿಂದ ಒಬ್ಬನೇ ಬರುವುದರಿಂದ ಈ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿಲ್ಲ. ಎಲ್ಲಾ ಸದಸ್ಯರೂ ಇದಕ್ಕೆ ಸ್ಪಂಧನೆ ಕೊಟ್ಟಿದ್ದಾರೆ. ನಾವು ಕೇಂದ್ರ ಸರ್ಕಾರದಲ್ಲಿ ಹಿಂದಿನ ಸರ್ಕಾರ ಇದ್ದಾಗ ಇರಿಗೇಷನ್ ಬಾಂಡ್ ಮಾಡಬೇಕೆಂದು ಒಂದು ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದರು, ಆ ದಿಶೆಯಲ್ಲಿ ನಾವು ಪ್ರಯತ್ನ ಮಾಡುತ್ತೇವೆ. ಇರಿಗೇಷನ್ ಬಾಂಡ್‌ಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದರೆ, ಈ ಎಲ್ಲಾ ನೀರಾವರಿ ಯೋಜನೆಗಳನ್ನು 2000ಇಸವಿಯೊಳಗೆ ಮುಗಿಸಬಹುದು ಎನ್ನುವ ಅಬಿಪ್ರಾಯವನ್ನು ನಾನು ವ್ಯಕ್ತಮಾಡುತ್ತೇನೆ. ಈ ಎರಡು ಜಲಾನಯನ ಪ್ರದೇಶದಲ್ಲಿ ಇನ್ನೂ 5000 ಕೋಟಿ ರೂ.ಗಳನ್ನು ಖರ್ಚು ಮಾಡಬೇಕಾಗಿದೆ.

ಈ ದಿಶೆಯಲ್ಲಿ ಶ್ರೀಮಾನ್ ಬೈರೇಗೌಡರು ಎಲ್‌ಒಸಿಯಲ್ಲಿ ನಿಗಧಿತ ಹಣವನ್ನು ಏನು ಇಟ್ಟಿರುತ್ತಾರೆ ಆ ಹಣವನ್ನು ನೀವು ಉಪಯೋಗ ಮಾಡುವುದಿಲ್ಲ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಅದನ್ನು ನಾನೂ ಕೂಡ ಒಪ್ಪುತ್ತೇನೆ. ಕೆಲವು ಸಂದರ್ಭದಲ್ಲಿ ಆ ರೀತಿಯಾಗಿದೆ. ಆದರೆ ಇನ್ನು ಮುಂದೆ ಆ ರೀತಿಯಾಗಿ ಆಗುವುದಕ್ಕೆ ನಾನು ಬಿಡುವುದಿಲ್ಲ, ಮಾನ್ಯ ವಿರೋಧ ಪಕ್ಷದ ಉಪನಾಯಕರು ಇದ್ದಾರೆ, ವಿರೋಧ ಪಕ್ಷದಲ್ಲಿರುವಂಥ ಮಂತ್ರಿಮಂಡಲದಲ್ಲಿರುವಂಥ ಸದಸ್ಯರು ಇದ್ದಾರೆ, ಒಂದು ಮಾತನ್ನು ಹೇಳಬಯಸುತ್ತೇನೆ. ಏನಾಗಿದೆ ಎಂದರೆ, ಎಲ್‌ಒಸಿ ರಿಲೀಸ್ ಮಾಡುವಾಗ, ನಮ್ಮ ಡಿಪಾರ್ಟಮೆಂಟ್‌ಗಾಗಲೀ, ನಮಗಾಗಲೀ ಯಾವುದೇ ಕಾಗದಪತ್ರಗಳಾಗಲೀ, ಅಂಕಿಅಂಶಗಳಾಗಲೀ ಬರುತ್ತಿರಲಿಲ್ಲ. ಆದುದರಿಂದ ಇದರ ಬಗ್ಗೆ ಯಾರು ಎಲ್‌ಒಸಿ ರಿಲೀಸ್ ಮಾಡುತ್ತಾರೆ ಅವರಿಗೆ ನಾನು ಹೇಳಿದ್ದೇನೆ.

ಎಲ್‌ಒಸಿ ರಿಲೀಸ್ ಮಾಡಿದ ಮೇಲೆ ಯಾರಿಗೆ ಎಷ್ಟು ಎಲ್‌ಒಸಿ ರಿಲೀಸ್ ಮಾಡಿದ್ದಾರೆಂದು ನಮ್ಮ ಇಲಾಖೆಯವರಿಗೆ ತಿಳಿಯದಿದ್ದರೆ ಅನಾಹುತವಾಗುತ್ತದೆ ಎಂದು ತಿಳಿಸಿದ್ದೇನೆ. ಈ ದೃಷ್ಟಿಯಿಂದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೂಡ ಹೇಳಿದ್ದೇನೆ. ಇಲ್ಲಿಯವರೆಗೆ ಈ ರೀತಿಯಾದ ಕಾರ್ಯಕ್ರಮ ನಡೆದಿರಲಿಲ್ಲ. ಇದಲ್ಲದೇ ಒಂದು ಹೊಸ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವುದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೇನೆ. ಈ ಎರಡೂ ಬೇಸಿನ್‌ಗಳಲ್ಲಿ ಒಂದೊಂದು ಸಲ ಎಲ್‌ಒಸಿ ರಿಲೀಸ್ ಆಗದೇ ಹೋಗುತ್ತದೆ, ಕಾರ್ಯ ನಿಂತು ಹೋಗುವ ಸಂದರ್ಭ ಕೂಡ ಇರುತ್ತದೆ. ಇದರ ಬಗ್ಗೆ ಇಲ್ಲಿಯೂ ಕೂಡ ಚರ್ಚೆ ಆಗಿದೆ. ಆ ದೃಷ್ಟಿಯಿಂದ ನ್ಯಾಷನಲೈಸ್ಡ್ ಬ್ಯಾಂಕ್ ಓ.ಡಿ ಎನ್ನುವ ಕ್ಯಾಶ್ ಕ್ರೆಡಿಟ್ ಹಣಕಾಸಿನ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುವುದಕ್ಕೆ ಒಂದು ವಿಷಯ ಚರ್ಚೆಯಾಗಿದೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕೆಲವೊಮ್ಮೆ ಎಲ್‌ಒಸಿ ರಿಲೀಸ್ ಆಗದೇ ಹೋದರೆ, ಹಣಕಾಸಿನ ತೊಂದರೆಯಾದರೆ. ಅಂಥ ಒಂದು ಸಂದರ್ಭದಲ್ಲಿ ಏನು ಪೀರಿಯಡ್ ಇರುತ್ತದೆ,

ಆ ಪಿರಿಯಡ್‌ನಲ್ಲಿ 15 ಕೋಟಿ ಅಥವಾ 20 ಕೋಟಿ ರೂ.ಗಳನ್ನು ಡ್ರಾ ಮಾಡಿ ಡೈರೆಕ್ಟ್ ಎಲ್‌ಒಸಿಗೆ ತುಂಬತಕ್ಕ ಕಾರ್ಯಕ್ರಮವನ್ನು ಮಾಡುವುದಕ್ಕೆ ಅವಕಾಶ ಇದೆಯೇ ಎನ್ನುವ ಅಭಿಪ್ರಾಯದಲ್ಲಿ ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ : ಎಲ್‌ಒಸಿ ರಿಲೀಸ್ ಆಗುವುದು ಫೈನಾನ್ಸ್ ಡಿಪಾರ್ಟ್‌ಮೆಂಟಿನಿಂದ. ಇದರ ಮೇಲೆ ಓಡಿ ಹೇಗೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ನೀರಾವರಿಗೆ ಹೆಚ್ಚಿನ ಹಣ ಬೇಕು. ನಿಜ. ತಾವು ಮುಖ್ಯ ಮಂತ್ರಿಯವರ ಹತ್ತಿರ ಮಾತುಕತೆ ಮಾಡಿ ನಿಮ್ಮ ಡಿಪಾರ್ಟ್‌ಮೆಂಟ್‌ಗೆ ಹೆಚ್ಚಿನ ಹಣ ಅಲೋಕೇಷನ್ ಮಾಡಿಸಿಕೊಳ್ಳಬೇಕು. ಎಲ್‌ಒಸಿ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಿಂದ ರಿಲೀಸ್ ಆಗುವುದಕ್ಕೆ ಹಣ ಬೇಕಾಗುತ್ತದೆ. ಹಣ ಇಲ್ಲದಿದ್ದರೆ, ನಿಮಗೆ ಹೇಗೆ ರಿಲೀಸ್ ಮಾಡುತ್ತಾರೆ? ಅದರ ಮೇಲೆ ನೀವು ಓ.ಡಿ. ಹೇಗೆ ಕೊಡುವುದಕ್ಕೆ ಬರುತ್ತದೆ? ಇದನ್ನು ಬಿಟ್ಟು, ಇರಿಗೇಷನ್ ಬಾಂಡ್‌ಗಳನ್ನು ಫ್ಲೋಟ್ ಮಾಡುವುದಕ್ಕೆ ಸಾಧ್ಯವಿದೆಯೇ ಎನ್ನುವ ಬಗ್ಗೆ ವಿಚಾರ ಮಾಡಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನಾನು ಹೇಳುವ ಹಿನ್ನೆಲೆ ಏನೆಂದರೆ, ನಾವು ಏನು ಒಂದು ಬಜೆಟ್ ಅಲೋಕೇಷನ್ ಕೊಟ್ಟಿರುತ್ತೇವೆ, ಕೆಲವೊಂದು ಸಂದರ್ಭದಲ್ಲಿ ಎಲ್‌ಒಸಿ ರಿಲೀಸ್ ಮಾಡುವುದಕ್ಕೆ ತಡವಾಗುತ್ತದೆ, ಇದರಿಂದ ಕೆಲಸದ ಮೇಲೆ ಪರಿಣಾಮವಾಗುವುದೂ ಸಹಜ. ಆ ದೃಷ್ಟಿಯಿಂದ ನಾನು ಹೇಳುತ್ತೇನೆ, ಸಂಪೂರ್ಣವಾಗಿ 100 ಕೋಟಿ ರೂಪಾಯಿ ಹಣವನ್ನು ಯುಟಿಲೈಸ್ ಮಾಡುತ್ತೇವೆ ಎಂದಲ್ಲ, ಒಂದು ಸಂದರ್ಭ ಬಂದಾಗ ಸುಮಾರು 50 ಕೋಟಿ ರೂ.ವರೆಗಿನ ಓ.ಡಿ.ಯನ್ನು ನಾವು ಮಾಡಬಹುದು. ಆದ್ದರಿಂದ, ಓ.ಡಿ. ತೆಗೆದುಕೊಂಡು ಸರ್ಕಾರದಿಂದ ಡೈರೆಕ್ಟ್ ಬ್ಯಾಂಕಿಗೆ ತುಂಬುವಂಥ ಕ್ರಮವನ್ನು ತೆಗೆದುಕೊಂಡರೆ, ಈಗೇನು ಕೆಲಸ ನಿಂತು ಹೋಗುತ್ತದೆ. ಆ ಕೆಲಸ ನಿಲ್ಲುವಂಥ ಸಂದರ್ಭ ಬರುವುದಿಲ್ಲ ಎನ್ನುವ ಅಭಿಪ್ರಾಯದಲ್ಲಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಆ ವಿಷಯದ ಹಿನ್ನೆಲೆಯಲ್ಲಿ ಇದನ್ನು ನಾವು ಎಗ್ಸಾಮಿನ್ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಎಲ್.ಓ.ಸಿ.ಯನ್ನು ಇರಿಗೇಷನ್ ಡಿಪಾರ್ಟ್‌ಮೆಂಟ್ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ರಿಲೀಸ್ ಮಾಡುವಂಥ ಸಂದರ್ಭದಲ್ಲಿ ಇಂಥಿಂಥ ಪ್ರಾಜೆಕ್ಟ್‌ಗೆ ಇಷ್ಟಿಷ್ಟು ದುಡ್ಡು ಎಂದು ಅಲೋಕೇಟ್ ಮಾಡಬೇಕು. ಇಂಥಿಂಥ ಪ್ರಾಜೆಕ್ಟ್‌ನಲ್ಲಿ ಇಂಥಿಂಥ ಸಬ್‌ಡಿವಿಜನ್‌ನಲ್ಲಿ ಇಷ್ಟು ಹಣ ಎಂದು ಅಲಾಟ್ ಮಾಡುವುದಕ್ಕೆ ತಮ್ಮ ಅಪ್ರೂವಲ್ ಇಲ್ಲದೇ.. How can the Finance Department directly release the LOC to EE; if file has to be gone through you.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನಾವು ಹೀಗೆ ಕೊಟ್ಟನಂತರ, ನಿಮ್ಮ ಇಲಾಖೆಯಿಂದ ಎಲ್.ಓ.ಸಿ.ಯನ್ನು ರಿಲೀಸ್ ಮಾಡಿ ಎಂದು ಹೇಳಿದರೂ ಕೂಡ ಅದು ರಿಲೀಸ್ ಆಗುತ್ತಿರಲಿಲ್ಲ. ರಿಲೀಸ್ ಆದಂಥ ಫಿಗರ್ಸ್ ಕೂಡ ನಮ್ಮ ಇಲಾಖೆಗೆ ಇಲ್ಲಿಯವರೆಗೆ ಬರುತ್ತಿರಲಿಲ್ಲ. ನಾನು ಈ ಮಾತನ್ನು ಹೇಳಬೇಕಾಗುತ್ತದೆ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ, ಹಣಕಾಸು ಇಲಾಖೆಯವರು ಎಲ್.ಓ.ಸಿ.ಯನ್ನು ಏನು ಕೊಡುತ್ತಾರೆ, ಅದು ತಮ್ಮ ಇಲಾಖೆಗೆ ಹೋಗಿಯೇ ಹೋಗುತ್ತದೆ. ತಮ್ಮ ಸಚಿವಾಲಯ ಕಚೇರಿಗೆ ಬರುತ್ತದೋ ಇಲ್ಲವೋ ಗೊತ್ತಿಲ್ಲ. It all depends upon your attitude.

ನಿಮ್ಮ ಚೀಫ್ ಇಂಜಿನಿಯರ್‌ಗೆ ಹೋಗಿಲ್ಲವೇ? ನಿಮ್ಮ ಸಂಬಂಧಪಟ್ಟ ಕೆಳಗಿನ ಹಂತದ ಅಧಿಕಾರಿಗಳಿಗೆ ಕಾನೂನಿನ ಪ್ರಕಾರ ಎಲ್‌ಒಸಿ ಹೋಗುತ್ತದೆ. ಅದು ಅವರ ಗಮನಕ್ಕೆ ಬಂದೇ ಬರುತ್ತದೆ. ಆದರೆ, ಆಗ ಬಂದ ಎಲ್‌ಒಸಿಯನ್ನು ನಿಮ್ಮ ಸಂಬಂಧಪಟ್ಟ ಅಧಿಕಾರಿಗಳು ಹೇಗೆ ಖರ್ಚು ಮಾಡುತ್ತಾರೆ? ಅದನ್ನು ತಾವು ನೋಡಿದರೆ, ಆಗ ತಮಗೆ ತಪ್ಪು ಎಲ್ಲಿದೆ ಎಂದು ಗೊತ್ತಾಗುತ್ತದೆ?

6.45. ಪಿ.ಎಂ.

ಶ್ರೀ ಆರ್.ವಿ. ದೇಶಪಾಂಡೆ : ಎಲ್.ಒ.ಸಿ. ಎಂದರೆ ಲೆಟರ್ ಆಫ್ ಕ್ರೆಡಿಟ್ ಆ ಲೆಟರ್ ಆಫ್ ಕ್ರೆಡಿಟ್ ಮೇಲೆ ನಿಮಗೆ ಹಣ ಬರಬೇಕಾದರೆ, ನಿಮ್ಮ ಚೀಫ್ ಇಂಜಿನಿಯರ್ ಧಾರವಾಡ ಕೊಟ್ಟಾಗ, ಆ ಲೆಟರ್ ಆಫ್ ಕ್ರೆಡಿಟ್ ಮೇಲೆ ಹಣ ಡಿಸ್ಟ್ರಿಬ್ಯೂಷನ್ ಮಾಡುತ್ತಾರೆ. ಕಂಟ್ರಾಕ್ಟರ್‌ಗೆ ಪೇಮೆಂಟ್ ಆಗುತ್ತದೆ. ನಿಮ್ಮ ಡಿಪಾರ್ಟ್‌ಮೆಂಟ್‌ಗೆ ಗೊತ್ತಿಲ್ಲವೆಂದರೆ ಹೇಗೆ ಸಾಧ್ಯ? ಫೈನಾನ್ಸ್ ಸೆಕ್ರೆಟರಿಯವರು ಸಹ ಡೈರೆಕ್ಟ್ ಆಗಿ ಪೇಮೆಂಟ್ ಮಾಡುವುದಿಲ್ಲ. ನಿಮ್ಮ ಡಿಪಾರ್ಟ್‌ಮೆಂಟ್‌ನಿಂದ್ ಪೇಮೆಂಟ್ ಆಗುತ್ತದೆ. ನಿಮ್ಮ ಡಿಪಾರ್ಟ್‌ಮೆಂಟ್ ನಾಲೆಡ್ಜ್‌ನಿಂದ ಆಗುತ್ತದೆ.

ಶ್ರೀ ಎಚ್. ಏಕಾಂತಯ್ಯ : ಅದು ನಿಮ್ಮ ಗಮನಕ್ಕೆ ಬಂದಿಲ್ಲದಿರಬಹುದು. ಏಕೆಂದರೆ, ಬಹಳಷ್ಟು ಎಲ್.ಒ.ಸಿ.ಗಳು ಇಷ್ಯೂ ಆಗೋದು ಬಂದಂಥ ಹಣ ಖರ್ಚು ಮಾಡೋದು, ಅನೇಕ ಸಂದರ್ಭಗಳಲ್ಲಿ ಮಾನ್ಯಮಂತ್ರಿಗಳ ಗಮನಕ್ಕೆ ಬಾರದಂತೆ ಖರ್ಚಾಗಿರಬಹುದು. ಆ ಪರಿಸ್ಥಿತಿ ಇದ್ದರೆ, ಅದನ್ನು ಹೇಳಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಆ ವಿಷಯ ಅವರಿಗೆ ಗೊತ್ತಿದೆ. ಗೊತ್ತಿದ್ದರೂ ಸಹಾ ಪ್ರಶ್ನೆಯನ್ನು ಮತ್ತೆ ಕೇಳುತ್ತಿದ್ದಾರೆ. ಎಲ್.ಒ.ಸಿ. ಡೈರೆಕ್ಟ್ ಆಗಿ ರಿಲೀಸ್ ಆಗುತ್ತೆ. ಯಾವ್ಯಾವ ಚೀಫ್ ಇಂಜಿನಿಯರ್ ಆಫೀಸಿಗೆ ಹೋಗುತ್ತದೆ? ಯಾರ್‍ಯಾರಿಗೆ ಹೋಗುತ್ತದೆ? ಎಲ್ಲಾ ಗೊತ್ತಿದೆ. ಆದರೆ, ಎಲ್.ಒ.ಸಿ. ರಿಲೀಸ್ ಮಾಡುವಂತೆ ಹೇಳಿದ ನಂತರ ಇಷ್ಟು ರಿಲೀಸ್ ಮಾಡಿದ್ದೇವೆ. ಈಗ ಹತ್ತು ಕೋಟಿ ರಿಲೀಸ್ ಮಾಡುವಂತೆ ನಾವು ಕೊಟ್ಟಿರುತ್ತೇವೆ. ಆದರೆ, ಒಂದೊಂದು ಸಲ ಐದು ಕೋಟಿ ಆಗುತ್ತದೆ, ಒಂದೊಂದು ಸಲ ಎಂಟು ಕೋಟಿ ಆಗುತ್ತದೆ, ಅಷ್ಟು ಎಲ್.ಒ.ಸಿ.ರಿಲೀಸ್ ಆಗಿದೆ. ಅದರ ಮೇಲೆ ಹತ್ತೋಟಿ ನಮಗೆ ಬರಬೇಕಲ್ಲ, ಆ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಈಗ ಇಂಜಿನಿಯರ್ಸ್ ಅಪಾಯಿಂಟ್‌ಮೆಂಟ್ ಬಗ್ಗೆ ಕೆಲವೊಂದು ಮಾತನ್ನು ತಾವು ಹೇಳಿದಿರಿ. ಡೈರೆಕ್ಟ್ ಸೆಲೆಕ್ಷನ್ ಮಾಡಿದರು? ಯಾವ ತರಹ ತೆಗೆದುಕೊಳ್ಳುತ್ತಾರೆ? ಯಾವ ತರಹ ತಾವು ಮಾಡುತ್ತೀರಿ? ಎಂಬುದರ ಬಗ್ಗೆ ಈಗಾಗಲೇ ಪಿ.ಡ.ಬ್ಲ್ಯೂ.ಡಿ ಮಂತ್ರಿಗಳು ಹೇಳಿದ್ದಾರೆ. ಯಾವ ದೃಷ್ಟಿಯಿಂದ ಅದನ್ನು ನಾವು ಭರ್ತಿ ಮಾಡಿದ್ದೇವೆ, ಯಾವ ದೃಷ್ಟಿಯಿಂದ ನಾವು ತೆಗೆದುಕೊಂಡಿದ್ದೇವೆ,ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇನ್ನು ಟ್ರಾನ್ಸ್‌ಫರ್ ಬಗ್ಗೆ ಕೂಡ ಕೇಳಿದ್ದಾರೆ. ಅದರ ಬಗ್ಗೆ ಕೂಡ ವಿವರವಾಗಿ ವರದಿ ಕೊಟ್ಟಿದ್ದೇವೆ. ಅದರ ಬಗ್ಗೆ ಹೇಳುವ ಅವಶ್ಯಕತೆ ಇಲ್ಲ. ಇದಿಷ್ಟೇ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.ಮಾನ್ಯ ವಿರೋಧಪಕ್ಷದ ಉಪನಾಯಕರಾಗಲಿ, ನಾಯಕರಾಗಲಿ, ನೀವು ಬ್ಲೈಫರ್‌ಕೇಟ್ ಮಾಡುವುದು ಸರಿಯಲ್ಲ ಎನ್ನತಕ್ಕಂಥ ಅಭಿಪ್ರಾಯ ಅವರು ಹೇಳಿದಿರಾ? ಆ ತರಹ ಒತ್ತಾಯ ಮಾಡಲಿಲ್ಲ, ನಾನು ಕೇಳುವುದು ಇಲಾಖೆಯಲ್ಲಿ ನಿರ್ಧಿಷ್ಟವಾದಂಥ ಅವಧಿಯಲ್ಲಿ ಕೆಲಸವಾಗಬೇಕಾದರೆ, ನಾವೇನಾದರೂ ನಿರ್ಣಯ

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಏಕೆಂದರೆ, 'ಉಪನಾಯಕರು' ಎಂದು ಹೇಳಿರುವುದರಿಂದ ಹೇಳುತ್ತಿದ್ದೇನೆ. ಅವರು ಏನು ಹೇಳಿದರೋ ನನಗೆ ಗೊತ್ತಿಲ್ಲ. ಅವರು ಮಾತನಾಡತಕ್ಕಂಥ ಸಂದರ್ಭದಲ್ಲಿ ನಾನು ಇರಲಿಲ್ಲ. ನಾನು ಹೇಳುತ್ತಿದ್ದೇನೆ. Bifurcation is a must and earlier the better.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಉಪನಾಯಕರು ಏನು ಒಂದು ವಿಷಯವನ್ನು ವ್ಯಕ್ತಮಾಡಿದ್ದಾರೆ. ಅದಕ್ಕೆ ನಾನು ಸಂಪೂರ್ಣವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ, ಅವರು ಪ್ರಾಕ್ಟಿಕಲ್ ಆಗಿ ಕೆಲಸಮಾಡಿದವರು. ನಾನು ವಿರೋಧಪಕ್ಷದಲ್ಲಿದ್ದಾಗ, ಅವರು ಮಂತ್ರಿಗಳಾಗಿ ನಾನು ನೋಡಿದ್ದೇನೆ. ಕೆಲವೊಂದು ಸಂದರ್ಭ ಬಂದಾಗ ನೇರವಾಗಿ ಉತ್ತರ ಕೊಡುವುದು, ನೇರವಾಗಿ ಕಾರ್ಯಕ್ರಮ ತೆಗೆದುಕೊಳ್ಳುವುದು. ಏನೇ ವಿಷಯವಾಗಲಿ ಒಳ್ಳೆಯ ದೃಷ್ಟಿಯಿಂದ ಅವರು ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದರು. ಅವರ ಸೂಚನೆ ಬಗ್ಗೆ ನಾನು ಅಭಿನಂದನೆಗಳನ್ನು ಸಲ್ಲಿಸಿ, ಇಂಥ ಒಂದು ಸಂದರ್ಭ ಬಂದಾಗ, ನಮ್ಮ ಇಲಾಖೆ ಮೇಲೆ ಹತೋಟಿ ಇರಬೇಕಾಗುತ್ತದೆ, ಎನ್ನತಕ್ಕ ಒಂದು ಅಭಿಪ್ರಾಯ ಇಟ್ಟುಕೊಂಡು ನಾವು ಈಗಾಗಲೇ ಮಾಡಿದ್ದೇವೆ. ಸಿಬ್ಬಂದಿ ವರ್ಗಕ್ಕೆ ತೊಂದರೆ ಆಗತಕ್ಕಂಥ ಸಂದರ್ಭ ಬಂದಾಗ ಕಾಮನ್, ಪ್ರೊಮೋಷನ್‌ಗಾಗಲಿ ಅಥವಾ ಇನ್ನಾವುದೇ ವಿಷಯ ಬಂದಾಗ ಆ ದೃಷ್ಟಿಯಿಂದ ವಿಚಾರ ಮಾಡುತ್ತೇವೆ ಎನ್ನತಕ್ಕಂಥ ಅಭಿಪ್ರಾಯವನ್ನು ವ್ಯಕ್ತ ಮಾಡಿ, ಇನ್ನುಳಿದ ಹಲವಾರು ವಿಷಯಗಳ ಬಗ್ಗೆ ಚರ್ಚೆ ನಡೆದಾಗ, ಸನ್ಮಾನ್ಯ ಹಲವಾರು ಮಾನ್ಯ ಸದಸ್ಯರುಗಳು ಕೆಲವು ವಿಷಯಗಳನ್ನು ಹೇಳಿದ್ದಾರೆ.

ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಯಾವ್ಯಾವ ಯೋಜನೆಗಳನ್ನು ಒಂದು ಪೀರಿಯಡ್‌ನಲ್ಲಿ ಮುಗಿಸುತ್ತೇವೆಂಬುದನ್ನು ಈಗಾಗಲೇ ಒಂದು ಪೀಠಿಕೆಯಲ್ಲಿ ಕೊಟ್ಟಿದ್ದೇವೆ. ಆ ದೃಷ್ಟಿಯಿಂದ ಈ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಎಲ್ಲಾ ವಿಷಯದಲ್ಲೂ ಕೂಡ ನಿರ್ದಿಷ್ಟವಾದಂಥ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಆ ಒಂದು ಸದಾವಕಾಶ ಸದನ ನನಗೆ ನೀಡಬೇಕು. ಆ ಸದವಕಾಶ ಸಿಕ್ಕರೆ ಮಾತ್ರ ಕೆಲಸ ಮಾಡಲಿಕ್ಕೆ ಸಾಧ್ಯ. ಈಗಾಗಲೇ ಉಪನಾಯಕರು ಹೇಳಿದರು. ಆ ದೃಷ್ಟಿಯಿಂದ ಬೆಂಬಲ ಇರಬೇಕಾಗುತ್ತದೆ, ಇಲ್ಲದೆಹೋದರೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಹೋದರೆ, ಯಾರೋ ಸುಮ್ಮನೆ ಅಡ್ಡ ಬಂದು 'ಬೆಕ್ಕು ಅಡ್ಡ ಬಂತು' ಎಂದು ನಾವು ಹಳ್ಳಿಯಲ್ಲಿ ಹೇಳುತ್ತೇವೆ, ಆ ದೃಷ್ಟಿಯಿಂದ ಆಗಬಾರದು. ಆ ಅಭಿಪ್ರಾಯದ ಹಿನ್ನೆಲೆಯಲ್ಲಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇನ್ನು ಕೆಲವೊಂದು ಸಂದರ್ಭಗಳಲ್ಲಿ ನಾವು ಕೆಲವೊಂದು ಇರಿಗೇಷನ್ ಪ್ರಾಜೆಕ್ಟ್ ಮೇಲೆ ಸೆಕ್ಯೂರಿಟಿ ಮೆಸರ್ಸ್, ಪ್ರೊಹಿಬಿಟೆಡ್ ಏರಿಯಾ ಮಾಡಿರತಕ್ಕ ಒಂದು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಸಾರ್ವಜನಿಕವಾಗಿ ಕೆಲವು ಜನರಿಗೆ ತೊಂದರೆಯಾಗಿರಬಹುದು, ಆದರೆ, ಅದು ಅನಿವಾರ್ಯ. ಆ ದೃಷ್ಟಿಯಿಂದ ಕೆಲವು ವರ್ಷಗಳವರೆಗೆ ಸೆಕ್ಯೂರಿಟಿ ಮೆಸರ್ಸ್ ಅನ್ನು ಮುಂದುವರೆಸಬೇಕಾಗುತ್ತದೆ. ಅದರ ಬಗ್ಗೆ ಈ ಸಂದರ್ಭದಲ್ಲಿ ನಾನು ವಿವರವಾಗಿ ಹೇಳಲಿಕ್ಕೆ ಹೋಗುವುದಿಲ್ಲ. ಎಲ್ಲಾ ಬೇಡಿಕೆಗಳ ಮೇಲೆ, 2000 ಇಸವಿಯೊಳಗೆ, ಕಾವೇರಿ ಜಲಾನಯನ ಪ್ರದೇಶಕ್ಕಾಗಲಿ, ಕೃಷ್ಣಾ ಜಲಾನಯನ ಪ್ರದೇಶಕ್ಕಾಗಲಿ, ಐದು ಸಾವಿರ ಕೋಟಿ ರೂಪಾಯಿಗಳ ಹಣಕಾಸಿನ ವ್ಯವಸ್ಥೆ ಮಾಡಬೇಕಾಗಿದೆ. ಕೃಷ್ಣಾ ಜಲಾನಯನ ಯೋಜನೆ ಇನ್ನೂ ಆಗಿಲ್ಲ. ವರ್ಲ್ಡ್ ಬ್ಯಾಂಕಿನಿಂದ ರೀಇಂಬರ್ಸ್ ಮಾಡುವಂಥ ಕಾರ್ಯಕ್ರಮ ಮಾಡಿದ್ದೇವೆ. ಇನ್ನು ಹೆಚ್ಚಿನ ಹಣಕಾಸಿನ ವ್ಯವಸ್ಥೆ ಮಾಡಲಿಕ್ಕೆ ಅದು ಇರಿಗೇಶನ್ ಬಾಂಡ್ಸ್ ಇರಬಹುದು, ಒಕ್ಕಲುತನ ಮಾಡತಕ್ಕಂಥ ಸಮಾಜದವರು ಏನಾದರೂ ಮುಂದೆ....ಆದರೆ, ಆ ದೃಷ್ಟಿಯಿಂದ ಷೇರು ಬಂಡವಾಳ ಏನಾದರೂ ತೆಗೆದುಕೊಳ್ಳುವುದಕ್ಕೆ

ಸಾಧ್ಯವಿದೆಯೇ ಎನ್ನತಕ್ಕಂಥ ಒಂದು ವಿಶೇಷವಾದಂಥ ಪರಿಶೀಲನೆ ಮಾಡುತ್ತಿದ್ದೇನೆ. ಸಂಪೂರ್ಣ ವಿವರವಾದಂಥ ಒಂದು ವರದಿಯನ್ನು... ಬಹಳ ಕಡಿಮೆ ಸಮಯದಲ್ಲಿ... ಏಕೆಂದರೆ, ನಾನು ಈ ಕಾರ್ಯಕ್ಷೇತ್ರವನ್ನು ಅಂಗೀಕಾರ ಮಾಡಿ ಸುಮಾರು ಒಂದು ತಿಂಗಳಾಯಿತು, ಎಲ್ಲಾ ವಿಷಯಗಳನ್ನು ಗ್ರಾಸ್ ಮಾಡಲಿಕ್ಕೆ ಇನ್ನೂ ಸಾಧ್ಯವಾಗಿಲ್ಲ, ದಯಮಾಡಿ, ಈ ಸಮಯದಲ್ಲಿ ಒಂದು ಅವಕಾಶ ನನಗೆ ಕೊಡಬೇಕು, ಮುಂದೆ ಬರತಕ್ಕಂಥ ಸಮಯದಲ್ಲಿ ಏನಾದರೂ ಸದವಕಾಶ ಸಿಕ್ಕರೆ, ಆ ದಿಸೆಯಲ್ಲಿ ಕೆಲಸ ಮಾಡುತ್ತೇನೆ ಎನ್ನತಕ್ಕಂಥ ಅಭಿಪ್ರಾಯವನ್ನು ವ್ಯಕ್ತಮಾಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್.ಪಾಟೀಲ್ : ಶ್ರೀಮಾನ್ ಬನ್ನಿಕೋಡ್‌ರವರು ಮಧ್ಯಪ್ರವೇಶಮಾಡುವುದು ಅವರ ಒಂದು ಸ್ವಭಾವ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಅವರಿಗೆ ಸಂಶಯ ಬಂದಿದೆ. ಸಚಿವಸಂಪುಟವನ್ನು ವಿಸ್ತಾರ ಮಾಡುವ ಬಗ್ಗೆ ರಾಜ್ಯಪಾಲರಿಂದ... ಎನ್ನುವುದು ಪತ್ರಿಕೆಯಲ್ಲಿ ಬಂದಿದೆ. ಅದರ ಬಗ್ಗೆ ಏನಾದರು ಸಂಶಯ ಬಂದಿರಬಹುದೇನೋ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನಾನು ಸಂಶಯದ ಬಗ್ಗೆ ಹೇಳುತ್ತಿಲ್ಲ. ಹಣಕಾಸಿನ ವ್ಯವಸ್ಥೆಯಾಗದಿದ್ದರೆ ಏನು ಮಾಡಬೇಕು ಎನ್ನತಕ್ಕ ಹಿನ್ನೆಲೆಯಲ್ಲಿ ಮಾತನಾಡುತ್ತಿದ್ದೇನೆ. ಸಚಿವಸಂಪುಟ ವಿಸ್ತರಣೆಯಾಗಲಿ, ಬದಲಾವಣೆಯಾಗಲಿ ಬಿಡಲಿ. ಯಾರು ಮಂತ್ರಿಗಳಾಗಿರುತ್ತಾರೋ ಅವರಿಗೆ ಜವಾಬ್ದಾರಿ ಇರುತ್ತದೆ. ನಾನು ಇಲ್ಲಿ ಇರಬಹುದು ಅಥವಾ ಹೋಗಬಹುದು. ಅದು ಪ್ರಶ್ನೆಯಲ್ಲ. ನಮ್ಮಲ್ಲಿ ಅನುಕಂಪವಿರಬೇಕು, ಯೋಜನೆಗಳ ಬಗ್ಗೆ ಕಳಕಳಿಇರಬೇಕು. ಬಡತನದಲ್ಲಿರತಕ್ಕ ಸಮಾಜವನ್ನು ಯಾವ ದೃಷ್ಟಿಯಿಂದ ಮೇಲ್‌ಮಟ್ಟಕ್ಕೆ ತರಬೇಕು ಎಂದು ಏನು ಪಂಚವಾರ್ಷಿಕ ಯೋಜನೆಯಲ್ಲಿ ಯೋಜನೆಯನ್ನು ಹಾಕಿ ಕೊಂಡಿದ್ದೇವೋ ಆ ದೃಷ್ಟಿಯಿಂದ ನಾವು ಹಿಂದೆ ಬಿದ್ದಿದ್ದೇವೆ. ಆ ಆತಂಕ ನನಗಾಗುತ್ತದೆ. ನಾನು ಪಿಟೀಷನ್ ಸಮಿತಿಯಲ್ಲಿ ಪ್ರವಾಸ ಮಾಡಿದಾಗ. ಸನ್ಮಾನ್ಯ ಅಧ್ಯಕ್ಷರೆ ಒಂದು ಪತ್ರ ಬರೆದಿದ್ದೇನೆ. ತಮಿಳುನಾಡಿನಲ್ಲಿ ಪ್ರವಾಸ ಮಾಡಿಬಂದಮೇಲೆ. ಅಲ್ಲಿರತಕ್ಕ ಪ್ರದೇಶವನ್ನು ನೋಡಿದಾಗ ನನಗೆ ಕಣ್ಣೀರು ಬಂದಿತು. ನಾನು ಮಂತ್ರಿಯಾಗುವ ಮೊದಲೇ ಆ ಪತ್ರವನ್ನು ನಿಮಗೆ ಬರೆದಿದ್ದೇನೆ. ನಮ್ಮಲ್ಲಿ ಈ ರೀತಿಯ ಪರಿಸ್ಥಿತಿ ಇರಬಾರದಾಗಿತ್ತು. ನೀರಾವರಿಯ ಬಗ್ಗೆ ಏನು ಕಾರ್ಯಕ್ರಮವಿದೆ, ಟೈಮ್ -ಬೌಂಡ್ ಲಿಮಿಟ್ ಕಾರ್ಯಕ್ರಮವೆಂದು ಏನು ನಮ್ಮ ಬಸವರಾಜ್‌ಪಾಟೀಲ್ ಅಟ್ಟೂರ್ ರವರು ಹೇಳಿದ್ದಾರೋ ಆ ಕಾರ್ಯಕ್ರಮವನ್ನು ಮಾಡಬೇಕು.

ಈ ಸಂದರ್ಭದಲ್ಲಿ ಶ್ರೀಮತಿ ಮೋಟಮ್ಮನವರು ವಿಶೇಷವಾದಂತಹ ಸೂಚನೆಯನ್ನು ಕೊಟ್ಟಿದ್ದಾರೆ. ಯಾರಾದರೂ ಒಳ್ಳೆಯ ಇಂಜಿನಿಯರ್ ಇದ್ದರೆ ಅವರನ್ನು ಗುರುತಿಸಿ ಪ್ರೋತ್ಸಾಹವನ್ನು ಕೊಡಿ. ಅವರಿಗೆ ರಾಜ್ಯಮಟ್ಟದ ಪ್ರಶಸ್ತಿಯನ್ನು ಕೊಡಿ ಎಂದು ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ನಮ್ಮ ಇಲಾಖೆಯಲ್ಲಾಗಲಿ, ಪಿ.ಡಬ್ಲ್ಯೂ.ಡಿ.ಇಲಾಖೆಯಲ್ಲಾಗಲಿ ಅಂತಹ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ಯಾವ ಈ ನಾಡಿನಲ್ಲಿ ವಿಶ್ವೇಶ್ವರಯ್ಯನವರು ದುಡಿದು ಹೋಗಿದ್ದಾರೆ, ಮೈಸೂರು ಮಹಾರಾಜರು ದುಡಿದುಹೋಗಿದ್ದಾರೆ, ಮಿರ್ಜಾ ಇಸ್‌ಮಾಯಿಲ್ ದುಡಿದು ಹೋಗಿದ್ದಾರೆ, ಕರ್ನಾಟಕ ಕಟ್ಟತಕ್ಕ ಕಾರ್ಯಕ್ರಮಕ್ಕೆ ಟಿಪ್ಪುಸುಲ್ತಾನರು ಅಡಿಗಲ್ಲನ್ನು ಹಾಕಿದ್ದಾರೆ ಅಂತ ಕರ್ನಾಟಕದ ಕಾರ್ಯದಲ್ಲಿ ನಾವು ಎಲ್ಲರಿಗೂ ಕೂಡ ಒಮ್ಮಸ್ಸಿನಿಂದ.. ಕೆಲಸ ಮಾಡಲು ನಮಗೆ ಅವಕಾಶ ಇದೆ. ಆ ದೃಷ್ಟಿಯಿಂದ ಕೆಲಸ ಮಾಡೋಣ. ಈ ಸಂದರ್ಭದಲ್ಲಿ ಉತ್ತರ ಕರ್ನಾಟಕದಲ್ಲಿರತಕ್ಕ ಹಿಪ್ಪರಗಿ ಬ್ಯಾರೇಜ್ ಆಗಲಿ, ಮಾದಾಯಿ ಯೋಜನೆ, ಮುಳವಾಡಿ ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳಲು ನಾವು ಬಹಳ ಕಡಿಮೆ ಹಣಕಾಸಿನ ವ್ಯವಸ್ಥೆಯನ್ನು

ಮಾಡಿದಂತಹ ಒಂದು ಕೊರಗನ್ನು ನಮ್ಮ ಎದುರುಗಡೆ ಹಲವಾರು ಸದಸ್ಯರು ಹೇಳಿದ್ದಾರೆ. ನಾನು ಇದರ ಹಿನ್ನೆಲೆಯಲ್ಲಿ ಒಂದು ಮಾತನ್ನು ಹೇಳುತ್ತೇನೆ.

(ಗೊಂದಲ)

ಹಿಪ್ಪರಗಿ ಯೋಜನೆಗೆ, ಮಾದಾಯಿ ಯೋಜನೆಯಾಗಲಿ, ಮುಳವಾಡಿ ಏತ ಯೋಜನೆಗಳಿಗೆ ಏನು ಒಂದು ಹಣಕಾಸಿನ ವ್ಯವಸ್ಥೆಯನ್ನು ಮಾಡಲಿಕ್ಕೆ ಉತ್ತರಕರ್ನಾಟಕದ ಸದಸ್ಯರ ಪರವಾಗಿ ಮಾತ್ರವಲ್ಲ, ಈ ಸದನದ ಸದಸ್ಯರ ಪರವಾಗಿ...

ಒಬ್ಬ ಮಾನ್ಯ ಸದಸ್ಯರು : ಪ್ರಪಂಚ ಬ್ಯಾಂಕಿನ ಸಹಾಯದ ಬಗ್ಗೆ ತಾವು ಹೇಳಬೇಕಾಗುತ್ತದೆ.

ಶ್ರೀ ವಾಟಾಳ್‌ನಾಗರಾಜ್ : ಉತ್ತರಕರ್ನಾಟಕ ದಕ್ಷಿಣಕರ್ನಾಟಕ ಎಂದು ವರ್ಗವಿಲ್ಲ ಸಮಗ್ರ ಕರ್ನಾಟಕ ಎಂದು ಹೇಳಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನಾನು ಈ ಮಾತನ್ನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಮಾನ್ಯ ವಾಟಾಳ್‌ನಾಗರಾಜ್‌ರವರ ತಮ್ಮ ಮಾತನ್ನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಉತ್ತರಕರ್ನಾಟಕ ದಕ್ಷಿಣ ಕರ್ನಾಟಕ ಎನ್ನುವ ಅಭಿಪ್ರಾಯ ಇಲ್ಲ, ಅಲ್ಲಿ ಅಭಿವೃದ್ಧಿಯಾಗಿಲ್ಲ ಎನ್ನತಕ್ಕ ಅಭಿಪ್ರಾಯವಿದೆ. ಆದುದರಿಂದ ಹೆಚ್ಚಿನ ಹಣವನ್ನು ಕೊಡಬೇಕು ಎಂದು ಹೇಳುತ್ತೇವೆ.

ಶ್ರೀ ಆರ್.ವಿ. ದೇಶ್‌ಪಾಂಡೆ : ಉತ್ತರಕರ್ನಾಟಕದ ಶಾಸಕರು ಬಂದಿದ್ದರು, ಆ ಪ್ರಕಾರ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಹಿಪ್ಪರಗಿ ಬ್ಯಾರೇಜ್‌ಗೆ, ಮಾದಾಯಿ ಯೋಜನೆಗೆ, ಮುಳವಾಡಿ ಏತ ನೀರಾವರಿಯೋಜನೆಗೆ ಇರತಕ್ಕ ಹಣಕಾಸಿನ ವ್ಯವಸ್ಥೆ ಬೇಕು. ಆ ಹಣಕಾಸಿನ ವ್ಯವಸ್ಥೆಯನ್ನು ಮಾಡಲು ನಾನು ಈಗಾಗಲೇ ಮುಖ್ಯಮಂತ್ರಿಗಳಲ್ಲಿ ಕೋರಿದ್ದೇನೆ. ಅವರು ಇದರ ಬಗ್ಗೆ ಸ್ಪಂದನ ಕೊಟ್ಟಿದ್ದಾರೆ. ಮುಖ್ಯಮಂತ್ರಿಗಳು ಸದನದಲ್ಲಿ ಉತ್ತರಕೊಡತಕ್ಕ ಸಮಯದಲ್ಲಿ ಒಂದು ನಿರ್ಣಯವನ್ನು ಮಾಡಿ ಇದರ ಬಗ್ಗೆ ಹಣಕಾಸಿನ ವ್ಯವಸ್ಥೆಯನ್ನು ಮಾಡುತ್ತೇವೆ ಎನ್ನತಕ್ಕ ಅಭಿಪ್ರಾಯವನ್ನು ಹೇಳಿದ್ದಾರೆ. ಈ ದೃಷ್ಟಿಯಿಂದ ಎಲ್ಲಾ ಯೋಜನೆಗೆ.. ಶ್ರೀ ಬನ್ನಿಕೋಡ್ ಕೂಡ ಏನು ಹೇಳಿದ್ದಾರೆ. ಅವರ ಯೋಜನೆ ಬಗ್ಗೆ ಕೂಡ ಪ್ರಯತ್ನ ಮಾಡುತ್ತೇನೆಂದು ಹೇಳಿ ಈ ಒಂದು ಬೇಡಿಕೆಯನ್ನು ಸದನದಲ್ಲಿ ಮುಂದಿಟ್ಟಿದ್ದೇನೆ. ಅದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿ ನನ್ನ ಮಾತನ್ನು ಮುಗಿಸುತ್ತೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ಇರಿಗೇಷನ್ ಡಿಪಾರ್ಟ್‌ಮೆಂಟ್ ಬಗ್ಗೆ ಉತ್ತರ ಕೊಡುವಂಥ ಸಮಯದಲ್ಲಿ ಅತ್ಯಂಥ ಪ್ರಮುಖವಾದಂತಹ ಒಂದು ವಿಷಯದ ಬಗ್ಗೆ ನಾನು ಮಾನ್ಯ ಮಂತ್ರಿಗಳ ಗಮನ ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆ ಕರ್ನಾಟಕ ಕಾವೇರಿ ಬೇಸಿನ್ ಇರಿಗೇಷನ್ ಈ ಪ್ರೊಟೆಕ್ಷನ್ ಆರ್ಡಿನೆನ್ಸ್ ಒಂದು ಹೊರಡಿಸಿದ್ದಾರೆ. ಈಗಾಗಲೇ ಒಂದು ಆರ್ಡಿನೆನ್ಸ್‌ನ್ನು ತಂದು ಬಿಲ್ಲನ್ನು ಈ ಸದನದಲ್ಲಿ ಪಾಸ್ ಮಾಡಬೇಕಾಗಿತ್ತು. ಆರು ತಿಂಗಳೊಳಗಾಗಿ ಅಥವಾ ಸದನ ಸೇರುವಂತಹ ಆರು [illegible]

ನಾನು ನೇರವಾಗಿ ಸಚಿವರನ್ನು ಕೇಳುತ್ತೇನೆ. ಇನ್ನು ನಾಲ್ಕಾರು ದಿವಸದೊಳಗಾಗಿ ಈ ಬಿಲ್ಲನ್ನು ಇಲ್ಲಿ ತಂದು ಪಾಸ್ ಮಾಡುವಂತಹ ಚಿಂತನೆ ಏನಾದರೂ ಇದೆಯೇ? ಅಥವಾ ಈ ಒಂದು ಆರ್ಡಿನೆನ್ಸ್ ತಂದು ಇದು ಕೇವಲ ಪ್ರಚಾರಕ್ಕಾಗಿ ಆಯಿತು ಎಂದು ಆಗದೆ, ಮುಂದೆ ಅನಾಹುತಕ್ಕೆ ಅವಕಾಶ ಮಾಡಿಕೊಡದೆ ಈ ಸದನ ಮುಗಿಯುವುದರೊಳಗಾಗಿ ಇದನ್ನು ಪಾಸ್ ಮಾಡುವುದು ಇದೆಯೇ ಎನ್ನುವುದಕ್ಕೆ ನಾನು ತಮ್ಮಿಂದ ಸ್ಪಷ್ಟವಾದ ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ ಈ ಸದನದಲ್ಲಿ ನಾವು ಬಿಲ್ಲನ್ನು ತಂದು ಸಮಯಕ್ಕನುಗುಣವಾಗಿ ಇಂಟ್ರಡ್ಯೂಸ್ ಮಾಡಿ ಬಿಲ್ಲನ್ನು ಪಾಸ್ ಮಾಡಿಕೊಳ್ಳುತ್ತೇವೆ. ಬಿ.ಜೆ.ಪಿ. ಮುಖಂಡರುಗಳಿಗೆ ಬಹಳ ಆತುರ. ಇವರು ಪ್ರತಿಯೊಂದರಲ್ಲೂ ಆತುರ ಮಾಡಿ ನಮ್ಮನ್ನು ಎಲ್ಲಾದರೂ ಸಿಕ್ಕಿಸಿಬಿಡುತ್ತಾರೆ. ಏಕೆಂದರೆ ಇವರು ರಾಮ ಪೂಜೆ ಮಾಡುವವರು. ಶ್ರೀ ರಾಮಪ್ಪನವರ ಮೇಲೆ ಒಂದು ಶಬ್ದ ಮಾತನಾಡಲಿಲ್ಲ, ಏಕೆಂದರೆ ರಾಮನ ಬಗ್ಗೆ ಬಹಳ ಅನುಕಂಪವಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ ಯೋಗ್ಯ ಸಮಯದಲ್ಲಿ ಈ ಸದನಕ್ಕೆ ವಿಶೇಷವಾಗಿ ಗೌರವ ಬರುವ ಹಾಗೆ ಆ ಬಿಲ್ಲನ್ನು ತಂದು...

ಶ್ರೀ ವಾಟಾಳ್ ನಾಗರಾಜ್ : ಈ ಸದನ ಮುಗಿಯುವುದೊಳಗೆ ಸುಗ್ರೀವಾಜ್ಞೆಯಾಗಲೇ ಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಕಾನೂನು ಪ್ರಕಾರ ಆಗಲೇಬೇಕು. ಇದು ಕೇವಲ ಪ್ರಚಾರಕ್ಕೋಸ್ಕರವಲ್ಲ. ಅದಕ್ಕೆ ಉತ್ತರವನ್ನು ತಮ್ಮಿಂದ ನಿರೀಕ್ಷೆ ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು : ಸಮಸ್ಯೆನೇ ಇಲ್ಲದೇ ಇರತಕ್ಕಂಥ ಸಮಯದಲ್ಲಿ ಸಮಸ್ಯೆ ಏಕೆ ತರುತ್ತಿದ್ದೀರಿ? ನಾನು ನಿಮಗೆ ಅವಕಾಶ ಕೊಡಲಿಲ್ಲ. ಪಿತೂರಿ ಎನ್ನತಕ್ಕಂಥ ಶಬ್ದ ಕಡತಕ್ಕೆ ಹೇಗೆ ಹೋಗುತ್ತದೆ. ಮಾನ್ಯ ಯಡಿಯೂರಪ್ಪನವರೆ ಅವರು ಈ ಸದನಕ್ಕೆ ಗೌರವ ಬರತಕ್ಕಂಥ ರೀತಿಯಲ್ಲಿ ನಾವು ನಡೆದುಕೊಳ್ಳುತ್ತೇವೆಂದು ಅವರು ಹೇಳಿದ್ದಾರೆ. ಅದಕ್ಕಿಂತ ಹೆಚ್ಚು ಏನು ನಿರೀಕ್ಷಣೆ ಕೊಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ನಮಗೆ ಅನುಮಾನವಿದೆ ಅಧ್ಯಕ್ಷರೆ.

ಅಧ್ಯಕ್ಷರು : ನಿಮ್ಮ ಅನುಮಾನವನ್ನು ನಿವಾರಣೆ ಮಾಡುವುದಕ್ಕೆ 179 ಸದಸ್ಯರುಗಳಿಂದ ಸಾಧ್ಯವಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಡಿಸಾಲ್ವ್ ಮಾಡಿ ಮನೆಗೆ ಹೋಗುವ ಸಂದರ್ಭವಿದೆ.

ಅಧ್ಯಕ್ಷರು : ಈ ಸದನ ನೀವು ಇಬ್ಬರು ಹೇಳಿದ ಹಾಗೆ ನಡೆಯಬೇಕೆಂದು ಹೇಳುತ್ತಿದ್ದೀರೇನು?

(Interruptions)

MR. SPEAKER : Nothing will go on record. Now I call Sri Ranganath to speak.

(Interruptions)

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೆ ಅವರ ಕಳಕಳಿಯನ್ನು ವ್ಯಕ್ತಮಾಡಿದ್ದಾರೆ. ಇವತ್ತು ಪರ್‌ಫಾರ್‌ಮೆನ್ಸ್ ಬಜೆಟ್ ಏನು ಕೊಟ್ಟಿದ್ದಾರೆ. ಹೇಮಾವತಿಯ ಕೆಳಗಡೆ ಹೇಮಾವತಿ ಲೆಫ್ಟ್ ಬ್ಯಾಂಕ್ ಕೆನಾಲ್, ಮತ್ತು ಕೆ.ಆರ್. ಪೇಟೆಯಲ್ಲಿ ಬರತಕ್ಕಂಥ ಸಾಹುಕಾರ ಚನ್ನಯ್ಯ ಕೆನಾಲ್ ಅದರಲ್ಲಿ ತಮ್ಮ ಗುರಿ 44,508 ಹೆಕ್ಟೇರ್.

ಪೇಜ್ 2ರಲ್ಲಿ ಹೇಮಾವತಿ ಕೆನಾಲ್, ತುಮಕೂರು (ಅ) ಹೆಂಗ್‌ನಲ್ಲಿ, ತುಮಕೂರು ಬ್ರಾಂಚ್‌ನಲ್ಲಿ 95,909 ಹೆಕ್ಟಾರ್‌ನ್ನು ನಾವು ನಿರ್ಮಾಣ ಮಾಡುತ್ತೇವೆಂದು ಪ್ರಸ್ತಾಪ ಮಾಡಿದ್ದೀರಿ. ಇದೇ ರೀತಿ ನಾಗಮಂಗಲ ಟಿ. ಮರಿಯಪ್ಪ ಕೆನಾಲ್‌ನಲ್ಲಿ 59,488 ಹೆಕ್ಟೇರ್ಸ್ ಮಾಡಬೇಕೆಂದಿದೆ. ತಮಗೆ ಗೊತ್ತಿರುವಂತೆ ಹೇಮಾವತಿ ಕೆರೆಯಿಂದ 6 ಲಕ್ಷ ಎಕರೆ ನೀರಾವರಿ ವ್ಯವಸ್ಥೆ ಆಗಬೇಕಾಗಿತ್ತು. ಆದರೆ ದುರದೃಷ್ಟವಶಾತ್ 8ನೇ ಯೋಜನೆಯಲ್ಲಿ ಈ 3 ಭಾಗಗಳನ್ನೂ ತೆಗೆದುಕೊಳ್ಳುತ್ತೇವೆಂದು ಪ್ರಸ್ತಾಪ ಮಾಡಿದ್ದಾರೆ. ಇದು ಏನು ತೋರಿಸುತ್ತದೆಂದರೆ, ತಮ್ಮ ಕಳಕಳಿಗೆ ಈ ಗುರಿಯನ್ನು ಮುಟ್ಟುವುದು ಬಹಳ ದೂರವಾಗುತ್ತಾ ಹೋಗುತ್ತಿದೆ. ಪೇಜ್ 84ರಲ್ಲಿ ಹೇಮಾವತಿ ಕೆನಾಲ್ ಜೋನ್ ಎಂದು ಹೆಡಿಂಗ್ ಇದೆ. ಅದರಲ್ಲಿ 2ನೇ ಪ್ಯಾರಾದಲ್ಲಿ

"Out of 44,508 Hectares under this canal, it is proposed to create entire irrigation potential by the end of 1992-93. 8000 Ha. of potential has been created during 90-91 for which joint inspection is to be done. It is programmed to create irrigation potential of 22,500 Ha.during 91-92 & 14,000 Ha of potential during 92-93."

ಎಂದು ಪ್ರಸ್ತಾಪ ಮಾಡಿದ್ದೀರಿ. ಇದೇರೀತಿ ಪೇಜ್ 3ರಲ್ಲಿ ಕೊನೇ ಪ್ಯಾರಾ Tumkur Branch Canal (T. Subramanima Canal)- " The total atchkat under this branch canal is 95,909 Ha.The working group on Major and Medium irrigation programme for eighth Five Year Plan in its August 1989 report has proposed to create entire potential during eighth Five Year Plan." ಎಂದು ಹೇಳಿದ್ದಾರೆ.

ಇದನ್ನು ತಾವು ಪುನರ್ ಪರಿಶೀಲಿಸಬೇಕಾಗುತ್ತದೆ? ಪುನರ್ ವಿಮರ್ಶೆ ಮಾಡಬೇಕಾಗುತ್ತದೆ. ಇದು ಇಷ್ಟು ದೂರ ಹೋದರೆ ಆಗುವುದಿಲ್ಲ. ತಮಗೆ ಗೊತ್ತಿರುವಂತೆ ಹೇಮಾವತಿ ಪ್ರಾರಂಭ ಮಾಡಿದಾಗ 16 ಕೋಟಿ ರೂಪಾಯಿ ಇದ್ದದ್ದು ಇವತ್ತು ಅದು ಬಹಳ ಜಾಸ್ತಿಯಾಗಿದೆ. ಇದು ತಮ್ಮ ವರದಿಯಲ್ಲಿದೆ. ಇದನ್ನು ಹೀಗೆಯೇ ಬಿಟ್ಟರೆ, ನಾಳೆ ನಾವು ಆಕ್ಟ್‌ನ್ನು ತಂದು ಆರ್ಡಿನೆನ್ಸ್‌ನ್ನು ಮಾಡಿದರೆ ಇಷ್ಟಕ್ಕೇ ನಮ್ಮ ಜವಾಬ್ದಾರಿ ಮುಗಿಯುವುದಿಲ್ಲ. ಇವತ್ತು 4 ಜಿಲ್ಲೆಗಳಿಗೆ ನಾವು ನೀರನ್ನು ಕೊಡತಕ್ಕಂತದ್ದು. ಹಾಸನ, ಮೈಸೂರು, ಮಂಡ್ಯ ಮತ್ತು ತುಮಕೂರು ಜಿಲ್ಲೆಗಳಿಗೆ ನೀರನ್ನು ಕೊಡಬೇಕಾಗುತ್ತದೆ. ಇದಕ್ಕಾಗಿ ತೀವ್ರಗತಿಯಿಂದ ಕೆಲಸಮಾಡಬೇಕು. ತಾವು ಹೇಳುತ್ತಿದ್ದೀರಿ, ಎಲ್.ಒ.ಸಿ. ತೊಂದರೆ ಬರುತ್ತದೆ, ಆ ತೊಂದರೆ ಬರುತ್ತದೆ, ಈ ತೊಂದರೆ ಬರುತ್ತದೆ ಎಂದು. ಇದು ಹಾಗಲ್ಲ. ತಾವು ಹಣಕಾಸಿನ ಮಂತ್ರಿಗಳ ಜೊತೆ, ಹಣಕಾಸಿನ ಇಲಾಖೆಯ ಕಾರ್ಯದರ್ಶಿಯವರ ಜೊತೆ ಕುಳಿತು ಮಾತನಾಡಿ ನೀರಾವರಿಗೆ ಬರಬೇಕಾದ ಹಣವನ್ನು ತೆಗೆದಿಡಲೇ ಬೇಕು, ಎಲ್.ಒ.ಸಿ. ವಿತಕ್ಕೆ ಮಾಡಿದ್ದರು ಎಂದರೆ, ಇದು ಇತ್ತೀಚಿನ ಒಂದು ಪರಿಪಾಠ. ಇದು ತಮಗೂ

ಗೊತ್ತಿದೆ ದುಡ್ಡಿಲ್ಲ ಎಂದಾಗ ಎಲ್.ಒ.ಸಿ. ಇಂಟ್ರಡ್ಯೂಸ್ ಮಾಡಿ 10 ಸಾವಿರ ಕೊಡಿ, 2 ಲಕ್ಷ ಕೊಡಿ, 3ಲಕ್ಷ ಕೊಡಿ ಎಂದು...

ಶ್ರೀ ಹೆಚ್. ಏಕಾಂತಯ್ಯ : ಅದಕ್ಕೆ ಒಂದು ನಿಗದಿಯಾದ ರೂಲ್ಸ್ ಇದೆ.

ಶ್ರೀ ಕೆ.ಹೆಚ್. ರಂಗನಾಥ್ : ಇದಕ್ಕೆ ಏನೂ ರೂಲ್ಸ್ ಇಲ್ಲ. ಅದನ್ನು ಬದಲಾವಣೆ ಮಾಡಿಕೊಳ್ಳಬಹುದು. ಅದು ಕಷ್ಟದ್ದೇನೂ ಅಲ್ಲ. ದುಡ್ಡು ಇಲ್ಲದಿದ್ದಾಗ ಇದೆಲ್ಲಾ ಬರುತ್ತದೆ. ಇದು ಹೇಗೆಂದರೆ 1000 ರೂ. ಕೊಡುವವರಿಗೆ 500 ರೂ. ಕೊಟ್ಟು ಬಾ ಎನ್ನುವಂತೆ. ನಾನು ತಮಗೆ ಹೇಳುತ್ತೇನೆ, ಇದನ್ನು ತಾವು 8ನೇ ಪಂಚವಾರ್ಷಿಕ ಯೋಜನೆಯವರೆಗೂ ಕಾಲ ಕಳೆಯುತ್ತಾ ಹೋದರೆ ಬಹಳ ಕಷ್ಟವಾಗುತ್ತದೆ, ಆಗುವುದಿಲ್ಲ. ದೊಡ್ಡ ಆಘಾತವಾಗುತ್ತದೆ. ಆದುದರಿಂದ ಈ ಅಧಿವೇಶನ ಮುಗಿದ ಕೂಡಲೇ ಇದನ್ನು ಪುನರ್ ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳಬೇಕು. 3-4 ವರ್ಷದಲ್ಲಿ ಎಲ್ಲಾ ಕೆಲಸ ಮುಗಿಯುವಂತಿರಬೇಕು. ಮಾನ್ಯ ವಾಟಾಳ್ ನಾಗರಾಜ್‌ರವರು ಹೊರಟು ಹೋದರು. ಕಬಿನಿಯ ಬಗ್ಗೆ ನೀವು ಏನನ್ನೂ ಹೇಳಲಿಲ್ಲ ಎಂದು ಹೇಳಿದರು. ಕಭಿನಿಯಲ್ಲಿ ನೀರು ಇದೆ, ಅದನ್ನು ಬಳಕೆ ಮಾಡುತ್ತಿಲ್ಲ. ನಾವು ಎಷ್ಟು ದಿವಸದವರೆಗೆ ನೀರನ್ನು ಇಟ್ಟುಕೊಂಡು ಕುಳಿತುಕೊಳ್ಳಬೇಕು? ಕ್ಲಿಪ್ತವಾಗಿ ಆಯಾಯ ಭಾಗದಲ್ಲಿ ಏನೇನು ಕೆಲಸಮಾಡಬೇಕೆಂದು ಯೋಚಿಸಿ ಎಸ್ಟಿಮೇಟ್ಸ್‌ನ್ನು ಸಕಾಲದಲ್ಲಿ ಮಾಡಿಸಿಕೊಂಡು, ಸ್ಯಾಂಕ್ಷನ್ ಮಾಡಿಸಿಕೊಂಡು ಅದಕ್ಕೆ ಹಣವನ್ನೊದಗಿಸಿಕೊಂಡು ಕಂಟ್ರಾಕ್ಟರ್‌ಗಳನ್ನು ಫಿಕ್ಸ್ ಮಾಡಿಕೊಂಡು ರೀ ಹ್ಯಾಬಿಟೇಷನ್, ಕಾಂಪೆನ್‌ಸೇಷನ್ ಕೊಡತಕ್ಕದ್ದು ಇದ್ದರೆ ಪೂರ್ವಭಾವಿಯಾಗಿ ಇದನ್ನೆಲ್ಲಾ ಮಾಡಿಕೊಂಡರೆ ಬೇಗ ಆಗುತ್ತದೆ.ಇದನ್ನು ತಾವು ದಯಮಾಡಿ ಪುನರ್ ಪರಿಶೀಲಿಸಿ 8ನೇ ಯೋಜನೆಯಲ್ಲಿ ಎಂದು ಏನು ಹೇಳಿದ್ದೀರಿ ಅದರ ಬಗ್ಗೆ ಆಶ್ವಾಸನೆಯನ್ನು ಕೊಡುವುದಕ್ಕೆ ಸಾಧ್ಯವೆ? ಅಥವಾ ಪುನರ್ ಪರಿಶೀಲನೆ ಮಾಡುತ್ತೀರಾ? ಮಾಡುವುದಾದರೆ ಯಾವಾಗ ಮಾಡುತ್ತೀರಿ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಶ್ರೀಮಾನ್ ರಂಗನಾಥ್‌ರವರು ಏನು ತಮ್ಮ ಆತಂಕವನ್ನು ವ್ಯಕ್ತಮಾಡಿದ್ದಾರೆ ಆ ಹಿನ್ನೆಲೆಯಲ್ಲಿ ಈ ಎಲ್ಲಾ ಯೋಜನೆಗಳನ್ನೂ ಮಾರ್ಚಿ 1995ರೊಳಗೆ ಮುಗಿಸತಕ್ಕ ಕಾರ್ಯಕ್ರಮ ಸರ್ಕಾರದ ಪರಿಶೀಲನೆಯಲ್ಲಿದೆ. ಈ ದಿಸೆಯಲ್ಲಿ ನಾವು ಕ್ರಮ ಕೈಗೊಳ್ಳುತ್ತೇವೆಂದು ಆಶ್ವಾಸನೆಯನ್ನು ನಾನು ಕೊಡಬಯಸುತ್ತೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ ಇವತ್ತು ನನ್ನದೊಂದು ವಿನಂತಿ ತಮಗೆ ಇದೆ. ಈಗತಾನೆ ಯಾರೋ ಸದಸ್ಯರು ಸಭಾತ್ಯಾಗ ಮಾಡಿದರು. ಅದನ್ನು ಕಡತದಿಂದ ತೆಗೆಸಬಹುದೋ ಏನೋ ಅಂತ ತಮ್ಮನ್ನು ಕೇಳೋಣವೆಂದು. ಏತಕ್ಕೆಂದರೆ ನಾವು ಏತಕ್ಕೆ ಈ ಬಿಲ್ಲನ್ನು ಮುಂಡಿಸಬಾರದು. ಅಥವಾ ಇಲ್ಲಿ ಮಂಡಿಸಿ ಆಗಿದೆ ಅದನ್ನು ಚರ್ಚೆಗೆ ತೆಗೆದುಕೊಳ್ಳಬಾರದು. ಕರ್ನಾಟಕದ ರೈತರ ಹಿತದೃಷ್ಟಿಯಿಂದ ಈ ಕೆಲಸ ಮಾಡಬಾರದೆನ್ನುವಂಥ ಒಂದು ಒಪ್ಪಂದಕ್ಕೆ ನಾವು ಖಾಸಗೀಯಾಗಿ ಈ ಸಭಾನಾಯಕರ ಜೊತೆ ಮಾತನಾಡಿ ಒಪ್ಪಿಗೆಯಾಗಿರುವ ವಿಚಾರ. ತಮಗೆ ನಾನು ವಿನಂತಿ ಮಾಡಿಕೊಳ್ಳುವುದು ನಿಮ್ಮ ಮೂಲಕ ಪತ್ರಿಕೆಯವರಿಗೂ, ದಯಮಾಡಿ ಇದನ್ನು ವರದಿ ಮಾಡಬಾರದು. ಈ ಪ್ರಚಾರಕ್ಕೋಸ್ಕರ ಮಾಡುವಂಥ ಚಟುವಟಿಕೆ ಯನ್ನು ಎಲ್ಲಿಯವರೆಗೆ ವರದಿ ಮಾಡುತ್ತೀರೋ ಪತ್ರಿಕೆಯವರು ಅಲ್ಲಿಯವರೆಗೆ ಇಂಥ ಚಟುವಟಿಕೆ ನಡೆಯುತ್ತಿರುತ್ತದೆ. ತಾವು ಪತ್ರಿಕೆಯವರನ್ನು ಕರೆಯಿಸಿ ಖಾಸಗೀಯಾಗಿ

ಹೇಳಿದರೆ ಒಳ್ಳೆಯದು. ವರದಿ ಮಾಡುತ್ತಾರೆಂದು ಈ ಚಟುವಟಿಕೆಯನ್ನು ಮಾಡುವುದು ನಾವು ಎಷ್ಟುದಿವಸ ಸಹಿಸಬೇಕೆಂದು ನನಗಂತೂ ಅರ್ಥವಾಗುವುದಿಲ್ಲ.

ಅಧ್ಯಕ್ಷರು : ನಾನು ಬಹಳ ದುಃಖದಿಂದ..

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ ಇದೇ ವಿಚಾರದಲ್ಲಿ ನಾನು ಹೇಳತಕ್ಕಂಥದ್ದು ಇದೆ. ಏತಕ್ಕೆಂದರೆ ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದ್ದಾರೆ. ಈ ಸಂದರ್ಭದಲ್ಲಿ ನಮ್ಮ ಪಕ್ಷದ ವತಿಯಿಂದ ನಾನು ನಾಯಕನಾಗಿ ಹೇಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ಕಾವೇರಿ ವಿಚಾರದಲ್ಲಿ I am not differing from the Professor

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಿಸ್ಟರ್ ಸಿಂಧ್ಯಾರವರೇ ಸುಪ್ರೀಮ್ ಕೋರ್ಟಿನಲ್ಲಿದೆ ಈ ವಿಚಾರ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಹೇಳತಕ್ಕಂಥದ್ದು ನಾವು ಈ ಕಾವೇರಿ ಜಲಾನಯನ ಮತ್ತು ಕಾವೇರಿ ನೀರಿನ ವಿಚಾರದಲ್ಲಿ ಎಲ್ಲ ಪಕ್ಷದವರು ಸಹಿತ ಒಂದು ನಿರ್ಧಾರಕ್ಕೆ ಸರ್ಕಾರದವರ ಜೊತೆಯಲ್ಲಿ ನಾವು ಬಂದಿದ್ದೇವೆ. ಇದುವರೆಗೂ ಸಹಿತ ನಾವು ಸುಪ್ರೀಮ್ ಕೋರ್ಟಿನಲ್ಲಿ ತೆಗೆದು ಕೊಂಡಿರುವ ನಿಲುವು, ಅಥವಾ ಟ್ರಿಬ್ಯೂನಲ್ ಮುಂದೆ ತೆಗೆದುಕೊಂಡಿರತಕ್ಕಂಥ ನಿಲುವು ಇದೆಲ್ಲ ಸರ್ವ ಸಮ್ಮತವಾಗಿರತಕ್ಕಂಥ ವಿಚಾರ. ಈ ಆರ್ಡಿನೆನ್ಸ್ ವಿಚಾರದಲ್ಲೂ ಸಹಿತ ನಾವು ಒಪ್ಪಿಗೆಯನ್ನು ಕೊಟ್ಟಿದ್ದೇವೆ. ಈಗ ಮುಂದೆ ಏನು ಮಾಡಬೇಕೆಂಬುದನ್ನು ಸಹಿತ ಇವೊತ್ತು ನಾವು 4-5 ಜನ ಸದಸ್ಯರುಗಳು, ವಿರೋಧಪಕ್ಷದ ನಾಯಕರು, ಸಭಾನಾಯಕರ ಜೊತೆಯಲ್ಲಿ ಇವತ್ತು ಬೆಳಿಗ್ಗೆ ಚರ್ಚೆ ಮಾಡಿದ್ದೇವೆ ಇದರ ಬಗ್ಗೆ. ಅದಕ್ಕೋಸ್ಕರವೇ ನಾನು ಹೇಳಬೇಕೆಂದಿದ್ದುದು. ಆದರೆ ನನಗನ್ನಿಸುತ್ತದೆ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುವುದು ಅಷ್ಟೊಂದು ಸೂಕ್ತವಲ್ಲ. ರಾಜ್ಯದ ಹಿತದೃಷ್ಟಿಯಿಂದಾಗಿ ನಮ್ಮ ರೈತರ ಹಿತದೃಷ್ಟಿಯಿಂದಾಗಿ ಅದನ್ನು ಇಲ್ಲಿ ಹೇಳುವುದು ಸರಿಯಲ್ಲವೆನ್ನುವುದು ನನ್ನ ಅಭಿಪ್ರಾಯ. ಆದ್ದರಿಂದ ಈ ವಿಚಾರದಲ್ಲಿ ಹೆಚ್ಚಿಗೆ ಪ್ರಚಾರ ಕೊಡದಿರುವುದಕ್ಕೆ ಏನು ಮಾಡಬೇಕು. ಅದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕೆನ್ನತಕ್ಕಂಥದ್ದು ನನ್ನ ಒತ್ತಾಯ ಸರ್ಕಾರದ ನಿಲುವು ಏನಿದೆ ಈ ಅಧಿವೇಶನ ಮುಗಿಯುವುದರೊಳಗಾಗಿ ಏನು ಮಾಡುತ್ತಿರೋ ಅದರ ಬಗ್ಗೆ ನಮ್ಮ ಒಪ್ಪಿಗೆ ಇದೆ.

ಅಧ್ಯಕ್ಷರು : ಈ ಸದನದ ಕಾರ್ಯಕಲಾಪಗಳ ಸಮಿತಿಯ ಸಭೆಯಲ್ಲಿ ಈ ವಿಚಾರ ಪ್ರಸ್ತಾಪಕ್ಕೆ ಬಂದಿತ್ತು. ಖಾಸಗೀಯಾಗಿ ನಾವೆಲ್ಲರೂ ಒಂದು ನಿರ್ಣಯಕ್ಕೆ ಬಂದಿದ್ದೇವೆ. ಯಾವ ಕ್ರಮವನ್ನು ಯಾವ ಕಾಲದಲ್ಲಿ ತೆಗೆದುಕೊಳ್ಳಬೇಕು. ಎನ್ನತಕ್ಕಂಥದ್ದನ್ನು 4ತಲೆಗಳು ಒಟ್ಟಿಗೆ ಸೇರಿ ತೀರ್ಮಾನ ಮಾಡಬೇಕಾಗಿದೆ. ಇವತ್ತು ಸಭೆ ಮುಗಿದುಹೊರಟು ಹೋಗುತ್ತಿಲ್ಲ. ಸಭೆ ನಾನಾಗಲೆ ಕ್ಲಿಪ್ತಪಡಿಸಿರತಕ್ಕಂಥ ರೀತಿ 27ನೇ ತಾರೀಖಿನವರೆಗೆ ನಡೆಯುತ್ತದೆ. ಮತ್ತು ಈ ಆರ್ಡಿನೆನ್ಸ್ ರೀಪ್ಲೇಸಿಂಗ್ ಲೆಜಿಸ್ಲೇಷನ್ ಏನು ಇಲ್ಲಿ ಮಂಡಿಸಿದ್ದೇವೆ ಅದನ್ನು ಮಂಡಿಸಿ ಅದನ್ನು ಪಾಸ್ ಮಾಡುವುದಕ್ಕೆ ಇನ್ನು ಬೇಕಾದಷ್ಟು ಅವಕಾಶಗಳು ಆ ಸದನಕ್ಕೆ ಇದೆ. ಆದ್ದರಿಂದ ಮಾನ್ಯ ಮಂತ್ರಿಯವರು ಹೇಳುತ್ತಿದ್ದಾರೆ, ಈ ಸದನಕ್ಕೆ ಗೌರವ ಬರತಕ್ಕಂಥ ರೀತಿಯಲ್ಲಿ ನಾವು ನಮ್ಮ ಕಾರ್ಯಕ್ರಮವನ್ನು ರೂಢಿಸುತ್ತೇವೆಂದು ಹೇಳುತ್ತಿದ್ದಾರೆ. ಆದರೂ 3-4 ಜನ ಮಾನ್ಯ ಸದಸ್ಯರು ಒಟ್ಟಾಗಿ ನಿಂತು ಈರೀತಿ ಮಾಡತಕ್ಕಂಥದ್ದು ಅದಕ್ಕೆ ನಾನು ಹೇಗೆ ನನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಬೇಕೋ ಅದನ್ನು ಆಗಲೇ ವ್ಯಕ್ತಪಡಿಸಿದ್ದೇನೆ. ಇಷ್ಟಕ್ಕೂ ಮೇಲೆ ನಾನು ಪತ್ರಿಕೆಯವರ ಮೇಲೆ ನೀವು ಇಂಥದ್ದನ್ನೇ ಬರೆಯಿರಿ, ಇಂಥದ್ದನ್ನೇ ಬರೆಯಬೇಡಿ

ಹಾಗೆಂದು ಹೇಳಿ ಹೇಳತಕ್ಕಂಥ ಶಕ್ತಿ ನನಗೆ ಇಲ್ಲ, ನಿರಸ್ತ್ರನಾಗಿದ್ದೇನೆ ನಾನು. ಆದರೆ ಒಟ್ಟು ಈ ಸದನದ ಕಳಕಳಿ ಕೋಟ್ಯಾವಧಿ ನಮ್ಮ ಕನ್ನಡ ನಾಡಿನ ನಮ್ಮ ನ್ಯಾಯವಾದಂಥ ಹಕ್ಕು ಏನಿದೆ ಆ ಹಕ್ಕನ್ನು ರಕ್ಷಣೆ ಮಾಡತಕ್ಕಂಥದ್ದರಲ್ಲಿ, ಹೋಗಿರತಕ್ಕಂಥ ಸದಸ್ಯರಿಗೂ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ಈ ಇಡೀ ಸದನಕ್ಕೆ ಇದೆ ಎನ್ನತಕ್ಕಂಥದ್ದು ಈ ಒಂದು ಸಂದೇಶ ಪತ್ರಿಕೆಗಳ ಮೂಲಕ ಕನ್ನಡ ನಾಡಿಗೆ ಹೋಗಲಿ ಎಂದು ಆಸೆ ಮಾಡುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ನೀರಾವರಿ ಮಂತ್ರಿಗಳನ್ನು ಎರಡು ಪ್ರಶ್ನೆಗಳನ್ನು ಕೇಳಲಿಕ್ಕೆ ಇಷ್ಟ ಪಡುತ್ತೇನೆ. ಮೊಟ್ಟಮೊದಲನೆಯದಾಗಿ ಈ ನೀರಾವರಿ ಇಲಾಖೆಯಲ್ಲಿ ಇರುವಂಥ ಚೀಫ್ ಇಂಜಿನಿಯರ್ಸ್, ಸೂಪರಿಂಟೆಂಡೆಂಟ್ ಇಂಜಿನಿಯರ್ಸ್, ಮತ್ತು ಬೇರೆ ಬೇರೆ ಅಧಿಕಾರಿಗಳು ಏನಿದ್ದಾರೆ. ಈ ಅಧಿಕಾರಿಗಳ ಸಂಖ್ಯೆಗೂ ಮತ್ತು ಆ ಇಲಾಖೆ ಅವರ ಮುಖಾಂತರ ಖರ್ಚು ಮಾಡುವ ಹಣಕ್ಕೂ ಏನಾದರೂ ಸಂಬಂಧ ಇದೆಯೇ? ಇದ್ದರೆ ಯಾವ ಆಧಾರದ ಮೇಲೆ ನೀವು ಈ ಹುದ್ದೆಗಳನ್ನು ನಿರ್ಮಾಣ ಮಾಡಿದಿರಿ? ಮತ್ತು ಮುಂದುವರಿಸಿಕೊಂಡು ಹೋಗುತ್ತೀರಿ? ಏತಕ್ಕೆಂದರೆ ಅನೇಕ ಸಂದರ್ಭಗಳಲ್ಲಿ, ಅದು ಸಣ್ಣ ನೀರಾವರಿ ಇಲಾಖೆ ಇರಬಹುದು, ಅಥವಾ ಬೇರೆಬೇರೆ ತಮ್ಮ ಇಲಾಖೆಗೆ ಸೇರಿದಂಥ ಇಂಜಿನೀಯರುಗಳು ಏನಿದ್ದಾರೆ, ಅವರ ಕಾರ್ಯವ್ಯಾಪ್ತಿಯಲ್ಲಿ ಏನು ಹಣವನ್ನು ಖರ್ಚುಮಾಡುತ್ತಿದ್ದಾರೆ ಅನೇಕ ಸಂದರ್ಬದಲ್ಲಿ ಅವರ ಸಂಬಳ ಖರ್ಚುಮಾಡುವಷ್ಟು ಹಣವನ್ನು ಖರ್ಚುಮಾಡದಿರುವಂಥ ಪ್ರಕರಣಗಳು ನಮ್ಮ ನಿಮ್ಮ ಗಮನಕ್ಕೆ ಬಂದಿದೆ.

ಆದ್ದರಿಂದ ನಾನು ತಮ್ಮನ್ನು ಕೇಳುವುದಿಷ್ಟೆ. ಬರೀ ಕೇವಲ ಹುದ್ದೆಗಳನ್ನು ನಿರ್ಮಾಣ ಮಾಡಿ ಹಣ ಇಲ್ಲದೆ ಆ ಹುದ್ದೆಯಲ್ಲಿ ಅವರು ಮುಂದುವರೆಯುವ ಪದ್ಧತಿಯನ್ನು ತಪ್ಪಿಸುವುದಕ್ಕೆ ಸರ್ಕಾರ ಏನಾದರೂ ಚಿಂತನೆ ಮಾಡುತ್ತದೆಯೇ? ಮಾನ್ಯ ಗೆಳೆಯ ರಂಗನಾಥ್ ಅವರು ಆಗಲೇ ನಾನು ಹೇಳಿದಾಗ ತಪ್ಪಾಗಿ ಭಾವಿಸಿದರು. ಎಲ್.ಒ.ಸಿ. ಕೊಡತಕ್ಕ ಪದ್ದತಿ ಏನಿದೆ ಇದರ ಮೇಲೆ ನಿಮ್ಮ ಹಿಡಿತ ಇರಬೇಕು, ಹತೋಟಿ ಇರಬೇಕು. ಅದಕ್ಕೆ ಯಾವುದೇ ವಿಧವಾದಂಥ ನೀತಿ ನಿಯಮಗಳನ್ನು ಹಣಕಾಸಿನ ಇಲಾಖೆಯಾಗಲಿ, ನೀರಾವರಿ ಇಲಾಖೆ ಎಲ್.ಒ.ಸಿ. ಕೊಟ್ಟ ನಂತರ ಅನುಸರಿಸುವ ನೀತಿ ಏನಿದೆ ಅದನ್ನು ರಾಜ್ಯಕ್ಕೇ ಆಗಲಿ ನಿಮ್ಮ ಇಲಾಖೆಗೇ ಆಗಲಿ ಅಥವಾ ಯಾವುದೇ ಒಂದು ಜನತಂತ್ರ ಸರ್ಕಾರಕ್ಕಾಗಲೀ ಮರ್ಯಾದೆ ತರುವ ವಿಚಾರ ಅಲ್ಲ, ನಾನು ತಮಗೆ ಕೇಳುತ್ತಿದ್ದೇನೆ, ಎಲ್.ಒ.ಸಿ. ಕೊಟ್ಟಂಥ ಪ್ರಕರಣಗಳಲ್ಲಿ ಯಾವ ರೀತಿ ಹಣ ಕೊಟ್ಟಿದ್ದಾರೆ ಆ ಹಣವನ್ನು ಯಾವ ರೀತಿ ಖರ್ಚು ಮಾಡಿದ್ದಾರೆ ನೋಡಬೇಕು. ಎಲ್.ಒ.ಸಿ. ಕೊಡದೇ ಇದ್ದರೂ ಹಣ ಖರ್ಚು ಮಾಡುತ್ತಿದ್ದಾರೆ ಸನ್ಮಾನ್ಯ ಅಧ್ಯಕ್ಷರೆ. ಎಲ್.ಒ.ಸಿ. ಕೊಡಬೇಕೆಂದು ಕಾನೂನು ಮಾಡಿಕೊಂಡಿದ್ದಾರೆ. ಫೈನಾನ್ಸ್ ಡಿಪಾರ್ಟ್‌ಮೆಂಟಿನಿಂದ ಎಲ್.ಒ.ಸಿ. ಕೊಡುತ್ತಾರೆ. ಆದರೆ ಮಾನ್ಯ ಮುಖ್ಯ ಇಂಜಿನಿಯರ್ ಆಗಲೀ ಅಥವಾ ಸಂಬಂಧಪಟ್ಟ ಅಧಿಕಾರಿಗಳು ಯಾರಿದ್ದಾರೆ ಅವರು ಎಲ್.ಒ.ಸಿ. ಕೊಡದೇ ಇದ್ದರೂ ಹಣ ಖರ್ಚು ಮಾಡಿರುವುದನ್ನು ನಾನು ನಿಮ್ಮ ಗಮನಕ್ಕೆ ಅನೇಕ ಸಾರಿ ತಂದಿದ್ದೇನೆ. ಪುನಃ ನಿಮಗೆ ಎಷ್ಟು ಬೇಕಾದರೂ ಉದಾಹರಣೆಯನ್ನು ಕೊಡುತ್ತೇನೆ. ನಿಮ್ಮ ಎಲ್.ಒ.ಸಿ. ನೆಪಕ್ಕೆ ಮಾತ್ರ ಆಗಿದೆಯೇ ಹೊರತು ಬೇರೆ ಏನೂ ಅಲ್ಲ, ಇದನ್ನು ಸರಿಪಡಿಸುವ ಕ್ರಮ ಆಲೋಚನೆ ಸರ್ಕಾರಕ್ಕಿದೆಯೆ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಹಿರಿಯರೂ ಮಾಜಿ ಮಂತ್ರಿಗಳೂ ಆದ ಏಕಾಂತಯ್ಯನವರು ಕೇಳಿದಂಥ ಮಾತಿಗೆ ನಾನು ಉತ್ತರಕೊಡಬೇಕಾಗುತ್ತದೆ. ಇದು ಒಂದು ತಿಂಗಳಲ್ಲಿ ನಾನು ಬಂದಮೇಲೆ ನಿರ್ಮಾಣ ಮಾಡಿದ ಇಲಾಖೆ ಅಲ್ಲ. ಯಾರು ಯಾರಿಗೆ ಏನೇನು ಬೇಕಾಗಿತ್ತೋ ಆ ತರಹ ಇಲಾಖೆಗಳನ್ನು ನಿರ್ಮಾಣ ಮಾಡಿದ್ದಾರೆ. ಯಾರಯಾರ ಸರ್ಕಾರ ಬಂತೋ ಅವರಿಗೆ ಯಾವಯಾವ ತರಹ ಬೇಕೋ ಆ ತರಹ ಮಾಡಿಬಿಟ್ಟಿದ್ದಾರೆ, ಅದೇನಾದರೂ ಹೇಳಿದರೆ ತಾವು ತಪ್ಪು ತಿಳಿದುಕೊಳ್ಳುತ್ತೀರಿ. ಅದನ್ನೇನಾದರೂ ಸರಿಪಡಿಸಬೇಕು ಎನ್ನತಕ್ಕ...

ಶ್ರೀ ಎಚ್. ಏಕಾಂತಯ್ಯ : ನಾನು ಕಳಕಳಿಯಿಂದ ಹೇಳುತ್ತಿದ್ದೇನೆ, ಇದು ಯಾವುದೇ ವ್ಯಕ್ತಿಗಳ ಸರ್ಕಾರ ಅಲ್ಲ, ಸರ್ಕಾರ ಕಾನೂನುಬದ್ಧವಾಗಿ ಆಡಳಿತ ಮಾಡತಕ್ಕ ಸಂಸ್ಥೆ. ಆದ್ದರಿಂದ ಇಲ್ಲಿ ಯಾವುದೇ ವ್ಯಕ್ತಿಗಳು ಮುಖ್ಯ ಅಲ್ಲ, ಈ ಮಾತನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮೊಟ್ಟಮೊದಲನೆಯದಾಗಿ ತಮ್ಮನ್ನು ಕೇಳಿದ್ದೇನೆಂದರೆ ಹುದ್ದೆಗಳನ್ನು ನಿರ್ಮಾಣ ಮಾಡಿದ್ದೀರಿ, ಅಥವಾ ಮಾಡಿದ್ದೇವೆ. ನಾವೇ ಆಗಲೀ ನೀವೇ ಆಗಲೀ ಮಾಡಿರಬಹುದು. ಇದಕ್ಕೇನಾದರೂ ಆಧಾರ ಇದೆಯೇ? ಇಷ್ಟು ಕೋಟಿ ರೂಪಾಯಿ ಖರ್ಚು ಮಾಡುವ ಸರ್ಕಲ್ ಇದ್ದರೆ ಅದಕ್ಕೆ ಒಬ್ಬ ಚೀಫ್ ಇಂಜಿನಿಯರ್ ಅಥವಾ ಇಷ್ಟು ಲಕ್ಷ ರೂಪಾಯಿ ಖರ್ಚು ಮಾಡುವಂಥ ವ್ಯವಸ್ಥೆ ಇದ್ದರೆ ಅದಕ್ಕೆ ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಈ ರೀತಿ ಏನಾದರೂ ಇದೆಯೆ? ಅದಿದ್ದರೆ ಆ ರೀತಿ ಇಲಾಖೆಯನ್ನು ಸಜ್ಜುಗೊಳಿಸಿದ್ದೀರಾ?

ಶ್ರೀ ಮಲ್ಲಾರಿಗೌಡ ಎಸ್.ಪಾಟೀಲ್ : ಆ ದೃಷ್ಟಿಯಿಂದ ನಾನು ಯೋಚನೆ ಮಾಡುತ್ತೇನೆ. ಆದರೆ ಒಂದು ವಿಷಯವನ್ನು ಈ ಸದನಕ್ಕೆ ಹೇಳುತ್ತೇನೆ. ವಿರೋಧಪಕ್ಷದಲ್ಲಿಯ ಕೆಲವು ಅಧಿಕಾರ ಇದೆ. ಪಬ್ಲಿಕ್ ಅಕೌಂಟ್ಸ್ ಕಮಿಟಿ ಇದೆ. ಅವರೂ ಕೂಡ ಈ ವಿಚಾರದಲ್ಲಿ ವಿಚಾರ ಮಾಡಿ ಸರ್ಕಾರಕ್ಕೆ ವರದಿ ಕೊಟ್ಟರೆ ಅದನ್ನು ಅನುಷ್ಠಾನ ಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯತೆ ಇದೆ. ಎಲ್.ಒ.ಸಿ. ಬಗ್ಗೆ...

ಅಧ್ಯಕ್ಷರು : ಅತ್ಯಂತ ಸೂಕ್ತವಾದ ಉತ್ತರ.

ಶ್ರೀ ಎಚ್. ಏಕಾಂತಯ್ಯ : ಆ ತಿಳುವಳಿಕೆಯಿಂದಲೇ ಈ ಪ್ರಶ್ನೆ ಕೇಳಿದ್ದುದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಎಲ್.ಒ.ಸಿ. ಯನ್ನು ಯಾವ ದೃಷ್ಟಿಯಿಂದ ಇಂಟ್ರೊಡ್ಯೂಸ್ ಮಾಡಿದ್ದೇವೆ. ಆ ಹಿನ್ನೆಲೆಯಲ್ಲಿ ಈ ತರಹ ಮಾಡಿದರೆ ರಾಜ್ಯಕ್ಕೆ ಒಳ್ಳೆಯದಾಗುತ್ತದೆ, ಈ ತರಹ ಮಾಡಬೇಕು ಎಂದು ಏನಾದರೂ ಸಲಹೆ ಸೂಚನೆ ಕೊಟ್ಟರೆ ಅದನ್ನು ಕೂಡ ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಈರಪ್ಪ ಮಾರಪ್ಪ ಶೇಡಶ್ಯಾಲ್ : ಮಾನ್ಯ ಮಂತ್ರಿಗಳನ್ನು ನಾನು ಕೇಳುವುದು ನಮ್ಮ ಹಿಪ್ಪರಗಿ ಬ್ಯಾರೇಜ್ ಸಲುವಾಗಿ ಹಣಕಾಸಿನ ವ್ಯವಸ್ಥೆಯನ್ನು ಮಾಡಲಾಗಿದೆಯೇ? ಮತ್ತು ಎರಡನೆಯದು ಟೆಕ್ನಿಕಲ್ ಸ್ಯಾಂಕ್ಷನನ್ನು ಎಷ್ಟು ದಿವಸದಲ್ಲಿ ಆ ಪ್ರಾಜೆಕ್ಟ್‌ಗೆ ಕೊಡುತ್ತೀರಿ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಸನ್ಮಾನ್ಯ ಶೆಡ್‌ಶ್ಯಾಲರಿಗೆ ಈ ವಿಷಯದಲ್ಲಿ ಉತ್ತರ ಕೊಟ್ಟಿದ್ದೇನೆ. ಹಿಪ್ಪರಗಿ ಬ್ಯಾರೇಜ್‌ಗೆ ಏನು ಹಣಕಾಸಿನ ವ್ಯವಸ್ಥೆ ಬೇಕು ಆ ಹಣಕಾಸಿನ ವ್ಯವಸ್ಥೆಯನ್ನು ಮಾಡಿಸಿಕೊಡುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವ ಕಾಲಕ್ಕೆ ಹಣಕಾಸಿನ ವ್ಯವಸ್ಥೆ ಬಗ್ಗೆ ಹೇಳುತ್ತಾರೆ ಎಂಬ ವಿಷಯ ಹೇಳಿದ್ದೇನೆ.

ಶ್ರೀ ಶಫಿ ಅಹಮದ್ : ಹೇಮಾವತಿ ಕೆನಾಲ್ ಜೋನ್ ತುಮಕೂರಿನಲ್ಲಿ 4000 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಅದರ ಬೇಸಿಕ್ ಇನ್‌ಫ್ರಾಸ್ಟ್ರಕ್ಚರ್ ಅಷ್ಟಿದೆಯೋ ಇಲ್ಲವೋ ತಿಳಿಸಬೇಕು. ಇವತ್ತು ತುಮಕೂರು ಹೇಮಾವತಿ ಮೇನ್ ಕೆನಾಲ್‌ನಲ್ಲಿ ತಾವೇನು ಕೆಲಸ ಎಕ್ಸ್‌ಪೆಕ್ಟ್ ಮಾಡುತ್ತೀರಿ ಅಷ್ಟು ಪ್ರೋಗ್ರೆಸ್ಸಾಗಿ ನಡೆಯುತ್ತಿಲ್ಲ. ತಾವು ಬೇಸಿಕ್ ಇನ್‌ಫ್ರಾಸ್ಟ್ರಕ್ಚರ್ ರೈಸ್ ಮಾಡಿದರೆ ಮಾತ್ರ ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಡೀಪರ್ ಕೆನಾಲ್ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಸಹ ಹೇಳಿದ್ದೇವೆ.

7.15 ಪಿ.ಎಂ.

ಇವತ್ತು ಡೀಪ್ ಕೆನಾಲ್‌ನಲ್ಲಿ ಲ್ಯಾಂಡ್ ಅಕ್ವಿಸಿಷನ್ ಪ್ರಾಬ್ಲಂ ಇದೆ. ತಾವೂ ಸಹ ತುಮಕೂರು ನಗರಕ್ಕೆ ಬಂದಾಗ ಆಶ್ವಾಸನೆ ಕೊಟ್ಟು ಬಂದಿದ್ದೀರಿ. ಅಲ್ಲಿ ಲ್ಯಾಂಡ್ ಆಕ್ವಿಸಿಷನ್ ಮಾಡಿಕೊಟ್ಟರೆ ಮಾತ್ರ ಪ್ರೋಗ್ರೆಸ್ ಅಚೀವ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದರ ಬಗ್ಗೆ ಯಾವ ರೀತಿ ಕ್ರಮ ಕೈಗೊಳ್ಳುತ್ತೀರಿ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನಾನು ಸಚಿವನಾದ ಮೇಲೆ ಎಲ್ಲಾ ಸ್ಥಳಗಳಿಗೆ ಭೇಟಿ ಕೊಟ್ಟಿದ್ದೇನೆ. ಇದರ ಹಿನ್ನಲೆಯಲ್ಲಿ ರಾಜಕಾರಣದಲ್ಲಿರತಕ್ಕ ವ್ಯಕ್ತಿಗಳಿಗೆ ಸಪೋರ್ಟ್ ಮಾಡುತ್ತಾ ಬಂದಿದ್ದಾರೆ. ಬಾಗೂರ್ ನವಿಲೆ ಮುಂದಿರತಕ್ಕ ಡೀಪ್ ಕೆನಾಲ್ ಬಗ್ಗೆ ಸೆಟಲ್‌ಮೆಂಟ್ ಮಾಡಬೇಕಾದರೆ ಯಾವ ರೀತಿ ಜಮೀನು ತೆಗೆದುಕೊಳ್ಳಬೇಕೆಂದು ಹಾಸನ ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇನೆ. ಅವರು ಈಗಾಗಲೇ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ. ಮಾನ್ಯ ಸದಸ್ಯರು ಆತಂಕ ಬಿಡಬೇಕು. ತುಮಕೂರಿನಲ್ಲಿ ನಡೆದಂಥ ಘಟನೆ ಬಗ್ಗೆ ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ವಿರೋಧ ಪಕ್ಷಕ್ಕೆ ಅಧಿಕಾರ ಇದೆ, ರಾಜಕಾರಣಿಗಳಿಗೆ ಅಧಿಕಾರ ಇದೆ ನನ್ನ ಇಲಾಖೆಯ 60 ಜನ ಸಿಬ್ಬಂಧಿಯವರನ್ನು ಮುಂಜಾನೆ 10 ರಿಂದ ಸಂಜೆ 10ರವರೆಗೆ ಕೀಲಿ ಹಾಕಿ ಇಡತಕ್ಕ ರಾಜಕಾರಣಿಗಳಿಗೆ ಏನು ಹೇಳಬೇಕೆಂದು ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ನಮಗೆ ಏನೇ ಅಧಿಕಾರ ಇರಬಹುದು, ಸಮಾಜದಲ್ಲಿ ಹಲವಾರು ದುಷ್ಟ ಶಕ್ತಿಗಳು ಇವೆ. ನಾವು ಎಷ್ಟೇ ಒಳ್ಳೆಯವರು ಇದ್ದರೂ, ನಾಲ್ಕು ಸಾವಿರ ಜನ ಸೇರಿದಾಗ , ಯಾವನೋ ಹೋಗಿ 60 ಜನರ ಮೇಲೆ ಪೆಟ್ರೋಲ್ ಹಾಕಿ ಬೆಂಕಿ ಹಚ್ಚಿದರೆ ಕಳಂಕ ಯಾರಿಗೆ ಬರುತ್ತದೆ? ವಿರೋಧ ಪಕ್ಷದ ಸದಸ್ಯರಾಗಲಿ, ನಮ್ಮ ಪಕ್ಷದ ಸದಸ್ಯರಾಗಲಿ ಈ ಪ್ರವೃತ್ತಿಯನ್ನು ಬೆಳಸಿಕೊಂಡು ಹೋಗುವುದು ಸರಿಯಲ್ಲವೆಂದು ಅನಿವಾರ್ಯವಾಗಿ ಹೇಳಬೇಕಾಗುತ್ತದೆ.

ಶ್ರೀ ಶಿವಶೇಖರಪ್ಪ ಶಿರವಾಳ್ : ಸ್ವಾಮಿ, ಮಾನ್ಯ ಏಕಾಂತಯ್ಯನವರು ಹೇಳಿದ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಕೃಷ್ಣ ಕಾಡಾದಲ್ಲಿ ಅಡ್ಮಿನಿಸ್ಟ್ರೇಟರಿಗೆ ಸರ್ಕಾರದಿಂದ ಒಂದು ಕೋಟಿ ರೂಪಾಯಿ ಕಾಮಗಾರಿಗಳಿಗಾಗಿ ಬಿಡುಗಡೆಯಾದಾಗ ಅದರಲ್ಲಿ ಸಿಬ್ಬಂದಿ ಪಗಾರಕ್ಕೆ 78 ಲಕ್ಷ ರೂಪಾಯಿ ಹೋಗಿ ಕೇವಲ 12 ಲಕ್ಷ ರೂಪಾಯಿ ಮಾತ್ರ ಕಾಮಗಾರಿಕೆ ಉಪಯೋಗವಾಗುತ್ತದೆ. ಇದರ ಬಗ್ಗೆ ಸರ್ಕಾರ ಗಮನ ಹರಿಸಬೇಕು. ಈ ರೀತಿ ಆದರೆ, ಯಾರ ಸಲುವಾಗಿ ಅಡ್ಮಿನಿಸ್ಟ್ರೇಟರು ಕೆಲಸ ಮಾಡಬೇಕೆಂದು ನೊಂದ ಮನಸ್ಸಿನಿಂದ ಹೇಳುತ್ತೇನೆ. ಮಾನ್ಯ ಸಚಿವರು ಈ ವಿಚಾರದ ಬಗ್ಗೆ ಬೆಳಕು ಚೆಲ್ಲಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ಅದರ ಬಗ್ಗೆ ಸರ್ಕಾರ ಚಿಂತನೆ ಮಾಡಿ ಒಂದು ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಕೆ. ಹರ್ಷಕುಮಾರ ಗೌಡ : ಈ ರಾಜ್ಯದಲ್ಲಿ ಒಂದು ಪ್ರಮುಖ ಸಮಸ್ಯೆ ಉದ್ಭವವಾಗಿದೆ, ಅದಕ್ಕೆ ಮಾನ್ಯ ಮಂತ್ರಿಗಳಿಂದ ಉತ್ತರ ಬಯಸುತ್ತೇನೆ. ರಾಜ್ಯದಲ್ಲಿ ಪ್ರಾಮಾಣಿಕವಾಗಿ ಉದ್ಯೋಗ ಕೊಡುವಂಥ ಜವಾಬ್ದಾರಿ ಹೊತ್ತಂಥ ಪಿ.ಎಸ್.ಸಿ. ಏನಿದೆ ಅದರಲ್ಲಿ ಎಂಜಿನಿಯರಿಂಗ್ ಪದವೀಧರರನ್ನು ಆಯ್ಕೆ ಮಾಡುತ್ತಿದ್ದಾರೆ. ಒಂದು ಕಡೆ ಬಿ.ಇ. ಪದವೀಧರರಿಗೆ ಎ.ಇ.ಇ. ಎಂದು ಮಾಡುತ್ತಾರೆ, ಮತ್ತೊಂದು ಕಡೆ ಎ.ಇ. ಎಂದು ಮಾಡುತ್ತಾರೆ. ಇದರಲ್ಲಿ ಯಾವ ಸೈದ್ಧಾಂತಿಕ ನೀತಿ ಇದೆ? ಇವತ್ತು ಇಂಜಿನಿಯರ್‌ಗಳನ್ನು ಸಂದರ್ಶನಕ್ಕೆ ಕರೆದಿದ್ದಾರೆ ಅದರ ಹಿನ್ನೆಲೆಯಲ್ಲಿ ಏನು ಕೈವಾಡ ಇದೆ ಎಂದರೆ, ದೊಡ್ಡ ದೊಡ್ಡ ಅಧಿಕಾರಿಗಳ ಮಕ್ಕಳಿಗೆ, ಪ್ರಭಾವಿ ವ್ಯಕ್ತಿಗಳ ಮಕ್ಕಳಿಗೆ ಅವಕಾಶ ಮಾಡಿಕೊಡುವ ಸಲುವಾಗಿ ಮಾತ್ರ ಈ ಸಂದರ್ಶನ ಕರೆದಿದ್ದಾರೆ. ಇಂತ ಅಕ್ರಮವನ್ನು ತಪ್ಪಿಸುವುದಕ್ಕೆ ಮಾನ್ಯ ಮಂತ್ರಿಗಳು ಸರ್ಕಾರದ ಪರವಾಗಿ ಯಾವ ಕ್ರಮ ಕೈಗೊಳ್ಳುತ್ತಾರೆ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಕೆ.ಪಿ.ಎಸ್.ಸಿ. ಸಂಸ್ಥೆಯಲ್ಲಿರತಕ್ಕ ಸದಸ್ಯರು ಯಾರು ಎಂಬುದು ಎಲ್ಲರಿಗೂ ಗೊತ್ತು. ಅದರ ಮೇಲೆ ಟೀಕೆ ಟಿಪ್ಪಣಿ ಮಾಡುವುದು ಸರಿಯಲ್ಲ. ಮಾನ್ಯ ಹರ್ಷಕುಮಾರಗೌಡರು ಏನು ಹೇಳಿದ್ದಾರೆ ಆ ಬಗ್ಗೆ ವಿಶೇಷ ವರದಿ ತರಿಸಿಕೊಂಡು ಆ ರೀತಿ ಆಗಿದ್ದರೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತದೆ.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಅಭಿವೃದ್ಧಿಪಡಿಸಲಾಗಿರುವ ನೀರಾವರಿ ಅಚ್ಚುಕಟ್ಟು ಪ್ರದೇಶದ ಮೇಂಟೆನೆನ್ಸ್‌ಗೆ 40 ರೂಪಾಯಿ ಒಂದು ಎಕರೆಗೆ ನಿಗಧಿ ಮಾಡಿದ್ದೀರಿ. ನನ್ನ ಕ್ಷೇತ್ರದಲ್ಲಿ ಕಾವೇರಿ ನದಿಗೆ ಕಟ್ಟೆಪುರ್ ಅಣೆಕಟ್ಟನ್ನು ಸುಮಾರು 100 ವರ್ಷಗಳ ಹಿಂದೆ ಕಟ್ಟಿದ್ದು ಅದರ ಕಾಲುವೆಗಳು, ಹೊಲಗಾಲುವೆಗಳು ಮತ್ತು ಫೀಡ್ ಛಾನಲ್‌ಗಳೆಲ್ಲಾ ಮುಚ್ಚಿಹೋಗಿವೆ. ಮತ್ತು ಅಲ್ಲಿ ಕಾಲ್ ಪೆಟಲಗಳೆಲ್ಲಾ ಮುರಿದಿವೆ. ಮತ್ತೆ ಅಲ್ಲಿ ಕಾಲುವೆಗಳಲ್ಲಿ ನೀರು ನಿಂತುಹೋಗಿ ತೂಬುಗಳು ರಿಪೇರಿಗೆ ಬಂದಿವೆ. 40 ವರ್ಷಗಳ ಹಿಂದೆ ನಿಗದಿ ಮಾಡಿದ ಈ ಧಾರಣೆ ಏನು ಇದೆ ಇದರಿಂದ ಮೇಂಟೆನೆನ್ಸ್ ಮಾಡುವುದಕ್ಕೆ ಸಾಕಾಗುತ್ತಿಲ್ಲ. ಆದ್ದರಿಂದ ಅದನ್ನು ಪುನರ್ವಿಮರ್ಶೆ ಮಾಡುವುದಕ್ಕೆ ಸರ್ಕಾರ ಏನಾದರೂ ತೀರ್ಮಾನ ತೆಗೆದುಕೊಳ್ಳುತ್ತದೆಯೇ? ಇನ್ನು ನೀರಾವರಿ ಇಲಾಖೆಯಲ್ಲಿ ಪ್ರಾಜೆಕ್ಟ್ ಕಟ್ಟುವುದಕ್ಕೆ ಅನೇಕ ಮಿಷನರಿಗಳನ್ನು ಕೊಂಡುಕೊಳ್ಳುತ್ತಾರೆ. ಆ ಒಂದು ಪ್ರಾಜೆಕ್ಟ್ ಆದ ಮೇಲೆ ಆ ಮಿಷಿನರಿಗಳು ಅಲ್ಲೇ ಏಡಲ್ ಆಗಿವೆ. ಕೋಟ್ಯಾಂತರ ರೂಪಾಯಿಗಳ ಮೆಷಿನರಿಗಳು ಆ ಪ್ರಾಜೆಕ್ಟ್‌ನಲ್ಲೇ ಉಳಿದಿದ್ದು ಮತ್ತೆ ಅವನ್ನು ಉಪಯೋಗ ಮಾಡಿಕೊಳ್ಳಲು ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಳ್ಳುತ್ತದೆ ಎಂದು ಕೇಳುತ್ತೇನೆ. ಇಲಾಖೆಯಿಂದ ಏನು ಕಾಮಗಾರಿ ಕೆಲಸ ಮಾಡುತ್ತಾರೋ ಅದರಲ್ಲಿ ಲೈನಿಂಗ್ ಕೆಲಸ ಮಾಡುತ್ತಾರೆ, ತಳಗಾಲುವೆ ಕೆಲಸ ಮಾಡುತ್ತಾರೆ, ತೂಬು ಕೆಲಸ ಮಾಡುತ್ತಾರೆ. ಈ ಕೆಲಸಗಳ ಕಳಪೆ ಕಾಮಗಾರಿಯಿಂದಾಗಿ ಕಟ್ಟಿದ 1Ë2 ವರ್ಷಗಳಲ್ಲಿ ಮುರಿದುಹೋಗುತ್ತವೆ. ಇದು ಕಳಪೆ ಆಗುವುದಕ್ಕೆ ಕಾರಣ ಭ್ರಷ್ಟಚಾರ ಅದರ ಹಿಂದೆ ಇರುತ್ತದೆ. ಆದ್ದರಿಂದ ಕಾಮಗಾರಿ ಗುಣಮಟ್ಟವನ್ನು ಸುಧಾರಣೆ ಮಾಡುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ?

ಶ್ರೀ ಮಲ್ಲಾರಿಗೌಡ ಎಸ್ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ಗಹನವಾದ ಪ್ರಶ್ನೆಯನ್ನು ಕೇಳಿದ್ದಾರೆ. ನಾವೇ ಕಳಪೆ ಆದಾಗ ಕೆಲಸಗಳೂ ಕೂಡ ಕಳಪೆ ಆಗುತ್ತವೆ. ಈ ಸಮಾಜದಲ್ಲಿ ಹುಟ್ಟಿದಮೇಲೆ ನಾವೊಬ್ಬರೇ ಹರಿಶ್ಚಂದ್ರರಾದರೆ ಆಗುವುದಿಲ್ಲ, ಎಲ್ಲರೂ ಹರಿಶ್ಚಂದ್ರರಾಗಬೇಕಾಗುತ್ತದೆ. ಆ ದೃಷ್ಟಿಯಿಂದ

ಎಲ್ಲರೂ ಪ್ರಯತ್ನ ಮಾಡಿದರೆ ಕಳಪೆಯಾದುದು ಸರಿಯಾಗುತ್ತದೆ. ಸರಿಯಿದ್ದುದು ಆಮೇಲೆ ಕಳಪೆಯಾಗುತ್ತದೆ. ಆ ದೃಷ್ಟಿಯಿಂದ ಮಾನ್ಯ ಸದಸ್ಯರು ಏನು ಸೂಚನೆ ಕೊಟ್ಟಿದ್ದಾರೆ ಅದರ ಬಗ್ಗೆ ನಾವು ಅವರ ಜೊತೆ ಸೇರಿ ಈ ಬಗ್ಗೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಇನ್ನು ಮೇಂಟೆನೆನ್ಸ್ ಬಗ್ಗೆ ಹೇಳಿದರು. ಇದರ ಬಗ್ಗೆ ನಿನ್ನೆಯೂ ಕೂಡ ನಾವು ಚರ್ಚೆ ಮಾಡಿದ್ದೇವೆ. ಈ ಬಗ್ಗೆ ಯೋಗ್ಯ ಕ್ರಮ ಏನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ತಿಗಡಿಹಳ್ಳಿ ನಾಲಾ ಯೋಜನೆ ಎಂದು 20 ವರ್ಷಗಳ ಹಿಂದೆ ಪ್ರಾರಂಭ ಆಯಿತು. ಆ ನಂತರ ಅಲ್ಲಿ 7-8 ಬಿಲ್ಡಿಂಗ್‌ಗಳನ್ನು ಕಟ್ಟಿದರು. ಅಲ್ಲಿ ಗೆಸ್ಟ್ ಹೌಸ್ ಕೂಡ ಆಯಿತು. ಆದರೆ ಒಬ್ಬ ಶ್ರೀಮಂತ ರೈತನ ಜಮೀನು ಮುಳುಗಡೆಯಾಗುತ್ತದೆಂದು ಅದನ್ನು ಕೈಬಿಟ್ಟರು. ಈಗ ಅಲ್ಲಿ ಒಬ್ಬ ಎಂಜಿನಿಯರ್, ಒಬ್ಬ ಸಿಪಾಯಿ ಮಾತ್ರ ಕಾವಲು ಕಾಯುತ್ತಿದ್ದಾರೆ. ಈ ಯೋಜನೆಯನ್ನು ಮತ್ತೆ ಕೈಗೆತ್ತಿಕೊಳ್ಳುತ್ತೀರಾ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಈ ವಿಚಾರದ ಬಗ್ಗೆ ಮಾನ್ಯ ಬಾಬಾಗೌಡರ ಮನಸ್ಸಿನಲ್ಲಿ ಏನಿದೆ ಎಂದು ಗೊತ್ತಿದೆ. ಹಿಂದಿನ ರಾಜಕಾರಣದಲ್ಲಿ ಎಲ್ಲಾ ನಡೆದುಹೋಗಿದೆ. ಅವರು ಈ ಬಗ್ಗೆ ಸಹಕಾರ ಕೊಟ್ಟರೆ ಅದನ್ನು ಮಾಡಿಕೊಡುತ್ತೇನೆಂದು ಈ ಸದನದಲ್ಲಿ ಹೇಳುತ್ತೇನೆ.

ಶ್ರೀ ಮಂಜುನಾಥ ಸಿ. ಕುನ್ನೂರ : ತುಂಗಾ ಮೇಲ್ದಂಡೆ ಯೋಜನೆಯನ್ನು ಜಾರಿಗೆ ತರುವಾಗ ಮಾರುತಿ ಜಲಾನಯನವನ್ನು ಒಳಗೊಂಡು ಜಾರಿಗೆತರುವುದಕ್ಕೆ ಪುನರ್‌ಪರಿಶೀಲನೆ ಮಾಡುವುದಕ್ಕಾಗುತ್ತದೆಯೇ? ಆಗದೇ ಇದ್ದರೆ ಯೋಜನೆಯನ್ನು ಜಾರಿಗೆತರುವುದಕ್ಕೆ ಸರ್ಕಾರಕ್ಕೆ ಇರುವ ಅಡಚಣೆಗಳು ಏನು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಆ ಬಗ್ಗೆ ನಾನು ಸ್ಟಡಿ ಮಾಡಿಲ್ಲ. ಅದನ್ನು ನೋಡಿ ನಾನು ನೇರವಾಗಿ ಅವರಿಗೆ ಉತ್ತರವನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಕನಕಪುರ ತಾಲ್ಲೂಕಿನ ಪ್ರತಿಷ್ಠಿತ ಯೋಜನೆಯಾದ ಹಾರೋಬೆಲೆ ಯೋಜನೆಯಿಂದ 25 ಸಾವಿರ ಎಕರೆ ಜಮೀನಿಗೆ ನೀರು ಕೊಡುವುದು ಆಗಿದೆ. ಕಳೆದ 3 ವರ್ಷಗಳಿಂದ ಈ ಯೋಜನೆ ಕೆಲಸ ಸ್ಥಗಿತವಾಗಿದ್ದು ಇದು ಮುಗಿಯಬೇಕಾದರೆ ಇನ್ನೂ 20 ವರ್ಷಗಳು ಬೇಕಾಗುತ್ತದೆ. ಈ ಸ್ಥಗಿತವಾಗಿರುವ ಕೆಲಸವನ್ನು ಮತ್ತೆ ಪ್ರಾರಂಭ ಮಾಡುವುದಕ್ಕೆ ಮತ್ತು ಅದು ಬೇಗ ಆಗುವುದಕ್ಕೆ ಹೆಚ್ಚಿನ ಹಣವನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಅಧ್ಯಕ್ಷರೇ, ಆ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ, ಆ ಬಗ್ಗೆ ಉತ್ತರವನ್ನು ನಾನು ಅವರಿಗೆ ಡೈರೆಕ್ಟಾಗಿ ಕಳುಹಿಸಿಕೊಡುತ್ತೇನೆ.

ಶ್ರೀ ಕೆ.ಎಸ್. ಕಾಳಮರಿಗೌಡ : ಪಿರಿಯಾಪಟ್ಟಣ ಏತ ನೀರಾವರಿ ಬಗ್ಗೆ ಮಾನ್ಯ ಮಂತ್ರಿಗಳು ಇಲ್ಲಿ ಹೇಳಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಇದು ಹಾರಂಗಿಯಲ್ಲಿ ಬರತಕ್ಕ ಯೋಜನೆಯಾಗಿದೆ. ನಾವೂ ಅವರೂ ಅಲ್ಲಿಗೆ ಹೋಗಿದ್ದಾಗ ಸಾಕಷ್ಟು ಜನಗಳು ಅಲ್ಲಿ ಕರೆದುಕೊಂಡು ಎಲಿವನ್ನೂ ಹೇಳಿಸಿದ್ದಾರೆ. ನಾನು ಅದನ್ನು

ಮಾಡಿಸಿಕೊಡುತ್ತೇನೆಂದು ಅವರಿಗೆ ಗೊತ್ತಿದೆ. ಅಷ್ಟಿದ್ದರೂ ಮತ್ತೆ ಇಲ್ಲಿ ಕೇಳಿ ಆಶ್ವಾಸನೆ ಪಡೆಮುಕೊಳ್ಳಬೇಕೆಂದು ಅವರ ಇಚ್ಛೆ. ಅದಕ್ಕೆ ನಾನು ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ : ಮಾನ್ಯ ಅಧ್ಯಕ್ಷರೆ, ಭಾರೀ ಮತ್ತು ಮಧ್ಯಮ ನೀರಾವರಿ ಮಂತ್ರಿಗಳಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಯಾವುದೂ ಯೋಜನೆ ಇಲ್ಲ. ಆದರೂ ಕೂಡ ವರಾಹಿ ಯೋಜನೆವುಂಟು 'ಭೀಮನ ಹೊಟ್ಟೆಗೆ ಕಾಸಿನ ಮಜ್ಜಿಗೆ' ಎನ್ನುವ ಹಾಗೆ ಹಣ ಕೊಟ್ಟರೆ ಅದನ್ನು ಸಂಪೂರ್ಣವಾಗಿ ಯಾವಾಗ ಮಾಡಿಕೊಡುತ್ತೀರಿ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಅದರ ಹಿನ್ನೆಲೆಯನ್ನು ಮಾನ್ಯ ಸದಸ್ಯರಾದ ಆಚಾರ್ಯರವರಿಗೆ ಉತ್ತರ ಕೊಡುವ ಕಾಲಕ್ಕೆ ಹೇಳಿದ್ದೇನೆ. ಅರಣ್ಯ ಮುಳುಗಡೆ ಏನಾಗುತ್ತಿದೆ ಅದರ ಬಗ್ಗೆ ಒಂದು ಪರವಾನಗಿ ಕೇಂದ್ರಸರ್ಕಾರದಿಂದ ಬರಬೇಕಾಗಿದೆ. ಪರವಾನಗಿ ಬಂದಮೇಲೆ ಯೋಗ್ಯ ಕ್ರಮವನ್ನು ತೆಗೆದುಕೆಲಸವನ್ನು ಮುಗಿಸಿ ಕೊಡುತ್ತೇನೆಂದು ನಾನು ಆಗಲೇ ಹೇಳಿದ್ದೇನೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ ನಮ್ಮ ಭಾಗದಲ್ಲಿ ಏತ ನೀರಾವರಿ ಕೆಲಸವನ್ನು ನಿಲ್ಲಿಸಿರುವುದರಿಂದ ಕೂಲಿಕಾರರು ಬೀದಿಪಾಲಾಗಿದ್ದಾರೆ. ಹೈದರಾಬಾದ್ ಕರ್ನಾಟಕ ಏರಿಯಾದಲ್ಲಿ ಮಳೆ ಇಲ್ಲದೆ ಬರಗಾಲ ಪ್ರಾರಂಭವಾಗಿ ಜನ ಬೊಂಬಾಯಿ ಕಡೆಗೆ ಹೋಗುತ್ತಿದ್ದಾರೆ. ಈ ರೀತಿಯ ಸ್ಥಿತಿ ಅಲ್ಲಿರುವಾಗ ಬೆಣ್ಣೆತೊರೆ ಪ್ರಾಜೆಕ್ಟನ್ನು ಕಂಪ್ಲೀಟ್ ಮಾಡಬೇಕು. ಗುತ್ತೆದಾರರು ಕೆಲಸವನ್ನು ನಿಲ್ಲಿಸಿದ್ದಾರೆ. ಕೆಲಸ ಸ್ಥಗಿತ ಗೊಂಡಿರುವುದರಿಂದ ಅಲ್ಲಿನ ಕೂಲಿಕಾರರಿಗೆ ಭಯಾನಕ ಪರಿಸ್ಥಿತಿ ಉಂಟಾಗಿದೆ. ಬೇರೆ ಗುತ್ತೇದಾರರನ್ನು ನೇಮಿಸಿ ಬೆಣ್ಣೆತೊರೆ ಪ್ರಾಜೆಕ್ಟ್‌ನ ಕೆಲಸವನ್ನು ತಕ್ಷಣ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಈಗಾಗಲೇ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅವರ ಇಲಾಖೆ ಕಡೆಯಿಂದ ಕೆಲಸ ಆಗಬೇಕಾಗಿದೆ, ಇಬ್ಬರು ಜೊತೆಗೆ ಅಲ್ಲಿಗೆ ಹೋಗಿ ಅಲ್ಲಿ ಏನಾಗಬೇಕೆಂಬುದರ ಬಗ್ಗೆ ವಿಚಾರ ಮಾಡುತ್ತೇವೆ.

ಅಧ್ಯಕ್ಷರು : ಅವರು ಆಗಲೇ ಟೂರ್ ಪ್ರೋಗ್ರಾಮ್ ಇಷ್ಯೂ ಮಾಡಿದ್ದಾರೆಯೇ?

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ವರ್ಲ್ಡ್‌ಬ್ಯಾಂಕ್ ಅಸಿಸ್ಟೆನ್ಸ್‌ನಲ್ಲಿ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳತ್ತಾರೊ ಅವು ಟೈಮ್ ಬಾಂಡ್ ಪ್ರಕಾರ ಮುಗಿಯಬೇಕು. ಒಂದು ವೇಳೆ ಟೈಮ್ ಬಾಂಡ್ ಪ್ರಕಾರ ಆ ಪ್ರೋಗ್ರಾಮ್‌ಗಳು ಮುಗಿಯಲಿಲ್ಲವೆಂದರೆ ವರ್ಲ್ಡ್‌ಬ್ಯಾಂಕಿನಿಂದ ಹಣ ಬರುವುದಿಲ್ಲ. ಕಾಸ್ಟ್ ಆಫ್ ಕನ್ಸಟ್ರಕ್ಷನ್ ಹೆಚ್ಚಾಗುತ್ತದೆ.

ನನ್ನ ಮತದಾರ ಕ್ಷೇತ್ರದಲ್ಲಿ ದುರ್ಗದಹಳ್ಳ ಮತ್ತು ಹತ್ತಿಬೆಲೆ ಮುಂಡಗೋಡ ತಾಲ್ಲೂಕಿನಲ್ಲಿ ಬರುತ್ತವೆ. ಇವು ಸಹ ವರ್ಲ್ಡ್‌ಬ್ಯಾಂಕ್ ಅಸಿಸ್ಟನ್ಸ್ ಯೋಜನೆಗಳು. ನಮ್ಮ ಸರ್ಕಾರ ಇದ್ದಾಗ ಮಂಜೂರಾಗಿದ್ದವು. ಅವು ಇನ್ನು ಮುಗಿದಿಲ್ಲ. ಸರಿಯಾದ ಸಮಯದಲ್ಲಿ ತಾವು ಎಲ್.ಓ.ಸಿ. ರಿಲೀಸ್ ಮಾಡುತ್ತಿಲ್ಲ. ಇವು ವರ್ಲ್ಡ್‌ಬ್ಯಾಂಕ್ ಪ್ರೋಗ್ರಾಮ್ ಆದುದರಿಂದ ಟೈಮ್ ಬಾಂಡ್‌ನಲ್ಲಿ ಈ ಕಾರ್ಯಕ್ರಮಗಳನ್ನು ಮುಗಿಸಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ದುರ್ಗದಹಳ್ಳ ಮತ್ತು ಹತ್ತಿಬೆಲೆ ಯೋಜನೆಗಳು ಏನಿವೆ ಅವುಗಳಿಗೆ ತಕ್ಷಣ ಎನ್.ಓ.ಸಿ. ಬೇಕಾಗುತ್ತದೆ. ತಕ್ಷಣ ಎನ್‌ಓಸಿಯನ್ನು ರಿಲೀಸ್ ಮಾಡಿ ಹಣವನ್ನು ಬಿಡುಗಡೆ ಮಾಡಬೇಕೆಂದೂ ತಾವು ತ್ವರಿತಗತಿಯಲ್ಲಿ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು,
ದಿನಾಂಕ........

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಸದಸ್ಯರಾದ ದೇಶಪಾಂಡೆಯವರು ಹೇಳುವಂತಹ ವಿಷಯದಲ್ಲಿ. ಆದಷ್ಟು ಶೀಘ್ರವಾಗಿ ಆ ಕೆಲಸಗಳನ್ನು ಮುಗಿಸುವುದಕ್ಕೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್ : ಮಾನ್ಯ ಅಧ್ಯಕ್ಷರೆ, ಹೊಸ ಯೋಜನೆಗಳೆಂದು ಈ ವಾರ್ಷಿಕ ವರದಿಯಲ್ಲಿ ಬರೆದಿದ್ದಾರೆ. ಅನೇಕ ಯೋಜನೆಗಳ ಜೊತೆಗೆ ತುಂಗಾ ಮೇಲ್ದಂಡೆ ಯೋಜ್ಞನೆಯನ್ನು ಕೂಡಿಸಿದ್ದಾರೆ.

ಅಧ್ಯಕ್ಷರು : ಆ ವಿಚಾರವನ್ನು ಆಗಲೇ ಹೇಳಿದ್ದಾರೆ.

ಶ್ರೀ ಕೆ.ಬಿ. ಕೋಳಿವಾಡ್ : ಅಪ್ಪರ್ ತುಂಗಾ ಯೋಜನೆಗೆ 1990-91ನೇ ಸಾಲಿಗೆ ಕೇವಲ 1ಕೋಟಿ 50 ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟಿದ್ದಾರೆ. ಆ ಯೋಜನೆಯ ಅಂದಾಜು ವೆಚ್ಚ 2075 ಕೋಟಿ ರೂಪಾಯಿ. ಈಗ ಇದಕ್ಕೆ ಅನೇಕ ಯೋಜನೆಗಳನ್ನು ಸಹ ಕೂಡಿಸಿದ್ದಾರೆ. ಇದಕ್ಕೆ 1,50 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಇದು ಹೋದ ವರ್ಷ ಇಟ್ಟಿದ್ದುದು ಈ ವರ್ಷ ಏನೂ ಇಟ್ಟಿಲ್ಲ.

ಶ್ರೀ ಕೆ.ಬಿ. ಕೋಳಿವಾಡ್ : ಈ ಯೋಜನೆ ಕಾರ್ಯರೂಪಕ್ಕೆ ಬರಬೇಕಾದರೆ ಹೆಚ್ಚು ಹಣ ಬೇಕು.

ಅಧ್ಯಕ್ಷರು : 1991-92ನೇ ಸಾಲಿಗೆ ಎಷ್ಟು ಹಣವನ್ನು ಪ್ರೊವೈಡ್ ಮಾಡಿದ್ದಾರೆ?

ಶ್ರೀ ಕೆ.ಬಿ. ಕೋಳಿವಾಡ್ : ಈ ಸಾರಿ ಅದಕ್ಕೆ ಹಣ ಇಟ್ಟೇ ಇಲ್ಲ.

ಅಧ್ಯಕ್ಷರು : ಸರಿ ಹಾಗಾದರೆ ತಾವು ಕುಳಿತುಕೊಳ್ಳಿ.

ಶ್ರೀ ಕೆ.ಬಿ. ಕೋಳಿವಾಡ್ : ಈವೊಂದು ಯೋಜನೆಗೆ ವರ್ಲ್ಡ್‌ಬ್ಯಾಂಕಿನ ನೆರವು ಪಡೆಯುತ್ತಾರೋ ಹೇಗೆ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ತುಂಗಾ ಮೇಲ್ದಂಡೆ ಯೋಜನೆಗೆ ಬಹಳ ದಿನದ ಚರ್ಚೆ ಇದೆ. ಈ ವಿಷಯದ ಹಿನ್ನೆಲೆಯಲ್ಲಿ ಮಾನ್ಯ ಕೋಳಿವಾಡರಾಗಲೀ ಬನ್ನಿಕೋಡ್‌ರವರಾಗಲೀ, ಕುನ್ನೂರುರವರಾಗಲೀ ಹಾಗೂ ಮನೋಹರ ತಹಶೀಲ್ದಾರ್‌ರವರಾಗಲೀ ಏನೊಂದು ಇಚ್ಛೆಯನ್ನು ವ್ಯಕ್ತಮಾಡಿದ್ದಾರೆ ಅದರ ಬಗ್ಗೆ ಜಿಲ್ಲೆಯ ಎಲ್ಲಾ ಶಾಸಕರ ಸಭೆಯನ್ನು ಕರೆದು ಯಾವ ದೃಷ್ಟಿಯಿಂದ ಇದನ್ನು ಬೇಗ ಪ್ರಾರಂಭಮಾಡುವುದಕ್ಕೆ ಸಾಧ್ಯವಿದೆ ಎನ್ನುವ ವಿಷಯವನ್ನು ಪರಿಶೀಲನೆ ಮಾಡಿ ಯೋಗ್ಯ ಸಮಯದಲ್ಲಿ ಯೋಗ್ಯ ನಿರ್ಣಯ ಕೈಗೊಳ್ಳುತ್ತೇನೆಂದು ಹೇಳುತ್ತೇನೆ.

ಶ್ರೀ ಎಂ.ಪಿ. ವೆಂಕಟೇಶ್ : ಮಾನ್ಯ ಅಧ್ಯಕ್ಷರೆ, ಕಳೆದ 20 ದಿವಸಗಳ ಹಿಂದೆ ತಾರಕ ಜಲಾಶಯಕ್ಕೆ ನೀರು ಬಂದಿರಲಿಲ್ಲ. ಈಗ ನೀರು ಬಂದಿದೆ. ಮಾನ್ಯ ನೀರಾವರಿ ಸಚಿವರು ಅಲ್ಲಿಗೆ ಬಂದು ಪೂಜೆ ಮಾಡಿ ನೀರು ಬಿಟ್ಟಿದ್ದಾರೆ. ಕಂಟ್ರಾಕ್ಟರುಗಳು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಶಿಲ್ಟ್ ತೆಗೆಸಿದ್ದಾರೆ, ತೂಬುಗಳನ್ನು ರಿಪೇರಿ ಮಾಡಿದ್ದಾರೆ ಗೇಟ್‌ಗಳನ್ನು ಹಾಕಿದ್ದಾರೆ. ಅದಕ್ಕೆ ಪ್ರಸ್ತುತ ಅಂದಾಜು ಪಟ್ಟಿಯಲ್ಲಿ ಹಣವನ್ನು ಒದಗಿಸಿಲ್ಲ. ತಾರಕ ಜಲಾಶಯದ ಕೆಲಸಕಾರ್ಯಗಳಿಗಾಗಿ ಕಂಟ್ರಾಕ್ಟರುಗಳಿಗೆ ಲಕ್ಷಾಂತರ ರೂಪಾಯಿ ಹಣವನ್ನು ಕೊಡಬೇಕಾಗುತ್ತದೆ. ಇನ್ನೂ ಲಕ್ಷಾಂತರ ರೂಪಾಯಿಗಳ ಕೆಲಸಕಾರ್ಯಗಳು ಆಗಬೇಕಾಗುತ್ತದೆ. ನಾನು 16ನೇ ತಾರೀಖು ಮಾನ್ಯ ಮಂತ್ರಿಗಳನ್ನು ಈ ಬಗ್ಗೆ ಕೇಳಿದಾಗ, ನಾನು ತಕ್ಷಣ ಹಣವನ್ನು

ಬಿಡುಗಡೆ ಮಾಡುತ್ತೇನೆಂದು ಹೇಳಿ ಒಪ್ಪಿದರು. ಆದನ್ನು ಅಂದಾಜು ಪಟ್ಟಿಯಲ್ಲಿ ಸೇರಿಸಿಲ್ಲ. ಅದರ ಬಗ್ಗೆ ಒಪ್ಪಿಗೆ ಕೊಡದಿದ್ದರೆ ನಾನು ಧರಣಿ ಕುಳಿತುಕೊಳ್ಳಬೇಕಾಗುತ್ತದೆ. ನನ್ನ ಕ್ಷೇತ್ರಕ್ಕೆ ಬಂದಿದ್ದಾಗ ಅದರ ಬಗ್ಗೆ ಒಪ್ಪಿಗೆ ಕೊಟ್ಟಿದ್ದಾರೆ.

ಅಧ್ಯಕ್ಷರು : ಧರಣಿ ಅಂತಹದ್ದು ಏನಾದರೂ ಮಾಡಬೇಕಾದರೆ ಪ್ರೊಫೆಸರ್ ನಂಜುಂಡ ಸ್ವಾಮಿಯವರಿಗೆ ಹೇಳಿಬಿಟ್ಟು ನೀವು ಮಾಡಿ.

ಶ್ರೀ ಎಂ.ಪಿ. ವೆಂಕಟೇಶ್ : ಆ ವಿಚಾರ ಬೇರೆ, ಇದೇ ಬೇರೆ. ನಮ್ಮ ಕ್ಷೇತ್ರದ ಕೆಲಸ ಕಾರ್ಯಗಳಿಗೆ ಹಣ ಬೇಕು..

ಅಧ್ಯಕ್ಷರು : ನೀವು ಧರಣಿ ಕುಳಿತುಕೊಳ್ಳುವುದರಿಂದ ಕಾಲುವೆಯಲ್ಲಿರುವ ಶಿಲ್ಟ್, ಎತ್ತಿ ಹಾಕುವುದಕ್ಕೆ ಸಾಧ್ಯವೇ? ಮಂತ್ರಿಗಳ ಜೊತೆಯಲ್ಲಿ ಹೋಗಿ ಮಾತನಾಡಿ ಚರ್ಚೆ ಮಾಡಿ ಇಲ್ಲಿ ಭಯಂಕರ ಭಾಷಣ ಮಾಡಿ.

ಶ್ರೀ ಎಂ.ಪಿ. ವೆಂಕಟೇಶ್ : ಮಂತ್ರಿಗಳಿಗೆ ಮತ್ತು ಕಾರ್ಯದರ್ಶಿಗಳಿಗೆ ಪತ್ರ ಕೊಟ್ಟಿದ್ದೇನೆ. ಇದರ ಬಗ್ಗೆ ಸದನದಲ್ಲಿ ಪ್ರಸ್ತಾಪಮಾಡಿದ್ದೇನೆ. ಅದಕ್ಕೆ ಮಂತ್ರಿಗಳು ಒಪ್ಪಿದ್ದಾರೆ.

ಅಧ್ಯಕ್ಷರು : ಮಂತ್ರಿಗಳು ಏನು ಹೇಳುತ್ತಾರೆ ನೋಡೋಣ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಏನು ವಿಷಯ ಇದೆಯೆಂದು ಪರಿಶೀಲನೆ ಮಾಡಿ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ನಾನು ಅವರಿಗೆ ಹೇಳಿದ್ದೇನೆ. ಈಗ ಇಲ್ಲಿ ಒಂದು ಪತ್ರ ತಂದು ಕೊಟ್ಟಿದ್ದಾರೆ. ಪತ್ರ ಕೊಟ್ಟಮೇಲೆ ಧರಣಿ ಮಾಡುತ್ತೇನೆ ಎಂದು ಹೇಳಿದರು. ನಾನು ಅದು ಸರಿಯಲ್ಲ ಎಂದು ಹೇಳಿ ಅವರನ್ನು ವಿನಂತಿ ಮಾಡಿದ್ದೇನೆ.

ಶ್ರೀ ಎಂ.ಪಿ. ವೆಂಕಟೇಶ್ : ಈ ಬಗ್ಗೆ ಹಲವಾರು ಬಾರಿ ಮಂತ್ರಿಗಳಿಗೆ ಪತ್ರ ಕೊಟ್ಟಿದ್ದೇನೆ, ಬಜೆಟ್‌ನಲ್ಲಿ ಪ್ರಾವಿಜನ್ ಮಾಡಬೇಕು ಎಂದು ಹೇಳಿದ್ದೇನೆ. ಮುಂಚಿತವಾಗಿಯೇ ಹೇಳಿದ್ದೇನೆ.

ಅಧ್ಯಕ್ಷರು : ಈ ಬಜೆಟ್ ಅವರು ಮಂತ್ರಿಯಾಗುವುದಕ್ಕೆ ಮುನ್ನ ತಯಾರಾದದ್ದು ಆದ್ದರಿಂದ ಅವರ ವಿರುದ್ಧ ಧರಣಿ ಮಾಡಿದರೆ ಏನು ಲಾಭ ಆಗುತ್ತದೆ ನಿಮಗೆ? ಆದ್ದರಿಂದ ಇದನ್ನು ಮುಂದಿನ ವರ್ಷಕ್ಕೆ ಪೋಸ್ಟ್‌ಪೋನ್ ಮಾಡಿ.

(ನಗು)

ಶ್ರೀ ಎಂ.ಪಿ. ವೆಂಕಟೇಶ್ : ಇದನ್ನು ಪರಿಶೀಲನೆ ಮಾಡಿ..

ಅಧ್ಯಕ್ಷರು : ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಎಂ.ಪಿ. ವೆಂಕಟೇಶ್ : ಅಲ್ಲಿ ಈಗಾಗಲೇ ಕೆಲಸ ನಡೆದಿದೆ. ಅವರೇ ನೀರು ಬಿಟ್ಟಿದ್ದಾರೆ. ಲಕ್ಷಾಂತರ ರೂಪಾಯಿಗಳ ಕೆಲಸ ಆಗಬೇಕು. ಮುಂದೆ ಕೆಲಸ ಆಗಬೇಕಾಗಿರುವಾಗ, ಪರಿಶೀಲನೆ ಮಾಡುವ ಪ್ರಶ್ನೆ ಅಲ್ಲ. ಅಲ್ಲಿ ಪೇಮೆಂಟ್ ಆಗಬೇಕಾಗಿದೆ. ಅದಕ್ಕೆ ದುಡ್ಡು ಕೊಡಬೇಕು. ಮುಂದಿನ ಕೆಲಸ ಆಗಬೇಕಾಗಿದ್ದು ಅವರು ನೋಡಿದ್ದಾರೆ, ವೀಕ್ಷಣೆ ಮಾಡಿದ್ದಾರೆ.

ಅಧ್ಯಕ್ಷರು : ಎಲ್.ಓ.ಸಿ. ರಿಲೀಸ್ ಮಾಡಿಕೊಡಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಅಧ್ಯಕ್ಷರೇ , ತಾರಕದ್ದು ಏನಾಗಿದೆ ಎಂದರೆ, ಕಳೆದ 20 ವರ್ಷಗಳಿಂದ ಅದು ತುಂಬಿಗಳಿಂ [illegible]

ಒಂದು ಲಿಫ್ಟ್ ಇರುಗೇಷನ್ ಮಾಡಿ ತುಂಬಿಸಬೇಕಾಗುತ್ತದೆ. ಆವಾಗ ಅವರು ಕಾರ್ಯಕ್ರಮಕ್ಕೆ ನನ್ನನ್ನು ಕರೆದರು. ಇವರು ಅಲ್ಲಿ ಇರಲೇ ಇಲ್ಲ. ನಾನು ಅಲ್ಲಿ ಹೇಗೆ ಅನೌನ್ಸ್ ಮಾಡುವುದು? ಇಲ್ಲಿ ಇವರು ಹೇಳುತ್ತಿದ್ದಾರೆ. ಇದರ ಬಗ್ಗೆ ಯೋಚಿಸಿ ಕ್ರಮ ತಗೆದುಕೊಳ್ಳುತ್ತೇನೆ ಎಂದು ನಾನು ಹೇಳಿದ್ದೇನೆ.

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್ : ದಯಮಾಡಿ ಹಣ ರಿಲೀಸ್ ಮಾಡುತ್ತೀರಾ ಹೇಳಿ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಅವರದ್ದು ಏನು ಇಚ್ಛೆ ಇದೆ, ಆ ಪ್ರಕಾರ ಸಾರ್ವಜನಿಕ ಹಿತದೃಷ್ಟಿಯಿಂದ ಮಾಡುತ್ತೇನೆ.

ಅಧ್ಯಕ್ಷರು : ನಾನು ಪ್ರಸ್ತಾಪವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾಪ ಏನೆಂದರೆ

"31.3.92ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ 45, 46, 47, 49, 5, 48, 36 ಮತ್ತು 35 ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡಬೇಕು"

ಪ್ರಸ್ತಾಪವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗಡೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ 45-ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು)

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೋಕೋಪಯೋಗಿ ಕಾಮಗಾರಿಗೆ (ನಿರ್ಮಾಣ ರಹಿತ) ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 107,43,36,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು "

ಅಭಿಯಾಚನೆ ಕ್ರಮಾಂಕ 46-ಕಟ್ಟಡಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಟ್ಟಡಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 8,63,82,000ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 46,34,26,000ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ 47 ರಸ್ತೆಗಳು ಮತ್ತು ಸೇತುವೆಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆಗಳು ಮತ್ತು ಸೇತುವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ

ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆ.ಲ್ಲಿ 127,24,18,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 35,27,43,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು"

<u>ಅಭಿಯಾಚನೆ ಕ್ರಮಾಂಕ 49 ವಿದ್ಯುಚ್ಛಕ್ತಿ ಯೋಜನೆಗಳು</u>

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿದ್ಯುಚ್ಛಕ್ತಿ ಯೋಜನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ , ರಾಜಸ್ವ ಖಾತೆಯಲ್ಲಿ 20,57, 90,000ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 335,92,80,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು"

<u>ಅಭಿಯಾಚನೆ ಕ್ರಮಾಂಕ-5 ಮೀನುಗಾರಿಕೆ</u>

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮೀನುಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 10,82,27,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 82,50,000 ರೂ.ಗಳಿಗಿಂತ ಮೀರಿದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು"

<u>ಅಭಿಯಾಚನೆ ಕ್ರಮಾಂಕ 48-ರೇವು ಮತ್ತು ಜಲ ಸಾರಿಗೆ ಸೇವೆಗಳು</u>

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇವು ಮತ್ತು ಜಲ ಸಾರಿಗೆ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 2,43,96,000ರೂ.ಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3,50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ 36 ನೀರಾವರಿ, ಜಲಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೀರಾವರಿ, ಜಲಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ 229,45,91,000ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 376,92,98,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು"

ಅಬಿಯಾಚನೆ ಕ್ರಮಾಂಕ 35 - ಸಣ್ಣ ನೀರಾವರಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ನೀರಾವರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು

ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ 47,78,71,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 17,62,14,000 ರೂ.ಗಳಿಗಿಂತ ಮೀರದ ಮೊತ್ತರನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು".

ಪ್ರಶ್ನೋತ್ತರಗಳು

ಚುಕ್ಕೆಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಶ್ರೀ ಆರ್.ವಿ. ದೇಶಪಾಂಡೆ : ಈಗ ಏಳೂವರೆ ಗಂಟೆಯಾಗಿದೆ. ಇನ್ನೂ ಉತ್ತರಗಳು ಬಂದಿಲ್ಲ.

ಅಧ್ಯಕ್ಷರು : ಪ್ರಶ್ನೆಗಳನ್ನು ತೆಗೆದುಕೊಳ್ಳದಿದ್ದರೆ ಅವು ಲ್ಯಾಪ್ಸ್ ಆಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈಗ ಪ್ರಶ್ನೆಗಳಿಗೆ ಉತ್ತರ ಕೊಡಲಿಕ್ಕೆ ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಇಲ್ಲ. ಅದಕ್ಕೋಸ್ಕರ ನಾನು ಅವರನ್ನು ಕರೆಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ತಾವು ದಯವಿಟ್ಟು ಸರ್ಕಾರಕ್ಕೆ ಆದೇಶ ಕೊಡಬೇಕು. ಮುಖ್ಯವಾಗಿ ಶಿಕ್ಷಣ ಮಂತ್ರಿಗಳು ಇಲ್ಲ.

ಅಧ್ಯಕ್ಷರು : ಶಿಕ್ಷಣ ಮಂತ್ರಿಗಳು ನನಗೆ ಕಾಗದ ಬರೆದಿದ್ದಾರೆ. ಅವರ ಪರವಾಗಿ ಶ್ರೀ ಪುಟ್ಟಸ್ವಾಮಿಗೌಡರು ಉತ್ತರ ಕೊಡುತ್ತಾರೆ.

ರಾಯಚೂರು ಜಿಲ್ಲೆಯಲ್ಲಿರುವ ಶಾಲಾರಹಿತ ಗ್ರಾಮಗಳ ಸಂಖ್ಯೆ.

3473-ಶ್ರೀ ಮಲ್ಲಿಕಾರ್ಜುನ ದಿವಟರ್ (ಕೊಪ್ಪಳ), ಶ್ರೀ ಬಸವನಗೌಡ ಪಾಟೀಲ್ ಮಾನ್ವಿ (ರಾಯಚೂರು) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆಯಲ್ಲರುವ ಶಾಲಾರಹಿತ ಗ್ರಾಮಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರಗಳನ್ನೊದಗಿಸುವುದು).

ಆ) ಈ ಗ್ರಾಮಗಳಿಗೆ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ತೆರೆಯಲು ಸರ್ಕಾರ ಆಸಕ್ತಿ ತಾಳಿದೆಯೇ?

ಇ) ಸರ್ಕಾರದಿಂದ ತೀವ್ರವಾಗಿ ಶಿಕ್ಷಕರನ್ನು ಶಾಲೆಗಳಿಗೆ ಒದಗಿಸಲಾಗಿದಿದ್ದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಶಾಲೆಗಳನ್ನು ನಡೆಸಲು ಅನುಮತಿ ನೀಡಲಾಗುವುದೇ?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಸಚಿವರು)

ಅ) 1990-91ರಲ್ಲಿದ್ದಂತೆ ರಾಯಚೂರು ಜಿಲ್ಲೆಯಲ್ಲಿ ಶಾಲಾ ರಹಿತ ಹಳ್ಳಿಗಳ ಒಟ್ಟು ಸಂಖ್ಯೆ : 222) (ತಾಲ್ಲೂಕುವಾರು ಪಟ್ಟಿ ಲಗತ್ತಿಸಿದೆ).

ಆ) ಶಾಲಾ ರಹಿತ ಹಳ್ಳಿಯಲ್ಲಿ 300ಕ್ಕಿಂತ ಹೆಚ್ಚು ಜನಸಂಖ್ಯೆ ಇದ್ದು ಶಾಲೆಗೆ ಹೋಗುವ ವಯಸ್ಸಿನ ಕನಿಷ್ಠ 20 ಮಕ್ಕಳು ಆ ಸ್ಥಳದಲ್ಲಿ ಇದ್ದಲ್ಲಿ ಆಯಾ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆ ಪ್ರಾರಂಭಿಸಲು ಸರ್ಕಾರ ಆಸಕ್ತಿ ಹೊಂದಿದೆ.

ಇ) ಖಾಸಗಿ ಶಾಲೆಗಳನ್ನು ಇಂತಹ ಹಳ್ಳಿಗಳಲ್ಲಿ ಪ್ರಾರಂಭಿಸುವ ಬಗ್ಗೆ ಖಾಸಗಿ ಸಂಸ್ಥೆಯವರು ಮುಂದೆ ಬಂದರೆ ಅಂತಹ ಸಂಸ್ಥೆಗಳಿಗೆ ಶಾಲೆಗಳನ್ನು ತೆರೆಯಲು ಸೂಕ್ತ ಮಾರ್ಗಸೂಚಿಗಳನ್ನು ಆದೇಶ ಸಂಖ್ಯೆ : ಇಡಿ 23 ಪಿಜಿಸಿ 91 ದಿನಾಂಕ 5-6-91 ರಲ್ಲಿ ನೀಡಿದೆ.

ಸರ್ಕಾರಿ ಮುದ್ರಣಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರು

3460- ಶ್ರೀ ಎಚ್.ಎಂ. ರೇವಣ್ಣ (ಮಾಗಡಿ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಸರ್ಕಾರಿ ಮುದ್ರಣಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರ ಸಂಖ್ಯೆ ಎಷ್ಟು?

ಆ) ಅವರುಗಳನ್ನು ಖಾಯಂಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಇ) ಮುದ್ರಣಾಲಯದಲ್ಲಿ ಸಾಕಷ್ಟು ನೌಕರರು ಇದ್ದರೂ ಸಹ ಮುದ್ರಣಾಲಯದ ಕಾರ್ಯವನ್ನು ಖಾಸಗಿ ಮುದ್ರಣಾಲಯದಲ್ಲಿ ಮಾಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಅದನ್ನು ತಡೆಗಟ್ಟಿ ಅದರಿಂದ ಸರ್ಕಾರಕ್ಕೆ ಉಂಟಾಗುತ್ತಿರುವ ನಷ್ಟವನ್ನು ತಪ್ಪಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣಸಚಿವರು).

ಅ) 471.

ಆ) ಪರಿಶೀಲನೆಯಲ್ಲಿದೆ.

ಇ) ಮುದ್ರಣಾಲಯದ ಕಾರ್ಯಗಳನ್ನು ಖಾಸಗಿ ಮುದ್ರಣಾಲಯಗಳಿಗೆ ವಹಿಸುತ್ತಿಲ್ಲ.

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಚ್.ಎಂ. ರೇವಣ್ಣ : ಮಾನ್ಯ ಅದ್ಯಕ್ಷರೇ, ಉತ್ತರದಲ್ಲಿ 471 ದಿನಗೂಲಿ ನೌಕರರು ಗವರ್ನಮೆಂಟ್ ಪ್ರೆಸ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿಸಿದ್ದಾರೆ. ಜೊತೆಗೆ ಅವರನ್ನು ಖಾಯಂಗೊಳಿಸುವ ಬಗ್ಗೆ 'ಪರಿಶೀಲಿಸಲಾಗುವುದು' ಎಂದು ಹೇಳುತ್ತಾರೆ. ಆದರೆ 1983ರಿಂದ ಈಚೆಗೆ ಯಾರು ಈ ಹಿಂದೆ ಕೆಲಸ ಮಾಡುತ್ತಿದ್ದರು. ಅವರನ್ನೆಲ್ಲಾ ಖಾಯಂ ಮಾಡಬೇಕೆಂದು ಸುಪ್ರೀಂ ಕೋರ್ಟಿನಿಂದ ಆದೇಶ ಬಂದಮೇಲೆ ಎಲ್ಲಾ ಇಲಾಖೆಗಳಲ್ಲಿಯೂ ಕೂಡ ದಿನಗೂಲಿ ನೌಕರರನ್ನು ಖಾಯಂ ಮಾಡಿದ್ದಾರೆ. ಆದರೆ ಗವರ್ನಮೆಂಟ್ ಪ್ರೆಸ್‌ನಲ್ಲಿ ಹಾಗೆ ಮಾಡಿದ್ದಾರೆಯೇ ಎಂದು ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಶಿಕ್ಷಣ ಸಚಿವರ ಪರವಾಗಿ) : ಈ ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿದೆ ಶೀಘ್ರದಲ್ಲೇ ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್.ಎಂ. ರೇವಣ್ಣ : ಮಾನ್ಯ ಅಧ್ಯಕ್ಷರೇ ಸರ್ಕಾರಿ ಮುದ್ರಣಾಲಯ ದೊಡ್ಡ ಪ್ರಮಾಣದಲ್ಲಿ ಇದ್ದರೂ ಕೂಡ ಖಾಸಗಿಯವರಿಂದ ಪ್ರಿಂಟಿಂಗ್ ವರ್ಕ್ ಕೊಟ್ಟಿದ್ದಾರೆಂದು ನಾನು ಕೇಳಿದ್ದೇನೆ. ಜೊತೆಗೆ ಪಠ್ಯಪುಸ್ತಕದ ಕೆಲಸ ಕೂಡ ಅವರು ಸಮರ್ಪಕವಾಗಿ ಮಾಡುತ್ತಿಲ್ಲ. ಇವತ್ತಿನ ದಿವಸ ಸರ್ಕಾರಿ ಪಾಠ ಶಾಲೆಗಳಿಗೆ ಸರಿಯಾದಂತಹ ಪುಸ್ತಕ ಸಹ ಬರುತ್ತಿಲ್ಲ ಜೊತೆಗೆ ಎಷ್ಟು ಪುಸ್ತಕಗಳು ಪ್ರಿಂಟ್ ಆಗುತ್ತವೆ ಎಂದು ಬೇರೆ ಪುಸ್ತಕಗಳ ಕವರ್ ಮೇಲೆ ಇಷ್ಟು ಪ್ರತಿಗಳು ಅಂತ ಪ್ರಿಂಟ್ ಆಗಿ ಬರುತ್ತದೆ. ಆದರೆ ಸರ್ಕಾರಿ ಮುದ್ರಣಾಲಯದಿಂದ ಬರತಕ್ಕಂಥ ಪುಸ್ತಕಗಳಲ್ಲಿ ಇದು ಬರುತ್ತಿಲ್ಲ ಇದರಲ್ಲಿ ಅವ್ಯವಹಾರ ಏನಾದರೂ ಆಗಿದ್ದರೆ, ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ನಾನು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಮಾನ್ಯ ಅಧ್ಯಕ್ಷರೇ ಮುದ್ರಣ ಕೆಲಸವನ್ನು ಖಾಸಗಿಯವರಿಗೆ ಯಾವ ಸಂದರ್ಭದಲ್ಲೂ ಕೂಡ ವಹಿಸಿಲ್ಲ. ಎಲ್ಲಾ ಕಾರ್ಯಗಳು ಕೂಡ ಸರ್ಕಾರಿ ಮುದ್ರಣಾಲಯವೇ ನಿರ್ವಹಿಸುತ್ತಿದೆ ಮತ್ತು ಮುದ್ರಣಾಲಯದಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲವೆಂದು ನಾನು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಮತ್ತು ಪಠ್ಯಪುಸ್ತಕಗಳು ಕೂಡ ಸರಿಯಾಗಿ ಒದಗಿಸತಕ್ಕಂಥಾದ್ದಕ್ಕೆ ಎಲ್ಲಾ ರೀತಿಯ ಕ್ರಮ ತೆಗೆದು ಕೊಂಡಿದ್ದೇವೆ. ಅದರಂತೆ ಕೆಲಸ ಆಗುತ್ತದೆ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ.

ಕೆ.ಎಸ್.ಇ.ಇ.ಬಿ. ಅವರು 91ರ ಜುಲೈರಂದು ನಡೆಸಿದ ಕನ್ನಡ ಹಿರಿಯ ಬೆರಳಚ್ಚು ಪರೀಕ್ಷೆ

3311- ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *1991ನೆಯ ಜುಲೈ ತಿಂಗಳಲ್ಲಿ ನಡೆದ ವಾಣಿಜ್ಯ ಪರೀಕ್ಷೆಯ ಕನ್ನಡ ಬೆರಳಚ್ಚು ಪ್ರೌಢ ದರ್ಜೆ ಪರೀಕ್ಷೆಯಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿರುತ್ತಾರೆ?*

ಆ) *ಇದರಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಕನ್ನಡ ಪ್ರೌಢ ದರ್ಜೆ ಪರೀಕ್ಷೆಯ ಮೊದಲನೆಯ ಪತ್ರಿಕೆಯಲ್ಲಿ ಅನುತ್ತೀರ್ಣರಾಗಿರುತ್ತಾರೆ?*

ಇ) *ಕನ್ನಡ ಬೆರಳಚ್ಚು ಪ್ರೌಢದರ್ಜೆ ಮೊದಲನೆಯ ಪತ್ರಿಕೆಯಲ್ಲಿ ಬಹಳ ಮಂದಿ ವಿದ್ಯಾರ್ಥಿಗಳು ಮನಸೋ ಇಚ್ಛೆ ಮೌಲ್ಯ ಮಾಪನ ಮಾಡದಿರುವುದರಿಂದ ಅನುತ್ತೀರ್ಣರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಮರು ಎಣಿಕೆಗೆ ಕನ್ನಡ ಪ್ರೌಢ ದರ್ಜೆಯ ಎಷ್ಟು ವಿದ್ಯಾರ್ಥಿಗಳು ಅರ್ಜಿ ಹಾಕಿರುತ್ತಾರೆ?*

ಉ) *ಮೌಲ್ಯಮಾಪನ ಮನಸೋ ಇಚ್ಛೆ ಆಗಿರುವುದರಿಂದ ಸರ್ಕಾರವು ಮರು ಮೌಲ್ಯಮಾಪನ ಮಾಡಿ ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸಿ ಕೊಡಲು ಕ್ರಮ ತೆಗೆದುಕೊಳ್ಳುವುದೇ?*

ಊ) *ಕನ್ನಡ ಬೆರಳಚ್ಚು ಪ್ರೌಢ ದರ್ಜೆ ಪರೀಕ್ಷೆಯಲ್ಲಿ ಹೆಚ್ಚು ವಿದ್ಯಾರ್ಥಿಗಳು ಮೆದಲನೆಯ ಪತ್ರಿಕೆಯಲ್ಲಿ ಅನುತ್ತೀರ್ಣರಾಗಿರುವುದಕ್ಕೆ ಕಾರಣರಾದ ಮೌಲ್ಯಮಾಪಕರನ್ನು ಮೌಲ್ಯಮಾಪಕರ ಕೆಲಸದಿಂದ ವಜಾ ಮಾಡಲು ಸರ್ಕಾರ ಕ್ರಮ ತೆಗೆದು ಕೊಳ್ಳುವುದೆ?*

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಸಚಿವರು)

ಅ) 8613 ವಿದ್ಯಾರ್ಥಿಗಳು.

ಆ) 2,176.

ಇ) ಇಲ್ಲ.

ಈ) 61 ವಿದ್ಯಾರ್ಥಿಗಳು.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ ಸೀನಿಯರ್ ಕನ್ನಡ ಟೈಪರೇಟಿಂಗ್ ಪರೀಕ್ಷೆ ಜುಲೈ 1991ರಲ್ಲಿ ಆಯಿತು ಅದನ್ನು ಕೆ.ಎಸ್.ಎಸ್.ಇ.ಬಿ. ವತಿಯಿಂದ ನಡೆಸುತ್ತಾರೆ. ಇದರಲ್ಲಿ ನಾನು ಮಾನ್ಯ ಸಚಿವರಿಗೆ ಕೇಳುವುದಕ್ಕೆ ಇಚ್ಛಿಪಡುತ್ತೇನೆ ಅಲ್ಲಿ ವ್ಯಾಲುವೇಶನ್ ಮಾಡುವವರು ಯಾರು? ಯಾರನ್ನು ನೇಮಿಸುತ್ತಾರೆ. ಎರಡನೆಯದಾಗಿ ಸೀನಿಯರ್ ಗ್ರೇಡ್ ಕನ್ನಡ ಟೈಪರೇಟಿಂಗ್ ಪಾರ್ಟ್ 1ರಲ್ಲಿ ಮಾರ್ಕ್ಸ್ ಕೊಡುವಾಗ ಸರಿಯಾಗಿ ಮಾರ್ಕ್ಸ್ ಪರೀಕ್ಷೆಯಲ್ಲಿ ಕೊಟ್ಟಿಲ್ಲ ಎನ್ನುವ ದೂರು

ಶ್ರೀ ಜಿ. ಪುಟ್ಟಸ್ವಾಮಿಗೌಡ : ಮಾನ್ಯ ಅಧ್ಯಕ್ಷರೆ, ಪರೀಕ್ಷೆಮೌಲ್ಯಮಾಪನ ನಿಬಂಧನೆಗಳಿಗೆ ಒಳಪಟ್ಟು ಅದರ ಮಾರ್ಗಸೂಚಿಯಲ್ಲಿ ಹೆಚ್ಚುವರಿ ತಿಳುವಳಿಕೆ ಕೊಟ್ಟು ಮುಖ್ಯಪರೀಕ್ಷಕರ ನಿರ್ದೇಶನದ ಅಡಿಯಲ್ಲಿ ನಡೆಸಲಾಗುತ್ತದೆ. ಮತ್ತು ಕನ್ನಡ ಸೀನಿಯರ್ ಇದರಲ್ಲಿ ಮಾರ್ಕ್ಸ್ ಬಹಳ ಕಡಿಮೆ ಕೊಟ್ಟಿದ್ದಾರೆ ಎನ್ನುವ ಸಂಶಯವನ್ನು ಏನು ವ್ಯಕ್ತಪಡಿಸಿದ್ದೀರಿ ಅದಕ್ಕೆ ಸರಿಯಾದಂಥ ಆಧಾರ ಇಲ್ಲ ಎನ್ನತಕ್ಕ ಮಾತನ್ನು ಈ ಅಂಕಿಅಂಶಗಳ ಮೂಲಕ ತಮಗೆ ತಿಳಿಸುತ್ತೇನೆ. 1989 ರಲ್ಲಿ 36 ಫರ್ಸೆಂಟ್ ಇದ್ದು ೯೦ರಲ್ಲಿ ೪೮ ಪರ್ಸೆಂಟ್ ತೇರ್ಗಡೆಯಾಗಿದ್ದರೆ ನವೆಂಬರ್‌ನಲ್ಲಿ ೪೧ ಪರ್ಸೆಂಟ್ ಆಗಿದ್ದಾರೆ. ಈಗಿನ ಜುಲೈನಲ್ಲಿ 50 ಪರ್ಸೆಂಟ್ ತೇರ್ಗಡೆಯಾಗಿದ್ದಾರೆ. ಆದ್ದರಿಂದ ಈ ಒಂದು ಸಂಶಯಕ್ಕೆ ಎಡೆ ಮಾಡಿ ಕೊಡತಕ್ಕಂಥ ಪರಿಸ್ಥಿತಿ ಇಲ್ಲ ಎನ್ನತಕ್ಕ ಮಾತನ್ನು ನಾನು ಹೇಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ನನ್ನ ಒಂದು ಮಾಹಿತಿ ಪ್ರಕಾರ ಟೈಪರೈಟಿಂಗ್‌ನಲ್ಲಿ ಅನುಭವ ಇರುವುದಿಲ್ಲವೆಂದು ನಾನು ಹೇಳುತ್ತಿಲ್ಲ. ಅವರು ಪರೀಕ್ಷೆಯಲ್ಲಿ ಪಾಸಾದ ನಂತರ ಅವರು ನಿಮ್ಮ ಸೆಕ್ರೆಟರಿಯೇಟ್‌ನಲ್ಲಿ ಸೆಕ್ಷನ್ ಆಫೀಸರ್ಸ್ ಆಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ತಾವು ಕಳುಹಿಸಿಕೊಡುತ್ತೀರಿ. ಹಾಗಾಗಿ ಇವತ್ತು ಸಾಕಷ್ಟು ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ. ಆದ್ದರಿಂದ ನಾನೇನು ಸೂಚನೆ ಮಾಡುತ್ತೇನೆಂದರೆ ಈ ಕಾಮರ್ಸ್ ಇನ್‌ಸ್ಟಿಟ್ಯೂಟ್ ಪ್ರಿನ್ಸಿಪಾಲ್ ಮತ್ತು ಟೀಚರ್ಸ್ ಯಾರು ಕೆಲಸ ಮಾಡುತ್ತಿದ್ದಾರೆ ಅವರಿಗೆ ಹೆಚ್ಚು ಅನುಭವ ಇರುತ್ತದೆ ಅಂತಹವರನ್ನು ವ್ಯಾಲು ವೇಶನ್ ಜವಾಬ್ದಾರಿ ಕೊಟ್ಟರೆ ಸೂಕ್ತ ಆಗಬಹುದು ಎಂದು ಸಲಹೆ ಮಾಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಉತ್ತಮ ಸಲಹೆ ಪರಿಶೀಲನೆ ಮಾಡುತ್ತೇನೆ.

ಚಾಮರಾಜನಗರದಲ್ಲಿ ವಿದ್ಯುತ್ ಕೊರತೆ

3266 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ವಿದ್ಯುತ್ ಕೊರತೆ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಚಾಮರಾಜನಗರದಲ್ಲಿ ವಿದ್ಯುತ್ ಪೂರೈಕೆ ಸ್ಥಿತಿಯನ್ನು ಉತ್ತಮ ಪಡಿಸಲು ಸರ್ಕಾರದ ಯಾವ ಕಾರ್ಯಕ್ರಮವನ್ನು ರೂಪಿಸಿದೆ?

ಇ) ಚಾಮರಾಜನಗರ ಹಾಗೂ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ವಿದ್ಯುತ್ತಿನ ಲೋವೋಲ್ಟೇಜನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಚಾಮರಾಜನಗರದಲ್ಲಿ ಇತರೆ ಪಟ್ಟಣಗಳಲ್ಲಿರುವಂತೆ ಹಗಲು ಸಮಯದಲ್ಲಿ ವಿದ್ಯುತ್ ಒತ್ತಡದ ಕಾಲದಲ್ಲಿ ಲೋಡ್ ಷೆಡ್ಡಿಂಗ್ ಮಾಡಲಾಗುತ್ತಿದೆ.

ಆ) ಚಾಮರಾಜನಗರ ತಾಲ್ಲೂಕಿನಲ್ಲಿ ವಿದ್ಯುತ್ ಪೂರೈಕೆಯನ್ನು ಉತ್ತಮಪಡಿಸಲು ಹೂಟಗಳ್ಳಿಯಿಂದ ನಂಜನಗೂಡು ಮತ್ತು ಚಾಮರಾಜನಗರಕ್ಕೆ ಹೋಗುವ 66 ಕೆ. ವಿ. ವಿದ್ಯುತ್ ಮಾರ್ಗಗಳನ್ನು ಬೇರ್ಪಡಿಸಿ ಪ್ರತ್ಯೇಕವಾಗಿ ಆಯಾ ಪ್ರದೇಶಗಳಿಗೆ ವಿದ್ಯುತ್ ಸರಬರಾಜು ಆಗಲು ವ್ಯವಸ್ಥೆಗೊಳಿಸಲಾಗಿದೆ ಮತ್ತು ಇದಲ್ಲದೆ 12.5 ಎಂ. ವಿ. ಎ. ಸಾಮರ್ಥ್ಯದ ಒ. ಎಲ್. ಟಿ.ಸಿ. ವುಳ್ಳ ಟ್ರಾನ್ಸ್‌ಫಾರ್ಮರ್‌ನ್ನು

ವಿದ್ಯುದ್ಬಲವು ಉತ್ತಮಗೊಂಡಿದೆ. ಅಲ್ಲದೆ ಓವರ್‌ಲೋಡ್‌ನಿಂದ ಆಗುವ ವಿದ್ಯುತ್ ನಿಲುಗಡೆ ಕಡಿಮೆ ಆಗಿದೆ.

ಇ) ಚಾಮರಾಜನಗರ ತಾಲ್ಲೂಕಿನಲ್ಲಿ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ವಿದ್ಯುತ್ ಸರಬರಾಜನ್ನು ಉತ್ತಮಪಡಿಸಲು ರೈನ್ ಟ್ಯಾಪ್ ಆಫ್, ಉಪ- ವಿದ್ಯುತ್ ಕೇಂದ್ರಗಳನ್ನು ಹರವೆ, ಚಂದರವಾಡಿ ಮತ್ತು ಸಂತಮಾರೇನಹಳ್ಳಿ ಇವುಗಳಲ್ಲಿ ಹಾಕಲು ಯೋಚಿಸಲಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಚಾಮರಾಜನಗರ ತಾಲ್ಲೂಕಿನಲ್ಲಿ ನಿರಂತರವಾಗಿ ವಿದ್ಯುಚ್ಛಕ್ತಿ ಅಭಾವದ ಬಗ್ಗೆ ನಾನು ಈ ಸಭೆಯಲ್ಲಿ ಅನೇಕ ಭಾರಿ ಹೇಳಿದ್ದೆ. ಹಿಂದೆ ವಿದ್ಯುಚ್ಛಕ್ತಿ ಸಚಿವರಾದ ಶ್ರೀ ಪುಟ್ಟಸ್ವಾಮಿಗೌಡರು ಇದನ್ನು ಸರಿ ಮಾಡುವ ಬಗ್ಗೆ ಒಂದು ಸಭೆ ಕರೆದಿದ್ದರು. ನಾವು ಒಂದೇ ಸಮನೆ ಒತ್ತಾಯ ಮಾಡುತ್ತಿದ್ದೇವೆ. ಅಲ್ಲಿ ನಿರಂತರವಾಗಿ ಅತ್ಯಂತ ತೊಂದರೆಯನ್ನು ಜನರು ಅನುಭವಿಸುತ್ತಿದ್ದಾರೆ. ಕಳೆದ 5-6 ವರ್ಷಗಳಿಂದ ನೀರಾವರಿ ಪಂಪ್‌ಸೆಟ್‌ಗಳಿಗೆ ತೊಂದರೆಯಾಗಿದೆ. ಈಗ ಇರತಕ್ಕಂಥ ಕೆ. ಇ. ಬಿ. ಛೇರ್ಮನ್‌ರು ಚಾಮರಾಜನಗರಕ್ಕೆ ಬಂದಿದ್ದಾಗ ಅವರು ಹೇಳಿದರು ಏನು ಇದು ದೀಪ ಉರಿದಂತೆ, ಲೈಟ್ ಉರಿಯುತ್ತಿವೆ ಇದು ನಮ್ಮ ಕೆ.ಇ. ಬಿ.ಗೆ ಅಗೌರವಾಗುತ್ತದೆ ಎನ್ನತಕ್ಕಂಥ ಮಾತನ್ನು ಅವರು ವ್ಯಕ್ತ ಪಡಿಸಿ ಬಂದಿದ್ದಾರೆ. ಆದ್ದರಿಂದ ತಾವು ಈ ಬಗ್ಗೆ ಪ್ರಾಮಾಣಿಕ ಪ್ರಯತ್ನಮಾಡಿ ನನ್ನ ತಾಲ್ಲೂಕಿಗೆ ಸಮಗ್ರ ವಿದ್ಯುಚ್ಛಕ್ತಿ ಒದಗಿಸಿಕೊಡುವ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಾಮಪ್ಪ :- ಮಾನ್ಯ ಅಧ್ಯಕ್ಷರೇ, ನಾವು ಶಿವಮೊಗ್ಗದಿಂದ ಮೈಸೂರಿಗೆ ಒಂದು ಲೈನ್ ತೆಗೆದುಕೊಂಡು ಹೋಗುತ್ತಿದ್ದೇವೆ. ನಿಮಗೆ ಆಗ ಸರಿಯಾದ ರೀತಿ ಕರೆಂಟ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಮಗೆ ಅನುಕೂಲ ಆದರೆ ಸಾಕು. ಕೂಡಲೇ ಏನು ವ್ಯವಸ್ಥೆ ಮಾಡುತ್ತೀರಿ?

ಶ್ರೀ ಎಂ.ರಾಮಪ್ಪ : ಅನುಕೂಲ ಮಾಡಿ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನನಗೆ ಬೇಕಾಗಿಲ್ಲ. ನನ್ನ ಹತ್ತಿರ ಸಾಕಷ್ಟು ಕರೆಂಟ್ ಇದೆ. ಆದರೆ ನಮ್ಮ ತಾಲೋಕಿಗೆ ಕರೆಂಟ್ ಬೇಕು ಅಷ್ಟೇ.

ರಾಜ್ಯದಲ್ಲಿ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ಬಿಡುಗಡೆ

3400 - ಶ್ರೀಮತಿ ಮೋಟಮ್ಮ (ಮೂಡಿಗೆರೆ ಕ್ಷೇತ್ರ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವ ಪರಿಶಿಷ್ಟ ಜಾತಿ : ವರ್ಗಗಳ ಸಂಸ್ಥೆಗಳಿಗೆ ಅನುಧಾನ ಬಿಡುಗಡೆ ಮಾಡದಂತೆ ಟೆಲೆಕ್ಸ್ ಮೆಸೇಜನ್ನು ಜಿಲ್ಲಾ ಪರಿಷತ್ತುಗಳಿಗೆ ನೀಡಿರುವುದರಿಂದ ಆ ಸಂಸ್ಥೆಗಳಲ್ಲಿ ದುಡಿಯುತ್ತಿರುವ ನೌಕರರಿಗೆ ಜೀವನ ದುರ್ಬರವಾಗಿರುವುದು ಶಿಕ್ಷಣ ಇಲಾಖೆಯ ಗಮನಕ್ಕೆ ಬಂದಿದೆಯೇ?

ಆ) ಚನ್ನರಾಯಪಟ್ಟಣ ಗೌತಮ ಶಿಕ್ಷಣ ಸಂಸ್ಥೆಯು ನಡೆಸುತ್ತಿರುವ ಪ್ರೌಢ ಶಾಲೆ ಪ್ರಾಥಮಿಕ ಶಾಲೆಗಳಿಗೆ 85-86ರಿಂದಲೂ ಅನುಧಾನ ಬಿಡುಗಡೆ ಮಾಡದಿರುವುದು

ಅ) ಪರಿಶಿಷ್ಟ ಜಾತಿ ವರ್ಗಗಳ ಶಿಕ್ಷಣ ಸಂಸ್ಥೆಗಳಿಗೆ ಅನುಧಾನ ಬಿಡುಗಡೆ ಮಾಡದಂತೆ ಟೆಲೆಕ್ಸ್ ಮೆಸೇಜನ್ನು ಶಿಕ್ಷಣ ಇಲಾಖೆಯು ಜಿಲ್ಲಾ ಪರಿಷತ್ತುಗಳಿಗೆ ನೀಡಿರುವುದಿಲ್ಲ.

ಆ) ಸದರಿ ಶಾಲೆಯು 1985-86ನೇ ಸಾಲಿನಲ್ಲಿ ಪ್ರಾರಂಭವಾಗಿದ್ದು ದಿನಾಂಕ 11-6-90ರಂದು ಪ್ರಥಮ ಮಾನ್ಯತೆ ನೀಡಲಾಗಿದೆ. ಸದರಿ ಶಾಲೆಯ ಆಡಳಿತ ಮಂಡಳಿಯವರು 24-1-91 ರಂದು ಅನುಧಾನಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಸ್ಥಳ ಪರಿಶೀಲನೆ ನಡೆಸಿದ ನಂತರ 23-3-91ರಂದು ಜಿಲ್ಲಾ ಪರಿಷತ್ತಿಗೆ ಸಲ್ಲಿಸಲಾಗಿತ್ತು. ಸದರಿ ಪ್ರಾಸ್ತಾವನೆಯು ದಿನಾಂಕ 8-4-91ರಂದು ಜಿಲ್ಲಾ ಪರಿಷತ್ತಿನಿಂದ ಸರ್ಕಾರದ ಆದೇಶ ಕ್ರಮಾಂಕ. : ಎಫ್ ಡಿ 27 ಬಿಸಿಎಫ್ 90 ದಿನಾಂಕ 20-3-91ರ ಮೇರೆಗೆ ಶಾಲೆಯನ್ನು ಮುಂಗಡ ವೇತನ ಅನುಧಾನಕ್ಕೆ ಒಳಪಡಿಸಲು ಅವಕಾಶವಿಲ್ಲವೆಂದು ವಾಪಸ್ಸು ಬಂದಿರುತ್ತದೆ ಹಾಗೂ ಈ ವಿಷಯವನ್ನು ಆಡಳಿತ ಮಂಡಳಿಯ ಗಮನಕ್ಕೆ ತರಲಾಗಿದೆ.

ಶ್ರೀಮತಿ ಮೋಟಮ್ಮ : ಅಧ್ಯಕ್ಷರೆ, ನನ್ನ ಪ್ರಶ್ನೆ ಹೀಗಿದೆ. ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವ ಪರಿಶಿಷ್ಟ ಜಾತಿ : ವರ್ಗಗಳ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡದಂತೆ ಟೆಲೆಕ್ಸ್ ಮೆಸೇಜನ್ನು ಜಿಲ್ಲಾ ಪರಿಷತ್ತುಗಳಿಗೆ ನೀಡಿರುವುದರಿಂದ ಆ ಸಂಸ್ಥೆಗಳಲ್ಲಿ ದುಡಿಯುತ್ತಿರುವ ನೌಕರರಿಗೆ ಜೀವನ ದುರ್ಬರವಾಗಿರುವುದು ಶಿಕ್ಷಣ ಇಲಾಖೆಯ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಟೆಲೆಕ್ಸ್ ಮೆಸೇಜನ್ನು ನೀಡಿಲ್ಲ ಎಂದು ಉತ್ತರ ಹೇಳಿದ್ದಾರೆ. ಆದರೆ ಇದು ನನ್ನ ಗಮನಕ್ಕೆ ಬಂದಿದೆ. ಹಾಸನ ಜಿಲ್ಲೆಯಲ್ಲಿ ಹಾಸನ ಜಿಲ್ಲಾ ಪರಿಷತ್ತಿಗೆ ಈ ರೀತಿ ಮೆಸೇಜ್ ಹೋಗಿದೆ. ಅಲ್ಲಿ ಶಾಲೆ ನಡೆಸುತ್ತಿರುವ ಎಸ್. ಸಿ : ಎಸ್. ಟಿ. ಇನ್‌ಸ್ಟಿಟ್ಯೂಷನ್‌ನವರು ಬಂದು ಹೇಳಿದ್ದಾರೆ. ಇದರ ಜೊತೆಗೆ ಇನ್ನೊಂದು ಏನು ಹೇಳಬೇಕೆಂದರೆ ಹೊಸದಾಗಿ ಶಿಕ್ಷಣ ಸಂಸ್ಥೆಗಳಿಗೆ ಅನುಮತಿ ನೀಡಬೇಕಾದರೆ ಹರಿಜನ ಗಿರಿಜನರು ನಡೆಸುವ ವಿದ್ಯಾ ಸಂಸ್ಥೆಗಳಿಗೆ ಶಾಶ್ವತ ಅನುದಾನರಹಿತ ಎಂದು ಅನುಮತಿಯನ್ನು ಕೊಡುತ್ತೇವೆಂದು ಹೇಳಿ ಸರಕಾರ ಆದೇಶ ಹೊರಡಿಸಿದೆ. ಇದು ಹೇಗೆ ಅನ್ನಿಸುತ್ತದೆ ಎಂದರೆ ನಮ್ಮ ಕಡೆ ಹೇಳುತ್ತಾರೆ. ಕೂಡಲದಲ್ಲಿ ಕತ್ತು ಕುಯ್ಯುವುದು ಎಂದು ಆ ರೀತಿ ಆಗಿದೆ. ಹರಿಜನ ಗಿರಿಜನರು ದುರ್ಬಲವರ್ಗದವರು ಆರ್ಥಿಕವಾಗಿ ಯಾವುದೇ ಸರಕಾರದ ಅನುದಾನ ಇಲ್ಲದೇ ಶಾಲೆಗಳನ್ನು ಸಂಸ್ಥೆಗಳನ್ನು ನಡೆಸುಲು ಆಗುವುದಿಲ್ಲ. ಆದುದರಿಂದ ನನ್ನ ಪ್ರಶ್ನೆ ಇಷ್ಟು. ಈ ಸಂಸ್ಥೆಗಳಿಗೆ ನೀವು ಅನುದಾನ ಕೊಡುವುದಕ್ಕೆ ಶಾಶ್ವತ ಅನುದಾನರಹಿತ ಎಂಬುದನ್ನು ತೆಗೆದು, ಅವರು ಶಾಲೆಗಳನ್ನು ಪ್ರಾರಂಭಿಸಿದ ಮೊದಲನೆಯ ವರ್ಷದಿಂದ ಯಾವತ್ತು ಸಂಸ್ಥೆಗಳನ್ನು ಪ್ರಾರಂಭ ಮಾಡುತ್ತಾರೆ ಅಲ್ಲಿಂದಲೇ ಅನುದಾನ ಕೊಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಅಧ್ಯಕ್ಷರೆ, ಅನುದಾನ ಕೊಡಬಾರದೆಂದು ಇಲಾಖೆಯಿಂದ ಯಾವುದೇ ಟೆಲೆಕ್ಸ್ ಮೆಸೇಜ್ ಕೊಟ್ಟಿಲ್ಲ ಎಂಬ ಮಾತನ್ನು ಖಚಿತವಾಗಿ ಹೇಳಬಯಸುತ್ತೇನೆ. ಅದರಲ್ಲೂ ಹಾಸನ ಜಿಲ್ಲೆಗೆ ಕೊಟ್ಟಿದ್ದೀರಿ ಎಂದು ಹೇಳುತ್ತಾರೆ. ನಮ್ಮ ರೆಕಾರ್ಡ್‌ನಲ್ಲಿ ಅದು ಇಲ್ಲ, ಕೊಡಲಿಲ್ಲ. ಅದನ್ನು ಅವರು ಯಾವುದೋ ಒಂದು ಹರಿಜನ ಸಂಸ್ಥೆಗೆ ಅನುದಾನ ಕೊಡುವುದಕ್ಕೆ ಮಂಜೂರಾತಿ ಕೊಡಲಿಲ್ಲ ಎಂದು ಹೇಳಿದ್ದಾರೆ. ಅಧ್ಯಕ್ಷರೇ, ಅನುದಾನ ಸಂಹಿತೆಯ ಪ್ರಕಾರ ಅದು ಕೆಲವೊಂದು ಅರ್ಹತೆಗಳನ್ನು ಹೊಂದಿದ್ದರೆ

ಮಾತ್ರ ಅಂತಹ ಸಂಸ್ಥೆಗಳಿಗೆ ಅನುದಾನ ಕೊಡುವುದಕ್ಕೆ ಬರುತ್ತದೆ. ಶ್ರೀಮತಿಯವರು ಹೇಳುವ ಈ ಒಂದು ಸಂಸ್ಥೆ 1986 ರಲ್ಲಿ ಪ್ರಾರಂಭವಾಗಿದ್ದರೂ ಕೂಡ ಅವಕ್ಕೆ 90ನೇ ಇಸವಿಯಲ್ಲಿ ಜಿಲ್ಲಾ ಪರಿಷತ್‌ನವರು ರೆಕಾಗ್ನೈಸ್ ಮಾಡಿರುತ್ತಾರೆ. ಸರಕಾರಕ್ಕೆ ವರದಿ ಮಾಡಿರುತ್ತಾರೆ. ಮಾನ್ಯತೆ ನೀಡಿದ್ದರೂ ಕೂಡ ಅದರಲ್ಲಿ ಅನುದಾನವನ್ನು ಪಡೆಯುವಂತಹ ಕೆಲವೊಂದು ಅರ್ಹತೆಗಳು ಇಲ್ಲದಿರುವ ಕಾರಣದಿಂದ ಅನುದಾನ ಕೊಡುವುದಕ್ಕೆ ಆಗಲಿಲ್ಲ ಎಂದು ತಿರಸ್ಕರಿಸಿದ್ದಾರೆ. ಈ ಕಾರಣದಿಂದ ಆ ಸಂಸ್ಥೆಗೆ ಅನುದಾನ ಕೊಟ್ಟಿರುವುದಿಲ್ಲ.

ಶ್ರೀಮತಿ ಮೋಟಮ್ಮ : ನಾನು ಹೇಳುವುದನ್ನು ಮಂತ್ರಿಗಳು ಸರಿಯಾಗಿ ಪರಿಶೀಲನೆ ಮಾಡಲಿಲ್ಲ ಅನ್ನಿಸುತ್ತದೆ. ಎರಡನೆಯ ಕೊಶ್ಚನ್‌ನಲ್ಲಿ ನಾನು ಕೇಳಿರುವುದು ಕರೆಕ್ಟ್ ಆಗಿದೆ. ಸದರಿ ಗೌತಮ ಶಿಕ್ಷಣ ಸಂಸ್ಥೆ, ಚನ್ನರಾಯಪಟ್ಟಣ ಇವರು 1985-86ರಲ್ಲಿ ಸಂಸ್ಥೆಯನ್ನು ಪ್ರಾರಂಭ ಮಾಡಿದ್ದಾರೆ. ಇವರಿಗೆ ಅನುದಾನ ಕೊಟ್ಟಿರುವುದು 11-6-90ಕ್ಕೆ ನಾಲ್ಕು ವರ್ಷಗಳ ಕಾಲ ಇವರು ಶಾಲೆ ನಡೆಸಿದ್ದಾರೆ. ಅಲ್ಲಿ ಕೆಲಸ ಮಾಡುವ ಶಿಕ್ಷಣ ಸಂಸ್ಥೆಯ ನೌಕರರುಗಳಿಗೆ ಸಂಬಳ ಕೊಟ್ಟಿದ್ದಾರೆ. ಆ ಸಂಬಳವನ್ನು ಅವರು ಸಾಲದ ರೂಪದಲ್ಲೋ ಇನ್ನು ಯಾವುದೋ ರೂಪದಲ್ಲೋ ಕೊಟ್ಟಿದ್ದಾರೆ. ಅದಕ್ಕೆ ಸಂಸ್ಥೆಯನ್ನು ಅವರು ಯಾವಾಗ ಪ್ರಾರಂಭ ಮಾಡಿದರು ಅಲ್ಲಿಂದಲೇ ಅವರಿಗೆ ಗ್ರಾಂಟ್ ಇನ್ ಏಡ್‌ಗೆ ಕನ್ಸೀಡರ್ ಮಾಡುತ್ತೀರಾ? ಎನ್ನುವುದು ಒಂದು ಪ್ರಶ್ನೆ. ಇನ್ನೊಂದು ಪ್ರಶ್ನೆ ಎಂದು ಹೇಳಿದರೆ, ಹೊಸದಾಗಿ ಹರಿಜನ ಗಿರಿಜನರು ಶಿಕ್ಷಣ ಸಂಸ್ಥೆಗಳನ್ನು ನಡೆಸಲು ಅನುಮತಿ ಕೊಡುತ್ತೀರಿ. ಅದನ್ನು ಕೊಡಬೇಕಾದರೂ ಸಹ ಹಿಂದೆ ಏನು ಈ ಸಂಸ್ಥೆಗಳಿಗೆ ಮೂರು ವರ್ಷದ ನಂತರ ಒಂದು ವರ್ಷದ ನಂತರ ಗ್ರಾಂಟ್ ಇನ್ ಏಡ್ ಕೊಡುತ್ತಿದ್ದರು. ಅದೇ ರೀತಿ ಈ ಸಾರಿ ಮುಂದೆಯೂ ಸಹ ಕನ್ಸಿಡರ್ ಮಾಡುತ್ತೀರಾ ಎಂಬುದು ಪ್ರಶ್ನೆ. ಈಗ ಅನುದಾನ ರಹಿತ ಎಂದು ಎಲ್ಲಾ ಪ್ರೈವೇಟ್ ಸಂಸ್ಥೆಗಳಿಗೆ ಒಂದು ಕಾನೂನು ಮಾಡಿದ್ದೀರಿ. ಅದನ್ನು ಎಸ್. ಸಿ. ಎಸ್. ಟಿ. ಇನ್‌ಸ್ಟಿಟ್ಯೂಷನ್ಸ್‌ಗೂ ಹೇಳಿದ್ದೀರಿ. ಇದು ಆಗಬಾರದು. ಎಸ್. ಸಿ. ಎಸ್.ಟಿ. ಇನ್‌ಸ್ಟಿಟ್ಯೂಷನ್ಸ್‌ಗೆ ಸ್ಪೆಷಲ್ ಆಗಿ ಈ ಒಂದು ಬಾರನ್ನು ತೆಗೆದುಹಾಕುತ್ತೀರಾ ಎಂಬುದು ನನ್ನ ಪ್ರಶ್ನೆ.

7.45 ಪಿ.ಎಂ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಮಾನ್ಯ ಅಧ್ಯಕ್ಷರೇ, ಅನುದಾನ ಕೊಡತಕ್ಕಂಥಾದ್ದಕ್ಕೆ ತನ್ನದೇ ಆದಂತಹ ಕೆಲವು ನೀತಿ ನಿಯಮಗಳನ್ನು ರೂಪಿಸಿದ್ದೇವೆ. ಅದು ಸರ್ಕಾರದ ನೀತಿ. ಆ ನೀತಿ ಮಾರ್ಪಾಡು ಮಾಡತಕ್ಕಂಥಾದ್ದಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕಾಗುತ್ತದೆ. ಶ್ರೀಮತಿಯವರು ಹೇಳಿರತಕ್ಕಂಥ ವಿಚಾರ ಹರಿಜನರಿಗೆ ವಿಶೇಷವಾಗಿ ಕೊಡಬೇಕೆಂದು ಹೇಳಿದ್ದಾರೆ. ಈಗಾಗಲೇ ಕಾಯ್ದೆಯಲ್ಲಿ ಅದಕ್ಕೆ ಅವಕಾಶ ಇದೆ. ಅವರಿಗೆ ವಿಶೇಷವಾದ ರಿಯಾಯಿತಿ ಉಂಟು ಅವರು ಪ್ರಾರಂಭಮಾಡಿದ 2 ವರ್ಷದಲ್ಲಿ ಅನುದಾನ ಕೊಡಬೇಕು ಎನ್ನತಕ್ಕ ಒಂದು ನಿಯಮ ಇದೆ ಎಂದು ತಿಳಿದುಕೊಂಡಿದ್ದೇನೆ. ಅವರೆಲ್ಲ ಅದನ್ನು ಕೂಡ ಮಾರ್ಪಾಡು ಮಾಡಿ ಕೊಡತಕ್ಕಂಥ ಅಗತ್ಯ ಸರ್ಕಾರಕ್ಕೆ ಸಧ್ಯಕ್ಕೆ ಇಲ್ಲ ಎಂದು ತಿಳಿದುಕೊಂಡಿದ್ದೇನೆ.

ಶ್ರೀ ಎಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮಂತ್ರಿಗಳನ್ನು ಒಂದು ಪ್ರಶ್ನೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ಏನು ಹೈಸ್ಕೂಲ್‌ಗಳನ್ನು ಮಂಜೂರು ಮಾಡುತ್ತಿದ್ದೀರಿ ಈ ರೀತಿ ಮಂಜೂರು ಮಾಡುವಾಗ ಸರ್ಕಾರ ಎರಡು ವಿಧಾನಗಳನ್ನು ಅನುಸರಿಸುತ್ತಿದೆ. ಒಂದು ನಿಗದಿತ ಕಾಲಕ್ಕೆ ಅನುದಾನ ರಹಿತವಾದ

ನಿರ್ಬಂಧನೆಗೆ ಒಳಪಟ್ಟು ನೀವು ಶಾಲೆಗಳನ್ನು ಮಾಡುತ್ತಿದ್ದೀರಿ. ಅವರು ಎಸ್. ಸಿ.ಎಸ್. ಟಿ. ಬೇರೆ ಯಾವ ವರ್ಗದವರೇ ಆಗಿರಬಹುದು ಮತ್ತು ಶಾಶ್ವತ ಅನುದಾನ ರಹಿತ ಶಾಲೆಗಳನ್ನು ಸಹ ತಾವು ಮಂಜೂರು ಮಾಡಿದ್ದೀರಿ. ಈಗ ಅನೇಕ ಸಂದರ್ಭದಲ್ಲಿ ಶಾಶ್ವತ ಅನುದಾನ ರಹಿತ ಎಂದು ಹೇಳಿದ್ದರೂ ಸಹ ಅನುದಾನ ಕೊಡಬೇಕೆನ್ನುವ ಒತ್ತಾಯ ಸರ್ಕಾರದ ಮೇಲೆ ತರುತ್ತಿದ್ದಾರೆ. ಮತ್ತು ಇಂತಿಷ್ಟು ವರ್ಷಗಳಿಗೆ ಅನುದಾನ ರಹಿತ ಎಂದು ಹೇಳಿದ್ದರೂ ಸಹ ಅದಕ್ಕೂ ಮೊದಲೇ ಕೊಡಿ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಎಲ್ಲಿಗೆ ಬಂದಿದೆ ಅಂದರೆ ಕೆಲವು ವರ್ಷಗಳ ನಂತರ ತಾವು ಇದನ್ನು ತೀವ್ರವಾಗಿ ಪರಿಶೀಲನೆ ಮಾಡಬೇಕು ಕೆಲವು ವರ್ಷಗಳ ನಂತರ ಕರ್ನಾಟಕ ರಾಜ್ಯದ ರೆವಿನ್ಯೂ ಏನಿದೆ ಅದರಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗ ಈ ಪ್ರೌಢಶಾಲೆಗಳ ಶಿಕ್ಷಣಕ್ಕೆ ಖರ್ಚುಮಾಡತಕ್ಕಂಥ ಪರಿಸ್ಥಿತಿ ಬರಬಹುದು. ತಾವು ತಮ್ಮ ಅಧ್ಯಾಯವನ್ನು ಗಮನದಲ್ಲಿಟ್ಟುಕೊಂಡು, ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು ಶಾಲೆಗಳನ್ನು ಅನುದಾನ ರಹಿತ ಅಥವಾ ಅನುದಾನ ಸಹಿತ ಎಂದು ಏನಾದರೂ ಕೊಡುವಂಥ ಯೋಚನೆ ಸರ್ಕಾರ ಮಾಡಿದೆಯೇ? ಅದು ಬಿಟ್ಟು ಸಿಕ್ಕಾಪಟ್ಟೆ ಯಾರೇ ಕೇಳಲಿ ಯಾವುದೇ ಆಧಾರ ಇಲ್ಲದೆ ಶಾಲೆಗಳನ್ನು ಕೊಡತಕ್ಕಂಥ ನೀತಿಯನ್ನು ಸರ್ಕಾರ ಇನ್ನೂ ಮುಂದುವರಿಸುತ್ತದೆಯೇ ಎಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಮಾನ್ಯ ಅಧ್ಯಕ್ಷರೇ, ಕಾನೂನು ಮೀರಿ ಪ್ರೌಢಶಾಲೆಗಳನ್ನು ಮಂಜೂರು ಮಾಡುವ ರೀತಿ ಪರಿಪಾಠ ನಾವು ಹಾಕಿಕೊಂಡಿಲ್ಲ. ಅನುದಾನ ಕೊಡುವ ಬಗ್ಗೆ ನಮ್ಮ ಮಂಜೂರಾತಿಯಲ್ಲಿ ಷರತ್ತುಗಳು ಇದ್ದರೂ ಕೂಡ ಯಾವುದೊ ಕಾರಣಕ್ಕೆ ಅದಕ್ಕಿಂತ ಮೊದಲೇ ಅನುದಾನ ಕೊಡಿ ಎಂದು ಒತ್ತಡ ಸರ್ಕಾರಕ್ಕೆ ಕೆಲವಾರು ದಿವಸಗಳ ನಂತರ ಬಂದರೆ ಆಗ ರಾಜ್ಯದ ಬೊಕ್ಕಸವನ್ನೆಲ್ಲಾ ವಿನಿಯೋಗ ಮಾಡತಕ್ಕಂಥ ಪರಿಸ್ಥಿತಿ ಬರಬಹುದು ಎಂದು ಮಾನ್ಯ ಏಕಾಂತಯ್ಯ ನವರ ಅನುಮಾನ ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ, ವಿದ್ಯಾಕ್ಷೇತ್ರಕ್ಕೆ ನಾವು ಎಷ್ಟು ಪ್ರಾತಿನಿಧ್ಯ ಕೊಡಬೇಕು ಎನ್ನುವುದನ್ನು ತಿಳಿದು ಕೊಟ್ಟಿದ್ದೇವೆ.

ಶ್ರೀ ಎಚ್. ಏಕಾಂತಯ್ಯ : ಸನ್ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಯನ್ನು ಬಹುಶ: ಅವರು ಅರ್ಥ ಮಾಡಿಕೊಳ್ಳಲಿಲ್ಲ. ತಾವೀಗ ನೂರಾರು ಶಾಲೆಗಳನ್ನು ಕೊಟ್ಟಿದ್ದೀರಿ. ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ. ಅನುದಾನ ರಹಿತ ಅಥವಾ ಅನುದಾನ ಸಹಿತ ಶಾಲೆಗಳನ್ನು ಕೊಟ್ಟಿದ್ದೀರಿ.ಎರಡು ಮೈಲಿಗೆ ಒಂದು ಹೈಸ್ಕೂಲ್ ಕೊಟ್ಟಿದ್ದೀರಿ. ಇದರ ಅವಶ್ಯಕತೆ ಇದೆಯೇ? ಅವಶ್ಯಕತೆಯ ಆಧಾರದ ಮೇಲೆ ಪ್ರೌಢಶಾಲೆಗಳನ್ನು ಸರ್ಕಾರ ತೆರೆದಿದೆಯೇ? ಅಥವಾ ಸರ್ಕಾರ ತಮಗಿಷ್ಟ ಬಂದ ರೀತಿಯಲ್ಲಿ ಇವತ್ತಿನ ದಿವಸ ಪ್ರೌಢಶಾಲೆಗಳನ್ನು ಅನುದಾನ ರಹಿತ ಅಥವಾ ಅನುದಾನ ಸಹಿತ ಕೊಟ್ಟಿದ್ದರಿಂದ ನಾಳೆ ನೀವು ಒಂದು ದೊಡ್ಡ ಸಮಸ್ಯೆ ಎದುರಿಸಬೇಕಾಗುತ್ತದೆ. ಅವರು ಒಂದು ಬೋರ್ಡ್ ಹಾಕಿಕೊಂಡು ನಾಳೆ ದಿವಸ ಸಂಬಳ ಕೊಡಲಿಲ್ಲ ಅಂದರೆ ಆಗ ನಾವು ಸೇರಿದಂತೆ ವಿಧಾನಸೌಧ ಮುಂದೆ ಮುಷ್ಕರ ಹೋರಾಟ ಮಾಡಬೇಕಾಗುತ್ತದೆ. ಸಂಬಳ ಕೊಡಿ ಎನ್ನುವ ಮಾತು ಹೇಳಬೇಕಾಗುತ್ತದೆ. ಮುಂದಿನ ಪರಿಸ್ಥಿತಿ ಏನು ಬರುತ್ತದೆ ಎನ್ನುವ ಚಿಂತನೆ ಸರ್ಕಾರಕ್ಕೆ ಇದೆಯೇ? ಹೀಗೆ ಕೊಟ್ಟಿರುವ ಶಾಲೆಗಳಿಂದ ಅನುದಾನ ರಹಿತ ಅಥವಾ ಅನುದಾನ ಸಹಿತ ಎಲ್ಲವೂ ಸೇರಿದರೆ ಎಷ್ಟು ಕೋಟಿ ರೂಪಾಯಿಗಳಾಗುತ್ತದೆ ಎಷ್ಟು ಖರ್ಚಾಗುತ್ತದೆ ಎನ್ನುವ ಕಲ್ಪನೆ ಸರ್ಕಾರಕ್ಕೆ ಇದೆಯೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ : ಅನುದಾನ ರಹಿತ ಷರತ್ತಿಗೆ ಒಳಪಟ್ಟು ಮಂಜೂರು ಮಾಡಿದ್ದರೂ ಒಂದು ವೇಳೆ ಮಾರ್ಪಾಡು ಮಾಡಬಹುದು. ಆಗ ನಾವು ಒತ್ತಡಕ್ಕೆ ಮಣಿಯಬೇಕಾಗುತ್ತದೆ ಎನ್ನುವ ಪ್ರಶ್ನೆ ಇವತ್ತು ನಮ್ಮ ಮುಂದೆ ಇಲ್ಲ, ಮುಂದೆ ಎನು ಬರುತ್ತದೆ ಎನ್ನತಕ್ಕಂಥಾದ್ದನ್ನು ನಾವು ನೋಡಬೇಕಾಗಿಲ್ಲ ಎಲ್ಲಾ ನಿಯಮಗಳ ಅನುಗುಣವಾಗಿ ಮಂಜೂರು ಮಾಡಿದ್ದೇವೆ. ಕಾನೂನು ವೈಲೆಟ್ ಮಾಡಿಲ್ಲ ಎನ್ನುವ ಮಾತನ್ನು ತಿಳಿಸುತ್ತೇನೆ.

ಅಧ್ಯಕ್ಷರು : ಶಿವನಂಜಪ್ಪನವರೇ ತಮ್ಮ ಪ್ರಶ್ನೆಯನ್ನು 27ನೇ ತಾರೀಖಿಗೆ ಹಾಕುತ್ತೇನೆ. ಅವರು ನನಗೆ ಬಂದು ತಿಳಿಸಿ ಹೋಗಿದ್ದಾರೆ.

ಸಾರ್ವಜನಿಕ ಗ್ರಂಥಾಲಯಕ್ಕೆ ಖಾಯಂ ನಿರ್ದೇಶಕರು

3393 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ್) : ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಖಾಯಂ ನಿರ್ದೇಶಕರು ಇಲ್ಲದೆ ಆ ಇಲಾಖೆಯ ಪ್ರಗತಿ ಕಾಣುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ; ಆ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

ಇ) ಸಾರ್ವಜನಿಕ ಗ್ರಂಥಾಲಯಗಳು ಸಿಬ್ಬಂದಿ ಕೊರತೆಗಳಿಂದಾಗಿ ಸರಿಯಾಗಿ ನಡೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) 1978 ರಲ್ಲಿ ಸರ್ಕಾರವು ಸಿಬ್ಬಂದಿ ಮಂಜೂರಾತಿಗಾಗಿ ನಿಯಮಗಳನ್ನು ರೂಪಿಸಿದ್ದರೂ ಸಹ ಅವರ ಪ್ರಕಾರ ಹುದ್ದೆಗಳನ್ನು ಏಕೆ ಮಂಜೂರು ಮಾಡಿರುವುದಿಲ್ಲ ?

ಶ್ರೀ ಎಂ.—ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಪ್ರಗತಿ ಕುಂಠಿತಗೊಂಡಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಬಂದಿದೆ.

ಈ) 1978 ರ ಸಿಬ್ಬಂದಿ ನಿಯಮಾವಳಿ ಪ್ರಕಾರ ಹುದ್ದೆಗಳ ಮಂಜೂರಾತಿಯ ಪ್ರಸ್ತಾವನೆಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಪಿ. ಬಸವರಾಜು : ಅಧ್ಯಕ್ಷರೆ, ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಖಾಯಂ ನಿರ್ದೇಶಕರಿಲ್ಲದೆ ಆ ಇಲಾಖೆಯು ಪ್ರಗತಿ ಕಾಣುತ್ತಿಲ್ಲ ಎಂಬುದರ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದೇನೆ. ಅದೇ ರೀತಿಯಲ್ಲಿ ಸಾರ್ವಜನಿಕ ಗ್ರಂಥಾಲಯಗಳ ಸಿಬ್ಬಂದಿ ಕೊರತೆಯಿಂದಾಗಿ ಸರಿಯಾಗಿ ನಡೆಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೆ. ನಿರ್ದೇಶಕರಿಲ್ಲದೆ ಪ್ರಗತಿ ಕುಂಠಿರವಾಗಿಲ್ಲವೆಂದು ಉತ್ತರ ಬಂದಿದೆ. ಮತ್ತು ಈ ಸಿಬ್ಬಂದಿ ಕೊರತೆ ಸರ್ಕಾರದ ಗಮನಕ್ಕೆ ಬಂದಿದೆಯೆಂದು ಉತ್ತರ ಕೊಟ್ಟಿದ್ದಾರೆ. ಅಧ್ಯಕ್ಷರೆ, ತಮಗೆ ಗೊತ್ತಿದ್ದ ಹಾಗೆ ಸಾರ್ವಜನಿಕ ಗ್ರಂಥಾಲಯ ಇಲಾಖೆಯು ಸಾರ್ವಜನಿಕರಿಗೆ ಬಹಳ ಮಹತ್ವವುಳ್ಳ ಒಂದು ಇಲಾಖೆ. ಗ್ರಂಥಾಲಯಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಬೆಳೆಸಬೇಕಾದ ಒಂದು ಅವಶ್ಯಕತೆ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ ಲೈಬ್ರರಿಗಳು ಪ್ರಾರಂಭವಾಗಿ

ಅದು ಮಾಡಲಿಕ್ಕಾಗುವುದಿಲ್ಲ. ಈ ಒಂದು ಇಲಾಖೆ ಸರ್ವಸನ್ನದ್ಧವಾಗಿರಬೇಕು. ಅದಕ್ಕೆ ಬೇಕಾದ ನಿರ್ದೇಶಕರು ಇರಬೇಕಾಗುತ್ತದೆ. ಕಳೆದ ಎರಡು ವರ್ಷಗಳಿಂದ ಆ ಇಲಾಖೆಗೆ ನಿರ್ದೇಶಕರಿಲ್ಲದೆ ಇರುವುದರಿಂದ ಪ್ರಗತಿ ಕುಂಠಿತವಾಗಿದೆ. ಸುಮಾರು ಗ್ರಾಮಾಂತರ...

ಅಧ್ಯಕ್ಷರು : ಕ್ವೊಶ್ಚನ್ ಕ್ವೊಶ್ಚನ್.

ಶ್ರೀ ಪಿ. ಬಸವರಾಜು : ಅಧ್ಯಕ್ಷರೆ, ಆದ್ದರಿಂದ ಆ ಇಲಾಖೆಗೆ ಯಾವಾಗ ನಿರ್ದೇಶಕರನ್ನು ನೇಮಕ ಮಾಡುತ್ತೀರಿ? ಮತ್ತು ಏನು ಕೊರತೆ ಬಂದಿರುವ ಸಿಬ್ಬಂದಿ ವರ್ಗ ಇದೆ, ಅದರ ನೇಮಕಾತಿ ಮಾಡಲಿಕ್ಕೆ ಯಾವ ಕ್ರಮ ತೆಗೆದುಕೊಳ್ಳುತ್ತೀರೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳುತ್ತಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಶಿಕ್ಷಣ ಸಚಿವರ ಪರವಾಗಿ): 1986ನೇ ಇಸವಿಯಲ್ಲಿ ನಿರ್ದೇಶಕರನ್ನು ಜೇಷ್ಠತಾ ಆಧಾರದ ಮೇಲೆ ಸರ್ಕಾರ ನೇಮಕ ಮಾಡಿತ್ತು. ಆದರೇ ಅದರಲ್ಲಿ ದೋಷ ಇತ್ತೆಂದು ನ್ಯಾಯಾಲಯಕ್ಕೆ ಹೋಗಿದ್ದ ಪರಿಣಾಮವಾಗಿ 1990 ರಲ್ಲಿ ನ್ಯಾಯಾಲಯ ಒಂದು ಅಜ್ಞೆಯನ್ನು ಕೊಡುವುದರ ಜೊತೆಗೆ ಕೆಲವು ಗೈಡ್ ಲೈನ್ಸ್ ಕೂಡ ಕೊಟ್ಟಿದೆ. ಆ ಹಿನ್ನಲೆಯಲ್ಲಿ ಸರ್ಕಾರ ಈಗಾಗಲೇ ಕಾರ್ಯಕ್ರಮ ತೆಗೆದುಕೊಂಡಿದೆ. ಕೂಡಲೇ ಜೇಷ್ಠತಾ ಪಟ್ಟಿಯನ್ನು ಪ್ರಕಟಣೆ ಮಾಡುವ ಮೂಲಕ ಇಲಾಖೆಯಿಂದ ಭಡ್ತಿ ಕೊಟ್ಟು ನಿರ್ದೇಶಕರನ್ನು ನೇಮಕ ಮಾಡತಕ್ಕಂಥ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಮತ್ತೊಂದು ಮಾತನ್ನು ಹೇಳಬಯಸುತ್ತೇನೆ. ಸಿಬ್ಬಂದಿ ಕೊರತೆ ನೀಗಲು 1810 ಜನ ಬೇಕು ಅನ್ನತಕ್ಕಂಥಾದ್ದನ್ನು ಇಲಾಖೆಯವರು ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. ಆರ್ಥಿಕ ನಿರ್ಬಂಧದ ಪರಿಸ್ಥಿತಿಯಿಂದಾಗಿ ಇವರಿಗೆ ಮಂಜೂರಾತಿ ಸಿಗಲಿಲ್ಲ. ಈಗ ಇಲಾಖೆಯವರು ಅರ್ಥ ಇಲಾಖೆಯವರ ಮೇಲೆ ಇದರ ಅಗತ್ಯತೆಯನ್ನು ಒತ್ತಿ ಹೇಳುವ ಮೂಲಕ ಅದರ ಮಂಜೂರಾತಿಯನ್ನು ಶೀರ್ಘದಲ್ಲೇ ಪಡೆಯುವವರಿದ್ದಾರೆ. ನಂತರ ಎಲ್ಲಾ ಖಾಲಿ ಇರತಕ್ಕಂಥ ಸ್ಥಾನಗಳನ್ನು ಭರ್ತಿ ಮಾಡಿ ಲೈಬ್ರರಿಯ ಉಪಯೋಗ ಎಲ್ಲರಿಗೂ ಸಿಗುವಂಥ ರೀತಿಯಲ್ಲಿ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ.

ಅಧ್ಯಕ್ಷರು : ಶ್ರೀ ಎನ್. ತಮ್ಮಣ್ಣ ಅವರ ಪ್ರಶ್ನೆ ಹೆಲ್ಡ್ ಓವರ್ ಆಗಿದೆ. ಇದನ್ನು 27ನೇ ತಾರೀಖು ಹಾಕುತ್ತೇನೆ.

ಚಿತ್ತಾಪುರ ತಾಲ್ಲೂಕಿನ ಶಾಲೆಗಳಲ್ಲಿ ಶಿಕ್ಷಕರಿಲ್ಲದಿರುವುದು

3348 : ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿತ್ತಾಪುರ ತಾಲ್ಲೂಕಿನಲ್ಲಿ ಪ್ರಾಥಮಿಕ ಶಾಲೆ, ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿ ಉಪನ್ಯಾಸಕರು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಮೇಲ್ಕಂಡ ಶಾಲೆಗಳಲ್ಲಿ ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದರೂ ಕೂಡ ಇಲ್ಲಿಯವರೆವಿಗೂ ಪ್ರಯೋಜನವಾಗದಿರುವುದಕ್ಕೆ ಕಾರಣಗಳೇನು? ಸರ್ಕಾರ ಇದರ ಬಗ್ಗೆ ಯಾವ ಕ್ರಮ ಕೈಗೊಂಡಿದೆ.?*

ಇ) *ಮೇಲ್ಕಂಡ ಪ್ರಾಥಮಿಕ ಶಾಲೆ, ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲೂ ಸರ್ಕಾರದವರು ಕೈಗೊಂಡಿರವ ಕ್ರಮವೇನು?*

ಈ) *ಚಿತ್ತಾಪುರ ತಾಲ್ಲೂಕಿನ ಪ್ರಾಥಮಿಕ ಶಾಲೆ ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು):

ಅ) ಬಂದಿದೆ.

ಆ) ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಪ್ರೌಢ ಶಾಲೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಅರ್ಹ ಪ್ರಾಥಮಿಕ ಶಾಲಾ ಶಿಕ್ಷಕರಿಂದ ಹಾಗೂ ಮಿತವೇತನ ಪದವೀಧರರಿಂದ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ. ಇನ್ನುಳಿದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿನ ಖಾಲಿ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳು ರಚನೆಯ ನಂತರ ಹಾಗೂ ಆರ್ಥಿಕ ಮಿತವ್ಯಯ ಸಡಿಲಿಸಿದ ನಂತರ ತುಂಬಲು ಕ್ರಮ ಕೈಗೊಳ್ಳಲಾಗುವುದು. ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಅರ್ಹ ಪ್ರೌಢ ಶಾಲಾ ಶಿಕ್ಷಕರಿಗೆ ಬಡ್ತಿ ನೀಡುವ ಮೂಲಕ ತುಂಬಲಾಗುವುದು.

ಈ)

ಪ್ರಾಥಮಿಕ ಶಾಲೆ	-19
ಪ್ರೌಢಶಾಲೆ	-22
ಸಂಯುಕ್ತ ಪದವಿ ಪೂರ್ವ ಕಾಲೇಜು	-7
ಸ್ವತಂತ್ರ ಪದವಿ ಪೂರ್ವ ಕಾಲೇಜು	-4
ಒಟ್ಟು	52

ಶ್ರೀ ಬಾಬುರಾವ್ ಚಿಂಚನ್‌ಸೂರ : ಮಾನ್ಯ ಅಧ್ಯಕ್ಷರೆ, ಚಿತ್ತಾಪುರ ತಾಲ್ಲೂಕಿನ ಪ್ರಾಥಮಿಕ ಶಾಲೆಗಳಲ್ಲಿ ಉಪನ್ಯಾಸಕರಿಲ್ಲದೇ ಇರುವುದರಿಂದ ವಿದ್ಯಾರ್ಥಿಗಳು ಹಂಗರ್ ಸ್ಟ್ರೈಕ್ ಕುಳಿತಿದ್ದಾಗ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆಂದು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಶಿಕ್ಷಣ ಸಚಿವರ ಪರಿವಾಗಿ) : ಅಧ್ಯಕ್ಷರೆ, ಚಿತಾಪುರ ತಾಲ್ಲೂಕಿನಲ್ಲಿ ಪ್ರಾಥಮಿಕ ಶಾಲೆ, ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಉಪನ್ಯಾಸಕರು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ವಿದ್ಯಾರ್ಥಿಗಳು ಹಂಗರ್ ಸ್ಟ್ರೈಕ್ ಮಾಡುತ್ತಿರತಕ್ಕಂಥ ವರದಿ ಸರ್ಕಾರಕ್ಕಂತೂ ಬಂದಿಲ್ಲ. ಅಲ್ಲಿ ಸುಮಾರು 52 ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ಭರ್ತಿ ಮಾಡತಕ್ಕಂಥಾದ್ದಕ್ಕೆ ಸರ್ಕಾರ ಕ್ರಮ ಕೈಗೊಂಡಿದೆ. ಶೀಘ್ರದಲ್ಲೇ ನೇಮಕಾತಿಯಾದನಂತರ ಆ ಜಾಗಗಳನ್ನು ಭರ್ತಿ ಮಾಡಿ ಶಾಲಾ ಮತ್ತು ಕಾಲೇಜುಗಳು ವ್ಯವಸ್ಥಿತವಾಗಿ ನಡೆಯುವಂಥ ರೀತಿಯಲ್ಲಿ ಮಾಡಲಾಗುವುದು.

ಶ್ರೀ ಎಸ್. ಆರ್. ಮೋರೆ : ಮಾನ್ಯ ಅಧ್ಯಕ್ಷರೇ, ಪ್ರಶ್ನೆ ಸಂಖ್ಯೆ 602 (3289)ಕ್ಕೆ ಇದಕ್ಕೆ ಸ್ವಲ್ಪ ಟೈಮ್ ಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ಇಲ್ಲಿ ನನ್ನದೇನೂ ಇಲ್ಲ. ತಾವು ಸಾಧ್ಯವಾದರೆ ನಾಳೆ, ನಾಡಿದ್ದು ಹಾಕಿಕೊಂಡರೆ ತುಂಬಾ ಒಳ್ಳೆಯದಾಗುತ್ತದೆ. ನಾನು ಕೇಳಿದ್ದು ಏನೆಂದರೆ, ಪ್ರಧಾನಿಯವರಿಗೆ, ರೈತರ ಸಾಲ ಮನ್ನಾ ಬಗ್ಗೆ ಪತ್ರ ಬರೆದಿದ್ದಕ್ಕೆ ಉತ್ತರ ಬಂದಿದೆಯೇ? ಬೇರೆ ಬೇರೆ ರಾಜ್ಯದಲ್ಲಿ ಈ ಒಂದು ಕಂಡೀಷನ್ ತೆಗೆದುಹಾಕಿ ಸಾಲ ಮನ್ನಾ ಮಾಡಿದ್ದಾರೆ. ಆದರ ವಿವರವನ್ನು ಒದಗಿಸಿಕೊಟ್ಟು ಅದರಂತೆ ನಮ್ಮ ಸರ್ಕಾರ ಮಾಡಬಹುದೆಂದು ಕೇಳುತ್ತಿದ್ದೇನೆ. ಇದು ಮೂರನೆಯದೋ, ನಾಲನೆಯದೋ ಪ್ರಶ್ನೆ. ಈ ಸದನ ಪ್ರಾರಂಭವಾದಾಗಿನಿಂದ ನನ್ನ ಮೂರು ಪ್ರಶ್ನೆಗೆ

ಉತ್ತರ ಸಿಗಲಿಲ್ಲ. ಒಂದೇ ಒಂದು ಪ್ರಶ್ನೆಗೆ ಉತ್ತರ ಸಿಕ್ಕಿರುವುದು. ಬೇರೆ ಏನೋ ಹುಡುಕುವಂಥಾದ್ದು ಏನಿಲ್ಲ.

ಶ್ರೀ ಎಸ್.ಆರ್. ಮೋರೆ : ನಾವು ಟೈಮ್ ಕೇಳಿದ್ದೇವೆ.

ಅಧ್ಯಕ್ಷರು : ಎಷ್ಟು ದಿವಸ ಟೈಮ್ ಕೇಳಿದ್ದೀರಿ?

ಶ್ರೀ ಎಸ್. ಆರ್. ಮೋರೆ : 20 ದಿವಸ ಟೈಮ್ ಕೇಳಿದ್ದೇವೆ.

ಅಧ್ಯಕ್ಷರು : 20 ದಿವಸ ಟೈಮ್ ಕೇಳಿದ್ದೀರಾ?

ಶ್ರೀ ಎಸ್. ಆರ್. ಮೋರೆ : ನಾವು ವಿವರ ಕೊಡಬೇಕಾಗುತ್ತದೆ. ಅವಸರದಲ್ಲಿ ಸುಮ್ಮನೇ ಹೇಳುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು : ಪ್ರಶ್ನೆ ಇರುವುದು ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಪ್ರಧಾನ ಮಂತ್ರಿಯವರಿಗೆ ಪತ್ರ ಬರೆದಿದ್ದಾರೆಯೇ, ಉತ್ತರ ಬಂದಿದೆಯೇ ಎಂದು ಕೇಳುತ್ತಿದ್ದಾರೆ.

ಶ್ರೀ ಎಸ್. ಆರ್. ಮೋರೆ : ಅದು ದೆಹಲಿಯಿಂದ ಬರಬೇಕು.

ಅಧ್ಯಕ್ಷರು : ನಿಮ್ಮ ಸೆಕ್ರೆಟರಿಯೇಟ್ ಫೈಲ್ ನೋಡಿದರೆ ನಿಮಗೆ ಗೊತ್ತಾಗುತ್ತದೆ. ಉತ್ತರ ಬಂದಿದ್ದರೆ ಬಂದಿದೆ ಇಂತಹ ತಾರೀಖಿಗೆ ಎಂದು ಹೇಳಿ. ಬಂದಿಲ್ಲದಿದ್ದರೆ ಬಂದಿಲ್ಲ ಎಂದು ಹೇಳಿ. ನಾನು ಈ ಪ್ರಶ್ನೆಯನ್ನು 27ನೇ ತಾರೀಖಿಗೆ ಹಾಕುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ತಾವು 27ನೇ ತಾರೀಖಿಗೆ ತೆಗೆದುಕೊಳ್ಳಿ. ಪರವಾಗಿಲ್ಲ. ಈಗ ಏನು ಆಯಿತು. ಮಧ್ಯ ಪ್ರದೇಶದಲ್ಲಿ ಲೋನ್ ವ್ಯವಹಾರದ ಬಗ್ಗೆ ಎಲ್ಲಾ ಕಂಡೀಷನ್ ತೆಗೆದುಹಾಕಿ ಸಾಲ ಮನ್ನಾ ಆಗಿದೆ ಎಂದು ನಾನು ಹೇಳಿದ್ದೆ. ಮಧ್ಯ ಪ್ರದೇಶದಲ್ಲಿ ಆ ಕಂಡೀಷನ್ ತೆಗೆದುಹಾಕಿ ಸಾಲ ಮನ್ನಾ ಮಾಡಿಲ್ಲ ಎಂದು ಪತ್ರಿಕೆಯಲ್ಲಿ ಬಂದಿದೆ. ನಾನು ನೇರವಾದ ಪ್ರಶ್ನೆ ಕೇಳಿದ್ದೆ. ಏಕೆಂದರೆ ಸರ್ಕಾರ ಅಧಿಕೃತವಾಗಿ ಉತ್ತರ ಕೊಡಬೇಕಾಗಿತ್ತು.

(ಗೊಂದಲ)

ಅಧ್ಯಕ್ಷರು : 27ನೇ ತಾರೀಖು ನಿಮ್ಮ ಪ್ರಶ್ನೆ ಬರುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಎಲ್ಲಾ ಪತ್ರಿಕೆಯಲ್ಲಿ ಬಂದಿದೆ. ಮಧ್ಯಪ್ರದೇಶದಲ್ಲಿ ಲೋನ್ ವ್ಯವಹಾರದ ಬಗ್ಗೆ ಇಂಪ್ಲಿಮೆಂಟ್ ಮಾಡಿಲ್ಲ ಎಂದು. ಇವತ್ತು ಸರ್ಕಾರ ಅಧಿಕೃತವಾಗಿ ಹೇಳಲಿ. ಆ ಕಂಡೀಷನ್ ತೆಗೆದುಹಾಕಿ ರೈತರ ಸಾಲ ಮನ್ನಾ ಮಾಡಿದೆಯೇ ಅಥವಾ ಇಲ್ಲ ಎಂದು.

ಅಧ್ಯಕ್ಷರು : ಶ್ರೀನಿವಾಸಯ್ಯರವರೆ, ನಿಮ್ಮ ಪ್ರಶ್ನೆ 27ನೇ ತಾರೀಖಿಗೆ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅವರು ಇರುವುದರಿಂದ...

ತುಮಕೂರಿನ ಅಂತರಸನ ಹಳ್ಳಿಗೆ M.V.E.S. ವಿದ್ಯುತ್ ಕೇಂದ್ರ.

3431 - ಶ್ರೀ ಎಸ್. ಷಫಿ ಅಹಮದ್ (ತುಮಕೂರು): ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರಿನ ಅಂತರಸನಹಳ್ಳಿ ಎಂ. ವಿ. ಇ. ಎಸ್. ಕೇಂದ್ರವನ್ನು ಸ್ಥಾಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಆ) ಈ ಕೆಲಸದ ಪ್ರಗತಿಯು ಯಾವ ಹಂತದಲ್ಲಿದೆ?

ಇ) ತುಮಕೂರು ಜಿಲ್ಲೆಯ ವಿದ್ಯುಚ್ಛಲವನ್ನು ಉತ್ತಮಗೊಳಿಸಲು ಇಲಾಖೆಯು ಯಾವ ಕ್ರಮಗಳನ್ನು ತೆಗೆದುಕೊಂಡಿದೆ?

ಈ) ರಾಜ್ಯದಲ್ಲಿ ಎಷ್ಟು ವಿದ್ಯುತ್ ಯೋಜನೆಗಳು ಮಂಜೂರಾಗಿವೆ ಮತ್ತು ಈ ಯೋಜನೆ ಕೆಲಸಗಳು ಪ್ರಗತಿಯಲ್ಲಿವೆಯೇ? ಇದ್ದರೆ, ಈ ಕೆಲಸಗಳು ಯಾವ ಹಂತದಲ್ಲಿವೆ ಮತ್ತು ಇದರ ಮೇಲೆ ಹೂಡಿರುವ ಹಣ ಎಷ್ಟು?

ಉ) ಇವು ಯಾವಾಗ ಪೂರ್ಣಗೊಳ್ಳಲಿದೆ ಮತ್ತು ಇದರಿಂದ ಉತ್ಪಾದನೆಯಾಗುವ ವಿದ್ಯುಚ್ಛಕ್ತಿಯ ಪ್ರಮಾಣವೆಷ್ಟು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ತುಮಕೂರು ತಾಲ್ಲೂಕಿನ ಅಂತರಸನಹಳ್ಳಿಯಲ್ಲಿ 220:66 ಕೆ. ವಿ. ಮತ್ತು 66:11ಕೆ. ವಿ. ವಿದ್ಯುತ್ ಉಪ ಕೇಂದ್ರಗಳನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಆ) ಎರಡೂ ವಿದ್ಯುತ್ ಉಪ ಕೇಂದ್ರಗಳ ಕೆಲಸಗಳು ಪ್ರಗತಿಯಲ್ಲಿದೆ.

ಇ) ತುಮಕೂರು ತಾಲ್ಲೂಕಿನ ವಿದ್ಯುದ್ಬಲದ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಮಂಡಳಿಯು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿದೆ.

1) ವಿಶ್ವ ಬ್ಯಾಂಕ್ ನೆರವಿನೊಂದಿಗೆ ಅಂತರಸನಹಳ್ಳಿಯಲ್ಲಿ 220:66 ಕೆ.ವಿ. ಸಾಮರ್ಥ್ಯದ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವುದು. ಇನ್ನೊಂದು 100 ಎಂ. ವಿ. ಎ. ಸಾಮರ್ಥ್ಯದ ವಿದ್ಯುತ್ ಪರಿವರ್ತಕವನ್ನು ಅಳವಡಿಸುವ ಉದ್ದೇಶವೂ ಇದೆ.

2) ಅಂತರಸನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ 66.11 ಕೆ. ವಿ. ಸಾಮರ್ಥ್ಯದ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸಿರುವುದು. 12:5 ಎಂ.ವಿ. ಎ. ಸಾಮರ್ಥ್ಯದ ಒಂದು ವಿದ್ಯುತ್ ಪರಿವರ್ತಕವನ್ನು ಸ್ಥಾಪಿಸುವ ಉದ್ದೇಶವೂ ಇದೆ.

3) 66:11 ಕೆ.ವಿ. ಹಿರೇಹಳ್ಳಿ ವಿದ್ಯುತ್ ಉಪಕೇಂದ್ರದಲ್ಲಿರುವ 8 ಎಂ.ವಿ.ಎ. ಆಫ್ ಲೋಡ್ ವಿದ್ಯುತ್ ಪರಿವರ್ತಕವನ್ನು ಆನ್ ಲೋಡ್ ವ್ಯವಸ್ಥೆಯಿರುವ ವಿದ್ಯುತ್ ಪರಿವರ್ತಕದೊಂದಿಗೆ ಬದಲಾಯಿಸುವುದು.

ಈ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು 127.92 ಮೆಗಾ ವ್ಯಾಟ್ಸ್ ಸಾಮರ್ಥ್ಯದ ಡೀಸಲ್ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ಬೆಂಗಳೂರಿನ ಹತ್ತಿರವಿರುವ ಯಲಹಂಕದಲ್ಲಿ ಸ್ಥಾಪಿಸುತ್ತಿದ್ದು ಇದರ ಕೆಲಸಕಾರ್ಯಗಳು ಪ್ರಗತಿಯಲ್ಲಿವೆ. ಇದಕ್ಕೆ ಬೇಕಾದ ಜಮೀನನ್ನು ಸ್ವಾಧೀನ ಪಡಿಸಿಕೊಂಡಿದ್ದು ಸಿವಿಲ್ ಅಭಿಯಾಂತ್ರಿಕ ಕಾಮಗಾರಿಗಳು ಪ್ರಗತಿಯಲ್ಲಿವೆ. ಜುಲೈ 1991ರ ಅಂತ್ಯದಲ್ಲಿರುವಂತೆ ಈ ಯೋಜನೆಗೆ 41.36 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಕರ್ನಾಟಕ ವಿದ್ಯುತ್ ನಿಗಮವು ಇನ್ನಿತರ 14 ಯೋಜನೆಗಳನ್ನು (ಜಲವಿದ್ಯುತ್, ಶಾಖೋತ್ಪನ್ನ ಮತ್ತು ಡೀಸಲ್ ಸೇರಿದಂತೆ) ಕಾರ್ಯಗತಗೊಳಿಸುತ್ತಿದ್ದು ಅವು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದೆ. ಇವುಗಳ ಸ್ಥಾಪನಾ ಸಾಮರ್ಥ್ಯ ಒಟ್ಟು ಸುಮಾರು 993.31 ಮೆಗಾ ವ್ಯಾಟ್ಸ್ ಮಾರ್ಚ್ 1991ರ ಅಂತ್ಯದವರೆಗೆ ಈ ಯೋಜನೆಗಳಿಗೆ 647.87 ಕೋಟಿ ರೂ. ಖರ್ಚು ಮಾಡಲಾಗಿದೆ. ಈ ಯಲಹಂಕ ಯೋಜನೆಯ ಮೊದಲ ಘಟಕವನ್ನು ಮಾರ್ಚ್ 1992ರ ಅಂತ್ಯದೊಳಗೆ ಕಮೀಷನ್ ಮಾಡುವ ಉದ್ದೇಶವಿದ್ದು, ಇನ್ನುಳಿದ 5 ಘಟಕಗಳನ್ನು ಸೆಪ್ಟೆಂಬರ್ 1992ರ ಅಂತ್ಯದ ವೇಳೆಗೆ ಪ್ರತಿ ಘಟಕಗಳ ಮಧ್ಯೆ ಒಂದು ತಿಂಗಳ ಅಂತರದಂತೆ ಕಮೀಷನ್ ಮಾಡಲಾಗುವುದು. ಈ ಡೀಸಲ್ ವಿದ್ಯುತ್ ಉತ್ಪಾದನಾ ಕೇಂದ್ರದಿಂದ ಒಂದು ವರ್ಷಕ್ಕೆ 720 ದಶಲಕ್ಷ ಯೂನಿಟ್ಟುಗಳ ವಿದ್ಯುಚ್ಛಕ್ತಿ ಉತ್ಪತ್ತಿಯಾಗುವುದೆಂದು ಅಂದಾಜು ಮಾಡಲಾಗಿದೆ.

ಉ) ಕರ್ನಾಟಕ ವಿದ್ಯುತ್ ನಿಗಮದ 14 ಯೋಜನೆಗಳನ್ನು 1995ನೇ ಇಸವಿ ಹೊತ್ತಿಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ. ಈ ಯೋಜನೆಗಳಿಂದ ವಾರ್ಷಿಕವಾಗಿ ಸುಮಾರು 3500 ದಶಲಕ್ಷ ಯೂನಿಟ್‌ಗಳ ವಿದ್ಯುಚ್ಛಕ್ತಿ ಉತ್ಪಾದಿಸಬಹುದೆಂದು ಅಂದಾಜು ಮಾಡಲಾಗಿದೆ.

ಶ್ರೀ ಶಫೀ ಅಹಮ್ಮದ್ : ತುಮಕೂರು ತಾಲ್ಲೂಕಿನ ಅಂತರಸಹಳ್ಳಿಯಲ್ಲಿ 220:66 ಕೆ ವಿ ಮತ್ತು 66:11 ಕೆ ವಿ ವಿದ್ಯುತ್ ಉಪಕೇಂದ್ರಗಳನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಹೇಳಿದ್ದೀರಿ. ತಾವು ಯಾವಾಗ ಕೆಲಸಗಳನ್ನು ಮುಗಿಸುತ್ತೀರಿ? ಹಾಗೂ ಅದಕ್ಕೆ ಹಾಕಬೇಕಾದಂತಹ ಟ್ರಾನ್ಸ್‌ಫಾರ್ಮರ್ಸ್ ಬಗ್ಗೆ ಆರ್ಡರ್ಸ್‌ಗಳನ್ನು ಕೊಟ್ಟಿದ್ದೀರಾ ಅಥವಾ ಇಲ್ಲವೇ? ಇನ್ನು ಪವರ್ \ ಪ್ರಾಜೆಕ್ಟ್ ಬಗ್ಗೆ ಹೇಳುತ್ತೇನೆ. ಎಲ್ಲಾ ಪವರ್ ಪ್ರಾಜೆಕ್ಟ್ ಸಹ ಅನ್ ಗೋಯಿಂಗ್ ಪ್ರಾಜೆಕ್ಟ್‌ಇದೆ. ಯಾವುದೇ ಪ್ರಾಜೆಕ್ಟ್ ಇನ್ನೂ ಕಂಪ್ಲೀಟ್ ಆಗುವ ಸ್ಟೇಜಿನಲ್ಲಿಲ್ಲ, ಈ ಪ್ರಾಜೆಕ್ಟ್‌ಗಳನ್ನು ಯಾವಾಗ ಮುಗಿಸುತ್ತೀರಿ? ಅದರಲ್ಲಿಯೂ ಸಹ ಬೆಂಗಳೂರಿನ ಯಲಹಂಕದಲ್ಲಿರುವ ಪ್ರಾಜೆಕ್ಟ್ ಕೆಲಸ ಶುರು ಮಾಡಿದ್ದೀರಾ? ಅದಕ್ಕೆ ಬೇಕಾದ ಸಲಕರಣೆಗಳ ಬಗ್ಗೆ ಆರ್ಡರ್ಸ್‌ನ್ನು ಪ್ಲೇಸ್ ಮಾಡಿದ್ದೀರೋ ಅಥವಾ ಇಲ್ಲವೋ ಇದರ ಬಗ್ಗೆ ಕೇಳುತ್ತಿದ್ದೇನೆ.

ಶ್ರೀ ಎಂ. ರಾಮಪ್ಪ : ಆದಷ್ಟು ಬೇಗ ಮಾಡುತ್ತೇವೆ.

ಸರ್ಕಾರಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ಶಿಕ್ಷಣ

3297 - ಶ್ರೀ ಕೆ. ಹರ್ಷಕುಮಾರ್‌ಗೌಡ (ಚಾಮರಾಜ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಒಡೆತನದ ಶಾಲೆಗಳಲ್ಲಿ ಆಂಗ್ಲ ಭಾಷಾ ಮಾಧ್ಯಮದಲ್ಲಿ ಶಿಕ್ಷಣವನ್ನು ನೀಡಲಾಗುತ್ತಿದೆಯೇ?

ಆ) ಸರ್ಕಾರಿ ಒಡೆತನದ ಶಾಲೆಗಳಿಗೆ ಸಮಾನಾಂತರವಾಗಿ ಖಾಸಗಿ ಸಂಸ್ಥೆಗಳಲ್ಲಿ ಆಂಗ್ಲ ಭಾಷಾ ಮಾಧ್ಯಮದ ವ್ಯಾಪಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಗಮನಕ್ಕೆ ಬಂದಿದ್ದರೆ ಈ ಶೋಷಣೆ ಮತ್ತು ದಂದೆ ತಪ್ಪಿಸಲು ಸರ್ಕಾರ ತೆಗೆದುಕೊಂಡು ಕ್ರಮವೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ನೀಡಲಾಗುತ್ತಿದೆ.

ಆ) ಇಲ್ಲಾ

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ಹರ್ಷಕುಮಾರ ಗೌಡ : ಮಾನ್ಯ ಅಧ್ಯಕ್ಷರೇ, ಈಗ ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಒಡೆತನದ ಶಾಲೆಗಳಲ್ಲಿ ಆಂಗ್ಲ ಭಾಷಾ ಮಾಧ್ಯಮದಲ್ಲಿ ಶಿಕ್ಷಣವನ್ನು ನೀಡಲಾಗುತ್ತಿದೆಯೇ ಎಂಬ ಬಗ್ಗೆ ನೀಡಲಾಗುತ್ತಿದೆ ಎಂದು ಉತ್ತರ ಹೇಳಿದ್ದಾರೆ. ರಾಜ್ಯ ಸರ್ಕಾರದ ನೀತಿಯಾದರೂ ಏನು? ರಾಜ್ಯ ಭಾಷೆ ಕನ್ನಡವನ್ನು ಕಲಿಸಬೇಕು ಎನ್ನುವುದು ಸರ್ಕಾರದ ನೀತಿ.

ಸರ್ಕಾರ ತನ್ನ ನೀತಿಗೆ ಬದ್ಧವಾಗಿದೆಯೇ? ಈ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು : ಪ್ರಶ್ನೆ ಕೇಳಿ.

ಶ್ರೀ ಕೆ. ಹರ್ಷಕುಮಾರ್ ಗೌಡ : ಸರ್ಕಾರೀ ಒಡೆತನದ ಶಾಲೆಗಳಲ್ಲಿ ಆಂಗ್ಲ ಭಾಷಾ ಮಾಧ್ಯಮದಲ್ಲಿ ಶಿಕ್ಷಣವನ್ನು ನೀಡಲಾಗುತ್ತಿದೆಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ ನೀಡಲಾಗುತ್ತಿದೆ. ಎಂದು ಉತ್ತರಿಸಿದ್ದಾರೆ. ನಾನು ಮತ್ತೆ ಕೇಳುತ್ತಿದ್ದೇನೆ. ರಾಜ್ಯದ ಭಾಷೆ ಕನ್ನಡ, ಎಂದು ನಾವು ಒಪ್ಪಿಕೊಂಡಿದ್ದೇವೆ. ಆ ನೀತಿಗೆ ಬದ್ಧವಾಗಿದೆಯೇ? ನನ್ನ ಒಂದು ಸ್ಪಷ್ಟವಾದ ಪ್ರಶ್ನೆ ಎಂದರೆ ಒಂದರಿಂದ ಏಳನೆಯ ತರಗತಿಯ ತನಕ ಕರ್ನಾಟಕ ರಾಜ್ಯದಲ್ಲಿ ಯಾವುದೇ ಸ್ಕೂಲ್ ಗಳಲ್ಲಿ ಕೂಡ ಇಂಗ್ಲೀಷ್ ಮಾಧ್ಯಮವನ್ನು ಕಲಿಸುತ್ತಾ ಇಲ್ಲ. ಕನಿಷ್ಟ ಒಂದೆರಡು ಸ್ಕೂಲುಗಳಲ್ಲಿ ಮಾತ್ರ ಕನ್ನಡದಲ್ಲಿ ಕಲಿಸುತ್ತಾ ಇರಬಹುದು. ಆದರೆ ಖಾಸಗೀ ಶಾಲೆಗಳಲ್ಲಿ ಇಂಗ್ಲೀಷ್ ಮಾರಾಟದ ವ್ಯವಸ್ಥೆ ನಡೆಯುತ್ತಾ ಇದೆ. ಈ ದ್ವಂಧ್ವ ಏಕೆ ಬೇಕು?

ಶ್ರೀ ಜಿ. ಪುಟ್ಟಸ್ವಾಮಿಗೌಡ : (ಶಿಕ್ಷಣ ಸಚಿವರ ಪರವಾಗಿ) ನಮ್ಮ ರಾಜ್ಯದಲ್ಲಿ ಕನ್ನಡವೇ ಶಿಕ್ಷಣ ಮಾಧ್ಯಮ. ಅದರಲ್ಲಿ ಯಾವ ದ್ವಂಧ್ವ ನೀತಿಯೂ ಇಲ್ಲ. ಆದರೆ ಕನ್ನಡೇತರ ವಿದ್ಯಾರ್ಥಿಗಳಿಗೆ ಅನುಕೂಲ ಆಗಲಿ ಎಂದು ಹೇಳಿ ಕೆಲವೊಂದು ಕಡೆ ಇಂಗ್ಲೀಷನ್ನು ತೆಗೆದಿರತಕ್ಕದ್ದು ನಮ್ಮಲ್ಲಿ ಇದೆ. ಆದರೆ ಖಾಸಗೀಯವರು ಇಂಗ್ಲೀಷ್ ಮಾಧ್ಯಮದ ವ್ಯಾಪಾರ ಮಾಡುತ್ತಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿಯೇ ಎಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅದು ಅಧಿಕೃತವಾಗಿ ಹೇಳಬೇಕಾದರೆ, ಇಲ್ಲ ಎಂದು ಹೇಳಬೇಕಾಗುತ್ತದೆ. ಆದ್ದರಿಂದ ಈ ಬಗ್ಗೆ ಸರ್ಕಾರ ಕೂಡಲೇ-ತೀರ್ಮಾನ ತೆಗೆದುಕೊಳ್ಳಲಿದೆ ಎನ್ನತಕ್ಕ ಮಾತನ್ನು ಸನ್ಮಿತ್ರರಿಗೆ ಹೇಳಬಯಸುತ್ತೇನೆ.

ಉರ್ದು ಮಾಧ್ಯಮದ ಪ್ರಾಥಮಿಕ ಪ್ರೌಢಶಾಲೆ ಮತ್ತು ಕಾಲೇಜುಗಳಿಗೆ ಅನುಮತಿ.

3294 - ಶ್ರೀ ಎ.ಎಂ. ಹಿಂಡಸಗೇರಿ (ಹುಬ್ಬಳ್ಳಿ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1988-89 ಮತ್ತು 1989-90 ರಲ್ಲಿ ಉರ್ದು ಮಾಧ್ಯಮದ ಎಷ್ಟು ಪ್ರಾಥಮಿಕ, ಪ್ರೌಢಶಾಲೆ ಮತ್ತು ಕಾಲೇಜುಗಳಿಗೆ ಅನುಮತಿ ನೀಡಲಾಗಿದೆ? (ಜಿಲ್ಲಾವಾರು ಅಂಕಿ ಅಂಶನೀಡುವುದು)

ಆ) ಉರ್ದು ಮಾಧ್ಯಮದ ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆ ಹಾಗೂ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ ಬಂದ ಅರ್ಜಿಗಳಲ್ಲಿ ಸರ್ಕಾರದಿಂದ ಇತ್ಯರ್ಥವಾಗದೆ ಉಳಿದಿರುವುದು ಎಷ್ಟು? (ಜಿಲ್ಲಾವಾರು ಅಂಕಿ ಅಂಶ ನೀಡುವುದು)

ಶಿಕ್ಷಣ ಸಚಿವರ ಪರವಾಗಿ ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಪ್ರಾಥಮಿಕ ಶಾಲೆಗಳು	-	9
ಮಾಧ್ಯಮಿಕ ಶಾಲೆಗಳು	-	ಇಲ್ಲ
ಪ್ರೌಢ ಶಾಲೆಗಳು	-	10
ಸಂಯುಕ್ತ ಮತ್ತು ಸ್ವತಂತ್ರ ಪದವಿಪೂರ್ವ ಕಾಲೇಜುಗಳು	-	ಇಲ್ಲ
ಪ್ರಥಮ ದರ್ಜೆ ಕಾಲೇಜುಗಳು	-	ಇಲ್ಲ

(ಜಿಲ್ಲಾವಾರು ಅಂಕಿ ಅಂಶ ಪಟ್ಟಿ ಲಗತ್ತಿಸಿದೆ)

ಆ) ಉರ್ದು ಮಾಧ್ಯಮಕ್ಕೆ ಸಂಬಂಧ ಪಟ್ಟಂತೆ ಯಾವ ಅರ್ಜಿಯೂ ಬಂದಿರುವುದಿಲ್ಲ.

ಮಾನ್ಯತೆ ಪಡೆದ ಉರ್ದು ಶಾಲೆಗಳ ವಿವರ

		1988-89				1989-90			
ಕ್ರಮ ಸಂಖ್ಯೆ	ಜಿಲ್ಲೆಗಳು	ಪ್ರಾಥಮಿಕ ಶಾಲೆ	ಮಾಧ್ಯಮಿಕ ಶಾಲೆ	ಪ್ರೌಢಶಾಲೆ	ಕಿರಿಯ ಕಾಲೇಜು	ಪ್ರಾಥಮಿಕ ಶಾಲೆ	ಮಾಧ್ಯಮಿಕ ಶಾಲೆ	ಪ್ರೌಢಶಾಲೆ	ಕಿರಿಯ ಕಾಲೇಜು
1.	ಬೆಂಗಳೂರು ಗ್ರಾಮಾಂತರ	-	-	-	-	-	-	-	-
2.	ತುಮಕೂರು	-	-	-	-	-	-	-	-
3.	ಚಿತ್ರದುರ್ಗ	-	-	-	-	-	-	-	-
4.	ಶಿವಮೊಗ್ಗ	-	-	3	-	-	-	-	-
5	ಕೋಲಾರ	-	-	-	-	-	-	-	-
6.	ಗುಲ್ಬರ್ಗಾ	-	-	-	-	-	-	-	-
7.	ರಾಯಚೂರು	-	-	-	-	-	-	-	-
8.	ಬಳ್ಳಾರಿ	-	-	-	-	-	-	-	-
9.	ಬೀದರ್	6	-	6	-	-	-	-	-
10.	ಮೈಸೂರು	-	-	-	-	-	-	-	-
11.	ಮಂಡ್ಯ	-	-	-	-	-	-	-	-
12.	ದಕ್ಷಿಣ ಕನ್ನಡ	-	-	-	-	-	-	-	-
13.	ಚಿಕ್ಕಮಗಳೂರು	-	-	-	-	-	-	-	-
14.	ಹಾಸನ	-	-	-	-	-	-	-	-
15.	ಮಡಿಕೇರಿ	-	-	-	-	-	-	-	-
16.	ಬೆಳಗಾಂ	-	-	-	-	-	-	-	-
17.	ಬಿಜಾಪುರ	-	-	-	-	-	-	1	-
18.	ಧಾರವಾಡ	-	-	-	-	-	-	-	-
19.	ಉತ್ತರ ಕನ್ನಡ	3	-	-	-	-	-	-	-
	ಒಟ್ಟು	9	-	9	-	-	-	1	-

ಶ್ರೀ ಎ.ಎಂ. ಹಿಂಡಸಗೇರಿ : ಮೊದಲಿನೆಯ ಪ್ರಶ್ನೆಗೆ89 ರಿಂದ 90 ರವರೆಗೆ ಬರೀ 9 ಎಂದು ಹೇಳಿದ್ದಾರೆ, ಪ್ರೈಮರಿ ಮಿಡಲ್ ಮತ್ತು ಹೈಸ್ಕೂಲ್ 10 ಅನ್ನುತ್ತಾರೆ ಮತ್ತು ಎರಡನೇ ಪ್ರಶ್ನೆಗೆ "No application are pending".

ಎನ್ನುತ್ತಾರೆ, ಇಡೀ ರಾಜ್ಯದಲ್ಲಿ ಉರ್ದು ಶಾಲೆಗೆ ಪ್ರೈಮರಿಯಾಗಲಿ ಮಿಡಲ್ ಆಗಲಿ, ಯಾವುದೂ ಅಪ್ಲಿಕೇಶನ್ನು ಬಂದಿಲ್ಲ. ಈಗ ಜಿಲ್ಲಾಪರಿಷತ್‌ಬಂದ ನಂತರ ನಾವು ಅಪ್ಲಿಕೇಶನ್ಸ್ ಕೊಡ್ತೇವೆ ಅಲ್ಲಿ ಡಿಲೇ ಮಾಡಿಬಿಡ್ತಾರೆ ಸರ್ಕಾರಕ್ಕೆ ಸರಿಯಾಗಿ ಅಪ್ಲಿಕೇಶನೂ ಮುಟ್ಟೋದಿಲ್ಲ ದಯವಿಟ್ಟು ತಾವು ಮರುಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹೊಸದಾಗಿ ಕಂಪ್ಲೋ ಕಾಲೇಜಗಳನ್ನು ಮೈನಾರಿಟೀಸ್‌ಗಾಗಲಿ ಮೋಟಮ್ಮನವರು ಕೇಳಿದಂತೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳವರೆಗೆ ಏನು ಕೊಟ್ಟಿದ್ದಾರೆ ಅವುಗಳಿಗೆ ಗ್ರಾಂಟ್ ಇನ್ ಏಡ್ ಕೊಡುವುದಿಲ್ಲ ಎಂದು ಹೇಳಿದ್ದಾರೆ. ಗ್ರಾಂಟ್ ಕೊಡದಿದ್ದರೆ ಶಾಲೆಗಳನ್ನು ಹೇಗೆ ನಡೆಸುವುದು? ದಯಮಾಡಿ ಮೈನಾರಿಟೀಸ್ ಮತ್ತು ದಯಮಾಡಿ ಮೈನಾರಿಟೀಸ್ ಮತ್ತು ಮತ್ತು ಎಸ್. ಸಿ. ಎಸ್. ಟಿ. ಶಾಲೆಗಳಿಗೆ ರಿಯಾಯಿತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಅಧ್ಯಕ್ಷರೇ, ಅವರು ಕೇಳಿದ ಪ್ರಶ್ನೆ 88-89 ಮತ್ತು 89-90ರಲ್ಲಿ ಎಷ್ಟು ಉರ್ದು ಮಾಧ್ಯಮಕ್ಕೆ ಸಂಬಂಧಿಸಿದಂತೆ ಅರ್ಜಿ ಪೆಂಡಿಂಗಿವೆ ಎಂದಿದ್ದಾರೆ. ಸರ್ಕಾರದ ಮುಂದೆ ಒಂದೂ ಇಲ್ಲ. ಅಧ್ಯಕ್ಷರೇ ತಮಗೆ ಗೊತ್ತಿರುವಂತೆ ಜಿಲ್ಲಾಪರಿಷತ್ ಅಸ್ತಿತ್ವಕ್ಕೆ ಬಂದ ಮೇಲೆ ಮತ್ತು ಪ್ರಾಥಮಿಕ ಮತ್ತು ಪ್ರೌಢಶಾಲೆ ತೆರೆಯಲು ಮೊದಲು ಜಿಲ್ಲಾಪರಿಷತ್‌ನವರು ವರದಿ ಕೊಟ್ಟು ಅರ್ಹತೆಗಳನ್ನು ಅವಲೋಕನ ಮಾಡಿ ಸರ್ಕಾರಕ್ಕೆ ಶಿಫಾರಸ್ಸಾದ್ದಬೇಕಾಗುತ್ತವೆ. ಬಹುತೇಕ ಅರ್ಜಿಗಳು ಆ ಮಟ್ಟದಲ್ಲೇ ಇತ್ಯರ್ಥವಾಗೋದರಿಂದ ಸರ್ಕಾರದ ಮುಂದೆ ಯಾವ ಅರ್ಜಿಗಳೂ ಉಳಿದಿಲ್ಲ. ಆದರೆ 91-92ಕ್ಕೆ ತುಮಾಕೂರಿನ ಒಂದು ಸಂಸ್ಥೆ ಅರ್ಜಿಹಾಕಿಕೊಂಡಿದೆ. ಅದು ಪರಿಶೀಲನೆಯಲ್ಲಿದೆ. ಎಸ್.ಸಿ. ಎಸ್.ಟಿ. ಮತ್ತು ಮೈನಾರಿಟೀಸ್‌ಗೆ ಅನುದಾನ ಕೊಡುವ ಬಗ್ಗೆ ಮತ್ತೊಂದು ಮಾತು ಹೇಳಿದರು. ಸರ್ಕಾರ ಅದರ ಬಗ್ಗೆ ಪರಿಶೀಲನೆ ಮಾಡಲಾಗುವುದು.

ಶ್ರೀ ಎ.ಎಂ. ಹಿಂಡಸಗೇರಿ : ಉರ್ದು ಮಿಡಿಯಂ ಶಾಲೆಗಳ ಬಗ್ಗೆ ಸರ್ಕಾರ ಅವರಿಗೆ ಆದೇಶ ಕೊಡಬೇಕು, ಶಿಫಾರಸ್ ಮಾಡಿ ತಮ್ಮ ಕಡೆಗೆ ಬರಬೇಕೆಂದು ಯಾವ ತರಹ ಅವರು ರಿಜೆಕ್ಟ್ ಮಾಡಿದರೆಂದು ಸರ್ಕಾರಕ್ಕೆ ಗೊತ್ತಾಗಬೇಕು. ಅಲ್ಲಿ ಅವರು ಕೊಡೋದಿಲ್ಲ ಎಂದು ಹೇಳಿ ಬಿಡ್ತಾರೆ,ಆದ್ದರಿಂದ ಉರ್ದು ಮಿಡಿಯಂ ಶಾಲೆಗೆ ಬಹಳ ತೊಂದರೆಯಾಗ್ತದೆ. ಅವರು ರಿಜೆಕ್ಟ್ ಮಾಡಿದ್ದನ್ನು ತಮಗೆ ಕಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ : ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಜಿಲ್ಲಾಪರಿಷತ್ ತನ್ನದೇ ಆದ ಅಧಿಕಾರವನ್ನು ಸರ್ಕಾರ ಈಗಾಗಲೇ ಕೊಟ್ಟಿದೆ. ಆ ಬಗ್ಗೆ ಕಾನೂನು ಚೌಕಟ್ಟಿನಲ್ಲಿ ಅವರು ತೀರ್ಮಾನ ತೆಗೆದುಕೊಳ್ಳಲು ಅವಕಾಶ ಇದೆ. ಅದನ್ನು ಪುನಃ ನಾವು ಹಿಂದಕ್ಕೆ ಪಡೆಯಬೇಕಾದರೆ ಮುಂದೆ ಆಕ್ಟನ್ನು ಮಾಡಿಫಿಕೇಶನ್ ಆಗಬೇಕಾಗುತ್ತದೆ. ಅದು ಸಧ್ಯಕ್ಕೆ ಕಷ್ಟ ಎಂದು ಹೇಳಬಯಸುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ಮಹಿಳಾ ಸಹಕಾರ ಸಂಘಗಳಿಗೆ ಸರ್ಕಾರದ ಪ್ರತ್ಯೇಕ ಷೇರು ಹಣ.

3433- ಶ್ರೀಮತಿ ಮಲ್ಲಾಜಮ್ಮ (ಮಳವಳ್ಳಿ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ರಾಜ್ಯದಲ್ಲಿ ಮಹಿಳಾ ಸಹಕಾರ ಸಂಘಗಳಿಗೆ ಸರ್ಕಾರ ದಿಂದ ಪ್ರತ್ಯೇಕ ಶೇರುಹಣವನ್ನು ಕೊಡುವ ವ್ಯವಸ್ಥೆ ಇದೆಯೇ?*
2. *ಸಹಕಾರ ಸಂಘಗಳಿಗೆ ನಾಮಕರಣ ಮಾಡುವಾಗ ಮಹಿಳಾ ಪ್ರತಿನಿಧಿಗಳನ್ನು ಕಡ್ಡಾಯವಾಗಿ ನೇಮಕ ಮಾಡುವ ಯೋಜನೆ ಸರ್ಕಾರಕ್ಕಿದೆಯೇ?*
3. *ಹಾಗಿದ್ದಲ್ಲಿ ಅದನ್ನು ಕೂಡಲೇ ಜಾರಿಗೆ ತರಲಾಗುವುದೇ?*

ಶ್ರೀ ಎಸ್. ಆರ್. ಮೋರೆ. (ಸಹಕಾರ ರಾಜ್ಯ ಸಚಿವರು) :

1. ಇದೆ.

2. ಇಲ್ಲಾ.

3. ಸಹಕಾರ ಸಂಘಗಳ ಕಾಯ್ದೆ 1959ರ ನಿಯಮ 28(ಎ) ಪ್ರಕಾರ ಈಗಾಗಲೇ ಒಂದು ಮಹಿಳಾ ಪ್ರತಿನಿಧಿಗೆ ಆಡಳಿತ ಮಂಡಳಿಯಲ್ಲಿ ಅವಕಾಶ ಇರುವುದರಿಂದ ಸರ್ಕಾರ ಮಹಿಳಾ ಪ್ರತಿನಿಧಿಗಳನ್ನು ಸರ್ಕಾರದ ನಾಮಿನಿಯಾಗಿ ನೇಮಕ ಮಾಡುವು ಅವಶ್ಯಕತೆತ ಕಂಡು ಬರುವುದಿಲ್ಲ.

ಹೊಸದುರ್ಗ ತಾಲ್ಲೂಕಿನಲ್ಲಿ ಕೃಷಿಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ರಜತ ಮಹೋತ್ಸವದ ಆಚರಣೆ

3372 - ಶ್ರೀ ಇ. ವಿಜಯ ಕುಮಾರು (ಹೊಸದುರ್ಗ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಹೊಸದುರ್ಗ ತಾಲ್ಲೂಕಿನ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ರಜತ ಮಹೋತ್ಸಾವವನ್ನು ಆಚರಿಸಿದೆಯೇ

ಆ) ಹಾಗಿದ್ದಲ್ಲಿ ಇದಕ್ಕಾಗಿ ಬ್ಯಾಂಕಿನ ವತಿಯಿಂದ ಹಣ ಖರ್ಚು ಮಾಡಲಾಗಿದೆಯೇ?

ಶ್ರೀ ಎಸ್.ಆರ್.ಮೋರೆ (ಸಹಕಾರ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಕೈಗಾರಿಕೆಗಳಿಂದ ವಿದ್ಯುತ್ ಶುಲ್ಕದ ಬಾಕಿ

3426 - ಶ್ರೀ ಡಿ.ಎ. ಚಿನ್ನಪ್ಪ (ಮಡಕೇರಿ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿವಿಧ ಕೈಗಾರಿಕೆಗಳಿಂದ ವಿದ್ಯುಚ್ಛಕ್ತಿ ಶುಲ್ಕದ ಬಾಬ್ತು ಮೊತ್ತದ ಹಣವು ಬಾಕಿಯಿರುವುದು ನಿಜವೆ?

ಆ) ಬಾಕಿಯಿರುವ ಕೈಗಾರಿಕೆಗಳು ಹೆಸರುಗಳೇನು ಮತ್ತು ಈ ಹಣವನ್ನು ವಸೂಲು ಮಾಡದೇ ಇರಲು ಕಾರಣಗಳೇನು ?

ಇ) ಕಾರ್ಖಾನೆಗಳಿಂದ ಬಾಕಿಯಿರುವ ಹಣವನ್ನು ಮನ್ನಾ ಮಾಡಲು ಸರ್ಕಾರವು ಯೋಚಿಸುತ್ತಿದೆಯೇ ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು)

ಅ) ಹೌದು. ವಿವಿಧ ಕೈಗಾರಿಕೆಗಳಿಂದ ಹೆಚ್ಚಿನ ಮೊತ್ತದ ವಿದ್ಯುಚ್ಛಕ್ತಿ ಹಣವು ಬಾಕಿಯಿರುತ್ತದೆ.

ಆ) ಜೂನ್ 1991ರ ಅಂತ್ಯಕ್ಕೆ 50,000 ರೂಪಾಯಿಗಳಿಗಿಂತಲೂ ಹೆಚ್ಚಿನ ವಿದ್ಯುಚ್ಛಕ್ತಿ ಮೊತ್ತದ ಬಾಕಿಯಿರುವ ಹೈಟೆನ್ಷನ್ ಉದ್ದಿಮೆದಾರರ ಹೆಸರುಗಳ ಪಟ್ಟಿಯನ್ನು ಇದರೊಡನೆ ಲಗತ್ತಿಸಿದ್ದು, ಈ ಬಾಕಿ ಹಣವನ್ನು ವಸೂಲು ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಇಲ್ಲ.

ANNEXURE TO L.A. QUESTION NO. 3426 OF SRI D.A CHINNAPPA.

LIST INDICATING THE NAMES OF H.T. INDUSTRIES HAVING ARREARS AMOUNT OF MORE THAN Rs. 50,000/- AS ON JUNE 1991

Sl. No.	R.R. No.	Consumers Name	Arrears
1.	2.	3.	4.
1	E4 HT.81/01	Kap Steel Ltd., Bangalore	1.12.90.030
2.	E4 HT.49/P1	Bhoruka Steel Ltd.,	2,54,82,250
3.	E4 HT.46/p2/2	Andhra Steel Corporation, Bangalore-48	91,77,000
4.	HT - 26	G.M.Wheel & Axle Plant, Bangalore	2,52,01,795
5.	HT1 & 1A	Binny Ltd., Bangalore	5.20.155
6.	HT-2	Sona Synthetics Ltd., Kanakapura Tq.,	1,95,012
7.	DYHT-6	Nandini Food Products, Sonnappanahalli	5.23.698
8.	EA HT-2g/P2	Graphite India Ltd., Bangalore-48	2,09,308
9.	WIO HT6/P9/132	Brindavan Alloys Ltd., Bangalore-58	12,71,357
10.	W3 HT-2	Minerva Mills Magadi Road, Bangalore	34,03,919

11.	W3 HT -2	Mysore Spinning & Processing <fd. Bangalore	3,75,527
12.	DHTP-7	Karnataka Marologivsld Lyf.,	1,13,003
13.	S5 HT-25	United Glass & Bottles, Bangalore-61	66,685
14.	S5 HT-5	Khoday Brewing & Distilling Industries,	2,26,872
15.	IEHT-4/CPI	Nandi Re-rolling Mills, Bangalore-77	19,81,866
16.	S5 HT-5	Best & Crompton Engg. Ltd., 95,417	
17.	IEHT-5/CPT	Mysore Crystal Glass Industry	32,48,553
18.	AKLHT-63/7	Harsha Dense Back Pvt. Ltd.,	49,926
19.	AKLHT46/9	Harsha Wires Industries	1,29,491
20.	AKLHT-34/9	Muddereswara Overseas Traders Pvt. Ltd., 1,84,519	
21.	AKLHT-42/9	Hoysala Blow Moulders Pvt.Ltd.,	1,44,728
22.	AKLHT-35/9	Chamundi Granites Pvt.Ltd., 1,33,094	
23.	[illegible]	Panyam Cements & Minerals, Bangalore-69	5,13,162
24.	S2 HT-33/P1	Shuwal Steel Re-rolling Mills	2,43,799

25	SI-HT-20/P1	Stump[Schule & Somappa Ltd.,	2,17,660
26	AP-651	Saraswathi Iron Factory, Magadi Road	98,626
27.	HT 7	Garrison Engineers Projects	11,59,683
28.	Ht-7	Mysore Spinning & Manufacturing Mills	15,88,470
29.	HTP-4	Vasavadatta Cements, Sedam	56,40,552
30.	SGBHT.2	ACC Cements, Shahabad	88,36,074
31.	WDHT-2	-do- Wadi	1,00,13,096
32.	HTP-6	Sedam Cements	2,11,080
33.	HTP-1	Cement Corporation of India Ltd.,	15,68,965
34.	JHT-2/2/5	MIC., Jewargi	2,79,487
35.	GHTP-1	M.S.K. Mills Ltd., Gulbarga	8,31,410
36.	HT-522	Jai Bharat Khandasari Sugar Factory	1,91,096
37.	CTPHT-2	RadhaKrishna Khadasari Sugar Mill	3,46,824
38.	CTPHT-1	Kanashiya Khandasari Sugar Mill	2,63,255
39.	SDBHT-1	Hoysala Cements Pvt. Ltd., 8,72,904	

40.	HTR-3	Rajashree Cements, Malkhed	37,07,454
41.	HT7	Karnataka Steel Rolling Mill	1,22,530
42.	EHT-2	Bellary Steels & Alloys Pvt. Ltd., 2,13,975	
43.	MHT-3	Tungabhadra Pulp & Board Mills Ltd.,	1,24.557
44.	VHT-3	Sandoor Manganese & Iron Ore Ltd.,	13.37.44.557
45.	VHT-2	-do-	3,66,13.411
46.	HT-6	Saraswathi Industries Rice Mill	49,977
47.	KDKHT-1	Karnataka Rubber Ltd.,	2,56,763
48,	HT-22	Chamundeswari Steel Rolling Mill	8,66,587
49.	EHt-2	Bellary Steel & Alloys	2,13,975
50.	DHt-25	Davangere, Wire Rope Industry	4,29,250
51.	DHT15/21-13	Lakshmi Flour Mills (Under Correspondence)	3,71,871
52.	DHT-16 -do-	Chandrodaya Mills Pvt.Ltd.,	6,65,714
53.	DHT-10	Siddeswara Textile Mills Ltd.,	36,75,314

54.	DHT-6	Ganesh Textile Mills Ltd.,	38,72,445
55.	DHT-1	Davangere Cotton Mills Pvt.Ltd.,	39,60,279
56.	LKHT-1	Kwality Cements Ltd.,	9,.94,332
57.	AVP-3	Anjeneya Cotton Mills Pvt.Ltd.,	1,16,400
58.	P-245	Yellamma Cotton Woolen & Silks Mills	4,94,088
59.	KKP-4	The Chief Engg.Davangere Sugar Co.,	1,15,570
60.	HT-2	Modern Mills	22,41,355
61.	SCHT-2	Raghaji Cement Mfg. Co.,	1,52,501
62.	Ht-3	Indian Plywood Mfg. Co.,	1,32,538
63.	Ht-4	The Canara Ice and Cold Storage	1,31,019
64.	CHt-1	Jayalakshmi Textiles	6,81,921
65.	RMC-HT-5	Rayhans Minerals & Chemicals	7,33,118
66.	Ht-6	Naveen Machanist Construction	2,15,948
67.	Ht-7	Chinna Nachimuttu & Co.,	1,80,827
68.	Ht-3	Indian Ply-Wood Mfg. Co.Ltd.,	1,88,634

69.	HT-1	Ballarpur Industries Ltd.,	49,64,683
70.	HT-3(R)	Banaga Ice & Cold Stroage	1,89,918
71.	SGHT-2	Raghaji Cement Mfg.Co.,	5,47,166
72.	HT-3	Mahadev Textile Mills	2,06,83,478
73.	HT-1 .	Dandeli Steel & Ferro Alloys	1,70,37,882
74.	HHT-3 .	General Manager, Mysore Kirloskar Harihar	9,99,297
75.	HTHPF-1	Harihar Polyfibre & Kumadopetanam	26,73,814
76.	KAHT-1	Ramco Industries Ltd.,	53,256
77.	KAUHT-2	Sangam Solvent Extract	93,308
78.	DHT-12	Shaman Hirigappa & Sons, Floor Mills & Rice Mill, Davangere	51,083
79.	HT-45	Kudremukh Iron Ore Co.Ltd., Panambur	34,66,59,775
80.	HPTP-1	-do- Mudigere Taluk	88,69,13,228
81.	HT-7/P21	Mangalore Chemicals & Fertilizers, Panambur	2,50,97,360 2,43,54,292
82.	HT-6/P21	Canara Steel Ltd.,	3,96,651

83.	BCHT-1	V.I.S.L. Bhadravathi	50,14,93,513
84.	BCHT-1	Mysore Paper Mills	4,05,49,078
85.	BBP-1	V.I.S.L. Bhadravathi	1,04,538
86.	BP-7	V.I.S.L. Bhadravathi	75,988
87.	HT17/PT3006	A.J. Shetty & Co	2,53,908
88.	BCHT-8	Managing Director, Shimoga Carbides & Ferro Oils (P) Ltd.	9,52,918
89.	HT60/P21	Swalf Quality Casting Pvt. Ltd.,	1,43,390
90.	HT-69/P21	Madhura Polymers(P) Ltd.,	68,871
91.	HT-36/P21	Supreme Rubber Reclaimers	1.42.905
92.	HSP-3	Vasantha Industries, Khandasari Sugar & Jaggary Mfs.	5,15,888
93.	HT-4	Managing Director, D.K. Sugar Co., Ltd.,	96,179
94.	HT-17/2245	Maruthi Institute of Technology & Craft	80.458
95.	HT-2(a)	Welmelt Steel Cautnes(P) Ltd., Bangarpet	3,19,692

96.	HT-10	M.Doraiswamy, Khandasari Sugar Unit, Kangondalahalli	1,13,696
97.	THT-6	Shanthinatha Khandasari Sugar Co.,	95,368
98.	H7-1	B.E.M.L., K.G.F.,	58,09,933
99.	HTP-5	President, Tiptur Corporation, Tiptur	2,14,854
100.	CNHT-6	Hemavathi Cements	53,951
101.	HT-16	Mandya National Paper Mills, Belagola	1,36,626
102.	SHT-1	Annapurna Khandasari Sugar Mills	1,08,264
103.	HT-45	Shimoga Steels Ltd.,	66,40,533
104.	CHT-2	Velan Nstitutes(P) Ltd.	, 71,36,039
105.	HTP-1	Kadama Tea Estate, Kadamane	1,28,059
106.	HT-80	Kap Chemicals, Mysore	1.15,997
107.	KHLHT-1	Emgee Steel Wires Mfg.Co., Kalenahalli	74,800
108.	HTP-2	EE PWD, K.R. Sagar Divn., K.R.Sagar	61,986
109	HSP-95	Commissioner, City Municipal Council, Hassan	11,67.308

110	HTP-8	Manager INSAT MCT 005 Hassan	5,13,334
111.	HT-88	PWD, Minor Irrigation Divn., Mysore	1,43,821
112.	HT-103	Balaji Malleable & Allied Guy Iron Foundry	1,22,414
113.	HT-123	Chamundi Polymers(P) Ltd., Mysore	2,13,328
114.	HT-2	Suptndt, V.V. Water Works, Mysore	1,17,28,217
115.	Ht-18	Ideal Jawa (India) Pvt. Ltd.,	17,49,645
116.	HTP-9	Mandya Khandasari Sugar Works, Mandya	2,28,706
117.	Ht-44	Kasturi Paper Food Works	4,29,956
118.	Ht-2 P5 3	The Chairman, Co-op Spinning Mills, Bijapur	25,31,730
119.	HT-5 P5 2	Mysore Cotton Seeds, Near Railway Stn, Bijapur	12,97,340
120.	BNHT-2	The Banahatti Co-op Spinning Mill Ltd.,	44,00,448
121.	HTS-21	Belgaum Roller Floor Mill	2,87,342
122.	HTS-16	Indian Aluminium Co. Ltd.,	2,57,912

130	UGR HT-15	The Chairman, Neeravari Sangha Niyamit	3,00,513
131..	UGR HT-16	-do-	1,05,551
132.	GKKHT-4/6477	Chairman, Ghataprabha Sahakari Sakkare Kharkane	1,72,981
133.	HT-5	M.S. Talalulicar Carbides Pvt. Ltd., 86,474	
134.	LKHT-2	Kwality Cements(P) Ltd.,	9,94,333
135.	MDC HT-1	The Asst. Ex.Engr. MI Sub-Dn.,	5,85,132
136.	HTS-5	INDAL	7,10,98,717
137.	HTS-36	Indian Aluminium Co. Ltd.,	1,69,821

ಬೇಲೂರಿನಲ್ಲಿ ನ್ಯಾಯಾಲಯ ಪ್ರಾರಂಭಿಸುವ ಬಗ್ಗೆ.

3461- ನ್ಯಾಯಾಲಯ ಪ್ರಾರಂಭಿಸುವ ಬಗ್ಗೆ : ಮಾನ್ಯ ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರಿನಲ್ಲಿ ನ್ಯಾಯಾಲಯವನ್ನು ಈ ವರ್ಷವೇ ಪ್ರಾರಂಭಿಸಲಾಗುವುದೆಂದು ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿರುವುದು ನಿಜವೇ?

ಆ) ಈಗಾಗಲೇ ಜಿಲ್ಲಾ ನ್ಯಾಯಾಧೀಶರು ತಾತ್ಕಾಲಿಕವಾಗಿ ನ್ಯಾಯಾಲಯವನ್ನು ಪ್ರಾರಂಭಿಸಲು ಕಟ್ಟಡಗಳ ಪರಿಶೀಲನೆ ನಡೆಸಿ ವರದಿ ಕಳಿಸಿರುವುದು ನಿಜವೇ?

ಇ) ಹಾಗಿದ್ದಲ್ಲಿ ಬೇಲೂರಿನಲ್ಲಿ ಈಗ ನ್ಯಾಯಾಲಯನ್ನು ಪ್ರಾರಂಭ ಮಾಡುವಿರಾ ಎಂದಿನಿಂದ ಕಾರ್ಯಗತ ಗೊಳಿಸುವಿರಿ?

ಶ್ರೀ ಬ್ಲೀಸಿಯಸ್ ಎಂ ಡಿಸೋಜ (ಕಾನೂನು ಸಚಿವರು) :

ಅ) ಹೌದು

ಆ) ಹೌದು.

ಇ) ಸೂಕ್ತ ಕಟ್ಟಡ ದೊರೆತ ಮೇಲೆ ಹಾಗೂ ರಾಜ್ಯದ ಸಂಪನ್ಮೂಲಗಳನ್ನು ಅನುಸರಿಸಿ ನ್ಯಾಯಾಲಯವನ್ನು ಪ್ರಾರಂಭಿಸಲಾಗುವುದು.

ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಅಧ್ಯಕ್ಷರು : ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು, 31ನೇ ಪಟ್ಟಿ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಇಂದು ಸದನದಲ್ಲಿ ಲಿಖಿತ ಮೂಲಕ ಉತ್ತರಿಸಬೇಕಾಗಿದ್ದ 331ನೇ ಪಟ್ಟಿಯಲ್ಲಿರುವ 126 ಪ್ರಶ್ನೆಗಳ ಪೈಕಿ 0099 ಚುಕ್ ಗುರುತಿಲ್ಲದ ಪಶ್ನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನ.

ಚಿತ್ತಾಪುರ ತಾಲ್ಲೂಕಿನಲ್ಲಿ ಬಸ್ ಡಿಪೋಗಳನ್ನು ತೆರೆಯುವುದು.

3351 - ಶ್ರೀ ಬಾಬುರಾವ್ ಚಿಂಚನ ಸೂರ್, (ಚಿತ್ತಾಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ತಾಪುರ ತಾಲ್ಲೂಕಿಗೆ ಬಸ್ ಡಿಪೋ ಮಂಜೂರಾತಿ ದೊರೆತು ವರ್ಷವಾದರೂ ಕೂಡ ಯಾವ ವಿಧವಾದ ಕೆಲಸಕಾರ್ಯಗಳು ಪ್ರಾರಂಭವಾಗಿಲ್ಲದಿರಲು ಕಾರಣವೇನು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :

ಅ) ಇಲ್ಲಿಯವರೆಗೆ ಜಮೀನನ್ನು ಸ್ವಾಧೀನಪಡಿಸಿ ಕೊಂಡಿರುವುದಿಲ್ಲ.

ಆ) ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಸಮಿತಿಯ ಬೇಕಾದ ಹಣವನ್ನು ಬಿಡುಗಡೆ ಮಾಡಿರುವುದಿಲ್ಲ.

ಮೈಸೂರು ನಗರದಲ್ಲಿ ನೂತನ ಡಿಪೋಗಳ ಬಗ್ಗೆ.

3406 - ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ) : ಮಾನ್ಯ ಸಾರಿಗೆ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ನೂತನವಾಗಿ ಪ್ರಾರಂಭಿಸಲು ಉದ್ದೇಶಿಸಲಾಗಿರುವ ಡಿಪೋಗಳ ಸಂಖ್ಯೆ ಎಷ್ಟು?

ಆ) ಇವುಗಳನ್ನು ನಗರದ ಯಾವ ಯಾವ ಸ್ಥಳಗಳಲ್ಲಿ ಪ್ರಾರಂಭಿಸಲಾಗುವುದು?

ಇ) ಇವುಗಳಿಗೆ ತಗಲುವ ಅಂದಾಜು ವೆಚ್ಚವೆಷ್ಟು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು)

ಅ) ಒಂದು ಅಧಿಕ ಡಿಪ್ಪೋ

ಆ) ಕರ್ನಾಟಕ ಇಂಡಸ್ಟ್ರೀಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಲೇಔಟ್.

ಇ) 60 ಲಕ್ಷ ರೂ. ಗಳ ವೆಚ್ಚದ ಅಂದಾಜು ಮಾಡಲಾಗಿದೆ.

ಸೂಪಾ ತಾಲ್ಲೋಕಿನಲ್ಲಿ ಕರ್ನಾಟಕ ವಿದ್ಯುತ್ ಮಂಡಲಿಯ ಉಪವಿಭಾಗ ಪ್ರಾರಂಭ.

3448 - ಶ್ರೀ ಪ್ರಭಾಕರ್ ಎನ್. ರಾಣೆ.(ಕಾರವಾರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೂಪಾ ತಾಲ್ಲೂಕಿನಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಉಪವಿಭಾಗಕ್ಕೆ ತಾಲ್ಲೂಕು ವಿದ್ಯುತ್ ಪೂರೈಕೆ ಅಸ್ತವ್ಯಸ್ತ ಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ತಾಲ್ಲೂಕಿನ ಅನೇಕ ಹಳ್ಳಿಗಳಲ್ಲಿ ತಿಂಗಳುಗಟಚ್ಚಲೆ ಹಾಗೂ ಕೆಲವು ಹಳ್ಳಿಗಳಲ್ಲಿ ವರ್ಷಗಟ್ಟಲೆ ವಿದ್ಯುತ್ ಪೂರೈಕೆ ಸ್ಥಗಿತಗೊಂಡಿರುವುದರಿಂದ ಜನರಿಗ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಕಾಳಿ ಜಲ ವಿದ್ಯುತ್ ಯೋಜನೆಯಿಂದ ರಾಜ್ಯಕ್ಕೆ ವಿದ್ಯುತ್ ನೀಡಲು ತನ್ನ ಸರ್ವಸ್ವವನ್ನು ತ್ಯಾಗ ಮಾಡಿದ ಸೂಪಾ ತಾಲ್ಲೂಕಿನ ಜನರಿಗೆ ವ್ಯವಸ್ಥಿತವಾದದ ರೀತಿಯಲ್ಲಿ ವಿದ್ಯುತ್ ಪೂರೈಕೆ ಮಾಡಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಉಪ ವಿಭಾಗವನ್ನು ಪ್ರಾರಂಭಿಸುವುದು ಅವಶ್ಯವೆಂದು ಸರ್ಕಾರ ಭಾವಿಸುವುದಿಲ್ಲವೇ?

ಈ) ಹಾಗಿದ್ದರೆ ಸೂಪಾ ತಾಲ್ಲೂಕಿನ ಕೇಂದ್ರ ಸ್ಥಳವಾದ ಜೊಯಡಾದಲ್ಲಿ ವಿದ್ಯುತ್ ಮಂಡಳಿಯ ಉಪವಿಭಾಗವನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು)

ಅ) ವಿದ್ಯುತ್ ಪೂರಕೈಯು ಅಸ್ತವ್ಯಸ್ಥಗೊಂಡಿರುವ ಬಗ್ಗೆ ಯಾವ ದೂರುಗಳು ಗಮನಕ್ಕೆ ಬಂದಿಲ್ಲ ಹಾಲಿ ದಾಂಡೇಲಿಯಲ್ಲಿರುರ ಕ.ವಿ.ಮಂಡಳಿಯ ಉಪ ವಿಭಾಗವು ಸೂಪಾ ತಾಲ್ಲೂಕಿಲ್ಲಿ ವಿದ್ಯುಚ್ಛಕ್ತಿ ಸರಬರಾಜು ಸುಗಮವಾಗಿರುವಂತೆ ಮೇಲ್ವಿಚಾರಣೆ ನಡೆಸುತ್ತಿದೆ.

ಆ) ವಿದ್ಯುತ್ ಪೂರೈಕೆಸ್ಥಗಿತಗೊಂಡಿರುವ ಬಗ್ಗೆ ಯಾವುದೇ ಮಾಹಿತಿಯು ಮಂಡಳಿಗೆ ಬಂದಿರುವುದಿಲ್ಲ.

ಇ) ಸೂಪಾದಲ್ಲಿ ತಾಲ್ಲೂಕಿನ ಹಾಲಿಕೇಂದ್ರ ಸ್ಥಳವಾದ ಜೊಯದಾದಲ್ಲಿ ಒಂದು ಶಾಖಾ ಕಛೇರಿಯನ್ನು ಪ್ರಾರಂಭಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಈ) ಸೂಪಾ ತಾಲ್ಲೂಕಿನಲ್ಲಿ ವಿದ್ಯುತ್ ಪೂರೈಕೆಯು ಸುಗಮವಾಗಿಸಲು ತಾಲ್ಲೂಕಿನ ಕೇಂದ್ರ ಸ್ಥಳವಾದ ಜೊತೆದಾದರಲ್ಲಿ ಶಾಖಾ ಕಛೇರಿಯನ್ನು ತೆರೆಯುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಕಪ್ಪು ಹಲಗೆ ಯೋಜನೆಯಡಿಯಲ್ಲಿ ನಿರ್ಮಿಸಲಿರುವ ಕೊಠಡಿಗಳ ಸಂಖ್ಯೆ.

3354 - ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಪ್ಪುಹಲಗೆ ಯೋಜನೆಯಡಿಯಲ್ಲಿ ಎಷ್ಟು ಶಾಲಾ ಕೊಠಡಿಗಳನ್ನು ನಿರ್ಮಿಸಲು ಸರ್ಕಾರ ಉದ್ದೇಶಿಸಿದೆ.

ಆ) ಇದುವರೆವಿಗೂ ಎಷ್ಟು ಕಟ್ಟಡಗಳು ಪೂರ್ಣವಾಗಿ ಶಾಲೆಯ ವಶಕ್ಕೆ ಬಂದಿದೆ?

ಇ) ಖಾಲಿ ಇರುವ ಶಿಕ್ಷಕರ ಹುದ್ದೆಗಳಲ್ಲಿ ಇದುವರೆವಿಗೂ ಭರ್ತಿ ಮಾಡಲಾದ ಹುದ್ದೆಗಳೇಷ್ಟು?

ಅ) ಕಪ್ಪು ಹಲಗೆ ಯೋಜನೆಯಡಿಯಲ್ಲಿ ಈ ಕೆಳಕಂಡ ಶಾಲಾ ಕೊಠಡಿಗಳನ್ನು ನಿರ್ಮಿಸಲು ಸರ್ಕಾರವು ಉದ್ದೇಶಿಸಿದೆ.

ಹಂತ	ಮಂಜೂರಾದ ಶಾಲಾ ಕೊಠಡಿಗಳು.
1ನೇ ಹಂತ (87-88)	2,260
2ನೇ ಹಂತ (88-89)	6,094
3ನೇ ಹಂತ (89-90)	3,438
4ನೇ ಹಂತ (90-91)	6,761
ಒಟ್ಟು	18,553

ಆ) ಇದುವರೆವಿಗೂ ಪೂರ್ಣಗೊಂಡು ಶಿಕ್ಷಣ ಇಲಾಖೆಯ ವಶಕ್ಕೆಬಂದಿರುವ ಶಾಲಾ ಕೊಠಡಿಗಳ ಸಂಖ್ಯೆ

1ನೇ ಹಂತ	-1,643
2ನೇ ಹಂತ	-2,654
3ನೇ ಹಂತ	-915
ಒಟ್ಟು	5,212

ಇ) ಈ ಯೋಜನೆಯಡಿಯಲ್ಲಿ ಸೃಡಿಸಲಾದ ಮತ್ತು ಭರ್ತಿ ಮಾಡಲಾದ ಶಿಕ್ಷಕರ ಹುದ್ದೆಗಳ ವಿವಗಳು,

	ಸೃಜಿಸಲಾದ ಹುದ್ದೆಗಳು	ಭರ್ತಿಮಾಡಲಾದ ಹುದ್ದೆಗಳು
1ನೇ ಹಂತ	1611	1611
2ನೇಹಂತ	5003	5003
3ನೇ ಹಂತ	2712	
4ನೇ ಹಂತ	4597	6614
ಒಟ್ಟು	13,923	6614

ಹಾಸನದಿಂದ ಬೊಂಬಾಯಿಗೆ ಬಸ್ಸ್ ಓಡಿಸುವುದು.

3427 - ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಸಿಟಿಯಿಂದ ಬೊಂಬಾಯಿಗೆ ಒಂದು ಲಕ್ಷುರಿ ಬಸ್ಸನ್ನು ಓಡಿಸಲು ಕೆ.ಎಸ್.ಆರ್.ಟಿ.ಸಿಯವರು ಕಾರ್ಯಕ್ರಮ ಹಾಕಿಕೊಂಡಿರುವುದು ನಿಜವೇ?

ಆ) ಹಾಗಿದಲ್ಲಿ ಈ ಬಸ್ಸನ್ ಯಾವ ತಾರೀಖಿನಿಂದ ಓಡಿಸಲಾಗುವುದು.

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು)

ಅ) ಶ್ರವಣಬೆಳೆಗೊಳದಿಂದ ಬೊಂಬಾಯಿಗೆ ಮತ್ತು ಒಂದಕ್ಕೆ ಸಾರಿಗೆ ಸೌಲಭ್ಯವನ್ನು ಪ್ರಾರಂಭಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಆ) ಅಂತರ ರಾಜ್ಯದ ಒಪ್ಪಂದವು ಮುಗಿದ ನಂತರ ಸಾರಿಗೆ ಸೇವೆಯನ್ನು ಪ್ರಾರಂಭಿಸಲಾಗುವುದ.

ಮುಳಬಾಗಿಲು ತಾಲ್ಲೂಕಿಗೆ ವಿದ್ಯುತ್ ಲೈನುಗಳು.

3287 - ಶ್ರೀ ಎಂ.ಡಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವುರೆ?

ಅ) ಮುಳಬಾಗಿಲು ತಾಲ್ಲೂಕಿಗೆ 66 ಕೆ.ವಿ. ವಿದ್ಯುಚ್ಛಕ್ತಿ ಲೈನನ್ನು 1991 ಮಾರ್ಚಿ 31 ರೊಳಗೆ ಪೂರ್ತಿಮಡಿ ವಿದ್ಯುಚ್ಛಕ್ತಿ ಒದಗಿಸುವುದಾಗಿ ವಿಧಾನಸಭೆಯಲ್ಲಿ ಆಶ್ವಾಸನೆ ಕೊಡಲಾಗಿದೆಯೆ?

ಆ) ಹಾಗಿದ್ದಲ್ಲಿ, ಇದುವರಿಗೂ 66ಕೆ.ವಿ.ವಿದ್ಯುಚ್ಛಕ್ತಿ ಒದಗಿಸದಿರುವುದಕ್ಕೆ ಕಾರಣಗಳೇನು?

ಇ) ಈ ರೀತಿಯ ವಿಳಂಭಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಕಾರಣರಾಗಿದ್ದಲ್ಲಿ ಅವರು ಮೇಲೆ ಕಾನೂನು ರೀತ್ಯ ಕ್ರಮ ಕೈಗೊಳ್ಳುವರೆ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು):

ಅ) ಹೌದು.

ಆ) ಕೋಲಾರದಿಂದ ಮುಳಬಾಗಿಲಿಗೆ 66 ಕೆ.ವಿ. ವಿದ್ಯುತ್ ಲೈನಿಗೆ ನಿರ್ಮಾಣ ಕಾರ್ಯವನ್ನು ಮಾರ್ಚಿ 1991ರ ವೇಳೆಗೆ ಪೂರ್ಣಗೊಳಿಸಲು ಯೋಜಿಸಿತ್ತು. ಆದರೆ ಸಾಮಾಗ್ರಿಗಳ ಕೊರತೆಯಿಂದಾಗಿ ಈ ಕಾರ್ಯವನ್ನು ಪೂರ್ಣಗೊಳಿಸುವಲ್ಲಿ ಸ್ವಲ್ಪ ವಿಳಂಭ ಉಂಟಾಯಿತು.ಜೂನ್ 1991ರಲ್ಲಿ ಸದರಿ ವಿದ್ಯುತ್ ಲೈನಿನ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ.

ಇ) ವಿಳಂಬಕ್ಕೆ ಅಧಿಕಾರಿಗಳು ಕಾರಣರಲ್ಲ ಹೀಗಾಗಿ ಅವರ ಮೇಲೆ ಕಾನೂನು ರೀತ್ಯ ಕ್ರಮವನ್ನು ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಮೂಡಿಗೆರೆ ಕ್ಷೇತ್ರದಲ್ಲಿ ಪ್ರಾಂಶುಪಾಲರ ಹುದ್ದೆಗಳು ಖಾಲಿ

3288 - ಶ್ರೀಮತಿ ಮೋಟಮ್ಮ (ಮೂಡುಗೆರೆ) : ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆ ವಿಧಾನ ಸಭೆ ಕ್ಷೇತ್ರಕ್ಕೆ ಸೇರಿದ ಆಲ್ದೂರು, ಬಣಕಲ್, ಕಳಸಾ, ಮೂಡಿಗೆರೆ ಜೂನಿಯರ್ ಕಾಲೇಜಿನಲ್ಲಿ ಪ್ರಾಂಶುಪಾಲರ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಸರ್ಕಾರ ಎಲ್ಲಿಯವರೆವಿಗೂ ಆ ಹುದ್ದೆಗಳನ್ನು ಭರ್ತಿ ಮಾಡದೆ ಇರಲು ಕಾರಣವೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅ) ಗಮನಕ್ಕೆ ಬಂದಿದೆ.

ಆ) ಭರ್ತಿ ಮಾಡಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗಿದೆ.

ಯೋಗ ಶಿಕ್ಷಣವನ್ನು ಶಾಲ ಪಠ್ಯಪುಸ್ತಕದಲ್ಲಿ ಅಳವಡಿಸುವುದು.

3298 -ಶ್ರೀ ಎಸ್. ಪ್ರಭಾಕರ ರಾಣೆ (ಕಾರವಾರ) : ಮಾನ್ಯ ಶಿಕ್ಷಣ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಪ್ರೌಢಶಾಲಾ ಶಿಕ್ಷಣದಿಂದ ಶಾಲಾಪಠ್ಯ ಕ್ರಮದಲ್ಲಿ ಯೋಗ ಶಿಕ್ಷಣ ಅಳವಡಿಸುವುದು ಯಾರ ಹಂತದಲ್ಲಿದೆ.
2. ಎಷ್ಟು ಜನ ದೈಹಿಕ ಶಿಕ್ಷಕರಿಗೆ ಅದರ ತರಭೇತಿ ನೀಡಲಾಗಿದೆ.
3. ಇಲ್ಲದಿದ್ದರೆ ತರಬೇತಿ ನೀಡಲು ವಿಳಂಬ ವೇಕೆ ಮಾಡಲಾಗಿದೆ.
4. ಅನಾವಶ್ಯಕ ವೆಚ್ಚ ಕಡಿಮೆ ಮಾಡಿ ಹಂತವಾಗಿ ದೈಹಿಕ ಶಿಕ್ಷಕರಿಗೆ ತರಭೇತಿ ನೀಡಲು ಯಾಕೆ ಕ್ರಮ ತೆಗೆದುಕೊಳ್ಳಬಾರದು.
5. ಈ ವರ್ಷದಲ್ಲಿ ಈ ಯೋಜನೆ ಜಾರಿ ಮಾಡಲು ಸಾಧ್ಯವೇ?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು)

1. ಪರಿಶೀಲನೆಯಲ್ಲಿದೆ.

2. ಉದ್ಭವಿಸುವುದಿಲ್ಲ.

3. ಈ ಬಗ್ಗೆ ತರಭೇತಿ ನೀಡಲು ಒಂದು ಸಮನ್ವಯ ಸಮಿತಿ ರಚಿಸಿದೆ. ಈ ಸಮಿತಿಯುವರದಿಯಂತೆ ದೈಹಿಕ ಶಿಕ್ಷಣ ಶಿಕ್ಷಕರಿಗೆ ತರಬೇತಿ ನೀಡಲುತಗಲುವ ವೆಚ್ಚಕ್ಕಾಗಿ ಹಣ ಮಂಜೂರು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿದ್ದು ಸರ್ಕಾರವು ಪರಿಶೀಲಿಸುತ್ತಿದೆ

4. ಪರಿಶೀಲಿಸಲಾಗುವುದು

5. ಪರಿಶೀಲಿಸಲಾಗುವುದು.

ಕಾಪುಕ್ಷೇತ್ರದ ಪದುಬೆಳೆಯಲ್ಲಿ ವಿದ್ಯುತ್ ಪವರ್ ಸ್ಟೇಷನ್ ನಿರ್ಮಾಣ

3307 - ಶ್ರೀ ವಸಂತ ಸಾಲಿಯಾನ್ (ಕಾಪು) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕಾಪು ಕ್ಷೇತ್ರದ ಪದುಬೆಳೆಯಲ್ಲಿ ಕರ್ನಾಟಕ ವಿದ್ಯುತ್ ಮಂಡಳಿ ಸ್ಥಾಪಿಸಲು ಉದ್ದೇಶಿಸಿದ ಪವರ್ ಸ್ಟೇಷನ್, ನ ಕಾರ್ಯ ಯಾವ ಹಂತದಲ್ಲಿದೆ?

ಆ) ಅದರ ವಿಳಂಬಕ್ಕೆ ಕಾರಣವೇನು?

ಇ) ಆ ಕುರಿತು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಕಾಪು ಕ್ಷೇತ್ರದ ಪದುಬೆಳೆ ಎಂಬ ಸ್ಥಳದಲ್ಲಿ ವಿದ್ಯುತ್‌ಉಪ ಕೇಂದ್ರದ ನಿರ್ಮಾಣದ ಪ್ರಸ್ತಾವನೆಯು ಸಧ್ಯಕ್ಕಿರುವುದಿಲ್ಲ.

ಆ) 'ಅ' ಉಪ ಪ್ರಶ್ನೆಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ದ.ಕನ್ನಡ ಜಿಲ್ಲೆಯಲ್ಲಿ ಆಂಗ್ಲ ಭಾಷೆಯ ಶಾಲೆಗಳ ಬಗ್ಗೆ

3447 - ಶ್ರೀ ವಿಜಯಕುಮಾರ ಶೆಟ್ಟಿ (ಸುರತ್ಕಲ್) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೂತನ ಇಂಗ್ಲೀಷ್ ಮಾಧ್ಯಮ ಶಾಲೆಗಳ ಪ್ರಾರಂಭಕ್ಕೆ ಅನುಮತಿ ಕೋರಿ ಸರ್ಕಾರಕ್ಕೆ ಎಷ್ಟು ಅರ್ಜಿಗಳು ಬಂದಿವೆ:

ಆ) ಆ ಬಗ್ಗೆ ಸರ್ಕಾರ ಶೀಘ್ರ ಕ್ರಮ ಕೈಗೊಳ್ಳುವುದೇ;

ಇ) ಕನ್ನಡ ಮಾಧ್ಯಮ ಕಡ್ಡಾಯವಾಗುವಂತೇ ದಕ್ಷಿಣ ಕನ್ನಡ ಜಿಲ್ಲೆಗೆ ವಿನಾಯತಿ ನೀಡಲಾಗುವುದೇ ?

ಅ)

	ಅರ್ಜಿಗಳ ಸಂಖ್ಯೆ
ಪ್ರಾಥಮಿಕ ಶಾಲೆಗೆ	- 32
ಪ್ರೌಢ ಶಾಲೆಗೆ	- 07

ಆ) ಆಂಗ್ಲ ಮಾಧ್ಯಮ ಶಾಲೆಗಳ ಸಮಸ್ಯೆ ಬಗ್ಗೆ ಸರ್ಕಾರವು ತಜ್ಞರ ಸಮಿತಿಯ ವರದಿಯನ್ನು ಪಡೆದಿದೆ. ಅದನ್ನು ಪರಿಶೀಲಿಸಲಾಗುತ್ತಿದೆ.

ಇ) ಇಲ್ಲ.

ಕಳೆದ ವರ್ಷ ಅಪಘಾತಕ್ಕೀಡಾದ ರಸ್ತೆ ಸಾರಿಗೆ ಬಸ್ಸುಗಳ ಸಂಖ್ಯೆ

3361 - ಶ್ರೀ ಪಿ.ಸಿ. ಸಿದ್ದನಗೌಡರು (ಕಲಘಟಗಿ) : ಮಾನ್ಯ ಸಾರಿಗೆ ಸಚಿವರು. ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಕಳೆದ ವರ್ಷ ಅಪಘಾತಕ್ಕೀಡಾದ ರಸ್ತೆ ಸಾರಿಗೆ ಬಸ್ಸುಗಳ ಸಂಖ್ಯೆ ಎಷ್ಟು ? ಹಾಗೂ ಗಲಭೆಗಳಿಂದ ಸುಟ್ಟ ಬಸ್ಸುಗಳ ಸಂಖ್ಯೆ ಎಷ್ಟು ?

ಆ) ಅಪಘಾತದಲ್ಲಿ ಸಿಕ್ಕಿದ ಪ್ರಯಾಣಿಕರಿಗೆ ಕಳೆದ ವರ್ಷ ನೀಡಿದ ಪರಿಹಾರದ ಹಣ ಎಷ್ಟು ?

ಇ) ಚಾಲಕರು ಪಾನಮತ್ತರಾಗಿ ವಾಹನ ಚಾಲನೆ ಮಾಡುತ್ತಿರುವುದರಿಂದ ಅಪಘಾತಗಳ ಸಂಖ್ಯೆ ಹೆಚ್ಚುತ್ತಿರುವುದನ್ನು ಸರ್ಕಾರವು ಗಮನಿಸಿದೆಯೇ ?

ಈ) ಹಾಗಿದ್ದಲ್ಲಿ ಸರ್ಕಾರ ಇದನ್ನು ತಡೆ ಗಟ್ಟಲು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು)

ಅ) 2277 ವಾಹನಗಳು ಅಪಘಾತಕ್ಕೀಡಾಗಿರುತ್ತವೆ ಮತ್ತು 8 ವಾಹನಗಳು ಸುಡಲ್ಪಟ್ಟಿವೆ.

ಆ) 438.58 ಲಕ್ಷ ರೂಗಳು.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಕಲಘಟಗಿಯಲ್ಲಿ ಸರ್ಕಾರಿ ಪದವಿ ಕಾಲೇಜನ್ನು ಪ್ರಾರಂಭಿಸುವ ವಿಚಾರ

3313 - ಶ್ರೀ ಪಿ.ಸಿ. ಸಿದ್ದನಗೌಡ (ಕಲಘಟಗಿ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯುವಿಟ್ಟು ಉತ್ತರಿಸುವರೇ

ಅ) ಧಾರವಾಡ ಜಿಲ್ಲೆಯ ಕಲಘಟಗಿಯಲ್ಲಿ ಸರ್ಕಾರಿ ಪದವಿ ಕಾಲೇಜನ್ನು ಪ್ರಾರಂಭಿಸುವ ವಿಚಾರ ಸರ್ಕಾರದ . ಪರಿಶೀಲನೆಯಲ್ಲಿದೆಯೇ ?

ಆ) ಇದ್ದಲ್ಲಿ ಯಾವಾಗ ಪದವಿ ಕಾಲೇಜನ್ನು ಪ್ರಾರಂಭಿಸಲಾಗುವುದು ?

ಶ್ರೀ ಎಂ ವೀರಪ್ಪ ಮೋಯಿಲಿ - (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು)

ಅ) ಈ ವಿಷಯದಲ್ಲಿ ಯಾವುದೇ ಪ್ರಸ್ತಾವನೆಗಳು ಸರ್ಕಾರಕ್ಕೆ ಬಂದಿರುವುದಿಲ್ಲ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸಿಬ್ಬಂದಿ ಸಂಖ್ಯೆ

3315 -ಶ್ರೀ ಪಿ.ಸಿ. ಸಿದ್ದನಗೌಡ (ಕಲಘಟಾಗಿ) :ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂಧಿ ವರ್ಗದ ಸಂಖ್ಯೆ ಎಷ್ಟು? (ವಿವಿಧ ವರ್ಗದ ನೌಕರರ ಬಗ್ಗೆ ಪ್ರತ್ಯೇಕ ವಿವರಗಳನ್ನು ನೀಡುವುದು.

ಆ) ಇವರುಗಳಿಗೆ ಸಂಬಳ ಮತ್ತು ಇತರ ಭತ್ಯೆಗಳಿಗಾಗಿ ಪ್ರತೀ ವರ್ಷ ವೆಚ್ಚವಾಗುತ್ತಿರುವ ಹಣ ಎಷ್ಟು?

ಇ) ರಾಜ್ಯ ಸಾರಿಗೆ ಸಂಸ್ಥೆಯಲ್ಲಿ ಬೇನಾಮಿ ನೌಕರರು ಕೆಲಸ ನಿರ್ವಹಿಸುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ?

ಈ) ಹಾಗಿದ್ದಲಿ ಇದುವರೆಗೂ ಅಂತಹ ಎಷ್ಟು ಜನರು ಈ ಪ್ರಕರಣದಲ್ಲಿ ಸಿಕ್ಕಿದ್ದಾರೆ

ಉ) ಸರ್ಕಾರ ಆ ರೀತಿಯ ಬೇನಾಮಿ ನೌಕರರುಗಳನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು)

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ 55,445 (ಖಾಯಂ) ಕಾರ್ಯ ನಿರ್ವಹಿಸುತ್ತಿದ್ದಾರೆ. ವಿವಿಧ ವರ್ಗಗಳಲ್ಲಿ ಕೆಲಸ ಮಾಡುತ್ತಿರುವ ನೌಕರರು ವಿವರ ಈ ಕೆಳಕಂಡಂತಿದೆ.

ವರ್ಗ	ಕಾರ್ಯನಿರ್ವಾಹಿಸುತ್ತಿರುವ ಸಿಬಂದ್ಧಿ ಸಂಖ್ಯೆ
ದರ್ಜೆ-1	226
ದರ್ಜೆ-2	232
ದರ್ಜೆ-3	47,296
ದರ್ಜೆ-4	7.691
ಒಟ್ಟು	55,445

ಆ) 1989-90 ಒಟ್ಟು 149,24 ಕೋಟಿ ರೂ.ಗಳನ್ನು ನೌಕರರಿಗೆ ಸಂಬಳ ಮತ್ತು ಭತ್ಯೆ ಗಳಿಗಾಗಿ ಕೊಡಲಾಗಿದೆ.

ಇ) ಗಮನಿಸಿದೆ.

ಈ) ಒರ್ವ ವ್ಯಕ್ತಿ ಪ್ರಕರಣದಲ್ಲಿ ಸಿಲುಕಿದ್ದಾರೆ.

ಉ) ಸಂಸ್ಥೆಯ ಭದ್ರತಾ ಮತ್ತು ಜಾಗ್ರತಾಧಿಕಾರಿ ಇಲಾಖೆಯ ವಿಭಾಗ ಅಧೀಕಾರಿಗಳಿಗೆ ಹಾಗೂ ಭದ್ರತಾ ನೀರಿಕ್ಷಕರುಗಳಿಗೆ ಈ ಬಗ್ಗೆ ನೀಗಾವಹಿಸಿ ಅಂತಹ ಪ್ರಕರಣಗಳನ್ನು ಸಂಸ್ಥೆಯ ಗಮನಕ್ಕೆ ತಂದು ಸಂಭಂದಪಟ್ಟವರ ಮೇಲೆ ವರದಿಗಳನ್ನು ಕೊಡಲು ಆದೇಶಿಸಿದೆ.

ಹುಬ್ಬಳ್ಳಿ -ಧಾರವಾಡದಲ್ಲಿ ಮಹಿಳಾ ಪದವಿ ಕಾಲೇಜುಗಳ ಪ್ರಾರಂಭ.

3314 - ಶ್ರೀ ಪಿ. ಸಿ. ಸಿದ್ದಗೌಡ (ಕಲಘಟಗಿ): ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ ಧಾರವಾಡ ನಗರದಲ್ಲಿ ಮಹಿಳಾ ಪದವಿ ಕಾಲೇಜುಗಳನ್ನು ಪ್ರಾರಂಭಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೆ?*

ಆ) *ಹಾಗಿದ್ದಲ್ಲಿ ಯಾವಾಗ ಈ ಕಾಲೇಜುಗಳನ್ನು ಪ್ರಾರಂಭಿಸಲಾಗುವುದು?*

ಇ) *ಸರ್ಕಾರದ ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಯಾವುದಾದರೂ ಯೋಜನಗಳನ್ನು ರೂಪಿಸಿದೆಯೇ?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ಈ ದಿಶೆಯಲ್ಲಿ ಯಾವುದೇ ಪ್ರಸ್ತಾವನೆಗಳು ಸರ್ಕಾರಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಸಕಲೇಶಪುರ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ

3353 - ಶ್ರೀ ಬಿ. ಆರ್. ಗುರುದೇವ (ಸಕಲೇಶಪುರ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಕಲೇಶಪುರ ಪಟ್ಟಣದಲ್ಲಿ ಒಂದೇ ಕಟ್ಟಡದಲ್ಲಿ ಸರ್ಕಾರಿ ಪ್ರೌಢಶಾಲೆ, ಕಿರಿಯ ಕಾಲೇಜು ಮತ್ತು ಪ್ರಥಮ ದರ್ಜೆ ಕಾಲೇಜಿನ ತರಗತಿಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

ಆ) *ಸದರಿ ಕಟ್ಟಡವು ತುಂಬಾ ಚಿಕ್ಕದಾಗಿದ್ದು ಮತ್ತು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದದೆಯೇ?*

ಇ) *ಹಾಗಿದ್ದಲ್ಲಿ ಪ್ರತ್ಯೇಕವಾದ ಪ್ರಥಮ ದರ್ಜೆ ಕಾಲೇಜಿನ ಕಟ್ಟಡವನ್ನು ಕಟ್ಟಿಸಲು ಸರ್ಕಾರವು ಜರೂರು ಕ್ರಮ ಕೈಗೊಳ್ಳುವುದೇ?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳು ಸಚಿವರು) :

ಅ) ಬಂದಿದೆ.

ಆ)ಬಂದಿದೆ.

ಇ) 1991-92ನೇ ಸಾಲಿಗೆ ಈ ಕಾಲೇಜಿನ ಕಟ್ಟಡಕ್ಕಾಗಿ ರೂ. 6.20 ಲಕ್ಷ ಹಣ ಒದಗಿಸಲಾಗಿದೆ. ಇದಕ್ಕೆ ಸಂಬಂಧಪಟ್ಟ ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಆಲೂರು ಮತ್ತು ಸಕಲೇಶಪುರಕ್ಕೆ ವಿದ್ಯುತ್ ಸರಬರಾಜು ಅಡಚಣೆ.

3345 - ಶ್ರೀ ಬಿ. ಆರ್. ಗುರುದೇವ(ಸಕಲೇಶಪುರ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಆಲೂರು ಮತ್ತು ಸಕಲೇಶಪುರ ತಾಲ್ಲೂಕುಗಳು ಮಲೆನಾಡು ಪ್ರದೇಶಗಳಲ್ಲಿದ್ದು ಮಳೆಗಾಲದಲ್ಲಿ ವಿದ್ಯುತ್ ಕಂಬಗಳು ಹಾನಿಗೊಳಗಾಗಿ ಸುಮಾರು 3-4 ತಿಂಗಳುಗಳ ಕಾಲ ವಿದ್ಯುತ್ ಸರಬರಾಜು ಇಲ್ಲದಿರುವುದು ಸರ್ಕಾರದ*

ಆ) ಹಾಗಿದ್ದಲ್ಲಿ, ಈ ಅನಾನುಕೂಲತೆಗಳನ್ನು ನಿವಾರಿಸಲು ಸರ್ಕಾರವು ಪರ್ಯಾಯ ಯೋಜನೆ ಮಾಡಿದೆಯೇ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಹೌದು. ಗಮನಕ್ಕೆ ಬಂದಿದೆ.

ಆ) ಆಲೂರು ತಾಲ್ಲೂಕಿನಲ್ಲಿ ಮಳೆಗಾಲದಲ್ಲಿ ಹಾನಿಗೊಳಗಾಗಿದ್ದ ಎಲ್ಲಾ ಕಂಬಗಳನ್ನು ಬದಲಾಯಿಸಲಾಗಿದ್ದು, ವಿದ್ಯುತ್ ಸರಬರಾಜನ್ನು ಪುನರ್ ವ್ಯವಸ್ಥೆಗೊಳಿಸಲಾಗಿದೆ. ಸಕಲೇಶಪುರ ತಾಲ್ಲೂಕಿನಲ್ಲಿ ಕೆಲವೇ ಕೆಲವು ಕಂಬಗಳನ್ನು ಬದಲಾಯಿಸಬೇಕಾಗಿದ್ದು, ಆದಷ್ಟು ಜಾಗ್ರತೆ ಈ ಕೆಲಸವನ್ನು ಪೂರ್ಣಗೊಳಿಸಲಾಗುವುದು.

ಸಕಲೇಶಪುರ ಹೊಸದಾಗಿ ಮುನ್ಸೀಫ್ ಕೋರ್ಟ್ ಕಟ್ಟಡ ನಿರ್ಮಾಣ

3352 - ಶ್ರೀ ಬಿ. ಆರ್. ಗುರುದೇವ (ಸಕಲೇಶಪುರ) : ಮಾನ್ಯ ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಕಲೇಶಪುರ ಪಟ್ಟಣದಲ್ಲಿರುವ ಮುನ್ಸೀಫ್ ಕೋರ್ಟಿಗೆ ಸ್ವಂತ ಕಟ್ಟಡವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಹೊಸದಾಗಿ ಕಟ್ಟಡ ನಿರ್ಮಾಣ ಮಾಡುವ ಯೋಜನೆ ಸರ್ಕಾರಕ್ಕಿದೆಯೇ?*

ಶ್ರೀ ಬ್ಲೇಸಿಯಸ್ ಎಂ. ಡಿಸೋಜ(ಕಾನೂನು ಸಚಿವರು) :

ಅ) ಹೌದು.

ಆ) ಸದ್ಯಕ್ಕೆ ಸರ್ಕಾರದ ಹತ್ತಿರ ಸಕಲೇಶಪುರದಲ್ಲಿ ಹೊಸ ಕೋರ್ಟ್ ಕಟ್ಟಡವನ್ನು ಕಟ್ಟಲು ಯಾವ ಪ್ರಸ್ತಾವನೆಯು ಇಲ್ಲ.

ಕರ್ನಾಟಕ ರಾಜ್ಯದಲ್ಲಿ ಗ್ರಾಹಕರಿಂದ ಬರಬೇಕಾದ ವಿದ್ಯುಚ್ಛಕ್ತಿ ಬಾಕಿ ಹಣ

3349 -ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕರ್ನಾಟಕ ರಾಜ್ಯದಲ್ಲಿ ಗ್ರಾಹಕರಿಂದ ಸರ್ಕಾರಕ್ಕೆ ಬರಬೇಕಾದ ವಿದ್ಯುಚ್ಛಕ್ತಿ ಬಾಕಿ ಹಣ ಎಷ್ಟು?*

ಆ) *ಇದರಲ್ಲಿ ಕೈಗಾರಿಕಾ ವಿಭಾಗದಿಂದ ಮತ್ತು ರೈತರ ಕಡೆಯಿಂದ ಬರಬೇಕಾದ ಬಾಕಿ ಹಣ ಎಷ್ಟು?*

ಶ್ರೀ ಎಂ ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು)

ಅ) 1991 ರ ಮಾರ್ಚ್ ಅಂತ್ಯದವರೆಗಿರುವಂತೆ ಡಿಮ್ಯಾಂಡ್ ವಸೂಲಿ ಮತ್ತು ಬಾಕಿ ತಃಖ್ತೆ ಪ್ರಕಾರ ಎಲ್ಲಾ ಬಾಬುಗಳಿಂದ ಮಾರ್ಚ ಡಿಮಾಂಡು ಸೇರಿ 433.94 ಕೋಟಿ ರೂಪಾಯಿಗಳ ವಿದ್ಯುಚ್ಛಕ್ತಿ ಬಾಕಿಯಿರುತ್ತದೆ.

ಆ) 1991 ರ ಮಾರ್ಚ್ ತಿಂಗಳ ಅಂತ್ಯಕ್ಕೆ ಎಲ್ಲಾ ವಿಧವಾದ ಕೈಗಾರಿಕೆಗಳಿಂದ 215.23 ಕೋಟಿ ರೂಪಾಯಿಗಳು ಮತ್ತು ರೈತರಿಂದ ಪಂಪುಸೆಟ್ಟುಗಳ ವಿದ್ಯುಚ್ಛಕ್ತಿ ಬಾಕಿ ಹಣ 52.63 ಕೋಟಿ ರೂಪಾಯಿಗಳು.

ಯಲ್ಲಾಪುರ ಮತ್ತು ಜೋಯಿಡಾದಲ್ಲಿ ಬಸ್ ನಿಲ್ದಾಣಗಳ ಬಗ್ಗೆ ನಿರ್ಮಾಣ

3453 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಟ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ಮತ್ತು ಜೋಯಿಡಾದಲ್ಲಿ ಬಸ್ ನಿಲ್ದಾಣಗಳನ್ನು ನಿರ್ಮಿಸಲು ಅಗತ್ಯವಿರುವ ಜಾಗವನ್ನು ಸರ್ಕಾರದವರು ತೆಗೆದುಕೊಂಡಿರುರುದು ನಿಜವಲ್ಲವೆ?

ಆ) ಹಾಗಿದ್ದಲ್ಲಿ ಆ ಜಾಗವನ್ನು ಯಾವಾಗ ತೆಗೆದುಕೊಳ್ಳಲಾಯಿತು?

ಇ) ಆ ಜಾಗವನ್ನು ತೆಗೆದುಕೊಂಡು ಹಲವಾರು ತಿಂಗಳುಗಳಾದರೂ ಇದುವರೆವಿಗೂ ಬಸ್ ನಿಲ್ದಾಣದ ನಿರ್ಮಾಣ ಕಾರ್ಯವನ್ನು ಪ್ರಾರಂಬಿಸದಿರಲು ಕಾರಣಗಳೇನು?

ಈ) ಸಾರ್ವಜನಿಕರ ಅನುಕೂಲವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಆದಷ್ಟು ಬೇಗನೆ ಮೇಲ್ಕಂಡ ಎರಡು ಸ್ಥಳಗಳಲ್ಲಿ ಬಸ್‌ನಿಲ್ದಾಣವನ್ನು ನಿರ್ಮಿಸುವ ಬಗ್ಗೆ ಕ್ರಮ ಕೈಗೊಳ್ಳುತ್ತದೆಯೆ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು)

ಅ) ನಿಜ

ಆ) ಯಲ್ಲಾಪುರದಲ್ಲಿ ದಿನಾಂಕ 16-11-66ರಲ್ಲಿ ಜೋಯಿಡಾದಲ್ಲಿ ದಿನಾಂಕ 23-8-89ರಲ್ಲಿ ನಿವೇಶನವನ್ನು ಪಡೆಯಲಾಯಿತು.

ಇ) 1) ಯಲ್ಲಾಪುರದಲ್ಲಿ ಈಗಾಗಲೆ ಬಸ್ ನಿಲ್ದಾಣ ನಿರ್ಮಿಸಲಾಗಿದ್ದು ಸಾರ್ವಜನಿಕರಿಂದ ಉಪಯೋಗಿಸಲಾಗುತ್ತಿದೆ.

2) ಆರ್ಥಿಕ ಮುಗ್ಗಟ್ಟಿನಿಂದಾಗಿ ಜೋಯಿಡಾದಲ್ಲಿ ನಿರ್ಮಿಸಲಾಗಿಲ್ಲ

ಈ) ಜೋಯಾಡದಲ್ಲಿ ನಿರ್ಮಾಣ ಕಾರ್ಯವನ್ನು 91-92ರಲ್ಲಿ ಕೈಗೊಳ್ಳಲಾಗುವುದು

ಹಳಿಯಾಳ ಮತ್ತು ಅಂಕೋಲಾ ಬಸ್ ನಿಲ್ದಾಣಗಳ ಬಗ್ಗೆ

3451 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಟ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಮತ್ತು ಅಂಕೋಲಾ ಬಸ್ ನಿಲ್ದಾಣಗಳಿಗೆ ಕವರ್ಡ್ ಅಕಾಮಡೇಶನ್ ಮಂಜೂರಾಗಿರುವುದು ನಿಜವಲ್ಲವೆ?

ಆ) ಹಾಗಿದ್ದಲ್ಲಿ ಇದರ ನಿರ್ಮಾಣ ಕೆಲಸಕ್ಕಾಗಿ ಎಂದು ಟೆಂಡರ್ ಕರೆಯಗಾಗಿತ್ತು?

ಇ) ಇದುವರೆವಿಗೂ ಇದರ ಕೆಲಸವನ್ನು ಪೂರ್ಣಗೊಳಿಸದಿರಲು ಕಾರಣಗಳೇನು?

ಈ) ಸರ್ಕಾರ ಈ ಕೂಡಲೇ ನಿರ್ಮಾಣ ಕೆಲಸವನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು)

ಅ) ನಿಜ

ಆ) ಹಳಿಯಾಳಕ್ಕೆ ದಿನಾಂಕ 29-6-88 ರಂದು ಮತ್ತು ಅಂಕೋಲಾಕ್ಕೆ ದಿನಾಂಕ 26-5-88ರಂದು ಹಾಗೂ 27-8-88ರಂದು ಟೆಂಡರ್ ಕರೆಯಲಾಗತ್ತು.

ಇ) ನಿಗಧಿಪಡಿಸಿದ ಗುತ್ತಿಗೆದಾರರು ಕೆಲಸ ಪ್ರಾರಂಭಿಸಲು ವಿಫಲವಾದ ಕಾರಣ

ಈ) ಪುನಃ ಟೆಂಡರ್ ಕರೆಯಲು ಕ್ರಮ ಕೈಗೊಳ್ಳಳಾಗುತ್ತಿದೆ.

ಹಳಿಯಾಳ ಮುಂಡಗೋಡ ಮತ್ತು ಯಲ್ಲಾಪುರಗಳಲ್ಲಿರುವ ಮಜರೇಗಳನ್ನು ವಿದ್ಯಾದ್ದೀಕರಣ ಮಾಡುವುದು

3455 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಮುಂಡಗೋಡ ಮತ್ತು ಯಲ್ಲಾಪುರ ತಾಲ್ಲೂಕುಗಳಲ್ಲಿ ಮಜರ್‌ಗಳ ಸಂಖ್ಯೆ ಎಷ್ಟು? (ಪ್ಯಾಮ್ಲೇಟ್)
ಆ) ಈ ಮಾಜರ್‌ಗಳಲ್ಲಿ ಇದುವರೆವಿಗೂ ಎಷ್ಟಕ್ಕೆ ವಿದ್ಯುದ್ದೀಕರಣ ಮಾಡಲಾಗಿದೆ. (ಮಜರ್‌ಗಳ ಹೆಸರುಗಳ ಬಗ್ಗೆ ತಾಲ್ಲೂಕುವಾರು ವಿವರಗಳನ್ನು ನೀಡುವುದು)
ಇ) 1990-91 ಮತ್ತು 1991-92 ನೇ ಸಾಲಿನಲ್ಲಿ ಮೇಲ್ಕಂಡ 3 ತಾಲ್ಲೂಕುಗಳಲ್ಲಿ ಎಷ್ಟು ಮಜರ್‌ಗಳಿಗೆ ವಿದ್ಯುದ್ದೀಕರಣ ಮಾಡುವ ಗುರಿ ಹೊಂದಲಾಗಿದೆ.
ಈ) ಜಿಲ್ಲೆಯಿಂದಲೇ ವಿದ್ಯುತ್ ಉತ್ಪಾದನೆ ಮಾಡುತ್ತಿರುವಾಗ (ಕಾಳಿ ಪ್ರಾಜೆಕ್ಟ್ ವಿದ್ಯುದ್ದೀಕರಣ ಮಾಡುವ ವಿಚಾರದ ಬಗ್ಗೆ ಸರ್ಕಾರ ಪರಿಶೀಸುತ್ತದೆಯೇ?

ಶ್ರೀ ಎಂ ರಾಮಪ್ಪ (ಇಂಧನ ರಾಜ್ಯ ಸಚಿವರು)

ಅ)

ವಿವರಗಳು ಕೆಳಕಂಡಂತ್ತಿದೆ

ತಾಲ್ಲೂಕಿನ ಹೆಸರು	ಜನವಸತಿ ಇರುವ ಮಜರ್‌ಗಳ ಸಂಖ್ಯೆ	ಜನವಸತಿ ಇಲ್ಲದ ಮಜರ್‌ಗಳ ಸಂಖ್ಯೆ
ಹುಳಿಯಾಳ	18	2
ಮುಂಡಗೋಡ	45	4
ಯಲ್ಲಾಪುರ	513	-

ಆ) ಆಗಸ್ಟ್ 91 ರ ಅಂತ್ಯದಲ್ಲಿರುವಂತೆ ವಿದ್ಯುದ್ದೀಕರಣವಾಗಿರುವ ಮಜರ್‌ಗಳ ಸಂಖ್ಯೆಗಳ ವಿವರಗಳು ಕೆಳಕಂಡಂತಿದೆ.

ತಾಲ್ಲೂಕು	ವಿದ್ಯುದ್ದೀಕರಣವಾಗಿರುವ ಮಜರ್‌ಗಳ ಸಂಖ್ಯೆ
ಹಳಿಯಾಳ	11
ಮುಂಡಗೋಡ	17
ಯಲ್ಲಾಪುರ	285

ಮಜರ್‌ಗಳ ಹೆಸರುಗಳ ವಿವರಗಳನ್ನು ಸಂಗ್ರಹಿಸಲಾಗುತ್ತಿದ್ದು ಆದಷ್ಟು ಜಾಗ್ರತೆ ಒದಗಿಸಲಾಗುವುದು.

ಇ) 1990-91ನೇ ಸಾಲಿನಲ್ಲಿ ಈ ಮೂರು ತಾಲ್ಲೂಕುಗಳಲ್ಲಿ ಮಜರ್‌ಗಳ ವಿದ್ಯುದ್ದೀಕರಣೆ ಗುರಿಯನ್ನು ನಿಗಧಿಪಡಿಸಿರಲಿಲ್ಲ ಆದಾಗ್ಯೂ ಹಳಿಯಾಳ ತಾಲ್ಲೂಕಿನಲ್ಲಿ ಮೂರು ಮುಂಡಗೋಡ್ ತಾಲ್ಲೂಕಿನಲ್ಲಿ ಎರಡು ಮತ್ತು ಯಲ್ಲಾಪುರ ತಾಲ್ಲೂಕಿನಲ್ಲಿ ಒಂದು ಒಟ್ಟು ಆರು ಮಜರ್‌ಗಳನ್ನು ವಿದ್ಯುದ್ದೀಕರಿಸಲಾಯಿತು. 1991-92ನೇ ಸಾಲಿನಲ್ಲಿಯೂ ಸಹ ಈ ಮೂರು ತಾಲ್ಲೂಕುಗಳಲ್ಲಿ ಮಜರ್‌ಗಳ ವಿದ್ಯುದ್ದೀಕರಣಕ್ಕೆ ಗುರಿಯನ್ನು ನಿಗಧಿಪಡಿಸಿಲ್ಲ. ಆದಾಗ್ಯೂ ಈ ವರ್ಷ ಆಗಸ್ಟ್ 91ರ ಅಂತ್ಯದವರೆಗೆ ಯಲ್ಲಾಪುರ ತಾಲ್ಲೂಕಿನಲ್ಲಿ ಒಂದು ಮಜರ್‌ಅನ್ನು ವಿದ್ಯುದ್ದೀಕರಿಸಲಾಗಿದೆ.

ಈ) ಈ ಜಿಲ್ಲೆಯಲ್ಲಿ ವಿದ್ಯುದ್ದೀಕರಣವಾಗಲೇ ಉಳಿದಿರುವ ಮಜರ್‌ಗಳನ್ನು ಮಂಡಳಿಗೆ ಲಭ್ಯವಿರುವ ಆರ್ಥಿಕ ಸಂಪನ್ಮೂಲಕ್ಕನು ಗುಣವಾಗಿ ಹಂತ ಹಂತವಾಗಿ ವಿದ್ಯುದ್ದೀಕರಿಸಲು ಮಂಡಳಿಯು ಉದ್ದೇಶಿಸಿದೆ.

ರಾಜ್ಯದಲ್ಲಿರುವ ಸಂಜೆ ಕಾಲೇಜುಗಳ ಸಂಖ್ಯೆ

3302 - ಶ್ರೀ ಎಸ್. ರುದ್ರಪ್ಪ : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಂಜೆ ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಈ ಪೈಕಿ ಸರ್ಕಾರಿ ಕಾಲೇಜುಗಳೆಷ್ಟು ಮತ್ತು ಖಾಸಗಿ ಕಾಲೇಜುಗಳೆಷ್ಟು?

ಇ) ಸಂಜೆ ಕಾಲೇಜುಗಳಲ್ಲಿರುವ ಡಿಪ್ಲೋಮಾ ಇಂಜಿನಿಯರಿಂಗ್ ಮತ್ತು ಸ್ನಾತಕೋತ್ತರ ಪದವಿಗಳ ಕಾಲೇಜುಗಳ ಸಂಖ್ಯೆ ಎಷ್ಟು?

ಈ) ಈ ಪೈಕಿ ಸರ್ಕಾರಿ ಮತ್ತು ಖಾಸಗಿ ಕಾಲೇಜುಗಳಾವುವು (ವಿವರ ನೀಡುವುದು)

ಅ) ಇಂಜಿನಿಯರಿಂಗ್

ಆ) ಪಾಲಿಟೆಕ್ನಿಕ್

ಇ) ಪ್ರಥಮ ದರ್ಜೆ ಕಾಲೇಜುಗಳು

ಒಟ್ಟು

ಉ) ಬಿ. ಟೆಕ್ ಟೆಕ್ನಾಲಜಿ ಸಂಜೆ ಕಾಲೇಜು ರಾಜ್ಯದಲ್ಲಿ ಇರುವುದೆ : ಇಲ್ಲದಿದ್ದಲ್ಲಿ ಸಂಜೆ ಕಾಲೇಜು ತೆರೆಯಲು ಸರ್ಕಾರ ಉದ್ದೇಶಿಸಲಾಗಿದೆಯೇ? (ವಿವರಗಳನ್ನು ನೀಡುವುದು)

ಊ) ಶ್ರೀ ಕೃಷ್ಣರಾಜೇಂದ್ರ ಸಿಲ್ವರ್ ಜ್ಯೂಬಿಲಿ ಟೆಕ್ನಾಲಜಿಕಲ್ ಇನ್‌ಸ್ಟಿಟ್ಯೂಟ್ (ಸರ್ಕಾರಿ) ಕಾಲೇಜಿನಲ್ಲಿ ಸಂಜೆ ಬಿ. ಟೆಕ್ ಪದವಿ ಕಾಲೇಜು ಪ್ರಾರಂಭಿಸಲು ಸರ್ಕಾರಕ್ಕೆ ಮನವಿ ಬಂದಿದೆಯೇ?

ಋ)ಹಾಗಿದ್ದಲ್ಲಿ 91-92ನೇ ಸಾಲಿನಲ್ಲಿ ಪ್ರಾರಂಭಿಸಲಾಗುವುದೇ ಹಾಗೂ ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :

ಅ) 19 ಪ್ರಥಮ ದರ್ಜೆ ಕಾಲೇಜುಗಳು

ಆ) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು .. ಇಲ್ಲ

ಖಾಸಗಿ ಪ್ರಥಮ ದರ್ಜೆ ಕಾಲೇಜುಗಳು ...19

ಇ) ಡಿಪ್ಲೋಮಾ ..5

ಇಂಜಿನಿಯರಿಂಗ್ ಕಾಲೇಜುಗಳು ..4

ಸ್ನಾತಕೋತ್ತರ ಸಂಜೆ ಕಾಲೇಜುಗಳು. ಇಲ್ಲ

ಈ)

ಸರ್ಕಾರಿ	ಖಾಸಗಿ ಅನುದಾನಿತ	ಖಾಸಗಿ ಅನುದಾನ ರಹಿತ	ಒಟ್ಟು
1	2	1	4
1	1	3	5
-	8	13	19
2	9	17	28

(ವಿವರಗಳನ್ನು ಅನುಬಂಧದಲ್ಲಿ ನೀಡಿದೆ)

ಉ) ಇಲ್ಲ.

ಊ) ಬಂದಿದೆ.

ಋ) 1991-92ನೇ ಸಾಲಿನಿಂದ ಈ ಕೋರ್ಸ್‌ನ್ನು ಪ್ರಾರಂಭಿಸಲು ಸರ್ಕಾರವು ಉದ್ದೇಶಿಸಿರುವುದಿಲ್ಲ.

ANNEXURE

I. Engineering Colleges

a) Government /University/Regional College (Degree Level)

1) University Visveswaraya Evening College off Engg., Bangalore

b) Private Aided Evening Engineering Colleges

1) The National Institute of Engineering,Mysore

2) B.M. Srinivasaian College of Engineering,Bangalore.

c) Private Un-aided Engineering Colleges

1) Sri Jayachamarajendra College of Engineering, Mysore.

II. Polytechnics (Diploma Level)

a) Government polytechnics

1) S.J. (Evening) Polytechnic, Bangalore.

b) Private Aided Polytechnics

1) M.E.I. Evening Polytechnic, Bangalore

c) Private Un-aided Polytechnics

1) Nadgir Polytechnic, Bangalore

2) KHK (Evening) Institute of Engineering, Dharwar

3) The State Govt. Employees Co- Education Society Ltd Polytechnic, Tarihal, Hubli, Dharwar District.

III. First Grade Colleges

a) Aided First Grade Evening Colleges

1) Acharya Patashala Evening College, Bangalore

2) St. Joseph's Evening College, Bangalore

3) V.V. Puram Evening College, Bangalore

4) Municipal Evening College, Chikkaballapur, Kolar District

5) Poornaprajna Evening College, Udupi, Dakshina Kannada Dt.

6) St. Akoysius College (Evening), Mangalore.

b) Un-aided First Grade Evening Colleges

1) Vijaya Evening College, Bangalore

2) Dr. Ambedkar Evening College, Bangalore

3) Dayananda Evening College, Bangalore
4) Sheshadripuram Evening College, Bangalore
5) BES Evening College, Bangalore
6) Vasavi Javapeeta Evening College, Bangalore
7) D. Banumaian's Evening College, Mysore
8) PES Evening College, Mandya
9) DVS Evening College, Shimoga
10) National Evening College, Shimoga
11) SJM Evening College, Chitradurga
12) Basant Evening College, Mangalore
13) Sri Ujjayani Jagadguru Siddeshawara Evening College, Bellary.

ಗುಲ್ಬರ್ಗಾ ಜಿಲ್ಲೆಯಲ್ಲಿ ಪ್ರೌಢ ಶಾಲೆಗಳಲ್ಲಿ ಶಿಕ್ಷಕರ ಕೊರತೆ.

3357 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸರಕಾರದ ಪ್ರೌಢಶಾಲೆಗಳು 90 ಇದ್ದು ಇದರಲ್ಲಿ 40 ಶಾಲೆಗಳಲ್ಲಿ ವಿಜ್ಞಾನ ಶಿಕ್ಷಕರು ಇಲ್ಲದೆ ಹಾಗೂ ಅಂತರ ಜಿಲ್ಲಾ ವರ್ಗಾವಣೆ ಹಾಗೂ ನಿವೃತ್ತಿಯಾಗಿರುವುದರಿಂದ ಸುಮಾರು 100 ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, ಬೋಧನೆಗೆ ತೊಂದರೆಯಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಈ ಜಿಲ್ಲೆಯಲ್ಲಿ 20 ಪ್ರೌಢಶಾಲೆಗಳು ಹೊಸದಾಗಿ ಪ್ರಾರಂಭ ಮಾಡಿ ಅಲ್ಲಿನ ಮುಖ್ಯ ಗುರುಗಳು ಹಾಗೂ ಸಹ ಶಿಕ್ಷಕರ ನೇಮಕಾತಿ ವ್ಯವಸ್ಥೆ ಮಾಡಲಾಗಿದೆಯೇ?

ಇ) ಶಿಕ್ಷಕರ ಕೊರತೆ ಇದ್ದದರಲ್ಲಿಯೇ ಎರವಲು ಸೇವೆಯ ಮೇಲೆ ಈ ಪ್ರೌಢಶಾಲೆಗಳಿಗೆ ಶಿಕ್ಷಕರನ್ನು ಕಳಿಸಿದರೆ ಮೂಲ ಶಾಲೆಯಲ್ಲಿ ಕೊರತೆಯಾಗಿ ಭೋಧನಾ ಮಟ್ಟ ಕುಸಿಯುವುದಿಲ್ಲವೆ?

ಈ) ಈ ಪ್ರಕಾರ ಮೊದಲನೇ ಪ್ರೌಢಶಾಲೆಗಳಿಗಾಗಿ ಹಾಗೂ ನೂತನ ಪ್ರೌಢಶಾಲೆಗಳಿಗಾಗಿ ಕೊರತೆ ಇರುವ ಶಿಕ್ಷಕರ ವ್ಯವಸ್ಥೆ ಮಾಡಿ ಎಂದಿನಿಂದ ಶಿಕ್ಷಣ ಮಟ್ಟ ಪ್ರಗತಿಗೊಳಿಸುವುದು?

ಉ) ಸೇಡಂ ತಾಲ್ಲೂಕಿನ ಪ್ರೌಢಶಾಲೆಗೆ ಇಂಟರ್ ಕಮ್ಯುನಿಕೇಶನ್ ಸೌಂಡ್ ಬಾಕ್ಸ್ (ಅಂತರಸಂಪರ್ಕ ಶಬ್ದ ಪೆಟ್ಟಿಗೆ) ತಂದು ಇಲ್ಲಿಯವರೆಗೆ ಜೋಡಣೆ ಮಾಡಿಲ್ಲವೇಕೆ ಹಾಗೂ ವರ್ಷಾನುಗಟ್ಟಲೇ ಉಪಯೋಗಿಸದೇ ಇದ್ದರೆ ಈ ಪೆಟ್ಟಿಗೆ ಕೆಡುವುದಿಲ್ಲವೆ? ಇದನ್ನು ಎಂದಿನಿಂದ ಜೋಡಿಸಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣಾ ಮತ್ತು ಸಂಸದೀಯ ವ್ಯವಹಾರಗಳು ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿದೆ. ಸದ್ಯಕ್ಕೆ ಹೆಚ್ಚುವರಿ ಶಿಕ್ಷಕರಿರುವ ಶಾಲೆಗಳಿಂದ ಶಿಕ್ಷಕರನ್ನು ನಿಯೋಜನೆ ಸರಿಹೊಂದಿಸಲಾಗಿದೆ.

ಆ) ಹೊಸದಾಗಿ ಪ್ರಾರಂಭವಾದ 20 ಸರ್ಕಾರಿ ಪ್ರೌಢಶಾಲೆಗಳಿಗೆ ಸಿಬ್ಬಂದಿ ಸಂಖ್ಯೆ

ತೆಗೆದುಕೊಳ್ಳಲಾಗುತ್ತಿದ್ದು ಸದ್ಯಕ್ಕೆ ಸ್ಥಳೀಯ ಪ್ರಾಥಮಿಕ ಶಾಲೆಗಳಲ್ಲಿರುವ ಪದವೀಧರ ಉಪಾಧ್ಯಾಯರಿಂದ ಪಾಠಪ್ರವಚನಗಳನ್ನು ಮಾಡಿಸಲಾಗುತ್ತಿದೆ. ಮುಖ್ಯೋಪಾಧ್ಯಾಯರ ಹುದ್ದೆಗಳನ್ನು ಸದ್ಯಕ್ಕೆ ತಾತ್ಕಾಲಿಕ ನಿಯೋಜನೆಯ ಮೇರೆಗೆ ಸದ್ಯದಲ್ಲಿಯೇ ತುಂಬಲಾಗುವುದು.

ಇ) ಹೆಚ್ಚುವರಿ ಶಿಕ್ಷಕರಿರುವ ಶಾಲೆಗಳಿಂದ ಮಾತ್ರ ನಿಯೋಜನೆ ಮಾಡಲಾಗುತ್ತಿದೆ. ಮೂಲ ಶಾಲೆಗಳಲ್ಲಿನ ಶಿಕ್ಷಕರಿಗೆ ಹೆಚ್ಚಿನ ಅವಧಿಯಲ್ಲಿ ಪಾಠಪ್ರವಚನ ನಡೆಸಲು ಸೂಚಿಸಲಾಗಿದೆ. ಶಿಕ್ಷಕರ ಕೊರತೆ ಇದ್ದರೂ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳಲಾಗಿದೆ.

ಈ) ಖಾಲಿ ಹುದ್ದೆಗಳಲ್ಲಿ ಶೇ. 40 ರಷ್ಟನ್ನು ಮಿತ ವೇತನ ಪದವೀಧರರಿಂದ ಭರ್ತಿ ಮಾಡಲು ವಿಭಾಗ ಮಟ್ಟದಲ್ಲಿ ಈಗಾಗಲೇ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಬಾಕಿ ಉಳಿಯುವ ಎಲ್ಲಾ ಖಾಲಿ ಹುದ್ದೆಗಳನ್ನು ನೇರ ನೇಮಕಾತಿಯಿಂದ ತುಂಬಲು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಲು ಕ್ರಮತೆಗೆದುಕೊಳ್ಳಲಾಗುತ್ತಿದೆ. ತಿದ್ದುಪಡಿ ನಂತರ ಹುದ್ದೆಗಳನ್ನು ತುಂಬಲಾಗುವುದು.

ಉ) ಸದರಿ ಇಂಟರ್ ಕಮ್ಯುನಿಕೇಶನ್ ಸೌಂಡ್ ಬಾಕ್ಸ್‌ಗೆ ವೈರಿಂಗ್ ಆಗಿರುವುದಿಲ್ಲ. ರೀ ವೈರಿಂಗ್ ಮಾಡಿಲಸು ಹಾಗೂ ಈ ವಿದ್ಯುತ್ ಸಾಧನಕ್ಕೆ ಅಗತ್ಯವಿರುವ ವಿದ್ಯುಚಕ್ತಿ ಉಪಯೋಗಿಸಲು ಶಾಲೆಗೆ ನಿಗದಿಪಡಿಸಿರುವ ಸಾವಿರಾರು ಹಣ ಸಾಕಾಗುವುದಿಲ್ಲ. ಈ ಸಾದನಕ್ಕೆ ಆಗಾದ ಖರ್ಚು (ವಿದ್ಯುಚಕ್ತಿ ಬಿಲ್) ಬರುತ್ತದೆಯಾದ್ದರಿಂದ ವೈರಿಂಗ್ ಹಾಗು ವಿದ್ಯುತ್ ಬಿಲ್‌ನ ಖರ್ಚನ್ನು ಗುಲ್ಬರ್ಗಾ ವಿಭಾಗ ಸಹ ನಿರ್ದೇಶಕರ ಕಛೇರಿಯ ನಿಧಿಯಿಂದಲೇ ಉಪಯೋಗಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ. ಇದನ್ನು ಉಪಯೋಗಿಸಿ ಪೂರ್ತಿ ಪ್ರಯೋಜನವನ್ನು ಪಡೆಯಲಾಗಿದೆ.

ಸೇಡಂ ಬಸ್ ನಿಲ್ದಾಣದಲ್ಲಿಯ ಶೌಚಾಲಯ ಸರಿಪಡಿಸುವುದು

3430 - ಶ್ರೀ ಬಸಶಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೋಕಿನ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣದಲ್ಲಿರುವ ಶೌಚಾಲಯ ಸರಿಪಡಿಸಲಾಗದ ಕಾರಣ ಮಹಿಳಾ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮವೇನು ?

ಇ) ಈಗಲಾದರೂ ವಿಳಂಬ ಮಾಡದೆ ಮಹಿಳಾ ಪ್ರಯಾಣಿಕರಿಗೆ ತೊಂದರೆಯಾಗದಂತೆ ಸೌಲಭ್ಯ ಒದಗಿಸಲಾಗುವುದೇ ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :

ಅ) ಹೌದು.

ಆ) ಜರೂರು ರಿಪೇರಿ ಮಾಡಲು ಆದೇಶಿಸಲಾಗಿದೆ.

ಇ) ರಿಪೇರಿ ಮಾಡಿದ ನಂತರ ಸಮಸ್ಯೆ ಉದ್ಭವಿಸುವುದಿಲ್ಲ.

ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಆಂಧ್ರಗಡಿ ಪ್ರಾಂತ್ಯದಲ್ಲಿ ಪ್ರಾಥಮಿಕ ಶಾಲೆಗಳ ಮಂಜೂರಾತಿ

3429 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ಆಂಧ್ರ ಗಡಿ ಪ್ರಾಂತ್ಯದಲ್ಲಿರುವ ಲಂಬಾಣಿ ತಾಂಡಗಳಲ್ಲಿ ಪ್ರಾಥಮಿಕ ಶಾಲೆಗಳ ಮಂಜೂರಿಗಾಗಿ ಪತ್ರದ ದಿನಾಂಕ 14-7-91ರ ಮೇಲೆ ಮಾನ್ಯ ಶಿಕ್ಷಣ ಸಚಿವರು ಆದೇಶ ನೀಡಿದ್ದು ಇಲ್ಲಿಯವರೆಗೆ ಯಾವ ಕ್ರಮ ತೆಗೆದುಕೊಳ್ಳದಿರಲು ಕಾರಣವೇನು?

ಆ) ಸೇಡಂ ತಾಲ್ಲೂಕಿನ ಮೇಡಕ್ ಲಂಬಾಣಿ ತಾಂಡಾ ಪಿಲ್ಲಿಗುಂಡ್ಲ ಬೊಂದೆಂಪಲ್ಲಿ ಸಮೀಪ ವೆಂಕಟಾಪುರ ತಾಂಡಾ ಆಂಧ್ರ ಗಡಿ ಪ್ರಾಂತ್ಯದಲ್ಲಿದ್ದು, ನೆರೆ ರಾಜ್ಯದಲ್ಲಿ ಅಭಿವೃದ್ಧಿಯಂತೆ ನಮ್ಮ ರಾಜ್ಯದಲ್ಲಿ ಅಭಿವೃದ್ಧಿಯಾಗಿಲ್ಲವೆಂಬ ಭಾವನೆ ಬರುವುದಿಲ್ಲವೆ?

ಇ) ಶಿಕ್ಷಣ ಸಚಿವರು ಮಾಡಿರುವ ಆದೇಶವನ್ನು ಇಲಾಖೆಯವರು ವಿಳಂಬಗೊಳಿಸಲು ಕಾರಣವೇನು?

ಈ) ಈ ಶಾಲೆಗಳ ಮಂಜೂರಿಗಾಗಿ ಸಹಾಯಕ ಶಿಕ್ಷಣಾಧಿಕಾರಿ ಸೇಡಂ ಇವರು ಶಿಫಾರಸ್ಸು ಸಹ ಮಾಡಿದ್ದು ಇಲ್ಲಿಯವರೆಗೆ ಏಕೆ ಕ್ರಮ ಕೈಗೊಂಡಿಲ್ಲ.

ಉ) ಈ ಗಡಿ ಪ್ರಾಂತ್ಯದ ಮೇಡಕ್ ಲಂಬಾಣಿ ತಾಂಡಾ ಪಿಲ್ಲಿಗುಂಡ್ಲ ತಾಂಡಾ ಬೊಂದೆಪಲ್ಲಿ ಸಮೀಪ ವೆಂಕಟಾಪುರ ತಾಂಡಗಳಲ್ಲದೆ ಚಿತ್ತಾಪುರ್ ತಾಲ್ಲೂಕಿನ ಬೆಳಗಾಂ ಸಣ್ಣ ತಾಂಡಾ (ಸೇಡಂ ಕ್ಷೇತ್ರ)ದ ಬಗ್ಗೆ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಇವರ ಪತ್ರದ ಪ್ರಕಾರ ಇಲ್ಲಿಯವರೆಗೆ ಈ ತಾಂಡಾಗಳ ಬಗ್ಗೆ ಕ್ರಮ ಕೈಗೊಂಡಿಲ್ಲ ಏಕೆ?

ಊ) ಈಗಲಾದರೂ ಹೈದ್ರಾಬಾದ್ ಕರ್ನಾಟಕ ಗುಲ್ಬರ್ಗ ಜಿಲ್ಲೆಯಲ್ಲಿಯೇ ಹಿಂದುಳಿದ ಪ್ರದೇಶವಾದ ಸೇಡಂ ಮತಕ್ಷೇತ್ರದ ಮೇಲಿನ ಪ್ರಾಥಮಿಕ ಶಾಲೆಗಳಿಗೆ ಮಂಜೂರು ನೀಡಿ ಶೈಕ್ಷಣಿಕ ಅಭಿವೃದ್ಧಿ ಮಾಡಲಾಗುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :

ಅ) 1991-92ನೇ ಸಾಲಿನಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲು ಗುಲ್ಬರ್ಗಾ ಜಿಲ್ಲಾ ಪರಿಷತ್ತು, ಶಿಕ್ಷಣ ಸ್ಥಾಯಿ ಸಮಿತಿ ಸಭೆಯಲ್ಲಿ ಜಿಲ್ಲೆಯಲ್ಲಿನ 32 ಸ್ಥಳಗಳನ್ನು ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲು ಪ್ರಸ್ತಾವನೆ ಮಂಡಿಸಲಾಗಿತ್ತು. ಈ ಮೇರೆಗೆ 31 ಸ್ಥಳಗಳಲ್ಲಿ ಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ.

ಆ) ಈ ತಾಂಡಾಗಳನ್ನು ಸದರಿ ಪ್ರಸ್ತಾವನೆಯಲ್ಲಿ ಸೇರಿಸಿರುವುದರಿಂದ ಅಂತಹ ಭಾವನೆ ಬರುವುದಿಲ್ಲ.

ಇ) ವಿಳಂಬಗೊಳಿಸಿರುವುದಿಲ್ಲ.

ಈ) ಕ್ರಮ ಕೈಗೊಳ್ಳಲಾಗುತ್ತಿದೆ.

ಉ) ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಊ) ಈ ಮೇಲ್ಕಂಡ ತಾಂಡಾಗಳಲ್ಲಿ ಶಾಲೆಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ವಿದ್ಯುತ್ ಕೊರತೆ ನೀಗಲು ಕೈಗೊಂಡಿರುವ ಕ್ರಮ

3437 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿ ತಯಾರಾಗುತ್ತಿರುವ ವಿದ್ಯುಚ್ಛಕ್ತಿ ಸಾಮರ್ಥ್ಯವೆಷ್ಟು?

ಆ) ಬೇರೆ ರಾಜ್ಯಗಳಿಂದ ತರಿಸಿಕೊಳ್ಳುತ್ತಿರುವ ವಿದ್ಯುಚ್ಛಕ್ತಿ ಪ್ರಮಾಣವೆಷ್ಟು?

ಇ) ಕರ್ನಾಟಕದಲ್ಲಿ ವಿದ್ಯುತ್ತಿನ ಎಷ್ಟು ಕೊರತೆ ಇರುವುದು?

ಈ) ಈ ಕೊರತೆಯನ್ನು ನೀಗಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು)

ಅ) ರಾಜ್ಯದಲ್ಲಿರುವ ಎಲ್ಲಾ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ಈಗ ದಿನವಹಿ ಸರಾಸರಿ 37.5 ದಶಲಕ್ಷ ಯೂನಿಟ್ಟುಗಳಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲಾಗುತ್ತಿದೆ.

ಆ) ರಾಜ್ಯವು ಈಗ ದಕ್ಷಿಣ ವಲಯದಲ್ಲಿರುವ ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಕೇಂದ್ರಗಳಲ್ಲಿ ಉತ್ಪಾದನೆ ಆಗುತ್ತಿರುವ ವಿದ್ಯುತ್ತಿನಲ್ಲಿ ತನ್ನ ಪಾಲನ್ನು ಮಾತ್ರ ಪಡೆಯುತ್ತಿದ್ದು ದಿನವಹಿ ಸರಾಸರಿ 7.5 ದಶಲಕ್ಷ ಯೂನಿಟ್ಟುಗಳಷ್ಟು ವಿದ್ಯುತ್ತನ್ನು ಪಡೆಯುತ್ತಿದೆ. ಬೇರೆ ರಾಜ್ಯಗಳಿಂದ ಈಗ ವಿದ್ಯುತ್ತನ್ನು ಆಮದು ಮಾಡಿಕೊಳ್ಳುತ್ತಿಲ್ಲ.

ಇ) ಈಗ ರಾಜ್ಯವು ದಿನವಹಿ ಸುಮಾರು 8 ರಿಂದ 10 ದಶಲಕ್ಷ ಯೂನಿಟ್ಟುಗಳಷ್ಟು ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿದೆ.

ಈ) ಹೆಚ್ಚಿನ ವಿದ್ಯುತ್ ಉತ್ಪಾದನೆಗಾಗಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಬೆಂಗಳೂರು ಸಮೀಪದ ಯಲಹಂಕದಲ್ಲಿ 127.92 ಮೆಗಾ ವ್ಯಾಟ್ ಸಾಮರ್ಥ್ಯದ ಒಂದು ಡೀಸಲ್ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ನಿರ್ಮಾಣಮಾಡುತ್ತಿದೆ. ಈ ವಿದ್ಯುತ್ ಉತ್ಪಾದನಾ ಕೇಂದ್ರವು ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡಿದ ನಂತರ ವಾರ್ಷಿಕ 720 ದಶಲಕ್ಷ ಯೂನಿಟ್ಟು ಹೆಚ್ಚುವರಿ ವಿದ್ಯುಚ್ಛಕ್ತಿ ಉತ್ಪಾದನೆಯಾಗಲಿದೆ. ಇದಲ್ಲದೆ ಕರ್ನಾಟಕ ವಿದ್ಯುತ್ ನಿಗಮವು ಮುಂಬರುವ ವರ್ಷಗಳಲ್ಲಿ ಸುಮಾರು 993.31 ಮೆಗಾ ವ್ಯಾಟ್ ಹೆಚ್ಚು ಸಾಮರ್ಥ್ಯದ ಹಲವಾರು ಯೋಜನೆಗಳನ್ನು ಹಾಕಿಕೊಂಡಿದೆ ಮತ್ತು ರಾಜ್ಯ ಸರ್ಕಾರವು ವಿದ್ಯುತ್ ಉತ್ಪಾದನೆಯಲ್ಲಿ ಖಾಸಗೀ ಸಂಸ್ಥೆಗಳ ಸಹಭಾಗಿತ್ವವನ್ನು ಆಹ್ವಾನಿಸಿದೆ.

ಪ್ರಾಥಮಿಕ ಸಹಕಾರಿ ಸಂಘಗಳ ಕಾರ್ಯದರ್ಶಿಗಳಿಗೆ ವೇತನ ಶ್ರೇಣಿಯಿಂದ ವಂಚನೆ

3292 - ಶ್ರೀ ಬಿ. ಎಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತಿರುಸುವರೆ?

ಅ) ರಾಜ್ಯದ ಪ್ರಾಥಮಿಕ ಸಹಕಾರಿ ಸಂಘಗಳ ಕಾರ್ಯದರ್ಶಿಗಳು ಹಾಗೂ ಸಿಬ್ಬಂದಿಗಳು ಸರಿಯಾದ ವೇತನ ಶ್ರೇಣಿ ಇಲ್ಲದೇ ವಂಚಿತರಾಗಿರುವುದನ್ನು ಸರ್ಕಾರ ಗಮನಿಸಿದೆಯೇ?

ಆ) ಸರ್ಕಾರಿ ನೌಕರರಿಗೆ ಇರುವ ಸಂಬಳ ಹಾಗೂ ಸೇವಾ ಸೌಲಭ್ಯಗಳನ್ನು ಪ್ರಾಥಮಿಕ ಸಹಕಾರಿ ಪತ್ತಿನ ವ್ಯವಸಾಯ ಸಂಘಗಳ ಕಾರ್ಯದರ್ಶಿಗಳಿಗೆ ದೊರಕಿಸಿಕೊಡಲು ಸರ್ಕಾರ ಯೋಚಿಸಿದೆಯೆ?

ಇ) ಈ ಬಗ್ಗೆ ಸರಕಾರದ ಕ್ರಮ ಹಾಗೂ ನೀತಿ ಏನು?

ಶ್ರೀ ಎಸ್. ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ಹೌದು.

ಆ) ಇಲ್ಲ.

ಗ್ರಂಥಾಲಯ,

ಇ) ಸರ್ಕಾರ, ಅಫಿಷಿಯಲ್ ಸಮಿತಿ ರಚಿಸಿದ್ದು ವರದಿ ಕೊಟ್ಟಿದೆ. ಇದರಲ್ಲಿ ಸಂಘಗಳ ಆರ್ಥಿಕ ಪರಿಸ್ಥಿತಿ ಅನುಗುಣವಾಗಿ ಸಿಬ್ಬಂದಿ ವಿಶೇಷ ಸೌಲಭ್ಯಗಳನ್ನು ಕೊಡಲು ಶಿಫಾರಸ್ಸು ಮಾಡಲಾಗಿದೆ. ಇದನ್ನು ಜಾರಿಗೆ ತರುವ ಬಗ್ಗೆ ಪರಿಶೀಲನೆಯಲ್ಲಿದೆ.

ಬೆಂಗಳೂರು ನಗರ ಸಾರಿಗೆ ಸಂಸ್ಥೆ ಅನುಭವಿಸಿರುವ ನಷ್ಟ?

3329 - ಶ್ರೀ ಎಲ್. ಆರ್ ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಸಾರಿಗೆ ಸಂಸ್ಥೆಯ ಈವರೆಗೆ ಅನುಭವಿಸಿರುವ ನಷ್ಟದ ಮೊತ್ತವೆಷ್ಟು?

ಆ) ಬೆಂಗಳೂರು ನಗರ ಸಾರಿಗೆ ಸಂಸ್ಥೆಯನ್ನು ದೆಹಲಿ ಸಾರಿಗೆ ಸಂಸ್ಥೆಯ ಮಾದರಿಯಲ್ಲಿ ಖಾಸಗೀಕರಣಗೊಳಿಸಲು ಸರ್ಕಾರ ಯೋಚಿಸಿದೆಯೇ?

ಇ) ಬೆಂಗಳೂರು ನಗರ ಸಾರಿಗೆ ಸೇವೆಯನ್ನು ಉತ್ತಮಗೊಳಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :

ಅ) 1989-90ರವರೆಗೆ 104.95 ಕೋಟಿ ರೂಪಾಯಿಗಳು.

20,612

ಆ) ಇಲ್ಲ.

ಇ)

1) ಅನುಸೂಚಿಗಳನ್ನು ಹೆಚ್ಚಿಸಲು ಹೆಚ್ಚುವರಿ ವಾಹನಗಳ ಸಂಖ್ಯೆಯನ್ನು ಕಡಿತಗೊಳಿಸಲಾಗುವುದು.

2) ೧೫೫ ಹೆಚ್ಚು ಬಸ್ಸುಗಳನ್ನು ಈ ವರ್ಷ ಸೇರಿಸಲಾಗುವುದು.

3) ವಿಶ್ರಾಂತಿ ಅವಧಿಯನ್ನು ಕಡಿಮೆಗೊಳಿಸಿ ಟ್ರಿಪ್‌ಗಳ ಸಂಖ್ಯೆಯನ್ನು ಹೆಚ್ಚಿಸಲಾಗುವುದು.

4) ಸಿಬ್ಬಂದಿಗಳ ಗುಣಮಟ್ಟವನ್ನು ಹೆಚ್ಚಿಸಲು ಅಲ್ಪಾವಧಿಯ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.

5) ಹಣ ಸೋರುವಿಕೆಯನ್ನು ತಡೆಗಟ್ಟಲು ತನಿಖಾ ತಂಡದ ಕಾರ್ಯಚಟುವಟಿಯನ್ನು ಚುರುಕು ಗೊಳಿಸಲಾಗುವುದು.

6) ರಸ್ತೆಯನ್ನು ಚೆನ್ನಾಗಿಡುವಂತೆ ನೋಡಿಕಕೊಳ್ಳಲು ಮಹಾನಗರ ಪಾಲಿಕೆಯನ್ನು ಒಪ್ಪಿಸಲಾಗುವುದು.

7) ಕಛೇರಿ ಮತ್ತು ಶಾಲಾ ವೇಳೆಯನ್ನು ಹಂಚಲು ಸರ್ಕಾರವನ್ನು ಕೋರಲಾಗುವುದು.

ಆರ್. ಟಿ. ಓ. ಕಛೇರಿಗಳಲ್ಲಿ ಗಣಕೀಕರಣ

3325 - ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸವರೆ?

ಅ) ರಾಜ್ಯದ ಆರ್. ಟಿ. ಓ. ಕಛೇರಿಗಳಲ್ಲಿ ಗಣಕೀಕರಣದ ಕಾರ್ಯಕ್ರಮವನ್ನು ಎಷ್ಟು ಜಿಲ್ಲೆಗಳಿಗೆ ಪೂರೈಸಲಾಗಿದೆ?

ಆ) ಈ ಗಣಕೀಕರಣ ಕಾರ್ಯಕ್ರಮಗಳಿಗಾಗಿ ಸರ್ಕಾರ ಇವರೆಗೆ ಖರ್ಚು ಮಾಡಿದ ಹಣವೆಷ್ಟು?

ಇ) ಸಾರಿಗೆ ಇಲಾಖೆಯ ಕಾರ್ಯ ಚಟುವಟಿಕೆಗಳನ್ನು ಪ್ರತಿ ತಾಲ್ಲೋಕಿಗೂ ವಿಸ್ತರಿಸುವ ಯೋಜನೆ ಸರ್ಕಾರದ ಮುಂದಿದೆಯೇ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :

ಅ) ಸದ್ಯಕ್ಕೆ ಕರ್ನಾಟಕ ರಾಜ್ಯದ ಬೆಂಗಳೂರು ಜಿಲ್ಲೆಯ ಮೂರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಗಳಲ್ಲಿ ಗಣಕೀಕರಣದ ಕಾರ್ಯಕ್ರಮವನ್ನು ಪೂರೈಸಲಾಗಿದೆ.

ಆ) ರೂ. 18,65,639-50

ಇ) ಇನ್ನು ಮುಂದೆ ಇಡೀ ರಾಜ್ಯದಲ್ಲಿ ಹಂತಹಂತವಾಗಿ ವಿಸ್ತರಿಸಲಾಗುವುದು.

ಆಳಂದ ತಾಲ್ಲೂಕಿನ ಸಲ್ಲರ ಗ್ರಾಮದಲ್ಲಿ ಕಾಲೇಜು ಸ್ಥಾಪನೆ

3338 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಮಾರು ಹತ್ತು ಸಾವಿರ ಜನಸಂಖ್ಯೆಯುಳ್ಳ ಆಳಂದ ತಾಲ್ಲೂಕಿನ ಸಲ್ಲರ ಗ್ರಾಮಕ್ಕೆ ಕಾಲೇಜಿನ ಸೌಕರ್ಯವಿಲ್ಲದೆ ವಿದ್ಯಾರ್ಥಿಗಳು ತೊಂದರೆ ಅನುಭವಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಆದಷ್ಟು ಬೇಗನೆ ಕಾಲೇಜು ಪ್ರಾರಂಭಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲಾಗುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :

ಅ) ಈ ದಿಶೆಯಲ್ಲಿ ಯಾವುದೇ ಪ್ರಸ್ತಾವನೆಗಳು ಸರ್ಕಾರಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಬೇಡಿಕೆ : ಪ್ರಸ್ತಾವನೆಗಳು ಬಂದಲ್ಲಿ ಪರಿಶೀಲಿಸಲಾಗುವುದು.

ಬಸವ ಕಲ್ಯಾಣ ಪಟ್ಟಣದಲ್ಲಿ ಮಹಿಳಾ ಪದವಿ ಕಾಲೇಜು ಸ್ಥಾಪನೆ.

3339 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣ ಪಟ್ಟಣದಲ್ಲಿ ಮಹಿಳಾ ಪದವಿ ಕಾಲೇಜನ್ನು ಪ್ರಾರಂಭಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು?

ಆ) ಈ ವಿಧಾನಸಭೆಯಲ್ಲಿ ಮಾನ್ಯ ಸಚಿವರು ಆಶ್ವಾಸನೆ ನೀಡಿದ್ದರೂ ಸಹ ಇದುವರೆಗೂ ಕ್ರಮ ಕೈಗೊಳ್ಳದಿರಲು ಕಾರಣಗಳೇನು?

ಇ) ಪ್ರಸ್ತುತ ವರ್ಷದಲ್ಲಿ ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? ಶೀಘ್ರದಲ್ಲಿಯೇ ಮೇಲ್ಕಂಡ ಕಾಲೇಜನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :

ಅ) ಬಸವಕಲ್ಯಾಣ ಪಟ್ಟಣದಲ್ಲಿ ಹಾಲಿ ಅನುಧಾನಿತ ಖಾಸಗಿ ಪ್ರಥಮ ದರ್ಜೆ ಕಾಲೇಜು ಇರುವುದರಿಂದ ಮಹಿಳಾ ಪದವಿ ಕಾಲೇಜನ್ನು ಮಂಜೂರು ಮಾಡುವ ಅಗತ್ಯತೆ ಇರುವುದಿಲ್ಲ.

ಆ) ಮಾನ್ಯ ಶಿಕ್ಷಣ ಸಚಿವರಿಂದ ಭರವಸೆಯನ್ನು ನೀಡಲಾಗಿರುವುದಿಲ್ಲ.

ಇ) 'ಆ' ಇದರಲ್ಲಿರುವ ಉತ್ತರದಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಶಿಗ್ಗಾಂವ-ಸವಣೂರು ತಾಲ್ಲೋಕ್‌ಗಳಲ್ಲಿ ವಿದ್ಯುತ್ ಸರಬರಾಜು ತೊಂದರೆಯಾಗುತ್ತಿರುವುದು.

3434 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಂಗ್ಗಾವ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಶಿಗ್ಗಾಂವ-ಸವಣೂರು ತಾಲ್ಲೂಕುಗಳಲ್ಲಿ 33 ಕೆ.ವಿ.ನೇ, ಲೈನು ಇರುವ ಕಾರಣ ಕರ್ನಾಟಕ ವಿದ್ಯುತ್ ಮಂಡಳಿಯಲ್ಲಿ ವಿದ್ಯುತ್ ಸರಬರಾಜು ಮಾಡುವಲ್ಲಿ ತೊಂದರೆಯಾದದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬಗ್ಗೆ 110 ಕೆ.ವಿ.ನೇ ಲೈನು ಪ್ರಾರಂಭ ಎಷ್ಟು ದಿವಸಗಳಲ್ಲಿ ಮಾಡಲಾಗುವುದು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು)

ಅ) ಶಿಗ್ಗಾಂವ್-ಸವಣೂರು ತಾಲ್ಲೂಕುಗಳಲ್ಲಿರುವ ವಿದ್ಯುತ್ತಿನ ಕಡಿಮೆ ವೋಲ್ಟೇಜಿನ ಪರಿಸ್ಥಿತಿ ಗಮನಕ್ಕೆ ಬಂದಿದೆ.

ಆ) ಪ್ರಸ್ತುತ 110 ಕೆ.ವಿ. ಲೈನಿನ ನಿರ್ಮಾಣ ಕಾರ್ಯದ ಪ್ರಸ್ತಾವನೆ ಮಂಡಳಿಯಲ್ಲಿರುವುದಿಲ್ಲ. ಆದರೆ ಸದರಿ ತಾಲ್ಲೂಕುಗಳಲ್ಲಿನ ಕಡಿಮೆ ವೋಲ್ಟೇಜ್ ಪರಿಸ್ಥಿತಿಯನ್ನು ಸುಧಾರಿಸಲು ಮಂಡಳಿಯು ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1) ಹಾವೇರಿಯಿಂದ ಸವಣೂರಿಗೆ 33 ಕೆ.ವಿ. ವಿದ್ಯುತ್ ಲೈನನ್ನು ಹಾತೀಮತ್ತೂರಿನ ಮೂಲಕ ನಿರ್ಮಾಣ ಮಾಡಿ ಹಾತೀಮತ್ತೂರಿನಲ್ಲಿ ಒಂದು 33 ಕೆ.ವಿ. ಉಪ ವಿದ್ಯುತ್ ಕೇಂದ್ರವನ್ನು ನಿರ್ಮಾಣ ಮಾಡುವುದು. ಉದ್ದೇಶಿತ ಉಪ-ವಿದ್ಯುತ್ ಕೇಂದ್ರದಲ್ಲಿ ತಲಾ 5 ಎಂ.ವಿ.ಎ. ಸಾಮರ್ಥ್ಯದ ಎರಡು ಪರಿವರ್ತಕಗಳನ್ನು ಸ್ಥಾಪಿಸಲಾಗುವುದು.

2) ಸವಣೂರಿನಲ್ಲಿ ಹಾಲಿಯಿರುವ 33 ಕೆ.ವಿ. ಉಪ ವಿದ್ಯುತ್ ಕೇಂದ್ರದಲ್ಲಿ ಇನ್ನೂ ಒಂದು 5 ಎಂ.ವಿ.ಎ. ಸಾಮರ್ಥ್ಯದ ಟ್ರಾನ್ಸ್‌ಫಾರ್ಮರನ್ನು ಸ್ಥಾಪಿಸುವುದು.

ಸಹಕಾರಿ ರಂಗದಲ್ಲಿಯ ಕಾರ್ಖಾನೆಗಳ ವ್ಯವಹಾರ.

3442 - ಶ್ರೀ ಬಾಬಾ ಗೌಡ ಪಾಟೀಲ (ಕಿತ್ತೂರು) : ಮಾನ್ಯ ಸಹಕಾರ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಸಹಕಾರಿ ರಂಗದಲ್ಲಿಯ ಕಾರ್ಖಾನೆಗಳ ಕಾರ್ಯನಿರ್ವಾಹಕ ನಿರ್ದೇಶಕರು ಚೆಕ್ಕಿನ ಮೇಲೆ ಸಹಿ ಹಾಕಿ ಖರ್ಚು ಮಾಡುತ್ತಿರುವುದರಿಂದ ಅಧ್ಯಕ್ಷರಿಗೆ ಖರ್ಚಿನ ವ್ಯವಹಾರಗಳು ತಿಳಿಯದಂತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ಮೊದಲಿನಂತೆಯೇ ಚೆಕ್ಕಿನ ಮೇಲೆ ಚೇರ್‌ಮನ್ ಮತ್ತು ಕಾರ್ಯ ನಿರ್ವಾಹಕ ನಿರ್ದೇಶಕ ಇಬ್ಬರ ಸಹಿ ಹಾಕುವ ಪದ್ಧತಿಯನ್ನು ಜಾರಿಗೆ ತರಲು ಸರ್ಕಾರ ಆಲೋಚಿಸುತ್ತಿದೆಯೇ?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಮಂತ್ರಿಯವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಸಹಕಾರಿ ಕಾರ್ಖಾನೆಗಳಿಗೆ ತಂತ್ರಜ್ಞಾನವನ್ನು ನೇಮಕ ಮಾಡುವ ವಿಚಾರ.

3440- ಶ್ರೀ ಬಾಬಾಗೌಡ ಪಾಟೀಲ (ಕಿತ್ತೂರು) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಸಹಕಾರಿ ರಂಗದಲ್ಲಿಯ ಕಾರ್ಖಾನೆಗಳಿಗೆ ಕಾರ್ಯ ನಿರ್ವಾಹಕ ನಿರ್ದೇಶಕರನ್ನಾಗಿ ತಂತ್ರಜ್ಞಾನವನ್ನು ನೇಮಕ ಮಾಡುವ ವಿಚಾರ ಸರಕಾರಕ್ಕಿದೆಯೇ?

ಆ) ಮಹಾರಾಷ್ಟ್ರ ರಾಜ್ಯ ಸರಕಾರ ಈ ರೀತಿ ತಂತ್ರಜ್ಞರನ್ನು ಕಾರ್ಯನಿರ್ವಾಹಕ ನಿರ್ದೇಶಕರನ್ನಾಗಿ ನೇಮಕಾತಿ ಮಾಡಿ ಕಾರ್ಖಾನೆಗಳನ್ನು ಊರ್ಜಿತಾವಸ್ಥೆಗೆ ತಲುಪಿಸಿದದ್ದಾರೆಂದು ಸರ್ಕಾರಕ್ಕೆ ತಿಳಿದಿದೆಯೇ?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು).

ಅ) ಇದೆ.

ಆ) ಹೌದು.

ಸಹಕಾರಿ ಸಂಘದ ಕಾರ್ಯಕ್ಷೇತ್ರದಲ್ಲಿ ನಿರ್ದೇಶಕರನ್ನು ಆಯ್ಕೆ ಮಾಡುವ ಪದ್ಧತಿ.

3439 -ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಸಹಕಾರಿ ಸಂಘದ ಕಾರ್ಯಕ್ಷೇತ್ರದಲ್ಲಿ ಮತದಾರ ವೃತ್ತಗಳನ್ನು ಮಾಡಿ ಪ್ರತಿ ವೃತ್ತದಿಂದ ಒಬ್ಬ ನಿರ್ದೇಶಕರನ್ನು ಆಯ್ಕೆ ಮಾಡುವ ಪದ್ಧತಿಯನ್ನು ಸರ್ಕಾರ ಜಾರಿಗೆ ತರುವ ಯೋಜನೆ ಮಾಡುತ್ತಿದೆಯೇ?

ಶ್ರೀ ಎಸ್. ಆರ್. ಮೋರೆ. (ಸಹಕಾರ ರಾಜ್ಯ ಸಚಿವರು)

ಅ) ಮತದಾರರ ವೃತ್ತಗಳನ್ನು ಮಾಡಿ ಪ್ರತಿ ವೃತ್ತದಿಂದ ಒಬ್ಬ ನಿರ್ದೇಶಕರನ್ನು ಆಯ್ಕೆ ಮಾಡುವ ಪದ್ಧತಿಯನ್ನು ಸಹಕಾರ ಸಂಘಗಳು ತಮ್ಮ ಬೈಲಾದಲ್ಲಿ ಅಳವಡಿಸಿಕೊಳ್ಳಲು ಸಹಕಾರ ಸಂಘಗಳ ನಿಯಮಗಳು 1960ರ 13ನೇ ನಿಯಮದ ಪ್ರಕಾರ ಅವಕಾಶ ಇದೆ. ಆದ್ದರಿಂದ, ಸರ್ಕಾರ ಈ ಪದ್ಧತಿಯನ್ನು ಜಾರಿಗೆ ತರುವ ಪ್ರಶ್ನೆ ಉದ್ಭವಿಸುವುದಿಲ್ಲ.

ಸಹಕಾರ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿಯ ಅಧಿಕಾರಿಗಳ ಸಂಖ್ಯೆ.

3360 - ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡ ದೇವನ ಕೋಟೆ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಸಹಕಾರ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿಯ ಅಧಿಕಾರಿಗಳ ಸಂಖ್ಯೆ ಎಷ್ಟು?

ಆ) ಸಹಕಾರ ಇಲಾಖೆಯಲ್ಲಿ ಪರಿಶಿಷ್ಟ ಜಾತಿಯ ಅಧಿಕಾರಿಗಳಿಗೆ ಸಂವಿಧಾನಬದ್ಧವಾಗಿ ಬಡ್ತಿ ನೀಡಲಾಗಿದೆಯೇ?

ಇ) ಸಹಕಾರ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿಯ ಅಧಿಕಾರಿಗಳು ಹೊಂದಿರುವ ಹುದ್ದೆ ಮತ್ತು ಹೆಸರನ್ನು ತಿಳಿಸುವುದು?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು)

ಅ) ಸಹಕಾರ ಇಲಾಖೆಯಲಲ್ಲಿ ವಿವಿಧ ದರ್ಜೆಗಳಲ್ಲಿ ಒಟ್ಟು 40 ಪರಿಶಿಷ್ಟ ಜಾತಿಯ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.

ಆ) ಸಹಕಾರ ಇಲಾಖೆಯಲ್ಲಿ ಪರಿಶಿಷ್ಟ ಜಾತಿಯ ಅಧಿಕಾರಿಗಳಿಗತೆ ಸಂವಿದಾನಬದ್ದವಾಗಿ ಬಡ್ತಿ ನೀಡಲಾಗಿದೆ.

ಇ) ಸಹಕಾರಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿಯ ಅಧಿಕಾರಿಗಳ ಹೆಸರು ಹಾತಗೂ ಹೊಂದಿರುವ ಹುದ್ದೆಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

ಪರಿಶಿಷ್ಟ ಜಾತಿಯ ಅಧಿಕಾರಿಗಳ ಪಟ್ಟಿ

ಕ್ರಮ ಸಂಖ್ಯೆ	ಹೆಸರು ಮತ್ತು ದರ್ಜೆ	ಹುದ್ದೆ
1.	2.	3.
	ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು	
	ಶ್ರೀ : ಶ್ರೀಮತಿ	
1.	ಶಾಂತಪ್ಪ	ಜನರಲ್ ಮ್ಯಾನೇಜರ್, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ, ಬೆಂಗಳೂರು.
2.	ಪಿ. ಮಹದೇವಯ್ಯ	ವ್ಯವಸಾಥಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿ, ಬೆಂಗಳೂರು.
3.	ಎಸ್. ಕೃಷ್ಣಮೂರ್ತಿ ಕಾರ್ಯದರ್ಶಿ	ಕೊಡಗು ಕಾಪಿಬೆಳೆಗಾರರ ಸಹಕಾರ ಸಂಘ ನಿಯಮಿತ, ಮಡಿಕೇರಿ.
4.	ಎನ್.ಬಿ. ತೋಟಾಪುರ್	ಭೂ ಅಬಿವೃದ್ಧಿ ಅಧಿಕಾರಿ (ಸಹಕಾರ), ಕೃಷ್ಣಾ ಮೇಲ್ದಂಡೆ ಯೋಜನೆ, ಭೀಮರಾಯನಗುಡಿ, ಗುಲ್ಬರ್ಗಾ ಜಿಲ್ಲೆ.
5.	ಉಮೇಶ್ ಬೋವಿ	ವ್ಯವಸ್ಥಾಪಕ ನಿರ್ದೇಶಕರು, ಬಿಡಿಸಿಸಿ ಬ್ಯಾಂಕ್. ಬೆಂಗಳೂರು
6.	ಕೆ. ಪದ್ಮನಾಭ	ಭೂ ಅಭಿವೃದ್ಧಿ ಅಧಿಕಾರಿ(ಸಹಕಾರಿ), ಕಾಡಾ, ತುಂಗಭದ್ರಾ ಯೋಜನೆ, ಮುನಿರಾಬಾದ್, ಬಳ್ಳಾರಿ ಜಿಲ್ಲೆ.,
7.	ಜಿ.ಆರ್. ಕೃಷ್ಣದಾಸ್	ಭೂ ಅಭಿವೃದ್ಧಿ ಅಧಿಕಾರಿ(ಸಹಕಾರ) ಕಾಡಾ, ಮೈಸೂರು.
8.	ಕೆ. ಹೂವಯ್ಯ	ವ್ಯವಸ್ಥಾಪಕ ನಿರ್ದೇಶಕರು, ಘಟಪ್ರಭಾ ಎಸ್‌ಎಸ್‌ಕೆ, ಗೋಕಾಕ್.
	ಸಹಕಾರ ಸಂಘಗಳ ಉಪ ನಿಬಂಧಕರು	
1.	ಡಿ. ಅಮೃತರಾವ್ ಜಗದಾಳೆ	ಫ್ಯಾಕಲ್ಟಿ ಮೆಂಬರ್, ಎನ್.ಸಿ.ಡಿ.ಸಿ. 3ನೇ ಯೋಜನೆ, ಸಹಕಾರಿ ತರಬೇತಿ ಕಾಲೇಜು, ಬೆಂಗಳೂರು.

2.	ಎಸ್.ವೈ. ಮಸಮಟ್ಟಿ ಕಾರ್ಯದರ್ಶಿ	ಶ್ರೀ ಹಾಲಸಿದ್ದನಾದ ಸಹಕಾರಿ ಸಕ್ಕರೆ ಕಾರ್ಖಾನೆ, ನಿಪ್ಪಾಣಿ.
3.	ಬಿ.ಬಿ. ಸಜ್ಜನ್	ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರ ಸಕ್ಕರೆ ಕಾರ್ಖಾನೆ, ಹಾವೇರಿ, ಧಾರವಾಡ ಜಿಲ್ಲೆ.
4.	ರಾಮು	ಚೀಫ್ ಅಕೌಂಟ್ಸ್ ಆಫೀಸರ್, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ, ಬೆಂಗಳೂರು.
5.	ಕೆ.ಎಂ. ನಾಗರಾಜು ಮ್ಯಾನೇಜರ್	ಕೊಡಗು ಕಾಫಿ ಬೆಳೆಗಾರರ ಸಹಕಾರ ಸಂಘ ನಿಯಮಿತ, ಹುಣಸೂರು.
6.	ಎಂ.ಡಿ. ಕಾಂಬ್ಳೆ	ವ್ಯವಸ್ಥಾಪಕ ನಿರ್ದೇಶಕರು, ಡಿಸಿಸಿ ಬ್ಯಾಂಕ್, ರಾಯಚೂರು.
7.	ಸಿ.ಎಸ್. ಪುಟ್ಟರಾಜು	ಆಡಳಿತಾಧಿಕಾರಿ, ಕರ್ನಾಟಕ ರಾಜ್ಯ ಸಹಕಾರಿ ಬಳಕೆದಾರರ ಮಹಾಮಂಡಳ, ಬೆಂಗಳೂರು.
8.	ಎಂ.ಎನ್. ರಾಯಣ್ಣವರ್	ಕಾರ್ಯದರ್ಶಿ, ದೂದಗಂಗಾ ಕೃಷ್ಣ ಸಹಕಾರಿ ಸಕ್ಕರೆ ಕಾರ್ಖಾನೆ ಸಿ. ಚಿಕ್ಕೋಡಿ ಬೆಳಗಾಂ ಜಿಲ್ಲೆ.
9.	ಎಸ್. ಶಿವರಾಮು	ಕಾರ್ಯದರ್ಶಿ, ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ, ಪಾಂಜವಪುರ.
10.	ಪಿ.ಟಿ. ರೂಪ್ಲಾನಾಯಕ್	ಉಪ ನಿಬಂಧಕರು, ಬೆಂಗಳೂರು ನಗರ ಜಿಲ್ಲೆ.
11.	ಎಂ.ಆರ್. ದೀಪಕ್‌ರಾಜ್	ಉಪ ನಿಬಂಧಕರು, ಮೈಸೂರು ಜಿಲ್ಲೆ.
12.	ಎಸ್. ಚಿಕ್ಕಸಾವಕ	ವ್ಯವಸ್ಥಾಪಕ ನಿರ್ದೇಶಕರು, ಭಾರತ್ ಸಿಲ್ಕ್ ಫೀಲೀಚರ್ಸ್ ಸಹಕಾರ ಸಂಘ ನಿ. ಮಳವಳ್ಳಿ.
13.	ಎಸ್. ಮುನಿವೆಂಕಟಪ್ಪ	ವ್ಯವಸ್ಥಾಪಕ ನಿರ್ದೇಶಕರು, ಡಿಸಿಸಿ ಬ್ಯಾಂಕ್, ತುಮಕೂರು.
14.	ಎಂ. ನಾರಾಯಣಪ್ಪ	ವಿಶೇಷ ಕರ್ತವ್ಯಾಧಿಕಾರಿ, ಸಹಕಾರ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
15.	ವೈ.ಎಸ್. ದೇವದಾಸರ್	ಉಪ ನಿಬಂಧಕರು, ರಾಯಚೂರು ಜಿಲ್ಲೆ
16.	ಎಂ.ಹೆಚ್. ಓಬಳಪ್ಪ	ಉಪ ನಿಬಂಧಕರು, ಬೀದರ್ ಜಿಲ್ಲೆ.
17.	ಟಿ. ರಾಜಲಕ್ಷ್ಮಿ	ಸಹಾಯಕ ಕಾರ್ಯದರ್ಶಿ, ಸಿಸಿಎ,

	ಸಹಕಾರ ಸಂಘಗಳ ಸಹಾಯಕ ನಿಬಂಧಕರು	
1.	ಡಿ.ಯು. ಮಂಜಯ್ಯ	ವಿಶೇಷಾಧಿಕಾರಿ (ಸಮಾಪನೆ), ಸಂಯುಕ್ತ ನಿಬಂಧಕರ ಕಚೇರಿ, ಬೆಂಗಳೂರು ವಿಭಾಗ, ಬೆಂಗಳೂರು.
2.	ಜಿ.ಎಸ್. ಸಿದ್ದಯ್ಯ	ವಸೂಲಾಧಿಕಾರಿ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಬೆಂಗಳೂರು.
3.	ಆರ್. ನಂಜಯ್ಯ	ಸಹಾಯಕ ನಿಬಂಧಕರು(ರೇಷ್ಮೆ), ರೇಷ್ಮೆ ನಿರ್ದೇಶಕರ ಕಚೇರಿ, ಬೆಂಗಳೂರು.
4.	ಮರಿಮಾದಯ್ಯ	ಕಾರ್ಯದರ್ಶಿ, ಶ್ರೀ ರಾಮ ಸಹಕಾರ ಸಕ್ಕರೆ ಕಾರ್ಖಾನೆ, ಚುಂಚನಕಟ್ಟೆ
5.	ಆರ್. ನಂಜುಂಡಯ್ಯ	ಸಹಾಯಕ ನಿಬಂಧಕರು, ಸಿ.ಓ.ಡಿ. ಬೆಂಗಳೂರು
6.	ಆರ್. ಗಂಗಣ್ಣ	ಸಹಾಯಕ ನಿಬಂಧಕರು, ಮೈಸೂರು ಉಪವಿಭಾಗ, ಮೈಸೂರು
7.	ಎ. ಚಿಕ್ಕಮುನಿಯಪ್ಪ	ಆಡಳಿತಾಧಿಕಾರಿ, ಟಿಎಪಿಸಿಎಂಎಸ್ ಲಿ., ಮೈಸೂರು.
8.	ಎಂ.ಕೆ. ಲಿಂಗಯ್ಯ	ಸಹಾಯಕ ನಿಬಂಧಕರು, ಬೆಂಗಳೂರು 2ನೇ ವಲಯ, ಬೆಂಗಳೂರು.
9.	ಡಿ.ಆರ್. ಶಿವಶರಣ್ಣ	ವ್ಯವಸ್ಥಾಪಕರು, ಟಿಎಪಿಸಿಎಂಎಸ್ ಲಿ. ಗೋಕಾಕ್, ಬೆಳಗಾಂ ಜಿಲ್ಲೆ.
10.	ಓ.ಎಚ್. ಜಂಗಣ್ಣನವರ್	ಕ್ಷೇತ್ರಾಭಿವೃದ್ಧಿ ಅಧಿಕಾರಿ, ಖಾನಾಪುರ, ಬೆಳಗಾಂ ಜಿಲ್ಲೆ.
11.	ಎಸ್.ಎಸ್. ತಾಳಿಕೋಟೆ	ಸಹಾಯಕ ನಿಬಂಧಕರು, ಯಾದಗಿರ್ ಉಪವಿಭಾಗ, ಯಾದಗಿರ್.
12.	ಆರ್. ತಿಮ್ಮಯ್ಯ	ಕ್ಷೇತ್ರಾಭಿವೃದ್ಧಿ ಅಧಿಕಾರಿ, ಯಾದಗಿರ್
13.	ಬಿ. ಹನುಮಂತಪ್ಪ	ವಸೂಲಾಧಿಕಾರಿ (ನಿಯಮ 441ರ ಮೇರೆಗೆ) ಕರ್ನಾಟಕ ರಾಜ್ಯ ಎಸ್.ಸಿ. ಮತ್ತು ಎಸ್.ಟಿ. ಸಹಹಾರ ಹೌಸಿಂಗ್ ಕಾರ್ಪೊರೇಷನ್ ನಿ.ಬೆಂಗಳೂರು.
14.	ಹನುಮಂತರಾವ್ ಬಸನ್‌ಕರೆ	ಕಾರ್ಯದರ್ಶಿ, ಟಿಎಪಿಸಿಎಂಎಸ್ ಲಿ. ಬಳ್ಳಾರಿ.
15.	ಕೆ.ಎಂ. ಚಂದ್ರಯ್ಯ	ಸಹಾಯಕ ನಿಬಂಧಕರು, ನಂಜನಗೂಡು ಉಪ ವಿಭಾಗ.

ಸಹಕಾರ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ನಿಬಂಧಕರಿಗೆ ವಾಹನ ಸೌಕರ್ಯ.

3367 - ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನಕೊಟೆ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಣ್ಯ ಇಲಾಖೆಯಲ್ಲಿ ಕಳ್ಳ ಸಾಗಾಣಿಕೆದಾರರಿಂದ ವಶಪಡಿಸಿಕೊಂಡಿರುವ ವಾಹನಗಳನ್ನು ಸಹಕಾರ ಇಲಾಖೆಗೆ ಕೊಡಿಸಲು ಸರ್ಕಾರಕ್ಕಿರುವ ತೊಂದರೆ ಏನು?

ಆ) ಸಹಕಾರ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ನಿಬಂಧಕರು ಮತ್ತು ಉಪ ನಿಬಂಧಕರಿಗೆ ವಾಹನಗಳ ಅವಶ್ಯಕತೆ ಇಲ್ಲವೆ?

ಶ್ರೀ ಎಸ್. ಆರ್. ಮೋರೆ. (ಸಹಕಾರ ರಾಜ್ಯ ಸಚಿವರು) :

ಅ) ಏನು ತೊಂದರೆ ಇಲ್ಲ.

ಆ) ವಾಹನಗಳ ಅವಶ್ಯಕತೆ ಇರುತ್ತದೆ.

ಹೆಗ್ಗಡದೇವನ ಕೋಟೆಯಲ್ಲಿ ನ್ಯಾಯಾಲಯದ ಕಟ್ಟಡ

3364 - ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ) : ಮಾನ್ಯ ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೆಗ್ಗಡದೇವನಕೋಟೆಯಲ್ಲಿ ನ್ಯಾಯಾಲಯದ ಕಟ್ಟಡವಿದೆಯೆ?

ಆ) ಹಾಗಿದ್ದಲ್ಲಿ ನ್ಯಾಯಾಲಯದ ಕಟ್ಟಡವನ್ನು ಕಟ್ಟಲು ಸರ್ಕಾರದಿಂದ ಹಣ ಮಂಜೂರಾಗಿದೆಯೆ?

ಇ) ಹೆಗ್ಗಡದೇವನಕೋಟೆಯಲ್ಲಿ ನ್ಯಾಯಾಲಯದ ಕಟ್ಟಡವನ್ನು ಕಟ್ಟಲು ಸರ್ಕಾರವು ಹಣವನ್ನು ಎಂದಿನಿಂದ ಬಿಡುಗಡೆ ಮಾಡಲಿದೆ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಸಚಿವರು) :

ಅ) ಹೆಗ್ಗಡದೇವನಕೋಟೆಯಲ್ಲಿ ಮುನ್ಸೀಫ್ ಮತ್ತು ಜೆಎಂಎಫ್ಸಿ ಕೋರ್ಟಿಗೆ ಸ್ವಂತ ಕಟ್ಟಡ ಇರುವುದಿಲ್ಲ. ಆದರೆ ಈಗಿರುವ ನ್ಯಾಯಾಲಯವು ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಆ) ಇಲ್ಲ.

ಇ) ರಾಜ್ಯದಲ್ಲಿ ದೊರೆಯುವ ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು ನಿವೇಶನಗಳನ್ನು ಸ್ವಾಧೀನ ಮಾಡಿಕೊಂಡ ನಂತರ, ಹೆಗ್ಗಡದೇವನಕೋಟೆಯಲ್ಲಿ ನ್ಯಾಯಾಲಯ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳುವ ವಿಚಾರವನ್ನು ಪರಿಶೀಲಿಸಲಾಗುವುದು.

ಹೆಗ್ಗಡದೇವನಕೋಟೆ ಪದವಿ ಪೂರ್ವ ಕಾಲೇಜಿಗೆ ಇಂಗ್ಲೀಷ್ ಉಪನ್ಯಾಸಕರ ನೇಮಕ

3361 - ಶ್ರೀ ಎಂ. ಟಿ. ವೆಂಕಟೇಶ್ (ಹೆಗ್ಗಡದೇವನಕೋಟೆ) : ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೆಗ್ಗಡ ದೇವನ ಕೋಟೆ ಪದವಿ ಪೂರ್ವ ಕಾಲೇಜಿಗೆ ಇಂಗ್ಲೀಷ್ ಉಪನ್ಯಾಸಕರನ್ನು ನೇಮಕ ಮಾಡದಿರಲು ಕಾರಣವೇನು?

ಆ) ಹೆಗ್ಗಡದೇವನ ಕೋಟೆ ಪದವಿ ಪೂರ್ವ ಕಾಲೇಜಿನಲ್ಲಿ ಎಂದಿನಿಂದ ಇಂಗ್ಲೀಷ್ ಉಪನ್ಯಾಸಕರ ಹುದ್ದೆ ಖಾಲಿ ಇದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :

ಅ) ಇಂಗ್ಲೀಷ್ ಉಪನ್ಯಾಸಕರ ಹುದ್ದೆಯನ್ನು ವರ್ಗಾವಣೆಯ ಮೂಲಕ ತುಂಬಿದೆ.

ಆ) ಖಾಲಿ ಇರುವುದಿಲ್ಲ.

ಎಪಿಎಂಸಿ ನಿಧಿಯಿಂದ ರಸ್ತೆ ಅಭಿವೃದ್ಧಿ

3474 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎಪಿಎಂಸಿ ನಿಧಿಯಿಂದ ರಸ್ತೆ ಅಭಿವೃದ್ಧಿ ಕಾರ್ಯಗಳ ಸಲುವಾಗಿ ಪ್ರತಿ ತಾಲ್ಲೂಕಿಗೆ ರೂ 25.00 ಲಕ್ಷಗಳನ್ನು ಮಂಜೂರು ಮಾಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಕೋಲಾರ ಜಿಲ್ಲೆಯ ಪ್ರತಿ ತಾಲ್ಲೂಕಿಗೆ 1989-90 ಮತ್ತು 1990-91ನೇ ಸಾಲಿನಲ್ಲಿ ಮೇಲ್ಕಂಡ ನಿಧಿಯಿಂದ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ.

(ತಾಲ್ಲೂಕುವಾರು ವಿವರವನ್ನು ನೀಡುವುದು)

ಇ) ಜಿಲ್ಲೆಯಲ್ಲಿ ಈ ನಿಧಿಯಿಂದ ಪ್ರತಿ ತಾಲ್ಲೂಕಿನಲ್ಲಿ ಕೈಗೊಂಡ ರಸ್ತೆ ಅಭಿವೃದ್ಧಿ ಕಾರ್ಯಗಳ ಬಗ್ಗೆ ವಿವರವನ್ನು ಒದಗಿಸುವುದು

ಶ್ರೀ ಎಸ್. ಆರ್. ಮೋರೆ (ಸಹಕಾರ ಸಚಿವರು) :

ಅ) ಇಲ್ಲಾ.

ಆ) 'ಅ' ಗೆ ಕೊಟ್ಟ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕಿರ್ಲೋಸ್ಕರ್ ವಿದ್ಯುತ್ ಕಂಪನಿಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ

3371 - ಶ್ರೀ ಗುರುಪಾದಪ್ಪ ನಾಗಮ್ಮರಪಲ್ಲಿ (ಔರಾದ್) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಿರ್ಲೋಸ್ಕರ ವಿದ್ಯುತ್ ಕಂಪನಿಯ ನೌಕರರು ಗೃಹ ನಿರ್ಮಾಣ ಸಹಕಾರ ಸಂಘ ಒಂದನ್ನು ನಡೆಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ? ಅದು ಈಗ ಅಸ್ತಿತ್ವದಲ್ಲಿದೆಯೇ?

ಆ) ಸದರಿ ಸಂಘವು ಕೊಡಿಗೇಹಳ್ಳಿ ಎಂಬ ಸ್ಥಳದಲ್ಲಿ ನೌಕರಿಗಾಗಿ ಜಮೀನನ್ನು ಖರೀದಿ ಮಾಡಿ ಸಂಘದ ಸದಸ್ಯರುಗಳಿಂದ ಹತ್ತರು ಸಾವಿರ ರೂಪಾಯಿಗಳ ಡೆಪಾಜಿಟ್ಟುಗಳನ್ನು ಪಡೆದಿರುವ ವಿಚಾರ ಸರ್ಕಾರಕ್ಕೆ ತಿಳಿದಿದೆಯೇ?

ಇ) ಸದರಿ ಜಮೀನನ್ನು ಸಂಘದ ಪರವಾಗಿ ಸ್ವಾಧೀನ ಪಡಿಸಿಕೊಳ್ಳಲು ಇರುವ ಅಡ್ಡಿ ಆತಂಕಗಳೇನು?

ಈ) ಸಂಘದ ಮೂಲ ಭೂತ ನೌಕರರಿಗಾಗಿ ನಿವೇಶನಗಳನ್ನು ಹಂಚುವ ಉದ್ದೇಶದಿಂದ ಕೊಡಿಗೆ ಹಳ್ಳಿಯಲ್ಲಿ ಖರೀದಿಸುವ ಜಮೀನಿನ ಬಾಬ್ತಿನಲ್ಲಿ ಹತ್ತಾರು ಸಾವಿರ ರೂಪಾಯಿಗಳನ್ನು ಸದಸ್ಯರ ಠೇವಣಿ ಮಾಡಿಯೂ ಕೂಡ ನೀವೇಶನ ಪಡೆಯದೆ ತ್ರಿಶಂಕು ಸ್ಥಿತಿಯಲ್ಲಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಕೂಡಲೇ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಸ್. ಆರ್. ಮೋರೆ (ಸಹಕಾರ ಸಚಿವರು) :

ಅ) ಇದೆ.

ಆ) ಹೌದು.

ಇ) ಕೊಡಿಗೆಹಳ್ಳಿ ಜಮೀನನ್ನು ಇತರೆ ಸಹಕಾರ ಗೃಹ ನಿರ್ಮಾಣ ಸಂಘಗಳಿಗೆ ಕರಾರು ಆಗಿರುವ ಕಾರಣ ಆ ಜಮೀನನ್ನು ಈ ಸಂಘ ಪಡೆಯುವುದು ಸೂಕ್ತವಲ್ಲವೆಂದು ಅಪರ ನಿಬಂಧಕರು ತಿಳಿಸಿರುವ ಮೇರೆಗೆ ಕೊಡಿಗೆಹಳ್ಳಿ ಜಮೀನು ಪಡೆಯುವುದನ್ನು ಕೈಬಿಡಲಾಯಿತು. ಸಂಘವು ಚಿಕ್ಕಬೆಟ್ಟಹಳ್ಳಿ ಹತ್ತಿರ 43.29 ಎಕರೆ ಜಮೀನನ್ನು ಪಡೆಯಲು ಕ್ರಮ ತೆಗೆದುಕೊಂಡಿದೆ. ಸರ್ಕಾರ ಈ ಬಗ್ಗೆ ಕಲಂ 4(1) ಮತ್ತು 5(ಎ) ಪ್ರಕಾರ ಅಧಿಸೂಚನೆ ಹೊರಡಿಸಿರುತ್ತದೆ.

ಬೀದರ್ ಜಿಲ್ಲೆಯ ಪ್ರೈಮರಿ, ಹೈಸ್ಕೂಲುಗಳಲ್ಲಿ ಖಾಲಿ ಇರುವ ಉಪಾಧ್ಯಾಯರುಗಳ ಹುದ್ದೆಗಳನ್ನು ತುಂಬುವುದು.

3271 - ಶ್ರೀ ಗುರಪಾದಪ್ಪ ನಾಗ್ಮಾರಪಲ್ಲಿ (ಔರದ್) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಆ) ಈ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಗಳಿಗೆ ಮಂಜೂರಾಗಿರುವ ಉಪಾಧ್ಯಾಯರುಗಳ ಸಂಖ್ಯೆ ಎಷ್ಟು?

ಇ) ನಿಗದಿತ ಪ್ರಮಾಣದಲ್ಲಿ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಗಳಲ್ಲಿ ಉಪಾಧ್ಯಾಯರಿದ್ದಾರೆಯೆ.

ಈ) ಇಲ್ಲದಿದ್ದಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ, (ತಾಲ್ಲೂಕುವಾರು ವಿವರ ನೀಡುವುದು)

ಉ) ಖಾಲಿ ಇರುವ ಪ್ರಾಥಮಿಕ ಶಾಲೆಹಾಗೂ ಪ್ರೌಢಶಾಲೆ ಉಪಾಧ್ಯಾಯರ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) :

ಪ್ರಾಥಮಿಕ ವಿಭಾಗ

ಬೀದರ್ ಜಿಲ್ಲೆಯಲ್ಲಿರುವ ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆ 79

ಬೀದರ್ ತಾ	:	11
ಬಿ. ಕಲ್ಯಾಣ	:	17
ಬಾಲ್ಕ	:	18
ಔರಾದ್	:	17
ಹುಮ್ನಾಬಾದ್	:	16

ಬೀದರ್ ಜಿಲ್ಲೆಯಲ್ಲಿನ ಪ್ರಾಥಮಿಕ ಶಾಲೆಗಳ ಸಂಖ್ಯೆ : 742

ಬೀದರೇ ತಾ	:	155
ಬಸವಕಲ್ಯಾಣ	:	169
ಬಾಲ್ಕಿ	:	144

ಹುಮ್ನಾಬಾದ್ : 104

ಒಟ್ಟು : 742

ಸದರಿ 79 ಶಾಲೆಗಳಲ್ಲಿ 8 ಸರ್ಕಾರಿ ಪ್ರೌಢಶಾಲೆಗಳಿಗೆ ಸರ್ಕಾರದಿಂದ ಅಂಗೀಕೃತ ಆದೇಶ ನೀಡಿ ಬಂದಿರುವುದಿಲ್ಲ ಬಾಕಿ 3 ಶಾಲೆಗಳಿಗೆ ಸರ್ಕಾರದಿಂದ ತಿರಸ್ಕೃತವಾಗಿದ್ದು ಅವುಗಳನ್ನು ಜಿಲ್ಲಾ ಪರಿಷತ್ತಿನವರು ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ ಎಂದು ತಿಳಿಸಿ ನಡೆಸಲು ಅನುಮತಿ ನೀಡಿದ್ದು ಈಗ ಒಟ್ಟು 79 ಸರ್ಕಾರಿ ಪ್ರೌಢಶಾಲೆಗಳು ಸಹ ಕರ್ತವ್ಯ ನಿರ್ವಹಿಸುತ್ತಿರುತ್ತದೆ.

ಆ) ಸರ್ಕಾರಿ ಪ್ರೌಢಶಾಲೆಗಳಿಗೆ ಮಂಜೂರಾಗಿರುವ ಉಪಾಧ್ಯಾಯರ ಸಂಖ್ಯೆ:578.ಬೀದರ್ ಜಿಲ್ಲೆಗಳಿಗೆ ಪ್ರಾಥಮಿಕ ಶಾಲೆಗಳಲ್ಲಿ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ : 3085.

ಇ) ಇಲ್ಲಾ, ಬೀದರ್ ಜಿಲ್ಲೆಯಲ್ಲಿ 1:50 ರ ಉಪಾಧ್ಯಾಯರ ಮಕ್ಕಳ ಅನುಪಾತದಂತೆ ಜಿಲ್ಲೆಗೆ 190 ಪ್ರಾಥಮಿಕ ಶಾಲೆ ಶಿಕ್ಷಕರ ಅವಶ್ಯಕತೆಯಿದ್ದು, ಈಗಾಗಲೇ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ..

ಈ) ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಉಪಾಧ್ಯಾಯರ ಸಂಖ್ಯೆ:88,

ಬೀದರ್ ತಾ : 13	ಬೀದರ್ ತಾ :08
ಬಿ. ಕಲ್ಯಾಣ :16	ಬಸವ ಕಲ್ಯಾಣ :30
ಬಾಲ್ಕಿ ತಾ :18	ಬಾಲ್ಕಿ :19
ಔರಾದ್ :19	ಔರಾದ್ :23
ಹುಮ್ನಾಬಾದ್ : 22	ಹುಮ್ನಾಬಾದ್ :18
	ಒಟ್ಟು :108

ಉ) ಈಗಾಗಲೇ ಖಾಲಿ ಇರುವ ಹುದ್ದೆಗಳನ್ನು ತುಂಬಲು ಶೇಕಡ 40 ಮಿತವ್ಯಯ (ಸ್ಟೈಪಂಡರಿ) ಪದವೀಧರರಿಂದ ತುಂಬಲು ಕ್ರಮ ಕೈಗೊಳ್ಳಲಾಗಿದೆ. ಬಾಕಿ ಉಳಿದಿರುವ ಹುದ್ದೆಗಳನ್ನು ತುಂಬಲು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಲು ಕ್ರಮ ತೆಗೆದುಕೊಳ್ಳುತ್ತಿದ್ದು ಇದಾದನಂತರ ಸದರಿ ಹುದ್ದೆಗಳನ್ನು ತುಂಬಲಾಗುವುದು.

ಬೈಲಹೊಂಗಲ ನೇಸರಗಿ ಪದವಿ ಪೂರ್ವ ಕಾಲೇಜು

3282 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ನೇಸರಗಿ ಪದವಿ ಪೂರ್ವ ಕಾಲೇಜು ಎಂದು ಪ್ರಾರಂಭಿಸಲಾಯಿತು?

ಆ) ಈ ಕಾಲೇಜು ಪ್ರಾರಂಭವಾದ ನಂತರ ಇಲ್ಲಿಯವರೆಗೆ ಎಷ್ಟು ಡೆಸ್ಕ್‌ಗಳನ್ನು ಹಾಗೂ ಪೀಠೋಪಕರಣಗಳನ್ನು ಒದಗಿಸಲಾಗಿದೆ?

ಇ) ಡೆಸ್ಕ್‌ಗಳನ್ನು ಕೊರತೆಯಿಂದ ಹಾಗೂ ಪೀಠೋಪಕರಣಗಳ ಕೊರತೆಯಿಂದ ಈ ವರ್ಷ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡುವುದನ್ನು ನಿಲ್ಲಿಸಲಾಗಿದೆಯೆ?

ಉ) ವಿದ್ಯಾರ್ಥಿಗಳಿಗೆ ಓದುವ ಸಲುವಾಗಿ ಇಲ್ಲಿಯವರೆಗೆ ಎಷ್ಟು ರೂಪಾಯಿ ಲೈಬ್ರರಿ ಪುಸ್ತಕ ಒದಗಿಸಲಾಗಿದೆ?

ಊ) ಒಂದು ವೇಳೆ ಲೈಬ್ರರಿ ಪುಸ್ತಕಗಳು ಪೂರೈಸದೇ ಇದ್ದಲ್ಲಿ ಕೂಡಲೇ ಪುಸ್ತಕಗಳನ್ನು ಪೂರೈಸಲು ಕ್ರಮವನ್ನು ಕೈಗೊಳ್ಳಲಾಗಿದೆಯೇ?

ಋ) ಈ ಕಾಲೇಜಿನಲ್ಲಿ ಎಷ್ಟು ಜನ ನೌಕರಿರುವರು ಒಂದು ವೇಳೆ ನೌಕರರ ಕೊರತೆಯಿದ್ದಲ್ಲಿ ಅದನ್ನು ಹೋಗಲಾಡಿಸಲು ಕ್ರಮ ಕೈಗೊಳ್ಳುವರೇ? ಹಾಗೂ ಎಷ್ಟು ದಿವಸಗಳಲ್ಲಿ ಈ ಹುದ್ದೆಗಳನ್ನು ತುಂಬಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು):

ಅ) 1984-85

ಆ) ಒದಗಿಸಿಲ್ಲ.

ಇ) ಇಲ್ಲ.

ಈ) ಬೇಡಿಕೆ ಬಂದಾಗ ಪರಿಶೀಲಿಸಲಾಗುವುದು.

ಉ) ಒದಗಿಸಲಾಗಿರುವುದಿಲ್ಲ.

ಋ) ಸದರಿ ಕಾಲೇಜಿನಲ್ಲಿ ಹಾಲಿ 8 ಜನ ಬೋಧನ ವರ್ಗ, ಒಬ್ಬ ಗುಮಾಸ್ತ ಮತ್ತು ಒಬ್ಬ ಜವಾನ ಇದ್ದಾರೆ. ನೌಕರರ ಕೊರತೆ ಇರುವುದಿಲ್ಲ.

ಬೈಲಹೊಂಗಲ ತಾಲ್ಲೂಕಿನ ನೇಸರಗಿಯಲ್ಲಿ ಸೈನ್ಸ್ ವಿಭಾಗದ ಅವಶ್ಯಕತೆ

3450 - ಶ್ರೀ ಶಿವಾನಂಧ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ನೇಸರಗಿಯಲ್ಲಿ ಸರ್ಕಾರಿ ಡಿಗ್ರಿ ಕಾಲೇಜಿನಲ್ಲಿ ಸೈನ್ಸ್ ವಿಭಾಗದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಯೂನಿವರ್ಸಿಟಿ ಅಫಿಲಿಯೇಷನ್ ಸಲುವಾಗಿ ಯೂನಿವರ್ಸಿಟಿಗೆ ಹಣ ತುಂಬಲು ಯಾವ ಕ್ರಮ ಕೈಗೊಂಡಿದೆ.

ಇ) ಅಲ್ಲಿ ಕಾಲೇಜನ್ನು ಸ್ಥಾಪಿಸಲು ಯಾವ ಕ್ರಮ ಕೈಗೊಂಡಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು):

ಅ) ಬಂದಿದೆ.

ಆ) 1992-93ನೇ ಸಾಲಿನಿಂದ ವಿಜ್ಞಾನ ವಿಭಾಗವನ್ನು ಪ್ರಾರಂಭಿಸಲು ಉದ್ದೇಶಿಸಿದ್ದು ಇದಕ್ಕಾಗಿ ಅರ್ಜಿಯೊಂದಿಗೆ ಸಂಯೋಜನಾ ಶುಲ್ಕವನ್ನು ವಿಶ್ವವಿದ್ಯಾನಿಲಯಕ್ಕೆ ಕಟ್ಟಬೇಕೆಂದು ಸದರಿ ಕಾಲೇಜಿನ ಪ್ರಿನ್ಸಿಪಾಲರನ್ನು ಕೋರಲಾಗಿದೆ.

ಇ) ಈಗಾಗಲೇ ಅಲ್ಲಿ ಕಲಾ ಮತ್ತು ವಾಣಿಜ್ಯ ಕಾಲೇಜನ್ನು ಸ್ಥಾಪಿಸಲಾಗಿದೆ. ವಿಶ್ವ ವಿದ್ಯಾನಿಲಯದ ಶಿಫಾರಸ್ಸಿನ ಮೇರೆಗೆ ವಿಜ್ಞಾನ ವಿಭಾಗವನ್ನು ಪ್ರಾರಂಭಿಸಲಾಗುವುದು.

ಹುಬ್ಬಳ್ಳಿಯಲ್ಲಿರುವ ಸಕ್ಕರೆ ಕಾರ್ಖಾನೆಯ ಹತ್ತಿರ ರಾಜ್ಯ ರಸ್ತೆ ಸಾರಿಗೆಯ ಬಸ್ ನಿಲ್ದಾಣ.

3330 - ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನಲ್ಲಿರುವ ಮುಗಟಖಾನ ಹುಬ್ಬಳ್ಳಿಯಲ್ಲಿರುವ ಸಕ್ಕರೆ ಕಾರ್ಖಾನೆಯ ಹತ್ತಿರ (ಬೈ ಪಾಸ್ ರೋಡ್ ಹತ್ತಿರ) ರಾಜ್ಯ ರಸ್ತೆ ಸಾರಿಗೆಯ ಬಸ್ ನಿಲ್ದಾಣದ ಅಗತ್ಯ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರದವರು ಈ ಬಸ್ ನಿಲ್ದಾಣದ ನಿರ್ಮಾಣ ಮಾಡಲು ಕೈಗೊಂಡು ಕ್ರಮವೇನು?

ಇ) ಸಕ್ಕರೆ ಕಾರ್ಖಾನೆಯವರು ಬಸ್ ನಿಲ್ದಾಣದ ನಿರ್ಮಾಣಕ್ಕಾಗಿ ಸ್ಥಳವನ್ನು ಕೊಡಲು ಒಪ್ಪಿಗೆ ನೀಡಿದ್ದರೂ ಕೂಡ ಇದುವರೆವಿಗೂ, ಅಲ್ಲಿ ನಿರ್ಮಾಣದ ಕಾರ್ಯವು ಪ್ರಾರಂಭವಾಗದಿರಲು ಕಾರಣವೇನು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):

ಅ) ಬಂದಿದೆ.

ಆ) ಮಂಡಲ್ ಪಂಚಾಯಿತಿಯವರನ್ನು ಒಂದು ಎಕರೆ ಜಮೀನು ಕೊಡಲು ಕೋರಲಾಗಿದೆ.

ಇ) ಭೂಮಿ ದೊರೆತ ನಂತರ ಈ ಕೆಲಸವನ್ನು ಪ್ರಾರಂಭಿಸಲಾಗುವುದು.

ಬೆಳಗಾವಿ ಜಿಲ್ಲೆಯಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸಂಪರ್ಕ

3373 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಈ ವರ್ಷ ಐ.ಪಿ. ಸೆಟ್ಟುಗಳಿಗೆ ಎಷ್ಟು ವಿದ್ಯುಚ್ಛಕ್ತಿ ಕೊಡಬೇಕೆಂದು ನಿರ್ಧರಿಸಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಬೆಳಗಾಂ ಜಿಲ್ಲೆಯಲ್ಲಿ ಈ ವರ್ಷ ಎಷ್ಟು ನೀರಾವರಿ ಪಂಪು ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸಂಪರ್ಕವನ್ನು ಕೊಡಬೇಕೆಂದು ನಿರ್ಧರಿಸಲಾಗಿದೆ. (ತಾಲ್ಲೂಕು ವಿವರಗಳನ್ನು ನೀಡುವುದು)

ಇ) ಏಪ್ರಿಲ್ ತಿಂಗಳಿಂದ ಜುಲೈ ಅಂತ್ಯದವರೆಗೆ ಎಷ್ಟು ಐ.ಪಿ. ಸೆಟ್ಟುಗಳಿಗೆ ವಿದ್ಯುತ್ ಸಂಪರ್ಕವನ್ನು ಪ್ರತಿಯೊಂದು ತಾಲ್ಲೂಕಿನಲ್ಲಿ ಕೊಡಲಾಗಿದೆ. ಮತ್ತು ಬೆಳಗಾಂ ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನ ಈ ವರ್ಷದ ಗುರಿ ಎಷ್ಟು?

ಈ) ಬೈಲಹೊಂಗಲ ವಿದ್ಯುತ್ ಮಂಡಳಿಯ ಸಹಾಯಕ ಕಾರ್ಯಕಾರಿ ಅಭಿಯಂತರ (ವಿ) ರವರ ಉಪಯೋಗಕ್ಕಾಗಿ ಇವರಿಗೆ ಜೀಪು ಮತ್ತು ಲಾರಿಗಳು ಇಲ್ಲದೇ ಇರುವುದರಿಂದ ಐ.ಪಿ. ಸೆಟ್ ಸಂಪರ್ಕ ಕೊಡಲು ಅತಿ ವಿಳಂಬವಾಗುತ್ತಿರುವ ಸಂಗತಿ ನಿಜವೇ? ಹಾಗಿದ್ದಲ್ಲಿ ಈ ವಾಹನಗಳನ್ನು ಒದಗಿಸಲು ಸರ್ಕಾರದವರು ಯಾವ ಕ್ರಮ ಕೈಗೊಳ್ಳುವರು?

ಉ) ಬೈಲಹೊಂಗಲ ಸಬ್ -ಡಿವಿಷನ್‌ನಲ್ಲಿ ಸುಟ್ಟು ಹೋಗಿರುವ ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆ ಎಷ್ಟು? ಅವು ಸುಟ್ಟು ಹೋಗಿ ಎಷ್ಟು ದಿನಗಳಾಗಿರುತ್ತವೆ? ಈ ವಿಭಾಗದಲ್ಲಿ ಒಂದು ತಿಂಗಳಿನಿಂದ ವಿದ್ಯುತ್ ಇಲ್ಲದೆ ಇರುವ ಸಂಗತಿ ನಿಜವೇ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು) :

ಅ) ಈ ವರ್ಷ 60,160 ನೀರಾವರಿ ಪಂಪು ಸೆಟ್ಟುಗಳ ವಿದ್ಯುದ್ದೀಕರಣದ ಗುರಿ ಹಾಕಿಕೊಂಡಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ಬೆಳಗಾಂ ಜಿಲ್ಲೆಯಲ್ಲಿ ಹುಕ್ಕೇರಿ ತಾಲ್ಲೂಕನ್ನು ಹೊರತು ಪಡಿಸಿ ಈ ವರ್ಷ 6,500 ನೀರಾವರಿ ಪಂಪು ಸೆಟ್ಟುಗಳನ್ನು ವಿದ್ಯುದ್ದೀಕರಿಸಲು ಗುರಿಯನ್ನು ನಿಗದಿ ಪಡಿಸಿದೆ. ಹುಕ್ಕೇರಿ ತಾಲ್ಲೂಕಿನಲ್ಲಿ ಹುಕ್ಕೇರಿ ತಾಲ್ಲೂಕು ಗ್ರಾಮೀಣ ವಿದ್ಯುತ್ ಸಹಕಾರ ಸಂಘವು ನೀರಾವರಿ ಸಂಪು ಸೆಟ್ಟುಗಳ ವಿದ್ಯುದ್ದೀಕರಣವನ್ನು ಮಾಡುತ್ತದೆ. ಇನ್ನಿತರ ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಸಾಲಿನಲ್ಲಿ ಈ(1991-92)ನೇ ವಿದ್ಯುದ್ದೀಕರಣಕ್ಕೆ ನಿಗದಿ ಪಡಿಸಿರುವ ನೀರಾವರಿ ಪಂಪುಸೆಟ್ಟುಗಳ ಸಂಖ್ಯೆ
1.	ಅಥಣಿ	1,100
2.	ಬೆಳಗಾವಿ	600
3.	ಚಿಕ್ಕೋಡಿ	1,000
4.	ಗೋಕಾಕ್	1,000
5.	ಖಾನಾಪುರ	400
6.	ಸವದತ್ತಿ	650
7.	ರಾಯಭಾಗ	700
8.	ರಾಮದುರ್ಗ	400
9.	ಬೈಲಹೊಂಗಲ	650

ಇ) ಏಪ್ರಿಲ್ 1991ರಿಂದ ಜುಲೈ 1991ರ ಅಂತ್ಯದವರೆಗಿನ ತಾಲ್ಲೂಕುವಾರು ಸಾಧನೆಯ ವಿವರಗಳು ಈ ಕೆಳಕಂಡಂತಿವೆ.

ಕ್ರಮ ಸಂಖ್ಯೆ	ತಾಲ್ಲೂಕು	ಗುರಿ (1991-92)	ವಿದ್ಯುತ್ (ಸಂಪರ್ಕ ನೀಡಲಾದ ನೀರಾವರಿ ಪಂಪು ಸೆಟ್ಟುಗಳ ಸರಾಸರಿ (ಏಪ್ರಿಲ್ 1991ರಿಂದ ಜುಲೈ 91ರವರೆಗೆ)

1.	ಬೆಳಗಾವಿ	600	54
2.	ಖಾನಾಪುರ	400	92
3.	ಬೈಲಹೊಂಗಲ	650	63
4.	ಸವದತ್ತಿ	650	24
5.	ರಾಮದುರ್ಗ	400	17
6.	ಚಿಕ್ಕೋಡಿ	1,000	181
7.	ಅಥಣಿ	1,100	119
8.	ರಾಯಭಾಗ	700	192
9.	ಗೋಕಾಕ್	1,000	104
10.	ಹುಕ್ಕೇರಿ		136

(ಹುಕ್ಕೇರಿ ತಾಲ್ಲೂಕು ಗ್ರಾಮೀಣ ಸಹಕಾರ ಸಂಘವು ವಿದ್ಯುದ್ಧೀಕರಣದ ಕಾರ್ಯವನ್ನು ...ರ್ವಹಿಸುತ್ತಿದೆ.

ಈ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಬೈಲಹೊಂಗಲ ಉಪ - ವಿಭಾಗದಲ್ಲಿ ...ಾಲಿ ಜೀಪ್ ಇಲ್ಲದಿರುವುದು ನಿಜ. ಆದರೆ ಒಂದು ಲಾರಿ ಖಾಯಂ ಆಗಿ ...ಈ ಉಪ ವಿಭಾಗಕ್ಕೆ ನೀಡಲಾಗಿದ್ದು ನೀರಾವರಿ ಪಂಪು ಸೆಟ್ಟುಗಳ ವಿದ್ಯುದ್ಧೀಕರಣದಲ್ಲಿ ...ಳಂಬವಾಗುತ್ತಿಲ್ಲ.

ಉ) ಈ ಸಾಲಿನಲ್ಲಿ ಏಪ್ರಿಲ್ 1991ರಿಂದ ಜುಲೈ 1991ರ ಅಂತ್ಯದವರೆಗೆ ...ೈಲಹೊಂಗಲ ಉಪ ವಿಭಾಗದಲ್ಲಿ ವಿಫಲಗೊಂಡ ವಿತರಣಾ ಟ್ರಾನ್ಸ್‌ಫಾರ್ಮರುಗಳ ...ಟ್ಟು ಸಂಖ್ಯೆ 92. ಇವುಗಳಲ್ಲಿ 85 ಟ್ರಾನ್ಸ್‌ಫಾರ್ಮರ್‌ಗಳು ಬಹಳ ಹಿಂದೆ ...ಫಲಗೊಂಡಿದ್ದು ಹೊಸ ಟ್ರಾನ್ಸ್‌ಫಾರ್ಮರುಗಳನ್ನು ಹಾಕಿದೆ. ಮಿಕ್ಕುಳಿದ ಏಳು ...ಾನ್ಸ್‌ಫಾರ್ಮರುಗಳ ಇತ್ತೀಚೆಗಷ್ಟೆ ವಿಫಲ ಗೊಂಡಿದ್ದು, ಹೊಸ ಟ್ರಾನ್ಸ್‌ಫಾರ್ಮರುಗಳನ್ನು ...ಾಕಲು ಕ್ರಮ ಕೈಗೊಂಡಿದೆ. ಒಂದು ತಿಂಗಳಿನಿಂದಲೂ ಈ ಉಪ ವಿಭಾಗದಲ್ಲಿ ...ದ್ಯುತ್ ಇಲ್ಲ ಎನ್ನುವ ಸಂಗತಿ ನಿಜವಲ್ಲ.

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಈ ಸಾಲಿನಲ್ಲಿ ನೀರಾವರಿ ಪಂಪು ಸೆಟ್ಟುಗಳ ವಿದ್ಯುದ್ದೀಕರಣಕ್ಕಾಗಿ ನಿಗದಿ ಪಡಿಸಿರುವ ಗುರಿ
1.	ಬೆಂಗಳೂರು	7,125
2.	ಬೆಳಗಾವಿ(ಹುಕ್ಕೇರಿ ತಾಲ್ಲೂಕನ್ನು ಹೊರತುಪಡಿಸಿ)	6,500
3.	ಬಳ್ಳಾರಿ	2,300
4.	ಬೀದರ್	1,600
5.	ಬಿಜಾಪುರ	5,200
6.	ಚಿಕ್ಕಮಗಳೂರು	1,200

7.	ಚಿತ್ರದುರ್ಗ	3,400
8.	ದಕ್ಷಿಣ ಕನ್ನಡ	4,600
9.	ಧಾರವಾಡ	2,500
10.	ಗುಲ್ಬರ್ಗಾ	2,000
11.	ಹಾಸನ	3,050
12.	ಕೊಡಗು	150
13.	ಕೋಲಾರ	2,700
14.	ಮಂಡ್ಯ	1,960
15.	ಮೈಸೂರು	2,700
16.	ರಾಯಚೂರು	3,100
17.	ಶಿವಮೊಗ್ಗ	2,000
18.	ತುಮಕೂರು	6,675
19.	ಉತ್ತರ ಕನ್ನಡ	1,400
	ಒಟ್ಟು	60,160

ಉಡುಪಿ ತಾಲ್ಲೂಕು ಕೆಮ್ಮಣ್ಣು ಸರ್ಕಾರಿ ಪದವಿ ಕಾಲೇಜಿನ ವಾಣಿಜ್ಯ ಶಾಸ್ತ್ರ ಪ್ರಾಧ್ಯಾಪಕರ ಹುದ್ದೆ

3317 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕು ಕೆಮ್ಮಣ್ಣು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ವಾಣಿಜ್ಯಶಾಸ್ತ್ರ ಪ್ರಾಧ್ಯಾಪಕರ ಹುದ್ದೆ ಖಾಲಿ ಇದೆಯೇ?

ಆ) ಇದ್ದಲ್ಲಿ ಎಷ್ಟು ಸಮಯದಿಂದ ಖಾಲಿ ಇದೆ.?

ಇ) ಈ ಸಲದ ಸಾಮಾನ್ಯ ವರ್ಗಾವಣೆಯ ಸಂದರ್ಭದಲ್ಲಿ ಆ ಹುದ್ದೆಗಳನ್ನು ಶಿಕ್ಷಣಾರ್ಥಿಗಳ ಹಿತದೃಷ್ಟಿಯಿಂದ ಭರ್ತಿ ಮಾಡುವಂತೆ ಸಾರ್ವಜನಿಕರಿಂದ ಮನವಿ ಬಂದಿರುವುದೆ?

ಈ) ಹಾಗಿದ್ದಲ್ಲಿ, ಅದನ್ನು ಭರ್ತಿ ಮಾಡಲಾಗಿದೆಯೆ?

ಉ) ಮಾಡದಿದ್ದಕ್ಕೆ ಅದಕ್ಕೆ ಕಾರಣವೇನು?

ಊ) ಈ ಕುರಿತು ಜನರ ಆಕ್ರೋಶ ತಳೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಋ) ಬಂದಿದ್ದಲ್ಲಿ ಎಷ್ಟು ಸಮಯದಲ್ಲಿ ಅದನ್ನು ಭರ್ತಿ ಮಾಡಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರ ಸಚಿವರು) :

ಅ) ಖಾಲಿ ಇರುವುದಿಲ್ಲ.

ಆ) ಇಲ್ಲಿನ ವಾಣಿಜ್ಯ ಶಾಸ್ತ್ರ ಉಪನ್ಯಾಸಕರ ದಿನಾಂಕ : 3-8-91ರಲ್ಲಿ ವರ್ಗಾಯಿಸಿದ್ದು, ಈ ಖಾಲಿ ಹುದ್ದೆಯನ್ನು ದಿನಾಂಕ : 29-8-91ರಲ್ಲಿ ನೇರ ನೇಮಕಾತಿಯಿಂದ ತುಂಬಿದೆ.

ಇ) ಬಂದಿದೆ.

ಈ) ದಿನಾಂಕ: 29-8-91ರಂದು ಭರ್ತಿ ಮಾಡಲಾಗಿದೆ.

ಉ) ಅನ್ವಯಿಸುವುದಿಲ್ಲ.

ಊ) ತುಂಬಲಾಗಿರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಋ) ದಿನಾಂಕ : 30-8-91ರಲ್ಲಿ ಭರ್ತಿ ಮಾಡಲಾಗಿದೆ.

ಸಾರ್ವಜನಿಕ ಗ್ರಂಥಾಲಯಕ್ಕೆ 91-92ನೇ ಸಾಲಿನಲ್ಲಿ ಆಯವ್ಯಯದಲ್ಲಿ ಒದಗಿಸಿದ ಹಣ

3391 - ಶ್ರೀ ಪಿ. ಬಸವರಾಜ (ಬ್ರಹ್ಮಾವರ) : ಮಾನ್ಯ ಶಿಕ್ಷಣ ಮತ್ತು ಸಂಸದಿಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕ ಗ್ರಂಥಾಲಯಕ್ಕೆ 1991-92ನೇ ಸಾಲಿನಲ್ಲಿ ಸರ್ಕಾರ ಆಯವ್ಯಯದಲ್ಲಿ ಒದಗಿಸಿರುವ ಹಣ ಎಷ್ಟು?

ಆ) ಅದರಲ್ಲಿ 1991-92ನೇ ಸಾಲಿಗೆ ಹೊಸ ಯೋಜನೆಗೆ ಒದಗಿಸಿರುವ ಹಣವೆಷ್ಟು?

ಇ) ಗ್ರಂಥಾಲಯ ವಿಭಾಗೀಯ ಕಛೇರಿಗಳನ್ನು ವಿಭಾಗೀಯ ಕೇಂದ್ರಗಳಲ್ಲಿ ತೆರೆಯುವ ಆಲೋಚನೆ ಸರ್ಕಾರದ ಮುಂದಿದೆಯೇ?

ಈ) ನಗರ ಕೇಂದ್ರ, ಗ್ರಂಥಾಲಯ, ಬೆಂಗಳೂರು ಇದನ್ನು 5 ವಲಯಗಳಾಗಿ ವಿಂಗಡಿಸುವ ಆಲೋಚನೆ ಸರ್ಕಾರದ ಮುಂದಿದೆಯೇ?

ಉ) ಗ್ರಂಥಾಲಯಕ್ಕಾಗಿ ಸ್ವಂತ ಕಟ್ಟಡವನ್ನು ಕಟ್ಟುವ ಆಲೋಚನೆ ಸರ್ಕಾರದ ಮುಂದಿದೆಯೇ?

ಊ) ಹಾಗಿದ್ದಲ್ಲಿ, ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳು ಸಚಿವರು) :

ಅ) ರೂ. 510.86 ಲಕ್ಷಗಳು

ಆ) ರೂ. 16.04 ಲಕ್ಷಗಳು

ಇ) ಹೌದು.

ಈ) ಹೌದು.

ಉ) ಹೌದು.

ಊ) (ಇ) (ಈ) ಗೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ:22:ಎಫ್‌ಸಿಸಿ: : 90 ದಿನಾಂಕ : 7-4-1991ರ ಅನ್ವಯ 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಯೋಜನೆಯಡಿ ಸರ್ಕಾರಿ ವಲಯದಲ್ಲಿ ಹೊಸ ಹುದ್ದೆಗಳನ್ನು ಸೃಜಿಸಿ (ಹೊಸ

ಶಾಲೆಗಳನ್ನು) ಹೊರತು ಪಡಿಸಿ ವೃಥಾ ಅಧಿಕ ವೆಚ್ಚಕ್ಕೆ ಅವಕಾಶ ಕೊಡಬಾರದೆಂದು ಆದೇಶ ನೀಡಲಾಗಿದೆ.

ಆದ ಕಾರಣ ಈ ಇಲಾಖೆಯ ಪ್ರಸ್ತಾವನೆಗಳು ಹೊಸ ಹುದ್ದೆಗಳ ಸೃಷ್ಟಿ ಬಗ್ಗೆ ಇದ್ದ ಕಾರಣ ತಿರಸ್ಕರಿಸಲಾಯಿತು.

1991-92ನೇ ಸಾಲಿನಲ್ಲಿ ಪುತ್ತೂರು, ಕಾರ್ಕಳ ಮತ್ತು ಸಾಲಿಗ್ರಾಮಗಳಲ್ಲಿ ಗ್ರಂಥಾಲಯ ಕಟ್ಟಡಗಳನ್ನು ಕಟ್ಟಲು ಮಂಜೂರಾತಿಯನ್ನು ನೀಡಲಾಗಿದೆ.

ಮೂಡಬಿದ್ರೆ ಸಬ್ ಸ್ಟೇಷನ್ ಕಾಮಗಾರಿ ಕೆಲಸ

3283 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೂಡಬಿದ್ರೆ ಸಬ್ ಸ್ಟೇಷನ್‌ನ ಕಾಮಗಾರಿ ಕೆಲಸವು ಯಾವ ಹಂತದಲ್ಲಿದೆ?*

ಆ) *1991 ಜೂನ್ ತಿಂಗಳ ಮೊದಲೇ ಉಪಕೇಂದ್ರವು ಪ್ರಾರಂಭವಾಗುವುದೆಂದು ಹೇಳಲಾಗಿದ್ದರೂ ಅದು ತಡವಾಗಲು ಕಾರಣವೇನು?*

ಇ) *ಅದರ ಕೆಲಸವು ಯಾವಾಗ ಪೂರ್ತಿಗೊಳ್ಳುವುದು?*

ಈ) *ಈ ಉಪಕೇಂದ್ರದ ನಿರ್ಮಾಣಕ್ಕೆ ಒಟ್ಟು ಎಷ್ಟು ಹಣ ವೆಚ್ಚವಾಗುವುದು?*

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :-

ಅ) ಮೂಡಬಿದ್ರಿ ಸಬ್ ಸ್ಟೇಷನ್‌ನ ಸಿವಿಲ್ ಕಾಮಗಾರಿಗಳ ಕೆಲಸ ಪ್ರಗತಿಯಲ್ಲಿದೆ.

ಆ) ಮುಂಗಾರಿನ ತಿಂಗಳುಗಳಲ್ಲಿ ತಲೆದೋರಿರುವ ಪ್ರತಿಕೂಲ ಹವಾಮಾನ ಮತ್ತು ಗಟ್ಟಿಮಣ್ಣಿನಿಂದ ಕೂಡಿದ ಈ ಸ್ಥಳವನ್ನು ಸಮತಟ್ಟು ಮಾಡುವುದಕ್ಕೆ ತೆಗೆದುಕೊಂಡ ಕಾಲದಿಂದ ಈ ನಿರ್ಮಾಣ ಕಾರ್ಯವಿಳಂಬವಾಗಿದೆ. ಆದಾಗ್ಯೂ ನಿರ್ಮಾಣ ಕಾರ್ಯವನ್ನು ಈಗ ಚುರುಕುಗೊಳಿಸಲಾಗುತ್ತಿದೆ.

ಇ) ಮುಂಬರುವ ತಿಂಗಳುಗಳಲ್ಲಿ ಬಾಕಿ ಉಳಿದಿರುವ ನಿರ್ಮಾಣ ಕಾರ್ಯಗಳನ್ನು ತ್ವರಿತಗೊಳಿಸಿ ಮಾರ್ಚ್ 92ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಿದೆ.

ಈ) ಈ ವಿದ್ಯುತ್ ಉಪ ಕೇಂದ್ರದ ನಿರ್ಮಾಣಕ್ಕೆ ತಗಲುವ ಅಂದಾಜು ವೆಚ್ಚ 92.73 ಲಕ್ಷ ರೂಪಾಯಿಗಳು.

ದ. ಕನ್ನಡ ಜಿಲ್ಲೆಯಲ್ಲಿನ ಸಾರ್ವಜನಿಕ ಗ್ರಂಥಾಲಯಗಳು

3392 - ಶ್ರೀ ಸೋಮಪ್ಪ ಸುವರ್ಣ(ಮೂಡಬಿದ್ರೆ) :ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಸಾರ್ವಜನಿಕ ಗ್ರಂಥಾಲಯಗಳಿಗೆ*

ಆ) *ಇತ್ತೀಚೆಗೆ ಈ ಗ್ರಂಥಾಲಯಗಳ ಬೆಳವಣಿಗೆ ಕುಂಠಿತವಾಗಲು ಕಾರಣವೇನು?*

ಇ) *ಪ್ರತಿ ಮಂಡಲದಲ್ಲಿಯೂ ಸರ್ಕಾರವು ಗ್ರಂಥಾಲಯ ತೆರೆಯುವ ಯೋಜನೆ ಹಾಕಿಕೊಂಡಿರುವುದೇ?*

ಈ) *ಗ್ರಂಥಾಲಯ ಸಿಬ್ಬಂದಿ ವರ್ಗದಲ್ಲಿ ತಮ್ಮ ಇಲಾಖೆಯಲ್ಲಿ ಬೆಳವಣಿಗೆ ಇಲ್ಲದೆ ತೊಂದರೆಯಾದ ಬಗ್ಗೆ ಮನವಿ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಉ) *ಈ ಇಲಾಖೆಯ ಅಭಿವೃದ್ಧಿ ಬಗ್ಗೆ ಸರ್ಕಾರ ಯಾವ ಯೋಜನೆ ಹಮ್ಮಿಕೊಂಡಿದೆ.*

ಊ) *ಮಂಗಳೂರು ನಗರ ಸಂಚಾರಿ ಗ್ರಂಥಾಲಯದ ಸೇವೆ ನಿಲ್ಲಿಸಲು ಕಾರಣವೇನು?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 18 ಶಾಖಾ ಗ್ರಂಥಾಲಯಗಳು, 40 ಗ್ರಂಥವಿತರಣಾ ಕೇಂದ್ರಗಳು, 20 ಮಂಡಲ ಹಾಗೂ ಒಂದು ಸಂಚಾರಿ ಗ್ರಂಥಾಲಯಗಳಿವೆ.

ಆ) ಕುಂಠಿತವಾಗಿಲ್ಲ.

ಇ) ಹೌದು.

ಈ) ಹೌದು

ಉ) ಈ ಕೆಳಗೆ ಕಾಣಿಸಿದ ಯೋಜನೆಗಳನ್ನು ಇಲಾಖೆಯ ಅಭಿವೃದ್ಧಿಗೋಸ್ಕರ ಸರ್ಕಾರ ಹಮ್ಮಿಕೊಂಡಿದೆ.

(1) ಇಲಾಖೆಯ ಪುನರ್‌ರಚನೆ ಹಾಗೂ ಕೇಂದ್ರ ಕಛೇರಿಯಲ್ಲಿ ಹೆಚ್ಚುವರಿ ಸಿಬ್ಬಂದಿಯನ್ನು ಸೃಷ್ಟಿ ಮಾಡುವುದು.

(2) ವಿಭಾಗ ಮಟ್ಟದಲ್ಲಿ ವಿಭಾಗೀಯ ಕಛೇರಿಗಳನ್ನು ತೆರೆಯುವುದು.

(3)ನಗರ ಕೇಂದ್ರ ಗ್ರಂಥಾಲಯ ಬೆಂಗಳೂರನ್ನು ಐದು ವಿಭಾಗಗಳಾಗಿ ವಿಂಗಡಿಸುವುದು.

(4) ಕಾರ್ಯನಿರ್ವಹಣೆ ಮತ್ತು ಮೌಲ್ಯ ಮಾಪನ.

ಊ) ಮಂಗಳೂರು ನಗರ ಸಂಚಾರಿ ಗ್ರಂಥಾಲಯ ವಾಹನ ಚಾಲಕರು ವೈದ್ಯಕೀಯ ಕಾರಣಗಳಿಂದ ವಾಹನ ಚಾಲನೆ ಮಾಡಲು ಅಸಮರ್ಥರಾಗಿದ್ದು, ಸಂಚಾರಿ ಗ್ರಂಥಾಲಯ ಸೇವೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ.

ಶಿವಮೊಗ್ಗ ಬಿ. ಎಡ್. ಕಾಲೇಜು ಪ್ರಾರಂಭಿಸುವುದು

3458 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಬಿ. ಎಡ್. ಕಾಲೇಜುಗಳು ಎಷ್ಟು ? (ಜಿಲ್ಲಾವಾರು ಪಟ್ಟಿ ಕೊಡಿರಿ)

ಆ) ಶಿವಮೊಗ್ಗ ಜಿಲ್ಲೆಗೆ ತುಂಬಾ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ವಿದ್ಯಾರ್ಥಿಗಳ ಬಹು ಬೇಡಿಕೆ ಇರುವುದರಿಂದ ಶಿವಮೊಗ್ಗ ಜಿಲ್ಲೆಗೆ ಒಂದು ಬಿ.ಎಡ್. ಕಾಲೇಜು ಮಂಜೂರು ಮಾಡಲಾಗುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) 63 (ವಿವರ ಅನುಬಂಧದಲ್ಲಿ)

ಆ) ಇಲ್ಲ.

ಇ) ಇಲ್ಲ.

ವಿಧಾನ ಸಭಾ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 3458ರ ಅನುಬಂಧ

ರಾಜ್ಯದಲ್ಲಿರುವ ಬಿ. ಎಡ್. ಕಾಲೇಜುಗಳ ಜಿಲ್ಲಾವಾರು ಪಟ್ಟಿ

ಕ್ರಮ ಸಂಖ್ಯೆ	ಜಿಲ್ಲೆ	ಕಾಲೇಜುಗಳ ಸಂಖ್ಯೆ
	ಬೆಂಗಳೂರು (ಗ್ರಾಮಾಂತರ ಮತ್ತು ನಗರ ಜಿಲ್ಲೆ)	11
2.	ತುಮಕೂರು	4
3.	ಕೋಲಾರ	3
4.	ಮೈಸೂರು	5
5.	ಮಂಡ್ಯ	1
6.	ಹಾಸನ	4
7.	ಶಿವಮೊಗ್ಗ	1
8.	ಚಿತ್ರದುರ್ಗ	5
9.	ಚಿಕ್ಕಮಗಳೂರು	1
10.	ದಕ್ಷಿಣ ಕನ್ನಡ	3
11.	ಕೊಡಗು	1
12.	ಧಾರವಾಡ	5
13.	ಬೆಳಗಾಂ	4
14.	ಬಿಜಾಪುರ	3
15.	ಉತ್ತರ ಕನ್ನಡ	2
16.	ಗುಲ್ಬರ್ಗ	4
17.	ರಾಯಚೂರು	1
18.	ಬೀದರ್	2
19.	ಬಳ್ಳಾರಿ	3
	ಒಟ್ಟು	63

ಶಿವಮೊಗ್ಗದಲ್ಲಿ ಮಹಿಳಾ ಪಾಲಿಟೆಕ್ನಿಕ್ ತೆರೆಯುವುದು

3396 - ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗದಲ್ಲಿ ಮಹಿಳಾ ಪಾಲಿಟೆಕ್ನಿಕ್ ಯಾವಾಗ ಪ್ರಾರಂಭಿಸಲಾಗುವುದು?

ಆ) ಪ್ರಾರಂಭಿಸಲು ಉದ್ದೇಶಿಸಿರುವ ಜಮೀನು ಯಾವುದು?

ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) 1991-92ನೇ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲಾಗಿದೆ.

ಆ) ಈ ಬಗೆ ಇನ್ನೂ ಅಂತಿಮ ನಿರ್ಣಯವಾಗಿಲ್ಲ

ಕುವೆಂಪು ವಿಶ್ವವಿದ್ಯಾಲಯದ ಮೌಲ್ಯಮಾಪನ ದುರ್ವ್ಯವಹಾರ

3395 - ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ವರ್ಷ ಕುವೆಂಪು ವಿಶ್ವವಿದ್ಯಾಲಯದ ಮೌಲ್ಯಮಾಪನದಲ್ಲಾದ ದುರ್ವ್ಯವಹಾರ *ಸರ್ಕಾರದ ಗಮನಕ್ಕೆ ಬಂದಿದೆಯೆ?*

ಆ) *ಬಂದಿದ್ದಲ್ಲಿ ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ.?*

ಇ) *ಆ ಬಗ್ಗೆ ಯಾವಾಗ ಕ್ರಮ ತೆಗೆದುಕೊಳ್ಳಲಾಗುವುದು?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ದ.ಕನ್ನಡ ಜಿಲ್ಲೆಯ ಬಂಟ್ವಾಳದಲ್ಲಿ ವಿದ್ಯುತ್ ಬಳಕೆದಾರರ ಸಹಕಾರ ಸಂಘ

3368 - ಶ್ರೀ ಬಿ. ರಮಾನಾಥ ರೈ (ಬಂಟ್ವಾಳ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದಲ್ಲಿ ಹುಕ್ಕೇರಿ ತಾಲ್ಲೋಕಿನ* ಮಾದರಿಯ *ವಿದ್ಯುತ್ ಬಳಕೆದಾರರಲ್ಲಿ ಸಹಕಾರ ಸಂಘ ಸ್ಥಾಪಿಸುವ ವಿಚಾರ ಯಾವ ಹಂತದಲ್ಲಿದೆ*

ಆ) *ಇದನ್ನು ಪ್ರಾರಂಭಿಸಲು ಸರ್ಕಾರ ಯೋಚಿಸಿದೆಯೇ?*

ಶ್ರೀ ಎಸ್. ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಗ್ರಾಮೀಣ ವಿದ್ಯುದ್ದೀಕರಣ ನಿಗಮ ನವ ದೆಹಲಿ ಇವರಿಂದ ಈ ಸಂಘದ ಯೋಜನೆಗೆ ಮಂಜೂರಾತಿ ನಿರೀಕ್ಷಿಸಲಾಗುತ್ತಿದೆ.

ನೆಲಮಂಗಲ ಕ್ಷೇತ್ರಕ್ಕೆ ಸೇರಿದ ಪ್ರಾಥಮಿಕ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆ

3272 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುರೆ?

ಅ) *ನೆಲಮಂಗಲ ವಿಧಾನ ಸಭಾ ಕ್ಷೇತ್ರಕ್ಕೆ ಸೇರಿದ ಪ್ರಾಥಮಿಕ (ಹಿರಿಯ ಮತ್ತು ಕಿರಿಯ ಪಾಠಶಾಲೆಗಳಲ್ಲಿ ಹಾಗೂ ಪ್ರೌಢ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಅಲ್ಲಿನ ಒಟ್ಟು ಶಿಕ್ಷಕರ ಸಂಖ್ಯೆ ಎಷ್ಟು ಹಾಗೂ ತುಂಬ ಬೇಕಾಗಿರುವ ಶಿಕ್ಷಕರ ಸಂಖ್ಯೆ ಎಷ್ಟು?*

ಇ) *ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಖಾಲಿ ಇರುವ ಹುದ್ದೆಗಳಿಗೆ ಶಿಕ್ಷಕರನ್ನು ನೇಮಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಳ ಸಚಿವರು):

ಅ) ಹೌದು.

ಆ)

	ಪ್ರಾಥಮಿಕ ಶಾಲೆ	ಪ್ರೌಢಶಾಲೆ
ಒಟ್ಟು ಶಿಕ್ಷಕರ ಸಂಖ್ಯೆ	557	63
ತುಂಬಬೇಕಾಗಿರುವ ಶಿಕ್ಷಕರ ಸಂಖ್ಯೆ	63	ಇಲ್ಲ

ಇ) ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ತಿದ್ದುಪಡಿಯಾಗುತ್ತಿದ್ದು ಇದು ಆದ ಕೂಡಲೇ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಪ್ರೌಢಶಾಲೆಗಳಲ್ಲಿ ಖಾಲಿ ಹುದ್ದೆಗಳು ಇಲ್ಲದೇ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ದ. ಕನ್ನಡ ಜಿಲ್ಲೆಯ ಬೈಂದೂರಿನಲ್ಲಿ ವಿದ್ಯುತ್ ಸಬ್ ಸ್ಟೇಷನ್ ಕಾಮಗಾರಿ ಕೆಲಸ.

3262 - ಶ್ರೀ ಜಿ. ಎಸ್. ಆಚಾರ್ (ಬೈಂದೂರ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನಲ್ಲಿ ವಿದ್ಯುತ್ ಸಬ್-ಸ್ಟೇಷನ್ ಕಾಮಗಾರಿಗೆ ಯಾವಾಗ ಮಂಜೂರಾತಿ ನೀಡಲಾಯಿತು.?

ಆ) ಯಾವಾಗ ಅದರ ಕಾರ್ಯಾರಂಭವಾಯಿತು, ಹಾಗೂ ಕಾಮಗಾರಿ ವಿಳಂಬಕ್ಕೆ ಕಾರಣಗಳೇನು ?

ಇ) ಬೈಂದೂರು ಪರಿಸರದ ವಿದ್ಯುತ್ ತೊಂದರೆ ನಿವಾರಿಸಲು ಅಲ್ಲಿನ ವಿದ್ಯುತ್ ಉಪಕೇಂದ್ರ ಕಾರ್ಯಾರಂಭವನ್ನು ತ್ವರಿತಗೊಳಿಸಲಾಗುವುದೇ ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು):

ಅ) ನವೆಂಬರ್ 1988ರಲ್ಲಿ ಮಂಜೂರಾತಿ ನೀಡಲಾಯಿತು.

ಆ) ಮೇ 1991ರಲ್ಲಿ ಕಾರ್ಯವನ್ನು ಆರಂಭಿಸಲಾಯಿತು. ಕಾಮಗಾರಿಯ ವಿಳಂಬಕ್ಕೆ ಮುಖ್ಯ ಕಾರಣಗಳು :

(1) ಕುಂದಾಪುರದಿಂದ ಬೈಂದೂರಿಗೆ ವಿದ್ಯುತ್ ಪ್ರಸರಣಾ ಮಾರ್ಗದ ನಿರ್ಮಾಣಕ್ಕೆ ಜನವರಿ 1989ರಲ್ಲಿ ಕರೆಯಲಾಗಿದ್ದ ಟೆಂಡರು ಅಸಮರ್ಪಕವಾದುದ್ದರಿಂದ ಸ್ವೀಕೃತವಾಗಲಿಲ್ಲ. ಹೀಗಾಗಿ ಪುನ: ಟೆಂಡರ್ ಅನ್ನು ಕರೆಯಬೇಕಾಯಿತು.

(2) ಈ ಮಧ್ಯದಲ್ಲಿ ಬೈಂದೂರಿನಲ್ಲಿ 110 ಕೆ.ವಿ. ವಿದ್ಯುತ್ ಉಪ-ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾವನೆಯು ಮಂಡಳಿಯ ಪರಿಶೀಲನೆಗೆ ಬಂದಿತು. ಸದರಿ ಸ್ಥಳದಲ್ಲಿ 110 ಕೆ.ವಿ. ವಿದ್ಯುತ್ ಉಪ-ಕೇಂದ್ರವನ್ನು ಸ್ಥಾಪನೆ ಮಾಡುವುದೋ ಅಥವಾ ಈಗಾಗಲೇ ಮಂಜೂರಾಗಿರುವ 33 ಕೆ.ವಿ. ವಿದ್ಯುತ್ ಉಪ-ಕೇಂದ್ರವನ್ನು ಸ್ಥಾಪನೆ ಮಾಡುವುದೋ ಎಂಬ ವಿಷಯದಲ್ಲಿ ಮಂಡಳಿಯು ಪರಿಶೀಲಿಸಿ ಅಂತಿಮವಾಗಿ 33 ಕೆ. ವಿ. ಉಪ ಕೇಂದ್ರ ಸ್ಥಾಪನೆ ಮಾಡುವುದೆಂದು ತೀರ್ಮಾನ ತೆಗೆದು ಕೊಳ್ಳುವಲ್ಲಿ ವಿಳಂಬವಾಯಿತು.

ಇ) ಕುಂದಾಪುರದಿಂದ ಬೈಂದೂರಿಗೆ ವಿದ್ಯುತ್ ಪ್ರಸರಣಾ ಮಾರ್ಗದ ನಿರ್ಮಾಣ ಕಾರ್ಯವನ್ನು ಈಗಾಗಲೇ ಪ್ರಾರಂಭಿಸಿದ್ದು, ಕಾರ್ಯವು ಪ್ರಗತಿಯಲ್ಲಿದೆ. ಬಾಕಿ ಉಳಿದಿರುವ ನಿರ್ಮಾಣ ಕಾರ್ಯಗಳನ್ನು ತ್ವರಿತಗೊಳಿಸಲಾಗುತ್ತಿದೆ.

3265 - ಶ್ರೀಮತಿ ಸುಮಾ ವಸಂತ (ವೀರಾಜಪೇಟೆ) : ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಕಿರಿಯ ಮಹಾ ವಿದ್ಯಾಲಯ, ಪದವಿ ಮಹಾ ವಿದ್ಯಾಲಯಗಳ ಅಧ್ಯಾಪಕರ, ಉಪನ್ಯಾಸಕರ ಎಷ್ಟು ಸ್ಥಾನ ಖಾಲಿ ಇದೆ?

ಆ) ಮುಖ್ಯೋಪಾಧ್ಯಾಯರು, ಪ್ರಾಂಶುಪಾಲರ ಎಷ್ಟು ಸಂಖ್ಯೆ ಖಾಲಿ ಇದೆ?

ಇ) ಮಂಜೂರಾದ ಹುದ್ದೆಗಿಂತಲೂ ಜಾಸ್ತಿಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಆ ಹುದ್ದೆಗಳನ್ನು ತುಂಬಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :

ಅ) ಪ್ರಾಥಮಿಕ ಶಾಲೆ	106
ಪ್ರೌಢಶಾಲೆ	22
ಕಿರಿಯ ಮಹಾ ವಿದ್ಯಾಲಯ	7
ಪದವಿ ಮಹಾ ವಿದ್ಯಾಲಯ	11
ಒಟ್ಟು	146
ಆ) ಮುಖ್ಯ ಶಿಕ್ಷಕರು	7
ಪ್ರಾಂಶುಪಾಲರು (ಕಿರಿಯ ಕಾಲೇಜು)	4
ಒಟ್ಟು	11

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಾಂಶುಪಾಲರ ಸ್ಥಾನ ಖಾಲಿ ಇರುವುದಿಲ್ಲ.

ಇ) ಬಂದಿದೆ.

ಈ) ಖಾಲಿ ಇರುವ ಮುಖ್ಯ ಶಿಕ್ಷಕರ ಹುದ್ದೆಗಳನ್ನು ತುಂಬಲು ಸದ್ಯದಲ್ಲೆ ಕ.ನಾ.ಸೇ.ನಿಯಮ ಮೇರೆಗೆ ಅರ್ಹ ಪ್ರೌಢ ಶಾಲಾ ಶಿಕ್ಷಕರಿಂದ ಬಡ್ತಿ ನೀಡಲು ಕ್ರಮ ಕೈಗೊಳ್ಳಲಾಗುವುದು.

ಪ್ರಾಂಶುಪಾಲರ ಹುದ್ದೆಗಳನ್ನು ತುಂಬಲು ಅರ್ಹ ಉಪನ್ಯಾಸಕರಿಗೆ ಬಡ್ತಿ ನೀಡುವ ಮೂಲಕ ಕ್ರಮ ಕೈಗೊಳ್ಳಲಾಗುವುದು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಕರ್ನಾಟಕ ಲೋಕ ಸೇವಾ ಆಯೋಗವು ಅರ್ಜಿಗಳನ್ನು ಆಹ್ವಾನಿಸಿದ್ದು ಭರ್ತಿ ಮಾಡಲು ಶೀಘ್ರ ಕ್ರಮ ಕೈಗೊಳ್ಳಲಾಗುತ್ತಿದೆ.

ಸಕಲೇಶಪುರ ಪಟ್ಟಣದಲ್ಲಿರುವ ಬಸ್ ನಿಲ್ದಾಣದಲ್ಲಿ ಸಾರ್ವಜನಿಕ ಸೌಲಭ್ಯ.

3346 - ಶ್ರೀ ಬಿ. ಆರ್.ಗುರುದೇಶ (ಸಕಲೇಶಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರ ಪಟ್ಟಣದಲ್ಲಿರುವ ಬಸ್ ನಿಲ್ದಾಣವು ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿದ್ದು ತುಂಬಾ ಕಿರಿದಾಗಿದ್ದು ಹಾಗೂ ಹಾಳಿಯಿರುವ ನಿಲ್ದಾಣದಲ್ಲಿ

ಆವಶ್ಯಕ ಸೌಲಭ್ಯಗಳಿಲ್ಲದೆ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿರುವುದ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) *ಹಾಗಿದ್ದಲ್ಲಿ ಹೊಸ ಬಸ್ ನಿಲ್ದಾಣವನ್ನು ನಿರ್ಮಿಸುವ ಯೋಜನೆ ಸರ್ಕಾರಕ್ಕೆ ಇದೆಯೇ?*

ಶ್ರೀ ಅಜೀಜ್ ಸೇಠ್(ಸಾರಿಗೆ ಸಚಿವರು):

ಅ) ಹೌದು.

ಆ) ಹೌದು.

ಬೆಳಗಾಂ ಮತ್ತು ಸಿರ್ಸಿ ವಿದ್ಯುಚ್ಛಕ್ತಿ ಮಂಡಳಿಗೆ ಸರ್ಕಾರಿ ಮತ್ತು ಖಾಸಗಿ ಸ್ಥಾವರಗಳಿಂದ ಬರಬೇಕಾದ ಹಣ

3343 - ಶ್ರೀ ಕೆ.ಸಿ. ಮಾಡಗೇಕರ್ ದೇಸಾಯಿ (ಹೀರೆಭಾಗೇವಾಡಿ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾಂ ವೃತ್ತ ಮತ್ತು ಸಿರ್ಸಿ ವಿಭಾಗದ ವಿದ್ಯುಚ್ಛಕ್ತಿ ಮಂಡಳಿಗೆ ಸರ್ಕಾರಿ ಮತ್ತು ಖಾಸಗೀ ಸ್ಥಾವರಗಳಿಂದ ಬರಬೇಕಾಗಿರುವ ಒಟ್ಟು ಬಾಕಿ ಹಣ ಎಷ್ಟು? (ಬಾಕಿ ಇರುವ ಸ್ಥಾವರಗಳ ಪಟ್ಟಿಯನ್ನು ವಿವರಿಸತಕ್ಕದ್ದು).*

ಆ) *ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಬಾಕಿ ವಸೂಲಾತಿ ಕಾಯಿದೆ ಮತ್ತು ಬಾಕಿ ವಸೂಲಾತಿ ನಿಯಮಾವಳಿ 1978 ಇವುಗಳಲ್ಲದೆ ಈ ಬಾಕಿ ಹಣವನ್ನು ವಸೂಲಿ ಮಾಡಲು ಸರ್ಕಾರವು ತೆಗೆದುಕೊಂಡು ಕ್ರಮಗಳೇನು?*

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):

ಅ) 31-03-1991ಕ್ಕೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಬರಬೇಕಾಗಿರುವ ಬಾಕಿಯ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಸರ್ಕಾರೀ ಸ್ಥಾವರಗಳಿಂದ ಬರಬೇಕಾದ ಬಾಕಿ ವಿವರ -

ಕಾರ್ಯ ಮತ್ತು ಪಾಲನಾ	976.34
ಬೆಳಗಾಂ ವೃತ್ತ	ಲಕ್ಷ ರೂ.ಗಳು
ಕಾರ್ಯ ಮತ್ತು ಪಾಲನಾ	47.48
ಸಿರ್ಸಿ ವಿಭಾಗ -2	ಲಕ್ಷ ರೂ. ಗಳು

ಖಾಸಗೀ ಸ್ಥಾವರಗಳಿಂದ
ಬರಬೇಕಾದ ಬಾಕಿ ಹಣ

ಕಾರ್ಯ ಮತ್ತು ಪಾಲನಾ	4,594.63
ಬೆಳಗಾಂ ವೃತ್ತ	ಲಕ್ಷ ರೂ. ಗಳು.
ಕಾರ್ಯ ಮತ್ತು ಪಾಲನಾ	220.59
ಸಿರ್ಸಿ ವಿಭಾಗ -2	ಲಕ್ಷ ರೂ. ಗಳು

ಬಾಕಿಯಿರುವ ಸ್ಥಾವರಗಳ ವಿವರಗಳನ್ನು ಸಂಗ್ರಹಿಸಲಾಗುತ್ತಿದ್ದು ಅದನ್ನು ಸದ್ಯದಲ್ಲಿಯೇ ಒದಗಿಸಲಾಗುವುದು.

ಆ) ಸಂಬಂಧಪಟ್ಟವರಿಗೆ ಬಾಕಿ ಹಣವನ್ನು ಸಂದಾಯ ಮಾಡಲು ತಿಳುವಳಿಕೆಗಳನ್ನು ಕಳುಹಿಸಲಾಗಿದೆ ಮತ್ತು ಈ ಬಾಕಿ ಹಣವನ್ನು ತ್ವರಿತವಾಗಿ ವಸೂಲಿಮಾಡಲು ಒತ್ತಡ ತರಲಾಗುತ್ತಿದೆ.

ವಾಣಿಜ್ಯ ಪರೀಕ್ಷೆಯ ಮೌಲ್ಯಮಾಪಕರಿಂದ ಬಂದಿರುವ ಬಿಲ್ಲುಗಳು

3389 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *1991ರ ಜೂನ್ ಮಾಹೆಯಲ್ಲಿ ನಡೆದ ವಾಣಿಜ್ಯ ಪರೀಕ್ಷೆಯ ಮೌಲ್ಯಮಾಪಕರಿಂದ ಬಂದಿರುವ ಪ್ರಯಾಣ ಭತ್ಯ, ದಿನಭತ್ಯೆ ಮತ್ತು ಸಂಭಾವನೆ ಬಿಲ್ಲುಗಳು - ಲೆಕ್ಕ ಪತ್ರ ಶಾಖೆಗೆ ಎಷ್ಟು ಬಂದಿರುತ್ತದೆ?*
2) *ಪ್ರವಾಸ ಭತ್ಯ ಬಿಲ್ಲುಗಳು ಆಗಾಗ್ಗೆ ಗೈರು ವಿಲೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಮತ್ತು ಮೌಲ್ಯಮಾಪಕದಿಂದ ನಕಲು ಪ್ರತಿಯ ಬಿಲ್ಲುಗಳನ್ನು ಕೇಳಲಾಗುತ್ತಿದೆಯೆ?*
3) *ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಲೆಕ್ಕ ಪತ್ರ ಶಾಖೆಯಿಂದ ಮೌಲ್ಯ ಮಾಪಕರ ಪ್ರವಾಸ ಭತ್ಯ ಬಿಲ್ಲುಗಳು, ದಿನಭತ್ಯ ಬಿಲ್ಲುಗಳು ಮತ್ತು ಸಂಭಾವನೆ ಬಿಲ್ಲುಗಳನ್ನು ವಿಳಂಬವಾಗಿ ಪಾವತಿ ಮಾಡಿರುವುದು ನಿಜವೇ?*
4) *ಸರ್ಕಾರವು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಲೆಕ್ಕ ಪತ್ರ ವಿಭಾಗದ ಕಾರ್ಯ ವೈಖರಿಯನ್ನು ಉತ್ತಮಪಡಿಸಲು ಯಾವ ಕ್ರಮ ಕೈಗೊಂಡಿದೆ.*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :

ಅ) ಕೇಂದ್ರವಾರು

1) ಬೆಂಗಳೂರು ಕೇಂದ್ರದಿಂದ : 519

2) ಮೈಸೂರು ಕೇಂದ್ರದಿಂದ : 119

3) ಬೆಳಗಾಂ ಕೇಂದ್ರದಿಂದ : 213

2) ಇಲ್ಲ.

3) ಇಲ್ಲ.

4) ಉದ್ಭವಿಸುವುದಿಲ್ಲ.

ನ್ಯಾಷನಲ್ ಕೋಆಪರೇಟಿವ್ ಬ್ಯಾಂಕಿ ನಿ. ಬೆಂಗಳೂರು ಇವರಿಂದ ಸಾಲ ಮನ್ನಾ ಮಾಡಲಾದ ಹಣ.

3270 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನ್ಯಾಷನಲ್ ಕೋಆಪರೇಟಿವ್ ಬ್ಯಾಂಕ್ ನಿ, ಬೆಂಗಳೂರು ಇದರಲ್ಲಿ 1985-86ರಿಂದ ಇಂದಿನವರೆಗೆ ಮನ್ನಾ ಮಾಡಲ್ಪಟ್ಟ ಕೆಟ್ಟ ಸಾಲಗಳ ಒಟ್ಟು ಮೊಬಲಗು (ವರ್ಗಾವಾರು ಮಾಹಿತಿ- ಮನ್ನಾ ಮಾಡಲ್ಪಟ್ಟ ಸಾಲದ ನಮೂನೆಗಳನ್ನು ನೀಡುವುದು)

ಆ) ಆಡಳಿತ ಮಂಡಳಿ ಸದಸ್ಯರು ತೆಗೆದುಕೊಂಡ ಸಾಲವನ್ನು ಮನ್ನಾ ಮಾಡಲಾಗಿದೆಯೇ?

ಇ) ಹಾಗಿದ್ದಲ್ಲಿ ಅವುಗಳ ವಿವರಗಳು

ಶ್ರೀ ಕೆ. ಹೆಚ್. ಪಾಟೀಲ್ (ಸಹಕಾರ ರಾಜ್ಯ ಸಚಿವರು) :

ಅ) ನ್ಯಾಷನಲ್ ಕೋಆಪರೇಟಿವ್ ಬ್ಯಾಂಕ್ ನಿ. ಬೆಂಗಳೂರು ಇದರಲ್ಲಿ 1985ರಿಂದ ಇಂದಿನವರೆಗೆ ಯಾವುದೇ ವಿಧವಾದ ಸಾಲವನ್ನು ಮನ್ನಾ ಮಾಡಿರುವುದಿಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳ ಸಂಖ್ಯೆ

3390 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್): ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜುಲೈ 1991ರಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ನಡೆಸಲಾದ ಕನ್ನಡ ಬೆರಳಚ್ಚು ಪ್ರಥಮ ದರ್ಜೆ, ಪ್ರೌಢ ದರ್ಜೆ ಹಾಗೂ ಪ್ರವೀಣ ದರ್ಜೆಗೆ ಕುಳಿತ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಆ) ಈ ಪೈಕಿ ಎಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ? (ದರ್ಜೆವಾರು ತಿಳಿಸಬೇಕು)

ಇ) ಕನ್ನಡ ಬೆರಳಚ್ಚು ಪ್ರೌಢ ದರ್ಜೆಯ ಪ್ರಥಮ ಪತ್ರಿಕೆಯ ಉತ್ತರ ಪತ್ರಿಕೆಗಳನ್ನು ಮನಸೋ ಇಚ್ಛೆ ಮೌಲ್ಯಮಾಪನ ಮಾಡಿರುವುದರಿಂದ, ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಅನುತ್ತೀರ್ಣರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಉ) ಕನ್ನಡ ಬೆರಳಚ್ಚು ಪ್ರೌಢ ದರ್ಜೆಯ ಪ್ರಥಮ ಪತ್ರಿಕೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಊ) ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸುವ ದೃಷ್ಟಿಯಲ್ಲಿ ಎಲ್ಲಾ ಕನ್ನಡ ಬೆರಳಚ್ಚು ಪ್ರೌಢ ದರ್ಜೆಯ ಪ್ರಥಮ ಪತ್ರಿಕೆಗಳನ್ನು ಮರುಮೌಲ್ಯಮಾಪನ ಮಾಡಿಸುವ ಬಗ್ಗೆ ಸರ್ಕಾರ ಇಚ್ಛಿಸುವುದೆ?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು):

ಅ)

1) ಪ್ರಥಮ ದರ್ಜೆ -12198

2) ಪ್ರೌಢದರ್ಜೆ -8613

3) ಪ್ರವೀಣ ದರ್ಜೆ - 49

ಆ)

1) ಪ್ರಥಮ ದರ್ಜೆ - 7476

2) ಪ್ರೌಢ ದರ್ಜೆ - 5133

3) ಪ್ರವೀಣ ದರ್ಜೆ - ಇಲ್ಲ

ಇ) ಇಲ್ಲ

ಉ) 2176

ಊ) ಉದ್ಭವಿಸುವುದಿಲ್ಲ.

Management of Junior College Bethamangala,

3336 - SRI. NARAYANASWAMY (Bethamangala): Will the Minister for Education and Parliamentary Affairs pleased to stage.

a) *Whether an Administrator was appointed for the management of Junior College, Bethamangala?*

b) *If so, when he was appointed?*

c) *The number of times the Administrator visited the above College since his appointment.*

d) *Whether term of the Administrator has expired;*

e) *If so when?*

f) *Whether the Govt. has handed over the Management off the above College to the Committee of Management.*

g) *If not, when it would be handed over to the Committee of Management?*

Shri. M. VEERAPPA MOILY (Minister for Education and Parliamentary Affairs)

a) Yes.

b) On 7-9-1981.

c) He has not visited the institution even once.

d) Yes.

e) Six months from Govt. Order No. RD 10 EST 78 dated 21.8.1981.

f) Not yet.

g) After the election and formation of the Managing Body.

ೋಲಾರ ಜಿಲ್ಲೆ ಬಂಗಾರು ಪೇಟೆಯ ಪದವಿ ಪೂರ್ವ ಮತ್ತು ಪದವಿ ಾಲೇಜುಗಳಲ್ಲಿ ಪಿ.ಯು.ಸಿ ಮತ್ತು ಪದವಿ ತರಗತಿಗಳ ವಿದ್ಯಾರ್ಥಿಗಳ ಸಂಖ್ಯೆ

3305 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ): ಮಾನ್ಯ ಶಿಕ್ಷಣ ಮತ್ತು ಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) *ಕೋಲಾರ ಜಿಲ್ಲೆ ಬಂಗಾರುಪೇಟೆಯ ಪದವಿ ಪೂರ್ವ ಮತ್ತು ಪದವಿ ಕಾಲೇಜುಗಳಕಲ್ಲಿ ಪಿ.ಯು.ಸಿ. ಮತ್ತು ಪದವಿ ತರಗತಿಗಳಲ್ಲಿರುವ ಹಾಲಿ ವಿದ್ಯಾರ್ಥಿಗಳ ಸಂಖೆ?*

ಬಿ) *ಮೇಲ್ಕಂಡ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸೇರ್ಪಡೆಯ ಗರಿಷ್ಟ ಮಿತಿಯನ್ನು ಹೆಚ್ಚಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆಯೇ?*

ಸಿ) *ಮೇಲ್ಕಂಡ ಕಾಲೇಜುಗಳಲ್ಲಿ ಹಾಲಿ ಕೆಲಸ ಮಾಡುತ್ತಿರುವ ಬೋಧಕರ ಸಂಖ್ಯೆ ಮತ್ತು ಖಾಲಿ ಹುದ್ದೆಗಳ ಸಂಖ್ಯೆ:*

ಡಿ) *ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಚಿವರು):

ಎ) ಪದವಿ ಪೂರ್ವ ತರಗತಿಗಳು : 654 ವಿದ್ಯಾರ್ಥಿಗಳು

ಪದವಿ ತರಗತಿಗಳು : 159 ವಿದ್ಯಾರ್ಥಿಗಳು

ಬಿ) ಪದವಿ ಪೂರ್ವ ತರಗತಿಗಳಿಗೆ ಹೆಚ್ಚಿನ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಬೇಕೆಂದು ಸುತ್ತೋಲೆಯನ್ನು ಹೊರಡಿಸಲಾಗಿದೆ. ಪದವಿ ತರಗತಿಗಳಿಗೆ ಸಂಬಂಧಿಸಿದಂತೆ ಅಂತಹ ಪ್ರಸ್ತಾವನೆ ಇಲ್ಲ.

ಸಿ) 14 (7 ಅರೆಕಾಲಿಕ ಉಪನ್ಯಾಸಕರೂ ಸೇರಿದಂತೆ)2 ಉಪನ್ಯಾಸಕರ ಹುದ್ದೆಗಳು ಖಾಲಿ ಇವೆ.

ಡಿ) ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಿವಿಧ ವಿಷಯಗಳಲ್ಲಿ ಖಾಲಿ ಇರುವ 271 ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಕರ್ನಾಟಕ ಲೋಕ ಸೇವಾ ಆಯೋಗವು ಈಗಾಗಲೇ ಅರ್ಜಿಗಳನ್ನು ಕರೆದಿದೆ. ಇದರ ಜೊತೆಗೆ 626 ಉಪನ್ಯಾಸಕರ ಹುದ್ದೆಗಳನ್ನು ಹೊಸದಾಗಿ ಸೃಷ್ಟಿಸಿ ಅವುಗಳನ್ನು ಸಹ ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ಭರ್ತಿ ಮಾಡಲಿ ಸರ್ಕಾರ ಶೀಘ್ರ ಕ್ರಮ ಕೈಗೊಳ್ಳುತ್ತಿದೆ. ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿ . ಬಂದ ಕೂಡಲೇ ಸದರಿ ಕಾಲೇಜಿನಲ್ಲಿರುವ ಉಪನ್ಯಾಸಕರ ಕೊರತೆಯನ್ನು ನೀಗಿಸಲಾಗುವುದು.

ಝೂಲ್ಕಿ ಮತ್ತು ಲೇಲ್ಯಾನ್‌ನಲ್ಲಿ ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸುವ ನಿರ್ಧಾರ

3310 - ಶ್ರೀ ಮನೋಹರ ಐನಾಪುರ. (ಬಳ್ಳೊಳ್ಳಿ): ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಝೂಲ್ಕಿ ಮತ್ತು ಲೇಲ್ಯಾನ್‌ನಲ್ಲಿ ಸಧ್ಯದಲ್ಲಿಯೋ 33 ಕೆ.ವಿ.ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸುವ ನಿರ್ಧಾರ ತೆಗೆದುಕೊಂಡಿರುವ ಬಗ್ಗೆ ಸರ್ಕಾರವು ಅನುಮತಿ ನೀಡುವ ಉದ್ದೇಶವಿದೆಯೆ?

ಆ) ಹಾಗಿದ್ದ ಪಕ್ಷದಲ್ಲಿ ಈ ಯೋಜನೆಗಳು ಯಾವಾಗ ಪೂರ್ಣಗೊಳ್ಳುವುವು?

ಇ) ಕರ್ನಾಟಕ ರಾಜ್ಯದಲ್ಲಿರುವ ಪಂಪ್‌ಸೆಟ್‌ಗಳಲ್ಲಿ ಇಂಡಿ ತಾಲ್ಲೂಕಿನಲ್ಲಿಯೇ ಅತಿ ಹೆಚ್ಚು ಪ್ರಮಾಣದ ಪಂಪ್‌ಸೆಪಟ್‌ಗಳು ಇರುವುದರಿಂದ ಧುಳ್ಕೇಡ್ (ಇಂಡಿ)ನಲ್ಲಿ ಮತ್ತೊಂದು 33 ಕೆ.ವಿ. ಉಪ ವಿದ್ಯುತ್ ಕೇಂದ್ರದ ಆವಶ್ಯಕತೆ ಇದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದ ಪಕ್ಷದಲ್ಲಿ ಇದು ಯಾವಾಗ ಸ್ಥಾಪಿಸಲ್ಪಡುತ್ತದೆ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):

ಅ) ಈಗ ಝೂಲ್ಕಿಯಲ್ಲಿರುವ 5 ಎಂ.ವಿ.ಎ. 33:11 ಕೆ.ವಿ.ವಿದ್ಯುತ್ ಕೇಂದ್ರದಲ್ಲಿ ಅದರ ಸಾಮರ್ಥ್ಯವನ್ನು ಹೆಚ್ಚಿಸಲು ಇನ್ನೂ ಒಂದು 5 ಎಂ.ವಿ.ಎ.33:11 ಕೆ.ವಿ. ಪರಿವರ್ತಕವನ್ನು ಅಳವಡಿಸಲು ಯೋಜಿಸಲಾಗಿದೆ. ಲೆಲ್ಯಾನ್‌ನಲ್ಲಿ ಒಂದು ಹೊಸ 5 ಎಂ. ವಿ.ಎ 33:11 ಕೆ.ವಿ. ಸಾಮರ್ಥ್ಯದ ವಿದ್ಯುತ್ ಕೇಂದ್ರವನ್ನು ಸ್ಥಾಪಿಸಲು ಯೋಜಿಸಲಾಗಿದೆ.

ಆ) ಒಂದು ಹೆಚ್ಚುವರಿ 5 ಎಂ.ವಿ. ಎ.33:11 ಕೆ.ವಿ. ಸಾಮರ್ಥ್ಯದ ಪರಿವರ್ತಕವನ್ನು ಝೂಲ್ಕಿಯ ವಿದ್ಯುತ್ ಕೇಂದ್ರದಲ್ಲಿ ಅಳವಡಿಸುವ ಯೋಜನೆಯನ್ನು 1991-92ರಲ್ಲಿಯೆ ಪೂರ್ಣಗೊಳಿಸುವ ಗುರಿ ಇದೆ. ಲೇಲ್ಯಾನ್‌ನಲ್ಲಿ ಸ್ಥಾಪಿಸುವ 5 ಎಂ.ವಿ.ಎ 33:11 ಕೆ.ವಿ. ವಿದ್ಯುತ್ ಕೇಂದ್ರದ ಯೋಜನೆಯು 1992-93ನೇ ವರ್ಷದಲ್ಲಿ ಪೂರ್ಣಗೊಳಿಸುವ ಗುರಿ ಇದೆ.

ಇ) ಸದ್ಯದಲ್ಲಿ, ಧುಲ್ಕೇಡ್(ಇಂಡಿ)ನಲ್ಲಿ 33 ಕೆ.ವಿ. ಉಪ ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆ ಇರುವುದಿಲ್ಲ.

ಈ) ಮೇಲೆ ಇದರಲ್ಲಿ ಕೊಟ್ಟಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಕೆ.ಜಿ.ಎಫ್.ನ ಗೋಲ್ಡನ್ ವ್ಯಾಲಿ ಎಜುಕೇಷನಲ್ ಟ್ರಸ್ಟ್ ಇಂಜಿನಿಯರಿಂಗ್ ಕಾಲೇಜಿನಿಂದ ಕ್ಯಾಪಿಟೇಷನ್ ಶುಲ್ಕದ ವಸೂಲಿ

3467 - ಶ್ರೀ ಎಂ. ಭಕ್ತವತ್ಸಲಂ (ಕೆ.ಜಿ.ಎಫ್): ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಜಿ.ಎಫ್.ನ ಗೋಲ್ಡನ್ ವ್ಯಾಲಿ ಎಜುಕೇಷನಲ್ ಟ್ರಸ್ಟ್ ಇಂಜಿನಿಯರಿಂಗ್ ಕಾಲೇಜಿನವರು ವಸೂಲು ಮಾಡುತ್ತಿರುವ ಕ್ಯಾಪಿಟೇಷನ್ ಶುಲ್ಕದ ಮೊತ್ತ?

ಶ್ರೀ ಎಂ. ವೀರಪ್ರ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಈ ವಿಷಯವು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಕೆ.ಜಿ.ಎಫ್.ನ ಅನುದಾನಿತ, ಅನುದಾನ ರಹಿತ, ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವವರ ವೇತನ

3466 - ಶ್ರೀ ಬಕ್ತವತ್ಸಲಂ (ಕೆ.ಜಿ.ಎಫ್): ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಜಿ.ಎಫ್. ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ, ಅನುದಾನರಹಿತ ಮತ್ತು ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉಪಾಧ್ಯಾಯರುಗಳಿಗೆ ಅವರು ನೇಮಕಾತಿಗೊಂಡ ದಿನಾಂಕದಿಂದ ವೇತನವನ್ನು ಪಾವತಿ ಮಾಡಲಾಗಿದೆಯೇ?

ಶ್ರೀ. ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು):

ಅ) ನಿಗಧಿಪಡಿಸಿದ ಸಮಯದಲ್ಲಿ ವೇತನವನ್ನು ಶಿಕ್ಷಕರುಗಳಿಗೆ ನೀಡಲಾಗುತ್ತಿದೆ.

ಹಸಿರು ಮತ್ತು ಕೇಸರಿ ಪಡಿತರ ಚೀಟಿಗಳನ್ನು ಜಾರಿಗೆ ತರುವುದು.

3405 - ಶ್ರೀ ಜೌಡ ರೆಡ್ಡಿ.(ಚಿಂತಾಮಣಿ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಗ್ರಾಮಗಳಲ್ಲಿರುವ ಬಡವರು ಹಾಗೂ ದುರ್ಬಲ ವರ್ಗದ ಜನರು ಆಹಾರ ಪದಾರ್ಥಗಳನ್ನು ಪಡೆಯಲು ಹಸಿರು ಹಾಗೂ ಕೇಸರಿ ಪಡಿತರ ಚೀಟಿಗಳನ್ನು ಎಂದಿನಿಂದ ಜಾರಿಗೆ ತರಲಾಯಿತು?

ಆ) ಶ್ರೀಮಂತರು ಹಾಗೂ ಆರ್ಥಿಕವಾಗಿ ಮುಂದುವರಿದ ಜನರಿಗೆ ಕಾನೂನು ಬಾಹಿರವಾಗಿ ಹಸಿರು ಹಾಗೂ ಕೇಸರಿ ಪಡಿತರ ಚೀಟಿಗಳನ್ನು ವಿತರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಅಂತಹ ಪಡಿತರ ಚೀಟಿಗಳನ್ನು ರದ್ದುಪಡಿಸಲು ಸರ್ಕಾರ ಕ್ರಮ ತೆಗೆದುಕೊಂಡಿದೆಯೇ?

ಈ) ಸುಮಾರು ಶೇಕಡ 50ರಷ್ಟು ಮಂದಿ ಬಡತನ ರೇಖೆಯಿಂದ ಕೆಳಮಟ್ಟದಲ್ಲಿರುವ ಗ್ರಾಮದ ಜನರಿಗೆ ಹಸಿರು ಹಾಗೂ ಕೇಸರಿ ಪಡಿತರ ಚೀಟಿಗಳನ್ನು ವಿತರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) *ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಪುನರ್ ಸಮೀಕ್ಷೆ ನಡೆಸಿ ನಿಜವಾಗಿಯೂ ಅಗತ್ಯ ಇರುವವರಿಗೆ ಪಡಿತರ ಚೀಟಿಗಳನ್ನು ಕಾನೂನಿನ ರೀತ್ಯಾ ವಿತರಿಸಲು ಕ್ರಮ ಕೈಗೊಳ್ಳುವುದೇ?*

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ದಿನಾಂಕ:01-11-1985 ರಂದು ಜಾರಿಗೆ ತರಲಾಗಿದೆ.

ಆ) -ಹೌದು-

ಇ) ಇಂತಹ ಹೆಚ್ಚುವರಿ ಪಡಿತರ ಚೀಟಿಗಳನ್ನು ಪತ್ತೆ ಮಾಡಿ ರದ್ದುಪಡಿಸಿ ಅರ್ಹ ಕುಟುಂಬದವರಿಗೆ ಹಾಗೂ ಬಿಟ್ಟು ಹೋಗಿರುವ ಕುಟುಂಬಸ್ಥರಿಗೆ ಹಸಿರು ಮತ್ತು ಕೇಸರಿ ಪಡಿತರ ಚೀಟಿಗಳನ್ನು 'ಗಾಂಧಿಜಯಂತಿ' 1991ರ ಮುನ್ನ ವಿತರಿಸುವಂತೆ ಈಗಾಗಲೇ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಈ) -ಹೌದು ಸ್ವಲ್ಪ ಮಟ್ಟಿಗೆ-

ಉ) ಹಸಿರು ಕಾರ್ಡುಗಳ ಸಮೀಕ್ಷೆ ನಡೆಸಿ, ಹೆಚ್ಚುವರಿ ಹಸಿರು ಕಾರ್ಡುಗಳನ್ನು ಪತ್ತೆ ಹಚ್ಚಿ ರದ್ದುಪಡಿಸಿ ಬಿಟ್ಟುಹೋದ ಅರ್ಹ ಕುಟುಂಬಗಳಿಗೆ ಹೊಸದಾಗಿ ಹಸಿರು ಕಾರ್ಡು ನೀಡುವಂತೆ ಹಾಗೂ ಈ ಕಾರ್ಯವನ್ನು ಮಹಾತ್ಮಾಗಾಂಧಿ ಜಯಂತಿಯ ದಿನವಾದ 02-10-91 ರೊಳಗೆ ಪೂರೈಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸರ್ಕಾರವು ಸೂಚಿಸಿದೆ.

ಚಿಂತಾಮಣಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಿಂದ ವರ್ಗಾವಣೆ ಹೊಂದಿರುವ ಉಪನ್ಯಾಸಕರು

3404 - ಶ್ರೀ ಚೌಡರೆಡ್ಡಿ (ಚಿಂತಾಮಣಿ): ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1990-91ನೇ ಸಾಲಿನಲ್ಲಿ ಚಿಂತಾಮಣಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಿಂದ ವರ್ಗಾವಣೆ ಹೊಂದಿರುವ ಉಪನ್ಯಾಸಕರ ಸಂಖ್ಯೆ ಎಷ್ಟು? (ವಿಷಯವಾರು ಮಾಹಿತಿ ನೀಡುವುದು)*

ಆ) *ಈ ವರ್ಗಾವಣೆ ಹೊಂದಿರುವ ಉಪನ್ಯಾಸಕರ ಜಾಗಕ್ಕೆ ವರ್ಗಾವಣೆಯಾಗಿ ಬಂದಿರುವ ಬದಲಿ ಉಪನ್ಯಾಸಕರ ಸಂಖ್ಯೆ ಎಷ್ಟು? (ವಿಷಯವಾರು ಮಾಹಿತಿ ನೀಡುವುದು)*

ಇ) *ಬಹಳಷ್ಟು ವಿಷಯಗಳಲ್ಲಿ ಸರಿಯಾಗಿ ಉಪನ್ಯಾಸಕರಿಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು):

ಅ) 9.

ಇಂಗ್ಲಿಷ್	2
ಸಂಸ್ಕೃತ	1
ಚರಿತ್ರೆ	1

ರಾಜ್ಯಶಾಸ್ತ್ರ	1
ತತ್ವಶಾಸ್ತ್ರ	1
ವಾಣಿಜ್ಯಶಾಸ್ತ್ರ	1
ಗಣಿತ ಶಾಸ್ತ್ರ	2

ಆ) 3.

ರಾಜ್ಯ ಶಾಸ್ತ್ರ	1
ತತ್ವಶಾಸ್ತ್ರ	1
ಗಣಿತ ಶಾಸ್ತ್ರ	1

ಇ) ಬಂದಿದೆ.

ಟೌನ್ ಕೋ-ಆಪರೇಟಿವ್ ಬ್ಯಾಂಕ್ ಚುನಾವಣೆ

3402 - ಶ್ರೀ ಚೌಡಾರೆಡ್ಡಿ (ಚಿಂತಾಮಣಿ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ಟೌನ್ ಕೋ-ಆಪರೇಟಿವ್ ಬ್ಯಾಂಕ್ 1991ರಲ್ಲಿ ಚುನಾವಣೆ ನಡೆಸಿದೆಯೇ? ಹಾಗಿದ್ದಲ್ಲಿ ಎಂದು ನಡೆಸಿದೆ.*

ಆ) *ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಚಿಕ್ಕಬಳ್ಳಾಪುರ ಇವರ ಮುಂದೆ ಚುನಾವಣೆ ದಾವೆ ಹೂಡಲಾಗಿದೆಯೇ? ಮರು ಚುನಾವಣೆಗೆ ಆದೇಶ ನೀಡಿರುವುದು ನಿಜವೇ?*

ಇ) *ಟೌನ್ ಕೋ ಆಪರೇಟಿವ್ ಬ್ಯಾಂಕಿನ ಮಾಜಿ ಚೇರ್ಮನ್ ಬ್ಯಾಂಕಿನ ವ್ಯವಹಾರ ನಡೆಸುತ್ತಿರುವುದು ನಿಜವೇ?*

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು)

ಅ) ಹೌದು. ದಿನಾಂಕ 28-2-1991.

ಆ) ಹೌದು, ದಿನಾಂಕ 28-2-1991ರ ಚುನಾವಣೆ ವಜಾ ಮಾಡಲಾಗಿದೆ.

ಇ) ಹೌದು,

THEFT OF ELECTRIC POWER BY SRI VENKATESHWARA TALKIES BAGEPALLI.

3761 - Sri. C.V. VENKATARAYAPPA(Bagepalli): Will the Minister of State for Energy be pleased to state.

a) *The total units of electricity consumed by Sri Venkateswara Talkies Bagepalli for the period from 1.9.1988 to 1.9.1991 (month-wise details be given).*

b) *The units of electricity consumed on average for the exhibition of a film?*

c) *Total No. of films exhibited during the period and whether the same talkies with the power consumed?*

d) *Whether it is not a fact that a case had been registrered against the owner of the talkies for theft of electricity?*

e) *If so, the panalty imposed thereon?*

f) *Whether the entire penalty is recovered, if not, action taken to recover the balance.*

Shri M. RAMAPPA (MINISTER OF STATE FOR ENERGY)

a) 35,265 units have been consumed by Sri Venkateswara Talkies Bagepalli from 1.9.1988 to 1.9.1991 and monthwise details furnished below :

Month	Units
Septembar 1988	963
October 1988	1000
November 1988	990
December 1988	870'
January 1989	720
February 1989	610
March 1989	580
April 1989	520
May 1989	190
June 1989	539
July 1989	654
August 1989	560
September 1989	470
October 1989	490
November 1989	400
December 1989	355
January 1990	750
February 1990	770
March 1990	770
April 1990	860
May 1990	800
June 1990	467
July 1990	1140
August 1990	1180
September 1990	1520

November 1990	1080
December 1990	1600
January 1991	1700
February 1991	1600
March 1991	1600
April 1991	1620
May 1991	1600
June 1991	1365
July 1991	2030
August 1991	1482

b) 20 Units.

c) Information regarding the number exhibited by the talkies is not ıvailable in the board. The power consumed during this period is 35,265 ınits.

d) Yes, a case has been registered at Bagepally police station.

e) Rs. 37,586-00.

f) 50% of the amount Rs. 18,793/- has been recovered. Appeal of the consumer is pending with Superintending Engineer (Electrical) Tumkur.

ನ್ಯಾಷನಲ್ ಕೋ-ಅಪರೇಟಿವ್ ಬ್ಯಾಂಕ್ ನಿ. ಬೆಂಗಳೂರು ಇದರಲ್ಲಿರುವ ಮ್ಯಾನೇಜರ್ ಮತ್ತು ಅಕೌಂಟೆಂಟ್‌ಗಳ ಸಂಖ್ಯೆ.

3308 - ಶ್ರೀ ಪಿ.ಸಿ. ಸಿದ್ದಣ್ಣ ಗೌಡರ್ (ಕಲಘಟಗಿ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್ ನಿ, ಬೆಂಗಳೂರು ಇದರಲ್ಲಿ ಕೆಲಸ ನಿರ್ವಹಿಸುತ್ತಿರುವ ಮಾನೇಜರ್‌ಗಳು, ಅಸಿಸ್ಟೆಂಟ್ ಮ್ಯಾನೇಜರುಗಳು ಹಾಗೂ ಸೀನಿಯರ್ ಅಕೌಂಟೆಂಟ್‌ಗಳ . ಸಂಖ್ಯೆ ಎಷ್ಟು? (ಶಾಖಾವಾರು ವಿವರ ನೀಡುವುದು)

ಆ) ಇದರಲ್ಲ ಪರಿಶಿಷ್ಟ ಜಾತಿ. ಪರಿಶಿಷ್ಟ ವರ್ಗ ಹಾಗೂ ಇತರ ಹಿಂದುಳಿದ ವರ್ಗಗಳಿಗೆ ಸೇರಿದವರ ಸಂಖ್ಯೆ ಎಷ್ಟು?

ಇ) ಮ್ಯಾನೇಜರ್ ಅಸಿಸ್ಟೆಂಟ್ ಮ್ಯಾನೇಜರ್ ಹಾಗೂ ಸೀನಿಯರ್ ಅಕೌಂಟೆಂಟ್ ಹುದ್ದೆಗಳನ್ನು ತುಂಬುವಾಗ ಮೀಸಲಾತಿ ನಿಯಮಗಳನ್ನು ಪಾಲಿಸಲಾಗಿದೆಯೇ?

ಈ) ಇಲ್ಲದಿದ್ದಲ್ಲಿ ಸರ್ಕಾರದ ಮೀಸಲಾತಿ ನಿಯಮ ಆದೇಶಗಳನ್ನು ಉಲ್ಲಂಘಿಸಿದ ಬಗ್ಗೆ ಆಡಳಿತ ಮಂಡಳಿಯ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಎಸ್. ಆರ್. ಮೋರೆ (ಸಹಕಾರ ರಾಜ್ಯ ಸಚಿವರು):

ಅ) ಮ್ಯಾನೇಜರ್ ಅಸಿಸ್ಟೆಂಟ್ ಸೀನಿಯಲ್ ಮ್ಯಾನೇಜರ್ ಅಕೌಂಟೆಂಟ್.

ಜಯನಗರ	1 (ಇನ್‌ಚಾರ್ಜ್)	-	-
ಬನಶಂಕರಿ	1	-	-

ಆ) ಇಲ್ಲ.

ಇ) ಇಲ್ಲ.

ಈ) ಪರಿಶೀಲಿಸಲಾಗುವುದು.

ರಾಜ್ಯ ಮಟ್ಟದ ಮಾರುಕಟ್ಟೆ ಸಮಿತಿಗಳ ನಿವ್ವಳ ಆದಾಯ.

3286 - ಶ್ರೀ ಸಾದತ್ ಅಲಿಖಾನ್ (ಚನ್ನಪಟ್ಟಣ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯ ಮಟ್ಟದ ಮಾರುಕಟ್ಟೆ ಸಮಿತಿಗಳ ಮಹಾಮಂಡಲದ ನಿವ್ವಳ ಆದಾಯವೆಷ್ಟು?

ಆ) ರಾಜ್ಯದಲ್ಲಿರುವ ಮಾರುಕಟ್ಟೆ ಸಮಿತಿಗಳ ನಿವ್ವಳ ಆದಾಯವೆಷ್ಟು?

ಇ) ಪ್ರತಿ ಮಾರುಕಟ್ಟೆ ಸಮಿತಿಯಲ್ಲಿ ರಾಜ್ಯ ಮಟ್ಟದ ನಿಯಂತ್ರಿತ ಮಾರುಕಟ್ಟೆ ಬ್ಯಾಂಕ್‌ನ್ನು ಸ್ಥಾಪಿಸಿರುವುದರಿಂದ ರೈತರು ಮತ್ತು ವರ್ತಕರುಗಳಿಗೆ ತಮ್ಮ ವಹಿವಾಟನ್ನು ನಡೆಸಲು ಅನುಕೂಲವಾಗುವುದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಅಂತಹ ಬ್ಯಾಂಕನ್ನು ಸ್ಥಾಪಿಸಲಾಗುವುದೇ?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು)

ಅ) ರಾಜ್ಯ ಮಟ್ಟದಲ್ಲಿ ಮಾರುಕಟ್ಟೆ ಸಮಿತಿಗಳ ಮಹಾ ಮಂಡಳಿ ಯಾವುದು ಇಲ್ಲ. ಆದರೆ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಎಂಬ ಮಂಡಳಿ ಇದೆ ಸದರಿ ಮಂಡಳಿಗೆ 1989-90ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಂದ ಬಂದಿರುವ ವಂತಿಗೆ 111.01ಲಕ್ಷ ರೂಗಳಾಗಿರುವುದು ಹಾಗೂ ಸರ್ಕಾರದಿಂದ ರೂ. 16.00 ಲಕ್ಷ ಅನುದಾನವಾಗಿ ಬಂದಿರುವುದು.

ಆ) 852.70 ಲಕ್ಷ ರೂಪಾಯಿಗಳು.

ಇ) ಹೌದು.

ಈ) ಇಂತಹ ಬ್ಯಾಂಕನ್ನು ಸ್ಥಾಪಿಸಲು ಅಜ್ಜಿಬಾಳ ಹೆಗ್ಗಡೆ ನೇತೃತ್ವದಲ್ಲಿ ನೇಮಿಸಿದ ಸಮಿತಿಯು ಶಿಫಾರಸ್ಸು ಮಾಡದೇ ಇರುವುದರಿಂದ ಈ ಪ್ರಸ್ತಾವವನ್ನು ಸರ್ಕಾರ ಕೈಬಿಟ್ಟಿದೆ.

ಗ್ರಾಮಾಂತರ ಪ್ರದೇಶತಗಳಲ್ಲಿ ವಿದ್ಯುಚ್ಛಕ್ತಿ ಮಂಡಲಿಯ ಸಾಲಾಳುಗಳು ತೃಪ್ತಿಕರವಾಗಿ ಕೆಲಸ ಮಾಡದೆ ಇರುವುದು.

3284 - ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಗ್ರಾಮಾಂತರ ಪ್ರದೇಶಗಳಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಸಾಲಾಳುಗಳು ತೃಪ್ತಿಕರವಾಗಿ ಕೆಲಸ ಮಾಡುತ್ತಿಲ್ಲವೆಂಬುದು ನಿಜವೆ?

ಆ) ಈ ದಿಸೆಯಲ್ಲಿ ಸರ್ಕಾರವು ತೆಗೆದುಕೊಂಡ ಕ್ರಮವೇನು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):

ಅ) ಸಾಲಾಳು ಸಿಬ್ಬಂದಿಯವರ ಕಾರ್ಯಲೋಪದ ಪ್ರಕರಣಗಳು ಮಂಡಳಿಯ ಗಮನಕ್ಕೆ ಬಂದಾಗ ಸಂಬಂಧಪಟ್ಟ ಸಾಲಾಳುಗಳ ಮೇಲೆ ಸೂಕ್ತವಾಗ ಕ್ರಮ ತೆಗೆದುಕೊಂಡು ಅವರು ಸಾರ್ವಜನಿಕ ಬಳಕೆದಾರರಿಗೆ ಸಮಾಧಾನಕರವಾಗುವಂತೆ ಕೆಲಸ ಮಾಡಲು ಏರ್ಪಾಟುಮಾಡಲಾಗುವುದು.

ಆ) ಮೂಲತಃ ಕರ್ತವ್ಯಲೋಪವೇನಾದರೂ ನಿರೂಪಣೆಯಾದಲ್ಲಿ, ತಪ್ಪಿತಸ್ಥ ಸಿಬ್ಬಂದಿ ವರ್ಗದ ಮೇಲೆ ಸಿ.ಡಿ.ಸಿ.ಎ.ನಿಯಾಮವಳಿಯ ಪ್ರಕಾರ ಕ್ರಮ ಜರುಗಿಸಲಾಗುವುದು.

ತಾತ್ಕಾಲಿಕವಾಗಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರ ಸಂಖ್ಯೆ.

3285 - ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಸುಮಾರು 5-6 ವರ್ಷಗಳಿಂದ ತಾತ್ಕಾಲಿಕವಾಗಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರ ಸಂಖ್ಯೆ ಎಷ್ಟು?

ಆ) ಅಂತಹ ಶಿಕ್ಷಕರ ಸೇವೆಯನ್ನು ಖಾಯಂಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಇ) ಹಾಗಿದ್ದಲ್ಲಿ ಅಂತಹ ಶಿಕ್ಷಕರನ್ನು ಸೇವೆಯಲ್ಲಿ ಖಾಯಂಗೊಳಿಸಲು ಯಾವ ನಿಯಮವನ್ನು ಅನುಸರಿಸಲಾಗಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು)

ಅ) ಪ್ರಾಥಮಿಕ ಶಾಲೆಗಳಲ್ಲಿ 5-6ವರ್ಷಗಳಿಂದ ತಾತ್ಕಾಲಿಕವಾಗಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರು ಇರುವುದಿಲ್ಲ. ಆದರೆ 1985ನೇ ಸಾಲಿನಿಂದ 3226 ಶಿಕ್ಷಕರುಗಳು ಗುತ್ತಿಗೆ ಆದಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ. ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ನಾಲ್ಕು ಜನ ಉಪನ್ಯಾಸಕರು ಹಾಗೂ ಪದವಿ ಪೂರ್ವ ಕಾಲೇಜಿನಲ್ಲಿ 749 ಜನ ಗುತ್ತಿಗೆ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ.

ಆ) ಸರ್ಕಾರದ ಆದೇಶ ಸಂಖ್ಯೆ : ಇಡಿ 289 ಎನ್ಇಎಸ್88 ದಿನಾಂಕ 20-2-91 ರಲ್ಲಿ ಗುತ್ತಿಗೆ ಶಿಕ್ಷಕರ ಸೇವೆಯನ್ನು ಸರ್ಕಾರಿ ಸೇವೆಯಲ್ಲಿ ವಿಲೀನಗೊಳಿಸಲು ಆದೇಶಿಸಲಾಗಿದೆ. ಗುತ್ತಿಗೆ ಆಧಾರದ ಉಪನ್ಯಾಸಕರನ್ನು ಆದೇಶ ಸಂಖ್ಯೆ: ಇಡಿ 359 ಡಿಪಿಎ 91 ರಲ್ಲಿ ದಿನಾಂಕ 27-8-91ರಲ್ಲಿ ಸೇವೆಯನ್ನು ಸಕ್ರಮಗೊಳಿಸಲು ಆದೇಶಿಸಿದೆ.

ಇ) ಮೇಲಿನ ಸರ್ಕಾರಿ ಆದೇಶದಲ್ಲಿ ತಿಳಿಸಿರುವಂತೆ ಸದರಿಯವರ ಸೇವೆಯನ್ನು ಸಕ್ರಮಗೊಳಿಸಲಾಗಿದೆ.

ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು 1991ನೇ ವರ್ಷದಲ್ಲಿ ಜಾಹೀರಾತಿಗಾಗಿ ಖರ್ಚು ಮಾಡಿರುವ ಹಣ.

3468 - ಡಾ: ಮಲ್ಲಿಕ್ ರೆಡ್ಡಿ(ಯಾದಗೀರ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು 1991ನೇ ವರ್ಷದಲ್ಲಿ ಜಾಹೀರಾತಿಗಾಗಿ ಖರ್ಚು ಮಾಡಿರುವ ಒಟ್ಟು ವೆಚ್ಚವೆಷ್ಟು (ತಿಂಗಳುವಾರು ಅಂಕಿ ಅಂಶಗಳನ್ನು ನೀಡುವುದು)

ಆ) ಎಷ್ಟು ಜಾಹೀರಾತುಗಳನ್ನು ಬಿಡುಗಡೆ ಮಾಡಿದೆ. ಅದರ ಮೊತ್ತವೆಷ್ಟು?

ಇ) ಜಾಹೀರಾತುಗಳನ್ನು ನೀಡಲು ವಿನಂತಿಸಿದ್ದು ಬಿಡುಗಡೆ ಮಾಡದೆ ಇರುವವರ ಹೆಸರು ಮತ್ತು ಬಿಡುಗಡೆ ಮಾಡದಿರಲು ಕಾರಣಗಳು?

ಈ) ಸರ್ಕಾರವು ಆಹಾರ ಮತ್ತು ನಾಗರೀಕ ಸರಬರಾಜು ನಿಗಮಕ್ಕೆ ಜಾಹೀರಾತುಗಳನ್ನು ಬಿಡುಗಡೆ ಮಾಡದಿರುವಂತೆ ನಿರ್ದೇಶನ ನೀಡಿರುವುದು ನಿಜವೇ?

ಉ) ಹಾಗಿದ್ದಲ್ಲಿ, ಎಂದಿನಿಂದ ಮತ್ತು ಇದಕ್ಕೆ ಕಾರಣಗಳೇನು?

ಶ್ರೀ ಟಿ.ಎಸ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಮಾರ್ಚ್ 1991ರಲ್ಲಿ ರೂ. 2,500-00 ಹಾಗೂ ಮೇ 1991ರಲ್ಲಿ ರೂ. 1,000-00 ಒಟ್ಟು ರೂ.3,500-00 ಗಳನ್ನು ಜಾಹೀರಾತಿಗಾಗಿ ಖರ್ಚು ಮಾಡಲಾಗಿದೆ.

ಆ) ಎರಡು ಜಾಹೀರಾತುಗಳನ್ನು ಬಿಡುಗಡೆ ಮಾಡಿದೆ. ತಗುಲಿದ ವೆಚ್ಚ ಒಟ್ಟು ರೂ. 3,500-00 ಗಳು.

ಇ) -ಅನುಬಂಧ ಲಗತ್ತಿಸಿದೆ-

ಈ) ಹೌದು- ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ಒಳಪಟ್ಟಂತೆ ಎಲ್ಲಾ ಸಾರ್ವಜನಿಕ ಉದ್ಯಮಗಳಿಗೆ.

ಉ) ಆರ್ಥಿಕ ಮಿತವ್ಯಯದ ಕಾರಣ 1982ನೇ ವರ್ಷದಿಂದ ಜಾರಿ ಮಾಡಿದೆ.

ANNEXURE

1. Lohitha, Kannada Monthly,
   65/10, 6th Main Road,
   2nd Cross, 4th Block,
   Thygarajanagar, Bangalore.
2. The Secretary,
   Institute of Parliament Officers,
   Gandhi Bhavan, Kumarpark East,
   Bangalore.
3. Upliftment of the weaker section
   (India's National Fortnights)
   No. 10/5, Ramappa Road,
   Fraser Town, Bangalore.
4. The Times of India,
   40/7 SNB Lower, 2nd Flor,
   M.G.Road, Bangalore.
5. K.L. Annigeri, Editor,
   Spoorthi Kannada Monthly,
   Gadag.
6. Karnataka Journalist Council,
   No. 56, 24th Cross, 6th Block

Rajajinagar, Bangalore.
7. Gulshan, Home for the Blind,
A-51, Gulmohar park, New Delhi.
8. Lal Bahadur Mountaining Institute,
Shastri Bhavan, No.8, Susheela Road,
Chikkamavalli, Bangalore.
9. Defence Publication Services,
Post Box No. 5760, 3/6, SRTN,
New Delhi.
10. Kannada Vishwa Bharathi,
Publications, Hubli.
11. Indian Express, Madhurai Pvt. Ltd.,
1 Queens Road, Banglore.

1990-91ನೇ ಸಾಲಿನಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುದ್ದೀಕರಿಸಲು ನಿಗಧಿ ಪಡಿಸಿದ ಗುರಿ.

3273 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1990-91ನೇ ಸಾಲಿನಲ್ಲಿ ನೀರಾವರಿ ಪಂಪು ಸೆಟ್ಟುಗಳನ್ನು ವಿದ್ಯುದ್ದೀಕರಿಸಲು ನಿಗಧಿಪಡಿಸಿದ್ದ ಗುರಿ ಎಷ್ಟು?

ಆ) ಇವುಗಳಲ್ಲಿ ಈ ಅವಧಿಯಲ್ಲಿ ಎಷ್ಟು ಪಂಪು ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆ?

ಇ) ವಿದ್ಯುದ್ದೀಕರಣಕ್ಕಾಗಿ ಬಾಕಿ ಇರುವ ಸಂಖ್ಯೆ ಎಷ್ಟು?

ಈ 1991-92ನೇ ಸಾಲಿನಲ್ಲಿ ಎಷ್ಟು ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಿಸಲು ಉದ್ದೇಶಿಸಲಾಗಿದೆ?

ಉ) ಜುಲೈ 1991ರ ಅಂತ್ಯದ ವರೆವಿಗೆ ವಿದ್ಯುದ್ದೀಕರಿಸಿದ ಸಂಖ್ಯೆ ಎಷ್ಟು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು)

ಅ) 1990-91ನೇ ಸಾಲಿನಲ್ಲಿ 60,000 ನೀರಾವರಿ ಪಂಪು ಸೆಟ್ಟುಗಳನ್ನು ವಿದ್ಯುದ್ದೀಕರಿಸುವ ಗುರಿಯನ್ನು ನಿಗಧಿ ಪಡಿಸಲಾಗಿದೆ.

ಆ) ಈ ಅವಧಿಯಲ್ಲಿ 69,607 ಪಂಪು ಸೆಟ್ಟುಗಳನ್ನು ವಿದ್ಯುದ್ದೀಕರಿಸಿದೆ.

ಇ) 1990-91ನೇ ಸಾಲಿನಲ್ಲಿನ ಮಾಡಿದ ಸಾಧನೆಯು ನಿಗದಿಪಡಿಸಲಾದ ಗುರಿಗಿಂತಲೂ ಹೆಚ್ಚಾಗಿದೆ.

ಈ) 1991-92ನೇ ಸಾಲಿನಲ್ಲಿ 60,000 ಪಂಪು ಸೆಟ್ಟುಗಳನ್ನು ವಿದ್ಯುದ್ದೀಕರಿಸಲು ಉದ್ದೇಶಿಸಲಾಗಿದೆ.

ಉ) ಜುಲೈ 1991ರ ಅಂತ್ಯದ ವರೆಗೆ 12,453ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಿಸಲಾಗಿದೆ.

3277 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) *ಬೆಂಗಳೂರು ನಗರದಲ್ಲಿ ಗಣಕೀಕರಣ ವ್ಯವಸ್ಥೆ ಹೊಂದಿರುವ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಗಳು ಯಾವುವು.*

2) *ಪ್ರಸ್ತುತ ಸಾಲಿನಲ್ಲಿ ಗಣಕೀಕರಣ ವ್ಯವಸ್ಥೆಯನ್ನು ಅಳವಡಿಸಲು ಉದ್ದೇಶಿತ ಕಛೇರಿಗಳು ಯಾವುವು?*

3) *ಈ ಗಣಕೀಕರಣ ಯಂತ್ರದಿಂದ ಪ್ರತಿನಿತ್ಯ ಸರಾಸರಿ ನೀಡುವ ಲೈಸೆನ್ಸ್ ಎಷ್ಟು ಮತ್ತು ನೇರವಾಗಿ (ಗಣಕೀಕರಣ ಯಂತ್ರದ ಮೂಲಕವಲ್ಲದೆ) ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ಯಶವಂತಪುರದ ಕಛೇರಿಯಲ್ಲಿ ಎಷ್ಟು?*

4) *ಈ ಗಣಕೀಕರಣದ ಯಂತ್ರದ ಮೂಲಕ ಅಭ್ಯರ್ಥಿಗಳಿಗೆ ಕನ್ನಡದಲ್ಲಿಯೇ ಪ್ರಶ್ನೆ ಕೇಳಲಾಗುತ್ತಿದೆಯೇ?*

5) *ಇಲ್ಲದಿದ್ದಲ್ಲಿ, ಸರ್ಕಾರ ಈ ಯಂತ್ರದ ಮೂಲಕ ಪ್ರಶ್ನೆ ಕೇಳಲು ಕ್ರಮ ಕೈಗೊಂಡಿದೆಯೇ?*

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):

1) ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ಯಶವಂತಪುರ)). ಇಂದಿರಾನಗರ, ಕೋರಮಂಗಲ.

2) ಪ್ರಾದೇಶಿಕ ಸಾರಿಗೆ ಕಛೇರಿ, ಮೈಸೂರು ಬೆಂಗಳೂರು (ಜಯನಗರ), ಧಾರವಾಡ ಮತ್ತು ಮಂಗಳೂರು.

3) ಗಣಕೀಕರಣ ಮೂಲಕ	ನೇರವಾಗಿ
-23-	-46-

4) ಸದ್ಯಕ್ಕಿಲ್ಲ.

5) ಹೌದು, ಎರಡೂ ಬಾಷೆಗಳಲ್ಲಿ,

ಬೆಂಗಳೂರಿನಲ್ಲಿ 1991ನೇ ಜುಲೈ ಅಂತ್ಯದವರೆಗೆ ವಿದ್ಯುತ್‌ಚ್ಛಕ್ತಿ ಗೃಹ ಮತ್ತು ಗೃಹೇತರ ಬಳಕೆದಾರರ ಸಂಖ್ಯೆ.

3276 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕ ಪೇಟೆ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.?

ಅ) *ಬೆಂಗಳೂರಿನಲ್ಲಿ 1991ನೇ ಜುಲೈ ಅಂತ್ಯದವರೆಗಿರುವ ವಿದ್ಯುಚ್ಛಕ್ತಿ ಗೃಹ ಮತ್ತು ಗೃಹೇತರ ಬಳಕೆದಾರರ ಸಂಖ್ಯೆ ಎಷ್ಟು?*

ಆ) *ಬೆಂಗಳೂರು ನಗರದಲ್ಲಿ ವಿದ್ಯುಚ್ಛಕ್ತಿ ಬಿಲ್ಲುಗಳನ್ನು ಗಣಕ ಯಾಂತ್ರೀಕರಿಸುವ ಪ್ರಸ್ತಾವವೇನಾದರೂ ಇದೆಯೇ?*

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):

ಅ) ಜುಲೈ 1991ನೇ ಅಂತ್ಯದವರೆಗಿನ ವಿವರಗಳನ್ನು ಈ ಕೆಳಗೆ ನಮೂದಿಸಲಾಗಿದೆ.

10 ಗೃಹ ಬಳಕೆದಾರರು...7,36,503

2) ಗೃಹೇತರ ಬಳಕೆದಾರರು ... 2,03,663

ಆ) ವಿದ್ಯುಚ್ಛಕ್ತಿ ಬಿಲ್ಲುಗಳನ್ನು ಗಣಕ ಯಾಂತ್ರೀಕರಣಗೊಳಿಸುವ ಪ್ರಸ್ತಾವನೆಯು ಮಂಡಳಿಯ ಪರಿಶೀಲನೆಯಲ್ಲಿದೆ.

ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ವಿದ್ಯುದ್ದೀಪಗಳನ್ನು ಒದಗಿಸುವುದು.

3275 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಂಗಳೂರು ನಗರದಲ್ಲಿರುವ ಕೊಳಚೆ ಪ್ರದೇಶಗಳಿಗೆ 1990-91ನೇ ಸಾಲಿನಲ್ಲಿ ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ವಿದ್ಯುದ್ದೀಪಗಳನ್ನು ಒದಗಿಸಲು ನಿಗದಿಪಡಿಸಿದ್ದ ಗುರಿ ಎಷ್ಟು?

ಆ) ಇದರಲ್ಲಿ 1990-91ನೇ ಸಾಲಿನಲ್ಲಿ ಕೊಳಚೆ ಪ್ರದೇಶಗಳಲ್ಲಿನ ಎಷ್ಟು ಮನೆಗಳಿಗೆ ವಿದ್ಯುದ್ದೀಪಗಳನ್ನು ಒದಗಿಸಲಾಗಿದೆ?

ಇ) ಇವುಗಳಲ್ಲಿ ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿನ ಸಂಖ್ಯೆ ಎಷ್ಟು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು)

ಅ) ಈ ಯೋಜನೆಯು ಗ್ರಾಮಾಂತರ ಪ್ರದೇಶಗಳಿಗೆ ಮಾತ್ರ ಅನ್ವಯಿಸುತ್ತದೆ.

ಆ) ಮೇಲೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ನ್ಯಾಷನಲ್ ಸಹಕಾರ ಬ್ಯಾಂಕ್ ನಿಯಮಿತ ಬೆಂಗಳೂರು ಇದರಲ್ಲಿ ಕೆಲಸ ಮಾಡುವ ಜಾತಿವಾರು ವರ್ಗ.

3412 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಎ) ನ್ಯಾಷನಲ್ ಸಹಕಾರ ಬ್ಯಾಂಕ್ ನಿಯಮಿತ ಬೆಂಗಳೂರು ಇದರಲ್ಲಿ ಕೆಲಸ ಮಾಡುತ್ತಿರುವ ಒಟ್ಟು ನೌಕರರ ಸಂಖ್ಯೆ ಎಷ್ಟು?

ಬಿ) ಅದರಲ್ಲಿ ಪರಿಶಿಷ್ಟ ಜಾತಿ. ಪರಿಶಿಷ್ಟ ವರ್ಗ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಸೇರಿದವರು (ವರ್ಗವಾರು ವಿವರಣೆಗಳನ್ನು ಕೊಡುವುದು):

ಸಿ) ಬ್ಯಾಂಕು ಸರ್ಕಾರದ ಆದೇಶದನ್ವಯ ನೇಮಕಾತಿ ಹಾಗೂ ಮುಂಬಡ್ತಿ ನೀಡಿಕೆಯಲ್ಲಿ ರೋಸ್ಟರ್ ಪದ್ಧತಿಯನ್ನು ಉಲ್ಲಂಘಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ?

ಡಿ) ಹಾಗಿದ್ದಲ್ಲಿ, ಸದರೀ ಬ್ಯಾಂಕಿನ ಕಾರ್ಯಕಾರಿ ಮಂಡಳಿಯ ಮೇಲೆ ಸರ್ಕಾರ ತೆಗೆದುಕೊಳ್ಳಬೇಕಾಗಿರುವ ಕ್ರಮ.

ಶ್ರೀ ಎಸ್.ಆರ್. ಮೋರೆ.(ಸಹಕಾರ ರಾಜ್ಯ ಸಚಿವರು)

ಎ) 122.

ಬಿ) ಎಸ್.ಸಿ.- 01 : ಕಿರಿಯ ಸಹಾಯಕ. ಹಿಂದುಳಿದ ವರ್ಗ-02 (1ಡ್ರೈವರ್ 1 ಅಟೆಂಡರ್)

ಸಿ) ಹೌದು.

ಡಿ) ಪರಿಶೀಲಿಸಲಾಗುವುದು.

3421 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಸರ್ಕಾರವು ತುಮಕೂರು ಜಿಲ್ಲೆಯ ಕುಣಿಗಲ್‌ನಲ್ಲಿ ಹೊಸ ಬಸ್ ನಿಲ್ದಾಣದ ನಿರ್ಮಾಣವನ್ನು ಕೈಗೊತ್ತಿಕೊಂಡಿರುವುದೇ?

ಆ) ಹಾಗಿದ್ದಲ್ಲಿ ಇಲ್ಲಿಯವರೆಗೆ ಮಾಡಲಾದ ಖರ್ಚೆಷ್ಟು ಹಾಗೂ ಯಾವಾಗ ಉಪಯೋಗಕ್ಕೆ ಸಿದ್ಧವಾಗುವುದು?

ಇ) ನಿರ್ಮಾಣ ಕಾರ್ಯವನ್ನು ಕೈಗೊಳ್ಳದಿದ್ದಲ್ಲಿ ಕೈಗೆತ್ತಿಕೊಂಡಿರದಿದ್ದಲ್ಲಿ ಕಾರಣಗಳೇನು? ಹಾಗೂ ಯಾವಾಗ ಈ ಕಾರ್ಯವನ್ನು ಕೈಗೊಳ್ಳಲಾಗುವುದು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ನಿರ್ಮಾಣ ಕಾರ್ಯವನ್ನು ಭೂಸ್ವಾಧೀನ ಪಡಿಸಿಕೊಂಡು ನಂತರ ಆರಂಭಿಸಲಾಗುವುದು.

ತುಮಕೂರಿನ ಅಂತರಸನ ಹಳ್ಳಿಯ ಕೈಗಾರಿಕಾ ಪ್ರದೇಶಕ್ಕೆ ವಿದ್ಯುಚ್ಛಕ್ತಿ ಸರಬರಾಜು.

3420 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ತುಮಕೂರಿನಲ್ಲಿ ಅಂತರಸನ ಹಳ್ಳಿಯ ಕೈಗಾರಿಕಾ ಪ್ರದೇಶಕ್ಕೆ ಸಾಕಷ್ಟು ಪ್ರಮಾಣದ ವಿದ್ಯುಚ್ಛಕ್ತಿಯ ಸರಬರಾಜನ್ನು ಖಾತ್ರಿಗೊಳಿಸಲು ಒಂದು ವಿದ್ಯುತ್ ಪರಿವರ್ತಕವನ್ನು ಅಳವಡಿಸಲಾಗಿದೆಯೇ?

ಆ) ಇಲ್ಲದಿದ್ದರೆ, ಯಾವಾಗ ವಿದ್ಯುತ್ ಪರಿವರ್ತಕವನ್ನು ಅಳವಡಿಸಲಾಗುವುದು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):

ಅ) ಇಲ್ಲ. ತುಮಕೂರಿನ ಅಂತರಸನ ಹಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಉದ್ದೇಶಿತ 66.11 ಕೆ.ವಿ. ವಿದ್ಯುತ್ ಉಪ-ಕೇಂದ್ರದಲ್ಲಿ 12.5 ಎಂ.ವಿ.ಎ. ಸಾಮರ್ಥ್ಯದ ಒಂದು ವಿದ್ಯುತ್ ಪರಿವರ್ತಕವನ್ನು ಸ್ಥಾಪಿಸುವ ಉದ್ದೇಶವಿದೆ.

ಆ) ಮೇಲ್ಕಂಡ ವಿದ್ಯುತ್ ಪರಿವರ್ತಕವನ್ನು ಸಾಧ್ಯವಾದಷ್ಟು ಜಾಗ್ರತೆ ಅಳವಡಿಸಲಾಗುವುದು.

CONDUCTING A ENQUIRY ON VISHWABHAVATH SEVA SAMITHI, ALWANAGALLI SHAHAPUR - BELGAUM.

3318 - Sri. B.I. PATIL (Uchagam) : Will the Minister for Education and Parliamentary Affairs be pleased to state?

a) Whether the enquiry of Vishvabharat Seva Samithi Alwan Galli, Shahapur, Belgaum was conducted by the Deputy Director of Public Instruction, Belgaum previously for mismanagement.?

b) If so, the action taken by the Government against the said institution?

c) If not, the reason thereof?

Sri. M. VEERAPPAMOILY (Minister for Education and Parliamentary

a) Yes.

b) The management has been directed to take action as per Grant-in-Aid Code No. 52 (iv) by thee Joint Director of Public Instruction, Belgaum.

c) Does not arise.

ನಿಪ್ಪಾಣಿಯ ಶ್ರೀ ಹಾಲಸಿದ್ದನಾಥ ಸಹಕಾರಿ ಸಕ್ಕರೆ ಕಾರ್ಖಾನೆಯ ಚುನಾವಣೆ

3358 - ಶ್ರೀ ಸುಭಾಷ್ ಜೋಶಿ (ನಿಪ್ಪಾಣಿ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ನಿಪ್ಪಾಣಿಯ ಶ್ರೀ ಹಾಲಸಿದ್ದನಾಥ ಸಹಕಾರಿ ಸಕ್ಕರೆ ಕಾರ್ಖಾನೆಗೆ ಯಾವಾಗ ಚುನಾವಣೆ ನಡೆಸಲಾಗುವುದು.

ಆ) ನಾಮ ನಿರ್ದೇಶಿತ ಮಂಡಳಿ ಇರುವುದರಿಂದ ಕಾರ್ಖಾನೆಯಲ್ಲಿ ಹಲವಾರು ಅವ್ಯವಹಾರಗಳು ನಡೆದಿರುವುದು ಸರ್ಕಾರದ ಗಮನಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು):

ಅ) ದಿನಾಂಕ 3.1.1992ರೊಳಗಾಗಿ ಚುನಾವಣೆ ನಡೆಯಬೇಕಾಗಿದೆ.

ಆ) ಇಲ್ಲ.

ಇ) ಪ್ರಶ್ನೆಯ "ಆ" ಭಾಗಕ್ಕೆ ಕೊಟ್ಟಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಬೆಳಗಾವಿ ಜಿಲ್ಲೆ ನಿಪ್ಪಾಣಿಯಲ್ಲಿ ನವೋದಯ ವಿದ್ಯಾಲಯ.

3359 - ಶ್ರೀ ಸುಭಾಷ್ ಜೋಷಿ (ನಿಪ್ಪಾಣಿ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಳಗಾವಿ ಜಿಲ್ಲೆ ನಿಪ್ಪಾಣಿಯಲ್ಲಿ ಪರಿಶಿಷ್ಟ ಜಾತಿ : ವರ್ಗದ ವಿದ್ಯಾರ್ಥಿಗಳಿಗೆ ನವೋದಯ ವಿದ್ಯಾಲಯವನ್ನು ಸರ್ಕಾರ ಮಂಜೂರಾತಿ ನೀಡಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಪಡಿತರ ವಸ್ತುಗಳಿಗೆ ವಿತರಣೆಯಲ್ಲಿ ತಾರತಮ್ಯ.

3370 - ಶ್ರಾ ಸುಭಾಶ ಜೋಶಿ (ನಿಪ್ಪಾಣಿ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಪಟ್ಟಣ ಪ್ರದೇಶಕ್ಕೆ ಮತ್ತು ಗ್ರಾಮಾಂತರ ಪ್ರದೇಶಕ್ಕೆ ಪಡಿತರ ವಸ್ತುಗಳ ವಿತರಣೆಯಲ್ಲಿ ತಾರತಮ್ಯ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

2) ಹಾಗಿದ್ದಲ್ಲಿ ಸರ್ಕಾರವು ಏಕರೂಪವಾಗಿ ವಿತರಣೆ ಮಾಡಲು ಕ್ರಮ ಕೆಗೊಳುವುದೆ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

1) ಬಂದಿದೆ.

2) ಗ್ರಾಮಾಂತರ ಪ್ರದೇಶದಲ್ಲಿನ ಜನರು ತಮ್ಮ ಆಹಾರ ಧಾನ್ಯಗಳನ್ನು ಬೆಳೆಯುವವರಾದ್ದರಿಂದ ಅವರು ಪಟ್ಟಣ ಪ್ರದೇಶದ ಜನರಂತೆ ಪೂರ್ತಿಯಾಗಿ ಪಡಿತರ ವಸ್ತುಗಳನ್ನು ಅವಲಂಬಿಸಿರುವುದಿಲ್ಲ. ಆದ್ದರಿಂದ ಪಟ್ಟಣ ಪ್ರದೇಶಕ್ಕೆ ಗ್ರಾಮಾಂತರ ಪ್ರದೇಶಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಧಾನ್ಯ ನೀಡಲಾಗುತ್ತಿದೆ. ಇದು ಅಲ್ಲದೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದಿಂದ 48,000 ಮೆ.ಟ. ಅಕ್ಕಿ 40,000 ಮೆ.ಟ. ಗೋಧಿ ಮತ್ತು 17,777 ಮೆ.ಟ. ಸಕ್ಕರೆಯನ್ನು ಮಾತ್ರ ಪಡೆಯುತ್ತದೆ. ಆದರೆ ವಾಸ್ತವಿಕವಾಗಿ ರಾಜ್ಯಕ್ಕೆ 75,000 ಮೆ.ಟ. ಅಕ್ಕಿ 50,000 ಮೆ.ಟ.ಗೋಧಿ 20,000 ಮೆ.ಟ. ಸಕ್ಕರೆ 11,000 ಮೆಟನ್ ಪಾಮೋಲಿವ್ ಎಣ್ಣೆ ಬೇಕಾಗುತ್ತದೆ. ಈ ರೀತಿ ರಾಜ್ಯದ ಅವಶ್ಯಕತೆಗನುಗುಣವಾಗಿ ಕೇಂದ್ರವು ರಾಜ್ಯಕ್ಕೆ ಆಹಾರ ಧಾನ್ಯಗಳನ್ನು ಬಿಡುಗಡೆ ಮಾಡಿದಲ್ಲಿ ಈ ತಾರತಮ್ಯವನ್ನು ಕಡಿಮೆ ಮಾಡಿ ಆಹಾರ ಧಾನ್ಯ ವಿತರಣೆ ಮಾಡಲಾಗುವುದು.

ಚಿಕ್ಕೋಡಿ ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘ

3369 - ಶ್ರೀ ಸುಭಾಷ್ ಜೋಶಿ (ನಿಪ್ಪಾಣಿ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ಚಿಕ್ಕೋಡಿ ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘ (ನಿ) ನಿಪ್ಪಾಣಿ ಇದರ ಅಧೀನದಲ್ಲಿರುವ ಗೊಬ್ಬರ ಕಾರ್ಖಾನೆಯನ್ನು ಖಾಸಗಿ ಸಂಸ್ಥೆಗೆ ಕೊಟ್ಟ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ?*

ಆ) *ಹಾಗಿದ್ದಲ್ಲಿ ಸರ್ಕಾರವು ಸದರಿ ಗೊಬ್ಬರ ಕಾರ್ಖಾನೆಯನ್ನು ಖಾಸಗಿ ಸಂಸ್ಥೆಗೆ ಮಾರಾಟ ಮಾಡಲು ಅನುಮತಿ ನೀಡಿರುವುದು ನಿಜವೇ?*

ಶ್ರೀ ಎಸ್.ಆರ್. ಮೋರೆ. (ಸಹಕಾರ ರಾಜ್ಯ ಸಚಿವರು)

ಅ) ಗೊಬ್ಬರ ಕಾರ್ಖಾನೆಯನ್ನು ಖಾಸಗಿ ಸಂಸ್ಥೆಗೆ ಆಧಾರದ ಮೇಲೆ ನೀಡಿರುವದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಇಲ್ಲ.

ಕೆ.ಜಿ.ಎಫ್. ಪ್ರಥಮ ದರ್ಜೆ ಕಾಲೇಜಿನ ಬಗ್ಗೆ.

3464 - ಶ್ರೀ ಎಂ. ಭಕ್ತವಚಲಂ (ಕೆ.ಜಿ.ಎಫ್) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) *ಕೆ.ಜಿ.ಎಫ್.ನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರು ಎಲ್ಲಾ ಪಿ.ಯು.ಸಿ. ತರಗತಿಗಳಲ್ಲಿ ಇಂಗ್ಲಿಷ್ ಬೋಧನೆಗೆ ಪ್ರತಿ ತರಗತಿಗೆ ನಿಗದಿಪಡಿಸಿದ್ದ ನಾಲ್ಕು ಘಂಟೆಗಳ ಕಾರ್ಯಭಾರವನ್ನು ವಾರಕ್ಕೆ ಮೂರು ಘಂಟೆಗಳಿಗೆ 1990-91 ಮತ್ತು 1991-92ನೇ ಸಾಲಿನಲ್ಲಿ ಕಡಿಮೆ ಮಾಡಿರುವುದು ವಾಸ್ತವಿಕ ಸಂಗತಿಯೇ?*

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಇಲ್ಲ.

ಅಧ್ಯಕ್ಷರು : ಮಂಡಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ.

ಶ್ರೀ ಎಸ್. ಪ್ರಭಾಕರ್ ರಾಣೆ : ಒಂದು ಮನವಿಯನ್ನು ನಾವು ಕೊಟ್ಟಿದ್ದೇವೆ. ಕಳೆದ ಸೋಮವಾರ ಮಾನ್ಯ ಗೃಹಸಚಿವರು ಈ ಸಭೆಯಲ್ಲಿ ಹಿರಿಯ ಸದಸ್ಯರಾದ ಶ್ರೀ ಕೆ.ಹೆಚ್. ರಂಗನಾಥ್‌ರವರು ಎತ್ತಿದ ಪ್ರಸ್ತಾವಕ್ಕೆ ಉತ್ತರಿಸಿದ್ದಾರೆ ಆದ್ದರಿಂದ ಸಂಶಯಗಳು ಇನ್ನೂವರೆಗೆ ನಮ್ಮಲ್ಲಿ ಉಳಿದಿವೆ. ಆದ್ದರಿಂದ ಆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಏಕಾಂತಯ್ಯ : ನಾನು ಒಂದು ಪ್ರಸ್ತಾವನೆಯನ್ನು ನಿಯಮ 191ರ ಪ್ರಕಾರ ತಮಗೆ ಕಳಿಸಿದ್ದೇನೆ. ಅದರ ಬಗ್ಗೆ ತಾವು ತೀರ್ಮಾನ ಮಾಡಿ ಸಾಧ್ಯವಾದಷ್ಟು ಬೇಗ ಸಭೆಯ ಮುಂದಿಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಸಂಶಯ ಅಷ್ಟೇ ಅಲ್ಲ, ಸರ್ಕಾರ ತನ್ನ ಪೂರ್ಣ ಗಮನವನ್ನು ಹರಿಸಬೇಕಾಗುತ್ತದೆ. ಏಕೆಂದರೆ ಇದ್ದದ್ದು ಇನ್ನು ಮುಂದೆ ಆಗಬೇಕಾಗಿರುವ ಬಗ್ಗೆ ಏನು ತೊಂದರೆ ಇದೆ ಎಂದು ಸರ್ಕಾರ ಗಮನಹರಿಸಿ ನೋಡಿ ತಿದ್ದುಪಡಿ ತರುವುದಾದರೆ ತತಕ್ಷಣ ತರಬೇಕಾದ ಪರಿಸ್ಥಿತಿ ಬಂದಿದೆ. ಆದ್ದರಿಂದ ಅದನ್ನು ವಿಶದವಾಗಿ ಹೇಳಲು ಸಮಯ ಬೇಕಾಗುತ್ತದೆ. ತಾವು ಯಾವುದಾದರೂ ದಿನ ನಿಗದಿಮಾಡಿದರೆ ಸರ್ಕಾರದ ಗಮನಕ್ಕೆ ನಾವು ತಿಳಿಸಲು ಸಾಧ್ಯವಾಗುತ್ತದೆ.

ಅಧ್ಯಕ್ಷರು : ಇಂದು ನನಗೆ ಎರಡು ಸೂಚನೆ ಬಂದಿವೆ. ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ಕೆ.ಹೆಚ್. ಪಾಟೀಲರು ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಪತ್ರ ಬರೆಯುವುದು ಈಗಾಗಲೇ ಪತ್ರಿಕೆಯಲ್ಲಿ ಬಂದಿದೆ. ಇದರ ಬಗ್ಗೆ ಸಾಕಷ್ಟು ಅವಕಾಶ ಕೊಟ್ಟರೆ.. ನಾನು ಹೇಳ್ತಾ ಇರೋದು ಅದು ಅತ್ಯಂತ ಪ್ರಮುಖ ವಿಷಯ, ಸಚಿವ ಸಂಪುಟದ ಒಬ್ಬ ಸದಸ್ಯರೇ ಮಂತ್ರಿಮಂಡಲದಲ್ಲಿ ತೀರ್ಮಾನವಾಗದೇ ಈ ರೀತಿ ತೀರ್ಮಾನ ತೆಗೆದುಕೊಂಡಿರುವುದು ಸರಿಯಲ್ಲ ಎಂದು ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ ಇಡೀ ರಾಜ್ಯದ ಜನತೆಗೆ ಸಂಬಂಧಿಸಿದ ಪ್ರಶ್ನೆ ಇದು.

ಅಧ್ಯಕ್ಷರು : ಇವೆಲ್ಲವನ್ನೂ ಪರಿಶೀಲಿಸಿ ನಾಳೆ ಹೇಳ್ತೇನೆ. ಈಗ ಸಭೆ ಮುಂದುವರಿದು ನಾಳೆ 11 ಗಂಟೆಗೆ ಸೇರುವುದು.

(ಸದನವು 8 ಗಂಟೆ 6 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ಮಾರನೆಯದಿನ ಬೆಳಿಗ್ಗೆ 11-00 ಗಂಟೆಗೆ ಸೇರಲು ತೀರ್ಮಾನಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

BLANK PAGE

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ ೧೯ನೇ ಸೆಪ್ಟೆಂಬರ್ ೧೯೯೧ ಭಾದ್ರಪದ. ಶಕ ೧೯೧೩.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೧೫ ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ)ರವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು : ರೇವಣ್ಣನವರೇ ಸದರಿ ವಿಷಯವೂ ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಇಲಾಖೆಗೆ ಸಂಬಂಧಪಟ್ಟಿರುತ್ತದೆ. ಆದ ಕಾರಣ ವಿಷಯವನ್ನು ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿತ ಇಲಾಖೆಗೆ ವರ್ಗಾಯಿಸಲಾಗಿದೆ ಎಂದು ಮಾನ್ಯ ಮಂತ್ರಿಗಳು ಈ ವಿಚಾರವನ್ನು ನನ್ನ ಅವಗಾಹನೆಗೆ ತಂದಿದ್ದಾರೆ, ಇದನ್ನು ನಾನು ತಮ್ಮ ಅವಗಾಹನೆಗೆ ತರುತ್ತಿದ್ದೇನೆ.

ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ಈ ಟೆಕ್ನಿಕಲ್ ಡಿಫಿಕಲ್ಟೀಸ್ ನಮಗೆ ಗೊತ್ತಿರಲಿಲ್ಲ ನಾವು ಕೇಳಿರತಕ್ಕ ಪ್ರಶ್ನೆಯಲ್ಲಿ ತಾಂತ್ರಿಕದೋಷ ಇದೆ ಎನಿಸುತ್ತದೆ. ಪ್ರಶ್ನೆಗಳು ಸರಿಯಾಗಿ ಇದ್ದರೂ ಕೃಷಿ ಮಂತ್ರಿಗಳಿಗೆ ನಾವು ಕೇಳಿರುವುದರಲ್ಲಿ ತಾಂತ್ರಿಕ ದೋಷ ಇರಬಹುದು. ನಮ್ಮ ಉದ್ದೇಶವಾದರೂ ಕೃಷಿಗೆ ಸಂಬಂಧಪಟ್ಟಂತೆ ಮಳೆಯ ಪ್ರಮಾಣವನ್ನು ಅಳತೆ ಮಾಡತಕ್ಕ ವಿಧಾನ ಏನಿದೆ ಅದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುವುದು. ಮತ್ತು ಸರ್ಕಾರದಿಂದ ಈ ಬಗ್ಗೆ ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಲಿ ಎಂಬ ಉದ್ದೇಶದಿಂದ. ಇದಕ್ಕೆ ತಾವು ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಇಲಾಖೆಯ ಮಂತ್ರಿಗಳಿಂದ ಉತ್ತರವನ್ನು ಕೊಡಿಸುವುದಾದರೆ, ತಮಗೆ ನಾವು ಖಂಡಿತ ಆಭಾರಿಯಾಗಿದ್ದೇವೆ.

ಅಧ್ಯಕ್ಷರು : ನಾನು ಅವರಿಗೆ ಇದನ್ನು ಕಳುಹಿಸಿಕೊಡುತ್ತೇನೆ.

ಅಮೃತ ಮಹಲ್ ಕಾವಲ್‌ಗೆ ಸೇರಿದ ಜಮೀನಿನ ಬಗ್ಗೆ

3635 - ಶ್ರೀ ಇ. ವಿಜಯಕುಮಾರ್ (ಹೊಸದುರ್ಗ) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಲೀ ಹೊಸದುರ್ಗ ತಾಲ್ಲೂಕಿನ ಅಮೃತಮಹಲ್ ಕಾವಲ್‌ಗೆ ಸೇರಿದ ಜಮೀನಿನ ವಿಸ್ತೀರ್ಣ ಎಷ್ಟು, ಹಾಗೂ ತಾಲ್ಲೂಕಿನ ಯಾವ ಭಾಗಗಳಲ್ಲಿ ಇದರಿಂದ ಪಶುಸಂಗೋಪನೆಗೆ ಏನಾದರೂ ಅನುಕೂಲ ಆಗಿದೆಯೇ,

ಆ) ಅಮೃತ್ ಮಹಲ್ ಕಾವಲ್ ಬಗ್ಗೆ ಸರ್ಕಾರಕ್ಕೆ ಬರುತ್ತಿರುವ ಆದಾಯ ವೆಚ್ಚಗಳೇನು,

ಇ) ಈ ರೀತಿ ಉಪಯೋಗವಿಲ್ಲದೆ ಇರುವ ಬಾಬಿನಿಂದ ಜಮೀನನ್ನು ಸರ್ಕಾರ ವಶಪಡಿಸಿಕೊಂಡು ಬಡವರಿಗೆ ಹಂಚಲು ಸರ್ಕಾರಕ್ಕೆ ತೊಂದರೆ ಏನು?

ಶ್ರೀ ಬಸವರಾಜ ಪಾಟೀಲ್ (ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ಸಚಿವರು)

ಅ) 1) 6811.08 ಎಕರೆಗಳು

2) **ಕಾವಲುಗಳ ಹೆಸರು ಮತ್ತು ವಿಸ್ತೀರ್ಣ**	
1. ಬಲ್ಲಾಳಸಮುದ್ರ	836.00
2. ದೇವಪುರ	520.00
3.ಕ್ಯಾಡಿಗೆರೆ	1329.14
4. ಕೈನಡು	628.04
5. ನೀರುಗುಂದ	1335.22
6. ಅಜ್ಜಿಗುಡ್ಡ	400.00
7. ಎರಡು ಗುಡ್ಡ	583.23
8. ಸೋಮಸಂದ್ರ	356.00
9. ಕೊಂಗವಳ್ಳಿ ತೊರೆ	789.29
10. ಚಕ್ಕತೇಕಲವಟ್ಟಿ	32.36
ಒಟ್ಟು	6811.08 ಎಕರೆಗಳು

3) ಹೌದು.

ಆದಾಯ	12.51 ಲಕ್ಷ
ವೆಚ್ಚ	31.24 ಲಕ್ಷ

ಸರ್ಕಾರದ ಕಾವಲ್ ಜಮೀನನ್ನು ಖಾಸಗಿ ವ್ಯಕ್ತಿಗಳಿಗೆ ಹಂಚುವ ಉದ್ದೇಶವಿಲ್ಲ.

ಶ್ರೀ ಇ. ವಿಜಯಕುಮಾರ್ : ಮಾನ್ಯ ಅಧ್ಯಕ್ಷರೇ ಹೊಸದುರ್ಗ ತಾಲ್ಲೂಕಿನಲ್ಲಿ 6811 ಎಕರೆ ಅಮೃತಮಹಲ್ ಕಾವಲ್‌ಗೆ ಸೇರಿದ ಜಮೀನಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಹಾಗೆಯೇ ಅದು ಪಶುಸಂಗೋಪನೆಗೆ ಅನುಕೂಲವಾಗಿದೆ ಎಂದು ಹೇಳಿದ್ದಾರೆ. ಆದಾಯ ಹನ್ನೆರಡೂವರೆ ಲಕ್ಷರೂಪಾಯಿಗಳು ಮತ್ತು ವೆಚ್ಚ ಮೂವತ್ತೊಂದು ಲಕ್ಷರೂಪಾಯಿಗಳೆಂದು ತಿಳಿಸಿದ್ದಾರೆ. ಇದರಿಂದ ಪಶುಸಂಗೋಪನೆಗೆ ಅನುಕೂಲವಾಗಿದ್ದರೆ ಹಿಂದೆ ಇದ್ದಂಥ ರಾಸುಗಳೆಷ್ಟು, ಈಗಿರತಕ್ಕಂಥ ರಾಸುಗಳ ಸಂಖ್ಯೆ ಎಷ್ಟು?

ಶ್ರೀ ಬಸವರಾಜಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಹಿಂದೆ ಇದ್ದಂಥ ಪಶುಗಳ ಸಂಖ್ಯೆ ಮತ್ತು ಈಗಿರತಕ್ಕಂಥ ಪಶುಗಳ ಸಂಖ್ಯೆ ಎಷ್ಟೆಂದು ಪ್ರಶ್ನೆಯನ್ನು ಕೇಳಿದ್ದಾರೆ. ಆದರೂ ನಮಲ್ಲಿರತಕ್ಕಂಥ 181 ಅಮೃತಮಹಲ್ ಹೋರಿಗಳು ಏನಿದಾವೆ ಅದರ ಬಗ್ಗೆ ಹಿಂದೆ ಇದ್ದಂಥವು ಮತ್ತು ಈಗಿರತಕ್ಕಂಥವುಗಳ ಬಗ್ಗೆ ಮಾಹಿತಿಯನ್ನು ಬೇಕಾದರೆ ಮಾನ್ಯ ಸದಸ್ಯರಿಗೆ ತರಿಸಿ ಒದಗಿಸುತ್ತೇನೆ.

ಶ್ರೀ ಇ. ವಿಜಯಕುಮಾರ್ : 175 ರಾಸುಗಳಿಗೋಸ್ಕರ ಒಂದು ತಾಲ್ಲೂಕಿನಲ್ಲಿ 6800 ಎಕರೆ ಭೂಮಿ ಇದೆ. ಇದರಂತೆ ಹೊಳಲ್ಕೆರೆ ತಾಲ್ಲೂಕಿನಲ್ಲಿಯೂ ಭೂಮಿ ಇದೆ. ತರೀಕೆರೆ ತಾಲ್ಲೂಕಿನಲ್ಲಿ ಅವರ ಒಂದು ಆಫೀಸು ಇದೆ. ಅಲ್ಲಿ ಬೇಕಾದಷ್ಟು ಜಮೀನು ಕೂಡ ಇದೆ. ಕೇವಲ 175 ರಾಸುಗಳಿಗೋಸ್ಕರ ಇಷ್ಟೊಂದು ಎಕರೆ ಜಮೀನನ್ನು ಇಟ್ಟುಕೊಂಡು ಇದು ಎಷ್ಟೊಂದು ಲುಕ್ಸಾನಾಗುತ್ತಿರುವ ಕಾರ್ಯಕ್ರಮವಾಗಿರುವುದರಿಂದ ಕೆಲವೊಂದು ಜಮೀನನ್ನು ಹಿಂದಿನ ಸರ್ಕಾರ ಬಡವರಿಗೆ

ಹಂಚಿತ್ತು. ಈ ಅಮೃತಮಹಲ್ ಕಾವಲ್ ಜಮೀನನ್ನು ಈಗಲಾದರೂ, ಹಂಚಲಿಕ್ಕೆ ತೊಂದರೆ ಏನು?

ಶ್ರೀ ಬಸವರಾಜಪಾಟೀಲ್ : ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಅಮೃತ ಮಹಲ್ ಕಾವಲ್‌ನಲ್ಲಿರತಕ್ಕಂಥ ಭೂಮಿ ಏನಿದೆ ಅದನ್ನು ಬಡವರಿಗೆ ಹಂಚಬೇಕೆಂದು ಕೇಳಿದ್ದಾರೆ. ಈ ಅಮೃತಮಹಲ್ ರಾಸುಗಳು ಏನಿದೆ ಇದು ಬಹಳ ಪ್ರಖ್ಯಾತವಾಗಿರತಕ್ಕಂಥ ರಾಸುಗಳು. ಇದನ್ನು ಇನ್ನೂ ದೊಡ್ಡ ಪ್ರಮಾಣದಲ್ಲಿ ಬೆಳೆಸಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ. ನಾವು ಬಡವರಿಗೆ ಭೂಮಿಯನ್ನು ಹಂಚಿದಮೇಲೆ ಆ ರಾಸುಗಳು ಅಮೃತ ಮಹಲ್ ರಾಸುಗಳ ಪ್ರಗತಿಯ ಕಾರ್ಯವನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಅಲ್ಲಿ ಹಸುಗಳಿಗೆ ಮೇವನ್ನು ಬೆಳೆಸಬೇಕೆಂಬ ಉದ್ದೇಶದಿಂದ ಸಾಕಷ್ಟು ಕಾರ್ಯಕ್ರಮ ಹಾಕಬೇಕಾಗಿದೆಯೆಂದು ಸರ್ಕಾರದ ವಿಚಾರದಲ್ಲಿದೆ. ಒಂದು ಸಲ ಭೂಮಿಯನ್ನು ಬಡವರಿಗೆ ಕೊಟ್ಟಮೇಲೆ ಬೇರೆ ಯಾವ ಕೆಲಸವನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಸದ್ಯಕ್ಕೆ ಸರ್ಕಾರದ ವಿಚಾರದಲ್ಲಿ ಆ ಭೂಮಿಯನ್ನು ಬಡವರಿಗೆ ಹಂಚಬೇಕೆನ್ನುವ ಉದ್ದೇಶ ಇಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ ಕರ್ನಾಟಕ ಅದರಲ್ಲೂ ಕೂಡ ಹಳೇ ಮೈಸೂರು ಭಾಗದಲ್ಲಿ ಅಮೃತ ಮಹಲ್ ಮತ್ತು ಹಳ್ಳಿಕಾರ್ ಏನು ಎತ್ತುಗಳಿವೆ ಈ ತಳಿಗಳನ್ನು ಹಿಂದೆ ಅಮೃತ ಮಹಲ್ ಕಾವಲ್‌ಗೆ ಕಾವಲನ್ನಿಟ್ಟು ಆ ತಳಿಗಳನ್ನು ನೋಡಿಕೊಳ್ಳುವ ಸಲುವಾಗಿ ಶೇರ್ವೆಗಾರರೆಂದು ನೇಮಕಮಾಡಿದ್ದರು. ಈಗ ಅದನ್ನು ವಜಾಮಾಡಿದ್ದಾಯಿತು. ಶೇರ್ವೆಗಾರರು ಇವತ್ತಿನದಿವಸ ಆ ರಾಸನ್ನು ಅಭಿವೃದ್ಧಿ ಮಾಡಲಿಕ್ಕೆ ಇಲ್ಲ. ಭೂಮಿ ಮಾತ್ರ ಇದೆ. ಸುಮಾರು 15-20 ವರ್ಷಗಳಿಂದ ಅದು ಹಾಗೆಯೇ ಇರತಕ್ಕಂಥದ್ದು ಇದೆ. ಈಗ ತಾವು ಹೇಳಿದಿರಿ ನಮಗೆ ಬೇಕೆಂದು, ಬೇಕೆಂದು ಹೇಳುವಾಗ ಇವತ್ತು ಆ ಅಮೃತಮಹಲ್ ದನಗಳು ನಿಮ್ಮಲ್ಲಿ ಎಷ್ಟಿದೆ? ಆ ತಳಿಗಳ ಅಭಿವೃದ್ಧಿಯ ವ್ಯವಸ್ಥಿತವಾದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಾ? ಬಜೆಟ್‌ನಲ್ಲಿ ಇದಕ್ಕೆ ಏನಾದರು ಹಣ ಒದಗಿಸಿದ್ದೀರಾ. ಅದನ್ನು ಮಾಡದಿದ್ದರೆ ಭೂಮಿಯನ್ನು ವಿತರಣೆ ಮಾಡಲಿಕ್ಕೆ ಏನಾದರೂ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಾ?

ಶ್ರೀ ಬಸವರಾಜಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಹಿರಿಯ ಸದಸ್ಯರು ಕೇಳಿದ ಪ್ರಶ್ನೆಗೆ ಈಗಾಗಲೇ ಹೇಳಿದ್ದೇನೆ. ಅಮೃತಮಹಲ್ ತಳಿಗಳಿಗೆ ಸಾಕಷ್ಟು ಕಾರ್ಯಕ್ರಮ ಮೊದಲು ಇತ್ತು, ಈಗ ಧಕ್ಕೆಯಾಗಿದೆ ಎಂದು ಮೊದಲನೆಯ ಪ್ರಶ್ನೆಯಾಗಿ ಕೇಳಿದ್ದಾರೆ. ಇದು ಯಾವುದೂ ಮಾಹಿತಿ ನನ್ನ ಹತ್ತಿರವಿಲ್ಲ. ಮಾನ್ಯ ಸದಸ್ಯರು ಕೇಳಿದಹಾಗೆ ಎಷ್ಟು ಭೂಮಿ ಇದೆ, ಸರ್ಕಾರದವರು ಆ ಭೂಮಿಯನ್ನು ಬಡವರಿಗೆ ಹಂಚುವುದಕ್ಕೆ ಯಾವ ಕಾರ್ಯಕ್ರಮ ಹಾಕಿಕೊಂಡಿದ್ದಾರೆಂದು ಕೇಳಿದ್ದಾರೆ.

ನಾನು ಪ್ರಶ್ನೆಯ ಬಗ್ಗೆ ಅಧಿಕಾರಿಗಳ ಜೊತೆಗೆ ಚರ್ಚೆಮಾಡಿ ಮೊದಲಿದ್ದಂಥ ಕಾರ್ಯಕ್ರಮ್ಮ ಯಾವುದಿದೆ, ಈಗ ಏನು ಮಾಡಬೇಕಾಗಿದೆ, ಅದರ ಅಭಿವೃದ್ಧಿಗೆ ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂಬ ಬಗ್ಗೆ ವಿಸ್ತಾರವಾಗಿ ವಿಚಾರ ಮಾಡುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಮೈಸೂರು ಮಹಾರಾಜರು ಇದನ್ನು ಬೆಳಸಿಕೊಂಡು ಬಂದದ್ದು. ಹಳ್ಳೀಕಾರ್, ಅಮೃತಮಹಲ್ ತಳಿಗಳು ಆ ಕಾಲದಿಂದ ಬಂದದ್ದು. ತುಮಕೂರು, ಚಿತ್ರದುರ್ಗ ಮತ್ತು ಬೇರೆ ಬೇರೆ ಜಿಲ್ಲೆಗಳಲ್ಲಿ ಹುಲ್ಲು ಬೆಳೆಯುವುದನ್ನು ಪರೀಕ್ಷೆ ಮಾಡಿ. ಅಲ್ಲಿ ಆ ಭಾಗದಲ್ಲೇ ಕಾವಲುಗಳು ಇದ್ದುದು. ತಾವು ಪರಿಶೀಲನೆ ಮಾಡುತ್ತೇವೆಂದು ಹೇಳಿದಿರಿ, ಆದರೆ ಇದರ ಬಗ್ಗೆ ಸಮಗ್ರವಾಗಿ ವಿಚಾರ ಮಾಡಬೇಕಾಗುತ್ತದೆ ಮತ್ತು ಒಂದು ಪಾಲಿಸಿ ಡಿಸಿಷನ್ ತೆಗೆದುಕೊಳ್ಳಬೇಕಾಗುತ್ತದೆ. ಅಮೃತಮಹಲ್ ತಳಿಗಳು ಹೇಗೆ ನಿಮ್ಮಲ್ಲಿ ದೊಡ್ಡ ರಾಸುಗಳು ಇವೆ, ಹೈದರಾಬಾದ್

ಕರ್ನಾಟಕದಲ್ಲಿ ದೇಣಿಗೆ ಎಂದು ಹೇಳುತ್ತೀರಿ ಹಾಗೇ ಈ ಭಾಗದಲ್ಲೂ ಇವೆ. ಮೈಸೂರು, ಮಂಡ್ಯ, ಚಿತ್ರದುರ್ಗ ಭಾಗಗಳಲ್ಲಿ ಇದರ ವಿಶೇಷ ತಳಿಗಳು ಇವೆ. ಅದಕ್ಕೆ ತಾವು ಕಾರ್ಯಕ್ರಮ ಹಾಕಿಕೊಳ್ಳಬೇಕು. ಕಾರಣಾಂತರದಿಂದ ಇಮ ನಿಮ್ಮ ಪಟ್ಟಿಯಲ್ಲಿ ಬಿಟ್ಟು ಹೋಗಿದೆ. ಇಷ್ಟು ಭೂಮಿ ಎಂದು ಕಳಿಸುವಾಗಲೇ ಇದರ ಚರಿತ್ರೆಯನ್ನು ಅಧಿಕಾರಿಗಳು ಇಡಬೇಕಾಗಿತ್ತು. ಈ ಬಗ್ಗೆ ಮಾಹಿತಿ ಇಲ್ಲದೆ ಕಳೆದುಹೋಗಿತ್ತೇನೋ ಗೊತ್ತಿಲ್ಲ. ತಾವು ವಿಶೇಷ ಆಸ್ತೆ ವಹಿಸಿ ಮಾಡಿಸಬೇಕು. ಒಂದು ವೇಳೆ ಭೂಮಿ ಬೇಡ ಎಂದರೆ ಅದನ್ನು ಬಡವರಿಗೆ ಹಂಚುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳಬೇಕು. ಇಲ್ಲದಿದ್ದರೆ ಒತ್ತುವರಿ ಮಾಡಿಕೊಂಡು ಅಥವಾ ನೇರವಾಗಿ ನಿಮ್ಮಲ್ಲಿ ಬಂದು ಸ್ಯಾಂಕ್ಷನ್ ಮಾಡಿಸಿಕೊಂಡು ಹೋಗಿದ್ದಾರೆ. 50-20-30 ಎಕರೆ ಜಮೀನನ್ನು ಸ್ಯಾಂಕ್ಷನ್ ಮಾಡಿಸಿಕೊಂಡಿರತಕ್ಕ ದೊಡ್ಡ ದೊಡ್ಡ ರೈತರು ಇದ್ದಾರೆಂದು ಗೊತ್ತಾಗಿದೆ.

ಶ್ರೀ ಬಸವರಾಜ್ ಪಾಟೀಲ್ : ಮಾನ್ಯ ಸದಸ್ಯರು ಹೇಳಿದ ಸಲಹೆಯನ್ನು ನೋಡಿ ಪರಿಶೀಲಿಸುತ್ತೇನೆ.

ಶ್ರೀ ಜೆ.ಸಿ. ಮಧುಸ್ವಾಮಿ : ರಾಜ್ಯದಲ್ಲಿರುವ ಎಲ್ಲಾ ಕಾವಲುಗಳಿಗೂ ಯಾವುದೇ ರೀತಿಯ ಹಣ ಬಿಡುಗಡೆ ಮಾಡಿಲ್ಲ, ಸಿಬ್ಬಂದಿ ಸಂಬಳ ಬಿಟ್ಟು, ಬೇರೆ ಹಣ ಬಿಡುಗಡೆ ಆಗಿಲ್ಲ, ಚಿಕ್ಕಮಗಳೂರು, ತುಮಕೂರು ಚಿತ್ರದುರ್ಗ ಜಿಲ್ಲೆಗಳಲ್ಲಿ ಅಮೃತಮಹಲ್, ಹಳ್ಳಿಕಾರ್ ಜೊತೆಗೆ ಸುಬಾಬುಲ್ಲ ಫಾರಂಗಳು ಇವೆ. ಬೈಯಪ್ಪನೂರು ಫಾರಂ ಕೂಡ ಇವೆ. ಅಲ್ಲಿ ಜಮೀನು ಬಹಳ ವೇಸ್ಟ್‌ಆಗಿ ಬಿದ್ದಿದೆ ಎಂದು ಅನ್ನಿಸುತ್ತದೆ. ಸುಬಾಬುಲ್ಲ ಫಾಡರ್ ಫಾರಂ ತುಮಕೂರು ಜಿಲ್ಲೆಯಲ್ಲಿ ಇದೆ. ಸುಮಾರು 25-30 ಎಕರೆ ಜಾಗ ಇದೆ ಅದನ್ನು ಯಾವುದೇ ರೀತಿಯಲ್ಲಿ ಅಭಿವೃದ್ಧಿ ಮಾಡಿಲ್ಲ. ಎಲ್ಲಾ ಫಾರಂಗಳನ್ನು ತೆಗೆದುಕೊಂಡು ಹಣ ಬಿಡುಗಡೆ ಮಾಡಿ, ಅಭಿವೃದ್ಧಿ ಮಾಡುತ್ತೀರಾ? ನಿಮ್ಮಿಂದ ಅವುಗಳನ್ನು ಮೆಯಿಂಟೇನ್ ಮಾಡುವುದಕ್ಕಾಗುತ್ತದೆಯೆ? ತಮಗೆ ಆಗದಿದ್ದರೆ, ಕರ್ನಾಟಕ ಮಹಾಮಂಡಲಕ್ಕೆ 1-2 ಫಾರಂಗಳನ್ನು ವಹಿಸಿಕೊಟ್ಟು ಅಭಿವೃದ್ಧಿ ಮಾಡುವುದಕ್ಕೆ ಬಿಡುತ್ತೀರಾ?

ಶ್ರೀ ಬಸವರಾಜ್ ಪಾಟೀಲ್ : ಮಾನ್ಯ ಸದಸ್ಯರು ಸುಬಾಬುಲ್ ಫಾರಂ ಬಗ್ಗೆ ಕೇಳುತ್ತಿದ್ದಾರೆ, ನಾನು ಈಗಾಗಲೇ ಹೇಳಿದ ಪ್ರಕಾರ ಪೂರ್ಣ ಮಾಹಿತಿ ನನ್ನ ಹತ್ತಿರ ಇನ್ನೂ ಬಂದಿಲ್ಲ, ನಾನು ಮಂತ್ರಿಯಾದ ಮೇಲೆ ಎಲ್ಲಾ ಕಡೆ ಪ್ರವಾಸ ಮಾಡಿ ನೋಡಿದಾಗ ಎಲ್ಲಿ ಸುಬಾಬುಲ್ಲ ಇದೆ ಅಲ್ಲಿ ಹುಲ್ಲು ಬೆಳೆಯುವುದನ್ನು ನೋಡಲಿಲ್ಲ, ಆದರೂ ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ, ಕೆ.ಎಂ.ಎಫ್. ಮುಖಾಂತರ ಮಾಡಿಸುತ್ತೀರಾ ಎಂದು ಕೇಳಿದ್ದಾರೆ ಅದರ ಬಗ್ಗೆ ಮಾತುಕತೆ ಆಡಿ ತಾವು ಹೇಳಿದಂತೆ ಉತ್ತಮವಾದ ಸಲಹೆಯನ್ನು ಪರಿಶೀಲಿಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಅಮೃತಮಹಲ್ ಕಾವಲು ಮಾನ್ಯ ರಂಗನಾಥ್ ಅವರು ಹೇಳಿದ ಹಾಗೆ ಹಳೇ ಮೈಸೂರು ಭಾಗದಲ್ಲಿ ಪ್ರತ್ಯೇಕವಾದ ತಳಿಯನ್ನು ಬೆಳಸಿಕೊಂಡು ಉಳಿಸಿಕೊಂಡು ಬಂದಿದ್ದಂತ ಪದ್ಧತಿ ಇತ್ತು. ಈಗ ಆ ಜಾತಿಗೆ ಸೇರಿದ ಪ್ರತ್ಯೇಕ ದನಗಳು ಸಿಗುವುದು ಕಷ್ಟ ಎನ್ನುವ ರೀತಿಯಾಗಿದೆ. ಸರ್ಕಾರದವರು ಹಲವಾರು ಕಡೆ ಅಮೃತಮಹಲ್ ತಳಿಗಳನ್ನು ಹಾಗೆಯೇ ಇಟ್ಟುಕೊಂಡಿದ್ದಾರೆ. ಹಿಂದೆ ಮಾನ್ಯ ಚಿಕ್ಕೇಗೌಡರು ಪಶುಸಂಗೋಪನಾ ಖಾತೆಯ ಸಚಿವರಾಗಿದ್ದಾಗ ಹೇಳಿದರು, ಅಮೃತಮಹಲ್ ಕಾವಲ್ ಭೂಮಿಯನ್ನು ರಿಸರ್ವ್ ಮಾಡುತ್ತೇವೆಂದು. ಸಂಬಂಧಪಟ್ಟ ಮಂತ್ರಿಗಳು ವಿಶೇಷವಾಗಿ ಮಾಹಿತಿ ಸಂಗ್ರಹಿಸಿ ಜಮೀನು ಎಷ್ಟಿದೆ, ಯಾವಯಾವ ಜಾತಿಗೆ ಸೇರಿದ ದನಗಳು ಎಷ್ಟಿವೆ ಎಂದು ತಿಳಿದು ಮುಂದಿನ ಕಾರ್ಯಕ್ರಮ

ತೆಗೆದುಕೊಳ್ಳಬೇಕು. ಈ ಮಧ್ಯೆ ಯಾವುದನ್ನೂ ಬದಲಾವಣೆ ಮಾಡಬಾರದೆಂದು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮಂತ್ರಿಗಳು ಈ ಬಗ್ಗೆ ಏನು ಹೇಳುತ್ತಾರೆಂದು ತಿಳಿಯಬಯಸುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ : ಮಾನ್ಯ ಸದಸ್ಯರು ಹೇಳಿದ ಸಲಹೆಯನ್ನು ವಿಚಾರ ಮಾಡಿ, ಪರಿಶೀಲನೆ ಮಾಡುತ್ತೇನೆ.

ಶ್ರೀ ಎ.ವಿ. ಉಮಾಪತಿ : ಅಧ್ಯಕ್ಷರೆ, ಈ ವಿಚಾರದಲ್ಲಿ ಮಾನ್ಯ ಹಿರಿಯ ಸದಸ್ಯರು ಹೇಳಿದಹಾಗೆ, ಸೇವಾಗಾರರಾಗಿ ಏನು ಕೆಲಸ ಮಾಡುತ್ತಿದ್ದರು ಅವರಿಗೆ 50 ಎಕರೆ ಜಮೀನನ್ನು ಕೊಟ್ಟಿದ್ದಾರೆ. ನೂರಾರು ವರ್ಷಗಳಿಂದ ಕಾವಲುಗಾರರಾಗಿ ಕೆಲಸ ಮಾಡಿಕೊಂಡು ಬಂದವರಿಗೆ 5ಎಕರೆ ಜಮೀನು ಕೊಡಬೇಕೆಂದು ಒಂದು ಕಾನೂನು ಮಾಡಿದ್ದೀರೆಂದು ಕೇಳಿದ್ದೇನೆ. ಇದುವರೆಗೆ ಅವರಿಗೆ ಜಮೀನು ಕೊಡಲಿಲ್ಲ. ನನ್ನ ಮತಕ್ಷೇತ್ರದಲ್ಲಿ ನೂರಾರು ಜನ ಕಾವಲುದಾರರು ಏನಿದ್ದಾರೆ ಅವರಿಗೆ 5 ಎಕರೆ ಜಮೀನು ಕೊಡುವ ಕಾರ್ಯಕ್ರಮವನ್ನು ಸರ್ಕಾರ ಮಾಡುತ್ತದೆಯೋ?

ಶ್ರೀ ಬಸವರಾಜ ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಅಮೃತಮಹಲ್ ಕಾವಲ್‌ನಿಂದ ಯಾವುದೇ ಭೂಮಿ ಕೊಡಬೇಕೆಂದು ಸರ್ಕಾರದ ವಿಚಾರದಲ್ಲಿಲ್ಲ. ಕಾವಲುಗಾರರಿಗಾಗಲೀ ಯಾರಾದರೂ ಸಾಗುವಳಿದಾರರಿಗಾಗಲೀ ಕೂಲಂಕಷವಾಗಿ ಮಾನ್ಯ ಸದಸ್ಯರ ಸಲಹೆಯನ್ನು ವಿಚಾರ ಮಾಡುತ್ತೇನೆ.

ಶ್ರೀ ಎ.ವಿ. ಉಮಾಪತಿ : ಸೇರ್ವೆದಾರರಿಗೆ ಕೊಟ್ಟಿದ್ದೀರಿ. ಕಾವಲುದಾರರಿಗೆ ಕೊಟ್ಟಿಲ್ಲ ಅದನ್ನು ಕೊಡತಕ್ಕ ವ್ಯವಸ್ಥೆ ಮಾಡಬೇಕು.

ಬೆಳಗಾಂ ತಾಲ್ಲೂಕಿನ ನಿಲಾಜಿಯಲ್ಲಿರುವ ಹೊಸ ಗ್ರಾಮೀಣ ಪಶುವೈದ್ಯ ಶಾಲೆಯ ಪ್ರಾರಂಭ

3476 - ಶ್ರೀ ಕೆ.ಸಿ. ಮದಗೇಕರ್ ದೇಸಾಯಿ (ಹಿರೇಬಾಗೇವಾಡಿ) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಳಗಾಂ ತಾಲ್ಲೂಕಿನ ನೀಲಜಿ ಗ್ರಾಮದಲ್ಲಿ ಹೊಸದಾಗಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರವನ್ನು ತೆರೆಯುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ.

ಆ) ಸದರಿ ಗ್ರಾಮದಲ್ಲಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಕ್ಕೆಂದು ಕಟ್ಟಡ ಕಟ್ಟಲು ಬೆಳಗಾಂ ಜಿಲ್ಲಾ ಪರಿಷತ್‌ನ ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಇ) ಹಾಗಿದ್ದಲ್ಲಿ ಎಂದಿನಿಂದ ಬಾಕಿ ಇದೆ, ಮತ್ತು ಇದಕ್ಕೆ ಕಾರಣಗಳೇನು?

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನಾ, ಪಶುವೈದ್ಯ ಸೇವಾ ಸಚಿವರು)

ಅ) ಇದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

SRI K.C. MODGAKAR DESAI : Speaker, Sir, I have asked 3 questions. One of them is whether it has come to the notice of the Government that a resolution has been passed in the general body meeting of the Zilla Parishad, Belgaum, to construct a New R.V.D. in the said villages, and another one is, if so, since when it is pending and reasons for the same. The hon'ble

Minister has given me the wrong reply. I think so, because I have written on 21st February to the then hon'ble Minister Basavalingappaji. In that letter I have mentioned everything regarding the resolution. It is better to read it Sir.

MR. SPEAKER : No, Mr. Desai I don't have the time to read the letter. Put your question.

SRI K.C. MODGEKAR DESAI : One copy I have sent to the...

MR. SPEAKER: You frame your question.

SRI K.C. MODGEKAR DESAI : Demand for that RVD in Nilaji is very more and..

MR. SPEAKER : Question, question..

SRI K.C. MODGEKAR DESAI : Regarding demand....

MR. SPEAKER : This is question hour. Elicit some answer from the Government.

SRI K.C. MODGEKAR DESAI : But the hon'ble Minister has no knowledge about this. When I have written Commissioner Sri Betkerur was there. He has entered in his register book also.

MR. SPEAKER : Where it is said that the Minister should have the knowledge.

SRI K.C. MODGEKAR DESAI : I have written a letter but they don't have the resolution also.

MR. SPEAKER : He will answer your question.

ಶ್ರೀ ಬಸವರಾಜ್ ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಜಿಲ್ಲಾ ಪರಿಷತ್ತಿನಿಂದ ಒಂದು ರೆಸಲ್ಯೂಷನ್ ಆಸ್ಪತ್ರೆ ಕಟ್ಟಡದ ವಿಷಯದಲ್ಲಿ ಕಳುಹಿಸಿದ್ದು ಆ ವಿಷಯದಲ್ಲಿ ಏನು ಕ್ರಮ ತೆಗೆದುಕೊಂಡಿದ್ದೀರಿ. ಎಂದು ಹೇಳಿದ್ದಾರೆ. ನನ್ನ ರಿಪೋರ್ಟ್ ಪ್ರಕಾರ ಜಿಲ್ಲಾ ಪರಿಷತ್ತಿನಿಂದ ಅದು ಬಂದಿಲ್ಲ. ಮುತಗಾ ಎಂಬ ಮಂಡಲ ಪಂಚಾಯಿತಿಯಿಂದ ಒಂದು ರೆಸಲ್ಯೂಷನ್ ನಮ್ಮ ಡಿಪಾರ್ಟ್‌ಮೆಂಟಿಗೆ ಬಂದಿದೆ. ಅಲ್ಲಿ ಆಸ್ಪತ್ರೆಯನ್ನು ತೆಗೆಯುವ ಉದ್ದೇಶ ಸರ್ಕಾರಕ್ಕೆ ಇದೆಯೆ ಎಂದು ಅವರು ಮತ್ತೊಂದು ಪ್ರಶ್ನೆ ಕೇಳಿದ್ದಾರೆ. ನಮ್ಮಲ್ಲಿ ಕೆಲವು ರೂಲ್ಸ್ ಇವೆ. ಅದರ ಪ್ರಕಾರ 5 ಸಾವಿರ ದನಗಳ ಘಟಕ ಅಥವಾ 10 ಕಿಲೋ ಮೀಟರ್ ಒಳಗೆ ಯಾವುದೂ ಆಸ್ಪತ್ರೆ ಇರಬಾರದು. ಅದಕ್ಕೆ ಯೋಗ್ಯವಾಗಿತ್ತು ಎಂದರೆ ಖಂಡಿತವಾಗಿ 1991-92ನೇ ಸಾಲಿನಲ್ಲಿ ತಮ್ಮ ಗ್ರಾಮಕ್ಕೆ ಆಸ್ಪತ್ರೆ ಕೊಡುವುದನ್ನು ಪರಿಶೀಲಿಸಲಾಗುವುದು.

ಅಧ್ಯಕ್ಷರು : ಅವರು ಕಾಗದ ಬರೆದಿದ್ದಾರಂತೆ.

SRI K.C. MODGEKAR DESAI : You consider the demand. Heavy demand is there in my village and it is my native place. Therefore Government has

MR. SPEAKER : Government; you must give due respect to his native place.

SRI BASAVARAJ PATIL : All right..

MR. SPEAKER : No, no, it has to be done. This is an assurance that you are giving on the Floor of the House. It goes before the Assurance Committee if he does not do it.

ಶ್ರೀ ಈ.ಟಿ. ಶಂಭುನಾಥ್ : ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಸಂಖ್ಯೆ : 3606ಕ್ಕೆ ಸಮಯ ಕೇಳಿದ್ದೇನೆ.

ಅಧ್ಯಕ್ಷರು : ಹೌದೇ ಸರಿ.

ತುಮಕೂರು ಜಿಲ್ಲೆಯ ಚೋಳೇನ ಹಳ್ಳಿಕೆರೆ ಅಂಗಳದ ಜಮೀನಿನ ಒತ್ತುವರಿ.

3511 - ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕು ಕಸಬಾ ಹೋಬಳಿ ಚೋಳೇನಹಳ್ಳಿ ಕೆರೆ ಒಡೆದಿದ್ದು ನಷ್ಟ ಸಂಭವಿಸಿದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಈ ಕೆರೆ ಒಡೆಯಲು ಕೆರೆ ಅಂಗಳದಲ್ಲಿ ಒತ್ತುವರಿ ಮಾಡಿರುವವರೇ ಕಾರಣ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಇ) ಆ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ.

ಈ) ಚೋಳೇನಹಳ್ಳಿ ಕೆರೆಯ ಅಂಗಳದಲ್ಲಿ ಎಷ್ಟು ಎಕರೆ ಪ್ರದೇಶ ಒತ್ತುವರಿಯಾಗಿದೆ (ಒತ್ತುವರಿ ಮಾಡಿರುವವರ ಪಟ್ಟಿ ಜಮೀನು ಸಹಿತ ಕೊಡುವುದು)

ಉ) ಆ ಒತ್ತುವರಿಯನ್ನು ಬಿಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ಅಥವಾ ಕೈಗೊಳ್ಳಲಾಗುವುದು.

ಊ) ಹಾಗಿದ್ದಲ್ಲಿ ಆ ಬಗ್ಗೆ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ದಿನಾಂಕ 10.9.88 ರಂದು ಸಂಭವಿಸಿದ ಭಾರಿ ಮಳೆಯಿಂದಾಗಿ ಮಧುಗಿರಿ ತಾಲ್ಲೂಕು ಚೋಳೇನಹಳ್ಳಿ ಕೆರೆಯು ಒಡೆದುಹೋಗಿದೆ.

ಆ) ಈ ಕೆರೆಯು ಒಡೆದು ಹೋಗಿರುವುದರಿಂದ, ಇದನ್ನು ಅತಿಕ್ರಮಣದಾರರು ಬೇಕೆಂದೇ ಒಡೆದು ಹಾಕಿರುವರೆಂದು ಹೇಳಲಾಗುವುದಿಲ್ಲ.

ಇ) ಅತಿಕ್ರಮಣದಾರರನ್ನು ಒಕ್ಕಲೆಬ್ಬಿಸಲು ಕ್ರಮ ಕೈಗೊಳ್ಳಲಾಗಿದೆ.

ಈ) 10.38 ಎಕರೆಗಳು (ಪಟ್ಟಿ ಲಗತ್ತಿಸಿದೆ)

ಉ) ಅತಿಕ್ರಮಣವನ್ನು ಈಗಾಗಲೇ ತೆರವುಗೊಳಿಸಲಾಗಿದೆ.

ಊ) ಉದ್ಭವಿಸುವುದಿಲ್ಲ.

ಚೋಳೇನಹಳ್ಳಿ ಕೆರೆಯ ಅಂಗಳವನ್ನು ಒತ್ತುವರಿ ಮಾಡಿರುವವರ ವಿವರಗಳ ಪಟ್ಟಿ

ಕ್ರಮ ಸಂಖ್ಯೆ	ಒತ್ತುವರಿ ಮಾಡಿರುವವರ ವಿವರ		ಎ.ಗುಂಟೆ
1.	2.		3.
1.	ನರಸೀಯಪ್ಪ ಬಿನ್ ಈರನರಸಪ್ಪ	ವಸಂತಯ್ಯನರೊಪ್ಪ	0.04
2.	ಕದಿರಪ್ಪ ಬಿನ್ ಕುರುಡಸೀಬಯ್ಯ	-"-	0.05
3.	ನರಸಿಂಹಯ್ಯ ಬಿನ್ ನರಸನಾಯ್ಕ	-"-	0.06
4.	ಸೀಬಿನರಸಿಂಹಯ್ಯ ಬಿನ್ ಕದಿರಪ್ಪ	ಮಧುಗಿರಿ	0.06
5.	ಲಕ್ಷ್ಮಮ್ಮ ಕೋಂ ಈರಣ್ಣ	ಹರಿಹರ ರೊಪ್ಪ	0.02
6.	ಭದ್ರಪ್ಪ್ ಬಿನ್ ಈರಣ್ಣ	-"-	0.06
7.	ನರಸಿಂಹಯ್ಯ ಬಿನ್ ಚೆನ್ನಪ್ಪ್	ಮಧುಗಿರಿ	0.14
8.	ಓಬಳೇಶಪ್ಪ ಬಿನ್ ತಿಪ್ಪಣ್ಣ	-"-	0.20
9.	ಸ.ನಂ. ೪೩ರ ಹಿಡುವಳಿದಾರರು ಒತ್ತುವರಿ ಮಾಡಿರುವುದು	-"-	0.08
10.	ತಿಮ್ಮಯ್ಯ ಬಿನ್ ದಾಸಣ್ಣ	ಕೆರೆಗಳ ಪಾಳ್ಯ	0.01
11.	ರಂಗಮ್ಮ ಕೋಂ ಪುಟ್ಟಮ್ಮ	-"-	0.02
12.	ಸಣ್ಣಕಾವಲಪ್ಪ ಕೋಂ ಗೋವಿಂದಪ್ಪ	-"-	0.16
13.	ನರಸಪ್ಪ ಬಿನ್ ಪುಟ್ಟಣ್ಣ	-"-	0.22
14.	ಪುಟ್ಟಕಾಮಯ್ಯ ಬಿನ್ ಪುಟ್ಟಣ್ಣ	-"-	0.20
15.	ಚಿಕ್ಕಣ್ಣ ಬಿನ್ ಪುಟ್ಟಣ್ಣ	-"-	0.20
16.	ಮಲ್ಲಪ್ಪ ಬಿನ್ ಪುಟ್ಟಣ್ಣ	-"-	0.28
17.	ಮಲ್ಲಪ್ಪ ಬಿನ್ ಪುಟ್ಟಣ್ಣ	-"-	
	ಚಿಕ್ಕಣ್ಣ ಬಿನ್ ಪುಟ್ಟಣ್ಣ	-"-	

	ಪುಟ್ಟಕಾಮಯ್ಯ ಬಿನ್ ಪುಟ್ಟಣ್ಣ	ಕೆರೆಗಳ ಪಾಳ್ಯ	0.07
	ನರಸಪ್ಪ ಬಿನ್ ಪುಟ್ಟಣ್ಣ		
18.	ತಿಮ್ಮಯ್ಯ ಬಿನ್ ದಾಸಣ್ಣ	-"-	0.01
19.	ಕಾವಲ್ಲಪ್ಪ ಬಿನ್ ಮಲ್ಲಣ್ಣ	-"-	0.01
20.	ಹುಚ್ಚಯ್ಯ ಬಿನ್ ಚಿಕ್ಕಣ್ಣ	-"-	0.01
21.	ಮಲ್ಲಪ್ಪ ಬಿನ್ ಪುಟ್ಟಣ್ಣ	-"-	
	ಚಿಕ್ಕಣ್ಣ ಬಿನ್ ಪುಟ್ಟಣ್ಣ	-"-	0.03
	ಪುಟ್ಟಕಾಮಯ್ಯ ಬಿನ್ ಪುಟ್ಟಣ್ಣ		
	ನರಸಪ್ಪ ಬಿನ್ ಪುಟ್ಟಣ್ಣ	-"-	
22.	ತಿಮ್ಮಯ್ಯ ಬಿನ್ ದಾಸಣ್ಣ	-"-	0.01
23.	ಮಲ್ಲಪ್ಪ ಬಿನ್ ಕುರಿಕಾಮಣ್ಣ	-"-	0.38
24.	ಲಿಂಗಪ್ಪ ಬಿನ್ ಲಿಂಗಪ್ಪ	-"-	0.33
25.	ವೆಂಕಟರವಣಪ್ಪ ಬಿನ್ ತಿಮ್ಮಯ್ಯ	-"-	0.03
26.	ಕ್ಯಾತಪ್ಪ ಬಿನ್ ಬಿಳಿನಾಗಪ್ಪ	-"-	0.10
27.	ಈರಣ್ಣ ಬಿನ್ ಬಿಳಿಕ್ಯಾತಯ್ಯ	-"-	0.03
28.	ನರಸಿಂಹಪ್ಪ ಬಿನ್ ಬಿಳಿಕ್ಯಾತಯ್ಯ	-"-	0.03
29.	ನಾಗಪ್ಪ ಬಿನ್ ಬಿಳಿಕ್ಯಾತಯ್ಯ	ಕೆರೆಗಳ ಪಾಳ್ಯ	0.03
30.	ಬಂದಪ್ಪ ಬಿನ್ ಈರಣ್ಣ	-"-	0.03
31.	ನಾಗರಾಜಯ್ಯ ಬಿನ್ ನರಸಪ್ಪ	-"-	$0.2\frac{1}{2}$
32.	ಈರೋಬಳಯ್ಯ ಬಿನ್ ಚಿಕ್ಕಹುಲಿಯಪ್ಪ	-"-	0.06
33.	ವೆಂಕಟರಾಮಯ್ಯ ಬಿನ್ ಕಚ್ಚಿಗಡ್ಡೇತಿಮ್ಮಯ್ಯ	-"-	0.03
34.	ಮುದ್ದಕ್ಕ ಕೋಂ ನರಸಪ್ಪ	-"-	0.03
35.	ಬಂಡಪ್ಪ ಬಿನ್ ಈರಣ್ಣ	-"-	0.03

36.	ಲಿಂಗಪ್ಪ ಬಿನ್ ಲಿಂಗಪ್ಪ	-"-	0.03
37.	-"-	-"-	0.08
38.	ಹುಚ್ಚಮ್ಮ ಕೋಂ ಚಿಕ್ಕಹನುಮಯ್ಯ	-"-	೦.೦೮
39.	ಲಿಂಗಪ್ಪ ಬಿನ್ ಲಿಂಗಪ್ಪ	-"-	0.06
40.	ವೆಂಕಟರಾಮಯ್ಯ ಬಿನ್ ಅಧಿನಾರಾಯಣಪ್ಪ	ಮಧುಗಿರಿ	0.09
41.	ಮುನಿಶ್ಯಾಮಪ್ಪ	ಕೆರೆಗಳ ಪಾಳ್ಯ	1.04
42.	ಮಲ್ಲಪ್ಪ ಬಿನ್ ಪುಟ್ಟಣ್ಣ	-"-	1.09
43.	ನರಸಿಂಹಯ್ಯ ಬಿನ್ ಕರಿಕ್ಯಾತಯ್ಯ	-"-	0.02
	ಒಟ್ಟು ಒತ್ತುವರಿ ವಿಸ್ತೀರ್ಣ :		$10.38\frac{1}{2}$ ಗುಂಟೆ.

ಶ್ರೀ ಜಿ.ಎಸ್.. ಶಿವನಂಜಪ್ಪ : ಉತ್ತರದಲ್ಲಿ 'ಇ' ಪ್ರಶ್ನೆಗೆ ಅತಿಕ್ರಮಣವನ್ನು ಒಕ್ಕಲೆಬ್ಬಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳುತ್ತಾರೆ. 'ಉ' ಪ್ರಶ್ನೆಗೆ ಅತಿಕ್ರಮಣವನ್ನು ಈಗಾಗಲೇ ತೆರವುಗೊಲಿಸಲಾಗಿದೆ ಎಂದು ಹೇಳಿದ್ದಾರೆ. ಇದರ ಅರ್ಥ ನನಗೆ ಗೊತ್ತಾಗುತ್ತಿಲ್ಲ, ಎವಿಕ್ಷನ್ ಮಾಡಿದ್ದಾರೋ ಇಲ್ಲವೋ ಅಥವಾ ಎವಿಕ್ಷನ್ ಪ್ರೊಸೀಡಿಂಗ್ಸ್ ಸ್ಟಾರ್ಟ್ ಮಾಡಿದ್ದಾರಾ ಎಂಬ ಬಗ್ಗೆ ಡೆಫನೆಟ್ ಉತ್ತರ ಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈಗ ನನಗೆ ಕೊಟ್ಟಂತಹ ಮಾಹಿತಿ ಪ್ರಕಾರ ಈಗಾಗಲೇ ಅವರಿಗೆ ಎವಿಕ್ಷನ್ ಮಾಡಿಸಿದ್ದೇವೆ.

ಶ್ರೀ ಜಿ.ಎಸ್. ಶಿವನಂಜಪ್ಪ : ನನಗೆ ಕೊಟ್ಟಿರುವ ಉತ್ತರದಲ್ಲಿ ಒಂದು ಕಡೆ ಅತಿಕ್ರಮಣದಾರರನ್ನು ಒಕ್ಕಲೆಬ್ಬಿಸಲು ಕ್ರಮ ಕೈಗೊಳ್ಳಲಾಗಿದೆ. ಎಂದು (ಇ) ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಇನ್ನೊಂದು ಕಡೆ 'ಅತಿಕ್ರಮಣವನ್ನು ಈಗಾಗಲೇ ತೆರವುಗೊಳಿಸಲಾಗಿದೆ' ಎಂದು ಹೇಳಿದ್ದಾರೆ. ಇದು ನನಗೆ ಸರಿಯಾಗಿ ಅರ್ಥವಾಗಲಿಲ್ಲ, ಮಾನ್ಯ ಮಂತ್ರಿಗಳು ಅರ್ಥ ಆಗುವ ಹಾಗೆ ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಲ್ಲಿ 10 ಎಕರೆ 38 ಗುಂಟೆಯನ್ನು ಏನು ಎನ್‌ಕ್ರೋಚ್ ಮಾಡಿದ್ದಾರೆ ಅವರೆಲ್ಲರನ್ನೂ ಎವಿಕ್ಟ್ ಮಾಡಿದ್ದೇವೆನ್ನುವ ಟೆಲೆಕ್ಸ್ ಮೆಸೇಜ್ ನನಗೆ ಬಂದಿದೆ. ಅದರ ಪ್ರಕಾರ ನಾನು ಹೇಳಿದ್ದೇನೆ. ಏನು ಎನ್‌ಕ್ರೋಚ್ ಮಾಡಿದ್ದಾರೆ ಅವರು ಪುನಃ ಬಂದು ಕಲ್ಟಿವೇಟ್ ಮಾಡುವ ಪ್ರಶ್ನೆ ಬರುವುದಿಲ್ಲ.

ಶ್ರೀ ಜಿ.ಎಸ್. ಶಿವನಂಜಪ್ಪ : ಮಾನ್ಯ ಅಧ್ಯಕ್ಷರೇ, ಮೊನ್ನೆ ತಾವು ರೂಲಿಂಗ್ ಕೊಟ್ಟಿರಿ "ಸುಳ್ಳು" ಎನ್ನುವ ಪದವನ್ನು ಉಪಯೋಗಿಸಬಹುದು ಎಂದು.

ಅಧ್ಯಕ್ಷರು : ಸ್ಪೇರಿಂಗಾಗಿ ಉಪಯೋಗಿಸಿ ಎಂದು ರೂಲಿಂಗ್ ಕೊಟ್ಟೆ..

ಶ್ರೀ ಜಿ.ಎಸ್. ಶಿವನಂಜಪ್ಪ : ಮಾನ್ಯ ಮಂತ್ರಿಗಳವರಿಗೆ ಏನು ಎವಿಕ್

ಮಾಡಲಾಗಿದೆ ಎಂದು ರಿಪೋರ್ಟ್ ಕೊಟ್ಟಿದ್ದಾರೆ ಅದು 'ಸುಳ್ಳು' ಎಂದು ನಾನು ಹೇಳಬೇಕಾಗುತ್ತದೆ ನಾನು ಈ ಪ್ರಶ್ನೆ ಹಾಕಿದಮೇಲೆ ನಾನು ಆ ಊರಿಗೆ ಹೋಗಿದ್ದೆ.

ಅಧ್ಯಕ್ಷರು : ಇವರು ಉತ್ತರ ಕೊಟ್ಟಮೇಲೆ ತಾವು ಇನ್ನೂ ಹೋಗಿಲ್ಲ, ಈಗ ಹೋಗಿ ನೋಡಿಕೊಂಡು ಬನ್ನಿ.

ಶ್ರೀ ಜಿ.ಎಸ್. ಶಿವನಂಜಪ್ಪ : ಬೆಳೆಯನ್ನು ಅವರು ಇಟ್ಟಿದ್ದಾರೆ.

They have not even issued a notice.

Mr. SPEAKER : The Minister takes the responsibility to say that he has received a telex message that they have been evicted.

SRI G.S. SHIVANAJAPPA : They have not even issued a notice. ಅಧಿಕಾರಿಗಳನ್ನು ಸ್ವಲ್ಪ ತರಾಟೆಗೆ ತೆಗೆದುಕೊಂಡರೆ, ಸರಿಯಾದ ಉತ್ತರ ಬರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಒಂದು ವೇಳೆ ಕೊಟ್ಟ ಮಾಹಿತಿ ಪ್ರಕಾರ ಎವಿಕ್ಟ್ ಮಾಡಿಲ್ಲ ಎನ್ನುವುದು ಸಭೀತದರೆ I will take action against the Thasildar who had furnished false information to this House.

MR. SPEAKER : That is the way to go about it.

ಶ್ರೀ ಕೆ.ಹೆಚ್. ರಂಗನಾಥ್ : ಈ ಪ್ರಶ್ನೆ ಒಂದು ತಾಲ್ಲೂಕಿಗೆ ಸೀಮಿತವಾಗಿದ್ದರೂ ವ್ಯಾಪಕವಾಗಿ ರಾಜ್ಯಕ್ಕೆ ಸಂಬಂಧಪಟ್ಟದ್ದುದು. ಇದೆ ನಾವು ರಾಷ್ಟ್ರೀಯ ಹೆದ್ದಾರಿಯಲ್ಲಿ ಪ್ರಯಾಣ ಮಾಡುವಾಗ ಅಕ್ಕಪಕ್ಕದಲ್ಲಿ ಕೆರೆ ಅಂಗಳವನ್ನು ಸಾಗುವಳಿ ಮಾಡಿರುವುದನ್ನು ನೋಡುತ್ತಿದ್ದೇವೆ. ಮತ್ತೆ ಕೆರೆಗೆ ಹರಿದು ಬರುವ ಹಳ್ಳಗಳಲ್ಲೂ ಸಾಗುವಳಿ ಮಾಡಿರುತ್ತಾರೆ. ನಾಳೆ ಕೆರೆಗಳೆಲ್ಲಾ ಸಾಗುವಳಿಯಾಗಿ ಬಾವಿಗಳಲ್ಲೂ ನೀರು ಇಲ್ಲದ ಪರಿಸ್ಥಿತಿ ಬರುತ್ತದೆ. ಕೆರೆ ಅಂಗಳ ಇಷ್ಟೇ ಎಂದು ಸರ್ವೆಆಗಿರುತ್ತದೆ ಆದರೂ ಕೂಡ ತಹಶೀಲ್ದಾರರು ಡಿಸಿಗಳು ಎಸಿಗಳು ಇದನ್ನು ಒತ್ತುವರಿ ಮಾಡುವುದಕ್ಕೆ ಅವಕಾಶ ಕೊಡುತ್ತಾರೆಂದರೆ ಹೇಗೆ? ಟಿ.ಟಿ ಹಾಕಿರಬಹುದು ಟಿ.ಟಿ ಹಾಕಿದ ಮಾತ್ರಕ್ಕೆ ಕೆರೆ ಅಂಗಳವನ್ನೇ ಕೊಡುವುದಕ್ಕಾಗುತ್ತದೆಯೇ? ಅಂತಹ ಕಡೆ ಟಿ.ಟಿ. ಹಾಕಿದ್ದರೆ ಅವರನ್ನು ಆಚೇ ಕಳುಹಿಸಬೇಕು. ಆದ್ದರಿಂದ ಮಾನ್ಯ ಮಂತ್ರಿಗಳು ರಾಜ್ಯದಲ್ಲಿ ಸರ್ವೆ ರೆಕಾರ್ಡ್ ಪ್ರಕಾರ ಯಾವ ಯಾವ ಕೆರೆಗಳ ಅಂಗಳ ಎಷ್ಟೆಷ್ಟು ಇತ್ತು ಎಷ್ಟೆಷ್ಟು ಒತ್ತುವಳಿ ಮಾಡಿದ್ದಾರೆ ಅದನ್ನು ನೋಡಿಸಿ ತೆರವು ಮಾಡುವ ಬಗ್ಗೆ ಮತ್ತು ಯಾವ ರೀತಿಯಿಂದಲೂ ಅತಿಕ್ರಮಣ ಮಾಡದ ಹಾಗೆ ಕ್ರಮ ತೆಗೆದುಕೊಳ್ಳುತ್ತಾರೆಯ ಹೇಗೆ.?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ಅಧ್ಯಕ್ಷರೇ ಈ ಪ್ರಶ್ನೆಯನ್ನು ಮೊನ್ನೆ ದೇಶಪಾಂಡೆಯವರು ಹಾಗೂ ಅನೇಕ ಸದಸ್ಯರು ಕೂಡಾ ಕೇಳಿದ್ದಾರೆ ಇವತ್ತು ಫಾರೆಸ್ಟ್ ಜಮೀನು ಇರಬಹುದು ಗುಂಡುತೋಪು ಇರಬಹುದು ಕೆರೆ ಅಂಗಳ ಇರಬಹುದು ಇದೆಲ್ಲಾ ಕೂಡ ಎನ್‌ಕ್ರೋಚ್ ಮಾಡಿದ್ದಾರೆ. ನಾವು ಏನು ಲ್ಯಾಂಡ್ ರೆವಿನ್ಯೂ ಆ್ಯಕ್ಟ್ ಸೆಕ್ಷನ್ 94ಎ ತಿದ್ದುಪಡಿ ಮಾಡಿ ಯಾರುಯಾರು ಅತಿಕ್ರಮಣ ಮಾಡಿದ್ದಾರೆ. ಅವರಿಗೆ ಸಕ್ರಮ ಮಾಡುತ್ತೇವೆನ್ನುವ ಹೇಳಿಕೆ ಕೊಟ್ಟಮೇಲೆ ರೂಲ್ಸ್ ಫ್ರೇಮ್ ಆದಮೇಲೆ ಎಲ್ಲಾ ಕಡೆ ಈ ಕೆಲಸ ನಡೆದಿದೆ. ರೂಲ್ಸ್‌ನಲ್ಲಿ ನಾವು ಏನು ಹೇಳಿದ್ದೇವೆ ಅದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಕೆಲವು ಜಾಗಗಳು ಅದು ಕೆರೆ ಅಂಗಳ ಇರಬಹುದು ಗುಂಡುತೋಪು ಇರಬಹುದು ಅಥವಾ ಬೇರೆ ಜಮೀನಿಗೆ ಕೆಲವು ಎಕ್ಸೆಪ್ಷನ್ ಇದೆ. ಅವರನ್ನು ರೆಗುಲರೈಸ್ ಮಾಡಬಾರದು. ಎನ್ನತಕ್ಕದ್ದೇ ನಮ್ಮ ಆದೇಶ, ಅದನ್ನು ಇದರಲ್ಲಿ ಕೊಟ್ಟಿದ್ದೇವೆ. ಒಂದು ವೇಳೆ ಯಾರಾದರೂ ಆ ರೂಲ್ಸನ್ನು ವೈಲೇಟ್ ಮಾಡಿ ರೆಗ್ಯುಲರೈಸ್ ಮಾಡತಕ್ಕ ಪ್ರಯತ್ನ ಮಾಡಿದರೆ we have

to take action action against the officers and also we have to evict these cultivators from these lands.

ಅದಕ್ಕೆ ಸರ್ವೆ ಮಾಡಿಸುತ್ತೇನೆಂದು ಹೇಳಿದ್ದೇನೆ. ಕಾನೂನು ಬಾಹಿರವಾಗಿ ಎನ್‌ಕ್ರೋಚ್ ಮಾಡಿದ್ದರೆ ಅವರನ್ನು ಎವಿಕ್ಟ್ ಮಾಡಿಸತಕ್ಕದ್ದು ಇದೆ ಅದನ್ನು ಮಾಡಿಸುತ್ತೇನೆ.

ಶ್ರೀಮತಿ ದಮಯಂತಿಬೋರೇಗೌಡ : ಮಾನ್ಯ ಅಧ್ಯಕ್ಷರೆ, ಗ್ರಾಮಗಳ ಬಗ್ಗೆ ಒಂದು ಸಮಗ್ರವಾದ ವರದಿಯನ್ನು ತರಿಸಿಕೊಳ್ಳಬೇಕು. ರಾಜ್ಯದ ಅನೇಕ ಗ್ರಾಮಗಳಲ್ಲಿ ಸ್ಮಶಾನಗಳು ಇಲ್ಲ, ಇರುವವರಿಗೆ ವಸತಿ ಕೊಡುವುದು ಇರಲಿ. ಸ್ವರ್ಗಸ್ಥರಾದವರಿಗೆ ಒಂದು ಗತಿ ಕಾಣಿಸುವುದಕ್ಕೆ ಅವಕಾಶವಿಲ್ಲ.

ಅಧ್ಯಕ್ಷರು : ಅದಕ್ಕೆ ಕೆರೆ ಅಂಗಳ ಉಪಯೋಗಿಸಿ ಎಂದು ಹೇಳುತ್ತೀರಾ?

ಶ್ರೀಮತಿ ದಮಯಂತಿಬೋರೇಗೌಡ : ಕೆರೆ ಅಂಗಳ ಉಪಯೋಗಿಸಿ ಎಂದು ಹೇಳುತ್ತಿಲ್ಲ, ಸರ್ಕಾರ ಸ್ಮಶಾನದ ಉದ್ದೇಶಕ್ಕೆ ಭೂಮಿಯನ್ನು ಮೀಸಲಿಡುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು : ಈ ಪ್ರಶ್ನೆ ಕೆರೆ ಅಂಗಳಕ್ಕೆ ಸಂಬಂಧಪಟ್ಟಿದ್ದುದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಕೆರೆ ಅಂಗಳಕ್ಕೂ ಸ್ಮಶಾನಕ್ಕೂ ಸಂಬಂಧವಿದೆ. ಸ್ಮಶಾನಕ್ಕೆ ಹೋದವರು ಕೆರೆಗೆ ಬರುತ್ತಾರೆ. ಹೆಚ್ಚು ಕಡಿಮೆ ಕೆರೆ ಪಕ್ಕದಲ್ಲಿಯೇ ಸ್ಮಶಾನ ಇರುತ್ತದೆ. ಅದನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಹೇಳುವವರು ಕೇಳುವವರು ಯಾರೂ ಇಲ್ಲ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೆ, ಶ್ರೀಮತಿ ದಮಯಂತಿ ಬೋರೇಗೌಡರು ಹೇಳಿದ್ದಕ್ಕೆ ನಾನು ಪೂರಕವಾಗಿ ಹೇಳುತ್ತೇನೆ. ಏಕೆಂದರೆ ಒತ್ತುವರಿಯನ್ನು ಸಕ್ರಮ ಮಾಡುತ್ತೇವೆಂದು ಹೇಳಿದ ಮೇಲೆ ಒತ್ತುವರಿ ಹಾವಳಿ ಇಡೀ ರಾಜ್ಯದಲ್ಲಿ ನಡೆಯುತ್ತಿದೆ. ಹೇಳಿದ ಹಾಗೆ ಕೆರೆ ಅಂಗಳ ಒತ್ತುವರಿಯಾಗುತ್ತಿದೆ ಸ್ಮಶಾನ ಒತ್ತುವರಿಯಾಗುತ್ತಿದೆ ಹರಿಜನಗಿರಿಜನರು ಸಾಗುವಳಿ ಮಾಡುತ್ತಿರುವ ಭೂಮಿಯನ್ನು ಸಹ ನಮ್ಮಲ್ಲಿ ಸಾಕಷ್ಟು ಜನ ಒತ್ತುವರಿ ಮಾಡುತ್ತಿದ್ದಾರೆ. ಅದರ ಬಗ್ಗೆ ತಾವು ಏತಕ್ಕೆ ಕ್ರಮ ತೆಗೆದುಕೊಳ್ಳಬಾರದು. ಕಂದಾಯ ಇಲಾಖೆಯ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ. ನಿಮಗೆ ಟಿ.ಟಿ. ಹಾಕುತ್ತೇವೆ ನಂತರ ನಿಮಗೆ ಮಂಜೂರಾತಿ ಸಿಗುತ್ತದೆಂದು ಅವರೇ ಹೇಳಿ ಕೊಡುತ್ತಾರೆ. ಆಮೇಲೆ ನೀವು ಕೋರ್ಟ್‌ಗೆ ಹೋಗಿ ತರಬಹುದುದೆಂದು ಹೇಳುತ್ತಾರೆ. ಇಂತಹ ಪ್ರಕರಣಗಳು ತಮ್ಮ ಇಲಾಖೆಗೆ ಎಷ್ಟು ಬಂದಿವೆ? ಎಷ್ಟು ಜನರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನೀವು ಪ್ರಯತ್ನ ಮಾಡಿದ್ದೀರಿ ಎನ್ನುವುದನ್ನು ತಾವು ಹೇಳಬೇಕು.

ಅಧ್ಯಕ್ಷರು : ಇದು ಕೆರೆ ಅಂಗಳದ ಪ್ರಶ್ನೆ ಅದಕ್ಕೆ ಮಾತ್ರ ಸೀಮಿತವಾದ ಪ್ರಶ್ನೆ ತಮ್ಮದು ರಾಜ್ಯದಾದ್ಯಂತ ಪ್ರದರ್ಶನ ಮಾಡತಕ್ಕ ಪ್ರಶ್ನೆ ತಾವು ಬೇರೆ ಪ್ರಶ್ನೆ ಕೇಳಿ.

ವಿಷಯ : ವಿದ್ಯಾವಂತ ನಿರುದ್ಯೋಗಿಗಳಿಗೆ ಮುಜರಾಯಿ ಭೂ ಮಂಜೂರಾತಿ

3506 - ಶ್ರೀ ಕೆ.ವಿ. ರವೀಂದ್ರನಾಥ ಬಾಬು (ಕೊಟ್ಟೂರು) : ಮಾನ್ಯ ಧಾರ್ಮಿಕ ದತ್ತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಸುಶಿಕ್ಷಿತ ನಿರುದ್ಯೋಗಿಗಳು ಹಾಗೂ ವಯೋಮಿತಿ ಮೀರಿದವರು ಮುಜರಾಯಿ ಭೂಮಿಯ ಮಂಜೂರಾತಿ ಕೋರಿರುವುದು ನಿಜವೇ?

2) ಈ ಮೇಲಿನ

ವಿವಿಧ ವ್ಯಾಪಾರ ಉದ್ದೇಶಕ್ಕಾಗಿ ಸ್ಥಳವನ್ನು ಗುತ್ತಿಗೆಗೆ ನೀಡಿರುವುದು ಸಹ ನಿಜವೇ?

3) ಈ ತರದ ಭೂಮಿಯನ್ನು ಖಾಸಗಿಯವರಿಗೆ ಮಂಜೂರು ಮಾಡುವಾಗ ಸರ್ಕಾರದವರು ನಿಯಮ ಮತ್ತು ನಿಬಂಧನೆಗಳನ್ನು ಪಾಲಿಸಿದ್ದಾರೆಯೇ?

4) ಸರ್ಕಾರದವರು ಈಗಲಾದರೂ ಸುಶಿಕ್ಷಿತ ನಿರುದ್ಯೋಗಿಗಳ ಮನವಿಯನ್ನು ಪರಿಗಣಿಸುವರೇ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

1) ಸುಶಿಕ್ಷಿತ ನಿರುದ್ಯೋಗಿ ಹಾಗೂ ವಯೋಮಿತಿ ಮೀರಿದವರು ಯಾರಿಂದಲೂ ಮುಜರಾಯಿ ದೇವಸ್ಥಾನಕ್ಕೆ ಸೇರಿದ್ದ ಜಾಗವನ್ನು ಮಂಜೂರು ಮಾಡಲು ಕೋರಿ ಸಲ್ಲಿಸಿದ್ದ ಮನವಿ ಬಂದಿರುವುದಿಲ್ಲ. ಆದರೆ ಬೆಂಗಳೂರು ನಗರದಲ್ಲಿ ಮುಜರಾಯಿ ದೇವಸ್ಥಾನಕ್ಕೆ ಸೇರಿದ ಒಂದು ಕೋಣೆಯನ್ನು ಗುತ್ತಿಗೆಗೆ ನೀಡಲು ಕೋರಿ ಒಂದು ಮನವಿ ಬಂದಿರುತ್ತದೆ.

2) ಇಲ್ಲ.

3) ಉದ್ಭವಿಸುವುದಿಲ್ಲ.

4) ಈಗಿನ ಸರ್ಕಾರಿ ಆದೇಶಗಳ ಅನುಗುಣವಾಗಿ ಮೇಲ್ಕಂಡ ಮನವಿಯನ್ನು ಪರಿಶೀಲಿಸಿ, ಶೀಘ್ರದಲ್ಲಿಯೇ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಕೆ.ವಿ. ರವೀಂದ್ರನಾಥ ಬಾಬು : ಮಾನ್ಯ ಅಧ್ಯಕ್ಷರೆ ದೇವಾಲಯದ ಪ್ರಾಪರ್ಟಿಯನ್ನು ನಿರುದ್ಯೋಗ ಪದವೀಧರರಿಗೆ ಲೀಸ್ ಮೇಲೆ ಕೊಟ್ಟರೆ ಸ್ವಲ್ಪ ಅನುಕೂಲವಾಗುತ್ತದೆಂದು ನಾನು ಕೇಳಿಕೊಂಡಿದ್ದೇನೆ. ಅದರ ಬಗ್ಗೆ ಯಾರಾದರೂ ಅಪ್ಲೈ ಮಾಡಿದ್ದರೆ ಎಂದು ಕೇಳಿದ್ದಕ್ಕೆ ಒಬ್ಬರು ಅಪ್ಲೈ ಮಾಡಿದ್ದರು ಎಂದು ಹೇಳಿದ್ದಾರೆ. 1988ರಲ್ಲಿ ಅವರು ಅಪ್ಲೈ ಮಾಡಿದ್ದಾರೆ ಆ ಅರ್ಜಿ ಇವತ್ತಿನವರೆಗೂ ಪರಿಶೀಲನೆಯಲ್ಲಿದೆ. ಮಂತ್ರಿಗಳು ಉತ್ತರದಲ್ಲಿ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಎರಡನೆಯದು ದೇವಾಲಯ ಪ್ರಾಪರ್ಟೀಸ್ ಮತ್ತು ಅಸೆಟ್ಸ್ have been given to some private business people.

ರೂಲ್ಸ್ ಪ್ರಕಾರ ಆಗಿದೆಯೇ ಎಂದು ಕೇಳಿದ್ದಕ್ಕೆ ಯಾವುದನ್ನು ಕೊಟ್ಟಿಲ್ಲವೆಂದು ಹೇಳುತ್ತಾರೆ. 1988ರಿಂದ 1991ರವರೆಗೆ ದೇವಾಲಯಗಳ ಪ್ರಾಪರ್ಟಿಗಳನ್ನು ಕೆಲವರು ತೆಗೆದುಕೊಂಡಿರುವುದು ಇದೆ. ಕೆಲವು ದೇವಾಲಯಗಳ ಪ್ರಾಪರ್ಟಿಗಳನ್ನು ಅನ್ ಅಫೀಶಿಯಲ್ ಆಗಿ ಅಕ್ವೈರ್ ಮಾಡಿಕೊಂಡು ವ್ಯಾಪಾರಸ್ಥರು ಸಾಕಷ್ಟು ವ್ಯವಹಾರ ಮಾಡುತ್ತಿದ್ದಾರೆ. ಇದನ್ನು ಕೇಳುವವರು ಯಾರು ಇಲ್ಲವೆ? ಉದಾಹರಣೆಗೆ ಹೇಳುವುದಾದರೆ ಬಳ್ಳಾರಿಯ ಮಲ್ಲೇಶ್ವರ ದೇವಾಲಯದ ಪ್ರಾಪರ್ಟಿಯನ್ನು ಅಕ್ವೈರ್ ಮಾಡಿಕೊಂಡು ಕಾಂಪ್ಲೆಕ್ಸ್‌ಗಳನ್ನು ಕಟ್ಟಿಕೊಂಡು ಮೋತಿ ಟಾಕೀಸ್ ಪಕ್ಕದಲ್ಲಿ ದೌರ್ಜನ್ಯದಿಂದ ಬಿಸಿನೆಸ್ ಮಾಡುತ್ತಿದ್ದಾರೆ. ಅದನ್ನು ಯಾರೂ ಕೇಳುವವರು ಇಲ್ಲ. ಅದೇ ರೀತಿಯಲ್ಲಿ ಹರಪನಹಳ್ಳಿಯಲ್ಲಿ ದೇವಾಲಯದ ಪ್ರಾಪರ್ಟಿಯನ್ನು ಅನ್ ಅಫೀಶಿಯಲ್ ಆಗಿ ಅಕ್ವೈರ್ ಮಾಡಿಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಇದನ್ನು ಕೇಳುವವರು ಯಾರೂ ಇಲ್ಲವೆ? 1988 ರಿಂದ ಯಾರು ಕೇಳಲಿಲ್ಲ. 1988 ರಿಂದ 1991ರವರೆಗೆ ಇದು ನಡೆಯುತ್ತಿದೆ. ಇದಕ್ಕೆ ದಯವಿಟ್ಟು ಸ್ವಲ್ಪ ಉತ್ತರ ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಲ್ಲೆಲ್ಲಿ ಅತಿಕ್ರಮಣವಾಗುತ್ತಿದೆಯೆಂದು ಮಾನ್ಯ ಸದಸ್ಯರು ನನಗೆ ಪಟ್ಟಿಯನ್ನು ಕೊಟ್ಟರೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ. ಈ ವಿಚಾರವನು ಪ್ರಶ್ನೆಯಲ್ಲಿ ಕೇಳಿಲ್ಲ. ಮಾನ್ಯ ಸದಸ್ಯರು ಬಂದು ನನಗೆ ಖುದ್ದು

ಹೇಳಿದರೆ ಸಂಬಂಧಪಟ್ಟ ರಾಜ್ಯ ಮಂತ್ರಿಗಳಾದ ಅಮರೇಶ್ ನಾಯಕರಿಗೆ ಹೇಳಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ನಾನಾದರೂ ಸಹ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಈಗಲಾದರೂ ಹೇಳಿ ಎಲ್ಲೆಲ್ಲಿ ಮುಜರಾಯಿ ಇಲಾಖೆಗೆ ಸಂಬಂಧಪಟ್ಟ ಆಸ್ತಿಪಾಸ್ತಿಗಳನ್ನು ಎನ್‌ಕ್ರೋಚ್ ಮಾಡಿದ್ದಾರೆ ಅಂತಹ ಕಡೆಗಳಲ್ಲಿ ಶಾಪ್ಸ್‌ಗಳನ್ನು ಕಟ್ಟಿದ್ದಾರೆ ಅದನ್ನು ತಿಳಿಸಿ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ವಿ. ರವೀಂದ್ರನಾಥ ಬಾಬು : ಮಾನ್ಯ ಅಧ್ಯಕ್ಷರೆ ನಾನು ಆಗಲೇ ಹೇಳಿದಹಾಗೆ 1988ರಿಂದ ಒಂದು ಅರ್ಜಿ ಪೆಂಡಿಂಗ್‌ನಲ್ಲಿದೆ. ಅದರ ಬಗ್ಗೆ ಪರಿಶೀಲನೆ ಮಾಡಲಾಗುವುದು ಎಂದು ಹೇಳಿದ್ದಾರೆ. ನಿರುದ್ಯೋಗಿ ಪದವೀಧರರಿಗೆ ಅಥವಾ ವಯಸ್ಸು ಮೀರಿದ ಪದವೀಧರರುಗಳಿಗೆ ಅನುಕೂಲ ಮಾಡಿಕೊಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರೂಲ್ಸ್ ಪ್ರಕಾರ ಪ್ರಿನ್ಸಿಪಲ್ಸ್ ಏನಿದೆ ಕಂಡೀಷನ್‌ಗಳು ಏನಿವೆ ಅವುಗಳನ್ನು ಫುಲ್‌ಫಿಲ್ ಮಾಡಿದ್ದರೆ ಕೊಡುವುದಕ್ಕೆ ನಾನು ಪರಿಶೀಲನೆ ಮಾಡುತ್ತೇನೆ.

11.45 ಎ. ಎಂ.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಅಧ್ಯಕ್ಷರೆ ಮಾನ್ಯ ಸದಸ್ಯರು ಹೇಳಿದ ಪ್ರಶ್ನೆ ಬಹಳ ಗಾಢವಾದದ್ದು. ಇದು ಎಲ್ಲಾ ಕರೆ ದೇವಸ್ಥಾನಗಳ ಪ್ರಾಪರ್ಟಿಗಳನ್ನು ಮುಜರಾಯಿ ಇಲಾಖೆಯಿಂದ ಯಾವುಯಾವುದೋ ಕಾರಣಕ್ಕೆ ಕೊಟ್ಟುಬಿಡುತ್ತಿದ್ದಾರೆ. ನ್ಯಾಯವಾಗಿ ಧರ್ಮವಾಗಿ ಇದು ಯಾರ ಕೈಗೆ ಹೋಗಬೇಕೋ ಅದು ಹೋಗುತ್ತಿಲ್ಲ. ಅವರು ಬಂದು ಹೇಳಿದ್ದಾರೆ ನಿರುದ್ಯೋಗಿ ಪದವೀಧರರಾಗಲೀ ವಯೋಮಿತಿ ಮೀರದ ಪದವೀಧರರಾಗಲೀ ಅಂತಹವರಿಗೆ ಅನುಕೂಲ ಮಾಡಿಕೊಡಬೇಕು. ಅಂಥದ್ದನ್ನು ರೂಲ್ಸ್ ಪ್ರಕಾರ ಕನ್ಸಿಡರ್ ಮಾಡುತ್ತೇವೆಂದು ಹೇಳಿದರು. ನನಗೆ ಗೊತ್ತಿರುವ ಹಾಗೆ ಬೆಂಗಳೂರು ನಗರದಲ್ಲಿ ನೋಡಿದ್ದೇ ಆದರೆ ಎಷ್ಟೋ ದೇವಸ್ಥಾನಗಳ ಪ್ರಾಪರ್ಟಿಗಳನ್ನು ಬೇರೆಬೇರೆ ಕಾರಣಕ್ಕಾಗಿ ಪರಭಾರೆ ಮಾಡಿದ್ದಾರೆ. ಬಳೇಪೇಟೆಯಲ್ಲಿ ಶ್ರೀ ನರಸಿಂಹಸ್ವಾಮಿ ದೇವಸ್ಥಾನ ಇದೆ. ಅದರ ಮುಂದುಗಡೆ ಇರುವ ಜಾಗವನ್ನು ಹಾಗೆ ಮಾಡಿದ್ದಾರೆ. ಅದಕ್ಕೆ ವಾರಸುದಾರರು ಯಾರು ಎಂದು ಗೊತ್ತಿಲ್ಲ, ನರಸಿಂಹಸ್ವಾಮಿ ದೇವಸ್ಥಾನದ ಮೇಲುಗಡೆ ಒಂದು ಮಲ್ಟಿಸ್ಟೋರಿಡ್ ಬಿಲ್ಡಿಂಗ್ ಕಟ್ಟಿ ಅಲ್ಲಿ ಕ್ಲಬ್ ನಡೆಸುತ್ತಿದ್ದಾರೆ. ಹೀಗೆ ನಾನಾ ಪ್ರಕಾರವಾಗಿ ನಡೆಸುತ್ತಿದ್ದಾರೆ. ನೀವು ರೂಲ್ಸ್ ಪ್ರಕಾರ ಮಾಡುತ್ತೇವೆ ಎಂದರೆ ಅರ್ಥ ಏನು ಸ್ವಾಮಿ? ಆದ್ದರಿಂದ ನನ್ನ ಸಲಹೆ ಏನೆಂದರೆ ಇದಕ್ಕೆ ಒಂದು ಪ್ರತ್ಯೇಕವಾದ ಒಂದು ಇನ್ವೆಸ್ಟಿಗೇಶನ್ ಕಮಿಟಿ ಎಂದು ಮಾಡಿ ಎಲ್ಲೆಲ್ಲಿ ಇಂಥ ಪ್ರಾಮುಖ್ಯವಾದ ಪ್ರಾಪರ್ಟಿಗಳು ಇವೆ ಯಾವ ತರಹ ಯಾರಿಗೆ ಹೋಗಿದೆ ಎನ್ನುವುದನ್ನು ಸ್ವಲ್ಪ ತನಿಖೆ ಮಾಡಿ ಇದು ರೂಲ್ಸ್ ಪ್ರಕಾರ ನಡೆದಿದೆಯೇ ಎಂದು ನೋಡಿದರೆ ಒಳ್ಳೆಯದಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಏನು ಹೇಳುತ್ತಿದ್ದೀರಿ ಇದನ್ನು ಕಳಿಸಿಕೊಟ್ಟರೆ ನನಗೂ ಕೂಡ ಅನುಕೂಲವಾಗುತ್ತದೆ ಇದರಲ್ಲಿ ಎರಡು ವಿಷಯಗಳು ಕೆಲವು ಮೊದಲನೆಯದು ಡಿಪಾರ್ಟ್‌ಮೆಂಟ್ ವತಿಯಿಂದ ಆಕ್ಷನ್ ಮಾಡಿ ಅಥವಾ ರೆಂಟ್ ಫಿಕ್ಸ್ ಮಾಡಿಕೊಟ್ಟಂಥ ಶಾಪ್‌ಗಳಿಗೆ ಅಥವಾ ಜಾಗವನ್ನು ಕೊಟ್ಟಿದ್ದಾರೆ ಈಗ ಆಕ್ಷನ್ ಮಾಡಿ ಅದನ್ನು ಕೊಡಬೇಕು ಎಂದು ಹೇಳಿದರೆ ಹೋದ ಸಲ ಕೆಲವು ಕಾರ್ಯಕ್ರಮ ತೆಗೆದುಕೊಂಡಾಗ ಅನೇಕ ಜನ ಹೈಕೋರ್ಟಿನಲ್ಲಿ ಸ್ಟೇ ತಂದಿದ್ದಾರೆ. ಹಳೆಯ ರೆಂಟನ್ನು ಕೊಟ್ಟುಕೊಂಡು ಬರುತ್ತಿದ್ದಾರೆ. ಇದರಿಂದ ಕೆಲವು ಕಡೆ ತೊಂದರೆ ಆದರೆ ನೀವು ಸ್ಪೆಸಿಫಿಕ್ ಆಗಿ ಇಂತಹ ಕಡೆ ಅನ್ಯಾಯ ನಡೆದಿದೆ ಅಥವಾ

ರೂಲ್ಸ್ ಬಿಟ್ಟು ಕೆಲಸ ಮಾಡಿದ್ದಾರೆ. ಎಂದು ನನ್ನ ಗಮನಕ್ಕೆ ತಂದರೆ ನಾನು ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್. ವಿಶ್ವನಾಥ್ : ಸನ್ಮಾನ್ಯ ಅಧ್ಯಕ್ಷರೇ ಈ ಧಾರ್ಮಿಕ ದತ್ತಿಯ ಕೆಳಗಡೆ ಬರತಕ್ಕಂಥ ಕೋಟ್ಯಾಂತರ ರೂಪಾಯಿ ಆಸ್ತಿಗಳು ದೇವಸ್ಥಾನಗಳಿಗೆ ಸಂಬಂಧಪಟ್ಟಿದ್ದುದು ಮೈಸೂರು ಬೆಂಗಳೂರು ಇಂಥ ಮಹಾ ನಗರಗಳಲ್ಲಿ ಹಿಂದೆ ಒಂದು ಅಗ್ರಿಮೆಂಟ್ ಆಗಿ 99 ವರ್ಷಗಳಿಗೆ ಕೆಲವರಿಗೆ ಕೊಟ್ಟಿದ್ದರು. ಅದು ಈಗ ರಿನ್ಯೂವಲ್ ಆಗತಕ್ಕಂಥ ಸಂದರ್ಭ ಬಂದಿದೆ. ಹಿಂದೆ ನೂರು ರೂಪಾಯಿ ಬೆಲೆಬಾಳತಕ್ಕಂಥ ಆಸ್ತಿಗಳು ಇಂದು ಕೋಟ್ಯಾಂತರ ರೂಪಾಯಿ ಬೆಲೆಬಾಳುತ್ತದೆ. ಅಂಥದ್ದನ್ನು ಮತ್ತೆ ಅವರಿಗೇ ರಿನ್ಯೂ ಮಾಡತಕ್ಕಂಥ ಪ್ರಯತ್ನ ಆಗುತ್ತಿದೆ ಎನ್ನತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ? ಹಾಗೊಂದು ವೇಳೆ ಬಂದಿದ್ದರೆ ನೂರಾರು ಕೋಟಿ ರೂಪಾಯಿ ಬೆಲೆಬಾಳುತಕ್ಕಂಥ ಆಸ್ತಿಯನ್ನು ಅವರಿಗೆ ಮತ್ತೆ ರೀಅಗ್ರಿಮೆಂಟ್ ಮಾಡುತ್ತೀರಾ? ಅಥವಾ ಅವರಿಂದ ಬಿಡಿಸಿ ಇನ್ನೇನಾದರೂ ಸರ್ಕಾರಕ್ಕೆ ಉಪಯೋಗ ಆಗತಕ್ಕಂಥ ವ್ಯವಸ್ಥೆ ಮಾಡುತ್ತೀರಾ ಎನ್ನತಕ್ಕಂಥಾದ್ದು ನನ್ನ ಪ್ರಶ್ನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ಮಾಹಿತಿ ನನ್ನ ಹತ್ತಿರ ಇಲ್ಲ.

ಶ್ರೀ ಬಿ.ಎಚ್. ಯಂಕನಾಯ್ಕ : ಇದೇ ದೇವರ ವಿಚಾರದಲ್ಲಿ....

ಅಧ್ಯಕ್ಷರು : ನೀವು ಬರೆದು ಕಳಿಸಿಕೊಟ್ಟರೆ ನಾನು ಸರಿಮಾಡುತ್ತೇನೆ ಎನ್ನುವ ಉತ್ತರವನ್ನು ಅವರು ಹೇಳುತ್ತಾರೆ. ಆದ್ದರಿಂದ ನೀವು ಬರೆದು ಕಳಿಸಿಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಒಂದೊಂದು ದೇವರ ಬಗ್ಗೆ ಕೇಳಿಕೊಳ್ಳುತ್ತಾ ಹೋದರೆ 64 ಸಾವಿರ ದೇವರುಗಳು ಇದೆ.

ಶ್ರೀ ವಾಟಾಳ್ ನಾಗರಾಜ್ : 64 ಸಾವಿರ ದೇವರುಗಳ ಹೆಸರುಗಳು ಈ ಸದನದಲ್ಲಿ ಬರಬೇಕು.

ಅಧ್ಯಕ್ಷರು : ಇಷ್ಟು ದೇವರುಗಳನ್ನು ನೀವು ನೋಡಿಕೊಳ್ಳಬೇಕಾದರೆ ನಿಮ್ಮದು ದೇವರೇ ಗತಿ.

ಶ್ರೀ ಎನ್.ಜಿ. ನಾಯಕ್ : ನಾನು ದೇವರ ವಿಚಾರ ಹೇಳಬೇಕು.

ಅಧ್ಯಕ್ಷರು : ನಿಮ್ಮದು ಯಾವ ದೇವರ ವಿಚಾರ?

ಶ್ರೀ ಎನ್.ಜಿ. ನಾಯಕ್ : ನನ್ನ ಕ್ಷೇತ್ರದಲ್ಲಿ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ ನೂರಾರು ವರ್ಷಗಳಿಂದ ಇದ್ದು ದೇವರ ಹೆಸರಿಗೆ ಜಮೀನು ಇದೆ ಈಗ ಅಲ್ಲಿ ಸೈಟುಗಳನ್ನು ಮಾಡಿ ಮಾರುತ್ತಿದ್ದಾರೆ. ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ? ಇದನ್ನು ಮಾಡಕೂಡದು ಎಂದು ನಾನು ಹೇಳುತ್ತೇನೆ. ಇದು ದೇವರ ಜಮೀನು ಇದ್ದು ಇದನ್ನು ದೇವರಿಗೇ ಕೊಡಬೇಕು. ದೇವರು ಅವನಿಗೆ ಕೊಡಬೇಕು ಎಂದು ಹೇಳಿದ್ದಾನೆ.

MR.SPEAKER: Please see that our hon Member. Sri Nayak is in direct communication with God.

ಆದ್ದರಿಂದ ದೇವರು ಹೇಳುತ್ತಿದ್ದಾರೆ. ಈಗ ಶ್ರೀ ಖರ್ಗೆಯವರು ಪೂಜಾರಿಗಳು ದೇವರು ವರ ಕೊಟ್ಟಿದ್ದಾನೆ. ಪೂಜಾರಿಯವರು ಅದಕ್ಕೆ ಅಡ್ಡಿ ಬರಬಾರದು.

ದಾವಣಗೆರೆಯನ್ನು ಜಿಲ್ಲಾ ಕೇಂದ್ರವಾಗಿ ನಿರ್ಮಾಣ

3534 - ಶ್ರೀ ಯಜಮಾನ್ ಮೋತಿ ವೀರಣ್ಣ (ದಾವಣಗೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಕೇಂದ್ರ ಬಿಂದುವಾಗಿ ರಾಜ್ಯದ ರಾಜಧಾನಿಯಾಗಲು ಸಕಲ ಅರ್ಹತೆಯನ್ನು ಹೊಂದಿರುವ ದಾವಣಗೆರೆಯನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಿ ಹೊಸ ಜಿಲ್ಲೆ ರಚಿಸುವುದಾಗಿ ಹಿಂದಿನ ಅಧಿವೇಶನದಲ್ಲಿ ಸರ್ಕಾರ ನೀಡಿರುವ ಭರವಸೆಯು ಕಾರ್ಯಗತವಾಗದಿರಲು ಕಾರಣವೇನೆಂಬುದನ್ನು ಸ್ಪಷ್ಟಪಡಿಸುವಿರಾ?

ಆ) ಜಿಲ್ಲೆ ರಚನೆಯಾಗಲು ಇರುವ ಅಡೆತಡೆಗಳೇನೆಂಬುದನ್ನು ತಿಳಿಯಲು ಸಾಧ್ಯವೇ?

ಇ) ಸುಮಾರು ಇಪ್ಪತ್ತು ವರ್ಷಗಳಿಂದ ಕಾತುರರಾಗಿ ನಿರೀಕ್ಷಿಸುವ ಆ ಭಾಗದ ಜನರ ಆಶೋತ್ತರಗಳಿಗೆ ಪ್ರತಿಸ್ಪಂದಿಸುವುದು ತಡವಾದರೆ ಜನರ ಆಕ್ರೋಶದ ದುಷ್ಪರಿಣಾಮಗಳಿಗೆ ಕಾರಣವಾದೀತೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಆಡಳಿತಾತ್ಮಕ ಮತ್ತು ಆರ್ಥಿಕ ಕಾರಣಗಳಿಂದ.

ಆ) ಹೆಚ್ಚಿನ ಅಡೆತಡೆಗಳೇನಿಲ್ಲ ಆದಷ್ಟು ಬೇಗ ರಚಿಸುವ ಪ್ರಾಮಾಣಿಕ ಪ್ರಯತ್ನ ನಡೆಯುತ್ತದೆ.

ಇ) ಹೆಚ್ಚು ತಡವಾಗಲಾರದು.

ಶ್ರೀ ವೈ.ಎಂ. ವೀರಣ್ಣ : ಮಾನ್ಯ ಸಭಾಧ್ಯಕ್ಷರೇ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಆಡಳಿತಾತ್ಮಕ ಮತ್ತು ಆರ್ಥಿಕ ಕಾರಣಗಳಿಂದ ಹೆಚ್ಚಿನ ಅಡೆತಡೆಗಳೇನಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಹೆಚ್ಚಿನ ಅಡೆತಡೆಗಳಿಲ್ಲ. ಮತ್ತು ಆಡಳಿತಾತ್ಮಕವಾದ ಮತ್ತು ಆರ್ಥಿಕವಾಗಿ ಎಂದು ಪ್ರಸ್ತಾಪ ಮಾಡಿರುವುದರಿಂದ ಹೇಳುತ್ತಿದ್ದೇನೆ. ದಾವಣಗೆರೆ ನಗರ ಬಹಳ ವರ್ಷಗಳಿಂದ ಜಿಲ್ಲೆ ಆಗಬೇಕೆಂದು ಇದೆ ಹಾಗಿದ್ದಲ್ಲಿ ಅವರಿಗೆ ಆಡಳಿತಾತ್ಮಕವಾದ ಸೌಲಭ್ಯಗಳು ಬೇಕಾದಲ್ಲಿ ಕಛೇರಿಗೆ ಬೇಕಾದ ಒಂದು ಬೃಹತ್ ಕಟ್ಟಡ ಇದೆ ಮತ್ತು ಆರ್ಥಿಕವಾಗಿ ಅಲ್ಲಿ ಸೌಲಭ್ಯ ದೊರಕುವುದಕ್ಕೆ ನಮ್ಮ ಸಹಕಾರ ಬೇಕಾಗಿದ್ದರೆ ದಾವಣಗೆರೆಯನ್ನು ಜಿಲ್ಲೆ ಮಾಡಿ ಇದನ್ನು ತಕ್ಷಣ ಜಾರಿಗೊಳಿಸುವುದಕ್ಕೆ ತೀರ್ಮಾನ ಕೈಗೊಳ್ಳುವುದಾದರೆ ನಾವು ಸಹಕಾರ ಮಾಡುತ್ತೇವೆ. ಸಾರ್ವಜನಿಕರಿಂದ ಬೆಂಬಲ ಕೊಡಿಸಿ ಜಿಲ್ಲೆ ಆಗುವುದಕ್ಕೆ ಸಹಕಾರಿಗಳಾಗಿ ನಿಲ್ಲುತ್ತೇವೆ. ಈ ದೃಷ್ಟಿಯಿಂದ ಅವರು ಕಾರ್ಯೋನ್ಮುಖರಾಗುತ್ತಾರೆಯೇ ಮತ್ತು ಜಾರಿಗೊಳಿಸುತ್ತಾರೆಯೇ ಎಂದು ನಾನು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ಅವರಿಗೆ ಗೊತ್ತಿದೆ ದಾವಣಗೆರೆ ಜಿಲ್ಲೆ ಮಾಡಬೇಕೆಂಬುದಕ್ಕೆ ಎಲ್ಲಾ ಸಮಿತಿಗಳೂ ಶಿಫಾರಸ್ಸು ಮಾಡಿವೆ. ಮತ್ತು ಇದನ್ನು ಘೋಷಣೆ ಮಾಡುವುದು ಸಧ್ಯಕ್ಕೆ ಆಗಿಲ್ಲ, ಕಾರಣ ಈಗಾಗಲೇ ಹೇಳಿದಹಾಗೆ ಆರ್ಥಿಕಸ್ಥಿತಿ ಬಹಳ ಕಷ್ಟದಲ್ಲಿದ್ದ ಕಾರಣ ಒಂದು ಜಿಲ್ಲೆಯನ್ನು ಫಾರಂ ಮಾಡಬೇಕಾದರೆ ಕನಿಷ್ಟ ಎರಡೂವರೆ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅದಕ್ಕಾಗಿ ಸಧ್ಯದಲ್ಲಿ ಅಷ್ಟು ಹಣವನ್ನು ಖರ್ಚುಮಾಡಿ ಜಿಲ್ಲೆ ಮಾಡುವುದಕ್ಕಾಗುವುದಿಲ್ಲವೆಂದು ಮುಂದೂಡಿದ್ದೇವೆ. ಆದರೆ ಸಮಿತಿಯ ಶಿಫಾರಸ್ಸನ್ನು ಒಪ್ಪಿಕೊಂಡಿದ್ದೇವೆ. ಮತ್ತು ಯಾವಾಗ ಜಿಲ್ಲೆಗಳನ್ನು ಫಾರಂ ಮಾಡುತ್ತೇವೆ, ಆಗ ದಾವಣಗೆರೆಯನ್ನು ಖಂಡಿತವಾಗಿ ಸೇರಿಸುತ್ತೇವೆ.

ಶ್ರೀ ವೈ.ಎಂ. ವೀರಣ್ಣ : ಸುಮಾರು ಮೂರೂವರೆ ದಶಕಗಳಿಂದಲೂ ಪ್ರಯತ್ನ ಮಾಡುತ್ತಿದ್ದೇನೆ. ಒಂದು ಸಣ್ಣ ಕೆಲಸಕ್ಕೂ ಚಿತ್ರದುರ್ಗಕ್ಕೆ ಹೋಗಬೇಕಾದ ಅವ್ಯವಸ್ಥೆ ಇದೆ. ಅಲ್ಲಿಯ ಜನರು ಬೇಕಾದ ಸಹಕಾರ ಕೊಡುವುದಕ್ಕೆ ಮುಂದೆ [illegible]

ಹೇಳಿದರೂ ಕೂಡ ಕಾರಣಗಳನ್ನು ಹೇಳುತ್ತಾ ಮುಂದೆ ಹಾಕುತಿದ್ದಾರೆ. ಇದರ ಬಗ್ಗೆ ಸರಿಯಾದ ನಿಲುವನ್ನು ತೆಗೆದುಕೊಂಡು ಅತಿ ಜಾಗ್ರತೆಯಾಗಿ ಜಿಲ್ಲೆ ಮಾಡುವುದಕ್ಕೆ ಸ್ಪಷ್ಟವಾದ ಉತ್ತರವನ್ನು ಕೊಟ್ಟರೆ ಅಲ್ಲಿ ಇರತಕ್ಕ ಜನರಿಗೆ ನೆಮ್ಮದಿ ಸಿಗುತ್ತದೆ. ಆ ದೃಷ್ಟಿಯಿಂದ ತಮ್ಮ ಆದೇಶವನ್ನು ಯಾವಾಗ ಜಾರಿ ಮಾಡುತ್ತೀರಿ ಸಮಾಜವಾದ ಉತ್ತರವನ್ನು ಮಾನ್ಯ ಸಚಿವರಿಂದ ಅಪೇಕ್ಷೆ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರ ಪ್ರಯತ್ನ ಬಹುಬೇಗನೆ ಸಫಲವಾಗುತ್ತದೆ. ಆದಷ್ಟು ಬೇಗ ಮಾಡತಕ್ಕಂಥ ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಸಚಿವರು ಆಡಳಿತಾತ್ಮಕ ಕಾರಣಗಳಿಂದ ಜಿಲ್ಲೆಯನ್ನು ರಚನೆ ಮಾಡುವುದಕ್ಕೆ ವಿಳಂಬವಾಗಿದೆ ಎಂದು ಹೇಳಿದ್ದಾರೆ. ಆಡಳಿತಾತ್ಮಕ ಕಾರಣ ಎಂದರೆ ಏನು ಎಂದು ಮೊದಲನೆಯದಾಗಿ ಕೇಳಬಯಸುತ್ತೇನೆ. ಅಲ್ಲಿಯ ಜನ ಜಿಲ್ಲೆ ಮಾಡುವುದಕ್ಕೆ ಬೇಕಾದ ಕಟ್ಟಡವನ್ನು ಕಟ್ಟಿಸಿಕೊಡುತ್ತಾರೆ ಅಥವಾ ಕಟ್ಟಡವನ್ನು ಕೊಡುತ್ತಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಎರಡನೆಯದಾಗಿ ಹೆಚ್ಚು ತಡವಾಗಬಾರದು. ಒಂದು ಜಿಲ್ಲೆ ಮಾಡುವುದಕ್ಕೆ ಎರಡೂವರೆ ಕೋಟಿ ಖರ್ಚು ಮಾಡಬೇಕಾಗುತ್ತದೆಂದು ಹೇಳಿದ್ದಾರೆ. ಈಗಾಗಲೇ 5-6 ಜಿಲ್ಲೆಗಳ ಪ್ರಸ್ತಾವನೆ ಸರ್ಕಾರದಲ್ಲಿದೆ. ಇವುಗಳನ್ನು ಹಂತಹಂತವಾಗಿ ಮಾಡುವುದರಿಂದ ಏನೂ ಹೆಚ್ಚು ಹಣ ಆಗುವುದಿಲ್ಲ. ಪ್ರತಿವರ್ಷವೂ ಹಂತಹಂತವಾಗಿ ಜಿಲ್ಲೆಗಳನ್ನು ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆಯೇ ಇದ್ದರೆ ಎಷ್ಟು ದಿವಸದಲ್ಲಿ ಮಾಡುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಂತಹಂತವಾಗಿ ಮಾಡುವುದಕ್ಕಾಗಿಯೇ ಸಚಿವಸಂಪುಟದ ಸಮಿತಿ ಮಾಡಿದ್ದೇವೆ. ಇದಾದಮೇಲೆ ಅಫಿಷಿಯಲ್ ಕಮಿಟಿ ಕೂಡ ಮಾಡಿದ್ದೇವೆ. ಇದರಲ್ಲಿ ಸೆಕ್ರೆಟರಿ-2, ಸೆಕ್ರಟರಿ, ಫೈನಾನ್ಸ್, ಸೆಕ್ರೆಟರಿ ರೂರಲ್ ಡೆವಲಪ್‌ಮೆಂಟ್ ಮತ್ತು ಪಂಚಾಯತ್‌ರಾಜ್ ಮತ್ತು ಸೆಕ್ರಟರಿ ಲಾ ಅಂಡ್ ಪಾರ್ಲಿಮೆಂಟರಿ ಅಫೇರ್ಸ್ ಈ ನಾಲ್ಕು ಜನರು ಸೇರಿರತಕ್ಕ ಕಮಿಟಿ ಕೂಡ ಮಾಡಿದ್ದೇವೆ. ಇವರು ಎಲ್ಲಾ ಜಿಲ್ಲೆಗಳಿಗೂ ಹೋಗಿ ಅಡ್ಮಿನಿಸ್ಟ್ರೇಟಿವ್ ರೀತಿಯಿಂದ ಕಟ್ಟಡವಾಗಲೀ ಮತ್ತು ಟ್ರೈಫರ್‌ಕೇಷನ್ ಆಫ್ ಸ್ಟ್ಯಾಫ್ ಯಾವ ರೀತಿಯಾಗಿ ಮಾಡಬೇಕು. ಮತ್ತು 9 ಜಿಲ್ಲೆಗಳ ಬಗ್ಗೆ ಏನು ಆಗಿದೆ. ಇದರಲ್ಲಿ ಹಂತಹಂತವಾಗಿ ಮಾಡಬೇಕೆನ್ನುವ ದೃಷ್ಟಿಯಿಂದಲೇ ಈ ಒಂದು ಸಬ್‌ಕಮಿಟಿ ಮಾಡಿ ಅಫಿಷಿಯಲ್ ಕಮಿಟಿ ಕೂಡ ಮಾಡಿದ್ದೇವೆ. ಆದಷ್ಟುಬೇಗ ಹಣಕಾಸಿನ ಪರಿಸ್ಥಿತಿ ಸುಧಾರಣೆಯಾದ ಮೇಲೆ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೇನೆ. ತಾವು ಏನು ಹೇಳಿದ್ದೀರಿ ಎಂದರೆ ದಾವಣಗೆರೆಯಲ್ಲಿರತಕ್ಕಂಥವರು ಕೆಲವು ಸವಲತ್ತುಗಳನ್ನು ಕೊಡುವುದಕ್ಕೆ ತಯಾರಿದ್ದಾರೆ. ತಾತ್ಕಾಲಿಕವಾಗಿ ಕಟ್ಟಡ ಕೊಡಬಹುದು. ಆದರೆ ಸ್ಯಾಲರಿ ಅವರು ಕೊಡುವುದಕ್ಕಾಗುವುದಿಲ್ಲ. ನಾವೇ ಪ್ರಾವಿಷನ್ ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕಾಗಿಯೇ ಹೇಳಿದೆ. ಜಿಲ್ಲೆ ಆಗಬೇಕೆಂದು ತಮಗೆ ಎಷ್ಟು ಆತುರ ಇದೆ ಇದು ಆದರೆ ನಮಗೂ ಕೂಡ ಒಳ್ಳೆಯದಾಗುತ್ತದೆ. ಬಹುಬೇಗನೆ ಮಾಡಬೇಕೆಂದು ಇದೆ.

ಶ್ರೀ ಎಸ್.ಎಂ. ಯಾಹ್ಯಾ : ಈ ಪ್ರಶ್ನೆ ದಾವಣಗೆರೆ ಮಾಡಬೇಕೆನ್ನುವುದಕ್ಕೆ ನಿಮಿತ್ತವಾದರೂ ಸರಕಾರದ ನೀತಿ ಈ ವಿಚಾರದಲ್ಲಿ ಏನಿದೆ. ಏತಕ್ಕೆಂದು ಹೇಳಿದರೆ ಈ ವಿಚಾರದಲ್ಲಿ ಎರಡು ಕಮೀಷನ್ ಮಾಡಿ ಹೊಸ ಹೊಸ ಜಿಲ್ಲೆಗಳನ್ನು ಮಾಡಬೇಕೆಂದು ರೆಕಮೆಂಡೇಷನ್ ಸಹ ಬಂತು. ಆ ರೆಕಮೆಂಡೇಷನ್‌ಗಳನ್ನು ಸಹ ಆಗಿನ ಸರಕಾರಗಳು ಒಪ್ಪಿಕೊಂಡವು. ಅಡ್ಮಿನಿಸ್ಟ್ರೇಟಿವ್ ಕನ್‌ವೀನಿಯನ್ಸ್ ಬರಬೇಕಾದರೆ ಬೇರೆ ಬೇರೆ ಜಿಲ್ಲೆಗಳನ್ನು ಮಾಡಬೇಕೆನ್ನುವುದು ಸರಕಾರದ ನೀತಿ. ಹೊಸ ಜಿಲೆಗಳು

ಬರುವ ವಿಚಾರದಲ್ಲಿ ಈ ಸರಕಾರದ ನೀತಿ ಏನಿದೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಈ ಸರಕಾರದ ನೀತಿ ಕೂಡ ಹೊಸ ಜಿಲ್ಲೆಗಳನ್ನು ಮಾಡಬೇಕು ಅಡ್ಮಿನಿಸ್ಟ್ರೇಟಿವ್ ಕನ್‌ವೀನಿಯನ್ಸ್ ಆಮೇಲೆ ಲಾ ಅಂಡ್ ಆರ್ಡರ್ ಮೇಂಟೇನ್ ಮಾಡುವುದಕ್ಕಾಗಲೀ ಡೆವಲಪ್‌ಮೆಂಟ್ ದೃಷ್ಟಿಯಿಂದ ಆಗಲೀ ಹೊಸ ಜಿಲ್ಲೆಗಳನ್ನು ಮಾಡಬೇಕೆಂಬ ದೃಷ್ಟಿಯಿಂದ ಕ್ಯಾಬಿನೆಟ್ ಸಬ್‌ಕಮಿಟಿ ಮಾಡಿರುತ್ತೇವೆ. ಮತ್ತು ಆಫಿಯಲ್ ಸಬ್‌ಕಮಿಟಿ ಮಾಡಿದ್ದೇವೆ. ಆದಷ್ಟು ಬೇಗನೆ ಕ್ರಮ ಕೈಗೊಳ್ಳಬೇಕೆನ್ನುವ ದೃಷ್ಟಿಯಿಂದ ನಾವು ಹೆಜ್ಜೆಯನ್ನು ಹಾಕುತ್ತೇವೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಸರ್ವೇಯರ್ಸ್‌ಗಳ ಹುದ್ದೆಗಳ ಭರ್ತಿ

3529 - ಶ್ರೀ ಎ. ವಿ. ಉಮಾಪತಿ (ಹೊಳಲ್ಕೆರೆ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಚಿತ್ರದುರ್ಗ ಜಿಲ್ಲೆಯ ತಾಲ್ಲೂಕು ಮಟ್ಟದಲ್ಲಿ ಎಷ್ಟು ಜನ ತಾಲ್ಲೂಕು ಸರ್ವೇಯರ್ಸ್ ಇದ್ದಾರೆ (ಖಾಲಿ ಇರುವ ಸ್ಥಳಗಳ ಬಗ್ಗೆ ವಿವರ ನೀಡುವುದು)*

ಆ) *ಹೋಬಳಿ ಮಟ್ಟದ ಸರ್ವೇಯರ್ಸ್ ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲ್ಲೂಕಿನಲ್ಲಿರುವರೇ?*

ಇ) *ಈಗ ಖಾಲಿಯಿರುವಂತಹ ಹುದ್ದೆಗಳೆಷ್ಟು?*

ಈ) *ತಾಲ್ಲೂಕು ಮಟ್ಟದಲ್ಲಿ ಖಾಲಿ ಇರುವ ಸರ್ವೇಯರ್ ತುಂಬಲು ಸರ್ಕಾರವೇನಾದರೂ ಕ್ರಮ ಕೈಗೊಂಡಿದೆಯೇ?*

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಒಂಬತ್ತು ತಾಲ್ಲೂಕು ಸರ್ವೇಯರ್ ಇದ್ದಾರೆ. (ಖಾಲಿ ಸ್ಥಳಗಳು ಇರುವುದಿಲ್ಲ)

ಆ) ಹೌದು.

ಇ) ಒಂದು.

ಈ) ತಾಲ್ಲೂಕು ಮಟ್ಟದಲ್ಲಿ ಯಾವ ಹುದ್ದೆಗಳೂ ಖಾಲಿ ಇರುವುದಿಲ್ಲ.

ಶ್ರೀ ಎ.ವಿ. ಉಮಾಪತಿ : ಸನ್ಮಾನ್ಯ ಅಧ್ಯಕ್ಷರೇ ಚಿತ್ರದುರ್ಗ ಜಿಲ್ಲೆಯ ತಾಲ್ಲೂಕು ಮಟ್ಟದಲ್ಲಿ ಎಷ್ಟು ಜನ ತಾಲ್ಲೂಕು ಸರ್ವೇಯರ್ಸ್ ಇದ್ದಾರೆ ಎಂದು ಕೇಳಿದ್ದೆ ಎಲ್ಲಾ ತಾಲ್ಲೂಕುಗಳಲ್ಲಿ ಇದ್ದಾರೆ ಎಂದು ಉತ್ತರ ಒದಗಿಸಿದ್ದಾರೆ. ಆದರೆ ಎಷ್ಟು ಜನ ಇದ್ದಾರೆ. ಎಂಬ ಉತ್ತರವನ್ನು ಅವರು ಕೊಟ್ಟಿಲ್ಲ. ಹೋಬಳಿ ಮಟ್ಟದ ಸರ್ವೇಯರ್ಸ್ ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲೋಕಿನಲ್ಲಿರುವರೇ ಎಂಬುದಕ್ಕೆ ಹೌದು ಎಂಬ ಉತ್ತರ ಕೊಟ್ಟಿದ್ದಾರೆ. ಖಾಲಿ ಇರುವ ಹುದ್ದೆಗಳು ಎಷ್ಟು ಎಂದು ಕೇಳಿದ್ದೆ ತಾಲ್ಲೂಕಿನಲ್ಲಿ ಅಥವಾ ಜಿಲ್ಲೆಯಲ್ಲಿ ಒಂದೇ ಒಂದು ಖಾಲಿ ಇರತಕ್ಕಂಥಾದ್ದು ಎಂಬ ವಿಚಾರ ತಿಳಿಸಿದ್ದಾರೆ. ಹೊಳಲ್ಕೆರೆ ತಾಲೋಕಿನಲ್ಲಿ ಎಷ್ಟು ಜನ ಸರ್ವೇಯರ್ಸ್ ಇದ್ದಾರೆ ಮತ್ತು ಖಾಲಿ ಇರತಕ್ಕಂಥ ಹುದ್ದೆಗಳು ಎಷ್ಟು ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ ಚಿತ್ರದುರ್ಗ ಜಿಲ್ಲೆಯ ಬಗ್ಗೆ ಕೇಳಿದುದನ್ನು ಹೇಳಿದ್ದೇನೆ ಸ್ಯಾಂಕ್ಷನ್‌ಡಿ ಸ್ಟ್ರೆಂಥ್ ಚಿತ್ರದುರ್ಗ ಸಬ್‌ಡಿವಿಷನ್ 26 ದಾವಣಗೆರೆ ಸಬ್‌ಡಿವಿಜನ್ 25 ಒಟ್ಟು 51 ಸರ್ವೇಯರ್ಸ್ ಅಲ್ಲಿದ್ದಾರೆ. ಒಂದು ಹುದ್ದೆ ಮಾತ್ರ ಖಾಲಿ ಇದೆ. ಇನ್ನು 50 ಜನ ಕೆಲಸ ಮಾಡುತ್ತಿದ್ದಾರೆ.

ಶ್ರೀ ಎ.ವಿ. ಉಮಾಪತಿ : ಸನ್ಮಾನ್ಯ ಅಧ್ಯಕ್ಷರೇ ನನ್ನ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ

ಮಾಡುತ್ತಿದ್ದೇನೆ. ಅಲ್ಲಿ ಒಬ್ಬನೇ ಒಬ್ಬ ಸರ್ವೇಯರ್ ಇದ್ದಾನೆ. ಬಹುಶಃ ಮಾನ್ಯ ಮಂತ್ರಿಗಳಿಗೆ ಸರಿಯಾಗಿ ಮಾಹಿತಿ ಕೊಟ್ಟಿಲ್ಲ ಎಂದು ಕಾಣುತ್ತಿದೆ. ನನ್ನ ಕ್ಷೇತ್ರದಲ್ಲಿ ಈಗೇನು ಸೈಟ್‌ಫಾಲ್ ಸೈಟ್‌ಲೆಸ್ ಕೊಡಬೇಕೆಂದು ಸರಕಾರದ ನೀತಿ ಇದೆ ಈಗಾಗಲೇ ಅದಕ್ಕಾಗಿ ಸರಕಾರದವರು ಭೂಮಿಯನ್ನು ಅಕ್ವೈರ್ ಮಾಡಿಕೊಂಡು ಅವಾರ್ಡ್ ಆಗಿದ್ದರೂ ಕೂಡಾ ಭೂಮಿಯನ್ನು ಅವರು ವೆಕೇಟ್ ಮಾಡಿಕೊಟ್ಟಿಲ್ಲ ಅದನ್ನು ಅಳತೆ ಮಾಡಿಸಬೇಕೆಂದರೆ ಇಡೀ ತಾಲ್ಲೂಕಿಗೆ ಒಬ್ಬನೇ ಒಬ್ಬ ಸರ್ವೇಯರ್ ಇದ್ದು ಈ ಕಾರ್ಯಕ್ರಮ ಕುಂಠಿತವಾಗುತ್ತಿದೆ. ಸರ್ವೇಯರ್‌ಗಳು ಇಲ್ಲದಿರುವುದರಿಂದ ಈ ಸಮಸ್ಯೆ ಉಂಟಾಗಿದೆ ಇದನ್ನು ಪರಿಹಾರ ಮಾಡುವುದಕ್ಕೆ ಆಗುವುದಿಲ್ಲವೇ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: ಈಗ ನನ್ನ ಬಳಿ ಇರತಕ್ಕಂಥ ಮಾಹಿತಿ ಪ್ರಕಾರ 50 ಸರ್ವೇಯರ್ ಪೈಕಿ ಒಂದು ಮಾತ್ರ ವೇಕೆನ್ಸಿ ಇದೆ ತಾಲ್ಲೂಕು ಮಟ್ಟದಲ್ಲಿ ಒಬ್ಬನೇ ಒಬ್ಬ ಸರ್ವೇಯರ್ ಇರುತ್ತಾನೆ. ಉಳಿದವರು ಹೋಬಳಿ ಮಟ್ಟದಲ್ಲಿ ಇರುತ್ತಾರೆ. ತಾಲ್ಲೂಕಿನಲ್ಲಿ ಖಾಲಿ ಇದೆ ಎನ್ನತಕ್ಕಂಥ ವಿಚಾರ ಹೇಳಿದ್ದಾರೆ ಒಂದು ಮಾತ್ರ ಖಾಲಿ ಇದೆ ಎಂದು ಹೇಳಿದ್ದೇನೆ. ಅಡಿಷನಲ್ ಆಗಿ ಬೇಕಾದರೆ ನಾವು ಈಗ ಅಕ್ರಮ ಸಾಗುವಳಿ ಭೂಮಿಯನ್ನು ಸಕ್ರಮಗೊಳಿಸತಕ್ಕಂಥ ಕಾರ್ಯಕ್ರಮ ಮತ್ತು ಲ್ಯಾಂಡ್ ರಿಫಾರ್ಮ್ಸ್‌ನಲ್ಲಿ ಸರ್ವೆ ಮಾಡತಕ್ಕದ್ದು ಈಗಾಗಲೇ ಮಾನ್ಯ ಹಿರಿಯ ಸದಸ್ಯರು ಹೇಳಿದಹಾಗೆ ಕೆರೆ ಅಂಗಳಗಳು ಹಾಗೂ ಬೇರೆ ಸರಕಾರಿ ಜಮೀನುಗಳನ್ನು ಸುರಕ್ಷಿತವಾಗಿ ಇಡಬೇಕು ಎಂದರೆ ಅದಕ್ಕೂ ಕೂಡ ಸರ್ವೆ ಮಾಡಬೇಕಾಗುತ್ತದೆ. ಈಗಾಗಲೇ ನಾನು ಹೇಳಿದಹಾಗೆ ಒಂದು ಸಾವಿರ ಹೊಸ ಹುದ್ದೆಗಳನ್ನು ಮಂಜೂರು ಮಾಡಬೇಕೆಂದಿದ್ದೇವೆ. ತಕ್ಷಣ ರೆಕ್ರೂಟ್‌ಮೆಂಟ್ ಮಾಡಿ ಅಡಿಷನಲ್ ಆಗಿ ಎಲ್ಲೆಲ್ಲಿ ಬೇಕು ಅಲ್ಲಿಗೆ ಒದಗಿಸತಕ್ಕಂಥ ಪ್ರಯತ್ನ ಮಾಡುತ್ತೇವೆ.

ಶ್ರೀ ಎ.ವಿ. ಉಮಾಪತಿ: ಎಷ್ಟು ದಿನಗಳ ಒಳಗಾಗಿ ಮಾಡುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಶೀಘ್ರವಾಗಿ ಒದಗಿಸುತ್ತೇವೆ.

ಶ್ರೀ ಎನ್.ಜಿ. ನಾಯಕ್: ಸನ್ಮಾನ್ಯ ಅಧ್ಯಕ್ಷರೇ ನನ್ನ ಕ್ಷೇತ್ರದಲ್ಲಿ ಒಬ್ಬರೇ ಸರ್ವೇಯರ್ ಇರುವುದು. ಈಗ ಸರಕಾರದವರು ಸಾವಿರಾರು ಮನೆಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಸಾವಿರಾರು ಮನೆಗಳನ್ನು ಒಂದು ಕ್ಷೇತ್ರಕ್ಕೆ ಕೊಡಬೇಕೆಂದರೆ ಸೈಟ್ ಬೇಕಲ್ಲ ಅದನ್ನು ಒಬ್ಬನೇ ಸರ್ವೇ ಮಾಡುವುದಕ್ಕೆ ಆಗುತ್ತದೆಯೇ? ಎಕ್‌ಸ್ಟ್ರಾ ಸರ್ವೆಯರ್ ಕೊಟ್ಟು ಮಾಡಿದರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮಾತು ನಡೆಯುತ್ತದೆ. ಇಲ್ಲದೇ ಹೋದರೆ ಸುಳ್ಳಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಪತ್ರವಿತರಣ ಅರ್ಜಿಗಳ ಸಂಖ್ಯೆ

3540 ಶ್ರೀ ವಸಂತ ವಿ. ಸಾಲಿಯಾನ(ಕಾಪು) ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭೂಪತ್ರ ವಿತರಣದ ಅರ್ಜಿ ಪತ್ರಗಳನ್ನು ಸ್ವೀಕರಿಸುವರೇ?

ಆ) ಸರ್ಕಾರ ಸೂಚನೆ ನೀಡಿದ ನಂತರ ಇದುವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ?

ಇ) ಅರ್ಜಿ ಸಲ್ಲಿಸಲು ನೀಡಲಾದ ಅಂತಿಮ ದಿನಾಂಕವನ್ನು ಸರ್ಕಾರ ಮುಂದುವರಿಸಲು ಯೋಚಿಸಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಹೌದು; ಒತ್ತುವರಿ ಸರ್ಕಾರಿ ಜಮೀನುಗಳನ್ನು ಸಕ್ರಮಗೊಳಿಸಲು ಅರ್ಜಿಗಳನ್ನು

ಆ) 1,16,086.

ಇ) ಇಲ್ಲ.

ಶ್ರೀ ವಸಂತ ವಿ. ಸಾಲಿಯಾನ: ಮಾನ್ಯ ಅಧ್ಯಕ್ಷರೇ ಅಕ್ರಮ ಭೂಮಿಯನ್ನು ಸಕ್ರಮ ಮಾಡಲಿಕ್ಕೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1 ಲಕ್ಷ 16 ಸಾವಿರದ 86 ಅರ್ಜಿಗಳು ಬಂದಿವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ನಾನು ಮಾನ್ಯ ಸಚಿವರನ್ನು ಈ ಮೂಲಕ ಕೇಳುತ್ತೇನೆ. ಜಿಲ್ಲಾವಾರು ತಾಲ್ಲೂಕುವಾರು ಅಧಿಕಾರಿಗಳಿಗೆ ಈ ಒಂದು ಸರ್ಕಾರಿ ಆದೇಶವನ್ನು ತಾವು ಯಾವಾಗ ಕೊಟ್ಟಿದ್ದೀರಿ. ಮತ್ತು ಅಕ್ರಮವನ್ನು ಸಕ್ರಮ ಮಾಡಲು ಅರ್ಜಿ ಸಲ್ಲಿಸಿದ್ದರೂ ಸಹ ಸುಮಾರು 30-40 ವರ್ಷಗಳಿಂದ ಯಾರು ಅರ್ಜಿ ಹಾಕಿದ್ದಾರೆ. ಅವರನ್ನು ಅಧಿಕಾರಿಗಳು ತೆರವು ಮಾಡಿಸಿದಂತಹ ಕೇಸ್‌ಗಳು ತಮ್ಮ ಗಮನಕ್ಕೆ ಏನಾದರೂ ಬಂದಿದೇಯೇ? ನಮ್ಮ ಜಿಲ್ಲೆಯಲ್ಲಿ ಅರ್ಹ ಅರ್ಜಿದಾರರಾಗಿದ್ದು ಪ್ರಾಮಾಣಿಕವಾಗಿ ಅರ್ಜಿಸಲ್ಲಿಸಿದ್ದರೂ ಸಹ ಅವರ ಅರ್ಜಿಯನ್ನು ತಿರಸ್ಕಾರ ಮಾಡಿರುವ ಅಧಿಕಾರಿಗಳ ಮೇಲೆ ಕ್ರಮ ಎನು ತೆಗೆದುಕೊಂಡಿದ್ದೀರಿ? ಇದೇ ರೀತಿಯಲ್ಲಿ ಅಕ್ರಮ ಭೂಮಿಯನ್ನು ಸಕ್ರಮ ಮಾಡುವಂತಹ ತುರ್ತು ಆದೇಶ ಬಂದಿದ್ದರಿಂದ ಇನ್ನು ಸ್ವಲ್ಪ ಸಮಯ ಅದರ ಅವಧಿ ಜಾಸ್ತಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ: ಮಾನ್ಯ ಅಧ್ಯಕ್ಷರೇ ಅವರು ಕೇಳಿದಂಥ ಪ್ರಶ್ನೆಗೆ ನಾನು ಉತ್ತರ ಕೊಟ್ಟಿದ್ದೇನೆ. ಅವರು ಕೇಳಿದ್ದುದು ಸಾಗುವಳಿ ಚೀಟಿ ಡಿಸ್ಟ್ರಿಬ್ಯೂಷನ್ ಮಾಡಿದ್ದೀರಾ ಹೇಗೆ ಎಂದು ಕೇಳಿದ್ದಾರೆ ಎರಡನೆಯದಾಗಿ ಎಷ್ಟು ಅರ್ಜಿಗಳು ಬಂದಿದ್ದವು ದಕ್ಷಿಣ ಕನ್ನಡ ಜಿಲ್ಲೆಯಿಂದ ಅಂತ ಕೇಳಿದ್ದರು. ಅದಕ್ಕೆ ಉತ್ತರ ಹೇಳಿದ್ದೇನೆ. 1 ಲಕ್ಷ 16 ಸಾವಿರದ 86 ಅರ್ಜಿಗಳು ಬಂದಿವೆ ಎಂದು ದಕ್ಷಿಣ ಕನ್ನಡ ಜಿಲ್ಲೆಯಿಂದ ಇಲ್ಲಿಯವರೆಗೆ ಮಾಹಿತಿ ಇದ್ದಂತೆ ಆ ಪ್ರಕಾರ ತಿಳಿಸಿದ್ದೇವೆ. ಇದನ್ನು ರೆಗ್ಯುಲರೈಸ್ ಮಾಡತಕ್ಕಂಥ ಕ್ರಮವನ್ನು ಅಲ್ಲಿನ ಲೋಕಲ್ ಎಂ.ಎಲ್.ಎ.ಗಳನ್ನು ಛೇರ್ಮನ್ ಮಾಡಿ ಅವರ ಜೊತೆ 3 ಜನರನ್ನು ಹಾಕಿ ಒಂದು ಕಮಿಟಿ ಮಾಡಿದ್ದೇವೆ. ರೆಗ್ಯುಲರೈಸ್ ಮಾಡತಕ್ಕಂಥ ಅಧಿಕಾರವನ್ನು ನಾವು ಅವರಿಗೆ ಕೊಟ್ಟಿದ್ದೇವೆ ಈಗ ಹತ್ತಾರು ವರ್ಷಗಳಿಂದ ಮಾಡುತ್ತಿದ್ದವರನ್ನು ಎವಿಕ್ಟ್ ಮಾಡಿಸಿ ಅಧಿಕಾರಿಗಳು ಬೇರೆಯವರಿಗೆ ಮಾಡಿದ್ದಾರೆ ಎನ್ನತಕ್ಕಂಥಾದ್ದನ್ನು ಅವರು ಹೇಳಿದ್ದಾರೆ ಅಂಥದ್ದು ಯಾವುದಾದರೂ ಇದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ನಾನು ಆ ಕೇಸನ್ನು ಡಿ.ಸಿ.ಗೆ. ಆದೇಶ ಕೊಟ್ಟು ಸರಿ ಮಾಡತಕ್ಕಂಥ ವ್ಯವಸ್ಥೆ ಮಾಡುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ: ನಮ್ಮ ಜಿಲ್ಲೆಯಲ್ಲಿ ಒಂದು ತಿಂಗಳ ಹಿಂದೆ ಕಾರ್ಯಕ್ರಮ ಜಾರಿಗೆ ಬಂತು. ಆದ್ದರಿಂದ ಈ ಕಾನೂನು ಬಂದಿದ್ದರೂ ಸಹ ಅಧಿಕಾರಿಗಳು ಯಾವುದೇ ಪ್ರಚಾರ ಮಾಡಿ ಅರ್ಜಿ ಹಾಕಲು ಇನ್ನೂ ಸ್ವಲ್ಪ ಅವಕಾಶ ಕಲ್ಪಿಸಿ ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ ಈಗ ಕಟಾಫ್ ಡೇಟ್ ಎಕ್ಸ್‌ಟೆಂಡ್ ಮಾಡಿ ಎಂದು ಹೇಳುತ್ತಿದ್ದಾರೆ. ಈಗ ಸದ್ಯಕ್ಕೆ ನೋಡೋಣ ಕಟಾಫ್ ಡೇಟ್ ಇವತ್ತೇ ಕೊನೆ. ಇಲ್ಲಿಯವರೆಗೆ ಎಷ್ಟು ಅರ್ಜಿಗಳು ಇಡೀ ರಾಜ್ಯದಲ್ಲಿ ಬಂದಿವೆ ಎನ್ನತಕ್ಕಂಥಾದ್ದು ಒಂದು ಕಡೆ ಎರಡನೆಯದಾಗಿ ಇವತ್ತು ಎನ್‌ಕ್ರೋಚ್ ಮಾಡಿರುವ ಅಂಕಿಅಂಶಗಳು ಏನು ಇತ್ತೆಂದರೆ ಸುಮಾರು 4 ಲಕ್ಷ ನಾಲ್ಕೂವರೆ ಲಕ್ಷ ಇವೆ. ಒಂದೇ ಜಿಲ್ಲೆಯಲ್ಲಿ 1 ಲಕ್ಷ 16 ಸಾವಿರ ಬಂದಿವೆ. ಇಡೀ ರಾಜ್ಯದಲ್ಲಿ ಲಕ್ಷಾಂತರ ಅರ್ಜಿಗಳು ಬಂದಿರುತ್ತವೆ. ಈ ಕಟಾಫ್ ಡೇಟನ್ನು ಒಂದೆರಡು ತಿಂಗಳು ಎಕ್ಸ್‌ಟೆಂಡ್ ಮಾಡಿದರೆ ನನಗನಿಸುತದೆ. ಪುನಃ ನಾನು ಇದನ್ನು

ಮಾಡುವುದು ತುಂಬಾ ತಲೆನೋವಾಗಿ ನಾವೇ ಹಳ್ಳಿಗಳಲ್ಲಿ ಜಗಳ ತಂದು ಇಟ್ಟಂತೆ ಆಗುತ್ತದೆ. ಈಗ 19ನೇ ತಾರೀಖಿನವರೆಗೆ ಬಂದಂತಹ ಅರ್ಜಿಗಳು ಎಷ್ಟು? ಇವುಗಳನ್ನು ಯಾವ ರೀತಿಯಾಗಿ ಡಿಸ್‌ಪೋಜ್ ಮಾಡಬೇಕು ಎನ್ನತಕ್ಕಂಥ ಅಧಿಕಾರ ಅವರಿಗೆ ಕೊಟ್ಟ ಕಾರಣ ಈಗ ಅವರು ನ್ಯಾಯವಾಗಿ ಕೆಲಸ ಮಾಡುತ್ತಾರೆ ಎನ್ನುವ ನಂಬಿಕೆಯನ್ನು ನಾನು ಇಟ್ಟುಕೊಂಡಿದ್ದೇನೆ. ಒಂದು ವೇಳೆ ಕೆಲವು ಅರ್ಜಿಗಳು ಉಳಿದರೆ ಅದನ್ನು ಯಾವ ರೀತಿ ಅವರಿಗೆ ಅವಕಾಶ ಮಾಡಿಕೊಡಬೇಕು ಎನ್ನತಕ್ಕಂಥಾದ್ದನ್ನು ಮುಂದೆ ಪರಿಶೀಲನೆ ಮಾಡೋಣ ಸದ್ಯದಲ್ಲಿ ಮಾಡುವುದಕ್ಕೆ ಹೋದರೆ ಈಗಾಗಲೇ ಎಲ್ಲಾ ಸದಸ್ಯರಿಗೆ ಗೊತ್ತಿರುವ ಹಾಗೆ ಉಳಿದಿರತಕ್ಕಂಥ ಎಲ್ಲಾ ಜಮೀನುಗಳನ್ನು ಫಾರೆಸ್ಟ್ ಇರಬಹುದು ಕೆರೆ ಅಂಗಳ ಇರಬಹುದು ಗುಂಡುತೋಪು ಇರಬಹುದು ಪಾರ್ಕ್‌ಗಳು ಇರಬಹುದು ಎಲ್ಲವನ್ನು ಎನ್‌ಕ್ರೋಚ್ ಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ಈ ಕಟಾಫ್ ಡೇಟ್ ಬಿಟ್ಟು ಆಮೇಲೆ ಯಾರೇ ಎನ್‌ಕ್ರೋಚ್ ಮಾಡಿದರೆ ನಾನು ಈ ಸದನದ ಮುಖಾಂತರ ಅಪೀಲ್ ಮಾಡುತ್ತೇನೆ. ಇದರಲ್ಲಿ ಎಲ್ಲಾ ಸದಸ್ಯರೂ ಕೂಡ ಸಹಕಾರ ಕೊಡಬೇಕು ನಾನು ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ ಈ ಕಟಾಫ್ ಡೇಟ್ ಆದ ಮೇಲೆ ಯಾರಾದರೂ ಎನ್‌ಕ್ರೋಚ್ ಮಾಡಿದರೆ ಅಂತಹವರು ಯಾವ ಪಕ್ಷಕ್ಕೆ ಸೇರಿರಲಿ ಯಾವ ಸದಸ್ಯರೂ ಕೂಡ ಎಲ್ಲಾ ಸದಸ್ಯರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಅಂತಹವರಿಗೆ ಎನ್‌ಕ್ರೋಚ್ ಮಾಡಬಾರದು ಅದನ್ನು ಡಿಸ್‌ಕ್ರೇಜ್ ಮಾಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಮತ್ತು ಇಡೀ ರಾಜ್ಯದ ಜನತೆಯನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ: ಸನ್ಮಾನ್ಯ ಅಧ್ಯಕ್ಷರೇ ನಮ್ಮ ಜಿಲ್ಲೆಯಲ್ಲಿ ಒಂದು ವಿಶೇಷ ಪರಿಸ್ಥಿತಿ ಇದೆ ಇಲ್ಲಿ 1 ಲಕ್ಷ 16 ಸಾವಿರದ 86 ಅರ್ಜಿ ಕೊಟ್ಟಿದ್ದಾರೆ. ನನ್ನ ಅನುಭವದ ಪ್ರಕಾರ ಅದರಲ್ಲಿ ನೂರಕ್ಕೆ 80ಪರ್‌ಸೆಂಟ್ ಕುಮ್ಕಿ ಎನ್‌ಕ್ರೋಜ್‌ಮೆಂಟ್‌ಗೆ ಅರ್ಜಿ ಕೊಟಿದ್ದಾರೆ ಕಾನೂನು ಪ್ರಕಾರ ಕೇವಲ ಸರ್ಕಾರಿ ಜಾಗ ಮಾತ್ರ ರೆಗ್ಯುಲರೈಸ್ ಮಾಡಬಹುದು. ಈ ಪರಿಸ್ಥಿತಿಯಲ್ಲಿ ಸರ್ಕಾರ ಈ ಕುಮ್ಕಿ ಭೂಮಿಯನ್ನು ಕೂಡ ಸಕ್ರಮ ಮಾಡುವುದಕ್ಕೆ ಏನಾದರೂ ಕಾನೂನು ತಿದ್ದುಪಡಿ ಮಾಡುವುದಕ್ಕೆ ಸಾಧ್ಯ ಉಂಟೋ? ಇದರಿಂದ ನಮ್ಮ ಜಿಲ್ಲೆಗಂತೂ ಲಾಭವಾಗುವುದಿಲ್ಲ. ಇಲ್ಲಿ ಜಾಸ್ತಿ ಬರುವುದು ಕುಮ್ಕಿ ಜಮೀನು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಈಗ ಏನು ಕಾನೂನು ಮಾಡಿದೆ ಅದರ ಪ್ರಕಾರ ರೆಗ್ಯುಲರೈಸ್ ಮಾಡುತ್ತೇವೆ. ಮುಂದೆ ಅವು ಬೇರೆ ಕುಮ್ಕಿ ಆಗಲಿ, ಬಾಣೆ ಆಗಲಿ, ಕಾಣೆ ಆಗಲಿ, ಅವು ಏನು ಲ್ಯಾಂಡ್ಸ್ ಇವೆ ಅದರ ಬಗ್ಗೆ ಬೇರೆ ಪ್ರಶ್ನೆ ಉದ್ಭವಿಸುತ್ತದೆ. ಈಗ ಸದ್ಯಕ್ಕೆ ಇದರಲ್ಲಿ ಬರುವುದಿಲ್ಲ.

ಶ್ರೀ ಎ. ರುಕ್ಮಯ್ಯ ಪೂಜಾರಿ: ಅಧ್ಯಕ್ಷರೇ ಈ ಅರ್ಜಿಯಲ್ಲಿ ನೂರಕ್ಕೆ 80 ಪರ್‌ಸೆಂಟ್ ಕುಮ್ಕಿ ಭೂಮಿ ಇದೆ.

ಅಧ್ಯಕ್ಷರು: ಕುಮ್ಕಿಗೂ ಇದಕ್ಕೂ ಸಂಬಂಧ ಇಲ್ಲ ಬಿಡಿ.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೇ ಬಹುತೇಕ ತಾವು ಹೇಳಿದ ಪ್ರಮಾಣ ನೋಡಿದರೆ ಅಷ್ಟು ಭೂಮಿ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ ಎರಡನೆಯದು ಮಲೆನಾಡು ಪ್ರದೇಶದಲ್ಲಿ ವಿಶೇಷವಾಗಿ ಬಹುತೇಕ ಭೂಮಿಯನ್ನು ಮೈನರ್ ಫಾರೆಸ್ಟ್ ಎಂದು ಹೇಳಿ ಸ್ಥಳೀಯರನ್ನು ಕೇಳದೆ ಡಿಕ್ಲೇರ್ ಮಾಡಿದ್ದಾರೆ. ಅದನ್ನು ಕನ್‌ಫರ್ಮ್ ಮಾಡಬೇಕಾದರೆ ಈಗ ಫಾರೆಸ್ಟ್ ಕನ್‌ಕರೆನ್ಸ್ ಲಿಸ್ಟ್‌ನಲ್ಲಿರುವುದರಿಂದ ಕೇಂದ್ರ ಸರ್ಕಾರದ ಅನುಮತಿ ಪಡೆಯಬೇಕಾಗುತ್ತದೆ. ಇಂಥ ಮೈನರ್ ಫಾರೆಸ್ಟ್‌ಗೆ ಸೇರಿದಂತಹ ಭೂಮಿಗಳನ್ನು ಯಾರು ರೈತರು ಎನ್‌ಕ್ರೋಚ್‌ಮೆಂಟ್ ಮಾಡಿದ್ದಾರೆ?

ಅದನ್ನು ಏನಾದರೂ ಕೇಂದ್ರ ಸರ್ಕಾರದ ಜೊತೆಗೆ ವ್ಯವಹರಿಸಿ ಆ ಭೂಮಿಯನ್ನು ಬಿಡಿಸಿ ಹಂಚುವಂತಹ ಆಲೋಚನೆ ಮಾಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೇ ನಮ್ಮ ಕಾನೂನಿನಲ್ಲಿರತಕ್ಕಂಥದ್ದು ಇಷ್ಟೇ ಸರ್ಕಾರಿ ಭೂಮಿ ಪ್ಲಸ್ ಸಿ ಅಂಡ್ ಡಿ ಲ್ಯಾಂಡ್‌ನ್ನು ಏನು ಫಾರೆಸ್ಟ್‌ಗೆ ವಹಿಸಿಕೊಟ್ಟಿದ್ದೇವೋ ಅದನ್ನು ಪುನಃ ವಾಪಸ್ ತೆಗೆದುಕೊಂಡಿದ್ದೇವೆ. ಯಾವುದು ನೋಟಿಫೈ ಆಗಿಲ್ಲ ಅಂಥವನ್ನು ಮಾತ್ರ ನಾವು ರೆಗ್ಯುಲರೈಸ್ ಮಾಡುತ್ತೇವೆ. ನೋಟಿಫೈ ಆಗಿದ್ದು ಮತ್ತು ಅವರ ರಿಜಿಸ್ಟರ್‌ನಲ್ಲಿ ಎಂಟ್ರಿ ಆಗಿದ್ದು ಫಾರೆಸ್ಟ್ ಲ್ಯಾಂಡ್‌ನ್ನು ಈಗ ರೆಗುಲರೈಸ್ ಮಾಡತಕ್ಕಂಥದ್ದು ಕಾನೂನಿನಲ್ಲಿ ಅವಕಾಶ ಇಲ್ಲ. ಅದನ್ನು ಸ್ಪೆಸಿಫಿಕ್‌ಆಗಿ ಕೆಲವು ಕೇಸಸ್ ಇದ್ರೆ ತದನಂತರ ವಿಚಾರ ಮಾಡಬಹುದು. ಆದ್ದರಿಂದ ಇದರಲ್ಲಿ ಆ ಪ್ರಶ್ನೆ ಉದ್ಭವಿಸುವುದಿಲ್ಲ.

ಅಧ್ಯಕ್ಷರು: ಶ್ರೀ ಅಲ್ಲಮ್ ವೀರಭದ್ರಪ್ಪ ನಿಮ್ಮ ಪ್ರಶ್ನೆಯನ್ನು ಪ್ಲಾನಿಂಗ್ ಮಿನಿಸ್ಟರ್‌ರವರಿಗೆ ಟ್ರಾನ್ಸ್‌ಫರ್ ಮಾಡಿದ್ದಾರೆ. ಹಾಗೆ ಗಂಗಾಧರಗೌಡರ ನಿಮ್ಮ ಪ್ರಶ್ನೆಯನ್ನು ಆರ್.ಡಿ.ಪಿ.ಆರ್.ಗೆ ವರ್ಗಾಯಿಸಲಾಗಿದೆ.

ಶ್ರೀ ಕೆ. ಗಂಗಾಧರ ಗೌಡ: ಪ್ರಶ್ನೆಗಳನ್ನು ನಾವು ಕಳುಹಿಸಿದರೆ ಅದಕ್ಕೆ ಉತ್ತರ ಬರದಿದ್ದರೆ ಇದಕ್ಕೆ ಏನು ಸಮಸ್ಯೆ? ಅಲ್ಲಿಂದ ಇಲ್ಲಿಗೆ ಟ್ರಾನ್ಸ್‌ಫರ್ ಮಾಡುತ್ತಾ ಕೂರುವುದರಲ್ಲಿ ಅರ್ಥ ಇಲ್ಲವೆಂದು ನಾನು ಭಾವಿಸುತ್ತೇನೆ. ಪ್ರಶ್ನೆಗಳೂ ಬರುವುದಿಲ್ಲ ನಾವು ಮಾತನಾಡಲಿಕ್ಕೆ ಅವಕಾಶವೂ ಇಲ್ಲ, ಇಲ್ಲಿ ಬಟ್ಟೆ ಬಿಚ್ಚುವವರಿಗೆ (ಕೆಲವು ದಿನಗಳ ಹಿಂದೆ ಸದಸ್ಯರಾದ ಭಕ್ತವತ್ಸಲರವರು ಸಭೆಯಲ್ಲಿ ಶರ್ಟನ್ನು ಬಿಚ್ಚಿ ತೋರಿಸಿದ್ದರು) ಅವಕಾಶ ಇದೆಯಾ? ಗಲಾಟೆ ಮಾಡುವವರಿಗೆ ಅವಕಾಶ ಇದೆಯಾ? ಏನಾದರು ಗೌರವಯುತವಾಗಿ ಕೇಳುವವರಿಗೆ ಅವಕಾಶ ಇಲ್ಲವೇ ಹೇಗೆ ಅಧ್ಯಕ್ಷರೇ?

ಅಧ್ಯಕ್ಷರು: ಅವಕಾಶ ಇದೆ.

ಶ್ರೀ ಕೆ. ಗಂಗಾಧರಗೌಡ: ನಾವೂ ಅದೇ ದಾರಿಯನ್ನು ಅನುಸರಿಸಬೇಕಾಗುತ್ತದೆ. ನಾವೂ ಸಹಾ ಬಟ್ಟೆ ಬಿಚ್ಚಿ ಇಳಿಯಬೇಕಾಗುತ್ತದೆ. ಅಧ್ಯಕ್ಷರೇ?

ಅಧ್ಯಕ್ಷರು: ಈಗ ನಾನು ಜಗಳಕ್ಕೆ ಇಳಿಯಿರೆಂದು ವೀಳ್ಯ ಕೊಡುವುದಿಲ್ಲ. ನಿಮಗೆ ಜಗಳ ಮಾಡಬೇಕು ಎಂದರೆ ಜಗಳ ಮಾಡಿರಿ ಆದರೆ ರೂಲ್ಸ್ ಚೌಕಟ್ಟಿನಲ್ಲಿ ಜಗಳ ಮಾಡಿರಿ

ಶ್ರೀ ಕೆ. ಗಂಗಾಧರ ಗೌಡ: ಅಂಥವರಿಗೆ ಅವಕಾಶ ಮಾಡಿಕೊಟ್ಟಿದ್ದೀರಿ.

ಅಧ್ಯಕ್ಷರು: ನೀವು ಕಂದಾಯ ಮಂತ್ರಿಗಳನ್ನು ನಿವೇಶನಗಳ ವಿಚಾರಗಳನ್ನು ಕೇಳಿದರೆ ನಿಮಗೆ ಉತ್ತರ ಯಾರು ಕೊಡುತ್ತಾರೆ? ನಿಮಗೆ ಗೊತ್ತಿಲ್ಲವೇನು? ಇದು ಜಿಲ್ಲಾಪರಿಷತ್ತಿಗೆ ಸೇರಿದ್ದು ಮಂಡಲ ಪಂಚಾಯಿತಿಗೆ ಸೇರಿದ್ದೆಂದು?

ಶ್ರೀ ಡಿ.ಬಿ. ಚಂದ್ರೇಗೌಡ: ಜಿಲ್ಲಾಪರಿಷತ್ತಿನಿಂದ ಮಂಡಲ ಪಂಚಾಯಿತಿಯಿಂದ ಕಂದಾಯ ಇಲಾಖೆಗೆ ವರ್ಗ ಮಾಡಿಕೊಂಡಿದ್ದಾರೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: ಇದನ್ನು ಟ್ರಾನ್ಸ್‌ಫೋರ್ಸ್‌ನಲ್ಲಿ ರೂರಲ್ ಡೆವಲಪ್‌ಮೆಂಟ್ ಮಿನಿಸ್ಟರ್ ಡೀಲ್ ಮಾಡುತ್ತಾರೆ. ಕೆಲಸವನ್ನು ವಹಿಸಿದ್ದು ಯಾರಿಗೆ ಎಂದರೆ ತಹಸೀಲ್ದಾರ್‌ಗೆ ಯಾರ ಪರವಾಗಿ? ರೂರಲ್ ಡೆವಲಪ್‌ಮೆಂಟ್ ಮಿನಿಸ್ಟರ್ ಪರವಾಗಿ ಸೋ ದುಡ್ಡು ಕೊಡತಕ್ಕಂಥವರು ಅದನ್ನು ಸ್ಟೇಜ್ ಫಾರಂ ಮಾಡುತಕ್ಕಂಥವರು ಡಿಸ್ಟ್ರಿಬ್ಯೂಟ್ ಮಾಡತಕ್ಕಂಥವರು ಅವರೇ ಅದಕ್ಕಾಗಿ ಈ ಒಂದು ರೂರಲ್

ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟಿಗೆ ಬಿಸಿನೆಸ್ ಟ್ರಾನ್ಸಾಕ್ಷನ್ ರೂಲ್ಸ್ ಪ್ರಕಾರ ಅವರಿಗೆ ಅಧಿಕಾರ ಇರುತ್ತದೆ. ಆದ್ದರಿಂದ ಇದನ್ನು ಅವರಿಗೇ ವರ್ಗಾಯಿಸಲಾಗಿದೆ.

ಶ್ರೀ ಕೆ. ಗಂಗಾಧರ ಗೌಡ: ಅಧ್ಯಕ್ಷರೆ ಇವರು ಸಮಿತಿಯನ್ನು ರಚನೆ ಮಾಡಿದ್ದಾರೆ. ಎಂ.ಎಲ್.ಎ. ಅಧ್ಯಕ್ಷತೆಯಲ್ಲಿ ಸೈಟ್ ಕೊಡಲಿಕ್ಕೆ ತಾಲ್ಲೂಕಿನಲ್ಲಿ ಸಮಿತಿ ರಚನೆ ಮಾಡುವುದಕ್ಕೆ ಇವರು ಸುತ್ತೋಲೆಯನ್ನು ಕಳುಹಿಸಿದ್ದಾರೆ. ರೂರಲ್ ಡೆವಲಪ್‌ಮೆಂಟ್‌ಗೂ ಇವರಿಗೂ ಏನೂ ಸಂಬಂಧ ಇಲ್ಲ, ತಹಶೀಲ್ದಾರ್ ಇದರ ಮೆಂಬರ್ ಆಗಿದ್ದಾರೆ. ಎಂ.ಎಲ್.ಎ. ಛೇರ್ಮನ್ ಆಗಿದ್ದಾರೆ. ಉಳಿದ ಸಮಿತಿ ಸದಸ್ಯರನ್ನು ನೇಮಕ ಮಾಡಲಿಕ್ಕೆ ಅವರು ಸುತ್ತೋಲೆಯನ್ನು ಕಳುಹಿಸಿದ್ದಾರೆ. ಸೈಟ್ ಕೊಡುವಂಥಾದ್ದು ಸೈಟ್ ಅಳತೆ ಮಾಡುವಂಥಾದ್ದು ಎಲ್ಲಾ ತಹಶೀಲ್ದಾರ್‌ರವರೇ ರೂರಲ್ ಡೆವಲಪ್‌ಮೆಂಟ್‌ಗೂ ಇದಕ್ಕೂ ಏನು ಸಂಬಂಧ ಬರುತ್ತದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಸ್ವಲ್ಪ ಕೇಳಿ ಈ ತಹಶೀಲ್ದಾರ್ ಎಲ್ಲಾ ಕೆಲಸ ಮಾಡುತ್ತಾರೆ.

12.15 ಪಿ.ಎಂ

ತಹಶೀಲ್ದಾರ್ ಎಲ್ಲರ ಕೆಲಸ ಮಾಡುತ್ತಾರೆ. ಹಾರ್ಟಿಕಲ್ಚರಲ್ ಡಿಪಾರ್ಟ್‌ಮೆಂಟ್‌ನವರು ಏನಾದರೂ ಡೈರೆಕ್ಷನ್ ಕೊಟ್ಟರೂ ಮಾಡುತ್ತಾರೆ. ಫುಡ್ ಡಿಪಾರ್ಟ್‌ಮೆಂಟ್‌ನವರು ಡೈರೆಕ್ಷನ್ ಕೊಟ್ಟರೂ ಮಾಡುತ್ತಾರೆ. ರೂರಲ್ ಡೆವಲಪ್‌ಮೆಂಟ್‌ನವರು ಡೈರೆಕ್ಷನ್ ಕೊಟ್ಟರೂ ಮಾಡುತ್ತಾರೆ. ನಮ್ಮ ಕೆಲಸ ಇಲ್ಲದೆ ಕೂಡ ಬೇರೆ ಬೇರೆ ಡಿಪಾರ್ಟ್‌ಮೆಂಟ್‌ನವರು ಅವರಿಗೆ ಆದೇಶ ಕೊಟ್ಟರೆ ಅದನ್ನು ಮಾಡುತ್ತಾರೆ. ಆದರೆ ಕಂಟ್ರೋಲಿಂಗ್ ಡಿಪಾರ್ಟ್‌ಮೆಂಟ್ ಅವರಿಗೆ ಇರುತ್ತದೆ.

ಶ್ರೀ ಕೆ. ಗಂಗಾಧರ ಗೌಡ : ಯಾರೋ ಸೈಟ್ ಬೇಕು ಎಂದು ಬಡವರು ಹೋದರೆ ನಾಲ್ಕು ನೂರು ರೂಪಾಯಿ ವಸೂಲಿ ಮಾಡುತ್ತಾರೆ. ಹಿಂದೆ ನಮ್ಮ ಕಾಂಗ್ರೆಸ್ ಸರ್ಕಾರ ಇದ್ದಾಗ ವಸೂಲು ಮಾಡುತ್ತಿರಲಿಲ್ಲ.

ಅಧ್ಯಕ್ಷರು : ಈಗ ಯಾವ ಸರ್ಕಾರ ಇದೆ?

ಶ್ರೀ ಕೆ. ಗಂಗಾಧರ ಗೌಡ : ಜನತಾ ದಳ ಸರ್ಕಾರ ಬಂದ ನಂತರ ನಾಲ್ಕು ನೂರು ರೂಪಾಯಿ ವಸೂಲು ಮಾಡುವುದಕ್ಕೆ ಶುರು ಮಾಡಿದರು. ಈಗ ಅದನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ನೀವು ಹೇಳಿದ್ದೀರಿ, ನಿಮ್ಮ ಸರ್ಕಾರ ಹೇಳಿದೆ. ಈಗ ಬಡವರ ಕೈಯಿಂದ ನೀವು ಸೈಟಿಗೆ ಹಣ ವಸೂಲು ಮಾಡುತ್ತಾ ಹೋದರೆ, ಅದು ರೂರಲ್ ಡೆವಲಪ್‌ಮೆಂಟಿನದು, ಆತನದ್ದು, ಈತನದ್ದು ಎಂದು ನೀವು ರೆಸ್ಪಾನ್ಸಿಬಿಲಿಟಿ ಶಿಫ್ಟ್ ಮಾಡಿದರೆ ಇದಕ್ಕೆ ಅರ್ಥವಿಲ್ಲ.

ಅಧ್ಯಕ್ಷರು : ಅರ್ಥ ಇಲ್ಲ ಸರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : I am sorry to that. ರೆಸ್ಪಾನ್ಸಿಬಿಲಿಟಿ ಷಿಫ್ಟ್ ಮಾಡುತ್ತಾ ಇಲ್ಲ, ನೀವು ನನಗೆ ಉತ್ತರ ಕೊಡಿ ಎಂದರೆ ನಾನು ಬೇಕಾದರೆ ನಾನೇ ಕೊಡುತ್ತೇನೆ. ಆದರೆ ಇದು ಸಂಬಂಧಪಟ್ಟ ಬಿಸಿನೆಸ್ ಟ್ರ್ಯಾನ್ಸಕ್ಷನ್ಸ್ ರೂಲ್ಸ್ ಪ್ರಕಾರ ಅವರಿಗೆ ಸೇರಿದ್ದು, ನಾನು ಉತ್ತರ ಕೊಟ್ಟಿದ್ದೇನೆ ಎಂದು ಅವರು ಮೈಮೇಲೆ ಬಿದ್ದರೆ ಇವರು ಉಳಿಸುತ್ತಾರಾ? ನನ್ನ ಉತ್ತರ ನೀವು ಹೇಗೆ ಕೊಟ್ಟಿದ್ದೀರಿ ಎಂದು ಅವರು ಕೇಳಿದರೆ.

ಅಧ್ಯಕ್ಷರು : ಮಾನ್ಯ ಕಂದಾಯ ಮಂತ್ರಿಗಳು ದಯಮಾಡಿ ನಮ್ಮ ಮೈಮೇಲೆ ... ಇವತ್ತು 25ನೇ ತಾರೀಖು

ತೆಗೆದುಕೊಳ್ಳುತ್ತೇನೆ. ಅಷ್ಟರಲ್ಲಿ ಮಾನ್ಯ ಕಂದಾಯ ಮಂತ್ರಿಗಳು ಉತ್ತರ ಕೊಡುತ್ತಾರೋ ಅಥವಾ ಯಾರು ಕೊಡುತ್ತಾರೋ, ಸರ್ಕಾರ ಇದಕ್ಕೆ ಉತ್ತರ ಕೊಡಬೇಕು. ಇದು 25ನೇ ತಾರೀಖು ಬರುತ್ತದೆ. ಶ್ರೀ ವೀರಭದ್ರಪ್ಪನವರೆ, ತಮ್ಮದು ಏನು ತಕರಾರು ಹೇಳಿ ಈಗಲೇ ಹೇಳಿಬಿಡಿ.

ಶ್ರೀ ಅಲ್ಲಂ ವೀರಭದ್ರಪ್ಪ : ನಮಗೆ ಪರ್ಮಿಷನ್ ಕೊಟ್ಟು ತಾವು ಯಾವುದಾದರೂ ಡೇಟ್ ಕೊಡಿ.

ಅಧ್ಯಕ್ಷರು ; ನಿಮ್ಮದು 26ನೇ ತಾರೀಖು ತೆಗೆದುಕೊಳ್ಳುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ : ಆಯಿತು ಸಂತೋಷ.

ಖುಷ್ಕಿ ಜಮೀನು ಅಭಿವೃದ್ಧಿ ಮಂಡಳಿ ಸಂಖ್ಯೆ.

3556 - ಶ್ರೀ ಹೆಚ್.ಎಸ್. ಪಾಟೀಲ (ಕುಷ್ಟಗಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿರುವ ಖುಷ್ಕಿ ಜಮೀನು ಅಭಿವೃದ್ಧಿ ಮಂಡಳಿಗಳ ಸಂಖ್ಯೆ ಎಷ್ಟು?

ಆ) ಅವು ಯಾವ ದಿನಾಂಕದಿಂದ ಕಾರ್ಯ ಆರಂಭ ಮಾಡಿವೆ ಮತ್ತು ಅವುಗಳ ಕೇಂದ್ರ ಸ್ಥಳ ಯಾವುವು?

ಇ) ಪ್ರತಿಯೊಂದು ಖುಷ್ಕಿ ಜಮೀನು ಅಭಿವೃದ್ಧಿ ಮಂಡಳಿಯ ಕಾರ್ಯ ವ್ಯಾಪ್ತಿಗೆ ಸೇರ್ಪಡೆಯಾಗಿರುವ ತಾಲ್ಲೂಕುಗಳಾವುವು?

ಈ) ಆಯಾ ತಾಲ್ಲೂಕುಗಳಲ್ಲಿ ಮಂಡಳಿ ರಚನೆಯಾದಾಗಿನಿಂದ 15-8-1990ರ ವರೆಗೆ ವಿವಿಧ ಇಲಾಖೆಯವರು ಎಷ್ಟು ಹಣವನ್ನು ಯಾವ ಯಾವ ಉದ್ದೇಶಗಳಿಗೆ ವಿನಿಯೋಗಿಸಿದ್ದಾರೆ. (ವಿವರವಾದ ಪಟ್ಟಿ ಕೊಡುವುದು)

ಉ) ಈ ಮಂಡಳಿಗಳ ಯೋಜನೆ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರದ ಅನುದಾನ ದೊರಕುತ್ತಿದೆಯೇ?

ಊ) ಹಾಗಿದ್ದಲ್ಲಿ, ಇಂದಿನವರೆಗೂ ಪ್ರತಿಯೊಂದು ಮಂಡಳಿಗೂ ದೊರಕಿರುವ ಮೊತ್ತವೆಷ್ಟು? (ಪ್ರತಿ ವರ್ಷದ ವಿವರ ಕೊಡುವುದು)

ಋ)ಈ ಮಂಡಳಿಯಿಂದ ಜಾರಿಯಾಗುತ್ತಿರುವ ಕಾರ್ಯಕ್ರಮದ ಅಡಿಯಲ್ಲಿ ಕೃಷಿ ಇಲಾಖೆಯ ವತಿಯಿಂದ ಕೈಗೆತ್ತಿಕೊಳ್ಳಲಾಗಿರುವ ಕೆಲಸಗಳು ತೃಪ್ತಿಕರವಾಗಿರದೆ ಹಣ ದುರ್ವಿನಿಯೋಗವೆಂಬ ಆಪಾದನೆಗಳು ಸರ್ಕಾರಕ್ಕೆ ಬಂದಿವೆಯೇ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು) :

ಅ) ನಾಲ್ಕು (4)

ಆ) ಖುಷ್ಕಿ ಜಮೀನು ಅಭಿವೃದ್ಧಿ ಮಂಡಲಿಗಳು 14-6-84 ರಿಂದ ಕಾರ್ಯ ಪ್ರಾರಂಭಿಸಿವೆ. ಇವುಗಳ ಕೇಂದ್ರ ಸ್ಥಾನವು ಈ ಕೆಳಕಂಡಂತೆ ಇರುತ್ತವೆ.

1) ಬೆಂಗಳೂರು ವಿಭಾಗ - ಬೆಂಗಳೂರು
2) ಮೈಸೂರು ವಿಭಾಗ - ಮೈಸೂರು
3) ಬೆಳಗಾಂ ವಿಭಾಗ - ಬೆಳಗಾಂ
4) ಗುಲ್ಬರ್ಗಾ ವಿಭಾಗ - ಗುಲ್ಬರ್ಗಾ

ಇ) ಅನುಬಂಧ 'ಅ' ದಲ್ಲಿ ನೀಡಲಾಗಿದೆ.

ಈ) ಜಲಾನಯನ ಪ್ರದೇಶದ ಒಂದೇ ತಾಲ್ಲೂಕಿನ ವ್ಯಾಪ್ತಿಗೆ ಸೀಮಿತವಾಗದೇ

ಜಿಲ್ಲಾವಾರು : ಜಲಾನಯನವಾರು ಮಾಹಿತಿಯನ್ನು ಅನುಬಂಧ 'ಅ'ದಲ್ಲಿ ನೀಡಲಾಗಿದೆ.

ಉ) 1988-89ನೇ ಸಾಲಿನವರೆಗೆ ಕೇಂದ್ರ ಯೋಜನೆ ಯಾವ ಗ್ರಾಮೀಣ ಭೂರಹಿತ ಕೃಷಿ ಕಾರ್ಮಿಕರ ಉದ್ಯೋಗ ಧೃಢೀಕರಣ ಯೋಜನೆ (ಆರ್.ಎಲ್.ಇ.ಜಿ.ಪಿ.) ಯಿಂದ ಅನುದಾನ ದೊರಕುತ್ತಿತ್ತು. ಈ ಯೋಜನೆಯು ಜವಾಹರ ರೋಜ್‌ಗಾರ್ ಯೋಜನೆ ಎಂದು ಮಾರ್ಪಾಟಾದ ನಂತರ ಈ ಮಂಡಳಿಗಳ ಯೋಜನೆಯ ಅನುಷ್ಠಾನಕ್ಕೆ ಯಾವುದೇ ಅನುದಾನ ದೊರಕುತ್ತಿಲ್ಲ.

ಊ) ಅನುಬಂಧ 'ಇ'ದಲ್ಲಿ ನೀಡಲಾಗಿದೆ.

ಋ) ಹೌದು. ಆಪಾದನೆಗಳು ಸರ್ಕಾರದ ಗಮನಕ್ಕೆ ಬಂದಿದ್ದು ಅವುಗಳ ವಿಚಾರಣೆಯನ್ನು ಮಾಡಿಸಿ, ಸೂಕ್ತಕ್ರಮ ತೆಗೆದು ಕೊಳ್ಳಲಾಗುವುದು.

ಶ್ರೀ ಹೆಚ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಂಡಳಿಯ ಕೆಲಸಗಳು ತೃಪ್ತಿಕರವಾಗಿರದೆ ಹಣ ದುರ್ವಿನಿಯೋಗ ಆಗಿದೆ ಎಂಬ ಆಪಾದನೆಗಳು ಸರ್ಕಾರಕ್ಕೆ ಬಂದಿವೆಯೇ ಎಂಬ ಪ್ರಶ್ನೆಗೆ ಮಾನ್ಯ ಸಚಿವರು ಹೌದು, ಆಪಾದನೆಗಳು ಸರ್ಕಾರದ ಗಮನಕ್ಕೆ ಬಂದಿದ್ದು ಅವುಗಳ ವಿಚಾರಣೆಯನ್ನು ಮಾಡಿಸಿ, ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದಾರೆ. 1984ರಿಂದ ಡಿಎಲ್‌ಡಿಬಿ ಅಸ್ತಿತ್ವಕ್ಕೆ ಬಂದ ಮೇಲೆ ಕೋಟಿಗಟ್ಟಲೆ ಹಣವನ್ನು ಅಲ್ಲಿರತಕ್ಕಂಥ ಅಗ್ರಿಕಲ್ಚರಲ್ ಅಸಿಸ್ಟೆಂಟ್ಸ್‌ಗಳು, ಅಸಿಸ್ಟೆಂಟ್ ಅಗ್ರಿಕಲ್ಚರಲ್ ಆಫೀಸರ್ಸ್, ಪ್ರಾಜೆಕ್ಟ್ ಡೈರೆಕ್ಟರ್‌ರವರು, ಸುಮಾರು ಮುಕ್ಕಾಲು ಭಾಗ ಹಣವನ್ನು ತಿಂದಿದ್ದಾರೆ. ತಿಂದು ಒಬ್ಬೊಬ್ಬ ಅಸಿಸ್ಟೆಂಟ್ ಹತ್ತಿರ ಸೈಟು, ಆರ್‌ಸಿಸಿ ಬಿಲ್ಡಿಂಗ್, ವೆಹಿಕಲ್ಸ್ ಮತ್ತು ಅನೇಕ ಟ್ರಾಕ್ಟರ್‌ಗಳನ್ನು ತಮ್ಮ ಸ್ವಂತ ಹಾಪನವಾಗಿ ಹೊಂದಿಸಿಕೊಂಡು ಲಕ್ಷಾಧೀಪರು ಆಗಿದ್ದಾರೆ. ಇದಕ್ಕೆ ಅನೇಕ ಸಾರಿ ಸಾರ್ವಜನಿಕರಿಂದ, ಶಾಸಕರಿಂದ ಇವರುಗಳ ಬಗ್ಗೆ ಆಪಾದನೆಗಳ ಸುರಿಮಳೆ ಬಂದರೂ ಸಹ ಸರ್ಕಾರ ಮೂಕಪ್ರೇಕ್ಷಕರಾಗಿ ಕುಳಿತುಕೊಂಡಿದ್ದಾರೆ. ಏಳು ವರ್ಷದಿಂದ ಯಾವ ಒಬ್ಬ ಅಧಿಕಾರಿಯನ್ನು ಕೂಡ ಟ್ರಾನ್ಸ್‌ಫರ್ ಮಾಡಿಲ್ಲ. ಇಲ್ಲಿನ ಕೃಷಿ ಇಲಾಖೆಯ ಅಧಿಕಾರಿಗಳು ಏನು ಹೇಳುತ್ತಾರೆ ಎಂದರೆ ನಮ್ಮ ನಿರ್ದೇಶಕರ ಕಡೆಯಿಂದ ಕೆಲಸ ಮಾಡಿಸಿಕೊಳ್ಳುತ್ತೇವೆ, ಶಾಸಕರು ಏನು ಮಾಡುತ್ತಾರೆ ಎಂದು ಹೇಳುತ್ತಾರೆ. ಅಗ್ರಿಕಲ್ಚರಲ್ ಅಸಿಸ್ಟೆಂಟ್ ರಾಜಕೀಯ ಮಾಡಿ ನಮ್ಮ ವಿರುದ್ಧ ತಿರುಗತಕ್ಕಂಥ ತಿಮಿಂಗಿಲ ಆಗಿದ್ದಾರೆ. ದಯಮಾಡಿ ಇದಕ್ಕೆ ಏನಾದರೂ ಸೂಕ್ತ ಕ್ರಮ ತೆಗೆದುಕೊಂಡು ಸಿಓಡಿ ತನಿಖೆ ಮಾಡಿಸಿ ಅವರನ್ನು ಎತ್ತಂಗಡಿ ಮಾಡಿಸಿ. ಸರಿಯಾಗಿ ವಿಚಾರಣೆ ಮಾಡುವುದಕ್ಕೆ ಸಾಧ್ಯ ಇದ್ದರೆ, ಸರ್ಕಾರಕ್ಕೆ ತಾಕತ್ತು ಇದ್ದರೆ ಮಾಡಿ. ಇಲ್ಲ ಎಂದರೆ ಇದರ ಬಗ್ಗೆ ಆಗುವುದಿಲ್ಲ ಎಂದು ನೇರವಾದ ಉತ್ತರವನ್ನು ಕೊಟ್ಟರೆ ನಾವು ಸುಮ್ಮನೇ ನಿರ್ವೀರ್ಯರಾಗಿ ಕೂಡತಕ್ಕ ಒಂದು ಪ್ರಸಂಗವನ್ನು ಮಾಡುತ್ತೇವೆ. ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಎನ್. ಚಿಕ್ಕೇಗೌಡ : ಮಾನ್ಯ ಅಧ್ಯಕ್ಷರೆ, 1984ರಲ್ಲಿ ಈ ಡಿಎಲ್‌ಡಿಬಿ ಅಸ್ತಿತ್ವಕ್ಕೆ ಬಂದವು. ಅಲ್ಲಿ ಒಬ್ಬರು ಅಧ್ಯಕ್ಷರು ಇದ್ದರು ಮತ್ತೆ ಇದಕ್ಕೆ ಮಂಡಳಿ ಇತ್ತು ಅವರ ಕೈಕೆಳಗೆ ಈ ಅಧಿಕಾರಿಗಳು ಕೆಲಸ ಮಾಡಿದ್ದಾರೆ. ನಾನಾ ಇಲಾಖೆ ಇವೆ. ನನ್ನ ಇಲಾಖೆಗೆ ಸಂಬಂಧಪಟ್ಟಂತೆ ನಾನು ಹೇಳಿದ್ದೇನೆ. ಕೆಲವು ಆಪಾದನೆಗಳು ಗುರುತರ ಆಗಿ ಬಂದಿವೆ. 1984ರಲ್ಲಿ ಆಗಿರತಕ್ಕದ್ದು. ನಿರ್ದಿಷ್ಟವಾದ ಆಪಾದನೆಗಳನ್ನು ಅಂದರೆ ಒಬ್ಬ ನಿರ್ದಿಷ್ಟ ಅಧಿಕಾರಿ ಬಗ್ಗೆ ಕೊಟ್ಟರೆ ನಾನು ಅದು ಹಿಂದೆ ಆಗಿರಲಿ, ಯಾವತ್ತೇ ಆಗಿರಲಿ ಕ್ರಮ ತೆಗೆದುಕೊಳ್ಳುತ್ತೇನೆ. ವಿಚಾರಣೆ ಮಾಡಿ ಬಹಳ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ತೀವ್ರವಾದ ಕ್ರಮ ಎಂದರೆ ನಾನು ಹೇಳಲೇಬೇಕಾಗುತ್ತದೆ. ರೂಲ್ 285ರ ಪ್ರಕಾರ ಕಂಪಲ್ಸರಿ ರಿಟೈರ್‌ಮೆಂಟ್ ಕಡ್ಡಾಯವಾಗಿ ನಿವೃತ್ತಿ

ಮಾಡಿಸುವುದು. ಅವನು ಎಷ್ಟೇ ವರ್ಷ ಕೆಲಸ ಮಾಡಿರಲಿ ಇವತ್ತೇ ಆಗಿರಲಿ, ನಾಳೆ ಆಗಿರಲಿ, ಅವನನ್ನು ಕೆಲಸದಿಂದ ವಜಾ ಮಾಡುತ್ತೇನೆ.

ಶ್ರೀ ಹೆಚ್.ಎಸ್. ಪಾಟೀಲ್ ; ಮಾನ್ಯ ಸಚಿವರ ಉತ್ತರದಿಂದ ಸಮಾಧಾನ ಆಯಿತು. ಆದರೆ ನಿರ್ದಿಷ್ಟವಾದ ಒಂದು ಪ್ರಕರಣವನ್ನು ಲಿಖಿತ ಮೂಲಕ ಅಯಾಯ ಅಧಿಕಾರಿ ಬಗ್ಗೆ ತಮಗೆ ನೇರವಾಗಿ ಕೊಡುತ್ತೇನೆ. ತಪ್ಪಿತಸ್ಥ ಅಧಿಕಾರಿ ಮೇಲೆ ತಾವು ಕ್ರಮ ತೆಗೆದುಕೊಳ್ಳಿ. ಮುಂದಿನ ವರ್ಷ ಇವರನ್ನೆಲ್ಲಾ ಸಾರಾಸಗಟಾಗಿ ನಮ್ಮ ತಾಲ್ಲೂಕಿನಿಂದ ಎತ್ತಂಗಡಿ ಮಾಡಿದರೆ ನಮ್ಮ ತಾಲ್ಲೂಕಿಗೆ ಬಹಳ ದೊಡ್ಡ ಉಪಕಾರ ಮಾಡಿದಂತಾಗುತ್ತದೆ. ಲಿಖಿತ ರೂಪವಾಗಿ ಸ್ವಲ್ಪ ದಿವಸದಲ್ಲಿಯೇ ಕೊಡುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ : ಸದಸ್ಯರಿಗೆ ಅಭಿನಂದನೆಗಳು. ನಿರ್ದಿಷ್ಟವಾದ ಆಪಾದನೆಗಳನ್ನು ಕೊಟ್ಟರೆ ತಕ್ಷಣ ವಿಚಾರಣೆ ನಡೆಸಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿಳಿಗಿರಿರಂಗಸ್ವಾಮಿ ಬೆಟ್ಟದಲ್ಲಿರುವ ದೇವಸ್ಥಾನ.

3560 - ಶ್ರೀ ಎಂ. ಶ್ರೀನಿವಾಸಯ್ಯ (ಟಿ, ನರಸೀಪುರ): ಮಾನ್ಯ ಧಾರ್ಮಿಕ ಮತ್ತು ದತ್ತಿ ಖಾತೆ ರಾಜ್ಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮೈಸೂರು ಜಿಲ್ಲೆಯಲ್ಲಿರುವ ಶ್ರೀ ಬಿಳಿಗಿರಿರಂಗ ಸ್ವಾಮಿ ಬೆಟ್ಟದಲ್ಲಿರುವ ದೇವಸ್ಥಾನವು ಸರ್ಕಾರದ ವತಿಯಿಂದ ನಡೆಯುತ್ತಿದೆಯೇ?

2) ಹಾಗಿದ್ದಲ್ಲಿ ಪ್ರಸಿದ್ಧ ಪೂಜಾ ಸ್ಥಳವಾಗಿದ್ದು ಮತ್ತು ಯಾತ್ರಿಕ ಸ್ಥಳವಾಗಿರುವುದರಿಂದ ಭಕ್ತಾದಿಗಳು ಬಂದು ತಂಗಲು ನೀರು ಮತ್ತು ವಸತಿ ಸೌಕರ್ಯವನ್ನು ಒದಗಿಸಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆಯೇ?

3) ಇಲ್ಲವಾದಲ್ಲಿ ಪ್ರೇಕ್ಷಣೀಯ ಹಾಗೂ ಪೌರಾಣಿಕ ಐತಿಹಾಸಿಕ ದೇವಸ್ಥಾನದ ಜೀರ್ಣೋದ್ಧಾರ ಮಾಡುವಲ್ಲಿ ಸರ್ಕಾರ ಯಾವ ರೀತಿ ತುರ್ತು ಕ್ರಮ ಕೈಗೊಳ್ಳುತ್ತವೆ?

4) ಸದರಿ ಬೆಟ್ಟದಲ್ಲಿ ಭಕ್ತಾದಿಗಳು ಬಂದು ಇದ್ದು ಹೋಗಲು ತಮ್ಮ ಸ್ವಂತ ಖರ್ಚಿನಲ್ಲಿ ಮಂಟಪಗಳನ್ನು ಕಟ್ಟಿಕೊಳ್ಳಲು ನಿವೇಶನಗಳನ್ನು ನೀಡಲು ಅವಕಾಶವಿದೆಯೇ?

5) ಹಾಗಿದ್ದಲ್ಲಿ ಯಾರ ಮುಖಾಂತರದಿಂದ ನಿವೇಶನಗಳನ್ನು ಪಡೆದುಕೊಳ್ಳಬಹುದು?

ಶ್ರೀ ರಾಜಾಅಮರೇಶನಾಯಕ (ಧಾರ್ಮಿಕ ಮತ್ತು ದತ್ತಿಖಾತೆ ರಾಜ್ಯ ಸಚಿವರು):

1) ಹೌದು.

2) (1) ದೇವಸ್ಥಾನಕ್ಕೆ ಸೇರಿದ 3 ಕೊಠಡಿಗಳ ವಸತಿ ಸೌಕರ್ಯವಿದೆ.

(2) ಲೋಕೋಪಯೋಗಿ ಇಲಾಖೆಗೆ ಸೇರಿದ ವಸತಿ ಇದೆ.

(3) ಅರಣ್ಯ ಇಲಾಖೆಗೆ ಸೇರಿದ ವಸತಿ ಇದೆ 1 ಕೊಳವೆ ಬಾವಿ ಇದೆ.

3) ದೇವಸ್ಥಾನದ ಜೀರ್ಣೋದ್ಧಾರದ ಬಗ್ಗೆ ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ, ಪ್ರಸ್ತಾವನೆ ಬಂದ ನಂತರ ತುರ್ತು ಕ್ರಮ ತೆಗೆದುಕೊಳ್ಳಲಾಗುವುದು.

4) ಇಲ್ಲ,

5) ಉದ್ಭವಿಸುವುದಿಲ್ಲ,

ಶ್ರೀ ಎಂ. ಶ್ರೀನಿವಾಸಯ್ಯ : ಮಾನ್ಯ ಅಧ್ಯಕ್ಷರೆ, ಮೈಸೂರು ಜಿಲ್ಲೆಯಲ್ಲಿರುವ ಶ್ರೀ ಬಿಳಿಗಿರಿರಂಗಸ್ವಾಮಿ ಬೆಟ್ಟದಲ್ಲಿರುವ ದೇವಸ್ಥಾನವು ಸರ್ಕಾರದ ವತಿಯಿಂದ ನಡೆಯುತ್ತಿದೆಯೇ ಎಂಬ ಪ್ರಶ್ನೆಗೆ 'ಹೌದು' ಎಂದು ಸಚಿವರು ಉತ್ತರ ಕೊಟ್ಟಿದ್ದಾರೆ.

ಹಾಗಿದ್ದಲ್ಲಿ ಪ್ರಸಿದ್ಧ ಪೂಜಾ ಸ್ಥಳವಾಗಿದ್ದು ಭಕ್ತಾದಿಗಳು ಬಂದು ತಂಗಲು ವಸತಿ ಸೌಕರ್ಯಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು 3 ವಸತಿ ಗೃಹಗಳು ಇದೆ. ಅದರಲ್ಲಿ ಭಕ್ತಾದಿಗಳು ಉಳಿದುಕೊಳ್ಳುವುದಕ್ಕೆ ಅವಕಾಶ ಇದೆ ಎಂದು ಹೇಳಿದ್ದಾರೆ. ಆದರೆ ನಾನು ಕೇಳಿರತಕ್ಕ ಪ್ರಶ್ನೆ ಸಾವಿರಾರು ಜನ ಭಕ್ತಾದಿಗಳು ಅಲ್ಲಿ ಹೋಗಿ ಒಂದೆರಡು ದಿವಸ ತಂಗುವುದಕ್ಕೆ ಅವಕಾಶ ಮಾಡಿಕೊಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ಎಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಧಾರ್ಮಿಕ ದತ್ತಿ ಸಚಿವರ ಪರವಾಗಿ) : ಅಲ್ಲಿರತಕ್ಕಂಥಾದ್ದು ಮೂರು ಗೆಸ್ಟ್‌ಹೌಸ್‌ಗಳು ಉಳಿದಂಥ ಡಾರ್ಮಿಟರೀಸ್ ಅಥವಾ ಧರ್ಮಶಾಲೆಗಳು ಮುಂತಾದ ಯಾವ ಕಟ್ಟಡಗಳೂ ಅಲ್ಲಿ ಇಲ್ಲ. ಮಾನ್ಯ ಸದಸ್ಯರು ಸ್ಪೆಸಿಫಿಕ್ ಆಗಿ ಪ್ರಪೋಸಲ್‌ನ್ನು ಅಲ್ಲಿ ಡೆಪ್ಯುಟಿ ಕಮಿಶನರ್‌ರವರಿಗೆ ಕಳುಹಿಸಿದರೆ ಸರಕಾರದವರು ಅದನ್ನು ಪರಿಶೀಲಿಸುತ್ತಾರೆ.

ಶ್ರೀ ಎಂ. ಶ್ರೀನಿವಾಸಯ್ಯ : ಮಾನ್ಯ ಅಧ್ಯಕ್ಷರೆ, ಮಹದೇಶ್ವರ ಬೆಟ್ಟದಲ್ಲಿ ಹೇಗೆ ಸಾವಿರಾರು ಜನ ಭಕ್ತಾದಿಗಳು ಹೋಗುವುದಕ್ಕೆ ಅವಕಾಶ ಇದೆ ಆ ರೀತಿಯ ಒಂದು ಸೌಲಭ್ಯವನ್ನು ಇಲ್ಲಿಯೂ ಸರಕಾರದವರು ಕಲ್ಪಿಸಿಕೊಡುತ್ತೀರಾ? ಒಂದು ವೇಳೆ ಸರಕಾರದಿಂದ ಆಗದಿದ್ದ ಪಕ್ಷದಲ್ಲಿ ಭಕ್ತಾದಿಗಳು ಮಾಡಿಕೊಳ್ಳುವುದಕ್ಕೆ ಮುಂದೆ ಬಂದರೆ ಅದಕ್ಕೆ ಸರಕಾರದವರು ಅವಕಾಶವನ್ನು ಮಾಡಿಕೊಡುತ್ತಾರೆಯೇ ಎಂದು ಕೇಳಬಯಸುತ್ತೇನೆ. ಈ ಬಗ್ಗೆ ದಯವಿಟ್ಟು ಸರಕಾರದ ನಿಲುವನ್ನು ತಿಳಿಸಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರ (ಡಿ) ಪ್ರಶ್ನೆಯಲ್ಲಿ ಇಲ್ಲವಾದಲ್ಲಿ, ಸ್ವಂತಖರ್ಚಿನಲ್ಲಿ ಮಂಟಪ ಕಟ್ಟಿಕೊಳ್ಳಲು ನಿವೇಶನ ನೀಡಲು ಅವಕಾಶ ಇದೆಯೇ ಎಂದು ಕೇಳಿದ್ದಾರೆ, ಒಂದು ವೇಳೆ ಭಕ್ತಾದಿಗಳು ಕಟ್ಟಿಕೊಳ್ಳುವುದಾದಲ್ಲಿ ನಿವೇಶನ ನೀಡಲು ಸರಕಾರಕ್ಕೆ ಇರುವ ತೊಂದರೆ ಏನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಲ್ಲಿ ಇರುವ ಜಾಗ ಕೇವಲ ಎರಡು ಎಕರೆಗಳು ಮಾತ್ರ, ಅದರಲ್ಲಿ ಕಾಂಪೌಂಡ್ ಹಾಕಿ ಎಂಟೈರ್ ಟೆಂಪಲ್‌ಗೆ ಮಾತ್ರ ಸೀಮಿತವಾಗಿ ಇಟ್ಟಿದ್ದಾರೆ. ಇನ್ನು ಇದು ಫಾರೆಸ್ಟ್ ಲ್ಯಾಂಡ್ ಇದ್ದ ಕಾರಣ ಅದನ್ನು ಕೊಡುವುದಕ್ಕೆ ನಮಗೆ ಅಧಿಕಾರ ಇಲ್ಲ. ಆ ವಿಚಾರದಲ್ಲಿ ಕೇಂದ್ರಸರಕಾರಕ್ಕೆ ಬರೆಯ ಬೇಕಾಗುತ್ತದೆ. ಆದುದರಿಂದಲೇ ನಿವೇಶನವನ್ನು ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದೇನೆ.

ಬೆಂಗಳೂರಿನ ಸುತ್ತಮುತ್ತ ಗಿಡಮರಗಳನ್ನು ಬೆಳಸುವುದರ ಬಗ್ಗೆ.

3568 - ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜಕ್ಷೇತ್ರ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ಅರಣ್ಯ ಇಲಾಖೆ ಬೆಂಗಳೂರು ನಗರ ಮತ್ತು ಸುತ್ತ ಮುತ್ತ ಅರಣ್ಯ ಬೆಳೆಸಲು ವಿಶೇಷ ಸೆಲ್ ರಚಿಸಲು ಹಣ ಮೀಸಲಿಟ್ಟಿದೆಯೇ?*

ಆ) *ರಾಜ್ಯದ ಬೇರೆ ಬೇರೆ ಪ್ರಮುಖ ನಗರಗಳಿಗೂ ಈ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆಯೇ?*

ಇ) *ಇಲ್ಲದಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು.*

ಶ್ರೀ ಈ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು)

ಅ) ಬೆಂಗಳೂರು ಹಾಗೂ ಸುತ್ತಮುತ್ತಲಿನ ಕಲುಷಿತ ವಾತಾವರಣವನ್ನು ನಿರ್ಮಲಗೊಳಿಸಲು ಅರಣ್ಯ ಇಲಾಖಾವತಿಯಿಂದ 1982ರಲ್ಲಿ ಒಂದು ವಿಭಾಗವನ್ನು ರಚಿಸಿದೆ. ಈ ಸೃಷ್ಟಿಸಿದ ವಿಭಾಗಕ್ಕೆ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಯಿಂದ

ಪ್ರಸ್ತುತ ಸಾಲಿನಲ್ಲಿ ರೂ. 27 ಲಕ್ಷ ಹಣವನ್ನು ಮೀಸಲಿಡಲಾಗಿದೆ.

ಆ) ರಾಜ್ಯದ ಬೇರೆ ಬೇರೆ ಪ್ರಮುಖ ನಗರಗಳಲ್ಲಿ ಮೇಲ್ಕಡಂತೆ ಯೋಜನೆ ಏನೂ ಹಾಕಿ ಕೊಂಡಿರುವುದಿಲ್ಲ.

ಇ) 8ನೇ ಪಂಚ ವಾರ್ಷಿಕ ಯೋಜನೆಯಡಿಯಲ್ಲಿ ನಗರ ಪ್ರದೇಶಗಳಲ್ಲಿ ಈ ಮೇಲ್ಕಂಡ ಯೋಜನೆಯನ್ನು ಪ್ರಾರಂಭಿಸಲು ಸರ್ಕಾರ ಸಾಧ್ಯತೆಯನ್ನು ಪರಿಶೀಲಿಸುತ್ತಿದೆ.

ಶ್ರೀ ಕೆ. ಹರ್ಷಕುಮಾರ್ ಗೌಡ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ ವಿಶೇಷವಾಗಿ ಗಿಡಗಳನ್ನು ನೆಡುವಂಥ ಕಾರ್ಯಕ್ರಮವನ್ನು ಸುಮಾರು 27 ಲಕ್ಷ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಿ ಒಂದು ಯೋಜನೆಯನ್ನು ರೂಪಿಸಿದ್ದಾರೆ. ಇದಕ್ಕಾಗಿ ವಿಶೇಷವಾದಂಥ ವಿಭಾಗವನ್ನು ಕೂಡ ರಚಿಸಿಕೊಂಡಿದ್ದಾರೆ. ಬೇರೆ ನಗರಗಳಿಗೆ ಈ ಯೋಜನೆಯನ್ನು ಕೊಡಲಿಲ್ಲವೇಕೆ? ಯಾವುದೇ ವಿಚಾರದಲ್ಲಿ ಆಗಲೀ ಬೆಂಗಳೂರು ನಗರಕ್ಕೆ ಆದ್ಯತೆ ಕೊಡುತ್ತೀರಿ, ನೀರಿಗೆ 1000ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೀರಿ, ಫಾರೆಸ್ಟ್‌ಗೆ 27 ಲಕ್ಷ ರೂಪಾಯಿಗಳನ್ನು ಕೊಡುತ್ತೀರಿ. ಆದರೆ ಮೈಸೂರು ನಗರ, ಹುಬ್ಬಳ್ಳಿ ಧಾರವಾಡ, ಬೆಳಗಾಂ ಮುಂತಾದ ನಗರಗಳಿಗೆ ನಾಲ್ಕನೇ ಒಂದಂಶ ಜನಸಂಖ್ಯೆ ಇರುವಂಥ ನಗರಗಳಿಗೆ ನೀವು ಈ ಯೋಜನೆಯನ್ನು ಕೊಡದೆ ಕಡೆಗಣಿಸಿದ್ದೀರಿ. ಹೀಗೆ ಆ ನಗರಗಳಿಗೆ ಏತಕ್ಕಾಗಿ ಆದ್ಯತೆಯನ್ನು ನೀವು ಕೊಟ್ಟಿಲ್ಲ? ಆದ್ಯತೆಯನ್ನು ಕೊಡುವ ಬದಲು ಅದನ್ನು 8ನೇ ಯೋಜನೆಯಲ್ಲಿ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೀರಿ. ದಯವಿಟ್ಟು 8ನೇ ಯೋಜನೆಗಿಂತ ಮೊದಲು ಇದಕ್ಕಾಗಿ ವಿಶೇಷ ಯೋಜನೆಯನ್ನು ರೂಪಿಸಿ ಈ ನಗರಗಳಲ್ಲಿಯೂ ಹೆಚ್ಚಿನ ಗಿಡಗಳನ್ನು ನೆಡುವ ಮೂಲಕ ನಿರ್ಮಲ ವಾತಾವರಣವನ್ನು ಕಾಪಾಡಲು ಮುಂದಾಗಬೇಕೆಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಈ.ಟಿ. ಶಂಭುನಾಥ್ : 1987ರ ಸರಕಾರ ಆಜ್ಞೆಯ ಪ್ರಕಾರ ಬೆಂಗಳೂರು ಹಸಿರುಪಟ್ಟಿ ವಿಭಾಗ ಎಂದು ನಿರ್ಣಯಿಸಿ, ವಿಶೇಷವಾದಂಥ ಕಾರ್ಯಕ್ರಮವೊಂದನ್ನು ಹಾಕಿಕೊಂಡಿದ್ದರು. ಉಳಿದ ನಗರಗಳಲ್ಲಿ ಮಾಮೂಲು ರೀತಿಯಲ್ಲಿ ನಮ್ಮ ಅರಣ್ಯ ಇಲಾಖೆಯವರು ಕೆಲವು ಕಾರ್ಯಕ್ರಮಗಳನ್ನು ಈ ಬಗ್ಗೆ ಹಾಕಿಕೊಂಡಿದ್ದಾರೆ. ಆದರೆ ಇದೇ ರೀತಿಯ ವಿಶೇಷವಾದಂಥ ಕಾರ್ಯಕ್ರಮವನ್ನು ಎಲ್ಲಾ ನಗರಗಳಿಗೆ ಹಾಕಿಕೊಳ್ಳಲು 8ನೇ ಯೋಜನೆಯಲ್ಲಿ ಯೋಚಿಸಲಾಗಿದೆ.

ಶ್ರೀ ಕೆ. ಹರ್ಷಕಮಾರ್ ಗೌಡ : ಮಾನ್ಯ ಅಧ್ಯಕ್ಷರೆ, ನಾವು 8ನೇ ಯೋಜನೆಯವರೆಗೆ ಕಾಯುವುದಕ್ಕೆ ತಯಾರಾಗಿಲ್ಲ. ಬೆಂಗಳೂರು ನಗರಕ್ಕೆ ಆದ್ಯತೆಯನ್ನು ಕೊಟ್ಟಮೇಲೆ ಉಳಿದ (ಬಿ) ಗ್ರೇಡ್ ನಗರಗಳಿಗೂ ಆದ್ಯತೆಯನ್ನು ಕೊಡಿ. ಮೈಸೂರು ನಗರವು ಒಂದು ಪ್ರಾಮುಖ್ಯವಾದ ಸಾಂಸ್ಕೃತಿಕ ರಾಜಧಾನಿಯಾಗಿದೆ. ಆದ್ದರಿಂದ ತುರ್ತಾಗಿ ಅಲ್ಲಿ 8ನೇ ಯೋಜನೆಗಿಂತ ಮೊದಲೇ ಒಂದು ಯೋಜನೆಯನ್ನು ರೂಪಿಸಿ ಹಣ ಒದಗಿಸಿ ಗಿಡಗಳನ್ನು ನೆಡುವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಸರಕಾರವು ಈ ರೀತಿಯಲ್ಲಿ ನೋಡುವುದಾದರೆ ಬೆಂಗಳೂರು ನಗರ ಒಂದು ಸ್ವರ್ಗ ಉಳಿದ ನಗರಗಳು ನರಕವೆ? ಹೀಗೆ ತಾರತಮ್ಯಕ್ಕೆ ಅವಕಾಶ ಕೊಡಬೇಡಿ. ಕೂಡಲೇ ಈ ದಿಸೆಯಲ್ಲಿ ಕಾರ್ಯಕ್ರಮಗಳನ್ನು ಕೈಗೊಳ್ಳಿ ಎಂದು ಕೇಳಬಯಸುತ್ತೇನೆ.

ಶ್ರೀ ಈ.ಟಿ. ಶಂಭುನಾಥ : ಬೆಂಗಳೂರು ನಗರದಲ್ಲಿಯೂ ಕೂಡ ಹಲವಾರು ಕಾರ್ಖಾನೆಗಳವರು ಹಣ ಸಂಗ್ರಹಣೆ ಮಾಡಿ ಅವರೇ ಈ ಗಿಡಗಳನ್ನು ನೆಡುವ ಕಾರ್ಯಕ್ರಮವನ್ನು ಮಾಡಿದ್ದಾರೆ. ಮೈಸೂರಿನಲ್ಲಿಯೂ ಕೂಡ ಇಂಥ ಕಾರ್ಯಕ್ರಮಕ್ಕೆ

ಅಲ್ಲಿಯ ವಿದ್ಯಾಸಂಸ್ಥೆಗಳವರು, ಕಾರ್ಖಾನೆಗಳವರು ಮುಂದು ಬಂದರೆ ಅಲ್ಲಿಯೂ ಕೂಡ ಇಂಥ ಕಾರ್ಯಕ್ರಮವನ್ನು ಪ್ರಾರಂಭ ಮಾಡಬಹುದಾಗಿದೆ.

ಸಂಚಾರಿ ಪಶು ಚಿಕಿತ್ಸಾ ವಾಹನಗಳ ವ್ಯವಸ್ಥೆ

3588 - ಶ್ರೀಮತಿ ಮಲ್ಲಾಜಮ್ಮ (ಮಳವಳ್ಳಿ) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪ್ರತಿ ತಾಲ್ಲೂಕಿನಲ್ಲಿ ಸಂಚಾರಿ ಪಶುಚಿಕಿತ್ಸ ವಾಹನಗಳ ವ್ಯವಸ್ಥೆ ಇದೆಯೇ? ಇಲ್ಲದ ತಾಲ್ಲೂಕಿನಲ್ಲಿ ಈ ವ್ಯವಸ್ಥೆ ನೀಡುವ ಆಲೋಚನೆ ಸರ್ಕಾರದ ಗಮನದಲ್ಲಿದೆಯೇ.

ಆ) ರಾಜ್ಯದ ಎಲ್ಲ ಪಶುಸಂಗೋಪನಾ ಘಟಕಗಳಲ್ಲಿ ಟೆಕ್ನಿಕಲ್ ಅಸಿಸ್ಟೆಂಟ್ಸ್, ಕಾಂಪೌಂಡರ್ಸ್, ಜವಾನರು ಇದ್ದಾರೆಯೆ, ಇಲ್ಲದ ಘಟಕಗಳಿಗೆ ಶೀಘ್ರವಾಗಿ ನೇಮಕ ಮಾಡುವ ವ್ಯವಸ್ಥೆ ನಡೆದಿದೆಯೇ.

ಇ) ರಾಜ್ಯದ ಪಶುಸಂಗೋಪನಾ ಇಲಾಖೆಯ ಎಲ್ಲಾ ವಾಹನಗಳಿಗೂ ಚಾಲಕರಿದ್ದಾರೆಯೇ, ಚಾಲಕರಿಲ್ಲದೆ ತಾಲ್ಲೂಕಿನ ಎಷ್ಟು ಸಂಚಾರಿ ವಾಹನಗಳು ನಿಂತಿವೆ, ಇದಕ್ಕೆ ಶೀಘ್ರ ವ್ಯವಸ್ಥೆ ಮಾಡಲಾಗುವುದೇ?

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನಾ, ಪಶುವೈದ್ಯ ಸೇವಾ ಸಚಿವರು)

ಅ) ಇಲ್ಲ. ಹೌದು.

ಆ) ಇಲ್ಲ. ಹೌದು.

ಇ) 1. ಇಲ್ಲ.
   2. 58
   3. ಹೌದು.

ಶ್ರೀಮತಿ ಮಲ್ಲಾಜಮ್ಮ : ಮಾನ್ಯ ಅಧ್ಯಕ್ಷರೆ, ರಾಜ್ಯದ ಪ್ರತಿಯೊಂದು ತಾಲ್ಲೂಕಿನಲ್ಲಿ ಸಂಚಾರಿ ಪಶುಚಿಕಿತ್ಸಾಲಯದ ವಾಹನಗಳ ವ್ಯವಸ್ಥೆ ಇದೆಯೇ? ಇಲ್ಲವಾದಲ್ಲಿ ಪ್ರತಿ ತಾಲ್ಲೂಕುಗಳಲ್ಲಿಯೂ ಇದನ್ನು ಮಾಡಲು ಸರಕಾರದವರು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆಯೇ ಎಂದು ಕೇಳಿದ್ದಕ್ಕೆ ಮಾನ್ಯ ಸಚಿವರು ಉತ್ತರದಲ್ಲಿ 'ಇಲ್ಲ' ಎಂದು ಹೇಳಿದ್ದಾರೆ. ಹಾಗಿದ್ದಲ್ಲಿ ಎಷ್ಟು ಕಡೆಗಳಲ್ಲಿ ಈ ಸಂಚಾರಿ ವಾಹನಗಳನ್ನು ಪ್ರಾರಂಭ ಮಾಡುತ್ತೀರಿ? ಮತ್ತು ರಾಜ್ಯದಲ್ಲಿ ಎಷ್ಟು ಪಶುಸಂಗೋಪನ ಘಟಕಗಳಲ್ಲಿ ಟೆಕ್ನಿಕಲ್ ಅಸಿಸ್ಟೆಂಟ್ಸ್, ಕಾಂಪೌಂಡರ್ಸ್, ಜವಾನರು ಇದ್ದಾರೆ? ಹಾಗೆ ಸೂಕ್ತ ಸಿಬ್ಬಂಧಿ ಇಲ್ಲದ ಘಟಕಗಳಿಗೆ ಶೀಘ್ರವಾಗಿ ನೇಮಕ ಮಾಡುವ ವ್ಯವಸ್ಥೆ ಸರಕಾರದಲ್ಲಿ ಇದೆಯೇ ಎಂದು ಕೇಳಿದ್ದೇನೆ.

ಅದಕ್ಕೆ ತಾವು ಇಲ್ಲವೆಂದು ಹೇಳಿದ್ದೀರಿ ಮತ್ತು ಶೀಘ್ರವಾಗಿ ನೇಮಕ ಮಾಡುವ ವ್ಯವಸ್ಥೆ ಇದೆಯೇ ಎಂದು ಕೇಳಿದ್ದಕ್ಕೆ 'ಹೌದು' ಎಂದಿದ್ದೀರಿ. ಎಷ್ಟು ಘಟಕಗಳಲ್ಲಿ ಯಾವಾಗ ಪ್ರಾರಂಭ ಮಾಡುತ್ತೀರಿ ಎಂದು ನಾನು ಕೇಳುತ್ತೇನೆ ಹಾಗೂ ಮಂಡ್ಯ ಜಿಲ್ಲೆಯಲ್ಲಿ ಅನೇಕ ಪಶುಸಂಗೋಪನಾ ಶಾಲೆಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆಯೋ ಅವನ್ನು ಭರ್ತಿಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ಪಾಟೀಲ್ : ಅಧ್ಯಕ್ಷರೇ, ಸದಸ್ಯರ ಪ್ರಶ್ನೆಗೆ ನಮ್ಮಲ್ಲಿ ಪಶು ಚಿಕಿತ್ಸಾ ವಾಹನಗಳಿವೆ, 175 ತಾಲೂಕುಗಳಲ್ಲಿ 163 ಪಶುಚಿಕಿತ್ಸ ಘಟಕಗಳಿವೆ ಕಾರವಾರ ಜಿಲ್ಲೆ ಹೊನ್ನಾವರ ತಾಲೂಕಿನಲ್ಲಿ ಜಲವಾಹಿನಿ ಸಂಚಾರ ಒಂದಿದೆ. ಹೀಗಾಗಿ 175ರಲ್ಲಿ 164ರಲ್ಲಿದೆ ಇನ್ನೂ 11 ತಾಲೂಕುಗಳಲ್ಲಿ ಪಶುಚಿಕಿತ್ಸ ಸೌಕರ್ಯಗಳಿಲ್ಲ. ಅದನ್ನು ಸರ್ಕಾರ

ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಪ್ರಯತ್ನ ಮಾಡುವುದು. ಆಮೇಲೆ ಮಂಡ್ಯ ಜಿಲ್ಲೆಯಲ್ಲಿ ತಮ್ಮ ಕ್ಷೇತ್ರ ಮಳವಳ್ಳಿ ತಾಲ್ಲೂಕು ಸೇರಿದಂತೆ ಐದು ಸಂಚಾರಿ ಪಶು ಚಿಕಿತ್ಸೆಗಳ ಹುದ್ದೆ ಖಾಲಿ ಇವೆ. ನಮಗೆ ತೊಂದರೆ ಬಂದಿದ್ದು ಹಣಕಾಸಿನದು ಆದಷ್ಟು ಬೇಗನೆ ಫೈನಾನ್ಸ್ ಇಲಾಖೆಯಿಂದ ಮಂಜೂರು ಪಡೆದು ಮಂಡ್ಯ ಜಿಲ್ಲೆಗಷ್ಟೇ ಅಲ್ಲ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಖಾಲಿ ಇರತಕ್ಕ ನಾನಾ ಹುದ್ದೆಗಳನ್ನು ಭರ್ತಿ ಮಾಡಲು ಪ್ರಯತ್ನಪಡುತ್ತೇನೆ.

ಯುವಕರೈತ ಸಮಾಜದ ಬಗ್ಗೆ

3597 - ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿರುವ ಕರ್ನಾಟಕ ಪ್ರದೇಶ ಯುವಕ ರೈತ ಸಮಾಜವು ನೊಂದಣಿಯಾಗಿದೆಯೇ?

ಆ) ಮೇಲ್ಕಂಡ ಸಂಘವನ್ನು ನಡೆಸಲು ಸರ್ಕಾರದಿಂದ ಕಟ್ಟಡವನ್ನೇನಾದರೂ ನೀಡಲಾಗಿದೆಯೇ?

ಇ) ಸದರಿ ಸಮಿತಿಯಲ್ಲಿರುವ ವ್ಯಕ್ತಿಗಳ ವಿಳಾಸಗಳನ್ನು ಒಳಗೊಂಡ ವಿವರಗಳನ್ನೊದಗಿಸುವುದು.

ಈ) ಈ ಸಮಾಜದ ಮಾಸಿಕ ಸಭೆಗಳು ಮತ್ತು ಮಹಾಸಭೆಗಳು ಸಕಾಲದಲ್ಲಿ ನಡೆಯುತ್ತಿವೆಯೇ ಇಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಉ) ಸರ್ಕಾರದಿಂದ ಈ ಸಮಾಜಕ್ಕೆ ಗ್ರಾಂಟ್ ದೊರೆಕುತ್ತಿದೆಯೇ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು)

ಅ) ಆಗಿದೆ.

ಆ) ಇಲ್ಲ.

ಇ) ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು : ಅಧ್ಯಕ್ಷರು : ಮಾನ್ಯ ಕೃಷಿ ಸಚಿವರು ಕಾರ್ಯಾಧ್ಯಕ್ಷರು : ಖಾಲಿಯಿದೆ.

ಉಪಾಧ್ಯಕ್ಷರು : ಶ್ರೀ ಟಿ. ತಿಪ್ಪೇರುದ್ರಯ್ಯನವರು ಆಲೂರು ಅಂಚೆ, ಹಿರಿಯೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ.

ಗೌ :ಕಾರ್ಯದರ್ಶಿ : ಶ್ರೀ ಆರ್. ತಿಮ್ಮಾರೆಡ್ಡಿ, ಚಂದಾಪುರ ಅಂಚೆ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆ.

ಖಜಾಂಚಿಗಳು : ಶ್ರೀ ಸಿ.ಯಂ. ಲಿಂಗಪ್ಪನವರು ಶಾಸನ ಸಭಾ ಸದಸ್ಯರು, ಇಟ್ಟುಮಡು ಅಂಚೆ ರಾಮನಗರ ತಾಲ್ಲೂಕು, ಬೆಂಗಳೂರು ಜಿಲ್ಲೆ.

ಈ) ನಡೆಯುತ್ತಿಲ್ಲ.

ಕಾರಣಗಳು :

1) ಹೊಸದಾಗಿ ಯುವಜನ ಇಲಾಖೆ ಅಸ್ತಿತ್ವಕ್ಕೆ ಬಂದು ಸಮಾಜಕ್ಕೆ ದೊರೆಯುತ್ತಿದ್ದ ಪ್ರತ್ಯಕ್ಷ ಹಾಗೂ ಪರೋಕ್ಷ ಪ್ರೋತ್ಸಾಹಗಳು ನಿಂತಿದ್ದು.
2) ಸದಸ್ಯತ್ವ ನೊಂದಾವಣೆಯಾಗಲೀ ಅಥವಾ ನವೀಕರಣವಾಗಲೀ ಆಗದೇ ನಿಂತುಹೋದದ್ದು.
3) ಆರ್ಥಿಕ ಮುಗ್ಗಟ್ಟು.
4) ಕಟ್ಟಡ ಇಲ್ಲದಿರುವುದು.

ಉ) ಇಲ್ಲ.

ಶ್ರೀ ಎ.ಕೆ. ಅನಂತಕೃಷ್ಣ : ಈ ಸಂಘಕ್ಕೆ ಕೃಷಿಸಚಿವರೇ ಅಧ್ಯಕ್ಷರಾಗಿರುತ್ತಾರೆ. ಈಗಲೂ ಇವರು ಅಧ್ಯಕ್ಷರಾಗಿದ್ದಾರೆಯೇ?

ಶ್ರೀ ಎನ್. ಚಿಕ್ಕೇಗೌಡ : ಹೌದು ಸ್ವಾಮಿ.

ಶ್ರೀ ಎ.ಕೆ. ಅನಂತಕೃಷ್ಣ : ಕೃಷಿಸಚಿವರೇ ಅಧ್ಯಕ್ಷರಾಗಿ ಬಹಳ ಕಾಲದಿಂದ ಅನುಭವ ಪಡೆದಿದ್ದಾರೆ. ಈ ಸಂಸ್ಥೆಯನ್ನು ಉಳಿಸಿಕೊಳ್ಳಲಿಕ್ಕೆ ಏಕೆ ಪ್ರಯತ್ನಿಸುತ್ತಿಲ್ಲ ಅದರ ಉತ್ತರದ ಪ್ರಕಾರ ಅದು ಹೆಚ್ಚೂಕಡಿಮೆ ಸತ್ತಿದೆ. ಪುನಶ್ಚೇತನ ಕೊಡಲು ಏಕೆ ಪ್ರಯತ್ನಿಸಿಲ್ಲ?

ಶ್ರೀ ಎನ್. ಚಿಕ್ಕೇಗೌಡ : ಇದಕ್ಕೊಂದು ಹಿನ್ನೆಲೆ ಇದೆ. 52ರಲ್ಲಿ ಆಗಿನ ಕೇಂದ್ರ ಕೃಷಿಸಚಿವರಾದ ಡಾ. ಪಂಜಾಬ್‌ರಾವ್ ದೇಶಮುಖ್‌ರು ಎಲ್ಲಾ ರಾಜ್ಯಗಳಲ್ಲೂ ಈ ಯುವಕರೈತಸಂಘ ಸ್ಥಾಪನೆ ಮಾಡಿದರು. ನಾನು ಪಾಶ್ಚಿಮಾತ್ಯ ದೇಶಗಳಿಗೆ ಹೋಗಿಬಂದು ಯವಕ ರೈತಸಂಘದ ಗೌರವ ಕಾರ್ಯದರ್ಶಿಯಾಗಿಯೂ ಕೆಲಸ ಮಾಡಿದ್ದೇನೆ. ಈ ಸಂಘ ಇಂದು ಬದಲಾವಣೆಯಾಗುವ ಪರಿಸ್ಥಿತಿಗೆ ನಮ್ಮ ಯುವಜನ ಇಲಾಖೆ ಏನು ಬಂತು ಅದು ಬಂದ ಮೇಲೆ ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಇಲ್ಲ. ಕೇಂದ್ರ ರಾಜ್ಯ ಮಟ್ಟಗಳಲ್ಲಿ ಮಾತ್ರ ಇತ್ತು, ಜಿಲ್ಲೆಗಳಲ್ಲಿ ಇರಲಿಲ್ಲ, ಮೊದಲು ಬಿ.ಡಿ.ಓ.ರವರು ಕೊಂಚ ಅನುದಾನ ಕೊಡುತ್ತಾ ಇದ್ದರು. ಇಂದು ಅನುದಾನ ಕೊಡಲು ಇಲಾಖೆ ಬೇರೆಯಾಗಿಬಿಟ್ಟಿದೆ. ಅವರಿಗೆ ಬೇಕಾದ ಸ್ಪೋರ್ಟ್ಸ್ ಮೆಟೀರಿಯಲ್ಸ್ ಕೊಟ್ಟು ಸಹಕಾರ ಕೊಡುತ್ತಿದ್ದರು. ಆ ಹಿನ್ನೆಲೆಯಿಂದ ಇಂದು ಸದಸ್ಯತ್ವ ಕೂಡ ನೋಂದಾಯಿಸಿಲ್ಲ. ನಾನು ಮಂತ್ರಿಯಾದ ಮೇಲೆ ಮೊದಲನೇ ಸಲ ಪ್ರಸ್ತಾಪಕ್ಕೆ ಬಂತು ನಾನು ಕೃಷಿಕಸಮಾಜದಲ್ಲಿದ್ದೇನೆ ಪದವಿನಿಮತ್ತ. ಬಹಳಷ್ಟು ವರ್ಷಗಳಿಂದ ಸದಸ್ಯತ್ವ ನೋಂದಾಯಿಸದೇ ಇರೋದು, ಸರ್ಕಾರದಿಂದ ಉತ್ತೇಜನ ಇಲ್ಲದೇ ಇರೋದು, ಅಲ್ಲದೆ ಬೇರೆ ರೀತಿಯ ಸಂಘಸಂಸ್ಥೆಗಳು ಹಳ್ಳಿಗಳಲ್ಲಿ ಬಂದಿರುವುದರಿಂದ ಈ ಸಂಸ್ಥೆ ಅಷ್ಟು ಚೆನ್ನಾಗಿ ಕೆಲಸ ಮಾಡಿಲ್ಲ ಎಂದು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಅಧ್ಯಕ್ಷರೇ, ಈ ಸಂಘವನ್ನೂ ಯೂತ್ ಸರ್ವೀಸಸ್‌ಗೆ ಕೊಟ್ಟಿದ್ದೇವೆ ಎನ್ನುವ ಕಾರಣದಿಂದ ಈ ಸಂಘಕ್ಕೆ ಅವರ ಕಡೆ ಅಭಿಮಾನ ಕಡಿಮೆಯಾಗಿದೆ ಎಂದು ಅವರು ಹೇಳುವ ಮಾತಿನಲ್ಲಿಯೇ ಅರ್ಥವಾಗುತ್ತದೆ. ನಾನು ಹೇಳುವುದು ಈಗಾಗಲೇ ರೂರಲ್ ಕಮ್ಯುನಿಟಿಯನ್ನು ಬಹಳ ಮಟ್ಟಿಗೆ ನಾವು ನೆಗ್ಲೆಕ್ಟ್ ಮಾಡುತ್ತಿದ್ದೇವೆ ಎಂದು ಒಂದು ಅಪಾದನೆ ದೇಶದ್ಯಾಂತ ಇದೆ. ಯೂಥ್ ಸರ್ವೀಸಸ್ ಬಹಳ ಮಟ್ಟಿಗೆ elitist ಅಪ್ರೋಚ್‌ನಲ್ಲಿ ಕೆಲಸ ಮಾಡುತ್ತಿವೆ ಎಂದು ಹೇಳಿ ನನ್ನ ಭಾವನೆ. ಅಂದರೆ ರೂರಲ್ ಕಮ್ಯುನಿಟಿಗೆ ಕೊಡಬೇಕಾದ ಒಂದು ಆದ್ಯತೆಯನ್ನು ನೀವು ಯೂತ್ ಸರ್ವೀಸಸ್ ಮೂಲಕ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ಮತ್ತು ಸಾಮಾಜಿಕವಾಗಿ ಏನಾದರೂ ಇವುಗಳನ್ನು ಬೆಳೆಸುವುದಕ್ಕೆ ಆಗುತ್ತದೆಯೇ?

ಅಧ್ಯಕ್ಷರು : ಅದನ್ನು ಜೀರ್ಣೋದ್ಧಾರ ಮಾಡಿ.

ಶ್ರೀ ಎನ್. ಚಿಕ್ಕೇಗೌಡ : ಮಾನ್ಯ ಅಧ್ಯಕ್ಷರೇ, ಅದಕ್ಕೆ ಸಂಬಂಧಪಟ್ಟ ಮಂತ್ರಿಗಳನ್ನು ವಿಚಾರಣೆ ಮಾಡಿಕೊಂಡು ಇದಕ್ಕೆ ಏನಾದರೂ ಒಂದು ಅನುಕೂಲ ಮಾಡುವುದಕ್ಕೆ ಪ್ರಯತ್ನಪಡುತ್ತೇನೆ.

ಹೊಸಕೋಟೆ ಕರಗಮ್ಮ ದೇವಸ್ಥಾನದ ಜೀರ್ಣೋದ್ಧಾರ ಮಾಡಿ.

3644 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಜಿಲ್ಲೆ ಆನೇಕಲ್ ತಾಲ್ಲೂಕು ಸಿಡಿ ಹೊಸಕೋಟೆ ಶ್ರೀ ಶ್ರೀ ಶ್ರೀ ಕರಗದಮ್ಮ ದೇವಸ್ಥಾನದ ಜೀರ್ಣೋದ್ಧಾರ ಮಾಡಲು ಕ್ರಮ ಏನಾದರೂ ಕೈಗೊಳ್ಳಲಾಗಿದೆಯೇ?

ಆ) ಹಾಗಿದ್ದಲ್ಲಿ ಈ ಕಾರ್ಯಕ್ರಮ ಕೈಗೊಳ್ಳಲು ವಿಳಂಬವಾಗಲು ಕಾರಣಗಳೇನು?

ಶ್ರೀ ರಾಜ ಅಮರೇಶನಾಯಕ್ (ಧಾರ್ಮಿಕ ದತ್ತಿ ರಾಜ್ಯ ಸಚಿವರು):

ಅ) ಈ ಬಗ್ಗೆ ಇಲಾಖೆಗೆ ಹಾಗೂ ಸರ್ಕಾರಕ್ಕೆ ಯಾರಿಂದಲೂ ಪ್ರಸ್ತಾವನೆ ಬಂದಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ದೇವಸ್ಥಾನಗಳ ಜೀರ್ಣೋದ್ಧಾರಕ್ಕೋಸ್ಕರ ಎಂದು ಪತ್ರಗಳನ್ನು ಬರೆದಿದ್ದಾರೆ. ಬಂದಿಲ್ಲ ಎಂದು ಹೇಳಿದ್ದಾರೆ. ಅದು ಬರದೇ ಇರುವ ಸಾಧ್ಯತೆಯೂ ಇದೆ. ಆ ರೀತಿ ಬಂದರೆ ಸ್ವಲ್ಪ ಹಣವನ್ನು ಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) (ಧಾರ್ಮಿಕ ದತ್ತಿ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಕೊಡಿಸೋಣ.

ಅಧ್ಯಕ್ಷರು : 630(2698) ನೇ ಪ್ರಶ್ನೆಯನ್ನು ಶ್ರೀ ಬೈರೇಗೌಡರ ಪರವಾಗಿ ಶ್ರೀ ಚಂದ್ರೇಗೌಡರು ಕೇಳಬಹುದು.

ಗೃಹ ನಿರ್ಮಾಣ ಸಹಕಾರ ಸಂಘಗಳು

2698 - ಶ್ರೀ ಸಿ.ಬೈರೇಗೌಡ (ವೇಮಗಲ್): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1989 ರ ನವೆಂಬರ್‌ನಿಂದ ಈಚೆಗೆ ಭೂಸ್ವಾಧೀನಕ್ಕೆ ಅನುಮತಿ ಕೋರಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿರುವ ಖಾಸಗಿ ಗೃಹ ನಿರ್ಮಾಣ ಸಹಕಾರ ಸಂಘಗಳು ಎಷ್ಟು? ಮತ್ತು ಯಾವುವು?

ಆ) ಇವುಗಳ ಪೈಕಿ ಭೂಸ್ವಾಧೀನ ನಡವಳಿಕೆ ಪ್ರತಿಯೊಂದು ಪ್ರಕರಣದಲ್ಲೂ ಯಾವ ಯಾವ ಹಂತದಲ್ಲಿ 4(1) 5, 6(1) ಇತ್ಯಾದಿ ಇದೆ ಎಂದು ತಿಳಿಸುವಿರಾ?

ಇ) ಜಮೀನು ಸ್ವಾಧೀನಕ್ಕೆ ಸರ್ಕಾರ ಅನುಮತಿ ನೀಡಲು ಯಾವ ಅಳತೆಗೋಲನ್ನು ಹಾಕಿದೆ ಈ ಅಳತೆಗೋಲನ್ನು ಹಿಡಿದು ಪರಾಮರ್ಶಿಸುವ ಅಧಿಕಾರ ಯಾರಿಗೆ ನೀಡಲಾಗಿದೆ?

ಈ) ಖಾಸಗಿ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಒಟ್ಟು ಎಷ್ಟು ಎಕರೆ ಭೂಮಿ ಭೂಸ್ವಾಧೀನಕ್ಕೆ ಅರ್ಜಿ ಸಲ್ಲಿಸಿದೆ?

ಉ) ಬಿ.ಡಿ.ಎ. ಬಡಾವಣೆಗಳನ್ನು ನಿರ್ಮಿಸಿ ಸಾರ್ವಜನಿಕರಿಗೆ ನಿವೇಶನ ನೀಡಲು ಎಷ್ಟು ಎಕರೆ ಭೂಸ್ವಾಧೀನಕ್ಕೆ 1989 ನವೆಂಬರ್ ನಿಂದೀಚೆಗೆ ಕ್ರಮ ತೆಗೆದುಕೊಂಡಿದೆ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಕಂದಾಯ ಸಚಿವರು):

ಅ) 16, ವಿವರಗಳಿಗೆ ಪಟ್ಟಿ ಲಗತ್ತಿಸಿದೆ.

ಆ) ಪಟ್ಟಿ ಲಗತ್ತಿಸಿದೆ.

ಇ) ಬೆಂಗಳೂರು ನಗರ ಜಿಲ್ಲೆ ಹೊರತುಪಡಿಸಿ ಇತರೆ ಜಿಲ್ಲೆಗಳಿಗೆ ಜಿಲ್ಲಾಮಟ್ಟದ ಅಧಿಕಾರಿಗಳ ಸಮಿತಿಯ ವರದಿ ಮತ್ತು ಬೆಂಗಳೂರು(ನಗರ) ಜಿಲ್ಲೆಗೆ ಸಂಬಂಧಿಸಿದಂತೆ ವಿಶೇಷ—ಸಮಿತಿಗಳ ವರದಿ ಪರಿಗಣಿಸಿ ಅನುಮತಿ ನೀಡಲಾಗುವುದು. ಈ ವರದಿಗಳನ್ನು ಪರಾಮರ್ಶಿಸುವ ಅಧಿಕಾರ ಸರ್ಕಾರಕ್ಕೆ ಇದೆ.

ಈ) 1103 ಎಕರೆ $14\frac{1}{2}$ ಗುಂಟೆ 19 ಸೆಂಟ್ಸ್.

ಉ) 4223 ಎಕರೆಗಳು.

NAMES OF THE SOCIETIES

Mysore District

1. Madhuvan Gruha Nirmana Sahakara Sangha, Mysore
2. Ananda Housing Co-operative Society
3. Vidya Shankara House Building Co-operative Society.
4. V.V. Mohalla House Building Co-operative Society.
5. Bapuji House Building Co-operative Society..

Dakshina Kannada District

1. Sri Venkateshwara House Building Co-operative Society

Dharwar District

1. Rajeeya House Building Co-operative Society.
2. Jayanagar House Building Co-operative Society
3. Azad House Building Co-operative Society.
4. Radhakrishna House Building Co-operative Society.
5. Taheed House Building Co-operative Society.
6. Raveendra House Building Co-operative Society.
7. Rajendra House Building Co-operative Society.

Karwar District

1. Central Government Employees House Building Co-operative Society.
2. Sri Vigneswara Sahakari Gruha Nirmana Sanghha, Sonarawada, Baad.

Bellary District

1. K.S.R.T.C. Employees House Building Co-operative Society.

Name of the Society		4(1)	5A	6(1
Mysore District				
1.	Madhuvan Gruha Nirmana Sahakara Sangha Mysore	8.3.90		4.4.91
2.	Ananda Housing Co-operative Society	13.6.91	5-A Stage	
3.	Vidya Sankara House Builidng Co-op.Society	6.6.91	5-A Stag	
4.	V.V. Mohalla House Building Co-op. Society	6.6.91	5-A Stage	
5.	Bapuji House Building Co-op. Society	17.8.91 under issue	-	-
Dakshina Kannada Dist				
Sri Venkateshwara House Building Co-op. Society		Under eliminary Enquiry Stage		
Dharwad District				
1	Rajeeva HBC		Possession to be nahdded over.	
2.	JJayanagar HBDS	4(1) Stage		
3.	Azad HBCS	4(1) Stage		
4.	RRadhakrishna HBCS	Under Preliminary Ennquiry Srage		
5.	TTuheed HBCS	"	"	"
6.	Raveendra HBCS	"	"	"
7.	Rajendra HBCS	"	"	"
Uttara Kannada District				
1.	CCentral Govt. Employees HBCS Karwar		6(1) Stage	
2.	SSri Vigneswara Sahakari Gruha Nirmana Sangha Sonarwada, Baad.		5A Stage	
Bellary District				
1.	K.S.R.T.C. Employees HBCS	4(1) stage		

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಈ ಉತ್ತರ ಬೆಂಗಳೂರು ನಗರ ವ್ಯಾಪ್ತಿಗೆ ಹೊರತು ಪಡಿಸಿ ನಮಗೆ ಸೊಸೈಟಿಗಳ ಹೆಸರುಗಳನ್ನು ಕೊಟ್ಟಿದ್ದಾರೆ. ಮುಖ್ಯವಾದ ಪ್ರಶ್ನೆ ....

ಅಧ್ಯಕ್ಷರು : ಮುಖ್ಯವಾದ ಪ್ರಶ್ನೆ ಚರ್ಚೆಯಾಗಿದೆಯಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಚರ್ಚೆಯಾದರೆ ಉತ್ತರ ಬರಬಾರದು ಎಂದು ಇದೆಯೇ?

ಅಧ್ಯಕ್ಷರು : ಉತ್ತರಗಳನ್ನು ಕೊಟ್ಟಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇದರಲ್ಲಿ ಕೊಟ್ಟರು. ಮತ್ತೆ ಅದರಲ್ಲಿ ಕೊಡುವುದಿಲ್ಲ ಎಂದು ಅವರು ಹೇಳಬೇಕಲ್ಲಾ. ಪ್ರಶ್ನೆಯನ್ನು ಕಳುಹಿಸುವ ಉದ್ದೇಶ ಬಹಳ ದೀರ್ಘವಾದಂಥ ಚರ್ಚೆಗೆ ಸಿಕ್ಕಿರತಕ್ಕಂಥದ್ದು ಬೆಂಗಳೂರು ಮತ್ತು ಸುತ್ತಮುತ್ತಲ ವ್ಯಾಪ್ತಿಗೆ ಬರತಕ್ಕಂಥ ಖಾಸಗೀ ಗೃಹ ನಿರ್ಮಾಣ ಸಹಕಾರ ಸಂಘಗಳ ಬಗ್ಗೆ ಇಲ್ಲಿ ಉತ್ತರದಲ್ಲಿ ಬಿ.ಡಿ.ಎ. ಬಡಾವಣೆ ನಿರ್ಮಿಸಿರುವುದಕ್ಕೆ ಭೂಮಿ ಎಷ್ಟಿದೆಯೋ ಅದರ ಸುಮಾರು 4/1 ರಷ್ಟು ಈ ಖಾಸಗೀಯವರ ಕೈಯಲ್ಲಿದೆ. ಬೆಂಗಳೂರು ನಗರದ್ದು ಸಿಗದಿದ್ದರೆ ನಮಗೆ ಈ ಖಾಸಗಿ ಸಂಸ್ಥೆಗಳವರು ಏನು ಮಾಡುತ್ತಿದ್ದಾರೆ, ಅವರೇ 4/1 ಭಾಗ ಕೆಲಸವನ್ನು ಮಾಡುವುದಾದರೆ ಬಿ.ಡಿ.ಎ. ಏತಕ್ಕಾದರೂ ಅಸ್ತಿತ್ವದಲ್ಲಿ ಇರಬೇಕು ಎಂದು ಕೇಳುತ್ತೇನೆ. ಜೊತೆಗೆ ಈ ವಿವರವನ್ನೇನಾದರೂ ಈಗ ತಕ್ಷಣ ಕೊಡುವುದಕ್ಕೆ ಸಾಧ್ಯವೇ? ಆಮೇಲೆ ಎರಡನೆಯ ಪ್ರಶ್ನೆಯನ್ನು ಕೇಳುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಅವರು ಕೇಳಿದ ಪ್ರಶ್ನೆ 1989ನೇ ನವೆಂಬರ್‌ನಿಂದ ಇಲ್ಲಿಯವರೆಗೆ ಎಷ್ಟು ಸೊಸೈಟಿಗಳಿಗೆ ಗೌರ್ನಮೆಂಟಿನವರು ಪರ್ಮಿಷನ್ ಕೊಟ್ಟಿದ್ದೀರಿ, ಎಷ್ಟು ಜಮೀನನ್ನು ಅಕ್ವೈರ್ ಮಾಡಿದ್ದೀರಿ ಎಂದು ಕೇಳಿದ್ದರು. ನಾವು ನವೆಂಬರ್ 89ರಿಂದ ಏನು ಪರ್ಮಿಷನ್ ಕೊಟ್ಟಿದ್ದೇವೆ, ಅದು ಮಾತ್ರ ಇಲ್ಲಿ ಕೊಟ್ಟಿದ್ದೇವೆ. ಬೆಂಗಳೂರು ಅರ್ಬನ್ ಡಿಸ್ಟ್ರಿಕ್ಟ್‌ನಲ್ಲಿ ಬೆಂಗಳೂರು ಸಿಟಿಯಲ್ಲಿ ಒಂದು ಕೂಡ ಪರ್ಮಿಷನನ್ನು ಕೊಟ್ಟಿಲ್ಲ. 89 ಆದಮೇಲೆ ಕೊಟ್ಟಿಲ್ಲ. ಹಿಂದಿನ ಸರ್ಕಾರ ಪರ್ಮಿಷನನ್ನು ಏನು ಕೊಟ್ಟಿತ್ತು ಅಥವಾ ಆ ಹಿಂದಿನ ಸರ್ಕಾರ ಏನು ಪರ್ಮಿಷನನ್ನು ಕೊಟ್ಟಿತ್ತು, ಪ್ರೊಸೀಡಿಂಗ್ಸ್‌ನ್ನು ಕಂಟಿನ್ಯೂ ಮಾಡಿದ್ದೇವೆಯೇ ಹೊರತಾಗಿ ಹೊಸ ಪರ್ಮಿಷನನ್ನು ಯಾವ ಸೊಸೈಟಿಗಳಿಗೂ ಕೊಟ್ಟಿಲ್ಲ ಎಂದು ಹೇಳುತ್ತೇನೆ. ಅದರಲ್ಲಿ ಅದು ಬಂದಿಲ್ಲ. ಎರಡನೆಯದಾಗಿ ಬಿ.ಡಿ.ಎ. ಬಗ್ಗೆ ತಾವು ಕೇಳಿದ್ದೀರಿ, ಇದು ಹೆಚ್.ಯು.ಡಿ. ಡಿಪಾರ್ಟ್‌ಮೆಂಟಿನವರು ಲ್ಯಾಂಡನ್ನು ಅಕ್ವೈರ್ ಮಾಡುತ್ತಾರೆ. ರೆವಿನ್ಯೂ ಡಿಪಾರ್ಟ್‌ಮೆಂಟ್ ಮಾಡುವುದಿಲ್ಲ. ಅದಕ್ಕೆ ತಮಗೆ ಮಾಹಿತಿಯನ್ನು ಕೇವಲ ಅವಗಾಹನೆಗಾಗಿ ಕೊಟ್ಟಿದ್ದೇವೆಯೇ ಹೊರತಾಗಿ ಆ ಡಿಟೈಲ್ಸ್‌ನ್ನು ಹೆಚ್.ಯು.ಡಿ. ಡಿಪಾರ್ಟ್‌ಮೆಂಟಿನವರು ಕೊಡುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಈ ಖಾಸಗೀ ಗೃಹ ನಿರ್ಮಾಣ ಸಹಕಾರ ಸಂಘಗಳು ಭೂಸ್ವಾಧೀನಕ್ಕೆ ಅರ್ಜಿಯನ್ನು ಸಲ್ಲಿಸಿವೆಯೇ? ಈ ರೀತಿ ಸ್ವಾಧೀನಪಡಿಸಿಕೊಂಡಂಥ ಈ ಭೂಮಿಯನ್ನು ಖಾಸಗೀ ವ್ಯಕ್ತಿಗಳಿಗೆ ಮಾರಾಟ ಮಾಡುವುದಕ್ಕೆ ಯಾವುದಾದರೂ ಸಹಕಾರ ಸಂಘಗಳು ಪ್ರಯತ್ನವನ್ನು ಮಾಡಿದ್ದಾವೆಯೇ? - bulk allotement from the societies. ಎರಡನೆಯದು ಈ ಖಾಸಗೀ ಗೃಹ ನಿರ್ಮಾಣ ಸಹಕಾರ ಸಂಘಗಳು ಇದನ್ನು ಕೇಳುವಾಗ, ಅಂಥ ಭೂಮಿಯನ್ನು ವಶಪಡಿಸುವುದಕ್ಕೆ ಮುನ್ನ ಈ ಭೂಮಿಯ ಮಾಲೀಕರು ಯಾರಿದ್ದಾರೆ, ಆ ಮಾಲೀಕರು ಈ ಭೂಮಿಯನ್ನು ವಶಪಡಿಸಿಕೊಳ್ಳುವುದಕ್ಕೆ ಯೋಗ್ಯತೆಯನ್ನು ಪಡೆದಿದ್ದಾರೆಯೇ?

ಭೂಸ್ವಾಧೀನ ಮಸೂದೆಯಲ್ಲಿ ಅವರು ಏನಾದರೂ ಡಿಕ್ಲರೇಷನ್ ಕೊಟ್ಟು ಭೂಸ್ವಾಧೀನಕ್ಕೆ ಬರತಕ್ಕದ್ದು ಅಥವಾ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್‌ಗೆ ವಿನಾಯಿತಿ ಕೊಡತಕ್ಕದ್ದು ಇಂತಹ ಪ್ರಸಂಗಗಳನ್ನು ಏನಾದರೂ ಪರಿಶೀಲನೆ ಮಾಡಿದ್ದೀರೋ? ಈ ಸಹಕಾರ ಸಂಘಗಳು ಇಂತಹ ಅರ್ಜಿಯನ್ನು ಹಾಕುವುದಕ್ಕೆ ಮುನ್ನಾ, ಈ ಸಹಕಾರ ಸಂಘಗಳ ಸ್ಥಿತಿಗತಿಗಳನ್ನು ಮತ್ತು ನಡೆಸತಕ್ಕ ವ್ಯವಹಾರಗಳ ಬಗ್ಗೆ ತಾವು ಏನಾದರೂ ಮಾಹಿತಿಯನ್ನು ಪಡೆದು ಭೂಮಿಯನ್ನು ಕೊಡತಕ್ಕ ಪ್ರಯತ್ನವನ್ನು ನಡೆಸಿದ್ದೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಹೌಸಿಂಗ್ ಸೊಸೈಟಿಗಳಿಗೆ ಲ್ಯಾಂಡ್ ಅಕ್ವಿಜೀಶನ್ ಮಾಡತಕ್ಕದ್ದರಲ್ಲಿ ಎರಡು ವಿಧ ಇದೆ. ಬೆಂಗಳೂರು ಸಿಟಿಯಲ್ಲಿ ಮಾಡತಕ್ಕಂಥದ್ದಕ್ಕೆ ಒಂದು ಕಮಿಟಿ ಇದೆ. ಮತ್ತೊಂದು ಬೆಂಗಳೂರು ಬಿಟ್ಟು ಬೇರೆ ಜಿಲ್ಲೆಗಳಲ್ಲಿ ಮಾಡತಕ್ಕದ್ದಕ್ಕೆ ಒಂದು ಕಮಿಟಿ ಇದೆ. ಬೇರೆ ಜಿಲ್ಲೆಗಳಿಗೆ ಸ್ಪೆಶಲ್ ಡೆಪ್ಯೂಟಿ ಕಮೀಷನರ್ ಅಥವಾ ಜಿಲ್ಲಾಧಿಕಾರಿಯವರು ಚೇರ್ಮನ್ ಆಗಿರುತ್ತಾರೆ. ಡೆಪ್ಯುಟಿ ರಿಜಿಸ್ಟ್ರಾರ್ ಆಫ್ ಕೋ ಆಪರೇಟಿವ್ ಸೊಸೈಟಿ ಇವರು ಮೆಂಬರ್ ಆಗಿರುತ್ತಾರೆ. ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಟೌನ್ ಪ್ಲಾನಿಂಗ್ ಅಥಾರಿಟಿ Member, concerned Assistant Commissioner shall be the ಇವರು ಕನ್ವಿನರ್ ಆಗಿರುತ್ತಾರೆ. ಇವರು ನಾಲ್ಕು ಜನ ಸದಸ್ಯರು ಏನು ರೆಕಮೆಂಡ್ ಮಾಡುತ್ತಾರೋ ಆ ರೆಕಮಂಡೇಷನ್ ಮೇಲೆ Land Acquisitior Officer.....ಆ ಸೊಸೈಟಿಗಳಿಗೆ ಲ್ಯಾಂಡ್‌ಗಳನ್ನು ಅಕ್ವೈರ್ ಮಾಡುತ್ತಾರೆ. ಬೆಂಗಳೂರಿನಲ್ಲಿ ಜಿಲ್ಲಾಧಿಕಾರಿ ಬೆಂಗಳೂರು, ಸೆಕ್ರೆಟರಿ ಬಿಡಿಎ, ಜಾಯಿಂಟ್ ರಿಜಿಸ್ಟ್ರಾರ್ ಕೋ ಆಪರೇಟಿವ್ ಸೊಸೈಟಿ, ಬೆಂಗಳೂರು ಈ ಮೂರು ಜನರ ಸೇರಿ ಬೆಂಗಳೂರು ಜಿಲ್ಲೆಗೆ ಸಂಬಂಧಪಟ್ಟಂತೆ ಇವರು ರೆಕಮೆಂಡ್ ಮಾಡುತ್ತಾರೆ.

ಇದನ್ನು ಪರಿಶೀಲಿಸುವುದಕ್ಕೆ ಸ್ಟೇಟ್ ಲೇವಲ್ ಕೋ ಆರ್ಡಿನೇಷನ್ ಕಮಿಟಿ ಇದೆ. ಆ ಕಮಿಟಿಯಲ್ಲಿ ರೆವಿನ್ಯೂ ಕಮೀಷನರ್ ಚೇರ್ಮನ್ಸ್, ಮತ್ತು ಕರ್ನಾಟಕ ಇಂಡಸ್ಟ್ರೀಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಇವರು ಮೆಂಬರ್, ಸೆಕ್ರೆಟರಿ ಟು ಗೌರ್ನಮೆಂಟ್ ಹೆಚ್.ಯು.ಡಿ. ಡಿಪಾರ್ಟ್‌ಮೆಂಟ್ ಇವರು ಮೆಂಬರ್, ಸೆಕ್ರೆಟರಿ ಟು ಗೌರ್ನಮೆಂಟ್ ಕೋ ಆಪರೇಶನ್ ಡಿಪಾರ್ಟ್‌ಮೆಂಟ್ ಮೆಂಬರ್, ಕಮೀಷನರ್ ಬಿಡಿಎ ಮೆಂಬರ್, ಜಿಲ್ಲಾಧಿಕಾರಿ ಬೆಂಗಳೂರು ಇವರು ಮೆಂಬರ್ ಸೆಕ್ರೆಟರಿ ಇಷ್ಟು ಜನ ಪರಿಶೀಲಿಸಿ ನೀವು ಅಕ್ವೈರ್ ಮಾಡಬಹುದೆಂದು ಶಿಫಾರಸ್ಸು ಮಾಡಿದರೆ ಆಗ ಸರ್ಕಾರದವರು ನೋಟೀಫಿಕೇಶನ್ ಇಶ್ಯೂ ಮಾಡುತ್ತಾರೆ. ಸೊಸೈಟಿಗಳಿಗೆ ಈ ಕಮಿಟಿಗಳನ್ನು ಮಾಡಿದ್ದೇವೆ. ಈ ಕಮಿಟಿಗಳು ಶಿಫಾರಸ್ಸು ಮಾಡಿದ ಮೇಲೆ ಲ್ಯಾಂಡ್ ಅಕ್ವೀಜೀಶನ್ ಪ್ರೊಸೀಡಿಂಗ್ಸ್ ಪ್ರಾರಂಭವಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಸೊಸೈಟಿಗಳಿಗೆ ಹೀಗೆ ಅಕ್ವಿಜೀಶನ್‌ಗೆ ಅವಕಾಶ ಕೊಡುವುದಕ್ಕೆ ಮುನ್ನಾ ಸೊಸೈಟಿಗಳ ಸ್ಥಿತಿಗತಿಗಳನ್ನು ನೋಡುತ್ತೀರಾ ಎಂದು ನಾನು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ರಿಜಿಸ್ಟ್ರಾರ್ ಕೋ ಅಪರೇಟಿವ್ ಸೊಸೈಟಿ ಆಗಲೀ, ಹಾಗು ಸಂಬಂಧಪಟ್ಟಂಥ ಅಧಿಕಾರಿಗಳು ಯಾರಿರುತ್ತಾರೆ, ಅವರೆಲ್ಲಾ ಮೆಂಬರ್‌ಶಿಪ್ ವೆರಿಫೈ ಮಾಡಿ ಸಬ್‌ಕಮಿಟಿಗೆ ಶಿಫಾರಸ್ಸನ್ನು ಮಾಡುತ್ತಾರೆ. ಇಷ್ಟು ಲ್ಯಾಂಡ್ ಅನ್ನು ನೀವು ಇವರಿಗೆ ಕೊಡಬಹುದು. ಆ ಸಬ್ ಕಮಿಟಿಯವರು

ಪರಿಶೀಲನೆ ಮಾಡಿ ತದನಂತರ ಹೈ ಲೇವಲ್ ಕಮಿಟಿಗೆ ಕಳುಹಿಸುತ್ತಾರೆ. ಅವರು ಆ ಶಿಫಾರಸ್ಸಿನ ಮೇರೆಗೆ ಹೈ ಲೆವಲ್ ಕಮಿಟಿಯವರು ಒಪ್ಪಿಕೊಂಡ ಮೇಲೆ formal ratification ಗೆ ಬರುತ್ತದೆ. ಲ್ಯಾಂಡ್ ಅಕ್ವಿಜೀಶನ್ ತೆಗೆದುಕೊಳ್ಳಬೇಕೆನ್ನುವಾಗ ನಾವು ನೋಟಿಫಿಕೇಶನ್ ಅನ್ನು ಇಷ್ಯೂ ಮಾಡುತ್ತೇವೆ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಮಂತ್ರಿಗಳವರಿಂದ ಒಂದು ವಿವರಣೆಯನ್ನು ಕೇಳುವುದಕ್ಕೆ ಬಯಸುತ್ತೇನೆ. 1108 ಎಕರೆ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಭೂಸ್ವಾಧೀನಕ್ಕೆ ಅರ್ಜಿ ಸಲ್ಲಿಸಿದ್ದು ವಿಸ್ತರಣೆಗೆಂಬ ಮಾತನ್ನು ತಾವು ಹೇಳಿದ್ದೀರಿ, ಇದು ಇಡೀ ರಾಜ್ಯಕ್ಕೆ ಅನ್ವಯಿಸುತ್ತದೆಯೋ ಅಥವಾ ಬೆಂಗಳೂರು ನಗರಕ್ಕೆ ಸೇರಿದಂತೆ ಮಾತ್ರವೇ? ಎರಡನೆಯದು ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ತಾವು ಕೊಟ್ಟಂತಹ ಜಮೀನು ಏನಿದೆ ಈ ಭೂಮಿ ಕೊಡುವಾಗ ತಾವು ಹೇಳಿದ್ದೀರಿ, ಈ ಹಿಂದೆ ಯಾರು ಸದಸ್ಯರಿದ್ದಾರೆ ಅವರನ್ನು ಪರಿಶೀಲನೆ ಮಾಡುವುದಕ್ಕೆ ತ್ರಿ ಮ್ಯಾನ್ ಕಮಿಟಿ ಮತ್ತು ಸ್ಟೇಟ್ ಲೆವೆಲ್ ಕೋ ಆರ್ಡಿನೇಷನ್ ಕಮಿಟಿ ಇದೆ, ಎಂಬ ಮಾತನ್ನು ಹೇಳಿದ್ದೀರಿ. ನಾನು ಸರ್ಕಾರಕ್ಕೆ ಕೇಳ ಬಯಸುವುದೇನೆಂದರೆ ಒಂದು ಸಾರಿ ಈ ಭೂಮಿಯನ್ನು ಕೊಟ್ಟಮೇಲೆ ಭೂಮಿಯ ನಿವೇಶನವನ್ನು ವಿತರಣೆ ಮಾಡುವಾಗ ಇರಾದೆಯಂತೆ ಆ ಭೂಮಿಯಲ್ಲಿ ಕಟ್ಟಿದ ಕಟ್ಟಡವನ್ನು ವಿಸ್ತರಣೆ ಮಾಡುವಾಗ ಯಾರು ಕಟ್ಟಡವನ್ನು ಕಟ್ಟುತ್ತಾರೋ ಅವರ ಇಷ್ಟದಂತೆ ಸದಸ್ಯರನ್ನು ಸೇರಿಸಿಕೊಳ್ಳಬೇಕೋ ಮತ್ತು ಅವರು ಹೇಳಿದವರಿಗೆ ಕಟ್ಟಡವನ್ನು ಕೊಡಬೇಕೋ ಎಂಬ ಒಪ್ಪಂದ ಆಗಿದೆಯೋ ಆ ಒಪ್ಪಂದಗಳೇನಾದರೂ ಸರ್ಕಾರದ ಗಮನಕ್ಕೆ ಬಂದಿದೆ. ಹಾಗಿದ್ದರೆ ಈ ಗೃಹ ನಿರ್ಮಾಣ ಸಹಕಾರ ಸಂಘಗಳ ಮೂಲ ಉದ್ದೇಶಗಳಿಗೆ ವಿರುದ್ಧ ಅಲ್ಲವೇ, ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡು ಕಾರ್ಯಕ್ರಮವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಕೇಳಿರುವ ಪ್ರಶ್ನೆ ಏನೆಂದರೆ 1108 ಎಕರೆ ಬೆಂಗಳೂರು ಸಿಟಿಗೆ ಸಂಬಂಧಪಟ್ಟಿದೆಯೋ ಅಥವಾ ಇಡೀ ರಾಜ್ಯಕ್ಕೆ ಸಂಬಂಧಪಟ್ಟಿದೆಯೋ ಎಂದು ತಾವು ಕೇಳಿದ್ದೀರಿ. ಈಗಾಗಲೇ ಅದರ ಪಟ್ಟಿಯನ್ನು ನಾನು ಕೊಟ್ಟಿದ್ದೇನೆ. ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಮೈಸೂರು ಜಿಲ್ಲೆ, ಧಾರವಾಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ, ಕಾರವಾರ, ಬಳ್ಳಾರಿ, ಈ ಎಲ್ಲಾ ಜಿಲ್ಲೆಗಳಲ್ಲಿ ಏನು ಸೊಸೈಟಿಗಳಿಗೆ ಅವರು ಅಕ್ವೈರ್ ಮಾಡಿದಂತಹ ಜಮೀನಿನ ಪಟ್ಟಿಯನ್ನು ನಾನು ಕೊಟ್ಟಿದ್ದೇನೆ. ಬೆಂಗಳೂರು ಸಿಟಿಗೆ ಸಂಬಂಧಪಟ್ಟ ಹಾಗೆ ನಾನು ಈಗಾಗಲೇ ಹೇಳಿದ್ದೇನೆ. ನಾವು ಹೊಸದಾಗಿ ಯಾವುದನ್ನು ಅಕ್ವೈರ್ ಮಾಡಿಲ್ಲ, ಹೊಸ ನೋಟಿಫಿಕೇಶನ್ ಇಷ್ಯೂ ಮಾಡಿಲ್ಲ, ಆದ್ದರಿಂದ ಆ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ.

ಅಧ್ಯಕ್ಷರು : ಪ್ರಶ್ನೋತ್ತರದಲ್ಲಿ - this question doesn't get solved. It really doesn't get solved. It needs much more time than what you really require to put through your points or if you wants to put stout defence. It has got so many contours....

ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವ ಬಗ್ಗೆ.

3665 - ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಅಕ್ರಮ ಸಾಗುವಳಿ ಮಾಡುತ್ತಿರುವ ಸರ್ಕಾರಿ ಗೋಮಾಳ, ಸರ್ಕಾರಿ ಗುಂಡು

ತೋಪು, ನೀರಾವರಿ ಅಚ್ಚುಕಟ್ಟು ಪ್ರದೇಶದಲ್ಲಿ ಇರುವ ಅನುಪಯುಕ್ತ ಕೆರೆ ಅಂಗಳಗಳನ್ನು ಸಕ್ರಮಗೊಳಿಸಲು ಸರ್ಕಾರ ಉದ್ದೇಶಿಸಿದೆಯೇ?

ಆ) *ದೊಡ್ಡ ದೊಡ್ಡ ಕಾಫಿ ಬೆಳೆಗಾರರು, ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಭೂಮಿಯನ್ನು ಸಕ್ರಮಗೊಳಿಸಲಾಗುವುದೇ?*

ಇ) *ಇಲ್ಲದಿದ್ದಲ್ಲಿ ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಳ್ಳುತ್ತದೆ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 94ಎ ಹಾಗೂ ಅದರಡಿಯಲ್ಲಿ ರೂಪಿಸಿರುವ ನಿಯಮಗಳ ಪ್ರಕಾರ ಗೋಮಾಳ ಜಮೀನಿನಲ್ಲಿ ದಿನಾಂಕ 14.4.90ಕ್ಕಿಂತಲೂ ಹಿಂದಿನ ಅನಧಿಕೃತ ಅತಿಕ್ರಮಣವನ್ನು ಸಕ್ರಮಗೊಳಿಸಲು ಸರ್ಕಾರವು ಉದ್ದೇಶಿಸಿದೆ. ಆದರೆ ಕೆರೆ ಅಂಗಳ ಮತ್ತು ಗುಂಡುತೋಪುಗಳಲ್ಲಿನ ಅನಧಿಕೃತ ಅತಿಕ್ರಮಣವನ್ನು ಸಕ್ರಮಗೊಳಿಸಲು ನಿಯಮಾವಳಿಗಳಲ್ಲಿ ಅವಕಾಶವಿರುವುದಿಲ್ಲವಾದ್ದರಿಂದ, ಇವುಗಳನ್ನು ಸಕ್ರಮಗೊಳಿಸಲಾಗುವುದಿಲ್ಲ.

ಆ) ಇಲ್ಲ.

ಇ) ಸದರಿ ಜನರನ್ನು ಒಕ್ಕಲೆಬ್ಬಿಸಲು ಕಾನೂನಿನಂತೆ ಕ್ರಮ ಕೈಗೊಳ್ಳಲಾಗುತ್ತದೆ.

ಶ್ರೀ ಎ ಟಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಸರ್ಕಾರಿ ಗೋಮಾಳದಲ್ಲಿ ದಿನಾಂಕ 14-4-91ಕ್ಕೆ ಹಿಂದೆ ಯಾರೂ ಅನಧಿಕೃತವಾಗಿ ಸಾಗುವಳಿಯನ್ನು ಮಾಡಿಕೊಂಡು ಬರುತ್ತಿದ್ದಾರೆ. ಅದನ್ನು ಸಕ್ರಮಗೊಳಿಸುತ್ತೇವೆಂದು ಹೇಳಿದ್ದಾರೆ. ಈಗಾಗಲೇ ರೆಕಾರ್ಡ್ಸ್‌ಗಳು ಸೃಷ್ಟಿಯಾಗಿವೆ. ಸರ್ಕಾರಿ ಗೋಮಾಳಗಳನ್ನು ಪೂರ್ತಿಯಾಗಿ ಕೊಟ್ಟರೆ, ಸಾರ್ವಜನಿಕ ಉದ್ದೇಶಕ್ಕಾಗಿ ಕನಿಷ್ಠ ಪಕ್ಷ ಸ್ಮಶಾನಕ್ಕೂ ಜಾಗ ಇಲ್ಲದಂತಾಗುತ್ತದೆ. ಆದ್ದರಿಂದ ಜನಸಂಖ್ಯೆಗೆ ಅನುಗುಣವಾಗಿ ಆಯಾ ಗ್ರಾಮಗಳಲ್ಲಿ ಸ್ವಲ್ಪ ಭಾಗ ಗೋಮಾಳಗಳನ್ನು ಉಳಿಸಿಕೊಳ್ಳುವುದಕ್ಕೆ ಸರ್ಕಾರ ಆಲೋಚನೆ ಮಾಡಿದೆಯೇ? ಇನ್ನೊಂದು ಪ್ರಶ್ನೆಯನ್ನು ಕೇಳಿದ್ದೆ. ಈ ನೀರಾವರಿ ಅಚ್ಚುಕಟ್ಟು ಪ್ರದೇಶದಲ್ಲಿ ಬರುವಂಥ ಅನುಪಯುಕ್ತ ಕೆರೆಗಳನ್ನು, ಊರಿನಿಂದ ಬಹಳ ದೂರವಿರುವುದರಿಂದ, ಇಂಥ ಕೆರೆಗಳನ್ನು ಮಂಜೂರು ಮಾಡುವುದಕ್ಕೆ ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಂಡಿದೆಯೇ? ಮತ್ತು ದೊಡ್ಡ ದೊಡ್ಡ ಕಾಫಿ ಬೆಳೆಗಾರರು 400-500 ಎಕರೆಯನ್ನು ಹೊಂದಿರುವಂಥ ಕಾಫಿ ಬೆಳೆಗಾರರು ತಮ್ಮ ಪಕ್ಕದಲ್ಲಿರುವಂಥ 100-200 ಎಕರೆ ಜಮೀನನ್ನು ಒತ್ತುವರಿ ಮಾಡಿಕೊಂಡು ಸುಮಾರು ವರ್ಷಗಳಿಂದ ಬೆಳೆ ಮಾಡಿಕೊಂಡು ಬಂದಿದ್ದಾರೆ. ಆದರೆ ಬಡವರು ಒಂದು ಅಥವಾ ಎರಡು ಎಕರೆ ಜಮೀನು ಈ ಕೆರೆ ಅಂಗಳದಲ್ಲಿ ಅಥವಾ ಗುಂಡು ತೋಪುಗಳಲ್ಲಿ ಉತ್ತಿಕೊಂಡು ಬರುತ್ತಿದ್ದರೆ ಅವರನ್ನು ಬಿಡಿಸುತ್ತೀರಿ. ದೊಡ್ಡ ದೊಡ್ಡ ಕಾಫಿ ಬೆಳೆಗಾರರು ಹತ್ತಾರು ವರ್ಷಗಳಿಂದ ನೂರಾರು ಎಕರೆಯನ್ನು ಒತ್ತುವರಿ ಮಾಡಿಕೊಂಡು ಬರುತ್ತಿದ್ದರೂ, ಅವರನ್ನು ಕಾನೂನು ಪ್ರಕಾರ ತೆರವು ಮಾಡಿಸುತ್ತೇವೆಂದು ಹೇಳಿದ್ದೀರಿ. ಆದರೆ ಇನ್ನೂ ಮಾಡಿಸಿಲ್ಲ. ಅವರನ್ನು ತೆರವು ಮಾಡಿಸಲು ಕಾನೂನು ಇರಲಿಲ್ಲವೇ? ಇದರ ಬಗ್ಗೆ ಯಾವ ಕ್ರಮವನ್ನೂ ಕೈಗೊಂಡಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ರೂಲ್ ಪ್ರಕಾರ ಯಾವುದನ್ನು ರೆಗ್ಯೂಲರೈಸ್ ಮಾಡಬೇಕು ಯಾವುದನ್ನು ಮಾಡಬಾರದು ಎನ್ನುವುದರ

ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳಲಾಗಿದೆ. ಜಾನುವಾರುಗಳ ಪ್ರೊಪೋರ್ಷನ್‌ಗೆ ಅನುಗುಣವಾಗಿ ಗೋಮಾಳ ಲ್ಯಾಂಡನ್ನು ಇಡಬೇಕೆಂದು ತಾವು ಹೇಳಿದ್ದೀರಿ. ಎಲ್ಲಿ ಸಾಧ್ಯವಿದೆ ಅಲ್ಲಿ ಇಡಬಹುದು. ಹಿಂದೆ ಎಲ್ಲಿ ರೆಗ್ಯೂಲರೈಸ್ ಆಗಿದೆ, ಅಲ್ಲಿ ಜಾನುವಾರುಗಳ ಅಂಕಿಸಂಖ್ಯೆಗಳಿಗೆ ಅನುಗುಣವಾಗಿ ಇಡುವುದಕ್ಕೆ ಆಗುವುದಿಲ್ಲ. ಈಗ ಆ ಪ್ರಶ್ನೆ ಉದ್ಭವಿಸುವುದಿಲ್ಲ. ಗೋಮಾಳ ಲ್ಯಾಂಡನ್ನು ಕೊಡಬಾರದೆಂದು ಆದೇಶ ಕೊಟ್ಟಿದ್ದೇವೆ. ಆದರೆ, in the case of SC/STs and House sites.....

ಮಾಡುವುದಕ್ಕೆ ಮಾತ್ರ ಎಗ್ಸೆಮ್ಷನ್ ಕೊಟ್ಟಿದ್ದೇವೆ. ಉಳಿದಿದ್ದಕ್ಕೆ ಇನ್ನು ಮುಂದೆ ಎನ್‌ಕ್ರೋಚ್ ಮಾಡುವುದಕ್ಕೆ ಯಾರೂ ಎನ್‌ಕರೇಜ್ ಮಾಡಬಾರದು. ರೆಗ್ಯೂಲರೈಸ್ ಮಾಡಬಾರದು ಎಂದು ಸರ್ಕಾರದಿಂದ ಆದೇಶ ಹೋಗಿದೆ.

ಶ್ರೀ ಎ.ಟಿ. ರಾಮಸ್ವಾಮಿ : ನೀರಾವರಿ ಅಚ್ಚುಕಟ್ಟು ಪ್ರದೇಶಗಳಲ್ಲಿ ಬರುವಂಥ ಅನುಪಯುಕ್ತ ಕೆರೆಗಳನ್ನು ಮಂಜೂರು ಮಾಡುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಇದೆ? ಇದು ಊರಿನಿಂದ ಹೊರಗೆ ಇರುತ್ತದೆ. ಹೂಳು ತುಂಬಿಕೊಂಡಿರುತ್ತದೆ. ಆ ಕೆರೆಗಳಿಂದ ಏನೂ ಪ್ರಯೋಜನವಿಲ್ಲ. ಇದನ್ನು ಮಂಜೂರು ಮಾಡಿಕೊಟ್ಟರೆ, ನೀರಾವರಿ ಪ್ರದೇಶದಲ್ಲಿರುವುದರಿಂದ ಬಡವರಿಗೆ ಸಾಗುವಳಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದರಿಂದ ಬಡವರಿಗೆ ಬಹಳ ಉಪಯೋಗವಾಗುತ್ತದೆ. ಆದ್ದರಿಂದ, ಇದನ್ನು ಏಕೆ ಮಾಡಬಾರದೆಂದು ಕೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕೆರೆಯಂಗಳಗಳನ್ನು ರೂಲ್ಸ್ ಪ್ರಕಾರ ಈ ರೀತಿ ಮಾಡುವುದಕ್ಕೆ ಬರುವುದಿಲ್ಲ. ಉಪಯೋಗವಿಲ್ಲ ಎನ್ನುವ ವಾದವನ್ನು ಇಟ್ಟಿದ್ದೀರಿ. ಲೋಕೋಪಯೋಗಿ ಇಲಾಖೆಯವರು ಇದು ಅಬಂಡೆಂಟ್ ಟ್ಯಾಂಕ್ಸ್ ಆಗಿದೆ, ಉಪಯೋಗ ಇಲ್ಲ ಡಿಸ್ಟ್ರಿಬ್ಯೂಟ್ ಮಾಡಬಹುದು ಎಂದು ತಿಳಿಸಿದರೆ, ಇಂಥ ಸಂದರ್ಭದಲ್ಲಿ ನಾವು ಡಿಸ್ಟ್ರಿಬ್ಯೂಟ್ ಮಾಡಬಹುದು.

ಶ್ರೀ ಎ.ಟಿ ರಾಮಸ್ವಾಮಿ : ದೊಡ್ಡ ದೊಡ್ಡ ಕಾಫಿ ಬೆಳೆಗಾರರು ನೂರಾರು ಎಕರೆ ಜಮೀನನ್ನು ಒತ್ತುವರಿ ಮಾಡಿದ್ದಾರೆ. ಒತ್ತುವರಿಯನ್ನು ಏಕೆ ತೆರವು ಮಾಡಿಸಿಲ್ಲ. ಸರ್ಕಾರಕ್ಕೆ ಆ ಶಕ್ತಿ ಇಲ್ಲವೇ? ಆದರೆ ಬಡವರು ಒಂದು ಎಕರೆ ಗುಂಡುತೋಪನ್ನು ಒತ್ತುವರಿ ಮಾಡಿದರೆ ಅದನ್ನು ತೆರವು ಮಾಡಿಸುತ್ತೀರಿ. ಕಾಫಿ ಬೆಳೆಗಾರರು ನೂರಾರು ಎಕರೆ ಭೂಮಿಯನ್ನು ಹತ್ತಾರು ವರ್ಷದಿಂದ ಒತ್ತುವರಿ ಮಾಡಿಕೊಂಡಿದ್ದಾರೆ. ಇವರುಗಳು 400-500 ಎಕರೆ ಭೂಮಿಯನ್ನು ಈಗಾಗಲೇ ಹೊಂದಿದ್ದಾರೆ. ಕಾನೂನು ರೀತ್ಯಾ ಕ್ರಮವನ್ನು ಕೈಗೊಳ್ಳುತ್ತೇವೆಂದು ಹೇಳುತ್ತೀರಿ? ಏಕೆ ತೆಗೆದುಕೊಂಡಿಲ್ಲ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಆಗಿಲ್ಲ, ನಾನೂ ಒಪ್ಪಿಕೊಳ್ಳುತ್ತೇನೆ. ಹತ್ತಾರು ವರ್ಷದಿಂದ ಇದು ನಡೆದುಕೊಂಡು ಬರುತ್ತಿದೆ. ಕಾಫಿ ಪ್ಲಾಂಟರುಗಳು ಅನೇಕ ಕಡೆ ಎನ್‌ಕ್ರೋಚ್ ಮಾಡಿದ್ದಾರೆ. ಅದನ್ನು ತೆಗೆದು ಹಾಕಬೇಕೆನ್ನುವುದೇ ಸರ್ಕಾರದ ಉದ್ದೇಶ. ಅದಕ್ಕೆ ನಿರ್ದಿಷ್ಟವಾದ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ತಾವು ಏನು ಸಲಹೆ ಕೊಟ್ಟಿದ್ದೀರಿ, ಖಂಡಿತವಾಗಿಯೂ ಇದರ ಬಗ್ಗೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಇವೊತ್ತು ಈ ದೇಶದಲ್ಲಿ ವಿದೇಶಿ ವಿನಿಮಯದ ಕೊರತೆ ಇದೆಯೆಂದು ಹೇಳಿ, ಸಾಕಷ್ಟು ಬೇರೆ ಬೇರೆ ಲಿಬರಲೈಸ್ಡ್ ಪಾಲಿಸಿಸ್ ತರುತ್ತಿದ್ದಾರೆ. ಈ ಕಾಫಿ ಕೂಡ ಇಂಥ ಒಂದು ವಿದೇಶಿ ವಿನಿಮಯವನ್ನು ಗಳಿಸಿ ಕೊಡತಕ್ಕಂಥ ಒಂದು ಬಾಗ, ಇಲ್ಲಿ ಸಾವಿರಾರು ಎಕರೆ

ಪ್ರದೇಶ ಒತ್ತುವರಿಯಾಗಿದೆಯೆಂದು ಜನರಲ್ ಆಗಿ ಹೇಳಿ ಏನು ಆಗಿಬಿಟ್ಟಿದೆಯೆಂದರೆ, ಸ್ವಲ್ಪ ಹೆಚ್ಚು ಕಡಿಮೆ ಎರಡಕ್ಕೂ ರೇಟ್ ಒಂದೇ. ಎರಡಕ್ಕೂ ವಿದೇಶಿ ವಿನಿಮಯ ಒಂದೇ ಸಂಪಾದನೆ ಮಾಡುವುದರಲ್ಲಿ. ಆದರೆ, ಇದೊಂದು ಜ್ವಲಂತ ಸಮಸ್ಯೆ. ಇದಕ್ಕಾಗಿ ಒಂದು ಸಮಿತಿಯನ್ನು ಕೂಡ ನೇಮಕ ಮಾಡಿ. ಆ ಸಮಿತಿ ಹಿಂದಿನ ಸರ್ಕಾರಕ್ಕೆ ವರದಿ ಕೊಟ್ಟಿದೆ. ಆ ವರದಿಯ ಆಧಾರದ ಮೇಲೆ ಹಿಂದಿರತಕ್ಕಂಥ ಸ್ಥಿತಿಯಲ್ಲಿ ಹೊಸ ಹೊಸ ಸಮಸ್ಯೆಗಳನ್ನು ನಿರ್ಮಾಣ ಮಾಡುವ ಬದಲು, ಆ ಸಮಿತಿಯ ವರದಿಯನ್ನು ತರಿಸಿ, ಇದಕ್ಕೆ ಏನಾದರೂ ನಿರ್ದಿಷ್ಟವಾದಂಥ ಪರಿಹಾರವನ್ನು ನಿಮ್ಮ ಕಾಲದಲ್ಲಾದರೂ, ಬಿಡಿಸುತ್ತೇವೆ ಎನ್ನುವುದು ಸುಲಭವಲ್ಲ. ಅವರು ಅಷ್ಟು ಸುಲಭವಾಗಿ ಬಿಟ್ಟುಹೋಗುವುದಕ್ಕೆ ತಯಾರಿಲ್ಲ. ಏನಾದರೂ ಪರಿಹಾರ ಕೊಡುವುದಕ್ಕೆ ತಾವು ಪ್ರಯತ್ನ ಮಾಡುತ್ತೀರಾ?

ಶ್ರೀ ಕೆ.ಎಚ್. ರಂಗನಾಥ್ : ಸರ್ಕಾರ ಎಂದು ಹೇಳಿ ಫ್ರೆಟನ್ ಮಾಡುವುದು ತಪ್ಪೇ.

ಶ್ರೀ ಡಿ.ಬಿ. ಚಂದ್ರೇಗೌಡ : ಎಂ.ಎಸ್. ರಾಮಯ್ಯನವರಿಗೆ ಬಿಡಿಸಿದ್ದೀರಲ್ಲಾ ಹಾಗೆಯೇ ಇದನ್ನು ಬಿಡಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಂ.ಎಸ್. ರಾಮಯ್ಯನವರಿಗೆ ನಾವು ರೆಕಮೆಂಡ್ ಮಾಡಿದ್ದೇವೆಯೇ? ಸುಮ್ಮನೆ ನಾವು ನೀವು ಎನ್ನುವುದು ಬೇಡ. ಪದೇ ಪದೇ ಎಂ.ಎಸ್ ರಾಮಯ್ಯನವರು ಹೆಸರನ್ನು ಹೇಳಿ ನೀವು ಮಾಡಿದ ತಪ್ಪನ್ನೆಲ್ಲಾ ಮುಚ್ಚಿಕೊಳ್ಳುವುದಕ್ಕೆ ಹೋಗಬೇಡಿ. ಅದನ್ನು ನೀವೇ ಮಾಡಿದ್ದುದು. ಜೋರಾಗಿ ಮಾತನಾಡಿ ನನ್ನನ್ನು ಸಪ್ರೆಸ್ ಮಾಡುವುದಕ್ಕೆ ಪ್ರಯತ್ನ ಮಾಡಬೇಡಿ. ಅದು ಸಾಧ್ಯವಾಗುವುದಿಲ್ಲ.

ಶ್ರೀ ಕರಿಯಣ್ಣ : ಸ್ವಾಮಿ 'ಕೋತಿ ಮೊಸರನ್ನು ತಿಂದು ಮೇಕೆ ಬಾಯಿಗೆ ಒರೆಸಿದಂತೆ' ಗಾದೆಯ ಹಾಗಾಯಿತು ನಿಮ್ಮ ಮಾತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಂ.ಎಸ್. ರಾಮಯ್ಯನವರಿಗೆ ಬಿಲ್ಡಿಂಗ್ ಕೊಡಬೇಕೆಂದು ನಾವು ಹೇಳಿದ್ದೇವೆಯೇ? ಇನ್ಸ್‌ಪೆಕ್ಷನ್ ಮಾಡಿದ್ದೇವೆಯೇ?

ಅಧ್ಯಕ್ಷರು : ಆರ್ಡರ್, ಆರ್ಡರ್.ಎಂ.ಎಸ್. ರಾಮಯ್ಯನವರು ಕಾಫಿ ಬೆಳೆಯುತ್ತಾರೋ ಏನೋ ನನಗೊತ್ತಿಲ್ಲ. ಆದರೆ, ಕಾಫಿ ಬೆಳೆಗಾರರ ವಿಚಾರವಾಗಿ ಅಕ್ರಮ .... ಸಕ್ರಮ ....ಇಲ್ಲಿ ಯಾರನ್ನು ಯಾರು ಬಾಯಿ ಮುಚ್ಚಿಸುವುದಕ್ಕೆ ಆಗುವುದಿಲ್ಲ. ಅದು ನನ್ನ ಕೈಯಲ್ಲಿ ಮಾತ್ರ ಸಾಧ್ಯ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈಗ ಸರ್ಕಾರದ ನೀತಿ ಇರತಕ್ಕಂಥಾದ್ದು ಪ್ಲಾಂಟೇಶನ್ .....

ಅಧ್ಯಕ್ಷರು : ಇವರು ಹೇಳಿದರು, ಹಿಂದೆ ಒಂದು ಸರ್ವೆ ಮಾಡಿದ್ದಾರೆ, ಒಂದು ಕಮಿಟಿ ಮಾಡಿ ರಿಪೋರ್ಟ್ ಕೊಟ್ಟಿದ್ದಾರೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಸರ್ವೆ ರಿಪೋರ್ಟ್ ತರಿಸಿಕೊಂಡು ಪರಿಶೀಲನೆ ಮಾಡುತ್ತೇನೆ. ಎರಡನೆಯದಾಗಿ ಎನ್‌ಕ್ರೋಚ್ ಮಾಡಿದವರು ರೆಗ್ಯುಲರೈಸ್ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಈಗಾಗಲೇ ನಮ್ಮ ನೀತಿಯ ಪ್ರಕಾರ ಅದನ್ನು ನಾವು ಒಪ್ಪಿಕೊಂಡಿಲ್ಲ, ಯಾರು ಬಡವರಿದ್ದಾರೆ ಅವರಿಗೆ. ಓನ್ಲಿ ಟೂ ಹೆಕ್ಟೇರ್ಸ್ ಮಾತ್ರ ನಾವು ರೆಗುಲರೈಸ್ ಮಾಡಬೇಕು ಎನ್ನತಕ್ಕಂಥಾದ್ದನ್ನು ತೆಗೆದುಕೊಂಡಿದ್ದೇವೆ.

ಆದರೂ ಕೂಡ ಅಗ್ರಿಕಲ್ಚರಲ್ ಲ್ಯಾಂಡ್, ವಿಶಿಷ್ಟವಾದಂಥ ಪಟ್ಟಿಯಲ್ಲಿರತಕ್ಕಂಥಾದ್ದು ಮಾತ್ರ ರೆಗ್ಯುಲರೈಸ್ ಮಾಡಬಹುದೆಂದು ಹೇಳಿದ್ದೇನೆ. ಅವರು ರಿಪೋರ್ಟ್ ಇದೆ, ತರಿಸಿಕೊಂಡು ಪರಿಶೀಲನೆ ಮಾಡಬೇಕೆಂದು ಹೇಳಿದ್ದಾರೆ. ಆ ಒಂದು ರಿಪೋರ್ಟನ್ನು ತಂದು ಪರಿಶೀಲಿಸಿ ಏನು ಕ್ರಮ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಹೇಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಒಂದು ಮಾತನ್ನು ಹೇಳಿದರು. 1990ಕ್ಕೂ ಮೊದಲು ಯಾರು ಗೋಮಾಳವನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ ಅವರಿಗೆಲ್ಲಾ ಕೊಟ್ಟುಬಿಡುತ್ತೇವೆಂದು. 1990ರಿಂದೀಚೆಗೆ ಒತ್ತುವರಿ ಮಾಡಿದವರಿಗೆ ಕೊಡುವುದಿಲ್ಲ ಎಂದಿದ್ದಾರೆ. ಸ್ವಾಮಿ ಇದನ್ನು ಕೊಡಬೇಕಾದರೂ ಸಹಾ ತಾವು ಒಂದು ಯೋಚನೆ ಮಾಡಬೇಕು. ಇಷ್ಟು ದನಗಳಿಗೆ ಒಂದು ಎಕರೆ ಇರಬೇಕೆಂದು ಒಂದು ಪ್ರಿಸ್ಕ್ರಿಪ್ಷನ್ ಇದೆ. ರೆಗ್ಯೂಲರೈಸ್ ಮಾಡುವಾಗ ಅದನ್ನು ಗಮನಕ್ಕೆ ತೆಗೆದುಕೊಳ್ಳುತ್ತೀರಾ? ಎರಡನೆಯದಾಗಿ ಹಿಂದಿನ ಪಂಚಾಯತ್ ಆಕ್ಟ್‌ನಲ್ಲಿ ಗೋಮಾಳ ಲ್ಯಾಂಡನ್ನು ಪಂಚಾಯಿತಿಗೆ ಕೊಟ್ಟಿದ್ದರು. ಅದು ಅವರ ಸುಪರ್ಧಿಯಲ್ಲಿತ್ತು. They are to supervise that. ಈಗ ಇದರ ಪ್ರಕಾರ ಅದನ್ನು ಕೊಟ್ಟಿಲ್ಲ. ಹೀಗಿರುವುದರಿಂದ ಅಫಾರಸ್ಟೇಶನ್ ಮಾಡಿಸಬೇಕಾದರೆ, ಸೋಶಿಯಲ್ ಫಾರೆಸ್ಟ್ರಿ ಮಾಡಬೇಕಾದರೆ ಗೋಮಾಳ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ದಯಮಾಡಿ, ಗೋಮಾಳ ಲ್ಯಾಂಡ್ ಅನ್ನು ಆಯಾ ಮಂಡಲ ಪಂಚಾಯಿತಿಗಳಿಗೆ ಕೊಡುವುದಕ್ಕೆ ಏನಾದರೂ ಮಾಡಿ, ಮತ್ತು ಈ ಜಮೀನನ್ನು ಉಳಿಸಿ, ಅಲ್ಲಿ ಸಣ್ಣ ಪುಟ್ಟ ಅಫಾರೆಸ್ಟೇಷನ್ ಮತ್ತು ಸೋಶಿಯಲ್ ಫಾರೆಸ್ಟ್ರಿ ಮಾಡಬೇಕೆಂದರೆ... ಬಡಬಗ್ಗರು ಕುರಿಗಳನ್ನು ಮೇಯಿಸಿಕೊಳ್ಳುವುದಕ್ಕೆ ಜಾಗ ಸಿಗುತ್ತದೆ. ಇವೊತ್ತಿನ ದಿವಸ ಅದೂ ಸಿಕ್ಕುವುದಿಲ್ಲ, ಬಹಳ ಜನರು ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಹೀಗಾಗಿ ತೊಂದರೆಯಾಗುತ್ತದೆ. ಅದನ್ನು ಬಿಡಿಸಿ ಅಫಾರೆಸ್ಟೇಶನ್ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ?

12.45 ಪಿ.ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಈಗಾಗಲೇ ಅದರ ಬಗ್ಗೆ ಸ್ಪಷ್ಟಪಡಿಸಿದ್ದೇನೆ. ಗೋಮಾಳ ಭೂಮಿಯಲ್ಲಿ ಹೌಸ್ಸಿಂಗ್ ಸೈಟ್ಸ್‌ಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಸೀಮಿತ ಮಾಡಿದ್ದೇವೆ. ಮತ್ತು ಎಸ್.ಸಿ., ಎಸ್.ಟಿ., ಎಂದು ಏನು ಇದ್ದಾರೋ ಅವರಿಗೆ ವಿಶೇಷವಾದ ರಿಯಾಯಿತಿಯನ್ನು ಕೊಟ್ಟಿದ್ದೇವೆ. ಎಲ್ಲಾರಿಗೂ ಕೂಡ ಸಾರಾಸಗಟಾಗಿ ರೆಗ್ಯುಲರೈಸ್ ಮಾಡಬೇಕೆಂದು ಹೇಳಿಲ್ಲ. ಮೊನ್ನೆ ತಾನೆ ನಮ್ಮ ಹೊಸ ಸುತ್ತೋಲೆ ಬಂದಿದೆ. ಅದರ ಪ್ರಕಾರ ಹಾಗೆ ಮಾಡುವಂತಿಲ್ಲ. ತಾವು ಇದನ್ನು ನೋಡಿರಬಹುದು. ಇನ್ನೊಂದು ಏನೆಂದರೆ ಬಹಳಷ್ಟು ಜನ ಬೇರೆಯವರು ಇದ್ದವರೆ ಇದನ್ನು ಒತ್ತುವರಿ ಮಾಡಿದ್ದಾರೆ. ತಾವು ಇರತಕ್ಕ ಜಮೀನನ್ನು ಉಳಿಸಿಕೊಡಬೇಕೆಂದು ಕೇಳಿದ್ದಾರೆ. ಇದನ್ನು ನಾವು ಈಗಾಗಲೇ ಪರಿಶೀಲನೆ ಮಾಡಿ ಹೆಚ್ಚು ಜಮೀನು ಇರುವವರು ಮತ್ತು ಅದಲ್ಲದೆ ಎಸ್.ಸಿ. ಮತ್ತು ಎಸ್.ಟಿ ಗೆ ಕಾನೂನಿನ ಪ್ರಕಾರ ಎಷ್ಟು ಜಮಿನು ಸಿಗಬೇಕಾಗಿತ್ತೋ ಲ್ಯಾಂಡ್‌ಗ್ರ್ಯಾಂಟ್ ರೂಲ್ಸ್ ಪ್ರಕಾರ ಅದು ಇಲ್ಲವೆಂದು ತಿಳಿದುಕೊಂಡ ಮೇಲೆ ನಾನು ಇದನ್ನು ರಿಲ್ಯಾಕ್ಸ್ ಮಾಡಿದ್ದೇನೆ, ಅವರ ಬಗ್ಗೆ ಆದುದರಿಂದ ಇದನ್ನು ನಾವೆಲ್ಲರೂ ಸೂಕ್ಷ್ಮವಾಗಿ ನೋಡಬೇಕಾಗುತ್ತದೆ. ನಮ್ಮ ಶಾಸಕರನ್ನು ಅಲ್ಲಿ ಅಧ್ಯಕ್ಷರನ್ನಾಗಿ ಮಾಡಿದ ಉದ್ದೇಶವೇನೆಂದರೆ ಅವರು ಇದನ್ನು ಸಮಗ್ರವಾಗಿ ನೋಡುತ್ತಾರೆ. ಅವರ ಕೈಯಲ್ಲಿ ಇದನ್ನು ವಹಿಸಿದರೆ ಅದರಿಂದ ಕಾನೂನಿನ ನ್ಯಾಯ ದೊರಕಿಸಿಕೊಡುತ್ತಾರೆ ಎನ್ನುವ ದೃಷ್ಟಿಯಿಂದ ನಾವು ಎಲ್ಲಾ ಶಾಸಕರನ್ನು ಛೇರ್‌ಮನ್ ನಾಗಿ ಮಾಡಿದ್ದೇವೆ. ಮತ್ತು ಬೇರೆ ಸೆಕ್ಷನ್ ನಿಂದ

ಇದರಲ್ಲಿ ಬೇರೆ ಯಾರಾದರೂ ಆಸಕ್ತಿ ತೋರಿಸುವವರಿದ್ದರೆ ಅವರನ್ನು ಸೇರಿಸಿದ್ದೇವೆ. ಆ ಸಮಿತಿಯವರು ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತಾರೆಂದು ಭಾವಿಸಿದ್ದೇನೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ಕಾಲವು ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕೊಪ್ಪಳ ತಾಲ್ಲೂಕಿನಲ್ಲಿ ಜಿಂಕೆ ಧಾಮದ ಸ್ಥಾಪನೆ

3658 - ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ (ಕೊಪ್ಪಳ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಪ್ಪಳ ತಾಲ್ಲೂಕಿನ ಅಳವಂಡಿ, ಕವಲೂರು ಮುರಲಾಪುರ, ಗುಡಿಗೇರಿ, ಯಲಬುರ್ಗಾ ತಾಲ್ಲೂಕಿನ ಬನ್ನಿಕೊಪ್ಪ ವೀರಾಪುರ ಚಂಡೂರು ಹಾಗೂ ಬೆಣಕಲ್ಲು ಗ್ರಾಮಗಳ ಎರೇ ಭೂಮಿ ಭಾಗದಲ್ಲಿ ಸಾವಿರಾರು ಚಿಗರೆ (ಜಿಂಕೆಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅಲ್ಲಿಯ ಜಿಂಕೆಗಳನ್ನು ಹರಿಣ ಶಿಕಾರಿಗಳು (ಬೇಟೆಗಾರರು) ಹಾಗೂ ಸಾರ್ವಜನಿಕರು ಬೇಟೆಗಳನ್ನಾಡಿ ಕೊಲ್ಲುತ್ತಿದ್ದಾರೆ. ಇವುಗಳನ್ನು ಸಂರಕ್ಷಿಸುವ ಬಗ್ಗೆ ಜಿಂಕೆ ಸಂರಕ್ಷಣಾ ಧಾಮ ಸರ್ಕಾರ ಸ್ಥಾಪಿಸುವುದೇ?

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :

ಅ) ಗಮನಕ್ಕೆ ಬಂದಿದೆ.

ಆ) ಜಿಂಕೆ ಸಂರಕ್ಷಣಾಧಾಮ, ಸ್ಥಾಪಿಸುವ ಪ್ರಸ್ತಾವನೆ ಈಗ ಸದ್ಯಕ್ಕೆ ಸರ್ಕಾರದ ಮುಂದಿರುವುದಿಲ್ಲ, ಆದರೆ ವನ್ಯ ಪ್ರಾಣಿ ಸಂರಕ್ಷಣಾ ಕಾಯಿದೆ 1972ರ ಪ್ರಕಾರ ಕಳ್ಳ ಬೇಟೆಗಾರರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸಬೇಕಾದ 32ನೇ ಪಟ್ಟಿಯಲ್ಲಿರತಕ್ಕ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಜಮೀನುಗಳಲ್ಲಿಯ ರಸ್ತೆಗಳ ಅತಿಕ್ರಮಣವನ್ನು ತೆಗೆದುಹಾಕುವ ಬಗ್ಗೆ

3607 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗ್ರಾಮಾಂತರ ಪ್ರದೇಶದಲ್ಲಿ ಜಮೀನುಗಳಿಗೆ ಹೋಗುವ ರಸ್ತೆಗಳು ಅತಿಕ್ರಮಣವಾಗಿ ಸಂಚಾರಕ್ಕೆ ನಿರುಪಯುಕ್ತವಾದದ್ದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಅತಿಕ್ರಮ ತೆಗೆದು ಹಾಕಲಿಕ್ಕೆ ವಿಶೇಷ ಸರ್ವೆ ಮಾಡಿಸಲು ಸರಕಾರ ಯೋಚಿಸಿದೆಯೇ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಹೌದು, ಹಲವು ಪ್ರದೇಶಗಳಲ್ಲಿ.

ಆ) ಇಂತಹ ಅತಿಕ್ರಮಣಗಳನ್ನು ಸಕ್ರಮಗೊಳಿಸಲು ಕಾನೂನಿನಲ್ಲಿ ಅವಕಾಶ ವಿರುವುದಿಲ್ಲವಾದ್ದರಿಂದ, ತೆರವುಗೊಳಿಸಲಾಗುವುದು.

ಭೂಸ್ವಾಧೀನ ಕಾನೂನಿನಿಂದ ಬಡವರಿಗೆ ಅನ್ಯಾಯ

3602 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಾಮಾಜಿಕ ಬಳಕೆಗಾಗಿ ಭೂಸ್ವಾಧೀನ ಮಾಡಿಕೊಳ್ಳುವ ಪ್ರಚಲಿತ ಕಾನೂನುಗಳಿಂದ ಭೂಮಿ ಕಳೆದುಕೊಂಡ ರೈತರಿಗೆ ಅನ್ಯಾಯವಾಗುತ್ತಿಲ್ಲವೇ?

ಆ) ಹಾಗಿದ್ದಲ್ಲಿ ಪರಿಹಾರ ಧನ ಕೊಟ್ಟ ನಂತರವೇ ಭೂಸ್ವಾಧೀನ ಮಾಡಲು ಕಾನೂನು ತಿದ್ದುಪಡಿ ಮಾಡಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಖಾಸಗಿ ವರ್ತಕರ ಹತ್ತಿರ ರಸಗೊಬ್ಬರಗಳ ದಾಸ್ತಾನು

3603 - ಶ್ರೀ ಬಾಬುಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ದಿನಾಂಕ 24-7-1991ರಂದು ಖಾಸಗಿ ವರ್ತಕರ ಹತ್ತಿರ ರಸಗೊಬ್ಬರಗಳ ದಾಸ್ತಾನು ಎಷ್ಟಿತ್ತು?

ಆ) ರಾಜ್ಯದಲ್ಲಿರುವ ರಸಗೊಬ್ಬರಗಳ ವ್ಯಾಪಾರಿಗಳ ಹತ್ತಿರ ದಿನಾಂಕ 12-8-91ರಂದು ಇದ್ದ ದಾಸ್ತಾನು ಎಷ್ಟು?

ಇ) ಈ ಮಧ್ಯಂತರ ಅವಧಿಯಲ್ಲಿ ಮಾರಾಟವಾದ ರಸಗೊಬ್ಬರ ಕಳ್ಳ ವ್ಯಾಪಾರದಿಂದ ನಡೆಯುತ್ತದೆಂದು ಗೊತ್ತಾದ ಸರ್ಕಾರ 24-9-91ರಂದೇ ದಾಸ್ತಾನು ಸೀಜ್ ಮಾಡಿ ಕಾಳ ಬಜಾರ್ ನಡೆಯದಂತೆ ಮಾಡಲಿಲ್ಲವೇಕೆ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು):

ಅ) ದಿನಾಂಕ 24-7-91ರಂದು ರಾಜ್ಯದ ಖಾಸಗಿ ರಸಗೊಬ್ಬರಗಳ ಮಾರಾಟಗಾರರ ಬಳಿ 80371 ಟನ್ ರಸಗೊಬ್ಬರಗಳ ದಾಸ್ತಾನು ಇತ್ತು.

ಆ) ದಿನಾಂಕ 24-7-91ರಂದು ಖಾಸಗಿ ರಸಗೊಬ್ಬರಗಳ ಮಾರಾಟಗಾರರ ಹತ್ತಿರ ಚಿಲ್ಲರೆ ದಾಸ್ತಾನು 68339 ಟನ್ ಮತ್ತು ಸಗಟು ದಾಸ್ತಾನು 12032 ಟನ್ ಅಂದರೆ ಒಟ್ಟು 80371 ಟನ್ ದಾಸ್ತಾನನ್ನು ಗುರುತಿಸಲಾಗಿತ್ತು. ಇದರಲ್ಲಿ ಚಿಲ್ಲರೆ ದಾಸ್ತಾನನ್ನು ಹಳೆಯ ದರದಲ್ಲಿ ಮಾರಾಟ ಮಾಡುವ ವ್ಯವಸ್ಥೆ ಮಾಡಲಾಗಿತ್ತು. ಮತ್ತು ದಿನಾಂಕ 12-8-91ರಂದೂ ಸಹ ಮಾರಾಟ ಮುಂದುವರೆದಿತ್ತು. ಆದ್ದರಿಂದ 12-8-91ರಂದು ಇದ್ದ ನಿರ್ಧಿಷ್ಟವಾದ ದಾಸ್ತಾನಿನ ವಿವರ ಲಭ್ಯವಿರುವುದಿಲ್ಲ. ಆದರೆ ಸಗಟು ದಾಸ್ತಾನು 12032 ಟನ್ ಇನ್ನೂ ಮಾರಾಟವಾಗಿರದೆ ದಾಸ್ತಾನಿತ್ತು.

ಇ) ದಿನಾಂಕ 24-7-91ರಂದು ರಸಗೊಬ್ಬರ ಮಾರಾಟಗಾರರಲ್ಲಿದ್ದ ದಾಸ್ತಾನನ್ನು ಗುರುತಿಸಿ ಎಲ್ಲಾ ದಾಸ್ತಾನನ್ನು ಹಳೆಯ ಬೆಲೆಗೆ ಮಾರಾಟ ಮಾಡಲು ವ್ಯವಸ್ತೆ ಮಾಡಲಾಗಿತ್ತು. ಈ ಮಧ್ಯಂತರ ಅವಧಿಯಲ್ಲಿ ರಸಗೊಬ್ಬರಗಳು ಕಾಳಸಂತೆಯಲ್ಲಿ ಮಾರಾಟವಾಗದಂತೆ ವ್ಯವಸ್ಥೆ ಮಾಡಲಾಗಿತ್ತು.

ಕಬ್ಬನ್ ಪಾರ್ಕ್‌ನಲ್ಲಿ ವಾಹನ ಸಂಚಾರ ನಿಷೇಧ

3501 - ಶ್ರೀ ಎಲ್.ಆರ್. ಶಿವರಾಮೇಗೌಡರು (ನಾಗಮಂಗಲ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಕಬ್ಬನ್ ಪಾರ್ಕಿನಲ್ಲಿ ಖಾಸಗಿ ಕಟ್ಟಡ ನಿರ್ಮಾಣ, ಸರ್ಕಾರಿ ಕಟ್ಟಡ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಅನುಮತಿ ನೀಡಿದೆಯೇ?

ಆ) "ಕಬ್ಬನ್ ಪಾರ್ಕ್ " ಪ್ರದೇಶವನ್ನು ಸುಸಜ್ಜಿತವಾಗಿಡಲು ಖಾಸಗಿ ಕಂಪೆನಿಯವರ ಸಹಯೋಗ ಪಡೆಯಲು ಇಲಾಖೆ ಯೋಜಿಸಿದೆಯೇ?

ಇ) ಕಬ್ಬನ್ ಪಾರ್ಕ್‌ನಲ್ಲಿ "ವಾಹನ ಸಂಚಾರ " ನಿಷೇಧಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ.ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಇಲ್ಲ.

ಆ) ಇಲ್ಲ.

ಇ) ಕಬ್ಬನ್ ಪಾರ್ಕಿನ ಬಹುತೇಕ ಪ್ರದೇಶದಲ್ಲಿ ವಾಹನ ಸಂಚಾರ ನಿಷೇಧಿಸಿದೆ. ಗೋಪಾಲ ಗೌಡ ವೃತ್ತದಿಂದ ಸಿದ್ಧಯ್ಯ ವೃತ್ತಕ್ಕೆ, ಕೆ.ಆರ್. ವೃತ್ತದಿಂದ ಸಿದ್ಧಯ್ಯ ವೃತ್ತಕ್ಕೆ ಮತ್ತು ಶೇಷಾದ್ರಿ ಸ್ಮಾರಕ ಸಾರ್ವಜನಿಕ ಗ್ರಂಥಾಲಯ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಿಂದ ಏಕ ಮುಖ ಸಂಚಾರ ಹಾಗೂ ವಿಕ್ಟೋರಿಯ ರಾಣಿ ವೃತ್ತದಿಂದ ಪಾರ್ಕಿನ ಮೇಲ್ಭಾಗಕ್ಕೆ ಮಾತ್ರ ವಾಹನ ಸಂಚಾರಕ್ಕೆ ಅವಕಾಶವಿದೆ.

ಮಂಡ್ಯ ಹಾಗೂ ಬಿಜಾಪುರಗಳಲ್ಲಿ ಕೃಷಿ ಕಾಲೇಜು ಸ್ಥಾಪನೆ

3599 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಮಂಡ್ಯ ಹಾಗೂ ಬಿಜಾಪುರಗಳಲ್ಲಿ ಕೃಷಿ ಕಾಲೇಜು ಸ್ಥಾಪಿಸುವ ಸರ್ಕಾರದ ತೀರ್ಮಾನವನ್ನು ಎಂದು ಕಾರ್ಯರೂಪಕ್ಕೆ ತರಲಾಗುವುದು?

ಆ) ಮೇಲ್ಕಂಡ ಕಾಲೇಜುಗಳಲ್ಲಿ ಒಂದನ್ನು ನಾಗಮಂಗಲ ತಾಲ್ಲೂಕಿನಲ್ಲಿ ಸ್ಥಾಪಿಸಲಾಗುವುದೇ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು) :

ಅ) ಈಗಾಗಲೇ ಕಾರ್ಯರೂಪಕ್ಕೆ ತರಲಾಗಿದೆ. ಬಿಜಾಪುರ ಕೃಷಿ ಕಾಲೇಜು 1990-91ನೇ ಸಾಲಿನಿಂದ ಪ್ರಾರಂಭಗೊಂಡಿದೆ. 1991-92ನೇ ಸಾಲಿಗೆ ಮಂಡ್ಯ ಕಾಲೇಜಿಗೆ ಸರ್ಕಾರದ ಅನುಮತಿ ನೀಡಲಾಗಿದೆ.

ಆ) ಉದ್ಭವಿಸುವುದಿಲ್ಲ.

ಕೊಲ್ಲೂರು ಮುಕಾಂಬಿಕಾ ದೇವಸ್ಥಾನದ ಆಡಳಿತ ಮಂಡಳಿಯ ರದ್ದಿ.

3601 - ಶ್ರೀ ಎಲ್.ಆರ್.ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೇ?

1) ರಾಜ್ಯದ ಪ್ರತಿಷ್ಠಿತ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದ ಆಡಳಿತ ಮಂಡಳಿಯನ್ನು ಸರ್ಕಾರ ರದ್ದುಪಡಿಸಲು ಕಾರಣಗಳೇನು?

2) ಈ ದೇವಸ್ಥಾನದ ವ್ಯವಹಾರಗಳನ್ನು ನಿರ್ವಹಿಸಲು ಧರ್ಮದರ್ಶಿ ಮಂಡಳಿಯ

ರಚನೆಯನ್ನು ಯಾವಾಗ ಮಾಡಲಾಗುವುದು?

ಶ್ರೀ ರಾಜಾ ಅಮರೇಶನಾಯಕ್ (ಧಾರ್ಮಿಕ ದತ್ತಿ ರಾಜ್ಯ ಸಚಿವರು):

1) ದುರಾಡಳಿತ, ದುರ್ನಡತೆ ಹಾಗೂ ಅವ್ಯವಹಾರಗಳ ಕಾರಣಗಳಿಂದ ಆಡಳಿತ ಮಂಡಳಿಯನ್ನು ಧಾರ್ಮಿಕ ದತ್ತಿ ಆಯುಕ್ತರು ಅಮಾನತ್ತುಗೊಳಿಸಿದ್ದಾರೆ.

2)ಈ ಪ್ರಕರಣ ಅಪೀಲು ಪಿಟಿಷನ್ ಸಂಖ್ಯೆ :124:91ಕರ್ನಾಟಕ ನ್ಯಾಯಾಧೀಕರಣದ ಮುಂದೆ ತೀರ್ಮಾನಕ್ಕೆ ಬಾಕಿ ಇದೆ. ತೀರ್ಮಾನ ಬಂದ ನಂತರ ಕ್ರಮ ತೆಗೆದುಕೊಳ್ಳಲಾಗುವುದು.

1990-91ನೇ ಸಾಲಿನಲ್ಲಿ ಅರಣ್ಯದಿಂದ ಬಂದ ಆದಾಯ

3639 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರಕ್ಕೆ 90-91ನೇ ವರ್ಷದಲ್ಲಿ "ಅರಣ್ಯ ಬಾಬ್ತು" ನಿಂದ ಬರಬೇಕಾದ ವಾರ್ಷಿಕ ಆದಾಯವೆಷ್ಟು?

ಆ) ಈ ಬಾಬ್ತಿನಿಂದ ವರ್ಷಾಂತ್ಯದಲ್ಲಿ ಬಂದ ಹಣದ ಮೊತ್ತವೆಷ್ಟು?

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :

ಅ) ಸರ್ಕಾರದ ಪರಿಷ್ಕೃತ ಅಂದಾಜಿನ ಪ್ರಕಾರ 90-91ನೇ ವರ್ಷದಲ್ಲಿ "ಅರಣ್ಯ ಬಾಬ್ತು" ನಿಂದ ಬರಬೇಕಾದ ಆದಾಯ ಈ ಕೆಳಕಂಡಂತೆ ಇರುತ್ತದೆ.

1)	"0406 - ಅರಣ್ಯ ಮತ್ತು ವನ್ಯ ಜೀವನ"	ರೂ.5049-00 (ಲಕ್ಷಗಳಲ್ಲಿ)
2)	"0045 -115-01 - ಅರಣ್ಯಾಭಿವೃದ್ಧಿ ತೆರಿಗೆ"	ರೂ.500-00 (ಲಕ್ಷಗಳಲ್ಲಿ)
3)	"0853 - 2 - ಅರಣ್ಯಗಳಲ್ಲಿರುವ ಗಣಿ ಮತ್ತು ಖನಿಜಗಳಿಂದ"	ರೂ.51-00 (ಲಕ್ಷಗಳಲ್ಲಿ)
	ಒಟ್ಟು ಬರಬೇಕಾದ ಆದಾಯ :	ರೂ.5600-00 (ಲಕ್ಷಗಳು)

ಆ) ಮೇಲ್ಕಂಡ ವಾರ್ಷಿಕ ನಿಗಧಿಯ ಅರಣ್ಯ ಬಾಬ್ತುಗಳಿಂದ 1990-91ನೇ ವರ್ಷದಲ್ಲಿ ಬಂದ ಆದಾಯ ಈ ಕೆಳಕಂಡಂತೆ ಇರುತ್ತದೆ.

1)	"0406 - ಅರಣ್ಯ ಮತ್ತು ವನ್ಯ ಜೀವನ"	ರೂ. 5449-12 (ಲಕ್ಷಗಳು)
2)	"0045 - 115-01 - ಅರಣ್ಯಾಭಿವೃದ್ಧಿ ತೆರಿಗೆ"	ರೂ. 499-73 (ಲಕ್ಷಗಳು)
3)	"0853 - 2 - ಅರಣ್ಯಗಳಲ್ಲಿರುವ ಗಣಿ ಮತ್ತು ಖನಿಜಗಳಿಂದ"	ರೂ. 69-25 (ಲಕ್ಷಗಳು)
	ವರ್ಷದಲ್ಲಿ ಬಂದ ಆದಾಯ :	ರೂ. 6068-10 (ಲಕ್ಷಗಳು)

ಮೂಡಿಗೆರೆ ತಾಲ್ಲೂಕಿನಲ್ಲಿರುವ ಪಶು ಸಂಗೋಪನೆ ಕೇಂದ್ರಗಳ ಸಂಖ್ಯೆ

3622 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಪಶು ಸಂಗೋಪನಾ ಮತ್ತು ಪಶು ವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೂಡಿಗೆರೆ ತಾಲ್ಲೂಕಿನಾದ್ಯಂತ ಇರುವ ಒಟ್ಟು ಪಶುಸಂಗೋಪನಾ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ಈ ಕೇಂದ್ರಗಳಲೆಲ್ಲಾ ಪಶು ವೈದ್ಯರನ್ನು ಭರ್ತಿ ಮಾಡಲಾಗಿದೆಯೇ?

ಇ) ಈ ಕೇಂದ್ರಗಳಲ್ಲಿ ಪಶುವೈದ್ಯರನ್ನು ಭರ್ತಿ ಮಾಡಲಾಗದಿದ್ದರೆ ಅದಕ್ಕೆ ಕಾರಣವೇನು?

ಶ್ರೀ ಬಸವರಾಜ ಪಾಟೀಲ್ (ಪಶು ಸಂಗೋಪನಾ ಮತ್ತು ಪಶು ವೈದ್ಯ ಸೇವಾ ರಾಜ್ಯ ಸಚಿವರು) :

ಅ) ಒಟ್ಟು 14

1) ಪಶು ವೈದ್ಯ ಆಸ್ಪತ್ರೆ	-	1
2) ಪಶು ಚಿಕಿತ್ಸಾಲಯ	-	4
3) ಸಂಚಾರಿ ಪಶು ಚಿಕಿತ್ಸಾಲಯ	-	1
4) ಪ್ರಾಥಮಿಕ ಪಶು ಚಿಕಿತ್ಸಾಲಯ	-	7
5) ಕೃತಕ ಗರ್ಭಧಾರಣಾ ಕೇಂದ್ರ	-	1
ಒಟ್ಟು	:	14

ಆ) ಇವುಗಳಲ್ಲಿ ಪಶುವೈದ್ಯ ಆಸ್ಪತ್ರೆ ಮತ್ತು ಪಶು ಚಿಕಿತ್ಸಾಲಯಗಳಲ್ಲಿ ಮಾತ್ರ ಪಶು ವೈದ್ಯರ ಹುದ್ದೆಗಳಿದ್ದು ಅವನ್ನು ಭರ್ತಿ ಮಾಡಲಾಗಿದೆ. ಸಂಚಾರಿ ಪಶು ಚಿಕಿತ್ಸಾಲಯಕ್ಕೆ ಹುದ್ದೆಯನ್ನು ಸೃಷ್ಟಿಸಬೇಕಾಗಿದೆ.

ಇ) ಸಂಚಾರಿ ಪಶು ಚಿಕಿತ್ಸಾಲಯಕ್ಕೆ ಪಶು ವೈದ್ಯಾಧಿಕಾರಿ ಹುದ್ದೆಯನ್ನು ಸೃಜಿಸುವ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿದೆ.

ಮುಳಬಾಗಿಲು ತಾಲ್ಲೂಕಿನಲ್ಲಿ ರಿಲೀಫ್ ಕಾಮಗಾರಿಗಳ ಪ್ರಾರಂಭ

3526 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಳಬಾಗಿಲು ತಾಲ್ಲೂಕಿನಲ್ಲಿ ಇತ್ತೀಚೆಗೆ ಸಕಾಲದಲ್ಲಿ ಮಳೆ ಬಾರದ ಪ್ರಯುಕ್ತ ಮೂರನೇ ಎರಡು ಭಾಗದಷ್ಟು ಜಮೀನಿನಲ್ಲಿ ಬಿತ್ತನೆಯಾಗಿಲ್ಲವೆಂದು ತಾಲ್ಲೂಕು ತಹಶೀಲ್ದಾರರವರು ಜಿಲ್ಲಾಧಿಕಾರಿಗಳಿಗೆ ವರದಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಕೂಲಿಗಾರರಿಗೆ ಕೆಲಸ ಒದಗಿಸಲು ರಿಲೀಫ್ ಕಾಮಗಾರಿಗಳನ್ನು ಪ್ರಾರಂಭ ಮಾಡಲು ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಮುಳಬಾಗಿಲು ತಾಲ್ಲೂಕಿನಲ್ಲಿ ಹಾಲು ಉತ್ಪಾದಕರ ಸಂಘಗಳ ನೋಂದಾವಣೆ.

3380 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಪಶುಸಂಗೋಪನಾ ಮತ್ತು ಪಶು ವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಳಬಾಗಿಲು ತಾಲ್ಲೂಕಿನಲ್ಲಿ ಹಾಲು ಉತ್ಪಾದಕರ ಸಂಘಗಳಿಗೆ ನೋಂದಾವಣೆ ಮಾಡಿಕೊಳ್ಳಲು ಒಟ್ಟು ಬಾಕಿಯಿರುವ ಅರ್ಜಿಗಳೆಷ್ಟು? ಆ ಊರಿನ ಹೆಸರುಗಳೇನು?

ಆ) ಸುಮಾರು ಒಂದು ವರ್ಷದಿಂದ ನೋಂದಾವಣೆ ಮಾಡದೆ ವಿನಾಕಾರಣಗಳನ್ನು ಕೊಡುತ್ತಾ ಮುಂದಕ್ಕೆ ಹಾಕುತ್ತಿರುವ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸರ್ಕಾರದವರು ಕೂಡಲೇ ಸೂಕ್ತ ಶಿಸ್ತು ಕ್ರಮ ಕೈಗೊಳ್ಳುವರೆ?

ಶ್ರೀ ಬಸವರಾಜ್ ಪಾಟೀಲ್ (ಪಶು ಸಂಗೋಪನಾ, ಪಶು ವೈದ್ಯ ಸೇವಾ ರಾಜ್ಯ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಹಾಲಿನ ಬೆಲೆಯನ್ನು ಹೆಚ್ಚಿಸುವುದರ ಬಗ್ಗೆ

3379 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೋಲಾರ ಬೆಂಗಳೂರು, ತುಮಕೂರು ಮತ್ತು ಇತರೆ ಜಿಲ್ಲೆಗಳ ಹಾಲು ಉತ್ಪಾದಕರಿಂದ ಇತ್ತೀಚೆಗೆ ಜಾನುವಾರು ಮೇವಿನ ಬೆಲೆಗಳು ಜಾಸ್ತಿಯಾಗಿರುವ ಪ್ರಯುಕ್ತ ಹಾಲಿನ ಬೆಲೆಯನ್ನು ಹೆಚ್ಚಿಸಬೇಕೆಂದು ಮನವಿಗಳು ಬಂದಿವೆಯೇ?

ಆ) ಹಾಗಿದ್ದಲ್ಲಿ ಮನವಿಗಳ ಸಾರಾಂಶವೇನು?

ಇ) ಮನವಿಗಳ ಮೇಲೆ ಸರ್ಕಾರದವರು ತೆಗೆದುಕೊಂಡಿರುವ ತೀರ್ಮಾನವೇನು?

ಶ್ರೀ ಬಸವರಾಜ್ ಪಾಟೀಲ್ (ಪಶು ಸಂಗೋಪನಾ ಪಶು ವೈದ್ಯ ಸೇವಾ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಬೇಲಿಮಲ್ಲೂರು ಹತ್ತಿರ ತೋಟಗಾರಿಕಾ ಇಲಾಖೆಯ ಜಮೀನಿನ ವಿಸ್ತೀರ್ಣ

3477 - ಡಾ||ಡಿ.ಬಿ. ಗಂಗಪ್ಪ (ಹೊನ್ನಾಳಿ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊನ್ನಾಳಿ ತಾಲ್ಲೂಕಿನ ಬೇಲಿಮಲ್ಲೂರು ಹತ್ತಿರ ತೋಟಗಾರಿಕಾ ಇಲಾಖೆಗೆ ಸಂಬಂಧಪಟ್ಟ ತೋಟ ಹಾಗೂ ನರ್ಸರಿಗಳಿರುವ ಜಮೀನು ಎಷ್ಟಿದೆ? (ವಿವರವನ್ನು ಒದಗಿಸುವುದು)

ಶ್ರೀ ಎಂ.ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು):

ಅ) ಬೇಲಿಮಲ್ಲೂರು ತೋಟಗಾರಿಕೆ ಕ್ಷೇತ್ರ - 25 ಎಕರೆ
ಹೊನ್ನಾಳಿ ಸಸ್ಯಾಗಾರ (ನರ್ಸರಿ) - 1.20 ಎಕರೆ

ಕೃಷಿ ಇಲಾಖೆಯಲ್ಲಿ ಮುಂಬಡ್ತಿ ನೀಡಲಾದ ವಿವರ

3479 - ಶ್ರೀ ಗೋಪಾಲ ಮುಕುಂದ ಕಾನಡೆ (ಸಿರಸಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷಿ ಇಲಾಖೆಯಲ್ಲಿ ಶೇ.18ರಂತೆ ಜೂನಿಯರ್ ಕ್ಲಾಸಿನಿಂದ ಸೀನಿಯರ್ ಕ್ಲಾಸಿಗೆ ಎಷ್ಟು ಜನರಿಗೆ ಈವರೆಗೆ ಬಡ್ತಿ ನೀಡಲಾಗಿದೆ. (ಹೆಸರು ಹಾಗೂ ವಿವರ ಒದಗಿಸುವುದು)

ಆ) ಅವರಲ್ಲಿ ಎಷ್ಟು ಮಂದಿ ಹರಿಜನರು ಗಿರಿಜನರು ಇದ್ದಾರೆ(ಹೆಸರು ಹಾಗೂ ವಿವರ ನೀಡುವುದು)

ಇ) ಈ ಕುರಿತು ಸರ್ಕಾರದಿಂದ ಕೃಷಿ ಇಲಾಖೆಗೆ ಸುತ್ತೋಲೆ ಏನಾದರೂ ಬಂದಿರುವುದೇ?

ಈ) ಬಂದಿದ್ದಲ್ಲಿ ಈ ಕುರಿತು ಇಲಾಖೆಯಲ್ಲಿ ತೆಗೆದುಕೊಂಡ ಕ್ರಮ ಏನು?

ಉ) ಈ ಇಲಾಖೆಯಲ್ಲಿ ಖಾಲಿ ಇದ್ದ ಹುದ್ದೆಗಳ ಸಂಖ್ಯೆ ಎಷ್ಟು?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು) :

ಅ) ಹಾಲಿ ಇರುವ ನಿಯಮಗಳ ಅನ್ವಯ ಶೇ.18ರಂತೆ ಜೂನಿಯರ್ ಕ್ಲಾಸ್ ನಿಂದ ಸೀನಿಯರ್ ಕ್ಲಾಸ್ ಹುದ್ದೆಗಳಿಗೆ ಬಡ್ತಿ ನೀಡಲು ಅವಕಾಶವಿರುವುದಿಲ್ಲ. ಆಧುದರಿಂದ ಶೇ 18 ರಂತೆ ಜೂನಿಯರ್ ಕ್ಲಾಸ್ ನಿಂದ ಸೀನಿಯರ್ ಕ್ಲಾಸ್‌ಗೆ ಬಡ್ತಿ ನೀಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಹಾಲಿ ಇಲಾಖೆಯಲ್ಲಿ 1972 ಹುದ್ದೆಗಳು ಖಾಲಿ ಇರುತ್ತದೆ.

ಕೇಂದ್ರ ಸರ್ಕಾರದಿಂದ ಮೀನುಗಾರರ ವಸತಿ ಯೋಜನೆಗೆ ಬಂದ ಹಣ

3482 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಮೀನುಗಾರಿಕೆ ಬಂದರು ಮತ್ತು ಒಳನಾಡು ಅಂತರ್ಜಲಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರ ಮೀನುಗಾರಿಕಾ ವಸತಿ ಯೋಜನೆಯನ್ವಯ ರಾಜ್ಯ ಸರ್ಕಾರಕ್ಕೆ 1985-86ನೇ ವರ್ಷದಲ್ಲಿ ಎಷ್ಟು ಹಣ ಕೊಟ್ಟಿರುವರು?

ಆ ಹಣವು ಮೀನುಗಾರರ ವಸತಿಗೆ ಖರ್ಚಾಗದೇ ಇರುವುದು ಸರಿಯೇ?

ಇ) ಹಾಗಾದರೆ ಆ ಹಣವು ಯಾವ ಉದ್ದೇಶಕ್ಕಾಗಿ ಖರ್ಚಾಗಿದೆ ಹಾಗೂ ಅದಕ್ಕೆ ಕಾರಣಗಳೇನು?

ಶ್ರೀ ಎ. ಎಮ್. ಬೆಳ್ಳಿಯಪ್ಪ (ಮೀನುಗಾರಿಕೆ, ಬಂದರು ಮತ್ತು ಒಲನಾಡು ಅಂತರ್ಜಲ ಸಾರಿಗೆ ರಾಜ್ಯ ಮಂತ್ರಿಗಳು) :

ಅ) ಕೇಂದ್ರ ಸರ್ಕಾರ 1985-86ನೇ ಸಾಲಿನಲ್ಲಿ ಮೀನುಗಾರಿಕಾ ವಸತಿ ಯೋಜನೆಯಡಿಯಲ್ಲಿ ಹಣವನ್ನು ಕೊಟ್ಟಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮೀನುಗಾರಿಕಾ ಜಟ್ಟಿಗಳ ಸಂಖ್ಯೆ

3483 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಮೀನುಗಾರಿಕೆ ಬಂದರು ಮತ್ತು ಒಳನಾಡು ಅಂತರ್ಜಲ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಎಷ್ಟು ಮೀನುಗಾರಿಕಾ ಜಟ್ಟಿಗಳಿವೆ?

ಆ) ಜಟ್ಟಿಗಳು ಸಾಕಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದರೆ, ಅವುಗಳನ್ನು ಹೆಚ್ಚು ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ ಹಾಗೂ ಎಲ್ಲೆಲ್ಲಿ ಯಾವಾಗ ಮಾಡಲಾಗುವುದು?

ಶ್ರೀ ಎ.ಎಮ್. ಬೆಳ್ಳಿಯಪ್ಪ (ಮೀನುಗಾರಿಕೆ, ಬಂದರು ಮತ್ತು ಒಳನಾಡು ಅಂತರ್ಜಲ ಸಾರಿಗೆ ರಾಜ್ಯ ಮಂತ್ರಿಗಳು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 4 ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ 4 ಮೀನುಗಾರಿಕೆ ಜಟ್ಟಿಗಳು ಇವೆ.

ಆ) ಬಂದಿದೆ.

ಇ) ಹೆಚ್ಚು ಮಾಡುವ ಉದ್ದೇಶ ಸರ್ಕಾರಕ್ಕೆ ಇರುವುದು ಮತ್ತು ಈ ಕೆಳಗಿನ ಜಾಗಗಳಲ್ಲಿ ಇಳಿದಾಣ ಜಟ್ಟಿಗಳನ್ನು ಕಟ್ಟುವ ಪ್ರಸ್ತಾಪ ಇದೆ. ಇವನ್ನು ಕೇಂದ್ರ ಸರ್ಕಾರದ ಪೂರ್ಣ ಆರ್ಥಿಕ ನೆರವಿನಿಂದ ನಿರ್ಮಿಸಲು ಯೋಚಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆ	*ಉತ್ತರ ಕನ್ನಡ ಜಿಲ್ಲೆ*
1. ಗಂಗೊಳ್ಳಿ	1 ಕೇಣಿ
2. ಕೋಡಿ ಬೆಂಗ್ರೆ ಹಂಗಾರಕಟ್ಟೆ	2. ತೆಂಗಿನ ಗುಂಡಿ
3. ಹೆಜ್ ಮಾಡಿಕೋಡಿ	3. ಅಘನಾಶಿನಿ
	4. ಗಂಗಾವಳಿ
	5. ಅಳಿವೆ ಕೋಡಿ
	6. ವನ್ನಾಳಿ
	7. ಗುಡ್ ಕಾಗಲ್
	8. ಬೆಳಂಬಾರ್
	9. ಮಾಜಾಳಿ

ನೇತ್ರಾವತಿ ಸೇತುವೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿದ ಭೂಮಿ.

3484 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನೇತ್ರಾವತಿ ಸೇತುವೆ ನಿರ್ಮಾಣಕ್ಕಾಗಿ ಸರ್ಕಾರ ಸ್ವಾಧೀನಪಡಿಸಿದ ಭೂಮಿಯ ವಿಸ್ತೀರ್ಣವೆಷ್ಟು?

ಆ) ಸರ್ಕಾರ ಸ್ವಾಧೀನ ಪಡಿಸಿದ ಎಲ್ಲಾ ಭೂಮಿಗೆ ಹಣ ಸಂದಾಯವಾಗಿದೆಯೇ?

ಇ) ಇಲ್ಲದೇ ಇದ್ದಲ್ಲಿ ಹಣ ಸಂದಾಯವಾಗಲು ಬಾಕಿ ಇರುವ ಭೂಮಿ ಎಷ್ಟು? ಬಾಕಿಯಿರಲು ಕಾರಣಗಳೇನು ಹಾಗೂ ಅದನ್ನು ಯಾವಾಗ ಪಾವತಿ ಮಾಡಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ನೇತ್ರಾವತಿ ಸೇತುವೆ ನಿರ್ಮಾಣಕ್ಕೆ ಯಾವುದೇ ಜಮೀನನ್ನು ಸ್ವಾಧೀನ ಪಡಿಸಿಕೊಂಡಿಲ್ಲ. ಆದರೆ ಪ್ರಸ್ತುತ ನೇತ್ರಾವತಿ ಸೇತುವೆ ನಿರ್ಮಾಣದ ಬಳಿ ಸಮೀಪ್ಯಾ ರಸ್ತೆ ನಿರ್ಮಿಸಲು 32 ಎಕರೆ 45 ಸೆಂಟ್ಸ್ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ.

ಆ) ಹೌದು.

ಇ) ಉದ್ಭವಿಸುವುದಿಲ್ಲ.

ಕರ್ನಾಟಕ ಸರ್ಕಾರದ ಭೂದಾಖಲೆಗಳ ಇಲಾಖೆಯಲ್ಲಿಯ ಹಂಗಾಮಿ ಹುದ್ದೆಗಳನ್ನು ಖಾಯಂಗೊಳಿಸುವ ಬಗ್ಗೆ

2910 - ಶ್ರೀ ಎ.ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಸರ್ಕಾರದ ಭೂದಾಖಲೆಗಳ ಇಲಾಖೆಯಲ್ಲಿ ಒಟ್ಟು ಹಂಗಾಮಿ ಹುದ್ದೆಗಳು ಎಷ್ಟು?

ಆ) ಆ ಹುದ್ದೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರು ಖಾಯಂ ನೌಕರರೇ?

ಇ) ಈ ಹಂಗಾಮಿ ಹುದ್ದೆಗಳು ಎರಡು ವರ್ಷಗಳಿಗೊಮ್ಮೆ ಮಂಜೂರಾಗಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಇದರಿಂದ ನೌಕರರಿಗೆ ಅನಾವಶ್ಯಕ ಮಾನಸಿಕ ತೊಂದರೆ ಉಂಟಾಗುವುದಿಲ್ಲವೇ?

ಉ) ಈ ಹಂಗಾಮಿ ಹುದ್ದೆಗಳು 1-3-91 ರಿಂದ ಮಂಜೂರಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಹಾಗಿದ್ದಲ್ಲಿ ಆ ಹುದ್ದೆಗಳನ್ನು ಕೂಡಲೇ ಖಾಯಂಗೊಳಿಸಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) 2878.

ಆ) ಇಲ್ಲ.

ಇ) ಹೌದು.

ಈ) ಇಲ್ಲ.

ಉ) ಮಂಜೂರಾಗಿದೆ.

ಊ) ಈ ಹುದ್ದೆಗಳನ್ನು ಖಾಯಂಗೊಳಿಸಲು ಈಗಿನ ಆದೇಶಗಳ ನಿಯಮಗಳ ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಸ್ಮಶಾನಕ್ಕೆ ಭೂಮಿಯನ್ನು ಕಾದಿರಿಸುವುದು

3548 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಹೆಚ್ಚಿನ ಗ್ರಾಮಗಳಲ್ಲಿ ಸ್ಮಶಾನದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದರಿಂದ ಬಡವರು ಕಷ್ಟನಷ್ಟಗಳನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇವನ್ನು ಪರಿಹರಿಸಲು ಎಲ್ಲಾ ಗ್ರಾಮಗಳಲ್ಲಿ ಜನರಿಗೆ ಅನುಕೂಲವಾಗುವಂತೆ ಆದಷ್ಟು ಹೆಚ್ಚಿಗೆ ಸ್ಮಶಾನಗಳಿಗೆ ಭೂಮಿಯನ್ನು ಕಾದಿರಿಸಲು ಸೂಕ್ತ ಕ್ರಮ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಹೌದು.

ಆ) ಹೌದು.

ಇ) ಈ ಬಗ್ಗೆ ಸರ್ಕಾರವು ಸುತ್ತೋಲೆ ಮುಖಾಂತರ ಎಲ್ಲಾ ವಿಭಾಗಾಧಿಕಾರಿಗಳಿಗೆ ಸೂಕ್ತ ತಿಳುವಳಿಕೆ ನೀಡಿದೆ.

ಬೆಂಗಳೂರಿನಲ್ಲಿ ಭೂ ಪರಿವರ್ತನೆಯ ಜಮೀನಿನ ವಿಸ್ತೀರ್ಣ

3485 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೃಷಿಯೇತರ ಉದ್ದೇಶಕ್ಕಾಗಿ ಇಲ್ಲಿಯವರೆಗೂ ಎಷ್ಟು ಎಕರೆ ಜಮೀನನ್ನು ಪರಿವರ್ತಿಸಲಾಗಿದೆ?

ಆ) ಈ ಭೂ ಪರಿವರ್ತನೆಯ ಬಗ್ಗೆ ಸಾರ್ವಜನಿಕರಿಂದ ಸಾಕಷ್ಟು ಆಕ್ಷೇಪಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇ) ಈ ಭೂ ಪರಿವರ್ತನೆಯಿಂದ ಸರ್ಕಾರಕ್ಕೆ ಬಂದಿರುವ ಹಣವೆಷ್ಟು?

ಈ) ಈ ಭೂ ಪರಿವರ್ತನೆಯ ಪ್ರಕರಣಗಳಲ್ಲಿ ವಿವಾದಗೊಳಪಟ್ಟಿರುವ ಅಧಿಕಾರಿಗಳು ಎಷ್ಟು?

ಉ) ಸರ್ಕಾರ ಅವರ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) $1,273.32\frac{1}{2}$ ಎಕರೆಗಳು.

ಆ) ಕೆಲವು ದೂರುಗಳು ಸ್ವೀಕೃತವಾಗಿವೆ.

ಇ) ರೂ. 2,37,04,696-00.

ಈ) ಒಂದು.

ಉ) ಇವರ ವಿರುದ್ಧ ಸೂಕ್ತ ಶಿಸ್ತಿನ ಕ್ರಮವನ್ನು ಜರುಗಿಸಲಾಗಿದೆ ಮತ್ತು ಪರಿವರ್ತನಾ ಪ್ರಕರಣಗಳನ್ನು ವಿಭಾಗಾಧಿಕಾರಿಗಳು ಪುನರ್ ಪರಿಶೀಲಿಸಿರುತ್ತಾರೆ.

ಕೌಟುಂಬಿಕ ಆಸ್ತಿಯ ವರ್ಗಾವಣೆಯ ಮೇಲಿನ ಮುದ್ರಾಂಕ ಶುಲ್ಕದ ಬಗ್ಗೆ.

3648 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಟುಂಬದ ಆಸ್ತಿಯನ್ನು ವಿಭಾಗ ಮಾಡಿಕೊಂಡಾಗ ಮತ್ತು ಸೆಟಲ್ ಮೆಂಟ್ ಡೀಡ್ ಮಾಡಿದಾಗ ಮಾರುಕಟ್ಟೆ ಬೆಲೆಯಲ್ಲಿ ಮುದ್ರಾಂಕ ಶುಲ್ಕ ತೆರಬೇಕಾಗಿರುವುದರಿಂದ ಬಡಜನತೆಗೆ ಹೊರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕುಟುಂಬದ ಆಸ್ತಿ ವಿಭಾಗ ಮಾಡಿಕೊಂಡಾಗ ಮತ್ತು ಸೆಟಲ್ ಮೆಂಟ್ ಡೀಡಿಗೆ ಮುದ್ರಾಂಕ ಶುಲ್ಕ ಹಾಕಿದ ಉದ್ದೇಶವೇನು?

ಇ) ಈಗಿನ ದರವನ್ನು 1991ರ ಏಪ್ರಿಲ್ ಗಿಂತ ಮೊದಲಿನ ದರಕ್ಕೆ ಇಳಿಸುವ ಬಗ್ಗೆ ಸರ್ಕಾರ ಪರಿಶೀಲಿಸುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಹೌದು.

ಆ) ಸರ್ಕಾರದ ಆದಾಯ ಹೆಚ್ಚಿಸಲು.

ಇ) ಪರಿಶೀಲಿಸಲಾಗುವುದು.

ಕೃಷಿ ವಿಶ್ವವಿದ್ಯಾನಿಲಯದಲ್ಲಿ ರೋಸ್ಟರ್ ಪದ್ಧತಿಯ ಬಡ್ತಿ

3561 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ವಿಶ್ವವಿದ್ಯಾನಿಲಯದಲ್ಲಿ ಖಾಲಿ ಹುದ್ದೆ ಭರ್ತಿ ಮಾಡುವಾಗ ಹಾಗೂ ಬಡ್ತಿ ಕೊಡುವಾಗ ಎಲ್ಲಾ ಕೇಡರ್‌ಗಳಲ್ಲಿ ರೋಸ್ಟರ್ ಸಿಸ್ಟಮ್(ನಿಯಮ) ಅನುಸರಿಸಲಾಗಿದೆಯೇ?

ಆ) ಕೆಲವು ಹುದ್ದೆಗಳಿಗೆ ಬಡ್ತಿ ಕೊಡುವಾಗ ರೋಸ್ಟರ್ ಸಿಸ್ಟಮ್ ಅನುಸರಿಸದೆ ಹರಿಜನರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು) :

ಅ) ರಾಜ್ಯದಲ್ಲಿರುವ ಎರಡೂ ಕೃಷಿ ವಿಶ್ವ ವಿದ್ಯಾನಿಲಯಗಳಲ್ಲಿ ಮುಂಬಡ್ತಿ ಕೊಡುವಾಗ ರೋಸ್ಟರ್ ನಿಯಮವನ್ನು ಅನುಸರಿಸಲಾಗಿದೆ. ಆದರೆ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಾಗ ಎರಡು ವಿಶ್ವ ವಿದ್ಯಾನಿಲಯಗಳಲ್ಲಿ ಮೀಸಲಾತಿ ನಿಯಮವನ್ನು ಕೆಲವು ಸಂದರ್ಭಗಳಲ್ಲಿ ಪಾಲಿಸದೆ ಇದ್ದದು ಸರ್ಕಾರದ ಗಮನಕ್ಕೆ ಬಂದಿದ್ದು, ಅದರ ಬಗ್ಗೆ ವಿಚಾರಣೆಗಳು ನಡೆಯುತ್ತಿದ್ದು ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಆ) ಇಲ್ಲ.

ಮೂಡಿಗೆರೆ ತಾಲ್ಲೂಕಿನಲ್ಲಿ ಆನೆಗಳ ಹಾವಳಿಯಿಂದ ಬೆಳೆಗಳ ನಷ್ಟ

3623 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಈ ವರ್ಷ ಮೂಡಿಗೆರೆ ತಾಲ್ಲೂಕಿನಲ್ಲಿ ಆನೆಗಳ ಹಾವಳಿಗಳಿಂದ ನಷ್ಟವಾದ ಕೃಷಿ ಬೆಳೆಯ ಮೊತ್ತವೆಷ್ಟು?

ಆ) ಸರ್ಕಾರ ಇದುವರೆಗೂ ಬಿಡುಗಡೆ ಮಾಡಿದ ಪರಿಹಾರ ಮೊತ್ತ ಎಷ್ಟು? ಇನ್ನೂ ಎಷ್ಟು ಹಣ ಬೇಕಾಗುತ್ತದೆ?

ಇ) ಯಾವ ಅಳತೆಗೋಲಿನಿಂದ ಪರಿಹಾರ ಹಣ ನಿಗಧಿಪಡಿಸಲಾಗಿದೆ?

ಶ್ರೀ ಇ.ಟಿ.ಶಂಭುನಾಥ್ (ಅರಣ್ಯ ರಾಜ್ಯ ಸಚಿವರು):

ಅ) ರೂ. 77,400-00

ಆ) ರೂ. 15,840-00 ಬಿಡುಗಡೆ ಮಾಡಿದ ಮೊತ್ತ.

ರೂ. 44,510-00 ಬೇಕಾಗುವ ಹಣ

ಇ) ವಲಯ ಅರಣ್ಯಾಧಿಕಾರಿಗಳು ಸ್ವತಃ ನಷ್ಟಕ್ಕೊಳಗಾದ ಜಮೀನನ್ನು ಪರಿಶೀಲನೆ ಮಾಡಿ ಭೂ ಒಡೆಯ ಮತ್ತು ಪಂಚರ ಸಮಕ್ಷಮ ಮಹಜರು ಮಾಡಿ ಫಸಲು ನಷ್ಟವನ್ನು ಅಂದಾಜು ಮಾಡಿ ಪರಿಹಾರ ಮೊತ್ತವನ್ನು ಸೂಚಿಸುವರು. ಇವರ ವರದಿಯ ಆಧಾರದ ಮೇಲೆ ಪರಿಹಾರ ಧನವನ್ನು ನಿಗಧಿಪಡಿಸಲಾಗುವುದು.

ಕಳಪೆ ಹತ್ತಿ ಬೀಜ ರೈತರಿಗೆ ಸರಬರಾಜು ಆಗಿರುವುದರ ಬಗ್ಗೆ

3530 - ಶ್ರೀ ಎನ್.ಜಿ. ನಾಯಕ್ (ಮೊಳಕಾಲ್ಮೂರು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ವರ್ಷ ಕರ್ನಾಟಕ ಬೀಜ ನಿಗಮದಿಂದ ರೈತರಿಗೆ ಒದಗಿಸಿರುವ ಹತ್ತಿ ಬೀಜ ಕಳಪೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಕಳಪೆ ಬೀಜಗಳನ್ನು ಮಾರಾಟ ಮಾಡಿರುವವರ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು):

ಅ) ಯಾವುದೇ ದೂರು ಬಂದಿರುವುದಿಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕೃಷಿ ಉತ್ಪಾದನಾ ವಸ್ತುಗಳ ಬೆಲೆ ನಿಗಧಿ ಮಾಡಲು ಅನುಸರಿಸಿದ ವಿಧಾನ

3531 - ಶ್ರೀ ಎನ್.ಜಿ.ನಾಯಕ್ (ಮೊಳಕಾಲ್ಮೂರು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷಿ ಇಲಾಖೆ ಇದುವರೆಗೂ ಕೃಷಿ ವಸ್ತುಗಳ ಉತ್ಪಾದನಾ ಬೆಲೆ ನಿಗಧಿ ಮಾಡಲು ಅನುಸರಿಸಿದ ವಿಧಾನಗಳೇನು?

ಆ) ಕೇಂದ್ರ ಸರ್ಕಾರ ಇತ್ತೀಚೆಗೆ ಮಾಡುತ್ತಿರುವ ಸುಧಾರಣೆಗಳ ಬಗ್ಗೆ ರಾಜ್ಯ ಸರ್ಕಾರವು ಇದುವರೆಗೂ ಕಾರ್ಯೋನ್ಮುಖವಾಗಿದೆಯೇ?

ಇ) ರಾಜ್ಯ ಸರ್ಕಾರವು ಹತ್ತಿ ಬೀಜದ ಬೆಲೆ ಏರಿಕೆ ಬಗ್ಗೆ ಏನಾದರೂ ಆಲೋಚನೆ ಮಾಡಿದೆಯೇ?

ಈ) ಹಾಗಿದ್ದಲ್ಲಿ ಹತ್ತಿ ಬೀಜದ ಬೆಲೆಯನ್ನು ಎಷ್ಟೆಂದು ನಿಗಧಿ ಮಾಡಿದೆ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು) :

ಅ) ಕೃಷಿ ನಿರ್ವಹಣೆ ವಿಭಾಗದಿಂದ ಕೃಷಿ ಉತ್ಪನ್ನಗಳ ಉತ್ಪಾದನಾ ಬೆಲೆಯನ್ನು ನಿಗಧಿ ಮಾಡಲು ಅಧ್ಯಯನವನ್ನು ತೆಗೆದುಕೊಳ್ಳಲಾಗುತ್ತಿದೆ. ಪ್ರತಿ ಅಧ್ಯಯನಕ್ಕೆ ರಾಜ್ಯದ ಎಲ್ಲಾ ಜಿಲ್ಲೆಗಳನ್ನು 10 ಕೃಷಿ ವಲಯಗಳಲ್ಲಿ ವಿಂಗಡಿಸಿ ಸುಮಾರು 68 ಆಯ್ದ ಕೇಂದ್ರಗಳಲ್ಲಿ ಈ ಅಧ್ಯಯನವನ್ನು ರೈತರ ತಾಕುಗಳಲ್ಲಿ ತೆಗೆದುಕೊಳ್ಳಲಾಗುತ್ತಿದೆ. ಇದರ ಸಲುವಾಗಿ ಪ್ರತಿ ಕೇಂದ್ರದಲ್ಲಿ 40 ಹಿಡುವಳಿದಾರರನ್ನು ವೈಜ್ಞಾನಿಕವಾಗಿ ಆಯ್ಕೆ ಮಾಡಲಾಗುತ್ತದೆ. ಹೀಗೆ ಆಯ್ಕೆ ಮಾಡಿದ ರೈತರು ಪ್ರತಿ ಬೆಳೆಗೆ ಮಾಡಿದ ವೆಚ್ಚದ ಮಾಹಿತಿಯನ್ನು ಸತತವಾಗಿ ಮೂರು ವರ್ಷಗಳ ಕಾಲ ಸಂಗ್ರಹಿಸಿ ಕ್ರೋಢೀಕರಿಸಲಾಗುವುದು. ಮಾಹಿತಿ ಸಂಗ್ರಹಣೆಯನ್ನು ತರಬೇತಿ ನೀಡಿದ ಕ್ಷೇತ್ರ ಸಹಾಯಕರುಗಳ ಮೂಲಕ ಮಾಡಲಾಗುತ್ತಿದ್ದು ಇದನ್ನು ಇಲಾಖೆಯ ಅಧಿಕಾರಿಗಳು ಕ್ರೋಢೀಕರಿಸಿ ವಿಶ್ಲೇಕ್ಷಿಸುತ್ತಾರೆ. ರೈತರಿಗೆ ತಗಲುವ ಪ್ರತಿಯೊಂದು ವೆಚ್ಚಗಳ ಮಾಹಿತಿಯನ್ನು ಸಂಗ್ರಹಿಸಲಾಗುವುದು. ಅಂದರೆ ಬದಲಾಗುವ ವೆಚ್ಚಗಳಾದ ಬಿತ್ತನೆ ಬೀಜ, ಸಸ್ಯ ಸಂರಕ್ಷಣೆ, ರಸಗೊಬ್ಬರಗಳು, ದುರಸ್ತಿ ವೆಚ್ಚ, ಮಾನವ ದುಡಿಮೆ ಎತ್ತುಗಳ ದುಡಿಮೆ, ಕೊಟ್ಟಿಗೆ ಗೊಬ್ಬರ, ನೀರಾವರಿ ವೆಚ್ಚ ಮತ್ತು ಇತರೆ ವೆಚ್ಚಗಳನ್ನು ಮತ್ತು ಸ್ಥಿರ ವೆಚ್ಚಗಳಾದ ಉಪಕರಣಗಳ ಮೇಲಿನ ಬಂಡವಾಳದ ಬಡ್ಡಿ, ಭೂ ಕಂದಾಯ ವಿವಿಧ ಖರ್ಚುಗಳ ಮೇಲಿನ ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಈ ರೀತಿ ಸಂಗ್ರಹಿಸಿದ ಮಾಹಿತಿಯನ್ನು ವಲಯವಾರು ಬೆಳೆವಾರು ಕ್ರೋಢೀಕರಿಸಿ, ವಿಶ್ಲೇಶಿಸಿ ಪ್ರತಿ ಕ್ವಿಂಟಾಲ್ ಉತ್ಪಾದನಾ ಬೆಲೆಯನ್ನು ಕಂಡು ಹಿಡಿಯಲಾಗುವುದು.

ಆ) ಹೌದು, ಕೃಷಿಗೆ ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ಪರಿಣಿತರು ಪ್ರಗತಿಪರ ರೈತರು ಹಾಗೂ ಶಾಸಕರನ್ನು ಒಳಗೊಂಡ ಸಮಿತಿಯನ್ನು ಸರ್ಕಾರ ರಚಿಸಿದೆ.

ಇ) ಪ್ರಸಕ್ತ ಸಾಲಿನಲ್ಲಿ ತೆಗೆದುಕೊಂಡಿರುವ ಹತ್ತಿ ಬೀಜೋತ್ಪಾದನೆಯಿಂದ ಬರುವ ಬೀಜಗಳ ಖರೀದಿಸುವ ಬೆಲೆಯನ್ನು ಆಯಾ ಉತ್ಪಾದನಾ ಸಂಸ್ಥೆಗಳೇ ಬೀಜೋತ್ಪಾದನಾ ವೆಚ್ಚ ಮತ್ತು ಹೊರ ರಾಜ್ಯಗಳಲ್ಲಿ ನಿಗಧಿ ಪಡಿಸಿರುವ ಹತ್ತಿ ಬೀಜಗಳ ಬೆಲೆ ಮುಂತಾದವುಗಳನ್ನು ಗಣನೆಗೆ ತೆಗೆದುಕೊಂಡು ನಿರ್ಧರಿಸುತ್ತವೆ.

ಈ) 1990-91ನೇ ಸಾಲಿನಲ್ಲಿ ಉತ್ಪಾದಿಸಿದ ಸಂಕರ ಹತ್ತಿ ಪ್ರಮಾಣಿತ ಬೀಜದ ಖರೀದಿ ದರವನ್ನು ಕರ್ನಾಟಕ ರಾಜ್ಯ ಬೀಜ ನಿಗಮವು ಕ್ವಿಂಟಾಲ್ ಗೆ 13,500 ರೂ.ಗಳೆಂದು ನಿಗಧಿಪಡಿಸಿದೆ.

ಅರಣ್ಯ ಇಲಾಖೆಯವರ ಪ್ಲಾಂಟೇಷನ್ ವೆಚ್ಚ

3488 - ಶ್ರೀ ಎಸ್.ಜಿ. ನಾಯ್ಕ (ಮೊಳಕಾಲ್ಮೂರು) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ಪ್ಲಾಂಟೇಶನ್ ಗಳನ್ನು ಮಾಡಲಾಗಿರುವುದು? (ಜಿಲ್ಲಾವಾರು ವಿವರಗಳು)

ಆ) ಈ ಪ್ಲಾಂಟೇಷನ್ನುಗಳಿಗೆ ರಾಜ್ಯದಲ್ಲಿ ಎಷ್ಟು ಹಣ ಖರ್ಚಾಗಿದೆ ? (ಜಿಲ್ಲಾವಾರು ವಿವರ ಮಾಹಿತಿ ಕೊಡಿ)

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು):

ಅ) ರಾಜ್ಯದಲ್ಲಿ 1991-92ರ ಸಾಲಿನಲ್ಲಿ ಆಗಸ್ಟ್ 1991ರವರೆಗೆ 27845.490 ಹೆಕ್ಟೇರ್ ಪ್ರದೇಶದಲ್ಲಿ ಪ್ಲಾಂಟೇಶನ್‌ಗಳನ್ನು ಮಾಡಿರುತ್ತವೆ.

ಜಿಲ್ಲೆಯ ಹೆಸರು	*ಪ್ಲಾಂಟೇಶನ್‌ಗಳ ವಿಸ್ತಾರ (ಹೆಕ್ಟೇರುಗಳಲ್ಲಿ)*
1. ಬೆಂಗಳೂರು ಗ್ರಾಮೀಣ	993.000
2. ಬೆಂಗಳೂರು ನಗರ	294.800
3. ಬೆಳಗಾಂ	1061.500
4. ಬಳ್ಳಾರಿ	887.000
5. ಬೀದರ್	527.000
6. ಬಿಜಾಪುರ್	941.000
7. ಚಿಕ್ಕಮಗಳೂರು	1205.350
8. ಚಿತ್ರದುರ್ಗ	1609.000
9. ದಕ್ಷಿಣ ಕನ್ನಡ	1619.500
10. ಧಾರವಾಡ	2535.500
11. ಗುಲ್ಬರ್ಗಾ	1208.000
12. ಹಾಸನ	865.000
13. ಕೊಡಗು	499.000
14. ಕೋಲಾರ	1455.430

16. ಮೈಸೂರು	1080.250
17. ರಾಯಚೂರು	813.200
18. ಶಿವಮೊಗ್ಗ	2164.500
19. ತುಮಕೂರು	978.750
20. ಉತ್ತರಕನ್ನಡ	6469.710
ಒಟ್ಟು	27845.490

ಆ) ರಾಜ್ಯದಲ್ಲಿ 1991-92ನೇ ಸಾಲಿನಲ್ಲಿ ಆಗಸ್ಟ್ 91ರ ವರೆಗೆ ಪ್ಲಾಂಟೇಷನ್ ಕೆಲಸಗಳಿಗೆ ಈ ಕೆಳಕಂಡಂತೆ ಹಣವನ್ನು ಖರ್ಚು ಮಾಡಿರುತ್ತದೆ.

ಜಿಲ್ಲೆಯ ಹೆಸರು	*ಖರ್ಚುಮಾಡಲಾದ ಹಣ ರೂ, (ಲಕ್ಷಗಳಲ್ಲಿ)*
1. ಬೆಂಗಳೂರು ಗ್ರಾಮಾಂತರ	9.172
2. ಬೆಂಗಳೂರು ನಗರ	17.266
3. ಬೆಳಗಾಂ ಜಿಲ್ಲೆ	29.939
4. ಬಳ್ಳಾರಿ	27.388
5. ಬೀದರ್	4.987
6. ಬಿಜಾಪುರ	20.661
7. ಚಿಕ್ಕಮಗಳೂರು	24.927
8. ಚಿತ್ರದುರ್ಗ	57.056
9. ಧಾರವಾಡ	6.314
10. ಗುಲ್ಬರ್ಗಾ	34.996
11. ಹಾಸನ	28.627
12. ಕೊಡಗು	15.624
13. ಕೋಲಾರ	20.788
14. ಮಂಡ್ಯ	21.592
15. ಮೈಸೂರು	25.390
16. ರಾಯಚೂರು	19.872
17. ಶಿವಮೊಗ್ಗ	13.545
18. ತುಮಕೂರು	23.800
19. ಉತ್ತರ ಕನ್ನಡ	21.755
ಒಟ್ಟು	430.358

ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ.

3492 - ಶ್ರೀ ಪಿ. ಬಸವರಾಜ್ (ಬಹಾದ್ದೂರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ರೈತರು ಮುಖ್ಯವಾಗಿ ಯಾವ ಯಾವ ಬೆಳೆಗಳನ್ನು ಬೆಳೆಯುತ್ತಿದ್ದಾರೆ. (ಶೇಕಡಾವಾರು ಪ್ರಮಾಣದಲ್ಲಿ ತಿಳಿಸುವುದು)

ಆ) ಇವುಗಳಲ್ಲಿ ಯಾವ ಯಾವ ಬೆಳೆಗಳಿಗೆ ರಾಜ್ಯ ಸರಕಾರವು ಬೆಂಬಲ

ಗೊಳಿಸುವ ಬೆಲೆಯ ವಿವರಗಳನ್ನು ಸಂಪೂರ್ಣ ತಿಳಿಸುವುದು)

ಇ) *ಈ ರೀತಿ ಬೆಂಬಲ ಬೆಲೆಯನ್ನು ಪ್ರಕಟಿಸುತ್ತಿದ್ದಲ್ಲಿ ಅದನ್ನು ಯಾವ ಆಧಾರದ ಮೇಲೆ ಪ್ರಕಟಿಸಲಾಗುತ್ತದೆ (ವಿವರ ತಿಳಿಸುವುದು)*

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು)

ಅ) ಅನುಬಂಧದಲ್ಲಿ ನೀಡಲಾಗಿದೆ.

ಆ) ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಗಳನ್ನು ನಿಗದಿ ಪಡಿಸಿ ಪ್ರಕಟಿಸುವುದು ಕೇಂದ್ರ ಸರ್ಕಾರದ ಕಾರ್ಯ ನೀತಿಗೆ ಒಳಪಟ್ಟಿರುತ್ತದೆ. ಆದರೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಬೆಂಬಲ ಬೆಲೆಗಳನ್ನು ಶಿಫಾರಸ್ಸು ಮಾಡುತ್ತಿದೆಯಷ್ಟೇ.

1991-92ನೇ ಮುಂಗಾರು ಹಂಗಾಮಿಗೆ ಕೇಂದ್ರ ಸರ್ಕಾರವು ನಿಗದಿ ಪಡಿಸಿರುವ ಬೆಂಬಲ ಬೆಲೆಗಳನ್ನು ನೀರಿಕ್ಷಿಸಲಾಗಿದೆ.

ಇ) ಕೃಷಿ ವೆಚ್ಚ ಮತ್ತು ಬೆಲೆ ಆಯೋಗ ಹಾಗೂ ರಾಜ್ಯ ಸರಕಾರಗಳ ಶಿಫಾರಸ್ಸಿನ ಆದಾರದ ಮೇಲೆ ಬೆಂಬಲ ಬೆಲೆಯನ್ನು ಕೇಂದ್ರ ಸರಕಾರ ನಿಗದಿ ಪಡಿಸುತ್ತದೆ.

ಅನುಬಂಧ

ರಾಜ್ಯದಲ್ಲಿ ರೈತರು ಬೆಳೆಯುತ್ತಿರುವ ಮುಖ್ಯವಾದ ಬೆಳೆಗಳು ಮತ್ತು ಒಟ್ಟು ವಿಸ್ತೀರ್ಣದ ಶೇಕಡವಾರು (1988-89)

ಕ್ರಮ ಸಂಖ್ಯೆ	ಬೆಳೆಯಹೆಸರು	ಶೇಕಡವಾರು
	<u>ಏಕದಳ ಧಾನ್ಯಗಳು</u>	
1	ಭತ್ತ	11.74
2	ಜೋಳ	19.97
3	ರಾಗಿ	10.91
4	ಮುಸುಕಿನ ಜೋಳ	2.42
5	ಸಜ್ಜೆ	4.40
6	ಗೋಧಿ	2.26
7	ತೃಣ ಧಾನ್ಯಗಳು	2.06
	ಮೊತ್ತ	53.76
	<u>ದ್ವಿದಳ ಧಾನ್ಯಗಳು</u>	
1	ತೊಗರಿ	4.71
2	ಕಡಲೆ	1.78
3	ಹುರುಳಿ	3.75
4	ಉದ್ದು	0.70
5	ಹೆಸರು	2.28
6	ಅಲಸಂದೆ	1.28
7	ಅವರೆ	0.82
	ಮೊತ್ತ	15.42

1	ಶೇಂಗಾ	12.20
2	ಎಳ್ಳು	1.89
3	ಸೂರ್ಯಕಾಂತಿ	4.65
4	ಹರಳು	0.26
5	ಹುಚ್ಚೆಳ್ಳು	0.51
6	ಸಾಸುವೆ	0.04
7	ಸೋಯ ಅವರೆ	0.09
8	ಕುಸಬೆ	1.84
9	ಅಗಸೆ	0.38
	ಮೊತ್ತ	21.86
	ವಾಣಿಜ್ಯ ಬೆಳೆಗಳು	
1	ಹತ್ತಿ	6.20
2	ಕಬ್ಬು	2.27
3	ತಂಬಾಕು	0.49
	ಮೊತ್ತ	8.96
	ಒಟ್ಟು ಮೊತ್ತ	100.00

೨೦, ೬೧೨

ಬ್ರಹ್ಮಾವರದಲ್ಲಿ ಕೃಷಿ ಕಾಲೇಜು ಸ್ಥಾಪನೆ.

3525 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ಯಾವ ಜಿಲ್ಲೆಗಳಲ್ಲಿ ಕೃಷಿ ಕಾಲೇಜುಗಳು ಇರುತ್ತವೆ? (ಸ್ಥಳದ ಹೆಸರು ತಿಳಿಸುವುದು)

ಆ) ದಕ್ಷಿಣ ಕನ್ನಡದ ಬ್ರಹ್ಮಾವರದಲ್ಲಿ ಕೃಷಿ ಕಾಲೇಜು ಸ್ಥಾಪಿಸಿ, ಕರಾವಳಿ ಪ್ರದೇಶದಲ್ಲಿ ವಿಪುಲ ಸಂಶೋದನೆ ಕೃಷಿ ಶಿಕ್ಷಣ ಮತ್ತು ಕೃಷಿ ಅಭಿವೃದ್ಧಿ ಮೊದಲು ಸರ್ಕಾರ ಉದ್ದೇಶಿಸಿರುವುದೇ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು):

ಅ) ರಾಜ್ಯದಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಕೃಷಿ ಕಾಲೇಜುಗಳು ಇರುತ್ತವೆ:

1) ಬೆಂಗಳೂರು ಜಿಲ್ಲೆಯ ಜಿ.ಕೆ.ವಿ.ಕೆ. ಬೆಂಗಳೂರು.

2) ಶಿವಮೊಗ್ಗ ಜಿಲ್ಲೆಯ ನವಿಲೆ.

3) ಮಂಡ್ಯ ಜಿಲ್ಲೆಯ ಮಂಡ್ಯ.

4) ಧಾರವಾಡ ಜಿಲ್ಲೆಯ ಧಾರವಾಡ.

5) ರಾಯಚೂರು ಜಿಲ್ಲೆಯ ರಾಯಚೂರು ಮತ್ತು

6) ಬಿಜಾಪುರ ಜಿಲ್ಲೆಯ ಬಿಜಾಪುರ.

ಆ) ದಕ್ಷಿಣ ಕನ್ನಡದ ಬ್ರಹ್ಮಾವರದಲ್ಲಿ ಕೃಷಿ ಕಾಲೇಜು ಸ್ಥಾಪಿಸುವ ಉದ್ದೇಶವು ಸಧ್ಯಕ್ಕೆ ಸರ್ಕಾರಕ್ಕೆ ಇರುವುದಿಲ್ಲ.

ಭೂಮಾಪನ ಇಲಾಖೆಯಲ್ಲಿ ನಕಾಶೆ ಯಂತ್ರದ ಬಗ್ಗೆ.

3493- ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡ ದೇವನಕೋಟೆ) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಭೂಮಾಪನ ಇಲಾಖೆಗೆ ನಕಾಶೆ ಯಂತ್ರವನ್ನು ಹೊಸದಾಗಿ ನೀಡಲಾಗಿರುವುದೇ.

ಆ) ಭೂಮಾಪನ ಇಲಾಖೆಯಲ್ಲಿ ಗ್ರಾಮದ ನಕಾಶೆಗಳು ಸಿಕ್ಕುತ್ತವೆಯೇ?

ಇ) ಭೂಮಾಪನ ಇಲಾಖೆಯಲ್ಲಿ ರೈತರಿಗೆ ನಕಾಶೆಗಳನ್ನು ನೀಡಲಾಗುತ್ತಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).

ಅ) ಹೌದು.

ಆ) ಹೌದು.

ಇ) ಹೌದು.

ಭೂಮಾಪನ ಇಲಾಖೆಗೆ ವಾಹನ.

3497 - ಶ್ರೀ ಎಂ.ವಿ. ವೆಂಕಟೇಶ (ಹೆಗ್ಗಡ ದೇವನ ಕೊಟೆ) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭೂ ಮಾಪನ ಇಲಾಖೆಯ ಸಹಾಯಕ ನಿರ್ದೇಶಕರಿಗೆ ವಾಹನ ಅವಶ್ಯಕತೆ ಇಲ್ಲವೆ.

ಆ) ಭೂಮಾಪನ ಇಲಾಖೆಯ ಉಪ-ನಿರ್ದೇಶಕರಿಗೆ ವಾಹನ ಅವಶ್ಯಕತೆ ಇಲ್ಲವೆ.

ಇ) ಭೂಮಾಪಕ ಇಲಾಖೆಯ ಸಹಾಯಕ ನಿರ್ದೇಶಕರಿಗೆ ಮತ್ತು ಉಪ-ನಿರ್ದೇಶಕರಿಗೆ ವಾಹನಗಳನ್ನು ನೀಡುವುದಕ್ಕೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿರುತ್ತಾರೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಇದೆ

ಆ) ಇದೆ.

ಇ) ಸದ್ಯಕ್ಕೆ ಏನೂ ಕ್ರಮ ತೆಗೆದುಕೊಂಡಿಲ್ಲ ಸರ್ಕಾರದ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡ ಹಾಗೂ ಸರ್ಕಾರದ ನೀತಿಗನುಗುಣವಾಗಿ ನಂತರ ವಾಹನಗಳನ್ನು ಒದಗಿಸಲು ಪರಿಶೀಲಿಸಲಾಗುವುದು.

ಭೂಮಾಪನ ಇಲಾಖೆಯಲ್ಲಿ ಸರ್ವೆಯರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ.

3498 - ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡ ದೇವನಕೋಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರ?

ಅ) ಭೂಮಾಪನ ಇಲಾಖೆಯಲ್ಲಿ ಎಷ್ಟು ಜನ ಸರ್ವೆಯರರು ಇದ್ದಾರೆ?

ಆ) ಭೂಮಾಪನ ಇಲಾಖೆಯಲ್ಲಿ ಎಷ್ಟು ಜನ ಸರ್ವೆಯರ್‌ರವರ ಅವಶ್ಯಕತೆ ಇರುವುದು?

ಇ) ಭೂಮಾಪನ ಇಲಾಖೆಯಲ್ಲಿ ಸರ್ವೆಯರನ್ನು ನೇಮಕ ಮಾಡಿಕೊಳ್ಳಲು ಏನು ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).

ಅ)	ಪ್ರಥಮ ದರ್ಜೆ ಭೂಮಾಪಕರು	406
	ಎರಡನೇ ದರ್ಜೆ ಭೂಮಾಪಕರು	1130
	ಒಟ್ಟು	**1536**

ಒಟ್ಟು ಇಲಾಖೆಗೆ ಮಂಜೂರಾದ ಹುದ್ದೆಗಳು :

ಪ್ರಥಮ ದರ್ಜೆ ಭೂಮಾಪಕರು	478
ಎರಡನೇ ದರ್ಜೆ ಭೂಮಾಪಕರು	1505
ಒಟ್ಟು	1983

ಆ) ಸುಮಾರು 3000 ಇಲಾಖೆಯಲ್ಲಿನ ಮಂಜೂರಾದ ಪ್ರಸ್ತುತ ಹುದ್ದೆಗಳೂ ಸೇರಿ.

ಇ) ಖಾಲಿ ಇರುವ ಎರಡನೇ ದರ್ಜೆ ಭೂಮಾಪಕರ ಹುದ್ದೆಗಳು 375 ಮತ್ತು ಹೆಚ್ಚುವರಿಯಾಗಿ ಸೃಜಿಸಿದ ಎರಡನೇ ದರ್ಜೆ ಭೂಮಾಪಕರ ಹುದ್ದೆಗಳು 1000 ಇವುಗಳಿಗೆ ಮಿತ ವೇತನ ಪದವೀದರರನ್ನು ನಿಯಮಿಸಿಕೊಳ್ಳಲು ಮತ್ತು 72 ಪ್ರಥಮ ದರ್ಜೆ ಭೂಮಾಪಕರ ಹುದ್ದೆಗಳನ್ನು ಬಡ್ತಿ ಕೊಟ್ಟು ತುಂಬಲು ಕ್ರಮಕೈಗೊಳ್ಳಲಾಗುತ್ತದೆ.

ಖಾಲಿಯಿರುವ ಗ್ರಾಮ ಲೆಕ್ಕಿಗರ ಹುದ್ದೆಗಳ ಸಂಖ್ಯೆ

3495 - ಶ್ರೀ ಬಿ. ರಮಾನಾಥ ರೈ (ಬಂಟ್ವಾಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ಒಟ್ಟು ಖಾಲಿಯಿರುವ ಗ್ರಾಮಲೆಕ್ಕಿಗರ ಸಂಖ್ಯೆ ಎಷ್ಟು?

ಆ) ಈ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಇ) ಹಾಗಿದ್ದಲ್ಲಿ ಯಾವಾಗ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಒಟ್ಟು 1948 ಗ್ರಾಮ ಲೆಕ್ಕಿಗರ ಹುದ್ದೆಗಳು ಖಾಲಿ ಇವೆ.

ಆ) ಹೌದು.

ಇ) ಅತೀ ಶೀಘ್ರವಾಗಿ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಸಕಲೇಶ್ವರಪುರ ತಾಲ್ಲೂಕುಗಳಲ್ಲಿ ಗ್ರಾಮೀಣ ಪಶುವೈದ್ಯಕೀಯ ಆಸ್ಪತ್ರೆಗಳ ಸಂಖ್ಯೆ.

3499 - ಶ್ರೀ ಬಿ.ಆರ್. ಗುರುದೇವ್ (ಸಕಲೇಶಪುರ) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಆಲೂರು ಮತ್ತು ಸಕಲೇಶಪುರ ತಾಲ್ಲೂಕುಗಳಲ್ಲಿ ಎಷ್ಟು ಗ್ರಾಮೀಣ ಪಶುವೈದ್ಯ ಶಾಲೆಗಳು ಇವೆ?

ಆ) ಈ ಪಶುವೈದ್ಯ ಶಾಲೆಗಳನ್ನು ಮೇಲ್ದರ್ಜೆಗೇರಿಸುವ ಯೋಜನೆ ಸರ್ಕಾರಕ್ಕೆ ಇದೆಯೇ?

ಶ್ರೀ ಬಸವರಾಜ ಪಾಟೀಲ್ (ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು):

ಅ) 1) ಆಲೂರು ತಾ: -4

2) ಸಕಲೇಶಪುರ ತಾ: -5

ಆ) ಪ್ರಸಕ್ತ ವರ್ಷದಲ್ಲಿ ರಾಜ್ಯದಲ್ಲಿ 80 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಯೋಜಿಸಲಾಗಿದೆ. ಹಾಸನ ಜಿಲ್ಲೆಯಿಂದ ಈ ಪಶುವೈದ್ಯ ಶಾಲೆಗಳ ಉನ್ನತೀಕರಣಕ್ಕೆ ಪ್ರಸ್ತಾವನೆ ಬಂದಾಗ ಅವುಗಳನ್ನು ಪರಿಗಣಿಸಲಾಗುವುದು.

ಖುಷ್ಕಿ ಜಮೀನುಗಳನ್ನು ತರಿಜಮೀನುಗಳಾಗಿ ಪರಿವರ್ತಿಸಿರುವುದು

2763 - ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖುಷ್ಕಿ ಜಮೀನುಗಳನ್ನು ನೀರಾವರಿ ಕೊಳವೆ ಬಾವಿಗಳ ಮೂಲಕ ತೋಟ ಮತ್ತು ತರಿ ಜಮೀನುಗಳನ್ನಾಗಿ ಪರಿವರ್ತಿಸಿರುವುದು ನಿಜವೇ?

ಆ) ಸದರಿ ಜಮೀನುಗಳ ಸುತ್ತಲೂ ತಂತಿ, ಬೇಲಿಗಳನ್ನು ಹಾಕಿರುವುದು ನಿಜವೇ?

ಇ) ಇದರಿಂದ ಅನೇಕ ರೈತರಿಗೆ ದಾರಿ ಸಮಸ್ಯೆ ಬಂದು ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಅಂತಹ ಜಮೀನುಗಳಲ್ಲಿ ಸರ್ವೆ ನಡೆಸಿ ಕಾಲು ದಾರಿ ಓಣಿ ಗೋಕಟ್ಟೆಗಳಿಗೆ ದಾರಿಗಳನ್ನು ಬಿಡಿಸಲು ಕ್ರಮಗೊಳ್ಳಲಾಗುವುದೇ?

ಉ) ಹಾಗಾದರೆ ಯಾವಾಗ ಕ್ರಮಕೈಗೊಳ್ಳಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ನಿಜ

ಆ) ಸರ್ಕಾರದ ಗಮನಕ್ಕೆ ಬಂದಿಲ್ಲ

ಇ) ಇಲ್ಲ

ಈ) ನಕಾಶೆಯಲ್ಲಿ ಕಂಡ ದಾರಿಯಾದಲ್ಲಿ ಬಿಡಿಸಿ ಕೊಡುವ ಕ್ರಮ ಕೈಗೊಳ್ಳಲಾಗುವುದು.

ಉ) ದೂರು ಬಂದಾಗ ಅಥವಾ ಸರ್ಕಾರದ ಗಮನಕ್ಕೆ ಬೇರೆ ಮೂಲಗಳಿಂದ ತಿಳಿದುಬಂದಾಗ ಇಂತಹ ಕ್ರಮ ಕೈಗೊಳ್ಳಲಾಗುವುದು.

ಸೇಂದಿ ವನ ಜಮೀನನ್ನು ಮಂಜೂರು ಮಾಡುವ ಬಗ್ಗೆ

2762 - ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೇಂದಿ ವಜಾ ಮಾಡಿರುವುದರಿಂದ ಸೇಂದಿ ವನದ ಜಮೀನನ್ನು ಸಾಗುವಳಿಗಾಗಿ ಮಂಜೂರು ಮಾಡಲಾಗುವುದೇ?

ಆ) ಸೇಂದಿ ವನದ ಜಮೀನುಗಳಿಗೆ ಟಿ.ಟಿ ಕಟ್ಟಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ, ಈ ಜಮೀನುಗಳಿಗೆ ಮಂಜೂರಾತಿ ನೀಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಯವರು)

ಅ) ಸದರಿ ಸೇಂದಿ ವನದ ಜಮೀನನ್ನು ಕಂದಾಯ ಇಲಾಖೆಗೆ ವರ್ಗಾಹಿಸಿದ್ದಲ್ಲಿ ಮಂಜೂರಾತಿ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

ಆ) ಹೌದು, ಸದರಿ ಜಮೀನುಗಳು ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದಲ್ಲಿ.

ಇ) ಕಾನೂನಿನಲ್ಲಿ ಅವಕಾಶವಿರುವುದಿಲ್ಲ.

ಕೆರೆ ಅಂಗಳ ಮಂಜೂರಾತಿ ಬಗ್ಗೆ

3509 - ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಎಲ್ಲಾ ಕೆರೆ ಅಂಗಳಗಳಲ್ಲಿನ ಜಮೀನು ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಜಮೀನುಗಳಿಗೆ ಟಿ.ಟಿ. ಕಟ್ಟಿಸಿ ಕೊಂಡಿರುವುದರ ನಿಜವೇ?

ಇ) ಹಾಗಿದ್ದಲ್ಲಿ ಅವುಗಳಿಗೆ ಸಾಗುವಳಿ ಚೀಟಿ ಕೊಡಲಾಗುವುದೇ?

ಈ) ಅದು ಕಾನೂನಿಗೆ ವಿರುದವಲವೇ?

ಉ) ಈ ಬಗ್ಗೆ ಸರ್ಕಾರದವರಿಂದ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಯವರು)

ಅ) ರಾಜ್ಯದಲ್ಲಿ ಎಲ್ಲಾ ಕೆರೆ ಅಂಗಳಗಳನ್ನು ಒತ್ತುವರಿ ಮಾಡಿಲ್ಲ.

ಆ) ಹೌದು

ಇ) ಕಾನೂನಿನಲ್ಲಿ ಅವಕಾಶವಿರುವುದಿಲ್ಲ.

ಈ) ವಿರುದ್ಧವಾಗುವುದಿಲ್ಲ

ಉ) ಕಾನೂನು ರೀತ್ಯ ಒಕ್ಕಲೆಬ್ಬಿಸಲಾಗುವುದು.

ತುಮಕೂರು ಜಿಲ್ಲೆಯಲ್ಲಿ ಗ್ರಾಮ ಲೆಕ್ಕಿಗರ ಹುದ್ದೆಗಳ ಭರ್ತಿ

3510 - ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳೆಷ್ಟು?

ಆ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದೇ?

ಇ) ಹಾಗಿದ್ದಲ್ಲಿ ಆ ಬಗ್ಗೆ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಒಟ್ಟು 173 ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿ ಇವೆ. ತಾಲ್ಲೂಕುವಾರು ವಿವರ ಕೆಳಗಿನಂತಿದೆ:

1) ತುಮಕೂರು	17
2) ಗುಬ್ಬಿ	17
3) ಕುಣಿಗಲ್	21
4) ತಿಪಟೂರು	16
5) ತುರುವೆಕೆರೆ	18
6) ಸಿ.ಎನ್.ಹಳ್ಳಿ	16
7) ಮಧುಗಿರಿ	15
8) ಶಿರಾ	21
9) ಪಾವಗಡ	21
10) ಕೊರಟಗೆರೆ	11
	173

ಆ) ಹೌದು

ಇ) ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಶೀಘ್ರ ಕ್ರಮ ತೆಗೆದುಕೊಳ್ಳಲಾಗುತ್ತದೆ

ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ಹಣ ಬಿಡುಗಡೆ

3524 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಕೃಷಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ 1989-90, 90-91 ಮತ್ತು 91-92ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆ ಮಾಡಿರುವ ಹಣ ಎಷ್ಟು?

ಆ) ಇದರಲ್ಲಿ ಸಿಬ್ಬಂದಿ ವೇತನ, ಪ್ರವಾಸ ಭತ್ಯೆ ಹಾಗೂ ಇತರೆ ಭತ್ಯೆಗಳಿಗೆ ಖರ್ಚಾದ ಹಣವೆಷ್ಟು?

ಇ) ಈ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಇತ್ತೀಚೆಗೆ ಎಷ್ಟು ಬಗ್ಗೆಯ ಹತ್ತಿ ಬೀಜಗಳ ಸಂಶೋಧನೆಯನ್ನು ಮಾಡಲಾಯಿತು?

ಈ) ಕೃಷಿ ವಿಶ್ವವಿದ್ಯಾನಿಲಯದಲ್ಲಿ ತೋಟಗಾರಿಕೆ ಹಾಗೂ ಹೈನುಗಾರಿಕೆ ಮತ್ತು ರೇಷ್ಮೆ ಬೆಳೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಸಂಶೋಧನೆಯನ್ನು ಕೈಗೊಳ್ಳಲು ಯಾವ ಕ್ರಮ ಕೈಗೊಂಡಿದೆ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು)

ಅ)

	ಬಾಕಿ ಅನುದಾನ (ಲಕ್ಷಗಳಲ್ಲಿ)	ಅಭಿವೃದ್ಧಿ ಅನುದಾನ (ಲಕ್ಷಗಳಲ್ಲಿ)
1989-90	375.62	195.00
1990-91	331.38	250-00
1991-92 (ಜೂನ್‌ವರೆಗೆ)	109.00	90.00

ಆ)

	ಸಿಬ್ಬಂದಿ ವೇತನ ಲಕ್ಷಗಳಲ್ಲಿ	ಪ್ರವಾಸ ಭತ್ಯೆ ಲಕ್ಷಗಳಲ್ಲಿ	ಇತರೆ ಭತ್ಯ ಲಕ್ಷಗಳಲ್ಲಿ
1989-90	376-42	004.78	1.11
1990-91	274-06	004.09	1.15
1991-92 (ಜೂನ್‌ವರೆಗೆ)	095-37	000.79	0.28

ಇ) ಈ ಕೆಳಗಿನ ಐದು ತಳಿಗಳನ್ನು ಸಂಶೋಧಿಸಲಾಗಿದೆ.

1. ಅಭಾದಿತ್
2. ಅರುಣ
3. ಗೌರಿ
4. ಗಣೇಶ(ಎ)
5. ಡಿ.ಸಿ.ಹೆಚ್-2

ಈ) ತೋಟಗಾರಿಕೆಯಲ್ಲಿ

1. 8ನೇ ಯೋಜನೆಯಲ್ಲಿ ಐ.ಸಿ.ಎ.ಆರ್. ಅಡಿಯಲ್ಲಿ ಅಲುಗಡ್ಡೆ ಬೆಳೆಯ ಸಂಶೋಧನಾಘಟಕ ಸ್ಥಾಪಿಸಲಾಗುವುದು.
2. ಮೆಣಸಿನಕಾಯಿ, ಈರುಳ್ಳಿ, ಒಣ ಬೇಸಾಯದಲ್ಲಿ ಹಣ್ಣು ಮತ್ತು ತೋಟಗಾರಿಕೆ ಬೆಳೆಗಳ ಮೇಲೆ ಸಂಶೋಧನೆ ಕೈಗೊಳ್ಳಲು ಯೋಜನೆಗಳನ್ನು ರೂಪಿಸಲಾಗಿದೆ.
3. ತರಕಾರಿ ಬೆಳೆಗಳಾದ ಕೋಸು, ಬದನೆಕಾಯಿ, ಟೊಮೆಟೆ ಇತ್ಯಾದಿ ಬೆಳೆಗಳ ಸಂಶೋಧನಾ ಕಾರ್ಯಗಳನ್ನು ಎಸ್‌ಎಆರ್‌ಐಪಿ ಯೋಜನೆಯಲ್ಲಿ ಕಾರ್ಯಗಳನ್ನು ತೆಗೆದುಕೊಳ್ಳಲಾಗಿದೆ.
4. ಪ್ಲಾಂಟೇಷನ್ ಬೆಳೆಗಳ ಮೇಲೆ ಸಂಶೋಧನೆ ಕಾರ್ಯಗಳನ್ನು ಕೈಗೊಳ್ಳಲು ರೂಪು ರೇಖೆಗಳನ್ನು ಸಿದ್ಧಗೊಳಿಸಲಾಗಿದೆ.

ಹೈನುಗಾರಿಕೆ : ಕಳೆದು ಒಂದು ವರ್ಷದಿಂದ ಹೊಸ ಮಿಶ್ರ ತಳಿಗಳನ್ನು ತಂದು ಆಕಳು ಉತ್ಪಾದನೆ ಮತ್ತು ಇತರೆ ವಿಚಾರವಾಗಿ ಸಂಶೋಧನೆ ಮಾಡಲಾಗುತ್ತಿದೆ.

ರೇಷ್ಮೆ ಬೆಳೆಗಳ ಬಗ್ಗೆ : ಹೆಚ್ಚಿನ ಸಂಶೋಧನೆ ಹಾಗೂ ಅಭಿವೃದ್ಧಿ ಕೈಗೊಳ್ಳಲು ಯೋಜನೆಯನ್ನು ರೂಪಿಸಲಾಗುತ್ತಿದೆ.

ಗದಗ ಮತ್ತು ಹಾವೇರಿಯನ್ನು ಜಿಲ್ಲೆಗಳೆಂದು ಘೋಷಣೆ

3523 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದ್ದಿಗೌಡರ್ ಸಮಿತಿಯನ್ನು ವರದಿಯನ್ನು ಸರ್ಕಾರ ಒಪ್ಪಿದೆಯೇ?

ಆ) ಹಾಗಿದ್ದಲ್ಲಿ ಆ ವರದಿಯನ್ನು ಅನುಷ್ಠಾನಗೊಳಿಸಲು ಒಪ್ಪಿದೆಯೇ? ಸರ್ಕಾರ ಯಾವುದಾದರೂ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆಯೇ?

ಇ) ಗದಗ ಮತ್ತು ಹಾವೇರಿಯನ್ನು ಜಿಲ್ಲೆಗಳೆಂದು ಘೋಷಣೆ ಮಾಡುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆಯೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಪರಿಶೀಲನೆಯಲ್ಲಿದೆ.

ಆ) ಇವರ ವರದಿ ಉಳಿದ ವರದಿಗಳ ಜೊತೆಯಲ್ಲಿ ತೀವ್ರ ಪರಿಶೀಲನೆಯಲ್ಲಿದೆ.

ಇ) ಹೌದು.

ಹೊಳಲ್ಕೆರೆ ತಾಲ್ಲೂಕಿನಲ್ಲಿರುವ ಅಮೃತ್ ಮಹಲ್ ಕಾವಲಿನ ವಿಸ್ತೀರ್ಣ

3527 - ಶ್ರೀ ಎ.ವಿ. ಉಮಾಪತಿ, (ಹೊಳಲ್ಕೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಳಲ್ಕೆರೆ ತಾಲ್ಲೂಕಿನಲ್ಲಿರುವ ಅಮೃತ್ ಕಾವಲ್‌ನ ಒಟ್ಟು ವಿಸ್ತೀರ್ಣವೆಷ್ಟು?

ಆ) ಈ ಪೈಕಿ ಎಷ್ಟು ಎಕರೆ ಪ್ರದೇಶ ಬಿಡುಗಡೆಯಾಗಿದೆ?

ಇ) ಈ ಪ್ರದೇಶವನ್ನು ಕಂದಾಯ ಇಲಾಖೆಗೆ ಬಿಟ್ಟು ಕೊಡಲಾಗಿದೆಯೇ?

ಈ) ಹಾಗಿದ್ದಲ್ಲಿ, ಎಷ್ಟು ಎಕರೆ ಪ್ರದೇಶವನ್ನು ಕಂದಾಯ ಇಲಾಖೆಗೆ ಬಿಟ್ಟುಕೊಡಲಾಗಿದೆ?

ಉ) ಬಿಡುಗಡೆ ಆಗಿದ್ದಲ್ಲಿ, ಆ ಜಮೀನನ್ನು ಬಡವರಿಗೆ ಹರಿಜನರಿಗೆ ಹಂಚಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) 9,363 ಎಕರೆಗಳು 18 ಗುಂಟೆಗಳು.

ಆ) 200 ಎಕರೆಗಳು

ಇ) ಹೌದು

ಈ) 200 ಎಕರೆಗಳು

ಉ) 1969ರ ಕರ್ನಾಟಕ ಭೂ ಮಂಜೂರಾತಿ ನಿಯಮಗಳಂತೆ ಅರ್ಹ ವ್ಯಕ್ತಿಗಳಿಗೆ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ.

ಪಿತ್ರಾರ್ಜಿತ ಆಸ್ತಿಯ ಬಗ್ಗೆ

3528 - ಶ್ರೀ ಎ.ವಿ. ಉಮಾಪತಿ (ಹೊಳಲ್ಕೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಿತ್ರಾರ್ಜಿತ ಆಸ್ತಿಗಳನ್ನು ಪಾಲು ಮಾಡುವಾಗ ಸವರಿ ಜಮೀನಿನ

ಕಂದಾಯದ 300 ರಷ್ಟು ಬೆಲೆಯನ್ನು ಸ್ಟಾಂಪ್ ಡಮ್ಯಾಟಿ ಆಗಿ ತೆಗೆದುಕೊಳ್ಳಲಾಗುತ್ತಿದೆ?

ಆ) ಈ ಸದರಿ ಕಾಯಿದೆಯನ್ನು ಬದಲಾಯಿಸಿ ಸದರಿ ಜಮೀನುಗಳಿಗೂ ಸದ ಕ್ರಯದ ರೀತಿ ಅನುಸರಿಸಿ ಮಾರ್ಕೆಟ್ ಬೆಲೆಯಂತೆ ಸ್ಟ್ಯಾಂಪ್ ಡ್ಯೂಟಿ ತೆಗೆದುಕೊಳ್ಳಲು ಸರ್ಕಾರ ತೀರ್ಮಾನಿಸಿರುವುದೇ?

ಇ) ಇದರಿಂದ ಬಡ ರೈತರಿಗೆ ಹೆಚ್ಚು ಹೊರೆಯಾಗುವುದರಿಂದ ಇದನ್ನು ಮೊದಲಿನಂತೆ ಅನುಸರಿಸಲು ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುವುದೇ?

ಈ) ಹಾಗಿದ್ದಲ್ಲಿ ಸರ್ಕಾರ ಆ ಬಗ್ಗೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುವುದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಇಲ್ಲ, ಕಂದಾಯದ 25ರಷ್ಟು ಬೆಲೆಯನ್ನು ಸ್ಟಾಂಪ್ ಡ್ಯೂಟಿಯೆಂದು ಕೃಷಿ ಭೂಮಿಗೆ ಸಂಬಂಧಿಸಿದಂತೆ ತೆಗೆದುಕೊಳ್ಳಲಾಗುತ್ತಿದೆ.

ಆ) ಹೌದು

ಇ) ಪರಿಶೀಲಿಸಲಾಗುವುದು

ಈ) ತೆಗೆದುಕೊಳ್ಳಲಾಗುವುದು.

ದ. ಕನ್ನಡ ಜಿಲ್ಲೆಯಲ್ಲಿರುವ ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗಳ ಸಂಖ್ಯೆ

3539 - ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಎಷ್ಟೆ ಗ್ರಾಮ ಲೆಕ್ಕಿಗರ ಹುದ್ದೆಗಳು ಖಾಲಿ ಇರುತ್ತದೆ?

ಆ) ಕಾಪು ಕ್ಷೇತ್ರದಲ್ಲಿ 36 ಕಂದಾಯ ಗ್ರಾಮಗಳಿದ್ದು ಎಷ್ಟು ಗ್ರಾಮಗಳಲ್ಲಿ ಆ ಹುದ್ದೆಗಳು ಖಾಲಿ ಇರುತ್ತವೆ?

ಇ) ಅವುಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಒಟ್ಟು 144 ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿ ಇವೆ.

ಆ) ಏಳು ಗ್ರಾಮಗಳಲ್ಲಿ ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿ ಇರುತ್ತವೆ.

ಇ) ಮಿತವೇತನ ಪದವೀಧರರನ್ನು ಹಾಗೂ ವಿವಿಧ ಇಲಾಖೆಗಳಲ್ಲಿನ ದಿನಗೂಲಿ ನೌಕರರನ್ನು ವರ್ಗವಣೆಯಿಂದ ಭರ್ತಿ ಮಾಡಿಕೊಳ್ಳುವ ಮೂಲಕ ಈ ಖಾಲಿ ಹುದ್ದೆಗಳನ್ನು ತುಂಬುಲು ಈಗ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಕಾಪುವಿನಲ್ಲಿ ಗ್ರಾಮ ಸಹಾಯಕರುಗಳ ಖಾಲಿ ಇರುವ ಹುದ್ದೆಗಳನ್ನು ತುಂಬುವ ಬಗ್ಗೆ

3538 - ಶ್ರೀ ವಸಂತ ವಿ ಸಾಲಿಯಾನ (ಕಾಪು) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ವಿಷಯಗಳನ್ನು ತಿಳಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕಾಪುವಿನಲ್ಲಿ ಗ್ರಾಮ ಸಹಾಯಕರುಗಳ ಎಷ್ಟು ಹುದ್ದೆಗಳು ಖಾಲಿ ಇವೆ?

ಆ) ಅವರುಗಳ ಆಯ್ಕೆಯಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಸರ್ಕಾರ ಏಕೆ ಅವಕಾಶ ನೀಡುವುದಿಲ್ಲ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಏಳು ಹುದ್ದೆಗಳು ಖಾಲಿ ಇವೆ.

ಆ) ಖಾಲಿ ಹುದ್ದೆಗಳನ್ನು ತುಂಬುವ ಸಮಯದಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

ಗುಲ್ಬರ್ಗಾ ಜಿಲ್ಲೆಯ ರೈತರು ಬೆಳೆಯುವ ಬೆಳೆಗಳ ಅಂದಾಜು ಇಳುವರಿ ಸಮೀಕ್ಷೆ

3554 - ಶ್ರೀ ಬಸವಂತ ರೆಡ್ಡಿ ಪೋತಕಪಲ್ಲಿ (ಸೇಡಂ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ರೈತರು ಬೆಳೆಯುವ ಬೆಳೆಗಳಾದ ತೊಗರಿ, ಹೆಸರು ಕಡ್ಲೆ, ಜೋಳ ಹಾಗೂ ಆಂಧ್ರ ಗಡಿ ಪ್ರಾಂತ್ಯದಲ್ಲಿ ಬೆಳೆಯುವ ಭತ್ತ ಪ್ರತಿ ಎಕರೆಗೆ ಸರಾಸರಿಬೆಳೆ ಇರುವಳಿ ಅಂದಾಜು ವರದಿ ಅಂದಾಜು ಮಾಡುವುದು 10 ವರ್ಷಗಳ ಸರಾಸರಿ ಬೆಳೆ ಇಳುವರಿ ತೆಗೆದರೆ ಮಾತ್ರ ನಿಜವಾದ ಸರಾಸರಿ ಬೆಳೆಯ ಇಳುವರಿಯ ಲೆಕ್ಕ ಸಿಕ್ಕುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ನಮ್ಮ ಭಾಗದ ರೈತರು ಪ್ರತಿ ವರ್ಷ ಬೀಜ ರಸಾಯನಿಕ ಗೊಬ್ಬರ, ಹಾಗೂ ಕ್ರಿಮಿನಾಶಕ ಮತ್ತು ಒಕ್ಕಲುತನಕ್ಕೆ ತಗಲುಖರ್ಚುಗಳು ಇತ್ಯಾದಿ ಮಾಡಿದರೆ ಅತಿವೃಷ್ಟಿಯಿಂದಲೂ ಅನಾವೃಷ್ಟಿಯಿಂದ ನೈಸರ್ಗಿಕ ವಿಕೋಪದಿಂದ 10 ವರ್ಷಗಳಲ್ಲಿ ಆರೇಳು ವರ್ಷಗಳು ನಷ್ಟವಾಗಿ ಮೂರು ನಾಲ್ಕು ವರ್ಷ ಏನಾದರೂ ಬೆಳೆ ಬೆಳೆಯ ಬಹುದಲ್ಲವೇ?

ಇ) ಈ ಪ್ರಕಾರ ರೈತ 10 ವರ್ಷಗಳಲ್ಲಿ 6-7 ವರ್ಷಗಳ ನಷ್ಟ ಅನುಭವಿಸಿ 3-4 ವರ್ಷ ಬೆಳೆಯಸರಾಸರಿ ಬೆಳೆ ಇಳುವರಿ ಅಂದಾಜು ಈ 10 ವರ್ಷ ಬೆಳೆ ಬೆಳೆದ ಅಂದಾಜು ಇಳುವರಿ ತೆಗೆಯಬಹುದೇಕೆ?

ಈ) ಈ ಪ್ರಕಾರಸರಾಸರಿ ಇಳುವರಿ ತೆಗೆದರೆ ರೈತರಿಗೆ ಈಗ ಸಿಕ್ಕುವ ಬೆಲೆಯಿಂದ ಎಷ್ಟು ನಷ್ಟವಾಗುವುದು?

ಉ) ರೈತ ಹುಟ್ಟಿನಿಂದಲೂ ಸಾಲದಲ್ಲಿಯೇ ಮುಳುಗುತ್ತಾನೆ ಎಂಬುದು ಸರ್ಕಾರ ಗಮನಿಸಿದೆಯೇ?

ಊ) ಇದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು)

ಅ) ಕೃಷಿ ಉತ್ಪಾದನೆಯಲ್ಲಿ ಹೊಸ ಸಂಶೋಧನೆಗಳ ಆಧಾರದ ಮೇಲೆ ಸುಧಾರಿತ ಕ್ರಮಗಳನ್ನು ಕೈಗೊಳ್ಳುತ್ತಿರುವುದರಿಂದ ಬೆಳೆಗಳ ಇಳುವರಿಯು ಪ್ರತಿ ವರ್ಷ ಹೆಚ್ಚಾಗಿರುತ್ತಿರುವುದರಿಂದ ಇಳುವರಿ ಸರಾಸರಿಯನ್ನು ಪಡೆಯಲು 10 ವರ್ಷದ ಇಳುವರಿಯನ್ನು ಪರಿಗಣಿಸುವುದು ವೈಜ್ಞಾನಿಕವಾದುದಲ್ಲ.

ಆ) ನೈಸರ್ಗಿಕ ಕಾರಣಗಳಿಂದ ಕೃಷಿ ಉತ್ಪಾದನೆಯಲ್ಲಿ ಏರುಪೇರು ಆಗುವುದು ಸಹಜ. ಈ ರೀತಿ ಇಳುವರಿ ಕಡಿಮೆಯಾದಾಗ ರೈತರಿಗೆ ನಷ್ಟವಾಗಿದ್ದಲ್ಲಿ ನಷ್ಟ ಪರಿಹಾರವನ್ನು ತುಂಬಿಕೊಡಲು ಬೆಳೆ ವಿಮಾಯೋಜನೆ ಜಾರಿಯಲ್ಲಿದೆ. ಇಂತಹ ಸಂದರ್ಭದಲ್ಲಿ 5ವರ್ಷಗಳ ಇಳುವರಿಯ ಸರಾಸರಿಯನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತಿದೆ. ಬೆಳೆಯ ಇಳುವರಿಯ ಸರಾಸರಿಯನ್ನು 10 ವರ್ಷಗಳಿಗೆ ತೆಗೆದುಕೊಂಡರೆ ಸರಾಸರಿ ಇಳುವರಿಯು ಕಡಿಮೆಯಾಗುವುದರಿಂದ ಬೆಳೆ ವಿಮಾ ಯೋಜನೆಯಿಂದ ಪರಿಹಾರಸಿಗುವ [illegible] ಬೆಳೆ ವಿಮಾ ಯೋಜನೆಯ ಸಲುವಾಗಿ ಈಗಿರುವ 5

ವರ್ಷದ ಸರಾಸರಿ ಇಳುವರಿಯ ಬದಲು 3 ವರ್ಷದ ಸರಾಸರಿ ಇಳುವರಿಯನ್ನು ತೆಗೆದುಕೊಳ್ಳುವ ಸಲುವಾಗಿ ಮನವಿಗಳು ಬರುತ್ತಿವೆ.

ಈ) ಕೃಷಿ ಉತ್ಪನ್ನಗಳ ಬೆಂಬಲ ಬೆಲೆಯನ್ನು ಆಯಾ ವರ್ಷದ ಉತ್ಪಾದನಾ ವೆಚ್ಚದ ಆಧಾರದ ಮೇಲೆಯೇ ನಿಗದಿಪಡಿಸಲಾಗುತ್ತಿದೆಯೇ ವಿನಃ 5 ವರ್ಷ ಅಥವಾ 10 ವರ್ಷಗಳ ಸರಾಸರಿ ಇಳುವರಿಯನ್ನು ಪರಿಗಣಿಸಲಾಗುತ್ತಿಲ್ಲ.

ಉ) ರೈತರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಕಾಲಕಾಲಕ್ಕೆ ಅನೇಕ ಯೋಜನೆಗಳನ್ನು ಸರ್ಕಾರವು ರೂಪಿಸುತ್ತಿದೆ.

ಊ) ಈ ದಿಶೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಹಲವಾರು ಕ್ರಮಗಳನ್ನು ಕೈಗೊಳ್ಳುತ್ತಿದೆ.

1) ರಿಯಾಯಿತಿ ದರದಲ್ಲಿ ಕೃಷಿ ಸಾಮಗ್ರಿಗಳ ವಿತರಣೆ.
2) ಅಲ್ಪಾವಧಿ ಸಾಲವನ್ನು ಧೀರ್ಘಾವಧಿ ಸಾಲವಾಗಿ ಪರಿವರ್ತಿಸುವುದು (ಅಗತ್ಯವಿದ್ದಾಗ)
3) ಕಿರುಬುತ್ತಿ ಚೀಲಗಳ ವಿತರಣೆ
4) ನೈಸರ್ಗಿಕ ವಿಕೋಪಗಳಿಂದ ಉಂಟಾದ ತೊಂದರೆಗಳಿಗೆ ಪರಿಹಾರ ಕಾರ್ಯಕ್ರಮಗಳು
5) ಮಾರುಕಟ್ಟೆ ಬೆಲೆ ಕುಸಿದಾಗ, ಬೆಂಬಲ ಬೆಲೆಯಲ್ಲಿ ಸರ್ಕಾರವು ಆಹಾರಧಾನ್ಯಗಳನ್ನು ಕೊಳ್ಳುವುದು.
6) ಬೆಳೆ ವಿಮಾ ಯೋಜನೆ
7) ನೀರಾವರಿ ಸೌಲಭ್ಯ ಕಲ್ಪಿಸುವುದು
8) ಭೂಸಾರ ಸಂರಕ್ಷಣಾ ಕಾರ್ಯಕ್ರಮಗಳು
9) ಅಧಿಕ ಇಳುವರಿಗಾಗಿ ಸುಧಾರಿತ ತಳಿಗಳ ಅಭಿವೃದ್ಧಿ ಕಾರ್ಯಕ್ರಮ
10) ಕೃಷಿ ಉತ್ಪನ್ನಗಳ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವುದು.
11) ಕೃಷಿ ವಿಸ್ತರಣಾ ಯೋಜನೆ ಇತ್ಯಾದಿ

ರಸಗೊಬ್ಬರದ ಅಭಾವ

3689 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) ; ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೊಬ್ಬರವ ಬೆಲೆ ಏರಿಕೆಯ ದ್ವಿಮುಖ ಬೆಲೆ ನೀತಿಯಿಂದ ಹೆಚ್ಚಿನ ಹೆಚ್ಚು ಗೊಬ್ಬರ ಸಣ್ಣ ಅತಿ ಸಣ್ಣ ರೈತರ ಹೆಸರಿನಲ್ಲಿ ಖರೀದಿಯಾಗಿ ದಾಸ್ತಾನುದಾರರ ಹತ್ತಿರ ಧೃಢೀಕರಣವಾಗಿ ಇದರಿಂದ ಗೊಬ್ಬರದ ಅಭಾವವಾಗಿ ಹೆಚ್ಚಿನ ಬೆಲೆಯಲ್ಲಿ ಮಾರಾಟವಾಗುವ ಸಾಧ್ಯತೆಗಳಿಲ್ಲವೆ?

ಆ) ಇದರಿಂದ ರೈತರಿಗೆ ಗೊಬ್ಬರದ ಖರೀದಿ ಮಾಡಲು ಇನ್ನೂ ಹೆಚ್ಚಿನ ತೊಂದರೆಯಾಗುವುದಿಲ್ಲವೇ?

ಇ) ರೈತರು ಬೆಳೆದಿರುವ ಬೆಳೆಗೆ ಬೆಲೆ ಇಲ್ಲದೆ ರೈತ ಪ್ರತಿವರ್ಷ ನಷ್ಟದಲ್ಲಿದ್ದು ಸಾಲದಲ್ಲಿ ಮುಳುಗಿರುವುದು ನಿಜವಲ್ಲವೇ?

ಈ) ರೈತರ ಬೆಳೆಗೆ ತಕ್ಕ ಬೆಲೆ ಇಲ್ಲದೆ ನಷ್ಟವಾಗುವಾಗ, ಇನ್ನೂ ಹೆಚ್ಚಿನ ಬೆಲೆಯಲ್ಲಿ ಗೊಬ್ಬರವನ್ನು ಖರೀದಿ ಮಾಡಲು ಅಸಮರ್ಥವಾಗಿ ಬೆಳೆಯದಿದ್ದರೆ ರಾಜ್ಯ, ರಾಷ್ಟ್ರಕ್ಕೆ ನಷ್ಟವಾಗುವುದಿಲ್ಲವೇ?

ಉ) ರೈತರ ಬೆಳೆಗಳಿಗೆ [illegible]

ಬೆಲೆ ನಿಗದಿಪಡಿಸಲು ಸಾಧ್ಯವಿಲ್ಲವೇ?

ಊ) ಸಣ್ಣ ದೊಡ್ಡ ರೈತರೆಂಬ ಭಾವನೆ ಇಲ್ಲದೆ ಗೊಬ್ಬರಕ್ಕೆ ರಿಯಾಯಿತಿ ಹಣವನ್ನು ನೀಡಿ ರೈತರಿಗೆ ಬೆಳೆ ಬೆಳೆಯಲು ಅನುಕೂಲ ಮಾಡಬಾರದೇಕೆ?

ಶ್ರೀ ಎಸ್. ಚಿಕ್ಕೆಗೌಡ (ಕೃಷಿ ಸಚಿವರು):

ಅ) ರಸಗೊಬ್ಬರದ ದ್ವಿಮುಖ ಬೆಲೆನೀಡಿಕೆಯನ್ನು ಅನುಷ್ಠಾನಗೊಳಿಸುವಲ್ಲಿ ಕೆಲವು ಆಡಳಿತಾತ್ಮಕ ಅಡಚಣೆ ಇರುವುದು ಸರ್ಕಾರದ ಮನಗಂಡಿದೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಈ ಯೋಜನೆ ಅಡಿಯಲ್ಲಿ ಒದಗಿಸಿರುವ ಸೌಲಭ್ಯದ ದುರುಪಯೋಗ ಆಗಬಹುದಾದ ಸಾಧ್ಯತೆಗಳಿರುವುದೂ ಸಹ ಸರ್ಕಾರ ಗಮನಿಸಿದೆ ಆದ್ದರಿಂದ ಈ ಸೌಲಭ್ಯದ ದುರುಪಯೋಗವಾಗದಂತೆ ಯೋಜನೆಯನ್ನು ಅನುಷ್ಠಾನಗೊಳಿಸುವ ಸರ್ಕಾರದ ವಿಧಿ ವಿಧಾನಗಳನ್ನು ಎಚ್ಚರಿಕೆಯಿಂದ ರೂಪಿಸುತ್ತಿದೆ.

ಆ) ದ್ವಿಮುಖ ಬೆಲೆ ನೀತಿಯ ಸೌಲಭ್ಯ ದುರುಪಯೋಗವಾಗದಂತೆ, ಯೋಜನೆಯ ಸರಳ ವಿಧಿ ವಿಧಾನಗಳನ್ನು ರೂಪಿಸುವುದರಿಂದ, ರೈತರಿಗೆ ರಸಗೊಬ್ಬರ ಖರೀದಿಮಾಡಲು ತೊಂದರೆಯಾಗುವುದಿಲ್ಲ.

ಇ) ರೈತರು ಬೆಳೆದಿರುವ ಬೆಳೆಗೆ ಬೆಲೆ ಇಲ್ಲದೆ ರೈತನಿಗೆ ನಷ್ಟವಾಗದಂತೆ ಸರ್ಕಾರವು ಬೆಂಬಲ ಬೆಲೆಯನ್ನು ಪ್ರತಿ ವರ್ಷ ನಿಗದಿಪಡಿಸುತ್ತದೆ. ಮಾರುಕಟ್ಟೆ ಬೆಲೆಯು ಬೆಂಬಲ ಬೆಲೆಗಿಂತ ಕಡಿಮೆಯಾದಲ್ಲಿ ಸರ್ಕಾರವೇ ಬೆಂಬಲ ಬೆಲೆಗೆ ಧಾನ್ಯಗಳನ್ನು ಖರೀದಿಸುವ ವ್ಯವಸ್ಥೆಯನ್ನು ಮಾಡಲಾಗಿದೆ.

ಈ) ಕೇಂದ್ರ ಸರ್ಕಾರದ ರಸಗೊಬ್ಬರಗಳ ಬೆಲೆ ಏರಿಕೆಯ ಘೋಷಣೆಯೊಂದಿಗೆ ಬೆಳೆಗಳ ಬೆಂಬಲ ಬೆಲೆಯನ್ನು ಸೂಕ್ತವಾಗಿ ಹೆಚ್ಚಿಸುವುದಾಗಿ ಘೋಷಿಸಿರುವುದರಿಂದ ಈ ಪರಿಸ್ಥಿತಿ ಉದ್ಭವಿಸುವುದಿಲ್ಲ.

ಉ) ಸಣ್ಣ ಮತ್ತು ಅತಿ ಸಣ್ಣ ರೈತರು ಕೊಳ್ಳಬಹುದಾದ ರಸಗೊಬ್ಬರಗಳ ಹಳೆ ಬೆಲೆ ಮತ್ತು ಹೊಸ ಬೆಲೆಯ ವ್ಯತ್ಯಾಸವನ್ನು ಕೇಂದ್ರ ಸರ್ಕಾರವು ಸಹಾಯ ಧನ ನೀಡುವ ಮೂಲಕ ಭರಿಸುತ್ತದೆ. ಆದರೆ ಉಳಿದ ರೈತರಿಗೆ ಈ ಸೌಲಭ್ಯವನ್ನು ಒದಗಿಸಲು ಸಾಧ್ಯವಿಲ್ಲ.

ಊ) ಸದ್ಯದ ಹಣಕಾಸಿನ ಪರಿಸ್ಥಿತಿಯಲ್ಲಿ ಈ ಸೌಲಭ್ಯವನ್ನು ಒದಗಿಸಲು ಸಾಧ್ಯವಿಲ್ಲ.

(ಕೃಷಿ ಇಲಾಖೆಯ ಬೀಜ, ಗೊಬ್ಬರ, ಕ್ರಿಮಿನಾಶಕಗಳ ವಿತರಣೆಯಲ್ಲಿ ಅವ್ಯವಹಾರ

3581 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ, ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ 87-88, 88-89ನೇ ಸಾಲಿನಲ್ಲಿ ಕೃಷಿ ಇಲಾಖೆಯ ಓಪಿಡಿಪಿ / ಎನ್‌ಪಿಡಿಪಿ ಇತರೆ ಯೋಜನೆಗಳಲ್ಲಿ ಹಾಗೂ ವಿಶೇಷ ಘಟಕ ಯೋಜನೆಯ ಅಡಿಯಲ್ಲಿ ರೈತರಿಗೆ ಉಚಿತವಾಗಿ ಬೀಜ, ಗೊಬ್ಬರ, ಕ್ರಿಮಿನಾಶಕ ಔಷಧಿಗಳನ್ನು ಒದಗಿಸುವಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ಜಂಟಿ ಕೃಷಿ ನಿರ್ದೇಶಕರು, ರಾಯಚೂರು ಅವರು ಸಲ್ಲಿಸಿರುವ ವರದಿ ಅಪೂರ್ಣವಾಗಿರುವುದರಿಂದ ಜಂಟಿ ಕೃಷಿ ನಿರ್ದೇಶಕರು, ಗುಲ್ಬರ್ಗಾ ಇವರು ಅಂತಿಮ ವರದಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಇದರ ಬಗ್ಗೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1688 ದಿನಾಂಕ :

ನಿರ್ದೇಶಕರು ಗುಲ್ಬರ್ಗಾ ಇವರ ವರದಿ ಬಂದ ನಂತರ ಕೈಗೊಂಡಿರುವ ಕ್ರಮವೇನು?

ಇ) *ಈಗಲಾದರೂ ಸಹ ಜಂಟಿ ಕೃಷಿ ನಿರ್ದೇಶಕರು ಗುಲ್ಬರ್ಗಾ ಇವರ ಅಂತಿಮ ವರದಿ ಪ್ರಕಾರ ಕ್ರಮಕೈಗೊಳ್ಳಲು ಸರ್ಕಾರಕ್ಕೆ ಎಷ್ಟು ಅವಧಿಬೇಕು?*

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು) :

ಅ) ಹೌದು ಜಂಟಿ ಕೃಷಿ ನಿರ್ದೇಶಕರು, ಗುಲ್ಬರ್ಗಾ ಅವರು ಅವರ ಪತ್ರ ದಿನಾಂಕ : 25-3-91ರ ಮೂಲಕ ಅಂತಿಮ ವರದಿಯನ್ನು ಸಲ್ಲಿಸಿದ್ದಾರೆ ಈ ವರದಿಯೂ ಸಹ ಅಪೂರ್ಣವಾಗಿದೆ.

ಆ) ಜಂಟಿ ಕೃಷಿ ನಿರ್ದೇಶಕರು ಗುಲ್ಬರ್ಗಾ ಅವರು ಅವರ ದಿನಾಂಕ: 25-3-91ರ ಪತ್ರದ ಮೂಲಕ ಕಳುಹಿಸಿದ್ದ ಅಂತಿಮ ವರದಿಯು ಸಹ ಅಪೂರ್ಣವಾಗಿದ್ದು ಸದರೀ ವರದಿಯನ್ನು ಕೃಷಿ ಇಲಾಖೆಯ ದಿನಾಂಕ : 25-4-91ರ ಪತ್ರದ ಮೂಲಕ ಜಂಟಿ ಕೃಷಿ ನಿರ್ದೇಶಕರು, ಗುಲ್ಬರ್ಗಾ ಇವರಿಗೆ ಹಿಂತಿರುಗಿಸಿ ಪರಿಪೂರ್ಣ ವರದಿಯನ್ನು ಕೂಡಲೇ ಸಲ್ಲಿಸಲು ಕೋರಲಾಗಿದೆ. ಈ ಬಗ್ಗೆ ಜಂಟಿ ಕೃಷಿ ನಿರ್ದೇಶಕರು, ಗುಲ್ಬರ್ಗಾ ಅವರೊಡನೆ ವ್ಯವಹರಿಸಲಾಗುತ್ತಿದ್ದು, ಪರಿಪೂರ್ಣ ವರದಿಯನ್ನು ಸಲ್ಲಿಸಲು ಆಗ್ರಹಿಸಲಾಗಿದೆ.

ಇ) ಜಂಟಿ ಕೃಷಿ ನಿರ್ದೇಶಕರು, ಗುಲ್ಬರ್ಗಾ ಇವರಿಂದ ಅಂತಿಮ ಪರಿಪೂರ್ಣ ವರದಿಯು ಇನ್ನೂ ಬಂದಿರುವುದಿಲ್ಲ. ಸದರೀ ವರದಿಯು ಬಂದ ಕೂಡಲೇ ಕ್ರಮ ಕೈಗೊಳ್ಳಲಾಗುವುದು.

ವನ್ಯ ಪ್ರಾಣಿಗಳಿಂದ ಬಲಿಯಾದ ಕುಟುಂಬಗಳಿಗೆ ವಿಮಾ ಸೌಲಭ್ಯ

2557 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವನ್ಯ ಪ್ರಾಣಿಗಳ ಹಾವಳಿಗೆ ತುತ್ತಾಗಿ ಮರಣ ಹೊಂದುವ ಕುಟುಂಬಗಳಿಗೆ ವಿಮಾ ಯೋಜನೆಯನ್ನು ಜಾರಿಗೆ ತರಲು ಸರ್ಕಾರ ಜೀವವಿಮಾ ನಿಗಮದ ಜೊತೆ ಹೊಂದಾಣಿಕೆ ಮಾಡಿ ಕೊಂಡಿದೆಯೇ?*

ಆ) *ಈಗ ಈ ಯೋಜನೆಯು ಯಾವ ಯಾವ ಜಿಲ್ಲೆಗಳಲ್ಲಿ ಜಾರಿಯಲ್ಲಿದೆ?*

ಇ) *ಅಗತ್ಯವಾದಾಗ ವಿಮಾ ಕಂತುಗಳನ್ನು ಯಾರು ತುಂಬುವರು?*

ಈ) *ಈ ಯೋಜನೆಯು ಯಾವ ಯಾವ ಪ್ರಾಣಿಗಳಿಂದ ತುತ್ತಾಗಿರುವ ಜನಕ್ಕೆ ಅನ್ವಯಿಸುತ್ತದೆ.?*

ಶ್ರೀ ಈ. ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಖಾಲಿ ಗ್ರಾಮ ಲೆಕ್ಕಾಧಿಕಾರಿಗಳ ಸಂಖ್ಯೆ

3555 - ಶ್ರೀ ಶಿವಾನಂದ ಹೆಚ್. ಕೌಜಲಗಿ, (ಬೈಲಹೊಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಗ್ರಾಮ ಲೆಕ್ಕಾಧಿಕಾರಿಗಳ ಖಾಲಿ ಹುದ್ದೆಗಳೆಷ್ಟು? (ಜಿಲ್ಲಾ ಹಾಗೂ ತಾಲ್ಲೂಕುವಾರು ಬೆಳಗಾವ್ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹಾಗೂ ಬೈಲಹೊಂಗಲ ತಾಲ್ಲೂಕಿನ ಗ್ರಾಮವಾರು ವಿವರ ತಿಳಿಸುವುದು)

ಆ) ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಇ) ರಾಜ್ಯದಲ್ಲಿ ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆ ಖಾಲಿಯಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದಿಲ್ಲವೇ?

ಈ) ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆ ತುಂಬಲು ಸರ್ಕಾರ ಏನು ಕ್ರಮ ಕೈಗೊಂಡಿರುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಒಟ್ಟು 1948 ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗಳು ಖಾಲಿ ಇವೆ. ವಿವರ ಅನುಬಂಧದಲ್ಲಿ ತೋರಿಸಿದೆ. (ತಾಲ್ಲೂಕುವಾರು ವಿವರ ನಂತರ ಒದಗಿಸಲಾಗುವುದು)

ಆ) ಇದೆ.

ಇ) ಹೌದು.

ಈ) ಈ ಖಾಲಿ ಹುದ್ದೆಗಳನ್ನು ಮಿತವೇತನ ಪದವೀಧರರನ್ನು ಮತ್ತು ವಿವಿಧ ಇಲಾಖೆಗಳಲ್ಲಿ ವಿಲೀನಗೊಂಡಿರುವ ದಿನಗೂಲಿ ನೌಕರರನ್ನೂ ಭರ್ತಿ ಮಾಡಲು ಶೀಘ್ರ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಅನುಬಂಧ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ -3555
2. ಶ್ರೀ ಶಿವಾನಂದ ಹೆಚ್. ಕೌಜಲಗಿ, ವಿಧಾನಸಭಾ ಸದಸ್ಯರು.

ಕ್ರಮ ಸಂಖ್ಯೆ	ಜಿಲ್ಲೆ ಹೆಸರು	ಗ್ರಾಮ ಲೆಕ್ಕಾಧಿಕಾರಿಗಳ ಖಾಲಿ ಹುದ್ದೆ ಸಂಖ್ಯೆ
1.	ಬೆಂಗಳೂರು (ನ)	07
2	.ಬೆಂಗಳೂರು(ಗ್ರಾ)	72
3.	ಕೋಲಾರ	121
4.	ಶಿವಮೊಗ್ಗ	19
5.	ಚಿತ್ರದುರ್ಗ	98
6.	ತುಮಕೂರು	160
7.	ಮೈಸೂರು	98
8.	ಚಿಕ್ಕಮಗಳೂರು	58
9.	ಹಾಸನ	138
10.	ದಕ್ಷಿಣ ಕನ್ನಡ	132
11.	ಮಂಡ್ಯ	61
12.	ಕೊಡಗು	08
13.	ಗುಲ್ಬರ್ಗಾ	196

15.	ಬಳ್ಳಾರಿ	96
16.	ರಾಯಚೂರು	64
17.	ಬೆಳಗಾವಿ	132
18.	ಧಾರವಾಡ	339
19.	ಉತ್ತರ ಕನ್ನಡ	76
20.	ಬಿಜಾಪುರ	73
	ಒಟ್ಟು	**1948**

ಅ) ಬೈಲಹೊಂಗಲ ತಾಲ್ಲೂಕಿನಲ್ಲಿ ಒಟ್ಟು 21 ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗಳು ಖಾಲಿ ಇವೆ. ಗ್ರಾಮಗಳ ವಿವರ :

1) ಗುಡಿಕಟ್ಟೆ (2) ಶಿವನೂರು (3) ಮಲ್ಲಾಪುರ ಕೆ.ಎ
(4) ಕೇಸರಿಕೊಪ್ಪ (5) ಬಸಾಪುರ (6) ಮಲ್ಲಾಪುರ ಕೆ.ಎಸ್.
(7) ಮರಿಕಟ್ಟೆ (8) ಬಾವಿಹಾಳ (9) ಸಾಣಿಕೊಪ್ಪ
(10) ಹೆಚ್.ನಜರಾಪುರ (11) ವೀರಾಪುರ (12) ವಣ್ಣರಪಳ್ಳಿ
(13) ಅಣಿಗೋಳ (14) ಡಿಗ್ಗಾಂವ್ (15) ಎಂ. ನಜರಾಪುರ
(16) ಮಣಿಬಸರ (17) ಮಡಿಕೆಬಾವಿ
(18) ಹೆಚ್ಚುವರಿ ಗ್ರಾ. ಲೆ. -1 (19) ರಜಾಮೀಸಲು - 3.

ಆ) ಸೌದತ್ತಿ ತಾಲ್ಲೂಕಿನಲ್ಲಿ ಒಟ್ಟು 8 ಗ್ರಾಮ ಲೆಕ್ಕಾಧಿಕಾರಿ ಹುದ್ದೆಗಳು ಖಾಲಿ ಇವೆ. ಗ್ರಾಮಗಳ ವಿವರ :

1) ಪಡಳಿ (2) ಕಡಬಿ (3) ರೈನಾಪುರ
(4) ಹುಲಿ 5) ಮೊರಬ (6) ಬಳ್ಳದಪಳ್ಳಿ
(7) ತೆಗ್ಗಿದಾಳ (8) ಹಂಚಿನಾಳ

ಶಿವಮೊಗ್ಗದಲ್ಲಿ ಅತಿ ಮಳೆಯಿಂದ ನೊಂದವರಿಗೆ ಪರಿಹಾರ

3558 - ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗದಲ್ಲಿ ದಿನಾಂಕ : 17.11.90ರಿಂದ ಸಂಜೆ ಭಾರೀ ಮಳೆ ಬಿದ್ದು ಕಡು ಬಡವರು ಅತೀ ತೊಂದರೆ ಅನುಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬಡವರಿಗೆ ಏನು ಪರಿಹಾರ ಕೊಡಲಾಗಿದೆ? ಮತ್ತು ಇನ್ನೇನಾದರೂ ಪರಿಹಾರ ಕೊಡಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಬಂದಿದೆ.

ಆ) ಅಕ್ಕಿ ವಿತರಣೆ -ತಲಾ 5 ಕೆ.ಜಿ.ಯಂತೆ 330 ಕುಟುಂಬಗಳಿಗೆ ನೀಡಿದೆ.

(ಇ) ನಗದು ಪರಿಹಾರ (ಮನೆ ದುರಸ್ತಿ)- ನಿಯಮಾವಳಿಗಳ ಪ್ರಕಾರ 330 ಕುಟುಂಬಗಳಿಗೆ ಒಟ್ಟು 1,67,850-00 ರೂ.ಗಳನ್ನು ನೀಡಿದೆ.

(ಇ) ನಗದು ಪರಿಹಾರ - ತ್ವರಿತ ಪರಿಹಾರವಾಗಿ ತಲಾ 50 ರೂ.ಗಳಂತೆ 330 ಕುಟುಂಬಗಳಿಗೆ ನೀಡಿದೆ.

ಈಗಾಗಲೇ ಪರಿಹಾರವನ್ನು ಅರ್ಹನೊಂದವರಿಗೆ ನೀಡಿರುವುದರಿಂದ, ಇನ್ನೇನೂ [illegible]

ರಾಜ್ಯದಲ್ಲಿ ಹಿಂದೂ ಅಭಿವೃದ್ಧಿ ಮಂಡಳಿ ರಚನೆ

3649 - ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೆ?

1) ವಕ್ಫ್ ಬೋರ್ಡ್ ತರಹ ಹಿಂದೂ ಅಭಿವೃದ್ಧಿಗಾಗಿ ಮಂಡಳಿಯನ್ನು ನೇಮಿಸಲು ಸರ್ಕಾರ ಯೋಚಿಸಿದೆಯೇ?

2) ಹಾಗಿದ್ದಲ್ಲಿ ಈ ಹಿಂದೂ ಅಭಿವೃದ್ಧಿ ಮಂಡಳಿಗೆ ಎಷ್ಟು ಹಣ ಮೀಸಲಿಡಲಾಗಿದೆ.?

ಶ್ರೀ ರಾಜಾ ಅಮರೇಶ್ ನಾಯಕ್ (ಧಾರ್ಮಿಕ ದತ್ತಿ ರಾಜ್ಯ ಸಚಿವರು):

1) ಇಲ್ಲ.

2) ಉದ್ಭವಿಸುವುದಿಲ್ಲ.

ಹಾಸನ ಜಿಲ್ಲೆಯಲ್ಲಿ ಭೂಮಿ ಒತ್ತುವರಿ ಬಗ್ಗೆ

3567 - ಶ್ರೀ ಬಿ. ಹೆಚ್. ಲಕ್ಷ್ಮಯ್ಯ (ಬೇಲೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ ಎಷ್ಟು ಎಕರೆ ಸರ್ಕಾರಿ ಭೂಮಿ ಒತ್ತುವರಿಯಾಗಿರುವುದು.

ಆ) ಆದರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು ಎಷ್ಟು ಎಕರೆ ಒತ್ತುವರಿ ಮಾಡಿರುವರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಹಾಸನ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ ಸರ್ಕಾರಿ ಭೂಮಿ ಒತ್ತುವರಿಯಾಗಿರುವ ಪ್ರದೇಶದ ವಿವರಗಳು ಕೆಳಕಂಡಂತಿರುತ್ತವೆ:

ತಾಲ್ಲೋಕಿನ ಹೆಸರು	ಒತ್ತುವರಿಯಾಗಿರುವ ವಿಸ್ತೀರ್ಣ ಎಕರೆ ಗುಂಟೆ
1) ಹಾಸನ	12,502 - 00
2) ಅರಸೀಕೆರೆ	19,968 - 00
3) ಚನ್ನರಾಯಪಟ್ಟಣ	11,797 - 00
4) ಹೊಳೇನರಸೀಪುರ	9,685 - 00
5) ಸಕಲೇಶಪುರ	5,133 - 00
6) ಅರಕಲಗೂಡು	6,502 - 00
7) ಬೇಲೂರು	11,834 - 00
8) ಆಲೂರು	9,629 - 00
ಒಟ್ಟು	87,050 - 00

ಆ) ಆದರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು ಒತ್ತುವರಿ ಮಾಡಿರುವ ಜಮೀನಿನ ವಿಸ್ತೀರ್ಣ ಕೆಳಕಂಡಂತೆ:

ತಾಲ್ಲೂಕಿನ ಹೆಸರು	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಒತ್ತುವರಿ ಮಾಡಿರುವ ಜಮೀನಿನ ವಿಸ್ತೀರ್ಣ ಎಕರೆ ಗುಂಟೆ
1) ಹಾಸನ	842 - 00

3) ಚನ್ನರಾಯಪಟ್ಟಣ	1,736 - 00
4. ಹೊಳೇನರಸೀಪುರ	1,401 - 00
5. ಸಕಲೇಶಪುರ	580 - 00
6. ಅರಕಲಗೂಡು	2,217 - 00
7. ಬೇಲೂರು	3,299 - 00
8. ಆಲೂರು	2,206 - 00
ಒಟ್ಟು	15,984 - 00

ಹಾಸನ ಜಿಲ್ಲೆಯಲ್ಲಿ ಒತ್ತುವರಿ ಜಮೀನನ್ನು ಸಕ್ರಮಗೊಳಿಸುವ ಕುರಿತು.

3569 - ಶ್ರೀ ಬಿ. ಹೆಚ್. ಲಕ್ಷ್ಮಯ್ಯ (ಬೇಲೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಹಾಸನ ಜಿಲ್ಲೆಯಲ್ಲಿ ಎಷ್ಟು ಎಕರೆ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡು ಕಾಫಿ ಬೆಳೆ ಹಾಕಿರಲಾಗುವುದು. (ತಾಲ್ಲೂಕುವಾರು ವಿವರ ಕೊಡುವುದು).

2) ಈ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸಲು ಸರಕಾರ ಉದ್ದೇಶಿನದೆಯೇ?

3) ಹಾಗಿದ್ದಲ್ಲಿ ಸಕ್ರಮ ಗೊಳಿಸುವಲ್ಲಿ ಸರಕಾರದ ನೀತಿಯೇನು ಮತ್ತು ಯಾವಾಗ ಸಕ್ರಮಗೊಳಿಸಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ *ಖರ್ಗೆ (ಕಂದಾಯ ಸಚಿವರು):*

1) ಹಾಸನ ಜಿಲ್ಲೆಯಲ್ಲಿ ಸರ್ಕಾರಿ ಒತ್ತುವರಿ ಜಮೀನನ್ನು ಕಾಫಿ ಬೆಳೆಯಲು ಬೆಳೆಸಿರುವ ತಾಲ್ಲೂಕು ಎಂದು ವಿವರಗಳ ವಿಸ್ತೀರ್ಣವನ್ನು ಈ ಕೆಳಗೆ ನಮೂದಿಸಲಾಗಿದೆ.

ತಾಲ್ಲೂಕುಗಳ ಹೆಸರು	ಕಾಫಿ ಬೆಳೆಯನ್ನು ಬೆಳೆದಿರುವ ಒಟ್ಟು ವಿಸ್ತೀರ್ಣ ಎಕರೆ ಮತ್ತು ಗುಂಟೆಗಳಲ್ಲಿ
	ಎ - ಗು
1. ಹಾಸನ	ಇಲ್ಲ
2. ಅರಸೀಕೆರೆ	ಇಲ್ಲ
3. ಚನ್ನರಾಯನಪಟ್ಟಣ	ಇಲ್ಲ
4. ಹೊಳೇನರಸೀಪುರ	ಇಲ್ಲ
5. ಸಕಲೇಶಪುರ	3,434 - 33
6. ಅರಕುಲಗೂಡು	36 - 09
7. ಬೇಲೂರು	1,138 - 02
8. ಆಲೂರು	451 -10
ಒಟ್ಟು	5,060 -14

2) ಈ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ.

3) ಸಕ್ರಮಗೊಳಿಸುವಲ್ಲಿ ಪ್ರತ್ಯೇಕವಾಗಿ ಪರಿಶೀಲಿಸಲಾಗುತ್ತದೆ ಮತ್ತು ಈ ಬಗ್ಗೆ ಮಾಡಿದ ನೀತಿಯನ್ನು ಪ್ರಚಾರ ಪಡಿಸಲಾಗುತ್ತದೆ.

ಹಾಲಿನ ಬೆಲೆಯ ಬಗ್ಗೆ

3578 - ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ, ಆಂಧ್ರ ಪ್ರದೇಶ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಕೇರಳ ರಾಜ್ಯಗಳಲ್ಲಿ 3.5 ಜಿಡ್ಡಿನಂಶದ ಒಂದು ಲೀಟರ್ ಹಾಲಿಗೆ ಆಯಾ ರಾಜ್ಯಗಳ ಡೈರಿ ಸಂಸ್ಥೆಯವರು ಎಷ್ಟು ಹಣ ಕೊಟ್ಟು ರೈತರಿಂದ ಹಾಲನ್ನು ಕೊಂಡುಕೊಳ್ಳುತ್ತಿದ್ದಾರೆ ?

ಆ) ಇತ್ತೀಚೆಗೆ ರೈತರು ಕೊಂಡುಕೊಳ್ಳುವ ಎಲ್ಲಾ ಪದಾರ್ಥಗಳ ಬೆಲೆಗಳು ಜಾಸ್ತಿಯಾಗಿರುವುದರಿಂದ ರೈತರಿಂದ ಕೊಂಡುಕೊಳ್ಳುವ ಹಾಲಿನ ಬೆಲೆಯನ್ನು ಜಾಸ್ತಿ ಮಾಡಲು ಸರ್ಕಾರ ಆಲೋಚಿಸಿದೆಯೇ ?

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನಾ ಮತ್ತು ಪಶು ವೈದ್ಯಸೇವಾ ಸಚಿವರು):

ಅ) ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯವರು ಕ್ಷೀರಧಾರ ಯೋಜನೆಯ ಜೂನ್ 91ರ ಮಾಸಿಕ ಪ್ರಗತಿ ವರದಿಯಲ್ಲಿ ನೀಡಿರುವ ಮಾಹಿತಿಯಂತೆ ಈ ರಾಜ್ಯಗಳಲ್ಲಿನ ಹಾಲು ಒಕ್ಕೂಟ ಡೇರಿಗಳಲ್ಲಿರುವ ಹಾಲು ಶೇಖರಣಾ ದರಗಳ ಈ ಕೆಳಕಂಡಂತಿರುತ್ತದೆ:

ರಾಜ್ಯದ ಹೆಸರು	*ಹಾಲು ಶೇಖರಣಾ ದರ ಲೀಟರ್‌ಗೆ ರೂ. ಗಳಲ್ಲಿ*	
	ಕನಿಷ್ಠ	ಗರಿಷ್ಠ
1) ಆಂಧ್ರ ಪ್ರದೇಶ	3.37	4.54
2) ಮಹಾರಾಷ್ಟ್ರ	3.32	5.22
3) ಪಶ್ಚಿಮ ಬಂಗಾಳ	3.79	4.87
4) ಕೇರಳ	4.46	
5) ಕರ್ನಾಟಕ	3.99 (ದಕ್ಷಿಣ ಜಿಲ್ಲೆಗಳು)	4.42 (ಉತ್ತರ ಜಿಲ್ಲೆಗಳು)

ಆ) ಇಲ್ಲ.

ಅಗಿಲೆಗ್ರಾಮದ ಚೆನ್ನಕೇಶವಸ್ವಾಮಿ ದೇವಸ್ಥಾನ ಕಟ್ಟಡದ ದುರಸ್ತಿ

3671 - ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ): ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೆ ?

ಅ) ಹಾಸನ ಕ್ಷೇತ್ರದ ಅಗಿಲೆ ಗ್ರಾಮದ ಶ್ರೀ ಚೆನ್ನಕೇಶವ ಸ್ವಾಮಿ ದೇವಸ್ಥಾನದ ಕಟ್ಟಡವು ಶಿಥಿಲವಾಗಿದ್ದು, ಬೀಳುವ ಸ್ಥಿತಿಯಲ್ಲಿರುವುದು ನಿಜವೇ ?

ಆ) ಈ ದೇವಸ್ಥಾನದ ತುರ್ತು ರಿಪೇರಿಗೆ ಸರ್ಕಾರ ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ರಾಜ ಅಮರೇಶ ನಾಯಕ್ (ಧಾರ್ಮಿಕ ದತ್ತಿ ರಾಜ್ಯ ಸಚಿವರು) :

ಅ) ನಿಜ.

15,000-00 ಗಳನ್ನು ಬಿಡುಗಡೆ ಮಾಡಲಾಗಿದೆ).

ಹಾಸನ ಜಿಲ್ಲೆಯಲ್ಲಿ ಅತಿವೃಷ್ಠಿಯಿಂದ ಹಾನಿ ಆಗಿರುವ ಬಗ್ಗೆ

3576 - ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಜಿಲ್ಲೆಗೆ ಇತ್ತೀಚೆಗೆ ಬಿದ್ದ ಧಾರಾಕಾರ ಮಳೆಯಿಂದ ಉಂಟಾದ ಹಾನಿಯೆಷ್ಟು?

ಆ) ವಿವಿಧ ಬೆಳೆಗಳಿಗೆ ಉಂಟಾದ ಹಾನಿಯ ಮೌಲ್ಯವೆಷ್ಟು?

ಇ) ಬಿದ್ದು ಹೋದ ಮನೆಗಳ ಸಂಖ್ಯೆ ಎಷ್ಟು?

ಈ) ಇದುವರೆವಿಗೆ ಸರ್ಕಾರ ಎಷ್ಟು ಪರಿಹಾರ ಹಣ ಒದಗಿಸಿದೆ?

ಉ) ಬೆಳೆ ಹಾಳಾದ ರೈತರಿಗೆ ಪರಿಹಾರ ಕೊಡುವಾಗ, ಸಣ್ಣ, ಅತೀ ಸಣ್ಣ ಮತ್ತು ದೊಡ್ಡ ರೈತರೆಂದು ಪರಿಗಣಿಸಿ ವಿವಿಧ ರೀತಿಯ ಪರಿಹಾರ ಒದಗಿಸುವಂತೆ ಸರ್ಕಾರಿ ಆದೇಶವಿತ್ತಿದೆಯೆ:

ಊ) ಹಾಸನ ಕ್ಷೇತ್ರಕ್ಕೆ ಈ ಬಾಬ್ತು ಎಷ್ಟು ಪರಿಹಾರ ಹಣವನ್ನು ನೊಂದ ಜನರಿಗೆ ಒದಗಿಸಲಾಗಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಒಟ್ಟು 126.20 ಲಕ್ಷ ರೂ. ಗಳು

ಆ) ಒಟ್ಟು 104.66 ಲಕ್ಷ ರೂ. ಗಳು

ಇ) 1367 ಮನೆಗಳು.

ಈ) 30.00 ಲಕ್ಷ ರೂ. ಗಳು

ಉ) ಹೌದು

ಊ) 1.93 ಲಕ್ಷ ರೂ.ಗಳು.

ರಾಜ್ಯದಲ್ಲಿ ಖಾಲಿಯಿರುವ ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗಳ ಸಂಖ್ಯೆ

3589 - ಶ್ರೀ ಮಂಜುನಾಥ ಕುನೂರು (ಶಿಗ್ಗಾವಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಾಲಿಯಿರುವ ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಧಾರವಾಡ ಜಿಲ್ಲೆಯಲ್ಲಿ ಖಾಲಿಯಿರುವ ಗ್ರಾಮಲೆಕ್ಕಿಗಳ ಹುದ್ದೆಗಳ ಸಂಖ್ಯೆ ಎಷ್ಟು?

ಇ) ಈ ಬಗ್ಗೆ ಮಾನ್ಯ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) 1948 ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿ ಇದೆ.

ಆ) 339 ಗ್ರಾಮಲೆಕ್ಕಿಗಳ ಹುದ್ದೆಗಳು ಖಾಲಿ ಇದೆ.

ಇ) ಖಾಲಿ ಇರುವ ಎಲ್ಲಾ ಗ್ರಾಮಲೆಕ್ಕಿಗರ ಹುದ್ದೆಗಳಿಗೆ ಮಿತ ವೇತನ ಪದವೀಧರರನ್ನು ಹಾಗೂ ವಿವಿಧ ಇಲಾಖೆಗಳಲ್ಲಿ ವಿಲೀನ ಹೊಂದಿದ ಮತ್ತು ಹೆಚ್ಚುವರಿಯಾದ ದಿನಗೂಲಿ ನೌಕರರನ್ನು ತುಂಬಿಕೊಳ್ಳಲು ಈಗ ಕ್ರಮ ತೆಗೆದು ಕೊಳ್ಳಲಾಗುತ್ತಿದೆ.

ರಾಣಿಬೆನ್ನೂರಿನ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿಯನ್ನು ಸ್ಥಳಾಂತರಿಸುವ ಬಗ್ಗೆ.

3593 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಂಗ್ಗಾವ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲಾ ರಾಣಿ ಬೆನ್ನೂರಿನಿಂದ (ಎಸ್‌ಸಿ) ಟಿಆರ್‌ಐಪಿ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಆಫೀಸ್ ಅನ್ನು ಸವಣೂರಿಗೆ ಶಿಫ್ಟ್ ಮಾಡಲು ಸರ್ಕಾರದಿಂದ ಆದೇಶವಾಗಿದೆಯೇ ಹಾಗಿದ್ದಲ್ಲಿ ಕಛೇರಿಯನ್ನು ಈವರೆಗೂ ಸ್ಥಳಾಂತರಿಸದಿರಲು ಕಾರಣವೇನು?

ಆ) ಸದರಿ ಕಛೇರಿಯಲ್ಲಿ ಎಷ್ಟು ಜನ ಸಿಬ್ಬಂದಿ ವರ್ಗದವರು ಕೆಲಸ ಮಾಡುತ್ತಾರೆ.

ಇ) ಶಿಗ್ಗಾಂವ, ಸವಣೂರು ತಾಲ್ಲೂಕುಗಳಲ್ಲಿ ಎಷ್ಟು ಹೆಕ್ಟೇರು ಜಮೀನು ಎಷ್ಟು ಹಣವನ್ನು 1989-90, 1990-91,1991-92ರಲ್ಲಿ ಖರ್ಚು ಮಾಡಲಾಗಿದೆ.

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು) :

ಅ) ಸಹಾಯಕ ಕೃಷಿ ನಿರ್ದೇಶಕರು (ಬೂನಾಸಂ) ಟಿಆರ್‌ಎಪಿ, ರಾಣಿ ಬೆನ್ನೂರು ಇವರ ಕಛೇರಿಯನ್ನು ಧಾರವಾಡ ಜಿಲ್ಲೆಯ ಸವಣೂರಿಗೆ ಸ್ಥಳಾಂತರಿಸಲು ದಿನಾಂಕ 30-7-91ರಂದು ಸರ್ಕಾರದ ಆದೇಶವಾಗಿರುತ್ತದೆ. ಸವಣೂರಿನಲ್ಲಿ ಸದರಿ ಕಛೇರಿಯನ್ನು ಪ್ರಾರಂಭಿಸಲು ಸರ್ಕಾರಿ ಕಟ್ಟಡಗಳು ಸಿಗದೆ, ಹಾಗೂ ಖಾಸಗಿ ಕಟ್ಟಡಗಳು ಬಾಡಿಗೆಗೆ ಲಭ್ಯವಾಗದ ಪ್ರಯುಕ್ತ ಸ್ಥಳಾಂತರವು ಇದುವರೆಗೂ ಸಾಧ್ಯವಾಗಿಲ್ಲ.

ಸವಣೂರಿನಲ್ಲಿ ಸೂಕ್ತ ಕಟ್ಟಡ ಸಿಕ್ಕಿದ ತಕ್ಷಣ ಸಹಾಯಕ ಕೃಷಿ ನಿರ್ದೇಶಕರು (ಬೂನಾಸಂ) ಟಿಆರ್‌ಎಪಿ ರಾಣಿ ಬೆನ್ನೂರು ಇವರ ಕಾರ್ಯಾಲಯವನ್ನು ಸವಣೂರು ಕೇಂದ್ರ ಸ್ಥಾನಕ್ಕೆ ಸ್ಥಳಾಂತರಿಸಲಾಗುವುದು.

ಆ) ಒಟ್ಟು 477 ಜನ.

ಇ) ಶಿಗ್ಗಾಂವ ಹಾಗೂ ಸವಣೂರು ತಾಲ್ಲೂಕುಗಳಲ್ಲಿ ಕೇಂದ್ರ ಪುರಸ್ಕೃತ ನದೀ ಕಣಿವೆ ಯೋಜನೆಯಡಿಯಲ್ಲಿ ಭೂಸಂರಕ್ಷಣೆ ಹಾಗೂ ಭೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡಿದೆ. ವಿವರಗಳು ಈ ಕೆಳಕಂಡಂತೆ ಇವೆ:

ವರ್ಷ	ಅಭಿವೃದ್ಧಿ ಪಡಿಸಿದ ಜಮೀನು(ಹೆಕ್ಟೇರುಗಳಲ್ಲಿ)	ವಿನಿಯೋಗಿಸಿದ ಹಣ (ಲಕ್ಷ ರೂ. ಗಳಲ್ಲಿ)
<u>ಶಿಗ್ಗಾಂವ ತಾಲ್ಲೂಕು</u> :		
1989-90	231	2.51
1990-91	217	2.71
1991-92 (ಆಗಸ್ಟ್ ಕೊನೆಯವರೆಗೆ)	04	0.26
<u>ಸವಣೂರು ತಾಲ್ಲೂಕು</u>		
1989-90	1224	10.62
1990-91	2638	24.95
1991-92 (ಆಗಸ್ಟ್ ಕೊನೆಯವರೆಗೆ)	1045	11.95

ಕಬ್ಬನ್ ಉದ್ಯಾನವನದ ಅಭಿವೃದ್ಧಿ

3600 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ತೋಟಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದಲ್ಲಿರುವ ಕಬ್ಬನ್ ಉದ್ಯಾನವನವನ್ನು ಸುರಕ್ಷಿತವಾಗಿ ಕಾಪಾಡಲು ಅಭಿವೃದ್ಧಿ ಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಕಬ್ಬನ್ ಉದ್ಯಾನವನದಲ್ಲಿ ಅನೇಕ ರೀತಿಯ ಒತ್ತುವರಿ ಬರುತ್ತಿರುವುದನ್ನು ಸರ್ಕಾರ ತಡೆಯಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ಎಸ್. ಆತ್ಮಾನಂದ (ತೋಟಗಾರಿಗೆ ರಾಜ್ಯ ಸಚಿವರು) :

ಅ) ಕಬ್ಬನ್ ಉದ್ಯಾನವನದ ಆವರಣದಲ್ಲಿ ಉದ್ಯಾನವನವನ್ನು ಸುರಕ್ಷಿತವಾಗಿ ಕಾಪಾಡಲು ಕರ್ನಾಟಕ ಉದ್ಯಾನವನಗಳ ಸುರಕ್ಷಣಾ ಕಾಯಿದೆ -1975 (Karnataka Parks Preservation Act), ಜಾರಿಯಲ್ಲಿದೆ.

ಆ) ಕಬ್ಬನ್ ಉದ್ಯಾನವನ ಈಗ ಒಂದು ಸುರಕ್ಷಿತ ಉದ್ಯಾನವನವಾಗಿದ್ದು ಈ ಉದ್ಯಾನವನದ ಯಾವುದೇ ಭಾಗದಲ್ಲಿ ಒತ್ತುವರಿ ಮಾಡಲು ಸರ್ಕಾರ ಅವಕಾಶ ಮಾಡಿ ಕೊಟ್ಟಿರುವುದಿಲ್ಲ.

ರಾಜ್ಯದ ಅರಣ್ಯ ಭೂಮಿ ವಿಸ್ತೀರ್ಣ

3630 - ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅರಣ್ಯ ಭೂಮಿಯ ಒಟ್ಟು ವಿಸ್ತೀರ್ಣವೆಷ್ಟು?

ಆ) ಅದರಲ್ಲಿ ರೈತರು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವ ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು?

ಇ) ಇದರಿಂದಾಗಿ ಸರ್ಕಾರಕ್ಕೆ ಉಂಟಾದ ನಷ್ಟವೆಷ್ಟು?

ಈ) ಈ ಅರಣ್ಯ ಭೂಮಿಯನ್ನು ಒತ್ತುವರಿ ಮಾಡುವುದನ್ನು ನಿಲ್ಲಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಈ. ಟಿ. ಶಂಭುನಾಥ್ (ರಾಜ್ಯ ಅರಣ್ಯ ಸಚಿವರು) :

ಅ) 38,645.54. ಚದರ ಕಿಲೋ ಮೀಟರ್ ಅಥವಾ 38,64,554 ಹೆಕ್ಟೇರು.

ಆ) ರಾಜ್ಯದಲ್ಲಿ ಅರಣ್ಯ ಜಮೀನು ಒತ್ತುವರಿ ಮಾಡಿರುವ ವಿಸ್ತೀರ್ಣದ ವಿವರ ಈ ಕೆಳಕಂಡಂತಿದೆ.

1978 ಕ್ಕೆ ಮೊದಲು	37,422.9 ಹೆಕ್ಟೇರು
1978ರ ನಂತರ	5,883.39 ಹೆಕ್ಟೇರು
	43,305.58 ಹೆಕ್ಟೇರು

ಇ) ಸರ್ಕಾರಕ್ಕೆ ಉಂಟಾದ ನಷ್ಟವನ್ನು ಅಂದಾಜು ಮಾಡಿರುವುದಿಲ್ಲ.

ಈ) 1978ರ ನಂತರ ಆದ ಅರಣ್ಯ ಒತ್ತುವರಿಯನ್ನು ನಿಲ್ಲಿಸಲು ಕರ್ನಾಟಕ ಅರಣ್ಯ ಕಾಯ್ದೆ 64 (ಎ) ಪ್ರಕಾರ ಮತ್ತು 1980ರ ಅರಣ್ಯ ಸಂರಕ್ಷಣಾ ಕಾಯ್ದೆಯಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯ ಅರಣ್ಯ ನಿಗಮಗಳ ಸಂಖ್ಯೆ

3633 - ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಣ್ಯ ಇಲಾಖೆಯ ಅಡಿಯಲ್ಲಿ ಬರುವ ನಿಗಮಗಳ ಸಂಖ್ಯೆ ಎಷ್ಟು?

ಆ) ಆ ನಿಗಮಗಳು ನಷ್ಟದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಶ್ರೀ ಈ. ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :

ಅ) 3.

ಆ) ಎರಡು ನಿಗಮಗಳು ಇತ್ತೀಚೆಗೆ ನಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಇರುವ ಮೂರು (3) ನಿಗಮಗಳಲ್ಲಿ 2 ನಿಗಮಗಳು ಇತ್ತೀಚಿನ ವರ್ಷಗಳಿಲ್ಲಿ ನಷ್ಟ ಅನುಭವಿಸಿದೆ.

ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ಅಭಿವೃದ್ಧಿ ನಿಗಮ ಕಚ್ಚಾ ವಸ್ತು ಅಭಾವ ಮತ್ತು ಉತ್ಪಾದನಾ ವೆಚ್ಚ ಏರಿಕೆಯ ಕಾರಣದಿಂದ ನಷ್ಟ ಅನುಭವಿಸಬೇಕಾಯಿತು. ಆದರೂ ಸರ್ಕಾರದಿಂದ ಆರ್ಥಿಕ ನೆರವು ಕೋರದೆ ತನ್ನ ಗಳಿಕೆಯಲ್ಲಿ ವೆಚ್ಚಗಳನ್ನು ಸರಿತೂಗಿಸಿಕೊಂಡು ಹೋಗುತ್ತಿದೆ.

ಮತ್ತೊಂದು ನಿಗಮವಾದ ಕರ್ನಾಟಕ ಗೇರು ಅಭಿವೃದ್ಧಿ ನಿಗಮವು ಗೇರು ಸಸಿಗಳು ಮತ್ತು ನೆಡುತೋಪು ಆರಂಭಿಸಿದ್ದು ಅವುಗಳು ಪೋಷಣೆಯ ಹಂತದಲ್ಲಿರುವುದರಿಂದ ಮತ್ತು ಉತ್ಪಾದನಾ ಅವಧಿ ಆರಂಭವಾಗಿರುವುದರಿಂದ ನಷ್ಟ ಅನುಭವಿಸಿತು. ಈ ನೆಡುತೋಪುಗಳು ಕಟಾವಿಗೆ ಬಂದ ನಂತರ ಲಾಭಗಳಿಸುವ ನಿರೀಕ್ಷೆಯಿದೆ.

ಮೀನುಗಾರಿಕೆ ಜೆಟ್ಟಿ ನಿರ್ಮಾಣ ಕಾರ್ಯದ ಬಗ್ಗೆ

3609 - ಶ್ರೀ ವಿಜಯಕುಮಾರ್ ಶೆಟ್ಟಿ (ಸೂರತ್ಕಲ್) : ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಅಂತರ್ಜಲ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನವ ಮಂಗಳೂರು ಬಂದರು ಪ್ರದೇಶದಲ್ಲಿ " ಮೀನುಗಾರಿಕೆ ಜೆಟ್ಟಿ " ನಿರ್ಮಾಣ ಕಾರ್ಯ ಈವರೆಗೆ ಪ್ರಾರಂಭವಾಗದಿರಲು ಕಾರಣಗಳೇನು?

ಆ) ನವಮಂಗಳೂರು ಬಂದರು ನಿರ್ಮಾಣ ಹಂತದಲ್ಲಿ ಈ ಜೆಟ್ಟಿ ರಚನೆಯ ಕಾರ್ಯ ಕೈಗೊಳ್ಳುವ ಒಪ್ಪಂದ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಮಧ್ಯೆ ಆಗಿತ್ತೇ?

ಇ) ಈ ಜೆಟ್ಟಿ ನಿರ್ಮಿಸಲು ಸರ್ಕಾರ ತಕ್ಷಣ ಯಾವ ಕ್ರಮ ಕೈಗೊಳ್ಳಲ್ಲಿದೆ?

ಶ್ರೀ ಎ. ಎಮ್. ಬೆಳ್ಳಿಯಪ್ಪ (ಮೀನುಗಾರಿಕೆ, ಬಂದರು ಮತ್ತು ಒಳನಾಡು ಅಂತರ್ಜಲ ಸಾರಿಗೆ ರಾಜ್ಯ ಮಂತ್ರಿಗಳು) :

ಅ) ಸದ್ಯದಲ್ಲಿ ಈ ಪ್ರಸ್ತಾವನೆ ಇಲ್ಲ.

ಆ) ಈ ಬಗ್ಗೆ ಎರಡು ಸರ್ಕಾರಗಳಲ್ಲಿ ಒಪ್ಪಂದವೇನಾದರೂ ಆಗಿದ್ದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಇ) ಭಾರತ ಸರ್ಕಾರದಿಂದ ಉತ್ತರ ಬಂದ ಮೇಲೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಮುಲ್ಕಿಯಲ್ಲಿ ಸೌಲಭ್ಯಗಳನ್ನು ಕಲ್ಪಿಸುವ ಬಗ್ಗೆ

3611 - ಶ್ರೀ ಕೆ. ಸೋಮಪ್ಪ ಸುವರ್ಣ (ಮುಲ್ಕಿ ಮೂಡಬಿದ್ರಿ): ಮಾನ್ಯ ಮೀನುಗಾರಿಕೆ ಬಂದರು ಮತ್ತು ಒಳನಾಡು ಅಂತರ್ಜಲ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಲ್ಕಿಯ ಅಳಿವೆಯ ಆಳವು ಕಡಿಮೆಯಾಗಿ ಮೀನುಗಾರಿಕಾ ಪರ್ಸೀಸ್ ದೋಣಿಗಳನ್ನು ತಂಗಲು ಅನಾನುಕೂಲವಾದ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ?

ಆ) ಈ ಅಳಿವೆಯನ್ನು ಆಳಮಾಡಿ. ಮೀನುಗಾರಿಕಾ ದೋಣಿಗಳಲ್ಲಿ ತಂಗುವಂತೆ ಮಾಡಲು ಸರ್ಕಾರ ಏನಾದರೂ ಯೋಜನೆ ತಯಾರಿಸಿದೆಯೇ ?

ಇ) ಮುಲ್ಕಿಯು ಉತ್ತಮ ಮೀನುಗಾರಿಕಾ ಕೇಂದ್ರವಾಗಿದ್ದರೂ ಇಲ್ಲಿ ಮೀನುಗಾರಿಕಾ ಸೌಲಭ್ಯಗಳಿಂದ ತೊಂದರೆ ಅನುಭವಿಸುವುದನ್ನು ತಪ್ಪಸಲು ಏನು ಕ್ರಮ ಕೈಗೊಂಡಿದೆ?

ಈ) ಇಲ್ಲಿಯ ಶೈತ್ಯಾಗಾರವು ಶಿಥಿಲಗೊಂಡಿದ್ದು ಕಟ್ಟಡವು ಬಿದ್ದು ಹೋಗಿದ್ದು ಈ ಸ್ಥಳವನ್ನು ಸ್ಥಳೀಯ ಶಾಲಾ ಕಟ್ಟಡ ದುರಸ್ತಿಗೊಳಿಸಲು ಇರುವ ಅಡ್ಡಿ ಆತಂಕಗಳೇನು?

ಶ್ರೀ ಎ. ಎಮ್. ಬೆಳ್ಳಿಯಪ್ಪ (ಮೀನುಗಾರಿಕೆ, ಬಂದರು ಮತ್ತು ಒಳನಾಡು ಅಂತರ್ಜಲ ಸಾರಿಗೆ ರಾಜ್ಯ ಮಂತ್ರಿಗಳು):

ಅ) ಇಲ್ಲಿ ಪರ್ಸೀಸ್ ದೋಣಿಗಳು ಮೀನುಗಾರಿಕೆ ಮಾಡುತ್ತಿಲ್ಲ. ಹಾಗಾಗಿ ಇಲ್ಲಿಯ ಅಳಿವೆಯ ಆಳ ಕಡಿಮೆಯಾಗಿ ದೋಣಿಗಳು ತಂಗಲು ಅನಾನುಕೂಲವಾಗುವ ಪ್ರಸಂಗ ಬರುವುದಿಲ್ಲ.

ಆ) ಇಲ್ಲ.

ಇ) ಈ ಬಗ್ಗೆ ತಾಂತ್ರಿಕ ಸಮೀಕ್ಷ ಕೈಗೊಂಡು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಈ) ಇಲ್ಲಿಯ ಶೈತ್ಯಾಗಾರ ಕಟ್ಟಡವು ಈಗ ಮಂಗಳೂರಿನ ಮೀನುಗಾರಿಕೆ ಅಭಿವೃದ್ಧಿ ನಿಗಮದ ವಶದಲ್ಲಿದ್ದು ಸ್ಥಳೀಯ ಶಾಲೆಯನ್ನು ನಡೆಸಲು ನೀಡುವ ಬಗ್ಗೆ ನಿಗಮ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತು ಇವುಗಳ ಮಧ್ಯೆ ಪತ್ರ ವ್ಯವಹಾರ ನಡೆಯುತ್ತಿರುತ್ತದೆ.

ದಕ್ಷಿಣ ಕನ್ನಡದಲ್ಲಿ ಮೀನಿನ ಉತ್ಪಾದನೆ

3612 - ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಮೀನುಗಾರಿಕೆ ಬಂದರು ಮತ್ತು ಒಳನಾಡು ಅಂತರ್ಜಲ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1988-89, 1989-90, 1990-91ರಲ್ಲಿ ಒಟ್ಟು ಮೀನಿನ ಉತ್ಪಾದನೆ ಎಷ್ಟಾಗಿದೆ?

ಆ) ಇವುಗಳಿಂದ ಬಂದ ಒಟ್ಟು ಹಣವೆಷ್ಟು? (ವರ್ಷವಾರು ವಿವರಗಳನ್ನು ಒದಗಿಸುವುದು)

ಇ) ಈ ಮೀನಿನ ಸರಬರಾಜಿಗೆ ಕೈಗೊಂಡ ವ್ಯವಸ್ಥೆಗಳೇನು?

ಈ) ಮೀನು ಸಾಗಾಣಿಕೆಗೆ ವಾಹನಗಳನ್ನು ಕೊಡಲಾಗಿದೆಯೇ; ಸಾಕಷ್ಟು ಐಸ್ ಫ್ಯಾಕ್ಟರಿಗಳು ಇದಕ್ಕಾಗಿ ಇದೆಯೆ?

ಶ್ರೀ ಎ.ಎಂ. ಬೆಳ್ಳಿಯಪ್ಪ (ಮೀನುಗಾರಿಕೆ, ಬಂದರು ಮತ್ತು ಒಳನಾಡು ಅಂತರ್ಜಲ ಸಾರಿಗೆ ರಾಜ್ಯ ಮಂತ್ರಿಗಳು):

ಅ)

1988-98	98,371 ಮೆಟ್ರಿಕ್ ಟನ್
1989-90	1,29,578 ಮೆಟ್ರಿಕೆ ಟನ್
1990-91	1,48,217 ಮೆಟ್ರಿಕ್ ಟನ್

ಆ) ಈ ಮೀನಿನ ಅಂದಾಜು ಮೌಲ್ಯ:

1988-89	34.72 ಕೋಟಿ ರೂ. ಗಳು.
1989-90	34.76 ಕೋಟಿ ರೂ. ಗಳು
1990-91	43.58 ಕೋಟಿ ರೂ. ಗಳು

ಇ) ಹಿಡಿದ ಮೀನನ್ನು ಸಾಗಾಟ ಮಾಡಲು ಅವಶ್ಯಕವಿದ್ದಕಡೆ ಕೊಂಡಿ ರಸ್ತೆಗಳನ್ನು ಕರಾವಳಿ ಉದ್ದಕ್ಕೂ ನಿರ್ಮಿಸಲಾಗಿದೆ.

ಈ) ಹೌದು. 77 ಮಂಜುಗೆಡ್ಡೆ ಕಾರ್ಖಾನೆಗಳು ದಿನ ನಿತ್ಯ 960 ಮೆಟ್ರಿಕ್ ಟನ್ ಮಂಜುಗೆಡ್ಡೆಯನ್ನು ಉತ್ಪಾದಿಸುತ್ತವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂದಾಯ ಇಲಾಖೆಯ ಅಧೀನದಲ್ಲಿರುವ ಜಮೀನಿನ ಬಗ್ಗೆ.

3620 - ಶ್ರೀ ಬಿ.ಎಂ. ಇದಿನಬ್ಬ, (ಉಳ್ಳಾಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂದಾಯ ಇಲಾಖೆಯ ವಶದಲ್ಲಿರುವ ಜಮೀನು ಎಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಸಾರ್ವಜನಿಕ ಉಪಯೋಗಕ್ಕಾಗಿ ನೀಡುವ ಸಲುವಾಗಿ ಇಲಾಖೆಯು ಸಾಕಷ್ಟು ಜಮೀನುಗಳನ್ನು ಹೊಂದಿದೆಯೇ (ಹಾಗಿದ್ದರೆ ತಾಲ್ಲೂಕುವಾರು ವಿವರಗಳನ್ನೊದಗಿಸುವುದು)?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂದಾಯ ಇಲಾಖೆಯ ವಶದಲ್ಲಿರುವ ಹಾಗೂ ಭೂ ಮಂಜೂರಾತಿ ನಿಯಮಗಳ ಅನ್ವಯ ವಿಲೆಗೆ ಲಭ್ಯವಿರುವ ಜಮೀನುಗಳ ತಾಲ್ಲೂಕುವಾರು ಮಾಹಿತಿ ಕೆಳಕಂಡಂತಿರುತ್ತೆ.

ತಾಲ್ಲೂಕಿನ ಹೆಸರು	ಕಂದಾಯ ಇಲಾಖೆಯ ವಶದಲ್ಲಿರುವ ಜಮೀನಿನ ವಿಸ್ತೀರ್ಣ ಎಕರೆ-ಗುಂಟೆ
1. ಕುಂದಾಪುರ	10 - 51
2. ಉಡುಪಿ	144 - 33
3. ಮಂಗಳೂರು	51 - 05
4. ಭಂಟ್ವಾಳ	125 - 47
5. ಬೆಳ್ತಂಗಡಿ	95 - 49
6. ಪುತ್ತೂರು	47 - 82
7. ಸೂಳ್ಯ	--
8. ಸೂರತ್ಕಲ್	--
ಒಟ್ಟು	569 - 67

ಆ) ಸಾರ್ವಜನಿಕ ಉಪಯೋಗಕ್ಕಾಗಿ ನೀಡಲು ಕಂದಾಯ ಇಲಾಖೆಯು ಸಾಕಷ್ಟು ಜಮೀನುಗಳನ್ನು ಹೊಂದಿರುವುದಿಲ್ಲ (ಈ ಬಗ್ಗೆ ಸಾಕಷ್ಟು ಜಮೀನುಗಳು ಇಲ್ಲದೇ ಇರುವುದರಿಂದ ತಾಲ್ಲೂಕುವಾರು ಮಾಹಿತಿ ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ)

ಬಳ್ಳಾರಿ ಜಿಲ್ಲೆಯಲ್ಲಿ ಉತ್ಪಾದನೆಯಾಗುತ್ತಿರುವ ಹಾಲಿನ ಪ್ರಮಾಣ

3617 - ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸರ್ಕಾರದ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆಯಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳು ಎಷ್ಟು? (ತಾಲ್ಲೂಕುವಾರು ಹಾಗೂ ಹೆಸರುವಾರು ತಿಳಿಸುವುದು)?

ಆ) ಜಿಲ್ಲೆಯಲ್ಲಿರುವ ಮದರ್ ಡೈರಿಗಳೆಷ್ಟು? ಹಾಗೂ ಶೀತಲೀಕರಣ ಕೇಂದ್ರಗಳೆಷ್ಟು? (ತಾಲ್ಲೂಕುವಾರು ಕೇಂದ್ರಗಳ ಹಾಗೂ ಶೇಖರಣೆಯಾಗುವ ಹಾಲಿನ ಪ್ರಮಾಣದ ವಿವರಗಳನ್ನು ಒದಗಿಸುವುದು)?

ಶ್ರೀ ಬಸವರಾಜ ಪಾಟೀಲ್ (ಪಶುಸಂಗೋಪನಾ ಹಾಗೂ ಪಶುವೈದ್ಯ ಸೇವಾ ರಾಜ್ಯ ಸಚಿವರು):

ಅ) 105 ಸಂಘಗಳು ಕಾರ್ಯಾಚರಣೆಯಲ್ಲಿರುತ್ತವೆ.

ವಿವರ ಅನುಬಂಧ -1 ರಲ್ಲಿ ನೀಡಲಾಗಿದೆ.

ಆ) ಬಳ್ಳಾರಿ ಜಿಲ್ಲೆಯಲ್ಲಿ ಮಾತೃ ಡೈರಿ ಇರುವುದಿಲ್ಲ, ಆದರೆ ಒಂದು ಸಂಸ್ಕರಣಾ ಡೇರಿಯು ಬಳ್ಳಾರಿ ನಗರದಲ್ಲಿ ಇದೆ.

ಬಳ್ಳಾರಿ ಜಿಲ್ಲೆಯಲ್ಲಿ ಎರಡು ಹಾಲು ಶೀತಲೀಕರಣ ಕೇಂದ್ರಗಳಿವೆ.

ಕೇಂದ್ರ ಸ್ಥಳ	*ತಾಲ್ಲೂಕು*	*ಶೇಖರಿಸುತ್ತಿರುವ ಹಾಲಿನ ಪ್ರಮಾಣ ದಿನಂಪ್ರತಿ (ಲೀಟರ್‌ಗಳಲ್ಲಿ)*
1. ಶಿರಗುಪ್ಪ	ಶಿರಗುಪ್ಪ	7,500
2. ಇಟಗಿ	ಹಡಗಲಿ	0,600

ರಾಯಚೂರು ಮತ್ತು ಬಳ್ಳಾರಿ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಬಳ್ಳಾರಿ.

ದಿನಾಂಕ : 31.8.1991ಕ್ಕೆ ಇದ್ದಂತೆ ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಉತ್ಪಾದಕರ ಸಂಘಗಳ ಪಟ್ಟಿ (ಬಳ್ಳಾರಿ ಜಿಲ್ಲೆ)

ಕ್ರ.ಸಂ.	ಬಳ್ಳಾರಿ (ತಾ) ಸಂಘದ ಹೆಸರು		
1.	ಶಿವಪುರ	23.	ಶಂಕರ್‌ಸಿಂಗ್ ಕ್ಯಾಂಪ್
2.	ಎರ್ರಗುಡಿ	24.	ಕೋರ್ಲಗುಂದಿ
3.	ಕಲ್‌ಕುಟಿಗನಾಳ್	25.	ಸಂಗನಕಲ್
4.	ವಣ್ಣೆನೂರು	26.	ತಿರುಮಲನಗರ
5.	ಬಾನಾಳ್	27.	ಶಂಕರಾಬಂಡಾ

6.	ಹಂದಿಹಾಳ್	28.	ವೈ. ಬೂದಿದಾಳ್
7.	ಸಂಧಿಗೇರಿ	29.	ಟಿ. ಬೂದಿಹಾಳ್
8.	ಬೈಲೂರು	30.	ಕಮ್ಮಾರಚೇಡು
9.	ದಮ್ಮೂರು	31.	ಕುಂಟನಹಾಳ್
10.	ಕ್ಯಾಡಿಗೆಹಳ್	32.	ವೈ. ಕಗ್ಗಲ್
11.	ಹೆಚ್. ವೀರಾಪುರ	33.	ಅಸುಂಡಿ
12.	ಲಕ್ಷ್ಮೀಪುರ	34.	ಕಕ್ಕಬೇವಿನಹಳ್ಳಿ
13	ಕೊಳೂರು	35.	ಗೆಣಕಿಹಾಳ್
14.	ಸೋಮಸಮುದ್ರ	36.	ಬಸರಗೋಡು
15.	ಎರ್ರಂಗಳಿ	37	ಬೆಣಕಲ್
16.	ಕೊಳಗಲ್	38.	ಡಿ. ಕಗ್ಗಲ್
17.	ಬಾದನಹಟ್ಟಿ	39.	ಕಂಟೋನ್‌ಮೆಂಟ್
18.	ಯಲ್ಲಾಪುರ	40.	ಚಾಗನೂರು
19.	ಮಾರುತಿಪುರಂ	41.	ಶ್ರೀಧರಗಡ್ಡ
20.	ಪಟ್ಟಣಸೆರಗು	42.	ಕಪ್ಪಗಲ್
21.	ಹಳೇಸಲ್ಲೂಡಿ	43.	ಬೆಳಗೋಡಹಾಳ್
22.	ಚೆನ್ನಪಟ್ಟಣ	44.	ವಡ್ಡಟಿ

ಕ್ರ.ಸಂ.	ಸಿರುಗುಪ್ಪ (ತಾ) ಸಂಘದ ಹೆಸರು		
1.	ಬಂಡ್ರಾಳ್	10.	ಹಳೇಕೋಟೆ
2.	ರಾರಾವಿ	11.	ದರೂರು
3.	ಕೆ. ಸುಗೂರು	12.	ಕರೂರು
4.	ಉಪ್ಪಾರಹೊಸಳ್ಳಿ	13.	ಮುದ್ದಟನೂರು
5.	ಜಾಣಕನೂರು	14.	ಇಬ್ರಾಹಿಂಪುರ
6.	ಅರಳಿಗನೂರು	15.	ದೇಶನೂರು
7.	ಶ್ರೀನಗರ	16.	ಬಾಗೇವಾಡಿ
8.	ಬೂದುಗುಪ್ಪ	17.	ತಾಳೂರು
9.	[illegible]	18.	[illegible]

ಹೊಸಪೇಟೆ (ತಾ) ಸಂಘದ ಹೆಸರು			
1.	ರಾಮಸಾಗರ	8.	ಜಾಕ್
2.	ಮುದ್ಲಾಪುರ ನಂ : 10	9.	ಮೆಟ್ರಿ
3.	ಬುಕ್ಕಸಾಗರ	10.	ಶ್ರೀರಾಮರಂಗಾಪುರ
4.	ಮುದ್ಲಾಪುರ ನಂ : 2	11.	ಸುಗ್ಗೇನಹಳ್ಳಿ
5.	ಸಾಣಾಪುರ	12.	ದೇವಸಮುದ್ರ
6.	ಬಸವೇಶ್ವರ ಕ್ಯಾಂಪ್	13.	ಹಿರೇಜಾಯಗನೂರು
7.	ಕಂಪ್ಲಿ ಕೊಟ್ಟಾರ್	14.	ಕ್ರಿಷ್ಣಾನಗರ ಕ್ಯಾಂಪ್
ಹರಪನಹಳ್ಳಿ (ತಾ) ಸಂಘದ ಹೆಸರು			
1.	ತಾವರಗುಂದಿ	10.	ಹಿರೇಮಗಳಗೆರೆ
2.	ನಿಟ್ಟೂರು	11.	ವಡ್ಡಿನಹಳ್ಳಿ
3.	ಕಡತಿ	12.	ಅರೇಬಸಾಪುರ
4.	ದುಗ್ಗಾವತಿ	13.	ಹಲುವಾಗಿಲು
5.	ತೆಲಿಗಿ	14.	ಗುಂಡಗತ್ತಿ
6.	ಶಿಂಗ್ರಿಹಳ್ಳಿ	15.	ಅಲಗಿಲವಾದ
7.	ರಾಗಿಮಸವಾಲಗ	16	ಕಂಚಿಕೇರಿ
8.	ಸತ್ತೂರು	17.	ಕಮ್ಮಾತ್ರಹಳ್ಳಿ
9.	ಜಂಬುಲಿಂಗಹಳ್ಳಿ		
ಹಡಗಲಿ (ತಾ) ಸಂಘದ ಹೆಸರು			
1.	ದೊಳಗುಂದಿ	೭.	ಮಾಗಳ
2.	ಉತ್ತಂಗಿ	8.	ಮಕರಬ್ಬಿ
3.	ಸೋಗಿ	9.	ಬ್ಯಾಲಹುಣಿಸಿ
4.	ನಂದಿಹಳ್ಳಿ	10.	ಅಂಗೂರು
5.	ಮುದೆನೂರು	11.	ಹಿರೇಬನ್ನಿಮಟ್ಟಿ
6.	ಕನಕನಹಳ್ಳಿ	12.	ಕತ್ತೆಬೆನ್ನೂರು

ಕೆ.ಪಿ.ಎಲ್.ಗೆ ಭೂಮಿ ನೀಡಿಕೆಗೆ ವಿರೋಧ

3625 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಪಲ್ಪ್‌ವುಡ್ ಲಿಮಿಟೆಡ್‌ಗೆ (ಕೆಪಿಎಲ್) ರಾಜ್ಯದ 75 ಸಾವಿರ ಎಕರೆ ಭೂಮಿಯನ್ನು ಕೊಟ್ಟಿರುವುದನ್ನು ವಿರೋಧಿಸಿ ರಾಜ್ಯದ ಜನತೆ ಹಾಗೂ 72 ಜನ ಶಾಸಕರು ಸರ್ಕಾರಕ್ಕೆ ಮನವಿ ಕೊಟ್ಟಿರುವುದನ್ನು ಸರ್ಕಾರ ಗಮನಿಸಿದೆಯೇ?

ಆ) ಕೆ.ಪಿ.ಎಲ್‌ನ್ನು ರದ್ದುಪಡಿಸಿ ಅದಕ್ಕೆ ಕೊಟ್ಟಿರುವ 75 ಸಾವಿರ ಎಕರೆ ರಾಜ್ಯ ಭೂಮಿಯನ್ನು ಪರಿಶಿಷ್ಟ ಜಾತಿ ಜನಾಂಗದವರಿಗೆ ಹಾಗೂ ಬಡ ರೈತರಿಗೆ ಸಾಮಾಜಿಕ ಅರಣ್ಯ ಅಭಿವೃದ್ಧಿ ಪಡಿಸಲು ವಿತರಣೆ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಇ) ಈ ಬಗ್ಗೆ ಸರ್ಕಾರದ ಕ್ರಮ ಹಾಗೂ ನೀತಿಯೇನು?

ಶ್ರೀ ಈ. ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು):

ಅ) ಗಮಿನಿಸಿದೆ.

ಆ) ಕೆ.ಪಿ.ಎಲ್‌ನ್ನು ರದ್ದುಪಡಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಕೆ.ಪಿ.ಎಲ್. ರದ್ದುಪಡಿಸುವ ನಿರ್ಧಾರ ಆಧರಿಸಿ ಸರ್ಕಾರ ಮುಂದಿನ ಕ್ರಮದ ಬಗ್ಗೆ ಪರಿಗಣಿಸಬೇಕಾಗಿರುತ್ತದೆ.

ಕೊಂಕಣ ರೈಲ್ವೆ ಯೋಜನೆ ಭೂಸ್ವಾಧೀನಕ್ಕೆ ಪರಿಹಾರ

2482 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಎಷ್ಟು ಪ್ರಮಾಣದ ರೈತರು ಸಾಗುವಳಿ ಮಾಡುತ್ತಿರುವ ಭೂಮಿ, ಗದ್ದೆ, ತೋಟಗಳನ್ನು ಕೊಂಕಣ ರೈಲ್ವೆ ಯೋಜನೆಗಾಗಿ ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಆ) ಭೂಸ್ವಾಧೀನ ಪಡಿಸಿಕೊಂಡ ರೈತರುಗಳ ಸಾಗುವಳಿ ಭೂಮಿ ಗದ್ದೆ, ತೋಟಗಳಿಗೆ ಇದುವರೆಗೂ ಪರಿಹಾರದ ಹಣವನ್ನು ನೀಡುವಲ್ಲಿ ವಿಳಂಬವಾಗುತ್ತಿರುವುದು ನಿಜವೇ?

ಇ) ಹಾಗಿದ್ದಲ್ಲಿ ಇದುವರೆಗೂ ಎಷ್ಟು ಜನ ರೈತರುಗಳಿಗೆ ಪರಿಹಾರ ಧನವನ್ನು ನೀಡಲಾಗಿದೆ. ಮತ್ತು ಈ ಪ್ರತಿಯೊಬ್ಬ ರೈತರಿಗೂ ನೀಡಿರುವ ಪರಿಹಾರಧನದ ಮೊತ್ತವೆಷ್ಟು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) 1133 ಎಕರೆ (ಕಾರವಾರ 248 ಎಕರೆ, ಕುಮಟ 215 ಎಕರೆ, ಅನ್‌ಕೋಲಾ 211 ಎಕರೆ, ಹೊನ್ನಾವರ 244 ಎಕರೆ, ಭಟ್ಕಲ್ 215 ಎಕರೆ)

ಆ) ಹೌದು.

ಇ) 23 ಜನರಿಗೆ ರೂ. 6,62,100.00 ಗಳ ಪರಿಹಾರ ಧನವನ್ನು ನೀಡಲಾಗಿದೆ.

ಹೊಸ ತಾಲ್ಲೂಕು ಜಿಲ್ಲೆಗಳ ರಚನೆ

2537 - ಶ್ರೀ ಜಿ.ಎಸ್. ಆಚಾರ್, (ಬೈಂದೂರು) : ಮಾನ್ಯ ಕಂದಾಯ ಸಚಿವರು

ಆ) ರಾಜ್ಯ ಪುನರ್ವಿಂಗಡಣಾ ಆಯೋಗಗಳ ವರದಿ ಪ್ರಕಾರ ಹೊಸ ಜಿಲ್ಲೆ ಹಾಗೂ ತಾಲ್ಲೂಕುಗಳ ರಚನೆ ಕುರಿತು ಯಾವಾಗ ಸರ್ಕಾರದ ಅಂತಿಮ ಪರಿಶೀಲನೆ ಮುಗಿಯುವುದು ಹಾಗೂ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು?

ಆ) ಶಿಫಾರಸ್ಸಿನ ಪ್ರಕಾರ ಹೊಸ ಜಿಲ್ಲೆ ತಾಲ್ಲೂಕುಗಳ ರಚನೆಗೆ ತೊಡಕುಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಈ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) ಆರ್ಥಿಕ ಮುಗ್ಗಟ್ಟಿನ ಹೊರತು ಹೆಚ್ಚಿನ ಅಡೆತಡೆಗಳೇನಿಲ್ಲ.

ಅರಣ್ಯ ಇಲಾಖೆಯ ಪ್ಲಾಂಟೇಷನ್ ಕಾರ್ಮಿಕರಿಗೆ ನೇರ ಪಾವತಿ ಜಾರಿಗೆ ತಂದಿರುವ ಬಗ್ಗೆ

3628 - ಶ್ರೀ ಜಿ.ಎಸ್. ಆಚಾರ್ (ಬೈಂದೂರ್) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಣ್ಯ ಇಲಾಖೆಯಲ್ಲಿ ಪ್ಲಾಂಟೇಷನ್ ಕೆಲಸಗಾರರಿಗೆ ನೇರಪಾವತಿ ಪದ್ಧತಿ ಜಾರಿಗೆ ಎಂದಿನಿಂದ ಬಂದಿದೆ ಹಾಗೂ ಅದಕ್ಕೆ ಕಾರಣಗಳೇನು?

ಆ) ನೇರಪಾವತಿ ವ್ಯವಸ್ಥೆ ಇದ್ದರೂ, ಕೆಲಸದ ಮೇಲ್ವಿಚಾರಣೆಗೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ. ಹಾಗೂ ಈ ಹೊಣೆಗಾರಿಕೆ ಎಷ್ಟರಮಟ್ಟಿಗೆ ಯಶಸ್ವಿ ಆಗಿದೆ?

ಶ್ರೀ ಈ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು)

ಅ) ಈ ನೇರಪಾವತಿ ಪದ್ಧತಿಯು ದಿನಾಂಕ 16-7-90ರಿಂದ ಜಾರಿಗೆ ಬಂದಿರುತ್ತದೆ. ಇದಕ್ಕೆ ಕಾರಣವೇನೆಂದರೆ ಪ್ಲಾಂಟೇಷನ್ ಕೆಲಸಗಾರರಿಗೆ ಅವರು ತಿಂಗಳಲ್ಲಿ ಕೆಲಸ ಮಾಡಿದ ದಿವಸಗಳಿಗೆ ನಿಗದಿಯಾದ ದಿನಗೂಲಿ ಸಕಾಲಕ್ಕೆ ಮತ್ತು ಸರಿಯಾಗಿ ಹಾಗೂ ಸಂಬಂಧಪಟ್ಟವರಿಗೆ ಹಾಲಿ ನಿಯಮದ ರೀತ್ಯಾ ನೇರ ಪಾವತಿಯಾಗಬೇಕೆಂಬ ಉದ್ದೇಶದಿಂದ ಈ ಪದ್ಧತಿಯನ್ನು ಜಾರಿಗೊಳಿಸಲಾಗಿದೆ.

ಆ) ಕೆಲಸದ ಮೇಲ್ವಿಚಾರಣೆಗೆ ಇಲಾಖೆಯ ಅಧಿಕಾರಿಗಳನ್ನು ಅಂದರೆ ವಲಯ ಅರಣ್ಯಾಧಿಕಾರಿಗಳು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಇವರುಗಳನ್ನೇ ಮೇಲ್ವಿಚಾರಣೆಗೆ ಹೊಣೆಗಾರರನ್ನಾಗಿ ಮಾಡಲಾಗಿದೆ. ಈ ಹೊಣೆಗಾರಿಕೆಯನ್ನು ಸರಕಾರ, ಸಾರ್ವಜನಿಕ ಮತ್ತು ಕೆಲಸಗಾರರ ಹಿತದೃಷ್ಟಿಯಿಂದ ಮಾಡಿದ್ದು, ಈ ಕಾರ್ಯ ತೃಪ್ತಿಕರವಾಗಿ ನಡೆಯುತ್ತಿದೆ.

ರಾಜ್ಯದ ರೈತರಿಗೆ ಪಾಸ್ ಪುಸ್ತಕ ವಿತರಣೆ

3662 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ರೈತರಿಗೆಲ್ಲ ಅವರ ಭೂಮಿಯ ವಿವರಗಳನ್ನೊಳಗೊಂಡ ಪಾಸು ಪುಸ್ತಕಗಳನ್ನು ವಿತರಿಸುವ ಕಾರ್ಯವನ್ನು ಸರ್ಕಾರ ಹಮ್ಮಿಕೊಂಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಈವರೆವಿಗೆ ರಾಜ್ಯದ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಪಾಸು ಪುಸ್ತಕಗಳನ್ನು ವಿತರಿಸಲಾಗಿದೆ? (ತಾಲ್ಲೂಕುವಾರು ವಿವರವನ್ನೊದಗಿಸುವುದು)

ಇ) ರೈತರಿಗೆ ಪಾಸು ಪುಸ್ತಕಗಳನ್ನು ಒದಗಿಸುವ ಕಾರ್ಯ ತುಂಬಾ ನಿಧಾನಗತಿಯಲ್ಲಿ ಸಾಗುತಿರುವುದು ನಿಜವಲ್ಲವೇ?

ಈ) ಹಾಗಿದ್ದಲ್ಲಿ ರೈತರಿಗೆ ಪಾಸು ಪುಸ್ತಕಗಳನ್ನು ವಿತರಿಸುವ ಕಾರ್ಯವನ್ನು ಒಂದು ನಿರ್ದಿಷ್ಟ ಅವಧಿಯನ್ನು ನಿಗದಿಗೊಳಿಸಿ ಪೂರ್ಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ನಿಜ.

ಆ) ತಾಲ್ಲೂಕುವಾರು ಮಾಹಿತಿ ಸದ್ಯಕ್ಕೆ ಲಭ್ಯವಿರುವುದಿಲ್ಲವಾದ್ದರಿಂದ, ಜಿಲ್ಲಾವಾರು ಮಾಹಿತಿಯನ್ನು ನೀಡಿದೆ. ತಾಲ್ಲೂಕುವಾರು ಮಾಹಿತಿಯನ್ನು ನಂತರ ಒದಗಿಸಲಾಗುವುದು.

ಇ) ಸ್ವಲ್ಪ ಮಟ್ಟಿಗೆ ನಿಜ.

ಈ) ಹೌದು.

ಪಾಸು ಪುಸ್ತಕಗಳನ್ನು ಜಿಲ್ಲಾವಾರು ನೀಡಿರುವ ವಿವರಗಳ ಪಟ್ಟಿ

ಜಿಲ್ಲೆ	ಪಾಸು ಪುಸ್ತಕ ವಿತರಣೆ ಮಾಡಿದ ಸಂಖ್ಯೆ
1) ಬೆಂಗಳೂರು	37,313
2) ಬೆಂಗಳೂರು (ಗ್ರಾಮಾಂತರ)	99,925
3) ಬೆಳಗಾಂ	500
4) ಬಳ್ಳಾರಿ	8,325
5) ಬೀದರ್	50,284
6) ಬಿಜಾಪುರ	2,755
7) ಚಿಕ್ಕಮಗಳೂರು	500
8) ಚಿತ್ರದುರ್ಗ	3,10,650
9) ದಕ್ಷಿಣ ಕನ್ನಡ	-
10) ಧಾರವಾಡ	5,486
11) ಗುಲ್ಬರ್ಗಾ	1,25,327
12) ಹಾಸನ	61,000
13) ಕೊಡಗು	-
14) ಕೋಲಾರ	50,532
15) ಮಂಡ್ಯ	15,000
16) ಮೈಸೂರು	5,895
17) ರಾಯಚೂರು	10,000
18) ಶಿವಮೊಗ್ಗ	3,966
19) ತುಮಕೂರು	16,488
20) ಉತ್ತರ ಕನ್ನಡ	1,54,797

ತೋಟಗಾರಿಕೆ ಇಲಾಖೆಯಲ್ಲಿ ತೆಂಗಿನ ಬೀಜದ ಕಾಯಿಗಳನ್ನು ಖರೀದಿಸುವ ಬಗ್ಗೆ

3110 ಎ - ಶ್ರೀ ಎಸ್. ರುದ್ರಪ್ಪ (ತುರುವೇಕರೆ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೋಟಗಾರಿಕೆ ಇಲಾಖೆಯಲ್ಲಿ ಒಂದು ಲಕ್ಷ ಐವತ್ತೆಂಟು ಸಾವಿರದ ಬೀಜದ ತೆಂಗಿನ ಕಾಯಿಗಳನ್ನು ಕೊಳ್ಳಲಾಗಿದೆಯೇ? ಹಾಗಿದ್ದಲ್ಲಿ ಇದನ್ನು ಎಂದು ಕೊಳ್ಳಲಾಯಿತು ಹಾಗೂ ಇದಕ್ಕಾಗಿ ತಗುಲಿದ ವೆಚ್ಚವೆಷ್ಟು?

ಆ) ಬೀಜದ ಕಾಯಿಗಳನ್ನು ನವೆಂಬರ್, ಡಿಸೆಂಬರ್ ಮತ್ತು ಜನವರಿಯಲ್ಲಿ ಕೊಳ್ಳಬೇಕಾಗಿದ್ದು ಜೂನ್ ಮತ್ತು ಜುಲೈ ತಿಂಗಳಲ್ಲಿ ಕೊಳ್ಳಲು ಕಾರಣವೇನು?

ಶ್ರೀ ಎಂ.ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು)

ಅ) ಇಲ್ಲ, ಆದರೆ 1990-91ನೇ ಸಾಲಿನಲ್ಲಿ ಒಟ್ಟು 9,13,898 ಬೀಜದ ತೆಂಗಿನ ಕಾಯಿಗಳನ್ನು ಅಕ್ಟೋಬರ್ ನವೆಂಬರ್, ಡಿಸೆಂಬರ್ ಮತ್ತು ಜನವರಿ 1991 ಅವಧಿಯಲ್ಲಿ ಮಾತ್ರ ಕೊಳ್ಳಲಾಗಿದೆ. ವೆಚ್ಚ ರೂ. 35.19 ಲಕ್ಷಗಳು.

ಆ) ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ ಕೊಂಡಿಲ್ಲವಾದ್ದರಿಂದ ಕಾರಣಗಳನ್ನು ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಉಪ-ನೋಂದಣಿ ಅಧಿಕಾರಿಗಳ ಸಂಖ್ಯೆ

3645 - ಶ್ರೀ ಗೋಪಾಲ ಮುಕುಂದ ಕಾನಡೆ (ಸಿರಸಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿರುವ ನೋಂದಣಿ ಅಧಿಕಾರಿಗಳ ಸಂಖ್ಯೆ ಎಷ್ಟು? ಇವರಲ್ಲಿ ಹರಿಜನ-ಗಿರಿಜನ ವರ್ಗಕ್ಕೆ ಸೇರಿದವರ ಸಂಖ್ಯೆ ಎಷ್ಟು?

ಆ) ಇವರಲ್ಲಿ ಜಿಲ್ಲಾ ಹೆಡ್ ಕ್ವಾರ್ಟರ್ಸ್‌ನಲ್ಲಿ ಎಷ್ಟು ಮಂದಿ ಹರಿಜನ ನೋಂದಣಿ ಅಧಿಕಾರಿಗಳು ಇದ್ದಾರೆ. ಹಾಗೂ ಅವರ ಹೆಸರು ಪೂರ್ತಿ ವಿವರ ಒದಗಿಸುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) 228 ಅವರಲ್ಲಿ, ಪರಿಶಿಷ್ಟ ಜಾತಿ 32, ಪರಿಶಿಷ್ಟವರ್ಗಕ್ಕೆ ಸೇರಿದವರು 3. ಒಟ್ಟು 35.

ಆ) 8.

<u>ಶ್ರೀಯುತರಾದ</u> :

1) ಕೆ.ನರಸಪ್ಪ

2) ಎಲ್.ಎಲ್. ನಾಯಕ್ ಬೆಂಗಳೂರು

3) ಹೊಂಬಾಳಯ್ಯ

4) ಮುದ್ದುರಂಗಯ್ಯ

5) ಬಿ.ವೈ. ಫುಲೇಕರ್ ಬೀದರ್

6) ರಾಮಚಂದ್ರನಾಯಕ್ ಚಿಕ್ಕಮಗಳೂರು

7) ಬೋರಪ್ಪ ಹಾಸನ

8) ಬಿ.ವೈ. ಮುಧೋಳ್ ಬೆಂಗಳೂರು

ಬೀದರ್ ಜಿಲ್ಲೆಯಲ್ಲಿರುವ ಚಿಲ್ಲಿಂಗ್ ಪ್ಲಾಂಟ್‌ಗಳ ಸಂಖ್ಯೆ

2524 - ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್) : ಮಾನ್ಯ ಪಶುಸಂಗೋಪನಾ ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಈಗ ಕಾರ್ಯ ನಿರ್ವಹಿಸುತ್ತಿರುವ ಚಿಲ್ಲಿಂಗ್ ಪ್ಲಾಂಟ್‌ಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಆ) ಜಿಲ್ಲೆಯಲ್ಲಿ ಹಾಲಿನ ಉತ್ಪಾದನೆ ಹೆಚ್ಚಿರುವುದರಿಂದ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಚಿಲ್ಲಿಂಗ್ ಪ್ಲಾಂಟ್‌ಗಳನ್ನು ಪ್ರಾರಂಭಿಸುವ ವಿಚಾರ ಸರ್ಕಾರದ ಮುಂದಿದೆಯೇ?

ಇ) ಹಾಗಿದ್ದಲ್ಲಿ ಎಲ್ಲೆಲ್ಲಿ ಹೊಸ ಚಿಲ್ಲಿಂಗ್ ಪ್ಲಾಂಟ್‌ಗಳನ್ನು ಪ್ರಾರಂಭಿಸಲಾಗುವುದು?

ಶ್ರೀ ಬಸವರಾಜ ಪಾಟೀಲ್ (ಪಶುಸಂಗೋಪನಾ ಮತ್ತು ಪಶು ವೈದ್ಯ ಸೇವಾ ರಾಜ್ಯ ಸಚಿವರು)

ಅ) 2.

1) ಬೀದರ್, ಬೀದರ್ ತಾಲ್ಲೂಕು (5,000 ಲೀಟರ್ ಸಾಮರ್ಥ್ಯ)

2) ಹುಡಗಿ, ಹುಮನಾಬಾದ್ ತಾಲ್ಲೂಕು (8,000 ಲೀಟರ್ ಸಾಮರ್ಥ್ಯ)

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ವೀರಾಜಪೇಟೆ ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದ ಹಾನಿ

2525 - ಶ್ರೀಮತಿ ಸುಮಾ ವಸಂತ (ವೀರಾಜಪೇಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜೂನ್, ಜುಲೈ, ಆಗಸ್ಟ್ ತಿಂಗಳುಗಳಲ್ಲಿ ಅತಿವೃಷ್ಟಿಯಿಂದ ಸಂಭವಿಸಿದ ನಷ್ಟವೆಷ್ಟು (ಇಲಾಖಾವಾರು ಹಾಗೂ ಜಿಲ್ಲಾವಾರು ಮಾಹಿತಿಯನ್ನೊದಗಿಸುವುದು)

ಆ) ವೀರಾಜಪೇಟೆ ತಾಲ್ಲೂಕಿನಲ್ಲಿ ಸಂಭವಿಸಿದ ನಷ್ಟವೆಷ್ಟು?

ಇ) ಆ ನಷ್ಟ ಪರಿಹಾರಕ್ಕೆ ಸರ್ಕಾರದಿಂದ ಬಿಡುಗಡೆ ಮಾಡಿದ ಹಣವೆಷ್ಟು (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಮಾಹಿತಿಯನ್ನೊದಗಿಸುವುದು)

ಈ) ವೀರಾಜಪೇಟೆ ತಾಲ್ಲೂಕಿಗೆ ಬಿಡುಗಡೆ ಮಾಡಿದ ಹಣವೆಷ್ಟು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) 'ಎ' ಪಟ್ಟಿಯನ್ನು ಅನುಬಂಧಿಸಿದೆ.

ಆ) 107.11 ಲಕ್ಷ ರೂ.

ಇ) 'ಬಿ' ಪಟ್ಟಿಯನ್ನು ಅನುಬಂಧಿಸಿದೆ.

ಈ) 1,99,382.00 ರೂ.ಗಳನ್ನು ಪರಿಹಾರವಾಗಿ ಪಾವತಿ ಮಾಡಿದೆ.

STATEMENT - A

STATEMENT SHOWING THE DAMAGES TO PUBLIC PROPERTIES DUE TO FLOOD/HEAVY RAINS DURING 1991-92.

(RS. IN LAKHS)

Sl. No.	Name of the District	Buildings Dameged		Roads Damaged		Bridges & Culverts		Minor Irrivation Tanks		Irrigation Works & Canals		Anti-Sea Erosion Works	
		No.	Loss	KMS	Loss	No.	Loss	No.	Loss	No.	Loss	No.	Loss
1	2	3	4	5	6	7	8	9	10	11	12	13	14
1.	BANGALORE (U)	-	-	6*	4.11	-	-	2	3.25	-	-	-	1
2.	BANGALORE (R)	-	-	-	-	-	-	-	-	-	-	-	-
3.	KOLAR	-	-	-	-	-	-	-	-	-	-	-	-
4.	TUMKUR	-	-	-	-	-	-	-	-	-	-	-	-
5.	CHITRADURGA	-	-	-	-	-	-	-	-	-	-	-	-
6.	SHIMOGA	4	0.40	150.00	88.60	1.22	89.65	83	18.43	8	8.62	-	-
7.	MYSORE	7	1.70	102.50	65.65	8	8.00	2	1.50	-	-	-	
8.	MANDYA	10	7.13	5.40	15.15	2	2.10	-	-	23	22.30	-	-
9.	CHICKA MAGALUR	70	8.67	127.00 5*	153.20	119	43.45	15	7.45	29	9.23	-	-
10.	HASSAN	4	-	774.88	-	55	-	269	-	-	-	-	-

11.	KODAGU	2	25.15	275.33	216.30	105	31.43	29	18.75	31	11.30	-	-
12.	D.KANNA DA	122	29.46	78.05 224*	317.12	47	20.85	-	-	24	19.55	-	-
13.	GULBARGA	24	5.00	110.33	14.80	88	19.70	37	16.20	1	0.35	-	-
14.	BIDAR	-	-	-	-	-	-	-	-	-	-	-	-
15.	RAICHUR	95	20.29	192.90 228*	128.11	58	21.38	24	15.25	8	3.30	--	-
16.	BELLARY	4	0.31	48.70	29.47	47	27.11	16	12.25	-	-	-	-
17.	BELGAUM	4	2.30	420.55	171.79	52	25.01	38	9.21	12	10.13	-	-
18.	BIJAPUR	171	6.84	1051.16	69.88	40	16.53	28	17.28	-	-	-	-
19.	DHARWAD	199	54.40	1181.05	231.24	255	82.85	89	28.40	7	3.65	-	-
20.	U.KANNA DA	34	5.25	134*	113.70	-	-	24	12.25	-	-	-	-
21.	CE, MI	-	-	-	-	-	-	456		-	-	-	140.00
	TOTAL	820	166.90	4517.85 597*	1619.12	998	388.06	1112	477.13	143	88.43	-	140.00

* No. of Roads.

Contd....

STATEMENT - A

Sl. No.	Name of the District	Drainage SystemDamaged		Properties Belonging to Corporn./T.M.C.S. K.E.D.		Others		Total Loss
		No.	Loss	Loss	Loss	No.	Loss	
1.	2.	15.	16.	17.	18.	19.	20.	21.
1.	BANGALORE (U)	-	-	-	-	-	-	7.36
2.	BANGALORE (R)	-	-	-	-	-	-	-
3.	KOLAR	-	-	-	-	-	-	-
4.	TUMKUR	-	-	-	-	-	-	-
5.	CHITRADURGA	-	-	-	-	-	-	-
6.	SHIMOGA	-	-	-	-	-	-	205.70
7.	MYSORE	-	-	-	-	-	-	76.85
8.	MANDYA	-	-	-	5.91	14	4.61	57.20
9.	CHICKAMAGALUR	9	5.65	-	19.15	3	0.35	247.15
10.	HASSAN	-	-	-	-	-	-	-
11.	KODAGU	-	-	-	1.80	1	0.50	305.23

12.	DAKSHINA KANNADA	-	-	-	-	-	-	386.98
13.	GULBARGA	-	-	106.38	2.95	3	1.00	166.38
14.	BIDAR	-	-	-	-	-	-	-
15.	RAICHUR	1	0.55	27.40	-	4	1.60	217.88
16.	BELLARY	9	0.78	1.25	14.98	-	-	86.15
17.	BELGAUM	-	-	25.00	12.70	-	-	256.84
18.	BIJAPUR	-	-	-	-	-	-	110.53
19.	DHARWAD	-	-	-	-	5	2.10	402.64
20.	UTTAR KANNADA	-	-	-	-	-	-	131.20
21.	C.E., M.I.	-	-	-	-	-	-	456.21
	TOTAL	19	6.98	160.03	57.49	30	10.16	3114.30

STATEMENT - A

STATEMENT SHOWING THE DETAILS OF DAMAGES TO LIVES AMD PRIVATE PROPERTIES DUE TO FLOOD/HEAVY RAINS DURING THE YEAR 1991-92

(RS. IN LAKHS)

Sl. No.	Name of the District	Human Lives Lost		Live Stock Lost		Houses Collapsed/Damaged				Agricultural land/Crops Damaged			Total Loss
		No.	Ex-gratia Relief	No.	Loss	Fully	Partly	Total	Loss	Area Affected (Hects)	No. of S&M Farmers Affected	Loss	
1	2	3	4	5	6	7	8	9	10	11	12	13	14
1.	BANGALORE (U)	-	-	-	-	-	-	-	-	-	-	-	-
2.	BANGALORE (R)	-	-	-	-	-	-	-	-	-	-	-	-
3.	KOLAR	1	0.08	-	-	-	1	1	0.01	-	-	2.00	2.09
4.	TUMKUR	-	-	-	-	-	-	-	-	-	-	-	-
5.	CHITRA DURGA	-	-	-	-	-	-	-	-	-	-	-	-
6.	SHIMOGA	5	0.40	-	-	27	278	305	3.46	2138.46	-	79.23	83.09
7.	MYSORE	4	0.32	8	-	495	723	1218	46.20	1892.75	3114	35.47	81.99
8.	MANDYA	6	0.48	53	1.27	16	23	39	0.47	482.65	1548	50.07	52.29

9.	CHICK MAGALUR	1	0.08	-	-	134	14	148	0.20	833.01	2243	53.91	54.89
10.	HASSAN	3	0.24	14	0.24	38	932	970	21.06	17866.00	9102	104.66	126.20
11.	KODAGU	-	-	84	0.12	72	193	265	4.05	1178.88	3875	59.55	63.72
12.	DAKSHINA KANNADA	26	2.08	10	0.32	56	672	728	11.94	21.95	128	10.38	24.72
13	GULBARGA	4	0.32	53	0.25	27	3193	3220	7.86	2052.00	452	43.72	52.15
14.	BIDAR	2	0.16	-	-	-	-	-	-	-	-	-	0.16
15.	RAICHUR	17	1.26	116	-	1967	282	2249	5.23	20828.00	21480	128.18	134.77
16.	BELLARY	25	2.00	20	-	6	433	439	0.65	630.50	883	75.36	78.01
17.	BELGAUM	-	-	503	0.60	83	1365	1448	25.67	4104.91	6418	9.04	35.31
18.	BIJAPUR	18	1.44	109	0.13	153	649	802	8.88	543.85	95	6.28	16.73
19.	DHARWAD	7	0.56	373	3:13	468	4441	4909	42.15	46139.00	38236	371.12	416.96
20.	UTTARA KANNADA	14	1.12	20	-	120	327	447	2.48	295.56	1599	11.05	14.65
	TOTAL	133	10.64	1363	6.06	3662	13527	17189	181.01	99007.52	89173	1040.02	1237.73

STATEMENT - B

STATEMENT SHOWING THE FUNDS RELEASED UNDER 'CALAMITY RELIEF FUND' DURING 1991-92 (1.4.91 TO 9.9.1991)

(RS. IN LAKHS)

Sl. No.	Name of the District	Relief on a/c of	Flood Relief	During Water Supply		Employment Generation	TOTAL
				Urban	Rural		
1	2	3	4	5	6	7	8
1.	BANGALORE (U)	2.00	-	2.00	32.50	-	43.50
2.	BANGALORE (R)	2.00	-	7.50	27.50	-	37.00
3.	KOLAR	2.00	-	7.00	27.50	-	36.50
4.	TUMKUR	2.00	-	6.00	22.50	-	30.50
5.	CHITRADURGA	2.00	-	6.00	30.00	-	38.00
6.	SHIMOGA	2.00	30.00	6.50	15.00	-	53.50
7.	MYSORE	2.00	40.00	10.00	32.50	-	84.50
8.	MANDYA	2.00	30.00	5.00	32.50	-	69.50
9.	CHICKMAGAL UR	2.00	35.00	4.50	12.50	15.00	69.00
10.	HASSAN	2.00	30.00	6.00	17.50	10.00	65.60

11.	KODAGU	1.00	15.00	1.00	10.50	-	27.00
12.	DAKSHINA KANNADA	1.00	35.00	8.00	12.50	-	56.50
13.	GULBARGA	2.00	50.00	11.00	27.50	-	90.50
14.	BIDAR	2.00	5.00	5.00	15.00	-	27.00
15.	RAICHUR	2.00	30.00	7.00	32.50	10.00	81.50
16.	BELLARY	2.00	10.00	10.00	22.50	-	44.50
17.	BELGAUM	2.00	15.00	16.00	17.50	3.70-	54.20
18.	BIJAPUR	2.00	17.00	10.00	27.00	-	62.00
19.	DHARWAD	2.00	37.50	19.00	32.50	4.80	95.00
20.	UTTAR KANNADA	1.00	30.00	8.00	12.50	-	51.50
21.	D.V.Cs.	13.00	30.00	-	-	-	13.00
	TOTAL	50.00	409.50	168.00	460.00	43.50	1,131.00

ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ಉಪಕುಲಪತಿಗಳನ್ನು ನೇಮಕ

3627 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ಉಪ ಕುಲಪತಿಗಳ ಜಾಗ ಖಾಲಿ ಇರುವುದು ನಿಜವಲ್ಲವೆ?

ಆ) ಹಾಗಿದ್ದಲ್ಲಿ, ಈ ಜಾಗವನ್ನು ಭರ್ತಿ ಮಾಡಲು ಕೈಗೊಂಡ ಕ್ರಮಗಳೇನು?

ಇ) ಈ ಹುದ್ದೆಯನ್ನು ಯಾವಾಗ ತುಂಬಲಾಗುವುದು?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು):

ಅ) ಹೌದು.

ಆ) ಕೃಷಿ ವಿಶ್ವವಿದ್ಯಾನಿಲಯಗಳ ಕಾಯ್ದೆ, 1963ರ ಕಲಂ 12 (2) ರ ಪ್ರಕಾರ ಆಯ್ಕೆ ಸಮಿತಿಯಿಂದ ಶಿಫಾರಸ್ಸು ಮಾಡಲ್ಪಟ್ಟ ಅಭ್ಯರ್ಥಿಗಳ ಪಟ್ಟಿಯಿಂದ ಒಬ್ಬರನ್ನು ಉಪಕುಲಪತಿಗಳಾಗಿ ಕುಲಪತಿಗಳು ನೇಮಕಾತಿ ಮಾಡಬೇಕಾಗುತ್ತದೆ. ಆಯ್ಕೆ ಸಮಿತಿಯಲ್ಲಿ ಈ ಕೆಳಕಂಡ ಸದಸ್ಯರಿರುತ್ತಾರೆ.

1. ಕುಲಪತಿಗಳಿಂದ ನಾಮನಿರ್ದೇಶನ ಮಾಡಲ್ಪಟ್ಟ ಒಬ್ಬ ವ್ಯಕ್ತಿ.
2. ಭಾರತೀಯ ಕೃಷಿ ಅನುಸಂದಾನ ಮಂಡಳಿಯ ಮಹಾನಿರ್ದೇಶಕರು.
3. ವಿಶ್ವವಿದ್ಯಾನಿಲಯ ಅನುದಾನ ಆಯೋಗದ ಅಧ್ಯಕ್ಷರು ಅಥವಾ ಅವರಿಂದ ನಾಮನಿರ್ದೇಶನ ಹೊಂದಿದ ವ್ಯಕ್ತಿ.
4. ರಾಜ್ಯ ಸರ್ಕಾರದಿಂದ ನಾಮನಿರ್ದೇಶನ ಹೊಂದಿದ ಒಬ್ಬ ವ್ಯಕ್ತಿ.

ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ಉಪ ಕುಲಪತಿಗಳ ನೇಮಕಾತಿಗೆ ಸಂಬಂಧಪಟ್ಟಂತೆ ಆಯ್ಕೆ ಸಮಿತಿಯನ್ನು ರಚಿಸಲು ಕುಲಪತಿಗಳ ಈಗಾಗಲೇ ಕ್ರಮ ಪ್ರಾರಂಭಿಸಿದ್ದಾರೆ. ಸರ್ಕಾರದ ವತಿಯಿಂದ ಈ ಸಮಿತಿಗೆ ಈಗಾಗಲೇ ನಾಮನಿರ್ದೇಶನ ಕಳುಹಿಸಲಾಗಿದೆ.

ಇ) ಆಯ್ಕೆ ಸಮಿತಿಯು ನಿರ್ಧಿಷ್ಟಪಡಿಸಿದ ಅವಧಿಯಲ್ಲಿ ಅಭ್ಯರ್ಥಿಗಳ ಪಟ್ಟಿಯನ್ನು ಕುಲಪತಿಗಳಿಗೆ ಸಲ್ಲಿಸಿದ ನಂತರ ನೇಮಕಾತಿ ಮಾಡಲಾಗುವುದು.

ಕಚೇರಿಗಳಲ್ಲಿ ಸರ್ವೆ ಮ್ಯಾಪ್‌ಗಳು ದೊರೆಯದಿರುವ ಬಗ್ಗೆ

3666 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬಳ್ಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭೂದಾಖಲೆಗಳ ಇಲಾಖೆಯ ಕಾರ್ಯಲಯ ಮತ್ತು ಬೆಂಗಳೂರಿನಲ್ಲಿರುವ ಇತರೆ ಕಾರ್ಯಾಲಯಗಳು ಮತ್ತು ಇತರೆ ಜಿಲ್ಲಾ ಕಛೇರಿಗಳಲ್ಲಿ ಭೂ ಮಾಪನ ನಕ್ಷೆ ಮತ್ತು ಗ್ರಾಮ ನಕ್ಷೆ (ನಕಾಶೆಗಳು) ಸಾರ್ವಜನಿಕರಿಗೆ ಲಭ್ಯವಿಲ್ಲದೇ ಇರುವುದು ನಿಜವೇ?

ಆ) ಇದಕ್ಕೋಸ್ಕರ ಹೊಸ ಯಂತ್ರವನ್ನು ಇತ್ತೀಚೆಗೆ ಖರೀದಿಸಿರುವುದು ನಿಜವೇ?

ಇ) ಹಾಗಿದ್ದಲ್ಲಿ, ಗ್ರಾಮ ನಕಾಶೆಗಳ ಸರಬರಾಜು ಮಾಡುವುದರಲ್ಲಿ ವಿಳಂಬಕ್ಕೆ ಕಾರಣಗಳೇನು ಮತ್ತು ಲಭ್ಯವಿಲ್ಲದಿರುವುದರ ಬಗ್ಗೆ ಕಾರಣಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಇಲ್ಲ.

ಆ) ಹೌದು.

ಇ) ನಕಾಶೆಗಳನ್ನು ಸರಬರಾಜು ಮಾಡುವಲ್ಲಿ ವಿಳಂಬವಾಗಿರುವುದಿಲ್ಲ.

ಅರಣ್ಯ ಕೈಗಾರಿಕ ನಿಗಮವು ಅರಣ್ಯ ಇಲಾಖೆಗೆ ಪಾಲಿಥಿನ್ ಚೀಲಗಳನ್ನು ಸರಬರಾಜು ಮಾಡುತ್ತಿರುವ ಬಗ್ಗೆ

3668 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮವು ಅರಣ್ಯ ಇಲಾಖೆಗೆ ಸಸಿಗಳನ್ನು ಬೆಳೆಸಲು ಪಾಲಿಥಿನ್ ಚೀಲಗಳನ್ನು ಸರಬರಾಜು ಮಾಡುತ್ತಿರುವುದು ನಿಜವೇ?

ಆ) ಜಿಲ್ಲಾ ಪರಿಷತ್‌ಗಳು ಸರ್ಕಾರದ ಆದೇಶಗಳನ್ನು ಉಲ್ಲಂಘಿಸಿ ಸ್ಥಳೀಯವಾಗಿ ಪಾಲಿಥಿನ್ ಚೀಲಗಳನ್ನು ಹೆಚ್ಚಿನ ದರದಲ್ಲಿ ಖರೀದಿಸುತ್ತಿರುವುದು ನಿಜವೇ?

ಇ) ಜಿಲ್ಲಾ ಪರಿಷತ್‌ಗಳು ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮವನ್ನು ಬಿಟ್ಟು ಬೇರೆ ಕಡೆಗಳಿಂದ ಪಾಲಿಥಿನ್ ಚೀಲಗಳನ್ನು ಖರೀದಿಸುವುದನ್ನು ತಡೆಯುವುದಕ್ಕೆ ಮತ್ತು ನಿಗಮವನ್ನು ಬಲಪಡಿಸಲು ಏನಾದರೂ ಕ್ರಮಗಳನ್ನು ತೆಗೆದುಕೊಂಡಿದೆಯೆ?

ಶ್ರೀ ಈ.ಟಿ. ಶಂಭುನಾಥ್ (ರಾಜ್ಯ ಅರಣ್ಯ ಸಚಿವರು):

ಅ) ಹೌದು.

ಆ) ಕೆಲವು ಸಂದರ್ಭದಲ್ಲಿ ಮಾತ್ರ ಜಿಲ್ಲಾ ಪರಿಷತ್‌ಗಳು ಸರಕು ಖರೀದಿ ಇಲಾಖೆಯ ಅಧಿಕೃತ ಫರ್ಮ್‌ಗಳ ಮೂಲಕ ಖರೀದಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಈ ಬೆಲೆ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕ ನಿಗಮವು ನಿಗದಿಪಡಿಸಿದ ಬೆಲೆಗಿಂತ ಕಡಿಮೆ ಇದೆ.

ಇ) ಹೌದು, ಈ ಬಗ್ಗೆ ಇತ್ತೀಚೆಗೆ ದಿನಾಂಕ 12-8-91ರಲ್ಲಿ ಸರ್ಕಾರ ಆದೇಶಸಂಖ್ಯೆ ಎಹೆಚ್‌ಎಫ್‌ಎಫ್ 18 ಎಫ್‌ಎಸಿ 91ನ್ನು ಹೊರಡಿಸಿದೆ. ಇದರ ಪ್ರಕಾರ ಶೇಕಡ 75ರಷ್ಟನ್ನು ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮದ ಮೂಲಕ ಮತ್ತು ಶೇಕಡ 25 ರಷ್ಟನ್ನು ಕರ್ನಾಟಕ ಸಣ್ಣ ಪ್ರಮಾಣದ ಕೈಗಾರಿಕಾ ನಿಗಮದ ಮೂಲಕವೇ ಖರೀದಿಸಬೇಕೆಂದು ನಿಗದಿಸಿ ಎಲ್ಲಾ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

1992-93 ರ ಅರಣ್ಯೀಕರಣದ ಬಗ್ಗೆ ಕ್ರಮಗಳು

3503 - ಶ್ರೀ ಕೆ.ವಿ. ರವೀಂದ್ರನಾಥ ಬಾಬು (ಕೊಟ್ಟೂರು) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಮುಂದೆ ಮುಂದಿನ ವರ್ಷ 1992-93 ಅರಣ್ಯೀಕರಣದ ಬಗ್ಗೆ ಯೋಜನೆ ನಿಮಿತ್ತ ಕಾರ್ಯಕ್ರಮಗಳಿವೆಯೇ?

ಆ) ಇದರ ಬಗ್ಗೆ ಆಯವ್ಯಯ ಹಂಚಿಕೆ ಮಾಡಲಾಗಿದೆಯೇ?

ಇ) ಸರ್ಕಾರವು ಕಳೆದ ಮೂರು ವರ್ಷಗಳಲ್ಲಿ ನಿಗದಿಪಡಿಸಿದ ಗುರಿಯನ್ನು ಸಾಧಿಸಿದೆಯೇ?

ಈ) ಗುರಿಯನ್ನು ಸಾಧಿಸದೆ ಇರಲು ಕಾರಣವೇನು?

ಶ್ರೀ ಈ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು):

ಅ) ಹೌದು.

ಆ) ಹೌದು. 1992-93ನೇ ಸಾಲಿನ ತಾತ್ಕಾಲಿಕ ಅಯ್ಯವ್ಯಯ ಹಂಚಿಕೆಯ

ಇ) ಹೌದು. ಹೆಚ್ಚಿನ ಯೋಜನೆಗಳಲ್ಲಿ ಗುರಿ ಸಾಧನೆಯು ಶೇಕಡ 100ಕ್ಕಿಂತ ಹೆಚ್ಚಾಗಿರುತ್ತದೆ. ಕೆಲವು ಯೋಜನೆಗಳಡಿಯಲ್ಲಿ ಶೇಕಡ 80ರಿಂದ 100 ರೊಳಗೆ ಗುರಿಯನ್ನು ಸಾಧಿಸಲಾಗಿದೆ.

ಈ) ಕೆಲವು ಜಿಲ್ಲೆಗಳಲ್ಲಿ ಕಡಿಮೆ ಮಳೆ ಬಿದ್ದ ಕಾರಣ, ಮತ್ತು ಫಲಾನುಭವಿಗಳಿಂದ ಬೆಳೆಸಿದ ಸಸಿಗಳನ್ನು ಕಳಪೆ ಎಂದು ತಿರಸ್ಕರಿಸಿದ ಕಾರಣ ಗುರಿಯನ್ನು ಸಾಧಿಸಲಾಗಲಿಲ್ಲ. ಅಲ್ಲದೆ ಬೇಕಾದಷ್ಟು ಸಂಖ್ಯೆಯಲ್ಲಿ ಪಾಲಿಥಿನ್ ಚೀಲಗಳ ಸರಬರಾಜಿನಲ್ಲಿನ ಅಭಾವ ಕೂಡ ಕಾರಣವಾಗಿದೆ.

1992-93ನೇ ಸಾಲಿನ ಅಂದಾಜು ಆಯವ್ಯಯ ಪಟ್ಟಿ

ಕ್ರಮ ಸಂಖ್ಯೆ	ಯೋಜನೆ ಹೆಸರು		1992-93ನೇ ಸಾಲಿನ ತಾತ್ಕಾಲಿಕ ಆಯವ್ಯಯ ಹಂಚಿಕೆ	ಷರಾ
1.	2.		3.	4.
	ರಾಜ್ಯವಲಯ ಯೋಜನೆಗಳು			
1.	ಅರಣ್ಯ ಸಂಶೋಧನೆ		40.00	
2.	ಕಾರ್ಯ ಯೋಜನೆ, ಭೂಮಿತಿ ಮತ್ತು ಸಮೀಕ್ಷೆ		60.00	
3.	ಶ್ರೀಗಂಧದ ಪುನರುತ್ಪಾದನೆ		20.00	
4.	ಕ್ಷೀಣಿಕ ಅರಣ್ಯಗಳು		100.00	
5.	ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ		860.00	
6.	ವೆಸ್ಟರ್ನ್ ಗಾಟ್ ಪಾರೆಸ್ಟ್ರಿ ಮತ್ತು ಎನ್‌ವಿರಾನ್‌ಮೆಂಟ್ ಪ್ರಾಜೆಕ್ಟ್ (ಒಡಿಎ ಅಸಿಸ್ಟೆಡ್)			
7.	ವನ್ಯಪ್ರಾಣಿ ಯೋಜನೆ (ನೀಲಗಿರಿ ಬಯೋಸ್ಪಿಯರ್ ಬಿಟ್ಟು)		500.00	
8.	ಕ್ಷೀಣಿಕ ಅರಣ್ಯಗಳು ಅಭಿವೃದ್ಧಿ ಯೋಜನೆ, ಕೆಸಿಡಿಸಿ ಕೆಎಫ್‌ಡಿಸಿ, ಕೆಎಸ್‌ಎಫ್‌ಐಸಿ		25.00	

9.	ಸಾಮಾಜಿಕ ಅರಣ್ಯ ಯೋಜನೆ (ವಿಶ್ವಬ್ಯಾಂಕ್ ನೆರವು)		150.00	
10.	ಕೇಂದ್ರ ಪುರಸ್ಕೃತ ಬಯೋಟಿಕ್ ಇಂಟರ್‌ಫಿಯರೆನ್ಸ್		60.00	
11.	ಕೇಂದ್ರ ಪುರಸ್ಕೃತ ಮಾರ್ಡನ್ ಫಾರೆಸ್ಟ್ ಫೈರ್ ಕಂಟ್ರೋಲ್ ಮೆತೆಡ್		40.00	
12.	ಕೇಂದ್ರ ಪುರಸ್ಕೃತ ಪ್ರೊಟೆಕ್ಷನ್ ಸರ್ವೀಸ್ ಎಗೆನೆಸ್ಟ್ ಫಂಗಸ್ ಇನ್‌ಸೆಕ್ಟ ಡಿಸೀಸಸ್		500	
13.	ಕೇಂದ್ರ ಪುರಸ್ಕೃತ ಏರಿಯಾ ಓರಿಯೆಂಟೆಡ್ ಕಟ್ಟಿಗೆ ಮತ್ತು ಹುಲ್ಲು ಬೆಳೆಯುವ ಯೋಜನೆ		750.00	
14.	ವಿಶೇಷ ಘಟಕ ಯೋಜನೆ (ರಾಜ್ಯ)		120.00	
15.	ರಸ್ತೆಬದಿಯ ನೆಡುತೋಪು		50.0o	
16.	ಕಟ್ಟಡಗಳು		50.00	
17.	ಬಂಜರು ಭೂಮಿ ಅಭಿವೃದ್ಧಿ ಯೋಜನೆ		452.00	
18.	ಕ್ರಿಯೇಷನ್ ಅಫ್ ಪ್ರೊಟೇಕ್ಷನ್ ಪಾರೆಸಟ್ಸ್ ಅಂಡ್ ರೀಆರಗನೈಸೇಷನ್		120.00	
19.	ಭೂಸಾರ ಸಂರಕ್ಷಣಾ (ಅರಣ್ಯೀಕರಣ)		2.50	
20.	ಕೇಂದ್ರ ಪುರಸ್ಕೃತ ವಿಕೇಂದ್ರಕೃತ ಸಸ್ಯಕ್ಷೇತ್ರಗಳು ಬೆಂಗಳೂರು (ನಗರ)		6.00	
21.	ಶಾಲಾ ಸಸ್ಯಕ್ಷೇತ್ರಗಳು (ಬೆಂಗಳೂರು ನಗರ)		5.00	
22.	ಕಿರು ಅರಣ್ಯ ಉತ್ಪತ್ತಿ ನೆಡುತೋಪು (ಕೇಂದ್ರ ಪುರಸ್ಕೃತ)		50.00	
23.	ಕೇಂದ್ರ ಪುರಸ್ಕೃತ ಬೀಜ ಅಭಿವೃದ್ಧಿ ಯೋಜನೆ		50.00	

24.	ಕೇಂದ್ರ ಪುರಸ್ಕೃತ ವಿಮಾನದಿಂದ ಬೀಜ ಪ್ರಸಾರ		18.00	
25.	ವಿಲೇಜ್ ಫಾರೆಸ್ಟ್ ಕಮಿಟಿ		18.00	
26.	ಕ್ಲಂಪ್		703.00	
27.	ನೀಲಗಿರಿ ಭಯೋಸ್ಪಿಯರ್ ರಿಸರ್ವ್		42.00	
28.	ಗ್ರೀನಿಂಗ್ ಅಫ್ ಅರ್‌ಬನ್ ಏರಿಯಾಸ್		500.00	
	ಒಟ್ಟು		4790.50 ಲಕ್ಷಗಳು	
11.	ಜಿಲ್ಲಾ ಪರಿಷತ್ ಯೋಜನೆಗಳು			
1.	ವಿಶ್ವಬ್ಯಾಂಕ್ ನೆರವಿನ ಸಾಮಾಜಿಕ ಅರಣ್ಯ ಯೋಜನೆ		1182.00	
2.	ಶಾಲಾ ಸಸ್ಯ ಕ್ಷೇತ್ರಗಳು		60.00	
3.	ಭೂಸಾರ ಸಂರಕ್ಷಣೆ (ಅರ್ರೈಕರಣ)		140.00	
4.	ಕೇಂದ್ರ ಪುರಸ್ಕೃತ ನದಿ ಕಣಿವೆ ಯೋಜನೆ		50.00	
5.	ಕೇಂದ್ರ ಪುರಸ್ಕೃತ ವಿಕೇಂದ್ರಿಕೃತ ಸಸ್ಯ ಕ್ಷೇತ್ರಗಳು		240.00	
6.	ಪರಿಜನ ಉಪಯೋಜನ (ಕೇಂದ್ರ)		5.00	
7.	ಪರಿಜನ ವಿಶೇಷ ಘಟಕ ಯೋಜನೆ		20.00	
8.	ಕಟ್ಟಡಗಳು		25.00	
	ಒಟ್ಟು		1722.00	
	ಗ್ರಾಂಡ್ ಟೋಟಲ್		6512.50 ಲಕ್ಷಗಳು ಅಥವಾ 65.12 ಕೋಟಿ	

ಪರಿವರ್ತನೆಯಾದ ವ್ಯವಸಾಯ ಜಮೀನುಗಳ ವಿಸ್ತೀರ್ಣ

3515 - ಶ್ರೀ ಪ್ರಭಾಕರ್ ಎಸ್. ರಾಣೆ (ಕಾರವಾರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ವ್ಯವಸಾಯದ ಜಮೀನುಗಳನ್ನು ನವೆಂಬರ್ 90ರಿಂದ ವ್ಯವಸಾಯೇತರ ಉದ್ದೇಶಗಳಿಗೆ ಭೂಪರಿವರ್ತಿಸಿರುವ ಜಮೀನಿನ ವಿಸ್ತೀರ್ಣವೆಷ್ಟು?

ಆ) ಪ್ರತಿಯೊಂದು ವ್ಯಕ್ತಿ ಹಾಗೂ ಸಂಸ್ಥೆಯ ಹೆಸರಿನಲ್ಲಿ ಭೂ ಪರಿವರ್ತನೆಗೆ ಮಂಜೂರಾತಿ ನೀಡಿರುವ ಜಮೀನಿನ ವಿಸ್ತೀರ್ಣವೆಷು? (ವಿವರಗಳನ್ನು ನೀಡುವುದು)

ಇ) ಮೇಲ್ಕಂಡ ಭೂ ಪರಿವರ್ತನೆ ಮಂಜೂರಾತಿಯಿಂದ ಸರ್ಕಾರಕ್ಕೆ ಬಂದ ಹಣದ ಮೊತ್ತವೆಷ್ಟು?

ಈ) ಯಾವ ಉದ್ದೇಶಗಳಿಗೆ ಈ ಭೂ ಪರಿವರ್ತನೆಗೆ ಅನುಮತಿ ನೀಡಲಾಗಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಬೆಂಗಳೂರು ನಗರ ಜಿಲ್ಲೆ-481 ಎಕರೆಗಳು $8\frac{1}{2}$ ಗುಂಟೆಗಳು

ಬೆಂಗಳೂರು ಗ್ರಾಮಾಂತರ ಜಿಲ್ಲೆ 618 ಎಕರೆಗಳು $19\frac{1}{2}$

ಆ) ತಾಲ್ಲೂಕುವಾರು ಮಾಹಿತಿಯನ್ನು ಲಗತ್ತಿಸಿದೆ.

ಇ) ಬೆಂಗಳೂರು ನಗರ ಜಿಲ್ಲೆ ರೂ. 83,37,674-00.

ಬೆಂಗಳೂರು ಗ್ರಾಮಾಂತರ ಜಿಲ್ಲೆ ರೂ.28.83,536-00

ಈ) ವಾಸದ ಉಪಯೋಗಕ್ಕಾಗಿ ಕೈಗಾರಿಕಾ ಮತ್ತು ವಾಣಿಜ್ಯ ಉದ್ದೇಶಗಳಿಗಾಗಿ ಈ ಪರಿವರ್ತನೆಯನ್ನು ಮಂಜೂರು ಮಾಡಲಾಗಿದೆ.

ಸ್ಟಾಂಪ್ ಡ್ಯೂಟಿಯನ್ನು ಕಡಿಮೆ ಮಾಡುವ ಬಗ್ಗೆ

3516 - ಶ್ರೀ ಪ್ರಭಾಕರ ಎಸ್.ರಾಣೆ (ಕಾರವಾರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮೀನು ಮತ್ತು ನಿವೇಶನ ನೋಂದಣಿಗಾಗಿ ಮುದ್ರಾಂಕ ಶುಲ್ಕ ಕಡಿಮೆ ಮಾಡಲು ಕೋರಿರುವ ವ್ಯಕ್ತಿ ಹಾಗೂ ಸಂಸ್ಥೆಗಳ ಹೆಸರುಗಳು (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಆ) ಅವುಗಳಲ್ಲಿ ಸರ್ಕಾರದಿಂದ ಪರಿಗಣಿಸಲ್ಪಟ್ಟ ಪ್ರಕರಣಗಳೆಷ್ಟು? ಹೆಸರುಗಳೊಂದಿಗೆ?

ಇ) ಮೇಲಿನ ಪ್ರಕರಣಗಳಲ್ಲಿ ಮುದ್ರಾಂಕ ಶುಲ್ಕವಿರುವ ರಿಯಾಯ್ತಿ ನೀಡಿದ ಮೊತ್ತ ಮತ್ತು ಈ ರಿಯಾಯಿತಿ ನೀಡಲು ಕಾರಣಗಳನ್ನು ಒದಗಿಸುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಏಪ್ರಿಲ್ 1991ರಿಂದ ಇದುವರೆಗೆ ಮುದ್ರಾಂಕ ಶುಲ್ಕ ಹಾಗೂ ನೋಂದಣಿ ಫೀ ವಿನಾಯಿಗಾಗಿ ಬಂದಿರುವ ಕೋರಿಕೆಗಳ ವಿವರ ಈ ಕೆಳಕಂನಂತಿವೆ:

1) ಶೃಂಗೇರಿ ನಾಗರೀಕರ ಮನವಿ	ಚಿಕ್ಕಮಗಳೂರು
2) ನಿಮಾನ್ಸ್ ಆಸ್ಪತ್ರೆ	ಬೆಂಗಳೂರು
3) ಮೊಳೆ ಏತ ನೀರಾವರಿ	ಬೆಳಗಾಂ ಅಥನಿ ತಾಲ್ಲೂಕು
4) ಕೃಷ್ಣ ಕೃಷಿ ಸಂಸ್ಥೆ ಹುಲಿಕೋಟೆ	ಧಾರವಾಡ
5) ವಿಷ್ಯನ್ ಇನ್ಸ್‌ಟಿಟ್ಯೂಟ್ ಫಾರ್ ರೂರಲ್ ಡೆವಲಪ್‌ಮೆಂಟ್	ಬೆಂಗಳೂರು
6) ಎಂ.ಎಸ್. ರಾಮಯ್ಯ ವೈದ್ಯಕೀಯ ಕಾಲೇಜು	ಬೆಂಗಳೂರು
7) ಉಗಾರ್ ಬುರ್ದ ಏತ ನೀರಾವರಿ ಸಹಕಾರ ಸಂಘ	ಬೆಳಗಾಂ
8) ಬಿಷಪ್ ಕಾಟನ್ ಸ್ಕೂಲ್	ಬೆಂಗಳೂರು
9) ಗುರುವಾಯೂರಪ್ಪನ್ ಮನವಿ	ಬೆಂಗಳೂರು
10) ಶಿವಪದ್ಮ ವಿದ್ಯಾ ಸಂಸ್ಥೆ ಕುಷ್ಟಗಿ	ರಾಯಚೂರು
11) ಸಾಧಪ್ ರಬ್ಬರ ಕಾರ್ಖಾನೆ	ಧಾರವಾಡ ಜಿಲ್ಲೆ
12) ಮಹಾಬೋದಿ ಸಂಘಧ ಮನವಿ	ಬೆಂಗಳೂರು
13) ಮೀನು ಮಾರುಕಟ್ಟೆ ಅಡಮಾನ ಪತ್ರಕ್ಕೆ ಮುದ್ರಾಂಕ ಶುಲ್ಕ ವಿನಾಯಿತಿ ಕೋರಿ	ದಕ್ಷಿಣ ಕನ್ನಡ ಮತ್ತು ಇತರೆ
14) ರಾಘವೇಂದ್ರ ಸ್ವಾಮಿ ಮಠ ಟ್ರಸ್ಟ್	ಕೋಲಾರ
15) ಎಸ್.ಸಿ. ಎಸ್.ಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾನ್ವಿ ಮತ್ತು ಸಿಂದನೂರು	ರಾಯಚೂರು
16) ಹೊಸಪೇಟೆ ವೀವರ್ಸ್ ಕೋ ಅಪರೇಟೀವ್ ಸೊಸೈಟಿ, ಹೊಸಪೇಟೆ	ಬಳ್ಳಾರಿ

ಆ) ನಾಲ್ಕು (4)

1) ಕೃಷ್ಣ ಸಂಸ್ಥೆ, ಹುಲಿಕೋಟೆ

2) ರಾಘವೇಂದ್ರ ಮಠ ಟ್ರಸ್ಟ್ ಕೋಲಾರ

3) ಎಸ್.ಸಿ. ಎಸ್.ಟಿ ಅಭಿವೃದ್ಧಿ ಸಂಘ ಮಾನ್ವಿ, ರಾಯಚೂರು

4) ನೇಕಾರರ ಸಂಘ, ಹೊಸಪೇಟೆ

ಇ) ಸುಮಾರು 20,17,600-00 (1) ಅಭಿವೃದ್ಧಿ ಕಾರ್ಯಕ್ಕಾಗಿ ಸ್ಥಾಪಿತವಾಗಿರುವ ಸಂಸ್ಥೆಯಾಗಿರುವುದರಿಂದ ಉತ್ತೇಜನ ನೀಡಲು (2)ಒಂದು ಧಾರ್ಮಿಕ ಸಂಸ್ಥೆಯಾದುದರಿಂದ (3) ಪ.ಜಾ ಮತ್ತು ಪ.ಪಂ.ಗಳ ಕಲ್ಯಾಣಕ್ಕಾಗಿ (4) ಬಡ ನೇಕಾರರು ಮಾರುಕಟ್ಟೆ ದರದಲ್ಲಿ ಮುದ್ರಾಂಕ ಶುಲ್ಕ ನೀಡಲು ಶಕ್ತರಲ್ಲದ್ದರಿಂದ, ಅವರಿಗೆ ಸಂಘದಿಂದ ಹಂಚಿಕೆಯಾದ ದರದಲ್ಲಿ ನೊಂದಾಯಿಸಲು ಅನುಮತಿಸಲಾಯಿತು.

ಬಿಇಎಂಎಲ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಪರ ಭೂಸ್ವಾಧೀನದಿಂದ ಕೈಬಿಡಲಾದ ಜಮೀನಿನ ವಿವರ

3519 - ಶ್ರೀ ಪ್ರಭಾಕರ್ ಎಸ್. ರಾಣೆ (ಕಾರವಾರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿ ಇ ಎಂ ಎಲ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಪರ ಭೂಸ್ವಾಧೀನವಾದ ಜಮೀನನ್ನು ಕೈಬಿಟ್ಟಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಕೈಬಿಡಲಾದ ಅಧಿಸೂಚನೆ ನಂಬರ್, ದಿನಾಂಕ, ವಿಸ್ತೀರ್ಣ ಹಾಗೂ ಒಳಗೊಂಡ ಜಮೀನಿನ ವಿವರಗಳ ಕಾರಣ ಸಹಿತ ವಿವರಿಸುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಹೌದು.

ಆ)

ದಿನಾಂಕ	ವಿಸ್ತೀರ್ಣ	ಗ್ರಾಮ	ಕೈಬಿಡಲು ಕಾರಣ
	ಎ - ಗು		
1) 4.8.89	3 - 19	ಹಲಗೆ-ವಡೇರಹಳ್ಳಿ	ಸಹಕಾರ ಸಂಘ ಕೋರಿಕೆ ಪತ್ರ ದಿ: 1.6.89 ಪ್ರಕಾರ ಅಧಿಸೂಚನೆಯಿಂದ ತೆಗೆದು ಹಾಕಿದೆ.
2) 10.7.89	74 - 13	ವಂತರಪಾಳ್ಯ ಮತ್ತು ಸಾಣೆಗುರುವನಹಳ್ಳಿ	ರಿಟ್ ಅರ್ಜಿ 39943 ರಿಂದ 39946:82 ರಲ್ಲಿ ಒಡಂಬಡಿಕೆ ಅರ್ಜಿ ಪ್ರಕಾರ ದಿ: 26.3.87ರಲ್ಲಿನ ಉಚ್ಚನ್ಯಾಯಾಲಯದ ಆದೇಶದಂತೆ ಅಧಿಸೂಚನೆಯಿಂದ ತೆಗೆದುಹಾಕಿದೆ.

ಬಿಜಾಪುರ ಜಿಲ್ಲಾ ಇಂಡಿ ತಾಲ್ಲೂಕಿನ ಶೀತಲ ಗೃಹ, ಹಣ್ಣು ಸಂಸ್ಕರಣೆ ಘಟಕ ತೆಗೆಯುವ ಬಗ್ಗೆ

3522 - ಶ್ರೀ ಮನೋಹರ ಐನಾಪುರ (ಬಳ್ಳೊಳ್ಳಿ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಕಳೆದ ವಿಧಾನ ಸಭೆಯಲ್ಲಿ ಮಾನ್ಯ ಸಚಿವರು ತೋಟಗಾರಿಕೆ ಇವರು ಬಿಜಾಪುರ ಜಿಲ್ಲಾ ಇಂಡಿ ತಾಲ್ಲೂಕಿನ ಶೀತಲಗೃಹ ಮತ್ತು ಹಣ್ಣು ಹಂಪಲು ಸಂಸ್ಕರಣೆ ಮತ್ತು ಶೇಖರಣೆ ಘಟಕವನ್ನು ತೆರೆಯಲು ಆಶ್ವಾಸನೆ ನೀಡಿದ್ದ ಬಗ್ಗೆ ನಿಮ್ಮ ಗಮನಕ್ಕೆ ಬಂದಿದೆಯೇ?*

2) *ಹಾಗಾದರೆ ಜಿಲ್ಲೆಯ ಬಡ ರೈತರಿಗೆ ಯೋಗ್ಯ ದರ ಸಿಗುವಂತೆ ಯಾವಾಗ ಶೀತಲಗೃಹ ನಿರ್ಮಾಣಕಾರ್ಯ ಕೈಗೊಳ್ಳಲಾಗುವುದು?*

ಶ್ರೀ ಎಂ. ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು)

ಅ) ಸಲಹೆಯನ್ನು ಪರಿಶೀಲಿಸಬೇಕಾಗಿದೆ.

ಆ) ಪರಿಶೀಲನೆಯಲ್ಲಿದೆ.

ಕುಣಿಗಲ್ ಹಾಲು ಮಹಾ ಮಂಡಳಿಯ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ

3550 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುಮಕೂರು ಜಿಲ್ಲೆಯ ಕುಣಿಗಲ್‌ನಲ್ಲಿ ಕರ್ನಾಟಕ ಹಾಲು ಮಹಾ ಮಂಡಳಿಯ ಪಶು ಆಹಾರ ಉತ್ಪನ್ನ ಘಟಕ ಕಾರ್ಯ ನಿರ್ವಹಿಸುತ್ತಿದೆಯೇ?*

ಆ) *ಹಾಗಿದ್ದಲ್ಲಿ, ಈ ಮೇಲ್ಕಂಡ ಘಟಕದಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ಎಷ್ಟು?*

ಇ) *ಅಲ್ಲಿ ತಾತ್ಕಾಲಿಕ ನೇಮಕಾತಿ ಮಾಡಿದ ಸಂಖ್ಯೆ ಎಷ್ಟು?*

ಈ) *ನೇಮಕಾತಿ ಮಾಡುವಾಗ ರೋಸ್ಟರ್, ನಿಯಮವನ್ನು ಪಾಲಿಸಲಾಗಿದೆಯೇ*

ಶ್ರೀ ಬಸವರಾಜ್ ಪಾಟೀಲ್ (ಪಶು ಸಂಗೋಪನಾ ಮತ್ತು ಪಶು ವೈದ್ಯ ಸೇವಾ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

Deaths of Elephants in Kollegal Forest Range.

3551 - Sri K. Lakkappa, (Kunigal) : Will the Hon'ble Minister of State for Forest be pleased to state:

1) *Whether some elephants are died in Kollegal Forest Range?*

2) *If So, number of elephants died and the causes of its death?*

3) *Is it dur to poaching or an epidemic?*

5) *If so, what are its conclusions?*

SHRI E.T. SHAMBUNATH (Minister of State for Forest):

1) Yes.

2) 11 Elephants have died in Kollegal Forest Division due to suspected Tripanasoniasis disease.

3) Due to an epidemic.

4) Yes, by the Insititute of Animal Health and Veterinary Biologicals, Bangalore.

5) The deaths are strongly suspected to be due to Tripanasoniasis disease.

ನಾಗರಹೊಳೆಯಲ್ಲಿನ ಪ್ರವಾಸಿ ಕುಟೀರಗಳನ್ನು ಹಾರಾಜು ಮಾಡುವ ಪ್ರಸ್ತಾವನೆ

3577 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗರಹೊಳೆಯಲ್ಲಿ ಅರಣ್ಯ ಇಲಾಖೆ ನಿರ್ಮಿಸಿರುವ ಪ್ರವಾಸಿ ಕುಟೀರಗಳನ್ನು ಹರಾಜು ಮಾಡಲು ಪ್ರಸ್ತಾವನೆ ಇದೆಯೇ?

ಆ) ಹಾಗಿದ್ದಲ್ಲಿ ತಾಜ್ ಗ್ರೂಪ್‌ನವರು ಮುಂದೆ ಬಂದು ತಮ್ಮ ಪ್ರಸ್ತಾವನೆಯನ್ನು ನೀಡಿದ್ದಾರೆಯೇ?

ಇ) ಹಾಗಿದ್ದಲ್ಲಿ ತಾಜ್ ಗುಂಪಿನವರು ಎಷ್ಟು ಹಣವನ್ನು ಕೊಡುವುದಕ್ಕೆ ಇಚ್ಛಿಸಿದ್ದಾರೆ?

ಶ್ರೀ ಈ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು):

ಅ) ನಾಗರಪೊಳೆಯಲ್ಲಿ ಅರಣ್ಯ ಇಲಾಖೆಯು ನಿರ್ಮಿಸಿರುವ ಪ್ರವಾಸಿ ಕುಟೀರಗಳನ್ನು ಹರಾಜು ಮಾಡುವ ಪ್ರಸ್ತಾವನೆಯು ಪರಿಶೀಲನೆಯಲಿಲ್ಲ. ಆದರೆ ಮೂರ್‌ಕಲ್ಲಿನಲ್ಲಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತವು ನಿರ್ಮಿಸಿರುವ ವನ್ಯಜೀವಿ ಪ್ರವಾಸಿ ಸಂಕೀರ್ಣವನ್ನು ಗುತ್ತಿಗೆ ನೀಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.

ಆ) ಮೆ. ಗೇಟ್‌ವೇ ಹೋಟೆಲ್ ಮತ್ತು ಗೇಟ್‌ವೇ ರೆಸಾರ್ಟ್ಸ್ (ತಾಜ್‌ಸಮೂಹ) ಇವರು ಇದನ್ನು ಗುತ್ತಿಗೆ ಮೇಲೆ ನಡೆಸಲು ಇತರರೊಂದಿಗೆ ಪ್ರಸ್ತಾವನೆ ನೀಡಿದ್ದಾರೆ.

ಇ) ಇವರು 15 ವರ್ಷಗಳ ಗುತ್ತಿಗೆ ಅವಧಿಗೆ ರೂ. 313.75 ಲಕ್ಷಗಳನ್ನು ಕೊಡಲು ಇಚ್ಛಿಸಿದ್ದಾರೆ.

ಕುಣಿಗಲ್‌ನಲ್ಲಿ ತೋಟಗಾರಿಕೆ ತರಬೇತಿ ಕೇಂದ್ರ ತೆರೆಯುವ ಪ್ರಸ್ತಾವನೆ

3576 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯ ಕುಣಿಗಲ್‌ನಲ್ಲಿ ಒಂದು ತೋಟಗಾರಿಕೆ ತರಬೇತಿ ಕೇಂದ್ರವನ್ನು ತೆರೆಯುವ ಪ್ರಸ್ತಾವನೆ ಇದೆಯೇ?

ಆ) ಇಲ್ಲದಿದ್ದರೆ ಸರ್ಕಾವು ಕುಣಿಗಲ್ ತಾಲ್ಲೂಕಿನಲ್ಲಿ ಇರುವ ಮೂಲ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಒಂದು ತೋಟಗಾರಿಕೆ ತರಬೇತಿ ಕೇಂದ್ರ ಮತ್ತು ಸಂಶೋಧನಾ ಕೇಂದ್ರವನ್ನು ತೆರೆಯಲು ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಎಂ.ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು):

ಅ) ಇಲ್ಲ

ಆ) ಇಲ್ಲ, ಏಕೆಂದರೆ ಈಗಾಗಲೇ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಹೇರೂರು ತೋಟಗಾರಿಕೆ ಕ್ಷೇತ್ರದಲ್ಲಿ ತರಬೇತಿ ಕೇಂದ್ರವಿದ್ದು, ತುಮಕೂರು ಜಿಲ್ಲೆಯ ರೈತರ ಮಕ್ಕಳಗಾಗಿಯೇ ಮೀಸಲಾಗಿದೆ. ಅಲ್ಲಿ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆಯು ಸಹ ಸರ್ಕಾರದ ಮುಂದಿಲ್ಲ.

ತುಮಕೂರು ಡೇರಿಯಲ್ಲಿ ದುರಾಡಳಿತ

3575 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಡೇರಿಯಲ್ಲಿ ದುರಾಡಳಿತದಿಂದ ದೊಡ್ಡ ಪ್ರಮಾಣದಲ್ಲಿ ಹಣದ ದುರುಪಯೋಗ ಮತ್ತು ನಿಧಿಯ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಹೆಚ್ಚಿನ ಬೇಡಿಕೆ ಇದ್ದಾಗ್ಯೂ ಲಕ್ಷಾಂತರ ರೂಪಾಯಿಗಳ ಬೆಲೆಯ ಹಾಲು ಮತ್ತು ತುಪ್ಪವನ್ನು ಸುಟ್ಟು ಹಾಕಿರುವುದು ನಿಜವೇ?

ಇ) ಹಾಗಿದ್ದಲ್ಲಿ ಈ ಮೇಲ್ಕಂಡ ಡೇರಿಯಲ್ಲಿ ದುರಾಡಳಿತಕ್ಕೆ ಹೊಣೆಗಾರರಾದವರ ಮೇಲೆ ಸರ್ಕಾರವು ಕ್ರಮ ಕೈಗೊಳ್ಳುವುದೇ?

ಈ) ಈ ಮೇಲ್ಕಂಡ ಡೇರಿಗೆ ಆಡಳಿತಗಾರರನ್ನು ನೇಮಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನಾ ಮತ್ತು ಪಸುವೈದ್ಯ ಸೇವಾ ರಾಜ್ಯ ಸಚಿವರು):

ಅ) ನಿರ್ದಿಷ್ಟ ಪ್ರಕರಣಗಳನ್ನು ನಮೂದಿಸಿ ಯಾವುದೇ ದೂರುಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಬೆಂಗಳೂರು ಹಾಲು ಮಾರಾಟ ಮಳಿಗೆಗಳನ್ನು ಗುತ್ತಿಗೆ ನೀಡುವ ಬಗ್ಗೆ

3570 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಹಾಲು ಮಾರಾಟ ಮಳಿಗೆಗಳ ಗುತ್ತಿಗೆಯನ್ನು ವಿಸ್ತರಿಸಿರುವ ಸಂಖ್ಯೆ ಎಷ್ಟು?

ಆ) ಈ ಗುತ್ತಿಗೆಗಳನ್ನು ವಿಸ್ತಿರಿಸಿದಾಗ ಎಲ್ಲಾ ಕಾನೂನು ಮತ್ತು ನಿಬಂಧನೆಗಳನ್ನು ಪಾಲಿಸಲಾಗಿದೆಯೇ?

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು):

ಅ) ಮೂರು.

ಆ) ಹೌದು.

ಸರ್ಕಾರವು ಮೀನು ಮರಿಗಳನ್ನು ಉತ್ಪಾದನೆ ಮಾಡುತ್ತಿರುವುದರ ಕುರಿತು

3672 - ಶ್ರೀ ಡಿ.ಎ. ಚಿನ್ನಪ್ಪ (ಮಡಕೇರಿ) : ಮಾನ್ಯ ಮೀನುಗಾರಿಕೆ ಬಂದರು ಮತ್ತು ಒಳನಾಡು ಅಂತರ್ಜಲಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಸರ್ಕಾರವು ಮೀನು ಮರಿಗಳನ್ನು ಉತ್ಪಾದನೆ ಮಾಡುತ್ತಿರುವ ಸಂಗತಿ ನಿಜವೆ?

ಆ) ರಾಜ್ಯದಲ್ಲಿರುವ ಈ ರೀತಿಯ ಮೀನು ಮರಿ ಉತ್ಪಾದನಾ ಕೇಂದ್ರಗಳೆಷ್ಟು?

ಇ) 1989-90 ಮತ್ತು 1990-91ನೇ ಸಾಲಿನಲ್ಲಿ ರಾಜ್ಯದಲ್ಲಿ ಉತ್ಪಾದಿಸಲ್ಪಟ್ಟ ಮೀನು ಮರಿಗಳೆಷ್ಟು?

ಈ) ಈ ಸಾಲಿನಲ್ಲಿ ಮೀನು ಕೃಷಿಕರಿಗೆ ವಿತರಣೆ ಮಾಡಿದ ಮೀನು ಮರಿಗಳು (ಫಿಂಗರ್‌ಲಿಂಗ್ಸ್) ಮಂಜೂರಾದ ಹಣ ಮತ್ತು ವೆಚ್ಚವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಉ) ಕೊಡಗೂ ಜಿಲ್ಲೆಗೆ ಮಂಜೂರಾದ ಒಟ್ಟು ಹಣ ಮತ್ತು ವೆಚ್ಚವೆಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು)

ಶ್ರೀ ಎ.ಎಮ್. ಬೆಳ್ಳಿಯಪ್ಪ (ಮೀನುಗಾರಿಕೆ, ಬಂದರು, ಮತ್ತು ಒಳನಾಡು ಅಂತರ್ಜಲಸಾರಿಗೆ ರಾಜ್ಯ ಮಂತ್ರಿಗಳು):

ಅ) ಹೌದು.

ಆ) 28.

ಇ) 1989-90 ಮತ್ತು 1990-91ರಲ್ಲಿ 27.84 ಕೋಟಿ ಮತ್ತು 27.05 ಕೋಟಿ ಮೀನು ಮರಿಗಳನ್ನು (ಹ್ಯಾಚಿಲಿಂಗ್ಸ್) ಕ್ರಮವಾಗಿ ಉತ್ಪಾದಿಸಲಾಗಿದೆ.

ಈ) ಮೇಲಿನ ಸಾಲಿನಲ್ಲಿ ಜಿಲ್ಲಾವಾರು ಮೀನು ಮರಿ ಬಿತ್ತನೆ, ವಿತರಣೆ, ಮಂಜೂರಾದ ಹಣ ಮತ್ತು ವೆಚ್ಚದ ವಿವರಗಳನ್ನು ಅನುಬಂಧ-I ರಲ್ಲಿ ನೀಡಲಾಗಿದೆ.

ಉ) 1989-90 ಮತ್ತು 1990-91ನೇ ಸಾಲಿನಲ್ಲಿ ಕೊಡಗು ಜಿಲ್ಲೆಗೆ ವಿವಿಧ ಇಲಾಖಾ ಯೋಜನೆಗಳನ್ನು ಕಾರ್ಯಗತಗೊಳಿಸಲು ನೀಡಲಾಗಿದ್ದು ಅನುಧಾನ ಮತ್ತು ವೆಚ್ಚದ ಬಗ್ಗೆ ತಾಲ್ಲೂಕುವಾರು ವಿವರಗಳನ್ನು ಅನುಬಂಧ-II ರಲ್ಲಿ ನೀಡಲಾಗಿದೆ.

ANNEXURE - 1

Sl. No.	District	No. of Fingerlings Stocked/Distributed to Farmers		Amount Sanctioned		Amount spent	
		1989-90	1990-91	1989-90	1990-91	1989-90	1990-91
1.	2.	3.	4.	5.	6.	7.	8.
1.	Bangalore (Rural)	12.02	4.61	350000	400000	148805	55353
2.	Bangalore (Urban)	26.44	10.47	120000	150000	169166	50254
3.	Belgaum	22.65	28.72	450000	500000	302816	375825
4.	Bellary	66.61	9.05	165000	185000	154355	122888
5.	Bidar	17.88	20.51	150000	150000	120851	145214
6.	Bijapur	12.50	12.00	200000	200000	213817	174711
7.	Chickmagalur	15.93	37.72	251000	500000	242869	532058
8.	Chitradurga	14.46	14.05	230000	250000	218551	131958
9.	Dakshina Kannada	1.16	0.47	40000	80000	39736	61799
10.	Dharwad	28.84	22.91	200000	230000	193216	105164
11.	Gulbarga	33.24	31.70	202000	208000	234192	193955
12.	Hassan	26.44	24.11	400000	406000	402506	430457
13.	Kodagu	9.56	6.28	150000	200000	148246	219864
14.	Kolar	28.20	11.41	200000	300000	387128	286670
15.	Mandya	32.18	27.08	250000	285000	552263	285386

16.	Mysore	48.41	57.00	300000	1000000	303418	635114
17.	Raichur	23.98	34.82	150000	300000	129926	141088
18.	Shimoga	29.17	37.05	384000	450000	320763	455274
19.	Tumkur	47.93	14.59	300000	340000	291552	346868
20.	Uttar Kannada	4.47	3.29	50000	50000	57995	54902
	Total	502.07	403.34	4542000	6184000	4331978	4804398

ANNEXURE - II

Sl. No.	Name of the Taluk	Total Budget Provided		Total Expenditure	
		1989-90	1990-91	1989-90	1990-91
1.	Madikeri	91,500	1,60,000	80,459	1,53,540
2.	Virajpet	1,09,750	1,78,000	1,04,425	1,58,866
3.	Somwarpet Plan	1,04,750	1,68,000	97,960	1,53,534
	Schemes WGDF	19,00,000	16,00,000	13,58,000	27,68,000
	Total	22,06,000	21,06,000	16,48,844	32,33,940

ತುಮಕೂರು ಡೈರಿಯ ಹಾಲಿನ ಪ್ರಮಾಣ

3616 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಳ) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ತುಮಕೂರು ಡೈರಿಯು ಪ್ರತಿದಿನ ತುಮಕೂರು ಮತ್ತು ಬೆಂಗಳೂರಿಗೆ ಸರಬರಾಜು ಮಾಡುತ್ತಿರುವ ಒಟ್ಟು ಹಾಲಿನ ಪ್ರಮಾಣವೆಷ್ಟು ?*

ಆ) *ಬೆಂಗಳೂರಿಗೆ ಸರಬರಾಜು ಮಾಡುತ್ತಿರುವ ಹಾಲಿಗೆ ದೊಡ್ಡ ಪ್ರಮಾಣದಲ್ಲಿ ಕಲಬೆರಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?*

ಇ) *ತುಮಾಕೂರಿನ ಬೆಂಗಳೂರಿಗೆ ಹಾಲು ಸಾಗಾಣಿಕೆ ಮಾಡುವಾಗ ಕಲಬೆರಿಕೆ ಮಾಡುತ್ತಿರುವುದು ನಿಜವೇ ?*

ಈ) *ಹಾಗಿದ್ದಲ್ಲಿ, ತಮಕೂರು ಡೇರಿಯಿಂದ ಸರಬರಾಜುತ್ತಿರುವ ಹಾಲಿನ ಕಲಬೆರಕೆಯನ್ನು ನಿಲ್ಲಿಸಲು ತೆಗೆದುಕೊಂಡ ಕ್ರಮಗಳೇನು ?*

ಶ್ರೀ ಬಸವರಾಜ ಪಾಟೀಲ್ (ಪಶುಸಂಗೋಪನಾ ಮತ್ತು ಪಶುವೈದ್ಯಸೇವಾ ರಾಜ್ಯ ಸಚಿವರು)

ಅ) ತುಮಾಕೂರು - 17,000 ಲೀಟರ್
ಬೆಂಗಳೂರು - 18,000 ಲೀಟರ್

ಆ) ಇಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಗಾಣಗಾಪುರದ ಶ್ರೀ ದತ್ತಾತ್ರೇಯ ದೇವಸ್ಥಾನದ ಆದಾಯ

3670 - ಶ್ರೀ ಬಿ.ಐ. ಪಾಟೀಲ್ (ಉಚ್ಚಗಾಂ) : ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೆ ?

ಅ) *ಗಾಣಗಾಪುರದ ಶ್ರೀ ದತ್ತಾತ್ರೇಯ ದೇವಸ್ಥಾನ 1982, 1983, 1984 1985,1986,ಮತ್ತು 1987,ಮತ್ತು 1988 ಮತ್ತು 1990 ಹಾಗೂ 1991ನೇ ವರ್ಷಗಳ ಆದಾಯ*

ಆ) *ಆದಾಯದಲ್ಲಿ ಏರಿಕೆ ಮತ್ತು ಇಳಿತಕ್ಕೆ ಕಾರಣಗಳು (ವರ್ಷವಾರು ಸಂಖ್ಯೆಯನ್ನು ಒದಗಿಸುವುದು)*

ಇ) *ಈ ಮೇಲಿನ ವರ್ಷಗಳಲ್ಲಿ ಸಿಬ್ಬಂದಿಗಳಿಗೆ ಸಂಬಳ ಮತ್ತು ಇತರ ಭತ್ಯೆಗಳಿಗೆ ಆದ ಖರ್ಚು*

ಈ) *ಗಾಣಗಾಪುರ ದೇವಸ್ಥಾನ ಹೊರತು ರಾಜ್ಯದಲ್ಲಿ ಇನ್ಯಾವ ದೇವಸ್ಥಾನಗಳಲ್ಲಿ ಸರ್ಕಾರಿ ವೇತನ ಶ್ರೇಣಿ ಕೊಡದಿರುವುದು ನಿಜವೇ*

ಉ) *ಹಾಗಿದ್ದರೆ, ಈ ವೇತನ ಶ್ರೇಣಿಯನ್ನು ಯಾರು ಅನುಮೋದಿಸುತ್ತಾರೆ ?*

ಊ) *ಇದು ಸರ್ಕಾರದ ಗಮನಕ್ಕೆ ಬಂದಿದಲ್ಲಿ ಸರ್ಕಾರದಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ ?*

ಶ್ರೀ ರಾಜ ಅಮರೇಶ್ ನಾಯಕ್ (ಧಾರ್ಮಿಕ ದತ್ತಿ ರಾಜ್ಯ ಸಚಿವರು):

ಶ್ರೀ ದತ್ತಾತ್ರೇಯ ಸ್ವಾಮಿ ದೇವಸ್ಥಾನ, ಗಾಣಗಾಪುರ ಇದರ ಆದಾಯವು ಈ ಕೆಳಕಂಡಂತೆ ಇರುತ್ತವೆ.

ವರ್ಷ ಆದಾಯ

1982-83	ರೂ. 581,030-00
1983-84	ರೂ. 8.19,530-00
1984-85	ರೂ. 9.32,530-00
1985-86	ರೂ. 9.64.745-00
1986-87	ರೂ. 11,28,148-00
1987-88	ರೂ. 6,78,115-00
1988-89	ರೂ. 10,09,772-00
1989-90	ರೂ. 10,13,459-00
1990-91	ರೂ. 11,02,160-00

ಆ) ದೇವಸ್ಥಾನದ ಆದಾಯವು ಇದಕ್ಕೆ ಭೇಟಿ ನೀಡುವ ಭಕ್ತಾಧಿಗಳು "ಯಾತ್ರಾರ್ಥಿಗಳ ಸಂಖ್ಯೆ" ಮೇಲೆ ಮತ್ತು ಅವರು ಸಲ್ಲಿಸುವ ಪೂಜೆ ಸೇವೆಗಳ ಮೇಲೆ ಅವಲಂಭಿಸಿರುತ್ತದೆ. ಸಾಮಾನ್ಯವಾಗ ಈ ವರ್ಷಗಳಲ್ಲಿ ದೇವಸ್ಥಾನದ ಆದಾಯವು ಏರಿಕೆಯಲ್ಲಿರುತ್ತದೆ. ಮತ್ತು 1987-88 ರ ಆದಾಯದಲ್ಲಿ ಸ್ವಲ್ಪ ಇಳಿಮುಖವಾಗಿರುತ್ತದೆ. ಇದು ಆ ವರ್ಷದಲ್ಲಿ ಕಡಿಮೆ ಸಂಖ್ಯೆಯ ಯತ್ರಾರ್ಥಿಗಳ ಭೇಟಿಯಿಂದ ಉಂಟಾಗಿರುತ್ತದೆ.

ಇ) ನೌಕರರಿಗೆ ವೇತನ ಮತ್ತು ಭತ್ಯೆ ನೀಡಿರುವ ವಿವರಗಳು ಕೆಳಕಂಡತಿದೆ:

1982-83	ರೂ. 70.000-00
1983-84	ರೂ. 35,000-00
1984-85	ರೂ. 1,20.000-00
1995-86	ರೂ. 1.30,000-00
1986-87	ರೂ. 1,45,000-00
1987-88	ರೂ. 1.60,000-00
1988-89	ರೂ. 1,76,427-00
1989-90	ರೂ. 2,55,905-00
1990-91	ರೂ. 2,85,806-00

ಈ) ಇಲ್ಲ

ಉ) ಧಾರ್ಮಿಕ ದತ್ತಿ ಆಯುಕ್ತರು ವೇತನ ನಿಗಧಿ ಪಡಿಸಿರುತ್ತಾರೆ.

ಊ) ಸರ್ಕಾರದ ಗಮನಕ್ಕೆ ಈ ಹಿಂದೆ ಬಂದಿರುತ್ತದೆ ಮತ್ತು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲವೆಂದ ಭಾವಿಸಲಾಗಿದೆ.

ಧರ್ಮವೀರ ತೋಟಗಾರಿಕೆ ಕ್ಷೇತ್ರಕ್ಕೆ ದಿನಗೂಲಿ ನೌಕರರನ್ನು ನೇಮಕ

3667 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಿವಳ್ಳಿ) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀ ಧರ್ಮವೀರ ತೋಟಗಾರಿಕೆ ಕ್ಷೇತ್ರದಲ್ಲಿ 1971 ರಿಂದ ಇಲ್ಲಿಯವರೆಗೆ ಎಷ್ಟು ಜನ ದಿನಗೂಲಿ ನೌಕರರನ್ನು ನೇಮಿಸಲಾಗಿದೆ.

ಆ) ಈ ದಿನಗೂಲಿ ನೌಕರರಲ್ಲಿ ಇಲ್ಲಿಯವರೆಗೆ ಯಾರನ್ನಾದರೂ ಖಾಯಂ ಗೊಳಿಸಲಾಗಿದೆಯೇ (ಹಾಗಿದ್ದ ಪಕ್ಷದಲ್ಲಿ ವಿವರಣೆ ನೀಡುವುದು)

ಇ) ಹಾಗಾಗಿದ್ದ ಪಕ್ಷದಲ್ಲಿ ಕಾರಣವನ್ನು ತಿಳಿಸುವುದು?

ಶ್ರೀ ಎಂ.ಎಸ್. [illegible] (ತೋಟಗಾರಿಕೆ ರಾಜ. ಸಚಿವರು):

ಅ) 1971ರಿಂದ ಇಲ್ಲಿಯವರೆಗೆ 42 ಜನ ದಿನಗೂಲಿ ನೌಕರರನ್ನು ನೇಮಕ ಮಾಡಲಾಗಿದೆ.

ಆ) ಈ ಪೈಕಿ 33 ಜನ ದಿನಗೂಲಿ ನೌಕರರನ್ನು ದಿನಾಂಕ 1-1-90 ರಿಂದ ಖಾಯಂಗೊಳಿಸಲಾಗಿದೆ.

ಶ್ರೀಯುತರು : ಶ್ರೀಮತಿ

1. ರಾಮನಾಯಕ್
2. ಸಣ್ಣ ರಾಮನಾಯಕ್
3. ರಾಮಚಂದ್ರನಾಯಕ್
4. ತೊಳಜಾನಾಯಕ್
5. ಸೇವಾನಾಯಕ್
6. ಬಿ.ಜಯಮ್ಮ
7. ಮರಿಯಮ್ಮ
8. ನಿಂಗಮ್ಮ
9. ಗೌರಮ್ಮ
10. ರಂಗಸ್ವಾಮಯ್ಯ ತಂದೆ ಬೋರಣ್ಣ
11. ಬಿ. ಶಿವಣ್ಣ
12. ಕರಿಯಮ್ಮ
13. ಗೋವಿಂದನಾಯಕ್
14. ಸಕ್ರಿಬಾಯಿ
15. ಬಿ.ನಿಜಾಮ್
16. ಬಿ.ವೆಂಕಟಾಚಲ.
17. ಬಿ.ರಾಜಮ್ಮ
18. ಹನುಮಕ್ಕ
19. ಎಸ್. ಆರ್. ಪಾಂಡುರಂಗಯ್ಯ
20. ಮುಕುಂದರಾವ್
21. ತಿಮ್ಮಣ್ಣ
22. ರಾಮಣ್ಣ
23. ಜಯನಾಯಕ್
24. ಬಿ.ರಾಜಣ್ಣ
25. ದೊಡ್ಡಸೀತಮ್ಮ
26. ಬಿ.ಲಕ್ಕಮ್ಮ
27. ಎ.ಹೆಚ್. ಕೃಷ್ಣ
28. ಎನ್.ವಿ. ವೆಂಕಟೇಶ್
29. ತಿಮ್ಮರಾಯಪ್ಪ
30. ಸಣ್ಣಗೌರಮ್ಮ
31. ಶಿವಮ್ಮ
32. ಕಮಲಮ್ಮ
33. ಜಯಣ್ಣ

ಇ) ಉಳಿದವರುಗಳನ್ನು ಸರ್ಕಾರ ಅಧಿಸೂಚನೆ ಸಂಖ್ಯೆ ಡಿಪಿ.ಎಆರ್ 9 ಎಸ್‌ಆರ್ 90 ದಿನಾಂಕ 6-8-90ರ ನಿಯಮಗಳ ಅನ್ವಯ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು : ಪಟ್ಟಿಯನ್ನು ಮಂಡಿಸಲಾಯಿತು. ಮಾನ್ಯ ಸಿಂಧ್ಯರವರ ಇವೊತ್ತು ನಿಮ್ಮ ಹುಟ್ಟಿದ ಹಬ್ಬದ ದಿನ, ಆದುದರಿಂದ ಸಭೆಯ ಪರವಾಗಿ ಮತ್ತು ನನ್ನ ಪರವಾಗಿ ತಮಗೆ ಶುಭಕಾಮನೆಗಳನ್ನು ತಿಳಿಸುತ್ತೇನೆ.

ಶ್ರೀಮತಿ ಮೋಟಮ್ಮ : ಇಲ್ಲಿ ತುಂಬಾ ಜನರ ಹುಟ್ಟಿದ ಹಬ್ಬವನ್ನು ಸೆಲಿಬರೇಟ್ ಮಾಡಿದಂತಾಯಿತು. ಆದರೆ ಒಬ್ಬರಿಂದಲೂ ಊಟ ಮತ್ತು ಸ್ವೀಟ್ ಸಿಗಲಿಲ್ಲ.

ಶ್ರೀಕೆ.ಎಸ್. ಈಶ್ವರಪ್ಪ : ಒಳ್ಳೆಯ ಹೂವನ್ನು ಕೊಡುತ್ತಿದ್ದೀರಿ ಕಮಲದ ಹೂವನ್ನು ಕೊಡಬೇಕು......

ಶ್ರೀ ಎಂ. ಮಹದೇವ್ : ವಿಶೇಷವೇನೆಂದರೆ ಮಾನ್ಯ ಸಿಂಧ್ಯರವರ ಹುಟ್ಟಿದ ಹಬ್ಬದ ದಿನವೇ ಫುಡ್ ಡಿಮ್ಯಾಂಡ್ ಇದೆಯಲ್ಲ.

ಶ್ರೀ ವಾಟಾಳ್ ನಾಗರಾಜ್ : ಸನ್ಮಾನ್ಯ ಅಧ್ಯಕ್ಷರೇ, ಕೊನೆಯ ಪಕ್ಷ ಒಂದು ಲಕ್ಷ ರೂಪಾಯಿಯನ್ನು ಬಹುಮಾನವಾಗಿ ಕೊಡುವ ವ್ಯವಸ್ಥೆಯನ್ನಾದರೂ ಮಾಡಿ

ಬರೀ ಹೂವನ್ನು ಕೊಡುವುದರಿಂದ ಪ್ರಯೋಜನವಾಗುವುದಿಲ್ಲ. ತಮ್ಮ ಅಧಿಕಾರದ ಅವಧಿಯಲ್ಲಿ ಒಂದು ಲಕ್ಷ ರೂಪಾಯಿಯನ್ನು ಕೊಡುವ ವ್ಯವಸ್ಥೆ ಮಾಡಿ.

ಅಧ್ಯಕ್ಷರು : ನೀವು ವಿಧಾನ ಸಭೆಯ ಅಧ್ಯಕ್ಷರಾದಾಗ ಅದನ್ನು ಜಾರಿಗೆ ತನ್ನಿ.

ಚುಕ್ಕೆಗುರುತಿನ ಮತ್ತು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರ ಬರದಿರುವ ಬಗ್ಗೆ ಪ್ರಸ್ತಾಪ

ಶ್ರೀ ಎನ್.ಜಿ. ನಾಯಕ್ : ನಾನು ಲಿಖಿತ ಮೂಲಕ ಕೆಲವು ಪ್ರಶ್ನೆಗಳನ್ನು ಕೇಳಿದ್ದೇನೆ. ಅದಕ್ಕೆ ಉತ್ತರ ಬಂದಿಲ್ಲ. ಚುಕ್ಕೆ ಗುರುತಿನ 5 ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ.

ಅಧ್ಯಕ್ಷರು : ಚುಕ್ಕೆ ಗುರುತಿನ ಪ್ರಶ್ನೆಗಳೇ?

ಶ್ರೀ ಎನ್.ಜಿ. ನಾಯಕ್ : ಅಲ್ಲಿ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ.

ಅಧ್ಯಕ್ಷರು : ಅದನ್ನು ತರಿಸಿಕೊಡುವ ಏರ್ಪಾಡು ಮಾಡುತ್ತೇನೆ.

+ಶ್ರೀ ಎಸ್. ಯಡಿಯೂರಪ್ಪ : ಚುಕ್ಕೆ ಗುರುತಿನ ಪ್ರಶ್ನೆಗಳಲ್ಲಿ 5-6 ದಿನದಿಂದ ನೋಡುತ್ತಿದ್ದೇನೆ. ಯಾವುದಕ್ಕೂ ಉತ್ತರ ಬರುತ್ತಿಲ್ಲ. ಸದನದಲ್ಲಿ ಉತ್ತರವನ್ನು ಕೊಡತಕ್ಕ ಸಂದರ್ಭದಲ್ಲಿ ಅನೇಕ ಪ್ರಶ್ನೆಗಳು ಮುಂದಕ್ಕೆ ಹೋಗಿವೆ. ಲಿಖಿತ ಮೂಲಕ ಕೊಡುವ ಉತ್ತರದಲ್ಲಿ ಈವತ್ತು 10-12 ಪ್ರಮುಖವಾದ ಪ್ರಶ್ನೆಗಳಿಗೆ ಉತ್ತರ ಕೊಡುತ್ತೇವೆಂದು ತೆಗೆದುಕೊಂಡು ಒಂದಕ್ಕೂ ಉತ್ತರ ಬಂದಿಲ್ಲ.

ಅಧ್ಯಕ್ಷರು : 147 ಪ್ರಶ್ನೆಗಳಲ್ಲಿ 88 ಕ್ಕೆ ಉತ್ತರ ಬಂದಿದೆ. ಉಳಿದ ಪ್ರಶ್ನೆಗಳಿಗೆ....

+ ಶ್ರೀ ಬಿ.ಎಸ್. ಯಡಿಯೂರಪ್ಪ : ಪ್ರಮುಖವಾಗಿರತಕ್ಕ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ.ಯಾವುದು ಇಲ್ಲಿ ಚುಕ್ಕೆ ಗುರುತಿನ ಪ್ರಶ್ನೆಯಾಗಿ ಬಂದು ಚರ್ಚೆಯಾಗಬೇಕಾಗಿತ್ತೋ ಅದು ಪರಿವರ್ತನೆಯಾಗಿಯಾದರೂ ಬರಬೇಕಲ್ಲ. ಎಂ.ಪಿ.ಎಂ. ಬಗ್ಗೆ, ರೈತರ ಬಗ್ಗೆ ಪ್ರಮುಖವಾದ ವಿಷಯದ ಬಗ್ಗೆ

ಅಧ್ಯಕ್ಷರು : ಸರ್ಕಾರಕ್ಕೆ ಮತ್ತೊಮ್ಮೆ ಸೂಚನೆಯನ್ನು ಕೊಡುತ್ತೇನೆ. ಲಿಖಿತ ಮೂಲಕ ಬರತಕ್ಕಂತಹ ಪ್ರಶ್ನೆಗಳನ್ನು ಮತ್ತು ಚುಕಕ್ಕೆ ಗುರುತಿನ ಪ್ರಶ್ನೆಗಳನ್ನು ಕೇಳಿದಾಗ ತ್ವರಿತ ಗತಿಯಲ್ಲಿ ನಿಯಮಿತಿವಾದ . ವೇಳೆಯಲ್ಲಿ, ನಿಯಮಿತವಾದ ದಿನದಲ್ಲಿ ಉತ್ತರ ಕೊಡತಕ್ಕಂತಹ ಏರ್ಪಾಡನ್ನು ಮಾಡಬೇಕು.

ಶ್ರೀ ವಾಟಾಳ್‌ನಾಗರಾಜ್ : ಅಧ್ಯಕ್ಷರೆ, ಇದರ ಬಗ್ಗೆ ಅನೇಕ ಸಂದರ್ಭಗಳಲ್ಲಿ ಹೇಳಿದ್ದೀವಿ. ಇದೇನು ಮೊದಲ ಸಲವಲ್ಲ ನಮಗೆ ದೊಡ್ಡ ದೊಡ್ಡ ಪುಸ್ತಕಗಳು ಬರುತ್ತವೆ. ನಮ್ಮ ಪ್ರಶ್ನೆಯನ್ನು ನಾವು ಒತ್ತಾಯಿಸಬೇಕೇ ಹೊರತು ಉತ್ತರ ಸಿಗುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಸದನದ ಕಾರ್ಯಕಲಾಪಗಳು ಮುಗಿಯುವುದರೊಳಗಾಗಿ ಅದರೆ 27ನೇ ತಾರೀಕಿನೊಳಗೆ ಯಾವುದಕ್ಕೆ ಉತ್ತರ ಸಿಕ್ಕಿಲ್ಲವೋ ಅದಕ್ಕೆ ಉತ್ತರವನ್ನು ಕೊಡುವಂಥ ವ್ಯವಸ್ಥೆ ಮಾಡಬೇಕು.

ಶ್ರೀ ವಾಟಾಳ್‌ನಾಗರಾಜ್ : ಈ ಸದನ ಮುಗಿಸುವುದರೊಳಗೆ ತಾವು ಇದಕ್ಕೆ ಉತ್ತರವನ್ನು ದೊರಕಿಸಿಕೊಡುವ ವ್ಯವಸ್ಥೆಯನ್ನು ಮಾಡಬೇಕು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

(i) ಭದ್ರಾ ಬಲದಂಡೆ ಕಾಲುವೆಯ ಚಾನಲ್ ಒಡೆದು ಹೋಗಿರುವ ಬಗ್ಗೆ

ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಸರ್ಕಾರದಿಂದ ಉತ್ತರ ತರಿಸುವ ವ್ಯವಸ್ಥೆ ತಾವು ಮಾಡಿಕೊಟ್ಟಿದ್ದೀರಿ. ನಾನು ತಮ್ಮಿಂದ ಕೆಲವು ಉತ್ತರಗಳನ್ನು ನಿರೀಕ್ಷೆ ಮಾಡಿದ್ದೆ. ಈಗಾಗಲೇ ಎರಡು ದಿವಸ ಸಭೆ ಇರುವುದಿಲ್ಲ, ಆ ಕಾರಣ ನಾನು ಟೆಲಿಫೋನ್ ಟ್ಯಾಪಿಂಗ್ ಪ್ರಕರಣಗಳಲ್ಲಿ ಕಾಲ ನಿಗದಿ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿದ್ದೆ. ತಮ್ಮಿಂದ ಉತ್ತರ ಬರಲಿಲ್ಲ. ಆದರೂ ನಾನು ಇವತ್ತು ಕೂಡ ನಿರೀಕ್ಷೆ ಮಾಡುತ್ತೇನೆ. ಇನ್ನೊಂದು ಪ್ರಿವಿಲೇಜ್ ಮೋಷನ್‌ನ್ನು ತಮ್ಮ ಅವಗಾಹನೆಗೆ ಕಳುಹಿಸಿಕೊಟ್ಟಿದ್ದೇನೆ. ಅದಕ್ಕಾಗಿ ತಾವು ಸರ್ಕಾರಕ್ಕೆ ಒತ್ತಾಯ ಮಾಡುವುದು. ತಮ್ಮನ್ನು ನಾನು ಒತ್ತಾಯ ಮಾಡುವುದು ಕಷ್ಟವಾಗುತ್ತದೆ. ಮತ್ತು ಮೂರನೆಯದಾಗಿ ಗ್ರಾನೈಟ್ ಪ್ರಕರಣದಲ್ಲಿ ಒಂದು ಸಮಿತಿಯನ್ನು ಮಾಡಬೇಕೆಂದು ತಮಗೆ ಅದರ ಅಧಿಕಾರವನ್ನು ವಹಿಸಿಕೊಟ್ಟಿದ್ದೇವೆ. ಈ ಮೂರು ವಿಚಾರಗಳಲ್ಲಿ ತಾವು ಇವತ್ತು ಏನಾದರೂ ಒಂದು ನಿರ್ಣಯ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ. ಮೋಹನ್ ಮೆಹನ್ಸ್ ಬಗ್ಗೆ ನಾನು ಕಳುಹಿಸಿದ್ದ ಪ್ರಿವಿಲೇಜ್ ಮೋಷನ್ ಬಗ್ಗೆ ಒಂದು ತೀರ್ಮಾನ ಕೊಡುತ್ತೀರಾ ಇವತ್ತು.....

ಅಧ್ಯಕ್ಷರು : ಕೆಲವು ಹಕ್ಕು ಭಾದ್ಯತಾ ಸೂಚನೆಗಳು ಮತ್ತು ಕೆಲವು ರೂಲಿಂಗ್ ನನ್ನ ಕಡೆಯಿಂದ ಬರಬೇಕಾಗಿದೆ. ಅವುಗಳು ಬಹಳ ಗಹನವಾದಂತಹ ವಿಚಾರಗಳನ್ನು ಒಳಗೊಂಡಿರುವಂತಹವು. 4-6 ಡಾಕ್ಯುಮೆಂಟ್‌ಗಳನ್ನು ಇಂಡೆಕ್ಸ್ ಸ್ಟಡಿ ಮಾಡಬೇಕಾಗಿರತಕ್ಕಂಥ ವಿವರಗಳು ಅದರಿಂದ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಇದೆ. ಹೈ ಕೋರ್ಟಿನ ಜಡ್ಜ್‌ಮೆಂಟ್ ಇದೆ. ಒಂದಕ್ಕೊಂದು ಹೇಳಿಕೆಗಳು ಇವೆ. ಮರು ಹೇಳಿಕೆಗಳು ಇವೆ. ಅನಂತರ ವಿವರಗಳು ಇವೆ. ಆದ್ದರಿಂದ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. 27 ರಂದು ಕೊನೆಯ ದಿವಸ ಅಧಿವೇಶನ ಅಡ್‌ಜರ್ನ್ ಆಗುವುದು ಅದರೊಳಗೆ ನನ್ನ ಮೇಲೆ ಉಳಿದಿರುವ ಬಾಕಿ ಕೆಲಸ ಏನು ಇವೆ ; ಅದನ್ನೆಲ್ಲಾ ನಾನು ಮುಗಿಸುತ್ತೇನೆ.

+ಶ್ರೀ ಬಿ. ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ ಭದ್ರಾಬಲ ದಂಡೆ ಕಾಲುವೆಯ ಒಂದು ಚಾನಲ್ ಒಡೆದು ಹೋಗಿ ಸುಮಾರು 90 ಸಾವಿರ ಹೆಕ್ಟೇರ್ ಜಮೀನು ಹಾಳಾಗಿ ಹೋಗುತ್ತಿದೆ. ಕುಡಿಯುವ ನೀರು ಮತ್ತು ರೈತರಿಗೆ ನೀರು ಸಿಗದಂತಹ ವಿಚಿತ್ರ ಪರಿಸ್ಥಿತಿ ಬಂದಿದೆ. ಇದರ ದುಷ್ಪರಿಣಾಮ ರೈತರ ಮೇಲೆ ಏನಾಗಬಹುದು, ಎಲ್ಲಾ ಅಧಿಕಾರಿಗಳು ಅಲ್ಲಿ ಹೋಗಿದ್ದಾರೆ, ನಾನು ಕೇಳಿದ್ದೇನೆ. ಪತ್ರಿಕೆಯಲ್ಲಿ ಪ್ರಮುಖವಾಗಿ ಅದು ಬಂದಿಲ್ಲ. ಸನ್ಮಾನ್ಯ ನೀರಾವರಿ ಸಚಿವರು ಇದ್ದಾರೆ. ಶಿವಮೊಗ್ಗದಿಂದ ದಾವಣಗೆರೆಯವರೆಗೆ ಎಡ ಬಲದಲ್ಲಿ ಏನು ಇದೆ ಕಂಪ್ಲೀಟ್ ಅಲ್ಲಿ ಇರುವಂತಹ ರೈತರು ಬೀದಿ ಪಾಲಾಗುವಂತಹ ಒಂದು ವಿಚಿತ್ರ ಪರಿಸ್ಥಿತಿ ಒದಗಿ ಬಂದಿದೆ. 90 ಸಾವಿರ ಹೆಕ್ಟೇರ್ ಜಮೀನಿನ ಮೇಲೆ ಇದು ಕೆಟ್ಟ ಪರಿಣಾಮವನ್ನು ಬೀರುತ್ತಿದೆ. ಇಲ್ಲಿ ನೀರಾವರಿ ಸಚಿವರು ಇದ್ದಾರೆ.

ಅದರ ಬಗ್ಗೆ ಉತ್ತರ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಈ ಚಾನಲ್ ಒಡೆದಿರುವುದರಿಂದ ತರೀಕೆರೆಯಿಂದ ದಾವಣಗೆರೆಗೆ ಕುಡಿಯುವ ನೀರಿಗೆ ಎಫೆಕ್ಟ್ ಆಗುತ್ತದೆ. ಇಲ್ಲಿರುವ ಅಡಿಕೆ, ತೆಂಗು, ಕಬ್ಬು, ಭತ್ತ ಇವೆಲ್ಲವಕ್ಕೂ ತೊಂದರೆಯಾಗುತ್ತದೆ.

ಅಧ್ಯಕ್ಷರು : ಸ್ಟೇಟ್‌ಮೆಂಟ್ ಮಾಡುತ್ತಾರೆ. ರೇಷ್ಮೆ ಹುಳು ವಿಚಾರದಲ್ಲಿ 25ನೇ ತಾರೀಖು ಚರ್ಚೆ ಮಾಡೋಣ.

ಶ್ರೀ ಎಂ. ಎಸ್. ಪಾಟೀಲ್ : ಅಧ್ಯಕ್ಷರೆ, ಇವರ ಬಗ್ಗೆ ಆಮೇಲೆ.....

ಪ್ರವಾಹ ಪೀಡಿತ ಪ್ರದೇಶಗಳಿಗೆ ಪರಿಹಾರ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಅಧ್ಯಕ್ಷರೆ, ಪ್ರವಾಹ ಪೀಡಿತ ಪ್ರದೇಶಗಳಿಗೆ ಪರಿಹಾರದ ಬಗ್ಗೆ ನಾವು ಒಂದೇ ಸಮನೆ ಚರ್ಚೆಗೆ ಕೇಳುತ್ತಿದ್ದೇವೆ. ತಾವು ನಾಳೆ ಅಥವಾ ನಾಡಿದ್ದು ಚರ್ಚೆ ಮಾಡೋಣವೆಂದು ಹೇಳಿದ್ದಿರಿ. ತಮಗೆ ನಾನು ಹೇಳುತ್ತಿದ್ದೇನೆ. ಮಂಡ್ಯ ಮೈಸೂರು ಹಾಸನ ಈ ಪ್ರದೇಶಗಳಲ್ಲಿ ಪ್ರವಾಹ ಪೀಡಿತಕ್ಕೆ ಒಳಗಾಗಿರುವಂತಹ ಜನ ಅನುಭವಿಸುತ್ತಾ ಇರುವಂತಹ ಕಷ್ಟಗಳಿಗೆ ಇವತ್ತಿನವರೆಗೂ ಪರಿಹಾರ ಕೊಟ್ಟಿಲ್ಲ. ಸಮಗ್ರವಾಗಿ ಈ ಸಭೆಯಲ್ಲಿ ಚರ್ಚೆಯಾಗಬೇಕಾಗಿದೆ. ಪ್ರತಿಯೊಂದನ್ನೂ ತಾವು 25,27 ಎಂದು ಹೇಳಿದರೆ ಅವತ್ತು 30 ಗಂಟೆ ಇರುವುದಿಲ್ಲ, 24 ಗಂಟೆನೆ ತಮಗೆ ತೊಂದರೆ ಕೊಡುವಂತಹ ಪರಿಸ್ಥಿತಿಗೆ ನಾವು ಹೋಗುತ್ತೇವೆ. ದಯವಿಟ್ಟು ಒಂದು ವಾರ ಸಭೆಯನ್ನು ಮುಂದಕ್ಕೆ ಹಾಕುವುದಾದರೆ ಅವನ್ನು ಸ್ವಲ್ಪ ಚರ್ಚೆ ಮಾಡಬಹುದು.

ಅಧ್ಯಕ್ಷರು : ಸದನ ಕಾರ್ಯಕಲಾಪಗಳ ಸಮಿತಿ ಸಭೆ ಕರೆಯುತ್ತೇವೆ ಅಲ್ಲಿ ನೀವು ಸಲಹೆ ಮಾಡಿ. ಕಾವೇರಿ ಚರ್ಚೆ ಅಪೂರ್ಣವಾಗಿದೆ. ನೀವು ಪ್ರಾರಂಭ ಮಾಡಿರುವಂತಹ ಚರ್ಚೆಯನ್ನು 25 ಅಥವಾ 26ಕ್ಕೆ ಮುಂದುವರಿಸೋಣ.

ಶ್ರೀ ವಾಟಾಳ್ ನಾಗರಾಜ್ : ನಾವೆಲ್ಲಾ ಸಹಿ ಹಾಕಿ ಕೊಟ್ಟಿರುವಂತಹದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ : ಅಧ್ಯಕ್ಷರೆ, ನಾನು ಇದಕ್ಕೆ ಉತ್ತರ ಹೇಳುತ್ತೇನೆ. ಅಧ್ಯಕ್ಷರೆ, ಇದು ತಮಗೆ ಗೊತ್ತಿದೆ. ಇದು ಶ್ರೀಮಾನ್ ಚಂದ್ರೇಗೌಡರು ಇದನ್ನು ರೈಸ್ ಮಾಡಿದ ಮೇಲೆ ನಾನು ಸದನದಲ್ಲಿ ಸ್ಟೇಟ್‌ಮೆಂಟ್ ಮಾಡಿದ್ದೇನೆ ಮತ್ತು ಪರಿಹಾರ ಕೊಟ್ಟಿದ್ದೇನೆ ಅದನ್ನು ಕೂಡ ಸರಕ್ಯುಲೇಟ್ ಮಾಡಿದ್ದೇನೆ. ಅದರ ಮೇಲೆ ಚರ್ಚೆ ಅಪೂರ್ಣವಾಗಿ ಉಳಿದಿದೆ ಅಷ್ಟೇ. ಸ್ಟೇಟ್‌ಮೆಂಟ್ ಮಾಡಿಲ್ಲ. ಅಂದರೆ ಅದು ಸರಿಯಲ್ಲ. ತಾವು ಆ ದಿವಸ ಇರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಸ್ವಲ್ಪ ಚರ್ಚೆ ಅಪೂರ್ಣವಾಗಿದೆ. ಹೇಳಿಕೆ ಪ್ರತಿ ಬಂದಿದೆ. ಸರ್ಕಾರ ಸರಿಯಾಗಿ ಆ ಪ್ರದೇಶ ನೋಡಲಿಲ್ಲ, ಮಂಡ್ಯ ಮೈಸೂರು, ಹಾಸನ ಪ್ರದೇಶವನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. ಅಲ್ಲಿ ಆಗಿರತಕ್ಕ ಪರಿಸ್ಥಿತಿ ಬೇರೆ ದುರಂತಕ್ಕೆ ಸಿಕ್ಕಿರತಕ್ಕ ಪರಿಸ್ಥಿತಿ ಬೇರೆ ಇವರು ಕೊಟ್ಟಿರತಕ್ಕಂಥ ಹೇಳಿಕೆ ಬೇರೆ. ಇದಕ್ಕಾಗಿ ಸಮಗ್ರವಾಗಿ ಚರ್ಚೆ ಆಗಬೇಕೆಂದು ತಮ್ಮಲ್ಲಿ ಕೇಳಿದ್ದು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಅಧ್ಯಕ್ಷರೇ, 11 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ ಒಂದು ಪೈಸೆ ಹಣ ಬಿಡುಗಡೆ ಆಗಿಲ್ಲ. ರಸ್ತೆಗಳು ಹಾಳಾಗಿ ಹೋಗಿವೆ.

(iii) ಸಹಕಾರಿ ಸಂಘಗಳಿಗೆ ಚುನಾವಣೆ

+ ಶ್ರೀ ಆರ್. ವಿ. ದೇಶಪಾಂಡೆ : ಅಧ್ಯಕ್ಷರೆ, ಸರ್ಕಾರದ ಆದೇಶದ ಪ್ರಕಾರ ಇಡೀ ರಾಜ್ಯದಲ್ಲಿ ಸಹಕಾರ ಸಂಘಗಳ ಚುನಾವಣೆ ಆಗುತ್ತಿದೆ. ಆದರೆ ಈ ಚುನಾವಣೆಯಲ್ಲಿ ಈಗಾಗಲೇ ಯಾರು ಡಿಫಾಲ್ಟರ್ಸ್ ಇದ್ದಾರೆ ಅವರಿಗೆ ತಾವು ವೋಟಿಂಗ್ ರೈಟ್ ಕೊಟ್ಟಿರಿ. 10 ನೇ ತಾರೀಖು ಮುಗಿಯಿತು. 10-9-91 ಕ್ಕೆ ಆ ಅಜ್ಞೆ ಮುಗಿದಿದೆ. ಇದರ ಮುಂದೆ ಚುನಾವಣೆ ಏನಾಗುತ್ತದೆ ಅದು ಬಹಳ

ಕನ್‌ಫ್ಯೂಷನ್ ನಡೆಯುತ್ತದೆ. ಡಿಫಾಲ್ಟರ್ಸ್‌ಗೆ ಆ ಮತದಾನ ಅಧಿಕಾರ ಇದೆಯೋ , ಇಲ್ಲವೋ ಅದರ ಬಗ್ಗೆ ಸರ್ಕಾರದಿಂದ ಯಾವುದೇ ಆಜ್ಞೆ ಹೊರಟಿಲ್ಲ, ಅದರ ಬಗ್ಗೆ ಮಾನ್ಯ ಸಹಕಾರ ಸಚಿವರು ಒಂದು ಹೇಳಿಕೆಯನ್ನು ಕೊಟ್ಟರೆ ಚುನಾವಣೆ ಸರಿಯಾಗಬಹುದು. ಇಲ್ಲದಿದ್ದರೆ, ಬಹಳ ಕನ್‌ಫ್ಯೂಸನ್ ಆಗುತ್ತದೆ.

ಅಧ್ಯಕ್ಷರು : ಅದರ ಬಗ್ಗೆ 25 ನೇ ತಾರೀಖು ಕೊಡಿ.

+ ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ಈ ಸದನದೊಳಗೆ ಸನ್ಮಾನ್ಯ ಸಹಕಾರ ಸಚಿವರು ಈ ಒಂದು ಡಿಫಾಲ್ಟರ್ ಪ್ರಶ್ನೆ ದೊಡ್ಡದು ಇರುವುದರಿಂದ ಚುನಾವಣೆಗಳನ್ನೂ ಈಗ ಮಾಡುತ್ತಿಲ್ಲ, ಮುಂದೂಡಿದ್ದೇನೆ. ಎಂದು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಹಾಗೆಯೇ ಚುನಾವಣೆಡೇಟನ್ನು ಕೊಟ್ಟಿದ್ದಾರೆ. ನೂರಕ್ಕೆ ತೊಂಭತ್ತು ಜನ ರೈತರು ಡಿಫಾಲ್ಟರ್ಸ್ ಆಗಿದ್ದಾರೆ. ಅದಕ್ಕೆ ನಾವು ಮುಂದೂಡಿಸಿದ್ದೇವೆಂದು ಹೇಳಿದ್ದರು. ಮತ್ತೆ ಈಗ ಚುನಾವಣೆ ಮಾಡುವ ಘೋಷಣೆ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಇಲ್ಲಿ ಎರಡು ಹೇಳಿಕೆಗಳು, ಒಂದು ಚುನಾವಣೆಯನ್ನು ಮುಂದೂಡುವುದು, ಮತ್ತೊಂದು ಚುನಾವಣೆ ನಡೆಸುತ್ತೇವೆ ಎನ್ನತಕ್ಕಂಥದ್ದು ಈ ಹೇಳಿಕೆ ಕೊಟ್ಟಿರತಕ್ಕಂತಾದ್ದರಲ್ಲಿ ಜವಾಬ್ದಾರಿ ಇದೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ನೂರಕ್ಕೆ ತೊಂಭತ್ತರಷ್ಟು ಜನ ರೈತರು ಡಿಫಾಲ್ಟರ್ಸ್ ಇದ್ದಾರೆ. ಸಹಕಾರ ಸಂಘಗಳು ಇರಬಹುದು. ಅಥವಾ ಪಿಎಲ್‌ಡಿ ಬ್ಯಾಂಕ್ ಇರಬಹುದು.

ಶ್ರೀ ಎಸ್. ಆರ್. ಮೋರೆ : ಎಲೆಕ್ಷನ್ ಮುಂದೂಡಿದ್ದೇವೆ. ಡಿಫಾಲ್ಟರ್ಸ್‌ಗೆ ಕೂಡ ನಾವು ಅವಕಾಶ ಮಾಡಿಕೊಡುತ್ತೇವೆ. ಇವೊತ್ತು ಅಥವಾ ಅದರ ಬಗ್ಗೆ ಆದೇಶ ಹೊರಡಿಸುತ್ತೇವೆ.

ಶ್ರೀ ಆರ್. ಎಲ್. ಜಾಲಪ್ಪ : ಅಧ್ಯಕ್ಷರೆ, ಕಳೆದ 28 ನೇ ತಾರೀಖು ಈ ಒಂದು ಸಭೆಯಲ್ಲಿ ಮಾನ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಮಾಡಿದರು. ಅದೇ ರೀತಿ ಆರ್ಡರ್ ಮಾಡಿದ್ದಾರೆ. ಎರಡು ತಿಂಗಳು ಮುಂದಕ್ಕೆ ಹಾಕಿದ್ದೇವೆಂದು ಹೇಳಿದರು. 28ನೇ ತಾರೀಖಿನಿಂದ ಎರಡು ತಿಂಗಳು ಮುಂದಕ್ಕೆ ಹೋದರೆ ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ಎಲೆಕ್ಷನ್ ಮಾಡಲಿಕ್ಕೆ ಬರುವುದಿಲ್ಲ, ನವೆಂಬರ್‌ನಿಂದ ಆಚೆಗೆ ಎಲೆಕ್ಷನ್ ಮಾಡಬೇಕು. ತಾವು ಬಗ್ಗೆ ಒಂದು ಷೆಡ್ಯೂಲ್ ಹಾಕಿಕೊಳ್ಳಬೇಕು. ತಾಲ್ಲೂಕು ಲೆವಲ್‌ನಲ್ಲಿ ಪಿಲ್.ಪಿ.ಬ್ಯಾಂಕುಗಳು ಇಷ್ಟನೇ ತಾರೀಖಿನಿಂದ ಇಷ್ಟನೇ ತಾರೀಖಿನವರೆಗೆ ನಡೆಯಬೇಕು. ಟಿ.ಎಪಿಎಂಪಿಎಸ್ ಎಲೆಕ್ಷನ್ಸ್ ಯಾವ ತಾರೀಖಿನಿಂದ ಯಾವ ತಾರೀಖಿನವರೆಗೆ ನಡೆಯಬೇಕು. ಜಿಲ್ಲಾ ಬ್ಯಾಂಕುಗಳ ಎಲೆಕ್ಷನ್ ಯಾವ ತಾರೀಖಿನಿಂದ, ಯಾವ ತಾರೀಖಿನವರೆಗೆ ನಡೆಯಬೇಕು ಮತ್ತೆ ಸ್ಟೇಟ್ ಲೆವೆಲ್ ಯಾವಾಗ ಮುಗಿಸಬೇಕು. ಎಂದು ಒಂದು ಷೆಡ್ಯೂಲ್ ಹಾಕದೇ ಇದ್ದರೆ ಬಹಳ ಕಷ್ಟ. ಡೆಪ್ಯೂಟಿ ರಿಜಿಸ್ಟ್ರಾರ್ ದಿವಸ ಒಂದೊಂದು ನೋಟೀಸ್ ಕೊಟ್ಟು ನೀವು ಇವೊತ್ತು ಎಲೆಕ್ಷನ್ ಮಾಡಬೇಕು. ನಾಳೆ ಎಲೆಕ್ಷನ್ ಮಾಡಬೇಕೆಂದು ಹೇಳುತ್ತಿರುತ್ತಾರೆ. ಆ ರೀತಿ ಹೇಳಿದಾಗ ಈ ನಿಮ್ಮ ಒಂದು ಆಜ್ಞೆಗೆ ಏನೂ ಬೆಲೆ ಬರುವುದಿಲ್ಲ. ಆದ್ದರಿಂದ ದಯವಿಟ್ಟು ಅದನ್ನು ಬೇಗ ಹೊರಡಿಸಿ. ಈಗ ಏನು ಕನ್‌ಫ್ಯೂಸನ್ ಇದೆ. ಅದನ್ನು ಕ್ಲಿಯರ್ ಮಾಡಬೇಕು. ಇನ್ನು ಎರಡನೇಯದಾಗಿ ನನ್ನ ಸ್ವಂತ ಅಭಿಪ್ರಾಯ ಡಿಫಾಲ್ಟರ್ಸ್ ವೋಟ್ ಮಾಡಲಿಕ್ಕೆ ಅಧಿಕಾರ ಕೊಡುವುದು ಅಷ್ಟೇನು ಉತ್ತಮವಾದುದು ಅಲ್ಲ, ಆದ್ದರಿಂದ, ದಯವಿಟ್ಟು ಈ ಬಗ್ಗೆ ಯೋಚನೆ ಮಾಡಿ.

Mr. SPEAKER ಯೋಚನೆ ಮಾಡಿ, If is a debatable question

ಶ್ರೀ ಆರ್. ಎಲ್.ಜಾಲಪ್ಪ : ನಾವು ಭಾರತದ ಒಂದು ಅಂಗ ಏನಾದರೂ ತೀರ್ಮಾನ ಮಾಡಿ, ಏಕೆಂದರೆ, ನಮ್ಮನ್ನು ನೋಡಿ ಬೇರೆಯವರು ನಗಬಾರದು ಎಂದು ನನ್ನ ಆಸೆ ಅಷ್ಟೆ.

ಅರ್ಜಿಗಳನ್ನೊಪ್ಪಿಸುವುದು.

ಶ್ರೀ ಎನ್. ಜಿ. ನಾಯಕ್ : ಅಧ್ಯಕ್ಷರೇ 1. ಮೊಳಕಾಲ್ಮೂರು ತಾಲ್ಲೂಕು ಭಕ್ತಾಧಿಗಳು ಸುಂಕಮಲೆಸಿದ್ಧೇಶ್ವರ ಸ್ವಾಮಿ ದೇವಸ್ಥಾನ ಹತ್ತಿರ ವಿಶ್ರಾಂತಿ ಧಾಮವನ್ನು ಕಟ್ಟಿಸುವ ಕುರಿತು. ಅರ್ಜಿಯನ್ನು ಒಪ್ಪಿಸಿರುತ್ತನೆ.

2. ಕೋಲಾರ ಜಿಲ್ಲೆಯ ಬಂಗಾರಪೇಟೆಯಲ್ಲಿನ ಪುರಸಭೆ ಕಾರ್ಯಾಲಯದಲ್ಲಿ ಅನುಕಂಪದ ಆಧಾರದ ಮೇಲೆ ನೌಕರಿ ಕೊಡಿಸುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತಿದ್ದೇನೆ.

ಶ್ರೀ ಸೋಮಪ್ಪ ಸುವರ್ಣ : ಅಧ್ಯಕ್ಷರೆ ಕರ್ನಾಟಕ ರಾಜ್ಯದ ಸಾರ್ವಜನಿಕ ಗ್ರಂಥಾಲಯಗಳನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಅರ್ಜಿಗಳನ್ನು ಒಪ್ಪಿಸಲಾಯಿತು.

ವಿತ್ತೀಯ ಕಾರ್ಯಕಲಾಪಗಳು.

1991-92 ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಚರ್ಚೆ.

ಅಭಿಯಾಚನೆ ಕ್ರಮಾಂಕ 23 (ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು) ಶ್ರೀ ಟಿ.ಎನ್. ನರಸಿಂಹಮೂರ್ತಿ : (ಆಹಾರ ಮತ್ತು ನಾಗರಿಕ ಸರಬರಾಜು ಮಂತ್ರಿಗಳು) ಸ್ವಾಮಿ ಸನ್ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 1992ರ ಮಾರ್ಚ್ 31ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 74,88,06,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಈ ಸದನವನ್ನು ಪ್ರಾರ್ಥಿಸುತ್ತೇನೆ.
@CEN = DEMAND NO. 30-ROAD TRANSPORT

SRI AZEEZ SAIT (Min .for Transport & Wakfs) : Speaker sir, on the recommendation of the Governor, I beg to move " That a sum not exceeding Rs. 50,00,000 on Revenue Account & Rs. 10,00,00,000 on Capital Account inclousive of the sum granted on account be granted to the Govemment to defray the charges which will come in course of payment during the finacial year ending 31st day of March 1992 in respact of " Road Transport".

DEMAND NO 54 WAKFS

" That a sum not exceeding Rs. 90,00,000 on Revenue Account in clusive of the sum granted on account be granted to the governement to defray the charges which will come in course of payment during the financial year ending 31st day of March 1992 in respect of " wakfs"."

DEMAND No.26 - TAXES ON VEHICLES

sum granted " on account" be granted to the Government to defray the charges which will come in course of payment during the financial year enjing 31st day of March 1992 in respect of " Taxes on Vehicles".

ಶ್ರೀ ಎ.ಎಸ್. ನಾಗಗೌಡ (ಕಾರ್ಮಿಕ ಮತ್ತು ಉದ್ಯೋಗ ಖಾತೆ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ,

ಅಭಿಯಾಚನೆ ಕ್ರಮಾಂಕ 59 ಕಾರ್ಮಿಕ ಮತ್ತು ಉದ್ಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ತಾ. 31-3-92 ರಂದು ಕೊನೆಗೊಳ್ಳುವ ಆರ್ಥಿಕ ವರ್ಷಗಳಲ್ಲಿ ಕಾರ್ಮಿಕ ಮತ್ತು ಉದ್ಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಬರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 45,85,52,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.

SRI M. MALLIKARJUN KHARGE (Min for Revenue) -

Demand No 42-District AdministrationSir,

On the recommendation of the Governor I beg to move

"That a sum not exceeding Rs. 32,48,72,000 on Revence Account inclusive of the sum granted on account be granted to the Government to defray the charges which will come in course of payment during the finacial year ending 31st day of March 1992 in respect of " District Administration".

Demand No. 50 Land Revenue Etc.

"That a sum not exceeding Rs. 70,23,78,000 on Revenue Account and Rs. 10,01,75,000 on Capital Account inclusive of the sum granted on account be granted to the Government to defray the chargres which will come in course of payment during the finacial year ending 31st day of March 1992 in respeot of land Revenue etc.,"

Demand No 51 - Stamps & Registrantion

"That a sum not exceeding Rs. 7,72,97,000 on Revenue Account inclusive of the sum granted on account be granted to the government to defray the charges which will come in course of payment during the financiel year ending 31st day of March 1992 in respect of " Stamps and Regisiation".

Demend No 52-relief On Account of Natural Calamities

"That a sum not exceeding Rs. 27,00,00.000 on Revenue Account and Rs. 2,00,000 on capital Account inclusive of the sum granted on account be granted to the Governement to defray the charges which will come in course of payment during the financial year ending 31st day of March 1992 in respect of "Relief on Account of Natural Calamities."

ಶ್ರೀ ಎಸ್.ಆರ್. ಮೋರೆ (ಸಹಕಾರ ಖಾತೆ ರಾಜ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೆ,

ಅಭಿಯಾಚನೆ ಕ್ರಮಾಂಕ 55-ಸಹಕಾರ (ಕ್ರಮ ಪಡಿಸಿದ ಮಾರುಕಟ್ಟೆಗಳ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರಕ್ಕೆ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರ ರಾಜಸ್ವಖಾತೆಯಲ್ಲಿ 56,50,18,000 ರೂ. ಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 18,97,02,000 ರೂ. ಗಳಿಗಿಂತ ಮೀರಿದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮುಂಜೂರುಮಾಡಬೇಕೆಂದು ಮತ್ತು ಅಭಿಯಾಚನೆ ಕ್ರಮಾಂಕ 56 ಕ್ರಮಪಡಿಸಿದ ಮಾರುಕಟ್ಟೆಗಳು.

ರಾಜ್ಯಪಾಲರ ಶಿಫಾರಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕ್ರಮಪಡಿಸಿದ ಮಾರುಕಟ್ಟೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 13,15,98,000 ರೂ. ಗಳಿಗಿಂತ ಮೀರಿದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಈ ಬೇಡಿಕೆಗಳೆಲ್ಲಾ ಸಭೆಯ ಮುಂದಿವೆ. ನಾಳೆಗೆ ಕೆಲವು ಬೇಡಿಕೆಗಳನ್ನು ಲಿಸ್ಟ್ ಮಾಡಿದ್ದೇವೆ. ಅವು ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟಂಥವು. ತಮಗೆಲ್ಲಾ ಒಪ್ಪಿಗೆ ಆಗುವುದಾದರೆ ಅವುಗಳನ್ನೂ ಇವತ್ತೇ ಮೂವ್ ಮಾಡಿ ಒಟ್ಟಿಗೇ ಚರ್ಚೆ ಮಾಡಿದ್ದರೆ ತಮಗೆ ಏನಾದರೂ ತೊಂದರೆ ಆಗುತ್ತದೆಯೇ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾಳೆ ಸಂಜೆಯೊಳಗೆ ನಾವು ಇವನ್ನೆಲ್ಲಾ ಪಾಸ್ ಮಾಡಿಕೊಡುತ್ತೇವೆಂಬ ಭಾರವಸೆಯನ್ನು ನಾವು ತಮಗೆ ಮತ್ತು ಸರ್ಕಾರಕ್ಕೆ ಕೊಟ್ಟಿದ್ದೇವೆ.

ಅಧ್ಯಕ್ಷರು : ಹಾಗಾದರೆ ಇವನ್ನೂ ಮೂವ್ ಮಾಡಿಸಬಹುದಲ್ಲವೆ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾಡಿಸಬಹುದು?

ಶ್ರೀ ಟಿ.ಎನ್. ನರಸಿಂಹಮೂರ್ತಿ : (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು)

ಸನ್ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ಬೇಡಿಕೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಭಿಯಾಚನೆ ಕ್ರಮಾಂಕ 17 - ವರಮಾನತೆರಿಗೆ, ವೃತ್ತಿಗಳು ಮಾರಾಟ ಮತ್ತು ಇತರ ಸೇವೆಗಳು.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವರಮಾನ ತೆರಿಗೆ ವೃತ್ತಿಗಳು ಮಾರಾಟ ಮತ್ತು ಇತರ ಸೇವೆಗಳಿಂದ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 72, 38,92,000 ರೂ. ಗಳಿಗಿಂತ ಮೀರಿದ ಮೊತ್ತವನ್ನು ಲೇಖಾನುದಾನದಲ್ಲಿ ಮುಂಜೂರಾದ ಮೊತ್ತವೂ ಸೇರಿದಂತೆ ಮುಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಗ 18- ವಿಮೆ, ಖಜಾನೆ ಮತ್ತು ಲೇಖಾ ಇಲಾಖೆಗಳ ಆಡಳಿತ.

ರಾಜ್ಯಪಾಲರ ಶಿಫಾರಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ

ವರ್ಷದಲ್ಲಿ ವಿಮೆ. ಖಜಾನೆ ಮತ್ತು ಲೇಖಾ ಇಲಾಖೆಗಳ ಆಡಳಿತಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 16,37,80,000 ರೂ.ಗಳಿಗಿಂತ ಮೀರಿದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮುಂಜೂರು ಮಾಡಬೇಕೆಂದು,

ಅಭಿಯಾಚನೆ ಕ್ರಮಾಂಕ 19 ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು

ರಾಜ್ಯಪಾಲರ ಶಿಫಾರಸ್ಸಿನ ಮೇಲೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 297,80,00,000 ರೂ.ಗಳಿಗಿಂತ ಮಿರಿದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು

ಅಭಿನಂದನೆ ಕ್ರಮಾಂಕ20 ಸರಕಾರಿ ನೌಕರರಿಗ ಸಹಾಯ ಮತ್ತು ವಿವಿಧ ಸಾಲಗಳು

ರಾಜ್ಯಪಾಲರ ಶಿಫಾರಸ್ಸಿನ 31-3-91ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ 2,90,00,000 ರೂ. ಗಳಿಂತ ಮೀರರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 13,98,00,000 ರೂ.ಗಳಿಗಿಂತ ಮೀರರದ ಮೊತ್ತವನ್ನು ಲೇಖಾನುದಾನದಲ್ಲಿ ಮುಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು

ಅಭಿಯಾಚನೆ ಕ್ರಮಾಂಕ 22 ಇತರ ವಿವಿಧ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಇತರೇ ವಿವಿಧ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ರಾಜಸ್ವ ಖಾತೆಯಲ್ಲಿ 22, 32,83,000 ರೂ.ಗಳಿಗಿಂತ ಮೀರರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 6,03,00,000 ರೂ.ಗಳಿಗೆ ಮಿರದ ಮೊತ್ತವನ್ನು ಲೇಖಾನಂದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮುಂಜೂರು ಮಾಡಬೇಕೆಂದು ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚುನಾವಣೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 12,45,99,000 ರೂಗಳಿಗಿಂತ ಮೀರಿದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು

ಅಭಿಯಾಚನೆ ಕ್ರಮಾಂಕ 40 ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯಪಾಲರು ಮಂತ್ರಿಗಳು ಮತ್ತು ಲೋಕಸೇವಾ ಆಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,73,46,000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು

ಅಭಿಯಾಚನೆ ಕ್ರಮಾಂಕ 41 ಸಚಿವಾಲಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಚಿವಾಲಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 19,55,16,000 [illegible]

ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು

ಅಭಿಯಾಚನೆ ಕ್ರಮಾಂಕ 43-ಮುಖ್ಯ ಮಂತ್ರಿಯವರ ವಿವಿಧ ಅಭಿಯಾಚನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುಖ್ಯಮಂತ್ರಿಯವರ ವಿವಿಧ ಅಭಿಯಾಚನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 22,20,47.000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 13,42,00,000 ರೂ. ಗಳಿಗಿಂತ ಮೀರಿದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಸಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ವರಮಾನ ತೆರಿಗೆ ವೃತ್ತಿಗಳು ಮಾರಾಟ ಮತ್ತು ಇತರೇ ಸೇವೆಗಳು, ವಿಮೆ, ಖಜಾನೆ, ಮತ್ತು ಲೇಖಾ ಇಲಾಖೆಗಳ ಆಡಳಿತ, ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು, ಸರಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು, ಇತರ ವಿವಿಧ ಸೇವೆಗಳು ಚುನಾವಣೆಗಳು, ರಾಜ್ಯಪಾಲರು ಮಂತ್ರಿಗಳು ಮತ್ತು ಲೋಕಸೇವಾ ಆಯೋಗ, ಸಚಿವಾಲಯ ಮುಖ್ಯ ಮಂತ್ರಿಯವರ ವಿವಿಧ ಅಭಿಯಾಚನೆ ಸಣ್ಣ ಉಳಿತಾಯಗಳು, ಈ ಎಲ್ಲ ಬೇಡಿಕೆಗಳನ್ನೂ ಸದನದ ಮುಂದೆ ಮಂಡಿಸಲಾಗಿದೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ : (ವಿರೋಧಪಕ್ಷದ ಉಪನಾಯಕರು) ಮಾನ್ಯ ಅಧ್ಯಕ್ಷರೆ, ಇವತ್ತು ಸರ್ಕಾರದ ಪರವಾಗಿ ಮಾನ್ಯ ಮಂತ್ರಿಗಳು ಈ ಸದನದಲ್ಲಿ ಏನು ಬೇಡಿಕೆಗಳನ್ನು ಮಂಡಿಸಿದ್ದಾರೆ. ಅವುಗಳನ್ನು ನಾನು ವಿರೋಧಮಾಡಿ ಇದರ ಜೊತೆಗೆ ಕೇವಲ ಬೇಡಿಕೆಗಳನ್ನು ಅಷ್ಟೇ ಅಲ್ಲ ಅವುಗಳ ಉದ್ದೇಶಗಳನ್ನೂ ಕೂಡ ನಾನು ವಿರೋಧ ಮಾಡಿ ಒಂದೆರಡು ಇಲಾಖೆಗಳ ಬಗ್ಗೆ ನನ್ನ ಅಭಿಪ್ರಾಯಗಳನ್ನು ಸರ್ಕಾರದ ಜೊತೆ ಹಂಚಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮತ್ತು ಕೆಲವು ಸಲಹೆಗಳನ್ನೂ ಕೂಡ ಸರ್ಕಾರಕ್ಕೆ ಕೊಡಬಯಸುತ್ತೇನೆ. ವಿಶೇಷವಾಗಿ ಸಾರಿಗೆ ಇಲಾಖೆಯ ಬಗ್ಗೆ ಒಂದೆರಡು ಸಲಹೆಗಳನ್ನು ಸರ್ಕಾರದ ಗಮನಕ್ಕೆ ತರಬಯುಸುತ್ತೇನೆ.

ಅಧ್ಯಕ್ಷರು : ಮಾನ್ಯ ಸಿಂಧ್ಯರವರೇ ಈ ಬೇಡಿಕೆಗಳಲ್ಲದೆ ನಾಳೆ ಬೇರೆ ಹಲವಾರು ಬೇಡಿಕೆಗಳಿವೆ. ಆದ್ದರಿಂದ ನಾನು ಉಳಿದಿರತಕ್ಕಂಥ ಬೇಡಿಕೆಗಳನ್ನು ನಾಳೆ ಮೂವ್ ಮಾಡಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ ಸಾರಿಗೆ ಇಲಾಖೆಯ ಬಗ್ಗೆ ಕೆಲವು ಸಲಹೆಗಳನ್ನು ಕೊಡಬೇಕೆಂದು ಇದ್ದೇನೆ. ಮತ್ತು ಸರ್ಕಾರದ ಸಂಬಂಧಪಟ್ಟ ಮಂತ್ರಿಗಳ ಇಲಾಖೆಗೆ ಸಂಬಂಧಪಟ್ಟಿರುತಕ್ಕಂಥ ಉದ್ದೇಶಗಳನ್ನು ವಿರೋಧ ಮಾಡಿ, ನನ್ನ ಸಲಹೆಗಳನ್ನು ಸರ್ಕಾರದ ಮುಂದೆ ತಮ್ಮ ಮೂಲಕ ಇಡುತ್ತೇನೆ. ಜೊತೆಗೆ ಕಾರ್ಮಿಕ ಇಲಾಖೆಗೆ ಸಂಬಪಟ್ಟ ಹಾಗೆ ಒಂದೆರಡು ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕೆಂದು ನಾನು ಇದ್ದೇನೆ. ಈಗ ಆತ್ಮ ಸಾಕ್ಷಿಯಾಗಿ ಮಾತನಾಡಬೇಕೆಂದು ನಮ್ಮ ಹಿರಿಯ ಸಚಿವರು ಮಾನ್ಯ ಅಜೀಜ್‌ಸೇಟ್‌ರವರು ಹೇಳಿದ್ದಾರೆ. ಇವರು ಹಾಗೆ ಹೇಳುವುದಕ್ಕೆ ಕಾರಣಗಳು ಇವೆ. ಏತಕ್ಕೆಂದರೆನಾನು ಸಾರಿಗೆ ಇಲಾಖೆಯ ಮಂತ್ರಿಯಾಗಿದ್ದಾಗ ಅವರವು ಲೋಕಸಭಾಸದಸ್ಯರಾಗಿದ್ದರು. ನಾನು ಯಾವ ರೀತಿ ಕಾರ್ಯನಿರ್ವಹಿಸುತ್ತಿದ್ದೆ ಎನ್ನುವುದನ್ನು ಬಹುಶಃ ಅವರು ಈಗ ತಿಳಿದುಕೊಳ್ಳುವುದಕ್ಕೆ ಒಂದು ಅವಕಾಶ ಸಿಕ್ಕಿದೆ. ಅಂದರೆ ಮಾನ್ಯ ಅಜೀಜ್‌ಸೇಟ್‌ರವರು ಬಹಳ ಹಿರಿಯರು ಸದನದಲ್ಲಿ ಅಷ್ಟೇ ಅಲ್ಲ ಮತ್ತಿತರ ಸಂದರ್ಭಗಳಲ್ಲೂ ಸಹಿತ ಬಹಳ ಸಾರಿ ಈ ಇಲಾಖೆಯನ್ನು ಸಾರಿಗೆ ಮಂತ್ರಿಗಳಾಗಿ ನಿರ್ವಹಿಸಿದ್ದಾರೆ. ನನಗನಿಸುತ್ತವೆ. ಈ ಇಲಾಖೆಯನ್ನು ನಿರ್ವಹಿಸಲಿಕ್ಕೆ ಅವರಿಗೆ ಈಗ ಬಹಳ ವಯಸ್ಸಾಯಿತೋ ಏನೋ ಎಂದು ನನಗನಿಸುತ್ತದೆ.

ಮಾನ್ಯ ಅಧ್ಯಕ್ಷರೇ, ಆತ್ಮಸಾಕ್ಷಿಯಾಗಿ ಹೇಳಬೇಕಾದಾಗ ಇದನ್ನು ಹೇಳಬೇಕಾಗುತ್ತದೆ. ಈಗ ಕೆ.ಎಸ್.ಆರ್.ಟಿ.ಸಿ. ಸಿಲ್ವರ್ ಜ್ಯೂಬಿಲಿ ಸೆಲಬರೇಟ್ ಮಾಡುತ್ತಿದ್ದಾರೆ. ಹಾಗೆಯೇ ನೀವು ಮಂತ್ರಿಗಳಾಗಿ ಸಿಲ್ವರ್ ಜ್ಯೂಬಲಿ ಸೆಲಬರೇಟ್ ಮಾಡುತ್ತಿದ್ದೀರಿ. ಇವರಿಗೆ ಗೊತ್ತಿಲ್ಲದಿರತಕ್ಕಂಥ ವಿಚಾರ ಸಾರಿಗೆ ಇಲಾಖೆಯಲ್ಲಿ ಏನೂ ಇಲ್ಲ. ಆದರೆ ಈ ಸರ್ಕಾರ ಕಳೆದ ಚುನಾವಣೆಯಲ್ಲಿ ರಾಜ್ಯದ ಜನತೆಗೆ ಒಂದು ದಕ್ಷವಾದ ಪ್ರಾಮಾಣಿಕ ವಾದ ಸರ್ಕಾರವನ್ನು ಕೊಡುತ್ತೇವೆಂದು ಒಳ್ಳೆಯ ಸಾರಿಗೆ ವ್ಯವಸ್ಥೆಯನ್ನು ಕೊಡುತ್ತೇವೆಂದು ಈ ರಾಜ್ಯದ ಕಾರ್ಮಿಕ ವರ್ಗದ ಜನಗಳ ಕಣ್ಣೀರನ್ನು ಒರಿಸುತ್ತೇವೆನ್ನುವ ಭರವಸೆಯನ್ನು ಏನು ಕೊಟ್ಟಿದ್ದಿರಿ ಅದರಲ್ಲಿ ಸಂಪೂರ್ಣವಾಗಿ ನೀವು ವಿಫಲರಾಗಿದ್ದೀರಿ. Your Government has totally failed in this regard. ಕಾರಣವೇನು?

ಮಾನ್ಯ ಅಧ್ಯಕ್ಷರೇ ಇದು ಎರಡನೇ ಬಾರಿಗೆ ಬಜೆಟ್‌ನ್ನು ಪಾಸ್ ಮಾಡಲಿಕ್ಕೆ ಕುಳಿತುಕೊಂಡಿರತಕ್ಕಂಥದ್ದನ್ನು ನಾವು ನೋಡುತ್ತಿದ್ದೇವೆ. ಕಳೆದಸಾರಿ ಸಾರಿಗೆ ಮಂತ್ರಿಗಳು ಮಾನ್ಯ ಜಾರ್ಜಿರವರು ಆಗಿದ್ದರು. ಲೇಬರ್ ಮಿನಿಸ್ಟರ್ ಬೇರೆಯವರು ಆಗಿದ್ದರು. ಈಗ ನಮ್ಮ ನಾಡಗೌಡರು ಲೇಬರ್ ಮಿನಿಸ್ಟರ್ ಆಗಿದ್ದಾರೆ. ಮಾನ್ಯ ಅಜೀಜ್ ಸೇಟ್‌ರವರು ಸಾರಿಗೆ ಮಂತ್ರಿಗಳಾಗಿದ್ದಾರೆ. ಅವರಿಗೆ ಗೊತ್ತಿಲ್ಲ ಇನ್ನು ಎಷ್ಟು ದಿವಸ ಈ ಇಲಾಖೆಯ ಮಂತ್ರಿಯಾಗಿರುತ್ತೇವೆಂದು ಇಷ್ಟೊಂದು ಅಭದ್ರತೆ ಇದೆ ಈ ಸರ್ಕಾರದಲ್ಲಿ ಇವರು ಯಾವುದೇ ತೀರ್ಮಾನಗಳನ್ನು ಸಹಿತ ತೆಗೆದುಕೊಳ್ಳುವುದಕ್ಕೆ ಇವರ ಕೈಯಲ್ಲಿ ಆಗುವುದಿಲ್ಲವೆಂದು ನನಗೆ ಗೊತ್ತಿದೆ. ಆದ್ದರಿಂದ ನಾನು ವಿರೋಧಮಾಡುತ್ತಿದ್ದೇನೆ. ಇವತ್ತು ನನ್ನಿಂದ ಸಲಹೆಗಳನ್ನು ತೆಗೆದುಕೊಂಡು ಮಾಡತಕ್ಕಂಥದ್ದು ಬಹಳ ಕಡಿಮೆ ಇರಬಹುದು. ಆದರೆ ಮಾಡಬೇಕೆನ್ನತಕ್ಕಂಥ ಮನಸ್ಸು ನಿಮಗೆ ಇಲ್ಲ. @CEN = (I~ølāXdā_¿ūā%cāāpā‰ %lāXdā_ á®lāāā}ā%‚Q %ñ™‹lāŸ«{āpā‰)

ನೀವು ಸಾರಿಗೆ ಸಚಿವರಾಗಿ ಇರುತ್ತೀರೋ ಎಷ್ಟು ದಿವಸ ಇರುತ್ತೀರೆಂಬುದು ನಿಮಗೆ ಗೊತ್ತಿಲ್ಲ. ಅಂದರೆ ಒಂದು ಸನ್ನಿವೇಶದಲ್ಲಿ ಇದ್ದೀರಿ ಎಂದು ಹೇಳುತ್ತೇನೆ.

ಶ್ರೀ ಎಸ್. ಹೆಚ್. ಕೌಜಲಗಿ : ಮಾನ್ಯ ಅಜೀಜ್‌ಸೇಟ್‌ರವರು ಯಾವ ಸರ್ಕಾರ ಬಂದರೂ ಇರುತ್ತಾರೆ. ಅದರ ಬಗ್ಗೆ ಏನೂ ಚಿಂತಿಸಬೇಕಾಗಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ : ನಾನು ಅವರು ಬಹಳ ಒಳ್ಳೆಯ ಸ್ನೇಹಿತರು. ನಾವು ಮಂತ್ರಿಗಳಾಗಿದ್ದಾಗ ನೈಬರರ್ಸ್ ಪ್ರಶ್ನೆ ಇರತಕ್ಕಂಥದ್ದು ಸಾರಿಗೆ ಇಲಾಖೆ ಮಾಂತ್ರಿಯಾಗಿ ಇರೋದಿಲ್ಲ.

SRI AZEEZ SAIT : Don't forget that to-day it is your birth day.

SRI R.L. JALAPPA : you want him to be generous.

(ನಗು)

SRI P.G.R. SINDHYA : As far as possible, I will try to do it. I have to do justice. I have to speak what the facts are.

SRI : AZZEZ SAIT : I Welcome.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷಣಿಯವರೇ ನಮ್ಮ ರಾಜ್ಯದ ಸಮಾರು ಮೂರುವರೆ ಕೋಟಿ ಜನಸಂಖ್ಯೆಯ ಪ್ರಯಾಣದ ಜವಾಬ್ದಾರಿಯನ್ನು ಇವತ್ತಿನ ದಿವಸ ಕೆ.ಎಸ್.ಆರ್.ಟಿ.ಸಿ ಹೊತ್ತಿದೆ. ಮೂರುವರೆ ಕೋಟಿ ಜನಸಂಖ್ಯೆಯಲ್ಲಿ ಪ್ರತಿದಿವಸ 55 ಲಕ್ಷಕ್ಕೂ ಹೆಚ್ಚು ಪ್ರಯಾಣಿಕರು ಪ್ರಯಾಣ ಮಾಡುತ್ತಿದ್ದಾರೆ. ನನಗೆ ಗೊತ್ತಿರುವ ಹಾಗೆ 60-70 ಲಕ್ಷ ಜನ ಪ್ರಯಾಣ ಮಾಡುತ್ತಿದ್ದಾರೆ. ಇವತ್ತು ಇದು ಒಂದು

ವರ್ಗಕ್ಕೆ ಸೀಮಿತವಾಗಿಲ್ಲ. ಕೂಲಿ ಮಾಡತಕ್ಕಂಥವರು, ರೈತರು ವ್ಯಾಪಾರಸ್ಥರು ಉದ್ಯೋಗ ಮಾಡತಕ್ಕಂಥವರು ಕಾರ್ಮಿಕರು ಹೀಗೆ ಪ್ರತಿಯೊಬ್ಬರೂ ಸಹಿತ ಪ್ರಯಾಣ ಮಾಡುತ್ತಿದ್ದಾರೆ. ಜನಸಂಖ್ಯೆಯು ಯಾವ ಪ್ರಮಾಣದಲ್ಲಿ ನಮ್ಮ ರಾಜ್ಯದಲ್ಲಿ ಬೆಳೆಯುತ್ತಿದೆ ಎಂಬುದನ್ನು ನಮಗೆ ಗೊತ್ತಿದೆ.

ನಾವು 2 ಕೋಟಿ ಇದ್ದವರು ಈಗ 3 1/2 ಕೋಟಿ ಆಗಿದ್ದೇವೆ. 3 3/4 ಕೋಟಿ ಆಗಿದ್ದೇವೆ ನಮ್ಮ ನೀಡ್ಸ್ ಹೆಚ್ಚಾಗುತ್ತಿದೆ. ಆದರೆ ಅದಕ್ಕೆ ತಕ್ಕಂಥ ನಮ್ಮ ಸಾರಿಗೆ ವ್ಯವಸ್ಥೆ ಬೆಳೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ನಾನು ಕೇವಲ ಕೆ.ಎಸ್.ಆರ್.ಟಿ.ಸಿ. ದೃಷ್ಟಿ ಯಿಂದ ಹೇಳುತ್ತಿಲ್ಲ. ನಮ್ಮ ಸಾರಿಗೆ ಬೇಡಿಕೆ ಏನಿದೆ ಆ ಬೇಡಿಕೆಯನ್ನು ನಿಭಾಯಿಸಲಿಕ್ಕೆ ನಮ್ಮ ಕೈಯಲ್ಲಿ ಆಗುತ್ತಿಲ್ಲ. ಇದನ್ನು ನಾವು ನೀವು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ ಯಾವ ಒಂದು ಪಾಪ್ಯುಲೇಷನ್ ಗ್ರೋತ್ ಇದೆ ಅದರ ಪ್ರಕಾರವಾಗಿ ಈ ಟ್ರಾಫಿಕ್ ನೀಡ್ಸ್ ಏನು ಹೆಚ್ಚಾಗುತ್ತಿದೆ. ಅದನ್ನು ಸರಿದೂಗಿಸುವುದಕ್ಕೆ ಯಾವುದೇ ಕಾರ್ಯಕ್ರಮವನ್ನು ಯಾವುದೇ ಸರ್ಕಾರ ಹಾಕಿಕೊಳ್ಳುವುದಕ್ಕೆ ಕಳೆದ ಹತ್ತು ವರ್ಷಗಳಲ್ಲಿ ಪ್ರಯತ್ನ ಮಾಡಬಹುದಾಗಿತ್ತು. ಆ ಪ್ರಯತ್ನ ನಿಮ್ಮ ಕೈಯಲ್ಲಿ ಆಗಿಲ್ಲ. ಇವತ್ತೂ ಮಾಡಬೇಕೆನ್ನುವ ಇಚ್ಛೆ ಇದ್ದಂಗೆ ಕಾಣುವುದಿಲ್ಲ.

ನಾನು ಸಾರಿಗೆ ಮಂತ್ರಿ ಇದ್ದಾಗ ರೈಟ್ಸ್ ಎಂಬ ಸಂಸ್ಥೆಗೆ ರಾಜ್ಯ ಸರ್ಕಾರದಿಂದ 25 ಲಕ್ಷ ರೂಪಾಯಿ ಹಣ ಕೊಟ್ಟು ಇಡೀ ರಾಜ್ಯದ 20 ಜಿಲ್ಲೆಗಳಲ್ಲಿ ಯಾವ ವರ್ಗದ ಜನ ಯಾವ ಹೊತ್ತಿನಲ್ಲಿ ಪ್ರಯಾಣಿಸುತ್ತಾರೆ ಮತ್ತು ಅವರ ಪ್ರಯಾಣದ ಬೇಡಿಕೆಗಳು ಎಷ್ಟು ಹೆಚ್ಚಾಗುತ್ತಿದೆ. 10-20 ವರ್ಷಗಳ ನಂತರ ಪ್ರಯಾಣಿಕರ ಸಂಖ್ಯೆ ಎಷ್ಟು ಹೆಚ್ಚಾಗುತ್ತದೆ ಅದೇ ರೀತಿಯಲ್ಲಿ ನೀವ ಸಹ ಸರ್ಕಾರದಿಂದ ಇವಕ್ಕೆ ಬೇಕಾಗಿರತಕ್ಕ ಇನ್‌ಫ್ರಾಸ್ಟ್ರಕ್ಚರ್ ಅನ್ನು ಡೆವಲಪ್ ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ಸರ್ವೆ ಮಾಡುವುದಕ್ಕೆ ಆಜ್ಞೆ ಮಾಡಿದ್ದೆ, ನಮ್ಮ ಸರ್ಕಾರ ಬದಲಾವಣೆ ಆದಮೇಲೆ ಏನು ಸರ್ವೆ ರಿಪೋರ್ಟ್ ಆಜ್ಞೆ ಮಾಡಿದ್ದೆ. ನಮ್ಮ ಸರ್ಕಾರ ಬದಲಾವಣೆ ಆದ ಮೇಲೆ ಏನು ಸರ್ವೆ ರಿಪೋರ್ಟ್ ಬಂದಿದೆ ಎಂದು ನನಗೆ ಗೊತ್ತಿಲ್ಲ. ಮಾನ್ಯ ಮಂತ್ರಿಗಳು ಅದನ್ನು ಹೇಳಬೇಕಾಗಿದೆ. ನಗರ ಸಾರಿಗೆ ಇರಬಹುದು. ಗ್ರಾಮೀಣ ಪ್ರದೇಶದ ಸಾರಿಗೆ ಇರಬಹುದು ಅದಕ್ಕೆ ಯಾವ ಒಂದು ಪ್ರಮಾಣದಲ್ಲಿ ಬೇಡಿಕೆ ಬರುತ್ತದೆ. ಆ ಬೇಡಿಕೆ ತಕ್ಕಂತೆ ನೀವು ಅದನ್ನು ಪೂರೈಸಲಿಕ್ಕೆ ಬೇಕಾಗಿರತಕ್ಕ ಅವಶ್ಯಕತೆಗಳನ್ನು ಮಾಡಿಕೊಳ್ಳತಕ್ಕ ನಿಲುವನ್ನು ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ಸರ್ಕಾರದ ಮುಂದೆ ಸಾರಿಗೆ ಬಗ್ಗೆ ಒಂದು ತತ್ವ, ಒಂದು ಪಾಲಿಸಿ, ಇರಬೇಕು. ಇವತ್ತು ನಿಮ್ಮ ಮುಂದೆ ಯಾವುದೇ ರೀತಿಯ ಪಾಲಿಸಿಯೂ ಇಲ್ಲ. ಮೋಟಾರ್ ವೆಹಿಕಲ್ಸ್ ಟ್ರಾನ್ಸ್‌ಪೋರ್ಟ್ ಮಾಡುವುದು ಒಂದೇ ಕೆಲಸ ಅಂದರೆ ಟ್ಯಾಕ್ಸ್‌ಗಳನ್ನೂ ಕಲೆಕ್ಟ್ ಮಾಡುವುದು. 400 ಪರ್ಸೆಂಟ್ ಟ್ಯಾಕ್ಸ್ ಕಲೆಕ್ಟ್ ಆದರೆ ಅವರ ಕೆಲಸ ಮುಗಿಯಿತು. ಕೆ.ಎಸ್.ಟಿ.ಸಿ.ಯಲ್ಲಿ 55 ಸಾವಿರ ಜನ ಕಾರ್ಮಿಕರು ಇದ್ದಾರೆ. ಹತ್ತು ಸಾವಿರ ಬಸ್ಸುಗಳು ಇವೆ. It has become, too unwidly.

ಒಬ್ಬ ಛೇರ್ಮನ್ ವೈಸ್ ಛೇರ್ಮನ್ ಇದ್ದರೆ, ಇವರೆಲ್ಲರೂ ಕೂಡ ಕೆಲಸಮಾಡಬೇಕಾಗುತ್ತದೆ. ಅವರು ಪ್ರತಿದಿನವೂ ಫೈರ್ ಫೈಟಿಂಗ್ ಮಾಡಬಹುದು. ಇವತ್ತು ಬಂದಿರತಕ್ಕ ಸಮಸ್ಯೆಗಳನ್ನು ನಿಭಾಯಿಸಬಹುದೇ ಹೊರತು ಇನ್ನು ಹತ್ತು ವರ್ಷಗಳ ನಂತರ ಕೆ.ಎಸ್.ಆರ್.ಟಿ.ಸಿ. ಏನಾಗಬೇಕು. 15ವರ್ಷಗಳ ನಂತರ ಕೆ.ಎಸ್.ಆರ್.ಟಿ.ಸಿ. ಯಾವ ಪ್ರಮಾಣದಲ್ಲಿ ಬೆಳೆಯಬಹುದು. ಎನ್ನುವ ಕಾರ್ಯಕ್ರಮ ಹಾಕಿಕೊಳ್ಳುವುದಕ್ಕೆ ಆಗುತ್ತಿಲ್ಲವೆಂದು ಪ್ರಮಾಣಿಕವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಇವತ್ತಿನ ದಿವಸ ದುಃಖದ ಸಂಗತಿ ಎಂದರೆ ನಮ್ಮ ರಾಜ್ಯಕ್ಕೆ ಬೇಕಾಗುತ್ತಕ್ಕ ರೈಲ್ವೆ ಅವಶ್ಯಕತೆ ಏನಿದೆ ಅದನ್ನು ಕೇಂದ್ರ ಸರ್ಕಾರದಿಂದ ತೆಗೆದುಕೊಳ್ಳುವುದಕ್ಕೆ ನೀವು ನಾವು ಎಲ್ಲ ವಿಫಲರಾಗಿದ್ದೇವೆ. ಕೊಂಕಣ ರೈಲ್ವೆ ಒಂದನ್ನು

ಬಿಟ್ಟರೆ ಬಾಕಿ ಯಾವುದೇ ರೈಲ್ವೆ ವಿಚಾರದಲ್ಲಿ ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯಕ್ಕೆ ಅನುಕೂಲ ಸಿಕ್ಕಿಲ್ಲ, ನ್ಯಾಯ ದೊರಕಿಲ್ಲ. ಇದು ತಮಗೆ ಗೊತ್ತಿರುವ ವಿಚಾರ ಅದನ್ನು ಬಿಟ್ಟು ಬೇರೆ ವ್ಯವಸ್ಥೆ ಇದೆಯೇ? ಇಲ್ಲ. ಬಸ್ ಮೂಲಕ ಪ್ರಮಾಣ ಮಾಡಬೇಕಾಗುತ್ತದೆ.

ಕೇಂದ್ರ ಸರ್ಕಾರದ ಟ್ರಾನ್ಸ್‌ಪೋರ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ಇದೆ. ಅವರು ಏನು ಮಾಡುತ್ತಾರೆ? ಇದು ಸ್ಟೇಟ್‌ಸಬ್‌ಜೆಕ್ಟ್. ಒಂದೆರಡು ವರ್ಷದಲ್ಲಿ ಕೆ.ಎಸ್.ಆರ್.ಟಿ.ಸಿ.ಗೆ ಒಂದೆರಡು ಕೋಟಿ ಮೂರು ಕೋಟಿ ರೂಪಾಯಿ ಮ್ಯಾಚಿಂಗ್ ಗ್ರಾಂಟ್ ಕೊಡುವುದು ಬಿಟ್ಟರೆ ಕೇಂದ್ರ ಸರ್ಕಾರದಿಂದ ಇನ್ನೇನು ನಿರೀಕ್ಷೆ ಮಾಡುವುದಕ್ಕಾಗುವುದಿಲ್ಲ. ಅಜೀಜ್ ಸೇಠರು ಇಳಿವಯಸ್ಸಿನಲ್ಲಿ ಮಂತ್ರಿಗಳಾಗಿದ್ದರು. ನಾನು ಒತ್ತಾಯ ಪೂರ್ವಕವಾಗಿ ಕಳಕಳಿಯಿಂದ ಹೇಳುತ್ತಿದ್ದೇನೆ, ನಮ್ಮ ರಾಜ್ಯಕ್ಕೆ ನಿಮ್ಮ ಕಾಲದಲ್ಲಿ, 15 ವರ್ಷಗಳ ನಂತರ ಎಷ್ಟು ಸಾರಿಗೆ ಬೇಡಿಕೆ ಹೆಚ್ಚಾಗಬಹುದು ಅದಕ್ಕೆ ತಕ್ಕಂತೆ ಒಂದು ಇನ್‌ಫ್ರಾಸ್ಟ್ರಕ್ಚರ್ ಅನ್ನು ಡೆವಲಪ್ ಮಾಡಬೇಕು. ಕೆ.ಎಸ್.ಆರ್.ಟಿ.ಸಿ. ಇರಬಹುದು. ಮೋಟಾರ್ ವೆಹಿಕಲ್ಸ್ ಸಾರಿಗೆ ವಿಚಾರ ಇರಬಹುದು, ಇದರ ಬಗ್ಗೆ ಒಂದು ನೀತಿ ಮಾಡತಕ್ಕ ಕರಡು ಪತ್ರವನ್ನು ತಯಾರಿಸಬೇಕು. ಅದಕ್ಕೋಸ್ಕರ, ಇಡೀ ರಾಜ್ಯದಲ್ಲಿ ರೈಟ್ಸ್ ಸಂಸ್ಥೆಯವರು ಸರ್ವೆ ಮಾಡಿ ರಿಪೋರ್ಟ್ ಕೊಟ್ಟಿದ್ದಾರೆಂದು ತಿಳಿದುಕೊಂಡಿದ್ದೇವೆ. ಅವರ ಆಧಾರದ ಮೇಲೆ ಪ್ರತಿ ಜಿಲ್ಲೆಗಳು ಇದರ ಬಗ್ಗೆ ದೀರ್ಘವಾಗಿ ಆಲೋಚನೆ ಮಾಡಿ ಸಾರಿಗೆ ನೀತಿ ತಯಾರಿಸಬೇಕೆಂದು ಒತ್ತಾಯಿಸುತ್ತೇನೆ. ಇಲ್ಲದಿದ್ದರೆ ಇದು ಸಾಧ್ಯವಿಲ್ಲ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕೆ.ಎಸ್.ಆರ್.ಟಿ.ಸಿ. ಬೆಳೆದಿದೆ. ನಮ್ಮಲ್ಲಿ ಸುಮಾರು 98-100 ಡಿಪೋಗಳಿವೆ. ಸಾರಿಗೆ ಸಚಿವರಾದವರು ಒಂದು ವರ್ಷ ಎರಡು ವರ್ಷ ಮೂರು ವರ್ಷ ಇದ್ದರೂ ಒಂದು ಸಾರಿ ಹೋಗಿಬರುವುದು ಕಷ್ಟವಾಗುತ್ತದೆ.

1.15 ಪಿ.ಎಂ

ಮ್ಯಾನೇಜಿಂಗ್ ಡೈರೆಕ್ಟರ್ ಸಹ ಹೋಗುವುದಕ್ಕಾಗುವುದಿಲ್ಲ, ಅವರಿಗೆ ಬೇಕಾದಷ್ಟು 24 ಗಂಟೆ ಬೇರೆ ಕೆಲಸ ಇರುತ್ತದೆ. ಹೇಳಿದೆನಲ್ಲ ಆಗಲೇ ಫೈರ ಫೈಟಿಂಗ್ ಎಂದು ಆದ್ದರಿಂದ ನಾನು ಕೇಳತಕ್ಕದ್ದು ಕೆ.ಎಸ್.ಆರ್.ಟಿ.ಸಿಯನ್ನು ಬೈಫರ್‌ಕೇಟ್ ಮಾಡಿ. ಸರ್ಕಾರಕ್ಕೆ ದೃಢ ನಿಲುಮೆ ಬೇಕಾಗುತ್ತದೆ. ಯಾರೋ ವಿರೋಧ ಮಾಡುತ್ತಿದ್ದಾರೆ.ಕಾರ್ಮಿಕರು ವಿರೋಧ ಮಾಡುತ್ತಿದ್ದಾರೆ. ಅಥವಾ ಅಲ್ಲಿರತಕ್ಕ ನಾಲ್ಕು ಜನ ಅಧಿಕಾರಿಗಳು ವಿರೋಧಮಾಡಬಹುದು. ಏಕೆಂದರೆ ಬೆಂಗಳೂರಿನಿಂದ ಆಚೆ ಗುಲ್ಬರ್ಗಕ್ಕೆ ಹೋಗಬೇಕು ಬೆಳಗಾಂಗೆ ಹೋಗಬೇಕು. ಕಾರವಾರಕ್ಕೆ ಹೋಗಬೇಕು. ಎಂದರೆ ಆಗುವುದಿಲ್ಲ, ಆದ್ದರಿಂದ ಅವರು ಸ್ವಾಭಾವಿಕವಾಗಿ ಬೇಡ ಎಂದು ಹೇಳುತ್ತಾರೆ. ನನಗನ್ನಿಸುತ್ತದೆ. ನಮ್ಮ ರಾಜ್ಯದಲ್ಲಿ ಸಾರಿಗೆ ವ್ಯವಸ್ಥೆ ಬಗ್ಗೆ ಬಹಳ ಚೆನ್ನಾಗಿ ಅಧ್ಯಯನ ಮಾಡಿ ಒಂದು ವರದಿಯನ್ನು ಕೊಟ್ಟಿರತಕ್ಕದ್ದು ಎಂದರೆ ಮಾನ್ಯ ಜೆ.ಸಿ.ಲಿನ್ ಅವರು ಜೆ.ಸಿ.ಲಿನ್ ಅವರು ನಮ್ಮ ರಾಜ್ಯದ ಅತ್ಯಂತ ಪ್ರಾಮಾಣಿಕ, ನಿಷ್ಠಾವಂತರ ಉನ್ನತ ಅಧಿಕಾರಿ. ಅವರು ಒಂದು ವರದಿಕೊಟ್ಟಿದ್ದಾರೆ.

ಬಹುಶಃ ಆ ವರದಿಯಲ್ಲೂ ಇದೇ ಅಭಿಪ್ರಾಯ ಇದೆ ಎಂಬುದು ನನಗೆ ಜ್ಞಾಪಕ. ಜೆ.ಸಿ.ಲಿನ್ ವರದಿಯಲ್ಲಿ ನೀಡ್ಸ್ ಬಗ್ಗೆ ಬಹಳ ಹೇಳಿದ್ದಾರೆ. ರಿಸೋರ್ಸಸ್ ಮೊಬಲೈಸೇಷನ್ ಹೇಗೆ ಮಾಡಿಕೊಳ್ಳಬೇಕು. ವರ್ಲ್ಡ್ ಬ್ಯಾಂಕ್‌ನಿಂದ ಹೇಗೆ ಸಾಲವನ್ನು ತೆಗೆದುಕೊಳ್ಳಬೇಕು ಬೇರೆಬೇರೆ ಸಂಘ ಸಂಸ್ಥೆಗಳಿಂದ ಹೇಗೆ ಹಣ ತೆಗೆದುಕೊಳ್ಳಬೇಕು ಎಂಬ ಬಗ್ಗೆಯೂ ಸಲಹೆಗಳನ್ನು ಕೊಟ್ಟಿದ್ದಾರೆ. ನೀವು ಯಾವುದೇ ಕಾರ್ಮಿಕ ಸಂಘಗಳ ಒತ್ತಡಗಳಿಗೆ ಈ ವಿಚಾರದಲ್ಲಿ ಮಣಿಯಬೇಕಾದ ಅವಶ್ಯಕತೆ ಇಲ್ಲ. ಇವನ್ನು ಬೈಫರ್ ಕೇಟ್ ಮಾಡಿ. ಬಿ.ಟಿ.ಎಸ್. ಅನ್ನು ಬೈಫರ್ ಕೇಟ್ ಮಾಡಿ ತಮಗೆ ಗೊತ್ತಿದೆ

ಬಿ.ಟಿ.ಎಸ್.ನಲ್ಲಿ ಪ್ರಯಾಣ ಮಾಡತಕ್ಕದ್ದು ಬಹಳ ಕಷ್ಟದ ಕೆಲಸ. ಹಿಂಸೆ, ಬಿ.ಟಿ.ಎಸ್ ಬಸ್ಸುಗಳನ್ನು ಹೆಚ್ಚು ಮಾಡುವುದಕ್ಕಾಗುವುದಿಲ್ಲ, ಏಕೆಂದರೆ ನಮ್ಮ ಬೆಂಗಳೂರು ರಸ್ತೆ ಹೆಚ್ಚು ಬಸ್ಸುಗಳನ್ನು ತೆಗೆದುಕೊಳ್ಳುವ ಸ್ಥಿತಿಯಲ್ಲಿಲ್ಲ. ಇದರಿಂದಾಗಿ ಬಿ.ಟಿ.ಎಸ್‌ನ್ನು ಕೆ.ಎಸ್.ಆರ್.ಟಿ.ಸಿ. ಜೊತೆ ಯಾವ ರೀತಿ ಹೊಂದಣಿಕೆ ಮಾಡುತ್ತೀರಿ? 10 ಸಾವಿರ ಜನ ಕಾರ್ಮಿಕರಿದ್ದಾರೆ. ಪ್ರತಿದಿವಸವೂ ಸಹ ಏನಾದರೂ ಒಂದು ಸಮಸ್ಯೆ ಇರುತ್ತದೆ. ಒಬ್ಬರು ಡಿವಿಷನ್ ಕಂಟ್ರೋಲರುಗಳು ಇಬ್ಬರು ಡಿವಿಷನಲ್ ಕಂಟ್ರೋಲರುಗಳು ಏನೂ ಮಾಡುವುದಕ್ಕಾಗುವುದಿಲ್ಲ.

ಕೆಲವರು ಹೇಳುತ್ತಾರೆ. ಬಿ.ಟಿ.ಎಸ್. ಸಪರೇಟ್ ಮಾಡಿಬಿಟ್ಟರೆ ಸಿಟಿ ಟ್ರಾನ್ಸ್ ಪೋರ್ಟ್ ಲಾಸ್ ಆಗುತ್ತದೆ. ಎಲ್ಲಾ ಸಿಟಿ ಟ್ರಾನ್ಸ್‌ಪೋರ್ಟ್‌ಗಳೂ ಲಾಸ್ ಆಗುತ್ತಿದೆ. ಅದಕ್ಕೋಸ್ಕರ ಸಪರೇಟ್ ಮಾಡುವುದು ಬೇಡ ಎಂದು. ಈಗ ಎರಡು ಫೇರ್ ಸ್ಟ್ರಕ್ಚರ್ ಇದೆ. ಬಿ.ಟಿ.ಎಸ್.ಗೇ ಒಂದು ಫೇರ್ ಸ್ಟ್ರಕ್ಚರ್ ಇದೆ.ಹಳ್ಳಿ ಜನರಿಗೇ ಒಂದು ಫೇರ್ ಸ್ಟ್ರಕ್ಚರ್ ಇದೆ. ಹಳ್ಳಿ ಜನರಿಗೆ ನನಗೆ ಗೊತ್ತಿರುವ ಹಾಗೆ ಒಂದು ಕಿಲೋಮಿಟರ್ ಹೋಗಬೇಕಾದರೆ ಒಬ್ಬ ರೈತ 20 ಪೈಸೆಯನ್ನೋ15 ಪೈಸೆಯನ್ನೋ ಚಾರ್ಜು ಮಾಡುತ್ತೀರಿ. ಅದೇ ಬಿ.ಟಿ.ಎಸ್. ನಲ್ಲಿ ಸಿಟಿಯಲ್ಲಿ ಪ್ರಯಾಣ ಮಾಡಬೇಕಾಗುದರೆ ಮೂರು ಪೈಸೆಯನ್ನೇ 6 ಪೈಸೆಯನ್ನೂ7 ಪೈಸೆಯನ್ನೋ ಚಾರ್ಜ್ ಮಾಡುತ್ತೀರಿ. ನಾನು ಹೇಳುತ್ತೇನೆ ಬಿ.ಟಿ.ಎಸ್.ಗೇ ಬೇರೆ ಫೇರ್ ಸ್ಟ್ರಕ್ಚರ್ ರೂರಲ್‌ಗೆ ಬೇರೇಫೇರೆ ಸ್ಟ್ರಕ್ಚರ್ ಮಾಡಿ. ಇದರ ಬಗ್ಗೆ ನಿಮಗೆ ಹೆದರಿಕೆ ಇದೆ. ಸಿಟಿ ಬಸ್ ನಲ್ಲಿ ಓಡಾಡುವ ಜನಗಳು ಗಲಾಟೆಮಾಡಬಹುದು ಎಂದು. ಅಲ್ಲ ಸ್ವಾಮಿ ಸಿಟಿಯಲ್ಲಿಕೂಲಿ ಮಾಡುವವನಿಗೆ 40-50 ರೂಪಾಯಿ ಕೂಲಿ ಇದೆ. ಆದರೆ ಹಳ್ಳಿಯಲ್ಲಿರುವವರನಿಗೆ? ಇವರು ಮಾಡುವ ಲಾಸ್ ಗೆ ನಾವು ಏತಕ್ಕೆ ಹಳ್ಳಿ ಜನ ಕೊಡಬೇಕು? ನಾನು ಇದನ್ನು ಮಾಡಬೇಕು ಎಂದಿದ್ದೇ. ಆದರೆ ಮಾಡುವುದಕ್ಕಾಗಲಿಲ್ಲ. ಆ ಸಂದರ್ಭದಲ್ಲಿ ಇದೇ ರೀತಿ ಅನೇಕ ಅಡಚಣೆಗಳು ಬಂತು. ಆಗ ದೊರೈರಾಜ್ ಎಂದು ಕಾಣುತ್ತದೆ. ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿ ಫೈನಲ್ ರಿಪೋರ್ಟ್ ಕೊಡಬೇಕೆಂದು ಹೇಳಿದೆವು. ಅವರು ಒಪ್ಪಿ ಕೊಂಡಿದ್ದಾರೆ ಎಂದು ತಿಳಿದುಬಂದಿದೆ. ಬಿ.ಟಿ.ಎಸ್.ನ್ನು ಕೆ.ಎಸ್.ಆರ್.ಟಿ.ಸಿ.ಯಿಂದ ಸಪರೇಟ್ ಮಾಡಿ. ಇದನ್ನು ಮಾಡಲೇಬೇಕು. ಇದರ ಜೊತೆಗೆ ಕೆ.ಎಸ್.ಆರ್.ಟಿ.ಸಿ. ಯನ್ನೂ ಬೈಫರ್ ಕೇಟ್ ಮಾಡಿ. ಬೀದರ್ ಗುಲ್ಬರ್ಗಾ, ರಾಯಚೂರು ಬಳ್ಳಾರಿಗೇ ಒಂದು ಕಾರ್ಪೋರೇಷನ್ ಮಾಡಿ ಬೆಳಗಾಂ, ಕಾರವಾರ, ಧಾರವಾಡ ಮತ್ತು ಬಿಜಾಪುರ ಜಿಲ್ಲೆಗೆ ಒಂದು ಕಾರ್ಪೋರೇಷನ್ ಮಾಡಿ ಮೈಸೂರು ಕಡೆಗೆ ಒಂದು ಕಾರ್ಪೋರೇಷನ್ ಮಾಡಿ ನಾಲ್ಕು ಕಾರ್ಪೋರೇಷನ್‌ನಲ್ಲಿ ಕಾಂಪಿಟಿಷನ್ ಇಡಿ. ಆಗ ಅವರಲ್ಲೂ ಒಂದು ಕಾಂಪಿಟಿಷನ್ ಮನೋಭಾವ ಬರುತ್ತದೆ. ವರ್ಗಾವಣೆ ವಿಷಯದಲ್ಲಿ ನೀವು ಬೆಳಿಗ್ಗೆಯಿಂದ ಸಾಯಂಕಾಲದವರೆ ಸಿಂಧ್ಯಾ ಅವರು ಹೇಳಿದರು ಮತ್ತೊಬ್ಬರು ಹೇಳಿದರು ಎಂದು ಎಂ.ಡಿ. ಯವರಿಗ ಟ್ರಾನ್ಸಫರ್ ಮಾಡಿ ಎಂದು ಹೇಳುವುದು ತಪ್ಪುತ್ತದೆ. ಅವರೂ ನೆಮ್ಮದಿಯಿಂದ ಇರುತ್ತಾರೆ. ನಮ್ಮ ಕಾರ್ಮಿಕರು ಬಹಳ ಒಳ್ಳೆಯವರು. ನನಗೆ ಗೊತ್ತಿದೆ. ಮಾನ್ಯ ಬನ್ನಿಕೋಡ್ ಅವರು ಈಗ ಇಲ್ಲ ನಾನು ಬಹಳ ಅರಿತು ಅರ್ಥ ಮಾಡಿಕೊಂಡು ಹೇಳುತ್ತಿದ್ದೇನೆ. ಕೆ.ಎಸ್.ಆರ್.ಟಿ.ಸಿ.ಯಲ್ಲಿ ಒಳ್ಳೆಯ ವರ್ಕ್‌ರ್ಸ್ ಇದ್ದಾರ. ಒಂದು ಒಪೀನಿಯನ್ ಏನಿದೆ ಎಂದರೆ ಕೆ.ಎಸ್.ಆರ್.ಟಿ.ಸಿ. ಕಾರ್ಮಿಕರು ಎಲ್ಲಾ ದುಷ್ಟರು, ಹೊಡೆಯತಕ್ಕವರು ಬಡಿಯತಕ್ಕವರು ಎಂಬ ಅಭಿಪ್ರಾಯ ಇದೆ. ನಾನು ವಿರೋಧಪಕ್ಷದಲ್ಲಿದ್ದುಕೊಂಡು ಹೇಳುತ್ತಿದ್ದೇನೆ ನಮ್ಮ ಕಾರ್ಮಿಕರು ಬಹಳ ಒಳ್ಳೆಯವರು. ಆದರೆ ಅವರಿಗೆ ಸರಿಯಾದ ದಾರಿ, ಮಾರ್ಗದರ್ಶನ ಕೊಡತಕ್ಕ ಒಂದು ಲೀಡರ್‌ಷಿಪ್ ಬೇಕಾಗಿದೆ. ಕಾರ್ಮಿಕರು ತೊಂದರೆ ಕೊಡುವುದಿಲ್ಲ. ಕೆಲವರು ವೆಸ್ಟಡ್ ಇಂಟರೆಸ್ಟ್ ಲೀಡರ್ ಷಿಪ್ ತೆಗೆದುಕೊಂಡಿರುವವರು ವಿರೋಧ ಮಾಡುತ್ತಾ

ಇರಬಹುದ. ಆದ್ದರಿಂದ ದಯವಿಟ್ಟು ಅದಕ್ಕೆ ಯಾವುದಕ್ಕೂ ಮಣಿಯದೆ ಕೆ.ಎಸ್.ಆರ್.ಟಿ.ಸಿ.ಯನ್ನು ಆದಷ್ಟು ಬೇಗ ಬೈಫರ್ ಕೇಟ್ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಇದರಿಂದ ಬಹಳ ಉಪಯೋಗವಾಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಇನ್ನು ರೂರಲ್ ಟ್ರಾನ್ಸಪೋರ್ಟ್ ಇದು. ಇತ್ತೀಚಿನ ದಿನಗಳಲ್ಲಿ ನಿಮ್ಮ ಸರ್ಕಾರ ಬಂದ ಮೇಲೆ ಬಹಳ ನೆಗ್ಲೆಟ್ ಆಗಿದೆ. ಹಿಂದೆ ಡೀಸೆಲ್ ಬೆಲೆ ಜಾಸ್ತಿಯಾದಾಗ ಎಕಾನಮಿ ಮೆಷರ್ ಎಂದು ಹೇಳಿ ಸುಮಾರು 2 ಸಾವಿರ ಸಿ ರೂಟ್ಸ್‌ನ್ನು ಕ್ಯಾನ್ಸಲ್ ಮಾಡಿದಿರಿ ಏಕೆ 'ಸಿ' ರೂಟ್ಸಗಳನ್ನು ಕ್ಯಾನ್ಸಲ್ ಮಾಡಿದಿರಿ? ಹಳ್ಳಿಯಿಂದ ತಾಲ್ಲೂಕು ಕೇಂದ್ರಕ್ಕೆ ಪ್ರತಿ ಹಳ್ಳಿಯಿಂದ ಜನ ಬರುತ್ತಾರೆ ಆ ರೂಟ್ಸ್ ಎಕಾನಮಿ ಇಲ್ಲ, ಇಪಿಕೆಎಂ ಕಡಿಮೆ ಎನ್ನುವ ಕಾರಣ ಕೊಟ್ಟು ಕ್ಯಾನ್ಸಲ್ ಮಾಡಿದಿರಿ. ಇವತ್ತು ಲೋಯರ್ ಲೆವೆಲ್‌ನ ಡಿಪೋ ಮೇನೇಜರ್‌ಗಳಲ್ಲಿ, ಹಾಗೂ ಡಿವಿಜನಲ್ ಕಂಟ್ರೋಲರ್ ಲೆವೆಲ್‌ನಲ್ಲಿ ಫೆಸಿಲಿಟೀಸ್ ಮುಖ್ಯಅಲ್ಲ. ಏನಾದರೂ ಮಾಡಿ ಮ್ಯಾನೇಜಿಂಗ್ ಡೈರೆಕ್ಟರ್‌ರಿಂದ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕೆಂದಿದ್ದಾರೆ. ಯಾರ ಕಾಸ್ಟನಲ್ಲಿ ಈ ಲಾಭ? ರೈತರಿಗೆ ತೊಂದರೆ ಆಗುವ ರೀತಿಯಲ್ಲಿ ಪ್ರಯಾಣಿಕರಿಗೆ ತೊಂದರೆ ಆಗುವ ರೀತಿಯಲ್ಲಿ ಎರಡು ಸಾವಿರ (ಸಿ) ರೂಟ್ಸನ್ನು ಕ್ಯಾನ್ಸಲ್ ಮಾಡಿದ್ದುದು. ಒಂದನ್ನೂ ಇನ್ನೂವರೆಗೆ ಪ್ರಾರಂಭ ಮಾಡಿಲ್ಲ, ಎಲ್ಲೋ ಒಂದರೆಡು ಕಡೆ ಎಂಎಲ್ಎ ಅವರು ಕೇಳಿದ ಕಡೆ ಪ್ರಾರಂಭ ಮಾಡಿದ್ದಾರೆಯೇ ವಿನಹಃ ಯಾವುದೇ ಸಿ ರೂಟ್ಸನ್ನು ಪ್ರಾರಂಭ ಮಾಡಿಲ್ಲ. ಒಂದೂವರೆ, ಎರಡು ವರ್ಷಗಳ ಹಿಂದೆ ಎಲ್ಲಾ ನಿಲ್ಲಿಸಿದ್ದು ಇವನ್ನು ಪುನಃ ಪ್ರಾರಂಭ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ತಾವು ಸ್ಟೂಡೆಂಟ್ಸ್ ಪಾಸ್ ಕೊಟ್ಟಿರುವುದರಿಂದ ಬೆಳಿಗ್ಗೆ ಮತ್ತು ಸಂಜೆಯ ವೇಳೆಯಲ್ಲಿ ಬಸ್‌ಗಳಲ್ಲಿ ಅರ್ನಿಂಗ್ಸ್ ಕಡಿಮೆ ಆಗಿದೆ ಎಂಬುದನ್ನು ಒಪ್ಪುತ್ತೇನೆ. ಆದರೆ ಅದನ್ನು ನಾವು ಮಾಡಬೇಕಾಗುತ್ತದೆ. ಅದಕ್ಕೆ ಬೇರೆ ದಾರಿ ಇಲ್ಲ. ಮತ್ತೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಈ ಹಳ್ಳಿಗಳ ಕಡೆ ಫಾರೆಸ್ಟ್ ಡಿಪಾರ್ಟ್‌ಮೆಂಟಿನ ಸೌದೆಯನ್ನು ಇತ್ತೀಚಿನ ದಿವಸಗಳಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳು ಸಾಗಾಣಿಕೆ ಮಾಡುವುದು ಹೆಚ್ಚಾಗಿದೆ. ನಾನು ಪತ್ರಿಕೆಯಲ್ಲಿ ಓದಿದೆ. ಈ ಬಗ್ಗೆ ಚರ್ಚೆಗೆ ನಾನು ಹೋಗುವುದಿಲ್ಲ. ಕೆ.ಎಸ್.ಆರ್.ಟಿ.ಸಿ. ಬಸ್‌ನಲ್ಲಿ ಗಂಧದ ಸೌದೆಯನ್ನು ತೆಗೆದುಕೊಂಡು ಹೋಗುತ್ತಿದ್ದರು ಎನ್ನುವುದನ್ನು ಓದಿದೆ. ಇಂತಹವರ ಮೇಲೆ ಸ್ಟ್ರಿಕ್ಟಾಗಿ ಆಕ್ಷನ್ ತೆಗೆದುಕೊಳ್ಳಬೇಕು. ರೂರಲ್ ರೂಟ್ಸ್‌ನಲ್ಲಿ ಫಾರೆಸ್ಟ್ ಸೌದೆ,ಗಂಧದ ಮರ ಏನು ಕಳ್ಳತನದಲ್ಲಿ ಸಾಗಣಿಕೆ ಮಾಡುತ್ತಿದ್ದಾರೆ. ಇವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ನಮ್ಮ ಮಿತ್ರರಾದ ಪ್ರಕಾಶ್ ಅವರು ಮಂತ್ರಿಗಳಾಗಿದ್ದಾಗ ರೂರಲ್ ಏರಿಯಾದಲ್ಲಿ ಗ್ರೀನ್ ಸರ್ವೀಸ್ ಬಸ್ ಎಂದು ಬಳ್ಳಾರಿ ಜಿಲ್ಲೆಯಲ್ಲಿ ಓಡಿಸುವುದನ್ನು ಪ್ರಾರಂಭ ಮಾಡಿದೆವು. ನಮ್ಮ ರಾಜ್ಯದಲ್ಲಿ ಯಾವ ಜಿಲ್ಲೆಗಳಲ್ಲಿ ರೂಟ್ಸ್ ನ್ಯಾಷನಲೈಸ್ ಆಗಿದೆ ಅಲ್ಲಿ ಬೆಳಿಗ್ಗೆ ಹಾಗೂ ರಾತ್ರಿ ಎರಡು ಸಾರಿಯಾದರೂ ಎಲ್ಲಿ ರಸ್ತೆ ಸಂಪರ್ಕ ಇದೆ ಅಂತಹ ಹಳ್ಳಿಗಳಿಗೆ ನಮ್ಮ ಬಸ್‌ಗಳು ಹೋಗಬೇಕೆಂದು ಮಾಡಿದೆವು. ಆ ಬಗ್ಗೆ ನಾನು ಈಗ ಇಲ್ಲಿ ಒತ್ತಾಯ ಮಾಡತ್ತಿದ್ದೇನೆ.

ರಾಷ್ಟ್ರೀಕರಣ ಆಗಿರತಕ್ಕ ಎಲ್ಲಾ ಪ್ರದೇಶದಲ್ಲಿಯೂ ಕೊನೆಯ ಪಕ್ಷ ಒಂದು ಟ್ರಿಪ್ ಆದರೂ ಪ್ರತಿ ಹಳ್ಳಿಗೆ ಹೋಗುವ ವ್ಯವಸ್ಥೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ಅರ್ಬನ್ ಟ್ರಾನ್ಸ್‌ಪೋರ್ಟ್ ಬಿಟಿಎಸ್, ಬಗ್ಗೆ ನಾನು ಚರ್ಚೆ ಮಾಡುವುದಿಲ್ಲ. ಆದರೆ ಏನಾಗಿದೆ? ಬಿಟಿಎಸ್‌ನಲ್ಲಿ ಇವತ್ತು ಬಹಳ ಮುಖ್ಯವಾಗಿ ಒಂದು ಕೆಲಸ ಆಗಬೇಕು. ಬೆಂಗಳೂರು ಜಿಲ್ಲೆಗೆ ಒಂದು ತೊಂದರೆ ಇದೆ. ಇಲ್ಲಿ 22 ಕಿ.ಮಿ. ಎಂದು ಸೀಲಿಂಗ್ ಇದೆ. [illegible]

ಅದನ್ನು ಅನಧಿಕೃತವಾಗಿ 27 ಕಿ.ಮಿ. ವರೆಗೆ ಹೆಚ್ಚಿಸಲಾಗಿದೆ. ಎಂದರೆ ಅಲ್ಲಿಂದ ಮುಂದಕ್ಕೆ ಸಿಟಿ ಸರ್ವೀಸ್ ಇಲ್ಲ,ಇದರಲ್ಲಿ ಸಬರ್ಬನ್ ರೂಟ್ಸ್ ಎಂದು ಒಂದು ಇಡಿ. ಮತ್ತು ಸಿಟಿ ರೂಟ್ಸ್ ಎಂದು ಒಂದು ಮಾಡಿ. ಹೇಗಿದ್ದರೂ ಈಗ ಸಪರೇಟ್ ಫೇರ್ ಸ್ಟ್ರಕ್ಚರ್ ಈಗಾಗಲೇ ಇದೆ. ಈಗ ಏನು 22 ಕಿ.ಮಿ. ಲಿಮಿಟ್ ಇದೆ. ಅದನ್ನು 40 ಕಿ.ಮಿ. ವರೆಗೆ ಹೆಚ್ಚಿಸಬೇಕೆಂದು ನಾನು ಇಲ್ಲಿ ಒತ್ತಾಯ ಮಾಡುತ್ತಿದ್ದೇನೆ.

ಬೆಂಗಳೂರಿನ ಸುತ್ತಮುತ್ತ ಅನೇಕ ಜನರು ಹಳ್ಳಿಗಳಿಂದ ಬರಬೇಕಾದವರಿಗೆ ಇವತ್ತು ಬೇರೆ ರೀತಿಯ ಸಂಪರ್ಕ ವ್ಯವಸ್ಥೆ ಇಲ್ಲ, ಅವರು 2,3,4 ಮೈಲಿ ನಡೆಮಕೊಂಡು ಬಂದು ಅನಂತರ ಬಸ್ ಹತ್ತುವ ಪರಿಸ್ಥಿತಿ ಇದೆ. ದೇವನಹಳ್ಳಿ. ಹೊಸಕೋಟೆ, ಆನೇಕಲ್. ನೆಲಮಂಗಲ, ರಾಮನಗರ ಈ ಐದಾರು ತಾಲ್ಲೂಕುಗಳಲ್ಲಿ ಬಹಳ ತೊಂದರೆ ಆಗಿರುವುದರಿಂದ 22 ಕಿ.ಮಿ. ಲಿಮಿಟ್ ಏನಿದೆ ಅದನ್ನು 40 ಕಿ.ಮಿ. ಗೆ ಹೆಚ್ಚು ಮಾಡಬೇಕು. ಈ 22ಕಿ.ಮಿ. ಲಿಮಿಟನ್ನು 20 ವರ್ಷಗಳ ಹಿಂದೆ ಫಿಕ್ಸ್ ಮಾಡಿದ್ದುದು ನನ್ನ ಕಾಲದಲ್ಲಿ ಇದನ್ನು ಸ್ವಲ್ಪ ಲಿಬರಲೈಸ್ ಮಾಡಿದೆ. ಈಗ ಮತ್ತಷ್ಟು ಲಿಬರಲೈಸ್ ಮಾಡಬೇಕು. ಇಲ್ಲದಿದ್ದರೆ ಅವರಿಗೆ ಬೇರೆ ರೀತಿಯ ಸಂಪರ್ಕ ವ್ಯವಸ್ಥೆ ಇಲ್ಲ, ಕನಕಪುರ, ದೊಡ್ಡಬಳ್ಳಾಪುರದಿಂದ ಜನರು ಬರುವುದಕ್ಕೆ ಬೇಕಾದ ವ್ಯವಸ್ಥೆ ಇದೆ. ಆದರೆ ಈಗ ನಾನು ಹೇಳಿದ ಭಾಗದವರಿಗೆ ಬಹಳ ತೊಂದರೆ ಇದೆ ಎಂದು ಹೇಳುತ್ತೇನೆ. ಇನ್ನು ಮೈಸೂರು ಹುಬ್ಬಳ್ಳಿ, ಧಾರವಾಡ ಬೆಳಗಾಂ ಈ 4 ಪಟ್ಟಣ ಪ್ರದೇಶದಲ್ಲಿ ನಗರ ಸಾರಿಗೆ ವ್ಯವಸ್ಥೆ ಇಟ್ಟಿದ್ದೀರಿ. ಇದು ಏನೇನೂ ಸಾಲುವುದಿಲ್ಲ.

ನಾನೊಂದು ಭರವಸೆಯನ್ನು ಈ ಸದನಕ್ಕೆ ಕೊಟ್ಟಿದ್ದೆ. ಅದರಂತೆ ತಾವು ದಾವಣಗೆರೆ, ಗುಲ್ಬರ್ಗ ತಮಕೂರು ಈ ರೀತಿ ಜಿಲ್ಲಾ ಕೇಂದ್ರಗಳಲ್ಲಿ ಇರತಕ್ಕ ಎಲ್ಲಾ ಪ್ರದೇಶಗಳಲ್ಲಿ ಸಿಟಿ ಸರ್ವೀಸ್ ವ್ಯವಸ್ಥೆ ಮಾಡಬೇಕು.

ಉಪಾಧ್ಯಕ್ಷರು : ದಾವಣಗೆರೆಯಲ್ಲಿ ಸಿಟಿ ಸರ್ವೀಸ್ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದೆ ಅದು ಸಾಲುವುದಿಲ್ಲ. ಈಗ ಹತ್ತು ಪಟ್ಟು ಬೇಡಿಕೆ ಇದೆ ಅದು ಯಾರ ಕಡೆಗೆ ಸಾಕಾಗುತ್ತದೆ. ನಿಮ್ಮಲ್ಲಿ ಒಳ್ಳೆಯ ಬಸ್ ಸ್ಟ್ಯಾಂಡ್ ಇದೆ. ಬಸ್ಸುಗಳು ಸಾಕಾಗುವುದಿಲ್ಲ, ಆ ವಿಚಾರ ನನಗೆ ಗೊತ್ತಿದೆ. ಈಗ ತಾವು ಅಲ್ಲಿ ಕುಳಿತಿದ್ದೀರಿ ಹೇಳುವುದಕ್ಕಾಗುವುದಿಲ್ಲ. ಅದಕ್ಕಾಗಿ ನಾನು ಒತ್ತಾಯ ಮಾಡುತ್ತೇನೆ, ಅಧಿಕಾರಿಗಳು ಸಾರಿಗೆ ಮಂತ್ರಿಗಳಿಗೆ ಹೇಳಿತ್ತಾರೆ. ಲಾಸ್ ಆಗುತ್ತದೆ ಏನು ಮಾಡುವುದೆಂದು ಹೇಳುತ್ತಾರೆ. ಲಾಸ್ ಆದರೆ ಆ ಲಾಸನ್ನು ಬೇರೆ ರೀತಿಯಲ್ಲಿ ಕಾಂಪನ್‌ಸೇಟ್ ಮಾಡಿಕೊಳ್ಳಬೇಕು. ಜನ ಶಾಪ ಹಾಕುತ್ತಿದ್ದಾರೆ. ನೀವು ಎಲ್ಲಿ ಹಣವನ್ನು ಸಂಗ್ರಹ ಮಾಡಬಹುದೆಂಬುದನ್ನು ನಾನು ಹೇಳುತ್ತೇನೆ. ಲಾಸ್ ಅನ್ನು ಹೇಗೆ ಕಾಂಪನ್‌ಸೇಟ್ ಮಾಡಬಹುದೆಂಬುದನ್ನು ನಾನು ಹೇಳುತ್ತೇನೆ. ಅದರ ಬಗ್ಗೆ ನಾನು ಸಲಹೆ ಕೊಡುತ್ತೇನೆ. ಆದರೆ ನನ್ನ ಸಲಹೆ ತಮಗೆ ಎಷ್ಟು ಹಿಡಿಸುತ್ತದಯೋ ನನಗೆ ಗೊತ್ತಿಲ್ಲ, ದಯವಿಟ್ಟು ಜಿಲ್ಲಾ ಕೇಂದ್ರಗಳಲ್ಲಿರತಕ್ಕ ಎಲ್ಲಾ ಪಟ್ಟಣ ಪ್ರದೇಶಗಳಲ್ಲಿ ನಗರ ಸಾರಿಗೆ ವ್ಯವಸ್ಥೆಯನ್ನು ಮಾಡುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಅದಕ್ಕೆ ನೀವು ದೃಢ ನಿಲುವು ತೆಗೆದುಕೊಳ್ಳದಿದ್ದರೆ, ಇನ್ನೊಂದು ಮೂರು ತಿಂಗಳು ಅಥವಾ ಆರು ತಿಂಗಳಾದ ಮೇಲೆ ನೀವು ಹೋಗುತ್ತೀರಿ, ಮತ್ತೊಬ್ಬರು ಬರುತ್ತಾರೆ, ಅದೂ ಪೋಸ್ಟ್‌ಪೋನ್ ಆಗುತ್ತಾ ಹೋಗುತ್ತದೆ. ಅಧಿಕಾರಿಗಳ ಮನಸೋಯಿಚ್ಛೆ ಆಗುತ್ತದೆ. ಅವರು ಮಾತ್ರ ಇಂಟರ್‌ಡ್ಯೂಸ್ ಮಾಡುವುದಕ್ಕೆ ಹೋಗುವುದಿಲ್ಲ. ನೀವು ಆ ರಾಜಕೀಯ ಪ್ರೌಢಿಮೆಯನ್ನು ತೋರಿಸಬೇಕಾಗುತ್ತದೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಬೆಂಗಳೂರು ನಗರದ ಮಟ್ಟಿಗೆ ಹೇಳುವುದಾದರೆ, ಶಿವಾಜಿನಗರ ಕಲಾಸಿಪಾಳ್ಯಂ ಬಸ್‌ಸ್ಟ್ಯಾಂಡ್‌ಗಳನ್ನು ಸಾರಿಗೆ ಸಂಸ್ಥೆಯವರು ತೆಗೆದುಕೊಳ್ಳಬೇಕು. ಅದಕ್ಕೆ ಕಾರ್ಪೊರೇಷನ್‌ನವರು ಅಡ್ಡಿ ಮಾಡುತ್ತಾರೆ. ಶಿವಾಜಿನಗರದ ಸ್ಟೇಡಿಯಂ ಏನಿದೆ ಅದರ ಪಕ್ಕದಲ್ಲಿ ನೀವು ಸ್ವಲ್ಪವಾದರೂ ಜಾಗವನ್ನು ತೆಗೆದುಕೊಳ್ಳಬೇಕು. ಅಲ್ಲಿ ಒಂದು ಬಸ್ಸಿಗೂ ಇನ್ನೊಂದು ಬಸ್ಸಿಗೂ ಆರು ಇಂಚು ಸಹ ಜಾಗ ಇರುವುದಿಲ್ಲ. ಪೀಕ್ ಆವರ್ಸ್‌ನಲ್ಲಿ ಅಲ್ಲಿ ಜಾಗವೇ ಇರುವುದಿಲ್ಲ. ಬೇಕಾದಷ್ಟು ಆಕ್ಸಿಡೆಂಟ್‌ಗಳು ಆಗುತ್ತವೆ. ಅಂತಹ ಒಂದು ಪರಿಸ್ಥಿತಿಗೆ ನಾವು ಬಂದಿದ್ದೇವೆ. ಕಲಾಸಿಪಾಳ್ಯಂ ಬಸ್‌ಸ್ಟ್ಯಾಂಡಿನಲ್ಲಿ ಕಾಲಿಡುವುದಕ್ಕೂ ಸಹ ಭಾಗ ಇರುವುದಿಲ್ಲ ಅಂತಹ ಒಂದು ಪರಿಸ್ಥಿತಿಗೆ ನಾವು ಬಂದಿದ್ದೇವೆ. ಬೆಂಗಳೂರು ನಗರದಲ್ಲಿ ಪ್ರತಿನಿತ್ಯ 15 ಲಕ್ಷ ಜನ ಪ್ರಯಾಣಿಕರು ಪ್ರಯಾಣ ಮಾಡುತ್ತಾರೆ. 20 ವರ್ಷಗಳ ಹಿಂದೆ ಮಾಡಿರತಕ್ಕ ಬಸ್ ಸ್ಟ್ಯಾಂಡ್ ಗಳನ್ನು ಎಕ್ಸ್‌ಪ್ಯಾಂಡ್ ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಂಡಿಲ್ಲ. ಕೇವಲ ಶಿವಜಿನಗರ ಮತ್ತು ಕಲಾಸಿಪಾಳ್ಯಂ ಬಸ್ ಸ್ಟ್ಯಾಂಡ್‌ಗಳನ್ನು ಎಕ್ಸ್‌ಪ್ಯಾಂಡ್ ಮಾಡತಕ್ಕದ್ದು ಅಷ್ಟೆ ಅಲ್ಲ ಬೆಂಗಳೂರು ನಗರಕ್ಕೆ ಯಾವ್ಯಾವ ಹೆದ್ದಾರಿಗಳಿವೆ ಅಲ್ಲಿ ನಾಲ್ಕೈದು ಎಕರೆ ಜಮೀನು ತೆಗದುಕೊಂಡು ಬಾಂಬೆಯಲ್ಲಿ ಯಾವ ರೀತಿ ಮಾಡಿದ್ದಾರೆ ಆ ರೀತಿ ಬಸ್ ಸ್ಟ್ಯಾಂಡ್ ಮಾಡಿ. ಮೈಸೂರು ರಸ್ತೆಯಿಂದ ಬರತಕ್ಕವರು ಅವರು ಏತಕ್ಕೆ ಸುಭಾಷ್‌ನಗರ ಬಸ್‌ಸ್ಟ್ಯಾಂಡಿಗೆ ಬರಬೇಕು? ಅವರು ಮೈಸೂರು ರಸ್ತೆಯಲ್ಲಿಯೇ ಇಳಿದು ಹೋಗತಕ್ಕ ವ್ಯವಸ್ಥೆಯನ್ನು ಮಾಡಬೇಕು. ಮದ್ರಾಸ್ ಕಡೆಯಿಂದ ಬರತಕ್ಕವರು ಅವರು ಏತಕ್ಕೆ ಸಂಟ್ರಲ್ ಬಸ್‌ಸ್ಟ್ಯಾಂಡಿಗೆ ಬರಬೇಕು? ಈ ರೀತಿ ನಗರದ ಸುತ್ತಮುತ್ತ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಕೊನೆಯ ಪಕ್ಷ ರಾಜ್ಯದ ಹೆದ್ದಾರಿಗಳಲ್ಲಿ ಬಸ್ ಸ್ಟ್ಯಾಂಡ್ ಗಳನ್ನು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಕೆಲವು ಬಡಾವಣೆಗಳಲ್ಲಿ ಜಯನಗರ, ಮಲ್ಲೇಶ್ವರಂ ಇಂತಹ ಕಡೆಗಳಲ್ಲಿ ಬಹಳ ತೊಂದರೆಯಾಗಿದೆ. ಇದರ ಬಗ್ಗೆ ನೀವು ಕ್ರಮವನ್ನು ತೆಗೆದುಕೊಳ್ಳಬೇಕು. ವಿಶ್ವಬ್ಯಾಂಕಿನ ಸಹಾಯವನ್ನು ಪಡೆದು ಬೆಂಗಳೂರು ಮೆಟ್ರೊಪಾಲಿಟನ್ ಅಥಾರಿಟಿಯವರು ಬಿ.ಟಿ.ಎಸ್.ನವರು ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟ್‌ನವರು ಇವರೆಲ್ಲಾ ಸೇರಿ ಕೊಡು ಇಲ್ಲಿರತಕ್ಕ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಮಾಡಬೇಕೆಂದು ಅದಕ್ಕೆ ಹಣ ತೆಗೆದುಕೊಳ್ಳುವುದಕ್ಕೆ ಒಂದು ಪ್ರಯತ್ನ ನಡೆಯುತ್ತಿದೆ. ಮಂತ್ರಿಗಳ ಇಲಾಖೆಗಳು ಬದಲಾವಣೆಯಾಗುವುದರಿಂದ ಇಂತಹ ಕಾರ್ಯಕ್ರಮಗಳನ್ನು ಕಾರ್ಯಾಚರಣೆ ಮಾಡುವುದಕ್ಕೆ ಆಗುತ್ತಿಲ್ಲ.

ನಮ್ಮ ದುರದೃಷ್ಟ ನಮ್ಮವರೇ ಕೇಂದ್ರದಲ್ಲಿ ರೈಲ್ವೆ ಮಂತ್ರಿಗಳಾಗುತ್ತಾರೆ. ಅವರು ಇಲ್ಲಿಗೆ ಬಂದಾಗ ಅವರು ಇಲ್ಲಿಗೆ ಬಂದಾಗ ಹಾರ ಹಾಕಿಸಿಕೊಳ್ಳುತ್ತಾರೆ. ಹೊಗಳಿಸಿಕೊಳ್ಳುತ್ತಾರೆ. ನಾವು ಸಹ ಅವರಿಗೆ ಒಳ್ಳೆಯ ಅತಿಥ್ಯ ಮಾಡುತ್ತೇವೆ. ಅವರು ದೆಹಲಿಗೆ ಹೋದ ತಕ್ಷಣ ನಮ್ಮ ಹತ್ತಿರ ಹಣವಿಲ್ಲ, ನೀವು ಹಣ ಕೊಟ್ಟರೆ ನಾವು ಮಾಡುತ್ತೇವೆಂದು ಹೇಳುತ್ತಾರೆ. ಬೆಂಗಳೂರು ನಗರದಲ್ಲಿ ಇವತ್ತು ಇರತಕ್ಕ ಬಿ.ಟಿ.ಎಸ್. ವ್ಯವಸ್ಥೆಯಿಂದ ಯಾವುದೇ ಪರಿಹಾರ ಮಾಡುವುದಕ್ಕೆ ಆ ಬ್ರಹ್ಮನಿಂದಲೂ ಸಾಧ್ಯವಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ನಿಮ್ಮಕ್ಕಿ ಕೈಯಿಂದ ಸಹ ಆಗುವುದಿಲ್ಲ.ಅದನ್ನು ನೀವು ಮಾಡುತ್ತೇನೆಂದು ಹೇಳಿದರೂಅದು ಸುಳ್ಳು ಭರವಸೆಯಾಗುತ್ತದೆ. ನೀವುನಾವು ಸೇರಿಕೊಂಡು ಬೇರೆ ಒಂದು ಮೆಥೆಡ್ ಆಫ್ ಟ್ರಾನ್ಸ್‌ಪೋರ್ಟ್ ಅದು ಮಾನೋ ಇರಬಹುದು. ಮೆಟ್ರೋ ಇರಬಹುದು. ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುವುದರ ಜೊತೆಗೆ ಟೆಂಪರರಿ ರಿಲೀಫ್ ಕೊಡುವುದಕ್ಕೆ ಸರ್ಕ್ಯುಲರ್ ರೈಲ್ವೆ ಕಡೆಗೆ ಗಮನ ಕೊಡಬೇಕೆಂದು ನಾನಾದರೂ ಒತ್ತಾಯ ಮಾಡುತ್ತೇನೆ. ಇಲ್ಲದಿದ್ದರೆ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ನಾವು ತಕ್ಷಣ ಬಹಳ ಮುಖ್ಯವಾಗಿ ಆಗಬೇಕಾಗಿರತಕ್ಕ ಈ ಕೆಲಸಕ್ಕೆ ಕೇಂದ್ರ ಸರ್ಕಾರದ ಮೇಲೆ ಮತ್ತು ಪ್ರಧಾನಮಂತ್ರಿಗಳ ಮೇಲೆ ಒತ್ತಾಯ ತಂದು

ಕೆಲವು ಸರ್ವೀಸ್‌ಗಳು ಏನಿವೆ ಬೆಂಗಳೂರು-ಯಲಹಂಕ, ಬೆಂಗಳೂರು-ರಾಮನಗರ ಎಲ್ಲೆಲ್ಲಿ ರೈಲ್ವೆ ಲೈನ್‌ಗಳು ಈಗಾಗಲೇ ಇವೆ ಅಲ್ಲಿ ಕೊನೆಯ ಪಕ್ಷ ಹೆಚ್ಚಿನ ರೈಲುಗಳನ್ನು ಓಡಿಸುವುದಕ್ಕೆ ಪ್ರಯತ್ನ ಮಾಡಿದರೆ ಸ್ವಲ್ಪ ಬಿ.ಟಿ.ಎಸ್.ಗೆ ಬರ್ಡನ್ ಕಡಿಮೆಯಾಗಬಹುದೆಂದು ನನ್ನ ಅಭಿಪ್ರಾಯ. ಅದಕ್ಕೆ ತಾವು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ.

ಇನ್ನು ಎಫಿಷಿಯನ್ಸಿ ಬಗ್ಗೆ ಒಂದು ಮಾತು ಹೇಳಬೇಕಾಗಿದೆ, ಇದು ಕಳೆದ ಎರಡು-ಮೂರು ವರ್ಷಗಳಲ್ಲಿ ಬಹಳ ಕಡಿಮೆಯಾಗುತ್ತಿದೆ. ಇದರ ಬಗ್ಗೆ ನಿಮಗೆ ವಯಸ್ಸಾಗಿದೆ ನೀವು ಹೋಗಿ ಅಲ್ಲಿ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ, ಅದು ನನಗೆ ಅರ್ಥವಾಗುತ್ತದೆ. ನಿಮ್ಮ ಎಂ.ಡಿ.ಯವರಿಗೂ ಹೋಗುವುದಕ್ಕೆ ಸಾಧ್ಯವಿಲ್ಲ, 98ಡಿಪೋಗಳಿವೆ. ಬೈಫರ್‌ಕೇಟ್ ಮಾಡಿದರೇನೇ ಇದು ಸಾಧ್ಯ. ಈಗ ಪ್ರತಿ ಡಿಪೋದಲ್ಲಿ ಅದೇನೋ ವಾಶಿಂಗ್ ಮೆಶಿನ್ಸ್ ನಾಲ್ಕು ತೆಗೆದುಕೊಳ್ಳಬೇಕು ಎಂದು ನೀವು ಹೇಳಿದ್ದೀರಿ. ಇದನ್ನು ಏಕೆ ತೆಗೆದುಕೊಂಡಿರೋ ಎಂದು ನನಗಂತೂ ಅರ್ಥವಾಗಲಿಲ್ಲ. ನಾನು ನಿಮ್ಮ ಬಗ್ಗೆ ಅಪಾದನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಈ ವಿಚಾರವನ್ನು ತಾವು ಕೇಳಬೇಕು. ನಿಮ್ಮ ಡಿಪೋಗಳಿಗೆ ವಾಶಿಂಗ್ ಮೆಶಿನ್ ಅಲ್ಲ ಬೇಕಾಗಿರುವುದು, ಡಿಪೋಗಳಲ್ಲಿ ಬೇಕಾಗಿರತಕ್ಕಂಥಾದ್ದು ವಾಶ್ ಮಾಡಲಿಕ್ಕೆ ಬೇಕಾಗಿರತಕ್ಕಂಥ ನೀರು. ಮೊದಲು 98 ಡಿಪೋಗಳಲ್ಲಿ 98 ಬೋರ್‌ವೆಲ್‌ಗಳನ್ನು ಹಾಕಿಸಬೇಕು.

SRI AZEEZ SAIT : With these automatic Washing Machines, you can clean the buses within two seconds. Where you have got less water, you have another automatic machine to re-cycle water. Even some times the borewells have failed. with these automatic machines, by re-cycling the water, with minimum water, we can wash the buses. This is the latest imported technology.

ಶ್ರೀ ಪಿ.ಜಿ.ಆರ್. ಸಿಂಧ್ಯ : ಹಿಂದೆ ಒಬ್ಬರು ಸಾರಿಗೆ ಮಂತ್ರಿಗಳಾಗಿದ್ದಾಗ ಬಸ್ಸುಗಳಲ್ಲಿನ ಈ ಸ್ಪೀಡ್ ಗವರ್ನಸ್ಸ್ ಹಾಕಬೇಕು ಎಂದು ಹೇಳಿ 40 ಲಕ್ಷ ರೂಪಾಯಿಗಳ Speed Governors ತರಿಸಿದ್ದರು. ಇದು ಸುಮಾರು ಹತ್ತು ವರ್ಷಗಳ ಹಿಂದೆ. ಈ Speed Governors ಅಲ್ಲಿ ಬಿದ್ದಿವೆ ಅಷ್ಟೆ. ಅದೇ ರೀತಿ ನಿಮ್ಮ Washing machines ಆಗುತ್ತವೆ. ಅದನ್ನು ದಯವಿಟ್ಟು ಬರೆದಿಟ್ಟುಕೊಳ್ಳಿ. Let it go on record. ಬಹಳ ಮುಖ್ಯವಾಗಿ ಬೇಕಾಗಿರುವುದು, ನಿಮ್ಮ ಡಿಪೋಗಳಲ್ಲಿ basic infrastructure ಇಲ್ಲ. Wiring ಇಲ್ಲ. ಬೋಲ್ಟ್ ಹೊಡೆಯುವುದಕ್ಕೆ ನಿಮ್ಮ ಹತ್ತಿರ ಮೆಶಿನ್ಸ್ ಇಲ್ಲ, ನನಗೆ ಗೊತ್ತಿದೆ. Cambring machine ಇಲ್ಲ, ನಮ್ಮ ಬಸ್ಸುಗಳು ರಸ್ತೆಗಳಲ್ಲಿ ಹೋಗಿಬಂದರೆ ಕೆಳಗೆ ಪ್ಲೇಟ್ ಇರುತ್ತವಲ್ಲ, ಅದನ್ನು ಸುತ್ತಿಗೆ ತೆಗೆದುಕೊಂಡು ಹೊಡೆಯಬೇಕು. ಅದಕ್ಕೆ ಒಂದು Cambring machines ಗಳನ್ನು ಅನೇಕ ಕಡೆ ಇಡುವುದಕ್ಕೆ ಆಗಿಲ್ಲ. ಆ ಪ್ಲೈನ್‌ಗಳು ಕಿತ್ತುಹೋಗಿಬಿಟ್ಟು ಶಾಕ್ ಹೊಡೆಯುತ್ತವೆ ಎಂದು ವರ್ಕರ್ ಹೇಳುತ್ತಾನೆ. ಅದಕ್ಕೆಲ್ಲಾ ಹತ್ತಿಪ್ಪತ್ತು ಸಾವಿರ ರೂಪಾಯಿ ಆಗುತ್ತದೆ. ನಾನು ಇದ್ದಾಗ ಅದಕ್ಕೆಲ್ಲಾ ಕಾರ್ಯಕ್ರಮ ತೆಗೆದುಕೊಂಡಿದ್ದೆವು. ಆದರೆ ಆ ಎಲ್ಲಾ ಕಾರ್ಯಕ್ರಮಗಳನ್ನು ಈಗ ನಿಲ್ಲಿಸಿಬಿಟ್ಟಿದ್ದಾರೆ. ಈ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡಬೇಕೆಂದು ಪ್ರಯತ್ನ ಪಟ್ಟರೆ, ಬೇಕಾಗಿರತಕ್ಕಂಥಾದ್ದು ನೀರು ಸಾಧ್ಯವಾದರೆ ಈ ಮೆಶಿನ್‌ಗಳನ್ನು ನೀವು ವಾಪಸ್ಸು ಕೊಟ್ಟುಬಿಡಿ. ನೀರೇ ಸಿಗುವುದಿಲ್ಲ ರೀಸೈಕಲ್ ಮಾಡಿಸುತ್ತೀರಿ. ನಾನು ಹಳ್ಳಿಯಿಂದ ಬಂದಿದ್ದೇನೆ, ನನಗೆ ಹೆಮ್ಮೆ ಇದೆ. ಅವುಗಳನ್ನು [illegible] ತೆಗೆದುಕೊಳ್ಳುವುದಕ್ಕೆ ಹೋದಿರಿ? ನನಗೆ ಗೊತ್ತಿದೆ ಆ ವಿಚಾರ. ಬಹಳ

ಮುಖ್ಯವಾಗಿ ಕೆ.ಎಸ್.ಆರ್.ಟಿ.ಸಿ. ಲಾಸ್ ಬಗ್ಗೆ ಎಲ್ಲರೂ, ಎಲ್ಲಾ Pilferage ಆಗುತ್ತದೆಂದು ಹೇಳುತ್ತಾರೆ ಫಿಲ್‌ಫರೇಜ್ ಆಗುತ್ತದೆ, ಇಲ್ಲವೆಂದು ನಾನು ಹೇಳುವುದಿಲ್ಲ. ಒಂದು 10 ಪರ್ಸೆಂಟ್ ಫಿಲ್‌ಫರೇಜ್ ಇದೆ. ನನಗೆ ಗೊತ್ತಿರುವ ಹಾಗೆ ಒಂದೂವರೆ ಕೋಟಿ ರೂಪಾಯಿ ಒಂದು ದಿವಸಕ್ಕೆ ಕಲೆಕ್ಷನ್ ಆದರೆ, ಒಂದು ವರ್ಷಕ್ಕೆ 450 ಕೋಟಿ ಆಗುತ್ತದೆ. 450 ಕೋಟಿಯಲ್ಲಿ 40-45 ಕೋಟಿ Pilferage ಇದೆ. ಆದರೆ ನಿಮ್ಮ checking percentage ಎಷ್ಟು? 2% of your total schedule.

ಅದನ್ನು ಜಾಸ್ತಿ ಮಾಡಿಸಬೇಕು. ಇದನ್ನು ಯಾವರೀತಿ ಮಾಡಿಸುತ್ತೀರಿ? ಇದರಲ್ಲಿ ನೀವು ಇಂಟರ್‌ಫಿಯರ್ ಆಗಬಾರದು. ನೀವು ಇಂಟರ್‌ಫಿಯರ್ ಆಗುವುದಕ್ಕೆ ಹೋದರೆ ಇದು ಸಾಧ್ಯವಿಲ್ಲ. ನಮ್ಮ ಹಳ್ಳಿಗಳಿಗೆ ಡಾಕ್ಟರ್‌ಗಳು ಬಂದಿಲ್ಲ ಎಂದು ಹೇಳಿದರೆ 'ಏನು ಮಾಡುವುದು, ರಾಜಕಾರಣದ ಒತ್ತಡ. ಅಲ್ಲಿ ಹಾಕಿಕೊಡಿ , ಇಲ್ಲಿ ಹಾಕಿಕೊಡಿ ಎಂದು ಹೇಳುತ್ತಾರೆ, ಅದಕ್ಕೋಸ್ಕರ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೆಲ್ತ್ ಮಿನಿಸ್ಟರವರು ಹೇಳುತ್ತಾರೆ. ಕೆ.ಎಸ್.ಆರ್.ಟಿ.ಸಿ.ಯಲ್ಲಿ ಒಂದು Independent checking squad ಮಾಡಿದರೆ,ಪ ಪ್ರತಿವರ್ಷ 45 ಕೋಟಿ ರೂಪಾಯಿಗಳನ್ನು ಉಳಿಸಬಹುದು. ಈ Disciplinary action ಬಗ್ಗೆ ಸ್ವಲ್ಪ ನಾನು ಹೇಳಬೇಕಾಗುತ್ತದೆ. ಇದರಲ್ಲಿ ಯಾವರೀತಿ ವ್ಯವಹಾರ ಕುದುರಿಸುತ್ತಾರೆ ಎನ್ನುವುದಕ್ಕೆ ತಮಗೆ ಒಂದು ಉದಾಹರಣೆಯನ್ನು ನಾನು ಹೇಳುತ್ತೇನೆ.

ಶ್ರೀ ಡಿ.ಎ. ಚಿನ್ನಪ್ಪ : ನೀವು ಚೆಕಿಂಗ್ ಸ್ಕ್ವಾಡ್ ಮಾಡಬೇಕೆಂದು ಹೇಳಿದಿರಿ, ನೀವೂ ಕೂಡ ಸಾರಿಗೆ ಮಂತ್ರಿಗಳಾಗಿದ್ದಿರಿ, ನಿಮ್ಮ ಕಾಲದಲ್ಲಿಯೇ ಮಾಡಬಹುದಿತ್ತಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಮ್ಮ ಕಾಲದಲ್ಲಿ ಕೆ.ಎಸ್.ಆರ್.ಟಿ.ಸಿ.ಗೆ ಏನು ಮಾಡಿದ್ದೇವೆ ಎನ್ನುವುದು ಸುವರ್ಣಯುಗ. ದಯಮಾಡಿ ನನ್ನ ಕಾಲ ಮಾತನಾಡಬೇಡಿ. ಇಲ್ಲಿ ಲಾಭ ಮುಖ್ಯವಲ್ಲ.

Facilities and amenities are important.

ಈ ಅಂಕಿಅಂಶ ಹೇಳುತ್ತಿದ್ದೇನೆ. ಇದು 1989-90ರ ವರದಿ. 1988-89ರಲ್ಲಿ ಸ್ವಲ್ಪ ದಿನ ನಾವೇ ಅಧಿಕಾರದಲ್ಲಿದ್ದೆವು.

Number of cases pending as on the last day of the previous year-10,500; Number of cases detected during the year 1988-89 - 53,000 ; total number of employees-55,000; number of cases detected 53,000; number of cases detected during the year 1988-89 - 60,161. So, from 1989-90, there were 50,000 to 60,000 cases each year; number of cases finalised-this is most important. I am not making any allegations. The point is about the dismissals, discharges and terminations,

ಒಂದು ವರ್ಷ 200, ಇನ್ನೊಂದು ವರ್ಷ 180, ಏಕೆ ಸ್ವಾಮಿ? ಯಾರು ನಿಮ್ಮನ್ನು ಡಿಸ್‌ಮಿಸ್ ಮಾಡಬೇಡಿ ಎಂದು ಹೇಳಿದರು, ಯಾರಾದರೂ ಕಾಗದ ಕೊಟ್ಟರೇ? ನಿಮ್ಮ ಅಧಿಕಾರಿಗಳನ್ನು ಕೇಳಿ. ನಮ್ಮ ಕಾಲದಲ್ಲಿ, ಅದು ಇವಿಯು ಒಂದು ಬೋರ್ಡನ್ನು ನನ್ನ ಆಫೀಸಿನಲ್ಲಿ ಹಾಕಿಸಿದೆ. ದಯಮಾಡಿ ರಾಜ್ಯದ ಹಿತದೃಷ್ಟಿಯಿಂದ ಯಾರೂ ಸಹಿತ ಡಿಸಿಪ್ಲಿನರಿ ವಿಷಯದಲ್ಲಿ ನನ್ನ ಹತ್ತಿರ ಬರಬೇಡಿ ಎಂದು ಹೇಳುತ್ತಾ ಇದ್ದೆ. ಆಗ ನನ್ನನ್ನು ದುರಹಂಕಾರದ ಮಂತ್ರಿ ಎಂದು ಹೇಳುತ್ತಿದ್ದರು. ಆದರೂ ಪರವಾಗಿಲ್ಲ ಎಂದು ಹೇಳುತ್ತಾ ಇದ್ದೆ. ಇವತ್ತು ಏನಾಗಿದೆ, 45 ಕೋಟಿ ರೂಪಾಯಿಗಳನ್ನು ಪ್ರತಿ ವರ್ಷವೂ [illegible]

ಅವರ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? 60 ಸಾವಿರ ಕೇಸುಗಳನ್ನು ಬುಕ್ ಮಾಡಿ, ಒಂದು ವರ್ಷ 211, ಜನ ಡಿಸ್‌ಮಿಸ್, ಇನ್ನೊಂದು ವರ್ಷ 180 ಜನ ಡಿಸ್‌ಮಿಸ್ ಮಾಡುತ್ತೀರಿ. ಸಸ್ಪೆಂಡ್ ಮಾಡಿರುವುದು ಒಂದು ವರ್ಷ 408, ಇನ್ನೊಂದು ವರ್ಷ 422. ಮತ್ತೆ ಫೈನ್ ಹಾಕಿದ್ದಾರೆ.

ಫೈನ್ ಅಮೌಂಟ್ ಇಲ್ಲಿ ಹೇಳುತ್ತಾ ಇಲ್ಲ, 9 ಸಾವಿರ ಜನಕ್ಕೆ ಒಂದು ವರ್ಷ ಫೈನ್ ಹಾಕಿದ್ದಾರೆ, ಇನ್ನೊಂದು ವರ್ಷ 600 ಜನಕ್ಕೆ ಹಾಕಿದ್ದಾರೆ. ಇನ್ನು ವಾರಂಟ್ ಒಂದು ವರ್ಷ 24 ಸಾವಿರ ಜನಕ್ಕೆ ವಾರನ್ ಮಾಡಿದ್ದಾರೆ, ಇನ್ನೊಂದು ವರ್ಷ 17 ಸಾವಿರ ಜನಕ್ಕೆ ವಾರನ್ ಮಾಡಿದ್ದಾರೆ. ಮತ್ತು ಅದರ ಪನಿಷ್‌ಮೆಂಟ್ ಎಂದು ಹೇಳುತ್ತಾರೆ. ಇದು ಏನೋ ನನಗೆ ಗೊತ್ತಿಲ್ಲ, ಅವರನ್ನು ಒಂಟಿ ಕಾಲಿನ ಮೇಲೆ ನಿಲ್ಲಿಸುತ್ತಾರೋ ಏನೋ? ಒಂದು ವರ್ಷ 24 ಸಾವಿರ ಜನಕ್ಕೆ, ಇನ್ನೊಂದು ವರ್ಷ 21 ಸಾವಿರ ಎಂದು ಹೇಳುತ್ತಾರೆ. ಅದರ್ ಫನಿಷ್‌ಮೆಂಟ್ ಎಂದರೆ ಏನು ಎನ್ನುವುದನ್ನು ತಾವು ಉತ್ತರ ಕೊಡುವಾಗ ಹೇಳಿ. ನಾನು ಏಕೆ ಹೇಳುತ್ತಿದ್ದೇನೆಂದರೆ, ನೀವು ಎಲ್ಲಾ ನೌಕರರ ಮೇಲೂ ಕೇಸ್ ಹಾಕಿಕೊಂಡು ಮತ್ತು ಒಬ್ಬ ನೌಕರನ ಮೇಲೆ 10-15 ಕೇಸ್ ಹಾಕಿ ಏಕೆ ಅಂತಹ ಕೇಸುಗಳನ್ನು ಬುಕ್ ಮಾಡಬೇಕು? ಏಕೆ ಮಾಡಬೇಕೆಂದರೆ, ಅವರಿಗೆ ವ್ಯವಹಾರ ಕುದುರಿಸಿಕೊಳ್ಳುವುದಕ್ಕೆ. ಒಬ್ಬ ಕಂಡಕ್ಟರ್ ಒಂದು ದಿವಸದಲ್ಲಿ 250 ರೂಪಾಯಿ ಉಳಿಸಿಕೊಂಡರೆ, ಮನೆಗೆ ಹೋಗುವ ವೇಳೆಗೆ ಅವನಿಗೆ ೫೦ ರೂಪಾಯಿ ಕೂಡ ಉಳಿಯುವುದಿಲ್ಲ. ಈ ಇನ್ನೂರು ರೂಪಾಯಿ ಯಾವ ಜನರಿಗೆ ಬರುತ್ತವೆ ಎನ್ನುವುದನ್ನು ನಾವು, ನೀವು ಕುಳಿತುಕೊಂಡು ಲೆಕ್ಕ ಹಾಕಬೇಕಾಗುತ್ತವೆ. ಅದು ನಿಮ್ಮ ಮಟ್ಟಕ್ಕೂ ಬರುವುದಿಲ್ಲ, ಎಂ.ಡಿ.ಮಟ್ಟಕ್ಕೂ ಬರುವುದಿಲ್ಲವೆಂಬುದು ಚೆನ್ನಾಗಿ ಗೊತ್ತಿದೆ. ಯಾವ ಯಾವ ಬಾರ್‌ಗಳಿಗೆ ಹೋಗುತ್ತದೆ, ಇವನ್ನು ನಿಲ್ಲಿಸಬೇಕಾಗುತ್ತವೆ. ಅದಕ್ಕಾಗಿಯೇ ನಾನು ಹೇಳುತ್ತೇನೆ.

ನಾನು ಒಂದೆ ಒಂದು ಕ್ರಮ ತೆಗೆದು ಕೊಳ್ಳಬೇಕೆಂದು ಇದ್ದೆ. ಈ ತರಹದ ಕೇಸುಗಳನ್ನು ಬುಕ್ ಮಾಡುವುದು ಬೇಡ. ಒಂದು ನಿಗದಿ ಮಾಡಿ, 50 ರೂಪಾಯಿ, ನೂರು - ರೂಪಾಯಿ ಆಗಿರತಕ್ಕಂಥವರಿಗೆ, 10 ವರ್ಷ ಅವನಿಗೆ ಖಾಯಂ ಮಾಡಬೇಡಿ. ಯಾರು ಪ್ರೊಬೇಷನರಿ ಅವಧಿಯಲ್ಲಿರುತ್ತಾರೆ, ಯಾರು ದುಡ್ಡು ಮಾಡಿದ್ದಾರೆ ಅವರನ್ನು ಕೆಲಸದಿಂದ ತೆಗೆಯತಕ್ಕ ಹೊಸ ಕಾನೂನನ್ನು ಮಾಡಬೇಕು. ಈ ಕಾನೂನು ಮಾಡುವುದಕ್ಕಾಗದೇ ಹೋದರೆ, ನೀವು ಅಧಿಕಾರಕ್ಕೆ ಬಂದರೆ ಎಷ್ಟೋ, ನಾವು ಅಧಿಕಾರಕ್ಕೆ ಬಂದರೂ ಅಷ್ಟೆ. ಏನೂ ಮಾಡುವುದಕ್ಕಾಗುವುದಿಲ್ಲ, ಇದರ ಬಗ್ಗೆ ತಾವು ಗಮನಕೊಡಬೇಕು. ಒಂದು ಒಳ್ಳೆಯ ಕೆಲಸ ಟೈರ್ ಮೈಲೇಜ್. 2-3 ಒಳ್ಳೆಯ ಕೆಲಸ ಮಾಡಿದ್ದಾರೆ. ನಮ್ಮ ಕಾರ್ಮಿಕರಿಗೆ ಮತ್ತು ನಮ್ಮ ಅಧಿಕಾರಿಗಳಿಗೆ ಒಪ್ಪಬಹುದು. ಈ ಟೈರ್ ಮೈಲೇಜ್ ವಿಚಾರದಲ್ಲಿ ನಮ್ಮ ಕೆ.ಎಸ್.ಆರ್.ಟಿ.ಸಿ. ಟೈರ್ ಒಂದು ಲಕ್ಷ ಕಿಲೋಮೀಟರ್ ಇತ್ತೀಚಿನ ದಿನಗಳಲ್ಲಿ ಓಡುತ್ತಿದೆ. ಸಂತೋಷ. ಡೀಸಲ್ ಕನ್‌ಸಂಪ್‌ಷನ್‌ನಲ್ಲೂ ಸ್ವಲ್ಪ ಇಂಪ್ರೂವ್ ಆಗಿದೆ. 4.5ರ ವರೆಗೂ ಬಂದಿದೆ. ಇನ್ನೂ 4.8 ಮತ್ತು 4.9 ರವರೆಗೂ ಹೋಗಬಹುದು. ಇವನ್ನೂ ನೀವು ಮಾಡಬೇಕು. ಎರಷ್ಟು ಇಂಪ್ರೂವ್ ಆದರೋ ಕೆ.ಎಸ್.ಆರ್.ಟಿ.ಸಿ.ಗೆ ಒಂದೂವರೆ ಕೋಟಿ ರೂಪಾಯಿಗಳು ಉಳಿಯುತ್ತವೆ. 5 ಎಂದು ಹೇಳಿದರೆ, ಕೊನೇಪಕ್ಷ 10 ಕೋಟಿ ರೂಪಾಯಿ ಉಳಿಸಬಹುದು.

ಇದರ ಕಡೆಗೆ ತಾವು ಪ್ರಯತ್ನ ಮಾಡಬೇಕೆನ್ನತಕ್ಕಂಥಾದ್ದು ನನ್ನ ಒಂದು ಒತ್ತಾಯ. ಮತ್ತು ಕ್ಯಾನ್ಸಲೇಷನ್ ಜಾಸ್ತಿಯಾಗಿ ಹೋಗಿದೆ. ಕ್ಯಾನ್ಸಲೇಷನ್ ಜಾಸ್ತಿಯಾಗಿರುವುದರಿಂದ, ಯಾರು ಪ್ಯಾಸೆಂಜರ್ಸ್ ನಿಮ್ಮ ಬಸ್‌ಗೆ ಬರಬೇಕೆಂದಿರುತ್ತಾರೆ ಅವರು ಬೇರೆ ಮೋಡ್

ಆಫ್ ಟ್ರಾನ್ಸ್‌ಪೋರ್ಟ್‌ಗೆ ಹೋಗಬೇಕಾಗುತ್ತದೆ. ಅವರು ಹೇಗೆ ನಿಮ್ಮ ಕಡೆ ಬರುವುದಕ್ಕೆ ಆಗುತ್ತದೆ. ಆದಷ್ಟು ಈ ಪಂಕೂಚಯಾಲಿಟಿ ಕಡೆ ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಈ ಕಂಡಕ್ಟರ್ಸ್ ರೂಟ್ ಅಲಾಟ್‌ಮೆಂಟ್ ಇದೆಯಲ್ಲಿ ಇದನ್ನು ನೀವು ರೊಟೇಷನ್ ಮಾಡಲೇಬೇಕು. There will bee a understanding between the passengers and the conductors.

ಪ್ಯಾಸೆಂಜರ್ ಕಂಡಕ್ಟರ್‌ನ ಮುಖ ನೋಡಿಬಿಟ್ಟ ಎಂದರೆ ಅವನು ಟಿಕೆಟ್ ಕೇಳುವುದಿಲ್ಲ, ಇವನು ಟಿಕೆಟ್ ಕೊಡುವುದಿಲ್ಲ. ಇದರಲ್ಲಿ ಪ್ಯಾಸೆಂಜರ್‌ಗೂ ಕಂಡಕ್ಟರರೂ ಒಂದು ಅಂಡರ್‌ಸ್ಟ್ಯಾಂಡಿಂಗ್ ಇರುತ್ತದೆ. ಅದಕ್ಕೆ ಏನು ಮಾಡಬೇಕೆಂದರೆ, ರೋಟೇಟ್ ಮಾಡಬೇಕು. ಲಾಂಗ್ ರೂಟ್ ಇರುವ ಕಡೆ ರೂಟೇಟ್ ಮಾಡಬೇಕಾದರೆ, ನಿಮ್ಮ ಆಫೀಸರ್ಸ್ ಆನೆಸ್ಟ್ ಆಗಿರಬೇಕು. ರೋಟೇಟ್ ಮಾಡಲಿಲ್ಲ ಎಂದರೆ ನೀನು ಏತಕ್ಕೆ ರೋಟೇಟ್ ಮಾಡಲಿಲ್ಲ ಎಂದು ಡಿಪ್ಪೋ ಮ್ಯಾನೇಜರ್ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕು. ಇದನ್ನು ಮಾಡದೇ ಹೋದರೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ನಿಮ್ಮ ಡಿಪ್ಪೋ ಮ್ಯಾನೇಜರ್‌ಗೆ ಮೊದಲು ಒಂದು ವೆಹಿಕಲ್ ಕೊಡಿರಿ. ಅದು ಬಹಳ ಮುಖ್ಯ. ನಿಮ್ಮ ಡಿವಿಜನಲ್ ಕಂಟ್ರೋಲರ್, ಡಿ.ಟಿ.ಓ.ಗೆ ವೆಹಿಕಲ್ ಕೊಟ್ಟಿದ್ದೀರಿ, ಅಟ್ ಲೀಸ್ಟ್ ಈ ಡಿಪ್ಪೋ ಮ್ಯಾನೇಜರ್ಸ್‌ಗೆ ಒಂದು ಮೋಟಾರ್ ಸೈಕಲ್‌ನ್ನಾದರೂ ಕೊಡಿರಿ. ಅವನು ಒಂದು ತಾಲ್ಲೂಕು, ಎರಡು ತಾಲ್ಲೋಕು ಕೆಲವು ಕಡೆ ಮೂರು ತಾಲ್ಲೋಕುಗಳನ್ನು ಕವರ್ ಮಾಡಬೇಕು. ಆಕ್ಸಿಡೆಂಟ್ ಆದ ತಕ್ಷಣ ಅಲ್ಲಿಗೆ ಹೋಗಬೇಕೆಂದರೆ ಹೇಗೆ ಹೋಗುತ್ತಾನೆ? ಒಂದು ಬಸ್ಸನ್ನೇ ತೆಗೆದುಕೊಂಡು ಹೊರಟು ಹೋಗುತ್ತಾನೆ.

ನಾನು ಒಂದು ಸಲ review ಮಾಡುವಾಗ ಒಂದು ಮೀಟಿಂಗ್ ಮಡಿಕೇರಿಯಲ್ಲಿ ಕರೆದಿದ್ದೆ. ಮಂತ್ರಿಗಳು ಬಂದಿದ್ದಾರೆ, ಬರಬೇಕು ಎಂದರೆ, ಆ ಡಿಪ್ಪೋ ಮ್ಯಾನೇಜರ್ ಒಂದು ಬಸ್‌ನಲ್ಲೇ ಬಂದು ಬಿಟ್ಟ. ಏತಕ್ಕೆ ಬಸ್‌ನಲ್ಲಿ ಬಂದೆ ಎಂದರೆ ನಮಗೆ ವೆಹಿಕಲ್ ಕೊಟ್ಟಿಲ್ಲ, ಅದಕ್ಕೋಸ್ಕರ ಬಸ್‌ನಲ್ಲಿ ಬಂದಿದ್ದೇನೆ ಎಂದು ಹೇಳಿದ. ದಯವಿಟ್ಟು ವೆಹಿಕಲ್‌ನ್ನು ಅವರಿಗೆ ಪ್ರೊವಾಯ್ಡ್ ಮಾಡಬೇಕು. ಬಿ.ಟಿ.ಎಸ್. ಬಗ್ಗೆ ವರ್ಲ್ಡ್ ಬ್ಯಾಂಕ್ ಪ್ರಾಜೆಕ್ಟನ್ನು ಆದಷ್ಟು ಬೇಗ ಇಂಪ್ಲಿಮೆಂಟ್ ಮಾಡಬೇಕು. ನಮಗೆ ಸಪರೇಟ್ ಮೋಡ್ ಆ ಟ್ರಾನ್ಸಪೋರ್ಟ್ ಮಾಡಲಿಕ್ಕೆ ತಾವು ಪ್ರಯತ್ನ ಮಾಡುವುದರ ಜೊತೆಗೆ ಕೆಂಗೇರಿಯಲ್ಲಿ ನಾವು ಒಂದು ಪ್ರಾಪರ್ಟಿ ತೆಗೆದುಕೊಂಡಿದ್ದೇವೆ. ಅಲ್ಲಿ ಕೊಳೆಯುತ್ತಾ ಬಿದ್ದಿರತಕ್ಕಂಥ ಸ್ಕ್ಯಾಪ್‌ನ್ನೆಲ್ಲಾ ಆಕ್ಷನ್‌ನಲ್ಲಿ ಮಾರಾಟ ಮಾಡುತ್ತಿದ್ದೀರಿ ಎಂದು ಕೇಳಿದ್ದೇನೆ. ತುಂಬಾ ಸಂತೋಷ. ನಾವು ಬಹಳ ಕಷ್ಟಪಟ್ಟು ಆ ಪ್ರಾಪರ್ಟಿ ತೆಗೆದು ಕೊಂಡಿದ್ದೇವೆ. ಯಾವ ಉದ್ದೇಶದಿಂದ ತೆಗೆದುಕೊಂಡಿದ್ದು ಎಂದರೆ, ಇಲ್ಲಿರತಕ್ಕಂಥ ರೀಜನಲ್ ವರ್ಕ್‌ಶಾಪ್‌ನ್ನು ಅಲ್ಲಿಗೆ ಷಿಫ್ಟ್ ಮಾಡಬೇಕು. ಇನ್ನೂ ಒಂದು ನಾಲ್ಕೈದು ಡಿಪ್ಪೋ ಮಾಡಬೇಕೆಂದು ತೆಗೆದುಕೊಂಡಿದ್ದು. ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಎಂದು ಅರ್ಥ ಆಗುವುದಿಲ್ಲ. ಮಂತ್ರಿಗಳೇ ಬೇಕೇ ಇದನ್ನು ಹೇಳುವುದಕ್ಕೆ. ನಾನು ಹೋದಮೇಲೆ ನಾಲ್ಕು ವರ್ಷ ಆಯಿತು. ಆ ಪ್ರಾಪರ್ಟಿ ಹಾಗೇ ಬಿದ್ದಿದೆ. ಒಂದುಕೋಟಿ ಇನ್‌ವೆಸ್ಟ್‌ಮೆಂಟ್ ಮಾಡಿರುತ್ತೇವೆ. 25 ಎಕರೆ ಜಮೀನು ಇದೆ ಒಳ್ಳೆಯ ಬಿಲ್ಡಿಂಗ್ ಇದೆ. ಏತಕ್ಕೆ ಅಲ್ಲಿಗೆ ಷಿಫ್ಟ್ ಮಾಡಬಾರದು? ತಕ್ಷಣ ಶಾಂತಿನಗರದಲ್ಲಿರುವ ರೀಜನಲ್ ವರ್ಕ್‌ಷಾಪ್, ಸೆಂಟ್ರಲ್ ವರ್ಕ್‌ಷಾಪ್ಗಳನ್ನು ಇಮ್ಮಿಡಿಯಟ್ ಆಗಿ ಷಿಫ್ಟ್ ಮಾಡಿರಿ. ತಕ್ಷಣ ಈ ಕೆಲಸ ಪ್ರಾರಂಭ ಮಾಡಬೇಕು. ಆ ಉದ್ದೇಶದಿಂದಲೇ ಇದನ್ನು ತೆಗೆದುಕೊಂಡಿದ್ದುದು. ಅದನ್ನು ನೀವು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಸಿವಿಲ್ ಎಂಜಿನಿಯರಿಂಗ್ [illegible]

ಬಸ್‌ಸ್ಟಾಂಡ್‌ನಲ್ಲಿ ವಾಸನೆ ಇದೆ ನೀರಿಲ್ಲ, ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಮಾನ್ಯ ಸದಸ್ಯರುಗಳು ಹೇಳಬಹುದು. ಅದರ ಪರಿಸ್ಥಿತಿ ನೀವೇ ಹೋಗಿ ನೋಡಿದ್ದೀರಿ ಏನಾಗಿದೆ ಎಂದು. ಹೋಟೆಲ್‌ಗಳದ್ದೂ ಅಷ್ಟೇ. ಅಲ್ಲಿ ಮಾತ್ರ ತಿಂಡಿ ತಿನ್ನುವುದಕ್ಕೆ ಆಗುವುದಿಲ್ಲ. ನಾವು ಎಷ್ಟೋ ಪ್ರಯತ್ನ ಮಾಡಿದ್ದೆವು, ಆದರೆ ಅವರು ಹೇಗೋ ನುಸುಳಿಕೊಂಡು ಬಂದು ಕಂಟ್ರಾಕ್ಟ್ ತೆಗೆದುಕೊಳ್ಳುತ್ತಾರೆ. ಈಗಿರತಕ್ಕ ಸಿಸ್ಟಮ್ ಅಬಾಲಿಷ್ ಮಾಡುವುದಕ್ಕೆ ಪ್ರಯತ್ನ ಮಾಡಿ. ದಯವಿಟ್ಟು ಹೆದರಬೇಡಿ. ಅಜೀಜ್‌ಸೇಠ್‌ರವರು ದುಡ್ಡು ತೆಗೆದುಕೊಂಡು ಬಿಟ್ಟಿದ್ದಾರೆ ಎಂದು ಯಾರೂ ಹೇಳುವುದಕ್ಕೆ ಆಗುವುದಿಲ್ಲ. ಬಹಳ ಸ್ಟ್ರಿಕ್ಟ್ ಆಗಿ ಒಳ್ಳೆಯ ಫುಡ್ ಕೊಡಿಸುವ ವ್ಯವಸ್ಥೆ ಮಾಡಿ. ಬಸ್‌ಸ್ಟ್ಯಾಂಡನಲ್ಲಿ ಚೀಟಿಂಗ್ ಆಗುತ್ತಿದೆ. ಯಾರು ಒಳ್ಳೆಯ ಊಟ ಕೊಡುತ್ತಾರೆ, ಒಳ್ಳೆಯ ತಿಂಡಿ ಕೊಡುತ್ತಾರೆ ಅವನಿಗೆ ನೀವು ಒಂದು ವರ್ಷಕ್ಕೆ ಕೊಡಿ. ಮ್ಯಾನೇಜಿಂಗ್ ಡೈರೆಕ್ಟರ್ ಹೇಳಿದವರಿಗೆ ಕೊಡುವಂಥ ಪವರ್ಸ್ ಮಾಡಿಕೊಳ್ಳಿ. ಇರತಕ್ಕಂಥ ರೂಲ್ಸ್‌ನ್ನು ಸಂಪೂರ್ಣವಾಗಿ ಚೇಂಜ್ ಮಾಡಿ. ಇಲ್ಲದೇ ಹೋದರೆ ಒಳ್ಳೆಯ ಫುಡ್‌ನ್ನು ಬಸ್ ಸಟ್ಟ್ಯಾಂಡ್‌ನಲ್ಲಿ ಕೊಡುವುದಕ್ಕೆ ಆಗುವುದಿಲ್ಲ. ಯಾವುದೋ ಒಂದು ಕಾನೂನು ಇಟ್ಟುಕೊಂಡು ಹೆದರಿಕೊಂಡು ಕೊಡುವ ಅವಶ್ಯಕತೆ ಇಲ್ಲ ಎಂದು ಹೇಳುತ್ತೇನೆ.

ಶ್ರೀ ಅಜೀಜ್ ಸೇಠ್ : ಯಾವುತ್ತೂ ಹೆದರುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಹೆದರುವುದಿಲ್ಲವೇ ಒಳ್ಳೆಯದು. ಆಮೇಲೆ ಪಾಸಸ್ ವಿಚಾರ. ಮಾತೆತ್ತಿದರೆ ಇದಕ್ಕೆ 75 ಕೋಟಿ ರೂಪಾಯಿ ಖರ್ಚಾಗುತ್ತದೆ, ಅದಕ್ಕೋಸ್ಕರ ಪಾಸ್‌ಗಳನ್ನು ನಿಲ್ಲಿಸಬೇಕೆಂದು ಹೇಳುತ್ತಿದ್ದೀರಿ. ನಾನು ಇದನ್ನು ಒಪ್ಪುವುದಿಲ್ಲ. ಫಸ್ಟ್ ಆಫ್ ಆಲ್ ಈ 75 ಕೋಟಿ ರೂಪಾಯಿ ಫಿಗರ್ರೆ ತಪ್ಪು. ನಮ್ಮ ಕಾಲದಲ್ಲಿ ಮಾನ್ಯ ಹೆಗ್ಗಡೆಯವರು ಮುಖ್ಯ ಮಂತ್ರಿಗಳಾಗಿದ್ದಾಗ ಈ ಪಾಸಸ್ ಕೊಡುವ ಕಾರ್ಯಕ್ರಮ ಇಂಟ್ರಡ್ಯೂಸ್ ಮಾಡಲಾಯಿತು. ನಾವು ಇದನ್ನು ಮಾಡಬೇಕಾಗುತ್ತದೆ. ವಿದ್ಯಾರ್ಥಿಗಳಿಗೆ ಪಾಸ್ ಕೊಡುವುದಿಲ್ಲ ಎಂದರೆ ಇನ್ನು ಯಾರಿಗೆ ಕೊಡುತ್ತೀರಿ?

1.45 ಪಿ.ಎಂ.

ವಿದ್ಯಾರ್ಥಿಗಳಿಗೆ ಪಾಸ್ ಕೊಡುವುದಿಲ್ಲವೆಂದು ಹೇಳಿದರೆ, ಇನ್ಯಾರಿಗೆ ಕೊಡುತ್ತೀರಿ? ಅವರೇನು ಬೇರೆ ರಾಜ್ಯದ ವಿದ್ಯಾರ್ಥಿಗಳೇ, ಕಾಲೇಜಿಗೆ ಹೋಗುವವರಿಗೆ ಕೊಡುತ್ತೀರಿ. ಇಷ್ಯೂ ಮಾಡತಕ್ಕ ಮೆಥೆಡ್‌ನಲ್ಲಿ ಸ್ವಲ್ಪ ತೊಂದರೆ ಆಗಬಹುದು. ಅಲ್ಲಿ ಪಿಲ್‌ಫರೇಜ್ ಇಲ್ಲದೇ ಇರುವಹಾಗೆ ಕ್ರಮ ತೆಗೆದುಕೊಳ್ಳಿ. ಮಾತೆತ್ತಿದರೆ, ನಮಗೆ 75 ಕೋಟ್ ರೂಪಾಯಿ ಖರ್ಚಾಗುತ್ತದೆ ಎಂದು ಹೇಳುತ್ತೀರಿ. ನಾನು ಕೇಳುತ್ತಿದ್ದೇನೆ, ನಿಮ್ಮಲ್ಲಿ 55 ಸಾವಿರ ಜನ ನೌಕರರು ಇದ್ದಾರೆ, ಅವರಿಗೆ ಪಾಸ್ ಕೊಟ್ಟಿಲ್ಲವೇ? ಪುಕ್ಕಟೆಯಾಗಿ, ಕೆ.ಎಸ್.ಆರ್.ಟಿ.ಸಿ. ಬಸ್ ಎಲ್ಲಿ ಹೋಗುತ್ತದೆ, ಅಲ್ಲಿಗೆ ಹೋಗುವುದಿಲ್ಲವೇ? ಅದಕ್ಕೆ ಎಷ್ಟು ಖರ್ಚಾಗುತ್ತದೆ, ಇದನ್ನು ಸಾರ್ವಜನಿಕರು ಏನಾದರೂ ಕೇಳಿದ್ದಾರೆಯೇ? ಅದರ ಕಡೆ ಏಕೆ ಗಮನಕೊಡುತ್ತೀರಿ? ಇನ್ನೊಂದು ನನಗೆ ಬಹಳ ದುಃಖವಾಯಿತು. ನಮ್ಮ ರಾಜ್ಯದಲ್ಲಿ ಅಂಧರಿಗೆ, ಕುರುಡರಿಗೆ ಬಸ್ಸಿನಲ್ಲಿ ಹೋಗತಕ್ಕ ಪಾಸ್ ವ್ಯವಸ್ಥೆ ಮಾಡಿತ್ತು. ನಮ್ಮ ರಾಜ್ಯದಲ್ಲಿ ಅಷ್ಟೇ ಅಲ್ಲ, ಬೆಂಗಳೂರಿನ ಅಂಧರ ಸಂಸ್ಥೆಯವರು ರಾಷ್ಟ್ರಪ್ರಶಸ್ತಿಯನ್ನೂ ಪಡೆದಿದ್ದಾರೆ. ರಮಣ ಮಹರ್ಷಿ ಸ್ಕೂಲ್ ಫಾರ್ ಅಕಾಡೆಮಿ ಎಂದು ಇದೆ. ರಮಣ ಮಹರ್ಷಿಗಳ ಹೆಸರಿನಲ್ಲಿರತಕ್ಕ ಸಂಸ್ಥೆಯವರು ಈ ರಾಷ್ಟ್ರದಲ್ಲಿ ಬಹಳ ಉತ್ಕೃಷ್ಟವಾದ ಕೆಲಸವನ್ನು ಮಾಡುತ್ತಿದ್ದಾರೆ. ಕಳೆದ ಸಾರಿ ಇವರಿಗೆ ರಾಷ್ಟ್ರಪ್ರಶಸ್ತಿಯೂ ಬಂತು. ಯಾರು ಅಂಧರು, ಯಾರೂ ಅಂಧರಲ್ಲ ಎಂದು ಇವರು ಸರ್ಟಿಫಿಕೇಟ್ ಕೊಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಏನಾಗುತ್ತಿದೆ ಎಂದರೆ, ಕಳೆದ 5-6 ತಿಂಗಳಲ್ಲಿ ಇವರಿಗೆ ಪಾಸ್ ಕೊಡುವುದರಲ್ಲಿ ಸ್ವಲ್ಪ ತೊಂದರೆಯಾಗುತ್ತಿದೆ. ಇದರ ಕಡೆ ಗಮನಕೊಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ಒತ್ತಾಯ ಮಾಡಿ, ಯಾವುದೇ

ಕಾರಣದಿಂದಲೂ ಸಹಿತ ಈ ಬಸ್ ಪಾಸ್‌ಗಳನ್ನು ತಾವು ಕಡಿಮೆ ಮಾಡುವುದಾಗಲೀ ಅಥವಾ ನಿಲ್ಲಿಸತಕ್ಕ ಕ್ರಮವಾಗಲೀ ಮಾಡಬಾರದೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಮತ್ತೆ ರೆಕ್ರೂಟ್‌ಮೆಂಟ್ ವಿಚಾರ. ಮೊನ್ನೆ ದಿನ ವಿಧಾನಸೌಧದಿಂದ ಹೋಗುವಾಗ ನಿಮ್ಮ ಅಧಿಕಾರಿಗಳು ಸಿಕ್ಕಿದರು. ನಾನು ಅವರನ್ನು ಏತಕ್ಕೆ ಬಂದಿದ್ದೀರಿ ಎಂದು ಕೇಳಿದೆ. ಅದಕ್ಕೆ ಅವರು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರ ಹತ್ತಿರ ಬಂದಿದ್ದೇವೆಂದು ಹೇಳಿದರು. ಏತಕ್ಕೆ ಬಂದಿದ್ದಿರಿ ಎಂದು ಕೇಳಿದ್ದಕ್ಕೆ, 600-800 ಕ್ಲರ್ಕ್‌ಗಳನ್ನು ರೆಕ್ರೂಟ್ ಮಾಡಿಕೊಳ್ಳಬೇಕಾಗಿದೆ, ಅದಕ್ಕೋಸ್ಕರ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರ ಒಪ್ಪಿಗೆ ತೆಗೆದುಕೊಳ್ಳಬೇಕಾಗಿತ್ತು, ಅದಕ್ಕಾಗಿ ಬಂದಿದ್ದೇವೆಂದು ಹೇಳಿದರು. ನಾನು ಹೇಳುತ್ತೇನೆ, ನಿಮಗೆ ಕರ್ಕ್‌ಗಳು ಏಕೆ ಬೇಕು, ನಿಮಗೆ ಬೇಕಾಗಿರುವುದು ಕಂಡಕ್ಟರುಗಳು, ಡ್ರೈವರುಗಳು ಮತ್ತು ಮೆಕಾನಿಕ್‌ಗಳು ಬಹಳ ಮುಖ್ಯವಾಗಿ ಬೇಕಾಗಿರತಕ್ಕಂತಾದ್ದು. ಆದಷ್ಟು ಬೇಗ ಈ ವೇಕೆನ್ಸಿಯನ್ನು ಭರ್ತಿ ಮಾಡಿ, ಇದನ್ನು ಮಾಡುವಾಗ ನನಗೆ ಕೇಳಿಬಂತು. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಈಗ ಅಮೆಂಡ್‌ಮೆಂಟ್ ಮಾಡಿದ್ದಾರೆ, ಮಾಡಿ, ಒಂದು ಒಳ್ಳೆಯ ಪದ್ಧತಿಯನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ನಡೆಯುತ್ತಿದೆ ಇದನ್ನು ತಾವು ಒಪ್ಪುತ್ತಾ ಇಲ್ಲವೆಂದು ನನಗೆ ತಿಳಿದು ಬಂದಿದೆ. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ಪಾಲಿಸಿಗೆ ಮಾಡಿರತಕ್ಕ ಅಮೆಂಡ್‌ಮೆಂಟ್‌ಗೆ ತಾವು ಒಪ್ಪದೇ, ನಾನ್ ಅಫಿಷಿಯಲ್ಸ್‌ನ್ನು ರೆಕ್ರೂಟ್‌ಮೆಂಟ್‌ನಲ್ಲಿ ಹಾಕಿ, ತಾವು ಆರು ಸಾವಿರ ಜನ ಕ್ಲರ್ಕ್‌ಗಳನ್ನು ತೆಗೆದುಕೊಳ್ಳಬೇಕೆಂಬ ಪ್ರಯತ್ನ ಮಾಡುತ್ತಿದ್ದೀರೆಂದು ತಿಳಿದು ಬಂದಿದೆ. ನಾನು ನಿಮಗೆ ಒತ್ತಾಯಪೂರ್ವಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ತಾವು ಸ್ವಲ್ಪ ದಿನ ಇರುತ್ತೀರಿ ಅನಂತರ ಹೋಗುತ್ತೀರಿ. ಆಮೇಲೆ ಮತ್ತೊಬ್ಬರು ಬರುತ್ತಾರೆ. ಇದು ಮುಖ್ಯವಲ್ಲ, ಇದು ಒಂದು ದೊಡ್ಡ ಸಂಸ್ಥೆ, ಮಿನಿ ಗವರ್ನಮೆಂಟ್ ಇದ್ದಹಾಗೆ. ಅಲ್ಲಿ ಒಂದು ವ್ಯವಸ್ಥೆ ಇರಬೇಕಾಗುತ್ತದೆ. ಅಲ್ಲಿ ಒಂದು ರೆಕ್ರೂಟ್‌ಮೆಂಟ್ ಬೋರ್ಡ್ ಮಾಡಿ ಬ್ಯಾಂಕಿಂಗ್ ಸರ್ವೀಸ್ ಕಮೀಷನ್‌ನಲ್ಲಿ ಇದ್ದಹಾಗೆ, ಒಂದು ರೆಕ್ರೂಟ್‌ಮೆಂಟ್ ಬೋರ್ಡ್ ಮಾಡಿ. ಆ ಬೋರ್ಡ್‌ನಲ್ಲಿ ಇಂಟಿಗ್ರಿಟಿ ಇರತಕ್ಕಂಥ ಇಬ್ಬರು ಅಥವಾ ನಾಲ್ಕು ಜನ ನಾನ್ ಅಫಿಷಿಯಲ್ಸ್‌ನ್ನೂ ಹಾಕಿ, ಬೇಡ ಎಂದು ಹೇಳುವುದಿಲ್ಲ, ಅದರ ಬದಲು ಒಂದೊಂದು ವಿಭಾಗಕ್ಕೂ ಒಂದೊಂದು ರೆಕ್ರೂಟ್‌ಮೆಂಟ್ ಮಾಡುತ್ತೇವೆ, ನಮ್ಮ ಪಾರ್ಟಿಯವರನ್ನೂ ಹಾಕುತ್ತೇವೆ, ನಿಮ್ಮ ಪಾರ್ಟಿಯವರನ್ನೂ ಹಾಕುತ್ತೇವೆಂದು ಹೇಳಿದರೆ, ನಿಮ್ಮ ಹೆಸರನ್ನು ಹರಾಜು ಹಾಕುತ್ತಾರೆ ಎನ್ನುವುದನ್ನು ತಾವು ದಯವಿಟ್ಟು ಜ್ಞಾಪಕದಲ್ಲಿಟ್ಟು ಕೊಳ್ಳಬೇಕು. ಯಾವುದೇ ಕಾರಣದಿಂದಲೂ ಸಹಿತ ಈ ಕೆಲಸವನ್ನು ಮಾಡುವುದಕ್ಕೆ ನೀವು ಹೋಗಬಾರದು ಎಂದು ನಾನು ಒತ್ತಾಯ ಮಾಡುತ್ತೇನೆ. ಈಗ ಏನು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ಸ್‌ನ್ನು ಅಮೆಂಡ್‌ಮೆಂಟ್ ಮಾಡಿದ್ದಾರೆ, ಅದರ ಪ್ರಕಾರವಾಗಿಯೇ ತಾವು ಕೆಲಸ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮತ್ತೊಂದು ವಿಚಾರ, ಈ ಸಾರಿಗೆ ಸಂಸ್ಥೆಯಲ್ಲಿ ಇರತಕ್ಕ 55 ಸಾವಿರ ನೌಕರರಲ್ಲಿ ಬಹಳ ಹೆಚ್ಚಿಗೆ ಇರತಕ್ಕಂಥವರು ಹೆಲ್ಪರ್ಸ್ ಮೆಕಾನಿಕ್ಸ್, ಕಂಡಕ್ಟರುಗಳು ಮತ್ತು ಡ್ರೈವರುಗಳು. ಈ ಕೆಟಗರಿಯಲ್ಲಿ ನಿಮಗೆ ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಸಿಗುವುದಿಲ್ಲವೇ? I was the only Minister who ordered for special recruitment of SC/STs in KSRTC but still it is only 9%. ಎಸ್.ಸಿ. ನೌಕರರು 9ಪರ್ಸೆಂಟ್, ಎಸ್.ಟಿ.ನೌಕರರು 1 ಪರ್ಸೆಂಟ್, ಒಟ್ಟು 10 ಪರ್ಸೆಂಟ್ ಇದ್ದಾರೆ. ಈಗ ಏಕೆ ಸ್ಪೆಷಲ್ ರೆಕ್ರೂಟ್‌ಮೆಂಟ್ ಎಸ್.ಸಿ.ಗಳಿಗೆ ನಿಲ್ಲಿಸಿದ್ದೀರಿ. ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡಿ. 6 ಸಾವಿರ ಜನ ಕಂಡಕ್ಟರುಗಳ, ಡ್ರೈವರುಗಳ ವೇಕೆನ್ಸಿ ಇದೆ. ತಾವು ತಿಳಿದುಕೊಳ್ಳಬೇಕು.

ನಾನು ಸಮಾಜ ಕಲ್ಯಾಣ ಮಂತ್ರಿಯಾಗಿದ್ದಾಗ, ಸಮಾಜ ಕಲ್ಯಾಣ ಇಲಾಖೆಯಿಂದ,

3 ಸಾವಿರ ಜನ ಎಸ್.ಸಿ. ಡ್ರೈವರುಗಳಿಗೆ ಟ್ರೈನಿಂಗ್ ಕೊಡುವುದಕ್ಕೆ ಪ್ರಯತ್ನ ಮಾಡಿದ್ದೆ. ಈ ಬಗ್ಗೆ ಒಂದು ಸ್ಕೀಮ್ ಮಾಡಿದ್ದೆ. ಎಸ್.ಸಿ. ಮತ್ತು ಎಸ್.ಟಿ. ಕಾರ್ಪೊರೇಷನ್‌ನವರಿಗೆ ಹೇಳಿದ್ದೆ, 25 ಲಕ್ಷ ದುಡ್ಡೂ ಕೊಟ್ಟಿದ್ದರು. ನಮ್ಮಲ್ಲಿ ಒಳ್ಳೆಯ ಡ್ರೈವಿಂಗ್ ಸೆಂಟರ್ಸ್ ಇದೆ. ಹುಮ್ನಾಬಾದ್‌ನಲ್ಲಿ, ಬಳ್ಳಾರಿಯಲ್ಲಿ ಇದೆ, ಇನ್‌ಫ್ರಾಸ್ಟ್ರಕ್ಚರ್ ಇದೆ ಎಸ್‌ಸಿ ಡ್ರೈವರ್ಸ್ ಸಿಕ್ಕದೇಹೋದರೆ, ಹರಿಜನ ಮಕ್ಕಳನ್ನು ಕರೆದುಕೊಂಡು ಹೋಗಿ ಡ್ರೈವಿಂಗ್ ತರಬೇತಿ ಕೊಡಿ.

ಅದು ಮಾಡುತ್ತೇವೆ, ಇದು ಮಾಡುತ್ತೇವೆಂದು ಇಷ್ಟೆಲ್ಲಾ ಹೇಳುತ್ತೀರಲ್ಲ ಇದನ್ನು ಏಕೆ ಮಾಡುವುದಕ್ಕಾಗಲಿಲ್ಲ, ಇದರ ಬಗ್ಗೆ ಯೋಚನೆ ಏಕೆ ನೀವು ಮಾಡುವುದಿಲ್ಲ? I urge upon this Government that special recruitment should be done.

ಸ್ಪೆಷಲ್ ರಿಕ್ರೂಟ್‌ಮೆಂಟ್ ಮಾಡಿ ಎಸ್.ಸಿ., ಎಸ್.ಟಿ.ಗೆ ಇದು ಒಂದು ಒಳ್ಳೆಯ ಅವಕಾಶ. 6 ಸಾವಿರ ವೇಕೆನ್ಸೀಸ್ ಇವೆ. ಅನೇಕ ಕಡೆ ಕ್ಯಾನ್ಸಲೇಷನ್ ಹೆಚ್ಚಾಗುತ್ತಿದೆ ಕಂಡಕ್ಟರುಗಳಿಲ್ಲ, ಡ್ರೈವರುಗಳು ಇಲ್ಲವೆಂದು ಹೇಳಿ ಬಸ್‌ಗಳನ್ನು ನಿಲ್ಲಿಸುತ್ತಿದ್ದಾರೆ. ತಾವು ದಯವಿಟ್ಟು ಈ ರಿಕ್ರೂಟ್‌ಮೆಂಟ್‌ನ್ನು ಆದಷ್ಟು ಬೇಗ ಮುಗಿಸಬೇಕೆಂದು ಹೇಳಿ ನಾನು ಒತ್ತಾಯ ಮಾಡುತ್ತೇನೆ. ಕೇಡರ್ ರಿಕ್ರೂಟ್‌ಮೆಂಟ್ ರೂಲ್ಸ್‌ನಲ್ಲಿ ಏನು ಅಮೆಂಡ್ ಮಾಡಿದ್ದಾರೋ ಅದರ ಪ್ರಕಾರವೇ ತೆಗೆದುಕೊಳ್ಳಬೇಕು. ಇಲ್ಲದೆ ಹೋದರೆ ನಿಮಗೆ ಬಹಳ ಕೆಟ್ಟ ಹೆಸರು ಬರುತ್ತದೆಂದು ಈ ಸಂದರ್ಭದಲ್ಲಿ ತಮಗೆ ಎಚ್ಚರಿಕೆ ಕೊಡಲಿಕ್ಕೆ ಬಯಸುತ್ತೇನೆ. ಮತ್ತೆ ನಿನ್ನೆಯ ದಿನ ವಿಧಾನಪರಿಷತ್ತಿನ ಸದಸ್ಯರೊಬ್ಬರಿಗೆ ಲಿಖಿತ ಮೂಲಕ ಉತ್ತರ ಕೊಟ್ಟಿದ್ದೀರಿ. ನಾನೂ ಈ ಪ್ರಶ್ನೆ ಹಾಕಿದ್ದೆ. ಇದಕ್ಕೆ ಉತ್ತರ ಕೊಡುವುದಕ್ಕೆ ಇವರು ಸೆಷನ್ ಆಗಲೆಂದು ಕಾದಿದ್ದರೆಂದು ಕಾಣುತ್ತದೆ. ಹೆಲ್ಡ್ ಓವರ್ ಕ್ವೆಶ್ಚನ್ ಮಾಡಿದರು.

ಶ್ರೀ ಅಜೀಜ್ ಸೇಠ್ : ಯಾವ ಉತ್ತರವನ್ನೂ ಹೆಲ್ಡ್ ಓವರ್ ಮಾಡಿಲ್ಲ, ಏಕೆ ಮಾಡಬೇಕು? That is not my look out.

ಅಲ್ಲಿ ಧರಣ ಪರಣ ಮಾಡಿ ಅವತ್ತು ಕ್ವೆಶ್ಚನ್ ಆಗಿಲ್ಲ, ಅದಕ್ಕೆ ನಾವೇನು ಮಾಡೋಣ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಧರಣವೂ ಇಲ್ಲ ಪರಣಾನೂ ಇಲ್ಲ, ಕುಳಿತುಕೊಳ್ಳಿ, ನಾನು ಹೇಳುತ್ತೇನೆ, ಕೇಳಿ.

SRI AZEEZ SAIT : I have given you unstarred reply. I have never done that.SRI P.G.R. SCINDIA : This question has been held over.

ಉಪಾಧ್ಯಕ್ಷರು : ನಿಮಗೆ ಇನ್ನೂ ಉತ್ತರ ಸಿಕ್ಕಿಲ್ಲವೇ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಇನ್ನೂ ಉತ್ತರ ಸಿಕ್ಕಿಲ್ಲ, ನಿನ್ನೆ ವಿಧಾನ ಪರಿಷತ್ತಿನ ಸದಸ್ಯರಿಗೆ ಲಿಖಿತ ಮೂಲಕ ಉತ್ತರ ಕೊಟ್ಟು ಬಸ್ ಫೇರನ್ನು ಜಾಸ್ತಿ ಮಾಡಿಯೇ ಮಾಡುತ್ತೇವೆ ಎನ್ನುವ ಹಠ ಇವರಿಗೆ ಬಂದುಬಿಟ್ಟಿದೆ. ನಾವು ಖಾಸಗೀಯಾಗಿ ಚರ್ಚೆ ಮಾಡಿದ್ದೇವೆ.

ಶ್ರೀ ಅಜೀಜ್ ಸೇಠ್ : ಆತ್ಮಸಾಕ್ಷಿಯಾಗಿ ಹೇಳುತ್ತಿದ್ದೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಪ್ರತಿಯೊಂದು ಇಲ್ಲಿ ಮಾತನಾಡಿರುವುದು ಆತ್ಮಸಾಕ್ಷಿಯಾಗಿಯೇ.

ಶ್ರೀ ಕೆ.ಹೆಚ್. ರಂಗನಾಥ್ : ಆತ್ಮಸಾಕ್ಷಿಯಿದು, ಅದಕ್ಕೆ ಒಂದು ಚರಿತ್ರೆಯೇ ಇದೆ. ಅದು ಬಹಳ ಕಷ್ಟ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಉಪಾಧ್ಯಾಕ್ಷಿಣಿಯವರೆ, ನಾನು ಸಾರಿಗೆ ಇಲಾಖೆ ನಡೆಸಿದ್ದೇನೆ. 85-90ನಲ್ಲಿ 5 ವರ್ಷದ ಪೀರಿಯಡ್‌ನಲ್ಲಿ ನಾನು ಸಾರಿಗೆ ಮಂತ್ರಿಯಾಗಿದ್ದಾಗ ಮಾನ್ಯ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ಡೀಸಲ್ ಬೆಲೆ ಜಾಸ್ತಿ ಆಯಿತು, ಪೆಟ್ರೋಲ್ ಬೆಲೆ ಜಾಸ್ತಿ ಆಯಿತು, ಟೈರುಗಳ ಬೆಲೆ ಜಾಸ್ತಿ ಆಯಿತು, ಎಲ್ಲಾ ಬೆಲೆಗಳು ಜಾಸ್ತಿ ಆಯಿತು, ಆದರೆ, ನಾವು ಜನಸಾಮಾನ್ಯರ ಮೇಲೆ ಹೊರೆ ಹಾಕಬಾರದೆಂದೆಂದು ಹೇಳಿ ಒಂದು ಸಾರಿ 22 ಪರ್‌ಸೆಂಟ್ ಇನ್‌ಕ್ರೀಸ್ ಮಾಡಿದ್ದೇವೆ. ನೀವು ಹೋದವರ್ಷ ಬಂದಿರಿ, ಕೆ.ಇ.ಬಿ.ಬೆಲೆ ಜಾಸ್ತಿ ಮಾಡಿದಿರಿ, ವಾಟರ್ ರೇಟ್ ಜಾಸ್ತಿ ಮಾಡಿದಿರಿ, ಎಲ್ಲಾ ರೇಟ್ ಜಾಸ್ತಿ ಮಾಡಿದ್ದೀರಿ. ಒಂದು ಸಾವಿರ ಕೋಟಿ ರೂಪಾಯಿ ನಿಮ್ಮ ಖಜಾನೆಗೆ ತುಂಬಿಕೊಂಡಿರಿ. ಆಮೇಲೆ ಡ್ರಿಂಕಿಂಗ್ ವಾಟರ್ ಬೆಲೆ ಜಾಸ್ತಿ ಮಾಡುತ್ತೇವೆಂದು ಈಗಾಗಲೇ ಬಿ.ಡಬ್ಲ್ಯೂ.ಎಸ್.ಎಸ್.ಬಿ.ನವರು ಅಬ್ಜೆಕ್ಷನ್‌ಗೆ ನೋಟಿಫಿಕೇಷನ್ ಹೊರಡಿಸಿದ್ದಾರೆ.ºZ® dõ. ñdã"xJ : ƒ®Ÿ}ã {ãpã OŸ« Oåõ™‰ âãëãùgãåøÅâõ. dõ.E.".}ãÑ[«"T™ âãgãù{ã âõ®yã}ã uø«KãâûøÅ{õ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಲಕ್ಕಣ್ಣನವರು ಆಡಳಿತ ಪಕ್ಷದ ಸದಸ್ಯರು, ಅವರು ಸರ್ಕಾರವನ್ನು ಡಿಫೆಂಡ್ ಮಾಡಿಕೊಳ್ಳಬೇಕು.

ಶ್ರೀ ಕೆ. ಲಕ್ಕಣ್ಣ : ವಿರೋಧ ಪಕ್ಷದ ಉಪನಾಯಕರಾದ ಸಿಂಧ್ಯಾರವರು ಸ್ವಲ್ಪ ಕೇಳಬೇಕು. ತಮ್ಮ ಆಡಳಿತದಲ್ಲಿ ಸಚಿವರಾಗಿದ್ದವರು. ಹಿಂದೆ ಕಾರ್ಪೋರೇಟರ್ ಆಗಿದ್ದಾಗ ಮಹಾನಗರ ಪಾಲಿಕೆಯಲ್ಲಿ ಯಾವುದೇ ರೀತಿಯಲ್ಲಿ ಮನೆಗಂದಾಯ ಮತ್ತು ನೀರಿನ ದರವನ್ನು ಏರಿಸಬೇಕಾದರೆ ಅದು ಮಾಡಲೇಬಾರದೆಂದು ಹಠ ಮಾಡಿ ನಿಲ್ಲಿಸುತ್ತಿದ್ದರು. ಅವರೇ ಸಚಿವರಾದ ಮೇಲೆ ನೀರಿನ ದರ ಏರಿಸದಿದ್ದರೆ ವಿಧಿ ಇಲ್ಲವೆಂದು ಹೇಳಿದ್ದಾರೆ. ಆ ತರಹ ದ್ವಂದ್ವ ರೀತಿಯಲ್ಲಿ ಮಾತನಾಡಬೇಡಿ. ನೇರವಾಗಿ ಮಾತನಾಡಿ. ಏನು ಮಾಡಬೇಕೋ ಅದನ್ನು ಹೇಳಬೇಕೆಂದು ಈ ಸಂದರ್ಭದಲ್ಲಿ ವಿನಂತಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಲಕ್ಕಣ್ಣನವರು ಒಂದು ರೀತಿ ಅಪ್ರತ್ಯಕ್ಷವಾಗಿ ಬಸ್ ಬೆಲೆ ಜಾಸ್ತಿ ಮಾಡಬಹುದೆಂದು ಹೇಳುತ್ತಿದ್ದಾರೆ. ಅದಕ್ಕೆ ನನ್ನದೇನೂ ತಕರಾರಿಲ್ಲ. ಮಾಡಿಕೊಳ್ಳಿ. ನಾನು ನಿಮಗೆ ಎಚ್ಚರಿಕೆ ಕೊಡುತ್ತೇನೆ. ನಿಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಈಗಾಗಲೇ ಇದೆ. ಪ್ರಯಾಣಿಕರ ಪರವಾಗಿ ನಾನು ಹೇಳುತ್ತಿದ್ದೇನೆ. ಯಾವುದೇ ಕಾರಣದಿಂದಲೂ ಸಹಿತಾ ದರಗಳನ್ನು ಏರಿಸಬೇಡಿ. ಅಲ್ಲ ಸ್ವಾಮಿ, ಡೀಸಲ್ ಬೆಲೆ ಜಾಸ್ತಿ ಆಯಿತೇ? ನಿಮ್ಮ ಬಸ್‌ಗಳಿಗೆ ಪೆಟ್ರೋಲ್ ಉಪಯೋಗಿಸುತ್ತೀರಾ? ನಿಮ್ಮ ಹತ್ತಿರ ಎಷ್ಟು ಕಾರ್‌ಗಳು ಇವೆ. ಒಂದು 150ಕಾರ್‌ಗಳು ಇಡೀ ಕೆ.ಎಸ್.ಆರ್.ಟಿ.ಸಿ.ಯಲ್ಲಿ. 10 ಸಾವಿರ ಬಸ್‌ಗಳು ಇವೆ.

ಪೆಟ್ರೋಲಿಯಂ ಪ್ರಾಡಕ್ಸ್ ಒಂದು ಐದು ಪರ್ಸೆಂಟ್ ಹೆಚ್ಚು ಆಗಿರಬಹುದು. ಡೀಸೆಲ್ ಬೆಲೆ ಜಾಸ್ತಿ ಆಗಿಲ್ಲ, ವೇಜ್ ರಿವಿಜನ್ ಯಾವಾಗ ಆಯಿತು? ರಿವಿಜನ್ ಆಗಿದ್ದುದು ಗವರ್ನರ್ ಕಾಲದಲ್ಲಿ, ಐದು ವರ್ಷಕ್ಕೆ ವೇಜ್ ಅಗ್ರೀಮೆಂಟ್ ಆಗಿರತಕ್ಕದ್ದು. ವೇಜ್ ಇನ್‌ಕ್ರೀಸ್ ಆಗಿಲ್ಲ, ನಿಮ್ಮ 50% of your expenditure is wages. ಕೆಎಸ್‌ಆರ್‌ಟಿಸಿಯಲ್ಲಿ 450 ಕೋಟಿ ರೂಪಾಯಿಯಲ್ಲಿ 220 ಕೋಟಿ ರೂಪಾಯಿಗಳನ್ನು ಸಂಬಳಕ್ಕಾಗಿ ಕೊಡುತ್ತಿದ್ದೀರಿ. ಅದರಲ್ಲಿ ಏನಾದರೂ ಹೆಚ್ಚು ಮಾಡಿದ್ದೀರಾ? ನೀವು 25 ಪರ್ಸೆಂಟ್ ಅನ್ನು ಡೀಸೆಲ್ ಕನ್‌ಸಂಪ್‌ಷನ್‌ಗೆ ಖರ್ಚು ಮಾಡುತ್ತಿದ್ದೀರಿ. ಅದರಲ್ಲಿ ಸುಮಾರು 90ರಿಂದ 100 ಕೋಟಿ ರೂಪಾಯಿ, ಇದು ಡೀಸಲ್ ಬಿಲ್ ಒಂದು ವರ್ಷಕ್ಕೆ. ಅದರಲ್ಲಿ ಏನಾದರೂ ಹೆಚ್ಚು ಆಗಿದೆಯೇ ಇಲ್ಲ, ಡೀಸಲ್ ಬೆಲೆ ಜಾಸ್ತಿ ಆಗಿಲ್ಲ, ವೇಜಸ್ ಹೆಚ್ಚು ಆಗಿಲ್ಲ. ಪ್ರೆಟ್ರೋಲಿಯಂ ಪ್ರಾಡಕಟ್ಸ್ ನೆಪದಲ್ಲಿ, ಟೈರ್ ಬೆಲೆ ಸ್ವಲ್ಪ ಜಾಸ್ತಿ ಇರಬಹುದು. ಟೈರ್ ಬೆಲೆ ಎಷ್ಟು ಇದೆ?

What is the consumption of tyre?

ಇಂತಹ ಸಂದರ್ಭದಲ್ಲಿ ನೀವು ಬೆಲೆಗಳನ್ನು ಜಾಸ್ತಿಮಾಡಬೇಕು ಎಂದು ಹೊರಟಿದ್ದೀರಲ್ಲ, ಇದರಿಂದ ನೀವು ಬಹಳ ಕೆಟ್ಟ ಹೆಸರನ್ನು ತೆಗೆದುಕೊಳ್ಳುತ್ತೀರಿ. ನಾವು ಇದನ್ನು ವಿರೋಧ ಮಾಡುತ್ತಿದ್ದೇವೆ. ಮತ್ತು ನಾವು ರಾಜ್ಯದಾದ್ಯಂತ ದೊಡ್ಡ ಚಳುವಳಿಯನ್ನೇ ಮಾಡಬೇಕಾಗುತ್ತದೆ ಎನ್ನತಕ್ಕ ಎಚ್ಚರಿಕೆಯನ್ನು ಕೂಡ ಈ ಸಂದರ್ಭದಲ್ಲಿ ನಾನು ನಿಮಗೆ ಕೊಡುತ್ತೇನೆ.

SRI AZEEZ SAIT : As 'Sindhya' , you are not opposing.

ಶ್ರೀ ಪಿ.ಜಿ.ಆರ್. ಸಿಂಧ್ಯ : ಯಾವುದೇ ಕಾರಣದಿಂದಲೂ ನೀವು ಜಾಸ್ತಿ ಮಾಡಬಾರದು. ದಯವಿಟ್ಟು ಈ ಏರಿಕೆಯನ್ನು ನಿಲ್ಲಿಸಬೇಕು. ಇದನ್ನು ನಾವು ವಿರೋಧ ಮಾಡುತ್ತಿದ್ದೇವೆ.

ಶ್ರೀ ಅಜೀಜ್ ಸೇಠ್ : ಸಿಂಧ್ಯ ಆಗಿ ವಿರೋಧ ಮಾಡುತ್ತಿಲ್ಲ, ವಿರೋಧ ಪಕ್ಷದ ಉಪ ನಾಯಕರಾಗಿ ಮಾಡುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ ; ಮಾನ್ಯ ಸಚಿವರು ಬೆಲೆ ಜಾಸ್ತಿ ಮಾಡುವುದಿಲ್ಲ ಎಂದು ಹೇಳಲಿ, ಯಾವುದೇ ಕಾರಣದಿಂದಲೂ ಸಹ ಬಸ್ ದರಗಳನ್ನು ಜಾಸ್ತಿಮಾಡಬಾರದು ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಸಿ.ಎಂ. ಲಿಂಗಪ್ಪ : ಶ್ರೀಮಾನ್ ಸಿಂಧ್ಯರವರು ಸಾರಿಗೆ ಮಂತ್ರಿಗಳಾಗಿದ್ದಾಗ ಆ ಕಾಲದಲ್ಲಿ ಅವರು ಏನು ಒಂದು ನಿಗದಿತವಾದಂತಹ ಡಿ.ಎ.ಅನ್ನು ಡ್ರೈವರ್ಸ್ ಮತ್ತು ಕಂಡಕ್ಟರ್ಸ್‌ಗೆ ಕೊಡುತ್ತಿದ್ದರು. ಅದನ್ನು ಇವರು ಇನ್‌ಸೆಂಟೀವ್ ಎಂದು ಪರಿವರ್ತನೆ ಮಾಡಿ ವಸೂಲಿ ಆಗತಕ್ಕ ಹಣದ ಮೇಲೆ ಅವರಿಗೆ ಇನ್‌ಸೆಂಟೀವ್ ಎಂದು ಕೊಡುವುದೆಂದು ಮಾಡಿದರು. ಅವರ ಉದ್ದೇಶ ಬಹಳ ಒಳ್ಳೆಯದು ಆಯಿತು. ಡ್ರೈವರ್ಸ್ ಹಾಗೂ ಕಂಡಕ್ಟರ್ಸ್‌ಗಳು ಹಣ ಕದಿಯದೇ ಇರಲಿ, ಟಿಕೇಟ್ ಕೊಟ್ಟು ಎಲ್ಲಾ ಪ್ರಯಾಣಿಕರಿಂದ ಹಣ ವಸೂಲಿ ಮಾಡಲಿ ಎನ್ನುವ ಸದಭಿಪ್ರಾಯ ಇತ್ತು. ಬಹುಶಃ ಇವತ್ತಾದರೂ ಅದು ಎಷ್ಟು ಹೆಚ್ಚಿನ ಹೊರೆ ಆಗಿ ಪರಿಣಮಿಸಿದೆ ಎಂದರೆ ಈ ಬಸ್ ದರವನ್ನು ಈಗಲೂ ಅಲ್ಲ, ಪ್ರತಿ ವರ್ಷ ಹೆಚ್ಚಿಸಿಕೊಂಡು ಹೋಗುತ್ತಾ ಹೋಗುತ್ತಾ ಅವರಿಗೆ ಬರೀ ಸಂಬಳ ಸಾರಿಗೆಗಳನ್ನು ನಾವು ಕೊಡಬೇಕಾಗುತ್ತದೇನೋ ಎನ್ನುವ ಪರಿಸ್ಥಿತಿ ಬಂದಿದೆ. ಇದನ್ನು ದಯವಿಟ್ಟು ತಾವು ಗಮನದಲ್ಲಿ ಇಟ್ಟುಕೊಂಡರೆ ಒಳ್ಳೆಯದೆಂದು ನನ್ನವಿನಂತಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಲಿಂಗಪ್ಪನವರು ಸತ್ಯ ಮಾತನಾಡಿದ್ದಾರೆ. ಆದರೆ ಅವರು ಮಾತನಾಡಿರುವುದು ಅರ್ಧ ಸತ್ಯ. ಇನ್‌ಸೆಂಟೀವ್ ಸಿಸ್ಟಂ ಅನ್ನು ನಾವೇ ಇಂಟ್ರೊಡ್ಯೂಸ್ ಮಾಡಿದ್ದುದು ಇನ್‌ಸೆಂಟೀವಿ ಸಿಸ್ಟಂ ಇಂಟರ್‌ಡ್ಯೂಸ್ ಮಾಡುವಾಗ ಕೇವಲ ಕಂಡಕ್ಟರ್ಸ್ ಹಾಗೂ ಡ್ರೈವರ್ಸ್‌ಗೆ ಮಾತ್ರ ಮಾಡಿದ್ದುದು ಅವರು ದುಡ್ಡು ಹೊಡೆಯುತ್ತಾರೆ ಇಲ್ಲಿ ದುಡ್ಡು ಕೊಟ್ಟು ಬಿಟ್ಟರೆ ನಿಲ್ಲಿಸಿಬಿಡುತ್ತಾರೆ ಎಂದಲ್ಲ, ನಾವು ಏಕೆ ಇನ್‌ಸೆಂಟೀವ್ ಸಿಸ್ಟಂ ಇಂಟ್ರೊಡ್ಯೂಸ್ ಮಾಡಿದೆವು ಅಂದರೆ ಟೈಮ್ ಪ್ರಕಾರವಾಗಿ ಡ್ರೈವರ್ಸ್ ಬಸ್ ಓಡಿಸಿದರೆ ಅದಕ್ಕೆ ಇನ್‌ಸೆಂಟೀವ್. ಅದು ಬಹಳ ಮುಖ್ಯ. ಟೈಮ್ ಪ್ರಕಾರವಾಗಿ ಓಡಿಸತಕ್ಕದ್ದು. ವರ್ಕ್ ಶಾಪ್‌ನಲ್ಲಿರತಕ್ಕ ಮೆಕಾನಿಕ್‌ಗೆ ಆ ಟಾರ್ಗೆಟ್ ಕೊಟ್ಟಿರುತ್ತೇವೆ. ಅವನು ಆ ಟಾರ್ಗೆಟ್ ಅನ್ನು ರೀಚ್ ಮಾಡಿದರೆ ಟೈಮಿಗೆ ಸರಿಯಾಗಿ ಬಸ್‌ನಿಂದ ಡಿಪೋನಿಂದ ಹೊರಡುತ್ತವೆ.

ಅದಕ್ಕೋಸ್ಕರ ಅವನಿಗೆ ಕೊಡತಕ್ಕ ಇನ್‌ಸೆಂಟೀವ್ . ಅದೇ ಹೊರತು ಇರತಕ್ಕ ಪಿಲ್‌ಫರೇಜ್ ಅನ್ನು ಚೆಕ್ ಮಾಡುವುದಕ್ಕೆ ಆಗುವುದಿಲ್ಲ, ಇನ್‌ಸೆಂಟೀವ್ ಎಷ್ಟು

ಕೊಡುತ್ತಾರೆ. ಒಂದೂವರೆ ಕೋಟಿ ರೂಪಾಯಿಗಳನ್ನು ಅದೂ 55ಸಾವಿರ ಎಂಪ್ಲಾಯೀಸ್‌ಗೆ ಕೊಡುತ್ತಾರೆ. ಅದರ ಬಗ್ಗೆ ನಾನು ಹೋಗುವುದಿಲ್ಲ, ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ, ಸರ್ಕಾರದಲ್ಲಿ ಕೇಳುತ್ತೇನೆ. ತಾವು ಮಾನ್ಯ ಮುಖ್ಯಮಂತ್ರಿಗಳ ಮೇಲೆ ಒತ್ತಾಯ ತರಬೇಕು . ನಾನು ಈ ಮಾತನ್ನು ಹೇಳುತ್ತೇನೆ. ಖಾಸಗೀ ಬಸ್‌ನವರು ಟ್ಯಾಕ್ಸ್‌ನ ರೂಪದಲ್ಲಿ ಸರ್ಕಾರಕ್ಕೆ ಸುಮಾರು 10-11 ಪರ್ಸೆಂಟ್ ಓವರ್ ದಿ ಟೋಟಲ್ ಟ್ರಾಫಿಕ್ ರೆವಿನ್ಯೂ ಕೊಡುತ್ತಾರೆ. ಆದರೆ ನಮ್ಮ ಕೆಎಸ್‌ಆರ್‌ಟಿಸಿ ಅವರು 17 ಪರ್ಸೆಂಟ್ ಕೊಡುತ್ತಿದ್ದೇವೆ. ನಾನೇ ಇದನ್ನು ಮಾಡಿಸಿದ್ದು, ಉದ್ದೇಶ ಪೂರ್ವಕವಾಗಿಯೇ ಮಾಡಿಸಿದ್ದು. ಕೆಎಸ್‌ಆರ್‌ಟಿಸಿ ಫ್ಲೀಟ್ ಓನರ್ ಎಂದು ಮಾಡಿಸಿ ಇದನ್ನು ಮಾಡಿಸಿದೆ. ಇದಕ್ಕೆ ಒಂದು ಉದ್ದೇಶ ಇದೆ. ಮೋಟಾರ್ ವೆಹಿಕಲ್ ಡಿಪಾರ್ಟ್‌ಮೆಂಟಿನವರು ರಿಪೇರಿಗೆ ಹೋದಾಗಲೆಲ್ಲ ಆನ್ ರೋಡ್, ಔಟ್ ರೋಡ್ ಎಂದು ಓಡಿಸದೇ ಇರುವುದು. o Ÿ®£äãûøÅ âõ»dãàØ ãã‰‰sÑs dãÖâõ‰ Agã‰yãK{õ. a™{õ® Ö~øôØüãõ‰™s}ãâãpã‰AcãDpØAàØõ˚®ôøpØõ»dãàØÖ~øôØùâõ‰™s}ãâãpã‰, dõUèØApØ s« U™{ãpõ Uàø[a™{õ®. a™{ã‰ gãâã}ãùâõ‰™ôØ E}õ˚Q™{ã‰ èõó‰ gãâã}ãùâõ‰™ôØ U™~ø[ö‰®èØX . ‰âãpãÑ[Odõ hãëãùúõ "pãüõ®dã‰ U}ã‰Qââ a™{ã‰ døpãx. E}õ˚Q™{ã‰ èãdøùpãdã˚" èãSñR ïõkã‰+ A{øäã‰ "pãÑ U}ã‰Qââ I{õM®çã›™{â 17 ಪರ್ಸೆಂಟ್ ಮಾಡಿದ್ದುದು ನಿಜ. ನಾನು ರೆಕ್ಮಂಡ್ ಮಾಡಿದ್ದು 13 ಪರ್ಸೆಂಟ್. ಆದರೆ ಆ ಸಂದರ್ಭದಲ್ಲಿ ಬರಗಾಲ ಇದ್ದುದರಿಂದ ನಮ್ಮ ಸರ್ಕಾರಕ್ಕೆ ಹಣಕಾಸಿನ ಕೊರತೆ ಇತ್ತು. ಆ ಕಾರಣ ನಾವು 17 ಪರ್ಸೆಂಟ್ ಮಾಡಿದೆವು. ಇದರಿಂದ ಕೆಎಸ್‌ಆರ್‌ಟಿಸಿ ಒಂದರಿಂದಲೇ ರಾಜ್ಯದ ಬೊಕ್ಕಸಕ್ಕೆ 70 ಕೋಟಿ ರೂಪಾಯಿಯಷ್ಟು ಹಣವನ್ನು ನಾವು ಟ್ಯಾಕ್ಸಸ್ ರೂಪದಲ್ಲಿ ಕೊಡುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು- ಈಗ ಬಂದಿದ್ದಾರೆ. ನಾನು ಅವರಲ್ಲಿ ಒತ್ತಾಯ ಮಾಡುತ್ತಿದ್ದೇನೆ.

ಈ ಸಾರಿಗೆ ಸಂಸ್ಥೆಯ ಬೆಲೆಗಳನ್ನು ಜಾಸ್ತಿ ಮಾಡಿ ಸರ್ಕಾರದವರು ಕೆಟ್ಟ ಹೆಸರನ್ನು ತೆಗೆದುಕೊಳ್ಳುವುದರ ಬದಲು 17 ಪರ್ಸೆಂಟ್ ಟ್ಯಾಕ್ಸಸ್ ಏನು ಇದೆ, ಖಾಸಗಿ ಬಸ್‌ನವರು 11 ಪರ್ಸೆಂಟ್ 12 ಪರ್ಸೆಂಟ್ ಮಾಡುತ್ತಿದ್ದಾರೆ, ಆ ಮಟ್ಟಕ್ಕೆ ನೀವು ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ.

ಇನ್ನು ಸಿಟಿ ಸರ್ವೀಸ್ ವಿಚಾರ ಹೇಳುವುದಾದರೆ, ಪಲ್ಲವನ್ ಟ್ರಾನ್ಸ್‌ಪೋರ್ಟ್ ಮದ್ರಾಸ್‌ನಲ್ಲಿ ಇದೆ. ಅವರಿಗೆ ಟ್ಯಾಕ್ಸೇಶನ್ ಬೇರೆ ಪ್ರಮಾಣದಲ್ಲಿ ಇದೆ. ಅವರಿಗೆ ಮೂರು ಪರ್‌ಸೆಂಟ್ ಟ್ಯಾಕ್ಸ್ ಹಾಕುತ್ತಾ ಇರುವುದರಿಂದ ಅವರಿಗೆ ಲಾಸ್ ಆಗುತ್ತಾ ಇಲ್ಲ. ಹಾಗೆ ನೋಡಿದರೆ ಎಲ್ಲಾ ಸಿಟಿ ಸರ್ವಿಸಸ್‌ನಲ್ಲಿ ಬಾಂಬೆಯನ್ನು ಸೇರಿಸಿಕೊಂಡು ಲಾಸ್ ಆಗಿಯೇ ಆಗುತ್ತದೆ, ಇಲ್ಲ ಎಂದಲ್ಲ. ಅದಕ್ಕೆ ಕಾಂಪನ್‌ಸೇಟ್ ಮಾಡಬೇಕಾದರೆ ನೀವು ಸರ್ಕಾರದಿಂದ ಹಣವನ್ನು ಕೇಳಿ. ಅಥವಾ ಅಲ್ಲಿ ಟ್ಯಾಕ್ಸ್‌ನ್ನು ನೀವು ಹಾಕ ಬೇಡಿ. ಆಗ ಮಾತ್ರ ನಿಮಗೆ ಸ್ವಲ್ಪ ಅನುಕೂಲವಾಗುತ್ತದೆ. ನೀವು 70 ಕೋಟಿ ರೂಪಾಯಿಗಳನ್ನು ತೆರಿಗೆ ರೂಪದಲ್ಲಿ ತೆಗೆದುಕೊಳ್ಳುವುದನ್ನು, 40 ಕೋಟಿಯನ್ನು ನೀವು ಸರಕಾರದಿಂದ ಸಹಾಯ ಕೇಳಿದರೆ, ಆಗ ನಿಮಗೆ ಬೆಲೆಗಳನ್ನು ಜಾಸ್ತಿ ಮಾಡತಕ್ಕಂಥ ಪ್ರಮೇಯ ಬರುವುದಿಲ್ಲ, ಅದನ್ನು ಮಾಡಬೇಕೆಂದು ನಾನು ತಮ್ಮಲ್ಲಿ ಒತ್ತಾಯ ಮಾಡುತ್ತಾ ಇದ್ದೇನೆ. ಮತ್ತೆ, ಈ ಪ್ರೈವೇಟ್ ರೂಟ್‌ಗಳು, ಈ ಬಗ್ಗೆ ಏನು ಮಾಡುತ್ತಿದ್ದಾರೆ ಅಂದರೆ, ಡೆಪ್ಯೂಟಿ ಕಮೀಷನರ್, ಆರ್‌ಟಿಒ, ಮತ್ತು ನಾನ್ ಅಫೀಶೀಯಲ್ ಮೆಂಬರ್ಸ್ ಕುಳಿತುಕೊಂಡು ಒಂದು ರೂಲ್ಸ್ ಮಾಡಿಕೊಂಡು, ಪ್ರಿಯಾರಿಟಿಯೋ ಏನೋ ಮಾಡಿಕೊಂಡು ನಾವು ಬಸ್ ರೂಟ್‌ಗಳನ್ನು ಕೊಡುತ್ತಿದ್ದೇವೆ ಎಂದು ಹೇಳುತ್ತಾರೆ. ಅದರ ಬದಲಾಗಿ, ನಿಮಗೆ ಆದಾಯ ಬರುವ ಹಾಗೆ, ನನ್ನ

ಈ ಸಲಹೆಯನ್ನು ಎಕ್ಸಾಮಿನ್ ಮಾಡಿಸಿ, ನಾನಿದ್ದಾಗಲೂ ಇದರ ಬಗ್ಗೆ ಪ್ರಯತ್ನ ಮಾಡಿದ್ದೆ, ಇದಕ್ಕೆ ರೂಲ್ಸ್‌ನ್ನು ಫ್ರೇಮ್ ಮಾಡಬೇಕೆಂದು ಹೇಳಿದರು,

ಆದ್ದರಿಂದ ಈ ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟಿನವರಿಗೆ ಹೇಳಿ, ಎಕ್ಸಾಮಿನ್ ಮಾಡಿಸಿ, ಈ ಖಾಸಗೀ ಬಸ್‌ಗಳಿಗೆ ಕೊಡತಕ್ಕಂಥ ರೂಟ್‌ಗಳನ್ನು ಆಕ್ಷನ್ ಮಾಡಿಸಿ ಬಿಡಿ. ಇದನ್ನು ಮಾಡುವುದರಿಂದ ನಿಮಗೆ 15-20 ಕೋಟಿ ರೂಪಾಯಿಗಳಷ್ಟು ಹಣ ಹೆಚ್ಚಿಗೆ ಬರುತ್ತದೆ. ಅದನ್ನು ನಿಮ್ಮ ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟಿಗೆ ತೆಗೆದುಕೊಳ್ಳಿ. ಈಗ ಏನಾಗುತ್ತಿದೆ ಅಂದರೆ. ಯಾರೋ ಮುಲಾಜಿಗೆ ಬರುತ್ತಾರೆ, ಯಾರೋ ರಾಜಕೀಯ ಒತ್ತಡವನ್ನು ತರುತ್ತಾರೆ. ಅಂಥವರಿಗೆ ರೂಟ್ಸ್‌ನ್ನು ಕೊಡತಕ್ಕಂಥ ಕ್ರಮವನ್ನು ನಾವು ಮಾಡುತ್ತಾ ಇದ್ದೇವೆ. ಇದು ಆಗಬಾರದು ಎಂದು ಈ ಸಂದರ್ಭದಲ್ಲಿ ನಿಮಗೆ ಒತ್ತಾಯ ಮಾಡುತ್ತಾ ಇದ್ದೇನೆ. ತಾವುಗಳು ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದೀರಿ. ಅದು ಯಾರೋ ಲೀಸಿಂಗ್ ಕಂಪನಿಯವರು ಮುಂದೆ ಬಂದಿದ್ದಾರೆ, ನಾವು ಚಾಸಿಗಳನ್ನು ಲೀಸ್ ಬೇಸಿಸ್ ಮೇಲೆ ತೆಗೆದುಕೊಳ್ಳುತ್ತಾ ಇದ್ದೇವೆ ಎಂದು ಹೇಳಿದ್ದೀರಿ. ದಯಮಾಡಿ ಅದನ್ನು ಮಾಡಲಿಕ್ಕೆ ಹೋಗ ಬೇಡಿ.

ಇಲ್ಲಿ ಇನ್‌ವೆಸ್ಟ್‌ಮೆಂಟ್ ವಿಚಾರ ಅಷ್ಟಾಗಿ ಬರುವುದಿಲ್ಲ, ಏಕೆಂದರೆ ಕೆಎಸ್‌ಆರ್‌ಟಿಸಿಯಲ್ಲಿ ಏನು ಹಣ ಜನರೇಟ್ ಆಗುತ್ತಾ ಇದೆ, ಅದರಲ್ಲಿ ನಿಮಗೆ 700 ಚಾಸಿಗಳನ್ನು ಹೊಸತಾಗಿ ತೆಗೆದುಕೊಳ್ಳುವುದಕ್ಕೆ, 600 ಚಾಸಿಗಳನ್ನು ರಿಪ್ಲೇಸ್ ಮಾಡುವುದಕ್ಕೆ 1,300ಕ್ಕೆ ಜಾಸ್ತಿಯಾಗುತ್ತದೆ, ಆ ಬಗ್ಗೆ ನಾನು ಲೆಕ್ಕ ಹಾಕಿಸಿದ್ದೇನೆ. ಹೀಗೆ ನಿಮಗೆ ಲೀಸಿಂಗ್ ಕಂಪನಿಯವರು ಕೊಡಬೇಕಾದರೆ, ಲೀಸಿಂಗ್ ಕಂಪನಿಯವರು ಮತ್ತು ಚಾಸಿ ಮ್ಯಾನ್ಯುಫ್ಯಾಕ್ಚರರ್ ಒಂದು ಅಂಡರ್‌ಸ್ಟಾಂಡಿಂಗ್‌ಗೆ ಬಂದಿರುತ್ತಾರೆ. ಅಥವಾ ಕ್ವಾಲಿಟಿ ಸರಿಯಾಗಿರುವುದಿಲ್ಲ, ಅಥವಾ ಅವರದ್ದೇ ಚಾಸಿಗಳನ್ನು ನಿಮ್ಮ ಮೇಲೆ ಹೇರುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದ್ದರಿಂದ ದಯಮಾಡಿ ಇದನ್ನು ಮಾಡಬಾರದು ಎಂದು ಹೇಳಿ ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಇನ್ನೊಂದು ವಿಚಾರ, ನಮ್ಮ ಬೀದರ್, ಗುಲ್ಬರ್ಗ ಜಿಲ್ಲೆಗಳ ರಸ್ತೆಗಳ ರಾಷ್ಟ್ರೀಕರಣ ಮಾಡತಕ್ಕಂಥ ಸಂದರ್ಭದಲ್ಲಿ ಸುಮಾರು 600-700ಜನರಿಗೆ ಕೆಲಸ ಹೊರಟು ಹೋಯಿತು. ನಮ್ಮ ಸಚಿವ ಬಸವರಾಜ್ ಪಾಟೀಲ್‌ರವರು ನನಗೆ ಸಿಕ್ಕಾಗ ಹೇಳುತ್ತಾ ಇರುತ್ತಾರೆ, ನಮಗೆಲ್ಲಾ ಹಾಳು ಮಾಡಿ ಬಿಟ್ಟಿದ್ದೀರಿ ಎಂದು. ಸುಮಾರು 200-300 ಜನಕ್ಕೆ ನಾನು ಇರುವಾಗಲೇ ಕೆಲಸ ಕೊಡಿಸಿದ್ದೆ. ಇನ್ನೂ 200ಜನರು ಹಾಗೆಯೇ ಇದ್ದಾರೆ. ಅವರು ಇವೊತ್ತೂ ಕೂಡ ಬಂದಿದ್ದಾರೆ. ನಮ್ಮ ಬೀದರ್ ಜಿಲ್ಲೆಯ ಎಲ್ಲಾ ಶಾಸಕರನ್ನು ಭೇಟಿ ಮಾಡಿದ್ದಾರೆ. ಅವರೆಲ್ಲರೂ ಒತ್ತಾಯ ಮಾಡಿದ್ದಾರೆ, ಈ ನಿರುದ್ಯೋಗಿಗಳು ಬೀದಿಯಲ್ಲಿದ್ದಾರೆ, ಅವರಿಗೆ ಒಂದು ಅನುಕೂಲ ಮಾಡಿಕೊಡಬೇಕು. ನಾವು ಚಿತ್ರದುರ್ಗ, ದಾವಣಗೆರೆಯಲ್ಲಿ ಕೂಡ 40-50 ಹೆದ್ದಾರಿಗಳನ್ನು ನಾವು ರಾಷ್ಟ್ರೀಕರಣ ಮಾಡಿದ್ದೇವೆ. ಅಲ್ಲಿರತಕ್ಕಂಥ ಕೆಲವು ಕಾರ್ಮಿಕರಿಗೂ ನಾವು ಉದ್ಯೋಗ ಕೊಟ್ಟಿಲ್ಲ. ನಿಮ್ಮ ಕಾನೂನಿನಲ್ಲಿ ಕೆಲವು ಅಡಚಣೆ ಇರಬಹುದು. ಅದನ್ನು ಇತ್ಯರ್ಥ ಮಾಡಿ ಈ ಜನರಿಗೆ ಕೆಲಸ ಕೊಡಬೇಕು, ಅದರ ಪುಣ್ಯ ನಿಮಗೆ ಬರುತ್ತದೆ ಎಂದು ಹೇಳುತ್ತೇನೆ.

ನನಗೆ ತಿಳಿದಿರುವ ಹಾಗೆ ಇತ್ತೀಚಿನ ದಿವಸಗಳಲ್ಲಿ ಕೆಎಸ್‌ಆರ್‌ಟಿಸಿಯ ಆಡಳಿತದಲ್ಲಿ ಹಸ್ತಕ್ಷೇಪ ಸ್ವಲ್ಪ ಜಾಸ್ತಿಯಾಗುತ್ತಿದೆ ಎಂದು ಕೇಳಿದ್ದೇನೆ. ಅದು ಏತಕ್ಕೋಸ್ಕರ ಸರಕಾರದಿಂದ ಹಾಗೆ ಆಗುತ್ತಿದೆ ಎಂದು ನನಗೆ ಅರ್ಥವಾಗುತ್ತಾ ಇಲ್ಲ. ಆದ್ದರಿಂದ ಈ ಹಸ್ತಕ್ಷೇಪವನ್ನು ಆದಷ್ಟು ಕಡಿಮೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

SRI AZEEZ SAIT : I would earnestly request you,

ಇದನ್ನು ಯಾರಾದರೂ ಹೇಳಿ, ತಮ್ಮ ಗಮನಕ್ಕೆ ತಂದು, ತಾವು ಅದನ್ನು

ಇಲ್ಲಿ ಮಾತನಾಡಬೇಕಾದರೆ, ಏಕೆಂದರೆ ತಾವುಗಳು ಇಲ್ಲಿ ಮಂತ್ರಿಯಾಗಿದ್ದವರು, ಈಗ ಸದಸ್ಯರಾಗಿರುವವರು, ನಾನು ಈಗ ಸಚಿವನಾಗಿ, ಅದರ ಚೇರ್ಮನ್ ಆಗಿ ಕೂಡ ಇದ್ದೇನೆ. ಅಲ್ಲಿ ಕೆಲವು ವ್ಯವಹಾರಗಳಲ್ಲಿ ಅಡ್ಮಿನಿಸ್ಟ್ರೇಶನ್ ವಿಚಾರದಲ್ಲಿ, ಎಲ್ಲಿ ಲೋಪದೋಷಗಳು ಇವೆ, ಅಲ್ಲಿ ಅದನ್ನು ಫುಲ್ ಮಾಡಬೇಕಾದದು ನನ್ನ ಆದ್ಯಕರ್ತವ್ಯವಾಗಿದೆ, ಅದನ್ನು ಬಿಟ್ಟು ಎಲ್ಲಿಯಾದರೂ ಕಾರಣವಿಲ್ಲದೆ ಹಸ್ತಕ್ಷೇಪ ಆಗಿದೆ ಎಂದು ತಾವುಗಳು ಹೇಳಿದರೆ ಅದನ್ನು ನಾನು ಕ್ಲಾರಿಫಿಕೇಶನ್ ಕೊಡುವುದಕ್ಕೆ ಅನುಕೂಲವಾಗುವ ದೃಷ್ಟಿಯಿಂದ ತಮ್ಮಲ್ಲಿ ನಿರ್ಧಿಷ್ಟವಾಗಿ ಹೇಳುವಂತೆ ಕೇಳುತ್ತೇನೆ. ºZ® á.ọ.ApØ. «™ãX : O}ã' gõ'£Kñ[{ã™yõ âãûøyøvãñ‰ Agã‰ሬã†›ñ[. Because I know the whole thing ಪರ್ಚೇಸ್ ಹೇಗೆ ಮಾಡುತ್ತಾರೆಂದು, I know what it is ನಾನು ಏನು ಹೇಳುತ್ತಿದ್ದೇನೆ ಈ ಇಂಟರ್‌ಫಿರೆನ್ಸ್. ನನಗೆ ಗೊತ್ತಿದೆ ಬಹಳ ಜನ ಹೇಳುತ್ತಾರೆ. ಒಂದೂವರೆ ಸಾವಿರ ಚಾಸಿ ಬಂದುಬಿಡ್ತು ಎಂದರೆ ಒಂದು ಚಾಸಿಗೆ ಒಂದು ಫಿಯೆಟ್ ಕಾರ್ ಹೊಡೆದರು ಎಂದು ಆಪಾದನೆ ಮಾಡಲು ನಾನು ತಯಾರಿಲ್ಲ I know what it is and who fixes it up. ಅಲ್ಲಾಗುವ ಪರ್ಚೇಸ್ ನಮಗೆ ಗೊತ್ತೇ ಇರುವುದಿಲ್ಲ. ಎರಡು ವರ್ಷವಾದ ಮೇಲೆ ನಮಗೆ ಗೊತ್ತಾಗುತ್ತದೆ. ಇಂಟರ್‌ಫಿರೆನ್ಸ್ ಏನೆಂದರೆ ಕೇಡರ್ ಅಂಡ್ ರೆಕ್ರೂಟ್ಮೆಂಟ್ ರೂಲ್ಸ್ ಮಾಡಿ, ಅದು ಅಮೆಂಡಾಯಿತು ಅದನ್ನು ಏಕೆ ತಡೆಹಿಡಿದಿದ್ದೀರಿ? ಆ ತರಹ ಇಂಟರ್‌ಫಿರೆನ್ಸ್ ಮಾಡಲು ಹೋಗಬೇಡಿ, ನೀವು ಏನಿದ್ದರೂ ಪಾಲಿಸಿ ಡೈರೆಕ್ಷನ್ಸ್ ಕೊಡಿ ಹಾಗೆ ಮಾಡಿ, ಹೀಗೆ ಮಾಡಿ ಎಂದು. ನೀವು ಟ್ರಾನ್ಸ್‌ಫರ್ ಮಾಡಬೇಡಿ ಎಂದು ಹೇಳಬೇಡಿ.

ಶ್ರೀ ಅಜೀಜ್ ಸೇಠ್ : ಕೆಎಸ್‌ಆರ್‌ಟಿಸಿಯಲ್ಲಿ ವಿಶೇಷ ಇಂಟರ್‌ಫಿರೆನ್ಸ್ ಜಾಸ್ತಿಯಾಗಿದೆ ಎಂದು ಹೇಳಿದಿರಿ, ಅದನ್ನು ಹೇಳಿ, ಹಾಗಾದರೆ ನಾನು ಉತ್ತರ ಕೊಡಲು ಸಾಧ್ಯ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಹೇಳುತ್ತೇನೆ ತಾಳಿ, ವಾಹನಗಳ ಕೊರತೆ ಬಹಳ ಜಾಸ್ತಿಯಾಗಿದೆ. ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ಬಿಟ್ಟು ಹೊರಗಡೆ ಹೋಗುವವರಿಗೆ ಕಷ್ಟವಾಗಿದೆ. ಈಗೆಲ್ಲ 50 ಪ್ಲಸ್ ಐದು, 50ಪ್ಲಸ್ 10 ಎಂದು ಇದೆ. ಬಸ್‌ನ ಮೇಲುಗಡೆ ಹೆಚ್ಚು ಪ್ರಯಾಣಿಕರಿರುತ್ತಾರೆ, ಅವರೆಲ್ಲಾ ಟಿಕೆಟ್ ತೆಗೆದುಕೊಳ್ಳುತ್ತಾರೋ ಇಲ್ಲವೋ ಅಥವಾ ಒಳಗಡೆ ಸೆಕೆ ಜಾಸ್ತಿ ಎಂದು ಕುಳಿತು ಕೊಳ್ಳುತ್ತಾರೋ ಗೊತ್ತಾಗದೆ ನಾನು ಡಿವಿಜನಲ್ ಕಂಟ್ರೋಲರ್ಸ್ ಆರ್.ಎಂ.ಓ.ಗಳನ್ನು ಕೇಳಿದೆ ಏಕೆ ಹೀಗೆ ಎಂದು, ಅದಕ್ಕೆ ಅವರು ನಮಗೆ ಬಸ್ ಜಾಸ್ತಿ ಇಲ್ಲ ಸ್ವಾಮಿ, ಏನು ಮಾಡೋದು? ಯಾವ ಕಡೆ ಬೇಕಾದರೂ ಹೋಗಿ ನ್ಯಾಷನಲೈಸ್ಡ್ ಏರಿಯಾದಲ್ಲಿ, ಇಷ್ಟೊಂದು ತೊಂದರೆಯಾಗಿದೆ ಎಲ್ಲಾ ಕಡೆಗಳಲ್ಲೂ ಬಸ್‌ಗಳ ಮೇಲೆ ಪ್ರಯಾಣಮಾಡುವ ಪರಿಸ್ಥಿತಿ ಬಂದಿದೆ. ಅದೇ ರೀತಿ ಆದರೆ ಲಾ ಅಂಡ್ ಆರ್ಡರ್ ಪ್ರಾಬ್ಲಮಾಗುತ್ತದೆ, ಆದ್ದರಿಂದ ದಯವಿಟ್ಟು ಪೀಕ್ ಅವರ್ಸ್‌ನಲ್ಲಿ ಬೆಳಿಗ್ಗೆ ಸಂಜೆ ಹೊತ್ತು ಜಾಸ್ತಿ ಬಸ್ ಓಡಿಸಲು ಪ್ರಯತ್ನ ಮಾಡಬೇಕೆಂದು ಒತ್ತಾಯಮಾಡುತ್ತೇನೆ. ನಾನು ಇದೇ ಸಭೆಯಲ್ಲಿ ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್ 36 ಸಾವಿರ ಜನ ಎಂಪ್ಲಾಯಿಸ್‌ಗಳು ತಮ್ಮ ಬೇಡಿಕೆ ಬಗ್ಗೆ ದೊಡ್ಡ ಮುಷ್ಕರ ಮಾಡಿ ಧರಣಿ ಮಾಡಿ ಅಧ್ಯಕ್ಷರ ಮೂಲಕ ಅವತ್ತಿನ ಸಾರಿಗೆ ಸಚಿವರಿಗೆ ಅವರ ಬೇಡಿಕೆಗಳನ್ನು ಕೊಟ್ಟಿದ್ದೇನೆ. ತಾವು ಅದನ್ನು ಪರಿಶೀಲನೆ ಮಾಡಬೇಕು. ನನಗೆ ಗೊತ್ತಿದೆ ನೀವು ಕಾರ್ಮಿಕ ಮಂತ್ರಿಯಾಗಿದ್ದವರು. ನಿಮಗೆ ಅವರ ಸಮಸ್ಯೆಗಳು ಗೊತ್ತಿದೆ. ದಯವಿಟ್ಟು ಕಾರ್ಮಿಕರಿಗೂ ನಿಮಗೂ ಸಂಬಂಧ ಚೆನ್ನಾಗಿರಬೇಕು. ಇಲ್ಲದಿದ್ದರೆ ಕೆ.ಎಸ್.ಆರ್.ಟಿ.ಸಿ. ನಡೆಸಲು ಬಹಳ ಕಷ್ಟವಾಗುತ್ತದೆ.

ಅವರು ಸ್ಟ್ರೈಕ್ ನೋಟೀಸು ಕೊಟ್ಟಿದ್ದಾರೆಂದು ಕೇಳಿದ್ದೇನೆ. ಆ ತರಹದ ಘರ್ಷಣೆಗೆ ತಾವು ಅವಕಾಶ ಮಾಡಬಾರದು. ಆಮೇಲೆ ಒಳ್ಳೆಯ ಕಾರ್ಮಿಕರನ್ನು ತಯಾರು ಮಾಡಲು ಕ್ರಮ ತೆಗೆದುಕೊಳ್ಳಬೇಕು, ನೀವು ನೋಡಿರಬಹುದು, ಪ್ರತಿನಿತ್ಯ ವಾಚಕರ ವಾಣಿಯಲ್ಲಿ ಓದುತ್ತೇವೆ.

ಬಿ.ಟಿ.ಎಸ್ ಕಂಡಕ್ಟರ್ ಹಾಗೆ ಮಾಡಿದ ಹೀಗೆ ಮಾಡಿದ, ಡ್ರೈವರ್ ಮತ್ತಾರಿಗೋ, ಶಾಸಕರಿಗೆ ಬೈದರು ಕೆಲವರಿಗೆ ಹಿಡಿದುಕೊಂಡು ಹೊಡೆದ ಎಂದು ಕೇಳುತ್ತಿರುತ್ತೇವೆ. ಇದರಲ್ಲಿ ಸತ್ಯಾಂಶ ಇದೆ ಮತ್ತು ರ್‍ಯಾಶ್ ಡ್ರೈವಿಂಗ್ . ಕೆಲವು ಸಲ ಬಿಟಿಎಸ್ ಡ್ರೈವರ್ಸ್ ಬಸ್ ಓಡಿಸುವುದನ್ನು ನೋಡಿದರೆ ಭಯವಾಗುತ್ತದೆ. ನಾನು ಬೇರೆಯವರ ರೀತಿ ಟೀಕೆ ಮಾಡಲು ಹೋಗುವುದಿಲ್ಲ 25-30 ವರ್ಷ ಒಂದೂ ಆಕ್ಸಿಡೆಂಟ್ ಮಾಡದೆ ಬಸ್ ಓಡಿಸಿರುವವರೂ ಇದ್ದಾರೆ, ಬಿಟಿಎಸ್ ಕಂಡಕ್ಟರ್ ಮತ್ತು ಡ್ರೈವರ್‌ಗಳಿಗೆ ನಾವೂ ನೀವೂ ಸೇರಿಕೊಂಡು ಯಾವುದಾದರೂ ಟ್ರೈನಿಂಗ್ ಕೋರ್ಸ್ ಮಾಡುವುದು ಒಳ್ಳೆಯದು. ಆಫ್ಟರಾಲ್, ಅವರಿಗೆ ಎಜುಕೇಶನ್ ಬ್ಯಾಕ್‌ಗ್ರೌಂಡ್ ಏನು ಮಹಾ ಇರುತ್ತದೆ? ಆದ್ದರಿಂದ ಒಂದು ರಿಫ್ರೆಶರ್ ಕೋರ್ಸ್‌ನ್ನು ಈಗಾಗಲೇ ಇರುವ ಎಂಪ್ಲಾಯಿಸ್‌ಗೆ ಮಾಡಲು ಕ್ರಮ ತೆಗೆದುಕೊಳ್ಳಬೇಕು ಮತ್ತು ಯಾರು ಹೊಸದಾಗಿ ಸರ್ವಿಸ್‌ಗೆ ಸೇರುತ್ತಾರೋ ಅವರಿಗೆ ಕಡೆಪಕ್ಷ 6 ತಿಂಗಳಾದರೂ ಸಹ ಟ್ರೈನಿಂಗ್ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ. ಒಟ್ಟಿನಲ್ಲಿ ಈ ಸಾರಿಗೆ ಸಂಸ್ಥೆ ಬಗ್ಗೆ ಹೇಳಬೇಕೆಂದರೆ ಯಾವುದೇ ಕಾರಣದಿಂದಲೂ ಬಸ್ ದರವನ್ನು ಜಾಸ್ತಿ ಮಾಡಲು ಹೋಗಬೇಡಿ.

ಈ ಬಸ್‌ನ ಮೇಲೆ ಪ್ರಯಾಣ ಮಾಡತಕ್ಕಂಥದ್ದನ್ನು ತಪ್ಪಿಸುವುದಕ್ಕೆ ಹೆಚ್ಚಿಗೆ ಬಸ್‌ನ್ನು ತಾವು ಹಾಕಬೇಕು ಎಂದು ಕೇಳಿಕೊಳ್ಳುತ್ತೇನೆ. ಬೆಂಗಳೂರಿಗೆ ಮಾತ್ರ ನಿಮ್ಮ ಕಾಲದಲ್ಲಿ ಏನಾದರೂ ಮಾಡಿ ಈ ಸೆಪರೇಟ್ ಮೋಡ್ ಆಫ್ ಟ್ರಾನ್ಸ್‌ಪೋರ್ಟ್‌ಗೆ ಫೌಂಡೇಶನನ್ನು ಹಾಕಬೇಕು, ಅದನ್ನು ಪ್ರಾರಂಭ ಮಾಡಬೇಕು. ವಿಶ್ವಬ್ಯಾಂಕ್‌ನಿಂದ ಲೋನನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನವನ್ನು ಮಾಡಬೇಕು. ಕಳೆದ ಒಂದೂವರೆ ವರ್ಷದ ಹಿಂದೆ ಸಿ.ರೂಟ್ಸ್‌ಗಳನ್ನು ಕ್ಯಾನ್ಸಲ್ ಮಾಡಿದ್ದೀರಿ. ಅವುಗಳನ್ನು ಮತ್ತೆ ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ. ಮತ್ತೆ ಈ ರೆಕ್ರೂಟ್‌ಮೆಂಟ್ ಬೋರ್ಡ್‌ನ್ನು ಮಾಡಬೇಕು. ಕೆ.ಎಸ್.ಆರ್.ಟಿ.ಸಿ.ಯನ್ನು ಬೈಫರ್‌ಕೇಟ್ ಮಾಡತಕ್ಕಂಥದ್ದು ಅತಿ ಅವಶ್ಯಕತೆ ಇದೆ. ಅದನ್ನು ಒಂದೆರಡು ವರ್ಷದಲ್ಲಿ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಸಾರಿಗೆ ಇಲಾಖೆಯ ಬಗ್ಗೆ ಸಂಬಂಧಪಟ್ಟ ಹಾಗೆ ಮೋಟಾರ್ ವೆಹಿಕಲ್ ಡಿಪಾರ್ಟ್‌ಮೆಂಟ್ ಇದೆ, ಈ ಮೋಟಾರ್ ವೆಹಿಕಲ್ ಡಿಪಾರ್ಟ್‌ಮೆಂಟ್‌ನಲ್ಲಿರತಕ್ಕಂಥ ಇನ್ಸ್‌ಪೆಕ್ಟರ್ಸ್‌ಗಳು ಯಾರು ಇದ್ದಾರೆ, ಅವರಿಗೆ ಕನ್‌ವೇಯೆನ್ಸ್ ಅಲೋಯೆನ್ಸನ್ನು ಕೊಡಬೇಕೆನ್ನುವುದು ಬಹಳ ದಿವಸಗಳಿಂದ ಪೆಂಡಿಂಗ್ ಇದೆ.

ಅದನ್ನು ತಾವು ಕನ್‌ಸಿಡರ್ ಮಾಡಬೇಕು ಎಂದು ಹೇಳುತ್ತೇವೆ. ಮತ್ತು ಇತ್ತೀಚಿನ ದಿನಗಳಲ್ಲಿ ಈ ಪಕ್ಕದ ರಾಜ್ಯಗಳಲ್ಲಿ, ನಮ್ಮ ರಾಜ್ಯದಲ್ಲಿ ಸ್ವಲ್ಪ ಡ್ರೈವಿಂಗ್ ಲೈಸೆನ್ಸ್‌ನ್ನು ಕೊಡುವುದರಲ್ಲಿ ನಾವು ಸ್ಟ್ರಿಕ್ಟ್ ಆಗಿದ್ದೇವೆ. ಪರವಾಗಿಲ್ಲ, ಈಗ ಅವರೆಲ್ಲಾ ಏನು ಮಾಡುತ್ತಿದ್ದಾರೆ ಎಂದರೆ ಪಕ್ಕದಲ್ಲಿ ಆಂಧ್ರ, ತಮಿಳುನಾಡು, ಕೇರಳ, ಮಹಾರಾಷ್ಟ್ರ, ಈ ಕಡೆ ನೇಬರಿಂಗ್ ಸ್ಟೇಟ್‌ಗಳ ಆರ್.ಟಿ.ಓ. ಆಫೀಸ್‌ಗಳಿಗೆ ಹೋಗಿ ಸಿಕ್ಕಾಪಟ್ಟೆ. ಡ್ರೈವಿಂಗ್ ಲೈಸೆನ್ಸ್ ಪಡೆದವರು ಬಹಳ ಜನ ಇದ್ದಾರೆ. ಬೆಂಗಳೂರಿನಿಂದ ಹೊಸೂರಿಗೆ ಹೋಗುತ್ತಾರೆ, ಅಲ್ಲಿಂದ ತೆಗೆದುಕೊಂಡು ಬರುತ್ತಾರೆ. ಇದಕ್ಕೆ ನೀವು ನಿಮ್ಮ ಸದರನ್ ಜೋನ್ ಟ್ರಾನ್ಸ್‌ಪೋರ್ಟ್‌ಮೀಟಿಂಗ್ ಕೌನ್ಸಿಲ್‌ನಲ್ಲಿ ಅಥವಾ ಟ್ರಾನ್ಸ್‌ಪೋರ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಇದನ್ನು ಸ್ವಲ್ಪ ಸ್ಟ್ರಿಕ್ಟ್ ಆಗಿ ಎನ್‌ಫೋರ್ಸ್ ಮಾಡುವುದಕ್ಕೆ ಅಲ್ಲಿರತಕ್ಕಂಥ ಅಧಿಕಾರಿಗಳಿಗೆ ಹೇಳಿ. ಐದಾರು ಜನ ಡ್ರೈವರ್‌ಗಳನ್ನು ನಾನೇ ಸ್ವತಃ

ನೋಡಿದ್ದೇನೆ. ಬಹಳ ರ್‍ಯಾಷ್ ಆಗಿ ಡ್ರೈವಿಂಗ್ ಮಾಡುತ್ತಿರತಕ್ಕಂಥವರು ಡ್ರೈವಿಂಗ್ ಲೈಸೆನ್ಸ್‌ನ್ನು ಎಲ್ಲಿ ಮಾಡಿಸುತ್ತೀರಿ ಎಂದು ಕೇಳಿದರೆ ಅಲ್ಲಿ ತೆಗೆದುಕೊಂಡು ಬಂದೆ, ಮದನಪಲ್ಲಿಯಲ್ಲಿ ತೆಗೆದಕೊಂಡು ಬಂದೆ, ಹೊಸೂರಿನಲ್ಲಿ ತೆಗೆದುಕೊಂಡು ಬಂದೆ ಎಂದು ಹೇಳುತ್ತಾರೆ. ಸೋಲ್ಲಾಪುರದಲ್ಲಿ ಹೋಗಿ ತೆಗೆದುಕೊಂಡು ಬಂದೆ ಎಂದು ಹೇಳುತ್ತಾರೆ. ಇದರ ಬಗ್ಗೆ ತಾವು ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಹೇಳಿ ನಾನು ಒತ್ತಾಯ ಮಾಡುತ್ತಿದ್ದೇನೆ. ಮತ್ತೆ ಈ ಆಕ್ಸಿಡೆಂಟ್‌ಗಳು ಇತ್ತೀಚಿನ ದಿನಗಳಲ್ಲಿ ಬಹಳ ಜಾಸ್ತಿಯಾಗಿ ಹೋಗಿದೆ ಇದರಿಂದ ನಾನು ನಿಮಗೆ ಹೇಳತಕ್ಕಂಥ ಅವಶ್ಯಕತೆ ಇಲ್ಲ, ಎಷ್ಟೊಂದು ಲಾಸ್ ಆಗುತ್ತಿದೆ, ಮತ್ತೆ ಜೀವಕ್ಕೆ ಹಣದ ಬೆಲೆಯನ್ನು ಕಟ್ಟುವುದಕ್ಕೆ ಆಗುತ್ತದೆಯೇ? ಪ್ರಾಣಕ್ಕೆ ಬೆಲೆಯನ್ನು ಕಟ್ಟುವುದಕ್ಕೆ ಆಗುತ್ತದೆಯೇ ಎಂದು ತಮಗೆ ಗೊತ್ತಿರುವ ವಿಚಾರ.

ಇದರ ಬಗ್ಗೆ ಪೋಲೀಸ್ ಡಿಪಾರ್ಟ್‌ಮೆಂಟ್‌ನವರು ಮತ್ತು ನಿಮ್ಮ ಮೋಟಾರು ವೆಹಿಕಲ್ ಡಿಪಾರ್ಟ್‌ಮೆಂಟ್‌ನವರು, ಕೆ.ಎಸ್.ಆರ್.ಟಿ.ಸಿ. ಈ ಮೂರು ಇಲಾಖೆಗಳು ಸೇರಿ ಇವುಗಳನ್ನು ಕಡಿಮೆ ಮಾಡುವುದಕ್ಕೆ, ನಿಯಂತ್ರಣ ಮಾಡಬೇಕು ಎಂದು ಹೇಳಿ ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತಿದ್ದೇನೆ. ಮತ್ತು ಯಾವುದೇ ಕಾರಣದಿಂದಲೂ ಸಹಾ ಬಸ್ ದರಗಳನ್ನು ನೀವು ಜಾಸ್ತಿ ಮಾಡುವುದಕ್ಕೆ ಹೋಗಬೇಡಿ. ಅದನ್ನು ಮಾಡುವುದಕ್ಕೆ ಹೋದರೆ ನಾವು ದೊಡ್ಡದಾಗಿ ಪ್ರತಿ ಭಟನೆಯನ್ನು ರಾಜ್ಯಾದ್ಯಂತ ಮಾಡುತ್ತೇವೆ ಎನ್ನತಕ್ಕಂಥ ಎಚ್ಚರಿಕೆಯನ್ನು ಮತ್ತೊಮ್ಮೆ ನಿಮಗೆ ಕೊಡುತ್ತಿದ್ದೇನೆ.... ಅದು ಯಾವ ರೀತಿಯ ಪ್ರತಿಭಟನೆ ಎಂದು ಅವರಿಗೆ ಗೊತ್ತಾಗುತ್ತದೆ. ಅವರು 25 ಪರ್‌ಸೆಂಟ್ ಎಂದು ಬಸ್ ದರಗಳನ್ನು ಜಾಸ್ತಿ ಮಾಡಿದ ಮೇಲೆ ಮೈಸೂರಿಗೆ ಹೇಗೆ ಹೋಗುತ್ತಾರೆ ಎಂದು ನಾವು ನೀವೂ ನೋಡುತ್ತೇವಲ್ಲ!

ಶ್ರೀ ವಾಟಾಳ್ ನಾಗರಾಜ್ : ಅವರು ಮಂತ್ರಿಗಳಾದ ಮೇಲೆ ಕೆಟ್ಟಿದ್ದುದು ಮೊದಲು ಬಹಳ ಚೆನ್ನಾಗಿದ್ದರು.

(ನಗು)

ಶ್ರೀ ಪಿ.ಜಿ.ಆರ್. ಸಿಂಧ್ಯ : ಕಾರ್ಮಿಕ ಇಲಾಖೆಯ ಬಗ್ಗೆ ನಾನು ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಕಾರ್ಮಿಕ ಇಲಾಖೆಯಲ್ಲಿ ಬಹಳ ಮುಖ್ಯವಾಗಿ ಕೆಲವು ಫ್ಯಾಕ್ಟರಿಗಳೆಲ್ಲವನ್ನೂ ಮುಚ್ಚಿ ಬಿಟ್ಟಿದ್ದಾರೆ. ಅವುಗಳಲ್ಲಿ ಕೆ.ಆರ್.ಮಿಲ್ಸ್ ಇರಬಹುದು, ಅಲೆಂಬಿಕ್ ಗ್ಲಾಸ್ ಇರಬಹುದು, ಮೆಹಾಥಾ ಗ್ರೂಪ್ ಇರಬಹುದು, ಚಾಮುಂಡಿ ಮೊಪೆಡ್ಸ್ ಇರಬಹುದು, ಜಿ.ಬಿ.ಬ್ರದರ್ಸ್, ಬೆಂಗಳೂರು ಇರಬಹುದು, ಮಫತ್ ಲಾಲ್ ಫ್ಲೆವುಡ್, ಇವುಗಳನ್ನು ಮುಚ್ಚಿರುವುದು ತಮಗೆ ಗೊತ್ತಿರುವ ವಿಚಾರ.

ಇವುಗಳನ್ನು ಪ್ರಾರಂಭ ಮಾಡುವುದಕ್ಕೆ ನೀವು ಕಳೆದ ಐದಾರು ತಿಂಗಳಲ್ಲಿ ಏನು ಪ್ರಯತ್ನವನ್ನು ಮಾಡಿದ್ದೀರಿ ಎನ್ನುವುದನ್ನು ನಮಗೆ ತಿಳಿಸಬೇಕು. ಇತ್ತೀಚಿನ ದಿನಗಳಲ್ಲಿ ಈ ಸದನದಲ್ಲಿ ನಮ್ಮ ಕಾರ್ಮಿಕ ಮುಖಂಡರುಗಳು ಇಲ್ಲ, ಹಿಂದೆ ಮಾನ್ಯ ಸೂರ್ಯನಾರಾಯಣರಾವ್ ಅವರು ಇದ್ದರು, ಮಾನ್ಯ ಕೃಷ್ಣನ್ ರವರು ಇದ್ದರು. ಪಂಪಾಪತಿಯವರು ಇದ್ದರು. ಅವರುಗಳು ಎಲ್ಲಾ ಸಮಸ್ಯೆಗಳ ಬಗ್ಗೆ ಮಾತನಾಡುತ್ತಿದ್ದರು. ಆಗ ಸರ್ಕಾರದ ಮೇಲೆ ಸ್ವಲ್ಪ ಒತ್ತಡ ಇತ್ತು. ಆದರೆ ಯಾವುದೇ ಕಾರ್ಮಿಕ ಮುಖಂಡರುಗಳು ಈ ದಿವಸ ಈ ಸದನದಲ್ಲಿ ಇಲ್ಲ, ಅವರ ಪರವಾಗಿ ನಾವು ಇವತ್ತು ಮಾತನಾಡಬೇಕಾಗಿದೆ. ನಾನಾದರೂ ಕೇಳುತ್ತಿರುವುದು ಈ ಗೌರ್ನ್‌ಮೆಂಟ್ ಆಫ್ ಇಂಡಿಯಾ ಮುಂದೆ ಯಾವುದು ಯಾವುದು ಕ್ಲೋಸ್ಡ್ ಫ್ಯಾಕ್ಟರೀಸ್ ಇದೆ, ಅದನ್ನೆಲ್ಲಾ ನೆಗೋಷಿಯೇಟ್ ಮಾಡುವುದಕ್ಕೆ ಬಿ.ಐ.ಎಫ್. ಆರ್. ಎಂದು ಹೇಳಿ ಒಂದು ಸಂಸ್ಥೆ ಇದೆ. ಈ ಬಿ.ಐ.ಎಫ್.ಆರ್. ಸಂಸ್ಥೆಯಲ್ಲಿ ನಮ್ಮ ರಾಜ್ಯದಿಂದ

ಹೋಗತಕ್ಕಂಥ ಕಾರ್ಮಿಕ ಇಲಾಖೆಯ ಅಧಿಕಾರಿಗಳು ಯಾರು ಇದ್ದಾರೆ, ಇವರು ನೆಗೋಷಿಯೇಷನ್ಸ್‌ನ್ನು ಸರಿಯಾಗಿ ಮಾಡುತ್ತಿಲ್ಲ. ಮುಚ್ಚಿರತಕ್ಕ ಫ್ಯಾಕ್ಟರಿಗಳನ್ನು ತೆಗೆದುಕೊಳ್ಳುವುದಕ್ಕೆ ಏನು ಕ್ರಮವನ್ನೂ ತೆಗೆದುಕೊಳ್ಳುತ್ತಿಲ್ಲ. ನನಗೆ ಗೊತ್ತಿರುವ ಹಾಗೆ ಅನೇಕ ಸಂದರ್ಭಗಳಲ್ಲಿ ಬಿ.ಐ.ಎಫ್.ಆರ್. ಅವರು ನಿಮ್ಮ ಕರ್ನಾಟಕ ರಾಜ್ಯದ ಕಾರ್ಮಿಕ ಇಲಾಖೆಯ ಅಧಿಕಾರಿಗಳು ಬಂದಿಲ್ಲ ಎಂದು ಹೇಳಿದ್ದಾರೆ.

2.15 ಪಿ.ಎಂ.

ಇದು ಪತ್ರಿಕೆಯಲ್ಲಿಯೂ ಸಹ ವರದಿಯಾಗಿದೆ. ಅದಕ್ಕೆ ನಾನು ಒಂದು ಸಲಹೆಯನ್ನು ಕೊಡುತ್ತಿದ್ದೇನೆ. ಮಹಾರಾಷ್ಟ್ರ ಸರ್ಕಾರದವರು ಬಿ.ಐ.ಎಫ್.ಆರ್. ಮುಂದೆ ಬರತಕ್ಕ ಎಲ್ಲಾ ಕಾರ್ಮಿಕ ವಿವಾದಗಳನ್ನು ಚರ್ಚೆ ಮಾಡಲಿಕ್ಕೆ ಅವರ ಪ್ರತಿನಿಧಿಗಳು ಯಾವಾಗಲೂ ಇರಬೇಕೆಂದು ಹೇಳಿ, ದೆಹಲಿಯಲ್ಲಿ ಒಂದು ಕಛೇರಿಯನ್ನು ಓಪನ್ ಮಾಡಿದ್ದಾರೆ. ಅವರು ಮಹಾರಾಷ್ಟ್ರ ಭವನದಲ್ಲಿ ಓಪನ್ ಮಾಡಿದ್ದಾರೆ. ಇದು ಖಾಯಂ ಆಗಿ ಇರತಕ್ಕಂತದ್ದು. ಅನೇಕ ಸಂದರ್ಭದಲ್ಲಿ ಕಾರ್ಮಿಕ ಮುಖಂಡರುಗಳು ದೆಹಲಿಯಲ್ಲಿ ಹೋಗಿ ಕಾಯ್ತಿರುತ್ತಾರೆ. ಬಿ.ಐ.ಎಫ್.ಆರ್‌ನವರು ಕಾಯ್ದಿರುತ್ತಾರೆ.

ಆದರೆ ನಮ್ಮ ಕರ್ನಾಟಕ ರಾಜ್ಯದ ಅಧಿಕಾರಿಗಳೇ ಅಲ್ಲಿ ಇರುವುದಿಲ್ಲ. 6 ತಿಂಗಳು 3 ತಿಂಗಳು ಪೋಸ್ಟ್ ಪೋನ್ ಮಾಡಿಬಿಡುತ್ತಾರೆ. ಹೀಗಾಗಿ ವರ್ಷಾನುಗಟ್ಟಲೆ ಅವರ ಸಮಸ್ಯೆಗಳು ಮುಂದಕ್ಕೆ ಹೋಗುತ್ತಲೇ ಇರುತ್ತವೆ. ಕರ್ನಾಟಕ ರಾಜ್ಯದ ಕಾರ್ಮಿಕ ಇಲಾಖೆಯ ಕಛೇರಿಯನ್ನು ದೆಹಲಿಯಲ್ಲಿ ತೆರೆಯುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಇದು ಸ್ವಲ್ಪ ನಿಧಾನ ಆಗಬಹುದು. ಆದರೆ ಬಿ.ಐ.ಎಫ್.ಆರ್ ಮುಂದೆ ಬರತಕ್ಕ ಪ್ರತಿಯೊಂದು ಕೇಸಸ್‌ಗಳಿಗೂ ನಮ್ಮ ಅಧಿಕಾರಿಗಳೇ ಹೋಗಿ, ಕಾರ್ಮಿಕರಿಗೆ ಆಗಿರತಕ್ಕ ಅನ್ಯಾಯವನ್ನು ತಡೆಗಟ್ಟುವುದಕ್ಕೆ ತಾವು ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಬೆಂಗಳೂರು ತುಮಕೂರು ರಸ್ತೆಯಲ್ಲಿ ಮಫತ್ ಲಾಲ್ ಪೈವುಡ್ ಫ್ಯಾಕ್ಟರಿ ಇದೆ. ಆ ಫ್ಯಾಕ್ಟರಿ ಮ್ಯಾನೇಜ್‌ಮೆಂಟ್‌ನವರು ಮುಚ್ಚಿರುವುದನ್ನು ತೆರೆಯುವುದಕ್ಕೆ ಅವರು ತಯಾರಿದ್ದಾರೆ. ಅವರು ಏನು ಕಂಡೀಶನ್ ಹಾಕಿದ್ದಾರೆಂದು ಎಂದರೆ, ಅವರದೇ ಆದ 2-3 ಎಕರೆ ಜಮೀನನ್ನು ಮಾರಲಿಕ್ಕೆ ಸರ್ಕಾರದ ಪರ್ಮಿಷನ್ ಅನ್ನು ಕೇಳಿದ್ದಾರೆ. ಇದನ್ನು ಕಳೆದ 2-3 ವರ್ಷಗಳಿಂದ ಏಕೆ ಪೆಂಡಿಂಗ್ ಇಟ್ಟಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಸುಮಾರು 700-800 ಜನ ಕಾರ್ಮಿಕರು ಇವತ್ತು ಬೀದಿ ಪಾಲಾಗಿದ್ದಾರೆ. ಮ್ಯಾನೇಜ್‌ಮೆಂಟ್‌ನವರು ತಯಾರಿದ್ದಾರೆ. ಅದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಂಡು ಮುಖ್ಯ ಮಂತ್ರಿಗಳ ಮೇಲೆ ಒತ್ತಾಯ ತಂದು ಅದನ್ನು ಬೇಗ ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಮಿನಿಮಂ ವೇಜಸ್ ಆಕ್ಟ್‌ನಲ್ಲಿ 60 ಇಂಡಸ್ಟ್ರೀಸ್ ಗಳು ಷೆಡ್ಯೂಲ್ ಎಂಪ್ಲಾಯಿಂಟ್ ಮೆಂಟ್ ನಾವು ಅಲಾಟ್ ಮಾಡಿಕೊಂಡಿದ್ದೇವೆ. ಸುಮಾರು 50 ಲಕ್ಷ ಜನ ಕಾರ್ಮಿಕರು, ಊರಿನ ಕಾರ್ಮಿಕರು ಸೇರಿ ಕೆಲಸ ಮಾಡುತ್ತಿದ್ದಾರೆ. ಸುಮಾರು 37 ಇಂಡಸ್ಟ್ರೀಸ್‌ಗಳಲ್ಲಿ ಮಿನಿಮಂ ವೇಜಸ್ ಫಿಕ್ಸ್ ಮಾಡತಕ್ಕದ್ದು ಸರ್ಕಾರದ ಕರ್ತವ್ಯವಾಗಿದೆ. ಅದಕ್ಕೋಸ್ಕರ ಒಂದು ಬೋರ್ಡ್ ಇದೆ. ಆ ಅಡ್ವೈಸರಿ ಬೋರ್ಡ್‌ನವರು ಈಗಾಗಲೇ 18 ಇಂಡಸ್ಟ್ರೀಸ್‌ಗಳಿಗೆ ನಮ್ಮ ಮುಂದೆ ಪ್ರಪೋಸಲ್ ಅನ್ನು ಕಳುಹಿಸಿದ್ದಾರೆ. ಆ 18 ಪ್ರಾಪೋಸಲ್‌ಗಳಲ್ಲಿ ಒಂದನ್ನು ಮಾತ್ರ ನೀವು ಅಪ್ರೂವ್ ಮಾಡಿದೀರಿ? ಬಾಕಿ 17 ಅನ್ನು ನೀವು ಅಪ್ರೂವಲ್ ಮಾಡಿಲ್ಲ. ಏನು ಕಾರಣ ಎಂಬುದನ್ನು ತಾವು ದಯವಿಟ್ಟು ತಿಳಿಸಬೇಕು. ಯಾವಾಗ ಮಾಡುತ್ತೀರೆಂಬುದನ್ನು ತಿಳಿಸಿ. ಮಿನಿಮಂ ವೇಜಸ್ ಅನ್ನು ಫಿಕ್ಸ್ ಮಾಡುವುದಕ್ಕೆ ನಿಮಗೆ ಇರುವಂಥ ತೊಂದರೆ ಏನು?

ಇದು ನಮಗೆ ಅರ್ಥ ಆಗದೆ ಇರತಕ್ಕದ್ದು. ಈ ಅಡ್ವೈಸರಿ ಬೋರ್ಡ್‌ನವರು ನಿಮಗೆ ರೆಕಮೆಂಡ್ ಮಾಡಿದ್ದು ಡೈಲಿವೇಜಸ್‌ಗೆ 23-50 ಪೈಸೆ ಆಗಬೇಕೆಂದು. ಪ್ಲಾಂಟೇಶನ್ ಇಂಡಸ್ಟ್ರೀಸ್‌ರವರು ರೆಕಮಂಡ್ ಮಾಡಿದರೂ ಸಹ ನೀವು ಏತಕ್ಕೆ 19-50 ಪೈಸೆ ಮಾಡಿದ್ದೀರಿ? ಏಕೆ? ಪ್ಲಾಂಟೇಶನ್ ಓನರ್ಸ್ ಪವರ್ ಫುಲ್ಲಾಗಿ ಇದ್ದಾರೆಂದು, ಅವರ ಪ್ರಜೆರ್ಸ್‌ಗೇನಾದರೂ ಈಲ್ಡ್ ಆಗಿದ್ದೀರಾ? ಈಗ ನಿಮಗೆ ಗೊತ್ತಿರುವ ಹಾಗೆ ಮಿನಿಮಂ ಅಡ್ವೈಸರಿ ಬೋರ್ಡ್‌ನಲ್ಲಿ ಅವರ ರೆಪ್ರಜೆಂಟೇಟೀವ್ ಇರುತ್ತಾರೆ. ಲೇಬರ್ ರೆಪ್ರೆಜೆಂಟೇಟೀವ್ ಮ್ಯಾನೇಜ್‌ಮೆಂಟ್ ರೆಪ್ರೆಜೆಂಟೇಟೀವ್ ಗೌರ್ನ್‌ಮೆಂಟ್ ರೆಪ್ರಜೆಂಟೇಟೀವ್ ಇರುತ್ತಾರೆ. ಅವರೆಲ್ಲ ಸೇರಿಕೊಂಡು 23-50 ರೂಪಾಯಿಯನ್ನು ಫಿಕ್ಸ್ ಮಾಡಿರುತ್ತಾರೆ. ಕಾಫಿ ತೋಟದ ಮಾಲೀಕರುಗಳು ರಾಷ್ಟ್ರೀಕೃತ ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳುತ್ತಾರೆ.

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ಮಂತ್ರಿಗಳು) : ಈ ಪ್ಲಾಂಟೇಶನ್ ಮಿನಿಮಂ ವೇಜಸ್ ಫಿಕ್ಸ್ ಮಾಡುವುದಕ್ಕಿಂತ ಮುಂಚೆ ರೆಪ್ರೆಜೆಂಟೇಶನ್ ಬಂದಿತ್ತು. 23 ರೂಪಾಯಿ ಕೊಡುವುದರಿಂದ ಈಗಾಗಲೇ ಎಕ್ಸ್‌ಪೋರ್ಟ್ ಮಾರ್ಕೆಟಿನಲ್ಲಿ ಕಾಫಿ ರೇಟ್ ಕಡಿಮೆ ಆಗಿರುವುದರಿಂದ ಈ ಮಿನಿಮಂ ವೇಜಸ್ ಹೆಚ್ಚಿಗೆ ಮಾಡುವುದರಿಂದ ಟೋಟಲಿ ಈ ಇಂಡಸ್ಟ್ರೀ ಕೋಲಾಪ್ಸ್ ಆಗುತ್ತದೆ ಎನ್ನುವ ದೃಷ್ಟಿಯಿಂದ ಮೆಮೊರಾಂಡಂ ಬಂದಿತ್ತು. ಆ ಕಾಲದಲ್ಲಿ ನಾವು ಪ್ಲಾಂಟೇಶನ್ ಓನರ್ಸ್ ಅನ್ನು ಮತ್ತು ಅಲ್ಲಿರುವಂತಹ ಎಂಪ್ಲಾಯೀಸ್ ಯೂನಿಯನ್ ರವರನ್ನು ಕರೆಯಿಸಿ ಒಂದು ಸಭೆಯನ್ನು ಮಾಡಿ ಚರ್ಚೆ ಮಾಡಿದ್ದೇವೆ. ಚರ್ಚೆ ಮಾಡಿದಂತಹ ಸಂದರ್ಭದಲ್ಲಿ ಅವರು ಎಷ್ಟು ಕೊಡಬೇಕೆನ್ನುವ ಅಭಿಪ್ರಾಯವನ್ನು ಯೂನಿಯನ್ ಲೀಡರ್ ಹೇಳಿದ್ದರೂ ಅದಕ್ಕಿಂತ 25 ಪೈಸೆ ನಾನು ಹೆಚ್ಚಿಗೆ ಮಾಡಿದ್ದೇನೆ. ಅಡ್ವೈಸರಿ ಬೋರ್ಡ್ ಮಾಡಿದ್ದಕ್ಕೆ ನಾವೆಲ್ಲೂ ಅಕ್ಸೆಪ್ಟ್ ಮಾಡಬೇಕೆನ್ನುವ ಬೈಡಿಂಗ್ ಸರ್ಕಾರದ ಮೇಲೆ ಯಾವುದೂ ಇಲ್ಲ. ಆ ಇಂಡಸ್ಟ್ರೀಸ್ ಸರ್ವೈವ್ ಆಗಬೇಕೆನ್ನುವ ದೃಷ್ಟಿಯಿಂದ ಎಲ್ಲಾ ಕಾರ್ಮಿಕ ನಾಯಕರು ಅಲ್ಲಿದ್ದಂತಹ ಪರಿಸ್ಥಿತಿಯನ್ನು ನೋಡಿ ಅವರು 18.75 ಪೈಸೆ ಕೊಡಬೇಕೆಂದು ಹೇಳಿದ್ದರೂ ಕೂಡ ನಾವು ಅದಕ್ಕಿಂತಲೂ ಹೆಚ್ಚಿಗೆ ಮಾಡಿ ನೋಟಿಫೈ ಮಾಡಿದ್ದೇವೆ. ಯಾವ ರೀತಿಯಾದ ಪ್ರೆಜರ್ ಇಲ್ಲ ಮತ್ತು ಈಲ್ಡ್ ಆಗುವಂತಹ ಮಾತೂ ಇಲ್ಲ. The intention is the industry should survive. ಇನ್ನೇನೂ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಹೇಳುತ್ತೇನೆ ತಾವು ಈಲ್ಡ್ ಆಗಿದ್ದೀರಿ. ಕಾಫಿ ತೋಟದ ಮಾಲಿಕರಿಗೆ ತಾವು ಯೀಲ್ಡ್ ಆಗಿದ್ದೀರಿ ಇಂಟರ್ ನ್ಯಾಷನಲ್ ಕಾಫಿ ಮಾರ್ಕೆಟಿನಲ್ಲಿ ಕಾಫಿ ಬೆಲೆ ಕಡಿಮೆಯಾಯಿತೆಂದು ಅವರು ರೆಪ್ರೆಸೆಂಟೇಶನ್ ಕೊಡಬಹುದು. ಇದು ಮೂರರಿಂದ ಆರು ತಿಂಗಳು ಫ್ಲಕ್ಚುಯೇಷನ್ ಆಗುತ್ತದೆ. ನ್ಯಾಷನಲೈಸ್ಡ್ ಬ್ಯಾಂಕುಗಳಿಂದ ಇವರು ಸಾಲವನ್ನು ತೆಗೆದುಕೊಂಡಿಲ್ಲವೇ? ಅದರ ಬಡ್ಡಿ ಏನಾದರೂ ಕಡಿಮೆ ಜಾಸ್ತಿ ಆಗುತ್ತದೆಯೇ? ಇಂಟರ್ ನ್ಯಾಷನಲ್ ಮಾರ್ಕೆಟಿನಲ್ಲಿ ಮುಂದಿನ ತಿಂಗಳು ಕಾಫಿ ಬೆಲೆ ಜಾಸ್ತಿಯಾಗಬಹುದು. ಮೂರು ವರ್ಷಕ್ಕೆ ನೀವು ಡೈಲಿ ವೇಜಸನ್ನು ಫಿಕ್ಸ್ ಮಾಡಿದ್ದಿರೆ, ಅದನ್ನು ಹೆಚ್ಚು ಮಾಡಲು ಪ್ರಯತ್ನ ಮಾಡಿ.

SRI A.S. NADAGOWDA : One more point you should note here.

ನಮ್ಮ ಕರ್ನಾಟಕ ಸ್ಟೇಟ್ ಮಿನಿಮಮ್ ವೇಜಸ್ ಸಿಸ್ಟಮ್ ಪ್ರಕಾರ we have got variable D.A.System.

ನಮ್ಮಲ್ಲಿ ಪ್ರತಿ ವರ್ಷ ವೇರಿಯೇಬಲ್ ಡಿಎ ಇದೆ. ಅದು ಇನ್‌ಕ್ರೀಸ್ ಆಗುತ್ತಾ ಹೋಗುತ್ತದೆ. ಇದು ಬೇರೆ ರಾಜ್ಯಗಳಲ್ಲಿ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಕಾಫಿ ಪ್ಲಾಂಟೇಶನ್ ಇರುವುದು ಕರ್ನಾಟಕದಲ್ಲೇ

ಹೆಚ್ಚು. ಇದೆಲ್ಲಾ ರೆಡಿಮೇಡ್ ಉತ್ತರಗಳು, ಅಧಿಕಾರಿಗಳು ನಿಮಗೆ ಕೊಡುತ್ತಾರೆ. ಬೇರೆ ರಾಜ್ಯಗಳಲ್ಲಿ ಇಲ್ಲ. ಆದುದರಿಂದ ನಾವು ಮಾಡುವುದಿಲ್ಲ ಎನ್ನುವುದು ಸರಿಯಲ್ಲ. ಮಾನ್ಯ ಅಜೀಜ್ ಸೇಠ್‌ರವರು ಉತ್ತರ ಕೊಡುವುದು ನನಗೆ ಗೊತ್ತಿದೆ. ಮಹಾರಾಷ್ಟ್ರದಲ್ಲಿ ಕಿಲೋಮೀಟರ್‌ಗೆ ಇಷ್ಟಿದೆ, ಆಂಧ್ರ ಪ್ರದೇಶದಲ್ಲಿ ಕಿಲೋಮೀಟರ್‌ಗೆ ಇಷ್ಟಿದೆ, ತಮಿಳುನಾಡಿನಲ್ಲಿ ಕಿಲೋಮೀಟರ್‌ಗೆ ಇಷ್ಟಿದೆ ಅದಕ್ಕೋಸ್ಕರ, on par with that ನಾನು ಮಾಡುತ್ತೇನೆ ಎನ್ನುವಂಥ ರೆಡಿಮೇಡ್ ಉತ್ತರವನ್ನು ಅವರು ಕೊಡುತ್ತಾರೆ. ತಾವು ದಯವಿಟ್ಟು ಅವರ ಮಾತನ್ನು ಕೇಳುವುದಕ್ಕೆ ಹೋಗಬೇಡಿ. ನೀವು ಯೀಲ್ಡ್ ಆಗಿದ್ದೀರಿ. ಮೇಲ್ಗಡೆಯವರು ಯಾರೋ ತಮಗೆ ಯೀಲ್ಡ್ ಆಗುವುದಕ್ಕೆ ಹೇಳಿದ್ದಾರೆ ಎಂದು ಕಾಣುತ್ತದೆ. ಇವತ್ತು ರೂ.19-50ಕ್ಕೆ ಏನು ಬರುತ್ತದೆ. ಇದನ್ನು ನೀವು ಯೋಚನೆ ಮಾಡಬೇಕು. ರೂ.25-30 ಕೊಟ್ಟರೂ ಕೂಲಿ ಆಳು ಸಿಗುವುದಿಲ್ಲ. ಗೌಡ್ರೆ ಇದು ನಿಮಗೂ ನಮಗೂ ಇಬ್ಬರಿಗೂ ಗೊತ್ತಿರುವ ವಿಚಾರ.

ಶ್ರೀ ಎಸ್. ಹೆಚ್. ಕೌಜಲಗಿ: ಶೇಂಗ ಎಣ್ಣೆ ಒಂದು ಕೇಜಿಗೆ 70 ರೂಪಾಯಿ ಆಗಿದೆ. ಸೀಮೆ ಎಣ್ಣೆ ಒಂದು ಲೀಟರಿಗೆ ಏಳು ರೂಪಾಯಿ ಆಗಿದೆ.

ಶ್ರೀ ಎ.ಎಸ್. ನಾಡಗೌಡ: ಆ ದೃಷ್ಟಿಯಲ್ಲಿ ನಾವು ನೋಡುತ್ತಾ ಹೋದರೆ ನಾವು ಕೂಡ ಎಷ್ಟೋ ತಪ್ಪನ್ನು ಮಾಡುತ್ತಿದ್ದೇವೆ ಎನ್ನುವ ವಿಚಾರ ಮಾಡಬೇಕಾಗುತ್ತದೆ. ಜವಾಹರ ರೋಜ್‌ಗಾರ್ ಯೋಜನೆಯಲ್ಲಿ ನಾವು ಎಷ್ಟು ಕೊಡುತ್ತಿದ್ದೇವೆ ಎನ್ನುವುದನ್ನು ವಿಚಾರ ಮಾಡಬೇಕಾಗಿದೆ. ಅದನ್ನು ಈಗ ಸರಿಮಾಡುತ್ತಿದ್ದೇವೆ. ನಮ್ಮ ಸರ್ಕಾರದವರು ಜಾಸ್ತಿ ಮಾಡಿಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. They wil get all the facilities. ಹೌಸಿಂಗ್ ಫೆಸಿಲಿಟಿ ಸಿಗುತ್ತದೆ ಮಿಡ್ಡೇಮೀಲ್ಸ್ ಸಿಗುತ್ತದೆ. ಹುಡುಗರಿಗೆ ಸ್ಕಾಲರ್‌ಶಿಪ್ ಕೊಡುತ್ತಿದ್ದಾರೆ. ಪ್ಲಾಂಟೇಷನ್ ವರ್ಕರ್ಸ್‌ಗೆ ಎಲ್ಲಾ ರೀತಿಯ ಬೆನಿಫಿಟ್‌ನ್ನು ಎಕ್ಸ್‌ಟೆಂಡ್ ಮಾಡುತ್ತಿದ್ದೇವೆ. ಎಲ್ಲಿ ಕೊಡುತ್ತಿಲ್ಲ ಎನ್ನುವುದರ ಬಗ್ಗೆ ತಾವು ಹೇಳಿದರೆ ಪರವಾಗಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ನನಗೆ ಎಲ್ಲಾ ವ್ಯವಹಾರಗಳು ಗೊತ್ತಿದೆ ಅದನ್ನು ಈಗ ಹೇಳುವುದು ಬೇಡ ಅಲಿಗೇಷನ್ ಇದೆ ತಮ್ಮ ಕಾಲದಲ್ಲಿ ಸಿಲ್ಕ್ ಇಂಡಸ್ಟ್ರೀಯಲ್ಲಿ ಮಿನಿಮಮ್ ವೇಜಸ್ ಎಷ್ಟಿದೆ ಎಂದು ತಮ್ಮ ಗಮನಕ್ಕೆ ಇನ್ನೂ ಬಂದಿಲ್ಲವೆಂದು ಕಾಣುತ್ತದೆ ಈಗಲೂ ಸೆರಿಕಲ್ಚರ್ ಇಂಡಸ್ಟ್ರಿಯಲ್ಲಿ ಮಿನಿಮಮ್ ವೇಜಸ್ ರೂ 2-30 ಕೊಡುತ್ತಿದ್ದಾರೆ. ಹೆಚ್ಚು ಮಾಡಲಿಕ್ಕೆ ಸರ್ಕಾರ ಇದ್ದಂಥ ಕಾಲದಲ್ಲಿ ಈ ಸೆರಿಕಲ್ಚರ್ ಇಂಡಸ್ಟ್ರೀಗೆ ಮಿನಿಮಮ್ ವೇಜಸ್ ಫಿಕ್ಸ್ ಮಾಡಬೇಕೆಂದು ಬಹಳವಾಗಿ ಪ್ರಯತ್ನ ಮಾಡಿದೆ. ಆದರೆ ಕೆಲವು ಕಾರಣಾಂತರದಿಂದ ಅದನ್ನು ಮಾಡುವುದಕ್ಕೆ ಆಗಲಿಲ್ಲ. ನಾನು ಸೆರಿಕಲ್ಚರ್ ಏರಿಯಾದಿಂದ ಬಂದವನು. ಈಗ ನಿಮ್ಮ ಕಡೆ ಇದನ್ನು ಬೆಳೆಯುವುದಕ್ಕೆ ಪ್ರಾರಂಭ ಮಾಡಿದ್ದೀರೆಂದು ಗೊತ್ತಾಗಿದೆ. ತಾವು ಇದರ ಕಡೆ ಗಮನಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಮತ್ತೆ ಕೆಲವು ಇಂಡಸ್ಟ್ರೀಗಳನ್ನು ಷೆಡ್ಯೂಲ್ಡ್ ಎಂಪ್ಲಾಯ್‌ಮೆಂಟ್‌ನಲ್ಲಿ ಕವರ್ ಮಾಡಿಲ್ಲ. ವಿಶೇಷವಾಗಿ ಹೇಳಬೇಕೆಂದರೆ ಪ್ಲಾಸ್ಟಿಕ್ ಅಂಡ್ ರಬ್ಬರ್ ಇಂಡಸ್ಟ್ರೀ ಗ್ರಾನೈಟ್ ಇಂಡಸ್ಟ್ರೀ ಫುಡ್ ಇಂಡಸ್ಟ್ರೀ ಪ್ಯಾಕೇಜ್ ಇಂಡಸ್ಟ್ರೀ ಫಾರಸ್ಯೂಟಿಕಲ್ ಇಂಡಸ್ಟ್ರಿ ಇವುಗಳನ್ನು ಷೆಡ್ಯೂಲ್ಡ್ ಎಂಪ್ಲಾಯ್‌ಮೆಂಟ್‌ನಲ್ಲಿ ಬರುವಂತೆ ಮಾಡಬೇಕೆಂದು ತಮ್ಮನ್ನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಇನ್ನು ಅಂಗನವಾಡಿ ವರ್ಕರ್ಸ್ ಬಗ್ಗೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಬಹುಶಃ ಚರ್ಚೆಗೆ ಬರುವುದಿಲ್ಲ. ಇದು ನಿಮಗೆ ನೇರವಾಗಿ ಸಂಬಂಧ ಇದೆ. ಏನಾಗಿದೆ ಎಂದರೆ ಮಿನಿಮಮ್ ವೇಜಸ್ ರೂ 19-50 ಕೊಡುತ್ತಿದ್ದೇವೆ ಎಂದು ಹೇಳುತ್ತೀರಿ. ಆದರೆ ಕೆಲವು ಕಡೆ ಒಂದು ದಿನಕ್ಕೆ ರೂ 10-00 ಕೊಡುತ್ತಿದ್ದೀರಿ.

ಸುಮಾರು 36000-40000 ಅಂಗನವಾಡಿ ವರ್ಕರ್ಸ್ ಇದ್ದಾರೆ. ಇದು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವಂತದ್ದಲ್ಲ ಅದು ನನಗೆ ಗೊತ್ತಿದೆ. ನೀವು ಕೇಂದ್ರ ಸರ್ಕಾರಕ್ಕೆ ಬರೆಯಬೇಕು ಕೇಂದ್ರ ಸರ್ಕಾರದವರು ಆ ಪತ್ರವನ್ನು ನೋಡುವುದಕ್ಕೆ ಆರು ತಿಂಗಳು ಬೇಕಾಗುತ್ತದೆ. ಅಷ್ಟರಲ್ಲಿ ಮಂತ್ರಿಗಳು ಬದಲಾವಣೆ ಆಗಬಹುದು ನಾನು ನಿಮ್ಮಲ್ಲಿ ಒತ್ತಾಯ ಮಾಡುವುದು ಇಷ್ಟೇ ನೀವು ಸೋಶಿಯಲ್ ವೆಲ್‌ಫೇರ್ ಮಿನಿಸ್ಟರ್ ಕುಳಿತುಕೊಂಡು ಫೈನಾನ್ಸ್ ಸೆಕ್ರೆಟರಿಯವರನ್ನು ಕರೆಯಿಸಿ ಈ ಅಂಗನವಾಡಿ ವರ್ಕರ್ಸ್‌ಗೆ ಒಂದಲ್ಲ ಒಂದು ರೀತಿಯಲ್ಲಿ ಸಹಾಯ ಮಾಡಲು ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವರುಗಳು ನಿಜವಾಗಿ ಕೆಲಸ ಮಾಡುವಂಥ ಜನ. ಇವರುಗಳು ತಮಗೆ ಬಹಳವಾಗಿ ಶಾಪ ಹಾಕುತ್ತಿದ್ದಾರೆ. ಈ ಅಂಗನವಾಡಿ ವರ್ಕರ್ಸ್ ಮಕ್ಕಳ ಗಲೀಜನ್ನು ಒರೆಸಿ ಅವರನ್ನು ನೋಡಿಕೊಳ್ಳುವುದು ಅವರಿಗೆ ಪಾಠ ಹೇಳಿಕೊಡುವ ಉತ್ತಮವಾದ ಕೆಲಸವನ್ನು ಮಾಡುತ್ತಿದ್ದಾರೆ. ದಯವಿಟ್ಟು ಇವರಿಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇತ್ತೀಚಿನ ದಿನಗಳಲ್ಲಿ ಕೆಲವು ಮ್ಯಾನೇಜ್‌ಮೆಂಟ್‌ರವರು ನೀವು ಮೀಟಿಂಗ್ ಕರೆದರೆ ಬರುವುದಿಲ್ಲ ನಿಮಗೆ ಅನುಭವವಾಗಿದೆಯೋ ಏನೋ ಗೊತ್ತಿಲ್ಲ.

ನಾನು ಹೆಚ್ಚಿಗೆ ದಿನ ಲೇಬರ್ ಮಿನಿಸ್ಟರ್ ಅಗಿರಲಿಲ್ಲ. ಐದಾರು ದಿವಸ ಮಾತ್ರ ಆಗಿದ್ದೆ. ಈಗ ಉದಾಹರಣೆಗೆ ಒಬ್ಬರಿದ್ದಾರೆ ಮೆಟಲ್ ಲ್ಯಾಂಪ್ಸ್ ಕ್ಯಾಪ್ಸ್(ಇಂಡಿಯಾ) ಬೆಂಗಳೂರು ಆಂಗ್ಲೋಫ್ರೆಂಚ್ ಡ್ರಗ್ ಕಂಪೆನಿ ರಾಜಾಜಿನಗರ ಇದೊಂದು ದೊಡ್ಡ ಸ್ಕ್ಯಾಂಡಲ್...... ಸಧ್ಯದಲ್ಲಿ ಬರುತ್ತದೆ. ಇವರು ಸುಮಾರು ಹತ್ತು ವರ್ಷಗಳ ಹಿಂದೆ ಎಂಟು ಎಕರೆ ಜಮೀನನ್ನು ಯಶವಂತಪುರದ ಹತ್ತಿರ ಖರೀದಿಸಿದರು. ಆಂಗ್ಲೋ-ಫ್ರೆಂಚ್ ಡ್ರಗ್ ಕಂಪನಿಯವರು ಫ್ಯಾಕ್ಟರಿಯನ್ನು ಎಕ್ಸ್‌ಪ್ಯಾಂಡ್ ಮಾಡುತ್ತೇವೆಂದು ಜಮೀನನ್ನು ತೆಗೆದುಕೊಂಡರು. ಬಹಳ ಪ್ರೀಮಿಯಂ ಲ್ಯಾಂಡ್ 10-12 ಕೋಟಿ ರೂಪಾಯಿಗಳಾಗುತ್ತದೆ.

ಈಗ ನೆಗೋಶಿಯೇಷನ್ ಕರೆದರೆ ಬರುವುದಿಲ್ಲ. ಲೇಬರ್ ಎಕ್ಸ್‌ಪ್ಲಾಯಿಟೇಶನ್ ಮಾಡುತ್ತಾರೆ. ಅವರು ಫ್ಯಾಕ್ಟರಿಯನ್ನು ಎಕ್ಸ್‌ಪ್ಯಾಂಡ್ ಮಾಡಿಲ್ಲ. ಈಗ ಎಂಟು ಎಕರೆ ಜಮೀನನ್ನು ರೆಸಿಡೆನ್ಷಿಯಲ್ ಪರ್‌ಪಸ್‌ಗೆ ಕನ್‌ವರ್ಶನ್ ಮಾಡಿ ಸೈಟ್ ಮಾಡಿಬಿಟ್ಟು ಮಾಡುವುದಕ್ಕೆ ಹೊರಟಿದ್ದಾರೆ.

ಇದರ ಬಗ್ಗೆ ನೀವು ಏನು ಕ್ರಮ ತೆಗೆದುಕೊಳ್ಳುತ್ತೀರಿ? ಆ ತರಹದ್ದು ಬಹಳ ಇದೆ. ಮತ್ತೆ ಕಾಂಗೋವಿ ಎಲೆಕ್ಟ್ರಾನಿಕ್ಸ್ ಪೀಣ್ಯ ಅವುಗಳನ್ನೆಲ್ಲಾ ಒಂದು ಲಿಸ್ಟ್ ಮಾಡಿದ್ದೇವೆ. ಅದನ್ನು ನಿಮಗೆ ಕಳುಹಿಸಿಕೊಡುತ್ತೇನೆ. ಯಾವ ಮ್ಯಾನೇಜ್ ಮೆಂಟಿನವರು ನೀವು ಮಂತ್ರಿಗಳು ಸರ್ಕಾರದ ಅಧಿಕಾರಿಗಳು ಕರೆದಾಗ ಅವರಷ್ಟೇ ದೊಡ್ಡವರಾಗಿರಲಿ ಅವರು ಯೂನಿಯನ್ ಗೌರ್ನಮೆಂಟ್ ಪಬ್ಲಿಕ್ ಸೆಕ್ಟಾರ್ ಆಗಲಿ ಅಥವಾ ಸ್ಟೇಟ್ ಗೌರ್ನಮೆಂಟ್ ಪಬ್ಲಿಕ್ ಸೆಕ್ಟಾರ್ ಆಗಲಿ ಲೇಬರ್ ನೆಗೋಶಿಯೇಶನ್‌ಗೆ ಅವರು ಬರುವುದಿಲ್ಲವೆಂದರೆ ಎಲೆಕ್ಟ್ರಿಸಿಟಿ ಕಟ್ ಮಾಡಿಸಿ ವಾಟರ್ ಕಟ್ ಮಾಡಿಸಿ ಆಗ ಅವರೆಲ್ಲಾ ಓಡಿ ಬರುತ್ತಾರೆ ಇಲ್ಲದಿದ್ದರೆ ಬರುವುದಿಲ್ಲ. ಇದನ್ನು ಕಾರ್ಮಿಕರ ಹಿತದೃಷ್ಟಿಯಿಂದ ಮಾಡಬೇಕಾಗುತ್ತದೆ. ಇಲ್ಲದೆ ಹೋದರೆ ಕಾರ್ಮಿಕರ ಶೋಷಣೆ ಮುಂದುವರೆಸಿಕೊಂಡು ಹೋಗುತ್ತಾರೆ ಎನ್ನುವುದನ್ನು ತಾವು ತಿಳಿದುಕೊಳ್ಳಬೇಕು. ಮತ್ತೆ ಲೇಬರ್ ಕೋರ್ಟ್ಸ್ ಬಗ್ಗೆ ಅದ್ಯಾಕೋ ಏನೋ ಎಲ್ಲರ ಕಾಲದಲ್ಲೂ ಹೀಗೆ ಆಗುತ್ತಿದೆ. ಜಡ್ಜ್‌ಗಳನ್ನು ಪೋಸ್ಟ್ ಮಾಡುವಾಗ 57-58 ವರ್ಷ ವಯಸ್ಸಾಗಿರತಕ್ಕಂಥವರನ್ನು ಪೋಸ್ಟ್ ಮಾಡುತ್ತಾರೆ. ಪಾಪ ಅವರು ಬಹಳ ದಿನ ರಜೆಯಲ್ಲಿರುತ್ತಾರೆ. ಅವರಿಗೆ ಬೇಕಾದಷ್ಟು ತೊಂದರೆಗಳಿರಬಹುದು. ಲೇಬರ್ ಕೋರ್ಟುಗಳಲ್ಲಿ ಬಹಳಷ್ಟು ವೇಕೆನ್ಸಿಸ್ ಇದೆ. ತಾವು ದಯವಿಟ್ಟು ಈ ಸಭೆಗೆ ತಿಳಿಸಬೇಕು ಎಷ್ಟು ಕೇಸ್‌ಗಳು ಡಿಸ್‌ಪೋಸ್

ಆಗುತ್ತಿದೆ? ಎಂದು ತಾವೇ ನೋಡಿ ಇನಾರ್ಡಿನೇಟ್ ಡಿಲೇ ಆಗುತ್ತಿದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಒಟ್ಟಿನಲ್ಲಿ ನಿಮ್ಮ ಸರ್ಕಾರಕ್ಕೆ ಕಾರ್ಮಿಕರ ವಿಚಾರದಲ್ಲಿ ಒಂದು ನೀತಿ ಇಲ್ಲ. ಈ ಕಾರ್ಮಿಕರ ಹೆಸರಿನಲ್ಲಿ ಬಡವರ ಹೆಸರಿನಲ್ಲಿ ತಾವು ಏನು ಅಧಿಕಾರಕ್ಕೆ ಬಂದಿದ್ದೀರಿ. ಅವರ ಬಗ್ಗೆ ನೀವು ಏನು ಗಮನಕೊಡುತ್ತಿಲ್ಲ ಎಂದು ನಾನು ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ.

ಇವೊತ್ತು ಕಾರ್ಮಿಕರ ಅಶಾಂತಿ ಬಹಳ ಇದೆ. ಅದು ಅಗ್ರಿಕಲ್ಚರ್ ಸೆಕ್ಟರ್ ಇರಬಹುದು ನಾನ್ ಅಗ್ರಿಕಲ್ಚರ್ ಸೆಕ್ಟರ್ ಇರಬಹುದು. ಈ ದೃಷ್ಟಿಯಿಂದ ನೀವು ಇದರ ಬಗ್ಗೆ ಕ್ರಮ ತೆಗೆದುಕೊಂಡು ಸಿಕ್ ಆಗಿರತಕ್ಕ ಇಂಡಸ್ಟ್ರೀಸ್‌ಗಳನ್ನು ಪ್ರಾರಂಭ ಮಾಡಲಿಕ್ಕೆ ಮಿನಿಮಮ್ ವೇಜಸ್ ಷೆಡ್ಯೂಲ್ ಎಂಪ್ಲಾಯ್‌ಮೆಂಟ್‌ಗೆ ಏನು ಸೇರಿಸಬೇಕು ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಮತ್ತು ಮಾಲೀಕರುಗಳು ಇರತಕ್ಕಂಥ ಕಾನೂನುಗಳನ್ನು ಸರಿಯಾಗಿ ಕಾರ್ಯಾಚರಣೆ ಮಾಡ್ತಲಿಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಈ ಸಾರಿಗೆ ಇಲಾಖೆ ಮತ್ತು ಕಾರ್ಮಿಕ ಇಲಾಖೆಯ ಬಗ್ಗೆ ನನ್ನ ಅಭಿಪ್ರಾಯಗಳನ್ನು ಕೊಟ್ಟು ಈ ಬೇಡಿಕೆಗಳನ್ನು ನಾನು ವಿರೋಧಮಾಡಿ ಮಾನ್ಯ ಉಪಾಧ್ಯಕ್ಷಿಣಿಯವರು ನನಗೆ ಮಾತನಾಡುವುದಕ್ಕೆ ಸಾಕಷ್ಟು ಸಮಯ ಒದಗಿಸಿ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೇ ಇಲ್ಲಿ ನಮ್ಮ ಹಣೆಬರಹ ಏನಾಗಿದೆ ಎಂದರೆ ಇವೊತ್ತು ನೀವು ಒಂದು ದೊಡ್ಡ ವ್ಯಾಗನ್ ತುಂಬ ಬೇಡಿಕೆಗಳನ್ನು ಹಾಕಿದ್ದೀರಿ. ಈ ಸದನದಲ್ಲಿ ಸದಸ್ಯರ ಸಂಖ್ಯೆ ನೋಡಿದರೆ ಹದಿನೈದು ಜನ ಕುಳಿತಿದ್ದಾರೆ. ಎಷ್ಟರ ಮಟ್ಟಿಗೆ ಇದರ ಮಹತ್ವ ಇದೆ? ಅವರು ಎಷ್ಟರಮಟ್ಟಿಗೆ ಸಭೆಯಲ್ಲಿ ಭಾಗವಹಿಸಬೇಕು? ಸರ್ಕಾರ ಯಾವಾಗಲೂ ಪರ್ಮನೆಂಟಾಗಿ ಕುಳಿತುಕೊಂಡಿರತಕ್ಕ ನಾಗರತ್ನಮ್ಮನವರು ಬಿಟ್ಟರೆ ಇನ್ನಾರು ಕಾಣುತ್ತಿಲ್ಲ ನಾವೇ ಪರ್ಮನೆಂಟಾಗಿ ಕುಳಿತಿದ್ದೇವೆ. ಹಳ್ಳಿ ಕಡೆ ಸಾಕ್ಷಿ ಕಲ್ಲು ಕುಳಿತಂಗೆ ಇಲ್ಲಿ ಕುಳಿತುಕೊಂಡಿದ್ದೇವೆ. ನಾಳೆ ಎರಡು ವ್ಯಾಗನ್‌ಗಳಷ್ಟು ಬೇಡಿಕೆಗಳಿವೆ. ಅದ್ಯಾರು ಮಾತನಾಡುತ್ತಾರೋ ಏನು ಬಿಡುತ್ತಾರೋ ಕೈಮುಗಿದು ಸಾರಾಸಟ್ಟಾಗಿ ಇಡೀ ಬೇಡಿಕೆಗಳನ್ನು ಸಂಪೂರ್ಣವಾಗಿ ವಿರೋಧಮಾಡಿದ್ದೇವೆಂದು ಕುಳಿತುಕೊಳ್ಳುವುದು ಒಂದನ್ನು ಬಿಟ್ಟರೆ ಇದರಲ್ಲಿ ಏನೇನು ಕಾಣುತ್ತಿಲ್ಲ.

ಅಧ್ಯಕ್ಷರೇ ನಾನು ತಮಗೆ ಮನವಿ ಮಾಡಿದೆ ಶಾಸನ ಸಭೆಯನ್ನು ಅದರಲ್ಲೂ ಆಯವ್ಯಯ ನಡೆಯುತಕ್ಕಂಥ ಇಂಥ ಸಭೆಗಳು ಕನಿಷ್ಠ 45 ದಿವಸ ಕಾರ್ಯಕ್ರಮ ನಡೆಯತಕ್ಕಂಥ ಒಂದು ವ್ಯವಸ್ಥೆ ಇರಬೇಕು. ವರ್ಷಕ್ಕೆ ನೂರು ದಿನವಾದರೂ ಶಾಸನ ಸಭೆ ನಡೆದರೆ ಎಲ್ಲಾ ಬೇಡಿಕೆಗಳ ಬಗ್ಗೆ ಮಾತನಾಡತಕ್ಕಂಥ ಒಂದು ಅವಕಾಶ ಸಿಗುತ್ತದೆ. ತಮಗೆ ಗೊತ್ತು ಹಿಂದೆ ಶಾಸನ ಸಭೆ ನಡೆಯುವಾಗ ಸುಮಾರು 45-50 ದಿವಸಗಳ ಕಾಲ ಆಯವ್ಯಯ ಅಧಿವೇಶನ ನಡೆಯುತ್ತಿತ್ತು. ಇವೊತ್ತು ಒಂದೊಂದು ಬೇಡಿಕೆಗಳ ಮೇಲೆ ಎರಡೆರಡು ದಿವಸಗಳು ಒಂದೊಂದು ಇಲಾಖೆಯ ಬೇಡಿಕೆಗೂ ಎರಡೆರಡು ದಿವಸ ಆಗುತ್ತಿದೆ. ತಮ್ಮ ಕಾರ್ಯಕ್ರಮದಲ್ಲಿ ನೋಡಿ ಒಂದೊಂದು ಬೇಡಿಕೆ ಮೇಲೆ ಎರಡೆರಡು ದಿವಸ ಮಾಡತಕ್ಕಂಥಾದ್ದು ಇದೆ. ಇದನ್ನು ತರಾತುರಿಯಲ್ಲಿ ಮಾತನಾಡಿ ನಾವು ಹೋಗುತಕ್ಕಂಥಾದ್ದನ್ನು ನೋಡಿದರೆ ನನಗನ್ನಿಸುತ್ತದೆ ಸರ್ಕಾರಕ್ಕೂ ಕಾಳಜಿ ಇಲ್ಲ ಮುಖ್ಯಮಂತ್ರಿಗಳು ಬೆಳಿಗ್ಗೆಯಿಂದ ಈ ಸದನಕ್ಕೆ ಬಂದಿಲ್ಲ ಇಲ್ಲಿ ಕುಳಿತಿಲ್ಲ

ಉಪಾಧ್ಯಕ್ಷಿಣಿಯವರು: ಮುಖ್ಯಮಂತ್ರಿಗಳು ಆ ಸದನದಲ್ಲಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಅವರು ಎಲ್ಲಾದರೂ ಇರಲಿ ಅವರ ಬಗ್ಗೆ ನಾನೇನು ವೈಯಕ್ತಿಕವಾಗಿ ಮಾತನಾಡುತ್ತಿಲ್ಲ.... ಕಾಳಜಿ ಬೇಕಲ್ಲ ಒಂದು ಚಿಂತನೆ ಇರಬೇಕಲ್ಲ ಇದು ಕಾಣುತ್ತಿಲ್ಲ.

ಶ್ರೀ ಟಿ.ಎಂ. ಮಂಜುನಾಥ (ಸಣ್ಣ ಉಳಿತಾಯ ಮತ್ತು ಲಾಟರಿ ರಾಜ್ಯ ಮಂತ್ರಿಗಳು) ವಾಟಾಳ್‌ನಾಗರಾಜ್‌ರವರಿಗೆ ತಮಗೆ ಗೊತ್ತಿರುವ ಹಾಗೆ ತಾವು ಇಲ್ಲಿ ಬಹಳ ವರ್ಷಗಳ ಅನುಭವವನ್ನು ಪಡೆದಿದ್ದೀರಿ. ತಾವು ಅನೇಕ ವೇಳೆ ಈ ರೀತಿ ಮಾಡಿ ಸಭೆಯು ಮುಂದಕ್ಕೆ ಹೋಗಿರುವುದು ತಮಗೆ ಗೊತ್ತಿದೆ. ಅದಲ್ಲದೆ ಈ ತಿಂಗಳ ಕೊನೆಯೊಳಗೆ ಇದು ಪಾಸ್ ಆಗಬೇಕು. ಮುಂದಿನ ವ್ಯವಸ್ಥೆಗಳು ಆಗಬೇಕು. ತಾವು ಅನುಭವಸ್ಥರು ತಮಗೆ ಎಲ್ಲಾ ಗೊತ್ತಿದೆ. ಬಿಸ್‌ನೆಸ್ ಅಡ್ವೈಸರ್ ಕಮಿಟಿಯಲ್ಲಿ ಏನು ಒಂದು ಸಲಹೆ ಮಾಡಿದ್ದರೋ ಆ ಒಂದು ವ್ಯಾಪ್ತಿಯಲ್ಲಿ ಇವೊತ್ತು ನಾವು ಕೆಲಸ ಮಾಡಬೇಕಾಗಿದೆ. ಆದುದರಿಂದ ತಾವು ಸ್ವಲ್ಪ ಸಹಕರಿಸಬೇಕು.

(ಗೊಂದಲ)

ಶ್ರೀ ವಾಟಾಳ್‌ನಾಗರಾಜ್ : ಉಪಾಧ್ಯಕ್ಷಣಿಯವರೇ ಈ ಒಂದು ಬೇಡಿಕೆಗೆ ಇಡೀ ಸಭೆಯಲ್ಲಿ ನಾವೆಲ್ಲ ಸೇರಿ 21 ಜನರಾಗುತ್ತೇವೆ. ಸಚಿವಸಂಪುಟ ದರ್ಜೆಯ ಮಂತ್ರಿಗಳೊಬ್ಬರು ರಾಜ್ಯಮಟ್ಟದ ಮೂರು ಜನ ಒಟ್ಟು 20-21 ಜನ ಇಲ್ಲಿ ಕುಳಿತಿದ್ದೇವೆ. ಎಷ್ಟರ ಮಟ್ಟಿಗೆ ಸರ್ಕಾರಕ್ಕೆ ತಮ್ಮ ಇಲಾಖೆಗಳ ಬೇಡಿಕೆಗಳ ಬಗ್ಗೆ ಆಸಕ್ತಿ ಇದೆ ಅಭಿಮಾನವಿದೆ ಎಂಬ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಹೇಗೆ ಬೇಕಾದರೂ ಸಭೆ ನಡೆಸಲಿ..... @CEN = (gö°™{ãñ)

ಶ್ರೀ ಎಸ್.ಹೆಚ್. ಕೌಜಲಗಿ : ಉಪಾಧ್ಯಕ್ಷಣಿಯವರೆ ಅವರುಗಳು ಮುಂದೆ ಕುಳಿತಿದ್ದಾರೆ ಮಾತನಾಡಲು ಸಾಧ್ಯವಾಗುತ್ತದೆ. ನಾನು ಹೇಗೆ ಮಾತನಾಡಲಿ ಯಾರು ಬಾಯಿ ಮಾಡುತ್ತಾರೋ ಅವರದು ನಡೆಯುತ್ತದೆ ನಾವು ಕಲ್ಲು ಕುಳಿತಾಗೆ ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್‌ನಾಗರಾಜ್ : ಉಪಾಧ್ಯಕ್ಷಣಿಯವರೆ ಇವರು ಜನತಾದಳದವರು ಅವರ ಪಕ್ಷಕ್ಕೆ ಎಷ್ಟು ಕಾಲಾವಕಾಶವನ್ನು ಕೊಟ್ಟಿದ್ದರೋ ಅದರಲ್ಲಿ ಅವರು ತಮ್ಮ ಸಮಯವನ್ನು ತೆಗೆದುಕೊಳ್ಳಬೇಕೆ ಹೊರತು...... ಮುಂದೆ ಕುಳಿತಿರುವವರು ಎಲ್ಲರು ಜನತಾದಳದಳದವರಲ್ಲ ಆದುದರಿಂದ ಆಯಾಯ ಪಕ್ಷಕ್ಕೆ ಕಲಾವಕಾಶ ಇಷ್ಟಿಷ್ಟು ಕೊಟ್ಟಿದ್ದೀರಿ ಅದನ್ನು ತೆಗೆದುಕೊಳ್ಳಿ ಬೇರೆಯವರ ವಿಚಾರ ಬೇಕಾಗಿಲ್ಲ.

ಶ್ರೀ ಎಂ.ಪಿ. ವೆಂಕಟೇಶ್ : ಉಪಾಧ್ಯಕ್ಷಣಿಯರೆ ಮಂತ್ರಿಗಳು ಊಟಕ್ಕೆ ಹೋಗಿದ್ದಾರೆ. ಇಲ್ಲಿ ಕೇಳುವವರಿಲ್ಲ ಸಂಬಂಧಪಟ್ಟ ಸಚಿವರಿಲ್ಲ

(ಶ್ರೀ ಬಿ.ಹೆಚ್. ಬನ್ನಿಕೋಡ್ : ಸಂಬಂಧಪಟ್ಟ ಸಚಿವರಿಲ್ಲ)

ಉಪಾಧ್ಯಕ್ಷಿಣಿಯವರು: ಅವರು ಊಟಕ್ಕೆ ಹೋಗಿದ್ದಾರೆ ಬರುತ್ತಾರೆ.

ಶ್ರೀ ಎಂ.ಪಿ. ವೆಂಕಟೇಶ್ : ಉಪಾಧ್ಯಕ್ಷಿಣಿಯರೆ ನಾನು ಇಲಾಖೆ ಕಂದಾಯ ಇಲಾಕೆಯ ಬಗ್ಗೆ ಮಾತನಾಡುತ್ತೇನೆ. ಸಹಕಾರಿ ಮಂತ್ರಿಗಳಿಲ್ಲದಿದ್ದರೆ ನಾನು ಮಾತನಾಡಿದರೂ ಏನು ಪ್ರಯೋಜನ? ಏನು ಮಾಡುವುದು 15 ಇಲ್ಲವೆ 30 ನಿಮಿಷ ಟೈಮ್ ಮಾತ್ರ ಕೊಡುತ್ತೀರಿ ಮಾತನಾಡಲು.......

ಶ್ರೀ ಟಿ.ಎಂ. ಮಂಜುನಾಥ : ತಾವು ಮಾತನಾಡಿ ನಾನು ಬರೆದುಕೊಳ್ಳುತ್ತೇನೆ.

ಉಪಾಧ್ಯಕ್ಷಿಣಿಯರು : ಅವರು ಬರೆದುಕೊಳ್ಳುತ್ತಾರೆ

+ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡದೇವಕೋಟೆ) : ಉಪಾಧ್ಯಕ್ಷಣಿಯರೆ ಈ ಒಂದು ಸಹಕಾರಿ ಇಲಾಖೆಯಲ್ಲಿ ಸಹಕಾರಿ ಸಂಘದಲ್ಲಿ ಕೆಲಸ ಮಾಡಿ ಮಂತ್ರಿಗಳಾಗುತ್ತಾರೆ ಮುಖ್ಯಮಂತ್ರಿಗಳಾಗುತ್ತಾರೆ ವಿವಿಧ ಮಂಡಳಿಗಳ ಅಧ್ಯಕ್ಷರಾಗುತ್ತಾರೆ ಶಾಸಕರುಗಳಾಗುತ್ತಾರೆ. ಆದರೆ ಈ ಸಹಕಾರಿ ಇಲಾಖೆಗೆ ಯಾವ ರೀತಿಯಲ್ಲಿ ಸರ್ಕಾರ ಉತ್ತೇಜನವನ್ನು ಕೊಡಬೇಕು ಆ ರೀತಿ ಕೊಡುತ್ತಿಲ್ಲ. ಉದಾಹರಣೆಗೆ ಒಂದು ಉಪವಿಭಾಗಕ್ಕೆ ಒಬ್ಬರು ಸಹಾಯಕ ರಿಜಿಸ್ಟ್ರಾರ್ ಇರುತ್ತಾರೆ. ಅವರಿಗೆ 3-4 ತಾಲ್ಲೂಕುಗಳು ಸೇರುತ್ತವೆ. ಒಬ್ಬ ಸಹಾಯಕ ರಿಜಿಸ್ಟ್ರಾರ್‌ಗೂ ಸಹ ವಾಹನವಿರುವುದಿಲ್ಲ. ಇದರ ಬಗ್ಗೆ ಎಷ್ಟೋ ಸಲ ಸದನದಲ್ಲಿ ಶಾಸಕರು ಪ್ರಸ್ತಾಪ ಮಾಡಿದ್ದಾರೆ. ಆದರೆ ಇದುವರೆಗೂ ವಾಹನವನ್ನು ಕಲ್ಪಿಸಿಕೊಡಿ ಎಂದು ಡೆಪ್ಯೂಟಿ ರಿಜಿಸ್ಟ್ರಾರ್‌ಗಳಿಗೆ ಸಾಮಾನ್ಯವಾಗಿ ಹಳೆಯ ಜೀಪುಗಳನ್ನು ಕೊಟ್ಟಿದ್ದಾರೆ. ಅವರು ಯಾವುದೇ ಒಂದು ತಾಲ್ಲೂಕಿಗೆ ಹೋಗುವ ಪರಿಸ್ಥಿತಿಯಲ್ಲಿಲ್ಲ ಸಾವಿರಾರು ಸಹಕಾರಿ ಸಂಘಗಳಿಗೆ ಆಡೀಟ್ ಮಾಡುವ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಆಡೀಟ್‌ಗಳು ಏನು ಇದ್ದಾರೆ ಅವರಿಗೂ ಸಹ ಒಂದು ವಾಹನವಿರುವುದಿಲ್ಲ ಇದರಿಂದ ಅವರುಗಳು ಎಲ್ಲಾ ಸಹಕಾರ ಸಂಘಗಳ ಆಡೀಟ್ ಮಾಡಿ ಎಲ್ಲಾವನ್ನು ಪರಿಶೀಲಿಸಿ ಒಂದು ವರದಿಯನ್ನು ಕೊಡುವುದಾಗಲಿ ಕ್ರಮತೆಗೆದುಕೊಳ್ಳುವುದಾಗಲಿ ಮಾಡಲು ಆಗುತ್ತಿಲ್ಲ.

ಈ ಒಂದು ತೊಂದರೆಯನ್ನು ಸರಿಪಡಿಸಲು ಸರ್ಕಾರದವರು ಅಸಿಸ್ಟೆಂಟ್ ರಿಜಿಸ್ಟ್ರಾರ್ಸ್ ಡೆಪ್ಯೂಟಿ ರಿಜಿಸ್ಟ್ರಾರ್ಸ್ ಮತ್ತು ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಆಡೀಟ್ ಅವರುಗಳಿಗೆ ವಾಹನವನ್ನು ಕೊಡಬೇಕು. ಇಲ್ಲದಿದ್ದರೆ ಸಹಕಾರಿ ಇಲಾಖೆಯವರು ಮುಖ್ಯಮಂತ್ರಿಗಳ ಜೊತೆ ಗಲಾಟೆ ಮಾಡಿ ನೀವು ವಾಹನಗಳನ್ನು ಪಡೆಯಬೇಕಾಗುತ್ತದೆ. ಸಹಕಾರಿ ಸಂಘದ ಉತ್ತೇಜನದ ಜೊತೆಗೆ..... ಅಪೆಕ್ಸ್ ಬ್ಯಾಂಕು ಮತ್ತು ಲ್ಯಾಂಡ್ ಬ್ಯಾಂಕುಗಳಿಗೆ ಎಂ.ಡಿ. ಯಾಗಿ ಐ.ಎ.ಎಸ್. ಅಧಿಕಾರಿಗಳನ್ನು ಹಾಕುತ್ತಾರೆ ಅವರಿಗೆ ಅಪೆಕ್ಸ್ ಬ್ಯಾಂಕು ಮತ್ತು ಲ್ಯಾಂಡ್ ಬ್ಯಾಂಕಿನ ಬಗ್ಗೆ ಯಾವ ಅನುಭವವಿರುವುದಿಲ್ಲ. ಅವರಿಗೆ ಕೋ-ಆಪರೇಟಿವ್ ಬ್ಯಾಂಕಿನ ಬಗ್ಗೆ ಏನು ಗೊತ್ತಿರುವುದಿಲ್ಲ. ಆದುದರಿಂದ ಈ ಅಪೆಕ್ಸ್ ಬ್ಯಾಂಕು ಮತ್ತು ಲ್ಯಾಂಡ್ ಬ್ಯಾಂಕುಗಳಿಗೆ ಕೋ-ಆಪರೇಟೀವ್ ಇಲಾಖೆಯ ಅಡೀಷನಲ್ ರಿಜಿಸ್ಟ್ರಾರ್‌ರವರನ್ನು ಎಂ.ಡಿ. ಯಾಗಿ ಹಾಕಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಸನ್ಮಾನ್ಯ ಉಪಾಧ್ಯಕ್ಷಣಿಯವರೆ ಸಕ್ಕರೆ ಫ್ಯಾಕ್ಟರಿಗಳಿಗೆ ಕೆ.ಎ.ಎಸ್. ಅಧಿಕಾರಿಗಳನ್ನು ಎಂ.ಡಿ.ಯಾಗಿ ಹಾಕುತ್ತಾರೆ. ಅಲ್ಲಿಗೆ ಸಂಬಂಧಪಟ್ಟಂತೆ ಅವರಿಗೆ ಯಾವವಿಧವಾದ ಅನುಭವವೂ ಇರುವುದಿಲ್ಲ ಮತ್ತು ಯಾವ ತರಹದ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವುದು ಗೊತ್ತಿರುವುದಿಲ್ಲ.

ಸಕ್ಕರೆ ಫ್ಯಾಕ್ಟರಿಗಳಿಗೆ ಡಿಪಾರ್ಟ್‌ಮೆಂಟ್‌ನ ಡೆಪ್ಯೂಟಿ ರಿಜಿಸ್ಟ್ರಾರ್ ಮತ್ತು ಅಸಿಸ್ಟೆಂಟ್ ರಿಜಿಸ್ಟ್ರಾರ್‌ಗಳನ್ನು ಹಾಕಿದರೆ ಅವರಿಗೆ ಅಲ್ಲಿರುವ ಸ್ಥಿತಿಗತಿಗಳನ್ನು ಅಂತು ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇಂಥ ಸಕ್ಕರೆ ಫ್ಯಾಕ್ಟರಿಗಳಿಗೆ M.D ಗಳನ್ನಾಗಿ ಸಹಕಾರ ಇಲಾಖೆಯವರನ್ನೇ ಹಾಕಬೇಕೆಂದು ನಾನು ಹೇಳುತ್ತೇನೆ. In Co-operative Department Register of Co-operative ಅಡ್‌ಮಿನಿಸ್ಟ್ರೇಷನ್‌ನಲ್ಲಿ ಏನು ರಿಜಿಸ್ಟ್ರಾರ್ ಇರುತ್ತಾರೆ. ಅವರು ಐ.ಎ.ಎಸ್. ಅಧಿಕಾರಿಗಳಾಗಿರುತ್ತಾರೆ ಹಲವಾರು ಸಾರಿ ಮಂತ್ರಿಗಳು ಆರ್ಡರ್ ಮಾಡಿದರೂ ರಿಜಿಸ್ಟ್ರಾರ್ ಅವರು ಉಲ್ಲಂಘನೆ ಮಾಡುತ್ತಾರೆ. ಅವರಿಗೆ ಈ ಇಲಾಖೆಯ ಬಗ್ಗೆ ಸರಿಯಾದ ಮಾಹಿತಿ ಇರುವುದಿಲ್ಲ ಇಲಾಖೆಯವರಾದ

ಜಾಯಿಂಟ್ ರಿಜಿಸ್ಟ್ರಾರ್‌ಗಳನ್ನು ಹಾಕಿದರೆ ಅವರಿಗೆ ಕೆಲಸದ ಅನುಭವವಿರುತ್ತದೆ ಮತ್ತು ವಿಚಾರಗಳು ಗೊತ್ತಿರುತ್ತವೆ. ಇದರಿಂದ ತುರ್ತಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಸಹಕಾರ ಇಲಾಖೆಯವರನ್ನೇ ಹಾಕಬೇಕೆಂದು ಹೇಳುತ್ತೇನೆ

ಲ್ಯಾಂಡ್‌ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕ್ ಎರಡನ್ನೂ ಒಂದೆ ಬ್ಯಾಂಕನ್ನಾಗಿ ಮಾಡಬೇಕೆಂದು ಹಲವಾರು ಸಾರಿ ಹೇಳಿದ್ದೇನೆ ಮತ್ತು ಮಾನ್ಯ ಮಾಜಿ ಸಚಿವರಾದ ಜಾಲಪ್ಪನವರೂ ಸಹ ಹೇಳಿದ್ದರು ಎರಡೆರಡು ಬ್ಯಾಂಕ್‌ಗಳನ್ನು ಮಾಡುವುದು ಸರಿಯಲ್ಲವೆಂದು ಹೇಳುತ್ತೇನೆ ಸಹಕಾರ ಇಲಾಖೆಯಲ್ಲಿ ಇನ್ಸ್‌ಪೆಕ್ಟರ್‌ಗಳು ಮತ್ತು ಪ್ರಥಮ ದರ್ಜೆ ನೌಕರರು 20-30 ವರ್ಷ ಸೇವೆ ಸಲ್ಲಿಸಿದವರಿಗೆ ಇದುವರೆಗೂ ಸಹ ಬಡ್ತಿ ಕೊಟ್ಟಿಲ್ಲ. ಅದರಲ್ಲೂ ಪರಿಶಿಷ್ಟ ಜಾತಿಯವರು 60 ಪರ್ಸೆಂಟ್ ಇದ್ದಾರೆ.

ಅವರಿಗೂ ಸಹ ಬಡ್ತಿ ಕೊಟ್ಟಿರುವುದಿಲ್ಲ ಈ ಸಹಕಾರಿ ಇಲಾಖೆಯಲ್ಲಿ ಅಧಿಕಾರಿಗಳು ಏನು ಇದ್ದಾರೆ. Deputy registrar of Co-operative societies ಇಡಿ ಜಿಲ್ಲೆಯನ್ನು ನೋಡಬೇಕಾಗುತ್ತದೆ. ಅವರಿಗೆ ಕೊಡುವಂತಹ ಡೀಸಲ್ ಯಾವ ವಿಧದಲ್ಲೂ ಸಾಕಾಗುವುದಿಲ್ಲ 10 ದಿವಸದ ಟೂರ್ ಮಾಡುವುದಕ್ಕಾಗುವುದಿಲ್ಲ ಅವರ ಕಛೇರಿಯಲ್ಲಿ ಪತ್ರ ವ್ಯವಹಾರ ಮಾಡುವುದಕ್ಕೆ ಸರ್ಕಾರದಿಂದ ಹಣದ ವ್ಯವಸ್ಥೆ ಇರುವುದಿಲ್ಲ. ಸಾರ್ವಜನಿಕರ ಸಹಾಯ ಕೇಳಬೇಕಾದ ಪರಿಸ್ಥಿತಿ ಡೆಪ್ಯೂಟಿ ರಿಜಿಸ್ಟ್ರಾರ್‌ಗೆ ಒದಗಿದೆ. ಆದುದರಿಂದ ಸರ್ಕಾರದವರು ಅವರಿಗೆ ಹಣ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. Co-operative Extension Officer ಬಿ.ಡಿ.ಒ. ಅವರ ಕೈಕೆಳಗೆ ಕೆಲಸಮಾಡುತ್ತಾರೆ ಸರಿಯಾಗಿ ತಾಲ್ಲೂಕಿನಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಕಾರಣ ಅವರ ಅಧೀನದಲ್ಲಿ ಕೆಲಸವೇ ಇರುವುದಿಲ್ಲ. ಇಂಥವರು ಅಸಿಸ್ಟೆಂಟ್ ರಿಜಿಸ್ಟ್ರಾರ್ ಸಿ.ಒ.ಗಳ ಅಧೀನದಲ್ಲಿದ್ದರೆ ಅವರು ಕೆಲಸಮಾಡುವುದಕ್ಕೆ ಅನುಕೂಲವಾಗುತ್ತದೆ. N.P. ಮತ್ತು ಅವರಿಗೆ ವಾಹನಗಳನ್ನು ಕೊಟ್ಟರೆ ಅನುಕೂಲವಾಗುತ್ತದೆ ಟಿ.ಎ.ಪಿ.ಸಿ.ಎಂ.ಎಸ್. ಬಗ್ಗೆ ಹೇಳುವುದಾದರೆ ಇದರಡಿ ಹಲವಾರು ರೀತಿಯ ದುರುಪಯೋಗಗಳಿಗೆ ಅವಕಾಶವಿದೆ ಕೃಷಿ ಇಲಾಖೆವರು ಟಿ.ಎ.ಪಿ.ಸಿ.ಎಂ.ಎಸ್.ಗೆ ಗೊಬ್ಬರ ಕೊಡುತ್ತಾರೆ ವಿತರಣೆ ಮಾಡಲು ಆಹಾರ ಪದಾರ್ಥಗಳು, ಸೀಮೆಎಣ್ಣೆ ಇವುಗಳನ್ನು ವಿತರಣೆ ಮಾಡಲು ಟಿ.ಎ.ಪಿ.ಸಿ.ಎಂ.ಎಸ್. ನವರಿಗೆ ಲೈಸೆನ್ಸ್ ಕೊಡುತ್ತಾರೆ. ಆದರೆ ಅವರಿಗೆ ದುಡ್ಡು ಇಲ್ಲವೆ ಆಹಾರಪದಾರ್ಥಗಳನ್ನು ತರುವುದಿಲ್ಲ ಮತ್ತು ಗೊಬ್ಬರವನ್ನು ಸಹ ತೆಗೆದುಕೊಂಡು ಹೋಗಿ ಮಾರುವುದಿಲ್ಲ. ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ ಹಿಂದೆ ಟಿ.ಎ.ಪಿ.ಸಿ.ಎಂ.ಎಸ್.ನಲ್ಲಿ ಹಣ ದುರುಪಯೋಗ ಮಾಡಿದರು ಅದು ಎನ್‌ಕ್ವೈರಿಯಾಗಲಿಲ್ಲ. ಇವತ್ತು ಅಲ್ಲಿ ಹಣವಿಲ್ಲ. ಸರ್ಕಾರದಿಂದ ಸಾಲ ಕೊಡುವುದಿಲ್ಲ ನ್ಯಾಯಬೆಲೆ ಅಂಗಡಿಗಳಿಂದ ಆಹಾರಪದಾರ್ಥಗಳನ್ನು ತರುವುದಿಲ್ಲ. 300 ಟನ್ ಗೊಬ್ಬರ ಕೊಟ್ಟಿದ್ದರೆ ಅದರಲ್ಲಿ ಬರೀ 130 ಟನ್ ಗೊಬ್ಬರ ಟಿ.ಎ.ಪಿ.ಸಿ.ಎಂ.ಎಸ್. ತಂದಿದ್ದಾರೆ.

ಅವರ ಹತ್ತಿರ ಹಣವಿಲ್ಲ ಆದ್ದರಿಂದ ಸರ್ಕಾರದವರು ನೇರವಾಗಿ ಟಿ.ಎ.ಪಿ.ಸಿ.ಎಂ.ಎಸ್.ಗೆ ಹೆಚ್ಚಿನ ಹಣ ಕೊಟ್ಟು ಅಲ್ಲಿಗೆ ಒಳ್ಳೆಯ ಅಧಿಕಾರಿಗಳನ್ನು ನೇಮಕ ಮಾಡಿ ಜವಾಬ್ದಾರಿಯಿಂದ ನೋಡಿಕೊಳ್ಳುವ ಹಾಗೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮೈಸೂರಿನಲ್ಲಿ ಸಹಕಾರ ಸಂಘಗಳಿವೆ ಬೆಂಗಳೂರಿನಲ್ಲಿ ಗೃಹನಿರ್ಮಾಣ ಸಹಕಾರಸಂಘಗಳಿವೆ. ಬೆಂಗಳೂರಿನಲ್ಲಿ ನೂರಾರು ಎಕರೆ ಸ್ಥಳಗಳನ್ನು ಕೊಟ್ಟಿದ್ದಾರೆ ಈಗ ಬೆಂಗಳೂರಿನಲ್ಲಿರತಕ್ಕಂಥವರು ಮೈಸೂರಿಗೆ ಬಂದು ಗೃಹನಿರ್ಮಾಣ ಸಹಕಾರ ಸಂಘಗಳನ್ನು ಮಾಡಿಕೊಂಡಿದ್ದಾರೆ. ಅವರು ಜಮೀನು ಮಾಡುವುದಕ್ಕೆ ಸರ್ಕಾರ ಏನು ನಿಗದಿಪಡಿಸುತ್ತದೆ.

ಅದಕ್ಕಿಂತ ಹೆಚ್ಚು ಹಣವನ್ನು ಕೊಟ್ಟು ಇಂಥ ಸೊಸೈಟಿಗೆ ನೀವು ಜಮೀನು ಕೊಡುವುದಾದರೆ ನನ್ನ ಒಪ್ಪಿಗೆ ಕೊಡುತ್ತೇನೆ. ಮೈಸೂರಿನಲ್ಲಿ ಸುಮಾರು 10-15 ಹೌಸಿಂಗ್ ಕೋ ಆಪರೇಟೀವ್ ಸೊಸೈಟಿಗಳು ಇವೆ ಅವರೆಲ್ಲರೂ ಹಿಂದಿನ ಸರ್ಕಾರ ಏನಿತ್ತು ಆ ಸರ್ಕಾರದ ಆದೇಶದಂತೆ ಅವರಿಗೆ 50, 50, ಎಕರೆ ಜಮೀನು ಕೊಟ್ಟಿದ್ದಾರೆ. ಅವರು ಇದುವರೆಗೂ ಯಾವುದೇ ಸದಸ್ಯರಿಗೆ ಸ್ವಾದೀನಕ್ಕೆ ಕೊಟ್ಟಿಲ್ಲ. ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಸೈಟುಗಳು ಒಂದಕ್ಕೆ ಡಬ್ಬಲ್ ಆಗಿದೆ. ಆ ದುಡ್ಡು ನಮಗೆ ಕೊಡಿ ಎಂದು ಕೇಳುತ್ತಿದ್ದಾರೆ. ಸಹಕಾರ ಸಂಘದವರು ನಮಗೆ ಹಣವನ್ನು ಕೊಡಿ ಎಂದು ಹೇಳುತ್ತಾರೆ. ಈಗ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ 40x60 ಸೈಟುಗಳು 80 ಸಾವಿರ ರೂಪಾಯಿ ಅಂದರೆ ಅಷ್ಟೇ ಹಣ ಕೊಡಿ ಎಂದು ಇವರೂ ಹೇಳುತ್ತಾರೆ.

ಅವೊತ್ತಿನ ಬೆಲೆಯಲ್ಲಿ ಇವರು 25 ಸಾವಿರ ರೂಪಾಯಿಗೆ ಒಂದು ಎಕರೆ ತೆಗೆದುಕೊಂಡು ಇವೊತ್ತು ಆ ಸದಸ್ಯರಿಂದ ಹೆಚ್ಚಿಗೆ ಹಣ ಪಡೆಯುವುದಕ್ಕೆ ಕೇಳುತ್ತಿದ್ದಾರೆ. ಆ ಸಂಘಗಳಿಗೆ ಕಳೆದ ಸಾಲಿನಲ್ಲಿ ಹಿಂದಿನ ಸರ್ಕಾರ ಇದ್ದಾಗ 50 ಎಕರೆ ಒಬ್ಬೊಬ್ಬ ಸಹಕಾರ ಸಂಘದವರು ತೆಗೆದುಕೊಂಡಿದ್ದಾರೆ. ನಗರಾಭಿವೃದ್ಧಿ ಪ್ರಾಧಿಕಾರದಿಂದ ಇವೊತ್ತು ಅದೇ ಸಹಕಾರ ಸಂಘದವರು ಪುನಃ 200-300-400 ಎಕರೆ ಅಕ್ವಿಸಿಷನ್ ಮಾಡಿ ಮಾಡಿ ನೀವು ಆ ಸಹಕಾರ ಸಂಘಕ್ಕೆ ಕೊಟ್ಟಿದ್ದೀರಿ. ಈ ಬಗ್ಗೆ ಇಲಾಖೆಯವರು ಪರಿಶೀಲನೆ ಮಾಡುವುದಿಲ್ಲ, ಆ ಸದಸ್ಯರಿಗೆ ಕೊಟ್ಟಿದ್ದಾರೆಯೇ ಇಲ್ಲವೇ ಎನ್ನುವುದನ್ನು ನೋಡಿದ್ದೀರಾ? ನೀವು ಒಂದು ಕಮಿಟಿ ಮಾಡಬೇಕು ರೆವಿನ್ಯೂ ಮಂತ್ರಿಗಳು ಅದರ ಬಗ್ಗೆ ನೋಡಬೇಕಾಗುತ್ತದೆ. ಅಲ್ಲಿ ಸಬ್‌ರಿಜಿಸ್ಟ್ರಾರವರಿಗೆ ಹೋಗಿ ನೋಡಲಿಕ್ಕೆ ಸರಿಯಾದ ಸಿಬ್ಬಂದಿ ಇಲ್ಲ, ಅವರು ಏನು ಹೇಳುತ್ತಾರೆಂದರೆ ಎಂಟೈರ್ ಮೈಸೂರು ನಗರಕ್ಕೆ ನನ್ನ ಹತ್ತಿರ ಇರುವುದು ಮೂರು ಜನ ಇನ್ಸ್‌ಪೆಕ್ಟರ್ಸ್ ಎಂದು ಹೇಳುತ್ತಾರೆ. ಈ ಮೂರು ಜನ ಇರುವಾಗ ನಾನು ಎಲ್ಲಿಗೆ ಕಳುಹಿಸಲಿಕ್ಕೆ ಆಗುತ್ತದೆ ಎಲ್ಲಿ ಅಂತ ನೋಡಲಿಕ್ಕೆ ಆಗುತ್ತದೆ ಎನ್ನುವ ಮಾತನ್ನು ಡೆಪ್ಯೂಟಿ ರಿಜಿಸ್ಟ್ರಾರ್‌ರವರು ಹೇಳುತ್ತಾರೆ. ಹಿಂದೆ ಸಹಕಾರ ಸಂಘಗಳಿಗೆ ಕೊಟ್ಟಂಥ 50 ಎಕರೆ ಜಮೀನನ್ನು ಲೇಔಟ್ ಮಾಡಿದ್ದಾರೆಯೇ? ಅವರೇ ಸ್ವಂತವಾಗಿ ಒಂದು ರೆಸಲ್ಯೂಷನ್ ಮಾಡಿ ಇಂಥ ಕಂಟ್ರಾಕ್ಟರ್‌ಗೆ ಎಂದು ಕೊಡುತ್ತಾರೆ. ಆ ಕಂಟ್ರಾಕ್ಟರ್ ಏನು ಗುತ್ತಿಗೆ ಅಗ್ರಿಮೆಂಟ್ ಮಾಡಿರುತ್ತಾರೆ ಇಲ್ಲಿ ಹಳ್ಳ ಇದೆ. ಅಲ್ಲಿ ಹಳ್ಳ ಎಂದು ಹೇಳಿ ಅವರು ಕಾಸ್ಟ್ ಜಾಸ್ತಿ ಮಾಡುತ್ತಾರೆ. ಈಗ ಏನು ಸಹಕಾರ ಸಂಘಗಳಿಗೆ ನೀವು ಭೂಮಿಯನ್ನು ಕೊಡುತ್ತಿದ್ದೀರಿ. ಅದನ್ನು ಲೋಕೋಪಯೋಗಿ ಇಲಾಖೆಯವರೇ ಲೇಔಟ್ ಮಾಡಲಿ. ಆಗ ಈ ದುರುಪಯೋಗ ಮಾಡುವಂಥದ್ದು ತಪ್ಪಿಹೋಗುತ್ತದೆ. ಈ ಬಗ್ಗೆ ನೀವು ನಿರ್ಭಂಧ ಹಾಕಬೇಕು. ನಾವು ಸಹಕಾರ ಸಂಘಗಳಿಗೆ ಜಮೀನು ಏನು ಕೊಡುತ್ತೇವೆ ಆ ಜಮೀನನ್ನು ನಗರಾಭಿವೃದ್ಧಿ ಪ್ರಾಧಿಕಾರದವರು ಲೇಔಟ್ ಮಾಡಬೇಕು ಅಥವಾ ಲೋಕೋಪಯೋಗಿ ಇಲಾಖೆಯವರು ಲೇಔಟ್ ಮಾಡಬೇಕು. ಪ್ರೈವೇಟ್ ಲೇಔಟ್ ಮಾಡುವುದಿಲ್ಲ ಎಂದು ಹೇಳಿದಾಗ ಅವರಿಗೆ ಅದರಿಂದ ಹೆಚ್ಚಿಗೆ ಆದಾಯ ಬರುವುದಿಲ್ಲ. ಆಗ ಸ್ವಲ್ಪ ಅನುಕೂಲವಾಗುತ್ತದೆ ಮತ್ತೆ ಹಿಂದೆ ಕೊಟ್ಟಂಥ ಜಮೀನು ಸದಸ್ಯರಿಗೆ ಹಂಚಿದ್ದಾರೆಯೇ ಇಲ್ಲವೇ ಎಷ್ಟು ಎಕರೆ ಖಾಲಿ ಇದೆ ನೋಡಬೇಕು. ಅದನ್ನು ಪರಿಶೀಲನೆ ಮಾಡದೆ ನೀವು 200-300 ಎಕರೆ ಸ್ವಾಧೀನ ಮಾಡಿಕೊಂಡರೆ ಹೇಗೆ ಬೆಂಗಳೂರಿನಲ್ಲಿ ಎಸ್.ಆರ್. ಕನ್‌ಸ್ಟ್ರಕ್ಷನ್ ಎಂದು ಇದೆ. ಇವರೆಲ್ಲರೂ 300-400 ಎಕರೆ ಅಕ್ವೈರ್ ಮಾಡಿದ್ದಾರೆ ಈ ರೀತಿಯಲ್ಲಿ ದುರುಪಯೋಗವಾಗುತ್ತಿದೆ. ಆದ್ದರಿಂದ

ನೀವು ಮಂಜೂರಾತಿ ಮಾಡುವಾಗ ನೇರವಾಗಿ ರೈತರಿಂದ ಆ ಜಮೀನನ್ನು ನಗರಾಭಿವೃದ್ಧಿ ಪ್ರಾಧಿಕಾರದವರು ತೆಗೆದುಕೊಂಡು ಅವರು ಸಹಕಾರ ಸಂಘಗಳಿಗೆ ಕೊಡುವಂಥ ವ್ಯವಸ್ಥೆ ಮಾಡಬೇಕು. ಏಕೆಂದರೆ ಅವರು ಜಮೀನು ಮಾಡಿಕೊಳ್ಳುವಾಗ ನೇರವಾಗಿ ವ್ಯವಹಾರ ಮಾಡಿಕೊಂಡು ಬಿಡುತ್ತಾರೆ ಇವತ್ತು ಸುಮಾರು 400 ಎಕರೆ ಎಸ್.ಆರ್. ಕನ್‌ಸ್ಟ್ರಕ್ಷನ್ ಅವರು ಮಧುವನ ಸೊಸೈಟಿ ಎಂದೆಲ್ಲಾ ಹೇಳಿ ಇವೊತ್ತು ಪಟ್ಟಿ ಕೊಟ್ಟಿದ್ದೀಕಿಯ ಇವರೆಲ್ಲರೂ 400-500 ಎಕರೆ ಮಾಡಿದ್ದಾರೆ. ಒಂದು ಸೈಟು 20-30 ಸಾವಿರ ರೂಪಾಯಿಗೆ ಕೊಡುವಂಥದ್ದು 60-70-80 ಸಾವಿರ ರೂಪಾಯಿಯಂತೆ ಕಲೆಕ್ಟ್ ಮಾಡುತ್ತಿದ್ದಾರೆ. ಅವರು ಕೋಟ್ಯಾಂತರ ರೂಪಾಯಿ ಹಣವನ್ನು ಮಾಡುತ್ತಿದ್ದಾರೆ. ಇದನ್ನು ತಾವು ತಪ್ಪಿಸಬೇಕು ನಗರಾಭಿವೃದ್ಧಿ ಪ್ರಾಧಿಕಾರದಿಂದಲೇ ಕೊಡಬೇಕು ರಾಜ್ಯದಲ್ಲಿ ಈ ಸಹಕಾರ ಸಂಘಗಳು ಏನಿದೆ ಅವು 18 ಪರ್‌ಸೆಂಟ್ ನಿವೇಶನಗಳನ್ನು ಪರಿಶಿಷ್ಟಜಾತಿ ಮತ್ತು ವರ್ಗದವರುಗಳಿಗೆ ಕೊಡುತ್ತಿಲ್ಲ ಅವರಿಗೆ ಮೆಂಬರ್‌ಷಿಪ್ ಕೂಡ ಕೊಡುತ್ತಿಲ್ಲ. ಸರ್ಕಾರದ ನಿಯಮ ಇದ್ದರೂ ಸಹ ಕೊಡುತ್ತಿಲ್ಲ. ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ 18 ಪರ್‌ಸೆಂಟ್ ನಿವೇಶಗಳನ್ನು ಯಾವ ಯಾವ ಸೊಸೈಟಿಗಳಲ್ಲಿ ಕೊಟ್ಟಿದ್ದಾರೆಂದು ಪರಿಶೀಲನೆ ಮಾಡಿ ನೋಡಿದ್ದೀರಾ? ಯಾರೂ ಕೊಟ್ಟಿಲ್ಲ ಅಂಥ ಸೊಸೈಟಿಗಳಿಗೆ ನೀವು ಜಮೀನು ಕೊಡಬಾರದು ತಾವು ಪರಿಶೀಲನೆ ಮಾಡಿದಾಗ ಅವರು ನಮ್ಮ ಹತ್ತಿರ ಯಾರೂ ಅರ್ಜಿ ಹಾಕಿಲ್ಲ ಎಂದು ಹೇಳಬಹುದು. ಆ ತರಹ ಇದ್ದರೆ ಪತ್ರಿಕೆಗಳಲ್ಲಿ ಹಾಕಿ ಪ್ರಕಟಣೆ ಮಾಡಿ ಇಂತಹ ಸೊಸೈಟಿಗಳಲ್ಲಿ 18 ಪರ್‌ಸೆಂಟ್ ಸದಸ್ಯತ್ವ ಖಾಲಿ ಇದೆ ನಾವು ಅಷ್ಟು ನಿವೇಶನ ಅವರಿಗೆ ಕೊಡುತ್ತೇವೆ ಎನ್ನುವುದನ್ನು ಹೇಳಬೇಕು. ಬೆಂಗಳೂರು ನಗರದಲ್ಲಿ 18 ಪರ್‌ಸೆಂಟ್ 18 ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಕೊಟ್ಟಿಲ್ಲ ಮೈಸೂರು ನಗರದಲ್ಲಿ ಆ ಒಂದು ಪರಿವಾರ ಮಾಡುತ್ತಿಲ್ಲ ಅದನ್ನು ಮಾಡಲಿಕ್ಕೆ ಸರ್ಕಾರದಿಂದ ಒಂದು ಆದೇಶ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ ಈಗ ತಾವು ಸಹಕಾರ ಮಂತ್ರಿಗಳಾಗಿ ಹೊಸದಾಗಿ ಬಂದಿದ್ದೀರಿ. ತಾವು ಅಸಿಸ್ಟೆಂಟ್ ರಿಜಿಸ್ಟ್ರಾರ್ ಡೆಪ್ಯೂಟಿ ರಿಜಿಸ್ಟ್ರಾರ್‌ಗಳಿಗೆ ವಾಹನ ಕೊಡುತ್ತಿಲ್ಲ. ತಾವು ವಾಹನ ಕೊಡದೇ ಇದ್ದರೆ ಅವರು ಎಲ್ಲಿ ಹೋಗಲಿಕ್ಕೆ ಆಗುತ್ತದೆ ಏನು ಮಾಡಲಿಕ್ಕೆ ಆಗುತ್ತದೆ ಅಡ್ಮಿನಿಸ್ಟ್ರೇಟರುಗಳಾಗಿ ಐ.ಎ.ಎಸ್ ಆಫೀಸರನ್ನು ಹಾಕುತ್ತೀರಿ ಅವರು ಮಂತ್ರಿಗಳ ಮಾತು ಕೇಳುವುದಿಲ್ಲ. ನಿಮ್ಮ ಮಾತು ಕೇಳುವುದಿಲ್ಲ. ಹಿಂದಿನ ಮಂತ್ರಿಗಳು ಆರ್ಡರ್ ಮಾಡಿದ್ದನ್ನು ಅವರು ಕೇಳಲಿಲ್ಲ ಅವರು ರಿಜಿಸ್ಟ್ರಾರ್ ಮಾತು ಕೇಳುವುದಿಲ್ಲ. ಇಲಾಖೆಯವರು ಜಾಯಿಂಟ್ ರಿಜಿಸ್ಟ್ರಾರ್‌ಗಳನ್ನು ಅಡ್ಮಿನಿಸ್ಟ್ರೇಟರುಗಳಾಗಿ ಹಾಕಿದರೆ ಅವರಿಗೆ ಸಹಕಾರ ಸಂಘಗಳ ವಿಚಾರವೆಲ್ಲಾ ಗೊತ್ತಿರುತ್ತದೆ.

ಪ್ರತಿಯೊಂದು ನಿಯಮಗಳು ಗೊತ್ತಿರುತ್ತದೆ ಸಹಕಾರ ಸಂಘಗಳ ಕೆಲಸ ಯಾವರೀತಿಯಲ್ಲಿ ಮಾಡಬೇಕೆಂದು ಗೊತ್ತಿರುತ್ತದೆ. ಆದ್ದರಿಂದ, ತಾವು ಈ ಸಹಕಾರ ಸಂಘಕ್ಕೆ ಹೆಚ್ಚಿನ ರೀತಿಯಲ್ಲಿ ಉತ್ತೇಜನವನ್ನು ಕೊಡಬೇಕು ಎಲ್ಲರೂ ಸಹಕಾರ ಸಂಘಗಳಲ್ಲಿ ಕೆಲಸವನ್ನು ಮಾಡಿದವರು ಮಂತ್ರಿಗಳಾಗುತ್ತಾರೆ ಈ ಇಲಾಖೆಯಲ್ಲಿ ಕೆಲಸ ಮಾಡಿದರೆ ಅನುಭವ ಹೆಚ್ಚು ಇರುತ್ತದೆ. ಎಲ್ಲಾ ಮಂತ್ರಿಗಳಿಗೆ ಅನುಭವ ಇರುತ್ತದೆ. ಸಹಕಾರ ಸಂಘಗಳಲ್ಲಿ ಕೆಲಸ ಮಾಡಿದವರು ಮುಖ್ಯಮಂತ್ರಿಗಳಾಗಿದ್ದಾರೆ. ಮಂತ್ರಿಗಳಾಗಿದ್ದಾರೆ. ಆದರೂ ಸಹ ಇವೊತ್ತು ಆ ಇಲಾಖೆಗೆ ಸರ್ಕಾರದಿಂದ ಯಾವುದೇ ಒಂದು ವಿಧವಾದ ಉತ್ತೇಜನ ಅನುಕೂಲ ಕೊಡುತ್ತಿಲ್ಲ. ಆದ್ದರಿಂದ ಸಹಕಾರ ಇಲಾಖೆಗೆ ಹೆಚ್ಚಿನ ಉತ್ತೇಜನ ಕೊಡಬೇಕೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ.

2.45 ಪಿ.ಎಂ.

ಇನ್ನು ಕಂದಾಯ ಇಲಾಖೆಯ ಬಗ್ಗೆ ಹೇಳುವುದಾದರೆ ಮಾನ್ಯ ಮಂತ್ರಿಗಳು ಬೆಳಿಗ್ಗೆ ಹೇಳುತ್ತಿದ್ದರು. ಅರಣ್ಯ ಇಲಾಖೆಗೆ ಸೇರಿದಂಥ ಜಮೀನಿನಲ್ಲಿ ಸುಮಾರು 20-30 ವರ್ಷಗಳಿಂದ ರೈತರು ಬಡವರು ಪರಿಶಿಷ್ಟ ಜಾತಿಯವರು ಎಲ್ಲಾ ಜನಾಂಗದವರು ಸೇರಿ 4-4 ಎಕರೆಯನ್ನು ಮಾಡಿಕೊಂಡಿದ್ದಾರೆ ಅವರು ಸಾಗುವಳಿ ಮಾಡುತ್ತಿರುವ ಸ್ಥಳಕ್ಕೆ ಕಂದಾಯ ಇಲಾಖೆಯವರು ಹೋಗಿ ಅಲ್ಲಿ ಅವರು ಎಷ್ಟು ವರ್ಷಗಳಿಂದ ಮಾಡುತ್ತಿದ್ದಾರೆಂಬುದನ್ನು ನೋಡದೆ ಆ ಜಮೀನನ್ನು ಅರಣ್ಯ ಇಲಾಖೆಗೆ ಹ್ಯಾಂಡ್‌ಓವರ್ ಮಾಡಿದ್ದಾರೆ. ನಾವು ೪೦೦ ಎಕರೆ, ೫೦೦ ಎಕರೆ ಜಮೀನನ್ನು ಕೊಟ್ಟಿದ್ದೇವೆ. ಆ ಜಮೀನನ್ನು ನಾವು ವಶಪಡಿಸಿಕೊಂಡಿದ್ದೇವೆಂದು ಅರಣ್ಯ ಇಲಾಖೆಯವರು ಪುಸ್ತಕಗಳಲ್ಲಿ ರೆಕಾರ್ಡ್ ಮಾಡಿದ್ದಾರೆ. ಆದರೆ ಆ ಜನರು ಜಮೀನನ್ನು ಸ್ವಾಧೀನದಲ್ಲಿಟ್ಟುಕೊಂಡು ಕಳೆದ 20-30 ವರ್ಷಗಳಿಂದ ಅಲ್ಲಿ ಬೆಳೆ ಬೆಳೆದಿದ್ದಾರೆ. ಅವರು ಆ ಸ್ಥಳದಲ್ಲಿಯೇ ಇದ್ದಾರೆ ಹುಂಸೇ ಗಿಡಗಳನ್ನು ಹರಾಜು ಹಾಕಿದ್ದಾರೆ. ಕಂದಾಯ ಇಲಾಖೆಯಿಂದ ಹಣವನ್ನು ತೆಗೆದುಕೊಂಡಿದ್ದಾರೆ

ಆದರೂ ಅಲ್ಲಿ ಕಳೆದ 20-30 ವರ್ಷಗಳಿಂದ ಇರತಕ್ಕ ಈ ಜನರಿಗೆ ಪಿ.ಎಲ್.ಡಿ. ಬ್ಯಾಂಕಿನವರಾಗಲಿ ಬೇರೆ ಯಾವುದೇ ಬ್ಯಾಂಕ್‌ನವರಾಗಲಿ ಸಾಲವನ್ನು ಕೊಡುತ್ತಿಲ್ಲ. ದರಖಾಸ್ತು ಪಡೆಯಲು ಕೇಂದ್ರಸರ್ಕಾರಕ್ಕೆ ತಾವು ಬರೆಯಬೇಕು. ಇಂಥ ಜಮೀನು ಇರುವವರಿಗೆ ಸಾಲವನ್ನು ಕೊಡುವಂತೆ ಸರ್ಕಾರದಿಂದ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಬೇಕು. ಅವರಿಗೆ ಸ್ವಂತ ಜಮೀನು ಇಲ್ಲದಿದ್ದರೂ ಕಳೆದ 20-30 ವರ್ಷಗಳಿಂದ ಈ ಜಮೀನಿನಿಂದ ಜೀವನ ನಡೆಸುತ್ತಿದ್ದಾರೆ. ಅರಣ್ಯ ಇಲಾಖೆಯವರು ಇವರನ್ನೇನೂ ಓಡಿಸುವುದಿಲ್ಲ. ನೀವು ಇಲ್ಲಿಂದ ಹೋಗಿ ಎಂದು ಅವರಿಗೆ ಹೇಳುವುದಿಲ್ಲ. ಆ ಜಮೀನನ್ನು ಉಳುಮೆ ಮಾಡುವುದಕ್ಕೆ ಯಾವುದೇ ರೀತಿಯ ಸಾಲಸೌಲಭ್ಯಗಳೂ ಸಿಕ್ಕುತ್ತಿಲ್ಲ ಅಂಥ ಜಮೀನಿನ ಬಗ್ಗೆ ಕೇಂದ್ರಸರ್ಕಾರಕ್ಕೆ ಕೂಡಲೇ ಶಿಫಾರಸು ಮಾಡಿ ಅವರು ಆ ಜಮೀನಿನಲ್ಲಿ ವ್ಯವಸಾಯ ಮಾಡಲಿಕ್ಕೆ ಸಲಕರಣೆಗಳನ್ನು ಕೊಂಡುಕೊಳ್ಳುವುದಕ್ಕೆ ಭಾರತಮಟ್ಟದ ಬ್ಯಾಂಕ್‌ಗಳವರು ಮತ್ತಿತರ ಬ್ಯಾಂಕ್‌ನವರು ಇವರಿಗೆ ಸಾಲ ಕೊಡುವಂತೆ ಆದೇಶ ನೀಡಬೇಕು ನನ್ನ ಕ್ಷೇತ್ರದಲ್ಲಿ ಸಾವಿರಾರು ಎಕರೆ ಜಮೀನಿನಲ್ಲಿ ಇವರು ಸಾಗುವಳಿ ಮಾಡುತ್ತಿದ್ದರೂ ಕೂಡ ರೆವಿನ್ಯೂ ಇಲಾಖೆಯಿಂದ ಅರಣ್ಯ ಇಲಾಖೆಗೆ ಹ್ಯಾಂಡ್ ಓವರ್ ಮಾಡಿದ್ದೇವೆ ಎಂಬುದು ದಾಖಲೆ ಪುಸ್ತಕದಲ್ಲಿದೆ ಈ ರೀತಿಯ ತೊಂದರೆಯನ್ನು ತಪ್ಪಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಗೃಹನಿರ್ಮಾಣ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಒಂದು ಸಮಿತಿ ಇದೆ. ನೀವು ಶಿಫಾರಸ್ಸು ಮಾಡಿದರೆ ನಾವು ಮಂಜೂರಾತಿ ಮಾಡುತ್ತೇವೆಂದು ಹೇಳುತ್ತಾರೆ ಸ್ವಾಮಿ ನಾನು ಕೇಳುತ್ತೇನೆ ಆ ಹೌಸಿಂಗ್ ಕೋ ಆಪರೇಟಿವ್ ಸೊಸೈಟಿಗಳು ಏನಿವೆ ಅವು ಜಮೀನು ಮಾಲಿಕರ ಹತ್ತಿರ ಸೇರಿಕೊಂಡು ಅಂದರೆ ಇವರಿಬ್ಬರೂ ಶಾಮೀಲಾಗಿ ಇಂಥ ಸೊಸೈಟಿಗೆ ಕೊಡುವುದಾದರೆ ನಾವು ಈ ಜಮೀನನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ.

ಹಿಂದಿನ ಸಹಕಾರ ಸಂಘಗಳು ಏನು ಕೆಲಸಮಾಡಿವೆ ನಿವೇಶನಗಳನ್ನು ಸರಿಯಾಗಿ ಹಚ್ಚಿದ್ದಾರೆಯೇ ಇಲ್ಲವೇ ಎಂಬುದನ್ನು ಸರಿಯಾಗಿ ಪರಿಶೀಲಿಸಿ ಮೊದಲು ನಗರಾಭಿವೃದ್ಧಿ ಪ್ರಾಧಿಕಾರದವರು ಜಮೀನನ್ನು ವಶಪಡಿಸಿಕೊಂಡು ಅದರ ಮಾಲೀಕರಿಗೆ ಕಾಂಪನ್‌ಸೇಷನ್ ಕೊಟ್ಟು ಅನಂತರ ಸೊಸೈಟಿಗಳಿಗೆ ಪ್ರಾಧಿಕಾರದಿಂದಲೇ ಕೊಡಿ ಆಗ ಅವರು ಜಮೀನು ಮಾಲೀಕರ ಹತ್ತಿರ ನೇರವಾಗಿ ವ್ಯವಹಾರ ಮಾಡುವುದು ತಪ್ಪಿ ನ್ಯಾಯವಾಗಿ ಸಿಕ್ಕುತ್ತದೆ ಇವತ್ತು ಮೈಸೂರು ನಗರದಲ್ಲಿ ಒಂದೊಂದು ಸಹಕಾರ ಸಂಘದವರೂ 200, 300 400 500 ಎಕರೆ ಜಮೀನನ್ನು ಅಕ್ವಿಸೇಷನ್ ಮಾಡಿಕೊಂಡು ಇಟ್ಟುಕೊಂಡಿದ್ದಾರೆ ಇದರಿಂದ

ಅವರು ಬಂಡವಾಳ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಆದುದರಿಂದ ರೆವಿನ್ಯೂ ಇಲಾಖೆಯವರು ಈ ಸಹಕಾರಸಂಘಗಳಿಗೆ ಯಾವುದೇ ಮಂಜೂರಾತಿಯನ್ನೂ ಕೂಡ ಮಾಡಬೇಡಿ. ಯಾವುದೇ ಸಮಿತಿಯೂ ಬೇಡ ನೀವೇ ನೇರವಾದ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ವಶಪಡಿಸಿಕೊಂಡು ಅಲ್ಲಿಂದ ಏನು ಕಾಸ್ಟ್ ಫಿಕ್ಸ್ ಮಾಡಬೇಕೋ ಮಾಡಿ ಲೇಔಟ್ ಮಾಡುವುದನ್ನು ನಗರಾಭಿವೃದ್ಧಿ ಪ್ರಾಧಿಕಾರದವರೇ ಮಾಡಲಿ ಇಲ್ಲದಿದ್ದರೆ ಪಿ.ಡಬ್ಲ್ಯುಡಿ ಯವರು ಮಾಡಿದಾಗ ಅವರು ನಮಗೆ ಜಮೀನನ್ನು ಕೊಡಿ ಎಂದು ಕೇಳುವುದಕ್ಕೆ ಬರುವುದಿಲ್ಲ.

ಮಾನ್ಯ ಅಧ್ಯಕ್ಷರೆ ಇನ್ನೊಂದು ವಿಚಾರವನ್ನು ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ ಸಹಕಾರ ಸಂಘಗಳ ಸದಸ್ಯರು ಯಾರಿದ್ದಾರೆ ಅವರಿಗೆ ನಿವೇಶನಗಳನ್ನು ಕೊಡಿ. ಆಗ ದುರುಪಯೋಗದ ಪ್ರಶ್ನೆಯೇ ಬರುವುದಿಲ್ಲ. ನೀವು ಲೇಔಟ್ ಮಾಡುವುದಕ್ಕೆ ಮುಂಚಿತವಾಗಿ ಅವರೇ ಹಣವನ್ನು ಕಟ್ಟುತ್ತಾರೆ ಆಗ ಸರ್ಕಾರಕ್ಕೆ ಹಣದ ಅವಶ್ಯಕತೆ ಕೂಡ ಇರುವುದಿಲ್ಲ. ನೇರವಾಗಿ ನೀವೇ ನಿವೇಶನಗಳನ್ನು ಸಹಕಾರ ಸಂಘಗಳಿಗೆ ಕೊಟ್ಟರೆ ಜಮೀನು ಕೊಡುತಕ್ಕದ್ದು ತಪ್ಪುತ್ತದೆ. ನಮ್ಮ ಗ್ರಾಮಲೆಕ್ಕಿಗರು ಯಾರೂ ಕೂಡ ತಮ್ಮ ಕೇಂದ್ರ ಸ್ಥಾನಗಳಲ್ಲಿ ವಾಸ ಮಾಡುತ್ತಿಲ್ಲ. ಆದ್ದರಿಂದ ನೀವು ಅಲ್ಲಿ ಅವರಿಗೆ ವಾಸಕ್ಕೆ ಮನೆಗಳನ್ನು ಕಟ್ಟಿಸಿಕೊಟ್ಟರೆ ಒಳ್ಳೆಯದು ಆಗ ಅವರು ಅಲ್ಲಿಯೇ ಇರುತ್ತಾರೆ. ಇದರಿಂದ ರೈತರಿಗೂ ಅನುಕೂಲವಾಗುತ್ತದೆ ಉದಾಹರಣೆಗೆ ಹೇಳುವುದಾದರೆ ಇವತ್ತು ಮೈಸೂರಿನ ಒಬ್ಬ ಗ್ರಾಮಲೆಕ್ಕಿಗನನ್ನು ಹೆಗ್ಗಡದೇವನಕೋಟೆಗೆ ಪೋಸ್ಟ್ ಮಾಡಿದ್ದರೂ ಅವನು ಮಾತ್ರ ಮೈಸೂರಿನಲ್ಲೇ ಇರುತ್ತಾನೆ ಹೆಗ್ಗಡದೇವ ಕೋಟೆಯ ರೈತರು ತಮಗೆ ಏನಾದರೂ ಮಾಹಿತಿ ಬೇಕಾದರೆ ಮೈಸೂರಿಗೇ ಹೋಗಿ ಬರೆಸಿಕೊಂಡು ಬರಬೇಕಾಗುತ್ತದೆ ಗ್ರಾಮಲೆಕ್ಕಿಗರು ಎಲ್ಲೋ ಒಂದು ಗಂಟೆಕಾಲ ತಮ್ಮ ಕೇಂದ್ರಸ್ಥಾನಕ್ಕೆ ಬಂದು ಹೊರಟುಹೋಗುತ್ತಾರೆ. ಇದನ್ನು ತಪ್ಪಿಸಬೇಕಾದರೆ ಅವರಿಗೆ ಅವರ ಕೇಂದ್ರಸ್ಥಾನದಲ್ಲೇ ಒಂದು ಮನೆಯನ್ನು ಕಟ್ಟಿಸಿಕೊಟ್ಟರೆ ಅಲ್ಲಿಯೇ ಅವರು ವಾಸ ಇರುವುದಕ್ಕೆ ಅನುಕೂಲವಾಗುತ್ತದೆ. ಮತ್ತು ಇದರಿಂದ ರೈತರಿಗೂ ಕೂಡ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ.

ಇನ್ನು ಸರ್ವೇಯರ್‌ಗಳ ಬಗ್ಗೆ ಹೇಳುವುದಾದರೆ ಒಂದು ತಾಲ್ಲೂಕಿಗೆ ಒಬ್ಬರೇ ಒಬ್ಬರು ಸರ್ವೇಯರ್ ಇದ್ದಾರೆ ಯಾವುದಾದರೂ ಜಮೀನು ವಿವಾದ ಬಂದಾಗ ಸರ್ವೆ ಮಾಡಿಸುವುದಕ್ಕೆ ತೊಂದರೆ ಆದಾಗ ತಹಶೀಲ್ದಾರ್‌ರವರು ಹೇಳುತ್ತಾರೆ ನಮ್ಮ ಹತ್ತಿರ ಕೇವಲ ಒಬ್ಬರು ಮಾತ್ರ ಸರ್ವೇಯರ್ ಇದ್ದಾರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಹಲವಾರು ಗಲಾಟೆಗಳು ಬಂದಾಗ ದರ್ಖಾಸ್ತು ವಿಷಯ ಬಂದಾಗ ಬಗರ್‌ಹುಕ್ಕು ಸಾಗುವಳಿಯನ್ನು ಕನ್‌ಫರ್ಮ್ ಮಾಡುವಂಥ ಸಂದರ್ಭ ಬಂದಾಗ ಇಂಥ ಕಷ್ಟವಾಗುತ್ತದೆ ಆದುದರಿಂದ ಒಂದೊಂದು ತಾಲ್ಲೂಕಿನಲ್ಲಿ ಕನಿಷ್ಠ 5-5 ಜನ ಸರ್ವೆಯರ್‌ಗಳಿದ್ದರೆ ಬಹಳ ಅನುಕೂಲವಾಗುತ್ತದೆ ಇವತ್ತು ತಾಲ್ಲೂಕು ಕಛೇರಿಗಳು ಬೀಳುವ ಸ್ಥಿತಿಯಲ್ಲಿವೆ. ಇದಕ್ಕೆ ಏನಾದರೂ ಗ್ರ್ಯಾಂಟನ್ನು ಕೊಡಿ ಸ್ವಾಮಿ ಎಂದು ನಾನು ಮಂತ್ರಿಗಳನ್ನು ಕೇಳಿದ್ದಾಗ ಇದರ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿದ್ದೇವೆ ಎಂದು ಹೇಳಿದರು. ಎಷ್ಟೋ ತಾಲ್ಲೂಕು ಕಛೇರಿಗಳು ಬಿದ್ದುಹೋಗುತ್ತಿವೆ.ತಾಲ್ಲೂಕು ಕೇಂದ್ರಗಳಲ್ಲಿ ಅಲ್ಲಿನ ಸಿಬ್ಬಂದಿಗೆ ಕ್ವಾರ್ಟರ್ಸ್‌ಗಳೇ ಇಲ್ಲ ಹಳೆಯ ಕಾಲದ 4-5 ಕ್ವಾರ್ಟರ್ಸ್ ಇದ್ದರೆ ಅದಕ್ಕೆ ಸುಮಾರು 20-30 ಜನ ಅಧಿಕಾರಿಗಳು ಇದನ್ನು ನಮಗೆ ಕೊಡಿಸಿ ನಮಗೆ ಕೊಡಿಸಿ ಎಂದು ಕೇಳುತ್ತಾರೆ ವಸತಿಗೃಹಗಳ ಸಮಸ್ಯೆಯಿಂದಾಗಿ ಸಾಮಾನ್ಯವಾಗಿ ಯಾವ ಅಧಿಕಾರಿಗಳೂ ಕೂಡ ಊರಿನಲ್ಲಿರುವುದಿಲ್ಲ.

ಮೈಸೂರು ಇನ್ನೂ ಬೇರೆ ಬೇರೆ ಕಡೆ ಇರುತ್ತಾರೆ ಬೆಳಿಗ್ಗೆ 11 ಗಂಟೆಗೆ ಆಫೀಸಿಗೆ

ಇಲಾಖೆಯ ಸಿಬ್ಬಂದಿಗೆ ತಾಲ್ಲೂಕು ಕೇಂದ್ರಗಳಲ್ಲಿ ಹೋಬಳಿ ಕೇಂದ್ರಗಳಲ್ಲಿ ಇರುವವರಿಗೆ ವಸತಿಗೃಹಗಳನ್ನು ಕಟ್ಟಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಮುಖ್ಯಮಂತ್ರಿಗಳ ಬೇಡಿಕೆಯ ಬಗ್ಗೆ ಗಡಿಯ ತಾಲ್ಲೂಕುಗಳ ಅಭಿವೃದ್ಧಿ ಕಳೆದ ಸಾಲಿನಲ್ಲಿ 1990-91ಕ್ಕೆ 9 ಲಕ್ಷ ರೂಪಾಯಿ ಹಣವನ್ನು ಕೊಟ್ಟಿದ್ದಾರೆ 25 ಲಕ್ಷ ರೂಪಾಯಿಗೆ ಪ್ರಸ್ತಾಪನೆಯನ್ನು ಕಳುಹಿಸಿ ಕೊಡಿ ಎಂದು ಹೇಳಿದ್ದಾರೆ ಅವರು ಕಳೆದಸಾರಿ ಕೊಟ್ಟಿರುವುದು 9 ಲಕ್ಷ ರೂಪಾಯಿಗಳು ಈ ಒಂದು ಸಾಲಿನಲ್ಲಿ 25 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆಂದು ಹೇಳಿದ್ದಾರೆ 40 ಲಕ್ಷ ರೂಪಾಯಿಗಳ ಪ್ರಸ್ತಾವನೆ ತೆಗೆದುಕೊಂಡಿದ್ದಾರೆ ನನ್ನ ಕ್ಷೇತ್ರದಲ್ಲಿ ಮಹಿಳಾ ಸಂಸ್ಥೆ ಒಂದು ಇದೆ ಅವರು ಹೇಳುತ್ತಾರೆ 1991-92ನೇ ಸಾಲಿಗೆ ನಾವು ಎರಡೂವರೆ ಕೋಟಿ ರೂಪಾಯಿಗಳನ್ನು ನಿಮಗೆ ಕೊಡುತ್ತೇವೆ ಸರ್ಕಾರದಿಂದ ಒಂದು ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿಸಿಕೊಂಡು ಬನ್ನಿ. ಎರಡೂವರೆ ಕೋಟಿ ರೂಪಾಯಿಗಳನ್ನು ಈ ಒಂದು ತಾಲ್ಲೂಕು ಅಭಿವೃದ್ಧಿಕೋಸ್ಕರ ಕೊಡುತ್ತೇವೆಂದು ಹೇಳುತ್ತಾರೆ ಈ ಬಗ್ಗೆ ನಾನು ಹಲವಾರು ಬಾರಿ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ಪ್ಲಾನಿಂಗ್ ಮಿನಿಸ್ಟರಿಗೆ ಪತ್ರ ಬರೆದಿದ್ದೇನೆ. ಎಲ್ಲಾ ಇಲಾಖೆಗೆ ಪತ್ರ ಬರೆದಿದ್ದೇನೆ. ಇದರ ಬಗ್ಗೆ ಯಾವವಿಧವಾದ ಕ್ರಮ ತೆಗೆದುಕೊಳ್ಳಲಿಲ್ಲ ನಾನು ಸಂಬಂಧಪಟ್ಟ ಪ್ಲಾನಿಂಗ್ ಕಮಿಷನರನ್ನು ಬೇಟಿಮಾಡಿದಾಗ ಇಲ್ಲ ನಾವು ಎಲ್ಲ ತಾಲ್ಲೂಕುಗಳಿಗೂ ಸರಿಸಮಾನವಾಗಿ ಹಂಚುತ್ತಿದ್ದೇವೆಂದು ಹೇಳುತ್ತಾರೆ.

ಆದರೆ ಆ ಮಹಿಳಾ ಸಂಸ್ಥೆ ಇದೆ. ಅವರಿಗೆ ತಲೆಗೆ ಹಿಡಿಸುತ್ತಿಲ್ಲ. ಇದರಿಂದ ಯಾವ ಯಾವ ತಾಲ್ಲೂಕಿನಲ್ಲಿ ಮಹಿಳಾ ಪ್ಲಾನ್ ಇದೆ ಅವರಿಗೆ ಒಂದೂವರೆ ಕೋಟಿ ಕೊಟ್ಟರೆ ಎರಡೂವರೆ ಕೋಟಿ ಕೊಡುತ್ತೇವೆಂದು ಹೇಳುತ್ತಾರೆ ಸರ್ಕಾರ ಇದರಿಂದ ವರ್ಷಕ್ಕೆ 25 ಲಕ್ಷ ಕೊಡುತ್ತಾರೆ ನಮಗೆ ಮುಂದಿನ ಎರಡು ವರ್ಷ ಕೊಡೋದೆ ಬೇಕಿಲ್ಲ ಈ ಒಂದು ಲಕ್ಷ ರೂಪಾಯಿ ಕೊಟ್ಟಾಗ ನಮಗೆ ಮೂರು ಕೋಟಿ ರೂಪಾಯಿಂದ ಈ ವರ್ಷಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಹಣ ಕೂಡಲೆ ಮೈಸೂರು ಜಿಲ್ಲೆಯಲ್ಲಿ ಒಂದು ಮಹಿಳಾ ಸಂಸ್ಥೆ ಇರುವುದು ನಮ್ಮ ಹೆಗ್ಗಡದೇವನ ಕೋಟೆ ತಾಲ್ಲೂಕಿನ ಒಂದರಲ್ಲೇ ಆದ್ದರಿಂದ ಕೂಡಲೇ ಒಂದು ಕಾಲು ಕೋಟಿ ಹಣವನ್ನು ಬಿಡುಗಡೆ ಮಾಡಬೇಕೆಂದು ಸರ್ಕಾರವನ್ನು ಕೋರುತ್ತೇನೆ.

ವಿಧಾನ ಸೌಧದ ಸಚಿವಾಲಯದಲ್ಲಿ ನಾನು ಹಲವಾರು ಸಾರಿ ಪ್ರಶ್ನೆಯನ್ನು ಹಾಕಿದೆ ಡೆಪ್ಯೂಟಿ ಸೆಕ್ರೆಟರಿ ಅಂಡರ್‌ಸೆಕ್ರೆಟರಿಗಳು, ಸೆಕ್ಷನ್ ಆಫೀಸರ್‌ಗಳು ಬಹಳ ಮುಖ್ಯವಾದ ಹುದ್ದೆಗಳಲ್ಲಿ ಪರಿಶಿಷ್ಟಜಾತಿಯವರು ಇಲ್ಲವೇ ಇಲ್ಲ ನನಗೆ ತಿಳಿದಹಾಗೆ ಬಹಳ ಕಡಿಮೆಯಲ್ಲಿದ್ದಾರೆ. ಹಿಂದಿನ ಸರ್ಕಾರದವರು ನಾನು ಪ್ರಶ್ನೆಯನ್ನು ಹಾಕಿದರೆ ಎಷ್ಟು ಜನ ಇದ್ದಾರೆಂದರೆ 2-3 ಜನ ಇದ್ದಾರೆಂದು ಹೇಳಿದರು. 60-70 ಜನ ನೂರಾರು ಜನ ಅಂಡರ್ ಸೆಕ್ರೆಟರಿಗಳು ಇರುವಕಾಲದಲ್ಲಿ ಡೆಪ್ಯುಟಿ ಸೆಕ್ರೆಟರಿ ಇರುವುದು ಸಚಿವಾಲಯದಲ್ಲಿ ಬಹಳ ಕಡಿಮೆ ಸಂಖ್ಯೆಯನ್ನು ತೋರಿಸುತ್ತಿರುವುದನ್ನು ನಾವು ಪ್ರಶ್ನೆಮಾಡಿದೆ. ಈ ಒಂದು ಸಂದರ್ಭದಲ್ಲಿ ಮುಖ್ಯಮಂತ್ರಿಗಳಾಗಿ ಮಾನ್ಯ ಬಂಗಾರಪ್ಪನವರು ಬಂದರು ಪರಿಶಿಷ್ಟಜಾತಿಯವರ ಬಗ್ಗೆ ಹಿಂದುಳಿದವರ ಬಗ್ಗೆ ಏನು ಅನುಕಂಪ ಇದೆ ಎಂದು ಹೇಳುತ್ತಾರೆ ಇವರು ಬಂದಾಗ ನಾವು ನೋಡಿದಾಗ ಈ ಸಚಿವಾಲಯದ ಉನ್ನತ ಹುದ್ದೆಗಳಲ್ಲಿ ಈ ಪರಿಶಿಷ್ಟಜಾತಿಯವರನ್ನು ಹಾಕಿರುವುದನ್ನು ನಾನು ನೋಡಿಲ್ಲ ನನ್ನ ಗಮನಕ್ಕೆ ಬಂದಹಾಗೆ ಬಹುಶಃ ಎಲ್ಲಿಯಾದರೂ ಒಂದು ಯಾವುದಾದರೂ ಮಂತ್ರಿಗಳಿರುವ ಜಾಗಕ್ಕೆ ಹಾಕಿದಾಗ ಅವರನ್ನು 6 ತಿಂಗಳಿಗೆ ಯಾವುದಾದರೂ ಒಂದು ನೆಪಮಾಡಿ ಟ್ರಾನ್ಸ್‌ಫರ್ ಮಾಡಿಸಿಬಿಡುತ್ತಾರೆ ಅವರು ಅದು ಸರಿಯಿಲ್ಲ ಇದು ಸರಿಯಿಲ್ಲವೆಂದು ಈ ಒಂದು ಕಿರುಕುಳ ಸಚಿವಾಲಯದಲ್ಲಿ ಪರಿಶಿಷ್ಟಜಾತಿಯವರಿಗೆ ಆಗುತ್ತಿದೆ ಇದನ್ನು ತಪ್ಪಿಸಬೇಕೆಂದು ಹೇಳುತ್ತೇನೆ.

ಇನ್ನು ಸ್ಟಾಂಪ್‌ಗಳ ಬಗ್ಗೆ ಮಾನ್ಯ ಉಪಾಧ್ಯಕ್ಷಣಿಯವರೇ ನನಗೆ ತಿಳಿದಹಾಗೆ ಮೈಸೂರಿನಲ್ಲಿ ಎಲ್ಲೂ ಐದು ರೂಪಾಯಿ ಸ್ಟಾಂಪ್‌ಪೇಪರ್ ಸಿಕ್ಕುತ್ತಿಲ್ಲ ಹಲವಾರು ಬಾರಿ ರಾಜ್ಯದಲ್ಲಿ ಇರುವ ತೊಂದರೆ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ 10 ರೂಪಾಯಿ 100 ರೂಪಾಯಿನ ಸ್ಟಾಂಪ್ ಪೇಪರ್ ಸಿಗುವುದಿಲ್ಲ ನಾವು ಹತ್ತು ರೂಪಾಯಿನ ಸ್ಟಾಂಪ್ ತೆಗೆದುಕೊಳ್ಳಬೇಕಾದರೆ ಎಕ್ಸ್‌ಟ್ರಾ ಕೊಡಬೇಕಾಗುತ್ತದೆ ಈ ರೀತಿ ಕೋಟಾ ಸಿಗದೆ ಎರಡು ಎರಡು ರೂಪಾಯಿನ ಶೀಟ್‌ಗಳನ್ನು ತೆಗೆದುಕೊಳ್ಳಬೇಕಾಗಿದೆ. ಎಲ್ಲದರಲ್ಲೂ ಟೈಪ್‌ಮಾಡಬೇಕಾಗಿದೆ ಹಣವನ್ನು ಜಾಸ್ತಿ ಕೇಳುತ್ತಾರೆ. ಅದು ಒಂದು ಶಿಸ್ತಾಗಿರುವುದಿಲ್ಲ. ಅದನ್ನು ಸರ್ಕಾರದವರು ಕೂಡಲೆ ಎಲ್ಲಾ ಕಡೆ ಹೆಚ್ಚಿಗೆ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸೇಲ್ಸ್‌ಟ್ಯಾಕ್ಸ್ ಬಗ್ಗೆ ಹೇಳುವುದಾದರೆ ಈ ಅಧಿಕಾರಿಗಳನ್ನು ಮಾತನಾಡಿಸುವಂತೆಯೇ ಇಲ್ಲ ಸ್ಪಷ್ಟವಾಗಿ ನೋಟೀಸ್ ಕೊಡುತ್ತಾರೆ. ನೀವು ಅದು ಕೊಟ್ಟಿಲ್ಲ ಇದು ಕೊಟ್ಟಿಲ್ಲವೆಂದು 28 ಸಾವಿರ ಸಾವಿರಕ್ಕೆ ನೋಟೀಸ್ ಕೊಟ್ಟುಬಿಡುತ್ತಾರೆ ಅವರು ಹೋಗಿ ನೋಡಿದರೆ ಎಷ್ಟೋ ಜನಕ್ಕೆ ಅರ್ಥವಾಗುವುದಿಲ್ಲ. ಬೋರ್ಡ್‌ಗೆ ಹಾಕಿ ಅಕೌಂಟ್ ಕೊಟ್ಟಿಲ್ಲ ಬೀದಿಗೆ ಎಳೆದಿದ್ದಾರೆ ಎ.ಸಿ.ಟಿ.ಒಗಳು ಇದ್ದಾರೆ ಈ ಅಕೌಂಟ್ಸ್‌ಗಳನ್ನು ಸರಿಯಾಗಿ ಕೊಟ್ಟಿಲ್ಲವೆಂದು ಹಲವಾರು ತೊಂದರೆಗಳನ್ನು ಕೊಡುತ್ತಿದ್ದಾರೆ.

ನಾವು ನಿಜವಾದ ಅಕೌಂಟ್ ಕೊಟ್ಟರೂ ನಮಗೆ ಎಂಟ್ರಿ ಕೊಡುತ್ತಿದ್ದಾರೆ ಸಿಕ್ಕಾಪಟ್ಟೆ ಹಣ ಕೇಳುತ್ತಿದ್ದಾರೆ ಕೊಟ್ಟರೆ ನಮಗೆ ಸರಿಮಾಡಿಕೊಡುತ್ತಾರೆ ಇಲ್ಲದಿದ್ದರೆ ಇಲ್ಲ ಕೋರ್ಟಿಗೆ ಹಾಕಿ ನಿರ್ದಿಷ್ಟವಾದ ಕಾರಣಗಳಿಲ್ಲದೆ ತೊಂದರೆ ಕೊಡುತ್ತಾರೆ ಯಾರು ನಿರ್ದಿಷ್ಟವಾಗಿ ಹಣ ಕೊಡುವುದಿಲ್ಲ ಅಂಥವರಿಗೆ ತೊಂದರೆ ಕೊಡುವಂಥ ಕೆಲಸ ಈ ಇಲಾಖೆಯಲ್ಲಿ ಆಗಿದೆ ಮಾತೆತ್ತಿದರೆ ಅವರು ಹೇಳುತ್ತಾರೆ ನಾವು ಲಕ್ಷಾಂತರ ರೂಪಾಯಿ ಖರ್ಚುಮಾಡಿ ಬಂದಿದ್ದೇವೆ. ಅದನ್ನು ವಾಪಸ್ ಪಡೆಯಬೇಕೆಂದು ಹೇಳುತ್ತಾರೆ. ಮೈಸೂರಿನಲ್ಲಿ ಒಬ್ಬ ಅಸಿಸ್ಟೆಂಟ್ ಕಮೀಷನರ್ ಕೇಳುತ್ತಿದ್ದಾರಂತೆ ನನ್ನ ಕ್ಷೇತ್ರದಲ್ಲಿ ಒಬ್ಬ ಹತ್ತಿ ವ್ಯಾಪಾರ ಮಾಡುವವರು ಹೇಳುತ್ತಿದ್ದರು. ಅವರ ಸೇಲ್ಸ್‌ಟ್ಯಾಕ್ಸ್ ಆಫೀಸರ್ ಅವರು 10 ಸಾವಿರ ರೂಪಾಯಿಕೊಡಿ ನಾನು ಐದು ಲಕ್ಷ ರೂಪಾಯಿ ಕೊಟ್ಟು ಬಂದಿದ್ದೇನೆ ಅದನ್ನು ತುಂಬಬೇಕೆಂದರೆ ಎಲ್ಲಿ ಆಗುತ್ತದೆಂದು ಹೇಳುತ್ತಾರೆ

ಶ್ರೀ ಟಿ.ಎಂ. ಮಂಜುನಾಥ: ಇಂಥವರು ಎಂದು ಹೇಳಿದರೆ ಅವರ ಮೇಲೆ ಆಕ್ಷನ್ ತೆಗೆದುಕೊಳ್ಳಬಹುದು. ನಮ್ಮ ಮುಖ್ಯಮಂತ್ರಿಗಳಿಗೆ ಕಾಗದ ಬರೆದುಕಳುಹಿಸೋಣ ದಯವಿಟ್ಟು ಹೇಳಿ

ಶ್ರೀ ಎಂ.ಪಿ. ವೆಂಕಟೇಶ್: ನಾನು ತಮಗೆ ಹೇಳಿದೆ ನನ್ನ ಕ್ಷೇತ್ರದಲ್ಲಿ ಹತ್ತಿಮಾರಾಟ ಮಾಡುವವರು. ಎಂದು ಅವರನ್ನು ಕರೆದುಕೊಂಡು ಬಂದು ಹೇಳಿಸುತ್ತೇನೆ. ಬರೆಸಿ ಕೊಡುತ್ತೇನೆ. ಆ ಅಸಿಸ್ಟೆಂಟ್ ಕಮೀಷನರ್ ಯಾರು ಮೈಸೂರಿನಲ್ಲಿದ್ದಾರೆ ನಾನು ಅವರ ಬಗ್ಗೆ ಹೇಳಿದೆ ನನಗೆ ಹೇಳುತ್ತಿದ್ದಾರೆ ನಿಮ್ಮ ಗಮನಕ್ಕೆ ಅದನ್ನು ತರುತ್ತಿದ್ದೇನೆ ಆದ್ದರಿಂದ ದಯವಿಟ್ಟು ಶಿಸ್ತಿನ ತೆಗೆದುಕೊಳ್ಳಬೇಕೆಂದು ಹೇಳಿ ಮಾನ್ಯ ಸಭಾಧ್ಯಕ್ಷಣಿಯವರೇ ಈ ಒಂದು ಬೇಡಿಕೆಗೆ ಒಪ್ಪಿಗೆ ಕೊಡದೆ ನಾನು ವಿರೋಧಿಸುತ್ತಾ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: ಸರ್ವೆಯರ್ ಕೊಡಬೇಕೆಂದಿರಿ ವಿಲೇಜ್ ಅಕೌಂಟೆಂಟ್ ಇಡಬೇಕೆಂದಿರಿ ಎಲ್ಲದಕ್ಕೂ ಎಸ್ ಎಂದೆವು ಎಲ್ಲಾ ಹೇಳಿದರೂ ನೀವು ವಿರೋಧ ಮಾಡುತ್ತೇವೆಂದರೆ ಏನು?

ಶ್ರೀ ಎಂ. ಪಿ. ವೆಂಕಟೇಶ್: ಈ ಸದನದಲ್ಲಿ ಹಿಂದೆ ಮಾನ್ಯ ಬಂಗಾರಪ್ಪನವರು ಮಂತ್ರಿಗಳಾಗಿದ್ದಾಗ ಮತ್ತು ಇತರೆ ಮಂತ್ರಿಗಳು ಇದ್ದಾಗ [illegible]

ಕೊಟ್ಟಿದ್ದೇವೆ ವಿರೋಧ ಪಕ್ಷದವರು ಕೊಡಬಾರದೆಂದರೂ ಕೊಟ್ಟಿದ್ದೇವೆ. ಆದರೆ ಮಾನ್ಯ ಸಹಕಾರ ಮಂತ್ರಿಗಳು ಏನು ಹೇಳಿದ್ದಾರೆ ಅದನ್ನೆಲ್ಲ ಒಪ್ಪಿಕೊಂಡು ಸಹಕಾರ ಇಲಾಖೆಯ ಅಭಿವೃದ್ಧಿ ದೃಷ್ಟಿಯಿಂದ ಸಲಹೆ ಕೊಟ್ಟಿದ್ದೇವೆ ನನ್ನ ಪ್ರಶ್ನೆಗೆ ಉತ್ತರ ಕೊಡುವಾಗ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರಿಗೆ ವಾಹನ ಬೇಕು ಡೆಪ್ಯೂಟಿ ರಿಜಿಸ್ಟ್ರಾರ್ ಅವರಿಗೆ ವಾಹನ ಬೇಕಾಗಿದೆ ನಿಜ ಸರ್ಕಾರದ ಆರ್ಥಿಕ ಪರಿಸ್ಥಿತಿ ಸರಿ ಇಲ್ಲದೆ ಇರುವುದರಿಂದ ಯಾವುದೇ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ ಅವರು ಇಲಾಖೆಯನ್ನು ಅಭಿವೃದ್ಧಿಗೊಳಿಸುತ್ತೇವೆಂದು ಹೇಳಿದರೆ ಅವರ ಬೇಡಿಕೆಗೆ ಒಪ್ಪಿಗೆ ಕೊಡುತ್ತೇವೆ ಹೇಳುತ್ತಾರೆಯೇ ಕೇಳಿ. ಕಂದಾಯ ಇಲಾಖೆಯ ಬಗ್ಗೆ ಹೇಳುವುದಾದರೆ ಪ್ರತಿಯೊಂದು ವಿಚಾರದಲ್ಲಿ ಹೇಳಿದ್ದೇವೆ ಅದರ ಬಗ್ಗೆ ಅವರಿಂದ ಏನೂ ಭರವಸೆ ಇಲ್ಲ. ಸಹಕಾರ ಇಲಾಖೆಯನ್ನು ನಾನು ಅಭಿವೃದ್ಧಿಗೊಳಿಸುತ್ತೇನೆ ಅದಕ್ಕೆ ಉತ್ತೇಜನ ನೀಡುತ್ತೇನೆಂದು ಹೇಳುವುದಾದರೆ ಅವರ ಬೇಡಿಕೆಗೆ ಒಪ್ಪಿಗೆ ಕೊಡುತ್ತೇನೆ. ಇಷ್ಟು ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟ ಮಾನ್ಯ ಸಭಾಧ್ಯಕ್ಷಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ): ಮಾನ್ಯ ಉಪಾಧ್ಯಕ್ಷಿಣಿಯವರೇ ಕಂದಾಯ ಇಲಾಖೆ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಹಾಗು ಧಾರ್ಮಿಕ ದತ್ತಿ ಇಲಾಖೆ ಮೇಲೆ ಸ್ವಲ್ಪಸ್ವಲ್ಪ ಮಾತನಾಡಬೇಕೆಂದು ಇದ್ದೇನೆ ಮೊದಲನೆಯದಾಗಿ ಕಂದಾಯ ಇಲಾಖೆ ಬಹಳ ಪುರಾತನವಾಗಿರತಕ್ಕ ಇಲಾಖೆ ಅದು ಈಗ ತನ್ನ ಎಲ್ಲ ಸೌಂದರ್ಯಗಳನ್ನು ಕಳೆದುಕೊಂಡು ಕೈಕಾಲು ತಲೆ ಕಳೆದುಕೊಂಡು ದೇಹ ಮಾತ್ರ ಇದೆ ಎಂದು ಭಾವಿಸಿದ್ದೇನೆ. ಇದರ ಆದಾಯವನ್ನು ಗಣನೆಗೆ ತೆಗೆದುಕೊಳ್ಳದೆ ಹೋದರೂ ಕೂಡ ಇದು ಮದರ್ ಡಿಪಾರ್ಟ್‌ಮೆಂಟ್ ಇದರ ಮೂಲಕ ಪ್ರತಿಯೊಂದು ವ್ಯವಹಾರ ಕೂಡ ನಡೆಯತಕ್ಕ ಒಂದು ಪದ್ಧತಿ ಈ ರಾಜ್ಯದಲ್ಲಿ ಬಂದಿದೆ. ಈ ಇಲಾಖೆ ಬಹಳ ಪ್ರಾಮುಖ್ಯವಾಗಿ ಎಲ್ಲರಿಗೂ ಬೇಕಾಗಿರತಕ್ಕ ಇಲಾಖೆ ಈ ಇಲಾಖೆ ಸರಿಯಾಗಿ ನಡೆದರೆ ಖರ್ಗೆಯವರು ಸರಿಯಾಗಿ ಇಲಾಖೆಗೆ ಕಾಯಕಲ್ಪ ಕೊಟ್ಟರೆ ಇಡೀ ಜನಸ್ತೋಮ ಪರವಾಗಿಲ್ಲ ಈ ಸರ್ಕಾರ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂಬ ಮಾತನ್ನು ಆಡುತ್ತಾರೆ ಇಲ್ಲದೇ ಹೋದರೆ ಯಾರು ಎಷ್ಟೇ ಏನೆಲ್ಲ ಮಾಡಿರಲಿ ಅದು ಲೆಕ್ಕಕ್ಕೆ ಬರುವುದಿಲ್ಲ ಈ ಇಲಾಖೆಯಲ್ಲಿ 5 ರೂಪಾಯಿ ಲಂಚ ತೆಗೆದುಕೊಂಡರೆ ಸಾಕು ಅದು ಬಹಳಷ್ಟು ಬೇಗ ಬೀದಿಗೆ ಬರುತ್ತದೆ. ಲೋಕೋಪಯೋಗಿ ನೀರಾವರಿ ಅಬ್ಕಾರಿ ಇಲಾಖೆಗಳಲ್ಲಿ ಅದು ಹೊರಗಡೆ ಬರುವುದಿಲ್ಲ. ಆದುದರಿಂದ ಇದು ಸೂಕ್ಷ್ಮವಾಗಿರತಕ್ಕ ಇಲಾಖೆಯಾಗಿದೆ. ಏಕೆಂದರೆ ಅರ್ಧ ಒಂದು ಎಕರೆ ಜಮೀನು ಇಟ್ಟುಕೊಂಡಿರುವವರು ಸರ್ಟಿಫಿಕೇಟ್ ಬೇಕು ಎಂದು ತಾಲ್ಲೂಕು ಆಫೀಸಿಗೆ ಹೋದರೆ ಅಲ್ಲಿ 2 ರೂಪಾಯಿ ಖರ್ಚು ಮಾಡತಕ್ಕ ಪ್ರಸಂಗ ಬಂದರೆ ಕೊಟ್ಟು ಈಚೆಗೆ ಬರುತ್ತಿದ್ದ ಹಾಗೆ ಹೇಳಿಕೊಂಡು ಬರುತ್ತಾನೆ. ಅಷ್ಟು ಸೂಕ್ಷ್ಮವಾಗಿರತಕ್ಕ ಇಲಾಖೆಯನ್ನು ಇವತ್ತು ಆದಾಯ ದೃಷ್ಟಿಯಿಂದ ನೋಡದೆ ಸಾರ್ವಜನಿಕರ ಹಿತದೃಷ್ಟಿಯಿಂದ ನೋಡಿದರೆ ಬಹಳಷ್ಟು ಶೋಷಣೆ ಇಲಾಖೆಯಲ್ಲಿ ನಡೆಯುತ್ತಿದೆ. ಎಲ್ಲಾ ವರ್ಗದ ಜನ ಅವನ ಯೋಗ್ಯತೆಗೆ ತಕ್ಕಂತೆ ಹಣ ಖರ್ಚು ಮಾಡಬೇಕಾಗಿದೆ.

ಮೊದನೆಯದಾಗಿ ಹಳ್ಳಿಗಳಲ್ಲಿ ಈ ಕಂದಾಯ ಇಲಾಖೆ ಹೇಗಿದೆ ಎಂದರೆ ನನ್ನ ದೃಷ್ಟಿಯಲ್ಲಿ ಹಳ್ಳಿಗಳಲ್ಲಿ ಕಂದಾಯ ಇಲಾಖೆ ಸತ್ತಿದೆ ಜೀವಂತವಾಗಿಲ್ಲ ಎಂಬ ವಿಚಾರವನ್ನು ನೊಂದು ಹೇಳುತ್ತಿದ್ದೇನೆ. ಕಾರಣ ನಾವುಈ ಸಂವಿಧಾನ ಬಂದಮೇಲೆ ಹೆರಿಡಿಟರಿ ಆಫೀಸರ್ಸ್ ಅನ್ನು ವಜಾ ಮಾಡಬೇಕು ಅವರಿಗೆ ಬದಲಾಗಿ ವಿಲೇಜ್ ಅಕೌಂಟೆಂಟ್ ಅನ್ನು ನೇಮಕ ಮಾಡಿಕೊಂಡೆವು.ನೇಮಕ ಮಾಡಿಕೊಂಡ ಮೇಲೆ ನಮ್ಮ ಗತಿ ಏನಾಗಿದೆ ಎಂದರೆ ವಿಲೇಜ್ ಅಕೌಂಟೆಟ್ಸ್ ಇವತ್ತು ಹಳ್ಳಿಗಳಲ್ಲಿ ವಾಸ

ಮಾಡುವುದಿಲ್ಲ ಮೊದಲಿದ್ದ ಸೌಕರ್ಯ ಏನಿತ್ತು? ಹಳೇ ಮೈಸೂರು ವಿಚಾರದಲ್ಲಿ ಹೇಳುವುದಾದರೆ ಒಂದು ಸಣ್ಣ ಸರ್ಕಾರಿ ಭೂಮಿಯನ್ನು ಯಾರಾದರೂ ಒತ್ತುವರಿ ಮಾಡಿದ್ದರೆ ತಕ್ಷಣ ತಹಸೀಲ್ದಾರರಿಗೆ ಪಟೇಲ ತಕ್ಷಣ ವರದಿ ಕಳುಹಿಸುತ್ತಿದ್ದ ಈಗ 4-5 10-15-20 ಎಕರೆ ಮಾಡಿದ್ದರೂ ಟಿ.ಟಿ. ಹಾಕಿಲ್ಲ ನಾನು ಮಂತ್ರಿಗಳನ್ನು ಕೇಳುತ್ತಿದ್ದೇನೆ ಇದನ್ನು ತಪ್ಪಿಸುವುದಕ್ಕಾಗುವುದಿಲ್ಲವೆ? ಇವತ್ತು ಅನೇಕ ಭೂಸುಧಾರಣ ಕಾನೂನು ತಂದಿದ್ದೇವೆ. ಅನೇಕ ಹೊಸ ಹೊಸ ಪದ್ಧತಿಯನ್ನು ವ್ಯವಸಾಯದಲ್ಲಿ ತಂದಿದ್ದೇವೆ. ಇವತ್ತಿನ ದಿವಸ ಅನೇಕ ಪಬ್ಲಿಕ್ ರಸ್ತೆಗಳನ್ನು ಅಡ್ಡಗಟ್ಟಿದ್ದಾರೆ ಲ್ಯಾಂಡ್ ರಿಫಾರಮ್ಸ್ ಆಕ್ಟ್ ಮೂಲಕ ಯಾವ ಬಡವನಿಗೆ ನಾವು ಜಮೀನುಗಳನ್ನು ಮಂಜೂರು ಮಾಡಿದ್ದೇವೆ ಆ ಬಡವರು ಜಮೀನಿನ ಮೇಲೆ ಹೋಗುವುದಕ್ಕಾಗುತ್ತಿಲ್ಲ ಬಲಾಢ್ಯರು ಜಾಗ ಬಿಡುತ್ತಿಲ್ಲ ಇದರ ಬಗ್ಗೆ ಸಮಗ್ರವಾದ ಚಿಂತನೆಯನ್ನು ನಾವು ಮಾಡಬೇಕಾಗಿದೆ ಮಲ್ಲಿಕಾರ್ಜುನ ಖಾರ್ಗೆಯವರೆ ಇವತ್ತು ಹೊಸ ಬೇಸಾಯ ಪದ್ಧತಿ ಬಂತು ಇರಿಗೇಷನ್ ಪಂಪ್‌ಸೆಟ್ಸ್ ಬಂತು. ಯಾವ ಖುಷ್ಕಿ ಜಮೀನುಗಳು ಇದ್ದವು ಆ ಜಮೀನಿನ ಮೇಲೆ ಯಾರು ಬೇಕಾದರೂ ತಿರುಗಾಡುವ ಅವಕಾಶ ಇತ್ತು. ಇವತ್ತಿನ ದಿವಸ ಐ.ಪಿ. ಸೆಟ್ಸ್ ಬಂತು. ಖುಷ್ಕಿ ಜಮೀನುಗಳು ಗಾರ್ಡನ್ ಲ್ಯಾಂಡ್ಸ್ ಆಗಿವೆ. ತರಿ ಜಮೀನುಗಳು ವೆಟ್ ಲ್ಯಾಂಡ್ಸ್ ಆಗಿದೆ. ಸುತ್ತಲೂ ಬೇಲಿ ಹಾಕಿದ್ದಾರೆ. ಜಮೀನಿನಿಂದ ಮುಂದಿನ ಜಮೀನಿನ ಹತ್ತಿರ ಹೋಗಬೇಕಾದರೆ ಬೇಲಿ ಹಾಕಿ ಅಡ್ಡ ಕಟ್ಟಿದ್ದಾರೆ ಮುಂದೆ ಹೋಗತಕ್ಕ ಬಡವ ಇವತ್ತಿನ ದಿವಸ ಜಮೀನು ಮಾರಬೇಕಾಗಿದೆ ಅವನ ಆಶ್ರಯದಲ್ಲಿ ಇವನು ಇರಬೇಕು ಅವನು ಹೋಗು ಎಂದಾಗ ಹೋಗಬೇಕು. ಇಲ್ಲ ಎಂದಾಗ ಇಲ್ಲ ಎಂಬ ಪರಿಸ್ಥಿತಿ ಬಂದಿದೆ ಇದನ್ನು ಸಮಗ್ರವಾಗಿ ಚಿಂತನೆ ಮಾಡಬೇಕಾಗಿದೆ ಕಂದಾಯ ಮಂತ್ರಿಗಳು ನನಗೆ ಬಹಳ ಜನ ದೂರ ಕೊಟ್ಟಿದ್ದಾರೆ. ಇದನ್ನು ಏನಾದರೂ ಮಾಡಿ ರೀಸರ್ವೆ ಮಾಡಿಸಿ ದಾರಿ ಕೊಡಿಸತಕ್ಕ ವ್ಯವಸ್ಥೆ ಮಾಡಬೇಕು. ಇದು ಒಂದು ತಾಲ್ಲೂಕಿನ ಪ್ರಶ್ನೆ ಅಲ್ಲ ಇಡೀ ಕರ್ನಾಟಕ ರಾಜ್ಯದಲ್ಲಿ ಈ ಪ್ರಶ್ನೆ ಬಂದಿದೆ.

ಆದ್ದರಿಂದ ದಯಮಾಡಿ ಇದರ ಬಗ್ಗೆ ಹೆಚ್ಚಿನ ಗಮನ ಹರಿಸಬೇಕೆಂದು ಹೇಳುತ್ತೇನೆ. ವಿಲೇಜ್ ಅಕೌಂಟೆಂಟ್ ವೈಖರಿ ನೀವು ನೋಡುವುದಾದರೆ ಬಹುಶಃ ಯಾವ ಸರ್ಕಾರ ಬಂದರೂ ಸರಿ ಮಾಡುವುದಕ್ಕಾಗುವುದಿಲ್ಲವೆಂದು ನಾನು ಭಾವಿಸಿದ್ದೇನೆ. ಕಾರಣ ಏನು ಎಂದು ನನಗಿನ್ನೂ ಗೊತ್ತಾಗಿಲ್ಲ ನಾನು ಆ ಕಡೆ ಇದ್ದಾಗಲೂ ಇದೇ ಮಾತನ್ನು ಹೇಳಿದ್ದೆ ಜನತಾ ಸರ್ಕಾರಕ್ಕೆ ಹೇಳಿದ್ದೆ ನೀವು ಏನಾದರೂ ವಿಲೇಜ್ ಅಕೌಂಟೆಂಟ್ಸ್ ಕಾರ್ಯವೈಖರಿ ಸರಿ ಮಾಡುವುದಕ್ಕೆ ಸಾಧ್ಯವೆ ಎಂದು ಇವತ್ತು ಕೂಡ ಅದನ್ನೇ ಹೇಳಬೇಕಾಗಿದೆ. ಯಾವುದೇ ವಿಲೇಜ್ ಅಕೌಂಟೆಂಟ್ ಹತ್ತಿರ ಹೋದರೂ, ರೈತನಿಗೆ ಬೇಕಾದ ಸರ್ಟಿಫಿಕೇಟುಗಳು ಸಿಗುತ್ತಿಲ್ಲ ಫ್ರೀಯಾಗಿ ಒಂದು ಪಹಣಿಗೆ 20ರಿಂದ 25 ರೂಪಾಯಿ ರೈತ ಖರ್ಚು ಮಾಡಬೇಕು ಖಾತೆಗಳ ಬದಲಾವಣೆಗಂತೂ 2 ಸಾವಿರದಿಂದ 3 ಸಾವಿರ ರೂಪಾಯಿ ಕೊಡಬೇಕು ಇಂಥ ಪರಿಸ್ಥಿತಿಯಲ್ಲಿದ್ದೇವೆ. ನಾನು ಕಂದಾಯ ಮಂತ್ರಿಗಳನ್ನು ಕೇಳುತ್ತೇನೆ ಇದಕ್ಕೇನಾದರೂ ಒಂದು ಪರ್ಯಾಯ ವ್ಯವಸ್ಥೆ ಮಾಡಲಿಕ್ಕೆ ಸಾಧ್ಯವೆ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ : ಸನ್ಮಾನ್ಯ ಅಧ್ಯಕ್ಷರೇ ಶಿವನಂಜಪ್ಪನವರು ಬಹಳ ಅನುಭವಸ್ಥರು. ಒಳ್ಳೆಯ ವಕೀಲರು. ಮತ್ತು ಶಾಸಕರಾಗಿಯೂ ಕೆಲಸ ಮಾಡುತ್ತಿದ್ದಾರೆ ವಕೀಲರಾಗಿ ಕೆಲಸ ಮಾಡಿದ್ದಾರೆ. ಇದರ ಬಗ್ಗೆ ಅವರು ಒಳ್ಳೆಯ ಸಲಹೆಗಳನ್ನು ಕೊಟ್ಟರೆ ಹೀಗೆ ಮಾಡಿದರೆ ಹೀಗಾಗುತ್ತದೆ ಇದು ಒಳ್ಳೆಯ ಸಲಹೆ ಇದನ್ನು ಇಂಪ್ಲಿಮೆಂಟ್ ಮಾಡಿ ಎಂದು ಹೇಳಿದರೆ ಖಂಡಿತ ಮಾಡುತ್ತೇವೆ. ದಯವಿಟ್ಟು ತಮ್ಮ ವಕೀಲಿತನದ ಆಧಾರದ ಮೇಲೆ ಮತ್ತು ಶಾಸಕರಾಗಿ ಕೆಲಸ ಮಾಡಿದ

ಆಧಾರದ ಮೇಲೆ ಮತ್ತು ಸಾರ್ವಜನಿಕರ ಮುಖಂಡರಾಗಿ ಕೆಲಸ ಮಾಡಿದ ಮೇಲೆ ಸ್ವಲ್ಪ ನಮಗೆ ಸಲಹೆ ಕೊಟ್ಟರೆ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ನನಗೂ ಕೂಡ ಅವಕಾಶವಾಗುತ್ತದೆ ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ : ಟೀಕೆ ಮಾಡಬೇಡಿ ಸಲಹೆ ಕೊಡಿ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: ಟೀಕೆಯನ್ನೂ ಮಾಡಲಿ ಅದಕ್ಕೇನಂತೆ ಈ ಡಿಪಾರ್ಟ್‌ಮೆಂಟ್ ಇವತ್ತು ಹುಟ್ಟಿದ್ದಲ್ಲ ತಾಲ್ಲೂಕು ಕಚೇರಿಗಳು ಜಿಲ್ಲಾ ಕಚೇರಿಗಳು ಮುಪ್ಪಾಗಿ ಎಷ್ಟು ಹಳೆಯದಾಗಿದೆಯೋ ಆದೇರೀತಿ ಈ ಇಲಾಖೆ ನನ್ನ ಪಾಲಿಗೆ ಬಂದಿದೆ.

ಶ್ರೀ ಜಿ.ಎಸ್. ಶಿವನಂಜಪ್ಪ: ನಾನು ಇವತ್ತು ಈ ವಿಚಾರವನ್ನು ಏತಕ್ಕೆ ಜಾಸ್ತಿ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ ಇದೇನೋ ಮಲ್ಲಿಕಾರ್ಜುನ ಖರ್ಗೆಯವರಿಗೂ ಈ ಇಲಾಖೆಗೂ ಬಹಳ ಸಂಬಂಧ ಇದೆ ಎಂದು ಕಾಣುತ್ತದೆ. ಬಹಳ ಸಾರಿ ಈ ಇಲಾಖೆ ತಗೆದುಕೊಂಡು ನಿಭಾಯಿಸಿದ್ದಾರೆ ಇದರ ಕಡೆ ಏತಕ್ಕೆ ಕೊಡಲಿಲ್ಲ ಎಂಬ ವಿಚಾರವನ್ನು ಅವರ ಎದುರಿಗೆ ಹೇಳಿದೆ.

ಶ್ರೀ ಬಿ.ಎಚ್.ಬನ್ನಿಕೋಡ್: ಅವರನ್ನು ಅನಿವಾರ್ಯ ಎಂದು ತೆಗೆದುಕೊಳ್ಳುತ್ತಾರೆ. ಮತ್ತೆ ಇದೇ ಖಾತೆಯನ್ನು ಕೊಡುತ್ತಾರೆ

ಶ್ರೀ ಜಿ.ಎಸ್. ಶಿವನಂಜಪ್ಪ: ಅದಕ್ಕೇ ಹೇಳುತ್ತಿದ್ದೇನೆ. ವಿಲೇಜ್ ಅಕೌಂಟೆಂಟ್ಸ್ ಬಂದಾಕ್ಷಣ ಭ್ರಷ್ಟಾಚಾರ ಜಾಸ್ತಿಯಾಗುವುದಕ್ಕೆ ಕಾರಣ ಏನು ಎಂಬುದನ್ನು ಸ್ವಲ್ಪ ಅರಿಯಬೇಕಾಗುತ್ತದೆ. ಮೊದಲೂ ಇತ್ತು ಭ್ರಷ್ಟಾಚಾರ ಇಲ್ಲಿ ಎಂದು ನಾನು ಹೇಳುವುದಿಲ್ಲ.

ಮೊದಲು ಶಾನುಭೋಗರಿಗೆ ಒಂದು ಸೇರು ಬೆಣ್ಣೆ ತೆಗೆದುಕೊಂಡು ಹೋಗಿ ಕೊಟ್ಟರೆ ಏನು ಬೇಕಾದರೂ ಕೆಲಸ ಮಾಡಿಸಿಕೊಳ್ಳಬಹುದಾಗಿತ್ತು ಹಾಗೆಯೇ ತಹಶೀಲ್ದಾರ್ ಬಂದಾಗ ಅವರ ಮನೆಗೆ ಒಂದು ಹಾಲು ಕರೆಯುವ ಹಸು ತೆಗೆದುಕೊಂಡು ಹೋಗಿ ಕಟ್ಟಿ ಏನು ಬೇಕಾದರೂ ಕೆಲಸ ಮಾಡಿಸಿಕೊಳ್ಳಬಹುದಾಗಿತ್ತು. ಆದರೆ ಇವತ್ತು ಏನಾಗಿದೆ? ಇದೇನೂ ಲಂಚ ಎಂಬುದು ಹೊಸ ಪದ್ಧತಿ ಅಲ್ಲ ಹೊಸದಾಗಿ ಲಂಚ ಬಂದಿದೆ ಎಂದು ನಾನು ಹೇಳುವುದಿಲ್ಲ ಆದರೆ ಇದು ಯದ್ವಾತದ್ವಾ ಏಕೆ ಬೆಳೆದಿದೆ? ಹಿಂದೆ ಶಾನುಭೋಗರು ಮತ್ತು ಪಟೇಲರು ಅದೇ ಊರಿನಲ್ಲಿ ವಾಸ ಮಾಡುತ್ತಿದ್ದರು ಈಗ ನಾನು ಛಾಲೆಂಜ್ ಮಾಡುತ್ತಿದ್ದೇನೆ ಪಕ್ಷ ಬೇದ ಬಿಟ್ಟು ನಾವೆಲ್ಲರೂ ಹೋರಾಡಬೇಕು. ಇವತ್ತು ಯಾವ ಒಬ್ಬ ವಿಲೇಜ್ ಅಕೌಂಟೆಂಟ್‌ಗೂ ಆ ಊರಿನಲ್ಲಿ ಇಂತಹವನದೇ ಜಮೀನು ಇಂತಲ್ಲಿ ಇಂಥಹ ಸರ್ವೆ ನಂಬರ್‌ನಲ್ಲಿ ಇದೆ ಎಂದು ಗುರ್ತು ಮಾಡುವುದಕ್ಕೆ ಸಾಧ್ಯವೇ? ಯಾರೂ ಗ್ರಾಮಲೆಕ್ಕಗಳು ಜಮೀನು ಬಳಿಗೆ ಹೋಗುವುದಿಲ್ಲ ರೂಮ್‌ನಲ್ಲಿ ಕುಳಿತು ಕೆಲಸ ಮಾಡುತ್ತಾರೆ ಆತ ಅಲ್ಲಿಗೆ ಬಂದರೆ ಬಂದ ಇಲ್ಲದಿದ್ದರೆ ಇಲ್ಲ ಯಾರಾದರೂ ಪಹಣಿ ಬೇಕು ಎಂದು ಬಂದರೆ ಹತ್ತಿಪ್ಪತ್ತು ರೂಪಾಯಿ ತೆಗೆದುಕೊಂಡು ಪಹಣಿ ಬರೆದುಕೊಡುತ್ತಾನೆ ಇದನ್ನು ತಪ್ಪಿಸಬೇಕು ಆಗಾಗ ಅಧಿಕಾರಿಗಳು ಹಳ್ಳಿಗಳಿಗೆ ಕೊಟ್ಟು ಇಂತಹವರ ಜಮೀನು ಎಲ್ಲಿದೆ ಎಂದು ಕೇಳಿದರೆ ಆಗ ಅವರಿಗೂ ಸ್ವಲ್ಪ ಭಯ ಬರುತ್ತದೆ.

ಯಾರಾದರೂ ಅಧಿಕಾರಿಗಳು ಬರುತ್ತಾರೆಂದು ತಿಳಿದು ಅವರು ಜಮೀನಿನ ಹತ್ತಿರ ಹೋಗಿ ಕೆಲಸ ಮಾಡುತ್ತಾರೆ. ಮೊದಲು ಜಮಾಬಂದಿ ಆಗುತ್ತಾ ಇತ್ತು ಮೊದಲು ಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ಜಮಾಬಂದಿ ಆಗುತ್ತಾ ಇತ್ತು ಇವತ್ತು ಡಿಸಿ ಆಫೀಸಿನಲ್ಲೋ ಎಸಿ ಆಫೀಸಿನಲ್ಲೋ ಅಥವಾ ತಹಶೀಲ್ದಾರ್ ಆಫೀಸಿನಲ್ಲೋ ಜಮಾಬಂದಿ ಆಗುತ್ತದೆ ಹೋಬಳಿ ಮಟ್ಟದಲ್ಲಿ ಜಮಾಬಂದಿಯಾದರೆ ಆಯಾ ಭಾಗದ ಜನರು

ಬಂದು ತಮ್ಮ ಖಾತೆ ಆಗಬೇಕಾಗಿತ್ತು ಅದು ಆಗಿಲ್ಲ ನಾವು ಅರ್ಜಿ ಕೊಟ್ಟಿದ್ದೇವೆ ಕೆಲಸ ಆಗಿಲ್ಲ ಕಂದಾಯ ಕಟ್ಟಿದ್ದೇವೆ ಆದರೆ ರಶೀದಿ ಕೊಟ್ಟಿಲ್ಲ ಅಥವಾ ಕಿರ್ದಿಕೆ ಎಂಟ್ರಿ ಆಗಿಲ್ಲ ಎನ್ನುವ ವಿಚಾರವನ್ನು ಜಮಾಬಂದಿಯಲ್ಲಿ ಬಂದು ಹೇಳುತ್ತಾ ಇದ್ದರು. ಇವತ್ತು ಈ ಸೌಕರ್ಯ ಇಲ್ಲ ಡಿಸಿ ಆಫೀಸಿನಲ್ಲಿ ತಹಶೀಲ್ದಾರ್ ಆಫೀಸಿನಲ್ಲಿ ಯಾರೋ ಹೆಡ್ ಕ್ಲರ್ಕ್ ಹೋಗಿ ಚೆಕ್ ಮಾಡಿ ಬರುತ್ತಾನೆ ಕಡೇ ಪಕ್ಷ ಮಂಡಲ ಪಂಚಾಯಿತಿ ಹೆಡ್‌ಕ್ವಾರ್ಟರ್ಸ್‌ನಲ್ಲಿ ಜಮಾಬಂದಿ ಆಗುವ ವ್ಯವಸ್ಥೆ ಆದರೂ ಮಾಡಬೇಕಾಗುತ್ತದೆ. ಅಲ್ಲಿ ಡಿಸಿ ಎಸಿ ತಹಶೀಲ್ದಾರ್ ಈ ಮೂರೂ ಜನರು ಹೋಗಬೇಕು ಅಲ್ಲಿ ಜನರ ಕಷ್ಟ ಸುಖ ನೋಡಿದಾಗ ಇವರ ಹುಳುಕು ಏನು ಇದೆ ಎಂಬುದು ಹೊರಬರುತ್ತದೆ. ಈ ಸಲಹೆ ಬಗ್ಗೆ ತಾವು ಗಮನಹರಿಸಬೇಕು. ಮತ್ತೆ ಎಕ್ಸೈಸ್ ಲೋಕೋಪಯೋಗಿ ಇಲಾಖೆಯಷ್ಟು ಪ್ರಾಮುಖ್ಯತೆ ಈ ಇಲಾಖೆಯಲ್ಲಿ ಆದಾಯದ ಮೂಲದಿಂದ ಕಾಣುವುದಿಲ್ಲ. ಆದರೆ, ಪ್ರತಿಯೊಬ್ಬರೂ ಕೂಡ ಈ ಇಲಾಖೆಯನ್ನು ಆಶ್ರಯಿಸಬೇಕಾಗುತ್ತದೆ. ಪ್ರತಿಯೊಂದು ಇಲಾಖೆಯ ಕಾರ್ಯಕ್ಕೆ ಮಲ್ಲಿಕಾರ್ಜುನ ಖರ್ಗೆಯವರನ್ನು ಆಶ್ರಯಿಸಬೇಕು. ಅಕ್ವಿಸಿಷನ್ ವಿಚಾರವಾಗಿ ಪಹಣಿ ವಿಚಾರವಾಗಿ, ಮತ್ತೊಂದು ವಿಚಾರವಾಗಿ ಈ ಇಲಾಖೆಗೆ ಬರಲೇ ಬೇಕು. ಅದಕ್ಕೇ ನಾನು ಈ ಇಲಾಖೆಯನ್ನು ಮದರ್ ಡಿಪಾರ್ಟ್‌ಮೆಂಟ್ ಎಂದು ಕರೆದೆ, ಇನ್ನೊಂದು ಮುಖ್ಯ ವಿಷಯ, ಈ ಗ್ರಾಮಲೆಕ್ಕಿಗರ ಫಜೀತಿ ಏನೆಂದರೆ ಯಾವುದೇ ಗ್ರಾಮ ಲೆಕ್ಕಿಗರು ಹೆಡ್‌ಕ್ವಾರ್ಟರ್ಸ್‌ನಲ್ಲಿ ಇರುವುದಿಲ್ಲ. ಇದಕ್ಕೆ ಕಾರಣ ಅವರು ಮಕ್ಕಳು ತಾಲ್ಲೂಕು ಅಥವಾ ಹೋಬಳಿ ಹೆಡ್‌ಕ್ವಾರ್ಟರ್ಸ್ ನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುತ್ತಾರೆ.

ಮತ್ತೆ ಎರಡನೆಯದಾಗಿ, ಹರಿಜನಗಿರಿಜನರನ್ನು ಏನು ಗ್ರಾಮಲೆಕ್ಕಿಗರನ್ನಾಗಿ ನೇಮಕ ಮಾಡಿದ್ದೇವೆ, ಅವರ ಬಗ್ಗೆ ನಮ್ಮ ದೇಶದಲ್ಲಿ ಈ ಜಾತೀ ಪದ್ಧತಿ ಇನ್ನೂ ಹೋಗಿಲ್ಲ. ಈ ಹರಿಜನರನ್ನು ಯಾವ ಹಳ್ಳಿಗೆ ಹಾಕುತ್ತೀರಿ ಅಲ್ಲಿ ಅವರಿಗೆ ಮನೆ ಸಿಗುವುದಿಲ್ಲ. ಇನ್ನೆಲ್ಲಿ ಅವರು ವಾಸಮಾಡಬೇಕು? ಅವರು ಎಲ್ಲಿ ಇರಬೇಕು? ಪಾಟೀಲರ ಕಾಲದಲ್ಲಿ ಒಂದು ಸುತ್ತೋಲೆಯನ್ನು ಕೊಟ್ಟು ಎಲ್ಲರೂ ಕೆಲಸದ ಸ್ಥಳದಲ್ಲಿ ಇರಬೇಕು ಇಲ್ಲದಿದ್ದರೆ ಹಾಗೆ, ಹೀಗೆ ಮಾಡುತ್ತೇವೆ ಎಂದು ತಿಳಿಸಿದ್ದೀರಿ. ಆದರೆ ಅವರು ಏನು ಮಾಡುತ್ತಾರೆ? ಆದ್ದರಿಂದ ದಯಮಾಡಿ ಈ ಗ್ರಾಮಲೆಕ್ಕಿಗರಿಗೆ ಕ್ವಾರ್ಟರ್ಸ್ ಕಟ್ಟಿಸುವ ವ್ಯವಸ್ಥೆ ಮಾಡಬೇಕು. ಇದಕ್ಕೆ ಹಣವನ್ನು ಎಲ್ಲಿಂದ ತರುತ್ತೀರೋ ಗೊತ್ತಿಲ್ಲ, ಬೆಗ್, ಬಾರೋ ಅಥವಾ ಸ್ಟೀಲ್ ಎನ್ನುವಂತೆ ಹೇಗಾದರೂ ಹಣ ಹೂಡಿಸಿ ಇವರಿಗೆ ಆಯಾಯ ಸ್ಥಳದಲ್ಲಿ ವಸತಿ ಸೌಲಭ್ಯವನ್ನು ಕಲಿಸಬೇಕೆಂದು ಹೇಳುತ್ತೇನೆ. ಇನ್ನು ಇಲಾಖೆಯಲ್ಲಿ ಫಾರಂ ನಂ 1 ರಿಂದ ಹಿಡಿದು 27ನೇ ನಂಬರ್ ವರೆಗೆ ಫಾರಂಗಳು ಸರ್ಕಾರದಿಂದ ಪ್ರಿಂಟ್ ಮಾಡಿಸಿ ಎಷ್ಟು ಕೊಟ್ಟಿದ್ದೀರಿ? ಇದ್ದು ನೀವು ಕೇವಲ ಪಹಣಿ ಬರೆಯುವ ಫಾರಂ 12 ನ್ನು ಮಾತ್ರ ಸಪ್ಲೈ ಮಾಡಿರುತ್ತೀರಿ. ಮಿಕ್ಕ ಫಾರಂಗಳನ್ನು ಏಕೆ ಕೊಡುವುದಿಲ್ಲ? ಮಿಕ್ಕ ಫಾರಂಗಳನ್ನು ಭರ್ತಿ ಮಾಡಬೇಕಾದರೆ, ಆತ ಎಲ್ಲಿಂದ ತರಬೇಕು? ಆತ ಸ್ವಂತ ಖರ್ಚಿನಲ್ಲಿ ತರಬೇಕು. ಆತ 10 ರೂಪಾಯಿ ಕೊಟ್ಟು ಕೊಂಡ ಫಾರಂನ್ನು ತುಂಬಿ ಆ ಸಂಬಂಧಪಟ್ಟ ರೈತನಿಂದ 50 ರಿಂದ 100 ರೂಪಾಯಿ ತೆಗೆದುಕೊಳ್ಳುತ್ತಾನೆ. ಈ ಲ್ಯಾಕುನಾವನ್ನು ತಾವು ಏಕೆ ಮಾಡಿಕೊಟ್ಟಿದ್ದೀರಿ?

ಹೋದ ಸಲ ನಾನು ಈ ವಿಚಾರವನ್ನು ಕೇಳಿದ್ದೇನೆ. ಕಂದಾಯ ಇಲಾಖೆಯ ಅಧಿಕಾರಿಗಳು ಇಲ್ಲಿದ್ದರೆ ಗೊತ್ತಾಗುತ್ತದೆ. ನಾನು ಈ ವಿಚಾರವನ್ನು ಬಹಳ ಪ್ರೆಸ್ ಮಾಡಿ ಹೇಳಿದ್ದೇನೆ. ಒಂದು ಫಾರಂ ತರಿಸಿಕೊಳ್ಳುವ ಬದಲು 20 ಫಾರಂ ತೆಗೆದುಕೊಂಡು ಬಾ ಎಂದು ಹೇಳುತ್ತಾರೆ. ರೆವಿನ್ಯೂ ಇಲಾಖೆಯ ಅಧಿಕಾರಿಗಳ ಹತ್ತಿರ ಒಬ್ಬ ಬಡ ರೈತ ಹೋದರೆ, ಅವನು ಒಂದು ಫಾರಂ ಕೊಂಡುಕೊಳ್ಳುವುದಕ್ಕೆ

ಗತಿಯಿಲ್ಲ. ಅಂತಹದ್ದರಲ್ಲಿ 20 ಫಾರಂ ತೆಗೆದುಕೊಂಡು ಬಾ ಅಂದರೆ ಎಲ್ಲಿ ತಂದುಕೊಡುವುದಕ್ಕೆ ಸಾಧ್ಯ? ಅವನಿಗೆ ಒಂದು ಫಾರಂ ತಂದು ಕೊಡುವುದಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ಫಾರಂ ನಂಬರ್ 1 ರಿಂದ 25ರವರೆಗೆ ಏನಿವೆ ಆ ಫಾರಂಗಳನ್ನು ನೀವು ಅವರಿಗೆ ಕಡ್ಡಾಯವಾಗಿ ಸಪ್ಲೈ ಮಾಡಬೇಕಾಗುತ್ತದೆ.

ಇನ್ನು ಪಹಣಿ ಬರೆಯುವ ವಿಚಾರದಲ್ಲಿ ನಾನು ಆಗಲೇ ಹೇಳಿದ್ದೇನೆ. ಪಹಣಿ ಬರೆಯುವವರು ಸ್ಥಳಕ್ಕೆ ಭೇಟಿ ಕೊಟ್ಟು ಯಾರು ನಿಜವಾಗಿ ಉಳುಮೆ ಮಾಡುತ್ತಿದ್ದಾರೆ ಅವರ ಹೆಸರು ಬರೆಯತಕ್ಕ ಪದ್ಧತಿಯನ್ನು ನೀವು ತರಬೇಕಾಗಿದೆ. ಹಿಂದೆ ಸ್ಥಳ ಪರೀಕ್ಷೆ ಮಾಡಿ ಈ ರೀತಿ ಮಾಡುತ್ತಿದ್ದರು. ಇವತ್ತಿನ ದಿವಸ ಸ್ಥಳ ಪರೀಕ್ಷೆ ಆಗುತ್ತಿಲ್ಲ. ಮತ್ತೆ ಎಲ್ಲೆಲ್ಲಿ ಸರ್ಕಾರಿ ಜಮೀನುಗಳಿವೆ, ಓಣಿಗಳಿವೆ, ಕಾಲುದಾರಿಗಳು ಇವೆ, ಗುಂಡುತೋಪುಗಳಿವೆ ಇವೆಲ್ಲವೂ ಕೂಡ ಇವತ್ತು ಆಕ್ರಮಣವಾಗಿವೆ. ಬಡವ ದಾರಿಯಲ್ಲಿ ಹೋಗಬೇಕಾದರೆ ದಾರಿ ಅಡ್ಡಗಟ್ಟಿದ್ದಾರೆ. ಬಡವ ಓಡಾಡುವುದಕ್ಕೆ ದಾರಿ ಸಿಗುತ್ತಿಲ್ಲ, ಗಾಡಿಗಳು ಹೋಗುವುದಕ್ಕೆ ಓಣಿಗಳು ಇದ್ದವು. ಅವುಗಳನ್ನು ಮುಚ್ಚಿ ಆ ಓಣಿಗಳನ್ನು ಸಹ ಅತಿಕ್ರಮ ಪ್ರವೇಶ ಮಾಡಿ ಅದನ್ನು ಆಕ್ಯುಪೈ ಮಾಡಿಕೊಂಡಿದ್ದಾರೆ. ಮತ್ತೆ ಗೋಮಾಳಕ್ಕೆ ಹೋಗತಕ್ಕ ದಾರಿಗಳನ್ನು ಸಹ ಮುಚ್ಚಿದ್ದಾರೆ. ಈಗ ಗೋಮಾಳವೇ ಬೇಕಾಗಿಲ್ಲ, ಆ ಪ್ರಶ್ನೆ ಬೇರೆ. ಗೋಮಾಳ ನಮಗೆ ಬೇಕಾಗಿಲ್ಲ, ದನಕರುಗಳು ನಮಗೆ ಬೇಕಾಗಿಲ್ಲ, ಗೋಮಾಳ ಪೂರ್ತಿ ಬೇರೆಯವರ ಪಾಲಾಗಿದೆ. ದನಗಳನ್ನು ಮುಂದೆ ಏನು ಮಾಡಬೇಕೋ ಗೊತ್ತಿಲ್ಲ, ಅದು ಮುಂದಿನ ಪ್ರಶ್ನೆ.

ಸರ್ಕಾರಿ ಜಮೀನುಗಳಲ್ಲಿ ಯಾವ್ಯಾವುದು ಸ್ಪೆಸಿಫಿಕ್ ಪರ್ಪಸ್‌ಗೆ ಇರಬೇಕೆಂದು ನಿಗದಿಯಾಗಿತ್ತೊ— ಕೆರೆಗೆ ಹೋಗತಕ್ಕ ದಾರಿ, ಓಣಿ, ಈ ತರಹ ದಾರಿಗಳನ್ನು ಸಹ ನೀವು ಆಕ್ಯುಪೈ ಮಾಡುವುದಕ್ಕೆ ಬಿಟ್ಟರೆ ಸರ್ಕಾರ ಇದೆಯೇ ಎಂದು ನಾನು ಕೇಳುತ್ತಿದ್ದೇನೆ? ತಾವು ಏತಕ್ಕೆ ಇರಬೇಕು? ರೆವಿನ್ಯೂ ಇನ್ಸ್‌ಪೆಕ್ಟರ್ ಅಲ್ಲಿಂದ ಹಿಡಿದು ಆರ್ಮಿ ಆಫ್ ಆಫೀಸರ್ಸ್ ಇದ್ದಾರೆ. ವಿಲೇಜ್ ಅಕೌಂಟೆಂಟ್. ನಿಂದ 'ಹಿಡಿದು ಮಲ್ಟಿ ಸ್ಟೋರಿಡ್ ಬಿಲ್ಡಿಂಗ್ ತನಕ ನಿಮ್ಮ ಅಧಿಕಾರಿಗಳು ಇದ್ದಾರೆ. ರೈತನ ಗೋಳನ್ನು ಯಾರು ಕೇಳಬೇಕು? ದನ ಕುರಿಗಳನ್ನು ಸಾಕಬೇಕಾದರೆ ನೀರು ತರಬೇಕಾದರೆ, ಗಾಡಿ ಹೊಡೆಯಬೇಕಾದರೆ ಎಲ್ಲಿ ಹೋಗಬೇಕು? ಎಲ್ಲವನ್ನು ಎಲ್ಲಾ ಕಡೆ ಆಕ್ಯುಪೈ ಮಾಡಿದ್ದಾರೆ. ನಾಳೆ ಕೇಳುತ್ತಾರೆ ಇದು ನನ್ನ ಬೆಟರ್ ಕಲ್ಟಿವೇಷನ್‌ಗೆ ಬೇಕೆಂದು. ಹೇಗೋ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಅಕ್ರಮ ಸಾಗುವಳಿಯನ್ನು ರೆಗ್ಯುಲರೈಸ್ ಮಾಡುವುದಕ್ಕೆ ಕಾನೂನು ತಂದಿದ್ದಾರೆ. ಅದಕ್ಕೆ ಅವರು ಅರ್ಜಿ ಹಾಕಿಕೊಳ್ಳುತ್ತಾರೆ. ಅದಕ್ಕೆ ಅವರಿಗೆ ಅವಕಾಶವುಂಟು ಅದರಲ್ಲಿ ನನಗೂ ಅವಕಾಶ ಇದೆ. ನಿಮ್ಮ ರೆವಿನ್ಯೂ ಆಫೀಸರ್ಸ್ ಏನು ಮಾಡುತ್ತಿದ್ದಾರೆ? ಅದರ ಬಗ್ಗೆ ಟಿ.ಟಿ. ಏತಕ್ಕೆ ಹಾಕಲಿಲ್ಲ? ಇದರ ಬಗ್ಗೆ ಯಾವುದಾದರೂ ಒಂದು ಸಮೀಕ್ಷೆ ನಡೆಸಿ. ಇದರ ಬಗ್ಗೆ ಒಂದು ರಿಪೋರ್ಟ್ ಕೇಳಿ. ಯಾವ್ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಟಿ.ಟಿ.ಕೇಸುಗಳನ್ನು ಹಾಕಿದ್ದಾರೆಂದು ಅದರ ಬಗ್ಗೆ ಒಂದು ರಿಪೋರ್ಟ್ ತರಿಸಿ. ಕಳೆದ ಆರು ತಿಂಗಳುಗಳಿಂದ ಟಿ.ಟಿ. ಹಾಕಿರುವುದು ಬೇಡ. ಹಿಂದೆ ಟಿ.ಟಿ. ಹಾಕಿರುವುದನ್ನು ತರಿಸಿ. ಈಗ ಆರು ತಿಂಗಳುಗಳಿಂದ ಬಹಳ ಜಾಸ್ತಿ ಮಾಡಿದ್ದಾರೆ. ಒಂದು ಎಕರೆಗೆ ಟಿ.ಟಿ. ಹಾಕಬೇಕಾದರೆ ಸರ್ಕಾರಕ್ಕೆ ನೂರು ರೂಪಾಯಿ ವಿಲೇಜ್ ಅಕೌಂಟೆಂಟ್‌ಗೆ 1 ಸಾವಿರ ರೂಪಾಯಿ. ಸರ್ಕಾರಕ್ಕೆ ಕೊಡುವುದು 100 ಮಾತ್ರ. ಗ್ರಾಮಲೆಕ್ಕಿಗ 1 ಸಾವಿರದಿಂದ 3 ಸಾವಿರದವರೆಗೆ ಲಂಚ ತೆಗೆದುಕೊಂಡಿರತಕ್ಕ ನಿದರ್ಶನಗಳು ನನ್ನ ನೋಟೀಸ್‌ಗೆ ಬಂದಿವೆ.

ಕೇಸುಗಳು ತೀರ್ಮಾನವಾಗುವ ಕಾಲದಲ್ಲಿ ಎಷ್ಟು ಬೆಳಕಿಗೆ ಬರುತ್ತವೆ ನೋಡೋಣ. ಇಂತಹ ಪದ್ಧತಿಯನ್ನು ನೀವು ತಪ್ಪಿಸುವುದಕ್ಕೆ ಆಗುವುದಿಲ್ಲವೇ ಎಂದು ಕೇಳುತ್ತೇನೆ. ಬಹಳಷ್ಟು ಜನ ನಿರ್ಗತಿಕರು ತಾಲ್ಲೂಕು ಆಫೀಸಿಗೆ ಹೋಗುತ್ತಿದ್ದಾರೆ. ಕೈಲಾಗದ ಜನ

ಅವರ ಕೋರ್ಟು ನೋಡಿರುವುದಿಲ್ಲ. ಸ್ವಾಮಿ ನಾನು ಓಡಾಡುವ ದಾರಿಯನ್ನು ಕಟ್ಟಿ ನನ್ನನ್ನು ಕೋರ್ಟಿಗೆ ಅಲೆಸುತ್ತಿದ್ದಾರೆ. ಇದು ಸರಿಯೇ ಎಂದು ಕೇಳುತ್ತಾರೆ. ದಯಮಾಡಿ ಈ ವಿಚಾರದಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ವಿಚಾರ ಮಾಡಬೇಕು. ಅವರು ಬಹಳ ಬುದ್ಧಿವಂತರು ಮತ್ತು ಶಾಣೆ ಇದ್ದಾರೆ. ಒಬ್ಬಿಬ್ಬರಿಗೆ ಚುರುಕು ಮುಟ್ಟಿಸಿದರೆ ಸರಿಯಾಗುತ್ತದೆ. ಒಂದೊಂದು ತಾಲ್ಲೂಕಿನಲ್ಲಿ ನಾಲ್ಕೈದು ಜನರನ್ನು ಸಸ್ಪೆಂಡ್ ಮಾಡಿದರೆ ಏನೂ ಆಗುವುದಿಲ್ಲ. ತಾವು ಕ್ರಮ ತೆಗೆದುಕೊಳ್ಳಿ. ಜನ ನೆಮ್ಮದಿಯಿಂದ ಜೀವನ ಮಾಡತಕ್ಕ ಒಂದು ವ್ಯವಸ್ಥೆಗೆ ನೀವು ಹಿಂಬು ಕೊಡತಕ್ಕ ಕೆಲಸ ಮಾಡಬೇಕಾಗುತ್ತದೆ. ಅದರ ಬಗ್ಗೆ ನಾನು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ, ಜನತೆ ಹಳ್ಳಿಗಳಲ್ಲಿ ನೆಮ್ಮದಿಯ ಜೀವನ ಮಾಡುತ್ತಿಲ್ಲ. ಕಾರಣ ನಿಮ್ಮ ಇಲಾಖೆ ಸತ್ತಿದೆ. ಈ ಇಲಾಖೆ ಸಾಯಬಾರದು ಇದು ಜೀವಂತವಾಗಿರಬೇಕು. ಲೋಕಸಭಾ ಚುನಾವಣೆಯಲ್ಲಿ ತುಮಕೂರಿನ ಕ್ಷೇತ್ರದಲ್ಲಿ ಭಾರತೀಯ ಜನತಾ ಪಕ್ಷದ ಅಭ್ಯರ್ಥಿ ಆರಿಸಿ ಬಂದಿದ್ದಾರೆ. ಎಲ್ಲಿ ಬೇಕು ಅಂದರೆ ಅಲ್ಲಿ ಅಡ್ಡಗಟ್ಟಿದ್ದಾರೆ. ಹೀಗೆ ಮಾಡಿದರೆ ಬೇರೆಯವರ ಗತಿ ಏನಾಗುತ್ತದೆ? ಅದೇ ರೀತಿ ಇಡೀ ರಾಜ್ಯದಲ್ಲಿ ಆಗುತ್ತಿದೆ.. ಸಾರ್ವಜನಿಕರಿಗಾಗಿ ಕಾಯ್ದಿಟ್ಟ ಜಮೀನುಗಳು ಏನಿವೆ ಅದನ್ನು At any cost we should preserve it for public purpose.

3.15 ಪಿ.ಎಂ.

ಈ ದಿಸೆಯತ್ತ ಕಾರ್ಯೋನ್ಮುಖರಾಗಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಮತ್ತೆ ನನಗೆ ಈ ಅಸಿಸ್ಟೆಂಟ್ ಕಮೀಷನರ್ ಅವರ ಆಫೀಸ್ ಬೇಡ ಎಂದು ಅನಿಸುತ್ತದೆ. It is only a Post Office.

ಏತಕ್ಕೋಸ್ಕರ ಅಸಿಸ್ಟೆಂಟ್ ಕಮೀಷನರ್ ಅವರ ಆಫೀಸನ್ನು ಇಟ್ಟುಕೊಂಡಿದ್ದೀರಿ? ಏನು ಕೆಲಸ ಇದೆ ಇದರೊಳಗೆ? ಬೇಕಾಗಿಲ್ಲ ಇದು. ಅಸಿಸ್ಟೆಂಟ್ ಕಮೀಷನರ್ ನೇರವಾಗಿ ಡಿವಿಜನಲ್ ಕಮೀಷನರ್ ಅವರಿಗೆ ಬರಲಿ, ಅಲ್ಲಿಂದ ಸರ್ಕಾರಕ್ಕೆ ಹೋಗಲಿ. ಈ ಅಸಿಸ್ಟೆಂಟ್ ಕಮೀಷನರ್ ಆಫೀಸು ಅನಾವಶ್ಯಕ. ಇದು ಸರ್ಕಾರದ ಬೊಕ್ಕಸಕ್ಕೆ ವೆಚ್ಚತರತಕ್ಕದ್ದು. ಏನೋ ಬ್ರಿಟಿಷರ ಕಾಲದಲ್ಲಿ ಮಾಡಿದ್ದು, ಅದನ್ನು ಮುಂದುವರೆಸಿಕೊಂಡು ಬಂದಿದ್ದೇವೆ. ಇದನ್ನು ಬದಲಾಯಿಸಿ ಹೊಸ ಚಿಂತನೆಯನ್ನು ಮಾಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇನ್ನು ತಾಲ್ಲೂಕು ಆಫೀಸಿನಲ್ಲಿ ಇಟ್ಟಿರತಕ್ಕಂಥ ರೆಕಾರ್ಡುಗಳು. ಮೊದಲು ಒಂದನೆಯ ಫಾರ್ಮ್‌ನಿಂದ 25ನೇ ಫಾರ್ಮ್ ತನಕ ಬರೆಯುತ್ತಿದ್ದರು. ಆರ್.ಆರ್. ಫೈಲ್ ಇರುತ್ತಿತ್ತು. ಆರ್.ಆರ್. ಇಂಡೆಕ್ಸ್‌ನಲ್ಲಿ ಇರುತ್ತಿತ್ತು. ಪಹಣಿ ಪುಸ್ತಕದಲ್ಲಿ ಬರೆಯುತ್ತಿದ್ದರು. ಅದೆಲ್ಲವನ್ನೂ ತೆಗೆದು ಬಿಟ್ಟು ಫಾರಂ ನಂ.12 ಎಂದು ತಂದು ಅದರಲ್ಲಿ ಎಲ್ಲವನ್ನೂ ತುಂಬುತ್ತಾರೆ. ಈ ಜಾತಕವೆಲ್ಲವನ್ನೂ ವಿಲೇಜ್ ಅಕೌಂಟೆಂಟ್ ಬರೆಯುತ್ತಾನೆ. ಶಿವನಂಜಪ್ಪ ಹೆಸರು ಇದ್ದುದ್ದನ್ನು ತೆಗೆದುಹಾಕಿ ಬಿಟ್ಟು ತಿಮ್ಮಪ್ಪ ಎಂದು ಹೆಸರು ಅಲ್ಲಿ ಬಂದರೆ Thimmappa will get his rights.

ಇಂತಹ ಕೇಸುಗಳಲ್ಲಿ, ಸಿವಿಲ್ ಕೋರ್ಟಿನಲ್ಲಿ ಅನೇಕ ಬೆಲೆಬಾಳತಕ್ಕಂಥ ಆಸ್ತಿಗಳು ಇವರ ಒಂದು ಅಚಾತುರ್ಯದಿಂದ ಕೋರ್ಟಿಗೆ ಬಂದಿದೆ. ಕೆಲವಾರು ನಿರಪರಾಧಿಗಳು ಅನೇಕ ಕೇಸುಗಳನ್ನು ಎದುರಿಸುತ್ತಿದ್ದಾರೆ. ಈ ಪಹಣಿಗಳಲ್ಲಿ ಬರೆಯುವುದು ಮೊದಲು ಹಾಗೆ ಇತ್ತು. ಆದ್ದರಿಂದ ಕೊನೆಯ ಪಕ್ಷ ಆರ್.ಆರ್.ನಲ್ಲಿ ಮತ್ತು ಇಂಡೆಕ್ಸ್‌ನಲ್ಲಿ ಇವೆರಡರಲ್ಲಿ ಬರೆಯುವ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಏಕೆಂದರೆ ಒಂದೇ ಫಾರಂನಲ್ಲಿ ಹಿಸ್ಸರಿ ಹೇಗೆ ಬಂತೆನ್ನುವುದು ಇರುವುದಿಲ್ಲ. ಈಗ ಇರುವ ಫಾರಮ್‌ನಲ್ಲಿ ಶಿವನಂಜಪ್ಪ - ಪಿತ್ರಾರ್ಜಿತ ಆಸ್ತಿ ಎಂದು ಬರೆದು, ಮೊದಲಿದ್ದ ಖರ್ಗೆಯವರ ಹೆಸರನ್ನು ಹೊಡೆದು ಹಾಕಿಬಿಟ್ಟರೆ ಅದನ್ನು ಟ್ರೇಸ್ ಮಾಡುವವರು ಯಾರು? ನಾಲ್ಕು ವರ್ಷದ್ದು ಪಹಣಿ ಬರೆದು ಇಟ್ಟರೆ ಸಿವಿಲ್ ಕೋರ್ಟಿನಲ್ಲಿ ಇಂಜಕ್ಷನ್

ಕೊಡುತ್ತಾರೆ. ನನ್ನ ಜಮೀನಿನ ಮೇಲೆ ಇನ್ನೊಬ್ಬ ಕೋರ್ಟಿನಲ್ಲಿ ಇಂಜೆಕ್ಷನ್ ತಂದು, ಕೋರ್ಟಿಗೆ ಅಲೆಯುವ ಪರಿಸ್ಥಿತಿ ಬಂದಿದೆಯಲ್ಲ? ಇದನ್ನು ನೀವು ತಪ್ಪಿಸಬೇಕಾಗುತ್ತದೆ. ಇದನ್ನು ಬಹಳ ಸುಲಭವಾಗಿ ಮಾಡುತ್ತಿದ್ದಾರೆ. ನಾನು ಒಂದು ಕೇಸನ್ನು ನಡೆಸಿದ್ದೇನೆ. ತುಮಕೂರಿಗೆ ಸಂಬಂಧಪಟ್ಟಿದ್ದುದು. 38 ಎಕರೆ ಜಮೀನಿನಲ್ಲಿ 2 ಎಕರೆ ತಿಮ್ಮಪ್ಪನದ್ದು ಎಂದು ಬರೆದುಬಿಟ್ಟ ಪಹಣಿ ಒಳಗೆ ತಿಮ್ಮಪ್ಪನ ಮಗ ಬಂದು ದಾವಾ ಹಾಕಿದ. ಇಂಜೆಕ್ಷನ್ ಕೊಟ್ಟು ಕೇಸನ್ನು ಗೆದ್ದೂ ಬಿಟ್ಟಿದ್ದಾರೆ.

ಸಿವಿಲ್ ಕೋರ್ಟಿನಲ್ಲಿ ಪಹಣಿ ಒಳಗೆ ಯಾರ ಹೆಸರು ಇದೆ? ತಿಮ್ಮಪ್ಪನದ್ದು ಇದೆ. ಎರಡು ಎಕರೆ ಇದೆಯೆಂದು ಇಂಜೆಕ್ಷನ್ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಇಂತಹ ಲ್ಯಾಕುನಾ ಹೊಸ ಫಾರಮ್‌ನಲ್ಲಿದೆ. ಎಷ್ಟು ಬೇಕಾದರೂ ಮೋಸ ಮಾಡಬಹುದು, ಯಾರ ಮನೆ ಬೇಕಾದರೂ ಹಾಳು ಮಾಡಬಹುದು. ಅಂತಹ ಒಂದು ಪಹಣಿ ವ್ಯವಸ್ಥೆ ಇದೆ. ಇದನ್ನು ಸ್ವಲ್ಪ ಬದಲಾಯಿಸಿ ಮೊದಲು ಏನು ಆರ್. ಆರ್. 5-6 ಇತ್ತು ಅದನ್ನು ಕಡ್ಡಾಯವಾಗಿ ಬರೆಯಬೇಕಾಗುತ್ತದೆ.

ನಾನು ತಮ್ಮನ್ನು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಇದರ ಬಗ್ಗೆ ಸ್ವಲ್ಪ ಚಿಂತನೆ ಮಾಡಿ ರೈತರ ಈ ಸಮಸ್ಯೆಯನ್ನು ಬಗೆಹರಿಸತಕ್ಕಂಥ ಪ್ರಯತ್ನ ಮಾಡಬೇಕು. ಇದು ತಮ್ಮ ಕೈಯಲ್ಲಿ ಆಗುತ್ತದೆ ಎನ್ನತಕ್ಕಂಥ ನಂಬಿಕೆಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಈ ರೆಕಾರ್ಡುಗಳ ಕೊಠಡಿ ಹೇಗೆ ಇರುತ್ತದೆ ಎಂದು ಬಹುಶ: ನಮ್ಮ ತಾಲ್ಲೂಕು ಆಫೀಸ್ ಬಗ್ಗೆ ಹೇಳುವುದಾದರೆ ಅದು ಯಾವಾಗ ಮುರಿದುಕೊಂಡು ಯಾರದಮೇಲೆ ಬೀಳುತ್ತದೆ, ತಹಸೀಲ್ದಾರರ ಮೇಲೆ ಬೀಳುತ್ತದೊ ಶಿರಸ್ತೇದಾರರ ಮೇಲೆ ಬೀಳುತ್ತದೋ, ಸಬ್ ರಿಜಿಸ್ಟ್ರಾರ್ ಅವರ ಮೇಲೆ ಬೀಳುತ್ತದೋ ಗೊತ್ತಿಲ್ಲ. ನಾವು ಹೋದಾಗ ನಮ್ಮ ಮೇಲೆ ಬಿದ್ದರೂ ಬೀಳಬಹುದು. ಇಂತಹ ಪರಿಸ್ಥಿತಿ ಇದೆ.ಮಳೆಬಿದ್ದಾಗ ಸೋರುವುದರಿಂದ ಅವುಗಳನ್ನು ಆಕಡೆ, ಈಕಡೆ ಎತ್ತಿಡಬೇಕಾದ ಪರಿಸ್ಥಿತಿ ಇದೆ. ಇಂತಹ ವ್ಯವಸ್ಥೆಯನ್ನು ತಪ್ಪಿಸಬೇಕಾಗುತ್ತದೆ.

ಇದೇ ವಿಚಾರದಲ್ಲಿ ನಮ್ಮ ಸರ್ವೆ ಡಿಪಾರ್ಟ್‌ಮೆಂಟ್‌ನಲ್ಲಿ ಇಟ್ಟಿರುವ ರೆಕಾರ್ಡ್ಸ್ ನೋಡಿಬಿಟ್ಟರೆ, ನೀವು ಒಂದು ಸಲವಾದರೂ ಇದನ್ನು ಇನ್‌ಸ್ಪೆಕ್ಷನ್ ಮಾಡಿಲ್ಲವೆಂದು ಕಾಣುತ್ತದೆ. ನೀವು ಇನ್‌ಸ್ಪೆಕ್ಷನ್ ಮಾಡಬೇಕು. ಯಾವುದಾದರೂ ಒಂದು ಕಾಗದವನ್ನು ಎತ್ತಿ ಹಿಡಿದುಕೊಂಡರೆ ಅದು ಪುಡಿಪುಡಿಯಾಗಿ ಬೀಳುತ್ತದೆ. ಇದನ್ನು ಸರಿಮಾಡುವುದಕ್ಕೆ ಏನಾದರೂ ವ್ಯವಸ್ಥೆ ಇದೆಯೇ? ಆ ರೆಕಾರ್ಡುಗಳು ಹಾಳಾಗಿ ಹೋದರೆ ರೈತನ ಸ್ಥಿತಿ, ಜಮೀನುದಾರರ ಸ್ಥಿತಿ ಏನು ಆಗುತ್ತದೆ? ಇವತ್ತೇನು ನಾವು ವೇಗವಾಗಿ ಹೋಗುತ್ತಿದ್ದೇವೆ, ಎಂದರೆ ಯಾರ ಜಮೀನು ಯಾರದ್ದು ಬೇಕಾದರೂ, ಆಗಬಹುದು. ಅದಕ್ಕೆ ನೀತಿ ನಿಯಮ ಏನೂ ಬೇಕಾಗಿಲ್ಲ. ಒರಿಜಿನಲ್ ರೆಕಾರ್ಡ್ಸ್ ಹಾಳಾಗಿ ಹೋದರೆ ನಮ್ಮ ಗತಿ ಏನು ಎನ್ನತಕ್ಕಂಥ ಪ್ರಶ್ನೆಯನ್ನು ಮಾನ್ಯ ಕಂದಾಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಾ, ಕೂಡಲೇ ಇದನ್ನು ಸರಿಪಡಿಸಬೇಕು. ಹೋದಸಲ ಇದೇ ಮಾತನ್ನು ನಾನು ಹೇಳಿದ್ದೇ. ಆದರೆ ಇದರ ಬಗ್ಗೆ ಯಾವುದೇ ಚಿಂತನೆಯನ್ನು ಸರ್ಕಾರ ಮಾಡಿದ ಹಾಗೆ ಇಲ್ಲ. ನಾವು ಹೇಳಿದ್ದನ್ನು ಇಲ್ಲಿ ಅಧಿಕಾರಿಗಳು ಬರೆದುಕೊಳ್ಳುತ್ತಾರೆ ಎಂದು ಹೇಳುತ್ತಾರೆ. ಅಧಿಕಾರಿಗಳು ಬರೆದುಕೊಳ್ಳುತ್ತಾರೆ ಮತ್ತು ನಿಮಗೊಂದು ನೋಟ್ ಕೊಟ್ಟುಬಿಡು ಇದು ಆಗಬಾರದು. ಇಲ್ಲಿ ನಮ್ಮ ಕೈಲಿ ಭಾಷಣ ಏಕೆ ಮಾಡಿಸುತ್ತೀರಿ? ನಾವು ಭಾಷಣ ಮಾಡುವುದು ಬೇಡ. ಇಲ್ಲಿ ಒಂದುನೂರು ಸಲಹೆ ಕೊಟ್ಟರೆ, ಅವುಗಳಲ್ಲಿ ಕೊನೆಯಪಕ್ಷ ಒಂದಾದರೂ ಮಾಡಿದ್ದಾರೆಂದು ಸಮಾಧಾನ ಬರದೇಹೋದರೆ, ನಾವೆಲ್ಲಾ ಇಲ್ಲಿ ಏಕೆ ಭಾಷಣ ಮಾಡಬೇಕು? ನಾವು ಅಲ್ಲಿಂದ, ಇಲ್ಲಿಗೆ ಏಕೆ ಬರಬೇಕು? ನಾವು ಅಲ್ಲಿಯೇ ಕುಳಿತುಕೊಂಡು, ನೀವು ಇಲ್ಲಿ ಏಕೆ ಪಾಸ್ ಮಾಡಿಕೊಳ್ಳಬಾರದು? ದಯಮಾಡಿ, ಇದರ ಬಗ್ಗೆ ನಾನು

ಕಳಕಳಿಯಿಂದ, ನೊಂದು ಹೇಳುತ್ತಿದ್ದೇನೆ. ಏಕೆಂದರೆ, ನೂರಾರು ಜನ ಇವತ್ತಿನದಿವಸ ಕೋರ್ಟ್ ಬಾಗಿಲು ಅಲೆಯುತ್ತಿದ್ದಾರೆ. ನಮ್ಮ ತಪ್ಪಿನಿಂದ, ಸರ್ಕಾರದ ಆಫೀಸಿನಲ್ಲಿ ಮಾಡತಕ್ಕ ತಪ್ಪಿನಿಂದ, ಅವರು ಕೋರ್ಟಿಗೆ ಅಲೆಯತಕ್ಕ ಪರಿಸ್ಥಿತಿ ಬಂದರೆ, ಅವರೆವಿಗೆ ನೆಮ್ಮದಿಯ ಜೀವನ ಯಾವಾಗ ಸಿಗುತ್ತದೆ? ಆದ್ದರಿಂದ ಇದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ಮತ್ತೆ ಈ ತಹಶೀಲ್ದಾರ್ ಆಫೀಸಿನಲ್ಲಿ ಮತ್ತು ಅಸಿಸ್ಟೆಂಟ್ ಕಮೀಷನರ್ ಆಫೀಸಿನಲ್ಲಿ ಹಾಗೂ ಡೆಪ್ಯೂಟಿ ಕಮೀಷನರ್ ಆಫೀಸಿನಲ್ಲಿ ಕೆಲಸಗಳು ಹೇಗೆ ನಡೆಯುತ್ತವೆ ಎಂದು ನಮಗಿಂತ, ನಿಮಗೆ ಹೆಚ್ಚಿನ ಪರಿಚಯವಾಗಿದೆ. ಇದರ ಬಗ್ಗೆ ಸ್ವಲ್ಪ ಏನಾದರೂ ಸುಧಾರಣೆ ಮಾಡುವುದಕ್ಕೆ ಸಾಧ್ಯವೇ? ಇದರ ಬಗ್ಗೆ ಯೋಚನೆ ಮಾಡಿ. ನಾನು ಹನುಮಂತಯ್ಯನವರು ಮುಖ್ಯಮಂತ್ರಿಗಯಾಗಿದ್ದಾಗ, ಒಂದುಸಾರಿ ಅವರ ಹತ್ತಿರ ಮಾತನಾಡುವಾಗ ಅವರು ಹೇಳಿದರು. ನಾನು ಇವತ್ತು ಮಧುಗಿರಿಗೆ ಹೋಗುತ್ತೇನೆ ಎಂದು ಹೇಳಿದರು. ಅವರು ಮಧುಗಿರಿಗೆ ಬರುತ್ತಾರೆಂದು ನಾವು ತುಮಕೂರಿನಲ್ಲಿ ಕಾದಿದ್ದರೆ, ಅವರು ಕುಣಿಗಲ್ ತಾಲ್ಲೂಕ್ ಆಫೀಸಿಗೆ ಹೋಗಿ ಚೆಕ್ ಮಾಡಿದರು. ಅಲ್ಲಿಯ ಮೂರು ಜನರನ್ನು ಅಲ್ಲಿಯೇ ಸಸ್ಪೆಂಡ್ ಮಾಡಿ ಬಂದಿದ್ದಾರೆ. ಏಕೆಂದರೆ, ಒಬ್ಬ ಕ್ಲರ್ಕ್ ಸುಮಾರು ಒಂದುನೂರು ಅಪ್ಲಿಕೇಷನ್‌ಗಳನ್ನು ವಿಲೇವಾರಿ ಮಾಡದೇ ಇಟ್ಟಿದ್ದರು. ಆದ್ದರಿಂದ, ಇವತ್ತು ಯಾರದಾದರೂ ಏನಾದರೂ ಮಾಡುತ್ತಿದ್ದೇವೆಯೇ, ಯಾರಾದರೂ ಭಯ ಇದೆಯೇ. ಒಂದು ಅರ್ಜಿ ಬಂದರೆ, ಎಷ್ಟು ದಿವಸ ತಾಲ್ಲೂಕು ಆಫೀಸಿನಲ್ಲಿ ಇಟ್ಟುಕೊಳ್ಳಬೇಕು ಅಥವಾ ಅರ್ಜಿ ಕೊಟ್ಟರೆ, I demand, under the Constitiution, I am entitled to get a reply from the Taluk Officerss, Assistant Commissioners or the Deputy Commissioners.

ಈ ರೀತಿ ಇದ್ದಾಗ ವರ್ಷಾನುಗಟ್ಟಲೆ, ಅವರ ಅಪ್ಲಿಕೇಷನ್ ವಿಲೇವಾರಿ ಮಾಡದೇ ಇಟ್ಟುಕೊಂಡಿದ್ದು, ನಾನು ಹೋಗಿ ಎಲ್ಲಿದೆ ಎಂದು ಹೇಳುವತನಕ ಈಚೆಗೆ ತೆಗೆಯುವುದಿಲ್ಲ, ನಾವು ಹೋಗಿ ಹೇಳಿದಾಗ, ಆ ಫೈಲ್ ಧೂಳು ಹೊಡೆದು ತೆಗೆಯುತ್ತಾರೆ. ಇದರಿಂದ, ಯಾವ ಪುರುಷಾರ್ಥ ಸ್ಥಾಪನೆಯಾಗುತ್ತದೆ? ಇದಕ್ಕೋಸ್ಕರವೇ ಸಂಬಳ ಕೊಟ್ಟು ಇಟ್ಟುಕೊಂಡಿರುವುದು ಎನ್ನುವ ಪ್ರಶ್ನೆಯನ್ನು ನಾನು ತಮಗೆ ಹಾಕುತ್ತಿದ್ದೇನೆ.

ದಯಮಾಡಿ, ರೈತರು ಕೊಟ್ಟ ಅರ್ಜಿಗಳಿಗೆ 15 ದಿವಸಗಳಲ್ಲಿ ಉತ್ತರ ಹೋಗಬೇಕು, ನಮ್ಮ ಕೆಲಸ ಆಗುತ್ತದೆ, ಅಥವಾ ಆಗುವುದಿಲ್ಲ ಅಥವಾ ನಾವು ಇಂಥಾದ್ದನ್ನು ಸರಿಪಡಿಸಬೇಕು ಎನ್ನತಕ್ಕಂಥಾದ್ದನ್ನು ನೀವು ಮಾಡದೇ ಹೋದರೆ ಬಹಳ ಕಷ್ಟವಾಗುತ್ತದೆ. ದಯಮಾಡಿ ಇದರ ಬಗ್ಗೆ ಚಿಂತನೆಹರಿಸಬೇಕೆಂದು ಹೇಳುತ್ತಾ, ಇನ್ನೂ ಮೇಲಕ್ಕೆ ಸರ್ಕಾರದ ಮಟ್ಟ, ಮಲ್ಟಿಸ್ಟೋರೀಡ್ ಬಿಲ್ಡಿಂಗ್ ಮಟ್ಟಕ್ಕೆ ಬರುವುದಾದರೆ, ತಾಲ್ಲೂಕು ಆಫೀಸಿನಲ್ಲಿ ಯಾವ ರೀತಿ ನಡೆಯುತ್ತಿದೆ. ಅದೇ ರೀತಿ ಮಲ್ಟಿಸ್ಟೋರೀಡ್ ಬಿಲ್ಡಿಂಗ್‌ನಲ್ಲೂ ನಡೆಯುತ್ತಿದೆ. ತಿಂಗಳಾನುಗಟ್ಟಲೆ ಒಬ್ಬ ಕೇಸ್‌ವರ್ಕರ್ ಹತ್ತಿರ ಕಾಗದಗಳು ಬಿದ್ದಿರುತ್ತವೆ. ಇದರ ಬಗ್ಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಒಂದು ಜಮೀನು ಪಡ ಬಿದ್ದು, ಸುಮಾರು ನೂರು ವರ್ಷಗಳಾಗಿದೆ. ಅಲ್ಲಿ ಯಾರೂ ಇಲ್ಲ, ಕೇಳುವವರೇ ಇಲ್ಲ. ಯಾರಿಗೋ ಒಬ್ಬರಿಗೆ ಆ ಜಮೀನು ಕೊಡಬೇಕೆಂದರೆ, ಪಡಾ ಬಿದ್ದಿರುವ ಜಮೀನು, ಅದು ರಿಸರ್ವ್ ಆಗಿರುವುದಿಲ್ಲ, ಸರ್ಕಾರಿ ಭೂಮಿ ಅಲ್ಲ, ಇನ್ನಾವುದೂ ಅಲ್ಲ, ಪಡಾ ಬಿದ್ದಭೂಮಿ ಮಂಜೂರ್ಮಾಡಿ ಕೊಡಿ ಎಂದು ಕೊಟ್ಟರೆ, ಅದು ಡಿವಿಜನಲ್ ಕಮೀಷನರ್‌ವರೆಗೂ ಬರುತ್ತದೆ. ಮತ್ತು ಸೆಕ್ರೆಟರಿಯಟ್‌ಗೂ ಹೋಗುತ್ತದೆ.

ಆಮೇಲೆ, ಇದು ಮೊದಲು ಯಾರದ್ದು ಇತ್ತು ಎಂದು ಕೊಕ್ಕೆ ಹಾಕಿ ವಾಪಸ್ ಬರುತ್ತದೆ. ಅಲ್ಲಿ ಯಾರೂ ಇಲ್ಲ, ಅವರ ವಂಶಸ್ಥರು ನಿರ್ನಾಮವಾಗಿ ಸತ್ತುಹೋಗಿದ್ದಾರೆ ಎಂದು ಮತ್ತೆ ವಾಪಸ್ ಬರುತ್ತದೆ ; ಯಾರು ಅರ್ಜಿ ಹಾಕಿದ್ದರೋ ಎಂದು

ವಾಪಸ್ ಬರುತ್ತದೆ. ಹೀಗಾದರೆ, ಎಷ್ಟು ದಿವಸ ನಾವು ಅವರನ್ನು ಅಲೆಸಬೇಕಾಗುತ್ತದೆ?ಬೆಂಗಳೂರಿನಿಂದ ತುಮಕೂರು, ತುಮಕೂರಿನಿಂದ ಬೆಂಗಳೂರು ಅಥವಾ ಗುಲ್ಬರ್ಗಾ ಹೀಗೆ ಆದರೆ, ಇದು ಸರಿ ಆಗುವುದಿಲ್ಲ. ಅವರು ಹಾಕುವ ತಕರಾರುಗಳು ಎಲ್ಲವನ್ನು ಒಂದೇಸಾರಿ ಹಾಕಲಿ. ಒಂದೊಂದುಸಾರಿ ಒಂದೊಂದು ತಕರಾರು ಹಾಕಿ ವಾಪಸ್ ಕಳುಹಿಸುವುದಾದರೆ, ಆ ಫೈಲಿಗೆ ಇತಿಮಿತಿ ಎಲ್ಲಿ, ಎಲ್ಲಿಗೆ ಕೊನೆಯಾಗುತ್ತವೆ? ಇದನ್ನು ಸರಿಪಡಿಸದೇ ಹೋದರೆ, ಸರಿ ಆಗುವುದಿಲ್ಲ. ಮತ್ತೆ ನಾನು ಒಂದು ಪ್ರಶ್ನೆ ಹಾಕುತ್ತೇನೆ. ಜಿಲ್ಲಾ ಪರಿಷತ್, ಮಂಡಲ್ ಪಂಚಾಯ್ತಿ ಬಂದಮೇಲೆ ಇಲ್ಲಿ ನಿಮ್ಮ ಸೆಕ್ರಟೇರಿಯಟ್‌ನಲ್ಲಿದ್ದ ಅಧಿಕಾರಿಗಳು ಪ್ರಪೋರ್ಷನೇಟಾಗಿ ಆಯಾ ಜಿಲ್ಲೆಗಳಿಗೆ ಹೋಗಬೇಕಾಗಿತ್ತು. ಇವತ್ತು ಹೋಗಿದ್ದಾರೆಯೇ ಎಲ್ಲಾ ಅಧಿಕಾರಿಗಳನ್ನೂ ಇಲ್ಲಿಯೇ ಇಟ್ಟುಕೊಂಡು, ಅಲ್ಲಿ ನಮಗೆ ಟೈಪಿಸ್ಟ್ ಇಲ್ಲ ಎಂದು ಬಡಿದುಕೊಳ್ಳುತ್ತಿದ್ದಾರೆ. ಇಲ್ಲಿ ಒಬ್ಬೊಬ್ಬ ಟೈಪಿಸ್ಟ್‌ಗೆ ಕೆಲಸ ಇಲ್ಲದೇ ಸಂಬಳ ಕೊಟ್ಟುಕೊಂಡು ಇಟ್ಟುಕೊಂಡಿದ್ದೀರಿ. ಜಿಲ್ಲಾಪರಿಷತ್ ಆದ ಮೇಲೆ, ಆಯಾ ಅಧಿಕಾರಿಗಳನ್ನು ಆಯಾ ಜಿಲ್ಲೆಗೆ ನೀವು ವರ್ಗಾವಣೆ ಮಾಡಬೇಕಾಗಿತ್ತು. ಇವತ್ತಿನದಿವಸ, ಮೊದಲು ಎಷ್ಟು ಅಧಿಕಾರಿಗಳಿಗೆ ಕೆಲಸ ಇತ್ತೋ, ಅಷ್ಟೇ ಕೆಲಸ. 70 ಪರ್ಸೆಂಟ್ ಕೆಲಸ ಬೇರೆ ಕಡೆ ಹಂಚಿ ಹೋದರೂ ಕೂಡ ಅಷ್ಟೇ ಜನ ಇಲ್ಲಿ ಇರುವುದಾದರೆ, ಅವರಿಗೆ ಕೆಲಸ ಇದೆಯೇ? ಒಂದು ದಿವಸಕ್ಕೆ, ಮಲ್ಟಿ ಸ್ಟೋರೀಡ್ ಬಿಲ್ಡಿಂಗ್‌ನಲ್ಲಿರತಕ್ಕವರಿಗೆ ಎಷ್ಟು ಫೈಲು ಬರುತ್ತದೆ, ಎಷ್ಟು ಗಂಟೆ ಕೆಲಸ ಸಿಗುತ್ತದೆ, ಎಷ್ಟು ಫೈಲು ಆಚೆಗೆ ಹೋಗುತ್ತದೆ ಎನ್ನುವ ಅಂಕಿ ಅಂಶ ತೆಗೆದುಕೊಂಡರೆ ಬಹಳ ಒಳ್ಳೆಯದೆಂದು ಭಾವಿಸಿದ್ದೇನೆ.

ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಇದು ವೈಟ್ ಎಲಿಫೆಂಟ್ ತರಹ ಆಗಿದೆ. ಇಷ್ಟಾದರೂ ಕೂಡಾ ಒಂದೊಂದು ಫೈಲು ಒಂದು ಎರಡು ಮೂರು ತಿಂಗಳು ಒಂದು ಆಫೀಸಿನಲ್ಲಿದ್ದರೆ ಇವರು ಏತಕ್ಕೆ ಇರಬೇಕೆಂದು ನಾನು ಪ್ರಶ್ನೆ ಮಾಡುತ್ತಾ ಇದರ ಬಗ್ಗೆ ಗಮನಹರಿಸಬೇಕೆಂದು ನಾನು ಹೇಳುತ್ತೇನೆ. ಇವತ್ತಿನ ದಿವಸ ತಾಲ್ಲೋಕ್ ಲೆವೆಲ್‌ನಲ್ಲಿ ಅಧಿಕಾರಿಗಳು ಸಿಗುವುದಿಲ್ಲ. ಯಾರೋ ಅನ್‌ಎಂಪ್ಲಾಯ್ಡ್ ಗ್ರಾಜುಯೇಟ್ಸ್ ಸ್ಟೈಫಂಡರಿ ಗ್ರಾಜುಯೇಟ್ಸ್ ಎರಡು ಏನು ತೆಗೆದುಕೊಂಡಿದ್ದೀರಿ ಅವರು ಕುಳಿತುಕೊಂಡಿದ್ದಾರೆ. ಇಲ್ಲಿ ಕುಳಿತಂತಹ ಅಧಿಕಾರಿಗಳಿಗೆ ಕೆಲಸ ಇಲ್ಲದಿದ್ದರೂ ಸಂಬಳ ಕೊಟ್ಟು ಇಟ್ಟುಕೊಂಡಿದ್ದೀರಿ ಏತಕ್ಕೆ ಈ ರೀತಿ ಆಗಿದೆ ಇದರ ಬಗ್ಗೆ ವಿಚಾರ ಮಾಡಿ ಆಯಾ ಜಿಲ್ಲೆ ಮತ್ತು ತಾಲೋಕುಗಳಿಗೆ ಜಿಲ್ಲಾ ಪರಿಷತ್ ಬಂದಮೇಲೆ ಅದಕ್ಕೆ ಪ್ರಪೋರ್ಷನೇಟ್ ಆಗಿ ನೌಕರರನ್ನು ಅಲ್ಲಿಗೆ ಕಳುಹಿಸಬೇಕಾಗಿತ್ತೋ ಅಷ್ಟು ನೌಕರರನ್ನು ಮೊದಲು ಕಳುಹಿಸಿಕೊಡಬೇಕು. ಇನ್ನು ರೆವಿನ್ಯೂ ಇಲಾಖೆಯ ಬಗ್ಗೆ ಹೇಳುವುದಾದರೆ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಬಗ್ಗೆ ನಮ್ಮ ಸರ್ಕಾರ ಬಂದರೂ ಕೂಡಾ ಇನ್ನೂ ಕಮಿಟಿಗಳು ಆಗಿಲ್ಲ, ಕಮಿಟಿ ಆದರೂಕೂಡಾ ಒಂದು ಮಿಟೀಂಗ್ ನಡೆಸಿಲ್ಲ ಎಂದು ಭಾವಿಸುತ್ತೇನೆ.

ವಿರೋಧ ಪಕ್ಷದ ಸದಸ್ಯರು ಅಧ್ಯಕ್ಷರಾಗಿರುವ ಕಡೆ ಯಾರಾದರೂ ನಡೆಸಿದ್ದಾರೋ ಏನೋ ಗೊತ್ತಿಲ್ಲ ರೈತರು ನಮ್ಮ ಕೇಸ್ ಏನಾಯಿತು ಎಂದು ಬಂದು ಹೋಗುತ್ತಿದ್ದಾರೆ. ಕೂಡಲೇ ಇದು ಕಾರ್ಯಗತವಾಗುವ ರೀತಿಯಲ್ಲಿ ಮಾಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಇನ್ನು ಅನ್‌ಆಥರೈಸ್ಡ್ ಕಲ್ಟಿವೇಷನ್‌ನ್ನು ರೆಗ್ಯುಲರೈಸ್ ಮಾಡಬೇಕಾದರೆ ಇದರ ಬಗ್ಗೆ ಸೂಕ್ತವಾದ ನಿರ್ದೇಶನ ಕೊಡಿಸಬೇಕಾಗುತ್ತದೆ. ಅಧಿಕಾರಿಗಳಿಂದಲೂ ಕೂಡಾ ಇವತ್ತಿನ ದಿವಸ ಇದಕ್ಕೆ ಪ್ರಚೋದನೆ ಸಿಕ್ಕಿದೆ. ಅವರು ಹೋಗಿ ನೀನು ಉಳುಮೆ ಮಾಡು ನಾನು ಪಹಣಿ ಬರೆದುಕೊಡುತ್ತೇನೆ ಮೂರು ಸಾವಿರ ಕೊಡು ನಾಲ್ಕು ಸಾವಿರ ಕೊಡು ಎಂಬ ವ್ಯಾಪಾರ ಅವರಿಂದ ಪ್ರಾರಂಭವಾಗಿದೆ. ಆದುದರಿಂದ ಇವತ್ತು ಯಾರುಯಾರ ಮೇಲೆ ಟಿ.ಟಿ. ಹಾಕಿದ್ದಾರೆ ಅವರ ಬಗೆ 15

ದಿವಸದ ಒಳಗಾಗಿ ರಿಪೋರ್ಟ್ ತರಿಸಿಕೊಡಿರಿ ನಾಳೆ ದಿವಸ ಇದನ್ನು ಬದಲಾಯಿರುವುದಕ್ಕೆ ಅವಕಾಶ ಇರಬಾರದು. ಇವತ್ತಿನ ದಿವಸ As on today ಎಷ್ಟು ಜನಕ್ಕೆ ಟಿ.ಟಿ.ಹಾಕಿದ್ದಾರೆ ಎಷ್ಟು ಜನ ಆನ್‌ಆಥರೈಸ್ಟ್ ಕಲ್ಟಿವೇಷನ್ ಮಾಡುತ್ತಿದ್ದಾರೆ ಎಷ್ಟು ಎಕರೆ ಮಾಡಿರುತ್ತಾರೆ ಎಂಬ ವಿವರಗಳನ್ನು ತರಿಸಿಕೊಂಡರೆ ಬಹಳ ಒಳ್ಳೆಯದು ಇದರಿಂದ ಕೇಸ್‌ಗಳನ್ನು ತೀರ್ಮಾನ ಮಾಡುವುದಕ್ಕೆ ಸುಲಭವಾಗುತ್ತದೆ ಎಂದು ಹೇಳುತ್ತೇನೆ. ಇಲ್ಲದೇ ಹೋದರೆ ಕೆಲವರೆ ಕೆಲವರು ಟಿ.ಟಿ. ಹಾಕುತ್ತಿರುವುದು ಕೆಲವರು ಅಪ್ಲಿಕೇಷನ್ ಹಾಕುತ್ತಿರುವುದು ನಾವು ಮೀಟಿಂಗ್ ಮಾಡುತ್ತಾ ಇರುವುದು ಆಗುತ್ತದೆ. ಇನ್ನು ಧಾರ್ಮಿಕ ದತ್ತಿ ಇಲಾಖೆಯ ವಿಚಾರದಲ್ಲಿ ಒಂದೆರಡು ಮಾತನಾಡುತ್ತೇನೆ.

ಉಪಾಧ್ಯಕ್ಷರು: ಇನ್ನು ಐದು ನಿಮಿಷದಲ್ಲಿ ತಾವು ಮುಗಿಸಿಬಿಡಿ.

ಶ್ರೀ ಜಿ.ಎಸ್. ಶಿವನಂಜಪ್ಪ: ಎರಡು ಮಾತನಾಡುತ್ತೇನೆ.ಬಹಳ ಜನ ಮಾತನಾಡುವವರು ಇಲ್ಲ ಇವತ್ತು ಅಧ್ಯಕ್ಷರೇ ನಾವು ವಿಚಿತ್ರವಾದ ರಾಜ್ಯವನ್ನು ನಡೆಸಿಕೊಂಡು ಬರುತ್ತಿದ್ದೇವೆ. ಎಂದರೆ ತಪ್ಪಾಗಲಾರದು ಈ ಧಾರ್ಮಿಕ ದತ್ತಿ ಇಲಾಖೆಯ ನೀತಿಯ ವಿಚಾರದಲ್ಲಿ ಇಲ್ಲಿ ರಿಪೋರ್ಟ್ ಇಲ್ಲ, ಯಾವುದೇ ರಿಪೋರ್ಟ್ ಏನೂ ಇಲ್ಲ, ಏನು ಮಾತನಾಡಬೇಕು ಇದರ ಮೇಲೆ. ಮಂತ್ರಿಗಳು ಮೊದಲೇ ಇಲ್ಲ, ಇದರಲ್ಲಿ ಹೋದಸಾರಿ ಕೂಡಾ ನಾನು ಡಿಮ್ಯಾಂಡ್ ಮಾಡಿದೆ ಈ ನಿಲುವು ಏತಕ್ಕೆ ರಿಪೋರ್ಟ್ ಇಲ್ಲ, ಇದು ಇಲಾಖೆ ಅಲ್ಲವೇ ಹಾಗಾದರೆ ಬೇಡಿಕೆ ಏತಕ್ಕೆ ಇಡುತ್ತೀರಿ? ಕಂದಾಯ ಇಲಾಖೆಯ ಒಳಗೇ ಸೇರಿಸಿಬಿಡಬಹುದಾಗಿತ್ತು ಇಲ್ಲಿ ಏನು ನಡೆಯುತ್ತದೆ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: ಪೇಜ್ ನಂಬರ್ 18ರಲ್ಲಿ ನೋಡಿದರೆ ಎಂಡೋಮೆಂಟ್ ಬಗ್ಗೆ ಬರೆದಿದ್ದೇವೆ. Religious and Charitable Institutions and Endowments in Karnataka Government under different acts.

ಪುಟ 18 - 19 ರಲ್ಲಿ ಇದರ ಬಗ್ಗೆ ಹೇಳಿದ್ದೇವೆ ನೋಡಿರಿ.

ಶ್ರೀ ಜಿ.ಎಸ್. ಶಿವನಂಜಪ್ಪ: ನಮ್ಮ ದೇವಸ್ಥಾನಗಳು ಎಷ್ಟಿವೆ. ಎಷ್ಟು ದೇವಸ್ಥಾನ ಬಿದ್ದು ಹೋಗುವ ಸ್ಥಿತಿಯಲ್ಲಿವೆ. ಎಷ್ಟೆಷ್ಟು ದೇವಸ್ಥಾನಗಳಿಗೆ ಕಮಿಟಿ ಇದೆ ಅದರ ಆದಾಯ ಏನು ಏತಕ್ಕೆ ಇದೆಲ್ಲಾ ಇಲ್ಲಿ ಇಲ್ಲ ವರ್ಕ್ ಬೋರ್ಡ್‌ಗಾದರೆ ಎಲ್ಲಾ ಇದೆ. ಅದರೆ ಇದಕ್ಕೆ ಏತಕ್ಕೆ ಇಲ್ಲ ಏತಕ್ಕೆ ಈ ತಾರತಮ್ಯ ಏಕೆ ವರ್ಕ್ ಬೋರ್ಡ್‌ಗಾದರೆ ಬೇರೆ ಕಮಿಟಿ ಇದೆ. ಇದಕ್ಕೆ ಏತಕ್ಕೆ ಇಲ್ಲ ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ನಮ್ಮ ದೇಶದ ಸಂಸ್ಕೃತಿ ಬಹಳ ಮುಖ್ಯ ಇದರಲ್ಲಿ ಇವತ್ತಿನ ದಿವಸ ಹಳೇಬೀಡು ಬೇಲೂರು ದೇವಾಲಯಗಳನ್ನು ನಾವು ಎಷ್ಟು ಕಷ್ಟವಾದರೂ ಉಳಿಸಿಕೊಳ್ಳಬೇಕಾಗುತ್ತದೆ. ಅವತ್ತು ಎಂಜಿನಿಯರ್ ಇರಲಿಲ್ಲ ವಿಶ್ವೇಶ್ವರಯ್ಯನಂತಹವರು ಪಾಪ ಆಗಿರಲಿಲ್ಲ, ಆದರೆ ಆ ದೇವಸ್ಥಾನದ ಮುಂದೆ ಒಂದು ಕಂಬ ನಿಲ್ಲಿಸಿದ್ದಾರೆ ಗ್ರಾವಿಟಿ ಪಿಲ್ಲರ್ ಎಂದು ಅದಕ್ಕೆ ಹೇಳುತ್ತಾರೆ ಯಾರಾದರೂ ನಮ್ಮ ಎಂಜಿನಿಯರ್ಸ್ ಇದನ್ನು ನಿಲ್ಲಿಸುವುದಕ್ಕೆ ಸಾಧ್ಯವೇ? ಒಬ್ಬ ಎಂಜಿನಿಯರ್ ಇದನ್ನು ನಿಲ್ಲಿಸಲಿ ನಾನು ಚಾಲೆಂಜ್ ಮಾಡುತ್ತೇನೆ. ವಿಧಾನಸೌಧದ ಮುಂದೆ ಈ ರೀತಿ ಒಂದು ನಿಲ್ಲಿಸಲಿ. ಇದು ಬೇಕಾಗುತ್ತದೆ. ಇದು ನಮ್ಮ ಸಂಸ್ಕೃತಿ ಇದನ್ನು ಉಳಿಸಿಕೊಂಡು ಹೋಗಬೇಕಾಗುತ್ತದೆ.

ಅನೇಕ ದೇವಸ್ಥಾನಗಳು ಇದೆ ಕೆತ್ತನೆ ಕೆಲಸದಲ್ಲಿ ನಿಪುಣರಾಗಿದ್ದ ಶಿಲ್ಪಿಗಳ ಹೇಳುವ ದೇವಸ್ಥಾನಗಳು ಇವೆ ಒಳ್ಳೆಯ ಮೂರ್ತಿಗಳು ಇವೆ ಇವುಗಳನ್ನು ಕಳ್ಳತನ ಮಾಡಿ ಹೊರದೇಶಕ್ಕೆ ಸಾಗಿಸಿ ಅವು ಲಕ್ಷಾಂತರ ರೂಪಾಯಿಗಳಿಗೆ ಮಾರಾಟವಾಗುತ್ತವೆ. ಇದರ ಬಗ್ಗೆ ಏನಾದರೂ ಚಿಂತನೆ ಆಗಿದೆಯೇ? ಇವತ್ತಿನದಿವಸ ಹೈದ್ರಾಬಾದ್ ಕರ್ನಾಟಕಕ್ಕೆ ಒಂದು ಕಾನೂನು ಹಳೆಯ ಮೈಸೂರಿಗೆ ಒಂದು ಕಾನೂನು ಮದ್ರಾಸ್ ಕರ್ನಾಟಕಕ್ಕೆ ಒಂದು ಕಾನೂನು ಬಾಂಬೆ ಕರ್ನಾಟಕಕ್ಕೆ ಒಂದು ಕಾನೂನು ಸ್ವಾಮಿ ಒಂದೇ

ಇಲಾಖೆಯಲ್ಲಿ 4-5 ಕಾನೂನು ಸುಮಾರು 7-8 ವರ್ಷಗಳಿಂದ ಕೇಳುತ್ತಿದ್ದೇನೆ ಇದನ್ನೆಲ್ಲಾ ಕನ್ಸಾಲಿಡೇಟೆಡ್ ಮಾಡಿ ಒಂದು ಆಕ್ಟ್ ಮಾಡಿ ಎಂದು ಇದರ ಬಗ್ಗೆ ಚಿಂತನೆ ಆಗಿಲ್ಲ. ಮತ್ತೆ ಕೋಟ್ಯಾಂತರ ರೂಪಾಯಿಗಳ ಮೌಲ್ಯದ ದೇವಸ್ಥಾನಗಳ ಆಸ್ತಿ ಲೂಟಿಯಾಗುತ್ತಿದೆ ಬೆಂಗಳೂರು ನಗರದಲ್ಲೇ ಲೆಕ್ಕ ಹಾಕಿದರೆ 200-300 ಕೋಟಿ ರೂಪಾಯಿಗಳಿಗೂ ಹೆಚ್ಚಿನ ಆಸ್ತಿ ಕಂಡವರ ಪಾಲು ಆಗುತ್ತಿದೆ. ಇದನ್ನು ನಾವು ಸರಿಯಾಗಿ ಉಪಯೋಗಿಸಿಕೊಂಡಿದ್ದರೆ ನಮಗೆ ಬೇಕಾದಷ್ಟು ಹಣ ಬರುತ್ತಿತ್ತು. ಅದೇ ರೀತಿಯಲ್ಲಿ ಇಡೀ ಕರ್ನಾಟಕ ರಾಜ್ಯದಲ್ಲಿ ದೇವಸ್ಥಾನಗಳ ಆಸ್ತಿ ತಿನ್ನದೆ ಇರುವವರು ಇಲ್ಲ ಎಲ್ಲಾ ತಿನ್ನುತ್ತಿದ್ದಾರೆ. ಇದನ್ನು ಏತಕ್ಕೆ ಬಿಟ್ಟುಕೊಂಡಿದ್ದೀರಿ. ಒಬ್ಬೊಬ್ಬರಿಗೆ 95 ವರ್ಷಕ್ಕೆ 100 ರೂಪಾಯಿಗಳಂತೆ ಗುತ್ತಿಗೆಗೆ ಕೊಟ್ಟಿದ್ದೀರಿ ಏನು ಸ್ವಾಮಿ ಇದು ಮತ್ತೆ ಅವರಿಗೆ ರಿನ್ಯೂ ಮಾಡಿ ಕೊಡಬೇಕೆಂದು ಕೆಲವು ಕಡೆ ಪ್ರಯತ್ನ ನಡೆಯುತ್ತಿದೆ. ಇನ್ನು ಎಲ್ಲಿ ದೇವಸ್ಥಾನಗಳು ಹಾಳಾಗಿದೆ ಅವುಗಳನ್ನು ರಿಪೇರಿ ಮಾಡುವವರು ಇಲ್ಲ ಅಲ್ಲಿನ ಅವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥಿತವಾಗಿ ಮಾಡಬೇಕೆಂದು ಹೇಳುತ್ತೇನೆ. ಇನ್ನು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಮೇಲೆ ಎರಡು ಮಾತುಗಳನ್ನು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ ನಮ್ಮ ಆಹಾರ ವಿತರಣೆ ವಿರೋಧಪಕ್ಷದವರು ಜೊತೆಗೆ ನಾವು ಕೂಡ ಒಂದೇ ಒಂದು ಪ್ರಾಬ್ಲಮನ್ನು ಹಳ್ಳಿಗಳ ಕಡೆ ಫೇಸ್ ಮಾಡುತ್ತಿದ್ದೇವೆ. ಅದೇನೆಂದರೆ ಹಸಿರು ಕಾರ್ಡು ಹಂಚಿಕೆ ಮಾಡಿರುವ ಬಗ್ಗೆ ಅದನ್ನು ನಮ್ಮ ಸರ್ಕಾರದವರು ಮಾಡಿದ್ದು ಅಲ್ಲ. ಜನತಾ ಸರ್ಕಾರ ಇದ್ದಾಗ ಮಾಡಿದ್ದುದು ಹಸಿರು ಕಾರ್ಡ್ ಹಂಚಿಕೆ ಮಾಡಿದರು ಆಗ 300 ಕಾರ್ಡ್ ಕೊಡುವ ಕಡೆ 350 ಕಾರ್ಡು ಕೊಟ್ಟಿದ್ದಾರೆ ಎಫ್ ಇಡಿ ಆಗಲಿ ಸೊಸೈಟಿಯವರು ಆಗಲಿ ಅಥವಾ 300 ಕಾರ್ಡ್‌ಗೆ ಮಾತ್ರ ಆಹಾರ ಹಂಚಿ ಇನ್ನು 50 ಕಾರ್ಡ್‌ಗಳನ್ನು ಆಹಾರ ಹಂಚದೆ ನಿಲ್ಲಿಸುತ್ತಾರೆ ಇದನ್ನು ಸರಿ ಮಾಡಬೇಕು. ಮತ್ತೆ ಒಂದು ಸಾವಿರ ತೆಂಗಿನ ಗಿಡ ಇರುವವರಿಗೆ ಹಸಿರು ಕಾರ್ಡು ಸಿಕ್ಕಿದೆ ಕೂಲಿ ಮಾಡಿ ಜೀವನ ಮಾಡುವವರಿಗೆ ಕೆಂಪು ಕಾರ್ಡು ಸಿಕ್ಕಿದೆ ಇದನ್ನು ಸರಿ ಮಾಡಬೇಕೆಂದು ನಾವು ಅನೇಕ ಸಾರಿ ಪಕ್ಷಭೇದ ಇಲ್ಲದೆ ಎಲ್ಲರೂ ಹೇಳಿದ್ದೇವೆ. ಇದನ್ನು ಸರಿ ಮಾಡಿ ಕೊಡುತ್ತೇನೆಂದು ಮಾನ್ಯ ಸಚಿವರು ಹೇಳಿದ್ದಾರೆ ಶ್ರೀ ಮಾನ್ ನರಸಿಂಹಮೂರ್ತಿಯವರಿಗೆ ಆ ಒಂದು ದಿಟ್ಟತನ ಇದೆ.ಅವರು ಸರಿಪಡಿಸಿಕೊಡುತ್ತಾರೆ.

ಅವರು ಇಲ್ಲಿ ಹೇಳಿದ್ದಾರೆ ಎಲ್ಲಾ ವಿಲೇಜ್ ಅಕೌಂಟೆಂಟ್ಸ್‌ಗಳಿಂದ ಮತ್ತು ತಾಲ್ಲೂಕು ಆಫೀಸ್‌ಗಳಿಂದ ವರದಿ ತರಿಸಿಕೊಳ್ಳುತ್ತೇನೆಂದು ಇದನ್ನು ಆದಷ್ಟು ಬೇಗ ಮಾಡಿ ಕೊಡಬೇಕು ನಿಮ್ಮ ಇಲಾಖೆಗೆ ಈಗ ಸ್ವಲ್ಪ ಹಲ್ಲು ಗಿಲ್ಲು ಬಂದ ಹಾಗೆ ಕಾಣುತ್ತದೆ. ಈಗ ಚೆನ್ನಾಗಿ ಕೆಲಸ ಮಾಡುತ್ತಿದೆ ನೀವು ಇನ್ನು ಸ್ವಲ್ಪ ಪುಲ್ಲಪ್ ಮಾಡಬೇಕು. ತಾಳೆ ಎಣ್ಣೆ ತುಮಕೂರಿನಲ್ಲಿ ಹೋಗುತ್ತದೆ ಸಕ್ಕರೆ ಸೊಸೈಟಿಯಲ್ಲಿ ಬಿಟ್ಟು ಹೊಗುತ್ತಾರೆ ಇದನ್ನೆಲ್ಲಾ ನೀವು ಮಾಡಬೇಕು ನೀವು ಸ್ವಲ್ಪ ಚುರುಕಾಗಿದ್ದೀರಿ. ಇತ್ತೀಚೆಗೆ ಏತಕ್ಕೂ ನೀವು ಬೆಂಗಳೂರು ಬಿಡುತ್ತಿಲ್ಲ ನೀವು ಸ್ವಲ್ಪ ಅಲ್ಲಲ್ಲಿ ಒಂದೆರಡು ಕಡೆ ಭೇಟಿ ಕೊಟ್ಟು ಇನ್ಸ್‌ಪೆಕ್ಟ್ ಮಾಡಬೇಕಾಗುತ್ತದೆ. ಈ ಸೊಸೈಟಿ ಮತ್ತು ಎಫ್.ಇ.ಡಿ.ಗಳು ಇವತ್ತಿನ ದಿವಸ ಸ್ವಾಮೀ ಈ ಎಫ್.ಇ.ಡಿ.ಗಳಿಗೆ ಅರ್ಜಿಗಳನ್ನು ಬರೆಸಿ ಬರೆಸಿ ಹಾಕುತ್ತಿದ್ದಾರೆ. ನನಗೆ ಎಫ್.ಇ.ಡಿ. ಕೊಡಿ ನನಗೆ ಎಫ್.ಇ.ಡಿ. ಕೊಡಿಸಿ ಅಂತ ಜನ ಕೇಳುತ್ತಿದ್ದಾರೆ. ಇವರು ಕೇಳುವುದು ನೋಡಿದರೆ ಇದರಿಂದ ಏನೋ ಲಾಭ ಇರಬೇಕು. ಇಲ್ಲದಿದ್ದರೆ ಬರೆಸುವುದಕ್ಕೆ ಸಾಧ್ಯವಿಲ್ಲ. ಇದನ್ನು ತಾವು ಸರಿಯಾಗಿ ನಿಭಾಯಿಸುತ್ತೀರಿ ಎನ್ನುವ ನಂಬಿಕೆ ನನಗೆ ಇದೆ. ದಯವಿಟ್ಟು ಹಸಿರು ಕಾರ್ಡ್ ವಿತರಣೆ ಮಾಡತಕ್ಕಂಥ ವ್ಯವಸ್ಥೆ ಕೂಡಲೇ ಆಗಬೇಕು. ಬಡವರಿಗೆ ಹಸಿರು

ಕಾರ್ಡ್‌ಸಿಕ್ಕಿಲ್ಲ ಸಾಹುಕಾರರಿಗೆ ಹಸಿರು ಕಾರ್ಡು ಸಿಕ್ಕಿದೆ.

ಇದರಿಂದ ಏನಾಗಿದೆ ಎಂದರೆ ಸಿಕ್ಕಿದವರು ತಿನ್ನುತ್ತಿದ್ದಾರೆ. ಈ ದೃಷ್ಟಿಯಲ್ಲಿ ಸರ್ಕಾರದ ನಿಲುವು ಸೊಸೈಟಿಗಳ ಮೂಲಕ ಆಹಾರ ವಿದರಣೆ ಮಾಡಿದರೆ ಅನುಕೂಲವಾಗುತ್ತದೆಂದು ನಾನು ಭಾವಿಸುತ್ತೇನೆ. ಸೊಸೈಟಿ ಮಂತ್ರಿಗಳು ಎಲ್ಲಾ ಸೊಸೈಟಿಗಳನ್ನು ವೈಯಬಲ್ ಮಾಡಲಿಕ್ಕೆ ಪ್ರಯತ್ನ ಮಾಡಬೇಕು ಇವತ್ತಿನ ದಿವಸ ಹಳ್ಳಿಗಾಡು ಪ್ರದೇಶದಲ್ಲಿರುವ ಸೊಸೈಟಿಗಳು ಏನಿವೆ ಆ ಸೊಸೈಟಿಗಳು ಹೆಸರಿಗೆ ಮಾತ್ರ ಸೊಸೈಟಿಗಳಾಗಿವೆ. ಎಲ್ಲಾ ಸೊಸೈಟಿಗಳು ನಷ್ಟದಲ್ಲಿವೆ. ಒಬ್ಬರಿಗೂ ಎಫ್.ಇ.ಡಿ.ಯಿಂದ ಆಹಾರ ತಂದು ಹಂಚಿತಕ್ಕಂಥ ಶಕ್ತಿ ಅವರಿಗೆ ಇಲ್ಲ ಅಂದ ಮೇಲೆ ಏತಕ್ಕೆ ಈ ಸೊಸೈಟಿಗಳು ಇರಬೇಕು ಇಂತಹ ಸೊಸೈಟಿಗಳು ಇದ್ದರೇನು ಇಲ್ಲದಿದ್ದರೇನು. ಎನ್ನತಕ್ಕಂಥ ಮಾತನ್ನು ನಾನು ನಿಷ್ಠೂರವಾಗಿ ಹೇಳಬೇಕಾಗುತ್ತದೆ ಈ ಸೊಸೈಟಿ ಮೂಲಕ ನಾವು ಆಹಾರ ವಿತರಣೆ ಮಾಡಿದರೆ ಎಲ್ಲಿ ಅನ್ಯಾಯ ನಡೆಯುತ್ತಿದೆ ಅವ್ಯವಹಾರ ನಡೆಯುತ್ತಿದೆ ಅದನ್ನು ತಪ್ಪಿಸುವುದಕ್ಕೆ ಅವಕಾಶ ಮಾಡಿದಂತಾಗುತ್ತದೆ. ಮತ್ತೆ ಸೊಸೈಟಿಗಳಲ್ಲಿ ಹಣ ಇಲ್ಲ ತಾಲ್ಲೂಕು ಸೊಸೈಟಿಗಳಲ್ಲಿ ದುಡ್ಡು ಇಲ್ಲ ಇಂತಹ ಪರಿಸ್ಥಿತಿ ಏತಕ್ಕೆಂದು ನಾವು ಅವರನ್ನು ಕೇಳಿದರೆ ನಮಗೆ ಆಹಾರ ಸಬ್ಸಿಡಿ 12 ಲಕ್ಷ ಬರಬೇಕು 14 ಲಕ್ಷ ಬರಬೇಕು 20 ಲಕ್ಷ ಬರಬೇಕೆಂದು ಹೇಳುತ್ತಾರೆ ಈ ತರಹ ಏನಾದರೂ ಸರ್ಕಾರ ತಾಲ್ಲೂಕು ಸೊಸೈಟಿಗಳಿಗೆ ಕೊಡಬೇಕಾಗಿದ್ದರೆ ತಕ್ಷಣ ಅವರಿಗೆ ಹಣ ಪಾವತಿ ಮಾಡಿ ಅವರಿಗೆ ನೀವು ಹೇಳಬೇಕು ಆಹಾರಧಾನ್ಯಗಳನ್ನು ನೀವು ತೆಗೆದುಕೊಂಡು ಹೋಗಿ ಎಂದು ಆಗ ಎಫ್.ಇ.ಡಿ. ಪ್ರವೇಟ್ ಪರ್ಸನ್ಸ್ ಯಾರಾದರೂ ಬಂದರೆ ಅವರನ್ನು ಚೆಕ್ ಮಾಡಬಹುದು.

ನಾವು ನಿಮಗೆ ಕೊಡುವುದಕ್ಕೆ ಆಗುವುದಿಲ್ಲ ನಮ್ಮ ಸಂಸ್ಥೆಗಳಿಗೆ ಇವೆ ಅದರ ಮೂಲಕ ವಿತರಣೆ ಮಾಡುತ್ತೇವೆಂದು ಹೇಳಬಹುದು ಆಗ ಅವರು ಕೊಡತಕ್ಕಂಥ ಶಕ್ತಿ ಬರುತ್ತದೆ. ಈಗ ಏನಾಗಿದೆ ಎಫ್.ಇ.ಡಿಗೆ ೩೦೦ ಕಾರ್ಡ್ ಕೊಟ್ಟಿದ್ದರೆ ಅವರು ಆಹಾರ ತೆಕೆದುಕೊಂಡು ಹೋಗುವುದಿಲ್ಲ ಸೊಸೈಟಿಯಲ್ಲಿ ಮಾರಿ ಹೋಗುತ್ತಾರೆ. ಆಗ ನಾವು ಆಹಾರ ಪದಾರ್ಥಗಳನ್ನು ಹೇಗೆ ವಿತರಣೆ ಮಾಡಬೇಕು ಆದ್ದರಿಂದ ನೀವು ನರಸಿಂಹಮೂರ್ತಿಯವರ ಕೈ ಬಲಪಡಿಸಬೇಕು ಇದನ್ನು ಸರಿಪಡಿಸದೆ ಹೋದರೆ ಆಹಾರ ವಿತರಣೆಯನ್ನು ಯಾವ ಬಂದರೂ ಏನು ಮಾಡುವುದಕ್ಕೆ ಸಾಧ್ಯವಿಲ್ಲ. ಇದನ್ನು ಗಮನದಲ್ಲಿ ತೆಗೆದುಕೊಂಡು ಇದು ಕೇವಲ ನರಸಿಂಹಮೂರ್ತಿಯವರೊಬ್ಬರದೇ ಅಲ್ಲ ನೀವಿಬ್ಬರೂ ಸೇರಿ ಫೈನಾನ್ಸ್ ಮಿನಿಸ್ಟರ್ ಹತ್ತಿರ ಹೋಗಿ ಏನಾದರೂ ಮಾಡಿ ಒಂದೊಂದು ಸೊಸೈಟಿಗೆ 10 ಲಕ್ಷ ರೂಪಾಯಿ ದುಡ್ಡು ಕೊಡಿಸಿ ಎಂದು ದುಂಬಾಲು ಬಿದ್ದು ಕೇಳಬೇಕಾಗುತ್ತದೆ. ಆ ರೀತಿ ಕೇಳಿದರೆ ಇವತ್ತಿನ ದಿವಸ ಆಹಾರ ವಿತರಣೆ ಸರಿಯಾಗಿ ಮಾಡಲು ಆಗುತ್ತದೆ.

(ಶ್ರೀಮತಿ ಮೋಟಮ್ಮನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇನ್ನು ಕೋ-ಆಪರೇಟಿವ್ ಸೊಸೈಟಿ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ನನಗೇಕೋ ಕೋ-ಆಪರೇಟಿವ್ ಸೊಸೈಟಿ ವಿಚಾರ ನೋಡಿದರೆ ನನ್ನ ತಲೆಗೇ ಹೋಗುತ್ತಿಲ್ಲ. ಎಲ್ಲಿ ನೋಡಿದರೂ ಬರೀ ಬ್ಯಾಲೆನ್ಸ್‌ಷೀಟ್, ಬುಕ್ ಅಡ್ಜಸ್ಟ್‌ಮೆಂಟ್ ಕಾಣುತ್ತದೆ. ಯಾವ ಸೊಸೈಟಿಗಳನ್ನು ನೋಡಿದರೂ ಕೂಡಾ ಲಾಭದಾಯಕವಾಗಿ ಆದುದನ್ನು ನೋಡಿಲ್ಲ ಏನೋ ಮುರ‍್ನಾಲ್ಕು ಸಿಗುತ್ತವೆಂದು ಕಾಣುತ್ತದೆ. ನಾನು ಒಂದು ಕೇಳುತ್ತೇನೆ. ಇಡೀ ರಾಜ್ಯದಲ್ಲಿ ಇರತಕ್ಕಂಥ ಸೊಸೈಟಿಗಳಲ್ಲಿ ಮಿಸ್‌ಅಪ್ರೋಪ್ರಿಯೇಷನ್ ಆಗದೇ ಇರುತಕ್ಕಂಥ ಸೊಸೈಟಿಗಳು ಯಾವುದಾದರು ಇದೆಯೇ ಅನ್ನತಕ್ಕಂಥಾದ್ದನ್ನು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಬೇಕು. ಈ ಮಿಸ್ ಅಪ್ರೋಪ್ರಿಯೇಷನ್ ಆಗಿರತಕಂಥ ಸೊಸೈಟಿಗಳ [illegible]

ತೆಗೆದುಕೊಂಡಿದ್ದೀರಿ? ಎಷ್ಟನ್ನು ಸರಿ ಮಾಡುವುದಕ್ಕೆ ಸಾಧ್ಯ. ಸರಿ ಮಾಡುವುದಕ್ಕೆ ಆಗದಿದ್ದರೆ ಸೊಸೈಟಿಗಳನ್ನು ಟೇಕನ್ ಓವರ್ ಮಾಡುತ್ತೀರೋ ಅಥವಾ ವೈಂಡಪ್ ಮಾಡುತ್ತೀರೋ ಮಾಡಿ. ಇಲ್ಲ ನೆಪಕ್ಕೋಸ್ಕರ ನಂಬರ್‌ಗೋಸ್ಕರ ಸೊಸೈಟಿಗಳನ್ನು ಇಟ್ಟುಕೊಂಡರೆ ಪ್ರಯೋಜನವಾಗುವುದಿಲ್ಲ ಇದಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕಾಗುತ್ತದೆ ಲಿಕ್ವಿಡೇಟ್ ಆಗುತಕ್ಕಂಥ ಸೊಸೈಟಿಗಳನ್ನು ಆ ಕಂಡೀಷನ್‌ನಲ್ಲಿ ಇರುವವನ್ನು ಕಟ್ಟಿಕೊಂಡು ಏನು ಮಾಡಬೇಕು ಅವುಗಳಿಂದ ಏನೂ ಸಾಧನೆಯಾಗುವುದಿಲ್ಲ ಹಾಗೂ ರೈತರಿಗೆ ಅನುಕೂಲವಾಗುವುದಿಲ್ಲ ಷೇರುದಾರರು ಹಾಳಾಗಿ ಹೋದರು ಜೊತೆಗೆ ಸರ್ಕಾರಕ್ಕೂ ಯಾವದೇ ರೀತಿಯಲ್ಲೂ ಅನುಕೂಲವಾಗುತ್ತಿಲ್ಲ. ಆದ್ದರಿಂದ ದಯಮಾಡಿ ಇರತಕ್ಕಂಥ ಸೊಸೈಟಿಗಳನ್ನು ವಯಬಲ್ ಆಗುವ ರೀತಿಯೊಳಗೋ ಸರ್ಕಾರದಿಂದ ಗ್ರ್ಯಾಂಟ್ ತೆಗೆದುಕೊಂಡೋ ಮಾಡಿ ಅದರ ಮುಖಾಂತರ ರೈತನಿಗೆ ಬಡವರಿಗೆ ಆಹಾರ ವಿತರಣೆ ಮಾಡಿಕೊಡತಕ್ಕಂಥ ಒಂದು ಕೆಲಸ ಮಾಡಬೇಕು ಎನ್ನತಕ್ಕ ವಿಚಾರವನ್ನು ಹೇಳುತ್ತಾ ಇವತ್ತಿನ ದಿವಸ ಡೀಸಲ್ ಪೆಟ್ರೋಲ್ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ನರಸಿಂಹಮೂರ್ತಿಯವರು ಒಂದೊಂದು ಸಾರಿ ದಾರಿಯಲ್ಲಿ ಹೋಗುತ್ತಾ ಡೀಸಲ್ ಪಂಪ್‌ಗಳನ್ನು ಚೆಕ್ ಮಾಡಬೇಕು. ಒಂದು ಲೀಟರ್ ಎಂದು ಹಾಕುತ್ತಾರೆ ಅದರಲ್ಲಿ ಬರೀ ನೂರೇನೇ ಬರುತ್ತದೆ. ಚೆಕ್ ಮಾಡುವವರು ಯಾರಿದ್ದಾರೋ ಗೊತ್ತಿಲ್ಲ ವೈಟ್ಸ್ ಅಂಡ್ ಮೆಷರ್ ಡಿಪಾರ್ಟ್‌ಮೆಂಟಿನವರು ಇದನ್ನು ಮಾಡುತ್ತಿದ್ದಾರೋ ಗೊತ್ತಿಲ್ಲ ಜವಾಬ್ದಾರಿ ನಿಮ್ಮ ಮೇಲಿರುವುದರಿಂದ ನೀವು ಅದನ್ನು ದಯಮಾಡಿ ಚೆಕ್ ಮಾಡಬೇಕು. ಆಮೇಲೆ ಮಾನ್ಯ ಅಜೀಜ್ ಸೇಠ್‌ರವರು ಬಂದರು ಅವರು ಬಂದಿದಕ್ಕೆ ನನ್ನ ಕ್ಷೇತ್ರದ್ದು ಸ್ವಲ್ಪ ಜ್ಞಾಪಕ ಬಂತು. ಇದರ ಬಗ್ಗೆ 27ನೇ ತಾರೀಖು ಒಂದು ಪ್ರಶ್ನೆ ಇದೆ. ಇಡಗೂರು ಅನ್ನತಕ್ಕಂಥ ಊರಿನಿಂದ ಬೆಂಗಳೂರಿಗೆ ಒಂದು ಬಸ್ ಬರುತ್ತಿತ್ತು.

ನನ್ನ ರಿಕ್ವೆಸ್ಟ್ ಮೇಲೆ ಕೆ.ಎಸ್.ಆರ್.ಟಿ.ಸಿ. ಬಸ್‌ನ್ನು ಸಿಂಧ್ಯಾರವರು ಮಿನಿಸ್ಟರ್ ಆಗಿದ್ದಾಗ ಹಾಕಿದರು. ಈಗ ಇದ್ದಕ್ಕಿದ್ದ ಹಾಗೆ ಬಸ್‌ನ್ನು ಕ್ಯಾನ್ಸಲ್ ಮಾಡಿದರು ಪ್ರೈವೇಟ್ ಬಸ್ಸುಗಳಿವೆ ಎಂದು. ಆಮೇಲೆ ನಮ್ಮ ಸರ್ಕಾರ ಬಂದ ಮೇಲೆ ಕೇಳಿದೆ ಮಾಡಿಕೊಡುತ್ತೇವೆಂದಿರಿ. ಸಾರ್ವಜನಿಕರು ಒಂದು ಪಿಟೀಷನ್‌ನ್ನು ಕೊಟ್ಟರು. ಪಿಟೀಷನ್ ಕಮಿಟಿಗೆ ಹೋಯಿತು. ಪಿಟೀಷನ್ ಕಮಿಟಿಯವರು ಬಸ್ ಹಾಕಬೇಕೆಂದು ರೆಕಮಂಡ್ ಮಾಡಿದ್ದಾರೆ. ಸುಮಾರು ಐದಾರು ತಿಂಗಳಿನಿಂದ ಸತತವಾಗಿ ಹಲವಾರು ಬಾರಿ ಅರ್ಜಿಗಳನ್ನು ತಮಗೆ ಬರೆಯುತ್ತಾ ಬಂದಿದ್ದಾರೆ. ದುರಾದೃಷ್ಟವಶಾತ್ ಅಜೀಜ್ ಸೇಠ್ ಸಾಹೇಬರಿಗೆ ಕನ್ನಡ ಬರುವುದಿಲ್ಲ, ಕನ್ನಡದಲ್ಲಿ ಅರ್ಜಿ ಬರುತ್ತವೆ. ಯಾರೋ ಅದನ್ನು ಟ್ರಾನ್ಸ್‌ಲೇಟ್ ಮಾಡಿ ಹೇಳಬೇಕು. ಟ್ರಾನ್ಸ್‌ಲೇಟ್ ಮಾಡುವವರು ಬೇಡ ಎಂದು ಹೇಳಿರಬೇಕೆಂದು ಅನಿಸುತ್ತದೆ.

ಶ್ರೀ ಅಜೀಜ್ ಸೇಠ್ : ನಾನು ಯಾವುದನ್ನೂ ತಿರಸ್ಕಾರ ಮಾಡಿಲ್ಲವಲ್ಲ. ಆ್ಯಕ್ಷನ್ ತೆಗೆದು ಕೊಂಡಿದ್ದೇನೋ ಇಲ್ಲವೋ?

ಶ್ರೀ ಜಿ.ಎಸ್. ಶಿವನಂಜಪ್ಪ : ತೆಗೆದುಕೊಂಡಿದ್ದೀರಿ. ನನ್ನ ಕೇಸ್‌ನಲ್ಲಿ ತಪ್ಪು ಆಕ್ಷನ್ ತೆಗೆದುಕೊಂಡಿದ್ದೀರಿ, ಅದೇ ಬಂದಿರುವುದು ತಾಪತ್ರಯ. ಯಾರೋ ಹೇಳಿದ್ದಾರೆ ಬಸ್ ಬೇಡ ಎಂದು ನೀವೂ ಬೇಡ ಎಂದು ಹೇಳಿಬಿಟ್ಟಿದ್ದೀರಿ. ದಯಮಾಡಿ ಇಡಗೂರಿನಿಂದ ಕುಣಿಗಲ್ ಮಾರ್ಗವಾಗಿ ಬೆಂಗಳೂರಿಗೆ ಕೂಡಲೇ ಬಸ್ ಹಾಕಬೇಕಾಗಿದೆ. ಇವತ್ತಿನ ದಿವಸ, ಗೌರ್‍ನಮೆಂಟ್ ಬಸ್ ಹಾಕಿದ್ದಾರೆಂದು ಪ್ರೈವೇಟ್ ಬಸ್‌ಗಳನ್ನು ನಿಲ್ಲಿಸಿದರು. ಪ್ರೈವೇಟ್ ಬಸ್‌ಗಳು ಬರುತ್ತಿವೆಯೆಂದು ನೀವು ನಿಲ್ಲಿಸಿದ್ದೀರಿ. ಪರಿಸ್ಥಿತಿ ಏನಾಗಿದೆ ಎಂದರೆ, ಒಂದು ಬಸ್ ಬಂದರೆ ಒಳಗೆ 50 ಜನ ಕುಳಿತುಕೊಂಡರೆ ಟಾಪ್ ಮೇಲೆ 60-70 ಜನ ಕುಳಿತುಕೊಂಡು ಹೋಗುವ ಹಾಗಾಗಿದೆ.

ಆಮೇಲೆ ಇನ್ನೊಂದು ವಿಷಯ ಸುಮಾರು 20 ಬಸ್‌ಗಳನ್ನು ಗುಬ್ಬಿ ತಾಲ್ಲೂಕಿನಲ್ಲಿ ನಿಲ್ಲಿಸಿದ್ದೀರಿ ಏಕೆ ನಿಲ್ಲಿಸಿದ್ದೀರೆಂದು ಸ್ಥಳಿಯ ಅಧಿಕಾರಿಗಳನ್ನು ಕೇಳಿದರೆ ಕಲೆಕ್ಷನ್ ಕಡಿಮೆಯಾಗುತ್ತಿರುವುದರಿಂದ ನಿಲ್ಲಿಸಿದ್ದೇವೆಂದು ಹೇಳುತ್ತಾರೆ. ನಾನು ನಿಮಗೆ ಚಾಲೆಂಜ್ ಮಾಡುತ್ತೇನೆ. ನನ್ನನ್ನು ಒಂದು ತಿಂಗಳು ಆ ರೂಟ್‌ಗೆ ಕರೆದುಕೊಂಡು ಹೋಗಿ. ಆ ರೂಟ್‌ನಲ್ಲಿ ಏನಾದರೂ ಲಾಸ್ ಆದರೆ ನಾನು ರಾಜೀನಾಮೆ ಕೊಟ್ಟು ಮನೆಗೆ ಹೋಗುತ್ತೇನೆ. ಇಲ್ಲವೆಂದರೆ ನಿಮ್ಮ ಡಿಪಾರ್ಟ್‌ಮೆಂಟ್ ಅಧಿಕಾರಿಗಳಿಗೆ ಏನು ಮಾಡುತ್ತೀರಿ? ನಮ್ಮ ರೈತರುಗಳಿಗೆ ಏಕೆ ಅನ್ಯಾಯ ಮಾಡುತ್ತೀರಿ? ಅವರು ಎಲ್ಲಿಗೆ ಹೋಗಬೇಕು? ಲಾರಿಗಳಲ್ಲಿ ಅವರುಗಳು ಪ್ರಯಾಣ ಮಾಡಬೇಕಾಗಿದೆ. ಲಾರಿಗಳಲ್ಲಿ ಬಂದರೆ ಆಕ್ಸಿಡೆಂಟ್‌ಗಳಾಗುತ್ತದೆ ಮೊನ್ನೆ ದಿವಸ ಮೂರು ಲಾರಿಗಳು ಬಿದ್ದು 10-12 ಜನ ಸತ್ತಿದ್ದಾರೆ. ಬಸ್ ವ್ಯವಸ್ಥೆ ಮಾಡಿಕೊಡಿ ಎಂದರೆ ಮಾಡಿಕೊಡುತ್ತಿಲ್ಲ. ಏಕೆ? ನಾವು ಏನು ತಪ್ಪು ಮಾಡಿದ್ದೇವೆ ಹೇಳಿ. ನಮ್ಮ ಗುಬ್ಬಿ ತಾಲ್ಲೂಕಿನಲ್ಲಿ ಸುಮ್ಮನೆ 15-20 ಬಸ್‌ಗಳನ್ನು ನಿಲ್ಲಿಸಿದ್ದೀರಿ. ಅಲ್ಲಿ ನಿಲ್ಲಿಸಿರುವ ಬಸ್‌ಗಳನ್ನು ಕೂಡಲೇ ಆಯಾ ರೂಟ್‌ಗಳಲ್ಲಿ ಓಡಿಸಬೇಕೆಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ನಾರಾಯಣರಾವ್ ಮನಳ್ಳಿ (ಬೀದರ್) : ಮಾನ್ಯ ಅಧ್ಯಕ್ಷಿಣಿಯವರೆ, ಈಗಾಗಲೇ ನಮ್ಮ ಎದುರಿಗೆ ಅನೇಕ ಬೇಡಿಕೆಗಳ ಪಟ್ಟಿ ಇದೆ. ನಾನು ಎಲ್ಲಾ ಬೇಡಿಕೆಗಳ ಬಗ್ಗೆ ಏನೋ ಹೇಳುವುದಕ್ಕೆ ಹೋಗುವುದಿಲ್ಲ. ಕೆಲವೊಂದು ಬೇಡಿಕೆಗಳ ಬಗ್ಗೆ ಅಂದರೆ ಅದರಲ್ಲಿಯು ಸಾರಿಗೆ ಬೇಡಿಕೆ ಬಗ್ಗೆ ಹೇಳಬೇಕಾಗಿದೆ. ಸಾರಿಗೆ ಬಗ್ಗೆ ಹೇಳಬೇಕಾದರೆ, ಶಾಸಕರುಗಳು ಎಲ್ಲೇ ಹೋಗಲಿ, ನಾನೊಬ್ಬನೇ ಅಲ್ಲ, ಎಲ್ಲಾ ಶಾಸಕರೂ ಸಹ ಅವರು ತಮ್ಮ ಸ್ವಂತ ಕ್ಷೇತ್ರಗಳಿಗೆ ಹೋದಾಗ ಜನರ ಕಡೆಯಿಂದ ಒಂದು ಡಿಮ್ಯಾಂಡ್ ಇರುತ್ತದೆ. ಕನಿಷ್ಟ ನಮ್ಮ ಊರಿಗೆ ಒಂದು ಬಸ್ ಹಾಕಿಸಿ ಎಂದು. "ಹಮಾರೇ ತರಫ್ ಏಕ್ ತೋಬೀ ಬಸ್ ಡಾಲೋ, ಯಹೀ ಡಿಮಾಂಡ್ ರಹತಾ ಹೈ" ಆದರೆ ಈಗ ಇದ್ದಂತಹ ಪರಿಸ್ಥಿತಿಯಲ್ಲಿ.

ಶ್ರೀ ಅಜೀಜ್ ಸೇಠ್ : ಉರ್ದೂ ಮೇ ಬೋಲೋ..

ಶ್ರೀ ನಾರಾಯಣರಾವ್ ಮನಳ್ಳಿ : ಬೋಲತಾ ಹೂ, ಲೇಕಿನ್ ಪರ್ಮಿಷನ್ ನಹೀ ರಹತೇ,

ಛೇರ್ಮನ್ : ನಾರಾಯಣರಾವ್ ಅವರೇ ತಾವು ತಮ್ಮ ಸಮಯವನ್ನು ಹಾಳುಮಾಡಿಕೊಳ್ಳಬೇಡಿ.

ಶ್ರೀ ನಾರಾಯಣರಾವ್ ಮನಳ್ಳಿ : ಈಗ ನಮ್ಮಲ್ಲಿ ಬಸ್ ಎಷ್ಟು ಬೇಕು? ವಿಶೇಷವಾಗಿ ಬೀದರ್ ಜಿಲ್ಲೆ ಬಗ್ಗೆ ಹೇಳುತ್ತೇನೆ. ರಾಷ್ಟ್ರೀಕರಣ ಆಗುವ ಮುನ್ನ ಎಕ್ಸ್‌ಸರ್ವೀಸಸ್‌ಗಳು, ಖಾಸಗಿಯವರದ್ದು ನಡೆಯುತ್ತಿತ್ತು. ಅವರು ಪ್ರತಿ ಹಳ್ಳಿಗೂ ಸಹ ತಮ್ಮ ಸೇವೆಯನ್ನು ಒದಗಿಸುತ್ತಿದ್ದರು. ರಾಷ್ಟ್ರೀಕರಣ ಆದ ನಂತರ ನಮ್ಮ ಸಾರಿಗೆ ಸಂಸ್ಥೆಯವರು ಆ ವ್ಯವಸ್ಥೆ ಮಾಡುತ್ತಾ ಇಲ್ಲ. ವಿಶೇಷವಾಗಿ ಹೇಳುವುದಾದರೆ ಕನಿಷ್ಟ ಪಕ್ಷ ಯಾವ ಯಾವ ಊರುಗಳಿಗೆ ಆ ಸರ್ವೀಸಸ್‌ಗಳು ಹೋಗುತ್ತಾ ಇತ್ತು, ಅಂತಹ ಊರುಗಳಿಗೆ ಬಸ್ ಹಾಕಬೇಕು. ಈಗ ನಮ್ಮ ಬೀದರ್ ಡಿಪೋದಲ್ಲಿ ಇದ್ದಂತಹ ಬಸ್‌ಗಳ ಪರಿಸ್ಥಿತಿ ನೋಡಿದಾಗ ಸುಮಾರು 78 ಬಸ್‌ಗಳು ನಮ್ಮ ಬಸ್ ಡಿಪೋದಲ್ಲಿ ಇವೆ. ಅದರ ಪೈಕಿ ಅರ್ಧ ಬಸ್‌ಗಳು ಕೆಟ್ಟ ಪರಿಸ್ಥಿತಿಯಲ್ಲಿ ಇದ್ದಾವೆ. ಆ ಬಸ್‌ಗಳು ಡಿಪೋನಿಂದ ಹೊರ ಬರುವ ಪರಿಸ್ಥಿತಿಯಲ್ಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಇದ್ದಂತಹ ರೂಟ್‌ಗಳನ್ನು ಸಹಿತ ಕ್ಯಾನ್ಸಲ್ ಮಾಡುವಂತಹ ಪರಿಸ್ಥಿತಿ ಉಂಟಾಗಿದೆ.

ಆಮೇಲೆ ಏನುಮಾಡಬೇಕು? ಇದರ ಬಗ್ಗೆ ಕಾರಣ ಕೇಳಿದರೆ ಸಾರಿಗೆ ಇಲಾಖೆಯವರು ಹೇಳುತ್ತಾರೆ, ರಸ್ತೆ ಚೆನ್ನಾಗಿಲ್ಲ ಎಂದು ಹೇಳುತ್ತಾರೆ. ಆದರೆ ನಮ್ಮ ಪಕ್ಕದ ಪ್ರಾಂತ್ಯಗಳಾದ ಮಹಾರಾಷ್ಟ್ರದವರಾಗಲೀ ಅಥವಾ ಆಂಧ್ರದವರಾಗಲೀ ಅವರುಗಳು ಮಾತ್ರ ಸರಿಯಾಗಿ ಇಂತಹ ರೂಟ್‌ನಲ್ಲಿ ಬಸ್‌ಗಳನ್ನು ಓಡಿಸುತ್ತಿದ್ದಾರೆ, ಅವರು ಲಾಭದಾಯಕವಾಗಿಯೂ ಬಸ್‌ಗಳನ್ನು ಓಡಿಸುತ್ತಿದ್ದಾರೆ. ಉದಾಹರಣೆಗೆ ಹೇಳಬೇಕಾದರೆ, ನಮ್ಮ ಬೀದರ್‌ನಲ್ಲಿ ಜಹೀರಾಬಾದ್ ಬೀದರ್ ಎಂಬ ಸಣ್ಣ ರೂಟ್ ಇದೆ. ಆ ರೂಟ್‌ನಲ್ಲಿ ಆಂಧ್ರದವರು ಬಸ್‌ಗಳನ್ನು ಓಡಿಸುತ್ತಾರೆ. ನಮ್ಮವರೂ ಓಡಿಸುತ್ತಾರೆ. ನಮ್ಮವರು ಆ ಬಸ್ ರೂಟ್‌ನಲ್ಲಿ ಅರ್ನಿಂಗ್ ಇಲ್ಲ ಎಂದು ಹೇಳುತ್ತಾರೆ. ಆದರೆ ಆಂಧ್ರದವರಿಗೆ ಮಾತ್ರ ಸರಿಯಾಗಿ ಪ್ರಾಫಿಟ್ ಆಗುತ್ತಿದೆ. ಒಂದೇ ರೂಟ್‌ನಲ್ಲಿ ಹೋಗುವಂತಹ ಎರಡು ಪ್ರಾಂತ್ಯಗಳ ವ್ಯತ್ಯಾಸವನ್ನು ಹೇಳುತ್ತಿದ್ದೇನೆ. ಅದರ ಸಲುವಾಗಿ ನಮ್ಮವರು ಬರೀ ಒಂದು ಏನಾದರೂ ಕುಂಟು ನೆಪ ಮಾಡಿಕೊಂಡು ಬಸ್ಸನ್ನು ಓಡಿಸದೇ ಇರುವುದು ಬಹಳ ಶೋಚನೀಯವಾದ ವಿಚಾರವಾಗಿದೆ. ಅದರ ಬಗ್ಗೆ ಮಾನ್ಯ ಮಂತ್ರಿಯವರು ಗಮನ ಕೊಡಬೇಕು. ಈಗ ವಿಶೇಷವಾಗಿ ಹೇಳಬೇಕಾದರೆ, ಪಾಲಿಸಿ ಮ್ಯಾಟರ್ ಬಗ್ಗೆ ಮಾನ್ಯ ಸಿಂಧ್ಯಾರವರು ಸಾಕಷ್ಟು ಹೇಳಿದ್ದಾರೆ. ಆದರೆ ನಮ್ಮ ನಮ್ಮ ಭಾಗದ ಬಗ್ಗೆ ನಾವು ಹೇಳಬೇಕಾಗಿದೆ. ನಮ್ಮ ಕರ್ನಾಟಕದೊಳಗೆ ಯಾವುದೇ ಬಸ್ ಸ್ಟ್ಯಾಂಡಿನಲ್ಲಿ ಶೌಚಾಲಯದ ವ್ಯವಸ್ಥೆ ಸರಿಯಾಗ ಇಲ್ಲ. ಬೆಂಗಳೂರಿನ ಪರಿಸ್ಥಿತಿ ಎಲ್ಲರಿಗೂ ಗೊತ್ತಿರಬಹುದು. ಆದರೆ ಸಣ್ಣ ಪುಟ್ಟ ತಾಲ್ಲೂಕು ಮಟ್ಟದಲ್ಲಿ ಆಗಲೀ, ಜಿಲ್ಲಾ ಮಟ್ಟದಲ್ಲಿ ಆಗಲೀ ಶೌಚಾಲಯ ಇಲ್ಲ, ಇದ್ದರೂ ಅದರ ಪರಿಸ್ಥಿತಿ ತೀರಾ ಹದಗೆಟ್ಟಿದೆ. ಬಸ್ ಸ್ಟ್ಯಾಂಡಿನಲ್ಲಿ ಪ್ರಯಾಣಿಕರು ಸರಿಯಾಗಿ ಕೂಡತಕ್ಕಂಥ ವ್ಯವಸ್ಥೆಯೂ ಸಹ ಇಲ್ಲ.

ಈಗ ಸರ್ವೇಸಾಧಾರಣವಾಗಿ ಪ್ಯಾಸೆಂಜರ್‌ಗಳಿಗೆ ಏನಾದರೂ ಕರ್ನಾಟಕದೊಳಗೆ ಸರಿಯಾಗಿ ತಮ್ಮ ಭಾಗಗಳಿಗೆ ತಕ್ಷಣ ಹೋಗುವ ಹಾಗೆ ಇಲ್ಲ. ಅದಕ್ಕಾಗಿ ಪ್ರಯಾಣಿಕರು ತಮ್ಮ ಊರುಗಳ ಬಸ್ಸನ್ನು ಪ್ರತೀಕ್ಷೆ ಮಾಡಬೇಕಾಗುತ್ತದೆ. ಅಲ್ಲಿ ಒಂದು ಕೂಡುವುದಕ್ಕೆ ಜಾಗ ಬೇಕು. ಸರ್ವೇಸಾಧಾರಣವಾಗಿ ನಾನು ಎಲ್ಲ ಕಡೆ ಓಡಾಡಿದ್ದೇನೆ. ಬಸ್ ಸ್ಟ್ಯಾಂಡಿನಲ್ಲಿ ಕೂಡುವುದಕ್ಕೆ ಸರಿಯಾದಂತಹ ಸ್ಥಳಾವಕಾಶ ಇಲ್ಲ, ವ್ಯವಸ್ಥೆ ಇಲ್ಲ. ಅದರಲ್ಲಿಯೂ ಬೀದರ್ ಒಂದು ಜಿಲ್ಲಾ ಕೇಂದ್ರ ಬಹುಶಃ ಮಾನ್ಯ ಮಂತ್ರಿಯವರೂ ಸಹ ಬಂದು ನಮ್ಮ ಬಸ್ ಸ್ಟ್ಯಾಂಡ್ ನೋಡಿದ್ದಾರೆ. ಒಂದು ಮಳೆ ಬಂತು ಎಂದರೆ ಜನರಿಗೆ ನಿಲ್ಲುವುದಕ್ಕೆ ಸಾಧ್ಯ ಇಲ್ಲ, ಇಂತಹ ಪರಿಸ್ಥಿತಿ ಈ ಬಸ್ ಸ್ಟ್ಯಾಂಡಿನಲ್ಲಿದೆ. ಆದ್ದರಿಂದ ಬಸ್ ಸ್ಟ್ಯಾಂಡ್ ಕೊಡುವ ಕಡೆ ಅವರು ವಿಶೇಷವಾಗಿ ಲಕ್ಷ್ಯ ಕೊಡಬೇಕು. ಈಗಾಗಲೇ ಮಾನ್ಯ ಸಿಂಧ್ಯರವರು ರಾಷ್ಟ್ರೀಕರಣ ಆದ ನಂತರ ರೂಟ್‌ಗಳ ಬಗ್ಗೆ ಸ್ವಲ್ಪ ಟಚ್ ಮಾಡಿದ್ದಾರೆ.

3.45 ಪಿ.ಎಂ.

ಆಗ ಅಲ್ಲಿ ಕೆಲವು ಜನರು ತಮ್ಮ ಕೆಲಸವನ್ನು ಕಳೆದುಕೊಂಡಿದ್ದಾರೆ. ಅಂಥವರಿಗೆ ನೀವು ಉದ್ಯೋಗವನ್ನು ಕೊಡಬೇಕು. ಮೊನ್ನೆ ಮಾನ್ಯ ಸಚಿವರು ಈ ಬಗ್ಗೆ ಕೇಳಿದಾಗ ಇರುವ ಫೈಲ್‌ನ್ನು ಕ್ಲೋಸ್ ಮಾಡಿರುವುದಾಗಿ ಹೇಳಿದ್ದರು. ಅದೇನೇ ಇದ್ದರೂ ಮಾನವೀಯತೆಯ ದೃಷ್ಟಿಯಿಂದ, ಆ ಡ್ರೈವರುಗಳು, ಕಂಡಕ್ಟರ್‌ಗಳು ಯಾರಿದ್ದಾರೆ, ಅವರು 7-8 ವರ್ಷಗಳಿಂದ ಉದ್ಯೋಗವಿಲ್ಲದೆ ಕಷ್ಟದಲ್ಲಿದ್ದಾರೆ, ಅವರ ಮಕ್ಕಳು ಮರಿಗಳು ಉಪವಾಸದಲ್ಲಿ ಸಾಯುತ್ತಾ ಇದ್ದಾರೆ, ಅಂಥವರನ್ನು ನೀವು ಕನಿಕರ ತೋರಿ ಉದ್ಯೋಗ ಕೊಟ್ಟರೆ ಒಳ್ಳೆಯದಾಗುತ್ತದೆ. ಆ ಬಗ್ಗೆ ಇರುವ ನಿಯಮಗಳನ್ನು ಸ್ವಲ್ಪ ತಿದ್ದುಪಡಿ ಮಾಡಿಕೊಂಡು, ಅವರಿಗೆ ಅವಕಾಶ ಕೊಟ್ಟರೆ ಅವರ ದಿನನಿತ್ಯದ ಜೀವನೋಪಾಯಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿ ಆ ಕೆಲಸವನ್ನು ಮಾಡಬೇಕೆಂದು

ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಪಟ್ಟಣ ಪ್ರದೇಶಗಳ ಸುತ್ತುಮುತ್ತ 20 ಕಿ.ಮೀ. ಅಂತರದಲ್ಲಿರತಕ್ಕಂಥ ಹಳ್ಳಿಗಳಿಗೆ ಬಸ್‌ಸೌಲಭ್ಯ. ಅಷ್ಟು ಸರಿಯಾಗಿ ಇಲ್ಲ. ಅಲ್ಲಿನ ಪರಿಸ್ಥಿತಿ ಏನಾಗಿದೆ ಅಂದರೆ ಅಲ್ಲಿ ಪಟ್ಟಣ ಪ್ರದೇಶಗಳಿಂದ ಬರುವ ಬಸ್‌ಗಳು ಯಾವುವೂ ನಿಲ್ಲುವುದಿಲ್ಲ. ಅಲ್ಲಿ ಬರುವಾಗಲೇ ಬಸ್‌ಗಳು ತುಂಬಿಕೊಂಡು ಬರುತ್ತವೆ. ಹೀಗಾಗಿ ಮಧ್ಯದಲ್ಲಿ ಬರತಕ್ಕಂಥ ಹಳ್ಳಿಗಳಿಗೆ ಬಸ್ ಸೌಕರ್ಯ ಇಲ್ಲದಂತಾಗಿದೆ. ಆದ್ದರಿಂದ ಅಂಥ ಕಡೆಗಳಿಗೆ ಸೆಟಲ್‌ಬಸ್‌ನ್ನಾಗಲಿ, ಸಿಟಿ ಬಸ್ ತರಹದ ಸೌಕರ್ಯವನ್ನಾಗಲಿ ಮಾಡಕೊಟ್ಟು ಆ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ತಮ್ಮ ಕೆ.ಎಸ್.ಆರ್.ಟಿ.ಸಿ.ಯವರಲ್ಲಿ ಒಂದು ಭಯ ಆವರಿಸಿಕೊಂಡಿದೆ. ಹೇಗೆ ಸಂಸ್ಥೆಯನ್ನು ನಡೆಸಿದರೂ ಕೂಡ ಲಾಭಗಳಿಸುವುದಕ್ಕೆ ಆಗುವುದಿಲ್ಲ ಎಂಬ ಒಂದು ಶಂಕೆ ನಿಮ್ಮಲ್ಲಿ ಇರಬಹುದು. ತಾವುಗಳು ಮನಸ್ಸು ಮಾಡಿದರೆ ಸಾರಿಗೆ ಸಂಸ್ಥೆಯಲ್ಲಿ ಲಾಭಗಳಿಸಿಕೊಡಬಹುದು. ಆ ಒಂದು ಸಾಧ್ಯತೆ ಇದೆ. ಆದ್ದರಿಂದ ತಾವುಗಳು ಮನಸ್ಸು ಮಾಡಿ ಆ ಕೆಲಸವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಆಹಾರಧಾನ್ಯಗಳ ಸರಬರಾಜು ವಿಚಾರದಲ್ಲಿ ಕೆಲವು ಮಾತನ್ನು ಹೇಳಬೇಕೆಂದಿದ್ದೇನೆ. ನಿಮ್ಮ ವಾರ್ಷಿಕ ವರದಿಯಲ್ಲಿ ನಮ್ಮ ಕರ್ನಾಟಕ ಸರ್ಕಾರದ ಜನರಿಗೆ ಸಾಕಷ್ಟು ಆಹಾರಧಾನ್ಯಗಳನ್ನು ಒದಗಿಸುತ್ತಿದ್ದೇವೆ ಎಂದು ಹೇಳಿದ್ದೀರಿ. ಆ ಮಾತನ್ನು ನಮ್ಮ ಸಮಾಧಾನಕ್ಕೋಸ್ಕರವಾಗಿ ಹೇಳಿದ್ದೀರಿ ಎಂದು ನನಗಾದರೂ ಅನ್ನಿಸುತ್ತದೆ. ಸಾಕಷ್ಟು ಸರಬರಾಜನ್ನು ತಾವುಗಳು ಎಲ್ಲಿ ಮಾಡುತ್ತಿದ್ದೀರಿ ಎಂದು ಹೇಳಬೇಕು. ಈಗ ಹಳ್ಳಿ ಮತ್ತು ಪಟ್ಟಣ ಪ್ರದೇಶಗಳಲ್ಲಿ ಆಹಾರಧಾನ್ಯಗಳಲ್ಲಿರತಕ್ಕಂಥ ಒಂದು ಹಂಚಿಕೆಯ ವಿಚಾರದಲ್ಲಿ ಇರುವ ತಾರತಮ್ಯವನ್ನು ಕೂಡ ನಿಮ್ಮಿಂದ ನೀಗಿಸುವುದಕ್ಕೆ ಸಾಧ್ಯವಾಗಲಿಲ್ಲ. ಅದನ್ನು ಬಿಟ್ಟು ನೀವು ಆ ಪ್ರದೇಶಗಳಿಗೆ ಸಾಕಷ್ಟು ಆಹಾರಧಾನ್ಯಗಳನ್ನು ಹಂಚುತ್ತಿದ್ದೇವೆ ಎಂದರೆ ಅದಕ್ಕೆ ಏನು ಅರ್ಥ ಬರುತ್ತದೆ?

ಆದ್ದರಿಂದ ಹಳ್ಳಿ ಮತ್ತು ಪಟ್ಟಣ ಪ್ರದೇಶಗಳೆಂದು ತಾವುಗಳು ಏನು ತಾರತಮ್ಯವನ್ನು ಮಾಡುತ್ತಿದ್ದೀರಿ ಅದನ್ನು ಹೋಗಲಾಡಿಸಬೇಕು. ಈಗಿರತಕ್ಕಂಥ ಸರಬರಾಜು ವ್ಯವಸ್ಥೆಯು ಸರಿಯಾಗಿಲ್ಲ. ಮಾನ್ಯ ಶಿವನಂಜಪ್ಪನವರು ಹೇಳಿದ ಹಾಗೆ, ನೀವು ಖಾಸಗೀಯವರಿಗೆ ನ್ಯಾಯ ಬೆಲೆ ಅಂಗಡಿಗಳನ್ನು ಕೊಟ್ಟಿದ್ದೀರಿ. ಅದನ್ನು ಬದಲು ಮಾಡಿ ಸಾರಾಸಗಟಾಗಿ ಎಲ್ಲರನ್ನೂ ತೆಗೆದು ಎಲ್ಲಾ ಕಡೆಗಳಲ್ಲಿ ಸೊಸೈಟಿಗಳ ಮೂಲಕ ಹಂಚಿಕೆ ವ್ಯವಸ್ಥೆಯನ್ನು ಮಾಡಿದರೆ ಬಹುಶಃ ಇದ್ದಂಥ ಸ್ಟಾಕ್‌ನಲ್ಲಿಯೇ ಸಾಕಷ್ಟು ಸರಬರಾಜು ಮಾಡುವುದಕ್ಕೆ ಅನುಕೂಲ ಆಗುತ್ತದೆ. ಎಲ್ಲರಿಗೂ ದಾನ್ಯ ಸಿಗುತ್ತದೆ. ಈಗ ಏನಾಗಿದೆ ಅಂದರೆ, ಗೋದಾಮಿನಲ್ಲಿ ಈ ಖಾಸಗೀ ಅಂಗಡಿಯವರು ಹೋಗಿ ಅಲ್ಲಿ ಅವರು ತೆಗೆದುಕೊಳ್ಳುವಂಥ ವ್ಯವಸ್ಥೆಯನ್ನು ಮಾಡಿದ್ದೀರಿ. ಅಲ್ಲಿ ಅವರು ಟ್ರಾನ್ಸ್‌ಪೋರ್ಟೇಶನ್ ವಿಚಾರದಲ್ಲಿ ವಿಳಂಬ ಎನ್ನುವುದಕ್ಕೆ ಕಾರಣ ಕೊಡುತ್ತಾರೆ. ಹಾಗೆ ಅವರು ತಮ್ಮ ಪಾಲಿನ ಧಾನ್ಯವನ್ನು ಇಳಿಸಿಕೊಂಡು ಹೋಗಮೇಲೆಯೂ ಕೂಡ ಕೂಡಲೇ 3-4 ದಿನಗಳ ಕಾಲ ಅಂಗಡಿಯನ್ನು ತೆಗೆದುಕೊಂಡು ಕುಳಿತಿರುತ್ತಾರೆ. ಆ ಸಂದರ್ಭದಲ್ಲಿ ಬಡವರು ಹಣಕೊಟ್ಟು ಖರೀದಿ ಮಾಡುವ ಪರಿಸ್ಥಿತಿಯಲ್ಲಿ ಇರುವುದಿಲ್ಲ. ಬಡವರು ತಮ್ಮ ಮಜೂರಿ ಇತ್ಯಾದಿ ಕೂಲಿಯನ್ನು ಸಂಗ್ರಹ ಮಾಡಿ ಧಾನ್ಯವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಆದರೆ ನಿಮ್ಮ ಡೀಲರ್ ಏನಿದ್ದಾನೆ ಬರೀ 4 ದಿವಸ ದುಕಾನ್ ತೆರೆದಿರುತ್ತಾನೆ. 5ನೇ ದುಕಾನ್ ಸ್ಟಾಕ್ ಮುಗಿದುಹೋಯ್ತು ಎಂದು ಹೇಳಿ ಮನೆಗೆ ಹೋಗಿಬಿಡುತ್ತಾನೆ. ಇದ್ದಂಥ ಆಹಾರ ಧಾನ್ಯವೆಲ್ಲ ಅಂಗಡಿಯವರಿಗೆ ಪ್ರೈವೇಟ್‌ನವರಿಗೆ ಅಥವಾ ಯಾರಿಗೋ ಮಾರಿಬಿಡುತ್ತಾನೆ. ಈ ಪ್ರಾಕ್ಟೀಸ್ ಎಲ್ಲಾ ಕಡೆಗೂ ನಡೆದಿದೆ. ನಾವು ಜಾಗ್ರತಾ ಸಮಿತಿ ಮಾಡಿದ್ದೇವೆ ಅವರ ಮೂಲಕ ನಾವು ಚೆಕ್‌ಅಪ್ ಮಾಡುತ್ತೇವೆ ಎನ್ನುತ್ತೀರಿ,

ಆದರೆ ಆ ಜಾಗ್ರತ ಸಮಿತಿಗಳು ಎಲ್ಲೂ ಕೆಲಸ ಮಾಡುತ್ತಿಲ್ಲ ಇಲ್ಲಿಯವರೆಗೆ ತಮ್ಮ ಗಮನಕ್ಕೆ ಬಂದಿರಬೇಕು ಎಲ್ಲೂ ಒಂದು ಕೇಸ್ ಆಗಿಲ್ಲ, ಅಂತಹ ಒಂದು ಡೀಲರ್ ಅಥವಾ ದುಕಾನನ್ನು ಕ್ಯಾನ್ಸಲ್ ಮಾಡಿಸಿಲ್ಲ ಇಂತಹ ಪರಿಸ್ಥಿತಿಯಲ್ಲಿ ಈ ಜಾಗ್ರತಾ ಸಮಿತಿ ಸ್ವಲ್ಪವೂ ಕೆಲಸ ಮಾಡುತ್ತಿಲ್ಲ ಆಮೇಲೆ ಕೋಟಾ ಸಿಸ್ಟಮ್ ಏನು ಮಾಡಿದಿರಿ ಬಹುಶಃ ಹತ್ತು ವರ್ಷದಲ್ಲಿ ಯಾವ ಊರಿಗೆ ಎಷ್ಟು ಕೊಡ್ತೀರೋ ಅಷ್ಟೇ ಕೋಟಾ ಈಗಲೂ ಕೊಡ್ತಿರಿ ಎಲ್ಲೂ ಹೆಚ್ಚು ಮಾಡಿಲ್ಲ ಆದರೆ ಪಟ್ಟಣ ಪ್ರದೇಶದೊಳಗೆ ಬಹುಶಃ ಹೆಚ್ಚುಮಾಡಿರಬೇಕು. ಆದರೆ ಹಳ್ಳಿಯೊಳಗೆ ಏಳೆಂಟು ವರಷದ ಹಿಂದೆ ಏನು ಕೋಟ ಇತ್ತು, 4 ಚೀಲ ಸಕ್ಕರೆ ಎರಡು ಚೀಲ ಅಕ್ಕಿ, ಎರಡು ಚೀಲ ಗೋಧಿ ಎಂದು ಇತ್ತು ಅದೇ ಇವತ್ತಿನತನಕ ನಡೆದಿದೆ ಅದರ ಸಲುವಾಗಿ ಜನಸಂಖ್ಯೆ ಏನು ಭೆಳದಿದೆಯೋ ಅಥವಾ ಕಡಿಮೆಯಾಯ್ತೋ ಅಥವಾ ಅದರ ಕಡೆ ವಿಚಾರ ಮಾಡಿ ಜನಸಂಖ್ಯೆಗನುಗುಣವಾಗಿ ನೀವು ಕೋಟಾ ಮಾಡಿದರೆ ಒಳ್ಳೆಯದಾಗುತ್ತದೆ. ಮತ್ತೊಂದೇನೆಂದರೆ ಗೊಡೌನ್‌ಗಳು ಅಥವಾ ಸಪ್ಲೈಯಿಂಗ್ ಏಜೆನ್ಸಿ ಎಲ್ಲಿದೆಯೋ ಅಲ್ಲಿಂದ ಸೊಸೈಟಿಯವರಾಗಲಿ ಫೇರ್‌ಪ್ರೈಸ್‌ನವರಾಗಲಿ ಏನು ತಗೊಂಡುಹೋಗ್ತಾರೆ ಕೆಲವೊಂದು ಚೀಲಗಳು ಕೆಟ್ಟುಹೋಗಿ, ಕೆಟ್ಟ ಪರಿಸ್ಥಿತಿಯಲ್ಲಿರುತ್ತವೆ. ಅಂತಹ ಧಾನ್ಯ ತುಂಬುವ ಬೀಲಾನ್ ಕೆಟ್ಟು ಹೋಗಿದೆ ಎಂದು ರಿಪೋರ್ಟ್ ಮಾಡಿದಾಗಲೂ ಅದರ ಮೇಲೆ ಯಾರೂ ಆಕ್ಷನ್ ತಗೊಹಂಗಿಲ್ಲ, ಗೊಡೌನ್‌ನಲ್ಲೇ ಆಗುತ್ತದೆ ಅದು. ಯಾವುದರಿಂದ ಆಗುತ್ತಿರಬೇಕು?

ಆದರೆ ಯಾರು ಹೋಗಿ ರಿಪೋರ್ಟ್ ಮಾಡಿಬಂದರೂ ಕೂಡ ಗೊಡೌನ್‌ನವರ ಮೇಲೆ ಅಥವಾ ವೇರ್‌ಹೌಸ್‌ನವರ ಮೇಲೆ ಆಕ್ಷನ್ ತಗೊಂಡಿಲ್ಲ, ಯಾರು ಕಂಪ್ಲೇಂಟ್ ಕೊಡುತ್ತಾರೋ ಅವರನ್ನೇ ಮುರ್ಖರು ಅಂತ ಹೇಳಿ ಕಡೆಗಾಣಿಸುವಂತಹ ಪರಿಸ್ಥಿತಿ ನಾವು ನೋಡ್ತಾಯಿದ್ದೇವೆ. ಆಮೇಲೆ ಕಾರ್ಡ್ ಡಿಸ್ಟ್ರಿಬ್ಯೂಷನ್ ಪದ್ಧತಿಯಲ್ಲಿ ಅದು ತಹಸೀಲ್‌ನಿಂದಾಗಲಿ ಅಥವಾ ಅಲ್ಲಿ ಮುನಿಸಿಪಾಲಿಟಿ ವ್ಯವಸ್ಥೆಯಿಂದಾಗಲಿ ಇದು ಸರಿಯಾಗಿ ಸರ್ವೆ ಮಾಡಿ ಪ್ರತಿಯೊಬ್ಬರು ಯಾರು ಅರ್ಹರಾಗಿದ್ದಾರೆ. ಅಂತಹವರಿಗೆ ಕಾರ್ಡ್ ಕೊಡಬೇಕು. ಆದರೆ ಪರಿಸ್ಥಿತಿ ಏನಿದೆ? ಯಾರ ಮನೆಯಲ್ಲಿ ಕೇವಲ 5 ಜನ ಇದ್ದಾರೆ ಆದರೆ ಅವರ ಕಾರ್ಡಿನಲ್ಲಿ 10 ಜನ ಎಂದು ಬರೆದುಕೊಂಡಿದ್ದಾರೆ. ಇಂತಹವೆಲ್ಲ ಪರಿಸ್ಥಿತಿ ಇದೆ. 10 ಜನ ಎಂದು ಯಾರು ಬರೆದುಕೊಡ್ತಾರೆ ಅದು ನಿಜವೇ ಎಂದು ಅವರು ವಿಶೇಷವಾಗಿ ನೋಡೋಹಂಗಿಲ್ಲ, ಅವರು ಎಷ್ಟು ಹೇಳ್ತಾರೆ ಅಷ್ಟೇ ಬರಕೊಂಬರ್‍ತಾರೆ. ಅದರ ಸಲುವಾಗಿ ಇಂತಹ ಜಾಗದಲ್ಲಿ ಚೆಕ್‌ಅಪ್ ಮಾಡಿ ಅಂತಹ ಕಾರ್ಡ್‌ಗಳನ್ನು ರದ್ದುಮಾಡಬೇಕು. ಇಷ್ಟೆಲ್ಲ ಹೇಳಿ ಕಂದಾಯ ಇಲಾಖೆ ಕಡೆ ಒಂದು ವಿಷಯ ಗಮನ ಸೆಳೆಯುತ್ತೇನೆ ಸಚಿವರು. ಕಳೆದ ಸ್ವಾತಂತ್ರ್ಯ ಪೂರ್ವದಲ್ಲೇ ಆಯಿತೋ ಗೊತ್ತಿಲ್ಲ.

ನಮ್ಮ ಕಡೆ ಸಮಗ್ರವಾಗಿ ಒಂದು ಸರ್ವೆಯಾಗಿಲ್ಲ ಏಕೆಂದರೆ ಕಂದಾಯ ಇಲಾಖೆಯವರಿಗೆ ಪ್ರತಿಹಳ್ಳಿಯಲ್ಲಿ ರಸ್ತೆ ಎಷ್ಟಿವೆ, ನದಿನಾಲೆ ಎಷ್ಟಿವೆ ಕಾಲುವೆಕಟ್ಟೆ ಎಷ್ಟಿವೆ ಗೋಮಾಳ ಎಷ್ಟಿದೆ ಎನ್ನುವ ವಿಷಯ ಸಿಗುತ್ತಿಲ್ಲ ಅದಕ್ಕೆ ಸಮಗ್ರವಾಗಿ ಒಂದು ಸಲ ಸರ್ವೆ ಆಗಬೇಕು. ಇದು ಹಿಂದೆ ಬ್ರಿಟಿಷ್ ಕಾಲದಲ್ಲಿ ನಿಜಾಮ್ ಕಾಲದಲ್ಲಿ ಪದ್ಧತಿ ಇತ್ತು. ಪ್ರತಿ 30 ವರ್ಷಕ್ಕೆ ಒಂದು ಸಲ ಸರ್ವೆ ಆಗುತ್ತಿತ್ತು. ಇಡೀ ಗ್ರಾಮದ ಏರಿಯಾದ ಸರ್ಕಲ್‌ವೈಸ್ ಸರ್ವೆಯಾಗ್ತಿತ್ತು. ಆ ತರಹದ ಸರ್ವೆ ಈಗ ಮಾಡಬೇಕು. ಅಂದಾಗ ಮಾತ್ರ ನಮ್ಮ ಸರ್ಕಾರಿ ಭೂಮಿ ಎಷ್ಟಿದೆ, ಖಾಸಗಿ ಎಷ್ಟಿದೆ, ಒತ್ತುವರಿಭೂಮಿ ಎಷ್ಟಿದೆ ಎಂದು ಅರ್ಥವಾಗುತ್ತದೆ. ಇಷ್ಟು ಹೇಳಿ ಇಷ್ಟು ಸಮಯ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

+ ಶ್ರೀಮತಿ ಮಲ್ಲಾಜಮ್ಮ : (ಮಳವಳ್ಳಿ) : ಮಾನ್ಯ ಅಧ್ಯಕ್ಷಿಣಿಯವರೇ, ಇಂದಿನ

ಬೇಡಿಕೆಗಳು ಏನು ಇವೆ, ಇವುಗಳಲ್ಲಿ ಬೇಡಿಕೆ 23 ಆಹಾರ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಹಸಿರು ಕಾರ್ಡನ್ನು ಏನು ಹಂಚಿಕೆ ಮಾಡುತ್ತಿದ್ದಾರೆ. ಅದು ಸರಿಯಾಗಿ, ಸಮರ್ಪಕವಾಗಿ ಹಂಚಿಕೆಯಾಗಿಲ್ಲ, ಹಸಿರು ಕಾರ್ಡುಗಳನ್ನು ಹಂಚಿಕೆ ಮಾಡಲಿಕ್ಕೆ ಏನು ನಿಯಮಾವಳಿಗಳನ್ನು ಅನುಸರಿಸಿದ್ದಾರೆ, ಅದರಲ್ಲಿ ಹೆಚ್ಚಿನ ಪಾಲು ಶ್ರೀಮಂತರಿಗೆ ಸಿಕ್ಕಿದೆ. ಸಿಕ್ಕಬೇಕಾದಂಥ ಅರ್ಹತೆ ಹೊಂದಿರತಕ್ಕಂಥವರಿಗೆ ಸಿಕ್ಕಿಲ್ಲ, ಇದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ಏನು ಅಂದಿನ ವಿಲೇಜ್ ಅಕೌಂಟೆಂಟ್‌ಗಳು ಈ ಗ್ರಾಮಗಳಿಗೆ ಭೇಟಿ ಕೊಟ್ಟಾಗ ಆ ಗ್ರಾಮದಲ್ಲಿರತಕ್ಕಂಥ ಮುಖಂಡರ ಸಲಹೆಯ ಮೇರೆಗೆ ಸಮರ್ಪಕವಾಗಿ ಹಂಚಿಕೆಯಾಗದೇ ಇದರಿಂದ ಜನಸಾಮಾನ್ಯರಿಗೆ ಸಾಕಷ್ಟು ತೊಂದರೆಯಾಗಿದೆ. ಆ ರೀತಿ ಹಂಚಿಕೆ ಮಾಡಿರತಕ್ಕಂಥ ಕಾರ್ಡುಗಳನ್ನು ವಾಪಸ್ಸು ಪಡೆದು ಬೇರೆ ಕಾರ್ಡುಗಳನ್ನು ಹಂಚಿಕೆ ಮಾಡುವಂಥ ಒಂದು ಕಾರ್ಯಕ್ರಮವನ್ನು ತಾವು ಹಾಕಿಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಇದರಿಂದ ಬಡವರಿಗೆ ಸಿಗಬೇಕಾದಂಥ ಸೌಲಭ್ಯ ಸಿಕ್ಕದೇ, ಹಸಿರು ಕಾರ್ಡ್‌ನ್ನು ಯಾರಿಗೆ ಬೇಡವೋ ಅಂಥವರಿಗೆ ಎಲ್ಲಾ ತಾಲ್ಲೂಕುಗಳಲ್ಲಿಯೂ ಆಗಿದೆ ಎಂದು ನನ್ನ ಭಾವನೆ. ಅದರಲ್ಲಿಯೂ ನನ್ನ ತಾಲ್ಲೂಕಿನಲ್ಲಿ ಸಾಕಷ್ಟು ಹೆಚ್ಚಿನ ಅವ್ಯವಹಾರ ಆಗಿದೆ ಎನ್ನತಕ್ಕಂಥದ್ದನ್ನು ತಮ್ಮ ಗಮನಕ್ಕೆ ಸದನದ ಮೂಲಕ ತರುತ್ತೇನೆ.

ಗ್ರಾಮಾಂತರ ಪ್ರದೇಶದಲ್ಲಿ ಸೀಮೆಎಣ್ಣೆ ತೊಂದರೆ ಸಾಕಷ್ಟು ಇದೆ. ಈ ಸೀಮೆಎಣ್ಣೆ ತೊಂದರೆ ದಿನನಿತ್ಯದ ಒಂದು ಬೇಡಿಕೆಯಾದುದರಿಂದ ಇದನ್ನು ಸಮರ್ಪಕವಾಗಿ ಹಂಚಿಕೆಯಾಗುವಂತೆ ವ್ಯವಸ್ಥೆಯನ್ನು ತಾವು ಮಾಡಬೇಕು. ಈಗ ಏನು ನ್ಯಾಯಬೆಲೆ ಅಂಗಡಿಗಳನ್ನು ರದ್ದುಪಡಿಸಿ, ಸೊಸೈಟಿಗಳ ಮೂಲಕ ಹಂಚಿಕೆ ಮಾಡುವಂಥ ವ್ಯವಸ್ಥೆಯನ್ನು ಮಾಡಿದ್ದೀರಿ, ಸೊಸೈಟಿಯಲ್ಲಿ ಕೆಲವು ಸೊಸೈಟಿಗಳು ಡಿಫಾಲ್ಟರ್ ಆಗಿರುವುದರಿಂದ ಸುಮಾರು ಎರಡು ತಿಂಗಳು, ಮೂರು ತಿಂಗಳು ಈ ಒಂದು ಆಹಾರ ಪದಾರ್ಥಗಳನ್ನು ಲಿಫ್ಟ್ ಮಾಡದೇ ಜನಸಾಮನ್ಯರಿಗೆ ತೊಂದರೆಯಾಗಿವೆ. ಅದನ್ನೂ ಸಹ ನಾನು ತಮ್ಮ ಗಮನಕ್ಕೆ ಈಗಾಗಲೇ ಹಲವಾರು ಬಾರಿ ತೆಗೆದುಕೊಂಡು ಬಂದಿದ್ದೇನೆ. ಇದರ ಬಗ್ಗೆ ತಾವು ಏನು ಸರಿಯಾದ ಕ್ರಮವನ್ನು ತೆಗೆದುಕೊಂಡಿಲ್ಲ. ಜಿಲ್ಲಾಧಿಕಾರಿಗಳು, ತಾಲ್ಲೂಕಿನ ತಹಶೀಲ್ದಾರ್ ಆಹಾರ ಇಲಾಖೆಯವರ ಗಮನಕ್ಕೂ ಕೂಡ ತಂದಿದ್ದೇನೆ. ಈ ನಿರುದ್ಯೋಗಿಗಳಿಗೆ ನ್ಯಾಯಬೆಲೆ ಅಂಗಡಿಯನ್ನು ಕೊಡಬೇಕು ಎನ್ನತಕ್ಕಂಥ ಒಂದು ಉದ್ದೇಶ ಸರ್ಕಾರಕ್ಕೆ ಇತ್ತು, ಅದನ್ನು ಹಲವಾರು ಕಾರಣಗಳಿಂದ ವಜಾ ಮಾಡಿದ್ದೀರಿ. ಅದರ ಬಗ್ಗೆ ನಾನು ಪ್ರಶ್ನೆ ಮಾಡುತ್ತಿಲ್ಲ.

ಡಿಫಾಲ್ಟರ್ ಆಗಿರತಕ್ಕಂಥ ಸೊಸೈಟಿಗಳಿಗೆ ತಾವು ಕೊಡದೆ, ಆ ಗ್ರಾಮಗಳಲ್ಲಿ ಯಾರು ನಿರುದ್ಯೋಗಿ ಪದವೀಧರರು ಇದ್ದಾರೆ. ಅಂಥವರಿಗೆ ತಾವು ನ್ಯಾಯಬೆಲೆ ಅಂಗಡಿಯನ್ನು ಕೊಡಬೇಕು ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇವತ್ತು ಹಲವಾರು ಸೊಸೈಟಿಗಳು ಸಮರ್ಪಕವಾಗಿ ನಡೆಯುತ್ತಿವೆ, ಅಂಥ ಸೊಸೈಟಿಗಳಿಗೆ ಕೊಡದೆ ತಹಶೀಲ್ದಾರ್, ಮತ್ತೆ ಇಲಾಖೆಯ ಅಧಿಕಾರಿಗಳು, ಫುಡ್ ಅಸಿಸ್ಟೆಂಟ್ಸ್, ನ್ಯಾಯಬೆಲೆ ಅಂಗಡಿಗಳನ್ನು ಕೊಟ್ಟಿದ್ದಾರೆ. ಕೆಲವು ಕಡೆ ನ್ಯಾಯಬೆಲೆ ಅಂಗಡಿಗಳು ಸರಿಯಾಗಿ ನಡೆಯುತ್ತಿಲ್ಲ, ಇನ್ನು ಕೆಲವು ಕಡೆ ಸೊಸೈಟಿಗಳು ಸರಿಯಾಗಿ ನಡೆಯುತ್ತಿಲ್ಲ, ಅಂಥವುಗಳ ಬಗ್ಗೆ ನಾವು ಗ್ರಾಮಾಂತರ ಪ್ರದೇಶಗಳಲ್ಲಿ ಹೋದಾಗ, ಅವರ ನೋವನ್ನು ಅರಿತುಕೊಂಡು ನಾವು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ಕೂಡ ಸರಿಯಾಗಿ ಕ್ರಮ ತೆಗೆದುಕೊಳ್ಳುತ್ತಿಲ್ಲ. ಇದರ ಬಗ್ಗೆ ಸೂಕ್ತವಾದಂಥ ಒಂದು ಕ್ರಮವನ್ನು ತಾವು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಮತ್ತೆ ನಾನು ಇದೇ ಒಂದು ಸಂದರ್ಭದಲ್ಲಿ ಕಂದಾಯ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ.

ಹ್ಯಾಮ್ಲೆಟ್ಸ್ ವಿಲೇಜಸ್ ಎಂದು ಗ್ರಾಮಾಂತರ ಪ್ರದೇಶಗಳಲ್ಲಿ ಏನು ಇವೆ, ಅವುಗಳನ್ನು ರೆವಿನ್ಯೂ ವಿಲೇಜಸ್‌ಗಳನ್ನಾಗಿ ಮಾಡಬೇಕು.

ಹಾಗೆ ನೀವು ಪರಿವರ್ತನೆ ಮಾಡದಿದ್ದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಕಡು ಬಡವರಿಗೆ, ಸರ್ಕಾರದ ಸೌಲಭ್ಯ ಏನು ಸಿಗಬೇಕೋ ಅಂಥವರಿಗೆ ಸಿಗುತ್ತಿಲ್ಲ. ಕಾರಣವಿಷ್ಟೆ, ಹ್ಯಾಮ್ಲೆಟ್ಸ್ ವಿಲೇಜಸ್‌ಗಳಲ್ಲಿ ವಾಸ ಮಾಡತಕ್ಕಂಥ ಜನರು ಬುಡಕಟ್ಟು ಜನರು, ಹರಿಜನ ಗಿರಿಜನರು, ಅವರಿಗೆ ನ್ಯಾಯಬೆಲೆ ಅಂಗಡಿಗಳ ಸೌಲಭ್ಯಗಳನ್ನಾಗಲಿ ಅಥವಾ ಐಆರ್‌ಡಿಪಿ ಲೋನ್‌ಗಳಾಗಲಿ ಸಿಗುತ್ತಿಲ್ಲ. ಆದುದರಿಂದ ತಾವು ಈ ಬಗ್ಗೆ ಹೆಚ್ಚಿನ ಗಮನವನ್ನು ಹರಿಸಿ ಅತೀ ಶೀಘ್ರವಾಗಿ ಹ್ಯಾಮ್ಲೆಟ್ಸ್ ವಿಲೇಜಸ್‌ಗಳನ್ನು ರೆವಿನ್ಯೂ ಗ್ರಾಮಗಳನ್ನಾಗಿ ಪರಿವರ್ತಿಸಬೇಕೆಂದು ತಮ್ಮಲ್ಲಿ ನಾನು ಪ್ರಾರ್ಥಿಸಿಕೊಳ್ಳುತ್ತೇನೆ.ಇನ್ನು ಒತ್ತುವರಿ ಜಮೀನಿನ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ದರಖಾಸ್ತು ಜಮೀನನ್ನು ಏನು ಒತ್ತುವರಿ ಮಾಡಿಕೊಂಡಿದ್ದಾರೆ, ಅಂಥ ಜಮೀನುಗಳನ್ನು ಹರಿಜನ ಗಿರಿಜನರಿಗೆ ತಾವು ಸಾಗುವಳಿಗೆ ಈಗಾಗಲೇ ಹಂಚಿಕೆ ಮಾಡಿದ್ದೀರಿ.

ಅವರಿಗೆ ಸಾಗುವಳಿ ಮಾತ್ರ ಕೊಟ್ಟಿದ್ದೀರಿ ಅವರು ಖಾತೆಯನ್ನು ಮಾಡಿಸಿಕೊಂಡಿದ್ದಾರೆ. ಆದರೆ ಪೊಸಿಷನ್‌ನಲ್ಲಿ ಅವರು ಇಲ್ಲ. ಇದು ಎಲ್ಲಾ ಕಡೆಯಲ್ಲಿಯೂ ನಡೆಯುತ್ತಿದೆ. ಅದರಲ್ಲಿಯೂ ನಮ್ಮ ಜಿಲ್ಲೆಯಲ್ಲಿ, ನಮ್ಮ ತಾಲ್ಲೂಕಿನಲ್ಲಿ ಅತಿ ಹೆಚ್ಚಾಗಿ ನಡೆಯುತ್ತಿದೆ. ಅದನ್ನು ಬಿಡಿಸಿಕೊಡಲಿಕ್ಕೆ ಶಾಸನದ ಮೂಲಕ ಅಧಿಕಾರಿಗಳಿಗೆ ಸೂಚನೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಥವಾ ಬಿಡದೇ ಇರತಕ್ಕವರಿಗೆ ಕಠಿಣವಾದ ಶಿಕ್ಷೆಗೆ ಒಳಪಡಿಸಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ರೆವಿನ್ಯೂ ವಿಲೇಜ್ ಅಕೌಂಟೆಂಟ್‌ಗಳು ಖಾತೆ ಮಾಡುವಂತಹ ಸಂದರ್ಬದಲ್ಲಿ ಆರ್.ಟಿಸಿ.ಗಳನ್ನು ಬದಲಾವಣೆ ಮಾಡುತ್ತಿದ್ದಾರೆ.

ಇವರ ಆರ್.ಟಿ.ಸಿ. ಅವರಿಗೆ ಬರೆಯುವುದು, ಅವರ ಆರ್.ಟಿ.ಸಿ. ಇವರಿಗೆ ಬರೆಯುವುದು. ಇದರಿಂದ ಸಣ್ಣ ಹಿಡುವಳಿಗಾರರಿಗೆ ತೊಂದರೆಯಾಗುತ್ತಿದೆಯೇ ವಿನಹ ದೊಡ್ಡ ಹಿಡುವಳಿದಾರರಿಗೆ ತೊಂದರೆಯಾಗುತ್ತಿಲ್ಲ. ಆರ್.ಟಿ.ಸಿ.ಗಳನ್ನು ಹೆಚ್ಚು ಕಡಿಮೆ ಮಾಡಿ ಗ್ರಾಮಾಂತರದಲ್ಲಿರತಕ್ಕಂಥ ರೈತರನ್ನೆಲ್ಲಾ ಇವತ್ತು ಕೋರ್ಟ್ ಕಛೇರಿಗಳಿಗೆ ಹತ್ತಿಸುತ್ತಿದ್ದಾರೆ. ಇದರ ಬಗ್ಗೆ ನೇರ ಹೊಣೆಗಾರಿಕೆಯನ್ನು ಹೊತ್ತಿರತಕ್ಕಂತಹ ವಿಲೇಜ್ ಅಕೌಂಟೆಂಟರ ಬಗ್ಗೆ ಶಿಸ್ತಿನ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ಅವರಿಗೆ ಡಿಸ್‌ಮೀಸ್ ಮಾಡುವುದೇ ಉತ್ತಮ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಪ್ರತಿಹಳ್ಳಿಗಳಿಗೂ ಸ್ಮಶಾನದ ಅವಶ್ಯಕತೆ ಇದೆ. ಏಕೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ಕುಂಟೆ ಆಸ್ತಿ ಇಲ್ಲದೆ ಇರತಕ್ಕವರು ಬಹಳಷ್ಟು ಜನ ಇದ್ದಾರೆ. ಅದಕ್ಕೆ ಸರ್ಕಾರದ ಜಮೀನು ಏನಿದೆ ಅದನ್ನು ನೀವು ಸ್ಮಶಾನಕ್ಕೋಸ್ಕರ ಮೀಸಲು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಇನ್ನು ಸಾರಿಗೆ ಇಲಾಖೆಯ ಬಗ್ಗೆ ಹೇಳುವುದಾದರೆ, ನನ್ನ ಕ್ಷೇತ್ರದ ಹಲವಾರು ಭಾಗಗಳಿಗೆ ಬಸ್‌ನ ವ್ಯವಸ್ಥೆಯೇ ಇಲ್ಲ. ಇದುವರೆಗೂ 14 ಬಸ್‌ಗಳು ಮಾತ್ರ ಓಡಾಡುತ್ತಿವೆ. ಅದು ಮೇನ್ ರೋಡ್‌ನಲ್ಲಿ ಓಡಾಡುತ್ತಿವೆ. ಗ್ರಾಮಾಂತರ ಪ್ರದೇಶಕ್ಕೆ ಕೆಲವಾರು ಬಸ್‌ಗಳನ್ನು ಹಾಕಿದ್ದಾರೆ. ಆ ಬಸ್‌ಗಳು ಕೂಡ ನಿಗದಿತವಾದಂತಹ ಸಮಯಕ್ಕೆ ಸರಿಯಾಗಿ ಬರುತ್ತಿಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ಮತ್ತೆ ರೈತರಿಗೆ ಬಹಳ ಅನಾನುಕೂಲವಾಗುತ್ತಿದೆ. ವಿದ್ಯಾಭ್ಯಾಸ ಮಾಡುವ ಕೆಲವು ಗ್ರಾಮಾಂತರದ ಇಂಟಿರಿಯರ್ ವಿಲೇಜಸ್‌ಗಳಿಗೆ ಬಸ್‌ನ ಅವಶ್ಯಕತೆ ಇಲ್ಲದೆ ಎಷ್ಟೋ ಹೆಣ್ಣುಮಕ್ಕಳು, ವಿದ್ಯಾರ್ಥಿಗಲು ವಿದ್ಯಾಭ್ಯಾಸವನ್ನು ಬಿಡುವಂತಹ ಒಂದು ಸಂದರ್ಭ ಬಂದಿದೆ. ಮಾನ್ಯ ಮಂತ್ರಿಗಳು ಅವಶ್ಯಕವಾಗಿ ನಮ್ಮ ಕಡೆಗಳಿಗೆ ಬಸ್ಸನ್ನು ಹಾಕಿಸಿಕೊಡಬೇಕೆಂದು ನಾನು ಕೇಳುತ್ತಾ, ತಮ್ಮ ತಲಾಖೆಯ ಬೇಡಿಕೆಗಳನ್ನು ನಾನು ಬೆಂಬಲಿಸುತ್ತಾ ಮಾನ್ಯ ಅಧ್ಯಕ್ಷರಿಗೆ

ವಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಆರ್.ವಿ. ದೇಶಪಾಂಡೆ : (ಹಳಿಯಾಳ) ಮಾನ್ಯ ಅಧ್ಯಕ್ಷರೆ, ನನಗೆ ಹೆಚ್ಚು ಸಮಯಬೇಕಾಗಿಲ್ಲ. ಈಗಾಗಲೇ ನಾನು ಎರಡು-ಮೂರು ಬೇಡಿಕೆಯ ಮೇಲೆ ಮಾತನಾಡಿದ್ದೇನೆ. ಬಹಳ ಸಂಕ್ಷಿಪ್ತವಾಗಿ ಕೆಲವು ವಿಚಾರಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಕಂದಾಯ ಇಲಾಖೆಯ ಬಗ್ಗೆ ಹೇಳಬೇಕಾದರೆ ಬಹಳ ಸಂತೋಷವಾಗುತ್ತದೆ. ಏಕೆಂದರೆ, ಬಹಳ ಏಬಲ್ ಸಚಿವರು ಇಲಾಖೆಯನ್ನು ಹೊತ್ತಿದ್ದಾರೆ. ಕಂದಾಯ ಇಲಾಖೆ ಎಷ್ಟು ಬಿಗಿ ಇರಬೇಕೋ ಅಷ್ಟು ಇಲ್ಲ. ಇದಕ್ಕೆ ಮುಖ್ಯವಾದ ಕಾರಣವೇನೆಂದರೆ ಮುಖ್ಯವಾಗಿ ಜಿಲ್ಲಾಧಿಕಾರಿಗಳು ಆರು ತಿಂಗಳು, ಒಂದು ವರ್ಷ ಒಂದು ಕಡೆ ಇರುವುದಿಲ್ಲ. ಮಾನ್ಯ ವೀರೇಂದ್ರಪಾಟೀಲರು ಬಂದಾಗ ಜಿಲ್ಲಾದಿಕಾರಿಗಳನ್ನು ಛೇಂಜ್ ಮಾಡಿದರು. ಬಂಗಾರಪ್ಪನವರು ಬಂದಾಗ ಪುನಃ ಛೇಂಜ್ ಮಾಡಿದರು. ಹೀಗಾಗಿ ಅಡ್ಮಿನಿಸ್ಟ್ರೇಷನ್ ಮೇಲೆ ಹಿಡಿತ ಇಲ್ಲ. ಅಷ್ಟೇ ಅಲ್ಲ. ಎಷ್ಟೋಕಡೆ ತಹಶೀಲ್ದಾರರು ಇಲ್ಲ. ನನ್ನ ಮತಕ್ಷೇತ್ರವಾದ ಮೂರುಗೋಡ್‌ನಲ್ಲಿ ನಿನ್ನೆ ತಹಶೀಲ್ದಾರರ್ ಜಾಯಿನ್ ಆಗಿದ್ದಾರೆ. ಯಾವ ಪ್ರಕಾರ ಕೆಲಸ ನಡೆಯುತ್ತಿದೆ ಎಂಬುದನ್ನು ಮಾನ್ಯ ಸಚಿವರು ಗಮನಿಸಬೇಕು. ನಾನು ನಿಮ್ಮ ಮೇಲೆ ಅಪಾದನೆ ಮಾಡುತ್ತಿಲ್ಲ. ಒಂದು ಅಡ್ಮಿನಿಸ್ಟ್ರೇಷನ್‌ನಲ್ಲಿ ಬಿಗಿ ತರಬೇಕಾದರೆ ತಾವು ನಿರ್ಧಿಷ್ಟವಾದಂತಹ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇವೊತ್ತು ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಮಳೆಯಾಗಿ ಸಾಕಷ್ಟು ಸಮಸ್ಯೆಗಳು ನಿರ್ಮಾಣವಾಗಿದೆ, ಎಷ್ಟೋ ಜನ ಜೀವವನ್ನು ಕಳೆದುಕೊಂಡಿದ್ದಾರೆ. ಪ್ರೈವೇಟ್ ಪ್ರಾಪರ್ಟಿಗಳು ಡ್ಯಾಮೇಜ್ ಆಗಿವೆ. ಪಬ್ಲಿಕ್ ಪ್ರಾಪರ್ಟಿಸ್‌ಗಳು ಡ್ಯಾಮೇಜ್ ಆಗಿವೆ. ಸರ್ಕಾರದಿಂದ ಹಣ ಬಿಡುಗಡೆ ಮಾಡಿಲ್ಲ ಎಂದು ಹೇಳುವುದಿಲ್ಲ. ಸರ್ಕಾರದ ಹಣ ಬಿಡುಗಡೆಯಾಗಿದೆ.

ಹತ್ತು ಕೋಟಿ ರೂ.ಗಳ ಲುಕ್ಸಾನ. ಆದರೆ, ೫ ಲಕ್ಷ ೧೦ಲಕ್ಷ ರೂ.ಗಳ ಬಿಡುಗಡೆಯಾಗಿದೆ. ಕಾಂಪೆನ್‌ಸೇಷನ್ ಯಾವ ರೀತಿ ಕೊಡಬೇಕು, ಯಾವ ಪ್ರಕಾರ ಕೆಲಸ ಮಾಡಬೇಕು ಎನ್ನುವುದು ಅಧಿಕಾರಿಗಳಿಗೆ ತಿಳಿಯುತ್ತಿಲ್ಲ. ಅಧಿಕಾರಿಗಳನ್ನು ಕೇಳಿದರೆ, ಅವರು ಹೇಳುತ್ತಾರೆ, ನಾವು ಏನು ಮಾಡಬೇಕು ಸ್ವಾಮಿ, ನಮ್ಮ ಹತ್ತಿರ ಏನು ಹಣ ಇದೆ ಅದನ್ನು ಬಿಡುಗಡೆ ಮಾಡುತ್ತೇವೆ ಎಂದು ಹೇಳುತ್ತಾರೆ. ಸರ್ಕಾರ ಯಾವುದೇ ಒಂದು ಪರಿಸ್ಥಿತಿಯಲ್ಲಿ ಕುಡಿಯುವ ನೀರಿನ ಅಭಾವವಾಗಲೀ, ಫ್ಲಡ್‌ನಿಂದ ಪಬ್ಲಿಕ್ ಪ್ರಾಪರ್ಟಿಯಾಗಲೀ, ಪ್ರೈವೇಟ್ ಪ್ರಾಪರ್ಟಿಯಾಗಲೀ ಡ್ಯಾಮೇಜ್ ಆದಾಗ, ಆ ರಸ್ತೆ ರಿಪೇರಿ ಮಾಡುವುದಕ್ಕೆ, ಪ್ರಾಪರ್ಟಿ ರಿಪೇರಿ ಮಾಡುವುದಕ್ಕೆ ಎಷ್ಟು ಹಣ ನಿಜವಾಗಿ ಬೇಕಾಗುತ್ತದೆ ಅದನ್ನು ನೋಡಿ ಹಣವನ್ನು ಬಿಡುಗಡೆ ಮಾಡಬೇಕಾಗುತ್ತದೆ. ಡ್ಯಾಮೇಜ್ ಆಗಿರುವಂಥ ಪ್ರೈವೇಟ್ ಪ್ರಾಪರ್ಟಿಗೆ ಮಾರ್ಕೆಟ್ ವ್ಯಾಲ್ಯೂ ಎಷ್ಟಿದೆ ಎಂಬುದನ್ನು ಸರಿಯಾಗಿ ನೋಡಿಕೊಂಡು ಹಣವನ್ನು ಬಿಡುಗಡೆ ಮಾಡಬೇಕಾಗಿದೆ, ಹೀಗೆ ಮಾಡದೇ ಸುಮ್ಮನೆ ಒಂದು ಜಿಲ್ಲೆಗೆ ಇಷ್ಟು ಹಣವನ್ನು ಕೊಟ್ಟಿದ್ದೇವೆ ಅಂತ ಹೇಳಲಿಕ್ಕೆ ಹಣವನ್ನು ಬಿಡುಗಡೆ ಮಾಡಿದರೆ ತಪ್ಪಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಶ್ರೀಮಾನ್ ದೇಶಪಾಂಡೆಯವರು ಮಾತನಾಡುವಾಗ ನಿಜವಾಗಿ ಎಲ್ಲಾ ಫ್ಯಾಕಟ್ಸ್‌ನ್ನು ತಿಳಿದುಕೊಂಡು ಮಾತನಾಡುತ್ತಾರೆ ಎನ್ನುವುದು ನನ್ನ ಭಾವನೆ ಏಕೆಂದರೆ ಅವರು ಮಂತ್ರಿಯಾಗಿ ಕೆಲಸ ಮಾಡಿದ್ದಾರೆ, ಮತ್ತು ಬಹಳ ಜವಾಬ್ದಾರಿಯಿಂದ ಮಾತನಾಡುತ್ತಾರೆ ಎಂದು ನನಗೆ ನಂಬಿಕೆ ಇದೆ. ಈಗ ಮಾರ್ಕೆಟ್ ವ್ಯಾಲ್ಯೂ ಕಾಂಪೆನ್‌ಸೇಷನ್ ಬಗ್ಗೆ ಹೇಳುವುದಾದರೆ ನಾನು ಬಂದು ಒಂದು ವರ್ಷವಾಗಿರಬಹುದು, ೬ ತಿಂಗಳು ಆಗಿರಬಹುದು, ಇದರ ಹಿಂದೆ ೩೦-೪೦ ವರ್ಷಗಳಿಂದ ಮಾರ್ಕೆಟ್ ವ್ಯಾಲ್ಯೂ ಪ್ರಕಾರವೇ ಕಾಂಪೆನ್‌ಸೇಷನ್ ಕೊಡುತ್ತಿದ್ದರು. ಎಲ್ಲಾ ರೋಡ್ಸ್, ಕೆಲಸ ರಿಪೇರಿ ಕೆಲಸವನ್ನು ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರೇ

ಮಾಡುತ್ತಿದ್ದರು. ಎಂದು ಹೇಳಿದ ತಾವು ಹೇಳಿದ್ದು ನಾನು ಕೇಳುತ್ತೇನೆ, ಇದು ತಪ್ಪು ಎಂದು ನಾನು ಕ್ಷಮೆ ಕೇಳುತ್ತೇನೆ. ಒಂದು ವೇಳೆ ನಿಮಗಿಂತಲೂ ಸ್ವಲ್ಪ ಹೆಚ್ಚಿಗೆ ಮಾಡಿದ್ದರೆ ನೀವು ಅಪ್ರಿಶಿಯೇಟ್ ಮಾಡುತ್ತೀರಾ?

ಶ್ರೀ ಆರ್.ವಿ. ದೇಶಪಾಂಡೆ : ನಮ್ಮ ಸರ್ಕಾರ ಇದ್ದಾಗ ನಾವು ಮಾರ್ಕೆಟ್ ವ್ಯಾಲ್ಯೂ ಕಾಂಪೆನ್‌ಸೇಷನ್ ಕೊಟ್ಟಿದ್ದೇವೆಂದು ನಾನು ಹೇಳಲಿಲ್ಲ, ನಾನು ಏನು ಹೇಳುತ್ತಿದ್ದೆ ಎಂದರೆ, ಇದೊಂದು ಜೆನ್ಯೂಯಿನ್ ಪ್ರಾಬ್ಲಮ್ ಕಳೆದ ಎಲೆಕ್ಷನ್ ಸಂದರ್ಭದಲ್ಲಿ ಭಟ್ಕಳದಲ್ಲಿ ಕಮ್ಯೂನಲ್ ಕ್ಲಾಶ್ ಆಯಿತು. ೨-೩ ಜನ ಸತ್ತು ಹೋದರು, ಲಕ್ಷಾಂತರ ರೂಪಾಯಿಗಳ ಪ್ರಾಪರ್ಟಿ ಡ್ಯಾಮೇಜ್ ಆಯಿತು, ಒಂದು ಕಾರನ್ನು ಸುಟ್ಟರು. ಇದಕ್ಕೆ ಸರ್ಕಾರದಿಂದ ಏನು ಕಾಂಪೆನ್‌ಸೇಷನ್ ಕೊಟ್ಟಿದ್ದೇವೆ? ನಿಜವಾಗಿ ಅಲ್ಲಿಯ ಡಿಸಿಯವರು ಬಹಳ ಒಳ್ಳೆಯವರು.

ನಾನು ಅಲ್ಲಿಯೇ ಇದ್ದೆ. ಅವರು ತಕ್ಷಣ ಬಂದರು. ಸರ್ಕಾರ ತಕ್ಷಣ ಆದೇಶ ಮಾಡಿತು. ಎಲ್ಲಿ ಲಕ್ಷ ರೂ.ಗಳ ಡ್ಯಾಮೇಜ್ ಆಗಿದೆ ಅಲ್ಲಿ ಎರಡು ಸಾವಿರ ಮೂರು ಸಾವಿರ ರೂಪಾಯಿಗಳ ಕಾಂಪೆನ್‌ಸೇಷನ್ ಕೊಡಲಾಯಿತು. ನಾನು ನಮ್ಮ ಸರ್ಕಾರ, ನಿಮ್ಮ ಸರ್ಕಾರ ಎಂದು ಹೇಳಲಿಲ್ಲ, ಇಂಥ ಒಂದು ಪರಿಸ್ಥಿತಿ ನಿರ್ಮಾಣವಾದಾಗ, ಫ್ಲಡ್ ಆದಾಗ, ಸ್ಕೇರ್‌ಸಿಟಿ ಆದಾಗ, ರಯಟಿಂಗ್ ಆದಂಥ ಸಂದರ್ಭದಲ್ಲಿ ಸರ್ಕಾರ ಪ್ರಾಕ್ಟಿಕಲ್ ವ್ಯೂ ತೆಗೆದುಕೊಂಡು ಸಹಾಯ ಮಾಡಿದರೆ ಮಾತ್ರ ಅದು ಸಹಾಯವಾಗುತ್ತದೆ, ಇಲ್ಲದಿದ್ದರೆ ಅದು ಸಹಾಯವಾಗುವುದಿಲ್ಲವೆಂದು ನಾನು ಹೇಳಬಯಸುತ್ತೇನೆ. ನಾನು ನಿಮಗೆ ಒಂದು ಸಲಹೆ ಮಾಡಬಯಸುತ್ತೇನೆ. ನಾವು ಮಾಡಿರುವುದು ಬೇಡ, ನೀವು ನಿಮ್ಮ ಸರ್ಕಾರ ಇರುವಂಥ ಕಾಲದಲ್ಲಿ ಹಳೇ ಒಂದು ಸ್ಕೇಲ್ ಇದೆ, ಈ ಕಾಂಪೆನ್‌ಸೇಷನ್ ರೇಟ್ಸ್‌ನ್ನು ಚೇಂಜ್ ಮಾಡಬೇಕು. ಇದು 25-30 ವರ್ಷಗಳ ಹಳೆಯ ರೇಟ್ಸ್‌ನ್ನೇ ಕೊಟ್ಟರೆ ಅದು ನ್ಯಾಯವೇ. ಮಾನ್ಯ ಮುಖ್ಯ ಮಂತ್ರಿಯವರು ನಾನು ಆರು ತಿಂಗಳ ಹಿಂದೆ ಇದರ ಬಗ್ಗೆ ಸಲಹೆ ಮಾಡಿದಾಗ ಒಪ್ಪಿಕೊಂಡರು, ಅದು ಆದೇಶವಾಯಿತೋ ಇಲ್ಲವೋ ಗೊತ್ತಿಲ್ಲ.

ಬಡವರ ಮನೆ ಸುಟ್ಟಿದ್ದರೆ ಮೂರು ನೂರು ರೂಪಾಯಿಗಳನ್ನು ಕಾಂಪೆನ್‌ಸೇಷನ್ ಕೊಡುತ್ತಿದ್ದಾರೆ. ಗುಡಿಸಲಾಗಲೀ ಮನೆಯಾಗಲೀ ಸುಟ್ಟರೆ ಮೂರುನೂರು ರೂಪಾಯಿಗಳನ್ನು ಕೊಡುವುದು, ಫಾರೆಸ್ಟ್ ಡಿಪಾರ್ಟಮೆಂಟ್‌ನಿಂದ ಹೋದರೆ 300 ರೂ.ಗಳು, ಏಸಿಯತನಕ ಹೋದರೆ 500 ರೂಪಾಯಿಗಳು ಸಿಗುತ್ತದೆ. ಇದು ನೀವು ಮಾಡಿದ್ದಲ್ಲ, ನಮ್ಮ ಕಾಲದಿಂದ ಇದೆ. ಬ್ರಿಟಿಷರ ಕಾಲದಲ್ಲಿ ಇದ್ದಂಥ ವ್ಯವಸ್ಥೆಯನ್ನೇ ನಾವು ಮುಂದುವರಿಸಿಕೊಂಡು ಹೋಗಬೇಕೇ ಅಥವಾ ಏನಾದರೂ ಬದಲಾವಣೆ ಮಾಡಬೇಕೇ ಎನ್ನುವುದನ್ನು ನಾವು ನೀವು ವಿಚಾರ ಮಾಡಬೇಕಾಗಿದೆ. ಪ್ರಾಕ್ಟಿಕಲ್ ಅಪ್ರೋಚ್ ತೆಗೆದುಕೊಳ್ಳಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಯವರು ಒಪ್ಪಿಕೊಂಡರು, ಅವರು ಹೇಳಿದರು ಹೌದು ದೇಶಪಾಂಡೆಯವರೇ ನಿಮ್ಮ ಸಲಹೆ ಒಳ್ಳೆಯದು, ಇದನ್ನು ಗಮನಕ್ಕೆ ತೆಗೆದುಕೊಳ್ಳುತ್ತೇವೆಂದು ಕಾಂಪೆನ್‌ಸೇಷನ್ ಹೆಚ್ಚು ಮಾಡಬೇಕೆಂದು ಅವರು ಹೇಳಿದರು. ಈ ಕಾಂಪೆನ್‌ಸೇಷನ್ ಹೆಚ್ಚು ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ, ಹೆಚ್ಚು ಮಾಡದಿದ್ದರೆ, ಅದನ್ನು ಹೆಚ್ಚು ಮಾಡಲು ಮಾನ್ಯ ಕಂದಾಯ ಸಚಿವರು ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ರಿಪ್ಲೈ ಕೊಡುವಾಗ ಈ ವಿಷಯದ ಬಗ್ಗೊ ಹೇಳಬೇಕು.

ಇವತ್ತು ಕಂದಾಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಂದು ಒಳ್ಳೆಯ ಕೆಲಸವಾಗುತ್ತಿದೆ ನಿಮ್ಮ ಕಾಲದಲ್ಲಿ, ಇದಕ್ಕಾಗಿ ನಿಮ್ಮ ಸರ್ಕಾರವನ್ನು ಅಭಿನಂದಿಸಬೇಕಾಗಿದೆ, ಇದು ನಮ್ಮ ಕಾಲದಲ್ಲೇ ಆಗಬೇಕಿತ್ತು, ಇದಕ್ಕೆ ಬಿಲ್‌ನ್ನು ಕೂಡ ನಾವು ರೆಡಿ ಮಾಡಿದೇವು. ಆದರೆ ನಮಗೆ ಆ ಭಾಗ್ಯ ಇರಲಿಲ್ಲ, ಇದು ನಿಮ್ಮ ಕಾಲದಲ್ಲಿ

ಆಗಿದೆ. ಅದು ಏನೆಂದರೆ, ಕಂದಾಯ ಭೂಮಿಯನ್ನು ಯಾರು ಬಡ ಜನ ಅಕ್ರಮ ಸಾಗುವಳಿ ಮಾಡಿದ್ದಾರೆ ಅದನ್ನು ಸಕ್ರಮ ಮಾಡುವಂಥ ಕೆಲಸ, ಬಹಳ ಒಳ್ಳೆಯ ಕೆಲಸ ಇದು. ತಾವು ಮಾಡಿದ್ದೀರಿ. ಅದರ ಬಗ್ಗೆ ಇವತ್ತು ಅಪ್ಲಿಕೇಷನ್ ಕರೆಯಲಾಗಿದ್ದು ಕಡೆಯ ದಿನ ಈ ತಿಂಗಳ ಮೂವತ್ತನೆಯ ತಾರೀಖು. ಅಪ್ಲಿಕೇಷನ್ಸ್ ಕೊಡುತ್ತಿದ್ದಾರೆ, ಸ್ವಲ್ಪ ಜನರು. ಆದರೆ ಇದರಲ್ಲಿ ಒಂದು ದೊಡ್ಡ ಅವ್ಯವಹಾರ ನಡೆಯುತ್ತಿದೆ. ಇದು ಮಾನ್ಯ ಸಚಿವರ ಗಮನಕ್ಕೆ ಬಂದಿರಬಹುದು. ಇವತ್ತು ಕೆಲವು ರಾಜಕೀಯ ಪಕ್ಷಗಳು, ಕೆಲವು ಅಧಿಕಾರಿಗಳು, ಇದರ ಒಂದು ಲಾಭವನ್ನು ಪಡೆದುಕೊಳ್ಳಲು, ಕಂದಾಯ ಭೂಮಿ ಮಾತ್ರವಲ್ಲದೇ, ಯಾರು ಅರಣ್ಯ ಭೂಮಿಯನ್ನು ಅತಿಕ್ರಮ ಮಾಡಿದ್ದಾರೆ, ಅವರಿಗೂ ಅರ್ಜಿಯನ್ನು ಸಲ್ಲಿಸುವುದಕ್ಕೆ ಹೇಳುತ್ತಿದ್ದಾರೆ. ಇವತ್ತು ನಮ್ಮ ಜಿಲ್ಲೆಯಲ್ಲಿ ಯಲ್ಲಾಪುರ ತಾಲ್ಲೂಕಿನಲ್ಲಿ ಒಂದು ಅಪ್ಲಿಕೇಷನ್ ಫಾರಂನ ಬೆಲೆ 100ರಿಂದ 150 ರೂ.ಗಳಾಗಿದೆ ಇನ್ನು ನಾನು ಮಾನ್ಯ ಸಚಿವರ ಗಮನಕ್ಕೆ ತಂದೆ..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಇರಲಿಲ್ಲ, ಕ್ವೆಶ್ಚನ್ ಅವರ್‌ನಲ್ಲಿ ನಮ್ಮ ಅನೇಕ ಮಾನ್ಯ ಮಿತ್ರರು ಇದನ್ನು ರೈಸ್ ಮಾಡಿದರು. ಶ್ರೀ ರಾಮಸ್ವಾಮಿಯವರಿಗೆ ಮತ್ತು ಶ್ರೀ ಕೆ.ಎಚ್. ರಂಗನಾಥ್ ಅವರಿಗೆ ನಾನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ಈ ಕಟ್ ಆಫ್ ಡೇಟ್ ಏನಿದೆ? ಈ ಕಟ್ ಆಫ್ ಡೇಟ್ ಮೇಲೆ ಯಾವ ಅಪ್ಲಿಕೇಶನ್ಸ್ ಕೂಡ ಎಂಟರ್‌ಟೇನ್‌ಮೆಂಟ್ ಮಾಡಬಾರದು ಮತ್ತು ನಮ್ಮ ಕಟ್ ಆಫ್ ಡೇಟ್ ಮೀರಿ ಯಾರಾದರೂ ಕಲ್ಟಿವೇಟ್ ಮಾಡಿದರೆ, ಅದನ್ನು ಇವಿಕ್ಟ್ ಮಾಡಬೇಕು. ಇವಿಕ್ಟ್ ಮಾಡದೆಹೋದರೆ ತಹಶೀಲ್ದಾರ್ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ಅವರ ಮೇಲೂ ಕೂಡ ಕ್ರಿಮಿನಲ್ ಕೇಸ್ ಹಾಕಬೇಕಾದಂಥ ಪರಿಸ್ಥಿತಿ ಬರುತ್ತದೆ. ಯಾರು ಎನ್‌ಕ್ರೋಚ್ ಮಾಡಿರುತ್ತಾರೆ ಅವರ ಮೇಲೆ ಕೇಸ್ ಹಾಕಬೇಕಾಗುತ್ತದೆ. ಇದನ್ನು ನಾನು ಕ್ವೆಶ್ಚನ್ ಅವರ್‌ನಲ್ಲಿ ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ಇದೇ ರೀತಿ ಎಲ್ಲಾ ಕಡೆ ಫಾರೆಸ್ಟ್ ಲ್ಯಾಂಡ್, ಟ್ಯಾಂಕ್ ಬೆಡ್ಸ್, ಗುಂಡು ತೋಪುಗಳು ಮತ್ತು ಯಾವುದುನಮ್ಮ ರೆಕಾರ್ಡ್‌ನಲ್ಲಿ ಅಂದರೆ, ರೆವಿನ್ಯೂ ಲ್ಯಾಂಡ್ ಆಕ್ಟ್ ಕೆಳಗೆ ನಾವು ಮಂಜೂರು ಮಾಡುವುದಕ್ಕೆ ಸಾಧ್ಯವಿಲ್ಲವೋ ಅಂಥ ಜಮೀನನ್ನು ಕೂಡ ಅವರು ಇವೊತ್ತು ಉಳುಮೆ ಮಾಡುತ್ತಿದ್ದಾರೆ, ಎನ್‌ಕ್ರೋಚ್ ಮಾಡುತ್ತಿದ್ದಾರೆ, ಇರ್‌ರೆಸ್‌ಪೆಕ್ಟಿವ್ ಆಫ್ ಪಾರ್ಟಿಸ್. ನಾನು ,ನಮ್ಮ ಪಾರ್ಟಿಯವರು ಮಾಡುತ್ತಾರೆ, ನಿಮ್ಮ ಪಾರ್ಟಿಯವರು ಮಾಡುತ್ತಾರೆಂದು ಹೇಳುವುದಿಲ್ಲ. ಇವೊತ್ತಲ್ಲ ನಾಳೆ ಮಾಡುತ್ತಾರೆ, ಇಷ್ಟೆಲ್ಲಾ ..20 ವರ್ಷದ್ದೂ ‒ಮಾಡಿದ್ದಾರೆ,

ಈಗ ಮಾಡುವುದಿಲ್ಲವೆ? ನೋಡೋಣ. ಮತ್ತೆ ಮುಂದೆ ಯಾವ ಸರ್ಕಾರ ಬರುತ್ತದೋ, ಅವರು ಏನು ಮಾಡುತ್ತಾರೋ ಆ ಪದ್ಧತಿ ಕೂಡ ಇದೆ. ಅವರಿಗೆ ನಾನು ಸ್ಪಷ್ಟಪಡಿಸಿದ್ದೇನೆ. 'ಸಿ' ಅಂಡ್ 'ಡಿ' ಕ್ಲಾಸ್ ಲ್ಯಾಂಡ್ಸ್ ಮತ್ತು ಅನ್-ಅಥರೈಸ್ಡ್ ಕಲ್ಟಿವೇಟ್ ಮಾಡತಕ್ಕಂಥಾದ್ದು , ಕಾನೂನು ಪ್ರಕಾರ ಯಾವುದಕ್ಕೆ ನಾವು ಒಪ್ಪಿಗೆ ಕೊಟ್ಟಿದ್ದೇವೆ. ಅದು ಮಾತ್ರ ರೆಗ್ಯುಲರೈಸ್ ಮಾಡಬೇಕು. ಅದಕ್ಕೆ ಮೀರಿ ಏನಾದರೂ ತಹಶೀಲ್ದಾರ್ ಆಗಲಿ ಅಥವಾ ಜನರಾಗಲೀ ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡು ಮಾಡಿದರೆ ಅದಕ್ಕೆ ಎವಿಕ್ಷನ್ ಮಾಡುತ್ತೇವೆ ಮತ್ತು ಕಾನೂನು ಪ್ರಾಕರ ಪನಿಷ್‌ಮೆಂಟ್ ಕೂಡ ಮಾಡುತ್ತೇವೆ ಎಂಬ ಮಾತನ್ನು ಸದನದ ಮುಖಾಂತರ ನಾನು ಹೇಳಬಯಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಈಗ ನಾನು ಏನು ಹೇಳುತ್ತಿದ್ದೇನೆ, ಇದು ಒಂದು ಕಡೆಯಾಯಿತು. ಕಟ್ ಆಫ್ ಡೇಟ್ ಅನ್ನು ಸ್ಟ್ರಿಕ್ಟ ಆಗಿ ಫಾಲೋ ಮಾಡಲೇಬೇಕು.

ನಾನು ಒಪ್ಪಿಕೊಳ್ಳುತ್ತೇನೆ. ಇವೊತ್ತು ಏನಾಗುತ್ತದೆಂದರೆ, ಆ ಜದನರು ಅನರಕ್ಷಸ್ಥರು, ಬಡ ಜನರು, ಅವರಿಗೆ ಉತ್ತೇಜನ ಕೊಟ್ಟು. ಫಾರೆಸ್ [illegible]

ತೆಗೆದುಕೊಳ್ಳುತ್ತಿದ್ದಾರೆ. ಈ ಸಮಿತಿಯ ಛೇರ್ಮನ್ ಶಾಸಕರಾಗಿದ್ದಾರೆ. ಹಾಗಾಗಿ, ಅಪ್ಲಿಕೇಶನ್ಸ್ ರಿಜೆಕ್ಟ್ ಮಾಡುವ ಕೆಲಸ ನಿಮ್ಮ ಕೈಯಲ್ಲೇ ಆಗುವುದು. ಇದೊಂದು ಪಾಪ. ಏಕೆಂದರೆ, ಕೆಲವು ಜನ ಇವೊತ್ತು ನನ್ನ ಕ್ಷೇತ್ರದಲ್ಲಿ ಆಯಿತು. ಪಾಠ ಕಲಿಸೋಣ, ಅರ್ಜಿ ಹಾಕಿ ಎಂದು ಹೇಳುತ್ತಾರೆ. ಆ ಎರಡು ಅರ್ಜಿಯನ್ನು ಹಾಕಿಸಿ ರಿಜೆಕ್ಟ್ ಮಾಡಿಸಿ....

ಶ್ರೀ ಆರ್.ಎನ್. ನಾಯಕ್ : ಶಾಸಕರು ಛೇರ್ಮನ್ ಆಗಿದ್ದರೆ, ನೀವು ಕಾನೂನನ್ನು ಮಾಡುವವರು ನೀವು ಕಲಿಸಿದ್ದೀರಾ? ನೀವು ಬಹಳ ಗೌರವದಿಂದ ರಿಜೆಕ್ಟ್ ಮಾಡಬೇಕು. ಏತಕ್ಕ ನಿಮ್ಮ ಮೇಲೆ ಆಪಾದನೆ ಬರುತ್ತದೆ? ನೋಡೋಣ, ನಾನು ಛೇರ್ಮನ್‌ಗಿರಿ ಮಾಡಿ ತೋರಿಸುತ್ತೇನೆ, ಏತಕ್ಕೆ ಆಗುವುದಿಲ್ಲ?

ಶ್ರೀ ಆರ್.ವಿ. ದೇಶಪಾಂಡೆ : ತಾವು ಸ್ಪಷ್ಟವಾಗಿ ಹೇಳಿದಿರಿ. ನಾನು ಮತ್ತೊಂದು ವಿಚಾರವನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ತಾವು ಮತ್ತೊಂದು ಮಾತನ್ನು ಹೇಳಬೇಕಾಗುತ್ತದೆ. ಅರಣ್ಯ ಭೂಮಿಗೆ ರೆಗ್ಯುಲರೈಸೇಷನ್ ನಾವು ಹಾಕಿಕೊಂಡಿರುವುದು ಆಗುವುದಿಲ್ಲ, ಅದಕ್ಕೆ ಸಂಬಂಧ ಇಲ್ಲ, ಟ್ಯಾಂಕ್ ಬಂಡ್ಸ್ ಸಂಬಂಧ ಇಲ್ಲ, ಸ್ಪಷ್ಟವಾಗಿ ನಿಮ್ಮ ಮುಖಾಂತರ ಇದು ಬರಬೇಕಾಗುತ್ತದೆ, ಏಕೆಂದರೆ, ಇದು ಆಗಿಲ್ಲವೆಂದರೆ, ಬಡ ಜನರಿಗೆ ತೊಂದರೆ, ಇವೊತ್ತು ಒಂದೊಂದು ಫಾರಂಗೆ 100-150 ರೂ. ಬೆಲೆಯಾಗಿದೆ. ತಾವು ಕ್ರಮ ತೆಗೆದುಕೊಳ್ಳುತ್ತೀರೆಂದು ವಿಶ್ವಾಸ ಇದೆ. ಅದೇ ಪ್ರಕಾರ ಮತ್ತೊಂದು ವಿಚಾರ. ನಾನು ಮಾತನಾಡುವುದಕ್ಕೆ ಹೆಚ್ಚು ಸಮಯ ತೆಗೆದುಕೊಳ್ಳುತ್ತಿಲ್ಲ, ಜಾಗ್ರತೆಯಾಗಿ ನಾನು ಮುಗಿಸಬೇಕು. ಈ ಪುನರ್ವಸತಿ ಬಗ್ಗೆ ಎಷ್ಟು ಗಮನಸೆಳೆಯಬೇಕೋ ಅಷ್ಟನ್ನು ಸೆಳೆದು, ನನಗೆ ಬಹಳ ಸಂತೋಷವಾಗಿದೆ, ಏಕೆಂದರೆ, ನಿಮ್ಮ ಇಲಾಖೆಗೆ ಒಳ್ಳೆಯ ಕಾರ್ಯದರ್ಶಿ ಸಿಕ್ಕಿದ್ದಾರೆ, ಬಹಳ ಚುರುಕಾಗಿದ್ದಾರೆ, ಕೆಲಸಗಾರರು. ಇವೊತ್ತು ನಾವು ರಿಹ್ಯಾಬಿಲಿಟೇಶನ್‌ಗೆ ಎಷ್ಟು ಮಹತ್ವವನ್ನು ಕೊಡಬೇಕೋ ಅಷ್ಟು ಕೊಡುತ್ತಿಲ್ಲ. ಪ್ರಾಜೆಕ್ಟ್‌ನಲ್ಲಿ ಎಷ್ಟೋ ಜನರಿಗೆ ರಿಹ್ಯಾಬಿಲಿಟೇಶನ್ ಮಾಡಬೇಕಾಗಿದೆ. ಎಷ್ಟೋ ಜನರಿಗೆ ತೊಂದರೆಯಾಗಿದೆ, ಅದರ ಬಗ್ಗೆ ಚಿಂತನೆ ಏಕೆ ಆಗಿಲ್ಲ? ನಾನು ನಿನ್ನೆ ಒಂದು ಸಲಹೆ ಮಾಡಿದೆ, ಏನೆಂದರೆ, ಯಾವ ಒಂದು ಪ್ರಾಜೆಕ್ಟ್ ಅನ್ನು ನಾವು ಮಂಜೂರು ಮಾಡುತ್ತೀರೋ, ಆ ಪ್ರಾಜೆಕ್ಟ್ ಶುರು ಆಗುವುದಕ್ಕಿಂತ ಮುಂಚೆ ರಿಹ್ಯಾಬಿಲಿಟೇಶನ್ ಶುರುವಾಗಬೇಕು.

ಅಂದರೆ, ಆ ಜನರಿಗೆ ರಿಲೀಫ್ ಸಿಗುತ್ತದೆ. ಅಂದರೆ, ಆ ಜನರು ನಾವು ಯಾವುದೇ ಒಂದು ಕಾರ್ಯಕ್ರಮ ಹಾಕಿಕೊಳ್ಳುವುದಕ್ಕೆ ಸಹಕಾರ ಕೊಡುತ್ತಾರೆ. ಈಗ ನಮ್ಮ ಜಿಲ್ಲೆಯಲ್ಲಿ ಕೈಗಾ ಪ್ರಾಜೆಕ್ಟ್ ತೆಗೆದುಕೊಳ್ಳಿ, ಸೀಬರ್ಡ್ ಪ್ರಾಜೆಕ್ಟ್ ತೆಗೆದುಕೊಳ್ಳಿ, ಕಾಳಿ ಪ್ರಾಜೆಕ್ಟ್ ತೆಗೆದುಕೊಳ್ಳಿ, ಎಲ್ಲಾ ಪ್ರಾಜೆಕ್ಟ್‌ಗಳ ರಿಹ್ಯಾಬಿಲಿಟೇಶನ್ ಕೆಲಸ ಸಟ್ಯಾಂಡ್ ಸ್ಟಿಲ್ ಆಗಿದೆ. ಕಳೆದ ಎರಡು ವರ್ಷದಲ್ಲಿ ರಿಹ್ಯಾಬಿಲಿಟೇಶನ್ ಕಮಿಟಿ ಎರಡು ಅಥವಾ ಮೂರು ಬಾರಿ ಆಗಿಲ್ಲ, ನಾವು ನಮ್ಮ ದೊಡ್ಡಸ್ತನ ಹೇಳುತ್ತಿಲ್ಲ, ನಮ್ಮ ಸರ್ಕಾರ ಇದ್ದಾಗ ಏನು ಮಾಡಿದೆಯೆಂದು ತಾವು ರೆಕಾರ್ಡ್ ತೆಗೆದು ನೋಡಿ. 2 ತಿಂಗಳಿಗೊಮ್ಮೆ ಈ ಮೀಟಿಂಗ್ ಮಾಡಿದ್ದೇವೆ ಇವೊತ್ತು ಏನಾಗಿದೆ, ಆರು ತಿಂಗಳು ಒಬ್ಬ ಮಂತ್ರಿ ಬರುತ್ತಾರೆ. ನಮ್ಮ ದುರ್ದೈವ, ನಮ್ಮ ಜಿಲ್ಲೆಗೆ ಮಂತ್ರಿ ಇಲ್ಲ. ನಾನು ಹೇಳಿದೆ ಮುಖ್ಯಮಂತ್ರಿಗಳಿಗೆ ಒಂದು ಜಿಲ್ಲೆಗೆ ರೆಪ್ರಸೆಂಟೇಷನ್ ಕೊಡಿ. ಮಲ್ಲಿಕಾರ್ಜುನ ಖರ್ಗೆಯವರು ಬಂದರೆ ಕೆಲಸ ಆಗುತ್ತದೆಂದು ಅಲ್ಲ, ಆದರೆ, ಶಾಸಕನಾದವನಿಗೆ ತನ್ನ ಜಿಲ್ಲೆಯ ಬಗ್ಗೆ, ಅಭಿವೃದ್ಧಿ ಬಗ್ಗೆ ಏನು ಅಭಿರುಚಿ ಇರುತ್ತದೆ.

4.15 ಪಿ.ಎಂ.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಯಾರೋ ಮಂತ್ರಿಗಳು ಬರುತ್ತಾರೆಂದು ಡೇಟ್ ಫಿಕ್ಸ್ ಮಾಡುತ್ತಾರೆ. ಆಮೇಲೆ ಟೆಲಿಗ್ರಾಮ್ ಬರುತ್ತದೆ ಮೀಟಿಂಗ್ ಕ್ಯಾನ್ಸಲ್ ಆಗಿದೆ ಎಂದು, ಕಳೆದ 2 ವರ್ಷದಲ್ಲಿ ಸೀ ಬರ್ಡ್, ಕಾಳಿ, ಕೈಗಾ ಯೋಜನೆಗಲ ಬಗ್ಗೆ ರಿಯಾಬಿಲಿಟೇಷನ್ ಸಮಿತಿಯು 2-3 ಸಲವು ಆಗಿಲ್ಲ. ಯಾವ ಕೆಲಸವು ಆಗುತ್ತಿಲ್ಲ. ಪ್ರಾಜೆಕ್ಟ್‌ನ ಕೆಲಸವಾಗುತ್ತಿಲ್ಲ. ಹೀಗಾಗಿ ಭಯ, ಅಸಂತೋಷದ ವಾತಾವರಣ ಈ ಭಾಗದಲ್ಲಾಗಿದೆ. ಆದುದರಿಂದ ಇದರ ಬಗ್ಗೆ ಆದೇಶವನ್ನು ಕೊಡಬೇಕಾಗಿದೆ. ಕನಿಷ್ಟ 2 ತಿಂಗಳೊಳಗೆ ಒಮ್ಮೆ ರಿಯಾಬಿಲಿಟೇಷನ್ ಸಮಿತಿಯು ಸೇರಬೇಕು. ಆ ಜನರ ಸಮಸ್ಯೆಗಳು ಚರ್ಚೆಯಾಗಬೇಕು. ಇದರ ಬಗ್ಗೆ ನಿರ್ಣಯವಾಗಬೇಕು. ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ನಿಮ್ಮ ಕಂದಾಯ ಇಲಾಖೆಯ ಕಾರ್ಯದರ್ಶಿಗಳೊಂದಿಗೆ ಮಾತನಾಡಿದಾಗ : ಅವರು ಒಂದು ಸಭೆಯನ್ನು ಮಾಡಿ ಆದೇಶವನ್ನು ಕೊಟ್ಟಿದ್ದಾರೆ. ಆದರೆ ಯಾವ ಪ್ರಾಮಾಣದಲ್ಲಿ ಕೆಲಸ ಆಗಬೇಕಾಗಿತ್ತೋ ಆ ಪ್ರಮಾಣದಲ್ಲಿ ಆಗುತ್ತಿಲ್ಲ. Because of the officers mistake awards are initiated in Khoslatdam.

ಹಾಗಾಗಿ ಈವತ್ತು ಎಷ್ಟೋ ಜನ ತೊಂದರೆಗೆ ಬಲಿಯಾಗಿದ್ದಾರೆ. ಆದರೂ ಸಹ ದೇಶದ, ರಾಜ್ಯದ ಬೆಳವಣಿಗೆಯಾಗಬೇಕು, ಅಭಿವೃದ್ಧಿಯಾಗಬೇಕು. ನಮ್ಮ ಜನರು ತ್ಯಾಗ ಮಾಡಲು ಸಿದ್ದರಾಗಿದ್ದರೂ ಸಹ ಇದನ್ನು ತಾವು ತಿಳಿದುಕೊಳ್ಳಬೇಕು. ಸರ್ಕಾರ ಅವರಿಗೆ ಸಹಾಯ ಮತ್ತು ಸಹಕಾರವನ್ನು ಕೊಡಬೇಕು.

ಮತ್ತೊಂದು ವಿಚಾರವನ್ನು ಹೇಳುತ್ತೇನೆಂದರೆ ನಿಮ್ಮ ರಿಲೀಜಸ್ ಮತ್ತು ಚಾರಿಟಬಲ್ ಎಂಡೋಮೆಂಟ್ಸ್ ಬಹಳ ಸಂತೋಷ ನಾನು ಈ ವಿಷಯದಲ್ಲಿ ನಿಮ್ಮನ್ನು ಮೆಚ್ಚುತ್ತೇನೆ. ಏಕೆಂದರೆ ತಾವು ಸಚಿವರಾಗಿ ಈವೊತ್ತು ಎಲ್ಲೆಲ್ಲಿ ಗುಡಿಗಳಿಗೆ ಸಹಾಯವಾಗಬೇಕೋ ಅದನ್ನು ಮಾಡಿದ್ದೀರಿ. ಇದಕ್ಕೆ ತಮ್ಮ ಇಲಾಖೆಯನ್ನು ನಾನು ಮೆಚ್ಚಬೇಕಾಗುತ್ತದೆ. ಅದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ. ಆದರೆ ಈ ಇಲಾಖೆಗೆ ಕೊಟ್ಟು ಗ್ರಾಂಟ್ಸ್ ಬಹಳ ಕಡಿಮೆ. ನಮಗೆ ಯಾವುದು, ಹೊರದೇಶದಿಂದ ಯಾವ ಗ್ರಾಂಟ್ಸ್ ಕೂಡ ಬರುವುದಿಲ್ಲ, ನಮ್ಮ ಗುಡಿಗಳಿಗೆ ನಮ್ಮ ಬಡ ಜನರೇ ಕೊಡುತ್ತಾರೆ. ಹಾಗಾಗಿ ಈವತ್ತು ಗುಡಿಗಳ ಸಲುವಾಗಿ ಹೆಚ್ಚು ಗ್ರಾಂಟ್ಸ್‌ನ್ನು ಕೊಡಬೇಕಾಗಿದೆ. ತಾವು ಬಜಟ್‌ನಲ್ಲಿ ಒಂದು ಒಂದೂವರೆ ಕೋಟಿ ಪ್ರಾವಿಷನ್ ಕೊಟ್ಟಿದ್ದೀರಿ ಇದು ಸಾಕಾಗುವುದಿಲ್ಲ. ಆದುದರಿಂದ ಕನಿಷ್ಟಪಕ್ಷ 5 ಕೋಟಿಯನ್ನಾದರೂ ಪ್ರಾವಿಷನ್‌ನನ್ನು ಬಜಟಿನಲ್ಲಿ ಕೊಡಬೇಕು. ಇದಕ್ಕೆ ಪ್ರಯತ್ನ ಮಾಡಬೇಕು ಇದರಿಂದ ಬಡಜನರಿರುವ ಹಳ್ಳಿಗಳಲ್ಲಿನ ಗುಡಿಗಳಿಗೆ ಸಹಾಯ ಮಾಡಲು ಸಾಧ್ಯವಾಗುತ್ತದೆ.

ನಾನು ಅಜೀಜ್ ಸೇಟರ ಬಗ್ಗೆ ಹೆಚ್ಚು ಹೇಳುವುದಿಲ್ಲ.. ಅಜೀಜ್‌ಸೇಟ್‌ರವರೆ ಇಲ್ಲಿ ಸ್ವಲ್ಪ ಲಕ್ಷ್ಯ ಕೊಡಬೇಕು. ನಿಮ್ಮ ಇಲಾಖೆಯ ಬಗ್ಗೆ ಸಿಂಧ್ಯಾರವರು ಹೆಚ್ಚು ಮಾತನಾಡಿದ್ದಾರೆ ನಾನು ಹೆಚ್ಚಾಗಿ ಹೇಳಲು ಹೋಗುವುದಿಲ್ಲ. ಒಂದು ವಿಷಯವನ್ನು ನಾನು ನೊಂದ ಮನಸ್ಸಿನಿಂದ ಹೇಳಬೇಕಾಗುತ್ತದೆ ; ಆರ್.ಎನ್. ನಾಯಕ್‌ರವರು ಹೇಳಿದಂತೆ.. ನಮ್ಮ ಸರ್ಕಾರ ಇದ್ದಾಗ ಎಷ್ಟು ಬಸ್‌ಸ್ಟಾಪ್‌ಗಳಿಗೆ ಮಂಜೂರು ಮಾಡಿದ್ದೇವೋ ಅದರಲ್ಲಿ ಒಂದೂ ಕೆಲಸ ಪ್ರಾರಂಭ ಮಾಡಿದ ಬಗ್ಗೆ ತಾವು ಹೇಳಿ. ಸಿರಸಿಯಲ್ಲಿ ಬಸ್‌ಸ್ಟ್ಯಾಂಡ್ ಮಾಡಿಕೊಡಬೇಕೆಂದು ಹೇಳಿದ್ದೆವು, ಅದಕ್ಕೆ ಜಾಗಬೇಕೆಂದು ಕೇಳಿದರು, ಜಾಗವನ್ನೂ ಕೊಟ್ಟೆವು. ಆದರೆ ಜಾಗವನ್ನು ತೆಗೆದುಕೊಂಡರೂ ಕೂಡ ಬಸ್‌ಸ್ಟಾಪ್ ಆಗಲಿಲ್ಲ. ಎರಡನೆಯದಾಗಿ 'ಜೋಡಾ' ಇದು ನನ್ನ ಮತದಾರರ ಕ್ಷೇತ್ರವಲ್ಲ. ನಾನು ನನ್ನ ಮತದಾರರ ಕ್ಷೇತ್ರದ ಬಗ್ಗೆ ಮಾತನಾಡುತ್ತಿಲ್ಲ. ಸಿರಸಿಯ ನನ್ನ ಕ್ಷೇತ್ರವಲ್ಲ 'ಜೋಡಾ' ಸಹ ನನ್ನ ಕ್ಷೇತ್ರವಲ್ಲ. 'ಜೋಡಾ' ದಲೇಲ್ ಕೆಎಸ್‌ಆರ್‌ಟಿಸಿ ಬಸ್‌ಸ್ಟಾಪ್ ಮಾಡಬೇಕೆಂದು ಜಾಗವನ್ನು ಕೊಟೆವು ಆದರೆ ಏನೇನೂ

ಆಗಿಲ್ಲ, ಅದು ತಾಲ್ಲೂಕು ಹೆಡ್‌ಕ್ವಾಟ್ರಸ್ ಪ್ರಭಾಕರ್ ರಾಣೆಯವರ ಕ್ಷೇತ್ರ. ಎಲ್ಲಾಪುರದಲ್ಲಿ ಕೆಎಸ್‌ಆರ್‌ಟಿಸಿ ಡಿಪೋವನ್ನು ಮಾಡುತ್ತೇವೆಂದು ಹೇಳಿದ್ದರು, ಅಲ್ಲಿ ಲ್ಯಾಂಡ್ ಕೊಟ್ಟು ಅಲ್ಲೂ ಕೂಡ ಡಿಪೋ ಆಗಿಲ್ಲ. ಇನ್ನು ಕುಮಟಾದಲ್ಲಿ ಡಿಪೋವಿನ ಕೆಲಸ ಏನು ನಡೆಯುತ್ತಿದೆ ಹೋಗಿ ನೋಡಿ. ಯಾವ ಪ್ರಕಾರದಲ್ಲಿ ಕನಸ್ಟ್ರಕ್ಷನ್ ಕಾರ್ಪೊರೇಷನ್ ಕೆಲಸ ಮಾಡುತ್ತಿದೆ ನೋಡಿ, ಕೇಳಿದರೆ ಹಣವಿಲ್ಲ ಎಂದು ಹೇಳುತ್ತಾರೆ.

ಶ್ರೀ ಅಜೀಜ್ ಸೇಠ್ : 1984 ರಲ್ಲಿ ಏನು ಹಾದಿ ಹಾಕಿದ್ದಿರೋ ಅದೇ ಹಾದಿಯಲ್ಲಿ ನಡೆದುಕೊಂಡು ಹೋಗುತ್ತಿದೆ.

ಶ್ರೀ ಆರ್.ವಿ. ದೇಶಪಾಂಡೆ : ಈ ಮಾತನ್ನು ನಾವು ಒಪ್ಪುವುದಿಲ್ಲ. ನಮ್ಮ ಕಾಲದಲ್ಲಿ ಬಸ್ ರೂಟ್ ಮಾಡಿದ್ದೇವೆ, ತಾವು ಇವತ್ತು ಎಷ್ಟು ಮಾಡಿದ್ದೀರಿ ಅದನ್ನು ಲೆಕ್ಕ ತೆಗೆದುನೋಡಿ. ಕೆ.ಎಸ್.ಆರ್.ಟಿ.ಸಿ ಯಲ್ಲಿ ಹಣವಿಲ್ಲವೆಂದು ಹೇಳುತ್ತೀರಿ. ನಮ್ಮ ಕಾಲದಲ್ಲಿ ಸ್ವಲ್ಪ ನಮ್ಮ ಜೊತೆ ಇದ್ದೀರಿ. ನಾನು ನಿಮ್ಮನ್ನು ಟೀಕೆ ಮಾಡುತ್ತಿಲ್ಲ. ಆದರೆ ಕೆಲಸವಾಗಿಲ್ಲ, ಕೆಲಸ ಮಾಡಿ ಎಂದು ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ. ನಾನು ಏನು ಹೇಳಿದೆ ಇದರಲ್ಲಿ ನನ್ನ ಮತ ಕ್ಷೇತ್ರ ಯಾವುದೂ ಇಲ್ಲ. ಅದ್ದರಿಂದ ತಾವು ಆ ಕೆಲಸವನ್ನು ಅದಷ್ಟು ಬೇಗ ಮಾಡಬೇಕೆಂದು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ. ಈಗ ಬಸ್ ಫೇರ್ ರೈಸ್ ಮಾಡುವ ಬಗ್ಗೆ ಹೇಳುತ್ತೇನೆ . ಈಗಾಗಲೇ ಸಿಂಧ್ಯರವರು ಇದರ ಬಗ್ಗೆ ಹೇಳಿದ್ದಾರೆ. ನಿಮಗೆ ಬಸ್ ಫೇರ್ ರೈಸ ಮಾಡುವ ಅಧಿಕಾರ ಇಲ್ಲವೆಂದು ಹೇಳುತ್ತೇನೆ. You have no moral right, You may have legal right to do so. Please verify the fares of Maharashtra buses. ಏಕೆಂದರೆ ಡೀಸೆಲ್ ರೇಟ್ ಹೆಚ್ಚಾಯಿತು. ಹೆಚ್ಚು ಫೇರ್ ಮಾಡಿದರು. ಮೊನ್ನೆ ನಾನು ಬೆಳಗಾಂಗೆ ಹೋಗಿದ್ದೆ ಮಹಾರಾಷ್ಟ್ರ Buses ply between Belgaum to Haliyal.ಮಹಾರಾಷ್ಟ್ರ ಟ್ರಾನ್ಸ್‌ಪೋರ್ಟ್ ಬಸ್ಸು ಬೆಳಗಾಂನಿಂದ ಹಳಿಯಾಳಗೆ ಹೋಗುತ್ತದೆ. ನಮ್ಮ ಊರಿಗೆ ಅವರು 14 ರೂಪಾಯಿ ಚಾರ್ಜ್ ತೆಗೆದುಕೊಳ್ಳುತ್ತಾರೆ. ಅದೇ ನಮ್ಮ ಕೆ.ಎಸ್.ಆರ್.ಟಿ.ಸಿ ಬಸ್ಸಿನಲ್ಲಿ ಬೆಳಗಾಂನಿಂದ ಹಳಯಾಳಗೆ 16 ರೂಪಾಯಿ 80 ಪೈಸೆ ಚಾರ್ಜ್ ತೆಗೆದುಕೊಳ್ಳುತ್ತಾರೆ ಏಕೆ?

When the Maharastra buses can ply for Rs.14/ for the same distance, why your buses take Rs.2.80. more? ಅಷ್ಟು ಮಾಡಿ ಪುನಃ ಹೆಚ್ಚು ಮಾಡುತ್ತೇವೆಂದರೆ ಅದು ಸರಿಯಾಗುವುದಿಲ್ಲ. ಕನ್ನಡನಾಡಿನ ಜನ ಯಾವಾಗಲೂ ಕ್ಷಮೆ ಮಾಡುವುದಿಲ್ಲ, ದಯವಿಟ್ಟು ಇದರ ಬಗ್ಗೆ ವಿಚಾರ ಮಾಡಿ, ಅದನ್ನು ಬಿಟ್ಟುಬಿಡಿ. ಅದರಿಂದೇನೂ ಲಾಭವಾಗುವುದಕ್ಕೆ ಸಾಧ್ಯವಿಲ್ಲ. ಅದನ್ನು ಕೈಬಿಟ್ಟರೆ ಬಹಳ ಒಳ್ಳೆಯದು. ಇನ್ನು ವಕ್ಫ್ ಬಗ್ಗೆ ತಾವು ಏನು ಹೊಸ ಗ್ರಾಂಟ್ಸ್ ಕೊಡುತ್ತಿದ್ದೀರಿ. ಅದರಲ್ಲಿ ಮೈಸೂರಿನ ಕಡೆ ಹೆಚ್ಚು ಲಕ್ಷ್ಯ ಕೊಡಬೇಡಿ. ಸ್ವಲ್ಪ ನಮ್ಮ ಉತ್ತರ ಕರ್ನಾಟಕದ ಕಡೆ ನೋಡಿ. ಉತ್ತರ ಕರ್ನಾಟಕದಲ್ಲಿ ಎಲ್ಲೆಲ್ಲಿ ಮಸೀದಿಗಳಿವೆ. ಅಲ್ಲಿಗೆ ಲಕ್ಷ್ಯ ಕೊಡಿ. ನೀವು ಸ್ವಲ್ಪ ಡಿಸ್‌ಕ್ರಿಷನರಿ ಗ್ರಾಂಟ್ಸ್ ಹಿಡಿದೂಕೊಳ್ಳಿ ನಮ್ಮ ತಕರಾರು ಇಲ್ಲ, ಅದನ್ನು ಕೊಡುವಾಗ ಬಾಂಬೆ ಕರ್ನಾಟಕ ಹೈದರಾಬಾದ್ ಕರ್ನಾಟಕದಲ್ಲಿ ಕೊಡುವಾಗ ಪ್ರತಿ ತಾಲ್ಲೂಕಿಗೆ ಕೊಡುವ ಹಾಗೆ ತಾವು ಮಾಡಿದರೆ ಒಳ್ಳೆಯದಾಗಬಹುದೆಂದು ನಾನು ಸಲಹೆ ಮಾಡುತ್ತಿದ್ದೇನೆ. ಇನ್ನು ನಾನು ಸಹಕಾರ ಸಚಿವರಿಗೆ ಒಂದೆರಡು ಸಲಹೆಗಳನ್ನು ಕೊಡುತ್ತಿದ್ದೇನೆ. ನಮ್ಮ ಏಕಾಂತಯ್ಯನವರು ಈ ಇಲಾಖೆಯ ಬಗ್ಗೆ ಮಾತನಾಡಬಹುದು. ಕೋ-ಅಪರೇಟಿವ್ ಸೊಸೈಟಿಗೆ ಅಮೆಂಡ್‌ಮೆಂಟ್ ಮಾಡುತ್ತೇವೆಂದು ಕೆ.ಹೆಚ್. ಪಾಟೀಲರವರು ಹೇಳಿ ಈಗ ಬೇರೆ ಖಾತೆಗೆ ಹೋದರು. ಈಗ ನೀವು ಬಂದಿರಿ

ಹಾಗಾಗಿ ಅಮೆಂಡ್‌ಮೆಂಟ್ ಏನು ಇವೆ, ಅದಷ್ಟುಬೇಗನೆ ತಾವು ತರಲಿಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಎರಡನೆಯದಾಗಿ ಎಲ್ಲಾ ಸಹಕಾರಿ ಸಂಘಗಳು ಡಿಫಂಕ್ಟ್ ಆಗಿದ್ದಾರೆ. ಏಕೆ ಆದವು, ಇದಕ್ಕೆ ನಿಮ್ಮದ್ದೇ ತಪ್ಪು ಎಂದು ನಾನು ಹೇಳುವುದಿಲ್ಲ. ಇದಕ್ಕೆ ಹಲವಾರು ಕಾರಣಗಳು ಇರಬಹುದು. ಅವನ್ನು ನಿವಾರಣೆ ಮಾಡುವುದಕ್ಕೆ ಯಾವುದೇ ಒಂದು ಕಾರ್ಯಕ್ರಮವಾಗಬೇಕು. ಈ ಸಾಲ ಮನ್ನಾ ವಿಚಾರದಲ್ಲಿ ನಮ್ಮ ಜನತಾ ಸರ್ಕಾರ ಕೇಂದ್ರದಲ್ಲಿ ಇದ್ದಾಗ 12 ಸಾವಿರ ಕೋಟಿ ರೂಪಾಯಿ ಬಡವರಿಗೆ ಸಾಲ ಮನ್ನಾ ಮಾಡಿದ್ದೇವೆ. ಎಷ್ಟೋ ಜನ ರೈತರು ದುಡಿದಿದ್ದಾರೆ. ಬಡ ರೈತರಿಗೆ ಸಹಾಯ ಮಾಡುವ ಬಗ್ಗೆ ಈ ಸದನದಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. ಅದರ ಬಗ್ಗೆ ಒಂದು ನಿರ್ಣಯವಾಗಬೇಕು. ಯಾವ ಜನರಿಗೆ ಸಾಲ ಮನ್ನಾ ಮಾಡಬೇಕು? ಅದನ್ನು ಮಾಡಬೇಕು. ಆದರೆ ಇವತ್ತು ಇದೇ ವಿಷಯವನ್ನು ತೆಗೆದುಕೊಂಡು ಕೆಲವು ಜನ ಹಳ್ಳಿಗಳಲ್ಲಿ ಹೋಗಿ ಸ್ಲೋಗನ್ನು ಕೊಡುತ್ತಿದ್ದಾರೆ. ಇದಕ್ಕೆ ಎಲ್ಲಾದಕ್ಕೂ ಒಂದು ಫೂಲ್‌ಸ್ಟಾಪ್‌ನ್ನು ಕೊಡಬೇಕು. ಹಾಗಾಗಿ ಇವತ್ತು ನಿಜವಾಗಿ ಬಡವರಿಗೆ ಒಳ್ಳೆಯದು ಮಾಡುವುದಿದ್ದರೆ ಈ ಸಾಲ ಮನ್ನಾ ವಿಚಾರದಲ್ಲಿ ಒಂದು ನಿರ್ಧಿಷ್ಟವಾದ ನಿರ್ಣಯಕ್ಕೆ ಬರಬೇಕು. ಏಕೆಂದರೆ ರಾಜ್ಯಸರ್ಕಾರ ಸಾಲ ಮನ್ನಾ ಮಾಡುವುದಕ್ಕೆ ಸಾಧ್ಯವಾಗಬಹುದು. ನಿಮ್ಮ ಕಡೆ ಹಣ ಇದೆ ಸಂಪನ್ಮೂಲಗಳಿವೆ. ಅದರ ಬಗ್ಗೆ ನೀವು ವಿಚಾರ ಮಾಡಬೇಕು. ನಮ್ಮ ಸರ್ಕಾರವಿದ್ದಾಗ ರೈತರಿಗೆ ನಾವು 7 ರೂಪಾಯಿ ಬಡ್ಡಿಯಲ್ಲಿ ಸಾಲ ಕೊಡುತ್ತಿದ್ದೆವು. We are giving loan at subsidised interest rate. ಅದನ್ನು ನೀವು ನಿಲ್ಲಿಸಿದಿರಿ. ಆ ಕೆಲಸ ತಾವು ಅದಷ್ಟು ಬೇಗನೆ ರೈತರಿಗೆ 7 ರೂಪಾಯಿ ಬಡ್ಡಿಯಲ್ಲಿ ಸಾಲ ಕೊಡುವ ಕೆಲಸವನ್ನು ಪ್ರಾರಂಭ ಮಾಡಬೇಕು. ಅದರಿಂದ ಸಾಕಷ್ಟು ಬಡ ರೈತರಿಗೆ ಸಹಾಯವಾಗುವುದು ಎನ್ನುವ ಆಶಯವಿದೆ. ಸಹಕಾರ ಸಂಘದ ಚುನಾವಣೆ ಬಗ್ಗೆ ಏನು ಗದ್ದಲವಿದೆ. ಈ ಗದ್ದಲವೆನ್ನೆಲ್ಲಾ ಮುಗಿಸಿ ಬಿಡಿ. ಬರುವ ಡಿಸೆಂಬರ್ ಒಳಗೆ ಚುನಾವಣೆ ಮಾಡಿ. ಇದರ ನಂತರ ಅಟ್‌ಲೀಸ್ಟ್ ಸರಿಯಾಗಿ ಚುನಾವಣೆಯಾಗಬೇಕು. ನಮ್ಮ ಕಾಲದಲ್ಲಿ ಅಷ್ಟೇ ಅಲ್ಲ ನಮ್ಮ ಕಾಲದಲ್ಲಿ ಸಹ ಸಹಕಾರ ಸಂಘಗಳಿಗೆ ಚುನಾವಣೆಯನ್ನು ಸಕಾಲದಲ್ಲಿ ಯಾವಾಗಲೂ ಮಾಡಲಿಕ್ಕೆ ಆಗಲಿಲ್ಲ.

ಪ್ರೆಷರ್ ಯಾರ್‍ಯಾರದೋ ಬರುತ್ತದೆ, ಆದರೆ ನಿಜವಾಗಿಯೂ ಡೆಮಾಕ್ರಸಿ ಪ್ರಿವೇಲ್ ಆಗಬೇಕು, ನಿಜವಾಗಿ ರೈತರ ಪ್ರತಿನಿಧಿಗಳು ಅಲ್ಲಿ ಇರಬೇಕಾದರೆ ಸರಿಯಾದ ಸಮಯದಲ್ಲಿ ಚುನಾವಣೆಯಾಗಬೇಕು. ಆ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ನಾವು ಯಾವಾಗಲೂ ಹೇಳುತ್ತಲೇ ಬಂದಿದ್ದೇವೆ, ಕೋ-ಅಪರೇಷನ್‌ನಲ್ಲಿ ಗೌರ್ನಮೆಂಟ್ ಇಂಟರ್‌ಫಿಯರೆನ್ಸ್ ಇರಬಾರದು ಎಂದು. ಈಗ ನಮ್ಮ ಮುಖಂಡರು ಹೇಳಿದರು, ರಿಜಿಸ್ಟ್ರಾರ್ ಕೂಡ ಇರಬಾರದು ಎಂದು ಹೇಳಿದರು. ನಿಜ, ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನಾವೂ ಬಿಡುತ್ತಿಲ್ಲ, ನೀವೂ ಬಿಡುತ್ತಿಲ್ಲ ರಿಜಿಸ್ಟ್ರಾರ್‌ರವರನ್ನು ಹಾಗಾಗಿ ಸಹಕಾರಿ ಸಂಸ್ಥೆಗಳು ಬೆಳೆಯಬೇಕಾದರೆ ಸರ್ಕಾರದಿಂದ ಇಂಟರ್‌ಫಿಯರೆನ್ಸ್ ಇರಬಾರದು. ಇದ್ದರೆ ಮಿನಿಮಮ್ ಇಂಟರ್‌ಫಿಯರೆನ್ಸ್ ಇರಬೇಕು. ಅದು ಒಳ್ಳೆಯದು ಆಗಬೇಕು ಎನ್ನುವ ದೃಷ್ಟಿಯಿಂದ ಇರಬೇಕೇ ವಿನಹ ಬೇರೆ ದೃಷ್ಟಿಯಿಂದ ಇರಬಾರದು. ಆದುದರಿಂದ ತಾವು ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು. ನಾಮಿನೇಷನ್ಸ್ ಬಗ್ಗೆ ನಮ್ಮ ಕೆ.ಹೆಚ್.ಪಾಟೀಲರು ಹೇಳಿದರು. ನಾವು ಹೇಳಿದ್ದೇವೆ, ಈ ನಾಮಿನೇಷನ್ಸ್ ಕ್ಲಾಸ್‌ನ್ನು ತೆಗೆಯುತ್ತೇವೆ ಎಂದು ಹೇಳಿದರು. ಹೇಳುತ್ತೇನೆ.

ಅದನ್ನು ತೆಗೆಯುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಅದನ್ನು ತೆಗೆಯುವುದಕ್ಕೆ ಸಾಧ್ಯವಿದ್ದರೆ ನೀವು ಪ್ರಯತ್ನವನ್ನು ಮಾಡಿ ಎಂದು ಹೇಳುತ್ತೇನೆ. ಆದುದರಿಂದಸ,

ಸಹಕಾರಿ ಸಂಘಗಳು ಸರಿಯಾಗಿ ಡೆಮಾಕ್ರಟಿಕ್ ಪದ್ಧತಿಯಲ್ಲಿ ನಡೆಯುವುದಕ್ಕೆ ಸಾಧ್ಯವಾಗಬಹುದು. ಆ ದೃಷ್ಟಿಯಿಂದ ತಾವು ಮಾಡಿಕೊಳ್ಳಬೇಕು. ಕೊನೆಯದಾಗಿ, ನಮ್ಮ ಲೇಬರ್ ಮಿನಿಸ್ಟರ್‌ರವರಿಗೆ ಒಂದು ಸೂಚನೆಯನ್ನು ಕೊಡುತ್ತೇನೆ. ಐಟಿಐಗಳು ಅಲ್ಲಿ ಏನಾಗಿದೆ, ಇಲ್ಲಿ ಕೆಲವು ಕಡೆ ಬಿಲ್ಡಿಂಗ್ ಇಲ್ಲ, ಕೆಲವು ಕಡೆ ಬಿಲ್ಡಿಂಗ್ ಇದ್ದರೆ ಮೆಷಿನರಿ, ಎಕ್ವಿಪ್‌ಮೆಂಟ್ಸ್ ಇಲ್ಲ. ಈ ರೀತಿಯ ಪರಿಸ್ಥಿತಿಯಾಗಿದೆ. ಹಾಗಾಗಿ ತಾವು ಎಲ್ಲಾ ಐಟಿಐಗಳನ್ನು ವಿಸಿಟ್ ಮಾಡಬೇಕು. ಎಲ್ಲಾ ಐಟಿಐಗೂ ಭೇಟಿ ಮಾಡಬೇಕು. ಎಲ್ಲೆಲ್ಲಿ ಎಕ್ವಿಪ್‌ಮೆಂಟ್ಸ್, ಮೆಷನರೀಸ್ ಇಲ್ಲವೋ ಅಲ್ಲಿ ಅದನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಮತ್ತು ನಮ್ಮ ಹಳ್ಳಿಯ ಜನರಿಗೆ, ಹಿಂದುಳಿದಿರತಕ್ಕಂಥ ಪ್ರದೇಶದ ಜನತೆಗೆ ಯಾವ ಟ್ರೇಡನ್ನು ಕಲಿಸಿದರೆ ಒಳ್ಳೆಯದು ಆ ಟ್ರೇಡನ್ನು ಅಲ್ಲಿ ಶುರುಮಾಡುವುದಕ್ಕೆ ನಾವು ಪ್ರಯತ್ನವನ್ನು ಮಾಡಬೇಕು ಎಂದು ಹೇಳುತ್ತೇನೆ. ನಮ್ಮ ಊರಿನಲ್ಲಿ ನಾನು ನಮ್ಮ ಸರ್ಕಾರದಿಂದ ಒಂದು ಐಟಿಐಯನ್ನು ಮಂಜೂರು ಮಾಡಿಸಿದ್ದೇವೆ. ಬಿಲ್ಡಿಂಗ್ ಆ ಸಮಯದಲ್ಲಿ ಮಂಜೂರು ಆಗಿದೆ. ಆದರೆ ಬಿಲ್ಡಿಂಗ್ ಕೆಲಸ ಮಾತ್ರ ಇನ್ನೂ ಮುಗಿದಿಲ್ಲ. ಅದರ ಬಗ್ಗೆ ಮೊನ್ನೆ ತಾನೇ ಹೇಳಿದೆ. ಏಕೆಂದರೆ ಬಜೆಟ್ ಇಲ್ಲ ಎಂದು ಹೇಳುತ್ತಾರೆ. ಆದುದರಿಂದ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರ ಜೊತೆ ತಾವು ಮಾತನಾಡಿ ಹೆಚ್ಚಿನ ಬಜೆಟ್‌ನ್ನು ತೆಗೆದುಕೊಳ್ಳುವುದಕ್ಕೆ ತಾವು ಪ್ರಯತ್ನವನ್ನು ಮಾಡಬೇಕು. ಮತ್ತೊಂದು ಸಲಹೆಯನ್ನು ನಾನು ಮಾಡುತ್ತೇನೆ. ಐಟಿಐ ಸಲೆಕ್ಷನ್ ಕಮಿಟಿ ಎಂದು ಒಂದು ಇದೆ. ನಮ್ಮ ಸರ್ಕಾರ ಏನು ಮಾಡುತ್ತಿದೆ, ಎಲ್ಲಾ ಕಡೆ ಶಾಸಕರನ್ನು ಛೇರ್ಮನ್‌ರನ್ನಾಗಿ ಮಾಡುತ್ತಿದೆ. ನಮ್ಮ ಐಟಿಐ ಸೆಲೆಕ್ಷನ್ ಕಮಿಟಿ ಇದೆಯೆಲ್ಲಾ ಅಲ್ಲಿ ನಮ್ಮ ಕಾಲದಿಂದ ಅಲ್ಲಿ ಅಸಿಸ್ಟೆಂಟ್ ಕಮೀಷನರ್‌ರವರೇ ಛೇರ್ಮನ್ ಇದ್ದಾರೆ. ಸಾಧ್ಯವಾದರೆ ಎಂ.ಎಲ್.ಎ.ಗಳನ್ನು ಅಲ್ಲಿ ಛೇರ್ಮನ್ ಆಗಿ ಮಾಡುವುದಕ್ಕೆ ತಾವು ಪ್ರಯತ್ನವನ್ನು ಮಾಡಿ. ಜಿಲ್ಲಾ ಪರಿಷತ್ತಿನ ಮೆಂಬರನ್ನು ಆದರೂ ಮಾಡಿ. ಯಾರನ್ನಾದರೂ ಮಾಡಿ. ಅಲ್ಲಿ ಸಾರ್ವಜನಿಕ ಸಂಪರ್ಕ ಇರುವವರು ಇದ್ದರೆ, ಅಲ್ಲಿ ಅವರು ಛೇರ್ಮನ್, ಆದರೆ ಹೆಚ್ಚಿನ ಸಹಾಯ ಆಗಬಹುದು ಎಂದು ನಾನು ತಮಗೆ ಸೂಚನೆಯನ್ನು ಕೊಡುತ್ತಿದ್ದೇನೆ. ಇಷ್ಟು ವಿಚಾರವನ್ನು ಹೇಳಿ ಇನ್ನು ಕೆಲವು ವಿಚಾರಗಳು ಇದ್ದವು. ಆದರೂ ಕೂಡ ಸಮಯ ಇಲ್ಲ. ಆದುದರಿಂದ ನನಗೆ ಇಷ್ಟು ಹೊತ್ತು ಮಾತನಾಡಲಿಕ್ಕೆ ಅವಕಾಶ ಕೊಟ್ಟಂಥ ಸಭಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತಗಳನ್ನು ಮುಗಿಸುತ್ತೇನೆ.

+ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಉಪಾಧ್ಯಕ್ಷಿಣಿಯವರೇ, ನಾನು ಈ ವರ್ಷದ ಈ ನಮ್ಮ ಸರ್ಕಾರವು ಈ ಸದನದಲ್ಲಿ ಇಟ್ಟಂಥ ಮುಂಗಡಪತ್ರವನ್ನು ತುಂಬು ಹೃದಯದಿಂದ ಸ್ವಾಗುತಿಸುತ್ತಾ ನನ್ನ ಎರಡು ಅನಿಕೆಗಳನ್ನು ಸದನದ ಮುಂದೆ, ತಮ್ಮ ಮೂಲಕ ಇಡಲು ತುಂಬಾ ಸಂತೋಷಪಡುತ್ತಿದ್ದೇನೆ. ನಮ್ಮ ಕಂದಾಯ ಇಲಾಖೆ, ಎಲ್ಲಾ ಇಲಾಖೆಗಳಿಗಿಂತಲೂ ಬಹಳ ಹೆಚ್ಚಿನ ಗೌರವ, ಅಭಿಮಾನವನ್ನು ಹೊಂದಿದಂಥ ಇಲಾಖೆ, ಇದರ ಮೂಲಕ ಹೆಚ್ಚಿನ ಕೆಲಸಗಳು ನಮ್ಮ ಜನತೆಗೆ ಒದಗುವಂಥಾದ್ದು ಸ್ವಾಭಾವಿಕವಾಗಿದೆ. ಆದರೆ ಇಂದು ಈ ಇಲಾಖೆಗೆ ಹಿಂದಿನ ಸ್ಥಾನಮಾನ ಇರದೇ ಇರುವಂಥ ಒಂದು ವಿಚಿತ್ರ ಪರಿಸ್ಥಿತಿ ಕಾಲ ಬದಲಾದಂತೆ ಆಡಳಿತದಲ್ಲಿ ಬರುವಂಥ ಏರುಪೇರುಗಳ ತೊಂದರೆಯಿಂದ ಅದರ ಹೆಚ್ಚಿನ ಜವಾಬ್ದಾರಿಗಳು ಇಂದು ಕುಂಠಿತವಾಗಿವೆ. ಏನೇ ಇರಲಿ, ಇಂದೂ ಸಹ ಕಂದಾಯ ಇಲಾಖೆಯ ಮೂಲಕ ಅನೇಕ ಕೆಲಸ ನಮ್ಮ ಅಭ್ಯುದಯದ ಕಾರ್ಯದಲ್ಲಿ ಮುನ್ನಡೆಯುತ್ತಾ ಇವೆ.

ಇಂದು ಆಡಳಿತದಲ್ಲಿ ಶಿಥಿಲತೆ ಬಂದು ಪ್ರಾಯಶಃ ಗ್ರಾಮ ಮಟ್ಟದಿಂದ ಹಿಡಿದು ರಾಜ್ಯಮಟ್ಟದ ಈ ಕಂದಾಯ ಇಲಾಖೆಯ ಕೆಲಸವನ್ನು ನಾವು ಅವಲೋಕಿಸಿದಾಗ

ಹಿಂದಿನಷ್ಟು ಚುರುಕುತನ ಕಾಣುತ್ತಿಲ್ಲ. ಸ್ವಲ್ಪ ಮಟ್ಟಿಗೆ ಭ್ರಷ್ಟಾಚಾರ ಅಲ್ಲಲ್ಲೇ ಇದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಮುಖ್ಯವಾಗಿ ಯಾವುದಾದರೂ ಕೆಲಸ ಆಗುವುದಾದರೆ ವೇಗ ಕಡಿಮೆಯಾಗಿ ಫೈಲುಗಳನ್ನು ಹಿಂದಕ್ಕೆ ಕಳುಹಿಸುವಂಥ ಅಥವಾ ಕೆಲಸ ಆಗುವುದಕ್ಕೆ ಅಡೆತಡೆ ಒಡ್ಡುವಂಥ ಪ್ರಮೇಯಗಳು ಹಳ್ಳಿಯಿಂದ ಹಿಡಿದು ದಿಲ್ಲಿಯತನಕ ಸಾಗುತ್ತಿವೆ. ಹೀಗಾಗಿ ಈ ಇಲಾಖೆಗೆ ನಮ್ಮ ಸರ್ಕಾರದವರು ಸ್ವಲ್ಪ ಮಟ್ಟಿಗೆ ಚುರುಕುತನವನ್ನು ಮುಟ್ಟಿಸುವಂತೆ ಕೆಲಸವನ್ನು ಮಾಡಿದರೆ ಈ ಅಧಿಕಾರಗಳ ಕೆಲಸದಲ್ಲಿ ಆಗುವಂಥ ತೊಂದರೆಗಳು ಆದರಲ್ಲೂ ಮುಖ್ಯವಾಗಿ ನಿಧಾನಗತಿಯನ್ನು ವೇಗದ ಕಡೆಗೆ ಹರಿಸಬಹುದು. ಈ ಶಿಥಿಲತೆ ಹೋಗಿ ವಿಳಂಬನೀತಿ ದೂರವಾಗ ಫೈಲುಗಳು ವೇಗವಾಗಿ ನಡೆಯುವಂತೆ ಆಗಬೇಕು. 5 ದಿವಸದಲ್ಲಿ ಆಗುವಂಥ ಕೆಲಸ 5 ಟೇಬಲ್‌ಗಳನ್ನು ದಾಟಿ ಹೋಗುವಾಗ 5 ತಿಂಗಳಾಗಿ ಪುನಃ ವಾಪಸ್ಸು ಬಂದು ಈ ಕೆಲಸಕ್ಕಾಗಿ ಆ ಹಳ್ಳಿಯ ಜನರು ಪುನಃ ತಾಲೂಕು ಮಟ್ಟಕ್ಕೆ ಜಿಲ್ಲಾಮಟ್ಟಕ್ಕೆ ಹೋಗಬೇಕಾದ ಪರಿಸ್ಥಿತಿ ಬಂದಿದೆ. ಅದನ್ನು ಈಗ ಕಡಿಮೆ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಮುಖ್ಯವಾಗಿ ಬಡವರಿಗೆ ಮನೆ ನಿವೇಶನವನ್ನು ಕೊಡತಕ್ಕ ಕೆಲಸವನ್ನು ನಮ್ಮ ಮಂಡಲದ ವತಿಯಿಂದ ಆಗುವುದಾದರೂ ಕೂಡ ತಹಸಿಲ್ದಾರರ ಸ್ಥಾನ ಇದಕ್ಕೆ ಬಹಳ ಮುಖ್ಯವಾಗಿದೆ. ನಿವೇಶನಗಳನ್ನು ಒದಗಿಸಿದರೂ ಕೂಡ ಈ ನಿವೇಶನಗಳು ಬಡವರಿಗೆ ಸಿಕ್ಕುವಾಗ ಹಲವಾರು ಅಡಚಣೆಗಳಿಂದಾಗಿ ಅವು ಸಿಕ್ಕುವುದಿಲ್ಲ. ನಮ್ಮ ಸರ್ಕಾರದವರು ಬಡವರಿಗೆ ನಿವೇಶನಗಳನ್ನು ಧರ್ಮರ್ಥ್ಯವಾಗಿ ಕೊಡುತ್ತೇವೆಂದು ಹೇಳಿದರು. ಆದರೆ ಬಡವರು ಎಂಬುದರ ವ್ಯಾಖ್ಯಾನ 2400 ರೂ. ವರಮಾನ ಎಂಬ ಅಂಕಿಯ ಆಧಾರದಿಂದಾಗಿ ಇಂದು ಅದರ ಪ್ರಯೋಜನ ಬಡವರಿಗೆ ಸಿಕ್ಕದೆ ಇದಕ್ಕಾಗಿ ಸುಮಾರು 500 ರೂ.ನಿಂದ 1000 ರೂ.ವರೆಗೆ ಹಣವನ್ನು ಪಾವತಿ ಮಾಡತಕ್ಕ ಪ್ರಮೇಯ ಈ ಬಡ ಜನರು ನಿವೇಶನಗಳನ್ನು ಪಡೆಯುವಾಗ ಕೊಡುವಂತಾಗಿದೆ. ಹೀಗಾಗಿ ನಿವೇಶನಗಳು ಖಾಲಿ ಇದ್ದರೂ ಎಷ್ಟೋ ಜನರಿಗೆ ಇವುಗಳನ್ನು ಪಡೆಯಲು ಅಸಾಧ್ಯವಾಗಿದೆ. ಆದುದರಿಂದ ಬಡವರಿಗೆ ಧರ್ಮಾರ್ಥವಾಗಿ 5 ಸೆಂಟ್ಸ್ ಜಮೀನನ್ನು ಕೊಡುವಂತೆ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿರತಕ್ಕ ಜಿಲ್ಲೆಗಳನ್ನು ತಾಲ್ಲೂಕುಗಳನ್ನು ಪುನರ್ ವಿಂಗಡಿಸುವುದಕ್ಕೆ ಒಂದು ಸಮಿತಿಯನ್ನು ಮಾಡಿದ್ದೀರಿ. ಪ್ರಾಯಶಃ ಮಂತ್ರಿಗಳ ಮಟ್ಟದಲ್ಲಿಯೂ ಕೂಡ ಒಂದು ಸಮಿತಿಯಾಗಿದೆಯೆಂದು ತಿಳಿದಿದ್ದೇನೆ. ಆದರೆ ಇದು ಇನ್ನೂ ಕಾರ್ಯಗತವಾಗಿಲ್ಲ. ಹೀಗಾಗಿ ದೊಡ್ಡ ತಾಲೂಕುಗಳು ದೊಡ್ಡದಾಗಿಯೇ ಉಳಿದಿದೆ. ಸಣ್ಣ ತಾಲೂಕುಗಳು ಸಣ್ಣವಾಗಿಯೇ ಉಳಿದಿದೆ. ಹೀಗಾಗಿ ಸರ್ಕಾರದಿಂದ ಸಿಕ್ಕುವಂಥ ಸಹಾಯ ಸವಲತ್ತುಗಳು ಬಹಳ ಕಡಿಮೆ ಹಣ ಹಂಚಿಕೆಯಾಗಿ ನಮಗೆ ಬಹಳಷ್ಟು ಅನ್ಯಾಯವಾಗುತ್ತಿದೆ. ಮಾನ್ಯ ಮಂತ್ರಿಗಳು ಸುಮಾರು 2.5 ಕೋಟಿ ಹೆಚ್ಚಿಗೆ ಖರ್ಚಾಗುತ್ತದೆಂದು ಹೇಳಿದರು. 2.5 ಕೋಟಿ ರೂ. ಹೆಚ್ಚು ಖರ್ಚಾಗುವುದಾದರೆ ಮೂರೂವರೆ ಕೋಟಿ ಜನಸಂಖ್ಯೆಯನ್ನು ಹೊಂದಿರುವಂಥ ನಮ್ಮ ಕರ್ನಾಟಕಕ್ಕೆ ಈ ಜಿಲ್ಲಾ ಪುನರ್ ವಿಂಗಡಣೆಯಿಂದಾಗಿ, ತಾಲೂಕು ಪುನರ್ ವಿಂಗಡಣೆಯಿಂದಾಗಿ ಆ ಜನರಿಗೆ ಹೆಚ್ಚಿನ ಪ್ರಯೋಜನ ಆಗುತ್ತದೆ. ಆದುದರಿಂದ ತಾಲೂಕು ಮತ್ತು ಜಿಲ್ಲಾ ಪುನರ್ ವಿಂಗಡಣಾ ಕಾರ್ಯವನ್ನು ಆದಷ್ಟು ಬೇಗ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದರಲ್ಲೂ ನನ್ನ ಕ್ಷೇತ್ರದ ಮೂಲ್ಕಿ ಮತ್ತು ಮೂಡಬಿದ್ರಿ ಈ ಎರಡು ತಾಲೂಕುಗಳು ಹೊಸ ತಾಲ್ಲೂಕುಗಳಾಗಿ ಬರುತ್ತಿವೆ. ಯಾವಾಗ ನೀವು ತಾಲೂಕು ಪುನರ್ ವಿಂಗಡಣೆಯನ್ನು ಮಾಡುತ್ತೀರೋ ಆಗ ನನ್ನ ಕ್ಷೇತ್ರಕ್ಕೆ ಆಗುತ್ತಿರುವ ಅನ್ಯಾಯ ಹೋಗಿ ನ್ಯಾಯ ಸಿಕ್ಕುತ್ತದೆ. ಆದುದರಿಂದ ತಾವು ಈ ಕೆಲಸವನ್ನು ಆದಷ್ಟು ಬೇಗ ಮಾಡಿ ಈ ಪಾಪದ ಜನರಿಗೆ ಸಹಾಯ

ಸಿಕ್ಕುವಂತೆ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರ ಎಂದರೆ, ಅನೇಕ ಗ್ರಾಮಗಳಲ್ಲಿ ಗ್ರಾಮಲೆಕ್ಕಿಗರ ಹುದ್ದೆಗಳು ಇನ್ನೂ ಖಾಲಿ ಇವೆ. ಈ ಹುದ್ದೆಗಳು ಖಾಲಿ ಇರುವ ಕಾರಣ ಸಾಮಾನ್ಯ ಜನರು ಹೋಗಿ ಈ ಗ್ರಾಮ ಲೆಕ್ಕಿಗರು ಯಾವಾಗ ಬರುತ್ತಾರೆಂದು ಕಾದು ಕಾದು ಪ್ರತಿದಿವಸ ವಾಪಸ್ಸು ಹೋಗತಕ್ಕ ಪರಿಸ್ಥಿತಿ ಬಂದಿದೆ. 3-4 ಗ್ರಾಮಗಳಿಗೆ ಒಬ್ಬ ಗ್ರಾಮಲೆಕ್ಕಿಗ ಇರುವುದರಿಂದ ಈ ಹಳ್ಳಿಯ ಜನರು ಬಂದು ಇವರನ್ನು ಕಾಯಬೇಕಾದ ಸಂದರ್ಭ ಬಂದಿದೆ. ಆದುದರಿಂದ ಎಲ್ಲ ಗ್ರಾಮಗಳಿಗೂ ಗ್ರಾಮಲೆಕ್ಕಿಗರನ್ನು ನೇಮಕ ಮಾಡಬೇಕೆಂದು ಒತ್ತಾಯಪಡಿಸುತ್ತೇನೆ. ಏಕೆಂದರೆ ನನ್ನ ತಾಲೂಕಿನಲ್ಲಿ ನನ್ನ ಜನರು ಬಹಳ ತೊಂದರೆಪಡುತ್ತಾದ್ದಾರೆ. ಈ ಸಾರಿ ಅನಧಿಕೃತವಾಗಿ ಭೂಮಿಯನ್ನು ಸಕ್ರಮಗೊಳಿಸುವಂಥ ಒಂದು ಒಳ್ಳೆಯ ಕಾನೂನ್ನು ತಾವು ಮಾಡಿದ್ದೀರಿ. ಅನೇಕ ರೈತರು ಆ ಅನುಧಿಕೃತವಾಗಿ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದಾರೆ. ಇದರಲ್ಲಿ ಯಾವ ರೀತಿಯಾದ ಹಕ್ಕನ್ನು ಹೊಂದದೆ ಅದರ ಮೂಲಕ ಸಾಲ ಮಾಡುವಂಥ ಯಾವುದೇ ಹಕ್ಕನ್ನು ಕಳೆದುಕೊಂಡು ಆ ಭೂಮಿಯನ್ನು ಅಭಿವೃದ್ಧಿಪಡಿಸುವುದಕ್ಕೆ ಅಸಾಧ್ಯವಾಗಿದೆ. ನಮ್ಮ ಸರ್ಕಾರದವರು ಬಹಳ ಧೈರ್ಯವಾಗಿ ಇಂಥ ಒಂದು ಕಾನೂನನ್ನು ತಂದು ಆ ಜನರಿಗೆ ಉಪಕಾರ ಮಾಡಿದ್ದಾರೆ. ಆದರೆ ನಮ್ಮ ಜಿಲ್ಲೆಯಲ್ಲಿ ಬಹಳ ಹಿಂದನ ಕಾಲದಿಂದಲೂ ಇದ್ದಂಥ ಕುಮ್ಮಿ ಹಕ್ಕಿನಿಂದಾಗಿ ಬಹಳ ತೊಂದರೆಯಾಗಿದೆ. ಏತಕ್ಕೆಂದರೆ ರೈತರು ಭೂಮಿಯ ಸುತ್ತಲಲ್ಲಿ ಸುಮಾರು ನಾಲ್ಕುವರೆ ಚೈನಿನಷ್ಟು ಸ್ಥಳವನ್ನು ಕುಮ್ಮಿಯಾಗಿ ಹೊಂದಿದ್ದರೆ ಅವನು ಅದನ್ನು ಅಭಿವೃದ್ಧಿಪಡಿಸಿಲಿಕ್ಕೆ ಆಗುವುದಿಲ್ಲ. ಅದನ್ನು ಮಾಡಲಿಕ್ಕೆ ಆಗುವುದಿಲ್ಲ. ಅದ್ದರಿಂದ ಅಕ್ರಮವನ್ನು ಭೂಮಿಯನ್ನು ಸಕ್ರಮಗೊಳಿಸುವ ಈ ಕಾನೂನಿನಲ್ಲಿ ಸೂಕ್ತವಾದ ತಿದ್ದುಪಡಿ ತಂದು ಈ ಕುಮ್ಮಿ ಹಕ್ಕನ್ನು ಈ ರೈತರಿಗೆ ಕೊಡುವಂಥ ಕ್ರಮವನ್ನು ನಾವು ಮಾಡಬೇಕು. ಅದಕ್ಕೆ ಬೇಕಾದಂಥ ಒಂದು ಬದಲಾವಣೆಯನ್ನು ಕೂಡ ತಾವು ತರಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ ಮುಜರಾಯಿ ಇಲಾಖೆ ನಿಜವಾಗಿಯೂ ಯಾವ ದೇಶದ, ರಾಜ್ಯದ, ಊರಿನ ಅಭಿವೃದ್ಧಿ ದೇವಸ್ಥಾನಗಳ ಸ್ಥಿತಿ ಉತ್ತಮವಾಗಿದ್ದರೆ ಆ ಊರಿಗೆ ಒಳ್ಳೆಯದಾಗುತ್ತದೆಂದು ಹೇಳಿ ನಮ್ಮ ಹಿರಿಯರ ಅಂಬೋಣ. ನಮ್ಮ ಕರ್ನಾಟಕ ರಾಜ್ಯದಾದ್ಯಂತ ಅಂದರೆ ಇಡಿ ರಾಜ್ಯಕ್ಕೆ ಎಲ್ಲಾ ಇಲಾಖೆಗಳಿಗೂ ಕಾನೂನು ಒಂದೇ ಆಯಿತು. ಆದರೆ ಆ ಮುಜರಾಯಿ ಇಲಾಖೆಯ ಕಾನೂನು 5 ಕಡೆಯಿಂದ ಬಂದಂಥ ಕನ್ನಡಿಗರ 5 ರೀತಿಯ ಕಾನೂನು ಇದ್ದು ಮುಜರಾಯಿ ಇಲಾಖೆಗೆ ಇವತ್ತಿನತನಕ ಒಂದು ಜೀವನ ಒಳಗೆ ತರಲಿಕ್ಕೆ ಆಗಲಿಲ್ಲ. ಇದು ಅತ್ಯಂತ ದುರ್ದೈವದ ಸಂಗತಿಯಾಗಿದೆ. ಬಹುಶಃ ನಮ್ಮ ಕರ್ನಾಟಕ ಸರ್ಕಾರದ ಜೊತೆಗೆ ತನ್ನ ಕಣ್ಣನ್ನು ಹರಿಸಲಿಲ್ಲ, ಬಹುಶಃ ಈ ಅನ್ಯಾಯವನ್ನು ದೂರ ಮಾಡಲಿಕ್ಕೆ ದೇವರ ದಯ ನಮಗೆ ಇನ್ನು ಸಿಗಲಿಲ್ಲವೆಂದು ಹೇಳಿ ಇಲ್ಲಿ ನಾವು ಪಶ್ಚಾತ್ತಾಪ ಪಡುವಂಥ ಸಂದರ್ಭವಿದೆ. ಆದ್ದರಿಂದ ನಮ್ಮ ಮುಜರಾತಿ ಇಲಾಖೆಯ ಮಂತ್ರಿಗಳು 1991ರ ಅಂತ್ಯದೊಳಗೆ ನಮ್ಮ ಇಡೀ ಕರ್ನಾಟಕಕ್ಕೆ ಅನ್ವಯಿಸುವ ಮುಜರಾಯಿ ಕಾನೂನನ್ನು ತಂದು ಈ ದೇವರಿಗೆಲ್ಲ ಸುಖವನ್ನು ಮಾಡಬೇಕೆಂದು ಹೇಳಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಹಿಂದಿನ ಕಾಲದಲ್ಲಿ ಯಾವ ಅಸ್ಪೃಶ್ಯರು ಹರಿಜನರು ದೇವಸ್ಥಾನದ 7 ಬಾಗಿಲು ಹೊರಗೆ ನಿಂತು ಬಹಳ ಹಿಂದುಳಿದ ವರ್ಗದವರಾಗಿದ್ದರು. ಧಾರ್ಮಿಕ ದೃಷ್ಟಿಯಿಂದ ಅವರಿಗೆ ಯಾವ ಸೌಲಭ್ಯವೂ ದೊರಕುತ್ತಿರಲಿಲ್ಲ. ಇಂದಿಗೂ ಸಹ ಅದೇ ಕಾನೂನು ಇದೆ. ಅದು ಇರುವುದರಿಂದ ನಮ್ಮ ಜಿಲ್ಲೆಯಲ್ಲಿ ಅಸ್ಪೃಶ್ಯರಿಗೆ ಹರಿಜನರಿಗೆ ಯಾವ ದೇಶಸ್ಥಾನದಲ್ಲಿಯೂ ಧರ್ಮದರ್ಶನವಿಲ್ಲ, ಹಿಂದುಳಿದವರಿಗೆ ದೇವಸ್ಥಾನದಲ್ಲಿ ಒಂದು ಉತ್ತಮವಾದ ಅಂದರೆ ಅದನ್ನು ನಡೆಸುವಂಥ ಸ್ಥಾನಮಾನ ಇನ್ನೂ ಸಿಕ್ಕಿಲ್ಲವೆಂದರೆ

ಮುಖ್ಯವಾಗಿ ಕರ್ನಾಟಕ್ಕೆ ಮುಜರಾಯಿಗೆ ಒಂದು ಕಾನೂನು ರಚನೆಯಾಗದೇ ಇರುವುದು ಮುಖ್ಯ ಕಾರಣವಾಗಿದೆ. ಆದ್ದರಿಂದ ಹರಿಜನರು ಮುಂದಕ್ಕೆ ಬರಬೇಕು, ಅಸ್ಪೃಶ್ಯರು ಮುಂದಕ್ಕೆ ಬರಬೇಕೆಂದರೆ ಯಾವ ರೀತಿ ಸಾಧ್ಯ? ನಾವು ಪೂಜೆ ಮಾಡುವಂಥ ದೇವಸ್ಥಾನದಲ್ಲಿ ಅವರಿಗೆ ಆಡಳಿತ ನಡೆಸುವಂಥ ಸ್ಥಾನಮಾನಗಳು ಸಿಕ್ಕದಿದ್ದರೆ ಅವರಲ್ಲಿರುವಂಥ ಕೀಳರಿಮೆ ಸ್ವಾಭಾವಿಕವಾಗಿ ಬೆಳೆದು ಮೇಲ್ಜಾತಿಯವರ ಜೊತೆಯಲ್ಲಿ ಬೇರೆಯಲು ದೂರವಾಗುವಂಥ ಪರಿಸ್ಥಿತಿ ಬಂದಿದೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ ಒಂದು ವೇಳೆ ಕಾನೂನನ್ನು ಏಕ ಕಾನೂನನ್ನಾಗಿ ತರುವುದಕ್ಕೆ ತಡವಾದರೆ ತಾವು ಒಂದು ಆರ್ಡಿನೆನ್ಸ್ ಮಾಡಿಯಾದರೂ ಪ್ರತಿಯೊಂದು ದೇವಸ್ಥಾನದಲ್ಲಿ ಒಬ್ಬ ಹರಿಜನರನ್ನು ಧರ್ಮದರ್ಶಿಯಾಗಿ ನೇಮಕ ಮಾಡಿ ಈ ಕೀಳರಿಮೆಯನ್ನು ದೂರಿಕರಿಸುವುದಕ್ಕೆ ನೀವು ಒಂದು ಮಾರ್ಗದರ್ಶನವನ್ನು ನೀಡಬೇಕೆಂದು ಈ ಸಂದರ್ಭದಲ್ಲಿ ನಿಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ.

ಇನ್ನು ಮೂರನೆಯದಾಗಿ ಸಾರಿಗೆ ಇಲಾಖೆ ಬಗ್ಗೆ ಹೇಳುವುದಾದರೆ ನನ್ನ ಕ್ಷೇತ್ರದಲ್ಲಿ ಮೂರು ಬಸ್‌ಗಳು ಅಂದಿನ ಕಾಲದಲ್ಲಿ ಅಂದರೆ ಎರಡು ವರ್ಷಗಳ ಹಿಂದೆ ನನ್ನ ಕ್ಷೇತ್ರಕ್ಕೆ ಬರುತ್ತಿದ್ದವು. ಚಿಕ್ಕಮಗಳೂರುನಿಂದ ಮೂಡಬಿದರೆ ಮಾರ್ಗವಾಗಿ ಮುಲ್ಕಿಗೆ ಒಂದು ಬಸ್, ಕಟೀಲ್‌ನಿಂದ ಮುಲ್ಕಿ ಮಾರ್ಗವಾಗಿ ಮಂಗಳೂರಿಗೆ ಒಂದು ಬಸ್, ಮುಲ್ಕಿಯಿಂದ ಬೆಂಗಳೂರಿಗೆ ಒಂದು ಬಸ್ ಇತ್ತು. ಆದರೆ ಕೊಲ್ಲಿ ಯುದ್ಧದ ಕೊಳ್ಳಿಯಿಂದ ಈ ಬಸ್ಸಿನ ಸಂಚಾರಕ್ಕೆ ನನ್ನ ಕ್ಷೇತ್ರಕ್ಕೆ ತೊಂದರೆಯುಂಟಾಯಿತು. ಚಿಕ್ಕಮಗಳೂರು ಬಸ್ ನಿಂತುಹೋಯಿತು. ಮಾನ್ಯ ಮಂತ್ರಿಗಳಿಗೆ ನಿವೇದನೆ ಕೊಟ್ಟೆ. ಮಾನ್ಯ ದೇವರಾಜಅರಸ್‌ರವರ ಕಾಲದಲ್ಲಿ ಈ ಬಸ್‌ನ ಸೌಕರ್ಯ ನಮಗೆ ಕೊಟ್ಟಿದ್ದರು. ಪುನಃ ಖಂಡಿತವಾಗಿಯೂ ಕೊಡುತ್ತೇವೆಂದು ಹೇಳಿದ್ದರು. ಆದರೆ ಬಸ್ ಸೌಕರ್ಯ ನಮಗೆ ಗಗನಕುಸುಮವಾಗಿದೆ. ಈ ಬಾರಿಯಾದರೂ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ನಮ್ಮಲ್ಲಿ ಪವಿತ್ರ ಕ್ಷೇತ್ರವಾದ ಕಟೀಲು ಏನಿದೆ ಅಲ್ಲಿಗೆ ಮುಲ್ಕಿ ಮೂಲಕ ಬೆಂಗಳೂರಿಗೆ ಬರುವ ಸುಖಾಸೀನ ಬಸ್ಸನ್ನು ಕೊಡಬೇಕೆಂದು ಕೇಳಿಕೊಂಡಾಗ ಖಂಡಿತ ಕೊಡುತ್ತೇವೆಂದು ಹೇಳಿದ್ದರು. ದೇವರು ನಿಮಗೆ ಒಳ್ಳೆಯ ಮನಸ್ಸು ಕೊಟ್ಟು ಕಟೀಲುವಿನಿಂದ ಮುಲ್ಕಿ ಮೂಲಕ ಬೆಂಗಳೂರಿಗೆ ಬರುವ ಸುಖಾಸನ ಬಸ್ಸನ್ನು ಒದಗಿಸಿ ಆ ಬಸ್ಸಿನಲ್ಲಿ ನಾನು ಬೆಂಗಳೂರಿಗೆ ಬರುವ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಆಹಾರದ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಹಾರ ಹಂಚಿಕೆಯಲ್ಲಿ ಹಳ್ಳಿಯ ಜನರಿಗೆ ಬಹಳ ತೊಂದರೆ ಯಾಗಿದೆ. ಕಾನೂನು ಮಾಡುವವರು ಪೇಟೆಯಲ್ಲಿರತಕ್ಕ ಅಧಿಕಾರಿಗಳು. ಹೀಗಾಗಿ ಹಳ್ಳಿಗೊಂದು ನ್ಯಾಯ, ಪೇಟೆಗೊಂದು ನ್ಯಾಯ ಆಗಿದೆ. ಪೇಟೆಯವರಿಗೆ ಸೀಮೆಎಣ್ಣೆ, ಅಕ್ಕಿ ಇತ್ಯಾದಿ ಎಲ್ಲಾ ವಸ್ತುಗಳ ಸವಲತ್ತು ಜಾಸ್ತಿ, ಪೇಟೆಯಲ್ಲಿ ಕೆಲಸ ಮಾಡುವ ಅಧಿಕಾರ ವರ್ಗದವರಿಗೆ ಸಂಬಳ ಜಾಸ್ತಿ. ಹೌಸ್ ರೆಂಟ್ ಅಲೋಯನ್ಸ್ ಕೊಡುತ್ತಿದ್ದಾರೆ. ಹಳ್ಳಿಯಲ್ಲಿ ವಾಸವಾಗಿರುವವರಿಗೆ ಯಾವುದೂ ಇಲ್ಲ. ಹೀಗಾಗಿ ಯಾರು ಟ್ರಾನ್ಸ್‌ಫರ್ ಆದರೂ ಪೇಟೆ ಬಿಟ್ಟು ಹಳ್ಳಿಗೆ ಹೋಗುವುದಕ್ಕೆ ತಯಾರಿಲ್ಲ. ಹೌಸ್‌ರೆಂಟ್ ಅಲೋಯನ್ಸ್ ಅನ್ನು ಪೇಟೆಯವರಿಗೆ ಕೊಟ್ಟ ಹಾಗೆ ಹಳ್ಳಿಯವರಿಗೂ ಕೊಡಿ. ಆಗ ಅಧಿಕಾರಿಗಳು ಹಳ್ಳಿಗೆ ಹೋಗಿ ವಾಸ ಮಾಡಲಿಕ್ಕೆ ತಯಾರಾಗುತ್ತಾರೆ. ಹಳ್ಳಿ ಮತ್ತು ಪೇಟೆಯಲ್ಲಿ ಆಹಾರ ಮತ್ತು ಪದಾರ್ಥಗಳು ಸೀಮೆಎಣ್ಣೆ ವಿತರಣೆ ಮಾಡುವಲ್ಲಿ ಇರತಕ್ಕ ವ್ಯತ್ಯಾಸವನ್ನು ಹೋಗಲಾಡಿಸಿ. ಹಳ್ಳಿಯವರಿಗೆ, ಪೇಟೆಯವರಿಗೆ ಕೊಟ್ಟಂತೆ ಸಕ್ಕರೆಯನ್ನು ಕೊಟ್ಟರೆ ಅವರಿಗೇನು ಡಯಾಬಿಟೀಸ್ ರೋಗ ಖಂಡಿತಾ ಬರುವುದಿಲ್ಲ. ಸೀಮೆಎಣ್ಣೆ ಜಾಸ್ತಿ ಕೊಟ್ಟರೆ ಮೈಮೇಲೆ ಸೀಮೆಎಣ್ಣೆ ಹಾಕಿಕೊಂಡು ಸತ್ತುಹೋಗುತ್ತಾರೆಂಬ ಭಯ ಬೇಡ. ಈ ತಾರತಮ್ಯವನ್ನು ಹೋಗಲಾಡಿಸಿ ಹಳ್ಳಿಯವರಿಗೂ ಮತ್ತು

ಪೇಟೆಯವರಿಗೂ ಒಂದೇ ರೀತಿಯಲ್ಲಿ ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು .ಮುಗಿಸುತ್ತೇನೆ.

+ ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರ್) : ಮಾನ್ಯ ಉಪಾಧ್ಯಕ್ಷಿಯವರೆ, ಸಹಕಾರ ಇಲಾಖೆ, ಕಂದಾಯ ಇಲಾಖೆ, ಮುಜರಾತಿ ಇಲಾಖೆ ಹೀಗೆ ಅನೇಕ ಇಲಾಖೆಯ ಬೇಡಿಕೆಗಳನ್ನು ಸಭೆಯ ಮುಂದಿಟ್ಟಿದ್ದಾರೆ. ಈ ರೀತಿ ಚರ್ಚೆಗೆ ಬೇರೆ ಯಾವುದೇ ಬೇಡಿಕೆಗಳ ಮೇಲೆ ಅವಕಾಶ ಸಿಗದಿದ್ದರೂ ಈಗ ಆ ಒಂದು ಅವಕಾಶವನ್ನು ಕೊಟ್ಟದ್ದಕ್ಕೆ ತಮಗೆ ಧನ್ಯವಾದಗಳು. ಈ ಸಹಕಾರ ಇಲಾಖೆ ಬಗ್ಗೆ ಒಂದೇ ಮಾತಿನಲ್ಲಿ ಹೇಳಬೇಕಾದರೆ ಇದು ಒಂದು ಅಸ್ಥಿಪಂಜರ ಇದ್ದಹಾಗೆ ಇದೆ. ಈ ರಾಜ್ಯದ ಜನತೆ ಅದರಲ್ಲೂ ಗ್ರಾಮೀಣ ಜನರ ಅಭಿವೃದ್ಧಿ ಆಗಬೇಕಾದರೆ ಈ ಸಹಕಾರ ಇಲಾಖೆ ಅಗತ್ಯ. ಸಹಕಾರ ಕಾರ್ಯಕ್ರಮಗಳು ಜನರಿಗೆ ಮುಟ್ಟಬೇಕಾದರೆ ಇದು ಅವಶ್ಯಕ. ಆದರೆ ರಾಜ್ಯದಲ್ಲಿರತಕ್ಕ ಸಹಕಾರ ಇಲಾಖೆ ಅಸ್ಥಿಪಂಜರ ರೂಪದಲ್ಲಿದೆ ರಾಜ್ಯದಲ್ಲಿರತಕ್ಕ ಪ್ರಾಥಮಿಕ ಸಹಕಾರ ಸಂಘಗಳು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಹಕಾರ ಸಂಘಗಳು ಸಕಾಲಕ್ಕೆ ಚುನಾವಣೆನ್ನು ನಡೆಸುತ್ತಿಲ್ಲ. ರಾಜಕೀಯ ಹಸ್ತಕ್ಷೇಪ, ಸರ್ಕಾರ ನಾಮಿನೇಷನ್ ಮಾಡುವ ಪದ್ಧತಿ ಮತ್ತು ಸಾಲ ಮನ್ನಾ ಯೋಜನೆಗಳನ್ನು ಸರಿಯಾಗಿ ಕಾರ್ಯ ರೂಪದಲ್ಲಿ ತರಲಿಲ್ಲ. ರೈತರಿಗೆ ಕೊಡತಕ್ಕ ಕಡಿಮೆ ದರದ ಅಂದರೆ 7 ರೂಪಾಯಿ ಬಡ್ಡಿ ದರದ ಯೋಜನೆಯನ್ನು ತೆಗೆದುಹಾಕಿ ಸಾಲ ಮನ್ನಾ ಯೋಜನೆಯನ್ನು ಜಾರಿ ಮಾಡಲಿಲ್ಲ. ಸರ್ಕಾರ ನಿರ್ಧಿಷ್ಟವಾದ ನೀತಿಯನ್ನು ಪ್ರಕಟಿಸಿದೆ ಹೋದುದರಿಂದ ಸಹಕಾರ ಸಂಘಗಳು ಬಾಗಿಲನ್ನು ಮುಚ್ಚಿದೆ. ಅಲ್ಲಿ ಪಡಿತರ ವಿತರಣೆ ಸರಿಯಾಗಿ ನಡೆಯುತ್ತಿಲ್ಲ, ಸೀಮೆಎಣ್ಣೆ ಸಿಗುತ್ತಿಲ್ಲ, ಸಹಕಾರ ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ಪಗಾರ ಕೊಡುವುದಕ್ಕೆ ಹಣ ಇಲ್ಲದಂತಹ ಪರಿಸ್ಥಿತಿಯನ್ನು ತಂದೊಡ್ಡಿದೆ ಸರ್ಕಾರ. ಈಗಲಾದರೂ ಸಕಾಲಕ್ಕೆ ಚುನಾವಣೆ ಮಾಡುವ ವ್ಯವಸ್ಥೆಯನ್ನು ಮಾಡಬೇಕು ಮಾನ್ಯ ಸಚಿವರು. ಸಾಲ ಮನ್ನಾ ಮಾಡುವುದಕ್ಕೆ ತಮ್ಮಿಂದ ಆಗುವುದಿದ್ದರೆ ಮಾಡುತ್ತೇವೆಂದು ಹೇಳಿ, ಇಲ್ಲದಿದ್ದರೆ ನೇರವಾಗಿ ಸಾಧ್ಯವಿಲ್ಲವೆಂದು ಹೇಳಿ.

ಶ್ರೀ ಆರ್.ಎನ್. ನಾಯಕ್: ಸರ್ಕಾರಕ್ಕೆ ಪಗಾರ ಕೊಡುವುದಕ್ಕೆ ಆಗುವುದಿಲ್ಲ ಅಂದ್ರಲ್ಲ...

ಶ್ರೀ ಬಿ.ಹೆಚ್. ಬನ್ನಿಕೋಡ್ : ಸರ್ಕಾರಕ್ಕೆ ಅಲ್ಲ ಸಹಕಾರ ಸಂಘಗಳಿಗೆ. ತಾವು ಭಾಷಣದ ಕಡೆ ಲಕ್ಷ್ಯ ಕೊಟ್ಟಿಲ್ಲವೆಂದು ಕಾಣುತ್ತದೆ. ಸಹಕಾರ ಸಂಘಗಳು ಕ್ಷೀಣವಾಗಿವೆ, ಸಂಬಳ ಕೊಡುವುದಕ್ಕೆ ಹಣ ಇಲ್ಲದಂತಹ ಪರಿಸ್ಥಿತಿ ಬಂದಿದೆ.

4.45 ಪಿ.ಎಂ

ಈ ಸಾಲ ಮನ್ನಾ ನೀತಿ ನಿರ್ಣಯ ಬೇಗ ಆಗಬೇಕು. ಕನಿಷ್ಠ ಪಕ್ಷ ಕಡಿಮೆ ದರದ ಬಡ್ಡಿಯಲ್ಲಾದರೂ ಕೊಡುತ್ತೇವೆಂದು ಹೇಳಿದ್ದಿರಿ. ಅದನ್ನು ಕೊಡಲಿಲ್ಲ. ಮತ್ತೆ ಅಲ್ಲಿ ಕೆಲಸ ಮಾಡತಕ್ಕ ಸಹಕಾರ ಸಂಘದ ಕಾರ್ಯದರ್ಶಿಗಳಿಗೆ ಸರ್ಕಾರಿ ಇಲಾಖೆ ಅಧಿಕಾರಿಗಳಿಗೆ ಇರುವ ಸೇವಾ ಸೌಲಭ್ಯ ಕೊಡಬೇಕೆಂದು ಅವರ ಬೇಡಿಕೆ ಬಹಳ ದಿವಸಗಳಿಂದ ಇದ್ದರೂ ಸಹ ಅದನ್ನು ಸರ್ಕಾರ ಕಣ್ಣೆತ್ತಿ ನೋಡಲಿಲ್ಲ, ಪರಿಶೀಲನೆ ಮಾಡುತ್ತಿಲ್ಲ. ಅಲ್ಲ ಗ್ರಾಮಾಂತರ ಪ್ರದೇಶದಲ್ಲಿ ಕೆಲಸ ಮಾಡತಕ್ಕ ಕಾರ್ಯದರ್ಶಿಗಳ ಗೋಳು ಬಹಳ ಕಠಿಣವಾಗಿದೆ. ಈ ಸಹಕಾರ ಆಂದೋಳದ ಸರಿಯಾಗಬೇಕಾದರೆ ಚುನಾವಣೆ ಸರಿಯಾದ ಸಮಯಕ್ಕೆ ನಡೆಯಬೇಕು. ನಾಮಿನೇಷನ್ ಮಾಡುವುದು ನಿಲ್ಲಬೇಕು. ಅಲ್ಲಿರತಕ್ಕ ಕಾರ್ಯದರ್ಶಿಯವರಿಗೆ ಸರಿಯಾದ ಸಂಬಳ ಮತ್ತೆ ಉಳಿದ ಸರ್ಕಾರಿ ನೌಕರರಿಗೆ ಸಿಗುವಂಥ ಸಂಬಳ ಸೇವಾ ಸೌಲಭ್ಯ ಸಿಗಬೇಕೆಂದು ಹೇಳುತ್ತೇನೆ. ಉತ್ತಮ ಸ್ಥಿತಿಗೆ ತರುವ ಸಲುವಾಗಿ ನಾಲ್ಕೈದು ಸಹಕಾರ ಸಂಘಗಳನ್ನು ಸೇರಿಸಿ

ದೊಡ್ಡ ಸಂಘವನ್ನು ಮಾಡಿ ಆರ್ಥಿಕ ಸುಧಾರಣೆ ಆಗಬಹುದು ಎಂದು ಅಮಾಲ್ಗಮೇಷನ್ ಮಾಡಿದ್ದೀರಿ. ಆದರೆ ಉಳಿದ ಎಲ್ಲಾ ಜಿಲ್ಲೆಗೆ ಮಾಡಿ ಧಾರವಾಡ ಜಿಲ್ಲೆಗೆ ಬಿಟ್ಟಿದ್ದೀರಿ. ಈ ಸಾರಿ ಅಮಾಲ್ಗಮೇಷನ್ ಮಾಡಿದ್ದೀರಿ. ಅವುಗಳನ್ನು ಸೇಪರ್ಡಡೆ ಮಾಡಿದ್ದೀರಿ. ಅಲ್ಲಿರತಕ್ಕ ನೀತಿ ನಿಯಮ ಬಿಟ್ಟು ಕಾನೂನುಬಾಹಿರವಾಗಿ ಅಮಾಲ್ಗಮೇಷನ್ ಆಗಿದೆ. ಯಾವ ಸಂಘಗಳಲ್ಲಿ ಇವತ್ತು ಮಿಸ್ ಅಪ್ರೋಪ್ರಿಯೇಷನ್ ಆಗಿದೆ, ಹಣ ಅಪವ್ಯಯ ಆಗಿದೆ, ಲಕ್ಷಾಂತರ ರೂಪಾಯಿ ಕೇಂದ್ರ ಬ್ಯಾಂಕಿಗೆ ಕೊಡತಕ್ಕ ಹಣಕ್ಕಿಂತ ಸದಸ್ಯರಿಂದ ಬರತಕ್ಕ ಹಣ ಬರದೆ ಕೆಟ್ಟುಹೋದಂಥ ಸಂಘಸಂಸ್ಥೆಗಳಿಗೆ ಉತ್ತಮ ಸಂಸ್ಥೆಗಳನ್ನು ಸೇರಿಸಿ ಎಲ್ಲೋ ಒಂದೆರಡು ಒಳ್ಳೆ ಸಂಸ್ಥೆಗಳಿದ್ದರೆ ಅದನ್ನು ಕೂಡ ದಿವಾಳಿ ಮಾಡುವಂಥ ಕಾನೂನುಬಾಹಿರ ಕೆಲಸ ಇಲಾಖೆಯಿಂದ ನಡೆದಿದೆ. ಅದರಲ್ಲಿ ರಾಜಕೀಯ ಹಸ್ತಕ್ಷೇಪ ಇದೆ. ದಯವಿಟ್ಟು ಇದನ್ನು ಮರುಪರಿಶೀಲನೆ ಮಾಡಬೇಕು. ಉತ್ತಮ ಸಂಸ್ಥೆಗಳು ಸದೃಢವಾಗಿ ಬೆಳೆಯುವುದಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಸೂಚನೆಯನ್ನು ತಮ್ಮ ಮೂಲಕ ಕೊಡುತ್ತೇನೆ ಮಾನ್ಯ ಅಧ್ಯಕ್ಷಿಣಿಯವರೆ. ಇಷ್ಟನ್ನು ಹೇಳಿ, ಈ ಸಂಸ್ಥೆ ಬಗ್ಗೆ ಹೇಳತಕ್ಕದ್ದು ಬಹಳ ಇದೆ. ಆದರೆ ಮಾನ್ಯ ಸಚಿವರು ಇಷ್ಟನ್ನು ಮಾಡುತ್ತಾರೆಂದು ಹೇಳಿ ಇಲ್ಲಿ ಅಸ್ತಿಪಂಜರದಂತೆ ಇರತಕ್ಕ ಸಹಕಾರಿ ಸಂಸ್ಥೆಗಳನ್ನು ಬಲಿಷ್ಠವಾಗಿ ಬೆಳೆಯುವುದಕ್ಕೆ ತೀವ್ರ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಈ ಸದನದಲ್ಲಿ ಅನೇಕ ಸಲಹೆ ಸೂಚನೆಗಳನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ತೀವ್ರವಾಗಿ ಅಭಿವೃದ್ಧಿ ಮಾಡುವುದಕ್ಕೆ ಅದರ ಕಾರ್ಯಚರಣೆ ಸರಿಯಾಗಿ ನಡೆಯುವುದಕ್ಕೆ ಕ್ರಮ ತೆಗೆದುಕೊಂಡು ಗ್ರಾಮೀಣ ಜನರ ಅಭಿವೃದ್ಧಿಗೆ ಸಂಸ್ಥೆಯ ಅಭಿವೃದ್ಧಿಗೆ ಪ್ರಯತ್ನ ಮಾಡಬೇಕೆಂದು ಸನ್ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇಲ್ಲಿ ನಾನು ಯಾವುದೇ ಟೀಕೆ, ಪ್ರತಿಟೀಕೆಗೆ ಹೋಗುವುದಿಲ್ಲ. ಕೇವಲ ರಚನಾತ್ಮಕವಾದ ಒಂದೆರಡು ಸಲಹೆಗಳನ್ನು ಮಾತ್ರ ಕೊಡುವುದಕ್ಕೆ ಇಷ್ಟಪಡುತ್ತೇನೆ. ಆಹಾರ ಇಲಾಖೆ ಬಗ್ಗೆ ಈಗಾಗಲೇ ಅನೇಕ ಸ್ನೇಹಿತರು ಹೇಳಿದರು. ಶಹರೆಯಲ್ಲಿರುವ ಜನರ ಹೊಟ್ಟೆ ಬೇರೆ ಅಲ್ಲ ಹಳ್ಳಿಯಲ್ಲಿರುವ ಜನರ ಹೊಟ್ಟೆ ಬೇರೆ ಅಲ್ಲ. ಹಳ್ಳಿಯಲ್ಲಿರುವ ಜನರ ಹೊಟ್ಟೆ ಸಣ್ಣಗಿಲ್ಲ. ಮಾನ್ಯ ಸಚಿವರು ಉತ್ತರ ಕೊಟ್ಟು ಶಹರೆಗೆ ಏತಕ್ಕೆ ಆಹಾರಧನ್ಯ ವಿತರಣೆ ಮಾಡತಕ್ಕ ಪದ್ಧತಿ ಇದೆ ಎಂದು ಹೇಳಿದ್ದಾರೆ. ಶಹರೆಯಲ್ಲಿ ಬೆಳೆಯುವುದಿಲ್ಲ ಅದಕ್ಕೆ ಕೊಡುತ್ತೇವೆ, ಹಳ್ಳಿಯಲ್ಲಿರುವ ಜನ ಆಹಾರಧಾನ್ಯ ಮತ್ತು ಅಗತ್ಯ ವಸ್ತುಗಳನ್ನು ಬೆಳೆಯುತ್ತಿದ್ದಾರೆ ಅದಕ್ಕೆ ಕಡಿಮೆ ಕೊಡುತ್ತಿದ್ದೇವೆ ಎಂದು ಹೇಳಿದ್ದಾರೆ.

ಮಾನ್ಯ ಸಚಿವರಿಗೆ ಕೇಳುತ್ತಿದ್ದೇನೆ ಚಿಮಣಿ ಎಣ್ಣೆಯನ್ನು ಹಳ್ಳಿಯಲ್ಲಿ ನಾವು ಉತ್ಪಾದನೆ ಮಾಡುತ್ತಿದ್ದೇವೆಯೆ? ತಿನ್ನುವ ಎಣ್ಣೆಯನ್ನು ಉತ್ಪಾದನೆ ಮಾಡುತ್ತಿದ್ದೇವೆಯೇ? ಸಕ್ಕರೆಯನ್ನು ಉತ್ಪಾದನೆ ಮಾಡುತ್ತಿದ್ದೇವೆಯೆ? ತಮ್ಮ ಈ ಕಾರಣ ಯಾವುದೂ ಸರಿಯಲ್ಲ. ಹಳ್ಳಿಯ ಜನರನ್ನು ಇಷ್ಟೊಂದು ನಿರ್ಲಕ್ಷ್ಯ ನೀವು ಮಾಡಿದರೆ ನಿಮ್ಮನ್ನು ನಮ್ಮನ್ನು ಆ ಜನ ನಿರ್ಲಕ್ಷ್ಯ ಮಾಡದೇ ಇರಲಾರದು ಎಂಬ ಸೂಚನೆಯನ್ನು ಕೊಡುತ್ತಿದ್ದೇನೆ. ಇಬ್ಬರನ್ನೂ ಸಮವಾಗಿ ನೋಡಬೇಕು. ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎಂದು ಭಾಷಣ ಮಾಡುತ್ತಾ ಗ್ರಾಮೀಣ ಜನತೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ ತಮ್ಮ ಇಲಾಖೆ. ಕೇಂದ್ರ ಸರ್ಕಾರದ ಬಗ್ಗೆ ಹೇಳುತ್ತೀರಿ. ಕೇಂಧ್ರ ಸರ್ಕಾರದಲ್ಲೂ ನಮ್ಮವರೇ ಪ್ರತಿನಿಧಿಗಳಿದ್ದಾರೆ. ಕೇಂದ್ರಕ್ಕೆ ಸಹ ಮನವರಿಕೆ ಮಾಡಿಕೊಡಬೇಕು. ಗ್ರಾಮೀಣ ಪ್ರದೇಶದ ಜನ ಮತ್ತು ನಗರ ಪ್ರದೇಶದ ಜನರಿಗೆ ಇರುವ ತಾರತಮ್ಯ ಹೋಗಬೇಕು. ಸಂಪೂರ್ಣವಾಗಿ ಪಡಿತರ ವಿತರಣೆ ಮಾಡುವ ವ್ಯವಸ್ಥೆಯನ್ನು ತಾವು ಮಾಡಬೇಕು. ಹೆಚ್ಚಿನ ಮುತುವರ್ಜಿಯಿಂದ ಇದನ್ನು ಮಾಡಬೇಕೆಂದು ಮಾನ್ಯ ಸಚಿವರಿಗೆ ಹೇಳುತ್ತಿದ್ದೇನೆ. ಹಸಿರು ಕಾರ್ಡ್ ಯಾವ ಕಾಲದಲ್ಲಿ ಕೊಟ್ಟಿದ್ದು? ಒಂದು ಮನೆಯಲ್ಲಿ ನಾಲ್ಕೈದು ಜನ ಅಣ್ಣ ತಮ್ಮಂದಿರು ಪ್ರತಿ ವರ್ಷ ಬೇರೆ ಆಗುತ್ತಿದ್ದಾರೆ. ಒಂದು ಕಾರ್ಡಿನಲ್ಲಿ 8 ಕುಟುಂಬ ಅಥವಾ 4 ಕುಟುಂಬ ಜೀವನ

ಮಾಡುವುದು ಹೇಗೆ? ಹೊಸದಾಗಿ ಸರ್ವೆ ಮಾಡಿಸಬೇಕು. ಅವಶ್ಯಕತೆ ಇರುವ ಕಾರ್ಡ್‌ದಾರರ ಸಂಖ್ಯೆ, ಆಗಿರತಕ್ಕ ವಿಭಜನೆ ನೋಡಿ ಕೂಡಲೇ ವಂಚಿತರಾಗಿರುವ ಬಡವರಿಗೆ ಕಾರ್ಮಿಕರಿಗೆ ಸಣ್ಣವರಿಗೆ ಈ ಹಸಿರು ಕಾರ್ಡ್ ವ್ಯವಸ್ಥೆ ಅದಷ್ಟು ಬೇಗ ಮಾಡಬೇಕೆಂದು ಹೇಳುತ್ತಿದ್ದೇನೆ. ಈಗಾಗಲೇ ಸಹಕಾರ ಮತ್ತು ಆಹಾರ ಇಲಾಖೆ ಮುಗಿಸಿದ್ದೇನೆ. ಇವತ್ತು ಇರತಕ್ಕ ಯಾದಿಯನ್ನು ಬಹುತೇಕ ಇಲ್ಲಿ ಯಾವ ಬೇಡಿಕೆ ಎಂಬುದನ್ನು ಹೇಳಲು ಸಾದ್ಯವಾಗುತ್ತಿಲ್ಲ. ನಾನು ಮೂರು ನಾಲ್ಕು ವಿಷಯಗಳನ್ನು ಮಾತ್ರ ಸೂಚನೆ ಮಾಡಿ ನನಗೆ ಅವಕಾಶ ಕೊಟ್ಟಿರುವುದನ್ನು ಸದುಪಯೋಗ ಮಾಡುತ್ತೇನೆ. ಕಂದಾಯ ಇಲಾಖೆ ಮಂತ್ರಿಗಳು ಇಲ್ಲಿಲ್ಲ. ಆದ್ದರಿಂದ ನಂತರ ಅದರ ಬಗ್ಗೆ ನೋಡುತ್ತೇನೆ.

ಶ್ರೀ ಅಜೀಜ್ ಸೇಠ್ : ಹೇಳಿ, ನಾನು ಬರೆದುಕೊಳ್ಳುತ್ತೇನೆ.

ಶ್ರೀ ಬಿ.ಎಚ್. ಬನ್ನಿಕೋಡ್ : ತಾವಿದ್ದೀರಿ. ಅದಕ್ಕೆ ತಮ್ಮದೇ ಹೇಳಿಬಿಡುತ್ತೇನೆ.

ಈಗ ನಾನು ಕೆಎಸ್‌ಆರ್‌ಟಿಸಿ ವಿಚಾರಕ್ಕೆ ಬರುವುದಾದರೆ, ಈ ಬಗ್ಗೆ ನಮ್ಮ ಗ್ರಾಮೀಣ ಜನರ ಕಣ್ಣೀರಿನ ಕಥೆಯನ್ನು ನಾನು ಹೇಳಬೇಕಾಗಿದೆ. ನಮ್ಮಲ್ಲಿನ ಗ್ರಾಮೀಣ ಭಾಗದ ಬಸ್‌ಗಳನ್ನು ತೆಗೆದುಹಾಕಿದ್ದೀರಿ. ಇದಕ್ಕೆ ತಾವು ಕೊಡುವ ಕಾರಣ ಲಾಸ್ ಎಂದು. ಮತ್ತೆ ಇದರಿಂದ ಬೆಲೆ ಏರಿಕೆ ಮಾಡುತ್ತೇವೆ ಎಂದು ಹೇಳುತ್ತೀರಿ. ಇದನ್ನು ಏಕೆ ಹೇಳುತ್ತೀರಿ? ನಮ್ಮ ಹಿರೇಕೆರೂರಿನಲ್ಲಿ ಸಾರಿಗೆ ಸಂಸ್ಥೆಯ ಡಿಪೋ ಇದ್ದು ಅದು 20 ಲಕ್ಷ ರೂಪಾಯಿ ಲಾಭ ಮಾಡಿದೆ. ಇಷ್ಟು ಆದರೆ ನೀವು ಯಾರಿಗೆ ದರ ಹೆಚ್ಚು ಮಾಡುತ್ತೀರಿ? ನಮ್ಮಲ್ಲಿ ಪ್ರಾಮಾಣಿಕರಾದ ಕಂಡಕ್ಟರ್ ಇದ್ದಾರೆ. ಪ್ರಾಮಾಣಿಕ ಸಿಬ್ಬಂದಿ ಇದ್ದಾರೆ. ನಮ್ಮ ಕ್ಷೇತ್ರದ ಜನರೂ ಸಹ ಪ್ರಾಮಾಣಿಕರಿರುವುದರಿಂದ ನಮ್ಮ ಡಿಪೋ 20 ಲಕ್ಷ ರೂಪಾಯಿ ಲಾಭವನ್ನು ಮಾಡಿದೆ. ಇದೇ ರೀತಿಯ ಪ್ರಾಮಾಣಿಕತೆ ಎಲ್ಲಾ ಕಡೆ ಆಗುವುದಾದರೆ ಬೆಲೆ ಏರಿಸುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಹೀಗಿದ್ದರೂ ಸಹಾ ಹಿರೇಕೆರೂರು ಡಿಪೋದಿಂದ ರಾಣೆಬೆನ್ನೂರು ಹಾಗೂ ಬ್ಯಾಡಿಗೆ ತಾಲ್ಲೂಕುಗಳಿಗೆ ಸಾರಿಗೆ ವ್ಯವಸ್ಥೆಯನ್ನು ವಿಸ್ತರಿಸಿದೆ. ಇವತ್ತು ನಮ್ಮ ಡಿಪೋದಲ್ಲಿ 104 ಬಸ್ಸುಗಳು ಇದ್ದು ಅವುಗಳಲ್ಲಿ 78 ಬಸ್‌ಗಳು 7 ಲಕ್ಷಕ್ಕೂ ಹೆಚ್ಚು ಕಿಲೋ ಮೀಟರ್ ದಾರಿ ಸವೆಸಿವೆ. ನಿಮ್ಮ ಸಂಸ್ಥೆಯ ನಿಯಮದ ಪ್ರಕಾರ 7 ಲಕ್ಷಕ್ಕೂ ಹೆಚ್ಚು ಕಿ.ಮೀ. ಓಡಿದ ಬಸ್‌ಗಳನ್ನು ನಿಲ್ಲಿಸಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಇರುವ, ಇಷ್ಟು ವಯಸ್ಸು ಕಳೆದಕೊಂಡಿರುವ ಬಸ್‌ಗಳು ದಾರಿಯಲ್ಲೇ ನಿಂತರೆ ಅದರಲ್ಲಿ ಪ್ರಯಾಣ ಮಾಡುವ ಶಾಲಾ ಮಕ್ಕಳು, ಹೆರಿಗೆಗೆ ಹೋಗುತ್ತಿರುವ ಹೆಣ್ಣುಮಕ್ಕಳ, ಹಾಲು ಮಾರಲು ಹೋಗುತ್ತಿರುವವರ ಗತಿ ಏನು ಎಂದು ಚಿಂತೆ ಮಾಡಿದ್ದೀರಾ? ನೀವು ಖಾತೆ ವಹಿಸಿಕೊಂಡಮೇಲೆ ಸ್ವಲ್ಪ ಮಟ್ಟಿಗೆ ಅಭಿವೃದ್ಧಿ ಮಾಡಿದರೂ ಇದರಿಂದ ಪ್ರಯೋಜನ ಏನು? ಬಸ್‌ಗಳ ಅವಸ್ಥೆ ಹೀಗಾದರೆ ನಮ್ಮ ಭಾಗದಲ್ಲಿ ಮೆಕಾನಿಕ್ಸ್ ಸರಿಯಾಗಿ ಇಲ್ಲ. ಅದು ಹಳ್ಳಿಯಾದ್ದರಿಂದ ಯಾರೂ ಕೂಡಾ ಅಲ್ಲಿಗೆ ಬರುವುದಕ್ಕೆ ತಯಾರು ಇಲ್ಲ. ಬರುವವರೂ ಬೆಳಿಗ್ಗೆ 11ಕ್ಕೆ ಬಂದರೆ ಸಂಜೆ 4 ಗಂಟೆಗೆ ಹುಬ್ಬಳ್ಳಿಗೆ ಹೋಗಿಬಿಡುತ್ತಾರೆ. ನಮಗೆ ಮೆಕಾನಿಕ್ಸ್, ಡ್ರೈವರ್ಸ್, ಕಂಡಕ್ಟರ್‌ಗಳನ್ನ ಕೊಡಿ ಮತ್ತು ನಮಗೆ ಕನಿಷ್ಟ ಪಕ್ಷ 40 ಹೊಸ ಬಸ್‌ಗಳನ್ನಾದರೂ ಕೊಡಿ. ಮತ್ತು ಯಾವ ರೂಟ್ಸ್‌ಗಳನ್ನು ನಷ್ಟ ಎಂದು ತೆಗೆದುಹಾಕಿದ್ದೀರಿ ಅವನ್ನು ಪುನರ್ ಆರಂಭ ಮಾಡಬೇಕು. ನಮ್ಮ ಡಿಪೋ 20 ಲಕ್ಷ ಲಾಭ ಮಾಡಿದ್ದರೂ ಹಿರೇಕೆರೂರಿನಿಂದ ಬೆಂಗಳೂರಿಗೆ ಬರುವ ಸೂಪರ್ ಡಿಲಕ್ಸ್ ಬಸ್‌ನ್ನು, ಲಕ್ಸುರಿ ಬಸ್ಸನ್ನು ನಿಲ್ಲಿಸಿಬಿಟ್ಟಿದ್ದೀರಿ

ಶ್ರೀ ಅಜೀಜ್ ಸೇಟ್ : ಸೂಪರ್‌ಡಿಲಕ್ಸ್‌ಗೆ 10 ಜನರೂ ಬರುವುದಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಸಾಕಷ್ಟು ಜನರು ಬರುತ್ತಾರೆ. ಶಿರಾಳಕೊಪ್ಪ,

ಸೊರಬ, ಶಿಕಾರಿಪುರದಿಂದ ಬರುವ ಜನರು ಸೂಪರ್‌ಡಿಲಕ್ಸ್ ಬಸ್‌ನಲ್ಲಿ ಬೆಂಗಳೂರಿಗೆ ಬರುತ್ತಾ ಇದ್ದಾರೆ. ನಮ್ಮ ಡಿಪೋದಲ್ಲಿ ನಷ್ಟ ಇಲ್ಲ. ಆದರೂ ಇವರು ಉದ್ದೇಶಪೂರ್ವಕವಾಗಿ ನಿಲ್ಲಿಸಿಬಿಟ್ಟಿದ್ದಾರೆ. ಈ ರೀತಿಯ ರಾಜಕೀಯ ಬೇರೆ. ಹಿಂದೆ ಓದುತ್ತಿದ್ದ ಬಸ್‌ಗಳನ್ನು ಬಂದ ಮಾಡುವುದು ಬೇಡ. ಹಿಂದೆ ಓಡುತ್ತಿದ್ದ ಎಲ್ಲಾ ಬಸ್‌ಗಳನ್ನು ಮತ್ತೆ ಓಡಿಸಬೇಕೆಂದು ಹೇಳುತ್ತೇನೆ. ಇನ್ನು ಸ್ಟೈಜ್‌ಗಳ ವಿಚಾರವಾಗಿ ಒಂದೆರಡು ಮಾತುಗಳನ್ನು ಆಡುತ್ತೇನೆ. ನಮ್ಮಲ್ಲಿ 6 ಕಿ. ಮೀ. ಗೆ ಒಂದು ಸ್ಟೇಜ್ ಎಂದು ಫಿಕ್ಸ್ ಮಾಡಿದ್ದೀರಿ. ಆದರೆ ಒಂದು ಸ್ಟೇಜ್ ಆದಮೇಲೆ ಕೇವಲ 100 ಅಡಿ, 500 ಅಡಿ ಮುಂದೆ ಪ್ರಯಾಣ ಮಾಡಿದವರಿಗೆ 2 ಸ್ಟೇಜಿನ ಹಣವನ್ನು ತಾವು ತೆಗೆದುಕೊಳ್ಳುತ್ತೀರಿ. ಎಂದರೆ ಅವರು ಹೋಗದ ಡಿಸ್ಟೆನ್ಸ್‌ಗೂ ಹಣ ತೆಗೆದುಕೊಳ್ಳುವುದು ಯಾವ ನ್ಯಾಯ? ಇದು ಹಗಲುದರೋಡೆ ಎಂದು ಹೇಳಿದರೂ ತಪ್ಪಾಗಲಾರದು. ನಗರ ಪ್ರದೇಶದಲ್ಲಿ ಕಿ.ಮೀ. ಲೆಕ್ಕದಲ್ಲಿ ಸ್ಟೇಜಿ ಮಾಡುತ್ತೀರಿ. ಏಕೆಂದರೆ ಈ ಜನರು ಸಂಘಟಿತರಾಗಿದ್ದಾರೆ. ಆದರೆ ನಮ್ಮ ಹಳ್ಳಿ ಜನರು ಸಂಘಟಿತರಿಲ್ಲದಿದ್ದರಿಂದ ಅವರನ್ನು ಶೋಷಣೆ ಮಾಡುವ ಸರ್ಕಾರದ ಈ ಕ್ರಮ ಸರಿಯಲ್ಲ. ಆದ್ದರಿಂದ ಇದನ್ನು ಬದಲಾವಣೆ ಮಾಡಬೇಕು. ಇನ್ನು ಗ್ರಾಮಾಂತರ ಪ್ರದೇಶದಲ್ಲಿ 1 ಅಥವಾ 2 ಕಿ.ಮೀ. ಅಂತರದಲ್ಲಿ ಹಳ್ಳಿಗಳು ಬರುತ್ತವೆ. ಆದ್ದರಿಂದ ಉಪ ಸ್ಟೇಜ್‌ಗಳನ್ನು ಮಾಡುವ ವ್ಯವಸ್ಥೆ ಮಾಡಿ. ನಾವು ಮುಂಬೈ ಸರ್ಕಾರದಲ್ಲಿ ಇದ್ದಾಗ ಬಹಳ ಉತ್ತಮವಾಗಿತ್ತು. ಆ ಆಡಳಿತದಲ್ಲಿ ಮೂರುಕಾಲು ಕಿ.ಮೀ. ಗೆ ಅರ್ಧ ಸ್ಟೇಜ್ ಎಂದು ಹೇಳಿ ಅಲ್ಲಿ ಅರ್ಧ ಹಣ ಮಾತ್ರ ತೆಗೆದುಕೊಳ್ಳುತ್ತಾರೆ. ಇದರಿಂದ ಗ್ರಾಮೀಣ ಜನರಿಗೆ ಬಹಳ ಅನುಕೂಲ ಇದೆ. ಆದ್ದರಿಂದ ಆ ರೀತಿಯ ಸಬ್ ಸ್ಟೇಜ್ ವ್ಯವಸ್ಥೆಯನ್ನು ನಮ್ಮಲ್ಲೂ ತರಬೇಕೆಂದು ತಮ್ಮಲ್ಲಿ ವಿನಂತಿಮಾಡುತ್ತೇನೆ.

ರಟ್ಟಿಹಳ್ಳಿಯಲ್ಲಿ ಒಂದು ಬಸ್‌ಸ್ಟ್ಯಾಂಡ್ ಮಂಜೂರು ಮಾಡಬೇಕೆಂದು ಹೇಳಿದ್ದೇನೆ. ತಾವು ಬಸ್‌ಸ್ಟ್ಯಾಂಡಿಗಾಗಿ ಹಣವನ್ನು ಮಂಜೂರು ಮಾಡಿದ್ದೀರಿ. ನಾವು ಜಾಗ ಕೊಟ್ಟಿದ್ದೇವೆ. ಈಗ ಏನು ಉತ್ತರ ಬಂದಿದೆ ಅಂದರೆ ಜಾಗ ಸರಿಯಲ್ಲ ಬೇರೆ ಜಾಗ ಕೊಡಿಯೆಂದು ಹೇಳುತ್ತಾರೆ. ಅದು ಉತ್ತಮವಾದ ಜಾಗವಿದೆ. ಮಾನ್ಯ ಸಚಿವರು ಸ್ವತ: ಅಲ್ಲಿಗೆ ಬಂದು ನೋಡಿ ಅದು ಯೋಗ್ಯ ಸ್ಥಳವಿದೆ. ಬುನಾದಿ ಭದ್ರವಾಗಲಿಕ್ಕೆ ಅದು ಯೋಗ್ಯ ಸ್ಥಳವಿದೆ. ತಾವು ಬಂದು ಪರಿಶೀಲನೆ ಮಾಡಿ ನೋಡಿ. 10 ಲಕ್ಷ ರೂಪಾಯಿಗಳನ್ನು ತಾವು ಮಂಜೂರು ಮಾಡಿದ್ದೀರಿ. ಬಸ್‌ಸ್ಟ್ಯಾಂಡ್ ಕಟ್ಟಡವನ್ನು ಬೇಗ ಪ್ರಾರಂಭ ಮಾಡಬೇಕೆಂದು ನಾನು ಹೇಳುತ್ತೇನೆ. ಹಂಸಬಾವಿ ಮತ್ತು ಚಿಕ್ಕೇರಿ ಗ್ರಾಮಗಳಲ್ಲಿದ್ದಂತಹ ಬಸ್‌ಸ್ಟ್ಯಾಂಡ್‌ಗಳು ನಾದುರಸ್ತಿಯಾಗಿದೆ. ಅವುಗಳನ್ನು ಒಂದಿಷ್ಟು ದುರಸ್ತಿ ಮಾಡಬೇಕೆಂದು ಹೇಳಿದ್ದೇನೆ. ಆ ಕೆಲಸ ಇಂದಿನವರೆಗೆ ಆಗಿಲ್ಲ. ಸಚಿವರು ಬರೆದದ್ದು ಹೇಳಿದ್ದು ಯಾವ ಕೆಲಸವನ್ನು ಅಲ್ಲಿನ ಅಧಿಕಾರಿಗಳು ಮಾಡುತ್ತಿಲ್ಲ. ಇದು ಸರಿಯಲ್ಲ. ಜನ ಪ್ರತಿನಿಧಿಗಳು ಜನರ ಸಮಸ್ಯೆಗಳನ್ನು ಸಚಿವರಿಗೆ ಹೇಳುತ್ತಾರೆ. ಹೇಳಿದ್ದನ್ನು ಸಂಬಂಧಪಟ್ಟ ಅಧಿಕಾರಿಗಳು ತೀವ್ರವಾಗಿ ಕೆಲಸ ಮಾಡಬೇಕು. ಆ ದಿಶೆಯಲ್ಲಿ ಕೆಲಸ ಮಾಡುವಂತೆ ಆದೇಶವನ್ನು ತಾವು ಕೊಡಬೇಕೆಂದು ತಮಗೆ ವಿನಂತಿಸಿಕೊಳ್ಳುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಸದಸ್ಯರಾದ ಬನ್ನಿಕೋಡ್‌ರವರೇ, ಇನ್ನೂ 15 ಜನ ಮಾನ್ಯ ಸದಸ್ಯರುಗಳು ಮಾತನಾಡುವವರು ಇದ್ದಾರೆ. ತಾವು ಬೇಗನೆ ಮುಗಿಸಿ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಆಯಿತು ಬೇಗ ಮುಗಿಸುತ್ತೇನೆ. ಮಾನ್ಯ ಕಂದಾಯ ಸಚಿವರು ಸದನದಲ್ಲಿ ಈಗ ಇಲ್ಲ. ಆದರೂ ಸಹಿತ ಹೇಳುತ್ತೇನೆ. ಈಗಾಗಲೇ ಅನೇಕ ವಿಷಯಗಳನ್ನು ಹೇಳಿದ್ದಾರೆ. ಗ್ರಾಮಲೆಕ್ಕಿಗರು ನಾಲ್ಕಾರು ಹಳ್ಳಿಗಳಿಗೆ ಒಬ್ಬರು ಇದ್ದಾರೆ ಗ್ರಾಮಲೆಕ್ಕಿಗರನ್ನು ತುಂಬುತ್ತೇವೆಂದು ಹೇಳುತ್ತಾರೆ. 1948 ಗ್ರಾಮಲೆಕ್ಕಿಗರ

ಹುದ್ದೆಗಳು ಖಾಲಿಯಿವೆ ಎಂದು ಹೇಳಿದ್ದಾರೆ. ಆದಷ್ಟು ಬೇಗ ಅವರನ್ನು ತುಂಬಬೇಕು. ಗ್ರಾಮದ ಜನರಿಗೆ ಬೇಕಾದ ದಾಖಲೆಗಳನ್ನು ಕೊಡುವುದಕ್ಕೆ ಅವರು ಇಲ್ಲದಿದ್ದರೆ ತೊಂದರೆಯಾತ್ತದೆ. ಕಂದಾಯ ಇಲಾಖೆಯಲ್ಲಿ ಪ್ರತಿಗಳನ್ನು ತೆಗೆದುಕೊಳ್ಳುಲಿಕ್ಕೆ ತಡವಾಗುತ್ತಿದೆ. ಆದ್ದರಿಂದ ಜೆರಾಕ್ಸ್‌ಕಾಪಿಗಳನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಅದಕ್ಕೋಸ್ಕರ ಕಂದಾಯ ಇಲಾಖೆಯವರು ಜೆರಾಕ್ಸ್ ಯಂತ್ರಗಳನ್ನು ಕೊಂಡು ಅದನ್ನು ಉಪಯೋಗಿಸಿ ಕೂಡಲೇ ದಾಖಲೆಗಳನ್ನು ಒದಗಿಸುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಹೇಳುತ್ತಿದ್ದೇನೆ. ಕೆಲವೊಂದು ಮಾಹಿತಿಗಳನ್ನು ತಾರೀಖುವಾರು ಸರಿಯಾಗಿ ಇಟ್ಟಿರುವುದಿಲ್ಲ. ಜನರು ಯಾರು ಬಂದು ಕೇಳುತ್ತಾರೆ ಅವರನ್ನು ಕಾಣುತ್ತಾರೆ ಅವರ ದಾಖಲೆಗಳನ್ನು ಸರಿಪಡಿಸುತ್ತಾರೆ. ಇಲ್ಲದಿದ್ದರೆ ಸರಿ ಮಾಡುವುದಿಲ್ಲ.

ಅದಕ್ಕೆ ಈಗಾಗಲೇ ಕಾನೂನಿನ ವ್ಯವಸ್ಥೆ ಆಗಿದೆ. ಅದನ್ನು ಕಾನೂನು ಪ್ರಕಾರ ಕ್ರಮವಾಗಿ ಎಂಟರೀಸ್‌ಗಳನ್ನು ಮಾಡಬೇಕೆಂದೂ ಅವುಗಳನ್ನು ಮಂಜೂರಾತಿಯನ್ನು ಮಾಡಬೇಕೆಂದೂ ಅದರ ಬಗ್ಗೆ ಒಂದು ಆದೇಶವನ್ನು ಮಾನ್ಯ ಸಚಿವರು ಕಳುಹಿಸಬೇಕೆಂದು ಹೇಳುತ್ತಿದ್ದೇನೆ. ಅಣೆವಾರಿ ಪದ್ಧತಿ ಓಬಿರಾಯನ ಕಾಲದ್ದು. ಈ ಪದ್ದತಿ ಬ್ರಿಟೀಷರ ಕಾಲದ್ದು. ಅಣೆವಾರಿ ಪದ್ಧಿತಿ ಎಂದರೆ ಒಂದು ಎಕರೆಯಲ್ಲಿ ಒಂದು ಪಡಿ ಪಾವು ಬೆಳೆ ಬಂದರೆ 12 ಅಣೆ ಆಯಿತು. ಇವತ್ತು ರೈತರು ಉಪಯೋಗಿಸತಕ್ಕ ರಸಾಯನಿಕ ಗೊಬ್ಬರ, ಔಷಧ, ಬೀಜ ಇವುಗಳ ಬೆಲೆ ಜಾಸ್ತಿಯಾಗಿದೆ. ಆ ಕಾಲದಲ್ಲಿ ಹಿಡಿ ಬಿತ್ತಿ ಖಂಡುಗ ಬೆಳೆಯುತ್ತಿದ್ದರು. ಬೀಜ ಕೊಳ್ಳುವ ಅಗತ್ಯವರಿಲಿಲ್ಲ. ರಸಾಯನಿಕ ಗೊಬ್ಬರ ಇದ್ದಿಲ್ಲ. ಔಷಧ ಇರಲಿಲ್ಲ. ಇವತ್ತು ಅವುಗಳ ವೆಚ್ಚವನ್ನು ಭರಿಸಬೇಕಾಗುತ್ತದೆ: ಅದಕ್ಕೆ ತಕ್ಕಂತೆ ಬೆಳೆಯಬೇಕಾದರೆ ಒಕ್ಕಲುತನ ಇಲಾಖೆಯವರು ಒಂದು ಬೆಳೆ ಆಧಾರವನ್ನು ಇಟ್ಟುಕೊಂಡು ಕೆಲಸ ಮಾಡುತ್ತಾರೆ. ಇಷ್ಟು ಬೆಳೆ ಬರಬೇಕಾದರೆ ಇಷ್ಟು ಹಣ ವೆಚ್ಚವಾಗುತ್ತದೆಂದು. ಒಂದು ಆಧಾರದ ಮೇಲೆ ಈ ರೀತಿ ಅಣೆವಾರಿ ಪದ್ಧತಿಯನ್ನು ಇವತ್ತು ನಿರ್ಧಾರ ಮಾಡಬೇಕು. ಇರತಕ್ಕ ಆಣೆವಾರಿ ಪದ್ಧತಿಯನ್ನು ಬದಲಾವಣೆ ಮಾಡಬೇಕು. ಒಕ್ಕಲುತನ ಇಲಾಖೆಯವರು ಕನಿಷ್ಟ ಎಷ್ಟು ಬೆಳೆ ಬರಬೇಕೆನ್ನುವ ಏನೊಂದು ಆಧಾರವನ್ನು ಇಟ್ಟಿದ್ದಾರೆ ಆ ಆಧಾರದ ಮೇಲೆ ಆಣೆವಾರಿ ಪದ್ಧತಿಯನ್ನು ಮಾಡಬೇಕೆಂದು ನಾನು ಸಲಹೆ ಮಾಡುತ್ತಿದ್ದೇನೆ.

ಇನ್ನು ಹುಲ್ಲುಗಾವಲುಗಳು, ಕೆರೆಅಂಗಳ, ಸ್ಮಶಾನ ಭೂಮಿ ಇವು ಗ್ರಾಮಕ್ಕೆ ಅವಶ್ಯವಾದುವು. ಅವುಗಳಿಗೂ ಸಹಿತ ಸಾಗುವಳಿಗೆ ಚೀಟಿ ಕೊಡತಕ್ಕ ನೀತಿ ಸರ್ಕಾರದ್ದು ಏನಿದೆ ಅದು ಸರಿಯಲ್ಲ. ಹಳ್ಳಿಗಳಲ್ಲಿ ಇವತ್ತು ನಾವು ಬಡವರಿಗೆ ಸಾಲಗಳನ್ನು ಕೊಡುತ್ತಿದ್ದೇವೆ. ಭೂಮಿ ಇಲ್ಲದವರಿಗೆ ಕುರಿ, ಆಡು, ಎಮ್ಮೆ ಸಾಲವನ್ನು ಐಆರ್‌ಡಿಪಿ ಇತರೆ ಸಾಲಗಳನ್ನು ಕೊಡುತ್ತಿದ್ದೇವೆ. ಅವರ ಆಡು-ಕುರಿ, ಹಸು-ಎಮ್ಮೆ ಯಾವ ಕಡೆ ಮೇಯಬೇಕು? ಇರತಕ್ಕ ಭೂಮಿಯನ್ನು ಸಾಗುವಳಿಗೆ ಕೊಟ್ಟರೆ ಆಗತಕ್ಕ ಪರಿಣಾಮವೇನು? ಹಿಂದೆ ಯಾರು ಸಾಗುವಳಿ ಮಾಡಿದ್ದಾರೆ ಅಂತಹ ಬಗರುಹುಕುಂ ಸಾಗು ಮಾಡಿದವರಿಗೆ ಕೊಡಿ. ಈಗ ಯಾರೂ ಕೆರೆ ಅಂಗಳ, ಸ್ಮಶಾನ, ಗುಂಡುತೋಪು, ಹುಲ್ಲುಗಾವಲುಗಳನ್ನು ಸಾಗುವಳಿ ಮಾಡಿದ್ದಾರೆ ಅವರನ್ನು ಅಲ್ಲಿಂದ ಓಡಿಸಿ. ಹೊಸ ಸಾಗುವಳಿ ಮಾಡುವುದನ್ನು ನಿಲ್ಲಿಸಬೇಕು. ಈ ಬಗ್ಗೆ ಒಂದು ನಿರ್ದಿಷ್ಟವಾದಂತಹ ಕಠೋರವಾದ ಒಂದು ನಿರ್ಧಾರ ತೆಗೆದುಕೊಳ್ಳಬೇಕು. ಹೊಸದಾಗಿ ಆಗತಕ್ಕ ಬಗರು ಹುಕುಂ ಸಾಗುವಳಿಯನ್ನು ಬಂದ್ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಇನ್ನು ಮುಜರಾಯಿ ಇಲಾಖೆಯ ದೇವಾಲಯಗಳ ಬಗ್ಗೆ ಹೇಳುವುದಾದರೆ ಸರ್ಕಾರದ ಆರ್ಡರ್ ಕೆಲವೇ ಜಿಲ್ಲೆಗೆ ಕೆಲವು ತಾಲ್ಲೂಕುಗಳಿಗೆ ಇದೆ. ರಾಜ್ಯದಲ್ಲಿ ದೇವಾಲಯಗಳಿಗಾಗಿ ಇಟ್ಟಿದ್ದ 1 ಕೋಟಿ ರೂಪಾಯಿ ಹಣ ಕೆಲವರಿಗೆ ಹೋಗಿದ್ದೆಯೇ ವಿನ: ಸಮಗ್ರ ಜಿಲ್ಲೆಗೆ ಹಂಚಿಕೆಯಾಗಿಲ್ಲ. ಇದು ಆಗಬಾರದು. ಹೆಚ್ಚು ಹಣವನ್ನು

ಮೀಸಲಾಗಿಡಬೇಕು. ಇದ್ದ ಹಣ ಸ್ವಲ್ಪವಾದರೂ ಸಹಿತ ನ್ಯಾಯಯುತವಾಗಿ ಹಂಚಿಕೆಯನ್ನು ಮಾಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತಾ, ನಾನು ಮಾನ್ಯ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ಮತ್ತೊಮ್ಮೆ ವಿರೋಧಮಾಡುತ್ತಾ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ಸಾರಿ ನಾವು ಸುಮಾರು 13 ಬೇಡಿಕೆಗಳನ್ನು ಮುಗಿಸಿ, 22 ಬೇಡಿಕೆಗಳನ್ನು ಚರ್ಚೆಗೆ ತೆಗೆದುಕೊಂಡಿದ್ದೇವೆ. ಬಹಳ ಮುಖ್ಯವಾದಂಥ ಮತ್ತು ಪ್ರಾಮುಖ್ಯವಾದಂಥ ಬೇಡಿಕೆ ನನ್ನ ದೃಷ್ಟಿಯಲ್ಲಿ, ಶ್ರೀಮಾನ್ ಟಿ. ಎನ್. ನರಸಿಂಹಮೂರ್ತಿಯವರಿಗೆ ಸೇರಿದ್ದುದು. ನಮ್ಮ ವಿವಿಧ ವ್ಯವಹಾರಗಳ ಮಧ್ಯೆ ಅದು ಎಷ್ಟು ಪ್ರಾಮುಖ್ಯತೆಯನ್ನು ಪಡೆಯಬೇಕೊ ಅಷ್ಟನ್ನು ಪಡೆಯಲಿಲ್ಲ ಎನ್ನುವುದು ನನ್ನ ವ್ಯಥೆ. ಆ ಕಾರಣ ನಾಲ್ಕು ಮಾತುಗಳನ್ನು ಹೇಳಬೇಕೆಂದು ನಾನು ಎದ್ದು ನಿಂತಿದ್ದೇನೆ. ಇಂದಿನ ರಾಷ್ಟ್ರದ ಆರ್ಥಿಕ ಪರಿಸ್ಥಿತಿಯ ವಿಶ್ಲೇಷಣೆಗೆ ಬಹಳ ದೂರಕ್ಕೆ ನಾನು ಹೋಗುವುದಿಲ್ಲ. ಒಂದು ವಾರದಲ್ಲಿ ಶೇಕಡ 22 ರಷ್ಟು ರೂಪಾಯಿಯ ಅಪಮೌಲ್ಯ ಆಯಿತು. ರೂಪಾಯಿ ಬೆಲೆ ಇಂದು 7 ಪೈಸೆ. ಅದು ಅಧಿಕೃತವಾಗಿ 14 ಪೈಸೆ ಎಂದು ಹೇಳಿ ಸರ್ಕಾರ ಕ್ಲೈಮ್ ಮಾಡುತ್ತದೆ. Industrial growth of the Country is less than 5%. ಇದನ್ನು ಹೇಳುವ ಉದ್ದೇಶ, ಜನರಿಗೆ ಕೊಳ್ಳತಕ್ಕಂಥ ಶಕ್ತಿ ಇಲ್ಲ. They have lost purchasing power. ಹಣದುಬ್ಬರ ಎಷ್ಟು ಇದೆ? ಶೇಕಡ 14-15 ಪರ್ಸೆಂಟ್ ಇದೆ. ಕಳೆದ ವರ್ಷ 9 ಇದ್ದದ್ದು ಈ ವರ್ಷ 15 ಪರ್ಸೆಂಟಿಗೆ ಹೋಗಿದೆ. ಆದ್ದರಿಂದ ಒಟ್ಟು ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯೇ ಇವತ್ತು ದೇಶದ ಆರ್ಥಿಕ ಸ್ಥಿತಿಯನ್ನು ಕದಡಿದೆ. ಹೀಗಾಗಿ ಅತ್ಯಂತ ಬಡವರು, ಮಧ್ಯಮ ವರ್ಗದ ಜನ, ವಿಶೇಷವಾಗಿ ಕಾರ್ಮಿಕರು, ದಲಿತರು ಈ ಆರ್ಥಿಕ ಒಂದು ಉಬ್ಬರಕ್ಕೆ ಸಿಕ್ಕಿ ತಮ್ಮ ಕಷ್ಟದ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಆ ಕಾರಣದಿಂದ ಅವರ ದಿನನಿತ್ಯ ಬಳಕೆಯ ವಸ್ತುಗಳಾದರೂ ಕನಿಷ್ಟ ಪ್ರಮಾಣದಲ್ಲಿ, ಕನಿಷ್ಟ ದರದಲ್ಲಿ ಉತ್ತಮವಾದಂಥ ರೀತಿಯಲ್ಲಿ ಸರಬರಾಜು ಆಗಬೇಕು ಎನ್ನುವ ಕಾರಣದಿಂದ ಇದು ಬಹಳ ಮುಖ್ಯವಾದುದು. ಈ ಜವಾಬ್ದಾರಿಯನ್ನು ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆ ಕರ್ನಾಟಕ ರಾಜ್ಯದಲ್ಲಿ ಹೊತ್ತುಕೊಂಡಿದೆ. ಈ ಇಲಾಖೆ ಏನು ಕೆಲಸ ಮಾಡಿದೆ. ಏನು ಬಿಟ್ಟಿದೆ ಎಂದು ನಾನು ಸುಧೀರ್ಘವಾಗಿ ಚರ್ಚೆ ಮಾಡುವುದಿಲ್ಲ. ಅವರ ವರದಿಯ ಮೊದಲನೇಯ ಪುಟದಲ್ಲಿ ಒಂದು ಮಾತನ್ನು ಹೇಳುತ್ತಾರೆ,

ಅದು 'ಸಮೀಕ್ಷೆ' ಎಂದು ಶಿರೋನಾಮೆ ಕೊಟ್ಟು "ಆಹಾರ ಇಲಾಖೆಯು ಈ ವರ್ಷದಲ್ಲಿ ಬೆಲೆಗಳನ್ನು ನಿಯಂತ್ರಿಸಲು ಅನೇಕ ಕಾರ್ಯಕ್ರಮಗಳನ್ನು ..." ಇದು ಅತ್ಯಂತ ದೊಡ್ಡ ಜವಾಬ್ದಾರಿಯ ಕೆಲಸ. "..... ಹಾಕಿಕೊಂಡಿದೆ" ಎಂದು ಹೇಳಿದ್ದಾರೆ. ಪಾಸಿಟಿವ್ ಆಗಿ ಹೇಳುತ್ತಾರೆ. "ಇಲಾಖೆಯು ಸಾರ್ವಜನಿಕ ಇತರಣಾ ಪದ್ಧತಿಯ ವ್ಯವಸ್ಥೆಯನ್ನು ಬಲಗೊಳಿಸಿ ಎಲ್ಲಾ ಗ್ರಾಹಕರಿಗೂ ನ್ಯಾಯಬೆಲೆ ಅಂಗಡಿಗಳ ಮೂಲಕ ನಿಯಂತ್ರಿತ ದರದಲ್ಲಿ ಅಗತ್ಯವಸ್ತುಗಳನ್ನು ಸಾಕಷ್ಟು ಪ್ರಾಮಾಣದಲ್ಲಿ ದೊರೆಯುವಂತೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕ್ಕೊಂಡಿದೆ." ಬಹಳ ದೊಡ್ಡ ಕ್ಲೈಮ್ ಇದು. ಆದರೆ ಇಲ್ಲಿ ಎಲ್ಲೂ ಕೂಡ "ಗುಣಮಟ್ಟ ಕಾಪಾಡಿಕೊಂಡು ಬಂದಿದ್ದೇವೆ" ಎಂದು ಒಂದು ಶಬ್ದವನ್ನೂ ಹೇಳುವುದಿಲ್ಲ, ಸಮಂಜಸವಾದ ಬೆಲೆಯಲ್ಲಿ ಸಾಕಷ್ಟು ಆಹಾರ ವಸ್ತುಗಳನ್ನು ಕೊಡುತ್ತೇವೆ ಎಂದು ಹೇಳುವಾಗ ಅದರ ಗುಣಮಟ್ಟ ಏನು? ಈ ಗುಣಮಟ್ಟದ ಬಗ್ಗೆ ನಾನು ಮೈಸೂರಿನಿಂದ ಪ್ರಾರಂಭ ಮಾಡಬೇಕು. ಮೈಸೂರು ಜಿಲ್ಲೆಯಲ್ಲಿ ಅಕ್ಕಿ ವಿತರಣೆ ಮಾಡುತ್ತಿದ್ದಾರೆ. ಅಕ್ಕಿಯ ಒಂದು ಸ್ಯಾಂಪಲ್ ಅನ್ನು ನಾನು ತಮಗೆ ಕೊಡುತ್ತೇನೆ.

ಒಂದು ಸ್ಯಾಂಪಲ್ ತಂದುಕೊಡುತ್ತೇನೆ, ಆಮೇಲೆ ಮುಂದಿನದನ್ನು ಹೇಳುತ್ತೇನೆ. ಮೈಸೂರು ನಗರದಲ್ಲಿ ಮೂರು ರೀತಿಯ ಅಕ್ಕಿಯನ್ನು ವಿತರಣೆ ಮಾಡುತ್ತಿದ್ದಾರೆ. ಇದು ನಂ-1, ಇದು ಅಕ್ಕಿ ಎಂದು ತಮಗೆ ಏನಾದರೂ ಗೊತ್ತಾದರೆ ಹೇಳಿ, ಕಬ್ಬಿಣದ ಕಡ್ಡಿ ಇದ್ದ ಹಾಗೆ ಇದೆ. ಈ ಅಕ್ಕಿ, ಮಾನ್ಯ ಮಂತ್ರಿಗಳು ಎಲ್ಲಿಂದ ತರುತ್ತಿದ್ದಾರೆ, ಅಲ್ಲಿಯ ಸಾರ್ವಜನಿಕ ವಿತರಣೆಗಾಗಿ ಬಿಡುಗಡೆ ಮಾಡಿರತಕ್ಕ ಅಕ್ಕಿ. ಅದಕ್ಕಾಗಿ ಇಲ್ಲಿ ಒಂದು ಶಬ್ದವನ್ನೂ ಹೇಳುವುದಿಲ್ಲ, ಗುಣಮಟ್ಟ ಏನು ಎಂದು ಹೇಳುತ್ತಿಲ್ಲ. ಈ ಅಕ್ಕಿಯನ್ನು ಏಕೆ ಬಿಡುಗಡೆ ಮಾಡುತ್ತಿದ್ದಾರೆಂದು ಆಮೇಲೆ ಹೇಳುತ್ತೇನೆ. ಆಮೇಲೆ, 2ನೇ ಮಟ್ಟದ ಅಕ್ಕಿ. ನಾನು ಇದನ್ನು ವಿತರಣಾ ಕೇಂದ್ರದಿಂದ ತೆಗೆದುಕೊಂಡು ಬಂದಿದ್ದೇನೆ. ವಾಟಾಳ್ ನಾಗರಾಜ್‌ರವರೇ, ಇದು ಮೈಸೂರು ಜಿಲ್ಲೆಯ ವಿಚಾರ, ಸ್ವಲ್ಪ ಕೇಳಿ.

ಶ್ರೀ ವಾಟಾಳ್ ನಾಗರಾಜ್ : ಮೈಸೂರು ಜಿಲ್ಲೆಯಲ್ಲಿ ಒಂದೇ ಅಲ್ಲ, ಈ ಗೊಬ್ಬರದಂಥ ಅಕ್ಕಿ ಕೊಡುವುದು. ಇಡೀ ರಾಜ್ಯದ ಮೂಲೆ ಮೂಲೆಯಲ್ಲಿ ಕೊಡುತ್ತಿದ್ದಾರೆ. ಈ ಇಲಾಖೆಯೇ ಗೊಬ್ಬರದ ಇಲಾಖೆ...

ಶ್ರೀ ಡಿ. ಬಿ. ಚಂದ್ರೇಗೌಡ : ಎರಡನೆಯದು ಈ ಅಕ್ಕಿ. ಇದು ಎರಡನ್ನೂ ತಿಂಗಳ ಮೊದಲನೇ ವಾರ ಬಿಡುಗಡೆ ಮಾಡುತ್ತಿದ್ದಾರೆ. ಜನಕ್ಕೆ, ಸಾರ್ವಜನಿಕ ವಿತರಣಾ ಕೇಂದ್ರದಲ್ಲಿ ಒಂದು ರೀತಿಯ ಅಸಡ್ಡೆ, ಅಸಹ್ಯ ಬರಬೇಕು. ಆ ಅಸಹ್ಯವನ್ನು ಈ ಇಲಾಖೆ ನಿರ್ಮಾಣ ಮಾಡುತ್ತಿದೆ. ಇದು ಸಾರ್ವಜನಿಕ ವಿತರಣೆಗೆ ಬಿಡುಗಡೆ ಮಾಡುವುದು ಬೇಡ. ನ್ಯಾಯಬೆಲೆ ಅಂಗಡಿಯಲ್ಲಿ ಅಕ್ಕಿಯನ್ನು ಕೊಳ್ಳುವುದು ಬೇಡವೆಂದು ಜನ ನಿರ್ಧಾರಕ್ಕೆ ಬಂದರೆಂದು ಇವರಿಗೆ ಖಾತ್ರಿಯಾದ ಮೇಲೆ, ಕೊನೆಯ ವಾರದಲ್ಲಿ, ಈ ಮೂರನೇ ಅಕ್ಕಿಯನ್ನು ಬಿಡುಗಡೆ ಮಾಡುತ್ತಾರೆ. ಇವರು, ಖಾತ್ರಿ ಮಾಡಿಕೊಂಡುದಕ್ಕಾಗಿ ಬಿಡುಗಡೆ ಮಾಡುತ್ತಾರೆ. ಆಗ ಈ ಮೂರನೇ ಪಾಲಿಷ್ ಮಾಡಿದ ಅಕ್ಕಿಯನ್ನು ಕೊಳ್ಳತಕ್ಕ ಸಾಮರ್ಥ್ಯ ರೈತನಿಗೆ ಅಥವಾ ಗ್ರಾಹಕನಿಗೆ ಇರುವುದಿಲ್ಲ. ಆಗ ಈ ಅಕ್ಕಿ ಏನಾಗುತ್ತದೆ ಎಂಬುದನ್ನು ತೆಗೆಸಿ ನೋಡಿ. 3-4ನೇ ವಾರದಲ್ಲಿ ಇಂತಹ ಅಕ್ಕಿಯನ್ನು ಬಿಡುಗಡೆ ಮಾಡುತ್ತಾರೆ. ಇವತ್ತು ಗ್ರಾಹಕ, He has lost the purchasing power. ಸಂಬಳಸಾರಿಗೆಯಲ್ಲಿ ಬದುಕತಕ್ಕ ಜನಕ್ಕೆ ಕೊನೆಯ ವಾರದಲ್ಲಿ ದುಡ್ಡು ಇರುವುದಿಲ್ಲ, ಇದು ನ್ಯಾಯಬೆಲೆ ಹೆಸರಿನಲ್ಲಿ, ಎಲ್ಲಿಗೆ ಹೋಗುತ್ತದೆಂದರೆ, ಪೇಟೆಗೆ ಹೋಗುತ್ತದೆ. ಆರೂವರೆ ರೂಪಾಯಿಗೆ ಇಡೀ ಅಕ್ಕಿಯನ್ನು, ಅದೇ ಮೈಸೂರು ನಗರದಲ್ಲಿ 2ನೇ ದರ್ಜೆಯ ಅಕ್ಕಿ, ಪಾಲಿಷ್ ಮಾಡಿದುದನ್ನು ಮಾರಾಟ ಮಾಡುತ್ತಿದ್ದಾರೆ.

ಇದನ್ನು ಇಲ್ಲಿ ಪ್ರದರ್ಶನ ಮಾಡುವುದಕ್ಕೆ ಮುಂಚೆ, ನಾನು ಬೇರೆಯವರ ವಿಚಾರ ಹೇಳಿದರೆ ಕಷ್ಟ, ಮಂತ್ರಿಗಳಿಗೆ ಸಂಬಂಧಿಸಿದಂತೆ "ಮಂಜುನಾಥ ಸ್ಟೋರ್ಸ್" ಎಂದು ಇದೆ. ಇದು ತಮಗೇ ಸಂಬಂಧಪಟ್ಟಿದ್ದು. ಇದು ಹೇಗೆ ಸಂಬಂಧ ಎಂಬುದನ್ನು ಕೇಳಬೇಡಿ. ಕಳೆದ ಶಾಸನ ಸಭೆಯಲ್ಲಿ ಇದನ್ನು ಹೇಳಿ, ಹೇಳಿ ನನಗೆ ಸಾಕಾಗಿ ಹೋಗಿದೆ. ಮಂಜುನಾಥ ಪ್ರಾವಿಷನ್ ಸ್ಟೋರ್ ಇವೆಯಲ್ಲ, ಇದು ಕೃಷ್ಣರಾಜೇಂದ್ರ ಮಿಲ್ಲಿನ ಪಕ್ಕದಲ್ಲಿದೆ. ಅದಕ್ಕೆ 1,2,3ನೇ ದರ್ಜೆಯಾಗಿ ನಾನು ಮಾಡಿದ್ದೇನೆ. ನಾನು ದಯಮಾಡಿ. ತಮ್ಮ ಮೂಲಕ ಮಂತ್ರಿಗಳ ಅವಗಾಹನೆಗೆ ಕಳುಹಿಸುತ್ತಿದ್ದೇನೆ. ದಾಖಲೆ ನಿಮಗೆ ಸಮಂಜಸವಾಗಿ ಕಂಡರೆ, ಈ ಗೊಬ್ಬರ ವಿತರಣೆ ಮಾಡುವ ಕೆಲಸ ಬಿಟ್ಟು, ಅಕ್ಕಿ ವಿತರಣೆ ಮಾಡುವ ಕೆಲಸ ಮಾಡಿ, ಅಷ್ಟೇ ನನ್ನ ಪ್ರಾರ್ಥನೆ.

ಶ್ರೀ ಬಿ. ಸ್ವಾಮಿರಾವ್ : ಹೀಗೆ ಏನಾದರೂ ಹೊರಗಡೆಯಿಂದ ಸಾಮಾನುಗಳನ್ನು

ಶ್ರೀ ವಾಟಾಳ್ ನಾಗರಾಜ್ : ಅವರು ಸಾಮಾನುಗಳನ್ನು ತಂದಿಲ್ಲ, ಆಹಾರವನ್ನು ತಂದಿದ್ದಾರೆ.

ಶ್ರೀ ಬಿ. ಸ್ವಾಮಿರಾವ್ : ನಾನು ತಮ್ಮನ್ನು ಕೇಳಲಿಲ್ಲ, ನೀವು ಅಧ್ಯಕ್ಷರಲ್ಲ;

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾನೂ ಅಧ್ಯಕ್ಷರಿಗೆ ಹೇಳುತ್ತಿದ್ದೇನೆ. ನಿಮ್ಮ ಸರ್ಕಾರ ಕೊಡತಕ್ಕ ಗೊಬ್ಬರದ ಅಕ್ಕಿ. ಗೊಬ್ಬರಕ್ಕೂ, ಆಹಾರಕ್ಕೂ ವ್ಯತ್ಯಾಸ ಈ ಸರ್ಕಾರಕ್ಕೆ ಇಲ್ಲ, ಈ ಗೊಬ್ಬರದಂಥ ಅಕ್ಕಿಯನ್ನು ಕೊಡುತ್ತಿರುವುದಕ್ಕೆ ನಾವೆಲ್ಲರೂ ಹರಾಜು ಹಾಕಬೇಕಾಗಿದೆ...

(ಗೊಂದಲ)

ಶ್ರೀ ಬಿ. ಸ್ವಾಮಿರಾವ್ : ನಾನು ನಿಮ್ಮನ್ನು ಕೇಳುತ್ತಾ ಇಲ್ಲ..

(ಭಾರೀ ಗೊಂದಲ)

(ಎರಡೂ ಕಡೆಯ ಅನೇಕ ಸದಸ್ಯರು ಎದ್ದು ನಿಂತು ಒಟ್ಟಾಗಿ ಮಾತನಾಡುತ್ತಿದ್ದರು)

ಶ್ರೀ ವಾಟಾಳ್ ನಾಗರಾಜ್ : ಈ ಸರಕಾರಕ್ಕೆ ಗೌರವ ಇದ್ದರೆ ರಾಜೀನಾಮೆ ಕೊಡಬೇಕು. ಗೊಬ್ಬರದಂತಹ ಅಕ್ಕಿಯನ್ನು ಕೊಡುತ್ತಿದ್ದಾರೆ. ಜನರಿಗೆ ವಿಷ ತಿನ್ನಿಸುತ್ತಿದ್ದೀರಿ. ನೀವು ಇಂತಹ ಅಕ್ಕಿಯನ್ನು ಕೊಡುತ್ತೀರಿ? ಇಲ್ಲೇನು ಸರಕಾರ ಇದೆಯೋ ಎಂದು ಕೇಳುತ್ತಿದ್ದೇನೆ.

(ಗೊಂದಲ)

ಶ್ರೀ ಬಿ. ಸ್ವಾಮಿರಾವ್ : ನೀವು ಅಧ್ಯಕ್ಷರಲ್ಲ, ನಾನು ಇವರನ್ನು ಕೇಳಲಿಲ್ಲ. ನಾನು ಅಧ್ಯಕ್ಷರನ್ನು ಕೇಳುತ್ತಿದ್ದೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾನೂ ಅಧ್ಯಕ್ಷರಿಗೆ ಹೇಳುತ್ತಿದ್ದೇನೆ ...ನಾನೂ ಅಧ್ಯಕ್ಷರಿಗೆ ಹೇಳುತ್ತಿದ್ದೇನೆ. ನನ್ನ ಮುಖ ನಿಮ್ಮ ಕಡೆ ತಿರುಗಿಕೊಂಡಿದೆ, ಇವರ ಕಡೆ ತಿರುಗಿಕೊಂಡಿಲ್ಲ.

(ಭಾರೀ ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದು ಬರೀ ಮೈಸೂರು ಜಿಲ್ಲೆ ಒಂದರಲ್ಲೇ ಅಲ್ಲ, ಕರ್ನಾಟಕದ ಮೂಲೆ ಮೂಲೆಯಲ್ಲಿ, ರಸ್ತೆ ರಸ್ತೆಯಲ್ಲಿ, ಗಲ್ಲಿ ಗಲ್ಲಿಯಲ್ಲಿ ಇಂತಹ ಗೊಬ್ಬರದಂಥ ಅಕ್ಕಿಯನ್ನು ಜನಗಳಿಗೆ ಕೊಡುತ್ತಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು : ಅವರು ನನಗೆ ತೋರಿಸುವುದಕ್ಕೆ ತಂದಿದ್ದಾರೆ. ತೋರಿಸಿ ಆ ಕಡೆಗೆ ಕಳುಹಿಸಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈ ಸದನ ಇವರೊಬ್ಬರಿಗೇ ಅಲ್ಲ, ಎಲ್ಲರಿಗೂ ಉಂಟು

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ನಾವು ತಮಟೆ ಹೊಡೆಯುವುದಕ್ಕೆ ಬಂದಿಲ್ಲ..

(ಗೊಂದಲ)

ಶ್ರೀ ಬಿ. ಸ್ವಾಮಿರಾವ್ : ಅಧ್ಯಕ್ಷರೇ, ನಾನು ನಿಮ್ಮನ್ನು ಪ್ರಶ್ನೆ ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ನಾನೂ ತಮಗೇ ಹೇಳುತ್ತಿದ್ದೇನೆ..

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ಏನಿದು, ಏನು ಮಾಡಬೇಕು?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮೈಸೂರಿನಲ್ಲೂ ಇಂತಹ ಗೊಬ್ಬರದ ಅಕ್ಕಿಯೇ ನಾಗಮಂಗಲದಲ್ಲೂ ಇಂತಹ ಗೊಬ್ಬರದ ಅಕ್ಕಿಯೇ

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಅಕ್ಕಿಯನ್ನು ನೀವು ನಿರ್ಮಾಣ ಮಾಡಿಲ್ಲ, ಮಿನಿಸ್ಟರ್‌ರವರು ನಿರ್ಮಾಣ ಮಾಡಿಲ್ಲ.... ಎಲ್ಲೋ ಬರುತ್ತಿದೆ, ಈ ರೀತಿ ಕೊಡುತ್ತಿದ್ದಾರೆ ಎಂದು ತೋರಿಸುತ್ತಿದ್ದಾರೆ,.... ಅದು ತಪ್ಪೇ

(ಗೊಂದಲ)

ಶ್ರೀ ಬಿ. ಸ್ವಾಮಿರಾವ್ : ಇವರ ಅಪ್ಪಣೆ ಪಡೆದು ಮಾತನಾಡಬೇಕೆಂದರೆ ಇದು ಬಹಳ ಅವಮಾನ.

(ಗೊಂದಲ)

ಉಪಾಧ್ಯಕ್ಷರು : ಅವರ ಈ ವಿಷಯದ ಬಗ್ಗೆ ಒಂದು ಸಣ್ಣ ಪ್ಯಾಕೆಟ್ಟನ್ನು ನನಗೆ ತೋರಿಸಿ ಅವರಿಗೆ ಕಳುಹಿಸಿದ್ದಾರೆ. ಇದರಲ್ಲಿ ಅಂತಹದೇನಿಲ್ಲ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ : ಮಂತ್ರಿಗಳಿಗಾದರೂ ವಿಷಯ ತಿಳಿಯಬೇಕಲ್ಲ ಅದು ಬೇಡ ಎನ್ನುತ್ತೀರಾ? ವೆದರ್ ಇಟ್ ಈಸ್ ಎ ಕ್ಲೋಸ್ಡ್ ಗೌರ್ನಮೆಂಟ್..

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದು ಸಂಪ್ರದಾಯ, ಸುಮಾರು 25 ವರ್ಷದಿಂದ ಇದೆ, ಹಿಂದೆ ರೇವಣ್ಣಸಿದ್ಧಪ್ಪ ಎಂಬ ಸದಸ್ಯರು ಇದ್ದರು, ಅವರು ಜನ ಗೆಡ್ಡೆ ತಿನ್ನುತ್ತಿದ್ದಾರೆ ಎಂದು ಹೇಳಿ ಈ ಸಭೆಗೆ ಗೆಡ್ಡೆಯನ್ನು ತಂದು ಪ್ರದರ್ಶನ ಮಾಡಿದ ನಿದರ್ಶನಗಳು ಇವೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾಡಿರಬಹುದು, ಆದರೆ ಅಧ್ಯಕ್ಷರೆ, ಯಾರಾದರೂ ತಂದಿರಬಹುದು ಇಲ್ಲ ಎಂದು ಹೇಳುವುದಿಲ್ಲ, ಆದರೆ ಮಾನ್ಯ ಚಂದ್ರೇಗೌಡರು ಅಧ್ಯಕ್ಷರಾಗಿ ಆ ಸ್ಥಾನದಲ್ಲಿ ಕುಳಿತು, ರೂಲ್ಸ್ ರೆಗ್ಯುಲೇಷನ್ ಎಲ್ಲಾ ನಮಗೆ ಹೇಳಿಕೊಟ್ಟಿದ್ದಾರೆ. ಅವರು ಈ ರೀತಿಯಾಗಿ ತರಬಹುದೆಂದು ಹೇಳಿದರೆ ನಾವು ಒಪ್ಪಿಕೊಳ್ಳುತ್ತೇವೆ.

(ಗೊಂದಲ)

ಉಪಾಧ್ಯಕ್ಷರು : ಸಾಧಾರಣವಾಗಿ ತರುವುದಿಲ್ಲ, ಆದರೆ ಇದಕ್ಕೆ ಸಂಬಂಧಪಟ್ಟ ಹಾಗೆ ಒಂದೆರಡು ಪ್ಯಾಕೆಟ್ಸ್ ತಂದು, ನನಗೆ ತೋರಿಸಿ, ಅವರಿಗೆ ಕಳುಹಿಸಿದ್ದಾರೆ, ಆದರಿಂದ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : (ಪೆನ್ ತೋರಿಸುತ್ತಾ) ಇದನ್ನು ತರಬೇಡವೇ, ಇದು ಪೆನ್, ತರಬೇಡಿ ಎಂದು ಹೇಳಿದರು, ಇದನ್ನು ಹೊರಗಡೆ ಇಟ್ಟು ಬರುತ್ತೇವೆ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ : ಅಧ್ಯಕ್ಷರೇ, ನಾನು ತಮ್ಮನ್ನು ಅಭಿಂದಿಸುತ್ತೇನೆ ತಾವು ಹೇಳಿದ್ದೀರಿ. ನನ್ನ ಉದ್ದೇಶ ಏನೆಂದರೆ...

ಉಪಾಧ್ಯಕ್ಷರು : ಇದಕ್ಕೆ ಸಂಬಂಧಪಟ್ಟ ಹಾಗೆ..

(ಗೊಂದಲ)

ಶ್ರೀ ಆರ್. ಎನ್. ನಾಯಕ್ : ಪೆನ್ ತಂದಿದ್ದರೆ ಯಾರಿಗೂ ತೊಂದರೆ ಇರಲಿಲ್ಲ, ನೀವು ಬಾಯಿ ತೆಗೆದುಕೊಂಡು ಬಂದಿದ್ದೀರಿ, ಅದಕ್ಕೆ ತೊಂದರೆಯಾಗಿದೆ. ಇಲ್ಲಿ.

(ಭಾರಿ ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇವರು ಬಾಯಿ ಮುಚ್ಚಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇವರ ಸರಕಾರ ಮಾಡಿರತಕ್ಕ ಅವಿವೇಕಕ್ಕೆ ಈ ರೀತಿಯಾಗಿ ಕೂಗಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸರಕಾರ ಏನು ಅವಿವೇಕ ಮಾಡಿದೆ..

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸರ್ಕಾರ ಅಕ್ಕಿ ಕೊಡುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾರು ಕೊಟ್ಟಿದ್ದುದು.

ಶ್ರೀ ವಾಟಾಳ್ ನಾಗರಾಜ್ : ಸರಕಾರ ಕೊಟ್ಟಿದ್ದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದನ್ನು ಸಮರ್ಥನೆ ಮಾಡಿಕೊಳ್ಳಿ, ಅದನ್ನು ಬಿಟ್ಟು ಇವರು ಈ ರೀತಿಯಾಗಿ ಬಾಯಿಗೆ ಬಂದಹಾಗೆ ಮಾತನಾಡಿದರೆ ಅದನ್ನು ನೋಬಡಿ ವಿಲ್ ಟಾಲರೇಟ್. ನಿಮಗೆ ಈ ರೀತಿ ಮಾತನಾಡುವ ಹಕ್ಕು ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಯಾರಿಗೆ ಕೊಡುತ್ತಿದ್ದೀರಿ ಅಕ್ಕಿಯನ್ನು.

(ಗೊಂದಲ)

ಶ್ರೀ ಬಿ. ಹೆಚ್. ಬನ್ನಿಕೋಡ್ : ಆಹಾರಧಾನ್ಯ ಅಲ್ಲ, ವಿಷ ಕೊಡುತ್ತಿದ್ದಾರೆ, ರಾಜ್ಯದ ಜನತೆಗೆ.

(ಭಾರೀ ಗೊಂದಲ)

ಉಪಾಧ್ಯಕ್ಷರು : ಆರು ಗಂಟೆಗೆ ಚರ್ಚೆ ಮುಗಿದು ಎಲ್ಲಾ ಬೇಡಿಕೆಗಳ ಬಗ್ಗೆ ಉತ್ತರ ಕೊಡಬೇಕಾಗಿದೆ.

5.15 ಪಿ.ಎಂ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ..

ಉಪಾಧ್ಯಕ್ಷರು : ದಯವಿಟ್ಟು ಅವರು ತಮ್ಮ ಭಾಷಣ ಮುಂದುವರಿಸಲಿಕ್ಕೆ ತಾವು ಕಾಲಾವಕಾಶ ಮಾಡಿ ಕೊಡಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷಣೀಯವರೇ, ನಾನು ಮಾನ್ಯ ಮುಖ್ಯಮಂತ್ರಿಗಳ ಉತ್ತರಕ್ಕೆ ಬೇಕಾಗಿರತಕ್ಕಂಥ ಆಹಾರಧಾನ್ಯಗಳನ್ನು ಒದಗಿಸಿದ್ದೇನೆ. ಪರಿಸ್ಥಿತಿಯನ್ನು ವಿವರಿಸಿದ್ದೇನೆ. ದೇಶದ ರಾಜ್ಯದ ಜನಗಳಿಗೆ ಇರತಕ್ಕಂಥ ಸಂಕಷ್ಟಗಳನ್ನು ಚರ್ಚೆ ಮಾಡುವುದಕ್ಕೆ ಇರುವ ಒಂದು ಸದನ ಅಂತ ನಾನು ಭಾವನೆ ಮಾಡಿದ್ದೇನೆ. ಅದರ ಅಗತ್ಯ ಇಲ್ಲ ಎಂದು ಕಂಡು ಬಂದರೆ ನಾನು ಅದನ್ನು ಅಲ್ಲಿಗೆ ನಿಲ್ಲಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ಮೈಸೂರು ನಗರದ ಸೆಕೆಂಡ್ ಸ್ಟೇಜ್ ಮಂಡಿ ಮಹಲ್‌ನಲ್ಲಿ ಮಂಜುನಾಥ ಏಜನ್ಸಿ ಅಂತ ಇದೆ ಇಲ್ಲಿ ಸೀಮೆ ಎಣ್ಣೆ 9 ರೂಪಾಯಿಗಳಿಗೆ ಒಂದು ಲೀಟರ್ ಮಾರಾಟ ಮಾಡುತ್ತಿದ್ದಾರೆ.

ಶ್ರೀ ಆರ್. ಎನ್. ನಾಯಕ್ : ಮಾನ್ಯ ಅಧ್ಯಕ್ಷಣೀಯರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್.

ಉಪಾಧ್ಯಕ್ಷರು : ಅವರದು ಒಂದು ಪಾಯಿಂಟ್ ಆಫ್ ಆರ್ಡರ್ ಇದೆಯಂತೆ.

ಶ್ರೀ ಆರ್. ಎನ್. ನಾಯಕ್ : ಈಗ ಅಕ್ಕಿಯನ್ನು ಅವರು ಇಲ್ಲಿ ತಂದು ತೋರಿಸಿದ್ದಾರೆ. ಇಂತಹ ಅಕ್ಕಿಯನ್ನು ಡಿಸ್ಟ್ರಿಬ್ಯೂಶನ್ ಮಾಡಿದ್ದಾರೆ ಅಂತ ಅವರು ಹೇಳಿ ಅದರ ಸ್ಯಾಂಪಲ್ ತೆಗೆದುಕೊಂಡು ಬಂದಿದ್ದೇನೆಂದು ಹೇಳಿದರು. ಅದಕ್ಕೆ ನಾನು ಹೇಳುತ್ತೇನೆ ಮಾನ್ಯ ಅಧ್ಯಕ್ಷರು ರೂಲಿಂಗ್ ಕೊಡಲಿ ನಾನು ಹೇಳಿದ್ದು ಸರಿಯಲ್ಲ ಎಂದು. ನಾನು ಏನು ಹೇಳುತ್ತೇನೆಂದರೆ ಅವರು ಆ ಅಕ್ಕಿಯನ್ನು ಇಲ್ಲಿಗೆ ತರತಕ್ಕ ಉದ್ದೇಶ ಇಟ್ಟುಕೊಂಡು ಬಹಳ ಹಿಂದೆ ಸಂಗ್ರಹ ಮಾಡಿ ಇಟ್ಟಿರುವ ಹಾಳಾದ ಅಕ್ಕಿ ಅಂತ ನಾನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರು ಅದು ಅಲ್ಲ ಅಂತ ಬೇಕಾದರೆ ರೂಲಿಂಗ್ ಕೊಡಲಿ. ಅದನ್ನು ಬೇಕಾದರೆ ಎಕ್ಸ್‌ಪರ್ಟ್ಸ್‌ಗೆ ಕಳುಹಿಸಿಕೊಡಿ.

(ಗೊಂದಲ)

ಉಪಾಧ್ಯಕ್ಷರು : ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಏನೂ ಇಲ್ಲ.

(ಗೊಂದಲ)

ಶ್ರೀ ಆರ್. ಎನ್. ನಾಯಕ್ : ಆ ಅಕ್ಕಿಯನ್ನು ಎಲ್ಲಿಂದಲೋ ಯಾವುದೋ ಗೋಡೌನ್‌ನಿಂದ ತಂದಿದ್ದೀರಿ ಎಂದು ಹೇಳುವ ಹಕ್ಕು ನನಗೆ ಇಲ್ಲವೇ? ಇಲ್ಲಿ ಮಾತನಾಡುವುದಕ್ಕೆ ಬರುವುದು ಬರೀ ವಾಟಾಳ್ ನಾಗರಾಜ್‌ರವರಿಗೊಬ್ಬರಿಗೆ ಏನು. ಎಲ್ಲರಿಗೂ ಹಕ್ಕು ಇದೆ. ನಾನು ಮತ್ತೊಮ್ಮೆ ಹೇಳುತ್ತೇನೆ. ಈ ಅಕ್ಕಿಯನ್ನು ನೀವು ಸದುದ್ದೇಶ ರಹಿತದಿಂದ ಟೀಕೆ ಮಾಡಬೇಕು ಸರ್ಕಾರಕ್ಕೆ ಅವಮಾನ ಮಾಡಬೇಕು ಎನ್ನುವ ಉದ್ದೇಶದಿಂದ ಇದನ್ನು ತಂದು ಇಂತಹ ಅಕ್ಕಿಯನ್ನು ಡಿಸ್ಟ್ರಿಬ್ಯೂಶನ್ ಮಾಡುತ್ತಿದ್ದೀರಿ ಅಂತ ಹೇಳುವುದಕ್ಕೆ ತಂದಿದ್ದೀರಿ ಅಂತ ಹೇಳುತ್ತೇನೆ.

ಉಪಾಧ್ಯಕ್ಷರು : ಅವರ ಅನಿಸಿಕೆ ಹೇಳಿದ್ದಾರೆ. ನೀವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ : ನಾನು ಅಂತಹ ಬೇಜವಾಬ್ದಾರಿ ಸದಸ್ಯನೂ ಅಲ್ಲ. ಅಂತಹ ಬೇಜವಾಬ್ದಾರಿ ಕೆಲಸವನ್ನು ನನ್ನ ಬದುಕಿನಲ್ಲಿ ಎಂದೂ ಮಾಡಿಲ್ಲ ಮುಂದೆ ಮಾಡುವುದಿಲ್ಲ. ಅಥವಾ ನಾನು ಇದನ್ನು ಇಲ್ಲಿ ಹೇಳಿ ರಾಜಕೀಯ ಲಾಭ ತೆಗೆದುಕೊಳ್ಳುವುದೂ ಇಲ್ಲ. ನಾನು ಇದನ್ನು ಮಂತ್ರಿಗಳ ಗಮನಕ್ಕೆ ತರತಕ್ಕಂಥ ಕೆಲಸ ಮಾಡಿದೆ. ಇದು ಅಹಿತಕರ ಅಂತ ಆದರೆ ಇದು ಏನಾಗಿದೆ ಅಂದ್ರೆ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಹೇಳಿದಹಾಗೆ ನಾವು ತಮಟೆ ಬಡಿದುಕೊಂಡು ಕೂತಿರಬೇಕೇನು? ನಾವು ಬೇರೆ ಕೆಲಸ ಮಾಡುವಂತಿಲ್ಲವೇನು? I take a challenge. ಇದೇ ಅಕ್ಕಿ ಮೈಸೂರಿನಲ್ಲಿ ಮಾರಾಟ ಮಾಡಿಲ್ಲ ಅಂತ ಆದರೆ ನಾನು ಈ

ಸದನದಲ್ಲಿ ಒಂದು ನಿಮಿಷ ಸದಸ್ಯನಾಗಿ ಇರುವುದಿಲ್ಲ. I take a challenge. Let there be a responsibility on the Member.

(INTERRUPTIONS)

SRI D. B. CHANDRE GOWDA : I take a challenge. If I fail I will not sit even as a Member. I have a responsibility.

ತಾವು ಯಾರ ಜೊತೆ ಮಾತನಾಡುತ್ತಿದ್ದೀರಿ ಅಂತ ಸ್ವಲ್ಪ ಗಮನ ಇರಲಿ. ಬಾಯಿಗೆ ಬಂದ ಹಾಗೆ ಮಾತನಾಡಬೇಡಿ. There is a limit for this.

(ಗೊಂದಲ)

SRI D. B. CHANDRE GOWDA : If it is wrong. I am prepared to submit my resignation. There should be some limit for these things.

(INTERRUPTIONS)

ಉಪಾಧ್ಯಕ್ಷರು : ತಾವೇನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದೀರಿ ಅದರಲ್ಲಿ ಪಾಯಿಂಟ್ ಆರ್ಡರ್ ಇಲ್ಲ.

ಶ್ರೀ ಆರ್.ಎನ್. ನಾಯಕ್ : ತಾವು ಹಾಗೆಲ್ಲಾ ಮಾಡಬೇಡಿ. ತೊಂದರೆಯಾಗುತ್ತದೆ. ರಾಜೀನಾಮೆ ಕೊಟ್ಟರೆ ತೊಂದರೆಯಾಗುತ್ತದೆ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ : ದಯವಿಟ್ಟು ತಾವು ಇಂತಹ ಹುಡುಗಾಟಿಕೆ ಮಾಡುವುದಕ್ಕೆ ಹೋಗಬೇಡಿ.

ಉಪಾಧ್ಯಕ್ಷರು : ಮಂತ್ರಿಗಳು ಉತ್ತರ ಕೊಡುತ್ತಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಆರ್. ಎನ್. ನಾಯಕ್ : ಮಾನ್ಯ ಅಧ್ಯಕ್ಷಣೀಯವರೇ, ನನಗೆ ರೂಲಿಂಗ್ ಬಂದಿಲ್ಲ.

ಉಪಾಧ್ಯಕ್ಷರು : ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಇಲ್ಲ ; ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಟಿ. ಎಂ. ಮಂಜುನಾಥ್ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಂತಹ ವಿಚಾರಗಳನ್ನು ಸುಳ್ಳು ಎಂದು ಹೇಳುವುದಕ್ಕಾಗುವುದಿಲ್ಲ. ಫುಡ್ ಕಾರ್ಪೋರೇಷನ್ ಆಫ್ ಇಂಡಿಯಾದಿಂದ ಬರತಕ್ಕಂಥ ಆಹಾರಧಾನ್ಯಗಳನ್ನು ನಮ್ಮವರು ಸರಬರಾಜು ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಅದು ಗೊಬ್ಬರದ ಗುಂಡಿಯಿಂದ ಬರಲಿ, ನಿಮ್ಮ ಜವಾಬ್ದಾರಿ ಏನು? ಸರ್ಕಾರದ ಜವಾಬ್ದಾರಿ ಏನು?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷಣೆಯವರೆ, ಒಂದು ನಿಮಿಷ.

(ಗೊಂದಲ)

ಶ್ರೀ ಟಿ. ಎಂ. ಮಂಜುನಾಥ್ : ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ನಾವು ಏನು ಮಾಡುವುದು?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷಿಣಿಯವರೆ, ನಮ್ಮ ವಿರೋಧಪಕ್ಷದ ನಾಯಕರು ಒಂದು ತಪ್ಪನ್ನು ಮಾಡಿದ್ದಾರೆ. ಈ ಅಕ್ಕಿ ಪ್ರದರ್ಶನವನ್ನು ಇಲ್ಲಿ ಮಾಡಿ ತಪ್ಪು ಮಾಡಿದ್ದಾರೆ. ಏಕೆಂದರೆ, ಈ ಸರ್ಕಾರ ಕೊಡುತ್ತಿರತಕ್ಕಂಥ ಮುಗ್ಗಲು ಅಕ್ಕಿಯನ್ನು ಒಂದು ಮಂಕರಿಯಲ್ಲಿ ಹಾಕಿಕೊಂಡು ಇಲ್ಲಿ ತೆಗೆದುಕೊಂಡು ಬಂದಿದ್ದರೆ ಯಾರು ಕುಳಿತುಕೊಳ್ಳುವುದಕ್ಕೆ ಆಗುತ್ತಿರಲಿಲ್ಲ. ಅವರು ಇರುವುದರಲ್ಲಿ ಉತ್ತಮವಾದ ಅಕ್ಕಿಯನ್ನು ತೋರಿಸಿದ್ದಾರೆ. ಇವರಿಗೆ ಏನೂ ಗೊತ್ತಿಲ್ಲದ ಆ ಸ್ಥಿತಿ. ಇದೆ ಸ್ವಾಮಿರಾವ್ ಸದಸ್ಯರಾಗಿದ್ದಾಗೆ ಏನೇನು ತೆಗೆದುಕೊಂಡು ಬಂದು ಪ್ರದರ್ಶನ ಮಾಡಿದ್ದಾರೆಂದು ನನಗೆ ಗೊತ್ತಿದೆ. ಏನೋ ಅಕ್ಕಿ ಸ್ಯಾಂಪಲ್ ತೋರಿಸಿದ ತಕ್ಷಣವೇ ಅದೇ ಒಂದು ದೊಡ್ಡದು ಮಾಡಿಕೊಂಡು, ಏನು ತಪ್ಪು ಮಾಡಿದ್ದಾರೆ ಅವರು? ಅವರು ಹಿರಿಯರಾದಂಥ ಗೌರವಾನ್ವಿತ ಸದಸ್ಯರಾಗಿದ್ದಾರೆ. ಅವರ್ರ ಮನಸ್ಸಿಗೆ ನೋವಾಗುವ ರೀತಿಯಲ್ಲಿ ಮಾತನಾಡಿದರೆ ಹೇಗೇ?

ಶ್ರೀ ಆರ್. ಎನ್. ನಾಯಕ್ : ರೂಲ್ಸ್ ಪ್ರಕಾರ ಮಾಡಿದರೇನು?

ಶ್ರೀ ಪಿ.ಜಿ. ಆರ್. ಸಿಂಧ್ಯ : ಏನು ರೂಲ್ಸ್ ಪ್ರಕಾರ ಇಲ್ಲದೇ ಇರುವುದು?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಕುಸುಬವಲಕ್ಕಿ, ಕೆಟ್ಟ ಅಕ್ಕಿ ಕೊಡುತ್ತಾರೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಶೇವರ್‌ಫುಲ್.

(ಗೊಂದಲ)

ಉಪಾಧ್ಯಕ್ಷರು : ಈಗ ದಯವಿಟ್ಟು ಚರ್ಚೆ ಮುಂದುವರಿಸಿ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಮಾನ್ಯ ಅಧ್ಯಕ್ಷರೇ, ಈ ಸಭೆಯಲ್ಲಿ ನಮಗೆ ಪ್ರಜಾ ಪ್ರಭುತ್ವದ ದೃಷ್ಟಿಯಿಂದ ರಕ್ಷಣೆ ಕೊಡುವುದಕ್ಕಾಗುವುದಿಲ್ಲವೆಂದರೆ ನಾವು ಹೊರಗಡೆ ಹೋಗಬೇಕಾಗುತ್ತದೆ. ಉಪಾಧ್ಯಕ್ಷರು : ವಿರೋಧ ಪಕ್ಷದ ಉಪ ನಾಯಕರು ..

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅನಾಗರೀಕವಾಗಿ..

(ಗೊಂದಲ)

ಶ್ರೀ ಬಿ. ಹೆಚ್. ಬನ್ನಿಕೋಡ್ : ತಿನ್ನುವುದಕ್ಕೆ ಯೋಗ್ಯವಲ್ಲ ಅಂತ ಅಕ್ಕಿಯನ್ನು ಕೊಟ್ಟು ಈಗ ವಿಚಾರಣೆ ಮಾಡುತ್ತೇವೆಂದು ಹೇಳುತ್ತಾರೆ.

(ಈ ಸಂದರ್ಭದಲ್ಲಿ ವಿರೋಧ ಪಕ್ಷದ ಸದಸ್ಯರುಗಳು ಅಧ್ಯಕ್ಷ ಪೀಠದ ಮುಂಭಾಗದ ವೆಲ್‌ಗೆ ಪ್ರವೇಶ ಮಾಡಿದರು)

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಹಿರಿಯ ಮಂತ್ರಿಗಳಾದ ಕೆ.ಹೆಚ್. ಪಾಟೀಲರು ಈಗ ಮಾತನಾಡುತ್ತಾರೆ. ಅವರು ಏನು ಹೇಳುತ್ತಾರೋ ಕೇಳೋಣ.

ಶ್ರೀ ಕೆ.ಹೆಚ್. ಪಾಟೀಲ್ : ಮಾನ್ಯ ಉಪಾಧ್ಯಕ್ಷಿಣೆಯರೆ...

(ಗೊಂದಲ)

ಶ್ರೀ ಅಜೀಜ್ ಸೇಠ್ : ಮಾನ್ಯ ಕೆ.ಹೆಚ್. ಪಾಟೀಲ್ ಅವರು ಮಾತನಾಡುತ್ತಿದ್ದಾರೆ. ಅವರು ಏನು ಹೇಳುತ್ತಾರೋ ಕೇಳಿ....

(ಗೊಂದಲ)

ಶ್ರೀ ಕೆ.ಹೆಚ್. ಪಾಟೀಲ್ : ನನ್ನ ಮಾತು ಸ್ವಲ್ಪ ಕೇಳಿ...

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಪಾಟೀಲ್‌ರವರು ಮಾತನಾಡುವುದನ್ನು ಕೇಳಿ....

(ಗೊಂದಲ)

ಶ್ರೀ ಕೆ.ಹೆಚ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ,

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಅವರು ನಿಮ್ಮನ್ನು ಉದ್ದೇಶಿಸಿ ಮಾತನಾಡಬೇಕು, ಈ ಕಡೆ ಮಾತನಾಡುವುದಲ್ಲ......

ಶ್ರೀ ಕೆ.ಹೆಚ್. ಪಾಟೀಲ್ : ನಮ್ಮ ಸಭಾ ನಾಯಕರಿಗೆ ಎಷ್ಟು ಗೌರವ ಇದೆಯೋ ಅಷ್ಟೇ ಗೌರವ ವಿರೋಧ ಪಕ್ಷದ ನಾಯಕರಿಗೂ ಸಹ ಇದೆ. ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಸಂಪೂರ್ಣವಾದ ಹೊಣೆಗಾರಿಕೆಯಿಂದ ಮಾತನಾಡುತ್ತಾರೆ ಎನ್ನುವ ಅರಿವು ನಮಗೆ ಮತ್ತು ನಮ್ಮ ಸರ್ಕಾರಕ್ಕೆ ಇದೆ.

(ಗೊಂದಲ)

ಉಪಾಧ್ಯಕ್ಷರು : ನೀವುಗಳು ಬಾವಿಯಲ್ಲಿ ನಿಂತುಕೊಂಡು ಮಾತನಾಡಿದರೆ ರೆಕಾರ್ಡಿಗೆ ಹೋಗುವುದಕ್ಕೆ ಹೇಗೆ ಸಾಧ್ಯ ? ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಸಂಖ್ಯಾ ಬಲ ಜಾಸ್ತಿ ಇದೆ ಎಂದು ವಿರೋಧ ಪಕ್ಷದವರನ್ನು ತುಳಿಯುವಂತಹದ್ದು ಕಾಂಗ್ರೆಸ್ ನೀತಿಯೇ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ವಿರೋಧ ಪಕ್ಷದವರು ಇದನ್ನೆಲ್ಲಾ ಪ್ರತಿಭಟನೆ ಮಾಡಬೇಕು. ಅವರಿಗೆ ಸಂಖ್ಯಾ ಬಲ ಜಾಸ್ತಿ ಇದೆ ಎಂದು, ಅದನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. (ಮಾನ್ಯ ಸದಸ್ಯರು ಮಾತನಾಡುತ್ತಾ ತಮ್ಮ ಪಕ್ಷದ ಸದಸ್ಯರೊಂದಿಗೆ ಬಾವಿಗೆ ಬಂದರು)

(ಗೊಂದಲ)

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಈ ಸಭೆಯಲ್ಲಿ ಇಲ್ಲಿಯವರೆಗೆ ನಡೆದಂಥ ವಿಷಾದಕರವಾದಂಥ ಘಟನೆ ಬಗ್ಗೆ ಎಲ್ಲರೂ ವಿಷಾದ ಪಡಬೇಕಾಗಿದೆ. ಇವೊತ್ತು ನಮ್ಮ ಸದನದ ಮುಖ್ಯಸ್ಥರಾದ ಮಾನ್ಯ ಮುಖ್ಯಮಂತ್ರಿಗಳು ಏನಿದ್ದಾರೆ ಅವರಿಗೆ ಎಷ್ಟು ಗೌರವ ಇದೆಯೋ ಅದಕ್ಕಿಂತ ಯಾವುದೇ ರೀತಿಯಲ್ಲಿ ಕಡಿಮೆ ಇಲ್ಲದ ಗೌರವ ನಮ್ಮ ವಿರೋಧ ಪಕ್ಷದ ನಾಯಕರಿಗೂ ಇರುತ್ತದೆ. ಅದರಲ್ಲಿಯೂ ಸಹ ಮಾನ್ಯ ಚಂದ್ರೇಗೌಡರು ವಿರೋಧಪಕ್ಷದ ನಾಯಕರಾಗಿ ಇರುವಾಗ ಯಾವುದೇ ಒಂದು ವಿಚಾರದಲ್ಲಿ ಮಾತನಾಡುವಾಗ ಬಹಳ ಸಂಪೂರ್ಣವಾಗಿ ಜವಾಬ್ದಾರಿಯುತವಾಗಿ ಮಾತನಾಡುತ್ತಾರೆ ಎಂಬ ಅರಿವು ನನಗೆ ಇದೆ. ಒಂದು ವೇಳೆ ಅವರು ಮಾತನಾಡಿದ ತೀಕ್ಷ್ಣತೆಯಲ್ಲಿ ಅಥವಾ ಅವರಿಗೆ ಬಂದಂಥ ಇನ್‌ಫಾರ್ಮೇಶನ್‌ಗಳ ಆಧಾರದ ಮೇಲಿಂದ ಏನಾದರೂ ನಮ್ಮನ್ನು ಟೀಕೆ ಮಾಡಿದ್ದರೆ, ಆ ಟೀಕೆಗಳನ್ನು ನಮ್ಮ ಹಾಗೂ ನಮ್ಮ ಸರಕಾರದ ವಿರುದ್ಧವಾಗಿದೆ ಎಂದು ತಿಳಿದುಕೊಳ್ಳಬಾರದು, ಅದು ನಮ್ಮ ಹಿತದೃಷ್ಟಿಯಿಂದ ಮಾಡಿದ ಟೀಕೆ ಎಂದು ತಿಳಿದುಕೊಳ್ಳಬೇಕು.

ಈ ಮಾತನ್ನು ನಾನು ನಮ್ಮ ಸರಕಾರದ ಪತಿಯಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರ ಮನಸ್ಸು ನೋವಾಗಿದೆ. ಯಾವಾಗಲೂ ವಿರೋಧಪಕ್ಷದ ನಾಯಕರಾಗಿ ಕೆಲಸ ಮಾಡುವಾಗ ಅನೇಕ ತೀಕ್ಷ್ಣವಾದ ಮಾತುಗಳನು [illegible]

ಎಷ್ಟೋ ಜನರ ಕಷ್ಟಸಂಕಷ್ಟಗಳನ್ನು ಜನರ ಪರವಾಗಿ ಹೇಳುವಾಗ ಮಂತ್ರಿಗಳ ಕೋಪಾನುಕೋಪಕ್ಕೆ ಕೂಡ ಈಗಾಗಬೇಕಾಗುತ್ತದೆ. ಅವುಗಳನ್ನೆಲ್ಲಾ ತಡವರಿಸಿಕೊಂಡು ಅವರು ಇಲ್ಲಿ ಮಾಡುವಂಥ ಕಾರ್ಯವು ಶ್ಲಾಘನೀಯವಾದುದು. ಈ ಒಂದು ಸಣ್ಣ ಮಾತಿಗಾಗಿ ಕರ್ನಾಟಕ ರಾಜ್ಯದಲ್ಲಿ ಇಂಥ ಒಂದು ಘಟನೆಯಾಯಿತು ಎಂದು ಆಗಬಾರದು. ಅದೂ ಚಂದ್ರೇಗೌಡರ ಕಾಲದಲ್ಲಿ ಆಯಿತು ಎಂದಾಗಬಾರದು. ಅದಕ್ಕಾಗಿ ನಾನು ಎಲ್ಲಾ ವಿರೋಧ ಪಕ್ಷದ ಮಾನ್ಯರುಗಳಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಅದುದನ್ನು ಮರೆತುಬಿಡಿ, ನಿಮ್ಮ ತೀಕ್ಷ್ಣತೆಯನ್ನು ಸಂಪೂರ್ಣವಾದ ಹೊಣೆಗಾರಿಕೆಯಿಂದ ಹೇಳಿ, ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ, ಈಗ ಮಾನ್ಯ ಚಂದ್ರೇಗೌಡರು ಮಾತನಾಡುವಾಗ ಸಂಬಂಧಪಟ್ಟ ಸಚಿವರು ಮಾತ್ರ ಮಾತನಾಡುತ್ತಾರೆ, ಅದನ್ನು ಬಿಟ್ಟು ಎಲ್ಲರೂ ಉತ್ತರ ಕೊಡುವುದಕ್ಕೆ ಹೋದರೆ ಹೀಗೆ ಆಗುತ್ತದೆ. ಆದ್ದರಿಂದ ಈ ಬಗ್ಗೆ ದಯವಿಟ್ಟು ನಾನು ಸರಕಾರದ ವತಿಯಿಂದ ಅಪಾಲಜಿ ಕೇಳುತ್ತೇನೆ. ತಾವುಗಳು ದಯಮಾಡಿ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಬೇಕು. ಇದರಿಂದ ನಿಮ್ಮ ಗೌರವಕ್ಕೆ ಯಾವುದೇ ರೀತಿಯಿಂದ ಚ್ಯುತಿ ಬರುವುದಿಲ್ಲ, ಕುಂಠಿತವಾಗುವುದಿಲ್ಲ, ಬದಲಾಗಿ ಇದರಿಂದ ನಿಮ್ಮ ಘನತೆಗೌರವಗಳು ಹೆಚ್ಚಾಗುತ್ತದೆ ಎಂದು ತಮ್ಮಲ್ಲಿ ಹೇಳಬಯಸುತ್ತೇನೆ. ನಾನು ನಿಮ್ಮ ಘನತೆಗೆ ಸಂಪೂರ್ಣವಾಗಿ ಪುಷ್ಟೀಕರಣ ಕೊಡಬಯಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಒಂದೊಂದು ಇಲಾಖೆಗೆ ಒಬ್ಬೊರು ಮಂತ್ರಿಗಳಾದರೆ ಸರಿಹೋಗುತ್ತದೆ, ಆದರೆ ಇಲ್ಲಿ ಒಂದೇ ಇಲಾಖೆಗೆ 10 ಜನರು ಮಂತ್ರಿಗಳಂತೆ ವರ್ತಿಸುತ್ತಿದ್ದಾರೆ...

(ಗೊಂದಲ)

ಶ್ರೀ ಆರ್.ಎನ್. ನಾಯಕ್ : ನೀವುಗಳು ಕರೆಯದೇ ಎಲ್ಲಿಯವರೆಗೆ ಹೀಗೆ ಮಧ್ಯೆ ಮಾತಾಡುತ್ತೀರಿ ಹಾಗೆಯೇ ನಾವು ಮಾತನಾಡಬೇಕಾಗುತ್ತದೆ...

ಶ್ರೀ ಬಿ.ಹೆಚ್. ಬನ್ನಿಕೋಡ್ : ಇವರಿಗೆ ಕಾನೂನಿನ ಚೌಕಟ್ಟಿನಲ್ಲಿ ಇರುವುದಕ್ಕೆ ಬರುವುದಿಲ್ಲ ಕಾನೂನಿನ ಚೌಕಟ್ಟಿನಲ್ಲಿ ನಡೆದರೆ ಅದನ್ನು ಒಪ್ಪುತ್ತೇನೆ, ತಪ್ಪಿನಡೆದರೆ ಅದಕ್ಕೆ ಸರಿಯಾದ ಉತ್ತರವನ್ನು ಕೊಡುತ್ತೇವೆ.

SRÍ D.B. CHANDRE GOWDA : I am extremly sorry,, Madam Chairman...

ನಾನು ಸಾಧಾರಣವಾಗಿ ಇಂಥ ಪ್ರವೃತ್ತಿ ಇರತಕ್ಕಂಥ ಮನುಷ್ಯನು ಅಲ್ಲ, ಆ ಕೆಲಸವನ್ನು ನಾನು ಮಾಡುವುದಕ್ಕೆ ಹೋಗುವುದಿಲ್ಲ. ಮೈಸೂರು ನಗರದಿಂದ ಹತ್ತಾರು ಜನರು ಗ್ರಾಹಕರು ಪರಿಸ್ಥಿತಿಯನ್ನು ನನಗೆ ಹೇಳಿದ ಮೇಲೆ ನಾನು ಖುದ್ದಾಗಿ ಪರಿಶೀಲನೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಉತ್ಪ್ರೇಕ್ಷೆ ಮಾಡಿ ಇಲ್ಲಿ ರಾಜಕೀಯ ಲಾಭವನ್ನು ಮಾಡಿಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡಿಲ್ಲ, ನನ್ನ ಮನಸ್ಸಿಗೆ ನೋವು ಆದುದು, ಮಾನ್ಯ ಸದಸ್ಯರು ಹಿರಿಯ ಸದಸ್ಯರು ಮೊನ್ನೆಯ ದಿವಸ ಇಂಥಾದ್ದೇ ಒಂದು ಪ್ರಸಂಗ ಬಂದಾಗ ನಾನು ಸ್ವಲ್ಪ ತಾಳ್ಮೆಯನ್ನು ತೆಗೆದುಕೊಂಡಾಗಿನ ಅಪರಾಧವಾಗಿ ಇವೊತ್ತು ಈ ಸ್ಥಿತಿಗೆ ಬಂದಿದೆಯೋ ಏನೋ ಅನ್ನಿಸುತ್ತದೆ. ಯಾವ ಮಂತ್ರಿಯವರ ಅಥವಾ ವ್ಯಕ್ತಿಯ ಚಾರಿತ್ರ್ಯ ಹರಣ ಮಾಡುತಕ್ಕಂಥ ಪ್ರವೃತ್ತಿಯು ನನ್ನದಲ್ಲ, ಅದನ್ನು ಹೊಸದಾಗಿ ನಾನು ಕಲಿಯಲೂ ಬೇಕಾಗಿಲ್ಲ. ಕಳೆದ ಶಾಸನಸಭೆಯ ಅಧಿವೇಶನ ಪ್ರಾರಂಭವಾದಾಗಿನಿಂದಲೂ ಅತ್ಯಂತ ಕೆಳಗಡೆ ಇರತಕ್ಕಂಥ ಜನರ ಕೆಲಸವನ್ನು ಮಾಡುವುದು ಸಾಧ್ಯವಾಗಲಿಲ್ಲ, ಇವೊತ್ತು ಏರುತ್ತಾ ಇರತಕ್ಕಂಥ ಬೆಲೆಗಳು ಹಣದುಬ್ಬರ ಇತ್ಯಾದಿಗಳ ಬಗ್ಗೆ ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ. ಶೇಕಡ 15ರಷ್ಟು ಇನ್‌ಫ್ಲೇಶನ್ ಇದೆ, ಆ ಒಂದು ಟ್ರೆಂಡ್ ದೇಶದಲ್ಲಿ ಇದೆ, ಅದೇ ರೀತಿಯಲ್ಲಿ ದೇಶದ ಪರಿಸ್ಥಿತಿಯ ಅರಿವು ನಮಗೂ ಇದೆ, ಅದರಲ್ಲೂ ಜನರಿಗೆ ಕನಿಷ್ಠಪಕ್ಷದಲ್ಲಿ

ಏನಾದರೂ ಸಹಾಯ ಮಾಡುವುದಕ್ಕೆ ಸಾಧ್ಯವಿದ್ದರೆ ಈ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯವರು ಮಾಡಬೇಕೆಂಬ ದೃಷ್ಟಿಯಲ್ಲಿ ಈ ಮಾತನ್ನು ಹೇಳಿದ್ದೇನೆ. ನಾನು ಇದಕ್ಕೆ ಮೈಸೂರು ಜಿಲ್ಲೆಯನ್ನು ಮಾತ್ರ ಆಯ್ಕೆ ಮಾಡಿಕೊಂಡಿಲ್ಲ. ಮಾನ್ಯ ಸಚಿವರು ದಲಿತರ ಪರವಾಗಿ ಬಹಳ ಕಳಕಳಿ ಇರತಕ್ಕಂತ ತಮ್ಮ ಬದುಕಿನುದ್ದಕ್ಕೂ ಅವರ ಬಗ್ಗೆ ಕೆಲಸ ಮಾಡಿರತಕ್ಕಂಥದು. ತಾವುಗಳು ಸಚಿವರೆಂದು ಈ ಮಾತನ್ನು ಹೇಳುತ್ತಾ ಇಲ್ಲ, ವಿಶೇಷವಾಗಿ ಮಾನ್ಯ ನರಸಿಂಹಮೂರ್ತಿಯವರ ಗಮನಕ್ಕೆ ತರುತ್ತಿದ್ದೇನೆ ಎಂದು ಹೇಳಿದ್ದೇನೆ. ಕರ್ನಾಟಕ ರಾಜ್ಯ ದಲಿತರ ಒಕ್ಕೂಟ ಸಮಿತಿ 13-3-91ರಲ್ಲಿ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್, ಫುಡ್‌ಸೆಲ್ ಇವರಿಗೆ ಒಂದು ಪತ್ರವನ್ನು ಬರೆಯುತ್ತಾರೆ. ಅವರ ಸಂಕಷ್ಟಗಳನ್ನು ಅದರಲ್ಲಿ ನಿವೇದನೆ ಮಾಡುತ್ತಾರೆ. ರಾಜೀವ ಗಾಂಧಿ ನಗರ ನಿವಾಸಿಗರು ನಕಲಿ ಕುಟುಂಬ ಪಡಿತರ ಚೀಟಿಗಳ ಬಗ್ಗೆ ಒಂದು ಕಡೆ ಬರೆದಿದ್ದಾರೆ ಮತ್ತು ಪಡಿತರ ಚೀಟಿಗಳಿಗೆ ವಿತರಣೆ ಮಾಡತಕ್ಕಂಥ ಸಾಮಾಗ್ರಿಗಳ ಬಗ್ಗೆ ಮತ್ತೊಂದು ಕಡೆ ಹೀಗೆ ಬರೆದಿದ್ದಾರೆ. ಆದರೆ ಇದುವರೆಗೂ ಅವರಿಗೆ ಯಾವುದೇ ಉತ್ತರ ಸಂಬಂಧಪಟ್ಟವರಿಂದ ಬಂದಿಲ್ಲ. 13-3-91ರಲ್ಲಿ ಅವರ ಸಂಖ್ಯೆ 90-91-386ರಂತೆ ಒಂದು ಪತ್ರವನ್ನು ಪುನಃ ಬರೆಯುತ್ತಾರೆ. 19-7-91ಕ್ಕೆ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಫುಡ್‌ಸೆಲ್ ಜನೋಪಯೋಗಿ ಇಲಾಖೆ, ಮಹಾತ್ಮಾಗಾಂಧಿ ರಸ್ತೆ ಇಲ್ಲಿಗೆ ಪತ್ರ ಬರೆಯುತ್ತಾರೆ. 17-7-91ರಂದು ತಹಶೀಲ್ದಾರ್ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಬೆಂಗಳೂರು ದಕ್ಷಿಣ ತಾಲ್ಲೂಕು ಇಲ್ಲಿಗೆ ಪತ್ರ ಬರೆಯುತ್ತಾರೆ, ಆದರೆ ಅವರಿಗೆ ಉತ್ತರ ಸಿಗುವುದಿಲ್ಲ, ಇವೊತ್ತಿನವರೆಗೂ ಅವರಿಗೆ ಉತ್ತರ ಸಿಕ್ಕಿಲ್ಲ. ಆ ಬಗ್ಗೆ ಇರುವ ಇಡೀ ಕಡತವನ್ನು ಕೊಡುವುದಕ್ಕೆ ಸಿದ್ದರಿದ್ದಾರೆ. ಇದು ಬೆಂಗಳೂರಿನ ವಿಚಾರವಾದರೆ, ಗುಲ್‌ಬರ್ಗದಿಂದ ಒಂದು ಪತ್ರ ಬರುತ್ತದೆ. ಇದನ್ನು ಹೇಳಬೇಕೆಂದು ನನ್ನಲ್ಲಿ ಇಚ್ಛೆ ಇರಲಿಲ್ಲ. ಅವರ ಗಮನಕ್ಕೆ ಇಷ್ಟು ಮಾತ್ರ ತಂದರೆ ಸಾಕು ಎಂದು ಅಂದುಕೊಂಡಿದ್ದೆ. ಈಗ ಪೂರ್ತಿ ಚರಿತ್ರೆಯನ್ನು ಬಿಚ್ಚಿ ಇಡಲು ಸಿದ್ಧನಾಗಿದ್ದೇನೆ. ಒಂದೊಂದು ವಿಭಾಗದಿಂದ ಒಂದೊಂದು ಉದಾಹರಣೆಯನ್ನು ಹೇಳಿದರೆ ಸಾಕು ಎಂದು ಕಾಣುತ್ತದೆ. ಗುಲ್‌ಬರ್ಗ ಜಿಲ್ಲೆಯ ಯಾದಗಿರಿ ತಾಲ್ಲೂಕು ಆಹಾರ ವಿತರಣೆ ಮಳಿಗೆಯಲ್ಲಿ ಶ್ರೀ ಶಿವಪ್ಪ ಕುರಿ ಎಂಬ ವ್ಯವಸ್ಥಾಪಕರು ನಡೆಸುತ್ತಿದ್ದಂಥ ಅವ್ಯವಹಾರಗಳ ಬಗ್ಗೆ ಬರೆಯುತ್ತಾರೆ. ಶ್ರೀ ಭೀಮರಾಯ, ಠಾಣಗುಂಡಿ, ಅಂಚೆ 'ಇವರು ಬರೆಯುತ್ತಾರೆ "ಗುಲ್‌ಬರ್ಗ ಜಿಲ್ಲೆಯ ಯಾದಗಿರಿ ತಾಲ್ಲೂಕಿನ ನಿವಾಸಿಗಳಾದ ನಾವು ತಮ್ಮನ್ನು ಕೇಳಿಕೊಳ್ಳುವುದೇನೆಂದರೆ, ಯಾದಗಿರಿಯಲ್ಲಿನ ಆಹಾರ ವಸ್ತುಗಳ ವಿತರಣಾ ಮಳಿಗೆಯ ವ್ಯವಸ್ಥಾಪಕರಾದ ಶ್ರೀ ಶಿವಪ್ಪ ಕುರಿ ಎಂಬವರ ಮೇಲೆ ನೇರವಾದ ಚಾರ್ಜ್‌ಸ್‌ನ್ನು ಮಾಡುತ್ತಾರೆ.

ಅವರು ಪ್ರತಿಯೊಂದು ಹಳ್ಳಿಗಳಿಗೂ ವಿತರಣೆ ಮಾಡಬೇಕಾದ ಸಕ್ಕರೆ ಮತ್ತು ದವಸಧಾನ್ಯಗಳನ್ನು ಹಳ್ಳಿಗಳಿಗೆ ವಿತರಣೆ ಮಾಡುವುದಿಲ್ಲ. ಪ್ರತಿಯೊಂದು ಹಳ್ಳಿಗಳಿಗೂ ಮಳಿಗೆಯುಗಳಿಗೂ ವಿತರಣೆ ಮಾಡಬೇಕಾದ ಸಕ್ಕರೆ ದವಸಧಾನ್ಯಗಳನ್ನು ಹಣವನ್ನು ಈ ಮಳಿಗೆಯ ವಿತರಕರ ಹೆಸರಿನಲ್ಲಿ ಪಡೆದುಕೊಂಡು ವ್ಯವಸ್ಥಾಪಕರು ತಾವೇ ಎಲ್ಲಾ ಸಕ್ಕರೆ ಮತ್ತ ದವಸಧಾನ್ಯಗಳನ್ನು ನೇರವಾಗಿ ವ್ಯಾಪಾರಸ್ಥರಿಗೆ ಮಾರಾಟ ಮಾಡುತ್ತಿದ್ದಾರೆ. ಮತ್ತು ಹಳ್ಳಿಯ ಮಳಿಗೆಯಲ್ಲಿ ವಿತರಕರಿಗೆ ಸ್ವಲ್ಪ ಹಣವನ್ನು ಕೊಟ್ಟು ಕಳುಹಿಸುತ್ತಾರೆ. ಈ ಕಾರ್ಯಕ್ಕೆ ಈ ತಾಲ್ಲೂಕಿನ ಆಹಾರ ಪೂರೈಕೆ ನಿರೀಕ್ಷಕರಾದ ಶ್ರೀ ಅಮರಣ್ಣನವರು ಪೂರ್ಣ ಪ್ರಮಾಣದ ಸಹಕಾರ ನೀಡುತ್ತಾರೆ. ಅದರಂತೇ ಅವರು ಸಹ ಅದರಲ್ಲಿ ಪಾಲುದಾರರಿದ್ದಾರೆ. ಇದರಿಂದಾಗಿ ಪ್ರತಿಯೊಂದು ಹಳ್ಳಿಗಳಿಗೂ ಸಕ್ಕರೆ ಆಹಾರಧಾನ್ಯಗಳ ವಿತರಣೆಯಾಗದೆ ಹಳ್ಳಿಯಲ್ಲಿ ಜನರು ಪರದಾಡಬೇಕಾಗಿದೆ. ಈ ಅವ್ಯವಹಾರವು ಅಲ್ಲಿ ನಿರ್ಭಯವಾಗಿ ನಡೆಯುತ್ತಾ ಇದೆ. ಯಾದಗಿರಿ ಪಟ್ಟಣಕ್ಕೆ ತರಿಸಿಕೊಳ್ಳುವ ಗೋಧಿಯನ್ನು ರಾಯಚೂರಿನ ಗೋದಾಮಿನಿಂದ ತರಿಸಿಕೊಳ್ಳುತ್ತಾ ಇದ್ದಾರೆ. ಹಾಗೂ ರಾಯಚೂರು

ಉಗ್ರಾಣದಲ್ಲಿ ತುಂಬಿ ಅಲ್ಲಿರುವ ಸುಬ್ರಮಣ್ಯ ಮಿಲ್ಲಿಗೆ ಗೋಧಿಯನ್ನು ಸರಬರಾಜು ಮಾಡುತ್ತಾ ಇದ್ದಾರೆ. ಹೀಗೆ ಅವರು ಸ್ಪೆಸಿಫಿಕ್ ಆಗಿ ಚಾರ್ಜಸ್ ಮಾಡುತ್ತಾ ಇದ್ದಾರೆ. ಆ ಮೇಲೆ ತೆಗೆದುಕೊಂಡು ಲೆಕ್ಕಕ್ಕೆ ಹಾಕುತ್ತಿದ್ದಾರೆ. ಇದು ಬಹಳ ದಿವಸಗಳಿಂದ ನಡೆದುಕೊಂಡು ಬಂದಿದೆ. ಇದರ ಬಗ್ಗೆ ಮಾನ್ಯ ಸಚಿವರಿಗೆ ಕೂಡ ತಿಳಿಸಲಾಗಿದೆ. ಆದರೆ ಸಂಬಂಧಪಟ್ಟ ಯಾರಿಂದಲೂ ಉತ್ತರವಾಗಲೀ, ವಿಷಯಕ್ಕೆ ಸಂಬಂಧಪಟ್ಟ ಹಾಗೆ ಯಾವುದೇ ಕ್ರಮ ತೆಗೆದುಕೊಂಡು ಬಗ್ಗೆಯಾಗಲಿ ಯಾವುದೇ ಉತ್ತರ ಬಂದಿಲ್ಲವಾದ ಕಾರಣ ವಿರೋಧ ಪಕ್ಷದ ನಾಯಕರಾದ ತಮಗೆ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವ ದಿಶೆಯಲ್ಲಿ ಆಹಾರ ಮಂತ್ರಿಯವರಿಗೆ ಹೇಳಿ ಕನಿಷ್ಟಪಕ್ಷ ಆ ಮನುಷ್ಯನನ್ನಾದರೂ ವರ್ಗಾವಣೆ ಮಾಡಿಸಿ ಎಂದು ಪತ್ರವನ್ನು ಬರೆದಿದ್ದಾರೆ. ಮಾನ್ಯ ಕೆ.ಹೆಚ್. ಪಾಟೀಲರೆ ತಾವುಗಳು ಹಿರಿಯರು, ಅನುಭವಿಗಳು ಹೀಗಾದರೆ, ನಾವು ಏನು ಮಾಡಬೇಕೆಂಬುದನ್ನು ಹೇಳಿ, ಇದನ್ನು ಮಂತ್ರಿಗಳಿಗೆ ತಲುಪಿಸಿ ಬಿಡಿ. ಈ ಒಂದು ಪರಿಸ್ಥಿತಿಯಲ್ಲಿ ನಾವು ಕೆಲಸ ಮಾಡುವಾಗ ನಾನು ಇವತ್ತು ದೀರ್ಘವಾಗಿ ಮಾತನಾಡುವುದಕ್ಕೆ ಮನಸ್ಸು ಇಲ್ಲ. ಆದರೆ ಒಂದೆರಡು ವಿಚಾರಗಳನ್ನು ಅಷ್ಟೇ ಹೇಳಿಬಿಡುತ್ತೇನೆ. ಹಿಂದೆ ಸಹಕಾರಿ ಸಂಸ್ಥೆಯಲ್ಲಿ ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. Notification No.RDC 125 DWM dt. 23rd March, 1985.. ಸಹಕಾರಿ ಮಂತ್ರಿಗಳಾಗಿದ್ದರು ಬಹಳ ಜನ ಇದ್ದಾರೆ, ಈ ಕಡೆಗೂ ಇದ್ದಾರೆ, ಆ ಕಡೆಗೂ ಇದ್ದಾರೆ. ಇಲ್ಲಿ ಕಂಟ್ರೋಲರ್ ಮತ್ತು ಲೀಗಲ್ ಮೆಟರ್‌ಲಜ್ ಈ ಇಲಾಖೆ ಮೊದಲು ಸಹಕಾರಿ ಇಲಾಖೆಯ ವ್ಯಾಪ್ತಿಯಲ್ಲಿತ್ತು. ಆ ಇಲಾಖೆಯನ್ನು ಸಹಕಾರಿ ಇಲಾಖೆಯಿಂದ ತೆಗೆದು ಈಗ ನಾಗರೀಕ ಪೂರೈಕೆ ಇಲಾಖೆಗೆ ಕೊಟ್ಟಿದ್ದಾರೆ. 23-3-85 ಆಜ್ಞೆಯಲ್ಲಿ ಬಹುಶಃ ಆಗ ಶ್ರೀಮಾನ್ ಆರ್.ಎಲ್. ಜಾಲಪ್ಪನವರು ಸಹಕಾರಿ ಮಂತ್ರಿಗಳಾಗಿದ್ದರು ಎಂದು ನಾನು ಭಾವನೆ ಮಾಡುತ್ತೇನೆ. ವೇಟ್ಸ್ ಅಂಡ್ ಮೆಷರ್ಸ್‌ನ್ನು ಮೂರು ವಿಭಾಗವಾಗಿ ವಿಂಗಡಣೆ ಮಾಡುತ್ತಾರೆ. ಒಂದನೇ ವಿಭಾಗ ಅಸಿಸ್ಟೆಂಟ್ ಕಂಟ್ರೋಲರ್ ಆಫ್ ವೇಟ್ಸ್ ಅಂಡ್ ಮೆಷರ್ಸ್, ಫ್ಲೈಯಿಂಗ್ ಸ್ಕ್ವಾಡ್, ಬೆಂಗಳೂರು ಎರಡನೇ ವಿಭಾಗ ಅಸಿಸ್ಟೆಂಟ್ ಕಂಟ್ರೋಲರ್ ಆಫ್ ವೇಟ್ಸ್ ಅಂಡ್ ಮೆಷನ್ಸ್ ಫ್ಲೈಯಿಂಗ್ ಸ್ಕ್ವಾಡ್, ಹುಬ್ಬಳ್ಳಿ, ಮೂರನೇ ವಿಭಾಗ ಅಸಿಸ್ಟೆಂಡ್ ಕಂಟ್ರೋಲರ್ ಆಫ್ ವೇಟ್ಸ್ ಅಂಡ್ ಮೆಷನ್ಸ್, ಫ್ಲೈಯಿಂಗ್ ಸ್ಕ್ವಾಡ್ Bangalore. ಈ ರೀತಿ ಮೂರು ವಿಭಾಗಗಳನ್ನು ಮಾಡುತ್ತಾರೆ.

ಮೊದಲನೇ ವಿಭಾಗದಲ್ಲಿ ರೆವಿನ್ಯೂ ಡಿಸ್ಟ್ರಿಕ್ಟ್‌ಗಳಾದ ಕೋಲಾರ, ತುಮಕೂರು, ಚಿತ್ರದುರ್ಗ, ಶಿವಮೊಗ್ಗ, ಮೈಸೂರು, ಮಂಗಳೂರು, ಕೊಡಗು, ಮಂಡ್ಯ, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳು. ಎರಡನೇ ವಿಭಾಗದಲ್ಲಿ ರೆವಿನ್ಯೂ ಜಿಲ್ಲೆಗಳಾದ ಬೆಳಗಾಂ, ಬಿಜಾಪುರ, ಧಾರವಾಡ, ಕಾರವಾರ, ಬೀದರ್, ಗುಲ್ಬರ್ಗಾ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳು. ಮೂರನೇ ವಿಭಾಗದಲ್ಲಿ ಮೆಟ್ರೋಪಾಲಿಟನ್ ಸಿಟಿ ಆಫ್ ಬೆಂಗಳೂರು ಮತ್ತು ರೆವಿನ್ಯೂ ಡಿಸ್ಟ್ರಿಕ್ಟ್ಸ್ ಆಫ್ ಬೆಂಗಳೂರು ಈ ರೀತಿ ಮೂರು ವಿಭಾಗಗಳನ್ನು ಮಾಡುತ್ತಾರೆ. ಈಗ ಇಲ್ಲಿ ಡಿ.ಪಿ.ಎ.ಆರ್.ನಲ್ಲಿ ಒಬ್ಬ ಅಧಿಕಾರಿಯ ಬಗ್ಗೆ ಶ್ರೀಮಾನ್ ಎಂ. ಕೃಷ್ಣ ಎನ್ನುವುವರನ್ನು ಇಲ್ಲಿಂದ ವರ್ಗ ಮಾಡುತ್ತಾರೆ. ಆ ವರ್ಗ ಮಾಡಿದ ಕಥೆ ಹಿಂದೆ ಹೇಳಿದ್ದೇನೆ. ಅದನ್ನು ಪುನಃ ಪುನಃ ಹೇಳಿ ಪ್ರಯೋಜನ ಇಲ್ಲ. ಆದರೆ ವರ್ಗ ಏತಕ್ಕೆ ಆಯಿತು? ಅವರನ್ನು ಈಗ ಇಲಾಖೆಯ ಕಂಟ್ರೋಲರ್ ಆಫ್ ಲೀಗಲ್ ಮೆಟ್ರೋಲಜಿ ಎನ್ನತಕ್ಕಂಥ ಇಲಾಖೆಗೆ ಕಳುಹಿಸಿಕೊಡುತ್ತಾರೆ. ಇವರು 24ನೇ ತಾರೀಖು ಹೋಗಿ ಛಾರ್ಜನ್ನು ತೆಗೆದುಕೊಳ್ಳುತ್ತಾರೆ. 26ನೇ ತಾರೀಖು ಒಂದು ಆದೇಶವನ್ನು ಹೊರಡಿಸುತ್ತಾರೆ. ಗೌರ್ನಮೆಂಟ್ ಆರ್ಡರ್ signed by him. ಏನು ಆದೇಶ?

"In exercise of the powers conferred on me under Section 3 (5) of Weights and Measures Act, I, M. Krishnappa, Controller of Legal Metrology, Bangalore do hereby notify that the offices specified in column II of the table given below shall all powers and discharge duties confered or against of them by or under the said Act in the jurisdiction specified in column III...

ಮೊದಲನೆ then in the areas specified in column III ಏರಿಯಾ ಸ್ಪೆಸಿಫೈಡ್ ಮೂರು ವಿಭಾಗಕ್ಕೆ ಯಾವ ಯಾವ ಜಿಲ್ಲೆಗಳು ಸೇರುತ್ತವೆ, ಆ ಆರ್ಡರ್‌ನಲ್ಲಿ ಏರಿಯಾ ಸ್ಪೆಸಿಫೈಡ್ ಇಲ್ಲ, ಜೂರಿಸ್‌ಡಿಕ್ಷನ್ ಯಾವುದು? ಮೂರು ವಿಭಾಗ ಇದ್ದದ್ದನ್ನು ನಾಲ್ಕು ವಿಭಾಗ ಮಾಡುತ್ತಾರೆ. ಜೂರಿಸ್‌ಡಿಕ್ಷನ್ ಏನು? ದಯಮಾಡಿ ಸ್ವಲ್ಪ ನೋಡಬೇಕು.

Assistant Controller of Legal Metrology, Flying Squad Bangalore City, Karnataka-Jurisdiction.

Assistant Controller of Legal Metrology, Flying Squad-III, Bangalore-Jurisdiction-Karnataka State.

Inspector General Legal Metrology, Flying Squad-I Jurisdiction-Karnataka State,

Inspector General, Legal Metrology, Flying Squad-Bangalore-II Jurisdiction-Karnataka State...

ಈ ಆಜ್ಞೆಯನ್ನು ಏತಕ್ಕೆ ಮಾಡಿದ್ದಾರೆ? ನಾಲ್ಕು ವಿಭಾಗಗಳನ್ನು ಮಾಡಿದಮೇಲೆ ಯಾವ ಯಾವ ವಿಭಾಗಕ್ಕೆ ಯಾರು ಜವಾಬ್ದಾರಿ ಎನ್ನತಕ್ಕಂಥದ್ದನ್ನು ನಿಗದಿ ಮಾಡಬೇಕು. ಇಡೀ ಕರ್ನಾಟಕ ರಾಜ್ಯಕ್ಕೆ ಮೂರು ವಿಭಾಗ ಇದ್ದದ್ದನ್ನು ನಾಲ್ಕು ವಿಭಾಗ ಎಂದು ಮಾಡಿದ್ದಾರೆ. ಇದು ಇಡೀ ಕರ್ನಾಟಕ ರಾಜ್ಯಕ್ಕೆ ವಿಸ್ತರಣೆ ವ್ಯಾಪಕವಾಗಿ ಆಗುವುದಾದರೆ ಕಾರಣವೇನು? ಯಾರು ಎಲ್ಲಿ ಕೆಲಸವನ್ನು ಮಾಡಬೇಕು? ಇಲ್ಲಾ ಕೆಲಸವನ್ನು ಮಾಡುವುದೋ ಅಥವಾ ವಸೂಲಿ ಮಾಡುವುದೋ ? ದಯಮಾಡಿ ತಪ್ಪು ತಿಳಿದುಕೊಳ್ಳಬೇಡಿ. ನಾನು ಇದಕ್ಕಿಂತ ಹೆಚ್ಚು ಏನೂ ಹೇಳುವುದಿಲ್ಲ. ಈ ಅಧಿಕಾರಿಯ ಬಗ್ಗೆ ಹಿಂದೆ ನಿಮ್ಮ ಆಡ್ಮಿನಿಸ್ಟ್ರೇಷನ್‌ನಲ್ಲಿದ್ದಾಗ ಡಿ.ಪಿ.ಎ.ಆರ್. ನಲ್ಲಿ ಇದ್ದಾಗ ಏನು ನಡೆಯಿತು ಎಂದು ನಾನು ಹೇಳಿದ್ದೆ.

5.45 ಪಿ.ಎಂ

ಎರಡು ಸಾರಿ ಅವರಿಗೆ ಕೊಠಡಿಯಲ್ಲಿ ಅಧಿಕಾರಿಗಳು ಹೊಡೆದರು. ಏಕೆ ಹೊಡೆದರು ಎಂಬುದನ್ನು ಹೇಳುತ್ತೇನೆ ಅವರನ್ನು ತಂದು ಇಲ್ಲಿಗೆ ಹಾಕುತ್ತೀರಿ, ಇವರಿಗೆ ಆಜ್ಞೆ ಮಾಡುತ್ತಾರೆ. ಏನಾದರೂ ಸರ್ಕಾರಿ ಆಜ್ಞೆಗಳಿಗೆ ಮೂರುಕಾಸಿನ ಬೆಲೆ ಇದೆಯಾ? ಇದನ್ನು ಹೇಳುವುದಕ್ಕೆ ಹೋದರೆ ನಮ್ಮನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದಕ್ಕೆ ಹೋಗುತ್ತಾರೆ. ಅದಕ್ಕೆ ನಾನು ಹೆಚ್ಚು ವಿಚಾರವನ್ನು ಪ್ರಸ್ತಾಪ ಮಾಡುವುದಿಲ್ಲ. ನನಗೂ ಇವತ್ತು ಮನಸ್ಸು ನೊಂದಿದೆ. ಇಷ್ಟು ಸಾಕೆಂದು ಕಾಣುತ್ತದೆ. ಉಳಿದ ಕಡತಗಳನ್ನು ಮುಚ್ಚಿಟ್ಟು ಯಾವ್ಯಾವ ಸದಸ್ಯರುಗಳಿಗೆ...

ಶ್ರೀ ಕೆ.ಹೆಚ್. ರಂಗನಾಥ್ : ಯಾವಾಗ ಅದು ಇಷ್ಯೂ ಆಗಿರುವುದು.

ಶ್ರೀ ಡಿ.ಬಿ. ಚಂದ್ರೇಗೌಡ : 26-8-1991 ಹೊಸ ಆರ್ಡರ್, ಹಳೆ ಆರ್ಡರ್ 23-3-85.

ಶ್ರೀ ಕೆ.ಹೆಚ್. ರಂಗನಾಥ್ : ಸ್ಟೇಟ್‌ಗೆ ನಾಲ್ಕು ಜನ ಅಂತಲ್ಲಾ

ಶ್ರೀ ಡಿ.ಬಿ. ಚಂದ್ರೇಗೌಡ : 1985ರ ಮಾರ್ಚಿ 23ರ ಆಜ್ಞೆಯಲ್ಲಿ ಮೂರು ವಿಭಾಗಗಳನ್ನು ಮಾಡಿ, ಆ ಮೂರು ವಿಭಾಗಕ್ಕೂ ಒಬ್ಬೊಬ್ಬ ಅಸಿಸ್ಟೆಂಟ್ ಕಮೀಷನರ್‌ಗಳನ್ನು ನೇಮಕಮಾಡಿ ಅವರಿಗೆ ಜೂರಿಸೆಡಿಕ್ಷನ್ ಅನ್ನು ನಿಗದಿ ಮಾಡಿದರು. ಈ ಅಧಿಕಾರ ಬಂದು ತಕ್ಷಣ ನಾಲ್ಕು ವಿಭಾಗಗಳನ್ನು ಮಾಡಿದರು. ಈ ವಿಭಾಗ ಏಕೆ? ಇಂತಹ ಆಜ್ಞೆಗಳು ಈ ಸರ್ಕಾರದಲಿಲ್ಲ ಬರುತ್ತದೆ. ಇಲ್ಲಿ ಏನು ನಡೆಯುತ್ತದೆ ಎನ್ನತಕ್ಕ ವಿವರ ನಾನು ಹೇಳಿದ ಕೂಡಲೆ ದಾಖಲೆ ಕೊಡಿ ನೀವೇ ಹುಟ್ಟು ಹಾಕಿ ಕೊಂಡು ಬಂದಿದ್ದೀರಿ ಎಂದು ಅಪಾದನೆ ಮಾಡುತ್ತಾರೆ. ಅದಕ್ಕಾಗಿ ಏನು ಹೇಳುವುದಿಲ್ಲ.

ಶ್ರೀ ಹೆಚ್. ಏಕಾಂತಯ್ಯ : ಇದಕ್ಕಿಂತ ಏನು ಬೇಕು?

ಶ್ರೀ ದಿ.ಬಿ. ಚಂದ್ರೇಗೌಡ : ಆದ್ದರಿಂದ ನಿಮ್ಮ ಇಲಾಖೆಗೆ ಏನಾದರೂ ಗೌರವ ಬರಬೇಕಾದರೆ ನಿಜವಾಗಿಯೂ ಬಡವರ ಬಗ್ಗೆ ನಿಮಗೆ ಕಳಕಳಿ ಇದ್ದರೆ, ನಿಜವಾಗಿಯೂ ಹರಿಜನ ಗಿರಿಜನರ ಬಗ್ಗೆ ಆಸಕ್ತಿ ಇದ್ದರೆ ಇವತ್ತು ಉಳಿದ ಎಲ್ಲಾ ಇಲಾಖೆಗಳಿಗಿಂತ ಅತ್ಯಂತ ಪ್ರಾಮುಖ್ಯವಾಗಿರತಕ್ಕ ಇಲಾಖೆ ನಾಗರಿಕ ವಿತರಣೆ ಕನಿಷ್ಟ ಪಕ್ಷ...

ಶ್ರೀ ಹೆಚ್. ಏಕಾಂತಯ್ಯ: ಕೋ ಅಪರೇಶನ್‌ನಿಂದ ವಿತ್‌ಡ್ರಾ ಮಾಡಿದ್ದಾರೆ....

ಶ್ರೀ ಡಿ.ಬಿ. ಚಂದ್ರೇಗೌಡ : ಕೋ ಅಪರೇಶನ್‌ನಿಂದ ವಿತ್‌ಡ್ರಾ ಮಾಡಿ ತಮ್ಮ ಇಲಾಖೆಗೆ ಕೊಟ್ಟಿದ್ದಾರೆ. ಈಗ ಈ ಇಲಾಖೆ ಇವರಿಗೆ ಬರುತ್ತದೆ. ಆದ್ದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

ಈ ರಾಜ್ಯದ ಬಡತನ ನಿಮ್ಮಿಂದ ಬಹಳಷ್ಟು ನಿರೀಕ್ಷಣೆ ಮಾಡುತ್ತಾರೆ. ನಿಮ್ಮ ಇಲಾಖೆಯಿಂದ ಬಹಳಷ್ಟನ್ನು ನಿರೀಕ್ಷಣೆ ಮಾಡುತ್ತಾರೆ. ಅವರ ನಿರೀಕ್ಷೆ ಎತ್ತರಕ್ಕೆ ಏರಲು ಸಾಧ್ಯವಾಗದಿದ್ದರೂ ಇವತ್ತಿನ ಈ ಹಣದುಬ್ಬರದ ಸ್ಥಿತಿಯಲ್ಲಿ ಕನಿಷ್ಟ ಪ್ರಮಾಣದ ಜನರ ಸಹಾಯಕ್ಕೆ ನೀವು ಹೋಗಿ ಎಂದು ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಶಫಿ ಅಹಮದ್‌ರವರೆ, 6 ಗಂಟೆಗೆ ಚರ್ಚೆಯು ಮುಗಿಯುತ್ತದೆ. ತಾವು ಸಂಕ್ಷಿಪ್ತವಾಗಿ ಮುಗಿಸುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಹೆಚ್. ಏಕಾಂತಯ್ಯ : ಅಂದರೆ 6 ಗಂಟೆಗೆ ಸದನ ಮುಗಿಯುತ್ತದೆ.

ಉಪಾಧ್ಯಕ್ಷರು : ಚರ್ಚೆ ಮುಗಿಯುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಾನು ಎರಡೇ ನಿಮಿಷ ಕೇಳಿದ್ದುದು.

ಶ್ರೀ ಎಲ್.ಆರ್. ಶಿವರಾಮೇಗೌಡ : ಹಾಗೆ ಆಗುವುದಿಲ್ಲ, ದಯವಿಟ್ಟು ನೀವು ನಮ್ಮ ರಕ್ಷಣೆಗೆ ಬರಬೇಕು. ಮಂಡ್ಯ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಪಬ್ಲಿಕ್ ಹಣ ದುರುಪಯೋಗ ಆಗಿರತಕ್ಕದ್ದರ ಬಗ್ಗೆ ಗಮನಸೆಳೆಯುವ ಸೂಚನೆಯನ್ನು ನಾನು ನಿಯಮ 67ರ ಪ್ರಕಾರ ಕಳುಹಿಸಿಕೊಟ್ಟಿದ್ದೇನೆ. ಅಧ್ಯಕ್ಷರು ಡಿಮ್ಯಾಂಡ್ ಬಗ್ಗೆ ಚರ್ಚೆಗೆ ಬಂದಾಗ ಮಾತನಾಡಿ ಎನ್ನುವ ಮಾತನ್ನು ಹೇಳಿದ್ದಾರೆ. ನೀವು ಈಗಲೇ ಕೂರಿಸಿದರೆ ನಾವು ಯಾವಾಗ ಮಾತನಾಡುವುದು ಹೇಳಿ.

ಉಪಾಧ್ಯಕ್ಷರು : ಈಗ ಶ್ರೀಯುತ ಶಫಿ ಅಹಮದ್‌ರವರು ಮಾತನಾಡಲಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ತಾವು ಯಾವಾಗ ಕೊಡುತ್ತೀರೆಂಬುದನ್ನು ಹೇಳಬೇಕು. ನಾನು ನಿನ್ನೆಯಿಂದ ನೋಡುತ್ತಿದ್ದೇನೆ. ಏಕೋ ಅಧ್ಯಕ್ಷಣೆಯವರು ಬಹಳ ನಮ್ಮ ಮೇಲೆ ಸಿಟ್ಟು ಮಾಡಿಕೊಂಡು ಬಿಟ್ಟಿದ್ದಾರೆ. ನನಗೆ ಏನೂ ಅರ್ಥವಾಗುತ್ತಿಲ್ಲ,

ಉಪಾಧ್ಯಕ್ಷರು : ಅವರು ವಕ್ಫ್ ಬೋರ್ಡ್ ಬಗ್ಗೆ ಮಾತನಾಡುತ್ತಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಸಹ ಟ್ರಾನ್ಸ್‌ಫೋರ್ಟ್ ಬಗ್ಗೆ ಮಾತನಾಡಬೇಕಾಗಿದೆ. ನಮಗೆ ಸಮಯ ಕೊಡಬೇಕು.

ಉಪಾಧ್ಯಕ್ಷರು: ಸಮಯವನ್ನು ಕೊಡೋಣ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾವು ಆರು ಜನ ಪಕ್ಷೇತರ ಸದಸ್ಯರಿದ್ದೇವೆ. 6 ಜನಕ್ಕೆ ಸುಮಾರು ಒಂದು ಗಂಟೆ ಸಮಯ ಕೊಡಬೇಕಾಗುತ್ತದೆ.

ಶ್ರೀ ಶಫಿ ಅಹಮದ್ : ಇವತ್ತು ಸರ್ಕಾರದವರು ಏನು ಈ ಡಿಮ್ಯಾಂಡ್ ಅನ್ನು ತಂದಿದ್ದಾರೆ...

ಶ್ರೀ ಎಲ್.ಆರ್. ಶಿವರಾಮೇಗೌಡ : ಯಾವಾಗ ಕೊಡುತ್ತೀರೆಂಬುದನ್ನು ಹೇಳಬೇಕು.

ಉಪಾಧ್ಯಕ್ಷರು : ಈಗ ಅವರನ್ನು ಕರೆದಿದ್ದೇವೆ, ಅವರು ಮಾತನಾಡಲಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಿನ್ನೆಯೂ ಸಹ ಕೊಡಲಿಲ್ಲ. ನಾವು ಬೆಳಿಗ್ಗೆಯಿಂದ ಜಾತಕಪಕ್ಷಿಗಳ ಹಾಗೆ ಕುಳಿತು ಸಾಕಾಗಿದೆ.

ಉಪಾಧ್ಯಕ್ಷರು : ನಿಮಗೂ ಕೊಡೋಣ ಕುಳಿತುಕೊಳ್ಳಿ.

+ ಶ್ರೀ ಶಫಿ ಅಹಮದ್(ತುಮಕೂರು) : ಮಾನ್ಯ ಉಪಾಧ್ಯಕ್ಷಿಣಿಯವರೆ ಸರ್ಕಾರದವರು ಈ ಡಿಮ್ಯಾಂಡ್‌ನ್ನು ಏನು ಮಂಡನೆ ಮಾಡಿದ್ದಾರೆ ಅದನ್ನು ಅನುಮೋದಿಸುತ್ತಾ ಇವತ್ತು ನಮ್ಮ ಎಲ್ಲಾ ಸದಸ್ಯರುಗಳು ಎಲ್ಲಾ ಡಿಪಾರ್ಟ್‌ಮೆಂಟ್‌ಗಳ ಬಗ್ಗೆ ಮಾತನಾಡಿದ್ದಾರೆ. ನಾನು ವಕ್ಫ್ ಬೋರ್ಡ್ ಬಗ್ಗೆ, ಟ್ರಾನ್ಸ್‌ಪೋರ್ಟ್, ಫುಡ್ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಕಳೆದ 2 ವರ್ಷಗಳ ಅವಧಿಯಲ್ಲಿ ವಕ್ಫ್ ಬೋರ್ಡ್‌ನಲ್ಲಿ ಯಾವ ರೀತಿ ಕೆಲಸ ಕಾರ್ಯಗಳು ನಡೆದಿದೆ. ಅದರ ಬಗ್ಗೆ ಸನ್ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಕರ್ನಾಟಕ ರಾಜ್ಯದಲ್ಲಿ ವಕ್ಫ್ ಬೋರ್ಡ್ ಅಕ್ಟ್ 1954ರ ಪ್ರಕಾರ ಸುಮಾರು 21,000 ಇನ್‌ಸ್ಟಿಟ್ಯೂಷನ್ಸ್ ಮಾನ್ಯತೆ ಪಡೆದು ಇದರಿಂದ ಸೌಲಭ್ಯವನ್ನು ಪಡೆಯುತ್ತಿವೆ. ಈ 21,000 ಇನ್‌ಸ್ಟಿಟ್ಯೂಷನ್ಸ್‌ಗಳು 22.5 ಲಕ್ಷ ರೂ.ಗಳನ್ನು ಸರ್ಕಾರಕ್ಕೆ ಕಾಂಟ್ರಿಬ್ಯೂಷನ್ಸ್ ಕೊಡುತ್ತಿದ್ದಾರೆ. ಇವತ್ತು ಕರ್ನಾಟಕ ವಕ್ಫ್ ಬೋರ್ಡ್‌ನಲ್ಲಿ ಕಳೆದ ಎರಡು ವರ್ಷಗಳಿಂದ ನಡೆದಿರುವಂಥ ಅವ್ಯವಹಾರಗಳನ್ನು ಸನ್ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಕರ್ನಾಟಕ ವಕ್ಫ್ ಬೋರ್ಡ್‌ನಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ, ಕೋಲಾರ ಜಿಲ್ಲೆಯಲ್ಲಿ ಮತ್ತು ಇಲ್ಲಿನ ಸೆಂಟ್ರಲ್ ವಕ್ಫ್ ಕಮಿಟಿಯಲ್ಲಿ ಸುಮಾರು 65 ಲಕ್ಷ ರೂ.ಗಳ ಅವ್ಯವಹಾರ ನಡೆಯುತ್ತದೆ. ಕಳೆದ ಎರಡು ವರ್ಷಗಳಿಂದ ಕಾಂಗ್ರೆಸ್ ಸರ್ಕಾರ ಇದ್ದರೂ ಕೂಡ ಅಲ್ಲಿನ ಸ್ಟೇಟ್ ವಕ್ಫ್ ಬೋರ್ಡ್‌ನ ಚೇರ್‌ಮನ್‌ರವರು ರಾಜೀನಾಮೆಯನ್ನು ಕೊಟ್ಟಿರುವುದಿಲ್ಲ. ಇವತ್ತು ರಾಜ್ಯದಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಯೇನಾದರೂ ಅಲ್ಪಸ್ವಲ್ಪ ನಡೆಯಬೇಕಿದ್ದರೆ ಅಲ್ಲಿನ ವಕ್ಫ್ ಬೋರ್ಡ್‌ನ ಚೇರ್‌ಮನ್‌ರವರು ರಾಜೀನಾಮೆ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಸೂಕ್ತವಾಗಿ ಹೇಳಬಯಸುತ್ತೇನೆ. ಸರ್ಕಾರ ಎನ್‌ಕ್ವೈರಿ ಕಮಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಿದೆಯಾದರೂ, ಇದರ ಬಗ್ಗೆ ತೀವ್ರವಾದ ವ್ಯವಹಾರ ನಡೆಯುತ್ತಿಲ್ಲ. ಈ ವಕ್ಫ್ ಬೋರ್ಡ್‌ನ್ನು ರೀ ಕಾನ್‌ಸ್ಟಿಟ್ಯೂಟ್ ಮಾಡಬೇಕಾಗಿದೆ. ಎಲ್ಲಾ ಜಿಲ್ಲೆಗಳಲ್ಲಿಯೂ ಕಮಿಟಿಗಳನ್ನು ಬದಲಾವಣೆ ಮಾಡಬೇಕು.

ಕರ್ನಾಟಕ ಸರ್ಕಾರದಿಂದ 50 ಲಕ್ಷ ರೂ.ಗಳ ಧನಸಹಾಯವನ್ನು ಕೊಡುತ್ತೇವೆಂದು ಕಳೆದ ಬಜೆಟ್ ಸ್ಪೀಚ್‌ನಲ್ಲಿ ಹೇಳಿದ್ದರು. ಮತ್ತು ಕಳೆದ ಸದನದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಒಂದು ಕೋಟಿ ರೂ.ಗಳಿಗಿಂತ ಹೆಚ್ಚಿನ ರೀತಿಯಲ್ಲಿ ಸಹಾಯವನ್ನು

ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಕಳೆದ ವರ್ಷ 364 ಇನ್‌ಸ್ಟಿಟ್ಯೂಷನ್ಸ್‌ಗೆ ಮಾತ್ರ ಹಣ ಸಹಾಯವನ್ನು ಒದಗಿಸಲಾಗಿದೆ. ಆದ್ದರಿಂದ ಈ 50 ಲಕ್ಷ ರೂ.ಗಳನ್ನು ಕೊಟ್ಟರೆ ಅದು ಸಾಕಾಗುವುದಿಲ್ಲ. ಅಕ್ಷಯ ಯೋಜನೆಯಲ್ಲಿ ಸರ್ಕಾರದ ವತಿಯಿಂದ ದೇವಸ್ಥಾನಗಳನ್ನು ಮತ್ತು ಮಸೀದಿಗಳನ್ನು ಕಟ್ಟುವುದಕ್ಕೆ ಸರ್ಕಾರ ಯೋಜನೆ ಹಾಕಿಕೊಂಡರೆ, ಕನಿಷ್ಠ ಪಕ್ಷ ಆರಾಧನೆ ಯೋಜನೆಯಲ್ಲಿ 2 ಕೋಟಿ ರೂ.ಗಳನ್ನು ಕೊಟ್ಟರೆ, ಸಾಕಾಗುತ್ತದೆ. ದೇವಸ್ಥಾನಗಳು ಮತ್ತು ಮಸೀದಿಗಳು ಇವತ್ತು ಬೀಳುವ ಸ್ಟೇಜ್‌ನಲ್ಲಿವೆ. ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ಈ ದೇವಸ್ಥಾನಗಳು ಮತ್ತು ಮಸೀದಿಗಳು ಬಹಳ ಶಿಥಿಲವಾಗಿವೆ. ಸರ್ಕಾರದವರು ಏನು 50ಲಕ್ಷ ರೂ.ಗಳನ್ನು ಮಂಜೂರು ಮಾಡುತ್ತೇವೆಂದು ಹೇಳಿದ್ದಾರೆ. ಅದು ಸಾಕಾಗುವುದಿಲ್ಲ. ಸರ್ಕಾರ 5 ಕೋಟಿ ರೂ.ಗಳನ್ನು ಸಹಾಯವಾಗಿ ಕೊಟ್ಟರೆ ಮಾತ್ರ ನಾವು ಕನಿಷ್ಠ 5000 ಇನ್‌ಸ್ಟಿಟ್ಯೂಷನ್‌ಗಳಿಗೆ ಹಣ ಕೊಡಲು ಸಹಾಯವಾಗುತ್ತದೆಂದು ಹೇಳಬಯಸುತ್ತೇನೆ. ತಾವು ಸೆಂಟ್ರಲ್ ವಕ್ಫ್ ಕೌನ್ಸಿಲ್‌ನಿಂದ ಒಳ್ಳೆಯ ಕೆಲಸ ಮಾಡಿ ಸುಮಾರು 21 ಇನ್‌ಸ್ಟಿಟ್ಯೂಷನ್ಸ್‌ಗಳಿಗೆ ಹಣ ಸಹಾಯವನ್ನು ಕೊಡಿಸಿದ್ದೀರಿ. ಇವತ್ತು ಸೆಂಟ್ರಲ್ ವಕ್ಫ್ ಕೌನ್ಸಿಲ್‌ಗೆ ತಾವೇ ಚೇರ್‌ಮನ್‌ರಾಗಿದ್ದೀರಿ. ಸುಮಾರು 300ಕ್ಕಿಂತ ಹೆಚ್ಚಿನ ಇನ್‌ಸ್ಟಿಟ್ಯೂಷನ್ಸ್‌ಗಳ ಬೇಡಿಕೆ ಇವತ್ತು ತಮ್ಮ ಮುಂದಿದೆ. ಇವರಿಗೆ ಹಣ ಸಹಾಯವನ್ನು ಕೊಟ್ಟರೆ, ಬಡವರಿಗೆ ಸಿಗಬೇಕಾದ ಸೌಲಭ್ಯಗಳು ಮತ್ತು ಆ ಇನ್‌ಸ್ಟಿಟ್ಯೂಷನ್ಸ್‌ಗಳನ್ನು ಡೆವ್‌ಲಪ್ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ತಾವು ಅಲ್ಲಿ ಡೆವಲಪ್‌ಮೆಂಟ್ ಇನ್‌ಸ್ಟಿಟ್ಯೂಶನ್ ಎಂದು ಏನು ಮಾಡಿದ್ದೀರಿ. ಅಲ್ಲಿ ಬರುವ ವರಮಾನದಲ್ಲಿ ಹೆಚ್ಚಿನ ರೀತಿಯಲ್ಲಿ ಬಡವರ ಮಕ್ಕಳಿಗೆ, ಬೀಡಿ ಕಾರ್ಮಿಕರ ಮಕ್ಕಳಿಗೆ ಸ್ಕಾಲರ್‌ಶಿಪ್ ಕೊಡುವುದರ ಮುಖಾಂತರ ಮತ್ತು ಒಳ್ಳೆಯ ರೀತಿಯಲ್ಲಿ ಹಣವನ್ನು ಸದುಪಯೋಗಪಡಿಸಿಕೊಂಡು, ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವುದಕ್ಕೆ ತಾವು ವಕ್ಫ್ ಬೋರ್ಡ್‌ನಿಂದ ಒಂದು ಯೋಜನೆ ಕೈಗೊಂಡರೆ ಒಳ್ಳೆಯದು ಮತ್ತು ರೆವಿನ್ಯೂ ಇಲಾಖೆಯಿಂದ ಅನ್‌ಆಥರೈಸ್ ಕಲ್ಟಿವೇಶನ್ ಅವಕಾಶವಿರುವುದಾದರೆ ಪ್ರತಿಯೊಂದು ಗ್ರಾಮದಲ್ಲೂ ಸಹ ಸ್ಮಶಾನಕ್ಕೆ ಜಾಗ ಇಲ್ಲದಂತಾಗಿದೆ. ತಾವು ವಕ್ಫ್ ಬೋರ್ಡ್‌ನಿಂದ ಒಂದು ಆದೇಶ ಕೊಡಬೇಕು. ಮೊನ್ನೆ ನನ್ನ ಕ್ಷೇತ್ರದಲ್ಲಿ ಒಂದು ದುರ್ಘಟನೆ ನಡೆಯಿತು. ಗ್ರಾಮಾಂತರ ಪ್ರದೇಶದಲ್ಲಿ ಯಾರಾದರೂ ಸತ್ತರೆ, ಅವರನ್ನು ಹೂಳುವುದಕ್ಕೂ ಸಹಾ ಸ್ಥಳವಿಲ್ಲ. ಆದುದರಿಂದ, ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಕೊಟ್ಟು ಸ್ಮಶಾನಕ್ಕೆ ಜಾಗಕೊಡುವಂತೆ ಮಾಡಬೇಕು. ಮತ್ತು ರೋಜಗಾರ್ ಯೋಜನೆಯಲ್ಲಿ ಈ ಸ್ಮಶಾನಕ್ಕೆ ಕಾಂಪೌಂಡ್ ಹಾಕಿ, ಬಂದೋಬಸ್ತ್ ಮಾಡಿಸಬೇಕು. ಕರ್ನಾಟಕ ಸರ್ಕಾರದಿಂದ ಡೆಪ್ಯೂಟಿ ಕಮೀಶನರ್ ಅವರಿಗೆ ಆದೇಶ ತಾವು ಕೊಟ್ಟಿದ್ದೀರಿ. ಅನ್‌ಆಥರೈಸ್ಡ್ ಆಕ್ಯುಪೇಶನ್ ಆಕ್ಟ್ ವಕ್ಫ್ ಬೋರ್ಡ್ ಪ್ರಾಪರ್ಟಿಸ್ ಏನಿದೆ, ಅದನ್ನು ಇವಿಕ್ಟ್ ಮಾಡಿಕೊಡಬೇಕೆಂದು ಸ್ವಾತಂತ್ರ್ಯ ಬಂದಲಾಗಾಯಿತು. ಹೇಳುತ್ತಿದ್ದೇನೆ. ಈ ಕಾರ್ಯ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ, ವಕ್ಫ್ ಪ್ರಾಪರ್ಟಿ ಎಲ್ಲಿದ್ದರೂ, ಅದು ಅಕ್ರಮವಾಗಿ ದುರುಪಯೋಗವಾಗುತ್ತಿದೆ.

ಅದನ್ನು ಸರ್ಕಾರದ ವತಿಯಿಂದ ಅತಿ ಶೀಘ್ರದಲ್ಲಿ ಇವಿಕ್ಟ್ ಮಾಡಿಸಿ, ಸಂಬಂಧಪಟ್ಟವರಿಗೆ, ವಕ್ಫ್ ಬೋರ್ಡಿಗೆ, ಪ್ರಾಪರ್ಟಿಗೆ ಏನಿದೆ? ಅದನ್ನು ಪೊಸಿಶನ್ ಕೊಡಿಸಿಕೊಟ್ಟರೆ ಒಳ್ಳೆಯ ರೀತಿಯಲ್ಲಿ ಸದುಪಯೋಗ ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಕಳೆದ ವರ್ಷ ಹಜ್ ಕಮಿಟಿ ಬಗ್ಗೆ ಸುಮಾರು 680 ಜನರಿಂದ ಡಿಮ್ಯಾಂಡ್ ಇತ್ತು. ಆದರೆ, ಬರಿ ಇನ್ನೂರು ಜನ ಮಾತ್ರ. ಸಮುದ್ರದ ಮುಖಾಂತರ ಹೋಗುವುದಕ್ಕೆ ಸಾಧ್ಯವಾಗಿತ್ತು, ಆ ಕೋಟಾವನ್ನು ಹೆಚ್ಚಿಸಬೇಕಾಗುತ್ತದೆ. ದಿನೇ ದಿನೇ ಬೆಳೆಯುತ್ತಿರುವ ಪಿಲಿಗ್ರಿಮೇಜ್ ಡಿಮ್ಯಾಂಡ್‌ನ್ನು ಮೀಟ್ ಮಾಡಬೇಕಾದರೆ ಕನಿಷ್ಠ ಪಕ್ಷ ಒಂದು ಸಾವಿರ ಜನಕ್ಕೆ ತಾವು ಕೇಂದ್ರ ಸರ್ಕಾರದಿಂದ ಮಂಜಾರಾತಿ ಪಡೆದು

ಕರ್ನಾಟಕದ ಜನತೆಗೆ ಒಂದು ಅವಕಾಶ ಮಾಡಿಕೊಟ್ಟರೆ ಬಹಳ ಒಳ್ಳೆಯದು. ಮತ್ತು ತಾವು ಕಳೆದ ವರ್ಷ ಒಂದು ಆಶ್ವಾಸನೆ ಕೊಟ್ಟಿದ್ದೀರಿ. ಮೆಕ್ಕಾ ಮದೀನಾದಲ್ಲಿ ಕರ್ನಾಟಕ ನಿವಾಸಿಗಳು ಅಲ್ಲಿ ಇರುವುದಕ್ಕೆ ನಿವೇಶನ ಮಾಡಿಕೊಡುತ್ತೇವೆಂದು ಹೇಳಿದಿರಿ. ಅಲ್ಲಿ ಎಲ್ಲಾ ಸ್ಟೇಟಿನ ಹಜ್ ಹೌಸಸ್ ಇದೆ. ಅದೇ ರೀತಿ ಅಲ್ಲಿ ನಿವೇಶನ ಮಾಡಿಕೊಟ್ಟರೆ ಸೂಕ್ತ. ಇಷ್ಟನ್ನು ನಾನು ವಕ್ಫ್ ಮೇಲೆ ಮಾತನಾಡಿ, ನಮ್ಮ ಸಚಿವರು ಎರಡು ವರ್ಷದಿಂದ ಸತತವಾಗಿ ವಕ್ಫ್ ಛೇರ್ಮನ್‌ರನ್ನು ತೆಗೆಯುವುದಕ್ಕೆ ಮತ್ತು ಸ್ಟೇಟ್ ಕಮಿಟಿಯನ್ನು ರಿಕಾನ್ಸ್ಟಿಟ್ಯೂಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಅವರ ಮೇಲೆ ಸರ್ಕಾರದಿಂದ ಈಗಾಗಲೇ ಸಾಕಷ್ಟು ಚಾರ್ಜಸ್ ಫ್ರೇಮ್ ಆಗಿದೆ. ತಾವು ಅತಿ ಶೀಘ್ರವಾಗಿ ಎನ್‌ಕ್ವೈರಿ ಮಾಡಿ, ಈ ಕಮಿಟಿ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡ ನಂತರ ವಕ್ಫ್ ಬೋರ್ಡ್‌ನ್ನು ರಿಕಾನ್ಸ್ಟಿಟ್ಯೂಟ್ ಮಾಡುವುದು ಸೂಕ್ತ. ಟ್ರಾನ್ಸ್‌ಪೋರ್ಟ್ ಬಗ್ಗೆ ನಾನು ಎರಡು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ತಮಗೆ ಗೊತ್ತಿರುವಂತೆ ಬೆಂಗಳೂರು-ತುಮಕೂರು ನ್ಯಾಷನಲ್ ಹೈವೇನಲ್ಲಿ ಪ್ರತಿನಿತ್ಯ ಬೆಳಿಗ್ಗೆಯಿಂದ ಸಾಯುಂಕಾಲದವರೆಗೆ ಕನಿಷ್ಟ ಪಕ್ಷ ಐದು ಅಕ್ಸಿಡೆಂಟ್ ಆಗುತ್ತಿದೆ. ಪ್ರತಿ ಸೆಕೆಂಡ್‌ನಲ್ಲಿ ಸುಮಾರು ಹತ್ತು ವೆಹಿಕಲ್ಸ್ ಪಾಸಾಗುತ್ತವೆ. ಕರ್ನಾಟಕ ರೋಡ್ ಟ್ರಾನ್ಸ್‌ಪೋರ್ಟ್‌ನವರು ಪ್ರತಿಯೊಂದು ಸ್ಟಾಪ್‌ನಲ್ಲಿ ಚೆಕ್‌ಪೋಸ್ಟ್‌ನಲ್ಲಿ ನಂತರ ನೆಲಮಂಗಲದ ಹತ್ತಿರ ಒಂದು ಹೆದ್ದಾರಿಯಲ್ಲಿ ಅಬ್‌ಸ್ಟಕಲ್ಸ್ ಇದೆ. ಇದೆಲ್ಲವನ್ನೂ ಗಮನಕ್ಕೆ ತಂದಿದ್ದೇವೆ.

ಅದನ್ನು ಡಬಲ್ ರೋಡ್ ಮಾಡುವ ಬಗ್ಗೆ ಪಿಡಬ್ಲ್ಯೂಡಿ ಡಿಮ್ಯಾಂಡ್‌ನಲ್ಲೂ ಸಹಾ ಹೇಳಿದ್ದೇವೆ. ಇಂಥ ಚೆಕ್‌ಪಾಯಿಂಟ್ಸ್ ಮಾಡುವುದು ಬಹಳ ಅವಶ್ಯಕತೆ ಇದೆ. ಬೆಂಗಳೂರು-ತುಮಕೂರು ಹೆದ್ದಾರಿಯಲ್ಲಿ ಆ್ಯಕ್ಸಿಡೆಂಟ್ಸ್ ಅವಾಯ್ಡ್ ಮಾಡುವುದಕ್ಕೋಸ್ಕರ ಒಂದು ಮೊಬೈಲ್ ಸ್ಕ್ವಾಡ್ ಹಾಕುವುದು ಬಹಳ ಸೂಕ್ತ. ತಾವು ಕಳೆದ ತಮ್ಮ ಡಿಮ್ಯಾಂಡ್‌ನಲ್ಲಿ, ಇದರ ಬಗ್ಗೆ ನಾನು ಗಮನಸೆಳೆದಾಗ ಮೈಬೈಲ್ ಸ್ಕವಾಡ್ ಅನ್ನು ನ್ಯಾಷನಲ್ ಹೈವೇನಲ್ಲಿ ಕನಿಷ್ಟ ಪಕ್ಷ ಒಂದು ನೂರು ಕಿಲೋಮೀಟರ್‌ಗೆ ಹಾಕಿಸಿ, ಅಲ್ಲಿ ಆಸ್ಪತ್ರೆ ಮಾಡಿ, ಅಕ್ಸಿಡೆಂಟ್ಸ್ ಅವಾಯ್ಡ್ ಮಾಡುವುದಕ್ಕೆ ಒಂದು ಪ್ರಯತ್ನ ಮಾಡುತ್ತೇವೆಂದು ಹೇಳಿದಿರಿ. ತುಮಕೂರು ನಗರ ಅತಿ ಬೆಳೆಯುತ್ತಿರುವ ಪ್ರದೇಶವಾಗಿದೆ. ಎರಡು ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆಗೆ ಅಲ್ಲಿ ತಾವು ಸಿಟಿ ಸರ್ವಿಸಸ್ ಇಂಟ್ರಡ್ಯೂಸ್ ಮಾಡಿ ಅಲ್ಲಿನ ನಾಗರೀಕರಿಗೆ ಒಂದು ಅನುಕೂಲ ಮಾಡಿಕೊಡಬೇಕಾಗುತ್ತದೆ.

ಬರೀ ಬೆಂಗಳೂರು ನಗರವನ್ನೊಂದನ್ನು ಗಮನದಲ್ಲಿಟ್ಟು ಕೊಂಡು ಕಾರ್ಯ ಮಾಡಿದರೆ ಸಾಧ್ಯವಾಗುವುದಿಲ್ಲ. ತುಮಕೂರು ನಗರಕ್ಕೂ ಸಹ ಈ ಸಿಟಿ ಸರ್‌ವೀಸ್‌ನ್ನು ವಿಸ್ತರಣೆ ಮಾಡಬೇಕು. ಮತ್ತೆ ಫುಡ್ ಬಗ್ಗೆ, ಕಳೆದ ಸಾರಿ ಬೇಡಿಕೆಯ ಬಗ್ಗೆ ಸಚಿವರಲ್ಲಿ ನಾವು ಕೇಳಿದಾಗ ಅವರು ಅತೀ ಶೀಘ್ರದಲ್ಲಿ ಸೀಮೆ ಎಣ್ಣೆಯನ್ನು ಸಪ್ಲೈ ಮಾಡಿ ನಮ್ಮ ಸಮಸ್ಯೆಯನ್ನು ಈಡೇರಿಸಿಕೊಟ್ಟರು. ಇನ್ನು ರೇಷನ್ ಕಾರ್ಡ್‌ಗಳ ಬಗ್ಗೆ ಹೇಳಬೇಕೆಂದರೆ, ಕರ್ನಾಟಕದಲ್ಲಿ ಒಟ್ಟು 78, 40, 154 ರೇಷನ್ ಕಾರ್ಡ್‌ಗಳನ್ನು ಕೊಟ್ಟಿದ್ದೀರಿ. ಅದರಲ್ಲಿ ಗ್ರೀನ್ ಕಾರ್ಡ್ 30, 73, 924, ಕೇಸರಿ ಕಾರ್ಡ್‌ಗಳು 20, 69, 791. ಏನು ಇಷ್ಟು ಕಾರ್ಡುಗಳನ್ನು ಕೊಟ್ಟಿದ್ದೀರೋ ಅದು ಸಾಕಾಗುವುದಿಲ್ಲ. ಅದರಲ್ಲಿಯೂ ಅರ್‌ಬನ್ ಏರಿಯೂದಲ್ಲಿ ಪ್ರತಿಯೊಂದು ಅಲ್ಟರ್‌ನೇಟೀವ್ಸ್ ಮನೆಗೂ ಕಾರ್ಡ್‌ಗಳ ಅವಶ್ಯಕತೆ ಇದೆ. ಕಳೆದ ಅಧಿವೇಶನದಲ್ಲಿ ತಾವು ಅತೀಶೀಘ್ರದಲ್ಲಿ ಈ ಹಸಿರು ಕಾರ್ಡು ಮತ್ತು ಕೇಸರಿ ಕಾರ್ಡುಗಳನ್ನು ತೆಗೆದು ಕಾಮನ್ ಪ್ಯಾಟ್ರನ್ ಮಾಡಿ ಎಲ್ಲಾ ಸರಿಸಾಮಾನ್ಯರಿಗೂ ಆಹಾರ ಸಿಗುವಂತೆ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಿರಿ.

ವಿದೇಶಗಳಲ್ಲಿ ಗ್ರೀನ್ ಕಾರ್ಡುಗಳಿಗೆ ಎಷ್ಟು ಮಹತ್ವ ಇದೆಯೋ, ಅಷ್ಟೇ ಮಹತ್ವ ಈ ರೇಷನ್ ಕಾರ್ಡುಗಳಿಗೂ ಇದೆ. ತಾವು ಈ ಕಾರ್ಡುಗಳನ್ನು ಕೊಡುವ

ವಿಚಾರದಲ್ಲಿ ಆದೇಶವನ್ನು ಕೊಟ್ಟು ರೂರಲ್ ಪಾರ್ಟ್ಸ್ ಮತ್ತು ಅರ್‌ಬನ್ ಏರಿಯಾಗಳಿಗೆ ಕಾರ್ಡುಗಳನ್ನು ಕೊಡಿಸಿಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇನೆ. ಡೀಸೆಲ್ ಮತ್ತು ಸೀಮೆ ಎಣ್ಣೆಗಳು ಅತ್ಯಂತ ಅವಶ್ಯಕವಾದ ವಸ್ತುಗಳಾಗಿವೆ. ತಾವು 8 ಗಂಟೆಯ ಮೇಲೂ ಸಹ ಪೆಟ್ರೋಲ್‌ಬಂಕ್‌ಗಳನ್ನು ಮುಚ್ಚಬಾರದೆಂದು ಆದೇಶವನ್ನು ಕೊಟ್ಟಿದ್ದೀರಿ. ಆದರೆ ನಮ್ಮ ನಗರದಲ್ಲಿ ರಾತ್ರಿ ಎಂಟು ಗಂಟೆಯಾದ ಮೇಲೆ ಪೆಟ್ರೋಲ್‌ಬಂಕ್‌ಗಳನ್ನು ಮುಚ್ಚಿಬಿಡುವ ಪದ್ಧತಿಯ ಇನ್ನೂ ಸಹ ಜಾರಿಯಲ್ಲಿದೆ.

ಆದುದರಿಂದ ತಾವು ಆದೇಶವನ್ನು ಕೊಟ್ಟು 24 ಗಂಟೆಗಳ ಕಾಲುವೂ ಇವುಗಳ ಸೇವೆ ದೊರೆಯುವಂತೆ ಮಾಡಿಸಬೇಕು. ಮತ್ತು ಈ ಹಸಿರು ಕಾರ್ಡುಗಳ ಪದ್ಧತಿಯನ್ನು ಏನು ಜಾರಿಗೆ ತಂದಿದ್ದೀರಿ ಅದನ್ನು ರಿವೈಸ್ ಮಾಡಿ ಹೆಚ್ಚಿನ ಕಾರ್ಡುಗಳನ್ನು ಕೊಡಿಸಿಕೊಡಬೇಕು. ಆಮೇಲೆ ಅತೀ ಅವಶ್ಯಕವಾಗಿರುವ ಪಾಮೇಲಿನ್ ಎಣ್ಣೆ ಸಿಗುತ್ತಿಲ್ಲ. ಇವತ್ತು ಪಾಮೇಲಿನ್ ಎಣ್ಣೆಯ ಬೆಲೆ ಒಂದು ಲೀಟರ್‌ಗೆ 45 ರೂ. ಆಗಿದೆ. ಆದುದರಿಂದ ಪ್ರತಿಯೊಂದು ಗ್ರಾಮಕ್ಕೂ ಪ್ರತಿಯೊಬ್ಬ ನಾಗರೀಕನಿಗೂ ಅವಶ್ಯಕವಾಗಿ ಬೇಕಾಗಿರುವ ಪಾಮೊಯಿಲ್ ಎಣ್ಣೆಯನ್ನು ಒದಗಿಸಿಕೊಡಬೇಕು. ಈ ಫುಡ್ ಮತ್ತು ಸಿವಿಲ್ ಸಪ್ಲೈ ಬೇಡಿಕೆಗಳ ಬಗ್ಗೆ... ನಮ್ಮ ತುಮಕೂರು ನಗರದಲ್ಲಿ ಸೆನ್‌ಸಸ್ ಮಾಡಿದಾಗ ಸುಮಾರು 8 ಸಾವಿರ ಕಾರ್ಡುಗಳು ಹೆಚ್ಚಾಗಿ ಅಲ್ಲಿಗೆ ಬೇಕಾಗಿದೆ. ಮತ್ತು ರೂರಲ್ ಸಂಖ್ಯೆಯಲ್ಲಿ, ತಾಲ್ಲೂಕು ಸಲಹಾ ಸಮಿತಿಯ ಮುಖಾಂತರ ಸುಮಾರು 18 ಸಾವಿರ ಕಾರ್ಡುಗಳ ಅವಶ್ಯಕತೆ ಇದೆ. ಕನಿಷ್ಟ ಪಕ್ಷ ಇಷ್ಟು ಕಾರ್ಡುಗಳನ್ನು ಕೊಡಲು ಆದೇಶವನ್ನು ಕೊಡಬೇಕು. ತುಮಕೂರು ನಗರಕ್ಕೆ ಕೇವಲ 41,694 ಕಾರ್ಡುಗಳನ್ನು ಕೊಟ್ಟಿದ್ದೀರಿ. ಇದು ಸಾಕಾಗುವುದಿಲ್ಲ, ಇದಕ್ಕಿಂತ ಹೆಚ್ಚು ಕಾರ್ಡುಗಳನ್ನು ಕೊಡಬೇಕು.

ಉಪಾಧ್ಯಕ್ಷರು : ಬೇಗ ತಮ್ಮ ಭಾಷಣವನ್ನು ಮುಗಿಸಿ.

ಶಫಿ ಅಹಮ್ಮದ್ : ಮಾತನಾಡಿ ಎಂದರೆ 10 ನಿಮಿಷ ಮಾತನಾಡುತ್ತೇನೆ.. ಬೇಡ ಎಂದರೆ ನಿಲ್ಲಿಸುತ್ತೇನೆ. ಈ ಸಮಸ್ಯೆಗಳ ಬಗ್ಗೆ ತಾವು ತೀವ್ರವಾದ ಗಮನವನ್ನು ಹರಿಸಬೇಕು. ಕಡ ಬಡವರಿಗೆ ಕಾರ್ಡ್ಗಳನ್ನು ಕೊಡಿಸಬೇಕು. ಮತ್ತು ನಮ್ಮ ನಗರ ಸಮಸ್ಯೆಗಳನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಇವೆಲ್ಲವನ್ನು ಈಡೇರಿಸಿ ಕೊಡುತ್ತೀರೆಂದು ನಾನು ಕೇಳಿ ಈ ದಿವಸ ಡಿಮ್ಯಾಂಡ್ ಏನು ಇದೆ. ಸಂಪೂರ್ಣವಾಗಿ ಒಪ್ಪಿಗೆ ಕೊಡುತ್ತಾ ನನಗೆ ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಅರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಇವತ್ತು ನಾನು ವಿಶೇಷವಾಗಿ ಕೆಲವು ಬೇಡಿಕೆಗಳ ಬಗ್ಗೆ ಎರಡು ನಿಮಿಷ ಮಾತನಾಡುತ್ತೇನೆ. ಇವತ್ತು 22 ಬೇಡಿಕೆಗಳನ್ನು ಇಟ್ಟಿದ್ದೀರಿ. 22 ಬೇಡಿಕೆ, ಸುಮಾರು 9 ಜನ ಮಂತ್ರಿಗಳು ಕರ್ನಾಟಕ ಶಾಸನಸಭೆಯಲ್ಲಿ ಚರಿತ್ರೆಯಲ್ಲಿ ಇವತ್ತಿನ ದಿವಸವನ್ನು ಸುವರ್ಣಾಕ್ಷರದಲ್ಲಿ ಬರೆಯಬೇಕು.

ಶ್ರೀ ಆರ್.ವಿ. ದೇಶಪಾಂಡೆ : ವಾಟಾಳರವರು ತಪ್ಪು ಮಾಹಿತ ಹೇಳುತ್ತಿದ್ದಾರೆ. ಬರೀ 22 ಬೇಡಿಕೆಗಳು ಮಾತ್ರ ಇಲ್ಲ, ಇನ್ನು ಹೆಚ್ಚು ಬೇಡಿಕೆಗಳಿವೆ. ಈಗಾಗಲೇ ಸ್ಪೀಕರ್‌ರವರು ಹೇಳಿದ್ದಾರೆ ನಾಳೆ ಮುಖ್ಯಮಂತ್ರಿಗಳ ಬೇಡಿಕೆ ಇಲ್ಲ, ಇವತ್ತೇ ಇಟ್ಟಿದ್ದಾರೆ, ಅವು 3-10 ಇವೆ. ಒಟ್ಟು 32 ಬೇಡಿಕೆಗಳು.

ಶ್ರೀ ವಾಟಾಳ್ ನಾಗರಾಜ್ : ನಾನು ತಮಗೆ ಭರವಸೆಯನ್ನು ಕೊಟ್ಟಿರುವ ಶೀಘ್ರ ಎರಡು ನಿಮಿಷ ಬೇಡಿಕೆಯ ಮೇಲೆ ಮಾತನಾಡುತ್ತೇನೆ.

ಉಪಾಧ್ಯಕ್ಷರು : ಬೇಡಿಕೆಯ ಮೇಲೆ ಮಾತನಾಡಿ. ತಮ್ಮದು ಪೀಠಿಕೆಯೇ ಜಾಸ್ತಿಯಾಯಿತು.

ಶ್ರೀ ವಾಟಾಳ್ ನಾಗರಾಜ್ : ಈ ಶಾಸನಸಭೆಯ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ಬರೆಯತಕ್ಕಂಥದ್ದು ಶಾಸನಸಭೆ ಒಂದು ರೀತಿ ಯಾವಾಗೆಂದರೆ ಆವಾಗ ಸೇರುತ್ತೆ ಸರ್ಕಾರ ಈ ಶಾಸನಸಭೆಗೆ ಎಷ್ಟು ಮಾನ್ಯತೆ, ಗಾಂಭೀರ್ಯತೆ, ಗೌರವ ಕೊಡಬೇಕೋ ಅದನ್ನು ಸರ್ಕಾರ ನನ್ನ ದೃಷ್ಟಿಯಲ್ಲ ಕೊಡುತ್ತಾ ಇಲ್ಲ. 1967 ಮತ್ತು 1972ರಲ್ಲಿ 50, 60 45 ದಿನಗಳು ಅಧಿವೇಶನ ನಡೆದದ್ದು ಉಂಟು. ಈಗ ನಮಗೆ 27ನೇ ತಾರೀಖು ಮುಗಿದರೆ ಒಟ್ಟು ಸುಮಾರು 20 ದಿನಗಳು ಬರುತ್ತವೆ. ನಾನು ತಮಗೆ ಹೇಳುತ್ತೇನೆ ಒಂದೊಂದು ಬೇಡಿಕೆಯನ್ನು ಕನಿಷ್ಠ ಎರಡು ದಿವಸ ಚರ್ಚೆ ಮಾಡಬೇಕು. ಎರಡು ದಿವಸ ನಾವು ಸಮಗ್ರವಾಗಿ ಈ ಸದನದಲ್ಲಿ ಬೆಳಕನ್ನು ಚೆಲ್ಲಲಿಲ್ಲವೆಂದರೆ ಅಧಿಕಾರಿಗಳಿಗೆ ಹಬ್ಬವೋ ಹಬ್ಬ. ಅದರಲ್ಲಿ ಏನು ಅನುಮಾನವೇ ಇಲ್ಲ. ನಾವು ರಾಜ್ಯದಲ್ಲಿರುವ ಸಮಸ್ಯೆಗಳನ್ನು ಎಳೆಎಳೆಯಾಗಿ ಬಿಡಿಸಿ ಹೇಳಬೇಕೆಂದರೆ ಎರಡು ದಿವಸಕ್ಕೆ ಒಂದು ಬೇಡಿಕೆ ಇರಬೇಕು. ಕನಿಷ್ಠ 45 ದಿನಗಳಾದರೂ ಸಭೆ ನಡೆಯಬೇಕು.

ಇವತ್ತಿನ ದಿವಸ ತಮ್ಮ ಮೂಲಕ ಸರ್ಕಾರವನ್ನು ಸಂಸದೀಯ ಸಚಿವರೂ ಆದ ಮೊಯಿಲಿಯವರು ಇದ್ದಾರೆ, ದಯವಿಟ್ಟು ಈ ಸದನವನ್ನು ಕನಿಷ್ಟ ಒಂದು ವರ್ಷದಲ್ಲಿ 100 ದಿನಗಳಾದರೂ ನಡೆಸುವಂತಹ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕು. ನೀವು ಇಚ್ಛೆ ಬಂದಂತಹ ಸಂದರ್ಭದಲ್ಲಿ ಸಭೆಯನ್ನು ನಡೆಸುವುದಕ್ಕೆ ಸರ್ಕಾರದವರು ಸಲಹ ಕೊಡುತ್ತೀರಿ. ನಿಮಗೆ ಬೇಕಾದಾಗ, ಎಷ್ಟು ಬೇಗ ಮುಗಿಸಬೇಕು, ಈ ತರಾತುರಿ ನೋಡಿದರೆ ಇದರಿಂದ ನಿಜವಾಗಿಯೂ ರಾಜ್ಯದ ಜನತೆಗೆ ನಾವು ಒಂದು ರೀತಿಯ ಅಗೌರವವನ್ನು ಮಾಡಿದ ಹಾಗೆ ಆಗುತ್ತದೆ. ಯಾವ ಬೇಡಿಕೆಯ ಬಗ್ಗೆ ಸಮಗ್ರವಾದ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಈಗ ನಮ್ಮ ಮುಂದೆ ಇರುವಂತಹ ಮುಖ್ಯಮಂತ್ರಿಗಳ ಬೇಡಿಕೆಗಳು ಜೊತೆಗೆ ಆಹಾರ, ಸಾರಿಗೆ, ಕಾರ್ಮಿಕ, ಧಾರ್ಮಿಕ ದತ್ತಿ, ಸಹಕಾರ, ಲಾಟರಿ, ಕಂದಾಯ ಮತ್ತು ನೈಸರ್ಗಿಕ ಇಷ್ಟು ನಮ್ಮ ಮುಂದಿವೆ. ಆದುದರಿಂದ ಮಾನ್ಯ ಅಧ್ಯಕ್ಷರೆ ತಮಗೆ ನಾನು ಕೊಟ್ಟ ಭರವಸೆಯಂತೆ ಬೇಡಿಕೆಗಳ ಸಂಖ್ಯೆ : 50, 42, 51, 52, 53, 55, 56, 17, 18, 19, 20, 22, 39, 40, 41, 43, 21, 23, 30, 25, 54, 59, ಇಷ್ಟು ಬೇಡಿಕೆಗಳನ್ನು ಸಾರಾಸಗಟಾಗಿ ವಿರೋಧ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

+ ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಉಪಾಧ್ಯಕ್ಷಿಣಿಯವರೆ, 9 ಜನ ಮಾನ್ಯ ಸಚಿವರುಗಳು ಮಂಡಿಸಿರತಕ್ಕಂಥ 22 ಬೇಡಿಕೆಗಳನ್ನು ಬೆಂಬಲಿಸಿ ನನ್ನ ನಾಲ್ಕು ಸಲಹೆಗಳನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಮಾತನಾಡಿದಂಥ ಮಾನ್ಯ ಸದಸ್ಯರು ಧಾರ್ಮಿಕ ದತ್ತಿ ಇಲಾಖೆಯ ಬಗ್ಗೆ ಸರ್ಕಾರದ ಗಮನವನ್ನು ಸಾಕಷ್ಟು ಸೆಳೆದಿದ್ದಾರೆಂದರೆ ತಪ್ಪಾಗಲಿಕ್ಕಿಲ್ಲ. ದೇವಸ್ಥಾನಗಳಿಗೆ ಹಣವನ್ನು ಕೊಡುವುದರ ಬಗ್ಗೆ ಒಂದು ಹೊಸ ಕಾಯಿದೆಯನ್ನು ಮಾಡಬೇಕೆಂದು ನಾನು ಸರ್ಕಾರವನ್ನು ವಿನಂತಿಮಾಡಿಕೊಳ್ಳುತ್ತೇನೆ. ಈಗ ಹೊಸ ಸರ್ಕಾರ ಬಂದಮೇಲೆ "ಆರಾಧನ" ಎಂದು ಒಂದು ಹೊಸ ಸ್ಕೀಂನ್ನು ತರುತ್ತೇವೆ ಎಂದು ಹೇಳಿದ್ದರೂ ಇನ್ನೂ ಫಲ ಕೊಡತಕ್ಕ ಮಟ್ಟಕ್ಕೆ ಬರಲಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಬಗ್ಗೆ ನೀವು ಇಟ್ಟಿರತಕ್ಕ ಹಣ ಏನೇನೂ ಸಾಲದು. ಇನ್ನೂ ಹೆಚ್ಚಿನ ಹಣವನ್ನು ಕೊಡಬೇಕು ಹಾಗೆ ಕೊಟ್ಟರೆ ಮಾತ್ರ ಈ ಆರಾಧನ ಎಂಬ ಸ್ಕೀಂ ಫಲಪ್ರದವಾಗುತ್ತದೆಂದು ಹೇಳಬಯಸುತ್ತೇನೆ.

ಈ ದೇವಸ್ಥಾನಗಳಿಗೆ ಹೊಸ ಕಾಯಿದೆಯನ್ನು ಮಾಡದೇ ಇರುವುದರಿಂದ ಅನೇಕ

ಹೆಗ್ಗಣಗಳು ಇದರಲ್ಲಿ ಸೇರಿಕೊಂಡಿವೆ. ಉದಾಹರಣೆಗೆ ಹೇಳುವುದಾದರೆ ಬೆಂಗಳೂರು ನಗರದಲ್ಲಿ ಒಂದು ದೇವಸ್ಥಾನ ಇದೆ. ಆ ದೇವಸ್ಥಾನದಲ್ಲಿ 1 ವರ್ಷಕ್ಕೆ ಸುಮಾರು 5-6 ಲಕ್ಷ ರೂಪಾಯಿಗಳವರೆಗೂ ಭಕ್ತಾಧಿಗಳಿಂದ ಕಾಣಿಕೆ ರೂಪದಲ್ಲಿ ಹಣ ಬರುತ್ತದೆ. ಆದರೆ ಮುಜರಾಯಿ ಇಲಾಖೆಯ ಲೆಕ್ಕದ ಪ್ರಕಾರ ಇದು ಒಂದು ಲಕ್ಷ ಕೂಡ ಮೀರಿಲ್ಲ ಎನ್ನತಕ್ಕದ್ದನ್ನು ನಾವು ನೋಡುತ್ತಿದ್ದೇವೆ. ಸರ್ಕಾರ ಈ ಭಕ್ತಾದಿಗಳ ಶೋಷಣೆಯನ್ನು ತಪ್ಪಿಸಬೇಕು. ಇದಕ್ಕೆ ಸಮಗ್ರವಾದ ಒಂದು ತಿದ್ದುಪಡಿಯನ್ನು ತಂದು ಒಂದು ಹೊಸ ಕಾಯಿದೆಯನ್ನು ಮಾಡಿ ಈ ದೇವಸ್ಥಾನಗಳನ್ನು ಉಳಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಮಾಡುತ್ತೇನೆ. ಈ ಹಿನ್ನೆಲೆಯಲ್ಲಿ ಇನಾಂ ಜಮೀನುಗಳು ಧಾರ್ಮಿಕ ದತ್ತಿ ಇಲಾಖೆಗೆ ಸೇರಿದೆ. ಮಂಡ್ಯ ಜಿಲ್ಲೆಯಲ್ಲಿ ಇನಾಂ ಜಮೀನಿಗೆ ಸೇರಿದಂತೆ ಒಂದು ಪ್ರಸಂಗ ನಡೆದಿದೆ. ಅದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಈ ಸಂದರ್ಭದಲ್ಲಿ ಮಾನ್ಯ ಕಂದಾಯ ಮಂತ್ರಿಗಳು ಇರಬೇಕಾಗಿತ್ತು. ಅವರು ಇದಕ್ಕೆ ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದರು. ಆದರೆ ಅವರು ಈಗ ಇಲ್ಲ. ಬಹುಶಃ ನೀವೇ ಕೊಡುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಇನಾಂ ಜಮೀನುಗಳಿಗೆ ತಸ್ತೀಕ್ ಹಣವನ್ನು ನಿಗದಿ ಮಾಡುವುದರಲ್ಲಿ ನಡೆದಿರತಕ್ಕ ಭ್ರಷ್ಟಾಚಾರ ಇದು.

ಸುಮಾರು 2.20 ಕೋಟಿ ರೂ. ಮಂಡ್ಯ ಜಿಲ್ಲೆಯಲ್ಲಿ ಅದರಲ್ಲೂ ನನ್ನ ತಾಲ್ಲೂಕಾದ ನಾಗಮಂಗಲವೂ ಸೇರಿ ಸುಮಾರು ಮೂರು ತಾಲ್ಲೂಕುಗಳಲ್ಲಿ 2.20 ಲಕ್ಷ ರೂಪಾಯಿ ಹೆಚ್ಚುವರಿ ಹಣ ಬಿಡುಗಡೆ ಆಗಿರುವುದನ್ನು ನಾವು ನೋಡಿದ್ದೇವೆ. ಕಳೆದ 8-10 ದಿನಗಳ ಹಿಂದೆ ಪ್ರಜಾವಾಣಿ ಮುಖಪುಟದಲ್ಲಿ ಬಂದಿದೆ. 3 ಜನ ತಹಸಿಲ್ದಾರರ ಸಸ್ಪೆಂಡ್ 20 ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಲಾಗಿದೆ ಎನ್ನತಕ್ಕದ್ದು. ಅವರನ್ನು ಸಸ್ಪೆಂಡ್ ಮಾಡಿರುವುದರಲ್ಲಿ ನಮ್ಮದು ಯಾರದ್ದೂ ಭಿನ್ನಾಭಿಪ್ರಾಯವಿಲ್ಲ. ಆದರೆ ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ತಾ:15-11-85 ರಲ್ಲಿ ಧಾರ್ಮಿಕ ದತ್ತಿ ಆಯುಕ್ತರ ಕಛೇರಿಯಿಂದ ಒಂದು ಸುತ್ತೋಲೆ ಹೊರಡಿಸಿದೆ. ಕರ್ನಾಟಕ ಇನಾಂ ರದ್ದಿಯಾತಿ ಕಾನೂನು ತಿದ್ದುಪಡಿ 1984ರ ಪ್ರಕಾರ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ತಸ್ತೀಕ್ ಭತ್ಯೆಯನ್ನು ನಿಗದಿಗೊಳಿಸಬೇಕಾಗಿರುತ್ತದೆ. ಈ ಹಣವನ್ನು ನಿಗದಿಗೊಳಿಸುವುದಕ್ಕೆ ಮುಂಚಿತವಾಗಿ ಸೆಕ್ಷನ್ 21 ರಲ್ಲಿ ಸೂಚಿಸಿರುವ ನಿಯಮವನ್ನು ಪಾಲಿಸಬೇಕೆಂದು ಧಾರ್ಮಿಕ ದತ್ತಿ ಇಲಾಖೆಯಿಂದ ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. ನಾನು ಇವತ್ತು ಈ ಸರ್ಕಾರವನ್ನು ಪ್ರಶ್ನೆ ಮಾಡಬೇಕಾಗಿದೆ. ಧಾರ್ಮಿಕ ದತ್ತಿ ಇಲಾಖೆಯವರ ಸುತ್ತೋಲೆಯ ಪ್ರಕಾರ ತಸ್ತೀಕ್ ಹಣವನ್ನು ನಿಗದಿಮಾಡುವವರು ಯಾರು ಎಂಬುದು ಯಕ್ಷ ಪ್ರಶ್ನೆಯಾಗಿದೆ. ತಹಸಿಲ್ದಾರರನ್ನು ಸಸ್ಪೆಂಡ್ ಮಾಡಿದಮೇಲೆ ಈ ಸುತ್ತೋಲೆಯ ಪ್ರಕಾರ ಯಾರು ಈ ತಸ್ತೀಕ್ ಹಣವನ್ನು ನಿಗದಿಮಾಡಬೇಕೆಂಬ ಬಗ್ಗೆ ಸರ್ಕಾರ ತೀವ್ರವಾಗಿ ಗಮನಹರಿಸಬೇಕು. ಯಾರು ತಸ್ತೀಕ್ ಹಣ 2.20 ಕೋಟಿ ರೂ.ಗಳನ್ನು ಬಿಡುಗಡೆ ಮಾಡತಕ್ಕ ಮಟ್ಟಕ್ಕೆ ಹೋಗಿದೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಮತ್ತು ದುರುಪಯೋಗದ ಬಗ್ಗೆ ಭ್ರಷ್ಟಾಚಾರದ ಬಗ್ಗೆ ತನಿಖೆ ನಡೆಸುತ್ತಿರುವವರು ಡಿವಿಜನಲ್ ಕಮೀಷನರ್‌ರವರು. ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟ ಮೈಸೂರು ಜಿಲ್ಲಾ ವಿಭಾಗಾಧಿಕಾರಿಯವರು ಇದರ ತನಿಖೆಯನ್ನು ನಡೆಸುತ್ತಿದ್ದಾರೆ. ಮಂಡ್ಯ ಜಿಲ್ಲೆಯ ಜನರು ಮಾತನಾಡಿಕೊಳ್ಳುತ್ತಿದ್ದಾರೆ, 2.20 ಕೋಟಿ ರೂ.ಗಳ ದುರ್ವ್ಯವಹಾರ ನಡೆದಿರತಕ್ಕ ಈ ವ್ಯವಸ್ಥೆಯಲ್ಲಿ ಇದು ಕೇವಲ ತಹಸಿಲ್ದಾರ್ ಒಬ್ಬರಿಂದಲೇ ನಡೆದಿಲ್ಲ.

ಇದರ ಹಿಂದ ಒಂದು ದೊಡ್ಡ ಜಾಲವೇ ಇದೆ. ಈ ಜಾಲವನ್ನು ಉಳಿಸುವುದಕ್ಕೆ ಈ ವಿಭಾಗಾಧಿಕಾರಿಯವರು ಪ್ರಯತ್ನಮಾಡುತ್ತಿದ್ದಾರೆ. ಆದುದರಿಂದ ಇದನ್ನು ಸಿ.ಓ.ಡಿ.

ತನಿಖೆಗೆ ಒಪ್ಪಿಸಬೇಕೆಂದು ಹೇಳುತ್ತಿದ್ದಾರೆ. ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ, ಈ ಸದನದಲ್ಲಿ ಕಂದಾಯ ಮಂತ್ರಿಗಳು ಉತ್ತರವನ್ನು ಹೇಳಬೇಕು. ಇದನ್ನು ಸಿ.ಓ.ಡಿ ತನಿಖೆಗೆ ಒಪ್ಪಿಸಬೇಕು. ಇವತ್ತು ಮಂಡ್ಯ ಜಿಲ್ಲೆಯಲ್ಲಿ ಏನಾಗಿದೆ ಎಂಬುದನ್ನು ನೀವು ನಿನ್ನೆ ಪತ್ರಿಕೆಯಲ್ಲಿ ನೋಡಿದ್ದೀರಿ. ಮಳವಳ್ಳಿಯಲ್ಲಿ ಒಂದು ಪಕ್ಷದ ಜನರು ಅಲ್ಲ, ಎಲ್ಲ ರಾಜಕೀಯ ಪಕ್ಷಗಳ ಮುಖಂಡರೂ ಒಂದು ಕರೆಯನ್ನು ಕೊಟ್ಟಿದ್ದಾರೆ. ಜಿಲ್ಲಾಧಿಕಾರಿಯವರನ್ನು ಘೇರಾವ್ ಮಾಡಿ, ಜಿಲ್ಲಾಧಿಕಾರಿಯವರ ಮುಂದೆ ನಾವು ಪ್ರತಿಭಟನೆ ಮಾಡುತ್ತೇನೆ. ಇದನ್ನು ಸಿ.ಓ.ಡಿಗೆ ಒಪ್ಪಿಸಿ ಇದರ ಹಿಂದೆ ಇರತಕ್ಕ ದೊಡ್ಡ ಜಾಲವನ್ನು ಹಿಡಿಯಬೇಕೆಂದು ಹೇಳಿದ್ದಾರೆ. ಆದ್ದರಿಂದ ನಾನು ಇವತ್ತು ಸರ್ಕಾರವನ್ನು ಒತ್ತಾಯಮಾಡುತ್ತೇನೆ, ಇದನ್ನು ಸಿ.ಓ.ಡಿ.ಗೆ ಒಪ್ಪಿಸಿ ನಿಜವಾದ ಭ್ರಷ್ಟರು ಯಾರಿದ್ದಾರೆ ಅವರನ್ನು ಬಯಲಿಗೆಳೆದು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇದಾದಮೇಲೆ ಇನ್ನೊಂದು ವಿಚಾರವನ್ನು ಹೇಳುವುದಾದರೆ, ತಹಸಿಲ್ದಾರ್‌ರವರನ್ನು ಏನು ಸಸ್ಪೆಂಡ್ ಮಾಡಿದ್ದೀರಿ ಅದಕ್ಕೆ ಕರ್ನಾಟಕ ಅಡ್ಮಿನಿಸ್ಟೇಟಿವ್ ಟ್ರಿಬ್ಯುನಲ್‌ನಿಂದ ಸ್ಟೇ ಬಂದಿದೆ. ಇವರನ್ನು ವಿಭಾಗಾಧಿಕಾರಿಗಳು ಸಸ್ಪೆಂಡ್ ಮಾಡಿರತಕ್ಕದ್ದು ತಪ್ಪು ಎಂದು ಅಡ್ಮಿನಿಸ್ಟೇಟಿವ್ ಟ್ರಿಬ್ಯುನಲ್‌ನವರು ಇದಕ್ಕೆ ತಡೆಯಾಜ್ಞೆಯನ್ನು ಕೊಟ್ಟಿದ್ದಾರೆ.

6.15 ಪಿ.ಎಂ.

ಅವರನ್ನು ಅಲ್ಲಿಂದ ವರ್ಗಾವಣೆ ಮಾಡಿದ್ದಾರೆ. ನಿರಪರಾಧಿಗಳಾಗಿರತಕ್ಕಂಥ ಅಧಿಕಾರಿಗಳನ್ನು ಸಿಕ್ಕಿಹಾಕಿಸಿ ಯಾರು ಅಪರಾದಿಗಳಾಗಿದ್ದಾರೆ ಅವರು ತಪ್ಪಿಸಿಕೊಂಡು ಇವತ್ತು ಎಲ್ಲ ಮುಖಂಡರುಗಳ ಮನೆಗಳಲ್ಲಿ ಓಡಾಡುತ್ತಿದ್ದಾರಲ್ಲ, ಅದಕ್ಕೆ ನೀವೇನು ಹೇಳುತ್ತೀರಿ ಎನ್ನತಕ್ಕಂಥ ಮಾತನ್ನು ಜನ ಕೇಳುತ್ತಿದ್ದಾರೆ. ನಾನು ಅದಕ್ಕೆ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ ಇದನ್ನು ಸಿ.ಓ.ಡಿ ತನಿಖೆಗೆ ಒಪ್ಪಿಸಬೇಕು. ನಿಜವಾದ ಕದೀಮರು ಯಾರು ಇದ್ದಾರೆ, ಯಾರು ಭ್ರಷ್ಟಾರಿದ್ದಾರೆ, ಯಾರು ಈ ವಿಚಾರದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ತಪ್ಪಿತಸ್ತಿರಿದ್ದಾರೆ, ಅವರು ಮೇಲೆ ಕ್ರಮ ತೆಗೆದುಕೊಳ್ಳಬೇಕೆನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ವಿನಂತಿ ಮಾಡುತ್ತೇನೆ. ಈಗಾಗಲೇ ಈ ಸದನದಲ್ಲಿ ಬಹಳಷ್ಟು ಚರ್ಚೆಯಾಗಿದೆ. ವಿಭಾಗಧಿಕಾರಿಗಳು ಕಛೇರಿ ಬೇಕೆ ಈ ಸರ್ಕಾರಕ್ಕೆ? ಇದನ್ನು ಅಬಾಲಿಷ್‌ಮಾಡಿ ಎಂದು ಹೇಳಿ ಬಹಳ ಜನ ಸದಸ್ಯರು ಮಾತನಾಡಿದ್ದಾರೆ. ಇದು ಒಂದು ರೀತಿ ಪೋಸ್ಟ್‌ಆಫೀಸ್ ಇದ್ದಹಾಗೆ. ಸರ್ಕಾರಕ್ಕೂ ಜಿಲ್ಲಾಧಿಕಾರಿಗಳ ಕಚೇರಿಗೂ ಒಂದು ರೀತಿ ಪೋಸ್ಟ್ ಆಫೀಸ್ ಇದ್ದ ಹಾಗೆ. ಆದರೂ ಸಹಿತ ಅದರ ವೈಭವಪೂರಿತ ನಡವಳಿಕೆ ಆಗಿದೆ ಎಂದರೆ ಯಾವ ಮಂತ್ರಿಗಳಿಗೂ ಕೂಡ ಇಲ್ಲ. ಒಬ್ಬ ಡಿ.ವಿ.ಸಿ ಬರುತ್ತಾರೆಂದರೆ ತಾಲ್ಲೂಕು ಹೆಡ್‌ಕ್ವಾಟರ್ಸ್‌ನಲ್ಲಿ ಸುಮಾರು 20 ವಾಹನಗಳು ಅದರ ಹಿಂದೆ ಬರುತ್ತಾವೆ. ಸರ್ಕಾರದ ಹಣದಲ್ಲಿ 20 ವಾಹನಗಳು ಅವರ ಹಿಂದೆ, ಏನು ಕೆಲಸವಿಲ್ಲ. ಆದ್ದರಿಂದ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ ವಿಭಾಗಾಧಿಕಾರಿಗಳವರ ಕೆಲಸವನ್ನು ದಯವಿಟ್ಟು ಕಿತ್ತುಹಾಕಿ. ಆ ಹಣವನ್ನು ಬೇರೆ ರೀತಿ ಉಪಯೋಗಿಸಿ. ಇಲ್ಲಿಂದಲೇ ನೇರವಾಗಿ ಜಿಲ್ಲಾಧಿಕಾರಿಗಳನ್ನು ನಿಯಂತ್ರಣ ಮಾಡತಕ್ಕಂಥದ್ದನ್ನು ಮಾಡಬೇಕೆಂದು ಹೇಳಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ನಾನು ಕಳೆದವಾರ ವಿಲೇಜ್ ಅಕೌಂಟ್‌ಟರುಗಳ ಬಗ್ಗೆ ಕೇಳಿದ್ದೆನು. ಮಾನ್ಯ ಪ್ರೊ .ನಂಜುಂಡಸ್ವಾಮಿಯವರು ಇಲ್ಲ ಇವತ್ತು ಅವರು ಬಹಳ ಚನ್ನಾಗಿ ಹೇಳಿದರು. ವಿಲೇಜ್ ಅಕೌಂಟೆಂಟ್ ಎಂದು ನೀವು ಹೇಳುತ್ತೀರಿ. ಅವರನ್ನು ನಮ್ಮ ಕಡೆ ಶನಿಗಳೆಂದು ಕರೆಯುತ್ತೇವೆ. ಹಳ್ಳಿಗಳ ಕಡೆ ಇವರನ್ನು ಇನ್ನು ಹೆಚ್ಚಾಗಿ ಹಾಕಿ ಎಂದು ಹೇಳುತ್ತೀರಲ್ಲ ಎನ್ನತಕ್ಕಂಥ ಮಾತನ್ನು ಹೇಳಿದರು. ಹಿಂದೆ ಶಾನುಭೋಗರು ಇದ್ದರು. ಅಧ್ಯಕ್ಷರೇ ನನಗೆ ಗೊತ್ತಿದೆ ಬರಿ ಕುಂಬಳ ಕಾಯಿ, ಬಾಳೆಗೊನೆ ಕೊಟ್ಟರೆ ಆಗಾಗ

ಯಾರ ಲೆಕ್ಕ ಯಾರ ಯಾರು ಜಮೀನು ಯಾರು ಯಾರಿಗೆ ಎಂದು ಬಹಳ ಚೆನ್ನಾಗಿ ಪ್ರತಿಪಾದನೆ ಮಾಡಿ ಕ್ಲೀನ್ ಆಗಿ ಬರೆಯುತ್ತಿದ್ದರು. ಈಗ ಯಾರ ಜಮೀನನ್ನು ಯಾರ ಹೆಸರಿಗೆ ಬರೆಯುತ್ತಾರೆ. ದೇವರಿಗೆ ಗೊತ್ತು. ನೂರು ಕೊಟ್ಟವರಿಗೆ ಒಂದು ತರ, ಇನ್ನೂರು ಕೊಟ್ಟವರಿಗೆ ಇನ್ನೊಂದು ತರ, ಮುನ್ನೂರು ಕೊಟ್ಟವರಿಗೆ ಮತ್ತೊಂದು ತರಹ ಮಾಡುತ್ತಾರೆ. ಮಾನ್ಯ ಶಿವನಂಜಪ್ಪನವರು ಹೇಳಿದರು ಪ್ರತಿಯೊಬ್ಬರ ಹೆಸರನಲ್ಲಿರತಕ್ಕಂಥ ಜಮೀನನ್ನು ಇವತ್ತು ಅವರಿಗೆ ಇರತಕ್ಕಂಥ ಹಕ್ಕನ್ನು ಇಲ್ಲವೆಂದು ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ಇವತ್ತು ವಿಲೇಜ್‌ಅಕೌಂಟೆಂಟ್‌ರಿಂದ ನೋಡುತ್ತಿದ್ದೇವೆ. ಇವರ ಬಗ್ಗೆ ಒಂದು ನಿಯಂತ್ರಣ ಮಾಡಬೇಕು. ಮಾನ್ಯ ದೇವಾರಾಜ ಅರಸ್‌ರವರು ಇದ್ದ ಕಾಲದಲ್ಲಿ 285ನೇ ನಿಯಮದ ಪ್ರಕಾರ ಈ ರಾಜ್ಯದಲ್ಲಿ ಯಾವುದೇ ಅಧಿಕಾರಿ ಬ್ರಷ್ಟ ಎಂದು ಗೊತ್ತಾದರೆ ಅವರನ್ನು ಕೆಲಸದಿಂದ ತೆಗೆದು ಮನೆಗೆ ಕಳುಹಿಸುತ್ತಿದ್ದರು. ಇವತ್ತು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ, ಒಂದು ತಿಂಗಳಿಗೆ ಕೊನೆ ಪಕ್ಷ 40-50 ಜನ ಅಧಿಕಾರಿಗಳನ್ನು 285ನೇ ನಿಯಮದ ಪ್ರಕಾರ ಯಾರು ಬ್ರಷ್ಟರಿದ್ದಾರೆ ಅಂಥವರನ್ನು ಕಿತ್ತುಹಾಕಿದರೆ ಮಾತ್ರ ಈ ಒಂದು ಅಧಿಕಾರದಲ್ಲಿ ಬಿಗಿ ಬರುತ್ತದೆ ಹೊರತು ಇಲ್ಲದಿದ್ದರೆ ಬರುವುದಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ ನಾನು ಏತಕ್ಕೆ ಈ ಮಾತು ಹೇಳುತ್ತಿದ್ದೇನೆಂದರೆ ಇವತ್ತು ವಿಲೇಜ್ ಅಕೌಂಟೆಂಟರುಗಳು ಮತ್ತು ತಾಲ್ಲೂಕ್ ಆಫೀಸಿನ ಯಾವ ರೀತಿ ಆಗಿದೆ ಎಂದು ಕೇಳಬೇಕು. ಅಧ್ಯಕ್ಷರೇ ಬಹುಶಃ ತಮಗೆ ಅನುಭವ ನನಗಿಂತ ಚೆನ್ನಾಗಿದೆ ಎಂದು ನಾನು ತಿಳಿದುಕೊಳ್ಳಬೇಕಾಗಿದೆ. ನಮ್ಮ ಕಡೆ ತಿರುಪತಿ ಚವರ ಎಂದು ಮಾಡುತ್ತಾರೆ. ಯಾರಾದರೂ ತಾಲ್ಲೂಕ್ ಆಫೀಸಿಸ ಒಳಗೆ ಹೋದರೆ ಅದನ್ನು ಮಾಡಿಸಿಕೊಂಡೆ ಹೊರಗೆ ಬರಬೇಕು. ಇನ್ನಾರನ್ನು ಒಳಕ್ಕೆ ಬಿಡುವುದಿಲ್ಲ.

ಶ್ರೀ ಸಿ.ಬೈರೇಗೌಡ : ತಿರುಪತಿ ಚವರ ಹಾಗೆಂದರೆ ಏನು.

ಶ್ರೀ ಎಲ್.ಆರ್. ಶಿವರಾಮೇಗೌಡ : ಪೂರ ಜೋಬಿನೊಳಗೆ ಇರುವುದನ್ನೆಲ್ಲ ಚೆಕ್‌ಮಾಡಿ ಕಿತ್ತುಕೊಂಡು ಇಚೇಗೆ ಕಳುಹಿಸುವುದು. ಅದಕ್ಕೆ ತಿರುಪತಿ ಚವರ ಎಂದು ಹಳ್ಳಿ ಭಾಷೆ.

ಶ್ರೀ ಸಿ. ಬೈರೇಗೌಡ : ತಿರುಪತಿ ಚವರ ಎಂದರೆ ಅರ್ಥಂಬರ್ಥ ಎಂದು ಕಾಣಿಸುತ್ತದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಇಲ್ಲ ಇಲ್ಲ ಪೂರ. ಆದ್ದರಿಂದ ನಿನ್ನೆ ಮೊನ್ನೆಯಿಂದ ಆಗಿರತಕ್ಕಂಥದಲ್ಲ ಬಹಳಷ್ಟು ವರ್ಷಗಳಿಂದ ನಡೆದುಬಂದಿದೆ. ಇದರ ಮೇಲೆ ಸರ್ಕಾರ ಬಿಗಿಯಾದ ಕ್ರಮ ತೆಗೆದುಕೊಳ್ಳಬೇಕು. ಇವತ್ತು ಯಾವ ಮಟ್ಟಕ್ಕೆ ಹೋಗಿದ್ದಾರೆ. ತಾಲ್ಲೂಕು ಆಫೀಸಿನ ಅಧಿಕಾರಿಗಳೆಂದರೆ ಎಷ್ಟು ನೀನು ಹೇಳಪ್ಪ ಎಂದರೆ ಜೋಬಿಗೆ ಕೈಹಾಕಿ ಅವರೇ ನೋಡುತ್ತಾರೆ. ನಮ್ಮ ಅಜೀಜ್‌ಸೇಠ್‌ರವರಿಗೆ ವಿಚಾರ ಗೊತ್ತಿದೆ. ನಾನು ಬಹಳಷ್ಟು ಸಾರಿ ನಿಮ್ಮ ಹತ್ತಿರ ಹೇಳಿದ್ದೇನೆ. ನಿನಗೆ ಕೆಲಸ ಮಾಡಿಸಿಕೊಡಬೇಕಾದರೆ ಎಷ್ಟು ತಂದಿದ್ದೀಯ ಹೇಳಪ್ಪ ಎಂದು ಕೇಳುತ್ತಾರೆ. ಹಿಂದೆ ಇತ್ತು ಚೆನ್ನಾಗಿ ಕೆಲಸ ಮಾಡಿಕೊಟ್ಟರೆ 10 ರೂಪಾಯಿ 5 ರೂಪಾಯಿನೋ ಕೊಟ್ಟರೆ ಸಂತೋಷವಾಗಿ ಹೋಗುತ್ತಿದ್ದರು. ನಾವು ನೋಡಿದ್ದೇವೆ, ಇವತ್ತು ಆ ಕಾಲ ಇಲ್ಲ. ಆ ಕಾಲ ಬದಲಾವಣೆಯಾಗಿದೆ. ಆದ್ದರಿಂದ ವಿಲೇಜ್ ಅಕೌಂಟೆಂಟ್‌ರುಗಳು ಮತ್ತು ತಾಲ್ಲೂಕ್ಕ ಆಫೀಸಿನ ಬಗ್ಗೆ ಸರ್ಕಾರ ಹೆಚ್ಚು ನಿಗಾವಹಿಸಬೇಕು. ಇದರ ಬಗ್ಗೆ ಒಂದು ಕಾರ್ಯಕ್ರಮವನ್ನು ತರಬೇಕೆಂದು ಒತ್ತಾಯ ಮಾಡುತ್ತೇನೆ.

ಉಪಾಧ್ಯಕ್ಷರು : ಈಗ ಇನ್ನು ಇಬ್ಬರು ಮೂರುಜನರು ಮಾತನಾಡಬೇಕಾಗಿದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ದಯವಿಟ್ಟು ಇನ್ನು ಸುಮಾರು 2-3

ಇಲಾಖೆಯ ಮಾತನಾಡಬೇಕಾಗಿದೆ. ಹೆಚ್ಚು ಮಾತನಾಡುವುದಿಲ್ಲ ನನಗೆ 15 ನಿಮಿಷ ಕಾಲಾವಕಾಶ ಮಾಡಬೇಕೆಂದು ಕೇಳುತ್ತೇನೆ.

ವಿಲೇಜ್ ಅಕೌಂಟೆಂಟ್‌ಗಳು ಯಾವ ಊರಿನಲ್ಲೂ ಸಹ ಇರುವುದಿಲ್ಲ. ತಾಲ್ಲೂಕು ಕೇಂದ್ರಗಳಲ್ಲೇ ಅವರ ಮನೆ. ಒಬ್ಬ ರೈತ ವಿಲೇಜ್ ಅಕೌಂಟೆಂಟ್‌ನಿಂದ ಒಂದು ರೆಕಾರ್ಡ್ ಪಡೆಯಬೇಕಾದರೆ 15 ದಿವಸ ಸುತ್ತಬೇಕು. ಮಾನ್ಯ ಕಂದಾಯ ಸಚಿವರು ಕೊಟ್ಟಿರುವ ಲೆಕ್ಕದ ಪ್ರಕಾರ 1900 ಚಿಲ್ಲರೆ ವಿಲೇಜ್ ಅಕೌಂಟೆಂಟ್‌ಗಳು ಷಾರ್ಟೇಜ್ ಇದ್ದಾರೆ. ಹಾಲಿ ಇರತಕ್ಕವರು ಕೂಡ ತಾಲ್ಲೂಕು ಕೇಂದ್ರಗಳಲ್ಲೇ ಇರುತ್ತಾರೆ. ಅವರಿಗೆ ಕೊಡತಕ್ಕ ಕಾಣಿಕೆಗಿಂತ ಅವರನ್ನು ಹಿಡಿಯುವುದಕ್ಕೆ ಹೆಚ್ಚಾಗಿ ಕಾಣಿಕೆಯನ್ನು ಒಪ್ಪಿಸಬೇಕಾಗಿದೆ. ಮಾನ್ಯ ಕೆ.ಹೆಚ್. ಪಾಟೀಲರು, ವಿಲೇಜ್ ಅಕೌಂಟೆಂಟರ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡು ಯಾರು ತಾವು ಇರಬೇಕಾದ ಜಾಗದಲ್ಲಿ ಇರುವುದಿಲ್ಲವೋ ಅವರನ್ನು ಅಮಾನತ್ತಿನಲ್ಲಿಟ್ಟು ಕೆಲಸದಿಂದ ವಜಾ ಮಾಡುತ್ತೇವೆಂದು ಹೇಳಿದ್ದರು. ದಯಮಾಡಿ ಈ ಕ್ರಮವನ್ನು ಸರ್ಕಾರ ಕೈಗೊಳ್ಳಬೇಕು. ರೈತರ ಕಲ್ಯಾಣ ಆಗಬೇಕಾದರೆ, ರೈತರ ಬಗ್ಗೆ ಕಾಳಜಿ ಇರತಕ್ಕ ಸರ್ಕಾರ ಈ ಕೆಲಸವನ್ನು ಮಾಡಬೇಕೆಂದು ಒತ್ತಾಯಿಸುತ್ತೇನೆ. ಈ ಒಂದು ಕಾಯಕಲ್ಪ ಮಾಡಬೇಕು.

ಇನ್ನು ರೈತರ ಪಾಸ್ ಬುಕ್ ಕೊಡತಕ್ಕ ವಿಚಾರದಲ್ಲಿ ಸರ್ಕಾರ ಒಂದು ಹೆಜ್ಜೆ ಮುಂದಿಡತಕ್ಕ ಮಟ್ಟಕ್ಕೆ ಹೋಗಿಲ್ಲ. ಸಾಂಕೇತಿಕವಾಗಿ ತಾಲ್ಲೂಕು ಕೇಂದ್ರಗಳಲ್ಲಿ ಕೊಟ್ಟಿದ್ದಾರೆ. ತಾವು ಬಜೆಟ್ ಭಾಷಣದಲ್ಲಿ ಹೇಳಿದ ಪ್ರಕಾರ ಶೀಘ್ರವಾಗಿ ಪಾಸ್ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಒತ್ತಾಯಿಸುತ್ತೇನೆ. ತಡ ಮಾಡಿದರೆ ಪ್ರಯೋಜನವಾಗುವುದಿಲ್ಲವೆಂದು ಹೇಳುತ್ತೇನೆ. ತಾಲ್ಲೂಕು ಕಛೇರಿಯಲ್ಲಿ ನಡೆಯತಕ್ಕ ಭ್ರಷ್ಟಾಚಾರವನ್ನು ಪರಿಗಣನೆಗೆ ತೆಗೆದುಕೊಂಡು ಇದಕ್ಕೆ ಕಡಿವಾಣ ಹಾಕಬೇಕು.

ಕೆ.ಎಸ್.ಆರ್.ಟಿ.ಸಿ ಬಗ್ಗೆ ಹೇಳಿ ನನ್ನ ಮಾತು ಮುಗಿಸುತ್ತೇನೆ. ಸಾರಿಗೆ ಇಲಾಖೆಯ ಬಸ್ಸಿನ ಬಣ್ಣ ಬಹಳ ಡೇಂಜರ್ . ಅದೇ ರೀತಿ ಸರ್ಕಾರಕ್ಕೂ ಡೇಂಜರ್ ಇಲಾಖೆ ಇದು. ಇಡೀ ರಾಷ್ಟ್ರದಲ್ಲ ಯಾವುದೇ ರಾಜ್ಯದಲ್ಲಿ ಈ ತರಹ ಕೆಂಪು ಬಣ್ಣ ಇಲ್ಲ. ಇದು ಒಂದೇ ರಾಜ್ಯದಲ್ಲಿ ಡೇಂಜರ್ ಬಣ್ಣ ಇರತಕ್ಕದ್ದು. ಹೊಸದಾಗಿ ಬಣ್ಣ ಹೊಡೆಸತಕ್ಕ ಸಂದರ್ಭದಲ್ಲಿ ಬಣ್ಣವನ್ನು ಬದಲಾಯಿಸಿದರೆ ಈ ಇಲಾಖೆಗೆ ಕಾಯಕಲ್ಪ ಬಂದೀತೆಂದು ವಿನಂತಿಸುತ್ತೇನೆ. ತಮಿಳ್ನಾಡಿನ ಪ್ರಕಾರ 5 ವಿಭಾಗಗಳನ್ನು ಮಾಡದೆ ಹೋದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕವರಿಗೆ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸುವುದಕ್ಕಾಗುವುದಿಲ್ಲ. ನಿಮ್ಮ ಇಲಾಖೆಯಲ್ಲಿ 9 ಸಾವಿರ ಚಿಲ್ಲರೆ ಬಸ್ಸುಗಳು ಇವೆ. ಇದರಲ್ಲಿ 1600 ಬಿಟಿಎಸ್.ಬಸ್ಸುಗಳು 40 ಲಕ್ಷ ಜನರಿಗೆ ಈ ಸಾವಿರದ ಆರನೂರು ಬಸ್ಸುಗಳು, ಇನ್ನು ಮೂರೂವರೆ ಕೋಟಿ ಜನರಿಗೆ ಏಳೂವರೆ ಸಾವಿರ ಬಸ್ಸುಗಳು.

ನಾನು ಕಳೆದ ೩ ವರ್ಷಗಳಿಂದ ಅಜೀಜ್ ಸೇಠರ ಮನೆಗೆ ಹೋಗಿ ಹೇಳಿದರೂ ಬಸ್ಸುಗಳನ್ನು ನಮ್ಮ ಭಾಗಕ್ಕೆ ಹಾಕಲಿಲ್ಲ. ನಮ್ಮ ತಾಲ್ಲೂಕಿನಲ್ಲಿ ದಕ್ಷಿಣ ಇಂಡಿಯಾದಲ್ಲೇ ಪ್ರಮುಖವಾದ ಆಸ್ಪತ್ರೆ ಒಂದು ಆಗಿದೆ. ಮಂಡ್ಯದ ಸುತ್ತಮುತ್ತಲಿನ ರೈತರು ಆ ಒಂದು ಆಸ್ಪತ್ರೆಗೆ ಹೋಗಬೇಕಾದರೆ ರೂಪಾಯಿ ಕೊಡುವ ಜಾಗಕ್ಕೆ 50 ರೂಪಾಯಿ ಖರ್ಚು ಮಾಡಿಕೊಂಡು ಹೋಗಬೇಕಾಗಿದೆ. ಈ ಬಗ್ಗೆ ನಾನು ತಮ್ಮ ಹತ್ತಿರ ಮಾತನಾಡಿದ ಹಾಗೆ 3 ಬಸ್ಸುಗಳನ್ನು ಕೂಡಲೇ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ಜಕ್ಕನಹಳ್ಳಿಯಿಂದ ಆದಿಚುಂಚನಗಿರಿ, ಕುಣಿಗಲ್ ನಿಂದ ಬೆಳ್ಳೂರು, ಚನ್ನರಾಯಪಟ್ಟಣದಿಂದ ಬೆಳ್ಳೂರಿಗೆ ಬಸ್ಸುಗಳನ್ನು ಹಾಕದಿದ್ದರೆ ನಮ್ಮ ತಾಲ್ಲೂಕಿನ ಜನರು ಮುಂದಿನ ವಾರ ಧರಣಿ ಮಾಡುತ್ತೇವೆಂದು ಹೇಳಿದ್ದಾರೆ. ದಯವಿಟ್ಟು ನನ್ನನ್ನು ಇಕಟ್ಟಿಗೆ ಸಿಕಿಸಬೇಡಿ.

ಇವತ್ತಿನ ದಿವಸ, ಸಾರಿಗೆ ಸಂಸ್ಥೆ ನಷ್ಟದಲ್ಲಿರುವ ಕಡೆ ಅಂದರೆ ಬೆಂಗಳೂರು ನಗರದಲ್ಲಿರತಕ್ಕ 40 ಲಕ್ಷ ಜನರಿಗೆ ಸವಲತ್ತು ಕೊಡತ್ತಿದ್ದೀರಿ. ಆದರೆ ಲಾಭ ಗಳಿಸಿ ಕೊಡುವ ಗ್ರಾಮಾಂತರ ಪ್ರದೇಶಗಳಿಗೆ ಬಸ್ಸುಗಳನ್ನು ಕೊಡುತ್ತಿಲ್ಲ. ಬಹುಪಾಲುನಷ್ಟ ಬಿ.ಟಿ.ಎಸ್.ನಿಂದ ಆಗುತ್ತದೆ. ಆದುದರಿಂದ ಇದನ್ನು ಪ್ರತ್ಯೇಕ ಮಾಡಿ. ಇಲ್ಲದಿದ್ದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ನಗರದಲ್ಲಿ ಎಷ್ಟು ಲಾಭವಾಗುತ್ತದೆ, ನಷ್ಟವಾಗುತ್ತದೋ ಎಂಬುದು ಗೊತ್ತಾಗುವುದಿಲ್ಲ. ಎವಡನ್ನೂ ಕ್ಲಬ್ ಮಾಡಿರುವುದರಿಂದ ಕೆ.ಎಸ್. ಆರ್. ಟಿ.ಸಿ. ಯಲ್ಲಿ ಲಾಸ್ ಇದೆ. ಬಸ್ಸುಗಳನ್ನು ಹೊಸದಾಗಿ ಹಾಕುವುದಕ್ಕಾಗುವುದಿಲ್ಲವೆಂದು ಅಧಿಕಾರಿಗಳು ಆದೇಶ ಕೊಡುತ್ತಾರೆ. ಇದಕ್ಕೆ ದಯಮಾಡಿ ಅವಕಾಶ ಕೊಡಬೇಡಿ ಇದನ್ನು ಪ್ರತ್ಯೇಕ ಮಾಡಿ ಗ್ರಾಮಾಂತರ ಪ್ರದೇಶಗಳಿಗೆ ಏನು ಸವಲತ್ತು ಕೊಟ್ಟಿದ್ದೀರಿ ಮತ್ತು ಎಷ್ಟು ವರಮಾನ ಬರುತ್ತಿದೆ ಎಂಬುದನ್ನು ನೋಡಿ, ನಗರ ಪ್ರದೇಶಗಳಿಗೆ ಏನು ಸವಲತ್ತು ಕೊಟ್ಟಿದ್ದೀರಿ, ಅಲ್ಲಿಂದ ಎಷ್ಟು ವರಮಾನ ಬರುತ್ತಿದೆ ಎಂಬುದನ್ನು ಪರಿಶೀಲಿಸಬೇಕು. ಇನ್ನೊಂದು ಬಹಳ ತಾರತಮ್ಯ ಮಾಡಿದ್ದೀರಿ. ನಗರದಲ್ಲಿರತಕ್ಕ ವೃದ್ಧರಿಗೆ ಪಾಸ್ ವ್ಯವಸ್ಥೆ ಮಾಡಿದ್ದೀರಿ. ಗ್ರಾಮಾಂತರ ಪ್ರದೇಶದವರು ಏನು ಮಾಡಿದ್ದಾರೆ? ಅವರು ಏನು ಪಾಪ ಮಾಡಿದ್ದಾರೆ? ಕೈಯಲ್ಲಿ ಕೋಲು ಹಿಡಿದುಕೊಂಡು ಬಸ್ಸು ಹತ್ತುವುದಕ್ಕೆ ಶಕ್ತಿ ಇಲ್ಲದವರಿಗೆ ಪಾಸ್ ಕೊಡತಕ್ಕ ವ್ಯವಸ್ಥೆ ಇಲ್ಲ. ನೂರಾರು ಕೋಟಿ ರೂಪಾಯಿಗಳನ್ನು ಪಟ್ಟಣಗಳಿಗೆ ಕೊಟ್ಟಿರುವಾಗ ಹತ್ತು ಕೋಟಿ ರೂಪಾಯಿ ಏನು ಹೆಚ್ಚಿಗೆ ಆಗುವುದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಗ್ರಾಮಾಂತರ ಪ್ರದೇಶದ ವಯಸ್ಸಾದವರಿಗೂ ಪಾಸ್ ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಸಾರಿಗೆ ಇಲಾಖೆ ಬಗ್ಗೆ ನಾನು ನೀಡಿರತಕ್ಕ ಸಲಹೆಗಳನ್ನು ಮಾನ್ಯ ಸಾರಿಗೆ ಸಚಿವರು ಶೀಘ್ರವಾಗಿ ಈಡೇರಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ನೀವು ಕೇಳಬೇಕು ಸ್ವಲ್ಪ ದಯಮಾಡಿ. ನೀವು ಬಹಿರಂಗ ಸಭೆಯಲ್ಲಿ ಮಹದೇಶ್ವರ ದೇವಸ್ಥಾನ ಏನು ಸವಲತ್ತು ಕೊಟ್ಟಿದೆ ಸರ್ಕಾರಿ ಇದೆ. ಸವಲತ್ತನ್ನು ಇವತ್ತು ಒಳಗಡೆ ಕುಳಿರತಕ್ಕ 50 ಜನ ಶಾಸಕರ ಪರವಾಗಿರತಕ್ಕ ಆದಿಚುಂಚನಗಿರಿ ಮಠಕ್ಕೂ ಕೊಡುತ್ತೇವೆಂದು ಹೇಳಿದ್ದೀರಿ. ಎಲ್ಲಿ ಹೋಯಿತು. ನಿಮ್ಮದಾದ? ಅದು ಮಾಡಿ ಮೊದಲು ನೀವು. ಮೊದಲು ಆದೇಶ ಕೊಟ್ಟು ಮುಂದಿನ ವಾರದೊಳಗೆ ದಯವಿಟ್ಟು ಅದನ್ನು ಅಸೆಸ್ ಮಾಡಿ ಆ ಕೆಲಸವಾಗುವಂತೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಅಜೀಜ್ ಸೇಠ್ : ನಿಮ್ಮ ಸ್ವಾಮಿಗಳಿಗೆ ನನ್ನ ಮೇಲೆ ಅಭಿಮಾನ ನಂಬಿಕೆ ನಿಮಗಿಂತ ಜಾಸ್ತಿ.

ಶ್ರೀ ಎಲ್. ಆರ್. ರಾಮೇಗೌಡ : ಅದರ ಬಗ್ಗೆ ನಾನು ಇಲ್ಲ ಎಂದು ಹೇಳುವುದಿಲ್ಲ. ನಮ್ಮ ಮಠದ ಬಗ್ಗೆ ಅಭಿಮಾನ ಇದೆ. ಅದರ ಬಗ್ಗೆ ಎರಡು ಮಾತಿಲ್ಲ. ಅಭಿಮಾನವನ್ನು ಬರೀ ಅಭಿಮಾನದಲ್ಲೇ ತೋರಿಸಬೇಕು. ಅದನ್ನು ಕೆಲಸದಲ್ಲಿ ತೋರಿಸಿಕೊಡಿ ಎಂದು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು : ಶಿವರಾಮೇಗೌಡರೇ, ತಾವು ಮುಗಿಸಿ.

ಶ್ರೀ ಎಲ್. ಆರ್. ಶಿವರಾಮೇಗೌಡ : ಅಧ್ಯಕ್ಷರೇ, ನಾವು ಆರು ಜನರು ಬರೆದು ಕೊಡುತ್ತೇವೆ. ಇನ್ನು ಮೇಲೆ ನಮ್ಮ ಕೈಯಲ್ಲಿ ಆಗುವುದಿಲ್ಲ. ಈ ಹೊಡೆತ.ಆರು ಜನರಲ್ಲಿ ಯಾರಾದರೂ ಒಬ್ಬರು ನಮ್ಮಲ್ಲಿ ಮಾತನಾಡುತ್ತೇವೆ. ನಮಗೆ ಕೊನೇ ಪಕ್ಷದ 60 ನಿಮಿಷ ಕೊಡಲೇಬೇಕು ನಾಳೆಯಿಂದ.

ಶ್ರೀ ವಾಟಾಳ್ ನಾಗರಾಜ್ : ಆರು ಜನ ಯಾರಿಗೆ ಬರೆದುಕೊಡುವುದು?

ಜನ್ಮದಲ್ಲಿ ಸಾಧ್ಯವಿಲ್ಲ. ಇವರು ಕಾಂಗ್ರೆಸ್ ಬಾಲವೇ ಹೊರತು ಇವರು ಪಕ್ಷೇತರಾಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ : ಫುಡ್ ಕಾರ್ಪೊರೇಷನ್ ಬಗ್ಗೆ ಹೇಳುತ್ತೇನೆ ಚಂದ್ರೇಗೌಡರು ಆ ವಿಚಾರದಲ್ಲಿ ಹೇಳಿದ್ದಾರೆ. ನಾನು ಎರಡು ಮೂರು ವಿಚಾರ ಹೇಳಿಬಿಡುತ್ತೇನೆ. ಇವತ್ತು ಸರ್ಕಾರದಿಂದ ಕೊಡಬೇಕಾಗಿರತಕ್ಕ ಹಣವನ್ನು ಫುಡ್ ಕಾರ್ಪೊರೇಷನ್ನಿಗೇ ಆಗಲಿ ಅಥವಾ ತಾಲ್ಲೂಕು ಕೇಂದ್ರಗಳಲ್ಲಿರತಕ್ಕ ಟಿ.ಎ.ಪಿ.ಎಂ.ಎಸ್. ಗಾಗಲೀ ಕೊಡದೇ ಹೋದರೆ ಸಹಕಾರ ಸಂಸ್ಥೆಗಳು ಹೇಗೆ ಕೆಲಸ ಮಾಡುತ್ತವೆ?

ಉದಾಹರಣೆಗೆ ನನ್ನ ತಾಲ್ಲೂಕಿನಲ್ಲಿ ಟಿ.ಎಪಿಸಿಎಂಎಸ್ ಗೆ 500 ರೂಪಾಯಿ ಯಾರಾದರೂ ಕೊಡುತ್ತಾರೆಂದರೆ ಸೆಕ್ರೆಟರಿ ಸ್ಕೂಟರ್ ಹಾಕಿಕೊಂಡು ಓಡುತ್ತಾನೆ. ಬಿಲ್ ಹಾಕಿಸುವುದಕ್ಕೆ ಫುಡ್ ಬಂದಿದೆ ಎಂದು.ಹೋಗಿ ಸಾವಿರ ರೂಪಾಯಿ ಕೊಡುವವರ ಹತ್ತಿರ, ಎರಡು ಸಾವಿರ ರೂಪಾಯಿ ಕೊಡುವ ಹತ್ತಿರ ತೆಗೆದುಕೊಂಡು ಬಂದು ವ್ಯವಹಾರ ಮಾಡುತ್ತಿದ್ದಾರೆ. ನಾಗಮಂಗಲ ತಾಲ್ಲೂಕು ಒಂದಕ್ಕೆ ಸುಮಾರು 12 ಲಕ್ಷ ರೂಪಾಯಿ ಸರ್ಕಾರದಿಂದ ಬಾಕಿ ಬರಬೇಕಾಗಿದೆ. ಸನ್ಮಾನ್ಯ ಆಹಾರ ಸಚಿವರು ಮಂಡ್ಯಕ್ಕೆ ಬಂದಿದ್ದಾಗ ವಿನಂತಿ ಮಾಡಿಕೊಂಡಿದ್ದೇವೆ. ಅವರ ಆವತ್ತು ಸುಮಾರು 2-3ಲಕ್ಷ ರೂಪಾಯಿ ಬಿಡುಗಡೆ ಮಾಡಿದರು. ಅದಾದಮೇಲೆ ಅದರ ಬಗ್ಗೆ ಉಸಿರೇ ಇಲ್ಲ. ದಯಮಾಡಿ ತಾವು ಉತ್ತರ ಕೊಡುವಾಗ ಇಡೀ ರಾಜ್ಯಕ್ಕೆ ಕೊಡುತ್ತೀರೋ ಬಿಡುತ್ತೀರೋ ಗೊತ್ತಿಲ್ಲ. ನಾಗಮಂಗಲ ತಾಲ್ಲೂಕಿಗೆ ಎಷ್ಟು ಹಣ ಕೊಡಬೇಕೋ ಅದನ್ನು ಕೊಡುತ್ತೀರೋ ಇಲ್ಲವೋ ಎಂಬುದನ್ನು ಹೇಳಬೇಕು. ಎಂದು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ. ಕೊನೆಯದಾಗಿ ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಎರಡು ಮಾತು ಹೇಳಬೇಕಾಗಿದೆ. ಇವತ್ತು ಫೈನಾನ್ಸ್ ಮತ್ತು ಎಕ್ಸೈಜ್ ಮಂತ್ರಿಮಂಡಲದಲ್ಲಿ ಬಹಳ ಬಿಗಿಯಾದ ಇಲಾಖೆಗಳು. ಎರಡಕ್ಕೂ ಬಿಗಿಯಾದ ಮಂತ್ರಿತ್ವ ನಮ್ಮ ಸರ್ಕಾರದಲ್ಲಿ ಇದೆ. ನಾನು ಒಂದು ವಿನಂತಿ ಮಾಡುತ್ತೇನೆ, ಸರ್ಕಾರದ ಲೆಕ್ಕದ ಪ್ರಕಾರ.....

ಶ್ರೀ ವಾಟಾಳ್‌ನಾಗರಾಜ್ : ಇಷ್ಟು ಬಹಿರಂಗವಾಗಿ ಮುಖ್ಯಮಂತ್ರಿಗಳ ಇಲಾಖೆಯನ್ನು ಟೀಕೆ ಮಾಡುವುದನ್ನು ನಾನು ಒಪ್ಪುವುದಿಲ್ಲ. ಇದೆಲ್ಲಾ ನೋಡಿದರೆ ಬಹುಶಃ ನಾಳೆ ನಾಡಿದ್ದು ಇವರು ಕಾಂಗ್ರೆಸ್ ಬೆಂಬಲವನ್ನು ಹಿಂತೆಗೆದುಕೊಳ್ಳತಕ್ಕ ಸೂಚನೆಗಳು ಕಾಣುತ್ತವೆ.

ಶ್ರೀ ಎಲ್. ಆರ್. ಶಿವರಾಮೇಗೌಡ : ಒಂದು ಮಾತು ದಯಮಾಡಿ ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್ ಅವರು ತಿಳಿದುಕೊಳ್ಳಬೇಕು. ನಾನು ಸರ್ಕಾರದಲ್ಲಿ ತಪ್ಪಿದ್ದರೆ ನೇರವಾಗಿ ಹೇಳುತ್ತೇನೆ. ಇದರಲ್ಲಿ ಮುಚ್ಚುಮರೆ ಇಲ್ಲ. ದಯಮಾಡಿ ಒಂದು ಮಾತು ಹೇಳುತ್ತೇನೆ ಕೇಳಿ. ನನ್ನನ್ನು ಜನ ಯಾವುದೇ ಬಾವುಟದ ಅಡಿಯಲ್ಲಿ ಗೆಲ್ಲಿಸಲಿಲ್ಲ. ಸ್ವಶಕ್ತಿ ಮೇಲೆ ಗೆದ್ದಿದ್ದೇನೆ. ಅದೂ ಎಷ್ಟುಗೊತ್ತಾ ಲೀಡಿಂಗ್? ತಮಗೆ ಗೊತ್ತಿರಬಹುದು. 35 ಸಾವಿರ. 35 ಸಾವಿರ ಲೀಡಿಂಗ್ ನಲ್ಲಿ ಬಂದಿದ್ದೇನೆ, ತಮಗೆ ಜ್ಞಾಪಕ ಇರಲಿ.

ಶ್ರೀ ವಾಟಾಳ್ ನಾಗರಾಜ್ : 35 ಸಾವಿರ ಬಹುಮತ ಬಂದರೂ ತಾವು ಕಾಂಗ್ರೆಸ್ ಹಿಂದೆ ಏತಕ್ಕೆ ಓಡಬೇಕು?

ಶ್ರೀ ಎಲ್. ಆರ್. ಶಿವರಾಮೇಗೌಡ : 1800 ಕೋಟಿ ರೂಪಾಯಿ ತೆರಿಗೆ ಬರಬೇಕು. ಈಗಾಗಲೇ ಸೆಪ್ಟೆಂಬರ್ ಅಕ್ಟೋಬರ್ ತಲುಪುತ್ತಿದ್ದೇನೆ. 7-8ನೇ ತಿಂಗಳಿಗೆ ಕಾಲಿಡುತ್ತಿದ್ದೇವೆ. ಕೊನೇಪಕ್ಷ 900 ಕೋಟಿ ರೂಪಾಯಿ ವಸೂಲಿ ಆಗಬೇಕಾಗಿತ್ತು, ಆದರೆ ಸರ್ಕಾರ ಬಿಗಿ ಮಾಡುತ್ತಿಲ್ಲ. ಕೇವಲ 650 ಕೋಟಿ ರೂಪಾಯಿ ಮಾತ್ರ

ತೆರಿಗೆ ಈವರೆಗೆ ವಸೂಲಾಗಿದೆ. ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ ಇವತ್ತು ಈ ಮೂಲೆಯಲ್ಲಿರತಕ್ಕ ತಿಪಟೂರು ತುಮಕೂರಿನಲ್ಲಿ ಕೊಬ್ಬರಿ ವ್ಯಾಪಾರ ಏನು ನಡೆಯುತ್ತದೆ ಅದರಲ್ಲಿ ಸುಮಾರು ಕೋಟ್ಯಾಂತರ ರೂಪಾಯಿ ಹಣ ವೇಸ್ಟ್‌ಆಗುತ್ತಿದೆ. ಅಧಿಕಾರಿಗಳು ತಿನ್ನುತ್ತಿದ್ದಾರೆ ಇವತ್ತು. ಇದೇ ಸದನದಲ್ಲಿ ಇವತ್ತಿನ ಸಚಿವರಾಗಿರುವ ಮಂಜುನಾಥ್ ಅವರು ಹಿಂದೆ ಪ್ರತಿಪಾದನೆ ಮಾಡಿದ್ದರು. ನಮ್ಮ ತಾಲ್ಲೂಕಿನಲ್ಲಿ ನಮ್ಮ ಜಿಲ್ಲೆಯಲ್ಲಿ ಕೊಬ್ಬರಿಯಲ್ಲಿ ಅನ್ಯಾಯ ನಡೆಯುತ್ತಿದೆ, ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ಕೊಬ್ಬರಿಗೆ ಸರಿಯಾದ ಬೆಲೆ ಸಿಗಬೇಕಾದರೆ ಮಾರ್ಕೆಟ್‌ನಲ್ಲಿ ನಡೆಯುವ ವಂಚನೆ ತಪ್ಪಬೇಕು ಎಂದು ಹೇಳುತ್ತಿದ್ದರು. ನಾನು ವಿನಂತಿ ಮಾಡುತ್ತೇನೆ 300 ಕೋಟಿ ರೂಪಾಯಿ ಹಣ ಎಲ್ಲಿ ಹೋಯಿತು? ಏತಕ್ಕೆ ಬರಲಿಲ್ಲ.

ಇವತ್ತು ಆ 300 ಕೋಟಿ ರೂಪಾಯಿ ಹಣ? ಇವತ್ತು 900 ಕೋಟಿ ರೂಪಾಯಿ ತೆರಿಗೆ ಬರುವ ಕಡೆ ಕೇವಲ 650 ಕೋಟಿ ರೂಪಾಯಿ ವಸೂಲಾಗಿದೆ. ಆದ್ದರಿಂದ ದಯಮಾಡಿ ಯಾರಿಂದ ಹಣ ತೆರಿಗೆ ರೂಪದಲ್ಲಿ ಬರಬೇಕೋ ಅವರಿಂದ ಮುಲಾಜು ಇಲ್ಲದೇ ಯಾವ ರೀತಿಯ ನೆಂಟಸ್ಥಿಕೆ ಇಲ್ಲದೇ ಹಣವನ್ನು ವಸೂಲಿ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಮಾನ್ಯ ವಾಟಾಳ್ ನಾಗರಾಜ್ ಅವರು ಒಂದು ಮಾತನ್ನು ಚೆನ್ನಾಗಿ ಹೇಳಿದರು. ಆ ಕಡೆ ಕುಳಿತಿರುವವರು ಈ ಕಡೆ ಕುಳಿತಿದ್ದಾಗ ಏನು ಭಾಷಣ ಮಾಡಿದ್ದಾರೆಂದು ನಾನು ಕೇಳಿದ್ದೇನೆ. ಹಿಂದೆ ದೇವರಾಜ ಅರಸ್‌ರವರ ಕಾಲದಲ್ಲಿ ಅಧಿವೇಶನ ವರ್ಷದಲ್ಲಿ 120 ದಿವಸ ನಡೆಯುತ್ತಿತ್ತು. ಈಗ ಏಕೆ 60-70 ದಿವಸಕ್ಕೆ ಇಳಿದಿದೆ ಎಂದು ಈಗ ಆಡಳಿತ ಪಕ್ಷದಲ್ಲಿ ಮಂಚೂಣಿಯಲ್ಲಿ ಇರುವವರು ಹೇಳುತ್ತಿದ್ದುದನ್ನು ಕೇಳಿದ್ದೇವೆ. ಇವತ್ತು 100 ದಿವಸಕ್ಕೆ ಕಡಿಮೆ ಇಲ್ಲದಂತೆ ಸಭೆ ನಡೆಸಿ ಜನರ ಸಂಕಷ್ಟವನ್ನು ಅರಿವಾಗುವಂತೆ ಸರ್ಕಾರಕ್ಕೆ, ಅಧಿಕಾರಿಗಳಿಗೆ ಅರಿವಾಗಬೇಕು. ಆದರೆ, ಇವತ್ತಿನ ಸನ್ನಿವೇಶ ಹಾಗೆ ಬಂದಿದೆ. 30 ನೇ ತಾರೀಖಿನ ಒಳಗೆ ಬಡ್ಜೆಟ್ ಆಗಬೇಕು.

ಶ್ರೀ ವಾಟಾಳ್ ನಾಗರಾಜ್ : ಈ ತಿಂಗಳ 30 ರೊಳಗೆ ಸರ್ಕಾರ ಏನಾಗುತ್ತದೆಯೋ ನನಗೆ ಗೊತ್ತಿಲ್ಲ.

ಉಪಾಧ್ಯಕ್ಷರು : ಸರ್ಕಾರಕ್ಕೆ ಏನೂ ಆಗುವುದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ : ಲೇಖಾನುದಾನಕ್ಕೆ ಒಪ್ಪಿಗೆ ತೆಗೆದುಕೊಳ್ಳದೇ ಹೋದರೆ, ಸಂಬಳ ಕೊಡುವುದಕ್ಕಾಗುವುದಿಲ್ಲ, ಸನ್ನಿವೇಶವನ್ನು ಹೀಗೆ ರೂಡಿಸಿಕೊಂಡು ಹೋಗುವುದಲ್ಲ, ಈ ಸಾರಿ ನೋ ಕಾನ್ಫಿಡೆನ್ಸ್ ಮೋಷನ್ ಹಾಗೂ ಇನ್ನಿತರೆ ವಿಷಯಗಳ ಮೇಲೆ ಚರ್ಚೆ ಮಾಡಿ ಡಿಮಾಂಡ್ ಬಗ್ಗೆ ಮಾತನಾಡುವುದಕ್ಕೆ ಸಮಯಹೆಚ್ಚು ಸಿಗಲಿಲ್ಲ. ಕೊನೇ ಪಕ್ಷ ಇನ್ನು 2 ದಿವಸ ಅರ್ಥಪೂರ್ಣ ಚರ್ಚೆ ಮಾಡಿ ಜನರ ಅನಿಸಿಕೆಗಳನ್ನು ಸರ್ಕಾರ ಹಾಗೂ ಅಧಿಕಾರಿಗಳಿಗೆ ಮನದಟ್ಟು ಮಾಡಿಕೊಟ್ಟರೆ ಮಾತ್ರ ಕೆಲಸವಾಗುತ್ತದೆ. ಆದ್ದರಿಂದ ಈ ಸಂದರ್ಭದಲ್ಲಿ ನನ್ನ ವಿನಂತಿ ಏನೆಂದರೆ, ಬರುವ ವರ್ಷವಾದರೂ ಈ ಕಡೆ ಕುಳಿತು ಆ ನಾಯಕರು ಏನು ಹೇಳಿದ್ದರೋ ಆ ಪ್ರಕಾರ 120 ದಿವಸ ಸದನ ನಡೆಸುವ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಬೇಕು. ಸರ್ಕಾರ ಏನು ಬೇಡಿಕೆಗಳನ್ನು ಇಲ್ಲಿ ಇಟ್ಟಿದೆ, ಅದಕ್ಕೆ ಒಪ್ಪಿಗೆಯನ್ನು ಕೊಟ್ಟು ನಾಳೆಯಿಂದ ದಯಮಾಡಿ ಪಕ್ಷೇತರ ಸದಸ್ಯರಿಗೆ ಕನಿಷ್ಟ ಪಕ್ಷ 60 ನಿಮಿಷಗಳಾದರೂ ಮಾತನಾಡುವ ಬಗ್ಗೆ ಕರುಣೆ ತೋರಿಸಬೇಕೆಂದು ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ. ಜೈಹಿಂದ್.

SRI. S.S.JOSHI (Nippani) : Madam Deputy Speaker, I will just speak on the Demands of the Labour Employment and Training and Employees State

Insurance Departments. Opposing these demads, I want to tell the Hon'ble Minister that in the Annual Report pertaining to the year 1990-91, there are many lacunae For example , it was noticed that the names of the casual labourers working under Contract,were not entered in the Muster Roll, I am not going to read out the entire report. During the period from 1-1-1990 to 31-1-1990, number of units inspected are many, but the number of prosecutions and number of cases registered are very few. Under the Beedi and Cigar Workers Employment Act 1966, the nuber of units inspected are 1386, but the number of prosecutions launched and the number of convictions and also the amount fined is nil. Sameu is the position with respect to the Maternity Benefit Act and also the Inter-State Labour Act.

There are many acts inspections are made, but in no cases prosectution or convictions are there, Like wise, there is lot of delay in referring the cases to the Labout Court. I will cite an example. From Belgaum itself from 1982, the no. of cases of workmen of the Management of Inder Steel Mining and Costing which was filed for Concilitation on 16-8-1989, The workmen of Management of Rugna Seva Mandal which was filed on 11-12-1990 and the workmen of Arani Weaving Works filed in 1990 are pending there are many cases, which were referred to the Labour Secretary for referring to Labour Court. There is lot of delay and therefore the workers of Belgaum City and there union leaders are pressing very hard for referring these cases to the Labour Court. When a Unit has to prosecute a Management, then permission has to be given by the Labour Secretary.

There are many examples where permission for prosecution is delayed. For example, in case of Rugna Seva Mandal, even when the Assistant Labour Commissioner and the Deputy Labour Commissioner have conciliated the cases for many times, and the Management is not ready. Even under Section 33 of the Industrial Disputes Act 1947, permission for prosecution for the Management of Rugna Seva Mandal and may managements was not given by the Secertary. I therefore request the Hon'ble Labour Minister to look into this matter.

I would like to speak a few words about the bonded labour eventhough the same is not in the purview of the Labour Department.. In Belgaum Division,. eventhough there are Deputy Labour Commissioners and Assistant Labour Commissioners and Bonded labour is found no action has been taken. In this connection, representation was also given to the Labour Commissioner

and the Labour Minister. Of course, it is concerned with the Revenue Department , and the Home Department. But they do not know as to what is the abolition of Bonded Labour Act. Even the Deputy Commissioner and the Assistant Commisssioner do not know as to what is the Bonded Labour Act. I therefore request the Labour Department to look into the matter, because it is the first case of the bonded labour being practised and therfore if that is prosectuted. then it will be in best interest of the laboure who are coming from outside the State and also within the State. In this connection the "Soshan Mukti Dal" has also given a representation for the bonded labour practised in Modern Steel and Wire Products, Nowge in Belgaum Taluka and a complaint has been lodged by Soshan Mukti Dal, but still no case is booked as such bonded labour practice is going on there. Then I would mention about the non-inplementation of Minimum wages in clubs. In your report. you have stated about the implementation of minimum wages and other things, but still in the Belgum Social Club and Kreeda Bhavan, Wherein the Deputy Commissioner is the President of Belgaum club and Superintendent of Police is the Secretary, minimum wages is not being given to the workers. This is the position where the highest officers of the District are the President and the Secretary.

Since they are the highest officers, they do not listen to your Labour Department. In all these clubs namely Belgaum Club, Social Club and Kreeda Bhavan, where the highest officers are the President and the Secretary, Minimum Wage Act is not being impelemented. Similarly what happens in Municipalities and P.W.D. you know the whole story.Where highest officers of the District are involved as President and Secretary to prosecute them is very difficult because the permission of the Governor is required. I there fore, request you to kindly look in to these matters and do the needful.

Furhter, in the report of the Department of Factories and Boilers you have stated that they have inspected the factories where women are working. Actually, there is a Supreme Court decision that women should not be made to work after 7 P.M. In my Constituency itself I will show you, not 1000 but 10,000 women are working even after 7 p.m. Whenever the Factories and Boilers department Inspectors comes for inspection in my contituency, he will inform the Management and issues instructions to them in advance so that not when he comes for inspection, women workers will not be there

after 7 P.M. on that particular day, therefore, in my constituency, women workers are always made to work after 7.P.M, Since the Union at Nipani is very strong do you know what the Management has done? They are shifting the factory to various places in Karnataka even to the villages, where the Labour Inspector, the Factory Inspector never visits. They just come there and make inpections. They do not know whether the factories make inspection. They do not know whether the factories are registered under the Shops and Establishments Act. There is a Contract Labour Act. Where the contractor has to register the names with the labour Officer and the Labour Inspector. If you visit the Sugar Factories in Karnataka, especially in Belgaum district, many contractors have not registered their names with the Labour Inspectors and there is no Muster Roll even. You can check up the position with all the Sugar factories, You know about the Sugar factory in Nipani where for the last five to six years agitation is going on, conciliation is done and there was a settlement reached. But the Management which is founded by your Government have terminated 300 to 400 workers and they are not ready to honour any settlement done by your officers.

I therefore, request you to kindly look in the these irregularities. Many of your officers do not know about these Contracts or Migration Labourers and Workers Act, because these acts are brought recently. I therefore, request the Hon'ble Minister to arrange some training camps for the officers where they could get all the Knowledge about the labour laws because many of the officers do not know even the labour laws. I therefore request the Hon'ble Minister to arrange for training camps for the officers also.

I want to make one suggestion to the Hon'ble Transport Minister. The Nipani Bus Depot and the Bus-Stand gives to the Government Rs. One crore profit year and the whole Chikodi taluk gives to the Government a profit of two to three crores per annum and the Government has sanctioned one new S.T. Depot and S.T.Stand at Nippani at a cost of Rs. 25/- lakhs and now the estimate has gone Rs. 40 lakhs. It is in your department pending for sanction. The Nipani is the entry point to the Karnataka and which gives to the Government crores of Rupees should be made attractive and a model bus-stand should be constructed. I therefore request the Hon'ble Minister to give all these facilities to this Depot. We are in the midst of Maharashtra and Karnataka. In fact in Sankeshwar, which is the constituency of the Hon'ble

Minister for Irrigation, there are many villages like Shipur, Alur, and all these villages are connected with only Maharashtra buses and not a single bus of Karnataka State goes there. When the Hon'ble Minister was an M.L.A., and when I was a social worker, we were demanding that from Sankeshwar and Nipani, there should be many buses to these because many students are coming from Sankeshwar and Nipani. I therefore request the Hon'ble Minister to please start the buses from Nipani and Sankeshwar to these villages which are on the border of the Karnataka. Therefore, I request the Hon'ble Minister to give all the facilities to these depots which are giving crores of profit to the Government. With these words, I thank the Chair, for having given me this opportunity to speak.

6.45 ಪಿ.ಎಂ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಭದ್ರಾ ಜಲಾಶಯದ ಬಲಭಾಗದ ನಾಲೆ ಒಡೆದು ಹೋಗಿ ಲಕ್ಷಾಂತರ ಜನ ರೈತರಿಗೆ ತೊಂದರೆಯಾಗಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಒಂದು ಹೇಳಿಕೆ ಕೊಡಲಿ. ಇದು ಇವತ್ತಿನ ದಿವಸ ಪತ್ರಿಕೆಯಲ್ಲಿ ಹಾಗೂ ಪ್ರದೇಶ ಸಮಾಚಾರದಲ್ಲಿ ಬರೆದಿದ್ದರೆ, ಅಲ್ಲಿನ ರೈತರಿಗೆ ತಂದರೆಯಾಗುತ್ತಿದೆ. ದಯಮಾಡಿ, ಮಂತ್ರಿಗಳು ಹೇಳಿಕೆ ಕೊಡಲಿ, ನಿಲುವಳಿ ಸೂಚನೆ ನಾವು ಪ್ರಸ್ತಾಪಕ್ಕೆ ಕಳುಹಿಸಿದ್ದೇವೆ. ಇದು ಅತ್ಯಂತ ಪ್ರಮುಖವಾದ ವಿಚಾರ. ಮಾನ್ಯ ಮಂತ್ರಿಗಳೂ ಸ್ಟೇಟ್‌ಮೆಂಟ್ ಮಾಡುವುದಕ್ಕೆ ತಯಾರಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು : ಈ ಚರ್ಚೆ ಮುಗಿದ ಮೇಲೆ ಸ್ಟೇಟ್‌ಮೆಂಟ್ ಕೊಡಿಸೋಣ. ದಯಮಾಡಿ ಕುಳಿತುಕೊಳ್ಳಿ. ಇನ್ನು ಸದಸ್ಯರು ಮಾತನಾಡಿದ ಮೇಲೆ, ಸ್ಟೇಟ್‌ಮೆಂಟ್ ಮಾಡುತ್ತಾರೆ. ಈ ಚರ್ಚೆ ಮುಗಿದ ಕೂಡಲೇ ಮಾನ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುತ್ತಾರೆ.

+ ಶ್ರೀ ಬಾಬುರಾವ್ ಚವಾಣ್ : (ಶಹಬಾದ್) : ಮಾನ್ಯ ಉಪಾಧ್ಯಕ್ಷರೇ, ತಮಗೆ ಗೊತ್ತು. ಹೈದರಾಬಾದ್ ಕರ್ನಾಟಕ ಜಿಲ್ಲೆಗಳಾದ ಬೀದರ್, ಗುಲ್ಬರ್ಗಾ, ರಾಮಚೂರು ಈ ಜಿಲ್ಲೆಗಳಲ್ಲಿ ಬಸ್ಸಿನ ಸೌಕರ್ಯ ಹೇಗಿದೆ ಎಂಬುದನ್ನು ಸುಮಾರು ಶಾಸಕರು, ಮಂತ್ರಿಗಳೂ ನೋಡಿದ್ದಾರೆಂದು ಮನವರಿಕೆ ಮಾಡಿಕೊಳ್ಳುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಬಸ್ಸುಗಳು ಸರಿಯಾದ ವೇಳೆಯಲ್ಲಿ ಹೊರಡುವುದಿಲ್ಲ. ಇದು ತಮಗೂ ಗೊತ್ತಿರಬಹುದು. ಹಿಂದೆ ನಾವು ನೋಡಿದ ಗುಲ್ಬರ್ಗಾ ಜಿಲ್ಲೆಯ ಘಟನೆ ಏನೆಂದರೆ ಇಲ್ಲಿ ಬಂಗಾರ ಕಳ್ಳತನವಾಗುತ್ತದೆ. ಬೆಳ್ಳಿ ಕಳ್ಳತನವಾಗುತ್ತದೆ. ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ ಬಸ್ಸು ಕೂಡ ಕಳ್ಳತನವಾದ ಘಟನೆ ಬಹುಶಃ ಸರ್ಕಾರದ ಗಮನದಲ್ಲಿದೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ರಾತ್ರಿಯಾರೋ ಬಂದು ಬಸ್ಸನ್ನು ಹೈದರಾಬಾದ್‌ಗೆ ತೆಗೆದುಕೊಂಡು ಹೋಗಿ ಮಾರಿ ಬಿಟ್ಟರು ಎಂಬ ಘಟನೆ ಕೂಡ ಡಿಪಾರ್ಟ್‌ಮೆಂಟ್‌ನಲ್ಲಿ ದಾಖಲೆಯಲ್ಲಿದೆ. ಒಂದು ಹಳ್ಳಿಯಿಂದ ಜಿಲ್ಲೆಗೆ ಬರಬೇಕಾದರೆ ಬಸ್ಸಿನ ಸೌಕರ್ಯ ಸರಿಯಾದ ರೀತಿಯಲ್ಲಿಇಲ್ಲ. ನಾವು ಸಂಬಂಧಪಟ್ಟ ಇಲಾಖೆಗೆ ಪತ್ರ ಬರೆದು ಕೇಳಿದರೂ ಈ ಬಗ್ಗೆ ಉತ್ತರ ಕೊಡುವುದಿಲ್ಲ. ಸನ್ಮಾನ್ಯ ಸಾರಿಗೆ ಮಂತ್ರಿಗಳು ಈ

ಕಡೆ ಲಕ್ಷ್ಯ ಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ನಾವು ಲಿಖಿತಕ ರೂಪದಲ್ಲಿ ಇಲಾಖೆಗೆ ತಿಳಿಸಿದರೂ, ಇಂತಹ ಊರಿಗೆ ಬಸ್ ಬರುತ್ತಿಲ್ಲ, ಇಂತಹ ಊರಿಗೆ ಬಸ್ ಕೊಡಿ ಎಂದು ಕೇಳಿದರೆ, ಇಲಾಖೆಯಿಂದ ನಮಗೆ ಉತ್ತರವೇ ಸಿಗುವುದಿಲ್ಲ. ಮಾನ್ಯ ಮಂತ್ರಿಗಳಿಗೂ ಕೂಡ ಲಿಖಿತ ರೂಪದಲ್ಲಿ ಬರೆದುಕಳುಹಿಸಿದ್ದೇನೆ. ಅವರಿಂದಲೂ ನಮಗೆ ಉತ್ತರ ಬಂದಿಲ್ಲ. ಆದರೆ, ಈ ಇಲಾಖೆ ಒಂದು ವೇಳೆ ಇದ್ದರೂ, ಸಂಬಂಧ ಪಟ್ಟ ಮಂತ್ರಿಗಳು, ಸಂಬಂಧಪಟ್ಟ ಸೆಕ್ರಟರಿಯವರು, ಡಿವಿಜನಲ್ ಕಂಟ್ರೋಲರ್ ಈ ಆಡಳಿತ ಮಂಡಳಿ ಏನಿದೆ, ಇವರಿಗೆ ಸಂಬಂಧಪಟ್ಟದ್ದನ್ನು ಕೇಳುತ್ತಾರೆಯೇ ವಿನಹ ಬೇರೆ ಯಾರು ಹೇಳಿದ್ದನ್ನೂ ಕೇಳುವುದಿಲ್ಲ. ಶಾಸಕರು ಪತ್ರ ಕೊಟ್ಟರೆ, ಅವರು ಗಮನವನ್ನು ಕೊಡುವುದಿಲ್ಲ. ಇದು ನಿಜವಾದ ಪರಿಸ್ಥಿತಿ. ನಾನು ಸಾರಿಗೆ ಮಂತ್ರಿಗಳಲ್ಲಿ ಕಳಕಳಿಯಿಂದ ಕೇಳುತ್ತಿದ್ದೇನೆ. ಮಾನ್ಯ ಮಂತ್ರಿಗಳು ಈ ಕಡೆ ಅಂದರೆ ಗುಲ್ಬರ್ಗಾ ಜಿಲ್ಲೆಯ ಕಡೆ ಲಕ್ಷ್ಯ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ನಾವು ಒಂದು ಪತ್ರ ಬರೆದರೂ ನಮಗೆ ಉತ್ತರ ಸಿಕ್ಕುವುದಿಲ್ಲ. ನಾನು ತಮಗೂ ಪತ್ರ ಬರೆದಿದ್ದೇನೆ. ಇದುವರೆಗೂ ಉತ್ತರ ಕೊಟ್ಟಿಲ್ಲ. ಮೇಲಾಗಿ ಅಲ್ಲಿ ಡಿವಿಜನಲ್ ಕಂಟ್ರೋಲರ್ ಕಟ್ಟಿ ಎಂಬುವರು ಇದ್ದಾರೆ, ಅಧಿಕಾರಿಗಳು ಇದ್ದಾರೆ, ಅವರಿಗೆ ಸುಮಾರು ಸಾರಿಪತ್ರ ಬರೆದು ಕಳುಹಿಸಿದ್ದೇನೆ. ಇಂತಹ ಊರಿಗೆ ಬಸ್ ಹಾಕಿ ಎಂದು ಹೇಳಿದರೂ ಅವರು ಕಿವಿಯಲ್ಲಿ ಹಾಕಿಕೊಳ್ಳುವುದಿಲ್ಲ. ಅವರಿಗೆ ಏನಾಗಿದೆಯೋ ನನಗೆ ಅರ್ಥವಾಗುತ್ತಿಲ್ಲ. ಅವರು ಏಕೆ ಉತ್ತರ ಕೊಡುವುದಿಲ್ಲ, ಏಕೆಂದರೆ ಶಾಸಕರಿಗೆ ಇಷ್ಟೊಂದು ಉದಾಸೀನ ಮಾಡುತ್ತಾರೆ, ಏನು ಕಾರಣ? ಶಾಸಕರ ಸಭೆಯಗಳಲ್ಲಿ ಅಥವಾ ತಾಲ್ಲೂಕು ಪಂಚಾಯ್ತಿ ಸಭೆಗಳಲ್ಲಿ ಕೆ.ಎಸ್.ಆರ್.ಟಿ.ಸಿ ಅಧಿಕಾರಿಗಳನ್ನು ಕರೆಸಿ, ಪುಣ್ಯಾತ್ಮರೇ ಯಾವ ಕಡೆ ಬಸ್ ಓಡಿಸುತ್ತಿದ್ದೀರಿ. ಯಾವ ರೂಟಿಗೆ ಓಡಿಸುತ್ತಿದ್ದೀರಿ, ಹೇಗೆ ಓಡಿಸುತ್ತಿದ್ದೀರಿ ದಯಮಾಡಿ ಶಾಸಕರ ಗಮನಕ್ಕೆ ತನ್ನಿ ಎಂದು ಹೇಳಿದರೂ, ತರುವುದಿಲ್ಲ. ಆ ಅಧಿಕಾರಿಗಳ ಪತ್ರವೂ ಇಲ್ಲಿಯವರೆಗೆ ಸಿಕ್ಕಿಲ್ಲ.

ಅದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡಿ ಹೇಳುವುದೇನೆಂದರೆ, ಶಾಸಕರನ್ನಾಗಲೀ, ಚುನಾಯಿತ ಪ್ರತಿನಿಧಿಗಳನ್ನಾಗಲೀ ಎರಡು ತಿಂಗಳಿಗೊಮ್ಮೆ ಒಂದು ತಿಂಗಳಿಗೊಮ್ಮೆ ಸಂಬಂಧಪಟ್ಟ ಅಧಿಕಾರಿಗಳು ಭೇಟಿ ಮಾಡಿ, ನಮ್ಮನಡುವೆ ಕುಳಿತು ಮಾತನಾಡಬೇಕು. ಮಾತನಾಡತಕ್ಕ ಹವ್ಯಾಸ ಅವರಲ್ಲಿ ಇಲ್ಲ. ಏತಕ್ಕೆ ನಿಮ್ಮ ಡಿಪಾರ್ಟ್‌ಮೆಂಟ್‌ನವರು ನಮ್ಮನ್ನು ಇನ್‌ಕ್ಲೂಡ್ ಮಾಡಿಕೊಳ್ಳದೆ ಇಂಡಿಪೆಂಡೆಂಟ್ ಆಗಿ ಡೀಲ್ ಮಾಡುತ್ತಾರೋ ಗೊತ್ತಾಗುತ್ತಿಲ್ಲ. ನಮ್ಮ ಸಂಬಂಧವನ್ನೇ ತೆಗೆದುಕೊಳ್ಳುವುದಿಲ್ಲ. ಬಸ್‌ನ ವಿಷಯ ಹೇಳುವುದಕ್ಕೆ ಕಚೇರಿಗೆ ಹೋದರೆ ಲಕ್ಷ್ಯ ಕೊಡುವುದಿಲ್ಲ. ಅದಕ್ಕಾಗಿ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೆಂದರೆ, ತಾಲೋಕ್ ಪಂಚಾಯತ್ ಸಮಿತ ಮಿಂಟಿಂಗ್ ನಲ್ಲಿ ನಿಮ್ಮ ಅಧಿಕಾರಿಗಳು ಬರಬೇಕು. ಸಮಿತಿಗಳಿಗೆ ಕ್ಲರ್ಕ್ ಗೋ ಯಾರಿಗೋ ಕಳುಹಿಸಿಕೊಡುತ್ತಾರೆ. ನಾವು ಯಾರಿಗೆ ಕೇಳಬೇಕು. ಒಂದು ಹಳ್ಳಿಗೆ ಬಸ್ ಬೇಕಾದರೆ ಸಂಬಂಧಪಟ್ಟ ಅಧಿಕಾರಿಯನ್ನಲ್ಲದೆ ಇನ್ನನು ಯಾರನ್ನು ಕೇಳಬೇಕು. ಡಿಪೋಗೆಹೋಗಿ ನೋಡಿದರೆ, ಎಲ್ಲಾ ಬಸ್‌ಗಳೂ ಒಂದೇ ಕಡೆ ಹೋಗುತ್ತದೆ. ಹೋಗಿದ್ದ ಕಡೆಗೇ ಹೋಗುತ್ತೇನೆ ಹೋಗದೇ ಇದ್ದ ಕಡೆಗೆ ಬಸ್ಸೇ ಹೋಗುವುದಿಲ್ಲ. ಅದಕ್ಕೋಸ್ಕರ ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ, ಆಡಳಿತವನ್ನು ಚುರುಕುಗೊಳಿಸುವತ್ತ ಸರಿಯದ ಲಕ್ಷ್ಯ ಕೊಡಿ. ಅಧಿಕಾರಿಗಳು ಶಾಸಕರ ಜೊತೆ ಸೇರಿಕೊಂಡು ಬಸ್ ರೂಟ್ಸ್‌ಗಳ ರೂಪು ರೇಷೆಗಳನ್ನು ಸರಿಯಾಗಿ ವಿಚಾರ ಮಾಡಿ ತೆಗೆದುಕೊಳ್ಳುವಂತೆ ಆದೇಶ ಕೊಡಬೇಕೆಂದು ಒತ್ತಾಯ ಮಾಡಿ ಹೇಳುತ್ತಿದ್ದೇನೆ. ಇನ್ನೊಂದು ವಿಷಯ ಎಂದರೆ ಡ್ರೈವರ್ಸ್ ಮತ್ತು ಕಂಡಕ್ಟರ್ಸ್‌ದು. ಎಷ್ಟೋ ಜನ ಡ್ರೈವರ್ಸ್ ಮತ್ತು ಕಂಡಕ್ಟರ್ಸ್

ಗಳನ್ನು ನೋಡಿದ್ದೇವೆ. ಕುಡಿತದ ಅಮಲಿನಲ್ಲಿ ಗಾಡಿ ಓಡಿಸುತ್ತಾರೆ. ಇದರ ಬಗ್ಗೆ ಸುಮಾರು ಸಲ ಹೇಳಿದ್ದೇನೆ. ಇಲ್ಲ ಯಾರೂ ಕುಡಿಯುವುದಿಲ್ಲ. ಎಂದು ಹೇಳಿಬಿಡುತ್ತಾರೆ. ನಾನು ಕಣ್ಣಾರೆ ನೋಡಿರುತ್ತೇನೆ. ಇಂತಹ ಡ್ರೈವರ್ಸ್ ಮತ್ತು ಕಂಡಕ್ಟರ್ಸ್ ಇದ್ದಾರೆ. ಇವರ ಮೇಲೆ ಏನಾದರೂ ಮಾಡಿ ಕಂಟ್ರೋಲ್ ಇಟ್ಟುಕೊಂಡು, ಡ್ರೈವರ್ಸ್ ಅಥವಾ ಕಂಡಕ್ಟರ್ಸ್ ಕುಡಿದರೆ ಅವರನ್ನು ಇಮ್ಮೀಡಿಯಟ್ ಆಗಿ ಸಸ್ಪೆಂಡ್ ಮಾಡುವುದಕ್ಕೆ ವಿಶೇಷ ದಳ ಮಾಡಬೇಕು. ನಿಮ್ಮ ಅಧಿಕಾರಿಗಳಿಗೆ ಕುಡಿದಿರುತ್ತಾರೆ. ಎಂಬುದು ಗೊತ್ತಿರುತ್ತದೆ. ಆದರೆ ನಿಮ್ಮ ಅಧಿಕಾರಿಗಳು ಆಕ್ಷನ್ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ ಕುಡಿಯುವಂತಹ ಡ್ರೈವರ್ಸ್ ಮತ್ತು ಕಂಡಕ್ಟರ್ಸನ್ನು ನೋಡಿದ ತಕ್ಷಣ ನಿಮ್ಮ ಅಧಿಕಾರಿಗಳು ಆ್ಯಕ್ಷನ್ ತೆಗೆದುಕೊಳ್ಳಬೇಕಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇನ್ನು ಕೆಲವು ಡ್ರೈವರ್ಸ್‌ಗಳು ಪ್ರಯಾಣಿಕರನ್ನು ಬಸ್ ಕ್ಯಾಬಿನ್‌ನಲ್ಲಿ ಕೂರಿಸಿಕೊಂಡು ಲಗೇದ್ ಹಾಕಿಕೊಂಡು ಬಸ್ಸನ್ನು ಓಡಿಸುತ್ತಾರೆ.

ಕಾನೂನಿನ ಚೌಕಟ್ಟಿನಲ್ಲಿ ಕ್ಯಾಬಿನ್ ಒಳಗಡೆ ಪ್ರಯಾಣಿಕರನ್ನು ಕೂರಿಸಿಕೊಳ್ಳುವ ಹಾಗೆ ಇಲ್ಲ. ಆದರೆ ಡ್ರೈವರ್ಸ್ ಏನೋ ಆಸೆಯಿಂದ ಪ್ರಯಾಣಿಕರನ್ನು ಒಳಗಡೆ ಕೂರಿಸಿಕೊಳ್ಳುತ್ತಾರೆ. ಈ ರೀತಿ ಕ್ಯಾಬಿನ್ ಒಳಗಡೆ ಪ್ರಯಾಣಿಕರನ್ನು ಕೂಡಿಸಿಕೊಂಡು ಬಸ್ ನಡೆಸುವುದನ್ನು ತಪ್ಪಿಸಬೇಕೆಂದು ಹೇಳುತ್ತೇನೆ. ಇನ್ನೊಂದು ವಿಷಯ. ನಮ್ಮ ಮತ ಕ್ಷೇತ್ರದಲ್ಲಿ ಫರ್‌ಹತಾಬಾದ್ ಎಂದು ಒಂದು ಇಂಟೀರಿಯರ್ ಪ್ಲೇಸ್ ಇದೆ. ಆ ಇಂಟೀರಿಯರ್ ಪ್ಲೇಸ್‌ಗೆ ಬಸ್ ಹೋಯಿತು ಎಂದರೆ, ಯಾರೂ ಸಹ ಅಲ್ಲಿ ಇನ್‌ಸ್ಪಕ್ಷನ್ ಮಾಡುವುದಕ್ಕೆ ಬರುವ ಹಾಗೆ ಇಲ್ಲ. ಅಲ್ಲಿ ಎದುರುಗಡೆಯಿಂದ ಬರುವುದಕ್ಕೆ ಸಾಧ್ಯ ಇಲ್ಲ. ಏತಕ್ಕೆಂದರೆ, ಸುತ್ತಲೂ ಭೀಮಾ ನದಿ ಇರುವುದರಿಂದ, ಎದುರುಗಡೆಯಿಂದ ಬರುವುದಕ್ಕೆ ಹಾದಿ ಇಲ್ಲ. ಹೋದರೆ, ಈ ಕಡೆಯಿಂದಲೇ ಹೋಗಬೇಕು.ಒಂದೇ ಹಾದಿ ಇದೆ. ಬಸ್ ಒಳಗಡೆ ಹೋಯಿತು ಎಂದರೆ ಫರ್‌ಹತಾಬಾದ್‌ಗೆ ಹೋಗುವುವರೆಗೆ ಸುಮಾರು 40ಹಳ್ಳಿಗಳಿಗೆ ಹೋಗುವ ಪ್ರಯಾಣಿಕರಿಗೆ ಕಂಡಕ್ಟರ್ ಟಿಕೇಟ್ ಕೊಡುವುದಿಲ್ಲ. ಇನ್‌ಸ್ಪೆಕ್ಷನ್ ಮಾಡುವುದಕ್ಕೆ ಯಾರೂ ಬರುವುದಿಲ್ಲ ಎಂದು ಗೊತ್ತು. ಕಾರಣ ಆ ಕಡೆಯಿಂದ ಬರುವುದಕ್ಕೆ ಹಾದಿ ಇಲ್ಲ. ಬಂದರೆ ಬ್ಯಾಕ್ ಸೈಡ್‌ನಿಂದಲೇ ಬರಬೇಕು. ಬ್ಯಾಕ್ ಸೈಡ್‌ನಿಂದ ಇನ್‌ಸ್ಪೆಕ್ಷನ್ ಮಾಡುವುದಕ್ಕೆ ಬಂದರೆ ಚಕಚಕ ಎಂದು ಹರಿದು ಟಿಕೆಟ್ ಕೊಡುತ್ತಾರೆ.

ಇಂತಹ ಪರಿಸ್ಥಿತಿ ನನ್ನ ಮತಕ್ಷೇತ್ರದ ಫರ್‌ಹತಾಬಾದ್ ಕಡೆ ಇದೆ. ಫರ್‌ಹತಾಬಾದ್ ರೂಟ್‌ನಲ್ಲಿ ಇನ್ನೊಂದು ಇದೆ. ಆ ಫರ್‌ಹತಾಬಾದ್ ರೆವಿನ್ಯೂ ಸರ್ಕಲ್‌ನಲ್ಲಿ ಇರತಕ್ಕಂಥ ಡ್ರೈವರ್ಸ್ ಅಥವಾ ಕಂಡಕ್ಟರ್ಸ ಅದೇ ಸರ್ಕಲ್‌ನಲ್ಲಿರುವ ಪ್ಲೇಸಸ್‌ಗೆ ಬಸ್ ಓಡಿಸುತ್ತಿದ್ದಾರೆ. ಆ ಭಾಗದಲ್ಲಿರತಕ್ಕಂಥ ಹಳ್ಳಿಗಳ ಡ್ರೈವರ್ಸ್ ಕಂಡಕ್ಟರ್ಸ್ ಗೆ, ಆ ಕಡೆ ರೂಟಗೆ ಹಾಕಬೇಡಿ ಎಂದು ಹೇಳಿದರೂ ಸಹ ಪುನಃ ಅವರು ಹೇಗೋ ಮ್ಯಾನಿಪ್ಯುಲೇಟ್ ಮಾಡಿಕೊಂಡು ಆ ಕಡಗೆ ಡ್ಯೂಟಿ ಹಾಕಿಕೊಂಡು ಹೋಗುತ್ತಾರೆ. ನಾನು ಇದರ ಬಗ್ಗೆ ಡಿವಿಜನಲ್ ಕಂಟೋಲರ್ ಕಟ್ಟಿಯವರಿಗೆ ಹೇಳಿದ್ದೆ. ಯಾರು ತಮ್ಮ ಊರಿನ ಡ್ರೈವರ್ಸ್ ಕಂಡಕ್ಟರ್ಸ್ ಇರುತ್ತಾರೆ. ಅವರಿಗೆ ಆ ಊರಿಗೆ ಹಾಕಬಾರದೆಂದು ಕಾನೂನನ್ನು ಪಾಸ್ ಮಾಡಿ, ಅದನ್ನು ಡಿಪಾರ್ಟ್‌ಮೆಂಟಿಗೆ ಕಳುಹಿಸಿಕೊಡಬೇಕೆಂಬ ಸಲಹೆಯನ್ನು ತಮ್ಮೆದುರು ಇಡುತ್ತಿದ್ದೇನೆ. ಇನ್ನೊಂದು ಹೇಳಬೇಕೆಂದರೆ, ನಮ್ಮ ಡಿವಿಜನಲ್ ಕಂಟ್ರೋಲರ್ ಆಫೀಸ್ ಏನಿದೆ ಇದು ಗುಲ್ಬರ್ಗಾ ಹಾಗೂ ಬೀದರ್ ಜಿಲ್ಲೆಗೆ ಒಂದೇ ಇವೆ. ಇದು ಬೀದರ್ ಹಾಗೂ ಗುಲ್ಬರ್ಗಾ ಎರಡೂ ಜಿಲ್ಲೆಗೆ ಸಂಬಂಧ ಪಟ್ಟಿದೆ. ಬೇರೆ ಎಲ್ಲಾ ಜಿಲ್ಲೆಗಳಲ್ಲಿ ಇಂಡಿಪೆಂಡಂಟ್ ಆಫೀಸ್ ಕೊಟ್ಟಿದ್ದಾರೆ. ಆದರೆ ನಮ್ಮ ಬೀದರ್ ಹಾಗೂ ಗುಲ್ಬರ್ಗಾ ಎರಡೂ ಜಿಲ್ಲೆಗೆ ಒಂದೇ ಆಫೀಸ್ ಕೊಟ್ಟಿದ್ದಾರೆ. ಇದರಿಂದ ನಮಗೆ ಬಹಳ ತೊಂದರೆಯಾಗಿದೆ. ಡಿವಿಜನಲ್ ಕಂಟ್ರೋಲರ್

ರವರು ಇನ್‌ಸ್ಪೆಕ್ಷನ್‌ಗೆ ಹೋದರೆ ಇಲ್ಲಿಂದ ಬೀದರ್ ಜಿಲ್ಲೆಗೆ ಹೋಗಬೇಕು. ಬೀದರ್ ಜಿಲ್ಲೆಯಲ್ಲಿ ಏನಾದರೂ ಕೆಲಸ ಆಗಬೇಕಾದರೆ ಅವರು ಗುಲ್ಬರ್ಗಾಕ್ಕೆ ಬರಬೇಕು. ಓಡಾಡಬೇಕು ಜಿಲ್ಲೆಯಲ್ಲಿ ಬಸ್ ಕಂಟ್ರೋಲ್ ಮಾಡಬೇಕೆಂದರೆ ಗುಲ್ಬರ್ಗಾದಲ್ಲಿ ಕುಳಿತುಕೊಂಡು ಮಾಡಬೇಕು. ಇದರಿಂದ ಸರಿಯಾಗಿ ಬಸ್ ಕಂಟ್ರೋಲ್ ಮಾಡುವುದಕ್ಕೆ ಆಗುತ್ತಿಲ್ಲ. ಆದಕಾರಣ ಬೀದರ್ ಜಿಲ್ಲೆಗೆ ಸೆಪರೇಟ್ ಡಿವಿಜನಲ್ ಹೆಡ ಕ್ವಾರ್ಟರ್ಸ್ ಮಾಡಬೇಕೆಂದು ಕಳಕಳಿಯಿಂದ ಮಾನ್ಯಮಂತ್ರಿಗಳಲ್ಲಿ ಒತ್ತಾಯ ಮಾಡಿ ಕೇಳುತ್ತಿದ್ದೇನೆ.

ಇನ್ನು ಕೊನೆಯದಾಗಿ ಕೆ.ಎಸ್.ಆರ್.ಟಿ.ಸಿ. ಡಿಪಾರ್ಟ್‌ಮೆಂಟ್ ವಿಷಯದಲ್ಲಿ ಹೇಳಬೇಕೆಂದರೆ ಬಸ್ಸುಗಳು ಸರಿಯಾಗಿ ರೀತಿಯಲ್ಲಿ ಸರಿಯಾದ ವೇಳೆಯಲ್ಲಿ ನಡಸಲಿಕ್ಕೆ ಮಾನ್ಯ ಮಂತ್ರಿಗಳು ಸತತ ಪ್ರಯತ್ನ ಪಡಬೇಕೆಂದು ನಾನು ಕಳಿಕಳಿಯಿಂದ ಕೇಳಿಕೊಳ್ಳುತ್ತೇನೆ. ಒಂದು ವೇಳೆ ತಮ್ಮ ಕೈಯಲ್ಲಿ ಆಗುವುದಿಲ್ಲವೆಂದಾದರೆ ಸರಿಯಾಗಿ ಓಡಿಸಲಿಕ್ಕೆ ನ್ಯಾಷನಲೈಜ್ ಮಾಡಲಿಕ್ಕ ತಾವು ಹೊರಟಿದ್ದೀರಿ. ನ್ಯಾಷನಲೈಜ್ ಮಾಡುತ್ತೇವೆ. ಎಂದು ಹೇಳುತ್ತಿದ್ದೀರಿ. ಆದರೆ ಸರಿಯಾಗಿ ಬಸ್ಸುಗಳನ್ನು ಓಡಿಸಲಿಕ್ಕೆ ನಿಮ್ಮ ಕೈಯಲ್ಲಿ ಆಗದಿದ್ದರೆ ಪ್ರೈವೇಟ್‌ನವರಿಗೆ ಕೊಟ್ಟು ಬಿಡಿ. ಅವರು ಆರಾಮವಾಗಿ ಬಸ್ಸುಗಳನ್ನು ಓಡಿಸುತ್ತಾರೆ. ಕರೆಕ್ಟ್ ಟೈಮ್‌ಗೆ ಅವರು 8 ಗಂಟೆಗೆ ಬಸ್ಸು ಬರುತ್ತದೆಂದರೆ 8 ಗಂಟೆಗೆ ಬಸ್ಸು ಬರುತ್ತದೆ. ನಮ್ಮ ಬಸ್ಸು 8 ಗಂಟೆಗೆ ಅಂದ್ರೆ 10 ಗಂಟೆ ಆದರೂ ಬರುವುದಿಲ್ಲ. ಬಸ್ ಸ್ಟ್ಯಾಂಡ್‌ನಲ್ಲಿ ಜನ ಕಾದುಕಾದು ಸೋತು ಪುನಃ ಮನೆಗೆ ಹೋಗುತ್ತಾರೆ ವಿನಹಃ ಬಸ್ಸು ಮಾತ್ರ ಸರಿಯಾದ ಕಾಲಕ್ಕೆ ಬರುವುದಿಲ್ಲ. ಅದರಲ್ಲೂ ವಿಶೇಷವಾಗಿ ನಮ್ಮ ಹೈದ್ರಾಬಾದ್ ಕರ್ನಾಟಕ ಜಿಲ್ಲೆಗಳಲ್ಲಿ ಬಸ್ ಸೌಕರ್ಯ ಸರಿ ಇಲ್ಲವೆಂದು ತಮ್ಮ ಮೂಲಕ ಹೇಳಿ ಮಾನ್ಯ ಮಂತ್ರಿಗಳು ಈ ಕಡೆ ಜಾಸ್ತಿ ಲಕ್ಷ್ಯ ವಹಿಸಬೇಕೆಂದು ನಾನು ಹೇಳುತ್ತೇನೆ.

ಇನ್ನು ಫುಡ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುವುದಾದರೆ ನನ್ನ ಶಹಬಾದ್ ಮತ ಕ್ಷೇತ್ರದಲ್ಲಿ ವಾಡಿ ಮತ್ತು ಶಹಬಾದ್ ಪಟ್ಟಣದಲ್ಲಿ ಕಂಪ್ಲೀಟ್ ಆಗಿ ಲೇಬರ್ ಏರಿಯಾ ಇದೆ. ಇಲ್ಲಿ ಏನಾಗಿದೆ ಆದರೆ ಯಾರೋ ಕೆಲವು ಜನರಿಗೆ ನ್ಯಾಯ ಬೆಲೆ ಅಂಗಡಿಗಳ ಏಜನ್ಸಿಯನ್ನು ಕೊಟ್ಟಿದ್ದಾರೆ. ಅವರು ಈ ನ್ಯಾಯ ಬೆಲೆ ಅಂಗಡಿಗಳನ್ನು ಇವತ್ತಿಗೂ ನಡೆಸಿಕೊಂಡು ಬರುತ್ತಿದ್ದಾರೆ. ಅವರು ಏನು ಮಾಡುತ್ತಾರೆಂದರೆ ಅವರು ಯಾರಿಗೂ ಫುಡ್ ಗ್ರೈನ್ಸ್ ಕೊಡಲಿಕ್ಕೆ ರೆಡಿ ಇಲ್ಲ. ಅವರು ಏನು ಮಾಡಿದ್ದಾರೆಂದರೆ ಅಲ್ಲಿರುವ ಎಲ್ಲಾ ರೇಶನ್ ಕಾರ್ಡ್‌ಗಳನ್ನು ರಿನ್ಯೂವಲ್ ಮಾಡಬೇಕೆಂದು ಹೇಳಿ ತೆಗೆದಕೊಂಡು ಪಾಪ ಲೇಬರ್ ಜನಗಳಿಗೆ ಪುನಃ ವಾಪಸ್ಸ್ ಕೊಟ್ಟಿಲ್ಲ. ಅವರು ಏನು ಮಾಡಿದ್ದಾರೆಂದರೆ 400 ಕಾರ್ಡ್‌ಗಳನ್ನು ತೆಗೆದುಕೊಂಡು ಅದರಲ್ಲಿ 200 ಕಾರ್ಡಗಳನ್ನು ಹರಿದು ಹಾಕಿ ಇನ್ನು ಉಳಿದ 200 ಕಾರ್ಡಗಳನ್ನು ವಾಪಸ್ಸ್ ಕೊಟ್ಟಿದ್ದಾರೆ. ಅವರು 400 ಕಾರ್ಡ್‌ಗಳಿಗೂ ರೇಶನ್ ಎತ್ತಿದರೂ ಕೂಡ ಅವರು ಮೆಟೀರಿಯಲ್ಸ್ ಕೊಡತಕ್ಕಂಥಾದ್ದು ಕೇವಲ 150-200 ಜನರಿಗೆ ಮಾತ್ರ. ಅಲ್ಲಿ ಜನ ರೇಶನ್‌ಗಾಗಿ ತೊಂದರೇ ಪಡುತ್ತಿದ್ದಾರೆ. ಅವರಿಗೆ ಸಕ್ಕರೆ ಇಲ್ಲ ಫಾಟ್‌ಗ್ರೈನ್ಸ್ ಇಲ್ಲ, ನಾನು ಈ ಬಗ್ಗೆ ಸಂಬಂಧಪಟ್ಟ ಇಲಾಖೆ.

ಅಧಿಕಾರಿಗಳಿಗೆ ಬರೆದಿದ್ದೇನೆ ಇಲ್ಲಿಯವರೆಗೆ ರೇಶನ್ ಕಾರ್ಡ್ ಕೊಟ್ಟಿಲ್ಲ, ಅವರೆಲ್ಲಾ ಲೇಬರ್ಸ್ ಇದ್ದಾರೆ. ಶಹಬಾದ್ ಮತ್ತು ವಾಡಿ ಪಟ್ಟಣದಲ್ಲಿ ರೇಷನ್ ಕಾರ್ಡ್ ಕಾರ್ಡ್ ಕೊಡಲಿಕ್ಕೆ ಯೋಗ್ಯವಾದ ವ್ಯವಸ್ಥೆ ಮಾಡಿ ಕೊಡಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಇನ್ನು ನಾನು ಲೇಬರ್ ಡಿಪಾರ್ಟ್‌ಮೆಂಟ್ ಬಗ್ಗೆ ಮಾತನಾಡುವುದಾದರೆ ಕಾರ್ಮಿಕಸಂಘದಿಂದ ಬಂದಂತಹ ಶಾಸಕ ನಾನು. ನಮ್ಮ ಆಡಳಿತ ಮಂಡಲಿಯವರ ವರ್ತನೆ ಸರಿ ಇಲ್ಲ, ಯಾವ ಕಂಪನಿಗಳಲ್ಲಿ ಕಾರ್ಮಿಕ ಸಂಘಗಳು ಕೆಲಸ ಮಾಡುತ್ತಿವೆ ಯಾವ ಇಲಾಖೆಯಲ್ಲಿ ಕಾರ್ಮಿಕ ಸಂಘಗಳು ಕೆಲಸ

ಮಾಡಿ ಹುಮ್ಮಸ್ಸಿನಿಂದ ಮುಂದೆ ಬರುತ್ತಿವೆ. ಈ ಕಾರ್ಮಿಕ ಸಂಘಗಳಿಗೆ ಆಡಳಿತ ಮಂಡಲಿಯವರು ಪೋಲೀಸರ ಹೊಡೆತ, ಗೂಂಡಾಗಳಿಂದ ಹೊಡೆತ ತಿನ್ನಿಸಿ ಪ್ಯೂಲೆಯಲ್ಲಿ ಕೂರಿಸಿದ್ದಾರೆ. ಅಲ್ಲಿ ಯಾವ ಘಟನೆ ನಡೆಯುತ್ತದೆ. ಎನ್ನುವುದನ್ನು ನನ್ನ ಕಣ್ಣಿನಿಂದ ಕಂಡು ಬಂದಿದ್ದೇನೆ. ರಾಸಿ ಸಿಮೆಂಟ್ ಫ್ಯಾಕ್ಟರಿಯಲ್ಲಿ ಒಂದು ಘಟನೆ ನಡೆದಿದೆ. ಗುಲ್ಬರ್ಗ ಜಿಲ್ಲೆಯಲ್ಲಿ ರಾಸಿ ಸಿಮೆಂಟ್ ಫ್ಯಾಕ್ಟರಿಯ ಆಡಳಿತ ಮಂಡಲಿಯವರು ಮತ್ತು ನಮ್ಮ ಇಲಾಖೆಯ ಮ್ಯಾನೇಜ್‌ಮೆಂಟ್‌ನವರು ಏನು ಮಾಡಿದರೆಂದರೆ ಒಬ್ಬ ರೆಹಮಾನ್ ಎನ್ನುವ ಹುಡುಗನನ್ನು ಅಲ್ಲಿನ ಜಾಯಿಂಟ್ ಸೆಕ್ರೆಟರಿ, ಐರನ್, ಡಿವಿಜನ್, ಇವರು ಗೇಟ್‌ನಲ್ಲಿದ್ದ ಹುಡುಗನನ್ನು ಜೀಪ್‌ನಲ್ಲಿ ಕರೆದುಕೊಂಡು ಒಳಗಡೆ ಹೋಗಿ ಫ್ಯಾಕ್ಟರಿಯಲ್ಲಿ ಸರಿಯಾಗಿ ಒಡೆದು ಪೋಲೀಸ್ ಕೇಸ್ ಅವನ ಮೇಲೆ ಮಾಡಿದ್ದಾರೆ. ಅವನು ನಮಗೆ ಬೋಟ್‌ನಿಂದ ಹೊಡೆಯಲು ಬಂದ ಅಂತ ಉಲ್ಟ ಮಾಡಿ ಆ ಕಾರ್ಮಿಕನಿಗೆ ಹೊಡೆದು ಅವನ ಮೇಲೆ ಕೇಸ್ ಮಾಡಿದ್ದಾರೆ.

ಅವರೇನಾದರೂ ಸ್ಟ್ರೈಕ್ ಮೇಲೆ ಹೋದರೆ ನಿಮ್ಮ ಸ್ಟ್ರೈಕ್ ಇಲ್ಲಿಗಲ್ ಇದೆ ಎಂದು ಹೇಳಿ ಅಲ್ಲಿರತಕ್ಕಂಥ ಜನಗಳಿಗೆ ಮಿಸ್ ಗೈಡ್ ಮಾಡಿ, ಅಲ್ಲಿರುವ ಪುಂಡರನ್ನು ತರಿಸಿ ಹೊಡೆಸತಕ್ಕಂಥ ವೈಟಾಟಿಕೆ ನಮ್ಮ ಹೈದ್ರಾಬಾದ್ ಜಿಲ್ಲೆಗಳಲ್ಲಿರುವ ಇಂಡಸ್ಟ್ರಿಗಳಲ್ಲಿ ಬೆಳೆದು ಬಂದಿದೆ. ಈ ಬಗ್ಗೆ ನಮ್ಮ ಕಾರ್ಮಿಕ ಸಚಿವರು ಲಕ್ಷ್ಯ ಕೊಟ್ಟು ಇಂತಹ ಆಡಳಿತ ಮಂಡಲಿಯವರಿಗೆ ಒಂದು ಸರಿಯಾದ ಪಾಠ ಕಲಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತು ಸಿಮೆಂಟ್ ಫ್ಯಾಕ್ಟರಿಯಲ್ಲಿರತಕ್ಕಂಥ ಲೋಪದೋಷಗಳು ಏನಿವೆ ಅಂದರೆ ಫ್ಯಾಕ್ಟರಿಯಲ್ಲಿ ಏನು ನಡೆಯುತ್ತಿದೆ ಎಂದು ನಾನು ಕಣ್ಣಾರೆ ನೋಡಿದ್ದೇನೆ. ಅಲ್ಲಿ ಕಂಟ್ರಾಕ್ಟ್ ಸಿಸ್ಟಂ ಅಂತ ಇದೆ. ಸಿಮೆಂಟ್ ಫ್ಯಾಕ್ಟರಿಯಲ್ಲಿ ಕಾಂಟ್ರಾಕ್ಟ ಸಿಸ್ಟಂ ಮೇಲೆ ಕೆಲಸ ಮಾಡಿಸುತ್ತಾರೆ. ಅವರು ಅಲ್ಲಿರತಕ್ಕಂಥ ಲೇಬರ್ಸ್ ರಕ್ತ ಹೀರುತ್ತಾರೆ. ಆಡಳಿತ ಮಂಡಲಿಯವರು ಯಾವ ಕೆಲಸವನ್ನು ಕಾಂಟ್ರಾಕ್ಟ್ ಸಿಸ್ಟಂ ಮೇಲೆ ಕೊಡಬೇಕೆಂದರೆ 2-3 ದಿವಸ ಗಳಿಗೆ ಮಾತ್ರ ಕೊಡಬೇಕು. ಆದರೆ ಕಾಂಟ್ರಾಕ್ಟ್‌ಸಿಸ್ಟಂನಲ್ಲಿ ವರ್ಷಾನುಗಟ್ಟಲೆ ಮಾಡುತ್ತಾರೆ.

ಇದ್ಯಾವಾ ಕಾಂಟ್ರಾಕ್ಟ್ ಸಿಸ್ಟಂ? ಇದು ಅನ್ಯಾಯ ಅಲ್ಲವೇ? ಈ ಸಿಮೆಂಟ್ ಫ್ಯಾಕ್ಟರಿಯಲ್ಲಿ ವರ್ಷಾನುಗಟ್ಟಲೆ ಕಾಂಟ್ರಾಕ್ಟ್ ಸಿಸ್ಟಂ ಮೇಲೆ ಕೆಲಸ ಏತಕ್ಕೆ ಕರೆಯಬೇಕು. ಕಾಂಟ್ರಾಕ್ಟ್ ಆಡಳಿತ ಮಂಡಲಿಯವರು ಮತ್ತು ಇವರು ಸೇರಿ ಲೇಬರ್ಸ್‌ನ್ನು 500-600 ರೂಪಾಯಿಗಳಿಗೆ ದುಡಿಸಿಕೊಂಡು ಪಾಪ ಅವರ ರಕ್ತ ಹೀರುತ್ತಾರೆ. ಆದ್ದರಿಂದ ಈ ಕಾಂಟ್ರಾಕ್ಟ್ ಲೇಬರ್ ಸಿಸ್ಟಂ ಆ್ಯಕ್ಟನ್ನು ಅಬಾಲಿಶ್ ಮಾಡಿ ಪರ್ಮನೆಂಟ್ ಸಿಸ್ಟಂ ಮಾಡಬೇಕೆಂದು ನಾನು ಮಾನ್ಯ ಕಾರ್ಮಿಕ ಸಚಿವರಲ್ಲಿ ಒತ್ತಾಯ ಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತೇನೆ.

ಈ ಸಿಮೆಂಟ್ ಫ್ಯಾಕ್ಟರಿಗಳಲ್ಲಿ ಆಗತಕ್ಕ ಆಕ್ಸಿಡೆಂಟನ್ನು ನಾನು ಕಣ್ಣಾರೆ ಕಂಡಿದ್ದೇನೆ. ಸಿಮೆಂಟ್ ಫ್ಯಾಕ್ಟರಿಯಲ್ಲಿ ಆಕ್ಸಿಡೆಂಟ್ ಆದ ತಕ್ಷಣ ಆಡಳಿತ ಮಂಡಳಿವರು ಹಾಸ್ಪಟೆಲ್‌ಗೆ ತೆಗೆದುಕೊಂಡು ಹೋಗುತ್ತಾರೆ. ಹಾಸ್ಪಟಲ್‌ಗೆ ಹೋದ ತಕ್ಷಣ ಆ್ಯಕ್ಸಿಡಂಟ್ ಆದವನ ಮಿಸೆಸ್ ಬಂದ ಮೇಲೆ ಮಣ್ಣು ಮಾಡುವುದಕ್ಕೆ 10-20 ಸಾವಿರ ಕೊಡುತ್ತೇವೆಂದು ಹೇಳಿ ಎಲ್ಲಾ ಕಾಗದ ಪತ್ರಗಳ ಮೇಲೆ ಸೈನ್ ಮಾಡಿಕೊಂಡು ಮೋಸದ ಬಲೆಯಲ್ಲಿ ಅವರನ್ನು ಸಿಕ್ಕಿಸಿ ಆ್ಯಕ್ಸಿಡೆಂಡ್ ಆದಂಥ ಕೇಸ್‌ಗಳನ್ನು ಮುಚ್ಚಿಹಾಕುವುದಕ್ಕೆ ಪ್ರಯತ್ನ ಮಾಡುತ್ತಾರೆ ಎಷ್ಟೋ ಕೇಸುಗಳನ್ನು ಮುಚ್ಚಿದ್ದಾರೆ. ಇದರ ಬಗ್ಗೆ ಕೂಡಾ ಮಾನ್ಯ ಮಂತ್ರಿಗಳು ಲಕ್ಷ್ಯ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಸಿಮೆಂಟ್ ಫ್ಯಾಕ್ಟರಿಗಳ ಪ್ರೊಡಕ್ಷನ್ ಬಗ್ಗೆ ಹೇಳಬೇಕಾದರೆ, ಕೆಲವು ಕಂಪನಿಗಳಿಗೆ 1800 ಟನ್ ಪ್ರೊಡಕ್ಷನ್ ಗೆ ಲೈಸನ್ಸ್ ಕೊಟ್ಟಿರುತ್ತಾರೆ. ಅವರು ಡೈಲಿ 3 ಸಾವಿರ ಟನ್ ಸಿಮೆಂಟ್

ಪ್ರೊಡಕ್ಷನ್ ಮಾಡುತ್ತಾರೆ. ಇರತಕ್ಕಂಥ ಲೇಬರ್ಸ್‌ಗಳಿಂದಲೇ ಹೆಚ್ಚು ಪ್ರೊಡಕ್ಷನ್ ಮಾಡುತ್ತಾರೆ. 1800 ಟನ್ ಪ್ರೊಡಕ್ಷನ್ ಮಾಡಬೇಕಾದ ಕಡೆ 3 ಸಾವಿರ ಟನ್ ಪ್ರೊಡಕ್ಷನ್ ಮಾಡಿದರೆ ಲೇಬರರ್ಸ್‌ಗೆ ಬಹಳ ತೊಂದರೆಯಾಗುತ್ತದೆ. ಇದರ ಬಗ್ಗೆ ಕೂಡ ಮಾನ್ಯ ಮಂತ್ರಿಗಳು ವೆರಿಫಿಕೇಷನ್ ಮಾಡಬೇಕು. ಲೇಬರರ್ಸ್ ಸಂಖ್ಯೆ ಜಾಸ್ತಿ ಮಾಡಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಪೂರ್ವಕವಾಗಿ ಕೇಳುತ್ತಿದ್ದೇನೆ. ಇದರ ಜೊತೆಗೆ ಲೋಕಲ್ ಲೇಬರ್ಸ್‌ನ್ನು ಆಡಳಿತ ಮಂಡಳಿಯವರು ತೆಗೆದುಕೊಳ್ಳುತ್ತಿಲ್ಲ. ಲೋಕಲ್ ಜನರನ್ನು ಅಪಾಯಿಂಟ್ ಮೆಂಟ್ ಮಾಡಿಕೊಂಡರೆ ಅವರುಗಳು ಯೂನಿಯನ್ ಮಾಡಿಕೊಂಡು ತೊಂದರೆ ಯಾದಾಗ ಸ್ಟ್ರೈಕ್ ಮಾಡುತ್ತಾರೆಂದು ಅವರನ್ನು ನೇಮಕ ಮಾಡಿಕೊಳ್ಳದೆ, ಬೇರೆ ಸ್ಟೇಟ್ ನಿಂದ ಜನರನ್ನು ಕರೆದುಕೊಂಡು ಬಂದು ಅವರಿಗೆ ಬೋಗಸ್ ಸರ್ಟಿಫಿಕೇಟ್ ನ್ನು ಇಶ್ಯೂ ಮಾಡಿಸಿ, ಇವರೂ ಕರ್ನಾಟಕದವರೇ ಎಂದು ಅಪಾಯಿಂಟ್‌ಮಂಟ್ ಮಾಡಿಕೊಳ್ಳುತ್ತಿದ್ದಾರೆ. ಫ್ಯಾಕ್ಟರಿ ಸುತ್ತಮುತ್ತ ಇರತಕ್ಕಂಥ ಜನರಿಗೆ ಇವರು ಅಪಾಯಿಂಟ್ ಮೆಂಟ್ ಕೊಡುತ್ತಿಲ್ಲ.

ಇದರ ಬಗ್ಗೆ ದಾಖಲೆ ಕೂಡಾ ಇದೆ. ಕರ್ನಾಟಕದವರನ್ನೇ ನೇಮಕ ಮಾಡಿಕೊಳ್ಳಬೇಕೆಂದು ಗುಲ್ಬರ್ಗಾ ಜಿಲ್ಲೆಯ ಡೆಪ್ಯುಟಿ ಕಮಿಷನರ್ ರವರು ನೋಟೀಸ್ ಕೊಟ್ಟಿದ್ದರೂ ಅದನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಹಾಗೂ ಲೋಕಲ್ ಜನರಿಗೆ ಕೆಲಸ ಕೊಡುತ್ತಿಲ್ಲ. ಇದರ ಬಗ್ಗೆ ಕೂಡ ಮಾನ್ಯ ಲೇಬರ್ ಮಂತ್ರಿಗಳು ಗಮನ ಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಇನ್ನು ಕಂದಾಯ ಮಂತ್ರಿಗಳಲ್ಲಿ ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಲಂಬಾಣಿ ತಾಂಡಗಳಲ್ಲಿ 5 ನೂರು ಜನಸಂಖ್ಯೆಯುಳ್ಳ ತಾಂಡಗಳನ್ನು ರೆವಿನ್ಯೂ ಹಳ್ಳಿಗಳನ್ನಾಗಿ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ, ನಾನು ಕಳಕಳಿಯಿಂದ ಮಾನ್ಯ ಮಂತ್ರಿಗಳಲ್ಲಿ ಒತ್ತಾಯಪೂರ್ವಕವಾಗಿ ಹೇಳುವುದೇನೆಂದರೆ, ಲಂಬಾಣಿ ಮತ್ತು ಕೆಲವು ಊರುಗಳಲ್ಲಿ ಕೆಲವು ಒಡ್ಡರಕೇರಿಗಳು ಸುಮಾರು ವರ್ಷಗಳಿಂದ ಊರ ಹೊರಗೆ ಉಳಿದುಬಿಟ್ಟಿದೆ. ಆದುದರಿಂದ ದಯವಿಟ್ಟು ಇಂಥಾ ಲಂಬಾಣಿ ತಾಂಡಗಳು ಮತ್ತು ಒಡ್ಡರ ಕೇರಿಗಳನ್ನು ಪರಿಶೀಲಿಸಿ ಕನಿಷ್ಟ 200 ಪಾಪ್ಯುಲೇಷನ್ ಇರತಕ್ಕಂಥ ತಾಂಡಗಳನ್ನು ಕಂದಾಯ ಹಳ್ಳಿಗಳನ್ನಾಗಿ ಪರಿವರ್ತನೆ ಮಾಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಮಾನ್ಯ ಕಂದಾಯ ಮಂತ್ರಿಗಳಲ್ಲಿ ಕೇಳುತ್ತೇನೆ.

ಇನ್ನು ನಾಡ ಕಛೇರಿಗಳ ಬಗ್ಗೆ ಹೇಳುವುವಾದರೆ, ನಾವು ಕಛೇರಿಗಳಲ್ಲಿ ಅಧಿಕಾರಿಗಳು ಮತ್ತು ವಿಲೇಜ್ ಅಕೌಂಟ್ಸ್ ಸರಿಯಗಿ ಕೆಲಸ ಮಾಡುತ್ತಿಲ್ಲ. ಇದರ ಬಗ್ಗೆ ನಮಗೆ ಸಾಕಷ್ಟು ದೂರುಗಳು ಬಂದಿದೆ. ಇವನ್ನೂ ಕೂಡ ಮಾನ್ಯ ಮಂತ್ರಿಗಳು ಗಮನಿಸಬೇಕು. ಇನ್ನೊಂದು, ಗುಲ್ಬರ್ಗಾ ಜಿಲ್ಲೆಯಲ್ಲಿ ಆಣೆವಾರಿ ಮಾಡುವ ಬಗ್ಗೆ ನಾನು ಸುಮಾರು ಸಲ ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರಿಗೆ ಒತ್ತಾಯ ಪೂರ್ವಕವಾಗಿ ಹೇಳಿದ್ದೇನೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಆಣೆವಾರಿ 37 ಪರ್‌ಸೆಂಟ್‌ಗಿಂತ ಕಡಿಮೆ ಎಂದು ಡೆಪ್ಯುಟಿ ಕಮಿಷನರ್‌ರವರು ಡಿಕ್ಲೇರ್ ಮಾಡಿದ್ದಾರೆ. ಆದರೆ, ಸ್ಟ್ಯಾಟಿಸ್ಟಿಕ್ಸ್ ಡಿಪಾರ್ಟ್‌ಮೆಂಟಿನವರು ಬೋಗಸ್ ರೆಕಾರ್ಡ್ ಬಿಲ್ಡಪ್ ಮಾಡಿಕೊಂಡು ಅಲ್ಲಿರತಥ ಕ್ರಾಪ್ ಕಟಿಂಗ್ ಬಗ್ಗೆ ಸುಳ್ಳು ದಾಖಲೆಯನ್ನು ಜಮಾಯಿಸಿಕೊಂಡು ಒಳ್ಳೆಯ ಕ್ರಾಪ್ಸ್ ಎಂದು ರೆಕಾರ್ಡ ಮಾಡಿದ್ದಾರೆ. ಸ್ಟ್ಯಾಟಿಸ್ಟಿಕಲ್ ಡೈರೆಕ್ಟರ್ ರವರೆಗೆ ದಾಖಲೆಗಳನ್ನು ಜಮಾಯಿಸಿಕೊಂಡು ಒಳ್ಳೆಯ ಕ್ರಾಪ್ಸ್ ಎಂದು ರೆಕಾರ್ಡ್ ಮಾಡಿದ್ದಾರೆ. ಸ್ಟ್ಯಾಟಿಸ್ಟಿಕಲ್ ಡೈರೆಕ್ಟರ್‌ರವರಿಗೆ, ದಾಖಲೆಗಳನ್ನು ಕೊಡಿಯೆಂದು ಕೇಳಿದಾಗ ಅವರು ನನಗೆ ದಾಖಲೆಗಳನ್ನು ಕೊಡಲಿಕ್ಕೆ ರೆಡಿ ಇಲ್ಲ, ಸರ್ವೇ ನಂಬರುಗಳ ದಾಖಲೆ ಕೊಡಲಿಕ್ಕೆ ಅವರು ತಯಾರಿಲ್ಲ, ಅಲ್ಲಿ ಕೂಡಾ ನಾನು ವಿಚಾರ ಮಾಡಿದ್ದೇನೆ. ಸುಳ್ಳು ದಾಖಲೆಗಳಿಂದ ಆಣೆವಾರಿ ಮಾಡಿಕೊಂಡು

ಸೇವರ್ ಇಯರ್ ನಲ್ಲಿ 88-89 ರಲ್ಲಿ ಡೆಪ್ಯುಟಿ ಕಮಿಷನರ್ ರವರು ಕ್ರಾಪ್ಸ್ ಫೈಲ್ಯೂರ್ ಎಂದು ಕೊಟ್ಟಿದ್ದಾರೆ. ಆದ್ದರಿಂದ, ಗುಲ್ಬರ್ಗಾ ತಾಲ್ಲೂಕಿನ ಆಣೆವಾರಿಯನ್ನು ಡಿಕ್ಲೇರ್ ಮಾಡಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ.

ಉಪಾಧ್ಯಕ್ಷರು : ತಾವು ಜಾಗ್ರತೆ ಮುಗಿಸಬೇಕು.

ಶ್ರೀ ಬಾಬುರಾವ್ ಚೌವಾಣ್ : ಕೋ-ಆಪರೇಟಿವ್ ಸೊಸೈಟಿ ಬಗ್ಗೆ ಎರಡು ವಿಷಯ ಹೇಳಿ ಮುಗಿಸುತ್ತೇನೆ. ಸನ್ಮಾನ್ಯ ಅಧ್ಯಕ್ಷಣಿಯವರೆ, ಪಿ.ಎಲ್.ಡಿ. ಬ್ಯಾಂಕುಗಳಲ್ಲಿ ಹೆಚ್ಚು ಅವ್ಯವಹಾರ ನಡೆಯುತ್ತಿದೆ. ಪಿ.ಎಲ್.ಡಿ.ಬ್ಯಾಂಕ್ ನಲ್ಲಿರತಕ್ಕಂಥ ಜೀಪಿನ ಖರ್ಚು ಟೆಲಿಫೋನ್ ಬಿಲ್‌ನ್ನು ಸಖತ್ ಆಗಿ ಪಿ.ಎಲ್.ಡಿ ಬ್ಯಾಂಕ್‌ನ ಅಧ್ಯಕ್ಷರು, ಕಾರ್ಯದರ್ಶಿಗಳು ಮಾಡಿ ಸರ್ಕಾರದ ಮೇಲೆ ವೆಚ್ಚವನ್ನು ಹಾಕುತ್ತಿದ್ದಾರೆ. ಇನ್ನೂ ಒಂದು ವಿಷಯ. ಪಿ.ಎಲ್.ಡಿ. ಬ್ಯಾಂಕ್‌ನಲ್ಲಿರತಕ್ಕಂಥ ಲೋಪದೋಷಗಳೆಂದರೆ ಎಲೆಕ್ಷನ್ ಮೆಥೆಡ್ ಏನಿದೆ. ಆ ಮೆಥೆಡನ್ನು ಸ್ವಲ್ಪ ಬದಲಾವಣೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ. ಏಕೆಂದರೆ ಪಿ.ಎಲ್.ಡಿ. ಬ್ಯಾಂಕ್ ಅದು ಫ್ರೆಂಡ್ಸ್ ಟೈಪ್ ಎಲೆಕ್ಷನ್ ವಿತೌಟ್ ಸಿಂಬಲ್ ಇರತಕ್ಕಂಥ ಎಲೆಕ್ಷನ್ ಆದರೆ, ಇಲ್ಲಿ ಜಾತಿ ಸಂಘಟನೆ ಮಾಡಿಕೊಂಡು ಪಿ.ಎಲ್.ಡಿ. ಬ್ಯಾಂಕ್ ಎಲೆಕ್ಷನ್ ಆಗುತ್ತಿದೆ. ಇದನ್ನು ಮುರಿಯಬೇಕಾದರೆ ಯಾವ ರೀತಿ ಮಂಡಲ ಪಂಚಾಯಿತಿ ಎಲೆಕ್ಷನ್ ಅನ್ನು ಪಾರ್ಟಿ ಸಿಂಬಲ್ ಕೊಟ್ಟು ಮಾಡುತ್ತಿದ್ದೀರೋ ಅದೇ ರೀತಿ ಪಿ.ಎಲ್.ಡಿ. ಬ್ಯಾಂಕ್‌ಗೂ ಪಾರ್ಟಿ ಸಿಂಬಲ್ ಕೊಟ್ಟುಬಿಡಿ. ಏಕೆಂದರೆ, ಅದರಲ್ಲಿ ಜಗಳ ಆಡುತ್ತಾರೆ. ಅದರಲ್ಲಿ ಜಗಳ ಆಡುವುದಕ್ಕೆ ಚಾನ್ಸ್ ಕೊಡುತ್ತಿದ್ದಾರೆ. ಪಿ.ಎಲ್.ಡಿ.ಬ್ಯಾಂಕ್ ಎಲೆಕ್ಷನ್‌ನಲ್ಲಿ ಜಾತಿ ಜಾತಿ ಗುಂಪೇ ಬೇರೆ ಆಗುತ್ತಿದೆ. ಇದನ್ನು ಮುರಿಯಬೇಕಾದರೆ ಪಾರ್ಟಿ ಸಿಂಬಲ್ ಕೊಡಿ. ಅದಕ್ಕಾಗಿ ಎಲೆಕ್ಷನ್ ರೂಲ್ ನಲ್ಲಿ ಅಮೆಂಡ್‌ಮೆಂಟ್ ಮಾಡಿ ಸಪರೇಟ್ ಆದಂಥ ಕಾನೂನು ತಿದ್ದುಪಡಿ ತರಬೇಕೆಂದು ಹೇಳಿ ಸನ್ಮಾನ್ಯ ಅಧ್ಯಕ್ಷರು, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ದಿವಸ....

ಶ್ರೀ ಪಿ.ಜಿ.ಆರ್. ಸಿಂಧ್ಯ : ಇನ್ನು ಎಷ್ಟು ಹೊತ್ತು ಚರ್ಚೆ ಮಾಡುವುದು?

ಉಪಾಧ್ಯಕ್ಷರು : ಇವತ್ತು ಚರ್ಚೆ ಮುಗಿಸಿಬಿಡೋಣ. ನಾಳೆ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಸಿ. ಬೈರೇಗೌಡ : ಬೆಳಿಗ್ಗೆ ಸ್ವಲ್ಪ ಹೊತ್ತು ಚರ್ಚೆಗೆ ಅವಕಾಶ ಮಾಡಿಕೊಟ್ಟು ಆ ನಂತರ ರಿಪ್ಲೈ ಕೊಡಬಹುದಲ್ಲವೇ?

ಶ್ರೀ ಎಸ್. ಹೆಚ್. ಕೌಜಲಗಿ : ಅರ್ಧಗಂಟೆ ಆಲೋ ಮಾಡಿದರೂ ಪರವಾಗಿಲ್ಲ. ಚರ್ಚೆ ಮುಗಿಸಿಬಿಡೋಣ.

ಶ್ರೀ ಸಿ. ಬೈರೇಗೌಡ : ಬೆಳಿಗ್ಗೆ ಸ್ವಲ್ಪ ಹೊತ್ತು ಚರ್ಚೆಗೆ ಅವಕಾಶ ಕೊಡಬಹುದು.

ಉಪಾಧ್ಯಕ್ಷರು : ಈಗ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿನ ನಿರ್ಣಯದಂತೆ ಇವತ್ತೇ ರಿಪ್ಲೈ ಕೂಡ ಮುಗಿಯಬೇಕಾಗಿತ್ತು. ಅಂತಹದ್ದು ಚರ್ಚೆನೇ ಮುಗಿದಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ : ನಮ್ಮ ಕೌಜಲಗಿಯವರಿಗೆ ಅವಕಾಶ ಮಾಡಿಕೊಡಿ ನಾವು ಯಾರೂ ಮಾತನಾಡುವುದಿಲ್ಲ.

ಹೇಳಿ ಅವಕಾಶ ಮಾಡಿಕೊಡೋಣ.

ಶ್ರೀ ಸಿ. ಬೈರೇಗೌಡ : ಬೆಳಿಗ್ಗೆ ಸ್ವಲ್ಪ ಹೊತ್ತು ಚರ್ಚೆಗೆ ಅವಕಾಶ ಕೊಡಬಹುದು.

ಉಪಾಧ್ಯಕ್ಷರು : ಈಗ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿನ ನಿರ್ಣಯದಂತೆ ಇವತ್ತೇ ರಿಪ್ಲೈ ಕೊಡುವುದಕ್ಕೆ ಅನುಕೂಲವಾಗುತ್ತದೆ. ಆದಷ್ಟು ಜಾಗ್ರತೆ ಚರ್ಚೆ ಮುಗಿಸೋಣ.

ಶ್ರೀ ಸಿ. ಬೈರೇಗೌಡ : ಈಗಾಗಲೇ ಏಳುಗಂಟೆ ಆಗಿದೆ. ಇಷ್ಟೊಂದು ಬೇಡಿಕೆಗಳು ಇಟ್ಟರೆ ನಾವು ಮಾತನಾಡುವುದು ಏನು.

ಉಪಾಧ್ಯಕ್ಷರು : ತಾವು ಮುಂದುವರೆಸಿ.

ಶ್ರೀ ಬಿ ಎಸ್ ಯಡಿಯೂರಪ್ಪ : ಏನು ಮಾತನಾಡಬೇಕೋ ಮಾತನಾಡಿ, ಮುಗಿಸಿಕೊಳ್ಳಿ. ಮತ್ತೆ ಅವಕಾಶಸಿಗುವುದಿಲ್ಲ.

ಶ್ರೀ ಸಿ. ಬೈರೇಗೌಡ : ಈಗ ಈ ಬೇಡಿಕೆಗಳು ಯಾವ ರೀತಿ ಇದ್ದಾವೆ. ಎಂದರೆ ಸಬ್ ಎಕ್ ಲುಂಡಾ ಎಲ್ಲಾ ಸೇರಿ ಒಂದು ದೊಡ್ಡ ಮುದ್ದೆಯನ್ನು ಇಟ್ಟಿದ್ದಾರೆ. ಇಷ್ಟೊಂದು ಬೇಡಿಕೆಗಳನ್ನು ಇಟ್ಟಿರತಕ್ಕಂಥದ್ದು ಬಹುಶಃ ವಿಧಾನಸಭೆಯ ಚರಿತ್ರೆಯಲ್ಲಿಯೇ ಪ್ರಥಮ ಎನಿಸುತ್ತದೆ.

ಶ್ರೀ ಬಿ. ಪುಟ್ಟಸ್ವಾಮಿಗೌಡ : ನಿನ್ನೆ ಸಹ ಆಗಿತ್ತು.

ಶ್ರೀ ಸಿ. ಬೈರೇಗೌಡ : ಇಷ್ಟೊಂದು ದೊಡ್ಡ ಸಂಖ್ಯೆಯ ಬೇಡಿಕೆಗಳು ಇವೆ.

ಶ್ರೀ ಗೋಪೀನಾಥ್ ಆರ್. ಸಾಂಡ್ರಾ : ಬಿಸಿನೆಸ್ ಕಮಿಟಿಯಲ್ಲಿ ಇದ್ದುಕೊಂಡು ಇವೆಲ್ಲಾ ವ್ಯವಹಾರ ಮಾಡಿದ್ದೀರಿ. ಈಗ ಏಕೆ ಹೇಳುತ್ತೀರಿ? ನೀವು ಅದರಲ್ಲಿ ಮೆಂಬರ್ ತಾನೇ?

ಶ್ರೀ ಬಿ.ಹೆಚ್. ಬನ್ನಿಕೋಡ್ : ಇವರೇ ಕಾರ್ಯಕಲಾಪಗಳನ್ನು ನಿಗದಿಪಡಿಸಿ ಇಲ್ಲಿ ಹೇಳುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾನು ಬಹಳ ಸಾರಿ ಬೈರೇಗೌಡರಿಗೆ ಹೇಳಿದೆ. ಒಪ್ಪಿಕೊಳ್ಳಬೇಡಿ ಎಂದು. ನನ್ನ ಮಾತು ಕೇಳಲಿಲ್ಲ. ಈಗ ಅನುಭವಿಸಿ.

ಶ್ರೀ ರಮಾನಾಥ ರೈ : ಇವರು ಇಲ್ಲೇ ಇದ್ದು ಕೊಂಡು, ನಾಯಕರುಗಳು ಯಾರು ಇದ್ದಾರೆ, ಅಲ್ಲಿ ಚರ್ಚೆ ಮಾಡಬೇಕಾಗಿತ್ತು. ಇವರು ಅಲ್ಲಿ ಹೋಗಿ ಒಪ್ಪಿಕೊಂಡು ಬಂದು ಇಲ್ಲಿ ಸಂಭಾವಿತರಾಗಿ ಮಾತನಾಡುತ್ತಿದ್ದಾರೆ.

ಶ್ರೀ ಸಿ.ಬೈರೇಗೌಡ : ಏನು ಮಾಡುವುದು? ಮಾಡಿದ್ದನ್ನು ನಾವು ಅನುಭವಿಸಲೇಬೇಕು. ಇವತ್ತು ಪ್ರಥಮವಾಗಿ ನಮ್ಮ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಒಂದು ಇಲಾಖೆ ಇದೆ. ಒಂದು ಕಾಲದಲ್ಲಿ ಇಟ್ ಈಸ್ ಮದರ್ ಆಫ್ ಆಲ್ ಡಿಪಾರ್ಟ್‌ಮೆಂಟ್ಸ್ ಎಂದು ಹೇಳುತ್ತಿದ್ದರು. ಅಂದರೆ ಎಲ್ಲ ಇಲಾಖೆಗಳಿಗೆ ಮೂಲ. ಕಂದಾಯ ಇಲಾಖೆ ಎನ್ನತಕ್ಕ ಒಂದು ಪ್ರತೀತಿ ಇತ್ತು, ಆದರೆ ಈ ಕಂದಾಯ ಇಲಾಖೆಯ ಬಗ್ಗೆ ಏನೂ ಒಂದು ಪ್ರತೀತ ಇತ್ತು. ಮೂಲತಃ ಅನೇಕ ಬದಲಾವಣೆಗಳು ಇವತ್ತು ಆಗಿವೆ. ಹಳೆಯ ಪ್ರತೀತಿಗೂ ಈಗ ನಡೆಯುತ್ತಾ ಇರುವುದಕ್ಕೂ ಒಂದು ವ್ಯತ್ಯಾಸ ಇದೆ. ಈಗ ನೂರೆಂಟು ಇಲಾಖೆಗಳಾಗಿದ್ದು ಅಜಗಜಾಂತರ ವ್ಯತ್ಯಾಸ

ಇವತ್ತಿನ ದಿವಸ ಆಗಿದೆ. ಬದಲಾವಣೆಗಳು ಆಗಬೇಕು. ಬದಲಾವಣೆಯನ್ನು ಸಮಾಜ ಯಾವತ್ತೂ ಕೂಡ ಬಯಸುತ್ತದೆ. ಈ ಇಲಾಖೆಗೆ ಸಂಬಂಧಪಟ್ಟ ಹಾಗೆ ನಾನು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿದೆ. ಈಗಾಗಲೇ ನಮ್ಮ ಸ್ನೇಹಿತರು ಹೇಳಿದ್ದಾರೆ, ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಸಮಯ ಕೂಡ ಬಹಳ ಕಡಿಮೆ ಇದೆ. ಆ ಕಾರಣ ನಾನು ನೇರವಾಗಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಜಿಲ್ಲೆಗಳನ್ನು ಪುನರ್ ವಿಂಗಡಣೆ ಮಾಡಬೇಕು ಎಂಬ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಬಹಳ ವರ್ಷಗಳಿಂದ ಇದೆ. ಇದಕ್ಕೆ ಎರಡು ಮೂರು ಸಮಿತಿಗಳನ್ನು ಕೂಡ ಮಾಡಲಾಗಿದೆ. ವರದಿಗಳನ್ನು ಕೂಡ ಅವರು ಕೊಟ್ಟಿದ್ದಾರೆ. ಒಂದೊಂದು ವರದಿಗಳಲ್ಲೂ ಸಹ ತನ್ನದೇ ಆದ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಈ ವಿಚಾರದಲ್ಲಿ ಸರ್ಕಾರಕ್ಕೆ ನಾನು ಹೇಳಬೇಕಾಗಿರತಕ್ಕದ್ದು ಏನು ಎಂದರೆ ದಯಮಾಡಿ ಈ ಜಿಲ್ಲೆಗಳನ್ನು ಹೆಚ್ಚು ಮಾಡತಕ್ಕ ಹುಚ್ಚು ಪ್ರಯತ್ನಕ್ಕೆ ನೀವು ಕೈ ಹಾಕಬೇಡಿ ಎಂದು. ಕಾರಣವೇನೆಂದರೆ ಕೆಲವು ಜಿಲ್ಲೆಗಳು ವಿಂಗಡಣೆಯಾಗಿ ನೂರಾರು ವರ್ಷಗಳಿಂದ ನಡೆದುಬಂದಿದೆ.

7.15 ಪಿ.ಎಂ.

ಆವೊತ್ತು ಅವಶ್ಯಕತೆ ಇಲ್ಲದೇ ಇರುವಾಗ ಇವತ್ತು ಅವನ್ನು ಬದಲಾಯಿಸಬೇಕೆಂಬುದು ಏಂತು ನನಗಂತೂ ಅರ್ಥವಾಗುತ್ತಿಲ್ಲ. ಈ ಜಿಲ್ಲೆಗಳ ವಿಂಗಡಣೆಯಾದಾಗ ಸರಿಯಾದ ರಸ್ತೆ ಸಂಪರ್ಕ ಇರಲಿಲ್ಲ. ಓಡಾಡಲು ವಾಹನಸೌಲಭ್ಯಗಳು ಇರಲಿಲ್ಲ. ಇವೊತ್ತು ಕಾಲ ಬದಲಾಗಿದೆ. ರಸ್ತೆಗಳು ಸರಿಯಾಗಿಲ್ಲದಿದ್ದರೂ ಕೂಡ ಕೆಟ್ಟ ರಸ್ತೆಗಳಾದರೂ ಇವೆ, ವಾಹನ ಸೌಕರ್ಯಗಳನ್ನು ಅನೇಕ ಅಧಿಕಾರಿಗಳಿಗೆ ಸರ್ಕಾರದ ಲೆಕ್ಕದಲ್ಲಿ ಕೊಟ್ಟಿದ್ದೀರಿ. ಒಂದು ಜಿಲ್ಲೆಯ ಮುಖ್ಯ ಸ್ಥಾನ ಅಂದರೆ, ಸುಮಾರು 100,150 ವಾಹನಗಳಿರುತ್ತವೆ. ಜೀಪ್ ಕಾರುಗಳು ಎಲ್ಲ ಸೇರಿ ಹಿಂದಿನ ಕಾಲದಲ್ಲಿ ಒಬ್ಬ ತಹಸೀಲ್ದಾರ್ ಓಡಾಡಬೇಕಾದರೆ ನಾನು ಕಂಡಿದ್ದೇನೆ ಕುದುರೆ ಮೇಲೆ ಬರುತ್ತಿದ್ದರು. ಜಿಲ್ಲಾಧಿಕಾರಿಗಳಿಗೆ ಹಳೆಯ ಒಂದು ಸ್ಟೇಷನ್ ವ್ಯಾಗನ್ ಕೊಟ್ಟಿರುತ್ತಿದ್ದರು.

ಆದರೆ ಇಂದು ಒಂದೊಂದು ಜಿಲ್ಲೆಯಲ್ಲೂ 150 ರಿಂದ 200 ವಾಹನಗಳನ್ನು ಕೊಟ್ಟಿದ್ದೀರಿ ಮತ್ತು ಟೆಲಿಫೋನ್ ಎನ್ನುವುದು ಅನೇಕ ಕಡೆ ಇರಲಿಲ್ಲ. ಇಂದು ಇಲ್ಲೇ ಕೂತು ಪ್ರಪಂಚದ ಯಾವುದೇ ಮೂಲೆಗೆ ಕ್ಷಣಾರ್ಧದಲ್ಲಿ ಸಂಪರ್ಕ ಬೆಳೆಸುವ ಸಾಧನ ಇವೆ. ಕ್ಷಣಾರ್ಧದಲ್ಲಿ ಫ್ಯಾಕ್ಸ್ ಯಂತ್ರ ಬಳಸಿ ಕಾಗದ ಪತ್ರಗಳನ್ನು ಅಷ್ಟೇ ತೀವ್ರವಾಗಿ ರವಾನಿಸಿರುವ ವ್ಯವಸ್ಥೆ ಕೈಗೆ ಸಿಕ್ಕಿವೆ. ವೈರ್‌ಲೆಸ್ ಎನ್ನುವುದು ಕ್ಷಣಾರ್ಧದಲ್ಲಿ ಎಲ್ಲೆಂದರಲ್ಲಿಗೆ ಸಂಪರ್ಕ ಮಾಡುವ ಸಾಧನ ಬಂದಿದೆ. ಇಷ್ಟೆಲ್ಲ ಇದ್ದುಕೊಂಡು ಜಿಲ್ಲೆಗಳನ್ನು ಮರುವಿಂಗಡಣೆ ಮಾಡಬೇಕು. ಸಂಖ್ಯೆ ಹೆಚ್ಚು ಮಾಡಬೇಕೆಂದರೆ ಇದಕ್ಕೆ ಅರ್ಥವಿಲ್ಲ. ಸಿಂಧ್ಯಾರು ಹೇಳಿದಂತೆ ನಾವು ಬ್ರಿಟೀಶರ ಕಾಲಕ್ಕೆ ಹೋಗಬೇಕಾಗುತ್ತದೆ ಜಿಲ್ಲೆಗಳನ್ನು ಹೆಚ್ಚು ಮಾಡಿದರೆ. ಆದ್ದರಿಂದ ದಯವಿಟ್ಟು ಆ ಪ್ರಯತ್ನ ಮಾಡಲು ಹೋಗಬೇಡಿ. ಹಿಂದೆ ಇದ್ದ ಅರ್ಥಸಚಿವರು ಒಂದು ಮಾತು ಹೇಳಿದ್ದರು. ಈಗಿರುವ ಸರ್ಕಾರಿ ನೌಕರರಿಂದ ಇಂತಹ ಎರಡು ಸರ್ಕಾರಗಳನ್ನು ನಡೆಸಬಹುದು. ಅಷ್ಟು ದೊಡ್ಡದಾಗಿ ಬೆಳೆದುಬಂದಿದೆ ಅವರ ಸಂಖ್ಯೆ. ಆದರೆ ಜಿಲ್ಲೆಗಳನ್ನು ಹೆಚ್ಚುಮಾಡಿ ಇನ್ನೊಂದಷ್ಟು ಅಧಿಕಾರಿಗಳನ್ನು ಜಾಸ್ತಿ ಮಾಡುವುದರಿಂದ ಜಿಲ್ಲೆಗಳಿಗೆ ಮತ್ತೆ ಎಂಟು ಜೆಡ್ ಅಧಿಕಾರಿಗಳು, ಇಲಾಖೆಗಳು ಬರಬೇಕಾಗುತ್ತದೆ.

ಈ ರೀತಿಯಾದ ಅಧಿಕಾರಿ ಸಂಖ್ಯೆ ಹೆಚ್ಚು ಮಾಡುವುದರಿಂದ ಆಡಳಿತ ಸುಧಾರಣೆಯಾಗುತ್ತದೆ ಎಂಬುದನ್ನು ಮರೆತುಬಿಡಿ. ಅಧಿಕಾರಿಗಳನ್ನು ಹೆಚ್ಚು ಮಾಡಿದರೆ ಲಂಚ ತೆಗೆದುಕೊಳ್ಳುವ ಕೈಗಳು ಜಾಸ್ತಿಯಾಗುತ್ತವೆ. ಆದ್ದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈಗಲೇ ನಮ್ಮ ಆಡಳಿತ ವ್ಯವಸ್ಥೆಗಾಗಿ ರಾಜ್ಯದಲ್ಲಿ 50ಕ್ಕಿಂತ ಹೆಚ್ಚು ಖರ್ಚಾಗುತ್ತಿದೆ.

ಇನ್ನೊಂದಷ್ಟು ಅಧಿಕಾರಿಗಳನ್ನು ನೀವು ಸೃಷ್ಟಿಮಾಡಿದರೆ ಸರ್ಕಾರದ ಆದಾಯವೆಲ್ಲ ಅಧಿಕಾರಿಗಳ ಸಂಬಳ ಸಾರಿಗೆ ಇತರೆ ಭತ್ಯೆಗಳನ್ನು ಕೊಡುವುದಕ್ಕೆ ಆಗುತ್ತದೆ ಅಷ್ಟೆ. ಆದ್ದರಿಂದ ಜಿಲ್ಲೆಗಳ ಸಂಖ್ಯೆಯನ್ನು ಹೆಚ್ಚು ಮಾಡುವುದಕ್ಕೆ ನನ್ನದು ಬಹಳ ತೀವ್ರವಿರೋಧ ಇದೆಯೆಂದು ಹೇಳುತ್ತೇನೆ. ಆ ಹುಚ್ಚು ಸಾಹಸಕ್ಕೆ ಕೈಹಾಕಬೇಡಿ ಇದರಲ್ಲಿ ಸಂಬಂಧಿಸಿದ ಹೆಸರುಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ, ಉದಾಹರಣೆಗೆ ನಾನು ಇಷ್ಟೇನೆ, ನನ್ನ ಕಾಲದಲ್ಲಿ ಒಂದು ಜಿಲ್ಲೆಯಾಗಬೇಕು ಯಡಿಯೂರಪ್ಪನವರು ಶಿಕಾರಿಪುರ ತಾಲ್ಲೂಕು ಜಿಲ್ಲೆಯಾಗಬೇಕು. ಎಂದು ಹೇಳಿದರೆ ಆಶ್ಚರ್ಯವಿಲ್ಲ. ಸಿಂಧ್ಯಾರು ಕನಕಪುರ ಜಿಲ್ಲೆಯಾಗಬೇಕೆಂದು ಹೇಳಿದರೆ ಆಶ್ಚರ್ಯವಿಲ್ಲ, ಏಕೆಂದರೆ ಅದು ಪಾರ್ಲಿಮೆಂಟ್ ಕ್ಷೇತ್ರವಾಗಿದೆ. ಆದ್ದರಿಂದ ಸಿಂಧ್ಯರರಿಗೊಂದು ಯಡಿಯೂರಪ್ಪನವರಿಗೊಂದು ಜಿಲ್ಲೆ ಮಾಡುವುದು ಬೇಡ ಇದಕ್ಕೆ ಆಡಳಿತದಲ್ಲಿ ಹಣ ವೆಚ್ಚವಾಗುತ್ತದೆಯೆ ಹೊರತು ಜನರಿಗೆ ಪ್ರಯೋಜನ ಸಿಗುವುದಿಲ್ಲ ಈಗಾಗಲೇ ಅಭಿವೃದ್ಧಿ ಮತ್ತು ಅಭಿವೃದ್ದೇತರ ಖರ್ಚುಗಳನ್ನು ಲೆಕ್ಕಹಾಕಿದರೆ ಅಜಗಜಾಂತರ ವ್ಯತ್ಯಾಸ ಇದೆ ಇದನ್ನು ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಿ.,

ಇನ್ನು ಕೆಲವು ಸ್ನೇಹಿತರು ಪ್ರಸ್ತಾಪಿಸಿದಂತೆ ಕೆಲವು ಕಡೆ ತಾಂಡಾಗಳು ಎನ್ನುತ್ತಾರೆ ಕೆಲರು ಕಡೆ ಕೇರಿಗಳು, ಇನ್ನು ಕೆಲವು ಕಡೆ ದೊಡ್ಡಿಗಳು ಎನ್ನುತ್ತಾರೆ ನಮ್ಮ ಕಡೆ ಮದಾರಾಗ್ರಾಮಗಳು ಎನ್ನುತ್ತೇವೆ. ಇವಕ್ಕೂ ಅಸಲಿ ಗ್ರಾಮಗಳಿಗೂ ವ್ಯತ್ಯಾಸ ಇಲ್ಲ. ಗ್ರಾಮ ಯಾವುದಿರುತ್ತವೆ ಅದಕ್ಕೆ ಸಿಗುತ್ತವೆ, ಆ ಸೌಲಭ್ಯಗಳು ಮಜರಾಗ್ರಾಮಗಳಿಗೆ ತಲುಪದಿರುವ ಪರಿಸ್ಥಿತಿ ಇದೆ ಆದ್ದರಿಂದ ಈಗಿರುವ ರಾಜ್ಯದ 28 ಸಾವಿರ ಚಿಲ್ಲರೆ ಗ್ರಾಮಗಳ ಸಂಖ್ಯೆ ಈ ಮಜರಾ ಗ್ರಾಮಗಳ್ನು ಸೇರುವುದರಿಂದ 40 ಸಾವಿರ ಆಗಬಹುದು ಅಷ್ಟೇ ಎಲ್ಲ ಮಜರಾ ಗ್ರಾಮಗಳನ್ನು ರೆವಿನ್ಯೂ ಗ್ರಾಮಗಳನ್ನಾಗಿ ಪರಿವರ್ತನೆ ಮಾಡಿ. ಜಿಲ್ಲೆಗಳನ್ನು ಮರುವಿಂಗಡಣೆ ಕೆಲಸ ಬಿಟ್ಟುಬಿಡಿ, ಇದು ಮಾಡಿದರೆ ಜನಕ್ಕೆ ಉಪಯೋಗವವಾದರೂ ಆಗುತ್ತದೆ. ದಯವಿಟ್ಟು ಕಂದಾಯಸಚಿವರು ಇದಕ್ಕೆ ಯಾವ ದೊಡ್ಡ ವಗದಿ ಬೇಕಾಗಿಲ್ಲ, ಪಂಡಿತರ ಘೋಷ್ಠಿ ಬೇಕಾಗಿಲ್ಲ ನೇರವಾಗಿ ಸರ್ಕಾರಿ ಆಜ್ಞೆ ಮೂಲಕ ಮಾಡಿಸುವುದಕ್ಕೆ ಅವಕಾಶ ಇದೆ ಇದರ ಬಗ್ಗೆ ಸಚಿವರು ಉತ್ತರಿಸುವಾಗ ಏನು ಕೆಲಸ ಮಾಡುತ್ತಾರೆಂದು ಹೇಳಬೇಕೆಂದು ವಿನಂತಿ ಮಾಡುತ್ತೇನೆ ಬೇಕಾದರೆ ಇರುವ ಜಿಲ್ಲಾಸಂಖ್ಯೆಯನ್ನು ಕಡಿಮೆ ಮಾಡಿದರೆ ಸಂತೋಷ, ಪಕ್ಕದಲ್ಲಿರುವ ಜಿಲ್ಲೆಗೆ ಸೇರಿಸಿ ಮಾಡಿದರೆ ಒಳ್ಳೆಯದು.

ಆಮೇಲೆ ಈ ಸರ್ಕಾರ ಬಂದ ಮೇಲೆ ಏನೇನು ಕೆಲಸವಾಗಿದೆ ಎಂದು ಹೇಳಬೇಕಾಗುತ್ತದೆ ಅಕ್ರಮ ಸಾಗುವಳಿ ಅದನ್ನು ಸಕ್ರಮ ಮಾಡುವ ಕೆಲಸ ಇದು ಖಂಡಿತವಾಗಿ ಒಳ್ಳೆಯ ಕೆಲಸ ಅದನ್ನು ನಾನು ಮೆಚ್ಚುತ್ತೇನೆ ಸರ್ಕಾರಕ್ಕೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನಮ್ಮ ಸರ್ಕಾರ ಇದ್ದಾಗ ಕೂಡ ಇದನ್ನು ಮಾಡಲು ತೀವ್ರ ಪ್ರಯತ್ನ ಪಟ್ಟೆವು. ಆದರೆ ವಿಘ್ನೇಶ್ವರನ ಮದುವೆಗೆ ಸಾವಿರ ವಿಘ್ನಗಳು ಅಡ್ಡಿ ಎಂಬಂತೆ ಬಹಳ ಸುಲಭವಾಗಿದ್ದ ವಿಚಾರವನ್ನು ಸಮಸ್ಯಾತ್ಮಕ ಮಾಡಿ ಈ ಕೆಲಸ ನಮ್ಮ ಕಾಲದಲ್ಲಿ ಆಗಲಿಲ್ಲ, ಆದರೆ ತಾವು ಕಾಲಮಿತಿಯ ಕಾರ್ಯಕ್ರಮ ಹಾಕಿ ಕೊಂಡಿದ್ದೀರಿ, ಸಂತೋಷ ಇದಕ್ಕೆ ಮೊದಲು ತಾಲ್ಲೂಕುಮಟ್ಟದಲ್ಲಿ ಒಂದು ಸಮಿತಿ ಮಾಡಿದೀರಿ ಅದಕ್ಕೆ ತಾಲ್ಲೂಕಿನ ಬಹುಪ್ರದೇಶ ಪ್ರತಿನಿಧಿಸುವ ಕ್ಷೇತ್ರದ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿರುತ್ತೀರಿ. ಪ್ರಜಾಪ್ರಭುತ್ವದಲ್ಲಿ ಜನಪ್ರತಿನಿಧಿಗಳಿಗೆ ಅವಕಾಶ ಕೊಡುವುದು ಧರ್ಮ ಆದರೆ, ಈಗ ಏನು ಮಾಡಿದ್ದೀರಿ ಎಂದರೆ ಅದನ್ನು ವಾಪಸ್ ಪಡೆದಿದ್ದೀರಿ,

ನಿಯಮಾವಳಿ ತಿದ್ದುಪಡಿ ಮಾಡಿ ಖಾಸಗಿ ಸವಸ್ಯರನ್ನು ಬೇರೆ ಸದಸ್ಯರನ್ನು ನೇಮಕ ಮಾಡಿ ಅವರಲ್ಲಿ ಯಾರಾದರೊಬ್ಬರನ್ನು ಅಧ್ಯಕ್ಷರಾಗಿ ಮಾಡುವ ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಏಕೆ? ಈ ಸದನದ ಸದಸ್ಯರ ಮೇಲೆ ನಿಮಗೆ ನಂಬಿಕೆ

ಇಲ್ಲವೇ? ಅಪನಂಬಿಕೆ ಏಕೆ? ನನಗೂ ಇದು ಅರ್ಥವಾಗುತ್ತಿಲ್ಲ. ಕಾರಣವೇನೆಂದರೆ ಕೆಲವು ಪ್ರದೇಶಗಳಲ್ಲಾದರೂ ಕೂಡ ವಿರೋಧಪಕ್ಷದವರು ಸಮಿತಿಯ ಅಧ್ಯಕ್ಷರಾಗುವುದಕ್ಕೆ ಅವಕಾಶ ಇತ್ತು. ಪ್ರಜಾತಂತ್ರದಲ್ಲಿ ವಿರೋಧಪಕ್ಷದವರಿಗೆ ಸ್ಥಾನಮಾನ ಕೊಡುವುದು ಬೇಡವೇ? ಆದರೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿರಿಸಿಕೊಂಡಿರುವವರು, ಮಾತೆತ್ತಿದರೆ ಪ್ರಜಾಪ್ರಭುತ್ವ ಎಂದು ಹೇಳುವವರು ಈ ರೀತಿ ಕ್ರಮ ತೆಗೆದುಕೊಂಡಿರುವುದು ಸರಿಯಾದುದಲ್ಲ. ತಾಲ್ಲೂಕಿನ ಬಹುಪ್ರದೇಶ ಪ್ರತಿನಿಧಿಸುವ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡುವ ಆಲೋಚನೆ ಮೊದಲು ನಿಮ್ಮದೇನಿತ್ತು ಅದನ್ನು ಪುನಃ ಜಾರಿಗೆ ತಂದು ದಯವಿಟ್ಟು ಈ ಕೆಲಸ ಜಾಗ್ರತೆಯಾಗಿ ಮಾಡಬೇಕೆಂದು ಹೇಳುತ್ತೇನೆ. ಅದನ್ನು ದಯವಿಟ್ಟು ಮಾಡಬೇಕು ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ಈ ಸಂದರ್ಭದಲ್ಲಿ ಇವತ್ತಿನ ದಿವಸ ಮಲೆನಾಡಿನ ಪ್ರದೇಶದಲ್ಲಿ ಕಾಫಿ, ಟೀ. ಏಲಕ್ಕಿ ಬೆಳೆಯುತ್ತಾರೆ. ಇವತ್ತಿನ ದಿವಸ ಇವುಗಳನ್ನು ಮುಟ್ಟುವುದಕ್ಕೆ ಹೋಗಿಲ್ಲ. ನನಗಂತೂ ಅರ್ಥವಾಗುತ್ತಿಲ್ಲ. ಆದರೆ ಏತಕ್ಕೆ ಈ ಒಂದು ತಾರತಮ್ಯವನ್ನು ನೀವು ಮಾಡುತ್ತಿದ್ದೀರಿ? ಅಲ್ಲಿಕೂಡ ಅಕ್ರಮ ಸಾಗುವಳಿ ಮಾಡಿದ್ದಾರೆ, ಅನೇಕ ಕಡೆ ನೂರಾರು ಎಕರೆ ಅಕ್ರಮ ಸಾಗುವಳಿ ಇದೆ ಎಂದು ನಾನು ಕೇಳಿದ್ದೇವೆ. ಅವರಿಗೆ ನೀವು ಕೊಡಿ ಎಂದು ಹೇಳತಕ್ಕಂಥವನೂ ಕೂಡ ಅಲ್ಲ.ಮತ್ತೆ ಏನೂ ಇಲ್ಲದೆ ಸರ್ಕಾರಕ್ಕೆ ಬರಬೇಕಾಗಿರತಕ್ಕಂಥ ಆದಾಯ ಕೂಡಾ ಬರುತ್ತಿಲ್ಲ.

ಕಂದಾಯ ಕೂಡ ಆ ಜಮಿನಿಗೆ ಇಲ್ಲ, ಆದೆರ ಎಕರೆಗೆ ಸಾವಿರಾರು ರೂಪಾಯಿ. ಲಕ್ಷಾಂತರ ರೂಪಾಯಿಗಳ ಆದಾಯವನ್ನು ಪಡೆಯುತ್ತಿದ್ದಾರೆ. ಇದು ಸರ್ಕಾರಕ್ಕೆ ಬರಬೇಕೇ ಬೇಡವೇ? ನೀವು ಅತೀ ಜಾಗ್ರತೆಯಾಗಿ ಈ ವಿಚಾರದಲ್ಲಿ ಒಂದು ತೀರ್ಮಾನಕ್ಕೆ ಬರಬೇಕಾದ ಅವಶ್ಯಕತೆ ಇದೆ ಯಾವ ರೀತಿಯಾಗಿ ಮಾಡಬೇಕು. ಎಷ್ಟೆಷ್ಟು ರಿಸರ್ವೇಷನ್ ಎನ್ನತಕ್ಕಂಥದ್ದರ ಬಗ್ಗೆ ನಮ್ಮ ವಿರೋಧಪಕ್ಷದ ನಾಯಕರನ್ನಾದರೂ ಕರೆದು ಸಲಹೆಗಳನ್ನು ಪಡೆಯತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಿದರೆ ನಮಗೆ ತೋಚಿರತಕ್ಕಂಥದ್ದನ್ನು ನಾವು ಹೇಳುತ್ತೇವೆ. ಇದು ಏನೂ ಇಲ್ಲದೆ ಇವತ್ತಿನ ದಿವಸ ಅದನ್ನು ಹಾಗೆಯೇ ಮುಂದುವರಿಸಿಕೊಂಡು ಹೋಗುವುದಾದರೆ ತಾವು ಕೂಡ ಅವರ ಜೊತೆಯಲ್ಲಿ , ದೊಡ್ಡ ದೊಡ್ಡ ನೂರಾರು ಎಕರೆಯಷ್ಟನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಿರತಕ್ಕಂಥವರ ಜೊತೆಯಲ್ಲಿ ಶಾಮಿಲಾಗಿದ್ದೀರಿ ಎನ್ನತಕ್ಕಂಥ ಅಭಿಪ್ರಾಯಕ್ಕೆ ನಾವು ಗತ್ಯಂತರವಿಲ್ಲದೇ ಬರಬೇಕಾಗುತ್ತದೆ. ಅದಕ್ಕೆ ತಾವು ಅವಕಾಶವನ್ನು ಕೊಡದೇ ಅತೀ ಜಾಗ್ರತೆಯಾಗಿ ಈ ಬಗ್ಗೆ ತೀರ್ಮಾನವನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಬೈರೇಗೌಡರು ಏನು ಹೇಳಿದ್ದಾರೆ, ಕಾಫಿ ಪ್ಲಾಂಟೇಷನನ್ನು ರೆಗ್ಯುಲರೈಜ್ ಮಾಡತಕ್ಕಂಥದ್ದಾಗಲಿ ಅಥವಾ ಎವಿಕ್ಟ್ ಮಾಡತಕ್ಕಂಥದ್ದಾಗಲಿ ನೀವು ಏತಕ್ಕೆ ಕ್ರಮವನ್ನು ತೆಗೆದುಕೊಂಡಿಲ್ಲ ಎಂದು ಹೇಳಿದ್ದಾರೆ. ಇದನ್ನು ರೆಗ್ಯುಲರೈಜ್ ಮಾಡುವುದಕ್ಕೆ ಕಾನೂನನ್ನು ತರಬೇಕಾದರೆ ನಮ್ಮಲ್ಲಿ ಕೂಡಾ ಅನೇಕ ಕಷ್ಟಗಳು, ತಮ್ಮಲ್ಲಿ ಇದ್ದಹಾಗೆ ನಮ್ಮಲ್ಲಿಯೂ ಕೂಡ ಇದೆ. ನಿಮ್ಮಲ್ಲಿ ಏತಕ್ಕೆ ನಿಂತುಹೋಯಿತು? ಕೆಲವು ಜನ ಹೇಳಿದರು ಕಾಫಿ ಪ್ಲಾಂಟರ್ಸ್‌ನ್ನು ರೆಗ್ಯುಲರೈಜ್ ಮಾಡುವುದು ಬೇಡ ಎಂದು, ಕೆಲವು ಜನ ಮಾಡಿ ಎಂದು ಹೇಳುತ್ತಾರೆ. ಸ್ವಲ್ಪ ಹೆಚ್ಚಿನ ಫೈನ್ ಹಾಕಿ ಮಾರುಕಟ್ಟೆ ವ್ಯಾಲ್ಯೂಕಟ್ಟಿ ಅದನ್ನು ತೆಗೆದುಕೊಳ್ಳಿ ಎಂದು ಹೇಳಿದರು. ಈ ಆರ್ಗ್ಯುಮೆಂಟ್ ಮೇಲೆ ಕಾಲವನ್ನು ಕಳೆಯುವುದು ಬೇಡ ಎಂದು ಹೇಳಿ ಅಟ್‌ಲೀಸ್ಟ್ ಇಷ್ಟಾದರೂ ಮೊದಲು ಮಾಡೋಣ ಅದಕ್ಕೆ ಮುಂದೆ ಯೋಚನೆ ಮಾಡೋಣ ಎನ್ನತಕ್ಕಂಥ ದೃಷ್ಟಿಯಿಂದ ಫಸ್ಟ್ ಸ್ಟೆಪ್ ಇದನ್ನು ತೆಗೆದುಕೊಂಡಿದ್ದೇವೆ.

ನಿಕೆಂಗಗೆ ಅಟ್‌ಲೀಸ್ಟ್ ಬಡವರಿಗಾದರೂ ತಪ್ಪಿಸಬಾರದು. ಮುಂದೆ ಇದರ ಬಗ್ಗೆ

ಯೋಚನೆಯನ್ನು ಮಾಡೋಣ. ಚಿಂತನೆಯನ್ನು ಮಾಡೋಣ ಎಂದು ಹೇಳಿ ಇದನ್ನಾದರೂ ಪಾಸ್ ಮಾಡಿಕೊಡಿ ಎಂದು ಹೇಳಿ ನಾವೆಲ್ಲರೂ ಒಮ್ಮತದಿಂದ ಒಪ್ಪಿಕೊಂಡ ಮೇಲೆ ಇವತ್ತು ಇದನ್ನು ತಂದಿದ್ದೇವೆ. ಇದಕ್ಕಿಂತ ಮುಂಚೆ ನಾನು ಈ ಸದನದಲ್ಲಿ ಈವನ್ ಇಂಪ್ರಿಷನ್‌ಮೆಂಟ್ ಕೂಡಾ ತಂದಿದ್ದೆ. ಯಾರು ಎನ್‌ಕ್ರೋಚ್‌ಮೆಂಟ್ ಮಾಡುತ್ತಾರೆ. ಕಟ್ ಆಫ್ ಡೇಟ್ ಆದಮೇಲೆ ಅವರಿಗೆ ಫೈನ್ ಹಾಕಬೇಕು. ಇಂಪ್ರಿಷನ್‌ಮೆಂಟ್‌ನ್ನು ಮಾಡಬೇಕು ಎಂದಾಗ ಇದೇ ಸದನದಲ್ಲಿ ಅನೇಕ ಮಾನ್ಯ ಸದಸ್ಯರು ಅಪೋಸ್ ಮಾಡಿದ ಮೇಲೆ ನಾನು ಆ ಕ್ಲಾಸ್‌ನ್ನು ಬಿಟ್ಟು ಮುಂದಕ್ಕೆ ಬಂದಿದ್ದೇನೆ. ಪ್ಲಾಂಟೇಷನ್ ಬಗ್ಗೆ ಮುಂದೆ ವಿಚಾರವನ್ನು ಮಾಡಿ ತಂದಮೇಲೆ ಎಷ್ಟು ಜನ ಸಪೋರ್ಟ್ ಮಾಡುತ್ತಾರೆ ಎಷ್ಟು ಜನ ಅಪೋಸ್ ಮಾಡುತ್ತಾರೆ ಎಂಬುದನನ್ನು ಆಮೇಲೆ ಮಾತನಾಡೋಣ. ಇದರ ಬಗ್ಗೆ ಮಾತನಾಡಿ ತಾವು.

ಶ್ರೀ ಸಿ. ಬೈರೇಗೌಡ : ತಾವು ಹೇಳಿದ್ದು ನಿಜ. ನಮ್ಮ ಸರ್ಕಾರ ಇದ್ದಾಗಲೂ ಕೂಡಾ ಇದು ಬಂದಿದ್ದು ಪ್ಲಾಂಟೇಷನ್‌ನಿಂದಲೇ, ನಾನು ನಮ್ಮ ಪಕ್ಷದ ಸಭೆಯಲ್ಲಿ ಕೂಡಾ ಸಲಹೆಯನ್ನು ಮಾಡಿದ್ದೆ. ಪ್ಲಾಂಟೇಷನನ್ನು ನಿಧಾನವಾಗಿ ಮಾಡೋಣ. ಈಗ ಬೇರೆಯದನ್ನು ಮಾಡಿ ಎನ್ನವಕ್ಕಂಥ ಆಗ್ರಹವನ್ನು ಕೂಡಾ ಮಾಡಿದ್ದೆ. ಇದೇ ಕಾರಣದಿಂದ ಅದು ತಡವಾಗಿದ್ದು ಎಷ್ಟು ದಿವಸ ಇದನ್ನು ಹೀಗೆ ಬಿಟ್ಟುಕೊಂಡಿರುತ್ತೀರಿ ಎಂದು ನಾನು ಕೇಳುತ್ತೇನೆ. ನಾನು ಆಗಲೇ ಹೇಳಿದ ಹಾಗೆ ಸರ್ಕಾರಕ್ಕೆ ಏನೂ ಆದಾಯ ಇಲ್ಲ. ಆದರೆ, ಪ್ರತಿಫಲ ಮಾತ್ರ ಇವತ್ತಿನ ದಿವಸ ಪಡೆಯುತ್ತಿದ್ದಾರೆ. ಇದು ಮುಂದುವರೆಯುವುದು ಬೇಡ. ಆದುದರಿಂದ ನಮ್ಮನ್ನಾದರೂ ಒಂದು ಸಭೆ ಕರೆಯಿರಿ. ಸಭೆ ಕರೆದು ಚರ್ಚೆಯನ್ನು ಮಾಡೋಣ. ಯಾವ ರೀತಿ ಮಾಡಬೇಕು? ಇದರ ಸಾಧಕ ಬಾಧಕಗಳನ್ನು ವಿಚಾರಮಾಡೋಣ. ದಯವಿಟ್ಟು ಈ ಕೆಲಸವನ್ನು ಆದಷ್ಟು ಜಾಗ್ರತೆ ಮಾಡಬೇಕೆಂದು ಹೇಳುತ್ತೇನೆ.

ಇವತ್ತು ಅಕ್ರಮ ಸಾಗುವಳಿಯನ್ನು ಸಕ್ರಮ ಮಾಡುತ್ತಾರೆ ಎಂದು ಸಿಕ್ಕಾಪಟ್ಟೆ ದಾರಿ ಉಳತಕ್ಕಂಥದ್ದು ರಸ್ತೆಯನ್ನು ಉಳತಕ್ಕಂಥದ್ದು ಎಷ್ಟೋ ಕಡೆ ಕೆರೆ ಅಂಗಳ, ಉಳತಕ್ಕಂತಾದ್ದು ಕೆರೆಗೆ ಹರಿದು ಬರುವ ಹಳ್ಳಗಳನ್ನು ನೀರುಹರಿಯುವ ಕಾಲುವೆಗಳನ್ನೂ ಉಳತಕ್ಕಂಥಾದ್ದು ನಡೆಯುತ್ತಿದೆ. ಒಟ್ಟಿನಲ್ಲಿ ಒಂದು ಅಂಗುಲ ಜಾಗ ಕೂಡ ಬಿಡದೆ ಉಳತಕ್ಕಂಥ ಪರಿಸ್ಥಿತಿ ಇವೊತ್ತಿನದಿವಸ ಹೆಚ್ಚಾಗಿದೆ. ಯಾವುದೋ ಕಾಲದಲ್ಲಿ ಕೆರೆಯನ್ನು ಕಟ್ಟಿದ್ದರು. ಇವತ್ತು ಅಂಥ ಒಂದು ಕೆರೆಯನ್ನು ಕಟ್ಟಬೇಕಾದರೆ ಕೋಟ್ಯಾಂತರ ರೂಪಾಯಿಗಳ ಹಣ ಖರ್ಚಾಗುತ್ತದೆ. ಅದನ್ನು ರಕ್ಷಣೆ ಮಾಡತಕ್ಕ ಜವಾಬ್ದಾರಿಯು ನಮಗೆ ಇರಬೇಕಾಗುತ್ತದೆ. ದಯವಿಟ್ಟು ಎಲ್ಲಿ ಕೆರೆ ಅಂಗಳ ಮತ್ತು ರಸ್ತೆ ನೀರು ಹರಿಯುವ ಕಾಲುವೆಗಳನ್ನು ಒತ್ತುವರಿ ಮಾಡುತ್ತಿದ್ದಾರೆ ಅವರ ಮೇಲೆ ಉಗ್ರವಾದಂತಹ ಕ್ರಮ ತೆಗೆದುಕೊಂಡು, ಇವುಗಳ ರಕ್ಷಣೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇವತ್ತು ಅತಿಮುಖ್ಯವಾದ ಇರತಕ್ಕದ್ದು ಅಂದರೆ ನಿಮ್ಮ ಸಬ್‌ರಿಜಿಸ್ಟ್ರಾರ್ ಆಫೀಸ್. ಇದಂತೂ ಯಾವ ಸರ್ಕಾರ ಬಂದರೂ ಕೂಡ ಉತ್ತಮವಾಗಲಿಲ್ಲ. ಹಿಂದೆ ಒಂದು ಕಾಲದಲ್ಲಿ ಇದನ್ನು ಕಂಪ್ಯೂಟರ್ಸ್ ಅನ್ನು ಉಪಯೋಗಿಸಿ ಕಂಪ್ಯೂಟ್ರೀಕರಣ ಮಾಡಬೇಕೆಂದು ಒಂದು ಆಲೋಚನೆ ಇತ್ತು. ಈಗ ಇದು ಏನಾಯಿತೋ ಗೊತ್ತಿಲ್ಲ. ಅಲ್ಲಿ ಒಂದು ಕಾಪಿ ತೆಗೆದುಕೊಳ್ಳಬೇಕಾಗಿದ್ದರೆ ಅಥವಾ ಒಂದು ರಿಜಿಸ್ಟ್ರೇಷನ್ ಮಾಡಬೇಕಾಗಿದ್ದರೆ ಯಮಲೋಕಕ್ಕಾದರೂ ಹೋಗಿಬರಬಹುದು, ನಿಮ್ಮ ಸಬ್‌ರಿಜಿಸ್ಟ್ರಾರ್ ಆಫೀಸಿಗಂತೂ ಹೋಗಿಬರುವುದಕ್ಕೆ ಆಗುವುದಿಲ್ಲ. ಅಂತಹ ಪರಿಸ್ಥಿತಿ ಇವತ್ತಿನ ದಿವಸ ಉಂಟಾಗಿದೆ. ಇದರಲ್ಲಿ ಏನೇನೊ ಇದೆ. ಅವೆಲ್ಲವನ್ನು ಹೇಳುವುದಕ್ಕೆ ಇವತ್ತಿನ ದಿವಸ ಸಮಯವಿಲ್ಲ. ಸಬ್‌ರಿಜಿಸ್ಟ್ರಾರ್‌ನ ಟ್ರಾನ್ಸ್‌ಫರ್ ವಿಚಾರದಲ್ಲಿ ಏನು ನಡೆಯುತ್ತದೆ. ಯ್ಯಾವ್ಯಾವ ಜಾಗದಲ್ಲಿ

ಏನೇನು ನಡೆಯುತ್ತಿತ್ತು ಎನ್ನುವುದರ ಬಗ್ಗೆ ದೊಡ್ಡ ಕರ್ಮಕಾಂಡವೇ ಇದೆ. ಅದರ ಬಗ್ಗೆ ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ, ಏಕೆಂದರೆ ಅಧ್ಯಕ್ಷರು ಬೆಲ್ ಹೊಡೆಯುವುದಕ್ಕಿಂತ ಮುಂಚೆ ಮುಗಿಸಬೇಕೆಂದಿದ್ದೇನೆ. ಆದರೆ ಅಲ್ಲಿ ಇದಕ್ಕೆ ಅವಕಾಶ ಇಲ್ಲದಂತಹ ರೀತಿಯಲ್ಲಿ ಆಡಳಿತ ಅಂದರೆ. ಆದಷ್ಟು ಕೆಟ್ಟದ್ದನ್ನು ಮಾಡುವುದಕ್ಕೆ ಕಾನೂನುಬಾಹಿರವಾಗಿರತಕ್ಕದ್ದನ್ನು ಮಾಡಿ ಅಕ್ರಮವಾಗಿ ಸಂಪಾದನೆ ಮಾಡುವುದಕ್ಕೆ ಅವಕಾಶ ಇಲ್ಲದ ರೀತಿಯಲ್ಲಿ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಯಾವುದಾದರೂ ಒಳ್ಳೆಯ ಸಲಹೆಯನ್ನು ಕೊಟ್ಟರೆ ಇಂಪ್ರೂವ್‌ಮೆಂಟ್ ಮಾಡತಕ್ಕ ರೀತಿಯಲ್ಲಿ ಹೇಳಿದರೆ ಅದನ್ನು ನಾವು ಅನುಕರಣೆ ಮಾಡೋಣ.ಏಕೆಂದರೆ ಸುಧಾರಣೆ ಮಾಡುವುದನ್ನು ಇವತ್ತೆ ನಾವು ಎಲ್ಲ ತೆಗೆದು ಹಾಕುತ್ತೇನೆ ಎಲ್ಲವೂ ಚೆನ್ನಾಗಿದೆ ಎಂಬು ನಾನು ಹೇಳುತ್ತಿಲ್ಲ. ಅಥವಾ ಹೇಳಿದರೂ ಕೂಡ ಜನ ನಗುತ್ತಾರೆ ಅದಕ್ಕೆ ನೀವು ಈ ರೀತಿ ಮಾಡಿದರೆ ಇದನ್ನು ತಪ್ಪಿಸಬಹುದು. ಅಥವಾ ಯಾವುದಾದರೂ ಒಂದು ನಿರ್ದಿಷ್ಟವಾದಂತಹ ಪದ್ಧತಿಯನ್ನು ಅನುಸರಿಸಿದರೆ ಅನುಕೂಲವಾಗುತ್ತದೆ ಎಂದರೆ ಖಂಡಿತವಾಗಿ ಅದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : ಕಂಪ್ಯೂಟ್ರಿಕರಣ ಮಾಡುವುದನ್ನು ಆಲೋಚನೆ ಮಾಡಿ, ಅದರ ಸಾಧಕ ಬಾಧಕಗಳನ್ನು ಆಲೋಚನೆ ಮಾಡೋಣ. ಒಂದು ಸಮಿತಿಯನ್ನು ರಚನೆ ಮಾಡಬೇಕೆಂದು ಹೊರಟಿದ್ದೀರಿ. ಅಂಡರ್ ವ್ಯಾಲ್ಯುವೇಶನ್ ಆಗುತ್ತಿದೆ. ಅಂಡರ್ ವ್ಯಾಲ್ಯುವೇಶನ್ ಆಗುವುದನ್ನು ತಪ್ಪಿಸುವ ಕಾರಣದಿಂದ ಸಮಿತಿಯನ್ನು ರಚನೆ ಮಾಡಬೇಕೆಂದು ಆಲೋಚನೆ ತಮ್ಮಲ್ಲಿ ಇದೆ. ಇದು ಸೂಕ್ತವಾದ ಆಲೋಚನೆ ಎಂದು ನನಗಾದರೂ ಅನ್ನಿಸುತ್ತದೆ. ಏಕೆಂದರೆ ಸರ್ಕಾರಕ್ಕೆ ಬರಬೇಕಾದ ಆದಾಯ ಬರಬೇಕಾಗುತ್ತದೆ. ಇಲ್ಲದಿದ್ದರೆ ಸರ್ಕಾರ ನಡೆಯಬೇಕಲ್ಲ. ಯಾವ ಸರ್ಕಾರ ಇದ್ದರೂ ಕೂಡ ಅಷ್ಟೆ. ಸರ್ಕಾರಕ್ಕೆ ಬಲಬೇಕಾದ ಆದಾಯ ಬಂದರೆ ಸರ್ಕಾರ ನಡೆಯುತ್ತದೆ. ಹಣವಿಲ್ಲದೆ ಮಂತ್ರಿಗಳನ್ನು ಮಾಡಿದರೆ ಏನು ಪ್ರಯೋಜನವಾಗುತ್ತದೆ. ನಾನು ಮಂತ್ರಿಯಾದರೂ ಕೂಡ ಏನು ಪ್ರಯೋಜನವಾಗುತ್ತದೆ. ಏನು ಆಗುವುದಿಲ್ಲ. ಸರ್ಕಾರಕ್ಕೆ ಬರಬೇಕಾದ ಹಣ ಎಲ್ಲಿ ಸೋರಿಹೋಗುತ್ತಿದೆ. ಆ ಸೋರಿ ಹೋಗುವುದನ್ನು ನಿಲ್ಲಿಸತಕ್ಕ ಕೆಲಸ ಆಗಬೇಕಾಗುತ್ತದೆ. ಈ ಸಮಿತಿಗಳನ್ನು ರಚನೆ ಮಾಡತಕ್ಕ ಕೆಲಸ ತಾವು ಏನು ಆಲೋಚನೆ ಮಾಡಿದ್ದೀರಿ.

ಅದನ್ನು ಶೀಘ್ರವಾಗಿ ಮಾಡಿದರೆ ಸೂಕ್ತ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಂಡರ್‌ವ್ಯಾಲ್ಯುವೇಶನ್ ಪತ್ತೆಹಚ್ಚುವುದಕ್ಕೆ ಬೆಂಗಳೂರಿನಲ್ಲಿ ಒಂದು ವ್ಯವಸ್ಥೆ ಇದೆ. ಇದಕ್ಕೆ ಜಿಲ್ಲಾಧಿಕಾರಿಯವರು ಇದ್ದಾರೆ, ಇದರ ವಿಚಾರದಲ್ಲಿ ಒಂದು ದೊಡ್ಡ ಕಡತ ನನ್ನ ಹತ್ತಿರ ಇದೆ. ಕೆ.ಹೆಚ್. ಪಾಟೀಲರ ಕಾಲದಲ್ಲಿ ಹೇಗೆ ತಪ್ಪಿಸಿಕೊಂಡರೂ ಗೊತ್ತಿಲ್ಲ. ಸುಮಾರು 7 ಪುಟದ ವರದಿ ಇದೆ. ಇದು ತನಿಖೆಯಾಗಿದೆ. ತನಿಖೆಯಾಗಿ ಅನ್ನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅನೇಕ ವಿಚಾರಗಳು ಇವತ್ತಿನದಿವಸ ಇವೆ. ನಾನು ಇವತ್ತು ತಮ್ಮ ಕೈಗೆ ತರಿಸಿಕೊಡುತ್ತೇನೆ. ಒಂದೆರಡು ತುಣುಕುಗಳನ್ನು ಹೇಳುವುದು ಸೂಕ್ತವೆಂದು ನನಗೆ ಅನ್ನಿಸುತ್ತದೆ. "ಪ್ರತಿಯೊಂದು ಅಂತಿಮ ಆದೇಶದಲ್ಲಿ ಕಕ್ಷಿದಾರನು ಒಂದೇ ರೀತಿಯ ಕೋರಿಕೆಯನ್ನು ಸಲ್ಲಿಸಿರುವುದು ಕಂಡುಬರುತ್ತದೆ.

ನಾವು ಕ್ರಯಕ್ಕೆ ಪಡೆದ ಸ್ವತ್ತನ್ನು ನೋಂದಾಯಿಸುವಾಗ ಮುದ್ರಾಂಕ ಅಪಮೌಲ್ಯ ಮಾಡದೆ, ಮಾರುಕಟ್ಟೆ ಬೆಲೆಗೆ ಸರಿಸಮಾನವಾಗಿ ಮುದ್ರಾಂಕ ಶುಲ್ಕವನ್ನು ಕೊಟ್ಟು ನೋಂದಾಯಿಸಿರುತ್ತೇವೆ. ಆದಕಾರಣ ಪ್ರಕರಣವನ್ನು ಕೈಬಿಡಬೇಕೆಂದು ಕೋರಿದರು. ಒಂದುವೇಳೆ ಪ್ರಕರಣವನ್ನು ಕೈಬಿಡಲು ಸಾಧ್ಯವಾಗದೆ ಹೋದಲ್ಲಿ ಒಮ್ಮೆಲೆ ಅಂತಿಮ

ಆದೇಶವನ್ನು ಹೊರಡಿಸಬೇಕಾಗಿ ವಿನಂತಿಸಿದರು. ಪ್ರತಿವಾದಿಯು ಸಲ್ಲಿಸಿರುವ ಆಕ್ಷೇಪಣೆಯಲ್ಲಿ ಕೆಲವು ಮುಖ್ಯಾಂಶಗಳು". ಇದನ್ನೆಲ್ಲಾ ಸ್ಟೆನ್ಸಿಲ್ ಮಾಡಿ ಇಟ್ಟಿದ್ದಾರೆ. ಸುಮಾರು ನೂರಾರು ಕೇಸುಗಳಲ್ಲಿ ವಿಚಾರಣೆ ಆಗಬೇಕಾಗಿದೆ. ನೂರಾರು ಪ್ರಕರಣಗಳಲ್ಲಿ ತಾರೀಖು, ಪತ್ರದ ಸಂಖ್ಯೆ, ಎಲ್ಲವನ್ನು ಇದರಲ್ಲಿ ನೋಂದಾಯಿಸಿದ್ದಾರೆ. ಇವತ್ತು ಈ ಫೈಲೇ ನಾಪತ್ತೆಯಾಗಿದೆ, ಈಗ ವರದಿ ಇಲ್ಲ, ಅದನ್ನು ತೆಗೆದು ಬಿಸಾಕಿದ್ದಾರೆ. ಅದು ನಾಪತ್ತೆಯಾಗಿದೆ. ಇದು ನೋಂದಣಿ ಮಹಾ ಪರಿವೀಕ್ಷಕರು, ಮತ್ತು ಮುದ್ರಾಂಕ ಆಯುಕ್ತರು, ಮುದ್ರಾಂಕ ಅಪಮೌಲ್ಯ ತನಿಖೆ. ಶಿವಾಜಿನಗರ, ಬೆಂಗಳೂರು ಕಛೇರಿಯಲ್ಲಿ ಪರಿವೀಕ್ಷಿಸಿದ ವರದಿ. ಅಂಡರ್ ವ್ಯಾಲ್ಯೂ ಡೆಪ್ಯೂಟಿ ಕಮೀಷನರ್ ಅವರ ಕಛೇರಿಯನ್ನೂ ಇವರುಗಳು ಇನ್‌ಸ್ಪೆಕ್ಟ್ ಮಾಡಿದ್ದಾರೆ. ಆ ವರದಿ ಇಲ್ಲಿದೆ. ನಿಮ್ಮಲ್ಲಿ ಇದು ಇಲ್ಲ. ಇವತ್ತು ಇನ್‌ಸ್ಪೆಕ್ಟ್ ಮಾಡಿರುವಂಥ ಅಧಿಕಾರಿಗಳನ್ನು ಕರೆಮ ಇದರ ಬಗ್ಗೆ ತನಿಖೆ ಮಾಡಿರುವುದು ನಿಜವೇ ಇಲ್ಲವೇ ವಿಚಾರ ಮಾಡಿ. ಈ ಅಧಿಕಾರಿಗಳು ಇವತ್ತು ಪುನಃ ಕೂಡಿ ಅದೇ ಜಾಗಗಳಿಗೆ ಬಂದಿದ್ದಾರೆ. ಇದು ನನಗೆ ಅರ್ಥವಾಗುತ್ತಿಲ್ಲ. ಹೀಗೆ ಈ ಅಧಿಕಾರಿಗಳು ಒಳ್ಳೆಯ ಆಯಕಟ್ಟಿನ ಜಾಗಗಳಿಗೆ ಹೇಗೆ ಬರುತ್ತಾರೆ? ಇದೇನಾದರೂ ಯಕ್ಷಿಣಿಯೇ? ಈ ಸರ್ಕಾರ ಬಂದ ಮೇಲಂತೂ ನಾವು ಬರೀ ಯಕ್ಷಿಣಿಯನ್ನೇ ನೋಡುತ್ತಿದ್ದೇವೆ,

ಜಾದುಗಾರರು ಕೂಡ ಮಾಡುವುದಕ್ಕೆ ಸಾಧ್ಯವಿಲ್ಲದಂಥ ಜಾದುವನ್ನು ಈ ಅಧಿಕಾರಿಗಳ ವರ್ಗಾವಣೆಯಲ್ಲಿ ನಾವು ನೋಡುತ್ತಿದ್ದೇವೆ. ಇದರಲ್ಲಿ ಸರ್ಕಾರಕ್ಕೆ ಬರುವಂಥ ಕೋಟ್ಯಾಂತರ ರೂ.ಗಳ ಆದಾಯ ಸೋರಿ ಹೋಗುತ್ತಿದೆ. ಬೆಂಗಳೂರು ನಗರ ಒಂದರಲ್ಲೇ, ಒಂದು ಉದಾಹರಣೆ ಹೇಳುವುದಾದರೆ, ಅನೇಕ ಪ್ರಕರಣಗಳಲ್ಲಿ ಅವರು ಪತ್ರ ಎಷ್ಟಕ್ಕೆ ಮಾಡಬೇಕೆಂದು ಪ್ರೊಪೋಸಲ್ ಕೊಟ್ಟಿರುತ್ತಾರೋ ಅದಕ್ಕಿಂತ ಕಡಿಮೆಗೆ ಹಣವನ್ನು ನಮೂದಿಸಿ ಕಳುಹಿಸಿರುತ್ತಾರೆ. ಡಿ.ಸಿ.ಯವರು. ಇದು ವರದಿಯಲ್ಲಿ ಇದೆ. ತಾವು ನಾಳೆ ಉತ್ತರ ಕೊಡುವಿರೆಂದು ಕಾಣುತ್ತದೆ. ಉತ್ತರ ಕೊಡುವ ಸಂದರ್ಭದಲ್ಲಿ ಇದರ ಬಗ್ಗೆ ದಯವಿಟ್ಟು ತಾವು ಸಂಪೂರ್ಣವಾದ ತನಿಖೆ ನಡೆಸಿ ಮಾಹಿತಿಯನ್ನು ಕೊಡಬೇಕು. ಇದರಲ್ಲಿ ಕೋಟ್ಯಾಂತರ ರೂ.ಗಳ ಅವ್ಯವಹಾರವಾಗಿದೆ. ಈ ಅಧಿಕಾರಿ ಒಂದು ಕಡೆ ಬಿಟ್ಟು ಇನ್ನೊಂದು ಕಡೆ ಬರುವುದಕ್ಕೆ ಹೇಗೆ ಸಾಧ್ಯ. ಆಯಕಟ್ಟಿನ ಜಾಗದಲ್ಲಿ ಬರುವುದಕ್ಕೆ ಏನು ಕಾರಣ? ಸರ್ಕಾರಕ್ಕೆ ಬರುವಂಥ ಆದಾಯದಲ್ಲಿ ಕೋಟ್ಯಾಂತರ ರೂ.ಗಳು ಸೋರಿ ಹೋಗುತ್ತಿದ್ದರೆ, ನಾವು ಇಲ್ಲಿ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ನನ್ನ ಭಾವನೆ ನಿಮಗೂ ಇದೆ ಎನ್ನುವುದು ನನ್ನ ಅಭಿಪ್ರಾಯ.

ಈ ಅಭಿಪ್ರಾಯ ಸರಿಹೋಗಬೇಕಾದರೆ, ಇದರ ಬಗ್ಗೆ ತತ್‌ಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ. ಈ ವರದಿಯನ್ನು ಅಧ್ಯಕ್ಷರ ಮೂಲಕ ತಮಗೆ ಕಳಿಸುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಇನ್ನು ಲ್ಯಾಂಡ್ ಅಕ್ವಿಸಿಷನ್ ಬಗ್ಗೆ. ಇವತ್ತು ಈ ಸಭೆಗೆ ಬರುವುದಕ್ಕೆ ಮುಂಚೆ ನಾನು ನನ್ನ ಕ್ಷೇತ್ರಕ್ಕೆ ನನ್ನ ತಾಲ್ಲೂಕಿಗೆ ಹೋಗಿದ್ದೆ. 1978ರಲ್ಲಿ ನಮ್ಮ ಕೋಲಾರ ತಾಲ್ಲೂಕಿನಲ್ಲಿ ಒಂದು ಕೆರೆಯನ್ನು ಮಂಜೂರು ಮಾಡಿಸಿದ್ದೆ. ಅದು ಎಸ್ಟಿಮೇಟ್ ಆಗಿದ್ದುದು ಒಂದೂವರೆ ಲಕ್ಷ ರೂ.ಗಳು. ಆದರೆ ಅದು ಕಾರ್ಯಗತವಾದಾಗ ಆಖೈರಾಗಿ 14 ಲಕ್ಷ ರೂ.ಗಳು ಖರ್ಚಾಯಿತು. ಬರೀ ಕಾಂಪೆನ್‌ಸೇಷನ್ 18 ಲಕ್ಷ ರೂ.ಗಳಾಗಿದೆ. ಒಂದೂವರೆ ಲಕ್ಷ ರೂ.ಗಳಿಗೆ ಎಸ್ಟಿಮೇಟ್ ಆಗಿರುವಂಥದ್ದು, ಕೆರೆ ಕಟ್ಟುವುದಕ್ಕೆ 14 ಲಕ್ಷ ರೂ.ಗಳಾಯಿತು, ಕಾಂಪೆನ್‌ಸೇಷನ್ 18 ಲಕ್ಷ ರೂ.ಗಳಾಯಿತು. ಇದಕ್ಕೆ ಬಡ್ಡಿ ಕೂಡ ಕೊಡಬೇಕಾಗುತ್ತದೆ. ಬಡ್ಡಿ ಸೇರಿದರೆ ಇದು 30-35 ಲಕ್ಷ ರೂ.ಗಳಾಗುತ್ತದೆ. ಒಂದೂವರೆ ಲಕ್ಷ ಎಲ್ಲಿ? ಮೂವತ್ತೈದು ಲಕ್ಷ ಎಲ್ಲಿ? ಇಲ್ಲಿಯವರೆಗೆ ಕಾಂಪೆನ್‌ಸೇಷನ್ ಕೊಟ್ಟಿಲ್ಲ, ಅನೇಕ ಸಂದರ್ಭದಲ್ಲಿ

ಸರ್ಕಾರ ಹಣವನ್ನು ಬಿಡುಗಡೆ ಮಾಡುವುದಿಲ್ಲ, ಹಣವನ್ನು ಬಿಡುಗಡೆ ಮಾಡದೇ ಪಾವತಿ ಮಾಡುವುದಕ್ಕೆ ಆಗುವುದಿಲ್ಲ. ಆದರೆ ಅನೇಕ ಸಂದರ್ಭದಲ್ಲಿ ಹಣವನ್ನು ಬಿಡುಗಡೆ ಮಾಡಿದ್ದರೂ ಕೂಡ ನಮ್ಮ ಲ್ಯಾಂಡ್ ಅಕ್ವಿಸಿಷನ್ ಆಫೀಸರ್‌ಗಳು, ಸ್ಪೆಷಲ್ ಲ್ಯಾಂಡ್ ಅಕ್ವಿಸಿಷನ್ ಆಫೀಸರ್‌ಗಲು, ಇದಕ್ಕೆ ನೂರೆಂಟು ಜನ ಇದ್ದಾರೆ,ಅವರುಗಳನ್ನು ಸರಿಯಾಗಿ ನೋಡಿಕೊಳ್ಳದೇ ಇದ್ದರೆ, ಕೊನೆಯ ಪಕ್ಷ ಆ ಹಣದಲ್ಲಿ ಶೇಕಡ 25-30 ರಷ್ಟು ಅವರ ಜೇಬಿಗೆ ತುಂಬದಿದ್ದರೆ, ಜಮೀನನ್ನು ಕಳೆದುಕೊಂಡ ರೈತರಿಗೆ ಮೋಕ್ಷವಿಲ್ಲ. ಹಣ ಪಾವತಿ ಆಗುವುದಿಲ್ಲ. ಇವತ್ತು ಬೆಂಗಳೂರಿನಲ್ಲಿ ನಡೆದಿರುವಂಥ ಇನ್ನೊಂದು ಉದಾಹರಣೆಯನ್ನು ಕೊಡುತ್ತೇನೆ. ಇಲ್ಲಿ ಸ್ಪೆಷಲ್ ಲ್ಯಾಂಡ್ ಅಕ್ವಿಸಿಷನ್ ಆಫೀಸರ್ ಫಾರ್ ರೈಲ್‌ವೇಸ್, ವಿಶ್ವೇಶ್ವರಯ್ಯ ಸೆಂಟರ್, ಇವರು ಇದ್ದಾರೆ. 1975ರಲ್ಲಿ ರೈಲ್‌ವೇಗಾಗಿ ಜಮೀನನ್ನು ವಶಪಡಿಸಿಕೊಂಡಿದ್ದಾರೆ. ಈ ರೀತಿಯಾದ ನೂರಾರು ಕೇಸಸ್ ಇದೆಯ ಎಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿ ಏನಾಗಿದೆ ಎಂದರೆ, ಅನೇಕರು ಸತ್ತು ಹೋಗಿದ್ದಾರೆ. ಸಾಯುವಾಗಲೂ ಸರ್ಕಾರವನ್ನು ಕೇಳಿಕೊಂಡಿದ್ದಾರೆ. ನಮಗೆ ಹಣವನ್ನು ಕೊಡಿ ಎಂದು. 1975ರಲ್ಲಿ ಅಕ್ವೈರ್ ಆಗಿರುವಂಥದ್ದಕ್ಕೆ. ಇಲ್ಲಿಯವರೆಗೂ ಹಣ ಕೊಟ್ಟಿಲ್ಲ, ಇವತ್ತು ಲ್ಯಾಂಡ್ ಅಕ್ವಿಸಿಷನ್ ಆಫೀಸರ್ ಇದ್ದಾರೆ. ಅವರ ಹೆಸರು ನನಗೆ ಗೊತ್ತಿಲ್ಲ, ನಾನು ಕೇಳುವುದಕ್ಕೂ ಹೋಗಿಲ್ಲ. ಇವತ್ತು ಯಾರು ಅಧಿಕಾರದಲ್ಲಿದ್ದಾರೆ, ಅವರು ಸುತ್ತಿ ಸುತ್ತಿ ಕಡೆಗೆ ಸರಿಯಾದ ರೇವಿಗೇ ಬರುತ್ತಾರೆ. ನಮ್ಮಲ್ಲಿ ಮಳೆ ಬಂದಾಗ ಮೀನು ಹಿಡಿಯುತ್ತಾರೆ. ಮೀನು ಹಿಡಿಯುವಾಗ ಸಣ್ಣದೊಂದು ಸಾಧನ ಇಡುತ್ತಾರೆ. ಎಲ್ಲಿ ಮೀನು ಬರುತ್ತದೆ. ಅಲ್ಲಿಗೆ ಈ ಸಾಧನವನ್ನು ತೆಗೆದುಕೊಂಡು ಹೋಗಿ ಇಡುತ್ತಾರೆ.

ಅದೇ ರೀತಿ ರೇವನ್ನು ನೋಡಿಕೊಂಡು ಇವತ್ತಿನ ದಿವಸ ನಮ್ಮ ಅಧಿಕಾರಿಗಳು ಇದ್ದಾರೆ. ತಾವು ಉತ್ತರ ಕೊಡುವಾಗ ಅಥವಾ ಬೇರೆ ಸಂದರ್ಭದಲ್ಲಿ ಇದರ ಬಗ್ಗೆ ಮಾಹಿತಿಯನ್ನು ಕೊಡಬೇಕಾಗುತ್ತದೆ. ಇದನ್ನು ನಾನು ತಮಗೆ ಕಳುಹಿಸುತ್ತಿದ್ದೇನೆ. ಈ ಸ್ಪೆಷಲ್ ಲ್ಯಾಂಡ್ ಅಕ್ವಿಜಿಶನ್ ಆಫೀಸರ್, ರೈಲ್ವೇಸ್ ಏನಿದ್ದಾರೆ? ವಿಶ್ವೇಶ್ವರಯ್ಯ ಸೆಂಟರ್ ಬೆಂಗಳೂರಿನಲ್ಲಿ ಇರತಕ್ಕಂಥವರು, ಇದರ ಬಗ್ಗೆ ಕೆಲವು ಕೇಸ್‌ಗಳು ಇದರಲ್ಲಿದೆ. ಇದರ ಬಗ್ಗೆ ಅವರಿಗೆ ಹಣ ಕೊಟ್ಟಿದ್ದರೂ ಕೂಡ ರೈಲ್ವೆ ಇಲಾಖೆಯಿಂದ ಹಣ ಬಂದಿದ್ದರೂ ಕೂಡಾ ಹಣ ಕೊಡುತ್ತಿಲ್ಲ, ಕಾರಣವೇನೆಂದರೆ, ಅವರಿಗೆ ಹಣ ಕೊಟ್ಟಿಲ್ಲವೆನ್ನುವ ಕಾರಣಕ್ಕೋಸ್ಕರ ಇವೊತ್ತು ಕೊಡುತ್ತಿಲ್ಲ. ದಯವಿಟ್ಟು, ಇದರ ಬಗ್ಗೆ ನೀವು ತನಿಖೆ ನಡೆಸಿ, ನಮಗೆ ಉತ್ತರ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದನ್ನೂ ಕೂಡ ಅಧ್ಯಕ್ಷರ ಮುಖಾಂತರ ತಮಗೆ ಕಳುಹಿಸುತ್ತಿದ್ದೇನೆ. ಅದೇ ರೀತಿಯಲ್ಲಿ ಸಹಕಾರ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಕೆ.ಎಚ್. ಪಾಟೀಲರಿಗೂ ಕೂಡ ಗೊತ್ತಿದೆ. ಬೆಂಗಳೂರು ಜಿಲ್ಲೆಗೆ ಸಂಬಂಧಪಟ್ಟ ಒಂದು ಕೇಂದ್ರ ಸಹಕಾರ ಬ್ಯಾಂಕಿದೆ. ಬಿ.ಡಿ.ಸಿ.ಸಿ ಬ್ಯಾಂಕ್ ಇಲ್ಲಿ ಒಬ್ಬರು ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದರು.

ಅವರನ್ನು ಮಾನ್ಯ ಕೆ.ಎಚ್. ಪಾಟೀಲರು ವರ್ಗ ಮಾಡಿದ್ದರು. ಆದರೆ, ಇವರನ್ನೂ ಕೂಡ ಮೀರಿಸುವಂಥ ಶಕ್ತಿ ಇದೆ. ಒಬ್ಬ ಮಂತ್ರಿಯನ್ನು ಕೂಡಾ ಮೀರಿಸುವಂಥ ಶಕ್ತಿ, ಈ ಅಧಿಕಾರಿ ಇದೆ. ಕಾರಣವೇನೆಂದರೆ, ಇದು ಇಡೀ ರಾಜ್ಯದಲ್ಲಿ ಪ್ರಚಲಿತವಾಗಿರತಕ್ಕಂಥ ಒಂದು ಸಂಸ್ಥೆ. ವಯ್ಯಾಲಿಕಾವಲ್ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿಯವರಿಗೆ ಎಷ್ಟು ಸಾಲ ಕೊಟ್ಟಿದ್ದಾರೆ?....ಅವರು ಹೇಳುವುದಿಲ್ಲ. ನಾಲ್ಕು ಕೋಟಿ ರೂಪಾಯಿಗಳನ್ನು ಹಣ ಕೊಟ್ಟಿದ್ದಾರೆ. ಅದು ಇವೊತ್ತಿನ ಪರಿಸ್ಥಿತಿಯಲ್ಲಿ ವಾಪಸ್ಸು ಬರುವುದಿಲ್ಲ, ನಾಲ್ಕು ಕೋಟಿ ರೂಪಾಯಿಗಳು, ಸಾರ್ವಜನಿಕರ ಹಣ ಕೊಟ್ಟಿದ್ದಾರೆ. ಅದು ವಾಪಸ್ಸು ಬರತಕ್ಕಂಥ ಪರಿಸ್ಥಿತಿಯಲ್ಲಿಲ್ಲ, ವಯ್ಯಾಲಿಕಾವಲ್ ಸೊಸೈಟಿ

ಒಂದೇ ಅಲ್ಲ, ಇದು ಅವರು ಮಾಡಿರತಕ್ಕಂಥ ಅವ್ಯವಹಾರ. ಇನ್ನು ಕೆಲವು ಸೊಸೈಟಿಗಳಿಗೆ ಸಾಲ ಮಂಜೂರು ಮಾಡಬೇಕಾಗಿದ್ದರೆ, ಸೊಸೈಟಿಗೆ ಮಂಜೂರು ಮಾಡಬೇಕು, ಒಂದೇ ಚೆಕ್‌ನಲ್ಲಿ ಹೆಸರು ಕೊಡುವುದಕ್ಕೆ ಅವಕಾಶವಿಲ್ಲ. ಯಾರ ಹೆಸರಿನಲ್ಲಿ ಸಾಲ ಮಂಜೂರಾಗುತ್ತದೋ, ಅವರ ಹೆಸರಿನಲ್ಲಿ ಚೆಕ್ ಹೋಗಬೇಕು. ಆ ರೀತಿ ಮಾಡಲಿಲ್ಲ. ಒಂದೇ ಸಾರಿ ಚೆಕ್ ಸುಮಾರು 90 ಲಕ್ಷ ರೂಪಾಯಿಗಳಿಗೆ ಹೋಗುತ್ತದೆ. ಅದ್ಯಾವುದೆಂದರೆ, ಟೆಲಿಗ್ರಾಫ್ ಇಂಜನಿಯರು ಎಂಪ್ಲಾಯಿಸ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯವರಿಗೆ ಅವಕಾಶ ಇಲ್ಲದಿದ್ದರೂ ಕ್ಯಾಶ್ ಕ್ರೆಡಿಟ್ 90ಲಕ್ಷ ರೂಪಾಯಿಗಳನ್ನು ನೀಡಿ ದುರುಪಯೋಗವಾದಿದ್ದರೂ ಸಹ ಪರಿಶೀಲನೆ ಮಾಡದೆ ಪುನಃ ಎರಡು ಬಾರಿಗೆ 90 ಲಕ್ಷ ರೂಪಾಯಿಗಳನ್ನು ಬ್ಯಾಂಕಿಗೆ ಕಟ್ಟದೆ ಇದ್ದರೂ ಸಹ ನಿಯಮ ಮೀರಿ ಆಡಳಿತ ಮಂಡಳಿಗೆ ಸುಳ್ಳು ಮಾಹಿತಿ ನೀಡಿ, ಸಾಲ ನವೀಕರಿಸಿದ್ದಾರೆ. ಇದರಲ್ಲಿ ಏನಾಗಿದೆಯೆಂದರೆ, ಇಂಡಿವಿಜುಯಲ್ ಆಗಿ ಯಾರು ಬೆನಿಫಿಶಿಯರಿ ಇರುತ್ತಾರೆ? ಸಾಲಗಾರರು ಇರುತ್ತಾರೋ ಅವರಿಗೆ ಚೆಕ್ ಹೋಗಬೇಕು. ಒಂದೇ ಸಾರಿ ಇಷ್ಟು ಹಣ ತೆಗೆದುಕೊಂಡು ಹೋಗುತ್ತಾರೆ. ನಮ್ಮ ಜೀವಮಾನದಲ್ಲಿ ಬಹುಶಃ ಇಷ್ಟು ನೋಡಿರಲಿಕ್ಕೆ ಸಾಧ್ಯವಿಲ್ಲ. ಅಂದರೆ, ಇಂಥಹ ಒಬ್ಬ ಅಧಿಕಾರಿಗೆ ಲಕ್ಷ, ಕೋಟಿಗಳೆಂದರೆ ಲೆಕ್ಕವಿಲ್ಲ.

ಇವೊತ್ತು ಇವರ ಮೇಲೆ ಸಾಕಷ್ಟು ಅಪಾದನೆಗಳಿವೆ. ಒಂದು ಸಾರಿ ವಿಧಾನ ಪರಿಷತ್‌ನಲ್ಲೂ ಇದರ ಬಗ್ಗೆ ಚರ್ಚೆಯಾಗಿದೆ. ಚರ್ಚೆಯಾಗಿ ಕ್ರಮ ತೆಗೆದುಕೊಳ್ಳುತ್ತೇವೆಂದರು, ಇದನ್ನು ಲೋಕಾಯುಕ್ತಕ್ಕೆ ಒಪ್ಪಿಸಬೇಕೆಂದು ಬೇಡಿಕೆ ಕೂಡ ಇತ್ತು. ಏನೂ ಇಲ್ಲ, ಅವರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಕೆ.ಹೆಚ್. ಪಾಟೀಲರು ಕೂಡಾ ಹೆದರಿದರು. ಹೆದರಿ ಕೊನೆಗೆ ಬೆಂಗಳೂರಿನಲ್ಲೆ ಒಂದು ಕಡೆ ವರ್ಗ ಮಾಡಿದರು. ಇನ್ನೊಂದು ಸಹಕಾರಿ ಬ್ಯಾಂಕ್‌ಗೆ ಹಾಕಿದರು. ಅವರು ಎಲ್ಲಾ ಕಡೆ ಸುತ್ತಿಕೊಂಡು ಕೊನೆಗೆ ಇಲ್ಲಿಗೆ ಬಂದಿದ್ದಾರೆ. ಏನು ಸ್ವಾಮಿ, ನೀವು ಕುರಿ ಕಾಯೋದಿಕ್ಕೆ ತೋಳ ಬಿಡ್ತಿರಾ ಅದು ನಿಮ್ಮ ಸಹಕಾರದ ನೀತಿ. ನಾವೇನು ಮಾಡೋಕಾಗುತ್ತದೆ. ಕುರಿ ಕಾಯೋದಕ್ಕೆ ತೋಳ ಬಿಡುವಂತಾದ್ದು ನಿಮ್ಮ ನೀತಿ. ತೋಳವಾದರೂ, ಆಗಲಿ 4-5 ಕುರಿಗಳನ್ನು ತಿಂದುಕೊಳ್ಳುತ್ತದೆ ಅಂದುಕೊಳ್ಳೋಣ. ಆದರೆ, ನೀವೇನು ಮಾಡುತ್ತಿದ್ದೀರಿ? ಕುರಿಗಳನ್ನು ಕಾಯೋದಕ್ಕೆ ಹುಲಿಗಳನ್ನು ಬಿಡುತ್ತಿದ್ದೀರಿ. ಗಾದೆ ಮಾತು ಕುರಿಗಳನ್ನು ಕಾಯೋದಕ್ಕೆ ತೋಳ".

ಈಗ ಗಾದೆ ಮಾತನ್ನು ಬದಲಾವಣೆ ಮಾಡಬೇಕೆಂದರೆ, ನಿಮ್ಮ ಸರ್ಕಾರ ಬಂದ ಮೇಲೆ ಕುರಿ ಕಾಯೋದಕ್ಕೆ ಹುಲಿಗಳನ್ನು ಬಿಡುತ್ತಿದ್ದೀರಿ. ಈ ಅಧಿಕಾರಿಗಳಿಂದ ಕೋಟ್ಯಾಂತರ ರೂಪಾಯಿಗಳು ಲೂಟಿಯಾಗಿದೆ. ಬೆಂಗಳೂರು ಕೇಂದ್ರ ಸಹಕಾರ ಬ್ಯಾಂಕಿನಲ್ಲಿ ದರೋಡೆಯಾಗಿದೆ. ಅದನ್ನು ಸರಿಪಡಿಸುವುದಕ್ಕೋಸ್ಕರ ದಾಖಲೆಗಳನ್ನು ಸೃಷ್ಟಿ ಮಾಡಬೇಕಲ್ಲ. ಸಷ್ಟಿಮಾಡಿಸಿ, ರಿಜಿಸ್ಟರನ್ನು ಕೂಡಾ ಸರಿಪಡಿಸುವುದಕ್ಕೋಸ್ಕರ ಪುನಃ ಕೇಂದ್ರ ಸಹಕಾರ ಬ್ಯಾಂಕಿಗೆ ಅದೇ ಅಧಿಕಾರಿಯನ್ನು ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ವರ್ಗ ಮಾಡಿ ನೇಮಕ ಮಾಡಿದ್ದೀರಿ. ಏನು ಕಾರಣ? ಪಾಟೀಲ್‌ರವರೆ, ನೀವು ಹೇಳಬೇಕು. ನೀವು ಕಣ್ಣೀರು ಸುರಿಸುತ್ತೀರೋ ಏನೋ ಗೊತ್ತಿಲ್ಲ ಈ ರೀತಿ ಯಾದಂಥ ವ್ಯವಹಾರಗಳು ನಡೆಯುತ್ತಿದ್ದರೆ, ನಿಮ್ಮ ಸರ್ಕಾರದಲ್ಲಿ ನೀವು ಸಹಕಾರ ತತ್ವದ ಮೇಲೆ, ಸಹಕಾರದಲ್ಲಿ ಬಹಳ ನಂಬಿಕೆ ಇಟ್ಟಿರತಕ್ಕವರು ನೀವು ಸಹಕಾರ ಸಂಘಗಳನ್ನು....

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು) : ನಿಮಗೆ ತಿಳಿಯದಿದ್ದರೆ ನಾನು ಹೇಳಬಹುದು. ನಿಮಗೆ ತಿಳಿದಿದ್ದರೆ ಹೇಳುವ ಅವಶ್ಯಕತೆಯಿಲ್ಲ. ನಿಮಗೆ ತಿಳಿಯದಿದ್ದರೆ ನಾನು ಏನಾದರೂ ಹೇಳುತ್ತಿದ್ದೆ.

ಶ್ರೀ ಸಿ. ಬೈರೇಗೌಡ : ಇವರು ಹಿರಿಯರಾಗಿ ನಮ್ಮನ್ನು ಸಿಕ್ಕಿ ಹಾಕಿಸುವಂಥ ಕೆಲಸ ಮಾಡುತ್ತಿದ್ದಾರೆ. ಇಷ್ಟು ತಿಳಿದರೂ ಕೂಡ ನಿಮ್ಮಂತವರ ಕೈಯಲ್ಲೂ ಕೂಡ ಈ ಕೆಲಸ ಮಾಡುವುದಕ್ಕಾಗಲಿಲ್ಲ ಎಂಬುದೇ ನನ್ನ ವ್ಯಥೆ. ಇಷ್ಟೊಂದು ದುರ್ದೆಸೆ. ಇಷ್ಟೊಂದು ಅನ್ಯಾಯ, ಅಕ್ರಮ ನಡೆಯುತ್ತಿದ್ದರೂ ಸಹಾ ಏನು ಕ್ರಮ ತೆಗೆದುಕೊಳ್ಳದೆ ಇರತಕ್ಕ ನಿಮ್ಮ ನಿಸ್ಸಹಾಯಕತೆ ಏನಿದೆ? ನಿಮ್ಮ ಅಸಹಾಯಕತೆ ಏನಿದೆ? ಅದನ್ನು ಕಂಡು ನನಗೂ ಕೂಡ ಮರುಕವಾಗುತ್ತದೆ.

ಶ್ರೀ ಕೆ.ಹೆಚ್. ಪಾಟೀಲ್ : ನಾನು ಅಸಹಾಯಕತೆ ತೋರಿಸಿಲ್ಲ, ನನ್ನ ಕರ್ತವ್ಯ ಏನಿತ್ತು ಆ ಪ್ರಕಾರ ಮಾಡಿದ್ದೇನೆ. ಖಾತೆ ನನ್ನ ಕೈಯಲ್ಲಿ ಇದ್ದಿದ್ದರೆ ಜೈಲಿಗೆ ಕಳುಹಿಸುತ್ತಿದ್ದೆ, ನನ್ನ ಕೈಯಲ್ಲಿ ಈಗಿಲ್ಲ, ಬಿಟ್ಟೆ.

7.45 ಪಿ.ಎಂ.

ಶ್ರೀ ಸಿ. ಬೈರೇಗೌಡ : ಬಹಳ ಒಳ್ಳೆಯ ಮಾತನ್ನು ಹೇಳಿದಿರಿ. ಅಂತಹ ಅಧಿಕಾರಿಗಳಿಗೆ ಜೈಲಿಗೆ ಕಳಿಸುತ್ತೇವೆಂದು ಹೇಳಿದಿರಿ. ಈ ಇಲಾಖೆಯಲ್ಲಿ ನೀವು ಇರಲಿ, ಅಥವಾ ಇನ್ನೊಬ್ಬರು ಇರಲಿ ಜೈಲಿಗೆ ಹಾಕುತ್ತೇವೆ ಎನ್ನುವ ಮಾತಿಗೆ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಆ ಕೆಲಸಗಳನ್ನು ಈಗಾಲಾದರೂ ಮಾಡ್ತೀರಾ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಅಧಿಕಾರದಲ್ಲಿದ್ದಾಗ ಮಾಡಲಾಗಲಿಲ್ಲ. ಇವರು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಾರೆ. ಅಷ್ಟನ್ನಾದರೂ ತಿಳಿದುಕೊಳ್ಳಿ.

ಶ್ರೀ ಸಿ. ಬೈರೇಗೌಡ : ಸ್ವಾಮಿ ನಾವು ಮಾಡುವುದಕ್ಕಾಗಲಿಲ್ಲ ಎಂದು ಇಲ್ಲಿ ಬಂದು ಕುಳಿತಿದ್ದೇವೆ. ನೀವು ಮಾಡುವವರು ಬಂದು ಕುಳಿದ್ದೀರಿ.. ದಯಮಾಡಿ ಇದರ ಬಗ್ಗೆ... ಏನೋ 1 ಸಾವಿರ 2 ಸಾವಿರ 10 ಸಾವಿರನೋ ಆಗಿದ್ದರೆ ಬಿಟ್ಟುಬಿಡಬಹುದಾಗಿತ್ತು. ಅದೇನು ಮಹಾ ದೊಡ್ಡ ವಿಚಾರವಲ್ಲವೆಂದು ಪ್ರಸ್ತಾಪ ಮಾಡುವುದಕ್ಕೆ ನಾನು ಹೋಗುತ್ತಿರಲಿಲ್ಲ, ಆದರೆ ಕೋಟ್ಯಾಂತರ ರೂಪಾಯಿಗಳನ್ನು ಮಾಡಿರತಕ್ಕದ್ದು. ಅವರನ್ನು ಮತ್ತೆ ಅಲ್ಲಿಯೇ ನೇಮಕ ಮಾಡಿದರೆ, ಅದೇ ಬ್ಯಾಂಕಿಗೆ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ನೇಮಕ ಮಾಡುತ್ತೇವೆಂದರೆ ಏನು ಇದು. ಇದು ಅವಿವೇಕದ ಒಂದು ಪರಮಾವಧಿ. ಇದಕ್ಕಿಂತ ಪದ ಇನ್ನೊಂದು ಇದ್ದರೆ ಮಾನ್ಯ ಖರ್ಗೆಯವರು ಹೇಳಲಿ. ಇನ್ನು ಕಾಗೋಡು ತಿಮ್ಮಪ್ಪನವರು ಏನಾದರೂ ಹೇಳಿದರೆ ಅದನ್ನು ಬಳಸುತ್ತೇನೆ. ಬೆಂಗಳೂರು ಜಿಲ್ಲಾ ಸಹಕಾರ ಬ್ಯಾಂಕಿನಲ್ಲಿ ಹಿಂದೆ ಒಬ್ಬರು ಮ್ಯಾನೇಜಿಂಗ್ ಡೈರೆಕ್ಟರ್ ಇದ್ದರು. ಕೋಟ್ಯಾಂತರ ರೂಪಾಯಿ ಹಣ ಅಲ್ಲಿ ಹೋಗಿದೆ. ಅವರನ್ನು ಮಾನ್ಯ ಕೆ.ಹೆಚ್. ಪಾಟೀಲ್‌ರವರು ಬೇರೆ ಕಡೆಗೆ ವರ್ಗಾವಣೆ ಮಾಡಿದ್ದರು. ಈಗ ಪುನಃ ಅವರು ಅದೇ ಬ್ಯಾಂಕಿಗೆ ಬಂದಿದ್ದಾರೆ. ಅದಕ್ಕೆ ಹೇಳಿದ್ದು ಗಾದೇ ಮಾತು, ಕುರಿಯನ್ನು ಕಾಯಲು ತೋಳ 1 ನೇಮಿಸುತ್ತಾರೆ, ಆದರೆ ಇಲ್ಲಿ ತೋಳವಲ್ಲ, ಹುಲಿ ಕುರಿಯನ್ನು ಕಾಯಲು ಹುಲಿಯನ್ನು ಬಿಡತಕ್ಕ ಕೆಲಸ ಈ ಸರ್ಕಾರದಿಂದ ನಡೆಯುತ್ತಿದೆ. ಈ ಹುಲಿಯನ್ನು ನಾನಿದ್ದರೆ ಜೈಲಿಗೆ ಹಾಕುತ್ತಿದ್ದೆ ಎಂಬ ಮಾತನ್ನು ಮಾನ್ಯ ಕೆ.ಹೆಚ್. ಪಾಟೀಲ್ ಅವರು ಹೇಳಿದ್ದಾರೆ, ನನಗೆ ಬಹಳ ಸಂತೋಷ. ಆದರೆ ಆ ಕೆಲಸವನ್ನು ಈವತ್ತು ಇರತಕ್ಕ ಸಹಕಾರಿ ಸಚಿವರು ಮಾಡಲಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ವಿಚಾರದಲ್ಲಿ ಸಮಗ್ರವಾದ ತನಿಖೆಯಾಗಬೇಕಾದ ಅವಶ್ಯಕತೆ ಇದೆ. ಈ ಮನುಷ್ಯನಿಗೆ ಏನು ಬೇಕಾದರು ಕೊಂಡುಕೊಳ್ಳಬಹುದಾದ ಶಕ್ತಿ ಇದೆ. ಅವರ ಹೆಸರನ್ನು ಹೇಳುವುದು ಬೇಡ.

ಶ್ರೀ ಕೆ.ಹೆಚ್. ರಂಗನಾಥ್ : ಈ ಮನುಷ್ಯ ಏನು ಬೇಕಾದರು ಮಾಡಬಹುದು, ಯಾರನ್ನು ಬೇಕಾದರೂ ಕೊಂಡುಕೊಳ್ಳುತ್ತಾನೆಂದು ಹೇಳಿದರೆ ಏನು ಅರ್ಥ. ಆ

ಮಾತನ್ನು ಸ್ವಲ್ಪ ಅಮೆಂಡ್ ಮಾಡಿ ಹೇಳಿ. ಅದಕ್ಕೆ ಒಳಗಾಗುವವರ್‍ಯಾರು ಇರುತ್ತಾರೋ ಅಂಥವರನ್ನು ಕೊಂಡುಕೊಳ್ಳುತ್ತಾನೆ.

ಶ್ರೀ ಸಿ. ಬೈರೇಗೌಡ : ನಿಮ್ಮ ತಿದ್ದುಪಡಿಯನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಅದಕ್ಕೆ ಒಳಗಾಗುವವರ ಸಂಖ್ಯೆಯೇ ಜಾಸ್ತಿ ಇದೆ. ಅವನಿಗೆ ಒಳಗಾಗದವರ ಸಂಖ್ಯೆಯು ಕಡಿಮೆ ಇದೆ. ಆದುದರಿಂದ ಇದನ್ನು ನೀವು ಸಿ.ಓ.ಡಿ ಗೆ ವಹಿಸುತ್ತೀರೋ...

ಉಪಾಧ್ಯಕ್ಷರು : ನೀವು ಈಗಾಗಲೇ ಮುಕ್ಕಾಲು ಗಂಟೆಯನ್ನು ತೆಗೆದುಕೊಂಡಿದ್ದೀರಿ. ಬೇಗ ಮುಗಿಸಬೇಕು.

ಶ್ರೀ ಸಿ. ಬೈರೇಗೌಡ : ಈ ವಿಷಯದ ಬಗ್ಗೆ ಸಮಗ್ರವಾದ ತನಿಖೆಗೆ ಸಿ.ಓ.ಡಿ.ಗೆ ಅಥವಾ ಲೋಕಾಯುಕ್ತಕ್ಕೆ ವಹಿಸಬೇಕೆಂದು ಆಗ್ರಹಪೂರ್ವಕವಾಗಿ ಒತ್ತಾಯ ಮಾಡುತ್ತೇನೆ. ದಯಮಾಡಿ ಈ ವಿಚಾರವನ್ನು ಬೆಂಗಳೂರು ಕೇಂದ್ರ ಸಹಕಾರಿ ಬ್ಯಾಂಕಿನ ಅವ್ಯವಹಾರಗಳನ್ನು ಲೋಕಾಯುಕ್ತದ ಮೂಲಕ ವಿಚಾರಣೆ ನಡೆಸಬೇಕು. ಅದು ನಿಮ್ಮ ಬ್ಯಾಂಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ನನ್ನ ಬ್ಯಾಂಕು ಎಂದರೇನು ಅರ್ಥ. ನನ್ನದ್ಯಾವ ಬ್ಯಾಂಕು ಇದೆ. ಬೆಂಗಳೂರಿನಲ್ಲಿ ನನ್ನದೊ ಗುತ್ತಿಗೆಗೆ ಇದೆ. ಬೆಂಗಳೂರಿನಲ್ಲಿ ಯಾವ್ಯಾವ ಬಿಲದಲ್ಲಿ ಯಾವ್ಯಾವ ಹಾವುಗಳಿವೆಯೋ ಅದೆಲ್ಲವನ್ನು ಗುತ್ತಿಗೆಗೆ ತೆಗೆದುಕೊಳ್ಳಲಾಗುತ್ತದೆಯೇ. ನಾನು ಬೆಂಗಳೂರಿನವನೆ, ತಾವು ಯಾವುದು ಎಂಬುದನ್ನು ಸ್ಪಷ್ಟವಾಗಿ ಹೇಳಿ.

ಶ್ರೀ ಸಿ. ಬೈರೇಗೌಡ : ಇನ್ನು ನಮ್ಮ ಕಡೆ ಕೊಳವೆ ಬಾವಿಗಳನ್ನು ಹಾಕುತ್ತಿರುವ ಬಗ್ಗೆ. ಇಲ್ಲಿ 500 ಅಡಿಯವರೆಗೆ ಕೊಳವೆ ಬಾವಿಗಳನ್ನು ತೋಡುತ್ತಿದ್ದಾರೆ. ಅನೇಕ ಬಾವಿಗಳಲ್ಲಿ ನೀರಿಲ್ಲದೆ ಬತ್ತಿಹೋಗಿದೆ. ಸಾಲಮಾಡಿ ಬಾವಿಯನ್ನು ತೋಡಿದ್ದಾರೆ. ಇದನ್ನು ವಜಾಮಾಡಬೇಕೆಂದು ಶ್ರೀಮಾನ್ ಏಕಾಂತಯ್ಯನವರ ಕಾಲದಲ್ಲಿ ಒಂದು ಸೂಚನೆಯನ್ನು ಕಳಿಸಿ ವಿನಂತಿ ಮಾಡಿದ್ದೆವು. ಅವರು ಒಂದು ಆಜ್ಞೆಯನ್ನು ಸಹ ಮಾಡಿದ್ದರು. ಅವರ ಕಾಲಕ್ಕೆ ಆ ಆಜ್ಞೆಯು ಸರಿಯಾಗಿತ್ತು. ಆದರೆ ಈಗ ಆ ಆಜ್ಞೆಯನ್ನು ಮಾರ್ಪಾಟು ಮಾಡಬೇಕಾದ ಅವಶ್ಯಕತೆ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಉಪಾಧ್ಯಕ್ಷಣಿಯವರೆ ದಯವಿಟ್ಟು ಬೇಗ ಮುಗಿಸಿ, ನಾವು ಬೆಳಿಗ್ಗೆ 11 ಗಂಟೆಯಿಂದ ಇಲ್ಲಿ ಕುಳಿತುಕೊಂಡಿದ್ದೇವೆ.

ಉಪಾಧ್ಯಕ್ಷರು : ಬೈರೇಗೌಡರೆ ಬೇಗ ಮುಗಿಸಬೇಕು.

ಶ್ರೀ ಸಿ. ಬೈರೇಗೌಡ : ಉಪಾಧ್ಯಕ್ಷಣಿಯವರೆ, ನಾನು ಒಂದೊಂದು ಇಲಾಖೆಯ ಮೇಲೆ 5-6 ನಿಮಿಷ ಮಾತನಾಡಿರಬಹುದು ಅಷ್ಟೆ.

ಈ ಕೊಳವೆ ಬಾವಿಗಳ ಪಕ್ಕ ಪಕ್ಕದಲ್ಲಿಯೇ ಇತರರು ಬಾವಿಗಳನ್ನು ಹಾಕುತ್ತಿರುವುದರಿಂದ ಸಾಲವನ್ನು ಮಾಡಿ, ತೋಡಿದಂಥ ಕೊಳವೆ ಬಾವಿಗಳು ಏನು ಇದೆ ಅದರಲ್ಲಿ ನೀರೇ ಇಲ್ಲದಂತಾಗಿದೆ. ಆದುದರಿಂದ ಮಾನ್ಯ ಸಹಕಾರ ಸಚಿವರು ಈವತ್ತಿನ ದಿವಸ ಏನೇನು ಕೇಳುತ್ತಿದ್ದಾರೆ ಎಂದರೆ ಹಿಂದೆ ಈಲ್ಡ್ ಟೆಸ್ಟ್‌ಗೆ ಕೊಟ್ಟಾಗ ಎಷ್ಟು ಗ್ಯಾಲನ್ ಬರುತ್ತಿತ್ತು, ಅದಕ್ಕೆ ನೀವು ಪಂಪ್ ಹಾಕಿಸಿ ಉಪಯೋಗಿಸಿಕೊಳ್ಳುತ್ತಿದ್ದೀರಿ ಆದುದರಿಂದ ಸಾಲವನ್ನು, ವಜಾಮಾಡಲು ಆಗುವುದಿಲ್ಲವೆಂದು ನೆಪವನ್ನು ಹೇಳುತ್ತಿದ್ದಾರೆ.ದಯಮಾಡಿ ಬೇಡ. ಈಗ ಹತ್ತಿರತ್ತಿರ ಕೊಳವೆ ಬಾವಿಗಳನ್ನು ಯಾರು ಹಾಕದೇ ಇರಬಹುದು.

SRI P.G.R. SINDHYA : You cannot test our patience.

ಶ್ರೀ ಸಿ. ಬೈರೇಗೌಡ : ಅವುಗಳಲ್ಲಿ ನೀರು ಇದ್ದದು ನಿಜ. ಈಗ ಹತ್ತಿರ

ಹತ್ತಿರ ಕೊಳವೆ ಬಾವಿಗಳನ್ನು ಹಾಕಿರುವುದರಿಂದ ಶೇಕಡಾ 50 ಕ್ಕಿಂತಾ ಹೆಚ್ಚು ಕೊಳವೆ ಬಾವಿಗಳಲ್ಲಿ ನೀರಿಲ್ಲ, ಎಲ್ಲಾವು ಬತ್ತಿ ಹೋಗಿದೆ. ಕೊಳವೆ ಬಾವಿಯಲ್ಲಿ ನೀರಿದ್ದರೆ ಬೆಳೆಯನ್ನು ಬೆಳೆಯಬೇಕು, ಹೇಗೆ ಸಾಲವನ್ನು ತೀರಿಸಬೇಕು ದಯವಿಟ್ಟು ಇವತ್ತಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ನೀರು ಬಾರದಿರುವ ವಿಶಿಷ್ಟ ಒಂದೇ ಆಜ್ಞೆಯಲ್ಲಿ ವಜಾ ಮಾಡಬೇಕೆಂದು ಹೇಳುತ್ತೇನೆ. ಇದನ್ನು ಮಾಡಲು ಸಮಿತಿ ಬೇಕಾಗಿಲ್ಲ, ಯಾಕೆಂದರೆ ಅಲ್ಲಿ ಹೋಗಿ ರೈತರ ಮಾಡತಕ್ಕ ಕೆಲಸವಾಗುತ್ತದೆ. ತಿರುಪತಿ ಕ್ಷೌರ ಆಗುತ್ತದೆಂದು ಹೇಳುತ್ತಿದ್ದರು. ಬರೀ ಈಲ್ಡ್ ಟೆಸ್ಟ್, ಟೆಕ್ನಿಕಲ್ ಯಾರಿದ್ದಾರೋ ಅವರಿಗೆ ಕಳಿಸಿ. ಇಂತಹ ಪರಿಸ್ಥಿತಿ ಎಲ್ಲೆಲ್ಲಿದೆಯೋ ಅಲ್ಲಿಗೆ ಅಧಿಕಾರಿಗಳೇ ಹೋಗಿ ಖುದ್ದಾಗಿ ನೋಡಿ ಪರಿಶೀಲನೆ ಮಾಡಬೇಕು. ನೀರು ಇಲ್ಲದಿದ್ದಗೆ ಅರ್ಜಿಯನ್ನು ಕೊಟ್ಟು ತಕ್ಷಣ ಅದಕ್ಕೆ ಒಂದು ಕಾಲಮಿತಿಯನ್ನು 15 ದಿವಸವೋ, 1 ತಿಂಗಳೋ ನಿಗದಿಮಾಡಿ ಇವರು ಹೋಗಿ ಈಲ್ಡ್ ಟೆಸ್ಟ್ ಮಾಡಿ ಅವತ್ತು ಆ ಕೊಳವೆ ಬಾವಿಯಲ್ಲ ನೀರು ಬರದಿದ್ದರೆ ಅವರ ಸಾಲ ವಜಾ ಆಯಿತು ಎಂದು ಅವತ್ತೇ ಅವರು ತಿಳಿದುಕೊಳ್ಳುವುದು ಎನ್ನತಕ್ಕ ಆಜ್ಞೆಯನ್ನು ತಾವು ದಯವಿಟ್ಟು ಮಾಡಬೇಕು. ಆದರೆ ಇದಕ್ಕಾಗಿ ನೂರೆಂಟು ಸಮಿತಿಯನ್ನು ಮಾಡಿ ರೈತರನ್ನು ಅಲ್ಲಿ ಇಲ್ಲಿ ಓಡಾಡಿಸತಕ್ಕ ಕೆಲಸವನ್ನು ಮಾಡುವುದಕ್ಕೆ ಹೋಗಬೇಡಿ ಎನ್ನತಕ್ಕ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸಹಕಾರ ಸಂಘಗಳ ಬಗ್ಗೆ ಹೇಳುವುದಾದರೆ, ಬಹಳಷ್ಟು ಸಹಕಾರ ಸಂಘಗಳು ರಾಜ್ಯದಲ್ಲಿ ಮುಚ್ಚಿಹೋಗಿವೆ. ಮಾನ್ಯ ಕೆ.ಹೆಚ್. ಪಾಟೀಲರಿಗೆ ಇದು ವ್ಯಥೆ, ಕಣ್ಣೀರು ತರತಕ್ಕ ವಿಚಾರ. ನಮಗೂ ಕೂಡ ಅಷ್ಟೆ. ಏಕೆಂದರೆ ಸರ್ಕಾರದಿಂದ ಏನೇನು ಹಣ ಅವರಿಗೆ ಬರಬೇಕಾಗಿತ್ತೋ ಅದು ಬಂದಿಲ್ಲ. ಇವತ್ತು ಹಸಿರು ಕಾರ್ಡುಗಳನ್ನು ಹಂಚುತ್ತಿದ್ದೀರಿ. ಇದಕ್ಕೆ ಸಂಬಂಧಪಟ್ಟಂತೆ ಟ್ರಾನ್ಸ್‌ಪೋರ್ಟೇಶನ್ ಛಾರ್ಜಸ್, ಡಿಫರನ್ಸ್ ಏನಿದೆ ಅದನ್ನು ಸರ್ಕಾರ ಕೊಡಬೇಕು. ಆದರೆ ಇವತ್ತು ಕೊಡುತ್ತಿಲ್ಲ. ಇವತ್ತು ಎಲ್ಲಾ ಟಿ.ಎ.ಪಿ.ಸಿ.ಎಂ.ಎಸ್.ಗಳೂ ಕೂಡ ದಿವಾಳಿಯಾಗಿವೆ. ಒಂದೊಂದು ಟಿ.ಎ.ಪಿ.ಸಿ.ಎಂ.ಎಸ್‌ಗೆ 15-20-30 ಲಕ್ಷ ರೂ.ಗಳನ್ನು ಕೊಡಬೇಕಾಗಿದೆ. ದುಡ್ಡಿಲ್ಲದೆ ದಿವಾಳಿಯಾಗಿವೆ, ಯಾವುದೂ ಕೂಡ ಸರಿಯಾಗಿ ಕೆಲಸಮಾಡುವುದಕ್ಕೆ ಆಗುತ್ತಿಲ್ಲ. ಒಟ್ಟಾರೆ ಹೇಳುವುದಾದರೆ ನೀವೇ ಅವರಿಗೆ ಕೊಡಬೇಕಾದಂಥ ಹಣವನ್ನು ಕೊಡದೆ ಅವರನ್ನು ದಿವಾಳಿ ಮಾಡುತ್ತಿದ್ದೀರಿ. ಹಾಗೆ ಮಾಡಬೇಡಿ.

ದಯವಿಟ್ಟು ಅವರಿಗೆ ಕೊಡಬೇಕಾದ ಹಣವನ್ನು ಮೊದಲು ಬಿಡುಗಡೆ ಮಾಡಿಸಿ. ಬಡ್ಡಿ ವಜಾ ಆಯಿತು. ಸರ್ಕಾರದಿಂದ ಬರತಕ್ಕಂಥಾದ್ದು ಹಳ್ಳಿ ಮಟ್ಟದಲ್ಲಿ ಇರತಕ್ಕಂಥ ಎಸ್‌ಎಸ್‌ಸಿಎಫ್.ಎಸ್ ಆಗಲಿ, ಬಿಎಸ್‌ಎಸ್ ಆಗಲಿ ಅವರಿಗೆ ಸರ್ಕಾರದಿಂದ ಬಡ್ಡಿ ಏನು ಜಮಾ ಆಗಬೇಕಾಗಿತ್ತೋ ಅದು ಜಮಾ ಆಗಿಲ್ಲ. ಇದರಿಂದಾಗಿ ಇವತ್ತು ಅವರಿಗೆ ಬಾರೋಯಿಂಗ್ ಕೆಪ್ಯಾಸಿಟಿ ಇಲ್ಲದಂತಾಗಿದೆ. ಈಗೇನೋ ತಾವು ಈ ಚುನಾವಣೆಗಳನ್ನು ಮುಂದಕ್ಕೆ ಹಾಕಿದ್ದೇವೆ ಎಂದು ಹೇಳಿದ್ದೀರಿ. ಈ ಕಾರಣದಿಂದಾಗಿ ವ್ಯವಸಾಯೋತ್ಪನ್ನ ಸಹಕಾರ ಸಂಘಗಳು, ಏನಿವೆ, ಪ್ರಾಥಮಿಕ ಸಹಕಾರ ಸಂಘಗಳು ಡಿಫಾಲ್ಟರ್ಸ್ ಆಗಿರುವುದರಿಂದ ಸರ್ಕಾರದಿಂದ ಬರಬೇಕಾದ ಹಣ ಜಮಾ ಆಗದೇ ಇರುವುದರಿಂದ ಅವರನ್ನು ಡಿಫಾಲ್ಟರ್ಸ್ ಎಂದು ತಿಳಿದುಕೊಂಡು ಇವತ್ತು ಚುನಾವಣೆಯಾದರೆ ಅಲ್ಲಿ ಸಹಕಾರ ಸಂಘಗಳ ಪ್ರತಿನಿಧಿಗಳೇ ಇಲ್ಲದಿರತಕ್ಕ ಪರಿಸ್ಥಿತಿ ಉಂಟಾಗಿದೆ. ಆದುದರಿಂದ ಪ್ರಾಥಮಿಕ ಸಹಕಾರಸಂಘಗಳು ಏನಿವೆ ಅವುಗಳಿಗೂ ಮತ್ತು ಟಿ.ಎ.ಪಿ.ಸಿ.ಎಂ.ಎಸ್‌ಗಳಿಗೂ ಸರ್ಕಾರದಿಂದ ಏನು ಹಣ ಬಿಡುಗಡೆ ಮಾಡಬೇಕೋ ಅದನ್ನು ಕೂಡಲೇ ಬಿಡುಗಡೆ ಮಾಡತಕ್ಕಂಥ ಕೆಲಸ ನಿಮ್ಮಿಂದಾಗಲೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಉಪಾಧ್ಯಕ್ಷರು : ಬೈರೇಗೌಡರೇ, ಇನ್ನೂ 4-5 ಜನ ಮಾನ್ಯ ಸದಸ್ಯರು ಮಾತನಾಡುವವರಿದ್ದಾರೆ.

ಶ್ರೀ ಸಿ. ಬೈರೇಗೌಡ : ನಾನು ಇನ್ನು ಹೆಚ್ಚು ಹೊತ್ತು ತೆಗೆದುಕೊಳ್ಳುವುದಿಲ್ಲ.

ಇನ್ನು ಮಾನ್ಯ ಸಿಂಧ್ಯರವರ ಹಳೆಯ ಇಲಾಖೆಯಾದ ಟ್ರಾನ್ಸ್‌ಪೋರ್ಟ್ ಇಲಾಖೆಯ ಬಗ್ಗೆ ಹೇಳುವುದಾದರೆ, ನಾನೂ ಕೂಡ ಸಮಾಜವಾದ ಹಿನ್ನೆಲೆಯಲ್ಲಿ ಬಂದಿರತಕ್ಕವನು. ಮೊದಲನೆಯದಾಗಿ ಸರ್ಕಾರಕ್ಕೆ ಹಣ ಉಳಿಯಬೇಕಂದಿದ್ದರೆ ಈ ಕೆ.ಎಸ್.ಆರ್.ಟಿ.ಸಿ.ಯನ್ನು ಡೀ ನ್ಯಾಷನಲೈಸ್ ಮಾಡಿ. ಯಾರು ಏನೇ ಹೇಳಿದರೂ ಕೂಡ ನಾನು ನೇರವಾಗಿ ಹೇಳುತ್ತಿದ್ದೇನೆ, ಮೊದಲು ಇದನ್ನು ಡೀ ನ್ಯಾಷನ್‌ಲೈಸ್ ಮಾಡಿ. ಇದನ್ನು ಮಾಡಬೇಕಾದುದು ಬಹಳ ಅವಶ್ಯಕತೆ ಇದೆ. ಏಕೆಂದರೆ...

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದನ್ನು ಡೀ ನ್ಯಾಷನ್‌ಲೈಸ್ ಮಾಡಬೇಕೇ?

ಶ್ರೀ ಸಿ. ಬೈರೇಗೌಡ : ಹೌದು, ಇದನ್ನು ಡೀ ನ್ಯಾಷನ್‌ಲೈಸ್ ಖಂಡಿತ ಮಾಡಬೇಕು. ಏಕೆಂದರೆ ಇದು ತಮಗೂ ಗೊತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಹೇಳುತ್ತಿರುವುದು ಅತಿಯಾಯಿತು. I cannot tolerate this . This can't go on record.

ಶ್ರೀ ಸಿ. ಬೈರೇಗೌಡ : ನಾನು ಏನು ಹೇಳಿವೆ ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಹೇಳುತ್ತಿರುವುದು ಏನು? ಕನಕಪುರ ತಾಲ್ಲೂಕಿನವರಿಗೆ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಕೆಲಸ ಕೂಡಿಸಿದ್ದಾರೆಂದರೆ. it is too much ; you are insulting my constituency voters.

SRI C. BYREGOWDA : No, No.

SRI P.G.R. SINDHYA : What are you talking.

ಅಧ್ಯಕ್ಷರ ಆದೇಶದ ಮೇರೆಗೆ ತೆಗೆದು ಹಾಕಲಾಗಿದೆ.

ಮಾನ್ಯ ಉಪಾಧ್ಯಕ್ಷಿಣಿಯವರೆ, ನೀವು ಇದನ್ನು ಎಕ್ಸ್‌ಪಂಜ್ ಮಾಡಿಸಬೇಕಾಗುತ್ತದೆ. ನಾನು ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಆಗಿದ್ದಾಗ ಕನಕಪುರದವರಿಗೆಲ್ಲಾ ಕೆಲಸವನ್ನು ಕೊಡಿಸಿದ್ದೇನೆಂದರೆ...

(ಗೊಂದಲ)

ಶ್ರೀ ಸಿ. ಬೈರೈಗೌಡ : ನೋ, ನೋ, ಎಲ್ಲರಿಗೂ ಎಂದು ನಾನು ಹೇಳಲಿಲ್ಲ.

SRI P.G.R. SINDHYA : This cannot go on record. There is a limit for all these.

ಶ್ರೀ ಸಿ. ಬೈರೇಗೌಡ : ನೀವು ರೆಕಾರ್ಡ್‌ನ್ನು ತರಿಸಿ ನೋಡಿ.

ಶ್ರೀ ಸಿ. ಬೈರೇಗೌಡ : ನೀವು ಎಷ್ಟು ಜನರಿಗೆ ಕೆಲಸ ಕೊಡಿಸಿಲ್ಲ ಎಂದು ನಾನು ಹೇಳಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಎಲ್ಲೆಲ್ಲಿ ಏನೇನು ಮಾಡುತ್ತಿದ್ದೀರಿ ಎಂದರೆ, ಏನು ಅರ್ಥ? ಕನಕಪುರ ತಾಲೂಕಿನ ಜನರನ್ನು ಏನು ಅಂದುಕೊಂಡಿದ್ದೀರಿ?

ಶ್ರೀ ಸಿ. ಬೈರೇಗೌಡ : ನಾನು ಹೇಳಿದ್ದು ಎಷ್ಟು ಜನರಿಗೆ ಕೆಲಸ ಕೊಡಿಸಿದ್ದೀರಿ ಎಂದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಕಾನೂನು ಪ್ರಕಾರ ಅಧಿಕಾರಿಗಳು ಇರುತ್ತಾರೆ. ಕಾನೂನು ಪ್ರಕಾರ ಕೆಲಸ ಕೊಡುತ್ತಾರೆ...

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ .: ನಾನೇನು ರಿಕ್ರೂಟ್‌ಮೆಂಟ್ ಬೋರ್ಡ್ ಛೇರ್ಮನ್ ಆಗಿದ್ದನೇ? ಅವೆಲ್ಲಾ ಬೇಡ. ನೀವು ಈ ಸದನದಲ್ಲಿ ಈ ರೀತಿ ಹೇಳುತ್ತಿರುವುದು ಇದು ಎರಡನೇ ಸಾರಿ.

It cannot go on record. you are insulting my voters.

(ಗೊಂದಲ)

ಶ್ರೀ ಎಸ್.ಹೆಚ್. ಕೌಜಲಗಿ : ಈ ವಿಚಾರ ಬಿಟ್ಟು ಬೇರೆ ವಿಚಾರ ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದು ಹೇಗೆ ಸಾಧ್ಯ? ನಾನು ಮಾನ್ಯ ಅಧ್ಯಕ್ಷಿಣಿಯವರನ್ನು ಕೇಳುತ್ತಿದ್ದೇನೆ. it cannot go on record.

ಶ್ರೀ ಸಿ. ಬೈರೇಗೌಡ : ಇಷ್ಟೊಂದು ಸಿಟ್ಟನ್ನು ನನ್ನ ಮೇಲೆ ಏತಕ್ಕೆ ಮಾಡಿಕೊಳ್ಳತ್ತಾರೋ ಗೊತ್ತಿಲ್ಲ.

ಉಪಾಧ್ಯಕ್ಷಿಣಿಯವರು : ಅವರ ಮನಸ್ಸಿಗೆ ನೋವಾಗಿದ್ದರೆ, ನೀವು ಅದನ್ನು ವಾಪಸ್ಸು ತೆಗೆದುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : He is insulting my constituency voters.

ಅವರ ಕ್ಷೇತ್ರದ ಸಾವಿರಾರು ಜನರಿಗೆ ಕೆಲಸ ಕೊಟ್ಟಿದ್ದಾರೆ, ಅವರು ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ಲೂಟಿ ಮಾಡುತ್ತಿದ್ದಾರೆ ಎನ್ನತಕ್ಕ ರೀತಿಯಲ್ಲಿ ಮಾತನಾಡುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ : ನಾನು ಹೇಳಿದ್ದೂ ಅಷ್ಟೇ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನನಗೆ ಕಿವಿ ನೆಟ್ಟಗಿವೆ. ನನಗೆ ಕೇಳಿಸುತ್ತಿದೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ನಾನು ಮಾತನಾಡುವುದಕ್ಕೆ ಅವಕಾಶವನ್ನೇ ಕೊಡದಿದ್ದರೆ ಹೇಗೆ? ನಿಮ್ಮ ಮನಸ್ಸಿಗೆ ಅಷ್ಟೊಂದು ನೋವಾಗಿದ್ದರೆ ಅದನ್ನು ನಾನು ವಾಪಸ್ಸು ತೆಗೆದುಕೊಂಡಿದ್ದೇನೆ. ಆಗಬಹುದೇ, ಈಗ ನಿಮಗೆ ಸಂತೋಷವೆ? ನೀವು ಯಾವಾಗಲೂ ಸಂತೋಷವಾಗಿರಬೇಕು.

ಉಪಾಧ್ಯಕ್ಷಿಣಿಯವರು : ಬೈರೇಗೌಡರೇ ಬೇಗ ಮುಗಿಸಬೇಕು. 1 ಗಂಟೆ ಹೊತ್ತು ನೀವು ಮಾತನಾಡಿದ್ದೀರಿ.

ಆದ್ದರಿಂದ ಇವತ್ತು ಕಂಡಕ್ಟರ್ಸ್ ಸುಮಾರು 20-25 ಸಾವಿರ ಜನರು ಇದ್ದಾರೆ. ಅವರೆಲ್ಲರನ್ನು ಕಾಯಲು ಸಾಧ್ಯವೆ? ಅವರೆಲ್ಲರಿಗೂ ಕಾವಲು ಇರಲು ಸಾಧ್ಯವಾಗುವುದಿಲ್ಲ. ಎಲ್ಲ ಹಂತದಲ್ಲೂ ಕೂಡ ಬರೆ ಕಂಡಕ್ಟರನ್ನೇ ಶೋಷಣೆ ಮಾಡತಕ್ಕಂಥದ್ದಲ್ಲ, ಎಲ್ಲಾ ಹಂತದಲ್ಲೂ ಕೂಡ ಜರಡಿ ವ್ಯವಸ್ಥೆ ಮಾಡಬೇಕು. ಜರಡಿ ವ್ಯವಸ್ಥೆ ಅಂದರೆ ದೊಡ್ಡ ಅಧಿಕಾರಿಗಳು ಅಂದರೆ ಜರಡಿ ಕಣ್ಣು ದೊಡ್ಡದಾಗಿರುತ್ತದೆ. ಹಾಗೆ ಇಳಿತಾ ಇಳಿತಾ ಕೊನೆಗೆ ಬಂದು ಕಣ್ಣು ಚಿಕ್ಕದಾಗಿರುತ್ತದೆ. ಸಣ್ಣದು ಕಣ್ಣು ಕಂಡಕ್ಟರ್ಸದು. ಇದು ಒಂದು ಜರಡಿ ವ್ಯವಸ್ಥೆ ಎಂದು ಇರುತ್ತದೆ. ಸನ್ಮಾನ್ಯ ಸಿಂಧ್ಯರವರು ಮಂತ್ರಿಗಳಾಗಿದ್ದಾಗ ನಾನು ಇದನ್ನು ಸರಿಪಡಿಸಿದಿದ್ದರೆ ರಾಜೀನಾಮೆ ಕೊಡುತ್ತೇನೆಂದು ಕೂಡ ಹೇಳಿದ್ದರು. ಅವರೂ ಕೂಡ ದರ ಜಾಸ್ತಿಮಾಡಿದರೆ ಪುನಃ ಈ ವ್ಯವಸ್ಥೆ

ಏನಿದೆ ಅದನ್ನು ಸರಿಮಾಡಲಾಗಲಿಲ್ಲ.

SRI P.G.R SINDHYA : When I was Transport Minister, It was the golden era in the history of KSRTC.

ಶ್ರೀ ಸಿ. ಬೈರೇಗೌಡ : ನೀವು ಹೇಳಿದ ಮಾತನ್ನೇ ಹೇಳಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ದೇವಾರಾಜ ಅರಸ್‌ರವರ ಕಾಲವನ್ನು ಒಂದು ಬಿಟ್ಟರೆ ಬಾಕಿ ನಾನು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ ಮೂರುವರೆ ವರ್ಷದಲ್ಲಿ 40 ಪರ್ಸೆಂಟ್ ಗ್ರೋತ್ ಆಗಿದೆ.

ಶ್ರೀ ಸಿ. ಬೈರೇಗೌಡ : ಹೋಗಲಿ ಬಿಡಪ್ಪ.

ಶ್ರೀ ಪಿ.ಜಿ.ಆರ್. ಸಿಂಧ್ಯ :ಹೋಗಲಿ ಬಿಡಪ್ಪ, ಹೋಗಲಿ ಬಿಡಪ್ಪ ಎಂದು ಹೇಳಿದರೆ ಏನ್ರಿ ಇದು.

ಶ್ರೀ ಸಿ. ಬೈರೇಗೌಡ : ಆಗಿನ ಕಾಲದ್ದು ಅದನ್ನು ಬಿಟ್ಟು ಮಾತನಾಡೋಣ. ನಿಮ್ಮ ಕೈಯಲ್ಲಿಯೂ ಕೂಡ ಅದನ್ನು ಪೂರ್ತಿಯಾಗಿ ಸರಿಪಡಿಸಲಿಕ್ಕೆ ಆಗಲಿಲ್ಲವೆನ್ನತಕ್ಕಂಥದ್ದನ್ನು ನಾನು ಹೇಳಿದೆ. ನಾನು ಒಪ್ಪುತ್ತೇನೆ. ಆದರೆ ನಿಮ್ಮ ಕೈಯಲ್ಲೂ ಕೂಡ ಪೂರ್ತಿಯಾಗಿ ಸರಿಪಡಿಸತಕ್ಕಂಥ ಕೆಲಸ ಆಗಿಲಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಅದನ್ನು ಒಪ್ಪುತ್ತೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಒಪ್ಪುತ್ತೇನೆ.

ಶ್ರೀ ಸಿ.ಬೈರೇಗೌಡ : ಅಷ್ಟು ಒಪ್ಪಿಗೆಯಾದರೆ ಸಾಕು. ಆದ್ದರಿಂದ ಮಾನ್ಯ ಅಧ್ಯಕ್ಷರೇ ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡುತ್ತಿದ್ದೇನೆ ದಯವಿಟ್ಟು ಇದನ್ನು ನ್ಯಾಷನಲೈಸ್ ಮಾಡಬೇಕಾದ್ದು ಬಹಳ ಅವಶ್ಯಕತೆ ಇದೆ. ಇವತ್ತು ಇಡೀ ಪ್ರಪಂಚದಲ್ಲಿ ಏನು ನಡೆಯುತ್ತಿದೆ, ಏನೇನು ಆಗುತ್ತಿದೆ ಎಂಬುದನ್ನು ಕಣ್ಣುಬಿಟ್ಟು ಕಣ್ಣು ಆಲಿಸಿ ನೋಡಬೇಕಾಗುತ್ತದೆ, ಕೇಳಬೇಕಾಗುತ್ತದೆ ಮತ್ತು ಗಮನಿಸಬೇಕಾಗುತ್ತದೆಂದು ನಾನು ಹೇಳುತ್ತೇನೆ. ಆದ್ದರಿಂದ ರಷ್ಯಾ ದೇಶದಲ್ಲಿ ಏನಾಗಿದೆ ಎಂಬುದನ್ನು ಎಲ್ಲರೂ ಕೂಡ ಕಣ್ಣುತೆಗೆದು ನೋಡಬೇಕು. ನಾನು ಒಪ್ಪುತ್ತೇನೆ. ಎಲ್ಲದಕ್ಕೂ ಮಾಡುವುದಕ್ಕೆ ಆಗುವುದಿಲ್ಲವೆಂದರೆ ಅದು ಅತಿಯಾಗುತ್ತದೆ. ಅದು ಅತಿ ಆಗುವುದಕ್ಕೆ ಹೋದರೆ ಪ್ರತಿಯೊಂದಕ್ಕೂ ಒಂದು ಟಾಲರೆನ್ಸ್ ಲಿಮಿಟ್ ಎನ್ನತಕ್ಕಂಥದ್ದು ಇದೆ. ಆದ್ದರಿಂದ ಆ ಟಾಲರೆನ್ಸ್ ಲಿಮಿಟ್ ಆದಮೇಲೆ ನೀವು ಇಂಜಿನೀಯರ್ ನಿಮಗೆಲ್ಲ ಗೊತ್ತಿರುತ್ತದೆ. ಆ ಟಾಲರೆನ್ಸ್ ಲಿಮಿಟ್ ಮುಗಿದಾಗ ಪ್ರತಿಯೊಂದು ಬ್ರೇಕ್ ಆಗುತ್ತದೆ. ಆ ರೀತಿಯಾವ ಹಂತಕ್ಕೆ ಹೋಗುವುದು ಬೇಡ ಎಂದು ಹೇಳಿ ಕೊನೆಯದಾಗಿ ಇವತ್ತಿದಿವಸ ನನ್ನ ಸ್ನೇಹಿತರು ಹೇಳಿದರು. ಈ ಬಿ.ಟಿ.ಎಸ್. ಮತ್ತು ಕೆ.ಎಸ್.ಆಗ್.ಟಿ.ಸಿ ಅನ್ನು ನಿಜಕ್ಕೂ ಕೂಡ ಪ್ರತ್ಯೇಕ ಮಾಡಬೇಕಾದಂಥ ಅವಶ್ಯಕತೆ ಇದೆ. ನಾವು ಹಳ್ಳಿಯಲ್ಲಿರತಕ್ಕಂಥ ಜನ ನಿಮಗೆ ಬಿಟ್ಟಿ ಸಿಕ್ಕಿದ್ದಾರೆ. ಕಾರಣವೇನೆಂದರೆ ಅವರು ಕೇಳುವುದಿಲ್ಲ ನೋಡಿ. ಬಿ.ಟಿ.ಎಸ್. ನವರಾದರೆ ತಕ್ಷಣ ಬಸ್ಸನ್ನು ರಸ್ತೆಯಲ್ಲಿಯೇ ನಿಲ್ಲಿಸಿ ಬಿಡುತ್ತಾರೆ. ಮಾನ್ಯ ಮಂತ್ರಿಗಳು ಓಡಬೇಕು, ಮ್ಯಾನೇಜರ್ ಓಡಬೇಕು, ಎಲ್ಲರೂ ಹೋಗಿ ಅವರ ಕಾಲಿಗೆ ಬೀಳಬೇಕು. ಹಳ್ಳಿಯಲ್ಲಿ ಯಾರು ಹೇಳುವವರು ಇಲ್ಲ, ಕೇಳುವವರು ಇಲ್ಲ, ಇಲ್ಲಿ ಆಗತಕ್ಕಂಥ ದುರ್‌ವ್ಯವಹಾರಕ್ಕೆ ಬಸ್‌ಚಾರ್ಜಸ್ಸನ್ನು ಜಾಸ್ತಿಮಾಡಿದರೆ ಹಳ್ಳಿಯವರು ಕೊಡಬೇಕಾಗುತ್ತದೆ. ಆದ್ದರಿಂದ ಈ ಕೆ. ಎಸ್. ಆರ್. ಟಿ. ಸಿ. ಮತ್ತು ಬಿ. ಟಿ. ಎಸ್ ನ್ನು ಪ್ರತ್ಯೇಕಗೊಳಿಸಿ ಲೆಕ್ಕ ಹಾಕಿಸಿ. ಇಲ್ಲಿ ತೀರ ಬಡವರೇ ಏನು ಓಡಾಡುತ್ತಿಲ್ಲ. ಸ್ಥಿತಿವಂತರೂ ಕೂಡ ಬಸ್‌ನಲ್ಲಿ ಓಡಾಡುತ್ತಿದ್ದಾರೆ. ಆದ್ದರಿಂದ ಶಕ್ತಿ ಇರತಕ್ಕಂಥವರು ಬಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದಾರೆ. ಅವರು ಕೊಡಲಿ. ಕೆ. ಎಸ್. ಆರ್. ಟಿ. ಸಿ. ಮತ್ತು ಬಿ. ಟಿ. ಎಸ್. ನ್ನು ಪ್ರತ್ಯೇಕ ಮಾಡತಕ್ಕಂಥದ್ದು ಬಹಳ

ಅವಶ್ಯಕತೆ ಇದೆಯೆಂದು ಹೇಳಿ, ಇಷ್ಟು ಹೊತ್ತು ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಂಥ ಮಾನ್ಯ ಅಧ್ಯಕ್ಷರನ್ನು ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಸ್. ಎಚ್. ಕೌಜಲಗಿ (ಬೈಲಹೊಂಗಲ) : ಸನ್ಮಾನ್ಯ ಅಧ್ಯಕ್ಷರೇ ಇವತ್ತಿನದಿವಸ 28 ಬೇಡಿಕೆಗಳನ್ನು ಇಟ್ಟಿರುವುದನ್ನು ವಿರೋಧಿಸಿ ಎರಡು ಸಲಹೆಗಳನ್ನು ಮಾತ್ರ ಕೊಡಬಯಸುತ್ತೇನೆ. ಮೊದಲನೆಯದಾಗಿ ಲೇಬರ್ ಡಿಪಾರ್ಟ್‌ಮೆಂಟ್‌ನಲ್ಲಿ ಇವತ್ತಿನದಿವಸ ಪ್ರತಿಯೊಂದು ಕೆಲಸಕ್ಕೂ ನಾವು ಹುಬ್ಬಳ್ಳಿ ಲೇಬರ್ ಕೋರ್ಟಿಗೆ ಹೋಗಬೇಕಾಗಿದೆ. ಮೊನ್ನೆದಿವಸ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಹುಬ್ಬಳ್ಳಿಯಲ್ಲಿ ಇನ್ನೊಂದು ಅಡಿಷನಲ್ ಲೇಬರ್ ಕೋರ್ಟನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದರು. ಆದಕಾರಣ ಈ ಕೋರ್ಟನ್ನು ಹುಬ್ಬಳ್ಳಿಯಲ್ಲಿ ಮಾಡದೆ ಅದನ್ನು ತಾವು ಬೆಳಗಾಮ್‌ನಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ, ಮಾನ್ಯ ಕೆ.ಹೆಚ್. ಪಾಟೀಲರು ಲೇಬರ್ ಮಿನಿಷ್ಟರ್ ಇದ್ದಾಗ ನಮ್ಮ ಬೈಲಹೊಂಗಲಕ್ಕೆ ವುಮೆನ್ಸ್ ಐ.ಟಿ.ಐ. ಅನ್ನು ಕೊಡುತ್ತೇವೆಂದು ಹೇಳಿದ್ದರು. ಇದುವರೆಗೆ ಕೊಟ್ಟಿಲ್ಲ. ವುಮೆನ್ಸ್ ಐ.ಟಿ.ಐ. ಅನ್ನು ಕೂಡಲೇ ಕೊಡತಕ್ಕ ವ್ಯವಸ್ಥೆ ಮಾಡಬೇಕು. ಏಕೆಂದರೆ ಅದು ರೆವಿನ್ಯೂ ಸಬ್‌ಡಿವಿಜನ್ ಹೆಡ್‌ಕ್ವಾರ್ಟರ್ಸ್ ಇದೆ. ಇನ್ನೂ ಬೆಳಗಾಂನಲ್ಲಿ ಇ. ಎಸ್. ಐ. ಹಾಸ್ಪಿಟಲ್ ಏನಿದೆ ಅದನ್ನು ಎಕ್ಸ್‌ಪ್ಯಾನ್‌ಷನ್ ಮಾಡುವ ಅವಶ್ಯಕತೆ ಇದೆ. ಅದನ್ನು ಎಕ್ಸ್‌ಪ್ಯಾನ್‌ಷನ್ ಮಾಡಬೇಕೆಂದು ಲೇಬರ್ ಮಿನಿಸ್ಟರನ್ನು ಕೇಳಿಕೊಳ್ಳುತ್ತೇನೆ.

ರೆವಿನ್ಯೂ ಇಲಾಖೆಯಲ್ಲಿ ನಾಡಕಛೇರಿಗಳು ಏನಿವೆ ಅವನ್ನು ಮುಂದುವರಿಸಬೇಕು. ಕೆಲವು ಕಡೆ ಅವನ್ನು ಮುಂದುವರಿಸುವುದಿಲ್ಲವೆಂದು ಹೇಳುತ್ತಿದ್ದಾರೆ. ದಯವಿಟ್ಟು ಅವನ್ನು ಕ್ಲೋಸ್ ಮಾಡಬಾರದು. ಅವು ಜನರಿಗೆ ಬಹಳ ಉಪಯುಕ್ತ ಇವೆ. ಆದ್ದರಿಂದ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ನಾಡ ಕಛೇರಿಗಳನ್ನು ತೆರೆಯಬೇಕು ಮತ್ತು ಅವುಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕೆಂದು ಹೇಳುತ್ತೇನೆ. ಬೆಳಗಾಂನಲ್ಲಿ ರೆವಿನ್ಯೂ ಅಪಲೇಟ್ ಟ್ರಿಬ್ಯುನಲ್ ಅನ್ನು ತೆರೆಯಬೇಕು. ಬೆಂಗಳೂರಿನಲ್ಲಿ 8 ರೆವಿನ್ಯೂ ಅಪಲೇಟ್ ಟ್ರಿಬ್ಯುನಲ್‌ಗಳಿವೆ. ಜನರು ಬೆಳಗಾಂನಿಂದ, ಉತ್ತರ ಕರ್ನಾಟಕದಿಂದ ಬೆಂಗಳೂರಿಗೆ ಬಂದು ಕೆಲಸಗಳನ್ನು ದಾಖಲು ಮಾಡಬೇಕಾಗಿದೆ. ಅಲ್ಲಿನ ಜನರು ಇಲ್ಲಿಗೆ ಬಂದು ವಕೀಲರನ್ನು ಹಿಡಿದು ಕೇಸುಗಳನ್ನು ಬುಕ್ ಮಾಡಬೇಕೆಂದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಬೆಳಗಾಂನಲ್ಲಿ 4 ಜಿಲ್ಲೆಗಳ ಸಲುವಾಗಿ ಒಂದು ರೆವಿನ್ಯೂ ಅಪಲೇಟ್ ಟ್ರಿಬ್ಯುನಲ್ ಅನ್ನು ಮಂಜೂರ್ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದಲ್ಲದೆ ಗದ್ದಿಗೇಗೌಡರ ಸಮಿತಿಯ ವರದಿಯಲ್ಲಿ ಬೈಲಹೊಂಗಲದಿಂದ ಕಿತ್ತೂರನ್ನು ಬೇರ್ಪಡಿಸಿ ಅದನ್ನು ಪ್ರತ್ಯೇಕ ತಾಲ್ಲೂಕನಾಗಿ ಮಾಡಬೇಕೆಂದು ಶಿಫಾರಸ್ಸು ಮಾಡಿದ್ದರು. ಅದನ್ನು ಕೂಡಲೇ ಕಾರ್ಯಗತ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಬೈಲಹೊಂಗಲದಲ್ಲಿ 1904ರಲ್ಲಿ ತಹಶೀಲ್ದಾರರ ಕಛೇರಿಯ ಕಟ್ಟಡವನ್ನು ಕಟ್ಟಲಾಗಿದ್ದು ಅದು ಈಗ ಸೋರುವುದಕ್ಕೆ ಹತ್ತಿದೆ. ಕಳೆದ ವರ್ಷ ಇದೇ ಅಸೆಂಬ್ಲಿಯಲ್ಲಿ ನನ್ನ 334ರ ಪ್ರಶ್ನೆಗೆ ಉತ್ತರವಾಗಿ, ಆ ಕಟ್ಟಡದ ರಿಪೇರಿ ಸಲುವಾಗಿ 10 ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡುವುದಾಗಿ ಆಶ್ವಾಸನೆ ಕೊಟ್ಟಿದ್ದರು. ಇದುವರೆಗೆ ಹಣವೂ ಬಿಡುಗಡೆ ಆಗಿಲ್ಲ, ಕೆಲಸವೂ ಪ್ರಾರಂಭವಾಗಿಲ್ಲ, ಮಳಗಾಲದಲ್ಲಿ ಅಲ್ಲಿನ ನೌಕರರು ಛತ್ರಿ ಹಿಡಿದು ಕೊಂಡು ಕೂಡುವ ಪರಿಸ್ಥಿತಿ ಇದೆ. ಈಗಾಗಲೇ ಆಶ್ವಾಸನೆ ಕೊಟ್ಟಂತೆ ಹತ್ತು ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಪಾಟೀಲರ ಕಾಲದಲ್ಲಿ 50 ಸಾವಿರ ರೂಪಾಯಿಗಳವರೆಗೆ ಜಮೀನು ಖರೀದಿ ಮಾಡುವವರಿಗೆ ಅನುಕೂಲತೆ ಮಾಡಿಕೊಟ್ಟಿದ್ದಾರೆ. ಅದನ್ನು ಈಗ ಒಂದು ಲಕ್ಷ ರೂಪಾಯಿಗಳವರೆಗೆ ಏರಿಸಿ ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಡಬೇಕು. ನೌಕರರು ಪ್ರಾಥಮಿಕ ಶಾಲಾ ಶಿಕ್ಷಕರು ನಿವೃತ್ತರಾದ ಬಳಿಕ ಪೆನ್‌ಷನ್ ಜಾಸ್ತಿ ಇದ್ದರೆ ಖರೀದಿ ರದ್ದು

ಎಂದು ಆರ್ಡರ್ ಮಾಡಿದ್ದಾರೆ.

ಇದರಿಂದ ನೌಕರರಿಗೆ ಹೆರಾಸ್‌ಮೆಂಟ್ ಆಗುತ್ತಿದೆ. ಈ ಒಂದು ಖರೀದಿ ಮೊತ್ತವನ್ನು ಹೆಚ್ಚು ಮಾಡಿ ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹಿಂದ ಪಾಟೀಲರು ಇದ್ದಾಗ ಏನು ಅನುಕೂಲತೆ ಮಾಡಿಕೊಟ್ಟಿದ್ದರು ಅದನ್ನು ಮರುಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಬರಗಾಲ ಕಾಮಗಾರಿಯಲ್ಲಿ ಬೋರ್ ವೆಲ್‌ಗಳನ್ನು ಬೆಳಗಾಂ ಜಿಲ್ಲೆಯಲ್ಲಿ ತೆಗೆಸಿದ್ದೀರಿ. ಅವುಗಳಿಗೆ 6 ತಿಂಗಳಾದರೂ ಕೈಪಂಪುಗಳನ್ನು ಕೂಡಿಸಿಲ್ಲ. ಏತಕ್ಕೆ ಕೂಡಿಸಿಲ್ಲವೆಂದರೆ ಸ್ಕೇರ್ಸಿಟಿ ವರ್ಕ್ಸ್ ಮುಗಿಸಿ ಎಂದು ಜಿಲ್ಲಾಧಿಕಾರಿಗಳು ಹೇಳುತ್ತಾರೆ. ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಗಳನ್ನು ಕೇಳಿದರೆ ನಮಗೆ ಅದು ಬರುವುದಿಲ್ಲವೆಂದು ಹೇಳುತ್ತಾರೆ. ಇದು ಗಂಡಹೆಂಡಿರ ಜಗಳವಾದ ಹಾಗೆ ಆಗಿದೆ. ಬೆಳಗಾಂ ಜಿಲ್ಲೆಯಲ್ಲಿ ಬೋರ್‌ವೆಲ್ ತೆಗೆಸಿದ್ದರಿಂದ ಉಪಯೋಗವಾಗಿಲ್ಲ. ತಾವಾದರೂ ಮುಖ್ಯ ಕಾರ್ಯದರ್ಶಿಗಳಿಗೆ ಆದೇಶ ನೀಡಿ ಕೈಪಂಪುಗಳನ್ನು ಕೂಡಿಸುವ ವ್ಯವಸ್ಥೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಬರಗಾಲದಲ್ಲಿ ಕೆಲವು ಕೆಲಸಗಳು ಅರ್ಧಂಬರ್ಧ ಆಗಿವೆ. ಅವನ್ನು ಪೂರ್ಣಗೊಳಿಸುವ ಕೆಲಸ ಮಾಡಬೇಕು. ಆ ಕೆಲಸಕ್ಕೆ ಇನ್ನೂ 4-5 ಲಕ್ಷ ರೂಪಾಯಿಗಳು ಬೇಕಾಗಬಹುದು. 4-5 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ಅರ್ಧಂಬರ್ಧ ಆಗಿರುವ ಕೆಲಸಗಳನ್ನು ಪೂರ್ಣ ಮಾಡಬೇಕು. ಅರ್ಧಂಬರ್ಧ ಆಗಿರುವ ಬಿಲ್ಡಿಂಗ್ ಕೆಲಸಗಳನ್ನು ಪೂರ್ಣ ಮಾಡಬೇಕು. ಫ್ಲಡ್ ರಿಲೀಫ್‌ಗಾಗಿ ಹೋದ ವರ್ಷ ಮತ್ತು ಈ ವರ್ಷ ಬೆಳಗಾಂ ಜಿಲ್ಲೆಗೆ ರೊಕ್ಕ ಕೊಟ್ಟಿಲ್ಲ. ರಸ್ತೆಗಳು ಹಾಳಾಗಿವೆ. ಫ್ಲಡ್ ರಿಲೀಫ್ ವರ್ಕ್ಸ್ ರೆವಿನ್ಯೂ ಇಲಾಖೆಗೆ ಬರುತ್ತದೆ. ಆದರೆ ಅವರನ್ನು ಕೇಳಿದರೆ ನಮಗೆ ಸಂಬಂಧ ಇಲ್ಲ, ರಸ್ತೆಗಳ ಕೆಲಸ ಆಗಬೇಕೆಂದರೆ ಲೋಕೋಪಯೋಗಿ ಇಲಾಖೆಯವರನ್ನು ಕೇಳಿ ಅನ್ನುತ್ತಾರೆ. ಈ ಒಂದು ಕಾಮಗಾರಿಗೆ ಬೇರೆ ಜಿಲ್ಲೆಗಳಿಗೆ ಕೊಟ್ಟ ಹಾಗೆ ನಮ್ಮ ಜಿಲ್ಲೆಗೂ ಹಣ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಎ. ಪಿ. ಎಂ. ಸಿ. ಯಲ್ಲಿ ದಳ್ಳಾಳಿಗಳು ಕೇವಲ 2 ಪರ್ಸೆಂಟ್ ಕಮಿಷನ್ ಅನ್ನು 15-20ವರ್ಷಗಳಿಂದ ತೆಗೆದುಕೊಳ್ಳುತ್ತಿದ್ದಾರೆ. ಇವತ್ತಿನವರೆಗೆ ಅದು ಎನ್‌ಹ್ಯಾನ್ಸ್‌ಮೆಂಟ್ ಆಗಿಲ್ಲ. ಅದನ್ನು 5 ಪರ್ಸೆಂಟ್ ಮಾಡಬೇಕು. ಇಲ್ಲದಿದ್ದರೆ ಬ್ಲಾಕ್‌ಮಾರ್ಕೆಟ್ ಮಾಡಿ ರೈತರಿಂದ 2 ಪರ್ಸೆಂಟ್, ಖರೀದಿದಾರರಿಂದ 2 ಪರ್ಸೆಂಟ್ ಕಮಿಷನ್ ತೆಗೆದುಕೊಳ್ಳುತ್ತಾರೆ. ಇವತ್ತಿನ ದಿವಸ ಎಲ್ಲಾ ಖರ್ಚು ಹೆಚ್ಚಾಗಿದೆ, ಪಗಾರ ಹೆಚ್ಚಾಗಿದೆ. ಆಫೀಸ್ ಬಾಡಿಗೆ ಹೆಚ್ಚಾಗಿದೆ, ಫೋನ್ ರೇಟ್ ಜಾಸ್ತಿಯಾಗಿದೆ. ಇತ್ಯಾದಿ ಕಾರಣಗಳಿಂದ ಕನಿಷ್ಠ 5 ಪರ್ಸೆಂಟ್ ಆದರೂ ದಳ್ಳಾಳಿಗಳಿಗೆ ಕಮಿಷನ್ ತೆಗೆದುಕೊಳ್ಳತಕ್ಕ ಅವಕಾಶವನ್ನು ಕಲ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : ಒಂದು ಕೆಲಸ ಮಾಡೋಣ. ಬೆಳೆದಿದ್ದೆಲ್ಲಾ ದಳ್ಳಾಳಿಗಳ ಕೈಯಲ್ಲಿ ಕೊಟ್ಟುಬಿಟ್ಟು ಬರಲಿ.

ಉಪಾಧ್ಯಕ್ಷರು : ಟೈಮ್ ಕಡಿಮೆ ಇದೆ. ದಯವಿಟ್ಟು ತಾವು ಮಧ್ಯೆ ಮಧ್ಯೆ ಮಾತನಾಡಬೇಡಿ.

ಶ್ರೀ ಎಸ್. ಎಚ್. ಕೌಜಲಗಿ : ನಾನು ಈಲ್ಡ್ ಆಗಿಲ್ಲ. ಈ ಸೆಸ್ ಏನಿದೆ ಇದನ್ನು ಏಳು ದಿನಗಳಲ್ಲಿ ತುಂಬಬೇಕು ಎಂದಿದೆ. ಸೇಲ್ಸ್ ಟ್ಯಾಕ್ಸ್‌ಗೆ ಒಂದು ತಿಂಗಳು ಟೈಮಿದೆ. ಇನ್‌ಕಮ್ ಟ್ಯಾಕ್ಸ್‌ಗೆ ಮೂರು ತಿಂಗಳು ಇದೆ. ಹೀಗಾಗಿ 7 ದಿವಸಕ್ಕಿಂತ ಹೆಚ್ಚು ದಿನ ಆದಮೇಲೆ 18 ಪರ್ಸೆಂಟ್ , 36 ಪರ್ಸೆಂಟ್ ಕೊಡಬೇಕಾಗಿದೆ. ಆದಕಾರಣ ಯಾವ ಪ್ರಕಾರ ಸೇಲ್ಸ್ ಟ್ಯಾಕ್ಸ್‌ನಲ್ಲಿ ಇನ್‌ಕಂ ಟ್ಯಾಕ್ಸ್‌ನಲ್ಲಿ ಒಂದು ತಿಂಗಳು ಟೈಂ ಇದೆ ಅದೇರೀತಿ ಇಲ್ಲೂ ಅಷ್ಟು ಸೆಸ್ ತುಂಬುವುದಕ್ಕೆ ಇವರಿಗೆ

ಅವಕಾಶ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಅದೇ ಪ್ರಕಾರ ಸೇಲ್ಸ್‌ಟ್ಯಾಕ್ಸ್ ಅಪಲೇಟ್ ಟ್ರಿಬ್ಯುನಲ್ ಬೆಂಗಳೂರಿನಲ್ಲಿ ಇದೆ. ನಾಲ್ಕು ಜಿಲ್ಲೆಯವರೂ ಇಲ್ಲಿಗೆ ಬರಬೇಕಾದರೆ ಬಹಳ ತ್ರಾಸ ಆಗುತ್ತದೆ. ಆದಕಾರಣ ಸೇಲ್ಸ್ ಟ್ಯಾಕ್ಸ್ ಅಪಲೇಟ್ ಟ್ರಿಬ್ಯುನಲ್ ಒಂದನ್ನು ಬೆಳಗಾಂಗೆ ಟ್ರಾನ್ಸ್‌ಫರ್ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಎಸ್. ಎಸ್.ಎಲ್. ಸಿ. ಯಾಗಿ ಹತ್ತು ವರ್ಷ ಪ್ಯೂನ್ ಆಗಿ ಕೆಲಸ ಮಾಡಿರುವವರಿಗಗೆ ಪ್ರೊಮೋಷನ್ ಕೊಡಬೇಕೆಂದು ಇದೆ. ತಲಾಟಿಯಾಗಿ ಪ್ರೊಮೋಶನ್ ಕೊಡಬೇಕೆಂದು ಇದ್ದರೂ ಇದುವರೆಗೆ ಅವರಿಗೆ ಪ್ರೊಮೋಷನ್ ಕೊಡುವ ಕ್ರಮ ಕೈಗೊಳ್ಳಬೇಕು. ಇಡೀ ರಾಜ್ಯದಲ್ಲಿ 1900 ತಲಾಟಿ ಪೋಸ್ಟ್‌ಗಳು ಖಾಲಿ ಇವೆ. ನಿಷ್ಠಾವಂತರು ಯಾರಿದ್ದಾರೆ ಒಳ್ಳೆಯ ಕೆಲಸ ಮಾಡಿರುವವರಿಗೆ ಎಲಿಜಿಬಲ್ ಇರುವವರೆಗೆ ಕೊಡುವುದರಿಂದ ಅವರಿಗೆ ಪ್ರೊಮೋಷನ್ ಕೊಟ್ಟಂತಾಗುತ್ತದೆ. ಕೊನೆಯದಾಗಿ ಕೆ.ಎಸ್. ಆರ್. ಟಿ. ಸಿ. ಬಗ್ಗೆ ಹೇಳುತ್ತೇನೆ. ಇವತ್ತು ಪ್ರತಿಯೊಂದನ್ನೂ ಬೆಂಗಳೂರಿನಿಂದ ಪ್ರಾರಂಭ ಮಾಡುವುದಕ್ಕಿಂತ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಿಂದ ಪ್ರಾರಂಭ ಮಾಡಬೇಕು. ಹಾಗೆ ಮಾಡುವುದರಿಂದ ಎಫಿಷಿಯೆನ್ಸಿ ಹೆಚ್ಚಾಗುತ್ತದೆ. ಇವತ್ತಿನ ದಿವಸ ತಾವು ವಿಚಾರ ಮಾಡಬಹುದು, ಬೈಲಹೊಂಗಲ ಬೆಂಗಳೂರು ಬಸ್ ಇದೆ. ಬೈಲಹೊಂಗಲ ಡಿಪೋದಿಂದ ಬಸ್ ಬಿಟ್ಟರೆ ಹೆಚ್ಚು ಎಫಿಷಿಯೆನ್ಸಿ ಇರುತ್ತದೆ, ಹೆಚ್ಚು ಕಲೆಕ್ಷನ್ ಆಗುತ್ತದೆ. ಒಂದು ಉದಾಹರಣೆ ಹೇಳುವುದಾದರೆ ರಾಯಚೂರು-ಬೈಲಹೊಂಗಲ ಮತ್ತು ಬೈಲಹೊಂಗಲ ರಾಯಚೂರು ರೂಟ್ ಇದೆ, ಬೈಲಹೊಂಗಲದಿಂದ ರಾಯಚೂರಿಗೆ ಹೋಗುವ ಡ್ರೈವರ್ ಮೂರೂವರೆ ಸಾವಿರ ರೂಪಾಯಿ ತರುತ್ತಿದ್ದರೆ ರಾಯಚೂರಿನಿಂದ ಬೈಲಹೊಂಗಲಕ್ಕೆ ಹೋಗುವವರು 2 ಸಾವಿರ ರೂಪಾಯಿ ತರುತ್ತಿದ್ದರು. ಅವರಿಗೇನಾಗುತ್ತದೆ. ನಮ್ಮ ಡಿಪೋ ಇದು, ಹೆಚ್ಚು ಗಳಿಸಬೇಕು ಎಂಬ ಅಭಿಮಾನದಿಂದ ಅವರು ಬರುತ್ತಾರೆ. ಆದಕಾರಣ ಆ ಪ್ರಕಾರವಾಗಿ ಪ್ರತಿಯೊಂದು ಡಿಪೋದಿಂದ ಬಸ್ ಬಿಡುವಂಥ ವ್ಯವಸ್ಥೆ ಮಾಡಬೇಕು. ಸರ್ಕಾರಕ್ಕೆ ಇದರಿಂದ ಯಾವುದೇ ನಷ್ಟ ಆಗುವುದಿಲ್ಲ. ಹೆಚ್ಚು ಫಾಯಿದೆ ಬರುತ್ತದೆ. ಮತ್ತೆ ಸಬ್-ಸ್ಟೇಜಸ್. ಸ್ಟೇಜಸ್ ಎಂದೋ ಆಗಿವೆ. ಕೆಲವು ಕಡೆ ಏನಾಗುತ್ತದೆ ಸಮೀಪ ಇರುವವರಿಗೆ ರೊಕ್ಕ ಜಾಸ್ತಿಯಾಗುತ್ತದೆ. ದೂರ ಇದ್ದರೆ ಕಡಿಮೆಯಾಗುತ್ತದೆ. ಹೀಗಾಗಿ ಜನರಲ್ಲಿ ವ್ಯತ್ಯಾಸವಾಗುತ್ತದೆ. ಆ ಸ್ಟೇಜಸ್ ಇವತ್ತಿನವರೆಗೆ ಸರಿ ಮಾಡಿಲ್ಲ. ಆದಕಾರಣ ಸಬ್-ಸ್ಟೇಜಸ್ ತಾವು ಮಾಡಬೇಕು. ಮತ್ತು ಇನ್ನೊಂದು ಸ್ಟೇಜ್ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಕೆ. ಎಸ್. ಆರ್. ಟಿ.ಸಿ. ಯಲ್ಲಿ ರಿಸರ್ವೇಷನ್ ಮಾಡುವಾಗ ರೈಲ್ವೇಯಲ್ಲಿ ಯಾವ ಪ್ರಕಾರ ಮಾಡುತ್ತಾರೆ ಅದೇ ಪ್ರಕಾರ ಮಾಡಬೇಕು. ಇವತ್ತು ಬೆಳಗಾಂನಲ್ಲಿ ಬೈಲಹೊಂಗಲದಲ್ಲಿ ರಿಸರ್ವೇಷನ್ ಮಾಡುತ್ತಾರೆ. ಅರ್ಧಗಂಟೆಗಿಂತ ಮೊದಲು ಟಿಕೆಟ್ ಕೊಡುತ್ತಾರೆ. ಅರ್ಧ ಗಂಟೆ ಮೊದಲು ಕೊಡಬೇಕಾದರೆ ನಾವು ಹೋಗಿ ಕೊಡಬೇಕು. ಅದರ ಬದಲು ಬೆಳಗ್ಗೆ ಆದಕೂಡಲೇ 4 ಗಂಟೆ ಬಸ್, 5 ಗಂಟೆ ಬಸ್, 7 ಗಂಟೆ ಬಸ್‌ಗೆ ರಿಸರ್ವೇಷನ್ ಕೊಟ್ಟರೆ ಅನುಕೂಲವಾಗುತ್ತದೆ. ಆದಕಾರಣ ಯಾವ ಪ್ರಕಾರ ರೈಲ್ವೆಯಲ್ಲಿ ರಿಸರ್ವೇಷನ್ ಕೊಡುತ್ತಾರೆ ಆ ರೀತಿ ಒಂದು ದಿವಸಕ್ಕೆ ಕೊಡಬೇಕು. ಕಂಟ್ರೋಲರ್ ಕ್ಯಾಬಿನ್‌ನಲ್ಲಿ ಇದ್ದೇ ಇರುತ್ತಾರೆ. ಇದರಿಂದ ಯಾವುದೇ ತೊಂದರೆಯಾಗುವುದಿಲ್ಲ. ಕೆ. ಎಸ್. ಆರ್. ಟಿ. ಸಿ. ಬೆಂಗಳೂರಿನಲ್ಲಿ ಒಂದೇ ಇರುವುದನ್ನು ನಾಲ್ಕು ಸಬ್-ಡಿವಿಷನ್ ಆಗಿ ಮಾಡಬೇಕು. ನಾಲ್ಕು ಡಿವಿಷನ್ ಬೇರೆ ಬೇರೆ ಮಾಡಿದರೆ ಪ್ರಾಫಿಟ್ ಯಾವುದು ಹೆಚ್ಚು ಮಾಡಿ ತೋರಿಸುತ್ತದೆ ಎಂಬುದು ಗೊತ್ತಾಗುತ್ತದೆ. ನಮ್ಮ ಬೆಳಗಾಂ ಡಿವಿಷನ್ ಹೈಯೆಸ್ಟ್ ಪ್ರಾಫಿಟ್ ಇರುತ್ತದೆ. ಆದರೂ ಯಾವುದೇ ಫೆಸಲಿಟೀಸ್ ಕೊಡುವುದಿಲ್ಲ.

ಯಾರು ಡೈ ಪ್ರಾಫಿಟ್ ಮಾಡುತ್ತಾರೋ ಅವರಿಗೆ ಫೆಸಲೀಟೀಸ್ ಇಲ್ಲ, ಯಾರು ಫ್ರಾಫಿಟ್ ಮಾಡುವುದಿಲ್ಲ ಅವರಿಗೆ ಫೆಸಲಿಟೀಸ್ ಹೆಚ್ಚು. ಹೆಚ್ಚು ಫೆಸಲಿಟೀಸ್ ಕೊಟ್ಟರೆ ಬೆಳಗಾಂ ಡಿವಿಜನ್ ಒಂದರಲ್ಲೇ 2 ಕೋಟಿ ರೂಪಾಯಿ ಪ್ರಾಫಿಟ್ ಮಾಡಿ ತೋರಿಸಬಹುದು. ಎಲ್ಲಾ ಕಡೆ 1 ಟಯರ್ ಸಿಸ್ಟಮ್ ಇದ್ದರೆ, ನಮ್ಮಲ್ಲಿ 2 ಟಯರ್ ಸಿಸ್ಟಮ್ ಎಂದರೆ ಬಸ್ ಒಳಗೆ ಕುಳಿತು ಪ್ರಯಾಣ, ಬಸ್ ಹತ್ತುವ ಜಾಗದಲ್ಲಿ ನಿಂತು ಪ್ರಯಾಣ ಹಾಗೂ ಬಸ್ ಮೇಲೆ ಕುಳಿತು ಪ್ರಯಾಣ. ಇವತ್ತು ನಮ್ಮ ಭಾಗದಕ್ಕೆ ಹೊಸ ಬಸ್‌ಗಳನ್ನು ಕೊಟ್ಟಿಲ್ಲ, ಲಕ್ಸುರಿ ಬಸ್‌ಗಳನ್ನು ಕೇಳಿದರೆ ಅದನ್ನೂ ಕೊಡುವುದಿಲ್ಲ. ಆದ್ದರಿಂದ ನಮ್ಮ ಭಾಗಕ್ಕೆ ಲಕ್ಸುರಿ ಬಸ್ ಕೊಡುವ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಬೇಕು. ಇನ್ನು ಸ್ವಾತಂತ್ರ್ಯ ಯೋಧರು ಸಾರಿಗೆ ಬಸ್‌ನಲ್ಲಿ ಓಡಾಡುವುದಕ್ಕೆ ಪಾಸ್ ಕೊಡಿ ಎಂದು ಕೇಳುತ್ತಿದ್ದಾರೆ. ಇವತ್ತು ಅವರಿಗೆ ಬಸ್‌ಪಾಸ್ ಕೊಡುವ ಅವಶ್ಯಕತೆ ಇದೆ. ಕೇಂದ್ರ ಸರ್ಕಾರದವರು ಸ್ವಾತಂತ್ರ್ಯ ಯೋಧರಿಗೆ ರೈಲ್ವೇ ಪಾಸ್ ಕೊಟ್ಟಿದ್ದಾರೆ. ಅವರು ಸ್ವಾತಂತ್ರ್ಯಕ್ಕೆ ಹೋರಾಡಿದ್ದರಿಂದ ನಾವೆಲ್ಲಾ ಇಲ್ಲಿದ್ದೇವೆ. ಅವರು ಅಲ್ಲಿದ್ದಾರೆ. ಮಹಾರಾಷ್ಟ್ರ ಮತ್ತು ಕೇರಳಗಳಲ್ಲಿ ಸ್ವಾತಂತ್ರ್ಯ ಯೋಧರಿಗೆ ತಮ್ಮ ಸಾರಿಗೆ ಸಂಸ್ಥೆಗಳಲ್ಲಿ ಓಡಾಡುವುದಕ್ಕೆ ಪಾಸ್ ಕೊಟ್ಟಿದ್ದಾರೆ. ಇನ್ನು ಮಾಜಿ ಶಾಸಕರಿಗೆ ಪಾಸ್ ಕೊಡುವ ಬಗ್ಗೆ ಹೆಚ್ಚಿನ ಗಮನ ಹೆಚ್ಚಿನ ಸೌಲತ್ತುಗಳನ್ನು ಕೊಡುವ ಬಗ್ಗೆ ಯೋಚನೆ ಮಾಡಬೇಕು. ನಮ್ಮ ಭಾಗದಲ್ಲಿ ಮೈನರ್ ತಪ್ಪಿಗೂ ದೊಡ್ಡ ಪನಿಷ್‌ಮೆಂಟ್ ಕೊಡುತ್ತಿದ್ದಾರೆ. ಇದನ್ನು ತಪ್ಪಿಸಬೇಕು.

ನಮ್ಮಲ್ಲಿ ಒಬ್ಬ ಕಂಡಕ್ಟರ್‌ಗೆ ಕೇವಲ 7 ತಿಂಗಳು ಸರ್ವೀಸ್ ಇದೆ. ಆತನ ಸೇವಾವಧಿಯಲ್ಲಿ ಯಾವುದೇ ಛಾರ್ಜಸ್ ಇಲ್ಲ, ಕೇವಲ 3 ರೂಪಾಯಿ ವ್ಯತ್ಯಾಸ/ ಬಂತು ಎಂದು ಆತನಿಗೆ ಡಿವಿಜನಲ್ ಕಂಟ್ರೋಲರ್ 1 ಇನ್‌ಕ್ರಿಮೆಂಟ್ ಸ್ಟಾಪ್ ಮಾಡಿದರೆ, 4 ಜಿಲ್ಲೆಯ ಆಡಳಿತ ನಡೆಸುವ ರೀಜನಲ್ ಕಂಟ್ರೋಲರ್ ಆತನನ್ನು ಡಿಸ್‌ಮಿಸ್ ಮಾಡುತ್ತಾರೆ, ಇಂತಹ ಅನ್ಯಾಯಗಳು ಆಗಬಾರದು. ಮತ್ತೆ ಫ್ರೈರ್ ಕೇಸಸ್‌ಗಳು ಏನಿವೆ ಅವುಗಳನ್ನು ಬೇಗ ಇತ್ಯರ್ಥವಾಗುವ ಹಾಗೆ ನೋಡಿಕೊಳ್ಳಬೇಕು. ಇವು ಇದ್ದರೆ ಸಂಸ್ಥೆಗೇ ಭಾರ. ಇನ್ನು ಬೆಳಗಾಂ ಜಿಲ್ಲೆಯಲ್ಲಿ ಚಿಮಣಿ ಎಣ್ಣೆ ಕೊರತೆ ಇದ್ದು, ಒಂದು ಲೀಟರ್ 7 ರೂ.ಗೆ ಮಾರಾಟವಾಗುತ್ತಿದ್ದು ಈ ಬಗ್ಗೆ ಕೆ.ಹೆಚ್. ಪಾಟೀಲರು ಬಂದಾಗಲೂ ಅಲ್ಲಿನ ನಾಗರೀಕರು ಹೇಳಿದ್ದಾರೆ. ಇನ್ನು ನಮ್ಮಲ್ಲಿ ಆಹಾರ ವಿತರಣೆ ಕೂಡಾ ಸರಿಯಾಗಿಲ್ಲ, ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಮತ್ತೆ ಟಿಎಪಿಸಿಎಂಸಿ ಮುಖಾಂತರ ಗೊಬ್ಬರದ ವಿತರಣೆ ಸರಿಯಾಗಿ ಆಗುವಂತೆ ನೋಡಿಕೊಳ್ಳಬೇಕು ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ಒಂದು ಸಾರಿ ಅಲ್ಲ, ಎರಡು ಸಾರಿ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಇವತ್ತು ಮಂಡಿಸಿರುವ ಬೇಡಿಕೆಗಳನ್ನು ವಿರೋಧಿಸುತ್ತಾ, ಕಂದಾಯ ಇಲಾಖೆ ಬಗ್ಗೆ ಒಂದೆರಡು ಮಾತನಾಡುತ್ತೇನೆ. ಇವತ್ತು ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಕಛೇರಿಗಳು ಅಥವಾ ಗ್ರಾಮ ಮಟ್ಟದಲ್ಲಿ ಗ್ರಾಮಕರಣಿಕರ ಕಛೇರಿಗಳು ವ್ಯವಸ್ಥಿತವಾಗಿದ್ದರೆ ಆ ಊರು, ಆ ತಾಲ್ಲೂಕು ನೆಮ್ಮದಿ ಹಾಗೂ ಶಾಂತಿಯಿಂದ ಇರುತ್ತದೆ. ಎಂದು ನಾನು ಹೇಳುತ್ತೇನೆ. ಯಾವುದೇ ರೀತಿಯ ವ್ಯವಸ್ಥೆ ಇಲ್ಲದ ಪಕ್ಷದಲ್ಲಿ ಅಂತಹ ಕಡೆಯಲ್ಲಿ ಗೊಂದಲ ನಿರ್ಮಾಣವಾಗುತ್ತದೆ. ಏಕೆಂದರೆ ಇವತ್ತಿನ ದಿವಸ ಶಾಸಕರಾದ ನಮ್ಮ ಹತ್ತಿರಕ್ಕೆ ಗ್ರಾಮೀಣ ಜನರು ಸಾಕಷ್ಟು ದೂರುಗಳನ್ನು ಕಂದಾಯ ಇಲಾಖೆ

(ಶ್ರೀ ಬಿ. ಎಂ. ಇದಿನಬ್ಬ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಬಗ್ಗೆಯೇ ತೆಗೆದುಕೊಂಡು ಬರುತ್ತಾರೆ. ಮಾನ್ಯ ಸಚಿವರು ಈ ಬಗ್ಗೆ ಗಮನಹರಿಸಿ ಆ ಕಚೇರಿಗಳಲ್ಲಿ ನಡೆಯುತ್ತಿರುವ

ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇವತ್ತು ಇಲಾಖೆಯನ್ನು ಚುರುಕು ಮಾಡುವ ದೃಷ್ಟಿಯಿಂದ ಹೆಚ್ಚಿನ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿರುವ ಸಂದರ್ಭದಲ್ಲಿ ಗ್ರಾಮ ಕರಣಿಕರ ಹುದ್ದೆಗಳು ಸಾಕಷ್ಟು ಖಾಲಿ ಇದೆ. ಅವನ್ನು ಕೂಡಲೇ ಭರ್ತಿ ಮಾಡಬೇಕೆಂದು ಹೇಳುತ್ತೇನೆ. ಮತ್ತು ಭೂಸುಧಾರಣಾ ಕಾನೂನು ಪ್ರಕಾರ ಸಿಕ್ಕಿರುವ ಭೂಮಿಯ ಖಾತೆಗಳನ್ನು ಇಷ್ಟರವರೆವಿಗೂ ಬದಲಾವಣೆ ಮಾಡಿರುವುದಿಲ್ಲ. ಅದನ್ನು ಕೂಡಾ ಆದಷ್ಟು ಜಾಗ್ರತೆ ಮಾಡುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳಬೇಕು. ಇವತ್ತು ಕುಮ್ಕಿ ಜಮೀನಿನ ಬಗ್ಗೆ ಬಹಳ ದೊಡ್ಡ ಸಮಸ್ಯೆ ಇದೆ. ರೈತರ ಪಟ್ಟಾ ಜಾಗದಲ್ಲಿ ನಾಲ್ಕೂವರೆ ಪಟ್ಟು ಭೂಮಿ ಏನಿದೆ ಅದಕ್ಕೆ ಕುಮ್ಕಿ ಜಮೀನು ಎಂದು ಹೇಳುತ್ತಿದ್ದಾರೆ.

ಅದಕ್ಕೆ ಸರಿಯಾದ ರಕ್ಷಣೆಯನ್ನು ರೈತರಿಗೆ ಕೊಡಬೇಕು. ಒಟ್ಟಿನಲ್ಲಿ ಈಗ ಸರ್ಕಾರದ ಒಂದು ಕಾನೂನು ಬಂದಿದೆ. ಯಾರು ಸರ್ಕಾರಿ ಭೂಮಿಯನ್ನು ಅಕ್ರಮ ಸಾಗುವಳಿ ಮಾಡುತ್ತಿದ್ದಾರೆ, ಯಾರು ಅಲ್ಲಿ ಕೂತು ಕೃಷಿ ಮಾಡುತ್ತಿದ್ದಾರೆ ಅವರಿಗೆ ಸಕ್ರಮ ಮಾಡಬೇಕೆಂದು ಕಾನೂನು ಬಂದಿದೆ: ಸರ್ಕಾರ ಒಂದು ವಿಚಾರವನ್ನುಗಮನಿಸಬೇಕು. ನಮ್ಮ ಜಿಲ್ಲೆಯಲ್ಲಿ ನೂರಕ್ಕೆ 70 ಭಾಗ ಕುಮ್ಕಿ ಭೂಮಿಯಲ್ಲಿ ಸಾಗುವಳಿ ಮಾಡುತ್ತಿದ್ದಾರೆ. ಅವರು ಸಹ ಅರ್ಜಿಯನ್ನು ಕೊಟ್ಟಿದ್ದಾರೆ. ಸುಮಾರು 50 ವರ್ಷಗಳಿಂದ ಅಲ್ಲಿ ಕೃಷಿ ಮಾಡುತ್ತಿದ್ದಾರೆ. ಆದರೆ ಅವರಿಗೆ ಇವತ್ತಿನವರೆಗೆ ರಕ್ಷಣೆ ಇಲ್ಲ. ಕಾನೂನು ತಿದ್ದುಪಡಿ ಮಾಡಿ ಅವರಿಗೂ ಸಹ ಪಟ್ಟಾ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದೇ ರೀತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕನ್ವರ್ಷನ್ ಸಮಸ್ಯೆ ದೊಡ್ಡದು ಇದೆ. ನಮ್ಮಲ್ಲಿ ಭೂ-ವರ್ಗೀಕರಣ ಮಾಡುವಾಗ ನಂಜ, ಪುಂಜ ಮತ್ತು ಭಾಗಾಯತ ಈ ರೀತಿಯಲ್ಲಿ ಮೂರು ರೀತಿ ವರ್ಗೀಕರಣ ಮಾಡಿದ್ದಾರೆ. ಈ ಭೂಮಿಯನ್ನು ಕನ್ವರ್ಷನ್‌ಗೆ ಹೊರತುಪಡಿಸಬೇಕೆಂದು ಮಾನ್ಯ ಸಚಿವರಲ್ಲಿ ಒತ್ತಾಯಿಸುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಸ್ಮಶಾನ ಭೂಮಿಯ ಬಗ್ಗೆ ದೊಡ್ಡ ಸಮಸ್ಯೆ ಇದೆ.

ಅಕ್ರಮ ಭೂಮಿಯನ್ನು ಸಕ್ರಮಗೊಳಿಸುವಂತಹ ಕಾಲದಲ್ಲಿ ಎಲ್ಲಾ ಕಡೆಗಳಲ್ಲಿ ಸರ್ಕಾರಿ ಭೂಮಿಯನ್ನು ಅಕ್ರಮ ಮಾಡಿ ಇಟ್ಟುಕೊಂಡಿದ್ದಾರೆ. ಇನ್ನು ಮುಂದೆ ಖಾಲಿ ಜಾಗದ ಮತ್ತು ಸ್ಮಶಾನ ಭೂಮಿಯ ದೊಡ್ಡ ಸಮಸ್ಯೆ ಬರಬಹುದು. ಇನ್ನು ಕೆಲವಾರು ವರ್ಷಗಳಲ್ಲಿ ಸ್ಮಶಾನ ಜಾಗದ್ದು ದೊಡ್ಡ ಸಮಸ್ಯೆಯಾಗಬಹುದು. ಆದ್ದರಿಂದ ಸರ್ಕಾರ ಕೂಡಲೇ ಗ್ರಾಮಾಂತರ ಪ್ರದೇಶಗಳಲ್ಲಿರುವಂತಹ ಗ್ರಾಮ ಕರಣಿಕರಿಗೆ ಸೂಚನೆ ಕೊಟ್ಟು ಒಂದು ಗ್ರಾಮದಲ್ಲಿ ಕನಿಷ್ಟ ಪಕ್ಷ ಐದು ಕಡೆಗಳಲ್ಲಿ ಸರ್ಕಾರಿ ಭೂಮಿಯನ್ನು ರಿಸರ್ವ್ ಮಾಡುವ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ಮಾನ್ಯ ಸಚಿವರು ಪ್ರಶ್ನೆಗೆ ಉತ್ತರ ಕೊಡುವಾಗ ಕಟ್ -ಆಫ್ ಡೇಟ್ ನಂತರ ಯಾರು ಸರ್ಕಾರಿ ಭೂಮಿಯನ್ನು ಅಕ್ರಮವಾಗಿ ಸ್ವಾಧೀನಪಡಿಸಿಕೊಂಡಿದ್ದಾರೆ ಅದನ್ನು ಕೂಡಲೇ ಇತ್ಯರ್ಥ ಮಾಡಲಾಗುವುದು ಎಂದು ಹೇಳಿದ್ದಾರೆ. ಅದನ್ನು ಮಾಡದಿದ್ದರೆ ಒಂದು ಕೆಟ್ಟ ಸಮಸ್ಯೆ ನಿರ್ಮಾಣವಾಗುತ್ತದೆ : ನೈಸರ್ಗಿಕ ವಿಕೋಪಕ್ಕೆ ನಮ್ಮ ಜಿಲ್ಲೆ ಪ್ರತಿ ವರ್ಷ ತುತ್ತಾಗುತ್ತಿದೆ. ಈವರ್ಷ ಧಾರಾಳವಾಗಿ ಮಳೆಯಾಗಿ ಮನೆಗಳು ಬಿದ್ದು ಹೋಗಿವೆ. ರೈತರ ಬೆಳೆಗಳು ಭಯಂಕರ ರೀತಿಯಲ್ಲಿ ನಾಶವಾಗಿವೆ. ಇದಕ್ಕೆ ಪರಿಹಾರ ಏನು ಕೊಡಲಾಗುತ್ತಿದೆ ಅದು ಏನೇನು ಸಾಲದು. ಕೊಡತಕ್ಕ ಪರಿಹಾರವನ್ನು ಜಾಸ್ತಿ ಮಾಡಬೇಕು.

ಮನೆ ಬಿದ್ದುಹೋದರೆ ಕೊಡತಕ್ಕ ಪರಿಹಾರ ಏನೇನು ಸಾಲದು ಅದನ್ನು ಕೂಡ ಜಾಸ್ತಿ ಮಾಡಬೇಕು. ನಮ್ಮ ಜಿಲ್ಲೆಯಲ್ಲಿ ಮುಖ್ಯವಾದ ಬೆಳೆ ಅಡಿಕೆ ಬೆಳೆ. ಆ ಬೆಳೆಗೆ ಈ ವರ್ಷ ಜಾಸ್ತಿ ಮಳೆಯಿಂದಾಗಿ ಕೊಳೆ ರೋಗ ಬಂದಿದೆ. ಆದ್ದರಿಂದ

ರೈತರಿಗೆ ತುಂಬಾ ಕಷ್ಟವಾಗಿದೆ. ಅದರ ಬಗ್ಗೆ ನಮ್ಮ ಜಿಲ್ಲೆಮಟ್ಟಿಗೆ ಒಂದು ಸರ್ವೆ ಮಾಡಿ ಯಾರಿಗೆ ಎಷ್ಟು ನಷ್ಟವಾಗಿದೆ ಅದನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಕೂಡ ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ಸಹಕಾರ ಸಂಘಗಳಲ್ಲಿ ಆಡಳಿತ ಮಂಡಳಿ ಮತ್ತು ಚುನಾಯಿತ ಪ್ರತಿನಿಧಿಗಳು ಇರುವಾಗ ಪುನ: ಸರ್ಕಾರ ನಾಮಿನೇಷನ್ ಮಾಡುವಂತಹ ಪ್ರವೃತ್ತಿ ಏನಿದೆ ಅದು ಪ್ರಜಾಪ್ರಭುತ್ವದ ನೀತಿಗೆ ವಿರೋಧವಾಗಿದೆ. ಸಹಕಾರ ಸಂಘಗಳಿಗೆ ನಾಮಿನೇಷನ್ ಮಾಡುವಂತಹದ್ದನ್ನು ನಿಲ್ಲಿಸಬೇಕು. ಸಹಕಾರ ಸಂಘಗಳಲ್ಲಿ ಅವ್ಯವಹಾರ ನಡೆದು ಅವ್ಯವಹಾರ ಪತ್ತೆಯಾದರೂ ಕೂಡ ಅದರ ಬಗ್ಗೆ ಇವತ್ತಿನವರೆಗೂ ಯಾವುದೇ ಕ್ರಮವನ್ನು ತೆಗೆದು ಕೊಂಡಿಲ್ಲ. ಮುಲ್ಕಿ ಸೊಸೈಟಿಯಲ್ಲಿ ಮೂರು ವರ್ಷಗಳ ಹಿಂದೆ ಸುಮಾರು 17 ಲಕ್ಷ ರೂಪಾಯಿಗಳ ಅವ್ಯವಹಾರ ನಡೆದಿದೆ. ಅದರ ಬಗ್ಗೆ ಇದುವರೆಗೆ ತನಿಖೆಯಾಗಲಿಲ್ಲ. ಅದನ್ನು ಇನ್ನು ಕಂಡುಹಿಡಿಯಲಿಲ್ಲ. ಇವತ್ತು ಅಲ್ಲಿನ ಜನ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಯಾರು ತಪ್ಪಿತಸ್ಥರು ಇದ್ದಾರೆ ಅವರಿಗೆ ಸರಿಯಾದ ಶಿಕ್ಷೆಯನ್ನು ಕೊಡುವಂತಹ ವ್ಯವಸ್ಥೆಯಾಗಬೇಕು.

ಇನ್ನು ಸಾರಿಗೆ ಇಲಾಖೆಯ ಬಗ್ಗೆ ಹೇಳುವುದಾದರೆ, ನಮ್ಮ ವಿಟ್ಲ ಅಂತರರಾಜ್ಯ ಸಂಚಾರ ಸಂಪರ್ಕವಿರತಕ್ಕ ಜಾಗವಾಗಿದೆ. ಅಲ್ಲಿ ಕೇರಳ-ಕರ್ನಾಟಕ ರಾಜ್ಯಗಳಿಗೆ ಸಂಚಾರಕ್ಕೆ ಅನುಕೂಲವಿರತಕ್ಕ ಜಾಗ. ಅಲ್ಲಿ ಒಂದು ಬಸ್‌ನಿಲ್ದಾಣವನ್ನು ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಶಾಸಕರು ಹೇಳಿದ ನಂತರ ಕೆಲವು ಕಡೆಗಳಲ್ಲಿ ಹೊಸ ಬಸ್‌ಗಳನ್ನು ಹಾಕಿದರು. ಕೇವಲ ಎರಡು ತಿಂಗಳುಗಳಲ್ಲಿ ನಷ್ಟವಾಗುತ್ತದೆಂದು ನಿಲ್ಲಿಸಿದರು. ಕೇವಲ ಎರಡು ತಿಂಗಳುಗಳಲ್ಲಿ ಒಂದು ರೂಟ್‌ನಲ್ಲಿ ಲಾಭ ಬರುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಸರ್ವೀಸ್ ಮಾಡತಕ್ಕ ಬಸ್ ಸಮಯಕ್ಕೆ ಸರಿಯಾಗಿ ಬರುತ್ತಿಲ್ಲ. ಜನರಿಗೆ ಅದರ ಬಗ್ಗೆ ವಿಶ್ವಾಸವಿಲ್ಲದ ಕಾರಣ ನಷ್ಟವಾಗಲಿಕ್ಕೆ ಕಾರಣವಾಗುತ್ತದೆ. ಕ್ರಮಬದ್ಧವಾಗಿ ಸಮಯಕ್ಕೆ ಸರಿಯಾಗಿ ಬಸ್ ಬಂದರೆ ಜನರಲ್ಲಿ ವಿಶ್ವಾಸ ಹುಟ್ಟಿ ಲಾಭ ಬರುವುದಕ್ಕೆ ಸಾಧ್ಯವಾಗುತ್ತದೆ. ನಿಲ್ಲಿಸಿರುವ ಬಸ್‌ನ್ನು ಕೂಡಲೇ ಓಡಿಸುವಂತಹ ವ್ಯವಸ್ಥೆಯನ್ನು ಮಾಡಬೇಕು. ಕೂಡಲೇ ಆ ಕೆಲಸವನ್ನು ಮಾಡಬೇಕೆಂದು ಸಂಬಂಧಪಟ್ಟ ಮಂತ್ರಿಗಳಲ್ಲಿ ನಾನು ಒತ್ತಾಯವನ್ನು ಮಾಡುತ್ತೇನೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ದೇವಾಲಯಗಳು ಅಜೀರ್ಣಾವಸ್ಥೆಯಲ್ಲಿವೆ. ದೇವಾಲಯಗಳು ಜೀರ್ಣೋದ್ಧಾರವಾದರೆ ಆ ಊರಿನಲ್ಲಿ ಶಾಂತಿ ನೆಮ್ಮದಿ ಬರುತ್ತದೆ. ಆ ದೃಷ್ಟಿಯಿಂದ ಊರುಗಳಲ್ಲಿರತಕ್ಕ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿ ಜನರಿಗೆ ಪೂಜೆ ಮಾಡಲಿಕ್ಕೆ ಅನುಕೂಲ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಿಸುತ್ತೇನೆ. ಇನ್ನು ನಿವೃತ್ತಿ ವೇತನ ಕೊಡುವ ಬಗ್ಗೆ ಹೇಳುವುದಾದರೆ, ನನ್ನ ಗಮನಕ್ಕೆ ಬಂದ ಹಾಗೆ ಕೆಲವಾರು ಕಡೆಗಳಲ್ಲಿ ಕೆಲವು ಕಾರಣಗಳನ್ನು ಕೊಟ್ಟು ನಿವೃತ್ತಿ ಹೊಂದಿದ್ದಾರೆ. ಆದರೆ ಅವರಿಗೆ ನಿವೃತ್ತಿ ವೇತನ ಸಿಕ್ಕಿಲ್ಲ. ಹಲವಾರು ವರ್ಷಗಳ ಕಾಲ ಸರ್ಕಾರಿ ಸೇವೆ ಮಾಡಿ ನಿವೃತ್ತಿ ಹೊಂದಿದವರಿಗೆ ನಿವೃತ್ತಿ ವೇತನ ಕೊಡದಿದ್ದರೆ ಅದು ಸರಿಯಲ್ಲ. ಸರ್ಕಾರ ಇತ್ತ ಕಡೆ ಗಮನ ಹರಿಸಿ ಕೇವಲ ಒಂದು ತಿಂಗಳೊಳಗೆ ನಿವೃತ್ತಿ ವೇತನ ಕೊಡುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ನಿವೃತ್ತಿಯಾದ ಮೇಲೆ ನಿವೃತ್ತಿ ವೇತನ ಇಲ್ಲದೆ ಹಲವಾರು ವರ್ಷಗಳ ಕಾಲ ಕಷ್ಟದಲ್ಲಿರುವುದು ಸರಿಯಲ್ಲ. ಸರ್ಕಾರ ಈ ಕಡೆ ತೀವ್ರ ಗಮನ ಕೊಡಬೇಕೆಂದು ಮತ್ತೊಮ್ಮೆ ಒತ್ತಾಯಿಸುತ್ತೇನೆ. ರೈತರ ಸಾಲ ಮನ್ನಾ ಮಾಡುವ ಬಗ್ಗೆ ಎರಡು ವರ್ಷಗಳಿಂದ ವಿಧಾನಸಭೆಯಲ್ಲಿ ಚರ್ಚೆ ನಡೆಯುತ್ತಿದೆ. ಮೊನ್ನೆ ಉತ್ತರ ಕೊಟ್ಟಾಗ ಮಾನ್ಯ ಮುಖ್ಯ ಮಂತ್ರಿಗಳು, 10 ಸಾವಿರ ರೂಪಾಯಿಗಳ ಒಳಗಿನ ಸಾಲ

ವಸೂಲಾತಿಗಾಗಿ ನೋಟೀಸ್ ಕೊಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿಕೆ ಕೊಟ್ಟಿದ್ದಾರೆ. ಆದರೆ 6-9-91ರ ಸರ್ಕಾರದ ಸುತ್ತೋಲೆಯನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಕರ್ನಾಟಕ ಸರ್ಕಾರದ ಸಹಕಾರ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳ ಕಛೇರಿಯಿಂದ ನೋಟೀಸ್ ಹೋಗಿದೆ. ಅದರ ಕ್ರಮಾಂಕ: ಪಿಆರ್‌ಡಿ. 1 ಕೆಎಂಸಿ : 2: 91-92 ಇದರಲ್ಲಿ ಏನು ಹೇಳಿದ್ದಾರೆಂದರೆ, ರೈತರೊಡನೆ ಸೌಜನ್ಯದಿಂದ ವರ್ತಿಸಬೇಕೆಂದರೆ ಕ್ರಮ ತೆಗೆದುಕೊಂಡು ಸಾಲ ವಸೂಲ್ಮಾಡಬಾರದೆಂದು ಅಲ್ಲ ಎಂದು ಸ್ಪಷ್ಟೀಕರಣ ನೀಡಿದ್ದಾರೆ. ಅಂದರೆ ಸಾಲ ವಸೂಲಾತಿ ಮಾಡಬೇಕೆಂದು ಸುತ್ತೋಲೆ ಕೊಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ನನಗೆ ಇಷ್ಟು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್ಮನ್ : ಈಗ ಶ್ರೀ ಏಕಾಂತಯ್ಯನವರು ಮಾತನಾಡುವುದು.

ಶ್ರೀ ಕರಿಯಣ್ಣ : ನಾಳೆ ಬೆಳಿಗ್ಗೆ ಸ್ವಲ್ಪ ಹೊತ್ತು ಮಾತನಾಡುವುದಕ್ಕೆ ಅವಕಾಶ ನೀಡಿ ನಂತರ ಉತ್ತರ ಕೊಡುವ ವ್ಯವಸ್ಥೆ ಮಾಡಿ.

ಛೇರ್ಮನ್ : ಇನ್ನು 2-3 ಜನರಿದ್ದಾರೆ. 10-15 ನಿಮಿಷದಲ್ಲಿ ಮುಗಿಸಬಹುದು.

ಶ್ರೀ ಕರಿಯಣ್ಣ : ಮಾನ್ಯ ಏಕಾಂತಯ್ಯನವರಿಗೆ ಒಂದು ಗಂಟೆ ಬೇಕಾಗುತ್ತದೆ. ಅವರು ಮಾತನಾಡುವುದಕ್ಕೆ ಶುರು ಮಾಡಿದರೆ ಕನಿಷ್ಟ ಒಂದು ಗಂಟೆ ತೆಗೆದುಕೊಳ್ಳುತ್ತಾರೆ. ಅವರು ಸಹಕಾರ ಸಚಿವರಾಗಿದ್ದವರು. ಅವರ ವಿಚಾರಗಳು ನಮಗೂ ತಿಳಿಯಬೇಕು. ಅವರಿಗೆ ಕೊಡಬೇಕಾದ ಸಮಯವನ್ನು ಕೊಡದೆ ಇರುವುದಕ್ಕೆ ಆಗುವುದಿಲ್ಲ. ನಾಳೆ ಬೆಳಿಗ್ಗೆ 9 ಗಂಟೆಗೆ ಶುರು ಮಾಡಿ.

ಶ್ರೀ ಪಿ.ಜಿ. ಆರ್. ಸಿಂಧ್ಯ : ಈಗ ಎಂಟೂವರೆ ಗಂಟೆ ಆಯಿತು. ಬೆಳಿಗ್ಗೆ 11ರಿಂದ ಕುಳಿತಿದ್ದೇವೆ. ಈಗ ಇನ್ನೂ ತಡವಾಗಿ ಹೋದರೆ ಬೆಳಿಗ್ಗೆ 9ಕ್ಕೆ ಬರುವುದು ಹೇಗೆ? ಕೇಳುವುದಕ್ಕೂ ಒಂದು ಪೇಷನ್ಸ್ ಇರುತ್ತದೆ. ಯಾವುದಕ್ಕೂ ಒಂದು ಲಿಮಿಟ್ ಇರಬೇಕು. ಈಗ ಅವರು ನಿಂತುಕೊಳ್ಳುವುದು ಕಷ್ಟವಾಗಿದೆ. ಬೆಳಿಗ್ಗೆ ಒಂದು ಅರ್ಧ ಮುಕ್ಕಾಲು ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ. ಇದಕ್ಕೆ ಸರ್ಕಾರದವರು ಒಪ್ಪುತ್ತಾರೆಂದು ಭಾವಿಸಿದ್ದೇನೆ. ದಯವಿಟ್ಟು ಬೆಳಿಗ್ಗೆ ಅರ್ಧ ಗಂಟೆ ಕೊಡಿ. ಬೆಳಿಗ್ಗೆ 9.30 ಕ್ಕೆ ಇಟ್ಟುಕೊಳ್ಳೋಣ.

ಶ್ರೀ ಹೆಚ್. ಏಕಾಂತಯ್ಯ : ಮುಖ್ಯ ಮಂತ್ರಿಗಳ ಬೇಡಿಕೆಗಳ ಬಗ್ಗೆ ಇದುವರೆಗೆ ಮಾತನಾಡಿಲ್ಲ. ಬೆಳಿಗ್ಗೆ ಆದರೆ ಆಗಬಹುದು, ನನ್ನದೇನು ತಕರಾರು ಇಲ್ಲ.

ಶ್ರೀ ಗೋಪಿನಾಥ್ ಆರ್. ಸಾಂಡ್ರ : ಈಗ ಕೋರಂ ಕೂಡ ಇಲ್ಲ, ಕೋರಂ ಇಲ್ಲದಿರುವಾಗ ಸಭೆಯನ್ನು ನಡೆಸುವುದು ಸರಿಯಲ್ಲ.

ಛೇರ್ಮನ್ : ಈಗ ಸಭೆ ಮುಂದುವರಿದು ನಾಳೆ ಬೆಳಿಗ್ಗೆ 9ಕ್ಕೆ ಸೇರುವುದು ಬೆಳಿಗ್ಗೆ ಒಂದು ಗಂಟೆಕಾಲ ಬೇಡಿಕೆಗಳ ಮೇಲೆ ಚರ್ಚೆಯಾಗಿ 10 ಗಂಟೆಗೆ ಮಂತ್ರಿಗಳು ಉತ್ತರ ಕೊಡುತ್ತಾರೆ.

(ಸದನವು ರಾತ್ರಿ 8 ಗಂಟೆ 25 ನಿಮಿಷಕ್ಕೆ ಮುಕ್ತಾಯಗೊಂಡು ಪುನ: 20ನೇ ಸೆಪ್ಟೆಂಬರ್ 1991ರ ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ಸಮಾವೇಶಗೊಳ್ಳುವುದಾಗಿ ನಿಶ್ಚಯಿಸಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

BLANK PAGE

ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಶುಕ್ರವಾರ ೨೦ನೇ ಸೆಪ್ಟೆಂಬರ್ ೧೯೯೧, ಭಾದ್ರಪದ ೨೯, ಶಕ ೧೯೧೩

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೯.೧೫ ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು : **(ಶ್ರೀಮತಿ ನಾಗಮ್ಮ ಕೇಶವಮೂರ್ತಿ)** ಅವರು ಅಧ್ಯಕ್ಷ

ಪೀಠವನ್ನು ಅಲಂಕರಿಸಿದ್ದರು.

ಉಪಾಧ್ಯಕ್ಷಣಿಯವರು ; ನಿನ್ನೆಯ ದಿವಸ ಅರ್ಧಗಂಟೆಕಾಲ ಈ ಬೇಡಿಕೆಯ ಮೇಲೆ ಚರ್ಚೆಯನ್ನು ಮುಂದುವರೆಸಿ ಉತ್ತರ ಪ್ರಾರಂಭ ಮಾಡಬೇಕೆಂದು ತೀರ್ಮಾನವಾಗಿರುತ್ತದೆ. ಆದ್ದರಿಂದ ಇನ್ನು ಒಬ್ಬಿಬ್ಬರು ಮಾತನಾಡುವವರಿದ್ದಾರೆಂದು ಗೊತ್ತಾಗಿದೆ. ಆದಷ್ಟು ಜಾಗ್ರತೆಯಾಗಿ ಅಂದರೆ ಇನ್ನು 10-15 ನಿಮಿಷದಲ್ಲಿ ಮುಗಿಸಿದರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೇ ನಿನ್ನೆ ಇವತ್ತು ಬೇಡಿಕೆಗಳ ಮೇಲೆ ಚರ್ಚೆಯಾದ ಮೇಲೆ ಇನ್ನೂ 15-20 ಬೇಡಿಕೆಗಳು ಬೇರೆ ಬೇರೆಯವು ಇರುತ್ತವೆ. ಅದಕ್ಕೆ ಇನ್ನೂ ಚರ್ಚೆಯಾಗಬೇಕಾಗಿರುವುದರಿಂದ 10-11 ಗಂಟೆಯವರೆಗಾದರೂ ಕಾಲಾವಕಾಶಬೇಕಾಗುತ್ತದೆ. ಅದು ಎಕ್ಸೈಸ್ ಇಲಾಖೆ ಇರಬಹುದು. ಅರಣ್ಯ ಇಲಾಖೆ ಇರಬಹುದು. ವಿದ್ಯಾ ಇಲಾಖೆಯಿರಬಹುದು, ಈ ರೀತಿ ಅನೇಕ ಇಲಾಖೆಗಳಿವೆ. ಸುಸೂತ್ರವಾಗಿ ಎಲ್ಲಾ ನಡೆಯಬೇಕಾಗಿದೆ. ಇವೆಲ್ಲವೂ ಪ್ರಮುಖ ಇಲಾಖೆಗಳಾಗಿರುವುದರಿಂದ ಪ್ರಮುಖವಾದ ವಿಷಯಗಳನ್ನು ಚರ್ಚೆ ಮಾಡುವ ಅಗತ್ಯವಿದೆ. 11 ಗಂಟೆಯವರೆಗೆ ಎಲ್ಲಾ ಬೇಡಿಕೆಗಳ ಮೇಲೆ ಚರ್ಚೆ ಮಾಡಲು ದಯವಿಟ್ಟು ಅವಕಾಶವನ್ನು ಮಾಡಿಕೊಡಬೇಕು. ಇದರ ಬಗ್ಗೆ ಬಿ.ಎ.ಸಿ. ಮೀಟಿಂಗ್ ಕರೆದು ಕೂಡ ಚರ್ಚೆ ಮಾಡಿ ರಾತ್ರಿ 11 ಗಂಟೆಯಾದರೂ ಎಲ್ಲಾ ವಿಷಯಗಳ ಬಗ್ಗೆ ಚರ್ಚೆಯಾಗಲು ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

1991-92ನೇ ಸಾಲಿನ ಅನುಪೂರಕ ಬೇಡಿಕೆಗಳ ಮೇಲೆ ಸಾಮಾನ್ಯ ಚರ್ಚೆ (ಮುಂದುವರೆಯಿತು)

+ ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) : ಸನ್ಮಾನ್ಯ ಉಪಾಧ್ಯಕ್ಷಣಿಯವರೇ ನಿನ್ನೆ ದಿವಸ ಕೆಲವು ಬೇಡಿಕೆಗಳ ಬಗ್ಗೆ ಮಾತನಾಡಲಿಕ್ಕೆ ನನ್ನನ್ನು ಕರೆದಿದ್ದಿರಿ. ಅದಕ್ಕೆ ನಾನು ಬಹಳ ಅಭಾರಿಯಾಗಿದ್ದೇನೆ. ಒಂದು ಪಕ್ಷ ನಿನ್ನೆ ಚರ್ಚೆ ಏನಾದರೂ ಸಂಪೂರ್ಣಗೊಳಿಸಿದ್ದರೆ, ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಒಂದು ಘಟನೆ ನಡೆದುಹೋಗುತ್ತಿತ್ತು. ಅದು ಒಳ್ಳೆಯ ಘಟನೆಯೋ ಕೆಟ್ಟ ಘಟನೆಯೋ ಎಂದು ಗೊತ್ತಿಲ್ಲ. ಪಾರ್ಲಿಮೆಂಟ್, ಪ್ರಜಾಸತ್ತೆಯಲ್ಲಿ ಒಂದು ವಿಶೇಷವಾದಂಥ ಘಟನೆಯಾಗುತ್ತಿತ್ತೆಂದು ತಿಳಿದುಕೊಂಡಿದ್ದೇನೆ. ಏತಕ್ಕೆಂದರೆ, ನಿನ್ನೆ ಇದ್ದಂತಹ 22 ಬೇಡಿಕೆಗಳ ಪೈಕಿ ಮುಖ್ಯವಾಗಿ

ಮಾನ್ಯ ಮುಖ್ಯಮಂತ್ರಿಗಳ ಬೇಡಿಕೆಗಳ ಬಗ್ಗೆ ಮಾತನಾಡಿದಂತಹ ಹಲವಾರು ಮಾನ್ಯ ಸದಸ್ಯರು ಯಾರೂ ಏನೂ ಚಕರಾ ಎತ್ತಿರಲಿಲ್ಲ. ಆದರಿಂದ ಮುಖ್ಯ ಮಂತ್ರಿಗಳು ಒಳ್ಳೆಯ ಅವಕಾಶವನ್ನು ಕಳೆದುಕೊಳ್ಳುತ್ತಿದ್ದರು. ಮತ್ತು ಯಾರೂ ಏನೂ ಹೇಳಲಿಲ್ಲ, ನಾನು ಏತಕ್ಕೆ ಉತ್ತರ ಕೊಡಬೇಕೆಂದು ಹೇಳುತ್ತಿದ್ದರೋ ಏನೋ ಗೊತ್ತಿಲ್ಲ. ಅದು ಏನೇ ಇರಲಿ. ನಿನ್ನೆಯ 22 ಬೇಡಿಕೆಗಳ ಜೊತೆಗೆ ಇವತ್ತು 26 ಬೇಡಿಕೆಗಳನ್ನು ಈ ಸಭೆಯ ಮುಂದೆ ಇವೆ, ಅವನ್ನು ಪರಿಶೀಲಿಸಬೇಕಾಗಿದೆ. 28 ಬೇಡಿಕೆಗಳಿಗೆ ಸಂಬಂಧಪಟ್ಟಂತೆ ಸುಮಾರು 3 ಸಾವಿರ ಕೋಟಿ ರೂಪಾಯಿಗಳನ್ನು ನಾವು ಇವತ್ತಿನ ದಿವಸ ಸರ್ಕಾರಕ್ಕೆ ಖರ್ಚು ಮಾಡುವುದಕ್ಕೆ ಮಂಜೂರಾತಿ ಕೊಡಬೇಕಾಗಿದೆ. ಆದುದರಿಂದ ಒಂದೆರಡು ನಿಮಿಷ ವ್ಯತ್ಯಾಸವಾದರೂ ಪರವಾಗಿಲ್ಲ, ಬೇಡಿಕೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಮಾನ್ಯ ಸದಸ್ಯರಿಗೆ ಮತ್ತು ನನಗೆ ಸ್ವಲ್ಪ ಮಟ್ಟಿಗಾದರೂ ಸಮಯ ಕೊಡಬೇಕೆಂದು ಮೊದಲಿಗೆ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಹೊಸ ಸರ್ಕಾರ ಚುನಾವಣೆಯಾಗಿ ಬಂದಮೇಲೆ ಕೆಲವು ಕಾರ್ಯ ನೀತಿಗಳನ್ನು ಘೋಷಣೆ ಮಾಡಿದೆ. ನಾನು ಆ ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಮುಖ್ಯವಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಬಗ್ಗೆ ಅಂದು ಇದ್ದಂತಹ ಕಾಂಗ್ರೆಸ್ ಸರ್ಕಾರ ಅಥವಾ ಮಾನ್ಯ ವೀರೇಂದ್ರ ಪಾಟೀಲರ ನೇತೃತ್ವದಲ್ಲಿದ್ದಂತಹ ಸರ್ಕಾರ ತನ್ನ ಮುಖ್ಯವಾದ ನೀತಿಗಳನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿತ್ತು. ಅಥವಾ ಘೋಷಣೆ ಮಾಡಿತ್ತು ಎಂದರೆ ತಪ್ಪಾಗುವುದಿಲ್ಲ. ಈ ರಾಜ್ಯದಲ್ಲಿ ಆಡಳಿತ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕಾದುದು ಬಹಳ ಪ್ರಮುಖವವಾದ ಉದ್ದೇಶ. ಆಡಳಿತದಲ್ಲಿ ಎಲ್ಲೆಡೆ ತುಂಬಿರುವ ಅದಕ್ಷತೆಯನ್ನು ಹೋಗಲಾಡಿಸಿ ದಕ್ಷತೆಯನ್ನು ತರಬೇಕು ಮತ್ತು ನೌಕರಶಾಹಿ ವ್ಯವಸ್ಥೆ ಏನಿದೆ ಅದು ಜನತೆಯ ಅಗತ್ಯ ಮತ್ತು ಅಶೋತ್ತರಗಳಿಗೆ ಸ್ಪಂದಿಸುತ್ತಿಲ್ಲ. ಭ್ರಷ್ಟಾಚಾರ ಎಲ್ಲೆಡೆ ವ್ಯಾಪಾಕವಾಗಿದೆ. ಇದಕ್ಕೆ ಜಟಿಲವಾದಂಥ ಕಾರ್ಯನೀತಿ ಮತ್ತು ವಿಳಂಬವೇ ಕಾರಣ ಎನ್ನುವ ಮಾತನ್ನು ಹೇಳುತ್ತಾ, ಸರ್ಕಾರ ಹೇಳಿದಂತಹ ಮಾತನ್ನು ಉಲ್ಲೇಖ ಮಾಡುತ್ತಿದ್ದೇನೆ. ಅದಕ್ಕೋಸ್ಕರ ಈ ಸರ್ಕಾರ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಅದರಲ್ಲಿ ದಕ್ಷತೆ ಪರಿಶೋಧನೆ ಮತ್ತು ಜಾಗ್ರತ ಮಂಡಲಿಯ ರಚನೆ, ಪದ್ಧತಿ ಪರಿಶೋಧನಾ, ಪರಿಶೀಲನಾ ಸಮಿತಿಯ ರಚನೆ 15-3-90ರಲ್ಲಿ ಆಗ ಇದ್ದಂತಹ ಸರ್ಕಾರ ತನ್ನ ಕಾರ್ಯನೀತಿಯ ಬಗ್ಗೆ ವಿಧಾನ ಸಭೆಯಲ್ಲಿ ಹೇಳಿದಂತಹ ಹೇಳಿಕೆ ಇದಾದ ಮೇಲೆ ಸಮಾಜವಾದಿ ಬಂಗಾರಪ್ಪನವವರು ಸರ್ಕಾರ ಬಂದಮೇಲೆ ಅವರ ಸರ್ಕಾರದ ನೀತಿಯನ್ನು ಘೋಷಣೆ ಮಾಡುತ್ತಾ ಮಾನ್ಯ ರಾಜ್ಯಪಾಲರ ಮೂಲಕ ಒಂದು ಕಾರ್ಯನೀತಿಯನ್ನು ಹೇಳಿಸಿದ್ದಾರೆ.

ಅನೇಕ ಯೋಜನೆಗಳನ್ನು ನಾವು ಜಾರಿಗೆ ತರುತ್ತೇವೆ. ಆರಾಧನಾ, ಶುಶ್ರೂಷೆ ಮತ್ತು ಬೇರೆ ಬೇರೆ ಯೋಜನೆಗಳನ್ನು ಜಾರಿಗೆ ತರುತ್ತೇವೆ. ಈ ಎಲ್ಲ ಯೋಜನೆಗಳನ್ನು ರೂಪಿಸುವುದಕ್ಕೆ ಮತ್ತು ಕಾರ್ಯಗತಗೊಳಿಸುವುದಕ್ಕೆ ಆಡಳಿತ ಯಂತ್ರದ ಈಗಿರುವ ಸ್ಥಿತಿ ಹಾಗೂ ಹಾಗೂ ಕಾರ್ಯನಿರ್ವಹಣಾ ರೀತಿ ಏನೇನೂ ಸಾಲದು ಹಾಗೂ ಅಸಮರ್ಥವಾಗಿದೆ ಎಂಬ ಅರಿವು ನನ್ನ ಸರ್ಕಾರಕ್ಕಿದೆ. ಜನತೆಗೆ ಸೇವೆಯನ್ನು ಅವರು ಇರುವಲ್ಲಿಯೇ ಒದಗಿಸಲು ಆಡಳಿತ ವ್ಯವಸ್ಥೆಯಲ್ಲಿ ಹಾಗೂ ಕಾರ್ಯವಿಧಾನದಲ್ಲಿ ಮೂಲಭೂತ ಬದಲಾವಣೆಯನ್ನು ಮಾಡುವುದು ಅವಶ್ಯಕ. ವಾಸ್ತವವಾಗಿ, ಆಡಳಿತಾಂಗವು, ಜನತೆಯ ಕಣ್ಣು ಹಾಗೂ ಕೈಗಳಾಗಿ ಕಾರ್ಯ ನಿರ್ವಹಿಸಬೇಕು. ಆದ್ದರಿಂದ, ನನ್ನ ಸರ್ಕಾರವು ಸರ್ಕಾರಿ ನೌಕರರ ಹಾಗೂ ಸಾರ್ವಜನಿಕರ ನಡುವೆ ಪರಸ್ಪರ ಗೌರವ ಹಾಗೂ

ನಂಬಿಕೆ ಮೂಡಿಸುವಂತಹ ಹೊಸ ಸಂಸ್ಕೃತಿಯೊಂದನ್ನು ಆಡಳಿತದಲ್ಲಿ ತರಲು ಬದ್ಧವಾಗಿದೆ.

ಈ ಮಾತನ್ನು ಹೇಳುತ್ತಾ, ಒಂದು ಪಂಚಸೂತ್ರ ಕಾರ್ಯಕ್ರಮವನ್ನು ಪ್ರಾರಂಭಿಸುತ್ತೇವೆಂದು ಹೇಳಿದರು. ಅದೇನೆಂದರೆ, ಸರಳವಾದ ಕಾರ್ಯವಿಧಾನ ಡೆಲಿಗೇಷನ್ ಆಫ್ ಪವರ್ಸ್, ಸಾರ್ವಜನಿಕರಿಗೆ ಜವಾಬ್ದಾರರಾಗಿರುವುದು, ಗ್ರಾಮದಿಂದ ರಾಜ್ಯಮಟ್ಟದವರೆಗೆ ಮೇಲ್ವಿಚಾರಣೆ, ಸಾರ್ವಜನಿಕ ಕುಂದುಕೊರತೆಗಳ ಪರಿಹಾರ ಅದರ ಜೊತೆಗೆ ಒಂದು ಕರ್ನಾಟಕ ಆಡಳಿತ ಪ್ರಕ್ರಿಯೆ ಅಧಿನಿಯಮವನ್ನು ಜಾರಿಗೆ ತರುತ್ತೇವೆಂದು ಹೇಳಿದರು. ನಾನು ಎಲ್ಲಾ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋದರೆ ಹಲವಾರು ಗಂಟೆಗಳು ಬೇಕಾಗಬಹುದು. ಆದ್ದರಿಂದ ನಾನು ಮುಖ್ಯವಾಗಿ ತಮ್ಮ ಗಮನಕ್ಕೆ ತರುವುದು ಏನೆಂದರೆ ಸರ್ಕಾರದವರು ಏನು ಆಶ್ವಾಸನೆಗಳನ್ನು ಕೊಟ್ಟಿದ್ದಾರೆ ಆ ಆಶ್ವಾಸನೆಗಳನ್ನು ಸ್ವಲ್ಪ ಮಟ್ಟಿಗಾದರೂ ಪ್ರಾಮಾಣಿಕವಾಗಿ ಜಾರಿಗೆ ತರುವ ಚಿಂತನೆ ನಡೆದಿದೆಯೆ? ಅಥವಾ ಅದಕ್ಕೆ ತದ್ವಿರುದ್ಧವಾದಂಥ ರೀತಿಯಲ್ಲಿ ಏನಾದರೂ ಈ ಸರ್ಕಾರ ಕಾರ್ಯ ನಿರ್ವಹಣೆ ಮಾಡುತ್ತಿದೆಯೆ? ಒಂದು ಪಕ್ಷ ಅವರು ಹೇಳಿದಂಥ ರೀತಿಯಲ್ಲಿ ಈ ಒಂದು ಆಡಳಿತ ಪದ್ಧತಿಯನ್ನು ಸುಧಾರಿಸಲಿಕ್ಕೆ, ದಕ್ಷತೆಯನ್ನು ಹೆಚ್ಚಿಸಲಿಕ್ಕೆ, ಭ್ರಷ್ಟಾಚಾರವನ್ನು ಕಡಿಮೆ ಮಾಡಲಿಕ್ಕೆ ಯೋಜನೆಗಳ ಫಲ ಈ ದೇಶದ ಸಾಮಾನ್ಯ ಜನರಿಗೆ ಸಿಗುವಂತೆ ಆಗಬೇಕಾದರೆ ಬೇಕಾದಂಥ ಎಲ್ಲ ಕಾರ್ಯಕ್ರಮವನ್ನು ರೂಪಿಸುವುದಕ್ಕೆ ನಿಜವಾಗಿಯೂ ಸಹ ಪ್ರಾಮಾಣಿಕವಾದ ಪ್ರಯತ್ನಮಾಡಿದ್ದರೆ ನಾವು ಅದನ್ನು ಖಂಡಿತವಾಗಿ ಪ್ರೋತ್ಸಾಹಿಸುತ್ತೇವೆ. ಆದರೆ ಅದಕ್ಕೆ ವಿರುದ್ಧವಾದ ದಿಕ್ಕಿನಲ್ಲಿ ಏನಾದರೂ ಸರ್ಕಾರ ನಡೆಯುತ್ತಾ ಇದ್ದರೆ ಅದನ್ನೂ ಸಹ ಈ ದೇಶದ ಜನತೆಗೆ ಈ ಸದನದ ಮೂಲಕ ಹೇಳಬೇಕಾದುದು ನಮ್ಮ ಕರ್ತವ್ಯ ಎಂದು ನಾನು ಭಾವಿಸಿದ್ದೇನೆ. ಸನ್ಮಾನ್ಯ ಅಧ್ಯಕ್ಷಿಣಿಯವರೆ, ಇಷ್ಟು ಪ್ರಸ್ತಾವನೆಯನ್ನು ಹೇಳುತ್ತಾ ಮಾನ್ಯ ಬಂಗಾರಪ್ಪನವರ ಸರ್ಕಾರ ಸುಮಾರು 11 ತಿಂಗಳಾಗಿದೆ ಬಂದು. ಬಂದಮೇಲೆ ಯಾವ ಯಾವ ಹೊಸ ಕಾರ್ಯವಿಧಾನವನ್ನು ಅಳವಡಿಸಿಕೊಂಡಿದೆ, ಯಾವ ಯಾವ ಹೊಸ ನೀತಿಯನ್ನು ಆಡಳಿತ ಸುಧಾರಣೆ ಮತ್ತು ದಕ್ಷತೆಯನ್ನು ಹೆಚ್ಚಿಸಲಿಕ್ಕೆ ಮಾಡಿದೆ ಎಂಬುದರ ಬಗ್ಗೆ ಕೆಲವು ವಿಚಾರಗಳನ್ನು ನಾನು ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ಸನ್ಮಾನ್ಯ ಅಧ್ಯಕ್ಷಿಣಿಯವರೆ, ನಮ್ಮ ಯಾವುದೇ ಜನತಂತ್ರ ಸರ್ಕಾರದಲ್ಲಿ ಮುಖ್ಯವಾಗಿ ಆಗಬೇಕಾದುದು ಜವಾಬ್ದಾರಿ, ಅಂದರೆ ಹೊಣೆಗಾರಿಕೆ. ಅಕೌಂಟಬಿಲಿಟಿ ಎಂದು ಏನು ಹೇಳುತ್ತೇವೆ ಅದನ್ನು ಸ್ವಲ್ಪ ಮಟ್ಟಿಗಾದರೂ ಎನ್‌ಫೋರ್ಸ್ ಮಾಡಲಿಕ್ಕೆ ಅದು ಪ್ರಾರಂಭವಾಗಬೇಕಾದರೆ ಮುಖ್ಯಮಂತ್ರಿಗಳಿಂದ ಮುಖ್ಯಮಂತ್ರಿಗಳ ಕಚೇರಿಯಿಂದ ಮತ್ತು ಸಚಿವಾಲಯ ಕಚೇರಿಯಿಂದ ಪ್ರಾರಂಭವಾಗಬೇಕು. ಮೊನ್ನೆ ನನ್ನ ಮಿತ್ರರು ಹೇಳುತ್ತಿದ್ದರು. ತಾಲ್ಲೂಕು ಕಚೇರಿಗಳಲ್ಲಿ ಆಡಳಿತ ಬಹಳ ಕೆಟ್ಟಿದೆ ಎಂಬ ಮಾತನ್ನು ಹೇಳುತ್ತಿದ್ದರು. ನಾನು ಹೇಳುತ್ತೇನೆ ತಾಲ್ಲೂಕು ಕಚೇರಿಗಳಲ್ಲಿರುವ ಆಡಳಿತವನ್ನು ಈ ಸಚಿವಾಲಯದ ಕಟ್ಟಡದಲ್ಲಿ ನಡೆಯುತ್ತಿರುವ ಆಡಳಿತಕ್ಕೆ ಹೋಲಿಕೆ ಮಾಡಿದಾಗ ಅದು ಖಂಡಿತವಾಗಿ ಸಹ ನೂರು ಪಾಲು ಉತ್ತಮವಾಗಿದೆ ಎಂದು ಹೇಳುತ್ತೇನೆ.

ಇಲ್ಲಿರುವಂಥ ಆಡಳಿತ ಹೊಣೆಗಾರಿಕೆ ಏನಿದೆ ಯಾರೂ ಸಹ ಜವಾಬ್ದಾರಿಯಿಂದ, ಹೊಣೆಗಾರಿಕೆಯಿಂದ ತಮ್ಮ ಕಾರ್ಯವನ್ನು ಮಾಡುತ್ತಿಲ್ಲ. ಅಂಥ ಎಲ್ಲ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಾಗ ಅವರ ಬಗ್ಗೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳದೆ ಅಥವಾ ಸರಿಪಡಿಸುವುದಕ್ಕೆ ಪ್ರಯತ್ನ ಮಾಡದೆ ಅದಕ್ಕೆ ತದ್ವಿರುದ್ಧವಾದ ರೀತಿಯಲ್ಲಿ ಪ್ರೋತ್ಸಾಹ ಮಾಡುತ್ತಾ ಇರುವುದರಿಂದ ಇದು ಕೆಳಗಡೆವರೆಗೆ ಸೋರಿಹೋಗಿ ಇಂಥ ಶಿಥಿಲವಾದ ಆಡಳಿತ ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಬಂದಿದೆ. There is

crisis of governability. ಆ ಕ್ರೈಸಿಸ್‌ಗೆ ನಾವು ಮುಟ್ಟಿದ್ದೇವೆ. ಏತಕ್ಕೋಸ್ಕರ ಮುಟ್ಟಿದ್ದೇವೆ. ಏನು ಆಡಳಿತ ಸುಧಾರಣಾ ಇಲಾಖೆ ಇದೆ.. ತದನಂತರ ಬರುತ್ತೇನೆ ಅದಕ್ಕೆ, ಏನು ಮಾಡುತ್ತಿದೆ ಅದು? ಅವರು ಹೇಳುತ್ತಾರೆ ಆಡಳಿತ ಸುಧಾರಣೆ ಇಲಾಖೆ ಏನು ಕೆಲಸ ಮಾಡಬೇಕು ಅದನ್ನು ಮಾಡುತ್ತಾ ಇದ್ದಾರೆಯೇ ಇದರ ಮುಖ್ಯ ಕೆಲಸಕಾರ್ಯಗಳನ್ನು ಹೇಳುತ್ತಾರೆ. ಆಡಳಿತದಲ್ಲಿ ಜಾಗೃತಿಯೂ ಸೇರಿದಂತೆ ಸೇವೆಗಳಲ್ಲಿ ಶಿಸ್ತು ಮತ್ತು ನೈತಿಕತೆಯ ಬಗ್ಗೆ ಮುಖ್ಯವಾಗಿ ಕಾರ್ಯನಿರ್ವಹಿಸುತ್ತದೆ. ಅದಕ್ಕಿಂತ ಹೆಚ್ಚಾಗಿ ಅಖಿಲ ಭಾರತ ಸೇವೆಗಳು ಮತ್ತು ಕೆಎಎಸ್ ಮತ್ತು ರಾಜ್ಯ ಸಚಿವಾಲಯದ ಸೇವೆಗಳಂಥ ರಾಜ್ಯ ಸೇವೆಗಳನ್ನು ನಿಯಂತ್ರಿಸುವುದು. ಸನ್ಮಾನ್ಯ ಅಧ್ಯಕ್ಷಿಣಿಯವರೆ, ನಮ್ಮ ರಾಜ್ಯದಲ್ಲಿ ಈ ಡಿ.ಪಿ.ಎ.ಆರ್. ಇದೆ ಎಂದು ನಮಗಂತೂ ಅನ್ನಿಸಿಲ್ಲ. ಏಕೆಂದರೆ ಅವರು ಮಾಡಬೇಕಾದಂಥ ಯಾವುದೇ ಕೆಲಸವನ್ನು ಅವರು ಅಚ್ಚುಕಟ್ಟಾಗಿ ಮಾಡಿದ್ದೇವೆ ಎಂಬ ಪ್ರಾಮಾಣಿಕ ಪ್ರಯತ್ನವನ್ನೂ ಸಹ ಮಾಡಲಿಲ್ಲ ಎಂದರೆ ತಪ್ಪಾಗಲಾರದು. ಹಾಗಾದರೆ ಏನಾದರೂ ಆಧಾರ ಇರಬೇಕಲ್ಲ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ನಿಯಂತ್ರಣದಲ್ಲಿರುವ ಸೇವೆಗಳ ನಾನು ವಿಚಾರಗಳನ್ನು ನಿರ್ವಹಿಸುವುದು ಎಂದಿದೆ. ಎಷ್ಟು ಇಲಾಖಾ ವಿಚಾರಣೆಗಳನ್ನು ನಿರ್ವಹಿಸಿದ್ದಾರೆ ಅದರ ಪಟ್ಟಿ ಇಡಬೇಕು. ಎಷ್ಟು ವರ್ಷದಿಂದ ಡಿಪಿಎಆರ್ ನಲ್ಲಿ ಕೋಣೆಯಲ್ಲಿ ಬಿದ್ದು ಸಾಯುತ್ತಿದೆ. ಎನ್‌ಕ್ವೈರಿಗೆ ಆರ್ಡರ್ ಮಾಡುತ್ತಾರೆ. ಎನ್‌ಕ್ವೈರಿಗೆ ಬರುತ್ತದೆ. ಆದರೆ ಅದರ ಬಗ್ಗೆ ಯಾರಿಗೂ ಮನಸ್ಸಿಲ್ಲ. ಏತಕ್ಕೆ? ಸನ್ಮಾನ್ಯ ಅಧ್ಯಕ್ಷಿಣಿಯವರೆ, ಇದು ಕೆಲವೇ ವ್ಯಕ್ತಿಗಳ ಹಿಡಿತದಲ್ಲಿದೆ. ಅವರು ಹೇಗೆ ಹೇಳುತ್ತಾರೆ ಹಾಗೆ ವಿಚಾರಣೆ ಆಗಬೇಕು. ಅವರು ಯಾವಾಗ ವಿಚಾರಣೆಗೆ ಹೇಳುತ್ತಾರೋ ಆಗ ಆ ರೀತಿ ವಿಚಾರಣೆ ಆಗಬೇಕು. ಹೀಗೆ ಪ್ರತಿಯೊಂದು ಇಲಾಖೆ ಕೆಲಸ ಮಾಡುತ್ತಿದೆ. ಇದಕ್ಕಿಂತ ಹೆಚ್ಚಾಗಿ ಸಚಿವಾಲಯದಲ್ಲಿರುವ ಇಲಾಖೆಯಲ್ಲಿ ಯಾರು ಕೆಲಸ ಮಾಡುತ್ತಿದ್ದಾರೆ ಅವರ ಮೇಲುಸ್ತುವಾರಿಯನ್ನು ಡಿಪಿಎಆರ್ ಮಾಡಬೇಕು. ನಾನು ಕೇಳುತ್ತಿದ್ದೇನೆ. ಇಲ್ಲಿರುವಂಥ ಸುಮಾರು 18ಕ್ಕಿಂತ ಹೆಚ್ಚು ಇಲಾಖೆಗಳೇನಿವೆ ಆ ಇಲಾಖೆಗಳಿಗೆ ಸಂಬಂಧಪಟ್ಟಂತೆ ಅವರ ಕಾರ್ಯನಿರ್ವಹಣೆಯನ್ನು ಏನು ಪರಿಶೀಲನೆ ಮಾಡಬೇಕು ಅಥವಾ ಇನಸ್ಪೆಕ್ಷನ್ ಮಾಡಬೇಕು ಎಂದು ಇವರ ಪುಸ್ತಕದಲ್ಲಿ ಸೆಕ್ರೆಟೇರಿಯೆಟ್ ಕೈಪಿಡಿಯಲ್ಲಿ ಬರೆದುಕೊಂಡಿದ್ದಾರೆ, ನಾನು ಕೇಳುತ್ತಿದ್ದೇನೆ ಎಷ್ಟು ಸೆಕ್ರೆಟೇರಿಯೆಟ್ ನಿರ್ವಹಣೆಯನ್ನು ಇವರು ಪರಿಶೀಲನೆ ಮಾಡಿದ್ದಾರೆ? ಪರಿಶೀಲನೆ ಮಾಡಿದ್ದರೆ ನಾನು ಕೇಳುತ್ತೇನೆ ಇವತ್ತಿನ ದಿವಸ ಸಚಿವಾಲಯದಲ್ಲಿ ಎಷ್ಟು ಕಡತಗಳಿವೆ? ಸಾವಿರಾರು ಅಲ್ಲ, ಲಕ್ಷಾಂತರ ಕಡತಗಳು ಇರಬಹುದು. ಏಕೆ ಹೇಳುತ್ತಿದ್ದೇನೆ ಎಂದರೆ ಈ ಇಲಾಖೆಯವರಿಗೆ ಒಂದು ನಮೂನೆ ಇದೆ. ಆ ನಮೂನೆ ಪ್ರಕಾರ ಕಡತಗಳನ್ನು ಲೆಕ್ಕ ಹಾಕಿದರೆ ಅದು ನನಗೆ ಅರ್ಥವಾಗುತ್ತದೆ. ನಿನ್ನೆ ಅಧ್ಯಕ್ಷರು ಒಂದು ಅಭಿಪ್ರಾಯದ ಮೂಲಕ ಅಪ್ಪಣೆ ಕೊಡಿಸಿದ್ದಾರೆ. ಇದು ಅಪ್ಪಟ ಸುಳ್ಳು, ಈ ಸಚಿವಾಲಯದಲ್ಲಿ ಇರುವವರಿಗೆ ಲೆಕ್ಕ ಹಾಕುವುದು ಗೊತ್ತಿಲ್ಲ, ಇವತ್ತು ಸಚಿವಾಲಯದಲ್ಲಿ, ಡಿಪಿಎಆರ್ ನಲ್ಲಿ, ಕಾರ್ಯದರ್ಶಿಯವರಿಗೆ ಎಷ್ಟು ಕಡತಗಳು ಪೆಂಡಿಂಗ್ ಇವೆ ಎಂದು ಕೇಳಿದರೆ, ಅವರಲ್ಲಿರುವ ಕಿರಿಯ ಸಹಾಯಕರದ ಹತ್ತಿರ ಇಷ್ಟು ಇವೆ, ಹಿರಿಯ ಸಹಾಯಕರಲ್ಲಿ ಇಷ್ಟು ಇವೆ, ಸೂಪರಿಂಟೆಂಡೆಂಟ್ ಲೆವೆಲ್‌ನಲ್ಲಿ ಇಷ್ಟು ಇವೆ, ಅಂಡರ್ ಸೆಕ್ರೆಟರಿಯವರ ಹತ್ತಿರ ಇಷ್ಟು ಇವೆ ಎಂದು ಹೇಳುತ್ತಾರೆ. ಈ ಸಚಿವಾಲಯ ಇಲಾಖೆಗಳಲ್ಲಿ ಎಷ್ಟು ಕೊರತೆಗಳು ಇವೆ ಎನ್ನುವ ಎಂದರೆ ಅವರು ಹೇಳಿದ ಲೆಕ್ಕ,ಲೆಕ್ಕ ಇಡದಂತ ಪರಿಸ್ಥಿತಿಯಲ್ಲಿ ಸರ್ಕಾರ ನಡೆಯುತ್ತಿದೆ. ಯಾರು ಹಿರಿಯ ಅಧಿಕಾರಿಗಳು ಹೊಣೆಗಾರಿಕೆ ಹೊತ್ತಿದ್ದಾರೆ. ಜವಾಬ್ದಾರಿ ಇರುವ ಅಧಿಕಾರಿಗಳು ಯಾರಿದ್ದಾರೆ ಅವರಿಗೆ ಸ್ವಲ್ಪವೂ

ಕೂಡ ಈ ಬಗ್ಗೆ ಕಳಕಳಿ ಇಲ್ಲ ಎಂದು ನಾನು ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಇವತ್ತು ನೌಕರರ ಮೇಲೆ ಚಕ್ ಇಲ್ಲದೇ ಇರುವುದರಿಂದ ಪರಿಶೀಲನೆ ಮಾಡದೇ ಇರುವುದರಿಂದ ಅವರು ಆಡಿದ್ದೇ ಆಟವಾಗಿದೆ ಎಂದು ಹೇಳುತ್ತೇನೆ. ಆದುದರಿಂದ ಆಡಳಿತ ಸುಧಾರಣೆ ಇಲಾಖೆ ಏನಿದೆ ಅದು ತನ್ನ ಕೆಲಸ ಏನು ಮಾಡಬೇಕಾಗಿತ್ತೋ ಅದನ್ನು ಮಾಡುತ್ತಿಲ್ಲ. ಯಾವಯಾವ ಕೆಲಸ ಮಾಡಬಾರದೋ ಅದನ್ನು ಮಾಡುವುದಕ್ಕೆ ಡಿಪಿಎಆರ್ ಇದೆ ಎಂದು ಬಹಳ ಗಂಭೀರವಾಗಿ ನಾನು ಈ ಆರೋಪವನ್ನು ಮಾಡುತ್ತಿದ್ದೇನೆ. ನಾನು ಇದನ್ನು ಸವಾಲಾಗಿ ತೆಗೆದುಕೊಳ್ಳುತ್ತಿದ್ದೇನೆ. ಡಿಪಿಆರ್ ಮತ್ತು ಸಚಿವಾಲಯದಲ್ಲಿ ಇರುವ ಯಾವ ಯಾವ ಇಲಾಖೆಗಳಲ್ಲಿ ಎಷ್ಟೆಷ್ಟು ಕಡತಗಳು ಇವೆ ಎಂದು ಹೇಳಿದರೆ ನಾನು ಖಂಡಿತವಾಗಿಯೂ ಸ್ವೀಕರಾ ಮಾಡುತ್ತೇನೆ. ನಾನು ಇಲ್ಲಿ ಮುಖ್ಯಮಂತ್ರಿಳನ್ನು ಕೇಳುತ್ತಿದ್ದೇನೆ. ನಿಮ್ಮ ಸಚಿವಾಲದಲ್ಲಿ ಎಷ್ಟು ಕಡತಗಳು ಎಷ್ಟು ವರ್ಷಗಳಿಂದ ಇವೆ? ಒಂದಲ್ಲ, ಎರಡಲ್ಲ, ಐದು,ಹತ್ತು ವರ್ಷಗಳಿಂದ ಇದ್ದರೂ ಅದರ ಬಗ್ಗೆ ನೋಡುವಂಥ ಗೋಜಿಗೆ ಯಾವ ಅಧಿಕಾರಿಯೂ ಹೋಗುವುದಿಲ್ಲ. ಇಂತಹ ಒಂದು ನಿಯಮ ನಾವು ಮಾಡಿಕೊಂಡಿದ್ದೇನೆ. ಕಡತಗಳು ಪೆಂಡಿಗ್ ಇರುವ ಬಗ್ಗೆ ಸಂಬಂಧಪಟ್ಟ ಕಾರ್ಯದರ್ಶಿಗಳು ಪರಿಶೀಲನೆ ಮಾಡಬೇಕು. ಸಂಬಂಧಪಟ್ಟ ಉಪಕಾರ್ಯದರ್ಶಿಗಳು ಪರಿಶೀಲನೆ ಮಾಡಬೇಕು. ವಾರ್ಷಿಕ ಅಥವಾ ತ್ರೈಮಾಸಿಕ, ಅರೆ ಮಾಸಿಕ ತಪಾಸಣೆ ಏನಿದೆ ಅದನ್ನು ನಿಯತಕಾಲದಲ್ಲಿ ಮಾಡಬೇಕು. ರೀತಿ ಪರಿಶೀಲನೆ ಮಾಡಬೇಕೆಂದು ಇದ್ದರೂ ಕೂಡ ಪರಿವೀಕ್ಷಣೆ ಮಾಡಬೇಕು. ಎಂದು ಇದ್ದರೂ ಕೂಡ ಯೂರೂ ಮಾಡುತ್ತಾ ಇಲ್ಲ. ಇವರು ಮಾಡುವುದೇ ಬೇರೆ ಕೆಲಸ, ಇವರಿಗೆ ಏನು ಹೇಳಬೇಕೋ ಗೊತ್ತಾಗುತ್ತಿಲ್ಲ. ಆದರೆ ಇಷ್ಟು ಮಾತ್ರ ಹೇಳುತ್ತೇನೆ. ಹೊಣೆಗೇಡಿತನದಿಂದ ವರ್ತನೆ ಮಾಡುವ ಆಡಳಿತ ನೋಡಬೇಕೆಂದರೆ It is only in the state of Karnataka secretariat and nowhere else.

ಸನ್ಮಾನ್ಯ ಅಧ್ಯಕ್ಷರೇ, ಇದಕ್ಕೆ ನಾನು ಅನೇಕ ಉದಾಹರಣೆಗಳನ್ನು ಕೊಡುತ್ತೇನೆ. ಅನೇಕ ಐಎಎಸ್, ಐಪಿಎಸ್ ಅಧಿಕಾರಿಗಳ ಮೇಲೆ ಆರೋಪಗಳು ಬಂದಾಗ ಏನು ಮಾಡಿದರು ಅಧ್ಯಕ್ಷಿಣಿಯವರೇ? ಒಬ್ಬ ಗುಮಸ್ತನ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ. ಅವನ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಅವನು ಏನಾದರೂ ಮಾಡಿದರೆ ಅವನ ಮೇಲೆ ಛಾರ್ಜ್‌ಫ್ರೇಮ್ ಮಾಡುತ್ತೀರಿ, ಸಿಪ್ಲಿನರಿ ಅಥಾರಿಟಿಯನ್ನು ಅಪಾಯಿಂಟ್ ಮಾಡುತ್ತೀರಿ ಇವೆಲ್ಲವನ್ನೂ ಮಾಡುತ್ತೀರಿ. ಆದರೆ ದೊಡ್ಡ ದೊಡ್ಡ ಅಧಿಕಾರಿಗಳು, ದೊಡ್ಡ ದೊಡ್ಡ ತಪ್ಪು ಮಾಡಿದಾಗ ಅದನ್ನು ಮುಚ್ಚಿಡುವ ಪ್ರಯತ್ನ ಉದ್ದೇಶ ಪೂರ್ವಕವಾಗಿ ಈ ಇಲಾಖೆಯ ಪ್ರೋತ್ಸಾಹದಿಂದ ನಡೆಯುತ್ತಿದೆ ಎಂದು ಹೇಳುತ್ತೇನೆ. ಎಷ್ಟೋ ಜನ ಐಎಎಸ್ ಐಪಿಎಸ್ ಅಧಿಕಾರಿಗಳ ಮೇಲೆ ಬೇರೆ ಬೇರೆ ರೀತಿಯ ಅದು ಸಿಬಿಐ ಇರಬಹುದು. ಸಿಓಡಿ ಇರಬಹುದು. ಲೋಕಾಯುಕ್ತ ತನಿಖೆಯ ವರದಿ ಇರಬಹುದು. ಇವರುಗಳ ಮೇಲೆ ಆರೋಪ ಬಂದಾಗ ಡಿಪಿಎಆರ್ ಏನಾದರೂ ಕ್ರಮ ತೆಗೆದುಕೊಂಡಿದೆಯೇ? ತೆಗೆದುಕೊಂಡಿದ್ದರೆ ಯಾವ ಯಾವ ವರಿದಿಯ ಮೇಲೆ ಯಾರ ಯಾರ ಮೇಲೆ ಕ್ರಮ ತೆಗೆದುಕೊಂಡಿದೆ ಎಂದು ಹೇಳಿದರೆ ಅದನ್ನು ರುಜುವಾತು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಒಂದು ಹಣಕಾಸಿನ ಇಲಾಖೆ ಇದೆ. ಆ ಹಣಕಾಸಿನ ಇಲಾಖೆ ರಾಜ್ಯದ ಆರ್ಥಿಕ ಶಿಸ್ತನ್ನು ಉಳಿಸಿಕೊಳ್ಳಬೇಕಾದರೆ ಗಂಭೀರವಾದ ಮತ್ತು ನಿರ್ದಾಕ್ಷಿಣ್ಯವಾದ ಕೆಲವು ತೀರ್ಮಾನಗಳನ್ನು ತೆಗೆದುಕೊಳ್ಳಬೇಕು. ಆ ರೀತಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಹಣಕಾಸಿನ ಇಲಾಖೆಗೆ ಸಾಧ್ಯವಾಗಿಲ್ಲ, ಸಾಧ್ಯವಾಗುತ್ತಿಲ್ಲ. ಅಧ್ಯಕ್ಷಿಣಿಯವರೇ ಇವತ್ತಿನ ದಿವಸ ಮುಖ್ಯವಾಗಿ ಆದಾಯ ಏನಿದೆ, ಅದು ವರಮಾನ

ತೆರಿಗೆಯಿಂದ ಬರಬಹುದು. ಮಾರಾಟ ತೆರಿಗೆಯಿಂದ ಬರಬಹುದು. ಎಕ್ಸೈಸ್ ತೆರಿಗೆ ಇರಬಹುದು. ಎಲ್ಲ ತೆರಿಗೆಗಳನ್ನು ವಸೂಲಿ ಮಾಡುವುದರಲ್ಲಿ ಯಾವ ಕ್ರಮವನ್ನು ಈ ಇಲಾಖೆ ತೆಗೆದುಕೊಳ್ಳುತ್ತಿದೆ? ಮೊದಲು ವಸೂಲಾತಿ ಬಗ್ಗೆ ಹೋಗೋಣ. ಆಮೇಲೆ ಖರ್ಚು ಮಾಡುತ್ತಿರುವ ಬಗ್ಗೆ ನೋಡೋಣ. ಮೊದಲನೆಯದಾಗಿ ಹಣಕಾಸಿನ ಇಲಾಖೆ ಪ್ರಕಾರ 1989ನೇ ಮಾರ್ಚಿ 31ಕ್ಕೆ ಅವರು ಹೇಳುವ ಪ್ರಕಾರ ಸುಮಾರು 202 ಕೋಟಿ ರೂಪಾಯಿ ಬಾಕಿ ಇತ್ತು. 1990ಕ್ಕೆ ಆಮೇಲೆ ಬರುತ್ತೇನೆ. ಹೀಗಿದ್ದಾಗ ಅವರು ಹೇಳುತ್ತಾರೆ. ಇದು ಬಹಳ ಚೆನ್ನಾಗಿದೆ ಅಧ್ಯಕ್ಷಿಣಿಯವರೇ.

ಮಂತ್ರಿಗಳ ಹೇಳಿಕೆ

ಭದ್ರುಬಲದಂಡೆ ನಾಲೆ ಒಡೆದು ರೈತರಿಗೆ ತೊಂದರೆ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷಿಣಿಯವರೆ, ನನಗೆ ಎರಡು ನಿಮಿಷ ಅವಕಾಶ ಕೊಟ್ಟರೆ ನಾನು ಒಂದು ಸ್ಟೇಟ್‌ಮೆಂಟ್ ಮಾಡಬೇಕಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೆ ಮಾನ್ಯ ಮಂತ್ರಿಗಳು ಸ್ಟೇಟ್ ಮೆಂಟ್ ಮಾಡುವುದಕ್ಕೆ ಮುಂಚೆ ನಾನು ಒಂದು ಮಾತು ಹೇಳುತ್ತೇನೆ. ನಿನ್ನೆ ನಿಲುವಳಿ ಸೂಚನೆಯ ಮೂಲಕ ಭದ್ರ ಬಲದಂಡೆ ನಾಲೆ ತರೀಕೆರೆ ಹತ್ತಿರ ಹೊಡೆದು 90 ಸಾವಿರ ಹೆಕ್ಟೇರ್ ಭೂಮಿಯಲ್ಲಿ ಬೆಳೆ ಹಾಳಾಗಿ ರೈತರು ಬೀದಿ ಪಾಲಾಗಿದ್ದಾರೆ. ಇದರಿಂದ ರೈತರು ದಿಗ್ಭ್ರಾಂತರಾಗಿದ್ದಾರೆ. ಅಧಿಕಾರಿಗಳು ಹೇಳುತ್ತಾರೆ. ಹೊಡೆದಿರುವ ನಾಲೆಯನ್ನು ರಿಪೇರಿ ಮಾಡಬೇಕಾದರೆ ಐದಾದು ತಿಂಗಳು ಬೇಕೆಂದು ಹೇಳುತ್ತಾರೆ. ಕುಡಿಯುವ ನೀರಿಗೂ ಸಹ ತರೀಕೆರೆಯಿಂದ ದಾವಣಗೆರೆಯವರೆಗೆ ಸಮಸ್ಯೆಯಾಗುತ್ತದೆ. ರೈತರು ಬೀದಿ ಪಾಲಾಗುತ್ತಾರೆ. ಸರ್ಕಾರ ಅತಿ ವೇಗದಲ್ಲಿ ಎಲ್ಲಾ ನಿಮ್ಮ ಶ್ರಮವನ್ನು ಹಾಕಿ ಒಂದು ತಿಂಗಳು ಅಥವಾ 15 ದಿವಸಗಳಲ್ಲಿ ಅದನ್ನು ರಿಪೇರಿ ಮಾಡುತ್ತೇನೆ ಎನ್ನುವ ಆಶ್ವಾಸನೆಯನ್ನು ಜನರಿಗೆ ಕೊಡಬೇಕು. ಆ ಕೆಲಸ ಮಾಡಲಿಕ್ಕೆ ನೀವು ತೀವ್ರ ಕ್ರಮ ಕೈಗೊಳ್ಳದಿದ್ದರೆ ಇಡೀ ರೈತ ಸಮುದಾಯ ಬೀದಿ ಪಾಲಾಗುತ್ತದೆ. ಇದು ರಾಜಕೀಯ ಪ್ರಶ್ನೆಯಲ್ಲ. ನಿಮಗೆ ಕಳಕಳಿಯಿದೆ. ದಯಮಾಡಿ ಇದಕ್ಕೆ ಸೂಕ್ತ ಬಂದೋಬಸ್ತ್ ಮಾಡುತ್ತೇನೆ ಎನ್ನುವ ಹೇಳಿಕೆಯನ್ನು ರೈತರಿಗೆ ತೃಪ್ತಿಯಾಗುವಂತೆ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಇದರ ಬಗ್ಗೆ ತನಿಖೆ ಮಾಡುವುದಕ್ಕೆ ವ್ಯವಸ್ಥೆ ಮಾಡಿದೆಯೆ? ಯಾವ ಕಾರಣಕ್ಕೆ ಹೊಡೆಯಿತು ನಿಜವಾಗಿಯೂ ಒಂದು ಗಂಭೀರವಾದ ಪರಿಸ್ಥಿತಿ ಉದ್ಭವವಾಗಿದೆ. ಕೂಡಲೇ ಅಧಿಕಾರಿಗಳ ತಂಡವನ್ನು ಕಳುಹಿಸಿದ್ದೀರಾ? ಸರ್ಕಾರದಿಂದ ಬರೀ ಹೇಳಿಕೆ ಕೊಡುವುದು ಒಂದೇ ಇಲ್ಲ ಅದಕ್ಕೆ ಮುಂಚಿತವಾಗಿ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿದ್ದೀರಾ? ಏನು ವ್ಯವಸ್ಥೆ ಮಾಡಿದ್ದೀರಿ ಎಂಬುದರ ಬಗ್ಗೆ ತಾವು ಸ್ಪಷ್ಟಪಡಿಸಬೇಕು. ಇದು ಬಹಳ ಅತ್ಯಂತ ಮಹತ್ವವಾದ ಪ್ರಶ್ನೆ.

ಶ್ರೀ ಕರಿಯಣ್ಣ : ಇದು ನನ್ನ ಕ್ಷೇತ್ರದಲ್ಲಿ ಬರುತ್ತದೆ. ಸಂಪೂರ್ಣವಾಗಿ ನನ್ನ ಕ್ಷೇತ್ರದ ಜಮೀನು ಮುಳುಗಡೆಯಾಗುತ್ತದೆ. ಫಸಲು ನಷ್ಟವಾಗಿದೆ. ತನಿಖೆಯನ್ನು ಆಮೇಲೆ ಮಾಡಿಕೊಳ್ಳಿ. ತಕ್ಷಣ ರಿಪೇರಿ ಮಾಡಿ. ಎಷ್ಟು ದಿವಸಗಳಲ್ಲಿ ರಿಪೇರಿ ಮಾಡುತ್ತೀರಿ ಎಂಬುದನ್ನು ಹೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೆ, ನಾನು ಒಂದೇ ಒಂದು ವಿಷಯ ಹೇಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನಾನು ಹೇಳಿದ ಮೇಲೆ ನೀವು ಹೇಳಿ, ದಯಮಾಡಿ ವಿಷಯ ತಿಳಿದುಕೊಂಡು ಏನಾದರೂ ಹೇಳುವುದು ಕೇಳುವುದು ಇದ್ದರೆ ಹೇಳಿ. ನಾನು ಇದರ ಬಗ್ಗೆ ಒಂದು ಸ್ಟೇಟ್‌ಮೆಂಟ್‌ನ್ನು ನಿನ್ನೆಯೇ ಮಾಡಬೇಕಾಗಿತ್ತು. ನಾನು ನಿನ್ನೆ ಸ್ಟೇಟ್‌ಮೆಂಟ್ ಮಾಡಿದ್ದರೆ ತಪ್ಪಾಗುತ್ತಿತ್ತು ಎಂದು ನನ್ನ ಭಾವನೆ. ಈಗಾಗಲೇ ನಾನು ಅದರ ಬಗ್ಗೆ ವಿಶೇಷವಾದ ವರದಿಯನ್ನು ತರಿಸಿಕೊಂಡಿದ್ದೇನೆ. ಮಾನ್ಯ ಯಡಿಯೂರಪ್ಪನವರು ಮತ್ತು ಇನ್ನು ಉಳಿದ ಸದಸ್ಯರು ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಅಲ್ಲಿ ಬಹಳಷ್ಟು ತೊಂದರೆಯಾಗಿದೆ. ಇದು 10-15 ದಿವಸಗಳಲ್ಲಿ ಪೂರ್ತಿ ಮಾಡತಕ್ಕ ಕೆಲಸ ಅಲ್ಲ, ನಾನು ಸ್ಥಳಕ್ಕೆ ಹೋಗಿ ಬರಬೇಕೆನ್ನುವ ಮನಸ್ಸು ಕೂಡ ಇದೆ. ನಾನು ಅಲ್ಲಿಗೆ ಹೋಗುವ ಅವಶ್ಯಕತೆ ಇದೆ ಎನ್ನುವ ಭಾವನೆಯಿಂದ ಮಧ್ಯೆ ಪ್ರವೇಶ ಮಾಡಿ ಇವತ್ತು ಒಂದು ಸ್ಟೇಟ್‌ಮೆಂಟ್ ಮಾಡುತ್ತಿದ್ದೇನೆ. ಅದರ ಬಗ್ಗೆ ಯೋಗ್ಯ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ. ರೈತರಿಗೆ ತೊಂದರೆಯಾಗುವ ಪರಿಸ್ಥಿತಿಗೆ ಬಿಡುವುದಕ್ಕೆ ಹೋಗುವುದಿಲ್ಲ, ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಇದಕ್ಕೆ ಸ್ವಲ್ಪ ಎಲ್ಲರೂ ಸಹಕರಿಸಬೇಕೆಂದು ನಾನು ಕೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಈ ಗಂಭೀರವಾದ ವಿಷಯದ ಬಗ್ಗೆ ನಿಲುವಳಿ ಸೂಚನೆಯ ಮೂಲಕ ಪ್ರಸ್ತಾಪ ಮಾಡಬೇಕೆಂದು ಇದ್ದೆ. ಈಗ ಚರ್ಚೆಯ ಅಗತ್ಯವಿಲ್ಲ. ಚರ್ಚೆಗಿಂತ ಮುಖ್ಯವಾಗಿ ರೈತರಿಗ ಅನುಕೂಲವಾಗಬೇಕಾಗಿದೆ. ತಮ್ಮ ಸ್ಟೇಟ್‌ಮೆಂಟಿನಲ್ಲಿ ಸಹ ಅದು ಯಾವಾಗ ಹೊಡೆಯಿತು, ಏತಕ್ಕೆ ಹೊಡೆಯಿತು. ಎಷ್ಟು ತಿಂಗಳಿನಲ್ಲಿ ಇದನ್ನು ರಿಪೇರಿ ಮಾಡುರ ಸ್ಥಿತಿಯಲ್ಲಿದ್ದೀರಿ ? ನಿಮ್ಮ ಅಧಿಕಾರಿಗಳು ಏನು ವರದಿಯನ್ನು ಕೊಟ್ಟಿದ್ದಾರೆ ? ನಾಳೆಯಿಂದ ನಾಲ್ಕೈದು ದಿವಸ ನಾವು ಇಲ್ಲಿ ಇರುವುದಿಲ್ಲ, ಇಡೀ ರೈತ ಮೂಲಕ ಸಮೂಹ ಬೆಂಗಳೂರಿಗೆ ಬರುವ ಅಗತ್ಯವಿಲ್ಲ. ತಾವು ಎಲ್ಲಾ ಕೆಲಸಕಾರ್ಯಗಳನ್ನು ಬದಿಗೊತ್ತಿ ಈಗಲೇ ಸ್ಥಳಕ್ಕೆ ಅಧಿಕಾರಿಗಳನ್ನು ಕರೆದುಕೊಂಡುಹೋಗಿ ಸೂಕ್ತ ಆದೇಶ ಕೊಟ್ಟು ಕೆಲಸ ಮಾಡಿಸುವುದಕ್ಕೆ ಪ್ರಯತ್ನ ಮಾಡಿ. ಅಲ್ಲಿ ಅನಾಹುತವಾಗಿದೆ ? ಅದನ್ನು ಎಷ್ಟು ದಿವಸಗಳಲ್ಲಿ ರಿಪೇರಿ ಮಾಡಬಹುದು ? ಅದನ್ನಾದರೂ ಸದನದ ಗಮನಕ್ಕೆ ತರುವ ಪ್ರಯತ್ನ ಮಾಡಿ. ಅದರ ಬಗ್ಗೆ ಡೀಟೈಲ್ಸ್ ಮಾಹಿತಿ. ತಮಗೆ ಗೊತ್ತಿದ್ದರೆ ಹೇಳಿ ನಾಲೆ ಹೊಡೆದಿರುವುದು ನಿಜವೇ ? ಎಷ್ಟು ಸಾವಿರ ಹೆಕ್ಟೇರ್ ಭೂಮಿ ಇದರಿಂದ ಹಾಳಾಗಿದೆ ? ನೂರಾರು ಹಳ್ಳಿಗಳಿಗೆ ಇದರಿಂದ ಕುಡಿಯುವ ನೀರು ಸಿಗದ ಪರಿಸ್ಥಿತಿ ಉಂಟಾಗಿದೆ. 95 ಸಾವಿರ ಹೆಕ್ಟೇರ್ ಭೂಮಿ ಹಾಳಾಗಿದೆ. ತರೀಕೆರೆಯಿಂದ ಶಿಮಮೊಗ್ಗ ಹಾಗೂ ದಾವಣಗೆರೆವರೆಗೆ ಲಕ್ಷಾಂತರ ರೈತರ ಗತಿ ಏನಾಗಬಹುದು. ಅದರ ಬಗ್ಗೆ ಸರಿಯಾದ ವಿವರಣೆಯನ್ನು ಕೊಡಿ ನಾವು ನಿಲುವಳಿ ಸೂಚನೆಯನ್ನು ಕಳಿಹಿಸಿದ್ದು ನಾವು ಕಳುಹಿಸುವಾಗ ಇದರ ಬಗ್ಗೆ ವಿವರವಾಗ ಚರ್ಚೆ ಮಾಡಬೇಕೆಂದು ಕಳುಹಿಸಲಾಗಿತ್ತು. ದಯಮಾಡಿ ಇದರ ಬಗ್ಗೆ ತಮ್ಮ ಸ್ಟೇಟ್‌ಮೆಂಟ್ ಏನಿದೆ ? ಇದರ ಬಗ್ಗೆ ತನಿಖೆ ಮಾಡಿಸುತ್ತೀರಾ ? ಇದಕ್ಕೆ ಯಾವ ಅಧಿಕಾರಿಗಳು ಜವಾಬ್ದಾರರು ಅವರು ಏತಕ್ಕೆ ಪೂರ್ತಿ ಗಮನವನ್ನು ಕೊಡಲಿಲ್ಲ ? ದಯಮಾಡಿ ವಿವರವಾದ ಸ್ಟೇಟ್‌ಮೆಂಟನ್ನು ಕೊಡಿ.

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ತ್ವರಿತವಾಗಿ ಏನು ಕ್ರಮವನ್ನು ಕೈಗೊಂಡಿದ್ದೀರಿ ? ತಕ್ಷಣ ಕ್ರಮ ಕೈಗೊಂಡರೆ ಅದು ಬಹಳ ಅನುಕೂಲ. ತನಿಖೆ ಮಾಡುತ್ತೇವೆಂದು ಏನು ತನಿಖೆ ಮಾಡುತ್ತೀರಿ ? ಸರ್ಕಾರ ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದೆ ಎಂಬುದನ್ನು ತಿಳಿಸಬೇಕು. ತಾವು ಎಲ್ಲಿ ಅನುಕೂಲವಾಗುತ್ತದೆ ಎಲ್ಲಿ ಅನಾನುಕೂಲವಾಗುತ್ತದೆ ಎಂಬುದನ್ನು ಹೇಳಿ ?

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ನಿಲುವಳಿ ಸೂಚನೆಯನ್ನು ಕಳಿಹಿಸುವಾಗ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಬತ್ತ ಕಬ್ಬು, ಅಡಿಕೆ ಮತ್ತು ತೆಂಗು ಇದೆಲ್ಲ ಸೇರಿ ಸುಮಾರು 90 ಸಾವಿರ ಹೆಕ್ಟೇರ್ ಭೂಮಿಗೆ ಎಫೆಕ್ಟ್ ಆಗಿದೆ, ಅಲ್ಲಿಗೆ ಗುಟ್ಟಾಗಿ ಹೋಗಿರುವ ಅಧಿಕಾರಿಗಳಿಂದ ನನಗೆ ಸುದ್ದಿ ಬಂದಿದೆ. ಆರು ತಿಂಗಳು ತನಕ ಏನೂ ಮಾಡುವುದಕ್ಕೆ ಆಗದ ಸ್ಥಿತಿಯಲ್ಲಿದ್ದೇವೆಂದು ಅವರು ಹೇಳುತ್ತಿದ್ದಾರೆ. ಅದಕ್ಕೋಸ್ಕರ ನಾನು ಕೇಳುತ್ತಿರುವುದು. ಅಧಿಕಾರಿಗಳು ಹೇಳುತ್ತಿರುವುದು ಸರಿಯೇ ತಾವು ಏನಾದರೂ ತುರ್ತು ಕ್ರಮ ತೆಗೆದುಕೊಳುತ್ತೀರಾ? ಈವತ್ತೇ ಅಲ್ಲಿಗೆ ಹೋಗುತ್ತಿರ? ೧೫ ದಿನಸಗಳಲ್ಲಿ ಈ ಕೆಲಸ ಮುಗಿಸುವ ಪ್ರಯತ್ನ ಮಾಡುತ್ತೀರಾ ಏಕೆಂದರೆ ಇಲ್ಲಿ ತಾವು ಉತ್ತರ ನಾವೂ ಕೊಟ್ಟು ಅದನ್ನು ಇಂಪ್ಲಿಮೇಂಟ್ ಮಾಡಿದರೆ ಮಾತ್ರ ರೈತರು ಬದುಕುತ್ತಾರೆ ಇಲ್ಲದಿದ್ದರೆ ಅವರು ನಿರ್ನಾಮವಾಗುತ್ತಾರೆ. ದಯವಿಟ್ಟು ತಾವು ಈ ಬಗ್ಗೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಉಧ್ಯಕ್ಷರೇ, ಈಗ ಏನಾಗಿದೆ ಎಂದರೆ ನಿನ್ನೆ ಪ್ರಸ್ತವ ಮಾಡಿದ್ದ ವಿಷಯದ ಹಿನ್ನೆಲೆಯಲ್ಲಿ ತ್ವರಿತ ವಾಗಿ ಮತ್ತು ಸ್ಟೇಟ್‌ಮೆಂಟ್ ಮಾಡುವುದಕ್ಕೆ ಹೊರಟಿದ್ದೆ. ಇದರ ಬಗ್ಗೆ ವಿವರವಾದ ವರದಿಯನ್ನು ನಾನು ತರಿಸಕೊಂಡಿದ್ದೇನೆ. ಆದರೆ ಅಧಿಕಾರಿಗಳ ವರದಿ ಸರಿಯಿಲ್ಲ ಎಂದು ನನ್ನನಿಸಿಕೆಯಾಗಿದೆ. ಆ ದೃಷ್ಟಿಯಿಂದ ನಾನು ಖುದ್ದಾಗಿ ಸ್ಥಳಕ್ಕೆ ಭೇಟ್ಟಿ ಕೊಟ್ಟು ಯೋಗ್ಯ ಸಮಯದಲ್ಲಿ ಆ ಕಾರ್ಯವನ್ನು ಪೂರ್ಣ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಅದಷ್ಟು ಬೇಗ ಆಗಬೇಕಾಗಿರತಕ್ಕಂಥ ಕೆಲಸಗಳು ಆಗಬೇಕು ಎಂಬ ಭಾವನೆಯಿಂದ ನಾನು ಮಧ್ಯೆ ಪ್ರವೇಶಿಸಿ ಮಾತನಾಡುತ್ತಿದ್ದೇನೆ. ಮಾನ್ಯ ಯಡಿಯೂರಪ್ಪನವರು ಏನು ನನ್ನ ಗಮನ ಸೆಳೆದಿದ್ದಾರೆ. ಅದರ ಬಗ್ಗೆಯೂ ಕೂಡ ನಾನು ವೈಯಕ್ತಿಕವಾಗಿ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಏನಾಗಿದೆ ಎಂದು ಸ್ವಲ್ಪ ಹೇಳಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಸುಮಾರು 60 ಅಡಿ ಕಟ್ಟಡ ಕುಸಿದಿದೆ. ಅದನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಅವರಿಗೆ ಎಲ್ಲಾ ವಿಷಯ ಗೊತ್ತಿದೆ. ಮತ್ತೆ ಅದನ್ನು ರಿಪೀಟ್ ಮಾಡುವುದು ಬೇಡವೆಂಬ ಭಾವನೆಯಿಂದ ನಾನು ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರದ ಮಾಹಿತಿ ಏನಿದೆ, ಅದನ್ನು ಹೇಳಿ. ನಾವು ಹೇಳುವುದು ಪ್ರಶ್ನೆ ಬೇರೆ ಸರ್ಕಾರಕ್ಕೆ ಬಂದಿರತಕ್ಕಂಥ ಮಾಹಿತಿ ಪ್ರಕಾರ ಹೇಳಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನನಗೆ ಅವಕಾಶ ಕೊಡುತ್ತೀರಾ?

(ಗೊಂದಲ)

ಉಪಾಧ್ಯಕ್ಷರು : ಮಂತ್ರಿಗಳು ಪೂರ್ತಿ ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನನಗೆ ಹೇಳುವುದಕ್ಕೆ ಅವಕಾಶ ಕೊಡದಿದ್ದರೆ ನಾನು ಏನು ಹೇಳಬೇಕು?

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ಏನು ಹೇಳುತ್ತಾರೋ, ಕೇಳೋಣ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ಈ ವಿಷಯದ ಹಿನ್ನಲೆಯಲ್ಲಿ ಒಂದು ವೇಳೆ ಅವಶ್ಯಕತೆ ಬಿದ್ದಲ್ಲಿ ಇವತ್ತೇ ಹೆಲಿಕಾಪ್ಟರ್ ನಲ್ಲಿ ಹೋಗತಕ್ಕಂಥ ಕಾರ್ಯಕ್ರಮವನ್ನು ನಾನು ತೆಗೆದುಕೊಳ್ಳುತಿದೇನೆ. ಏಕೆಂದರೆ ಇದು ಬಹಳ

ಸೂಕ್ಷ್ಮವಾದಂಥ ವಿಚಾರ. ಇದನ್ನು ನಾನು ಇಲ್ಲಿ ಹೇಳಬಾರದಾಗಿತ್ತು. ಆದರೂ ಒಂದು ವೇಳೆ ಇದು ಸಿಗದೇ ಇದ್ದರೂ ಸಹ ನಾನು ಖುದ್ದಾಗಿ ಕಾರಿನಲ್ಲೇ ಹೋಗಿ, ಅವರು ಬಂದರೆ ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇನೆ. ಸ್ಥಳಕ್ಕೆ ಭೇಟಿ ಕೊಡುತ್ತೇನೆ ಮತ್ತು ಸ್ಥಳದಲ್ಲೇ ಆದೇಶವನ್ನು ಕೊಡುತ್ತೇನೆ, ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕು ಎಂದು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಳೆ ಹೋಗೋಣವೆ ಸ್ವಾಮಿ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಇವತ್ತೇ ಹೋಗೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ರೈತರಿಗೆ ಸಂಬಂಧಪಟ್ಟ ವಿಷಯ ಇಲ್ಲಿ ಇದ್ದು ಏನು ಮಾಡುವುದು. ನಾನು ಬರುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಅವರು ಮಧ್ಯಾಹ್ನ ಹೋಗೋಣ ಎಂದರೆ ಮಧ್ಯಾಹ್ನವೇ ಹೋಗುತ್ತೇನೆ.

ಉಪಾಧ್ಯಕ್ಷರು : ಆಯಿತು. ಶ್ರೀ ಏಕಾಂತಯ್ಯನವರೇ ನೀವು ಮುಂದುವರೆಸಿ ಐದು-ಹತ್ತು ನಿಮಿಷಗಳಲ್ಲಿ ನೀವು ಮುಗಿಸಬೇಕು.

೧೯೯೧-೯೨ನೇ ಸಾಲಿನ ಅನುಪೂರಕ ಬೇಡಿಕೆಗಳ ಮೇಲೆ ಸಾಮಾನ್ಯ ಚರ್ಚೆ.

ಶ್ರೀ ಎಚ್. ಏಕಾಂತಯ್ಯ : ಸನ್ಮಾನ್ಯ ಅಧ್ಯಕ್ಷಣಿಯವರೆ, ಈಗ ನಾನು ಏನು ಪ್ರಸ್ತಾಪ ಮಾಡುತ್ತಿದ್ದೆ ಎಂದರೆ, ಈ ರಾಜ್ಯ ಸರ್ಕಾರಕ್ಕೆ ತೆರಿಗೆ ರೂಪದಲ್ಲಿ ಬರಬೇಕಾದಂಥ ಬಾಕಿ 1989ನೇ ಇಸವಿಯಲ್ಲಿ ಏನು ಇತ್ತೋ, ಆ ಮಾತನ್ನು ಹೇಳಿದ್ದೆ. ಅದೇ ರೀತಿಯಾಗಿ 1990-91 ಕ್ಕೆ ಸುಮಾರು 221ಕೋಟಿ ರೂಪಾಯಿ ಬರಬೇಕಾಗಿದೆ. ನಾನು ಕೇವಲ ಮಾರಾಟ ತೆರಿಗೆಯ ಮಾತನ್ನು ಹೇಳುತ್ತಿದ್ದೆ. ಈ 221ಕೋಟಿ ರೂಪಾಯಿಗಳು ಏನು ಬರುತ್ತದೆ. ಅದರಲ್ಲಿ ನ್ಯಾಯಾಲಯದ ಆದೇಶದಿಂದ ತಡೆಹಿಡಿಯಲಾದ ಮೊಬಲಗು ಮತ್ತು ಸಕ್ಕರೆ ಕಾರ್ಖಾನೆಗಳಿಗೆ ಕೊಟ್ಟಿರುವ ಬಡ್ಡಿರಹಿತ ಸಾಲವನ್ನು ಬಿಟ್ಟರೆ ಯಾವುದು ವಸೂಲು ಮಾಡಬೇಕೋ ಅವರ ಪ್ರಕಾರ 214 ಕೋಟಿ ರೂಪಾಯಿಗಳು ಎನ್ನುವ ಮಾತನ್ನು ಹೇಳುತ್ತಾರೆ. ಈ 214ಕೋಟಿ ರೂಪಾಯಿಗಳಲ್ಲಿ ಬಾಕಿ ಎಷ್ಟು ವಸೂಲು ಮಾಡಿದ್ದಾರೆ ಎಂದರೆ, 16 ಕೋಟಿ ರೂಪಾಯಿಗಳು ಮಾತ್ರ ಮಾಡಿದ್ದಾರೆ. ಏಕೆ? ಇವರ ಇಲಾಖೆ ಏನು ಬಾಕಿ ವಸೂಲು ಮಾಡುವುದಕ್ಕೆ ತಯಾರಿಲ್ಲವೇ? ಇವರಿಗೆ ಇರುವ ಅಡಚಣೆಗಳು ಏನು? ಕೋರ್ಟಿನಲ್ಲಿ ಸ್ಟೇ ಇದೆಯೆಂದು ಹೇಳುತ್ತಾರೆ ನಾನು ಒಪ್ಪುತ್ತೇನೆ. ನಾನು ಕೆಲವು ಅಂಕಿಅಂಶಗಳನ್ನು ಕೊಡಬಲ್ಲೆ. ಕೋರ್ಟಿನಲ್ಲಿ ಒಂದು, ಎರಡು ಮೂರು ವರ್ಷ ಆದರೂ ಸಹ, ಸಂಬಂಧಪಟ್ಟವರು ತಡೆಯಾಜ್ಞೆ ಪಡೆದಿದ್ದರೂ ಸಹ, ಆ ತಡೆಯಾಜ್ಞೆಯನ್ನು ತೆರವು ಮಾಡಿಸುವುದಕ್ಕೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಕ್ರಮ ತೆಗೆದುಕೊಳ್ಳದೇ ಇರುವ ಅನೇಕ ಉದಾಹರಣೆಗಳನ್ನು ನಾನು ಬೇಕಾದರೆ ಕೊಡಬಲ್ಲೆ ಏತಕ್ಕೋಸ್ಕರ? ಇದೇನು 50 ರೂಪಾಯಿ 100 ರೂಪಾಯಿ ಅಲ್ಲ. ಲಕ್ಷಾಂತರ ರೂಪಾಯಿಗಳು ಸರ್ಕಾರಕ್ಕೆ ಬರಬೇಕಾದ ಸಂದರ್ಭದಲ್ಲಿ, ಕೆಲವು ಪ್ರಕರಣಗಳಲ್ಲಿ ಕೋಟ್ಯಾಂತರ ರೂಪಾಯಿ ಸಂಬಂಧಪಟ್ಟಂಥ ಆಫೀಸಿನಿಂದ ಬರಬೇಕಾಗಿದ್ದರೂ ಸಹ ಈ ಇಲಾಖೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಂಡಿಲ್ಲವೆಂದು ಹೇಳುವುದಕ್ಕೆ ನಾನು ಇಚ್ಛಿಸುತ್ತೇನೆ. ಇದನ್ನು ಪರಿಶೀಲನೆ ಮಾಡುವಂಥ ಮಂತ್ರಿಗಳಾಗಲೀ,

ಅಧಿಕಾರಿಗಳಾಗಲೀ ಈ ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಇಲ್ಲವೇ? ಇದನ್ನು ನಾನು ಹುಟ್ಟಿಸಿಕೊಂಡು ಹೇಳುತ್ತಿಲ್ಲ. ಎ.ಜಿ.ಯವರು ಏನು ಹೇಳುತ್ತಾರೆ? ಅವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಅವರು ಮುಖ್ಯವಾದ ಅಂಶಗಳನ್ನು ಪ್ರಸ್ತಾಪ ಮಾಡಿದ್ದಾರೆ.

"Revenue amounting to Rs. 112.03 crores due upot March 1988 remained uncollected in the 25 Circlø offices test-checked. Out of this, collection of Rs.9.37 crores in 91 cases of over Rs. one lakh each was stayed by court/ appellate authority, while a sum of Rs. 21.17 crores pertaining to years 1972-73 to 1986-87 is outstanding due to non-version of tax in to interest free loan under a scheme of incerntive to sugar industries introduced in 1973 resulting in undue benefit to 11 assessees to that extent. Recovery agreegating to Rs. 10.88 Crores was stayed by courts etc. in 216 cases during 1978-79 to 1988-89. The Department neither got the stay vacated nor got bank guarantee converted in to cash security in these cases, despite favourable judicial decisions."

ಇದಕ್ಕಿಂತ ನಿರ್ಲಕ್ಷತನ ಅಥವಾ ಹೊಣೆಗಾರಿಗೆ ಇಲ್ಲದಂತೆ ಆಡಳಿತ ಏನಾದರೂ ಇದೆಯೇ? ಕೋರ್ಟಿನವರೂ ಸಹ ಅರ್ಡರ್ ಮಾಡುತ್ತಾರೆ, ಆದರೂ ಸಹ ಅವರ ಬಗ್ಗೆ ವಸೂಲಿ ಮಾಡುವುದಕ್ಕೆ ಕ್ರಮ ತೆಗೆಮಕೊಳ್ಳದೇ ಇದ್ದಾರೆ, ಕೋರ್ಟಿನಲ್ಲಿ ಸ್ಟೇ ಕೊಟ್ಟಿರುತ್ತಾರೆ. ಅದು ಕಂಡೀಷನರ್ ಸ್ಟೇ ಆರ್ಡರ್ ಇರಬಹುದು. ಅಥವಾ ಅನ್ ಕಂಡೀಷನಲ್ ಸ್ಟೇ ಆರ್ಡರ್ ಇರಬಹುದು. ಇದನ್ನು ತೆರವು ಮಾಡಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಾ ಇಲ್ಲ.

"Even though the powers to grant stay of recovery of tax dues by the Appellate Tribunal were withdrawn from 1st April 1988, the Tribunal granted stay of recovery tax amounting to Rs. 1.22 lakhs in 3 cases during the year 1988-89 and this was not contested by the department."

ಅದು ಮುಖ್ಯ. ಕೇವಲ 1 ಕೋಟಿ ಅಥವಾ 1 ಲಕ್ಷ ಇವರು ಸ್ಟೇ ಕೊಟ್ಟಿದ್ದಾರೆ ಎನ್ನುವುದು. ಮುಖ್ಯಅಲ್ಲ. ಇದನ್ನೂ ಸಹ ಸಂಬಂಧಪಟ್ಟ ಟ್ರಿಬ್ಯುನಲ್ ಮುಂದೆ ತರುವುದಕ್ಕೆ ನಿಮಗೆ ಅಧಿಕಾರ ಇಲ್ಲ ಎಂಬ ಮಾತನ್ನು ಹೇಳುವುದಕ್ಕೂ ಸಹ ಇವರು ತಯಾರು ಇಲ್ಲ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಇನ್ನು ಎರಡು ಉದಾಹರಣೆಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ.

"The Department had not taken edequate action to get the stay vacted even in cases involing tax of Rs.177 crores, pertaining to the years 1970-71 to 1988-89.."

1 ಕೋಟಿ 77 ಲಕ್ಷ ರೂಪಾಯಿಗಳಿಗೆ ಸಂಬಂಧಪಟ್ಟಂತೆ ಸ್ಟೇ ಆರ್ಡರ್ ಏನು ಆಗಿತ್ತು. ಅದರಲ್ಲೂ ಸಹ ಅನ್-ಕಂಡೀಷನಲ್ ಆಗಿ ಕೋರ್ಟಿನಿಂದ ಕೊಟ್ಟಿದ್ದರೆ, ಅವುಗಳನ್ನು ವೆಕೇಟ್ ಮಾಡುವುದಕ್ಕೆ ಇವರು ಯಾವ ಕ್ರಮವನ್ನೂ ತೆಗೆದುಕೊಂಡಿರುವುದಿಲ್ಲ. ಎನ್ನುವ ಮಾತನ್ನು ಎ.ಜಿ.ಯವರು ತಮ್ಮ ವರಿದಿಯಲ್ಲಿ ಹೇಳುತ್ತಾರೆ. ಇದು ಬಹಳ ಮುಖ್ಯ ಒಂದು ಕೋಟಿ ಹದಿನೈದು ಲಕ್ಷ ರೂಪಾಯಿಗಳನ್ನು ಏನು ಕೊಡಬೇಕಾಗಿತ್ತೋ

ಅದನ್ನು ಕೊಡುವುದಕ್ಕೆ, 21 ಚೆಕ್‌ಗಳನ್ನು ಸಂಬಂಧಪಟ್ಟವರು ಕೊಡುತ್ತಾರೆ. ಇದು 1986ರ ಮಾರ್ಚಿಯಿಂದ 1987ರ ವರೆಗೆ, ಆದರೆ ಅದು ಡಿಸ್ ಹಾನರ್ ಆಗುತ್ತದೆ. ಡಿಸ್ ಹಾನರ್ ಆದಮೇಲೂ ಸಹ ಚೆಕ್ ಫಾಲೋ ಅಪ್ ಅಕ್ಷನ್ ಏನಿದೆ. ಅದನ್ನೂ ತೆಗೆದುಕೊಂಡಿರುವುದಿಲ್ಲ ಎಂಬ ಮಾತನ್ನು ಎ.ಜಿ.ಯವರು ತಮ್ಮ ವರದಿಯಲ್ಲಿ ಹೇಳುತ್ತಾರೆ. ಇಷ್ಟು ಸಾಕು ಎಂದು ಕಾಣಿಸುತ್ತದೆ. ಈ ನಿದರ್ಶನಗಳ ಆಧಾರದ ಮೇಲೆ ಹೇಳುವುದಾದರೆ, ಏನು ಫೈನಾನ್ಸ್ ಡಿಪಾರ್ಟಮೆಂಟ್ ಅಥವಾ ಸಂಬಂಧಪಟ್ಟ ಇಲಾಖೆಗಳು ಏನಿವೆ, ಸರ್ಕಾರಕ್ಕೆ ಬರಬೇಕಾದ ಬಾಕಿಯನ್ನು ವಸೂಲಿ ಮಾಡುವುದರಲ್ಲಿ, ನಿರ್ಧಾಕ್ಷಿಣ್ಯವಾದ ಕ್ರಮವನ್ನು ತೆಗೆದುಕೊಳ್ಳುವುದರಲ್ಲಿ ವಿಫಲರಾಗಿದ್ದಾರೆ ಇದರ ಅರ್ಥ ಏನು ಎನ್ನುವುದನ್ನು ತಮಗೇ ಬಿಡುತ್ತೇನೆ. ತದನಂತರ, ಮತ್ತೊಂದು ಈ ಇಲಾಖೆಯಲ್ಲಿ ನಡೆದಿದೆ. ಪ್ರತಿ ವರ್ಷವೂ ಆಯವ್ಯಯ ಅಂದಾಜು ತಯಾರು ಮಾಡುತ್ತಾರೆ. ಈ ಸದನದ ಮುಂದೆ ಇಡುತ್ತಾರೆ, ನಾವು ಒಪ್ಪಿಗೆಯನ್ನು ಕೊಡುತ್ತೇವೆ. ಒಪ್ಪಿಗೆಯನ್ನು ಕೊಟ್ಟಮೇಲೆ, ಕೆಲವು ಇಲಾಖೆಯವರು ನಮಗೆ ಹೆಚ್ಚು ಹಣ ಬೇಕಾಗುತ್ತದೆಂದು ಹೇಳುತ್ತಾರೆ. ನಮಗೆ ಹೆಚ್ಚು ಹಣ ಬೇಕೆಂದು ಹಣಕಾಸಿನ ಇಲಾಖೆಗೆ ಹೇಳುತ್ತಾರೆ. ಅದಕ್ಕೆ ಅವರು ನಮ್ಮಲ್ಲಿ ಹಣ ಇಲ್ಲ, ನಾವು ಸಪ್ಲಿಮೆಂಟರಿ ಗ್ರಾಂಟ್ಸ್ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಾರೆ. ಒಂದುಕಡೆ ಸಪ್ಲಿಮೆಂಟರಿ ಗ್ರಾಂಟ್ಸ್ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳುವ ಈ ಇಳಾಖೆ, ಮತ್ತೊಂದು ಕಡೆ ಎಲ್‌ಓಸಿ ಕೊಡುತ್ತದೆ. ಇವರಿಗೆ ಏನಾದರೂ ಆರ್ಥಿಕ ಶಿಸ್ತನ್ನು ತರಬೇಕೆಂಬ ಇರಾದೆ ಇದೆಯೇ? ಇಲ್ಲದಿದ್ದರೆ ಯಾ ಪ್ರಭಾವದಿಂದ, ಯಾವ ಕಾರಣದಿಂದ, ಆಯವ್ಯಯ ಪಟ್ಟಿಯಲ್ಲಿ ನಮೂದು ಮಾಡಿರುವುದಕ್ಕಿಂತ ಹೆಚ್ಚಿನ ಹಣವನ್ನು ಎಲ್ ಓ.ಸಿ ಮುಖಾಂತರ ಸಂಬಂಧಪಟ್ಟ ಇಲಾಖೆಗೆ ಕೊಡುತ್ತಾರೆ? ಇದೇನು ಜನಸಾಮಾನ್ಯರಿಗೆ ಉಪಯೋಗ ಅಲ್ಲ, ಯಾರಾದರೂ ಕಂಟ್ರಾಕ್ಟ್‌ದಾರರಿಗೆ ಕೊಡತಕ್ಕ ಹಣಕ್ಕೆ ಮಾತ್ರ ಈ ಎಲ್ ಓ.ಸಿ.ಯನ್ನು ಅನಿರ್ದಿಷ್ಟವಾಗಿ ಅವರಿಗೆ ಬೇಕಾದ ರೀತಿಯಲ್ಲಿ ಹಣಕಾಸಿನ ಇಲಾಖೆ ಕೊಡುತ್ತದೆ, ನಾನು ಕೇಳುತ್ತಿದ್ದೇನೆ, ಸಪ್ಲಿಮೆಂಟರಿ ಗ್ರಾಟ್ಸ್ ಕೊಡಿ ಎಂದು ಕೇಳಿದರೆ ನಮ್ಮಲ್ಲಿ ಹಣ ಇಲ್ಲವೆಂದು ಹೇಳುತ್ತಾರೆ. ಮತ್ತೊಂದು ಕಡೆ ನಮಗೆ ಯಾರಿಗೂ ಗೊತ್ತಿಲ್ಲದೆ ಎಲ್.ಓ.ಸಿ ಕೊಡುತ್ತಾರೆ. ಆಯವ್ಯಯ ಪಟ್ಟಿಯಲ್ಲಿ ಏನು ಹೇಳಿದ್ದಾರೆ, ಬೇಡಿಕೆಯಲ್ಲಿ ಏನು ಮಂಜೂರಾಗಿದೆ, ಅದಕ್ಕಿಂತ ಹೆಚ್ಚು ಹಣವನ್ನುಕೊಡತಕ್ಕ ಪ್ರವತ್ತಿ ಏನಿದೆ, ಈ ಪ್ರವೃತ್ತಿಗೆ ಕಾರಣ ಏನು ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಅವರು ಹೇಳಬಹುದು, ನಿಮ್ಮ ಕಾಲದಲ್ಲೂ ಇದು ಇತ್ತು ಎಂದು ಹೇಳಬಹುದು. ಅದೇ ರೀತಿ ನೀವು ಮುಂದೂಮಾಡುತ್ತೀರಾ? ಯಾವುದೇ ಆಡಳಿತಾತ್ಮಕ ತೊಂದರೂ ಆಗಿದ್ದರೆ, ಯಾವುದೋ ಒಂದು ನೀತಿಯನ್ನು ಅನುಸರಿಸಿದ್ದರೆ, ಅದನ್ನೇ ಮುಂದುವರಿಸುವುದಕ್ಕೆ ಇಷ್ಟಪಡುತ್ತೀರಾ ಎನ್ನುವ ಮಾತನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆರಡು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಆಡಳಿತ ಸುಧಾರಣೆಗೆ ಸಂಬಂಧಪಟ್ಟಂತೆ ಲೋಕಾಯುಕ್ತ ವರದಿ ಇದೆ. ಕಳೆದ ಸಾರಿ ಸರ್ಕಾರದ ಪ್ರಮುಖ ಸದಸ್ಯರು ಏನಿರುತ್ತಾರೆ, ಇವರು ಈ ಕಡೆ ಇದ್ದಾಗ ಲೋಕಾಯುಕ್ತದ ಅಷ್ಟೊಂದು ನಂಬಿಕೆ ವ್ಯಕ್ತಮಾಡುತ್ತಾ ಇರಲಿಲ್ಲ. ಈಗ ಅದೇನೋ ಅವರಿಗೆ ಪ್ರೀತಿ ಬಂದಿದೆ. ಯಾವ ಕಾರಣದಿಂದ ಇದು ಬಂದಿದೆಯೋ ಗೊತ್ತಾಗುವುದಿಲ್ಲ.

ಮಾನ್ಯ ಗೃಹಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ. ಅದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಲೋಕಾಯುಕ್ತ ಏನು ಕೆಲಸ ಮಾಡುತ್ತಿದೆ? ಇದರಲ್ಲಿ ವಿಚಾರಣಾ ವಿಭಾಗ ಇದೆ. ಒಂದು ಪೋಲೀಸರಿಂದ, ಮತ್ತೊಂದು ತಾಂತ್ರಿಕ ವಿಭಾಗದಿಂದ ಈ ಎರಡು ವಿಭಾಗಗಳಿಗೆ ಸಂಬಂಧ ಪಟ್ಟಂತೆ ಕೆಲವು ಅಂಕಿಅಂಶಗಳನ್ನು

ಕೊಟ್ಟಿದ್ದಾರೆ. ಏನು ಎಷ್ಟೆಷ್ಟು ನಮ್ಮಲ್ಲಿ ಇದೆ, ಎಷ್ಟು ಕೇಸ್ ಮಾಡಿದ್ದೇವೆ ಎನ್ನುವ ಮಾತನ್ನು ಹೇಳುತ್ತಾರೆ. ಅಲ್ಲಿ ಇನ್‌ವೆಸ್ಟಿಗೇಷನ್ ಮತ್ತು ಟೆಕ್ನಿಕಲ್ ವಿಂಗ್ ಎಂದು ಎರಡು ವಿಂಗ್ಸ್ ಇದೆ. ಇನ್‌ವೆಸ್ಟಿಗೇಷನ್ ಎಂದರೆ ಪೋಲೀಸ್ ವಿಂಗ್ ಏನಿದೆ ಅದರಲ್ಲಿ 89 ನೇ ಇಸವಿಯಲ್ಲಿ ಅಂದರೆ 1.4.89ರವರೆಗೆ 395 ಕೇಸಸ್ ಬಾಕಿ ಇದೆ, ಟೆಕ್ನಿಕಲ್ ವಿಂಗ್‌ನಲ್ಲಿ 25 ಬಾಕಿ ಇದೆ. ಆ ವರ್ಷ ಸೇರಿದ್ದು ಸೇರಿದರೆ ಒಟ್ಟು 942 ಆಯಿತು ಇನ್ವೆಸ್ಟಿಂಗೇಷನ್‌ವಿಂಗ್ ನಲ್ಲಿ, 96 ಆಯಿತು ಟೆಕ್ನಿಕಲ್ ವಿಂಗ್‌ನಲ್ಲಿ ಅದರಲ್ಲಿ ಡಿಸ್ಪೋಸಲ್ ಆಗಿರತಕ್ಕಂಥಾದ್ದು 498 ಮತ್ತು 75 ಕ್ರಮವಾಗಿ, ಈ ವಿವರಗಳನ್ನು ನಾನು ಏತಕ್ಕೆ ಕೊಡುತ್ತಿದ್ದೇನೆ ಎಂದರೆ ಇಷ್ಟೆಲ್ಲಾ ಇವರು ತನಿಖೆ ಮಾಡಿದ್ದಾರೆ. ಆ ತನಿಖೆಯ ಫಲ ಏನಯಿತು. ಎಂಬುದು ಬಹಳ ಮುಖ್ಯ ಇವರಲ್ಲಿ 373 ಕೇಸಸ್ ನಲ್ಲಿ ಏನು ಚಾರ್ಜ್ ಪ್ರೂವ್ ಆಗಿಲ್ಲ ಎಂಬ ಮಾತನ್ನನು ಹೇಳುತ್ತಾರೆ. ಮತ್ತು 39ರಲ್ಲಿ Enquiry recommended, but no prosecution.Departmental enquiry and prosecution recommended in 32 cases.

ಈ ವಿಚಾರವನ್ನು ನಾನು ಏತಕ್ಕೆ ತಮ್ಮ ಗಮನಕ್ಕೆ ತರುತ್ತಿದ್ದೇನೆ ಎಂದರೆ, ಏನು ಲೋಕಾಯುಕ್ತದಿಂದ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ವಿಚಾರಣೆ ಆಗುತ್ತದೆ. ಆ ವಿಚಾರಣೆ ಆದಮೇಲೆ ಏನು ಶಿಫಾರಸ್ಸುಗಳನ್ನು ಅವರು ಮಾಡುತ್ತಾರೆ, ಅದನ್ನು ಕಾರ್ಯಗತ ಮಾಡುವುದಕ್ಕೆ ಇವರಿಗೆ ಹಲವಾರು ವರ್ಷಗಳೇ ಬೇಕು. ನಾನು ಇದನ್ನು ಕೇಳುತ್ತಿದ್ದೇನೆ. ಎಷ್ಟು ಪ್ರಕರಣಗಳಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದೆ, ಅದರ ಬಗ್ಗೆ ಎಷ್ಟು ಪ್ರಕರಣಗಳಲ್ಲಿ ಕ್ರಮ ತೆಗೆದುಕೊಂಡಿದ್ದೀರಿ, ಅದರ ವಿವರ ಇಲ್ಲ. Convenently it does not find a place in the report ಏತಕ್ಕೆ, ಸರಕಾರಕ್ಕೆ ಅವಮಾನವೇ ಇಷ್ಟನ್ನು ಹೇಳಿದ್ದಾರೆ, ಡಿಸಿಪ್ಲಿನರಿ ಆಕ್ಷನ್ ಇನಿಷಿಯೇಟ್ ಮಾಡಿದ್ದೇವೆ. ಶಿಸ್ತು ಕ್ರಮ ಆರಂಭಗೊಳಿಸಿದ್ದೇವೆ ಎಂಬ ಮಾತನ್ನು ಹೇಳಿದ್ದಾರೆ. ಇದರಿಂದ ನಾಚಿಕೆಯಾಗುತ್ತದೆ. ಅನೇಕ ಪ್ರಕರಣಗಳಲ್ಲಿ ಲೋಕಾಯುಕ್ತ ಎಂದರೆ ವಿಜಿಲೆನ್ಸ್ ಕಮಿಷನ್, ಏನಿದೆ ಅವರು ವರದಿ ಕಳುಹಿಸಿದ್ದರೂ ಸಹ ಇವರು ಎರಡು ವರ್ಷವಾದರೂ ಸಹ ಶಿಸ್ತಿನ ಕ್ರಮ ಆರಂಭಿಸುವುದಿಲ್ಲ ಎಂದು ಹೇಳಿದರೆ ಡಿ.ಪಿ.ಎ.ಆರ್. ಏನು ಮಾಡುತ್ತಿದೆ. ಇದರ ಬಗ್ಗೆ ಅವರಿಗೆ ಗಮನ ಇಲ್ಲವೇ? ಇನ್ನೊಂದು ಬಹಳ ಮುಖ್ಯವಾದುದು ಇದೆ. ಈ ಆಲ್ ಇಂಡಿಯಾ ಸರ್ವೀಸ್‌ಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಲೋಕಾಯುಕ್ತ ಉಪಲೋಕಾಯುಕ್ತದವರಿಗೆ ವಿಚಾರಣೆ ಮಾಡುವುದಕ್ಕೆ ಅಧಿಕಾರ ಇದೆ. 1989-90ನೇ ಇಸವಿಯಲ್ಲಿ ಉಪಲೋಕಾಯುಕ್ತದವರಿಗೆ 23 ಪ್ರಕರಣಗಳು ಅವರ ಗಮನಕ್ಕೆ ಬರುತ್ತವೆ. ಸನ್ಮಾನ್ಯ ಅಧ್ಯಕ್ಷಣೆಯವರೆ not even one care they have disposed off ಏಕೆ? ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಕಾರಣ ಹೇಳಬೇಕು. ಈ ಐ.ಎ.ಎಸ್. ಮತ್ತು ಐ.ಪಿ.ಎಸ್, ಅಧಿಕಾರಿಗಳಿಗೆ ಸಂಬಂಧಪಟ್ಟ 23 ಪ್ರಕರಣಗಳು ಉಪಲೋಕಾಯುಕ್ತ ಅವರಿಗೆ ಬಂದಿದೆ ಎಂಬ ಮಾತನ್ನು ಹೇಳುತ್ತಾರೆ. ಅವರ ವ್ಯಾಪ್ತಿಗೆ ಬಂದಿದೆ ಎಂಬ ಮಾತನ್ನು ಹೇಳುತ್ತಾರೆ, What is the disposal ಎಂದರೆ, ಪುಟ-35, annexure A ನಲ್ಲಿ "Total number of cases pending as on 1st April/1989 before the Hon'ble Lokayukta is Nil - Total number of cases pending as on 1st April 1990. 23

ಇದ್ದವೂ ಅಷ್ಟೇ, ಈಗಿರುವುದೂ ಅಷ್ಟೇ, ಮತ್ತೆ ಇವರು ಏನು ಮಾಡುತ್ತಿದ್ದಾರೆ? ನಿರ್ದಿಷ್ಟ ದಿವಸಗಳಲ್ಲಿ ವಿಚಾರಣೆ ಪ್ರಾರಂಭ ಮಾಡಬೇಕೆನ್ನುವುದು ಏನಾದರೂ ಇದೆಯೇ? ಸದನದ ಮುಂದೆ ಈ ಕಾನೂನನ್ನು ಏನಾದರೂ ತಿದ್ದುಪಡಿ ಮಾಡುವುದಕ್ಕೆ

ಸರಕಾರ ಪ್ರಯತ್ನ ಮಾಡುತ್ತದೆಯೇ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಬಹಳ ಮುಖ್ಯವಾದುದು ಎಂದು ಹೇಳಿದರೆ ಕೆಲವು ಶಿಫಾರಸ್ಸುಗಳನ್ನು ಮಾಡಿರುತ್ತಾರೆ. 'In All India Conference of Lokayukta and Upalokayukta'' ಅವರು ಒಂದು ಸಮಾವೇಶದಲ್ಲಿ ಒಂದು ತೀರ್ಮಾನ ಮಾಡಿದರು. ನಾನು ಹೇಳುತ್ತಿರುವುದು ಈ ವರ್ಷಕ್ಕೆ ಸಂಬಂಧಪಟ್ಟದ್ದಲ್ಲ. 1.4.89 ರಿಂದ 31.3.90 ರವರೆಗಿನದು, ಅದು ಇವತ್ತು ನನ್ನ ಕೈ ಸೇರಿದೆ. ಅದು ಆದಮೇಲೆ ಒಂದೂವರೆ ವರ್ಷವಾಗಿದೆ. ಅದಕ್ಕೆ ಸಂಬಂಧಪಟ್ಟ ವರದಿಯನ್ನು ವಾರ್ಷಿಕ ವರಿದಿಯನ್ನು ಏನು ಕೊಡಬೇಕಾಗಿದೆ. ಈ ಲೋಕಾಯುಕ್ತ ಅಧಿನಿಯಮ 84ರ ಪ್ರಕಾರ, 12 (6)ರ ಪ್ರಕಾರ ಅವರು ಕೊಡಬೇಕಾಗಿದೆ. ಒಂದು ಕ್ರೋಢೀಕೃತ ವಾರ್ಷಿಕ ವರದಿಯನ್ನು ಒಪ್ಪಿಸತಕ್ಕದ್ದು ಎಂಬ ಮಾತು ಇದೆ. ಇದನ್ನು ಯಾವಾಗ ಒಪ್ಪಿಸಬೇಕು? ಇಷ್ಟಬಂದಾಗ ಒಪ್ಪಿಸಬಹುದೇ? ಇದರ ಬಗ್ಗೆ ಚರ್ಚೆ ಮಾಡಿರುತ್ತಾರೆ. ಸಂಬಂಧಪಟ್ಟ ಲೋಕಾಯುಕ್ತ ಉಪಲೋಕಯುಕ್ತ ಸಮಾವೇಶ ಏನು ನಡೆಯಿತು. ಅವರು ಇದಕ್ಕೆ ನಿರ್ದಿಷ್ಟ ನಿಯಮ ಮಾಡಬೇಕಾದ ಅಗತ್ಯ ಇದೆ ಎಂಬ ಸಲಹೆ ಕೊಡುತ್ತಾರೆ. ಆ ಸಲಹೆಗೆ ನಮ್ಮ ಸರಕಾರ ಗಮನಕೊಟ್ಟಿಲ್ಲ. ಒಂದು ನಿರ್ದಿಷ್ಟ ಅವಧಿಯೊಳಗೆ ವಾರ್ಷಿಕ ವರದಿಯನ್ನು ಲೋಕಾಯುಕ್ತ ಅಧಿನಿಯಮದ /ಪ್ರಕಾರ ಸಂಬಂಧಪಟ್ಟವರು ಕೊಡಬೇಕು. ಅದನ್ನು ಕೊಡುವುದಕ್ಕೆ ಈ ಸದನದ ಮುಂದೆ ಇಡುವುದಕ್ಕೆ ಕಾಲವನ್ನು ನಿಗದಿ ಮಾಡಬೇಕಾದುದು ಅವಶ್ಯಕ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಈ ಸರ್ಕಾರ ಯಾವ ರೀತಿ ಕೆಲಸ ಮಾಡುತ್ತಿದೆ ಎನ್ನುವ ಬಗ್ಗೆ ಹೇಳಲಿಕ್ಕೆ ವಾಪಸ್ಸು ಬರುತ್ತೇನೆ. ನಾನು ಏನು ಮೊದಲು ಪ್ರಾಸ್ತಾವಿಕವಾಗಿ ಹೇಳಿದೆ ಆಗ ಅವರು ಇದು ನಮ್ಮ ನೀತಿ ಎಂದು ಹೇಳಿದರು. ಈ ನೀತಿಯನ್ನು ಎಷ್ಟರ ಮಟ್ಟಿಗೆ ಕಾರ್ಯಗತಗಳಿಸಲಿಕ್ಕೆ ಪ್ರಯತ್ನ ಮಾಡಿದ್ದಾರೆ ಎನ್ನುವುದಕ್ಕೆ ನಾನು ಕೆಲವು ನಿದರ್ಶನಗಳನ್ನು ಕೊಡಲಿಕ್ಕೆ ಬಯಸುತ್ತೇನೆ. ಮಾನ್ಯ ಅಧ್ಯಕ್ಷಣೀಯವರೇ ವರ್ಗಾವಣೆಗಳ ಬಗ್ಗೆ ನಾವು ಒಂದು ನಿಯಮಗಳನ್ನು ರೂಪಿಸಿದ್ದೇವೆ. ಇದನ್ನು ಡಿ.ಪಿ.ಎ.ಆರ್.ನವರೇ ರೂಪಿಸಿರುವುದು. ಅವರು ಏನು ಹೇಳುತ್ತಾರೆಂದರೆ ತಾವು ಈ ರೀತಿ ಕೆಲಸ ಮಾಡಬೇಕೆಂದು. ಅವರು ಆ ರೀತಿಯಲ್ಲಿ ಕೆಲಸ ಮಾಡಿದ್ದಾರೋ ಇಲ್ಲವೋ ಎನ್ನುವುದನ್ನು ಮೊದಲು ಅವರು ನೋಡಿಕೊಳ್ಳಬೇಕು. ಮಾನ್ಯ ಅಧ್ಯಕ್ಷಣೀಯವರೇ ಕಟ್ಟು ನಿಟ್ಟಾದ ಸೂಚನೆಯನ್ನು ಡಿ.ಪಿ.ಎ.ಆರ್. ನವರು ಎಲ್ಲಾ ಇಲಾಖೆಗಳಿಗೂ ಕಳುಹಿಸಿದ್ದಾರೆ ಇದನ್ನು ದಿನಾಂಕ 29-3-90ಕ್ಕೆ ಮತ್ತು 30-5-90ಕ್ಕೆ ಉಲ್ಲೇಖವನ್ನು ಮಾಡಿ ಒಂದು ಅಧಿಸೂಚನೆ ಪ್ರಕಾರ ಅವರು ಕಳುಹಿಸಿದ್ದಾರೆ. ನಾನು ಕೇಳುತ್ತೇನೆ ಎಲ್ಲದರಲ್ಲೂ ಅಪವಾದ ಇರುತ್ತದೆ. ಎಕ್ಸೆಪ್ಷನ್ ಇರುತ್ತದೆ. ಅಪವಾದ ಇಲ್ಲ ಏನು ತಾವು ಸೂಚನೆ ಕೊಟ್ಟಿದ್ದಾರೆ, ನಿಯಮಗಳನ್ನು ರೂಪಿಸಿದ್ದಾರೆ ಅವೆಲ್ಲವನ್ನೂ ಸಹ ನೂರಕ್ಕೆ ನೂರರಷ್ಟು ಎಂದರೂ ತಪ್ಪಲ್ಲ ಬಹುತೇಕ ಪ್ರಕಾರಣಗಳಲ್ಲಿ ಈ ನಿಯಮಗಳಿಗೆ ವಿರುದ್ಧವಾಗಿ ಸರ್ಕಾರ ವರ್ಗಾವಣೆ ಮಾಡಿದೆ. ಇದನ್ನು ನಾನು ಏತಕ್ಕೆ ಹೇಳುತ್ತೇನೆಂದರೆ ಈ ನಿಯಮಗಳನ್ನು ರೂಪಿಸತಕ್ಕಂಥ ಅಗತ್ಯ ಏನಿತ್ತು ಈ ನಿಯಮಗಳನ್ನು ಯಾರಿಗೆ ತೋರಿಸುವುದಕ್ಕೆ? ನಮ್ಮಂತಹವರು ಯಾರಾದರೂ ಕೇಳಿದರೆ ಅಂತಹವರಿಗೆ ಹೇಳೋದಕ್ಕೆ ಅಥವಾ ಇದನ್ನು ಏನಾದರೂ ಪಾಲನೆ ಕೊಂಡು ಹೋಗಲಿಕ್ಕೆ ಮಾಡಿದ್ದೀರಾ? ಎಂದು ನಾನು ಕೇಳಬಯಸುತ್ತೇನೆ. ಏಕೆಂದರೆ ನಾನೊಂದು ಉದಾಹರಣೆ ಹೇಳುತ್ತೇನೆ. ಯಾರೋ ಒಬ್ಬ ಟೈಪಿಸ್ಟನ್ನು, ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜನೀಯರ್ ಆಗಿ ಪೋಸ್ಟ್ ಮಾಡಿದ್ದುದು ದೊಡ್ಡದಲ್ಲ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ಟೈಪಿಂಗ್ ಮಿಸ್ಟೇಕ್

ಶ್ರೀ ಹೆಚ್. ಏಕಾಂತಯ್ಯ : ಅದು ಟೈಪಿಂಗ್ ಮಿಸ್ಟೇಕ್ ಆದರೆ, ಇನ್ನೊಂದನ್ನು ಹೇಳೋಣ ಮೊನ್ನೆ ಕೆಲವು ವರ್ಗಾವಣೆಗಳನ್ನು ತಾವು ಮಾಡಿದರು ಮಾನ್ಯ ಅಧ್ಯಕ್ಷಣೀಯವರೇ, ವರ್ಗಾವಣೆಯಲ್ಲಿ ತಾವು ಅನುಸರಿಸಿದ ನೀತಿ ಏನು? ತಾವು ಬೆಲ್ ಮಾಡಬೇಡಿ.

ಉಪಾಧ್ಯಕ್ಷಣೀಯವರು : 15 ನಿಮಿಷ ಆಯಿತು. ತಾವು ಬೇಗ ಮುಗಿಸಿ. ಇನ್ನೂ ಮಾತನಾಡುವ ಸದಸ್ಯರು ಇದ್ದಾರೆ.

ಶ್ರೀ ಡಿ.ಎ. ಚಿನ್ನಪ್ಪ : ಇವತ್ತು 53 ಸಬ್ಜೆಕ್ಟ್ ಡಿಸ್‌ಕಷನ್‌ಗೆ ಉಂಟು. ಇನ್ನು 23 ಜನ ಮಾತನಾಡುವವರಿದ್ದಾರೆ.

ಶ್ರೀ ಹೆಚ್. ಏಕಾಂತಯ್ಯ : ಈಗ ದಿನಾಂಕ 3-8-91ರಲ್ಲಿ ಕೆಲವು ವರ್ಗಾವಣೆಗಳನ್ನು ಸರ್ಕಾರದವರು ಮಾಡಿದ್ದಾರೆ. ಅದು ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜನೀಯರ್ಸ್ ಬಗ್ಗೆ. ತಾವು ಏನು ಮಾಡಿದ್ದೀರಿ? ನಾನು ಅವೆಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಈಗ ಒಬ್ಬರ ಹೆಸರು ಇಲ್ಲಿ ಬರೆದಿದ್ದಾರೆ. ಅವರ ಹೆಸರಿನ ಮುಂದೆ ಡಿಸಿಗನೇಶನ್ ಹಾಕಬೇಡವೇ? ಡಿಸಿಗನೇಶನ್ ಹಾಕದೆ ಇರುವುದಕ್ಕೆ ಕಾರಣ ಏನು? ಈ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜನೀಯರ್ ಇಂತಹ ಕಡೆ ಅಂತ ಹೇಳುವುದಿಲ್ಲ. ಏಕೆಂದರೆ ನಮ್ಮಂತಹವರು ಯಾರದರೂ ಏನಪ್ಪ ಮೊನ್ನೆ ಇವನು ಚಿತ್ರದುರ್ಗದಲ್ಲಿ ಇದ್ದ ತಿರುಗಿ ಇಲ್ಲಿಗೆ ವರ್ಗ ಮಾಡಿದ್ದಾರೆಂದು ಎಲ್ಲಿ ಕೇಳುತ್ತಾರೋ ಅಥವಾ ಇವರು ಯು.ಕೆ.ಪಿ. ಯಲ್ಲಿದ್ದವರು ಇವರನ್ನು ಕಾನೂನಿಗೆ ವಿರುದ್ಧವಾಗಿ ಹೇಗೆ ಪುನಃ ವರ್ಗ ಮಾಡಿದ್ದೀರಿ ನಮ್ಮನ್ನು ಏತಕ್ಕೆ ಬೆದರಿಕೆಯೇ? ಏತಕ್ಕೆ ಮಾಡಿದ್ದೀರಿ? ಮುಂದೆ ಇವರನ್ನು ಇಂತಹ ಕಡೆ ಪೋಸ್ಟ್ ಮಾಡಿದ್ದೇವೆಂದು ಹೇಳುತ್ತಾರೆ. ಮಾನ್ಯ ಅಧ್ಯಕ್ಷರೇ ಇನ್ನೊಂದು ನಾನು ಬಹಳ ಮುಖ್ಯವಾಗಿ ಹೇಳುತ್ತೇನ. ಅವರ ಹೆಸರಿನ ಮುಂದೆ ಡಿಸಿಗನೇಶನ್ ಇರುವುದಿಲ್ಲ ಆದರೆ ಅವರನ್ನು ಪೋಸ್ಟ್ ಮಾಡಬೇಕಾದರೆ ಬರೆಯುತ್ತಾರೆ. ಇದಕ್ಕಿಂತ ನಾಚಿಕೆಗೇಡಿನ ಕೆಲಸ ಏನಾದರೂ ಇದೆಯೇ? ಹೆಸರಿನ ಮುಂದೆ ಡಿಸಿಗನೇಶನ್ ಹಾಕುವುದಿಲ್ಲ. ಆ ಲೆಟರ್ ಪೋಸ್ಟ್ ಮಾಡುವಾಗ ಎಲ್ಲಿಗೆ ಪೋಸ್ಟ್ ಮಾಡಿದ್ದೇವೆ. ಎನ್ನುವುದನ್ನು ಕೈಯಲ್ಲಿ ಬರೆಯುತ್ತಾರೆ. ಇಂತಹ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜನೀಯರ್ ಇಂತಹ ಮೈನರ್ ಇರಿಗೇಶನ್ ಚಿತ್ರದುರ್ಗ ಅಂತ ಅಲ್ಲಿ ಬರೆಯುತ್ತಾರೆ. ವರ್ಗಾವಣೆ ಆದೇಶದಲ್ಲಿ ಹಾಕುವುದಿಲ್ಲ, ಇದಕ್ಕಿಂತ ನಾಚಿಕೆಗೇಡಿನ ಪ್ರಕರಣ ಇನ್ನೊಂದಿಲ್ಲ, ಇದಕ್ಕೆ ಕಾರಣ ಏನು? ಇದಾದ ಮೇಲೆ ಮತ್ತೊಂದು ಮಾತು ನಾನು ಹೇಳುತ್ತೇನ. ದಿನಾಂಕ 3-8-91ರಲ್ಲಿ ಒಂದು ಆದೇಶ ಆಯಿತು. ಅದಕ್ಕೆ ಸ್ಟೇ ಆರ್ಡರ್ ಕೊಟ್ಟಿದ್ದಾರೆ. ಆಮೇಲೆ ಪುನಃ ಜಾರಿ ಮಾಡುತ್ತಾರೆ. ಇವೆಲ್ಲ ಎತಕೋಸ್ಕರ? ಆಮೇಲೆ ಟೆಲಿಗ್ರಾಂ ಕಳುಹಿಸುತ್ತಾರೆ. ಪುನಃ ಆ ಟೆಲಿಗ್ರಾಂನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆ. ಇವೆಲ್ಲಾ ಏತಕೋಸ್ಕರ. ಸಂಬಂಧಪಟ್ಟವರು ಸಂಬಂಧಪಟ್ಟವರನ್ನು ನೋಡಿಲ್ಲ ಎನ್ನತಕ್ಕಂಥ ಕಾರಣವೇ? ಅಥವಾ ಏತಕ್ಕೆ? ವರ್ಗಾವಣೆಯಲ್ಲಿ ಸರ್ಕಾರ ಯಾವುದೇ ನಿರ್ದಿಷ್ಟವಾದ ಕಟ್ಟುನಿಟ್ಟಾದ ನಿಯಮಗಳನ್ನು ಮಾಡಿಕೊಂಡಿದ್ದಾರೆ. ಆ ನಿಯಮಗಳನ್ನು ಪಾಲನೆ ಮಾಡಿಲ್ಲ. ಇದನ್ನು ಸದುದ್ದೇಶದಿಂದ ಪಾಲನೆ ಮಾಡಿಲ್ಲ ಎನ್ನತಕ್ಕಂಥಾದ್ದನ್ನು ಅವರು ಹೇಳುವುದಕ್ಕೆ ಸಾಧ್ಯವಿಲ್ಲ. ದುರುದ್ದೇಶದಿಂದ ಅವರು ಪಾಲನೆ ಮಾಡಲಿಕ್ಕೆ ಸರ್ಕಾರ ಇದರಲ್ಲಿ..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಏನು ಮಾಡಿದರೂ ದುರುದ್ದೇಶವೇ?

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೇ ನಾನು ದುರುದ್ದೇಶದ ಆರೋಪ ಮಾಡುವುದಿಲ್ಲ. ನೀವು ನ್ಯಾಯವಾಗಿ ಮಾಡಿದ್ದೀರಿ ಎನ್ನುವ ಭಾವನೆ ಸಾರ್ವಜನಿಕರಲ್ಲಿ

ಬರಬೇಕು. Justice should be done, ಅಷ್ಟೇ ಅಲ್ಲ, it should appear to have been done.

ಕಣ್ಣಿಗೆ ಕಾಣಬೇಕು. ನನಗೆ ಕಾಣದಿದ್ದರೂ ಪರವಾಗಿಲ್ಲ. ಸರ್ಕಾರ ಏನು ಕೆಲಸ ಮಾಡಿದೆ ಎಂದು ನನಗೆ ಬೇಡ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಮನಸ್ಸಿಗೆ ಮನವರಿಕೆ ಆದರೆ ಸಾಕು ಈ ವರ್ಗಾವಣೆಯಲ್ಲಿ ಒಂದು ಖಚಿತವಾದ ನೀತಿ ಅನುಸರಿಸಿಲ್ಲ.

ಇವರ ಮೇಲೆ ಖಂಡಿತವಾಗಿಯೂ ಸಹ ಜಾತಿಯ ಆರೋಪ ಮಾಡುವುದಿಲ್ಲ. ಮಾನ್ಯ ಬಂಗಾರಪ್ಪನವರ ನೇತೃತ್ವದ ಸರ್ಕಾರ ಏನಿದೆ? ಖಂಡಿತವಾಗಲೂ ಸಹಾ ಅದು ಜಾತಿವಾದಿಗಳ ಸರ್ಕಾರ ಅಲ್ಲ. ಅವರಿಗೆ ಗೊತ್ತಿರುವುದು ಎರಡೇ ಜಾತಿ, ಭ್ರಷ್ಟರು ಮತ್ತು ಸಚ್ಚಾರಿತ್ರ್ಯದವರು. ಯಾರು ಒಳ್ಳೆಯ ಕೆಲಸ ಮಾಡುತ್ತಾರೋ ಯಾರು ಈ ದೇಶದ ಅಭಿವೃದ್ಧಿ ಬಗ್ಗೆ, ಈ ದೇಶದ ಜನರ ಬಗ್ಗೆ ಕಳಕಳಿ ಇದೆಯೋ ಆ ಜನ ಇವರ ಜೊತೆಯಲ್ಲಿ ಇಲ್ಲ ಅವರಿಗೆ ಪ್ರೋತ್ಸಾಹ ಮಾಡುವಂಥ ಒಂದು ನೀತಿಯನ್ನು ಈ ಸರ್ಕಾರ ಉಳಿಸಿಕೊಂಡಿಲ್ಲ. ಯಾರು ಭ್ರಷ್ಟರಿದ್ದಾರೋ, ಯಾರು ಇವರಿಗೆ ಬೇಕಾದಂಥ ಕಡೆ ಬೇಕಾದಂಥ ಕೆಲಸವನ್ನು ಕಾನೂನು ವಿರುದ್ಧವಾಗಿ, ನಿಯಮಗಳಿಗೆ ವಿರುದ್ಧವಾಗಿ, ಸ್ವಜನ ಪಕ್ಷಪಾತಕ್ಕೆ ಅಥವಾ ದುರುದ್ದೇಶದಿಂದ ಮಾಡುತ್ತಿದ್ದಾರೋ ಅಂಥಾ ಅಧಿಕಾರಿಗಳನ್ನು ಪ್ರೋತ್ಸಾಹ ಮಾಡುವಂಥ ನೀತಿಯನ್ನು ಆ ಸರ್ಕಾರ ಅನುಸರಿಸುತ್ತಿದೆ. ಹೌದು. ಇದನ್ನು ಹೇಳಿದ ತಕ್ಷಣ ಅದನ್ನು ಪ್ರೂವ್ ಮಾಡುತ್ತೀರಾ ಎಂದು ಕೇಳುತ್ತಾರೆ. ನಾನು ಪ್ರೂವ್ ಮಾಡುತ್ತೇನೆ. ಹೇಗೆ ಪ್ರೂವ್ ಮಾಡುವುದು? ಯಾರ ಯಾರ ಮೇಲೆ ಖಚಿತವಾಂಥ ಆರೋಪಗಳ ಇವೆ. ಸಿ.ಬಿ.ಐ. ಯಿಂದ ಆರೋಪ ಬಂದವರಿಗೆ ಪ್ರಮೋಷನ್ ಮಾಡಿ ಬೇರೆ ಕಡೆ ಹಾಕಿದ್ದೀರಿ. ಯಾರು ಯಾರು ಒಳ್ಳೆಯ ಕೆಲಸ ಮಾಡುತ್ತಾರೋ ಅವರಿಗೆ ಜಾಗವನ್ನು ಕೊಡದಂಥ ಪ್ರವೃತ್ತಿ ನಿಮ್ಮಲ್ಲಿ ಇಲ್ಲ, ಉದಾಹರಣೆ ಬೇಕೇ? ಸನ್ಮಾನ್ಯ ಅಧ್ಯಕ್ಷಣಿಯವವರೆ, ಈ ಸರ್ಕಾರ ಯಾರು ಯಾರು ಕೋಟಿ ಕೋಟಿ ರೂಪಾಯಿಗಳನ್ನು ನುಂಗುತ್ತಾರೋ ಅಂಥವರ ಪರವಾಗಿರತಕ್ಕಂಥ ಸರ್ಕಾರ ಯಾರು ಲಕ್ಷ ಲಕ್ಷ ರೂಪಾಯಿಗಳನ್ನು ವಸೂಲು ಮಾಡುತ್ತಾರೋ ಅಂಥವರ ಪರವಾಗಿ ಇರುವಂಥ ಸರ್ಕಾರ. ಯಾರು ಈ ದೇಶದ ಆಡಳಿತವನ್ನು ದಕ್ಷತೆಯಿಂದ, ಜನಸಾಮಾನ್ಯರಿಗೆ ಉಪಯೋಗವಾಗುವಂಥ ಆಡಳಿತ ಮಾಡುತ್ತಾರೋ ಅಂಥಾ ಅಧಿಕಾರಿಗಳೂ ಇದ್ದಾರೆ. ಅವರನ್ನು ಇವರು ಅಸ್ಪೃಷ್ಯರಂತೆ ಕಾಣುತ್ತಾರೆ, ಅವರ ಮೇಲೆ ಇಲ್ಲದಂಥಾ ಸಂಶಯ. ಹಾಗದಾದರೆ ಅದಕ್ಕೆ ಏನಾದರೂ ಉದಾಹರಣೆ ಇರಬೇಕಲ್ಲ, ಎಷ್ಟು ಬೇಕಾದರೂ ಉದಹಾರಣ ಕೊಡಬಲ್ಲೆ, ಸನ್ಮಾನ್ಯ ಅಧ್ಯಕ್ಷಿಣಿಯವರೇ ನನಗೆ ಒಂದು ಗಂಟೆ ಸಮಯ ಕೊಟ್ಟರೆ ಎಷ್ಟು ಐ.ಎ.ಎಸ್. ಆಫೀಸರ್‌ಗಳು ಎಷ್ಟು ಕೆ.ಎ.ಎಸ್, ಆಫೀಸರ್‌ಗಳು ಇವರಿಂದ ದೂರವಾಗಿದ್ದಾರೆ? ಎಂಥೆಂಥಾ ಭ್ರಷ್ಟರು ಇವರ ಹತ್ತಿರ ಬಂದಿದ್ದಾರೆ. ಎಂಬ ಮಾತನ್ನು ಹೇಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ : ನಮ್ಮ ರಾಜ್ಯದ ಆಡಳಿತ ಯಂತ್ರ ಏನಿದೆ ಇದು ನಮ್ಮ ರಾಷ್ಟ್ರದಲ್ಲಿ ಒಂದು ಮಾದರಿಯಾದಂಥ ಆಡಳಿತ ಯಂತ್ರವೆಂದು ಬಹುಶಃ ಭಾರತದ ಭೂಪಠದಲ್ಲಿ ಒಳ್ಳೆಯ ಹೆಸರು ಇದೆ. ಈಗ ತಮ್ಮ ವಾದವನ್ನು ಗಮನಿಸಿ ಇಡೀ ಆಡಳಿತ ಯಂತ್ರವನ್ನೇ ಭ್ರಷ್ಟಾಚಾರ ಎಂದಾಗ ಬಹುಶಃ ನಮ್ಮ ಆಡಳಿತ ಯಂತ್ರದ ಮೇಲೆ ದುಷ್ಪರಿಣಾಮವಾಗುತ್ತದೆ. ಆದ್ದರಿಂದ, ದಯಮಾಡಿ ನಿಮ್ಮ ಖಚಿತವಾದ ಅಭಿಪ್ರಾಯ ಏನಿದೆ? ಶೇಕಡಾ ಎಷ್ಟು ಮಂದಿ ನಮ್ಮ ಆಡಳಿತ

ಯಂತ್ರದಲ್ಲಿ ಭ್ರಷ್ಟರಿದ್ದಾರೆ. ಅಧ್ಯಕ್ಷರಿದ್ದಾರೆ ಮತ್ತು ಸಮರ್ಥರಿದ್ದಾರೆಂದು ಹೇಳುವುದಕ್ಕೆ ಸಾಧ್ಯ ಇದೆ ನಿಮ್ಮ ಅಂಕಿ ಅಂಶದಲ್ಲಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಸರ್ಕಾರದಲ್ಲಿ ಒಳ್ಳೆಯವರು 5 ಪರ್‌ಸೆಂಟ್ ಸಿಗಬಹುದು.

ಶ್ರೀ ಹೆಚ್. ಏಕಾಂತಯ್ಯ : ಸನ್ಮಾನ್ಯ ನರಸಿಂಹಮೂರ್ತಿಯವರೆ, ಆ ಪರ್‌ಸೆಂಟೇಜ್ ನಿಮಗೆ ಗೊತ್ತು. ನನಗೆ ಗೊತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 5 ಪರ್ ಸೆಂಟ್ ಆನೆಸ್ಟ್ ಅಫಿಸರ್ಸ್ ಸಿಗಬಹುದೆಂದು ಹೇಳುತ್ತೀರಲ್ಲಾ? ಬಾಕಿಯವರು ನಮಗೇ ಹುಟ್ಟಿದ್ದಾರೇನು? ಒಬ್ಬ ಅಫೀಸರ್ ಒಂದು ಸಾರಿ ಸರ್ವೀಸ್‌ನಲ್ಲಿ ಸೇರಿದರೆ 30 ವರ್ಷ ಇರುತ್ತಾರೆ. ಅವನು ನಿಮ್ಮ ಸರ್ಕಾರದಲ್ಲೂ ಇರುತ್ತಾನೆ. ನಮ್ಮ ಸರ್ಕಾರದಲ್ಲೂ ಇರುತ್ತಾನೆ, ಮುಂದೆ ಬರತಕ್ಕಂಥ ಸರ್ಕಾರದಲ್ಲೂ ಇರುತ್ತಾನೆ. ಅದನ್ನು ಬಿಟ್ಟು ಎಲ್ಲಾ ನೀವು ನಿಮ್ಮ ಸರ್ಕಾರದಲ್ಲಿ 5 ಪರ್ ಸೆಂಟ್ ಇದ್ದಾರೆ, 1 ಪರ್ ಸೆಂಟ್ ಇದ್ದಾರೆಂದು ಹೇಳಿದರೆ ಎಷ್ಟರ ಮಟ್ಟಿಗೆ ಸಮಂಜಸವೆಂದು ಹೇಳಬೇಕು. ಅದೂ ನಿಮ್ಮಂಥವರು ಹೇಳಿದರೆ ಏನೂ ಗೊತ್ತಾಗುತ್ತಿಲ್ಲ.

ಶ್ರೀ ಹೆಚ್. ಏಕಾಂತಯ್ಯ : ನಾನು ಹೇಳಿದ್ದನ್ನು ನೀವು ಕೇಳುವುದಿಲ್ಲ. ಆದರಿಂದ ಈ ತೊಂದರೆ ಬರುವುದು. ನಾನು ಆ ಮಾತನ್ನು ಹೇಳಲಿಲ್ಲ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ತಾವು ಮಂತ್ರಿಯಾಗಿದ್ದವರು, ಬಹುಶಃ ಹೊಸದಾಗಿ ಬರುವ ಸದಸ್ಯರುಗಳ ಅಭಿಪ್ರಾಯವೇ ಬೇರೆ, ಒಂದು ರಾಜ್ಯದಲ್ಲಿ ತಾವು ಪ್ರಮುಖ ಇಲಾಖೆಯಾಗಿದ್ದವರು. ಬಹುಶಃ ಸಾಕಷ್ಟು ಅನುಭವ ಇರತಕ್ಕವರು, ನಾವು ದೆಹಲಿಗೆ ಮತ್ತಿತರ ಕಡೆ ಹೋದಂಥ ಕಾಲದಲ್ಲಿ ನಮ್ಮ ರಾಜ್ಯದ ಆಡಳಿತ ಯಂತ್ರ ಏನಿದೆ ಅದು ಇವತ್ತಿಗೂ ಕೂಡ ನಮ್ಮ ರಾಜ್ಯದಲ್ಲಿ ಒಳ್ಳೆಯ ಆಡಳಿತ ಯಂತ್ರ ಇದೆ ಎಂದು ಅಲ್ಲಿರುವ ಅಧಿಕಾರಿಗಳು ಹೇಳುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷಣೆಯವರೆ, ತಾವು ತುಂಬಾ ಸೂಕ್ತವಾದಂಥ ವಿಚಾರ ಹೇಳಿದ್ದೀರಿ. ಸನ್ಮಾನ್ಯ ಖರ್ಗೆಯವರು ಹೇಳಿದರು. ಆ ಕಡೆ ಈ ಕಡೆ ಕುಳಿತಿರತಕ್ಕಂಥವರು ನಾವು, ಎಲ್ಲಿಯವರೆಗೆ ಪ್ರಾಮಾಣಿಕವಾಗಿ ಕೆಲಸ ಮಾಡುವುದಿಲ್ಲವೋ ಜನ ಪ್ರತಿನಿಧಿಗಳಾದ ನಾವು ಕೆಲಸ ಮಾಡತಕ್ಕಂಥ ಅಪೇಕ್ಷೆ ಮಾಡುವುದಿಲ್ಲವೋ, ಜನ ಹಿತ ಮರೆತು ನಮ್ಮ ಸ್ವಾರ್ಥಕ್ಕೆ ನಾವು ಮುಳುಗಿದಾಗ, ಅಧಿಕಾರಿಗಳು ಏನು 1 ಪರ್‌ಸೆಂಟ್ ? 90 ಪರ್‌ಸೆಂಟ್ ತಿನ್ನುವವರು ಇರಬೇಕಾದರೆ, ಆಡಳಿತ ನಡೆಸುವವರು ಆ ಕಡೆ ಈ ಕಡೆ ಕುಳಿತವರು ಸರಿಯಾಗಿ ಇರಬೇಕು. ಆದ್ದರಿಂದ ನಾವೂ ನೀವು ಸರಿಯಾಗಿ ಇರುವುದಕ್ಕೆ ಪ್ರಯತ್ನ ಮಾಡೋಣ. ಸುಮ್ಮನೆ ಯಾರೋ ಬಡಪಾಯಿಗಳ ಬಗ್ಗೆ ಏಕೆ ಹೇಳುವುದು? ನೀವು ಹೇಳಿದ ಕೆಲಸವನ್ನು ಅವನು ಮಾಡದೇ ಇದ್ದರೆ ಅವನನ್ನು ಉಳಿಸುತ್ತೀರಾ? ನೀವು ಹೇಳಿದ್ದನ್ನು 24 ಗಂಟೆಯೊಳಗೆ ಆದೇಶ ತಂದು ಇಡದೇ ಇದ್ದರೆ 24 ಗಂಟೆಯೊಳಗೆ ಗುಲ್ಬರ್ಗಾ, ರಾಯಚೂರಿಗೆ ಅವನು ಹೋಗಬೇಕಾಗುತ್ತದೆ.

ಶ್ರೀಮತಿ ಮೋಟಮ್ಮ : ಒಂದು ಗಂಟೆಯೊಳಗೆ ಮುಗಿಸಬೇಕೆಂದು ಇದ್ದಿರಿ, ಏಕಾಂತಯ್ಯ ನವನೊಬ್ಬರೇ ಒಂದು ಗಂಟೆ ಮಾತನಾಡುತ್ತಿದ್ದಾರೆ. ಈ ಕಡೆಯೂ ಮಾತನಾಡಲಿಕ್ಕೆ ಬಹಳ ಜನ ಕಾದಿದ್ದಾರೆ.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ ಕೆ.ಎಸ್.ಆರ್.ಟಿ.ಸಿ. ಇದೆ, ಬೆಂಗಳೂರು ನಗರದಲ್ಲಿ ದೊಡ್ಡ ಬಿ.ಟಿ.ಎಸ್. ಇದೆ. ಬೆಂಗಳೂರು ನಗರದ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತಿಲ್ಲ.

ಶ್ರೀ ಹೆಚ್. ಏಕಾಂತಯ್ಯ : ಬೇರೆ ಕಡೆ ನಿಮಗೆ ಅವಕಾಶ ಇರುವುದರಿಂದ ನೀವು ಅಲ್ಲಿ ಉಪಯೋಗಿಸಿಕೊಳ್ಳಿ ಸ್ವಾಮಿ.

ಉಪಾಧ್ಯಕ್ಷರು : ಇನ್ನು ತಾವು ಮುಗಿಸಬೇಕು.

ಶ್ರೀ ಹೆಚ್. ಏಕಾಂತಯ್ಯ : ಸನ್ಮಾನ್ಯ ಅಧ್ಯಕ್ಷಿಣಿಯವರೆ, ನಾನು ಮತ್ತೊಮ್ಮೆ ಪುನರಾವರ್ತನೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಈ ರಾಜ್ಯದ ಆಡಳಿತದಲ್ಲಿ ಅಧಿಕಾರಿಗಳು ಕಾರ್ಯನಿರ್ವಹಣೆ ಏನು ಮಾಡುತ್ತಿದ್ದಾರೆ ಆ ಎಲ್ಲ ಅಧಿಕಾರಿಗಳು ಭ್ರಷ್ಟರು ಎಂಬ ಮಾತನ್ನು ಹೇಳಲಿಲ್ಲ, ಹೇಳುವುದೂ ಇಲ್ಲ. ಈ ಸಮಾಜದಲ್ಲಿ ಅದರಲ್ಲೂ ಸಹ ಎಲ್ಲಾ ವರ್ಗಗಳಲ್ಲಿ ಭ್ರಷ್ಟರೂ ಇದ್ದಾರೆ, ಒಳ್ಳೆಯವರೂ ಇದ್ದಾರೆ, ಅದೇ ಪ್ರಮಾಣದಲ್ಲಿ ಅವರಲ್ಲೂ ಇರಬಹುದು. ರಾಜಕಾರಣಿಗಳಲ್ಲಿ ಭ್ರಷ್ಟರು ಇಲ್ಲವೇ? ಅಧಿಕಾರಿಗಳಲ್ಲಿಯೂ ಇರಬಹುದು ಇಲ್ಲ ಎಂಬ ಮಾತನ್ನು ಹೇಳುತ್ತಾ ಇಲ್ಲ. ಆದರೆ ನಿಮ್ಮ ಸರ್ಕಾರದ ನೀತಿ ಏನು ಅಂದರೆ ಯಾರ್ಯಾರು ಭ್ರಷ್ಟರು ಇದ್ದಾರೆ, ಅವರನ್ನು ಶಿಕ್ಷೆ ಮಾಡುವಂತಹ ಪ್ರವೃತ್ತಿಯನ್ನು ನಿಮ್ಮ ಸರ್ಕಾರ ತೋರುತ್ತಾ ಇಲ್ಲ. Shall I prove it? ಈ ಮಾತನ್ನು ನಾನು ಹೇಳುತ್ತೇನೆ. ನಾನು ಇದನ್ನು ರುಜುವಾತು ಮಾಡುತ್ತೇನೆ. ಮಾನ್ಯ ನರಸಿಂಹಮೂರ್ತಿಯವರೇ, ಈ ಸವಾಲನ್ನು ತೆಗೆದುಕೊಳ್ಳುತ್ತೀರಾ? ಯಾರ್ಯಾರು ಭ್ರಷ್ಟರು ಇದ್ದಾರೆಂದು ಹೇಳುತ್ತಾರೆ ಅವರ ಬಗ್ಗೆ ನೀವು ವಿಚಾರಣೆ ಮಾಡುವಂತಹ ಮನಸ್ಸು ಮಾಡುವುದಿಲ್ಲ. ನನ್ನ ಮೇಲೆ ಒಂದು ಆರೋಪ ಇದೆ. ನನ್ನ ಮೇಲೆ ಆರೋಪ ಬಂದರೆ ಮೊಟ್ಟಮೊದಲು ಮಂತ್ರಿ ಆದವರು, ಸರ್ಕಾರ ಮಾಡಬೇಕಾದಂತಹ ಕೆಲಸ ಏನು ಅಂದರೆ ಈ ಆರೋಪದಲ್ಲಿ ಸತ್ಯಾಸತ್ಯತೆ ಇದೆಯೇ ಅಥವಾ ಇಲ್ಲವೇ ಎನ್ನುವುದನ್ನು ವಿಚಾರಣೆ ಮಾಡುವಂತಹ ಒಂದು ಪ್ರವೃತ್ತಿ ನಿಮ್ಮ ಸರ್ಕಾರಕ್ಕೆ ಇದೆಯೇ? ಒಂದು ಉದಾಹರಣೆ ಹೇಳುತ್ತೇನೆ. ಮಾನ್ಯ ನರಸಿಂಹ ಮೂರ್ತಿಯವರು ಕೇಳಿದ್ದಕ್ಕೋಸ್ಕರ ಹೇಳುತ್ತೇನೆ. ಡೈರೆಕ್ಟರ್ ಆಫ್ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಅಧಿಕಾರಿ ಇದ್ದಾರೆ. ಅವರ ಮೇಲೆ ಅವರ ಇಲಾಖೆಯ ನೌಕರರ ಸಂಘದವರು ಒಂದು ಆರೋಪ ಮಾಡಿದರು, ಅವರು ವರ್ಗಾವಣೆಯಲ್ಲಿ ಭ್ರಷ್ಟಾಚಾರ ಮಾಡುತ್ತಾರೆ ಎಂಬ ವಿಚಾರವನ್ನು ತಮ್ಮ ಗಮನಕ್ಕೆ ತಂದರು. ತಂದ ಮೇಲೆ ತಾವು ಏನು ಮಾಡಿದ್ದೀರಿ ಸ್ವಾಮಿ? ಅವರ ಬಗ್ಗೆ ವಿಚಾರಣೆ ಮಾಡಿದಿರಾ? ಒಂದಲ್ಲ 100 ಪ್ರಕರಣಗಳನ್ನು ನಾನು ಹೇಳಬಲ್ಲೆ. ಸಿ.ಬಿ.ಐ.ನವರು ಒಬ್ಬ ಅಧಿಕಾರಿ ಮೇಲೆ ಪ್ರಾಸಿಕ್ಯೂಟ್ ಮಾಡಬೇಕು ಎಂದು ರೆಕ್ಮಂಡ್ ಮಾಡಿದರು. ಸರ್ಕಾರ ಪ್ರಾಸಿಕ್ಯೂಟ್ ಮಾಡಬೇಕು ಎಂದು ನಿರ್ಧಾರ ಮಾಡಿತು ನಿರ್ಧಾರ ಮಾಡಿದ ಮೇಲೆ ಆ ನಿರ್ಧಾರವನ್ನು ಬದಲಾಯಿಸಿ ಅವರಿಗೆ ನೀವು ಬಡ್ತಿಯನ್ನು ಕೊಟ್ಟಿರಿ. ಪ್ರಾಸಿಕ್ಯೂಟ್ ಮಾಡಲಿಲ್ಲ, ಇದು ನಿಜವೇ? ಹೇಳಿ. ನಿಮ್ಮ ಪುಸ್ತಕದಲ್ಲಿ ನೋಡಿ ಹೇಳುತ್ತೀರಾ?

ಶ್ರೀ ಟಿ.ಎನ್. ನರಸಿಂಹಮೂರ್ತಿ : ಆ ಅಧಿಕಾರಿ ಹೆಸರು Kindly quote an instance.

Sri H. EKANTHAIAH : Why do you want it?

ಅಂತಹ ಪ್ರಕರಣಗಳು ಇಲ್ಲ ಎಂಬ ಮಾತನ್ನು ಹೇಳಿ. ನಿಮ್ಮ ಹತ್ತಿರ ಕಾಗದ ಇಲ್ಲವೋ?

Take it as a challenge. Are you prepared to accept that challenge?

ನಾವು ಹೊಣೆಗಾರಿಕೆಯಿಂದ ಇಲ್ಲಿಗೆ ಬಂದಿದ್ದೇವೆ. ನಾವು ಏನನ್ನಾದರೂ ಹೇಳಿದರೆ..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಹೇಳಿ, ಅದಕ್ಕೆ ಸೂಕ್ತವಾದ ಉತ್ತರ ಅವರು ಕೊಟ್ಟೇ ಕೊಡುತ್ತಾರೆ.

ಶ್ರೀ ಹೆಚ್. ಏಕಾಂತಯ್ಯ : ಹೆಸರು ಹೇಳಿ ಅಂದರು, ಅದಕ್ಕೆ ಹೇಳಿದೆ. ನಾವು ಹೆಸರು ಹೇಳುವುದಕ್ಕೆ ಹಿಂದುಮುಂದು ನೋಡುವುದಿಲ್ಲ, ನೀವು ಹೇಳುತ್ತಿದ್ದೀರಲ್ಲ, ಅದರ ಅವಶ್ಯಕತೆ ಇಲ್ಲ. ನನಗೆ ಗೊತ್ತಿದೆ ನಿಮಗೆ ಏತಕ್ಕೆ ಅವಶ್ಯಕತೆ ಇಲ್ಲ ಎಂದರೆ ನಿಮ್ಮಲ್ಲಿ ದಾಖಲೆಗಳು ಇಲ್ಲವೇ ಹೇಳಿ. ನಮ್ಮಲ್ಲಿ ದಾಖಲೆಗಳು ಇಲ್ಲ ಎಂಬ ಮಾತನ್ನು ಹೇಳಿದರೆ ನಾನು ಕೊಡುತ್ತೇನೆ. come out with a statement. ಈ ರೀತಿ ಯಾವುದೇ ಪ್ರಕರಣ ಆಗಿಲ್ಲ, ಸಿಬಿಐನವರು ಎನ್‌ಕ್ವೈರಿ ಮಾಡಬೇಕು, ಪ್ರಾಸಿಕ್ಯೂಟ್ ಮಾಡಬೇಕು ಎಂದು ಇದ್ದಾಗಲೂ ಸಹ ನಾವು ಅವರಿಗೆ ಬಡ್ತಿ ಕೊಟ್ಟಿಲ್ಲ ಎಂದು, ಈ ಮಾತನ್ನು ಹೇಳಿ. I will accept that challenge. ಯಾರ್‍ಯಾರು ಒಳ್ಳೆಯವರು ಇದ್ದಾರೆ, ಯಾರ್‍ಯಾರು ಪ್ರಾಮಾಣಿಕರು ಇದ್ದಾರೆ, ಯಾರ್‍ಯಾರು ಕಾನೂನು ಬದ್ಧವಾದ ರೀತಿಯಲ್ಲಿ ಕೆಲಸ ಮಾಡಬೇಕು ಎಂಬ ಮನಸ್ಸು ಉಳ್ಳವರಿದ್ದಾರೆ ಅವರೆಲ್ಲರಿಗೂ ಸಹ ಈ ಸರ್ಕಾರವು ಪ್ರೋತ್ಸಾಹ ಮಾಡುತ್ತಿಲ್ಲ. ಅವನು ಯಾವ ಜಾತಿಯೇ ಇರಬಹುದು ಈ ಸರ್ಕಾರ ಪ್ರೋತ್ಸಾಹ ಮಾಡುವುದು ನಾನು ಆಗಲೇ ಹೇಳಿದೆನಲ್ಲ, ಕೋಟಿ ಕೋಟಿಗಟ್ಟಲೆ ನುಂಗುವಂತಹವರನ್ನು..

ಉಪಾಧ್ಯಕ್ಷರು : ಈಗ ತಾವು ಮುಗಿಸಿ..

ಶ್ರೀ ಹೆಚ್. ಏಕಾಂತಯ್ಯ : ವರ್ಷಾನುಗಟ್ಟಲೆ ವಸೂಲು ಮಾಡುವಂತಹ ದೇವರುಗಳನ್ನು ಇವರು ಪ್ರೋತ್ಸಾಹ ಮಾಡುತ್ತಿದ್ದಾರೆಯೇ ಹೊರತು ಬೇರೆಯವರಿಗೆ ಪ್ರೋತ್ಸಾಹ ಮಾಡುತ್ತಾ ಇಲ್ಲ. ನಾನು ಈ ವಿಚಾರವಾಗಿ ಹೆಚ್ಚು ಹೇಳುವುದ್ಕೆ ಹೋಗುವುದಿಲ್ಲ, ಏಕೆಂದರೆ ನರಸಿಂಹಮೂರ್ತಿಯವರು ಹೇಳಿದರು, ದೆಹಲಿಯಲ್ಲಿ ಇವರನ್ನು ಹೊಗಳುತ್ತಾರೆ ಎಂದು. ಪುಣ್ಯ ಅವರು ಎಷ್ಟು ಕೆಟ್ಟವರಿರಬೇಕು ನಿಮ್ಮನ್ನು ಹೊಗಳಬೇಕಾದರೆ.. I am not at all feeling happy...

Sri T.N. NARASIMHAMURTHY : We are not happy about that... ನಮ್ಮ ರಾಜ್ಯದ ಆಡಳಿತ ದೃಷ್ಟಿಯಿಂದ...

ಶ್ರೀ ಹೆಚ್. ಏಕಾಂತಯ್ಯ : ಇಂತಹ ಭ್ರಷ್ಟ ಸರ್ಕಾರವನ್ನು ಅವರು ಪ್ರಾಮಾಣಿಕವಾದ ಸರ್ಕಾರ ಎಂದು ಹೇಳುವುದಾದರೆ, ನಮ್ಮ ರಾಜ್ಯದ ಆಡಳಿತ ಯಂತ್ರ ಚೆನ್ನಾಗಿದೆ ಎಂದು ಹೇಳಬೇಕಾದರೆ ಮುಚ್ಚುಮರೆ ಇಲ್ಲದಂತಹ ಭ್ರಷ್ಟಾಚಾರವನ್ನು ಪ್ರೋತ್ಸಾಹ ಮಾಡುವಂತಹ ಸರ್ಕಾರ ಏನಾದರೂ ಕರ್ನಾಟಕದಲ್ಲಿ ಬಂದಿದೆ ಎಂದರೆ. It is only your Government. No Government was there earlier. ಮುಂದೆ ಬರುತ್ತದೋ ಇಲ್ಲವೋ? ಇಲ್ಲಿಯವರೆಗೆ ಇಂತಹ ಭ್ರಷ್ಟ ಸರ್ಕಾರ ಬಂದಿರಲಿಲ್ಲ. ಮುಂದೆ ಬರುತ್ತದೋ ಇಲ್ಲವೋ ಗೊತ್ತಿಲ್ಲ. ಇದು ವ್ಯಕ್ತಿಗಳ ಸರ್ಕಾರ ಆಗಿದೆ. ಒಂದೇ ಒಂದು ಉದಾಹರಣೆ ಕೊಡುತ್ತೇನೆ.

Sri T.N. NARASIMHAMURTHY : Which is the right parameter to judge who is who and what is what? It is only the coming elections.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗಲೇ ಚುನಾವಣೆಗೆ ಹೋಗೋಣ..

ಶ್ರೀ ಹೆಚ್. ಏಕಾಂತಯ್ಯ : ಆಯಿತು, ಸರ್ಕಾರ, ನೀವೇ ಬರಬಹುದು. ಸರ್ಕಾರದಲ್ಲಿ ತಾವೇ ಇದ್ದೀರಿ. ಜನಮತ ಕೊಟ್ಟಿದ್ದಾರೆ. ಮತ ಕೊಟ್ಟಿರುವುದರಿಂದ ನಾವು ಭ್ರಷ್ಟಾಚಾರ ಮಾಡುತ್ತೇವೆ ಎಂದು ತಮ್ಮ ನೀತಿ ಆಗಿದ್ದರೆ ನನ್ನದು ಅದಕ್ಕೆ ವಿರೋಧ ಇಲ್ಲ. ನಾನು ಒಂದೇ ಒಂದು ವಿಚಾರವನ್ನು ಹೇಳುತ್ತೇನೆ. ಹೇಗೆ ಈ ಸರ್ಕಾರ ನಡೆಯುತ್ತಿದೆ ಎಂದು.

ಉಪಾಧ್ಯಕ್ಷರು : ಈಗ ಇನ್ನೂ 7-8 ಜನ ಮಾತನಾಡುವವರು ಇದ್ದಾರೆ ತಾವು ಬೇಗ ಮುಗಿಸಿ.

ಶ್ರೀ ಹೆಚ್. ಏಕಾಂತಯ್ಯ : ಮಧ್ಯದಲ್ಲಿ ಅವರುಗಳು ಮಾತನಾಡಿದ್ದರೆ, ನಾನೇನು ಮಾಡಲಿ, ಇನ್ನು ಹತ್ತು ನಿಮಿಷದಲ್ಲಿ ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ತಾವು ಮುಗಿಸಬೇಕು.

ಶ್ರೀಮತಿ ಮೋಟಮ್ಮ : ನೀವು ಒಂದು ಗಂಟೆ ಇಂದ ಮಾತನಾಡುತ್ತಿದ್ದೀರಿ.

ಶ್ರೀ ಕರಿಯಣ್ಣ : ತಾವು ಅರ್ಧ ಗಂಟೆ ಕೊಡಿ ಎಂದು ಕೇಳಿದ್ದೀರಿ.

ಶ್ರೀ ಹೆಚ್. ಏಕಾಂತಯ್ಯ : ತಾವು ಅರ್ಧ ಗಂಟೆಯಲ್ಲಿ ನೀವೇ 25 ನಿಮಿಷ ತೆಗೆದುಕೊಂಡಿದ್ದೀರಿ. ನೀವು ಮಾತನಾಡುತ್ತೀರಿ, ನಿಮಗೆ ಉತ್ತರ ಕೊಡಬೇಕು.

ಉಪಾಧ್ಯಕ್ಷರು : ಅವರಿಗೆ ಉತ್ತರ ಕೊಡಬೇಡಿ ನಿಮ್ಮ ವಿಚಾರವನ್ನು ಸಭೆಯ ಮುಂದೆ ಇಟ್ಟುಬಿಡಿ.

ಶ್ರೀ ಹೆಚ್. ಏಕಾಂತಯ್ಯ : ನಮ್ಮ ಹಿರಿಯ ಸಚಿವರು ಮುಂದಿನ ಸಾಲಿನಲ್ಲಿ ಇದ್ದಾಗ ಹೇಳುತ್ತಿದ್ದರು. ಅವರು ಈ ಕಡೆ ಇದ್ದಾಗ, ನಾವು ಈ ಸಹಕಾರ ಇಲಾಖೆಯಲ್ಲಿ ಅಂದರೆ ನಮ್ಮ ಕಾಲದಲ್ಲಿ ಅತ್ಯಂತ ಕೆಟ್ಟದಾಗಿತ್ತು ಈಗ ನಾವೆಲ್ಲ ಸರಿ ಮಾಡಿದ್ದೇವೆ ಎಂಬ ಆರೋಪ ಮಾಡುತ್ತಾ ಇದ್ದರು.

ಶ್ರೀ ಎಂ. ವೀರಪ್ಪ ಮೊಯಿಲಿ : ನಿಮ್ಮ ಮೇಲೆ ಅಲ್ಲ.

ಶ್ರೀ ಹೆಚ್. ಏಕಾಂತಯ್ಯ : ನಮ್ಮ ಮೇಲೆ ಅಲ್ಲ ಎಂದರೆ ಯಾರ ಮೇಲೆ?

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ನಾವು ತಮಗೆ ಶಿಫಾರಸ್ಸು ಮಾಡಿದ್ದೇವೆ. ತಾವು ಇದ್ದಾಗ ತಮ್ಮ ಕಾಲದಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡಿದ್ದೀರಿ. ಆದರೆ ಕೆಲಸ ಮಾಡುವುದಕ್ಕೆ ಜನ ಬಿಡಲಿಲ್ಲ.

ಶ್ರೀ ಹೆಚ್. ಏಕಾಂತಯ್ಯ : ಆಗ ನಾನು ಏನು ಮಾಡಿದ್ದೇನೆ ಎಂಬುದು ತಮಗೆ ಗೊತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಏಕಾಂತಯ್ಯನವರನ್ನು ಆ ಸಾಲಿನಲ್ಲಿ ಸೇರಿಸಬೇಡಿ.

Sri H. EKANTHAIAH : He knows better than me.

ಯಾಕೆಂದರೆ ಕಡತಗಳೆಲ್ಲವೂ ಅವರ ಹತ್ತಿರವೇ ಇವೆ ಕಡತಗಳು ಸುಳ್ಳು. ಹೇಳುವುದಕ್ಕೆ ಸಾಧ್ಯವಿಲ್ಲ. ಒಂದು ಉದಾಹರಣೆಯನ್ನು ಮಾನ್ಯ ಹಿರಿಯ ಸಚಿವರ ಗಮನಕ್ಕೆ ತರುತ್ತೇನೆ, ಈ ಕಡೆಯಲ್ಲಿ ನೀವು ಇದ್ದಾಗ ಗೃಹನಿರ್ಮಾಣ ಸಹಕಾರ ಸಂಘಗಳ ಬಗ್ಗೆ ತುಂಬಾ ಮಾತನಾಡುತ್ತಾ ಇದ್ದೀರಿ. ಉಪದೇಶವನ್ನು ಕೊಟ್ಟಿದ್ದೀರಿ, ಅಥವಾ ನಮ್ಮ ಸರಕಾರವನ್ನು ನೀವು ಟೀಕೆ ಮಾಡಿದ್ದೀರಿ. ನಿಮಗೆ ಎಲ್ಲಾ ಹಕ್ಕು ಉಂಟು ಇಲ್ಲ ಎಂದು ಹೇಳುವ ಹಾಗಿಲ್ಲ. ಆದರೆ ಇವೊತ್ತು ತಾವುಗಳು ಏನು

ಮಾಡುತ್ತಿದ್ದೀರಿ ಸ್ವಾಮಿ? ಒಂದು ನಾಚಿಕೆಗೇಡಿನ ಪ್ರಕರಣವನ್ನು ಈ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಂಘಗಳ ಪ್ರವೇಶ, ಅಡ್ಮಿಶನ್ ಏನಿದೆ, ಅದನ್ನು ಯಾರು ಮಾಡಬೇಕು? ಇದರ ಪ್ರಕಾರ ಸಹಕಾರ ಸಂಘ ಅಲ್ಲ, ಯಾರು ಬಿಲ್ಡರ್ಸ್ ಇದ್ದಾರೆ, ಈ ಗೃಹನಿರ್ಮಾಣ ಸಹಕಾರ ಸಂಘಗಳಿಗೆ ಯಾರು 5-10 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ, ಯಾರು ಈ ನಿವೇಶನಗಳಲ್ಲಿ ಕಟ್ಟಡಗಳನ್ನು ಕಟ್ಟುತ್ತಾರೆ, ಆ ಕಟ್ಟಡಗಳನ್ನು ಕಟ್ಟುವ ಬಿಲ್ಡರ್ಸ್ ಯಾರಿದ್ದಾರೆ, ಅವರ ಒಪ್ಪಿಗೆಯ ಮೇಲೆ ಸದಸ್ಯರನ್ನು ಸೇರಿಸಿಕೊಳ್ಳಬೇಕಂತೆ. ಅಂಥ ಒಂದು ಕರಾರು ಇದೆ. ಆ ಒಂದು ಕರಾರನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

Let it be on record.

" Allotment and enrolment of members for the purpose of allotment of houses flats, units in the proposed building and right of development, in the scheduled property. shall be made by the first party with consent of the second party."

First party is the society and the Second party is the Builder.

ಇದಕ್ಕಿಂತ ನಾಚಿಕೆಗೇಡಿತನ ಪ್ರಕರಣವೇನಾದರೂ ಬೇಕಾಗುತ್ತದೆಯೇ? ಸಹಕಾರ ಕ್ಷೇತ್ರದಲ್ಲಿ ನಮಗೆ ಅಪಾರವಾದ ನಂಬಿಕೆ ಇದೆ ಎಂದು ಇವರು ಹೇಳುತ್ತಾರೆ. ಬಡವರಿಗೆ ನಾವು ನಿವೇಶನಗಳನ್ನು ಬಹಳ ಕಡಿಮೆ ದರದಲ್ಲಿ ಕೊಟ್ಟಿದ್ದೇವೆ ಎಂದು ಕೂಡ ಹೇಳುತ್ತಾರೆ. ಇದು ಅಂಥ ಯೋಜನೆ ಅಲ್ಲ, ಬಡವರನ್ನು ಶೋಷಣೆ ಮಾಡಿ. ಲೂಟಿ ಮಾಡಿ, ದೊಡ್ಡ ದೊಡ್ಡ ಶ್ರೀಮಂತರನ್ನು ಮತ್ತಷ್ಟು ಶ್ರೀಮಂತರನ್ನಾಗಿ ಮಾಡುವುದು ಸಂಬಂಧಪಟ್ಟಂಥ ಅಧಿಕಾರಿಗಳನ್ನು ರಾಜಕಾರಣಿಗಳನ್ನು ಮತ್ತಷ್ಟು ಭ್ರಷ್ಟರನ್ನಾಗಿ ಮಾಡುವಂಥ ಅವಕಾಶ ಇದರಿಂದ ಆಗುತ್ತದೆ. ಇದು 8 ಸೊಸೈಟಿಗಳಿಗೆ ಸಂಬಂದಪಟ್ಟಂಥ ಕರಾರು. ಇದು ಸರಕಾರದ ಗಮನಕ್ಕೆ ಬಂದಿದೆಯೇ ಇಲ್ಲವೇ? ಬಂದಿದ್ದರೆ ಸರಕಾರ ಇದರ ಬಗ್ಗೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದೆ? ಇವ್ರೊತ್ತಿನವರೆಗೂ ಸಹ ಅಲ್ಲಿ ಆಡಳಿತ ಅಧೀಕಾರಿಗಳನ್ನು ನೇಮಿಸಿದರೂ ಸಹ ಅವರಿಂದ ಪ್ರಾಭಾರವನ್ನು ತೆಗೆದುಕೊಂಳ್ಳಲಿಕ್ಕೆ ಈ ಸರಕಾರದ ಕೈಯಲ್ಲಿ ಆಗಲಿಲ್ಲ. ಸರಕಾರದಲ್ಲಿ ಶಕ್ತಿ ಇಲ್ಲ ಎಂದು ನಾನು ಹೇಳುವುದಿಲ್ಲ, ಸರಕಾರದಲ್ಲಿ ಶಕ್ತಿ ಇದೆ. ಸರಕಾರದಲ್ಲಿ ಮನಸ್ಸಿಲ್ಲ ಯಾಕೆ ಮನಸಿಲ್ಲ? ಅದಕ್ಕೆ ಕಾರಣವನ್ನು ಅವರೇ ಹೇಳಬೇಕು. ಒಂದು ಮಾತನ್ನು ಮಾನ್ಯ ವೀರಪ್ಪಮ್ಮೆಲಿಯ ವರು ಹೇಳಿದ್ದು ನನಗೆ ಜ್ಞಾಪಕ ಇದೆ. ಅದು ರೆಕಾರ್ಡ್‌ನಲ್ಲಿ ಇದೆ. ತೆಗೆದುನೋಡಬಹುದು. ಈ ಗೃಹನಿರ್ಮಾಣ ಸಹಕಾರ ಸಂಘಗಳು ಕೋಟಿಗಟ್ಟಲೆ ಹಣವನ್ನು ತೆಗೆದುಕೊಳ್ಳುತ್ತಾರೆ ಅಡ್ವಾನ್ಸ್ ಆಗಿ ಪಡೆಯುತ್ತಾರೆ ಅದನ್ನು ವಿಧಾನಸೌಧಕ್ಕೆ ತರುತ್ತಾರೆ ಎಲ್ಲಿ ಕೊಡುತ್ತಾರೋ ಗೊತ್ತಿಲ್ಲ ಎಂಬ ಮಾತನ್ನು ಚರ್ಚೆಯ ಸಂದರ್ಭದಲ್ಲಿ ಹೇಳಿದ್ದೀರಿ ಅದು ರೆಕಾರ್ಡ್‌ನಲ್ಲಿದೆ. ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ ಈ ಕೋಟಿ ಕೋಟಿಗಟ್ಟಲೆ ಹಣವನ್ನು ಸಂಗ್ರಹ ಮಾಡಿದ ಗೃಹನಿರ್ಮಾಣ ಸಹಕಾರಿ ಸಂಘಗಳು ಏನಿದ್ದಾವೆ,

ಶ್ರೀ ಎಂ ವೀರಪ್ಪ ಮೊಯಿಲಿ: ಅಧ್ಯಕ್ಷರೇ ಅವರ ಕೋಟಿಗಟ್ಟಲೆ ಹಣವನ್ನು ಅವರ ಅಕೌಂಟ್‌ನಲ್ಲಿಯೇ ತೋರಿಸಿದ್ದಾರೆ. ಆದರೆ ಅದು ಎಲ್ಲಿ ಹೋಗುತ್ತದೆ ಎಂಬುದು ಆ ರೇಕಾರ್ಡ್‌ನಲ್ಲಿ ಇಲ್ಲ. ಅದನ್ನೆ ನಾನು ಹೇಳಿದ್ದು.

Sri H. EKANTHAIAH : I am repeating the same allegation against your Government. What is your reply?

ತಾವೇ ಹೇಳಿದಂಥ ಆರೋಪವನ್ನೆ ನಾನು ಪುನಃ ನಿಮ್ಮ ಮೇಲೆ ಆರೋಪ ಮಾಡುತ್ತಾ ಇದ್ದೇನೆ. ಇದಕ್ಕೆ ತಮ್ಮ ಉತ್ತರವೇನು? ತಮ್ಮ ಉತ್ತರ ಹೀಗೆ ಇರಬಹುದು ನೀವು ಮಾಡಿದ್ದೀರಿ ಅದಕ್ಕೋಸ್ಕರ ನಾವು ಮಾಡುತ್ತೇವೆ ಎಂಬ ಮಾತನ್ನು ಹೇಳುವುದಾದರೆ ನನ್ನ ವಾದ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ: ನೀವು ಮಾಡಿದ ತಪ್ಪನ್ನು ನಾವು ಮಾಡಿದ್ದರೆ, ನಾವು ಉಳಿಯುವುದಿಲ್ಲ.

ಶ್ರೀ ಹೆಚ್. ಏಕಾಂತಯ್ಯ: ಆದರೆ ತಾವುಗಳು ಅದೇ ದಾಟಿಯಲ್ಲಿ ಅದೇ ರೀತಿಯಲ್ಲಿ ಹೋಗುತ್ತಾ ಇದ್ದೀರಿ. ಇಲ್ಲ ಎಂದು ಹೇಳುವುದಕ್ಕೆ ಏನಾದರೂ ಕಾರಣ ಬೇಕಲ್ಲ? ನೀವು ಕೊಟ್ಟಿರುವ ಬಟ್ಟೆ ಬಿಳಿ ಇದ್ದರೆ ಬಿಳಿ ಎಂದೇ ಹೇಳಬಾಕಾಗುತ್ತದೆ ಕಪ್ಪು ಇದೆ ಎಂದು ಹೇಳುವುದಕ್ಕೆ ಸಾದ್ಯವೇ ಇವೊತ್ತಿನ ದಿವಸ ಈ ಗೃಹನಿರ್ಮಾಣ ಸಹಕಾರ ಸಂಘಗಳವರು 5 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿನ ಹಣವನ್ನು ಈ ಬಿಲ್ಡರ್ಸ್‌ಗೆ ಕೊಟ್ಟಿದ್ದಾರೆ. ಇದರ ಬಗ್ಗೆ ತಮ್ಮ ಸರಕಾರ ಕ್ರಮತೆಗೆದುಕೊಂಡಿತ್ತು ಏನು ಮಾಡಿದ್ದೀರಿ ಸ್ವಾಮಿ? ಅದು ಜಾರಿಗೆ ಬಂತೇ? ಸಾಧ್ಯ ಇಲ್ಲ.
ಉಪಾಧ್ಯಕ್ಷಿಣಿಯವರು: ಏಕಾಂತಯ್ಯನವರೇ ತಾವುಗಳು ಅರ್ಧಗಂಟೆ ಎಂದು ಹೇಳಿ ಮುಕ್ಕಾಲು ಗಂಟೆ ಸಮಯ ತೆಗೆದುಕೊಂಡಿದ್ದೀರಿ ಇನ್ನೂ ಬಹಳ ಜನರು ಮಾತನಾಡುವವರು ಇದ್ದಾರೆ ದಯಮಾಡಿ ಬೇಗನೇ ಮುಗಿಸಬೇಕು.

10.15 ಪಿ.ಎಂ

ಹೆಚ್. ಏಕಾಂತಯ್ಯ: ಅಧ್ಯಕ್ಷಿಣಿಯವರೇ ಕೇವಲ ಒಂದು ಸಹಕಾರ ಸಂಘಕ್ಕೆ ಇದು ಸೀಮಿತವಾಗಿಲ್ಲ ನೂರಾರು ಕೋಟಿ ರೂಪಾಯಿಗಳು ಈ ರೀತಿಯಾಗುತ್ತಿದೆ. ಇದರ ಬಗ್ಗೆ ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಅದಕ್ಕಿಂತ ಹೆಚ್ಚಿಗೆ ಒಂದು ವಿಚಾರ ತಮ್ಮ ಗಮನಕ್ಕೆ ತರುತ್ತೇನೆ. ಯಾವನೇ ಒಬ್ಬ ಬಿಲ್ಡರ್ ಅಥವಾ ಕಂಟ್ರಾಕ್ಟರ್ ಒಂದು ಕೆಲಸ ಕೊಡಬೇಕಾದರೆ ಅನುಸರಿಸುವ ಕ್ರಮಗಳೇನು? ಮೊದಲು ಎಸ್ಟಿಮೇಟ್ ಮಾಡಬೇಕು ಟೆಂಡರ್ ಕರೆಯಬೇಕು ಅದರ ಮೇಲೆ ಆದೇಶ ಕೊಡಬೇಕು ಇದು ಯಾವುದನ್ನೂ ಮಾಡದೆ ಇಷ್ಟ ಬಂದ ರೀತಿಯಲ್ಲಿ ಇವರಿಗಿಷ್ಟ ಬಂದ ದರದಲ್ಲಿ ಅವರದೇ ಆದ ಕಾರಣಗಳಿಗಾಗಿ ಕೋಟ್ಯಂತರ ರೂಪಾಯಿಗಳ ಕೆಲಸವನ್ನು ಕೊಟ್ಟಿದ್ದಾರೆ ಇದರ ಬಗ್ಗೆ ಮೊಯಿಲಿಯವರು ಹಿಂದೆ ಹೇಳುತ್ತಿದ್ದಂತೆ ಸಿ.ಬಿ.ಐ. ಎನ್‌ಕ್ವಯಿರಿ ಬೇಡ ಹೋಗಲಿ ಸಿ.ಬಿ.ಐ. ಎನ್‌ಕ್ವಯಿರಿ ಮಾಡಿಸಲು ತಯಾರಾಗಿದ್ದಾರೆಯೇ? ಮೊನ್ನೆ ಸ್ಲಂ ಬೋರ್ಡ್‌ನಲ್ಲಿ 60 ಸಾವಿರ ಖರ್ಚುಮಾಡಿ ಕಟ್ಟಡ ಕಟ್ಟಿಸುತ್ತಾರೆ ಬಾತ್ ರೂಂ ಕಟ್ಟಿಸುತ್ತಾರೆ ಅವುಗಳನ್ನು ಕೆಡವಿ ಪ್ರೈವೇಟಿನವರು ಅಂಗಡಿಗಳನ್ನು ಕಟ್ಟಿ ಕೊಳ್ಳುತ್ತಾರೆ ಆ ಮೇಲೆ ಸ್ಲಂ ಬೋರ್ಡ್‌ನವರು ಸರ್ಕಾರಕ್ಕೆ ಬರೆಯುತ್ತಾರೆ ಪೋಲೀಸ್ ಸ್ಟೇಷನ್‌ಗೆ ಬರೆಯುತ್ತಾರೆ ಆಗ ಪೋಲಿಸರು ಹತ್ತಿರ ಹೋಗುವುದಿಲ್ಲ ಸರ್ಕಾರ ಮಾಡುವ ಕೆಲಸ ಏನು ಇದು? ತಮಗೆ ಇಷ್ಟಬಂದ ರೀತಿ ಸರ್ಕಾರ ಕೆಲಸ ಮಾಡುತ್ತಾರೆ. ಶಾಸ್ತ್ರೀನಗರ್ ಸ್ಲಂಬೋರ್ಡ್ ಈ ರೀತಿಯಾದ ಕೆಲಸ ಮಾಡುತ್ತಿದ್ದೆಯೆಂದು.

ಉಪಾಧ್ಯಕ್ಷರು: ಏಕಾಂತಯ್ಯನವರೇ ನಾನು ಬೇರೆಯವರನ್ನು ಕರೆಯುತ್ತೇನೆ. ನೀವು ಅರ್ದ ಗಂಟೆ ಕೇಳಿ ಈಗ ಮುಕ್ಕಾಲು ಗಂಟೇಯಾಯಿತು.

ಶ್ರೀ ಹೆಚ್. ಏಕಾಂತಯ್ಯ: ಮುಕ್ಕಾಲು ಗಂಟೆಯಲ್ಲಿ ಅವರೇ ಅರ್ಧ ಗಂಟೆ ಮಾತಾಡಿದ್ದಾರೆ.

ಉಪಾಧ್ಯಕ್ಷರು: ನೀವು ಯೀಲ್ಡ್ ಆಗಿದ್ದರಿಂದ ಅವರು ಮಾತಡುತ್ತಾರೆ.

ಶ್ರೀ ಏಕಾಂತಯ್ಯ: ಇದನ್ನು ನಾನು ಅಪೋಸ್ ಮಾಡುತ್ತೇನೆ ಏನಿದು ದೊಡ್ಡ ಆರೋಪಗಳನ್ನು ಮಾಡುವುದಕ್ಕೆ ತಾವು ಅವಕಾಶ ಕೊಡುವುದಿಲ್ಲ.

ಉಪಾಧ್ಯಕ್ಷರು: ಎಲ್ಲರಿಗೂ ಅವಕಾಶ ಕೊಡಬೇಕು ನಾನು.

ಶ್ರೀ ಹೆಚ್ ಏಕಾಂತಯ್ಯ: ಬೇಕಾದರೆ ನಾಳೆಯೂ ಕುಳಿತುಕೊಳ್ಳಿ ಬೇಡ ಎನ್ನುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು: ಸಭೆ 9.30ಕ್ಕೆ ಶುರುವಾಯಿತು ಇದುವರೆಗೂ ಎಷ್ಟು ಜನ ಮಾತಾಡಿದ್ದಾರೆಂದು ನೀವೇ ಯೋಚಿಸಿ.

ಶ್ರೀ ಶಿವಾನಂದ ಎಚ್. ಕೌಜಲಗಿ: ಅವರು ಗಂಭೀರ ಆರೋಪ ಮಾಡುತ್ತಿದ್ದಾರೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಕರಿಯಣ್ಣ: ಅಧ್ಯಕ್ಷಿಣಿಯವರೇ ಬಾವಿಯಲ್ಲಿ ಅವರೇ ಇವತ್ತು ಮುಗಿಸಬೆಕೆಂದು ತೀರ್ಮಾನ ಮಾಡಿ ಇಲ್ಲ ಈ ರೀತಿ ಮಾತಾಡುವುದು ಸರಿಯೇ?

ಶ್ರೀ ಎಚ್. ಏಕಾಂತಯ್ಯ: ಈ ಸದನ ಬಾವಿಗಿಂತ ದೊಡ್ಡದು.

(ಗೊಂದಲ)

ಶ್ರೀ ಎಲ್.ಆರ್ ಶಿವರಾಮೇಗೌಡ: ನಿಮ್ಮ ಕಡೆಯವರು ಬಹಳ ಜನ ಮಾತಾಡಿದ್ದಾರೆ.

(ಗೊಂದಲ)

ಶ್ರೀ ಕೆ.ಹೆಚ್. ಹನುಮೇಗೌಡ: ಮಾನ್ಯ ಅಧ್ಯಕ್ಷರೇ ಈಗ ಈ ಕಡೆ ಇಷ್ಟು ಜನ ಇದ್ದೇವಲ್ಲಾ ನಾವು ಎಲೆಕ್ಟ್ ಆಗಿ ಬಂದಿಲ್ಲವೇ? ನಮ್ಮ ಕ್ಷೇತ್ರದಲ್ಲಿ ಏನು ತೊಂದರೆ ಇದೆ ಅದನ್ನು ಹೇಳುವುದಕ್ಕೆ ನಮಗೆ ಅವಕಾಶ ಬೇಡವೇ? ಅವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ. ನಾನು ಬೇಡ ಎಂದು ಹೇಳುವುದಿಲ್ಲ. ಈ ಕಡೆಯವರು ನಾವು ಕೂಡಾ ಎಲೆಕ್ಟ್ ಆಗಿ ಬಂದಿರತಕ್ಕಂಥ ಜನ ನಮಗೂ ಕಷ್ಟ ಇದೆ. ನಮ್ಮ ಕ್ಷೇತ್ರದ ತೊಂದರೆಗಳನ್ನು ಹೇಳಬೇಕು. ಈ ಟೈಮ್ ಬಿಟ್ಟರೆ ನಮಗೆ ಯಾವಾಗ ಅವಕಾಶ ಸಿಗುತ್ತದೆ? ನೀವು ಬರೀ ಆ ಕಡೆಗೆ ನೋಡಿಬಿಟ್ಟರೆ ಅವರಿಗೆ ಅವಕಾಶವನ್ನು ಕೊಟ್ಟುಬಿಟ್ಟರೆ ನಾವು ಏನು ಮಾಡಬೇಕು?

ಉಪಾಧ್ಯಕ್ಷರು: ಅವರು ಮುಗಿಸುತ್ತಾರಂತೆ. ನಿಮಗೆ ಆಮೇಲೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ: ಮಾನ್ಯ ಉಪಾಧ್ಯಕ್ಷಿಣಿಯವರೇ ಒಂದು ಪ್ರಕರಣವನ್ನು ತಮ್ಮ ಗಮನಕ್ಕೆ ತರುತ್ತೇನೆ. ಈಗಾಗಲೇ ಸ್ಲಮ್ ಬಗ್ಗೆ ಹೇಳಿದೆ. ಮತ್ತೊಂದು ಈ ಸರ್ಕಾರ ಹೇಗೆ ಆದೇಶವನ್ನು ಹೊರಡಿಸುತ್ತದೆ ಎಂದು ಹೇಳುತ್ತೇನೆ. ಬಿ.ಡಿ.ಎ. ಪ್ರಕಾರ ರಿವಿಷನ್ ಮಾಡತಕ್ಕಂಥ ಅಧಿಕಾರ ಸರ್ಕಾರಕ್ಕೆ ಇದೆ. ನಾನು ಕೇಳುತ್ತಿದ್ದೇನೆ ಈ ರಿವಿಷನ್ ಪಿಟಿಷನ್‌ನ್ನು ಏನಾದರು ಹಾಕಿದ್ದೀರಾ? ಅದರಲ್ಲಿ ಏನು ಬರೆದಿದ್ದಾರೆ? ಆ ಆದೇಶವನ್ನು ತಮಗೆ ಕೊಡುತ್ತೇನೆ. ಯಾವುದೇ ಒಂದು ಹೊಣೆಗಾರಿಕೆ ಇರುವಂಥ

ಸರ್ಕಾರ ಇಂಥ ಆದೇಶವನ್ನು ಹೊರಡಿಸಬಹುದೇ ಎಂದು ಮಾನ್ಯ ವೀರಪ್ಪಮೊಯಿಲಿಯವರು ಹೇಳಲಿ. ಯಾವ ಅರ್ಜಿಯನ್ನು ಹಾಕಿದ್ದಾರೆ ಅದು ಯಾವ ಸರ್ವೆ ನಂಬರ್‌ಗೂ ಸಂಬಂಧಪಟ್ಟಿಲ್ಲ. ಅದನ್ನು ಹೋಲುವುದಿಲ್ಲ. ಅವರಿಗೆ ಬೇಕಾದಂಥ ನಿವೇಶನಗಳನ್ನು ಭೂಮಿಯನ್ನು ಕೊಡಲಿಕ್ಕೆ ಇಷ್ಟು ತರಾತುರಿಯಲ್ಲಿ ಸರ್ಕಾರ ಆದೇಶವನ್ನು ಮಾಡಿದೆ ಎಂದು ಹೇಳಿದರೆ ನಾನು ಅದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಹೆಚ್.ಯು.ಡಿ 169 ಎಂ.ಎನ್.ಎ. 91, ದಿನಾಂಕ : 21-9-91 ಇಲ್ಲಿ 19 ಯಾವ ಸರ್ವೆ ನಂಬರ್ ಎಂದು ಬರೆಯುವುದಕ್ಕೂ ನಮ್ಮ ಕಾರ್ಯದರ್ಶಿಗಳಿಗೆ ಸಂಬಂಧಪಟ್ಟಂಥ ಸರ್ಕಾರದ ಅಧಿಕಾರಿಗಳಿಗೆ ಹೊಣೆಗಾರಿಕೆ ಇಲ್ಲ, ಇವರು ಸರ್ಕಾರದ ಕೆಲಸವನ್ನು ಮಾಡುತ್ತಾರೆ. ಇವರು ಈ ದೇಶದ ಜನತೆಗೆ ಹೊಣೆಗಾರಿಕೆಯನ್ನು ಹೇಳಿಕೊಡುತ್ತಾರೆ. ತಮಗೆ ಇಷ್ಟಬಂದಂತೆ ರೀತಿಯಲ್ಲಿ 19 ಎಕರೆ ಗುಂಟೆಯನ್ನು ಏನು ಕೊಟ್ಟಿದ್ದಾದರೆ ಎನ್.ಕೆ.ಸೊಸೈಟಿಗೆ ಮತ್ತು 19 ಎಕರೆ 32 ಗುಂಟೆಯನ್ನು ಯಾರಿಗೆ ಕೊಟ್ಟಿದ್ದಾರೆ ಯಾವ ಸಹಕಾರ ಸಂಘವನ್ನು ಇವರು ಸೂಪರ್‌ಸೀಡ್ ಮಾಡಿದ್ದಾರೆ. ಆಡಳಿತಾಧಿಕಾರಿಯನ್ನು ನೇಮಿಸಿದ್ದಾರೆ. ಆಡಳಿತಾಧಿಕಾರಿಯವರಿಗೆ ಕೊಟ್ಟಿಲ್ಲ ಅದಕ್ಕೆ ಬದಲಾಗಿದೆ ಇದ್ದಂಥ ಆಡಳಿಧೀಕಾರಿಗೆ ಪೊಸಿಷನನ್ನು ಕೊಡಿ ಎಂಬ ಮಾತನ್ನು ಹೇಳಿ ಒಂದು ಪತ್ರವನ್ನು ಬರೆಯುತ್ತಾರೆ. ಇದಕ್ಕಿಂತ ನಾಚಿಕೆಗೇಡಿನ ಪ್ರಸಂಗ ಏನಾದರೂ ಇದೆಯೇ? ಮಾನ್ಯ ಉಪಾಧ್ಯಕ್ಷಿಣಿಯವರೇ ತಮಗೆ ಬೇಸರವಾಗಿರಬಹುದು ಇಂಥ ಅನೇಕ ಪ್ರಕರಣಗಳನ್ನು ನಾನು ಹೇಳಬಲ್ಲೆ. ನಾನು ನೇರವಾಗಿ ಸರ್ಕಾರದ ಮೇಲೆ ಆರೋಪ ಮಾಡುತ್ತೇನೆ. ಸರ್ಕಾರ ಈ ಕರ್ನಾಟಕ ರಾಜ್ಯದಲ್ಲಿ ಒಂದು ಅಮೋಘವಾದಂಥ ಕೆಲಸವನ್ನು ಮಾಡಿದರೆ ಎಂದು ಹೇಳಿದರೆ ಮಾನ್ಯ ನರಸಿಂಹಮೂರ್ತಿಯವರು ಹೇಳಿದ ಹಾಗೆ ದೆಹಲಿಯಲ್ಲಿ ಅಲ್ಲ ಇಡೀ ವಿಶ್ವದಲ್ಲಿಯೇ ಏನಾದರೂ ಅತ್ಯಂತ ಭ್ರಷ್ಟವಾದಂಥ ಸರ್ಕಾರ ಅದು ಈ ಸರ್ಕಾರ ಎಂಬ ಮಾತನ್ನು ನಾನು ಹೇಳುತ್ತೇನೆ. ಇದರ ಬಗ್ಗೆ ನಾನು ಹೆಚ್ಚಿಗೆ ಮಾತನಾಡುವುದು ಅನಾವಶ್ಯಕ ಎಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ವಂದನೆಗಳು.

ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಉಪಾಧ್ಯಕ್ಷಿಣಿಯವರೇ ನಾನು ದೀರ್ಘವಾಗಿ ಭಾಷಣವನ್ನು ಮಾಡುವುದಕ್ಕೆ ಹೋಗುವುದಿಲ್ಲ. ಒಂದೊಂದು ಬೇಡಿಕೆಯನ್ನು ಏನು ಇದೆ ಅದರ ಬಗ್ಗೆ ಮಾತನಾಡುವುದಕ್ಕೆ ನಾನು ಇಷ್ಟ ಪಡುತ್ತೇನೆ ಮೊದಲನೇಯದಾಗಿ ಕೆ.ಎಸ್.ಆರ್.ಟಿ.ಸಿ. ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈಗ ಕೆ.ಎಸ್.ಆರ್.ಟಿ.ಸಿ. ಹಳೆಯ ಬಸ್‌ಗಳು ಇದೆ ಈ ಲಾಂಗ್ ರೂಟ್‌ಗಳಲ್ಲಿ ಹಳೆಯ ಬಸ್‌ಗಳನ್ನು ಹಾಕಿ ಮದ್ಯೆ ಬ್ರೇಕ್ ಫೈಲೂರು ಆಗುವುದು ಬ್ಲೆಡ್ ಕಟ್ ಆಗಿ ತುಂಬಾ ತೊಂದರೆಯಗುತ್ತಿದೆ. ಅಂಥದ್ದರ ಬದಲಾಗಿ ಹೊಸ ಬಸ್‌ಗಳು ಸೆಮಿ ಲಕ್ಸುರಿ ಬಸ್‌ಗಳನ್ನು ಹಾಕಿದರೆ ಘಾಟ್ ಸೆಕ್ಷನ್‌ನಲ್ಲಿ ಲಾಂಗ್ ರೂಟಿಗೆ ಒಳ್ಳೆಯದಾಗುತ್ತದೆ ಎಂದು ಹೇಳುತ್ತೇನೆ. ಮತ್ತು ಈ ಇಲಾಖೆಯಲ್ಲಿ ಸಾಕಷ್ಟು ರೋಸ್ಟರ್ ಸಿಸ್ಟಂನ್ನು ಫಿಲಪ್ ಮಾಡಿಲ್ಲ, ಸುಮಾರು ಈಗ ಆರು ಸಾವಿರ ವೇಕೆನ್ಸೀಸ್ ಇದೆ ಎಂದು ಹೇಳಿದ್ದಾರೆ. ಅದನ್ನು ಬ್ಯಾಕಲಾಗ್ ಎಂದು ಪರಿಗಣಿಸಿ ತುಂಬುವುದಕ್ಕೆ ಅದರಲ್ಲೂ ಸ್ಪೆಷಲ್ ಆಗಿ ಎಸ್.ಸಿ. ಮತ್ತು ಎಸ್.ಟಿ. ಯವರಿಗೆ ಕೊಡಬೇಕು ಎಂದು ಹೇಳುತ್ತೇನೆ. ಹಾಗೆಯೇ ಆಹಾರ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈಗ ಸೀಮೆಎಣ್ಣೆ ತೊಂದರೆ ಎಲ್ಲಾ ಕಡೆ ಇದೆ. ಅವರು ಸಾಕಷ್ಟು ಕೋಟಾಗಳನ್ನು ನಮ್ಮ ಕ್ಷೇತ್ರಗಳಿಗೆ ಹೆಚ್ಚು ಮಾಡಬೇಕಾಗುತ್ತದೆ. ಅದರ ಜೊತೆಗೆ ಹಸಿರು ಕಾರ್ಡ್‌ಗಳನ್ನು ಆದಷ್ಟು ಬೇಗ ಈ ಡಿಮ್ಯಾಂಡ್ ಮುಗಿದ ತಕ್ಷಣ ಎಲ್ಲಾ

ಕಡೆಗೂ ವಿತರಣೆಯಾಗತಕ್ಕಂಥ ವ್ಯವಸ್ಥೆಯಾಗಬೇಕಾಗಿದೆ. ಈಗ ಬಡವರನ್ನು ಗುರುತಿಸಿರುವುದು ಹಸಿರು ಕಾರ್ಡು. ನಮಗೆ ಮೊನ್ನೆ ಯಾರೋ ಹೇಳುತ್ತಿದ್ದರು ಐಡಿಂಟಿಟಿ ಕಾರ್ಡ್ ಕೇಳಿದರೆ ನಮಗೆ ಎಷ್ಟು ಮುಜುಗರ ಆಯಿತು ನಾವು ಎಂ.ಎಲ್.ಎ. ಹೌದೋ ಅಲ್ಲವೋ ಎಂದು ಹಾಗೆಯೇ ಒಬ್ಬ ಬಡವನೂ ಕೂಡ ಅವನು ಪ್ರತಿಯೊಂದು ಇಲಾಖೆಗೆ ಹೋದಾಗ ನಿನ್ನಲ್ಲಿ ಹಹಿರು ಕಾರ್ಡ್ ಇದೆಯೇ ಎಂದು ಕೇಳಿದರೆ ಅವನಿಗೂ ಅಷ್ಟೇ ಮುಜುಗರವಾಗುತ್ತದೆ. ನನಗೆ ಹಸಿರು ಕಾರ್ಡು ಸಿಕ್ಕಿಲ್ಲ ಸರ್ಕಾರದಿಂದ ಸೌಲಭ್ಯಗಳು ಸಿಗುತ್ತಿಲ್ಲ ಎಂದು ಹೇಳುತ್ತಾರೆ. ಆದಷ್ಟು ಬೇಗ ಈ ಹಸಿರು ಕಾರ್ಡನ್ನು ವಿತರಣೆಯಾಗಬೇಕೆಂದು ಕೇಳಿಕೊಳ್ಳುತ್ತೇನೆ. ಜೊತೆಗೆ ಕಾರ್ಮಿಕರ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈಗ ಕಾರ್ಮಿಕ ಕಾಯ್ದೆ ಏನಿದೆ ಕೆಲವು ಅಂಶಗಳನ್ನು ಅದರಲ್ಲಿ ಸೇರಿಸಬೇಕು ಎಂದು ಹೇಳುತ್ತೇನೆ. ಈ ಕಾರ್ಮಿಕ ಇಲಾಖೆಯನ್ನು ನೋಡುವುದಾದರೆ ನನ್ನಲ್ಲಿ ಎಸ್ಟೇಟ್ ಲೇಬರ್ಸ್‌ಗಳು ಸಿಕ್ಕಾಪಟ್ಟೆ ಬರುತ್ತಾರೆ. ಅವರ ಮಕ್ಕಳಿಗೆ ಯಾವ ಸವಲತ್ತೂ ಕೂಡ ಇಲ್ಲ. ಆ ಮಗುವಿಗೆ ಐದು ವರ್ಷ ಆದ ತಕ್ಷಣ ಅದು ಅಮ್ಮನ ಜೊತೆಗೆ ಹೋಗಿ ಕಾಫಿ ಹಣ್ಣನ್ನು ಕೀಳುವುದಕ್ಕೆ ಪ್ರಾರಂಭ ಮಾಡುತ್ತದೆ. ಏಕೆಂದರೆ ತಾಯಿ ಜೊತೆ ಮಗು ಒಂದಿಷ್ಟು ಕಿತ್ತುಕೊಟ್ಟರೆ ಹೆಚ್ಚಿಗೆ ಹೆಚ್ಚಿಗೆ ಅವರಿಗೆ ಸಂಬಳ ಬರುತ್ತದೆ. ಆ ಮಗುವನ್ನು ಜತೆಗೆ ಕಳುಹಿಸುವುದಕ್ಕೆ ಬದಲಾಗಿ ಕಾಫಿ ಹಣ್ಣನ್ನು ಕೀಳುವುದಕ್ಕೆ ಪಾರಂಭ ಮಾಡುತ್ತಾರೆ ಹಾಗಾಗಿ ಅವರು ಕೂಡ ಕಾಫಿ ತೋಟದ ಲೇಬರರ್ಸ್‌ಗಳಾಗುತ್ತಾರೆ. ಅವರ ವ್ಯಾಸಾಂಗಕ್ಕೆ ಕಾಫಿ ಎಸ್ಟೇಟ್ ಏನು ರಿಜಿಸ್ಟರ್ಡ್ ಎಸ್ಟೇಟ್ ಇದೆ ಅವರು ಕೆಲವು ಸೌಲಭ್ಯಗಳನ್ನು ಕೊಡಬೇಕು. ಎಂದು ಇದೆ. ಅದರಲ್ಲಿ ಮಗುವಿಗೆ ಕಾರ್ಮಿಕರ ಮಕ್ಕಳಿಗೆ ಶಿಕ್ಷಣದ ವೆಚ್ಚವನ್ನು ಭರಿಸುವುದಕ್ಕೆ ತಾವು ಒಂದು ಕಾನೂನನ್ನು ಮಾಡಬೇಕು. ಜೊತೆಗೆ ಸಣ್ಣ ಮಕ್ಕಳನ್ನು 1 ವರ್ಷದಿಂದ ಮೂರು ವರ್ಷದ ಮಕ್ಕಳನ್ನು ನೋಡಿಕೊಳ್ಳುವುದಕ್ಕೆ ಬೇರೆ ವ್ಯವಸ್ಥೆ ಇರುವುದಿಲ್ಲ. ಪೇಟೆಯಲ್ಲಿ ಕೆಲಸ ಮಾಡುವ ಹೆಣ್ಣು ಮಕ್ಕಳಿಗೆ ಬೇಬಿ ಸಿಟಿಂಗ್ ಸೆಂಟರ್ಸ್‌ಗಳಿಗೆ ಮಕ್ಕಳನ್ನು ಸೇರಿಸುವ ಅನುಕೂಲವಿದೆ. ಪ್ರತಿ ಎಸ್ಟೇಟ್‌ನಲ್ಲಿ ಬೇಬಿ ಸಿಟಿಂಗ್ ಸೆಂಟರ್ ಮಾಡಿದ್ದರೆ ಸಣ್ಣ ಸಣ್ಣ ಮಕ್ಕಳನ್ನು ತಾಯಂದಿರು ಅಲ್ಲಿ ಚಿಕ್ಕಮಕ್ಕಳನ್ನು ಬಿಟ್ಟು ಹೋಗುತ್ತಾರೆ. ಇಲ್ಲದಿದ್ದರೆ ಏನಾಗುತ್ತದೆ ಅಂದರೆ ಈ ಮೂರು ವರ್ಷ ಅಥವಾ 4 ವರ್ಷದ ಮಕ್ಕಳು ಸಣ್ಣ ಮಗವನ್ನು ನೋಡಿಕೊಳ್ಳಬೇಕಾಗುತ್ತದೆ ಅದು ಶಾಲೆಗೆ ಹೋಗುವುದೇ ಇಲ್ಲ. ಆ ರೀತಿ ಅಲ್ಲಯೂ ಬೇಬಿ ಸಿಟಿಂಗ್ ಮಾಡಿದರೆ ನಿಜಾವಾಗಿಯೂ ಅನುಕೂಲವಾಗುತ್ತದೆ. ಹೋಟಲ್‌ಗಳಲ್ಲಿ, ಸಣ್ಣ ಸಣ್ಣ ಮಕ್ಕಳೆಲ್ಲ ತಟ್ಟೆ ಮತ್ತು ಲೋಟವನ್ನು ತೊಳ್ಳುಯುವಂತಹ ಕೆಲಸವನ್ನು ಮಾಡುತ್ತಾರೆ. ಅದನ್ನು ನಿಲ್ಲುಸುವುದಕ್ಕೆ ತಾವು ವ್ಯವಸ್ಥೆ ಮಾಡಬೇಕಾಗುತ್ತದೆ. ಇನ್ನು ಕಂದಾಯ ಇಲಾಖೆಯ ಬಗ್ಗೆ ಒಂದೇರಡು ಮಾತುಗಳನ್ನು ಹೇಳಬೇಕಾಗಿದೆ. ಇದು ಬಹಳ ಪ್ರಮುಖವಾದ ಇಲಾಖೆ. ಈಗ ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಬಡವರಿಗೆ ಮಂಜೂರಾದ ಜಮೀನು ಅವರ ಕೈಗೆ ಸಿಕ್ಕಿಲ್ಲ. 78ರಿಂದ ಇಲ್ಲಿಯವರೆಗೆ ಬಡವರಿಗೆ ಮಂಜೂರಾದ ಜಮೀನಿಗೆ ಸಾಗುವಳಿ ಚೀಟಿ ಸಿಕ್ಕಿಲ್ಲ. ಕೆಲವು ಎಡಿ.ಎಲ್.ಆರ್. ಆಫೀಸಿನಲ್ಲಿ ಹೊಗಿ ಸರ್ವೆಗಾಗಿ ಕುಳಿತಿವೆ. ಅರಣ್ಯ ಇಲಾಖೆಯವರು ಅನುಮತಿ ಕೊಡಬೇಕು. ಜನ ನನ್ನ ರಿಕಾರ್ಡ್ ಇವತ್ತು ಬರುತ್ತದೆ ನಾಳೆ ಬರುತ್ತದೆಂದು ಅರಣ್ಯ ಇಲಾಖೆಗೆ ಎಡಿ.ಎಲ್.ಆರ್. ಆಫೀಸಿಗೆ ಮತ್ತು ತಹಶೀಲ್ದಾರ್ ಆಫೀಸಿಗೆ ಅಲೆದು ಅಲೇದು ಈಗಾಗಲೇ ಸಾಕಾಗಿದ್ದಾರೆ. ಸುಮಾರು 1800 ಚಿಲ್ಲರೆ ರೆಕಾರ್ಡ್ ಪೆಂಡಿಂಗ್ ಇದೆ. ಅದನ್ನು ಡಿಸ್‌ಪೋಸ್ ಮಾಡಿಲಿಕ್ಕೆ ಆದೇಶ ನೀಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಹರಿಜನ ಗಿರಿಜನರಿಗೆ ದೊಡ್ಡ ದುರಂತ ಅಂದರೆ ಹರಿಜನ ಗಿರಿಜನರಿಗೆ ಮಂಜೂರಾತಿಯಾದ

ಜಮೀನನ್ನು ಬೇರೆಯವರು ಒತ್ತುವರಿ ಮಾಡಿದ್ದಾರೆ. ಇವರು ಮನುಷ್ಯರು ಅಲ್ಲವೇನೂ ಎಂದು ನನಗೆ ಅನ್ನಿಸುತ್ತದೆ. ನಮ್ಮ ಹಾಗೆ ಬೇರೆಯವರು ಬದುಕಬೇಕೆಂದು ಆಸೆ ಸಮಾಜದ ಕೆಲವು ಮುಂದುವರೆದ ವರ್ಗದವರಿಗೆ ಅಥವಾ ಇರುವಂತಹ ಜನರು ತಿಳಿದುಕೊಂಡಿಲ್ಲ ಎಂದು ನನಗೆ ಅನ್ನಿಸುತ್ತದೆ. ನಮ್ಮಲ್ಲಿ 50 ಎಕರೆ ಕಾಫಿ ತೋಟ ಒಂದು ಕಡೆ ಇದ್ದರೆ 2 ಎಕರೆ ಯಾರೋ (ಹರಿಜನರಿಗೆ ಮಂಜೂರಾಗಿದ್ದರೆ ಇವತ್ತು ಅದಕ್ಕೆ ಬೇಲಿ ಹಾಕಿಕೊಂಡಿದ್ದಾರೆ. ಸಾಗವಳಿ ಚೀಟ್ ಹರಿಜನರ ಕೈಯಲ್ಲಿ ಇದೆ. ಬೂಮಿ ಇನ್ನೊಬ್ಬರ ಕೈಯಲ್ಲಿದೆ. ಯಾರ ಕೈಯಿಂದಲೂ ಬಿಡಿಸಲಿಕ್ಕೆ ಆಗುತ್ತಿಲ್ಲ. ಪೋಲೀಸಿನವರು ಪ್ರೊಟೆಕ್ಷನ್ ಕೊಡಲಿಕ್ಕೆ ಆಗುತ್ತಿಲ್ಲ ಈಗಾಗಲೇ ಕಾಫಿ ಗಿಡವನ್ನು ಹಾಕಿಬಿಡ್ಡಿದ್ದಾರೆ. ನನಗೆ ಗೊತ್ತಿರುವ ಹಾಗೆ ಕೇಂದ್ರ ಸರ್ಕಾರದವರು ಒಂದು ಆಕ್ಟ್ ತಂದಿದ್ದಾರೆ. ನನಗೆ ತಿಳಿದ ಹಾಗೆ ಕೇಂದ್ರ ಸರ್ಕಾರದವರು ಒಂದು ಆಕ್ಟ್ ತಂದಿದ್ದಾರೆ Prevention of Atrocities ಆಕ್ಟ್ ಅದರಲ್ಲಿ ಹರಿಜನರಿಗೆ ಸ್ಯಾಂಕ್ಷನ್ ಆಗಿರುವ ಲ್ಯಾಂಡ್ ಒತ್ತುವರಿ ಮಾಡಿದರೆ ಅವರ ಬಗ್ಗೆ ಕ್ರಿಮಿನಲ್ ಮೊಕದ್ದಮೆ ಹೂಡಲಿಕ್ಕೆ ಅವಕಾಶವಿದೆ. ಆಕ್ಟ್ ಜಿಲ್ಲಾಧಿಕಾರಿಯವರ ಹತ್ತಿರ ಇದೆ. S.P. ಆಫೀಸಿನಲ್ಲಿದೆ ಇದುವರೆಗೂ ಅದರ ಬಗ್ಗೆ ಏನೂ ಕ್ರಮ ಆಗಿಲ್ಲ. ಈ ಆಕ್ಟ್ ನಾಮಕಾವಸ್ಥೆಗೆ ಇದೆ. ಮಾನ್ಯ ಖಾರ್ಗೆಯವರ ಕಾಲದಲ್ಲಾದರೂ ಅದನ್ನು ಇಂಪ್ಲಿಮೆಂಟ್ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನೊಂದು ಬಹಳ ಮುಖ್ಯವಾದದ್ದು ಎಂದರೆ ಪಾಲುಪಾರಿಕತ್ತು ಅಥವಾ ಪಾರ್ಟೀಷನ್ ಡೀಡ್ ಮಾಡುತ್ತಿದ್ದೀರಿ. ಹಿಂದೆ ಅದಕ್ಕೆ ಸ್ಟಾಂಪ್ ಡ್ಯೂಟಿ ಇರಲಿಲ್ಲ. ಈಗ ಸ್ಟಂಪ್ ಡ್ಯೂಟಿಯನ್ನು ಜಾಸ್ತಿ ಮಾಡಿದ್ದಾರೆ. ಇದರಿಂದ ಸಮಾಜದಲ್ಲಿರುವ ಅವಿಭಕ್ತ ಕುಟುಂಬಗಳಿಗೆ ತುಂಬಾ ತೊಂದರೆಯಾಗಿದೆ. ಪಾಲು ಪಾರಿಕತ್ತನ್ನು ಮಾಡಿಕೊಳ್ಳಬೇಕಾದರೆ ಪ್ರತಿಯೊಬ್ಬನಿಗೂ ಬರುವ ಪಾಲಿಗೆ ಅವನು ಸ್ಟಂಪ್ ಡ್ಯೂಟಿಯನ್ನು ಕೊಡಬೇಕಾಗುತ್ತದೆ. ಅದನ್ನು ತೆಗೆದುಹಾಕಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ ನನ್ನ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗೆ ಪರಿಶೀಲನೆ ಮಾಡಲಾಗುತ್ತದೆಂದು ಉತ್ತರವನ್ನು ಕೊಟ್ಟಿದ್ದಾರೆ. ಅದನ್ನು ಕೂಡಲೇ ಜಾರಿಗೆ ತರಬೇಕೆಂದು ಮಾನ್ಯ ಕಂದಾಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಇನ್ನು ಪ್ರವಾಹದ ಬಗ್ಗೆ ನಾವೆಲ್ಲರೂ ಗಮನಸೆಳೆಯುವ ಸೂಚನೆಯನ್ನು ಕೊಟ್ಟಿದ್ದೇವು ಅವು ಬರಲೇ ಇಲ್ಲ. ಮಾನ್ಯ ಚಂದ್ರೇಗೌಡರು ಒಬ್ಬರು ಅದರ ಬಗ್ಗೆ ಮಾತನಾಡಿದರು. ಅದು ಅರ್ಧಕ್ಕೆ ನಿಂತುಹೋಯಿತು. ನಮಲ್ಲಿ ಈ ಸಾರಿ ಸಿಕ್ಕಾಪಟ್ಟೆ ಮಳೆಯಿಂದ ಹಾನಿಯಾಗಿದೆ. ಸುಮಾರು 3 ಕೋಟಿಯಷ್ಟು ನಮ್ಮ ಜಿಲ್ಲೆಯಲ್ಲಿ ಹಾನಿಯಾಗಿದೆ. ಇವರು ಕೊಟ್ಟಿರುವುದು 30 ಲಕ್ಷ ರೂಪಾಯಿಗಳು ಮಾತ್ರ ಅದರಲ್ಲೂ ನನ್ನ ಕ್ಷೇತ್ರಕ್ಕೆ ಬಂದಿರುವುದು 5 ಲಕ್ಷ ರೂಪಾಯಿಗಳು. ಚಿಕ್ಕಮಗಳೂರಿನಲ್ಲಿ ಅರ್ಧ ಮೈದಾನ ಅರ್ಧ ಮಳೆ ಇರುವ ಪ್ರದೇಶವಾಗಿದೆ. ಆದರೆ ಅವರಿಗೆ ಏಳು ಲಕ್ಷ ರೂಪಾಯಿಯನ್ನು ಕೊಟ್ಟಿದ್ದಾರೆ ಅಲ್ಲೂ ತಾರತಮ್ಯವಾಗಿದೆ. ನಾವು ಫ್ಲಡ್ ಕಮಿಟಿ ಮೀಟಿಂಗ್‌ನಲ್ಲಿ ಜಿಲ್ಲಾಧಿಕಾರಿಯವರ ಆಫೀಸಿನಲ್ಲಿ ಜಿಲ್ಲಾಧಿಕಾರಿಯ ಹತ್ತಿರ ಈ ತಾರತಮ್ಯ ಏಕೆಂದು ಗಲಾಟೆ ಮಾಡಿದ್ದೇವೆ. ಮಳೆ ಎಲ್ಲಿ ಜಾಸ್ತಿಯಾಗಿದೆ ಎಲ್ಲಿ ಹಾನಿ ಜಾಸ್ತಿಯಾಗಿದೆ ಅವರಿಗೆ ನೀವು ಜಾಸ್ತಿ ಪರಿಹಾರ ಕೊಡಬೇಕೇ ವಿನಃ ರಸ್ತೆಗಾಗಲಿ ಅಥವಾ ಬೇರೆ ಯಾವುದೇ ಕಾಮಗಾರಿಗಳಿಗೆ ಕೊಡುವುದು ಸರಿಯಲ್ಲ ಅರ್ಧ ಮೈದಾನ ಅರ್ಧಮಲೆನಾಡು ಇರುವ ಪ್ರದೇಶಕ್ಕೆ ಪ್ರಭಾವವಿದೆ ಎಂದು ಹೇಳಿ ಜಾಸ್ತಿ ಕೊಟ್ಟಿರುವುದು ತಪ್ಪೆಂದು ನಾವು ಕಂದಾಯ ಮಂತ್ರಿಗಳ ಗಮನಕ್ಕೂ ತಂದಿದ್ದೇವೆ. ನಮ್ಮಲ್ಲಿ ಎಲ್ಲಿ ಹೆಚ್ಚು ಹಾನಿಯಾಗಿದೆ ಅಂತಹ ಕಡೆಗಳಿಗೆ ಸಾಕಷ್ಟು ಹಣವನ್ನು ಬಿಡುಗಡೆ ಮಾಡಬೇಕೆಂದು

ಇವತ್ತು ಪರಿಹಾರ ಹಣವನ್ನು ಜಿಲ್ಲಾಪರಿಷತ್ತಿಗೆ ಮಾತ್ರ ಕೊಟ್ಟಿದ್ದಾರೆ. ಪಿ.ಡಬ್ಲ್ಯೂ.ಡಿ ರಸ್ತೆ ನಮ್ಮಲ್ಲಿ ಘಾಟ್ ರಸ್ತೆಯಾಗಿದೆ. ಚಾರ್ಮುಡಿ ಘಾಟ್ ನನಗೆ ಬರುತ್ತದೆ. ಸಸ್ಸೆ ಕಳಸ ಕುದುರೇಮುಖ ಏರಿಯಾ ಇವುಗಳೂ ಸಹ ಘಾಟ್‌ಗಳಿಂದ ಕೂಡಿದೆ. ದೊಡ್ಡದೊಡ್ಡ ಬೆಟ್ಟಗಳು ಕುಸಿದು ರಸ್ತೆಯ ಮೇಲೆ ಬಿದ್ದಿದೆ. ಅದರ ಮಣ್ಣವನ್ನುತೆಗೆಯುವುದಕ್ಕೆ ಸಾಕಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಇವರು ಪಿ.ಡ.ಬ್ಲ್ಯೂ.ಡಿ ಗೆ ಬರ ಪರಿಹಾರದಿಂದ ಒಂದು ಪೈಸಾವನ್ನು ಕೊಟ್ಟಿಲ್ಲ. ಅದಕ್ಕೆ ಸಾಕಷ್ಟು ಹಣವನ್ನು ಈ ಸಾರಿ ಬಿಡುಗಡೆ ಮಾಡಿ ಬರಪರಿಹಾರದಲ್ಲಿ ಹಾನಿಯಾಗಿರುವುದನ್ನು ಸರಿಪಡಿಸಲಿಕ್ಕೆ ಸಾಕಷ್ಟು ಹಣವನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ನಾನು ಪ್ಲಾಂಟೇಷನ್ ಬಗ್ಗೆ ಒಂದೆರಡು ಮಾತನ್ನು ಹೇಳಬೇಕಾಗುತ್ತದೆ. ನಿನ್ನೆಯೆ ಇದರ ಬಗ್ಗೆ ಚರ್ಚಗೆ ಬಂದಿತ್ತು ದೊಡ್ಡದೊಡ್ಡವರು ಒತ್ತುವರಿ ಮಾಡಿದ್ದಾರೆ. ಅದಕ್ಕೆ ಏನಾದರೂ ಒಂದು ಕಾನೂನನ್ನು ತರಲೇಬೇಕು ಅರ್ಧ ಎಕರೆ ಒಂದು ಎಕರೆ ಜಮೀನು ಒತ್ತುವರಿ ಮಾಡಿದ ಬಡವ ಕಂದಾಯವನ್ನು ಕಟ್ಟಲಿಕ್ಕೆ ಸಾಧ್ಯವಿಲ್ಲದಿದ್ದರೂ ಇವರ ಆಫೀಸಿನಿಂದ ಅವನಿಗೆ ನೋಟೀಸ್ ಮೇಲೆ ನೋಟೀಸ್ ಹಲವಾರು ಎಕರೆಯನ್ನು ಒತ್ತುವರಿ ಮಾಡಿಕೊಂಡಿರುವವರು ಇವತ್ತು ಸರ್ಕಾರಕ್ಕೆ ಒಂದು ಪೈಸಾ ಕಂದಾಯ ಕಟ್ಟದೆ ಎನ್‌ಜಾಯ್ ಮಾಡುತ್ತಿದ್ದಾರೆ. ಅದರ ಬಗ್ಗೆ ಇವರ ಕ್ರಮವೇನು? ಹಾಗಾದರೆ ಅವರು ಎನ್‌ಜಾಯ್ ಮಾಡಿಕೊಂಡೇ ಇರಲಿ ಎಂದು ಅರ್ಥವೇನು? ಅದನ್ನು ಮಾಡಬಾರದು. ನೂರಾರು ಎಕರೆ ಒತ್ತುವರಿ ಮಾಡಿಕೊಂಡವರ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳಬೇಕು. ಅವರಿಗೆ ಕೊಡುತ್ತೇವೆಂದು ಹೇಳಬೇಕು. ಇಲ್ಲದಿದ್ದರೆ ಬಿಡುತ್ತೇವೆಂದು ಹೇಳಬೇಕು. ಅವರು ಇಟ್ಟುಕೊಳ್ಳುವಂಥದ್ದು ಆದರೆ ಏನು ಬಾಕಿ ಇದೆ. ಏನು ಕಂದಾಯ ಬರಬೇಕಾಗಿದೆ ಅದನ್ನು ವಸೂಲು ಮಾಡುವಂಥ ಪ್ರಯತ್ನವನ್ನು ತಾವು ಮಾಡಬೇಕಾಗಿದೆ. ಪರ್ಚೆಸ್ ಪರ್ಚೇಸ್ ಟ್ಯಾಕ್ಸ್‌ನ್ನು ಈ ಕಾಫೀ ತೋಟದವರ ಮೇಲೆ ಹಾಕಿದ್ದೀರಿ ಇತರಿಂದ ಸಣ್ಣ ಮತ್ತು ದೊಟ್ಟ ಕಾಫಿ ತೋಟದವರಿಗೆ ಬಹಳ ತೊಂದರೆಯಾಗಿದೆ. ಮಾನ್ಯ ಮುಖ್ಯ ಮಂತ್ರಿಯವರ ಖಾತೆಗೆ ಇದು ಬರುವುದರಿಂದ ಈ ಪರ್ಚೇಸ್ ಟ್ಯಾಕ್ಸನ್ನು ತೆಗೆಯಬೇಕೆಂದು ಮಾನ್ಯ ಮುಖ್ಯ ಮಂತಿಯರಲ್ಲಿ ಕೇಳಿಕೊಳ್ಳುತ್ತೇನೆ. ಗ್ರಾಮಾಂತರದಲ್ಲಿ ಬಡವರಿಗೆ ವಿಲ್ಲೇಜ್ ಅಕೌಂಟೆಂಟ್ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರ್‌ರವರಿಂದಲೇ ಹೆಚ್ಚು ತೊಂದರೆ ತಹಶೀಲ್ದಾರ್ ಮತ್ತು ಅಸಿಸ್ಟೆಂಟ್ ಕಮೀಷನರ್‌ರವರಿಂದ ತೊಂದರೆಯಾಗುವುದಿಲ್ಲ ಮೊನ್ನೆ ನಂಜುಂಡಸ್ವಾಮಿಯವರು ಹೇಳುತ್ತಿದ್ದರು ಅವರು ಕೂಡ ಎಷ್ಟು ಕಿರುಕುಳ ಬೇರೆಯಾರು ಕೊಡುತ್ತಿಲ್ಲವೆಂದು ಕೃಷಿ ಪಾಸ್ ಬುಕ್ ಮಾಡುತ್ತೇವೆಂದು ಹೇಳಿದ್ದಿರೋ ಅದನ್ನು ಆದಷ್ಟು ಬೇಗನೆ ಮಾಡಿ ಮಾಡಿಸಿಕೊಳ್ಳುವಾಗ ಈ ವಿಲೇಜ್ ಅಕೌಂಟೆಂಟ್ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರ್‌ರವರ ಸುಲಿಗೆಗೆ ಸಿಕ್ಕಹಾಗೆ ಮಾಡಬೇಕೆಂದು ಮಾನ್ಯ ಕಂದಾಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಇನ್ನು ಜೆನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ ಪ್ರಜಾಪ್ರಭುತ್ವದಲ್ಲಿ ಜನರಿಂದ ಆಯ್ಕೆಯಾಗಿ ಬಂದ ಶಾಸಕರುಗಳಿಗಿಂಥ ಈ ಅಧಿಕಾರಿಗಳು ತಮಗೇ ಹೆಚ್ಚು ಮಾನ್ಯತೆ ತಾವು ಹೆಚ್ಚು ಪವರ್‌ಫುಲ್ ಎನ್ನುವ ರೀತಿಯಲ್ಲಿ ವರ್ತನೆ ಮಾಡುತ್ತೀದ್ದಾರೆ. ಪ್ರತಿಯೊಂದರಲ್ಲಿ ಅವರ ಕೈವಾಡ ಜಾಸ್ತಿ ಇರುತ್ತದೆ. ಯಾವುದೇ ಒಂದು ಇಲಾಖೆ ಯಾರೊಬ್ಬರ ಕಂಟ್ರೋಲ್‌ನಲ್ಲಿ ಇಲ್ಲವೇ ಎನ್ನುವ ಹಾಗೆ ಆಗಿದೆ. ನಾನು ಮಲ್ಟಿಸ್ಟೋರ್‌ಡ್ ಬಿಲ್ಡಿಂಗ್‌ನಲ್ಲಿ ನೋಡಿದ್ದೇನೆ ಸೆಕ್ರೆಟರಿಯವರು ಡೆಪ್ಯೂಟಿ ಸೆಕ್ರೆಟರಿಯವರು ಇರುತ್ತಾರೆ. ಆದರೆ ಸಂಬಂಧಪಟ್ಟ ಸೆಕ್ಷನ್ ಆಫೀಸರ್ ಕ್ಲರ್ಕ್ ಇರುವುದಿಲ್ಲ ಫೈಲ್ ತರಿಸುವುದಕ್ಕೆ ಯಾರೂ ಇರುವುದಿಲ್ಲ ನಮ್ಮ

ಕೆಲಸಗಳೂ ಆಗುವುದಿಲ್ಲ. ಆಫೀಸರ್‌ಗಳು ಎಷ್ಟು ಸಿನ್ನಿಯರ್ ಆಗಿ ಆಫೀಸ್‌ನಲ್ಲಿ ಇರುತ್ತಾರೋ ಅವರ ಸ್ಟಾಫ್ ಅವರ ಕೈಯಲ್ಲಿ ಇರುವುದಿಲ್ಲ. ಕಾಫಿ ಕುಡಿಯುವುದಕ್ಕೆ ಹೋಗಿರುತ್ತಾರೆ ಅವರು ಗೊತ್ತು ಇವರು ಗೊತ್ತು ಎಂದು ಬೇರೆ ಬೇರೆ ಇಲಾಖೆಗಳಲ್ಲಿ ರಾಜಕೀಯ ಮಾಡುವುದಕ್ಕೆ ಈ ಸ್ಟಾಫ್ ಹೋಗಿರುತ್ತಾರೆ. ಇವರುಗಳು ಕಚೇರಿ ವೇಳೆಯಲ್ಲಿ ಆಫೀಸ್‌ನಲ್ಲೇ ಇರುವಂತೆ ಮಾಡಬೇಕು. ಕಡೆಯ ಪಕ್ಷ ನಮ್ಮ ಶಾಸನ ಸಭೆ ನಡೆಯುವಾಗಲಾದರೂ ನಾವು ಯಾವುದಾದರೂ ಕಛೇರಿಗೆ ಹೋದರೆ ನಮ್ಮ ಕೆಲಸ ಆಗುವಂತೆ ಇರಬೇಕು. ನಮ್ಮ ಹಳ್ಳಿಯಲ್ಲಿ ನಿಮ್ಮ ವಿಧಾನಸೌದ ನಿಧಾನಸೌದ ಆಗಿದೆ ಎಂದು ಹೇಳುತ್ತಿದ್ದಾರೆ. ನಿಜವಾಗಿ ಇದು ನಿಧಾನಸೌಧವಾಗಿದೆ. ನಾವು ಹಿಂದೆ ಯಾವುದಾದರೂ ಒಂದು ಪತ್ರವನ್ನು ಕೊಟ್ಟರೆ ವಾರದೊಳಗೆ ಆಕ್ಷನ್ ಆಗಿ ಆರ್ಡರ್ ಆಗುತ್ತಿತ್ತು ಆದರೆ ಇವತ್ತು ಆ ಪತ್ರ ಮಿನಿಸ್ಟರ್ ಆಫೀಸಿನಿಂದ ಸೆಕ್ರೆಟರಿಯವರಿಗೆ ಸೆಕ್ರೆಟರಿಯವರಿಂದ ಡೆಪ್ಯೂಟಿ ಸೆಕ್ರೆಟರಿಯವರಿಗೆ ಅಲ್ಲಿಂದ ಸೆಕ್ಷನ್ ಆಫೀಸರ್‌ಗೆ ಅಲ್ಲಿಂದ ಕ್ಲರ್ಕ್‌ಗೆ ಹೋಗುತ್ತದೆ ಉತ್ತರ ಎಲ್ಲಿಯೂ ಸಿಗುವುದಿಲ್ಲ ನಾವು ಕೊಟ್ಟ ಪತ್ರದ ಬಗ್ಗೆ ಏನು ಆಕ್ಷನ್ ಆಗಿದೆ ಎಂಬುದು ಗೊತ್ತಾಗುವುದಿಲ್ಲ. ಹೀಗಾದರೆ ನಾವು ಸಾಮಾನ್ಯ ಜನರ ಕೆಲಸವನ್ನು ಹೇಗೆ ಮಾಡುವುದು? ಆದ್ದರಿಂದ ಜೆನರಲ್ ಅಡ್ಮಿನ್‌ಸ್ಟ್ರೇಷನ್ ಏನಿದೆ ಡಿ.ಪಿ.ಎ.ಆರ್. ಅದನ್ನು ಬಿಗಿ ಮಾಡಬೇಕಾಗಿದೆ. ನಾನು ಹಿಂದೆ ಮಾತನಾಡುವಾಗ ಹೇಳಿದ್ದೆ ಜನತಾ ಆಡಳಿತದಲ್ಲಿ ಅಧಿಕಾರಿಗಳು ಏನು ಒಂದು ಗುಂಗಿನಲ್ಲಿ ಇದ್ದರೋ ಕಾಂಗ್ರೆಸ್ (ಐ) ಸರ್ಕಾರ ಬಂದ ಮೇಲೆ ಅವರಿಗೆ ಚಾಟಿ ಏಟು ತಗಲಿಲ್ಲ ಎಂದು. ಚಾಟಿ ಏಟು ಬಿದ್ದರೆ ಹೊಡೆಯುವುದು ಎಂದಿಲ್ಲ ಅವರನ್ನು ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳುವುದು ಎಂದು ಇಲ್ಲದಿದ್ದರೆ ಅವರು ನಿದ್ದೆ ಮಾಡುತ್ತಾರೆ. ಅದಕ್ಕೆ ಅಸ್ಪದ ಕೊಡಬಾರದು. ಆದ್ದರಿಂದ ವಿಧಾನಸೌಧದಿಂದ ಅಂದರೆ ಸೆಕ್ರೆಟೇರಿಯೆಟ್‌ನಿಂದ ವಿಲ್ಲೇಜ್ ಅಕೌಂಟೆಂಟ್ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರ್‌ವರೆಗೆ ಬಡವರ ಕೆಲಸ ಬೇಗನೆ ಆಗುವಂತೆ ಆಡಳಿತವನ್ನು ಸುಧಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಯವರು ಇದನ್ನು ಮಾಡಲು ಪ್ರಯತ್ನ ಮಾಡಬೇಕೆಂದು ಅವರನ್ನು ಕೇಳಿಕೊಳ್ಳುತ್ತೇನೆ. ತಾವು ಏನು ಹಿಂದೆ ಬಡವರ ಹೆಸರಿನಲ್ಲಿ ಹೋರಾಡಿ ಇವತ್ತು ಅವರ ಪರವಾಗಿ ಮುಖ್ಯ ಮಂತ್ರಿಗಳಾಗಿದ್ದೀರಿ ಆ ಬಡವರ ಕಷ್ಟವನ್ನು ಅರಿತು ಅವರ ಕೆಲಸಗಳು ಸುಸುತ್ರವಾಗಿ ಆಗುವಂತೆ ಮಾಡಬೇಕೆಂದು ವಿನಂತಿಸುತ್ತೇನೆ. ಇಷ್ಟು ಮಾತನಾಡಲು ಅವಕಾಶ ಮಾಡಿ ಕೊಟ್ಟಿದ್ದಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಸನ್ಮಾನ್ಯ ಅಧ್ಯಕ್ಷಿಣಿಯವರೇ ನಾನು ಈ ಸಲ ಯಾವ ಒಂದು ಬೇಡಿಕೆಯ ಮೇಲೂ ಮಾತನಾಡಿಲ್ಲ, ವಿರೋಧ ಪಕ್ಷಕ್ಕಿಂತ ಆಡಳಿತ ಪಕ್ಷಕ್ಕೆ ತುಂಬಾ ಜವಾಬ್ದಾರಿ ಇತ್ತು ತನ್ನ ಒಂದು ವರ್ಷದ ಆಡಳಿತದ ಅವಧಿಯಲ್ಲಿ ಯಾವ ಯಾವ ಇಲಾಖೆಗಳಲ್ಲಿ ಲೋಪದೇಶಗಳು ಇವೆ ಅದನ್ನು ಸರಿಪಡಿಸಿಕೊಂಡು ಒಳ್ಳೆಯ ಸಲಹೆಗಳನ್ನು ತೆಗೆದುಕೊಂಡು ಒಳ್ಳೆಯ ಆಡಳಿತ ಕೊಡಬೇಕೆಂದು ನಿಜವಾದ ಕಳಕಳಿ ಆಡಳಿತ ಪಕ್ಷಕ್ಕೆ ಇದ್ದಿದ್ದರೆ ಈ ರೀತಿಯಾಗಿ ದಿಮ್ಯಾಂಡ್ ಬಗ್ಗೆ ಚರ್ಚೆಯಾಗುತ್ತಿದ್ದ ಸಂದರ್ಭದಲ್ಲಿ ಸಾಕಷ್ಟು ಸಮಯ ಕೊಟ್ಟು ಸತ್ಯಕ್ಕೆ ಹತ್ತಿರವಿರುವಂಥ ಟಿಕೆಗಳಿಗೆ ಅವಕಾಶಕೊಟ್ಟು ಸತ್ಯಕ್ಕೆ ಹತ್ತಿರವಿರುವಂಥ ಟೀಕೆಗಳಿಗೆ ಅವಕಾಶ ಕೊಟ್ಟು ಸರಿಪಡಿಸುವಂಥ ಪ್ರಾಮಾಣಿಕವಾದ ಪ್ರಯತ್ನ ಸರ್ಕಾರ ಮಾಡಿಲ್ಲ ಅದಕ್ಕೆ ಬೇಕಾದ ಸಮಯ ಕೊಡಲಿಲ್ಲ ಎನ್ನುವುದು ಈಗಾಗಲೇ ಸ್ಪಷ್ಟವಾಗಿದೆ ಕಳೆದ

22 ತಿಂಗಳ ಕಾಂಗ್ರೆ ಸರ್ಕಾರದ ಆಡಳಿತದಲ್ಲಿ ಬಹುಶಃ ಜನತೆ ಒಂದು ಗಂಬೀರವಾದ ಸ್ಥಿತಿಗೆ ಬಂದು ತಲುಪಿದ್ದಾರೆ.

(ಉಪಾಧ್ಯಕ್ಷಿಣಿಯವರು ಪೀಠದಲ್ಲಿ ಉಪಸ್ಥಿತರಿದ್ದರು)

1989ರಲ್ಲಿ ನಡೆದಂಥ ಒಂದು ಚುನಾವಣೆಯಲ್ಲಿ ಹೆಚ್ಚಿನ ಭಹುಮತ ಇವರಿಗೆ ಸಿಕ್ಕಿತು ಅದೊಂದು ರಾಜಕೀಯ ಸ್ಥಿರತೆಗಾಗಿ ಕಾರಣವಾಗಲಿಲ್ಲ ಅಥವಾ ಜನಪರ ಒಂದು ಕಾರ್ಯಕ್ರಮ ರೂಪಿಸಿ ಜನಪಿತ ಮಾಡುವುದರಲ್ಲಿ ಸಫಲರಾಗುವುದಕ್ಕೆ ಅವರಿಂದ ಸಾಧ್ಯವಾಗಲಿಲ್ಲ ಅಥವಾ ಒಂದು ಸ್ಥಿರ ಸರ್ಕಾರವನ್ನೂ ಸಹ ಕೊಡುವಂಥ ಸ್ಥಿತಿಯಲ್ಲಿ ಇಲ್ಲದೆ ಆ ರೀತಿ ಒಂದು ಹೆಚ್ಚಿನ ಬಹುಮತ ಇದ್ದಂಥ ಸಮಯದಲ್ಲಿ ಇದು ಒಂದು ಶಾಪವಾಗಿ ಪರಿಗಣನೆಯಾಗಿರುವಂತಾದ್ದು ನಿಜವಾಗಿಯೂ ಪ್ರಜಾತಂತ್ರ ವ್ಯವಸ್ಥೆಯನ್ನು ಬುಡಮೇಲು ಮಾಡುವಂಥ ಜನತೆಗೆ ನೋವು ತರುವಂಥ ಒಂದು ಪ್ರಸಂಗವೆಂದು ಅನಿವಾರ್ಯವಾಗಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ ಒಂದು ವರ್ಷದೊಳಗಾಗಿ ಒಬ್ಬ ಮುಖ್ಯಮಂತ್ರಿಗಳ ಬದಲಾವಣೆಯಾಯಿತು ಹಿಂದುಳಿದ ಜನಾಂಗದ ಹಿನ್ನೆಲೆಯಲ್ಲಿ ಹೋರಾಟ ಮಾಡಿಕೊಂಡು ಬಂದಂಥ ಸನ್ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾದ ನಂತರ ಬಹುಶಃ ಶ್ರೀ ಸಾಮಾನ್ಯ ಬಡ ಬಗ್ಗರನ್ನು ಹಿಂದುಳಿದ ಸಮಾಜಕ್ಕೆ ಹರಿಜನ ಗಿರಿಜನರಿಗೆ ಒಳ್ಳೆಯ ಕೆಲಸ ಮಾಡಬಹುದು ಅನ್ನುವಂತದ್ದು ಸುಳ್ಳಾಯಿತು. ಆ ದಿಕ್ಕಿನಲ್ಲಿ ಅವರು ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ ಅನ್ನುವಂಥ ಮಾತನ್ನು ಆಡಳಿತ ಪಕ್ಷದ ಸದಸ್ಯರೇ ಹೇಳುವಂಥ ಒಂದು ವಿಚಿತ್ರವಾದ ಪರಿಸ್ಥಿಗೆ ಬಂದು ಮುಟ್ಟಿದೆ. ಬಹುಶಃ ಹತ್ತಿರದಲ್ಲಿ ಮೂರನೇ ಒಬ್ಬ ಮುಖ್ಯಮಂತ್ರಿಯನ್ನು ಸಹ ಈ ರಾಜ್ಯದ ಜನತೆ ಅನಿವಾರ್ಯವಾಗಿ ನೋಡುವಂಥ ಒಂದು ವಿಚಿತ್ರವಾದ ಪರಿಸ್ಥಿತಿ ಇವೊತ್ತು ರಾಜ್ಯದ ಜನತೆ ಒದಗಿ ಬಂದಿರುವಂಥದ್ದು ನಿಜಕ್ಕೂ ಗೌರವ ತರುವಂಥ ಸಂಗತಿಯೆಂದು ನನಗೇನು ಅನಿಸುವುದಿಲ್ಲ. ಬಹುಶಃ ಇಂಥ ಒಂದು ಬದಲಾವಣೆ ಒಂದು ಒಳಜನಗಳವನ್ನು ಕುಗ್ಗಿಸಲಿಲ್ಲ ಅಥವಾ ಆಡಳಿತ ಪಕ್ಷ ಅದನ್ನು ಗುಪ್ತವಾಗಿ ಸರಿಪಡಿಸುವಂಥ ಒಂದು ಪ್ರಯತ್ನ ಮಾಡಿಲ್ಲ. ಬಹಿರಂಗವಾಗಿ ಅದನ್ನು ಟೀಕೆ ಮಾಡುವಂಥ ಮಟ್ಟಕ್ಕೆ ಈ ಆಡಳಿತ ವ್ಯವಸ್ಥೆ ಕುಸಿದು ಬಿದ್ದಿರುವಂಥದನ್ನು ಪ್ರತಿನಿತ್ಯ ನಾವು ನೋಡುತ್ತಿದ್ದೇವೆ. ಇಂತಹ ಒಂದು ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಮೋಟಮ್ಮನವರು ತುಂಬಾ ಒಳ್ಳೆಯ ಮಾತನ್ನು ಹೇಳಿದರು. ಹಿಂದೆ ಜನತಾದಳ ಸರ್ಕಾರ ಇಲ್ಲಿತು. ಆಡಳಿತ ಪಕ್ಷಕ್ಕೆ ತಾವು ಬಂದಿದ್ದರು ಈ ಭಾಗದಲ್ಲಿ ಟೀಕೆ ಮಾಡಿದ್ದೀರಿ ಅಧಿಕಾರಕ್ಕೆ ಬಂದ ನಂತರ ಹಿಂದೆ ಇದ್ದಂಥ ಸರ್ಕಾರ ಲೋಪದೋಷಗಳ ಬಗ್ಗೆ ಸಾಕಷ್ಟು ದಾಖಲೆಗಳು ಇರುವಂಥ ಸಂದರ್ಭದಲ್ಲಿ ಚುನಾವಣೆಯಾಗಿ ಬದಲಾವಣೆಯಾಗಿ ಸರ್ಕಾರ ಆದಾಕ್ಷ್ಯಾಣಕ್ಕೆ ಅದೊಂದು ಶಿಕ್ಷೆಯಾಗುವುದಿಲ್ಲ. ಆಡಳಿತ ಪಕ್ಷಕ್ಕೆ ಬಂದ ನಂತರ ವಿರೋಧಕಪಕ್ಷದಲ್ಲಿದ್ದಾಗ ತಾವು ಟೀಕೆ ಟಿಪ್ಪಣಿಗಳು ಮಾಡಿದ್ದರೋ ಆ ಜನ ಮಾಡಿರುವಂಥ ಅವ್ಯವಹಾರಗಳು ತಮಗೆ ಸಾಬೀತಾದರೆ ತಾವು ಇಲ್ಲಿ ಕುಳಿತಾಗ ಮಾತನಾಡಿದಂಥ ವಿಷಯಗಳು ಸರಿಯೆಂದು ನಿಮಗೆ ಅನಿಸಿದರೆ ಅಂತಹವರ ಮೇಲೆ ತೀವ್ರವಾಗಿ ಕ್ರಮ ತೆಗೆದುಕೊಂಡು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅಧಿಕಾರ ಬದಲಾವಣೆ ಆದಂಥ ಮಾತ್ರಕ್ಕೆ ಅವರು ಮಾಡಿದಂತ ಅಪಾರಾಧಗಳಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎನ್ನುವ ರೀತಿಯಲ್ಲಿ ಶಿಕ್ಷೆಗೆ ಒಳಪಡಿಸುವ ರೀತಿಯಲ್ಲಿ ನೀವು ಆಡಳಿತವನ್ನು ನಡೆಸಬೇಕಾಗಿದೆ ಅದರಲ್ಲೂ ಸಹಾ ಸಂಪೂರ್ಣವಾಗಿ ತಾವು ವಿಫಲರಾಗಿದ್ದೀರಿ ಎಂದು ನೊಂದು ಈ ಮಾತನ್ನು ಹೇಳುತ್ತಿದ್ದೇನೆ. ಅಧಿಕಾರಿಗಳು ಯಾರೇ ಇರಲಿ ಲೋಪ-ದೋಷಗಳಾಗುವುದು ಸಾಮಾನ್ಯ ತಪ್ಪುಗಳಾಗಬಹುದು. ಅದನ್ನು ತಿದ್ದಿಕೊಳ್ಳುವಂಥ ಪ್ರಯತ್ನ ಮಾಡದೇ ಯಾವುದೇ ಸಂದರ್ಭದಲ್ಲಿ ಚರ್ಚೆ ಯಾವಾಗ ನೀವೇನು

ಮಾಡಿದಿರಿ ಎನ್ನುವಂಥ ಮಾತನ್ನು ನಾವು ಕೇಳುತ್ತಿರುವಂಥದ್ದು ನಿಜಕ್ಕೂ ಆಡಳಿತ ನಡೆಸುವಂತವರಿಗೆ ಗೌರವ ಸಂಗತಿಯಲ್ಲ ನೀವು ಬೇಕಾದ್ದು ಮಾಡಿ. ಆದರೆ ನಮ್ಮ ಕಡೆಯಿಂದ ತಪ್ಪಾಗದಂತೆ ನಾವು ಆಡಳಿತ ನಡೆಸುತ್ತಿದ್ದೇವೆ ಎಂದು ಧೈರ್ಯವಾಗಿ ಸ್ಥಿತಿಗೆ ಸರಬೇಕಾಗಿತ್ತು ಆ ಪ್ರಯತ್ನ ನಿಮ್ಮ ಕಡೆಯಿಂದ ಆಗಿಲ್ಲ ಎನ್ನುವ ಮಾತನ್ನು ತುಂಬ ನೋವಿನಿಂದ ಹೇಳುತಿದ್ದೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿದ್ದಾರೆ. ಒಂದು ರಾಜಕೀಯ ಅಪರಾಧಿಗಳಿಗೆ ಶಿಕ್ಷೆ ಆಗಬೇಕು. ವಿಚಾರಣೆ ನಡೆದು ಚಾರ್ಜ್ ಶೀಟ್ ತಯಾರಿಸಿ ಅದರ ಬಗ್ಗೆ ಒಂದು ಕ್ರಿಮಿನಲ್ ಪ್ರೊಸೀಡಿಂಗ್ಸ್ ನಡೆಸಿ ಶಿಕ್ಷೆ ವಿಧಿಸಬೇಕೇ ಹೊರತು ಕೇವಲ ವಾಗ್ದಂಡನೆಯಿಂದ ಅಥವಾ ರಾಜೀನಾಮೆ ಒತ್ತಾಯ ಮಾಡುವ ದೃಷ್ಟಿಯಿಂದ ಅಥವಾ ಒಂದು ಚುನಾವಣೆ ಮಾಡಿ ಬದಲಾವಣೆ ಮಾಡುವುದರಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ ಅದಕ್ಕೋಸ್ಕರ ಇವೊತ್ತು ಪ್ರತಿಪಕ್ಷದಲ್ಲಿ ಕುಳಿತುಕೊಂಡಿರತಕ್ಕ ನಾವು ಅವಿಶ್ವಾಸ ನಿರ್ಣಯವನ್ನು ತಂದು ಅನೇಕ ಆರೋಪಗಳನ್ನು ಈ ಸರ್ಕಾರದ ಮೇಲೆ ಮಾಡಿದೆವು ಅನೇಕ ದಾಖಲೆಗಳನ್ನು ಒದಗಿಸಿಕೊಡುವಂಥ ಪ್ರಯತ್ನ ಮಾಡಿದೆವು ನಿಜ. ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಬಹುಮತ ಇಷ್ಟೊಂದು ದೊಡ್ಡದು ಇರುವಂತ ಸಮಯದಲ್ಲಿ ಅವಿಶ್ವಾಸ ನಿರ್ಣಯದ ಬಗ್ಗೆ ಚರ್ಚೆಯಾದ ಮಾತ್ರಕ್ಕೆ ಈ ಸರ್ಕಾರ ಹೋಗುತ್ತದೆ ಎನ್ನುವ ಭಾವನೆಯಿಂದ ನಾವು ಮಾಡಿಲ್ಲ. ತುಂಬಾ ಗಂಭೀರವಾದಂಥ ಯಾವ ಸರ್ಕಾರದ ಬಗ್ಗೆ ಈ ರೀತಿ ಒಂದು ಆರೋಪದ ಪಟ್ಟಿ ಮಾಡಿ ನೀವು ಅಧಿಕಾರದಲ್ಲಿ ಮುಂದುವರೆಯುವುದಕ್ಕೆ ಸಾಧ್ಯವಿಲ್ಲ ಬಹುಮತ ಇರಬಹುದು. ಆದರೆ ಜನ ನಿಮ್ಮ ಬಗ್ಗೆ ವಿಶ್ವಾಸ ಕಳೆದುಕೊಂಡಿದ್ದಾರೆ ಎನ್ನುವಂತ ಮಾತನ್ನು ಅವಿಶ್ವಾಸ ನಿರ್ಣಯದ ಮೂಲಕ ತಮ್ಮ ಕಿವಿಗೆ ತಲುಪಿಸುವಂಥ ಒಂದು ಪ್ರಾಮಾಣಿಕ ಪ್ರಯತ್ನ ಮಾಡಿದೆವು ಅಧಿಕಾರದಲ್ಲಿ ಮುಂದುವರಿಯಬೇಕೆಂದು ಇದ್ದರೆ ನಾವು ಮಾಡಿದಂಥ ಚಾರ್ಜಸ್‌ನಲ್ಲಿ ಏನಾದರೂ ಸತ್ಯಾಂಶ ಇದೆಯೆಂದು ಅದನ್ನು ಸರಿಪಡಿಸಿಕೊಳ್ಳುವಂಥ ಪ್ರಾಮಾಣಿಕ ಪ್ರಯತ್ನ ನಿಮ್ಮ ಕಡೆಯಿಂದ ಆಗದೇ ಅವಿಶ್ವಾಸ ನಿರ್ಣಯದಲ್ಲಿ ಹೇಗೂ ನಾವು ಗೆದ್ದಿದ್ದೇವೆ ಇನ್ನು ಯಾವುದೇ ಭಯವಿಲ್ಲ ಎನ್ನುವಂತ ಮಾತನ್ನು ತಾವು ಏನು ಹೇಳುತ್ತಿದ್ದೀರಿ ಈ ಪ್ರಜಾತಂತ್ರ ವ್ಯವಸ್ಥೆಯ ಮಾಲೀಕರು ಹೊರಗಡೆ ಕುಳಿತಿದ್ದಾರೆ ಅವರು ಪ್ರತಿಯೊಂದು ಕ್ಷಣದಲ್ಲೂ ಅಬ್ಸರ್ವ್ ಮಾಡುತ್ತಿದ್ದಾರೆ. ಜನಹಿತ ಮರೆತಿದ್ದಾರೆಯೇ? ಅಭಿವೃದ್ಧಿ ಕಾರ್ಯ ಸ್ಥಗಿತವಾಗಿದೆಯೇ ಹೇಗೆ? ಎಲ್ಲಾ ರಂಗದಲ್ಲಿ ವ್ಯಾಪಕ ಭ್ರಷ್ಟಾಚಾರ ತಾಂಡವವಾಡುತ್ತಿದೆ ಮುಖ್ಯಮಂತ್ರಿಗಳಿಗೆ ನಾನು ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಸ್ವಾಮಿ ಕೇವಲ ಆರೋಪ ಮಾಡುವುದಕ್ಕೋಸ್ಕರ ನಾನು ಹೇಳುತ್ತಿಲ್ಲ. ನಿಮ್ಮ ಬಗ್ಗೆ ನನಗೆ ಗೌರವ ಇದೆ. ಕೆಲವು ಲೋಪದೋಷಗಳಾಗಿರಬಹುದು. ಆದರೆ ನಾನು ನಿಮ್ಮನ್ನು ಕೇಳುತ್ತಿದ್ದೇನೆ. ನಿಮ್ಮ ಸರ್ಕಾರ ಕೇಂದ್ರದಲ್ಲೂ ಇದೆ. ಇವೊತ್ತು ನಿಮ್ಮ ಬಗ್ಗೆ ಆಡಳಿತ ಪಕ್ಷದಲ್ಲಿರುವಂಥ ಸದಸ್ಯರೇ ಟೀಕೆ ಮಾಡಿರುವಂಥದ್ದು ಆರೋಪದ ಪಟ್ಟಿಯನ್ನು ಡೆಲ್ಲಿಗೆ ತೆಗೆದುಕೊಂಡು ಹೋಗಿರುವಂಥದ್ದು ಪತ್ರಿಕೆಯಲ್ಲಿ ದಿನನಿತ್ಯ ಬರುತ್ತಿದೆ. ನನಗೂ ಇದರ ಬಗ್ಗೆ ನೋವಾಗಿದೆ ಇದು ಆನಂದ ತರುವಂಥ ಸಂಗತಿಯಲ್ಲ ಅದಕ್ಕೆ ನಾನು ತಮಗೆ ಹೇಳುತ್ತಿದ್ದೇನೆ. ಯಾರು ನಿಮ್ಮ ಬಗ್ಗೆ ಆರೋಪ ಮಾಡುತ್ತಾರೋ ಅವರು ನಿಮ್ಮ ಸದಸ್ಯರು ಇರಬಹುದು ಅಥವಾ ನಾವು ಆರೋಪ ಮಾಡುತ್ತಿದ್ದೇವೆ. ಇಂಥ ಒಂದು ಸಂದರ್ಭದಲ್ಲಿ ನಿಮ್ಮದೇ ಒಂದು ಸರ್ಕಾರ ಇರುವಾಗ ಒಂದು ಅಗ್ನಿ ಪರಿಕ್ಷೆಗೆ ತಾವು ಒಳಗಾಗುತ್ತೀರಾ? ತಮ್ಮ ಮೇಲೆ ಇರುವಂಥ ಆರೋಪದ ಬಗ್ಗೆ ಸರ್ಕಾರದ ಮೇಲಿರುವಂಥ ಆರೋಪದ ಬಗ್ಗೆ ಮಂತ್ರಿಗಳ

ಮೇಲಿರುವಂಥ ಆರೋಪದ ಬಗ್ಗೆ ಒಂದು ಸಿ.ಬಿ.ಐ. ತನಿಖೆಗೆ ನೀವು ಆಜ್ಞೆ ಮಾಡುತ್ತೀರಾ?

ಅದರಿಂದ ಹೊರಬರುವ ಹೊರಬರುವ ಪ್ರಯತ್ನವನ್ನು ಮಾಡುತ್ತೀರಾ? ಈ ರೀತಿ ನಾನು ನಿಮಗೆ ಸಧನದಲ್ಲಿ ಜನತೆಯಪರವಾಗಿ ವಿನಂತಿಮಾಡುತ್ತೇನೆ ನಿಮ್ಮ ಮೇಲೆ ನಿಮ್ಮ ಸರ್ಕಾರದ ಮೇಲೆ ನಿಮ್ಮ ಮಂತ್ರಿಮಂಡಲದ ಮೇಲೆ ಮಾಡಿರುವ ಆರೋಪದಿಂದ ಹೊರಗೆ ಬರಬೇಕಾದರೆ ದಯಮಾಡಿ ಸಿ.ಓ.ಡಿ. ತನಿಖೆಯ ಅಗ್ನಿಪರೀಕ್ಷೆಗೆ ಒಳಗಾಗಿ ಆದಾಗದಿದ್ದರೆ ನಿಮ್ಮ ಭಿನ್ನಮತಿಯ ಶಾಸಕರು ಹೇಳುವಂತಹ ಮಾತನ್ನು ಮತ್ತು ನಾವು ಮಾಡುತ್ತಿರುವ ಚಾರ್‌ಜಸ್ ಮೇಲೆ.... ಸನ್ಮಾನ್ಯ ಉಪಾಧ್ಯಕ್ಷಣೆಯವರೇ ಮುಖ್ಯಮಂತ್ರಿಗಳು ಬದಲಾವಣೆಯಗುವುದು ಸಮಸ್ಯೆಗೆ ಪರಿಹಾರವಲ್ಲ. ಕಾಂಗ್ರೆಸ್‌ನ್ನು ಉಳಿಸುವಂತಹ ಪ್ರಶ್ನೆಯಲ್ಲ ಜನರ ಹಿತವನ್ನು ನಾವು ಮಾಡಬೇಕಾಗಿದೆ. ಅದುದರಿಂದ ನಾನು ಹೇಳುತ್ತೇನೆ. ನಿಜವಾಗಿಯೂ ಆಡಳಿತ ಪಕ್ಷದಲ್ಲಿರುವಂತ ಸದಸ್ಯರು ಬಹಿರಂಗವಾಗಿ ಹೊರಗೆ ಬಂದಿರುವುದು ಸರಿಯಲ್ಲವೆಂದು ನಾನು ಹೇಳುತ್ತೇನೆ. ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸಚಿವ ಸಂಪುಟದಲ್ಲಿರತಕ್ಕ ಸಚಿವರೇ ಮುಖ್ಯಮಂತ್ರಿಗಳ ಬಗ್ಗೆ ಆರೋಪವನ್ನು ಮಾಡುವಂತಹ ಮಟ್ಟಕ್ಕೆ ಹೋಗುವಂಥದ್ದು ಅಥವಾ ಈ ರೀತಿ ಚರ್ಚೆ ಸದನದಲ್ಲಿ ನಡೆದಿರತಕ್ಕ ಸಂದರ್ಭದಲ್ಲಿ...... ಅವರ ಶಾಸಕಾಂಗ ಪಕ್ಷದ ಸಭೆಯಲ್ಲಿ..... ಈ ರೀತಿ ಯಾರು ವಿರೋಧಪಕ್ಷದಲ್ಲಿ ಕುಳಿತು ಗುರುತರವಾದ ಆರೋಪವನ್ನು ಮಾಡಬೇಕಾಗಿತ್ತೋ ಒಂದು ರೀತಿಯಲ್ಲಿ ನಾವು ಕರ್ತವ್ಯ ಭ್ರಷ್ಟರಾಗಿದ್ದೇವೆ. ವಿರೋಧಪಕ್ಷದಲ್ಲಿ ಕುಳಿತುಕೊಂಡು ಅದೆಷ್ಟೇ ಬರಲಿ ಒಂದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಆಡಳಿತ ಪಕ್ಷಕ್ಕಿಂತ ದೊಡ್ಡ ಜವಾಬ್ದಾರಿ ವಿರೋಧಪಕ್ಷದ ಮೇಲಿದೆ. ಆ ಜವಾಬ್ದಾರಿಯಿಂದ ಸಂಪೂರ್ಣವಾಗಿ ವಿಫಲರಾಗಿದ್ದೇವೆ ಎನ್ನುವ ಮಾತನ್ನು ನೊಂದ ಮನಸ್ಸಿನಂದ ನಾನು ಹೇಳುತ್ತೇನೆ. ಯಡಿಯೂರಪ್ಪನವರೆ ನೀವು ಏನು ಮಾಡುತ್ತೀರಾ ನೀವು ವಿರೋಧಪಕ್ಷದಲ್ಲಿಲ್ಲವೇ ಎಂದು ಪತ್ರಿಕೆಯವರು ಅಳತೆ ಮಾಡತಕ್ಕಂತಾದ್ದು ನಿಮ್ಮ ಅಧಿಕಾರಿಗಳಂತ ನಿಮ್ಮ ಶಾಸಕರನ್ನು ಅಳತೆ ಮಾಡತಕ್ಕಂಥವರು ಎಷ್ಟೋ ಜನ ಶಾಸಕರು ಇದ್ದಾರೆ. ಇದರ ಅದಾರದ ಮೇಲೆ ತೀರ್ಮಾನವಾಗುತ್ತಿರುವುದರಿಂದ ನಾವು ಆರೋಪ ಮಾಡತಕ್ಕ ಪಟ್ಟಿಯ ಬಗ್ಗೆ ಇಲ್ಲಿ ಗುರುತರವಾಗಿ ಎಷ್ಟರ ಮಟ್ಟಿಗೆ ಚಿಂತನೆ ಆಗಬೇಕಾಗಿತ್ತೋ ಅದು ಆಗದಿರುವ ಪರಿಣಾಮ ಈವತ್ತು ಪ್ರಜಾತಂತ್ರ ವ್ಯವಸ್ಥೆ ಹಾಳಾಗುವಂಥ ದುಸ್ಥಿತಿ ತಲುಪುತ್ತಾ ಇದೆ ದಯಮಾಡಿ ನಿಮ್ಮ ಬಗ್ಗೆ ಅನೇಕ ಗುರುತರವಾದ ಆರೋಪಗಳಿವೆ ಸಾಕ್ಷಿಗಳನ್ನು ನಾವು ಕೊಟ್ಟಿದ್ದೇವೆ. ನಮ್ಮ ಆರೋಪದ ಪಟ್ಟಿ ಏನು ಇದೆ. ಇದರ ಆಧಾರದ ಮೇಲೆ ತಾವು ಸಿ.ಬಿ.ಐ. ತನಿಖೆಗೆ ಒಳಗಾಗಬೇಕು. ಇದಕ್ಕೆ ತಾವು ಆಜ್ಞೆ ಮಾಡಬೇಕು. ಇಲ್ಲದಿದ್ದರೆ ನಿಮ್ಮ ಬಗ್ಗೆ ಜನರಿಗಿರುವ ಸಂಪೂರ್ಣವಾದ ವಿಶ್ವಾಸವನ್ನು ಕಳೆದುಕೊಳ್ಳುತ್ತೀರೋ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಸನ್ಮಾನ್ಯ ಉಪಾಧ್ಯಕ್ಷಣೆಯರೆ ಹೆಚ್ಚಿನ ವಿವರಣೆಗಳಿಗೆ ನಾನು ಹೋಗುವುದಿಲ್ಲ ಈ ಕಮರ್ಶಿಯಲ್ ಟ್ಯಾಕ್ಸ್ ಅಧಿಕಾರಿಗಳ ಬಗ್ಗೆ ಹತ್ತಾರು ಪ್ರಕರಣಗಳ ದಾಖಲೆಗಳನ್ನು ನಾನು ನಿಮಗೆ ಕೊಡುತ್ತೇನೆ. ವಿಶೇಷವಾಗಿ ಕಳೆದ 1-2 ತಿಂಗಳಿನಿಂದ ಅಂದರೆ ಲೋಕಸಭೆಯ ಚುನಾವಣೆಯು ಹತ್ತಿರ ಬಂದಮೇಲೆ ದೊಡ್ಡ ಪ್ರಮಾಣದಲ್ಲಿ ತಾವು ಕೋಟ್ಯಾಧಿಶ್ವರರ ಬಗ್ಗೆ ಯಾವ ಲಿಟಿಗೇಷನ್ ಇತ್ತೋ ತಕರಾರು ಇತ್ತೋ ಇದನ್ನು ಡಿಸ್‌ಪೋಸ್ ಮಾಡಿದಿರಿ ಇದರಿಂದ ಸರ್ಕಾರದ ಬೊಕ್ಕಸಕ್ಕೆ ಬರಬೇಕಾಗಿದ್ದು ಕೋಟ್ಯಾಂತರ ರೂಪಾಯಿಗಳನ್ನು ತಪ್ಪಿಸಿದಿರಿ ಕಳೆದ 2-3 ತಿಂಗಳಿಂದ ಈಚೆಗೆ ಈ ರೀತಿ ಕಮರ್ಶಿಯಲ್ ಟ್ಯಾಕ್ಸ್ ಇಲಾಖೆಯಲ್ಲಿ ಅನೇಕ ಆರೋಪಗಳಿದ್ದು ಬೇರೆ ಬೇರೆ ತನಿಖೆಗಾಗಿ ಬೇರೆ ಬೇರೆ ಕಾರಣಕ್ಕಾಗಿ ಲಿಟಿಗೇಷನ್ ಇದ್ದಂತ ಎಷ್ಟು ಪ್ರಕರಣಗಳನ್ನು ತಾವು ಬಗೆಹರಿಸಿದ್ದೀರಿ.

ಎಷ್ಟು ಕೋಟಿ ರೂಪಾಯಿಗಳು ನಿಮ್ಮ ಸರ್ಕಾರದ ಬೊಕ್ಕಸಕ್ಕೆ ಬರಬೇಕಾಗಿರುವುದನ್ನು ಅವರಿಗೆ ವಿನಾಯಿತಿ ರೂಪದಲ್ಲಿ ಕೊಟ್ಟಿದ್ದೀರಿ ಅದರ ವಿವರಣೆಯನ್ನು ಕೊಡಿ ಇಲ್ಲದಿದ್ದರೆ ನಾನೇ ಅದನ್ನು ಕಳಿಸಿಕೊಡುತ್ತೇನೆ. ಸಾಮಾನ್ಯ ತೆರಿಗೆದಾರನಿಗೆ ಈ ರೀತಿ ಅನ್ವಯಿಸುತ್ತೀರಾ? ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕಾಗಿತ್ತು ಲೂಟಿಮಾಡಲು ಹೊರಟಂತಹ ದೊಡ್ಡ ದೊಡ್ಡವರಿಂದ ತೆರಿಗೆಯನ್ನು ವಸೂಲಿ ಮಾಡಬೇಕಾಗಿತ್ತೋ ಅಲ್ಲಿ ಅವರಿಗೆ ವಿನಾಯಿತಿಯನ್ನು ಕೊಡುವಂತ ಪ್ರಯತ್ನ ಅನೇಕ ತಿಂಗಳಿನಿಂದ ನಡೆದು ಹೋಗಿದೆ. ಅದರ ಸಂಪೂರ್ಣವಾದ ವಿವರಣೆಯನ್ನು ಮುಖ್ಯಮಂತ್ರಿಗಳು ಈ ಸಂದರ್ಭದಲ್ಲಿ ಕೊಡಬೇಕೆಂದು 1 ಒತ್ತಾಯ ಮಾಡುತ್ತೇನೆ. ಉಪಾಧ್ಯಕ್ಷಿಣಿಯವರೆ ಆಗಸ್ಟ್ ಮತ್ತು ಸೆಪ್ಟಂಬರ್ ತಿಂಗಳಿನಲ್ಲಿ ಬೆಂಗಳೂರು ಜಿಲ್ಲೆ ಬೆಂಗಳೂರು ನಗರ ಮತ್ತು ಮೈಸೂರಿನಲ್ಲಿ ಕೊಟ್ಯಾಂತರ ರೂಪಾಯಿ ಬೆಲೆಬಾಳುವ ಆಸ್ತಿಯು ಸಬ್ ರಿಜಿಸ್ಟಾರ್ ಕಛೇರಿಯಲ್ಲಿ ರಿಜಿಸ್ಟ್ರೇಷನ್ ಆಗಿದೆ. ಅದನ್ನು ಮುಖ್ಯ ಮಂತ್ರಿಗಳಿಗೆ ಕಳಿಸುತ್ತೇನೆ ಬಹುಶಃ ಮಂತ್ರಿಗಳ ಬಗ್ಗೆ ಆರೋಪವನ್ನು ಮಾಡಬೇಕಾದರೆ ಅನುಮತಿಯನ್ನು ತೆಗೆದುಕೊಳ್ಳಬೇಕು. ನಾನು ಸಂಬಂಧ ಪಟ್ಟ ದಾಖಲೆಗಳನ್ನು ಮಂತ್ರಿಗಳಿಗೆ ಕಳಿಸಿಕೊಡುತ್ತೇನೆ. ಆಗಸ್ಟ್ ಮತ್ತು ಸೆಪ್ಟಂಬರ್ ತಿಂಗಳಿನಲ್ಲಿ ಅಸ್ತಿಯು ವಿಲೇವರಿ ಸಬ್‌ರಿಜಿಸ್ಟಾರ್ ಕಛೇರಿಯಲ್ಲಿ ಆಗಿದೆ power of attorney sale deed ತರಹ ಇದ್ದು ಕಡಿಮೆ ಸ್ಟಾಂಫ್‌ನ್ನು ನೀವು ಕೊಟ್ಟಿದ್ದೀರಿ ವಿಲ್ ರಿಜಿಸ್ಟರ್ ಆಗಿರುವಂಥದ್ದು ಸೇಲ್‌ಡೀಡ್‌ಗಳು 15-20 ಕೋಟಿ ರೂಪಾಯಿ ಬೆಲೆಬಾಳುವ ಆಸ್ತಿಗಳು ಈ ರೀತಿ ವರ್ಗಾವಣೆಯಾಗಿದೆ. ಒಂದು ಕೈನಿಂದ ಇನ್ನೊಂದು ಕೈಗೆ ಬದಲಾವಣೆಯಾಗಿದೆ. ಸುಮಾರು ಎರಡು ಎರಡೂವರೆ ತಿಂಗಳಿನಲ್ಲಿ 50 ಕೋಟಿ ರೂಪಾಯಿಗಳಿಗೂ ಹೆಚ್ಚು ಬಹುಶಃ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಹಿಂದೆಯೂ ಇಲ್ಲದಂತಹ ರಿಜಿಸ್ಟ್ರೇಷನ್‌ಗಳು ಪವರ್ ಆಫ್ ಅಟಾರ್ನಿ ಮೂಲಕ ಸಬ್‌ರಿಜಿಸ್ಟಾರ್‌ರನ್ನು ಹೆದರಿಸಿ ಬೆದರಿಸಿ ರಿಜಿಸ್ಟ್ರೇಷನ್‌ಗಳಾಗಿದೆ. ಇದರ ಬಗ್ಗೆ ಸಂಪೂರ್ಣವಾದ ತನಿಖೆಯಾಗಬೇಕು. ಇದರ ಬಗ್ಗೆ ಸಿ.ಒ.ಡಿ. ತನಿಖೆಯಾಗಬೇಕು.

ಕಳೆದ ಎರಡು ತಿಂಗಳಿನಲ್ಲಿ ಆಗಿರತಕ್ಕ ರಿಜಿಸ್ಟ್ರೇಷನ್ ಏನು ಇದೆ ಅತಿ ಪ್ರಾಮುಖ್ಯವಾದಂತಹ ಬೆಂಗಳೂರು ಜಿಲ್ಲೆ, ಬೆಂಗಳೂರು ನಗರ ಮೈಸೂರಿನಲ್ಲಿ ಆಗಿರತಕ್ಕ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಆಸ್ತಿ ಏನು ಆ ಕಡೆಯಿಂದ ಈ ಕಡೆಗೆ ಹೋಗಿದೆ. ಈ ಸರ್ಕಾರದ ಬಗ್ಗೆ ಇರತಕ್ಕ ವಿಶ್ವಾಸವನ್ನು ಕಳೆದುಕೊಳ್ಳತಕ್ಕ ರಿಜಿಸ್ಟ್ರೇಷನ್ ಏನು ಆಗಿದೆ ಅದರ ದಾಖಲೆಗಳನ್ನು ನಾನು ಮುಖ್ಯಮಂತ್ರಿಗಳಿಗೆ ಕಳಿಸಿಕೊಂಡುತ್ತೇನೆ ಮುಖ್ಯಮಂತ್ರಿಗಳು ಇದನ್ನು ಸರಿಯೆಂದು ಹೇಳಿದ ಮೇಲೆ ನಾನು ಅದರ ಬಗ್ಗೆ ಇಲ್ಲಿ ಚರ್ಚೆ ಮಾಡುತ್ತೇನೆ. ರಿಜಿಸ್ಟ್ರೇಷನ್ ಆಗಿರತಕ್ಕ ಕಾಫಿಗಳು ಮತ್ತು ಅದರ ನಂಬರ್‌ನ್ನು ನಾನು ಕೊಡುತ್ತೇನೆ. ಆದರೆ ನಿಮ್ಮ ಉತ್ತರವನ್ನು ಈ ಸಂದರ್ಭದಲ್ಲಿ ಹೇಳುತ್ತೀರಾ. ನಾನೂ ಸಹ ಶೇಕಡ 31ರಷ್ಟು ಓಟುಗಳನ್ನು ಪಡೆದು ಬಂದಿದ್ದೇನೆ. ಇಲ್ಲಿ ಒಂದು ಪಕ್ಷದ ಪ್ರತಿನಿದಿಯಾಗಿ 4 ಜನ ಮಾತ್ರ ಇರಬಹುದು. ನಾಲ್ಕು ಇದ್ದದ್ದು 140 ಆಗಬಹುದು 140 ಇರುವವರು ಮನೆಗೆ ಹೋಗಬಹುದು ಈ ವಿಷಯ ಬೇರೆ ಜನಗಳ ಪ್ರಶ್ನೆ ಇದಲ್ಲ, ಈ ರೀತಿ ಗುರುತರವಾದ ಆರೋಪವನ್ನು ಮಾಡತಕ್ಕ ಸಮಯದಲ್ಲಿ ಕಳೆದ ಆಗಸ್ಟ್ ಮತ್ತು ಸೆಪ್ಟಂಬರ್ ತಿಂಗಳಿನಲ್ಲಿ ಆಗಿರತಕ್ಕ ರಿಜಿಸ್ಟ್ರೇಷನ್‌ಗಳ ಬಗ್ಗೆ ದಯಮಾಡಿ ತನಿಖೆಯನ್ನು ಮಾಡಬೇಕು ನ್ಯಾಯಾಂಗ ತನಿಖೆಯಾಗಬೇಕು. ಅಥವಾ ಸಿ.ಓ.ಡಿ. ಯಿಂದ ತನಿಖೆ ಮಾಡಿಸಿ ಇದನ್ನು ಬಹಿರಂಗಗೊಳಿಸಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಪೂರ್ವವಾಗಿ ಹೇಳುತ್ತೇನೆ.

10.45 ಪಿ.ಎಂ

ಇನ್ನು ರಾಜ್ಯದ ರೈತರ ಸಮಸ್ಯೆ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಒಂದು ಸಂಗತಿಯನ್ನು ತರುತ್ತೇನೆ ತಾವು ಮೊನ್ನೆ ಉತ್ತರ ಕೊಡುವ ಸಂದರ್ಭದಲ್ಲಿ ರೈತರ ಸಮಸ್ಯೆ ಬಗ್ಗೆ ಸ್ಟೇಟ್‌ಮೆಂಟ್ ಮಾಡಿಸುತ್ತೇನೆಂದು ಹೇಳಿದ್ದಿರಿ. ಆದರೆ 10 ಸಾವಿರದೊಳಗಡೆ ಇರುವಂತಹ ಯಾವ ರೈತನ ಬಗ್ಗೆ ಕೇಂದ್ರಸರ್ಕಾರ ಈ ಕಂಡೀಷನ್‌ಗಳನ್ನು ಹಾಕಿದೆ ಇದರಿಂದ ಅವನ್ನು ಮುಕ್ತನಾಗುವುದಿಲ್ಲ ಶೇಕಡ 5 ಪರ್ಸೆಂಟ್ ರೈತರಿಗೆ ಇದರಿಂದ ಉಪಯೋಗವಾಗುವುದಿಲ್ಲ. ಕೋ-ಆಪರೇಟೀವ್ ಸೊಸೈಟಿಗಳು ಬಾಗಿಲು ಹಾಕಿವೆ. ಬೆಳೆ ಸಾಲ ಸಿಗುತ್ತಾ ಇಲ್ಲ. ತಾವು ಏನು ಹೇಳಿದ್ದಿರಿ. ಯಡಿಯೂರಪ್ಪನವರೆ 10 ಸಾವಿರ ಒಳಗೆ ಇರತಕ್ಕ ಯಾವುದೇ ಸಾಲದ ಬಗ್ಗೆ ಅಧಿಕಾರಿ ಕೆಲಸ ಮಾಡಿರಲಿ ಅವನ ಮೇಲೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಹಾಗೆ ಆಗುವುದಕ್ಕೆ ಬಿಡುವುದಿಲ್ಲವೆಂದಿರಿ. ಅಧ್ಯಕ್ಷರೆ ಸರ್ಕಾರದಿಂದ ಸುತ್ತೋಲೆ ಹೋಗಿದೆ. ದಿನಾಂಕ 6-9-1991 ಕ್ರಮಾಂಕ ಆರ್ 1 ಎ.ಎಂ.ಸಿ. 2.91-92 ಕರ್ನಾಟಕ ಸರ್ಕಾರ ಸಹಕಾರ ಇಲಾಖೆ ಸಹಕಾರ ಸಂಘ ನಿಬಂಧಕರ ಕಛೇರಿ ಸಂಖ್ಯೆ ಒಂದು ಇಲ್ಲಿ ತಾವು ಒಂದು ಅದೇಶವನ್ನು ಕಳುಹಿಸಿದ್ದೀರಿ 10 ಸಾವಿರ ರೂಪಾಯಿಗಳ ತಕರಾರು ಅನ್ವಯಿಸುವುದಿಲ್ಲವೆಂದು ಅದು ಕೇವಲ ಒಂದು ಸಾವಿರವಾದರೂ ಸಹ ವಸೂಲಿ ಮಾಡಬೇಕಾಗುತ್ತದೆಂದು ಸೂಚನೆ ನೀವು ಕಳುಹಿಸಿಕೊಟ್ಟಿದ್ದೀರಿ ಮತ್ತು ಒತ್ತಾಯ ಮಾಡಬೇಕೆಂದು ಹೇಳಿದ್ದೀರಿ. ರೈತರೊಡನೆ ಸೌಜನ್ಯದಿಂದ ವರ್ತಿಸಬೇಕೆಂದರೆ ಇದರ ಅರ್ಥ ಬಲಾತ್ಕಾರ ತೆಗೆದುಕೊಂಡು ಸಾಲ ವಾಸೂಲಿ ಮಾಡಬಾರದು ಎಂದು ಅಲ್ಲವೆಂದು ಸ್ಪಷ್ಟೀಕರಣ ನೀಡಿರುತ್ತಾರೆ. ಅಂದರೆ ಒಂದು ಸಾವಿರ ಇರಲಿ ಎರಡು ಸಾವಿರ ಇರಲಿ ಆ ಸಾಲವನ್ನು ಬಲಾತ್ಕಾರದಿಂದ ವಸೂಲಿ ಮಾಡಬೇಕೆಂದು ನೀವು ಸುತ್ತೋಲೆಯನ್ನು ಸರ್ಕಾರದಿಂದ ಕಳುಹಿಸುಕೊಟ್ಟಿದ್ದೀರಿ ಒಬ್ಬ ಮುಖ್ಯಮಂತ್ರಿಯಾಗಿ ಇವತ್ತು ಹೇಳಿಕೆ ಕೊಡುತ್ತೀರಿ. ಯಾರು ಈ ರೀತಿ ಅಸಿಸ್ಟೆಂಟ್ ರಿಜಿಸ್ಟ್ರಾರ್‌ಗಳು ಕೇಸ್‌ಗಳನ್ನು ಹಾಕಿದ್ದಾರೆ ಅವರ ಮೇಲೆ ಕ್ರಮವನ್ನು ತೇಗೆದುಕೊಳ್ಳುತ್ತೇವೆಂದು ಹೇಳಿಕೆಯಲ್ಲಿ ಕೊಡುತ್ತೀರಿ ಇನ್ನೊಂದು ಕಡೆ ರಾಜ್ಯಸರ್ಕಾರದ ಸುತ್ತೋಲೆ ಹೊರಡಿಸಿ ಬಲಾತ್ಕಾರದಿಂದ ವಸೂಲಿ ಮಾಡಬೇಕೆಂದು ಹೇಳುತ್ತೀರಿ. ಆ ಸುತ್ತೋಲೆಯನ್ನು ನಾನು ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಇದನ್ನು ಪರಿಶೀಲನೆ ಮಾಡಿ ಬೇರೆ ಒಂದು ಸುತ್ತೋಲೆಯನ್ನು ಹೊರಡಿಸಬೇಕು. ಇದರಿಂದ ರೈತನನ್ನು ಋಣಮುಕ್ತನನ್ನಾಗಿ ಮಾಡಬೇಕು. ಈ ಸಹಕಾರ ಸಂಘಗಳು ಏನಿವೆ ಈ ಒಂದು ಸಹಕಾರಿ ವ್ಯವಸ್ಥೆ ಉಳಿಯುವಂತೆ ಮಾಡಬೇಕು ರೈತರನ್ನು ಋಣಮುಕ್ತನನ್ನಾಗಿ ಮಾಡಿ ಅವನು ಗೌರವದಿಂದ ಜೀವನ ಮಾಡುವಂತಹ ವ್ಯವಸ್ಥೆ ಮಾಡಬೇಕು ದಯವಿಟ್ಟು ತಾವು ಬೇರೆ ಒಂದು ಸುತ್ತೋಲೆಯನ್ನು ಕಳುಹಿಸುಕೊಡಬೇಕು? ಎಂಬ ಮಾತನ್ನು ಹೇಳುತ್ತೇನೆ. ಕನ್ನಡಪ್ರಭಾ ಪತ್ರಿಕೆಯ ಮುಖ ಪುಟದಲ್ಲಿ ಒಂದು ವಿಷಯ ಬಂದಿದೆ. ಅದೇನೆಂದರೆ ಕಡಲೆಕಾಯಿ ಎಣ್ಣೆಯಲ್ಲಿ ಹರಳೆಣ್ಣೆ ಬೆರಕೆ, ದೆಹಲಿಯಿಂದ ಬಂದಿರುವ ಸುದ್ದಿ. ಬೆಂಗಳೂರು ಮತ್ತು ರಾಜಕೋಟೆ ಮಾರ್ಕೆಟ್‌ಗಳಲ್ಲಿ ಚಿಲ್ಲರೆ ಮಾರಾಟದ ಕಡಲೆಕಾಯಿ ಎಣ್ಣೆ ಪ್ರತಿಶತ: 90 ಕ್ಕೂ ಹೆಚ್ಚು ಕಡಲೆಕಾಯಿ ಎಣ್ಣೆಯಲ್ಲಿ ಹರಳೆಣ್ಣೆ ಕಲಬೆರಕೆಯಾಗುತ್ತಿದೆ. ಕೆಲವು ಪ್ರಕರಣಗಳಲ್ಲಿ ಕಡಲೆಕಾಯಿ ಎಣ್ಣೆಯಲ್ಲಿ ಹತ್ತಿ ಬೀಜದ ಎಣ್ಣೆಯು ಮಿಶ್ರಿತವಾಗುತ್ತಿದೆ. ರಾಷ್ಟ್ರೀಯ ಡೈರಿ ಅಭಿವೃದ್ಧಿ ಮಂಡಳಿ ಎನ್.ಡಿ.ಡಿ.ಬಿ. ಸೂಚನೆ ಪ್ರಕಾರ ಬೆಂಗಳೂರು ಹಾಗೂ ರಾಜಕೋಟೆಗಳಲ್ಲಿ ನಡೆಸಿದ ವ್ಯಾಪಕ ಅಧ್ಯಯನದಿಂದ ಈ ಮೇಲಿನ ಅಂಶ ವ್ಯಕ್ತವಾಗಿದೆ. ಇಷ್ಟೊಂದು ಗಂಭೀರವಾಗಿರುವಂತಹ ಪ್ರಕರಣ. ಯಾವ ರೀತಿ ವ್ಯಾಪಾರಸ್ಥರು ಎಣ್ಣೆಯ ಬೆಲೆ ಗಗನಕ್ಕೆ ಏರುತ್ತಿರುವಂತಹ ಸಂದರ್ಭದಲ್ಲಿ ಈ ರೀತಿ ಶೇಂಗಾ ಎಣ್ಣೆಯಲ್ಲಿ ಹರಳೆಣ್ಣೆ ಬೆರಕೆ ಮಾಡುವಂತಹ

ಒಂದು ಪ್ರಯತ್ನ. ಹತ್ತಿ ಬೀಜದ ಎಣ್ಣೆಯನ್ನು ಬೆರಕೆ ಮಾಡುವಂತಹ ಪ್ರಕರಣ ಬಯಲಾಗುತ್ತಿದೆ. ಅಂದರೆ ಯಾವ ರೀತಿ ಇವತ್ತು ಕಲಬೆರಕೆಯಾಗುತ್ತಿದೆ ಎನ್ನುವುದಕ್ಕೆ ಇದೊಂದು ತಾಜಾ ಉದಾಹರಣೆ. ನಾನು ಮಾನ್ಯ ಆಹಾರ ಸಚಿವರನ್ನು ಒತ್ತಾಯ ಮಾಡುತ್ತೇನೆ. ತಾವು ಇದರ ಬಗ್ಗೆ ತನಿಖೆ ಮಾಡಿಸುತ್ತೀರಾ, ಇಲ್ಲದಿದ್ದರೆ ಜನರಿಗೆ ಯಾವ ರೀತಿ ಈ ಒಂದು ಆಹಾರವನ್ನು ಎಣ್ಣೆ ಮತ್ತು ಬೇರೆ ಬೇರೆ ಪದಾರ್ಥಗಳನ್ನು ಕೊಂಡು ತಿನ್ನುವುದಕ್ಕೆ ಧೈರ್ಯ ಎಲ್ಲಿ ಬರುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ಹೇಳಿಕೆ ಕೊಟ್ಟಿದ್ದರು. ಮಾನ್ಯ ಆಹಾರ ಸಚಿವರು ಹೇಳಿದ್ದರು. ಇವತ್ತು ಪಡಿತರ ವ್ಯವಸ್ಥೆಯಲ್ಲಿ ಪಾಮಾಯಿಲ್ ವಿತರಣೆ ಆಗಬೇಕಾಗಿತ್ತು ಅದು ಆಗಲಿಲ್ಲ, ಅದಕ್ಕೆ ಅವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಪಾಮಾಯಿಲ್ ನಮಗೆ ಸರಿಯಾಗಿ ಸಪ್ಲೈ ಆಗುವುದಿಲ್ಲ, ಅದರ ಬದಲು ನ್ಯಾಯ ಬೆಲೆ ಅಂಗಡಿಗಳಲ್ಲಿ ಶೇಂಗಾ ಎಣ್ಣೆಯನ್ನು ವಿತರಣೆ ಮಾಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆಂದು ಭರವಸೆ ಕೊಟ್ಟಿದ್ದರು. ಪತ್ರಿಕೆಯಲ್ಲೂ ಸಹ ಬಂದಿದೆ, ಇದರ ಬಗ್ಗೆ ನಾವು ಪ್ರಶ್ನೆಯನ್ನು ಸಹ ಕೇಳಿದ್ದೆವು. ಒಂದು ಸಾರಿ ಪಾಮಾಯಿಲ್ ಎಣ್ಣೆ ಬರಲಿಲ್ಲವೆಂದರೆ ಅದರ ಬದಲಾಗಿ ಶೇಂಗಾ ಎಣ್ಣೆಯನ್ನು ಕೊಡುತ್ತೇವೆಂದು ಆಹಾರ ಸಚಿವರು ರಾಜ್ಯದ ಜನತೆಗೆ ಭರವಸೆ ಕೊಟ್ಟಿದ್ದಾರೆ, ಪತ್ರಿಕೆಗಳಲ್ಲಿ ಹೇಳಿಕೆ ಕೊಟ್ಟಿದ್ದೀರಿ ಇದರ ಬಗ್ಗೆ ನಾವು ಪ್ರಶ್ನೆಯನ್ನು ಕೇಳಿದ್ದೇವೆ. ಮತ್ತು ಪತ್ರಿಕೆಯಲ್ಲಿ ಬಂದಿರವಂತಹ ಹರಳೆಣ್ಣೆ ಮತ್ತು ಹತ್ತಿ ಬೀಜದ ಎಣ್ಣೆ ಬೆರಕೆ, ಶೇಂಗಾ ಎಣ್ಣೆ ಕಲಬೆರಕೆಯಾಗುತ್ತಿದೆ ಎನ್ನುವ ಬಗ್ಗೆ ತಾವು ಸರಿಯಾದಂತಹ ಒಂದು ತನಿಖೆ ನಡೆಸಬೇಕು. ರಾಜ್ಯದ ಜನತೆಗೆ ಶೇಂಗಾ ಎಣ್ಣೆ ಕೊಡುತ್ತೇವೆಂದು ಏನು ಆಶ್ವಾಸನೆ ಕೊಟ್ಟಿದ್ದೀರಿ ದಯವಿಟ್ಟು ಪಾಮಾಯಿಲ್ ಬದಲು ಶೇಂಗಾ ಎಣ್ಣೆಯನ್ನು ಪಡಿತರ ವ್ಯವಸ್ಥೆ ಮೂಲಕ ವಿತರಣೆ ಮಾಡುವಂತಹ ಧೈರ್ಯ ಮಾಡಬೇಕು. ಅದನ್ನು ಜಾರಿಗೆ ತರಬೇಕು ಎನ್ನುವ ಮಾತನ್ನು ನಾನು ಹೇಳುತ್ತೇನೆ.

ಬಡವರಿಗೆ ವಿಶೇಷವಾಗಿ ನೇಕಾರರ ಲಕ್ಷಾಂತರ ಕುಟುಂಬಗಳಲ್ಲಿ ತಾವು ಭರವಸೆಯನ್ನು ಕೊಟ್ಟಿದ್ದೀರಿ. ಆದರೆ ಆಜ್ಞೆ ಮಾತ್ರ ಹೋಗಿಲ್ಲ. ಹಸಿರು ಕಾರ್ಡ್ಸ್ ವಿತರಣೆ ನಗರದಲ್ಲಿರುವಂತಹ ಕಡು ಬಡವರಿಗೆ ಮತ್ತು ಹೊರಗಡೆ ಇರುವಂತಹ ಬಡವರ ಸಮೂಹಕ್ಕೆ ನೇಕಾರರಿಗೆ ಹಸಿರು ಕಾರ್ಡ್ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆಂದು ತಾವು ಏನು ಆಶ್ವಾಸನೆ ಕೊಟ್ಟಿದ್ದೀರಿ. ಅದು ಕಾನೂನಾಗಿ, ಶಾಸನವಾಗಿ ಹೋಗಿಲ್ಲ. ದಯವಿಟ್ಟು ಇದನ್ನು ಜಾರಿಗೆ ತರಬೇಕು. ತಮ್ಮ ಉತ್ತರದಲ್ಲಿ ಇದನ್ನು ತಿಳಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಒಂದು ಕೊನೆಯ ಮಾತನ್ನು ಹೇಳಿ ನಾನು ಅವರಿಗೆ ಈ ಪತ್ರವನ್ನು ಕಳುಹಿಸಿಕೊಡುತ್ತೇನೆ. ಎಲ್ಲಾ ಕಡೆಗಳಲ್ಲಿ ಅವ್ಯವಹಾರ ನಡೆಯುತ್ತಿದೆ. ಇಲ್ಲಿ ಒಬ್ಬ ರಾಜಮ್ಮ ಎಂದು ಹೆಣ್ಣುಮಗಳು ಮುಖ್ಯ ಮಂತ್ರಿಯವರಿಗೆ ಒಂದು ಪತ್ರವನ್ನು ಬರೆಯುತ್ತಾಳೆ. ಬೆಂಗಳೂರು ಸಿಟಿ, ವಿಜಯನಗರ ಮೂರನೇ ಮುಖ್ಯರಸ್ತೆ, 1229ನೇ ನಂಬರ್ ಮನೆಯಲ್ಲಿ ವಾಸವಾಗಿರುವ ಶಿವಮೊಗ್ಗ ಜಿಲ್ಲೆ ಶುಂಠಿವ್ಯಾಪಾರಿ ದಿವಂಗತ ರಾಮಯ್ಯನವರ ಪುತ್ರಿ ರಾಜಮ್ಮಳಾದ ನಾನು ನೊಂದು ಮನವಿ ಮಾಡಿಕೊಳ್ಳುವುದು ಏನೆಂದರೆ ನಾನು 1958ನೇ ಇಸವಿಯಲ್ಲಿ ಸಿ. ಎಂ. ಮಲ್ಲಯ್ಯ ಎಂಬುವವನನ್ನು ಲಗ್ನ ಮಾಡಿಕೊಂಡೆ, ಎಂದು ಹೇಳಿದ್ದಾಳೆ. ಅವರ ಯಜಮಾನರು ಪದವೀಧರರಾಗಿದ್ದಾರೆ. 1960ರಲ್ಲಿ ಕರ್ನಾಟಕ ಸರ್ಕಾರದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗೆ ಸೇರಿಕೊಂಡರು. ಅವರ ಅಪ್ಪನ ಆಸ್ತಿ ಎಲ್ಲದರಿಂದ ಒಂದು ಸೈಟು ತೆಗೆದುಕೊಂಡು 30 ಸಾವಿರ ರೂಪಾಯಿಗೆ ಒಂದು

ಮನೆ ಕಟ್ಟಿಕೊಂಡರು. ಅಧ್ಯಕ್ಷರೆ, ನಿಮಗೆ ಆಶ್ಚರ್ಯವಾಗಬಹುದು, ಇದರ ಬಗ್ಗೆ ತನಿಖೆಯಾಗುತ್ತಿದೆ, ಆ ತನಿಖೆಯಲ್ಲಿ ಆ ಬೆಲೆ 53 ಸಾವಿರ ಆಗುತ್ತದೆಂಬು ಹೇಳಿ, 23 ಸಾವಿರ ರೂಪಾಯಿ ಹೆಚ್ಚು ಆದಾಯ ಎಲ್ಲಿ ಇತ್ತು ಎಂದು ಹೇಳಿ, ಅವರ ಪತಿಯನ್ನು ಕೆಲಸದಿಂದ 1985ರಲ್ಲಿ ಕಡ್ಡಾಯ ನಿವೃತ್ತಿ ಮಾಡಿದ್ದಾರೆ. ಆಕೆ ತಮಗೆ ಈಗ ಒಂದು ಲೆಟರ್ ಕೊಟ್ಟಿದ್ದಾಳೆ. ನಾನು ಹೇಳುವಂಥಾದ್ದು, ಯಾರೊ ಒಬ್ಬ ಬಡವೆ, ತನ್ನ ಅಪ್ಪನ ಆಸ್ತಿ ಎಲ್ಲವನ್ನೂ ಉಪಯೋಗ ಮಾಡಿಕೊಂಡರು. ಒಂದು ಮನೆಯನ್ನು ಕಟ್ಟಿಕೊಂಡು, ಮನೆಯ ಬೆಲೆ ಹತ್ತುಸಾವಿರ ರೂಪಾಯಿ ವ್ಯತ್ಯಾಸ ಆಯಿತು ಎಂದು ಹೇಳಿ, ಇದರ ಬಗ್ಗೆ ತನಿಖೆ ಮಾಡಿಸಿ, ಕೆಲಸದಿಂದ ವಜಾ ಮಾಡುವಂತಹ ಒಂದು ಹೀನಾಯವಾದಂಥ ತೀರ್ಮಾನವನ್ನು ಆ ಒಂದು ಇಲಾಖೆ ತೆಗೆದುಕೊಂಡಿದೆ. ಈ ಬಗ್ಗೆ ಅವರು ಮುಖ್ಯ ಮಂತ್ರಿಗಳಿಗೆ ಒಂದು ಪ್ರತಿಯನ್ನು ಕಳುಹಿಸಿಕೊಟ್ಟಿದ್ದಾರೆ. ನಾನು, ಸಹ ಕ'/ಹಿಸಿಕೊಡುತ್ತೇನೆ. ದಯಮಾಡಿ ಆ ಒಂದು ಹೆಣ್ಣು ಮಗಳ ಮುಂದಿನ ಭವಿಷ್ಯದ ದೃಷ್ಟಿಯಿಂದ ಏನೊಂದು ಮನೆಯನ್ನು ಅವಳು ತನ್ನ ಜೀವನದಲ್ಲಿ ಮಾಡಿಕೊಂಡಿದ್ದಳು, ಅದರ ಬಗ್ಗೆ ವಿಚಾರ ಮಾಡಿ ನೋಡಬೇಕಾಗುತ್ತದೆ. ಆಕೆ ಅದರ ಬಗ್ಗೆ ದಾಖಲೆಗಳನ್ನೂ ಕೊಟ್ಟಿದ್ದರೂ ಸಹ ಕೆಲಸದಿಂದ ವಜಾ ಮಾಡುತ್ತಾರೆ. ಇಲ್ಲಿ ದೊಡ್ಡ ದೊಡ್ಡ ಹೆಗ್ಗಣಗಳು ಕೋಟಿಗಟ್ಟಲೆ ಲೂಟಿ ಮಾಡುತ್ತಿರುವವರನ್ನು ನಾವು ರಕ್ಷಣೆ ಮಾಡುತ್ತಿದ್ದಾರೆ. ಆದ್ದರಿಂದ, ಸನ್ಮಾನ್ಯ ಮುಖ್ಯಮಂತ್ರಿಗಳು ಅವರಿಗೆ ಉದ್ಯೋಗವನ್ನು ಒದಗಿಸಿಕೊಟ್ಟು ಅವರನ್ನು ಉಳಿಸುವಂಥ ಒಂದು ಪ್ರಯತ್ನ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು 1989ರಲ್ಲಿ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯವರು ಮೈಸೂರು ಭಾಗದಲ್ಲಿ ನಿರ್ವಾಹಕರ ಹುದ್ದೆಗಳಿಗೆ ಲಿಖಿತ ಮೂಲಕ ಪರೀಕ್ಷೆ ಮಾಡಿದ್ದಾರೆ. 1989ರ ಸೆಪ್ಟೆಂಬರ್ 10ನೇ ತಾರೀಖಿನವರೆಗೆ ಲಿಖಿತ ಪರೀಕ್ಷೆಯಾಗಿದೆ. ಇವೊತ್ತಿನವರೆಗೆ ಅಲ್ಲಿ ಸೆಲೆಕ್ಷನ್ ಆಗಿರುವುದಿಲ್ಲ. ನಿರುದ್ಯೋಗಿ ಯುವಕರ ಸಮಸ್ಯೆ ನಿಮಗೆ ಗೊತ್ತಿದೆ. ಅವರಿಗೆ ಈ ತರಹದ ಟೆಸ್ಟ್ ಆಗಿ, ರಿಟರ್ನ್ ಎಕ್ಸಾಮಿನೇಷನ್ ಎಲ್ಲಾ ಮುಗಿದು ಹೋಗಿ, ಇದುವರೆಗೂ ಒಂದು ತೀರ್ಮಾನ ತೆಗೆದುಕೊಂಡಿಲ್ಲ, ಸೆಲೆಕ್ಷನ್ ಆಗಲಿಲ್ಲ ಎನ್ನುವುದು ಒಂದು ದೊಡ್ಡ ಅಪರಾಧವಾಗುತ್ತದೆ. ಆದ್ದರಿಂದ, ದಯಮಾಡಿ ತಕ್ಷಣ ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡು ಅವರಿಗೆ ಉದ್ಯೋಗ ಒದಗಿಸಿಕೊಡುವಂಥ ಒಂದು ವಿಶೇಷ ಪ್ರಯತ್ನ ಮಾಡಬೇಕು. ಬೇರೆ ಬೇರೆ ಕಡೆಗಳಲ್ಲೆಲ್ಲಾ ಮಾಡಿದ್ದಾರೆ. 1989ರ ಸೆಪ್ಟೆಂಬರ್ 10ನೇ ತಾರೀಖು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಮೈಸೂರು ವಿಭಾಗದಲ್ಲಿ ನಿರ್ವಾಹಕರ ಹುದ್ದೆಗೆ ಲಿಖಿತ ಪರೀಕ್ಷೆಯಾಗಿದೆ ಎನ್ನುವಂತಾದ್ದು ನನಗೆ ಗೊತ್ತಿಲ್ಲ. ಇದನ್ನು ನಾನು ತಮ್ಮ ಕಡೆ ಕಳುಹಿಸಿಕೊಡುತ್ತೇನೆ. ದಯಮಾಡಿ ಅದಕ್ಕೆ ಒಂದು ನ್ಯಾಯವನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಮಾನ್ಯ ಉಪಾಧ್ಯಕ್ಷಣಿಯವರೆ, ನಾನು ಹೆಚ್ಚು ಮಾತನಾಡುವುದಿಲ್ಲ, ಬಹುಶ: ಮಧ್ಯಾಹ್ನದ ಮೇಲೆ ಅತ್ಯಂತ ಪ್ರಮುಖವಾದಂಥ ಅರಣ್ಯ ಇಲಾಖೆ, ಎಕ್ಸೈಜ್ ಇಲಾಖೆ, ಶಿಕ್ಷಣ ಇಲಾಖೆ ಬಗ್ಗೆ ತಾವು ಹೆಚ್ಚು ಸಮಯ ಕೊಟ್ಟರೆ ಹೆಚ್ಚು ಬೆಳಕನ್ನು ತರಲಿಕ್ಕೆ ಸಾಧ್ಯವಾಗುತ್ತದೆ. ಈ ಬಗ್ಗೆ ನಾನು ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ. ತಾವು ಈ ಒಂದು ಎಲ್ಲಾ ಆರೋಪಗಳಿಂದ ಮುಕ್ತರಾಗಬೇಕೆಂದು ಇದ್ದರೆ, ಅದು ಗ್ರಾನೈಟ್ ಕಲ್ಲಿನ ಬಗ್ಗೆ ಇರಬಹುದು, ಹೌಸಿಂಗ್ ಕೋ ಆಪರೇಟೀವ್ ಸೊಸೈಟಿ ಬಗ್ಗೆ ಇರಬಹುದು, ಹಿಂದೆ ಇದ್ದಂಥ ಸರ್ಕಾರ ತನಿಖೆಗೆ ಒಳಪಟ್ಟು ಜನರ ಒಂದು ಅಭಿಪ್ರಾಯಕ್ಕೆ ಮನ್ನಣೆ ನೀಡಿ, ಶಿಕ್ಷೆಗೊಳಗಾಗುತ್ತಿದ್ದರು. ಆದರೆ ಇಷ್ಟೆಲ್ಲಾ ಆರೋಪಗಳಾದರೂ ಸಹ ನೀವು ಕೈಕಟ್ಟಿ ಕುಳಿತುಕೊಳ್ಳುವುದು ಸರಿಯಲ್ಲ. ನಿಮ್ಮ ಬಗ್ಗೆ, ನಿಮ್ಮ

ಮಂತ್ರಿಮಂಡಲದ ಬಗ್ಗೆ ಇರುವಂಥ ಆರೋಪದ ಬಗ್ಗೆ ನೀವೇ ನೇರವಾಗಿ ಸಿಓಡಿ ತನಿಖೆಗೆ ಒಳಪಡಿಸಿಕೊಂಡು, ಸಿಬಿಐ ತನಿಖೆಗೆ ತಾವು ಹಾಕಿಕೊಂಡು, ತಾವು ಅಗ್ನಿ ಪರೀಕ್ಷೆಯಿಂದ ಹೊರಬಂದಾಗ ಮಾತ್ರ ತಾವು ಈ ಕುರ್ಚಿಯಲ್ಲಿ ಮುಂದುವರಿಯುವುದಕ್ಕೆ ಸಾಧ್ಯವಾಗುಬಹುದು. ಇಲ್ಲದೇ ಇದ್ದರೆ ಜನರು ತಮ್ಮ ಬಗ್ಗೆ ಸಂಶಯದಿಂದ ನೋಡುವಂಥ ವಾತಾವರಣ ಆಗುತ್ತದೆ. ನಿಮ್ಮ ಪಕ್ಷದವರು ಭಿನ್ನಮತಿಯರು ಯಾರನ್ನೋ ಮುಖ್ಯಮಂತ್ರಿಗಳನ್ನು ಮಾಡಬೇಕು ಎನ್ನುವ ಚಟದಿಂದ, ಮಾಡಿದ್ದಾರೆಯೇ ಹೊರತು ಬೇರೆ ಇಲ್ಲ, ಕಾಂಗ್ರೆಸ್ ಉಳಿಸಬೇಕು ಎನ್ನುವ ಕಳಕಳಿ ಇದೆಯೇ ಹೊರತು, ಜನರು ಉಳಿಯಬೇಕು ಎನ್ನುವುದು ಇಲ್ಲ. ರಾಜ್ಯದ ಜನರನ್ನು ಉಳಿಸುವಂತಾದ್ದು ಏನೂ ಇಲ್ಲ. ಆದರೆ ನಾನು ಹೇಳುತ್ತೇನೆ, ನಿಜವಾಗಿ ಇಲ್ಲಿ ಮಾತನಾಡದೇ ಇದ್ದರೂ ಸಹ ತಪ್ಪಾಗದಂತೆ ಎಚ್ಚರ ವಹಿಸುತ್ತೇನೆ. ಈಗ ತಪ್ಪಾಗುವವರೆಗೂ ಬಿಟ್ಟು, ತಪ್ಪನ್ನು ಮಾಡಿಸಿ, ಈಗ ಹೇಗೋ ಮಾಡಿ ಬೇರೆಯವರು ಮುಖ್ಯಮಂತ್ರಿಗಳಾಗುವುದರಿಂದ, ಸಮಸ್ಯೆ ಬಗೆಹರಿಯುವುದಿಲ್ಲ. ಇದರ ಬಗ್ಗೆ ಸರಿಯಾದಂಥ ಒಂದು ತನಿಖೆ ಆಗಬೇಕು. ಈಗ ಹಿಂದೆ ಇದ್ದಂಥ ಸರ್ಕಾರ ಮಾಡಿದಂಥ ತಪ್ಪುಗಳು ಏನಿದೆ ಅದರ ಬಗ್ಗೆಯೂ ಕೂಡ ಚಾರ್ಜ್‌ಷೀಟ್ ಹಾಕಬೇಕು ಅಂತಹ ಮಂತ್ರಿಗಳಿಗೆ ಶಿಕ್ಷೆಯಾಗಬೇಕು. ಸ್ವತ: ತಾವು ಸಿಬಿಐ ತನಿಖೆಗೆ ಒಳಪಡಿಸಿಕೊಂಡು ತಾವು ಈ ಒಂದು ಆರೋಪದಿಂದ ಮುಕ್ತರಾಗುವುದಕ್ಕೆ ಸಾಧ್ಯವಾದರೆ ಮುಂದೆ ಬರಬೇಕು. ಆ ಒಂದು ತನಿಖೆಯಾಗಲಿ, ಆ ಒಂದು ತನಿಖೆಯಿಂದ ವಿವರಗಳು ಹೊರಬರುತ್ತದೆ. ತಾವು ಧೈರ್ಯಮಾಡಿ, ಆ ತನಿಖೆಗೆ ತಾವೇ ಒಳಪಡಿಸಿಕೊಳ್ಳಬೇಕು ಎನ್ನುವ ಒತ್ತಾಯವನ್ನು ತರುತ್ತಾ ಹದಿನೈದು ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಾಕ್ಕಾಗಿ ಅಧ್ಯಕ್ಷರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀ ಕೆ. ಸೋಮಪ್ಪ ಸುವರ್ಣ : ರಾಮ ಮಂದಿರ ನಿರ್ಮಾಣದ ಹಣ ಸಂಗ್ರಹಣದ ಬಗ್ಗೆ ತುಂಬಾ ಅಪವಾದ ಉಂಟು. ಅದಕ್ಕೂ ಸಹ ಸಿಬಿಐ ಮಾಡಿಸಿಕೊಂಡರೆ ಒಳ್ಳೆಯದೆಂದು ಕಾಣುತ್ತದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅದು ದೇಶದ ಜನತೆಗೆ ಗೊತ್ತಿದೆ. ಇವೊತ್ತು ಅದಕ್ಕೆಲ್ಲಾ ಲೆಕ್ಕ ಪುಸ್ತಕ ಇದೆ, ತನಿಖೆ ಮಾಡಿಸಿ. ಆದರೆ ಇಷ್ಟೊಂದು ಬೇಜವಾಬ್ದಾರಿತನದಿಂದ, ತಾವು ಮಾಡಿದಂಥ ಅನೇಕ ಆಪಾದನೆಗಳು ಏನಿದೆ ಅದನ್ನು ಮುಚ್ಚಿಹಾಕಿಕೊಳ್ಳುವುದಕ್ಕೋಸ್ಕರ, ಈ ರೀತಿ ಮಾತನಾಡತಕ್ಕದ್ದು ಸರಿಯಲ್ಲ. ಶಾಸಕರಾದ ತಮಗೆ ಜನರು ಕ್ಷಮಿಸುವುದಿಲ್ಲ. ಜನರು ಮೊನ್ನೆ ಲೋಕಸಭೆ ಚುನಾವಣೆಯಲ್ಲಿ ಈ ರೀತಿ ಹಗುರವಾಗಿ ಮಾತನಾಡಿದ್ದರಿಂದ ನಿಮಗೆ ಶಿಕ್ಷೆ ಕೊಟ್ಟಿದ್ದಾರೆ. ನಿಮಗೆ ಧೈರ್ಯ ಇದ್ದರೆ ಇದೇ ಒಂದು ಆರೋಪದ ಮೇಲೆ ನೀವು ಚುನಾವಣೆ ನಡೆಸಿ, ಆಗ ಜನರು ಛೀಮಾರಿ ಹಾಕುತ್ತಾರೆ ನಿಮಗೆ ಜನರು ಬುದ್ಧಿ ಕಲಿಸುವ ಸಮಯ ಹತ್ತಿರ ಬರುತ್ತದೆ.

(ಗೊಂದಲ)

ಉಪಾಧ್ಯಕ್ಷರು : ಈಗ ಮಾನ್ಯ ಸದಸ್ಯರಾದ ಕರಿಯಣ್ಣನವರು ಮಾತನಾಡಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ಈಗಲಾದರೂ ಮಾನ್ಯ ಮುಖ್ಯಮಂತ್ರಿಗಳು ದೇವಸ್ಥಾನದ ಬಗ್ಗೆ ಕಳಕಳಿಯನ್ನು ಇಟ್ಟುಕೊಂಡಿದ್ದಾರೆ. ಅವರು ದೇವಸ್ಥಾನವನ್ನು ಕಟ್ಟಿಸಲಿ.

ಶ್ರೀ ಎಸ್. ಬಂಗಾರಪ್ಪ : ನೀವು ತಪ್ಪಾಗಿ ತಿಳಿದುಕೊಂಡಿದ್ದೀರಿ. ನಾವು ಬಡ್ಜೆಟ್ ಪ್ರಸೆಂಟ್ ಮಾಡಿದ್ದುದು ಯಾವಾಗ, ನೀವು ರಾಮನ ಬಗ್ಗೆ ವ್ಯಾಖ್ಯನ ಮಾಡಿದುದು ಯಾವಾಗ, ಸ್ವಲ್ಪ ವಿಚಾರ ಮಾಡಿ ನೋಡಿಕೊಳ್ಳಿ. ನಾನು ಬಡ್ಜೆಟ್ ಪ್ರಸೆಂಟ್ ಮಾಡಿದುದು. ಈ ಕರ್ನಾಟಕದಲ್ಲಿರತಕ್ಕ ಹರಿಜನ ಗಿರಿಜನ, ತುಳಿತಕ್ಕೆ ಸಿಕ್ಕಿರತಕ್ಕ ವರ್ಗಗಳ ಕೇರಿಯಲ್ಲಿರತಕ್ಕಂಥ ದೇವಸ್ಥಾನಗಳ ನಿರ್ಮಾಣ ಮಾಡದೇ ಇದ್ದರೆ, ಅಲ್ಲಿ ಸರಿಯಾಗಿ ದೇವರು ಮುಖ ತೊಳೆಯುವುದಿಲ್ಲ, ದೇವಸ್ಥಾನಗಳಿಗೆ ಸುಣ್ಣ ಬಣ್ಣ ಇರುವುದಿಲ್ಲ. ದೇವಸ್ಥಾನ ಕಟ್ಟಿಸುವುದಿಲ್ಲ ಎನ್ನುವ ವಿಚಾರದ ಮಾತು, ನೀವು ರಾಮ ದೇವರ ಬಗ್ಗೆ ಏನು ದೇಶದಲ್ಲಿ ವ್ಯಾಖ್ಯಾನ ಮಾಡುತ್ತಾ ಹೊರಟಿರಿ ಅದಕ್ಕಿಂತಲೂ ಮೊದಲೇ ನಮ್ಮ ಬಡ್ಜೆಟ್ಟಿನಲ್ಲಿ ಹಾಕಿರತಕ್ಕಂಥದ್ದು. ಆದ್ದರಿಂದ, ನೀವು ಈ ಕಾಲವನ್ನು ವ್ಯತ್ಯಾಸ ಮಾಡಲಿಕ್ಕೆ ಹೋಗಬೇಡಿ. ವಿಷಯ ಕರೆಕ್ಟ್‌ಆಗಿ ಹೇಳಿದಿರಿ. ಕಾಲದ ವ್ಯತ್ಯಾಸ ಆಗುತ್ತದೆ. ನಾನು ಹೇಳುವ ಹಾಗೆ ಇದ್ದರೆ, ನಾನು ಹೀಗೆ ಅನ್ನಬಹುದುಲ್ಲ, ಇವೊತ್ತು ನಾವು ಆರಾಧನ ಕಾರ್ಯಕ್ರಮ ಎನ್ನತಕ್ಕ ವಿಚಾರ ಪ್ರಸ್ತಾಪ ಮಾಡಿದಮೇಲೆ ನೀವು ರಾಮನನ್ನು ಹಿಡಿದುಕೊಂಡು ಹೊರಟಿರಿ ಎನ್ನುವ ಮಾತನ್ನು ನಾನು ಅನ್ನಬಹುದೆ, ಅದಕ್ಕೆ ನಾನು ಹೇಳಬಹುದೆ; ಶ್ರೀ ಬಿ. ಎಸ್. ಯಡಿಯೂರಪ್ಪ : ಒಟ್ಟಿಗೆ ಹೋಗೋಣ, ಮಾಡೋಣ.

ಶ್ರೀ ಎಸ್. ಬಂಗಾರಪ್ಪ : ಅದಕ್ಕೆ ನಾನು ಹೇಳಿದ್ದುದು ತಾವು ರಾಮನ ಬಗ್ಗೆ ವ್ಯಾಖ್ಯಾನ ಮಾಡಿದಿರಿ, ರಾಮ ನಿಮ್ಮ ಒಬ್ಬರಿಗೆ ಸಂಬಂಧಪಟ್ಟವನಲ್ಲ, ರಾಮ, ಎಲ್ಲರ ರಾಮ ಹೌದು. ಅದಕ್ಕೆ ನಮ್ಮ ಸೋಮಪ್ಪ ಸುವರ್ಣ ಅವರು ಹೇಳಿದ್ದು ರಾಮ ಸುಮ್ಮನೆ ದೇವಸ್ಥಾನದ ಒಳಗಡೆ ಇದ್ದ, ಅವನನ್ನು ನಿಮ್ಮ ರಾಮ ಎಂದು ಏತಕ್ಕೆ ತೆಗೆದುಕೊಂಡು ಹೊರಟಿರಿ, ಅವರು ಕೇಳುವುದು ಸರಿ, ರಾಮ ಎಲ್ಲರ ರಾಮ ಕೂಡ ಹೌದು.

ಶ್ರೀ ವಾಟಾಳ್ ನಾಗರಾಜ್ : ಈಗ ರಾಮಭಜನೆ ಬೇಡ. ಆ ಭಜನೆ ನಿಲ್ಲಿಸೋಣ.

ಶ್ರೀ ಎಸ್. ಬಂಗಾರಪ್ಪ : ತಮ್ಮ ಪಕ್ಕದಲ್ಲಿರುವ ಯಡಿಯೂರಪ್ಪನವರು ನಿಲ್ಲಿಸಿಬಿಟ್ಟರೆ ಸಾಕು.

ಶ್ರೀ ವಾಟಾಳ್ ನಾಗರಾಜ್ : ಯಡಿಯೂರಪ್ಪನವರಿಂದ ರಾಮನ ಭಜನೆ ಬರಲಿಲ್ಲ, ರಾಮನ ಭಜನೆ ಬಂದಿದ್ದು ತಮ್ಮ ಕಡೆಯಿಂದ.

ಶ್ರೀ ಎಸ್. ಬಂಗಾರಪ್ಪ : ಆದರೆ ಹುಟ್ಟಿದುದು ಅಲ್ಲಿಂದ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ತಾವು ಸಂಕಷ್ಟಕ್ಕೆ ಸಿಕ್ಕಿದ ಮೇಲಾದರೂ ತಾಂಡದಲ್ಲಿರುವಂಥ ಹರಿಜನ ಗಿರಿಜನ ಕಾಲೋನಿಯಲ್ಲಿರುವಂಥ ದೇವಸ್ಥಾನಗಳು ಜ್ಞಾಪಕಕ್ಕೆ ಬಂತಲ್ಲ, ನಿಜವಾಗಿ ರಾಮ ನಿಮಗೆ ಒಳ್ಳೆಯದು ಮಾಡಲಿ ಎಂದು ನಾನು ವಿನಂತಿಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ನಾನು ಸಂಕಷ್ಟಕ್ಕೆ ಸಿಕ್ಕಿದ್ದೇನೆಯೇ, ನಾನು ಹೈಕ್ಲಾಸ್ ಆದಮೇಲೆ ನಾನು ಆರಾಧನೆ ಯೋಜನೆ ಮಾಡಿದ್ದು. ನಾನು ಸಂಕಷ್ಟಕ್ಕೆ ಸಿಕ್ಕಿಲ್ಲ, ಕಷ್ಟ ಇದ್ದಾಗ ನಾನು ದೇವರು ನೆನಸಿಕೊಳ್ಳುವುದಿಲ್ಲ.

ಕೆ.ಎಸ್. ಈಶ್ವರಪ್ಪ : ಈಗ ತಾವು ಹೈಕ್ಲಾಸ್ ಆಗಿದ್ದೀರಿ.

ಶ್ರೀ ಎಸ್. ಬಂಗಾರಪ್ಪ: ನನ್ನನ್ನು ನೋಡಿದರೆ, ನಿಮಗೆ ಹೇಗೆ ಅನಿಸುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ನಿಮ್ಮ ಸ್ಥಿತಿ ನೋಡಿ ಅಯ್ಯೋ ರಾಮ ಅನ್ನಿಸುತ್ತದೆ.

ಶ್ರೀ ಬಾಬುಗೌಡ ರುದ್ರಗೌಡ ಪಾಟೀಲ್ : ಜನರು ದೇವಸ್ಥಾನ ಕಟ್ಟಿಸಲಿಕ್ಕೆ ನಮಗೆ ಇಲ್ಲಿ ಕಳುಹಿಸಿಕೊಟ್ಟಿಲ್ಲ.

(ಗೊಂದಲ)

ಶ್ರೀ ಎಂ. ಮಹದೇವನ್ : ಈಗ ಬಿಜೆಪಿ ಅವರು ಕಾಡು ರಾಮನ ಪೂಜಿಸುತ್ತಾರೋ, ಅಥವಾ ಊರು ರಾಮನ ಪೂಜಿಸುತ್ತಾರೋ.

ಉಪಾಧ್ಯಕ್ಷರು : ಈಗ ಇದನ್ನು ಮುಕ್ತಾಯ ಮಾಡೋಣ. ಮಾನ್ಯ ಸದಸ್ಯರಾದ ಕರಿಯಣ್ಣನವರು ಈಗ ಮಾತನಾಡಬೇಕು.

ಶ್ರೀ ಕರಿಯಣ್ಣ (ಹೊಳೆಹೊನ್ನೂರು): ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಇವೊತ್ತಿನ 22 ಬೇಡಿಕೆಗಳನ್ನು ನಾನು ಅನುಮೋದಿಸುತ್ತಾ ಸಹಕಾರ ಸಂಘಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈಗ ಸಹಕಾರ ಪಿತಾಮಹರಾದಂಥ ನಮ್ಮಲ್ಲಿ ಮಂತ್ರಿಗಳಾಗಿರತಕ್ಕಂಥ ಶ್ರೀಯುತ ಕೆ. ಹೆಚ್. ಪಾಟೀಲರು, ಹಾಗೂ ಹಿಂದೆ ಮಂತ್ರಿಗಳಾಗಿದ್ದಂಥ ಶ್ರೀಯುತ ಕೆ. ಹೆಚ್. ರಂಗನಾಥ್‌ರವರು ಇಲ್ಲೇ ಇದ್ದಾರೆ. ಇನ್ನು ಈಗತಾನೆ ಮಾತನಾಡಿದಂಥ ನಮ್ಮ ಯಡಿಯೂರಪ್ಪ ಮಂತ್ರಿಗಳಾಗದೇ ಇದ್ದರೂ ಸಹ ಸಹಕಾರ ಸಂಘಗಳನ್ನು ಎಷ್ಟು ರೀತಿ ಮಾಡಬೇಕು, ಅಷ್ಟು ರೀತಿ ಚಳುವಳಿಯನ್ನು ಸಹಿತ ಮಾಡುತ್ತಿದ್ದಾರೆ.

ನಾವು ಇವತ್ತು ಸಹಕಾರಿ ಸಂಘಗಳನ್ನು ಕಳೆದುಕೊಂಡರೆ, ಅದರಲ್ಲೂ ಹಳ್ಳಿಗಾಡಿನಲ್ಲಿರತಕ್ಕ ಸಹಕಾರಿ ಸಂಘಗಳು, ರೈತರ ಜೀವನಾಡಿಯಾಗಿರತಕ್ಕಂಥ ಸಹಕಾರಿ ಸಂಘಗಳು ಆ ಜೀವನಾಡಿಯನು ಮೂರು ಹಂತಗಳಲ್ಲಿ ನಾವು ಕಳೆದುಕೊಳ್ಳುತ್ತಿದ್ದೇವೆನ್ನುವಂಥ ಒಂದು ಭಾವನೆ ಬರುತ್ತದೆ. ಯಾರು ಮಾನ್ಯ ಸದಸ್ಯರು ಸಹಿತ ಸಮರ್ಪಕವಾಗಿ ಸಹಕಾರಿ ಸಂಘಗಳು ಉಳಿಯಬೇಕೆನ್ನುವ ಬಗ್ಗೆ ಈ ಸದನದಲ್ಲಿ ಮಾತನಾಡುವುದಕ್ಕೆ ಅರಿವಾಗಲಿಲ್ಲ. ಮೊದಲನೆಯದಾಗಿ ಅಧಿಕಾರಿ ವರ್ಗದವರು ಅವರು ಸಮರ್ಪಕವಾಗಿ ರಿಜಿಸ್ಟ್ರಾರ್ ಆಗಲಿ, ಸಹಕಾರಿ ಸಂಘಗಳ ಜಾಯಿಂಟ್ ರಿಜಿಸ್ಟ್ರಾರ್ ಆಗಲಿ ಅಥವಾ ಅಸ್ಟೆಂಟ್ ರಿಜಿಸ್ಟ್ರಾರ್‌ರವರಾಗಲಿ ಸಹಕಾರಿ ಸಂಘಗಳ ಇನ್‌ಸ್ಪೆಕ್ಟರ್ ಆಗಲಿ, ಆಡಿಟರ್ಸ್ ಆಗಲಿ ಸಮರ್ಪಕವಾಗಿ ಸಹಕಾರಿ ಸಂಘಗಳಿಗೆ ವಿಸಿಟ್‌ಕೊಟ್ಟು, ಇನ್‌ಸ್ಪೆಕ್ಷನ್ ಮಾಡಿ ಆ ಡೈರೆಕ್ಟರುಗಳಿಗೆ ತಿಳುವಳಿಕೆಯನ್ನು ಕೊಟ್ಟಿದ್ದರೆ, ಲೆಕ್ಕಪತ್ರಗಳ ವ್ಯತ್ಯಾಸ ಆಗುತ್ತಿರಲಿಲ್ಲ, ದುರುಪಯೋಗವಾಗುವುದಕ್ಕೆ ಅವಕಾಶವಾಗುತ್ತಿರಲಿಲ್ಲ. ಮೊದಲನೆಯ ಸಾರಿಗೆ ಶುರುವಾಗಿದೆ. ಆದರೆ ಅಧಿಕಾರಿಗಳ ಭಾವನೆ ಏನಾಗಿದೆ ಎಂದರೆ ಈಗ ಮಾಡಿರತಕ್ಕಂಥ ಎಲ್ಲ ಕಾನೂನುಗಳ ಬದಲಾವಣೆಯಿಂದ ಸಹಕಾರಿ ಸಂಘಗಳಲ್ಲಿ ಆಡಳಿತ ಮಾಡತಕ್ಕಂಥ ಖಾಸಗಿ ಜನರಮೇಲೆ ಸವಾರಿ ಮಾಡಬೇಕೆಂದು ಹೇಳಿ ಅವರಿಗೆ ನೋಟೀಸ್ ಕೊಡುತ್ತಿದ್ದಾರೆಯೇ ವಿನ: ಅವರು ಯಾವುದೇ ವಿಧದಲ್ಲಿ ಆ ಸಹಕಾರಿ ಸಂಘಗಳನ್ನು ಹಾಳುಮಾಡುತ್ತಿದ್ದೇವೆನ್ನುವ ಭಾವನೆಯೇ ಇಲ್ಲ. ಒಂದು ಉದಾಹರಣೆಯನ್ನು ಹೇಳುತ್ತೇನೆ. ಸಾಗರದಲ್ಲಿ ಚೆನ್ನಾಗಿ ನಡೆಯುತ್ತಿರತಕ್ಕಂಥ ಅಡಿಕೆ ಕೋಆಪರೇಟೀವ್ ಮಾರ್ಕೆಂಟಿಂಗ್ ಸೊಸೈಟಿ ಎಂದು ಇದೆ. ಇಲ್ಲಿ ಕೋಟ್ಯಾಂತರ ರೂಪಾಯಿಗಳ ವ್ಯವಹಾರ ನಡೆಯುತ್ತಿದ್ದು ರೈತರಿಗೆ ಬಹಳ ಅನುಕೂಲವಾಗಿತ್ತು. ಸಹಕಾರಿ ಇಲಾಖೆಯ ಡೆಪ್ಯುಟಿ ರಿಜಿಸ್ಟ್ರಾರ್‌ರವರು ಆ ಸಹಕಾರಿ ಸಂಘದ ಒಬ್ಬ ಡೈರೆಕ್ಟರ್ ಸಹಿತ ಆಗಿದ್ದರು. ಮತ್ತೆ ಅಲ್ಲಿ ಒಬ್ಬ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ಡಿವಿಜನ್‌ವಾರು ಇದ್ದರು. ಅವರು ಪ್ರತಿ ತಿಂಗಳು ಸಹಕಾರಿ ಸಂಘಕ್ಕೆ ವಿಸಿಟ್ ಮಾಡುತ್ತಿದ್ದರು. ಆಗ ಅಡಿಕೆ ಸ್ಟಾಕ್ ಇರಲಿಲ್ಲವೇ?

ದುಡ್ಡನ್ನು ಹೊಡಿದಿದ್ದನ್ನು ಅವರು ನೋಡಿರಲಿಲ್ಲವೇ? ಪ್ರತಿ ತಿಂಗಳು ಪರಿಶೀಲನೆ ಮಾಡುವಾಗ ಅದರಲ್ಲಿ ಹಣ ಇದ್ದುದನ್ನು ಕಾಣಲಿಲ್ಲವೇ? 45 ಕೋಟಿ ರೂಪಾಯಿಗಳು ದುರುಪಯೋಗವಾಗುವವರೆಗೂ ಬಿಡುತ್ತಾ ಹೋದರು. ಇದರಿಂದಾಗಿ ಇವತ್ತು ಆ ಸೊಸೈಟಿ ಸೂಪರ್‌ಸೀಡ್ ಆಗಿರುವುದನ್ನು ನೋಡುತ್ತಿದ್ದೇವೆ. ಈಗ 65ನೇ ಸೆಕ್ಷನ್ ಹಾಕಿಬಿಟ್ಟು ಡೈರೆಕ್ಟರುಗಳ ಎಲ್ಲರ ಮನೆಗಳನ್ನು ಜಪ್ತಿ ಮಾಡಬೇಕೆಂದು, ಮುಟ್ಟುಗೋಲು ಹಾಕಬೇಕೆಂದು ಹೇಳಿ ಆರ್ಡರನ್ನು ಪಾಸ್ ಮಾಡುವುದಕ್ಕೂ ಅಧಿಕಾರಿಗಳೇ ಹೋಗಿದ್ದಾರೆ. ಆದರೆ 69ನೇ ಸೆಕ್ಷನ್ ಪ್ರಕಾರ ಇವರು ಯಾರೋ ಒಬ್ಬ ಗುಮಾಸ್ತರನ್ನು ಕಳುಹಿಸಿ ಡೈರೆಕ್ಟರುಗಳ ಮನೆಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಬದಲು 69ನೇ ಸೆಕ್ಷನ್ ಜಾರಿ ಮಾಡಿ ಅಧಿಕಾರಿಗಳ ಆಸ್ತಿ ಮನೆ ಮಠಗಳನ್ನು ಏತಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದಾಗಿತ್ತು? ಇಲ್ಲಿ ಸರ್ಕಾರದ್ದು ಕೂಡ ಸ್ವಲ್ಪ ತಪ್ಪಾಗಿದೆ. ಏತಕ್ಕೆಂದರೆ ಭತ್ತ ಲೆವಿ ಕಲೆಕ್ಷನ್‌ಗೆ ಸಹಕಾರಿ ಸಂಘಗಳಿಗೆ ಕೊಟ್ಟಿದ್ದಾರೆ. ಸರ್ಕಾರ ಕಡಿಮೆ ದರದ ಆಹಾರ ಧಾನ್ಯಗಳನ್ನು ಮಾರಾಟ ಮಾಡಿ ಎಂದು ಸಹಕಾರಿ ಸಂಘಗಳಿಗೆ ಕೊಟ್ಟಿದ್ದಾರೆ.

ಆದರೆ ಸರ್ಕಾರ ಕೊಡತಕ್ಕಂಥ ಹಣವನ್ನು ಸಬ್‌ಸಿಡಿ ರೂಪದಲ್ಲಿ ಅವರಿಗೆ ಕೊಡದಿರುವುದರಿಂದ ಚೆನ್ನಾಗಿ ನಡೆಯುತ್ತಿದ್ದಂಥ ಟಿ.ಎ.ಪಿ.ಸಿ.ಒಂ.ಸಿ.ಎಸ್. ಸೊಸೈಟಿಗಳು ಮುಚ್ಚಿಕೊಂಡು ಹೋದವು. ಸರ್ವಿಸ್ ಕೋಆಪರೇಟೀವ್ ಸೊಸೈಟಿಗಳು ಮುಚ್ಚಿಕೊಂಡು ಹೋದುವು. ಬಹಳ ವರ್ಷಗಳ ಹಿಂದೆ ಲೆವಿ ಕಲೆಕ್ಷನ್ ಮಾಡುವಾಗ ನಿಮಗೆ ಎರಡು ಕೆ.ಜಿ. ಮಾಫಿ ಕೊಡುತ್ತೇವೆ, ಸಿಂಕೇಜ್ ಕೊಡುತ್ತಿದ್ದೇವೆಂದು ಹೇಳಿ ಆ ಸೊಸೈಟಿಗಳಿಗೆ ಸಿಂಕೇಜ್ ಕೊಡಲಿಲ್ಲ, ಲಕ್ಷಾಂತರ ರೂಪಾಯಿ ಕೊಡದೆ ಇದ್ದುದರಿಂದ ಶೇರು ಬಂಡವಾಳವನ್ನು ಕಳೆದುಕೊಂಡು ಆ ಸಹಕಾರಿ ಸಂಘಗಳು ಸೊರಗಿಹೋಗಿವೆ. ಇವತ್ತು ಮಾನ್ಯ ಯಡಿಯೂರಪ್ಪನವರು ಇನ್ನೊಂದು ಚಳವಳಿ ಮಾಡಬಹುದು, ಸಾಲ ಸಿಗದಿರತಕ್ಕಂಥ ಪರಿಸ್ಥಿತಿಯ ಸಹಕಾರಿ ಸಂಘಗಳು ಅದರಲ್ಲೂ ಪ್ರಾಥಮಿಕ ಸಹಕಾರಿ ಸಂಘಗಳು ಹಳ್ಳಿ ಮಟ್ಟದಲ್ಲಿದೆ. ಅಂಥ ಸಹಕಾರಿ ಸಂಘಗಳಿಂದ ಸಾಲ ಕೊಡಬೇಡಿ, ಸಾಲ ಕೊಡಬೇಡಿ ಎಂದು ಎಲ್ಲ ಪಕ್ಷಗಳವರು ಕ್ಯಾನ್‌ವಾಸ್ ಮಾಡಿಬಿಟ್ಟಿದ್ದಾರೆ. ಒಂದು ಪಕ್ಷದವರೇ ಅಲ್ಲ ಎಲ್ಲ ಪಕ್ಷದವರೂ ಹೇಳಿಬಿಟ್ಟಿದ್ದಾರೆ. ಇವತ್ತು ಸಾಲ ಕಟ್ಟದಂತಾಗಿ ಈ ರಾಜ್ಯದಲ್ಲಿ ಹತ್ತೊಂಬತ್ತು ಕೇಂದ್ರ ಬ್ಯಾಂಕ್‌ಗಳಿದ್ದರೆ, ಹತ್ತು ಕೇಂದ್ರ ಬ್ಯಾಂಕ್‌ಗಳಿಗೆ ಮಾತ್ರ ನಬಾರ್ಡ್‌ನಿಂದ ಸಾಲ ಬಂದಿದೆ. ನಿಮ್ಮ ರಿಪೋರ್ಟ್ ಪ್ರಕಾರ, ಇನ್ನೂ 9 ಕೇಂದ್ರ ಬ್ಯಾಂಕ್‌ಗಳ ವ್ಯಾಪ್ತಿಯಲ್ಲಿರತಕ್ಕಂಥ, ಯಾವುದೇ ಸಹಕಾರಿ ಸಂಘಗಳ ವ್ಯಾಪ್ತಿಯಲ್ಲಿರತಕ್ಕಂಥ ರೈತರಿಗೆ ಒಂದು ರೂಪಾಯಿ ಸಾಲವೂ ಸಿಕ್ಕಿಲ್ಲವೆಂದು ಇದರ ಅರ್ಥ. ನಬಾರ್ಡ್‌ನವರು ಕೊಡದಿದ್ದರೆ ಅವೆಲ್ಲವೂ ಮುಳುಗಿ ಹೋಗಿಬಿಡುತ್ತವೆ. ಇದಕ್ಕೆ ಒಂದು ಅಂತಿಮ ಗೆರೆ ಎಳೆಯದೆ ಹೋದರೆ ರೈತ ಸಂಘದವರೇ ಆಗಿರಲಿ, ಯಡಿಯೂರಪ್ಪನವರೇ ಆಗಿರಲಿ ಕಾಂಗ್ರೆಸ್‌ನವರೇ ಆಗಿರಲಿ, ದಳದವರೇ ಆಗಿರಲಿ, ಯಾವ ಪಾರ್ಟಿಯವರೇ ಆಗಿರಲಿ ಸಾಲಕ್ಕೆ ತಾರೀಖನ್ನು ನಿಗದಿ ಮಾಡಬೇಕು. ಪ್ರತಿ ಮೀಟಿಂಗ್‌ನಲ್ಲೂ ಸಾಲ ವಸೂಲು ಮಾಡಬೇಡಿ ಎಂದು ಹೇಳುವುದು ಮಾನ್ಯ ಮುಖ್ಯಮಂತ್ರಿಗಳಿಂದ ನಾವು ಮುಂದೆ ಹಾಕಿಸಿದ್ದೇವೆಂದು ಹೇಳುವುದು, ಹಾಗಾಗಿ ಯಾವುದೇ ಸಾಲವನ್ನು ಕಟ್ಟದಂಥ ಪರಿಸ್ಥಿತಿಯಾಗಿದೆ. ಇದಕ್ಕೆ ಒಂದು ಗೆರೆಯನ್ನು ಎಳೆಯದೇ ಹೋದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ರೈತರಿಗೆ ರಾಜಕಾರಣಿಗಳಾದ ನಾವು ಸಹಿತ ಮೋಸಮಾಡಿದಂತಾಗುತ್ತದೆ. ಆ ಒಂದು ಮೋಸಕ್ಕೆ ನಾವೆಲ್ಲರೂ ಸಾರಸಗಟಾಗಿ ಒಳಗಾಗುತ್ತೇವೆ. ಇನ್ಸ್‌ಪೆಕ್ಷನ್ ಬಗ್ಗೆ ಹೆಚ್ಚಿನ ಗಮನ ಕೊಡಬೇಕೆಂದು ಮಾನ್ಯ ಸಹಕಾರಿ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇದಲ್ಲದೆ, ಆಡಿಟ್ ಇಲಾಖೆಯನ್ನೂ ಸಹ ಬದಲಾವಣೆ ಮಾಡಿದರು. ಏನಾದರೂ ಮಾಡಿ ಆಡಿಟ್ ಅನ್ನು ಸಮರ್ಪಕವಾಗಿ ಮಾಡಿದರೆ ಸಹಕಾರ ಸಂಘಗಳು ಚುರುಕಾಗಬಹುದೆಂದು ಮಾಡಿದರು. ಆದರೆ ಆಡಿಟ್ ಸಹ ಸಮರ್ಪಕವಾಗಿ ಆಗುತ್ತಿಲ್ಲ. ಪ್ರತಿ ವರ್ಷ ಸುಮಾರು 6-8 ಸಾವಿರ ಸಹಕಾರ ಸಂಘಗಳ ಆಡಿಟ್ ಆಗುತ್ತಿಲ್ಲ. ಆಡಿಟ್ ಆದ ಮೇಲೆ ದುರುಪಯೋಗವಾದ ಹಣದ ಮೇಲೆ ಕೇಸುಗಳನ್ನು ಸಮರ್ಪಕವಾಗಿ ಹಾಕಿಲ್ಲ. ಇದಕ್ಕೆ ತಾವು ಯಾವುದಾದರೂ ಒಂದು ರೂಪ ಕಂಡುಹಿಡಿದು ಸಹಕಾರ ಸಂಘಗಳು ಚುರುಕಾಗಿ ನಡೆಯುವ ಹಾಗೆ ಮಾಡಬೇಕು. ಸಹಕಾರ ಸಂಘಗಳ ಮೇಲೆ ಕಡಿವಾಣ ಇರುವುದೆ ಆಡಿಟ್‌ನಿಂದ ಆಡಿಟ್ ಸಮರ್ಪಕವಾಗಿ ಆಗದೆ ಇದ್ದರೆ ಹೇಗೆ? 1989-90ನೇ ಸಾಲಿನಲ್ಲಿ ಆಡಿಟ್ ಆಗಬೇಕಾಗಿದ್ದ 20-22 ಸಹಕಾರ ಸಕ್ಕರೆ ಕಾರ್ಖಾನೆಗಳ ಪೈಕಿ 9 ಮಾತ್ರ ಆಡಿಟ್ ಆಗಿವೆ. ಉಳಿದ ಸಕ್ಕರೆ ಕಾರ್ಖಾನೆಗಳೇ ಆಡಿಟ್ ಆಗದೆ ಹೋದರೆ ಬೇರೆ ಸಹಕಾರ ಸಂಘಗಳ ಪರಿಸ್ಥಿತಿ ಏನು? ಮಾನ್ಯ ರಂಗನಾಥ್ ಅವರ ಕಾಲದಲ್ಲಿ, ಸಹಕಾರ ಸಂಘಗಳಲ್ಲಿ ಎಲ್ಲ ಸದಸ್ಯರುಗಳಿಗೂ ಸಹ ಮೆಂಬರ್‌ಷಿಪ್ ಕೊಡಬೇಕೆಂದು ಇತ್ತು. ಮಾನ್ಯ ಏಕಾಂತಯ್ಯನವರ ಕಾಲದಲ್ಲೋ ಏನೋ ಗೊತ್ತಿಲ್ಲ, ಪ್ರಾಥಮಿಕ ಸಹಕಾರ ಸಂಘಗಳಲ್ಲಿ ಹರಿಜನ ಗಿರಿಜನರಿಗೆ ಮೀಸಲಾತಿ ಕೊಡಬೇಕೆಂದು ಕಾನೂನು ಆಯಿತು. ಅದು ನಿಜವಾಗಿ ಸಂತೋಷದ ವಿಚಾರ. ಆದರೆ, ಜಿಲ್ಲಾ ಮಟ್ಟದ ಸಹಕಾರ ಸಂಘಗಳಲ್ಲಾಗಲಿ ರಾಜ್ಯ ಮಟ್ಟದ ಸಹಕಾರ ಸಂಘಗಳಲ್ಲಾಗಲಿ, ಹರಿಜನ ಗಿರಿಜನರಿಗೆ ಒಳಗಾಗಿ ಕೆಲಸ ಮಾಡತಕ್ಕ ಬಗ್ಗೆ ಯಾರೂ ಯೋಚನೆ ಮಾಡಲಿಲ್ಲ. ಹೀಗಾಗಿ ರಾಜ್ಯಮಟ್ಟದ ಅಥವಾ ಜಿಲ್ಲಾಮಟ್ಟದ ಸಹಕಾರ ಸಂಘಗಳಲ್ಲಿ ಹರಿಜನ ಗಿರಿಜನರ ಪ್ರಾತಿನಿಧ್ಯ ಇಲ್ಲದೆ ಅವರಿಗೆ ಸಿಗಬೇಕಾದ ಸವಲತ್ತಿನಲ್ಲ ಕುಂದು ಉಂಟಾಗಿದೆ. ಇದನ್ನು ಕಾನೂನು ವ್ಯಾಪ್ತಿಗೆ ಒಳಪಡಿಸಿ ಅಲ್ಲಿ ಮೀಸಲಾತಿ ನೀಡಬೇಕೆಂದು ಮಾನ್ಯ ಸಹಕಾರ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಸಹಕಾರ ಸಂಘವು ದೊಡ್ಡ ಸಂಸ್ಥೆಯಾಗಿದ್ದು ಅದರಲ್ಲಿ ಅಫೆಕ್ಸ್ ಇನ್ಸ್‌ಸ್ಟಿಟ್ಯೂಷನ್‌ಗಳು ಇವೆ. ಆ ಸಂಸ್ಥೆಗಳಲ್ಲಿ ಅನೇಕ ನೌಕರರು ಇದ್ದಾರೆ. ಅಲ್ಲಿ ಕೂಡ 18 ಪರ್ಸೆಂಟ್ ಹರಿಜನ ಗಿರಿಜನರಿಗೆ ಮೀಸಲಾತಿ ನೀಡಬೇಕೆಂದು ಇದೆ. ಆದರೆ ಈ ಬಗ್ಗೆ ನನಗೆ ಸಮರ್ಪಕವಾಗಿ ಉತ್ತರ ಸಿಕ್ಕಿಲ್ಲ. ಇದನ್ನು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳು ನೋಡುತ್ತಾರೋ, ಅಥವಾ ಮುಖ್ಯ ಮಂತ್ರಿಗಳು ಕೇಳುತ್ತಾರೋ ಅಥವಾ ಸಹಕಾರ ಇಲಾಖೆಯವರು ಕೇಳುತ್ತಾರೋ ಗೊತ್ತಿಲ್ಲ. ನಾನೂ ಎಸ್.ಸಿ.ಎಸ್.ಟಿ. ಸಮಿತಿಯಲ್ಲಿ ಕೇಳಿದರೆ ಯಾರಿಗೆ ಬರುತ್ತದೋ ಗೊತ್ತಿಲ್ಲವೆಂದು ಉತ್ತರ ಬರುತ್ತದೆ. ಹಾಗಾಗಿ ನಾನೂ ಸಹಕಾರ ಸಚಿವರನ್ನು ಕೇಳುತ್ತೇನೆ, ತಾವು ರಾಜ್ಯಮಟ್ಟದಲ್ಲಿ ಸಹಕಾರ ಸಂಘಗಳಲ್ಲಿ ಎಷ್ಟು ಜನ ನೌಕರರಿದ್ದಾರೆ, ಅದರಲ್ಲಿ ಹರಿಜನ ಗಿರಿಜನರಿಗೆ ಎಷ್ಟು ಮೀಸಲಾತಿ ಕೊಟ್ಟಿದ್ದಾರೆ, ಅದರ ಪ್ರಮಾಣ ಏನು ಎಂಬ ಬಗ್ಗೆ ರಿಪೋರ್ಟ್ ತಯಾರಿಸಿದ್ದೀರಾ ಎಂದು ಕೇಳಬಯಸುತ್ತೇನೆ. ಹಾಗೇ ರಿಜಿಸ್ಟ್ರಾರ್‌ರವರು ರಾಜ್ಯ ಮಟ್ಟದ ಸಹಕಾರ ಸಂಘಗಳಲ್ಲಿ ಹರಿಜನಗಿರಿಜನರಿಗೆ ಎಷ್ಟು ಪ್ರಮಾಣದಲ್ಲಿ ಮೀಸಲಾತಿ ಸೌಲಭ್ಯ ನೀಡಿದ್ದೀರಾ? ಅಥವಾ ನೀಡಿಲ್ಲ ಎಂಬುದನ್ನು ರೆವ್ಯೂ ಮಾಡಿದ್ದಾರೆಯೆ? ಅದೇ ರೀತಿ ಡಿವಿಜನ್ ಮಟ್ಟದಲ್ಲಿ ಜಾಯಿಂಟ್ ರಿಜಿಸ್ಟ್ರಾರ್ ಅವರು ರೆವ್ಯೂ ಮಾಡಿ ಯಾರು ಯಾರಿಗೆ ಕೊಟ್ಟಿಲ್ಲ, ಕೊಡದೇ ಹೋದರೆ ನೌಕರಿಗಳನ್ನು ಮಂಜೂರಾತ್ಮಾಡುವುದಿಲ್ಲವೆಂದು ನೋಟೀಸ್ ಕೊಟ್ಟಿದ್ದೀರಾ? ಇದರಲ್ಲಿ ಲೋಪ ಆಗಿದೆ; ಈ ಲೋಪವನ್ನು ಸರಿಪಡಿಸುವುದಕ್ಕೆ ನಮ್ಮ ಸಹಕಾರ ಸಚಿವರು ಪ್ರಯತ್ನ ಮಾಡುವರೆ? ಏಕೆಂದರೆ ಹರಿಜನಗಿರಿಜನರ ಉದ್ಧಾರಕ್ಕಾಗಿ ಅನೇಕ ಕಾನೂನುಗಳನ್ನು ಮಾಡಿದ್ದೇವೆ, 18 ಪರ್ಸೆಂಟ್ ಮೀಸಲಾತಿ ಇಟ್ಟಿದ್ದೇವೆ ಎಂದು

ರೇಡಿಯೋ, ಟಿ.ವಿ. ಭಾಷಣಗಳಲ್ಲೆಲ್ಲ ಹೇಳಿ ಸವರ್ಣೀಯರು ಹರಿಜನಗಿರಿಜನರ ವಿರುದ್ಧರಾಗಿದ್ದಾರೆ. ಆದರೆ ಇಲ್ಲಿ ಹರಿಜನಗಿರಿಜನರ ಕೈಗೆ ಏನೇನು ಸವಲತ್ತು ಸಿಕ್ಕಿಲ್ಲ. ಲಕ್ಷಾಂತರ ಮಂದಿ ನೌಕರರು ಇವತ್ತಿನ ದಿವಸ ಸಹಕಾರ ಸಂಘಗಳಲ್ಲಿ ಇದ್ದಾರೆ. ಅವರಿಗೆ ರೂಲ್ಸ್ ಇಲ್ಲ, ಕಾನೂನುಕಟ್ಟಳೆ ಇಲ್ಲ ಏನೇನೂ ಇಲ್ಲ. ಹರಿಜನಗಿರಿಜನರನ್ನು ಅಲ್ಲಿ ತೆಗೆದುಕೊಳ್ಳುವ ಹಾಗೆ ಇಲ್ಲ. ಕಳೆದ ಸಾರಿ, ಅಪೆಕ್ಸ್ ಬ್ಯಾಂಕ್‌ನಲ್ಲಿ ಹರಿಜನಗಿರಿಜನರಿಗೆ ಬಡ್ತಿ ನೀಡುವಾಗ ವ್ಯತ್ಯಾಸವಾಗಿದೆ, ಅವರಿಗೆ ಬಡ್ತಿ ನೀಡಿಲ್ಲವೆಂದು ಪ್ರಶ್ನೆ ಕೇಳಿದಾಗ ಕೆ.ಹೆಚ್. ಪಾಟೀಲರು ನಿಯಮಾವಳಿಯನ್ನು ಸೃಷ್ಟಿ ಮಾಡಿಲ್ಲ, ಸೃಷ್ಟಿ ಮಾಡಿ ಕೊಡುತ್ತೇವೆಂದು ಹೇಳಿದರು. ಈಗಲಾದರೂ ಸಹಕಾರ ಸಚಿವರು ನಿಯಮಾವಳಿ ಸೃಷ್ಟಿ ಮಾಡಿ ಹರಿಜನಗಿರಿಜನರಿಗೆ ಬಡ್ತಿ ಕೊಡಲು ಅವಕಾಶ ಕಲ್ಪಿಸಬೇಕೆಂದು ಒತ್ತಾಯಮಾಡುತ್ತೇನೆ.

ಇನ್ನು ಆಹಾರ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ಆಹಾರ ಸಚಿವರು ಬಹಳ ಅನುಭವಶಾಲಿಗಳು. ಅವರು ಮೇಲ್ಮನೆಯಲ್ಲಿ ಎಲ್ಲಾ ಹಂತಗಳಲ್ಲಿ ಕೆಲಸ ಮಾಡಿ, ಕೆಳಮನೆಯಲ್ಲೂ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ.

ಅವರು ಬಂದಮೇಲೆ ಹೆಚ್ಚಿನ ಆಹಾರಧಾನ್ಯಗಳನ್ನು ರಾಜ್ಯಕ್ಕೆ ತಂದಿದ್ದಾರೆ. ಪೆಟ್ರೋಲ್ ಮತ್ತು ಡೀಸೆಲ್ ಕೊರತೆ ಇದ್ದಾಗ ಅದನ್ನು ಕೂಡ ಹೆಚ್ಚಿಗೆ ತಂದಿದ್ದಾರೆ, ಸಂತೋಷ. ಆದರೆ ಹರಿಜನರಿಗಾಗಿ ಅವರು ಎರಡು ರೂಪಾಯಿ ಕೆ.ಜಿ.ಯ ಹಸಿರು ಕಾರ್ಡ್ ಅಕ್ಕಿಯನ್ನು ಅವರ ಹಾಸ್ಟೆಲ್‌ಗಳಿಗೆ ಕೊಡಬೇಕೆಂದು ಕಾನೂನು ಮಾಡಿದ್ದಾರೆ. ಆದರೆ ಹರಿಜನ ಗಿರಿಜನ ಹಾಸ್ಟೆಲ್‌ನಲ್ಲಿ 25 ಪರ್ಸೆಂಟ್ ಬ್ಯಾಕ್‌ವರ್ಡ್ ಕ್ಲಾಸ್‌ನವರೂ ಇರುತ್ತಾರೆ. ಹರಿಜನ ಗಿರಿಜನ ಎಂದು ಸೇರಿಸಿರುವುದರಿಂದ ಈ 25 ಜನರನ್ನು ಬಿಟ್ಟು ಅಕ್ಕಿ ಕೊಡುತ್ತಾರೆ. ಆದ್ದರಿಂದ ದಯಮಾಡಿ ಹರಿಜನಗಿರಿಜನರು ಎನ್ನದೆ ಹರಿಜನರ ಹಾಸ್ಟೆಲ್ ಎಂದರೆ ಎಲ್ಲರೂ ಕೂಡ್ ಬರುತ್ತಾರೆ. ಅದನ್ನು ತಾವು ಪರಿವರ್ತನೆ ಮಾಡಿಕೊಳ್ಳಬೇಕು. ಇದರ ಜೊತೆಯಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ಹಾಸ್ಟೆಲ್‌ನವರು ಸಹ ಬಡವರ ಮಕ್ಕಳು ಅಲ್ಲಿ ಬರುವುದರಿಂದ ಈ ಹಸಿರು ಕಾರ್ಡ್ ಅಕ್ಕಿಯನ್ನು ಬ್ಯಾಕ್‌ವರ್ಡ್‌ಕ್ಲಾಸ್ ಹಾಸ್ಟೆಲ್ ಮಕ್ಕಳಿಗೂ ಕೊಟ್ಟರೆ ಉತ್ತಮ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹಾಗೂ ತಮ್ಮ ಇಲಾಖೆಯಲ್ಲಿ ನೌಕರಿಗೆ ಬಹಳ ಅವಕಾಶ ಇದೆ. ಏಕೆಂದರೆ ನಿಮ್ಮದು ಸ್ವತಂತ್ರವಾದ ಇಲಾಖೆಯಾಗಿ ಮಾಡುವುದಕ್ಕೆ ತಾವು ಪ್ರಯತ್ನ ಪಡುತ್ತಿದ್ದೀರಿ. ನಿಮ್ಮಲ್ಲಿರತಕ್ಕ ಲೆಂಟೆಡ್ ಅಫಿಷಿಯಲ್ಸ್ ಅನ್ನು ವಾಪಸ್ ಕಳುಹಿಸುತ್ತಿದ್ದೀರಿ. ನೀವು ಸಹ ನೌಕರಿಗೆ ತೆಗೆದುಕೊಳ್ಳಬೇಕಾದರೆ ಈಗಲಾದರೂ ಸಹ ರೋಸ್ಟರ್ ಸಿಸ್ಟಂ ಫಾಲೋ ಮಾಡಿ ಏನೇನು ಕೊರತೆ ಇದೆಯೋ ಅದನ್ನು ತುಂಬಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯಿಸುತ್ತೇನೆ. ಡಿಪೋಗಳನ್ನು ಕೊಡಬೇಕಾದರೆ ಎಲ್ಲರೂ ಹೇಳಿದರು. ಅರ್ಜಿ ಹಾಕಿ ಮೇಲಿಂದ ಮೇಲೆ ಒತ್ತಾಯ ಮಾಡಿ ಡಿಪೋ ಬೇಕು ಡಿಪೋ ಬೇಕು ಎಂದು ಕೇಳುತ್ತಾರೆ, ಅದರಲ್ಲಿ ಬಹಳ ಗಂಟು ಹೊಡೆಯುತ್ತಾರೆ, ಆ ವ್ಯಾಪಾರದಲ್ಲಿ ಅನುಕೂಲ ಇರಬೇಕು ಎಂದು ಹೇಳಿದರು. ಡಿಪೋ ಕೊಡಬೇಕಾದರೆ ಏನಾಗಿದೆ, ಅದು ಒಂದು ರೀತಿಯ ನೌಕರಿ. ಆದ್ದರಿಂದ ಅನೇಕ ಕಡೆ ಹರಿಜನಗಿರಿಜನರಿಗೆ ಡಿಪೋಗಳನ್ನು ಕೊಟ್ಟಿಲ್ಲ. ಆದ್ದರಿಂದ ಡಿಪೋ ಕೊಡುವಾಗ ಕಡ ಪಕ್ಷ 25 ಪರ್ಸೆಂಟ್ ಹರಿಜನಗಿರಿಜನರಿಗೆ ಕೊಡಬೇಕೆಂದು ನಾನು ವಿನಂತಿ ಮಾಡಿ ಕೊಳ್ಳುತ್ತಿದ್ದೇನೆ. ಏತಕ್ಕೆ 25 ಪರ್ಸೆಂಟ್ ಕೇಳುತ್ತಿದ್ದೇನೆ ಎಂದರೆ ಮೊನ್ನೆ ಮೊನ್ನೆ ತಾನೆ ಎಸ್.ಸಿ.ಎಸ್.ಟಿ.ಗೆ ಅನೇಕ ಜಾತಿಗಳನ್ನು ಸೇರಿಸಿದ್ದಾರೆ. ಆದ್ದರಿಂದ ಪಾಪ್ಯುಲೇಷನ್ 27 ಪರ್ಸೆಂಟ್‌ಗೆ ಹೋಗುತ್ತಿದೆ. ಆದ್ದರಿಂದ ದಯವಿಟ್ಟು 25 ಪರ್ಸೆಂಟ್ ಡಿಪೋಗಳನ್ನು ಇವರಿಗೆ ಕೊಡುವುದಕ್ಕೆ ಸಹಾಯ ಮಾಡಬೇಕು. ಹಾಗೂ ನೀವು ಬಂದಮೇಲೆ ಅನೇಕ

ಸೊಸೈಟಿಗಳು ಕಂಟ್ರೋಲ್‌ಗೆ ಬಂದಿದ್ದರೂ ಸಹ ಅನೇಕ ಸೊಸೈಟಿಗಳಲ್ಲಿ ದುರುಪಯೋಗ ನಡೆಯುತ್ತಿದೆ. ಅಲ್ಲಿ ಮಾರಾಟ ಮಾಡಿಕೊಂಡು ಹೋಗುತ್ತಿದ್ದಾರೆ. ಅದನ್ನು ಮತ್ತಷ್ಟು ಬಿಗಿ ಮಾಡಿ ಕಂಟ್ರೋಲ್ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇದರ ಜೊತೆಗೆ ನಿಮ್ಮಲ್ಲಿ ಒಂದು ತಾರತಮ್ಯವಾಗಿದೆ. ಟೌನ್‌ನಲ್ಲಿರತಕ್ಕವರಿಗೆ ಕಾರ್ಡ್ ಇಲ್ಲದೇ ಹೋದರೆ ತಕ್ಷಣ - ಇನ್ಸ್‌ಪೆಕ್ಷನ್ ಮಾಡಿ ನಗರವಾಸಿಗಳಿಗೆ ಕಾರ್ಡ್ ಕೊಡುತ್ತಾರೆ. ಹಳ್ಳಿಯಲ್ಲಿ ಕಾರ್ಡ ಇಲ್ಲ ಎಂದು ಕೈ ಮುಗಿದುಕೊಂಡು ಬಂದರೂ ಕಾನೂನಿನಲ್ಲಿ ಅವಕಾಶ ಇಲ್ಲ ಎಂದು ಅಕ್ಕಿ ಸಕ್ಕರೆ ಗೋಧಿ ತೆಗೆದುಕೊಳ್ಳುವುದಕ್ಕೆ ಯಾವುದೇ ಅನುಕೂಲ ಇಲ್ಲದೆ ಅನಾನುಕೂಲವಾಗಿದೆ. ಇನ್ನೂ ಒಂದು ಅನಾನುಕೂಲವಾಗಿದೆ. ಒಂದು ಸ್ಟೋರ್ ಮಾಡಬೇಕಾದರೆ 50 ಕಾರ್ಡ್ ನಿಗದಿ ಮಾಡಿ ಕೊಟ್ಟಿದ್ದೀರಿ. ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ಏನಾಗಿದೆ ಎಂದರೆ ಒಂದು ಹಳ್ಳಿಗೂ ಇನ್ನೊಂದು ಹಳ್ಳಿಗೂ 10ರಿಂದ 15 ಕಿಲೋಮೀಟರ್ ದೂರ ಇದೆ. ಒಂದು ಹಳ್ಳಿಯಲ್ಲಿ 175ರಿಂದ 200 ಮನೆಗಳಿರುತ್ತದೆ. 200 ಮನೆಗಳಿಗೆ ಕಾರ್ಡ್ ಕೊಡುವುದಕ್ಕಾಗುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ರಿಜೆಕ್ಟ್ ಮಾಡುತ್ತಾರೆ ಸ್ಟೋರ್ ಮಾಡುವುದಕ್ಕಾಗುವುದಿಲ್ಲ ಎಂದು. ಇಲ್ಲದೇ ಹೋದರೆ 15 ಕಿಲೋಮೀಟರ್ ನಡೆದುಕೊಂಡು ಬಂದು ಮಾಡಬೇಕಾಗುತ್ತದೆ. ಹಳ್ಳಿಯ ಜನರು ಸೇವೆ ಮಾಡುವುದಕ್ಕಾಗಿ ನಮ್ಮ ಮನೆಯಲ್ಲಿ ಸ್ಟೋರ್ ಇಟ್ಟರೆ ಅದು ಗೌರವ ಎಂದು ಇಡುತ್ತಾರೆ. ಅದಕ್ಕಾಗಿ 150 ಇರಲಿ 200 ಇರಲಿ ಅಥವಾ 500ರೊಳಗೆ ಎಷ್ಟೇ ಕಾರ್ಡ್ ಇದ್ದರೂ ಜನಗಳಿಗೆ ಅನಾನುಕೂಲ ಆಗದ ರೀತಿಯಲ್ಲಿ ಸ್ಟೋರ್‌ಗಳನ್ನು ಮಾಡಬೇಕು, ಮತ್ತು ಅದಕ್ಕೆ ಹೊಸ ಕಾನೂನನ್ನು ತಾವು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಹಾಗೆ ಸಾರಿಗೆ ಇಲಾಖೆ. ಸಾರಿಗೆ ಇಲಾಖೆ ಮಂತ್ರಿಗಳು ಎಷ್ಟೇ ವಯಸ್ಸಾದರೂ ಬಹಳ ಲವಲವಿಕೆಯಿಂದ ಓಡಾಡುತ್ತಾರೆ. ಆದರೆ ಬಸ್ಸುಗಳ ಪರಿಸ್ಥಿತಿ ನೋಡಿದರೆ ಆ ಬಸ್ಸಿನಲ್ಲಿ ಕಸ ಹೊಡೆಯುವುದಿಲ್ಲ. ಬಸ್ ತೊಳೆದಿರುವುದಿಲ್ಲ. ಕೊಂಡುಕೊಂಡಾಗ ಬಸ್ ತೊಳೆದರೆ ಮತ್ತೆ ಸ್ಕ್ರಾಪ್ ಮಾಡಿ ಗೋಡೌನ್‌ಗೆ ಹೋದಾಗ ಕಸ ಹೊಡೆಯುತ್ತಾರೋ ತೊಳೆಯುತ್ತಾರೋ ಗೊತ್ತಿಲ್ಲ. ಆ ಪರಿಸ್ಥಿತಿ ಸಾರಿಗೆ ಇಲಾಖೆಯದಾಗಿದೆ. ದಯಮಾಡಿ ತಾವು ಸೂಪರ್‌ವಿಷನ್ ಮಾಡಿ ಬಸ್ಸುಗಳನ್ನು ತೊಳೆಸಿ ಟೈರು ಟ್ಯೂಬುಗಳನ್ನು ಚೆನ್ನಾಗಿ ಹಾಕಿ ಪ್ರಯಾಣಿಕರಿಗೆ ಸುಖಕರವಾಗಿ ಹೋಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಶಿವಮೊಗ್ಗದಲ್ಲಿ ಒಂದು ಅನುಭವ ಪಡೆದಿದ್ದೇವೆ. ಯಾರೋ ಹೊಸ ಸಾರಿಗೆ ಅಧಿಕಾರಿಯನ್ನು ಅಲ್ಲಿ ಹಾಕಿದ್ದೀರಿ. ಕೇವಲ 3 ತಿಂಗಳಲ್ಲಿ ಆತ ನಮ್ಮ ಕಣ್ಣಿಗೆ ಕಂಡಹಾಗೆ 13ರಿಂದ 15 ಲಕ್ಷ ರೂಪಾಯಿ ಲಾಭ ಮಾಡಿದ್ದಾನೆ. ಹೇಗೆ ಮಾಡಿದ ಎಂದು ನಾನು ಕೇಳಿದೆ.

11.15 ಎ.ಎಂ.

ಅವರು ಏನು ಮಾಡಿದ್ದಾರೆ? ಬಸ್ ಬಂದ ತಕ್ಷಣದಲ್ಲಿ ಇನ್ನೊಬ್ಬ ಡ್ರೈವರ್ ಹಾಗೂ ಕಂಡಕ್ಟರ್‌ನ್ನು ಹಾಕಿ ಮತ್ತೊಂದು ಕಡೆ ಹತ್ತಿರದಲ್ಲಿ ಹೋಗುವುದಕ್ಕೇ ಅಥವಾ ಇನ್ನೊಂದು ಬಸ್ ಹೋಗುವ ವೇಳೆಗೆ ಆ ಬಸ್ ವಾಪಸ್ಸು ಬರುವ ರೀತಿಯಲ್ಲಿ ಅಡ್ಜಸ್ಟ್ ಮಾಡಿ ಇರತಕ್ಕ ಬಸ್‌ನ್ನು ಕ್ಲೀನ್ ಮಾಡಿ, ರಿಪೇರಿ ಮಾಡಿ ಆ ಕಡೆ ಈ ಕಡೆ ಕಳುಹಿಸಿ ಇರತಕ್ಕ ಬಸ್‌ಗಳಲ್ಲೇ ಎಷ್ಟು ಲಾಭ ಮಾಡುವುದಕ್ಕೆ ಸಾಧ್ಯವಾಗಿದೆ ಎಂದು ಹೇಳಿದ್ದಾರೆ. ತಾವೂ ಕೂಡ ಅನಾವಶ್ಯಕವಾಗಿ ಒಂದು ಊರಿಗೆ ಒಂದು ಬಸ್ ಬೆಳಿಗ್ಗೆ ಹೋಗಿ ಸಾಯಂಕಾಲದವರೆಗೆ ನಿಂತು ಸಂಜೆಮೇಲೆ ಬಸ್ ಹೊರಡುವ ವ್ಯವಸ್ಥೆಯನ್ನು ನಿಲ್ಲಿಸಿ, ಹತ್ತಿರದ ಊರಿಗೆ ಹೋಗಿ ಬರುವ ವ್ಯವಸ್ಥೆ ಮಾಡಿದರೆ ಹಣವೂ ಬರುತ್ತದೆ. ಹಾಗೂ ಪ್ರಯಣಿಕರಿಗೂ ಅನುಕೂಲ ಮಾಡಿಕೊಟ್ಟಹಾಗಾಗುತ್ತದೆ.

ಅದನ್ನು ಮಾಡಬೇಕೆಂದು ಹೇಳುತ್ತೇನೆ. ಅದಲ್ಲದೇ ತಾವು ಏನು ಮಾಡಿದ್ದೀರೆಂದರೆ 6 ಸಾವಿರ ನೌಕರಿ ಕರೆಯುತ್ತೇವೆಂದು ಹೇಳಿದ್ದೀರಿ. ಈಗಾಗಲೇ 55 ಸಾವಿರ ನೌಕರರಾದರು ಕೆಲಸ ಮಾಡುತ್ತಿದ್ದಾರೆ. ಈಗ ಇರುವವರಲ್ಲಿ ಹರಿಜನಗಿರಿಜನರ ಪರ್ಸೆಂಟೇಜ್ 9 ಮಾತ್ರ ಇದೆ. ಹಾಗೂ ಇನ್ನೂ 9 ಪರ್ಸೆಂಟ್ ಬ್ಯಾಕ್‌ಲಾಗ್ ಇದೆ. ಹಾಗೂ ಮೊದಲನೇ ಆದ್ಯತೆಯನ್ನು ಬ್ಯಾಕ್‌ಲಾಗ್‌ಗೆ ಕೊಡುತ್ತೇವೆಂದು ಇದೇ ಸಭೆಯಲ್ಲಿ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಹಾಗೂ ನಂತರ ರೆಗ್ಯುಲರ್ ಅಪಾಯಿಂಟ್‌ಮೆಂಟ್ ಮಾಡುತ್ತೇವೆಂದು ಹೇಳಿದ್ದಾರೆ. ಮಾನ್ಯ ಸಾರಿಗೆ ಮಂತ್ರಿಗಳೂ ಸೋಶಿಯಲಿಸ್ಟ್ ಪಾರ್ಟಿಯಿಂದ ಬಂದಿರುವವರು. ಮಾನ್ಯ ಮುಖ್ಯಮಂತ್ರಿ ಹಾಗೂ ಮಾನ್ಯ ಚಂದ್ರೇಗೌಡರೂ ಸಹಾ ಮಾನ್ಯ ಸಾರಿಗೆ ಮಂತ್ರಿಗಳ ಶಿಷ್ಯರೇ. ಆದ್ದರಿಂದ ತಮ್ಮ ಕಾಲದಲ್ಲಾದರೂ ಹರಿಜನಗಿರಿಜನರಿಗೆ ಅನುಕೂಲ ಮಾಡಿಕೊಟ್ಟರು ಎನ್ನುವ ಭಾವನೆ ಬರುವ ರೀತಿಯಲ್ಲಿ ತಾವು ಕೆಲಸ ಮಾಡುತ್ತೀರೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಇನ್ನು ಮಾನ್ಯ ಮುಖ್ಯಮಂತ್ರಿಯವರ ಖಾತೆಯ ಮೇಲೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಮುಖ್ಯಮಂತ್ರಿಗಳ ಖಾತೆ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಯಡಿಯೂರಪ್ಪನವರು ನೌಕರ ವರ್ಗದವರ ಮೇಲೆ ಮಾತನಾಡಿದರು. ಆದರೆ, ಮಾನ್ಯ ಏಕಾಂತಯ್ಯನವರು ದೊಡ್ಡಸ್ಥಿಕೆಯಲ್ಲಿ ಯಾರ ಹೆಸರನ್ನೂ ಹೇಳದೇ ಎಲ್ಲ ನೌಕರವರ್ಗದವರಲ್ಲೂ ಕೆಲವು ಪರ್ಸೆಂಟೇಜ್ ಕರಪ್ಷನ್ ಇದೆಯಾದ್ದರಿಂದ ಅವರಿಗೆ ಸ್ವಲ್ಪ ಕಡಿವಾಣವಾಕಬೇಕು ಇಲ್ಲದಿದ್ದರೆ ಆಡಳಿತ ವ್ಯವಸ್ಥೆ ಕುಸಿದುಬೀಳುತ್ತದೆಂದರು. ಆದರೆ ನಮ್ಮ ವಿರೋಧ ಪಕ್ಷದ ನಾಯಕರು, ಸೋಶಿಯಲಿಸ್ಟ್ ಪಾರ್ಟಿಯಿಂದ ಬಂದವರು, ನನ್ನ ಜಿಲ್ಲೆಯಿಂದ ಬಂದವರು, ಬಂಗಾರಪ್ಪನವರು ನನ್ನ ಜಿಲ್ಲೆಯವರೇ, ಸೋಷಿಯಲಿಸ್ಟ್ ಪಾರ್ಟಿಯಿಂದ ಬಂದವರೆ, ಶ್ರೀಮತಿ ಇಂದಿರಗಾಂಧಿಯವರಿಗೆ ಸೀಟು ಬಿಟ್ಟುಕೊಟ್ಟು ಚುನಾವಣೆಯಲ್ಲಿ ಗೆಲ್ಲಿಸುವುದಕ್ಕೆ ಹೋರಾಟ ಮಾಡಿದಂತ ಡಾ. ಲೋಹಿಯಾ ಅವರ ಅನುಯಾಯಿಗಳಾಗಿ ಅವರ ತತ್ವವನ್ನು ಅನುಕರಣೆ ಮಾಡಿದ ನಮ್ಮ ವಿರೋಧ ಪಕ್ಷದ ನಾಯಕರಾದ ಚಂದ್ರೇಗೌಡರ ಬಗ್ಗೆ ನನಗೆ ಬಹಳ ಗೌರವ ಇದೆ. ಯಾರು ಈ ದೇಶದಲ್ಲಿ ಈ ರಾಜ್ಯದಲ್ಲಿ ತುಳಿಯಲ್ಪಟ್ಟ ಜನರಿದ್ದಾರೆ ಆ ಜನಾಂಗದವರು ಆಡಳಿತ ಮಾಡುವುದಕ್ಕೆ ಬಂದಾಗ ಈ ದೇಶದ ಪ್ರಗತಿಯಾಗುತ್ತದೆ. ಯಾರಿಗೆ ಅನ್ಯಾಯವಾಗಿದೆಯೋ ಅವರು ಮೇಲಕ್ಕೆ ಬರುವುದಕ್ಕೆ ಸಾಧ್ಯವಾಗುತ್ತದೆ ಎಂದು ಭಾಷಣವನ್ನು ಮಾಡಿ ನಮ್ಮನ್ನೆಲ್ಲಾ ಪ್ರಚೋದನೆ ಮಾಡಿದಂತಹ ಮಾನ್ಯ ಚಂದ್ರೇಗೌಡರು ಇವತ್ತು ಮುಖ್ಯಮಂತ್ರಿಗಳ ಇಲಾಖೆ ಮೇಲೆ ಮಾತನಾಡುವ ಸಂದರ್ಭದಲ್ಲಿ ಅಧಿಕಾರಿಗಳ ಹೆಸರನ್ನು ಹೇಳಬೇಕಾದರೆ ಕೇವಲ ಹರಿಜನ ಅಧಿಕಾರಿಗಳ ಹೆಸರನ್ನು ಹೇಳಿದರೇ ವಿನಃ ಬೇರೆ ಜನರ ಹೆಸರನ್ನು ಹೇಳಲಿಲ್ಲ, ಅನೇಕ ಐಎಎಸ್, ಐಪಿಎಸ್ ಅಧಿಕಾರಿಗಳು ಲೋಕಾಯುಕ್ತಕ್ಕೆ ಸಿಕ್ಕಿಕೊಂಡಿದ್ದಾರೆ. ಆದರೆ ಇವರು ಕೇವಲ ಹರಿಜನಗಿರಿಜನರ ಮೇಲೆ ಕಂಪ್ಲೇಂಟ್ ಮಾಡಿದರು.

ಶ್ರೀಮತಿ ಮೋಟಮ್ಮ : ಉಳಿದವರು ಸತ್ಯಹರಿಶ್ಚಂದ್ರರ ಕಡೆಯಿಂದ ಬಂದಿರುವವರು.

ಶ್ರೀ ಕರಿಯಣ್ಣ : ಅವರು ಹೇಳಬಾರದು ಎಂದಲ್ಲ, ಆ ಹೆಸರುಗಳನ್ನು ಹೇಳಬಾರದು ಎಂದು ನಾನು ಹೇಳುತ್ತಿಲ್ಲ. ಹಿಂದೊಮ್ಮೆ ಮಾನ್ಯ ರಂಗನಾಥ್ ಅವರು ಶಿವಮೊಗ್ಗಕ್ಕೆ ಜಿಲ್ಲಾಮಂತ್ರಿಗಳಾಗಿ 10 ವರ್ಷಗಳ ಹಿಂದೆ ಬಂದಾಗ ಕೆಲವು ಹಜಾಮರುಗಳು ಅವರ ಹತ್ತಿರ ಬಂದು ಸ್ವಾಮಿ ನಮಗೆ ಬಹಳ ಕಷ್ಟವಾಗುತ್ತದೆ ನಾವು ಸೋಶಿಯಲ್ ಜಸ್ಟೀಸ್‌ಗಾಗಿ ಕೇಳುತ್ತಿದ್ದೇವೆ ಎಂದರು. ಆಗ ಸೋಶಿಯಲ್ ಜಸ್ಟೀಸ್ ಎಂದರೆ ಏನು ಗೊತ್ತು ನಿಮಗೆ ಎಂದು ಕೇಳಿದರು. ಏಕೆ ಹೇಳುತ್ತಿದ್ದೇನೆಂದರೆ, ರಂಗನಾಥ್ ಅವರ ಎದುರಿಗೆ ಮಾತನಾಡುವುದಕ್ಕೆ ನಮಗೆ ಈಗಲೂ ಹೆದರಿಕೆಯಾಗುತ್ತದೆ. ಅವರಿಗೆ ಅಷ್ಟೊಂದು ಆಳವಾದ ಅನುಭವ ಇದೆ.

ಸೋಶಿಯಲ್ ಜಸ್ಟೀಸ್ ಅಂದರೆ ನಿಮಗೆ ಗೊತ್ತೇನ್ರಿ ಎಂದು ಕೇಳಿದರು, ನಾವು ಏನೋ ಹೇಳುತ್ತಾರೆಂದು ನಿಂತುಕೊಂಡಿದ್ದೆ. ಒಬ್ಬ ಹಜಾಮರವನು ಐಎಎಸ್ ಆಫೀಸರ್ ಬಹಳ ಚೆನ್ನಾಗಿ ಆರ್ಡರ್ ಮಾಡುತ್ತಾನೆ. ಯಾವ ತರಹ ಚೆನ್ನಾಗಿ ಆರ್ಡರ್ಸ್‌ಗಳನ್ನು ಮಾಡುತ್ತಿದ್ದಾನೆ ಅದನ್ನು ನೋಡಿಯೆಂದು ಸವರ್ಣೀಯರಿಗೆ ಹೇಳಿದರೆ, ಸವರ್ಣೀಯರು ಏನು ಹೇಳುತ್ತಾರೆಂದರೆ, ಯಾರೋ ಒಬ್ಬ ಹಜಾಮರವನು ಐಎಎಸ್ ಆಫೀಸರ್ ಡೆಪ್ಯುಟಿ ಕಮೀಷನರ್ ಆಗಿ ಬಂದಿದ್ದಾನೆ ಅವನಿಗೆ ಏನೂ ಬರುವುದಿಲ್ಲವೆಂದು ಹೇಳುತ್ತಾರೆಂದು ಅವರು ಹೇಳಿದರು. ಅವನು ಫಸ್ಟ್‌ಕ್ಲಾಸ್ ಸ್ಟೂಡೆಂಟ್ ಆಗಿ ಎಲ್ಲಾ ತರಗತಿಗಳಲ್ಲೂ ಪಾಸ್ ಮಾಡಿಕೊಂಡು ಬಂದಿದ್ದರೂ ಅವನು ಚೆನ್ನಾಗಿ ಆರ್ಡರ್ಸ್‌ಗಳನ್ನು ಮಾಡುತ್ತಿದ್ದರೂ ಅವನಿಗೆ ಏನೇನೂ ಬರುವುದಿಲ್ಲ. ಅವನು ರಿಸರ್ವ್ ಆಗಿ ಆರ್ಡರ್ಸ್ ಮಾಡುವುದಕ್ಕೆ ಹತ್ತಿದ್ದಾನೆಂದು ಹೇಳುತ್ತಾರೆ. ಸವರ್ಣೀಯ ಒಬ್ಬ ಅಧಿಕಾರಿಯಾಗಿ ಬಂದರೆ ಅವನಿಗೆ ಏನೂ ಬರದಿದ್ದರೂ ಕೂಡ ಅವನಿಗೆ ಏನೂ ಗೊತ್ತಿಲ್ಲದಿದ್ದರೂ ಕೂಡ ಅವನು ಒಳ್ಳೆಯವನಾಗಿ ಬಿಡುತ್ತಾನೆ. ಆ ರೀತಿಯಾಗಿ ಇವತ್ತಿನ ದಿವಸ ಹರಿಜನರ ಹೆಸರು ಹಿಡಿದು ಹೇಳಿದ್ದರಿಂದ ಅನೇಕ ಸವರ್ಣೀಯ ಐಎಎಸ್ ಅಧಿಕಾರಿಗಳು ಐಪಿಎಸ್ ಅಧಿಕಾರಿಗಳು ನಕ್ಕೊಂಡು ಹೋಗುತ್ತಿದ್ದರು. ನಮ್ಮ ಚಂದ್ರೇಗೌಡರು ಮತ್ತು ಯಡಿಯೂರಪ್ಪನವರು ಬಹಳ ಚೆನ್ನಾಗಿ ಮಾತನಾಡಿದರು ಎಂದು ಅಂದುಕೊಳ್ಳುತ್ತಿದ್ದರು. ತಾವ ಹೀಗೆ ಮಾತನಾಡಿದರೆ ಈ ಜನರ ಪರಿಸ್ಥಿತಿ ಏನಾಗಿರಬೇಕು? ಅವರು ಮುಖ ತೋರಿಸುವಹಾಗೆ ಇದೆಯೇ? ಎಷ್ಟು ಜನ ಸವರ್ಣೀಯ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳು ಲೋಕಾಯುಕ್ತರ ಕೈಗೆ ಸಿಕ್ಕಿಲ್ಲ? ಅವರ ಮೇಲೆ ಕರಪ್ಷನ್ ಕೇಸುಗಳು ಇಲ್ಲ? ನನ್ನ ಕ್ಷೇತ್ರದಲ್ಲಿ ಒಬ್ಬ ಇಂಜಿನಿಯರ್ ಇದ್ದಾನೆ. ಅವನು ಒಂದು ರಸ್ತೆ ಕೆಲಸವನ್ನು ಮೂರು ತಿಂಗಳಿನಲ್ಲಿ ಎರಡು ಸಾರಿ ಮಾಡಿಸಿದ್ದೇನೆಂದು ದುಡ್ಡನ್ನು ಖರ್ಚು ಹಾಕಿದ್ದಾನೆ. ಅವನ ಬಗ್ಗೆ ನಾನು ಹೇಳಬೇಕೆಂದರೆ ಅವನಿಗೆ ಜನಾಂಗದ ಬಲ ಇದೆ. ನನ್ನ ಮೇಲೆ ಒತ್ತಡ ತರುತ್ತಾನೆ.. ಹರಿಜನ ಅಧಿಕಾರಿಗಳ ವಿಚಾರವನ್ನು ತಮಗೆ ಕೊಟ್ಟಿದ್ದಾರೆ. ಬೇರೆ ಜನಾಂಗದವರ ಅಧಿಕಾರಿಗಳ ವಿಚಾರವನ್ನು ಕೊಡುವುದಕ್ಕೆ ಅವರಿಗೆ ಯಾರು ಇರಲಿಲ್ಲವೆ? ನಾನು ವಿರೋಧಪಕ್ಷದ ನಾಯಕರನ್ನು ಟೀಕೆ ಮಾಡುತ್ತಿಲ್ಲ. ಜನರಲ್ ಆಗಿ ಹೇಳುವಂತಹ ಪರಿಸ್ಥಿತಿಯನ್ನು ರೂಢಿಸಿಕೊಳ್ಳಬೇಕು. ಹೆಸರು ಹಿಡಿದು ಹೇಳುವುದಕ್ಕೆ ಹೋಗಬಾರದೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇಷ್ಟೆಲ್ಲ ಆಪಾದನೆಗಳು ಇದ್ದರೂ ಒಂದು ಒಳ್ಳೆಯ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೆ. ಅವರಿಗೆ ಇವತ್ತು ನಾವು ಕೃತಜ್ಞತೆಗಳನ್ನು ಹೇಳಬೇಕಾಗಿದೆ. ಹರಿಜನ ಅಧಿಕಾರಿಗಳಿಗೆ ಅನೇಕ ಕ್ಷೇತ್ರಗಳಲ್ಲಿ ಅವಕಾಶ ಕೊಡದಿದ್ದರೂ ಸ್ವಲ್ಪ ಕ್ಷೇತ್ರಗಳಲ್ಲಿ ಸಾಕಷ್ಟು ಕ್ಷೇತ್ರಗಳಲ್ಲಿ ವಿರೋಧಪಕ್ಷದ ನಾಯಕರ ಸುರಿಮಳೆಗಳು ಇದ್ದರೂ ಸಹಿತ ಅನೇಕ ಹರಿಜನಗಿರಿಜನ ಅಧಿಕಾರಿಗಳಿಗೆ ಮುಖ್ಯವಾದ ಸ್ಥಾನಮಾನಗಳನ್ನು ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಕೊಟ್ಟಿರುವಾಗ ಆ ಅಧಿಕಾರಿಗಳು ನಾವು ಈ ಸ್ಥಾನಮಾನಗಳಲ್ಲಿ ಕೆಲಸಮಾಡುವುದಕ್ಕೆ ಅರ್ಹರು, ನಾವು ಈ ಕೆಲಸ ಮಾಡಬಲ್ಲೆವು ಎಂದು ತೋರಿಸುವುದಕ್ಕೆ ಅವರಿಗೆ ಅವಕಾಶ ಸಿಕ್ಕಿವೆ. ಹಾಗಾಗಿ ಈ ವಿಚಾರದಲ್ಲಿ ಮುಖ್ಯಮಂತ್ರಿಗಳಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದರ ಜೊತೆಗೆ ಹರಿಜನರ ದೇವಾಲಯಗಳಿಗೆ ಇದುವರೆಗೆ ಯಾರೂ ಕೈಹಾಕಿರಲಿಲ್ಲ. ರಾಮನ ದೇವಾಲಯ ಕಟ್ಟುತ್ತೇವೆಂದು ಬೇರೆಯವರು ಹಣವನ್ನು ಎತ್ತಿಕೊಂಡು ಹೋಗುತ್ತಿದ್ದರೇ ವಿನಹ, ಕೃಷ್ಣನ ದೇವಾಲಯ ಕಟ್ಟುವುದಕ್ಕೆ ಹಣ ತೆಗೆದುಕೊಂಡು ಹೋಗುತ್ತಿದ್ದರೇ ವಿನಹ, ಹರಿಜನರು ಪೂಜೆ ಮಾಡತಕ್ಕ ಗಂಗವ್ವ, ಮಾರವ್ವ ಚೌತವ್ವ, ಈ ದೇವಾಲಯಗಳಿಗೆ ಹಣ ಕೊಡುವ ವ್ಯವಸ್ಥೆ ಇರಲಿಲ್ಲ. ರಸ್ತೆ ಮೇಲೆ ಸಣ್ಣ

ಸಣ್ಣ ಗುಡಿಗಳನ್ನು ಕಟ್ಟಿಕೊಂಡು ಪೂಜೆ ಮಾಡಿಕೊಳ್ಳುತ್ತಿದ್ದರು. ಎರಡು ಕೇರಿಗಳ ಮಧ್ಯೆ ದೇವಾಲಯಗಳು ಇದ್ದರೆ ಅವುಗಳಿಗೆ ಜಾಗ ಕೊಟ್ಟಿರುವ ನಿದರ್ಶನಗಳು ಇರಲಿಲ್ಲ. ಅವರು ರಸ್ತೆಯಲ್ಲಿ ದೇವಾಲಯ ಕಟ್ಟಿಕೊಂಡಿರುವುದನ್ನು ನೋಡಿ ಅದರಲ್ಲೂ ತುಳಿಯಲ್ಪಟ್ಟ ಹಿಂದುಳಿದವರ್ಗದ ಮುಖ್ಯಮಂತ್ರಿಯಾದರಿಂದ ಅವರು ಅದನ್ನು ಗುರುತಿಸಿ ಹರಿಜನರ ದೇವಾಲಯಗಳಿಗೆ 1 ಕೋಟಿ ರೂಪಾಯಿ ಹಣವನ್ನು ಸಹ ಬಿಡುಗಡೆ ಮಾಡಿದ್ದಾರೆ. ಅದು ಹಂಚಿಕೆಯ ಹಂತದಲ್ಲಿದೆ. ಮಾನ್ಯ ಕಂದಾಯ ಸಚಿವರಾದ ಮಲ್ಲಿಕಾರ್ಜುನ ಖರ್ಗೆಯವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಯಾವ ವರ್ಷವೂ ಆಗದೇ ಇರತಕ್ಕ ಕೆಲಸ ಈವೊಂದು ವರ್ಷದಲ್ಲಿ ಆಗಿದೆ, ತಾವು 1 ಕೋಟಿ ರೂಪಾಯಿ ಕೊಡುವುದಕ್ಕೆ ಬದಲು 5 ಕೋಟಿ ರೂಪಾಯಿ ಹಣವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹಣ ಕೊಡುವುದರ ಜೊತೆಗೆ ಎಲ್ಲೆಲ್ಲಿ ಅವಕಾಶವಿದೆ ಅಲ್ಲಿ ಹರಿಜನರ ದೇವಾಲಯಗಳಿಗೆ ಸೈಟುಗಳನ್ನು ಕೊಡಬೇಕು. ಜೊತೆಗೆ ಅವರಿಗಾಗಿ ಕಮ್ಯುನಿಟಿ ರಿಕ್ರಿಯೇಷನ್ ಬಿಲ್ಡಿಂಗ್‌ಗಳನ್ನು ಕಟ್ಟುವುದಕ್ಕೆ ಸೈಟುಗಳನ್ನು ರಿಸರ್ವ್ ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಸದಸ್ಯರಾದ ಕರಿಯಣ್ಣನವರೇ, ಇನ್ನು ಮೂರು-ನಾಲ್ಕು ಜನ ಸದಸ್ಯರು ಮಾತನಾಡುವವರು ಇದ್ದಾರೆ ತಾವು ಬೇಗ ಮುಗಿಸಿ.

ಶ್ರೀ ಕರಿಯಣ್ಣ : ಇನ್ನು ರೆವಿನ್ಯೂ ಇಲಾಖೆಯ ಬಗ್ಗೆ ಮಾತನಾಡುವುದಾದರೆ, ರೆವಿನ್ಯೂ ಇಲಾಖೆಯಲ್ಲಿ ಸರ್ವೆ ಇಲಾಖೆಯೊಂದು ಇದೆ. ಅಲ್ಲಿ ಎಲ್ಲಾ ರೆಕಾರ್ಡ್‌ಗಳನ್ನು ಸರ್ವೆ ಸ್ಕೆಚ್ ಮಾಡಿಇಟ್ಟಿದ್ದಾರೆ. ಅವುಗಳು ಮಣ್ಣು ತಿನ್ನುತ್ತಿದೆ. ಯಾವ ರೆಕಾರ್ಡ್‌ಗಳನ್ನು ಕೇಳಿದರೂ ಅವು ಸಿಗುವುದಿಲ್ಲ. ಬೌಂಡರಿಗಳ ರೆಕಾರ್ಡ್ ಸಿಗುವುದಿಲ್ಲ, ಅದಕ್ಕೆ ಏನಾದರೂ ಒಂದು ವ್ಯವಸ್ಥೆಯನ್ನು ಮಾಡದೇ ಹೋದರೆ ನೀವು ಮತ್ತೊಂದು ಸಾರಿ ಹೊಸದಾಗಿ ಸರ್ವೆ ಮಾಡಿಸಬೇಕಾಗುತ್ತದೆ. ಇರುವ ರೆಕಾರ್ಡ್‌ಗಳನ್ನು ಸರಿಯಾದ ರೀತಿಯಲ್ಲಿ ಕಾಪಾಡುವ ಕೆಲಸವನ್ನು ತಕ್ಷಣ ಮಾಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. ನಮ್ಮ ಹೊಳೇಹೊನ್ನೂರು ಕ್ಷೇತ್ರವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹೊಸದಾಗಿ ಜಿಲ್ಲೆ ಮತ್ತು ತಾಲ್ಲೂಕುಗಳನ್ನು ಮಾಡುವಾಗ ಅದರ ಬಗ್ಗೆ ಈಗಾಗಲೇ ವರದಿಗಳು ಸರ್ಕಾರಕ್ಕೆ ಬಂದಿವೆ. ನನ್ನ ಕ್ಷೇತ್ರವನ್ನು ಸಹ ತಾಲ್ಲೂಕು ಮಟ್ಟಕ್ಕೆ ಏರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ತೋಟಿ ತಳವಾರರುಗಳಿಗೆ ಏನು ಸಂಬಳವನ್ನು ನಿಗದಿ ಮಾಡಲಾಗಿದೆ ಅದು ಸಾಲುವುದಿಲ್ಲ. ಸರ್ಕಾರಿ ನೌಕರರಿಗೆ ಒಂದೇ ಸಮನೆ ಡಿ.ಎ. ರೈಸ್ ಮಾಡುತ್ತೀರಿ. ಇವರಿಗೆ ಏತಕ್ಕೆ ಸಂಬಳವನ್ನು ಹೆಚ್ಚು ಮಾಡಬಾರದು?

ಅವರಿಗಾದರೂ ಕಡೆಯಪಕ್ಷ 50 ರೂಪಾಯಿ ಏರಿಸುವ ಮೂಲಕ ಈ ತೋಟಿ ತಳವಾರರಿಗೆ ಸಹಾಯ ಮಾಡಬೇಕು. ಏಕೆಂದರೆ ಅವರಿನ್ನೇನು ಸಾಯುವ ಪರಿಸ್ಥಿತಿಗೆ ಬಂದುಬಿಟ್ಟಿದ್ದಾರೆ. ಸಾಯುವ ಕಾಲದಲ್ಲಾದರೂ ಅವರಿಗೆ ಎರಡು ಹೊತ್ತು ಊಟ ಮಾಡತಕ್ಕಂಥ ಅನುಕೂಲ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈಗ ಏನಾಗಿದೆ ಎಂದರೆ, ಆಯಾ ಇಲಾಖೆಗೆ ಸಂಬಂಧಪಟ್ಟಿದ್ದನ್ನು ಅವರವರೇ ನೋಡಿಕೊಳ್ಳಬೇಕು. ಸಹಕಾರ ಸಂಘಗಳನ್ನು ಸಹಕಾರ ಇಲಾಖೆ ನೋಡಿಕೊಳ್ಳಬೇಕು. ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟಿದ್ದು ಅವರೇ ನೋಡಿಕೊಳ್ಳಬೇಕು. ಹೀಗೆ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ಅಂತ ಎಲ್ಲೆಲ್ಲಿ ಅಪಾಯಿಂಟ್‌ಮೆಂಟ್ಸ್ ಇದೆ, ಅಲ್ಲಿ ಹರಿಜನ ಗಿರಿಜನರಿಗೆ ಎಷ್ಟು ಕೊಟ್ಟಿದ್ದಾರೆ, ಎಷ್ಟು ಬಿಟ್ಟಿದ್ದಾರೆ ಎಂದು ಸರಿಯಾಗಿ ಮಾಹಿತಿ ಸಿಗುವುದಿಲ್ಲ. ಇವೆಲ್ಲವನ್ನೂ ಪರಿಶೀಲನೆ ಮಾಡುವುದಕ್ಕೆ ಒಂದು ಹೈಪವರ್ ಕಮಿಟಿಯನು ಎಸ್‌ಸಿ-

ಎಸ್‌ಟಿಯವರಿಗಾಗಿ ಮಾಡಿದರೆ ಅನುಕೂಲವಾಗುತ್ತದೆ. ಇಲ್ಲದೇ ಹೋದರೆ ಹರಿಜನಗಿರಿಜನರಿಗೆ ಎಷ್ಟು ಜನರಿಗೆ ಸರಿಯಾಗಿ ನೌಕರಿ ಸಿಕ್ಕಿದೆ ಎಂದು ಗೊತ್ತಾಗುವುದಿಲ್ಲ. ಇದು ಹಿಂದೆ ಇತ್ತು. ಈಗ ಅದನ್ನು ಮತ್ತೆ ಚಾಲುಗೊಳಿಸಿ ಕೂಡಲೇ ಒಂದು ಹೈಪವರ್ ಕಮಿಟಿ ಮಾಡಿ, ಅದರಲ್ಲಿ ಯಾರ್‍ಯಾರನ್ನು ಹಾಕಬೇಕೋ ಅವರನ್ನು ಹಾಕುವುದರ ಮೂಲಕ ತಾವು ಸಹಾಯ ಮಾಡುತ್ತೀರಿ ಎಂದು ಭಾವಿಸಿ ಈ ಸಂದರ್ಭದಲ್ಲಿ ಎರಡು ನಿಮಿಷ ಹೆಚ್ಚಿಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಶ್ರೀ ಕುಶಾಲ ಅವರು...

ಶ್ರೀ ಕೆ.ಹೆಚ್. ಹನುಮೇಗೌಡ : ನಮಗೂ ಅವಕಾಶ ಕೊಡಬೇಕು. ಇಲ್ಲದಿದ್ದರೆ ಪ್ರಯೋಜನವಾಗುವುದಿಲ್ಲ. ಕೆಲವರೇ ಮಾತನಾಡುವುದೆಂದರೆ ಹೇಗೆ? ನಾವು ಸುಮ್ಮನೆ ಬಂದು ಕುಳಿತ್ತಿದ್ದೀವಾ ಇಲ್ಲಿ? ಸರ್ಕಾರಕ್ಕೆ ಹೇಳುವಂಥ ವಿಚಾರಗಳು ನಮ್ಮಲ್ಲಿ ಇಲ್ಲವೇನು? ಬಂದು ಹೇಳಿದರೂ ಇಲ್ಲ, ಕಾಗದ ಬರೆದರೂ ಇಲ್ಲ. ಹಾಗಾದರೆ ನಾವು ಏಕೆ ಇಲ್ಲಿ ಇರಬೇಕು?

ಉಪಾಧ್ಯಕ್ಷರು : ಇವರದ್ದು ಆಗುತ್ತಿದ್ದ ಹಾಗೆ ನಿಮ್ಮನ್ನು ಕರೆಯುತ್ತೇನೆ.

ಶ್ರೀ ಕೆ. ಕುಶಾಲ (ಸುಳ್ಯ) : ಮಾನ್ಯ ಉಪಾಧ್ಯಕ್ಷರೇ, ಸಹಕಾರ, ಧಾರ್ಮಿಕ ದತ್ತಿ ಮತ್ತು ಸಾರಿಗೆ ಈ ಇಲಾಖೆಗಳ ಬಗ್ಗೆ ನಾನು ಎರಡು ಮಾತುಗಳನ್ನು ಆಡಬೇಕಾಗಿದೆ. ಬಹುಶಃ ಇವತ್ತು ನಮ್ಮ ಸರ್ಕಾರ ಅಕ್ರಮ ಅತಿಕ್ರಮಣವನ್ನು ಸಕ್ರಮ ಮಾಡುವ ಕಾರ್ಯಕ್ರಮ ಹಮ್ಮಿಕ್ಕೊಂಡು ಈಗಾಗಲೇ ಈ ಒಂದು ಕಾರ್ಯಕ್ರಮ ನಡೆದಿದೆ. ಈ ಕಾರ್ಯಕ್ರಮದ ಅನ್ವಯ ಕಳೆದ 19ನೇ ತಾರೀಖು ಅದರ ಅವಧಿ ಮುಗಿದಿದೆ. ಬಹುಶಃ ಹೆಚ್ಚಿನ ಬಡಜನರಿಗೆ, ಐದು ಸೆಂಟ್ಸ್ ಸ್ಥಳದಲ್ಲಿ ಮನೆಕಟ್ಟಿಕೊಂಡು ಹಕ್ಕುಪತ್ರ ಮೂಲಕ ಯಾವುದೇ ಸವಲತ್ತು ಪಡೆಯುವಂಥ ಅವಕಾಶ ಕೂಡ ಇದರಿಂದ ಸಿಕ್ಕಿದಂತಾಗಿದೆ. ಅದೇರೀತಿಯಲ್ಲಿ ಹೆಚ್ಚಿನ ರೈತರಿಗೆ ಸರ್ಕಾರದ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಕಾರ್ಯಕ್ರಮದ ಅನ್ವಯ ಅತಿ ಪ್ರಾಮುಖ್ಯವಾದ ಒಂದು ಸವಲತ್ತು ಪಡೆಯುವ ಅವಕಾಶ ಇದರಿಂದ ಸಿಕ್ಕಿದೆ. ಈ ಸಂದರ್ಭದಲ್ಲಿ ಇದರ ವಾಯಿದೆಯನ್ನು ಸ್ವಲ್ಪ ಮುಂದುವರೆಸಿದರೆ ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕಂಥ ಬಡ ಜನರಿಗೆ ಈ ಸವಲತ್ತುಗಳನ್ನು ಪಡೆಯಲು ಅವಕಾಶವಾಗುತ್ತದೆ ಎಂಬ ಮಾತನ್ನು ನಾನು ಹೇಳುತ್ತೇನೆ. ಹಿಂದೆ ಆಗಿನ ಕಂದಾಯ ಸಚಿವರಾದಂಥ ಶ್ರೀ ಬಸವಲಿಂಗಪ್ಪನವರು ಕರ್ನಾಟಕ ರಾಜ್ಯದಲ್ಲಿ ಹರಿಜನಗಿರಿಜನರಿಗೆ ದರಖಾಸ್ತು ಕೊಡುವಂಥ ಒಂದು ಕಾರ್ಯಕ್ರಮವನ್ನು ಹಮ್ಮಿಕ್ಕೊಂಡಿದ್ದರು. ಅದರ ಅನ್ವಯ ರಾಜ್ಯದಲ್ಲಿ ಬಡ ಹರಿಜನಗಿರಿಜನರಿಗೆ ದರಖಾಸ್ತು ಅಥವಾ ಹಕ್ಕು ಪತ್ರಗಳು ದೊರಕಿದವು. ಇಂತಹ ಸಂದರ್ಭದಲ್ಲಿ ತರಾತುರಿಯಿಂದ ಕೊಟ್ಟಂತ ದರಖಾಸ್ತು ಮಂಜೂರಾತಿಯಲ್ಲಿ, ಕೆಲವರಿಗೆ ಮಂಜೂರಾತಿ ಪತ್ರ ಸಿಕ್ಕಿದೆಯೇ ಹೊರತು ಭೂಮಿ ಸಿಕ್ಕಿಲ್ಲವೆಂಬುದು ನಮ್ಮ ಗಮನಕ್ಕೆ ಬಂದಿದೆ. ಇಂತಹ ಸಂದರ್ಭದಲ್ಲಿ ಆ ಒಂದು ಮಂಜೂರಾತಿ ಕಾನೂನನ್ನು ಇಂಪ್ಲಿಮೆಂಟ್ ಮಾಡುವಂಥ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಪುನಃ ಹಮ್ಮಿಕ್ಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಇನ್ನೂ ಕೆಲವು ತೊಂದರೆಗಳು ಕಂದಾಯ ಇಲಾಖೆಯಿಂದ ಆಗುತ್ತಿದೆ. ಬಹುಶಃ ಹತ್ತಿಪ್ಪತ್ತು ವರ್ಷಗಳ ಹಿಂದೆ ಹರಿಜನ ಗಿರಿಜನರಿಗೆ ಅಥವಾ ಬಡವರ್ಗದ ಜನರಿಗೆ ದರಖಾಸ್ತು ಮೂಲಕ ಜಮೀನು ಕೊಟ್ಟಂಥ ನಿದರ್ಶನ ಇದೆ. ಆದರೆ ಆಗ ಸರ್ಕಾರ ದರಖಾಸ್ತು ಮಂಜೂರಾತಿ ಕೊಡುವಾಗ ಒಂದು ಷರತ್ತು ಹಾಕಿತ್ತು. ಈ ಒಂದು ಕಂದಾಯ

ಭೂಮಿಯಲ್ಲಿ ಇರುವಂಥ ಜಾಗದಲ್ಲಿ ಎಕರೆಯಲ್ಲಿ 20 ಮರಗಳಷ್ಟು ಇದ್ದರೆ ಆ ಮರಗಳನ್ನು ಕಡಿದು ಸಾಗಿಸಿ ಅವರಿಗೆ ಹಕ್ಕುಪತ್ರ ಕೊಡುವ ಕಾನೂನು ಇಟ್ಟುಕೊಂಡು ಆ ಷರತ್ತು ಮೇರೆಗೆ ಹಲವಾರು ಮಂದಿಗೆ ದರಖಾಸ್ತು ಕೊಡಲಾಗಿತ್ತು. ಆದರೆ ಕಳೆದ 20 ವರ್ಷಗಳಿಂದ ಈ ದರಖಾಸ್ತು ಮಂಜೂರಾದರೂ ಕೂಡ ಸರ್ಕಾರದ ಆಗಿನ ಕಡತಗಳು ಅರಣ್ಯ ಇಲಾಖೆಗೆ ಹೋದವು. ಆ ಮರಗಳನ್ನು ಸಾಗಿಸಲಿಕ್ಕೆ ಅರಣ್ಯಇಲಾಖೆಗೆ ಆದೇಶ ನೀಡಲಾಗಿತ್ತು. ಆದರೆ ಕಳೆದ ಇಪ್ಪತ್ತು ವರ್ಷಗಳಿಂದ ಅರಣ್ಯ ಇಲಾಖೆಯಿಂದ ಮರಗಳನ್ನು ತೆಗೆಯದೆ ಈಗ ಕೆಲವು ಮರಗಳನ್ನು ತೆಗೆಯಲಿಕ್ಕೆ ಒಂದೊಂದೇ ಕಡತಗಳು ಹೊರಬರುತ್ತಿರುವಾಗ, ಇಪ್ಪತ್ತು ವರ್ಷಗಳಾದರೂ ಕೂಡ ಆ ಜಮೀನನ್ನು ಸ್ವಾಧೀನಪಡಿಸಿಕೊಂಡು ಅಲ್ಪಸ್ವಲ್ಪ ಕೃಷಿಯನ್ನು ಮಾಡುತ್ತಿದ್ದರೂ ಕೂಡ ಅವರಿಗೆ ಅರಣ್ಯ ಇಲಾಖೆಯಿಂದ ವರದಿಯನ್ನು ಹಾಕುತ್ತಿದ್ದಾರೆ.

ಆ ಸ್ಥಳದಲ್ಲಿ ದಟ್ಟವಾದ ಅರಣ್ಯ ಇರುವುದರಿಂದ, ನಿಮಗೆ ದರಖಾಸ್ತನ್ನು ಮಂಜೂರ್ಮಾಡುವುದಕ್ಕಾಗುವುದಿಲ್ಲ, ಈ ದರಖಾಸ್ತನ್ನು ಪುನಃ ರದ್ದುಪಡಿಸಿ, ಅರಣ್ಯ ಇಲಾಖೆಗೆ ಒಪ್ಪಿಸಬೇಕೆಂಬ ಕಿರುಕುಳವನ್ನು ಕೆಲವು ಮಲೆನಾಡು ಪ್ರದೇಶಗಳಲ್ಲಿ ಕೊಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ನಿಜವಾಗಿಯೂ ಅರಣ್ಯ ಇಲಾಖೆಯ ತಪ್ಪಿಗೆ, 20 ವರ್ಷಗಳಿಂದ ಬಡ ರೈತರು ಈ ಸಮಸ್ಯೆಯನ್ನು ಎದುರಿಸುವಂಥ ಪರಿಸ್ಥಿತಿ ಬಂದಿದೆ. ಇದರ ಬಗ್ಗೆ ನಿಜವಾಗಿಯೂ ಸರ್ಕಾರ ಕಟ್ಟುನಿಟ್ಟಿನ ಕಾನೂನು ಮಾಡಿ, ಹೊರಡಿಸಬೇಕು. 20 ವರ್ಷಗಳಿಂದ ಆ ರೈತರು ಬೆಳೆಸಿದಂಥ ಮರಗಳು ಆ ಜಮೀನಿನಲ್ಲಿ ಇರಬಹುದು. ಆದರೆ, ಆ ರೈತರಿಗೆ ಅನ್ಯಾಯವಾಗುತ್ತಿದೆ. ಸರ್ಕಾರ ಇದನ್ನು ಪರಿಶೀಲಿಸಿ, 20 ವರ್ಷಗಳ ಹಿಂದೆ ಮಂಜೂರಾತಿಯಾದಂಥ ಹಕ್ಕುಪತ್ರ ಏನಿದೆ, ಅವನಿಗೆ ಆ ಸ್ಥಳವನ್ನು ಖಾಯಂ ಮಾಡಿ, ಅರಣ್ಯ ಇಲಾಖೆಯವರು ಕೊಡುತ್ತಿರುವ ಈ ಉಪದ್ರವವನ್ನು ತಪ್ಪಿಸತಕ್ಕ ಕ್ರಮವನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ. ಈಗಾಗಲೇ ಶ್ರೀಯುತ ಕರಿಯಣ್ಣನವರು ಹೇಳಿದಹಾಗೆ, ಕಂದಾಯ ಇಲಾಖೆಯಲ್ಲಿ ಗ್ರಾಮ ಕರುಣೆಕರ ಹುದ್ದೆಗಳು ಜಿಲ್ಲಾದ್ಯಂತ, ರಾಜ್ಯಾದ್ಯಂತ ಹಲವಾರು ಹುದ್ದೆಗಳನ್ನು ಸರ್ಕಾರ, ಭರ್ತಿ ಮಾಡದೇ ಕೆಲವು ವರ್ಷಗಳಿಂದ ಬಾಕಿ ಇದೆ. ಮುಖ್ಯವಾಗಿ ಗ್ರಾಮೀಣ ಪ್ರದೇಶದ ಜನರಿಗೆ ಯಾವುದೇ ಸವಲತ್ತನ್ನು ಪಡೆದುಕೊಳ್ಳಬೇಕಾದರೆ ಸರ್ಕಾರದ ವತಿಯಿಂದ ಅಥವಾ ಇಲಾಖಾ ವತಿಯಿಂದ ಆಗುತ್ತಾ ಇಲ್ಲ. ಸರ್ಕಾರ ಶೀಘ್ರವಾಗಿ ಕ್ರಮಕೈಗೊಂಡು, ಈ ಗ್ರಾಮ ಕರುಣೆಕರ ಹುದ್ದೆಗಳನ್ನು ಭರ್ತಿಮಾಡತಕ್ಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ಗ್ರಾಮ ಸಹಾಯಕರು ಏನಿದ್ದಾರೆ, ಬಹುಶಃ ನಮ್ಮ ರಾಜ್ಯದಲ್ಲಿ ಹಿಂದಿನ ಮಾನ್ಯಮುಖ್ಯಮಂತ್ರಿಗಳಾದ ದಿವಂಗತ ದೇವರಾಜ ಅರಸರ ಕಾಲದಲ್ಲಿ ಜೀತಪದ್ಧತಿಯನ್ನು ನಿರ್ನಾಮ ಮಾಡತಕ್ಕಂಥ ಕಾರ್ಯಕ್ರಮವನ್ನು ರಾಜ್ಯಾದ್ಯಂತ ಹಮ್ಮಿಕೊಂಡಿದ್ದರು. ಆದರೆ, ಈ ಕಂದಾಯ ಇಲಾಖೆಯಲ್ಲಿ ಗ್ರಾಮಸಹಾಯಕರು ಏನಿದ್ದಾರೆ, 300 ಅಥವಾ 500 ರೂಪಾಯಿಗಳ ಜೀತಪದ್ಧತಿಯ ಮೂಲಕ ದುಡಿಯುತ್ತಿದ್ದಾರೆ. 1987ರಲ್ಲಿ ಇವರಿಗೆ ಸರ್ಕಾರ ಒಂದು ಆದೇಶ ಹೊರಡಿಸಿತ್ತು. ಇವರನ್ನು "ಡಿ" ವರ್ಗದ ನೌಕರರು ಎಂದು ಪರಿಗಣಿಸಿ, ಇವರಿಗೆ 780 ರೂಪಾಯಿಗಳ ಮೂಲ ವೇತನವನ್ನು ನಿಗದಿಪಡಿಸುವಂಥ ಒಂದು ಆದೇಶವನ್ನು ಹೊರಡಿಸಿ, ಇದಕ್ಕೆ ಆರ್ಥಿಕ ಇಲಾಖೆಯಿಂದ ಮಂಜೂರಾತಿ ಇನ್ನೂ ಕೂಡ ಸಿಗದೇ ಇರುವುದು ಬಹಳ ಬೇಸರದ ವಿಷಯ. 1987ರಿಂದ, ಇದಕ್ಕೆ ಆರ್ಥಿಕ ಇಲಾಖೆ ಒಪ್ಪಿಗೆ ಕೊಡದೇ ಇರುವುದರಿಂದ, ಈ ಆದೇಶವನ್ನು ಇಂಪ್ಲಿಮೆಂಟ್ ಮಾಡದೇ ಇರತಕ್ಕ ಪರಿಸ್ಥಿತಿ ಬಂದಿದ್ದು, ಗ್ರಾಮದಲ್ಲಿರುವಂಥ ಗ್ರಾಮಸಹಾಯಕರಿಗೆ

ಇವತ್ತು 300-500 ರೂಪಾಯಿಗಳನ್ನು ಕೊಟ್ಟರೆ, ಒಂದು ದಿವಸಕ್ಕೆ ಅವರಿಗೆ ಬೀಡಿ, ಕಾಫಿ ಕುಡಿಯುವುದಕ್ಕೂ ಹಣ ಆಗುತ್ತಾ ಇಲ್ಲ.

ಇದರಿಂದಾಗಿ, ಬಹುಶಃ ಈ ಕಂದಾಯ ಇಲಾಖೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇರತಕ್ಕ ಈ ನೌಕರರು ಕೆಲವು ಸಂದರ್ಭದಲ್ಲಿ ಚುನಾವಣೆ ಬಂತು ಎಂದು ಹೇಳಿದರೆ, ದಿವಸದಲ್ಲಿ 24 ಗಂಟೆಗಳೂ ದುಡಿಯತಕ್ಕ ಪರಿಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ಇವರಿಗೆ ನಿಜವಾದ ವೇತನರನ್ನು ಕೊಡತಕ್ಕ ಕಾರ್ಯಕ್ರಮ ಆಗಬೇಕು ಮತ್ತು ಈಗಾಗಲೇ ಆರ್ಥಿಕ ಇಲಾಖೆಯಲ್ಲಿ ಏನು ಬಾಕಿ ಇದೆ, ಇದರ ಬಗ್ಗೆ ಕ್ರಮ ಹಮ್ಮಿಕ್ಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಜೊತೆಯಲ್ಲಿ ಇವತ್ತು ಪ್ರಕೃತಿ ವಿಕೋಪ. ಯಾವುದೇ ಸರ್ಕಾರ ಕೂಡ ಈ ಒಂದು ಪ್ರಕೃತಿ ವಿಕೋಪದ ಜನರಿಗೆ ಸವಲತ್ತನ್ನು ಕೊಡುವಂಥ ಅಥವಾ ಪರಿಹಾರ ಕೊಡುವಂಥ ಕಾರ್ಯಕ್ರಮವನ್ನು ಹಮ್ಮಿಕ್ಕೊಳ್ಳಲಿಲ್ಲ. ನನ್ನ ಕ್ಷೇತ್ರದ ಬಗ್ಗೆ ಹೇಳುವುದಾದರೇ, ಪುತ್ತೂರು ತಾಲ್ಲೂಕಿನ ಬಿಳಿನೆಲೆ ಎನ್ನುವ ಸ್ಥಳದಲ್ಲಿ ಶ್ರೀಯುತ ವಿಷ್ಣುಭಟ್ ಎನ್ನುವವರಿಗೆ 1987ನೇ ಇಸವಿಯಲ್ಲಿ ಮಳೆ ಮತ್ತು ಬಿರುಗಾಳಿಗೆ ಸಂಬಂಧಪಟ್ಟಂತೆ, ಮೂರು ಲಕ್ಷ ರೂಪಾಯಿಗಳ ನಷ್ಟವಾಯಿತು. ಕಂದಾಯ ಇಲಾಖೆಯಿಂದ ಜಿಲ್ಲಾಧಿಕಾರಿಗಳ ಮೂಲಕ ವರದಿಯನ್ನು ಆಗಿನ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆ, ನಂತರ ಶ್ರೀಯುತ ಬೊಮ್ಮಾಯಿಯವರು ತದನಂತರ ಬಂದ ನಮ್ಮ ಸರ್ಕಾರಕ್ಕೂ ಅವರು ಮನವಿ ಮಾಡಿಕೊಂಡಿದ್ದಾರೆ. ಆ ವರದಿಯನ್ನು ಸಹಕಾರ ಸಂಘದ ಇಲಾಖೆಗೆ ಕಳುಹಿಸಿದರೂ ಕೂಡ 1987ರಿಂದ ಇಲ್ಲಿಯವರೆಗೂ 5-6 ವರ್ಷಗಳ ಕಾಲ ಅವರಿಗೆ ಯಾವುದೇ ಪರಿಹಾರ ಸಿಗದೇ ಇರುವಂಥ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ನಿಜವಾಗಿ ಪ್ರಕೃತಿ ವಿಕೋಪದಿಂದ ರೈತರಿಗೆ ಆಗುತ್ತಿರತಕ್ಕ ತೊಂದರೆಗಳಿಗೆ ಅಥವಾ ಕಷ್ಟಗಳಿಗೆ, ನಿಜವಾದ ಪರಿಹಾರವನ್ನು ಕೊಡತಕ್ಕ ಕಾನೂನನ್ನು ಜಾರಿಗೆ ತರಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಶ್ರೀಯುತ ವಿಷ್ಣುಭಟ್‌ರವರು ಸಹಕಾರಿ ಸಂಘದಲ್ಲಿ ಹಲವಾರು ರೀತಿಯ ಸಾಲವನ್ನು ಪಡೆದಿದ್ದಾರೆ. ಅವರಿಗೆ ಮೂರು ಲಕ್ಷ ರೂಪಾಯಿಗಳು ನಷ್ಟವಾಗಿ ಇಡೀ ಮೂರು ಎಕರೆ ತೋಟ ನಷ್ಟವಾಗಿ, ಅವರು ಸಂಪೂರ್ಣವಾಗಿ ಬೀದಿಯಲ್ಲಿರುವಂಥ ಪರಿಸ್ಥಿತಿ ಇದೆ. ಅದಕ್ಕಾಗಿ, ಇವರು ಸಹಕಾರಿ ಇಲಾಖೆಯಿಂದ ಪಡೆದ ಸಾಲವನ್ನಾದರೂ ಮನ್ನಾ ಮಾಡಿ ಅಥವಾ ಅವರು ಪಡೆದಂಥ ಸಾಲಕ್ಕೆ ಬಡ್ಡಿ ರಿಯಾಯಿತಿ ಮಾಡಿ, ಇಲ್ಲದಿದ್ದರೆ ಅವರು ಪಡೆದ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಮಾಡಿಕೊಡಿ ಎಂದು ಕೇಳಿಕೊಂಡರೂ ಕೂಡ, ಇದು ಕಾರ್ಯಗತವಾಗದೇ ಇರುವುದು ವಿಷಾದಕರವಾದ ಸಂಗತಿಯಾಗಿದೆ. ಪ್ರಕೃತಿ ವಿಕೋಪದಂತ ಒಂದು ಕಾರ್ಯಕ್ರಮಕ್ಕೆ ತುರ್ತು ಪರಿಹಾರ ಕೊಡತಕ್ಕ ಕಾನೂನಿನ ಅವಶ್ಯಕತೆ ಇಲ್ಲದಿದ್ದರೂ ಕೂಡ ಕಾನೂನು ಜಾರಿ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅದರ ಜೊತೆಯಲ್ಲಿ ಇವತ್ತು ನಮ್ಮ ಸರಕಾರ ಅಕ್ರಮ ಸಾಗುವಳಿ ಭೂಮಿಯನ್ನು ಸಕ್ರಮೀಕರಣ ಮಾಡತಕ್ಕಂಥ ಕಾರ್ಯಕ್ರಮವನ್ನು ಹಮ್ಮಿಕ್ಕೊಂಡಿದೆ. ಆದರೆ ಈ ಒಂದು ಕಾನೂನಿನ ಅಡಿಯಲ್ಲಿ ಸರಕಾರಿ ಭೂಮಿಯನ್ನು ಅಕ್ರಮ ಮಾಡಿಕೊಂಡಿದ್ದರೆ, ಆ ಭೂಮಿಯಲ್ಲಿ ಅವರು ಮನೆಯನ್ನು ಕಟ್ಟಿಕೊಂಡಿದ್ದರೆ, ಆ ಮನೆ ಕಟ್ಟಿದಂಥ ಸ್ಥಳವನ್ನು, ಯಾವುದೇ ರೈತನಿಗೆ ಅಥವಾ ಕೃಷಿಕಾರ್ಮಿಕನಿಗೆ, ಮಂಜೂರು ಮಾಡುವಂತಹ ಕಾನೂನು ಈ ಒಂದು ಸಕ್ರಮೀಕರಣ ಕಾನೂನಿನ ಅಡಿಯಲ್ಲಿ ಇರುವುದಿಲ್ಲ. ಇದರಿಂದಾಗಿ ಬಡ ರೈತನಿಗೆ ಕೃಷಿ ಕಾರ್ಮಿಕನಿಗೆ ಅನ್ಯಾಯವಾಗುವಂತಹ ಪರಿಸ್ಥಿತಿ ಬಂದಿದೆ. ಇದಕ್ಕೆ ಒಂದು ತಿದ್ದುಪಡಿಯನ್ನು ತಂದು ಆ ಭೂಮಿ ಅಕ್ರಮ ಮಾಡಿ, ಆ ಭೂಮಿಯಲ್ಲಿ

ಕೃಷಿಯನ್ನು ಮಾಡುತ್ತಿದ್ದು, ಆ ಸ್ಥಳದಲ್ಲಿ ಮನೆಯನ್ನು ಕಟ್ಟಿಕೊಂಡಿದ್ದರೂ ಕೂಡಾ ಅದನ್ನೂ ಕೂಡಾ ಜೊತೆಯಲ್ಲಿ ಸೇರಿಸಿಕೊಂಡು ಮಂಜೂರಾತಿಯನ್ನು ಮಾಡುವಂತಹ ಅವಕಾಶ ಕಲ್ಪಿಸಿಕೊಡಬೇಕೆಂದು ನಾನು ಈ ಮೂಲಕ ಕೇಳಿಕೊಳ್ಳುತ್ತೇನೆ. ಇವತ್ತು ಕೇವಲ ಸಿ ಮತ್ತು ಡಿ ವರ್ಗದ ಜಮೀನು ಏನಿದೆ ಅಥವಾ ಕಂದಾಯ ಇಲಾಖೆಗೆ ಸೇರಿದ ಸರಕಾರಿ ಜಮೀನು ಏನಿದೆ, ಆ ಜಮೀನನ್ನು ಮಾತ್ರ ಕೊಡುವಂತಹ ಅವಕಾಶ ಇದೆ. ಆದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚಾಗಿ ಒತ್ತುವರಿ ಮಾಡಿರತಕ್ಕ ಜಮೀನು ಎಂದರೆ ಕುಮ್ಕಿ ಜಮೀನು, ಖಾನಾ ಮತ್ತು ಬಾಣೆ ಎಂದು ಹೇಳುವ ಜಮೀನುಗಳು ಇವೆ. ಅದೇ ರೀತಿ ಕೊಡಗಿಗೆ ಹೋದರೆ ಜಮ್ಮಾ ಅಥವಾ ದೇವರಭೂಮಿ ಎಂದು ಹೇಳುವಂತಹ ಜಮೀನುಗಳು ಇವತ್ತು ಹೆಚ್ಚು ಜನರಿಂದ ಅಕ್ರಮವಾಗಿ ಸಾಗುವಳಿ ಮಾಡಲ್ಪಟ್ಟಿವೆ. ಇದನ್ನು ಸಕ್ರಮಗೊಳಿಸುವಂತಹ ದಿಸೆಯಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಸಮಿತಿಯನ್ನು ಸಧ್ಯದಲ್ಲೇ ನೇಮಿಸಿ ಇಂತಹ ಬಡ ಜನರಿಗೂ ಕೂಡಾ ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅಕ್ರಮ ಭೂಮಿಯನ್ನು ಸಕ್ರಮ ಮಾಡುವಂತಹದರಲ್ಲಿ ಇನ್ನೊಂದು ಸಮಸ್ಯೆ ಇದೆ. ಈಗಾಗಲೆ ನಗರ ಸಭೆ ಅಥವಾ ಪುರಸಭೆಯ 7ಕಿಲೋಮೀಟರ್ ವ್ಯಾಪ್ತಿಯಲ್ಲಿ ಬರುವ ರೈತರಿಗೆ ಮಾತ್ರ ಇದನ್ನು · ಕೊಡುವಂತಹ ಅವಕಾಶ ಇದೆ. ಆದರೆ ಇದನ್ನು ಇನ್ನೂ ಹೆಚ್ಚು ಮಾಡಬೇಕು, ನಗರಸಭೆ ಮತ್ತು ಪುರಸಭೆಯ ವ್ಯಾಪ್ತಿಯಲ್ಲಿ 7 ಕಿಲೋಮೀಟರ್ ಇರುವುದನ್ನು ತೆಗೆದು 12 ಅಥವಾ 15 ಕಿಲೋಮೀಟರ್ ವ್ಯಾಪ್ತಿಗೆ ಬರುವಂತಹ ಜನರಿಗೂ ಇದರ ಅವಕಾಶ ಕಲ್ಪಿಸಲಿಕ್ಕೆ ಒಂದು ತಿದ್ದುಪಡಿಯನ್ನು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಧಾರ್ಮಿಕ ದತ್ತಿ ಇಲಾಖೆ ಏನಿದೆ ಅದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ಕ್ಷೇತ್ರದಲ್ಲಿ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ ಇದೆ. ಈ ದೇವಸ್ಥಾನದಲ್ಲಿ ಒಂದು ಅವ್ಯವಹಾರ ನಡೆದಿದೆ. ನಮ್ಮ ಸರಕಾರ ಬಂದನಂತರ ಇದೇ ಸದನದಲ್ಲಿ ಭರವಸೆ ಕೊಟ್ಟಿದ್ದರು.

ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ಅವ್ಯವಹಾರದ ಬಗ್ಗೆ ನಾವು ಸಿ.ಓ.ಡಿ. ತನಿಖೆ ಮಾಡಿಸುತ್ತೇವೆ ಎಂಬ ಮಾತನ್ನು ಕೊಟ್ಟರು. ಆದರೂ ಕೂಡಾ ಇವತ್ತಿಗೂ ಸಿ.ಓ.ಡಿ. ತನಿಖೆಯನ್ನು ಮುಚ್ಚಿಹಾಕತಕ್ಕ ಪರಿಸ್ಥಿತಿ ಇದೆ. ಎರಡು ಸಲ ಈ ಸದನದಲ್ಲಿ ಸಿ.ಓ.ಡಿ. ತನಿಖೆ ಮಾಡುತ್ತೇವೆಂದು ಭರವಸೆ ಕೊಟ್ಟರೂ ಸಹ ತನಿಖೆ ಆಗದಂತೆ ಮುಚ್ಚಿ ಹಾಕಿದ್ದಾರೆ. ಇದಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದ ನಾನು ಸರಕಾರವನ್ನು ಒತ್ತಾಯಿಸುತ್ತೇನೆ. ಹಿಂದೆ ಇದ್ದಂಥ ಸರಕಾರ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಆಡಳಿತ ಮಂಡಲಿಯನ್ನು ನೇಮಕ ಮಾಡಿತ್ತು. ಆದರೆ ಅವರ ಅವಧಿ ಮುಗಿದರೂ ಕೂಡಾ ಹಿಂದಿನ ಆಡಳಿತ ಮಂಡಲಿ ಅಧ್ಯಕ್ಷರು ಅಲ್ಲಿಯ ಸಮಿತಿಯವರು ಇನ್ನೂ ಕೂಡ, ನಮಗೆ ಅಧಿಕಾರ ಬೇಕೆಂದು, ಇತರರನ್ನು ಸೇರಿಸಿಕೊಂಡು ಉಚ್ಚನ್ಯಾಯಾಲಯಕ್ಕೆ ಮೊರೆ ಹೋಗಿದ್ದಾರೆ. ಆದರೆ ಉಚ್ಚ ನ್ಯಾಯಾಲಯದಲ್ಲಿ ನ್ಯಾಯಪೀಠ ಅದರ ತೀರ್ಮಾನಕ್ಕೆ ಕ್ರಮ ಕೈಗೊಂಡರೂ ಕೂಡ ಆಗಿನ ನ್ಯಾಯಾಧೀಶರು ರಿಟೈರ್ ಆದುದರಿಂದ ಅದು ಇನ್ನೂ ಕೂಡಾ ಪೆಂಡಿಂಗ್ ಎನ್‌ಕ್ವೈರಿ ಎಂದು ಇಟ್ಟುಕೊಂಡು, ಯಾವುದೇ ಆದೇಶ ಹೊರಡಿಸದೇ ಇರುವಂತಹ ಒಂದು ಪರಿಸ್ಥಿತಿ ಇದೆ. ಈ ಬಗ್ಗೆ ಲೀಗಲ್ ಅಡ್ವೈಸರ್ ಮೂಲಕ ಕ್ರಮ ಕೈಗೊಂಡು ಕೂಡಲೇ, ತೀರ್ಪನ್ನು ನೀಡುವಂತಹ ಅವಕಾಶ ಮಾಡಿಕೊಟ್ಟು, ಆ ದೇವಸ್ಥಾನದಲ್ಲಿ ಒಳ್ಳೆಯ ರೀತಿಯ ಕಾರ್ಯಕ್ರಮ ಜರುಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿಸುತ್ತೇನೆ. ಸಹಕಾರ ಸಂಘಗಳ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಅನೇಕ ಸದಸ್ಯರು ಮಾತನಾಡಿದ್ದಾರೆ. ಒಂದು ವಿಷಯ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಹಕಾರ ಸಂಘಗಳಲ್ಲಿ

ಪ್ರಾಥಮಿಕ ಸಹಕಾರ ಸಂಘಗಳು ಇರಲಿಕ್ಕೆ ಅಥವಾ ಕ್ಯಾಂಪ್ಕೋ ಮುಂತಾದ ಸಂಸ್ಥೆಗಳು ಇರಲಿ, ಇವತ್ತು ನಮ್ಮ ಸಹಕಾರ ಸಂಘಗಳ ಕಾನೂನಿನ 14(ಬಿ) ನಿಯಮದ ಪ್ರಕಾರ ನೇಮಕ ಮಾಡುವಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರನ್ನು ನೇಮಕ ಮಾಡಿಕೊಳ್ಳಬೇಕೆಂದು ಹಿಂದಿನ ಸರಕಾರ ಆದೇಶ ಮಾಡಿದ್ದರೂ ಕೂಡಾ ಇನ್ನೂ ಕೂಡಾ ರೋಸ್ಟರ್ ಪದ್ಧತಿ ಮೂಲಕ ಸಹಕಾರ ಸಂಘಗಳಲ್ಲಿ ನೌಕರರ ನೇಮಕ ಮಾಡುತ್ತಿಲ್ಲ, ಇದನ್ನು ತೀವ್ರವಾಗಿ ಪರಿಗಣಿಸಿ ಶೀಘ್ರದಲ್ಲಿ ಸಹಕಾರ ಸಂಘಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸ್ಥಾನ ಸಿಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೆ.ಎಸ್.ಆರ್.ಟಿ.ಸಿ. ಬಗ್ಗೆ ಹೇಳುವುದಾದರೆ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಒಂದು ವಿಷಯವನ್ನು ಹೇಳುತ್ತೇನೆ. 1985ರಲ್ಲಿ ಸುಳ್ಯ ತಾಲ್ಲೂಕಿನಲ್ಲಿ ಒಂದು ಬಸ್‌ಸ್ಟ್ಯಾಂಡನ್ನು ರಚನೆ ಮಾಡಲಿಕ್ಕೆ ಆಗಿನ ಸರ್ಕಾರ ಮಂಜೂರು ಮಾಡಿತ್ತು, ಆದರೆ, ಭೂಸ್ವಾದೀನ ಆಗದೆ ಅದು ಖಾಸಗಿ ಜಮೀನು ಆಗಿದ್ದು 4:1 ನೋಟಿಫಿಕೇಶನ್ 1987ನೇ ಇಸವಿಯಲ್ಲಿ ನಡೆದರೂ ಕೂಡ ಇನ್ನು ಆಗಲಿಲ್ಲ, ನಾನು ಈ ಸದನದಲ್ಲಿ ಹಲವಾರು ಭಾರಿ ಪ್ರಸ್ತಾಪ ಮಾಡಿದ್ದೇನೆ. ಆದರೆ 1982ರಲ್ಲಿ ಅಂದರೆ 1987ರಲ್ಲಿ 4:1 ನೋಟಿಪಿಕೇಶನ್ ಆಗಿದ್ದು ಅದು ಖಾಸಗಿ ಜಮೀನು ಆಗಿದ್ದರಿಂದ ಸರ್ಕಾರ ಸ್ವಾಧೀನಪಡಿಸಿಕೊಳ್ಳದೇ ಇರುವುದು ಬಹಳ ವಿಷಾದಕರವಾದ ಪರಿಸ್ಥಿತಿ. ಸಂಬಂಧಪಟ್ಟ ಇಲಾಖೆಯ ಮೂಲಕ ಲೀಗಲ್ ಅಡ್ವೈಜರ್ ಮೂಲಕ ಕೇವಲ 20 ಸೆನ್ಸ್ ಖಾಸಗಿ ಜಮೀನನ್ನು ಪಡೆದುಕೊಳ್ಳದೆ ಅವರು ಹೈಕೋರ್ಟಿಗೆ ಹೋಗಿದ್ದಾರೆಂದು ಇನ್ನು ಕೂಡ ಏನೂ ಕ್ರಮ ಕೈಗೊಳ್ಳುವುದಕ್ಕೆ ಆಗಿಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ ಸಾರ್ವಜನಿಕ ಉದ್ದೇಶಕ್ಕೆ ಯಾವ ರೀತಿಯಲ್ಲಿ ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಹಕ್ಕುಬಾಧ್ಯತೆಗಳಿವೆಯೋ ಆ ಮೂಲಕ ಒಂದು ಕಾನೂನು ಜರುಗಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಾನು ಸಂಬಂಧಪಟ್ಟ ಸಚಿವರನ್ನು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಚ್. ಹನುಮೇಗೌಡ (ಹಾಸನ): ಮಾನ್ಯ ಅಧ್ಯಕ್ಷಣೀಯವರೇ, ರಾಜ್ಯದಲ್ಲಿ ಈ ವರ್ಷ ಅತಿ ಭೀಕರವಾದ ಮಳೆಯಾಗಿ ಹಾಸನ, ಮೈಸೂರು, ಮತ್ತು ಚಿಕ್ಕಮಗಳೂರು ಇತರೆ ಕೆಲವು ಜಿಲ್ಲೆಗಳಲ್ಲಿ ಕೋಟ್ಯಾಂತರ ರೂಪಾಯಿಗಳ ಬೆಳೆ ಮತ್ತು ಆಸ್ತಿ ಹಾಳಾಯಿತು. ಸರ್ಕಾರದವರು ಅಂತಹ ನೊಂದ ಜನಗಳಿಗೆ ಪರಿಹಾರ ಕೊಡಬೇಕೆಂದು ಆದೇಶ ಮಾಡಿ ಪರಿಹಾರ ಕೊಟ್ಟರು. ಯಾವ ರೀತಿಯಲ್ಲಿ ಕೊಟ್ಟರು ಅಂದ್ರೆ, ಈ ದೇಶಕ್ಕೆ ಯಾರು ಅನ್ನ ಕೊಡುತ್ತಾರೆ, ಯಾರು ಆ ದೇಶಕ್ಕೆ ಟ್ಯಾಕ್ಸ್ ಕೊಟ್ಟು ಸರ್ಕಾರವನ್ನು ನಡೆಸುತ್ತಾರೆ, ಯಾರು ಈ ದೇಶದ ಬೆನ್ನೆಲುಬು ಆಗಿದ್ದಾರೆ ಆ ಜನಗಳಿಂದ ನಾಡು ಬಾಳಿ ಬದುಕಿ ಉಳಿದಿದೆ. ಯಾರನ್ನು ನೀವು ಬರೀ ಬಾಯಲ್ಲಿ ಹಾಡಿ ಹೊಗಳುತ್ತೀರಿ, ಅಂತಹ ನಿರ್ಭಾಗ್ಯ ಜನಗಳು ತೊಂದರೆಗೆ ಒಳಗಾದರೆ ಅವರನ್ನು ಸರ್ಕಾರ ನಡೆಸಿಕೊಂಡಂತಹ ರೀತಿಯನ್ನು ನೆನೆಸಿಕೊಂಡರೆ ಎಂತಹವರಿಗೂ ಕೂಡ ದುಃಖ ಬರುತ್ತದೆ. ಮಾನ್ಯ ಅಧ್ಯಕ್ಷರೇ ಬೆಳೆ ಹಾಳಾದಂತಹ ಕೆಲವರಿಗೆ ಮತ್ತು ಆಸ್ತಿ ಹಾಳಾದಂತಹ ಕೆಲವು ಜನ ರೈತರಿಗೆ 8 ರೂಪಾಯಿ 6 ರೂಪಾಯಿ ಚೆಕ್ ಕೊಟ್ಟಿದ್ದಾರೆ. ಆ ಚೆಕ್ ತೆಗೆದುಕೊಳ್ಳಬೇಕಾದರೆ ಬಹುಶಃ ಅವನು 2 ರೂಪಾಯಿ ಸ್ಟ್ಯಾಂಪ್ ಹಾಕಬೇಕು ಒಂದೆರಡು ದಿವಸ ಸಂಬಂಧಪಟ್ಟ ಆಫೀಸರ್‌ನ್ನು ಬಂದು ಕಾಣಬೇಕು ಆಮೇಲೆ ಅವರೆಲ್ಲಾ ವೆರಿಫೈ ಮಾಡಿದ ಮೇಲೆ ಚೆಕ್ ಸಿಗುತ್ತದೆ. ಆಮೇಲೆ ಅದನ್ನು ಕ್ಯಾಶ್ ಮಾಡಿಸಿಕೊಳ್ಳಲು ಪುನಃ ಬ್ಯಾಂಕಿಗೆ ಹೋಗಬೇಕು ಎಷ್ಟು

ಖರ್ಚಾಗುತ್ತದೆ? ಅವನು ಕೇವಲ ಟೌನ್‌ಗೆ ಬಂದು ಊಟ ಮಾಡಬೇಕಾದರೆ 6 ರೂಪಾಯಿ ಆಗುತ್ತದೆ. 8 ರೂಪಾಯಿಗಲು ಕೊಡಬೇಕಾಗುತ್ತದೆ. ಹಳ್ಳಿ ಜನ ಹೊಟ್ಟೆ ತುಂಬಾ ಊಟ ಮಾಡಿದರೆ 15 ರೂಪಾಯಿ ಆಗುತ್ತದೆ. 15 ರೂಪಾಯಿ ಕೊಟ್ಟರೂ ಹೊಟ್ಟೆ ತುಂಬುವುದಿಲ್ಲ. ಕೊನೆ ಪಕ್ಷ ಒಂದು ಊಟಕ್ಕೆ ಆಗುವಷ್ಟಾದರೂ ಪರಿಹಾರ ಕೊಡುವುದಕ್ಕೆ ಶಕ್ತಿ ಇಲ್ಲದ ಮೇಲೆ ನೀವು ಅದನ್ನು ಏತಕ್ಕೆ ಕೊಡುತ್ತೀರಿ ಇಂತಹ ಸರ್ಕಾರವನ್ನು ನಾವು ಏನಂತ ಕರೆಯಬೇಕು. ಹಿಂದೆ ಏನಾಯಿತು ಅಂದ್ರೆ ಬೆಳೆ ಹಾಳಾದಾಗ ಬೆಳೆ ಮೇಲೆ..

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ಒಂದು ನಿಮಿಷ ಅದಕ್ಕೆ ನಾನು ಹೇಳುತ್ತೇನೆ. ಮಿನಿಮಮ್ ಕೊಟ್ಟಿದ್ದಾರೆ. ಅದಕ್ಕೆ ನಾನು ಕ್ಲಾರಿಫೈ ಮಾಡುತ್ತೇನೆ. ಅವರು ನೋಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಪೇಪರ್‌ನಲ್ಲಿ ಮತ್ತು ಈ ಸದನದಲ್ಲಿ ಕೂಡ ಮಾಡಿದ್ದೇನೆ. ಗೌರ್ನಮೆಂಟ್ ಆಫ್ ಇಂಡಿಯಾ ಸ್ಕೇಲ್ ಪ್ರಕಾರ ನಮ್ಮ ರಾಜ್ಯದವರು ಎಲ್ಲಾ ರಾಜ್ಯದವರು ನಮ್ಮನ್ನು ಹಿಡಿದುಕೊಂಡು ಒಂದು ನಿಯಮವನ್ನು ಹಾಕಿದ್ದಾರೆ. ಆ ನಿಯಮದ ಪ್ರಕಾರ ಪ್ರತಿ ಎಕರೆಗೆ 120 ರೂಪಾಯಿಗಳನ್ನು ಪರಿಹಾರ ಕೊಡಬೇಕು ಎನ್ನತಕ್ಕಂಥ ಒಂದು ನಿಯಮ ಇದೆ. ಆದರೆ ಕೇಂದ್ರ ಸರ್ಕಾರದವರು 80 ರೂಪಾಯಿಗಳನ್ನು ಮಾತ್ರ ಕೊಡುತ್ತಾರೆ. ಒಂದು ಗುಂಟೆಗೆ 2 ರೂಪಾಯಿಗಳಾಗುತ್ತದೆ. ಇದನ್ನು ಅವರು ಹೇಳಿದಹಾಗೆ ತಪ್ಪಿಸಬೇಕು. ಅದನ್ನು ಟ್ರಜರಿಗೆ ತೆಗೆದುಕೊಂಡು ಹೋಗಲು ಮತ್ತೆ ಅವನು 50 ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಅದಕ್ಕೆ ನಾನು ಟೆಲೆಕ್ಸ್ ಮೆಸ್ಸೇಜ್‌ನ್ನು ಎಲ್ಲಾ ಜಿಲ್ಲಾಧಿಕಾರಿಗಳಿಗೂ ಕಳುಹಿಸಿ ಹೇಳಿದ್ದೇನೆ. ನೀವು ಮಿನಿಮಮ್ ಆಗಿ ಇರೆಸ್‌ಪೆಕ್ಟೀವ್ ಆಗಿ ಒಂದು ಗುಂಟೆ ಇರಬಹುದು 2 ಗುಂಟೆ ಇರಬಹುದು. ಅವರಿಗೆ 2 ರೂಪಾಯಿ 4 ರೂಪಾಯಿ ಕೊಡುವುದು ಬೇಕಾಗಿಲ್ಲ. ಕನಿಷ್ಟ ಪಕ್ಷ 100 ರೂಪಾಯಿಗಳು ಕೊಡಬೇಕೇ ಹೊರತಾಗಿ ಅದಕ್ಕಿಂತ ಮೇಲೆ ನೀವು ಸ್ಕೇಲ್ ಹಾಕಬೇಕೆ ವಿನಹಃ ಅದಕ್ಕಿಂತ ಕೆಳಗೆ ನೀವು ಸ್ಕೇಲ್ ಹಾಕಿ ಕೊಡಬಾರದು ಎನ್ನತಕ್ಕಂಥ ಆದೇಶ ಕೊಟ್ಟಿದ್ದೇನೆ. ಅನೌನ್ಸ್‌ಮೆಂಟ್ ಮಾಡಿದ್ದೇವೆ. ಮತ್ತೆ ಟೆಲೆಕ್ಸ್‌ಮೆಸ್ಸೇಜ್ ಕೊಟ್ಟು ಇನ್‌ಫರ್‌ಮೇಶನ್ ಕೊಟ್ಟಿದ್ದೇವೆ. ಇದನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಶ್ರೀ ಕೆ.ಎಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೇ ಕೇಂದ್ರ ಸರ್ಕಾರದವರು ಕಳುಹಿಸುತ್ತಾರೆ. 2 ರೂಪಾಯಿ 4 ರೂಪಾಯಿ ಕೊಡಿ ಅಂತ. ಅವರಿಗೇನು ನೀವು ಬಿಕ್ಷೆ ಕೊಡುತ್ತೀರೇನು? ತೊಂದರೆಯಲ್ಲಿರತಕ್ಕಂಥ ಜನಗಳಿಗೆ ಬೆಳೆ ಹಾಳಾದಂತಹ ಜನರಿಗೆ ಯೋಗ್ಯ ಪರಿಹಾರ ಕೊಡದಿದ್ದ ಮೇಲೆ ಅಂತಹ ಅಧಿಕಾರಿಗಳು ನಮಗೆ ಏತಕ್ಕೆ ಬೇಕು. ಅವರು ಬರೀ ಆಕ್ಟ್, ಸರ್ಕ್ಯುಲರ್ ಮಾಡೋದೇ ಕೆಲಸವೇನು? ಕೇಂದ್ರ ಸರ್ಕಾರದವರು ಕೊಟ್ಟ ಸರ್ಕ್ಯುಲರ್‌ಗಳನ್ನು ನಾವು ಒಪ್ಪಿಕೊಳ್ಳುವುದಕ್ಕಾಗುತ್ತದೆ ಏನು? ಅವರು ಯಾರು? ಅವರು ಯಾವ ಉದ್ದೇಶದಿಂದ ಕೊಟ್ಟರು? ಏನಂತ ಕೊಟ್ಟರು. ಈ ದೇಶಕ್ಕಾಗಿ ಹಗಲು ರಾತ್ರಿ ತಮ್ಮ ಪ್ರಾಣ ಕೊಡತಕ್ಕಂಥವರು.

11.45 ಎ.ಎಂ.

ಕೇಂದ್ರ ಸರ್ಕಾರದ ಅಧಿಕಾರಿಗಳೆಂದರೆ ಅವರೇನು ದೇವಲೋಕದಿಂದ ಇಳಿದಿದ್ದಾರಾ? ಅವರು ಮನುಷ್ಯ ಜಾತಿಯಲ್ಲಿ ಹುಟ್ಟಿದವರಲ್ಲವಾ? ಅವರು ಕಷ್ಟ ಸುಖ ತಿಳಿದವರಲ್ಲವಾ? ಈ ದೇಶದ ಜನ ಬೆಳೆದ ಅನ್ನ ತಿನ್ನುವವರಲ್ಲವಾ? ಈ ದೇಶದ ಜನ ಕೊಟ್ಟಂಥ ಟ್ಯಾಕ್ಸ್‌ನಿಂದ ಅವರು ಸಂಬಳ ತೆಗೆದುಕೊಳ್ಳುವುದಿಲ್ಲವಾ? ಅಲ್ಲಿಂದ ಸರ್ಕ್ಯುಲರ್ ಬಂದರೆ, ಅದನ್ನು ಹೇಳಿ ವಾಪಸ್ ಕಳುಹಿಸಿ, ಅದನ್ನು ಮಾಡಿಫೈ ಮಾಡುವುದಕ್ಕೆ

ಆಗದೇ ಹೋದರೆ ನೀವು ಏಕೆ ಅಧಿಕಾರದಲ್ಲಿರಬೇಕು? ಕೊಡುವುದಾದರೆ ನ್ಯಾಯವಾಗಿ ಕೊಡಬೇಕು, ಇಲ್ಲದೆಹೋದರೆ ಬೇಡ ಎಂದು ತಿರಸ್ಕಾರ ಮಾಡಬೇಕು. ಹೊಟ್ಟೆಗಿಲ್ಲದ ಜನ, ಏನೋ ಅವರು ಅಸಹಾಯಕರು, ಅವರನ್ನು ಭಿಕ್ಷುಕರಿಗಿಂಥ ಕಡೆಯಾಗಿ ಕಂಡು. ಈ ರೀತಿ ಕೊಡುವುದಕ್ಕೆ ನಿಮಗೆ ನಾಚಿಕೆಯಾಗುವುದಿಲ್ಲವೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : I am sorry. ನಾನು ಉತ್ತರ ಹೇಳಬೇಕಾಗುತ್ತದೆ. ಅವತ್ತಿನಿಂದ ಕೇಂದ್ರಸರ್ಕಾರದಲ್ಲಿ ಮತ್ತು ಸ್ಟೇಟ್‌ಗೌರ್ನಮೆಂಟಿನಲ್ಲಿ ಏನು ಕಾನೂನು ಇದೆಯೋ ಅದರ ಪ್ರಕಾರ ಕೊಟ್ಟಿದೆ. ಇದು ಹತ್ತಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಆ ಕಾನೂನು ಬಿಟ್ಟು ನಾವೇನಾದರೂ ತೊಂದರೆ ಮಾಡಿದ್ರೆ ಹೇಳಿ ಹೇಳುವ ಧಾಟಿಯಲ್ಲಿ ಹೇಳಿ. ಅದು ಬಿಟ್ಟು ನಿಮಗೆ ನಾಚಿಕೆ ಬರುವುದಿಲ್ಲವೇ? ನೀವು ಏಕೆ ಇದ್ದೀರಿ? ಎಂದರೆ ಹೇಗೆ? ಅವರಿಗೆ ಎಷ್ಟು ಗೌರವ ಇದೆಯೋ ಅಷ್ಟೇ ನನಗೂ ಗೌರವ ಇದೆ. ನಾನು ಇವತ್ತು ಹೊಸದಾಗಿ ಮಂತ್ರಿಗಿರಿ ಮಾಡುತ್ತಿಲ್ಲ ಅಥವಾ ಹೊಸದಾಗಿ ಕಾನೂನು ತಿಳಿಯಬೇಕಾಗಿಲ್ಲ. ನನಗಿಂಥಾ ಹಿಂದೆ ಇದ್ದಂಥ ಮಂತ್ರಿಗಳು ಮಾಡಿದ್ದು, ಸರ್ಕಾರ ಮಾಡಿದ್ದು. ಅದನ್ನು ಬೇಕಾದರೆ ಇಲ್ಲಿ ತಂದಿಡು ಎಂದರೆ ಇಡುತ್ತೇನೆ. ನೀವು ಹೇಳಿ, ಕಡಿಮೆ ಇದೆ, ಇದು ನ್ಯಾಯವಾಗಿಲ್ಲವೆಂದು ವಾದ ಮಾಡ್ರಿ. ನಿಮ್ಮ ವಾದವನ್ನು ಹತ್ತು ಸಲ ನಾನು ಕೇಂದ್ರಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ. ಈ ಸದನದಲ್ಲಿ ನೀವೆಲ್ಲರೂ ಮಾರ್ಕೆಟ್ ವ್ಯಾಲ್ಯು ಕೊಡಬೇಕೆಂದು ಒಪ್ಪಿಗೆ ಕೊಟ್ಟು ಹೇಳಿದರೆ ಹಾಗೇ ಮಾಡುತ್ತೇನೆ. ನನ್ನದೇನೂ ಗಂಟು ಹೋಗುವುದಿಲ್ಲ. ನಾನೇನು ನನ್ನ ಮನೆಯಿಂದ ತಂದುಕೊಡುವುದಿಲ್ಲ. ಸ್ವಲ್ಪ ಸೌಜನ್ಯದಿಂದ ಮಾತನಾಡಿ ಹೇಳಿದರೆ ನನಗೂ ಕೂಡಾ ಒಳ್ಳೆಯದಾಗುತ್ತದೆ. ಇದಕ್ಕೆ ಸುಮ್ಮನೆ ನಾಚಿಕೆ ಇಲ್ಲ ಎಂದು ಬಯಗಳು ಮಾತ್ರ ಹೇಳಬಾರದು ಅಧ್ಯಕ್ಷರೆ.

(ಗೊಂದಲ)

ಶ್ರೀ ಕೆ.ಹೆಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೆ, ನಾನು ವೈಯಕ್ತಿಕವಾಗಿ ಅವರಿಗೆ ಮಾತನಾಡಲಿಲ್ಲ. ನಾನು ಏಕೆ ಹೇಳುತ್ತಿದ್ದೇನೆಂದರೆ,

(ಗೊಂದಲ)

SRI M. MALLIKARJUNA KHARGE : But, don't abuse. I am not sitting to tolerate. You can effectively tell. But, don't abuse. I am the man who has enhanced it within 4 months. He can tell as to who is the Minister who has enhanced that..

(INTERRUPTIONS)

ಶ್ರೀ ಕೆ. ಹೆಚ್. ಹನುಮೇಗೌಡ : ನನಗೆ ಬೇಕಾಗಿಲ್ಲ. ನಿಮ್ಮ ಹತ್ತಿರ ಪಾಠ ಕಲಿಯಬೇಕಾಗಿಲ್ಲ.

SRI M. Malliakarjuna Kharge : It is I who has enhanced. You should know. You should tell effectively. But, dont't abuse.

(Interruptions)

ಉಪಾಧ್ಯಕ್ಷರು : ಶ್ರೀಯುತ ಹನುಮೇಗೌಡರೆ, ಮಾತನಾಡುವಾಗ ತಾವು ಧಾಟಿಯನ್ನು ಸರಿ ಮಾಡಿಕೊಂಡು ಸಜೆಷನ್ ಕೊಡಿ.

ಶ್ರೀ ಕೆ.ಹೆಚ್. ಹನುಮೇಗೌಡ : ನಾನು ಆಗಲೇ ಹೇಳಿದ್ದೇನೆ.ನಾನು ವೈಯಕ್ತಿಕವಾಗಿ ಮಾತನಾಡಿಲ್ಲ. ರೈತರ ಬಗ್ಗೆ ಆಗಿರತಕ್ಕಂಥ ಅನಾನುಕೂಲಗಳನ್ನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ರೈತರ ಪರಿಸ್ಥಿತಿ ನೋಡಿದಾಗ ಕೆಲವರಿಗೆ ನೋವಾಗುತ್ತದೆ. ಅವರಿಗೆ ತಡೆದುಕೊಳ್ಳವುದಕ್ಕಾಗುತ್ತಿಲ್ಲ. ಅವರ ಅಭಿಪ್ರಾಯಗಳನ್ನು ಹೇಳತಕ್ಕ ಪ್ರಯತ್ನ ಮಾಡಿದ್ದಾರೆ.ಸನ್ಮಾನ್ಯ ಅಧ್ಯಕ್ಷಣೆಯವರೆ, ರೈತರ ಸ್ಥಿತಿ ಅಲ್ಲಿಗೆ ಬಂದಿದೆ. ಇವತ್ತು ಸರ್ಕಾರ ರೈತರ ಪಾಲಿಗೆ ಸತ್ತಿದೆ. ಇವತ್ತು ಆಡಳಿತ ಪಕ್ಷದ ಸದಸ್ಯರಿಗೆ ಇನ್ನೂ ಹೆಚ್ಚಿನ ಸತ್ಯ ಸಂಗತಿಗಳು ಗೊತ್ತಿವೆ. ಆ ನೋವನ್ನು ತಡೆದುಕೊಳ್ಳಲಾರದೆ ಹೇಳುವಂಥ ಪ್ರಯತ್ನ ಮಾಡುತ್ತಿದ್ದಾರೆ. ಅವರಿಗೆ ಹೇಳುವಂಥ ಸ್ವಾತಂತ್ರ್ಯ ಇಲ್ಲವೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾತನಾಡುವುದಕ್ಕೆ ಎಲ್ಲರಿಗೂ ಸ್ವಾತಂತ್ರ್ಯ ಇದೆ. ನನಗೂ ಕೂಡಾ ಉತ್ತರ ಕೊಡುವುದಕ್ಕೆ ಸ್ವಾತಂತ್ರ್ಯ ಇದೆ. ನೀವು ಎಫೆಕ್ಟೀವ್ ಆಗಿ ಮಾತನಾಡಿ. ಸರ್ಕಾರದ ಮೇಲೆ ಟೀಕೆ ಮಾಡಿ ಆದರೆ ರೂಲ್ಸ್ ರೆಗ್ಯುಲೇಷನ್ ನೋಡಿಕೊಂಡು ನೀವು ಮಾತನಾಡಿ, ನಾನು ಬೇಡ ಅನ್ನುವುದಿಲ್ಲ. ಆದರೆ ನಿಮಗೆ ನಾಚಿಕೆ ಬರಬೇಕು ಎಂದರೆ ನಾನು ಏನು ತಿಂದಿದ್ದನೆಯೇ? ಉಂಡಿದ್ದೇನೆಯೇ? ಏನು ಮಾಡಿದ್ದೇನೆ.

ಶ್ರೀ ಕೆ.ಹೆಚ್. ಹನುಮೇಗೌಡ : ನಾನು ವೈಯಕ್ತಿಕವಾಗಿ ಮಾತನಾಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸ್ವಲ್ಪ ಕೇಳಿ ಸ್ವಾಮಿ. ಪಾಲಿಸಿ ಬಗ್ಗೆ ಟೀಕೆ ಮಾಡಿ, ಕೇಂದ್ರ ಸರ್ಕಾರದ ನೀತಿಯೂ ಸರಿಯಿಲ್ಲ. ರಾಜ್ಯ ಸರ್ಕಾರದ ನೀತಿಯೂ ಸರಿಯಿಲ್ಲ. ನೀವು ಇದಕ್ಕೆ ಎನ್‌ಸ್ಸ್ ಮಾಡಬೇಕೆಂದು ಹೇಳಿ. ಎಫೆಕ್ಟೀವ್. ಆಗಿ ಹೇಳಿ ಚೆನ್ನಾಗಿ ಕ್ರಿಟಿಸೈಸ್ ಮಾಡಿ. ಫ್ಯಾಕಟ್ಸ್ ಫಿಗರ್ಸ್ ಇಟ್ಟು ಮಾತನಾಡಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ವೈಯಕ್ತಿಕವಾಗಿ ನಿಮಗೆ ನಾಚಿಕೆ ಬರಬೇಕು ಎಂದರೆ ?

ನೀವು ಎಫೆಕ್ಟೀವ್ ಆಗಿ ಹೇಳಿ. ನೀವು ಕ್ರಿಟಿಸೈಜ್ ಮಾಡಿ. ಫ್ಯಾಕಟ್ಸ್ ಅಂಡ್ ಫಿಗರ್ಸ್ ಇಡಿ ನಾವು ಒಪ್ಪಿಕೊಳ್ಳುತ್ತೇವೆ. ಆದರೆ ವೈಯಕ್ತಿಕವಾಗಿ ನಿಮಗೆ ನಾಚಿಕೆ ಬರಬೇಕು ಎಂದರೆ

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ಕಾರಕ್ಕೆ ನಾಚಿಕೆ ಅಂದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಯಡಿಯೂರಪ್ಪನವರೆ, ನನಗೆ ಗೊತ್ತಿದೆ. ನಾನು ಇವತ್ತು ಬಂದು ಇಲ್ಲಿ ಕುಳಿತವನಲ್ಲ. ನನಗೆ ಏನು ಅಂದರೆ ಜನರ ಒಂದು ಆಶೀರ್ವಾದ ಇದೆ. ಅದರ ಆಶೀರ್ವಾದದಿಂದ 20 ವರ್ಷದಿಂದ ವಿಧಾನ ಸೌಧದಲ್ಲಿ ಕುಳಿತಿದ್ದೇನೆ.

ಶ್ರೀ ಕೆ.ಹೆಚ್. ಹನುಮೇಗೌಡ : ಜನ ಓಟು ಕೊಟ್ಟು ಕಳಿಸಿರುವುದು ಇಲ್ಲಿ ಬಂದು ಯಾರ್ಯಾರೋ ಏನು ಹೇಳಿತ್ತಾರೆ, ಅದನ್ನು ಕೇಳುವುದಿಲ್ಲ. ನನಗೆ ಏನು ನ್ಯಾಯ ತೋರುತ್ತದೋ ಅದನ್ನು ಹೇಳುವ ಅಧಿಕಾರ ಇದೆ, ನಾನು ಅದನ್ನು ಹೇಳುತ್ತೇನೆ. ಏಕೆ ಈ ಮಾತು ಹೇಳಿದೆ ಅಂದರೆ, ದೇಶದ ರೈತರು ಭಿಕ್ಷುಕರಾ? ಭಿಕ್ಷುಕರಾಗಿ ಯಾರ್ಯಾರೋ ದಾರಿಯಲ್ಲಿ ಹೋಗುತ್ತಿದ್ದರೆ ಹೊಟ್ಟೆ ಬಡಿದುಕೊಂಡು ಏನೂ ಇಲ್ಲ ಕೊಡಿ ಸ್ವಾಮಿ ಎಂದರೆ ಎರಡು ರೂಪಾಯಿನೋ ಐದು ರೂಪಾಯಿನೋ ಬಿಸಾಕುತ್ತಾರೆ ವರ್ಷವೆಲ್ಲಾ ಮಳೆಯಲ್ಲಿ, ಬಿಸಿಲಿನಲ್ಲಿ ಒಣಗಿ ದೇಹ ತೇಯ್ದು ದೇಶಕ್ಕೋಸ್ಕರ ತ್ಯಾಗ ಮಾಡಿದಂತಹ ರೈತರು ಕಷ್ಟಕ್ಕೆ ಒಳಗಾದಾಗ ಅವರಿಗೆ ನ್ಯಾಯವಾದ ರೀತಿಯಲ್ಲಿ ಪರಿಹಾರ ಕೊಟ್ಟಿದ್ದರೆ ನಾನು ಏಕೆ ಮಾತನಾಡುತ್ತಿದ್ದೆ.

(ಗೊಂದಲ)

ಉಪಾಧ್ಯಕ್ಷರು : ಈಗ ಅವರು 100 ರೂಪಾಯಿ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಕೆ.ಹೆಚ್. ಹನುಮೇಗೌಡ : ನಾನು ಬೇರೆಯವರಿಂದ ಪಾಠ ಕಲಿಯಬೇಕಾಗಿಲ್ಲ ನಾನು ಏನು ಹೇಳಬೇಕೊ ಅದನ್ನು ಹೇಳುವ ಅಧಿಕಾರ ಇದೆ, ಅದನ್ನು ಹೇಳುತ್ತೇನೆ. ಇಂತಹ ಪರಿಸ್ಥಿತಿ ಇರುವಾಗ ಇಷ್ಟುತೀರ ತೊಂದರೆ ಆದಾಗ ರೈತರ ಪರವಾಗ ಹತ್ತಾರು ವರ್ಷಗಳಿಂದ ಹೇಳಿಕೊಂಡು ಬಂದಿದ್ದಾರೆ, ಅವರ ಪರಿಸ್ಥಿತಿ ಸರಿಯಗಿ ಹೋಯಿತಾ ಇಲ್ಲ, ಸರಿ ಹೋಗಲಿಲ್ಲ, ಕಾನೂನು ಬದಲಾವಣೆ ಆಯಿತಾ? ಕಾನೂನು ಬದಲಾವಣೆ ಆಗಲಿಲ್ಲ. ನಾಯಿಗೆ ರೊಟ್ಟಿ ಚೂರು ಎಸೆಯುತ್ತಾರಲ್ಲ ಹಾಗೆ ಮಾಡಿದರೆ ನಾವು ಏನು ಎಂದು ತಿಳಿದುಕೊಳ್ಳಬೇಕು? ಆ ಜನ ನಮಗೆ ಒಟು ಕೊಟ್ಟು ಕಳಿಸಿದ್ದಾರೆ.

ಉಪಾಧ್ಯಕ್ಷರು : 100 ರೂಪಾಯಿ ಕೊಡಬೇಕು ಎಂದು ಆಗಿದೆ. ಎಂದು ಅವರು ಹೇಳಿದ್ದಾರೆ.

ಶ್ರೀ ಕೆ.ಹೆಚ್. ಹನುಮೇಗೌಡ : ಆ ಜನ ನಮಗೆ ಒಟು ಕೊಟ್ಟಿದ್ದಾರೆ. ಅವರ ಪ್ರತಿನಿಧಿಯಾಗಿ ನಾವು ನಿಂತಿದ್ದೇವೆ. ಆ ಜನಕ್ಕೆ ಈ ರೀತಿ ಅವಮಾನ ಆದಾಗ, ತ್ರಾತ್ಸಾರ ಆದಾಗ ಸರ್ಕಾರದಿಂದ ಸರಿಯಾದ ಪರಿಹಾರ ದೊರೆಯದೇ ಇದ್ದಾಗ ನಾವು ಯಾವ ಭಾಷೆಯಲ್ಲಿ ಹೇಳಬೇಕು. ಇನ್ನು ಯಾವ ಭಾಷೆಯಲ್ಲಿ ಹೇಳಲಿ. ಎಲ್ಲಾರೂ ಭಾರೀ ಚೆನ್ನಾಗಿ ಮಾಡಿಬಿಟ್ಟಿದ್ದಾರೆ ದೇಶ ಸಮೃದ್ಧಿ ಆಗಿದೆ. ಎಂದು ಹಾಡಿ ಹೊಗಳಬೇಕೇ, ಸ್ವರ್ಗಕ್ಕೆ ಹೋಗುತ್ತೇವೆ ಎಂದು ಹೇಳಬೇಕೇ?

ಉಪಾಧ್ಯಕ್ಷರು : ಅವರು ನೂರು ರೂಪಾಯಿ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಕೆ.ಹೆಚ್. ಹನುಮೇಗೌಡ : ನಾನು ಮಾನ್ಯ ಖರ್ಗೆಯವರ ಬಗ್ಗೆ ವೈಯಕ್ತಿಕವಾಗಿ ಹೇಳುತ್ತಾ ಇಲ್ಲ, ಅವರು ಏನು ಮಾಡುತ್ತಾರೇ? ನಾನು ಏನು ಹೇಳುತ್ತೇನೆ ಎಂದರೆ ಬೇರೆ ಕಡೆಯಿಂದ ಬಂದಂತಹ ಸರ್ಕುಲರ್ ಅನ್ನು ವಿರೋಧಿಸಿ ಇದು ಕೊಡತಕ್ಕ ವಿಧಾನ ಅಲ್ಲ. ಇದನ್ನು ಕೊಟ್ಟರೆ ರೈತರು ಒಪ್ಪುವುದಿಲ್ಲ. ದೇವರು ಮೆಚ್ಚುವುದಿಲ್ಲ. ಎಂದು ಹೇಳಲಿ ಕಷ್ಟದಲ್ಲಿರತಕ್ಕ ಜನರಿಗೆ ನ್ಯಾಯವಾಗಿ ಕೊಡಬೇಕು ಎಂದು ಹೇಳಿಬಿಟ್ಟು ಅವನಿಗೆ ತಿರುಗಿಸಿ ಬರೆದು ಸರಿಯಾದ ಪರಿಹಾರ ಕೊಡುವುದಕ್ಕೆ ಅವರು ಹೋರಾಟ ಮಾಡಬೇಕು ಎನ್ನುವ ದೃಷ್ಟಿಯಿಂದ ಹೇಳಿದೆನೇ ವಿನಹ ವೈಯಕ್ತಿಕವಾಗಿ ನಾನು ಅವರನ್ನು ಏಕೆ ಅನ್ನಲಿ. ಅವರು ಏನು ಮಾಡಿದ್ದಾರೆ. ಅಂಥಾದ್ದು ಹೇಳುವುದು ಏನೂ ಇಲ್ಲ. ಎಲ್ಲೋ ನಾಲ್ಕು ಸಣ್ಣಪುಟ್ಟ ಕೆಲಸ ಮಾಡಿಕೊಟ್ಟಿದ್ದಾರೆ. ಅವರ ಬಗ್ಗೆ ನನಗೆ ಗೌರವ ಇದೆ. 20 ವರ್ಷದಿಂದ ನಾವು ಜೊತೆಯಲ್ಲಿಯೇ ಇದ್ದೇವೆ. ಅವರು ತಪ್ಪು ತಿಳಿದುಕೊಂಡು ಯಾರೋ ಕೂಗಿದರು ಎಂದು ಅವರು ಎಗರಬೇಕಾದ ಅವಶ್ಯಕತೆ ಇಲ್ಲ, ಏಕೆಂದರೆ ನಾನು ಉದ್ದೇಶ ಪೂರ್ವಕವಾಗಿ ಹೇಳಲಿಲ್ಲ, ಅವರಿಗೆ ಅವಮಾನ ಮಾಡಬೇಕು. ಎಂದು ಹೇಳಿದವನಲ್ಲ. ಏಕೆಂದರೆ ನನಗೆ ಸಂಕಟ ಆಗುತ್ತದೆ. ಕಷ್ಟದರಲ್ಲಿರತಕ್ಕ ಜನ ನಮಗೆ ಒಟು ಕೊಟ್ಟು ಕಳಿಸಿರುವುದು. ಆ ಜನ ಕಣ್ಣೀರು ಹಾಕುವಾಗ ನಮಗೆ ತೊಂದರೆ ಆಗಿದೆ ಎಂದರೆ ಸರಿಯಾಗಿ ಪರಿಹಾರ ಕೊಡದೇ ಇದ್ದ ಮೇಲೆ ನಾನು ಏಕೆ ಇಲ್ಲಿ ಮೆಂಬರ್ ಆಗಿ ನಿಲ್ಲಬೇಕು.? ಈ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಾ ಇದ್ದೇನೆ. ಮೊದಲು ಏನು ಅವಕಾಶ ಇತ್ತು ಎಂದರೆ ಪರಿಹಾರ ಕೊಡಬೇಕಾದರೆ ಏನು ನಷ್ಟ ಆಗಿದೆ, ನಷ್ಟದಲ್ಲಿ ಇಷ್ಟು ಭಾಗವನ್ನು ಕೊಡಬೇಕು ಎಂದು ಇತ್ತು. ನಾನು ಅದನ್ನು ಕೇಳಿದ್ದೇನೆ. ಈಗ ಏನು ಮಾಡಿದ್ದಾರೆ ಅನ್ಯಾಯವಾಗಿ ದುಡ್ಡು ರೈತರಿಗೆ ಸಿಕ್ಕಿಬಿಡುತ್ತದಲ್ಲ. ದುಡ್ಡು

ಹೋಗಿಬಿಡುತ್ತವೆ. ಅವರು / ಎರಡು ತಿಂಗಳು ಹೊಟ್ಟೆ ತುಂಬಾ ಊಟಮಾಡುತ್ತಾರಲ್ಲ. ಅವರ ಮಕ್ಕಳು ಚೆನ್ನಾಗಿ ಬಟ್ಟೆ ಹಾಕಿಕೊಂಡು ನಮ್ಮ ಎದುರಿಗೆ ಓಡಾಡುತ್ತರಲ್ಲ ಎಂದು ಹೇಳಿ ಕಾನೂನನ್ನು ಬದಲಾವಣೆ ಮಾಡಿ ಏರಿಯಾವೈಸ್, ಒಂದು ಎಕರೆಯಲ್ಲಿ ಬೆಳೆ ಹೋದರೆ ಅವರಿಗೆ 80 ರೂಪಾಯಿ ಎಂದು. ಅವರು ತಮ್ಮ ಆತ್ಮಸಾಕ್ಷಿಯಾಗಿ ಹೇಳಲಿ, ಒಂದು ಎಕರೆಯಲ್ಲಿ ಬೆಳೆ ಹೋದರೆ 80 ರೂಪಾಯಿ ಕೊಡಬೇಕು ಎಂದು ಆರ್ಡರ್ ಬಂದಿದೆ ಎಂದರು. ಅವರೂ ಒಬ್ಬ ರೈತ. ಅವರೂ ರೈತರಾಗಿದ್ದಾಗ, ಅವರು ಏನಾದರೂ ಎರಡು ಎಕರೆಯಲ್ಲಿ ಬೆಳೆ ಕಳೆದುಕೊಂಡು ಇಷ್ಟು ಹಣ ಅವರಿಗೆ ಸಿಕ್ಕಿದ್ದರೆ ಅವರು ಏನು ಅನ್ನುತ್ತಿದ್ದರು? ಜನತ ಬೆಳೆ ಕಳೆದುಕೊಂಡು ಇಷ್ಟು ಹಣ ಅವರಿಗೆ ಸಿಕ್ಕಿದ್ದರೆ ಅವರು ಏನು ಅನ್ನುತ್ತಿದ್ದರು? ಜನತಾ ಪ್ರತಿನಿಧಿಗೆ ಏನು ಹೇಳುತ್ತಿದ್ದರು? ಸರ್ಕಾರದ ಬಗ್ಗೆ ಏನು ಹೇಳುತ್ತಿದ್ದರು? ಬಹುಶಃ ನನಗೆ ಅನಿಸುತ್ತದೆ.ನಾನು ಸ್ವಲ್ಪ ಮೈಲ್ ಆಗಿ ಮಾತನಾಡುತ್ತೇನೆ. ನನಗಿಂತ ಹೆಚ್ಚು ಆಕ್ರೋಶದಿಂದ ಒಬ್ಬ ರೈತ ಮಾತನಾಡುತ್ತಾನೆ. ಇಲ್ಲಿ ಬಂದು ಬಡಪಾಯಿಗಳು ಅವರು ಪ್ರತಿನಿಧಿಸುವುದಕ್ಕೆ ಅವಕಾಶ ಇಲ್ಲ. ಅವರ ಪರವಾಗಿ ನಾವು ಬಂದಿದ್ದೇವೆ. ಅವರು ಫೀಲಿಂಗ್ಸ್ ಹೇಳಬೇಕು. ಇದು ಧರ್ಮ, ಡ್ಯೂಟಿ ಯಾರು ಏನಾದರೂ ತಿಳಿದುಕೊಳ್ಳಬಹುದು. ಕಂಡಿದ್ದನ್ನು ಮುಚ್ಚುಮರೆ ಇಲ್ಲದೆ ಹೇಳಬೇಕಾದ್ದು ನನ್ನ ಧರ್ಮ. ನಾನು ಈ ಮಾತನ್ನು ಹೇಳುತ್ತೇನೆ. ಮಾನ್ಯ ಮಂತ್ರಿಯವರಿಗೆ ನಾನು ಹೇಳುತ್ತೇನೆ. ತಕ್ಷಣ ಈ ಕಾನೂನನ್ನು ಹರಿದು ಬಿಸಾಕಿ. ಕೇಂದ್ರ ಸರ್ಕಾರದವರಿಗೆ ಬರೆದು ನೀವು ತಕ್ಷಣ ನ್ಯಾಯವಾಗಿ ಕೊಡುವ ಹಾಗಿದ್ದರೆ ಕೊಡಿ. ಈ ರೀತಿ ಭಿಕ್ಷೆ ತರಹ ಕೊಟ್ಟರೆ ಜನ ಸುಮ್ಮನೇ ಬಿಡುವುದಿಲ್ಲ. ಶಾಸನ ಸಭೆಗಳಲ್ಲಿ ಆ ಜನರಿಂದ ಓಟು ತೆಗೆದುಕೊಂಡು ಬಂದಿರುವ ಮೆಂಬರ್ಸ್‌ಗಳಿಗೂ ಕೂಡ ಸುಮ್ಮನೇ ಬಿಡುವುದಿಲ್ಲ. ಇದು ಒಂದು ದೊಡ್ಡ ಅನಾಹುತಕ್ಕೆ ಕಾರಣವಾಗುತ್ತದೆ ಎಂದು ಹೇಳಿ ಮತ್ತೆ ಒತ್ತಾಯ ಮಾಡಬೇಕು. ಕೊಡುವುದಾದರೆ ನ್ಯಾಯವಾಗಿ ಕೊಡಲಿ, ಕೊಡದೇ ಹೋದರೆ ಪರವಾಗಿಲ್ಲ, ಈ ದೇಶ ಹುಟ್ಟಿದಾರಭ್ಯ ನಾವು ರೈತರು ತ್ಯಾಗ ಮಾಡಿಕಂಡು ಬಂದಿದ್ದಾರೆ. ಯಾರೋ ಹಾಡಿ ಹೊಗಳಿದರು. ನೇಗಿಲ ಯೋಗಿ ಎಂದು ಏನು ಇಲ್ಲ. ಬರೆ ಮಾತನಾಡುವ ಬದಲು ಏನಾದರೂ ಕಾರ್ಯತಃ ಮಾಡಿ. ಇಲ್ಲದೆ ಇದ್ದರೆ, ನ್ಯಾಯಾವಾಗಿ ಕೊಡಿ. ಕೊಡದೇ ಇದ್ದರೆ ಕೈಬಿಟ್ಟು ಬಿಡಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಕಾನೂನು ಬದಲಾವಣೆ ಆಗಬೇಕು. ಮೊದಲು ಇದ್ದ ಹಾಗೆ ಏನು ಲುಕ್ಸಾನು ಆಗುತ್ತದೆ. ಆ ಲುಕ್ಸಾನಿನ ಮೇಲೆ ಪರಿಹಾರ ಕೊಡಬೇಕೇ ವಿನಹ ಏರಿಯಾ ವೈಸ್ ಎಕರೆ ವೈಸ್ ಕೊಡುವುದು ಅಧರ್ಮ,ಅನ್ಯಾಯ ಇದು ರೈತರ ಮೇಲೆ ಮಾಡುವ ಘೋರ ಅಪರಾಧ ಎಂದು ಹೇಳುತ್ತೇನೆ.

ಈ ದೇಶದಲ್ಲಿ ರೈತರು ಚೆನ್ನಾಗಿ ಬೆಳೆದರೆ ಬೆಳೆದಾಗ ಅದನ್ನು ಸಣ್ಣ ರೈತರಿಂದ, ದೊಡ್ಡ ರೈತರಿಂದ ಭೇದವಿಲ್ಲದೆ ತೆಗೆದುಕೊಳ್ಳುತ್ತಾರೆ. ಅದೇ ರೀತಿಯಲ್ಲಿ ಲೆವಿ ಬೇರೆ ಬರುತ್ತದೆ. ಒಂದು ವೇಳೆ ಏನಾದರೂ ಕಂದಾಯ ಕೊಡುವುದು ಸ್ವಲ್ಪ ತಡವಾದರೆ ರೈತರ ತಲೆಗೆ ಕೈ ಹಾಕಿ ವಸೂಲು ಮಾಡುತ್ತಾರೆ. ಹೀಗೆ ಕಷ್ಟದಲ್ಲಿರತಕ್ಕಂಥ ಈ ರೈತರಲ್ಲಿಯೂ ಸಣ್ಣ ರೈತ, ದೊಡ್ಡ ರೈತ ಎಂದು ಏಕೆ ಮಾಡಿದ್ದೀರಿ? ಹಾಗಾದರೆ ದೊಡ್ಡ ರೈತರು ಬೆಳೆದ ಆಹಾರ ಧಾನ್ಯಗಳನ್ನು ಈ ದೇಶದ ಜನರು ತಿನ್ನುವುದಿಲ್ಲವೆ? ಅಥವಾ ಅವರು ಕಷ್ಟಪಟ್ಟು ಬೆಳೆದಿಲ್ಲವೆ? ಆತನು ಕೂಡ ಮನುಷ್ಯ ಅಲ್ಲವೇ ಆತನಿಗೆ ಆದ ಕಷ್ಟಕ್ಕೆ ಆತನ ಹೆಂಡತಿ ಮಕ್ಕಳು ಕೊರಗುವುದಿಲ್ಲವೆ? ಇಂಥ ತಾರತಮ್ಯವನ್ನು ಏಕೆ ಮಾಡುತ್ತಿದ್ದೀರಿ? ಒಂದು ವೇಳೆ ಆತನು ಚೆನ್ನಾಗಿ ಬೆಳೆದಿದ್ದರೆ

ಆ ಮಾತು ಬೇರೆ, ಆದರೆ ಆತನು ಕಷ್ಟದಲ್ಲಿರುವಾಗ ನಾವ ಯಾವುದೇ ರೀತಿಯಲ್ಲಿ ಸಣ್ಣ ರೈತರು ದೊಡ್ಡ ರೈತರು ಎಂದು ಭೇದಭಾವ ಮಾಡುವುದು ಸರಿಯಾಗಲಾರದು ಹಾಗಾದರೆ ಅವರ ಬಗ್ಗೆ ಹೇಳುವವರು ಕೇಳುವವರು ಯಾರು ಇಲ್ಲವೆಂದು ಬಡಪಾಯಿಗಳಿಗೆ ಏನು ಬೇಕಾದರೂ ಮಾಡಬಹುದು. ಅವರು ನೋಡ್ತಾಲೆ ಇರುತ್ತಾರೆ. ನಾವು ಕೂತುಕೊಂಡು ರಾಜ್ಯಭಾರವನ್ನು ಮಾಡಬಹುದೆಂದು ಈ ರೀತಿ ರೈತರ ಮೇಲೆ ಅನ್ಯಾಯವನ್ನು ಮಾಡಿದ್ದೀರಲ್ಲ? ಇದು ನ್ಯಾಯವೋ? ಇದು ತಾರತಮ್ಯ ಅಲ್ಲವೆ ಎಂದು ಕೇಳುತ್ತಾನೆ ಇದು ಬಗ್ಗೆ ಉತ್ತರವ್ನ ತಮ್ಮ ಕಡೆಯಿಂದ ನಿರೀಕ್ಷೆ ಮಾಡುತ್ತೇನೆ. ನಿಮ್ಮ ಪ್ರಕಾರ ಮೂರು ಎಕರೆ ಇದ್ದರೆ ಆತನು ಸಣ್ಣ ರೈತ, ಅವನಿಗೆ ಕೆಲವು ಪರಿಹಾರಗಳು ಮೂರು ಎಕರೆಗಿಂತ ಒಂದು ಗುಂಟೆ ಹಚ್ಚಿದ್ದರೂ ಅವನು ಭಾರೀ ದೊಡ್ಡ ರೈತನಾಗುತ್ತಾನೆ.

ಅವನಿಗೆ ಯಾವ ರೀತಿಯ ಪರಿಹಾರವೂ ಇಲ್ಲ ಅರ್ಹತೆಯೂ ಇಲ್ಲ. ತಿಳುವಳಿಕೆ ಇಲ್ಲ ಜಮ್ಮ ಐಕ್ಯತೆಯ ಇಲ್ಲದಂತ ಜನ ತಿಳಿದುಕೊಳ್ಳವುದಕ್ಕೆ ಆಗತ್ತದೆಯೇ? ನಾವುಗಳು ವಿದ್ಯೆ ಕಲಿತಿರುವುದು ಆ ಬಡ ರೈತರು ಕೊಟ್ಟ ಟ್ಯಾಕ್ಸನ ಹಣದಿಂದ ಅವರು ಕೊಟ್ಟ ಓಟ್‌ನಿಂದ ನಾವು ಇವೊತ್ತು ಇಲ್ಲಿ ಸರಕಾರವನ್ನು ನಡೆಸುತ್ತಾ ಇದ್ದೇವೆ. ಅಧಿಕಾರವನ್ನು ಚಲಾಯಿಸುತ್ತಾ ಇದ್ದೇವೆ. ಅಂಥ ಜನರನ್ನು ನಾವು ರೀತಿಯಾಗಿ ನಡೆಸಿಕೊಂಡು ಹೋಗುವುದು ನ್ಯಾಯವೇ? ಧರ್ಮವೇ? ಎಂಬುದನ್ನು ದಯಮಾಡಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಸಹಕಾರ ಇಲಾಖೆಯ ಬಗ್ಗೆ ಎಷ್ಟು ಹೇಳಿದರೂ ಕಡಿಮೆ ಎಂದು ಕಾಣುತ್ತದೆ. ಈ ಬಗ್ಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಹತ್ತುವರ್ಷಗಳ ಹಿಂದೆ ನಮ್ಮ ಹಾಸನದಲ್ಲಿ ಡಿಸ್ಟ್ರಿಕ್ಟ್ ಮಾರ್ಕೆಟಿಂಗ್ ಸೊಸೈಟಿ ಎಂಬುದು ಒಂದು ಇತ್ತು. ಬಹಳ ಚೆನ್ನಾಗಿ ವ್ಯಾಪಾರ ಆಗುತ್ತಿತ್ತು. ಸಾವಿರಾರು ಜನ ರೈತರು ಅದರಲ್ಲಿ ಶೇರುಗಳನ್ನು ಕಟ್ಟಿದ್ದರು. ಒಂದು ವರ್ಷಕ್ಕೆ 25-30 ಲಕ್ಷ ಒಂದು ಕೋಟಿ ರೂಪಾಯಿಗಳ ವ್ಯವಹಾರ ಆಗುತ್ತಿತ್ತು. ಹಣ ಸಂಗ್ರಹವಾದ ಕೂಡಲೇ ಅಲ್ಲಿಯ 8-10 ಜನರು ತಮ್ಮಲ್ಲಿಯೇ ಮಾತನಾಡಿಕೊಂಡರು. ಈ ಒಂದು ಸೊಸೈಟಿಯಲ್ಲಿ 25-30 ಲಕ್ಷ ರೂಪಾಯಿಗಳು ಇದೆ. ಇದನ್ನು ಹೀಗೆ ಬಿಟ್ಟುಬಿಡುವುದು ಅನ್ಯಾಯವಲ್ಲವೆ? ಹೊಟ್ಟೆಗಿಲ್ಲದ ಬಡಜನರು ಕಟ್ಟಿದ ಈ ದುಡ್ಡನ್ನು ನಾವು ಸಂಪಾದಿಸಿಕೊಳ್ಳೋಣ ಎಂದು ಹೊರಟರು. ಬೇಕಾದಷ್ಟು ಹಣವನ್ನು ಖರ್ಚು ಮಾಡಿದರು, ಚುನಾವಣೆಗೆ ನಿಂತುಕೊಂಡು ಖರ್ಚು ಮಾಡಿ ಗೆದ್ದು ಬಂದರು. ಎರಡೇ ವರ್ಷಗಳಲ್ಲಿ ಅಲ್ಲಿದ್ದ 25 ಲಕ್ಷ ರೂಪಾಯಿಗಳನ್ನು ಪೂರ್ತಿಯಾಗಿ ನುಂಗಿಹಾಕಿಬಿಟ್ಟರು. ಅಲ್ಲಿದ್ದ ಮೇಜು ಖುರ್ಚಿಗಳನ್ನು ಕೂಡ ಹಂಚಿಕೊಂಡರು. ಅಲ್ಲಿ ಬರೇ ಚಾಪೆ ಲೋಟವನ್ನು ಇಟ್ಟು ಹೊರಟುಹೋದರು. ನಾನು ಸರ್ಕಾರವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ನಿಮ್ಮ ಸರಕಾರದ ಇಲಾಖೆಯು ಇರಲಿಲ್ಲವೋ ? ನಿಮ್ಮ ಅಧಿಕಾರಿಗಳು ಇರಲಿಲ್ಲವೋ ? ಅಲ್ಲಿ ಹತ್ತು ವರ್ಷಗಳ ಹಿಂದೆ ಇದ್ದ 25 ಲಕ್ಷ ರೂಪಾಯಿಗಳನ್ನು ಅವರುಗಳು ಹಾಡುಹಗಲೇ ದರೋಡೆ ಮಾಡಿಕೊಂಡು ಹೋರಟು ಹೋದರಲ್ಲ? ಈ ಬಗ್ಗೆ ಯಾರಿಗೆ ಹೇಳಬೇಕು? ಯಾವ ಭಾಷೆಯಲ್ಲಿ ಹೇಳಬೇಕು? ಏನಂತ ಹೇಳಬೇಕು? ಇಲಾಖೆಯಲ್ಲಿ ಎಲ್ಲರೂ ಇದ್ದಾರೆ. ರಿಜಿಸ್ಟಾರ್ ಇದ್ದಾರೆ, ಡೆಪ್ಯುಟಿ ರಿಜಿಸ್ಟಾರ್ ಇದ್ದಾರೆ, ಮಂತ್ರಿಗಳು ಇದ್ದಾರೆ, ಬೇರೆ ಎಲ್ಲರೂ ಇದ್ದಾರೆ. ಅಲ್ಲಿಗೆ ಲಿಕ್ವಿಡೇಟರ್‌ನ್ನು ನೇಮಿಸಿ 10 ವರ್ಷಗಳು ಆದುವು ಆತನಿಗೆ ತಿಂಗಳಿಗೆ 3-4 ಸಾವಿರ ರೂಪಾಯಿಗಳ ಸಂಬಳ ಕೊಡುತ್ತಿದ್ದೀರಿ? ಅವನು ಎಂಟು ವರ್ಷಗಳಿಂದ ಸುಮ್ಮನೆ ಕುಳಿತುಕೊಂಡಿದ್ದಾನೆ. ನಾನು ಪ್ರಶ್ನೆ ಮಾಡುತ್ತೇನೆ.

ರೈತರು ಒಂದು ಸಣ್ಣ ಪರಿಹಾರ ಕೇಳಿದರೆ 2-3 ರೂಪಾಯಿಗಳನ್ನು ಬಿಕ್ಷೆ ಬಿಸಾಡಿದ ಹಾಗೆ ಬಿಸಾಡುತ್ತೀರಲ್ಲ, ರೊಟ್ಟಿಯ ಚೂರು ಬಿಸಾಡಿದ ಹಾಗೆ ಎಸೆಯುತ್ತೀರಲ್ಲ? ಅದೇ ಕಷ್ಟದಲ್ಲಿರುವ ರೈತರಿಗೆ ಏನಾದರೂ ಸಹಾಯವನ್ನು ಮಾಡಿ ಎಂದ ಕೂಡಲೇ ನನ್ನ ಮೇಲೆ ಎದ್ದೆದ್ದು ರೇಗುತ್ತೀರಲ್ಲ. ಅಲ್ಲಿ ಎಂಟು ಜನರು ಸೇರಿ 25 ಲಕ್ಷ ರೂಪಾಯಿಗಳನ್ನು, ಬಡರೈತರ ಹಣವನ್ನು ನುಂಗಿ ಇವೊತ್ತು ಕಾರುಗಳನ್ನು ಇಟ್ಟುಕೊಂಡು ಓಡಾಡುತ್ತಿದ್ದಾರಲ್ಲ? ಆ ಹಣವನ್ನು ತಿಂದವರಿಗೆ ನೀವು ಏನು ಮಾಡಿದ್ದೀರಿ? ನಾನು ಆಗ ಎರಡು ಮೂರು ಭಾರಿ ಕಾಗದ ಬರೆದೆ, ಅನ್ಯಾಯವಾಗಿದೆ ಎಂದು ಹೇಳಿದೆ, ಆದರೆ ಏನು ಪರಿಣಾಮ ಆಗಲಿಲ್ಲ. ಇಂಥ ಪರಿಸ್ಥಿತಿ ಇರುವಾಗ, ರೈತರಿಂದ ಬರಬೇಕಾದ ಒಂದು ರೂಪಾಯಿ ಇದ್ದರೂ ಕೂಡ 2 ದಿವಸಗಳ ಅವಧಿಯನ್ನು ಕೂಡ ಕೊಡದೆ ಅನ್ಯಾಯ ಮಾಡುತ್ತೀರಲ್ಲ? ಜನರ ದುಡ್ಡು ಹೀಗೆ ಕೋಟಿಗಟ್ಟಲೆ ಹಾಳಾಗಿ ಯಾರೋ ಕಂಡ ಕಂಡವರು ತಿಂದು ಹೋಗುತ್ತಾರಲ್ಲ ಅವರ ಬಗ್ಗೆ ಏನು ಮಾಡಿದ್ದೀರಿ ? ನಿಮಗೆ ಜವಾಬ್ದಾರಿ ಇಲ್ಲವೆ?

ಯಾರು ಹೇಳುವವರು ಕೇಳುವವರು ಇಲ್ಲ, ಇನ್ಯಾವ ಭಾಷೆಯಲ್ಲಿ ಮಾತಾಡಬೇಕು ಎಂದು ಮಾನ್ಯ ರೆವಿನ್ಯೂಸಚಿವರು ಹೇಳಬೇಕು. ಮಾನ್ಯ ಸಹಕಾರ ಸಚಿವರಿದ್ದಾರೆ ಅವರು ಈ ಸೆಕ್ಷನ್ ಮುಗಿಯುವುದರೊಳಗೆ ಯಾರು ಎಷ್ಟು ನುಂಗಿದರು, ಏನೇನು ಮಾಡಿದರು, ಆ ಕುರ್ಚಿ ಬೆಂಚು ಎಲ್ಲಿವೆ? 8 ವರ್ಷಗಳಿಂದ ಒಬ್ಬ ಲಿಕ್ವಿಡೇಟರ್‌ನ್ನು ಅಪಾಯಿಂಟ್ ಮಾಡಿದಿರಿ, ಅವರು ಎಲ್ಲಿ ಮಲಗಿದ್ದಾರೆ, ಏನು ಮಾಡಿಕೊಂಡಿದ್ದಾರೆ ಗೊತ್ತಿಲ್ಲ, ಅವರಿಗೆ 8ವರ್ಷ ಸಂಬಳ ಕೊಟ್ಟಿರಲ್ಲ ಏಕೆ ಕೊಟ್ಟಿರಿ? ಅದು ಎಷ್ಟಾಯಿತು? ಈ ತರಹದ ಕೆಲಸಕ್ಕೆ ಕೊನೆ ಮೊದಲಿಲ್ಲವೋ? ಇದನ್ನೆಲ್ಲ ಮಾತಾಡಬಾರದೇ? ಇದರ ಬಗ್ಗೆ ಸಹಕಾರ ಸಚಿವರು ಈ ಸೆಶನ್ ಮುಗಿಯುವುದರೊಳಗೆ ಏನು ಆಕ್ಷನ್ ತೆಗೆದುಕೊಂಡಿದ್ದಾರೆ ಏನಾಯಿತೆಂದು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಕೆ.ಎಸ್.ಆರ್.ಟಿ.ಸಿ. ಹಾಸನದಲ್ಲಿ ಒಂದು ಬಸ್ ಸ್ಟಾಂಡ್ ಇದೆ ಯಾರೇ ಅದನ್ನು ನೋಡಿದರೂ ಇಲಾಖೆಯನ್ನು ಹಾಡಿ ಹೊಗಳಿ ಕೈಮುಗಿಯುತ್ತಾರೆ. ನನ್ನ ಕೇಳಿದರು ಒಬ್ಬರು, ಕೆ.ಎಸ್.ಆರ್.ಟಿ.ಸಿಯನ್ನು ಕೃಷಿ ಇಲಾಖೆಗೆ ವಹಿಸಿಕೊಟ್ಟಿದ್ದೀರಾ ಎಂದು. ನಾನು ಏಕೆ ಎಂದು ಕೇಳಿದ್ದಕ್ಕೆ ಅಲ್ಲಿ ಸೊಗಸಾದ ಗದ್ದೆ ಮಾಡಬಹುದು. ಅಲ್ಲಿ ಎರಡು ಎರಡೂವರಡಿ ನೀರಿರುತ್ತದೆ. ಹೊರಗಡೆಯಿಂದ ಹೆಣ್ಣುಮಕ್ಕಳು ನೆಂಟರ ಮನೆಗೆ ಹೋಗುತ್ತೇವೆಂದು ಚೆನ್ನಾಗಿ ಬಟ್ಟೆಹಾಕಿಕೊಂಡು ಅಲ್ಲಿಗೆ ಬಂದರೆ, ಚಪ್ಪಲಿ ಒಂದು ಕೈಲಿ ಹಿಡಿದುಕೊಂಡು ಇನ್ನೊಂದು ಕೈಲಿ ಬಟ್ಟೆ ಮೇಲಕ್ಕೆತ್ತಿಕೊಂಡರೆ, ಕಂಕುಳಲ್ಲಿರುವ ಮಗು ಗತಿಯೇನು?

ಶ್ರೀ ಸಿ. ಭೈರೇಗೌಡ :...

ಶ್ರೀ ಅಜೀಜ್ ಸೇಠ್ : ಅವರು ಹೇಳಲಿ, ಅದಕ್ಕೆ ನಿಮಗೆ ಏನು ತೊಂದರೆಯಾಗುತ್ತದೆ.

ಶ್ರೀ ಕೆ.ಹೆಚ್. ಹನುಮೇಗೌಡ : ಇದ್ದಬದ್ದ ಟೈಮನೆಲ್ಲ ನೀವೇ ತಗೊಂಡುಬಿಟ್ಟರೆ ನಾವು ನಿಂತು ಮಾತಾಡುವುದೇನು?

ಶ್ರೀ ವಾಟಾಳ್ ನಾಗರಾಜ್ : ನಾನು ಗೌಡರಿಗೆ ಹೇಳಿದೆ ಮಧ್ಯೆ ಮಾತಾಡಬೇಡಿ ಎಂದು.

ಶ್ರೀ ಸಿ. ಬೈರೇಗೌಡ : ಯಾರ ಮೇಲಿನ ಕೋಪಾನ ನಮ್ಮ ಮೇಲೆ ತೋರಿಸುತ್ತೀರಲ್ರಿ?

ಶ್ರೀ ಕೆ.ಎಚ್. ಹನುಮೇಗೌಡ : ಸಿಟ್ಟೂ ಇಲ್ಲ ಪಟ್ಟೂ ಇಲ್ಲ ನಮ್ಮ ರೈತರಿಗೆ ಆಗಿರುವ ಅನ್ಯಾಯ ನೋಡಿದರೆ ಹೀಗಾಗುತ್ತದೆ. ಹೊರಗಡೆಯಿಂದ ಬರುವವರು ಸ್ಕೂಲಿಗೆ ಹೋಗುವ ಮಕ್ಕಳು ಅಷ್ಟೊತ್ತಿಗೆ ಎದ್ದು ಬಟ್ಟೆಹಾಕಿ ಬೂಟ್ಸ್ ಹಾಕಿ ಕಳಿಸಿರುತ್ತಾರೆ, ಅವರ ಸ್ಥಿತಿ ನೋಡಬಾರದು? ಐದು ಹತ್ತು ದಿವಸ ನಡೆಯಿತು ಇದು, ಆಗ ನಾನು ಮಾನ್ಯ ಸಚಿವರಿಗೆ ಲೆಟರ್ ಬರದೆ ಮತ್ತು ಕೆ.ಎಸ್.ಆರ್.ಟಿ.ಸಿ.ಯ ಎಂಡಿಯವರಿಗೆ ಫೋನ್ ಮಾಡಿ ಹೇಳಿದೆ. ನಾನಂತೂ ಬಸ್ ಸ್ಟಾಂಡಿಗೆ ಹೋಗುವುದಿಲ್ಲ, ವೋಟ್ ಹಾಕಿದವರು ಏನು ಮಾಡುತ್ತಾರೋ ಅಂತಹ ಪರಿಸ್ಥಿತಿಯಾಗಿದೆ ಎಂದು.

(ಅಧ್ಯಕ್ಷರು ಪೀಠದಲ್ಲಿ)

ಎಂಡಿಯವರು ತಕ್ಷಣ ಇಂಜಿನಿಯರ್‌ನ್ನು ಕಳಿಸಿ, ಅವರಿಗೆ ಮಿನಿಸ್ಟು ಹೇಳಿದ್ದಾರೋ ಏನೋ ಅವರು ಹೇಳಿರಬೇಕು. ಅದಕ್ಕಾಗಿ ಜನತೆ ಪರವಾಗಿ ಸಚಿವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಟೆಂಪರರಿ ರಿಪೇರಿ ಮಾಡಿಸಿ ಆಗುತ್ತಿದ್ದ ಅನಾಹುತವನ್ನು ತಪ್ಪಿಸಿದರು. ಎಂಡಿಯವರಿಗೂ ವಂದನೆಗಳನ್ನು ಹೇಳುತ್ತೇನೆ. ಮತ್ತೊಂದು ವಿಚಾರ ಟೆಂಪರರಿಯಾಗಿ ಮಣ್ಣು ಹಾಕಿದ್ದಾರೆ ಸಧ್ಯಕ್ಕೆ ಪರವಾಗಿಲ್ಲ ಇನ್ನು ಎರಡು ಮೂರು ತಿಂಗಳು ಬಸ್ ಓಡಾಡಿದ ಮೇಲೆ ಮತ್ತೆ ಅದೇ ಪ್ರಕಾರ, ಮಳೆಗಾಲದಲ್ಲೆಲ್ಲ. ದಯವಿಟ್ಟು ಸಚಿವರನ್ನು ಕೇಳಿಕೊಳ್ಳುತ್ತೇನೆ. ಈ ಬೇಸಿಗೆಗೆ ದಯವಿಟ್ಟು ಕಾಂಕ್ರೀಟ್ ಅಥವಾ ಡಾಂಬರ್ ಹಾಕಿಸುವ ವ್ಯವಸ್ಥೆ ಮಾಡಿ ಬಸ್ ಸ್ಟಾಂಡ್‌ಗೆ ಹೆಣ್ಣುಮಕ್ಕಳು ಗೌರವಸ್ಥರು ಗೌರವವಾಗಿ ಬಂದು ಹೋಗುವುದಕ್ಕೆ ಅನುಕೂಲ ಮಾಡಿಕೊಡಿ ಎಂದು ಸಚಿವರನ್ನು ಇಲಾಖೆಯ ಅಧಿಕಾರಿಗಳನ್ನು ಕೇಳಿಕೊಳ್ಳುತ್ತೇನೆ. ಅದಕ್ಕೆ ಒಂದು ಕಾರಣ ಹೇಳ್ತಾರೆ. ಮೇಲುಗಡೆಯಿಂದ ನೀರು ಬರುತ್ತದೆ. ಹಿಂದೆ ಆ ಜಾಗ ಕೆರೆಯಾಗಿತ್ತು. ಆ ನೀರನ್ನು ಡೀವಿಯೇಟ್ ಮಾಡದೆ ಹೋದರೆ ಏನೂ ಮಾಡಲು ಬರುವುದಿಲ್ಲವೆನ್ನುತ್ತಾರೆ. ಇದರ ಬಗ್ಗೆ ಮಾನ್ಯ ಅಜೀಜ್ ಸೇಠ್‌ರಿಗೆ ಪತ್ರ ಬರೆದಿದ್ದೆ ಅವರು ಬಂದಿದ್ದರು.

ನಾನು ಮಾನ್ಯ ಅಜೀಜ್ ಸೇಠ್‌ರವರಿಗೆ ಕಾಗದವನ್ನು ಬರೆದಿದ್ದೆ. ಅವರು ಬಂದಿದ್ದರು. ಅವರು ಬಂದು ನೋಡಿ 27 ಲಕ್ಷ ರೂಪಾಯಿಗಳನ್ನು ಡೀವಿಯೇಷನ್ ಚಾನಲ್ಗೆ ದುಡ್ಡು ಆಗುತ್ತದೆ ಎಂದು ಹೇಳಿ ಅಲ್ಲಿಯೇ ಆರ್ಡರನ್ನು ಮಾಡಿ ಬಂದರು. 11 ಲಕ್ಷ ರೂಪಾಯಿಗಳನ್ನು ಕೊಟ್ಟು ಇದನ್ನು ತಕ್ಷಣ ಮಾಡಿಬಿಡಿ ಉಳಿದದ್ದನ್ನು ಮುನ್‌ಸಿಪಾಲಿಟಿಯವರು ಮಾಡಲಿ ಎಂದು ಹೇಳಿ ಆರ್ಡರನ್ನು ಮಾಡಿ ಬಂದರು. ದುಡ್ಡು ಇಲಾಖೆಯವರು ಕೊಟ್ಟಿದ್ದಾರೆ. ಆ ರೀತಿ ಕೊಟ್ಟು ಆರು ತಿಂಗಳಾಯಿತು. ಮುನ್‌ಸಿಪಾಲಿಟಿಯವರು ಆ ವರ್ಕನ್ನು ತೆಗೆದುಕೊಂಡಿಲ್ಲ. ಇಲಾಖೆಯವರು ಏನು ಹೇಳುತ್ತಾರೆ ಎಂದರೆ ಚಾನಲ್ ಆಗದಹೊರತು ಆ ಬಸ್ ಸ್ಟಾಂಡನ್ನು ರಿಪೇರಿ ಮಾಡುವುದಕ್ಕೆ ಆಗುವುದಿಲ್ಲ, ನೀರು ಬಂದು ಹೊರಗಡೆ ತುಂಬಿಕೊಳ್ಳುತ್ತದೆ ಎಂದು ಅವರು ಹೇಳುತ್ತಾರೆ. ಮುನಿಸಿಪಾಲಿಟಿಯವರನ್ನು ಕೇಳಿದರೆ ಒಂದೊಂದು ತರಹ ಅವರು ಮಾತನಾಡುತ್ತಾರೆ, ನಾನು ಮಾನ್ಯ ಸಚಿವರಲ್ಲಿ ಕೈಮುಗಿದು ಕೇಳಿಕೊಳ್ಳುತ್ತೇನೆ, ಈ ಡೀವಿಯೇಷನ್ ಚಾನಲ್‌ನ್ನು ನೀವು ಇಮ್ಮೆಡಿಯೇಟ್ ಆಗಿ ಮಾಡಿಸುತ್ತೀರಾ ಅಥವಾ ಅವರ ಕೈಯಲ್ಲಿ ಆದರೂ ಮಾಡಿಸುತ್ತೀರಾ? ಇದನ್ನು ತಕ್ಷಣ ಮಾಡಿ ಬಸ್ ಸ್ಟಾಂಡ್‌ನ ರಿಪೇರಿಗೆ ಸೂಕ್ತವಾದ ವ್ಯವಸ್ಥೆಯನ್ನು ಮಾಡಿಕೊಡಬೇಕು. ಮಾನ್ಯ ಅಧ್ಯಕ್ಷರೇ, ಡಿವಿಜನಲ್ ವರ್ಕಷಾಪನ್ನು ಮಾಡುವುದಕ್ಕೆ ಎಂದು ಹೇಳಿ ಹಳ್ಳಿಯಲ್ಲಿ ರೈತರುಗಳು ಅರ್ಧರ್ಧ ಎಕರೆ, ಹೊಟ್ಟೆಗೆ ಇಲ್ಲದವು

ಅರ್ಧ ಎಕರೆ, ಕಾಲು ಎಕರೆ ಜಮೀನನ್ನು ಇಟ್ಟುಕೊಂಡಿದ್ದರು. ಇವರ ಡಿಪೋ ಪಕ್ಕದಲ್ಲಿ ಆ ಜಮೀನುಗಳನ್ನು ಇಟ್ಟುಕೊಂಡಿದ್ದರು. 92 ಎಕರೆ ಈ ರೀತಿ ಜಮೀನನ್ನು 1979 ನೇ ಇಸವಿಯಲ್ಲಿ ಡಿವಿಜನಲ್ ವರ್ಕಷಾಪ್‌ನ್ನು ಹಾಕಿಸುತ್ತೇವೆ ಎಂದು ಹೇಳಿ..

ಅಧ್ಯಕ್ಷರು : ಅರ್ಧ ಗಂಟೆಯಾಯಿತು.

ಶ್ರೀ ಕೆ.ಹೆಚ್ ಹನುಮೇಗೌಡ : ಸ್ವಾಮಿ, 15 ನಿಮಿಷ ಕೂಡಾ ಮಾತನಾಡಿಲ್ಲ. ಈ ಮಧ್ಯೆ ಮಧ್ಯೆ ಯಾರ್‍ಯಾರೋ ಮಾತನಾಡಿದರು, ತಿಮ್ಮಪ್ಪನವರು ಮಾತನಾಡುತ್ತಿದ್ದರು, ಎಲ್ಲಿಯೋ ಅವರು ಹೋಗಿದ್ದಾರೆ, ಅವರ ಟೈಮನ್ನು ಹಿಡಿದುಕೊಂಡು ನನಗೆ ಕೊಡಿ ಅವರು ಮಾತನಾಡದಿದ್ದರೆ ಇಷ್ಟು ಆಗುತ್ತಿರಲಿಲ್ಲ. ಇಷ್ಟು ಹೊತ್ತಿಗೆ ಮುಗಿಸಿಬಿಡುತ್ತಿದ್ದೆ. ಅವರು ಒಬ್ಬರು, ಈ ಕರಿಯಣ್ಣ ಒಬ್ಬರು, ಅವರು ಎಲ್ಲಿಯೋ ಹೋಗಿದ್ದಾರೆ. ಅವರಿಬ್ಬರೂ 15 ನಿಮಿಷ ಮಾತನಾಡಿ ನನ್ನ ಅರ್ಧ ಗಂಟೆಯಲ್ಲಿ 15 ನಿಮಿಷವನ್ನು ತೆಗೆದುಕೊಂಡರು. ಅವರಿಬ್ಬರಿಗೂ ಟೈಮನ್ನು ಕೊಡುವಾಗ ಅದನ್ನು ಮುರಿದುಕೊಂಡು ನನಗೆ ಕೊಡಿ.

ಮಾನ್ಯ ಅಧ್ಯಕ್ಷರೇ, 12 ವರ್ಷದ ಹಿಂದೆ ಆ ಜಮೀನನ್ನು ಅಕ್ವೈರ್ ಮಾಡಿಕೊಂಡರು. ಅದು 92 ಎಕರೆ ಜಮೀನು ಚೆನ್ನಾಗಿ ಬೆಳೆಯನ್ನಾದರೂ ಬೆಳೆದುಕೊಂಡು ಆ ರೈತರು ನೆಮ್ಮದಿಯಾಗಿ ಬದುಕುತ್ತಿದ್ದರು. ಅದನ್ನು ತಪ್ಪಿಸಿದರು. ಅವರಿಗೆ ಎಕರೆಗೆ ಪರಿಹಾರವನ್ನು ಕೊಟ್ಟಿರುವುದು ಎಷ್ಟು ಎಂದರೆ ನಾಲ್ಕು ಸಾವಿರ, ಮೂರು ಸಾವಿರ, ಒಂದೂವರೆ ಸಾವಿರ, ಐದು ಸಾವಿರವೋ ಈ ರೀತಿಯಾಗಿ ಕೊಟ್ಟಿದ್ದಾರೆ. ಹೋಗಲಿ, ಆ ರೈತರಿಂದ ಜಮೀನನ್ನು ತೆಗೆದುಕೊಂಡರಲ್ಲಾ, ಅಲ್ಲಿ ಡಿವಿಜನಲ್ ವರ್ಕ್‌ಷಾಪ್‌ನ್ನಾದರೂ ಹಾಕಿದ್ದಾರೆಯೇ, ಅದನ್ನೂ ಹಾಕಿಲ್ಲ. ಅಲ್ಲಿ ರೈತರಿಗೂ ಅನ್ಯಾಯವಾಯಿತು. ಇಲ್ಲಿ ವರ್ಕ್‌ಷಾಪನ್ನು ಹಾಕಿಲ್ಲ. ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ, ಇಷ್ಟು ಹೊತ್ತಿಗೆ ಅಲ್ಲಿಯ ಜನರು ಅದನ್ನು ಕಿತ್ತು ಹಾಕುವುದಕ್ಕೆ ಮಾಡಿದ್ದರು, ನಾನು ಸ್ವಲ್ಪ ನಿಲ್ಲಿಸಿದ್ದೇನೆ, ಎರಡು-ಮೂರು ತಿಂಗಳು ಸುಮ್ಮನಿರಿ, ನೋಡೋಣ ಎಂದು ಹೇಳಿದ್ದೇನೆ. ಅಲ್ಲಿ ವರ್ಕ್‌ಷಾಪನ್ನು ಹಾಕಬೇಕು, ಇಲ್ಲದಿದ್ದರೆ ಆ ಜಮೀನನ್ನು ಅವರಿಗೆ ವಾಪಸ್ ಕೊಡಬೇಕು ಎಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ. ಹೋದ ವರ್ಷ ಕೇಳಿದ್ದೆ ಸಚಿವರನ್ನು, ಈ ವರ್ಷ ಬಹಳ ಲಾಸ್‌ನಲ್ಲಿದೆ ಎಂದು ಹೇಳಿ ಮುಂದಿನ ವರ್ಷಕ್ಕೆ ಮಾಡಿಕೊಡುತ್ತೇನೆ ಎಂದು ಹೇಳಿದ್ದರು. ಈ ವರ್ಷ ಮತ್ತೆ ಕೇಳಿದೆ. ಅದೇನೋ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಹಾಕುತ್ತೇವೆ, ಏನೋ ಹಾಕುತ್ತೇನೆ ಎಂದು ಹೇಳಿದರು. ಎಂಥದ್ದಾದರೂ ಆಗಲಿ, ಒಟ್ಟಿನಲ್ಲಿ ಅಲ್ಲಿ ಫ್ಯಾಕ್ಟರಿ ಅಂಥ ಆಗಬೇಕು. ಇಲ್ಲದಿದ್ದರೆ ಆ ಜಮೀನನ್ನು ಅವರುಗಳಿಗೆ ವಾಪಸ್ ಕೊಡಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಆಮೇಲೆ ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಒಂದು ಮಾತನ್ನು ಹೇಳುವುದಾದರೆ ಯೋಗ್ಯರಿಗೆ ಪುರಸ್ಕಾರ ಇಲ್ಲ, ಅಯೋಗ್ಯರಿಗೆ ಶಿಕ್ಷೆ ಇಲ್ಲ. ಯಾರು ಏನು ಬೇಕಾದರೂ ಮಾಡಿಕೊಂಡು ಹೋಗಬಹುದು. ಚೆನ್ನಾಗಿ ಮಾಡುವವರನ್ನು ಬಹಳ ಚೆನ್ನಾಗಿ ಮಾಡಿದ್ದೀಯೇ ಎಂದು ಹೇಳಿ ಬೆನ್ನು ತಟ್ಟಿ ಎರಡು ಮಾತನಾಡಿದರೆ ಅವರು ಎಷ್ಟೋ ಸಂತೋಷಪಟ್ಟುಕೊಳ್ಳುತ್ತಾರೆ. ಅವರಿಗೆ ಆ ಮಾತನ್ನೂ ಹೇಳುವುದಿಲ್ಲ. ಅದನ್ನೂ ಮಾಡುವುದಿಲ್ಲ, ಕೆಲವರು ಅಯೋಗ್ಯರು ಇದ್ದಾರಲ್ಲಾ, ಅವರಿಗೆ ಇಂಥ ತಪ್ಪು ಮಾಡುತ್ತೀರಿ, ಮುಂದಾದರೂ ಹುಷಾರಾಗಿರಿ, ಸರಿಯಾಗಿ ನಡೆದುಕೊಂಡು ಹೋಗಿರಿ ಎಂದು ಅದನ್ನು ಕೂಡಾ ಹೇಳುವುದಿಲ್ಲ. ಹೀಗಾಗಿ ಒಳ್ಳೆಯವರಿಗೆ ಪುರಸ್ಕಾರವಿಲ್ಲ, ಅಯೋಗ್ಯರಿಗೆ ಶಿಕ್ಷೆ ಇಲ್ಲದೇ ಆಗಿದೆ ಇದು

ಉಂಡವರದೇ ರಾಜ್ಯ ಆಗಿದೆ. ಯಾರದೋ ಮದುವೆಗೆ ಹೋಗಿ ಕಂಡ ಕಂಡವರೆಲ್ಲಾ ಸಿಕ್ಕಿದ ಹಾಗೆ ಉಂಡ್‌ಕೊಂಡು ಹೋದರು. ಆ ರೀತಿಯ ಪರಿಸ್ಥಿತಿಯಾಗುತ್ತಿದೆ. ದಯಮಾಡಿ ಇದು ಆಗಬಾರದು. ಏಕೆಂದರೆ ಈ ಜನ ನಿರೀಕ್ಷೆಗೆ ಮೀರಿ ವೋಟನ್ನು ಕೊಟ್ಟು ಸರ್ಕಾರ ಅದು ನಮಗೆ ಅನುಕೂಲವನ್ನು ಮಾಡಿಕೊಡುತ್ತದೆ, ನಮಗೆ ಒಳ್ಳೆಯ ಕೆಲಸಕಾರ್ಯಗಳನ್ನು ಮಾಡಿಕೊಡುತ್ತದೆ ಎನ್ನುವ ದೃಷ್ಟಿಯಿಂದ ವೋಟನ್ನುಕೊಟ್ಟು ಕಳುಹಿಸಿದ್ದಾರೆ. ಆ ಜನಗಳಿಗೆ ಕೆಲಸ ಆಗಬೇಕಾದರೆ ಯೋಗ್ಯ ಅಧಿಕಾರಿಗಳನ್ನು ಅಲ್ಲಿಗೆ ಹಾಕಿ ಅವರಿಗೆ ನ್ಯಾಯವಾದ ಪುರಸ್ಕಾರ ಆ ಅಧಿಕಾರಿಗಳಿಗೆ ದೊರೆಯಬೇಕು. ಅವರಿಗೆ ಸಿಗಬೇಕಾದಂಥ ಪ್ರೋತ್ಸಾಹ ಸಿಗಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ರೈತರ ಪ್ರಶ್ನೆ ಬಂದಾಗ ಮುಂದೆ, ಈ ಸರ್ಕಾರ ಇರಲಿ, ಯಾವ ಸರ್ಕಾರವೇ ಇರಲಿ, ನ್ಯಾಯವಾಗಿ ಮಾನವೀಯ ದೃಷ್ಟಿಯಿಂದ ಅವರಿಗೆ ಏನು ಪರಿಹಾರವನ್ನುಕೊಡಬೇಕೋ ಅದನ್ನು ಕೊಡಬೇಕೇ ವಿನಹಾ ಏನು ಮನಸ್ಸಿಗೆ ಬಂದಂತೆ ತಾತ್ಸಾರವಾಗಿ ಹೇಳುವುದು ಇಲ್ಲ ಕೇಳುವವರೂ ಏನೂ ಇಲ್ಲ ಎಂದು ಮಾಡತಕ್ಕಂಥ ಈ ಕೆಲಸಗಳನ್ನು ನಿಲ್ಲಿಸಿ ಸೂಕ್ತವಾದ ಪರಿಹಾರವನ್ನು ಆ ಬಡ ರೈತರಿಗೆ ಕೊಡಬೇಕು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ತಿಳಿಸಿ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರು): ಮಾನ್ಯ ಅಧ್ಯಕ್ಷರೆ, ನನ್ನ ಇಲಾಖೆ ಹಾಗೂ ಮತ್ತಿತರ ಇಲಾಖೆಗೆ ಸಂಬಂಧಪಟ್ಟಹಾಗೆ ಸುದೀರ್ಘವಾದಂತಹ ಚರ್ಚೆ ನಡೆದಿರುವುದನ್ನು ನಾನು ಗಮನಿಸಿದ್ದೇನೆ. ನಿನ್ನೆ ದಿವಸ ನನ್ನ ಇಲಾಖೆಗೆ ಸಂಬಂಧಪಟ್ಟ ಹಾಗೆ 74,88,60,000-00 ರೂಪಾಯಿಗಳ ಬೇಡಿಕೆಯನ್ನು ನಾನು ಈ ಸದನದ ಮುಂದೆ ಸದನದ ಒಪ್ಪಿಗೆಗಾಗಿ ನಾನು ಮಂಡಿಸಿದ್ದೇನೆ. ನನ್ನ ಇಲಾಖೆಯ ಬೇಡಿಕೆಯ ಮೇಲೆ ಸುಮಾರು ಹದಿಮೂರು ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಬಹಳ ರಚನಾತ್ಮಕವಾದಂತಹ ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಮತ್ತು ಅಲ್ಲಲ್ಲಿ ಎಚ್ಚರಿಕೆಯನ್ನು ಕೂಡ ಕೊಟ್ಟಿದ್ದಾರೆ. ಉಪಯುಕ್ತವಾದಂತಹ ಸಲಹೆಯನ್ನು ಕೂಡ ಮಾಡಿದ್ದಾರೆ. ನನ್ನ ಇಲಾಖೆಗೆ ಸಂಬಂಧಪಟ್ಟಹಾಗೆ ನಾನು ಸವಿಸ್ತಾರವಾಗಿ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಸಾಕಷ್ಟು ಕಾಲಾವಕಾಶವಿಲ್ಲವೆಂದು ತಿಳಿದುಕೊಂಡಿದ್ದೇನೆ. ಆದ್ದರಿಂದ ಸುಧೀರ್ಘವಾಗಿ ನನ್ನ ಇಲಾಖೆಗೆ ಸಂಬಂಧಪಟ್ಟ ಹಾಗೆ, ನನ್ನ ಇಲಾಖೆಯ ನೀತಿ, ನನ್ನ ಇಲಾಖೆಯ ಕಾರ್ಯಕ್ರಮಗಳು, ನನ್ನ ಇಲಾಖೆಯ ಸಾಧನೆಗಳು, ಮತ್ತು ನನ್ನ ಇಲಾಖೆಯಮೇಲೆ ಮತ್ತಿತರ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಕಾಲಾವಕಾಶ ಇಲ್ಲದೆ ಇರುವುದರಿಂದ ನನಗೆ ನನ್ನ ಇಲಾಖೆಯ ಬಗ್ಗೆ ಮೊದಲನೆಯ ಬಾರಿಗೆ ಚರ್ಚೆಗೆ ಉತ್ತರ ನೀಡುವಂತಹ ಅವಕಾಶ ಸಿಕ್ಕಿದೆ. ಕಳೆದಸಾರಿ ಬಜೆಟ್ ಮೇಲೆ ನಾನು ಉತ್ತರ ಕೊಡುವಂತಹ ಕಾಲದಲ್ಲಿ ನನಗೆ ಬೇರೆ ಖಾತೆ ಇತ್ತು. ಈಗ ನಾನು ಚರ್ಚೆ ಮಾಡುತ್ತಿರುವಂಥ ಕಾಲದಲ್ಲಿ ಒಳ್ಳೆಯ ಸೂಕ್ಷ್ಮವಾದಂತಹ ಇಲಾಖೆಯನ್ನು ನನ್ನ ಕೈಗೆ ಕೊಟ್ಟಿದ್ದಾರೆ. ಈ ಇಲಾಖೆಯಲ್ಲಿ ಒಳ್ಳೆಯ ಹೆಸರನ್ನು ಪಡೆಯುವುದು ಅಷ್ಟು ಸುಲಭವಲ್ಲ. ಬಹಳ ಸೂಕ್ಷ್ಮವಾದ ಇಲಾಖೆಯೆಂದು ನನಗೆ ಚೆನ್ನಾಗಿ ಗೊತ್ತಿದೆ. ಈ ಇಲಾಖೆಯಲ್ಲಿ ಸರ್ಕಾರಕ್ಕೂ ಕೆಟ್ಟ ಹೆಸರು ಬರಲಿಕ್ಕೆ ಅವಕಾಶವಿದೆ. ಒಳ್ಳೆಯ ಹೆಸರು ಬರಲಿಕ್ಕೆ ಅವಕಾಶವಿದೆ. ಬಹಳ ಎಚ್ಚರಿಕೆಯಿಂದ ಕರ್ತವ್ಯವನ್ನು ನಿರ್ವಹಿಸುವಂತಹ ಜವಾಬ್ದಾರಿಯನ್ನು ನಮ್ಮ ಮುಖ್ಯಮಂತ್ರಿಗಳು ನನ್ನ ಕೈಗೆ ವಹಿಸಿದ್ದಾರೆ. ಈ ಇಲಾಖೆಯ ಬಗ್ಗೆ ನಾನು ಎಲ್ಲವನ್ನು ಅರ್ಥಮಾಡಿ ಕೊಂಡಿದ್ದೇನೆಂದು ಹೇಳುವಂತಹ ಸರ್ವಜ್ಞನಲ್ಲ. ಈ ಇಲಾಖೆಯ ಕಾರ್ಯನೀತಿಗಳು ಇಲಾಖೆಯ ಜವಾಬ್ದಾರಿಯನ್ನು ಅರಿತುಕೊಂಡು ಎಷ್ಟು ಮಟ್ಟಿಗೆ ಈ ಇಲಾಖೆಯನ್ನು ಹತೋಟಿಯಲ್ಲಿಟ್ಟು ಕೊಂಡಿದ್ದೇನೆಂದು ಹೇಳಿದಾಗ,

ನನ್ನ ಕರ್ತವ್ಯವನ್ನು ನಾನು ಜವಾಬ್ದಾರಿಯಿಂದ ನಿರ್ವಹಿಸುತ್ತಿದ್ದೇನೆಂಬ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ಪ್ರತಿಪಕ್ಷದ ನಾಯಕರಾದಂತಹ ಶ್ರೀ ಡಿ.ಬಿ. ಚಂದ್ರೇಗೌಡರು ಈ ಸದನದಲ್ಲಿ ಪ್ರತಿಪಕ್ಷದ ನಾಯಕರಾಗಿರುವ ಜೊತೆಗೆ ನನ್ನ ಜೊತೆಯಲ್ಲಿ ವಿಧಾನಪರಿಷತ್ತಿನಲ್ಲಿ ನನ್ನ ಸಹೋದ್ಯೋಗಿಗಳಾಗಿದ್ದರು. ಈ ಸಭೆಯಲ್ಲಿ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದಾರೆ. ಅವರು ರಾಜ್ಯ ಮಂತ್ರಿಮಂಡಲ್ಲಿಯೂ ಕೆಲಸಮಾಡಿದ್ದಾರೆ. ಒಬ್ಬ ಅನುಭವಿ ರಾಜಕಾರಣಿ ಎಂದು ನಾನು ಅವರ ಬಗ್ಗೆ ಸಂತೋಷದಿಂದ ಒಳ್ಳೆಯ ಮಾತನ್ನಾಡಬೇಕಾಗುತ್ತದೆ. ಅವರು ನನ್ನ ಇಲಾಖೆಯ ಬಗ್ಗೆ ನೇರವಾಗಿ ಪ್ರಾಸ್ತಾಪ ಮಾಡಿದ್ದಾರೆ. ಅದಕ್ಕಾಗಿ ನನಗೆ ಸಂತೋಷವಾಗುತ್ತದೆ. ಅವರು ಪ್ರಸ್ತಾಪ ಮಾಡಿದ ವಿಷಯದ ಬಗ್ಗೆ ನನಗೆ ಯಾವುದೇ ತರಹ ವ್ಯಾಕುಲವಾಗಲಿ, ಆತಂಕವಾಗಲಿ ಆಗಿಲ್ಲ. ಅವರು ಮಾತನಾಡುವಾಗ ಅಕ್ಕಿಯ ಬಗ್ಗೆ ಮಾತನಾಡಿದರು. ಈ ಅಕ್ಕಿಯನ್ನು ನಿಮ್ಮ ಇಲಾಖೆಯಲ್ಲಿ ಕೊಟ್ಟಿದ್ದೀರಿ, ಇದು ಮನುಷ್ಯರು ತಿನ್ನುವಂತಹ ಯೋಗ್ಯವಲ್ಲದ ಅಕ್ಕಿ ಇಂತಹ ಯೋಗ್ಯವಲ್ಲದ ಅಕ್ಕಿಯನ್ನು ನಿಮ್ಮ ಇಲಾಖೆಯಲ್ಲಿ ಹೇಗೆ ಸರಬರಾಜು ಮಾಡುತ್ತೀರಿ ಎಂಬ ಬಗ್ಗೆ ಅವರು ಈ ಸದನದಲ್ಲಿ ಪ್ರದರ್ಶನ ಮಾಡಿದ್ದಾರೆ. ಇದರ ಬಗ್ಗೆ ನಾನು ಆಗಲೇ ಉನ್ನತ ಅಧಿಕಾರಿಗಳೊಂದಿಗೆ ಮಾತನಾಡಿದ್ದೇನೆ. ಮಾನ್ಯ ಪ್ರತಿಪಕ್ಷದ ನಾಯಕರಿಗೂ ಹಾಗೂ ಸದನದ ಇಡೀ ಎಲ್ಲಾ ಸದಸ್ಯರಿಗೂ ಗೊತ್ತಿರುವ ಹಾಗೆ ನಾನೂ ಕೂಡ 6-7 ವರ್ಷಗಳ ಕಾಲ ಪ್ರತಿಪಕ್ಷದ ನಾಯಕನಾಗಿ ಮೇಲ್ಮನೆಯಲ್ಲಿ ನಾನು ಕರ್ತವ್ಯವನ್ನು ನಿರ್ವಹಿಸಿದ್ದೇನೆ. ಪ್ರತಿಪಕ್ಷದಲ್ಲಿ ಕುಳಿತಿರುವಂತಹ ನನ್ನ ಸ್ನೇಹಿತರು ಮಾಡುವಂತಹ ಕೆಲಸವನ್ನು ನಾನು ಕೂಡ ಮಾಡಿದ್ದೇನೆ. ಆ ಹಿಂದೆ ಇದ್ದಂತಹ ಸರ್ಕಾರಗಳಲ್ಲಿ ಇದು ನಡೆದಿರಬಹುದು. ಇದನ್ನು ಏತಕ್ಕಾಗಿ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಅವರು ಯಾವ ಅಕ್ಕಿಯನ್ನು ಕೊಡುತ್ತಾರೆ, ಆ ಅಕ್ಕಿಯನ್ನು ನಾವು ವಿತರಣೆ ಮಾಡಬೇಕಾಗುತ್ತದೆ. ಇದು ನಾನು ಕೊಂಡುಕೊಡುವಂತಹ ಅಕ್ಕಿ ಅಲ್ಲ. ಅವರು ಕೊಡುವಂತಹ ಅಕ್ಕಿಯನ್ನು, ವಿತರಣೆ ಮಾಡುವಂತಹ ಜವಾಬ್ದಾರಿ ನನ್ನ ಪಾಲಿಗೆ ಸಿಕ್ಕಿದೆ. ಆ ಕೆಲಸದಲ್ಲಿ ಇಂತಹದ್ದನ್ನೆಲ್ಲ ನೋಡುವುದು ನನ್ನ ಭಾಗ್ಯವೆಂದು ನನಗೆ ಅನ್ನಿಸುತ್ತದೆ. ನಾನು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ, ಈ ಹಿಂದೆ ಇದ್ದಂತಹ ನನ್ನ ಸಹೋದ್ಯೋಗಿಗಳಾಗಲಿ, ಅಥವ ಈ ಹಿಂದೆ ಇದ್ದಂತಹ ಪಕ್ಷದ ಸರ್ಕಾರಗಳು ಇದ್ದಾಗಲು ಕೂಡ ಈ ಕಳಪೆ ಅಕ್ಕಿ ಏನು ಇದೆ. ಈ ಅವಧಿಯಲ್ಲಿ ಬಂದಿರತಕ್ಕ ಕಳಪೆ ಅಕ್ಕಿ ಪ್ರಮಾಣ ಸ್ವಲ್ಪ ಇರಬಹುದು. ಆದರೆ ದುರ್ದೈವ ಏನಾಗಿದೆ ಅಂದರೆ ಸಾರಸಗಟು ಎಲ್ಲಾ ಸಾಲಿನಿಂದಲೂ ಬರುವಂತಹ ಅಕ್ಕಿಯ ಬಗ್ಗೆ ನಾನು ಮಂತ್ರಿಯಾದಮೇಲೆ ಕೇಂದ್ರ ಸರ್ಕಾರದ ಸಂಬಂಧ ಪಟ್ಟಂತಹ ಮಂತ್ರಿಯವರ ಗಮನವನ್ನು ಸೆಳೆದಿದ್ದೇನೆ. ನಿನ್ನೆ ಮಾನ್ಯ ವಿರೋಧ ಪಕ್ಷದ ಉಪನಾಯಕರಾದಂತಹ ಸಿಂಧ್ಯಾರವರು ಮಾತನಾಡುವಾಗ ಶ್ರೀಮಾನ್ ಲಿನ್‌ನವರ ಹೆಸರನ್ನು ಪ್ರಸ್ತಾಪ ಮಾಡಿದರು. ಇವರು ನಮ್ಮ ರಾಜ್ಯದ ಒಬ್ಬ ದಕ್ಷ ಪ್ರಾಮಾಣಿಕ ಅಧಿಕಾರಿ ಎಂದು ನಾನು ತಿಳಿದಿದ್ದೇನೆ. ಅವರು ಕೂಡ ಇವತ್ತು ಭಾರತ ಆಹಾರ ನಿಗಮದ ಅಧ್ಯಕ್ಷರಾಗಿದ್ದಾರೆ. ಅವರು ನಮ್ಮ ರಾಜ್ಯಕ್ಕೆ ಒಂದಲ್ಲ ಎರಡು ಭಾರಿ ಬಂದಾಗ ನನ್ನ ಕೊಠಡಿಯಲ್ಲಿಯೇ ಅವರನ್ನು ಕರೆಸಿ ಚರ್ಚೆ ಮಾಡಿ ಅವರ ಗಮನಕ್ಕೂ ತಂದಿದ್ದೇನೆ. ಶ್ರೀಮಾನ್ ನರಸಿಂಹರಾವ್‌ರವರು ನಮ್ಮ ಭಾರತ ದೇಶದ ಪ್ರಧಾನ ಮಂತ್ರಿಯಾದಮೇಲೆ..

ಶ್ರೀ ಡಿ.ಬಿ. ಚಂದ್ರೇಗೌಡ : ಆ ಅಕ್ಕಿ ತುಂಬಾ ಅಪರಾದ ಎಂದು ನಾನು ಹೇಳಲಿಲ್ಲ ಒಂದು ಕನ್‌ಸೈನ್‌ಮೆಂಟ್ ಹಾದು ಎಂದು ಒಪ್ಪಿಕೊಳ್ಳುತ್ತೇವೆ ವಿನಃ ನಾನು ಬೇರೆ ಗೋಡೌನ್‌ನಿಂದ ತಂದು ಪ್ರದರ್ಶನ ಮಾಡಿದ್ದು ಅಲ್ಲ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ನಮ್ಮ ಭಾರತ ದೇಶದ ಪ್ರಧಾನಿ ಮಂತ್ರಿಗಳು ಸಾರ್ವಜನಿಕ ವಿತರಣೆಯ ವ್ಯವಸ್ಥೆಯ ಮೇಲೆ ನೇರ ಹತೋಟಿಯನ್ನು ಹೊತ್ತುಕೊಂಡು ಪಡಿತರ ವ್ಯವಸ್ಥೆಯು, ಸಮರ್ಪಕವಾಗಿ ಆಗಬೇಕೆಂದು ಹೊಣೆಗಾರಿಕೆಯನ್ನು ಹೊತ್ತುಕೊಂಡು ಆ ಇಲಾಖೆಯನ್ನು ಅವರೇ ವಹಿಸಿಕೊಂಡಿದ್ದಾರೆ.

12.15 ಪಿ.ಎಂ.

ಕಳೆದ ತಿಂಗಳು 23-24ನೇ ತಾರೀಖು ಮಾನ್ಯ ಪ್ರತಿ ಪಕ್ಷದ ನಾಯಕರು, ಇತರ ಸದಸ್ಯರನ್ನು ಹಾಗು ಆಹಾರ ಸಚಿವರುಗಳನ್ನು ಕರೆಸಿ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಎಲ್ಲಾ ವಿಚಾರಗಳನ್ನು ನಾನೂ ಕೂಡ ಪ್ರಸ್ತಾಪ ಮಾಡಿದ್ದೇನೆ. ಈ ಅಕ್ಕಿ ನಮಗೆ ಭಾರತ ಆಹಾರ ನಿಗಮದಿಂದ ಬಂದಿರುವಂತಾದ್ದೇ. ಮಾನ್ಯ ಪ್ರತಿ ಪಕ್ಷದ ನಾಯಕರು ಪ್ರಸ್ತಾಪಿಸಿರುವ ರೀತಿ, ಮೋಸವೇನಾದರೂ ನಡೆದಿದ್ದರೆ, ಇದರ ಸತ್ಯಾಸತ್ಯತೆಯನ್ನು ತಿಳಿಯಲು ನಮ್ಮ ಇಲಾಖೆಯಲ್ಲಿರುವಂಥ ಡಿಐಜಿ (ಸ್ಪೆಶಲ್ ಸೆಲ್), ಶ್ರೀ ಮುನಿಕೃಷ್ಣ ಅವರಿಗೆ ಅತಿ ಜಾಗ್ರತೆ ಸ್ಥಳಕ್ಕೆ ಹೋಗಿ ತನಿಖೆ ನಡೆಸಿ ಕೂಲಂಕುಷವಾದ ವರದಿಯನ್ನು ಕೊಡಲು ಆದೇಶಿಸಿದ್ದೇನೆ. ಇದನ್ನು ಈ ಸದನದಲ್ಲಿ ಪ್ರಕಟಮಾಡಬಯಸುತ್ತೇನೆ. ಮಾನ್ಯ ಪ್ರತಿ ಪಕ್ಷದ ನಾಯಕರು ಮತ್ತೊಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದು ಲೀಗಲ್ ಮೆಟ್ರಾಲಜಿ ಡಿಪಾರ್ಟ್‌ಮೆಂಟ್ ಅಂದರೆ ಕಾನೂನು ಮಾಪನ ಇಲಾಖೆಗೆ ಸಂಬಂಧಿಸಿದ್ದಾಗಿದೆ. ಹಿಂದೆ ಇದು ಕೋಆಪರೇಷನ್ ಇಲಾಖೆಯಲ್ಲಿ ಇತ್ತು. ಈಗ ಇದು ನಮ್ಮ ಇಲಾಖೆಗೆ ಬಂದಿದೆ. ಕೇಂದ್ರದಲ್ಲಿ ಈ ಇಲಾಖೆ ಫುಡ್ ಡಿಪಾರ್ಟ್‌ಮೆಂಟ್ ಕಂಟ್ರೋಲ್‌ನಲ್ಲಿ ಇರುವುದರಿಂದ, ಆ ಒಂದು ರಾಷ್ಟ್ರೀಯ ತತ್ವದ ಆಧಾರದ ಮೇಲೆ, ಫುಡ್ ಅಂಡ್ ಸಿವಿಲ್ ಸಪ್ಲೈಸ್ ಡಿಪಾರ್ಟ್‌ಮೆಂಟ್ಗೆ ಈ ಇಲಾಖೆಯನ್ನು ಮರ್ಜ್ ಮಾಡಬೇಕೆಂದು ಹೇಳಿದ ಮೇಲೆ, ಅದು ನಮ್ಮ ಇಲಾಖೆಗೆ ಬಂದಿದೆ. ಈ ಇಲಾಖೆ ಕಳೆದ ಒಂದೆರಡು ವರ್ಷಗಳಿಂದ ನಮ್ಮ ಆಹಾರ ಇಲಾಖೆಯಲ್ಲಿದೆ. ಬಹುಶಃ ತಾವು ಮಾತನಾಡುವ ಕಾಲದಲ್ಲಿ ಅಲ್ಲಿನ ನಿಗಮದ ಕಂಟ್ರೋಲರ್ ಏನಿದ್ದಾರೆ, ಅವರು ತಮ್ಮ ಇತಿಮಿತಿ ಮೀರಿ ಒಂದು ನೋಟಿಫಿಕೇಷನನ್ನು ತಂದಿದ್ದಾರೆ. ಕಾನೂನು ಚೌಕಟ್ಟಿನಲ್ಲಿ ಇದನ್ನು ಅವರು ಹೇಗೆ ಜಾರಿಗೆ ಕೊಟ್ಟಿದ್ದಾರೆ ಎಂಬುದನ್ನು ಪ್ರಸ್ತಾಪ ಮಾಡಿದ್ದೇವೆ. ಮಾನ್ಯ ಪ್ರತಿ ಪಕ್ಷದ ನಾಯಕರು ಈ ನೋಟಿಫಿಕೇಶನ್ ಏನು ಬಂದಿದೆ ಇದರ ಅಗತ್ಯ ಇತ್ತೇ ಎಂಬುದನ್ನು ಪ್ರಸ್ತಾಪ ಮಾಡಿದ್ದಾರೆ. 26-8-90ರಂದು ಕಂಟ್ರೋಲರ್‌ರವರು ತಮ್ಮ ಇತಿಮಿತಿಯಲ್ಲಿ, ಅವರ ಕಾನೂನು ಚೌಕಟ್ಟಿನಲ್ಲಿ ಒಂದು ಸ್ಪೆಶಲ್ ಫ್ಲೈಯಿಂಗ್ ಸ್ಕ್ವಾಡನ್ನು ಕೆಲವೊಂದು ಕಡೆಗಳಲ್ಲಿ ಮಾಡಿದ್ದಾರೆ. ನಾನಾದರೂ ಈ ಮಾತನ್ನು ನನ್ನ ಅಧಿಕೃತ ದಾಖಲೆಯಿಂದ ಹೇಳುತ್ತಿದ್ದೇನೆ. 26ನೇ ತಾರೀಖಿನ ನೋಟಿಫಿಕೇಶನ್ ನನ್ನ ಗಮನಕ್ಕೆ ಬಂದ ಮೇಲೆ, 27 ನೇ ತಾರೀಖೇ ನಾನು ಈ ನೋಟಿಫಿಕೇಶನ್ ನನ್ನ ಗಮನಕ್ಕೆ ಬಾರದೆ ಹೇಗೆ ಬಂದಿದೆ, ಎಂದು ಕೇಳಿದ್ದೇನೆ ಮತ್ತು ಇದರ ಬಗ್ಗೆ ವಿಚಾರಣೆ ಮೊದಲು ನನ್ನ ಸೆಕ್ರೆಟರಿಯವರಿಗೆ ಆಜ್ಞೆ ಮಾಡಿದ್ದೇನೆ. ಅದನ್ನು ಕೂಡಲೇ ಸ್ಟೇ ಮಾಡುವಂಥದ್ದು ಒಳ್ಳೆಯದು,. ಎಂದು ಸಹ ತಿಳಿಸಿದ್ದೇನೆ. Let him (Secretary) have a scrutiny over them whether the Controller is competent and whether such a squad is important.

ನಾನು 27ನೇ ತಾರೀಖು ಇದರ ಬಗ್ಗೆ ಆದೇಶವನ್ನು ಕೊಟ್ಟಿದ್ದೇನೆ. ಬಹುಶಃ ಇದು ಕಾರ್ಯರೂಪಕ್ಕೆ ಬಂದಿದೆಯೋ ಇಲ್ಲವೋ ನೋಡಿ ಹೇಳುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಏನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ಸ್ಟೇ ಮಾಡಿ

ಎಂದು, ಅದರ ಬಗ್ಗೆ ಅದು ನಿಜವಾಗಿ ಅಗತ್ಯ ಇತ್ತೇ ಎಂಬುದನ್ನು ನೋಡಿ ಅಂತಿಮವಾದ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ. ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆ ಕಂಟ್ರೋಲರ್‌ರವರ ಆಂಟೀಸಿಡೆಂಟ್ಸ್ ನನಗೆ ಬೇಕಾಗಿಲ್ಲ. ಯಾವುದೇ ಅಧಿಕಾರಿಗಳು ಇವತ್ತು ಒಳ್ಳೆಯವರು ಇರಬಹುದು, ನಾಳೆ ಕೆಟ್ಟವರಾಗಬಹುದು ಅಥವಾ ಇವತ್ತು ಕೆಟ್ಟವರಾಗಿರುವವರು ನಾಳೆ ಒಳ್ಳೆಯವರಾಗಬಹುದು.ನನಗೆ ಡಿಪಿಎಆರ್ ಪೋಸ್ಟ್ ಮಾಡುವಂಥ ಅಧಿಕಾರಿಗಳನ್ನು ನಾನು ಸ್ವಾಗತ ಮಾಡಬೇಕಾಗುತ್ತದೆ. ಆ ಅಧಿಕಾರಿಯವರು ನನ್ನ ಹತ್ತಿರ ಬಂದಾಗ ಈ ಇಲಾಖೆಗೆ ಒಳ್ಳೆಯ ಹೆಸರು ಇಲ್ಲ. ಇದಕ್ಕೆ ಶಸ್ತ್ರ ಚಿಕಿತ್ಸೆ ಮಾಡಬೇಕಾಗುತ್ತದೆ ಹೊಸ ಚೈತನ್ಯವನ್ನು ತುಂಬಬೇಕಾಗುತ್ತದೆಂದು ಸಲಹೆ ಕೊಟ್ಟಾಗ, ಅದಕ್ಕೆ ಅವರು ಆ ಹಿನ್ನೆಲೆಯಲ್ಲೇ ಇದನ್ನು ಮಾಡಿದ್ದೇನೆಂದು ಹೇಳಿದ್ದರು. ನಾನು ನನ್ನ ಇತಿಮಿತಿಯಲ್ಲಿ ಕೆಲಸವನ್ನು ಮಾಡುತ್ತೇನೆ. ಏನಾದರೂ ಅಪ್ಪಿತಪ್ಪಿ ತಪ್ಪು ಹೆಜ್ಜೆ ಇಡುವಾಗ, ಎಚ್ಚರಿಕೆ ಕೊಡುವಂಥ ಸ್ವಾತಂತ್ರ್ಯ ನಿಮಗೆ ಇದೆ. ನೀವು ಕೊಟ್ಟಂಥ ಸಲಹೆಗಳನ್ನು ಎಚ್ಚರಿಕೆಯಿಂದ ಗಮನಿಸುತ್ತೇನೆಂದು ಹೇಳುತ್ತೇನೆ. ತಾವು ಏನು ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ ಅದಕ್ಕೆ ಸ್ಪಷ್ಟವಾದ, ನೇರವಾದ ಉತ್ತರವನ್ನು ಕೊಟ್ಟಿದ್ದೇನೆ. ನೀವು ನನ್ನ ಇಲಾಖೆಯ ಬಗ್ಗೆ ಮಾತನಾಡಿ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಕ್ಕಾಗಿ ವೈಯಕ್ತಿಕವಾಗಿ ನನ್ನ ಇಲಾಖೆಯ ಪರವಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

(ಅಧ್ಯಕ್ಷರು ಪೀಠದಲ್ಲಿ ಉಪಸ್ಥಿತರಿದ್ದರು)

ಮಾನ್ಯ ಸಭಾಧ್ಯಕ್ಷರೇ, ನಾನು ಎಲ್ಲಾ ಸದಸ್ಯರುಗಳ ಸಲಹೆಯನ್ನು ಕ್ರೋಡಿಕರಿಸಿದ ಮೇಲೆ ಏನು ಅರ್ಥವಾಗಿದೆ ಎಂದರೆ, ನಮಗೆ ಪಾಮೋಲಿನ್ ಆಯಿಲ್ ಬರುತ್ತಿಲ್ಲ, ಅದು ಬಡವರ ಎಣ್ಣೆ, ಅದರ ಬಗ್ಗೆ ಬಹಳಷ್ಟು ಪ್ರಚಾರ ಮಾಡಿದಿರಿ, ಏತಕ್ಕೆ ಬರುತ್ತಿಲ್ಲ? ಎಂದು ಕೇಳಿದ್ದಾರೆ. ನಾನು ರಾಷ್ಟ್ರೀಯ ಆಹಾರ ಸಚಿವರ ಸಭೆಯಲ್ಲಿ ಭಾಗವಹಿಸಿ, . ಪ್ರಧಾನಮಂತ್ರಿಗಳನ್ನು ಖುದ್ದಾಗಿ ಕಂಡು, ಅವರ ಗಮನಸೆಳೆದು, ಈ ಎಣ್ಣೆ ಮಲೇಶಿಯಾದಿಂದ ಏನು ಬರುತ್ತಿತ್ತು, ಇದನ್ನು ಮತ್ತೆ ನೀವು ತರಿಸಿ, ಅದು ನಮಗೆ ಕಳೆದ ಏಪ್ರಿಲ್ ತಿಂಗಳಿನಿಂದ ಬರುತ್ತಿಲ್ಲ. ಈ ಎಣ್ಣೆ ಬಡವರ ಪಾಲಿಗೆ ಬಹಳ ಪ್ರಿಯವಾಗಿರತಕ್ಕಂಥಾದ್ದು, ಅಗ್ಗವಾಗಿರತಕ್ಕಂಥಾದ್ದು, ರುಚಿಯಾಗಿರತಕ್ಕಂಥಾದ್ದು, ಈ ಎಣ್ಣೆಯನ್ನು ನಮ್ಮ ರಾಜ್ಯದ ಜನತೆ ಮೆಚ್ಚಿದ್ದಾರೆ, ಮಾನ್ಯ ಪ್ರಧಾನಮಂತ್ರಿಗಳು ಇದಕ್ಕೆ ಅವಕಾಶ ನೀಡಿ ಈ ಎಣ್ಣೆಯನ್ನು ಮತ್ತೆ ಭಾರತ ದೇಶಕ್ಕೆ ತರಿಸಿ ನಮ್ಮ ರಾಜ್ಯಕ್ಕೆ ಕೊಡಬೇಕೆಂದು ಕೇಳಿದ್ದೇವೆ. ಇದು ಕೇಂದ್ರ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆಯೆಂದು ತಿಳಿದು ಬಂದಿದೆ. ನಮ್ಮ ಬೇಡಿಕೆ ಸುಮಾರು 11,000 ಮೆಟ್ರಿಕ್ ಟನ್ ಎಣ್ಣೆ ನಮಗೆ ಬೇಕೆಂದು ಕೇಳಿದ್ದೇವೆ. ಬಹುಶಃ ಎಣ್ಣೆ ಬಂದರೆ ಮತ್ತೆ ನಮ್ಮ ರಾಜ್ಯದಲ್ಲಿ ಬಡವರ ಪಾಲಿಗೆ ಹೋಗುವುದಾದರೆ ನನಗೆ ಅತ್ಯಂತ ಆನಂದವಾತಗುತ್ತದೆ. ಇದನ್ನು ಆದಷ್ಟುಬೇಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಸದಸ್ಯರುಗಳು ಮಾತನಾಡುವ ಕಾಲದಲ್ಲಿ, ನಿನ್ನೆ ದಿವಸ ನಮ್ಮ ಶ್ರೀ ಕಮರುದ್ದೀನ್, ಕೇಂದ್ರ ಸರ್ಕಾರದ ನಾಗರೀಕ ಪೂರೈಕೆ ಸಚಿವರು ಅವರು ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಅತಿ ಜಾಗ್ರತೆಯಾಗಿ ಪಾಮೋಲಿನ್ ಎಣ್ಣೆಯನ್ನು ನಮ್ಮ ರಾಷ್ಟ್ರಕ್ಕೆ ತರಿಸಿ, ರಾಜ್ಯಗಳಿಗೆ ಹಂಚುತ್ತೇವೆಂದು ಹೇಳಿದ್ದಾರೆ. ಆ ದಿಸೆಯಲ್ಲಿ ನಾವೆಲ್ಲರೂ ಭರವಸೆ ಹೊಂದಿದ್ದೇವೆ. ಮಾನ್ಯ ಸದಸ್ಯರಾದ ಶ್ರೀಮಾನ್ ಶಿವನಂಜಪ್ಪನವರು ಮಾತನಾಡುವ ಕಾಲದಲ್ಲಿ, ಈಗ ಹಸಿರು ಕಾರ್ಡುಗಳು ಏನಿದೆ, ಈ ಹಸಿರು ಕಾರ್ಡುಗಳು 1985ನೇ ಇಸವಿಯಲ್ಲಿ ಜಾರಿಗೆ ಬಂತು. ರಾಜ್ಯ ಸರ್ಕಾರ ಸುಮಾರು 55 ಕೋಟಿ ರೂಪಾಯಿಗಳ ರಿಯಾಯಿತಿ ಧರದಲ್ಲಿ ಖರ್ಚುಮಾಡುತ್ತಿದೆ. ಇದು ಬಡವರಿಗಾಗಿ ಹಾಕಿಕೊಟ್ಟಿರತಕ್ಕಂಥಾದ್ದು. ಇದು

ಪರಿಶಿಷ್ಟ ಜಾತಿ, ಪಂಗಡದವರಿಗೆ ಇರಬಹುದು, ಪ್ಲಾಂಟೇಶನ್ ಲೇಬರರ್ಸ್ ಇರಬಹುದು,ಬೀಡಿ ವರ್ಕರ್ಸ್ ಇರಬಹುದು, ಬಡವರಿಗಾಗಿ ಕೊಡುವಂಥ ಈ ಒಂದು ವಿಶೇಷ ಯೋಜನೆ ಏನಿದೆ?...

ಶ್ರೀ ಡಿ.ಬಿ. ಚಂದ್ರೇಗೌಡ : ನಿಮ್ಮ ವರದಿಯಲ್ಲಿ ನಲವತ್ತೆಂಟುವರೆ ಕೋಟಿ ಎಂದು ಇದೆ. ಇಲ್ಲಿ 55 ಕೋಟಿ ಎಂದು ಇದೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಈಗ ಜಾಸ್ತಿ ಮಾಡಿಕೊಂಡಿದ್ದೇವೆ. ಅದು ಕಳೆದ ವರ್ಷದ ವರದಿ. 1991-92ರಲ್ಲಿ ಸ್ವಲ್ಪ ಜಾಸ್ತಿಯಾಗಿದೆ. ಮಾನ್ಯ ಸಭಾಧ್ಯಕ್ಷರೇ, ಇವೊತ್ತು ಹಸಿರು ಕಾರ್ಡುಗಳು ಯಾರಿಗೆ ಸಿಗಬೇಕೋ, ವಾರ್ಷಿಕ ವರಮಾನ 3500 ಏನಿದೆ, ಅದಕ್ಕಿಂತ ಕೆಳಗೆ ಇರತಕ್ಕಂಥ ಎಲ್ಲರಿಗೂ ಕೊಡಬೇಕೆಂದು, ಸುಮಾರು 36 ಲಕ್ಷ ಮಂದಿ ಇವೊತ್ತು ಕಡು ಬಡವರಾಗಿರತಕ್ಕಂಥವರಿಗೆ ಈ ಹಸಿರುಕಾರ್ಡನ್ನು ಕೊಟ್ಟಿದ್ದೇವೆ. ಕೊಟ್ಟಿದ್ದರೂ ಕೂಡಾ ವಾದ-ವಿವಾದಗಳು ಏನಿವೆ, ಅರ್ಹತೆ ಇಲ್ಲದ ಬಹಳ ಜನರಿಗೆ ಸಿಕ್ಕಿದೆ, ಅರ್ಹತೆ ಇದ್ದವರಿಗೆ ಸಿಕ್ಕಿಲ್ಲ ಎನ್ನತಕ್ಕಂಥ ವಾದವನ್ನು ಶ್ರೀಮತಿ ಮೋಟಮ್ಮ, ಶ್ರೀ ಕರಿಯಣ್ಣ, ಶ್ರೀ ಶಿವನಂಜಪ್ಪ ಮತ್ತು ಎಲ್ಲಾ ಸದಸ್ಯರು ಹೇಳಿದ್ದಾರೆ. ಅದರಲ್ಲಿ ಸತ್ಯಾಂಶ ಇದೆ. ಬಹುಶಃ ಇದಕ್ಕೆ ಇದು 'ಮೇಜರ್ ಅಪರೇಶನ್'ಮಾಡಬೇಕಾದ ಸಂದರ್ಭ ಬಂದಿದೆ. ಇದು ಕೇವಲ ಗುಳಿಗೆಯಿಂದ ಆಗತಕ್ಕಂಥ ತೀರ್ಮಾನ, ವಿಚಾರ ಅಲ್ಲ. ಕಾರ್ಡುಗಳನ್ನು ಕೊಟ್ಟುಬಿಟ್ಟಿದ್ದೇವೆ. ಕಾರ್ಡು ಇರುವವರಿಗೆಲ್ಲಾ ಕಾರ್ಡನ್ನು ಕೊಟ್ಟು, ಹೆಚ್ಚಾಗ್ ಕಾರ್ಡ್ ಕೊಟ್ಟರೆ ಸಬ್ಸಿಡಿ ಜಾಸ್ತಿಯಾಗುತ್ತದೆ, ರಾಜ್ಯ ಸರ್ಕಾರಕ್ಕೆ ಹೆಚ್ಚು ಹಣ ಹೊರೆಯಾಗುತ್ತದೆ. ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಯಾರಿಗೆ ಕಾರ್ಡುಗಳನ್ನು ಕೊಟ್ಟಿದ್ದಾರೆ? ಅರ್ಹತೆ ಇಲ್ಲದವರಿಗೆ, 3500 ಜಾಸ್ತಿ ಇರತಕ್ಕಂಥವರಿಗೆ ಕಾರ್ಡ್ ಕೊಟ್ಟಿರುವ, ಅವರಿಂದ ನಾವು ಸರಂಡರ್ ಮಾಡಬೇಕಾಗುತ್ತದೆ. ಈ ಒಂದು ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ, 11 ಲಕ್ಷ ಹೆಚ್ಚುವರಿ ಗ್ರೀನ್ ಕಾರ್ಡುಗಳು ಅರ್ಹತೆ ಇಲ್ಲದವರಿಗೆ ಸಿಕ್ಕಿದೆಯೆಂದು ಹೇಳಿದ ನಂತರ, ಜಿಲ್ಲಾಧಿಕಾರಿಗಳಿಗೆ ನಾವು ಆದೇಶ ಕೊಟ್ಟು ಸುಮಾರು ಆರು ಲಕ್ಷ ಕಾರ್ಡುಗಳನ್ನು ತೆಗೆಸಿ ಈಗ ಐದು ಲಕ್ಷ ಕಾರ್ಡುಗಳು ಇನ್ನು ಸರಂಡರ್ ಮಾಡುವುದಕ್ಕೆ ಆಗಿಲ್ಲ ಎನ್ನತಕ್ಕಂಥ ವಾದ ಇದೆ. ಆದರೆ, ಒಂದು ಮಾತನ್ನು ತಮಗೆ ಭರವಸೆ ಕೊಡುತ್ತೇನೆ, ಇವೊತ್ತು ಹಸಿರು ಕಾರ್ಡು ಏನಿದೆ ಗ್ರೀನ್ ಕಾರ್ಡ್ ವ್ಯವಸ್ಥೆ ನಮ್ಮ ಪ್ರತಿ ಪಕ್ಷದ ನಾಯಕರು ಪಕ್ಷದಲ್ಲಿದ್ದಂಥ ಕಾಲದಲ್ಲಿ ಬಂದಂಥ ಕಾರ್ಯಕ್ರಮ, ಅದನ್ನು ನಾವು ನಿಲ್ಲಿಸಿಲ್ಲ, ಅದನ್ನು ಮತ್ತೆ ವಿಸ್ತರಣೆ ಮಾಡಬೇಕೆಂದು ನಮ್ಮ ಉದ್ದೇಶ ಇದೆ. ಇದು ಬಡವರ ಕಾರ್ಯಕ್ರಮ, ಬಡವರಿಗಾಗಿ ಇರತಕ್ಕ ಕಾರ್ಯಕ್ರಮ.

ಶ್ರೀಮತಿ ಮೋಟಮ್ಮ : ಕೂಲಿ ಮಾಡುವವನಿಗೂ 3000 ಮೇಲೆ ವರಮಾನ ಬರುತ್ತದೆ. ಅಟ್‌ಲೀಸ್ಟ್ 8000 ಮೇಲೆ ಮಾಡಬೇಕು. ಏಕೆಂದರೆ, ನಮ್ಮಲ್ಲಿ ಪರ್‌ಡೇಗೆ ಲೇಬರ್ ಚಾರ್ಜ್ 20 ರೂ. ಇದೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಮಾನ್ಯ ಸಭಾಧ್ಯಕ್ಷರೇ, ಶ್ರೀಮತಿ ಮೋಟಮ್ಮನವರು, ಮಾನ್ಯ ಉಪನಾಯಕರು, ಅನೇಕ ಸದಸ್ಯರುಗಳು ಅಭಿಪ್ರಾಯ ಕೊಟ್ಟಿದ್ದಾರೆ. ಈಗ ಆದಾಯ ಮಿತಿ 3500 ಏನಿದೆ, ಇದು ಓಬಿರಾಯನ ಕಾಲದ್ದು.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ನೀವು ಆರು ಲಕ್ಷ ಕಾರ್ಡುಗಳನ್ನು ಸರ್ವೆ ಮಾಡಿದ ನಂತರ ಕ್ಯಾನ್ಸಲ್ ಮಾಡಿದ್ದೇವೆಂದು ಹೇಳಿದ್ದೀರಲ್ಲಾ, ನಿಮ್ಮ ಇಲಾಖೆಯಿಂದ ಆಜ್ಞೆಯನ್ನು ಕಳುಹಿಸಿದ್ದೀರಾ? 3600 ಆದಾಯಕ್ಕಿಂತ ಹೆಚ್ಚಿಗೆ

ಇರತಕ್ಕಂಥವರನ್ನು ಕ್ಯಾನ್ಸಲ್ ಮಾಡಿ, 3600 ಹೆಚ್ಚಿಗೆ ಇದೆಯೆಂದು ಕ್ಯಾನ್ಸಲ್ ಮಾಡಿದ್ದಾರೆ. 20ರೂ 80ರೂ ಮಿಸ್‌ಯೂಸ್ ಆಗಿಲ್ಲವೆಂದು ನಾನು ಹೇಳುವುದಿಲ್ಲ, ಮಿಸ್‌ಯೂಸ್ ಖಂಡಿತ ಆಗಿದೆ, 3600 ಆದಾಯವನ್ನು 10000ಮಾಡಿ. ಆಮೇಲೆ ಕವರೇಜ್ ಕರೆಕ್ಟ್ ಆಗುತ್ತದೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಮಾನ್ಯ ಸಭಾಧ್ಯಕ್ಷರೆ ಇದು ಉತ್ತಮವಾದ ಸಲಹೆ ಇದೆ.. ಈವತ್ತು 3500 ರೂಪಾಯಿಗಳ ಆದಾಯದ ಮಿತಿಯನ್ನು ಮಾರ್ಪಾಡು ಮಾಡಿ, ಇವೊತ್ತು ಐಆರ್‌ಡಿಪಿಯ ಫಲಾನುಭವಿಗಳು ಯಾರು ಇದ್ದಾರೆ, ಅವರಿಗೆ ಕೇಂದ್ರ ಸರ್ಕಾರದ ಮಾರ್ಗದರ್ಶನದ ಪ್ರಕಾರ 6400 ರೂಪಾಯಿಗಳ ಕನಿಷ್ಠ ಪ್ರಮಾಣದ ಆದಾಯ ಮಿತಿ ಇದೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ, ಕ್ಯಾಬಿನೇಟ್‌ಗೆ ಈ ಸೂಚನೆಯನ್ನು ಕೊಂಡೊಯ್ಯಲು ನಾನು ತಯಾರಾಗಿದ್ದೇನೆ. ಆದಾಯ ಮಿತಿ ಏನು ಇದೆ ಇದನ್ನು 3500 ರೂಪಾಯಿಯಿಂದ 6400 ರೂಪಾಯಿಗೆ ಮಾರ್ಪಾಡು ಮಾಡಲಾಗುವುದೆಂದು ಸದನಕ್ಕೆ ಭರವಸೆ ಕೊಡುತ್ತೇನೆ. ಈ ಆದಾಯದ ಮಿತಿಯು 6400 ರೂಪಾಯಿಗೆ ಜಾಸ್ತಿಯಾದ ಮೇಲೆ ನಾವು ಮತ್ತೆ ಇದನ್ನು ರೀಸರ್‌ವೇ ಮಾಡಬೇಕಾಗುತ್ತದೆ, ರೀಸರ್‌ವೇ ಮಾಡಿ ಇದಕ್ಕೆ ಏನಾದರೂ ಒಂದು ಅಂತಿಮ ತೆರೆಯನ್ನು ಎಳೆಯಬೇಕಾಗುತ್ತದೆ. ಅದಕ್ಕಾಗಿ ಮುಂದಿನ ಒಂದು ವಾರ್ಷಿಕ ವರ್ಷ ಏನು ಬರುತ್ತದೆ ಅಂದರೆ 1992-93ರ ಏಪ್ರಿಲ್ ಒಳಗೆ ಇದನ್ನು ಜಾರಿಗೆ ತಂದು ಬಜೆಟಿನಲ್ಲಿ ಪ್ರಾವಿಷನ್ ಮಾಡಬೇಕಾಗುತ್ತದೆ. ಯಾಕೆಂದರೆ ಸಬ್‌ಸಿಡಿಯನ್ನು ಹೆಚ್ಚು ಮಾಡಬೇಕಾಗಿರುವುದರಿಂದ ಮುಂದಿನ ವಾರ್ಷಿಕ ವರ್ಷವು (1992-93) ಬರುವುದರೊಳಗೆ ಇದಕ್ಕೆ ಏನಾದರೊಂದು ಅಂತಿಮವಾದ ಸ್ವರೂಪವನ್ನು ಕೊಡಲು ಪ್ರಯತ್ನ ಮಾಡುತ್ತೇನೆ. ಮಾನ್ಯ ಸಿಂಧ್ಯರವರು ನನ್ನನ್ನು ಆಗಾಗ್ಗೆ ಗ್ರೀನ್ ಕಾರ್ಡುಗಳನ್ನು ಕೊಟ್ಟಿಲ್ಲಾ ಎಂದು ತಿವಿದು ತಿವಿದು ಮಾತನಾಡಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಹಾಗೇ ತಾನೆ ಮಾಡಬೇಕು.

ಶ್ರೀ ಟಿ.ಎನ್. ನರಸಿಂಹಮೂರ್ತಿ : ನಾವು ಅಲ್ಲಿ ಕುಳಿತು ಮಾಡಿದ್ದನ್ನು ನೀವು ಈಗ ಮಾಡುತ್ತಿದ್ದೀರಿ, ಮಾಡಿ ಸಂತೋಷ. ಆದರೆ ಹೆಚ್ಚು ಗಾಯವಾಗುವ ರೀತಿ ತಿವಿಯಬೇಡಿ. ಈ ಗ್ರೀನ್ ಕಾರ್ಡುಗಳು ಕೆಲವರಿಗೆ ಸಿಕ್ಕಿಲ್ಲವೆಂದು ಜಿಲ್ಲಾಧಿಕಾರಿಗಳು ತಾತ್ಕಲಿಕವಾಗಿ ಏನಾದರು ಸರ್‌ವೇ ಮಾಡಿದ್ರೆ, ಎಲ್ಲೆಲ್ಲಿ ಗ್ರೀನ್ ಕಾರ್ಡುಗಳು ಬೇಕಾಗಿದೆ ಎಂಬುದನ್ನು ಅಂದಾಜು ಮಾಡಿದ್ದರೆ, ಕಾರ್ಡುಗಳನ್ನು ವಿತರಣೆ ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಇಂತಹ ಗ್ರೀನ್ ಕಾರ್ಡುಗಳನ್ನು ಹೊಸದಾಗಿ ಮಾಡಿಸಬೇಕಾದರೆ ಒಂದು ಕೋಟಿ 80 ಲಕ್ಷ ಬೇಕಾಗುತ್ತದೆ. ಈ ಬಗ್ಗೆ ನಾವು ಒಂದು ಪ್ರಪೋಸಲ್‌ನ್ನು ಫೈನಾನ್ಸ್ ಇಲಾಖೆಗೆ ಕಳಿಸಿಕೊಟ್ಟಿದ್ದೇವೆ. ಹಣಕಾಸಿನ ಇಲ್ಲಾಖೆಯವರು 1 ಕೋಟಿ 80 ಲಕ್ಷ ರೂಪಾಯಿ ಅಂದಾಜು ವೆಚ್ಚಕ್ಕೆ ಕ್ಲಿಯರೇನ್ಸ್ ಸಹ ಕೊಟ್ಟಿದ್ದಾರೆ. ಆದುದರಿಂದ ಗ್ರೀನ್ ಕಾರ್ಡುಗಳ ಬದಲಾವಣೆಯಾಗಬೇಕೆ, ಬಣ್ಣ ಬದಲಾವಣೆಯಾಗಬೇಕೆ, ಬೇಡವೇ, ರೀಸರ್‌ವೇ ಮಾಡಿ ಒಳ್ಳೆಯ ಅಚ್ಚುಕಟ್ಟಾದ ಕಾಲದಲ್ಲೂ ಇಟ್ಟುಕೊಳ್ಳತಕ್ಕ, ಭದ್ರವಾಗಿರತಕ್ಕ, ಮತ್ತು ಚೆನ್ನಾಗಿರತಕ್ಕ, ಉಪಯೋಗವಾಗತಕ್ಕ ಕಾರ್ಡುಗಳ ವ್ಯವಸ್ಥೆಯನ್ನು ಖಂಡಿತವಾಗಿ ನಿಮ್ಮೆಲ್ಲರ ಬೆಂಬಲದಿಂದ ನಿಮ್ಮೆಲ್ಲರ ವಿಶ್ವಾಸದಿಂದ ಮಾಡುತ್ತೇನೆಂಬ ಭರವಸೆಯನ್ನು ಕೊಡುತ್ತೇನೆ. ಮಾನ್ಯ ಸದಸ್ಯರಾದ ಶಿವನಂಜಪ್ಪನವರು ಆಹಾರ ಸಚಿವರು ಪ್ರವಾಸ ಮಾಡಬೇಕೆಂದು ಹೇಳಿದ್ದಾರೆ. ಅದು ಒಳ್ಳೆಯ ಸಲಹೆ. ಅದನ್ನು ಮಾಡುತ್ತೇನೆ. ಇದುವರೆಗೂ ಪ್ರವಾಸ ಮಾಡಿಲ್ಲ, ಇನ್ನು ಮೇಲೆ ಹೆಚ್ಚಿನ ಪ್ರಮಾಣದಲ್ಲಿ ಮಾಡುತ್ತೇನೆ. ಇದುವರೆಗೂ ಜಿಲ್ಲಾಧಿಕಾರಿಗಳಿಗೆ

ಅಧಿಕಾರವನ್ನು ಕೊಟ್ಟಿದ್ದೆ. ಅವರು ಹೀಗೆ ಕಾರ್ಯವನ್ನು ಮಾಡುತ್ತಾರೆ ಎನ್ನುವ ಬಗ್ಗೆ ನಿಗಾವಹಿಸಿದ್ದೆ. ಮಾನ್ಯ ಕರಿಯಣ್ಣನವರು ಮಾತನಾಡತಕ್ಕ ಕಾಲದಲ್ಲಿ ಎಸ್.ಸಿ.ಎಸ್.ಟಿ. ವಿದ್ಯಾರ್ಥಿನಿಲಯಗಳಿಗೆ ರಿಯಾಯಿತಿ ದರದಲ್ಲಿ ಆಹಾರವನ್ನು ಕೊಡಬೇಕೆಂಬ ಸೂಚನೆಯನ್ನು ಕೊಟ್ಟಿದ್ದಾರೆ. ನನಗೆ ಜ್ಞಾಪಕವಿರುವಂತೆ ಜನವರಿ ಅಥವಾ ಫೆಬ್ರವರಿ 1991ರಲ್ಲಿ ಡಿವಿಷನಲ್ ಕಮೀಷನರ್, ಡೆಪ್ಯೂಟಿ ಕಮೀಷನರ್, ಜಿಲ್ಲಾಧಿಕಾರಿಗಳು ಜಿಲ್ಲಾಪರಿಷತ್ ಚೀಫ್ ಸೆಕ್ರೆಟರಿಗಳ ಸಭೆಯನ್ನು ಕರೆದ ಕಾಲದಲ್ಲಿ ಮಾನ್ಯ ಸಹಕಾರಿ ಸಚಿವರಾಗಿದ್ದ ಕೆ.ಹೆಚ್. ಪಾಟೀಲರು ಆ ಸಭೆಯಲ್ಲಿ ಒಂದು ಸೂಚನೆಯನ್ನು ತಂದು ಎಸ್.ಸಿ. ಮತ್ತು ಎಸ್.ಟಿ.ಗಳಿಗೆ ಗ್ರೀನ್ ಕಾರ್ಡ್ ಸೌಲಭ್ಯವನ್ನು ಯಾಕೆ ಕೊಡಬಾರದು ಎನ್ನುವ ಸೂಚನೆಯನ್ನು ತಂದರು. ಅವರ ಸೂಚನೆಯನ್ನು ನಾನು ಒಪ್ಪಿಕೊಂಡಿದ್ದೆ. ಕ್ಯಾಬಿನೇಟ್ ಮುಂದೆ ಈ ವಿಚಾರ ತಂದಾಗ, ನಮ್ಮ ಮುಖ್ಯಮಂತ್ರಿಗಳು ಯಾವುದೇ ಚರ್ಚೆಯಿಲ್ಲದೆ ಅಂತಹ ವಿದ್ಯಾರ್ಥಿಗಳಿಗೆ ಗ್ರೀನ್ ಕಾರ್ಡುಗಳನ್ನು ಕೊಡಲು ನಮ್ಮ ಅಭ್ಯಂತರವಿಲ್ಲವೆಂದು ಹೇಳಿದರು,ಮಂತ್ರಿಮಂಡಲದಲ್ಲಿ ಸರ್ವರು ಇದನ್ನು ಒಪ್ಪಿದರು. ಈಗ ಎಸ್.ಸಿ. ಎಸ್.ಟಿ. ವಿದ್ಯಾರ್ಥಿ ಹಾಸ್ಟೆಲ್‌ಗಳಲ್ಲಿ ಇದು ಈಗಾಗಲೇ ಜಾರಿಯಲ್ಲಿದೆ. ಈ ಮಧ್ಯೆ ಕರಿಯಣ್ಣನವರು ಏನು ಸಲಹೆ ಕೊಟ್ಟಿದ್ದಾರೆಂದರೆ ಈ ಸೌಲಭ್ಯವನ್ನು ಯಾಕೆ ಮೈನಾರಿಟಿ ವಿದ್ಯಾರ್ಥಿಗಳ ಹಾಸ್ಟೆಲ್‌ಗಳಿಗೆ ವಿಸ್ತರಿಸಬಾರದೆಂದು ಹೇಳಿದ್ದಾರೆ. ಇದು ಒಳ್ಳೆಯ ಸಲಹೆ. ಇದನ್ನು ಸರ್ಕಾರ ಪರಿಶೀಲನೆ ಮಾಡಿ ಅದನ್ನು ಕ್ಯಾಬಿನೇಟ್ ಮುಂದೆ ತೆಗೆದುಕೊಂಡು ಹೋಗಿ, ಆದಷ್ಟು ಬೇಗ ಅದನ್ನು ಜಾರಿಗೆ ತರಲು ನಾನು ಪ್ರಯತ್ನಿಸುತ್ತೇನೆ. ಮಾನ್ಯ ಸಭಾಧ್ಯಕ್ಷರೆ ಬಹುಶಃ ಎಲ್ಲಾ ಸದಸ್ಯರು ಪ್ರಸ್ತಾಪ ಮಾಡಿದಂತಹ ವಿಚಾರವೇನೆಂದರೆ: ನ್ಯಾಯಬೆಲೆ ಅಂಗಡಿಗಳು ಸರಿಯಾಗಿ ನಡೆಯುತ್ತಿಲ್ಲವೆಂದು ನಿಜ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ ಎಲ್ಲಾ ನ್ಯಾಯಬೆಲೆಯ ಅಂಗಡಿಗಳು ಚೆನ್ನಾಗಿ ನಡೆಯುತ್ತಿಲ್ಲವೆಂದು ನಾನು ಹೇಳುತ್ತಿಲ್ಲ, ಎಷ್ಟೋ ನ್ಯಾಯ ಬೆಲೆ ಅಂಗಡಿಗಳು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿವೆ.

ಸನ್ಮಾನ್ಯ ಅಧ್ಯಕ್ಷರೇ, ಈ ನ್ಯಾಯಬೆಲೆ ಅಂಗಡಿಗಳ ಉಸ್ತುವಾರಿಯನ್ನು ನೋಡುವಂತಹ ನಮ್ಮ ಸ್ಥಳೀಯ ಅಧಿಕಾರಿಗಳು ಏನು ಇದ್ದಾರೆ, ಅವನು ಇನ್‌ಸ್ಪೆಕ್ಟರ್ ಇರಬಹುದು, ಅಸಿಸ್ಟೆಂಟ್ ಡೈರೆಕ್ಟರ್ ಇರಬಹುದು ಅಥವಾ ಡೆಪ್ಯುಟಿ ಡೈರೆಕ್ಟರ್ ಇರಬಹುದು. ಈ ಅಧಿಕಾರಿಗಳ ಮೇಲೆ ಜವಾಬ್ದಾರಿ ಹಾಕಿ, ಅಕ್ರಮ ಅನ್ಯಾಯಗಳಿಗೆ ಲೋಪದೋಷಗಳೇನಿವೆ ಇವೆಲ್ಲಕ್ಕೂ ಇವರೇ ಹೊಣೆಗಾರರು ಅನ್ನುವಂತಹ ಒಂದು ಜವಾಬ್ದಾರಿಯನ್ನು ಫಿಕ್ಸ್ ಮಾಡಬೇಕೆಂದು ನಾನು ಈಗಾಗಲೇ ಸೂಚನೆ ಕೊಟ್ಟಿದ್ದೇನೆ. ಏಕೆಂದರೆ ನಮ್ಮ ಇಲಾಖೆ ಶ್ರೀಮಂತಿಕೆ ಸಂಪದ್ಭರಿತವಾದ ಇಲಾಖೆ. ನಮ್ಮಲ್ಲಿ ಸೀಮೆಎಣ್ಣೆ ಪೆಟ್ರೋಲ್, ಡೀಸಲ್, ಗೋಧಿ, ಸಕ್ಕರೆ, ಅಕ್ಕಿ ಇವೆಲ್ಲಾ ಇದೆ ಇವೆಲ್ಲ....

ಶ್ರೀ ವಾಟಾಳ್ ನಾಗರಾಜ್ : ಇವೆಲ್ಲವೂ ಬೂಷ್ಟ್ ಹಿಡಿದಿದೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಎಲ್ಲವೂ ಇಲ್ಲ, ಸ್ವಲ್ಪ ಹಿಡಿದಿದೆ. ಇಲ್ಲಿ ಸ್ವಲ್ಪ ಭ್ರಷ್ಟಾಚಾರದ ಆರೋಪಣೆ ಇದೆ, ನಾನು ಅದನ್ನು ಅಲ್ಲಗಳೆಯುವುದಕ್ಕೆ ಹೋಗುವುದಿಲ್ಲ. ಇದನ್ನು ಎದುರಿಸಬೇಕಾದರೂ ಕೂಡ ಎದಗಾರಿಕೆ ಬೇಕಾಗುತ್ತದೆ. ನಾವು ಏನಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಹೋದರೆ, ನಮ್ಮನ್ನು ಹಾಗೆ ಬಿಟ್ಟರೆ ಪರವಾಗಿಲ್ಲ, ಒಬ್ಬರು ಬಂದು ದಕ್ಷ ಅಧಿಕಾರಿ ಎಂದು ಹೇಳುತ್ತಾರೆ, ಮತ್ತೊಬ್ಬರು ಬಂದು ಇವರು ಒಬ್ಬ ಭ್ರಷ್ಟ ಅಧಿಕಾರಿ ಇವನನ್ನು ಕೂಡಲೇ ವರ್ಗಾವಣೆ ಮಾಡಿ ಎಂದು ಹೇಳುತ್ತಾರೆ. ನಾವು ಯಾರ ಮಾತು ಕೇಳಬೇಕು ಹೇಳಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಮನಸಾಕ್ಷಿಯಾಗಿ ವರ್ತನೆ ಮಾಡಿ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಯಡಿಯೂರಪ್ಪನವರು ಒಬ್ಬ ಪ್ರತಿಪಕ್ಷದ ಮುಖಂಡರು ಇದ್ದಾರೆ. ನಮ್ಮ ಕ್ಷೇತ್ರದಲ್ಲಿ ಅನ್ಯಾಯ ನಡೆಯುತ್ತಿದೆ ಎಂದಾಗ I must believe you, I must take your complaint very seriously. ಮತ್ತೊಬ್ಬರು ಬರುತ್ತಾರೆ ಇವರು ಹೋದ ಮೇಲೆ ಸ್ವಾಮಿ ಯಡಿಯೂರಪ್ಪನವರು ಹೇಳಿದ್ದು ಸರಿಯಿಲ್ಲವೆಂದು, ನಾವು ಯಾವುದನ್ನು ಅಂತಿಮವಾಗಿ ತೆಗೆದುಕೊಳ್ಳಬೇಕು. ಆದ್ದರಿಂದ ಎಲ್ಲವನ್ನೂ ಸೀರಿಯಸ್ ಆಗಿ ತೆಗೆದುಕೊಳ್ಳೋಣ. ಅಧ್ಯಕ್ಷರೆ ನಾನು ಕೂಡ ಹತ್ತಾರು ವರ್ಷಗಳಿಂದ ಬಹುಶಃ ಶಾಸನ ಸಭೆಯಲ್ಲಿ ಮಂತ್ರಿಯಾಗಿ ಎರಡು ವರ್ಷವಿದ್ದರೆ ವಿರೋಧಪಕ್ಷದಲ್ಲಿ ಏಳು ವರ್ಷಗಳ ಕಾಲ ಕೆಲಸಮಾಡಿದ್ದೇನೆ. ಬಹುಶಃ ಈಗ ನಾವು ಮಂತ್ರಿಯಾಗಿ ನಮ್ಮ ಪಾತ್ರಗಳನ್ನು ವಹಿಸುವಾಗ ಯಾವುದು ಶ್ರೀರಾಮನ ಪಾತ್ರ ಯಾವಾಗ ವಹಿಸಬೇಕಾಗುತ್ತದೆ ಎಂಬುದು ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಈ ಎರಡರಲ್ಲಿ ನಿಮ್ಮ ಮನಸ್ಸಿಗೆ ಯಾವುದು ಚೆನ್ನಾಗಿತ್ತು.

ಶ್ರೀ ಟಿ.ಎನ್. ನರಸಿಂಹಮೂರ್ತಿ: ನನಗೆ ಎರಡು ಚೆನ್ನಾಗಿತ್ತು. ಈ ಸಂವಿಧಾನ ಬದ್ಧವಾಗಿ ಬದಲಾದಂಥ ವ್ಯವಸ್ಥೆಯಲ್ಲಿ ನಾವು ಕೆಲಸ ಮಾಡಬೇಕಾಗುತ್ತದೆ. ಆದುದರಿಂದ ನನಗೆ ಯಾವ ಸ್ಥಾನವನ್ನು ಕೊಟ್ಟರೂ ಕೂಡ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇನೆ. ಬಹುಶಃ ನಾನೇನಾದರೂ ತಪ್ಪು ಹೆಜ್ಜೆ ಇಟ್ಟಾಗ ನನ್ನನ್ನು ತಿದ್ದಲೂ ನಿಮಗೆ ಸ್ವಾತಂತ್ರ್ಯವಿದೆ. ನಮ್ಮ ಇಲಾಖೆಗೆ ಸಂಬಂಧಪಟ್ಟ ಹಾಗೆ ಬಹಳಷ್ಟು ಇನ್ನು ಹೆಚ್ಚು ಚರ್ಚೆಯಾಗುತ್ತದೆ ಎಂಬ ಮಾತನ್ನು ಹೇಳಿದ್ದೆ. ಬಹಳ ಸೂಕ್ಷ್ಮವಾದ ಚರ್ಚೆಯನ್ನು ಬಹಳ ಎಚ್ಚರಿಕೆಯಿಂದ ಮಾತನಾಡಿದ್ದಾರೆ. ಅದರಲ್ಲೂ ಪ್ರತಿಪಕ್ಷದ ನಾಯಕರು ಕೂಡ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಏಕೆಂದರೆ ನಾನು ಪ್ರತಿಪಕ್ಷದ ನಾಯಕ ಸ್ಥಾನವನ್ನು ಐದಾರು ವರ್ಷಗಳು ಸವಿದಿದ್ದೇನೆ. ಆ ಸ್ಥಾನ ಬಹಳ ಚೆನ್ನಾಗಿದೆ. ಆದರೆ ಮಾನ್ಯ ಚಂದ್ರೇಗೌಡರು ಇವತ್ತು ನನ್ನ ಇಲಾಖೆಯ ಬಗ್ಗೆ ಮಾತನಾಡಿದ್ದಾರೆಂದು ನನಗೆ ಬಹಳ ಸಂತೋಷವಿದೆ. ಆದುದರಿಂದ ನನ್ನ ಇಲಾಖೆಗೆ ಸಂಬಂಧಪಟ್ಟಂತೆ ತಾವು ಕೊಟ್ಟಿರುವ ಸಲಹೆಗಳು ಚೆನ್ನಾಗಿವೆ. ಜನತೆಯ ಮುಂದೆ ನಾವು ಐದು ವರ್ಷದ ಚುನಾವಣೆ ಬಂದಾಗ ಹೋಗುತ್ತೇವೆ, ಐದು ವರ್ಷ ನಮ್ಮ ಸರ್ಕಾರವಿರುತ್ತದೆ ದಯವಿಟ್ಟು ಅದನ್ನು ಮಾತ್ರ ಮರೆಯಬೇಡಿ. ಇಲ್ಲಿ ಏನಾದರೂ ಅಭದ್ರತೆ ಸರ್ಕಾರ ಇದೆಯೆಂದರೆ ಅದು ಕೇವಲ ನಿಮ್ಮ ಭ್ರಮೆಯಷ್ಟು ಯಾವುದೇ ಒಂದು ರಾಷ್ಟ್ರ ಮತ್ತು ರಾಜ್ಯದಲ್ಲಿ ಆಡಳಿತ ಸರಿಯಿರಬೇಕಾದರೆ, ಅಭಿವೃದ್ಧಿಯಾಗಬೇಕಾದರೆ ಅಲ್ಲಿ ಪೊಲಿಟಿಕಲ್ ಸ್ಟೆಬಿಲಿಟಿ ಇರಲೇ ಬೇಕಾಗುತ್ತದೆ. ತಾವು ಏನಾದರೂ ಪೊಲಿಟಿಕಲ್ ಸ್ಟೆಬಿಲಿಟಿಯನ್ನು ಕ್ವೆಶ್ಚನ್ ಮಾಡುವುದಾದರೆ ಅದು ಅಭಿವೃದ್ಧಿಗೆ ಧಕ್ಕೆ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಸರ್ಕಾರದ ಅಭದ್ರತೆಗೆ ನೀವೇ ಕಾರಣ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಸನ್ಮಾನ್ಯ ಸಭಾಧ್ಯಕ್ಷರೆ ಯಾವುದೇ ಪಕ್ಷವಾಗಲಿ, ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಪಕ್ಷವಿದೆ. ಆಯಾ ರಾಜ್ಯಗಳಲ್ಲಿ ಪೊಲಿಟಿಕಲ್ ಸ್ಟೆಬಿಲಿಟಿ ಇರಲೇಬೇಕು. ರಾಷ್ಟ್ರದಲ್ಲೂ ಕೂಡ ಪೊಲಿಟಿಕಲ್ ಸ್ಟೆಬಿಲಿಟಿ ಇರಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಕೂಡ ಈ ಒಂದು ಪಕ್ಷ ಏನು ಇದೆ ಅದರ ಐದು ವರ್ಷಗಳ ಪೂರ್ಣ ಅವಧಿಯನ್ನು ನಾವು ಮಾಡುತ್ತೇವೆ, ಅದನ್ನು ನೀವು ನೋಡಿ. ನಾವು ಒಳ್ಳೆಯ ಕೆಲಸವನ್ನು ಮಾಡಿ ಪುನಃ ಜನತೆಯ ಮುಂದೆ ಹೋಗುತ್ತೇವೆ ಎಂಬ ಭಾವನೆಯನ್ನು ನೀವು ಇಟ್ಟುಕೊಳ್ಳಿ ಅಥವಾ ತಿರಸ್ಕಾರ ಮಾಡಿ ಅದು

ನಿಮಗೆ ಬಿಟ್ಟಿದ್ದು. ನಾನು ಇನ್ನು ಹೆಚ್ಚಿಗೆ ಈ ಬೇಡಿಕೆಯ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಬಹಳ ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದ್ದೇನೆ. ತಮ್ಮ ಅವಕಾಶಕ್ಕಾಗಿ ನಾನು ವಂದಿಸುತ್ತೇನೆ. ಯಾವ ಯಾವ ಸದಸ್ಯರುಗಳು ಅಭಿಪ್ರಾಯ ಕೊಟ್ಟಿದ್ದಾರೆ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಮತ್ತು ಅವರ ಸಲಹೆಗಳನ್ನು ಒಪ್ಪುತ್ತೇನೆ. ಮಂಡಿಸಿರತಕ್ಕಂಥ ಬೇಡಿಕೆಗೆ ತಾವು ಎಲ್ಲರೂ ಕೂಡ ಸರ್ವಾನುಮತದಿಂದ ಬೆಂಬಲ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಸನ್ಮಾನ್ಯ ಸಭಾಧ್ಯಕ್ಷರೇ ನಾನು ಉತ್ತರ ಕೇಳಿದ ಮೇಲೆ ಪ್ರಶ್ನೆ ಕೇಳುವುದಿಲ್ಲ. ನನಗಾದ ಸಂತೋಷವೇನೆಂದರೆ ಎರಡು ಮುಖ್ಯವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೆ. ಕೆಲವು ಸದಸ್ಯರುಗಳು ಲಘುವಾಗಿ ಗೋಡೌನ್ ಅಕ್ಕಿ ತಂದರು ಎಂದು ಪ್ರಸ್ತಾಪ ಮಾಡಿದರು. ಮಾನ್ಯ ಮಂತ್ರಿಗಳು ಅದನ್ನು ಒಪ್ಪಿದ್ದಾರೆ, ಮತ್ತು ಅದನ್ನು ತನಿಖೆ ಮಾಡಿಸುತ್ತೇನೆಂದು ಹೇಳಿದ್ದಾರೆ. ಹಿಂದೆ ಅವರ ಇಲಾಖೆಯಿಂದ ಒಂದು ಆಜ್ಞೆ ಕೂಡ ಹೊರಡಿಸಿದರು. ಅದಕ್ಕೂ ಇಲಾಖೆಯಲ್ಲಿ ತನಿಖೆ ಮಾಡಿಸುತ್ತೇವೆಂದು ಹೇಳಿದರು, ಅದಕ್ಕಾಗಿ ನನಗೆ ವೈಯುಕ್ತಿಕವಾಗಿ ತೃಪ್ತಿಯಾಗಿದೆ. ಯಾವ ಸದಸ್ಯರುಗಳು ನಾವು ಆಪಾದನೆ ವಿನಾಕಾರಣ ಮಾಡುತ್ತೇವೆಂದು ಇದ್ದಾರೆ, ಅವರಿಗೂ ತೃಪ್ತಿಯಾಗಿದ್ದರೆ ನನಗಷ್ಟೇ ತೃಪ್ತಿ. ಮತ್ತೊಂದು ವ್ಯಾಖ್ಯಾನವನ್ನು ಬಹಳವಾಗಿ ಮಾಡಿದ್ದಾರೆ. ಅದು ಅವರ ಕಡೆಯ ತೃಪ್ತರಿಗೆ ಹೇಳಿದರೋ ಅಥವಾ ಅತೃಪ್ತರಿಗೆ ಹೇಳಿದರೋ ನನಗಂತೂ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇವತ್ತು ಅವರು ತಮ್ಮ ಜೀವನದಲ್ಲಿ ನಿಜವಾಗಿ ಬಹಳ ಕಡಿಮೆ ಹೊತ್ತು ಉತ್ತರವನ್ನು ಕೊಟ್ಟಿದ್ದು. . .. .

ಶ್ರೀ ಡಿ.ಬಿ. ಚಂದ್ರೇಗೌಡ : ಈ ವಿಚಾರದಲ್ಲಿ ನಾನು ಅವರನ್ನು ಮೆಚ್ಚಿಕೊಂಡೆ.

ಶ್ರೀ ಎಸ್.ಎಂ. ಯಾಹ್ಯಾ : ಫೇರ್‌ಪ್ರೈಸ್ ಷಾಪ್‌ಗಳು ಎಲ್ಲ ಕಡೆಯೂ ಇವೆ. ಇವತ್ತು ನನ್ನ ಕ್ಷೇತ್ರದಿಂದ ಕೂಡ ಬಹಳ ಜನರು ಬಂದಿದ್ದರು. ಅಲ್ಲಿ ಕೊಟ್ಟಿರತಕ್ಕಂಥ ಅಕ್ಕಿ ಬಗ್ಗೆ ಮೊನ್ನೆಯ ದಿವಸ ಮೈಸೂರಿನವರೂ ಹೇಳಿದ್ದಾರೆ. ಅದನ್ನು ನೋಡಿದರೆ ನಾವೂ, ನೀವೂ ಯಾರೂ ಕೂಡ ಊಟ ಮಾಡುವುದಕ್ಕೆ ಸಾಧ್ಯವಿಲ್ಲ. ಅದು ಏತಕ್ಕೆ ಈ ರೀತಿ ಆಗುತ್ತಿದೆ? ಅದೇ ಫೇರ್ ಪ್ರೈಸ್ ಡಿಪೋದಲ್ಲಿ ಕೆಲವು ಚೀಲದ ಅಕ್ಕಿ ಚೆನ್ನಾಗಿರುತ್ತದೆ, ಇನ್ನು ಕೆಲವು ಚೀಲಗಳಲ್ಲಿ ಚೆನ್ನಾಗಿರುವುದಿಲ್ಲ. ಇದಕ್ಕೆ ಕಾರಣ ಏನು? ಇನ್ನುಮುಂದೆ ಈ ರೀತಿ ಆಗಬಾರದು. ಅವರೂ ಕೂಡ ಸ್ವಲ್ಪ ಸ್ಯಾಂಪಲ್ ಅದರ ಜೊತೆಗೆ ನಾನೂ ಕೂಡ ಸ್ವಲ್ಪ ಸ್ಯಾಂಪಲ್ ತಮಗೆ ಕೊಡುತ್ತಿದ್ದೇನೆ ಮತ್ತು ಇದನ್ನು ತಾವು ಸ್ವಲ್ಪ ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಮಾನ್ಯ ಸಭಾಪತಿಯವರೆ, ನನ್ನ ಪಕ್ಷದ ಹಿರಿಯ ನಾಯಕರಾದಂಥ ಮಾನ್ಯ ಯಾಹ್ಯಾರವರು ಸ್ಯಾಂಪಲ್‌ನ್ನು ಕೊಟ್ಟಿದ್ದಾರೆ. ನಮಗೆ ಸುಮಾರು 75 ಪರ್ಸೆಂಟ್ ಒಳ್ಳೆಯ ಅಕ್ಕಿ ಬರುತ್ತದೆ. ಇನ್ನು 25 ಪರ್ಸೆಂಟ್‌ನಷ್ಟು ಇಂಥ ಅಕ್ಕಿ ಬರುತ್ತದೆ. ನಮ್ಮ ದುರ್ದೈವ ಎಂದರೆ ಭಾರತೀಯ ಆಹಾರ ನಿಗಮದವರು ನಮಗೆ ನೀಡತಕ್ಕ ಅಲಾಟ್‌ಮೆಂಟ್ ಏನಿದೆ ಅದರಲ್ಲಿ ಲೋಪದೋಷಗಳಿವೆ ಎಂದು ಹೇಳಬೇಕಾಗಿದೆ. ಇತ್ತೀಚಿಗೆ ನಡೆದ ದಕ್ಷಿಣ ರಾಜ್ಯಗಳ ಆಹಾರ ಸಚಿವರ ಸಮ್ಮೇಳನದಲ್ಲಿ ಕೂಡ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ರಾಷ್ಟ್ರ ಮಟ್ಟದಲ್ಲಿ ಮಾನ್ಯ ಪ್ರಧಾನಿಯವರೇ ಖುದ್ದಾಗಿ ಹಾಜರಿದ್ದ ಸಂದರ್ಭದಲ್ಲಿ ಕೂಡ ನಾನು ಪ್ರಸ್ತಾಪ ಮಾಡಿದ್ದೇನೆ. ನನ್ನ ರಿಟರ್ನ್‌ಸ್ಪೀಚ್‌ನಲ್ಲಿ ಕೂಡ ಪ್ರಸ್ತಾಪ ಮಾಡಿದ್ದೇನೆ.

ನಮಗೆ ದಯವಿಟ್ಟು ಆಂಧ್ರದಿಂದ ಬರತಕ್ಕ ಅಕ್ಕಿಯನ್ನು ಕೊಡಿ ಎಂದು ಕೇಳಿಕೊಂಡಿದ್ದೇನೆ. ಆಂಧ್ರದಿಂದ ಬರತಕ್ಕ ಅಕ್ಕಿಯನ್ನು ನಮಗೆ ಕೊಡುವುದಾದರೆ, ಅದು ರುಚಿಯಾಗಿದೆ, ಸಾಗಾಣಿಕೆ ವೆಚ್ಚ ಕೂಡ ನಮಗೆ ಕಡಿಮೆಯಾಗುತ್ತದೆ. ಅಕ್ಕಿ ನಮ್ಮ ಜನಕ್ಕೆ ಬಹಳ ಪ್ರಿಯವಾಗಿದೆ ಎಂದು ನಾನು ಹೇಳಿದ್ದೇನೆ. ದೆಹಲಿಯಲ್ಲಿ ತಮಗೂ ಕೂಡ ಬಹಳಷ್ಟು ಹೈ ಕಮ್ಯಾಂಡ್‌ನಲ್ಲಿ ಪರಿಚಯ ಇದ್ದಾರೆ. ತಾವೂ ಕೂಡ ಕೇಂದ್ರದ ಆಹಾರ ಮಂತ್ರಿಗಳನ್ನು ಭೇಟಿಮಾಡಿ ಭಾರತ ಆಹಾರ ನಿಗಮದವರು ಈಗಾಗಲೇ ನಮಗೆ ಒಂದು ಸಾರಿ ಭರವಸೆಯನ್ನು ಕೊಟ್ಟಿದ್ದಾರೆ, ಆಂಧ್ರದ ಅಕ್ಕಿಯನ್ನೇ ಕೊಡಿಸುತ್ತೇವೆಂದು ಹೇಳಿದ್ದಾರೆ. ಆ ಬರವಸೆ ಈಡೇರುವುದಾದರೆ ಈ ಕಳಪೆ ಅಕ್ಕಿ ನಿಲ್ಲುತ್ತದೆಂದು ತಮಗೆ ಹೇಳಬಯಸುತ್ತೇನೆ.

ಶ್ರೀ ಎಸ್.ಎಂ. ಯಾಹ್ಯಾ : ಆಂಧ್ರದಿಂದ ಅಕ್ಕಿ ತರಬೇಕೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಇವತ್ತು ಪಬ್ಲಿಕ್‌ನಲ್ಲಿ ಇದು ಆಂಧ್ರದ ಅಕ್ಕಿ, ಇದು ಯು.ಪಿ.ಅಕ್ಕಿ ಎಂದು ಹೇಳುವುದಕ್ಕೆ ಬರುವುದಿಲ್ಲ. ನೀವು ಹೇಳಿದಂತೆ 25 ಪರ್ಸೆಂಟ್ ಮಾತ್ರ ಸೆಂಟ್ರಲ್‌ನಿಂದ ಬರತಕ್ಕದ್ದು ಸರಿ ಇಲ್ಲ ಎಂದು ಹೇಳಿದಿರಿ. ಇದು ಇರಬಹುದು. ಏಕೆಂದರೆ ಎಲ್ಲ ಫೇರ್ ಪ್ರೈಸ್ ಷಾಪ್‌ಗಳಲ್ಲೂ ಕೆಲವು ಚೀಲಗಳಲ್ಲಿ ಚೆನ್ನಾಗಿರುತ್ತದೆ, ಇನ್ನು ಕೆಲವು ಚೀಲಗಳಲ್ಲಿ ಚೆನ್ನಾಗಿರುವುದಿಲ್ಲ. ಆದುದರಿಂದ ಈ ವಿವರಣೆಯನ್ನು ನಾವು ಜನರಿಗೆ ಕೊಡುವುದಕ್ಕಾಗುವುದಿಲ್ಲ, ಮತ್ತು ಇಂಥ ಅಕ್ಕಿಯನ್ನು ಕೇಂದ್ರದವರೂ ಕೂಡ ಕಳುಹಿಸುವುದಿಲ್ಲವೆಂದು ನನ್ನ ನಂಬಿಕೆ. ಇದು ಮಧ್ಯದಲ್ಲಿ ಏನೋ ಆಗುತ್ತಿದೆ ಎಂದು ನಾನು ಹೇಳಬಯಸುತ್ತೇನೆ. ಇದು ರಾಜ್ಯಸರ್ಕಾರದ ತಪ್ಪಲ್ಲ, ಅಥವಾ ಕೇಂದ್ರ ಆಹಾರನಿಗಮದವರ ತಪ್ಪೂ ಅಲ್ಲ. ಮಧ್ಯದಲ್ಲಿ ಏನೋ ಸ್ಕ್ಯಾಂಡಲ್ಸ್ ನಡೆಯುತ್ತಿದೆ. ಅದನ್ನು ತಾವು ಗಮನಿಸಬೇಕು. ಈ ರೀತಿ ಆಗದಂತೆ ನೋಡಿಕೊಳ್ಳಬೇಕು.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಮಾನ್ಯ ಅಧ್ಯಕ್ಷರೆ, ಭಾರತ ಆಹಾರ ನಿಗಮದಿಂದ ಈ ರೀತಿಯ ಅಕ್ಕಿ ಬರುತ್ತಿಲ್ಲ, ಮಧ್ಯೆ ಏನೋ ನಡೆಯುತ್ತಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ನಮ್ಮ ಡಿ.ಐ.ಜಿ.ಸ್ಪೆಷಲ್ ಎನ್‌ಫೋರ್ಸ್‌ಮೆಂಟ್ ಸೆಲ್ ಇದೆ. D.I.G.(Special Cell) is there. I will announce on the floor of the House that I will direct the DIG (Special Cell) to have a special look over this and I will also ask all the Senior Officers to go and see that these mal-practices will put an end to.

ಇನ್ನು ವಿರೋಧಪಕ್ಷದ ನಾಯಕರಾದ ಮಾನ್ಯ ಚಂದ್ರೇಗೌಡರು ಯಾದ್ಗೀರ್‌ಗೆ ಸಂಬಂಧಪಟ್ಟಂತೆ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಆಹಾರ ಸಚಿವರಿಗೆ ನಾವು ತಿಳಿಸಿದ್ದೇವೆ, ಆದರೂ ನಮಗೆ ಹೇಳಿಲ್ಲ ಅವರು ಏನೂ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಹೇಳಿದ್ದಾರೆ. ನಿಜವಾಗಿ ಹೇಳುವುದಾದರೆ ನಿಮಗೆ ಆ ಪತ್ರ ಏನು ಬಂದಿದೆ ಅದು ನನಗೆ ಬಂದಿಲ್ಲ. ಸಾಮಾನ್ಯವಾಗಿ ಬಡವರಿಂದ ಯಾವುದಾದರೂ ಒಂದು ಮನವಿ ಪತ್ರ ಬಂದಾಗ ಅವರ ಕಷ್ಟ ಸುಖಗಳಿಗೆ ನಾನು ರಿಪ್ಲೈ ಮಾಡುತ್ತೇನೆ, ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳುತ್ತೇನೆ. ಆದರೆ ಅಲ್ಲಿ ಎಲ್ಲವೂ ಚೆನ್ನಾಗಿಲ್ಲ ಎಂದು ಏನು ಹೇಳಿದ್ದಾರೆ. ಅಲ್ಲಿನ ಫುಡ್ ಕಾರ್ಪೊರೇಷನ್ ಮ್ಯಾನೇಜರ್‌ರವರು, ಮತ್ತು ಇನ್‌ಸ್ಪೆಕ್ಟರ್‌ಗೆಲ್ಲಾ ಸೇರಿ ಕೈಚಳಕ ಮಾಡುತ್ತಿದ್ದಾರೆಂದು ಹೇಳಿದ್ದಾರೆ. The Joint Director of Food and civil supplies, Sri. I.T. Perumal is a Senior IAS Officer.

within a week, I will send that Officer to the spot to enquire and report it to me. I will inform the House about it.

ಮತ್ತು ಅವರು ಏನು ಪತ್ರವನ್ನು ಬರೆದಿದ್ದಾರೆಂದು ಹೇಳಿದ್ದಾರೆ ಅದು ನನಗೆ ಬಂದಿಲ್ಲ. ನಿಮಗೆ ಬಂದಿರತಕ್ಕ ಪತ್ರವನ್ನು ನನಗೆ ನೀವು ಕಳುಹಿಸಿಕೊಟ್ಟಿದ್ದೀರಿ. ಅಲ್ಲಿ ಜಿಲ್ಲಾಧಿಕಾರಿಗಳು, ಇದನ್ನು ವಿಚಾರಣೆ ಮಾಡುತ್ತಾರೆ. ಅವರು ನೇರವಾಗಿ ನಿಮಗೆ, ನಮಗೆ ಪತ್ರವನ್ನು ಬರೆಯುವುದರ ಬದಲು ಜಿಲ್ಲಾಧಿಕಾರಿಗಳಿಗೆ, ಸ್ಥಳೀಯ ಶಾಸಕರಿಗೆ, ಜಿಲ್ಲಾ ಉಸ್ತುವಾರಿ ಮಂತ್ರಿಗಳಿಗೆ ಇದನ್ನು ತಿಳಿಸಿದರೆ ಇಂಥ ಸಮಸ್ಯೆ ಬರುವುದಿಲ್ಲ ಎಂದು ಹೇಳಬಯಸುತ್ತೇನೆ, ಮತ್ತು ಈಗಾಗಲೇ ಇದರ ಬಗ್ಗೆ ನಾನು ಆಜ್ಞೆಯನ್ನೂ ಕೂಡ ಮಾಡಿದ್ದೇನೆ ಆದರೂ ನಾನು ಪ್ರತಿಪಕ್ಷದ ನಾಯಕರ ಸಲಹೆಯನ್ನು ಒಪ್ಪಿಕೊಂಡಿದ್ದೇನೆ ಮತ್ತು Sri I.R. Perumal will go to the spot and make an enquiry and submit a report. Then, I will submit it to the House.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮಾತನಾಡುವ ಸಂದರ್ಭದಲ್ಲಿ ಕನ್ನಡ ಪ್ರಭದಲ್ಲಿ ಮುಖಪುಟದಲ್ಲಿ ಬಂದಿದೆ ತಾವು ಸಹಜವಾಗಿ ಉತ್ತರವನ್ನು ಕೊಡಬೇಕಾಗಿತ್ತು. ನಾನೂ ಮಾತನಾಡಿದ್ದಕ್ಕೆ ನೀವು ಉತ್ತರ ಕೊಟ್ಟಿಲ್ಲ. ಮೊದಲನೆಯದಾಗಿ ಕಡಲೆ ಕಾಯಿ ಎಣ್ಣೆಯಲ್ಲಿ ಹರಳೆಣ್ಣೆ ಕಲಬೆರಕೆಯಾಗುತ್ತಿದೆ, ಹತ್ತಿ ಎಣ್ಣೆ ಕಲಬೆರಕೆಯಾಗುತ್ತಿದೆ ಇದರ ಬಗ್ಗೆ ಎನ್‌ಡಿಡಿಪಿ ತನಿಖೆ ಮಾಡಿ ಬೆಂಗಳೂರು ಮತ್ತು ರಾಜಕೋಟೆಯಲ್ಲಿ ಈ ರೀತಿ ಆಗುತ್ತಿದೆ ಎಂದು ವರದಿಯನ್ನು ಕೊಟ್ಟಿದ್ದಾರೆ. ಇದನ್ನು ತಡೆಯುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಇನ್ನು ಎರಡನೆಯದಾಗಿ ತಾವು ಅನೇಕ ಕಡೆ ಭಾಷಣ ಮಾಡುವಾಗ ಹೇಳಿದ್ದೀರಿ. ಈ ಸದನದಲ್ಲೂ ಇದರ ಪ್ರಸ್ತಾಪ ಬಂದಿತ್ತು. ಪಾಮ್‌ಆಯಿಲ್ ಈಗ ಬರುತ್ತಿಲ್ಲ. ಆದುದರಿಂದ ಸೇಂಗಾ ಎಣ್ಣೆಯನ್ನು ನ್ಯಾಯಬೆಲೆ ಅಂಗಡಿಗಳಲ್ಲಿ ವಿತರಣೆ ಮಾಡತಕ್ಕ ವ್ಯವಸ್ಥೆಯನ್ನು ಮಾಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದಿರಿ.

ಇನ್ನು ಮೂರನೆಯದಾಗಿ ಇಲ್ಲಿ ಆ ಕಡೆಯವರೂ ಮತ್ತು ಈ ಕಡೆಯವರೂ ಕೇಳಿರತಕ್ಕದ್ದು ಲಕ್ಷಾಂತರ ಜನ ಕಡುಬಡವರಿಗೆ (ನೇಕಾರರಿಗೆ) ಹಸಿರು ಕಾರ್ಡುಗಳನ್ನು ಕೊಡಬೇಕೆಂಬ ಒತ್ತಾಯ ಇತ್ತು. ಹಸಿರು ಕಾರ್ಡ್‌ಗಳನ್ನು ನೇಕಾರರಿಗೆ ವಿತರಣೆ ಮಾಡತಕ್ಕ ವ್ಯವಸ್ಥೆಯನ್ನು ಮಾಡುತ್ತೇವೆಂದು ತಾವು ಹೇಳಿದ್ದಿರಿ. ಆದುದರಿಂದ ಕಲಬೆರಕೆ ಎಣ್ಣೆಯ ಬಗ್ಗೆ, ನೇಕಾರರಿಗೆ ಹಸಿರು ಕಾರ್ಡುಗಳನ್ನು ಕೊಡುವ ಬಗ್ಗೆ ಮತ್ತು ಪಾಮ್‌ಆಯಿಲ್ ಬದಲು ಸೇಂಗಾ ಎಣ್ಣೆಯ ವಿತರಣೆ ಮಾಡುವ ಬಗ್ಗೆ ಸ್ಪಷ್ಟವಾದ ಉತ್ತರವನ್ನು ತಮ್ಮಿಂದ ಕೇಳಬಯಸುತ್ತೇನೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಮಾನ್ಯ ಅಧ್ಯಕ್ಷರೆ, ನಮ್ಮ ವಿರೋಧ ಪಕ್ಷದ ಮತ್ತೊಬ್ಬ ಬಿ.ಜೆ.ಪಿ. ಮುಖಂಡರಾದ ಮಾನ್ಯ ಯಡಿಯೂರಪ್ಪನವರು ಈಗ ಪಾಮ್ ಆಯಿಲ್ ಇಲ್ಲ, ಇದಕ್ಕೆ ಪರ್ಯಾಯ ವ್ಯವಸ್ಥೆಯನ್ನು ಏನು ಮಾಡುತ್ತೀರೆಂದು ಹಿಂದೆ ಒಂದು ಸಾರಿ ಕೇಳಿದ್ದರು. ನನ್ನ ಇಲಾಖೆಗೆ ಸಂಬಂಧ ಪಟ್ಟಂತೆ ಒಂದು ನಿಗಮ ಇದೆ. (ಆಹಾರ ನಿಗಮ) ಅಲ್ಲಿಗೆ ಹೊಸದಾಗಿ ಒಬ್ಬರು ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಬಂದಮೇಲೆ ಸ್ವಲ್ಪಮಟ್ಟಿಗೆ ಸುಧಾರಣೆ ಮಾಡುತ್ತಿದ್ದಾರೆ. ಇದಕ್ಕೆ ಒಂದು ಬದಲಿ ವ್ಯವಸ್ಥೆ ಏನು ಮಾಡುತ್ತಿದ್ದೇವೆಂದು, ಕೆಲವು ದಿವಸದವರೆಗೆ ಎಣ್ಣೆ ಗಿರಣಿಯವರು ಸ್ಟ್ರೈಕ್ ಮಾಡಿದಾಗ ಕಡಲೆಕಾಯಿ ಎಣ್ಣೆಯ ಬೆಲೆ 40-45 ರೂ.ವರೆಗೂ ಬೆಲೆ ಜಾಸ್ತಿಯಾಯಿತು.ಆಗ ನಾನು ಛೇಂಬರ್ ಆಫ್ ಕಾಮರ್ಸ್‌ನವರನ್ನೂ ಮತ್ತು ರೀಟೇಲ್

ಹಾಗೂ ಹೋಲ್‌ಸೇಲ್ ವ್ಯಾಪಾರಸ್ಥರನ್ನು ಕರೆಸಿ ಯಾವುದೇ ಕಾರಣದಿಂದಲೂ ಈ ಸಂದರ್ಭವನ್ನು ದುರುಪಯೋಗ ಮಾಡಿಕೊಂಡು ನೀವು ಎಣ್ಣೆಯ ಬೆಲೆಯನ್ನು ಜಾಸ್ತಿ ಮಾಡಿದರೆ ಅದನ್ನು ನೋಡಿಕೊಂಡು ಸರ್ಕಾರ ಸುಮ್ಮನೆ ಇರುವುದಿಲ್ಲ ಎನ್ನತಕ್ಕ ಎಚ್ಚರಿಕೆಯನ್ನು ನೀಡಿದ ಮೇಲೆ 37 ರೂ.ಗಳಿಗೆ ಎಣ್ಣೆಯ ಬೆಲೆ ಮೀರದಂತೆ ನಾವು ಕಂಟ್ರೋಲ್ ಮಾಡಿಕೊಂಡು ಹೋಗುತ್ತೇವೆಂದು ಹೇಳಿದರು. ಈಗ 37 ರೂ.ಗಳಂತೆ ಕರ್ನಾಟಕ ಫುಡ್ ಕಾರ್ಪೊರೇಷನ್‌ನವರೂ ಮಾರುತ್ತಿದ್ದಾರೆ. ಈಗ ಇದನ್ನು ಸಣ್ಣ ಪ್ರಮಾಣದಲ್ಲಿ ಮಾರುತ್ತಿದ್ದಾರೆ. ಸದ್ಯದಲ್ಲಿ ಹೆಚ್ಚಿಗೆ ಮಾಡುವುದಕ್ಕೆ ಆಗಿಲ್ಲ. ಕೇಂದ್ರದವರು ತಾಳೆ ಎಣ್ಣೆಯನ್ನು ಕೊಡುತ್ತಾರೋ, ಇಲ್ಲವೋ ಎಂಬುದು ಅಂತಿಮವಾಗಿ ತೀರ್ಮಾನ ಆಗುವವರೆಗೂ ನಾನು ಇದರ ಬಗ್ಗೆ ಏನೂ ಭರವಸೆಯನ್ನು ಕೊಡುವುದಕ್ಕಾಗುವುದಿಲ್ಲ. ಇದನ್ನು ನಾವು ಕಾದು ನೋಡುತ್ತಿದ್ದೇವೆ. ನಾವು ಇನ್ನೂ ಆಶಾವಾದಿಗಳಾಗಿದ್ದೇವೆ.

ಮತ್ತೊಂದು ವಿಚಾರ ಎಂದರೆ ನೇಕಾರರಿಗೆ ಹಸಿರು ಕಾರ್ಡುಗಳನ್ನು ಕೊಡುವ ವಿಚಾರ ಇದನ್ನು ಕೊಡಬೇಕೆಂದು ಈಗಾಗಲೇ ಮಂತ್ರಿಮಂಡಲದ ಸಭೆಯಲ್ಲಿ ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ಸರ್ವೆ ಮಾಡುತ್ತಿದ್ದೇವೆ. ಈ ವರ್ಷದಲ್ಲಿ ಹಸಿರು ಕಾರ್ಡ್‌ಗಳನ್ನು ಕೊಡುತ್ತೇವೆ.

ಇನ್ನೊಂದು ವಿಚಾರ ಎಂದರೆ ಕಲಬೆರಕೆ ವಿಚಾರ. ಇದು ತಮಗೂ ಗೊತ್ತಿದೆ. ಇವತ್ತು ನಮ್ಮ ಸಮಾಜದಲ್ಲಿ ಬಹಳಷ್ಟು ಮೌಲ್ಯಗಳನ್ನು ರೂಪಿಸಿಕೊಂಡು ಹೋಗುತ್ತಿದ್ದೇವೆ. ಆದರೆ ನಮ್ಮಲ್ಲಿ ಒಳ್ಳೆಯ ಮೌಲ್ಯಗಳ ಅಭಾವದಿಂದ ಇಂಥಾದ್ದು ನಡೆಯುತ್ತಿದೆ. ಸೇಂಗಾ ಎಣ್ಣೆಗೆ ಏನೇನೋ ಬೆರೆಸುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದು ಕಲಬೆರಕೆ ಎಂದು ಆಗುತ್ತದೆ. ಇದನ್ನು ಪತ್ತೆಮಾಡುವುದಕ್ಕೆ ಕೇಂದ್ರದವರು ಒಂದು ರೀಸರ್ಚ್ ಸೆಂಟರ್‌ನ್ನು ನಮಗೆ ಕೊಟ್ಟಿದ್ದಾರೆ. ಅದು ಯಲಹಂಕದ ಹತ್ತಿರ ಇದೆ. ಕಲಬೆರಕೆಯಾದ ವಸ್ತುವನ್ನು ಕೂಡಲೇ ನಾವು ಅಲ್ಲಿಗೆ ಕಳುಹಿಸಿ ಇನ್ವೆಸ್ಟಿಗೇಟ್ ಮಾಡಿ ತಪ್ಪಿತಸ್ಥರಿಗೆ ಶಿಕ್ಷೆ ಮಾಡುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಈಗ ಪ್ರತಿಯೊಂದು ಹಳ್ಳಿಯಲ್ಲೂ ಸೀಮೆಎಣ್ಣೆಯ ಅಭಾವ ಬಹಳ ತೀವ್ರವಾಗಿದೆ. ಇದರ ಬಗ್ಗೆ ಈ ಸಭೆಯಲ್ಲಿ ನಾವು ಅನೇಕ ಸಾರಿ ಚರ್ಚೆ ಮಾಡಿದ್ದೇವೆ. ಸೀಮೆ ಎಣ್ಣೆಯ ಹಂಚಿಕೆ ಪರಿಣಾಮಕಾರಿಯಾಗಿ ನಡೆಯುತ್ತಿಲ್ಲ, ಸೀಮೆ ಎಣ್ಣೆ ಎಲ್ಲೂ ಸಿಕ್ಕುತ್ತಿಲ್ಲ, ಹಳ್ಳಿಗಳಲ್ಲಿ ಬಹಳ ತೊಂದರೆಯಾಗಿದೆ. ತಾವೂ ಕೂಡ ಕೇಳಿರಬಹುದು, ನಂಜನಗೂಡಿನಲ್ಲಿ, ಚಾಮರಾಜನಗರದಲ್ಲಿ ಇದೇರೀತಿ ಇಡೀ ರಾಜ್ಯದ ಅನೇಕ ಹಳ್ಳಿಗಳಲ್ಲಿ ಬಹಳ ತೊಂದರೆ ಇದೆ. ಇದಕ್ಕೆ ಪ್ರತಿಯೊಂದು ಹಳ್ಳಿಯಲ್ಲೂ, ಪ್ರತಿಯೊಬ್ಬರಿಗೂ ಸೀಮೆ ಎಣ್ಣೆ ಸಿಕ್ಕುವಂತೆ ಏನು ವ್ಯವಸ್ಥೆ ಮಾಡಿದ್ದೀರಿ?

ಶ್ರೀ ಟಿ.ಎನ್. ನರಸಿಂಹಮೂರ್ತಿ : ಈ ಸಮಸ್ಯೆಯನ್ನು ನಾವೂ ಎದುರಿಸುತ್ತಿದ್ದೇವೆ. 1991ರ ಸೆಪ್ಟೆಂಬರ್ ತಿಂಗಳಿಗೆ ಕೇಂದ್ರದಿಂದ ಬರತಕ್ಕ ಅಲಾಟ್‌ಮೆಂಟ್ 46,445 ಕಿಲೋ ಲೀಟರ್‌ಗಳು. ಆದರೆ ನಮ್ಮ ಬೇಡಿಕೆ ಇರತಕ್ಕದ್ದು 67 ಸಾವಿರ ಕಿಲೋ ಲೀಟರ್‌ಗಳು. ಇದರ ಜೊತೆಗೆ ಈಗ ನಾವು ಕಾರ್ಡ್‌ಗಳನ್ನು ಕೊಡುತ್ತಿದ್ದೇವೆ ಹೆಚ್ಚು ಕಾರ್ಡ್‌ಗಳನ್ನು ಕೊಡುತ್ತಿರುವುದರಿಂದ, ಮತ್ತು ಅಲಾಟ್‌ಮೆಂಟ್ ಅಷ್ಟೇ ಇರುವುದರಿಂದ ಈ ಸಮಸ್ಯೆಯನ್ನು ನಾವು ಎದುರಿಸುತ್ತಿದ್ದೇವೆ. ಸಂತೆಗಳಲ್ಲಿ, ಇನ್ನೂ ಬೇರೆ ಬೇರೆ ಕಡೆಗಳಲ್ಲಿ ಲೀಟರ್‌ಗೆ 6 ರೂ, 9ರೂ.ನಂತೆ ಮಾರಾಟ ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರಾದ ಬನ್ನಿಕೋಡ್‌ರವರು ಹೇಳಿದರು. ನಾವು ಅದನ್ನು ವಿಚಾರ ಮಾಡುತ್ತಿದ್ದೇವೆ. ಲೀಗಲ್ ಮೆಟ್ರಾಲಜಿ ಡಿಪಾರ್ಟ್‌ಮೆಂಟ್‌ನ ಲೋಕಲ್ ಆಫೀಸರ್‌ಗಳಿದ್ದಾರೆ, ಫುಡ್ ಸೆಲ್‌ನವರಿದ್ದಾರೆ, ಫುಡ್ ಕಾರ್ಪೊರೇಷನ್‌ನವರು ಇದ್ದಾರೆ. ನಾನು ಅವರನ್ನು ಸ್ವಲ್ಪ

ಚುರುಕಾಗಿರುವಂತೆ ಎಚ್ಚರಿಸುತ್ತಿದ್ದೇನೆ. ನೀವು ನನ್ನನ್ನು ಎಚ್ಚರಿಸಿದಷ್ಟೂ ನಾನು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಅವರೂ ಯಾರೇ ಆಗಲಿ ಸರಿಯಾಗಿ ಕೆಲಸ ಮಾಡದಿದ್ದರೆ ಅವರನ್ನು ನಾನು ಅಷ್ಟು ಸುಲಭವಾಗಿ ಬಿಟ್ಟುಕೊಡುವುದಿಲ್ಲ ಎನ್ನತಕ್ಕ ಆಶ್ವಾಸನೆಯನ್ನು ನಾನು ಈ ಸದನಕ್ಕೆ ಕೊಡಬಯಸುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ : ತಾವು ಎಸ್‌ಸಿ; ಎಸ್‌ಟಿ; ಹಾಸ್ಟೆಲ್‌ಗಳಿಗೆ ಸಬ್ಸಿಡಿ ಅಕ್ಕಿಯನ್ನು ಸಪ್ಲೈ ಮಾಡುತ್ತಿದ್ದೀರಿ. ಅದೇರೀತಿ ಬ್ಯಾಕ್‌ವರ್ಡ್‌ಕ್ಲಾಸ್ ಹಾಸ್ಟೆಲ್‌ಗಳಿಗೂ ಸಪ್ಲೈ ಮಾಡುವುದಕ್ಕೆ ಯೋಚನೆ ಮಾಡಿದ್ದೀರಾ?

ಶ್ರೀ ಟಿ.ಎನ್. ನರಸಿಂಹಮೂರ್ತಿ : ನಾನು ಉತ್ತರವನ್ನು ಹೇಳುವಾಗ ಮಾನ್ಯ ಸದಸ್ಯರಾದ ನಾರಾಯಣಸ್ವಾಮಿಯವರು ಸಭೆಯಲ್ಲಿರಲಿಲ್ಲ ಎಂದು ಕಾಣಿಸುತ್ತದೆ. ಈ ಸೂಚನೆ ಕ್ಯಾಬಿನೆಟ್ ಮುಂದೆ ಹೋಗಬೇಕಾಗುತ್ತದೆ. ಏಕೆಂದರೆ ಬ್ಯಾಕ್‌ವರ್ಡ್‌ಕ್ಲಾಸ್ ಹಾಸ್ಟೆಲ್‌ಗಳಿಗೆ ಮೈನಾರಿಟಿ ಕಮ್ಯುನಿಟಿ ಹಾಸ್ಟೆಲಗಳಿಗೂ ಇದನ್ನು ಕೊಡಬೇಕೇ ಎಂಬುದನ್ನು ನಾವು ಚಿಂತನೆ ಮಾಡುತ್ತಿದ್ದೇನೆ. ಕ್ಯಾಬಿನೆಟ್ ಅನುಮತಿಯನ್ನು ಪಡೆದ ನಂತರ ಮುಂದಿನ ಶೈಕ್ಷಣಿಕ ವರ್ಷದಿಂದ ಇದನ್ನು ಜಾರಿಗೆ ಕೊಡಲು ಅನುಕೂಲವಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಇದ್ದಾರೆ, ನನ್ನ ಮಾತುಗಳನ್ನು ಕೇಳಿಸಿಕೊಂಡಿದ್ದಾರೆ, ಮುಂದಿನ ಚಿತ್ರವನ್ನು ತಾವು ಪರದೆಯ ಮೇಲೆ ನೋಡಿ.

12.45 ಪಿ.ಎಂ

ಶ್ರೀ ಬನ್ನಿಕೋಡ್ ಎಚ್. ಬಸಪ್ಪ : ಇದು ಯಾವ ಚಿತ್ರ?

ಅಧ್ಯಕ್ಷರು : ಮುಗಿದದ್ದು ಯಾವುದು, ಪ್ರಾರಂಭವಾದುದು ಯಾವುದು. ಮುಗಿದದ್ದು ಯಾವ ಚಿತ್ರ, ಪ್ರಾರಂಭವಾಗತಕ್ಕಂಥದ್ದು ಯಾವ ಚಿತ್ರ?

ಶ್ರೀ ಟಿ.ಎನ್. ನರಸಿಂಹಮೂರ್ತಿ : ಅವರು ಕೊಟ್ಟಿರುವ ಕೆಲವು ಉಪಯುಕ್ತವಾದ ಸಲಹೆಗಳನ್ನು ಜಾರಿಗೆ ಕೊಡತಕ್ಕಂಥದ್ದರಲ್ಲಿ ಮುಂದಿನ ಚಿತ್ರ ನೋಡಿ ಎಂದೆ.

ಶ್ರೀ ಚೌವಾಣ್ ವಿಠ್ಠಲರಾವ್ ಯಶವಂತರಾವ್ : ನಾನು ಹಿಂದೆನೂ ಕೂಡ ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಶಹಬಾದ್ ಮತ್ತು ವಾಡಿಯಲ್ಲಿ ಕೆಲವು ಫೇರ್‌ಪ್ರೈಸ್ ಷಾಪ್‌ಗಳು ತಮ್ಮ ರೇಷನ್ ಕಾರ್ಡುಗಳನ್ನು ಎಲ್ಲ ವಾಪಸ್ ಕಲೆಕ್ಟ್ ಮಾಡ್ಕೊಂಡು ರಿನ್ಯೂವ್ ಮಾಡಿಕೊಡುತ್ತೇವೆಂದು ಹೇಳಿ, ಚೆಕ್ ಮಾಡಿಕೊಡುತ್ತೇವೆಂದು ಹೇಳಿ 400 ರೇಷನ್ ಕಾರ್ಡ್ಸನ್ನು ವಾಪಸ್ ತೆಗೆದುಕೊಂಡು ಅದರಲ್ಲಿ 200 ಹರಿದು ಬೀಸಾಕಿ 200ನ್ನು ವಾಪಸ್ ಕೊಟ್ಟು, 400ಕ್ಕೂ ಅಲೋಕೇಷನ್ ಪಡೆಯುತ್ತಿರುತ್ತಾರೆ. ಈ ವಿಷಯದಲ್ಲಿ ಮಾನ್ಯ ಮಂತ್ರಿಗಳು ಎನ್‌ಕ್ವಯರಿ ಮಾಡಿ ಬಡವರಿಗೆ ರೇಷನ್ ಕಾರ್ಡ್ ಸಿಗುವಂತೆ ಮಾಡುತ್ತೇವೆಂದು ಹೇಳಿದ್ದರು. ಅದರಂತೆ ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಮಾನ್ಯ ಸಭಾಪತಿಯವರೇ ಮಾನ್ಯ ಸದಸ್ಯರಾದ ಚವಾಣ್‌ರವರು ಶಹಬಾದ್ ಕ್ಷೇತ್ರದಿಂದ ಬರತಕ್ಕಂಥವರು. ಮೀಸಲು ಕ್ಷೇತ್ರದಿಂದ ಬರತಕ್ಕಂಥವರು. ಅವರ ಕ್ಷೇತ್ರದ ವಾಡಿಯಲ್ಲಿ ಕಾರ್ಮಿಕರಿಗಾಗಿ ಕೊಟ್ಟಿರತಕ್ಕಂಥ ಈ ಕಾರ್ಡಿನ ಅನ್ಯಾಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಮ್ಮ ಸೆಕ್ರೆಟರಿಯವರು ಇದರ ಬಗ್ಗೆ ಹೇಳಿದ್ದಾರೆ. ಇವತ್ತೆ ಟೆಲೆಕ್ಸ್ ಮೆಸೇಜ್ ಜಿಲ್ಲಾಧಿಕಾರಿಗಳಿಗೆ ಗುಲ್ಬರ್ಗಾಕ್ಕೆ ಕಳುಹಿಸಿಕೊಟ್ಟು, ಆ ಜಿಲ್ಲಾಧಿಕಾರಿ ಸ್ಥಳಕ್ಕೆ ಹೋಗಿ ತಮ್ಮ ಒಂದು ಸಮಸ್ಯೆ ಏನಿದೆ ಅದರ ಬಗ್ಗೆ ಮಾತನಾಡಿ ಇತ್ಯರ್ಥ ಮಾಡಲಿಕ್ಕೆ ನಾನು ಸೂಚನೆ ಕೊಡುತ್ತೇನೆಂಬ ಭರವಸೆಯನ್ನು ಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ ಈಗಾಗಲೇ ಮಾನ್ಯ ಸಚಿವರು ಅನೇಕ ಸಂದರ್ಭದಲ್ಲಿ ಹೊಸ ಗ್ರೀನ್ ಕಾರ್ಡ್‍ಗಳನ್ನು ಕೊಡುತ್ತೇವೆನ್ನತಕ್ಕಂಥ ಆಶ್ವಾಸನೆಯನ್ನು ಕೊಟ್ಟಿದ್ದರು. ಮಾನ್ಯ ಸಚಿವರು ಉತ್ತರ ಹೇಳಬೇಕಾದರೆ ಸರ್ವೆ ಮಾಡಿಸಬೇಕಾಗುತ್ತದೆ. ಸರ್ವೆ ಮಾಡಿಸಿದ್ದಾದಮೇಲೆ ಕೊಡುತ್ತೇವೆ ಎನ್ನುವ ಮಾತನ್ನು ಹೇಳುತ್ತಿದ್ದೀರಿ, ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಸರ್ವೆಯೆಲ್ಲ ಮುಗಿದು ಅಂತಿಮವಾಗಿ ನಿಮ್ಮ ಇಲಾಖೆ ಮುಂದಿಟ್ಟಿದ್ದಾರೆ, ಹೆಚ್ಚುವರಿ ಕಾರ್ಡುಗಳು ಒಂದೊಂದು ತಾಲ್ಲೂಕಿಗೆ 4-5 ಸಾವಿರ ಬರುತ್ತವೆ. ಅವರಿಗೆ ನಾವು ಕಾರ್ಡುಗಳನ್ನು ಕೊಡುತ್ತೇವೆಂದು ಹೇಳಿಬಿಟ್ಟಿದ್ದೇವೆ. ಈಗ ಅದನ್ನು ಕೊಡದಿದ್ದರೆ ತೊಂದರೆಯಾಗುತ್ತದೆ. ತಾವು ಯಾವುದಾದರು ಒಂದು ಕಾರ್ಯಕ್ರಮ ಹಾಕಿ ಇಂಥ ದಿವಸ ಕೊಡುತ್ತೇವೆನ್ನುವ ಮಾತನ್ನು ಹೇಳಿಲ್ಲ. ಆದ್ದರಿಂದ ಇಂಥ ದಿವಸ ಖಚಿತವಾಗಿ ಕೊಡುತ್ತೇವೆನ್ನುವ ಮಾತನ್ನು ತಾವು ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಮಾನ್ಯ ನಮ್ಮ ಸದನದ ಹಿರಿಯ ಮುಖಂಡರೂ, ಸದಸ್ಯರಾದ ಶ್ರೀಮಾನ್ ರಂಗನಾಥ್‍ಜಿಯವರು ಮತ್ತು ಶ್ರೀಮಾನ್ ಉಚ್ಚಮಾಸ್ತಿಗೌಡರು ಆ ರೀತಿ ಹೇಳಿದಾಗ ನಾನು ಹೇಳಿದೆ. ಇದನ್ನು ಜಾಗ್ರತೆ ಮಾಡಲು ಸೂಚನೆ ಕೊಡುತ್ತೇನೆಂದು ಹೇಳಿದಾಗ; ಅವರೆಲ್ಲರು ಮಂಡಿಸಿದ ವಾದವನ್ನು ಕೇಳಿದ ಕೂಡಲೇ ನನ್ನ ಕಚೇರಿಗೆ ಹೋಗಿ ಜಿಲ್ಲಾಧಿಕಾರಿಗಳಿಗೆಲ್ಲ ಸೂಚನೆ ಕಳುಹಿಸಿಕೊಟ್ಟು ಎಲ್ಲೆಲ್ಲಿ ಹಸಿರುಕಾರ್ಡುಗಳನ್ನು ಕೊಡುವುದು ಪೆಂಡಿಂಗ್ ಇದೆ, ಅವನ್ನೆಲ್ಲ ಕೊಡಿ ಎನ್ನುವ ಸೂಚನೆ ಕೊಟ್ಟಿದ್ದೇನೆ. ಮಾನ್ಯ ಜಯಚಂದ್ರರವರ ಜಿಲ್ಲೆಗೂ ಇದು ಅನ್ವಯವಾಗುತ್ತದೆ. ಮತ್ತೇ ಏತಕ್ಕಾಗಿ ರಿಸರ್ವ್ ಮಾಡಬೇಕೆಂದು ಹೇಳಿದ್ದೇನೆಂದರೆ ಈಗ 3,500 ರೂಪಾಯಿ ಆದಾಯ ಮಿತಿ ಇದೆ. ಆ ಮಿತಿಯನ್ನು ವಿಮರ್ಷೆ ಮಾಡಿ ಅದು 6,400 ರೂಪಾಯಿಗೋ, ಎಲ್ಲಿಗೋ ತೆಗೆದುಕೊಂಡು ಹೋದಾಗ ಅದನ್ನು ಮತ್ತೆ ರಿಸೇರ್ವೆ ಮಾಡಬೇಕಾಗುತ್ತದೆ. ಆ ಒಂದು ಕಾಂಟೆಸ್ಟ್‍ಮೇಲೆ ಹೇಳಿದ್ದೇನೆ ಹೊರತು, ಬಹುಶಃ ಏನು ಹಾಲಿ ಕಾರ್ಡುಗಳು ರೆಡಿಯಾಗಿದೆ ಅದನ್ನು ಕೊಡಬೇಡಿ ಎಂದು ಸೂಚನೆ ಕೊಟ್ಟಿಲ್ಲ. ಈಗಲೂ ಕೊಡಿ ಎಂದು ಹೇಳುತ್ತೇನೆ.

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೇ ನನ್ನ ಮತ ಕ್ಷೇತ್ರದಲ್ಲಿ ಆಯಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ವ್ಯಕ್ತಿಗಳಿಗೆ ಅಂದರೆ ಅನ್‍ಎಂಪ್ಲಾಯ್‍ಮೆಂಟ್ ಗ್ರಾಜಿಯೇಟ್ಸ್‍ಗಳಿಗೆ ಈ ಸೀಮೆ ಎಣ್ಣೆ ವಿತರಣೆ ಮಾಡಲಿಕ್ಕೆ ಆಹಾರ ವಿತರಣೆ ಮಾಡಲಿಕ್ಕೆ ಅವಕಾಶ ಮಾಡಿಕೊಡಿ ಎಂದು ಮನವಿ ಪತ್ರ ಕೊಟ್ಟಾಗಲೂ ಕೆಲವು ಅಧಿಕಾರಿಗಳು ಈ ಬೆಂಗಳೂರು ಸಿಟಿಯಲ್ಲಿರತಕ್ಕಂಥವರಿಗೆ ಕೊಡುತ್ತಿದ್ದಾರೆ. ಆದರೆ ಬೆಂಗಳೂರು ಸಿಟಿಯಲ್ಲಿದ್ದುಕೊಂಡು ಸೀಮೆಎಣ್ಣೆಯನ್ನು ಹೋಟೆಲ್‍ಗೂ ಮತ್ತೊಂದು ಕಡೆಗೆ ಮಾರಾಟ ಮಾಡುತ್ತಿದ್ದಾರೆ. ಅದೇ ರೀತಿ ಆಹಾರದ ವಿತರಣೆಯನ್ನು ಸಹ ಮಾಡುತ್ತಿಲ್ಲ, ಇದರ ಬಗ್ಗೆ ಮಾನ್ಯ ಸಚಿವರು ಸೂಕ್ತ ಕ್ರಮ ಕೈಗೊಳ್ಳಬೇಕು. ಆಯಾಕ್ಷೇತ್ರದಲ್ಲಿ ಏನು ವ್ಯಕ್ತಿಗಳನ್ನು ಸೂಚಿಸಿ ಇಂಥವರಿಗೆ ಅರ್ಹರಾದವರಿಗೆ ಕೊಡಿ ಎಂದು ಹೇಳುತ್ತೇವೆ, ಅದನ್ನು ಪಾಲನೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತಾರೆ ಅದನ್ನು ಸೂಚಿಸಬೇಕೆಂದು ಕೇಳುತ್ತೇನೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಮಾನ್ಯ ಅಧ್ಯಕ್ಷರೇ ನಾನು ವಸತಿ ಹಾಗೂ ನಗರಾಭಿವೃದ್ಧಿ ಸಚಿವನಾಗಿ ಈ ಸದನದಲ್ಲಿ ರಿಪ್ಲೈ ಮಾಡುವಾಗ ಇದೇ ಸಂದರ್ಭದಲ್ಲಿ ಪರಿಶಿಷ್ಟಜಾತಿ ಪರಿಶಿಷ್ಟ ಪಂಗಡದವರಿಗೆ ಎಲ್ಲೆಲ್ಲಿ ಗೃಹ ನಿರ್ಮಾಣ ಮಂಡಳಿಯವರು

ಮನೆಗಳನ್ನು ಕಟ್ಟುತ್ತಾರೆ ಅಲ್ಲಿ ಶೇಕಡಾ 20 ರಷ್ಟು ಮೀಸಲಾತಿ ಮಾಡಬೇಕೆಂದು ಒಂದು ಅನೌನ್ಸ್‌ಮೆಂಟ್ ಮಾಡಿದ್ದೆ. ಬೆಂಗಳೂರು ಪ್ರಾಧಿಕಾರ ಇರಬಹುದು, ಯಾವುದೇ ನಗರಾಭಿವೃದ್ಧಿ ಪ್ರಾಧಿಕಾರ ಇರಬಹುದು. ಅಲ್ಲೆಲ್ಲ ಸೈಟುಗಳನ್ನು ಕೊಡುವಾಗಲೂ ಕೂಡ 20 ಪರ್ಸೆಂಟ್ ಮೀಸಲಾತಿ ಕೊಡಬೇಕೆಂದು ಸೂಚನೆಯನ್ನು ಮಾಡಿ ಈಗ ಶೇಕಡಾ 20 ರಷ್ಟು ಸೈಟ್‌ಗಳನ್ನು ಮನೆಗಳನ್ನು ಮೀಸಲಾತಿ ಇಡಬೇಕೆಂಬ ಬಗ್ಗೆ ಕ್ಯಾಬಿನೆಟ್ ಡಿಸಿಷನ್ ಆಗಿದೆ. ಮಾನ್ಯ ಅಂಜನಮೂರ್ತಿಯವರು ಸಲಹೆ ಮಾಡಿರುತ್ತಾರೆ, ನ್ಯಾಯಬೆಲೆ ಅಂಗಡಿಗಳು ಮತ್ತು ರಿಟೇಲ್ ಕೆರೋಸಿನ್ ಆಕರ್ಸ್ ಏನು ಇದ್ದಾರೆ, ಅವರಿಂದ ಬಹಳಷ್ಟು ಮನವಿ ಪತ್ರಗಳು ಬಂದಿದೆ. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದಲ್ಲಿ ವಿದ್ಯಾವಂತರಾಗಿ ನಿರುದ್ಯೋಗಿಯಾಗಿರತಕ್ಕಂಥವರಿಗೆ ಮೀಸಲಾತಿ ಕೊಡಬೇಕೆಂದು ಹೇಳಿ. ಇದು ಅಂತಿಮ ತೀರ್ಮಾನ ಅಲ್ಲ, ಇದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಆ ವರ್ಗದವರಿಗೆ ಕೆರೋಸಿನ್ ಡೀಲರ್ಷಿಪ್ ಇದೆ ಅಥವಾ ರೀಟೈಲ್ ಬಿಸಿನೆಸ್ ಮಾಡುತ್ತಿದ್ದಾರೆ, ಅದನ್ನು ಶೇಕಡ 20 ರಷ್ಟು ಮಂದಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಕೊಡಬೇಕೆಂಬ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ಹಾಗೆಯೇ ನ್ಯಾಯಬೆಲೆ ಅಂಗಡಿಗಳನ್ನು ಕೂಡ ಶೇಕಡ 20 ರಷ್ಟು ಮಂದಿ ಯುವಕ ಯುವತಿಯರಿಗೆ ಕೊಡಬೇಕೆಂಬ ನೀತಿಯನ್ನು ಸರ್ಕಾರ ಇಷ್ಟರಲ್ಲೇ ಪ್ರಕಟ ಮಾಡುತ್ತದೆ.

ಶ್ರೀ ಅಂಜನಮೂರ್ತಿ : ಹೊರಗಡೆಯವರಿಗೆ ಕೆರೋಸಿನ್ ಡೀಲರ್‌ಷಿಪ್ ಕೊಡುತ್ತಿದ್ದಾರೆ. ಅದನ್ನು ಲೋಕಲ್‌ನವರಿಗೆ ಕೊಡಿ, ಅವರು ಚೆನ್ನಾಗಿ ವಿತರಣೆ ಮಾಡುತ್ತಾರೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ಹೇಳಿದರೆ ಅದನ್ನು ಸರಿಪಡಿಸುತ್ತೇನೆ.

ಶ್ರೀ ಎಸ್. ರುದ್ರಪ್ಪ : ನನ್ನ ಕ್ಷೇತ್ರವಾದ ತುರುವೇಕೆರೆಯಲ್ಲಿ ಹೋದ ತಿಂಗಳು ಸೀಮೆಎಣ್ಣೆ ಬಾರದೆ ಬಹಳ ತೊಂದರೆಯಾಯಿತು. ಬ್ಲಾಕ್‌ನಲ್ಲಿ ಲೀಟರ್ ಒಂದಕ್ಕೆ 7-8 ರೂಪಾಯಿ ಬೆಲೆಗೆ ಮಾರಾಟ ಮಾಡಿದ್ದಾರೆ. ಸೀಮೆಎಣ್ಣೆ ಅಭಾವ ನಮ್ಮ ಕ್ಷೇತ್ರದಲ್ಲಿ ಬಹಳ ಇದೆ..

ಅಧ್ಯಕ್ಷರು : ಸೀಮೆ ಎಣ್ಣೆಯ ವಿಚಾರವನ್ನು ಈಗಾಗಲೇ ಹೇಳಿ ಆಗಿದೆ. ಸಾಕು, ಅಭಾವವನ್ನು ಸರಿ ಮಾಡುತ್ತಾರೆ.

SRI AZEEZ SAIT (Minister for Transport & Wakfs): Mr. Speaker, Sir, I am grateful to the hon'ble members of this House for having brought good suggestions and complaints too. What I expected particularly from my hon'ble friend Mr. sindhia since he was holding the portfolio of Transport but to my expectations I don't think Mr. Sindhia has done any justice and I only request having heard every member without interrupting particularly Mr. Sindhia to bear with me and to listen to me whatever I am going to tell him and in the end if he wants he can seek some clarifiactions.

SRI. P.G.R. SINDHIA: Transport took a wrong start.

SRI AZEEZ SAIT: That is why I requested you not to interrupt me. As a matter of fact politics has got certain aims and that should be within the

orbit but at the same time we should not forget the reality. Transport Corporation is a commercial organisation. How this has been misused due to pressures to satisfy some members or for some other purposes. Now we are guided by certain principles, policies. The Planning Commissioner wants that there should be increase with operational costs once in three years. The then Government as confessed by Mr. Sindhia himself inspite of all the difficulties we did not hike the prices. Today I would like to draw his attention and the attention of the hon'ble House, from 1985 up to 1990-91 the increase is . of the order of 91%, Whether it may be petroleum hike or pertroleum products, oil, greese, tyres, diesel earlier. What is the increase? They have given 91% increase with 4% D.A. in the year 1990. After 1985 26.4% hike has been given. But continued increase by Government of India has not been taken into consideration. Our friends at the fag end of the Government just going before the election they have given concession, various types of concession to students and elderly citizens of above 60 years to the tune of 72 crores. Probably, by 91, it may come to 75 crores. The tax as Mr. Sindhia himself has confessed it is I who increased the tax to KSRTC only because the Government was feeling little embarassed for want of finance. One side the private operators pays 12%, the KSRTC have to pay 17%. Now here in the world city services are under deficit and they have all been subsidised by the Corporation and by the Government. In the same country for city services the tax ratio is 40.256% but here we are forced to pay 17% even for city services. At the same time they want city services also. They want not only city services they want city services into urban constituencies beyond the corporation limits. ಒಂದು ಗಾದೆ ಇದೆ. ಹಸು ಚಿಕ್ಕದಾಗಿರಬೇಕು, ಹುಲ್ಲು ಬಹಳ ಕಡಿಮೆ ತಿನ್ನಬೇಕು, ಹಾಲು ಮಾತ್ರ ಜಾಸ್ತಿ ಕೊಡಬೇಕು ಎಂದು.

This philosophy, I can't understand wheather I am here today in Government, wheather this Government is there or not, we have to go with the reality before the people. ಯಾವರೀತಿ ನೀವು ಕಂಟ್ರೋಲ್ ಮಾಡಿತ್ತೀರಿ? ಪಾಸ್‌ಗಳಿವೆ. ಮೊನ್ನೆ ತಾನೇ ನಾವು ಮಾಡಿದ್ದೇವೆ.

SRI. P.G.R. SINDHIA : ನಾನು ಕ್ವೆಶ್ಚನ್ ಕೇಳುವುದಕ್ಕೆ ಉಳಿದೇ ಇಲ್ಲ.

SRI AZEEZ SAIT : I beg of you not to interrupt me. You can ask me any question afterwards.

SRI. P.G.R. SINDHIA : I understand your prelude very much.

SRI AZEEZ SAIT: So, you have come to the conclusion.

SRI AZEEZ SAIT : I know what you want to do and what for you are speaking all these things..

SRI AZEEZ SAIT : Will you please bear with me? Shall I get you some glass of water?

SRI P.G.R. SINDHIA : You want?

SRI AZEEZ SAIT : I don't want. I said, you.

MR. SPEAKER : No, no. I will get you two glasses of ice cooled water for both of you, one for former Transport Minister and another for the present Transport Minister.

SRI AZEEZ SAIT : Sir, he is putting me into a wrong tract. I will be losing my trend. I know very much that he can do that. What I am trying to say is, ನನ್ನ ಟ್ರೆಂಡ್ ಹೋಗುತ್ತದೆ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಒಬ್ಬ ವಿದ್ಯಾರ್ಥಿ ಅಲ್ಲದೇ ಇದ್ದವನು ಕಾಲೇಜು ವಿದ್ಯಾರ್ಥಿ ಎಂದು ಸರ್ಟಿಫಿಕೇಟ್ ತಂದು ಪಾಸ್ ಪಡೆದುಕೊಂಡಿರುವುದು ನಮ್ಮ ಮುಂದಿದೆ. ಬೆಳಗ್ಗೆ ಅಧಿಕಾರಿಗಳು; ಸಾಯಂಕಾಲ ಸಂಜೆ ಕಾಲೇಜ್ ವಿದ್ಯಾರ್ಥಿಗಳು. ಕನ್‌ಸೇಷನ್ ಕೊಡಬಾರದು ಎಂದು ಹೇಳುವುದಿಲ್ಲ. ಇರುವವರಿಗೂ ಕೊಡಬೇಕು ಇಲ್ಲದೇ ಇರುವವರಿಗೂ ಕೊಡಬೇಕು ಎಂದರೆ ಕೊಡೋಣ. ತಮಿಳುನಾಡಿನಲ್ಲಿ ಏನು ಕನ್‌ಸೆಷನ್ ಇದೆ?

50% of the fare is being given on concession. That 50% concession is being reimbursed by the Government of Tamil Nadu. But what our friends did? Without re-imbursement from the Government, they increased the tax from 12% to 17%. They gave concession to the tune of 72 crores. ಹೀಗೆ ಮಾಡಿ ಇವತ್ತು ಕೆ.ಎಸ್.ಆರ್.ಟಿ.ಸಿ. ಪರಿಸ್ಥಿತಿ ಹೀಗೆ ಬಂದಿದೆ.

SRI P.G.R. SINDHIA: In spite of that I did not make losses. You must know that.

SRI AZEEZ SAIT : There have been losses. I will give your balance sheet. It is not I/who was there. I was in Parliament. Even after planning for next 25 years. K.S.R.T.C. is unable to meet the increased traffic need. Sir, I have appointed a technical committee because whatever feelings I may have, practical experience, whatever experience Mr. Sindhia may have as a civil engineer or mechanical engineer, but everything should go through proper norms. I have appointed four persons who are doctorate in transport. V.C.M.D.

is the Chairman. Dr. Padan, Director, Central Institute of Road Transport, Poona.

Dr. N.S. Srinivasan, Executive director, National Transportation Planning & Research Centre, Trivendram, Sri V. Nagaraj, Adviser, ASRTU; Shri Y. Sathyanarayan, Executive Director, APSRTC, Hyderabad and CTM, KSRTC, as Member Secretary. This will be a guideline for us. We only say that Tamil Nadu has got 17 Companies but do you know the inner fact of the Companies? In spite of the Tamil Nadu subsidising those Companies, they are running under the loss. You told me something about J.C.Lynn's Report. J.C. Lynn Committee report deals basically with BTS to mobilise funds for imporoving services. I have already decided to bifurcate BTS. It is under consideration of the other components of World Bank project are also under consideration report will be sent to World Bank. Reports are awaited from other Depts, after which consolidated ತಾವು ಏನೂ ಇನ್‌ಕ್ರೀಸ್ ಮಾಡಲೇಬಾರದು ಎಂದು ಹೇಳಿದ್ದೀರಿ ಅದಕ್ಕೆ ಸಧ್ಯಕ್ಕೆ ಬಿಡುತ್ತೇವೆ. ಅದಕ್ಕೆ ಬೇಕಾದರೆ ಸ್ಪೆಷಲ್ ಕಮಿಟಿ ಫಾರ್ಮ ಮಾಡುತ್ತೇನೆ. ಎಲ್ಲಾ ವಿರೋಧ ಪಕ್ಷದ ನಾಯಕರಿಗೆ ಕರೆಯಿಸಿ ಮಾತನಾಡುತ್ತೇನೆ. ನೀವು ಇವತ್ತು ರಾಜಕೀಯವಾಗಿ ಏನೋ ಹೇಳಬಹುದು. ದುರಾದೃಷ್ಟ ಏನಾಗಿದೆ? ಏನೇ ಬರಲಿ KSRTC is victim on all sides.

ಎಲ್ಲಾ ಕಡೆ ಬಡಿಯುತ್ತಾರೆ, ಹೊಡೀತಾರೆ. ಅರಕಲಗೂಡಿನಲ್ಲಿ ಬಸ್‌ಸ್ಟಾಂಡ್ ಕಟ್ಟಿದರು. ಅದನ್ನು ಕಟ್ಟುವವರೆಗೂ ಏನೂ ಯಾರೂ ಹೇಳಲಿಲ್ಲ. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಕಟ್ಟಿಯಾದಮೇಲೆ ಬಸ್‌ಸ್ಟಾಂಡ್ ಇನಾಗುರೇಟ್ ಆಗಬಾರದು ಎಂದು ಒಂದು ಭಾಗದವರು ಹೇಳಿದರೆ, ಇನ್ನೊಂದು ಸೆಕ್ಷನ್ ಅದು ಆಗಬೇಕು ಎನ್ನುತ್ತಾರೆ. 3 ವರ್ಷದಿಂದ ಬಸ್ ಸ್ಟಾಂಡ್ ಬಿಲ್ಡಿಂಗ್ ಮಾಡಿ ಇಟ್ಟಿದ್ದೇವೆ. ಆದರೆ ಅಲ್ಲಿಗೆ ಬಸ್ ತೆಗೆದುಕೊಂಡು ಹೋಗುವುದಕ್ಕೆ ಆಗುತ್ತಿಲ್ಲ. ಅಲ್ಲಿ ಜನ ಕೆಲವರು ಬೇಕು ಎನ್ನುತ್ತಾರೆ, ಕೆಲವರು ಬೇಡ ಎಂದು ಹೇಳುತ್ತಾರೆ.

ಬೆಳಗಾಂ ಬಾರ್ಡರ್‌ನಲ್ಲಿ ಊರಿನಲ್ಲಿ ಬಸ್‌ಸ್ಟಾಂಡ್ ಕಟ್ಟಿದ್ದಾರೆ. ಅಲ್ಲಿ 3 ವರ್ಷ ಆಗಿದೆ ಬಸ್‌ಸ್ಟಾಂಡ್ ಮಾಡಿ. ಇವತ್ತಿನವರೆವಿಗೂ ಅದರ ಇನಾಗ್ಯುರೇಟ್ ಆಗಿಲ್ಲ. ಏಕೆ ಆಗಿಲ್ಲ? That road is narrow. The approach road to the bus stand is narrow.ಒಬ್ಬ ಮಾನ್ಯ ಸದಸ್ಯರು ಹೇಳಿದರು ಜಮೀನು ಇದೆ ಎಂದು. ಸಕಲೇಶಪುರದಲ್ಲಿ ಒಂದು ಜಮೀನು ಹಿಂಸೆ ಮಾಡಿ ತೆಗೆದುಕೊಂಡರು ಕೆಎಸ್‌ಆರ್‌ಟಿಸಿ ನವರು, ಅದು ಟ್ಯಾಂಕ್‌ಬೆಡ್. ಮೊನ್ನೆ ಮೀಟಿಂಗ್ ಮಾಡಿ, ಎಂಎಲ್‌ಎ ಗುರುದೇವ್ ಅವರನ್ನು ಕರೆಯಿಸಿ, ಅಲ್ಲೇ ಇರುವ ಟ್ರಾವಲ್ಸ್ ಬಂಗ್ಲೋ ಜಾಗವನ್ನು ತೆಗೆದುಕೊಂಡೆವು. ಅಲ್ಲಿ ಇರುವ ಜಾಗದಲ್ಲಿ ಬಸ್‌ಸ್ಟಾಂಡ್ ಕಟ್ಟಿಸುವುದಕ್ಕೆ ಆಗುತ್ತಾ ಇಲ್ಲ. ಅಲ್ಲಿ ನೀರು ಇದೆ. ಟ್ಯಾಂಕ್ ಬೆಡ್‌ನ ನಾಲ್ಕೂವರೆ ಎಕರೆ ತೆಗೆದುಕೊಂಡಿದ್ದಾರೆ. ಅಲ್ಲಿ ಕಟ್ಟಿದರೆ ಶ್ರಿಂಕ್ ಆಗುವ ಭಯ ಇದೆ. ಅದರ ಬದಲು ಟ್ರಾವಲರ್ಸ್ ಬಂಗ್ಲೋ ಜಾಗ ತೆಗೆದುಕೊಂಡು ಅವರಿಗೆ ಬೇರೆ ಕಡೆ 10 ಎಕರೆ ಜಮೀನು ಕೊಡಿಸಿ, ಇದರ ವ್ಯಾಲ್ಯೂ ಅವರಿಗೆ ಕೊಡುತ್ತೇವೆಂದು ಮಾಡಿದ್ದೇವೆ. ಇನ್ನು ಗ್ರೀನ್ ಬಸ್ ಕಾನ್‌ಸೆಪ್ಟ್

ಬಹಳ ಚೆನ್ನಾಗಿದೆ. ರೈತರಿಗಾಗಿ ಹಸಿರು ಬಣ್ಣದ ಬಸ್ ಮಾಡಿದರು. It has proved to be an utter failure and heavy losses.

ನಾನು ಅಂಕಿ ಅಂಶ ನೋಡಿ ಹೇಳುತ್ತಿದ್ದೇನೆ. ನನ್ನ ಅಧಿಕಾರಿಗಳು ಬರೆದಿದ್ದು ನಾನು ಓದುತ್ತಾ ಇಲ್ಲ. ನಾನು ಅಂಕಿಅಂಶ ತರಿಸಿ ಅದನ್ನು ನೋಡಿ ಹೇಳುತ್ತಿದ್ದೇನೆ. We have planned to introduce 1200 buses. This year, another 800 buses, for which we are trying to raise funds. The position will improve.

ನಿನ್ನೆ ಮಾತನಾಡಿದಾಗ ಸಿಂಧ್ಯಾ ಅವರು ಹೇಳಿದರು, ದಯಮಾಡಿ ಲೀಸಿಂಗ್ ಕಂಪೆನಿಯಿಂದ ತೆಗೆದುಕೊಳ್ಳಬೇಡಿ ಎಂದು ಹೇಳಿದರು. ಲೀಸಿಂಗ್ ಕಂಪೆನಿಯಿಂದ ತೆಗೆದುಕೊಳ್ಳದೆ ಇದ್ದರೆ ನಮ್ಮಲ್ಲಿ ಬಂಡವಾಳ ಇರಬೇಕು. ಇವತ್ತಿನ ನ್ಯೂ ಕಾನ್‌ಸೆಪ್ಟ್, ಇಂಡಸ್ಟ್ರಿಯಲಿಸ್ಟ್ ಸಹ ಲೀಸಿಂಗ್ ಮೇಲೆ ತೆಗೆದುಕೊಳ್ಳುತ್ತಿದ್ದಾರೆ. Now we are going to a modern world of science and technology. Any business-man will be in utter failure who puts his own capital in business.

ಈಗ ಇಂಡಸ್ಟ್ರಿಗಳನ್ನು ತೆಗೆದುಕೊಂಡರೆ, ಅವರದು ಸ್ವಲ್ಪ ಪರ್ಸೆಂಟೇಜ್ ಇದ್ದರೆ, ಕೆಎಫ್‌ಸಿ ಕೆಎಸ್‌ಐಡಿಸಿ ಬ್ಯಾಂಕು ತೆಗೆದುಕೊಂಡು ಮಾಡಿದರೂ ಬುದ್ಧಿಬೇಕು. ಆದರೆ ರಾಜಕಾರಣದಲ್ಲಿ ಏನಾಗಿದೆ ದುರದೃಷ್ಟ ಯಾರೂ ಶಾಶ್ವತ ಇಲ್ಲ, ನಾನು ಉತ್ತರ ಕೊಡುವುದಕ್ಕೆ ಮೊದಲೇ ಮಂತ್ರಿಯಾಗಿರುತ್ತೇನೋ ಇಲ್ಲವೋ. ನಾನು ಕರ್ನಾಟಕ ಸಾರಿಗೆ ಸಂಸ್ಥೆಯ ಛೇರ್ಮನ್ ಆಗಿ ಇರುತ್ತೇನೋ ಇಲ್ಲವೋ. ಐದು ವರ್ಷ ಅಂತು ಅಸೆಂಬ್ಲಿಯ ಸದಸ್ಯನಾಗಿರುತ್ತೇನೆ. ಅವರ ಅವಧಿಯಲ್ಲಿ ಮಾನ್ಯ ರಾಮಕೃಷ್ಣಹೆಗಡೆಯವರು ಚೀಫ್ ಮಿನಿಸ್ಟರ್ ಆಗಿದ್ದ ಕಾಲದಲ್ಲಿ ನಮ್ಮ ಸ್ನೇಹಿತರು ಸಿದ್ಧರಾಮಯ್ಯನವರು ಸ್ವಲ್ಪ ದಿವಸ ಸಾರಿಗೆ ಮಂತ್ರಿಗಳಾಗಿದ್ದರು. ಶ್ರೀಮಾನ್ ಸಿಂಧ್ಯಾರವರು ಟ್ರಾನ್ಸ್‌ಪೋರ್ಟ್ ಮಂತ್ರಿಗಳಾಗಿದ್ದರು. ಕೊನೆಯಲ್ಲಿ ಎಂ. ಪಿ. ಪ್ರಕಾಶ್ ರವರು ಟ್ರಾನ್ಸ್‌ಪೋರ್ಟ್ ಮಂತ್ರಿಗಳಾಗಿದ್ದರು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮಂತ್ರಿಗಳು ಉಲ್ಟಾ ಹೇಳುತ್ತಿದ್ದಾರೆ.

ಶ್ರೀ ಅಜೀಜ್ ಸೇಠ್ : ನೀವು ಮೊದಲು ಟ್ರಾನ್ಸ್‌ಪೋರ್ಟ್ ಮಂತ್ರಿಯಾಗಿರಬಹುದು ಅಥವಾ ಕೊನೆಯಲ್ಲಿ ಸಾರಿಗೆ ಮಂತ್ರಿಯಾಗಿರಬಹುದು. ಅದು ನಿಜವೋ ಅಲ್ಲವೋ? ಮೂರು ಜನ ಸಾರಿಗೆ ಸಚಿವರು ಆಗಿದ್ದರೋ ಇಲ್ಲವೋ?

ಅಧ್ಯಕ್ಷರು : ಯಾರೋ ನಿಮ್ಮ ಜೊತೆಯಲ್ಲಿ ಕನ್ನಡದಲ್ಲಿ ಮಾತನಾಡಿಯೆಂದು ಹೇಳಿದರು. ನಾನು ದೇವರಲ್ಲಿ ಪ್ರಾರ್ಥನೆ ಮಾಡುತ್ತಿದ್ದೆ ತಾವು ಕನ್ನಡದಲ್ಲಿ ಮಾತನಾಡಲಿ ಎಂದು.

ಶ್ರೀ ಅಜೀಜ್ ಸೇಠ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾರವರ ಬಗ್ಗೆ ನಾನು ಪ್ರೀತಿ ವಿಶ್ವಾಸದಿಂದ ಮಾತನಾಡಿದರೆ ನನ್ನ ಮೇಲೆ ಸಿಟ್ಟು ದ್ವೇಷ ಇಟ್ಟಿದ್ದಾರೆಂದು ಹೇಳುತ್ತಾರೆ.

Mr. Speaker : I know both of you are best friends.

Sri. Azeez Sait : I will try my best to avoid singulars.

Sri P.G.R. Sindhya : I am not objecting.

Mr. Speaker : But I am objecting.

Shri. P.G.R. Sindhya : He has become too old.

Sri. Azeez Sait : I am not too old, Sir, Although my age might have run away 70 years but I am still stronger than you. That nobody denies here in the House, I work more than 18 hours. I don't sleep like you for half-an-hour in the afternoon. Never in my life. From the day I have taken over the charge as Chairman of KSRTC I have been trying my best to fill up the posts by promotion and raise this checking system, at least to double up to 4%. ಕೊನೆಯ ಪಕ್ಷ 4 ಪರ್ಸೆಂಟ್ ಈಗ ಮಾಡೋಣವೆಂದು ಇದ್ದೇವೆ. ಬಹಳ ಹಿಂದೆ 1972ರಲ್ಲಿ ಇದೇ ಸದನದಲ್ಲಿ ಅರಸೀಕೆರೆ ಎಂ.ಎಲ್.ಎ. ಅವರು ಹೇಳಿದರು. ಸಾರಿಗೆ ಮಂತ್ರಿಗಳೇ ನೀವು ನನಗೆ ಒಂದು ಕಂಡಕ್ಟರ್ ಕೆಲಸ ಕೊಟ್ಟರೆ ನಾನು ಎಂ.ಎಲ್.ಎ. ಸ್ಥಾನಕ್ಕೆ ರಾಜಿನಾಮೆ ಕೊಡುತ್ತೇನೆಂದು ಹೇಳಿದರು. ನಾನು ವಿಕಲ್ಪ ಎಂದು ಕೇಳಿದೆ. ನಮ್ಮ ಊರಿನಲ್ಲಿ ಒಬ್ಬ ಕಂಡಕ್ಟರ್ ಎರಡು ಮನೆ ಕಟ್ಟಿದ್ದಾನೆ. ನಾನು ಎಂ. ಎಲ್. ಎ ಆಗಿ ಒಂದು ಮನೆ ಸಹ ಕಟ್ಟಿಲ್ಲವೆಂದು ಹೇಳಿದರು. ನಾನು ಎಲ್ಲಾ ಕಂಡಕ್ಟರುಗಳನ್ನು ಅದೇ ರೀತಿಯಲ್ಲಿ ಸಾರಿಗೆ ಸಂಸ್ಥೆಯಲ್ಲಿದ್ದಾರೆಂದು ಹೇಳುವುದಿಲ್ಲ. ಮಾನ್ಯ ಸಿಂಧ್ಯಾರವರು ನಿನ್ನೆ ಹೇಳಿದರು ಎಲ್ಲರೂ ಕೆಟ್ಟವರು ಎಂದು ಹೇಳುವುದಿಲ್ಲವೆಂದು, ನಾನು ಸಹ ಹೇಳುತ್ತಾ ಇದ್ದೇನೆ, ಕೆಲವರು ಕೆಟ್ಟವರು ಇದ್ದಾರೆ. ಕಳ್ಳತನ ಮಾಡಿದ್ದಾರೆ, ರೇಪ್ ಮಾಡಿದ್ದಾರೆ. ಬಸ್ಸುಗಳನ್ನು ತೆಗೆದುಕೊಂಡು ಅವರ ಊರುಗಳಲ್ಲಿ ಇದ್ದುದನ್ನು ನೋಡಿದ್ದೇವೆ. ಕೋಲಾರದಲ್ಲಿ ಬಸ್ ಬಿಟ್ಟು ಬಿಟ್ಟು ಮನೆಗೆ ಹೊರಟು ಹೋಗಿದ್ದರು. ಕಾಯುತ್ತಾ ಇದ್ದವರು ಕಾಯುತ್ತಿದ್ದರು. ಇಂತಹವೆಲ್ಲ incidents ನೆಡದಿದೆ. ನಡದೇ ಇಲ್ಲವೆಂದು ನಾನು ಹೇಳುವುದಿಲ್ಲ. ಮತ್ತೆ ನಾನು ಸಾರಿಗೆ ಸಂಸ್ಥೆ ನೌಕರರಿಗೆ ಏನೂ ಕೊಟ್ಟಿಲ್ಲವೆಂದು ನಾನು ಒಪ್ಪಿಕೊಳ್ಳುವುದಿಲ್ಲ. ಮಾನ್ಯ ವೆಂಕಟಸುಬ್ಬಯ್ಯನವರು ರಾಜ್ಯಪಾಲರಾಗಿದ್ದ ಸಂದರ್ಭದಲ್ಲಿ 3ಕೋಟಿ ರೂಪಾಯಿಗಳನಷ್ಟು ಅವರ ಡಿಮಾಂಡ್‌ಗಳನ್ನು ಪೂರೈಸಿದ್ದಾರೆ. ಒಂದು ಕಡೆ ಕಾಲು ಹಿಡಿಯುವುದಕ್ಕೆ ಅವರಿಗೆ ಕೊಡಬೇಕು. ಇನ್ನೊಂದು ಕಡೆ ಜಗಳ ಆಯಿತು ಅಂದರೆ ಕಲ್ಲುಗಳನ್ನು ತೆಗೆದುಕೊಂಡು ಜನಗಳು ಬಸ್ಸುಗಳಿಗೆ ಹೊಡೆಯುತ್ತಾರೆ. ನಮ್ಮ ಲಾಸಸ್‌ಗೆ ನಾವೇ ಕಾರಣ. ಜನಗಳು ಸಹ ಇದು ನಮ್ಮ ಕಾರ್ಪೊರೇಷನ್ ಎಂದು ತಿಳಿದುಕೊಳ್ಳಬೇಕು. ಜನಗಳಿಗೆ ಏನಾದರೂ ವರ್ಕರ್ಸ್ ಮೇಲೆ ಕೋಪ ಬಂದರೆ ಬಸ್ಸುಗಳಿಗೆ ಏತಕ್ಕೆ ಹೊಡೆಯಬೇಕು? ನಮ್ಮ ಸ್ಟ್ಯಾಫ್ ಸಹ ಒಂದು ಬಸ್ ನಿಂತರೆ ಎಲ್ಲಾ ಬಸ್ಸುಗಳನ್ನು ನಿಲ್ಲಿಸುತ್ತಾರೆ. ಯಾರಿಗೆ ತೊಂದರೆ ಇದೆ ಅವರು ಮುಷ್ಕರ ಮಾಡಿ ಎಲ್ಲರೂ ಏತಕ್ಕೆ ಮಾಡುತ್ತಾರೆಂದು ನಾನು ಕೇಳಿದ್ದೇನೆ. ಮೊನ್ನೆ ನಾನು ತುಮಕೂರು ಕಡೆಯಿಂದ ಬೆಂಗಳೂರಿಗೆ ಬರಬೇಕಾದರೆ ದಾಬಸ್‌ಪೇಟೆಯ ಹತ್ತಿರ ಒಂದು ಕೆಎಸ್‌ಆರ್‌ಟಿಸಿ ಬಸ್ಸಿಗೆ ಮತ್ತು ಲಾರಿಗೆ ಆಕ್ಸಿಡೆಂಟ್ ಆಗಿತ್ತು. ಅಲ್ಲಿ ಹೋಗುವ ಬಸ್ಸುಗಳೆಲ್ಲ ಅಲ್ಲೆ ನಿಂತಿದ್ದವು. ಅಲ್ಲಿ ಟ್ರಾಫಿಕ್ ಜಾಮ್ ಆಗಿತ್ತು. I had to speed my car and I had to clear the road myself. ನಾನು ಕ್ಲಿಯರ್ ಮಾಡಿಸಿದೆ. ಇದೆಲ್ಲ ನಡೆಯುತ್ತದೆ. ಇದು ಅನುಭವ ಇದು ಆಗುವುದಿಲ್ಲವೆಂದು ನಾನು ಹೇಳುವುದಿಲ್ಲ. ಡಿಪೋನಲ್ಲಿ ಲೇಟೆಸ್ಟ್ ಎಕ್ಯುಪ್‌ಮೆಂಟ್ಸ್‌ಗಳಾದ ಏರ್ ಕಂಪ್ರೋಸರ್ ಮತ್ತೊಂದು ಇಲ್ಲವೆಂದು ಹೇಳಿದರು. ನಿನ್ನೆ ತಾನೇ ಮಾನ್ಯ ಸದಸ್ಯರು ಆಟೋಮೆಟಿಕ್ ವಾಶಿಂಗ್ ಮೆಷಿನ್ ಏತಕ್ಕೆ ಹಾಕುತ್ತೀರಿ ಎಂದು ಕೇಳಿದರು. 2 ನಿಮಿಷಗಳಲ್ಲಿ ಎಂದು ಬಸ್ಸು ವಾಶ್ ಆಗಿ ಬರುತ್ತದೆ. Latest tools ಹಾಕಬೇಕೆಂದು ಹೇಳಿದರು ಈಗ automatic washing machine ಹಾಕುತ್ತೇನೆ ಎಂದು ಹೇಳಿದರೆ ಏಕೆ ಎಂದು ಕೇಳುತ್ತಾರೆ. ಇದು ಮಾಡಿದರೂ ಕಷ್ಟ, ಮಾಡದಿದ್ದರೂ ಕಷ್ಟ. ಅಮ್ಮನ ಜೊತೆ ತಿಂದರೂ

ಕಷ್ಟ, ಅಪ್ಪನ ಜೊತೆ ತಿಂದರೂ ಕಷ್ಟ. ಯಾರ ಜೊತೆಯಲ್ಲಾದರೂ ತಿನ್ನಲೇ ಬೇಕಲ್ಲ? ಅಪ್ಪನ ಜೊತೆಯಲ್ಲಾದರೂ ತಿನ್ನಬೇಕು, ಅಮ್ಮನ ಜೊತೆಯಲ್ಲಾದರೂ ತಿನ್ನಬೇಕು. Starting of work-shop at Kengeri. 27 ಎಕರೆಗಳು ಇದೆ. ಬಿಲ್ಡಿಂಗ್ ತೆಗೆದುಕೊಂಡಿರುವುದು ನಿಜ. ಇವರ ಕಾಲದಲ್ಲೇ ತೆಗೆದುಕೊಂಡಿದ್ದಾರೆ. ಈಗ ಅಲ್ಲಿ ಒಂದು ರೀಜನಲ್ ವರ್ಕ್ ಶಾಪ್ ಮಾಡಬೇಕೆಂದು ಏರ್ಪಾಡು ಮಾಡುತ್ತಿದ್ದೇವೆ. ನಾನು ಬಂದು ನೋಡಿದ ಮೇಲೆ ಅಲ್ಲಿ ವಾಚ್ ಅಂಡ್ ವಾರ್ಡ್ ಇರಲಿಲ್ಲ. ಈಗ ವಾಚ್ ಅಂಡ್ ವಾರ್ಡ್ ಹಾಕಿಸಿದ್ದೇನೆ. ಇನ್ನು Cancellatins. Not only because of cancellation because we are not allowed to recruit.

ಹಿಂದೆ 1989ರಲ್ಲಿ ಒಬ್ಬ ಸದಸ್ಯರು ಹೇಳಿದ್ದರು, ಏನೆಂದರೆ ಟೆಸ್ಟ್ ಆಗಿದೆ, ಇನ್ನೂ ಕೆಲಸ ಕೊಟ್ಟಿಲ್ಲ ಎಂದು. ಇವರು 1989ರಲ್ಲಿ ಇದ್ದಂಥ ಕಾಲದಲ್ಲಿ ಇಂಟರ್‌ವ್ಯೂ ಕರೆದರು. ರಿಟನ್ ಟೆಸ್ಟ್ ಮಾಡಿ ಸೆಲೆಕ್ಷನ್ ಮಾಡುವ ಕಾಲದಲ್ಲಿ ಅದು ಬ್ಲಾಂಕ್ ಆಗಿ ನಿಂತುಹೋಯಿತು. ಅಂದರೆ ಕೆಲಸಗಾರರನ್ನು ತೆಗೆದುಕೊಳ್ಳಬೇಕು ಎನ್ನುವುದೂ ಕೂಡ ನಿಂತುಹೋಯಿತು. ಅದೇ ರೀತಿ ಹಿಂದೆ ಇದ್ದ ಮಾನ್ಯ ಸಚಿವರಾದ ಶ್ರೀ ಸಿದ್ಧರಾಮಯ್ಯನವರು 276 ಕಾರ್ಮಿಕರನ್ನು ಮೈಸೂರಿನಲ್ಲಿ ಸೆಲೆಕ್ಟ್ ಮಾಡಿದ್ದರೂ, ಏನೋ ಲಿಸ್ಟ್ ಬದಲಾಯಿತು ಎಂದು ಹೇಳಿ ಎನ್‌ಕ್ವೈರಿ ನಡೆದು ಅವರು ಉಳಿದುಕೊಂಡಿದ್ದಾರೆ. ಇದನ್ನೆಲ್ಲಾ ನಾವು ನೀವು ಕುಳಿತುಕೊಂಡು ಬಗೆಹರಿಸಬೇಕೇ ಹೊರತು ರಾಜಕೀಯವಾಗಿ ಉಪಯೋಗ ಮಾಡಿಕೊಳ್ಳುತ್ತೇವೆ ಎಂದರೆ ಆಗುವುದಿಲ್ಲ. ಶ್ರೀ ಹನುಮೇಗೌಡರು ಹೇಳಿದರು, ಹಾಸನದಲ್ಲಿ ಹುಲ್ಲು ಬೆಳೆಯುತ್ತಿದೆ ಎಂದು. ನಾನೇ ಸ್ವತ: 25 ಲಕ್ಷ ರೂಪಾಯಿಗಳಿಂದ ಡೀವಿಯೇಶನ್ ಮಾಡಬೇಕೆಂದು ಮಾಡಿದ್ದೇನೆ. ನಮ್ಮ ಭಾಗದಿಂದ 11 ಲಕ್ಷ ರೂಪಾಯಿಗಳನ್ನು ನಾನು ಒಂದು ನಿಮಿಷವೂ ತಡವಿಲ್ಲದೆ ಒಂದೇ ವಾರದಲ್ಲಿ ಡ್ರಾಫ್ಟ್‌ನ್ನು ಹಾಸನ ಮುನಿಸಿಪಾಲಿಟಿಗೆ ಕಳಿಸಿಕೊಟ್ಟೆ. ಪುಟ್ಟಸ್ವಾಮಿ ಗೌಡರಿಗೆ ಗೊತ್ತು, ಆ ದುಡ್ಡನ್ನು ತೆಗೆದುಕೊಂಡು ಅಲ್ಲಿಯ ಮುನಿಸಿಪಾಲಿಟಿಯವರು ಆರಾಮವಾಗಿ ಕುಳಿತುಕೊಂಡುಬಿಟ್ಟಿದ್ದಾರೆ, ಅದನ್ನು ಸಂಬಳ ಸಾರಿಗೆಗೆ ಕೊಟ್ಟಿದ್ದಾರೆ. ಇವರು ಮಾಡಿಲ್ಲವೆಂದರೆ ನಾನು ಏನು ಮಾಡುವುದು? ಅವರಿಗೆ 11 ಲಕ್ಷ ರೂಪಾಯಿಗಳನ್ನು ಕೊಟ್ಟು ತಿರುಗಿ ಕೈಯಿಂದ ಹಾಕಬೇಕು. ಆಮೇಲೆ ಆಗಿಲ್ಲ, black top ಆಗಿಲ್ಲ ಆಸ್‌ಫಾಲ್ಟಿಂಗ್ ಆಗಿಲ್ಲ. roof cover ಆಗಿಲ್ಲ. ಎಂದಿದ್ದಾರೆ. ನಾನು ಹೇಳುತ್ತಿದ್ದೇನೆ, ಅದು ಆ ಕಾಲದಲ್ಲಿ ಆಗಿಹೋಯಿತು, ಇದು ಈ ಕಾಲದಲ್ಲಿ ಆಗಿಹೋಯಿತು. ಇನ್ನು ಮುಂದೆ ಯಾವುದೇ ಬಸ್‌ಸ್ಟ್ಯಾಂಡ್ ಕಂಪ್ಲೀಟ್ ಆಗುವವರೆಗೆ ಬೇರೆ ಬಸ್ ಸ್ಟ್ಯಾಂಡ್ ತೆಗೆದುಕೊಳ್ಳುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ. ಜನರಿಗೆ ನೆಮ್ಮದಿ ಮಾಡುವುದಕ್ಕೋಸ್ಕರ ಅಲ್ಲಿ ಒಂದು ಬಸ್‌ಸ್ಟ್ಯಾಂಡ್ ಕಟ್ಟುತ್ತೇನೆ ಎಂದು ಹೇಳಿ ಕಟ್ಟುವುದು. ಅಲ್ಲಿ ಕಕ್ಕಸ್ಸು ಇರುವುದಿಲ್ಲ, ನೀರು ಇರುವುದಿಲ್ಲ. ಹಾಗೆಯೇ ಬಿಟ್ಟುಬಿಡುವುದು. ಕಡೆಗೆ ಐದು ವರ್ಷದ ನಂತರ roof-top ಹಾಕುವುದು. ಆಮೇಲೆ ಕಡೂರು, ಜಿಲ್ಲಾಪರಿಷತ್‌ನವರು ಬಿಲ್ಡಿಂಗ್ ತೆಗೆದುಕೊಂಡಿದ್ದಾರೆ. ಅದಕ್ಕೆ ಕ್ಯಾಂಟೀನ್ನೇ ಇಲ್ಲ, ನಿಮ್ಮ ಕಾಲದಲ್ಲಿ ಅಂದರೆ ಜನತಾದಳ ಸರ್ಕಾರ ಇದ್ದಾಗ ಇದು ಆದದ್ದು. ಅಲ್ಲಿ ಕ್ಯಾಂಟೀನ್‌ಗೆ ಜಾಗ ಇಲ್ಲ, ಸ್ಕೂಲ್ ಬಿಲ್ಡಿಂಗ್‌ನ್ನು ತೆಗೆದುಕೊಂಡಿದ್ದು ಅದನ್ನು ಈಗ ಆಲ್ಟರೇಶನ್ ಮಾಡಿಸುವುದಕ್ಕೆ ಪ್ಲಾನ್‌ಗೆ ಕೊಟ್ಟು ಮಾಡಿಸುತ್ತಿದ್ದೇವೆ. I will send the file and the records. ಬರೀ ನಾನು ಹೇಳಬೇಕು ಅಂತ ಹೇಳುತ್ತಿಲ್ಲ, ಒಟ್ಟಾರೆ ನಾವು ಏನು ಮಾಡುತ್ತಿದ್ದೇವೆ ಎಂದರೆ too much of politicking. ರಾಜಕೀಯವಾಗಿ ಬೆಳೆಯಬೇಕೂಂತ ಇವರು, ರಾಜಕೀಯವಾಗಿ ಅಳಿಯಬೇಕೂಂತ

ಅವರು ಪ್ರಯತ್ನ ಮಾಡುತ್ತಾರೆ. ನಾನು ಒಂದು ಮಾತನ್ನು ಹೇಳುತ್ತೇನೆ ನಾನು ಇರುವವರೆಗಾದರೂ ಇದು Commercial organisation ಆಗಿ ಟ್ರೀಟ್ ಮಾಡುವುದಕ್ಕೆ ಅವಕಾಶ ಕೊಡಿ. ಸ್ವಾಮಿ, ಇವತ್ತು ಒಬ್ಬ ಕಂಡಕ್ಟರ್‌ನ್ನಾಗಲಿ,ಆಫೀಸರ್‌ನ್ನಾಗಲೀ ಟ್ರಾನ್ಸ್‌ಫರ್ ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಇಬ್ಬರು ಎಂ.ಎಲ್.ಎ.ಗಳು, ಒಬ್ಬರು ಮಂತ್ರಿಗಳು ಇರುತ್ತಾರೆ. ನನ್ನ ಡಿಪಾರ್ಟ್‌ಮೆಂಟ್ ಏನಾಗಿದೆ ಎಂದರೆ it has got its own significance. ಒಬ್ಬರನ್ನು ನಾನು ಮುಟ್ಟುವ ಹಾಗಿಲ್ಲ. ಈಗ ಬೇನಾಮಿ ಡ್ರೈವರ್ಸ್, ಕಂಡಕ್ಟರ್ಸ್ ಕೆಲಸ ಮಾಡುತ್ತಿದ್ದಾರೆ. ಸಂಬಳ ತೆಗೆದುಕೊಳ್ಳುವ ಕಂಡಕ್ಟರ್ ತಿಂಗಳಿಗೊಂದು ಸಾರಿ ಬಂದು ಸಂಬಳ ತೆಗೆದುಕೊಳ್ಳುತ್ತಾರೆ. ಮಾಮೂಲು ಕೆಲಸ ಮಾಡುವ ಕಂಡಕ್ಟರ್ ಬೇನಾಮಿಯಾಗಿ ಕೆಲಸ ಮಾಡುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಂದರೆ ಏನು ಅರ್ಥ?

ಶ್ರೀ ಅಜೀಜ್ ಸೇಠ್ : ಕಂಡುಹಿಡಿದುರುವುದನ್ನು ಹೇಳುತ್ತಿದ್ದೇನೆ. ಮೊನ್ನೆ ಒಂದು ಕೇಸ್ ಹಿಡಿದಿದ್ದೇವೆ. I am not exaggerating. Whatever I am telling, I am telling nothing but the truth in this House.

Exaggeration ಮಾಡುವುದರಿಂದ ನನಗೆ ಏನು ಸಿಕ್ಕುತ್ತದೆ? ನನಗೆ ಬೆದರಿಕೆ ಪತ್ರಗಳು ಒಂದಲ್ಲ, ಎರಡು ಬಂದಿದೆ. ನೀನು ಏನಾದರೂ ಅಭದ್ರ ಮಾಡಿದರೆ, ಬಿಚ್ಚಿದರೆ ನಿಮ್ಮನ್ನು ಮುಗಿಸಿಬಿಡುತ್ತೇವೆ, ಮುಕ್ತಾಯ ಮಾಡುತ್ತೇವೆ ಎಂದು ಬರೆದಿದ್ದಾರೆ. ಕರ್ನಾಟಕ ಟೆರರಿಸ್ಟ್ ಎಂದು ಒಂದು ಬಂದಿದೆ, 'you will be kept in Hit List of LTTE' ಎಂದು ಮೊನ್ನೆ ಒಂದು ಲೆಟರ್ ಬಂದಿದೆ. ಇವುಗಳನ್ನು ಹೋಮ್ ಮಿನಿಸ್ಟರಿಗೆ ಕಳುಹಿಸಿದ್ದೇನೆ. ರಾಜಕೀಯ ಪ್ರವೇಶ ಮಾಡಿದರೆ ನಾಳೆ ನೀವು ಬಂದರೂ ಸರ್ಕಾರ ನಡೆಸುವುದಕ್ಕಾಗುವುದಿಲ್ಲ. ಸರ್ಕಾರ ನಡೆಸಬೇಕಾದರೆ, ಲೇಬರ್ ರೂಲ್ ಪ್ರಕಾರ ಹೋಗಬೇಕಾಗುತ್ತದೆ. ಶ್ರೀಮಾನ್ ಚವಾಣ್‌ರವರು ಹೇಳಿದರು. ನಾನು ಇಷ್ಟು ಮಾತ್ರ ಹೇಳಬಲ್ಲೆ. ನಮ್ಮ ಅಧಿಕಾರಿಗಳು ಜಿಲ್ಲಾ ಪರಿಷತ್ ಮೀಟಿಂಗ್‌ಗೆ ಬರುವುದಿಲ್ಲವೆದು ಹೇಳಿದರು. I want that Divisional Controller of that area should attend the meeting. We will give those instructions. ಈಗ ಹೊಸ ಬಸ್ಸುಗಳನ್ನು ಹಾಕುತ್ತಿದ್ದೇವೆ, ಎರಡು ಸಾವಿರ ಬಸ್ಸುಗಳನ್ನು ಹಾಕಬೇಕೆಂದು ಪ್ರಯತ್ನಪಡುತ್ತಿದ್ದೇವೆ. ಇಡೀ ವೇಳೆಯಲ್ಲಿ ಜನ ಟಾಪ್ ಮೇಲೆ ಸವಾರಿ ಮಾಡುತ್ತಿದ್ದಾರೆಂದು ಹೇಳುತ್ತಾರೆ. ನಾನು ಮೊನ್ನೆ ಹಾನಗಲ್‌ಗೆ ಹೋಗಬೇಕಾದರೆ, My CTM was also there. I have inspected. One of the Officials has written a letter to us. In one bus there were 21 passeangers sitting inside the bus which ticket were issued.

ಡ್ರೈವರ್ ಕ್ಯಾಬಿನ್‌ನಲ್ಲಿ ಅದೂ ಬಸ್ ಸ್ಟಾಪಿನಲ್ಲಿ 20 ಜನ ಇದ್ದರು. ಅವರೆಲ್ಲರೂ, they are known as subsidised travellers.

Shri P.G.R. SINDHYA: Who has to take action?

Shri Azeez Sait : I am telling you the facts. Why should I keep it secret? I want only your cooperation and all the Memebers' cooperation. I am asking for your cooperation. ಇದು ನಡೆಯುತ್ತಾ ಇದೆ. ಮೊನ್ನೆ 17 ಜನ ಬಸ್ಸಿನಲ್ಲಿದ್ದರು. 7 ಜನ ಟಾಪ್ ಮೇಲೆ ಇದ್ದರು. ಬಾಂಬೆ ಕರ್ನಾಟಕದಲ್ಲಿ ಇವರನ್ನು "subsidized

travellers" ಎಂದು ಹೇಳುತ್ತಾರೆ. ಹೀಗೆ ನಡೆದರೆ ಏನು ಮಾಡುವುದು? ಒಟ್ಟಾರೆ ಹೇಳಬೇಕಾದರೆ, ನಾನು ಈ ಕೆ.ಎಸ್.ಆರ್.ಟಿ.ಸಿ. ಬಗ್ಗೆ ಡೀಟೈಲ್ ಆಗಿ ಹೇಳುವುದಕ್ಕೆ ಹೋಗುವುದಿಲ್ಲ, ನನಗೆ ಒಂದು ವರ್ಷ ಟೈಮ್ ಕೊಡಿ. Take it for yourself that none of you will interfere. ನಿಮ್ಮ ಒಬ್ಬರಿಗೆ ನಾನು ಹೇಳುತ್ತಿಲ್ಲ, ಇಡೀ ಸದನಕ್ಕೆ ಹೇಳುತ್ತಿದ್ದೇನೆ. ಒಂದು ವರ್ಷ ಅವಕಾಶ ಕೊಡಿ. 30 officials enquiry...

ಶ್ರೀ ವಾಟಾಳ್ ನಾಗರಾಜ್ : ನೀವೇನಾದರೂ ಕಾಗದ ಬರದಿದ್ದೀರಾ ಎಂದು ಕೇಳಿದರು, ನಾನು ಒಂದನ್ನೂ ಬರೆದಿಲ್ಲ...

ಶ್ರೀ ಅಜೀಜ್ ಸೇಠ್ : ನಾನು ಯಾರ ಹೆಸರನ್ನೂ ಹೇಳುತ್ತಿಲ್ಲ, ನಾನು ನಿಮಗೆ ಅವರಿಗೆ ಎಂದು ಹೇಳುತ್ತಿಲ್ಲ. "ಕುಂಬಳಕಾಯಿ ಕಳ್ಳ ಎಂದರೆ, ಹೆಗಲ ಮುಟ್ಟಿ ನೋಡಿ ಕೊಂಡರು" ಎಂಬಂತೆ, ಮೂಲ ಇಲ್ಲದೇ ಯಾವುದನ್ನೂ ಮಾಡುವುದಕ್ಕಾಗುವುದಿಲ್ಲ. ತಾವು ನನಗೆ ಸಿಕ್ಕಿಸುವುದಕ್ಕೆ ಪ್ರಯತ್ನ ಪಟ್ಟಿಲ್ಲವೇ? Too much of interference. ಲಾಭ ನಷ್ಟ ಮಾಡಿದ್ದಾರೆಂದು ನೀವು ಹೇಳಿಲ್ಲ. ನಿಮಗೆ ಯಾರು ಹೇಳಿದ್ದಾರೆಂದು ನನಗೆ ಗೊತ್ತಿದೆ. ನಾನು ಅಲ್ಲಿ ಚೇರ್ಮನ್ ಆಗಿದ್ದು, If I cannot have control over the administration- as a Minister if I would have interfered, that is something. But as Chairman ನಾನು ಕಣ್ಣಾರೆ ನೋಡಿದ್ದು, ನಾನು ಕೇಳದೇ ಇದ್ದರೆ, ನಾನು ಚೇರ್ಮನ್ ಆಗಿ ಏಕೆ ಇರಬೇಕು? I am only temporary Chairman. I am telling you. I have given it in writing to the Hon'ble Chief Minister: "Please appoint somebody else as Chairman. I cannot be a Chairman there." ನಮ್ಮ ಸಿಂಧ್ಯ ಸಾಹೇಬರಿಗೆ ಹೇಳುತ್ತಿದ್ದೇನೆ. ಕೆ. ಎಸ್.ಆರ್. ಟಿ. ಸಿ. ಒಂದು ಕಾರ್ಪೊರೇಷನ್. ಇವರ ಕಾಲದಲ್ಲಿಯೇ, 12 ಜೀಪು, ಅದರಲ್ಲಿ 8 ಜಿಪ್ಸಿ, ಪೋಲೀಸ್ ಇಲಾಖೆಗೆ ಕೊಟ್ಟಿದ್ದಾರೆ. ಆರ್.ಟಿ.ಓ. ಡಿಪಾರ್ಟ್‌ಮೆಂಟ್‌ಗೆ 4 ಜೀಪು, ಟ್ಯಾಕ್ಸ್ ನಾವು ಕಟ್ಟಬೇಕು, ಡ್ರೈವರ್ ಸಂಬಳ ನಾವು ಕೊಡಬೇಕು; ನಮ್ಮ ಜೀಪು Transport Commissions ಆಫೀಸಿಗೆ. ಒಂದು ಗಾದೆ ಇದೆ, "ತಾತಾನ ತಿಥಿ, ಮಿಠಾಯಿ ಅಂಗಡಿಯಲ್ಲಿ ಮಾಡಿದರು" ಎಂದ ಹಾಗೆ ಕೆ.ಎಸ್.ಆರ್. ಟಿ. ಸಿ. ಲಾಸ್ ಎಂದು ಹೇಳುತ್ತಾರೆ. ಈ ರೀತಿ ಪೋಲೀಸ್‌ಗೆ ಜಿಪ್ಸಿ, ಟ್ರಾನ್ಸ್‌ಪೋರ್ಟ್‌ಗೆ ಇಲಾಖೆಗೆ ಟ್ಯಾಕ್ಸ್ ಕಟ್ಟುವುದು ಇವುಗಳಿಂದ ಏನಾಗುತ್ತದೆ? ಟ್ರಾನ್ಸ್‌ಪೋರ್ಟ್ ಇಲಾಖೆಗೆ ಸುಮಾರು 80 ಕೋಟಿ ರೂಪಾಯಿಗಳ ಟ್ಯಾಕ್ಸ್ ಕಟ್ಟಬೇಕು. ಅದರ ಮೇಲೆ ಅವರಿಗೆ 4 ಜೀಪು ಬಿಟ್ಟಿ ಕೊಡಬೇಕು.

ಅದರ ಡ್ರೈವರ್ಸ್ ಸಂಬಳ ಇವತ್ತಿನವರೆಗೂ ನಾವು ಕೊಡುತ್ತಿದ್ದೇವೆ. ಟ್ಯಾಕ್ಸೂ ಕಟ್ಟುತ್ತಿದ್ದೇವೆ. ಇದೇನು ಕೆ.ಎಸ್.ಆರ್.ಟಿ.ಸಿ.ನಾ ಅಥವಾ ಟ್ರಾನ್ಸ್‌ಪೋರ್ಟ್ ಕಮೀಷನರ್ ಆಫೀಸೇ?

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಸ್ವಲ್ಪ ಡ್ರಾಪ್ ಆಗುತ್ತೀರಾ?

ಶ್ರೀ ಅಜೀಜ್ ಸೇಠ್ : ಇಲ್ಲ, ಆಗುವುದಿಲ್ಲ, ನಾನು ಹೇಳಿದಮೇಲೆ ಕೊನೆಗೆ ಹೇಳಬೇಕು. ಆಮೇಲೆ ನಮ್ಮಲ್ಲಿ ಇ.ಎಸ್.ಐ ಇತ್ತು, ಅದನ್ನು ಪ್ರಾರಂಭಿಸಬೇಕಾಗಿತ್ತು. ನಮ್ಮ ಸರಕಾರ ಬಂದ ಮೇಲೆ ಅದನ್ನು ಪ್ರಾರಂಭಿಸಿದ್ದೇವೆ. ನಾಲ್ಕು ಕಡೆ ಹಾಸ್ಪಿಟಲ್ ಕಟ್ಟಿಸಿದ್ದೇವೆ. ಅದು ಇನ್ನೇನು ಇಷ್ಟರಲ್ಲೇ ಪ್ರಾರಂಭವಾಗಬೇಕಾಗಿತ್ತು. ಅದಕ್ಕೆ ಮೊದಲು ನಮ್ಮ ಸಿಂಧ್ಯಾ ಸಾಹೇಬರ ಕಾಲದಲ್ಲಿ ಏನಾಗಿತ್ತು ಎಂದರೆ, ಇದೇ ಮೊದಲು ದರಿದ್ರ, ಈತನಿಗೇ ಉಳಿದುಕೊಳ್ಳುವುದಕ್ಕೆ ಸಾಧ್ಯ ಇಲ್ಲ, ಇವನನೇ ಕ್ಯಾನ್ಸರ್ ಪೇಷಂಟ್ ಆಗಿದ್ದಾನೆ, ಆಕ್ಸಿಜನ್ ಕೊಡಬೇಕಾಗುತ್ತದೆ,

ಅಂತಹದರಲ್ಲಿ ಸುಮಾರು 5 ಲಕ್ಷ ರೂಪಾಯಿ ವರ್ಥ್ ಟೆಸ್ಟಿಂಗ್ ಮೆಷಿನ್‌ನ್ನು ಕೆ.ಎಸ್.ಆರ್.ಟಿ.ಸಿ. ಯಿಂದ ತರಿಸಿ ಮಿಂಟೋ ಹಾಸ್ಪಿಟಲ್‌ಗೆ ದಾನ. ಹೀಗೆ ನಾವು ಮಾಡಿಕೊಂಡು ಹೋದರೆ ಆಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಯಾರೋ ಆಫೀಸರ್ಸ್ ನಿಮಗೆ ಮಿಸ್‌ಗೈಡ್ ಮಾಡಿರಬೇಕು.

ಶ್ರೀ ಅಜೀಜ್ ಸೇಠ್ : ನಾನು ರೆಕಾರ್ಡ್ಸ್ ನೋಡದೆ ಯಾವುದೂ ಹೇಳುವುದಿಲ್ಲ. ಬೇಕಾದರೆ ನಿಮಗೆ ಕಳುಹಿಸಿಕೊಡುತ್ತೇನೆ. ಇಲ್ಲದೇ ಹೋದರೆ ಸ್ಪೀಕರ್‌ಗೆ ಕಳುಹಿಸಿಕೊಡುತ್ತೇನೆ. ಏನಾದರೂ ತಪ್ಪು ಹೇಳಿದರೆ ಈಗಲೇ ತಕ್ಷಣ ವಿತ್‌ಡ್ರಾ ಮಾಡುತ್ತೇನೆ. ವಿತ್‌ಡ್ರಾ ಮಾಡುವುದಕ್ಕೆ ಅವಕಾಶ ಇದೆಯಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈಲ್ಡ್ ಆಗಿ ಹೇಳುತ್ತೇನೆ.

ಶ್ರೀ ಅಜೀಜ್ ಸೇಠ್ : ಇಲ್ಲ, ಇನ್ನೂ ಹೇಳುವುದಕ್ಕೆ ಬಹಳ ಬಾಕಿ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಕುಳಿತುಕೊಳ್ಳಿ, ನಾನು ಹೇಳುತ್ತೇನೆ. ಸುಮ್ಮನೆ ನಾನು ಈಲ್ಡ್ ಆಗುವುದಿಲ್ಲ. ಈಲ್ಡ್ ಆಗುವುದಿಲ್ಲ, 'ನೀನು' ಎಂದು ಮಾತನಾಡಿದರೆ ಆಗುವುದಿಲ್ಲ, my period in the KSRTC in the last 25 years is the golden era. I am prepared for any public debate on this issue.ಸುಮ್ಮನೆ ಯಾರೋ ಅಧಿಕಾರಿಗಳು ಬರೆದುಕೊಟ್ಟಿದ್ದಾರೆ ಎಂದು ಓದುವುದಕ್ಕೆ ಹೋಗಬೇಡಿ. ಮಾನ್ಯ ಅಧ್ಯಕ್ಷರೇ, ಮಿಂಟೋ ಹಾಸ್ಪಿಟಲ್‌ಗೆ ಐದು ಅಲ್ಲ, ಐವತ್ತು ಲಕ್ಷ ರೂಪಾಯಿ ಕೊಡಬೇಕೆಂದು ನಾನು ಹೇಳಿದೆ. ಏತಕ್ಕೆ ಹೇಳಿದೆ ಎಂದರೆ, ಮಿಂಟೋ ಹಾಸ್ಪಿಟಲ್‌ಗೆ ಐ ಟೆಸ್ಟ್ ಮಾಡಿಸಬೇಕಾಗುತ್ತದೆ. ಬಹಳಷ್ಟು ಜನ ಡ್ರೈವರ್ಸ್ above the age of 40 and below 55 ಗೆ ಚಾಳೀಸ್ ಬರುತ್ತದೆ. ಡ್ರೈವಿಂಗ್ ಮಾಡುವುದಕ್ಕೆ ಆಗುವುದಿಲ್ಲ. ಆಕ್ಸಿಡೆಂಟ್ ಆಗುತ್ತದೆ. ಮಿಂಟೋ ಹಾಸ್ಪಿಟಲ್‌ನವರು ಎಲ್ಲಾ ಡಿಪೋಗಳಿಗೆ ಬಂದು ಚಾಲಕರ ಐ ಸೈಟ್ ಚೆಕ್ ಮಾಡಬೇಕೆಂದು ಹೇಳಿ ಒಂದು ಆಟೋಮ್ಯಾಟಿಕ್ ಮೆಷಿನ್ ತರಿಸಬೇಕೆಂದು ಹೇಳಿ ನಾವು ಕೊಟ್ಟಿದ್ದೇವೆ. ಇದರಿಂದ ಆಕ್ಸಿಡೆಂಟ್ ಕಡಿಮೆಯಾಗುತ್ತದೆ. ಎರಡನೆಯದಾಗಿ ಇವತ್ತು ಕ್ಲಾಂಡಸ್ಟೈನ್ ಆಪರೇಷನ್ಸ್ ಇದೆ. ನೋಡಿದರೆ ಹೊಟ್ಟೆಯಲ್ಲಿ ಬೆಂಕಿ ಹಾಕಿದಹಾಗೆ ಆಗುತ್ತದೆ. ನನಗೇನೂ ಈ ಸರಕಾರದ ಜವಾಬ್ದಾರಿ ಇಲ್ಲ. ಆದರೆ ರಾಜ್ಯದ ಒಬ್ಬ ಶಾಸಕನಾಗಿ ರಾಜ್ಯದ ಒಬ್ಬ ಪ್ರಜೆಯಾಗಿ ನನಗೆ ಹೊಟ್ಟೆ ಉರಿಯುತ್ತಿದೆ. ಇವರ ಸರಕಾರಕ್ಕೆ ನಾಚಿಕೆಯಾಗುಬೇಕು. ಸುಭಾಷ್ ನಗರ ಸುತ್ತ ಮುತ್ತ ಇರತಕ್ಕಂಥ ಬಸ್ ಸ್ಟ್ಯಾಂಡ್‌ಗಳೆಲ್ಲಾ ಪ್ರೈವೇಟ್ ಬಸ್‌ಗಳನ್ನು ನಿಲ್ಲಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ತಮಿಳುನಾಡಿನಿಂದ ಬರತಕ್ಕ ಬಸ್‌ಗಳಿಗೆ ಕೇರಳದಿಂದ ಮತ್ತು ಮಹಾರಾಷ್ಟ್ರದಿಂದ ಬರತಕ್ಕ ಬಸ್‌ಗಳಿಗೆ, ಆಂಧ್ರದಿಂದ ಬರತಕ್ಕ ಬಸ್‌ಗಳಿಗೆ ಅದು ಬಸ್‌ಸ್ಟ್ಯಾಂಡ್ ಆಗಿದೆ. ನಾನು ಇದ್ದಾಗ ಈ ಒಂದು ಬಸ್‌ಸ್ಟ್ಯಾಂಡ್ ಹತ್ತಿರ ಒಂದು ಪ್ರೈವೇಟ್ ಬಸ್‌ನ್ನೂ ನಿಲ್ಲಿಸುತ್ತಿರಲಿಲ್ಲ. ಇದಕ್ಕೋಸ್ಕರ ಪೋಲೀಸ್ ಇಲಾಖೆಯವರಿಗೆ ಇದನ್ನು ಚೆಕ್ ಮಾಡಬೇಕೆಂದು ಹೇಳಿ 8 ಅಲ್ಲ 50 ವೆಹಿಕಲ್ಸ್‌ಕೊಡಬೇಕೆಂದು ಹೇಳಿದ್ದೆ. 50 ಜೀಪ್ಸಿಗಳನ್ನು ಕೊಡಿಸಬೇಕೆಂದು ಹೇಳಿದ್ದೆ. ಅದಕ್ಕೋಸ್ಕರ ಕಲೆಕ್ಷನ್ ಜಾಸ್ತಿಯಾಗುತ್ತಾ ಇತ್ತು. ಈ ರೂಟ್‌ಗಳಲ್ಲಿ. ಇವತ್ತಿನದಿವಸ ನಾನು ಹೆಸರು ಹೇಳುವುದಕ್ಕೆ ತಯಾರಾಗಿಲ್ಲ, ಆಡಳಿತ ಪಕ್ಷದ ಒಬ್ಬ ಶಾಸಕರು ನನಗೆ ಹೇಳುತ್ತಿದ್ದರು. ಸ್ವಾಮಿ ನಮಗೆ ಹೊಟ್ಟೆ ಉರಿಯುತ್ತಿದೆ. ಬೆಳಗಾಂ, ಹುಬ್ಬಳ್ಳಿಯಿಂದ ಬರತಕ್ಕ ನಮ್ಮ ಲಕ್ಷುರಿ ಬಸ್‌ಗಳಲ್ಲಿ ಪ್ಯಾಸೆಂಜರ್ಸ್ ಇಲ್ಲ. ಎಂದು ಹೇಳುತ್ತಿದ್ದರು. ಏತಕ್ಕೆ ನಮ್ಮ ಕೆ.ಎಸ್.ಆರ್.ಟಿ.ಸಿ. ಚೆನ್ನಾಗಿ ಇದೆಯಲ್ಲ ಎಂದು ನಾನು ಹೇಳಿದೆ.

ಅದಕ್ಕೆ ಅವರು, ಏತಕ್ಕಾಗಿ ಪ್ಯಾಸೆಂಜರ್ಸ್ ಕೆ.ಎಸ್.ಆರ್.ಟಿ.ಸಿ. ಬಸ್‌ಗೆ ಬರುವುದಿಲ್ಲ ಎಂದು ಹೇಳಿದರೆ, ಅದೇ ಟೈಮ್‌ಗೆ ಎರಡು ಪ್ರೈವೇಟ್ ಲಕ್ಸುರಿ ಬಸ್ ಓಡಿಸಲು ಪ್ರೈವೇಟ್‌ನವರಿಗೆ ಪರ್ಮಿಷನ್ ಕೊಟ್ಟಿದ್ದಾರೆ ಎಂದು ಹೇಳಿದರು. ಹೇಗೆ ಜನ ನಮ್ಮ ಬಸ್‌ಗಳಲ್ಲಿ ಬರುತ್ತಾರೆ. ಈ ಕ್ಲಾಂಟೆಸ್ಟೈನ್ ಅಪರೇಷನ್ ಚೆಕ್ ಮಾಡಬೇಕೆಂದು ಹೇಳಿ, ಪೋಲೀಸರಿಗೆ ನಾನು ವೆಹಿಕಲ್ ಕೊಡಿಸಿದ್ದೆ. ಅದನ್ನು ನೀವು ವಿತ್‌ಡ್ರಾ ಮಾಡಿರುತ್ತೀರಿ. ಅದರ ಅರ್ಥ ಏನು ಎಂದು ಹೇಳಬೇಕು? ಕ್ಲಾಂಟಸ್ಟೈನ್ ಆಪರೇಷನ್‌ಗೆ ಎನ್‌ಕರೇಜ್ ಮಾಡುತ್ತೀರಿ ಎಂದು ಹೇಳಬೇಕೇ?

ಶ್ರೀ ಅಜೀಜ್ ಸೇಠ್ : ಕ್ಲಾಂಡಸ್ಟೈನ್ ಆಪರೇಷನ್‌ಗೆ ನಾನು ಯಾವತ್ತೂ ಒಪ್ಪುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಇವರು ಸಾರಿಗೆ ಮಂತ್ರಿಗಳಾಗಿ ಒಂದು ಕ್ಷಣವೂ ಇರಬಾರದು. ಏತಕ್ಕೆಂದು ಹೇಳಿದರೆ ಬೇನಾಮಿ ಡ್ರೈವರ್ಸ್ ಬಂದು ಡ್ರೈವ್ ಮಾಡುತ್ತಾರೆ ಎಂದು ಹೇಳಿದರೆ, ನಿಮ್ಮ ಆಫೀಸರ್ಸ್ ಕೊಲ್ಯೂಡ್ ಆಗಿದ್ದಾರೆ ಎಂದು ಅದರ ಅರ್ಥ. What action you have taken on these officers. Have you suspended one D.C. in one year?

ಶ್ರೀ ಅಜೀಜ್ ಸೇಠ್ : ನನ್ನ ಕಾಲದಲ್ಲಿ ಒಬ್ಬರಲ್ಲ ಇಬ್ಬರು ಸಸ್ಪೆಂಡ್ ಆಗಿದ್ದಾರೆ you should be happy that I was able to trace out these difficulties.ಆ ಕಾಲದಿಂದ ಬಿಗಿ ಬಿಟ್ಟಿತ್ತು, ಬಿಟ್ಟಿದ್ದಕ್ಕೆ ಈ ಪರಿಣಾಮ These are not to-day's baby. This baby has now grown up and now we are facing the music.

ಸುಭಾಷ್ ನಗರ ಬಸ್‌ಸ್ಟ್ಯಾಂಡ್‌ನಲ್ಲಿ ತಮಿಳುನಾಡು, ಆಂಧ್ರ, ಮಹಾರಾಷ್ಟ್ರ ಬಸ್‌ಗಳು ಬರುತ್ತವೆ ಎಂದು ಹೇಳಿದ್ದಾರೆ.

ಔಟ್ ಸ್ಟೇಷನ್ ಬಸ್ ಸ್ಟ್ಯಾಂಡ್ ಇವರ ಕಾಲದಿಂದ ಅಂದರೆ 1979ರಿಂದ..

ಶ್ರೀ ಪಿ.ಜಿ.ಆರ್. ಸಿಂಧ್ಯಾ : 1979 ಅಂದ್ರೆ ನನ್ನ ಕಾಲವೇ?

ಶ್ರೀ ಅಜೀಜ್ ಸೇಠ್ : ನಿಮ್ಮ ಕಾಲದ್ದು ಹೇಳುತ್ತೇನೆ. ಇಂಟರ್ ಸ್ಟೇಟ್ ಪರ್ಮಿಟ್ ಇವರು ಎಷ್ಟು ಮಾಡಿದ್ದಾರೆ? ಮಹಾರಾಷ್ಟ್ರ ತಮಿಳುನಾಡು, ಗೋವಾ, ಕೇರಳ ಇವು ಯಾವಾಗ ಮಾಡಿದಿರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ : ನನ್ನ ಕಾಲದಲ್ಲಿ ಮಾಡಿದ್ದೇನೆ. ಆದರೆ ಪ್ರೈವೇಟ್‌ನವರಿಗೆ ನಾನು ಎಲ್ಲೂ ಮಾಡಿಲ್ಲ, ನಾನು ಇಂಟರ್ ಸ್ಟೇಟ್ ಕಾರ್ಪೋರೇಷನ್ ಜೊತೆಯಲ್ಲಿಮಾಡಿದ್ದೇನೆ. ಮಾನ್ಯ ಅಧ್ಯಕ್ಷರೆ, ಒಂದು ಪ್ರೈವೇಟ್ ಬಸ್ಸಿಗೂ ನಾನು ಪರ್ಮಿಟ್ ಕೊಟ್ಟಿಲ್ಲ. ಯಾವುದಾದರೂ ಪರ್ಮಿಟ್ ಕೊಟ್ಟಿದ್ದರೆ ಇದರ ಹೊರತ್ತಾಗಿ ಆಫೀಸರ್ಸ್‌ನ್ನು ಫರ್ನಿಶ್ ಮಾಡಿದ್ದೇನೆ. ನಿಮ್ಮ ಲಾ ಡಿಪಾರ್ಟ್‌ಮೆಂಟ್ . ಕೆಲಸ ಮಾಡುತ್ತಿದೆಯೇ? ನಿಮ್ಮ ಲಾ ಆಫೀಸರ್ ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ನ್ಯಾಷನಲೈಜ್ ಮಾಡುವಾಗ ಕೆ.ಎಸ್.ಆರ್.ಟಿ.ಸಿ.ಗೆ ವಿರುದ್ಧವಾಗಿ ಮಾತನಾಡಿದ್ದಾರೆ. ಆ ಲಾ ಆಫೀಸರ್ ನಾನು ಹೋದ ಮೇಲೆ ರಾಜ್ಯಪಾಲರ ಆಡಳಿತ ಬಂದಾಗ, ಮತ್ತೆ ಚೀಫ್ ಲಾ ಆಫೀಸರ್ ಆಗಿ ಬಂದು ಕುಳಿತುಕೊಂಡಿದ್ದಾರೆ. ಅದು ಲಾ ಡಿಪಾರ್ಟ್‌ಮೆಂಟಾ? ಅಲ್ಲಿ 50 ಸಾವಿರ ಎಂಪ್ಲಾಯಿಸ್ ಇದ್ದಾರೆ? ಅವರ ಮೇಲೆ 60 ಸಾವಿರ ಕೇಸ್ ಹಾಕಿ ಚೆಕ್ ಮಾಡುತ್ತಾರೆ 200 ಜನರನ್ನು ಸಸ್‌ಪೆಂಡ್ ಮಾಡಿದ್ದಾರೆ? ಏತಕ್ಕೋಸ್ಕರ ಕೇಸ್ ಹಾಕಿ ಚೆಕ್ ಮಾಡುತ್ತಾರೆಂದರೆ ಕಲೆಕ್ಷನ್‌ಗೋಸ್ಕರ ಕೇಸ್ ಹಾಕಿ ಚೆಕ್ ಮಾಡುತ್ತಾರೆ. ಅಲ್ಲಿ ಲಾ ಡಿಪಾರ್ಟ್‌ಮೆಂಟ್ ಒಂದು ಕ್ಷಣ

ಇರಬಾರದು. ಅದನ್ನು ಡಿಸಮಿಸ್ ಮಾಡಬೇಕು. What action have you taken on them? Have you ordered for enquiry on this I know what it is. ದಯವಿಟ್ಟು ಸಮಯ ಇಲ್ಲ, ಆದ್ದರಿಂದ I am prepared for a public debate on KSRTC functioning. ನಿಮಗೇನು ಕಾರ್ಯಕ್ರಮ ಇದೆ ಅದನ್ನು ದಯವಿಟ್ಟು ಹೇಳಿ. ನಾವು ಕೇಳುತ್ತೇವೆ. Don't try to dig.

ಶ್ರೀ ಅಜೀಜ್ ಸೇಠ್ : ನಾನು ಬಂದ ಮೇಲೆ We have taken action against the law officer. He is retired. We have not kept him there. What he says, we know.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅವರು ರಿಟೈರ್ಡ್ ಆದರೆ ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಿ, ಏತಕ್ಕೆ ಅವರಿಗೆ ಪೆನ್‌ಷನ್ ಕೊಡುತ್ತೀರಿ? ನಿಲ್ಲಿಸಿ ಅದನ್ನು. What action you have taken? What about other officers? ನನಗೆ ಗೊತ್ತಿಲ್ಲವೇ ನಾವು ಇದೆಲ್ಲಾ ತಿಳಿದುಕೊಂಡಿದ್ದೇವೆ. ನಮಗೂ ಗೊತ್ತಿದೆ ಸಮಯ ಇಲ್ಲ.

ಶ್ರೀ ಅಜೀಜ್ ಸೇಠ್ : ನಾವು ಒಬ್ಬ ಚೀಫ್ ಇಂಜನಿಯರ್‌ನ್ನು ಮನೆಗೆ ಕಳುಹಿಸಿದ್ದೇವೆ. ಅದು ನಾನು ಬಂದ ಮೇಲೆ. ಹಾಗಾದರೆ ನಾವೇನೂ ಕೆಲಸ ಮಾಡಿಲ್ಲವೇ? ನಾವು ಮಾಡಿರುವುದನ್ನು ಒಪ್ಪಿಕೊಳ್ಳಿ. ಇಂಟರ್ ಸ್ಟೇಟ ಪರ್ಮಿಟ್ ಮಾಡಿದ್ದೇವೆಂದು ಅವರು ಹೇಳಿದರು. ಈಗ 1975-79ರವರೆಗೆ ಇಂಟರ್ ಸ್ಟೇಟ್ ಪರ್ಮೀಟ್ ಆಯಿತು. ಈಗ ಅವರು ಹೇಳಲಿ. I have taken action on inter-state services and taken oficers to Andhra, Maharashtra, Tamilnadu.

ಆಂಧ್ರ ಪ್ರದೇಶದ ಮಿನಿಸ್ಟರ್ ಇಲ್ಲಿಗೆ ಬಂದಿದ್ದರು. ಮಹಾರಾಷ್ಟ್ರಕ್ಕೆ ಕಳುಹಿಸಿದ್ದೆವು. ತಮಿಳುನಾಡಿಗೆ ಕಳುಹಿಸಿದ್ದೆವು. ಇದುವರೆಗೂ ಹಿಂದಿನ ಅಗ್ರಿಮೆಂಟ್ ಮೇಲೆ ನಾವು ನಡೆಯುತ್ತಿರುವುದು. ಇನ್ನು ಕ್ಲಾಂಡಸ್ಟೈನ್ ಸ್ಟೇಟ್ ಆಪರೇಟರ್ಸ್ ಕೋಲಾರ ಡಿಸ್ಟ್ರಿಕ್ಟ್‌ನಲ್ಲಿ ಇದ್ದರೆ. ಅಲ್ಲಿ ನ್ಯಾಷನಲೈಸ್ ಆಗದೇ ಇರುವುದರಿಂದ ಪ್ರವೇಟ್ ಅಪರೇಟರ್ಸ್‌ಗೆ ಕೊಡಲೇಬೇಕಾಗಿದೆ. ಈಗ ತಮಗೆಲ್ಲಾ ಗೊತ್ತಿದ್ದ ಹಾಗೆ ಮಾನ್ಯ ಅಧ್ಯಕ್ಷರೇ ನ್ಯಾಷನಲ್ ಲೈಜ್ ಮಾಡಿದ್ದಾರೆ. ನಾನು ಮೈಸೂರಿನಿಂದ ಬರುತ್ತಿದ್ದೆ. Let us keep our hand on our conscience, and say "I am not responsible." ಅರ್ಧ ಮೈಸೂರನ್ನು ನೀವು ನ್ಯಾಷನಲೈಜ್ ಮಾಡಿದ್ದೀರಿ ಇನ್ನು ಅರ್ಧ ಮೈಸೂರು ನ್ಯಾಷನಲೈಜ್ ಮಾಡಿಲ್ಲ. ಮಂಡ್ಯ ಜಿಲ್ಲೆಯಲ್ಲಿ ಮಾಡಿಲ್ಲ. ಅಲ್ಲಿಂದ ಹುಬ್ಬಳ್ಳಿವರೆಗೂ ನ್ಯಾಷನಲೈಜ್ ಆಗಿದೆ. ಚಿತ್ರದುರ್ಗದಿಂದ ದಾವಣಗೆರೆಯವರೆಗೂ ಮಾಡಿಲ್ಲ. ಈಗ ಆಗಿದೆ. ಹೀಗೆ ಎಲ್ಲಿಯವರೆಗೂ ನ್ಯಾಷನಲೈಜ್ ಮಾಡುವುದಿಲ್ಲವೋ ಅಲ್ಲಿಯವರೆಗೂ ಇದೇ ಪರಿಣಾಮವಾಗುತ್ತದೆ. ಆದ್ದರಿಂದ I have decided now. If I have a chance and time, I am going to nationalise Mysore, Mandya, Shimoga and other places so that we can bring them in one pocket which could be nationalised.

ಎಲ್ಲಿ ನ್ಯಾಷನಲೈಜ್ ಆಗಿದೆ ಎಲ್ಲಿ ನ್ಯಾಷನಲೈಜ್ ಆಗದೆ ಇರುವವರು ಆಪರೇಶನ್ ಆಗುತ್ತದೆ. ಅಲ್ಲಿ ನಾವೇನು ಮಾಡುವುದಕ್ಕೆ ಬರುತ್ತದೆ? ಮತ್ತೆ ಈಗ ಕೆಲವು ಡಿಸ್ಟ್ರಿಕ್ಟ್‌ಗಳನ್ನು ಮಾಡುವ ಸಂಭವ ಇದೆ. Divisions are too big and unwieldy. I am thinking and planning change of divisions, and to divide certain divisions, this year. ಅದು ಚಾಮರಾಜನಗರ ಇರಬಹುದು.

ಗದಗ ಇರಬಹುದು ಶಿವಮೊಗ್ಗ ಇರಬಹುದು ದಾವಣಗೆರೆ ಇರಬಹುದು ಇದನ್ನು ಮಾಡುವುದಕ್ಕೆ ಪ್ರಯತ್ನ ಪಡುತ್ತೇವೆ. We will see that three or four divisions.. ಆತುರದಲ್ಲಿ ಮಾಡುತ್ತೇವೆ. ಮಾನ್ಯ ಸಿಂಧ್ಯಾರವರು ಹೇಳಿದರು....

ಶ್ರೀ ವಾಟಾಳ್ ನಾಗರಾಜ್ : ಡೆಫನೇಟ್ ಆಗಿ ಮಾಡುತ್ತೀರಾ?

ಶ್ರೀ ಅಜೀಜ್ ಸೇಠ್ : ನಾನು ಮೊದಲೇ ಚಾಮರಾಜನಗರ ಎಂದು ಹೇಳಿದೆ. ನೀವು ಕೇಳಿಸಿಕೊಳ್ಳಲಿಲ್ಲ. ಇನು ಕೆಲವು ಡಿಪೋಗಳಿಗೆ ಜಾಗ ತೆಗೆದುಕೊಂಡಿದ್ದಾರೆ. ಇದು ನಮಗೆ ಬಹಳ ಹಿಂಸೆ ಆಗಿದೆ. Depots are meant for acting as necleus, dealing in operating parts. ಎಲ್ಲಿ ಬೇಕಾಗಿಲ್ಲ ಅಲ್ಲಿ ತೆಗೆದುಕೊಂಡಿದ್ದಾರೆ. ಅಲ್ಲಿ ಡಿಪೋ ಕಟ್ಟಿದ್ದಾರೆ... ಈ ರೀತಿ ಮಾಡಿರುವುದು ಹಿಂದೆ ನಾನೀಗ ಏನೂ ಮಾಡುವುದಕ್ಕಾಗುವುದಿಲ್ಲ. ಈಗ ರಾಣಿಬೆನ್ನೂರಿನಲ್ಲಿ ತೆಗೆದುಕೊಂಡಿದ್ದಾರೆ ಬಸ್ ಸ್ಟ್ಯಾಂಡ್ ಮಾಡಿದ್ದಾರೆ. ನಾನು ಅವರ ಹೆಸರು ಹೇಳುವುದಕ್ಕೆ ಸಾಧ್ಯವಿಲ್ಲ. ಒಬ್ಬರು ಲೆಜಿಸಲೇಟರ್‌ದ್ದು ಜಾಗ ಅಲ್ಲಿ ಅನ್ ಅಥರೈಜ್ಡ್ ಆಗಿ ಅಂಗಡಿಗಳು ಇದ್ದವು ಆ ಜಾಗವನ್ನು ತೆಗೆದುಕೊಂಡು ಅವರಿಗೆ ಸಹಾಯ ಮಾಡಿದ್ದಾರೆ. ಎಷ್ಟು ಕಂಜೆಸ್ಟೆಡ್ ಏರಿಯಾ ಇದೆ? Iam trying to buy 14 to 15 acres of land for bus station and depot. ರಾಣಿಬೆನ್ನೂರಿಗೆ ಡಿಪೋ ಬೇಕು. ಹಾನ್‌ಗಲ್‌ಗೆ ಬೇಕೇ ಬೇಕು. ಹುಬ್ಬಳ್ಳಿಯಲ್ಲಿ ಬಸ್ ಸ್ಟ್ಯಾಂಡ್‌ಗೆ ಹೊಸ ಜಾಗ ತೆಗೆದುಕೊಂಡಿದ್ದಾರೆ. ಡಿವಿಷನಲ್ ವರ್ಕ್‌ಶಾಪ್‌ಗೆ ಬಸ್‌ಸ್ಟ್ಯಾಂಡ್‌ದೂರ ಇದ್ದುದರಿಂದ ಅದನ್ನು ಶಿಫ್ಟ್ ಮಾಡಿದ್ದಾಯಿತು. ನಾನು ಒಟ್ಟಾರೆ ಹೇಳುವುದು, There are many establishments where we have to improve our KSRTC, its functioning and rerouting.

'ಸಿ' ರೂಟ್ಸ್ ಎಲ್ಲಾ ಕ್ಲೋಸ್ ಮಾಡಿದ್ದೇವೆಂದು ಹೇಳುತ್ತಾರೆ. ಸ್ವಾಮಿ 'ಸಿ' ರೂಟ್ಸ್ ತಾವು ಹೇಳಿದ ಹಾಗೆ ಎಲ್ಲಾ ಚಾಪ್ಟರ್ ಕ್ಲೋಸ್ ಮಾಡಿಲ್ಲ ನಾವು.

Operation 30 for 1227 routes. Restored 1042; not restored 185.

ಇದು ಯಾವುದು? ತಾಲ್ಲೂಕು ಹೆಡ್ ಕ್ವಾರ್ಟರ್‌ನಿಂದ ನಾವು ರೆಸ್ಟೋರ್ ಮಾಡಿಲ್ಲ, ಅದು ಬರಲಿ We have added some more buses by rerouting. We have not completely eliminated that. ಈಗ ಒಂದು ಕೆಲಸ ಆಗಿದೆ. ಆಂಧ್ರದಲ್ಲಿ ಡಿಪೋ ಮ್ಯಾನೇಜರ್ are powerful as far as rerouting and routing are concerned. ನಮ್ಮಲ್ಲಿ DC's ಮಾಡುತ್ತಾ ಇದ್ದಾರೆ. ಈ ಸಂದರ್ಭದಲ್ಲಿ ನಾನು ಇಷ್ಟು ಹೇಳಬಲ್ಲೆ. ಏಕೆಂದರೆ ಟೈಮ್ ಇಲ್ಲ. ಇವರೆಲ್ಲಾ ಏನೇನು ಹೇಳಿದ್ದಾರೆ ಅದನ್ನು ಎಲ್ಲಾ ಗಮನದಲ್ಲಿಟ್ಟುಕೊಂಡು ಈಗ ಬೀದರ್‌ನಲ್ಲಿ ಡಿವಿಷನ್ ಆಫೀಸ್ ಆಗಬೇಕಾಗಿದೆ. ನಾನು ಏನು ಮಾಡಬೇಕು ಹೇಳಿ? ಹುಮ್ನಾಬಾದ್‌ನಲ್ಲಿ ತೆಗೆದುಕೊಂಡು ಹೋಗಿ 40-50 ಲಕ್ಷ ರೂಪಾಯಿ ಹಾಕಿ ಬಿಲ್ಡಿಂಗ್ ಕಟ್ಟಿದ್ದಾರೆ. ನೀವು ಹೇಳುತ್ತೀರಾ ಮಾಡಿ ಎಂದು. ಆ ಕಾಲಕ್ಕೆ ಯೋರೋ ಹೇಳಿದರು, ಮಾಡಿಬಿಟ್ಟು ಬೀದರ್ ಹೆಡ್ ಕ್ವಾರ್ಟರ್ ಇದ್ದಾಗ ಡಿವಿಷನಲ್ ವರ್ಕ್‌ಶಾಪ್ ಎಲ್ಲಿ ಮಾಡುತ್ತೀರಾ? ಹುಮ್ನಾಬಾದ್‌ನಲ್ಲಿ ಮಾಡುತ್ತೀರೋ? We have to go into its reality - real concept. ಹೋಗಬೇಕು. 50-60 ಲಕ್ಷ ರೂಪಾಯಿ ಹಾಕಿ ಆ ಕಾಲದಲ್ಲಿ ಬಿಲ್ಡಿಂಗ್ ಕಟ್ಟಿಬಿಟ್ಟಿದ್ದಾರೆ. ಅಲ್ಲೇ ಡಿವಿಷನಲ್ ಆಫೀಸ್ ಮಾಡದೆ ವಿಧಿ ಇಲ್ಲ. ವಿಧಿ ಇಲ್ಲದೆ ಮಾಡಬೇಕಾಗುತ್ತದೆ. ಆದ್ದರಿಂದ Let us see.

ನಾವು ರಾಜಕೀಯದಲ್ಲಿದ್ದು ಅಧಿಕಾರಕ್ಕೆ ಬಂದ ಮೇಲೆ ನಾವು ಈ ಕೆ.ಎಸ್.ಆರ್.ಟಿ.ಸಿ. ಯನ್ನು ಯಾವ ರೀತಿ ಯಾರಿಗೋ ಸಂತೋಷಪಡಿಸುವುದಕ್ಕೆ, ನಮ್ಮ ಸಂತೋಷ ಪಡುವುದಕ್ಕೆ ನಾವು ಉಪಯೋಗಿಸಿಕೊಂಡಿದ್ದೇವೆ? ನಾನು ಹೇಳುತ್ತೇನೆ. ಇವತ್ತು ಯಾರೇ ಇರಲಿ, ಇದು ಕಮರ್ಷಿಯಲ್ ಕಾರ್ಪೋರೇಷನ್ ಎಂದು ಅವಕಾಶ ಮಾಡಿಕೊಡಬೇಕು. ಮತ್ತೆ ಒಂದು ಸಾರಿ ಕಳಕಳಿಯಿಂದ ಎಲ್ಲರಿಗೂ ಕೇಳಿಕೊಳ್ಳುತ್ತೇನೆ. ಈಗ ಕೆ.ಎಸ್.ಆರ್.ಟಿ.ಸಿ. ಯನ್ನು ಬೆಳೆಸಬೇಕಾದರೆ We have to reconsider regarding enhancement of fare.

ಶ್ರೀ ವಾಟಾಳ್ ನಾಗರಾಜ್ : ಒಂದು ನಯಾ ಪೈಸೆ ಜಾಸ್ತಿ ಮಾಡುವುದಕ್ಕೆ ಬಿಡುವುದಿಲ್ಲ.

ಶ್ರೀ ಅಜೀಜ್ ಸೇಠ್ : ಸದನದಲ್ಲಿ ಮಾತನಾಡಿದರೆ ಬೇಡ ಅಂತೀರಿ. ಲಾಬಿಯಲ್ಲಿ ಕುಳಿತುಕೊಂಡು ಮಾತನಾಡುವಾಗ ಬೇಡ ಎಂದು ಹೇಳುತ್ತೀರಿ.

ಶ್ರೀ ವಾಟಾಳ್ ನಾಗರಾಜ್ : ನಾವು ಕೈ ಮುಗಿದು ಹೇಳುತ್ತೇವೆ. ನಿಮಗೆ ಸಾಷ್ಟಾಂಗ ಬೇಕಾದರೆ ಜನಗಳ ಪರವಾಗಿ ನಾವು ಮಾಡುತ್ತೇವೆ. ಒಂದು ನಯಾಪೈಸೆ ಕೂಡಾ ಜಾಸ್ತಿ ಮಾಡಬಾರದು.

ಶ್ರೀ ಅಜೀಜ್ ಸೇಠ್ : ನನ್ನಲ್ಲಿ ಒಂದು ಕೆಟ್ಟ ಅಭ್ಯಾಸ ಏನಿದೆ ಎಂದರೆ? ನಾನು ಯಾವೊತ್ತೂ ಸುಳ್ಳು ಹೇಳುವುದಿಲ್ಲ. ಈ ಸದನಕ್ಕೆ ಬರುವುದಕ್ಕೆ ಮೊದಲು ವಾಟಾಳ್ ನಾಗರಾಜ್ ಸಾಹೇಬರಿಗೆ ಹೇಳಿದ್ದೆ. ಡಿಪೋ ಬೇಕು ಡಿಪೋ ಬೇಕು ಅಂತಾರೆ ಅದಕ್ಕೆ ಬಸ್ ಫೇರ್ ಜಾಸ್ತಿ ಮಾಡಬೇಕೆಂದು ಹೇಳಿದಾಗ, ಮಾಡಬೇಕಾದರೆ ಅದರ ಬಗ್ಗೆ ನಾವು ಒಳಗೆ ಹೇಳುವುದಕ್ಕೆ ಬರುವುದಿಲ್ಲವೆಂದು ಹೇಳಿದರು.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಬೇಜವಾಬ್ದಾರಿಯಿಂದ ಮಾತನಾಡುತ್ತಿದ್ದೀರಿ. ಅವರು ಜವಾಬ್ದಾರಿ ಇಟ್ಟುಕೊಂಡು ಮಾತನಾಡುತ್ತಿಲ್ಲ. ಅವರು ಹಿರಿಯ ಸಚಿವರು. ಅವರ ಬಗ್ಗೆ ನನಗೆ ಬಹಳ ಗೌರವ ಇದೆ. ಆದರೆ ಅವರ ನಾಲಿಗೆ ಎತ್ತತ್ತಲಾಗೋ ತಿರುಗುತ್ತಿದೆ. ಸ್ವಲ್ಪ ನಾಲಿಗೆಯನ್ನು ಭದ್ರವಾಗಿ ಹಿಡಿಯಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಅಜೀಜ್ ಸೇಠ್ : ನಾಗರಾಜ್ ನೀವು ನನ್ನ ಹಳೇ ಫ್ರೆಂಡ್. ನಾನು ನಿಮ್ಮ ಫ್ರೆಂಡ್. ನೀವು ನನ್ನನ್ನು ತಿಳಿದುಕೊಂಡಿದ್ದೀರಿ. ನಾನು ನಿಮಗೆ ತಿಳಿದುಕೊಂಡಿದ್ದೀನಿ. ರಾಜಕೀಯವಾಗಿ ಇದೆಲ್ಲಾ ನಡೆಯುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾವೂ ಬಹಳ ವಿಚಾರ ಹೇಳಬೇಕಾಗುತ್ತದೆ.

ಶ್ರೀ ಅಜೀಜ್ ಸೇಠ್ : ಹೇಳಿ ಅಪ್ಪಾ, ನಾನು ಏನಾದರೂ ಅಂಥಾದ್ದು ಮಾಡಿದರೆ ಒಂದು ನಿಮಿಷ ಈ ಜಾಗದಲ್ಲಿ ಇರುವುದಕ್ಕೆ ಅರ್ಹತೆ ಇಲ್ಲ.

ಇದು ಸಿಂಧ್ಯರವರು ಆತ್ಮಸಾಕ್ಷಿಯಾಗಿ ಏನಾದರೂ ಮಾಡಿದ್ದೇವೆಂದು ಹೇಳಿದರೆ ಇವತ್ತೇ ಇಲ್ಲಿಂದ ನಾನು ಮುಖ ಎತ್ತಿಕೊಂಡು ಹೋಗುತ್ತೇನೆ. ಈ ಸದನದಲ್ಲಿ ಕಾಲಿಡುವುದಿಲ್ಲ. ಇದು ನನ್ನ ಕೊನೆಯ ಟರ್ಮ್. I have decided to retire from politics. ಏಕೆಂದರೆ ನಾವು ನೋಡಿದ ರಾಜಕೀಯಕ್ಕೂ ಈಗ ನಡೆಯುತ್ತಾ ಇರತಕ್ಕ ರಾಜಕೀಯಕ್ಕು ಅಜಗಜಾಂತರ ವ್ಯತ್ಯಾಸ ಇದೆ. ಬದಲಾವಣೆ ಆಗಿದೆ. ಆಗ ನಾವು ಪಾಲಿಟಿಕ್ಸ್ ಎಂದರೆ ಅನ್ ಇನಸ್ಟ್ರುಮೆಂಟ್ಸ್ ಆಫ್ ಸೋಷಿಯಲ್ ಸರ್ವೀಸ್ ಎಂದು ತಿಳಿದುಕೊಂಡಿದ್ದೆವು. ಇವತ್ತು ಹಾಗೆ ಇಲ್ಲ. ನಾವು ಇರಬಹುದು, ಇಲ್ಲದೇ ಇರಬಹುದು. ದೇಶದಲ್ಲಿ ನಾಳೆ ಏನು ಆಗುತ್ತದೆ ಎಂದು ಯೋಚನೆ ಮಾಡಬೇಕು. ಅಧಿಕಾರಕ್ಕೆ ನಾವು ಬರಬಹುದು, ನೀವು ಬರಬಹುದು, ನಾವು ಹೋಗಬಹುದು ಅಥವಾ ನೀವು

ಹೋಗಬಹುದು. ಅಂದರೆ ನಾವು ಬ್ಯಾಲೆನ್ಸ್ ಇಟ್ಟುಕೊಂಡಿರಬೇಕು. ನಾವು ಪ್ರತಿಒಂದಕ್ಕೂ ಮಕ್ಕಳಿಗೆ ಲಾಲಿ ಪಂಪ್ ಕೊಡುತ್ತೇವೆಂದು ಹೇಳುವಂತೆ ನಾವು ಹೇಳಿಕೊಂಡು ಜನಗಳಿಗೆ ತಲೆ ಕೆಡಿಸಬಾರದು. ಮಾನ್ಯ ಬನ್ನಿಕೋಡ್ ಅವರು ಹೇಳಿದರು. ಬಾಂಬೆ ಕರ್ನಾಟಕದ ರೂಟ್,ಹಿರೇಕೆರೂರ್ ಲಾಭದಾಯಕವಾಗಿ ಬಸ್ ಓಡುತ್ತಿದೆ ಎಂದು. ಬಳ್ಳಾರಿ-ರಾಯಚೂರು, ಬಳ್ಳಾರಿ-ಗುಲ್ಬರ್ಗಾ ಲಾಸ್. ಏಕೆ ಆಯಿತು ತಮಗೆ ಗೊತ್ತಿದೆ. You know very well there is absenteeism, favouritism, and nepotism. ಎಲ್ಲಾ ಇದೆ. ಆದ್ದರಿಂದ ಜನಗಳಿಗೆ ಸೌಕರ್ಯ ಬೇಕಾಗಿದೆ. 77 ಲಕ್ಷ ರೂಪಾಯಿಗಳ ಸ್ಟೂಡೆಂಟ್ಸ್ ಪಾಸ್ ನಾವು ಕೊಡುತ್ತಿದ್ದೇವೆ. ರೂರಲ್ ಕಾಲೇಜ್‌ನವರು ತಾವು ಪತ್ರಿಕೆಯಲ್ಲಿ ಎಡಿಟೋರಿಯಲ್ ನೋಡಿರಬಹುದು, ಅವರು ಹೇಳುತ್ತಿದ್ದಾರೆ. ಕೆ.ಎಸ್. ಆರ್.ಟಿ.ಸಿ. ಅವರು ಕನ್ಸೇಷನ್ ಪಾಸ್ ಕೊಡುವುದರಿಂದ ನಮ್ಮ ಸ್ಕೂಲಿನಲ್ಲಿ ವಿಧ್ಯಾರ್ಥಿಗಳ ಸಂಖ್ಯೆ ಕಡಿಮೆ ಆಗುತ್ತಿದೆ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅದು ಓಲ್ಡ್ ಫೀಲಿಂಗ್.

ಶ್ರೀ ಅಜೀಜ್ ಸೇಠ್ : ಓಲ್ಡ್ ಫೀಲಿಂಗ್ ಅಲ್ಲ. ಮೊನ್ನೆ ಪತ್ರಿಕೆಯಲ್ಲಿ ಬಂದಿದೆ. ನನ್ನ ಹತ್ತಿರ ರೆಪ್ರೆಸೆಂಟೇಷನ್ಸ್ ಬಂದಿವೆ. ಆದ್ದರಿಂದ ನಾನು ಹೇಳುವುದು ನಾವು ಎಲ್ಲವನ್ನೂ ಸ್ವಲ್ಪ ನೋಡಬೇಕು. ಯಾವ ರೀತಿಯಿಂದಲೂ ಬಸ್ ಪಾಸಸ್ ಕೊಡಬಾರದು ಎಂದು ನಾನು ಹೇಳುವುದಿಲ್ಲ. ಅದನ್ನು ನಾವು ನೋಡಬೇಕಾಗುತ್ತದೆ. ಮೊನ್ನೆ ಬೆಳಗಾಂನಿಂದ ಸ್ಟೂಡೆಂಟ್ ಬಂದಿದ್ದ. ಅವನನ್ನು ಪಾಸ್ ಕೇಳಿದ್ದಕ್ಕೆ ಆತನ ಹತ್ತಿರ ಪಾಸ್ ಇಲ್ಲ. ಅವನನ್ನು ಬಸ್‌ನಿಂದ ಇಳಿಸಿದರೆ ಜಗಳವಾಗಿ ಮೂರು ಗಂಟೆಗಳ ಕಾಲ ಬಸ್ ಸ್ಟಾಪ್ ಆಯಿತು, ಡಿಸಿಪ್ಲೀನ್ ಬೇಕೋ ಬೇಡವೋ, ನಾನು ಪಾಸಸ್ ಕೊಡಬಾರದು ಎಂದು ಹೇಳುವುದಿಲ್ಲ,ನಾವು ಕೊಡಬೇಕಾಗುತ್ತದೆ. ಅದಕ್ಕೆ ಒಂದು ನಿಯಮ ಬೇಕಾಗುತ್ತದೆ. 1992-93ಕ್ಕೆ ನಾವು ಏನಾದರೂ ಮಾಡಬೇಕಾಗುತ್ತದೆ. ಅಕಾಡೆಮಿಕ್ ಇಯರ್ ಮಾರ್ಚಿ -ಏಪ್ರಿಲ್, 1992ಕ್ಕೆ ಏನಾದರೂ ಮಾಡಬೇಕಾಗುತ್ತದೆ. ಇಷ್ಟು ಹೇಳಿ ನಾನು ಎಲ್ಲರ ಸಹಕಾರವನ್ನು ಕೋರುತ್ತೇನೆ. ಈ ಕೆ.ಎಸ್.ಆರ್.ಟಿ.ಸಿ. ಯಲ್ಲಿ ಲೋಪ-ದೋಷಗಳು ಏನಿವೆ, ಅದನ್ನು ತೆಗೆಯುವುದಕ್ಕೆ ನಾನು ಪ್ರಯತ್ನ ಪಡುತ್ತೇನೆ ಮತ್ತು ಆರು ತಿಂಗಳಲ್ಲಿ ಯಾವುದೇ ಇಂಟರ್‌ಫಿಯರೆನ್ಸ ಎಂದರೆ You will see the result of KSRTC.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಒಂದೆರಡು ವಿಚಾರಗಳನ್ನು ಹೇಳಿದರು. ನಾನು ಸಾರಿಗೆ ಮಂತ್ರಿಯಾಗಿದ್ದಾಗ ಮಾತನಾಡಿರುವುದನ್ನು ನಾನು ಹೇಳಬೇಕಾಗುತ್ತದೆ. ಅವರು ಹೇಳಿದರು: ನನ್ನ ಮಾತಿನಿಂದ ಡಿಸಪಾಯಿಂಟ್ ಆಗಿದೆ ಎಂದು. ಅದು ನ್ಯಾಚುರಲ್. ಬಸ್ ಫೇರ್ ಇನ್‌ಕ್ರೀಸ್ ಮಾಡಬಾರದೆಂದು ನಾನು ಬಹಳ ವರ್ಷಗಳಿಂದ ಹೇಳಿಕೊಂಡು ಬಂದಿದ್ದೇನೆ. There is no technical or scientificreason.ಯಾವ ರೀತಿ ರಿಸೋರ್ಸಸ್ ಅನ್ನು ಮೊಬಿಲೈಸ್ ಮಾಡಿಕೊಳ್ಳಬಹುದು. ಈಗಿರತಕ್ಕ ಪೊಜಿಶನ್‌ನಲ್ಲಿ ಎನ್ನತಕ್ಕ ಮಾತನ್ನು ಹೇಳಿದ್ದೇನೆ. ಇನ್‌ಸ್ಟೆಡ್ ಆಫ್ ದಟ್ ನಾನು ಒಪ್ಪಿಗೆ ಕೊಟ್ಟಿಲ್ಲ ಎಂದು ಹೇಳಿ ಡಿಸಪಾಯಿಂಟ್ ಆಗಿದೆ ಅಷ್ಟೆ.ಈಗ ಹುಮ್ನಾಬಾದ್ ಬಗ್ಗೆ ಹೇಳಿದಿರಿ. ಅಲ್ಲಿ ಡ್ರೈವಿಂಗ್ ಸೆಂಟರ್‌ನ ಡಿವಿಜನ್ ಆಫೀಸ್ ಇಲ್ಲ. ಅಲ್ಲಿ ಇರುವುದು ಟ್ರೈನಿಂಗ್ ಸೆಂಟರ್, ನಿಮಗೆ ಯಾರೋ ತಪ್ಪು ಮಾಹಿತಿ ಕೊಟ್ಟಿದ್ದಾರೆ, ಅಲ್ಲಿ ಮಾಡಿರತಕ್ಕದ್ದು ಡ್ರೈವರ್ಸ್ ಟ್ರೈನಿಂಗ್ ಸೆಂಟರ್ ಎಂದು ಡ್ರೈವರ್ಸ್‌ಗೆ ರಿಫ್ರೆಷ್‌ಮೆಂಟ್ ಕೋರ್ಸನ್ನು ಕೊಡಬೇಕೆಂದು ಹೇಳಿ ಬಹುಶ: ಇಡೀ ಹಿಂದೂಸ್ತಾನದಲ್ಲಿ ಇದು ಎಲ್ಲಿಯೂ ಇಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಇಂತಹ ಒಂದು ಕೇಂದ್ರ

ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಕೇಳಿದ್ದೇನೆ. ಅದು ಕೆಲಸ ಮಾಡುವ ಹಾಗೆ ಮಾಡಬೇಕು. ಈಗ ವಿದ್ಯಾರ್ಥಿಗಳ ಪಾಸ್‌ಗಳ ಬಗ್ಗೆ ಒಂದು ಮಾತನ್ನು ಕೇಳಿದೆ. ನಮ್ಮ ರಾಜ್ಯದಲ್ಲಿ ಬ್ಲೈಂಡ್ ಪರ್ಸನ್ಸ್‌ಗೆ ಟ್ರಾವೆಲ್ ಮಾಡುವುದಕ್ಕೆ ನಾವು ಫ್ರೀ ಪಾಸಸ್ ಕೊಟ್ಟಿದ್ದೇವೆ. ಅವರಿಗೆ ಪಾಸಸ್ ಕೊಡುವುದರಲ್ಲಿ ಏನೋ ಸರಿಯಾಗಿ ನಡೆಯುತ್ತಾ ಇಲ್ಲ, ಬಹಳ ತೊಂದರೆ ಆಗುತ್ತಿದೆ ಎಂದು ಬ್ಲೈಂಡ್ ಅಸೋಸಿಯೇಷನ್‌ರವರು ಒಂದು ಹೇಳಿದ್ದಾರೆ. ಇದರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಬೇಕು.

SRI. AZIZ SAIT : I am taking action on that.

ಶ್ರೀ ಪಿ.ಜಿ.ಆರ್. ಸಿಂಧ್ಯ : ಎರಡನೆಯದಾಗಿ ನಾನು ಸಿ ಅಂಡ್ ಆರ್ ರೂಲ್ಸ್ ಏನು ಅಮೆಂಡ್‌ಮೆಂಟ್ ಮಾಡಿದ್ದೀರಿ, ಅಮೆಂಡ್ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದೀರಿ. ಇದಕ್ಕೆ ಅಪ್ರೂವಲ್ ಕೊಡಬೇಕು. ರಿಕ್ರೂಟ್‌ಮೆಂಟ್ ಬೋರ್ಡ್ ಮಾಡಬೇಕೆಂದು ಹೇಳಿದ್ದೆ. ಇದರ ಬಗ್ಗೆ ನೀವು ಪ್ರತಿಕ್ರಿಯಿಸಲಿಲ್ಲ.

SRI. AZIZ SAIT : There is no secret. Government is run by a party. ನಾನು ಇಂಟರ್‌ಫಿಯರ್ ಮಾಡಿದ್ದೇನೆಂದು, ಅದನ್ನು ತಾವು ಒಂದು ನೆಪ ಎಂದು ಭಾವಿಸಿಕೊಳ್ಳಬೇಡಿ. ನಾನು ಯಾವುದಕ್ಕೂ ಇಂಟರ್‌ಫಿಯರ್ ಮಾಡುವುದಿಲ್ಲ.ನಮಗೆ ಏನು ತೋಚಿತು ಎಂದರೆ ಎಂಪ್ಲಾಯ್‌ಮೆಂಟ್ ಎಕ್ಸಚೇಂಜ್ ನಿಂದ ಮಾಡೋಣ. ಆದರ ಬಗ್ಗೆ ಕೆಲವರು ವಾದ-ವಿವಾದ ಮಾಡಿ ಅದು ಆಗಬಾರದು ಎಂದರು. ಅದಕ್ಕೆ ಸ್ಟಾಪ್ ಮಾಡಿದ್ದೇವೆ.

ರಿಕ್ರೂಟ್‌ಮೆಂಟ್‌ನ್ನು ಯಾವ ರೀತಿಯಲ್ಲಿ ಮಾಡಬೇಕೆಂದು ನಮ್ಮ ಮಂತ್ರಿಮಂಡಳದಲ್ಲಿ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಅದರ ಪ್ರಕಾರವಾಗಿಯೇ ನಾನು ಮಾಡಬೇಕಾಗಿದೆಯೇ ವಿನಹ ನಾನೇನೂ ಇಂಟರ್‌ಪೇರ್ ಮಾಡುತ್ತಾ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾವು ಸಜೆಶನ್ಸ್ ಕೊಟ್ಟಿದ್ದೇವೆ, ಅದನ್ನು ತೆಗೆದುಕೊಳ್ಳುವುದು ಬಿಡುವುದು ತಮಗೆ ಸೇರಿದ್ದು. ಆದರಿಂದ ಬರುವ ಒಳ್ಳೆಯ ಮತ್ತು ಕೆಟ್ಟ ಹೆಸರು ಸರಕಾರಕ್ಕೆ ಸಂಬಂಧಪಟ್ಟದ್ದುದು. ನಿಮಗೆ ಇಷ್ಟ ಬಂದ ಹಾಗೆ ಮಾಡಬಹುದು. ಅದರ ಕಹಿ ಮತ್ತು ಸಿಹಿ ಎರಡನ್ನು ನೀವೇ ಅನುಭವಿಸುತ್ತೀರಿ. ನನ್ನ ಅಭಿಪ್ರಾಯವನ್ನು ಮಾತ್ರ ನಾನು ಹೇಳಿದ್ದೇನೆ. ಇನ್ನು ಎಸ್‌ಸಿ ಮತ್ತು ಎಸ್‌ಟಿ ಯವರ ರಿಕ್ರೂಟ್‌ಮೆಂಟ್ ಬಗ್ಗೆ ಕೂಡ ಹೇಳಿದ್ದೇನೆ. ಅದರ ಬಗ್ಗೆ ತಾವು ಏನನ್ನೂ ಹೇಳಲಿಲ್ಲ. ಅದನ್ನು ತಾವು ಮಾಡಬೇಕು ಎಂದು ಒತ್ತಾಯ ಮಾಡುತ್ತೇನೆ. ನಾನು ಕೇಳಿರತಕ್ಕಂಥ ಬಹಳಷ್ಟು ವಿಚಾರಗಳ ಬಗ್ಗೆ ತಾವುಗಳು ಉತ್ತರಿಸಿಲ್ಲ. ನಾವಾದರೂ ಏನು ಮಾಡುವುದಕ್ಕೆ ಆಗುತ್ತದೆ? ಹಾಗೆಯೇ ಕರ್ನಾಟಕ ರಾಜ್ಯದಲ್ಲಿ ಇನ್ನೂ 15 ವರ್ಷಗಳಲ್ಲಿ ಎಷ್ಟು ಟ್ರಾನ್ಸ್‌ಪೋರ್ಟ್‌ನೀಡ್ ಇರುತ್ತದೆ ಎಂಬುದನ್ನು ತಿಳಿಯಲು ಒಂದು ಟ್ರಾಫಿಕ್ ಸರ್ವೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಅಜೀಜ್ ಸೇಠ್ : ತಾವುಗಳು ಹೇಳಿದ ವಿಚಾರಗಳ ಬಗ್ಗೆ ಪರಿಶೀಲನೆ ಮಾಡುತ್ತೇನೆ, ಇಲ್ಲ ಎಂದು ಇಲ್ಲ. ಈಗಾಗಲೇ ಒಂದು ಸರ್ವೆಯನ್ನು ಕೆ.ಎಸ್.ಆರ್.ಟಿ.ಸಿ. ಯವರು ಮಾಡಿದ್ದಾರೆ. ಅದು ಅಷ್ಟು ಸರಿಯಾಗಿಲ್ಲ. ಅದಕ್ಕೆ ಸರಕಾರದವರೇ ಒಂದು ಸರ್ವೇಯನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ. ಇನ್ನು 25 ವರ್ಷಗಳ ಮುಂದಿನ ಒಂದು ಅಂದಾಜನ್ನು ಮಾಸ್ಟರ್‌ಪ್ಲಾನ್ ಮಾಡಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಒಂದು ಪೀಠಿಕೆಯನ್ನು ಹಾಕಿದರು. ಬಸ್‌ದರವನ್ನು ಇನ್ನೂ ಹೆಚ್ಚಿಗೆ ಮಾಡುತ್ತೇವೆ ಎಂಬ ಅರ್ಥದಲ್ಲಿ ಹೇಳಿದರು. ಆ ಮೇಲೆ ಇಲ್ಲ, ಬಿಡುತ್ತೇನೆ ಎಂದು ಹೇಳಿದರು. ಆ ಮೇಲೆ ಮುಗಿಸತಕ್ಕಂಥ ಸಂದರ್ಭದಲ್ಲಿ ಬಸ್‌ದರವನ್ನು ಹೆಚ್ಚಿಗೆ ಮಾಡಬೇಕಾಗುತ್ತದೆ ಎಂದು ಕೂಡ ಹೇಳಿದ್ದಾರೆ. ಇದರ ಬಗ್ಗೆ ಸ್ಪಷ್ಟವಾಗಿ ಯಾವಾಗ ಮಾಡುತ್ತೀರಿ ಎಂಬುದನ್ನು ಹೇಳಬೇಕು. ಬಸ್‌ದರವನ್ನು ಹೆಚ್ಚಿಗೆ ಮಾಡುವ ಬಗ್ಗೆ ನನ್ನದು ತೀವ್ರವಾದಂಥ ವಿರೋಧವಿದೆ. ಯಾವುದೇ ಕಾರಣಕ್ಕಾಗಿ ಸಾರಿಗೆ ದರವನ್ನು ಹೆಚ್ಚಿಗೆ ಮಾಡುವುದರಲ್ಲಿ ಅರ್ಥವಿಲ್ಲ. ಇದರಿಂದ ನಿಮಗೆ ಕೆಟ್ಟ ಹೆಸರು ಬರುತ್ತದೆ. ನಿಮ್ಮ ಸರಕಾರಕ್ಕೆ ಕೆಟ್ಟ ಹೆಸರು ಬರುತ್ತದೆ, ಜನಸಾಮಾನ್ಯರಿಗೆ ತೊಂದರೆಯಾಗುತ್ತದೆ. ಜನರು ನಿಮಗೆ ಶಾಪ ಹಾಕುತ್ತಾರೆ. ತೀವ್ರವಾದಂಥ ಪ್ರತಿಭಟನೆಯನ್ನು ನಿಮ್ಮ ಸರಕಾರವು ಎದುಸಿರಬೇಕಾಗುತ್ತದೆ. ಅದ್ದರಿಂದ ಈ ಕಾರ್ಯಕ್ರಮವನ್ನು ಕೈಬಿಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಅಜೀಜ್ ಸೇಠ್ : ಒಂದು ವಿಷಯವನ್ನು ನಾನು ಹೇಳಲು ಮರೆತು ಹೋಗಿದ್ದೆ. ದೇಶದಲ್ಲಿ ರೈಲ್ವೇ ದರ ಹೆಚ್ಚಾಯಿತು. ಆಟೋ ದರವೂ ಹೆಚ್ಚಿಗೆ ಆಯಿತು. ಟ್ಯಾಕ್ಸಿದರ ಹೆಚ್ಚಾಯಿತು. ಈಗ 97 ಪರ್‌ಸೆಂಟ್ ಜಾಸ್ತಿ ಆಗಿರುವುದರಿಂದ, ಮಾನ್ಯ ವೀರೇಂದ್ರ ಪಾಟೀಲರ ಕಾಲದಲ್ಲಿ 26.4 ಪರ್‌ಸೆಂಟ್ ಏರಿಕೆ ಮಾಡಿದರು. ಆದಾದಮೇಲೆ 8 ದಿವಸಕ್ಕೆ ಗಲ್ಫ್ ಸರ್‌ಚಾರ್ಜ್ 25 ಪರ್‌ಸೆಂಟ್ ಬಂತು. ಆ 25 ಪರ್‌ಸೆಂಟ್ ಹೋದರೆ ಅಲ್ಲಿ ಉಳಿದುದು ಒಂದೇ ಒಂದು ಪರ್‌ಸೆಂಟ್ ಪೆಟ್ರೋಲಿಯಂ ಪ್ರೊಡಕ್ಸ್ ಇದು 11 ಪರ್‌ಸೆಂಟ್, ಟೈರ್ 25 ಪರ್‌ಸೆಂಟ್, ಹೀಗೆ ಎಲ್ಲಾ ಮಾಡಿ ಜಾಸ್ತಿಯಾಗಿದೆ. ಅದರಂತೆ 4 ಪವರ್‌ಸೆಂಟ್ ಡಿಎ ಕೂಡ ಜಾಸ್ತಿಯಾಯಿತು, ಎಲ್ಲಾ ಸೇರಿ 91 ಪರ್‌ಸೆಂಟ್ ಜಾಸ್ತಿಯಾಯಿತು. ಇದರಲ್ಲಿ ನಾವು ಜಾಸ್ತಿ ಮಾಡಿದ್ದು ವೀರೇಂದ್ರ ಪಾಟೀಲರ ಕಾಲದಲ್ಲಿ 26.4 ಪರ್‌ಸೆಂಟ್‌ನಷ್ಟು ಮಾತ್ರ. ಮೂರು ವರ್ಷಕ್ಕೆ ಇದನ್ನು ಮಾಡಲಾಗಿದೆ. ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರ ಪ್ರಕಾರ ಪ್ರತೀ ಮೂರು ವರ್ಷಕ್ಕೆ ಒಮ್ಮೆ ದರವನ್ನು ಏರಿಸಬೇಕೆಂಬ ನಿಯಮ ಇದೆ. ಹಾಗೆ ನಾವು ಮಾಡದಿದ್ದರೆ ಅದು ತಪ್ಪಾಗುತ್ತದೆ. ಹಾಗೆ ಮಾಡದಿದ್ದದ್ದು ನಮ್ಮ ತಪ್ಪಾಗಿದೆಯೇ? ಈಗ ಈ ತಪ್ಪನ್ನು ನಾವು ಹೊಂದಿಸಿಕೊಳ್ಳಬೇಕು. ಆಟೋದವರು ಧರಣಿ ಮಾಡುತ್ತಾರೆ, ದಾರಿಯಲ್ಲಿ ಉರುಳುಸೇವೆ ಮಾಡುತ್ತಾರೆ, ಶರ್ಟ್ ಅಂಗಿ ಎಲ್ಲಾ ತೆಗೆದು ಹಾಕಿ ಕುಳಿತುಕೊಳ್ಳುತ್ತಾರೆ, ಅವರ ಡಿಮ್ಯಾಂಡ್ ಏನು ಸ್ವಾಮಿ,

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಏನು ಹೇಳುವುದಕ್ಕೆ ಹೊರಟೆ ಅಂದರೆ ತಮ್ಮ ಶಾಸಕಾಂಗ ಪಕ್ಷದಲ್ಲಿ ದೀರ್ಘವಾಗಿ ಚರ್ಚೆಯಾಗಿ ಸದ್ಯಕ್ಕೆ ಅಗತ್ಯವಸ್ತುಗಳ ಬೆಲೆಯು ಗಗನಕ್ಕೇರಿದೆ, ಬೇರೆ ಎಲ್ಲಾ ಪದಾರ್ಥಗಳ ಬೆಲೆ ಏರಿರುವ ಈ ಸಂದರ್ಭದಲ್ಲಿ ಮಧ್ಯಮವರ್ಗದ ಜನತೆಗೆ ತುಂಬಾ ಕಷ್ಟವಾಗಿದೆ, ಈ ಸಮಯದಲ್ಲಿ ಸಾರಿಗೆ ದರವನ್ನು ಜಾಸ್ತಿ ಮಾಡಬಾರದು ಎಂದು ಆಗಿತ್ತು. ತಾವು ಈ ಬಗ್ಗೆ ಸ್ಟಿಕ್ ಆನ್ ಆಗಿದ್ದೀರಿ ಎಂದು ಅಂದುಕೊಂಡಿದ್ದೆವು. ಕೊನೆಯಲ್ಲಿ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಈ ವಾಕ್ಯವನ್ನು ಸೇರಿಸಿದ್ದೀರಿ. ಆದ್ದರಿಂದ ರಾಜ್ಯದ ಜನರ ಹಿತದೃಷ್ಟಿಯಿಂದ ಅನಿವಾರ್ಯವಾಗಿ ತಾವುಗಳು ಸಾರಿಗೆ ದರವನ್ನು ಜಾಸ್ತಿ ಮಾಡುವುದಿಲ್ಲ ಎಂದು ಹೇಳದಿದ್ದರೆ ನಿಮ್ಮ ಸರಕಾರದ ಈ ನೀತಿಯನ್ನು ಪ್ರತಿಭಟಿಸಿ ನಾವು ವಾಕ್‌ಔಟ್ ಮಾಡಬೇಕಾಗಿ ಬರುತ್ತದೆ. ಅದನ್ನು ಬಿಟ್ಟು ನಮಗೆ ಬೇರೆ ಮಾರ್ಗ ಇಲ್ಲ. ಈ

ಸರಕಾರ ಜನರ ಸ್ಥಿತಿಗತಿಗಳನ್ನು ಅರಿತುಕೊಂಡಿದ್ದರೂ ಸಹ ಪುನ: ದರವನ್ನು ಜಾಸ್ತಿ ಮಾಡುತ್ತೇವೆ ಎಂದು ಹೇಳುವಂಥಾದ್ದು ತುಂಬಾ ಅಪ್ರಿಯವಾದ ವಿಚಾರ. ರಾಜ್ಯದ ಜನತೆಗೆ ನೀವು ಕೊಟ್ಟ ಆಶ್ವಾಸನೆಯನ್ನು ನೀವೆ ವಾಪಸ್ ತೆಗೆದುಕೊಂಡಿದ್ದೀರಿ. ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ಆಗುತ್ತಾ ಇಲ್ಲ, ಈ ಸಾರಿಗೆಯಲ್ಲಿ ಒಂದು ವೇಳೆ ನಷ್ಟವಾದರೂ ಕೂಡ ಅದನ್ನು ಸರ್ಕಾರದವರು ಭರಿಸಿಕೊಳ್ಳಬೇಕು, ಇಲ್ಲವಾದರೆ ಗ್ರಾಮೀಣ ಜನರು ಬದುಕುವುದು ಕಷ್ಟವಾಗುತ್ತದೆ. ಈಗಾಗಲೇ ಒಂದೊಂದು ಬಸ್‌ನಲ್ಲಿ 200-300 ಜನರು ಪ್ರಯಾಣ ಮಾಡುತ್ತಾ ಇದ್ದಾರೆ. ಸಂಸ್ಥೆಯಲ್ಲಿ ಆಗುತ್ತಿರುವ ಸೋರುವಿಕೆಯನ್ನು ಸರಿಪಡಿಸಿಕೊಳ್ಳಿ, ದರವನ್ನು ಜಾಸ್ತಿ ಮಾಡಬೇಡಿ. ಜನರ ಹಿತವನ್ನು ಕಾಪಾಡಲಿ ಎಂಬ ದೃಷ್ಟಿಯಿಂದ ಜನರು ನಿಮ್ಮನ್ನು ಆಯ್ಕೆ ಮಾಡಿ ಅಧಿಕಾರದಲ್ಲಿ ಕೂರಿಸಿದ್ದಾರೆ. ಅನಿವಾರ್ಯವಾದಾಗ ಬೇಕಾದರೆ ಹೆಚ್ಚಿಗೆ ಮಾಡಿ. ಆದರೆ ಈಗ ಬೇಡ. ಯುದ್ಧದ ನೆಪ ಮಾಡಿಕೊಂಡು ಒಮ್ಮೆ ಜಾಸ್ತಿ ಮಾಡಿದ್ದೀರಿ. ಯುದ್ಧ ಹೋದ ಮೇಲೆ ಮತ್ತೆ ಕಡಿಮೆ ಮಾಡಿಲ್ಲ, ಈಗ ಸ್ಪೇರ್ ಪಾರ್ಟ್ಸ್ ದರ ಹೆಚ್ಚಿಗೆ ಆಯಿತು ಎಂಬುದು ಸರಿಯಲ್ಲ. ತಾವುಗಳು ಇಷ್ಟು ಹೇಳಿದ್ದರೂ ಕೂಡ ಅದಕ್ಕೆ ಮನ್ನಣೆ ಕೊಡದಿದ್ದರೆ ಅದನ್ನು ಪ್ರತಿಭಟಿಸಿ ನಾವು ವಾಕ್‌ಔಟ್ ಮಾಡುತ್ತೇವೆ.

1.45 ಪಿ.ಎಂ

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಇವರು ದರ ಜಾಸ್ತಿ ಮಾಡ್ತೇವೆಂದು ಸಾರಿಗೆ ಸಚಿವರು ಹೇಳಿದಾಗ,ಮುಖ್ಯ ಮಂತ್ರಿಗಳು ಏನು ಹೇಳಿದರು ನಾವು ಕೂಡಲೇ ಮಾಡುವುದಿಲ್ಲ ಎಂದು ಹೇಳಿದರು. ಆದರೆ ಸಚಿವರು ಈ ಸದನದಲ್ಲಿ ಹೇಳತಕ್ಕ ಸೂಚನೆ ನೋಡಿದರೆ; ಇವರು ದರ ಜಾಸ್ತಿ ಮಾಡುವ ಮಾತಾಗುತ್ತದೆ. ಇದು ಸರಿಯಾದದ್ದಲ್ಲ, ಆದ್ದರಿಂದ ಈ ರಾಜ್ಯದ ಜನತೆಯ ಪರವಾಗಿ ತೀವ್ರ ಪ್ರತಿಭಟನೆ ಮಾಡಬೇಕಾಗುತ್ತದೆ. ದಯಮಾಡಿ ತಾವು ಬದಲಾವಣೆ ಮಾಡಿಕೊಳ್ಳಬೇಕು. ಮತ್ತೆ ಮತ್ತೆ ಮಾಡೇ ತೀರುತ್ತೇವೆ ಎಂಬ ಹಠಮಾರಿತನಕ್ಕೆ ನೀವು ಹೋಗಬಾರದು. ಆಮೇಲೆ ನೀವು ನಿವೃತ್ತಿಯಾಗುತ್ತೇನೆಂದು ಹೇಳಿದಿರಿ. ಅದು ಆಗಕೂಡದು. ನೀವು ಹಿರಿಯ ಸದಸ್ಯರು, ನಿಮ್ಮ ಆರೋಗ್ಯ ಚೆನ್ನಾಗಿರುವವರೆಗೂ ಇಲ್ಲಿ ಇರಬೇಕು. ದರ ಏರಿಕೆ ಕಾರಣದ ಮೇಲೆ ನಿವೃತ್ತನಾಗುತ್ತೇನೆಂದು ಹೇಳುವುದು ಬೇಡ. ನೀವು ಇರಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೇ, 85ರಿಂದ 89ರಲ್ಲಿ ಯಾವ್ಯಾವ ಪ್ರೈಸ್ ಜಾಸ್ತಿಯಾಯಿತು ಎಂಬ ವಿಚಾರದಲ್ಲಿ ಅದನ್ನೆಲ್ಲ ಪರಿಶೀಲನೆ ಮಾಡಿ ಗವರ್ನರ್ ಕಾಲದಲ್ಲಿ ವೇಜಸ್ ಜಾಸ್ತಿಯಾಯಿತೆಂದು ಅದನ್ನು ಕನ್‌ಸಿಡರ್ ಮಾಡಿ ವೀರೇಂದ್ರ ಪಾಟೀಲರ ಸರ್ಕಾರ ಬೇರೆ, ಬಂಗಾರಪ್ಪನವರ ಸರ್ಕಾರ ಬೇರೆ, ನೀವು ಎರಡು ಚುನಾವಣೆ ಗೆದ್ದಿಲ್ಲ, ರಾಜ್ಯದ ಜನತೆಗೆ ಪ್ರಣಾಳಿಕೆ ಕೊಟ್ಟು ಇದನ್ನೆಲ್ಲ ಮಾಡುತ್ತೇವೆಂದು ಎರಡು ವರ್ಷದ ಹಿಂದೆ ಬಂದಿರಿ. 26 ಪರ್ಸೆಂಟ್ ಜಾಸ್ತಿ ಮಾಡಲಾಗಿದೆ ಎಂದಿರಿ ಅದಾದಮೇಲೆ ಗಲ್ಫ್ ಚಾರ್ಜ್ ಬಿಟ್ಟರೆ ಬೇರೆ ಏನೂ ಆಗಿಲ್ಲ ಇದರಲ್ಲಿ 450 ಕೋಟಿ ಪ್ರತಿವರ್ಷ ಕಲೆಕ್ಷನ್ ನಿಮ್ಮ ಸಂಸ್ಥೆಗೆ ಬರುತ್ತದೆ. ಅದರಲ್ಲಿ 250 ಕೋಟಿ ವೇಜಸ್‌ಗಾಗಿ ಖರ್ಚಾಗುತ್ತದೆ. ಸುಮಾರು 100 ಕೋಟಿ ಡೀಸಲ್‌ಗಾಗಿ ಖರ್ಚು ಮಾಡುತ್ತೀರಿ ಅದರಲ್ಲೇನೂ ಚೇಂಜಾಗಿಲ್ಲ. 350 ಕೋಟಿಯಲ್ಲಿ ಜಾಸ್ತಿಯಾಗಿಲ್ಲ ಉಳಿದಿರುವ 100 ಕೋಟಿಯಲ್ಲಿ ಟೈರ್‌ಗೆ ನಾಲ್ಕೈದು ಪರ್ಸೆಂಟ್ ಜಾಸ್ತಿಯಾಗಿದೆ ಮತ್ತು ಪೆಟ್ರೋಲಿಯಂ ಪ್ರಾಡಕಟ್ಸ್ ಏಕೆ ಬೇಕು? ಅದರಲ್ಲಿ ನೀವು ಬೋಲ್ಟ್ ನೆಟ್ ಮಾಡುತ್ತೀರಾ? ಯಾವ ಕಾರಣಕ್ಕಾಗಿ ಹೆಚ್ಚು ಮಾಡುತ್ತೇವೆಂದು ಹೇಳಬೇಕು, ಇಲ್ಲದಿದ್ದರೆ ರಾಜ್ಯದ ಜನತೆಯ ಪರವಾಗಿ ನಾವು ತೀವ್ರ ಪ್ರತಿಭಟನೆ ಮಾಡಬೇಕಾಗುತ್ತದೆ. ಜನತೆ ನಿಮ್ಮನ್ನು

ಸಹಿಸುವುದಿಲ್ಲ, ಮುಖ್ಯಮಂತ್ರಿಗಳು ಜಾಸ್ತಿ ಮಾಡುವುದಿಲ್ಲ ಎಂದಿದ್ದಾರೆ ಆದರೆ ನೀವು ಮಾಡುವುದಾಗಿ ಹೇಳುತ್ತಿದ್ದೀರಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಜನತೆಯ ದೃಷ್ಟಿಯಿಂದ ವಿರೋಧಪಕ್ಷಗಳು ನೀಡಿದ ಯಾವ ಸಲಹೆಯನ್ನಾದರೂ ನೀವು ತೆಗೆದುಕೊಂಡಿದ್ದೀರಾ? ಇದನ್ನೆಲ್ಲಾ ಮಾಡಬೇಡಿ, ನಿಮಗೆ ನಿಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆಂದು ಹೇಳಿದರೂ ಮಾಡುತ್ತಿರುವಿರಿ.

ಶ್ರೀ ಸಿ. ಬೈರೇಗೌಡ : ಪೆಟ್ರೋಲಿಯಂ ಪ್ರಾಡಕ್ಟ್ ಟೈರ್, ಸ್ಪೇರ್ ಪಾರ್ಟ್ಸ್, ಬೆಲೆ ಜಾಸ್ತಿಯಾಗಿದೆ ಎಂದು ಹೇಳಿದ್ದೀರಿ, ಇದನ್ನು ಸರಿದೂಗಿಸುವುದಕ್ಕೆ ನೀವು ತೆಗೆದುಕೊಂಡಿರುವ ಆಂತರಿಕ ಕ್ರಮಗಳೇನು? ಸೋರಿಹೋಗುವುದು ಸೋರುತ್ತಿದೆ. ಏನೂ ಕ್ರಮ ತೆಗೆದುಕೊಂಡಿಲ್ಲ, ನಿಮ್ಮ ದೌರ್ಬಲ್ಯಕ್ಕೆ ನಿಮಗೆ ಮೆನೆಜರಿಯಲ್ ಸ್ಕಿಲ್ ಇಲ್ಲದೇ ಅಲ್ಲಿ ನಡೆಯತಕ್ಕ ಅವ್ಯವಹಾರಗಳಿಗೆ ಸಾರ್ವಜನಕರ ಮೇಲೆ ಟ್ಯಾಕ್ಸ್ ಹಾಕುವುದಕ್ಕೆ ಹೊರಟಿದ್ದೀರಿ, ಇದು ಬೇಡ. ಸಿಂಧ್ಯಾ ಅವರು ಎರಡು ಚುನಾವಣೆಯಾಗಿಲ್ಲ ಎಂದರು, ಆದರೆ ಎರಡು ಚುನಾವಣೆಯಾಗಿದೆ, ಒಂದು ವಿಧಾನಸಭೆಯದು, ಇನ್ನೊಂದು ಲೋಕಸಭೆಯದು, ಆಗ ಏನು ಹೇಳಿದಿರಿ, ಈ ಸರ್ಕಾರ ಬಂದ ನೂರು ದಿನಗಳೊಳಗಾಗಿ ಇಂತಹ ತಾರೀಖಿನಲ್ಲಿದ್ದ ಬೆಲೆಗಳಿಗೆ ದರಗಳನ್ನು ಇಳಿಸುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದೀರಿ. ಅದೇ ರೀತಿ 24-25 ಸ್ಥಾನಗಳನ್ನು ಜನ ಗೆಲ್ಲಿಸಿ ಪಾರ್ಲಿಮೆಂಟಿಗೆ ಕಳಿಸಿದ್ದಾರೆ. ಜನರ ಹತ್ತಿರ ಹೋದಾಗ ಒಂದು ಮಾತು, ಅಧಿಕಾರಕ್ಕೆ ಬಂದಾಗ ತದ್ವಿರುದ್ಧ ನಡೆಯುವುದು ನಿಮ್ಮ ನೀತಿಯೆ? ಇದಕ್ಕೆ ಜನ ಉತ್ತರ ಕೊಡುತ್ತಾರೆ. ಆದರೆ ದಯವಿಟ್ಟು ನುಡಿದಂತೆ ನಡೆಯಿರಿ ಇದು ಸಾರ್ವಜನಿಕರ ಪರವಾದ ವಿನಂತಿ ಇಲ್ಲದಿದ್ದರೆ ಅನಾವಶ್ಯಕವಾಗಿ ಜನರನ್ನು ಬೀದಿಗಿಳಿಸುತ್ತೀರಿ, ಇದರಿಂದ ನಿಮ್ಮ ಸರ್ಕಾರಕ್ಕೆ ನಷ್ಟವಾಗುತ್ತದೆ. ಆ ಸಾಹಸಕ್ಕೆ ಹೋಗಬೇಡಿ.

ಅಧ್ಯಕ್ಷರು : ಅವರು ಮುಗಿಸಲಿ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರು : ಮಾನ್ಯ ಅಧ್ಯಕ್ಷರೇ, ಬಹಳ ದಿವಸಗಳಿಂದ ಹೈದಾರಾಬಾದ್ - ಕರ್ನಾಟಕ ಏರಿಯಾ ಮತ್ತು ಬೀದರ್‌ನಲ್ಲಿ ಒಂದು ಡಿವಿಜನ್ ಆಗುವ ಸಲುವಾಗಿ ನಮ್ಮದು ಒಂದು ಬೇಡಿಕೆ ಇದೆ. ಮಾನ್ಯ ಸಿಂಧ್ಯಾಜಿಯವರು ಮಂತ್ರಿಗಳಾಗಿದ್ದಾಗ ಹೇಳಿದ್ದರು, ಅದರ ಬಗ್ಗೆ ಒಂದು ಪೇಪರ್ ಸ್ಟೇಟ್‌ಮೆಂಟನ್ನು ಕೂಡಾ ಕೊಟ್ಟಿದ್ದರು. ಈಗ ಮಾನ್ಯ ಅಜೀಜ್ ಸೇಠ್ ಸಾಹೇಬರು ಬಂದ ಮೇಲೆ ನವೆಂಬರ್ ತಿಂಗಳಲ್ಲಿ ಮಾಡಬೇಕು ಎಂದು ಹೇಳಿದ್ದಾರೆ. ನವೆಂಬರ್ ತಿಂಗಳಲ್ಲಿ ಕರ್ನಾಟಕ ರಾಜ್ಯೋತ್ಸವ ಇದೆ, ಆದ್ದರಿಂದ ಇದನ್ನು ನವೆಂಬರ್ ತಿಂಗಳಲ್ಲಿ ಮಾಡುತ್ತೀರಾ ಎನ್ನುವುದು ಒಂದು ಪ್ರಶ್ನೆ. ಎರಡನೆಯ ಪ್ರಶ್ನೆ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಬಹಳಷ್ಟು ಜನ ಕಂಡಕ್ಟರ್ ಮತ್ತು ಡ್ರೈವರ್ಸ್‌ಗಳಿಗೆ ನೌಕರಿ ಸಿಗದೆ ಕೆಲವರಿಗೆ ಸಿಕ್ಕಿದೆ, ಕೆಲವು ಜನರಿಗೆ ಸಿಕ್ಕಿಲ್ಲ. ಕೆಲಸ ಸಿಗದಂಥ ಜನ ಏನು ಇದ್ದಾರೆ, ಅವರಿಗೆ ಮಾಲೀಕರು ಅನ್ಯಾಯವನ್ನು ಮಾಡಿದ್ದಾರೆ, ಮೋಸ ಮಾಡಿದ್ದಾರೆ. ಆ ಜನರಿಗೆ ಮೋಸ ಮಾಡಿದ್ದಾರೆ. ಆ ಜನರಿಗೆ ಮೋಸ ಮಾಡಿರುವುದನ್ನು ಮಾನ್ಯ ಮಂತ್ರಿಗಳು ಕೂಡಾ ಒಪ್ಪಿಕೊಂಡಿದ್ದಾರೆ. ಅಂಥ ಜನರಿಗೆ ತಾವು ನೌಕರಿ ಕೊಡುತ್ತೀರಾ ಎನ್ನುವ ಬಗ್ಗೆ ಸ್ಪಷ್ಟವಾದ ಅಭಿಪ್ರಾಯವನ್ನು ಹೇಳಬೇಕು. ಎರಡನೆಯದಾಗಿ ಬಸವಕಲ್ಯಾಣದಲ್ಲಿ ಸುಮಾರು ನಮ್ಮ ಕರ್ನಾಟಕ ರಾಜ್ಯದಲ್ಲಿ ಒಟ್ಟು 4000 ಲಾರಿಗಳು ಇವೆ. ಬಸವಕಲ್ಯಾಣದಲ್ಲಿರತಕ್ಕಂಥ ಪ್ರೈವೇಟ್ ಲಾರಿಗಳು ಏನು ಇದೆ, ಇವುಗಳ ರಿಜಿಸ್ಟ್ರೇಷನ್ ಹೈದರಾಬಾದ್‌ನಲ್ಲಿ ಆಗುತ್ತಿದೆ. ಆದ್ದರಿಂದ ಇದರ ಬಗ್ಗೆ ಒಂದು

ತಿದ್ದುಪಡಿಯನ್ನು ಮಾಡಿ ಬಸವಕಲ್ಯಾಣದಲ್ಲಿಯೇ ಆಗುವಂತೆ ಮಾಡಿದರೆ ಗೌರ್ನಮೆಂಟ್‌ಗೆ ಇದರಿಂದ ರೆವಿನ್ಯೂ ಕೂಡಾ ಬರುತ್ತದೆ. ರೆವಿನ್ಯೂ ಬರುವ ಸಲುವಾಗಿ ಸರ್ಕಾರದವರು ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾರೆಯೇ ಎಂದು ನಾನು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ಹಿರೇಕೆರೂರಿಗೆ .....

(ಗೊಂದಲ)

ಶ್ರೀ ಅಜೀಜ್ ಸೇಠ್ : ನಾನು ನಿಮಗೆ ಅಭಾರಿಯಾಗಿದ್ದೇನೆ. ಅದನ್ನು ಮಾಡುತ್ತೇನೆ ಬಿಡಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಹಿರೇಕೆರೂರಿಗೆ ಬಸ್‌ಗಳನ್ನು ಕೊಡುವುದಕ್ಕೆ....

(ಗೊಂದಲ)

ಶ್ರೀ ಅಜೀಜ್ ಸೇಠ್ : ಅದರ ಬಗ್ಗೆ ಮೊನ್ನೆ ಕೂಡಾ ಹೇಳಿದ್ದೇನೆ. ಅದನ್ನು ಮಾಡುತ್ತೇನೆ. ವಿಶೇಷವಾಗಿ ನಿಮ್ಮನ್ನೆ ಕರೆದುಕೊಂಡು ಹೋಗಿ ಎಲ್ಲಾ ಮಾತನಾಡಿ ಬಸ್‌ನ್ನು ಕೊಡುತ್ತೇನೆ ಎಂದು ಹೇಳಿದ್ದೇನೆಲ್ಲಾ, ಅದೇನೂ ಪತ್ರಿಕೆಯಲ್ಲಿ ಬರಬೇಕಾ? ಈಗ ನಾನು as incharge Minister, as a person incharge of Affair...

ನನ್ನ ಅಭಿಪ್ರಾಯವನ್ನು ನಾನು ಕೊಡಲೇಬೇಕು. ನಮ್ಮ ಯಡಿಯೂರಪ್ಪನವರು ಮಾತನಾಡುತ್ತಾ ಒಂದು ಮಾತನ್ನು ಹೇಳಿದರು. ನನಗೆ ನೆನಪು ಇದೆ. ತಾವು ಕೂಡಾ ಕೇಳಿರಬಹುದು. ನಾನು ಏನು ಹೇಳಿದೆ, ಅದು ಅನಿವಾರ್ಯ. ಅನಿವಾರ್ಯವಾಗಿ ಅದನ್ನು ಮಾಡಲೇಬೇಕು. ಅದಕ್ಕೆ ನಾನು ವಿರೋಧಪಕ್ಷದ ನಾಯಕರುನ್ನು ಕರೆದು ಮಾತನಾಡಿ ಅವರಿಗೆಲ್ಲಾ ಅಂಕಿ ಅಂಶಗಳನ್ನು ಕೊಡುತ್ತೇನೆ ಎಂದು ಹೇಳಿದ್ದೇನೆ. ನಾನು ಆ ರೀತಿ ಹೇಳುವಂಥ ಮನುಷ್ಯನಲ್ಲ, ನನಗೆ ದೇವರು ಎಷ್ಟು ಬುದ್ಧಿಯನ್ನು ಕೊಟ್ಟಿದ್ದಾನೋ,ಅದಕ್ಕಿಂತ ಜಾಸ್ತಿ ಬುದ್ಧಿ ಅವರಿಗೆ ಕೊಟ್ಟಿದ್ದಾನೆ. (ಮಾನ್ಯ ಸಿಂಧ್ಯಾರವರನ್ನು ಉದ್ದೇಶಿಸಿ) ಅವರು ಇಂಜನಿಯರು ಇದ್ದಾರೆ, ಮೆಕಾನಿಕಲ್ ಇಂಜನಿಯರ್ ಇದ್ದಾರೆ.ಅವರು ಡಬಲ್ ಗ್ರ್ಯಾಜುಯೇಟ್ (ಮಾನ್ಯ ಯಡಿಯೂರಪ್ಪನವರನ್ನು ಉದ್ದೇಶಿಸಿ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಗ್ರ್ಯಾಜುಯೇಷನ್ ಮಾಡಿಲ್ಲ.

ಶ್ರೀ ಅಜೀಜ್ ಸೇಠ್ : ಎಸ್.ಎಸ್.ಎಲ್.ಸಿ. ಆಗಿದೆಯೋ ಇಲ್ಲವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅದೂ ಆಗಿಲ್ಲ.

ಶ್ರೀ ಅಜೀಜ್ ಸೇಠ್ : ಅದು ಆಗಿದೆ. ನನ್ನದು ಲೋವರ್ ಸೆಕೆಂಡರಿ ಕೂಡ ಆಗಿಲ್ಲ. ಇವರು ಬಂದು ನನ್ನನ್ನು ಮಾರಾಟ ಮಾಡುವುದಕ್ಕೆ ಹೋಗುತ್ತಾರಲ್ಲಾ, ಅವರಿಗೆ ದೇವರು ಸ್ವಲ್ಪ ಖಾಲಿ ಇತ್ತು ಎಂದು ಅಲ್ಲಿಯವರೆಗೆ ಓದುವುದಕ್ಕೆ ಹೋಗಬೇಕಾಗಿತ್ತು. ಅಲ್ಲಿಗೇ ನನಗೆ ತುಂಬಿತ್ತು ಎಂದು ಹೇಳಿ ದೇವರು ಓದುವುದಕ್ಕೆ ಅವಕಾಶ ಕೊಟ್ಟಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಲೋವರ್ ಯಾವುದು ಎಂದು?

ಶ್ರೀ ಅಜೀಜ್ ಸೇಠ್ : ಲೋವರ್ ಅಲ್ಲ, ಲೋಯರ್. ಲೋವರ್ ನಿಮಗೆ ಬೇಕು.ನನಗೆ ಏತಕ್ಕೆ ಬೇಕಾಗಿದೆ? ಸ್ವಾಮಿ ದಯಮಾಡಿ ಕುಳಿತುಕೊಳ್ಳಿ. Iam throwing the ball in your court. ರಾಜಕೀಯವನ್ನು ಎಲ್ಲಿಯವರೆಗೆ ಎಷ್ಟರವರೆಗೆ ಎಷ್ಟು ಹಾದಿಯವರೆಗೆ ರಾಜಕೀಯವನ್ನು ಮಾಡಬೇಕೊ, ಅಷ್ಟು ಮಾಡಬೇಕು. ಬರೀ ಚುನಾವಣೆಯ ಕಾಲಕ್ಕೆ ರಾಜಕೀಯ ಗೆದ್ದುಬಂದಮೇಲೆ ರಾಜ್ಯದ ಹಿಂದೆ, ರಾಜ್ಯದ

ಜನರ ಹಿಂದೆ ಮತ್ತು ಈ ದೇಶದಲ್ಲಿ ಪ್ರತಿಯೊಂದು ಕನ್‌ಷೆಷನ್,ಸಬ್ಸಿಡಿ, ಇದು ಅದು ಮಾಡಿಕೊಂಡು ಹೋಗಬೇಕು. ಇವತ್ತು ನಾವು ದೇಶಭಕ್ತರಾಗಬೇಕಾದರೆ ಸ್ವಲ್ಪ ದುಡಿಮೆ ಮಾಡಬೇಕಾಗುತ್ತದೆ. ಇವತ್ತು ಕಾವೇರಿ ಬೇಕು, ಅಪ್ಪರ್‌ಕೃಷ್ಣ ಬೇಕು, 17 ಪರ್‌ಸೆಂಟ್ ಟ್ಯಾಕ್ಸ್‌ನ್ನು ಅವರು (ಜನತಾ ದಳದವರನ್ನು ಉದ್ದೇಶಿಸಿ) ಜಾಸ್ತಿ ಏರಿಸಿ ಬಿಟ್ಟಿದ್ದರು. ಪ್ರೈವೇಟ್ ಆಪರೇಟರ್ಸ್‌ಗೆ 12 ಪರ್‌ಸೆಂಟ್ ಎಂದು ಇಟ್ಟರು. ಅದನ್ನು ನಾನು ಹೇಳುವುದಕ್ಕಾಗುತ್ತದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಹೇಳಿ.

ಶ್ರೀ ಅಜೀಜ್ ಸೇಠ್ : ಹೇಳುವುದಕ್ಕೆ ಬರುವುದಿಲ್ಲ. ನಾನು ಅಷ್ಟು ಕೆಳಮಟ್ಟಕ್ಕೆ ಹೋಗಿಲ್ಲ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅದನ್ನು ಹೇಳಿಬಿಟ್ಟು ಹೇಳಲೇ, ಹೇಳಲೇ ಎಂದರೆ ಅದರ ಅರ್ಥವೇನು ಹೇಳಿದ್ದೀರಿ ಎಂದು ಅದರ ಅರ್ಥ. ಅಷ್ಟೊಂದು ದಡ್ಡನಲ್ಲ ನಾನು.

(ಗೊಂದಲ)

ಶ್ರೀ ಅಜೀಜ್ ಸೇಠ್ : ನೀವು ಪ್ರೈವೇಟ್ ಅಪರೇಟರ್ಸ್‌ಗೆ 17 ಪರ್‌ಸೆಂಟ್ ಮಾಡಿಲ್ಲವೆ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಯಾವ ಕಾರಣದಿಂದ 17 ಪರ್‌ಸೆಂಟನ್ನು ಮಾಡಿದ್ದೇವೆ ಎಂದು ನೀವು ಹೇಳಿ.

ಶ್ರೀ ಅಜೀಜ್ ಸೇಠ್ : ಸರ್ಕಾರಕ್ಕೆ ದುಡ್ಡು ಬೇಕಾಗಿತ್ತು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮತ್ತೆ ಅಷ್ಟನ್ನು ತಿಳಿದುಕೊಳ್ಳಿ.

ಶ್ರೀ ಅಜೀಜ್ ಸೇಠ್ : ಕಿಮ್ಕೊ ಸಿಕ್ ಇಂಡಸ್ಟ್ರಿ ಇದೆ. 1 ಕೋಟಿ 40 ಲಕ್ಷ ರೂಪಾಯಿಗಳನ್ನು ಕಿಮ್ಕೊಗೆ ಕೆ.ಎಸ್.ಆರ್.ಟಿ.ಸಿ. ಯವರು ಕೊಟ್ಟಿದ್ದಾರೆ. ನಮಗೆ ಆ ದುಡ್ಡು ವಾಪಸ್ ಬರುತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಕಿಮ್ಕೊ ಏನು ಎಂ.ಎಸ್. ರಾಮಯ್ಯನವರೇ ಫ್ಯಾಕ್ಟರಿ? ಕಿಮ್ಕೊ ಕೂಡ ಕೆ.ಎಸ್.ಆರ್.ಟಿ.ಸಿ. ಸಬ್‌ಸಿಡಿಯರಿ ಕಾರ್ಪೋರೇಷನ್ ಅಥವಾ ಅದೇನೂ ಪೈಗಳಾ? ಕೆ.ಎಸ್.ಆರ್.ಟಿ.ಸಿ. ಕಾರ್ಮಿಕರು Best bus-body builders in the country.

ಶ್ರೀ ಅಜೀಜ್ ಸೇಠ್ : ಯಾರು?

ಶ್ರೀ ಪಿ.ಜಿ.ಆರ್. ಸಿಂಧ್ಯ : ಕೆಎಸ್‌ಆರ್‌ಟಿಸಿ ಕಾರ್ಮಿಕರು. ಪ್ರೈವೇಟ್‌ನವರು ಮಾಡುತ್ತಿದ್ದುದ್ದನ್ನು ಕೆಎಸ್‌ಆರ್‌ಟಿಸಿ .... ತುಮಕೂರಿನಲ್ಲಿ ಇವರು ಆಡಳಿತ ನಡೆಸುತ್ತಿರುವಂತಹ ಕಾಲದಲ್ಲಿ ಮೂರು ಜನರಿಗೆ ಕೆಲಸಕೊಡಬೇಕೆಂದು ಬಾಡಿ ಬಿಲ್ಡಿಂಗ್ ಕೊಟ್ಟದ್ದು, ಕಾರ್ಮಿಕರು ಈ ಸರ್ಕಾರಕ್ಕೆ ಶಾಪ ಹಾಕುತ್ತಿದ್ದಾರೆ. ಅದರ ಬಗ್ಗೆ ಹೇಳಿ ಬೆಲೆ ಏನು ಮಾಡುತ್ತೀರಾ ಹೇಳಿ, ಉಳಿದಿದ್ದನ್ನು ಆಮೇಲೆ ಮಾತನಡೋಣ.

(ಗೊಂದಲ)

ಶ್ರೀ ಸಿ. ಬೈರೇಗೌಡ: ಅನಾವಶ್ಯಕವಾಗಿ ಕೆಲವು ಹೆಸರುಗಳು ಇಲ್ಲಿ ಪ್ರಸ್ತಾಪವಾಗಿದೆ.

ಶ್ರೀ ಸಿ. ಬೈರೇಗೌಡ : ಸಿಂಧ್ಯ ಅವರು ಹೇಳಿದ್ದಾರೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಪುನ: ಅದು ದಾಖಲೆಗೆ ಹೋಗುತ್ತದೆ.

ಅಧ್ಯಕ್ಷರು : ಯಾವ ಹೆಸರು.

ಶ್ರೀ ಸಿ. ಬೈರೇಗೌಡ : ಎಂ. ಎಸ್. ರಾಮಯ್ಯ ಎಂದು ಹೇಳಿದ್ದಾರೆ. ಅದಕ್ಕೂ ಇದಕ್ಕೂ ಸಂಬಂಧ ಏನಿದೆ. ಅವರು ಏನು ಈ ಸದನದ ಸದಸ್ಯರೇ ಅವರ ಹೆಸರನ್ನು ಏತಕ್ಕೆ ಇಲ್ಲಿ ಪ್ರಸ್ತಾಪ ಮಾಡಬೇಕು?

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದು ಪ್ರೈವೇಟ್ ನವರದ್ದಲ್ಲ, ಪೈಗಳದ್ದಲ್ಲ, ಎಂ.ಎಸ್. ರಾಮಯ್ಯನವರದ್ದಲ್ಲ, ಬೇರೆ ಯಾರದ್ದು ಅಲ್ಲ ಪಬ್ಲಿಕ್ ಸೆಕ್ಟಾರ್ ಕಂಪನಿ ಎಂದು ಹೇಳಿದೆ. ಅದರಲ್ಲಿ ಏನು ತಪ್ಪಿದೆ.

ಅಧ್ಯಕ್ಷರು : ಪಬ್ಲಿಕ್ ಸೆಕ್ಟಾರ್, ಪ್ರೈವೇಟ್ ಸೆಕ್ಟಾರ್. ಡಿಫರೆನ್ಷಿಯೇಟ್ ಮಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಆಯಿತು ಸ್ವಾಮಿ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಅವರು ಅದೇ ರೀತಿಯಲ್ಲಿ ಹೇಳಿದ್ದು.

ಶ್ರೀ ಅಜೀಜ್ ಸೇಠ್ : ಏಕೆ ಈ ವಾದ ವಿವಾದವನ್ನು ಮಾಡುತ್ತೀರಾ? KSRTC it is already a sick industry...

ಶ್ರೀ ಸಿ. ಬೈರೇಗೌಡ : ಏನು ಅವಶ್ಯಕತೆ ಇಲ್ಲ. ಆದರೆ ನೀವು ನೀವು ಒಂದಾಗಿರಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾವು ಒಂದಾಗಿದ್ದೇವೆ. ಅದು ಏತಕ್ಕೆ ಬಿಡಿ

ಅಧ್ಯಕ್ಷರು : ಅದು ಬಿಟ್ಟು ಬಿಡಿ.

Sri Azeez Sait : I have been telling there is no two opinion. As concerned Chairman, concerned Minister what I have to say is, you should appreciate. Iam trying to throw the ball in their court. I invite the Leader of Opposition and others irrespective of parties, I will give them cost accounts, balance sheet and everything...ಬೇಡ ಎಂದರೆ ಬೇಡ, ನಾಳೆ ನಾವು ಮಾಡದೆ ಇದ್ದರೆ ಇವರು ಬಂದು ಮಾಡುವುದಕ್ಕೆ ಆಗುವುದಿಲ್ಲ. ಇದನ್ನು ಪ್ರೈವೇಟಿಸಂ ಏತಕ್ಕೆ ಮಾಡಬಾರದು. ಎಂದು ಹೇಳುತ್ತಿದ್ದಾರೆ? ನಷ್ಟವಾಗಿ, ಸರ್ಕಾರಿ ಇಂಡಸ್ಟ್ರೀಸ್ ಎಲ್ಲಾ ಹಾಳಾಗಿ ಮುಚ್ಚಿ ಹೋಗಿವೆ. ಇದು ಪ್ರೈವೇಟಿಸಂ ಆಗಬೇಕೆಂದು ಕೆಲವರು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಖಾಸಗೀಕರಣಕ್ಕೆ ಸಂಪೂರ್ಣ ವಿರೋಧ.

Mr. Speaker : I have a solution Mr. Transport Minister. You can invite them for a discussion, take them into confidence for everything, for better functioning...

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಎವರಿ ಥಿಂಗ್ ಅವರು ಮಾಡುವುದಿಲ್ಲ.

ಮಾನ್ಯ ಸಾರಿಗೆ ಸಚಿವರು, ಸಾರಿಗೆ ಸಂಸ್ಥೆಯ ಅಧ್ಯಕ್ಷರು ಕೂಡ ಆಗಿದ್ದಾರೆ. ಸಾರಿಗೆ ಸಂಸ್ಥೆಯ ರೂಲ್ ಬೇರೆ ಇದೆ. ಟ್ರಾನ್ಸ್‌ಪೋರ್ಟ್ ಕಮೀಷನ್ನರ್‌ರವರ ರೂಲ್

ಬೇರೆ ಇದೆ. ಅದು ನನಗೆ ಅರ್ಥವಾಗುತ್ತದೆ. ತಾವು ಭರವಸೆಯನ್ನು ಕೊಡುವುದಾದರೆ ನಾವು ಎಲ್ಲಾ ವಿರೋಧ ಪಕ್ಷದ ಮುಖಂಡರನ್ನು ಕರೆಸಿ ಮಾತನಾಡಿ ಅದಾದನಂತರ ಇದರ ಬಗ್ಗೆ ವಿಚಾರ ಮಾಡುತ್ತೇವೆಂದರೆ We also reserve for comment on that...

(ಗೊಂದಲ)

Mr. Speaker : That is a very very fair solution. I command your effort......

ಶ್ರೀ ವಾಟಾಳ್ ನಾಗರಾಜ್ : ಅಲ್ಲಿಯವರೆಗೂ ಸರ್ಕಾರ ಯಾವುದೇ ನಿರ್ಧಾರ ಕೈಗೊಳ್ಳಬಾರದು.

ಶ್ರೀ ಅಜೀಜ್ ಸೇಠ್ : It means that... ಇವತ್ತು ಆಟೋರಿಕ್ಷಾದವರು ನಮಗೆ ಸಬ್ಸಿಡಿ ಪೆಟ್ರೋಲ್ ಕೊಡಬೇಕೆಂದು ಡಿಮ್ಯಾಂಡ್ ಮಾಡುತ್ತಿದ್ದಾರೆ. 25 ವರ್ಷ ಆದಮೇಲೆ ನಮಗೆ ಪೆನ್‌ಷನ್ ಕೊಡಬೇಕು. ಇದನ್ನು ಎಲ್ಲಿಂದ ನಾವು ಕೊಡುವುದಕ್ಕೆ ಬರುತ್ತದೆ. ಅವರು ಮಾಲೀಕರು ಇವರು ಡ್ರೈವರ್ -We have labour laws. They should implement that...

ಇವರು ನಮಗೆ ಪೆನ್‌ಷನ್ ಕೊಡಿ, ನಮಗೆ ನಾಲ್ಕು ಲೀಟರ್ ಪೆಟ್ರೋಲ್ ಸಬ್ಸಿಡಿ, ಕೊಡಿ, ಎಂದು ಧರಣಾ ಮಾಡುತ್ತಿದ್ದಾರೆ. ಹೀಗಾದರೆ ಎಲ್ಲಾ ಆಟೋರಿಕ್ಷಾವನ್ನು ನಾವೇ ತೆಗೆದುಕೊಳ್ಳಬಹುದಲ್ಲಾ, truck terminal ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಆಟೋರಿಕ್ಷಾ ಡ್ರೈವರ್ಸ್ ಅವರು ಸ್ಟ್ರೈಕ್ ಮಾಡುತ್ತಿದ್ದಾರೆ ಅದು ತಮ್ಮ ಗಮನಕ್ಕೆ ಬಂದಿಲ್ಲ, ತಮ್ಮ ಗಮನಕ್ಕೆ ಬಂದಿದ್ದರೆ ಅದರ ಬಗ್ಗೆ ವಿಶೇಷವಾದಂತಹ ಚರ್ಚೆ ಮಾಡಲು ಅವಕಾಶ ಕೊಡುತ್ತಿದ್ದೀರಿ. What I am requesting is they are on strict. The way in which the Government treating them that is not correct.. ದಯಮಾಡಿ ಕರೆಸಿ, ಅವನು ನೀನು ಅಂದರೆ ಯಾರು ಕೇಳುತ್ತಾರೆ. ನೀವು ದಯವಿಟ್ಟು ಅವರನ್ನು ಕರೆಯಿಸಿ ಮಾತನಾಡಿ ಸಮಜಾಯಿಷಿ ಕೊಡಿ. ಅವರ ಕೆಲವು ಸಮಸ್ಯಗಳ ಜೆನ್ಯೈನ್ ಇವೆ. ಸಪರೇಟ್ ಫ್ಯೂಯೆಲ್ ಪಾಲಿಸಿ ಮಾಡುವುದಕ್ಕೆ ನೀವು ಯಾರು? ಅದನ್ನು ಮಾಡುವವರು ಬೇರೆ ಇದ್ದಾರೆ. ಅದು ನಿಮ್ಮ ಕೈಯಲ್ಲಿ ಆಗುವುದಿಲ್ಲ. ಈ ಸದನದಲ್ಲಿ ಅದನ್ನು ಮಾತನಾಡುವುದು ಉಪಯೋಗವಿಲ್ಲ.

ಅಧ್ಯಕ್ಷರು : ಹಾಗೇ, ಅವರಿಗೆ ಪೆನ್‌ಷನ್ ಕೊಡುವುದಕ್ಕೆ ಆಗುವುದಿಲ್ಲ

ಶ್ರೀ ಪಿ.ಜಿ. ಆರ್. ಸಿಂಧ್ಯ : ಅದು ಆಗುವುದಿಲ್ಲವೆಂದು ನನಗೂ ಗೊತ್ತಿದೆ. ಆದರೆ ಕೆಲವು ವಿಚಾರಗಳು ಕನ್ಸಿಡರ್ ಮಾಡುವುಂಥವು ಇದೆ. ಅವರಿಗೆ ಅಶ್ಯೂರೆನ್ಸ್ ಕೊಡಿ. ನಾನು ಹೇಳುವುದಕ್ಕೆ ಟೈಂ ಇಲ್ಲ.

ಅಧ್ಯಕ್ಷರು : ನೀವು ಅವರನ್ನು ಕರೆಯಿಸಿ ಮಾತನಾಡಿ.

ಶ್ರೀ ಅಜೀಜ್ ಸೇಠ್ : ನಾನು ಅವರನ್ನು ಕರೆಯಿಸಿ ಮಾತನಾಡಿದ್ದೇನೆ. ಅವರಲ್ಲಿ ಹತ್ತಾರು ಯೂನಿಯನ್‌ಗಳು ಇವೆ. ಯೂನಿಯನ್ ರೈವಲರಿ ಇದೆ. ಅವರಿಗೆ ಪೆನ್‌ಷನ್ ಬೇಕು, ಮನೆ ವಸತಿ ಬೇಕು ಎಂದು ಕೇಳುತ್ತಿದ್ದಾರೆ. ಬೀಡಿ ಕಾರ್ಮಿಕರ ತರಹ ನೀವೂ ಒಂದು ಹೌಸಿಂಗ್ ಕಮೀಷನ್ ಮಾಡಿಕೊಳ್ಳಿ, ಒಂದು ಬ್ಯಾಂಕ್ ಮಾಡಿಕೊಳ್ಳಿ ಎಂದು ನಾನು ಅವರಿಗೆ ಹೇಳಿದೆ. ಅವರ ಮುಷ್ಕರದ ನಿಜವಾದ

ಹಿನ್ನಲೆ ಹೇಳುತ್ತೇನೆ. ಅವರಿಗೆ ಮೀಟರ್ ಹಾಕುವುದಕ್ಕೆ ಇಷ್ಟವಿಲ್ಲ. ಎಷ್ಟೋ ಆಟೋರಿಕ್ಷಾಗಳು ಪರ್ಮೀಷನ್ ಇಲ್ಲದೇ ನಡೆಯುತ್ತಿವೆ. ತಪ್ಪಿತಸ್ಥರ ಮೇಲೆ ಕ್ರಮವನ್ನು ವಾರ್ ಫೂಟಿಂಗ್ ಬೇಸಿಸ್ ಮೇಲೆ ತೆಗೆದುಕೊಳ್ಳಲು ನಾನು ನನ್ನ ಇಲಾಖೆಯ ಅಧಿಕಾರಿ ಗಳಿಗೆ ಆದೇಶ ಕೊಟ್ಟಿದ್ದೇನೆ. Your have to take action against the erring people. ಅವರ ಬಗ್ಗೆ ನನಗೆ ಕಳಕಳಿ ಇದೆ. ನಾನೂ 40 ವರ್ಷದಿಂದ ಲೇಬರ್ ಫೀಲ್ಡ್‌ನಲ್ಲಿ ಇದ್ದೇನೆ. ಲೇಬರ್ ಜೊತೆಯಲ್ಲೇ ಇದ್ದೇನೆ.

ಅಧ್ಯಕ್ಷರು : ನೀವು ಇದನ್ನೆಲ್ಲಾ ಮಾಡಿ. ಈಗ ಸದನ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 3-00 ಗಂಟೆಗೆ ಸಮಾವೇಶವಾಗಲಿದೆ.

(ಸದನವು ತನ್ನ ಕಾರ್ಯಕಲಾಪವನ್ನು ಮಧ್ಯಹ್ನ 2-03 ಗಂಟೆಗೆ ಮುಕ್ತಾಯಗೊಳಿಸಿತು ಹಾಗು ಮಧ್ಯಾಹ್ನ 3-00 ಗಂಟೆಗೆ ಮತ್ತೆ ಸಮಾವೇಶಗೊಳ್ಳಲು ನಿರ್ಧರಿಸಿತು).

(The House re-assembled at 3.10 P.M.)

(MADAM DEPUTY SPEAKER IN THE CHAIR)

SRI AZEEZ SAIT : Madam Deputy Speaker, I just...

MADAM DEPUTY SPEAKER : Do you want to still continue?

SRI AZEEZ SAIT : I have not touched Wakf Board. Hon'ble Madam, Very few Members have spoken about Wakf Board. Nobody has spoken.

SRI R. V. DESHAPANDE : I have spoken.

SRI AZEEZ SAIT : You have said only about grants. Unfortunately, what has happened? The board was politically constituted...

SRI R.V. DESHAPANDE : Always politically constituted. You tell from your conscience when it was not politically constituted. It is politically constituted. What is the reconstitution? Sri Azeez Sait's choice will be there. If you say your choice will not be there, I agree.

SRI AZEEZ SAIT : They know what is in my heart. They know everything. They have crystal glass before them. Before I could say something, they know what I am going to say. I think, it is fortunate for me. At least you should understand what I am going to say. When I said the word constituted politically, they have not followed the rules and regulations. The Wakf Act is the Central Act of 1954. It says the Board shall consists 11 Members, out of which it says there shall be only one Muthwalli. While constituting, they have not taken due care for that Act. They have appointed more than Muthwallies in the Board. Well, I do not want to go into the details, because there is already a Writ Petition pending in the High Court. But, I must say here that the Chairman who is a great shishya of their party,has converted the whole dharmika places like mosque, Darga, everything into a political organisation. ಮುಜರಾಯಿ ಆಗಿರಲಿ, ವಕ್ಫ್ ಆಗಿರಲಿ, ಧಾರ್ಮಿಕ ಜಾಗ ಆಗಿರಲಿ.

Either it is a mosque or a temple, it should be governed by the people who know something about the religion. But, here ಜನತಾದಳದವರು, ಜನತಾ ಯುವಕ, ಜನತಾತನ, ಜನತಾದಲ್ಲಿ ಹುಟ್ಟಿದವರು ಅಂಥವರನ್ನೆಲ್ಲಾ ಧಾರ್ಮಿಕ ಜಾಗದಲ್ಲಿ ಹಾಕಿ ಎಲ್ಲಾ ಸರ್ವ ಪ್ರಯತ್ನ ಮಾಡಿ ಪ್ರತಿಯೊಂದು ಹಳ್ಳಿಯಲ್ಲೂ Political person. But, nobody dare raise their finger as far as the mosques or temples are concerned. Even as Muzrai Minister, I have never constituted a committee of political persons- good muslims even with political background. To-day you have sanctioned Rs. 1 crore what is called Grant, of which you have given Rs. 40 Lakhs for Board's maintenance. What is the Board doing? As on today, 6% contribution which they have to collect...

SRI P.G.R. SCINDHIA : This cannot be allowed.

SRI AZEEZ SAIT : I have to reply.

(INTERRUPTIONS)

SRI R.V. DESHAPANDE: You have admitted yourself you are capable of controlling the Board. Better resign.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಈಗ ಅವರು ಛೇರ್ಮನ್‌ಗೆ ರೆಫರ್ ಮಾಡಿದರು. ಛೇರ್ಮನ್ ಏನು ಮಾಡುತ್ತಾರೆಂದು ನಾನು ಕೇಳುತ್ತಿದ್ದೇನೆ. ನಾವು ಕೇಳಬೇಕಾಗಿರುವುದರಿಂದ ಇದನ್ನು ಕೇಳುತ್ತಿದ್ದೇನೆ. ಆದರೆ ಇದಕ್ಕೆ ಒಂದು ಲಿಮಿಟ್ ಇದೆ. ಇವತ್ತು ಕೋರ್ಟಿನಲ್ಲಿ ಇದೆಯೆಂದು ಅವರೇ ಹೇಳುತ್ತಾರೆ. ಕೋರ್ಟ್‌ನಲ್ಲಿ ಇರುವುದನ್ನು ಈಗ ಏಕೆ ರೈಸ್ ಮಾಡುತ್ತಿದ್ದೀರಿ? ಇದು ಸಬ್‌ಜುಡಿಸ್ ಆಗುವುದಿಲ್ಲವೆ?

Madam Deputy Speaker : He is note going into the details.

Sri. R. V. Deshapande : He has talked about the constitution, about its functioning.

ಶ್ರೀ ಹೆಚ್. ಏಕಾಂತಯ್ಯ : ರಾಜಕೀಯ ಭಾಷಣ ಮಾಡಲಿಕ್ಕೆ ಇದು ವೇದಿಕೆಯಲ್ಲ.

ಉಪಾಧ್ಯಕ್ಷರು : ತಾವು ಮುಂದುವರಿಸಿ.

ಶ್ರೀ ಅಜೀಜ್ ಸೇಠ್ : ಏಕಾಂತಯ್ಯ ...

ಶ್ರೀ ಪಿ.ಜಿ. ಆರ್.ಸಿಂಧ್ಯಾ : ಏಕಾಂತಯ್ಯ ಹೇಳುವುದಕ್ಕೆ ಎಂದು, ಏಕ್‌ತಯ್ಯ ಎಂದು ಬೇಕಾಗಿ ಹೇಳುತ್ತಿದ್ದಾರೆ. ಇವರಿಗೆ ಏನು ಹೇಳಬೇಕು ನಾವು?

ಶ್ರೀ ಅಜೀಜ್ ಸೇಠ್ : ನನಗೆ ಕನ್ನಡ ಬರುವುದೇ ಹಾಗೆ.

ಶ್ರೀ ಹೆಚ್. ಏಕಾಂತಯ್ಯ : ಅದು ಅವರವರ ಸಂಸ್ಕೃತಿ ತೋರಿಸುತ್ತದೆ.

ಶ್ರೀ ಅಜೀಜ್ ಸೇಠ್ : ಸಂಸ್ಕೃತಿ ಚೆನ್ನಾಗಿದೆ ನಮ್ಮದೂ ನಿಮ್ಮದೂ ಇಲ್ಲಿ.

ಶ್ರೀ ಹೆಚ್. ಏಕಾಂತಯ್ಯ : ಸ್ವಾಮಿ, ನಿಮಗಿಂಥಾ ಚೆನ್ನಾಗಿ, ಒರಟಾಗಿ ಮಾತನಾಡುವುದು ನಮಗೆ ಬರುತ್ತದೆ. ಅದರ ಬಗ್ಗೆ ಸ್ಪರ್ಧೆ ಮಾಡುವುದಕ್ಕೆ

ಹೋಗಬೇಡ್ರಿ. ಅವರಿಗೆ ಎಲ್ಲಾ ಗೊತ್ತಿದೆ. ಇದನ್ನು ತಿಳಿದುಕೊಳ್ಳುವಷ್ಟು ಯೋಗ್ಯತೆ ಇಲ್ಲವಾ?

ಉಪಾಧ್ಯಕ್ಷರು : ಮಂತ್ರಿಗಳೇ ತಾವು ಮುಂದವರಿಸಿ.

ಶ್ರೀ ಅಜೀಜ್ ಸೇಠ್ : ನಿಮಗೆ ಸಿಟ್ಟು ಬರುವುದಿಲ್ಲ. ಏಕೆ ಬರುತ್ತದೆ ಇವತ್ತು? ನಾನು ಹೇಳಿದೆ, ಇಷ್ಟು ಗ್ರಾಂಟ್ ಕೊಟ್ಟರೂ, ಮೇನ್‌ಟೆನೆನ್ಸ್ ಗ್ರಾಂಟ್ ಕೊಟ್ಟರೂ 57 ಲಕ್ಷ ವಕ್ಫ್ ಕಾಂಟ್ರಿಬ್ಯೂಷನ್ ಬಾಕಿ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೇ, ಇವರು ಹೇಳಿದ ಹಾಗೆ, ಇವರ ತಾಳಕ್ಕೆ ಅವರು ಕುಣಿಯುವುದಿಲ್ಲ. ಕಾನೂನು ಪ್ರಕಾರ ಅವರನ್ನು ಕಿತ್ತುಹಾಕಲಿಕ್ಕೆ ಇವರ ಕೈಯಲ್ಲಿ ಆಗಲಿಲ್ಲ. 6 ತಿಂಗಳಾಯಿತು, ಇವರ ರಾಜಕೀಯಕ್ಕೆ, ಇವರ ತಾಳಕ್ಕೆ ತಕ್ಕಂತೆ ಅವರು ಕುಣಿಯುವುದಿಲ್ಲವೆಂದು ಹೇಳಿ, ಇದು ಇವರಿಬ್ಬರ ಪರ್ಸನಲ್ ಜಗಳ. ಇಲ್ಲಿ ತಂದು ಇದನ್ನು ದುರುಪಯೋಗ ಮಾಡುತ್ತಿದ್ದಾರೆ. It is a personal fight between Sri Azeez Sait and the Wakf Board Chairman.

Sri Azeez Sait : No. no.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ವಕ್ಫ್ ಗ್ರ್ಯಾಂಟ್ ಕೊಟ್ಟಿದ್ದಾರಲ್ಲಾ, ಎಲ್ಲಾ ಮೈಸೂರಿಗೇ ತೆಗೆದುಕೊಂಡು ಬಿಟ್ಟಿದ್ದಾರೆ. ನಮ್ಮ ಜಿಲ್ಲೆಗಳಿಗೆ ಕೊಡಲೇ ಇಲ್ಲ, ಎಲ್ಲಾ ಇವರ ಜಿಲ್ಲೆಗೇ ತೆಗೆದುಕೊಂಡು ಬಿಟ್ಟಿದ್ದಾರೆ. ಅದಕ್ಕೆ ಏನು ಹೇಳುತ್ತಾರೆ.

ಶ್ರೀ ಅಜೀಜ್ ಸೇಠ್ : ಅವರು ಹೇಳುವುದು Yes. I don't shy. I will not shy. Out of Rs. 60 lakh, if I could have given Rs. 12 lakhs or Rs. 15 lakhs, to Mysore, they should appreciate me, because charity begins first at home.

Sri. R. L. Jalappa : It is not your personal property.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಕುಚ್ ಭೀ ನಹೀ ಸಮಜ್ ರಹಾ ಹೈ. ಆಪ್ ಕ್ಯಾ ಬಾತ್ ಕರ್ ರಹಾ ಹೈ? ತಾವು ಏನು ಮಾತನಾಡುತ್ತಿದ್ದೀರಿ Charity begins at home. It is your personal property? ಒಂದು ಕೆಲಸ ಮಾಡಿರಿ. Next love your neighbour. Mandya. ಏನು ಮಾಡಿದ್ದೀರಿ? ಮಂಡ್ಯದಲ್ಲಿ ಏನು ಮಾಡಿದ್ದೀರಿ.

Sri Azeez Sait : Next is, love the neighbour.

ಉಪಾಧ್ಯಕ್ಷರು : ಮಂಡ್ಯಕ್ಕೆ ಬರುವುದಕ್ಕೆ ಇನ್ನೂ ಬಹಳ ದೂರ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮೈಸೂರಿನಲ್ಲಿ ನೀವು ತೆಗೆದುಕೊಂಡಾಗ ಬರೀ 27 ಲಕ್ಷ ರೂಪಾಯಿಗಳನ್ನು 60 ಲಕ್ಷ ರೂಪಾಯಿಯಲ್ಲಿ ತೆಗೆದುಕೊಂಡಿರಲ್ಲ, ತಮಗೆ ಬೇಕಾಗಿರುವ ಇನ್ಸ್‌ಸ್ಟಿಟ್ಯೂಷನ್‌ಗೆ ಕೊಟ್ಟಿದೀರಿ. ಬೇರೆಯವರಿಗೆ ಕೊಟ್ಟಿಲ್ಲ.

ಶ್ರೀ ಅಜೀಜ್ ಸೇಠ್ : ಇಲ್ಲ, ಇಲ್ಲ, Muslim dharmika institutions right from Idgah, burial ground, mosque, darga, all are mine. I am one for them. They are for me, as far as Aziz Sait is concerned. I will prove in the Bagalkot election. ಜನತಾ ದಳಕ್ಕೆ ಹೋಗುವ ಓಟನ್ನು ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಬಾಗಿಲಕೋಟೆ ಎಲೆಕ್ಷನ್‌ನಲ್ಲಿ ಏನು ಮಾಡಿದ್ದೀರಿ, ಯಾವ ಯಾವ ಟಿ.ಬಿ.ನಲ್ಲಿ ಹೋಗಿ ಇದ್ದೀರಿ ಇವೆಲ್ಲ ವಿಷಯ ಈಗ ಬೇಡ.

ಶ್ರೀ ಅಜೀಜ್ ಸೇಠ್ : ಏಕೆ ಸಿಂಧ್ಯರವರು ಈ ರೀತಿ ಮಾತನಾಡುತ್ತಿದ್ದಾರೆ.

ಶ್ರೀ ಅಜೀಜ್ ಸೇಠ್ : ಏಕೆ ಬಾಗಿಲಕೋಟೆ ಎಲೆಕ್ಷನ್ ವಿಷಯ ಇಲ್ಲಿ ಏಕೆ ತರುತ್ತೀರಿ. ಆ ವಿಷಯಕ್ಕೆ ತರುವುದಕ್ಕೆ ಹೋಗಬೇಡಿ.

ಉಪಾಧ್ಯಕ್ಷರು : ವಕ್ಫ್ ಬೋರ್ಡ್ ವಿಷಯ ಮಾತನಾಡಿ.

ಶ್ರೀ ಅಜೀಜ್ ಸೇಠ್ : ಈಗ ನಾನು ಮೊದಲನೆಯ ಕೆಲಸ ಏನು ಮಾಡುತ್ತಿದ್ದೇನೆ ಎಂದರೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಜೀಜ್ ಸೇಠ್‌ರವರು ಬಾಗಿಲಕೋಟೆ ಜೊತೆಗೆ ದಾವಣಗೆರೆಗೂ ಬಂದಿದ್ದೀರಿ. ಅದನ್ನು ಹೇಳಲಿಲ್ಲ. ನಮ್ಮ ಕ್ಯಾಂಡಿಡೇಟನ್ನು ಮುಗಿಸಿಬಿಟ್ಟಿರಿ.

ಶ್ರೀ ಅಜೀಜ್ ಸೇಠ್ : ಯಾವ ಕ್ಯಾಂಡಿಡೇಟ್ ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ಕ್ಯಾಂಡಿಡೇಟ್, ಬಿಜೆಪಿ ಕ್ಯಾಂಡಿಡೇಟ್‌ನನ್ನು ಮುಗಿಸಿಬಿಟ್ಟಿರಿ. ಬಿಜೆಪಿ ಕ್ಯಾಂಡಿಡೇಟ್ ಗೆದ್ದರಲ್ಲ, ಸೋಲುವ ಹಾಗೆ ಮಾಡಿದಿರಿ.

ಶ್ರೀ ಅಜೀಜ್ ಸೇಠ್ : ನಾನು ಆ ಕೈವಾಡ ಮಾಡಲಿಲ್ಲ..

ಶ್ರೀ ಸಿ. ಬೈರೇಗೌಡ : ಬೇರೆಯವರು ಯಾರು ಮಾಡಿದ್ದಾರೆ?

ಶ್ರೀ ಅಜೀಜ್ ಸೇಠ್ : ಎಣಿಕೆಯಲ್ಲಿಯೇ ಸರಿಯಾಗಿ ಬಂತು. ಮೂರು ಸಾರಿ ಎಣಿಕೆ ಮಾಡಿದ್ದಾರೆ. ಅದನ್ನು ಏಕೆ ಹೇಳುವುದು? ಸೋಲುವುದು ಗೆಲ್ಲುವುದು ಅದು ಬೇರೆ ವಿಷಯ. ತತ್‌ಕಾಲಕ್ಕೆ ರಾಜಕೀಯ, ಜನತಾ ಇರಬಹುದು. As far as wakf institutions are concrened, I am wedded to them. My people are after me and I am after them.ಆ ಕಾಲಕ್ಕೆ ರಾಜಕೀಯ ಯಾವುದೇ ಇರಬಹುದು. As far as Muslims are concerned, I have my place. He also agrees. Iam ordering now these contributions to be collected under Land Revenue, I only request all my hon. friends, please don't come and interfere in that. ಏಕೆಂದರೆ ಸಾಧಾರಣವಾಗಿ ಒಂದು ಗಾದೆ ಇದೆ. ಮನೆಯಲ್ಲಿ ಅಡಿಗೆ ಮಾಡಬೇಕಾದರೆ ಒಳ್ಳೆಯ ಬಿರಿಯಾನಿಗೆ ರೈಸ್ ಬೇಕು. ದಾನ ಮಾಡಬೇಕಾದರೆ ಬಾಯಿಲ್ಡ್ ರೈಸ್ ತೆಗೆದುಕೊಂಡು ಹಾಕಬೇಕು ಎಂದು. ಆ ರೀತಿ ಮಾಡುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ. ಸೆಂಟ್ರಲ್ ಗವರ್ನಮೆಂಟಿನಿಂದ ಎರಡೂವರೆ ಕೋಟಿ ರೂಪಾಯಿಗಳ ಸಾಲ ಕೊಡಿಸಿದ್ದೇನೆ. ಹಜ್‌ನವರಿಗೆ ಇವತ್ತು ಒಂದು ಕೋಟಿ ಇಪ್ಪತ್ತು ಲಕ್ಷ ರೂಪಾಯಿ ಮಾಡಿ ಬಿಟ್ಟರು. ಸೆಂಟ್ರಲ್ ಹಜ್ ಕಮಿಟಿಯವರು ದುಡ್ಡು ಕೊಡುತ್ತಾರಂತೆ ಸೆಂಟ್ರಲ್ ಹಜ್ ಕಮಿಟಿಯವರು ಹತ್ತಿರ ದುಡ್ಡು ಇಲ್ಲ ಕೊಡುವುದಕ್ಕೆ ಈಗ ನಾನು ಹಜ್‌ನಿಂದ ಇಷ್ಟು ಎಂದು ಕಲೆಕ್ಟ್ ಮಾಡಿ ಈಗ ಸ್ಟೆಲ್ಲರ್, ಗ್ರೌಂಡ್ ಅಂಡ್ ಫಸ್ಟ್‌ಫ್ಲೋರ್ ಕೆಲಸ ಮುಗಿಸುತ್ತಿದ್ದೇನೆ. ವಕ್ಫ್ ಬೋರ್ಡ್ ಐ ಕೆನಾಟ್ ರಿಮೂವ್ ಎಂದು ಇಲ್ಲ, ಆಗಲೇ ನಾನು ಶೋಕಾಸ್ ನೋಟೀಸ್ ಕೊಟ್ಟಿದ್ದೇನೆ. ಇವೆಲ್ಲ ಎನ್‌ಕ್ವೈರಿ ಪೆಂಡಿಂಗ್ ಇದೆ. ಆಡಿಟರ್ ಜನರಲ್‌ರವರು ಒಂದು ಸೂಚನೆ ಕಳಿಸಿದ್ದಾರೆ. ಮೂರು ಕೋಟಿ ರೂಪಾಯಿ ಚಿಲ್ಲರೆ ಕೊಟ್ಟಿರುವುದು ನಿಮ್ಮ ಈ ಬೋರ್ಡ್ಸ್ ಛೇರ್ಮನ್‌ರವರು 76 ಲಕ್ಷ ರೂಪಾಯಿ ಖರ್ಚು ಮಾಡದೇ ಟ್ರೆಜರಿಗೆ ವಾಪಸ್ ಕಳಿಸದೇ ಅಲ್ಲೇ

ಬೋರ್ಡ್‌ನಲ್ಲಿ ಇಟ್ಟುಕೊಂಡಿದ್ದಾರೆ. ನನಗೆ ಅವರ ಮೇಲೆ ದ್ವೇಷ ಇಲ್ಲ. He is a very good friend of mine. ನಿಮ್ಮ ಒಂದು ಆಶೀರ್ವಾದ ನನ್ನ ಮೇಲೆ ಇರುವುದರಿಂದ ತಮ್ಮಿಂದ ಬಾಯಿ ಪಾಠ ಕೇಳುವ ಹಾಗೆ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಅವರು ಏನು ಹೇಳುತ್ತಿದ್ದಾರೆಂದರೆ ಅವರು ಹೌಸ್‌ನಲ್ಲಿ ಇಲ್ಲ. ನಾನು ಅವರನ್ನು ಕೇಳಿದೆ, ಏನಪ್ಪ ಇದು ಎಂದು. ಕಮೀಷನ್ ಕೇಳಿದರು ನಾನು ಕೊಡಲಿಲ್ಲ. ಅದಕ್ಕೋಸ್ಕರ ನಾನು ತೆಗೆದುಕೊಂಡು ಹೋಗಿದ್ದೇನೆ ಎಂದು ಹೇಳುತ್ತಾರೆ.

ಶ್ರೀ ಅಜೀಜ್ ಸೇಠ್ : ಯಾವ ಕಮೀಷನ್?

ಶ್ರೀ– ಪಿ.ಜಿ.ಆರ್. ಸಿಂಧ್ಯ : ನಿಮ್ಮ ಛೇರ್ಮನ್‌ರೇ ಹೇಳುತ್ತಾರೆ.

ಶ್ರೀ ಅಜೀಜ್ ಸೇಠ್ : ಈಗ ಒಂದು ಕೆಲಸ ಮಾಡೋಣ. ನೀವು ಒಳ್ಳೆಯ ವಂಶಕ್ಕೆ ಸೇರಿರುವಂತಹವರು. ನಿಮ್ಮ ತಂದೆಯವರು ಎಂ. ಆರ್. ಆಗಿದ್ದವರು. ನನ್ನ ವಂಶ, ಮನೆತನ ಎಂತಹುದು ಎಂದು ಇಡೀ ಮೈಸೂರಿನವರಿಗೆ ಗೊತ್ತು. ನೀವು ಬನ್ನಿ ನಾನೂ ಬರುತ್ತೇನೆ. ಇಲ್ಲ ನಾನು ಹೇಳಿದ ಜಾಗಕ್ಕೆ ನೀವು ಬನ್ನಿ. ಇಲ್ಲಿ ನೀವು ಹೇಳುವ ದೇವಸ್ಥಾನಕ್ಕೆ ಹೋಗೋಣ. ನಾನೂ ಬರುತ್ತೇನೆ. ಆ ದೇವರ ಹತ್ತಿರ ಆಣೆ ಮಾಡಿ ನಾನು ಕಮೀಷನ್ ತೆಗೆದುಕೊಂಡಿಲ್ಲದಿರುವ ಬಗ್ಗೆ ಹೇಳುತ್ತೇನೆ. ಅವರನ್ನು ಕರೆಯಿರಿ, ಯಾರು ಕಮೀಷನ್ ತೆಗೆದುಕೊಂಡರು ಎಂದು ಹೇಳಿದ್ದುದು?

(ಗೊಂದಲ)

ಶ್ರೀ ಅಜೀಜ್ ಸೇಠ್ : ಯಾರು ಹೇಳಿದ್ದುದು ಕಮೀಷನ್ ಎಂದು, ಕಮೀಷನ್ ಕೊಡುವವರು ಯಾರೂ ಹುಟ್ಟೇ ಇಲ್ಲ. ನಾವು ಹುಟ್ಟಿರುವುದು ಶ್ರೀಮಂತರ ಮನೆಯಲ್ಲಿ ಯಾರು ನಮಗೆ ಕಮೀಷನ್ ಕೊಡುತ್ತಾರೆ.

(ಗೊಂದಲ)

It is a parliamentary word?

ಶ್ರೀ ಪಿ.ಜಿ.ಆರ್. ಸಿಂಧ್ಯ : ಇವರು ಏನು ಹೇಳುತ್ತಾ ಇರುವುದು, ಅವರ ಮೇಲೆ ಅಲಿಗೇಷನ್ ಮಾಡಿದರೆ ಹೇಗೆ? 75 ಲಕ್ಷ ರೂಪಾಯಿ ಅವರು ತೆಗೆದುಕೊಂಡು ಹೋಗಿದ್ದಾರೆ. ಅವರು ವಾಪಸ್ ಕೊಟ್ಟಿಲ್ಲ ಎಂದು ಹೇಳಿದರೆ ಅವರು ಈ ಹೌಸ್‌ನಲ್ಲಿ ಇಲ್ಲ ಡಿಫೆಂಡ್ ಮಾಡಿಕೊಳ್ಳುವುದಕ್ಕೆ How to defend him. because he is my partyman.

Sri. Aziz Sait : It is a serious charge.

(ಗೊಂದಲ)

ಶ್ರೀ ಪಿ.ಜಿ. ಆರ್. ಸಿಂಧ್ಯ : ನೀವು ಬೇವರ್ಸಿ ಎಂಬ ಪದವನ್ನು ಹೇಳಿದ್ದೀರಿ. ನಿಮ್ಮ ಬಾಯಲ್ಲಿ ಈ ಮಾತು ಬೇಡ. ಆ ಮಾತು ಹೇಳುವುದಕ್ಕೆ ಹೋಗಬೇಡಿ.

(ಗೊಂದಲ)

ಉಪಾಧ್ಯಕ್ಷರು : ನಾವು ಈ ತರಹ ಮಾತನಾಡುವುದು ಬೇಡ.

ಶ್ರೀ ವಾಟಾಳ್ ನಾಗರಾಜ್ : ಬೇವರ್ಸಿ ಎಂದರೆ ಅಂತಹ ಕೆಟ್ಟ ಪದ ಏನಲ್ಲ.

ಉಪಾಧ್ಯಕ್ಷರು : ಇಂತಹ ಪದ ಉಪಯೋಗಿಸುವುದು ಬೇಡ. ಒಳ್ಳೆಯ ಪದ ಆದರೂ ಅದನ್ನು ಬಳಸಬಾರದು.

ಶ್ರೀ ವಾಟಾಳ್ ನಾಗರಾಜ್ : ಬೇವರ್ಸಿ ಅಂದರೆ ಕೆಟ್ಟ ಪದ ಅಲ್ಲ, ದಿಕ್ಕಿಲ್ಲದೇ ಇರುವವರು ಎಂದು. ಯಾರೂ ಹೇಳುವವರು ಕೇಳುವವರೂ ಇಲ್ಲ ಎಂದು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಕಳೆದ ಒಂದು ವರ್ಷದಿಂದ ನಾವು ನಿಮ್ಮನ್ನು ಯಾರೂ ಕೆಣಕಿಲ್ಲ. ಆನಂದವಾಗಿ ಕೆಲಸಮಾಡಿಕೊಂಡು ಬಂದಿದ್ದೀರಿ. ಇವೊತ್ತು ಪುನ: ನಮ್ಮೆಲ್ಲರನ್ನು ಕೆಣಕಲು ತೀರ್ಮಾನ ಮಾಡಿದ್ದೀರಿ?

ಶ್ರೀ ಅಜೀಜ್ ಸೇಠ್ : ನಾನೇನು ಕಮಿಷನ್ ತೆಗೆದುಕೊಂಡಿದ್ದೇನೆಯೇ? ಯಾರಿಗಾದರೂ ತಾಕತ್ತಿದ್ದರೆ ಬನ್ನಿ ಹೊರಗಡೆ, ನೀವೇ ಹೇಳಿದ್ದೀರಿ ಕಮಿಷನ್ ಕೇಳಿದ್ದೀರಿ ಅಂತ .. ಕಮೀಷನ್ ಕೇಳಿದರು ಕೊಟ್ಟಿಲ್ಲ ಎಂದು ಹೇಳಿದಿರಿ.

ಶ್ರೀ ವಾಟಾಳ್ ನಾಗರಾಜ್ : ಯಾರೂ ವೈಯಕ್ತಿಕವಾಗಿ ನಿಮ್ಮ ಮೇಲೆ ಆರೋಪಣೆ ಮಾಡಿಲ್ಲ, ಅಜೀಜ್ ಸೇಠ್ ರವರ ಮೇಲೆ ಎಷ್ಟು ಗೌರವ ಇರಬೇಕೋ ಅಷ್ಟು ಗೌರವ ಇದ್ದೇ ಇದೆ. ತಾವುಗಳು ಸ್ವಲ್ಪ ವಯಸ್ಸಾದವರು, ತಮಗೆ ಕಿವಿ ಕೇಳಿಸಲಿಲ್ಲ ಎಂದು ಕಾಣುತ್ತದೆ. ನಾವು ಏನೇನೋ ಮಾತನಾಡಿ ಬಿಟ್ಟರೆ ನಮಗೆ ಕೇಳುತ್ತದೆ, ನಿಮಗೆ ಕೇಳಿಸಿರಲಿಕ್ಕಿಲ್ಲ... ನಮಗೆ ಚೆನ್ನಾಗಿ ಕಿವಿ ಕೇಳುತ್ತಾ ಇದೆ, ತಮಗೆ ಆ ಮಾತನ್ನು ಯಾರೂ ಹೇಳಲಿಲ್ಲ..

ಶ್ರೀ ಅಜೀಜ್ ಸೇಠ್ : ನನಗೆ ಕಿವಿ ಚೆನ್ನಾಗಿ ಕೇಳಿಸುತ್ತದೆ, ಕಣ್ಣು ಚೆನ್ನಾಗಿ ಇದೆ.. ನೀವು ಹೇಳಿಲಿಲ್ಲ ಅಂದರೆ ಬಿಟ್ಟುಬಿಡಿ. ನಾಹಿ ಲ್ಯಾಂಡ್‌ರೆವಿನ್ಯು ಕಲೆಕ್ಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ. ಅದಕ್ಕೆ ಯಾರೂ ಮಧ್ಯೆ ಪ್ರವೇಶ ಮಾಡಬಾರದು ಎಂದು ಹೇಳಬಯಸುತ್ತೇನೆ. ಇನ್ನು ಸೆಂಟ್ರಲ್‌ಗೌರ್ನಮೆಂಟ್‌ನಿಂದ ಅನೇಕ ಸಾಲಸೋಲ ಕೊಡಿಸಿರುವುದು ಉಂಟು. ಕೆಲವು ಇನ್ಸಿಟಿಟ್ಯೂಶನ್ ಪ್ರಾರಂಭವೇ ಆಗಲಿಲ್ಲ. ಆ ಹಣ ಬ್ಯಾಂಕ್‌ನಲ್ಲಿಯೇ ಇದೆ. ಹಾಗಾದರೆ ಸೆಂಟ್ರಲ್‌ನವರು ಕೊಡುವುದು ಏತಕ್ಕಾಗಿ? ಡೆವಲಪ್‌ಮೆಂಟ್‌ಗೋಸ್ಕರವಾಗಿ. ಜೊತೆಗೆ ನಮ್ಮ ಕರ್ನಾಟಕ ರಾಜ್ಯ ಇವೊತ್ತು ನಮ್ಮ ಮುಖ್ಯಮಂತ್ರಿಯವರಿಗೆ ಹೇಳಿದ್ದೇನೆ, ಅವರು ಯೋಚನೆ ಮಾಡುತ್ತಾ ಇದ್ದಾರೆ, ಸಂಟ್ರಲ್ ಗವರ್ನಮೆಂಟ್‌ನಲ್ಲಿ ರಿವಾಲ್ವಿಂಗ್ ಫಂಡ್ ಯಾವರೀತಿಯಲ್ಲಿ ಮಾಡಿದ್ದೇವೊ ಅದೇ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಕೂಡ ಮಾಡಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ಈಗ ಏನಾಗಿದೆ, 10 ಸಾವಿರ ಗ್ರಾಂಟ್‌ಕೊಟ್ಟು, ಮಿಸ್‌ಯೂಸ್ ಬಹಳ ಆಗಿದೆ. ಅಲ್ಲಿ ಕಳ್ಳತನವೂ ಬಹಳ ಆಗುತ್ತದೆ. ಕೆಲವೊಂದು ವಸ್ತುಗಳನ್ನು ತೆಗೆದುಕೊಂಡು ಹೋಗಿ ಗುಜರಿಗೆ ಹಾಕುತ್ತಾರೆ. ಆದ್ದರಿಂದ what Iam thinking is, a portion of it will be a revolving fund, a portion of it will be direct grant and this is.40 lakhs which is being given to the Wakf Board, will be reduced by Rs. 20 lakhs.

ಶ್ರೀ ಶಫೀ ಅಹಮದ್ : ಮಾನ್ಯ ಅಧ್ಯಕ್ಷರೇ, ಒಂದು ಕ್ಲಾರಿಫಿಕೇಷನ್, ವಕ್ಫ್‌ಬೋರ್ಡ್‌ನಲ್ಲಿ ಮಿಸ್ ಅಪ್ರೋಪ್ರಿಯೇಷನ್ ಆಗುವ ಬಗ್ಗೆ ಎನ್‌ಕ್ವಾಯಿರಿ ಕಮೀಷನ್ ಕಾನ್ಸಿಟ್ಯೂಟ್ ಮಾಡುತ್ತಾರೋ ಇಲ್ಲವೋ ಎಂಬುದನ್ನು ಸಚಿವರು ತಿಳಿಸಬೇಕು. ಅದರ

ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಅಲ್ಲಿ ಸುಮಾರು ಒಂದು ಕೋಟಿಗಿಂತ ಹೆಚ್ಚಿನ ಹಣ ಮಿಸ್‌ಯೂಸ್ ಆಗಿದೆ. ಎಂದು ತಾವು ಹೇಳಿದ್ದೀರಿ. ಅದರ ಬಗ್ಗೆ ತಾವು ಏನು ಆಕ್ಷನ್ ತೆಗೆದುಕೊಳ್ಳುತ್ತೀರಿ ಎಂದು ಕೇಳುತ್ತೇನೆ.

ಶ್ರೀ ಅಜೀಜ್ ಸೇಠ್ : ವಕ್ಫ್ ಇನ್‌ಕ್ವಾಯರಿ ಕಮೀಷನ್ ಆಗಲೇ ನಮೂದು ಮಾಡಿದ್ದೇವೆ. ಕಮೀಷನ್ ವರ್ಕ್ ಮಾಡುತ್ತಾ ಇದೆ. ಮುಸ್ಲಿಮ್ ಸಮಾಜಸ್ಥರಲ್ಲಿ ಈ ಸದನದ ಮೂಲಕ ಒಂದು ಅಪೀಲ್ ಏನೆಂದರೆ, ಅಂಥಾದ್ದು ಏನಾದರೂ ಇದ್ದರೆ, ಮೈನಾರಿಟಿ ಕಮೀಷನ್ ಮುಂದೆ ಒಂದು ಅಪ್ಲಿಕೇಷನ್ ಹಾಕಬಹುದು.

ಶ್ರೀ ಎ.ಎಸ್ ನಾಡಗೌಡ(ಕಾರ್ಮಿಕ ಸಚಿವರಿಂದ) ಉತ್ತರ

ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ ನಮ್ಮ ಇಲಾಖೆ ಬೇಡಿಕೆಗಳ ಮೇಲೆ ಪರ ಮತ್ತು ವಿರೋಧವಾದಂಥ ಅಭಿಪ್ರಾಯಗಳನ್ನು ಮಾನ್ಯ ಸದಸ್ಯರುಗಳು ವ್ಯಕ್ತಮಾಡಿದಂಥ ಸಂದರ್ಭದಲ್ಲಿ ಸುಮಾರು 45 ಕೋಟಿ 85 ಲಕ್ಷ ರೂಪಾಯಿಗಳ ವೆಚ್ಚಕ್ಕೆ ಈ ಸಭೆಯ ಎಲ್ಲಾ ಮಾನ್ಯ ಸದಸ್ಯರುಗಳು ತಮ್ಮ ಭಿನ್ನಾಭಿಪ್ರಾಯ ಇಲ್ಲದೇ ಅನುಮತಿ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಅಂತೆಯೇ ಈ ಚರ್ಚೆಯಲ್ಲಿ ಉದ್ಭವವಾದಂಥ ಕೆಲವೊಂದು ವಿಷಯಗಳ ಬಗ್ಗೆ ನನ್ನ ಅಭಿಪ್ರಾಯಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮೊಟ್ಟಮೊದಲನೇದಾಗಿ ಈ ಇಲಾಖೆಯು ಕೇವಲ ಇಲಾಖೆಯಿಂದ ಮಾತ್ರವಲ್ಲ ಇಲ್ಲಿರುವಂಥ ಮಾನ್ಯ ಸದಸ್ಯರುಗಳಿಂದಲೂ ಮತ್ತು ಸಾಮಾನ್ಯ ಜನರಿಂದಲೂ ಕೂಡ ಸಹಕಾರವನ್ನು ಹೊಂದಿರ ಬೇಕಾಗುತ್ತದೆ ಕಾರಣ ಈ ಇಲಾಖೆಯು ಇವೊತ್ತು ಹುಟ್ಟಿದಂಥ ಇಲಾಖೆಯಲ್ಲ 1947ನೇ ಇಸವಿಯಿಂದ ಬಂದಂಥ ಇಲಾಖೆ ಇದಾಗಿದೆ. ಇನ್ನುವರೆಗೆ ಸರಿಯಾದ ಸಿಬ್ಬಂದಿಯಾಗಲಿ ಮೆಶಿನರಿಯಾಗಲಿ ನಮಗೆ ಒದಗಿಬಂದಿಲ್ಲ ಎಂದು ಹೇಳುತ್ತಾ ನನ್ನ ಇಲಾಖೆ ಬಗ್ಗೆ ತಮ್ಮೆಲ್ಲ ಸಹಕಾರ ಕೋರಿ ಲೋಪಾದೋಷಗಳೇನಿವೆ ಎಂಬುದನ್ನು ಮೇಲಿಂದ ಮೇಲೆ ಇಲಾಖೆಯ ಗಮನಕ್ಕೆ ತರಬೇಕೆಂದು ಈ ಮೂಲಕ ಕಳಕಳಿಯ ವಿನಂತಿಮಾಡಿಕೊಳ್ಳುತ್ತೇನೆ ನನ್ನ ಬೇಡಿಕೆ ಬಗ್ಗೆ ಮಾತನಾಡುತ್ತಾ ಈ ಮೂಲಕ ಮಾನ್ಯ ದೇಶಪಾಂಡೆಯವರು ಹಳಿಯಾಳದಲ್ಲಿರುವ ಐ.ಟಿ.ಐ. ಬಿಲ್ಡಿಂಗ್ ಮತ್ತು ಮೆಶಿನರೀಸ್ ಕುರಿತು ಪ್ರಸ್ತಾವಿಸಿದ್ದಾರೆ. ಈಗಾಗಲೇ ಹಳಿಯಾಳದಲ್ಲಿ 9 ಎಕರೆ ಭೂಮಿ ತೆಗೆದುಕೊಳ್ಳಲಾಗಿದೆ ಕಾರವಾದಲ್ಲಿ 9 ಎಕರೆ ಭೂಮಿ ತೆಗೆದುಕೊಳ್ಳಲಾಗಿದೆ ಹಳಿಯಾಳದಲ್ಲಿ ಬಿಲ್ಡಿಂಗ್ ಕೆಲಸ ಈಗಾಗಲೇ ನಡೆಯುತ್ತಿದೆ ಹಣಕಾಸಿನ ಕೊರತೆಯಿಂದಾಗಿ ಸ್ವಲ್ಪ ವಿಳಂಬವಾಗಿದ್ದು ಈ ವರ್ಷ ನಮ್ಮ ಸೇವಿಂಗ್ಸ್‌ನಿಂದ ಎಷ್ಟನ್ನು ಡೈವರ್ಟ್ ಮಾಡಲು ಸಾಧ್ಯವೋ ಅಷ್ಟು ಮಾಡಿ ಈ ಕಟ್ಟಡವನ್ನು ಶೀಘ್ರವೇ ಮುಗಿಸುವ ಪ್ರಯತ್ನ ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತೇನೆ ಅದೇ ರೀತಿ ಮೆಶಿನರಿಗಾಗಿ ಸೀಪರ್ಡ್ ಪ್ರಾಜೆಕ್ಟ್‌ನಲ್ಲಿ ಕನ್‌ಸ್ಟ್ರಕ್ಷನ್ ವರ್ಕ್‌ಗಾಗಿ ಕೂಡ ಸ್ವಲ್ಪ ಹಣ ಕೇಳುತ್ತಿದ್ದೇವೆ ಮತ್ತು ಮೆಶಿನರಿಗಾಗಿ ಕೇಳುತ್ತಿದ್ದೇವೆ. ಅದೂ ಅಲ್ಲದೆ ನಿಮ್ಮ ವರ್ಲ್ಡ್ ಬ್ಯಾಂಕಿನ ಒಂದು ಯೋಜನೆಯಲ್ಲಿ ಕೂಡ ಕೆಲವಷ್ಟು ಹಣವನ್ನು ಮೇಶಿನರಿಗಾಗಿ ಕೊಡಲು ಸಿದ್ದವಾಗಿದ್ದೇವೆ ಆದರೆ ಅಲ್ಲಿಗೆ ಯಾವ ಮೆಶಿನರಿಸ್ ಬೇಕೆಂಬ ಒಂದು ಇಂಡೆಂಟನ್ನು ಅಲ್ಲಿನ ಪ್ರಿನ್ಸಿಪಾಲರು ಕಳಿಸಿಕೊಟ್ಟಿಲ್ಲ ಮತ್ತು ವಸ್ತುಸಾಮಗ್ರಿಗಳು ಏನಿವೆ ಎಂದು ಕಳಿಸಿಕೊಟ್ಟಿಲ್ಲ ಅದರ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ. ಮತ್ತೊಂದು ವಿಚಾರ ಹೇಳಿದರು ಸೆಲೆಕ್ಷನ್ ಕಮಿಟಿ ಐ.ಟಿ.ಐ ಏನು ಮಾಡುತ್ತೇವೆ ಅದರ ಚೇರ್ಮನ್‌ನಾಗಿ ಶಾಸಕರನ್ನು ನೇಮಿಸಬೇಕೆಂದು ಪ್ರಸ್ತಾಪಿಸಿದರು ಆದರೇ ಐ.ಟಿ.ಐ. ಮ್ಯಾನುಯಲ್‌ನಲ್ಲಿ ಯಾರು ಕಮಿಟಿಯ ಚೇರ್ಮನ್‌ನಾಗಬೇಕೆಂದು

ಸ್ಪೆಸಿಫಿಕ್ಕಾಗಿ ಮೆನ್‌ಷನ್ ಮಾಡಿರುವುದರಿಂದ ನಾನ್ ಅಫಿಶಿಯಲ್ ಮೆಂಬರ್ ಎಂದರೆ ಕೇವಲ ಎಂ.ಎಲ್.ಎ ಎಂ.ಪಿಗಳೇ ಆಗಬೇಕಂದಿಲ್ಲ ನಾನ್ ಅಫಿಷಿಯಲ್ ಮೆಂಬರ್ಸ್ ಎನ್ನುವಾಗ ವಿಶೇಷವಾಗಿ ಶಾಸಕರ ಪ್ರಸ್ತಾವವಾಗುವುದು ಏಕೆಂದರೆ ಅವರಿಗೆ ಹೆಚ್ಚು ಜ್ಞಾನ ಇರುತ್ತದೆ ಜನಸಂಪರ್ಕ ಇರುತ್ತದೆ ಆದರೆ ಸಮಿತಿಯ ಚೇರ್ಮನ್‌ರಾಗಿ ಶಾಸಕರನ್ನು ನೇಮಕ ಮಾಡಬೇಕೆಂಬ ತಮ್ಮ ಸಲಹೆಯನ್ನು ನಮ್ಮ ರಾಷ್ಟ್ರದಲ್ಲಿ ನಡೆಯುವ ಲೇಬರ್ ಕಾನ್‌ಫರೇನ್ಸ್‌ನಲ್ಲಿ ಪ್ರಸ್ತಾಪಿಸಿ ಅವರಿಂದ ಏನು ಉತ್ತರ ಬರುತ್ತದೆ ಅದನ್ನು ಆಮೇಲೆ ತಿಳಿಸುತ್ತೇನೆ. ಇದರ ಜತೆಗೆ ಮಾನ್ಯ ಸಿಂಧ್ಯಾರವರು ತಮ್ಮದ್ದೇ ಆದ ಧಾಟಿಯಲ್ಲಿ ಬಹಳ ಚೊಕ್ಕವಾಗಿ ತಿಳಿಸಿದ್ದಾರೆ. ಅವರು ಮಾತಾಡುವಾಗ ನಮ್ಮ ಸರ್ಕಾರ ಬಂದ ಮೇಲೆ ಕಾರ್ಮಿಕರ ಹಿತರಕ್ಷಣೆ ವಿರುದ್ಧವಾಗಿ ನಮ್ಮ ಇಲಾಖೆ ಕೆಲಸ ಮಾಡುತ್ತಿದೆ ಎಂದು ಕಠೋರವಾದ ಆರೋಪ ಮಾಡಿದರು ಆದರೆ ನನ್ನ ಹತ್ತಿರ 90-91 ಸ್ಟ್ಯಾಟಿಸ್ಟಿಕ್ಸ್ ಇದ್ದು ಅವರಿಗಾಗಿ ಇದನ್ನು ಓದುತ್ತೇನೆ. 90ರಲ್ಲಿ ಲಾಕೌಟ್ ಅದದ್ದು 19, ಆದರೆ ಈ ವರ್ಷ ಕೇವಲ 5 ಅದೇರೀತಿ ಹೋದವರ್ಷ ಲಾಕೌಟ್ ಆದದ್ದು 6 ಈ ವರ್ಷ 1 ಆಗಿದೆ ಅದೇ ರೀತಿ ಇಂಡಸ್ಟ್ರೀಯಲ್ ಡಿಸ್‌ಪ್ಯೂಟ್ ಬಗ್ಗೆ ನೋಡಿದರೆ ಹಿಂದಿನ ಮೂರು ವರ್ಷಗಳ ಅಂಕಿಅಂಶ ನೋಡಿದರೆ ಈ ವರ್ಷ ಸರಾಸರಿ ಡಿಕ್ಲೈನಾಗಿದ್ದು ರಾಜ್ಯದಲ್ಲಿ ಇಂಡಸ್ಟ್ರಿಯಲ್ ಪೀಸ್ ಇತ್ತೆಂದು ತಿಳಿಸಲು ಸಂತೋಷಪಡುತ್ತೇನೆ. ಇದು ನಿಜವಾದ ಸ್ಥಿತಿ.ಇದು ನಿಜವಾದಂಥ ಅಂಶ ಸ್ಥಿತಿ ಆ ರೀತಿ ಇದೆ. ಅದಕ್ಕೋಸ್ಕರ ಇದು ಕೇವಲ ಸರ್ಕಾರದ ಒಂದು ಪ್ರಯತ್ನದಿಂದಾಗಿದೆ ಎನ್ನತಕ್ಕಂಥ ಒಂದು ಶ್ರೇಯಸ್ಸನ್ನು ಪಡೆದುಕೊಳ್ಳುವುದಕ್ಕೆ ನಾವು ಹೋಗುವುದಿಲ್ಲ. ಇವತ್ತು ಅಲ್ಲಿ ಜನರು ಕೂಡಾ ಸಹಕಾರವನ್ನು ಮಾಡಿದ್ದಾರೆ ಕಾರ್ಮಿಕರು ಸಹಕಾರವನ್ನು ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಅವರಿಗೂ ಕೂಡಾ ಅಭಿನಂದನೆಗಳನ್ನು ಸಲ್ಲಿಸಬೇಕಾಗುತ್ತದೆ. ಕಾರಣ ಕಾರ್ಮಿಕರ ಮತ್ತು ಮಾಲೀಕರ ಒಂದು ಸಂಬಂಧ ಏನಿದೆಯೋ ಆ ಸಂಬಂಧ ಯಾವ ರೀತಿಯಾಗಿ ಇರಬೇಕು ಎನ್ನುವಂಥ ಹಿನ್ನೆಲೆ ಮತ್ತು ಚಿಂತನೆಯನ್ನು ಮಾಡುತ್ತಿದ್ದಾರೆ ಇದರಿಂದ ನಾವು ಹೆಮ್ಮೆಪಡುತ್ತಿದ್ದೇವೆ. ಆದರೆ ಸರ್ಕಾರ ಇದರ ಬಗ್ಗೆ ಬೇಜವಾಬ್ದಾರಿಯ ವರ್ತನೆಯನ್ನು ಮಾಡಿದೆ ಎನ್ನುವಂಥ ಆಪಾದನೆಯನ್ನು ಏನು ಮಾಡಿದ್ದಾರೆ ಅದನ್ನು ನಾನು ಖಂಡಿತವಾಗಿಯೂ ಅಲ್ಲಗಳೆಯುತ್ತೇನೆ. ಈಗಾಗಲೇ ಎಷ್ಟೋ ಇಂಡಸ್ಟ್ರೀಸ್‌ಗಳು ಮುಚ್ಚಿಹೋಗಿವೆ. ನೀವು ಅವುಗಳನ್ನು ಪುನಃ ಪ್ರಾರಂಭ ಮಾಡುವುದಕ್ಕೆ ಏನು ಕ್ರಮವನ್ನು ಕೈಗೊಂಡಿದ್ದೀರಿ ಎಂದು ತಾವು ಕೇಳಿದ್ದೀರಿ ಇವತ್ತು ಹಲವಾರು ಇಂಡಿಸ್ಟ್ರಿಗಳು ಆ ರೀತಿಯಲ್ಲಿ ಮುಚ್ಚಿಹೋಗಿವೆ ಅದರ ಪಟ್ಟಿಯನ್ನು ಬೇಕಾದರೆ ನಾನು ತಮಗೆ ಕಳುಹಿಸಿಕೊಡುತ್ತೇನೆ. ಮುಖ್ಯವಾಗಿ ಇಂಡಸ್ಟ್ರಿಗಳು ಮುಚ್ಚಿಹೋಗುವುದಕ್ಕೆ ಕಾರ್ಮಿಕರ ಮತ್ತು ಮಾಲೀಕರ ಒಂದು ಭಿನ್ನಾಭಿಪ್ರಾಯವೇ ಕಾರಣ ಎಂದು ನಾನು ಹೇಳುತ್ತಿಲ್ಲ. ಬಹು ಮುಖ್ಯವಾಗಿ ರಾ-ಮೆಟೀರಿಯಲ್ಸ್‌ನ ಕೊರತೆ ಅಥವಾ ಫೈನಾನ್ಸ್‌ನ ಕೊರತೆ ಅಥವಾ ಮಾರ್ಕೆಟಿಂಗ್ ತೊಂದರೆ ಇರಬಹುದು. ಇವತ್ತು ತಾವು ಐಡಿಯಲ್ ಜಾವಾ ಸಂಸ್ಥೆಯ ಬಗ್ಗೆ ಕೇಳಿದ್ದೀರಿ. ಹಲವಾರು ಕಾರಣಗಳಿಂದಾಗಿ ಇಂಡಸ್ಟ್ರೀಗಳು ಮುಚ್ಚಿಹೋಗಿರುವಂಥ ಇವುಗಳನ್ನು ತೆರೆಯುವ ಬಗ್ಗೆ ಕೂಡಾ ಸರ್ಕಾರ ಪ್ರಯತ್ನವನ್ನು ಮಾಡುತ್ತಿದೆ. ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಸವಿಸ್ತಾರವಾಗಿ ನಾನು ಚರ್ಚೆ ಮಾಡಿದ್ದೇನೆ. ಐಡಿಯಲ್ ಜಾವಾ ಬಗ್ಗೆಯೂ ಚರ್ಚೆಯನ್ನು ಮಾಡಿದ್ದೇನೆ. ಮಫತ್‌ಲಾಲ್ ಬಗ್ಗೆಯೂ ಚರ್ಚೆಯನ್ನು ಮಾಡಿದ್ದೇವೆ. ಅದೇ ರೀತಿಯಾಗಿ ಸಣ್ಣಸಣ್ಣ ಘಟನೆಯಾದಾಗ ಕೂಡ ಚರ್ಚೆ ಮಾಡಿದ್ದೇನೆ. ವೆಸ್ಟ್ ಪೇಪರ್ ಮಿಲ್ಸ್ ಕೂಡಾ ಬಂದು ಆಗಿತ್ತು ಆ ಸಂದರ್ಭದಲ್ಲಿ ಛೇಂಬರ್‌ನಲ್ಲಿಯೇ

ಮೀಟಿಂಗನ್ನು ಮಾಡಿದ್ದೇನೆ. ನನ್ನ ಛೇಂಬರ್‌ನಲ್ಲಿ ಮೀಟಿಂಗನ್ನು ಮಾಡಿ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ದಾವಣಗೆರೆಗೆ ಕಳಿಸಿಕೊಟ್ಟು ಆ ಕಾರ್ಖಾನೆಯನ್ನು ಪುನಃ ಪ್ರಾರಂಭ ಮಾಡಿದ್ದೇವೆ. ಇವತ್ತು ಐಡಿಯಲ್ ಜಾವಾ ದವರು ಇವತ್ತಿನ ದಿವಸ 12 ಕೋಟಿ ರೂಪಾಯಿಗಳನ್ನು ಬಾಕಿ ಕೊಡಬೇಕಾಗಿದೆ. ಅವರು ಈಗಾಗಲೆ ಬಿ.ಐ.ಎಫ್. ಆರ್.ಗೆ ಹೋಗಿದ್ದಾರೆ. ನಾವು ಇವತ್ತು ಅದರ ಬಗ್ಗೆ ಚರ್ಚೆ ಮಾಡುವುದು ಸರಿಯಲ್ಲ ಏಕೆಂದರೆ it is also a quasijudicial body. ನಾವು ಈ ಬಗ್ಗೆ ಚರ್ಚೆಯನ್ನು ಮಾಡಿದರೆ ಅದುಸಬ್ ಜುಡೀಸ್ ಆಗುತ್ತದೆ. ಈ ರೀತಿ ಹಲವಾರು ಕೇಸಸ್‌ಗಳು ಇದೆ. ಆದರೆ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಯಾವ ರೀತಿಯಾದಂಥ ನೆರವನ್ನು ಸರ್ಕಾರ ಕೊಡಬಹುದು ಎನ್ನುವುದನ್ನು ನನಗೆ.........

ಶ್ರೀ ವಾಟಾಳ್ ನಾಗರಾಜ್ : ಕಾರ್ಮಿಕರು ಬೀದಿಯಲ್ಲಿ ಭಿಕ್ಷೆಯನ್ನು ಎತ್ತುತ್ತಿದ್ದಾರೆ ಅದರ ಬಗ್ಗೆ ಚರ್ಚೆ ಮಾಡಿದರೆ ಅದು ಹೇಗೆ ಸಬ್ ಜುಡೀಸ್ ಆಗುತ್ತದೆ ಎಂದು ನನಗಂತೂ ಅರ್ಥವಾಗುವುದಿಲ್ಲ.

ಶ್ರೀ ಎ.ಎಸ್. ನಾಡಗೌಡ : ಇವತ್ತು ನಾನು ಹೇಳುತ್ತೇನೆ. ಕುಳಿತುಕೊಳ್ಳಿ We can discuss about the financial crisis, but not into the merits of that.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಈಗ ಬಿ.ಐ.ಎಫ್.ಆರ್. ಮುಂದೆ ಹೋಗಿರತಕ್ಕಂಥ ಎಲ್ಲಾ ಡಿಸ್‌ಪ್ಯೂಟ್ ಸಬ್ ಜುಡೀಸ್ ಆಗುತ್ತದೆ ಎಂದು ಯಾರಾದರೂ ಅಡ್ವೈಸ್ ನೀಡಿದ್ದರೆ ಅವರು ಕಾನೂನನ್ನು ಸರಿಯಾಗಿ ತಿಳಿದುಕೊಂಡಿಲ್ಲ ಎಂದು ಹೇಳಬೇಕಾಗಿದೆ. ಸ್ವಲ್ಪ ಕಾನೂನು ಪುಸ್ತಕವನ್ನು ತೆಗೆದು ಅವರಿಗೆ ಓದುವುದಕ್ಕೆ ಹೇಳಿ. ಇದನ್ನು ನೀವು ಹೇಳುವುದಕ್ಕೆ ಸಾಧ್ಯವಿಲ್ಲ ನೀವು ಅವರು ಹೇಳಿದ್ದನ್ನು ಹೇಳುತ್ತಿದ್ದೀರಿ.

ಶ್ರೀ ಎ.ಎಸ್. ನಾಡಗೌಡ : ನಾವು ಇಲ್ಲಿ ಮೆರಿಟ್ಸ್ ಬಗ್ಗೆ ಮಾತನಾಡತಕ್ಕಂಥದ್ದಲ್ಲ. ಕೇವಲ ಫೈನಾನ್ಶಿಯಲ್ ಕನ್‌ಸ್ಟ್ರೈಂಟ್ ಇದೆ ಅದರ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಬೇರೆ ಆಸ್‌ಪೆಕಟ್ಸನ್ನು ಟಚ್ ಮಾಡಿ ಅದನ್ನು ಮಾತನಾಡುವುದಕ್ಕೆ ಹೋಗುತ್ತಿಲ್ಲ. ಏಕೆಂದರೆ ನಮ್ಮ ಹತ್ತಿರವೂ ಕನ್‌ಸಿಲಿಯೇಷನ್ ವಿಫಲವಾದ ಸರ್ಕಾರ ಹಣಕಾಸಿನ ನೆರವನ್ನು ಅವರಿಗೆ ಯಾವ ರೀತಿ ಮಾಡಬಹುದು ಎಂಬುದರ ಬಗ್ಗೆ ಯೋಚನೆ ಮಾಡಬೇಕಾಗಿದೆ.ಉದಾಹರಣೆಗೆ ಹೇಳುವುದಾದರೆ ಇವತ್ತು 12 ಕೋಟಿ ರೂಪಾಯಿಗಳನ್ನು ಕರ್ನಾಟಕ ರಾಜ್ಯ ಸರ್ಕಾರ ಐಡಿಯಲ್ ಜಾವಾಗೆ ಕೊಡಬಹುದೇ ಹೇಗೆ ಎಂಬುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಅದೇ ರೀತಿ ಮಫತ್‌ಲಾಲ್ ಪ್ರೈವುಡ್ಸ ಎಂದು ಇದ್ದಾರೆ ಆದರೆ ಅವರು ಏನು ಹೇಳುತ್ತಾರೆ. ಅವರ ಸರ್ಕಾರದಿಂದ ದುಡ್ಡು ನಮಗೆ ಈ ರೀತಿಯಾಗಿ ಕೆಲವು ಸವಲತ್ತುಗಳನ್ನು ಕೊಡಿ ಎಂದು ಹೇಳಿಬರಲಿಲ್ಲ. ನಮ್ಮ ಜಮೀನನ್ನೆಲ್ಲಾ ಕನ್‌ವರ್ಟ್ ಮಾಡುವುದಕ್ಕೆ ನಮಗೆ ಪರವಾನಗಿಯನ್ನು ಕೊಡಿ ಎಂದು ಬಂದರು. ಇವತ್ತು ಆ ಫೈಲ್ ನಮ್ಮ ಹತ್ತಿರ ಇದೆ. ಇವತ್ತು ಹೆಚ್.ಯು.ಡಿ. ಮಂತ್ರಿಗಳು ಅದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ ಎಂದು ಮೇಲಿನ ಮನೆಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ ಈಗಾಗಲೇ ಅವರು ಹೇಳಿದಂತೆ ಮಾರಾಟ ಮಾಡಿದರೆ ಅದರಿಂದ ಕೋಟ್ಯಾಂತರ ರೂಪಾಯಿಗಳ ಸಂಪಾದನೆಯಾಗುತ್ತದೆ. ಮತ್ತೆ ಪುನಃ ಪ್ರಾರಂಭ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಕೂಡಾ ಅವರು ಹೇಳಿದ್ದಾರೆ. ಅದೇ ರೀತಿಯಾಗಿ ಬೇರೆಯವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಐಡಿಯಲ್

ಜಾಸ್ತಿಯಾದವರು ಅವರಿಗೆ ನೂರಾರು ಎಕರೆ ಜಮೀನು ಇದ್ದರೂ ಕೂಡಾ ಜಮೀನಿನ ಬಗ್ಗೆಯಾಗಲೀ ಅಥವಾ ಕೆಲವೊಂದು ಸೆಕ್ಷನ್ಸ್‌ಗಳನ್ನು ಆಫ್ ಮಾಡುವುದರ ಬಗ್ಗೆ ಯಾಗಲೀ ಕ್ರಮ ಕೈಗೊಂಡಿಲ್ಲ ವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.ನಮ್ಮ ರಕ್ಷಣೆಗೆ ಸರ್ಕಾರ

3-40 ಪಿಎಂ.

ಎಷ್ಟರಮಟ್ಟಿಗೆ ಬರಬಹುದು ಎಂಬುದನ್ನು ಸೀಮಿತವಾಗಿ ನಾವು ವಿಚಾರ ಮಾಡಬೇಕು ನನ್ನ ಇಲಾಖೆ ಯಾವ ಮಟ್ಟದಲ್ಲಿ ಸ್ಪಂದಿಸಬಹುದು ಎಂಬುದರ ಬಗ್ಗೆ ಸಲಹೆಯನ್ನು ಕೊಟ್ಟರೆ ಒಳ್ಳೆಯದೆಂದು ಹೇಳುತ್ತೇನೆ. ನಮ್ಮ ಅಧಿಕಾರಿಗಳ ಮೇಲೆ ಒಂದು 194 ಅಪಾದನೆಯನ್ನು ಮಾಡಿದ್ದೀರಿ. ಮೀಟಿಂಗ್ ಕರೆದ ಸಂದರ್ಭದಲ್ಲಿ ಆ ಸಿಟಿಂಗ್‌ಗಳನ್ನು ಕಂಡಕ್ಟ್ ಮಾಡುವಾಗ ನಮ್ಮ ಅಧಿಕಾರಿಗಳು ಯಾರು ಹೋಗುವುದಿಲ್ಲವೆಂದು ಹೇಳಿದ್ದೀರಿ. ನಾನು ನಿನ್ನೆ ನಮ್ಮ ಅಧಿಕಾರಿಗಳನ್ನು ಕರೆಸಿ ವಿಚಾರ ಮಾಡಿದಾಗ ನಮಗೆ ಯಾವ ನೋಟೀಸ್ ಅವರು ಸರ್ವ್ ಮಾಡಿಲ್ಲ ಎಂದು ಹೇಳಿದರು ಇಂಟಿಮೇಷನ್ ಕೂಡ ಕೊಟ್ಟಿಲ್ಲ ಎಂದು ಹೇಳಿದರು.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿಮ್ಮ ಲೇಬಲ್ ಕಮೀಷನರ್ ಹೊಸದಾಗಿ ಬಂದಿದ್ದಾರೆ. ಶ್ರೀ ದಿಲೀಪ್‌ರಾವ್‌ರವರು ಟ್ರಾನ್ಸ್‌ಫರ್ ಆದಮೇಲೆ ಈಗ ಹೊಸದಾಗಿ ಮತ್ತೊಬ್ಬರು ಬಂದಿದ್ದಾರೆ. ಅವರಿನ್ನು ಕಾನೂನು ಪುಸ್ತಕವನ್ನು ಸರಿಯಾಗಿ ತಿಳಿದುಕೊಂಡ ಹಾಗೆ ಕಾಣಲಿಲ್ಲ. ನಾವು ಕಾರ್ಮಿಕರ ಜೊತೆಯಲ್ಲಿ ಇದ್ದವರು. ಅವರ ಸಂಘಸಂಸ್ಥೆಗಳನ್ನು ತಿಳಿದುಕೊಂಡವರು, ನೀವು ಇನ್ನೂ ಹೊಸದಾಗಿ ಮಂತ್ರಿಗಳಾಗಿದ್ದೀರಿ ಬೇಕಾದಷ್ಟು ಅಂಕಿಅಂಶಗಳನ್ನು ತಿಳಿದುಕೊಳ್ಳಬೇಕು. ಚೆನ್ನಾಗಿ ಕೆಲಸ ಮಾಡಬೇಕೆಂದು ಉತ್ಸಾಹ ಇದೆ. ಅವರು ಹೇಳೋದನ್ನೆಲ್ಲಾ ಕೇಳೋದಕ್ಕೆ ಹೋಗಬೇಡಿ ಪ್ರಿವಿಲೇಜ್ ಆಗುತ್ತದೆ. I know pretty well, ಡೆಲ್ಲಿಗೆ ಹೋದಾಗ ಹೋಗಿನೋಡಿ ಮಹಾರಾಷ್ಟ್ರದವರು ಹಾಗೂ ಬೇರೆ ರಾಜ್ಯದವರು. ಬಿ.ಐ.ಎಫ್.ಆರ್. ಮೀಟಿಂಗ್ ಯಾವರೀತಿ ಅಟೆಂಡ್ ಮಾಡುತ್ತಾರೆಂಬುದು ಗೊತ್ತಾಗುತ್ತದೆ. ಅದೇ ನಮ್ಮ ಅಧಿಕಾರಿಗಳು ಯಾವರೀತಿ ಅಟೆಂಡ್ ಮಾಡುತ್ತಾರೆ ಎಂಬುದನ್ನು ನೋಡಿ.

ಶ್ರೀ ವಾಟಾಳ್ ನಾಗರಾಜ್ : ದೆಹಲಿಯಲ್ಲಿ ನಮ್ಮ ಕರ್ನಾಟಕದ ಕಾರ್ಮಿಕರ ಪರವಾಗಿ ಹೇಳುವವರು ಇಲ್ಲ ಕೇಳುವವರು ಇಲ್ಲ.

ಶ್ರೀ ಎ.ಎಸ್. ನಾಡಗೌಡ : ತಾವು ಹೇಳಿಮೇಲೆ ಕೂಡ ನಾನು ಕ್ಲಿಯರಾಗಿ ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದೇನೆ. ನೋಟೀಸ್ ಸರ್ವ್ ಆಗಿಲ್ಲ ಎಂದು ಸುಮ್ಮನೆ ಕುಳಿತುಕೊಳ್ಳಬೇಡಿ ಇಮಿಡಿಯೆಟ್ ಆಗಿ ಅವರ ಜೊತೆಗೆ ಕರಸ್ಪಾಂಡ್ ಮಾಡಿ ಏತಕ್ಕೆ ನೋಟೀಸ್ ಸರ್ವ್ ಆಗಿಲ್ಲ ಎಂದು ತಿಳಿದುಕೊಳ್ಳಬೇಕು. This has been already told to them. we have given instructions to them also. ಇನ್ನು ಒಂದು ಲೇಬರ್ ಆಫೀಸನ್ನು ದೆಹಲಿ ಮಟ್ಟದಲ್ಲಿ ಪ್ರಾರಂಭ ಮಾಡಬೇಕೆಂದು ಹೇಳಿದ್ದೀರಿ. ದೆಹಲಿಯ ಮಟ್ಟದಲ್ಲಿ ಬೇರೆ ರಾಜ್ಯದವರು ಒಂದು ಆಫೀಸನ್ನು ಮಾಡಿದ್ದಾರೆ. ನಮ್ಮ ಸರ್ಕಾರದವರು ಏತಕ್ಕೆ ಮಾಡಿಲ್ಲವೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಇದರ ಬಗ್ಗೆ ಕೂಡ ನಾವು ಪರಿಶೀಲನೆ ಮಾಡುತ್ತಿದ್ದೇವೆಂದು ಹೇಳಬಯಸುತ್ತೇನೆ. ಮ್ಯಾನೇಜ್‌ಮೆಂಟ್‌ನವರು ಕೂಡ ನಾವು ಕರೆದಂತಹ ಕನ್‌ಸಿಲಿಯೇಷನ್ ಮೀಟಿಂಗಿಗೆ ಸರಿಯಾಗಿ ಪಾರ್ಟಿಸಿಪೇಟ್ ಮಾಡುತ್ತಿಲ್ಲ, ಅದಕ್ಕಾಗಿ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ತಾವು ಕೇಳಿದ್ದೀರಿ. ಇಂತಹ ಹಲವಾರು ಘಟನೆಗಳನ್ನು ಕೂಡ ನನ್ನ ಗಮನಕ್ಕೆ ಬಂದಿದೆ. ನಾನು ಕೂಡ ಸಂತ ಕರೆಸಿದ ಸಂದರ್ಭದಲ್ಲಿ ಎಷ್ಟೋ ಮ್ಯಾನೇಜ್‌ಮೆಂಟ್‌ನವರು.

ನನ್ನ ಹತ್ತಿರ ಬಂದಿಲ್ಲ. ಶ್ರೀ ಪಿ.ಜಿ.ಆರ್. ಸಿಂಧ್ಯ : ಕರೆಂಟ್ ಕಟ್ ಮಾಡಿ ಬರುತ್ತಾರೆ

ಶ್ರೀ ಎ.ಎಸ್. ನಾಡಗೌಡ : ತಾವು ಹೇಳಿದಂತಹ ಸಲಹೆ ವಿಚಾರ ಮಾಡಿದಾಗ We will bring amendments to various Acts ಮುನಿಸಿಪಾಲಿಟಿ ಆಕ್ಟ್ ಆಗಲಿ ಕೆ.ಇ.ಬಿ. ಆಕ್ಟ್‌ನಲ್ಲಾಗಲಿ ನಾವು ತಿದ್ದುಪಡಿ ತರಬೇಕಾಗುತ್ತದೆ.

ಪಿ.ಜಿ.ಆರ್. ಸಿಂಧ್ಯ : ಯಾವ ತರಹ ಮಾಡಬೇಕೆಂದು ಹೇಳುತ್ತೇನೆ. ಆಂಗ್ಲೋಫ್ರೆಂಚ್ ಡ್ರಗ್ ಕಂಪನಿ ರಾಜಾಜಿನಗರದಲ್ಲಿ ಇದೆ. 10 ವರ್ಷಗಳ ಹಿಂದೆ ಬಂದು ಅಧಿಕಾರದಲ್ಲಿರುವವರಿಗೆ ನಾವು ಎಕ್ಸ್‌ಪ್ಯಾನಶನ್ ಮಾಡುತ್ತೇವೆ. ನಮಗೆ 8 ಎಕರೆ ಭೂಮಿಯನ್ನು ಕೊಡಿ ಎಂದು ಕೇಳಿ ತೆಗೆದುಕೊಂಡಿದ್ದರು. ಅದಕ್ಕೆ ಈಗ 10-12 ಕೋಟಿ ರೂಪಾಯಿ ಆಗುತ್ತದೆ. ಈಗ 10 ವರ್ಷವಾದರೂ ಕೂಡ ಏನು ಎಕ್ಸ್‌ಪ್ಯಾನ್‌ಶನ್ ಮಾಡಿಲ್ಲ. ನಮ್ಮ ಕಾಲದಲ್ಲಿ ನಾವು ವಿತ್‌ಡ್ರಾ ಮಾಡಬೇಕೆಂದು ಹೇಳಿದಾಗ ಕೋರ್ಟಿನಿಂದ ನೋಟೀಸ್ ಬಂತು. ಕೋರ್ಟಿನಿಂದ ಅವರು ಸ್ಟೇ ತೆಗೆದುಕೊಂಡು ಬಂದರು. ಈಗ ಕೋರ್ಟ್ ವ್ಯವಹಾರ ಮುಗಿದಿದೆ. ಆ ಜಮೀನನ್ನು ವಾಪಸ್ಸು ತೆಗೆದುಕೊಂಡರೆ ಆಟೋಮೀಟೀಕ್ ಆಗಿ ಅವರು ನಿಮ್ಮ ಹತ್ತಿರ ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಮೇಹತಾ ಕಂಪನಿ ಎಂಬುದು ತಾವು ಕೇಳಿರಬಹುದು. ವರ್ಷಕ್ಕೊಂದು ಬೋರ್ಡನ್ನು ಬದಲಾವಣೆ ಮಾಡುವುದು. ಸರ್ಕಾರದ ಹಣವನ್ನು ಲೂಟಿ ಮಾಡುವ ಕೆಲಸವನ್ನು ಇವರು ಮಾಡುತ್ತಿದ್ದಾರೆ. ಒಬ್ಬ ಮನುಷ್ಯನೇ ಯಾವಾಗಲೂ ಎಲ್ಲಾ ಕಂಪನಿಗಳಿಗೂ ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುತ್ತಾರೆ.

ಶ್ರೀ ಎ.ಕೆ. ಅನಂತಕೃಷ್ಣ : ಯಾವ ಮೆಹತಾ?

ಶ್ರೀ ವಾಟಾಳ್ ನಾಗರಾಜ್ : ಎ.ಪಿ. ಮೆಹತಾ

SRI A.S. NADAGOWDA: We are not denying the fact ತಾನು ನಿಜವಾಗಿಯೂ ವಾಸ್ತವಾಂಶ ಹೇಳುತ್ತಿದ್ದೀರಿ. ಬಹಳಷ್ಟು ಜನರು ಇದ್ದಾರೆ. ಇಲ್ಲ ಎಂದು ಹೇಳುವುದಿಲ್ಲ. ಕರ್ನಾಟಕ ಸರ್ಕಾರ ಸಬ್ಸಿಡಿ ಕೊಡುತ್ತದೆಂದು ಕರ್ನಾಟಕಕ್ಕೆ ಬರುವುದು ಇಲ್ಲ, ಇಲ್ಲಿ ಸಸ್ತಲ್ಯಾಂಡ್ ಸಿಗುತ್ತದೆಂದು ಲ್ಯಾಂಡ್ ತೆಗೆದುಕೊಳ್ಳುವುದು ಲೋನ್ ತೆಗೆದುಕೊಳ್ಳುವುದು ಇಲ್ಲಿ ಲೇಬರ್ ಚೀಫ್ ಎಂದು ಬರುವುದು ನಂತರ ಲಾಭವನ್ನು ತೆಗೆದುಕೊಂಡು ಮೇಲೆ ಬೇರೆಯವರಿಗೆ ಕೊಟ್ಟು ಹೋಗುವುದು ಈ ರೀತಿ ಮಾಡುತ್ತಿದ್ದಾರೆ. For that a comprehensive amendment has to be brought.

ಎಲ್ಲಾ ಡಿಪಾರ್ಟ್‌ಮೆಂಟ್‌ನಲ್ಲಿ ಕೂಡ ಇದರ ತಿದ್ದುಪಡಿ ಮಾಡಬೇಕಾಗುತ್ತದೆ. ಇದಕ್ಕೆ ಸರ್ಕಾರದ ಎಲ್ಲಾ ಇಲಾಖೆಗಳಿಂದ ಸಹಕಾರ ಬೇಕು. ಜನರ ಸಹಕಾರ ಬೇಕು. ಇದನ್ನು ಈಗ ತಾವು ಲೇಬರ್ ಕೋರ್ಟ್ಸ್ ಬಗ್ಗೆ ಏನು ಪ್ರಸ್ತಾಪ ಮಾಡಿದ್ದೀರಿ ಅದು ಬಹಲ ಮುಖ್ಯವಾದ ವಿಷಯ ಇದರ ಬಗ್ಗೆ ಮಾನ್ಯ ಮುಖ್ಯ ನ್ಯಾಯಾಧೀಶರು ನನ್ನನ್ನು ಕರೆಸಿದ್ದರು. ಅವರ ಕೊಠಡಿಯಲ್ಲೇ ಚರ್ಚೆ ನಡೆಯಿತು. ಸುಧೀರ್ಘವಾಗಿ ಚರ್ಚೆಯಾದ ನಂತರ - ಈಗಿನ ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಈ ವರ್ಷ ಎಷ್ಟು ಕೋರ್ಟ್‌ಗಳನ್ನು ತೆಗೆಯಬೇಕೆನ್ನುವುದರ ಬಗ್ಗೆ ಪ್ರಸ್ತಾಪ ಮಾಡಲಾಯಿತು. ಬೆಂಗಳೂರಿಗೆ ಮತ್ತು ಹುಬ್ಬಳಿಗೆ ಒಂದೊಂದು ಅಡೀಷನಲ್ ಕೋರ್ಟನ್ನು ಈ ವರ್ಷವೇ ತೆರೆಯಬೇಕೆನ್ನುವ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಇಂಡಸ್ಟ್ರೀ ಟ್ರಿಬ್ಯೂನಲ್‌ಗೆ ರೆಫರ್ ಮಾಡಿರುವಂಥ ಹಲವಾರು ಕೇಸ್‌ಗಳನ್ನು ನಾವು ಲೋಕ್ ಅದಾಲತ್‌ಗೆ [illegible]

ಬಗ್ಗೆ ಕಲಾಶ ಅಂದು ಚರ್ಚೆ ನಡೆಸಿದೆವು. But how far parties will agree to that will have to be seen.

ಇವತ್ತು ಹುಬ್ಬಳ್ಳಿ ಕೋರ್ಟ್‌ನಲ್ಲಿ 3000 ಚಿಲ್ಲರ್ ಕೇಸಸ್ ಪೆಂಡಿಂಗ್ ಇದೆ. ಇದನ್ನು ನಾನು ಅಲ್ಲಗಳೆಯುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಪೆಂಡಿಂಗ್ ಕೇಸಸ್ ಒಂದು ಕಡೆ ಈ, ಕಾರ್ಮಿಕ ನ್ಯಾಯಾಲಯಗಳಲ್ಲಿ ಎಷ್ಟು ನ್ಯಾಯಾಧೀಶರು ಖಾಲಿ ಇದ್ದವೆಂದು ನೋಡಬೇಕು. ಹೀಗೆ ಬೆಳೆಯುತ್ತೀದ್ದರ ಎಷ್ಟು ಕಾರ್ಮಿಕರಿಗೆ ನ್ಯಾಯ ದೊರೆಯುತ್ತವೆ? ಇದರ ಬಗ್ಗೆ ಸರ್ಕಾರದ ನೀತಿ ಏನು ಎಂಬುದನ್ನು ಹೇಳಬೇಕು.

ಶ್ರೀ ಎಸ್. ನಾಡಗೌಡ : ನಮ್ಮಲ್ಲಿ ಇರುವಂಥ ಕಾರ್ಮಿಕ ಕೋರ್ಟ್‌ಗಳಲ್ಲಿ ಒಬ್ಬರೇ ಒಬ್ಬರು ನ್ಯಾಧೀಶರು ಕಡಿಮೆ ಇದ್ದಾರೆ. ಪರಿಸ್ಥಿತಿ ಏನಾಗಿದೆ ಎಂದರೆ ಹ್ಯೂಜ್ ಕೇಸಸ್ ಪೆಂಡಿಂಗ್ ಇರುವುದರಿಂದ ಈ ರೀತಿಯಾಗಿದೆ. ಅಷ್ಟೇ ಅಲ್ಲ ಜಿಲ್ಲಾ ಮಟ್ಟದಲ್ಲಿ ಒಂದೊಂದು ನ್ಯಾಯಾಲಯವನ್ನು ಪ್ರಾರಂಭಿಸಬೇಕೆಂದು ಸರ್ಕಾರ ಯೋಚಿಸುತ್ತಿದೆ. ಇದರ ಬಗ್ಗೆ ನಾವು ಮಾತ್ರವಲ್ಲ ನನ್ನ ಪ್ರಿಡಿಸೆಸರ್ ಮಾಡಿದ್ದಾರೆ. ತಮ್ಮ ಸರ್ಕಾರದಲ್ಲಿ ಮಂತ್ರಿಗಳಾಗಿದ್ದ ಶ್ರೀ ಕಾಂತಾರವರು ಕೂಡ ಇದರ ಬಗ್ಗೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದ್ದಾರೆ. ಅಷ್ಟು ಸುಲಭವಾಗಿ ಏಕೆ ಮಾಡುವುದಕ್ಕೆ ಆಗುತ್ತಿಲ್ಲ ಎಂಬುದು ತಮಗೂ ಗೊತ್ತಿದೆ. ವರ್ಷ ವರ್ಷಕ್ಕೆ ಈ ಕೋರ್ಟ್‌ಗಳನ್ನು ಹೆಚ್ಚು ಮಾಡುವಂಥ ಪ್ರಯತ್ನವನ್ನು ನಾವು ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಡಿಕೇರಿ, ಬಳ್ಳಾರಿ ಮತ್ತು ಮಂಗಳೂರಿಗೆ ಕೂಡ ಕೋರ್ಟ್‌ಗಳನ್ನು ಪ್ರಾರಂಭ ಮಾಡಬೇಕು ಎನ್ನುವ ಬೇಡಿಕೆ ಇದೆ. ಇದು ಪರಿಶೀಲನೆಯ ಹಂತದಲ್ಲಿದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ತಾವು ಮಿನಿಮಮ್ ವೇಜಸ್ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಯಾವಾಗ ಸರ್ಕಾರ ಮಿನಿಮಮ್ ವೇಜಸ್ ರಿವೈಸ್ ಮಾಡಿದ್ದು? ಮತ್ತೆ ರಿವೈಸ್ ಏಕೆ ಮಾಡುತ್ತಿಲ್ಲ? ಏಕೆ ವಿಳಂಬವಾಗುತ್ತಿದೆ ಎನ್ನುವುದರ ಹಿನ್ನೆಲೆಯನ್ನು ಈಗಾಗಲೇ ಕೇಳಿದ್ದೀರಿ. ಆಕ್ಟ್‌ನಲ್ಲಿ ಮೂರು ವರ್ಷಕೊಂದು ಬಾರಿ ರಿವೈಸ್ ಮಾಡಬೇಕೆಂದು ಇದ್ದರೂ ಕೂಡ 1984ರಲ್ಲಿ ಮಾಡಿದಂಥ ರಿವಿಜನನ್ನು ಹಲವಾರು ಉದ್ಯಮಗಳಲ್ಲಿ ಆಗಿರಲಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಈಗಾಗಲೇ ಪ್ಲಾಂಟೇಷನ್ ಇಂಡಸ್ಟ್ರೀಯಲ್ಲಿ ಮಾಡಿದ್ದೇವೆ. ಇನ್ನೂ 17 ಇಂಡಸ್ಟ್ರೀಗಳಿಗೆ ಈ ಅಧಿವೇಶನ ಮುಗಿಯುವುದರೊಳಗೆ ಇಶ್ಯೂ ಮಾಡುತ್ತೇವೆ ಇದಲ್ಲದೇ ರಬ್ಬರ್ ಪ್ಲಾಸ್ಟಿಕ್ ಇಂಡಸ್ಟ್ರೀಗಳಿಗೂ ಕೂಡ ಮಾಡುತ್ತಿದ್ದೇವೆ. ಗ್ರಾನೈಟ್ ಬಗ್ಗೆ ಕೇಳಿದ್ದೀರಿ. ಗ್ರಾನೈಟ್ ಬಗ್ಗೆ ಹೊಸದಾಗಿ ಶೆಡ್ಯೂಲ್‌ನಲ್ಲಿ ಸೇರಿಸಿಕೊಂಡು ನೋಟಿಫಿಕೇಶನ್ ಮಾಡಿ ಪ್ರೊಸಿಜರ್ ಕಂಪ್ಲೀಟ್ ಮಾಡುತ್ತಾ ಹೋದರೆ ಏನಾಗುತ್ತದೆ, ನಿಮಗೇ ಗೊತ್ತಿದೆ. ಅದುದರಿಂದ ಶೆಡ್ಯೂಲ್‌ನಲ್ಲಿ ಇರುವಂಥ ಸ್ಟೋನ್ ಬ್ರೇಕಿಂಗ್ ಕಟಿಂಗ್ ಏನಿದೆ ಶೆಡ್ಯೂಲ್ 'ಬಿ' ಮಾಡಿ ಪಾಲೀಶಿಂಗ್‌ನ್ನು ಇನ್‌ಕ್ಲೂಡ್ ಮಾಡಿ ಮಾರ್ಬಲ್ ಅಂಡ್ ಗ್ರಾನೈಟ್ ಪಾಲೀಶಿಂಗ್ ಎಂದು ಮಾಡಿ ವಿಳಂಬವನ್ನು ತಪ್ಪಿಸಬೇಕೆಂದು ವಿಚಾರ ಮಾಡುತ್ತಿದ್ದೇವೆ. ಇನ್ನು ಸಿಲ್ಕ್ ಬಗ್ಗೆ ಇದನ್ನು ಕೂಡ ನಾವು ಸೇರಿರಿಕೊಂಡಿದದೇವೆ. ಇನ್ನು ಅಂಗನವಾಡಿ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಇದು ನಮ್ಮ ರಾಜ್ಯದ ನೀತಿ ಅಲ್ಲ ತಮಗೆ ಗೊತ್ತಿದ್ದ ಹಾಗೆ ಇದು ಕೇಂದ್ರ ಸರ್ಕಾರದ ಒಂದು ಕಾರ್ಯಕ್ರಮ. ಆದರೆ ಇವರಿಗೆ ನಿಜವಾಗಿಯೂ ಅನ್ಯಾಯವಾಗಿದೆ ಇನ್‌ಜಸ್ಟೀಸ್ ಆಗಿದೆ ಎನ್ನುವುದು ತಿಳಿದು ಬಂದರೂ ಕೂಡ our hands are tied. We are handicapped. ಅದಕ್ಕೋಸ್ಕರ ನಮ್ಮ ವತಿಯಿಂದ ನಮ್ಮ ಸರ್ಕಾರದ ವತಿಯಿಂದ ಯಾವ ರೀತಿ ನಾವು ಪ್ರಯತ್ನ ಮಾಡಬೇಕು ಏನು

ಶೀಫಾರಸ್ಸು ಮಾಡಬೇಕು ಯಾವ ರೀತಿ ನಮ್ಮ ಸಹಕಾರವನ್ನು ಕೊಡಬೇಕು ಏನೇನು ಪ್ರಯತ್ನವನ್ನು ಮಾಡಬೇಕು ಅದನ್ನು ಖಂಡಿತಾವಾಗಿಯೂ ನಾವು ಮಾಡುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಕಾನೂನಿನ ಪ್ರಕಾರ ನಡೆದುಕೊಳ್ಳುವುದು ಸಾರ್ವಜನಿಕರಿಗೆ ಮಾತ್ರ ಇದೆಯೋ ಅದು ಸರ್ಕಾರಕ್ಕೂ ಅನ್ವಯಿಸುತ್ತದೆಯೇ? ಉಪಾಧ್ಯಕ್ಷಿಣಿಯವರಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಪೀಠದಲ್ಲಿ ಉಪಸ್ಥಿತರಿದ್ದರು.

ಶ್ರೀ ಎ.ಎಸ್. ನಾಡಗೌಡ : ಸರ್ಕಾರದ ಮೇಲೆ ಜವಾಬ್ದಾರಿ ಇಲ್ಲವೆಂದು ನಾನು ಹೇಳಿಲ್ಲ. ಕಾನೂನು ಮಾಡಿದವರೇ ಕಾನೂನನ್ನು ಮೀರುವಂತಾದ್ದು ನಾನು ಹೇಳಿಲ್ಲ. ಕಾನೂನು ಪ್ರಕಾರ ನಾವು ನಡೆದುಕೊಳ್ಳಬೇಕಾಗುತ್ತದೆ. It was basically thought as a honorarium and given. ಮತ್ತೆ ಅದರ ಬಗ್ಗೆ ವಿಚಾರ ಮಾಡುವಂಥದ್ದು ಇಲ್ಲಿ ವೇಳೆ ಕಡಿಮೆ ಇರುವುದರಿಂದ ಅದರ ಬಗ್ಗೆ ಮೀಟಿಂಗ್ ಬೇಕಾದರೆ ಮಾಡೋಣ. ತಾವು ಹಿರಿಯ ಸದಸ್ಯರಾಗಿದ್ದೀರಿ. ಅದರ ಬಗ್ಗೆ ಎಲ್ಲರೂ ಕುಳಿತುಕೊಂಡು ಡಿಸ್‌ಕಸ್ ಮಾಡೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಂಗನವಾಡಿ ಕಾರ್ಯಕರ್ತೆಯರ ವಿಚಾರ ಸಮಾಜಕಲ್ಯಾಣ ಸಚಿವರಾದ ಶ್ರೀ ಶಿವಣ್ಣನವರಿಗೆ ನೇರವಾಗಿ ಸಂಬಂಧಪಟ್ಟಿರತಕ್ಕ ಇಲಾಖೆ. ನೀವಿಬ್ಬರೂ ಸೇರಿಕೊಂಡು ಒಂದು ದಿವಸ ಅಸೋಸಿಯೇಷನ್ ಅವರನ್ನು ಕರೆಸಿ ಮಾತನಾಡಿ ಒಂದು ಕಡೆ ನಾವು ಹೇಳುತ್ತೇವೆ. ನಮ್ಮ ಸರ್ಕಾರದಿಂದ ಮಿನಿಮಮ್ ವೇಜಸ್ ರೂ 19.50 ಅನ್ನು ನೀವೇ ಫಿಕ್ಸ್ ಮಾಡಿದ್ದೀರೆಂದು ಹೇಳುತ್ತೇವೆ. ಮಾನ್ಯ ಶಿವಣ್ಣನವರೇ ನೀವೇ ಹೇಳಿ ಅವರಿಗೆ ದಿವಸಕ್ಕೆ ಎಷ್ಟು ಬರುತ್ತಿದೆ ಎಂದು ಹತ್ತು ರೂ. ಇಲ್ಲವೇ ಹನ್ನೊಂದು ರೂ. ವನ್ನು ಕೊಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : 270 ರೂ ಅಂಗನವಾಡಿ ಕಾರ್ಯಕರ್ತೆಯರಿಗೆ ಸೇವಕಿಯರಿಗೆ 110 ರೂ ಒಂದು ದಿವಸಕ್ಕೆ ಮಿನಿಮ್ 4 ರೂ. ನಾಚಿಕೆಯಾಗುತ್ತದೆ. ನಾಲ್ಕು ರೂಪಾಯಿಗಳ ಸಂಬಳ ತೆಗೆದುಕೊಳ್ಳುವುದಕ್ಕೆ

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಅದನ್ನು ಜಾಸ್ತಿ ಮಾಡುವುದಕ್ಕಾಗುವುದಿಲ್ಲವೇ?

ಶ್ರೀ ಬಿ. ಶಿವಣ್ಣ : ನಾಚಿಕೆಯಾಗುತ್ತದೆಂದು ಏತಕ್ಕೆ ಹಾಗೆ ಹೇಳುತ್ತಿದ್ದೀರಿ? ಹೇಳಬಾರದು.

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳಿದ್ದು ನಿಮಗಲ್ಲ. ನಿಮ್ಮ ಸರ್ಕಾರಕ್ಕೆ ನಾಚಿಕೆ ಇದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಎ.ಎಸ್. ನಾಡಗೌಡ : ಹೇಳುವುದು ಬಹಳ ಸುಲಭ ನಿಮ್ಮ ಸರ್ಕಾರ ಬಂದಾಗ ಏನು ಮಾಡುತ್ತೀರೋ ನೋಡೋಣ.

ಶ್ರೀ ಬಿ. ಶಿವಣ್ಣ : ನಾಚಿಕೆಯಾಗುತ್ತದೆಂದು ಏತಕ್ಕೆ ಹೇಳುತ್ತಿದ್ದೀರಿ?

ಶ್ರೀ ವಾಟಾಳ್ ನಾಗರಾಜ್ : ನಾನು ನಿಮಗಲ್ಲ ಹೇಳಿದ್ದು, ನಿಮ್ಮ ಸರ್ಕಾರಕ್ಕೆ ಮಾನ ಮರ್ಯಾದೆ ಇದೆಯೇ ಎಂದು ಕೇಳುತ್ತಿದ್ದೇನೆ. ನೀವು ಸಂಬಳವನ್ನು ಭಿಕ್ಷೆ ಕೊಡುತ್ತಿದ್ದೀರಾ?

ಶ್ರೀ ಎಲ್.ಆರ್. ಶಿವರಾಮೇಗೌಡ : 'ನಾಚಿಕೆ' ಅನ್ನುವ ಪದಕ್ಕೆ ನೀವು ಮರ್ಯಾದೆ ತೆಗೆದುಬಿಟ್ಟಿರಿ.

ಶ್ರೀ ವಾಟಾಳ್ ನಾಗರಾಜ್ : ನೀವು ಮರ್ಯಾದೆ ಕೊಡುತ್ತಿದ್ದೀರಾ? ಶಿವರಾಮೇಗೌಡರಿಂದ ನಾನು ಭಾಷೆ ಕಲಿಯಬೇಕಾಗಿದೆ, ಕುಳಿತುಕೊಳ್ಳಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೇ ತಮ್ಮ ಮನಸ್ಸಿಗೆ ನೋವು ಮಾಡಬೇಕೆಂದು ಉದ್ದೇಶವಿಲ್ಲ ವಿಷಯ ಅದಲ್ಲ ಇವೊತ್ತು ಸುಮಾರು ಜನ ಅಂಗನವಾಡಿ ಕಾರ್ಯಕರ್ತೆಯರು ಕಡಿಮೆ ಹಣ ಪಡೆದು ಹಣ ಪಡೆದು ಕೆಲಸ ಮಾಡುವ ಸ್ಥಿತಿಯಲ್ಲಿಲ್ಲ. ಸಂಬಳ ಸ್ವಲ್ಪ ಜಾಸ್ತಿ ಮಾಡಿ ಎಂದು ನೋವಿನಿಂದ ಅವರು ಹೇಳಿದರೇ ಹೊರತು ನಿಮ್ಮ ಮನಸ್ಸಿಗೆ ನೋವು ಮಾಡಬೇಕಂದಲ್ಲ. ಸರ್ಕಾರ ಇದರ ಬಗ್ಗೆ ಗಂಭೀರ ಚಿಂತನೆ ಮಾಡಿ ಸಂಬಳವನ್ನು ಜಾಸ್ತಿ ಮಾಡಿ ಎಂದು ಕೇಳುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಹೆಣ್ಣು ಮಕ್ಕಳ ಕಷ್ಟ ನಿಮಗೇನು ಗೊತ್ತು? ಶ್ರೀ ಟಿ.ಎಮ್. ಮಂಜುನಾಥ್ ಅಂಗನವಾಡಿ ಕಾರ್ಯಕರ್ತೆಯರನ್ನು ಮತ್ತು ಸಹಾಯಕಿಯರನ್ನು ಕೇಂದ್ರಸರ್ಕಾರದ ಆದೇಶದ ಮೇರೆಗೆ ನೇಮಿಸಲ್ಪಟ್ಟಿದ್ದೇವೆ. ಹಳ್ಳಿಗಳಲ್ಲಿರತಕ್ಕ ಸಹಾಯಕಿಯರಿಗೆ ನಾವು ಏನು ಮಾಡುತ್ತಿದ್ದೇವೆಂದರೆ ಪೆನ್‌ಷನ್ ಬರತಕ್ಕಂಥವರನ್ನು....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಮಂತ್ರಿಗಳು ಎದ್ದರು ಕೇಳಿದರು ಕುಳಿತರು ತಿರುಗಿ ಏನು? ಮಾನ್ಯ ಶಿವಣ್ಣನವರೇ ನಾನು ತಮಗೆ ಹೇಳುತ್ತಿದ್ದೇನೆ ನಾಚಿಕೆ ಅಂದದ್ದು ನಿಮಗಲ್ಲ, ನಾವು ನೀವು ಸ್ನೇಹಿತರು ಸ್ವಲ್ಪ ಗಂಭೀರವಾಗಿ ತಿಳಿದುಕೊಳ್ಳಿ. ನೀವು ನಿಂತರಲ್ಲ ಅದಕ್ಕೆ ನನಗೆ ಸ್ವಲ್ಪ ಕೋಪ ಬಂತು. ಹೆಣ್ಣುಮಕ್ಕಳ ಬಗ್ಗೆ ಮಾತನಾಡುವಾಗ ಸ್ವಲ್ಪ ಕರುಣೆಯಾದರೂ ನಿಮಗೆ ಇರಬೇಡವೇ?

ಶ್ರೀ ಕೆ.ಎಸ್. ಈಶ್ವರಪ್ಪ : ಅವರು ತೆಗೆದುಕೊಳ್ಳುತ್ತಿರುವ ಸಂಬಳದಲ್ಲಿ ಇವೊತ್ತಿನ ದಿವಸ ಒಂದು ಹೊತ್ತು ಊಟ ಮಾಡುವುದಕ್ಕಾಗುವುದಿಲ್ಲ.

ಉಪಾಧ್ಯಕ್ಷಣಿಯವರು : ಈಗ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. Let us be serious.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಶಿವಣ್ಣನವರೇ ನಾನು ಏನು ಹೇಳುತ್ತಿದ್ದೇನೆಂದರೆ, ಈಗ ಅವರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನೀವು ಕೇಂದ್ರದವರನ್ನು ತಲೆ ತೋರಿರಬೇಡಿ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರ ಏನಾದರೂ ಪ್ರಾಮಾಣಿಕ ಪ್ರಯತ್ನ ಮಾಡಬೇಡವೇ? ವಿಧಾನಸೌಧದ ಮುಂದೆ ಐವತ್ತು ಸಾವಿರ ಅಂಗನವಾಡಿ ಕಾರ್ಯಕರ್ತೆಯರು ಸತ್ಯಾಗ್ರಹ ಮಾಡಿದ್ದು ನೋಡಲಿಲ್ಲವೇ? ಹೆಣ್ಣು ಮಕ್ಕಳ ಕಣ್ಣೀರು ತಮಗೆ ತಟ್ಟುವುದಿಲ್ಲವೆ? ಅವರ ಶಾಪ ನಿಮಗೆ ತಗಲುವುದಿಲ್ಲವೆ?

ಉಪಾಧ್ಯಾಕ್ಷಣಿಯವರು : ಮಾನ್ಯ ಮಂತ್ರಿಗಳು ಯೀಲ್ಡ್ ಆಗಬಾರದು. ಮೊದಲು ಉತ್ತರ ಮುಗಿಸಲಿ ನಂತರ ತಾವು ಕೇಳಿದರೆ ಹೇಳುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಂಗನವಾಡಿ ಕಾರ್ಯಕರ್ತೆಯು ವೇತನವನ್ನು ಹೆಚ್ಚು ಮಾಡಲಿಕ್ಕೆ ರಾಜ್ಯ ಸರ್ಕಾರದ ಕೈಯಲ್ಲಿ ಆಗುವುದಿಲ್ಲವೆಂದು ಇಬ್ಬರು ಮಂತ್ರಿಗಳು ಹೇಳುತ್ತಿದ್ದಾರೆ. ನಾನು ಸ್ವಲ್ಪ ದಿವಸಗಳ ಕಾಲ ಸಮಾಜಕಲ್ಯಾಣ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಪ್ರಶ್ನೆ ಇರತಕ್ಕಂಥಾದ್ದು ಕೇಂದ್ರ ಸರ್ಕಾರಕ್ಕೆ ಇರುವುದು ಕೆಲವು ಬ್ಲಾಕ್ಸ್ ಮಾತ್ರ ಎಲ್ಲಾ ಬ್ಲಾಕ್ಸ್ ಕೇಂದ್ರ ಸರ್ಕಾರದಲ್ಲಿ ರಾಜ್ಯ ಸರ್ಕಾರದ ಕೆಲವು ಬ್ಲಾಕ್ಸ್ ಇದೆ. ಅಂಗನವಾಡಿಗಳದು ಕೆಲವು ಇವೆ. ನಿಮಗೂ ಗೊತ್ತಿದೆ ಅದನ್ನು ಜಾಸ್ತಿ ಮಾಡುವುದಕ್ಕೆ ಏಕೆ ಪರಿಶೀಲನೆ ಮಾಡಬಾರದು? ಇದು ಒಂದು ಭಾಗ. ಎಲ್ಲದರಕ್ಕಿಂತ

ಹೆಚ್ಚಾಗಿ ಇದರಲ್ಲಿ ದ್ವಂದ ಇದೆ. ನಾವು ಒಂದು ಕಡೆ ಮಿನಿಮಮ್ ವೇಜಸ್ ಹೆಚ್ಚಾಗಬೇಕೆಂದು ಹೇಳುತ್ತೇವೆ. ಇನ್ನೊಂದು ಕಡೆ ಅವರಿಗೆ 8-10 ರೂಪಾಯಿ ಕೊಡುತ್ತೇವೆ. ಅದಕ್ಕೆ ಏನು ಮಾಡಬೇಕೆಂದರೆ ಕಡೆಪಕ್ಷ ಅವರುಗಳಿಗೆ ಇತರೆ ಅನುಕೂಲಗಳ ಜೊತೆಗೆ 500 ಇಲ್ಲವೆ 600 ರೂ ರೆಮ್ಯುನರೇಷನ್ ಕೊಡಬೇಕು. ಅವರುಗಳು ಹಳ್ಳಿಗಳಿಗೆ ಹೋಗಿ ಬರಲು ಬಸ್‌ನ್ನು ಇಂಟ್ರಡ್ಯೂಸ್ ಮಾಡಿ.

ಶ್ರೀ ಬಿ. ಶಿವಣ್ಣ : ಮಾನ್ಯ ಸಿಂಧ್ಯರವರು ಮಂತ್ರಿಗಳಾಗಿದ್ದಾಗ ಅವರಕಾಲದಲ್ಲಿ ಏನು ತೀರ್ಮಾನವನ್ನು ತೆಗೆದುಕೊಳ್ಳಲಿಲ್ಲ. ಈಗ ಏಕೆ?

(ಗೊಂದಲ)

ಉಪಾಧ್ಯಕ್ಷಿಣಿಯರು : ಮಂತ್ರಿಗಳು ಉತ್ತರವನ್ನು ಹೇಳಿದಮೇಲೆ ತಾವೆಲ್ಲರು ಕೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಶಿವಣ್ಣರವರು ಹೇಳಿದರು. ನಿಮ್ಮ ಕಾಲದಲ್ಲಿ ಏಕೆ ಮಾಡಲಿಲ್ಲವೆಂದು ಒಂದು ಕೆಲಸವನ್ನು ಮಾಡೋಣ ಕರ್ನಾಟಕದಾದ್ಯಂತ ಅಂಗನವಾಡಿ ಮಹಿಳಾ ಮಂಡಳಿಯ 40 ಸಾವಿರ ಸಂಘಗಳು ಏನು ಇದೆ ಆ ಸಂಘದವರು ನಿರ್ಣಯವನ್ನು ಮಾಡಿದ್ದಾರೆ ಅದೇನೆಂದರೆ ಸಿಂಧ್ಯಾರವರ ಕಾಲದಲ್ಲಿ ಆಗಿರತಕ್ಕ ಇಂಪ್ಲಿಮೆಂಟ್ ಮಾಡಿರತಕ್ಕದನ್ನು ಈ ಸರ್ಕಾರದವರು ಮಾಡಿದರೆ ನಮಗೆ ಅಷ್ಟೇ ಸಾಕು ಎಂದು ಬರೆದು ಕೊಟ್ಟಿದ್ದಾರೆ. ಅದನ್ನು ನೀವು ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಉಪಾಧ್ಯಕ್ಷಿಣಿಯವರೇ ನಿಮ್ಮ ಸರ್ಕಾರ ಅವರ ಸರ್ಕಾರ ಈ ಇಬ್ಬರ ಸರ್ಕಾರದಲ್ಲಿ ನಾವ್ಯಾಕೆ ಪಾಪದ ಕೂಸಾಗಬೇಕು? ನಾನು ಮತ್ತೆ ಯಡಿಯೂರಪ್ಪ ನವರು ಯಾಕೆ ಆಗೋಣ? ಈ ಸರ್ಕಾರ ಆ ಸರ್ಕಾರದ ಮಧ್ಯ ನಾವು ಸಿಗಲು ತಯಾರಾಗಿಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಅವರುಗಳಿಗೆ ಒಂದು ಹೊತ್ತು ಊಟ ಮಾಡುವ ವ್ಯವಸ್ಥೆಯನ್ನು ಮಾಡಿ.

ಉಪಾಧ್ಯಕ್ಷಿಣಿಯವರು : ಆ ವಿಷಯವನ್ನು ಬಿಟ್ಟು ಮುಂದೆ ಹೋಗಿ.

ಶ್ರೀ ಎ.ಎಸ್. ನಾಡಗೌಡ : ಈಗ ಆ ಬಗ್ಗೆ ಚರ್ಚೆ ಮಾಡಲಿಲ್ಲ. ಸೋಶಿಯಲ್ ವೆಲ್‌ಫೇರ್ ಬೇಡಿಕೆಗೆ ಮೇಲೆ ಬೇಕಾದರೆ ಚರ್ಚೆ ಮಾಡಲಿ, ನನ್ನ ಅಭ್ಯಂತರವಿಲ್ಲ. ಇಷ್ಟು ಹೇಳುತ್ತಾ ಸರ್ಕಾರದ ಆಡಳಿತದಲ್ಲಿ ಸರಿಯಾದಂತಹ ವೈಖರಿ ಇಲ್ಲದಿದ್ದಕ್ಕೋಸ್ಕರ ಅಧಿಕಾರಿಗಳ ಮೇಲೆ ಈ ಕಾರ್ಮಿಕರ ಮೇಲೆ ಸಾಕಷ್ಟು ಶೋಷಣೆಯಾಗುತ್ತವೆಂದು ಶ್ರೀಯುತ ಚೌವಾಣ್ ಹೇಳಿದರು. ನಾನೇ ಖುದ್ದಾಗಿ ಮಂತ್ರಿಯಾದ ಮೇಲೆ ರಾಜಶ್ರೀ ಸಿಮೆಂಟ್ ಫ್ಯಾಕ್ಟರಿಗೆ ಮತ್ತು ವಾಸವದತ್ತ ಸಿಮೆಂಟ್ ಫ್ಯಾಕ್ಟರಿಗೆ ಹೋಗಿದ್ದೆ ಅವರೂ ಸಹ ನನ್ನ ಜೊತೆ ಬಂದಿದ್ದರು. ಆ ಸಂದರ್ಭದಲ್ಲಿ, ಅಲ್ಲಿರತಕ್ಕ ಎಲ್ಲಾ ಕಾರ್ಮಿಕರನ್ನು ಕರೆದು ನಾನೇ ಖುದ್ದಾಗಿ ಅವರನ್ನು ವಿಚಾರಣೆ ಮಾಡಿದಾಗ ಯಾವ ರೀತಿಯಾದಂತಹ ಅನ್ಯಾಯ ಅಥವಾ ದೌರ್ಜನ್ಯವನ್ನು ಮೇನೇಜ್‌ಮೆಂಟ್‌ನಿಂದ ನಡೆಯುತ್ತಿದ್ದಾವೆಂದು ಹೇಳಿ ನಮ್ಮ ಮಾಹಿತಿಗೆ ತರಲಿಲ್ಲ, ನಾನು ಮೊದಲೇ ಪ್ರವಾಸದ ಕಾರ್ಯಕ್ರಮವನ್ನು ಹಾಕಿ ವಾಸವದತ್ತ ಫ್ಯಾಕ್ಟರಿಗೆ ಬೇಟಿ ಕೊಡುತ್ತೇನೆಂದು ಹೇಳಿರಲಿಲ್ಲ, ನಾವು ಅಧಿಕಾರಿಗಳ ಜೊತೆ ಇದ್ದಾಗ ಕೂಡ ಅವರು ಹೇಳದೇ ಇದ್ದಂತಹ ಪರಿಸ್ಥಿತಿಗೆ ಬಂದ ಮೇಲೆ ನಾನು ಬೆಂಗಳೂರಿಗೆ ಕಛೇರಿಗೆ ಬಂದಮೇಲೆ ಅಲ್ಲಿ ಹೆರಾಸ್‌ಮೆಂಟ್ ನಡೆಯುತ್ತದೆ. ಕಾರ್ಮಿಕರ ಮೇಲೆ ಶೋಷಣೆಯಾಗುತ್ತದೆ ಎಂದು ಹಲವಾರು ಜನರು ಬರುತ್ತಾರೆ. ಉಪಾಧ್ಯಕ್ಷಿಣಿಯವರೇ,

ನಾನು ಏನು ಹೇಳುವುದೇನೆಂದರೆ ಯಾರೆ ಅಧಿಕಾರಿಯಾಗಲಿ ನಾವಾಗಲಿ ಯಾವುದಾದರೊಂದು ಪರಿಶೀಲನೆಗೆ ಫ್ಯಾಕ್ಟರಿಗೆ ಹೋದಾಗ ಅಲ್ಲಿರತಕ್ಕ ನಿಜವಾದ ತೊಂದರೆಗಳ ಬಗ್ಗೆ ನಮ್ಮ ಮುಂದೆ ಪ್ರಸ್ತಾಪ ಮಾಡಿದರೆ ನಾವು ಏನಾದರೂ ಮಾಡಲು ಸಾಧ್ಯವಾಗುತ್ತದೆ. ನಾವು ಅಲ್ಲಿಗೆ ಹೋದಾಗ ಟ್ರೇಡ್ ಯೂನಿಯನ್ ಲೀಡರ್ಸ್ ಸಹ ಇದ್ದು ಎಲ್ಲಾವು ಸರಿ ಇದೆ ಎನ್ನತಕ್ಕ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ಆದರೆ ನಾವು ಬೆಂಗಳೂರಿಗೆ ವಾಪಸ್ ಬಂದ ಒಂದು ವಾರದೊಳಗೆ ಒಂದು ಉದ್ದವಾದ ಪಿಟೀಷನ್ ಕೊಟ್ಟು ಈ ರೀತಿ ತೊಂದರೆಯಾಗುತ್ತದೆ ಎಂದು ಹೇಳುತ್ತಾರೆ. ಇದು ಯಾಕಾಗುತ್ತಿದೆಯೋ ನನಗೆ ಅರ್ಥವಾಗುತ್ತಿಲ್ಲ. ನಾವು ಮೀಟಿಂಗ್‌ನ್ನು ಕರೆಯುತ್ತೇವೆ ಮೆನೇಜ್‌ಮೆಂಟನವರು ಮತ್ತು ನೀವು ಕುಳಿತು ಮಾಡೋಣವೆಂದು ಹೇಳಿದರೆ ಕರೆಯಿರಿ ಎಂದು ಹೇಳುತ್ತಾರೆ. ಆಮೇಲೆ ಯಾರು ಕೂಡ ಮೀಟಿಂಗ್‌ಗೆ ಬರುವುದಿಲ್ಲ. ಆದುದರಿಂದ ನಾನು ಕೇಳುತ್ತಿದ್ದೇನೆ. ಅವರ ಸಹಕಾರ ಅತೀ ಮುಖ್ಯ. ಜನರಿಂದ ಯುನಿಯನ್ ಲೀಡರ್‌ನಿಂದ 'ಮಾನ್ಯ ಸದಸ್ಯರಿಂದ ಸಹಕಾರ ಅತಿಮುಖ್ಯ' ಮಾನ್ಯ ಚೌವಾಣ್‌ರವರು ಹೇಳಿದಂತೆ ಅಲ್ಲಿ ಇದ್ದಂತಹ ಹಲವಾರು ರೀತಿಯ ಕುಂದುಕೊರತೆಗಳ ಬಗ್ಗೆ ನಾನೇ ಖುದ್ದಾಗಿ ತನಿಖೆ ಮಾಡಿದ್ದೇನೆ.ಅವರಿಗೆ ಗೊತ್ತಿದೆಯೋ ಅಥವಾ ಇಲ್ಲವೋ, ಈಗಾಗಲೇ ಅದು ಪ್ರೊಸಸ್ ಸ್ಟೇಜ್‌ನಲ್ಲಿದ್ದು ಪ್ರಾಸಿಕ್ಯೂಷನ್ಸ್ ಕೂಡ ಅವರ ಮೇಲೆ ಹಾಕುತ್ತಿದ್ದೇವೆ. ಶ್ರೀಮಾತಿ ಮೋಟಮ್ಮನವರು ಪ್ಲಾಂಟೇಷನ್ ವರ್ಕರ್ಸ್ ಮಕ್ಕಳಿಗೆ ಶಾಲೆ ಅಥವಾ ಶಿಶುಪಾಲನಾ ಕೇಂದ್ರ ಕೊಡುವುದಿಲ್ಲವೆಂದು ಹೇಳಿದರು. ಅದು ಆಕ್ಟ್‌ನಲ್ಲಿ ಬಹಳ ಕ್ಲಿಯರ್ ಆಗಿ ಇದೆ. 20 and above women working ಅಂಥ ಆಕ್ಟ್‌ನಲ್ಲಿ ಇದೆ. ಅಲ್ಲಿ ಅವರಿಗೆ ಶಿಶುಪಾಲನಾ ಕೇಂದ್ರವನ್ನು ಒದಗಿಸಬೇಕೆಂದು ಹೇಳಿದೆ. ಆದರೆ ಎಲ್ಲಿ ಮಾಡಿಲ್ಲವೆಂದು ಸ್ಪೆಸಿಫಿಕ್ಕಾಗಿ ಹೇಳಿದರೆ ನಮ್ಮ ಅಧಿಕಾರಿಗಳಿಗೆ ಇನ್ಸ್‌ಸ್ಟ್ರಕ್ಷನ್ಸ್ ಕೊಟ್ಟು ಅಲ್ಲಿಗೆ ಹೋಗಿ ಇನ್ಸ್‌ಪೆಕ್ಟ್ ಮಾಡಿಕೊಂಡು ಬರುವುದಕ್ಕೆ ಹೇಳುತ್ತೇನೆ. ಪ್ಲಾಂಟೇಷನ್ ವರ್ಕರ್ಸ್ ಮಕ್ಕಳಿಗೆ ಶಾಲೆಗೆ ಹೋಗುವಂತಹ ಅವಕಾಶವನ್ನು ಮಾಡಿಕೊಡಬೇಕು ಎಂದು ಏನು ಕೇಳುತ್ತಿದ್ದಾರೆ.....

ಶ್ರೀ ವಾಟಾಳ್ ನಾಗರಾಜ್ : ಜಾವ ಕಾರ್ಖಾನೆ ಬಗ್ಗೆ ತಾವು ಸ್ಪಷ್ಟವಾದ ನೀತಿಯನ್ನು ಹೇಳಲಿಲ್ಲ.

ಶ್ರೀ ಎ.ಎಸ್ ನಾಡಗೌಡ : ತಾವು ಬೇಕಾದರೆ ಉಪಪ್ರಶ್ನೆ ಕೇಳಿ ನಾನು ಸ್ಪಷ್ಟೀಕರಣ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಕೃಷ್ಣರಾಜೇಂದ್ರ ಮಿಲ್ ಮತ್ತು ಜಾವ ಕಾರ್ಖಾನೆಯದು ಬಹಳ ಪ್ರಮುಖವಾದಂತಹದು. ಮೈಸೂರು ಜಿಲ್ಲೆಯಲ್ಲಿ ಕಾರ್ಖಾನೆಗಳನ್ನು ಮುಚ್ಚಿ ಜನ ಅತ್ಯಂತ ನರಕ ಯಾತನೆ ಅನುಭವಿಸುತ್ತಿದ್ದು ಬೀದಿಗೆ ಬಂದಿದ್ದಾರೆ. ಕೆ.ಆರ್. ಮಿಲ್‌ನ ಅನೇಕ ಜನ ಕಾರ್ಮಿಕರು ರಸ್ತೆಗೆ ಬಂದಿದ್ದಾರೆ. ಜಾವ ಕಾರ್ಖಾನೆ ತೆಗೆಯತಕ್ಕಂತಹದು ಇಲ್ಲ, ಅವರು ಉತ್ತರದಲ್ಲಿ ಕೊನೆಗೆ ಬರುತ್ತಿದ್ದಾರೆ. ಈ ಕರ್ನಾಟಕ ಸರ್ಕಾರ ಕಾರ್ಮಿಕ ವಿರೋಧಿ ನೀತಿಯನ್ನು ತೀವ್ರವಾಗಿ ತಾಳುತ್ತಿದೆ. ಈಗ ಅವರಿಗೆ ನಿದರ್ಶನ ಅನ್ನುವುದಕ್ಕೆ ಕೆ.ಆರ್. ಮಿಲ್ ತೆಗೆಯಲಿಕ್ಕೆ ಆಗಿಲ್ಲ ಇವರ ಕೈಯಲ್ಲಿ ಜಾವ ಕಾರ್ಖಾನೆ ತೆಗೆಯಲಿಕ್ಕೆ ಆಗಿಲ್ಲ. ಮುಚ್ಚಿರತಕ್ಕ ಕಾರ್ಖಾನೆಗಳನ್ನು ತೆಗೆಯಲಿಕ್ಕೆ ಆಗಲಿಲ್ಲ, ಸಾವಿರಾರು ಜನ ಕಾರ್ಮಿಕರು ಬೀದಿಯಲ್ಲಿ ಬಿದ್ದಿರತಕ್ಕಂಥ ಪರಿಸ್ಥಿತಿ ಇದೆ. ಇದರ ಬಗ್ಗೆ ಏನೂ ಮಾಡಲಿಲ್ಲ ಸರ್ಕಾರ ಈ ಸರ್ಕಾರದ ನೀತಿಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಗೊಂದಲ)

ಉಪಾಧ್ಯಕ್ಷಿಣಿಯವರು : ಅವರು ಇನ್ನು ಮುಗಿಸಿಲ್ಲ, ನಂತರ ಅವರು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ನನಗೆ ಗೊತ್ತಿದೆ. ಅವರು ಕೊನೆಗೆ ಬರುತ್ತಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಸಾವಿರಾರು ಜನ ಕೆ.ಆರ್. ಮಿಲ್ ಮತ್ತು ಜಾವ ಕಾರ್ಖಾನೆಯ ಕಾರ್ಮಿಕರು ಬೀದಿಗೆ ಬಿದ್ದಿದ್ದಾರೆ. ಬೆಂಗಳೂರಿನಲ್ಲಿ ನೂರಾರು ಕಾರ್ಖಾನೆಗಳು ಮುಚ್ಚಿವೆ. ಈ ಕಾರ್ಖಾನೆಗಳನ್ನು ತೆಗೆಯುವುದಕ್ಕೆ ಸರ್ಕಾರಕ್ಕೆ ಆಗಲಿಲ್ಲ. ಅನೇಕ ಕಾರ್ಮಿಕರನ್ನು ಕೇಳುವಂತಾದ್ದು ಇಲ್ಲ. ಇಂಥ ಒಂದು ಪರಿಸ್ಥಿತಿಯಾಗಿದೆ. ನಮ್ಮ ಬಗ್ಗೆ ನನಗೆ ವೈಯಕ್ತಿಕವಾಗಿ ಏನೂ ಇಲ್ಲ. ಈ ಸರ್ಕಾರದ ನೀತಿಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ (ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು).

ಉಪಾಧ್ಯಕ್ಷಿಣಿಯವರು : ಅವರು ಮುಗಿಸಿದ ಮೇಲೆ ತಾವು ಕೇಳುವುದು ಸರಿ

(ಗೊಂದಲ)

ಉಪಾಧ್ಯಕ್ಷಿಣಿಯವರು : ಮಾನ್ಯ ಯಡಿಯೂರಪ್ಪನವರೇ ತಾವು ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಉಪಸಭಾಧ್ಯಕ್ಷಿಣಿಯವರೇ ಮಂತ್ರಿಗಳ ಬಗ್ಗೆ ನಮಗೆ ಗೌರವವಿದೆ. ಕಳಕಳಿ ಇದೆ. ಈ ಇಲಾಖೆಯಲ್ಲಿ ಒಂದು ಬದಲಾವಣೆ ತರಬೇಕು ಎಂಬ ಪ್ರಾಮಾಣಿಕ ಪ್ರಯತ್ನ ಮಾಡುತ್ತೀರಾ ನಾನು ವಾಕ್ ಔಟ್ ಮಾಡುತ್ತಾ ಇಲ್ಲ. ನೂರಾರು ಕಾರ್ಖಾನೆಗಳ ಬಾಗಿಲು ಮುಚ್ಚಿವೆ. ಅದರಲ್ಲೂ ಜಾವ ಕಾರ್ಖಾನೆ ಮತ್ತು ಕೆ.ಆರ್. ಮಿಲ್ ನಲ್ಲಿ 7-8 ಸಾವಿರ ನೌಕರರು ಕೆಲಸವಿಲ್ಲದೆ ಇದ್ದಾರೆ. ಆ ಕಾರ್ಖಾನೆಗಳ ಬಾಗಿಲನ್ನು ತೆಗೆಸುವುದಕ್ಕೆ ಏನಾದರೂ ವಿಶೇಷ ಪ್ರಯತ್ನ ಮಾಡಿ. ತಾವು ಜಾವಾ ಕಾರ್ಖಾನೆ ಹಾಗೂ ಕೆ.ಆರ್. ಮಿಲ್‌ಗಳ ಬಾಗಿಲು ತೆಗೆಸಲಿಲ್ಲವೆಂದರೆ ಸಾವಿರಾರು ಜನ ನೌಕರರ ಹಿತದೃಷ್ಟಿಯಿಂದ ನಾವು ವಾಕ್‌ಔಟ್ ಮಾಡಿ ದೊಡ್ಡ ಪ್ರತಿಭಟನೆ ಮಾಡಲೇ ಬೇಕಾಗುತ್ತದೆ. ಈ ಅನ್ಯಾಯದ ಬಗ್ಗೆ ಸರ್ಕಾರದ ನೀತಿಯ ಬಗ್ಗೆ ಈ ಕಾರ್ಖಾನೆಯ ನೀತಿಯ ಬಗ್ಗೆ ತಾವು ಉತ್ತರ ಕೊಡುವ ಸಮಯದಲ್ಲಿ ಬಾಗಿಲು ತೆಗೆಸುವ ವ್ಯವಸ್ಥೆ ಮಾಡುತ್ತೇವೆ ಎನ್ನುವ ಸ್ಪಷ್ಟ ಉತ್ತರ ಕೊಟ್ಟರೆ ನಾವು ಕೇಳುತ್ತೇವೆ. ಏಕೆಂದರೆ ಉತ್ಸಾಹದಲ್ಲಿ ಒಳ್ಳೆಯ ಕೆಲಸಮಾಡುತ್ತಿದ್ದೀರಿ. ಅದಕ್ಕೆ ನಾವೆಲ್ಲಾ ಸಹಕಾರ ಕೊಟ್ಟಿದ್ದೇವೆ.

ಶ್ರೀಮತಿ ಮೋಟಮ್ಮ : ಸನ್ಮಾನ್ಯ ಅಧ್ಯಕ್ಷಿಣಿಯವರೇ ಮಾನ್ಯಮಂತ್ರಿಗಳು ಪ್ಲಾಂಟೇಷನ್ ಲೇಬರ್ಸ್ ಮಕ್ಕಳ ಬಗ್ಗೆ ಮಾತನಾಡಿದ್ದಾರೆ. ಅದನ್ನು ಕ್ಲಿಯರಾಗಿ ಹೇಳಲಿಲ್ಲ. ಮಕ್ಕಳಿಗೆ ಏನು ಮಾಡಬೇಕು ಎಂಬುದು ಆಕ್ಟ್‌ನಲ್ಲಿ ಇದೆ ಅದನ್ನು ಇಂಪ್ಲಿಮೆಂಟ್ ಮಾಡಿಲ್ಲ ಅದನ್ನು ಹೇಳುವುದಕ್ಕೆ ಬಂದಾಗ ಅಷ್ಟರಲ್ಲಿ ಮಧ್ಯ ಪ್ರವೇಶಿಸಿ ತೊಂದರೆ ಉಂಟು ಮಾಡಿದರು.

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್: ಅಧ್ಯಕ್ಷರೆ, ಮಧ್ಯದಲ್ಲಿ ಜಾವಾ ಕಂಪನಿ ಬಗ್ಗೆ ಏನಾಗಿದೆ ಎಂದು ಕೇಳುವುದು ಬೇಡವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ನಾವು ಮಾನ್ಯ ಸಚಿವರ ಭಾಷಣಕ್ಕೆ ಅಡ್ಡಿ ಮಾಡಬೇಕೆಂದು ಇಲ್ಲ. ಈಗ ಪ್ರಮುಖವಾದ ಬೇಡಿಕೆಗಳ ಮೇಲೆ ಮಾತಾಡಲಿಕ್ಕೆ ಅವಕಾಶ ಆಗಿಲ್ಲ. ಕ್ಲಾರಿಫಿಕೇಷನ್ ಕೊಡಬೇಕಾದರೆ ಹೇಳಿ ಎಂದು

ಹೇಳಿದೆವು. ಆದ್ದರಿಂದ ಉತ್ತರ ಕೊಡುವಂಥ ಸಮಯದಲ್ಲಿ ಕ್ಲಾರಿಫಿಕೇಷನ್ ಕೇಳಿ ಎಂದು ಹೇಳಿದ್ದರು.

ಉಪಾಧ್ಯಕ್ಷರು : ಪ್ರತಿಯೊಂದು ವಾಕ್ಯಕ್ಕೂ ನೀವೆಲ್ಲರೂ ಎದ್ದುನಿಂತುಬಿಟ್ಟು ಈ ರೀತಿ ಹೇಳಿದರೆ ಮಂತ್ರಿಗಳು ಹೇಗೆ ಉತ್ತರ ಕೊಡಲಿಕ್ಕೆ ಆಗುತ್ತದೆ?

ಶ್ರೀ ಎ.ಎಸ್. ನಾಡಗೌಡ : ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಈ ಅಂಕಿಅಂಶ ಓದುವುದಕ್ಕೆ ಮುಂಚೆ, ನಾನು ಭಾಷಣ ಪ್ರಾರಂಭ ಮಾಡುವುದಕ್ಕಿಂಥ ಮುಂಚೆ ಓದಿದ್ದು ಏನೆಂದರೆ, ಸರ್ಕಾರ ಇದರ ಹಿನ್ನೆಲೆಯಲ್ಲಿ ಪ್ರಯತ್ನ ಮಾಡುತ್ತಾ ಇದೆ ಎನ್ನುವಂಥ ವಿಚಾರ ಅವರಿಗೆ ಬರಲಿ ಎನ್ನುವುದಕ್ಕೋಸ್ಕರ ಹೇಳಿದೆ. ಸರ್ಕಾರ ಮಾಡದೇ ಇದ್ದರೆ, ಈ ನಂಬರ್ಆಫ್ ಲಾಕ್ಔಟ್ಸ್ ಆಗಲಿ, ಇಂಡಸ್ಟ್ರೀಸ್ ಕ್ಲೋಸ್ ಆಗುವುದು, ಪ್ರತಿವರ್ಷ ಹೆಚ್ಚಾಗುವುದಕ್ಕಿಂತಲೂ ಕಡಿಮೆಯಾಗುತ್ತಿದೆ ಎನ್ನುವುದನ್ನು ನಾವು ವಿಚಾರ ಮಾಡದೇ ಇದ್ದರೆ ಹೇಳಿ? ನಾನು ಇನ್ನು ಏನು ಹೇಳಬೇಕೋ ಗೊತ್ತಾಗುತ್ತಿಲ್ಲ, ಸರ್ಕಾರ ಪ್ರಯತ್ನ ಮಾಡುತ್ತಾ ಇದೆ ಅಂದಮೇಲೆ ಸರ್ಕಾರದಲ್ಲಿರುವಂಥ ಪಕ್ಷದ ದುಡ್ಡೇ ಎಲ್ಲದಕ್ಕೂ ಕೊಡಲಿಕ್ಕೆ ಆಗುತ್ತದೆಯೇ ಎನ್ನುವುದನ್ನು ತಿಳಿದುಕೊಳ್ಳಬೇಕು. ಇವೊತ್ತು ತಮ್ಮ ತಮ್ಮ ಪ್ರೈವೇಟ್ ಲಿಮಿಟೆಡ್ ಕಂಪನಿಗಳ ಲಾಕ್ಔಟ್ ಆದರೆ, ಅವು ಅನೇಕ ಕಾರಣಾಂತರಗಳಿಂದ ಬಂದ್ ಆದಂತಾದ್ದು ಇರಬಹುದು. ಇವೊತ್ತು ಐಡಿಯಲ್ ಜಾವಾ ಬಗ್ಗೆ ಹೇಳಬೇಕೆಂದರೆ, ಅದಕ್ಕೆ ಹಲವಾರು ರೀತಿಯಿಂದ ಅದಕ್ಕೆ ಹಿನ್ನೆಲೆ ಇದೆ. ಐಡಿಯಲ್ ಜಾವಾ ಇವೊತ್ತು ಬಹಳಷ್ಟು ಹಳೇ ಟೆಕ್ನಾಲಜಿಯಾಗಿದೆ. ಆಗ ಅದಕ್ಕಿಂಥ ಸಾಕಷ್ಟು ಪ್ರಿಸಿಷನ್ ಇದ್ದಂಥ ವೆಹಿಕಲ್ಸ್‌ಗಳು ಬರುತ್ತಿವೆ, ಫ್ಯೂಯಿಲ್ ಎಫಿಷಿಯಂಟ್ ವೆಹಿಕಲ್ಸ್‌ಗಳು ಬರುತ್ತಿದೆ. ಸ್ಪರ್ಧೆಯಾಗಿರತಕ್ಕ ವೆಹಿಕಲ್ಸ್‌ಗಳು ಬರುತ್ತಿವೆ. ಅವರ ಜೊತೆ ಕಾಂಪೀಟ್ ಮಾಡಲಿಕ್ಕೆ ಐಡಿಯಲ್ ಜಾವಾಕ್ಕೆ ಆಗುತ್ತಿಲ್ಲ, ಇದೊಂದು ಹಿನ್ನೆಲೆ ಇದ್ದರೂ ಕೂಡ ಈಗ ಇರುವಂಥ ಅಕ್ಯುಮ್ಯುಲೇಟೆಡ್ ಲಾಸ್ 12 ಕೋಟಿ ರೂಪಾಯಿ ಒಂದು ಕಡೆ ಇದ್ದರೆ, ಸರ್ಕಾರ ಇದರೊಳಗೆ ಯಾವ ನೀತಿಯನ್ನು ಹೊಂದಬೇಕು? ಯಾವ ರೀತಿಯಾದಂಥ ರಕ್ಷಣೆಗೆ ಬರಬೇಕೆಂಬುದರ ಬಗ್ಗೆ ಮಾನ್ಯ ಸದಸ್ಯರು ಸಲಹೆ ಕೊಟ್ಟರೆ ಆ ಪ್ರಕಾರ ಸರ್ಕಾರ ಮುಂದುವರೆಯಬಹುದು. ಆದರೆ ಇಷ್ಟಾದರೂ ಕೂಡ ಸರ್ಕಾರ ಅವರನ್ನು ಕರೆಸಿ ವಿಚಾರ ಮಾಡುವಂಥ ಒಂದು ಹಂತಕ್ಕೆ ನಾವು ಹೋಗಿದ್ದೇವೆ. ನಾವು ಮೀಟಿಂಗ್ ಕರೆಯುತ್ತೇವೆ, ಅದರಲ್ಲಿ ಕುಳಿತು ಚರ್ಚೆ ಮಾಡುತ್ತೇವೆ, ಮ್ಯಾನೇಜ್‌ಮೆಂಟಿನವರ ಜೊತೆ ಚರ್ಚೆ ಮಾಡುತ್ತೇವೆಂದು ಹೇಳಿದಾಗಲೂ ಕೂಡ ಮ್ಯಾನೇಜ್‌ಮೆಂಟ್ has not turned up. ಆದರೂ ತಾವು ಹೇಳುತ್ತೀರಿ. ಸರ್ಕಾರದ ನೀತಿ ಅಲ್ಲ ಅಂದರೂ ಕೂಡ ನಮ್ಮ ಶಾಸಕರು, ಹಲವಾರು ಮೈಸೂರಿನ ಶಾಸಕರು ಕೂಡ ಪ್ರಯತ್ನ ಮಾಡುತ್ತಿದ್ದಾರೆ. ಮಾನ್ಯ ಅಜೀಜ್‌ಸೇಟ್‌ರವರು ಪ್ರಯತ್ನ ಮಾಡುತ್ತಿದ್ದಾರೆ, ಎಂ.ಎಲ್.ಸಿ. ಅವರು ಪ್ರಯತ್ನ ಮಾಡುತ್ತಿದ್ದಾರೆ. ನಮ್ಮ ರಮೇಶ್ ಅವರು ಪ್ರಯತ್ನ ಮಾಡುತ್ತಿದ್ದಾರೆ. ಪ್ರತಿದಿವಸ ಮ್ಯಾನೇಜ್‌ಮೆಂಟ್‌ನವರನ್ನು ಕರೆಸಿ, ವಿಚಾರ ಮಾಡಬೇಕೆಂದರೆ, ಮ್ಯಾನೇಜ್‌ಮೆಂಟ್‌ನವರು ಕೈಗೆ ಸಿಕ್ಕುತ್ತಿಲ್ಲ, ಮೀಟಿಂಗ್ ಆಗಬೇಕಾದರೆ, ಮುಖ್ಯಮಂತ್ರಿಗಳ ಛೇಂಬರ್‌ನಲ್ಲಿ ಮೀಟಿಂಗ್ ಕರೆಯಬೇಕು. ಸಿಕ್ ಇಂಡಸ್ಟ್ರಿ ಎಷ್ಟಿದೆ, ಅದರ ಬಗ್ಗೆ ಇಂಡಸ್ಟ್ರಿ ಸೆಕ್ರೆಟರಿಯವರನ್ನು, ಇಂಡಸ್ಟ್ರಿ ಮಿನಿಸ್ಟರನ್ನು, ಲೇಬರ್ ಸೆಕ್ರೆಟರಿ, ಮತ್ತು ಕಮೀಷನರ್ ಮತ್ತು ಟ್ರೇಡ್ ಯೂನಿಯನ್ ಲೀಡರ್ಸ್‌ಗಳನ್ನು ಕರೆದು ಒಂದು ಮೀಟಿಂಗ್ ಮಾಡಬೇಕು. ಯಾವುದಾದರೂ ಒಂದು ರೀತಿಯಿಂದ ಪರಿಹಾರ ಕಂಡುಹಿಡಿಯಬೇಕು ಎಂದು ನಾವು ಈಗಾಗಲೇ ವಿಚಾರ ಮಾಡುತ್ತಿದ್ದೇವೆ ಎಂದು ಹೇಳಿದರೂ ಸಮಾಧಾನವಾಗಲಿಲ್ಲ, ಅಂದರೆ ನಾವು ಇದಕ್ಕೆ ಏನು ಉತ್ತರ ಕೊಡಬೇಕು? ಸಭೆಗೆ ಯಾವ ರೀತಿ ಕನ್‌ವಿನ್ಸ್ ಮಾಡಬೇಕೆಂದು ನನಗೆ ಅರ್ಥವಾಗುತ್ತಿಲ್ಲ,

ಅದನ್ನು ಬಿಟ್ಟು ನಮ್ಮ ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್ ರವರು ವಾಕ್‌ಔಟ್ ಮಾಡಿರುವುದು ಅಂದರೆ ನನಗೆ ಮನಸ್ಸಿಗೆ ಬಹಳ ನೋವಾಯಿತು.

ಶ್ರೀ ಎಂ.ಪಿ. ವೆಂಕಟೇಶ್ : ಅವರು ವಾಕ್‌ಔಟ್ ಮಾಡಿದ ಉದ್ದೇಶ ಅಂದರೆ, ನಾವು ಏನೂ ಮಾಡಲಿಕ್ಕೆ ಆಗುವುದಿಲ್ಲ ಎಂದು ನಾವು ಮೊದಲೇ ಹೇಳಿದಿರಿ ಅದಕ್ಕೋಸ್ಕರ ಅವರು ವಾಕ್‌ಔಟ್ ಮಾಡಿದರು.

(ಗೊಂದಲ)

ಶ್ರೀ ಎ.ಎಸ್. ನಾಡಗೌಡ : ನಾನು ಯೀಲ್ಡ್ ಆಗಿಲ್ಲ, ದಯಮಾಡಿ ತಾವು ಕುಳಿತುಕೊಳ್ಳಬೇಕು. ಇನ್ನು ಪ್ಲಾಂಟೇಷನ್ ವರ್ಕ್‌ರ್ಸ್‌ಗಳ ಬಗ್ಗೆ ಏನು ವೆಲ್‌ಫೇರ್ ಕಾರ್ಯಕ್ರಮಗಳನ್ನು ಮಾಲೀಕರು ಹಾಕಿಕೊಂಡಿದ್ದಾರೆ ಎಂದು ಕೇಳಿದ್ದಾರೆ. ಮಾಲೀಕರೂ ಕೂಡ ತಮ್ಮದೇ ಆದಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾರೆ. ಸರ್ಕಾರದ ನಮ್ಮ ವೆಲ್‌ಫೇರ್ ಬೋರ್ಡ್ ಇಲಾಖೆಯಿಂದ ಕೂಡ ಅವರಿಗೆ ಈಗಾಗಲೇ ಸ್ಕಾಲರ್‌ಶಿಪ್ ಕೊಡುತ್ತಿದ್ದೇವೆ ಮಕ್ಕಳಿಗೆ ಬಟ್ಟೆಗಳನ್ನು ಕೂಡ ಹಂಚುವಂಥ ಕಾರ್ಯಗಳನ್ನು ಹಾಕಿಕೊಳ್ಳುತ್ತಿದ್ದೇವೆ. ಈಗಾಗಲೇ ಪ್ರತಿಯೊಂದು ಜಿಲ್ಲಾ ಘಟಕದಲ್ಲೂ ಒಂದಾದರೂ ವೆಲ್‌ಫೇರ್ ಸೆಂಟರನ್ನು ಮಾಡಬೇಕೆಂದು ಹೇಳಿ ಪ್ರಾರಂಭ ಮಾಡುತ್ತಿದ್ದೇವೆ. ಅಲ್ಲಿ ಎಲ್ಲಾ ರಿಯಾಯಿತಿಯನ್ನು ಕೊಟ್ಟು ನಮ್ಮ ವೆಲ್‌ಫೇರ್ ಮೆಜರ್ಸ್‌ಅನ್ನು ಇಂಪ್ಲಿಮೆಂಟ್ ಮಾಡುವುದಕ್ಕೋಸ್ಕರ ಸೂಪರ್‌ವೈಸರ್ಸ್ ಮತ್ತು ಅಲ್ಲಿಗೆ ಬೇಕಾದಂಥ ಸಿಬ್ಬಂದಿಯನ್ನು ಕೂಡ ಇವೊತ್ತಿನ ದಿವಸ ನಾವು ಭರ್ತಿ ಮಾಡುವಂಥ ವಿಚಾರದಲ್ಲಿ ಈಗಾಗಲೇ ನಾವು ಕ್ರಮ ಕೈಗೊಂಡಿರುತ್ತೇವೆ. ಇನ್ನು ಕೊನೆಯದಾಗಿ ಹೇಳಬೇಕೆಂದರೆ, ಮಾನ್ಯ ಸದಸ್ಯರಾದ ಕೌಜಲಗಿಯವರು ತಮ್ಮ ಕ್ಷೇತ್ರಕ್ಕೆ ಹಿಂದಿನ ಮಂತ್ರಿಗಳಾದಂಥ ಕೆ.ಹೆಚ್.ಪಾಟೀಲರು ಒಂದು ಐಟಿಐ ಕೊಡುತ್ತೇವೆನ್ನುವ ಪ್ರಾಮಿಸ್ ಮಾಡಿದ್ದರು ಎನ್ನುವ ಮಾತನ್ನು ಹೇಳಿದರು. ಕೇಂದ್ರ ಸರ್ಕಾರದ ನೀತಿ ವೊಕೇಷನಲ್ ಟ್ರೈನಿಂಗ್ ಕೋರ್ಸ್‌ಗೆ ಹೆಚ್ಚಿಗೆ ಪ್ರೋತ್ಸಾಹ ಕೊಡಬೇಕು ಎನ್ನುವುದು ಆಗಿದೆ. ಈ ದಿಸೆಯಲ್ಲಿ ಒಂದು ಆದೇಶವನ್ನು ನಮಗೆ ಕಳುಹಿಸಿದ್ದಾರೆ. ಅದರ ಹಿನ್ನೆಲೆಯಲ್ಲಿ ನಾವು ಈಗ ಅದರ ಫಿಸಿಬಿಲಿಟಿ ರಿಪೋರ್ಟ್ ತರಿಸಿಕೊಂಡು ಈಗ ಅಲ್ಲಿ ಐಟಿಐ ಪ್ರಾರಂಭ ಮಾಡಲಿಕ್ಕೆ ಸರಿಯಾದಂಥ ಸ್ಥಳ ಇದೆ ಎಂದು ಕಂಡುಬಂದರೆ ಮುಂದಿನ ವರ್ಷದಲ್ಲಿ ಅದನ್ನು ಪ್ರಾರಂಭ ಮಾಡುವಂಥ ಏರ್ಪಾಡು ಕೂಡ ಮಾಡುತ್ತೇವೆಂಬ ಈ ಸಭೆಯಲ್ಲಿ ಆಶ್ವಾಸನೆಯನ್ನು ಈ ಸಭೆಯಲ್ಲಿ ಕೊಡುತ್ತಿದ್ದೇವೆ. ನಾನು ಇನ್ನು ಹೆಚ್ಚು ಸಮಯವನ್ನು ತೆಗೆದುಕೊಳ್ಳದೆ ಈ ಸದನದ ಒಮ್ಮತವನ್ನು ಕೋರುತ್ತೇನೆ ಮತ್ತು ಈ ಸದನದ ಹೆಚ್ಚಿನ ಸಹಕಾರ ನಮ್ಮ ಇಲಾಖೆಗೆ ಬೇಕು ಎನ್ನತಕ್ಕ ಮಾತನ್ನು ಹೇಳಿ ನನ್ನ ಈ ಎಲ್ಲ ಬೇಡಿಕೆಗಳಿಗೂ ಸರ್ವಾನುಮತದಿಂದ ಸಭೆಯು ಮಾನ್ಯತೆ ನೀಡಬೇಕೆಂದು ವಿನಂತಿಮಾಡಿಕೊಂಡು ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI SUBHASH S. JOSHI : Madam, I have raised many questions Yesterday during my speech. However, the Hon.Minister has not replied to my single question.

SRI A.S. NADAGOWDA : Please ask.

SRI SUBHASH S JOSHI : Whether the Labour Secretary will give permission to prosecute the Management? The Unions are asking for the last 3 years about this. What about the Bonded labourers? What about the women

labourers who are working after 7.00 PM. That was the question raised by me yesterday, among others.

ಶ್ರೀ ಎ.ಎಸ್. ನಾಡಗೌಡ : ಸಭೆಯ ಕಾಲ ಕಡಿಮೆ ಇದೆ ಎಂದು ತಿಳಿದು ನಾನು ತಮ್ಮ ಪ್ರಶ್ನೆಗೆ ಉತ್ತರವನ್ನು ಕೊಡುವುದಕ್ಕೆ ಬಿಟ್ಟಿದ್ದೆ. ಆದರೆ ಉದ್ದೇಶಪೂರ್ವಕವಾಗಿ ಉತ್ತರ ಕೊಡಬಾರದು ಎಂದು ಏನೂ ಇರಲಿಲ್ಲ. The hon.Member has asked about the women working after 7.00 PM also. In some of the industries or other establishments it is found that they are employed even after 7.00 PM. Of course, any industries or establishment, if they want to employ women after 7.00 PM , as per the Act, they will have to ask for the permission of the Government. In case, where this procedure has not been followed, let the hon.Member bring it to my notice and I will definitely take action as per the Act and prosecute them under the relevant section.

SRI SUBHASH S JOSHI : I also know the Provisions of the Act.

SRI A.S. NADAGOWDA : If you just resume your seat for a while, I will reply to your point.

SRI SUBHASH S JOSHI : Alright.

SRI A. S. NADAGOWDA : You were telling about Beedi Industries. It has become a Home Industries now.

SRI SUBHASH S JOSHI : I said Tobacco Industry-The Tobacco processing industries. The tobacco which is being processed for manufacturing beedies.

SRI A. S. NADAGOWDA : I will just go through that. If they have not sought permission for exemption from the Government, definitely I will enquire through the concerned Inspectors and prosecute the Management. We will definitely take action. If you could kindly inform the particular management or an industry whatsoever, we will definitely go and inspect. Another important point raised was about the contract system. There is a Contract Abolition Board. That matter has to be referred to the Contract Abolition and Regulation Board. The entire matter is before that Board. Whatever that Board recommends, we will definitely bring that Act into effect.

ಶ್ರೀ ಬಿ.ಎಂ. ಇದಿನಬ್ಬ : ಮಾನ್ಯ ಉಪಾಧ್ಯಕ್ಷಿಣಿಯವರೇ, ಬೇಡಿಕೆಯ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಸಿಕ್ಕಲಿಲ್ಲ, ಆದುದರಿಂದ ಕ್ಲಾರಿಫಿಕೇಶನ್ ಕೇಳುವುದಕ್ಕಾಗದರೂ ಕೇಳುವುದಕ್ಕಾದರೂ ನನಗೆ ಅವಕಾಶ ಇರಲಿ. ನಮ್ಮಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ಮೂರುವರೆ ಲಕ್ಷಕ್ಕಿಂತ ಹೆಚ್ಚು ಬೀಡಿ ಕಾರ್ಮಿಕರಿದ್ದಾರೆ. ಅವರು ಒಂದು ಕಡೆ ಮಾಲೀಕರು, ಮತ್ತೊಂದುಕಡೆ ಕಂಟ್ರಾಕ್ಟರ್‌ಗಳ ಮಧ್ಯೆ ಸಿಕ್ಕಿಕೊಂಡು ಬಹಳ ಕಷ್ಟದಲ್ಲಿದ್ದಾರೆ. ಅವರಿಗೆ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಸರ್ಕಾರದವರು ಹಿಂದೆ ಹೇಳಿದ್ದರು. ಆದರೆ ಆ ಕೆಲಸ ಆಗಲಿಲ್ಲ. ಮತ್ತು ಈ ಕಾರ್ಮಿಕರ ಕೂಲಿಯನ್ನು 20-22 ರೂ. ಮಾಡಬೇಕೆಂದು ಕೇಳುತ್ತಿದ್ದಾರೆ. ಏಕೆಂದರೆ

ಇವತ್ತಿನಬೆಲೆ ಏರಿಕೆ ಕಾಲದಲ್ಲಿ ಜೀವನ ನಡೆಸುವುದು ಕಷ್ಟವಾದ್ದರಿಂದ ಹೆಚ್ಚುಮಾಡಬೇಕೆಂದು ಕೇಳುತ್ತಿದ್ದಾರೆ.

ಆದ್ದರಿಂದ ನನ್ನ ಕ್ಷೇತ್ರದಲ್ಲಿ ಸುಮಾರು ಮೂರುವರೆ ಲಕ್ಷ ಬೀಡಿ ಕಾರ್ಮಿಕರು ಯಾರಿದ್ದಾರೆ, ಅವರು ಮಜೂರಿಯನ್ನು ಹೆಚ್ಚು ಮಾಡತಕ್ಕ ವ್ಯವಸ್ಥೆ ಮತ್ತು ಅವರಿಗೆ ಮನೆಗಳನ್ನು ಕಟ್ಟಿಸಿಕೊಡತಕ್ಕ ವ್ಯವಸ್ಥೆಯನ್ನು ಮಾಡುತ್ತೀರಾ? ಅವರ ಬಗ್ಗೆ ನಿಮಗೆ ಅನುಕಂಪ ಇದೆಯೇ ಎಂದು ಸರ್ಕಾರವನ್ನು ಕೇಳಬಯಸುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ : ಮಾನ್ಯ ಉಪಾಧ್ಯಕ್ಷಿಣಿಯವರೆ, ಇ.ಎಸ್.ಐ. ಆಸ್ಪತ್ರೆಗಳಿಗೆ ಔಷಧಿಗಳನ್ನು ಸರಬರಾಜು ಮಾಡುವುದರಲ್ಲಿ ಬಹಳ ಅವ್ಯವಹಾರ ನಡೆದಿದೆ. ಲಕ್ಷಾಂತರ ರೂ. ಔಷಧಿಗಳು ಖರೀದಿಯಾಗಿದೆ, ಆದರೆ ಆಸ್ಪತ್ರೆಗಳಿಗೆ ಈ ಔಷಧಿಗಳು ತಲುಪಿಲ್ಲ.

ಇನ್ನು ಎರಡನೆಯದಾಗಿ ಈಗಿರತಕ್ಕ ತಾವೇ ನಮ್ಮ ಶ್ರೀರಂಗಪಟ್ಟಣ ತಾಲ್ಲೂಕಿಗೆ ಒಂದು ಐ.ಟಿ.ಐಯನ್ನು ಕೊಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದಿರಿ. ಅದನ್ನು ಯಾವಾಗ ಕೊಡುತ್ತೀರಿ ಎಂಬುದನ್ನು ದಯವಿಟ್ಟು ಹೇಳಬೇಕು.

ಶ್ರೀ ಎಸ್. ಹೆಚ್. ಕೌಜಲಗಿ : ಬೆಳಗಾಂನಲ್ಲಿ ಒಂದು ಕಾರ್ಮಿಕರ ಕೋರ್ಟನ್ನು ಸ್ಥಾಪಿಸಬೇಕೆಂದು ನಾನು ಕೇಳಿಕೊಂಡಿದ್ದೆ. ಅದು ಏನಾಯಿತು? ಹುಬ್ಬಳ್ಳಿಯಲ್ಲಿ ಒಂದು ಅಡಿಷನಲ್ ಕೋರ್ಟ್‌ನ್ನು ತೆರೆಯುವ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ, ಮಂಡಲ್‌ಪಂಚಾಯತ್‌ನಲ್ಲಿ ಈಗ ಹಾಲಿ ಕೆಲಸಮಾಡತಕ್ಕಂಥ ಸಿಪಾಯಿಗಳು ಕಾರಕೂನರು 50-60 ರೂಪಾಯಿಗಳ ಮೇಲೆ ದುಡಿದುಕೊಂಡು ಬರುತ್ತಿದ್ದು ಈ ಬಗ್ಗೆ ಸರ್ಕಾರಕ್ಕೆ ಒಂದು ಮನವಿಯನ್ನು ಸಲ್ಲಿಸಿದ್ದಾರೆ. ಅವರಿಗೆ ಕಾನೂನು ಪ್ರಕಾರ ಕನಿಷ್ಠ ವೇತನವನ್ನು ಕೊಡತಕ್ಕಂಥ ಕೆಲಸ ಮಾನ್ಯ ಮಂತ್ರಿಗಳನ್ನು ಮಾಡಬೇಕು. ಅದೇ ರೀತಿಯಲ್ಲಿ ಸಹಕಾರಿ ಸಂಘಗಳಲ್ಲಿ ಹಾಗ ಪ್ರಾಥಮಿಕ ಸಹಕಾರಿ ಸಂಘಗಳಲ್ಲಿ ಸಹಿತ ಇಂಥ ಒಂದು ಕನಿಷ್ಠ ವೇತನವೂ ಸಿಗದಂಥ ನೌಕರರು ಇದ್ದಾರೆ. ಆದ್ದರಿಂದ ಸರ್ಕಾರ ತನ್ನ ನೀತಿಯನ್ನು ಕಾನೂನಿನ ಮುಖಾಂತರ ಏತಕ್ಕೆ ಸರಿಪಡಿಸಿಕೊಳ್ಳಬಾರದೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷಣಿಯವರೇ, ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡತಕ್ಕಂಥ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ನಾನು ಜಾವಾಕಾರ್ಖಾನೆಯನ್ನು ಹಾಗೂ ಕೆ.ಆರ್.ಎಸ್.ಮಿಲ್ಸ್ ಮೈಸೂರು, ಇವುಗಳನ್ನು ಮತ್ತೆ ತರೆಯುವ ಬಗ್ಗೆ ಆ ಮ್ಯಾನೇಜ್‌ಮೆಂಟ್‌ನವರನ್ನು ಕರೆಸಿ ಹೇಗಾದರೂ ಮಾಡಿ ಅದಷ್ಟು ಜಾಗ್ರತೆ ಕಾರ್ಮಿಕರ ಹಿತದೃಷ್ಟಿಯಿಂದ ಎರಡು ಕಾರ್ಖಾನೆಗಳ ಬಾಗಿಲನ್ನು ತೆಗೆಸುವುದಕ್ಕೆ ವಿಶೇಷ ಪ್ರಯತ್ನವನ್ನು ಸರ್ಕಾರದವರು ಮಾಡುತ್ತದೆಯೇ? ಸರ್ಕಾರದವರು ವಿಶೇಷವಾದಂಥ ಕಾರ್ಯಕ್ರಮವನ್ನು ತೆಗೆದುಕೊಂಡು ಅವರನ್ನು ಕರೆಸಿ ಮಾತನಾಡಿ ಒಂದು ಕ್ರಮ ತೆಗೆದುಕೊಳ್ಳುತ್ತೀರ ಸ್ವಾಮಿ!

ಶ್ರೀ ಶಫಿ ಅಹಮದ್ : ಮಾನ್ಯ ಅಧ್ಯಕ್ಷರೇ ಐ.ಟಿ.ಐ.ಬಗ್ಗೆ ಗ್ರಾಂಟಿನೈಡ್ ಕೋಡ್‌ನಲ್ಲಿ ಸೇರತಕ್ಕಂಥ ಒಂದು ಕ್ರಮವನ್ನು ತೆಗೆದುಕೊಂಡಿದ್ದಾರೆ. ತುಮಕೂರು ಐ.ಟಿ.ಐ.ಬಗ್ಗೆ ಸುಮಾರು ಸಾರಿ ಈ ಮನೆಯಲ್ಲಿ ಎತ್ತಲಾಯಿತು. ಬಿಲ್ಡಿಂಗ್ ಕಟ್ಟಲಿಕ್ಕೆ ಹಣವನ್ನು ಕಳೆದ ಅಧಿವೇಶನದಲ್ಲಿ ತಾವು ಆಶ್ವಾಸನೆ ಕೊಟ್ಟಿದ್ದೀರಿ. ಈ ಸಾರಿಯಾದರೂ ಕ್ರಮ ಕೈಗೊಳ್ಳುತ್ತೀರಾ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೇ, ಈಗತಾನೆ ಮಾನ್ಯ ಮಂತ್ರಿಗಳು ಮಾತನಾಡುತ್ತಾ ರಾಜ್ಯದಲ್ಲಿ ಚೀಫ್ಆಗಿ ಜಮೀನು ಸಿಗುತ್ತದೆ, ಚೀಪಾಗಿ ಲೇಬರರ್ಸ್ ಸಿಗುತ್ತಾರೆ. ಮಾತೆತ್ತಿದ್ದರೆ ಚೆನ್ನಾಗಿ ಫೈನಾನ್ಸ್ ಸಿಗುತ್ತದೆಂದು ಹೇಳಿಬಿಟ್ಟು ಎಲ್ಲಾ ಫ್ಯಾಕ್ಟರಿ ಮಾಡಲು ಮುಂದೆ ಬರುತ್ತಾರೆಂದು ಹೇಳಿದರು. ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ಹೊರರಾಜ್ಯದವರು ಬಂದು ಸಣ್ಣ ಸಣ್ಣ ಕೈಗಾರಿಕೆಗಳನ್ನು ಕಟ್ಟಿದ್ದಾರೆ. ಅವರು ಲೇಬರ್ ಕಾಂಟ್ರ್ಯಾಕ್ಟ್ ಮುಖಾಂತರ ಕೆಲಸ ಮಾಡುತ್ತಿದ್ದಾರೆ. ಆದರೆ 20-40 ಜನರ ಮೇಲೂ ಇದ್ದರೂ ಲೈಸೆನ್ಸ್‌ಗಳನ್ನು ತೆಗೆದುಕೊಂಡಿರುವುದಿಲ್ಲ. ಇದರ ಬಗ್ಗೆ ಪ್ರಶ್ನೆಯನ್ನು ಕೇಳಿರುತ್ತೇವೆ. ಲೇಬರ್ ಇನ್‌ಸ್ಪೆಕ್ಟರ್ ಏನು ಮಾಡುತ್ತಾರೋ ಗೊತ್ತಿಲ್ಲ. ಸಾಯಂಕಾಲವಾದರೆ ಮಾಲೀಕರ ಹತ್ತಿರ ಹೋಗಿ ಹಣವನ್ನು ತೆಗೆದುಕೊಳ್ಳುತ್ತಾರೆ. ಸರಿಯಾಗಿ ವರದಿಯನ್ನು ಕೊಡುವುದಿಲ್ಲ. ವಿಪರೀತವಾದ ಶೋಷಣೆ ಮಾಡುತ್ತಿದ್ದಾರೆ. ಲೇಬರ್ ಇನ್‌ಸ್ಪೆಕ್ಟರ್‌ರವರಿಗೆ ಇನ್‌ಸ್ಪೆಕ್ಟ್ ಮಾಡಿ ವರದಿ ತರಿಸಿಕೊಂಡು ಈ ಶೋಷಣೆಯನ್ನು ತಪ್ಪಿಸುವುದಕ್ಕೆ ಕ್ರಮ ಕೈಗೊಳ್ಳುತ್ತೀರಾ ಎಂದು ಸಭೆಯ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎ.ಎಸ್. ನಾಡಗೌಡ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಈಗಾಗಲೇ ಮಾನ್ಯ ಇದಿನಬ್ಬರವರು ಹಿರಿಯ ಶಾಸಕರು ತಮ್ಮ ಕ್ಷೇತ್ರದಲ್ಲಿ ಬರುವಂಥ ಬೀಡಿ ಕಾರ್ಮಿಕರಾಗಲಿ ಅವರಿಗೆ ವೇತನ ರಿವೈಸ್‌ಮಾಡುವುದಕ್ಕೆ ಹೇಳಿ ಪ್ರಶ್ನೆ ಮಾಡಿದ್ದಾರೆ. ಇದು ಸರ್ಕಾರದ ಪರಿಶೀಲನೆಯ ಹಂತದಲ್ಲಿದೆ. ಈ ಸದನ ಮುಗಿಯುವುದರೊಳಗಾಗಿ ಅದನ್ನು ಪ್ರಕಟಣೆ ಮಾಡುತ್ತೇವೆಂದು ಈಗಾಗಲೇ ಹೇಳಿದ್ದೇನೆ. ಆದರೆ ಯಾವುದೇ ನಾವು ಒಂದು ಕ್ರಮ ಕೈಗೊಳ್ಳುವುದಕ್ಕೆ ಮುಂಚೆ ಯಾವ ರೀತಿ ಎಫೆಕ್ಟ್‌ಗೆ ಕೊಡಬೇಕು ಎನ್ನುವ ಬಗ್ಗೆ ಕ್ರೋಸ್ ಅಂಡ್ ಕಾನ್ಸ್ ಎರಡು ವಿಚಾರ ಮಾಡಬೇಕಾಗುತ್ತದೆ. ಅದು ನಮ್ಮ ಕರ್ತವ್ಯವೂ ಆಗಿದೆ. ಬೋರ್ಡ್‌ನಿಂದ ರೆಕಮೆಂಡೇಷನ್ ಏನು ಮಾಡಿದ್ದಾರೆ. ಆ ಫೈಲ್ ಬಂದಿದೆ. ಅಧಿವೇಶನ ಆದತಕ್ಷಣ ಕ್ರಮ ತೆಗೆದುಕೊಳ್ಳುವ ಭರವಸೆಯನ್ನು ಕೊಡುತ್ತೇನೆ. ಮತ್ತು ಮನೆಗಳನ್ನು ಕಟ್ಟುವ ಬಗ್ಗೆ ತಾವು ಕೇಳಿದ್ದೀರಿ. ಈಗಾಗಲೇ ದಕ್ಷಿಣ ಕನ್ನಡಜಿಲ್ಲೆಯಲ್ಲಿಯೂ ಮನೆಗಳನ್ನು ಕಟ್ಟುವಂಥ ಭರವಸೆಯನ್ನು ಅವರಿಗೆ ಕೊಡುತ್ತೇನೆ. ಇನ್ನು ಲ್ಯಾಂಡ್ ಅಕ್ವೈರ್ ಮಾಡುವುದಕ್ಕೆ ತಾವು ಕೇಳಿದ್ದೀರಿ. ಲ್ಯಾಂಡ್ ಅಕ್ವೈರ್ ಮಾಡಿದತಕ್ಷಣವೇ ಅಲ್ಲಿ ತಮ್ಮ ಹುಡ್‌ಕೋ ದವರ ಜೊತೆಯಲ್ಲಿ ಚರ್ಚೆಮಾಡಿ ಕೂಡಲೇ ಮನೆಗಳನ್ನು ಕಟ್ಟುವಂತೆ ಕ್ರಮವನ್ನು ಕೈಗೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಅದೇ ರೀತಿಯಲ್ಲಿ ಈಗ ನಮ್ಮ ಸ್ನೇಹಿತರು ಐ.ಟಿ.ಐ.ಗೆ ಗ್ರಾಂಟನ್ನು ಕೊಡುತ್ತೀರಾ ಎಂದು ಕೇಳಿದರು. ಅದನ್ನೂ ಕೂಡ ವಿಚಾರ ಮಾಡುತ್ತೇನೆ. ಕೊಡುತ್ತೇವೆ ಬಿಡುತ್ತೇವೆನ್ನುವ ಬಗ್ಗೆ ಈಗಲೇ ಭರವಸೆ ಕೊಡುವುದಕ್ಕಾಗುವುದಿಲ್ಲ. ಏತಕ್ಕೆಂದರೆ ಸರ್ಕಾರ ಸರ್ಕಾರದ ನೀತಿಯಂತೆ ನಾವು ಕೊಡುತ್ತೇವೆ. ಅದನ್ನು ಒಂದು ಎಜ್ಯುಕೇಷನ್ ಇನ್‌ಸ್ಟಿಟ್ಯೂಷನ್, ಅದು ಒಂದು ಮೀಡಿಯಾ ಎಂದು ತಿಳಿದುಕೊಂಡಿರುತ್ತೇವೆ, ಅದನ್ನು ಅಲ್ಲಗಳೆದಿಲ್ಲ. ಆದರೆ ಒಂದು ವಿಷಯವನ್ನು ಹೇಳತಕ್ಕಂಥದ್ದು ಬೇರೆ ರಾಜ್ಯಗಳಲ್ಲಿ ಏನಿದೆ ಅದನ್ನು ಫಾಲೋ ಮಾಡಬೇಕಾಗುತ್ತದೆ. ಅದಕ್ಕೋಸ್ಕರವಾಗಿ ಇದು ಪರಿಶೀಲನೆಯ ಹಂತದಲ್ಲಿದೆ ಎಂದು ಹೇಳುತ್ತೇನೆ.

ಆದರೆ ಮಾನ್ಯ ಅಂಜನ ಮೂರ್ತಿಯವರು ಏನು ಆಪಾದನೆ ಮಾಡಿದ್ದಾರೆ ಅಂಥದ್ದು ದಿನನಿತ್ಯ ಕೇಳಿಬರುತ್ತದೆ, ಇಲ್ಲವೆಂದು ಅಲ್ಲ. ಕಾಂಟ್ರ್ಯಾಕ್ಟ್‌ಲೇಬರ್ 20-40 ಜನ ಇದ್ದರೂ ರಿಜಿಸ್ಟರ್ ಮಾಡಿರುವುದಿಲ್ಲವೆಂದು ಹೇಳುತ್ತಿದ್ದಾರೆ. ಅಂಥದ್ದು ಯಾವುದು ಇದೆ ಎಂದು ಸ್ಪಷ್ಟ ನಿರ್ದೇಶನ ಹೇಳಿದರೆ ಒಳ್ಳೆಯದು. ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಎಲ್ಲವನ್ನೂ ಹೋಗಿನೋಡುವುದಕ್ಕಾಗುವುದಿಲ್ಲ. ನಮ್ಮ ಇಲಾಖೆಯವರು ಅಲ್ಲಿಗೆ ಹೋಗಬೇಕು; ಅದು ಅವರ ಕರ್ತವ್ಯ. ಆದರೆ ಕೆಲವೊಂದು ಸಂದರ್ಭದಲ್ಲಿ ಹೋಗಲಿಕ್ಕೆ

ಆಗುವುದಿಲ್ಲ. ಅಂಥಲ್ಲಿ ಅಂಥ ಘಟನೆ ನಡೆದಾಗ ಯಾವುದಾದರೂ ನಿದರ್ಶನ ಇದ್ದಾಗ ತಕ್ಷಣ ನಮ್ಮ ಗಮನಕ್ಕೆ ತಂದರೆ ಖಂಡಿತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಅಂಜನ ಮೂರ್ತಿ : ನಾನು ಈ ಸದನದಲ್ಲಿ ಪ್ರಶ್ನೆ ಕೇಳಿದ್ದೇನೆ. ನೆಲಮಂಗಲ ತಾಲ್ಲೂಕಿನಲ್ಲಿ ಸ್ಟಾರ್ ಎಕ್ವಿಪ್‌ಮೆಂಟ್ ಎಂದು ಇದೆ. ಅಲ್ಲಿರತಕ್ಕ ತಾಲ್ಲೂಕು ಲೇಬರ್ ಇನ್ಸ್‌ಪೆಕ್ಟರನ್ನು ಲೇಬರ್ ಇನ್ಸ್‌ಪೆಕ್ಟರ್ ಅನ್ನಬೇಕೋ ಅಥವಾ ಲೈಯರ್ ಇನ್ಸ್‌ಪೆಕ್ಟರ್ ಅನ್ನಬೇಕೊ ಗೊತ್ತಿಲ್ಲ. ಅವರು ಕಾರ್ಮಿಕರ ಕುಂದುಕೊರತೆಗಳನ್ನು ವಿಚಾರಿಸುವುದಿಲ್ಲ, ತಮಗೆ ಅಧಿಕಾರಿಗಳು ಏನು ರಿಪ್ಲೈ ಕೊಟ್ಟಿದ್ದಾರೆಂಬುದನ್ನು ನೋಡಿ ಅದರ ಬಗ್ಗೆ ಕಡಿವಾಣ ಹಾಕಬೇಕು; ಲೇಬರ್ ಇನ್ಸ್‌ಪೆಕ್ಟರ್‌ಗಳ ಬಗ್ಗೆ ಗಮನಹರಿಸಬೇಕು.

ಶ್ರೀ ಎ.ಎಸ್. ನಾಡಗೌಡ : ಸರ್ಕಾರಿ ಅಧಿಕಾರಿಗಳ ಮೇಲೆ ಈ ದೂರುಗಳು ಬರುತ್ತಿವೆ. ಇಲ್ಲವೆಂದು ಅಲ್ಲ, ನಾನು ಬ್ರಹ್ಮ ಎಲ್ಲವನ್ನೂ ಕ್ಲೀನ್ ಮಾಡುತ್ತೇನೆಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ಅಧಿಕಾರದಿಂದ ಈ ಕರಪ್ಷನ್ ಬಂದಿದೆ. ಅದನ್ನು ಎಷ್ಟರ ಮಟ್ಟಿಗೆ ಸ್ವಚ್ಛ ಮಾಡುವುದಕ್ಕಾಗುತ್ತದೆ. ಅಷ್ಟರಮಟ್ಟಿಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂದು ಹೇಳಬಲ್ಲೆ. ಇ. ಎಸ್. ಎ. ಹಾಸ್ಪಿಟಲ್‌ನಲ್ಲಿ ಅವ್ಯವಹಾರ ನಡೆದಿದೆ ಎಂದು ಹೇಳುತ್ತಾರೆ. ಎಲ್ಲಿ ಯಾವ ಹಂತದಲ್ಲಿ ನಡೆದಿದೆ ಎಂದು ಹೇಳಿದರೆ ಖಂಡಿತ ಕ್ರಮ ತೆಗೆದುಕೊಳ್ಳುತ್ತೇನೆ. ನನಗೆ ತಿಳಿದ ಹಾಗೆ ನಾನು ಇಲಾಖೆಯನ್ನು ವಹಿಸಿಕೊಂಡ ಮೇಲೆ ಯಾವ ತರಹದ ಘಟನೆಗಳು ನಡೆದಿಲ್ಲ, ಮೊನ್ನೆ ಹರಿಯಾಣದಿಂದ ಅಲ್ಲಿನ ಮಂತ್ರಿಗಳು ಮತ್ತು ಸೆಕ್ರೆಟರಿಗಳು ಬಂದಿದ್ದಾಗ ಇ.ಎಸ್.ಐ. ಹಾಸ್ಪಿಟಲ್ ವಿಸಿಟ್ ಮಾಡಿದ್ದಾರೆ ; ರೆವ್ಯೂ ಮೀಟಿಂಗ್‌ಗೆ ಅಟೆಂಡ್ ಮಾಡಿದ್ದಾರೆ. ಅವರು ಹೋಗುವಾಗ ಇಲಾಖೆ ಬಗ್ಗೆ ಮತ್ತು ಇ.ಎಸ್.ಐ ಆಸ್ಪತ್ರೆ ಬಗ್ಗೆ ವರ್ಣನೆ ಮಾಡಿದ ನಿದರ್ಶನ ಇದೆ. ಅಲ್ಲಿ ಅವ್ಯವಹಾರ ನಡೆದಿದೆ ಎಂಬ ಬಗ್ಗೆ ಹಲವಾರು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಎಲ್ಲಾ ಔಷಧಿ ಮಾತ್ರೆ, ಇಂಜಕ್ಷನ್‌ಗಳಿಗೆ ತಮ್ಮದ್ದೇ ಆದ ಸ್ಲಿಪ್ಸ್ ಇರಬೇಕೆಂದು ಮಾಡಿದ್ದೇವೆ. ಇ.ಎಸ್. ಐ.ಆಸ್ಪತ್ರೆಯಲ್ಲಿ ಕ್ಯಾಪ್‌ಸುಲ್ಸ್ ಕೊಡಬೇಕಾದರೆ ಸೀಲನ್ನು ರೋಗಿಯ ಎದುರಿಗೆ ಓಪನ್ ಮಾಡಿಕೊಡಬೇಕೆಂದು ಮಾಡಿದ್ದೇವೆ. ಇಂದಿರಾನಗರ ಆಸ್ಪತ್ರೆಯಲ್ಲಿ ವೈದ್ಯರ ಮೇಲೆ ನಿಯಂತ್ರಣ ಇಡುವ ಸಲುವಾಗಿ 2 ಲಕ್ಷ ರೂಪಾಯಿ ಖರ್ಚು ಮಾಡಿ ಮೆಷಿನರಿ ಇನ್‌ಸ್ಟಾಲ್ ಮಾಡುತ್ತಿದ್ದೇವೆ. ಬೆಂಗಳೂರ ನಗರದಲ್ಲಿ ಏಡ್ಸ್ ಎಂಬ ಹೊಸ ರೋಗ ಬಂದಿದೆ. ಇದನ್ನು ನಿಯಂತ್ರಿಸುವ ಸಲುವಾಗಿ ಡಿಸ್‌ಪೋಸಬಲ್ ನೀಡಲ್ಸ್ ಮತ್ತು ಸಿರೇಂಜ್‌ಗಳನ್ನು ಖರೀದಿ ಮಾಡಬೇಕೆಂದು ಡೈರೆಕ್ಷನ್ ಕೊಟ್ಟಿದ್ದೇನೆ. ಇಷ್ಟಾದರೂ ಇ.ಎಸ್.ಐ. ಬಗ್ಗೆ ಸಂಶಯ ಕಂಡುಬಂದರೆ ವೈದ್ಯರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂಬುದು ಕಂಡು ಬಂದರೆ ಅದನ್ನು ನನ್ನ ಗಮನಕ್ಕೆ ತಂದರೆ ಖಂಡಿತ ಕ್ರಮತೆಗೆದುಕೊಳ್ಳುತ್ತೇನೆ.

ಉಪಾಧ್ಯಕ್ಷಿಣಿಯವರು : ಈಗ ಸಹಕಾರ ಸಚಿವರಿಂದ ಉತ್ತರ.

ಸಹಕಾರ ಸಚಿವರಿಂದ ಉತ್ತರ

ಶ್ರೀ ಎಸ್.ಆರ್. ಮೋರೆ (ಸಹಕಾರ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ಇಲಾಖೆಯ ಬೇಡಿಕೆ ಮೇಲೆ ಉತ್ತರ ನೀಡಲು ನಿಂತಿದ್ದೇನೆ. ಅನೇಕ ಹಿರಿಯ ಸದಸ್ಯರು ರಚನಾತ್ಮಕವಾದ ಟೀಕೆಗಳನ್ನು ಮಾಡಿದ್ದಾರೆ, ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ಸ್ವಾಗತಿಸುತ್ತಾ ಮಾನ್ಯ ಸದಸ್ಯರುಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ. ನನ್ನ ಕಾರ್ಯವ್ಯಾಪ್ತಿಯಲ್ಲಿ ಈ ಕೆಳಕಂಡ ಇಲಾಖೆಗಳು ಬರುತ್ತವೆ. ಅವುಗಳಲ್ಲಿ ಸಹಕಾರ, ಕೃಷಿ ಮಾರಾಟ ಇಲಾಖೆ, ರಾಜ್ಯದ ಉಗ್ರಾಣ ನಿಗಮ, ಅಪೆಕ್ಸ್ ಬ್ಯಾಂಕ್, ಲ್ಯಾಂಡ್‌ಡೆವಲಪ್‌ಮೆಂಟ್ ಬ್ಯಾಂಕ್, ಇಂಡಸ್ಟ್ರಿಯಲ್ ಕೋ ಆಪರೇಟೀವ್ ಬ್ಯಾಂಕ್,

ಮಾರಾಟ ಮಹಾ ಮಂಡಲಿ, ಸಹಕಾರ ಮಹಾ ಮಂಡಲಿ, ಸಕ್ಕರೆ ಕಾರ್ಖಾನೆ, ನೂಲಿನ ಕಾರ್ಖಾನೆ ಇತ್ಯಾದಿಗಳು ಬರುತ್ತವೆ. ರಾಜ್ಯದಲ್ಲಿ 31-3-91ರ ಅಂತ್ಯಕ್ಕೆ 26237 ಸಹಕಾರ ಸಂಘಗಳು ಇದ್ದು ಅವುಗಳಲ್ಲಿ 1.18 ಕೋಟಿ ಮಂದಿ ಸದಸ್ಯರಿರುತ್ತಾರೆ. ಈ ಪೈಕಿ 4542 ಸಂಘಗಳು ಲಿಕ್ವಿಡೇಟ್ ಆಗಿವೆ. 3452 ಸಂಘಗಳು ನಿಷ್ಕ್ರಿಯ ಅಂದರೆ ಡೀಫಂಕ್ಟ್ ಆಗಿವೆ. ಈ ಸಂದರ್ಭಗಳಲ್ಲಿ 431.08 ಕೋಟಿ ರೂಪಾಯಿ ಷೇರು ಹಣವನ್ನು ನಾವು ತೊಡಗಿಸಿದ್ದು ಅದರ ಪೈಕಿ 146.45 ಕೋಟಿ ರೂಪಾಯಿ ಸರ್ಕಾರದ ಷೇರ್ ಆಗಿದೆ. 11811 ಸಹಕಾರ ಸಂಘಗಳು ಲಾಭದಲ್ಲಿ ನಡೆಯುತ್ತಿದ್ದು 5690 ಸಂಘಗಳು ನಷ್ಟ ಅನುಭವಿಸುತ್ತಿವೆ. ಸರ್ಕಾರವು ಸಹಕಾರ ಸಂಘಗಳಿಗೆ ಆರ್ಥಿಕ ನೆರವು ನೀಡುತ್ತಿದ್ದು ಈ ಆರ್ಥಿಕ ನೆರವು ಷೇರು ಧನ, ದುಡಿಯುವ ಬಂಡವಾಳ ಹಾಗೂ ಸಿಬ್ಬಂದಿ ಸಹಾಯಧನವನ್ನು ಒಳಗೊಂಡಿರುತ್ತದೆ. ಇದೂ ಅಲ್ಲದೆ ಸರ್ಕಾರವು ಸಹಕಾರ ಸಂಸ್ಥೆಗಳಿಗೆ ಸಾಲ ಸೌಲಭ್ಯಗಳನ್ನು ಹಣಕಾಸು ಸಂಸ್ಥೆಗಳಿಂದ ಪಡೆಯಲು ಗ್ಯಾರಂಟಿ ನೀಡಿರುತ್ತದೆ. ಇದುವರೆಗೆ ಸರ್ಕಾರ 146.65 ಕೋಟಿ ರೂಪಾಯಿ ಷೇರು ಧನವನ್ನು ನೀಡಿದೆ. ಆರ್ಥಿಕ ನೆರವನ್ನು ಪ್ರಾಥಮಿಕ ಪತ್ತಿನ ವ್ಯವಸಾಯ ಸಹಕಾರ ಸಂಘಗಳ ಗೋದಾಮುಗಳ ನಿರ್ಮಾಣಕ್ಕೆ ಮತ್ತು ಮಾರುಕಟ್ಟೆ ಸಹಕಾರ ಸಂಘಗಳ ಗೋದಾಮುಗಳ ನಿರ್ಮಾಣಕ್ಕೆ ನೀಡಿರುತ್ತೇವೆ. ಅದೂ ಅಲ್ಲದೆ ಅಕ್ಕಿ ಗಿರಣಿಗಳು ಎಣ್ಣೆ ಗಿರಣಿಗಳು ಇವುಗಳ ಅಭಿವೃದ್ಧಿಗೆ ಆರ್ಥಿಕ ಸಹಾಯ ನೀಡಿದೆ. ಇತ್ತೀಚೆಗೆ ಬೃಹತ್ ಪ್ರಮಾಣದಲ್ಲಿ ಸಕ್ಕರೆ ಕಾರ್ಖಾನೆಗಳು, ನೂಲಿನ ಗಿರಣಿಗಳ ಸ್ಥಾಪನೆಗೆ ಮತ್ತು ನವೀಕರಣಕ್ಕೆ ಉತ್ತೇಜನ ನೀಡಿದ್ದು ಆರ್ಥಿಕ ನೆರವು ನೀಡಿದೆ. ಗಿರಿಜನರ ಅಭಿವೃದ್ಧಿಗಾಗಿ, ಗಿರಿಜನರ ಉದ್ಯೋಗ ಯೋಜನೆ ಅಡಿಯಲ್ಲಿ ಗಿರಿಜನರ ಸಹಕಾರ ಸಂಘಗಳಿಗೆ ಆರ್ಥಿಕ ಸಹಾಯವನ್ನು ನೀಡಲಾಗುತ್ತಿದೆ. ಹಾಗೂ ವಿಶೇಷ ಘಟಕ ಯೋಜನೆಯಲ್ಲಿ ಪರಿಶಿಷ್ಟ ಜಾತಿ ಸದಸ್ಯರಿಗೆ ಸಹಕಾರ ಸಂಘಗಳ ಸದಸ್ಯತ್ವ ಹೊಂದಲು ಷೇರು ರೂಪದಲ್ಲಿ ಮತ್ತು ಸಾಲ ಪಡೆಯಲು ಹೆಚ್ಚುವರಿ ಷೇರು ಹಣವನ್ನು ನೀಡುವ ಮೂಲಕ ಹೆಚ್ಚಿನ ಆರ್ಥಿಕ ನೆರವು ದೊರಕಿಸಿಕೊಡಲಾಗುತ್ತಿದೆ. ನಿನ್ನೆ ಬಹಳ ವಿವರವಾಗಿ ಚರ್ಚೆ ಆಯಿತು. ಆ ಚರ್ಚೆ ಕಾಲದಲ್ಲಿ ಅನೇಕ ಹಿರಿಯ ಸದಸ್ಯರು ಅನೇಕ ವಿಷಯಗಳನ್ನು ಕೂಡ ಪ್ರಸ್ತಾಪ ಮಾಡಿದ್ದಾರೆ. ಮೊದಲನೆಯದಾಗಿ ಶ್ರೀಮಾನ್ ಎಂ. ಪಿ. ವೆಂಕಟೇಶ್ ಅವರು ಸರ್ಕಾರವು ಸಹಕಾರಿ ಇಲಾಖೆಗೆ ಯಾವರೀತಿಯ ಪ್ರೋತ್ಸಾಹ ನೀಡುತ್ತದೆ ಮತ್ತು ಉಪ ವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರಿಗೆ ಲೆಕ್ಕಪರಿಶೋಧನಾ ಇಲಾಖೆಸಹಾಯಕ ನಿರ್ದೇಶಕರಿಗೆ ಯಾವುದೇ ವಾಹನ ಸೌಲಭ್ಯ ಇರುವುದಿಲ್ಲ, ಸಾಕಷ್ಟು ಇಂಧನ ಪೂರೈಕೆ ಇರುವುದಿಲ್ಲ ಎಂದು ಪ್ರಸ್ತಾಪ ಮಾಡಿದ್ದಾರೆ. ಇದು ನಮಗೂ ಕೂಡ ಮನವರಿಕೆಯಾಗಿದೆ. ವಾಹನ ಸೌಲಭ್ಯ ಇಲ್ಲದೆ ಸಹಕಾರ ಇಲಾಖೆ ಅಧಿಕಾರಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಇದನ್ನು ನಾವು ಹಂತಹಂತವಾಗಿ ಹಣಕಾಸಿನ ಪರಿಸ್ಥಿತಿ ಆಧಾರದ ಮೇಲೆ ನಾವು ಒದಗಿಸಲು ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ಪಿ. ವೆಂಕಟೇಶ್ : ಅರಣ್ಯ ಇಲಾಖೆಯಲ್ಲಿ ವಾಹನವನ್ನು ದುರುಪಯೋಗ ಮಾಡಿದ್ದಾರೆ.

ಉಪಾಧ್ಯಕ್ಷರು : ಅವರು ಮಾತನಾಡಿ ಮುಗಿಸಲಿ. ಆಮೇಲೆ ತಾವು ಕೇಳಿ. ತಾವು (ಮಾನ್ಯ ಮಂತ್ರಿಗಳಿಗೆ) ಈಲ್ಡ್ ಆಗುವುದು ಬೇಗ. ತಾವು ಮುಂದುವರಿಸಿ.

ಶ್ರೀ ಎಸ್.ಆರ್. ಮೋರೆ : ಎರಡನೆಯದಾಗಿ, ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್, ಮತ್ತು ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಿಗೆ

ಕಾರ್ಯನಿರ್ವಾಹಕ ನಿರ್ದೇಶಕರನ್ನು ನೇಮಕ ಮಾಡಲಾಗುತ್ತಿದ್ದು ಅನುಭವಸ್ಥ ಸಹಕಾರಿ ಇಲಾಖೆ ನೌಕರರನ್ನು ನೇಮಕ ಮಾಡಬೇಕು ಎಂದು ಹೇಳಿದ್ದೀರಿ ಸಲಹೆ ಬಹಳ ಸೂಕ್ತವಾಗಿದೆ. ಸೂಕ್ತ ಸಮಯದಲ್ಲಿ ಅದನ್ನು ಪರಿಶೀಲನೆ ಮಾಡುತ್ತೇವೆ. ಮೂರನೆಯದು, ಸಹಕಾರ ಸಕ್ಕರೆ ಕಾರ್ಖಾನೆ ವಿಷಯಗಳ ಬಗ್ಗೆ ಅರಿವು ಇಲ್ಲದ ಕರ್ನಾಟಕ ಆಡಳಿತ ಸೇವೆಯ ಅಧಿಕಾರಿಗಳನ್ನು ನೇಮಿಸುತ್ತೀರಿ ಎಂದು ಹೇಳಿದ್ದಾರೆ. ಆದರೆ ಆ ಬಗ್ಗೆ ಇಲಾಖೆ ಅಧಿಕಾರಿಗಳಿಗೆ ಬಡ್ತಿ ಕೊಟ್ಟಾಗ ಆಡಳಿತ ಸೇವೆ ಅಧಿಕಾರಿಗಳನ್ನು ಬದಲಾಯಿಸಲಾಗುವುದು. ನಾಲ್ಕನೆಯದಾಗಿ 20ರಿಂದ 22 ವರ್ಷ ಸೇವೆ ಸಲ್ಲಿಸಿದ ಪತ್ರಾಂಕಿತರಲ್ಲದ ಅಂದರೆ ಎನ್.ಜಿ.ಓ. ಅಧಿಕಾರಿಗಳಿಗೆ ಪದೋನ್ನತಿಗಳನ್ನು ನೀಡುತ್ತಿಲ್ಲ ಎಂದು ಹೇಳಿದ್ದೀರಿ. ಇದರ ಬಗ್ಗೆ ಹೇಳಬೇಕಾದರೆ ಈಗಾಗಲೇ ಸುಮಾರು 120 ನೌಕರಿಗೆ ಬಡ್ತಿ ನೀಡಿದ್ದು ಇನ್ನುಳಿದ ಖಾಲಿ ಹುದ್ದೆಗಳಿಗೆ ಬಡ್ತಿ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಐದನೆಯದು, ಹಾಲಿ ಸಹಕಾರ ಇಲಾಖೆ ಸಹಕಾರ ವಿಸ್ತರಣಾಧಿಕಾರಿಗಳು ತಾಲ್ಲೂಕು ಮಟ್ಟದಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಚೇರಿಯಲ್ಲಿ ಕೆಲಸ ಮಾಡುತ್ತಿರುವ ಸಹಕಾರ ಸಂಘಗಳ ಸಹಾಯಕ ನಿಬಂಧಕರಿಗೆ ವರ್ಗಾಯಿಸತಕ್ಕದ್ದು ಎಂದು ಹೇಳಿದಿರಿ. ಇದರ ಬಗ್ಗೆ ಹೇಳಬೇಕೆಂದರೆ ಸಹಕಾರಿ ವಿಸ್ತರಣಾ ಅಧಿಕಾರಿಗಳನ್ನು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಚೇರಿಯಿಂದ ವಾಪಸ್ ಪಡೆದು ತಾಲ್ಲೂಕು ಮಟ್ಟದ ಸಹಕಾರಿ ಅಭಿವೃದ್ಧಿ ಅಧಿಕಾರಿಗಳ ಜೊತೆ ಕೆಲಸ ನಿರ್ವಹಿಸುವ ವ್ಯವಸ್ಥೆ ಮಾಡಲಾಗುವುದು. 6ನೆಯದಾಗಿ ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರ ಸಂಘಗಳು ಹಾಗೂ ಇತರೆ ಸಹಕಾರ ಸಂಘಗಳಲ್ಲಿ ನಿಯಂತ್ರಿತ ಆಹಾರ ಪದಾರ್ಥಗಳ ವಿತರಣೆ ಮತ್ತು ಗೊಬ್ಬರದ ವಿತರಣೆಗೆ ಸಾಕಷ್ಟು ಹಣ ದೊರೆತಿಲ್ಲ ಎಂದು ಹೇಳುತ್ತೀರಿ. ಈ ಬಗ್ಗೆ ಆಹಾರ ಇಲಾಖೆಯಿಂದ ನಮ್ಮ ಖಾತೆಗೆ 8-9 ಕೋಟಿ ರೂಪಾಯಿ ಬರಬೇಕಾಗಿದೆ. ಈ ಬಗ್ಗೆ ಆಹಾರ ಇಲಾಖೆ ಜೊತೆ ಚರ್ಚಿಸಿ ಆದಷ್ಟು ಬೇಗ ಇತ್ಯರ್ಥಪಡಿಸಿ ಕ್ರಮ ತೆಗೆದುಕೊಳ್ಳುತ್ತೇನೆ. 7ನೆಯದು ಮೈಸೂರು ನಗರದ ಗೃಹನಿರ್ಮಾಣ ಸಹಕಾರ ಸಂಘಗಳಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ನಿವೇಶನ ಹಂಚಿಕೆ ಮಾಡಿಲ್ಲ, ಅವರನ್ನು ಸದಸ್ಯರನ್ನಾಗಿ ಮಾಡಿಕೊಂಡಿಲ್ಲ ಎಂಬುದು. ಆದರೆ ಕಾಯ್ದೆ ಪ್ರಕಾರ ಸದಸ್ಯರಾಗಲು ಯಾವುದೇ ಬಾಕಿ ಅಡ್ಡಬರುವುದಿಲ್ಲ. ಷೆಡ್ಯೂಲ್ಡ್ ಕಾಸ್ಟ್ ವರ್ಗದವರಿಗೆ ನಿವೇಶನ ಹಂಚಿಕೆಯಲ್ಲಿ ಮೀಸಲಾತಿ ನೀಡಲು ಮಾದರಿ ಬೈಲಾ ಎಂದು ನೀವು ಸೂಚಿಸಿದ್ದು, ಇದು ಪರಿಶೀಲನೆಯಲ್ಲಿದೆ. ಈಗಾಗಲೇ ಈ ಬಗ್ಗೆ ಕ್ಯಾಬಿನೆಟ್ ಸಬ್ ಕಮಿಟಿ ಮುಂದೆ ಇದೆ ಈ ವಿಚಾರದ ಬಗ್ಗೆ 4-5 ಸಿಟ್ಟಿಂಗ್ಸ್ ಆಗಿದೆ. ಇನ್ನು 2 ಸಿಟ್ಟಿಂಗ್ಸ್‌ನಲ್ಲಿ ಮುಗಿಸಿ ಇದರಬಗ್ಗೆ ಒಂದು ಉಪಯುಕ್ತವಾದ ಹೊಸ ಮಾದರಿ ಬೈಲಾ ಅಳವಡಿಸಿಕೊಳ್ಳುತ್ತೇವೆಂದು ಹೇಳುತ್ತೇನೆ.

ಇನ್ನು ಎರಡನೆಯದಾಗಿ, ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್‌ನೊಂದಿಗೆ ಕೃಷಿ ಮತ್ತು ಕರ್ನಾಟಕ ರಾಜ್ಯ ಕೃಷಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕನ್ನು ವಿಲೀನಗೊಳಿಸುವ ಬಗ್ಗೆ. ಇದರ ಬಗ್ಗೆ ಈಗಾಗಲೇ ಆಂಧ್ರಪ್ರದೇಶದಲ್ಲಿ ಮಾಡಿದ್ದಾರೆ. ಅದನ್ನು ಅಧ್ಯಯನ ಮಾಡುವುದಕ್ಕೆ ಅಧಿಕಾರಿಗಳು ಹೋಗಿದ್ದರು. ಅವರು ಅಧ್ಯಯನ ಮಾಡಿ ಬಂದಿದ್ದಾರೆ. ಇದರ ಸಾಧಕ ಬಾಧಕಗಳನ್ನು ವಿಚಾರ ಮಾಡಿ, ಇದು ನಮ್ಮ ರಾಜ್ಯಕ್ಕೆ ಅನುಕೂಲವಾದರೆ ಅದನ್ನೂ ಕೂಡಾ ಮಾಡುವುದಕ್ಕೆ ನಾವು ಪರಿಶೀಲನೆ ಮಾಡುತ್ತೇವೆ. ಶ್ರೀಮಾನ್ ಜಿ. ಎಸ್. ಶಿವನಂಜಪ್ಪನವರು ಒಂದು ಪ್ರಸ್ತಾಪ ಮಾಡಿದ್ದಾರೆ. ರಾಜ್ಯದಲ್ಲಿ ಯಾವುದೇ ಸಹಕಾರ ಸಂಘದಲ್ಲಿ ಹಣದುರುಪಯೋಗ ಆಗಿದೆಯೇ? ಹಣ ದುರುಪಯೋಗ ಪ್ರಕರಣದಲ್ಲಿ ಸಂಘದ ಕಾರ್ಯ ನಿರ್ವಹಣಾ ಮಂಡಲಿ ರದ್ದತಿ ಕಾರ್ಯಕ್ರಮಗಳಾಗುತ್ತಿದ್ದು ಸಮಾಪನಗೊಂಡ ಸಹಕಾರ ಸಂಘಗಳಲ್ಲಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತಿದೆಯೇ

ಎಂದು ಕೇಳಿದ್ದಾರೆ. ಇಲ್ಲಿಯವರೆಗೆ 8,352 ದುರುಪಯೋಗ ಪ್ರಕರಣಗಳು ಬೆಳಕಿಗೆ ಬಂದಿದ್ದು, 2,815 ಪ್ರಕರಣಗಳಲ್ಲಿ ಹಣ ವಸೂಲಿ ಮಾಡಲಾಗಿದೆ. 5,537 ಪ್ರಕರಣಗಳಲ್ಲಿ ಸಿವಿಲ್ ಕೇಸ್ ಹಾಕಿದ್ದೇವೆ. 2,862 ಪ್ರಕರಣಗಳಲ್ಲಿ ಕ್ರಿಮಿನಲ್ ಕೇಸ್ ಹಾಕಿದ್ದೇವೆ. ಸಮಾಪನಗೊಂಡ ಸಂಘಗಳಲ್ಲಿ ನೋಂದಣಿ ರದ್ದು ಮಾಡಲು ಅಥವಾ ರೀವೈವ್ ಮಾಡುವುದಕ್ಕೆ ಕ್ರಮ ತೆಗೆದಕೊಳ್ಳುತ್ತಿದ್ದೇವೆ. ಎರಡನೆಯದಾಗಿ, ಶಿವನಂಜಪ್ಪನವರು ಮಾತನಾಡುತ್ತಾ, ಸಗಟು ಮಾರಾಟ ಸಹಕಾರ ಸಂಘ ಮತ್ತು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಗಳಲ್ಲಿ ಸಾಕಷ್ಟು ಹಣದ ಲಭ್ಯತೆ ಇದೆ, ನಿಯಂತ್ರಣ ಹಾಗೂ ಆಹಾರ ಸಾಮಗ್ರಿಗಳನ್ನು ಎತ್ತುವಳಿ ಮಾಡಲಾಗುತ್ತಿಲ್ಲ ಹಾಗೂ ಸಾಗಾಣಿಕೆ ವೆಚ್ಚದ ಹಣವು ಆಹಾರ ಇಲಾಖೆಯಲ್ಲಿಯೇ ಸ್ಥಗಿತಗೊಂಡಿದೆ ಎಂದು ಹೇಳಿದರು. ಈ ಬಗ್ಗೆ ಆಹಾರ ಇಲಾಖೆ ಜೊತೆ ಚರ್ಚೆ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಹಿರಿಯ ಸದಸ್ಯರೂ ಹಾಗೂ ಮಾಜಿ ಮಂತ್ರಿಗಳಾದ ಆರ್. ವಿ. ದೇಶಪಾಂಡೆಯವರು ಕೂಡಾ ಪ್ರಸ್ತಾಪ ಮಾಡಿದ್ದಾರೆ. ಸಹಕಾರ ಸಂಘಗಳ ಕಾಯ್ದೆಗಳಿಗೆ ತಿದ್ದುಪಡಿ ಮಾಡಲು ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳಿದ್ದಾರೆ. ಈ ವಿಷಯ ಈಗಾಗಲೇ ಪರಿಶೀಲನೆಯಲ್ಲಿದ್ದು ಬರುವ ಸದನ ಎಂದರೆ ಮುಂದೆ ನಾವು ಏನು ಅಸೆಂಬ್ಲಿ ಕರೆಯುತ್ತೇವೆ ಅದರಲ್ಲಿ ಇಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ. ಎರಡನೆಯದಾಗಿ, ಸಹಕಾರ ಸಂಘಗಳ ಚುನಾವಣೆಯನ್ನು ಸರಿಯಾದ ಸಮಯದಲ್ಲಿ ನಡೆಸುವ ಬಗ್ಗೆ ಈ ಸದನದ ತೀರ್ಮಾನದಂತೆ 2 ತಿಂಗಳು ಮುಂದೆ ಹಾಕಿದ್ದ ಚುನಾವಣೆಗಳನ್ನು, ತಾಲ್ಲೂಕು ಮಟ್ಟದ ಚುನಾವಣೆಯನ್ನು 15ನೇ ಅಕ್ಟೋಬರ್‌ನಿಂದ 30ನೇ ಅಕ್ಟೋಬರ್ ಒಳಗೂ, ಜಿಲ್ಲಾಮಟ್ಟದ ಚುನಾವಣೆಗಳನ್ನು 16ನೇ ನವೆಂಬರ್‌ನಿಂದ 30ನೇ ನವೆಂಬರ್ ಒಳಗೂ, ರಾಜ್ಯ ಮಟ್ಟದ ಚುನಾವಣೆಗಳನ್ನು 16ನೇ ಡಿಸೆಂಬರ್‌ನಿಂದ 30ನೇ ಡಿಸೆಂಬರ್ ಒಳಗೂ ಮುಗಿಸುತ್ತೇವೆಂದು ಹೇಳುತ್ತೇನೆ. ಇನ್ನೊಂದು ಬಹಳ ಉತ್ಕೃಷ್ಟವಾದ ಪ್ರಸ್ತಾಪವನ್ನು ಮಾನ್ಯ ದೇಶಪಾಂಡೆಯವರು ಮಾಡಿದ್ದಾರೆ. ಸಹಕಾರ ಸಂಘಗಳಲ್ಲಿ ಸರ್ಕಾರ ಪ್ರವೇಶ ಮಾಡಬಾರದು ಎಂದಿದ್ದಾರೆ. ನಾನೂ ಕೂಡಾ ಇದರ ಬಗ್ಗೆ ಬಹಳ ನಂಬಿಕೆಯನ್ನು ಇಟ್ಟಿದ್ದೇನೆ. ಆದುದರಿಂದ ಇದರ ಬಗ್ಗೆ ಸಮಗ್ರ ತಿದ್ದುಪಡಿಯಲ್ಲಿ ನಾನು ಪರಿಶೀಲನೆ ಮಾಡುತ್ತೇನೆಂದು ಹೇಳುತ್ತಿದ್ದೇನೆ. ಸಹಕಾರಿ ಸಂಘಗಳಿಗೆ ಆಡಳಿತ ಮಂಡಲಿ ಸದಸ್ಯರುಗಳನ್ನು ನಾಮನಿರ್ದೇಶನ ಮಾಡುವುದನ್ನು ಆದಷ್ಟು ಬೇಗ ನಿಲ್ಲಿಸಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ಹೇಳಬೇಕೆಂದರೆ, ಸಹಕಾರಿ ಕಾಯ್ದೆ ಕಲಮ್ 53(ಎ) ರೀತಿ ಹೆಚ್ಚಿನ ಜನರನ್ನು ನಾಮಿನೇಷನ್ ಮಾಡುವ ಅಧಿಕಾರ ಇದೆ. ಆದರೂ ಕೂಡಾ 3 ಜನರನ್ನು ಕೂಡಾ ನಾವು......

ಶ್ರೀ ಆರ್.ವಿ. ದೇಶಪಾಂಡೆ : ನಾವು ಇದ್ದಾಗ ಪ್ರಯತ್ನ ಮಾಡಿದೆವು. ನಮಗೆ ಕಷ್ಟ ಆಯಿತು. ಮಾನ್ಯ ಜಾಲಪ್ಪನವರೂ ಬಹಳ ಕಷ್ಟಪಟ್ಟರು. ನಿಮಗೂ ತೊಂದರೆ ಆದರೆ ಬೇಡ. ಆದರೆ ಪ್ರಯತ್ನ ಮಾಡಿ.

ಶ್ರೀ ಎಸ್.ಆರ್. ಮೋರೆ : ಕ್ರಮೇಣವಾಗಿ ಇದನ್ನು ನಾವೂ ನೀವೂ ಕೂಡಿ ತೆಗೆಯಲಿಕ್ಕೆ ಪ್ರಯತ್ನ ಮಾಡೋಣ.

ಶ್ರೀ ಆರ್.ಎಲ್. ಜಾಲಪ್ಪ : ಕೆಲವು ಸಂಸ್ಥೆಗಳಿಗೆ ಅನಿವಾರ್ಯವಾಗಿ ಮಾಡಲೇಬೇಕಾಗುತ್ತದೆ. ಪ್ರೆಷರ್ ಇರಲಿ ಇಲ್ಲದಿರಲಿ ಮಾಡಬೇಕು. ಏಕೆಂದರೆ ಸರ್ಕಾರ ಲಕ್ಷಾಂತರ ರೂಪಾಯಿ ಇನ್ವೆಸ್ಟ್ ಮಾಡಿರುತ್ತದೆ. 50 ಲಕ್ಷ, 1 ಕೋಟಿ, 2 ಕೋಟಿ ರೂಪಾಯಿ ಹಾಗೂ ಡಿಬೆಂಚರ್‌ಗೆ ನೀವು ಗ್ಯಾರಂಟಿ ಕೊಟ್ಟಿರುವಾಗ ಅಂತಹ ಸಂಸ್ಥೆಗೆ ನೀವು ಮಾಡಬೇಕಾಗುತ್ತದೆ. ಆದರೆ 500, 2 ಸಾವಿರ, 5 ಸಾವಿರ ರೂಪಾಯಿ

ಕೊಟ್ಟಿರುವ ಸಂಸ್ಥೆಗೂ ನಾಮಿನೇಷನ್ ಮಾಡಿದರೆ we will become laughing stock. ದಯವಿಟ್ಟು ಇಂತಹದ್ದನ್ನು ರೀಕನ್ಸಿಡರ್ ಮಾಡಬೇಕು.

50 ಪರ್ಸೆಂಟ್ ಷೇರ್ ಕ್ಯಾಪಿಟಲ್ ಇದ್ದರೆ ಅಂತಹ ಕಡೆ ನಾಮಿನೇಟ್ ಮಾಡಬೇಕು. ನೀವು ಸಾಲಕ್ಕೆ ಎಲ್ಲಿ ಗ್ಯಾರಂಟಿ ಕೊಟ್ಟಿರುತ್ತೀರಿ ಅಂತಹ ಕಡೆ ನಾಮಿನೇಟ್ ಮಾಡಬೇಕೆಂದು ಇದೆ. ನೀವು ಎಲ್ಲಾ ಕಡೆ ನಾಮಿನೇಟ್ ಮಾಡುತ್ತಾ ಹೋದರೆ ಹೇಗೆ? 2 ಸಾವಿರ 3 ಸಾವಿರ 10 ಸಾವಿರ ಷೇರ್‌ಕ್ಯಾಪಿಟಲ್ ಇರುವ ಕಡೆ ಎಲ್ಲಾ ನಾಮಿನೇಟ್ ಮಾಡುತ್ತಾ ಹೋದರೆ ಬಹಳ ಕಷ್ಟವಾಗುತ್ತದೆ. ನಮ್ಮಲ್ಲಿ ಸಾವಿರಾರು ಸಹಕಾರ ಸಂಘಗಳಿವೆ; ಆ ರೀತಿ ಮಾಡಿದರೆ ಇದೇ ಒಂದು ಕೆಲಸ ಆಗುತ್ತದೆ. ನಿಮಗೆ ಬೇರೆ ಕೆಲಸವನ್ನು ಮಾಡಲು ಆಗುವುದಿಲ್ಲ. ಸಹಕಾರಸಂಘಗಳು ಹಾಳಾಗಿವೆ, ಪ್ರಾಥಮಿಕ ಸಹಕಾರ ಸೊಸೈಟಿಗಳಿಗೆ ಸಾಲ ಸಿಗುತ್ತಿಲ್ಲ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳಲ್ಲಿ ಸಾಲ ಸಿಗುತ್ತಿಲ್ಲ. ಸಾಲ 7 ಪರ್ಸೆಂಟ್, 9 ಪರ್ಸೆಂಟ್, 11 ಪರ್ಸೆಂಟ್ ಸಾಲ ವಸೂಲಿಯಾಗುತ್ತಿದೆ. ಈ ರೀತಿಯಾದರೆ ಇನ್ನು ಎರಡು ತಿಂಗಳುಗಳಲ್ಲಿ ಅಲ್ಲಿರುವ ಸಿಬ್ಬಂದಿಗೆ ಸಂಬಳ ಕೊಡುವುದಕ್ಕೆ ದುಡ್ಡಿಲ್ಲ. ಡಿಬೆಂಚರ್ ಸಾಲಕ್ಕೆ ನೀವೇನು ಜಾಮೀನು ಆಗಿದ್ದೀರಿ ಅವುಗಳೆಲ್ಲಾ ನಬಾರ್ಡ್‌ಗೆ ಡಿಫಾಲ್ಟರ್ ಆಗಿದ್ದಾರೆ. ಅದರ ಕಡೆಗೆ ಗಮನ ಕೊಡದೆ ಬರೀ ಸೊಸೈಟಿಗಳಿಗೆ ನಾಮಕರಣ ಮಾಡಿಕೊಂಡು ಕುಳಿತುಕೊಳ್ಳುವುದರಿಂದ ಸಹಕಾರ ಇಲಾಖೆ ಉದ್ಧಾರವಾಗುವುದಿಲ್ಲ. ದಯವಿಟ್ಟು ಅದನ್ನು ರೀಕನ್ಸಿಡರ್ ಮಾಡಿಯೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಸ್.ಆರ್. ಮೋರೆ : ಮಾನ್ಯ ಜಾಲಪ್ಪನವರು ಒಂದು ಒಳ್ಳೆಯ ಸಲಹೆ ಕಟ್ಟಿದ್ದಾರೆ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಮಾನ್ಯ ದೇಶಪಾಂಡೆಯವರು ರೈತರ ಸಾಲ ಮನ್ನಾದ ಬಗ್ಗೆ ಆದಷ್ಟು ಬೇಗ ಪಾಲಿಸಿ ಡಿಸಿಷನ್ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಸಾಲ ಮನ್ನಾದ ಬಗ್ಗೆ ಈಗಾಗಲೇ ಕೇಂದ್ರಸರ್ಕಾರ ಒಪ್ಪಿಲ್ಲ. ಇದನ್ನು ಒತ್ತಾಯಿಸಲು ಮಾನ್ಯ ಮುಖ್ಯಮಂತ್ರಿಗಳು ಸರ್ವಪಕ್ಷಗಳ ನಿಯೋಗವನ್ನು ಕೇಂದ್ರಸರ್ಕಾರದ ಬಳಿಗೆ ನಾಳೆ ತೆಗೆದುಕೊಂಡು ಹೋಗಲಿದ್ದಾರೆ. ತಾವೆಲ್ಲರೂ ಹೋಗುತ್ತಾ ಇದ್ದೀರಿ. ಅನಂತರ ತೀರ್ಮಾನಗಳನ್ನು ಹೇಳುತ್ತೇನೆ. ಅವರ 6ನೆಯ ಪ್ರಸ್ತಾಪ ಶೇಕಡ 7ರಷ್ಟು ಸಾಲ ಕೊಡಲು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದಾರೆ. ಈ ಬಗ್ಗೆ ನಬಾರ್ಡ್ ಸಂಸ್ಥೆ ಅಬ್ಜೆಕ್ಷನ್ ಹಾಕುತ್ತದೆ. ಅದರ ಬಗ್ಗೆ ಅನೇಕ ಸಲ ಉಲ್ಲೇಖನ ಮಾಡಿದ್ದೇನೆ. ಅದರ ಬಗ್ಗೆ ಏನು ತೀರ್ಮಾನ ತೆಗೆದುಕೊಳ್ಳಬೇಕೆನ್ನುವ ಬಗ್ಗೆ ಕೂಲಂಕುಷವಾಗಿ ನಾವು ನೀವು ಪರಿಶೀಲನೆ ಮಾಡೋಣವೆಂದು ಹೇಳುತ್ತೇನೆ. ಮಾನ್ಯ ಸದಸ್ಯರಾದ ರುಕ್ಮಯ್ಯ ಪೂಜಾರಿಯವರು ಮುಲ್ಕಿ ಪ್ರಾಥಮಿಕ ಸಹಕಾರ ಬ್ಯಾಂಕಿನಲ್ಲಿ ನಡೆದಿರುವ ಆಭರಣ ಸಾಲದ ದುರುಪಯೋಗದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮುಲ್ಕಿ ಸಹಕಾರಬ್ಯಾಂಕಿನಲ್ಲಿ ಚಿನ್ನದ ಆಭರಣ ಕಳವು ಆಗಿದ್ದು, ಅದಕ್ಕೆ ವಿಮೆ ಕಂಪನಿಯಿಂದ 6 ಲಕ್ಷದ 40 ಸಾವಿರ ರೂಪಾಯಿ ಹಣ ಬಂದಿದೆ. ಅದನ್ನು ಸಂಬಂಧಿಸಿದ

(ಶ್ರೀಮತಿ ಮೋಟಮ್ಮನವರು ಅಧ್ಯಕ್ಷ ಪೀಠದಲ್ಲಿದ್ದರು)

ಸಾಲಗಾರರಿಗೆ ಪರಿಹಾರವಾಗಿ ನೀಡಲಾಗುವುದು. ಈ ಬಗ್ಗೆ ಸಿಓಡಿ ತನಿಖೆ ವ್ಯವಸ್ಥೆಯನ್ನು ಮಾಡಲಾಗಿದೆ. ಹಿಂದಿನ ಆಡಳಿತ ಮಂಡಳಿಯ ಮೇಲೆ ಸರ್ಛಾರ್ಜ್ ಕೂಡ ಹಾಕಲಾಗಿದೆ.

ಮಾನ್ಯ ಸದಸ್ಯರಾದ ಬೈರೇಗೌಡರು ಕೂಡ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದೇನೆಂದರೆ, ಬೆಂಗಳೂರು ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕಿನಲ್ಲಿ

ಒಬ್ಬರು ಮ್ಯಾನೇಜಿಂಗ್ ಡೈರೆಕ್ಟರ್ ಇದ್ದ ಅವಧಿಯಲ್ಲಿ ಆ ಬ್ಯಾಂಕಿನಿಂದ ವೈಯ್ಯಾಲಿಕಾವಲ್ ಗೃಹನಿರ್ಮಾಣ ಸಹಕಾರ ಸಂಘಕ್ಕೆ ನಾಲ್ಕು ಕೋಟಿ ರೂಪಾಯಿ ಸಾಲವನ್ನು ನೀಡಲಾಗಿದೆಯೆಂದು ಹೇಳಿದ್ದಾರೆ. ಇನ್ನು ಕೆಲವು ಸಹಕಾರ ಸಂಘಗಳಿಗೆ ಸಾಲ ನೀಡುವಾಗ ಅಕ್ರಮ ನಡೆದಿದೆಯೆಂದು ಹೇಳಿದ್ದಾರೆ. ಉದಾಹರಣೆಗೆ ಟೆಲಿಗ್ರಾಫ್ ಇಂಜಿನಿಯರಿಂಗ್ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಗೆ 90 ಲಕ್ಷ ರೂಪಾಯಿ ಸಾಲ ನೀಡಿ ಸಂಘದ ಹಣವನ್ನು ಬ್ಯಾಂಕಿಗೆ ಮರುಪಾವತಿ ಮಾಡದಿದ್ದರೂ ಸುಳ್ಳು ಮಾಹಿತಿ ಕೊಟ್ಟು ಸಾಲವನ್ನು ನವೀಕರಿಸಲಾಗಿದೆ. ಹೀಗೆ ವ್ಯವಸ್ಥಾಪಕ ನಿರ್ದೇಶಕರ ಮೇಲೆ ಸಾಕಷ್ಟು ಆಪಾದನೆಗಳು ಇದ್ದರೂ ಸರ್ಕಾರ ಏನು ಕ್ರಮ ಕೈಗೊಂಡಿಲ್ಲವೆಂದು ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ಸತ್ಯಾಂಶಗಳನ್ನು ತಿಳಿಯಲು ಅಗತ್ಯವಾದ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಮಂತ್ರಿಗಳು ಈ ಅಧಿಕಾರಿಯ ಬಗ್ಗೆ ಸದನದಲ್ಲೂ ಭಯಪಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಭಯ ಏತಕ್ಕೆ?

ಶ್ರೀ ಸಿ. ಭೈರೇಗೌಡ : ನಾನು ಎದ್ದಮೇಲೆ, ಅಗತ್ಯವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದರು. ಈ ಅಧಿಕಾರಿಯ ಪ್ರಭಾವ ಎಷ್ಟಿದೆ ಎನ್ನತಕ್ಕದ್ದು ಇಲ್ಲಿ ಅರ್ಥವಾಗುತ್ತದೆ. ಇದರಲ್ಲಿ ನಾವು ದಾಖಲೆಗಳನ್ನು ಕೊಟ್ಟಿದ್ದೇನೆ.

ಛೇರ್ಮನ್ : ಮಾನ್ಯ ಸದಸ್ಯರಾದ ಭೈರೇಗೌಡರೇ ತಾವು ಕುಳಿತುಕೊಳ್ಳಿ.

ಶ್ರೀ ಆರ್.ವಿ. ದೇಶಪಾಂಡೆ : ಆಕ್ಷನ್ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ಅದು ಅವರ ಕಡೆಯ ಪದ.

ಶ್ರೀ ಸಿ. ಭೈರೇಗೌಡ : ಅವರು ಹೇಳುವುದರಲ್ಲಿ ಅನುಮಾನ ಬಂತು. ಎಷ್ಟು ಕುತ್ತಿಗೆ ಕತ್ತು ಹಿಡಿದಿತ್ತು ಎನ್ನುವ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಆರ್.ಎನ್. ನಾಯಕ್ : ಮಾನ್ಯ ಭೈರೇಗೌಡರು ಮೀನುಗಾರಿಕೆಯ ಮಂತ್ರಿಗಳು ಆಗಿದ್ದವರು. ಅವರು ಏನು ಮಾಡಿದ್ದರು? ದೊಡ್ಡ ಭಯೋತ್ಪಾದಕರಾಗಿ ಅಧಿಕಾರಿಗಳಿಗೆ ಕಂಡಿರಾ? ಬಹು ದೊಡ್ಡ ತಿಮಿಂಗಿಲವಾಗಿ ಕಂಡಿರಾ?

ಶ್ರೀ ಸಿ. ಭೈರೇಗೌಡ : ಬಾಯಿ ಮುಚ್ಚಿಕೊಂಡು ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ. ಸಿ. ಭೈರೇಗೌಡ : ಅವರು ಹೇಳಿರತಕ್ಕಂಥ ಮಾತು ಸರಿಯಾದುದಲ್ಲ.

ಚೇರ್ಮನ್ : ಮಂತ್ರಿಗಳಿಂದ ರಿಪ್ಲೈ ಆದಮೇಲೆ ಕ್ಲಾರಿಫಿಕೇಷನ್ ಬೇಕಾದರೆ ಕೇಳಿ.

ಶ್ರೀ ಸಿ. ಭೈರೇಗೌಡ : ಅವರು ಹೇಳಿದ ಮಾತನ್ನು ತಾವು ಕಡತದಿಂದ ತೆಗೆಯಬೇಕು.

ಚೇರ್ಮನ್ : ಏನು ಹೇಳಿದರು?

ಶ್ರೀ ಸಿ. ಭೈರೇಗೌಡ : ತಿಮಿಂಗಿಲ ಅಂತ ಕರೆಯುತ್ತಿದ್ದಾರೆ. ಅರ್ಥ ಇಲ್ಲದೆ ಮಾತನಾಡಿದರೆ ಹೇಗೆ? ನಾನು ಹೇಳಬಾರದ್ದು ಏನೂ ಕೂಡ ಹೇಳಲಿಲ್ಲ.

(ಗೊಂದಲ)

ಚೇರ್ಮನ್ : ದಯವಿಟ್ಟು, ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಆರ್.ಎನ್. ನಾಯಕ್ : ನಾನು ಅಂಥ ಕೆಟ್ಟ ಮಾತನ್ನು ಏನೂ ಆಡಲಿಲ್ಲ. ಬೇಕಾದರೆ ನಾನು ಅದನ್ನು ರಿಪೀಟ್ ಮಾಡುತ್ತೇನೆ. ನೀವು ಅಧಿಕಾರಿಗಳಿಗೆ ತಿಮಿಂಗಲ ರೂಪದಲ್ಲಿ ಕಾಣುತ್ತಿದ್ದಿರಾ, ಅವರು ಭಯ ಪಡುತ್ತಿದ್ದರಾ ಎಂದು ಕೇಳಿದೆ. ಅದನ್ನು ನೀವು ಅರ್ಥ ಮಾಡಿಕೊಳ್ಳಲಿಲ್ಲ.

ಶ್ರೀ ಸಿ. ಬೈರೇಗೌಡ : ನಿಮ್ಮ ಅರ್ಥ ನನಗೆ ಬೇಕಾಗಿಲ್ಲ. ಕುಳಿತುಕೊಳ್ಳಿ ಇದರರ್ಥ ನನಗೇನೂ ಬೇಕಾಗಿಲ್ಲ. ನೀವು ಯಾರು ನನಗೆ ಹೇಳುವುದಕ್ಕೆ?

(ಗೊಂದಲ)

ಶ್ರೀ ಗೋಪಿನಾಥ ಆರ್ ಸಾಂಡ್ರಾ : ಮಂತ್ರಿಗಳು ಯೀಲ್ಡ್ ಆಗಿಲ್ಲ. ಮಾನ್ಯ ಹಿರಿಯ ಸದಸ್ಯರು ನಿಯಮ ಗೊತ್ತಿಲ್ಲದೆ ಮಾತನಾಡುತ್ತಿದ್ದಾರೆ. ಅವರು ಯೀಲ್ಡ್ ಆದರೆ ಮಾತನಾಡಲಿ.

ಶ್ರೀ ಸಿ. ಬೈರೇಗೌಡ : ನಾನು ಹೇಳುವಾಗ ಅವರು ಕುಳಿತಿದ್ದರು. ಅದನ್ನು ನೀವು ಗಮನಿಸಲಿಲ್ಲ.

ಶ್ರೀ ಗೋಪಿನಾಥ ಆರ್. ಸಾಂಡ್ರ : ಈಗ ನಿಂತಿದ್ದಾರಲ್ಲಾ?

ಶ್ರೀ ಸಿ. ಬೈರೇಗೌಡ : ಈಗ ಇರಬಹುದು. ನಾನು ಮಾತನಾಡುವುದಕ್ಕೆ ಪ್ರಾರಂಭ ಮಾಡಿದಾಗ ಅವರು ಕೂತಿದ್ದರು. ದಯವಿಟ್ಟು ಅವರು ಹೇಳಲಿ.

ಚೇರ್ಮನ್ : ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಹೀಗೆ ಅರ್ಥವಿಲ್ಲದೆ ಮಾತನಾಡಿದರೆ ಹೇಗೆ? ನೀವು ಹೇಳಿ ಅವರಿಗೆ.

ಚೇರ್ಮನ್ : ನಾನು ಎಲ್ಲರಿಗೂ ಹೇಳುತ್ತಿದ್ದೇನೆ. ದಯವಿಟ್ಟು ಕುಳಿತುಕೊಳ್ಳಿ. ಅನಾವಶ್ಯಕವಾಗಿ ಕಾಂಪ್ಲಿಕೇಷನ್‌ಗೆ ಅವಕಾಶ ಮಾಡಿಕೊಡುತ್ತಿದ್ದೀರಿ.

ಶ್ರೀ ಎಸ್. ಆರ್. ಮೋರೆ : ಶ್ರೀಮಾನ್ ಬೈರೇಗೌಡರು ಕೊಳವೆ ಬಾವಿಗಳ ಬಗ್ಗೆ ಮಾತನಾಡಿದ್ದಾರೆ. ವಿಫಲ ಕೊಳವೆ ಬಾವಿಗಳಿಗೆ ಸಬ್ಸಿಡಿ ನೀಡುವ ಆದೇಶವನ್ನು ಪರಿಷ್ಕರಿಸುವ ಅವಶ್ಯಕತೆ ಇದೆ.

(ಗೊಂದಲ)

ಚೇರ್ಮನ್ : ಮಂತ್ರಿಗಳು ರಿಪ್ಲೈ ಮಾಡುತ್ತಿದ್ದಾರೆ. ದಯವಿಟ್ಟು ಮಧ್ಯೆ ಪ್ರವೇಶ ಮಾಡಬೇಡಿ. ಶ್ರೀ ಬೈರೇಗೌಡರೇ, ಸ್ವಲ್ಪ ಸಮಾಧಾನ ತಂದುಕೊಳ್ಳಿ. ದಯವಿಟ್ಟು ಕುಳಿತುಕೊಳ್ಳಿ.

(ಸಭೆಯಲ್ಲಿ ಗೊಂದಲ. ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಚೇರ್ಮನ್ : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಇದನ್ನು ಗರಡಿಮನೆ ಮಾಡಿಕೊಳ್ಳಬೇಡಿ. ಅವರಿಗೆ ರಿಪ್ಲೈ ಮಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಎಸ್.ಆರ್. ಮೋರೆ : ಬಾವಿ ಕೊರೆಯುವ ಸಮಯದಲ್ಲಿ ಇಳುವರಿ ಪರೀಕ್ಷೆ ಸಫಲವಾಗಿದ್ದರೂ ಈಗ ಅವು ಒಣಗಿವೆ. ಯಾವುದೇ ಸಮಿತಿಯನ್ನು ರಚಿಸದೆ ಎಲ್ಲಾ ವಿಫಲ ಕೊಳವೆಬಾವಿಗಳ ಮೇಲೆ ಸಾಲವನ್ನು ಮನ್ನಾ ಮಾಡಬೇಕಾಗಿದೆ. ನೀರಿನ ಲಭ್ಯತೆಯನ್ನು ಪರೀಕ್ಷಿಸಿ ಎಲ್ಲಾ ಅರ್ಜಿಗಳನ್ನು ಮೂವತ್ತು ದಿನಗಳೊಳಗೆ

ಮಾಡಿದ್ದಾರೆ. ಇದರ ಬಗ್ಗೆ ಕೇಂದ್ರ ಸರ್ಕಾರದಿಂದ ಅನುದಾನದ ಮೇರೆಗೆ ವಿಫಲ ಕೊಳವೆಬಾವಿ ವಿಮಾ ಯೋಜನೆ ಇದ್ದು ಇದನ್ನು ಆಗ್ರೋ ಇಂಡಸ್ಟ್ರೀಸ್, ನ್ಯಾಷನಲ್ ಇನ್ಸುರೆನ್ಸ್ ಕಂಪನಿಗಳಿಂದ ಜಾರಿಗೊಳಿಸಲಾಗುತ್ತಿದೆ. ಇದರಲ್ಲಿ ಬದಲಾವಣೆಗೆ ಕೇಂದ್ರಸರ್ಕಾರದ ಒಪ್ಪಿಗೆ ಬೇಕಾಗುತ್ತದೆ. ಈ ಬಗ್ಗೆ ನಮ್ಮ ಹಂತದಲ್ಲಿ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಿರುವುದಿಲ್ಲ. ಶ್ರೀಮಾನ್ ಭೈರೇಗೌಡರು ಪ್ರಾಥಮಿಕ ಸಹಕಾರ ಸಂಘಗಳು, ತಾಲ್ಲೂಕು ಮತ್ತು ಜಿಲ್ಲಾಮಟ್ಟದ ಸಹಕಾರ ಸಂಘಗಳ ಚುನಾವಣೆಯಲ್ಲಿ ಭಾಗವಹಿಸಲು ಸಾಧ್ಯವಾಗದೇ ಇರುವ ಬಗ್ಗೆ, ಸುಸ್ತಿದಾರ ಸಹಕಾರ ಸಂಘಗಳಿಗೆ, ಮತದಾನ ಹಕ್ಕು ನೀಡುವ ಬಗ್ಗೆ ಕೇಳಿದ್ದಾರೆ. ಈಗಾಗಲೇ ಹೊರಡಿಸಲಾಗಿರುವ ಆದೇಶದ ಪ್ರಕಾರ ಈ ಸೌಲಭ್ಯಗಳನ್ನು, ಮುಂದೆ ಇರುವ ಸಹಕಾರ ಸಂಘಗಳ ಚುನಾವಣೆಯಲ್ಲಿ ಸಹಿತ ಇದನ್ನು ವಿಸ್ತರಣೆ ಮಾಡಬೇಕೆಂದು ನಾವು ಮಾಡುತ್ತಿದ್ದೇವೆ.

ಶ್ರೀಮಾನ್ ಬನ್ನಿಕೋಡ್‌ರವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ ಪ್ರಾಥಮಿಕ ಸಹಕಾರ ಸಂಘಗಳನ್ನು ಒಟ್ಟುಗೂಡಿಸಲು, ಅಂದರೆ, ಅಮಾಲ್ಗಮೇಷನ್‌ನಲ್ಲಿ ಅನೇಕ ತಪ್ಪುಗಳನ್ನು ಮಾಡಲಾಗಿದೆ. ಇದರಿಂದ ಒಳ್ಳೆಯ ಸಂಘ ಮತ್ತು ಕಳಪೆ ಸಂಘ ಆಗತಕ್ಕ ಸಾಧ್ಯತೆ ಇದೆ. ಧಾರವಾಡ ಜಿಲ್ಲೆ ಬಗ್ಗೆ ಹೇಳಬೇಕಾದರೆ, 1976-77ರಲ್ಲಿ ಈ ತೀರ್ಮಾನದಿಂದ ಒಟ್ಟುಗೂಡಿಸುವುದು ಆಗದಿದ್ದರೂ ಕೂಡ, ಈಗ ನಮ್ಮ ಜಿಲ್ಲೆಯಲ್ಲಿ ಅಮಾಲ್ಗಮೇಷನ್ ಮಾಡಲಾಗಿದೆ. ಇದನ್ನು ಕಾನೂನುರೀತಿಯಲ್ಲಿ ಮಾಡಲಾಗಿದೆ. ಆದರೆ, ಕೆಲವು ಸಹಕಾರ ಸಂಘಗಳು ನಮಗೆ ಅನ್ಯಾಯವಾಗಿದೆ ಎಂದು ಕೋರ್ಟಿಗೆ ಹೋಗಿದ್ದಾರೆ. ಕೋರ್ಟಿನ ನಿರ್ಣಯ ನೋಡಿಕೊಂಡು ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಅನ್ಯಾಯ ಎಂದು ಕಂಡುಬಂದರೆ, ನಿಮಗೆ ಮನವರಿಕೆಯಾದರೆ, ಏನಾದರೂ ಸರಿಪಡಿಸುತ್ತೀರಾ?

ಶ್ರೀ ಎಸ್.ಆರ್. ಮೋರೆ : ಶ್ರೀಮಾನ್ ಕರಿಯಣ್ಣನವರು ಎತ್ತಿರುವ ವಿಷಯ ಎಂದರೆ, ಇಲಾಖಾ ಅಧಿಕಾರಿಗಳು, ಅಡಿಕೆ ಬೆಳೆಗಾರರ ಸಹಕಾರ ಸಂಘ, ಸಾಗರ, ಇಲ್ಲಿಗೆ ಭೇಟಿ ನೀಡಿ, ಮಾರ್ಗದರ್ಶನ ನೀಡಿದ್ದಾರೆಯೇ ಹಾಗೂ ಸದರಿ ಸಂಘದಲ್ಲಿ ದಾಸ್ತಾನು ಕೊರತೆ ಆಗಿರುವುದು ಗಮನಕ್ಕೆ ಬಂದಿದೆಯೇ ಮತ್ತು ಈ ಬಗ್ಗೆ ಆಡಳಿತ ಮಂಡಳಿಯ ಸದಸ್ಯರ ಮೇಲೆ ಮತ್ತು ಸ್ಥಳೀಯ ಅಧಿಕಾರಿಯ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡಿದೆಯೇ ಎಂದು ಕೇಳಿದರು. ಇದರ ಬಗ್ಗೆ ಹೇಳಬೇಕೆಂದರೆ, ಇಲಾಖಾ ಅಧಿಕಾರಿಗಳು, ಈ ಸೊಸೈಟಿಗೆ ಆಗಿಂದಾಗ್ಗೆ ಭೇಟಿ ನೀಡಿದ್ದಾರೆ ಮತ್ತು ಮಾರ್ಗದರ್ಶನ ನೀಡುತ್ತಿದ್ದಾರೆ. ಈ ಸಂಘದಲ್ಲಿ ನಡೆದ ದುರುಪಯೋಗದ ಬಗ್ಗೆ ಮಾರ್ಚ್ 1990ರಲ್ಲಿ ಸರ್ಕಾರದ ಗಮನಕ್ಕೆ ಬಂದಿದೆ. ಸಂಬಂಧಪಟ್ಟ ನೌಕರರ ಮೇಲೆ, ಹಣ ವಸೂಲಾತಿಗಾಗಿ ಈಗಾಗಲೇ ಕ್ರಮ ಜರುಗಿಸಲಾಗಿದೆ. ಆಡಳಿತ ಮಂಡಳಿಯನ್ನು ರದ್ದುಪಡಿಸಲಾಗಿದ್ದು, ಈಗ ಚುನಾಯಿತ ಮಂಡಳಿ ಅಸ್ತಿತ್ವದಲ್ಲಿದೆ. ಕಲಮು 63 ಮತ್ತು 64ರಂತೆ ಲೆಕ್ಕತಪಾಸಣೆ ಮತ್ತು ವಿಚಾರಣಾ ಆದೇಶ ಇದೆ. ಈ ವರದಿಗಳು ಬಂದಕೂಡಲೇ ಸಂಬಂಧಿಸಿದ ಎಲ್ಲರ ಮೇಲೂ ಅಗತ್ಯ ಕ್ರಮಗಳನ್ನು ಜರುಗಿಸಲಾಗುವುದು. ಕೊನೆಯದಾಗಿ, ಶ್ರೀಮಾನ್ ಕರಿಯಣ್ಣನವರು ಇನ್ನೊಂದು ಪ್ರಸ್ತಾಪ ಮಾಡಿದ್ದಾರೆ. ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್‌ನಲ್ಲಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದ ನೌಕರರಿಗೆ ಮುಂಬಡ್ತಿ ಸೌಲಭ್ಯ ನೀಡುವಲ್ಲಿ ಕಾನೂನು ರಚಿಸುವ ವಿಷಯ ಇದರ ಬಗ್ಗೆ ಹೇಳಬೇಕೆಂದರೆ, ಪರಿಶಿಷ್ಟಜಾತಿ

ನೀಡುವಾಗ ಮೀಸಲಾತಿಯನ್ನು ಕಡ್ಡಾಯ ಮಾಡಿ, ಸಹಕಾರಸಂಘಗಳ ನಿಬಂಧಕರು, ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 30 ಬಿ.ಪ್ರಕಾರ ಆದೇಶವನ್ನು ನೀಡಿರುತ್ತಾರೆ.

ಶ್ರೀ. ಕೆ. ಕುಶಾಲರವರು ಈ ರೀತಿ ಕೇಳಿದ್ದಾರೆ. ಶ್ರೀ ವಿಷ್ಣುಭಟ್ ಎಂಬುವರು ಪ್ರಕೃತಿವಿಕೋಪದಿಂದ ಸಾಕಷ್ಟು ನಷ್ಟ ಹೊಂದಿದ್ದಾರೆ, ಆದ್ದರಿಂದ ಅವರು ಸಹಕಾರ ಸಂಘದಲ್ಲಿ ಪಡೆದಿರುವ ಸಾಲವನ್ನು ಮನ್ನಾ ಮಾಡಬೇಕೆಂದು ಹೇಳಿದ್ದಾರೆ. ಅವರು ಒಟ್ಟು 59 ಸಾವಿರ ರೂಪಾಯಿಗಳ ಸಾಲ ಪಡೆದಿದ್ದು, ಅವರ ಅರ್ಜಿಯನ್ನು ಪರಿಶೀಲಿಸಿ, ಸಾಲ ಮನ್ನಾ ಮಾಡಲು ಬರುವುದಿಲ್ಲವೆಂದು ಈಗಾಗಲೇ ಉಪ ನಿಬಂಧಕರು ಬರವಣಿಗೆಯಲ್ಲಿ ಕೊಟ್ಟಿರುತ್ತಾರೆ. ಇನ್ನು ಕೃಷಿ ಮಾರಾಟ ಇಲಾಖೆ ಬಗ್ಗೆ ಹೇಳುವುದಾದರೆ, ಶ್ರೀಮಾನ್ ಕೌಜಲಗಿಯವರು ಒಂದೆರಡು ಪ್ರಶ್ನೆಗಳನ್ನು ಪ್ರಸ್ತಾಪ ಮಾಡಿದ್ದಾರೆ. ಪ್ರಸ್ತುತ ಜಾರಿಯಲ್ಲಿ ಇರತಕ್ಕ ಕಾಯಿದೆ ಪ್ರಕಾರ, ದಲ್ಲಾಳರು, ಖರೀದಿದಾರರಿಂದ ವಸೂಲ್ಮಾಡುವ ಮಾರಾಟ ಸುಂಕವನ್ನು ಪಡೆದು, ಒಂದು ವಾರದೊಳಗಾಗಿ ಮಾರುಕಟ್ಟೆ ಸಮಿತಿಗೆ ಜಮಾ ಮಾಡಬೇಕೆಂಬ ನಿಯಮ ಇದೆ. ಇದನ್ನು ಒಂದು ತಿಂಗಳ ಅವಧಿಯಲ್ಲಿ ಪಾವತಿ ಮಾಡುವುದರಿಂದ ಇದು ಖಾಸಗಿಯಾಗಿ ಉಪಯೋಗವಾಗುವ ಸಾಧ್ಯತೆ ಇದೆ. ಈ ಸಂಬಂಧದಲ್ಲಿ ಹಲವಾರು ದಲ್ಲಾಳರು ಹೈಕೋರ್ಟಿನಲ್ಲಿ ದಾವೆ ಹೂಡಿದ್ದು, ನ್ಯಾಯಾಲಯ ಮೇಲ್ಕಂಡ ಅಂಶಗಳನ್ನು ಎತ್ತಿ ಹಿಡಿದು, ದಲ್ಲಾಳರ ಮನವಿಯನ್ನು ತಳ್ಳಿಹಾಕಿದೆ. ಆದ್ದರಿಂದ ಮಾನ್ಯ ಶಿವಾನಂದ ಕೌಜಲಗಿಯವರು ಮಾಡಿರುವ ಸಲಹೆಯನ್ನು ಒಪ್ಪಲು ಸಾಧ್ಯವಿಲ್ಲ. ಅವರು ಇನ್ನೊಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ದಲ್ಲಾಳರ ಕಮೀಷನ್ ದರ ಹೆಚ್ಚಿಸುವ ಬಗ್ಗೆ ಹೇಳಿದ್ದಾರೆ. ಪ್ರಸ್ತುತ ಕಾನೂನು ಪ್ರಕಾರ, ಕೃಷಿ ಉತ್ಪಾದನೆಗೆ ಶೇಕಡ 2ರಂತೆ ಹಾಗೂ ಹಣ್ಣು ಮತ್ತು ತರಕಾರಿಗಳಿಗೆ ಶೇಕಡ 5ರಷ್ಟು ಕಮೀಷನ್‌ನ್ನು ದಲ್ಲಾಳರು ಪಡೆಯುತ್ತಿದ್ದಾರೆ. ಈ ಬೆಳೆಗಳ, ಬೆಲೆಗಳು ಹೆಚ್ಚಾದಂತೆ ಹೋಗುತ್ತಾ, ಈ ದಲ್ಲಾಳರ ಕಮೀಷನ್ ಕೂಡ ತಾನುತಾನಾಗಿಯೇ ಹೆಚ್ಚಾಗುತ್ತದೆ. ಆದ್ದರಿಂದ ಕಮೀಷನ್ ಹೆಚ್ಚಿಸುವ ಅವಶ್ಯಕತೆ ಕಂಡುಬರುವುದಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಕ್ಲಾರಿಫಿಕೇಷನ್, ಕಮೀಷನನ್ನು ದಲ್ಲಾಳರು ಯಾರಿಂದ ಪಡೆಯುತ್ತಿದ್ದಾರೆ?

ಶ್ರೀ ಎಸ್.ಆರ್. ಮೋರೆ : ದಲ್ಲಾಳರು ಆ ಕಮೀಷನನ್ನು ಖರೀದಿದಾರರಿಂದ ಪಡೆಯುತ್ತಿದ್ದಾರೆ. ಅದು ರೈತರ ಮೇಲೆ ಬೀಳುವುದಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಕಾನೂನು ಪ್ರಕಾರ ರೈತರ ಮೇಲೆ ಬೀಳುವುದಿಲ್ಲ, ಆದರೆ ವಸ್ತುಸ್ಥಿತಿ ಏನು ನಡೆಯುತ್ತಿದೆ ಎಂದರೆ 8 ರಿಂದ 10 ಪರ್ಸೆಂಟ್‌ನ್ನು ರೈತರಿಂದ ವಸೂಲು ಮಾಡುತ್ತಿದ್ದಾರೆ. ಇದನ್ನು ಹಲವಾರು ಸಾರಿ ಈ ಸಭೆಯಲ್ಲಿ ಹೇಳಿದ್ದೇನೆ. ಏತಕ್ಕೆ ಈ ತರಹ ಸತ್ಯಕ್ಕೆ ದೂರವಾದುದನ್ನು ಹೇಳುತ್ತಿದ್ದೀರಿ? ತಮ್ಮ ಕೈಯಲ್ಲಿ ಕಂಟ್ರೋಲ್ ಮಾಡುವುದಕ್ಕೆ ಆಗಲಿಲ್ಲ. ಕಡೆಯ ಪಕ್ಷ ಇವತ್ತು ಅಷ್ಯೂರೆನ್ಸ್ ಕೊಡಿರಿ, ಇನ್ನೊಂದು ತಿಂಗಳೊಳಗಾಗಿ ಎ.ಪಿ.ಎಂ.ಸಿ. ಎಲೆಕ್ಷನ್ಸ್ ಮಾಡಿಸುತ್ತೇನೆಂದು ತಾವು ಅಷ್ಯೂರೆನ್ಸ್ ಕೊಡುವುದಕ್ಕೆ ಸಾಧ್ಯವೇ?

ಶ್ರೀ ಎಸ್.ಆರ್. ಮೋರೆ : ಕಮೀಷನ್‌ನ್ನು ಏಜೆಂಟರು ಬಿಲ್ ಮೇಲೆ ಚಾರ್ಜ್ ಮಾಡುವುದಿಲ್ಲ, ಯಾರು ಖರೀದಿ ಮಾಡುತ್ತಾರೆ ಅವರಿಂದ ಎರಡು ಪರ್ಸೆಂಟ್ ತೆಗೆದುಕೊಳ್ಳುತ್ತಾರೆ. ಆದುದರಿಂದ ಇದನ್ನು ಏನಾದರೂ ಸರ್‌ಪ್ರೈಸ್ ಚೆಕ್

ಶ್ರೀ ಆರ್.ಎಲ್. ಜಾಲಪ್ಪ : ಮಂತ್ರಿಗಳು ಕೆಲವು ಬಿಲ್‌ಗಳನ್ನು ತರಿಸಿ ನೋಡಲಿ, ಯಾವುದಾದರೂ ಬೇರೆ ರೈತರಿಗೆ ಕೊಟ್ಟಿರುವ ಬಿಲ್‌ಗಳನ್ನು ತರಿಸಿ ನೋಡಿ. ಹಿಂದುಗಡೆ ಅವರು ರೈತರಿಂದ ಕಮೀಷನ್ ಮುರಿದುಕೊಂಡಿರುತ್ತಾರೆ. ಬಿಲ್ ಮುಂದೆ ಏನಿರುವುದಿಲ್ಲ, ಆದರೆ ಬಿಲ್ ಹಿಂದುಗಡೆ ಡಿಡಕ್ಟ್ ಮಾಡಿರುತ್ತಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಅಂತಹವರ ಮೇಲೆ ಉಗ್ರಕ್ರಮ ಕೈಗೊಳ್ಳಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ಸನ್ಮಾನ್ಯ ಸಚಿವರಿಗೆ ಕೇಳುತ್ತೇನೆ, ಎ.ಪಿ.ಎಂ.ಸಿ. ಎಲೆಕ್ಷನ್ ಮಾಡಬೇಕೆನ್ನುವುದು ಏನಾದರೂ ಮರೆತು ಹೋಯಿತೇ? ಅದನ್ನೇನಾದರೂ ಪೋಸ್ಟ್‌ಪೋನ್ ಮಾಡುತ್ತಿದ್ದೀರಾ ಎಂಬುದನ್ನು ಹೇಳಿರಿ. ಮೂರು ವರ್ಷದಿಂದ ಅದರ ಸುದ್ದಿಯೇ ಇಲ್ಲ.

ಶ್ರೀ ಎಸ್.ಆರ್. ಮೋರೆ : ಅದನ್ನೂ ಕೂಡಾ ಮಾಡುತ್ತಿದ್ದೇವೆ. ವೋಟಿಂಗ್ ಏಜ್ ಅನ್ನು 21 ರಿಂದ 18ಕ್ಕೆ ಇಳಿಸಿದ ಮೇಲೆ ಅದಕ್ಕಾಗಿ ಬೇರೆ ವೋಟರ್ಸ್ ಲಿಸ್ಟ್ ಮಾಡಬೇಕು. ಎ.ಪಿ.ಎಂ.ಸಿ. ಆಕ್ಟ್‌ನಲ್ಲಿ ಅಮೆಂಡ್‌ಮೆಂಟ್ ಮಾಡುವುದರಲ್ಲಿ ಸ್ವಲ್ಪ ತಡವಾಗಿದೆ. ವೋಟರ್ಸ್ ಲಿಸ್ಟ್ ಆದಮೇಲೆ ತಕ್ಷಣ ನಾವು ಎಲೆಕ್ಷನ್ ಮಾಡುತ್ತೇವೆ.

(ಗೊಂದಲ)

ಚೇರ್ಮನ್ : ಮಾನ್ಯ ಕರಿಯಣ್ಣನವರೇ, ನಾನು ನಿಮ್ಮ ಹೆಸರನ್ನು ಕರೆದಿಲ್ಲ, ಮಾನ್ಯ ವೆಂಕಟೇಶ್‌ರವರೇ ನಿಮ್ಮ ಹೆಸರನ್ನೂ ಕರೆದಿಲ್ಲ. ಇಬ್ಬರೂ ನಿಂತುಕೊಂಡರೆ ಹೇಗೆ? ಮಾನ್ಯ ವೆಂಕಟೇಶ್‌ರವರೇ ಕುಳಿತುಕೊಳ್ಳಿ; ನಾನು ಕರೆಯುತ್ತೇನೆ. ಮಾನ್ಯ ಯಡಿಯೂರಪ್ಪನವರೇ ತಾವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಒಂದೇ ಒಂದು ಕ್ಲಾರಿಫಿಕೇಷನ್ ಅತ್ಯಂತ ಪ್ರಮುಖವಾದುದು. 10 ಸಾವಿರ ರೂಪಾಯಿ ಒಳಗೆ ಸಾಲ ಇರುವ ರೈತರಿಂದ ಬಲಾತ್ಕಾರವಾಗಿ ವಸೂಲಿ ಮಾಡುತ್ತಿದ್ದಾರೆ. ಸರ್ಕಾರದ ಸುತ್ತೋಲೆ ಹೋಗಿದೆ. ಈವನ್ ಒಂದು ಸಾವಿರ ಇದ್ದರೂ ಸಹ ಬಲಾತ್ಕಾರದಿಂದ ವಸೂಲು ಮಾಡಬೇಕೆಂದು ಸುತ್ತೋಲೆ ಇದೆ. ಅದರ ನಕಲನ್ನೂ ನಾನು ಕಳುಹಿಸಿದೆ, ಮುಖ್ಯಮಂತ್ರಿಗಳು ಅದನ್ನು ನಿಮಗೆ ಕಳುಹಿಸಿಕೊಟ್ಟರು. ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೇ, ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಈ ಸದನಕ್ಕೆ ಆಶ್ವಾಸನೆ ಕೊಟ್ಟಿದ್ದಾರೆ. ಯಾವುದೇ ಕಾರಣಕ್ಕೂ 10 ಸಾವಿರ ರೂಪಾಯಿ ಒಳಗಿರುವಂತಹವರಿಂದ ಬಲಾತ್ಕಾರವಾಗಿ ಸಾಲ ವಸೂಲು ಮಾಡುವುದಿಲ್ಲ, ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರಿಂದ ನೋಟೀಸ್ ಕೊಡುವುದು ಮಾಡುವುದಿಲ್ಲ ಎಂದು ಹೇಳಿದ್ದಾರೆ. ಅದಕ್ಕೆ ತದ್ವಿರುದ್ಧವಾಗಿ ನಿಮ್ಮ ಸರ್ಕ್ಯುಲರ್ ಹೋಗಿದೆ. ಅದಕ್ಕೆ ತಕ್ಷಣ ಏನಾದರೂ ಒಂದು ಆಜ್ಞೆ ಮಾಡಿ, ಸುತ್ತೋಲೆ ಕಳುಹಿಸಿಕೊಟ್ಟು, 10 ಸಾವಿರ ರೂಪಾಯಿ ಒಳಗೆ ಸಾಲ ಇರುವಂತಹವರಿಂದ ಬಲಾತ್ಕಾರವಾಗಿ ಸಾಲ ವಸೂಲಿ ಮಾಡದಂತೆ ಆದೇಶ ಕೊಡುತ್ತೀರಾ? ಬೆಳಿಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ತಮಗೆ ಒಂದು ಸೂಚನೆ ಕಳುಹಿಸಿಕೊಟ್ಟಿದ್ದಾರೆ. ಅದಕ್ಕೆ ಏನಾದರೂ ಉತ್ತರ ಕೊಡುತ್ತೀರಾ?

ಶ್ರೀ ಎಸ್.ಆರ್. ಮೋರೆ : ಮಾನ್ಯ ಯಡಿಯೂರಪ್ಪನವರೇ, ಆ ಸುತ್ತೋಲೆ ನನ್ನ ಕೈಸೇರಿದೆ, ನಾನು ನೋಡಿದೆ. ಅದರ ಪ್ಯಾರಾ ಎರಡರಲ್ಲಿ ಏನು ಹೇಳಿದೆ ಎಂದರೆ, "ಸಾಲ ಮನ್ನಾ ಯೋಜನೆ ಪ್ರಕಾರ 10 ಸಾವಿರಕ್ಕಿಂದ ಹೆಚ್ಚು ಇರುವ

ಸಾಲವನ್ನು ಸಾಲ ಮನ್ನಾ ಸೌಲಭ್ಯಕ್ಕೆ ಒಳಪಡದ ಸಾಲಗಳನ್ನು ಕಡ್ಡಾಯವಾಗಿ ವಸೂಲು ಮಾಡಲು ಸೂಚನೆಗಳನ್ನು ನೀಡಲಾಗಿದೆ" ಎಂದರೆ,

ಶ್ರೀ ಬಿ.ಎಸ್. ಯಡಿಯೂರಪ್ಪ : ಅದೇ ಪ್ಯಾರಾದಲ್ಲಿ ಕೊನೇ ಸೆಂಟೆನ್ಸ್ ಓದಿರಿ.

ಶ್ರೀ ಎಸ್.ಆರ್. ಮೋರೆ : ಇಲ್ಲಿ ಸಾಲ ಮನ್ನಾ ಯೋಜನೆ ಬರುವುದಕ್ಕಿಂದ ಮುಂಚೆ ಏನು ಇತ್ತಲ್ಲ, ಅದನ್ನು ಕೂಡಾ ಸಾವಿರ ರೂಪಾಯಿ ಇದ್ದರೂ ವಸೂಲು ಮಾಡುವ ಹಾಗೆ ಹೇಳಿರುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಬೇಕಾದರೆ ಆ ಮೇಲೆ ಉತ್ತರ ಕೊಡಿರಿ. ಈ ಸದನಕ್ಕೆ ಮಾನ್ಯ ಮುಖ್ಯಮಂತ್ರಿಗಳು ಏನು ಆಶ್ವಾಸನೆ ಕೊಟ್ಟಿದ್ದಾರೆ ಎಂದರೆ, 10 ಸಾವಿರ ರೂಪಾಯಿ ಒಳಗಡೆ ಇರುವಂತಹ ಯಾವುದೇ ಸಾಲ ವಸೂಲಿ ಮಾಡುವುದಿಲ್ಲ, ಬಲಾತ್ಕಾರ ಮಾಡುವುದಿಲ್ಲ, ನೋಟೀಸ್ ಕೊಡುವುದಿಲ್ಲ, ಯಾರು ಯಾರು ಈ ರೀತಿ ಮಾಡಿದ್ದಾರೆ, ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂಬ ಆಶ್ವಾಸನೆ ಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಆ ಕಂಡೀಷನ್ಸ್ ತೆಗೆದುಹಾಕಬೇಕೆಂದು ಹೇಳುತ್ತೇನೆ. ಈಗ ನೀವು ಉತ್ತರ ಕೊಟ್ಟಾದಮೇಲೆ ನಾವು ಪ್ರೈಮ್ ಮಿನಿಸ್ಟರ್ ಹತ್ತಿರ ಹೋಗುತ್ತಿದ್ದೇವೆ. ಕಳೆದ ಎರಡು ವರ್ಷಗಳಿಂದ ಇದು ಗೊಂದಲದಲ್ಲಿರುವಂತಹ ವಿಚಾರ. ಅಸಿಸ್ಟೆಂಟ್ ರಿಜಿಸ್ಟ್ರಾರ್ ನೋಟೀಸ್ ಕೊಡುತ್ತಿದ್ದಾರೆ, ಕೇಸ್ ಹಾಕುತ್ತಿದ್ದಾರೆ, ಬಡ್ಡಿ ಜಾಸ್ತಿಯಾಗುತ್ತಿದೆ, ಕೋರ್ಟ್ ಫೀಸ್ ಸ್ಟಾಂಪ್ ಖರ್ಚು ಮೈಮೇಲೆ ಬರುತ್ತಿದೆ. ಅದಕ್ಕೋಸ್ಕರ ಸ್ಪಷ್ಟವಾಗಿ ನಾವು ಆದೇಶ ಕಳುಹಿಸಿಕೊಡುತ್ತೇವೆ, ಅಂತಹ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆ ದೃಷ್ಟಿಯಿಂದ ಇನ್ನೇನು ಬೇಕು? ಒಂದು ಸಾವಿರ ರೂಪಾಯಿ ಇದ್ದರೂ ಬಲಾತ್ಕಾರವಾಗಿ ವಸೂಲು ಮಾಡಿ ಎಂದು ಸುತ್ತೋಲೆ ಇದೆ. ಅದರಿಂದ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ನೋಟೀಸ್ ಕೊಡುತ್ತಿದ್ದಾರೆ.

ಶ್ರೀ ಎಸ್.ಆರ್. ಮೋರೆ : ಸ್ಪಷ್ಟವಾಗಿ ಆದೇಶ ಕೊಟ್ಟಿದೆ. ಆದರೆ ಸಾಲ ಮನ್ನಾ ಯೋಜನೆ ಏನು ಮಾಡಿದ್ದಾರಲ್ಲಾ, ಅದರಲ್ಲಿ ಬರದೇ ಇರುವ ಸಾಲಗಳನ್ನು ಮಾತ್ರ ವಸೂಲು ಮಾಡುತ್ತಿದ್ದಾರೆಯೇ ಹೊರತು ಸಾಲ ಮನ್ನಾ ಯಾವಾಗ ಜಾರಿಗೆ ತಂದೆವು, ಅದರ ನಂತರ ಯಾವ ಸಾಲವನ್ನೂ ವಸೂಲೂ ಮಾಡಿಲ್ಲ. ಅದರ ಬಗ್ಗೆ ಈಗಾಗಲೇ ಆದೇಶ ಕೊಟ್ಟಿದ್ದೇವೆ, ಯಾವುದೂ ಮಾಡಬಾರದೆಂದೂ. ಇನ್ನೂ ಒಂದು ಮಾತನ್ನು ಹೇಳಬೇಕೆಂದರೆ, 101ನೇ ಕಾಲಮ್‌ನ್ನು ರಿಪೀಲ್ ಮಾಡಬೇಕೆಂದು ಇದೆ, ಅದರ ಬಗ್ಗೆ ಕ್ಯಾಬಿನೆಟ್ ಮೀಟಿಂಗ್ ಕೂಡಾ ಇದೆ. ಅದನ್ನೂ ಕೂಡಾ ನಾಳೆ ನಾಡಿದ್ದರಲ್ಲಿ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷಣಿಯವರೇ, ಇಲ್ಲಿ ಹಿರಿಯ ಸಚಿವರು ಅನೇಕರು ಇದ್ದಾರೆ ಅವರಲ್ಲಿ ಯಾರಾದರೂ ಒಬ್ಬರು ಮಧ್ಯ ಪ್ರವೇಶ ಮಾಡಿ.......

ಛೇರ್ಮನ್ : ಮಾನ್ಯ ಯಡಿಯೂರಪ್ಪನವರೇ ತಾವು ಕುಳಿತುಕೊಳ್ಳಿ. ಅವರಿಗೆ ತಿಳಿದಿದ್ದು ಹೇಳಿದ್ದಾರೆ. ಮಾನ್ಯ ವೆಂಕಟೇಶ್‌ರವರೇ ತಾವು ಮಾತನಾಡಿ.....

(ಗೊಂದಲ)

ಶ್ರೀ. ಎಂ.ಪಿ. ವೆಂಕಟೇಶ್ : ಮಾನ್ಯ ಅಧ್ಯಕ್ಷಣೆಯವರೇ, ನಾನು ಮಾನ್ಯ ಸಹಕಾರ ಸಚಿವರಿಗೆ 9 ಸಲಹೆಗಳನ್ನು ಕೊಟ್ಟಿದ್ದೆ. ಅದರಲ್ಲಿ ಕೆಲವು ಸಲಹೆಗಳು ಸೂಕ್ತವಾಗಿವೆ ಸೂಕ್ತವಾದ ಕಾಲದಲ್ಲಿ....

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷಣೆಯವರೇ ನಾನು ಇಲ್ಲಿ.....

ಛೇರ್ಮನ್ : ಯಡಿಯೂರಪ್ಪನವರೇ ತಾವು ದಯಮಾಡಿ ಕುಳಿತುಕೊಳ್ಳಿ...

(ಗೊಂದಲ)

ಶ್ರೀ ಆರ್.ಎನ್. ನಾಯಕ್ : ಮಾನ್ಯ ಅಧ್ಯಕ್ಷಣೆಯವರೇ, ತಾವು ಕುಳಿತುಕೊಳ್ಳಿ ಅಂದರೂ ಅವರು ಕುಳಿತುಕೊಳ್ಳುವುದಿಲ್ಲ, ಅದು ಅವರ ಅಭ್ಯಾಸ...

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷಣೆಯವರೇ, ಅವರ್ಯಾರು ಈ ಮಾತು ಆಡುವುದಕ್ಕೆ? ಇದು ತುಂಬಾ ಜಾಸ್ತಿ ಆಯಿತು. ಹುಚ್ಚು ಹುಚ್ಚಾಗಿ ಮಾತನಾಡುತ್ತಾರೆ. ನಾಯಕರೇ, ಇದರಿಂದ ನಿಮಗೆ ಶೋಭೆ ತರುವುದಿಲ್ಲ. ನಿನ್ನೆ ಸಹ ಇದೇ ರೀತಿ ಮಾಡಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವಿಲ್ಲಿ ಜನರ ಪ್ರತಿನಿಧಿಗಳಾಗಿ, ಶಾಸಕರಾಗಿ ಬಂದಿದ್ದೇವೋ ಇಲ್ಲವೋ ಹೇಗೆ?

ಚೇರ್ಮನ್ : ಎಲ್ಲರೂ ಜನರ ಪ್ರತಿನಿಧಿಗಳು. ಮಾನ್ಯ ಮಂತ್ರಿಗಳು ಹೇಳಿದ ಉತ್ತರಕ್ಕೆ ತಾವು ಸಮಾಧಾನವಾಗಿ ಹೊಂದಿಕೊಳ್ಳಬೇಕಾಗುತ್ತದೆ. ಹೀಗೆಯೇ ಉತ್ತರ ಕೊಡಬೇಕೆಂದು ಕಡ್ಡಾಯ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಹೇಳಿದ್ದಕ್ಕೆ ಇದು ತದ್ವಿರುದ್ಧವಾಗಿ ಇದೆ. ಅವರು ಯಾರನ್ನಾದರೂ ಒಬ್ಬ ಹಿರಿಯಸಚಿವರನ್ನು ಕೇಳಿ ಉತ್ತರ ಹೇಳಲಿ.

(ಗೊಂದಲ)

ಶ್ರೀ ಎಸ್.ಆರ್. ಮೋರೆ : ದಿನಾಂಕ 2-10-90ರಲ್ಲಿ ಯಾರು ಸಾಲ ತೆಗೆದುಕೊಂಡಿರುತ್ತಾರೋ ಅವರಿಗೆ ಮಾತ್ರ ಕೇವಲ ಒಂದು ಸಾವಿರ ರೂಪಾಯಿಗಳು....

(ಗೊಂದಲ)

ಛೇರ್ಮನ್ : ಕುಳಿತುಕೊಳ್ಳಿ.

ಶ್ರೀ ಆರ್. ಎನ್. ನಾಯಕ್ : ತಾವು ಹಿರಿಯ ಸದಸ್ಯರಿದ್ದೀರಿ. ಅವರು ಹೊಸದಾಗಿ ಮಂತ್ರಿಗಳಾಗಿದ್ದಾರೆ. ನೀವು ಅವರಿಗೆ ಸಹಾಯ ಮಾಡಿ. ಸಹಾಯ ಮಾಡದೇ ಸುಮ್ಮನೆ ಹೇಳುತ್ತೀರಿ.

ಛೇರ್ಮನ್ : ಮಾನ್ಯ ವೆಂಕಟೇಶ್ ತಾವು ಮಾತನಾಡಿ.

ಶ್ರೀ ಎಂ.ಪಿ. ವೆಂಕಟೇಶ್ : ಮಾನ್ಯ ಸಹಕಾರ ಸಚಿವರಿಗೆ ನಾನು 9 ಸಲಹೆಗಳನ್ನು ಕೊಟ್ಟಿದ್ದೆ. ಅದರಲ್ಲಿ ಕೆಲವು ಸಲಹೆಗಳು ಸೂಕ್ತವಾಗಿವೆ ಇನ್ನು ಕೆಲವು ಸಲಹೆಗಳನ್ನು ನಾನು ಸೂಕ್ತ ಕಾಲದಲ್ಲಿ ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಕ್ಕೆ ಅವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾನು ಈಗ ತಮ್ಮ ಮುಖಾಂತರ ಒಂದು ಸಲಹೆ ಕೊಡುತ್ತೇನೆ. ಅಸಿಸ್ಟೆಂಟ್ ರಿಜಿಸ್ಟ್ರಾರ್ ಮತ್ತು ಡೆಪ್ಯುಟಿ ರಿಜಿಸ್ಟ್ರಾರ್‌ಗಳಿಗೆ

ಹಾಗೂ ಅಸಿಸ್ಟೆಂಟ್ ಡೈರೆಕ್ಟರ್ಸ್ (ಆಡಿಟ್ ಸೆಲ್) ಇವರಿಗೆ ವಾಹನಗಳನ್ನು ಕೊಡಬೇಕೆಂದು ಹೇಳಿದ್ದೆ. ಅವರಿಗೆ ವಾಹನ ಕೊಡುವುದು ಸೂಕ್ತವೆಂದು ಹೇಳಿದ್ದೀರಿ ಮತ್ತು ಆರ್ಥಿಕ ಪರಿಸ್ಥಿತಿ ತೊಂದರೆ ಇರುವುದರಿಂದ ಪರಿಶೀಲನೆ ಮಾಡಿ ನೋಡುತ್ತೇನೆಂದು ಹೇಳಿದ್ದಾರೆ. ಆದರೆ ಅರಣ್ಯ ಇಲಾಖೆಯವರು ಕಳ್ಳವಾಹನಗಳನ್ನು ಸೀಜ್ ಮಾಡಿರುತ್ತಾರೆ. ಆ ವಾಹಹಗಳನ್ನು ಕಡಿಮೆ ಬೆಲೆಗೆ ಸಿಗುತ್ತವೆ. ಅರಣ್ಯ ಇಲಾಖೆಯವರು ಸಹಕಾರ ಇಲಾಖೆಗೆ ಕೊಡಲಿಕ್ಕೂ ಸಹ ಒಪ್ಪಿದ್ದಾರೆ ನಾನು ಒಂದು ಪ್ರಶ್ನೆ ಕೇಳಿದಾಗ ಸಹಕಾರ ಇಲಾಖೆಗೆ ನಾವು ವಾಹನಗಳನ್ನು ಕೊಡಲಿಕ್ಕೆ ನಮ್ಮದೇನೂ ಅಭ್ಯಂತರ ಇಲ್ಲವೆಂದು ಹೇಳಿದ್ದಾರೆ. ಅವರು ಕಡಿಮೆ ಬೆಲೆಯನ್ನು ನಿರ್ಧಾರ ಮಾಡುತ್ತಾರೆ. ಅರಣ್ಯ ಇಲಾಖೆಯವರು ಏನು ವಾಹನಗಳನ್ನು ಸೀಜ್ ಮಾಡಿದ್ದಾರೆ, ಆ ವಾಹನಗಳನ್ನು ತಾವು ಪಡೆದುಕೊಳ್ಳುತ್ತೀರಾ?

ಶ್ರೀ ಎಸ್.ಆರ್. ಮೋರೆ : ಆದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಅರಣ್ಯ ಇಲಾಖೆ ವಾಹನಗಳನ್ನು ನಾವು ಪಡೆಯಲು ಅರಣ್ಯ ಇಲಾಖೆ ಮಂತ್ರಿಗಳ ಜೊತೆ ಚರ್ಚೆ ಮಾಡಿ ನೋಡಿ ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷಣೀಯವರೇ, ನಾನು ಸಹಕಾರ ಇಲಾಖೆಯ ಬಗ್ಗೆ ಎರಡು ವಿಚಾರಗಳನ್ನು ಮಾತ್ರ ಪ್ರಸ್ತಾಪ ಮಾಡಿದ್ದೆ. ಗೃಹನಿರ್ಮಾಣ ಸಹಕಾರ ಸಂಘಗಳ ಆಡಳಿತಮಂಡಳಿ ಡೆವಲಪರ್ಸ್ ಮತ್ತು ಬಿಲ್ಡರ್ಸ್ ಜೊತೆಯಲ್ಲಿ ಗುತ್ತಿಗೆ ಮಾಡಿಕೊಳ್ಳತಕ್ಕಂಥ ಸಂದರ್ಭದಲ್ಲಿ ಕಾನೂನು ಬಾಹಿರವ ಆಗಿ ಗುತ್ತಿಗೆಯನ್ನು ಮಾಡಿಕೊಂಡಿದ್ದಾರೆ, ಕಾನೂನು ಬಾಹಿರವಾಗಿ ಹಣವನ್ನು ಮುಂಗಡವಾಗಿ ಕೊಟ್ಟಿದ್ದಾರೆ ಇದರ ಬಗ್ಗೆ ಏನು ಕ್ರಮ ತೆಗೆದಕೊಳ್ಳುತ್ತೀರಿ. ಇದಾದ ಮೇಲೆ ಗುತ್ತಿಗೆದಾರರ ಮತ್ತು ಬಿಲ್ಡರ್ಸ್ ಮತ್ ಡೆವಲಪರ್ಸ್ ಯಾರಿದ್ದಾರೆ ಅವರು ಹೇಳಿದವರಿಗೆ ಮನೆ ಕೊಡಬೇಕೆಂದು ಗುತ್ತಿಗೆ ಕರಾರಿನಲ್ಲಿದೆ. ಇದರ ಬಗ್ಗೆ ಸರ್ಕಾರದ ನಿಲುವು ಏನು?

ಛೇರ್ಮನ್ : ಅವರ ಪ್ರಶ್ನೆ ಅರ್ಥವಾಯಿತೇನು?

ಶ್ರೀ ಹೆಚ್. ಏಕಾಂತಯ್ಯ : ನಾನು ಇನ್ನೊಂದು ಸಲ ಹೇಳುತ್ತೇನೆ. ಗೃಹನಿರ್ಮಾಣ ಸಹಕಾರ ಸಂಘದ ಆಡಳಿತ ಮಂಡಲಿ ಏನಿದೆ ಆ ಆಡಳಿತ ಮಂಡಳಿಯವರು ಕೆಲವು ಗುತ್ತಿಗೆದಾರರಿಗೆ ಜಮೀನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಮತ್ತು ಸ್ವಾಧೀನ ಪಡಿಸಿಕೊಂಡ ಭೂಮಿಯನ್ನು ಕಟ್ಟಡಗಳನ್ನು ಕಟ್ಟಲಿಕ್ಕೆ ಮುಂಗಡವಾಗಿ ಹಣವನ್ನು ಕೊಟ್ಟಿದ್ದಾರೆ. ಸದರಿ ನಿವೇಶನಗಳನ್ನು ಅಲಾಟ್ ಮಾಡುವಾಗ ಮತ್ತು ಕಟ್ಟಡಗಳನ್ನು ಅಲಾಟ್ ಮಾಡುವಾಗ ಅವರು ಹೇಳಿದವರಿಗೆ ಕೊಡಬೇಕೆಂದು ಗುತ್ತಿಗೆ ಕರಾರಿನಲ್ಲಿದೆ. ಇದನ್ನು ಸರ್ಕಾರ ಒಪ್ಪುತ್ತದೆಯೇ? ಒಪ್ಪದಿದ್ದರೆ ಏನು ಕ್ರಮ ತೆಗೆದುಕೊಳ್ಳುತ್ತದೆ?

ಶ್ರೀ ಎಸ್. ಆರ್. ಮೋರೆ : ಇದು ಸೊಸೈಟಿ ಮತ್ತು ಅವರು ನಡೆಸಿರತಕ್ಕಂಥ ಕಾಂಟ್ರಾಕ್ಟ್ ನಾವು ಇದರಲ್ಲಿ ಹೇಗೆ ಭಾಗವಹಿಸುವುದಕ್ಕೆ ಬರುತ್ತದೆ? ಇದನ್ನು ನಾನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆ. ಕೆಲವುಸಂಘಗಳು ಮಾಡಿದ ಅವ್ಯವಹಾರಕ್ಕಾಗಿ ಸೂಪರ್‌ಸೀಡ್ ಸಹ ಮಾಡಿದ್ದೇವೆ.

ಶ್ರೀ ಹೆಚ್. ಏಕಾಂತಯ್ಯ : ಸೂಪರ್‌ಸೀಡ್ ಮಾಡಿದ ಸಂಘಗಳಲ್ಲಿ ಆಡಳಿತಾಧಿಕಾರಿಗಳು ಹೋಗಿ ಅಧಿಕಾರ ವಹಿಸಿಕೊಂಡಿಲ್ಲ ಇದರ ಬಗ್ಗೆ ತಾವೇನು

ಶ್ರೀ ಎಸ್.ಆರ್. ಮೋರೆ : ಅಧಿಕಾರಿಗಳು ಅಧಿಕಾರ ವಹಿಸಿಕೊಂಡಿಲ್ಲವೆಂಬ ಮಾಹಿತಿ ನನಗೆ ಬಂದಿಲ್ಲ, ಹೇಳುತ್ತೇನೆ ಕೇಳಿ. ಮೊನ್ನೆ 4 ಸಂಘಗಳನ್ನು ಸೂಪರ್‌ಸೀಡ್ ಮಾಡಿದ್ದಾರೆ. ನಮ್ಮ ಅಧಿಕಾರಿಗಳು ಅಲ್ಲಿ ಹೋಗಿ ಅಧಿಕಾರ ತೆಗೆದುಕೊಂಡಿದ್ದಾರೆ.

ಶ್ರೀ ಹೆಚ್. ಏಕಾಂತಯ್ಯ : ಚಾರ್ಜನ್ನು ತೆಗೆದುಕೊಂಡಿಲ್ಲ. ಮಂಜುನಾಥೇಶ್ವರ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ ಎಂದು ಏನಿದೆ ಅದರ ಅಧಿಕಾರವನ್ನು ತಮ್ಮ ಅಧಿಕಾರಿಗಳು ತೆಗೆದುಕೊಂಡಿಲ್ಲ. ಅಂದರೆ ಚಾರ್ಜ್ ತೆಗೆದುಕೊಂಡಿಲ್ಲ ಎಂಬ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಎಸ್. ಆರ್. ಮೋರೆ : ಅದರ ಬಗ್ಗೆ ವಿವರ ತರಿಸಿ ಸಪರೇಟ್ ಆಗಿ ಉತ್ತರ ಕೊಡುತ್ತೇನೆ.

ಶ್ರೀ ಜಿ. ರಾಜೂಗೌಡ : ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ಗೆ ಆಯ್ಕೆಯಾಗಿ ನಿರ್ದೇಶಕನಾಗಿ ಸೇವೆ ಸಲ್ಲಿಸತಕ್ಕಂಥ ಕಾಲದಲ್ಲಿ ಆ ಸಹಕಾರ ಸಂಘವು ಶೇಕಡ 50 ಕ್ಕಿಂಥಾ ಹೆಚ್ಚಾಗಿ ಸುಸ್ತಿಯಾದಾಗ ಆತನ ನಿರ್ದೇಶಕತ್ವ ಹೋಗುತ್ತದೆ. ಆ ಒಂದು ಸ್ಥಾನವನ್ನು ಬಹುಶ: ಒಂದು ಸಹಕಾರ ಕೇಂದ್ರ ಬ್ಯಾಂಕ್‌ನಲ್ಲಿ ಸುಮಾರು 15 ನಿರ್ದೇಶಕರಿದ್ದು, ಆ 15 ಜನ ನಿರ್ದೇಶಕರ ಪೈಕಿಯಲ್ಲಿ 10 ಜನ ಯಾವ ಸಹಕಾರ ಸಂಘದಿಂದ ಆಯ್ಕೆಯಾಗಿರುತ್ತಾರೋ ಆ ಸಹಕಾರ ಸಂಘದಲ್ಲೂ ಕೂಡಾ ಸೇಕಡ 50 ಕ್ಕಿಂಥಾ ಜಾಸ್ತಿ ಸುಸ್ತಿಯಾದಾಗ ಅಂಥ ಸಂದರ್ಭದಲ್ಲಿ ಯಾವ ರೀತಿ ಮಾಡಲಾಗುತ್ತಿದೆ.?

ಶ್ರೀ ಎಸ್. ಆರ್. ಮೋರೆ : ಮಾನ್ಯ ರಾಜೂಗೌಡರ ವಿಷಯಕ್ಕೆ ನಾನು ಸಪರೇಟ್ ಆಗಿ ವಿವರ ಕೊಡುತ್ತೇನೆ.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷಣಿಯವರೆ, ಸಹಕಾರ ಸಂಘದಲ್ಲಿ ಎಷ್ಟು ಜನ ನೌಕರದಾರುಗಳನ್ನು ತೆಗೆದುಕೊಂಡಿದ್ದೀರಿ ? ಅದರಲ್ಲಿ ಹರಿಜನಗಿರಿಜನರ ಕೋಟಾ ಕಂಪ್ಲೀಟ್ ಆಗಿ ತುಂಬಲಾಗಿದೆಯೇ ಇಲ್ಲವೇ ಎಂದು ಕೇಳಿದ್ದೇ. ಅದಕ್ಕೆ ಏನೂ ಹೇಳಿಲ್ಲ. ಅಕಸ್ಮಾತ್ ಇಲ್ಲದೆ ಹೋದರೆ ನಿಮ್ಮ ಅಧಿಕಾರ ಅವಧಿಯಲ್ಲಿ ಯಾವ ಯಾವ ಸಂಸ್ಥೆಯಲ್ಲಿ ಕಡಿಮೆ ಆಗಿದೆಯೋ ಅದನ್ನು ತೆಗೆದುಕೊಳ್ಳುವುದಕ್ಕೆ ಏನಾದರೂ ಭರವಸೆ ಕೊಡುತ್ತೀರಾ ಎಂದು ಕೇಳಿದ್ದೆ. ಅದಕ್ಕೂ ಉತ್ತರ ಇಲ್ಲ. ಮೇಲಾಗಿ ಜಿಲ್ಲಾ ಮಟ್ಟ ಮತ್ತು ರಾಜ್ಯಮಟ್ಟದ ಸಹಕಾರ ಸಂಘಗಳಿಗೆ ನಾಮಿನೇಷನ್ ಮಾಡುವುದರಲ್ಲಿ ಕಡ್ಡಾಯವಾಗಿ ಹರಿಜನಗಿರಿಜನರಿಗೆ ಮಾಡುವುದಕ್ಕೆ ಆಕ್ಟ್‌ನಲ್ಲಿ ಅಮೆಂಡ್‌ಮೆಂಟ್ ಮಾಡಬೇಕೆಂದು ಕೇಳಿದ್ದೆ. ಅದಕ್ಕೆ ದಯವಿಟ್ಟು ಸ್ಪಷ್ಟೀಕರಣ ಕೊಡಬೇಕು.

ಶ್ರೀ ಎಸ್. ಆರ್. ಮೋರೆ : ಮಾನ್ಯ ಕರಿಯಣ್ಣನವರೇ, ಈ ಬಗ್ಗೆ ಸಹಕಾರ ಕಾಯಿದೆಯಲ್ಲಿ ತಿದ್ದುಪಡಿ ಮಾಡಿ ಅವಕಾಶ ಮಾಡಿಕೊಡುವುದಕ್ಕೆ ಪರಿಶೀಲನೆ ಮಾಡುತ್ತೇನೆ.

ಉಪಾಧ್ಯಕ್ಷರು : ಈಗ ಮಾನ್ಯ ರೆವಿನ್ಯೂ ಮಂತ್ರಿಗಳಿಂದ ಉತ್ತರ.

ಶ್ರೀ ಸಿ. ಬೈರೇಗೌಡ : ನಾನು ಕೆಲವು ವಿಷಯಗಳನ್ನು ಮಾತನಾಡಬೇಕಾಗಿದೆ.

ಮಾನ್ಯ ಉಪಾಧ್ಯಕ್ಷಣಿಯವರೆ, ನೀರು ಇಲ್ಲದೆ ಬತ್ತಿಹೋಗಿರತಕ್ಕಂಥ ಕೊಳವೆಬಾವಿಗಳ ಸಾಲದ ಬಗ್ಗೆ ಹೇಳುತ್ತೇನೆ. ನೀರಿಲ್ಲ, ನೀರು ಇಲ್ಲದೆ ರೈತರು ಸಂಪಾದನೆ ಮಾಡುವುದಕ್ಕೆ ಸಾಧ್ಯವಿಲ್ಲ, ಸಂಪಾದನೆ ಮಾಡದೆ ಕೊಳವೆಬಾವಿ ತೆಗೆಸುವುದಕ್ಕಾಗಿ ಬ್ಯಾಂಕ್‌ಗಳಿಂದ ಅಥವಾ ಸಹಕಾರ ಸಂಘಗಳಿಂದ ತೆಗೆದುಕೊಂಡಿರತಕ್ಕಂಥ ಸಾಲವನ್ನು ಮರುಪಾವತಿ ಮಾಡುವುದಕ್ಕಾಗುವುದಿಲ್ಲ, ಆದ್ದರಿಂದ ಇವತ್ತು ವಾಸ್ತವಾಂಶ ಏನಿದೆ ಅದನ್ನು ಪರಿಶೀಲನೆ

ಮಾಡಿ ಬತ್ತಿ ಹೋಗಿರತಕ್ಕಂಥ ಕೊಳವೇ ಬಾವಿಗಳ ಸಾಲವನ್ನು ವಜಾ ಮಾಡಬೇಕೆಂದು ನಾನು ಹೇಳಿದ್ದೆ. ಅದರ ಬಗ್ಗೆ ತಾವು ಏನೂ ಹೇಳಲಿಲ್ಲ. ಇದರ ಬಗ್ಗೆ ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳಿ. ಆ ಆಕ್ಟ್‌ನ್ನು ತಿದ್ದುಪಡಿ ಮಾಡಿದರೆ ಸಾಕಾಗುತ್ತದೆ. ದಯವಿಟ್ಟು ಅಷ್ಟು ಮಾಡುತ್ತೀರಾ?

ಶ್ರೀ ಎಸ್.ಆರ್. ಮೋರೆ : ವಿಫಲಗೊಳ್ಳುವ ಬಾವಿಗೆ ಪರಿಹಾರ ಕೊಡುವುದು ವಿಮಾ ಯೋಜನೆಗೆ ಬರುತ್ತದೆ. ಇದನ್ನು ಆಗ್ರೋ ಇಂಡಸ್ಟ್ರೀಸ್, ನ್ಯಾಷನಲ್ ಇನ್‌ಶ್ಯೂರೆನ್ಸ್ ಕಂಪನಿಗಳಿಂದ ಜಾರಿಗೊಳಿಸಲಾಗುತ್ತದೆ. ಅದರಲ್ಲಿ ಬದಲಾವಣೆ ಮಾಡಬೇಕಾದರೆ ಕೇಂದ್ರ ಸರ್ಕಾರದ ಒಪ್ಪಿಗೆ ಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ : ನೀವು ಒಂದು ಕೆಲಸ ಮಾಡಿ. ನಮ್ಮನ್ನೆಲ್ಲಾ ಒಂದು ಸಾರಿ ಕರೆಯಿರಿ ನಾವೆಲ್ಲಾ ಕುಳಿತುಕೊಂಡು ಪರಿಶೀಲನೆ ಮಾಡೋಣ. ಅದಕ್ಕಾದರೂ ಒಪ್ಪುತ್ತೀರಾ?

ಶ್ರೀ ಎಸ್.ಆರ್. ಮೋರೆ : ಅಗತ್ಯವಾಗಿ ಪರಿಶೀಲನೆ ಮಾಡೋಣ.

ಉಪಾಧ್ಯಕ್ಷರು : ಈಗ ರೆವಿನ್ಯೂ ಮಂತ್ರಿಗಳಿಂದ ಉತ್ತರ.

ಶ್ರೀ ಗೋಪಿನಾಥ ಆರ್. ಸಾಂಡ್ರ : ನಾನು ಒಂದೆರಡು ವಿಷಯ ಹೇಳಬೇಕಾಗಿದೆ.

ಉಪಾಧ್ಯಕ್ಷರು : ಮಾನ್ಯ ಸಾಂಡ್ರಾರವರೇ, ನಿಮ್ಮ ಹೆಸರನ್ನು ಕರೆದಿಲ್ಲ. ನಾನು ಮಾನ್ಯ ಕಂದಾಯ ಮಂತ್ರಿಗಳನ್ನು ಕರೆದಿದ್ದೇನೆ.

ಶ್ರೀ ಗೋಪಿನಾಥ ಆರ್. ಸಾಂಡ್ರ : ಹುಬ್ಬಳ್ಳಿ ಎಪಿಎಂಸಿಯನ್ನು ಬೈಫರ್‌ಕೇಟ್ ಮಾಡುತ್ತೇವೆಂದು ಹೇಳಿದ್ದೀರಿ. ಹುಬ್ಬಳ್ಳಿ ಧಾರವಾಡ ಮಹಾ ನಗರಕ್ಕೆ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರನ್ನು ಟ್ರಾನ್ಸ್‌ಫರ್ ಮಾಡಬೇಕು. ಕೆಲಸದ ಒತ್ತಡದಿಂದ ಇದು ಮಾಡಬೇಕಾಗುತ್ತದೆ. ಮೂರನೆಯದಾಗಿ ಇಂಡಸ್ಟ್ರಿಯಲ್ ಕೋ ಅಪರೇಟೀವ್ ಸೊಸೈಟಿಗಳು ಎಂದು ಏನು ಇದೆ. ಇವು ಬಡವರ ಸೊಸೈಟಿಗಳಾಗಬೇಕು. ಬಡಿಗೇರು, ಕಮ್ಮಾರು, ಮತ್ತಿಗಾರು, ಅಕ್ಕಸಾಲಿಗರು ಇವೆಲ್ಲ ಸೊಸೈಟಿಗಳು ಮುಚ್ಚಿವೆ. ಅವುಗಳನ್ನು ಪುನಶ್ಚೇತನಗೊಳಿಸಲು ಯಾವುದಾದರೂ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು.

ಶ್ರೀ ಎಸ್. ಆರ್. ಮೋರೆ : ಈಗಾಗಲೇ ಹುಬ್ಬಳ್ಳಿ ಎಪಿಎಂಸಿ ಬೈಫರ್‌ಕೇಷನ್ ಬಗ್ಗೆ ಕೇಳಿದ್ದಾರೆ. ಈಗಾಗಲೇ ಬೈಪರ್‌ಕೇಶನ್‌ಗೆ ರೆಡಿ ಆಗಿದೆ. ಅದನ್ನು ಕೆಲವೇ ದಿನಗಳಲ್ಲಿ ಮಾಡಿ ಅದನ್ನು ನೋಟಿಫೈ ಮಾಡುತ್ತೇನೆ. ಎರಡನೆಯದು ತಾವು ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರನ್ನು ಟ್ರಾನ್ಸ್‌ಫರ್ ಮಾಡುವ ಬಗ್ಗೆ ಕೇಳಿದಿರಿ. ಇದು ಒಳ್ಳೆಯ ಸಲಹೆ ಎಂದು ಕಾಣಿಸುತ್ತದೆ. ಹುಬ್ಬಳ್ಳಿ ಧಾರವಾಡ ನಗರವು ಬೃಹತ್ ನಗರವಾಗಿ ಬೆಳೆದಿತ್ತು. ಅಲ್ಲಿ ಕೆಲಸದ ಒತ್ತಡ ಜಾಸ್ತಿ ಆಗಿದೆ. ಸರ್ಕಾರ ಇದರ ಬಗ್ಗೆ ಪರಿಶೀಲನೆ ಮಾಡುತ್ತದೆ ಎಂದು ಹೇಳುತ್ತೇನೆ.

ಛೇರ್ಮನ್ : ನೀವು ಕೇಳಿದ್ದು ಆಯಿತು, ಅವರು ಹೇಳಿದ್ದಾರೆ ಕುಳಿತುಕೊಳ್ಳಿ.

ಶ್ರೀ ಗೋಪಿನಾಥ ಆರ್. ಸಾಂಡ್ರ : ಇಂಡಸ್ಟ್ರಿಯಲ್ ಕೋ ಆಪರೇಟೀವ್ ಸೊಸೈಟಿ ಬಗ್ಗೆ ಹೇಳಿಲ್ಲ.

ಛೇರ್ಮನ್ : ನೀವು ಅವರೂ ಇದರ ಬಗ್ಗೆ ಪ್ರತ್ಯೇಕವಾಗಿ ಚರ್ಚೆ ಮಾಡಿ.

ಶ್ರೀ ಎಸ್. ಆರ್. ಮೋರೆ : ಇದರ ಬಗ್ಗೆ ಕಾರ್ಯಕ್ರಮ ಹಾಕುತ್ತೇನೆ. ಇದರ ಬಗ್ಗೆ ನಾವೂ ನೀವೂ ಭೇಟಿ ಮಾಡಿ ವಿಚಾರ ಮಾಡೋಣ.

ಛೇರ್ಮನ್ : ಮಾನ್ಯ ಸಾಂಡ್ರಾರವರೇ, ಕುಳಿತುಕೊಳ್ಳಿ. ಈಗ ಮಾನ್ಯ ಕಂದಾಯ ಮಂತ್ರಿಗಳು ಉತ್ತರ ಕೊಡುತ್ತಾರೆ.

ಕಂದಾಯ ಸಚಿವರಿಂದ ಉತ್ತರ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷಣಿಯವರೇ, ನನ್ನ ಇಲಾಖೆಯ ಬೇಡಿಕೆಗಳ ಮೇಲೆ ಸುಮಾರು 20 ಜನ ಸದಸ್ಯರು ಮಾತನಾಡಿದ್ದಾರೆ. ನನ್ನ ಬೇಡಿಕೆ ನಂಬರ್ 50,51,52 ಮತ್ತು 42, ಇದಲ್ಲದೇ ಮುಜರಾಯಿ ಇಲಾಖೆಯೂ ಸೇರಿದಂತೆ ಬೇಡಿಕೆ ನಂ. 53, ಸುಮಾರು ಐದು ಡಿಮಾಂಡ್ ಬರುತ್ತದೆ. ಇದರ ಮೇಲೆ 20 ಜನ ಸದಸ್ಯರು ಮಾತನಾಡಿದ್ದಾರೆ. ಅವರುಗಳು ಅನೇಕ ಒಳ್ಳೆಯ ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಮತ್ತು ಎಲ್ಲಿ ಕೆಲಸ ಆಗಿಲ್ಲ ಅಲ್ಲಿ ಟೀಕೆಯನ್ನು ಕೂಡ ಮಾಡಿದ್ದಾರೆ. ಇವೆಲ್ಲವನ್ನೂ ಕೂಡ ನಾನು ತಿಳಿದುಕೊಂಡಿದ್ದು, ಸರ್ಕಾರ ಸರಿಯಾಗಿ ಕೆಲಸ ಮಾಡಬೇಕು ಎನ್ನತಕ್ಕ ದೃಷ್ಟಿಯಿಂದಲೇ ಅವರು ತಮ್ಮ ಟೀಕೆಯನ್ನು ಮಾಡಿದ್ದಾರೆ ಎನ್ನತಕ್ಕ ಭಾವನೆ ನನ್ನದು. ಎಲ್ಲಿ ಸ್ವಲ್ಪ ಮಟ್ಟಿಗೆ ಅವರು ಹೊಗಳಿದ್ದಾರೆ. ಅದನ್ನು ಕೂಡ ಬಹಳ ಒಳ್ಳೆಯ ಕೆಲಸ ಮಾಡಿದ್ದಕ್ಕೆ ಅವರು ಬೆಂಬಲವನ್ನು ಸೂಚಿಸಿದ್ದಾರೆ ಎನ್ನತಕ್ಕ ಭಾವನೆಯನ್ನು ಇಟ್ಟುಕೊಂಡು ಕೆಲವೇ ನಿಮಿಷಗಳಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಕಾರಣ ಈ ರೆವಿನ್ಯೂ ಇಲಾಕೆಯ ಎಲ್ಲಕ್ಕಿಂತ ಹಳೆಯ ಇಲಾಖೆ. ಮಾನ್ಯ ಸದಸ್ಯರುಗಳು ಎಲ್ಲರೂ ಕೂಡ ಮಾತನಾಡುವಾಗ ಇದು ಮದರ್ ಡಿಪಾರ್ಟ್‌ಮೆಂಟ್ ಎನ್ನತಕ್ಕ ಭಾವನೆಯನ್ನು ವ್ಯಕ್ತ ಮಾಡಿದ್ದಾರೆ. ಆದರೆ ಈ ಮದರ್ ಡಿಪಾರ್ಟ್‌ಮೆಂಟ್ ಏನು ಆಗಿದೆ, ಇದು ಮದರ್ ಆಗಿ ಬಿಟ್ಟಿದೆ.

ಶ್ರೀ ಎಂ.ವಿ. ವೆಂಕಟಪ್ಪ : ಅಜ್ಜಿ ಡಿಪಾರ್ಟ್‌ಮೆಂಟ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ; ಅಜ್ಜಿ ಡಿಪಾರ್ಟ್‌ಮೆಂಟ್ ಆಗಿದೆ. ಏಕೆಂದರೆ ಈ ಡಿಪಾರ್ಟ್‌ಮೆಂಟನಿಂದ ಏನು ಅನೇಕ ಅಧಿಕಾರಗಳು ಇತ್ತು ಅವೆಲ್ಲಾ ಒಂದೊಂದಾಗಿ ಹೊಸ ಹೊಸ ಇಲಾಖೆಗಳು ಹುಟ್ಟಿದ ಮೇಲೆ ಎಲ್ಲಾ ಹೋಗಿ ಬಿಟ್ಟಿದೆ. ಇವತ್ತು ಬರಗಾಲ ಪ್ರದೇಶದಲ್ಲಿ ಅದನ್ನ ಇರಲಾರದೇ, ಧಾನ್ಯ ಇರಲಾರದೆ, ಯಾವ ರೀತಿ ನೀರು ಇರಲಾರದೆ ತೆವಳಿಕೊಂಡು ಒಬ್ಬ ಮನುಷ್ಯ ನಿಲ್ಲುತ್ತಾನೆ ಆ ಒಂದು ಸ್ಥಿತಿಯಲ್ಲಿ ನಮ್ಮ ರೆವಿನ್ಯೂ ಇಲಾಖೆ ಉಳಿದಿದೆ. ಆದರೂ ಸಹ ನಮಗೆ ವಹಿಸಿದಂತಹ ಕೆಲಸವನ್ನು ನಾವು ಮಾಡಬೇಕಾಗುತ್ತದೆ. ಮತ್ತು ಈ ಇಲಾಖೆಗೆ ವಿಶಿಷ್ಟವಾದಂತಹ ಕೆಲವು ಅಧಿಕಾರಗಳು ಇದ್ದರೂ, ಬೇರೆ ಇಲಾಖೆಯ ಕೆಲಸವನ್ನು ಕೂಡ ವಹಿಸಿಕೊಂಡು ನಮ್ಮ ಇಲಾಖೆಯು ನೆರವೇರಿಸುತ್ತಿದೆ.. ಈಗ ಉದಾಹರಣೆಗೆ ಹೇಳಬೇಕಾದರೆ ಯಾವ ಮಂತ್ರಿಗಳೇ ಹೋಗಲಿ, ವಿರೋಧ ಪಕ್ಷದ ನಾಯಕರೇ ಹೋಗಲಿ ಅಥವಾ ಯಾವುದೇ ಟೀಮ್ ಬರಲಿ, ಮೊದಲು ಅವರು ಕರೆಯತಕ್ಕದ್ದು ತಾಲ್ಲೂಕು ಮಟ್ಟದ ತಹಶೀಲ್ದಾರ್ ಅವರನ್ನು; ತಹಶೀಲ್ದಾರ್ ಯಾರು, ಅವರನ್ನು ಕರೆಯಿರಿ ಎಂದು ಹೇಳುತ್ತಾರೆ. ಅವರ ಇಲಾಖೆಯವರನ್ನು ಅವರು ಕರೆಯುವುದಿಲ್ಲ. ಆದರೆ ತಹಶೀಲ್ದಾರ್ ಅವರನ್ನು ಮೊದಲು ಕರೆಯಿರಿ ಎಂದು ಹೇಳುತ್ತಾರೆ. ಬೇರೆ ಸೆಂಟ್ರಲ್ ಟೀಮ್ ಆಗಲೀ ಅಥವಾ ಸ್ಟೇಟ್ ಆಗಲಿ ಬರಲಿ ಅವರು ಕೂಡ ಕೇಳತಕ್ಕದ್ದು ಇವರಿಗೇ. ಇವರಿಗೇ ಜವಾಬ್ದಾರಿ ಹೆಚ್ಚಿನದು ಇದೆ. ಆದರೆ ಅಧಿಕಾರಗಳು ಕಡಿಮೆ ಕಡಿಮೆ ಆಗುತ್ತಾ ಹೋಗುತ್ತಿದೆ. ಅದಕ್ಕೆ ಈಗ ಇರತಕ್ಕ ಅಧಿಕಾರದಲ್ಲಿ, ಅಧಿಕಾರದ ವ್ಯಾಪ್ತಿಯಲ್ಲಿ ಈ ಇಲಾಖೆಯನ್ನು ಯಾವ ರೀತಿಯಾಗಿ ನಾವು ನಡೆಸಿಕೊಂಡು ಬಂದಿದ್ದೇವೆ ಮತ್ತು ಯಾವ ರೀತಿಯಾಗಿ ನಡೆಯಬೇಕು, ಜನರ ಅಪೇಕ್ಷೆಯ ಪ್ರಕಾರ

ನಾವು ಯಾವ ರೀತಿಯಾಗಿ ಕೆಲಸ ಮಾಡಬೇಕು ಎನ್ನತಕ್ಕ ಪ್ರಶ್ನೆಗಳು ಕೂಡ ಇವತ್ತು ನಮ್ಮ ಮುಂದೆ ಇದೆ. ಒಂದು ಉದಾಹರಣೆ ಹೇಳಬೇಕಾದರೆ ಹೋದ ಮಾರ್ಚ್‌ನಲ್ಲಿ ನಾನು ಅಧಿಕಾರವನ್ನು ವಹಿಸಿಕೊಂಡ ಮೇಲೆ ಕೆಲವು ಆಶ್ವಾಸನೆಗಳನ್ನು ಈ ಒಂದು ಸದನದಲ್ಲಿ ಕೊಟ್ಟಿದ್ದೆ. ಅದು ಲ್ಯಾಂಡ್ ರೆವಿನ್ಯೂ ಬಗ್ಗೆ ಇರಬಹುದು ಅಥವಾ ಲ್ಯಾಂಡ್ ರೆವಿನ್ಯೂ ಆಕ್ಟ್‌ಗೆ ತಿದ್ದುಪಡಿ ತರತಕ್ಕ ವಿಚಾರ ಇರಬಹುದು. ರೆಗ್ಯುಲರೈಸೇಷನ್ ಆಫ್ ಅನ್ ಅಥರೈಸ್ಡ್ ಕಲ್ಟಿವೇಷನ್ ಇರಬಹುದು.

ಅದು ಸ್ಟ್ಯಾಂಪ್ ಡ್ಯೂಟಿಯನ್ನು ಎಕ್ಸ್‌ಪೆನ್‌ಷನ್ ಮಾಡತಕ್ಕಂಥಾದ್ದು ಇರಬಹುದು, ಅಥವಾ ಲ್ಯಾಂಡ್ ರಿಫೋರ್ಮ್ಸ್‌ನಲ್ಲಿ ಸೋಲ್ಜರ್ಸ್‌ಗೆ ಕೊಡತಕ್ಕಂಥ ಕನ್ಸಿಷನ್, ಪರಿಹಾರ ಇರಬಹುದು, ನೈಸರ್ಗಿಕ ವಿಕೋಪದಿಂದಾದುದಕ್ಕೆ ಸಹಾಯ ಮಾಡತಕ್ಕಂಥಾದ್ದು ಇರಬಹುದು, ಮನೆ ನಿವೇಶನಗಳನ್ನು ಹಂಚುವುದಕ್ಕೆ ಏನು ಕೆಲವು ಅನಾನುಕೂಲತೆಗಳು ಇವೆ, ಅವುಗಳನ್ನು ತೆಗೆದುಹಾಕಿ ಅವರಿಗೆ ಸಹಾಯ ಮಾಡತಕ್ಕಂಥ ಕೆಲಸವೇ ಇರಬಹುದು, ಅವೆಲ್ಲವನ್ನೂ ಕೂಡ ತಮ್ಮೆಲ್ಲರ ಸಲಹೆಗಳನ್ನು ನಾವು ಪಡೆದುಕೊಂಡು ಅವುಗಳನ್ನು ಅನೇಕ ರೀತಿಯಲ್ಲಿ ಜಾರಿಗೆ ತಂದಿದ್ದೇವೆ. ಬಹುಶಃ ಇಂಥ ಕೆಲಸಗಳನ್ನು ತಾವುಗಳು ಮೆಚ್ಚುತ್ತೀರಿ ಎಂದು ನಾನು ಭಾವಿಸಿದ್ದೇನೆ. ಅದೂ ಅಲ್ಲದೆ ಇನಾಮ್ ಅಬಾಲಿಷನ್ ಆಕ್ಟ್‌ನಲ್ಲಿಯೂ ಕೂಡ ಕೆಲವುಕಡೆ ಡೇಟ್ ಎಕ್ಸ್‌ಟೆಂಡ್ ಮಾಡಬೇಕಾಗಿತ್ತು; ರೀಗ್ರ್ಯಾಂಟ್ ಮಾಡತಕ್ಕಂಥ ದೃಷ್ಟಿಯಿಂದ ನಾವು ಮಾಡಿದ್ದೇವೆ. ಹೀಗೆ ಹಲವಾರು ಸಮಸ್ಯೆಗಳಿಗೆ ಪರಿಹಾರವನ್ನು ಕೊಡತಕ್ಕಂಥ ಕೆಲಸವನ್ನು ಈ ರೆವಿನ್ಯೂ ಇಲಾಖೆಯು ಮಾಡಿದೆ. ಇಷ್ಟಾದರೂ ಕೂಡ ನಮ್ಮ ಮುಂದೆ ಇನ್ನೂ ಮಾಡತಕ್ಕಂಥ ಕೆಲಸಗಳು ಇನ್ನೂ ಅನೇಕವು ಇವೆ. ಈ ಇಲಾಖೆಯ ಮೇಲೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಮೊಟ್ಟಮೊದಲನೇಯದಾಗಿ, ಮಾನ್ಯ ಸದಸ್ಯರಾದ ವೆಂಕಟೇಶ್‌ರವರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಸಿ ಅಂಡ್ ಡಿ ಲ್ಯಾಂಡ್ ಬಗ್ಗೆ ಅವರು ಒಂದು ಪ್ರಶ್ನೆಯನ್ನು ಎತ್ತಿದ್ದಾರೆ. ವೆರಿಫಿಕೇಷನ್ ಮಾಡದೆ, ಸಿ ಅಂಡ್ ಡಿ ಕ್ಲಾಸ್ ಲ್ಯಾಂಡ್‌ನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಒಪ್ಪಿಸಿ, ಪುನಃ ಅದನ್ನು ವಾಪಸ್ ವಾಪಸ್ ತೆಗೆದುಕೊಂಡು ಹಂಚಬೇಕಾದರೆ ಅದು ಬಹಳ ಕಷ್ಟವಾಗುತ್ತ ಇದೆ. ಆ ಬಗ್ಗೆ ಪ್ರಾಪರ್ ವೆರಿಫಿಕೇಷನ್ ಮಾಡಿಲ್ಲ, ಅದನ್ನು ಸರಿಯಾದಂಥ ರೀತಿಯಲ್ಲಿ ಮಾಡಿ ರೆಗ್ಯುಲರೈಸ್ ಮಾಡಬೇಕೆಂದು ಅವರು ಹೇಳಿದ್ದಾರೆ. ಈ ಮಾತನ್ನು ನಾವು ಒಪ್ಪಿಕೊಂಡಿದ್ದೇವೆ. ಈ ಸಿ ಅಂಡ್ ಡಿ ಕ್ಲಾಸ್ ಲ್ಯಾಂಡ್‌ನ್ನು ಯಾವುದನ್ನು ನಾವು ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಒಪ್ಪಿಸಿಕೊಟ್ಟಿದ್ದೇವೋ ಅದನ್ನು ನಾವು ತಿರುಗಿ ತೆಗೆದುಕೊಂಡು ರೆಗ್ಯುರೈಸ್ ಮಾಡತಕ್ಕಂಥಾದ್ದು ಒಂದು ವಿಚಾರ. ಇನ್ನು ಉಳಿದಂಥ ಜಮೀನನ್ನು ಸಾರ್ವಜನಿಕರ ಕೆಲಸಗಳಿಗಾಗಿ ಮೀಸಲು ಇಡಬೇಕು. ಯಾಕೆಂದರೆ ನಾಳೆ ಶಾಲಾಕಟ್ಟಡಗಳೇ ಆಗಲಿ, ಆಸ್ಪತ್ರೆಯ ಕಟ್ಟಡಗಳೇ ಆಗಲಿ, ಬರಿಯಲ್‌ಗ್ರೌಂಡ್‌ಗೆ ಆಗಿರಲಿ, ಇಂಥ ಅನೇಕ ಕಾರ್ಯಗಳಿಗಾಗಿ ನಾವು ಜಮೀನು ಕೊಡತಕ್ಕಂಥ ಅವಶ್ಯಕತೆಯು ಇದೆ. ಅಂಥ ಸಮಯದಲ್ಲಿ ನಮ್ಮ ಹತ್ತಿರ ಜಮೀನು ಇಲ್ಲವಾದಲ್ಲಿ ನಮಗೆ ಕಷ್ಟವಾಗುತ್ತದೆ, ಹೀಗೆ ರೆಗ್ಯುಲರೈಸ್ ಮಾಡುತ್ತಾ ಹೋದರೆ ಪುನ: ನಾವು ಸರಕಾರಿ ಕೆಲಸಗಳಿಗಾಗಿ ಲ್ಯಾಂಡ್ ಅಕ್ವಿಸಿಶನ್ ನಾವೇ ಮಾಡಬೇಕಾದ ಪರಿಸ್ಥಿತಿಯು ಬರುತ್ತದೆ. ಅದು ಬರಬಾರದು ಎನ್ನುವ ದೃಷ್ಟಿಯಿಂದ ಕೆಲವು ಸಿ ಅಂಡ್ ಡಿ ಕ್ಲಾಸ್ ಭೂಮಿ ಏನಿದೆ ಅದನ್ನು ರಿಸರ್ವ್ ಮಾಡಿಕೊಂಡು ಸಾರ್ವಜನಿಕ ಉಪಯೋಗಕ್ಕಾಗಿ ಇಡಬೇಕೆಂದು ಮಾಡಿದ್ದೇವೆ. ಹಾಗೆಯೇ ಗೃಹನಿರ್ಮಾಣ ಸಹಕಾರಿ ಸಂಘಗಳ ವಿಚಾರವನ್ನು ನೀವು ಏಕೆ ಮಾಡುತ್ತೀರಿ? ಅದನ್ನು ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಗೆ ಬಿಡಬೇಕು ಆ ಕೆಲಸವನ್ನು ಅವರೇ ಡೈರೆಕ್ಟ್ ಆಗಿ ಸೊಸೈಟಿಯವರು ಮಾಡುತ್ತಾರೆ ಎನ್ನತಕ್ಕಂಥ ಸಲಹೆಯನ್ನು ಕೂಡ ಅವರು ಮಾಡಿದ್ದಾರೆ.

ಅದಕ್ಕೆ ಸಂಬಂಧಪಟ್ಟಹಾಗೆ ಮಾನ್ಯ ಬೈರೇಗೌಡರು ಕೂಡ ಒಂದು ಪ್ರಶ್ನೆಯನ್ನು ಕೇಳಿದ್ದರು. ಈ ವಿಚಾರವು ಸಾಕಷ್ಟು ಚರ್ಚೆಗೆ ಕೂಡ ಬಂದಿದೆ. ಅದನ್ನು ಯಾವ ರೀತಿಯಲ್ಲಿ ಕೋ-ಆಪರೇಟಿವ್ ಡಿಪಾರ್ಟ್‌ಮೆಂಟ್‌ನವರು ತೆಗೆದುಕೊಳ್ಳುತ್ತಾರೋ ಮತ್ತು ಅದನ್ನು ಸಂಬಂಧಪಟ್ಟ ಇಲಾಖೆಗೆ ಬಿಡತಕ್ಕಂಥ ವಿಷಯ ಇದೆ. ಆದರೆ, ನಮ್ಮ ಕಾನೂನು ಪ್ರಕಾರ ಯಾರಾದರೂ ರಿಕ್ವಿಸಿಷನ್ ಕೊಟ್ಟರೆ ಲ್ಯಾಂಡ್ ಅಕ್ವಿಸಿಶನ್ ಆಕ್ಟ್ ಪ್ರಕಾರ, ಕಾನೂನು ಪ್ರಕಾರ ಇಲಾಖೆಗಳಾದ ಪಿಡಬ್ಲೂಡಿ ಇರಬಹುದು, ಇರಿಗೇಷನ್ ಇರಬಹುದು, ಕೊ-ಅಪರೇಟಿವ್ ಇಲಾಖೆ ಇರಬಹುದು, ಹೀಗೆ ಯಾರ ಮುಖಾಂತರ ಬರುತ್ತದೋ ಅವರನ್ನು ಅಕ್ವೈರ್ ಮಾಡಿಕೊಡತಕ್ಕಂಥ ಒಂದು ಪದ್ಧತಿ ಇದೆ. ಅದರ ಪ್ರಕಾರ ನಾವು ಮಾಡಿಕೊಂಡು ಬಂದಿದ್ದೇವೆ. ಆದರೆ ಅಲ್ಲಿನ ಸದಸ್ಯರು ಒಳ್ಳೆಯವರು ಕೆಟ್ಟವರು ಎನ್ನತಕ್ಕಂಥ ವಿಚಾರ ಬರುತ್ತದೆ ಅಂದರೆ ಸಂಬಂಧಪಟ್ಟ ಸೊಸೈಟಿಗಳಲ್ಲಿ ಇರತಕ್ಕಂಥ ಸದಸ್ಯರ ಪ್ರಶ್ನೆ ಅದಾಗುತ್ತದೆ. ಅಸಿಸ್ಟೆಂಟ್ ರಿಜಿಸ್ಟ್ರಾರ್ ಅಥವಾ ಸೊಸೈಟಿಗಳವರು ವೆರಿಫಿಕೇಷನ್ ಮಾಡತಕ್ಕಂಥವರು ಕೂಡ ಒಳ್ಳೆಯವರಿಲ್ಲದಿದ್ದರೆ ಅಲ್ಲಿ ತೊಂದರೆಯಾಗಬಹುದು, ಏಕೆಂದರೆ ಬಹಳಷ್ಟು ಜನರು ಇದನ್ನು ಒಂದು ವ್ಯಾಪಾರ ಮಾಡಿಕೊಂಡಿದ್ದಾರೆ. ಬೋಗಸ್ ಸೊಸೈಟಿಗಳನ್ನು ಮಾಡಿಕೊಂಡು ಕೆಲವು ಹೆಸರನ್ನು ಕೊಟ್ಟು ಕೆಲವು ಜನರಿಗೆ ಅದರಲ್ಲಿ ಮೆಂಬರ್‌ಶಿಪ್ ಕೊಟ್ಟು ಅಲಾಟ್ ಮಾಡಿ ಉಳಿದ ಸೈಟ್‌ಗಳನ್ನು ಮಾರ್ಕೆಟ್ ಬೆಲೆಯಲ್ಲಿ ಮಾರಾಟ ಮಾಡಿ ಬಹಳ ದೊಡ್ಡ ಪ್ರಮಾಣದಲ್ಲಿ ಹಣ ಸಂಪಾದನೆ ಮಾಡತಕ್ಕಂಥ ಹಾದಿಯನ್ನು ಹುಡುಕಿದ್ದಾರೆ. ಈ ಮಾತನ್ನು ತಾವುಗಳು ಕೂಡ ಒಪ್ಪುತ್ತೀರಿ ಎಂದು ನಂಬಿದ್ದೇನೆ.

ಇದಕ್ಕೆ ಏನು ಕಂಡುಹಿಡಿಯಬೇಕು? ಹೇಗೆ ತಪ್ಪಿಸಬೇಕೆಂಬ ದೃಷ್ಟಿಯಿಂದ ನಮ್ಮ ಸರ್ಕಾರ ಒಂದು ಆರ್ಡಿನೆನ್ಸ್‌ನ್ನು ಇಂದು ತಂದಿದೆ. ಏನು? ನೇರವಾಗಿ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟೀಸ್, ತಾಲ್ಲೂಕು ಮತ್ತು ಜಿಲ್ಲಾಮಟ್ಟದಲ್ಲಿರುವಂಥವುಗಳು ಹೌಸಿಂಗ್ ಬೋರ್ಡ್, ಕೆಐಡಿಬಿ, ಮತ್ತು ಬಿಡಿಎ-ಇವರು ನೇರವಾಗಿ ರೈತರ ಹತ್ತಿರ ಹೋಗಿ ಪರ್ಚೇಸ್ ಮಾಡುವುದಕ್ಕೆ ನಾವು ಭೂಸುಧಾರಣಾ ಕಾಯಿದೆಯಲ್ಲಿ ಅವಕಾಶ ಮಾಡಿಕೊಟ್ಟಿದ್ದೇವೆ. ಇದರಿಂದ ಬಹುಶ: ರೈತರಿಗೆ ಒಳ್ಳೆಯ ಪ್ರೈಸು ಸಿಗುತ್ತದೆ. ಮತ್ತು ಯಾರಿಗೆ ಮಾರಬೇಕೆನ್ನುವ ಇಚ್ಛೆ ಇರುತ್ತದೆ ಅವರಿಗೆ ಸೊಸೈಟಿಗೆ ಮಾರುವ ಬದಲು ಬಿಡಿಎ ಗಾಗಲಿ, ಅರ್ಬನ್ ಡೆವಲಪ್‌ಮೆಂಟ್ ಅಧಿಕಾರಿಗಾಗಲಿ ಕೆಐಡಿಗಾಗಲಿ ಮಾರಲು ಅವಕಾಶ ಮಾಡಿಕೊಟ್ಟಿದ್ದೇವೆ. ಸ್ಲಂ ಕ್ಲಿಯರೆನ್ಸ್ ಬೋರ್ಡನ್ನೂ ಕೂಡಿ ಸೇರಿಸಬೇಕೆಂದು ಮಾಡಿದ್ದೇನೆ. ಇದರಿಂದ ಈ ಅನಾಹುತ ತಪ್ಪುತ್ತದೆ. ಬಹುಬೇಗನೆ ಭೂಸ್ವಾಧೀನವಾಗಿ, ಸೈಟನ್ನು ವಿಂಗಡಣೆ ಮಾಡಲು ಅನುಕೂಲವಾಗುತ್ತದೆ ಎಂಬ ದೃಷ್ಟಿಯಿಂದ ನಾನು ಈ ಕೆಲಸ ಮಾಡಿದ್ದೇನೆ. ಆ ತಿದ್ದುಪಡಿ ಈ ಸದನದಲ್ಲಿ ಬರುತ್ತದೆ. ಅದಕ್ಕೆ ತಮ್ಮೆಲ್ಲರ ಬೆಂಬಲವನ್ನು ಕೋರುತ್ತೇನೆ. ವಿಲೇಜಸ್‌ನಲ್ಲೂ ತಮಗೆ ಗೊತ್ತಿರುವಂತೆ ಮನೆ ನಿವೇಶನಗಳನ್ನು ಗ್ರಾಮೀಣ ಅಭಿವೃದ್ಧಿ ಸಚಿವಾಲಯ ಸ್ವಾಧೀನಪಡಿಸಿಕೊಳ್ಳುತ್ತದೆ. ಗೋಮಾಳದ್ದಕ್ಕೆ ಕೂಡ ಡೆಪ್ಯುಟಿ ಕಮೀಷನರ್‌ಗೆ ಅಧಿಕಾರ ಕೊಟ್ಟಿದ್ದೇನೆ. ಅವರೇ ಹೌಸ್‌ಸೈಟ್ ಮಾಡಿ ಬಿಡಿಓ ಮೂಲಕ ಅದನ್ನು ಹಂಚಬೇಕೆಂಬುದು ಮಾಡಿದ್ದೇವೆ. ಅದಕ್ಕೊಂದು ಟಾಸ್ಕ ಫೋರ್ಸನ್ನು ಕೂಡ ಗ್ರಾಮೀಣಾಭಿವೃದ್ಧಿ ಸಚಿವರು ಮಾಡಿದ್ದಾರೆ. ಅಲ್ಲಿ ಯಾರಿಗೂ ತೊಂದರೆ ಬರುವುದಿಲ್ಲ. ಬಂದರೂ ಕೂಡ ಎಮರ್ಜೆನ್ಸಿ ಕ್ಲಾಸ್‌ನಲ್ಲಿ ರೂರಲ್ ಹೌಸಿಂಗೆಂದು ಹೌಸ್ ಆಕ್ಟ್ ಎಂದು ಏನು ಮಾಡಿದ್ದಾರೆ ಅದರ ಪ್ರಕಾರ ಅವವು ಮಾಡಿಕೊಳ್ಳುತ್ತಾರೆ. ಅದಕ್ಕೇನೂ ತಾಪತ್ರಯಗಳು ಬರುವುದಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಯಾರಾದರೂ ಕೊಡುವುದಿದ್ದರೆ ಅದನ್ನು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೋಡೋಣ, ಆ ಫ್ರೀ ಸೈಟನ್ನು ಹಂಚುವ ಕೆಲಸವನ್ನು ಸರ್ಕಾರವೇ ವಹಿಸಿಕೊಂಡ ಕಾರಣ ಅದಕ್ಕೆ ನಾವು ಲ್ಯಾಂಡ್ ಅಕ್ವಿಸಿಷನ್ ಇರಲಿ ಎಂದು ಮಾಡಿದ್ದೇವೆ. ಏಕೆಂದರೆ ಮಂಡಲ ಪಂಚಾಯ್ತಿಯಾಗಲಿ, ಜಿಲ್ಲಾಪರಿಷತ್ತಾಗಲೀ ಬಹಳ ರೇರ್ಲಿ ಪರ್ಚೇಸ್ ಮಾಡಿ ಹೌಸ್ ಸೈಟ್ ಮಾಡಿ ಫ್ರೀ ಸೈಟ್ ಹಂಚುವುದು ಬಹಳ ರೇರ್. ಅದಕ್ಕೆ ಇಷ್ಟರಮಟ್ಟಿಗಾದರೂ ಇರಲಿ ಎಂಬ ದೃಷ್ಟಿಯಿಂದ ಮತ್ತು ಈ ಸೊಸೈಟಿಗಳ ಹಾವಳಿ ಕಡಿಮೆ ಮಾಡುವ ದೃಷ್ಟಿಯಿಂದ ನೆಗೋಸಿಯೇಷನ್ ನಿಮ್ಮ ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಜಿಸ್ಟರ್ ಮಾಡುವುದಿರುತ್ತದೆ. ಎಲ್ಲಾದರಲ್ಲೂ ವಂಚನೆ ನಡೆಯುತ್ತದೆ. ಆದರೆ ಆತ್ಮಸಾಕ್ಷಿಯಾಗಿ ಯಾರಾದರೂ ಅಧಿಕಾರಿಗಳು ಮಾಡಿದರೆ ನಾವು ಮೆಚ್ಚಬೇಕು. ಆ ಬೇಸಿಸ್ ಮೇಲೆ ಇದನ್ನು ಮಾಡುತ್ತಿದ್ದೇವೆ ಮತ್ತು ಸ್ಟಾಂಪ್ ಬಗ್ಗೆ ಕೂಡ ಅವರು ಹೇಳಿದರು. 5-10 ರೂ ಸ್ಟಾಂಪ್‌ಗಳ ಬಗ್ಗೆ ವಿವರಗಳನ್ನು ನಾನು ಈಗಾಗಲೇ ತರಿಸಿಕೊಂಡಿದ್ದೇನೆ. ಆ ಪ್ರಾಬ್ಲಂ ಇಲ್ಲ ಎಂದು ಹೇಳಿದ್ದಾರೆ ಮತ್ತು ಉಳಿದಂಥ ವಿಷಯಗಳ ಬಗ್ಗೆ ಮಾನ್ಯ ಕೌಜಲಗಿಯವರು, ಮಾನ್ಯ ರುಕ್ಮಯ್ಯ ಪೂಜಾರಿಯವರು ಮಾನ್ಯ ಸಿಂಧ್ಯಾಜಿಯವರು ಇಂದು ಮಾತನಾಡಿದ ನಾಲ್ಕೈದು ಸದಸ್ಯರು ಹಾಗೂ ಮಾನ್ಯ ಏಕಾಂತಯ್ಯನವರು...

ಶ್ರೀ ವಾಟಾಳ್ ನಾಗರಾಜ್ : ಈ ಪದ್ಮಶ್ರೀಗಳು ಓಡಾಡಿದಂತೆ ಎಲ್ಲರ ಮುಂದೆ ಒಂದೊಂದು "ಜಿ" ಇದೆ.

ಉಪಾಧ್ಯಕ್ಷಣಿಯವರು : ನಿಮಗೂ ಒಂದು "ಜಿ" ಕೊಡಿಸುವ.

ಶ್ರೀ ಆರ್. ವಿ. ದೇಶಪಾಂಡೆ : ಖರ್ಗೆಯವರೆ ಸೆಂಟ್ರಲ್ ಕಡೆ ಹೋದಾಗ ಸಿಂಧ್ಯಾಜಿ, ಎಂದು ಮಾತಾಡಿ ರೂಢಿಯಾಗಿಬಿಟ್ಟಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮ್ಮ ಹೈದರಾಬಾದ್ ಕರ್ನಾಟಕದಲ್ಲಿ ಇದು ರೂಢಿಯಲ್ಲಿದೆ. ದೇಶಪಾಂಡೇಜಿ ಅನ್ನಬಹುದು. ಆದರೆ ದೇಶಪಾಂಡೆ ಅನ್ನೋದೆ ರೂಢಿಯಾಗಿಬಿಟ್ಟಿದೆ. ಈಗ ವಾಟಾಳ್‌ನಾಗರಾಜ್‌ಜೀ ಎಂದು ಎನ್ನುಬಹುದು.

ಉಪಾಧ್ಯಕ್ಷಿಣಿಯವರು : ಅವರಿಗೂ ಒಂದು "ಜಿ" ಕೊಟ್ಟುಬಿಡಿ.

ಶ್ರೀ ವಾಟಾಳ್ ನಾಗರಾಜ್ : ಅಪಾರ್ಥ ಆಗೋದು ಬೇಡ, ಖಂಡಿತವಾಗಿ ನನಗೆ ಆ 'ಜಿ' ಬೇಡ. ಕೊಡೋದಾದರೆ ದುಡ್ಡು ಗಿಡ್ಡು ಕೊಡಿ ಬೇಕಾದರೆ ತೆಗೆದುಕೊಳ್ಳುತ್ತೇನೆ.

ಮಲ್ಲಿಕಾರ್ಜುನ ಖರ್ಗೆ : ಅವರ ಜೊತೆಯಲ್ಲಿ ಶ್ರೀಮಾನ್ ಯಡಿಯೂರಪ್ಪನವರು, ಮಾನ್ಯ ಕರಿಯಣ್ಣನವರು ಮತ್ತು ಶ್ರೀಮತಿ ಮೋಟಮ್ಮನವರು ಮಾತನಾಡಿದ್ದಾರೆ. ಹೀಗೆ ಅನೇಕ ಜನ ಸದಸ್ಯರುಗಳು ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ಕೆಲವು ಗೌರ್ನಮೆಂಟ್ ಆರ್ಡರ್ಸ್ ಗಳನ್ನು ನಾವು ಈಗಾಗಲೇ ಇಷ್ಯೂ ಮಾಡಿದ್ದೇವೆ. ಆದರೂ ಕೂಡಾ ಬಹಳಷ್ಟು ಸದಸ್ಯರಿಗೆ ಅದರ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲವೋ ಏನೋ ಎಂದು ಹೇಳಿ ನನಗೆ ಅನ್ನಿಸುತ್ತಿದೆ. ಕೆಲವು ಜನರಿಗೆ ಮಾಹಿತಿ ಇರಬಹುದು, ಇಲ್ಲ ಎಂದು ನಾನು ಹೇಳುವುದಿಲ್ಲ. ಈಗ ಉದಾಹರಣೆಗೆ ಕಳೆದ ಇದೇ ಸದನದಲ್ಲಿ ಗ್ರಾಮ ಸಹಾಯಕರ ಒಂದು ರೆಮ್ಯುನರೇಷನ್ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದರು. ಈಗಾಗಲೆ ನಾವು ಗ್ರಾಮ ಸಹಾಯಕರಿಗೆ 300 ರೂಪಾಯಿಗಳಿಂದ 500 ರೂಪಾಯಿಗಳಿಗೆ ಅವರಿಗೆ ಎನ್‌ಹ್ಯಾನ್ಸ್ ಮಾಡಿದ್ದೇವೆ. ಅವರಿಗೆ ಹಾನರರಿಯಂ ಅಥವಾ ಕಾಂಪೆನ್‌ಸೇಟರಿ ಅಲೋಯೆನ್ಸ್ ಮೊದಲು ಮೂರು ನೂರು ರೂಪಾಯಿಗಳಿತ್ತು. ನಾನು ಬಂದ

ಪೆನ್‌ಷನ್ ಶಾನುಭೋಗರಿಗೆ ಮೊದಲು ಇರಲಿಲ್ಲ ಮೊದಲು ಅದು 300 ರೂಪಾಯಿ ಇತ್ತು. ಅದನ್ನೂ ಕೂಡಾ ಇವತ್ತು ನಾವು 500 ರೂಪಾಯಿ ಎಂದು 20ನೇ ಜುಲೈ 1991ಕ್ಕೆ ಅವರಿಗೂ ಕೂಡ ನಾವು ಜಾಸ್ತಿ ಮಾಡಿದ್ದೇವೆ. ಅನೇಕ ಮಿತ್ರರುಗಳು ವಿಲೇಜ್ ಅಕೌಂಟೆಂಟ್ ಪೋಸ್ಟ್ಸ್ ಸರ್ವೇಯರ್ಸ್, ಅಡಿಷನಲ್ ಸರ್ವೇಯರ್ಸ್ ಬೇಕು ಎಂದು ಹೇಳಿದರು. ಇವೆಲ್ಲವನ್ನೂ ಕೂಡಾ ಮಾಡುವವರೆಗೆ ಈ ಒಂದು ಇಲಾಖೆಯಲ್ಲಿ ಒಳ್ಳೆಯ ಕೆಲಸವಾಗುವುದಿಲ್ಲ, ಮತ್ತು ಸಾಕಷ್ಟು ಏನು ಈಗಾಗಲೇ ಎನ್‌ಕ್ರೋಚ್‌ಮೆಂಟ್ ನಲ್ಲಿ, ಲ್ಯಾಂಡ್ ರಿಫಾರ್ಮ್ಸ್ ನಲ್ಲಿ ಭೂಮಿಗಳು ಸಿಗುತ್ತಿದೆ, ಅಥವಾ ರೆಗ್ಯುರಲೈಸ್ ಮಾಡುತ್ತಿದ್ದೇವೆ. ಅದಕ್ಕೆ ಸಾಕಷ್ಟು ಸರ್ವೇಯರ್ಸ್ ಇಲ್ಲ, ನೀವು ಮಾಡಬೇಕು ಎಂದು ಹೇಳಿದಾಗ ನಾನು ಬಹಳ ಸಂತೋಷದಿಂದ ಹೇಳಬಯಸುತ್ತಿದ್ದೇನೆ. ಸುಮಾರು ಒಂದು ಸಾವಿರ ಅಡಿಷನಲ್ ಸರ್ವೇಯರ್ಸ್ ಪೋಸ್ಟ್‌ನ್ನು ನಾವು ಕ್ರಿಯೇಟ್ ಮಾಡಿದ್ದೇವೆ. ಮತ್ತು ಆ ಸಾವಿರ ಪೋಸ್ಟ್‌ನ್ನು ತುಂಬಲು ಇವತ್ತು ಸಾವಿರಾರು ಗ್ರಾಜುಯೇಟನ್ನು ತೆಗೆದುಕೊಂಡು ಮಾಡಬೇಕು ಎನ್ನತಕ್ಕಂಥ ನಿರ್ಧಾರ ಮಾಡಿದ್ದೇವೆ. ಗೌರ್ನಮೆಂಟ್ ಬಿ.ಓ. ಕೂಡ ಇವತ್ತು ಇಷ್ಯೂ ಮಾಡಿದ್ದೇವೆ. ಅದಲ್ಲದೆ ಅಲ್ಲಿ ಏನಾಗಿದೆ ವ್ಯತ್ಯಾಸ ಸ್ವಲ್ಪ ಎಂದರೆ 940 ಸ್ಕೇಲ್‌ನಲ್ಲಿ ಈ ಸ್ಟೈಪೆಂಡರಿ ಗ್ರಾಜುಯೇಟ್ಸ್ ನ್ನು ತೆಗೆದುಕೊಳ್ಳಬೇಕು ಎನ್ನತಕ್ಕಂಥ ಆದೇಶ ಇದೆ. ಏಕೆಂದರೆ ಸ್ಟೈಪೆಂಡರಿ ಗ್ರಾಜುಯೇಟ್ಸ್‌ನ್ನು ಅಬ್‌ಸಾರ್ಬ್ ಮಾಡುವಾಗ ಎಲ್ಲಾ ಇಲಾಖೆಯಲ್ಲೂ ಒಂದೇ ಸ್ಕೇಲ್‌ನಲ್ಲಿ ಮಾಡಬೇಕು ಎನ್ನತಕ್ಕಂಥದ್ದು ಆಗಿದೆ. ಅವರಿಗೆ ಅಲ್ಲಿ ಸ್ಕೇಲ್ ಇರತಕ್ಕಂಥ 940 ರೂಪಾಯಿ ಇದೆ. ನಮ್ಮ ಸರ್ವೇಯರ್, ಸೆಕೆಂಡ್ ಡಿವಿಜನ್ ಸರ್ವೇಯರ್ಸ್ ಏನು ಇದೆ ಅದನ್ನು 1040 ರೂಪಾಯಿಗಳು ಎಂದು ಇದೆ. ಆದಕ್ಕೆ ಆ ಜಾಗದಲ್ಲಿ ಹಾಕಿ ಅಬ್‌ಸರ್ಬ್ ಮಾಡುವುದು ಎನ್ನತಕ್ಕಂಥದ್ದು ಸ್ವಲ್ಪ ಬಂದಿದೆ. ಅದಕ್ಕೆ ಫೈನಾನ್ಸ್ ಡಿಪಾರ್ಟ್‌ಮೆಂಟ್ ಮತ್ತು ನಾವು ಸೇರಿ ಅಂದರೆ ಡಿಪಿಎಆರ್ ನವರು ಸೇರಿ ಒಂದು ವ್ಯತ್ಯಾಸವನ್ನು ಬಗೆಹರಿಸತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡುತ್ತಿದ್ದೇವೆ.

ಶ್ರೀ ಎಂ. ವಿ. ವೆಂಕಟಪ್ಪ : ಒಂದು ಟೈಮ್ ಕೊಡಿ ಅವರಿಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ; ನಾನು ಅದನ್ನೇ ಹೇಳುತ್ತಿದ್ದೇನೆ. ಡೇಟ್ ವೈಸ್ ಹೇಳುತ್ತಿದ್ದೇನೆ. ಅದು ಸಾವಿರವಲ್ಲದೇ ಏನು ವೇಕೆನ್ಸೀಸ್‌ಗಳು ಇತ್ತು, ಸುಮಾರು 375 ಆ ವೇಕೆನ್ಸೀಸ್‌ನ್ನು ಕೂಡಾ ಫಿಲಿಪ್ ಮಾಡುತ್ತೇವೆ. ಅಂದರೆ ಏನಾಯಿತು, 1375 ವೆಕೆನ್ಸೀಸಗಳನ್ನು ಈಗ ಸುಮಾರು ಒಂದೆರಡು ತಿಂಗಳಲ್ಲಿ ರೆಕ್ರೋಟ್ ಮಾಡಿ ಅಥವಾ ಅವರನ್ನು ಅಬ್‌ಸಾರ್ಬ್ ಮಾಡಿಕೊಂಡು ಎಲ್ಲಾ ಕಡೆ ಕಳುಹಿಸತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ. ಆಮೇಲೆ ವಿಲೇಜ್ ಅಕೌಂಟೆಂಟ್ ಕೂಡಾ ನಾವು ಸುಮಾರು 800 ವೆಕೆನ್ಸೀಸ್ ಏನು ಇತ್ತು, 800 ವೆಕೆನ್ಸೀಸ್‌ನ್ನು ಫಿಲ್-ಅಪ್ ಮಾಡುತ್ತೇವೆ. ಮತ್ತು ಯಾರು ಸ್ಟೈಪೆಂಡರಿ ಗ್ರಾಜುಯೇಟ್ಸ್ ಇದ್ದಾರೆ, ಅವರನ್ನು ತೆಗೆದುಕೊಳ್ಳಬೇಕು ಎನ್ನತಕ್ಕಂಥ ನಿರ್ಧಾರವನ್ನು ಮಾಡಿದ್ದೇವೆ. ಇವರ ಸ್ಕೇಲ್ ಮತ್ತು ವಿಲೇಜ್ ಅಕೌಂಟೆಂಟ್ ಸ್ಕೇಲ್‌ಗೂ ಏನೂ ವ್ಯತ್ಯಾಸ ಇಲ್ಲ. ಅದಕ್ಕೆ ಅವರೆಲ್ಲರನ್ನೂ ಸಂಪೂರ್ಣವಾಗಿ ಅಬ್‌ಸಾರ್ಬ್ ಮಾಡಿ ರೋಸ್ಟರ್ ಸಿಸ್ಟಂ ಪ್ರಕಾರ ನಾವು ಮಾಡಬೇಕು ಎಂದು ಮಾಡಿದ್ದೇವೆ. ಅದಕ್ಕಾಗಿ ಇದನ್ನೂ ಕೂಡ ಈ ಕಾರ್ಯವನ್ನು ಬಹಳ ಬೇಗನೆ ಜಾರಿಯಲ್ಲಿ ತರುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿ ಇದಲ್ಲದೇ ಮತ್ತು ಒಂದು ಸಾವಿರ ಸರ್ವೇಯರ್ ಸಹಾಯಕರು, ಸರ್ವೇಯರ್ ಹೋದರೆ ಅವನ ಹಿಂದೆ ಹೋಗಬೇಕಲ್ಲ ಒಬ್ಬರು ಹಿಡಿದುಕೊಂಡು. ಚೈನನ್ನು ಹಿಡಿದುಕೊಂಡು ಒಬ್ಬರು ಹೋಗಬೇಕು. ಅದಕೆ ಕೂಡಾ ಕೊರತೆ ಇದೆ. ಇಲ್ಲದಿದ್ದರೆ ಕೊನೆಗೆ ಯಾರಿಗೋ

ಹಿಡಿದುಕೊಂಡು ಹೋಗುತ್ತಿದ್ದರು. ನಡೆಯಪ್ಪ, ಎಂದು ಹೇಳಿ 5 ರೂಪಾಯಿ 2 ರೂಪಾಯಿ ಕೊಡುತ್ತಿದ್ದರು. ಪಾರ್ಟಿಯವರು ಕೊಟ್ಟು ಅವರನ್ನು ಕರೆದುಕೊಂಡು ಹೋಗುತ್ತಿದ್ದರು. ಅವರಿಗೆ ಇಂಟರೆಸ್ಟ್ ಅಲ್ಲವೇ? ನಾವು ಹಿಂದೆ ಅವರಿಗೆ ಬಂಡಿ ಮಾಡಿ, ಮೋಟಾರ್‌ನಲ್ಲಿ ಕರೆದುಕೊಂಡು ಹೋಗಿ ಸರ್ವೆಯನ್ನು ಮಾಡಿಸಿಕೊಂಡು ವಾಪಸ್ ಬಂದಂಥ ಉದಾಹರಣೆಗಳು ಇದೆ. ನಿಮಗೂ ನಮಗೂ ಗೊತ್ತಿದೆ. ಅದನ್ನು ನಾವು ಯಾರೂ ಹೇಳುವುದಿಲ್ಲ. ಏಕೆಂದರೆ ಮಂತ್ರಿಗಳಾದವರು ಡಿಫೆಂಡ್ ಮಾಡಿಕೊಳ್ಳುತ್ತಾರೆ. ಆ ಕಡೆ ಇದ್ದವರು ಈಗ ಹೇಳುತ್ತಾರೆ. ಆದರೆ ಇಲ್ಲಿ ಕುಳಿತಾಗ ನೀವೂ ಹೇಳುವುದಿಲ್ಲ, ನಾವೂ ಹೇಳುವುದಿಲ್ಲ. ಆದರೆ ಸತ್ಯ ಪರಿಸ್ಥಿತಿ ಏನ ಇದೆ ಎಂದರೆ ಅನೇಕ ಸಲ ಫೀಯನ್ನು ತುಂಬಿ ನಾವು ಅವರಿಗೆ ಟಿಫನ್, ಟೀ ಎಲ್ಲವನ್ನೂ ಕೊಟ್ಟು ಕರೆದುಕೊಂಡು ಹೋಗಿ ಸರ್ವೆ ಮಾಡಿಸಿಕೊಂಡು ಪುನ: ತಂದುಬಿಡಬೇಕು. ಇಂಥ ಒಂದು ಪರಿಸ್ಥಿತಿ ಇತ್ತು. ಅದಕ್ಕಾಗಿ ನಾವು ಒಂದು ಸಾವಿರ ವೆಕೆನ್ಸೀಸ್ ಸರ್ವೇಯರ್ ಸಹಾಯಕರನ್ನು ಕೂಡಾ ಇವತ್ತಿನ ದಿವಸ ನಾವು ತೆಗೆದುಕೊಳ್ಳಬೇಕು ಎನ್ನತಕ್ಕಂಥ ಒಂದು ನಿರ್ಧಾರವನ್ನು ಮಾಡಿದ್ದೇವೆ.

ಆ ಒಂದು ಸಾವಿರ ಜನರನ್ನು ಡೈಲಿವೇಜಸ್‌ನಲ್ಲಿ ಏನು ಕನ್‌ಫರ್ಮ್ ಮಾಡಬೇಕೆಂದು ಇದ್ದೇವೆ, ಅದರಿಂದ ಸಾವಿರ ಜನರನ್ನು ಅಬ್ಸರ್ವ್ ಮಾಡುತ್ತೇವೆ. ಅದರಿಂದ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಕೆಲಸ ಕೊಟ್ಟಂತೂ ಆಯಿತು.ವೆಕೆನ್ಸಿ ಇರುವ ಪೋಸ್ಟ್‌ಗಳಿಗೆ ಅಡಿಷನಲ್ ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಿ ಈ ಒಂದು ತೊಂದರೆಯನ್ನು ನಿವಾರಣೆ ಮಾಡಬೇಕೆನ್ನುವ ದೃಷ್ಟಿಯಿಂದ ಈ ಕೆಲಸವನ್ನು ಮಾಡುತ್ತಿದ್ದೇವೆ. ಪಟೇಲರಿಗೆ 100 ರೂಪಾಯಿಯನ್ನು ಕೊಡುತ್ತಿದ್ದೇವೆ. ತೋಟಿ, ತಳವಾರರು, ನಿರ್‌ಗಂಟಿಗಳಿಗೆ 75 ರೂಪಾಯಿಯನ್ನು ನಾನು ಇದ್ದಾಗ ಮಾಡಿದ್ದೆ. 100ರೂಪಾಯಿ ಏನಿದೆ ಇದನ್ನು ಹೆಚ್ಚು ಮಾಡಬೇಕೆಂದರೆ ಈಗ 75 ರೂಪಾಯಿಯನ್ನು ಕೊಡುತ್ತಿರುವುದನ್ನು ಹೆಚ್ಚು ಮಾಡಲೇಬೇಕು.

ಈ ಎರಡರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಪಟೇಲರುಗಳ ನಿಯೋಗ ತಮ್ಮ ಬಳಿ ಬಂದಿದ್ದರು.

ಶ್ರೀ ವಾಟಾಳ್ ನಾಗರಾಜ್ : ಒಂದು ಕಾಲದಲ್ಲಿ ಪಟೇಲರು ಶಾನುಭೋಗಗರು ಎಂದರೆ ಬಹಳ ಚೆನ್ನಾಗಿ ಇತ್ತು. ಇವತ್ತು ಸರ್ಕಾರದಿಂದ 75 ರೂಪಾಯಿ ತೆಗೆದುಕೊಳ್ಳುವಂತಹ ಹಣೆಬರಹ ಬಂದಿದೆ, ಇಂತಹ ಪರಿಸ್ಥಿತಿ ಬರಬಾರದಾಗಿತ್ತು.

ಶ್ರೀ ಸಿ. ಬೈರೇಗೌಡ : ಶಾನುಭೋಗರಿಗೆ 500 ರೂಪಾಯಿಗಳನ್ನು ಕೊಡುತ್ತಿದ್ದೀರಿ, ಪಟೇಲರುಗಳಿಗೆ ಏತಕ್ಕೆ ಈ ತಾರತಮ್ಯವನ್ನು ಮಾಡುತ್ತಿದ್ದೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಕಾಲದಲ್ಲಿ ನಿಮ್ಮ ಬಾಯಿಂದಲೇ ಬರಲಿ ಜಾಸ್ತಿ ಮಾಡುತ್ತೇವೆಂದು. ಪಟೇಲರುಗಳಿಗೆ ಜಾಸ್ತಿ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ನಾವು ಪಟೇಲ್ ಖಾರ್ಗೆ ಎಂದು ಹೆಸರನ್ನು ಇಡುತ್ತೇನೆ ಅವರಿಗೆ ಜಾಸ್ತಿ ಮಾಡಿ.

ಶ್ರೀ ಎಲ್.ಆರ್. ಶಿವರಾಮೇಗೌಡ : 500 ರೂಪಾಯಿ ಕೊಡಲು ಆಗದೇ ಇದ್ದರೆ ಎಷ್ಟು ಸಾಧ್ಯವೋ ಅಷ್ಟು ಜಾಸ್ತಿ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತೋಟಿ, ತಳವಾರರು, ನಿರ್‌ಗಂಟಿ ಮತ್ತು ಪಟೇಲರುಗಳ ...

ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಎಲ್ಲಾ ಮಾನ್ಯ ಸದಸ್ಯರುಗಳು ಹೇಳುತ್ತಿರುವುದನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ, ಹಣಕಾಸಿನ ಪರಿಸ್ಥಿತಿಯನ್ನು ನೋಡಿ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಎಂ.ವಿ. ವೆಂಕಟಪ್ಪ : ಇದು ಮಾಮೂಲು ಆಯಿತು, ಇವರುಗಳಿಗೆ ಹೆಚ್ಚು ಮಾಡುತ್ತೇವೆಂದು ತಾವು ನಿರ್ದಿಷ್ಟವಾಗಿ ಹೇಳಿದರೆ, ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್ : ಒಂದು ಕಾಲದಲ್ಲಿ ಪಟೇಲರ ಮನೆ ಎಂದರೆ ಧರ್ಮ ಛತ್ರ ಇದ್ದಹಾಗೆ ಇತ್ತು, ಯಾರೇ ಹೋಗಲಿ, ಶಿರಸ್ತೆದಾರ ಹೋಗಲಿ, ಅಲ್ಲೇ ಊಟ ಆಗುತ್ತಿತ್ತು. ಆ ಒಂದು ಪುಣ್ಯಕ್ಕಾದರೂ ನೀವು ಅವರಿಗೆ ಜಾಸ್ತಿ ಮಾಡಿ.

(ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀಮತಿ ಮೋಟಮ್ಮ : ಬಾರ್‌ಗೈನ್ ಜಾಸ್ತಿಯಾಗುತ್ತಿದೆ. ಸಾಯಂಕಾಲ ಆಗಿದೆ ಸ್ವಲ್ಪ ಸಹಾಯ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ನನ್ನ ಗಮನದಲ್ಲಿಯೂ ಕೂಡ ಇದೆ. ತೋಟಿ, ತಳವಾರರು, ನೀರುಗಂಟಿಗಳು ಹಾಗೂ ಪಟೇಲರು ಯಾರಿದ್ದಾರೆ ಅವರಿಗೆ ಬಹಳ ಕಡಿಮೆ ಕೊಡುತ್ತಿದ್ದೇವೆ. ಆದ್ದರಿಂದ ಅದನ್ನು ಸ್ವಲ್ಪಮಟ್ಟಿಗಾದರೂ ಜಾಸ್ತಿ ಮಾಡಿ ತಾರತಮ್ಯವನ್ನು ತೆಗೆದುಹಾಕಬೇಕೆಂಬ ದೃಷ್ಟಿಯಿಂದ ಯೋಚನೆ ಮಾಡಿದ್ದೇನೆ. ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ.

ಇನ್ನು ಸಾಕಷ್ಟು ಸದಸ್ಯರುಗಳು ಹ್ಯಾಮ್‌ಲೆಟ್ಸ್ ಮತ್ತು ತಾಂಡಗಳು ಮತ್ತುಮಜರ್‌ವಾಡಿಗಳ ಬಗ್ಗೆ ಮಾತನಾಡಿದ್ದಾರೆ. ಇವೆಲ್ಲವುಗಳನ್ನು ರೆವಿನ್ಯೂ ವಿಲೇಜ್‌ಗಳಾಗಿ ಅರ್ಹತೆ ಇದೆ ಎಂಬುದನ್ನು ಘೋಷಣೆ ಮಾಡಬೇಕೆಂದು ಶ್ರೀ ಬೈರೇಗೌಡರು ಮತ್ತು ವಾಡಿ ಕ್ಷೇತ್ರದ ಚವಾಣ್‌ರವರು ಹೇಳಿದ್ದಾರೆ. ಈಗಾಗಲೇ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. 500 ಕ್ಕೂ ಹೆಚ್ಚು ಜನಸಂಖ್ಯೆ ಇರತಕ್ಕ ತಾಂಡಗಳು ಇವೆ, ಅಥವಾ ಹ್ಯಾಮ್‌ಲೆಟ್ಸ್‌ಗಳು ಇವೆ, ಅಥವಾ ಮಜರ್‌ವಾಡಿಗಳು ಇವೆ, ಅವುಗಳೆಲ್ಲವನ್ನು ರೆವಿನ್ಯೂ ವಿಲೇಜ್‌ಗಳನ್ನಾಗಿ ಮಾಡಬೇಕೆಂಬ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಇದನ್ನು ಹಂತಹಂತವಾಗಿ ಮಾಡುತ್ತೇವೆ. ಅದಕ್ಕೆ ಒಂದು ಕ್ರೈಟೀರಿಯಾ ಇದೆ. ಡಿಸ್ಟೆನ್ಸ್ ಇದೆ, ಪಾಪ್ಯುಲೇಷನ್ ಇದೆ. ಒಂದು ವೇಳೆ ಡಿಸ್ಟೆನ್ಸ್ ಜಾಸ್ತಿ ಇದ್ದು, ಪಾಪ್ಯುಲೇಷನ್ ಕಡಿಮೆ ಇದ್ದರೆ, ನಾವು ಡಿಕ್ಲೇರ್ ಮಾಡಬಹುದು. ತದನಂತರ, ಇದಾದಮೇಲೆ ಶ್ರೀ ಬೈರೇಗೌಡರು ಹೇಳಿದರು, ಸಾಕಷ್ಟು ಮಾನ್ಯ ಸದಸ್ಯರುಗಳು ಹೇಳಿದರು. ಡಿಸ್ಟ್ರಿಕ್ ಆರ್ಗನೈಸ್ ಆಗಬೇಕು ಎಂದು ಬಹಳಷ್ಟು ಸದಸ್ಯರುಗಳು ಹೇಳಿದರು. ಆದರೆ, ಶ್ರೀ ಬೈರೇಗೌಡರು ಇದಕ್ಕೆ ಖರ್ಚು ಜಾಸ್ತಿಯಾಗುತ್ತದೆ ಈಗ ಮಾಡುವುದು ಬೇಡ ಎಂದು ಹೇಳಿದರು. ಆದರೆ ಒಂದು ಮಾತನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು, ಸ್ವಾತಂತ್ರ್ಯ ಸಿಕ್ಕಮೇಲೆ, ನಮ್ಮ ಭಾರತ ದೇಶದಲ್ಲಿ ಭಾಷಾವಾರು ಪ್ರಾಂತ್ಯ ರಚನೆಯಾಗಿದೆ. ಅದಾದಮೇಲೆ ಸಾಕಷ್ಟು ಸ್ಟೇಟ್ಸ್‌ಗಳಲ್ಲಿ ಹೊಸ ಜಿಲ್ಲೆಗಳನ್ನು ಮಾಡಿದ್ದಾರೆ. ಹೇಗೆ ಮಾಡಿದ್ದಾರೆ, ಒಂದು ಅಡ್ಮಿನಿಸ್ಟ್ರೇಟೀವ್ ಕನ್‌ವೀನಿಯೆನ್ಸ್, ಜಿಯಾಗ್ರಫಿಕಲ್ ಕಂಟಿನಿಜೆನ್ಸಿ ಇರಬೇಕು ಮತ್ತು ಆಡಳಿತಾತ್ಮಕವಾಗಿ ಲಾ ಅಂಡ್ ಆರ್ಡರ್ ಮೈನ್‌ಟೇನ್ ಮಾಡುವುದಕ್ಕೆ ಅನುಕೂಲ ಇರಬೇಕು, ಡೆವಲಪ್‌ಮೆಂಟ್ ದೃಷ್ಟಿಯಿಂದ ಕಾಂಪ್ಯಾಕ್ಟ್ ಜಿಲ್ಲೆಗಳನ್ನು ಮಾಡಬೇಕು. ತಾಲ್ಲೂಕುಗಳನ್ನು ಮಾಡಬೇಕು ಎನ್ನುವ ವಾದವನ್ನು ಇಟ್ಟುಕೊಂಡು ಇದನ್ನು ಮಾಡಲಾಗಿದೆ. ನಮ್ಮ ಕಾಲದಲ್ಲಿ ಯಾವ ವರದಿಯನ್ನು

ತರಿಸಿಲ್ಲ. ತಮ್ಮ ಕಾಲದಲ್ಲಿ ಹುಂಡೇಕರ್ ಸಮಿತಿ, ಗದ್ದೀಗೌಡರ್ ಸಮಿತಿಯನ್ನು ಮಾಡಲಾಗಿತ್ತು. ಅದಕ್ಕೂ ಮುಂಚೆ 1974ರಲ್ಲಿ ವಾಸುದೇವರಾವ್ ಕಮೀಷನ್ ಕೂಡ ನೇಮಕವಾಗಿತ್ತು. ಅನೇಕ ಕಮಿಟಿಗಳು ಕಮೀಷನ್‌ಗಳು ಇವತ್ತಿನ ದಿವಸ ವರದಿಗಳನ್ನು ಕೊಟ್ಟಿವೆ. ಆ ವರದಿಗಳ ಆಧಾರದ ಮೇಲೆ ನಾವು ಜಿಲ್ಲೆಗಳನ್ನು ವಿಂಗಡಣೆ ಮಾಡದೇ ಹೋದರೆ ಕೆಲವು ಜನರಿಗೆ ನ್ಯಾಯವಾಗಿ ಸಿಗಬೇಕಾದಂಥ ಅನುಕೂಲಗಳು ಸಿಗದೇ ಹೋಗಬಹುದು: ತೀವ್ರವಾಗಿ ನಾವು ಏನು ಡೆವೆಲಪ್‌ಮೆಂಟ್ ಮಾಡಬೇಕೆಂದು ಇದ್ದೇವೋ ಅದನ್ನು ಮಾಡಬೇಕಾದರೆ ಇದರ ಕಡೆ ಸ್ವಲ್ಪ ಲಕ್ಷ್ಯ ಕೊಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.ಕೆಲವು ಸಲ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನಲ್ಲಾಗಲೀ, ನಮ್ಮ ರಾಜ್ಯ ಸರ್ಕಾರದಲ್ಲಾಗಲೀ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳುವಾಗ Taluk as a unit ಎಂದು ತೆಗೆದುಕೊಳ್ಳುತ್ತೀರಿ. ಇಲ್ಲವೇ District as a unit ಎಂದು ತೆಗೆದುಕೊಳ್ಳುತ್ತೀರಿ. ಧಾರವಾಡ ಜಿಲ್ಲೆ, ಮೈಸೂರು ಜಿಲ್ಲೆ, ಗುಲ್ಬರ್ಗ ಜಿಲ್ಲೆ, ಬಿಜಾಪುರ ಜಿಲ್ಲೆ, ಬೆಳಗಾಂ ಜಿಲ್ಲೆ, ಮಂಗಳೂರು ಜಿಲ್ಲೆ ಇವುಗಳಿಗೆ ಕೂರ್ಗ್ ಆಗಲೀ, ಬೀದರ್, ಚಿಕ್ಕಮಗಳೂರು, ಹಾಸನ್ ಆಗಲೀ ಹೋಲಿಸಿ ನೋಡಿದಾಗ, ಡಿಸ್ಟ್ರಿಕ್ಟ್‌ವೇಸ್ ಅಲೋಕೇಷನ್ ಕೊಡುವಾಗ, ಪ್ರಿಫರೆನ್ಸ್ ಕೊಡುವಾಗ, ಯಾವ ನ್ಯಾಯ ಸಿಗುತ್ತದೆ? ಅದೇ ರೀತಿ ತಾಲ್ಲೂಕು ಪ್ಯೆಸಸ್. ಅದಕ್ಕೆ ಇದನ್ನು ಕೂಡ ತಾವು ಗಮನದಲ್ಲಿಟ್ಟುಕೊಳ್ಳಬೇಕು. ಹಿಂದಿನಿಂದಲೂ ಎಲ್ಲಾ ಸರ್ಕಾರಗಳು ಇದರ ಬಗ್ಗೆ ಚಿಂತನೆ, ಯೋಚನೆಯನ್ನು ಮಾಡುತ್ತಿವೆ. ಜನರಿಗೆ ಅನುಕೂಲವಾಗಬೇಕು ಎನ್ನುವ ಚಿಂತನೆ ನಮಗೆ ಕೂಡ ಇದೆ. ಇದನ್ನು ಇಂಪ್ಲಿಮೆಂಟ್ ಮಾಡಬೇಕೆನ್ನುವ ನಿರ್ಧಾರ ಕೂಡ ಸರ್ಕಾರಕ್ಕೆ ಇದೆ. ಹಣದ ಅಭಾವದಿಂದ ಇದು ನಿಂತುಹೋಗಿದೆ. ಆದಷ್ಟು ಜಾಗ್ರತೆ ಇದನ್ನು ಜಾರಿಗೆ ತರಬೇಕೆನ್ನುವುದು ನಮ್ಮ ನಿರ್ಧಾರವಾಗಿದೆ. ಆದ್ದರಿಂದ ಜಿಲ್ಲಾ ರೀಆರ್ಗನೈಸೇಷನ್‌ಗೆ ಶ್ರೀ ಬೈರೇಗೌಡರೂ ಕೂಡ ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ. ಇನ್ನೊಂದು ವಿಷಯ ಏನೆಂದರೆ, ಕಂಪ್ಯೂಟರೈಸೇಷನ್ ಆಫ್ ಲ್ಯಾಂಡ್ ರೆಕಾರ್ಡ್ಸ್. ಈಗ ಕೇಂದ್ರ ಸರ್ಕಾರದವರೂ ಕೂಡ ಒಂದು ಪಾಲಿಸಿ ಡೆಸಿಷನ್ ತೆಗೆದುಕೊಂಡಿದ್ದಾರೆ. ಅಪ್‌ಡೇಟಿಂಗ್ ಆಫ್ ರೆಕಾರ್ಡ್ಸ್ ಎನ್ನುವ ದೃಷ್ಟಿಯಿಂದ. ಅದಕ್ಕೆ ಅವರು ಪ್ರೈವೇಟ್ ಪ್ರಾಜೆಕ್ಟ್ ಒಂದು ಸ್ಯಾಂಪಲ್ ಎಂದು ಗುಲ್ಬರ್ಗಾ ಜಿಲ್ಲೆಯನ್ನು ಸೆಲೆಕ್ಟ್ ಮಾಡಿದ್ದಾರೆ. ಅದಕ್ಕೆ ಈಗಾಗಲೇ ಭಾರತ ಸರ್ಕಾರದವರು 25 ಲಕ್ಷ ರೂ. ಗಳನ್ನು ಬಿಡುಗಡೆ ಮಾಡಿದ್ದಾರೆ. ಮತ್ತು ಆ ಒಂದು ಪ್ರಾಜೆಕ್ಟ್ ಅಲ್ಲಿ ಕಂಪ್ಲೀಟ್ ಆದರೆ, ಬಹುಶ: ಅದೇ ಮಾದರಿಯಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ನಾವು ಈ ಕಂಪ್ಯೂಟರೈಸೇಷನ್ ಮಾಡಿದರೆ ಅನೇಕ ತೊಂದರೆಗಳು ಏನಿವೆ, ತಾವು ನಿನ್ನೆ ಏನು ಪ್ರಸ್ತಾಪ ಮಾಡುತ್ತಿದ್ದೀರಿ, ಅವುಗಳು ಇದರಿಂದ ಕಡಿಮೆಯಾಗಬಹುದು ಎನ್ನುವ ದೃಷ್ಟಿಯಿಂದ ಮತ್ತು ಅಪ್‌ಡೇಟ್ ಮಾಡುವುದಕ್ಕೆ ಸಹಾಯವಾಗುತ್ತದೆ ಎನ್ನುವ ದೃಷ್ಟಿಯಿಂದ ಈ ಒಂದು ನಿರ್ಣಯವನ್ನು ತೆಗೆದುಕೊಂಡು ಕಂಪ್ಯೂಟರೈಸೇಷನ್ ಮೊದಲು ಗುಲ್ಬರ್ಗ ಜಿಲ್ಲೆಯಲ್ಲಿ ಮೊದಲನೇ ಪ್ರೋಗ್ರಾಂ ಅನ್ನು ತೆಗೆದುಕೊಳ್ಳುತ್ತಿದ್ದೇವೆ.

(ಉಪಾಧ್ಯಕ್ಷಿಣಿಯವರು ಪೀಠದಲ್ಲಿ ಉಪಸ್ಥಿತರಿದ್ದರು)

ಮತ್ತು ಅಗ್ರಿಕಲ್ಚರಲ್ ಕ್ರೆಡಿಟ್ ಪಾಸ್ ಬುಕ್ ಬಗ್ಗೆ ತಮಗೆ ಗೊತ್ತಿದೆ. ಕರ್ನಾಟಕ ರಾಜ್ಯದಲ್ಲಿ ಸುಮಾರು 67,50,346 ಖಾತೆಯಲ್ಲಿದ್ದಾರೆ. ಇವೆಲ್ಲರಿಗೂ ಪಾಸ್ ಬುಕ್ ವಿತರಿಬೇಕಾದರೆ ಕೆಲವು ದಿವಸಗಳು, ಕೆಲವು ಸಮಯ ಹಿಡಿಯುತ್ತದೆ. ಈಗಾಗಲೇ ಸುಮಾರು ಒಂದು ಕೋಟಿ ಪಾಸ್ ಪುಸ್ತಕಗಳನ್ನು ಪ್ರಿಂಟ್ ಮಾಡಿ, ಪ್ರತಿಯೊಂದು ಜಿಲ್ಲೆಯ, ಪ್ರತಿಯೊಂದು ತಾಲ್ಲೂಕಿಗೆ ಕಳುಹಿಸದ್ದೇವೆ. ಆದರೆ, ಕೆಲಸ ಬಹಳ ತ್ವರಿತ ಗತಿಯಿಂದ ನಡೆಯುತ್ತಿಲ್ಲವೆಂಬುದು ನನ್ನ ಗಮನಕ್ಕೆ ಬಂದಿದೆ. ಏಕೆಂದರೆ, ಇದು

ನಿಧಾನವಾಗಿ ಆಗುತ್ತಿದೆ. ಒಂದು ಕಾರಣ. ಮೊನ್ನೆ ಪಾರ್ಲಿಮೆಂಟ್ ಎಲೆಕ್ಷನ್ ಬಂದಿದ್ದರಿಂದ, ಎಲ್ಲಾ ಅಸಿಸ್ಟೆಂಟ್ ಕಮೀಶನ್ಸ್ ತಹಶೀಲ್ದಾರ್ಸ್ ಮತ್ತು ಜಿಲ್ಲಾಧಿಕಾರಿಗಳು 'ಬಿಜಿ' ಯಾಗಿದ್ದರು. ಆ ಕಾರಣ ಹೆಚ್ಚಿನ ಸಮಯ ಕಳೆದ ಕಾರಣ, ಪಾಸ್ ಪುಸ್ತಕಗಳು ಹೆಚ್ಚಿನ ರೀತಿಯಲ್ಲಿ ಹಂಚುವುದಕ್ಕಾಗಲಿಲ್ಲ. ಆನಂತರ, ನಾವು ಟಾರ್ಗೆಟನ್ನು ಫಿಕ್ಸ್ ಮಾಡಿ, ಪ್ರತಿ ತಿಂಗಳು ಅಥವಾ ಕ್ವಾರ್ಟರ್ಲಿ ಇಷ್ಟು ಕೆಲಸ ಮಾಡಲೇಬೇಕೆಂದು ಪ್ರತಿಯೊಂದು ಜಿಲ್ಲಾಧಿಕಾರಿಗೆ ಸಂಬಂಧಪಟ್ಟಂತೆ ಅಲ್ಲಿರುವ ಖಾತೆದಾರರುಗಳು ಎಷ್ಟು ಎಂಬುದರ ಅಂಕಿ-ಸಂಖ್ಯೆಗಳನ್ನು ನೋಡಿಕೊಂಡು ನಾವು ಆ ಕೆಲಸ ಮಾಡಬೇಕು ಎನ್ನತಕ್ಕಂಥ ಒಂದು ನಿರ್ಣಯ ತೆಗೆದುಕೊಂಡು ಅದೇ ರೀತಿಯಾಗಿ ನಾನು ಡೈರೆಕ್ಷನ್ ಕೊಡುತ್ತಿದ್ದೇನೆ. ಉಳಿದಂತೆ, prevention of Fragmentation Act ನ್ನು ಈಗಾಗಲೇ ಜಾರಿಗೆ ತಂದಿದ್ದೇನೆ. ಮತ್ತು ಈ ಸ್ಟ್ಯಾಂಪ್ ರಿಜಿಸ್ಟ್ರೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಹಿಂದೆ ಏನಾಗಿತ್ತು ಎಂದರೆ ಸಬ್ ರಿಜಿಸ್ಟ್ರಾರ್‌ಗಳಿಗೆ ನೇರವಾಗಿ ಜಿಲ್ಲಾಧಿಕಾರಿಗಳನ್ನು ಕೇಳತಕ್ಕಂಥ ಹಕ್ಕು ಇರಲಿಲ್ಲ. ಈಗ ನಾನು ರೂಲ್ ಅಮೆಂಡ್ ಮಾಡಿ ಸಬ್ ರಿಜಿಸ್ಟ್ರಾರ್ ಮತ್ತು ಡಿಸ್ಟ್ರಿಕ್ ರಿಜಿಸ್ಟ್ರಾರ್ ಅವರ ಕಾನ್‌ಫಿಡೆನ್ಷಿಯಲ್ ರಿಪೋರ್ಟ್ಸ್ ಅನ್ನು ಡೆಪ್ಯೂಟಿ ಕಮೀಷನರ್ ಬರೆಯಬೇಕು ಮತ್ತು ಪ್ರತಿ ತಿಂಗಳು ಅವರು ಆಫೀಸನ್ನು ವಿಸಿಟ್ ಮಾಡಿ ಇನ್ಸ್‌ಪೆಕ್ಷನ್ ಮಾಡಬೇಕು ಎನ್ನತಕ್ಕಂಥ ಒಂದು ಹೊಸ ನಿರ್ಣಯವನ್ನು ತೆಗೆದುಕೊಂಡು ಪ್ರತಿಯೊಂದು ಜಿಲ್ಲೆಯಲ್ಲಿ ಕೆಲಸ ಮಾಡಲೇಬೇಕು ಎಂದು ಏಳೆಂಟು ದಿವಸಗಳ ಹಿಂದೆ ಆದೇಶ ಕೂಡಾ ಹೊರಡಿಸಿದ್ದೇವೆ. ಅದಕ್ಕೆ ಎಲ್ಲರ ಒಪ್ಪಿಗೆ ಪಡೆದುಕೊಂಡು ಇವೊತ್ತು ಆ ಕೆಲಸವನ್ನು ಮಾಡಿದ್ದೇವೆ. ಇದರಿಂದ ಆದಾಯ ಕೂಡಾ ಸ್ವಲ್ಪ ಹೆಚ್ಚು-ಕಡಿಮೆ ಆಗಬಹುದು ಕರಪ್ಷನ್ ಸಂಪೂರ್ಣವಾಗಿ ಹೋಗುತ್ತದೆ ಅನ್ನತಕ್ಕಂಥ ಮಾತನ್ನು ಹೇಳುವ ಹಾಗಿಲ್ಲ, ಎಲ್ಲಿಯಾದರೂ ಕೂಡಾ ಸ್ವಲ್ಪ ಇದ್ದೇ ಇರುತ್ತದೆ, ನಿಮಗೂ ಗೊತ್ತಿದೆ, ಇಲ್ಲಿ 20 ವರ್ಷ ಅನುಭವವಿರುವ ವಕೀಲರಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮರ್ಯಾದೆಗಾದರೂ ಸ್ವಲ್ಪ ಲಂಚ ಇರಬಹುದು... ನೀವು ಸಿಟ್ಟು ಏಕೆ ಮಾಡಿಕೊಳ್ಳುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲಿ ವಕೀಲರಾದ ಶ್ರೀ ಬನ್ನಿಕೋಡ್‌ರವರು ಇದ್ದಾರೆ. ನಾನು ಮಂತ್ರಿಯಾಗಿ ಒಂಭತ್ತು ತಿಂಗಳು ಆಗಿರಬಹುದು. ಅವರು ವಕೀಲರಾಗಿ 20-30 ವರ್ಷಗಳ ಅನುಭವ ಇರಬಹುದು. ಅವರನ್ನೇ, ಸಬ್ ರಿಜಿಸ್ಟ್ರಾರ್ ಆಫೀಸಿಗೆ ಹೋಗಿ ವಕೀಲರು ಏನು ಮಾಡುತ್ತಾರೆಂದು ಕೇಳಿರಿ... ಆತ್ಮಸಾಕ್ಷಿಯಾಗಿ ಹೇಳಿ. ನೀವಲ್ಲ, ವಕೀಲರೆಲ್ಲರೂ ಕೂಡಾ...

ಶ್ರೀ ಬಿ.ಎಚ್. ಬನ್ನಿಕೋಡ್ : ನನ್ನ ಜೀವಮಾನದಲ್ಲಿ ಯಾವ ಕಛೇರಿಗೂ ಹೋಗಿಲ್ಲ, ಕೊಡಿಸಿಲ್ಲ, ಕೊಡುವಂತೆಯೂ ಹೇಳಿಲ್ಲ, ಪೋಲೀಸ್ ಸ್ಟೇಷನ್ನಿಗೂ ಕಾಲು ಇಟ್ಟಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೋಸ್ಕರ ಇದನ್ನು ತಪ್ಪಿಸಬೇಕೆಂದು,ಇದನ್ನು ಕಡಿಮೆ ಮಾಡಬೇಕೆಂಬ ದೃಷ್ಟಿಯಿಂದ ಡೆಪ್ಯುಟಿ ಕಮೀಷನರ್ ಅವರಿಗೆ ನಾನು ಅಧಿಕಾರವನ್ನು ಕೊಟ್ಟಿದ್ದೇನೆ. ಅವರು ಕಾನ್‌ಫಿಡೆನ್ಷಿಯಲ್ ರಿಪೋರ್ಟ್ಸ್ ಬರೆಯತಕ್ಕಂಥಾದ್ದು, ಇನ್ಸ್‌ಪೆಕ್ಷನ್ ಮಾಡತಕ್ಕಂಥಾದ್ದು, ರೆಕಾರ್ಡ್ಸ್ ಚೆಕ್ ಮಾಡತಕ್ಕಂಥಾದ್ದು, ಈ ರೀತಿಯಿಂದ ಬಹುಶ: ಸ್ವಲ್ಪ ಮಟ್ಟಿಗೆ ಆಡಳಿತದಲ್ಲಿ ಸುಧಾರಣೆ ಬರಬಹುದೆಂದು ದೃಷ್ಟಿಯಿಂದ ಸೆಕ್ಷನ್ 35 (ಎ) ಕರ್ನಾಟಕ ಸ್ಟಾಂಪ್ ಆಕ್ಟ್ ಅನ್ನು ಅಮೆಂಡ್ ಮಾಡಿದ್ದೇನೆ. ಈಗ ಹಿಂದೆ [illegible] ಸಿವಿಲ್ ಕೋರ್ಟಿಗೆ ಹೋಗುತಿದರು. ಸ್ಟಾಂಪ್

ರಿಜಿಸ್ಟ್ರಿರ್‌ನಲ್ಲಿ ವ್ಯತ್ಯಾಸ ಬಂದರೆ ಕೇಸ್ ಅಪೀಲ್ ಡಿಸ್ಟ್ರಿಕ್ ರಿಜಿಸ್ಟ್ರಾರ್ ಅನ್ನು ಫೇಸ್ ಮಾಡಿದ ನಂತರ ಸಿವಿಲ್ ಕೋರ್ಟ್‌ಗೆ ಹೋಗುತ್ತಿದ್ದರು, ಅದನ್ನು ತಪ್ಪಿಸಿ, ಕ್ವಿಕ್ ಡಿಸ್‌ಪೋಸಲ್ ಆಗುವುದಕ್ಕಾಗಿ ಡಿವಿಜನಲ್ ಕಮೀಷನರ್‌ಗೆ ನಾನು ಸಂಪೂರ್ಣವಾಗಿ ಅಧಿಕಾರ ಕೊಟ್ಟು, ಅಪೀಲನ್ನು ಹಿಯರ್ ಮಾಡಿ ಅವರೇ ಅದನ್ನು ಸೆಟ್ಲ್ ಮಾಡಬೇಕೆನ್ನುವ ದೃಷ್ಟಿಯಿಂದ ಅವರಿಗೆ ಈ ಒಂದು ಹಕ್ಕನ್ನು, ಅಧಿಕಾರವನ್ನು ಕೊಟ್ಟಿದ್ದೇವೆ. ಮತ್ತು ವ್ಯಾಲ್ಯೂವೇಷನ್ ಸರಿಯಾದ ರೀತಿಯಲ್ಲಿ ಆಗಬೇಕೆಂದು ತಾಲ್ಲೂಕು ಮಟ್ಟದಲ್ಲಿ ಒಂದು ತಾಲ್ಲೂಕು ಕಮಿಟಿಯನ್ನು ಕಾನ್ಸ್‌ಟಿಟ್ಯೂಟ್ ಮಾಡಬೇಕು ಎನ್ನತಕ್ಕಂಥ ನಿರ್ಣಯ ತೆಗೆದುಕೊಂಡು ಈಗಾಗಲೇ ಒಂದು ಸುತ್ತೋಲೆಯನ್ನು ಹೊರಡಿಸಿದ್ದೇವೆ. ಅಲ್ಲಿರತಕ್ಕಂಥ ತಹಶೀಲ್ದಾರ್, ಅಸಿಸ್ಟೆಂಟ್ ಕಮೀಷನರ್ಸ್, ರೆವಿನ್ಯೂ ಇನ್ಸ್‌ಪೆಕ್ಟರ್ ಇವರೆಲ್ಲರೂ ಕೂಡಾ ಆ ಭಾಗದಲ್ಲಿ ಅಡ್ಡಾಡಿ ಅಪೀಲನ್ನು ಫಿಕ್ಸ್ ಮಾಡಿ, ರಿಜಿಸ್ಟ್ರೇಷನ್‌ಗೆ ಅವಕಾಶ ಮಾಡಿಕೊಡಬೇಕು ಎನ್ನತಕ್ಕಂಥಾದ್ದು ಕೂಡಾ ಒಂದು ಕ್ರಮವನ್ನು ತೆಗೆದುಕೊಂಡಿದ್ದೇವೆ.

5-40 ಪಿ.ಎಂ.

ಈಗ ಇನ್ನೊಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈ ಪಾರ್ಟಿಷಿಯನ್ ಬಗ್ಗೆ. ಶ್ರೀಮತಿ ಮೋಟಮ್ಮನವರು ಹೇಳಿದರು.. ಇದಕ್ಕೆ ನಮ್ಮ ಕಡೆ ವಾಟನಿ ಎಂದು ಕರೆಯುತ್ತೇವೆ. ಭಾಗ ಮಾಡುವಾಗ ರಿಜಿಸ್ಟ್ರೇಷನ್ ಕಛೇರಿಯಲ್ಲಿ ಫುಲ್ ವ್ಯಾಲುವೇಷನ್ ತೆಗೆದುಕೊಳ್ಳುತ್ತಾರೆಂದು ದೂರು ಬಂದಿದೆ. ಆ ರೀತಿ ಮಾಡುತ್ತಿದ್ದಾರೆ ಅದನ್ನು ತಪ್ಪಿಸಬೇಕೆಂದು ನಾನು ತೀರ್ಮಾನ ಮಾಡಿದ್ದೇನೆ. ಹಿಂದೆ ಏನು ಪದ್ಧತಿ ಇತ್ತೋ.. ಅಥವಾ ಒಂದು ನಿರ್ದಿಷ್ಟವಾದ ಬೆಲೆಯನ್ನು ಅಂದರೆ 100, 200, 500 ಹೀಗೆ ಒಂದು ಫಿಕ್ಸ್ ಮಾಡಿ ಅದರ ಮೇಲೆ ನಮ್ಮ ರೈತರಿಗೆ ವ್ಯವಸಾಯದ ಭೂಮಿ, ಮತ್ತು ಅವರ 1 ರೆಸಿಡೆನ್‌ಷಿಯಲ್ ಪ್ರಾಪರೇಟೀಸ್‌ನ್ನು ರಿಜಿಸ್ಟ್ರೇಷನ್ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇದಕ್ಕೆ ಸೂಕ್ತವಾದ ಅಮೆಂಡ್‌ಮೆಂಟನ್ನು ತಂದು ರೈತರಿಗೆ ಅನುಕೂಲ ಮಾಡಿಕೊಳ್ಳುತ್ತೇನೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ. ಆಮೇಲೆ ಅನೇಕ ಜನ ರೈತರು ವಿನಾಯಿತಿಯನ್ನು ಕೇಳಿದರು. ಅಂದರೆ ನಾವು ಟ್ರಾಕ್ಟರ್‌ನ್ನು ತೆಗೆದುಕೊಳ್ಳುತ್ತೇವೆ, 5 ಸಾವಿರ, ಇಲ್ಲವೆ 10 ಸಾವಿರ ಸಾಲವನ್ನು ತೆಗೆದುಕೊಂಡರೆ ಸ್ಟಾಂಪ್ ಡ್ಯೂಟಿಯನ್ನು ತೆಗೆದುಕೊಳ್ಳುತ್ತಾರೆ, ಅದನ್ನು ತಪ್ಪಿಸಬೇಕೆಂದು ಅನೇಕ ಜನ ರೈತರು ನಮಗೆ ವಿನಂತಿ ಮಾಡಿದರು. ನಾವು ಅದನ್ನು ಕೂಡ ಪರಿಶೀಲಿಸಿದೆವು. ಎಲ್ಲರಿಗೂ ಕೂಡ ವಿನಾಯಿತಿಯನ್ನು ಕೊಡಲು ಆಗಲಿಲ್ಲ, ಆದರೆ 15 ಸಾವಿರದ ವರೆಗೆ ರೈತರಿಗೆ ವಿನಾಯಿತಿ ಮಾಡಿದ್ದೇವೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಕನಿಷ್ಟ ಪಕ್ಷ 50 ಸಾವಿರದ ವರೆಗೆ ಕೊಡಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಆಂಧ್ರ ಮತ್ತು ತಮಿಳುನಾಡಿನಲ್ಲಿ 40 ಸಾವಿರ ಹಾಗೂ 50 ಸಾವಿರದವರೆಗೆ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ದೇಶಪಾಂಡೆಯವರೇ, ನೀವು 10 ಸಾವಿರದವರೆಗೆ ಮಾಡಿದಿರಿ; ನಾವು 15 ಸಾವಿರದವರೆಗೆ ಮಾಡಿದ್ದೇವೆ.

ಶ್ರೀ ಆರ್. ವಿ. ದೇಶಪಾಂಡೆ : ಅದಕ್ಕೆ ಅಭಿನಂದನೆಗಳು, ಕಡೆಯಪಕ್ಷ ಬೋರ್‌ವೆಲ್ ತೆಗೆಯಬೇಕಾದರೂ 15 ಸಾವಿರ ...

ಆಮೇಲೆ ಎಲ್ಲಕಿಂತ ಮೆಚ್ಚತಕ್ಕ ವಿಷಯವೇನೆಂದರೆ ಸೈನಿಕರ ಬಗೆಗಿನ ವಿಚಾರ ಯಾರು ದೇಶಕ್ಕಾಗಿ ಹೋರಾಡಿರತಕ್ಕವರು, ಯಾರು ಬಾರ್ಡರ್‌ನಲ್ಲಿ ಪ್ರಾಣವನ್ನು ತೆತ್ತವರಿದ್ದಾರೋ ಅವರಿಗೆ ಟೆನೆನ್ಸ್ ಕಾನೂನು ಮುಕ್ತವಾಗುತ್ತದೆ. ಯಾರು ಸೇನೆಯಲ್ಲಿನ ಸೇವೆಯಲ್ಲಿ ಮೃತರಾಗಿರುತ್ತಾರೋ ಅವರ ಜಮೀನನ್ನು ವಾಪಸ್ ಕೊಡಬೇಕು. ಅಂದರೆ ಟೆನೆನ್ಸ್‌ನಿಂದ ಮುಕ್ತ ಮಾಡತಕ್ಕ ನಿರ್ಣಯವನ್ನು ತೆಗೆದುಕೊಂಡಿದ್ದೇನೆ. ಅದನ್ನು ಈವತ್ತು ಜಾರಿಗೆ ತಂದಿದ್ದೇನೆ. ಅದಲ್ಲದೆ ಅನೇಕ ಜನ ಮುದುಕರು, 65 ವರ್ಷ ವಯಸ್ಸಾದಮೇಲೆ ಅವರು ಟೆನೆಂಟ್ಸ್‌ಗಳಿಗೆ ಕೊಟ್ಟು ಭೂಮಿಯನ್ನು ಕಳೆದುಕೊಂಡಿದ್ದರೆ ಅವರಿಗೆ, ಇನ್‌ಸ್ಟಾಲ್ ಮೆಂಟ್‌ನಲ್ಲಿ ಕೊಡುತ್ತಾ ಹೋದರೆ ಅಂದರೆ ಸುಮಾರು 10-15 ವರ್ಷವೆಂದರೂ ಅವರಿಗೆ 85ವರ್ಷವಾಗುತ್ತದೆ; ಆಮೇಲೆ ಅವರು ಸತ್ತು ಹೋಗಿರುತ್ತಾರೆ. ಅಂತಹ ವಯಸ್ಸಾದವರಿಗೆ ಒಟ್ಟಾರೆಯಾಗಿ ಪರಿಹಾರವನ್ನು ಕೊಡಬೇಕೆಂಬ ನಿರ್ಣಯವನ್ನು ಜಾರಿಗೆ ತಂದಿದ್ದೇವೆ.

(ಗೊಂದಲ)

ಆಮೇಲೆ ಮಾನ್ಯ ಬನ್ನಿಕೋಡ್ ಮತ್ತು ಬಿಜಾಪುರದ ಪಾಟೀಲ್ ರವರು ಒಂದು ನಾಲ್ಕು ಕಾಯಿದೆ ಕಾನೂನುಗಳಿಗೆ ರೀಗ್ರಾಂಟ್ ಮಾಡಲು ಸಮಯ ಕೊಡಬೇಕೆಂದು ಕೇಳಿದ್ದರು, ಈವತ್ತು ಕರ್ನಾಟಕ ಅರ್ಬನ್ ಲ್ಯಾಂಡ್ ಪ್ರದೇಶಗಳಿಗೆ ಕೂಡ ಟೈಮನ್ನು ವಿಸ್ತರಣೆ ಮಾಡಿದ್ದೇವೆ. ಮತ್ತು ಕರ್ನಾಟಕ Area watan lands Karnataka Inferior Village Officers Abolition Act ಇದಕ್ಕೆ 31-12-91ರವರೆಗೆ ವಿಸ್ತರಣೆ ಕೊಟ್ಟು ಉಳಿದಿರತಕ್ಕ ಅಪ್ಲಿಕೇಷನ್‌ಗಳಿಗೆ ರೀಗ್ರಾಂಟ್ ಮಾಡಿಕೊಂಡು ಹೋಗುವ ದೃಷ್ಟಿಯಿಂದ ಮಾಡಿದ್ದೇನೆ. ಅದಲ್ಲದೆ ಹೈದ್ರಾಬಾದ್ Inams Abolition Act ಗೆ ನಾವು ಮಾರ್ಚ್ 1992ರವರೆಗೆ ಟೈಮ್ಸ್ ಕೊಟ್ಟಿದ್ದೇವೆ. ಅದು ಮಾನ್ಯ ಮನೊಳ್ಳಿಯವರಿಗೆ ಬಹಳ ಅನುಕೂಲವಾಗುತ್ತದೆ. ಇದಲ್ಲದೆ ಇನ್ನೂ ಅನೇಕ ವಿಷಯಗಳನ್ನು ನಾವು ದೃಷ್ಟಿಯಲ್ಲಿಟ್ಟುಕೊಂಡಿದ್ದೇವೆ.

ಇನ್ನೊಂದು ಸಂತೋಷದ ವಿಷಯವೇನೆಂದರೆ ಎಕ್ಸ್ ಮಿಲಿಟರಿ ಪರ್ಸನ್ಸ್‌ರವರಿಗೆ ಹಿಂದೆ ಜಮೀನು ಕೊಡಬೇಕಾದರೆ 4,800 ರೂಪಾಯಿ ಇನ್‌ಕಂ ಇತ್ತು, ಅದರಿಂದ ಏನೂ ಆಗುವುದಿಲ್ಲವೆಂದು ತಿಳಿದು 12,000 ನೆಟ್ ಇನ್‌ಕಂ ಇದ್ದರೆ ಅವರಿಗೂ ಕೂಡ ಜಮೀನನ್ನು ಮಂಜೂರುಮಾಡಬೇಕೆಂದು ಹೇಳಿದ್ದೇನೆ. ಮೂರು ಪಟ್ಟು ಜಾಸ್ತಿಯ ಮಾಡಿ, ಇವತ್ತು ಅವರ ಇನ್‌ಕಂ ಲಿಮಿಟ್‌ನ್ನು ಎನ್‌ನ್ಸ್ ಮಾಡಿಸಿದ್ದೇನೆ. ನಾನ್ ಅಗ್ರಿಕಲ್ಚರ್ ಇನ್‌ಕಂನಿಂದ 12,000 ರೂಪಾಯಿ ಒಂದು ಲಿಮಿಟ್ ಇರುವುದು ತಮಗೆ ಗೊತ್ತಿದೆ. ಅದಕ್ಕೆ ಈಗಾಗಲೇ ಆಕ್ಟ್‌ನಲ್ಲಿ ಆರ್ಡಿನೆನ್ಸ್ ಮುಖಾಂತರ ಲ್ಯಾಂಡ್ ರಿಫಾರ್ಮ್ಸ್ ಆಕ್ಟನ್ನು ಅಮೆಂಡ್‌ಮೆಂಟ್ ಮಾಡಿದ್ದೇವೆ. ಆದರೆ ಈಗ ಇನ್ನು ಹೆಚ್ಚಿಗೆ ಮಾಡಬೇಕೆಂದು ಇದೆ. ಅದನ್ನು ಹೆಚ್ಚಿಗೆ ಮಾಡಬೇಕೆಂದು ವಾದ ಕೂಡ ಇದೆ. ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಟ್ಟರೆ ಇದರ ಪ್ರಯೋಜನವಾಗುತ್ತದೆಂದು ನಮ್ಮ ಕೌಜಲಗಿಯವರು ಸಹ ಹೇಳುತ್ತಿದ್ದರು. ಅದಕ್ಕೋಸ್ಕರ ನಾನು ಇದರ ಬಗ್ಗೆ ಲಾ ಡಿಪಾರ್ಟ್‌ಮೆಂಟ್‌ನಿಂದ ತರಿಸಿ ಪರಿಶೀಲನೆ ಮಾಡುತ್ತೇನೆ. ಏಕೆಂದರೆ ಇದರ ರಿಫರ್‌ಕೇಷನ್ ಬೇರೆ ರೀತಿ ಆಗಬಾರದು ಎನ್ನುವ ದೃಷ್ಟಿಯಿಂದ ಇದನ್ನು ಲಾ ಡಿಪಾರ್ಟ್‌ಮೆಂಟ್‌ಗೆ ಪರಿಶೀಲನೆ ಮಾಡುವುದಕ್ಕೆ ಕಳಿಸಿದ್ದೇನೆ. ಇನ್ನೊಂದು ಮಹತ್ವವಾದ ವಿಷಯವೇನೆಂದರೆ ಸ್ಟಾಟುಟರಿ ಬೋರ್ಡ್‌ಗಳಿಗೆ ಪರ್ಚೇಸ್ ಮಾಡುವುದಕ್ಕೆ ಕೊಡತಕ್ಕಂತಹ ಹಕ್ಕಿನ ಬಗ್ಗೆ ಈಗಾಗಲೇ ಡಿಕ್ಲೇರ್ ಮಾಡಿದ್ದೇವೆ. ರೈತರ ವಿಷಯಕ್ಕೆ ಸಂಬಂಧಪಟ್ಟಂತೆ ಇನ್ನು ಮೊನ್ನೆ ತಾನೇ ಒಂದು ಆದೇಶವನ್ನು ಹೊರಡಿಸಿದ್ದೇವೆ. ಸೆಕ್ಷನ್ 163 ಅಮೆಂಡ್‌ಮೆಂಟ್

ಮಾಡಿ ನಮ್ಮ ಲ್ಯಾಂಡ್ ರೆವಿನ್ಯೂಸ್ ಬಗ್ಗೆ ತಿದ್ದುಪಡಿಯನ್ನು ತಂದಿದ್ದೇವೆ. 10,000 ಒಳಗಡೆ ಇರುವಂತಹ ಲೋನ್ ಆಗಲಿ ಡ್ಯೂಸ್ ಆಗಲಿ ಫಾರ್‌ಫ್ಲೂಚರ್ ಮಾಡಿಕೊಳ್ಳುತ್ತಿದ್ದರು ರೈತರು. ಅದನ್ನು ಫಾರ್‌ಫೀಚರ್ ಮಾಡಿಕೊಳ್ಳಬಾರದು. ಲ್ಯಾಂಡ್ ರೆವಿನ್ಯೂ ಆಕ್ಟ್ ಪ್ರಕಾರ ಅದರ ಪ್ರೊಸಿಜರ್ ಪ್ರಕಾರವೆ ಅವರು ಪ್ರೊಸೀಡ್ ಆಗಬೇಕು ಅವರ ಜಮೀನನ್ನು ಫಾರ್‌ಫೀಚರ್ ಮಾಡಬಾರದು ಎನ್ನುವಂತಹ ಒಂದು ಆದೇಶವನ್ನು ಹೊರಡಿಸಿ ಲಕ್ಷಾಂತರ ರೈತರಿಗೆ ಇದರಿಂದ ಲಾಭ ಮಾಡಿಕೊಡುವಂತಹ ಕೆಲಸವನ್ನು ನಾವು ಮಾಡಿದ್ದೇವೆ. ಬಹುಶ: ತಾವೆಲ್ಲರೂ ಮೆಚ್ಚುತ್ತೀರೆಂದು ತಿಳಿದಿದ್ದೇನೆ. ಆ ಕಲಂ ತೆಗೆದರೆ ಏನಾಗುತ್ತದೆಂದರೆ 10,000 ಕ್ಕಿಂತ ಮೇಲೆ ಇರುವಂತಹ ಅನೇಕ ಜನರು ಇದ್ದಾರೆ, ಅದರಿಂದ ಬೇರೆಯವರಿಗೆ ತೊಂದರೆಯಾಗಬಾರದು ಎನ್ನುವ ದೃಷ್ಟಿಯಿಂದ, ನಾಳೆ ಅಧಿಕಾರಕ್ಕೆ ನೀವು ಬರಬಹುದು ಅಥವಾ ಇನ್ನೊಬ್ಬರು ಬರಬಹುದು. ಆದರೆ ಸರ್ಕಾರವೇ ಅಲ್ಲ ಅನ್ನುವಂತಹ ಭಾವನೆ ಇರಬಾರದು. ನಾವು ಸಾಲ ತೆಗೆದುಕೊಂಡರೆ ಯಾರಾದರೂ ಸಾಲ ಕೇಳುವವರು, ವಸೂಲು ಮಾಡುವವರು ಇದ್ದಾರೆ ಅನ್ನುವಂತಹ ಒಂದು ಭಾವನೆ ಇರಬೇಕು. ಇಲ್ಲಿ ಇರುವಂತಹ ರೈತ ಸಂಘದವರು, ಬಿ.ಜೆ.ಪಿ. ಸದಸ್ಯರಾಗಲಿ ಇಂಡಿಪೆಂಡೆಂಟ್ ಸದಸ್ಯರಾಗಲಿ, ಜನತಾ ಸದಸ್ಯರಾಗಲಿ, ಅಥವಾ - ಕಾಂಗ್ರೆಸ್ ಪಕ್ಷದ ಸದಸ್ಯರಾಗಲಿ ಎಲ್ಲರೂ ಕೂಡ ಈ ಒಂದು ತಿದ್ದುಪಡಿಯನ್ನು ಪ್ರಪೋಸ್ ಮಾಡಿದರು. ಅದಕ್ಕೆ ಈ ನಿರ್ಣಯವನ್ನು ನಾವು ತೆಗೆದುಕೊಂಡಿದ್ದೇವೆ. ಬಹುಶ:ಈ ನಿರ್ಣಯ ಬೇರೆ ಕಡೆ ಇಲ್ಲ ಎನ್ನುವಂತಹ ಭಾವನೆ ಇದೆ. ಇನ್ನು ರೆಗ್ಯುಲರೈಸೇಷನ್ ಬಗ್ಗೆ ಹೇಳಬೇಕೆಂದರೆ ಇದು ಬಹಳ ಮಹತ್ವದ್ದು; ಇದರ ಕಡೆ ತಾವೆಲ್ಲರೂ ಗಮನ ಕೊಡಬೇಕಾದ ಅವಶ್ಯಕತೆ ಇದೆ. ಈ ಒಂದು ವಿಷಯದಲ್ಲಿ ಮಾನ್ಯ ಸದಸ್ಯರ ಸಹಕಾರ ಮತ್ತು ಬೆಂಬಲ ನನಗೂ ಬೇಕು; ಜನತೆಗೂ ಬೇಕು ಏಕೆಂದರೆ ಈಗ ಡೇಟ್ ಫಿಕ್ಸ್ ಮಾಡಿರುವುದರಿಂದ ಈ ಸದನದ ಮುಖಾಂತರ ನಮ್ಮ ಇಡೀ ರಾಜ್ಯದ ಕೃಷಿ ಕಾರ್ಮಿಕರಾಗಲಿ ಅಥವಾ ಭೂಮಿಯನ್ನು ಸಾಗುವಳಿ ಮಾಡುವವರು ಇದ್ದಾರೆ ಅವರಿಗೂ ಕೂಡ ಅಪೀಲ್ ಮಾಡುತ್ತೇನೆ. ನಾವು ಕೆಲವು ಪ್ರಮುಖವಾದಂತಹ 7 ಅಂಶಗಳನ್ನು ಈಗಾಗಲೇ ಹೇಳಿದ್ದೇವೆ. ತಹಶೀಲ್ದಾರರಿಗೆ ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದೇವೆ. ಆ ಪ್ರಕಾರವೇ ಅವರು ಹೋಗಬೇಕು. ಮತ್ತು ಅವರು ಬೇರೆ ಕ್ರಮವನ್ನು ತೆಗೆದುಕೊಳ್ಳಬಾರದೆಂದು ಕೂಡ ಹೇಳಿದ್ದೇನೆ. ರೆಗ್ಯುಲರೈಸೇಷನ್ ಸಮಿತಿ ಛೇರ್‌ಮನ್ . ಇದ್ದ ಕಾರಣ ತಾವೆಲ್ಲರೂ ಇದನ್ನು ಗಮನದಲ್ಲಿ ಇಟ್ಟುಕೊಳ್ಳಬಹುದು. ಈ 7 ಅಂಶಗಳು ಯಾವುವೆಂದರೆ;

1. Cut off date for regularisation has been fixed as 1.4.1990 to mark the centenary celebrations of Dr. B.R. Ambedkar. This is the cut off date.
2. Unauthorised occupation occurring from a continuous period of three years from the said cut off date will be eligible for regularisation. In case of SC/STs it is one year.
3. A maximum extent of two hectares of dryland or its equivalent of other land will be regularised.
4. A five member taluka level committee will consider the applications for regularisations including the tahsildar - the Member Secretary.

5. A period of six months from 20th March, 1991 due for submission of applications for regularisation in the prescribed form, this period expired on 19.9.90, i.e. yesterday..

6. Land situated within the limits of city municipalities as per distance prescribed under Section 94-A of the Karnataka Land Revenue Act are not eligible for regularisation.

7. The lands assigned for public purposes, plantations, privileged lands, forest lands and other similar place privileged lands shall not be regularised.

ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ, ಈಗಾಗಲೇ ನಾವು ರೂಲ್ಸ್ ಮತ್ತು ರೆಗ್ಯುಲೇಷನ್ಸ್‌ನ್ನು ಕಳುಹಿಸುತ್ತಿದ್ದೇವೆ. ಆಕ್ಟ್‌ನಲ್ಲಿ ಕೂಡ ಪ್ರೊವಿಷನ್ ಇದೆ. ಆದುದರಿಂದ ಇದನ್ನು ರೆಗ್ಯುಲರೈಸ್ ಮಾಡತಕ್ಕ ಸಂಪೂರ್ಣ ಅಧಿಕಾರ ಅವರಿಗೆ ಇದೆ. ಇದಾದಮೇಲೆ ಇನ್ನೂ ಏನಾದರೂ ತೊಂದರೆ ಬಂದರೆ, ಇನ್ನೂ ರೈತರೇನಾದರೂ ಉಳಿದರೆ ಅಥವಾ ಇನ್ನೂ ಎಲ್ಲಾದರೂ ಅವಶ್ಯಕತೆ ಇದೆ ಎಂದು ಹೇಳುವುದಾದರೆ ಅದನ್ನು ಸರ್ಕಾರದ ಮಟ್ಟದಲ್ಲಿ ಸ್ಪೆಷಲ್ ಕನ್ಸಿಡರೇಷನ್ ಮಾಡಿ, ಇಂಥ ಕೇಸುಗಳನ್ನು ಸ್ಪೆಷಲ್ ಆಗಿ ತೆಗೆದುಕೊಂಡು ನಾವು ಗ್ರ್ಯಾಂಟ್ ಮಾಡೋಣ. ಮಾನ್ಯ ಸದಸ್ಯರಾದ ದೇಶಪಾಂಡೆಯವರು ಹೇಳಿದ ರೀತಿಯಲ್ಲಿ, ಇನ್ನೂ ಅನೇಕ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ, ಈ ಕಡೆಯವರೂ, ಆ ಕಡೆಯವರೂ ಹೇಳಿದಂತೆ ಈಗಾಗಲೇ ಇದು ಒಂದು ದೊಡ್ಡ ಗಲಾಟೆಯೇ ಎದ್ದುಬಿಟ್ಟಿದೆ. ಇದು ಒಂದು ಸುಗ್ಗಿಯಾಗಿಬಿಟ್ಟಿದೆ. ನಾನು ಜಮೀನನ್ನು ಕೊಡಿಸುತ್ತೇನೆ, ನಾನು ಜಮೀನು ಕೊಡಿಸುತ್ತೇನೆಂದು ಹಾಕಿದವರಿಂದಲೇ ಅರ್ಜಿ ಹಾಕಿಸುತ್ತಿದ್ದಾರೆ. ನಾಳೆ ಒಂದೇ ಜಮೀನಿನ ಮೇಲೆ 10 ಜನ ಬರುತ್ತಾರೋ, 20 ಜನ ಬರುತ್ತಾರೋ ಅದನ್ನೆಲ್ಲಾ ಸೆಟಲ್‌ಮೆಂಟ್ ಮಾಡತಕ್ಕ ಜವಾಬ್ದಾರಿ ನಿಮ್ಮ ತಲೆಯಮೇಲಿದೆ. ಇದನ್ನು ಬಹಳ ರಕ್ಷತೆಯಿಂದ, ಪ್ರಮಾಣಿಕತೆಯಿಂದ, ತಾವು ಮಾಡುತ್ತೀರೆಂಬ ನಂಬಿಕೆಯನ್ನಿಟ್ಟುಕೊಂಡೇ ಕರ್ನಾಟಕ ಜನತೆ ನಿಮಗೆ ಈ ಅಧಿಕಾರವನ್ನು ಕೊಟ್ಟಿದೆ. ಇದಕ್ಕೆ ಒಂದು ಕಮಿಟಿಯನ್ನು ಮಾಡಿದ್ದೇವೆ.....

ಶ್ರೀ ಬಿ. ಎಸ್. ಯಡಿಯೂರಪ್ಪ : ಇದಕ್ಕೆ ಸ್ಪೆಷಲ್ ಟ್ರೈಪ್ ಹೆಲ್ಮೆಟ್ ಅನ್ನು ಶಾಸಕರಿಗೆ ಕೊಡತಕ್ಕ ವ್ಯವಸ್ಥೆ ಮಾಡಿ. ಏಕೆಂದರೆ, ಒದೆ ಬೀಳುವುದು ಗ್ಯಾರಂಟಿ. ಈಗ ಬೇರೆ ಬೇರೆ ರಾಜ್ಯಗಳಿಂದ ದಾಖಲೆಗಳನ್ನು ತರಿಸಿಕೊಂಡು ನೋಡಿ. ಕಳೆದ 15-20 ವರ್ಷಗಳಿಂದ ಅರಣ್ಯ ಇಲಾಖೆಗೆ ಸಂಬಂಧಪಟ್ಟ ಜಮೀನನ್ನು ಬಗರ್ ಹುಕುಂ ಸಾಗುವಳಿ ಮಾಡಿಕೊಂಡು ಜನ ಬರುತ್ತಿದ್ದರು. ಅನೇಕ ವರ್ಷಗಳಿಂದ ಅಲ್ಲೇ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅಲ್ಲೇ ಊರುಗಳಾಗಿವೆ. ಅವರಿಗೆ ಎಲ್ಲ ಸೌಲಭ್ಯಗಳನ್ನೂ ಒದಗಿಸಿಕೊಟ್ಟಿದ್ದಾಗಿದೆ. ಅದು ಕಂಟಿನ್ಯೂ ಆಗುತ್ತಿದೆ. ನಾನು ತಮಗೆ ಮಧ್ಯಪ್ರದೇಶದ ವಿಚಾರವನ್ನು ಹೇಳಿದರೆ, ನೀವು ನಿಮ್ಮ ಸರ್ಕಾರದ ವಿಚಾರವನ್ನು ಹೇಳುತ್ತಿದ್ದೀರಿ ಎಂದು ಹೇಳಬೇಡಿ, ಕೇಂದ್ರ ಸರ್ಕಾರದಿಂದ ಅನುಮತಿಯನ್ನು ತೆಗೆದುಕೊಂಡು ಸ್ಥಳ ತನಿಖೆ ಮಾಡಿಸಿ ಯಾರ್‍ಯಾರು ಕಳೆದ 15-20 ವರ್ಷಗಳಿಂದ ಈ ರೀತಿ ಜಮೀನು ಇಲ್ಲದೆ ಕಡುಬಡವರು ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದಾರೋ ಅವರಿಗೆ ಕನ್‌ಫರ್ಮ್ ಮಾಡಿ. ಈಗಾಗಲೇ ಹಿಂದೆ ಕನ್‌ಫರ್ಮ್ ಮಾಡಿ ಆಗಿದೆ. ಎಸ್.ಸಿ. ಎಸ್.ಟಿ.ಗಳು ಅಲ್ಲಿ 90 ಪರ್ಸೆಂಟ್ ಇದ್ದಾರೆ. ಅಲ್ಲಿ ಊರುಗಳಾಗಿವೆ. ಬಗರ್ ಹುಕುಂ ಸಾಗುವಳಿ ಕಂಟಿನ್ಯೂ ಆಗುತ್ತಿದೆ. ಇದನ್ನು ಕೊನೆ ಮಾಡಬೇಕೆಂದಿದ್ದರೆ ಇದರ

ಬಗ್ಗೆ ಕೂಡ ಬೇರೆ ಬೇರೆ ರಾಜ್ಯಗಳಲ್ಲಿ ಏನು ತೀರ್ಮಾನ ತೆಗೆದುಕೊಂಡಿದ್ದಾರೆ ಅದರಂತೆ ನೀವು ಕೂಡ ಯೋಚನೆ ಮಾಡಿ ಇವರಿಗೂ ಅದರ ಅನುಕೂಲ ಮಾಡಿಕೊಡಿ. ಒಂದುರೀತಿಯಲ್ಲಿ ಇದರಿಂದ ಕಾಡುಗಳೂ ಕೂಡ ಉಳಿಯುತ್ತವೆ. ಇಲ್ಲದೇ ಹೋದರೆ ಹೀಗೇ ಮುಂದುವರಿಯುತ್ತದೆ. ಆದುದರಿಂದ ಇದನ್ನು ತಾವು ಪರಿಶೀಲಿಸಬೇಕು.

ಶ್ರೀ ಆರ್.ವಿ. ದೇಶಪಾಂಡೆ : ನಾನು ಒಪ್ಪಿಕೊಳ್ಳುತ್ತೇನೆ. ಫಾರೆಸ್ಟ್ ಇಲಾಖೆಯ ಜಮೀನನ್ನು ರೆಗ್ಯುಲರೈಸ್ ಮಾಡಬೇಕಾದರೆ ನಿಮ್ಮ ಇಲಾಖೆ ಮತ್ತು ರೆವಿನ್ಯೂ ಇಲಾಖೆ ಎರಡೂ ಸೇರಿ ಕೆಲಸ ಮಾಡಬೇಕಾಗುತ್ತದೆ. ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ಇದನ್ನು ತಂದೆ. ಇಡೀ ರಾಜ್ಯದಲ್ಲೇ ಇಂಥ ಜ್ವಲಂತ ಸಮಸ್ಯೆ ಇದೆ. ನಮ್ಮ ಮಲೆನಾಡಿನಲ್ಲೂ ಇಂಥ ಸಮಸ್ಯೆ ಇದೆ. ನಮ್ಮ ಸರ್ಕಾರ ಇದ್ದಾಗ 1978ರ ಮಾರ್ಚಿಗೆ ಮುಂಚಿತವಾಗಿ ಯಾವ ಬಡ ಜನರು ಭೂಮಿಯನ್ನು ಅತಿಕ್ರಮಣ ಮಾಡಿದ್ದಾರೆ ಅವರಿಗೆ ಆ ಭೂಮಿಯನ್ನು ರೆಗ್ಯುಲರೈಸ್ ಮಾಡಬೇಕೆಂದು ನಿರ್ಣಯ ಆಯಿತು. ಆ ಪ್ರಕಾರ ಎಲ್ಲೆಲ್ಲಿ ಯಾವ ಯಾವ ಕೇಸುಗಳಲ್ಲಿ ಡಿಸ್ಪ್ಯೂಟ್‌ಗಳಿಲ್ಲ ಅದನ್ನೆಲ್ಲಾ ಅರಣ್ಯ ಇಲಾಖೆಯವರು ರೆಕಮಂಡ್ ಮಾಡಿ ಕಳುಹಿಸಿದ್ದಾರೆ. ಎಲ್ಲೆಲ್ಲಿ ಡಿಸ್ಪ್ಯೂಟ್ ಇತ್ತು ಅಲ್ಲಿ ಡಿ.ಎಫ್.ಓ. ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದರು.ಆದರೆ ಅದೆಲ್ಲಾ ಇವತ್ತು ಹಾಗೆಯೇ ನಿಂತಿವೆ. ಹೀಗಾಗಿ ಈ ಫಾರೆಸ್ಟ್ ಜಮೀನನ್ನು ಈಗ ಕೊಡಿ ಎಂದು ಹೇಳುತ್ತಿಲ್ಲ. ಫಾರೆಸ್ಟ್ ಜಮೀನನ್ನು ಎನ್‌ಕ್ರೋಚ್ ಮಾಡುವುದಕ್ಕೆ ಪರ್ಮಿಷನ್ ಕೊಡಿ ಎಂದು ಹೇಳುತ್ತಿಲ್ಲ. ಆದರೇ 1973ಕ್ಕಿಂತ ಮುಂಚಿತವಾಗಿ ಯಾರು ಅತಿಕ್ರಮಣ ಮಾಡಿದ್ದಾರೆ. ಅದರ ಬಗ್ಗೆ ಕೂಡ ಒಂದು ನಿರ್ಣಯವನ್ನು ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೂ ನಾನು ಇದನ್ನು ತಂದಿದ್ದೇನೆ. ಅದೇ ಪ್ರಕಾರ ನಮ್ಮ ಜಿಲ್ಲೆಯಲ್ಲಿ ಸಾವಿರಾರು ಎಕರೆ ಭೂಮಿ ಫಾರೆಸ್ಟ್ ಲ್ಯಾಂಡ್‌ನ್ನು ಕೃಷಿಗೆ ರಿಲೀಸ್ ಮಾಡಿದರು. ಇವತ್ತು ಎಷ್ಟೋ ಬಡ ಜನರು ಇದನ್ನು ಟೆಂಪೊರರಿಯಾಗಿ ಮಾಡಿಕೊಂಡು ಬಂದಿದ್ದಾರೆ. ಆದರೆ ಇದು ಇನ್ನೂ ಅವರಿಗೆ ಪರ್ಮನೆಂಟ್ ಆಗಿಲ್ಲ. ಆ ಕೆಲಸ ನಿಮ್ಮ ಇಲಾಖೆಯಿಂದ ಆಗಬೇಕಾಗಿದೆ. ಇದು ಎನಕ್ರೋಚ್‌ಮೆಂಟ್ ಅಲ್ಲ. Lawfully they have been released by the Forest department to the Revenue Department. The Revenue Department is in possession of the land lawfully. However, they are temporary but they have to be confirmed.

ನಿಮ್ಮ ಇಲಾಖೆಯವರು ಪರಿಶೀಲನೆ ಮಾಡಬೇಕು. ಫೈಲ್ಸ್ ರೆಡಿ ಇವೆ. ಆದಷ್ಟು ಬೇಗ ನಿರ್ಣಯವನ್ನು ತಾವು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಲ್ಯಾಂಡ್ ಗ್ರಾಂಟ್‌ನಲ್ಲಿ 5 ಜನ ಸದಸ್ಯರು ಇರುತ್ತಾರೆಂದು ಹೇಳಿದರು. ಅದರಲ್ಲಿ ಶಾಸಕರು ಇರುತ್ತಾರೆ. ತಹಶೀಲ್ದಾರರು ಇರುತ್ತಾರೆಂದು ಹೇಳುತ್ತಾರೆ. ಬೇರೆ ಮೂರುಜನ ಸದಸ್ಯರು ಯಾರು ಇರುತ್ತಾರೆಂಬುದನ್ನು ಎನ್‌ಲೈಟನ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರೂಲ್ಸ್‌ನಲ್ಲಿದೆ ಓದಿಕೊಳ್ಳಿ. ರೂಲ್ಸ್‌ನಲ್ಲಿದೆ. ಆಕ್ಟ್‌ನಲ್ಲಿದೆ, ಆಮೇಲೆ ಈಗಾಗಲೇ ಮಾನ್ಯ ಯಡಿಯೂರಪ್ಪನವರಿಗೆ..

ಶ್ರೀ ಆರ್.ಎಲ್. ಜಾಲಪ್ಪ : ನಮ್ಮ ತಾಲ್ಲೂಕಿನ ಸಮಿತಿಗೆ ಬಹಳ ಒಳ್ಳೆಯವರೊಬ್ಬರನ್ನು ಹಾಕಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಜಾಲಪ್ಪನವರೇ, ನಾನು ಹೇಳಬೇಕಾದರೆ ಕೊನೆ ಪಕ್ಷ ನಾನು ನಿಮ್ಮನ್ನು ಚೇರ್‌ಮನ್ ಮಾಡಿದ್ದೆವು. ನೀವು ನಮ್ಮನ್ನು ಮೆಂಬರ್ ಮಾಡಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ನನ್ನನ್ನು ಮೆಂಬರ್ ಮಾಡಿದರೆ ಯಾವ ಮರ್ಯಾದಸ್ತರೂ ಚೇರ್‌ಮನ್ ರಾಗಿರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮ್ಮ ಲ್ಯಾಂಡ್ ಟ್ರಿಬ್ಯುನಲ್‌ಗೆ ಅದು ಇಲ್ಲ. ಹಾಗೆ ಮಾಡಿಟ್ಟಿದ್ದೀರಿ. ಹೋಗಲಿ ಬಿಡಿ. ಅದು ಬೇಡ, ಅದಕ್ಕೆ ಇನ್ನೊಂದು ವಿಷಯ ಎಂದರೆ ಗೋಮಾಳದಲ್ಲಿ ಪ್ರತಿಯೊಂದು ಗೋಮಾಳವನ್ನು ರಿಡಕ್ಷನ್ ಮಾಡಬೇಕೆಂದರೆ ಸರ್ಕಾರಕ್ಕೆ ಬರುತ್ತಿತ್ತು.

ಶ್ರೀ ವಾಟಾಳ್ ನಾಗರಾಜ್ : ನಮಗೂ ಒಂದು ಒಳ್ಳೆಯ ಅದೃಷ್ಟ, ಚೇರ್‌ಮನ್ ಗಿರಿಸಿಕ್ಕಿ ಅದೃಷ್ಟ ಬಂದಿತಕ್ಕೊಂದು ನಮ್ಮ ಅದೃಷ್ಟದ ಬಗ್ಗೆ ಎಷ್ಟು ಸಂತೋಷ ಪಡಬೇಕು. ಇಂಥ ಯುಗದಲ್ಲಿಯೂ ಒಂದು ಚೇರ್‌ಮನ್‌ಗಿರಿ ಸಿಕ್ಕುವಂಥ ಅದೃಷ್ಟ ಬಂತಲ್ಲ.

ಶ್ರೀ ಆರ್. ಎಲ್. ಜಾಲಪ್ಪ : ಮಾನ್ಯ ಮಂತ್ರಿಗಳೇ, ಮಾನ್ಯ ಮುಖ್ಯಮಂತ್ರಿಗಳಿದ್ದಾರೆ. ಬೆಂಗಳೂರಿನಲ್ಲಿ ವಾಸ ಮಾಡುತ್ತಿರುವವರನ್ನು ತೆಗೆದುಕೊಂಡು ಬಂದು, ದೊಡ್ಡಬಳ್ಳಾಪುರದಲ್ಲಿ ಅನ್‌ಆಥರೈಸ್ಡ್ ಕಲ್ಟಿವೇಷನ್ ಜಮೀನನ್ನು ರೆಗ್ಯುಲರೈಸ್ ಮಾಡಲಿಕ್ಕೆ ಮೆಂಬರ್ ಮಾಡಿ ಹಾಕಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ನೋಡುತ್ತೇನೆ, ತಮಗೂ ಗೊತ್ತಿದೆ. ನಮ್ಮ ಪಾರ್ಟಿ ಲೆಕ್ಕದ ಮೇಲೆ ನಾವು ಹಾಕಿದ್ದೇವೆ. ನೀವು ಹಾಗೆ ಮಾಡುತ್ತಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡುತ್ತೀರಲ್ಲ, ಕೆಲವು ಕ್ಷೇತ್ರದಲ್ಲಿ ಹೆಚ್ಚಿನ ಒಂದು ಭಾಗದಿಂದ ಶಾಸಕರು ಮುಂದೆ ಬಂದಿದ್ದಾರೆ. ಅವರನ್ನಾದರೂ ಚೇರ್‌ಮನ್ ಮಾಡಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾಡಿದ್ದೇವಲ್ಲ!

ಶ್ರೀ ಬಿ. ಎಸ್. ಯಡಿಯೂರಪ್ಪ : ನಾನು ಹೇಳುತ್ತಿರುವುದು ಒಂದು 24-30 ಕ್ಷೇತ್ರಗಳು ವಿಚಿತ್ರವಾದ ಕ್ಷೇತ್ರಗಳಿವೆ. 3-4 ಜನ ಆ ಒಂದು ತಾಲ್ಲೂಕಿನಲ್ಲಿ ಅವರು ರೆಪ್ರಸೆಂಟ್ ಮಾಡುತ್ತಿದ್ದಾರೆ. ಇದುವರೆಗೆ ಹೆಚ್ಚಿನ ಭಾಗ ರೆಪ್ರಸೆಂಟ್ ಮಾಡುತ್ತಾರೆ. ಅವರನ್ನೇ ಆ ಸಮಿತಿಗೆ ಹಾಕುವುದು, ಚೇರ್‌ಮನ್ ಮಾಡುವುದು ಪದ್ಧತಿಯಲ್ಲಿ ಬಂದಿರುವಂಥದ್ದು ಅದನ್ನು ಅನುಷ್ಠಾನಕ್ಕೆ ತರುತ್ತೀರಲ್ಲಾ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ಇನ್ನೊಂದು ವಿಶೇಷವಾಗಿ ಈ ಗೋಮಾಳ ಲ್ಯಾಂಡ್‌ನ ರಿಡಕ್ಷನ್ ಬಗ್ಗೆ, ಎಲ್ಲಾ ಫೈಲ್ಸ್ ದಾಖಲೆಗಳು ಅರ್ಜಿಗಳು ವಿಧಾನಸೌಧಕ್ಕೆ ಬರುತ್ತದೆ. ಇಲ್ಲಿಂದ ನಾವು ರಿಡಕ್ಷನ್ ಪರ್ಮಿಷನ್ ಕೊಟ್ಟು ಅವರು ರಿಡಕ್ಷನ್‌ಮಾಡಿ ಹೌಸ್ ಸೈಟ್ಸ್ ಡಿಸ್ಟ್ರಿಬ್ಯೂಟ್ ಮಾಡತಕ್ಕಂಥದ್ದೇ ಆಗಲಿ ಅಥವಾ ಅವರಿಗೆ ಗ್ರಾಂಟ್ ಮಾಡತಕ್ಕಂಥದ್ದೇ ಆಗಲಿ ಮಾಡುತ್ತೇವೆ. ಈ ಒಂದು ಅಧಿಕಾರವನ್ನು ವಿಧಾನ ಸೌಧದಿಂದ ತೆಗೆದು ಡೆಪ್ಯುಟಿ ಕಮೀಷನರಿಗೆ ಕೊಟ್ಟಿದ್ದೇವೆ. ಅವರು ಅಲ್ಲೇ ರಿಡಕ್ಷನ್‌ಮಾಡಿ ಹೌಸ್‌ಸೈಟ್‌ಗಳನ್ನು ಮಾಡಲಿಕ್ಕೆ ಅವರು ಪರ್ಮಿಷನ್ ಕೊಡಬಹುದು. ಗ್ರಾಂಟ್ ಮಾಡಬಹುದು. ಅದಕ್ಕೆ ಇದರಿಂದ ಲಕ್ಷಾಂತರ ಜನರಿಗೆ ಅನುಕೂಲವಾಗುತ್ತದೆ

.ಅದನ್ನು ಎಲ್ಲರೂ ಕೂಡ ಒಪ್ಪುತ್ತೀರೆಂದು ಭಾವಿಸುತ್ತೇನೆ. ನಾವು ಇಷ್ಟೆಲ್ಲ ರೆಗ್ಯುಲರೈಸ್ ಮಾಡಿದ ಮೇಲೆ ಸರ್‌ಪ್ಲಸ್ ಲ್ಯಾಂಡ್ ಡಿಸ್ಟ್ರಿಬ್ಯೂಷನ್ ಮಾಡುತ್ತಿದ್ದೇವೆ. ಇಷ್ಟಾದರೂ ಕೂಡ ಈ ಷೆಡ್ಯೂಲ್‌ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ ಜನರಿಗೆ ; ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಅವರಿಗೆ 50 ಪರ್ಸೆಂಟ್ ಕೊಡಬೇಕಾಗಿತ್ತು ಅದು ಸಿಕ್ಕಿಲ್ಲ. ನಾನು ಅಂಕಿಸಂಖ್ಯೆ ನೋಡಿದ್ದೇನೆ. ಸಿಗಲಿಲ್ಲವೆಂದರೆ ಈಗ ಲ್ಯಾಂಡ್ ಇಲ್ಲ. ಇವತ್ತು ಎನ್‌ಕ್ರೋಚ್‌ಮಾಡಿಕೊಂಡು ಜಮೀನನ್ನು ಒಪ್ಪಿಕೊಂಡು ರೆಗ್ಯುಲರೈಸ್ ಮಾಡುತ್ತಿದ್ದೇವೆ. ಕೊನೆ ಪಕ್ಷ ಉಳಿದಂಥ ಜಮೀನು ಅಥವಾ ಮುಂದೆ ಬರತಕ್ಕಂಥ ಪ್ರಾಜೆಕ್ಟ್ ಏರಿಯಾದಲ್ಲಿ ಬರತಕ್ಕಂಥ ಸರ್‌ಪ್ಲಸ್ ಜಮೀನು ಅದರಲ್ಲಿ ಕನಿಷ್ಠ 75 ಪರ್ಸೆಂಟ್ ಅವರಿಗೆ ಕೊಡಬೇಕೆನ್ನತಕ್ಕಂಥ ನಿರ್ಣಯ ತೆಗೆದುಕೊಂಡು, ನಾವು 31-8-1991ಕ್ಕೆ ಗೌರ್‍ನಮೆಂಟ್ ಆರ್ಡರನ್ನು ಹೊರಡಿಸಿದ್ದೇವೆ. ಆದರಿಂದ ಸಾವಿರಾರು ಎಕರೆ ಜಮೀನು ಅವರಿಗೆ ಸಿಗುತ್ತದೆನ್ನುವ ನಂಬಿಕೆ ಇದೆ.

ಕೊನೆಯದಾಗಿ, ನಾವು ಏನು ಕೆಲವು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇವೆ ಮತ್ತು ಕೆಲವು ರೈತರಿಗೆ ಅನುಕೂಲವಾಗತಕ್ಕ ಕನ್‌ಸೆಷನ್....

ಶ್ರೀ ವಾಟಾಳ್ ನಾಗರಾಜ್ : ಇನ್ನೊಂದು ವಿಚಾರವನ್ನು ತಾವು ಹೇಳಲಿಲ್ಲ. ಬಹು ಭಾಗ ಬರತಕ್ಕ ಶಾಸಕರನ್ನು ತಾನೇ ಅಧ್ಯಕ್ಷರು ಎಂದು ಹೇಳುವುದು ಆ ಪ್ರಕಾರ ರುಕ್ಮಯ್ಯ ಪೂಜಾರಿಯವರು ಬಹು ಭಾಗ ಶಾಸಕರಾದವರೂ.

ಶ್ರೀ ಸಿ. ಬೈರೇಗೌಡ: ಅದು ತಿದ್ದುಪಡಿಯಾಗಿದೆ, ದಯವಿಟ್ಟು ವೆರಿಫೈ ಮಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ರುಕ್ಮಯ್ಯ ಪೂಜಾರಿಯವರ ಕ್ಷೇತ್ರದಲ್ಲಿ ಅವರನ್ನು ಸದಸ್ಯರನ್ನಾಗಿಯೂ ಮಾಡಿಲ್ಲ, ಇನ್ನು ಛೇರ್ಮನ್ ಮಾಡುವ ಪ್ರಶ್ನೆ ಬರುವುದಿಲ್ಲ. ಬಿಜೆಪಿಗೆ ಒಂದು ಕಾನೂನು ಇದೆಯೇ? ಬಹುಭಾಗದಿಂದ ಬಂದಿರುವ ರುಕ್ಮಯ್ಯ ಪೂಜಾರಿಯವರನ್ನು ಸದಸ್ಯರನ್ನಾಗಿಯೂ ಮಾಡಿಲ್ಲ. ಈ ಬಗ್ಗೆ ನಾನು ಪರ್ಸನಲ್ ಆಗಿ ವಿಚಾರ ಮಾಡಿದೆ. ನಿಮ್ಮ ಕಾನೂನು ಪ್ರಕಾರ ಅವರು ಛೇರ್ಮನ್ ಆಗಬೇಕು, ಆದರೆ ಸದಸ್ಯರೂ ಆಗಿಲ್ಲ. ಬಿಜೆಪಿ ಬೇರೆ, ಬಿಜೆಪಿಯನ್ನು ಹೊರತುಪಡಿಸಿದ್ದೇವೆಂದು ಹೇಳುತ್ತೀರಾ? ವಿರೋಧ ಪಕ್ಷದವರು ಪ್ರಜಾಸತ್ತೆಯಲ್ಲಿ ಅಗತ್ಯ ಇಲ್ಲವೆಂದು ಬೇಕಾದರೆ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಛೇರ್ಮನ್ ಇದ್ದೀರಾ ಇಲ್ಲವೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲ. ನನ್ನ ಬಗ್ಗೆ ನಾನು ಚಿಂತೆ ಮಾಡುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಲ್ಲಿ ಕಮಿಟಿಯನ್ನು ರಚನೆ ಮಾಡಿದೆ ಅಲ್ಲಿ ಎಲ್ಲಾ ಸದಸ್ಯರನ್ನು ಹಾಕಿದೆ. ಅದು ಒಂದು ಮಾತ್ರ ಆಗಿಲ್ಲ. ಏತಕ್ಕೆ ಆಗಿಲ್ಲವೆಂದು ಹೇಳಿದೆ. ಅಲ್ಲಿ 3-4 ಮಂದಿ ಶಾಸಕರು ಬಂದಿದ್ದಾರೆ. ತಪ್ಪಾಗಿದ್ದರೆ ಸರಿ ಮಾಡೋಣ. ಒಂ ದೇ ಕಮ್ಯುನಿಟಿಯವರು ಅದೇ ಕಮಿಟಿಯಲ್ಲಿ 2-2 ಜನ...

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಕಮ್ಯುನಿಟಿ ಬಗ್ಗೆ ಮಾತನಾಡುತ್ತಿಲ್ಲ. ಶಾಸಕರ ವಿಚಾರದಲ್ಲಿ...

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ವಾದವನ್ನು ಒಪ್ಪುತ್ತೇನೆ, ಒಂದೇ ಕಮ್ಯುನಿಟಿಯವರು ಇರಬಾರದು. ಆದರೆ ಒಂದು ನೀತಿ ಇದೆಯಲ್ಲ. ಬಹು ಭಾಗ ಬರತಕ್ಕ ಶಾಸಕರು ಯಾರಿದ್ದರೆ ಅವರು ಅಧ್ಯಕ್ಷರಾಗಬೇಕೆಂಬುದು ನಿಮ್ಮ ನೀತಿ.

ರುಕ್ಮಯ್ಯ ಪೂಜಾರಿಯವರು ಬಹುಭಾಗ ಬರುತ್ತಾರೆ. ಆದರೆ ಅವರು ಅಧ್ಯಕ್ಷರೂ ಅಲ್ಲ, ಸದಸ್ಯರೂ ಅಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏನು ತಪ್ಪಾಗಿದೆ ಅದನ್ನು ಸರಿಪಡಿಸೋಣ.

ಶ್ರೀ ಸಿ. ಬೈರೇಗೌಡ : ಒಂದು ಅಸೆಂಬ್ಲಿ ಕ್ಷೇತ್ರದಲ್ಲಿ ಎರಡು ತಾಲ್ಲೂಕುಗಳು ಸೇರಿಸುತ್ತದೆ. ಅಂಥ ಸಂದರ್ಭದಲ್ಲಿ ಒಂದು ತಾಲ್ಲೂಕಿನಲ್ಲಿ ಮೆಂಬರ್ ಆದರೆ ಇನ್ನೊಂದು ತಾಲ್ಲೂಕಿನಲ್ಲಿ ಬೇಕಾಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸರಿ, ಎಲ್ಲಿಯಾದರೂ ಒಂದು ಕಡೆ ಇರಲಿ. ನಿಮ್ಮ ಕಷ್ಟ ನನಗೆ ಗೊತ್ತು. ಕೋಲಾರದಲ್ಲಿ, ಚಿಂತಾಮಣಿಯಲ್ಲಿ ಇರಬೇಕು ಅನ್ನುತ್ತೀರಾ?

ಶ್ರೀ ಸಿ. ಬೈರೇಗೌಡ: ಪಕ್ಷದ ವಿಚಾರ ಬಂದಾಗ ಒಂದೇ ಪಕ್ಷದವರನ್ನು ಹೇಗೆ ಮಾಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೋಡಿ ಮಾಡೋಣ. ಒಬ್ಬರು ಸದಸ್ಯರನ್ನು ಮಾಡಿದ ಮೇಲೆ ಮುಗಿಯಿತು.

ಶ್ರೀ ಸಿ. ಬೈರೇಗೌಡ : ಅದು ಮಾಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಲ್ಲಿಯಾದರೂ ಮೆಂಬರ್ ಮಾಡುತ್ತೇವೆ. ನೀವು ತಾಲ್ಲೂಕು ಪಂಚಾಯಿತಿಯ ಛೇರ್ಮನ್ ಇದ್ದೀರಾ?

ಶ್ರೀ ಸಿ. ಬೈರೇಗೌಡ : ಹೌದು, ನಾನು ತಾಲ್ಲೂಕು ಪಂಚಾಯಿತಿ ಛೇರ್ಮನ್ ಇದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದ್ದರೆ ನೋಡೋಣ.

ಶ್ರೀ ಸಿ. ಬೈರೇಗೌಡ : ಒಂದೊಂದು ಸಾರಿ ಒಂದೊಂದು ರೀತಿ ಹೇಳುತ್ತೀರಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಾನೂನನ್ನು ಮುಚ್ಚಿಡುವುದಕ್ಕಾಗುತ್ತದೆಯೆ ಯಾವುದೇ ಕಾನೂನಾಗಲಿ ಅದು ಎಲ್ಲಾ ಕಡೆ ಅಪ್ಲಿಕಬಲ್ ಆಗುತ್ತದೆ. ಒಬ್ಬರಿಗೆ ಒಂದು ಇನ್ನೊಬ್ಬರಿಗೆ ಒಂದು ಕಾನೂನು ಮಾಡುವುದಕ್ಕಾಗುತ್ತದೆಯೆ?

ಶ್ರೀ ಸಿ. ಬೈರೇಗೌಡ : ಇಲ್ಲಿ ಮಾಡಿದ್ದೀರಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಲ್ಲಿ ಏನೋ ಆಗಿರಬೇಕು. 3-4 ಜನ ಶಾಸಕರು ಬಂದಾಗ ವ್ಯತ್ಯಾಸ ಆಗಿರಬಹುದು. ನಾವು, ಎಡಿಯೂರಪ್ಪನವರು ಎಲ್ಲಾ ಮಾತನಾಡಿ ಲ್ಯಾಂಡ್ ಟ್ರಿಬ್ಯುನಲ್ ಮತ್ತು ಲ್ಯಾಂಡ್ ಗ್ರಾಂಟ್ ಕಮಿಟಿಯಲ್ಲಿ ಅಜಸ್ಟ್ ಮಾಡೋಣ ಎಂದು ಹೇಳಿದ ಮೇಲೆ ಇಲ್ಲಿ ಈ ರೀತಿ...

ಶ್ರೀ ಬಿ. ಎಸ್. ಯಡಿಯೂರಪ್ಪ : ಯಾವುದೇ ಕಮಿಟಿಯಲ್ಲಿ ಹೆಸರಿಲ್ಲ ಅಂದುದಕ್ಕೆ ಇನ್ನೊಬ್ಬರು ವ್ಯಕ್ತಿಯನ್ನು ತೆಗೆದುಕೊಳ್ಳಿ ಅಂದರು. ಲ್ಯಾಂಡ್ ಗ್ರಾಂಟ್ ಕಮಿಟಿಗೆ ನಿಮ್ಮ ಮರ್ಸಿ ಬೇಕಾಗಿಲ್ಲ. ಛೇರ್ಮನ್‌ಗಿರಿ ಮಾಡಿ ಉದ್ಧಾರವಾಗಬೇಕಾಗಿಲ್ಲ. ಕಾನೂನು ಪ್ರಕಾರ ಮಾಡಿ. ಆದರೆ ಈ ಕಾನೂನು ಬಿಜೆಪಿಗೆ ಅನ್ವಯವಾಗುವುದಿಲ್ಲವೆಂದು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಾಗೆ ಹೇಳಲಿಲ್ಲ. ಇನ್ನು ಎಲ್ಲಕ್ಕಿಂತ ಮಹತ್ವದ ವಿಷಯ ಮತ್ತು ಈ ಸಧನದಲ್ಲಿ ಎಲ್ಲರೂ ಚರ್ಚೆ ಮಾಡಿರತಕ್ಕ ವಿಷಯಗಳು ಎಂದರೆ ನ್ಯಾಚುರಲ್ ಕೆಲಾಮಿಟೀಸ್, ಫ್ಲಡ್ ರಿಲೀಫ್ ಮತ್ತು ಸ್ಕೇರ್ಸಿಟಿ. ಇವುಗಳ ಬಗ್ಗೆ ವಾದ ವಿವಾದ ಕೂಡ ಆಯಿತು. ತಮಗೆಲ್ಲ ಗೊತ್ತಿದೆ. ಈ ನ್ಯಾಚುರಲ್ ಕೆಲಾಮಿಟೀಸ್ ಫಂಡ್ ಏನಿದೆ ಇದು ಫಿಕಸ್ಡ್ ಫಂಡ್. 9ನೇ ಹಣಕಾಸಿನ ಆಯೋಗ ಬಂದಮೇಲೆ ಈ ರಾಜ್ಯಕ್ಕೆ 27 ಕೋಟಿ ರೂಪಾಯಿಗಳನ್ನು ಮಾತ್ರ ನಿಗದಿ ಮಾಡಿದ್ದಾರೆ. ಈ 27 ಕೋಟಿ ರೂಪಾಯಿ ರಿಲೀಫ್, ಇದು ಕಾಂಪನ್‌ಸೇಷನ್ ಅಲ್ಲ.

ತಕ್ಷಣ ಸ್ಕೇರ್ಸಿಟಿಯಲ್ಲಿ ನೀರಿಲ್ಲ ಎಂದು ಇಟ್ಟುಕೊಳ್ಳಿ ಟ್ರಾನ್ಸ್‌ಪೋರ್ಟೇಷನ್ ಮಾಡತಕ್ಕದ್ದು, ಎಲ್ಲೋ ಒಂದು ಕೊಳವೆಬಾವಿ ಹೊಡೆಯತಕ್ಕದ್ದು, ಟ್ಯಾಂಕ್ ಬ್ರೀಚ್ ಆದರೆ ಸ್ಯಾಂಡ್ ಬ್ಯಾಗ್ಸ್ ತಂದು ಫಿಲಮ್ ಮಾಡಿ ನೀರು ನಿಲ್ಲಿಸುವುದು ಹೀಗೆ ರಿಲೀಫ್ ಕೊಡುವುದು. ಬಹುತೇಕ ಸದಸ್ಯರು ಏನು ತಿಳಿದುಕೊಂಡಿದ್ದಾರೆ ಎಂದರೆ ಫುಲ್ ಕಾಂಪೆನ್‌ಸೇಷನ್ ಕೊಡಬೇಕು, ಮಾರ್ಕೆಟ್ ವ್ಯಾಲ್ಯೂ ಕೊಡಬೇಕು, ಸಂಪೂರ್ಣವಾಗಿ ಸರ್ಕಾರ ಹೊಣೆ ಹೊತ್ತು ಸಹಾಯ ಮಾಡಬೇಕು ಎಂಬ ವಾದವನ್ನು ಇವತ್ತು ನಮ್ಮ ಮುಂದೆ ಇಟ್ಟು ಬಹಳ ಜನ ಕೇಳುತ್ತಿದ್ದಾರೆ. ಈ ಕಾನೂನು ಬರೀ ಕರ್ನಾಟಕ ರಾಜ್ಯಕ್ಕೆ ಸೀಮಿತವಾಗಿಲ್ಲ, ರಾಜಾಸ್ಥಾನಕ್ಕೆ ಹೋಗಿ, ಯು.ಪಿ, ಗೆ ಹೋಗಿ, ಮಧ್ಯಪ್ರದೇಶಕ್ಕೆ ಹೋಗಿ, ತಮಿಳುನಾಡಿಗೆ ಹೋಗಿ ಎಲ್ಲಾ ಕಡೆಯಲ್ಲಿಯೂ ಒಂದೇ ಕಾನೂನಿದೆ. ಇಲ್ಲಿ ಕರ್ನಾಟಕಕ್ಕೆ ಒಂದು ಕಾನೂನಿದೆ ಬೇರೆ ಕಡೆ ಒಂದು ಕಾನೂನಿದೆ. ಕರ್ನಾಟಕ ಸರ್ಕಾರ ಅಲಕ್ಷ್ಯ ಮಾಡಿದೆ ಎಂಬ ರೀತಿಯಲ್ಲಿ ಧಾಟಿಯಲ್ಲಿ ಕೆಲವು ಸದಸ್ಯರು ಮಾತನಾಡಿದರು. ಇವತ್ತು ನಾನು ಹೇಳುತ್ತೇನೆ, ದೇಶಪಾಂಡೆಯವರೆ ತಮ್ಮ ಸರ್ಕಾರ ಇದ್ದಾಗ ತಾವು ಒಂದು ಆದೇಶ ಹೊರಡಿಸಿದ್ದೀರಿ. ಗೌರ್ನಮೆಂಟ್ ಆರ್ಡರ್ ನಂ. 17 ಟಿ.ಎನ್.ಆರ್. 86 ಬೆಂಗಳೂರು ದಿನಾಂಕ 8ನೇ ಜೂನ್ 1988. ಇದರಲ್ಲಿ ಕಾಂಪೆನ್‌ಸೇಷನ್ ಫಿಕ್ಸ್ ಮಾಡಿರುವುದು ಎಷ್ಟು ಎಂದರೆ ಬಿಲ್ಡಿಂಗ್ ಮೆಟಿರಿಯಲ್‌ಗೆ 1 ಸಾವಿರ ರೂಪಾಯಿ ಮಾಡಿದ್ದೀರಿ, ಆಮೇಲೆ ಮನೆಗಳು ಬಿದ್ದರೆ ಅಥವಾ ಕ್ಯಾಷ್ ರಿಲೀಫ್‌ಗೆ 1200ರೂಪಾಯಿ, ಇನ್‌ಕಮ್ ಲಿಮಿಟ್ ತಮ್ಮದು 4800 ರೂಪಾಯಿಗಳು 1988ರಲ್ಲಿ, ಈ ರೀತಿ ಆಗ ಇತ್ತು. ಕೇಂದ್ರ ಸರ್ಕಾರದ್ದು ಏನಿದೆ? ಕೇಂದ್ರ ಸರ್ಕಾರದವರು ಇವತ್ತು ನಿಗದಿ ಮಾಡಿದ್ದಾರೆ. ಹಣ ಕೊಡುವಾಗ ಕೆಲವು ಗೈಡ್‌ಲೈನ್ಸ್ ಹಾಕಿಕೊಟ್ಟು ಅದರ ಪ್ರಕಾರ ಹಂಚಬೇಕು ಎಂದು ಆದೇಶ ನೀಡುತ್ತಾರೆ. ಅದನ್ನು ವಯಲೇಟ್ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ನಾಳೆ ಅಕೌಂಟ್ ಕೊಡುವಾಗ ಅವರು ಅಕೌಂಟ್ ಅಕ್ಸೆಪ್ಟ್ ಮಾಡದೇ ಇದ್ದರೆ ಸ್ವಾಭಾವಿಕವಾಗಿ ಮುಂದಿನ ಹಣ ಬಿಡುಗಡೆ ಮಾಡುವುದಿಲ್ಲ. ಗೌರ್ನಮೆಂಟ್ ಆಫ್ ಇಂಡಿಯಾ ಸ್ಕೇಲ್ ಏನಿದೆ ಎಂದರೆ ಡಿಸೀಸ್ಡ್ ಪರ್ಸನ್ಸ್ ಫ್ಯಾಮಿಲಿಗೆ ಎಕ್ಸ್‌ಗ್ರೇಷಿಯಾ ಪೇಮೆಂಟ್ 5 ಸಾವಿರ ರೂಪಾಯಿ. ರಾಜ್ಯ ಸರ್ಕಾರದಿಂದ ನಾವು ಇಷ್ಯೂ ಮಾಡಿರುವುದು 8 ಸಾವಿರ ರೂಪಾಯಿ. ಇದೇ ಏಪ್ರಿಲ್ ತಿಂಗಳಲ್ಲಿ ಇಷ್ಯೂ ಮಾಡಿರುವುದು. ಅಂದರೆ ಸುಮಾರು ನಾಲ್ಕೈದು ತಿಂಗಳ ಹಿಂದೆ ಹೊಸ ಆರ್ಡರ್ ಮಾಡಿದ್ದೇವೆ. 5 ಸಾವಿರ ಅವರಿದ್ದರೆ ನಾವು 8ಸಾವಿರ ಮಾಡಿದ್ದೇವೆ. ಅವರು ಒಂದು ಹೆಕ್ಟೇರಿಗೆ 200ರೂಪಾಯಿ ಮಾಡಿದ್ದರೆ ನಾವು 300 ರೂಪಾಯಿ ಮಾಡಿದ್ದೇವೆ. ಬಿಲ್ಡಿಂಗ್ ಮೆಟೀರಿಯಲ್ ಮನೆ ಕಾಂಪೆನ್‌ಸೆಷನ್ ಕೊಡತಕ್ಕದ್ದು 2950 ನಮ್ಮದು. ಇಷ್ಟೆಲ್ಲಾ ಕೂಡ ರೈತರಿಗೆ

ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಹೆಚ್ಚು ಮಾಡಿದ್ದು. ಹಿಂದೆ ಇದೇ ರಿಲೀಫ್ ಆ ಪ್ರಾಮಾಣದಲ್ಲಿ ಕೊಡುತ್ತಿದ್ದರು. ಇದೇನು ನಾವು ಸೃಷ್ಟಿ ಮಾಡಬೇಕು ಎಂದು ಕಡಿಮೆ ಕೊಡುತ್ತಿಲ್ಲ, ಇವತ್ತು ರೈತರಿಗೆ ಹೆಚ್ಚು ಕೊಡಬೇಕಂಬುದು ನಮ್ಮ ಆಸೆ ಕೂಡ ಇದೆ. ಆದರೆ ಸರ್ಕಾರದವರು ಗೈಡ್‌ಲೈನ್ಸ್ ಇಷ್ಯೂ ಮಾಡಿದ ಮೇಲೆ ಅದಕ್ಕೆ ತಕ್ಕಂತೆ ನಾವು ನಡೆದುಕೊಳ್ಳಬೇಕಾಗುತ್ತದೆ. ಅದೂ ಅಲ್ಲದೆ ಹೆಚ್ಚಿಗೆ ಮಾಡಿದ್ದೇವೆ. ಹಿಂದಿನ ಸರ್ಕಾರ ಮಾಡಿಲ್ಲ. ಕೇಂದ್ರ ಸರ್ಕಾರದ ಸರ್ಕ್ಯುಲರ್ ಅದೇ ರೀತಿ ಆಗಿದೆ. ಮತ್ತು ಇಷ್ಟು ಮಾಡಿದಮೇಲೂ ಕೂಡ ಇದು ಸರಿಯಲ್ಲ ಎಂದು ಹೇಳಿ ಒಪ್ಪಿಕೊಳ್ಳುತ್ತೇನೆ. ಅಥವಾ ಕೊಡತಕ್ಕ ಕಾಂಪೆನ್‌ಸೇಷನ್ ಸಫಿಷಿಯೆಂಟ್ ಇಲ್ಲ ಎಂದರೂ ಒಪ್ಪಿ ಕೊಳ್ಳುತ್ತೇನೆ. ಇದಕ್ಕೆ ಪರಿಹಾರ ಕಂಡುಹಿಡಿಯಬೇಕು. ಅಂದರೆ ಇನ್ನೂ ಹೆಚ್ಚಿಗೆ ಮಾಡಬೇಕು. ಇನ್‌ಕಂ ಲಿಮಿಟ್ ನಾವು 6400 ರೂಪಾಯಿ ಮಾಡಿದ್ದೇವೆ. ಹಿಂದಿಗಿಂತ ಜಾಸ್ತಿ ಮಾಡಿದ್ದೇವೆ. ಇದೆಲ್ಲವೂ ರೈತರ ಹಿತ ಗಮನದಲ್ಲಿಟ್ಟುಕೊಂಡು ಸಹಾಯ ಮಾಡಿದ್ದೇವೆ. ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಮಿನಿಮಂ 100 ರೂಪಾಯಿಗಿಂತ ಕಡಿಮೆ ಯಾರಿಗೂ ಕೊಡಬಾರದು ಎಂದು ಮಾಡಿದ್ದೇವೆ. 2 ರೂಪಾಯಿ 3 ರೂಪಾಯಿ ಎಂದು ಹೇಳುತ್ತಿದ್ದರಲ್ಲ ಅದನ್ನು ತಪ್ಪಿಸಬೇಕು ಎಂದು ಎಷ್ಟೇ ಡ್ಯಾಮೇಜ್ ಆದರೂ ಮಿನಿಮಂ 100 ರೂಪಾಯಿ ಕೊಡಬೇಕು, ಅದೂ ಕೂಡ ತಹಶೀಲ್ದಾರರೇ ನೇರವಾಗಿ ಊರಿಗೆ ಹೋಗಿ ಹಂಚಬೇಕು ಎಂದು ಟೆಲೆಕ್ಸ್ ಮೆಸೇಜ್ ಕೊಟ್ಟು ಇವತ್ತಿನ ದಿವಸ ಆದೇಶವನ್ನು ಜಾರಿಯಲ್ಲಿ ತಂದಿದ್ದೇವೆ. ಕೊನೆಯದಾಗಿ ಮುಜರಾಯಿ ಇಲಾಖೆ. ಈ ಮುಜರಾಯಿ ಇಲಾಖೆಯ ಮೇಲೆ ಕೆಲವು ಸದಸ್ಯರು ಮಾತನಾಡಿದ್ದಾರೆ.

ಶ್ರೀ ಬಿ. ಎಚ್. ಬನ್ನಿಕೋಡ್ : ರೈತರಿಗೆ ಸಾಲ ಸಿಗುತ್ತಿಲ್ಲ, ಎಂಟ್ರಿ ಇವೆ. ಪೋಕಳಿವೆ.. ಇದರ ಬಗ್ಗೆ ಪರಿಶೀಲನೆ ಮಾಡಿ. ಎಂಟ್ರಿಗಳನ್ನು ತೆಗೆದುಹಾಕಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ಹೇಳೋಣ ಆಮೇಲೆ. ಎಂಡೋಮೆಂಟ್ ಡಿಪಾರ್ಟ್‌ಮೆಂಟ್ ಬಗ್ಗೆ ಕೆಲವು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಕಾಮನ್ ಬಿಲ್ ತರಬೇಕೆಂದು ಹೇಳಿದ್ದಾರೆ. ಅದು ಬಹಳ ದಿವಸಗಳಿಂದ ಹಾಗೆಯೇ ಇದೆ. ಈಗಾಗಲೇ ಆ ಬಗ್ಗೆ ಒಂದು ಬಿಲ್ಲನ್ನು ರೆಡಿ ಮಾಡಿದ್ದೇವೆ. ಲಾ ಡಿಪಾರ್ಟ್‌ಮೆಂಟ್ ಕೂಡ ಅದನ್ನು ಸ್ಕ್ರುಟನಿ ಮಾಡಿದೆ. ಪುನ: ನಮಗೆ ಅವರು ಕಳುಹಿಸಿದ್ದಾರೆ. ಆ ಬಿಲ್ಲನ್ನು ರೆಡಿ ಮಾಡಿ ಈ ಅಧಿವೇಶನದಲ್ಲಿ ಅದನ್ನು ತರುವುದಕ್ಕೆ ಸಾಧ್ಯವಿಲ್ಲ ಮುಂದಿನ ಅಧಿವೇಶನದಲ್ಲಿ ಅದನ್ನು ತಂದು ರಾಜ್ಯದ ಎಲ್ಲಾ ಭಾಗಗಳಿಗೆ ಅನುಕೂಲವಾಗುವಂತಹ ಒಂದು ಕಾಮನ್ ಕೋಡ್ ಇರುವಂತೆ ಮಾಡಿ ಅದು ಬಾಂಬೆ ಕರ್ನಾಟಕ ಇರಬಹುದು, ಹೈದರಾಬಾದ್ ಕರ್ನಾಟಕ ಇರಬಹುದು ಹಳೆಯ ಮೈಸೂರು ಇರಬಹುದು. ಮದ್ರಾಸ್ ಸ್ಟೇಟಿಗೆ ಸೇರಿದ್ದ ಭಾಗವಿರಬಹುದು. ಅವುಗಳಿಗೆ ಒಂದೇ ಕಾನೂನು ತರಬೇಕು ಎನ್ನುವ ಒಂದು ನಿರ್ಣಯ ತೆಗೆದುಕೊಂಡಿದ್ದೇವೆ. ಅದರ ಪ್ರಕಾರ ಕೆಲಸ ಇವತ್ತು ನಡೆಯುತ್ತಿದೆ. ಎಲ್ಲಕ್ಕಿಂತ ಮಹತ್ವವಾದ ಒಂದು ಯೋಜನೆ ಏನೆಂದರೆ ಅದು ತಮಗೆ ಗೊತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಬಜೆಟ್ ಸ್ಪೀಚ್‌ನಲ್ಲಿ ಸಹ ಹೇಳಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಸಚಿವರು ಮುಜರಾಯಿಗೆ ಸಂಬಂಧಪಟ್ಟಹಾಗೆ [illegible] [illegible] [illegible] ಹೇಳಿದಾರೆ. ಆ ಬಿಲ್ ತರುವುದಕ್ಕೆ / ಮುಂಚೆ

ಅದನ್ನು ರಿಲೀಸ್ ಮಾಡಿ ಎಲ್ಲಾ ಕಡೆಯಿಂದ ಡಿಸ್‌ಕಷನ್ ಮಾಡಿ ತರುತ್ತೇವೆಂದು ಹೇಳಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬಿಲ್ ತಯಾರು ಮಾಡಿ ಅದನ್ನು ಸರ್ಕ್ಯುಲೇಟ್ ಮಾಡಿ ಆಮೇಲೆ ಇನ್‌ವೇಟ್ ಮಾಡೋಣ. ಅದರ ಬಗ್ಗೆ ಚರ್ಚೆ ಮಾಡಿದರೆ ಅನುಕೂಲವಾಗುತ್ತದೋ ಅನಾನುಕೂಲವಾಗುತ್ತದೋ ಅದನ್ನು ಈಗಲೇ ಹೇಳುವುದಕ್ಕಾಗುವುದಿಲ್ಲ, ನಾವು ಏನಾದರೂ ಮಾಡಬೇಕೆಂದರೆ, ಸುಪ್ರೀಂಕೋರ್ಟ್ ಆದೇಶ ನೀಡಿದೆ. ಸುಪ್ರೀಂ ಕೋರ್ಟ್‌ನವರು ಹೇಳಿದ್ದಾರೆ. ಒಂದು ಕಾಮನ್ ಕೋಡ್ ಅಡಾಪ್ಟ್ ಮಾಡಿಕೊಳ್ಳುತ್ತೇವೆ. ಒಂದು ಭಾಗದಲ್ಲಿ ಒಂದು ತರಹ ಇನ್ನೊಂದು ಭಾಗದಲ್ಲಿ ಇನ್ನೊಂದು ತರಹ ಈ ರೀತಿ ತಾರತಮ್ಯವಿರಬಾರದು ಎನ್ನುವ ಬಗ್ಗೆ ಸುಪ್ರೀಂ ಕೋರ್ಟ್‌ನವರು ನಿರ್ದೇಶನ ಕೊಟ್ಟಿದ್ದಾರೆ. ಆ ರೀತಿ ನಾವು ನಡೆಯಬೇಕಾದರೆ ಈ ಕಾನೂನು ತರಬೇಕಾಗುತ್ತದೆ. ಮಹತ್ವದ ವಿಚಾರವನ್ನು ಹೇಳಬೇಕಾದರೆ, ಮಾನ್ಯ ಮುಖ್ಯಮಂತ್ರಿಗಳು ಒಂದು ವಿಚಾರವನ್ನು ಅನೌನ್ಸ್ ಮಾಡಿದ್ದಾರೆ. ಅದು ಆರಾಧನ ಸ್ಕೀಮ್. ಈಗಾಗಲೇ ಆ ಸ್ಕೀಮ್‌ನಲ್ಲಿ 2 ಲಕ್ಷದ 50 ಸಾವಿರ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಿದ್ದೇವೆ.

ಹಣ ಆಗಲೇ ಹೋಗಿದೆ. ಉಳಿದಂತಹ ಹಣ 3 ಕೋಟಿ 75 ಲಕ್ಷ ಬಿಡುಗಡೆಬೇಕಾಗಿದೆ. ಒಟ್ಟು ಇದಕ್ಕಾಗಿ 5 ಕೋಟಿ ರೂಪಾಯಿ ಹಣವನ್ನು ಒಂದು ವರ್ಷದಲ್ಲಿ ಖರ್ಚು ಮಾಡತಕ್ಕ ಒಂದು ಯೋಜನೆಯನ್ನುಹಾಕಿಕೊಂಡಿದ್ದೇವೆ. ಇದರಿಂದ ಬಡವರ ಓಣಿಗಳಲ್ಲಿರತಕ್ಕ ಗುಡಿಸಲುಗಳಲ್ಲಿರತಕ್ಕ ಸಣ್ಣ ಪುಟ್ಟ ದೇವಾಲಯಗಳ ಜೀರ್ಣೋದ್ಧಾರಕ್ಕೆ ಕೊಡಲಾಗುತ್ತದೆ. ಈ ರೀತಿ ಹಣವನ್ನು ಅವರಿಗೆ ಕೊಡುವುದರಿಂದ ಆ ಬಡವರು ಅಲ್ಲಿ ಹೋಗಿ ಕೂಡಲಿಕ್ಕೆ ಸಹ ಜಾಗ ಆಗುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ದೇವರ ಬಗ್ಗೆ ರಾಜಕಾರಣ ಮಾಡಿದ್ದಾರೆ. ಬಡವರ ದೇವರು ದೊಡ್ಡವರ ದೇವರು ಎಂದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬಡವರ ಓಣಿಯಲ್ಲಿರತಕ್ಕ ದೇವರು ಎಂದು ಹೇಳಿದ್ದೇನೆ. ಮುಜರಾಯಿ ಇಲಾಖೆಯವರು ಇಲ್ಲಿಯವರೆಗೆ ಇಂತಹ ಓಣಿಗಳಲ್ಲಿರತಕ್ಕ ದೇವಾಲಯಗಳಿಗೆ 10 ಪೈಸೆ ಸಹ ಅವರಿಗೆ ಕೊಟ್ಟಿಲ್ಲ. ಈವೊಂದು ಸ್ಕೀಮ್‌ನಲ್ಲಿ ಬಡವರು ಓಣಿ ಅಂದರೆ ಎಲ್ಲರೂ ಬರುತ್ತಾರೆ. ಯಾರು ಬಡವರು ಇರುತ್ತಾರೆ. ಅವರ ಓಣಿಗಳಲ್ಲಿರತಕ್ಕ ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ 5 ಕೋಟಿ ರೂಪಾಯಿ ಯೋಜನೆ ಇಟ್ಟುಕೊಂಡಿರುವುದು ಬಹುಶ: ಇದೊಂದು ಐತಿಹಾಸಿಕ ಯೋಜನೆಯೆಂದು ನಾನು ಭಾವಿಸುತ್ತೇನೆ. ಇದುವರೆಗೆ ಈ ಬಗ್ಗೆ ಯಾರೂ ಕೂಡ ಗಮನ ಕೊಟ್ಟಿರಲಿಲ್ಲ, ಯಾರೂ ಕೂಡ ಈ ಕಡೆಗೆ ನೋಡೇ ಇರಲಿಲ್ಲ, ನಾವು ಈ ಕಡೆಗೆ ಗಮನಹರಿಸಿ ಹಣವನ್ನು ಸಹ ರಿಲೀಸ್ ಮಾಡಿದ್ದೇವೆ. ತಾವು ನೋಡಬಹುದು. ನಾನು ರಿಲೀಸ್ ಮಾಡದೇ ಮಾತನಾಡುವುದಿಲ್ಲ, ಅದನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ. ಉಳಿದ 3 ಕೋಟಿ 75 ಲಕ್ಷ ರೂಪಾಯಿ ಹಣವನ್ನು ರಿಲೀಸ್ ಮಾಡಬೇಕಾಗಿದೆ.

ಶ್ರೀ ಆರ್. ವಿ. ದೇಶಪಾಂಡೆ : ಹಣವನ್ನು ರಿಲೀಸ್ ಮಾಡಿದ್ದೀರಿ ಸಂತೋಷ. ಒಳ್ಳೆಯ ಸ್ಕೀಮ್ ಇದೆ ಬಹಳ ಸಂತೋಷ. ಆದರೆ [illegible]

ಏನು ಈ ಗ್ರಾಂಟನ್ನು ಕೊಡುತ್ತೀರಿ ಅದನ್ನು ಯಾವ ಪ್ರಕಾರ ಡಿಸ್ಟ್ರಿಬ್ಯುಷನ್ ಮಾಡಲಾಗುತ್ತದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಜಿಲ್ಲಾಮಟ್ಟದಲ್ಲಿ ಒಂದು ಕಮಿಟಿ ಇರುತ್ತದೆ. ತಾಲ್ಲೂಕುಮಟ್ಟದಲ್ಲಿ ಒಂದು ಕಮಿಟಿ ಇರುತ್ತದೆ. ಕಾನೂನು ಪ್ರಕಾರ ಮಾಡಬೇಕೆಂದು ಇನ್ಸ್‌ಸ್ಟ್ರಕ್ಷನ್ ಕೊಟ್ಟಿದ್ದೇವೆ. ನಾರ್ಮ್ಸ್ ಪ್ರಕಾರ ರಿಪೇರಿಗಾಗಲೀ, ರಿನೋವೇಷನ್‌ಗಾಗಲಿ ಈ ಎಲ್ಲ ಕೆಲಸಗಳಿಗೆ ಹಣವನ್ನು ತೆಗೆದುಕೊಳ್ಳುತ್ತಾರೆ. ಜನರಲ್ ಆಗಿ ಇವತ್ತು 1ಕೋಟಿ 20 ಲಕ್ಷ ರೂಪಾಯಿಗಳನ್ನು ಮುಜರಾಯಿ ಇಲಾಖೆಯಿಂದ ರಿಪೇರಿ ಮಾಡುವುದಕ್ಕೆ ರಿನೋವೇಷನ್‌ಗಾಗಿ ಹಣವನ್ನು ಕೊಟ್ಟಿದ್ದೇವೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಮಂತ್ರಿಗಳಿಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ಹಣವನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆ ಹಣವನ್ನು ಹಂಚಲಿಕ್ಕೆ ಒಂದು ಕಮಿಟಿಯನ್ನು ಸಹ ಮಾಡಲಾಗಿದೆಯೆಂದು ಹೇಳಿದರು. ಆ ಹಣವನ್ನು ಪ್ರತಿಯೊಂದು ತಾಲ್ಲೂಕಿಗೂ ಹಂಚಿಕೆ ಮಾಡಿದರೆ ಸುಮಾರು 15ರಿಂದ 20 ಸಾವಿರ ಬರುತ್ತದೆ.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ : ಉಳಿಕೆ ಹಣ 3 ಕೋಟಿ 75 ಲಕ್ಷ ರಿಲೀಸ್ ಆದರೆ ಹೆಚ್ಚಾಗುತ್ತದೆ. ನೀವು ಅಪ್ಲಿಕೇಷನ್ ಹಾಗೂ ಮ್ಯಾಪ್ ಹಿಡಿದುಕೊಂಡು ಇಲ್ಲಿಗೆ ಬರುವುದು ಬೇಡವೆಂದು ಜಿಲ್ಲಾಧಿಕಾರಿಗಳಿಗೆ ನಾವು ಹಣವನ್ನು ಕೊಟ್ಟಿದ್ದೇವೆ. ಈ ರೀತಿಯಾದ ಪ್ರಗತಿಪರವಾದ ಕಾರ್ಯಕ್ರಮಗಳನ್ನು ನಾವು ಮಾಡುತ್ತಿದ್ದೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಟ್ರಸ್ಟ್ ದೇವಾಲಯಗಳಿಗೆ ಕೊಡತಕ್ಕ ಹಣ ಕೇವಲ ಒಂದು ಕೋಟಿ ರೂಪಾಯಿ ಮಾತ್ರ ಇದೆ. ಅದು ಸಾಕಾಗುವುದಿಲ್ಲ ಅದನ್ನು ಸ್ವಲ್ಪ ಹೆಚ್ಚಿಗೆ ಮಾಡಬೇಕು ಕನಿಷ್ಠಪಕ್ಷ ಅದನ್ನು ನಾಲ್ಕು ಕೋಟಿಯಾದರೂ ಮಾಡಿ.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ: ಅದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ ಈ ರೀತಿಯಾಗಿ ಪ್ರಗತಿಪರವಾದ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಮಾನ್ಯ ಸದಸ್ಯರಾದ ಶಿವರಾಮೇಗೌಡರು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕು ಮತ್ತು ನಾಗಮಂಗಲ ತಾಲ್ಲೂಕುಗಳಲ್ಲಿ ದೇವಾಲಯದ ತಸ್ದಿಕ್ ಹಣವನ್ನು ಮಿಸ್ ಅಪ್ರೋಪ್ರಿಯೇಷನ್ ಮಾಡಿದ್ದಾರೆಂದು ನನ್ನ ಗಮನಕ್ಕೆ ತಂದಿದ್ದಾರೆ. ಅದರ ಬಗ್ಗೆ ವಿಭಾಗಾಧಿಕಾರಿಗಳು ಒಂದು ರಿಪೋರ್ಟ್ ಸಹ ಕಳುಹಿಸಿದ್ದಾರೆ. ಸುಮಾರು 53 ಲಕ್ಷ ರೂಪಾಯಿ ತಸ್ದಿಕೆ ಹಣವನ್ನು ಹೆಚ್ಚು ಕಡಿಮೆ ಮಾಡಿದ್ದಾರೆಂದು ಹೇಳಿದ್ದಾರೆ. ಇದರಲ್ಲಿ ಯಾರು ತಪ್ಪಿತಸ್ಥರು ಇದಕ್ಕೆ ಯಾರ್‍ಯಾರು ರೆಸ್ಪಾನ್ಸಿಬಲಿಟಿ ಇದ್ದಾರೆನ್ನುವುದನ್ನು ಕಂಡಿಹಿಡಿಯುವುದಕ್ಕಾಗಿ ಒಂದು ಎನ್‌ಕ್ವಯಿರಿಯನ್ನು ಮಾಡಿಸಬೇಕೆಂದು ಕೇಳಿಕೊಂಡಿದ್ದಾರೆ. ಅದರ ಬಗ್ಗೆ ಸಿ.ಓ.ಡಿ ಎನ್‌ಕ್ವಯಿರಿ ಮಾಡಿಸಲಿಕ್ಕೆ ನಾನು ಒಪ್ಪಿದ್ದೇನೆ. ನಾನು ತಕ್ಷಣ ಹೊಮ್ ಮಿನಿಸ್ಟರ್‌ಗೆ ಬರೆದು ಯಾರು ತಪ್ಪಿತಸ್ಥರು ಇದ್ದಾರೆ ಅವರಿಗೆ ಶಿಕ್ಷೆ ಕೊಡಬೇಕೆನ್ನುವ ಉದ್ದೇಶದಿಂದ ಎನ್‌ಕ್ವಯಿರಿ ಮಾಡಿಸಲಾಗುತ್ತದೆ. ಯಾರಿಗೂ ರಕ್ಷಣೆ ಕೊಡಬೇಕೆನ್ನುವ ಉದ್ದೇಶ ನಮಗಿಲ್ಲ, ಅಂತಹವರಿಗೆ ನಾವು ಬೆಂಬಲವನ್ನು ಸಹ ಕೊಡುವುದಿಲ್ಲ, ಅದರ ಬಗ್ಗೆ ಸಿ.ಓ.ಡಿ. ಎನ್‌ಕ್ವಯಿರಿ ಆದಮೇಲೆ ಯಾರು ತಪ್ಪಿಸ್ಥರು ಇದ್ದಾರೆ ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆ. ಈ ರೀತಿಯಾಗಿ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ರೈತರಿಗೆ ಅನುಕೂಲ ಮಾಡುವಂತಹ ಕೆಲಸವನ್ನು [illegible] ಕೆಲಸವನು ತಾವೆಲ್ಲರೂ

ಮೆಚ್ಚಿಕೊಂಡಿದ್ದೀರಿ ನನ್ನ ಡಿಮಾಂಡ್‌ಗಳಿಗೆ ತಾವುಗಳೆಲ್ಲರೂ ಸಪೋರ್ಟ್ ಮಾಡುತ್ತೀರಿ ಎಂದು ನಾನು ತಿಳಿದು ಕೊಂಡಿದ್ದೇನೆ.

ಶ್ರೀ ಸಿ. ಬೈರೇಗೌಡ : ನಾನೊಂದು ವಿಚಾರವನ್ನು ಸಿ.ಓ.ಡಿ. ಎನ್‌ಕ್ವಯಿರಿ ಮಾಡಿಸಬೇಕೆಂದು ತಮಗೆ ಕೊಟ್ಟಿದ್ದೆ

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ : ತಾವೊಂದು ಮಿನಿಟ್ಸ್ ಕೊಟ್ಟಿದ್ದೀರಿ ಎನ್‌ಕ್ವಯಿರಿ ಮಾಡಿಸಬೇಕಾದರೆ ಯಾರದಾದರೂ ಒಂದು ರುಜು ಬೇಕು. ಫೈಲು ಬೇಕು ಅದನ್ನು ನಾನು ಎಕ್ಸಾಮಿನ್ ಮಾಡುತ್ತೇನೆ. ಮಾನ್ಯ ಶಿವರಾಮೇಗೌಡರು ಕೊಟ್ಟಿದ್ದಕ್ಕೆ ವಿಭಾಗಾಧಿಕಾರಿಗಳವರ ರಿಪೋರ್ಟ್ ಇದೆ. ಆದ್ದರಿಂದ ಅದನ್ನು ಎನ್‌ಕ್ವಯಿರಿ ಮಾಡಲಿಕ್ಕೆ ಸಾಧ್ಯವಾಗುತ್ತದೆ.

ಶ್ರೀ ಸಿ. ಬೈರೇಗೌಡ : ನಾನು ಕೊಟ್ಟಿರುವುದನ್ನು ವಾಪಸ್ಸು ಕೊಟ್ಟರೆ ಈಗಾಲೇ ನಾನೇ ರುಜು ಮಾಡಿ ಕೊಡುತ್ತೇನೆ. ಅದನ್ನು ಸಿ.ಓ.ಡಿ.ಗೆ ಕಳುಹಿಸಿ

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ : ಅದನ್ನು ನೋಡುತ್ತೇನೆ. ಇನ್ನೊಂದು ವಿಚಾರ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಭೂಮಿಯನ್ನು ಗ್ರಾಂಟ್ ಮಾಡಿ ಕೊಟ್ಟಿದ್ದೇವೆ. ಅಥವಾ ಸರ್‌ಪ್ಲಸ್ ಲ್ಯಾಂಡನ್ನು ಡಿಸ್ಟ್ರಿಬ್ಯೂಟ್ ಮಾಡಿದ್ದೇವೆ. ಅಂತಹ ಜಮೀನುಗಳನ್ನು ಇವತ್ತು ಬೇರೆಯವರು ಆಕ್ರಮ ಮಾಡತಕ್ಕದ್ದು ಅಥವಾ ಒತ್ತುವರಿ ಮಾಡತಕ್ಕ ಕೆಲಸ ಮಾಡುತ್ತಿದ್ದಾರೆ. ಅದರ ಬಗ್ಗೆ ಈಗಾಗಲೇ ನಾನು ಹೋಮ್ ಮಿನಿಸ್ಟರ್ ಜೊತೆಯಲ್ಲಿ ಕೂಡ ಚರ್ಚೆ ಮಾಡಿದ್ದೇನೆ. ಎಸ್.ಸಿ ಎಸ್.ಟಿ ವರಿಗೆ ಪ್ರಿವೆನ್ಸ್‌ನ್ ಆಫ್ ಅಟ್ರೂಸಿಟಿ ಆಕ್ಟ್ 1980 ಈವೊಂದು ಕಾನೂನಿನ ಅನ್ವಯ ಸೆಕ್ಷನ್ 3 ಸಬ್‌ಕ್ಲಾಸ್ ಒನ್ ಟು ಫೈವ್ ಆ ಪ್ರಕಾರ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ಗೃಹಸಚಿವರನ್ನು ಕೇಳಿಕೊಂಡಿದ್ದೇನೆ. ಅವರು ಸುತ್ತೋಲೆಯನ್ನು ಕಳುಹಿಸುತ್ತಾರೆ. ಮತ್ತು ಸಿವಿಲ್ ಎನ್‌ಫೋರ್ಸ್‌ಮೆಂಟ್ ಸೆಲ್ ಈ ಕೆಲಸ ಮಾಡುತ್ತದೆ. ಇದರಿಂದ ಬಡ ರೈತರ ಗೋಳು ತಪ್ಪಬಹುದು ಎನ್ನತಕ್ಕ ಭಾವನೆಯಿಂದ ಈ ಕಾನೂನನ್ನು ಜಾರಿಯಲ್ಲಿ ತಂದು ಅವರಿಗೆ ಸಹಾಯ ಮಾಡುವ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಹೀಗೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಅವುಗಳನ್ನು ಜಾರಿಯಲ್ಲಿ ತಂದಿದ್ದೇವೆ. ತಾವುಗಳೆಲ್ಲರೂ ಒಮ್ಮನಸ್ಸಿನಿಂದ ನನ್ನ ಬೇಡಿಕೆಗಳಿಗೆ ಒಪ್ಪಿಗೆ ಕೊಡುತ್ತೀರಿ ಎಂದು ತಿಳಿದು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೇ ಮಾನ್ಯ ಕಂದಾಯ ಸಚಿವರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ರೆಂಟ್ ಕಂಟ್ರೋಲ್ ಆಕ್ಟ್ ಬಗ್ಗೆ ಪ್ರಸ್ತಾಪ ಮಾಡಲಿಲ್ಲ. ಕಾರಣ ಇಷ್ಟೆ ರೆಂಟ್ ಕಂಟ್ರೋಲ್ ಆಕ್ಟನಲ್ಲಿ ಅನೇಕ ಲೋಪದೋಷಗಳಿವೆ. ಮಾಜಿ ವಿಧಾನಸಭಾ ಸದಸ್ಯರಾದ ಶ್ರೀಮತಿ ಪ್ರಮೀಳಾವರ ಕಮಿಟಿ ಈ ಬಗ್ಗೆ ಒಂದು ವರದಿಯನ್ನು ಕೊಟ್ಟಿದೆ. ಇರತಕ್ಕ ಲೋಪದೋಷಗಳನ್ನು ಸಹ ಸರಿಪಡಿಸುವುದಕ್ಕೆ ಸಹ ಸಲಹೆ ಮಾಡಿದೆ. ಮಹಾರಾಷ್ಟ್ರ ರಾಜ್ಯದಲ್ಲಿರುವಂತೆ ಯಾರು ಒಂದು ಮನೆಯಲ್ಲಿ 12 ವರ್ಷಗಳ ಕಾಲ ಬಾಡಿಗೆಯಲ್ಲಿರುತ್ತಾರೆ ಅವರಿಗೆ ಆ ಮನೆ ಸೇರಬೇಕೆಂದು ಇದೆ. ಅದೇರೀತಿಯಲ್ಲಿ ಇಲ್ಲೂ ಮಾಡಬೇಕೆಂದು ಹೇಳಿದ್ದಾರೆ. ಅವರೇನು ಆ ರೀತಿ ರೆಕಮೆಂಡೇಷನ್ ಮಾಡಿದ್ದಾರೆ ಅದರ ಬಗ್ಗೆ ಸರ್ಕಾರದವರ ಅಭಿಪ್ರಾಯವೇನು?

ಶ್ರೀ ಎಂ.ಪಿ. ವೆಂಕಟೇಶ್ : ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಕಂದಾಯ ಸಚಿವರು ಮತ್ತು ಕಂದಾಯ ಇಲಾಖೆಯ ಕಾರ್ಯದರ್ಶಿಗಳು ರೈತರಿಗೆ ಉತ್ತಮವಾದ ಕೆಲಸಗಳನ್ನು ಮಾಡಿದ್ದಾರೆ. ಸಂಬಂಧಪಟ್ಟ ಆದೇಶಗಳನ್ನು ಸಹ ಹೊರಡಿಸಿದ್ದಾರೆ ಅದಕ್ಕೆ ನಾನು ಅಬಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಒಂದು ವಿಚಾರವನ್ನು ಗಮನದಲ್ಲಿಟ್ಟು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಪಟೇಲರುಗಳಿಗೆ ಏನು ಮಾಸಾಶನ ಕೊಡುತ್ತಿದ್ದಾರೆ. ಅದನ್ನು ಕೊಡುವಾಗ ಆಸ್ತಿ ಅವರ ಹೆಸರಿನಲ್ಲಿರುತ್ತದೆ. ಸಾಮಾನ್ಯವಾಗಿ ಎಲ್ಲಾ ಆಸ್ತಿ ಪಟೇಲರುಗಳ ಹೆಸರಿನಲ್ಲಿರುತ್ತದೆ. ಆಸ್ತಿ ಅವರ ಹೆಸರಿನಲ್ಲಿರುವುದರಿಂದ ಅವರಿಗೆ ಹೆಚ್ಚಿಗೆ ಆದಾಯವಿದೆಯೆಂದು ಹೇಳಿ ಪಟೇಲರುಗಳಿಗೆ ಮಾಸಾಶನ ಕೊಡುತ್ತಿಲ್ಲ. ನನ್ನ ಕ್ಷೇತ್ರದಲ್ಲಿ 200 ಜನರಿಗೆ ಮಾಸಾಶನ ಕೊಡುತ್ತಿಲ್ಲ. ಮೈಸೂರು ಜಿಲ್ಲೆಯಲ್ಲಿ ಎಲ್ಲಾ ಇದೇ ರೀತಿ ಇದೆ. ಅವರ ಹೆಸರಿನಲ್ಲಿರತಕ್ಕ ಆಸ್ತಿಯನ್ನು ಪರಿಗಣಿಸದೆ ಪಟೇಲರುಗಳಿಗೆ ಮಾಸಾಶನವನ್ನು ಕೊಡಬೇಕೆಮಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ನಾರಾಯಣ : ಹಿಂದೆ ನಾವು ಈ ಲಂಬಾಣಿ ತಾಂಡಾಗಳನ್ನು ಪಕ್ಕಾ ಗ್ರಾಮಗಳನ್ನಾಗಿ ಮಾಡಬೇಕೆಂದು ಹೇಳಿದ್ದೆವು. ಅದೇರೀತಿ ಗೊಲ್ಲರ ಹಟ್ಟಿಗಳನ್ನು ಸಹ ಪಕ್ಕಾ ಗ್ರಾಮಗಳನ್ನಾಗಿ ಮಾಡಬೇಕೆಂದು ಹೇಳಿದ್ದೆವು. 1991ರ ಸೆನ್ಸಸ್ ಆದಮೇಲೆ ಜೂನ್ ನಂತರ ಮಾಡುತ್ತೇವೆ ಎಂದು ಹೇಳಿದ್ದರು. ಇದರ ಬಗ್ಗೆ ಏನು ಮಾಡಿದ್ದೀರಿ ಎಂದು ದಯವಿಟ್ಟು ಹೇಳಬೇಕು.

ಶ್ರೀ ಶಫಿ ಅಹಮದ್ : ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಬಡವರಿಗೆ ಸೈಟುಗಳನ್ನು ವಿತರಣೆ ಮಾಡುವ ಬಗ್ಗೆ ಎಮರ್ಜನ್ಸಿ ಅಕ್ವಿಸಿಷನ್ ಕ್ಲಾಸ್‌ನ್ನು ಅಮೆಂಡ್‌ಮೆಂಟ್ ಮಾಡಿ ಸೂಕ್ತ ಕ್ರಮ ಕೈಗೊಂಡರೆ ಒಳ್ಳೆಯದು. ಮತ್ತು ಲ್ಯಾಂಡ್ ಪರ್ಚೇಸ್ ಮಾಡುವ ಬಗ್ಗೆ ಹೌಸಿಂಗ್ ಬೋರ್ಡ್‌ನವರು ಏನು ಕಾರ್ಯಕ್ರಮ ಕೈಗೊಂಡಿದ್ದಾರೆ, ಅದೇರೀತಿ ನೆಗೋಷಿಯೇಟ್ ಮಾಡಿ ಅಕ್ವೈರ್ ಮಾಡುವುದರಲ್ಲಿ ಏನು ಗಮನಹರಿಸಿದ್ದೀರಿ?

ಶ್ರೀ ಬಿ.ಎಚ್. ಬನ್ನಿಕೋಡ್ : ಪೋಕಳ್ ಎಂಟ್ರಿ ಬಗ್ಗೆ ಹೇಳಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪೋಕಳ್ ಎಂಟ್ರಿ ಬಗ್ಗೆ ನಾನು ಸಂಬಂಧ ಪಟ್ಟ ಅಧಿಕಾರಿಗಳನ್ನು ಕರೆಸಿ ಅದನ್ನು ಮಾಡುವುದಕ್ಕೆ ಬರುತ್ತದೆಯೇ, ಲ್ಯಾಂಡ್ ರಿಫಾರ್ಮ್‌ನಿಂದ ತೊಂದರೆ ಆಗುವುದಿಲ್ಲ ಎನ್ನತಕ್ಕಂಥ ಭರವಸೆಯನ್ನು ಕೊಟ್ಟರೆ ಖಂಡಿತವಾಗಿ ಮಾಡಿಕೊಡುತ್ತೇನೆ. ಲ್ಯಾಂಡ್ ರಿಫಾರ್ಮ್ ಆಕ್ಟ್‌ಗೆ ವಿರುದ್ಧ ಆಗುತ್ತದೆ ಎಂದರೆ ಮಾಡುವುದಕ್ಕೆ ಆಗುವುದಿಲ್ಲ,

ಶ್ರೀ ವಾಟಾಳ್ ನಾಗರಾಜ್ : ಈ ಪೋಕಳ್ ಎಂಟ್ರಿ ಎಂದರೆ ಏನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬಾಂಬೆ ಕರ್ನಾಟಕದಲ್ಲಿ ಮರಾಠಿ ಭಾಷೆಯಲ್ಲಿ ಇತರೆ ಎಂದು ಕಾಲಮ್ ಇರುತ್ತದೆ. ಅದರ್ಸ್ ಅಂತ. ಇದಕ್ಕೆ ಆ ಭಾಷೆಯಲ್ಲಿ 'ಪೋಕಳ್' ಅಂತ ಇರುತ್ತದೆ. ಅಧ್ಯಕ್ಷರೇ, ಈಗಾಗಲೇ ಅನೇಕ ಪ್ರಶ್ನೆಗಳ ಬಗ್ಗೆ ನಾನು ಹೇಳಿದ್ದೇನೆ. ಮತ್ತು ಆದೇಶ ಕೂಡ ಹೊರಡಿಸಿದ್ದೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ಲಂಬಾಣಿ ತಾಂಡಾ ಮತ್ತು ಗೊಲ್ಲರ ಹಟ್ಟಿ ಬಗ್ಗೆ ಶ್ರೀ ನಾರಾಯಣ ಅವರು ಹೇಳಿದರು. ಈಗಾಗಲೇ ಅನೌನ್ಸ್ ಮಾಡಿದ್ದೇವೆ. ದೂರ ಮತ್ತು ಜನಸಂಖ್ಯೆ, ಇದರ ಆಧಾರದ ಮೇಲೆ ನಾವು ಹಂತಹಂತವಾಗಿ ಮಾಡುತ್ತೇವೆಂದು ಹೇಳಿದ್ದೇನೆ. ಆಮೇಲೆ ಪೆನ್‌ಶನ್ ಬಗ್ಗೆ ಹೇಳಿದ್ದೀರಿ. ಈಗಾಗಲೇ ನಾನು ಹೇಳಿದ್ದೇನೆ,

ತೋಟಿ, ತಳವಾರರು, ಗುಮಾಸ್ತರ ಬಗ್ಗೆ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಎಷ್ಟರಮಟ್ಟಿಗೆ...

ಶ್ರೀ ಎಂ.ವಿ. ವೆಂಕಟಪ್ಪ : ಇನ್‌ಕಮ್ ಜಾಸ್ತಿ ಇರುವ ಪಟೇಲರಿಗೆ ಕೊಡುತ್ತಿಲ್ಲ.

ಶ್ರೀ ಸಿ. ಭೈರೇಗೌಡ : ಪಟೇಲರು ಇದರೊಳಗೆ ಗುಮಾಸ್ತ ಪಟೇಲರು ಎಂದು ಸೇರಿಸಿ. ಹೋದ ಸಲ ಕೂಡ ಇದೇ ವಿಚಾರ ಬಂದಿತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದನ್ನು ಪರಿಶೀಲಿಸುತ್ತೇನೆ.

ಶ್ರೀ ಸಿ. ಭೈರೇಗೌಡ : ಇದು ಪರಿಶೀಲನೆಯಲ್ಲಿರುವುದು ಬೇಡ, ಮಾಡುತ್ತೇನೆ ಎಂದು ಹೇಳಿ. ದಯವಿಟ್ಟು ಇದಕ್ಕೆ ಆದಾಯದ ಮಿತಿ ಬೇಡ...

ಶ್ರೀಮತಿ ಮಲ್ಲಾಜಮ್ಮ : ಹರಿಜನ ಗಿರಿಜನರಿಗೆ ಸ್ಮಶಾನಗಳನ್ನು ಕೊಡುವ ವಿಚಾರದಲ್ಲಿ ಕೆಲವರು ಒತ್ತುವರಿ ಮಾಡಿಕೊಂಡಿದ್ದಾರೆ. ಅವರ ಬಗ್ಗೆ ಕಟ್ಟುನಿಟ್ಟಿನಿಂದ ತೀರ್ಮಾನ ತೆಗೆದುಕೊಳ್ಳಬೇಕು. ಯಾವರೀತಿ ಇತರೇ ಒತ್ತುವರಿಗಳನ್ನು ಸಕ್ರಮವಾಗುವ ಹಾಗೆ ನೀವು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಅದೇ ರೀತಿ ಇಲ್ಲಿ ತೆಗೆದುಕೊಂಡಿದ್ದೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ನಾನು ಹೇಳಿದ್ದೇನೆ, ನೀವು ಕೇಳಿಸಿಕೊಳ್ಳಲಿಲ್ಲ. ಎಸ್‌ಸಿ: ಎಸ್.ಟಿಗಳಿಗೆ ಸಂಬಂಧಪಟ್ಟಹಾಗೆ ಪ್ರಿವೆನ್‌ಷನ್ ಆಫ್ ಅಟ್ರಾಸಿಟಿ ಆಕ್ಟ್ ಏನಿದೆ, ಅದರ ಕೆಳಗಡೆ ಇದು ಎಸ್.ಸಿ.ಗಳಿಗೆ ಮಂಜೂರಾದಂಥ ಭೂಮಿ ಇರಬಹುದು, ಬರಿಯಲ್ ಗ್ರೌಂಡ್ ಇರಬಹುದು, ಅಂಗಡಿ ಇರಬಹುದು, ಅದೆಲ್ಲವೂ ಕೂಡ ಇದರಲ್ಲಿ ಇನ್‌ಕ್ಲೂಡ್ ಆಗುತ್ತದೆ. ಇದನ್ನು ಸಿವಿಲ್ ಎನ್‌ಫೋರ್ಸ್‌ಮೆಂಟ್ ಸೆಲ್‌ಗೆ ಒಪ್ಪಿಸಿ ಎಲ್ಲೆಲ್ಲಿ ಹೀಗೆ ಅಕ್ರಮ ಮಾಡಿಕೊಂಡಿದ್ದಾರೆ, ಅವುಗಳನ್ನು ಬಿಡಿಸತಕ್ಕಂಥ ಒಂದು ಪ್ರಯತ್ನ, ಅದರ ಮುಖಾಂತರ ನಡೆಯುತ್ತಿದೆ. ಎರಡನೇಯದಾಗಿ, ರೆಂಟ್ ಕಂಟ್ರೋಲ್ ಆಕ್ಟ್ ಬಗ್ಗೆ ಶ್ರೀ ವೆಂಕಟಪ್ಪನವರು ಹೇಳಿದ್ದಾರೆ. ಈಗಾಗಲೇ ಪ್ರಮೀಳಾ ಕಮಿಟಿ ರಿಪೋರ್ಟ್ ನಮ್ಮಮುಂದಿದೆ. ಇದನ್ನು ಹಿಂದೆ ಜಾಯಿಂಟ್ ಸೆಲೆಕ್ಟ್ ಕಮಿಟಿ ಮಾಡಿ, ಅದರ ಮುಂದೆ ಇದು ಹೋಗಿ ಅವರು ಒಪ್ಪಿಕೊಂಡಿಲ್ಲ. ಇದನ್ನು ಯಾವರೀತಿ ತಿದ್ದುಪಡಿ ಮಾಡಬೇಕೆಂದು ನೋಡೋಣ. ಆದರೆ ಈಗ ಇದ್ದವರಿಗೇ ಮನೆ ವಹಿಸಿಕೊಡಬೇಕು ಎನ್ನತಕ್ಕಂಥಾದ್ದನ್ನು ಮಾಡಿದರೆ ಎಷ್ಟರಮಟ್ಟಿಗೆ ಜನ ಒಪ್ಪುತ್ತಾರೆ. ಬಿಡುತ್ತಾರೆ ಎನ್ನತಕ್ಕದ್ದನ್ನು ನಾವು ನೋಡಬೇಕಾಗುತ್ತದೆ. ಎಲ್ಲರೂ ಕೂಡ, ವಿರೋಧ ಪಕ್ಷದವರು ಮತ್ತು ಇತರ ಸದಸ್ಯರುಗಳು ಸೇರಿ ಇದರ ಬಗ್ಗೆ ಒಂದು ದೀರ್ಘವಾದ ಚಿಂತನೆ ಮಾಡಿ ಅದನ್ನು ಮಾಡಬೇಕಾಗುತ್ತದೆಯೇ ಹೊರತಾಗಿ ಸುಮ್ಮನೆ ಇದನ್ನು ಅವರಿಗೇ ಕೊಡುತ್ತೇವೆ ಎಂದು ಹೇಳಿದರೆ ಅದನ್ನು ಯಾರೂ ಕೂಡ ಒಪ್ಪುವುದಿಲ್ಲ.

ಮಾನ್ಯ ಸಣ್ಣ ಉಳಿತಾಯ ರಾಜ್ಯಮಂತ್ರಿಗಳಿಂದ ಉತ್ತರ

ಶ್ರೀ ಟಿ.ಎಂ. ಮಂಜುನಾಥ್ : (ಸಣ್ಣ ಉಳಿತಾಯ ರಾಜ್ಯ ಮಂತ್ರಿಗಳು) ಮಾನ್ಯ ಅಧ್ಯಕ್ಷಣೀಯವರೇ, ತಮ್ಮ ಮುಂದಿರತಕ್ಕಂಥ ಬೇಡಿಕೆಗಳು ರಾಷ್ಟ್ರೀಯ ಸಣ್ಣ ಉಳಿತಾಯದಿಂದ ನಮ್ಮ ರಾಜ್ಯದ ಬೊಕ್ಕಸಕ್ಕೆ ಸುಮಾರು ಮೂರನೇ ಒಂದು ಭಾಗದಷ್ಟು ಆದಾಯವನ್ನು ತೆಗೆದುಕೊಂಡು ಬರುವಂತಾದ್ದು. ಈ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಬಡ್ಡಿ ದರವನ್ನು ಹೆಚ್ಚು ಮಾಡಲು ಕೇಂದ್ರ ಸರ್ಕಾರದಲ್ಲಿ ಮಾತುಕತೆ ಮುಂದುವರಿಸಲಿದ್ದು ಅವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತಾ ಈ

ಬೇಡಿಕೆಗಳನ್ನು ಸರ್ವಾನುಮತದಿಂದ ಪಾಸು ಮಾಡಿ ಕೊಡಬೇಕೆಂದು ನಾನು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಮುಖ್ಯಮಂತ್ರಿಗಳಿಂದ ಉತ್ತರ

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಮಾನ್ಯ ಸದಸ್ಯರುಗಳು ಹಲವಾರು ಬೇಡಿಕೆಗಳ ಮೇಲೆ ಮಾತನಾಡುತ್ತಾ ನನ್ನ ಬೇಡಿಕೆಗಳ ಬಗ್ಗೆ ಕೂಡ ಅಲ್ಲಲ್ಲಿ ಒಂದೊಂದು ಪ್ರಸ್ತಾಪ ಮಾಡಿರುವುದನ್ನು ನಾನು ಕಂಡೆ. ಇದರಲ್ಲಿ ಅವಿಶ್ವಾಸ ನಿರ್ಣಯ ಏನು ಮಂಡನೆಯಾಗಿತ್ತು ಆಗಲೇ ಹೆಚ್ಚಾಗಿ ಜನರಲ್ ಅಡ್ಮಿನಿಸ್ಟ್ರೇಷನ್ ಮತ್ತೊಂದು ಮಗದೊಂದು ಟ್ರಾನ್ಸ್‌ಫರ್ಸ್ ಇತ್ಯಾದಿ ವಿಚಾರಗಳ ಬಗ್ಗೆ ಎಲ್ಲಾ ಮಾತನಾಡಿದ್ದೀರಿ. ನಾನು ಅದರ ಬಗ್ಗೆ ನಾನು ಕೂಡ ವಿವರವಾದ ಉತ್ತರವನ್ನು ಕೊಟ್ಟಿದ್ದೇನೆ. ಒಂದು ವಿಚಾರವನ್ನು ಈ ಸಂದರ್ಭದಲ್ಲಿ ಪ್ರಸ್ತಾಪಮಾಡುತ್ತೇನೆ. ತಮ್ಮ ಗಮನಕ್ಕೆ ತರುವುದಾದರೆ ಈ ಸರ್ಕಾರ ಏನು ಹಲವಾರು ಕಾರ್ಯಕ್ರಮಗಳನ್ನು ಜನತೆ ಮುಂದಿಟ್ಟು ಅವುಗಳನ್ನು ಜಾರಿಗೊಳಿಸತಕ್ಕಂಥ ವಿಚಾರವನ್ನು ಹಮ್ಮಿಕೊಂಡಿದೆ. ಮೂಲಭೂತವಾಗಿ ಜಾರಿ ಕೊಡತಕ್ಕಂಥ ವಿಚಾರದಲ್ಲಿ ಇನ್ನು ಕೆಲವು ಹೆಜ್ಜೆಗಳನ್ನು ಇಡಬೇಕೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಯಾವಕಾರ್ಯ ಕ್ರಮಗಳನ್ನು ನಾವು ರಾಜ್ಯಪಾಲರ ಭಾಷಣದ ಮುಖಾಂತರ ತದನಂತರ ಬಜೆಟ್ ಸ್ಪೀಚ್‌ಮುಖಾಂತರ ಪ್ರಸ್ತಾಪ ಮಾಡಿದ್ದೇವೆ. ಆ ಕಾರ್ಯಕ್ರಮಗಳನ್ನು ನಾವು ಅಕ್ಟೋಬರ್ ಮತ್ತು ನವೆಂಬರ್ ಈ ಎರಡು ತಿಂಗಳಲ್ಲಿ ಹೆಚ್ಚುಕಡಿಮೆ ಅವೆಲ್ಲವನ್ನೂ ಜಾರಿಗೊಳಿಸತಕ್ಕಂಥ ಪ್ರಯತ್ನದಲ್ಲಿ ಇದ್ದೇವೆ. ಈಗಾಗಲೇ ಕೆಲವನ್ನು ಜಾರಿಗೊಳಿಸಿದ್ದೇವೆ. ಇವತ್ತು ಅಪ್ರೋಪ್ರಿಯೇಷನ್ ಬಿಲ್ ಏನು ಪಾಸು ಮಾಡುತ್ತಿದ್ದೇವೆ ಅದರ ನಂತರ ಕಾರ್ಯಕ್ರಮ ಹಾಕಿಕೊಳ್ಳತಕ್ಕಂಥ ವಿಚಾರ ನಮ್ಮ ಮುಂದೆ ಇದೆ. ಕರ್ನಾಟಕ ರಾಜ್ಯದಲ್ಲಿ ಆಡಳಿತಕ್ಕೆ ಸಂಬಂಧಪಟ್ಟಿರತಕ್ಕಂಥ ವಿಚಾರದಲ್ಲಿ ಒಂದು ಮಾತನ್ನು ನಾನು ಹೇಳಬೇಕಾಗುತ್ತದೆ. ಆಡಳಿತವನ್ನು ಬಿಗಿ ಮಾಡತಕ್ಕಂಥ ವಿಚಾರದಲ್ಲಿ ಹೇಳಬೇಕೆಂದರೆ ಇಲ್ಲಿಯವರೆಗೆ ನಮಗೆ ಕಾನೂನು ಯಾವುದೂ ಇಲ್ಲ. ಎಕ್ಸೆಪ್ಟ್ ಸೆಂಡಿಂಗ್ ಸರ್ಕ್ಯುಲರ್ ಮತ್ತೊಂದು ಇದನ್ನು ಬಿಟ್ಟರೆ ಬೇರೆ ಯಾವುದು ಕೂಡ ರೆಸ್ಪಾನ್ಸಿಬಿಲಿಟಿ ಒಬ್ಬ ಆಫೀಸರ್ ಮೇಲೆ ಫಿಕ್ಸ್ ಮಾಡತಕ್ಕಂಥಾದ್ದು ಜವಾಬ್ದಾರಿ ನಿಗಧಿ ಮಾಡಿ ಜವಾಬ್ದಾರಿ ನಿರ್ವಹಿಸತಕ್ಕಂಥ ಅಧಿಕಾರ ನೋಡಿಕೊಳ್ಳತಕ್ಕಂಥ ಕಾನೂನು ಇಲ್ಲ. ಅದಕ್ಕೆ ಬಜೆಟ್ ಭಾಷಣದಲ್ಲಿ ಪ್ರಸ್ತಾಪ ಮಾಡಿದಂತೆ "ಪಂಚಸೂತ್ರ" ಒಂದು ಹೊಸ ಕಾನೂನನ್ನು ನಾವು ತರುತ್ತಿದ್ದೇವೆ ಎನ್ನತಕ್ಕಂಥ ಮಾತನ್ನು ನಾನು ಹೇಳಿದೆ, ಈಗ ಆ ಒಂದು ಮಸೂದೆ ಸಿದ್ಧವಾಗಿದೆ. ಇಡೀ ರಾಷ್ಟ್ರದಲ್ಲಿ ಯಾವುದೇ ರಾಜ್ಯಕ್ಕೆ ಹೋಲಿಸಿ ನೋಡಿದರೂ ಕೂಡ ಎಲ್ಲೂ ಇಂತಹ ಮಸೂದೆ ಆಗಿರತಕ್ಕಂಥಾದ್ದು ನಮ್ಮ ಗಮನಕ್ಕೆ ಬಂದಿಲ್ಲ. ಬೇರೆ ಎಲ್ಲಿಯಾದರೂ ಮಾಡಿದರೆ ಸಂತೋಷ ಪಡುತ್ತೇನೆ. ನಾವು 25-26 ಮತ್ತು 27ನೇ ತಾರೀಖಿಗೆ ಪುನಃ ಸೇರುತ್ತಿದ್ದೇವೆ. ಆಗ ಈ ಸದನದ ಒಪ್ಪಿಗೆಗೆ ತಮ್ಮ ಒಪ್ಪಿಗೆಗೆ ಈ ಒಂದು ಮಸೂದೆಯನ್ನು ತರುತ್ತೇವೆ. ಅದು ಬಂದ ಮೇಲೆ ನಾವು ಜರೂರಾಗಿ ಹಾಗೂ ಕಡ್ಡಾಯವಾಗಿ ಆಡಳಿತ ಯಂತ್ರವನ್ನು ಚುರುಕುಗೊಳಿಸತಕ್ಕಂಥಾದ್ದಕ್ಕೆ ಕ್ರಮ ಕೈಗೊಳ್ಳಲಿದ್ದೇವೆ. ನಾವು ಅವರಿಗೆ ಜವಾಬ್ದಾರಿ ಕೊಡತಕ್ಕಂಥಾದ್ದು ಅವರು ಅದರ ಪ್ರಕಾರ ನಿರ್ವಹಣೆ ಮಾಡಬೇಕು ಮಾಡದಿದ್ದರೆ ಏನು ಎನ್ನತಕ್ಕಂಥ ವಿಚಾರವನ್ನೂ ಕೂಡ ಅದರಲ್ಲಿ ನಮೂದು ಮಾಡಿ ಎಲ್ಲವನ್ನೂ ಕಾನೂನು ಚೌಕಟ್ಟಿನಲ್ಲಿ ತರುತ್ತಿದ್ದೇವೆ. ಇದರಿಂದ ಅಧಿಕಾರಿಗಳೂ ಕೂಡ ನಿರ್ದಿಷ್ಟವಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ,

ಯಾವ ಕೆಲಸವನ್ನು ಒಬ್ಬ ಅಧಿಕಾರಿ ಮಾಡಬೇಕೆಂಬ ವಿಚಾರದಲ್ಲಿ ನಿರ್ದಿಷ್ಟವಾದ ಜವಬ್ದಾರಿ ಕೊಡುವುದಕ್ಕೆ ನಮಗೆ ಅನುಕೂಲವಾಗುತ್ತದೆ. ಆ ಒಂದು ದೃಷ್ಟಿಯಿಂದ ಪಂಚಸೂತ್ರ ಎಂಬ ಕಾನೂನನ್ನು ತರುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಇನ್ನು ಹರಿಜನ ಗಿರಿಜನರಿಗೆ ಸಂಬಂಧಪಟ್ಟಂತೆ ಅಲ್ಪಸಂಖ್ಯಾತರಿಗೆ ಸಂಬಂಧಪಟ್ಟಂತೆ, ಅವರ ಸಮಮಸ್ಯೆಗಳಿಗೆ ಪರಿಹಾರಕೆಂದು ಹಿಡಿಯತಕ್ಕ ವಿಚಾರದಲ್ಲಿ, ಬಜೆಟ್ ಮೇಲೆ ನಡೆದ ಜನರಲ್ ಡಿಸ್ಕಷನ್‌ಗೆ ಉತ್ತರ ಕೊಡತಕ್ಕಂಥ ಸಂಧರ್ಭದಲ್ಲಿ ಹಾಗೂ ಇನ್ನೂ ಅನೇಕ ಸಂದರ್ಭಗಳಲ್ಲಿ ಬೆಳಕನ್ನು ಚೆಲ್ಲತಕ್ಕ ಪ್ರಯತ್ನ ಮಾಡಿದ್ದೇನೆ. ಈಗ ಒಂದು ಮಾತನ್ನು ಸ್ಪಷ್ಟಪಡಿಸಬೇಕು. ಸಮಾಜದಲ್ಲಿ ಶತಶತಮಾನಗಳಿಂದ ತುಳಿತಕ್ಕೆ ಸಿಕ್ಕಿ ಜರ್ಝರಿತವಾಗಿರತಕ್ಕ ಈ ವರ್ಗಗಳು ಏನಿದ್ದಾವೆ, ಈ ವರ್ಗಗಳ ಹಕ್ಕುಗಳ ರಕ್ಷಣೆಗೋಸ್ಕರ, ಅವರಿಗೆ ಸೌಲಭ್ಯಗಳನ್ನು ಕೊಡುವುದಕ್ಕೋಸ್ಕರ, ಸೌಲಭ್ಯಗಳಿಂದ ವಂಚಿತರಾಗಿರತಕ್ಕಂಥ ವರ್ಗಗಳಿಗೆ ಕಾನೂನಿನ ಚೌಕಟ್ಟಿನಲ್ಲಿ ಸೌಲಭ್ಯಗಳನ್ನು ಕೊಡತಕ್ಕಂಥ ವಿಚಾರದಲ್ಲಿ ಸರಕಾರ ಬದ್ಧವಾಗಿದೆ. ನಾವು ಈ ವಿಚಾರದಲ್ಲಿ ಸದಾ ಹೆಜ್ಜೆ ಇಟ್ಟರೆ ಸಾಲು, ಕಾದು ಹೆಜ್ಜೆ ಇಡತಕ್ಕ ವಿಚಾರ ಸರಕಾರದ್ದಾಗಿದೆ. ಆ ವಿವರಗಳಿಗೆ ಈ ಸಂದರ್ಭದಲ್ಲಿ ಹೋಗದೇ, ಅವರ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಮುಂದಕ್ಕೆ ಹೋಗುತ್ತೇವೆ ಎಂಬ ಮಾತನ್ನು ಈ ಸಂದರ್ಭದಲ್ಲಿ ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ಶ್ರೀಮಾನ್ ಯಡಿಯೂರಪ್ಪನವರು ಮಾತನಾಡತಕ್ಕ ಕಾಲದಲ್ಲಿ ಲೋಕಾಯುಕ್ತದ ಬಗ್ಗೆ ಹೇಳಿದರು, ಲೋಕಾಯುಕ್ತದ ವಿಚಾರದಲ್ಲಿ...

ಶ್ರೀ ಆರ್.ಎಲ್. ಜಾಲಪ್ಪ : ಎರಡು ವರ್ಗಗಳ ಬಗ್ಗೆ ಮಾತ್ರ ಹೇಳಿದಿರಿ. ಹಿಂದುಳಿದವರ್ಗಗಳ ಕಮೀಷನ್ ರಿಪೋರ್ಟ್ ತಮ್ಮ ಮುಂದೆ ಇದೆ. ಅದರ ಬಗ್ಗೆ ಶೀಘ್ರವಾಗಿ ಕ್ರಮ ಕೈಗೊಳ್ಳುತ್ತೀರಾ?

ಶ್ರೀ ಎಸ್. ಬಂಗಾರಪ್ಪ : ಮೊನ್ನೆ ಮೊನ್ನೆ ಇದಕ್ಕೆ ಉತ್ತರ ಕೊಟ್ಟಿದ್ದೆ. ಹಿಂದುಳಿದವರ್ಗಗಳ ಬಗ್ಗೆ ತೀರ್ಮಾನ ಹಿಂದೆ ಮಾಡಿದ್ದಾರೆ. ಮತ್ತೆ ಕೆಲವು ಮಾಡುವುದು ಇದೆ. ಇದರ ಬಗ್ಗೆ ಶೀಘ್ರವಾಗಿ ಕಾರ್ಯಕ್ರಮ ಹಾಕುತ್ತೇವೆ. ಆಯೋಗದ ವರದಿ ನಮ್ಮ ಮುಂದೆ ಇದೆ. ಅದರ ಬಗ್ಗೆ ಸಂಪೂರ್ಣ ತೀರ್ಮಾನವನ್ನು ಸದ್ಯದಲ್ಲೇ ತೆಗೆದುಕೊಳ್ಳುವವರಿದ್ದೇವೆ. ಆ ಸದನದಲ್ಲಿ ಪ್ರಶ್ನೋತ್ತರ ಕಾಲದಲ್ಲಿ ಈ ಪ್ರಶ್ನೆ ಬಂದಾಗ ಪ್ರಸ್ತಾಪ ಮಾಡಿದ್ದೆ. ಇನ್ನು ಲೋಕಾಯುಕ್ತದ ಬಗ್ಗೆ ಹೇಳುವುದಾದರೆ, ಹಿಂದೆ ಆಂಟಿ ಕರಪ್ಷನ್ ಡಿಪಾರ್ಟ್‌ಮೆಂಟ್ ಎಂದು ಇತ್ತು, ಆಮೇಲೆ ವಿಜಿಲೆನ್ಸ್ ಕಮೀಷನ್ ಎಂದು ಮಾಡಿದೆವು, ಅದು ಹೋಗಿ ಈಗ ಲೋಕಾಯುಕ್ತ ಎಂದು ಮಾಡಿರುತ್ತೇವೆ. These are all trial and error methods. ನಮಗೆ ನಿಮಗೆ ಗೊತ್ತಿದ್ದ ಹಾಗೆ ನಾವು ಪ್ರಯೋಗಗಳನ್ನು ಮಾಡುತ್ತಿದ್ದೇವೆ. ಯಾವುದು ಮಾಡಿದರೆ ಸರಿ ಎಂಬ ವಿಚಾರ ಇನ್ನೂ ಕೂಡಾ ಅದು ಜಿಜ್ಞಾಸೆಯಾಗಿಯೇ ಉಳಿದಿದೆ ಎಂಬ ಅಭಿಪ್ರಾಯ ಕೊಡತಕ್ಕದ್ದು ಒಂದು ವಿಚಾರ, ಪದೇ ಪದೇ ಬರುತ್ತದೆ, ನಿಜ, ಲೋಕಾಯುಕ್ತದ ಮುಂದಿರತಕ್ಕಂಥ ಪ್ರಕರಣಗಳು ಮಧ್ಯೆ ಕೆಲವು ಕಾಲ ವಿಚಾರಣೆಯಾಗಿಲ್ಲ, ಏತಕ್ಕೆಂದರೆ ಇವರನ್ನು ಅಪಾಯಿಂಟ್ ಮಾಡುವುದು ಕೂಡಾ ತಡವಾಗಿತ್ತು. ಈಗ ಉಪಲೋಕಾಯುಕ್ತರನ್ನು ಅಪಾಯಿಂಟ್ ಮಾಡುವುದಕ್ಕೆ ಕಾರ್ಯಕ್ರಮ ಹಾಕಿದ್ದೇವೆ. ಸದ್ಯದಲ್ಲೇ ಆಜ್ಞೆ ಕೂಡಾ ಹೊರಡಿಸುವವರಿದ್ದೇವೆ. ಇದಾದ ಮೇಲೆ ಇತ್ಯರ್ಥ ಆಗಿರತಕ್ಕಂಥ ಬಾಕಿ ಮೊಕದ್ದಮೆಗಳು ಅಥವಾ ವಿಷಯಗಳು ಏನಿವೆ ಅವುಗಳನ್ನು ಇತ್ಯರ್ಥಪಡಿಸುವುದಕ್ಕೆ ಶೀಘ್ರವಾಗಿ ಕಾರ್ಯಕ್ರಮ ಹಾಕುವುದಕ್ಕೆ ನಾವು ಲೋಕಾಯುಕ್ತದವರಿಗೆ ತಿಳಿಸುತ್ತೇವೆ ಎಂಬ ಮಾತನ್ನು

ಈ ಸಂದರ್ಭದಲ್ಲಿ ಆಡುತ್ತೇನೆ. ಇನ್ನು ಕರ್ನಾಟಕ ರಾಜ್ಯದಲ್ಲಿ ಹಲವಾರು ಸಮಸ್ಯೆಗಳು ಇವೆ. ಎಲ್ಲವನ್ನೂ ಕೂಡ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇಷ್ಟು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಿ ಬೇರೆ ವಿಚಾರಗಳ ಬಗ್ಗೆ ಪ್ರಸ್ತಾಪಕ್ಕೆ ನಾನು ಹೋಗುತ್ತೇನೆ. ಆಡಳಿತವನ್ನು ಚುರುಕು ಮಾಡಿ, ಹಲವಾರು ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವುದಕ್ಕೆ ಸರಕಾರ ಬದ್ಧವಾಗಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಇನ್ನು ಅಪ್ರೋಪ್ರಿಯೇಷನ್ ಬಿಲ್ ಏನು ಬರುತ್ತದೆ, ಇವತ್ತು, ಅದು ಬಂದ ಕಾಲದಲ್ಲಿ ನಾನು ಹಣಕಾಸಿನ ವಿಚಾರ, ಕೆಲವು ನೀರಾವರಿ ವಿಚಾರಗಳ ಬಗ್ಗೆ ಸೂಕ್ಷ್ಮವಾಗಿ ಪ್ರಸ್ತಾಪ ಮಾಡತಕ್ಕ ವಿಚಾರಗಳನ್ನು ಪ್ರತ್ಯೇಕವಾಗಿ ಇಟ್ಟುಕೊಂಡಿದ್ದೇನೆ. ಆದ್ದರಿಂದ ಈ ಸಂದರ್ಭದಲ್ಲಿ ಅವುಗಳನ್ನು ಪ್ರಸ್ತಾಪ ಮಾಡುವುದಿಲ್ಲ. ಆದರೆ ಒಂದೇ ಒಂದು ಮಾತು ಇವತ್ತು ನಮ್ಮ ಇಲಾಖೆಗಳು ಏನಿವೆ, ಅವುಗಳಿಗೆ ಬರಬೇಕಾದ ಆದಾಯ ಏನಿದೆ ಅದೆಲ್ಲಾ ಸೇರಿಕೊಂಡಹಾಗೆ, ಎಲ್ಲವನ್ನೂ ವ್ಯವಸ್ಥಿತವಾದ ಹಾಗೂ ಸರಿಯಾದ ರೀತಿಯಲ್ಲಿ ನಾವು ವಸೂಲಿ ಮಾಡುವುದಕ್ಕೆ ಕಾರ್ಯಕ್ರಮ ಮಾಡುವುದರ ಬಗ್ಗೆ ಹೆಚ್ಚಿನ ಗಮನ ಕೊಟ್ಟಿದ್ದೇವೆ.

ಮಾನ್ಯ ಸದಸ್ಯರು ಹೇಳಿದ ಹಾಗೆ, ಬೇರೆ ಬೇರೆ ಕಾರ್ಯಕ್ರಮಗಳೂ ಇರಬಹುದು. ಆ ಬಗ್ಗೆಯೂ ಹೆಚ್ಚಿನ ಗಮನ ಕೊಟ್ಟಿದ್ದೇನೆ ಅಂಕಿ ಅಂಶಗಳೂ ಸಹ ಹಿಂದೆಯೂ ಇವೆ, ಮುಂದೆಯೂ ಇವೆ, 1990-91 ಮತ್ತು 1991-92 ಅಂದರೆ, ಪ್ರಸ್ತುತ ಆರ್ಥಿಕ ವರ್ಷಕ್ಕೆ ಸಂಬಂಧಪಟ್ಟಂತೆ ಅಂಕಿಅಂಶಗಳ ಆಧಾರದ ಮೇಲೆ ಯಾವರೀತಿಯಾಗಿ ನಾವು, ನಮಗಿರತಕ್ಕ ಪ್ಲಾನ್‌ಸೈಜ್, ಅದನ್ನು ಮುಟ್ಟುವುದಕ್ಕೆ ಕೂಡ ಯಾವ ಪ್ರಯತ್ನವನ್ನು ಹಾಕಿಕೊಂಡಿದ್ದೇವೆಂಬ ಮಾತನ್ನು ಆ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ. ಇಷ್ಟು ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಮಾನ್ಯಸದಸ್ಯರು ಮಾತನಾಡತಕ್ಕ ವಿಚಾರ, ಈಗಾಗಲೇ ಒಂದು ಸಾರಿ ಬಂದುಹೋಗಿರತಕ್ಕ ವಿಚಾರವಾಗಿರುವುದರಿಂದ, ಪುನಃ ಈ ವಿಚಾರ ಈ ಸಂದರ್ಭದಲ್ಲಿ ಪ್ರಸ್ತಾಪ ಬೇಕಾಗಲಾರದೆಂಬ ದೃಷ್ಟಿಯಿಂದ ಈ ಮಾತನಾಡಿ, ನನ್ನ ಉತ್ತರವನ್ನು ಮುಗಿಸುತ್ತೇನೆ, ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಎಂ.ವಿ. ವೆಂಕಟಪ್ಪ : ಚುನಾವಣಾ ವಿಷಯದಲ್ಲಿ, ವಿಧಾನ ಪರಿಷತ್ತಿಗೆ ಸುಮಾರು 75 ಸೀಟುಗಳಲ್ಲಿ 25 ಸೀಟು ಲೋಕಲ್ ಬಾಡೀಸ್‌ನಿಂದ ಆಯ್ಕೆಯಾಗುತ್ತದೆ. ಇದರಲ್ಲಿ 24 ಸೀಟುಗಳಿಗೆ ಚುನಾವಣೆ ನಡೆಸಿದ್ದೀರಿ, ಬೆಂಗಳೂರು ಸಿಟಿ ಜಿಲ್ಲೆಗೆ ಮೂರು ವರ್ಷಗಳಿಂದ ಈ ಚುನಾವಣೆ ನಡೆದಿಲ್ಲ, ಸಿಟಿಜಿಲ್ಲೆಯಿಂದ ವಿಧಾನ ಪರಿಷತ್ತಿಗೆ ಪ್ರತಿನಿಧಿಗಳು ಬಾರದೆ ಲೋಕಲ್ ಬಾಡೀಸ್‌ಗೆ ತೊಂದರೆಯಾಗಿದೆ. 87 ಜನ ಕಾರ್ಪೋರೇಟರುಗಳು ಇದ್ದಾರೆ. ಆಮೇಲೆ ಹೆಚ್.ಎ.ಎಲ್, ಮತ್ತು ಐ.ಟಿ.ಐ. ನೋಟಿಫೈಡ್ ಏರಿಯಾ ಇದೆ. ಅಲ್ಲಿ ಸದಸ್ಯರು ಇದ್ದಾರೆ. ಚುನಾವಣಾ ಕಾನೂನು ಪ್ರಕಾರ, ಶೇಕಡ 50 ಭಾಗ ಇದ್ದರೂ ಸಹ ಚುನಾವಣೆ ನಡೆಸಬೇಕೆಂದು ಇದೆ, ಆದರೆ, ಸರ್ಕಾರ ನಿರ್ಲಕ್ಷ್ಯ ವಹಿಸಿದೆ. ಆದಷ್ಟು ಬೇಗನೆ ಚುನಾವಣೆ ನಡೆಸುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ : ಈ ವಿಚಾರವನ್ನು ಸರ್ಕಾರ ಗಮನದಲ್ಲಿಟ್ಟು, ಶೀಘ್ರವಾಗಿ ಕಾರ್ಯಕ್ರಮ ಹಾಕುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮಾತನಾಡಿದುದರಲ್ಲಿ ದುರುದ್ದೇಶ ಇಲ್ಲ, ಇವತ್ತು ಸರ್ಕಾರದ ಬಗ್ಗೆಮುಖ್ಯಮಂತ್ರಿಗಳು ಮತ್ತು ಮಂತ್ರಿಗಳ ಬಗ್ಗೆ ದೊಡ್ಡ

ಮಂಡನೆ ಸಂದರ್ಭದಲ್ಲಿ ನಾವು ಮಾತನಾಡಿದ್ದೇವೆ. ಇದರಲ್ಲಿ, ಇಡೀ ರಾಜ್ಯದ ಜನರಿಗೆ ಸಂಶಯ ಉಳಿದಿದೆ. ಅನೇಕ ಸಾಕ್ಷ್ಯಾಧಾರಗಳನ್ನು ಒದಗಿಸಿಕೊಟ್ಟಿದ್ದೇವೆ. ಇನ್ನುಮುಂದೆ ಈ ರೀತಿ ಆಗಬಾರದೆನ್ನುವ ದೃಷ್ಟಿಯಿಂದ, ತಮ್ಮನ್ನೂ ಒಳಗೊಂಡಂತೆ, ತಮ್ಮ ಮಂತ್ರಿಮಂಡಲದ ಸದಸ್ಯರ ಮೇಲೆ ಆರೋಪಮಾಡಿರುವ ದೃಷ್ಟಿಯಿಂದ, ತಾವು ಸಿ.ಬಿ.ಐ ತನಿಖೆಗೆ ಒಳಪಡಿಸಿಕೊಂಡರೆ, ನಿಜವಾಗಿಯೂ ಸತ್ಯಸಂಗತಿ ಗೊತ್ತಾಗುತ್ತದೆ. ಈ ದಿಸೆಯಲ್ಲಿ ಒಂದು ಸಲಹೆಯನ್ನು ತಂದಿದ್ದೇವೆ. ದಯಮಾಡಿ ಈ ವಿಚಾರದಲ್ಲಿ ಸತ್ಯಾಸತ್ಯತೆ ಹೊರಗೆ ಬರಲಿ, ಕೇಂದ್ರದಲ್ಲೂ ನಿಮ್ಮದೇ ಸರ್ಕಾರ ಇದೆ. ವಿಚಾರದಲ್ಲಿ ಅನೇಕ ದಾಖಲಾತಿಗಳನ್ನು ಕೊಡತಕ್ಕ ಪ್ರಯತ್ನ ಮಾಡಿದ್ದೇವೆ. ಆದ್ದರಿಂದ ದಯಮಾಡಿ, ತಮ್ಮನ್ನೂ ಒಳಗೊಂಡಂತೆ ಕೆಲವು ಮಂತ್ರಿಗಳ ಮೇಲೆ ಏನು ಆರೋಪ ಮಾಡಿದ್ದಾರೆ, ಇದನ್ನು ಸಿ.ಬಿ.ಐ. ತನಿಖೆಗೆ ಒಳಪಡಿಸುವ ಅವಕಾಶ ಮಾಡಿಕೊಡಬೇಕು. ಇದರಿಂದ ಮುಂದೆ ಧೈರ್ಯವಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇಲ್ಲದೇ ಹೋದರೆ, ಈ ಸರ್ಕಾರ ಹೋಗಿ ಇನ್ನೊಂದು ಸರ್ಕಾರ ಬರಬಹುದು, ಒಬ್ಬ ಮುಖ್ಯಮಂತ್ರಿಯವರು ಹೋಗಿ ಇನ್ನೊಬ್ಬ ಮುಖ್ಯಮಂತ್ರಿಯವರು ಬರಬಹುದು. ಈ ಆರೋಪಕ್ಕೆ ನಿಜವಾಗಿಯೂ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಕ್ರಿಮಿನಲ್ ಪ್ರೊಸೀಜರ್ ಪ್ರಕಾರ, ಕ್ರಮ ಆಗುವುದಿಲ್ಲ, ಆದ್ದರಿಂದ ಸಿ.ಬಿ.ಐ. ತನಿಖೆಗೆ ಒಳಪಡಿಸಿಕೊಳ್ಳಿ ಎಂದು ಕೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ನಾನು ಮರೆತುಬಿಟ್ಟೆ. ತಾವು ಮತ್ತೊಂದು ಪದ ಪ್ರಯೋಗ ಮಾಡಿದ್ದೀರಿ. ಅಗ್ನಿಪರೀಕ್ಷೆ ಮಾಡಿಕೊಂಡು ಹೊರಗೆ ಬರಬೇಕೆಂದು ಹೇಳಿದ್ದೀರಿ. ಅಪಾದನೆ ಮಾಡುವುದಕ್ಕೆ ಮೊದಲು ಬೆಂಕಿ ಹಚ್ಚಿ, ನಂತರ ಅಗ್ನಿ ಪರೀಕ್ಷೆ ಆಗಬೇಕು. ಅಗ್ನಿ ಎಲ್ಲಾ ರೆಡಿ ಮಾಡಿ ಇಲ್ಲಿ ಬಂದು ವಿಚಾರ ಪ್ರಸ್ತಾಪ ಮಾಡುವುದು. ತಾವು ಎನ್ನತಕ್ಕಂಥ ಪ್ರಶ್ನೆ ಅಲ್ಲ, ಯಾರಾದರೂ ಇರಬಹುದು. ಅಗ್ನಿಕುಂಡಕ್ಕೆ ಹಾಯುವುದಕ್ಕೆ ನೀವು ರೆಡಿ ಮಾಡಿಕೊಂಡು ಬಂದಿದ್ದೀರಿ ,ಅದಕ್ಕೋಸ್ಕರ ನಾವೆಲ್ಲಾ ಅಗ್ನಿ ಪರೀಕ್ಷೆಗೆ ಒಳಗಾಗಬೇಕೆಂದು ಹೇಳುತ್ತೀರಿ....

ಶ್ರೀ ವಾಟಾಳ್ ನಾಗರಾಜ್ : ಆ ಕಾಲದ ಅಗ್ನಿಪರೀಕ್ಷೆ ಬೇರೆ. ಈ ಕಾಲದ ಅಗ್ನಿಪರೀಕ್ಷೆ ಮಾಡುವುದಕ್ಕೆ ಹೋದರೆ ಯಾರೂ ಉಳಿಯುವುದಿಲ್ಲ, ಅಗ್ನಿಯಲ್ಲಿ ಹೊರಟುಹೋಗುತ್ತಾರೆ, ಆದ್ದರಿಂದ ಸ್ವಲ್ಪ ಎಚ್ಚರಿಕೆ ವಹಿಸಿ, ಆಗಿನ ಅಗ್ನಿ ಪರೀಕ್ಷೆ ಬೇಕೆ. ಅದು ಬಹಳ ಸತ್ಯವಾದ ಮತ್ತು ಬಹಳ ದೊಡ್ಡ ಕಾಲ. ಈಗಿನ ಪರಿಸ್ಥಿತಿಯಲ್ಲಿ ಅಗ್ನಿಪರೀಕ್ಷೆಗೆ ಹೋದರೆ, ಎಲ್ಲರೂ ಬೆಂದು ಹೋಗುತ್ತಾರೆ.

ಅಧ್ಯಕ್ಷರು : ಆಗಿನ ಕಾಲದ ಬೆಂಕಿಗೆ ಅಷ್ಟು ಶಾಖ ಇರಲಿಲ್ಲ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಯಾವ ಅಗ್ನಿಪರೀಕ್ಷೆ ಎಂಬತಕ್ಕಂಥ ಪದವನ್ನು ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಪ್ರಯೋಗ ಮಾಡಿದ್ದಾರೆ. ಈ ಎಲ್ಲಾ ವಿಚಾರಗಳನ್ನು ಅವಿಶ್ವಾಸ ನಿರ್ಣಯ ಬಂದ ಕಾಲದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಅವರು ಪ್ರಸ್ತಾಪ ಮಾಡಿದ್ದಕ್ಕೆ ಅಂಕಿಅಂಶಗಳ ಸಹಿತ ಉತ್ತರ ಕೊಡತಕ್ಕ ಪ್ರಯತ್ನ ಮಾಡಿದ್ದೇನೆ. ಇದೇ ಸದನ ನೋಡಿದೆ. ಆದ್ದರಿಂದ, ಒಂದುಸಾರಿ ಪರೀಕ್ಷೆ ಆಗಿ, ಅಗ್ನಿ ಎಲ್ಲಾ ಮುಗಿದು, ಆ ಕತೆ ಮುಗಿದು ಹೋಗಿರತಕ್ಕ ವಿಚಾರ. ಮತ್ತೆ ಈಗ ಬೆಂಕಿ ಎಂದು ಹೇಳುವುದು ನನಗೆ ಗೊತ್ತಾಗುವುದಿಲ್ಲ. ಅಂದರೆ ಅಗ್ನಿಗೆ ಹೋಗಬೇಕಾಗಿಲ್ಲ, ಮತ್ತೆ ಅದಕ್ಕೆ ಏನು ಸಂಬಂಧ ಎಂದು ನನಗೆ ಅರ್ಥವಾಗುವುದಿಲ್ಲ. ಆ ಪರೀಕ್ಷೆ ಅದು ಪರೀಕ್ಷೆಯಲ್ಲ, ಅದು

6.40 ಪಿ.ಎಂ.

ಮತ್ತೊಂದು ಸಾರಿ ಸಿ.ಬಿ.ಐ. ಬೇಕಾಗಿಲ್ಲವೆಂದು ಅಂಕಿಅಂಶ ಸಹಿತ ನಾನು ಉತ್ತರ ಕೊಟ್ಟಾದ ಮೇಲೆ ಇಡೀ ಸದನ ಸಮಾಧಾನಗೊಂಡ ಮೇಲೆ, ಕರ್ನಾಟಕದ ಜನತೆ ಕೂಡಾ ಸಮಾಧಾನಗೊಂಡಮೇಲೆ ಮತ್ತೊಂದುಸಾರಿ ಆ ವಿಚಾರ ಇದೆ, ಇದಕ್ಕಿಂತ ಹೈಕ್ಲಾಸ್ ಅಗ್ನಿಪರೀಕ್ಷೆ ಮಾಡತಕ್ಕಂಥವರು ಇದ್ದಾರೆಂದು ನಾನು ಭಾವಿಸಿದ್ದೇನೆ. ಆದ್ದರಿಂದ ತಮ್ಮ ಸಲಹೆ ಏನಿದೆ ಆ ಸಲಹೆಯನ್ನು ತಾವೇ ಹಿಂದಕ್ಕೆ ತೆಗೆದುಕೊಂಡರೆ ಒಳ್ಳೆಯದೆಂದು, ನಿಮ್ಮ ಹಿತದೃಷ್ಟಿಯಿಂದ ಹೇಳಿದೆ ತೆಗೆದುಕೊಳ್ಳುವುದಿಲ್ಲ ಅಂದರೆ ಅದು ಒಪ್ಪುವುದಿಲ್ಲ ಅನ್ನುವುದೇ ನಮ್ಮ ಉತ್ತರ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನ ಪ್ರಶ್ನೆ ಏನೆಂದರೆ, ನಿನ್ನೆ ನಿಮ್ಮ ಶಾಸಕಾಂಗ ಪಕ್ಷದಲ್ಲಿ ಬಹಳ ಸ್ಪಷ್ಟವಾಗಿ ಶಾಸಕರು, ವಿಶ್ವನಾಥ್ ಎನ್ನುವವರು, ನಾವು ಜನರ ಮುಂದೆ ಚುನಾವಣೆ ಸಮಯದಲ್ಲಿ ಹೋದಾಗ...

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅದಕ್ಕೆ ಒಂದು ವ್ಯವಸ್ಥೆ ಇದೆ. ಕೇಂದ್ರದಲ್ಲಿ ನಿಮ್ಮ ಸರ್ಕಾರ ಇದೆ, ಗುರುತರವಾದ ಆರೋಪ ಮಾಡಿದ್ದಾರೆ. ಹಿಂದೆ ಎಂದೂ ಇಲ್ಲದಂಥ ಅನೇಕ ಭ್ರಷ್ಟಾಚಾರಗಳ ಪ್ರಕಟಣೆಗೆ ತಾವು ಸಾಕ್ಷಿಯಾಗಿದ್ದೀರಿ. ಆ ರೀತಿ ಪ್ರಕರಣ ನಡೆದಿದೆ. ಅದಕ್ಕಾಗಿ ಸಿ.ಬಿ.ಐ. ತನಿಖೆಗೆ ತಾವು ಒಪ್ಪಿಕೊಳ್ಳಬೇಕು. ಕೇವಲ ಕಾಂಗ್ರೆಸ್ ಪಕ್ಷದ ಸ್ನೇಹಿತರಿಗೆ ಮಾತ್ರ ಶಿಕ್ಷೆಯಾಗುವುದಿಲ್ಲ ಅದಕ್ಕೋಸ್ಕರ ಸಿ.ಬಿ.ಐ. ತನಿಖೆಗೆ ಒಪ್ಪಿಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಆರ್ಡರ್. ಆರ್ಡರ್, ಎಲ್ಲಾ ಒಟ್ಟಿಗೆ ಮಾತನಾಡಿದರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಸನ್ಮಾನ್ಯ ಅಧ್ಯಕ್ಷರೇ, ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಮೊನ್ನೆ ನಿಮ್ಮ ಶಾಸಕಾಂಗ ಪಕ್ಷದ ಸಭೆಯಲ್ಲಿ...

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಸದನದೊಳಗೆ ಅನೇಕ ಗುರುತರವಾದ ಆರೋಪಗಳನ್ನು ಈ ಸರ್ಕಾರದ ಮೇಲೆ, ಮುಖ್ಯಮಂತ್ರಿಗಳ ಮೇಲೆ ಮಾಡಿದ್ದೇವೆ. ತಾವು, ಯಾವುದೇ ಆರೋಪ ಸರಿಯಿಲ್ಲವೆಂದು ನೀವೇ ಹೇಳಿದರೆ ಅದಕ್ಕೆ ಪರಿಹಾರವಲ್ಲ. ದಕ್ಕೆ ಒಂದು ತನಿಖಾ ತಂಡ ಇದೆ. ನಿಮ್ಮದ್ದೇ ಕೇಂದ್ರ ಸರ್ಕಾರ ಇದೆ. ಸಿ.ಬಿ.ಐ. ತನಿಖೆ ಮಾಡಿಸಿ. ಅನೇಕ ಸಾಕ್ಷ್ಯಾಧಾರಗಳನ್ನು ಒದಗಿಸಿಕೊಟ್ಟಿದ್ದೇವೆ. ಹಿಂದೆ ಎಂದೂ ಇಲ್ಲದಂಥ ಅನೇಕ ಅವ್ಯವಹಾರಗಳು ಭ್ರಷ್ಟಾಚಾರಗಳ ಪ್ರಕರಣಗಳು ನಡೆದಿವೆ. ಅದಕ್ಕಾಗಿ ಸಿ.ಬಿ.ಐ ತನಿಖೆ ಮಾಡಿಸಿ ಎಂದು ನಾನು ಕೇಳುತ್ತಿದ್ದೇನೆ. ಇಲ್ಲ ಯಡಿಯೂರಪ್ಪನವರೇ ಜನ ತೀರ್ಮಾನ ಮಾಡಲಿ ನೋಡೋಣವೆಂದರೆ, ನನ್ನದೇನೂ ಅಭ್ಯಂತರವಿಲ್ಲ, ನಾನು ಅದಕ್ಕಿಂತ ಹೆಚ್ಚು ಒತ್ತಾಯ ಮಾಡುವುದಕ್ಕಾಗುತ್ತದೆಯೇ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ತಾವು ಯಾವ ಸಿ.ಬಿ.ಐ. ತನಿಖೆಯನ್ನು ಅತಿ ಆಸಕ್ತಿಯಿಂದ ಹೃದಯಾಂತರಾಳದಿಂದ ನಿರೀಕ್ಷೆ ಮಾಡುತ್ತಿದ್ದಿರೋ ಅದೇ ವಿಚಾರದ ಬಗ್ಗೆ ನಾನು ಉತ್ತರ ಕೊಟ್ಟಮೇಲೆ, ತಮ್ಮ ಆಪಾದನೆಗಳು ನಿರಾಧಾರವೆಂದು ಹೇಳಿ ತಮ್ಮ ಅವಿಶ್ವಾಸ ನಿರ್ಣಯ ಸಂಪೂರ್ಣವಾಗಿ ತಿರಸ್ಕಾರ ಮಾಡಿ ಈಗಾಗಲೇ ಈ ಸಭೆ ನಿರ್ಣಯ ಕೊಟ್ಟಾಗಿದೆ. ಇದಕ್ಕಿಂಥ ಉದಾಹರಣೆ

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿ ನಿಮ್ಮ ಪರವಾಗಿ ಹೇಳುತ್ತಾರೆ. ಹೊರಗಡೆ ನಿಮ್ಮ ವಿರುದ್ಧವಾಗಿ ಆರೋಪ ಮಾಡುತ್ತಾರೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ನಮ್ಮ ಶಾಸಕಾಂಗ ಪಕ್ಷದ ಸಭೆಯಲ್ಲಿ ಏನಾದರೂ ನಡೆದರೆ, ಅದು ನಿಮ್ಮ ಪಕ್ಷದ ಸಭೆಯೊಳಗೆ ಹೇಗೆ ನಡೆಯುತ್ತದೆಯೋ ಹಾಗೆ ಆಂತರಿಕ ವಿಚಾರವಾಗುತ್ತದೆ. ಹಾಗೆಯೇ ಆಯಾ ರಾಜಕೀಯ ಪಕ್ಷಗಳ ಒಳಗಡೆ ನಡೆಯುತ್ತಿರತಕ್ಕಂಥ ವಿಚಾರ. ಅದು ಆಯಾ ಪಕ್ಷಗಳಿಗೆ ಸೇರಿರತಕ್ಕಂಥ ವಿಚಾರ. ಮೊನ್ನೆ ತಾನೆ ಅದನ್ನು ಪ್ರಸ್ತಾಪ ಮಾಡಿ ಹೇಳಿದ್ದಾರೆ. ಜೊತೆಗೆ ನೀವು ಹೇಳಿರತಕ್ಕಂಥಾದ್ದು ರೆಕಾರ್ಡ್‌ಗೆ ಹೋಗಿರುವುದರಿಂದ ಒಂದು ವಿಷಯ ಹೇಳಬೇಕಾಗಿದೆ. ಮಾನ್ಯ ವಿಶ್ವನಾಥ್‌ರವರಾಗಲೀ ಮತ್ತೊಬ್ಬರಾಗಲೀ, ಯಾರೂ ಕೂಡ ಆ ರೀತಿ ಹೇಳಿಲ್ಲ. ಆ ಪ್ರಕರಣಕ್ಕೆ ಸಂಬಂಧಿಸಿದಂತೆ ಚರ್ಚೆ ಮಾಡೋಣ ಅಂದತಕ್ಷಣವೇ ಯಾವುದೋ ಒಂದು ಪತ್ರಿಕೆ ವಿಷಯ ಹೇಳಿ, ಅದು ಯಾವ ಪತ್ರಿಕೆಯಲ್ಲೂ ಬರೆದಿಲ್ಲ, ಒಂದು ಪತ್ರಿಕೆ ಬರೆದಿದೆ ಎಂದ ತಕ್ಷಣ...

ಶ್ರೀ ಬಿ.ಎಸ್. ಯಡಿಯೂರಪ್ಪ : ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಯಡಿಯೂರಪ್ಪನವರೇ, ಹಾಗೆಲ್ಲಾ ನಡೆಯುವುದಿಲ್ಲ ಕುಳಿತುಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ : ಮೊನ್ನೆ ಸಂಜೆವಾಣಿಯಲ್ಲಿ ಬಂದಿದೆ.

(ಅಧ್ಯಕ್ಷರ ಆದೇಶದಂತೆ ಶ್ರೀ ಆರ್. ನಾರಾಯಣ್‌ರವರು ಮಾತನಾಡಿದ ವಿಷಯವನ್ನು ರೆಕಾರ್ಡ್ ಮಾಡಲಿಲ್ಲ)

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಈ ಎಲ್ಲಾ ಆಂತರಿಕ ವಿಚಾರದ ಬಗ್ಗೆ ಹೆಚ್ಚಿನ ಗಮನ ಕೊಡದೇ ಇರತಕ್ಕಂಥಾದ್ದು ಎಲ್ಲಾ ಪಕ್ಷಗಳಿಗೂ ಕ್ಷೇಮ ಅನ್ನತಕ್ಕಂಥ ಮಾತನ್ನು ಮಾತ್ರ ನಾನು ಪ್ರಾಥಮಿಕವಾಗಿ ಹೇಳಬಲ್ಲೆ. ಏಕೆಂದರೆ ನೀವು ಆಂತರಿಕ ವಿಚಾರಕ್ಕೆ ಹೋದರೆ ನಾಳೆ ಅದು ನಿಮ್ಮ ಪಕ್ಷಕ್ಕೂ ಬರುತ್ತದೆ. ನಾಳೆ ಮತ್ತೊಂದು ಪಕ್ಷಕ್ಕೆ ಬರಬಹುದು ಇನ್ನೊಂದು ಪಕ್ಷಕ್ಕೆ ಬರಬಹುದು. ಆದ್ದರಿಂದ ಈ ವಿಚಾರ ಇಷ್ಟಾದರೂ ಕೂಡ ತಾವು ಹೇಳಿದ್ದರಿಂದ ಅದನ್ನು ನಾನು ಅಲ್ಲಗಳೆಯುತ್ತೇನೆ. ಈ ರೀತಿಯ ವಿಚಾರ ಬಂದಿಲ್ಲ ಇಷ್ಟು ಮಾತನ್ನು ಮಾತ್ರ ಹೇಳುತ್ತೇನೆ. ಅದರ ಜೊತೆಗೆ ಇದು ಸುಳ್ಳು ಎಂದು ಹೇಳುತ್ತೇನೆ. ಏಕೆಂದರೆ ಮಾನ್ಯ ಸಭಾಧ್ಯಕ್ಷರು ಈಗಾಗಲೇ ರೂಲಿಂಗ್ ಕೊಟ್ಟಿರುವುದರಿಂದ ಈ ಪದ ಪ್ರಯೋಗ ಮಾಡಬಹುದು.

ಅಧ್ಯಕ್ಷರು : ಅವಶ್ಯವಾಗಿ ಪ್ರಯೋಗ ಮಾಡಬಹುದು.

ಶ್ರೀ ಎಸ್. ಬಂಗಾರಪ್ಪ : ಇಷ್ಟು ವಿಚಾರವನ್ನು ಈ ಸಂದರ್ಭದಲ್ಲಿ ಹೇಳಿ ಸುಳ್ಳು ಎಂದು ಕೂಡ ಹೇಳುತ್ತೇನೆ.

ಅಧ್ಯಕ್ಷರು : ಎಲ್ಲಾ ಪ್ರಸನ್ನವದನರಾಗಿದ್ದಾರೆ. ಸುಳ್ಳು ಎಂದು ಹೇಳಿದ ತಕ್ಷಣ ಎಷ್ಟು ಪ್ರಸನ್ನರಾದರು.

ಶ್ರೀ ವಾಟಾಳ್ ನಾಗರಾಜ್ : ಅದನ್ನು ನೇರವಾಗಿ ಹೇಳಬಹುದು.

ಶ್ರೀ ಎಸ್. ಬಂಗಾರಪ್ಪ : ಏತಕ್ಕೆ ಮಾನ್ಯ ಯಡಿಯೂರಪ್ಪನವರು ಖುಷಿ ಆದರೂ ಎಂದರೆ ಅವರೂ ಹೇಳಿದ್ದೂ ಸುಳ್ಳು ಎಂದು ಅವರಿಗೆ ಗೊತ್ತಿದೆ. ಅದಕ್ಕೋಸ್ಕರ ಸುಮ್ಮನೆ ಆದರು. ಇಷ್ಟು ಮಾತನ್ನು ಈ ಸಂದರ್ಭದಲ್ಲೀ ಹೇಳುತ್ತಾ ಮತ್ತೊಮ್ಮೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ, ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿದೆ. ಗೌರಿ ಮತ್ತು ಗಣೇಶ ಹಬ್ಬದ ಮುಂದೆ ಎಣ್ಣೆ ಮಾಲೀಕರು ಮತ್ತು ವಿತರಣೆದಾರರು ಬಂದ್ ಮಾಡಿದಾಗ ಈ ವಿಚಾರವನ್ನು ತಮ್ಮ ಗಮನಕ್ಕೆ ಜೀರೋ ಅವರ್‌ನಲ್ಲಿ ತಂದಾಗ ತಾವು ಈ ಒಂದು ಟ್ಯಾಕ್ಸಿನ ಬಗ್ಗೆ ಕನ್‌ಸಿಷನ್ ಕೊಡುತ್ತೇವೆ ಎಂದು ಹೇಳಿದ್ದೀರಿ. ಅದನ್ನು ವಿತ್‌ಡ್ರಾ ಮಾಡಿದ್ದೀರಿ ಎಂಬ ವಿಚಾರ ತಿಳಿಯಿತು. ಅದನ್ನು ಗಮನಕ್ಕೆ ತರುತ್ತಿದ್ದೇನೆ, ಈ ವಿಚಾರ ಇನ್ನೂ ಪ್ರಸ್ತಾಪಕ್ಕೆ ಬರಲಿಲ್ಲ.

ಅಧ್ಯಕ್ಷರು : ತಾವು ಬೆಳಿಗ್ಗೆ ಇರಲಿಲ್ಲವೇ?

ಶ್ರೀ ಎಸ್. ಬಂಗಾರಪ್ಪ : ಆ ಬೇಡಿಕೆ ಬರುತ್ತದೆ, ಬಂದಾಗ ನಾನು ಹೇಳುತ್ತೇನೆ.

ಶ್ರೀಮತಿ ಮೋಟಮ್ಮ : ಕಾಫಿ ಪರ್ಚೇಸ್ ಟ್ಯಾಕ್ಸ್ ಬಗ್ಗೆ ವಿಚಾರ ಹೇಳಬೇಕು

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಬೇಡಿಕೆಗಳ ವಿಚಾರದಲ್ಲಿ ಒಂದು ವಿಷಯವನ್ನು ನಾನು ಹಿಂದೆ ಮುಂದೆ ನೋಡಿ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇದು ನೇರವಾಗಿ ಈ ಸದನದಲ್ಲಿ ಚರ್ಚೆ ಮಾಡಬಹುದಾ ಎನ್ನುವ ಬಗ್ಗೆ ತಾವು ನನಗೆ ಮಾರ್ಗದರ್ಶನ ಮಾಡಬೇಕು ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ ಸರ್ಕಾರದವರು ಲೋಕೋಪಯೋಗಿ ಇಲಾಖೆಗೆ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್‌ಗಳನ್ನು ನೇರವಾಗಿ ನೇಮಕ ಮಾಡಿಕೊಳ್ಳುವುದಕ್ಕೆ ಆದೇಸ ಕಳಿಸಿದ್ದಾರೆ. ಅದು ಸರ್ಕಾರದ ಕೆಲಸ ಅದು ಅಲ್ಲಿಗೆ ಮುಗಿಯುತ್ತದೆ. ಕೆಪಿಸಿನವರು 50 ಜನ ಅಥವಾ 100 ಜನರನ್ನೋ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ಸ್‌ನ್ನು ಸೆಲೆಕ್ಟ್ ಮಾಡಿಕೊಳ್ಳುತ್ತಿದ್ದಾರೆ. ಈ ಸೆಲೆಕ್ಷನ್ ಪ್ರೋಸೆಸ್ ಎಲ್ಲಾ ಮಾಡಿ 13ನೇ ತಾರೀಖಿನಂದು ಲಿಸ್ಟನ್ನು ಅನೌನ್ಸ್ ಮಾಡಿದ್ದಾರಂತೆ. ನನಗೆ ಅನೇಕ ಜನ ರಿಟೈರ್ಡ್ ಚೀಫ್ ಇಂಜಿನಿಯರ್ಸ್ ರಿಟೈರ್ಡ್ ಸೂಪರಿಂಟೆಂಡೆಂಟ್ ಇಂಜಿನಿಯರ್ಸ್, ಅನೇಕ ಜನ ಕೆಪಿಎಸ್‌ಸಿ ಮೆಂಬರ್ಸ್. ಬಂದು ಹೇಳಿದ್ದಾರೆ. ಇದರಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಒಂದು ಲಕ್ಷ, ಒಂದೂವರೆ ಲಕ್ಷ ರೂಪಾಯಿ ಹಣ ತೆಗೆದುಕೊಂಡು ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ಸ್‌ನ್ನು ಸೆಲೆಕ್ಟ ಮಾಡಿದ್ದರೆ ಎಂದು ತಿಳಿಸಿದ್ದಾರೆ. ತಾವು ನನಗೆ ಇದರ ಬಗ್ಗೆ ಸಾಕ್ಷಿ ಆಧಾರ ಬೇಕು ಕೊಡಿ ಎಂದು ಹೇಳಿದರೆ ನನ್ನ ಹತ್ತಿರ ಸಾಕ್ಷಿ ಆಧಾರಗಳು ಏನೂ ಇಲ್ಲ, ಬಹಳ ಜವಾಬ್ದಾರಿ ಇರತಕ್ಕ ರಿಟೈರ್ಡ್ ಚೀಫ್ ಇಂಜಿನಿಯರ್ಸ್‌ಗಳು ಬಂದು ಹೇಳಿದಾಗ ನಾನು ಅದನ್ನು ಕೇಳಬೇಕಾಗುತ್ತದೆ. ಮತ್ತು ನಮ್ಮ ರಾಜ್ಯದ ಅತ್ಯಂತ ಪ್ರತಿಷ್ಠಿತ ವ್ಯಕ್ತಿಗಳು ಸಹಿತ ಖಾಸಗಿಯಾಗಿ ಹೇಳಿದ್ದಾರೆ. ಇದರಲ್ಲಿ ಅನ್ಯಾಯ ನಡೆದಿದೆ. ಬಹಳ ಕಡಿಮೆ ನಂಬರ್ ಇರುವವರಿಗೆ ಹೆಚ್ಚು ನಂಬರ್ ಕೊಟ್ಟಿದ್ದಾರೆ. ಹೆಚ್ಚಿಗೆ ನಂಬರ್ ಇರುವವರಿಗೆ ಕೊಟ್ಟಿಲ್ಲ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಈಗ ನೇರವಾಗಿ ಅಸಿಸ್ಟಬೆಂಟ್ ಇಂಜಿನಿಯರ್ಸ್‌ನ್ನು ತೆಗೆದು ಕೊಳ್ಳಬೇಕೋ ಬಿಡಬೇಕೋ ಎನ್ನುವುದರ ಬಗ್ಗೆ ಇಂಜಿನಿಯರ್ಸ್ ಅಸೋಸಿಯೇಷನ್‌ನವರು ಹೈಕೋರ್ಟಿನಲ್ಲಿ ಕ್ವೆಶ್ಚನ್ ಮಾಡಿದ್ದಾರೆ. ಅದು ಅಲ್ಲಿ ತೀರ್ಮಾನವಾಗುತ್ತದೆ. ಆದರೆ ಇಲ್ಲಿ ಇದರ ಬಗ್ಗೆ ಸರ್ಕಾರದವರ ಹೇಳಿಕೆ ಏನು

ಇದೆ? ಕೆಪಿಎಸ್‌ಸಿ ನವರು ಏನು ಮಾಡುತ್ತಿದ್ದಾರೆ? ಏಕೆಂದರೆ ಎಲ್ಲರಿಗೂ ಗೊತ್ತಿರುವ ವಿಚಾರ. There should be a limit for all these things. ಈ ವಿಚಾರ ಬೀದಿಯಲ್ಲಿನ ಮಾತಾಗಿದೆ. ಈ ವಿಚಾರದಲ್ಲಿ ನಾನು ಇದನ್ನು ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಡುತ್ತೀರೋ ಅಥವಾ ಸರ್ಕಾರದವರು ಏನಾದರೂ ಇದರ ಬಗ್ಗೆ ಹೇಳುವುದು ಇದೆಯೇ ಎನ್ನುವುದರ ಬಗ್ಗೆ ತಾವು ಮಾರ್ಗದರ್ಶನ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಏಕೆಂದರೆ ಇದು ಜನರಲ್ ಅಡ್ಮಿನಿಸ್ಟ್ರೇಷನ್‌ಗೆ ಸಂಬಂಧಪಟ್ಟ ವಿಚಾರ ಆಗಿರುವುದರಿಂದ ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇದೇ ಸಂಬಂಧವಾಗಿ ನಾನು ಒಂದು ವಿಚಾರ ಕೇಳುತ್ತೇನೆ. ಈಗ ಲೋಕಸೇವಾ ಆಯೋಗದಲ್ಲಿ ಏನು ಸಂದರ್ಶನ ನಡೆಯುತ್ತಿದೆ. ಅದರ ಬಗ್ಗೆ ನನಗೆ ಅನಿಸುತ್ತಿದೆ ಇದು ಒಂದು ದೊಡ್ಡ ಬಿಳಿ ಆನೆ ಇದ್ದ ಹಾಗೆ ಎಂದು. ಲೋಕಸೇವಾ ಆಯೋಗವನ್ನು ರದ್ದು ಮಾಡಿ ಬೇರೆ ರೂಪದಲ್ಲಿ ಸಂದರ್ಶನ ಮಾಡುವುದಕ್ಕೆ ವ್ಯವಸ್ಥೆ ಮಾಡುವುದಾದರೆ ಅದು ನಿಜವಾಗಿ ಬಹಳ ಒಳ್ಳೆಯದೆಂದು ನನ್ನ ಸಲಹೆ ಇದೆ. ಸರ್ಕಾರ ಈ ಬಗ್ಗೆ ತೀರ್ಮಾನ ಮಾಡುವುದಾದರೆ ಅದು ನಿಜವಾಗಿ ಬಹಳ ಒಳ್ಳೆಯದು. ಏಕೆಂದರೆ ಇದು ದೊಡ್ಡ ಬಿಳಿ ಆನೆ. ಇದಕ್ಕೆ ಖರ್ಚು ಆಗತಕ್ಕದ್ದು, ಅದರ ವ್ಯವಸ್ಥೆ ಪರಿಸ್ಥಿತಿ ನೋಡಿದಾಗ ಒಂದು ದೊಡ್ಡ ಬಿಳಿ ಆನೆ ಹಾಗೆ ಆಗಿದೆ. ಮತ್ತೊಂದು ಕಡೆ ಸಂದರ್ಶನಕ್ಕೆ ಓಡಾಡತಕ್ಕವರ ಹಣೆಬರಹಗಳನ್ನು ನೋಡಿದಾಗ ಈ ತರಹ ಒಂದು ಒಡಕು ಶಬ್ದ ಬೀದಿಯಲ್ಲಿ ಶುರುವಾಗಿ ಎಲ್ಲಾ ಮಾತನಾಡುತ್ತಿರತಕ್ಕ ವಿಚಾರ ಆಗಿದೆ. ಈ ಲೋಕಸೇವಾಆಯೋಗ ಇರಬೇಕೆ ಅಥವಾ ಬೇಡವೇ ಇದರ ಬಗ್ಗೆ ಒಂದು ತೀರ್ಮಾನಕ್ಕೆ ಬರಬೇಕು. ತಾವು ಇದರ ಬಗ್ಗೆ ದಯಮಾಡಿ ತಿಳಿಸಬೇಕು.

ಶ್ರೀ ಎಸ್. ಬಂಗಾರಪ್ಪ : ಪರ್ಯಾಯವಾಗಿ ಇವತ್ತು ನಾವು ಏನಾದರೂ ನೇಮಕಾತಿ ಮಾಡಬೇಕು ಎಂದರೆ there are only two ways. ನಾವು ವಿಚಾರ ಮಾಡಬೇಕು. ಒಂದು ತ್ರೂ ಕೆಪಿಎಸ್‌ಸಿ, ಇನ್ನೊಂದು ರಿಕ್ರೂಟ್‌ಮೆಂಟ್ ಕಮಿಟಿಯನ್ನು ಮಾಡಿ ಸರ್ಕಾರ ಇದನ್ನೆಲ್ಲಾ ಇಟ್ಟು ಕೊಂಡು ಮಾಡತಕ್ಕದ್ದು. ತಮಗೆಲ್ಲಾ ಗೊತ್ತಿರುವ ಹಾಗೆ KPSC is a body created according to statutionary under the constitutional provisions.

Under the Constitution, UPSC, and State KPSCಗಳು Constitutionನ ಪ್ರಕಾರ ಕ್ರಿಯೇಟ್ ಮಾಡಿರತಕ್ಕ ಬಾಡಿಗಳು.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಏಕೆ ಇದನ್ನು ಇಲ್ಲಿ ಪ್ರಸ್ತಾಪ ಮಾಡಿದೆ ಎಂದರೆ Union Public Service Commission is a creature of the Parliament under the Constitution. ಇದೇ ರೀತಿಯಾಗಿ ಅಲ್ಲಿ ಕಂಪ್ಲೆಂಟ್ಸ್ ಬಂದು ಯೂನಿಯನ್ ಪಬ್ಲಿಕ್ ಸರ್ವೀಸ್ ಕಮೀಷನ್‌ನ ಎಕ್ಸಾಮಿನೇಷನ್ಸ್ ಅನ್ನು ಪೇಪರ್ಸ್ ಎಲ್ಲಾ ಮಾರಾಟ ಆಗಿ ಹೋಯಿತು ಎಂದು ಹೇಳಿಬಿಟ್ಟು ಅದನ್ನು ರದ್ದು ಮಾಡಿದ್ದಾರೆ. ನಾನು ಏಕೆ ಇದನ್ನು ಒತ್ತಾಯ ಮಾಡುತ್ತಿದ್ದೇನೆ ಎಂದರೆ ಈಗ ಒಂದು ಕಡೆ ನೀವು ಹೇಳುತ್ತೀರಿ. ಪ್ರತಿಭಾವಂತರಿಗೆ, ರಿಯಲ್ ಮೆರಿಟೆಡ್ ಅಭ್ಯರ್ಥಿಗಳನ್ನು ಟ್ಯಾಲೆಂಟ್‌ನ್ನು ನಮ್ಮ ಡಿಪಾರ್ಟ್‌ಮೆಂಟಿಗೆ ತೆಗೆದುಕೊಂಡು ಸರ್ಕಾರದಲ್ಲಿ ಕೆಲಸ ಮಾಡುವುದಕ್ಕೆ ಉಪಯೋಗಿಸಿಕೊಳ್ಳಬೇಕು ಎಂದು ಹೇಳುತ್ತೀರಿ. ಈ ತರಹ ದುಡ್ಡು ಕೊಟ್ಟು ಬಂದಿರುವವರಿಗೆ ಏನು ಟ್ಯಾಲೆಂಟ್ ಇರುತ್ತದೆ? ನನಗೆ ಗೊತ್ತಿರುವ ಹಾಗೆ ಅಲ್ಲಿ ಮಿನಿಮಮ್ ಮಾರ್ಕ್ಸ್ 55ರ ಕೆಳಗಡೆ ನಿಗದಿ

ಪರ್ಸೆಂಟೋ ಅಥವಾ 61 ಪರ್ಸೆಂಟೆಗೋ ನನಗೆ ಗೊತ್ತಿಲ್ಲ. 61 ಪರ್ಸೆಂಟ್ ಬಂದಿರುವವರಿಗೂ ಕಳಿಸಿದ್ದಾರೆ. 60 ರಿಂದ 63 ಪರ್ಸೆಂಟ್ ಬಂದಿರುವವರನ್ನೆಲ್ಲಾ ಎಲ್ಲಾ ಸೆಲೆಕ್ಟ್ ಮಾಡಿದ್ದಾರೆ. 82-83 ಪರ್ಸೆಂಟ್ ಬಂದಿರುವವರನ್ನು ಮನೆಗೆ ಕಳಿಸಿದ್ದಾರೆ.

ಶ್ರೀ ಎಸ್. ಬಂಗಾರಪ್ಪ : ಈ ವಿಚಾರದಲ್ಲಿ ಲೋಕಸೇವಾ ಆಯೋಗದ ಚೇರ್ಮನ್ ಏನಿದ್ದಾರೆ ಅವರಿಗೆ ಈ ವಿಚಾರವನ್ನು ಮತ್ತು ಸದನದಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ಹಾಗೂ ಜೊತೆಗೆ ಮಾನ್ಯ ಸದಸ್ಯರುಗಳ ಅಭಿಪ್ರಾಯಗಳನ್ನು ತಿಳಿಸ ತಕ್ಕಂಥ ಕೆಲವನ್ನು ಸರಕಾರದ ವತಿಯಿಂದ ಮಾಡುತ್ತೇನೆ. ಈ ಮಧ್ಯೆ ಇಂಥ ಆಪಾದನೆಗಳನ್ನು ಕೇಳಿದ ಮೇಲೆ. ಆಪಾದನೆ ನಮ್ಮ ಗಮನಕ್ಕೂ ಕೂಡ ಬಂದಾಗ, ಪಿಎಸ್‌ಸಿ ಚೇರ್ಮನ್‌ರವರನ್ನು ಕರೆಸಿ ಮಾತನಾಡತಕ್ಕಂಥ ಮತ್ತು ಅವರಿಗೆ ಈ ಅಭಿಪ್ರಾಯಗಳನ್ನು ಹೇಳತಕ್ಕಂಥ ಕೆಲಸವನ್ನು ಮಾಡುತ್ತೇವೆ. ಅವರ ವ್ಯಾಪ್ತಿಯಲ್ಲಿ ಅವರು ಗಮನವನ್ನು ಕೊಡಬೇಕಾಗುತ್ತದೆ. ಇಲ್ಲವಾದರೆ ಇದು ಬಹಳ ಕಷ್ಟವಾಗುತ್ತದೆ. ನಾಳೆ ಬಡವರಾಗಿರತಕ್ಕಂಥವರು ಮತ್ತೊಬ್ಬರು, ಮಾರ್ಕ್ಸ್ ಜಾಸ್ತಿ ಸ್ಕೋರ್ ಮಾಡಿದ್ದರೂ ಕೂಡ ಅಂಥವರ ನೇಮಕವಾಗದಿದ್ದರೆ ನಾವು ಏತಕ್ಕಾಗಿ ಕಷ್ಟಪಟ್ಟು ಮಾರ್ಕ್ಸ್‌ಸ್ಕೋರ್ ಮಾಡಬೇಕು, ಎಂಬ ಒಂದು ಮನೋಭಾವ ಸಹಜವಾಗಿಯೇ ತಾಳುತ್ತಾರೆ. ಆದ್ದರಿಂದ ಈ ವಿಚಾರವನ್ನು ಅವರಿಗೆ ತಿಳಿಸುವ ಕೆಲಸವನ್ನು ಮಾಡುತ್ತೇವೆ. ಪರ್ಯಾಯವಾಗಿ ಮಾನ್ಯ ವಾಟಾಳ್‌ನಾಗರಾಜ್‌ರವರು ಅದನ್ನು ತೆಗೆದು ಹಾಕಿ ಬೇರೆ ಒಂದು ವ್ಯವಸ್ಥೆಯನ್ನು ಏಕೆ ಮಾಡಬಾರದು ಎಂಬುದನ್ನು ಹೇಳಿದ್ದಾರೆ, ಈ ರೀತಿ ಕೆಲವು ಕೇಸುಗಳನ್ನು ನಾವು ಮಾಡಿದ್ದೇವೆ. ಹಾಗೆ ಮಾಡಿಲ್ಲ ಎಂಬ ಮಾತನ್ನು ನಾನು ಹೇಳಲಾರೆ. ಪೋಲೀಸ್ ಇಲಾಖೆಗೆ ಬೇಕಾದ ಡಿಪಾರ್ಟ್‌ಮೆಂಟಲ್ ರಿಕ್ರೂಟ್‌ಮೆಂಟ್ ಕಮಿಟಿಯನ್ನು ನಾವು ಮಾಡಿದ್ದೇವೆ, ಹೀಗೆ ಇಲಾಖಾ ನೇಮಕಾತಿಗಳನ್ನು ಇಂಥ ಸಮಿತಿಗಳ ಮುಖಾಂತರ ಹಿಂದೆ ಕೂಡ ಮಾಡಿದ್ದರು. ಹೀಗೆ ಡಿಪಾರ್ಟ್‌ಮೆಂಟ್‌ಲ್ ರಿಕ್ರೂಟ್‌ಮೆಂಟ್ ಕಮಿಟಿಗಳನ್ನು ಕೂಡ ಮಾಡಿದ್ದು ಉಂಟು. ಅಸಿಸ್ಟಂಟ್ ಇಂಜಿನೀಯರ್ ಮಟ್ಟದಲ್ಲಿ ನಾವು ಸೆಲೆಕ್ಟ್ ಮಾಡತಕ್ಕಂಥದ್ದು ಈಗಲೂ ಇದೆ. ಹೀಗೆ ಯಾವುದೇ ಪೋಸ್ಟ್‌ಗಾಗಿ ಆದರೂ ಕೂಡ ಅಲ್ಲಿ ಸಂದರ್ಶನಕ್ಕೆ ಹೋದಾಗ ಅನ್ಯಾಯವಾಗುತ್ತದೆ ಎಂಬುದನ್ನೂ ನಾನು ಒಪ್ಪಿಕೊಳ್ಳುತ್ತೇನೆ. ನಾವು ರಿಕ್ರೂಟ್‌ಮೆಂಟ್ ಕಮಿಟಿಯನ್ನು ಏನು ಮಾಡಿದ್ದೇವೆ ಅದನ್ನು ಇಟ್ಟುಕೊಂಡು ಹೋಗುತ್ತೇವೆ. ಇದರ ಬಗ್ಗೆ ನೇಮಕಾತಿಗಳನ್ನು ಮಾಡಿ ಹೆಚ್ಚುಕಡಿಮೆ ಮಾಡಿ ಮುಗಿಸುತ್ತೇವೆ. ಪಿಡಬ್ಲ್ಯೂಡಿಯನ್ನು ಉದಾಹರಣೆಗೆ ತೆಗೆದುಕೊಂಡರೆ, ಕೆಲವು ಪೋಸ್ಟ್‌ಗಳು ಜ್ಯೂನಿಯರ್ ಇಂಜಿನೀಯರ್ಸ್, ಅಸಿಸ್ಟಂಟ್ ಇಂಜಿನೀಯರ್ಸ್ ಹೀಗೆ ಬೇರೆ ಬೇರೆ ಇಲಾಖೆಗಳಲ್ಲಿಯೂ ಕೂಡ ಇರಬಹುದು, ಅದನ್ನು ಮಾಡುತ್ತೇವೆ. ಕೆಪಿಸಿಗೆ ಯಾವುದನ್ನು ಕೊಟ್ಟಿದ್ದೇವೆ ಅವರು ಅದನ್ನು ಮಾಡುತ್ತಾರೆ. ಹೀಗೆ ಮಾಡುವಾಗ ಅಲ್ಲಿ ದೊಡ್ಡ ದುರುಪಯೋಗ ಆಗುತ್ತದೆ. ಎಂದು ಕಂಡುಬಂದರೆ ನಮ್ಮ ಇಲಾಖೆಗಳಿಗೇ ಅಧಿಕಾರವನ್ನು ಕೊಡತಕ್ಕಂಥ ಸಂಪೂರ್ಣ ಪವರ್ಸ್ ನಮಗೆ ಇದೆ. ಇಲ್ಲ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಆಡಲಾರೆ. ಇದನ್ನು ನಾವು ಗಮನದಲ್ಲಿಟ್ಟುಕೊಂಡು ಅವರ ಜೊತೆಯಲ್ಲಿ ಮಾತನಾಡಿ, ಒಂದು ತೀರ್ಮಾನಕ್ಕೆ ಬರುತ್ತೇವೆ. ಹಾಗೂ ಈ ಸದನದ ಅಭಿಪ್ರಾಯವನ್ನು ಅವರಿಗೆ ತಿಳಿಸುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ತಮ್ಮ ಮಾರ್ಗದರ್ಶನವನ್ನು ಕೆ.ಪಿ.ಎಸ್.ಸಿ. ಬಗ್ಗೆ ನಾವು ಇಲ್ಲಿ ಚರ್ಚೆ ಮಾಡಬಹುದೇ ಎಂಬುದನ್ನು ಕೇಳುತ್ತಿದ್ದೇನೆ, ಅದಕ್ಕೆ ಮುಂಚೆ ಮಾನ್ಯ ಸಭಾನಾಯಕರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, 1963ರ ... 1972 1983 1993 ಈಗ ನಾವು 91ರಲ್ಲಿ ಇದೇವೆ. 28 ವರ್ಷಗಳ

ನಂತರ ನಾವು ಇವರನ್ನು ರಿಕ್ರೂಟ್‌ಮೆಂಟ್ ಮಾಡುತ್ತಿರತಕ್ಕಂಥ ಸಂದರ್ಭದಲ್ಲಿ ಇವರು 58 ಜನ ಅಸಿಸ್ಟೆಂಟ್ ಇಂಜಿನೀಯರ್‌ಗಳನ್ನು ರಿಕ್ರೂಟ್‌ಮಾಡಿಕೊಳ್ಳುತ್ತೇವೆ ಅಂದರೆ, ಇನ್ನು 20 ವರ್ಷಕ್ಕೆ ಇವರೆಲ್ಲರೂ ಚೀಫ್ ಇಂಜಿನೀಯರ್ಸ್, ಸೂಪರಿಂಟೆಂಡೆಂಟ್ ಇಂಜಿನೀಯರ್ ಕರ್ನಾಟಕ ರಾಜ್ಯಕ್ಕೆ ಆಗಿರುತ್ತಾರೆ. ಯಾರು ಈಗ 20 ವರ್ಷಗಳ ಸರ್ವೀಸ್ ಮಾಡಿರುತ್ತಾರೆ ಅವರೆಲ್ಲರೂ ಅಸಿಸ್ಟೆಂಟ್ ಇಂಜಿನೀಯರ್ ಆಗಿ ರಿಟೈರ್ಡ್ ಆಗುತ್ತಾರೆ. ಅವರನ್ನೂ ಬಾಸ್ ಓವರ್ ಮಾಡುವುದಕ್ಕೆ ಬರುವ ಇವರು ನನಗೆ ನಿರ್ಧಿಷ್ಟವಾಗಿ ಗೊತ್ತಿದೆ ಇದನ್ನು ಇವರು ಹಣ ತೆಗೆದುಕೊಂಡು ಮಾಡಿದ್ದಾರೆ ಎಂದು. ನೇರವಾದ ಆಪಾದನೆಯನ್ನು ನಾನು ಮಾಡುವುದಕ್ಕೂ ತಯಾರಾಗಿದ್ದೇನೆ. ಇಂಥ ಸಂದರ್ಭದಲ್ಲಿ ಸರಕಾರದವರಿಗೆ ಇದನ್ನು ರದ್ದು ಪಡಿಸುವುದಕ್ಕೆ ಸಾಧ್ಯವಿಲ್ಲವೇನು? ಯಾಕೆ ರದ್ದು ಪಡಿಸಬಾರದು? ತಮ್ಮ ಕೈಯಲ್ಲಿ ಆಗುವುದಿಲ್ಲ ಎಂದು ಇಟ್ಟುಕೊಳ್ಳಿ. ಹೈಕೋರ್ಟಿನ ಮುಖ್ಯನ್ಯಾಯಾಧೀಶರಿಗೆ ಹೇಳಿ ಇದರ ಬಗ್ಗೆ ವಿಚಾರಣೆ ನಡೆಸಲಿ. ತಮಗಿರತಕ್ಕಂಥ ಕಾನೂನಿನಲ್ಲಿ ಸಾಧ್ಯವಾಗದಿದ್ದರೆ ಹೈಕೋರ್ಟಿನ ಮುಖ್ಯನ್ಯಾಯಾಧೀಶರಿಗೆ ಹೇಳಿ ಅವರು ಕೆಪಿಎಸ್‌ಸಿ ಬಗ್ಗೆ ಎಂದು ವಿಚಾರಣೆ ನಡೆಸಲಿ. ಈ 50 ಜನರನ್ನು ಏನು ರಿಕ್ರೂಟ್ ಮಾಡುತ್ತಾ ಇದ್ದಾರೋ ಅದನ್ನು ನಿಲ್ಲಿಸಲಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಇದಕ್ಕೆ ಸಂವಿಧಾನವೇ ತಿದ್ದುಪಡಿಯಾಗ ಬೇಕಾಗುತ್ತದೆ. ಪಿಎಸ್‌ಸಿಯ ನೀತಿ ಬೇರೆ ಎನ್ನುವ ಪ್ರಶ್ನೆ ಬಂದಾಗ ಅದನ್ನು ಮಾಡಬೇಕಾಗುತ್ತದೆ. ತಾವುಗಳು ಹೇಳಿದ ಪ್ರಕಾರ ಇಲ್ಲಿ ಕೆಲವನ್ನು ನಾವು ರಿಕ್ರೂಟ್ ಮಾಡುವುದಕ್ಕೆ ತೆಗೆದುಕೊಳ್ಳಬಹುದು ಯಾವ ಯಾವ ದರ್ಜೆಯನ್ನು ತೆಗೆದುಕೊಳ್ಳಬೇಕೆನ್ನುವುದನ್ನು ತಾವುಗಳು ತೀವ್ರವಾಗಿ ತೀರ್ಮಾನ ತೆಗೆದುಕೊಳ್ಳಬೇಕಾದುದು ಒಂದು. ಮಾನ್ಯ ಸಿಂಧ್ಯರವರು ಹೇಳಿದ ಮಾತುಗಳ ಬಗ್ಗೆ ನಾವು ಲಘುವಾಗಿ ತೆಗೆದುಕೊಳ್ಳತಕ್ಕಂಥಾದ್ದು ಅಲ್ಲ. ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು ಮತ್ತು ಆ ಇಂಜಿನೀಯರ್‌ಗಳಿಗೆ ಆದ ಅನ್ಯಾಯವನ್ನು ಸರಿಪಡಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ಅವರಿಂದ ಪವರ್ಸ್‌ನ್ನು ವಾಪಸ್ ತೆಗೆದುಕೊಂಡು ಪುನಃ ಇಲ್ಲಿ ಅದು ನಡೆಯುವುದಿಲ್ಲವೇ? ಖಂಡಿತಾ ನಡೆಯುತ್ತದೆ. ಅದಲ್ಲ ನಾವು ಮಾಡಬೇಕಾದುದು ಅಲ್ಲಿ ಅಧಿಕಾರಿಗಳನ್ನು ಸರಿಯಾದವರನ್ನು ಇಟ್ಟು, ಅಲ್ಲಿ ಬಂದೋಬಸ್ತ್ ಮಾಡುವುದಕ್ಕೆ ಯೋಚನೆ ಮಾಡಬೇಕೇ ಹೊರತು, ಬೇರೆ ಚಿಂತನೆ ಮಾಡುವುದು ಸರಿಯಲ್ಲ. ಅಲ್ಲಿ ಇರುವ ವ್ಯವಸ್ಥೆಯನ್ನು ಸರಿಪಡಿಸಬೇಕು. ಅಲ್ಲಿ ಬಿಗಿ ಬಂದೋಬಸ್ತ್ ಮಾಡುವುದು ಇತ್ಯಾದಿ ಮಾಡಬೇಕೆ ಹೊರತು ಹೀಗೆ ಮಾಡುವುದು ಸರಿಯಲ್ಲ, ಎಲ್ಲಾ ಕಡೆಗಳಲ್ಲಿಯೂ ಇವೊತ್ತು ಅವ್ಯವಹಾರಗಳು ನಡೆಯುತ್ತಾ ಇದೆ. ಸರಿಯಾದ ಮಾರ್ಗ ಅಂದರೆ ಅಲ್ಲಿ ಯೋಗ್ಯರಾದವರನ್ನು ಇಡುವುದು, ತಪ್ಪು ಮಾಡಿದರೆ ಶಿಕ್ಷೆ ಮಾಡುವುದು, ಸಾಮಾಜಿಕ ಬಹಿಷ್ಕಾರ ಹಾಕುವುದು ಮುಂತಾದವುಗಳು, ಬೇಕು, ಆ ಒಂದು ಹಕ್ಕನ್ನು ತೆಗೆಯುವುದರಿಂದ ಸಮಸ್ಯೆ ಬಗೆಹರಿಯುತ್ತದೆ ಎಂದು ನನಗೆ ಅನ್ನಿಸುವುದಿಲ್ಲ.

MR. SPEAKER : I would like to strike a note of caution. ಒಂದು ವಿಚಾರ ಅಂದರೆ ಪಬ್ಲಿಕ್ ಸರ್ವೀಸ್ ಕಮೀಷನ್ ಏನಿದೆ, it is the creation under the Constitution which has certain standing in the public and it is also a useful instrument for recruitment to various services of the government . So, I only hope and I have no special information..

ತಾವುಗಳು ಏನಾದರೂ ತೀವ್ರವಾದಂಥ ಜನರಲೈಸ್ಡ್ ಒಂದು ಆಪಾದನೆ ರೀತಿ ಮಾಡತಕ್ಕಂಥಾದ್ದು, ಮತ್ತು ಅದರ ಔಚಿತ್ಯವನ್ನು ತಾವುಗಳು ದಯವಿಟ್ಟು ಯೋಚನೆ ಮಾಡಬೇಕೆಂದು ಮಾತ್ರ ಹೇಳ ಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಯೋಚನೆ ಮಾಡಿಯೇ ಇಲ್ಲಿ ಪ್ರಸ್ತಾಪ ಮಾಡಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ : ಅಧ್ಯಕ್ಷರೆ, ಈ ಲೋಕ ಸೇವಾ ಆಯೋಗವಾಗಲಿ, ಲೋಕಾಯುಕ್ತವಾಗಲಿ, ಇವುಗಳ ಆಡಳಿತದ ವಿಷಯಗಳ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ವ್ಯಾಪ್ತಿಯಲ್ಲಿ ಬರುತ್ತದೆ, ಆದ್ದರಿಂದ ಅವುಗಳ ಆಡಳಿತಾತ್ಮಕ ವಿಷಯಗಳ ಬಗ್ಗೆ ನಾವು ಚರ್ಚೆ ಮಾಡಬಹುದು. ಅದು ನಮ್ಮ ರಿಪೋರ್ಟ್‌ನಲ್ಲಿ ಇದೆ. ಹಾಗೆಯೇ ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆ ನಾನು ಒಂದು ಗಂಟೆ ಮಾತನಾಡಿ ನನ್ನ ಗಂಟಲೇ ಹೊಯಿತು. ಆದರೆ ಒಂದೇ ಒಂದು ಶಬ್ದದವು ಕೂಡ ಮಾನ್ಯ ಮುಖ್ಯಮಂತ್ರಿಯವರಿಂದ ನನಗೆ ಉತ್ತರ ಬಂದಿಲ್ಲ. ನಾನು ಈ ಡಿಪಿಎಆರ್‌ನ ಕಾರ್ಯನಿರ್ವಹಣೆಯ ಬಗ್ಗೆ ಕಟುವಾಗಿ ಟೀಕೆ ಮಾಡಿದ್ದೇನೆ. ಈ ಡಿಪಿಎಆರ್ ಇಲಾಖೆಯು ಸಚಿವಾಲಯದ ಕೈಪಿಡಿಯಲ್ಲಿ ನಮೂದಿತವಾಗಿರುವಂಥ ಕಾರ್ಯಕ್ರಮ ಏನಿದೆ, ಕಾರ್ಯನಿರ್ವಹಣೆ ಏನಿದೆ, ಅದನ್ನು ಮಾಡುವಲ್ಲಿ ವಿಫಲವಾಗಿದೆ, ದಯಮಾಡಿ ತಾವುಗಳು ವಾರ್ಷಿಕ ಅಥವಾ ಅರೆವಾರ್ಷಿಕ ಅಥವಾ ತ್ರೈಮಾಸಿಕ ಏನು ಇನ್ಸ್‌ಪೆಕ್ಷನ್ಸ್ ಮಾಡಬೇಕು, ಆ ಇಲಾಖೆಯಲ್ಲಿರುವಂಥ ಕಾರ್ಯದರ್ಶಿಗಳಾಗಿರಲಿ, ಉಪಕಾರ್ಯದರ್ಶಿಗಳಾಗಿರಲಿ ಅಥವಾ ಡಿಪಿಎಆರ್‌ನಲ್ಲಿರುವಂಥ ಅಧಿಕಾರಿಗಳೇನು ಇರುತ್ತಾರೆ, ಅವರು ಯಾರೂ ಮಾಡುತ್ತಾ ಇಲ್ಲ, ನಿಗದಿತವಾದಂಥ ಕೆಲಸವನ್ನು ಕಾಲದಲ್ಲಿ ಮಾಡುತ್ತಾ ಇಲ್ಲ, ಮತ್ತು ಡಿಪಿಎಆರ್‌ನ್ನಲ್ಲಿ ವಿಚಾರಣೆ ಏನು ಮಾಡಬೇಕೆಂದು ಇದೆ, ಅದನ್ನು ಮಾಡುವಂಥ ವಿಚಾರದಲ್ಲಿ ಡಿಪಿಎಆರ್ ಸರಿಯಾದಂಥ ಕೆಲಸವನ್ನು ಮಾಡುತ್ತಾ ಇಲ್ಲ ಎಂಬ ಆರೋಪವನ್ನು ನಾನು ಮಾಡಿದೆ. ಅದಕ್ಕೆ ಸಂಬಂಧಪಟ್ಟಂಥ ಕೆಲವು ವಿಚಾರಗಳನ್ನು ಕೂಡ ನಾನು ಬೆಳಿಗ್ಗೆ ಹೇಳಿದ್ದೇನೆ.

ಈ ಲೋಕಾಯುಕ್ತ ಏನಿದೆ, ಅದರ ವ್ಯಾಪ್ತಿಯಲ್ಲಿ ಅನೇಕ ವಿಧವಾದಂಥ ವಿಭಾಗಗಳು ಇವೆ, ಒಂದನೇಯದು ತನಿಖಾ ವಿಭಾಗ, ಮತ್ತೊಂದು ವಿಚಾರಣಾ ವಿಭಾಗ. ತನಿಖಾ ವಿಭಾಗದಲ್ಲಿ ಪೋಲೀಸ್ ತನಿಖಾ ವಿಭಾಗದಲ್ಲಿ ಮತ್ತೊಂದು ತಾಂತ್ರಿಕ ತನಿಖಾ ವಿಭಾಗದಲ್ಲಿ ಏನು ಕೆಲಸ ಮಾಡುತ್ತಾ ಇದ್ದಾರೆ, ಆ ವಿಭಾಗದವರು ಹೇಳಿದ ಶಿಫಾರಸ್ಸನ್ನು ಮಾಡಿದ ಪ್ರಕಾರ ಏನು ವಿಚಾಣಾ ವಿಭಾಗದವರು ವಿಚಾರಣೆ ಮಾಡಿದ್ದಾರೆ, ವಿಚಾರಣೆ ಮಾಡಿದ ಮೇಲೆ ಯಾವರೀತಿಯಲ್ಲಿ ಬೇಕು, ಯಾರಿಗೆ ಪ್ರಾಸಿಕ್ಯೂಷನ್ ಮಾಡಬೇಕು. ಯಾರಿಗೆ ಡಿಪಾರ್ಟ್‌ಮೆಂಟಲ್ ಕ್ರಮವನ್ನು ತೆಗೆದುಕೊಳ್ಳಬೇಕೆಂಬ ಶಿಫಾರಸ್ಸನ್ನು ಮಾಡಿದೆ? ಆ ಶಿಫಾರಸ್ಸನ್ನು ಮಾಡಿದವರ ಬಗ್ಗೆ ಇಲ್ಲಿಯವರೆಗೆ ಡಿಪಿಎಆರ್ ನವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ನಾನು ತಮ್ಮಿಂದ ತಿಳಿಯಬಯಸುತ್ತೇನೆ. ಮುಖ್ಯರಾಗಿ ಐಎಎಸ್ ಮತ್ತು ಐಪಿಎಸ್ ಆಫೀಸರ್ಸ್ ಏನಿದ್ದಾರೆ. ಅವರು ಆಲ್ ಇಂಡಿಯಾ ಕೇಡರ್ ಸರ್ವೀಸ್ ಎಂದು ನಾವೇನು ಕರೆಯುತ್ತೇವೆ, ಅವರಿಗೆ ಸಂಬಂಧಪಟ್ಟಂತೆ ಡಿಸಿಪ್ಲಿನ್ ಮತ್ತು ಅಪೀಲ್ ರೂಲ್ಸ್ ಏನಿದೆ, ಅವುಗಳ ಬಗ್ಗೆ 23 ಅವರಲ್ಲಿ ಗಮನಕ್ಕೆ ಬಂದಿದೆ. 23ರಲ್ಲಿ ಈ ವರ್ಷ ಅವರು ತಮ್ಮ ನಾಲ್ಕನೇ ವಾರ್ಷಿಕ ವರದಿಯನ್ನು ಕೊಟ್ಟಿದ್ದಾರೆ, ಒಂದೇ ಒಂದು ವಿಚಾರಣೆಯನ್ನೂ ಸಹ ಅವರು ಪೂರೈಸಿಲ್ಲ. ಇದರ ಬಗ್ಗೆ ತಾವುಗಳು ವಿವರವನ್ನು ಕೊಡಬೇಕೆಂದು ಕೇಳಿಕೊಂಡಿದ್ದೇನೆ. ಅದಕ್ಕಿಂತ ಹೆಚ್ಚಾಗಿ ನಾನು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನ

ಬಗ್ಗೆ ಎರಡು ಆರೋಪಗಳನ್ನು ಮಾಡಿದ್ದೇನೆ. ಮೊಟ್ಟಮೊದಲನೇದಾಗಿ ಇಲಾಖೆಯವರು ಏನು ಸಪ್ಲಮೆಂಟರಿ ಗ್ರ್ಯಾಂಟ್‌ನ್ನು ಕೇಳುತ್ತಾರೆ ಅವರಿಗೆ ತಾವು ನಿರಾಕರಣೆ ಮಾಡುತ್ತೀರಾ? ಮಾಡಿದ ಮೇಲೆ ತಾವೇ ಎಲ್‌ಒಸಿ ಕೊಟ್ಟು ಆಯವ್ಯಯದಲ್ಲಿ ಏನು ಮಂಜೂರಾತಿ ಆಗಿದೆ, ಅದಕ್ಕಿಂತ ಹೆಚ್ಚು ಹಣವನ್ನು ತಾವು ಎಲ್‌ಒಸಿ ಕೊಡುವುದರ ಮುಖಾಂತರ ಕಾನೂನಿನ ವಿರುದ್ಧವಾಗಿ ತಾವು ಅವರು ಖರ್ಚು ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತಿದ್ದೀರಿ, ಇದನ್ನು ಸರಿಪಡಿಸಲಿಕ್ಕೆ ಸರಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬ ಮಾತನ್ನು ನಾನು ಕೇಳಿದ್ದೆಮೂರನೇಯದಾಗಿ ಈ ಫೈನಾನ್ಸ್ ಇಲಾಖೆಯವರು ಮಾರಾಟ ತೆರಿಗೆ ಮತ್ತು ಬೇರೆ ಬೇರೆ ಆದಾಯಗಳು ಏನಿದ್ದಾವೆ, ಅವುಗಳಿಂದ ಬರಬೇಕಾದಂಥ ಬಾಕಿಯನ್ನು ವಸೂಲಿ ಮಾಡುವ ವಿಚಾರದಲ್ಲಿ ಇವರು ಕಾನೂನು ಪ್ರಕಾರವಾದಂಥ ಕ್ರಮವನ್ನು ತೆಗೆದುಕೊಳ್ಳುವಲ್ಲಿ ವಿಫಲರಾಗಿದ್ದಾರೆ.

ಅನೇಕ ಸಂದರ್ಭಗಳಲ್ಲಿ ಕೋರ್ಟಿನಲ್ಲಿ ಸ್ಟೇ ಇದ್ದರೂ ಸಹಾ, ಸ್ಟೇ ವಜಾ ಇದ್ದರೂ ಸಹಾ ಅಥವಾ ಕಂಡೀಷನಲ್, ಸ್ಟೇಯನ್ನು ಕೊಟ್ಟಿದ್ದರೆ ಹಣವನ್ನು ಕೊಡಬೇಕು ಎಂದು ಇರುತ್ತದೆ. ಆ ಹಣವನ್ನು ವಸೂಲು ಮಾಡುವುದಕ್ಕೇ ಹೋಗುವುದಿಲ್ಲ. ಮತ್ತು ಈ ರೀತಿಯಾದಂಥ ಅನೇಕ ಆರೋಪಗಳನ್ನು. ಎ.ಜಿ. ಅವರ ವರದಿಯ ಆಧಾರದಮೇಲೆ ಬೆಳಿಗ್ಗೆ ಪ್ರಸ್ತಾಪಮಾಡಿದ್ದೆ. ಒಂದು ಘಂಟೆ ಕೂಗಿಕೊಂಡೆ. ನನ್ನ ಗಂಟಲು ಹೋಯಿತು. ಆದರೆ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಏನಾದರೂ ಉತ್ತರವನ್ನು ಹೇಳುವುದಕ್ಕೆ ಸಾಧ್ಯವಿದೆಯೇ ಎನ್ನತಕ್ಕಂಥ ಮಾತನ್ನು ನಾನು ತಮ್ಮ ಮೂಲಕ ಅವರ ಗಮನಕ್ಕೆ ತರುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರಾದ ಏಕಾಂತಯ್ಯನವರು ಹೇಳಿರತಕ್ಕಂಥ ಲೋಕಾಯುಕ್ತದ ವಿಚಾರದಲ್ಲಿ ತಮಗೆ ಗೊತ್ತಿರುವ ಹಾಗೆ ಅಭಿಪ್ರಾಯಗಳು ಒಂದು ಸಾರಿ ಬಂದಾಗ, ವಿಭಿನ್ನವಾದ ಅಭಿಪ್ರಾಯವನ್ನು ಮತ್ತೊಂದು ಸಾರಿ ನಾವು ತಳೆದಾಗ, ಅದು ಪ್ರೊಸೀಜರ್ ಏನು ಎನ್ನತಕ್ಕಂಥದ್ದು ತಮಗೆ ಗೊತ್ತಿದೆ. ಅವರು ಹೇಳತಕ್ಕಂಥ ಅಭಿಪ್ರಾಯವನ್ನು ನಾನು ಒಪ್ಪಿದರೆ ಅದು ಒಂದು ರೀತಿ. ಒಂದು ವೇಳೆ ಇಲ್ಲದಿದ್ದರೂ ಕೂಡಾ ನಾವು ಕೆಲವು ಸಾರಿ opinion of the public service commission ಕೇಳುತ್ತೇವೆ. ನಾವು ಕೆಲವು ಸಾರಿ ಪಿ.ಎಸ್.ಸಿ.ಗೂ ಕೂಡಾ ರೆಫರ್ ಮಾಡಿ ಅವರ ಒಪಿನಿಯನ್‌ನ್ನು ತೆಗೆದುಕೊಂಡಿರತಕ್ಕಂಥ ಸಂದರ್ಭ ಕೂಡ ಕೆಲವೊಮ್ಮೆ ಬಂದುಬಿಡುತ್ತದೆ, ಒಂದು ಮಾತನ್ನು ನಾನು ಒಪ್ಪುತ್ತೇನೆ. ಈ ಮಧ್ಯೆ ಲೋಕಾಯುಕ್ತ ಸಂಪೂರ್ಣವಾಗಿ ಕೆಲಸವನ್ನು ಮಾಡುವುದಕ್ಕೆ ಆಗಿಲ್ಲ. ಏಕೆಂದರೆ ನಾವು ಅಪಾಯಿಂಟ್‌ಮೆಂಟ್ ಮಾಡತಕ್ಕಂಥದ್ದು ಸ್ವಲ್ಪ ತಡವಾಯಿತು, ಅದಕ್ಕೆ ನಾನು ಉತ್ತರವನ್ನು ಕೊಟ್ಟೆ. ನಾನು ತಮ್ಮ ಹೆಸರನ್ನು ತೆಗೆದುಕೊಳ್ಳಲಿಲ್ಲ. ಆದರೆ ಉತ್ತರವನ್ನು ಕೊಡಬೇಕಾದರೆ ತಮ್ಮ ಪಾಯಿಂಟನ್ನು ಮೀಟ್ ಮಾಡಿದೆ. ಈಗ ಏನು ನಾವು ಉಪಲೋಕಾಯುಕ್ತರನ್ನು ಕೂಡ ಅಪಾಯಿಂಟ್ ಮಾಡುತ್ತಿದ್ದೇವೆ ಎನ್ನತಕ್ಕಂಥ ಮಾತನ್ನು ನಾನು ಹೇಳಿದ್ದೇನೆ. ಈಗ ಐ.ಎ.ಎಸ್ ಮತ್ತೊಬ್ಬರು ಸುಮಾರು 20-30 ಕೇಸ್‌ಗಳ ಬಗ್ಗೆ ತಾವು ಏನು ಪ್ರಸ್ತಾಪ ಮಾಡಿದ್ದೀರಿ, ಅವುಗಳ ಬಗ್ಗೆ ಅಂತಿಮ ತೀರ್ಮಾನವನ್ನು ಮಾಡತಕ್ಕಂಥ ವಿಚಾರದಲ್ಲಿ ಏನು ಅವರು ತನಿಖೆಯನ್ನು ಮಾಡಿ ಒಂದು ಹಂತವನ್ನು ತಲುಪಿದ್ದಾರೋ ಅದನ್ನು ಪರಿಶೀಲಿಸಿ ಅದರ ಬಗ್ಗೆ ಆದಷ್ಟು ಶೀಘ್ರವಾಗಿ ಅಂತಿಮ ತೀರ್ಮಾನವನ್ನು ಸರ್ಕಾರದವರು ತೆಗೆದುಕೊಳ್ಳುತ್ತೇವೆ. ಆ ಮಾತನ್ನು ನಾನು ಅಷ್ಟಕ್ಕೇ ನಿಲ್ಲಿಸುತ್ತೇನೆ. ಏಕೆಂದರೆ merit ಮೇಲೆ each case ಅನ್ನು ನಿರ್ಧರಿಸಬೇಕಾಗುತ್ತದೆ. ನಾನು ಜನರಲೈಸ್ ಮಾಡಿ ಯಾವುದೂ ಕೂಡಾ ಹೇಳುವುದಕ್ಕೆ ಬರುವುದಿಲ್ಲ. ಇನ್ನು ಫೈನಾನ್ಸ್ ಡಿಪಾರ್ಟ್‌ಮೆಂಟ್ ವಿಚಾರದಲ್ಲಿ ಹಲವು ಎಲ್.ಓ.ಸಿ.

ಯನ್ನು ಕೊಡತಕ್ಕಂಥ ವಿಚಾರದಲ್ಲಿ ಹೇಳಿದಿರಿ, ತಾವೇ ಒಂದು ಸಾರಿ ಸದನದಲ್ಲಿ ಕೇಳಿದ್ದೀರಿ, ಒಂದು ಕೆಲಸವನ್ನು ನಾವು ಮಾಡಬೇಕಾದರೆ ನಾವು ಇಷ್ಟೇ ಎಂದು ಹೇಳಿ ನಿರ್ದಿಷ್ಟವಾಗಿ ಮಾಡಿಕೊಟ್ಟರು, ಎರಡು ರೀತಿ ಅದು, ಒಂದು ನಿರ್ದಿಷ್ಟವಾಗಿರತಕ್ಕಂಥ ಹಣ, ಆ ಕಾಲಕ್ಕೆ ಸರಿಯಾಗಿ ನಾವು ಬಿಡುಗಡೆ ಮಾಡಬೇಕಾಗುತ್ತದೆ. ಒತ್ತಡ ಕೂಡಾ ಬಂದುಬಿಡುತ್ತದೆ. ಅತೀ ಶೀಘ್ರವಾಗಿ ಎಲ್.ಓ.ಸಿ. ಜಾಸ್ತಿ ಹೋದರೆ ಬಹಳ ಕಷ್ಟ. ಉದಾಹರಣೆಗೆ ಮೊನ್ನೆ ಫ್ಲಡ್ ಬಂತು. ನಾನು ಕೆಲವೊಮ್ಮೆ ಬೇರೆಯವರನ್ನು ದಾಟಿ ಹೋಗಿ ಜಾಸ್ತಿ ಹಣವನ್ನು ರಿಲೀಜ್ ಮಾಡಿರತಕ್ಕಂಥ ಪ್ರಸಂಗಗಳು ಕೂಡ ಬರುತ್ತದೆ. depending upon the situation that warrants.

ಆ ಸಂದರ್ಭದಲ್ಲಿ ಅತೀ ಒತ್ತಡದ ಸಂದರ್ಭ. ಆ ರೀತಿ ಬಂದಾಗ ಮಾಡುತ್ತೇವೆಯೇ ವಿನಹಾ ಬೇರೆ ಸಂದರ್ಭಗಳಲ್ಲಿ ಮಾಡುವುದಿಲ್ಲ. In the larger interest of the public ಆ ರೀತಿ ಮಾಡತಕ್ಕಂಥ ಸಂದರ್ಭವೇ ವಿನಹಾ, ಬೇರೆ ಸಂದರ್ಭದಲ್ಲಿ ನಾವು ಆ ರೀತಿ ಎಲ್.ಓ.ಸಿ.ಯನ್ನು ರಿಲೀಸ್ ಮಾಡತಕ್ಕಂಥದ್ದನ್ನು ಇಟ್ಟಿಲ್ಲ. ಮತ್ತೊಂದು ನೇರವಾಗಿ ನಾವು ಕಳುಹಿಸುವುದಕ್ಕೆ ಬದಲು ಆಯಾ ಇಲಾಖೆಗೆ ಕಳುಹಿಸುವುದರ ಬಗ್ಗೆ ಅವರು ಏನೂ ಮಾತನಾಡಿಲ್ಲ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೇ, ನಾನು ಕೇಳಿರತಕ್ಕಂಥ ಪ್ರಶ್ನೆಗೆ ಸ್ಪಷ್ಟೀಕರಣವನ್ನು ಮಾಡಬಯಸುತ್ತೇನೆ. ಲೇಖಾನುದಾನವನ್ನು ಕೊಟ್ಟಿದ್ದಕ್ಕಿಂತ ತಾವು excess over expenditure ಎಕ್ಸ್‌ಪೆಂಡುಚರ್ ಏನು ಎಕ್ಸೆಸ್ ಮಾಡುತ್ತೀರಿ, ಅದನ್ನು ನಾನು ಕೇಳುತ್ತಿಲ್ಲ. ಅದನ್ನು ನೀವು ಕಂಟನ್‌ಜೆನ್ಸಿ ಫಂಡ್‌ನಿಂದ ತೆಗೆದುಕೊಂಡು ಮಾಡತಕ್ಕಂಥ ಅಧಿಕಾರ ಸರ್ಕಾರಕ್ಕೆ ಇದೆ. ಅದನ್ನು ನಾವು ಸಂವಿಧಾನದ ಪ್ರಕಾರ ಮಂಜೂರಾತಿ ಮಾಡಬೇಕಾಗುತ್ತದೆ, ಆ ಪ್ರಶ್ನೆ ಬೇರೆ. ನಾನು ಇಲ್ಲಿ ಹೇಳುತ್ತಿರುವುದು ಏನೆಂದರೆ ಈ ಉದಾಃ ಗೆ ಇರಿಗೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಮೂರು ನೂರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ, 300 ಕೋಟಿ ರೂಪಾಯಿಗಳನ್ನು ಕೊಟ್ಟಾಗ 300 ಕೋಟಿ ರೂಪಾಯಿಗಳನ್ನು ನೀವು ವರ್ಷದ ಕೊನೆಯಲ್ಲಿ ಹೇಗಾದರೂ ಎಲ್.ಓ.ಸಿ. ಮುಖಾಂತರ ಮಾಡಿ, ಅದರ ಬಗ್ಗೆ ಏನೂ ಇಲ್ಲ. ಅವರು ಹೇಳುತ್ತಾರೆ, 300 ಕೋಟಿ ರೂಪಾಯಿ ಸಾಲದಾಗುತ್ತದೆ. ನಮಗೆ 50 ಕೋಟಿ ನೀವು ಎಕ್ಸ್‌ಟ್ರಾ ಕೊಡಿ ಎಂದು ಹೇಲಿ ಸಪ್ಲಿಮೆಂಟರಿ ಗ್ರಾಂಟ್ ಮುಖಾಂತರ ನಮಗೆ ಮಂಜೂರು ಮಾಡಿಕೊಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತಾರೆ. ಅಂದರೆ ಫೈನಾನ್ಸ್ ಇಲಾಖೆಯನ್ನು ಕೇಳುತ್ತಾರೆ. ಆ ರೀತಿ ಕೇಳಿಕೊಂಡಂಥ ಸಂದರ್ಭದಲ್ಲಿ ನಮ್ಮಲ್ಲಿ ಹಣ ಇಲ್ಲ, ಕೊಡುವುದಕ್ಕಾಗುವುದಿಲ್ಲ ಎನ್ನತಕ್ಕಂಥ ಮಾತನ್ನು ತಾವು ಹೇಳುತ್ತೀರಿ. ಆದರೆ ಆ ಇಲಾಖೆಯ ಅಧಿಕಾರಿಗಳು ಏನು ಮಾಡುತ್ತಾರೆ. ಎಂದರೆ ಪುನಃ 300 ಕೋಟಿ ರೂಪಾಯಿ ಹೆಚ್ಚು ಹಣವನ್ನು ಖರ್ಚು ಮಾಡುತ್ತಾರೆ, ಅದನ್ನು ಹೇಗೆ ಖರ್ಚು ಮಾಡುತ್ತಾರೆ ಎಂದರೆ ನಿಮ್ಮ ಫೈನಾನ್ಸ್ ಇಲಾಖೆಯವರೇ 350 ಕೋಟಿ ರೂಪಾಯಿಗಳಿಗೆ ಎಲ್.ಓ.ಸಿ.ಯನ್ನು ಕೊಡುತ್ತಾರೆ. ಇದನ್ನು ಹೇಗೆ ಕೊಡುವುದಕ್ಕೆ ಸಾಧ್ಯ ಮಾನ್ಯ ಮೊಯಿಲಿಯವರೇ ? It is not possible. ಎಕ್ಸೆಸ್ ಎಕ್ಸಪೆಂಡಿಚರ್ ಆಗಬೇಕಾದರೆ ತಾವು ಸಪ್ಲಿಮೆಂಟರಿ ಗ್ರಾಂಟ್ ಇಲ್ಲ ಎಂದು ಹೇಳಿರುತ್ತೀರಿ. ಅವರು ಹೇಳಿದಂತೆ ಅಬ್‌ನಾರ್ಮಲ್ ಸಿಚುಯೇಷನ್‌ನಲ್ಲಿ ತಾವು ಮಾಡುವುದಾದರೆ ಈಗ ಮೊನ್ನೆ ಫ್ಲಡ್ ಬಂತು, ಅದು ಮಾಡಿ. ಕನ್‌ಟಿನ್‌ಜೆನ್ಸಿ ಫಂಡ್‌ನಿಂದ ತೆಗೆದುಕೊಳ್ಳುತ್ತೀರಿ. ಕನ್‌ಟಿನ್‌ಜೆನ್ಸಿ ಫಂಡ್‌ನಿಂದ ತಾವು ತೆಗೆದುಕೊಂಡು ಮಾಡಬೇಕೇ ಹೊರತಾಗಿ ತಾವು ಎಲ್.ಓ.ಸಿ. ಮುಖಾಂತರ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ, ತಾವು ಅರ್ಥಮಾಡಿಕೊಂಡಿದ್ದೀರಿ ಎಂದು ನಾನು

ಭಾವಿಸುತ್ತೇನೆ. ಈ ಸದನದಲ್ಲಿ ಏನು ಲೇಖಾನುದಾನವಾಗಿದೆ, ಅದಕ್ಕಿಂತ ಹೆಚ್ಚು ಹಣವನ್ನು ಖರ್ಚು ಮಾಡತಕ್ಕಂಥ ಅಧಿಕಾರ ಸರ್ಕಾರಕ್ಕೆ ಇಲ್ಲ. ಸುತ್ತಿಕೊಂಡು ಬಂದು ಅವರು ತಮ್ಮ ಕೆಲಸವನ್ನು ಮಾಡಿಕೊಳ್ಳುತ್ತಿದ್ದಾರೆ. ಇದು ಸರಿಯಲ್ಲ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಎಸ್. ಬಂಗಾರಪ್ಪ : ನಾವು ಕೆಲವು ಸಪ್ಲಿಮೆಂಟರಿ ಗ್ರಾಂಟ್‌ನಲ್ಲಿ ತೋರಿಸಿದೆ...

ಶ್ರೀ ಹೆಚ್. ಏಕಾಂತಯ್ಯ : ಎಕ್ಸ್‌ಪೆಂಡಿಚರ್ ಓವರ್ ಗ್ರಾಂಟ್ ಮಾಡುವುದಕ್ಕೆ ತಮಗೆ ಅಧಿಕಾರ ಇದೆ. ಅದನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿ ಶಿಫಾರಸ್ಸು ಮಾಡುತ್ತದೆ. ಅದನ್ನು ಮಾಡುವುದಕ್ಕೆ ತಮಗೆ ಅಧಿಕಾರ ಇದೆ. ಇಲ್ಲಿ ಆ ಪ್ರಶ್ನೆ ಇಲ್ಲ. ಅಂತಹ ಸಂದರ್ಭ ಇಲ್ಲದೆ ಇದ್ದರೂ ಸಹ ಕಂಟ್ರಾಕ್ಟ್‌ದಾರರಿಗೂ ಸಹ ನೀವು ಬಿಲ್ ಕೊಡಲಿಕ್ಕೆ ಎಲ್.ಓ.ಸಿ. ಮುಖಾಂತರ ಲೇಖಾನುದಾನಕ್ಕಿಂತ ಜಾಸ್ತಿ ಕೊಡುವಂತಹ ಅಧಿಕಾರ ಸರ್ಕಾರಕ್ಕೆ ಎಲ್ಲಿಂದ ಬರುತ್ತದೆ? ತಪ್ಪುಗಳು ಆಗುತ್ತಾ ಇದೆ, ದಯವಿಟ್ಟು ನೋಡಿ.

ಶ್ರೀ ಎಸ್. ಬಂಗಾರಪ್ಪ : ಆ ರೀತಿ ಆಗತಕ್ಕ ವಿಚಾರವನ್ನು ನಮ್ಮ ಗಮನಕ್ಕೆ ತನ್ನಿ ಏಕೆಂದರೆ ಅದು ಸರಿಯಾದುದ್ದಲ್ಲ ಎಂಬ ಅಭಿಪ್ರಾಯ ಇದೆ. ಅದರ ಬಗ್ಗೆ ಪರಿಶೀಲನೆ ಮಾಡಿ ನಾವು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಸರ್ಕಾರಕ್ಕೆ ಬರಬೇಕಾದ ಹಣ ಬರುತ್ತಿಲ್ಲ, ಕಾರಣವೇನೆಂದರೆ, ಅಕ್ಕಪಕ್ಕದ ರಾಜ್ಯಗಳಲ್ಲಿ ಒಂದೊಂದು ವಿಧವಾದಂತಹ ವಸ್ತುಗಳಿಗೆ ಒಂದೊಂದು ವಿಧಾವಾದಂತಹ ರೇಟ್ ಆಫ್ ಟ್ಯಾಕ್ಸ್ ಇದೆ. ಉದಾಹರಣೆಗೆ ಮೋಟಾರ್ ವೆಹಿಕಲ್ ತೆಗೆದುಕೊಳ್ಳೋಣ. ಇವತ್ತು ಬೆಂಗಳೂರಿನಲ್ಲಿ ಕಾರನ್ನು ಡೆಲಿವರಿ ಕೊಡುತ್ತಾರೆ. ಇಲ್ಲದಿದ್ದರೆ ಪಾಂಡಿಚೇರಿಯಿಂದ ತರಿಸಿಕೊಡುತ್ತಾರೆ. ಅಥವಾ ಗೋವಾದಿಂದ ಬರುತ್ತದೆ. ಮೋಟಾರ್ ವೆಹಿಕಲ್ಸ್ ಅಲ್ಲದೆ ಟ್ರಾಕ್ಟರ್ಸ್, ಇವೆಲ್ಲವೂ ಈ ರೀತಿ ಬೇರೆ ಕಡೆಯಿಂದ ಬರುತ್ತಿದೆ. ಅಲ್ಲಿಗೂ ಇಲ್ಲಿಗೂ ಸುಮಾರು 10-12 ಸಾವಿರ ವ್ಯತ್ಯಾಸ ಇರುತ್ತದೆ. ಇದರ ಬಗ್ಗೆ ಕಳೆದ ಸಾರಿಯೂ ಕೂಡ ನಾನು ಹೇಳಿದ್ದೇನೆ. ಇದನ್ನು ಸರಿದೂಗಿಸಬೇಕು. ಗೋವಾ ಮತ್ತು ಪಾಂಡಿಚೆರಿಯಲ್ಲಿರತಕ್ಕ ರೇಟ್‌ಗೆ ಸರಿದೂಗಿಸಬೇಕೆಂದು ಹೇಳಿದೆ. ಆದರೆ, ಇದುವರೆಗೂ ಏನೂ ಮಾಡಿಲ್ಲ. ಆದ್ದರಿಂದ ನಮ್ಮ ರಾಜ್ಯಕ್ಕೆ ಬರಬೇಕಾದ ಹಣ ಏನಾಗುತ್ತಿದೆ ಎಂದರೆ ಗೋವಾಕ್ಕೆ ಹೋಗುತ್ತಿದೆ, ಪಾಂಡಿಚೇರಿಗೆ ಹೋಗುತ್ತಿದೆ. ಇದು ಆಗಬಾರದು. ಆದ್ದರಿಂದ ಸೇಲ್ಸ್‌ಟ್ಯಾಕ್ಸ್ ರೇಟ್ ಏನಿದೆ ಅದನ್ನು ಸರಿದೂಗಿಸತಕ್ಕ ಕೆಲಸವನ್ನು ದಯವಿಟ್ಟು ಮಾಡಬೇಕು. ಇದರಿಂದ ನಮಗೆ ವ್ಯತ್ಯಾಸ ಇರತಕ್ಕದ್ದು 5-6 ಸಾವಿರ, ಸುಮಾರು ಒಂದು ಮೋಟಾರ್ ವೆಹಿಕಲ್‌ನಲ್ಲಿ 40-50 ಸಾವಿರ ರೂಪಾಯಿ ನಷ್ಟವಾಗುತ್ತಿದೆ. ಅದನ್ನು ಸರಿದೂಗಿಸತಕ್ಕ ಕೆಲಸವನ್ನು ಮಾಡಬೇಕೆಂದು ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಟ್ಯಾಕ್ಸೇಷನ್ ಸಿಸ್ಟಂ ನೆರೆಹೊರೆ ರಾಜ್ಯಗಳಲ್ಲಿ ಒಂದೊಂದು ರೀತಿ ಇದೆ. ನೀವು ಹೇಳತಕ್ಕದ್ದು ನಿಜ. ದಕ್ಷಿಣ ರಾಜ್ಯಗಳನ್ನು ತೆಗೆದುಕೊಂಡರೆ ಒಂದೇ ರೀತಿಯ ಟ್ಯಾಕ್ಸ್‌ಸ್ಟ್ರಕ್ಚರ್ ಇರಬೇಕಾಗುತ್ತದೆ. ತಮಿಳುನಾಡು, ಕೇರಳ, ಪಾಂಡಿಚೇರಿ, ಆಂಧ್ರ, ಕರ್ನಾಟಕ ರಾಜ್ಯಗಳವರು ಸೇರಿ ಒಂದು ಮೀಟಿಂಗ್ ಮಾಡಿ ಕೊಂಡು ಕೆಲವು ಐಟಂಗಳ ಟ್ರಾಕ್ಸೇಷನ್‌ನಲ್ಲಿ ಏನು ಡಿಸ್‌ಪ್ಯಾರಿಟಿ ಇದೆ ಅದನ್ನು ಆದಷ್ಟು ರೀತಿಯಲ್ಲಿ ಸರಿಪಡಿಸಲು ನಿರ್ಧಾರತೆಗೆದುಕೊಂಡಿದ್ದೇವೆ. ಎಲ್ಲಿ ಜಾಸ್ತಿ ಏರುಪೇರು ಬರುತ್ತದೆ, ಅದು ಬಂದಾಗ ಸಹಜವಾಗಿ ನಮಗೆ ಹೆಚು

ಟ್ಯಾಕ್ಸೇಷನ್ ಬರಲಿ ಜಾಸ್ತಿ ಹಾಕುತ್ತೇವೆ. ಉದಾಹರಣೆಗೆ ಪಾಂಡಿಚೇರಿಯನ್ನು ತೆಗೆದುಕೊಳ್ಳಿ. ಮೋಟಾರ್ ವೆಹಿಕಲ್ಸ್‌ಗೆ ಅಲ್ಲಿ ಕಡಿಮೆ ಇರುವುದರಿಂದ ಅಲ್ಲಿ ಸೇಲ್ಸ್ ಜಾಸ್ತಿಯಾಗುತ್ತದೆ, ಅವರಿಗೆ ಹೆಚ್ಚು ಆದಾಯ ಬರುತ್ತದೆ. ನಾವು ಹೆಚ್ಚು ಟ್ಯಾಕ್ಸ್ ಹಾಕಿರುವುವನ್ನು ಕಡಿಮೆ ಮಾಡಬೇಕು ಎಂಬುದು ಒಳ್ಳೆಯ ಸಲಹೆಯಾಗಿದೆ. That is why I feel it is better to bring it down. It is a good suggestion for action. ನಮಗೂ ಕೂಡ ಇದರಿಂದ ಹೆಚ್ಚು ವರಮಾನ ಬರಲು ಸಾಧ್ಯವಾಗುತ್ತದೆ. ಅಕ್ಕಪಕ್ಕದ ರಾಜ್ಯಗಳಲ್ಲಿ ಈ ತೆರಿಗೆಗಳು ಆದಷ್ಟು ಹತ್ತಿರದಲ್ಲಿರಬೇಕು.

ಶ್ರೀ ಆರ್.ಎಲ್. ಜಾಲಪ್ಪ : ಹೊರಗಡೆಯಿಂದ ರಿಜಿಸ್ಟರ್ ಮಾಡಿಕೊಂಡು ಇಲ್ಲಿಗೆ ಬರುತ್ತಾರೆ. ನಮ್ಮ ರಾಜ್ಯದಲ್ಲಿ ಟ್ಯಾಕ್ಸ್ ಅನ್ನು ಜಾಸ್ತಿ ಮಾಡಿದರೆ, ಈ ರೀತಿ ಮಾಡುತ್ತಾರೆ. Why not you consider it? ಫಾರಿನ್ ಕಾರುಗಳನ್ನು 4 ಸಾವಿರದಿಂದ ಈ ವರ್ಷ 2 ಸಾವಿರಕ್ಕೆ ಇಳಿಸಿದ್ದಾರೆ. ಹೊರಗಡೆಯಿಂದ ಬರತಕ್ಕ ಕಾರುಗಳಿಗೆ We will enhance it.

ಶ್ರೀ ಸಿ. ಬೈರೇಗೌಡ : ಎರಡು ವರ್ಷದ ಹಿಂದೆ ನಾನು ಕಾರು ಕೊಂಡುಕೊಂಡೆ, ಪಾಂಡುಚೇರಿಯಿಂದ ಬಂತು ಕೋಲಾರದಲ್ಲೇ ರಿಜಿಸ್ಟರ್ ಆಯಿತು. ಸುಮಾರು 7-8 ಸಾವಿರ ರೂಪಾಯಿ ಟ್ಯಾಕ್ಸ್ ಕಡಿಮೆಯಾಯಿತು. ಇದು ಪ್ರತಿದಿನ ಸಾರೋದ್ದಾರವಾಗಿ ನಡೆಯುತ್ತಿದೆ. ಟ್ರ್ಯಾಕ್ಟರ್ ಲಾರಿ, ಕಾರುಗಳು, ಎಲ್ಲಾ ಪ್ರತಿದಿನ ಬೇರೆ ಕಡೆಯಿಂದ ಕೊಂಡು ಕೊಂಡು ಇಲ್ಲಿಗೆ ತರುತ್ತಿದ್ದಾರೆ. ಇದರಿಂದ ನಮ್ಮ ರಾಜ್ಯದ ಬೊಕ್ಕಸಕ್ಕೆ ಎಷ್ಟು ಹಣ ಬರಬೇಕಾಗಿತ್ತೋ ಅಷ್ಟು ಹಣ ಪ್ರತಿದಿವಸ ನಷ್ಟವಾಗುತ್ತಿದೆ. ಇದನ್ನು ಊಹಿಸಲೂ ಕೂಡ ಸಾಧ್ಯವಿಲ್ಲ. ಉದಾಹರಣೆಗೆ ಸ್ಪೇರ್ ಪಾರ್ಟ್ಸ್‌ಗಳನ್ನು ಹೊಸೂರಿಗೆ ಹೋಗಿ ಖರೀದಿ ಮಾಡಿದರೆ ಕಡಿಮೆಗೆ ಸಿಗುತ್ತದೆ.

7.10 ಪಿ.ಎಂ.

ಆದರೆ ಬೆಂಗಳೂರಿನಲ್ಲಿ ಇದನ್ನು ಕೊಂಡುಕೊಂಡರೆ ಅದರ ಪ್ರೈಸ್ ಜಾಸ್ತಿಯಾಗುತ್ತದೆ. ನಾವು ತಮಿಳುನಾಡಿನ ಹೊಸೂರಿನಲ್ಲಿ ಕೊಂಡುಕೊಂಡರೆ ಏಳೆಂಟು ಸಾವಿರ ಕಡಿಮೆಯಾಗುತ್ತದೆ. ಇದನ್ನು ಸರಿದೂಗಿಸುವಂಥ ಕೆಲಸ ಮಾಡಿದರೆ, ನಮ್ಮ ರಾಜ್ಯಕ್ಕೆ ಬರುವಂಥ ಆದಾಯ ಹೆಚ್ಚಾಗುತ್ತದೆ. ಇದನ್ನು ಆದಷ್ಟು ಜಾಗ್ರತೆ ಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ನನಗೆ ಗೊತ್ತಿತ್ತು ತಾವು ಪಾಂಡಿಚೇರಿಯನ್ನು ಉದಾಹರಣೆಗೆ ಕೊಡುತ್ತೀರೆಂದು. ಅದಕ್ಕೇ ನಾನೇ ಮೊದಲು ಪಾಂಡಿಚೇರಿಯ ಬಗ್ಗೆ ಹೇಳಿದೆ. ಮೋಟಾರ್ ವೆಹಿಕಲ್ಸ್ ಟ್ಯಾಕ್ಸನ್ನು ಅಕ್ಕಪಕ್ಕ ರಾಜ್ಯಗಳಲ್ಲಿ ಗಮನಕ್ಕೆ ತೆಗೆದುಕೊಂಡರೆ Pondicherry is an outstanding example. That is why, I said that your suggestion is a very good suggestion for action. ನಾವೆಲ್ಲಾ ಸೇರಿ ಇದರ ಬಗ್ಗೆ ಚರ್ಚೆ ಮಾಡಿ ಒಂದು ನಿರ್ಧಾರಕ್ಕೆ ಬಂದರೆ ಬಹಳ ಒಳ್ಳೆಯದು ಎಂದು ನನ್ನ ಭಾವನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಬಗ್ಗೆ ರಿಸೋರ್ಸ್ ಮೊಬಿಲೈಸೇಷನ್ ಎಂದು ಒಂದು ಸಮಿತಿಯನ್ನು ಮಾಡಿ, ಅದರ ಮೀಟಿಂಗ್ ಕೂಡ ನಡೆದಿದ್ದು, ಅದರ ಪ್ರೊಸೀಡಿಂಗ್ ಇದೆ. ತಾವು ಅದನ್ನು ತೆಗೆದು ನೋಡಿದರೆ ಗೊತ್ತಾಗುತ್ತದೆ. ನಮ್ಮ ರಾಜ್ಯದಲ್ಲಿ ಸುಮಾರು ಒಂಬತ್ತರಿಂದ ಹತ್ತು ಸಾವಿರ ಬಸ್‌ಗಳು ಕೆಎಸ್‌ಆರ್.ಟಿ.ಸಿಯಲ್ಲಿ ಇವೆ. ಪ್ರೈವೇಟ್ ಸೆಕ್ಟಾರ್‌ನಲ್ಲಿ

ಏನು ಮಾಡುತ್ತಾರೆ ಎಂದರೆ, ಪ್ರತಿ ವರ್ಷ ಫಿಟ್‌ನೆಸ್ ಸರ್ಟಿಫಿಕೇಟ್ ತೆಗೆದುಕೊಳ್ಳುವುದಕ್ಕೆ ಮೋಟಾರ್ ವೆಹಿಕಲ್ಸ್ ಇನ್ಸ್‌ಪೆಕ್ಟರ್ ಹತ್ತಿರ ಬರುತ್ತಾರೆ. 35 ಸೀಟಿಗೆ ಎಂದು ಹೇಳಿ ಚಾರ್ಜ್ ಕಟ್ಟಿ, ಪರ್ ಹೆಡ್‌ಗೆ ಇಷ್ಟು ಎಂದು ನಾವು ಚಾರ್ಜ್ ಮಾಡುತ್ತೇವೆ. ಪರ್ ಹೆಡ್, ಪರ್ ಕ್ವಾರ್ಟರ್, ಪರ್ ಸೀಟ್ ಎಂದು ನಾವು ಫಿಕ್ಸ್ ಮಾಡುತ್ತೇವೆ. ಅದನ್ನು ಅವರು ಕೊಡುತ್ತಾರೆ. ಆರ್‌ಟಿಓ ಆಫೀಸ್‌ಗಳಿಂದ ಹೋದ ತಕ್ಷಣ ಆ ಮುವತ್ತೈದು ಸೀಟಿಗೆ ಇನ್ನೊಂದು 15 ಸೀಟುಗಳನ್ನು ಹಾಕಿಕೊಳ್ಳುತ್ತಾರೆ, ಒಟ್ಟಿಗೆ 50-55 ಸೀಟು ಇರುತ್ತದೆ. ನಮಗೂ ನಿಮಗೂ ಗೊತ್ತಿರುವ ಹಾಗೆ, ಇವತ್ತು ಯಾವುದೇ ಮೀಡಿಯಂ ಚಾಸಿ ಬಸ್ ತೆಗೆದುಕೊಂಡರೂ 55 ಜನ ಕಮ್‌ಫರ್ಟ್ ಆಗಿ ಕುಳಿತುಕೊಳ್ಳಬಹುದು. ಇದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಬೇಕಾದರೆ ತರಿಸಿ ನೋಡಿ, 30-35 ಜನಕ್ಕೆ ಚಾರ್ಜ್ ಕಟ್ಟಿರುತ್ತಾರೆ. ನಾನಿದ್ದಾಗ ಏನು ಮಾಡುತ್ತಿದ್ದೆ ಎಂದರೆ, ಕ್ಲಾಂಡೆಸ್ಟೈನ್ ಆಪರೇಷನ್ಸ್ ಬಗ್ಗೆ ಎಸ್.ಪಿ., ಡಿ.ಐ.ಜಿ.ಗಳನ್ನು ಕರೆಸಿ ಆಗಾಗ್ಗೆ ಇದರ ಬಗ್ಗೆ ಜಾಕ್‌ಪಾಟ್ ಚೆಕಿಂಗ್ ಎಂದು ಮಾಡಿಸುತ್ತಿದ್ದೆ. ಈ ರೀತಿ ಜಾಕ್‌ಪಾಟ್ ಚೆಕಿಂಗ್ ಮಾಡಿದಾಗ ಬಹಳಷ್ಟು ಜನರು ಸಿಕ್ಕಿಕೊಂಡು ನಾಲ್ಕೈದು ಕೋಟಿ ರೂಪಾಯಿ ಎರಡು-ಮೂರು ತಿಂಗಳಲ್ಲಿ ಟ್ಯಾಕ್ಸ್ ಇವೇಷನ್ ಸಿಕ್ಕಿತ್ತು. ನನಗನಿಸುತ್ತದೆ, ಕೊನೆಯ ಪಕ್ಷ ಹೀಗೆ ಮಾಡಿದರೆ ಸರ್ಕಾರಕ್ಕೆ ವರ್ಷಕ್ಕೆ ಹತ್ತು-ಹನ್ನೆರಡು ಕೋಟಿ ರೂ.ಗಳು ಆದಾಯ ಹೆಚ್ಚಾಗುತ್ತದೆ ಎಂದು. ಇದರ ಬಗ್ಗೆ ರಿಸೋರ್ಸ್ ಮೊಬಿಲೈಸೇಷನ್ ಮೀಟಿಂಗ್ ಮಾಡಿದಾಗ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ದಾಖಲೆಗಳನ್ನು ತೆಗೆಸಿ ಸಂಪೂರ್ಣವಾಗಿ ನೋಡಿ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಜೊತೆಗೆ ಮಾನ್ಯ ಸದಸ್ಯಣಿಯವರಾದ ಶ್ರೀಮತಿ ಮೋಟಮ್ಮನವರು ಕಾಫಿ ಪರ್ಚೇಸ್ ಟ್ಯಾಕ್ಸ್ ಬಗ್ಗೆ ಹೇಳಿದ್ದಾರೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳುತ್ತೇನೆ. ಷುಗರ್‌ಕೇನ್ ಪರ್ಚೇಸ್ ಟ್ಯಾಕ್ಸ್ ಬಗ್ಗೆ ಕೂಡ ಸರ್ಕಾರದ ಪರಿಶೀಲನೆಯಲ್ಲಿದೆ. ಆಡಳಿತ ಚುರುಕುಗೊಳಿಸುವ ಬಗ್ಗೆ ನಾನು ಮೊದಲೇ ಉತ್ತರ ಕೊಟ್ಟಿದ್ದೇನೆ. ತಾವು ಇದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಅದಕ್ಕೋಸ್ಕರವಾಗೇ ನಾವು ಪಂಚಸೂತ್ರ ಬಿಲ್ಲನ್ನು ಇಂಟ್ರೊಡ್ಯೂಸ್ ಮಾಡುತ್ತಿದ್ದೇವೆ ಎಂದು ಸಹ ನಾನು ಹೇಳಿದ್ದೇನೆ.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೇ, ಯೂನಿವರ್ಸಿಟಿ ಲೆವೆಲ್‌ನಲ್ಲಿ ಫಸ್ಟ್ ಕ್ಲಾಸ್ ಬಂದವರನ್ನು ಡೈರೆಕ್ಟ್ ಆಗಿ ಅಪಾಯಿಂಟ್ ಮಾಡಿಕೊಳ್ಳುತ್ತೇವೆಂದು ಹೇಳಿದ್ದೀರಿ ಆದರೆ ಈಗಾಗಲೇ ಅಸಿಸ್ಟೆಂಟ್ ಎಕ್ಸಕ್ಯೂಟೀವ್ ಇಂಜಿನಿಯರುಗಳ ರೆಕ್ರೂಟ್‌ಮೆಂಟ್ ಇವರಿಗೆ ಕೊಡದೇ ಅನ್ಯಾಯವಾಗಿದೆ. ಫಸ್ಟ್ ಕ್ಲಾಸ್ ಬಂದಂಥ ಹರಿಜನ ಗಿರಿಜನ ವಿದ್ಯಾರ್ಥಿಗಳ ಪಟ್ಟಿ ತಮ್ಮ ಹತ್ತಿರ ಇದೆ, ಅದನ್ನು ಇಲಾಖೆಗೆ ಕೂಡ ಕಳುಹಿಸಿದ್ದೀರಿ. ಅವರಿಗೆ ಮೊದಲು ಆದ್ಯತೆ ಕೊಡುತ್ತೀರಾ ಎಂಬುವ ಭರವಸೆಯನ್ನು ನಾನು ತಮ್ಮಿಂದ ಕೇಳಬಯಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸದಸ್ಯರ ಪ್ರಶ್ನೆ ನನಗೆ ಗೊತ್ತಿದೆ. ಈ ಸ್ಕೀಮ್ ನಾಲ್ಕೈದು ವರ್ಷದ ಮುಂಚೆ ಬಂತು. ಸರ್ಟನ್ ಪೋಸ್ಟ್‌ಗಳಿಗೆ ನೇಮಕ ಮಾಡುವಾಗ ಯಾರು ಹರಿಜನ ಗಿರಿಜನರಲ್ಲಿ ಹೆಚ್ಚು ಮಾರ್ಕ್ಸ್‌ನ್ನು ಪಡೆದಿರುತ್ತಾರೋ ಅಂಥವರಿಗೆ ಇಂಟರ್‌ವ್ಯೂ ಇಲ್ಲದೆಯೇ ಡೈರೆಕ್ಟ್ ಅಪಾಯಿಂಟ್ ಮಾಡಬೇಕೆಂದು ತೀರ್ಮಾನವಾಯಿತು. It was decided to appoint them for certain posts directly without sending them to any of these interviews. But, It was questioned in the High Court & there was a stay order. But later [illegible]

ವೇಕೇಟ್ ಆಯಿತು. ಇದಾದಮೇಲೆ ಮಾನ್ಯ ವೀರೇಂದ್ರ ಪಾಟೀಲ್‌ರವರ ಮಂತ್ರಿಮಂಡಲದಲ್ಲಿ ನಾನು ಕೃಷಿ ಮತ್ತು ತೋಟಗಾರಿಕೆ ಸಚಿವನಾಗಿದ್ದಾಗ Our Department was the first Department to give appointment to SC persons.

ನಾವು ಮೊಟ್ಟಮೊದಲನೆಯದಾಗಿ ನಮ್ಮ ಇಲಾಖೆಯಲ್ಲಿ ಡೈರೆಕ್ಟ್ ಆಗಿ ಅಪಾಯಿಂಟ್‌ಮೆಂಟ್ ಆರ್ಡರನ್ನು ಕೊಟ್ಟಿದ್ದೆವು. ಆ ರೀತಿಯಾದ ಕಾರ್ಯಕ್ರಮ ಇದೆ. ಈಗಾಗಲೇ ಕೆಲವು ಇಲಾಖೆಗಳಲ್ಲಿ ಇದನ್ನು ಕೊಡಲಾಗಿದೆ. ಮತ್ತೆ ಕೆಲವು ಇಲಾಖೆಗಳಲ್ಲಿ ಕೊಡಬೇಕಾಗಿದೆ. ಕೊಡುತ್ತೇವೆ. ಈ ಕಾರ್ಯಕ್ರಮವನ್ನು ಮುಂದುವರಿಸುತ್ತೇವೆ.

ಶ್ರೀ ಕರಿಯಣ್ಣ : ಈಗಾಗಲೇ ಅಸಿಸ್ಟೆಂಟ್ ಎಗ್ಸಿಕ್ಯೂಟೀವ್ ಇಂಜಿನಿಯರುಗಳ ರೆಕ್ರೂಟ್‌ಮೆಂಟ್ ಮಾಡಿಕೊಂಡಿದ್ದೀರಿ ಎಂದು ತಿಳಿದು ಬಂದಿದೆ. ಅದಕ್ಕಿಂಥ ಮುಂಚಿತವಾಗಿ ಇವರಿಗೆ ಕೊಡುತ್ತೀರಾ ಎಂದು ಕೇಳುತ್ತಿದ್ದೇನೆ.

(ಅಧ್ಯಕ್ಷರು ಪೀಠದಲ್ಲಿ ಉಪಸ್ಥಿತರಿದ್ದರು)

ಶ್ರೀ ಎಸ್. ಬಂಗಾರಪ್ಪ : ಎಷ್ಟು ಪೋಸ್ಟ್ ಎನ್ನತಕ್ಕಂಥಾದ್ದು ಇಲ್ಲ. ಪೋಸ್ಟ ಎಷ್ಟು ಎನ್ನತಕ್ಕಂಥಾದ್ದು ರಿಕ್ರೂಟ್‌ಮೆಂಟ್ ಇಲ್ಲದೆ ಎಸ್.ಸಿ : ಎಸ್.ಟಿ.ಗೆ ಆನ್ ದಿ ಬೇಸಿಸ್ ಆಫ್ ಮೆರಿಟ್ ಕೊಡುತ್ತಿದ್ದೇವೆ. ಇದನ್ನು ಬಿಟ್ಟು ಉಳಿದವುಗಳು ಪಿಎಸ್‌ಸಿಗೆ ಹೊರಟು ಹೋಗುತ್ತದೆ. ಇಷ್ಟು ಪೋಸ್ಟ್‌ಗಳನ್ನು ಡೈರೆಕ್ಟ್ ರಿಕ್ರೂಟ್‌ಮೆಂಟ್ ಆನ್ ದಿ ಬೇಸಿಸ್ ಆಫ್ ಮೆರಿಟ್ ಆಫ್ ಎಸ್‌ಸಿ : ಎಸ್‌ಟಿಗಳಿಗೆಂದು ನಾವು ಇಟ್ಟುಕೊಂಡು ಬಿಡುತ್ತೇವೆ ಇದನ್ನು ಬಿಟ್ಟು ಉಳಿದವುಗಳ ನೇಮಕಾತಿಗಾಗಿ ಅವರಿಗೆ ಕಳುಹಿಸುತ್ತೇವೆ. ಇದು ಸರಿಯಾಗಿ ನಡೆಯುತ್ತಿರುತ್ತದೆ. ಅದಕ್ಕೆ ಏನೂ ತೊಂದರೆ ಬರುವುದಿಲ್ಲ.

ಶ್ರೀ ಕೆ.ಬಿ. ಕೋಳಿವಾಡ : ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರದ ಅನೇಕ ಇಲಾಖೆಗಳಲ್ಲಿ ಅವಶ್ಯಕತೆಗಿಂತ ಹೆಚ್ಚಾಗಿ ಅನೇಕ ಉನ್ನತ ಹುದ್ದೆಗಳು ಸೃಷ್ಟಿಸಲ್ಪಟ್ಟಿದೆ. ಉದಾಹರಣೆಗೆ ಪೋಲೀಸ್ ಇಲಾಖೆ ಮತ್ತು ಪಿಡಬ್ಲ್ಯೂಡಿ ಇಲಾಖೆಗಳಲ್ಲಿ ಅನೇಕ ಡಿಐಜಿಗಳು ಐ.ಜಿ.ಗಳು, ಪಿ.ಡ.ಬ್ಲ್ಯೂ.ಡಿ ಇಲಾಖೆಯಲ್ಲಿ ಅನೇಕ ಚೀಫ್ ಇಂಜಿನೀಯರ್ಸ್‌ಗಳಿದ್ದಾರೆ. ಇಷ್ಟು ಜನರ ಅವಶ್ಯಕತೆ ಇದೆಯೇ? ಈ ಸರ್ಕಾರದಲ್ಲಿ ನೌಕರರ ವರ್ಗ 4 ಪರ್ಸೆಂಟ್ ಇದ್ದು, ಸರ್ಕಾರದ ಒಟ್ಟು ಉತ್ಪನ್ನದಲ್ಲಿ ಸುಮಾರು 50 ಪರ್ಸೆಂಟ್ ಪಾಲನ್ನು ಕೇವಲ ಈ ಸರ್ಕಾರಿ ಬ್ಯೂರೋಕ್ರಸಿಗೆ ಹೋಗುವುದರಿಂದ ಈ ಉನ್ನತ ಹುದ್ದೆಗಳು ಮತ್ತು ಎಲ್ಲೆಲ್ಲಿ ಹೆಚ್ಚು ಹುದ್ದೆಗಳಿವೆ ಅವುಗಳನ್ನು ಕಡಿಮೆ ಮಾಡಲಿಕ್ಕೆ ಏನಾದರೂ ಕಾರ್ಯಕ್ರಮ ಸರ್ಕಾರ ಹಾಕಿಕೊಳ್ಳುತ್ತದೆಯೇ? ಎರಡನೆಯದಾಗಿ, ಈ ಸೆಕ್ರೆಟೇರಿಯಟ್‌ಯೊಳಗೆ ಪ್ರೊಸೀಜರ್ ಡಿಲೇ ವಿಪರೀತ ಇದೆ. ಬಹುತೇಕ ಬ್ರಿಟೀಷರ ಕಾಲದಿಂದ ಬಂದಂಥ ಒಂದು ಪ್ರೊಸೀಜರ್ ಇಲ್ಲಿ ನಡೆಯುತ್ತಿದೆಯೇನೋ ಎಂಬ ಸಂಶಯ ಬಂದಿದೆ. ಈ ಡಿಲೇಯನ್ನು ಕಡಿಮೆ ಮಾಡಲಿಕ್ಕೆ ಏನಾದರೂ ಒಂದು ರೀಫಾರ್ಮನ್ನು ಕಂಡುಹಿಡಿಯಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಯೇ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಪ್ರೊಸೀಜರಲ್ ಡಿಲೇಯನ್ನು ಕಡಿಮೆ ಮಾಡಬೇಕೆಂಬ ಅಭಿಪ್ರಾಯ ನಾವೆಲ್ಲರೂ ಒಪ್ಪಲೇಬೇಕು. ಈಗ ನಾವು "ಪಂಚಸೂತ್ರ" ಬಿಲ್ ಏನು ತರುತ್ತಿದ್ದೇವೆ. ಅದರಲ್ಲಿ ಆ ವಿಚಾರವನ್ನು ಪ್ರಸ್ತಾಪ ಮಾಡತಕ್ಕಂಥ ಪ್ರಯತ್ನ ನಾವು ಇಟ್ಟುಕೊಂಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : 'ಪಂಚಸೂತ್ರ' ಎಂದು ಹೇಳಿ ನಮ್ಮ ಮೂಗಿನ ... ಕನ್ನಡಿಗರ ಮೇಲೆ ಪಂಚಸೂತ್ರ

ಪಂಚಸೂತ್ರ ಎಂದು ನಾವಂತೂ ಬಾಯಿ ಬಿಟ್ಟುಕೊಂಡು ಕುಳಿತಿದ್ದೇವೆ. ಅದ್ಯಾವ ಸೂತ್ರವೋ ದೇವರೇ ಬಲ್ಲ.

ಶ್ರೀ ಬಸಪ್ಪ ಹೆಚ್. ಬನ್ನಿಕೋಡ್ : ಅದೊಂದು ಹೊಸ ಪ್ರಯೋಗ.

ಶ್ರೀ ಸಿ. ಬೈರೇಗೌಡ : 'ಪಂಚಸೂತ್ರ' ಎಂದು ಹೇಳಿಕೊಂಡು ನೀವೇನಾದರೂ 'ಪಂಚತಂತ್ರ' ಮಾಡುತ್ತಿದ್ದೀರಾ?

ಶ್ರೀ ಎಸ್. ಬಂಗಾರಪ್ಪ : ಬೇಡ ಎಂದರೆ ಬಿಟ್ಟುಬಿಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಬಿಟ್ಟುಬಿಡಿ ಎಂದಲ್ಲ. ಪಂಚಸೂತ್ರದ ಉದ್ದೇಶವೇನು? ಯಾವ ಸೂತ್ರಗಳು? ಎಲ್ಲೆಲ್ಲಿಗೆ ಕಳುಹಿಸುತ್ತಿದ್ದೀರಿ? ಪಂಚಸೂತ್ರವೆಂದರೆ ಏನು ಇದರ ವ್ಯಾಖ್ಯಾನ ಏನು? ಇದರ ಬಗ್ಗೆ ನಮಗೆ ಅರ್ಥವೇ ಆಗಿಲ್ಲ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ವಾಟಾಳ್ ನಾಗರಾಜ್‌ರಾಯರಿಗೆ ಸ್ವಲ್ಪ ಸಹನೆ ಇರಬೇಕು.

ಶ್ರೀ ವಾಟಾಳ್ ನಾಗರಾಜ್ : ನಾನು 'ರಾಯರು 'ಅಲ್ಲ. ಇದನ್ನು ನಾನು ಹಕ್ಕುಭಾದ್ಯತೆಗೆ ತರಬೇಕಾಗುತ್ತದೆ. ನಾನು ವಾಟಾಳ್ ನಾಗರಾಜ್ ಅಷ್ಟೆ. ದಯಮಾಡಿ ನನ್ನನ್ನು 'ರಾಯರು' ಎಂದು ಕರೆಯಬೇಡಿ.

ಶ್ರೀ ಎಸ್. ಬಂಗಾರಪ್ಪ : ಆದುದರಿಂದ ಈ 'ಪಂಚಸೂತ್ರ' ಎನ್ನತಕ್ಕಂಥಾದ್ದನ್ನು ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದ್ದೇವೆ. ಅದಕ್ಕಾಗಿ 'ಪಂಚಸೂತ್ರ' ಎಂದು ಹೇಳಲೇ ಬೇಕಾಗಿದೆ. ಆಡಳಿತವನ್ನು ಚುರುಕುಗೊಳಿಸುವ ವಿಚಾರದಲ್ಲಿ ಡಿಲೇ ಕಡಿಮೆ ಮಾಡುವ ವಿಚಾರದಲ್ಲಿ, ಪ್ರೊಸೀಜರಲ್ ಮ್ಯಾಟರ್ ಸಿಂಪ್ಲಿಫೈ ಮಾಡುವ ವಿಚಾರದಲ್ಲಿ ಉದ್ದೇಶ ಇಟ್ಟುಕೊಂಡು ತರುತ್ತಿದ್ದೇವೆ. ಮತ್ತೆ ಶ್ರೀ ಕೋಳಿವಾಡರವರು ಒಂದು ಪ್ರಶ್ನೆ ಮಾಡಿದ್ದಾರೆ. ಕೆಲವು ಹೆಚ್ಚಿನ ಪೋಸ್ಟ್‌ಗಳು ಇವೆ. ಅವು ಪಿ.ಡಬ್ಲ್ಯೂ.ಡಿ. ಯಲ್ಲಿರುವ ಚೀಫ್ ಇಂಜಿನೀಯರ್ ಇರಬಹುದು ಮತ್ತು ಪೋಲೀಸ್ ಇಲಾಖೆಯ ಡಿಐಜಿ,ಐಜಿಪಿ, ಇರಬಹುದು ಒಂದೊಂದು ಸಾರಿ ಗಲಾಟೆ ನಡೆದಾಗ ಜಾಸ್ತಿ ಪೋಸ್ಟ್‌ಗಳನ್ನು ಮಾಡಿ ಎನ್ನುವ ಸಲಹೆ ಬರುತ್ತದೆ. ಈಗ ಇರುವುದನ್ನು ಕಡಿಮೆ ಮಾಡುವುದಕ್ಕೆ ಬರುವುದಿಲ್ಲ. ಮುಂದೆ ಜಾಸ್ತಿ ಆಗದ ಹಾಗೆ ನೋಡಿಕೊಳ್ಳುವ ಜವಾಬ್ದಾರಿ, ನಿರ್ವಹಣೆ ಮಾಡಬೇಕಾದಂಥ ಅವಶ್ಯಕತೆ ಇದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳೋಣ. ಆದರೆ, ಲೋವರ್ ರಂಗ್ ಎನ್ನತಕ್ಕಂಥ ಕೆಲವು ಪೋಸ್ಟ್‌ಗಳು ಏನಿವೆ, ಅವನ್ನು ನೋಡಿಕೊಳ್ಳಬೇಕು, ಆಯಾ ಕೇಸಿನ ಮೇಲೆ ಆಯಾ ಇಲಾಖೆಯ ಜವಾಬ್ದಾರಿ ಆ ಕೆಲಸಗಾರರ ಮೇಲೆ ಇರುತ್ತದೆ. ಪೋಲೀಸರೇ ಬೇಕಾಗಿಲ್ಲ ಎಂದು ಹೇಳುವಂಥ ಒಂದು ಕಾಲ ಇತ್ತು. ಈಗ ಪೋಲೀಸರಿಲ್ಲದೆ ಹೋಗುವುದಕ್ಕೆ-ಬರುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಕಾಲ ಈಗ ಬಂದುಬಿಟ್ಟಿದೆ.

ಶ್ರೀ ವಾಟಾಳ್ ನಾಗರಾಜ್ : ಬೇಡ ಎಂದರೆ ಅವರನ್ನು ತೆಗೆಯಿರಿ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಜಾಸ್ತಿ ರಿಕ್ರೂಟ್‌ಮೆಂಟ್ ಮಾಡಿ ಎನ್ನತಕ್ಕಂಥ ಸಲಹೆಗಳು ಸದನದ ಎಲ್ಲಾ ಮೂಲೆಗಳಿಂದ ಬರುತ್ತದೆ. ಅದೇ ರೀತಿಯಾಗಿ ಗೃಹ ಇಲಾಖೆಯಿಂದ ಹೆಚ್ಚಾಗಿ ನೇಮಕಾತಿ ಮಾಡುವುದಕ್ಕೆ ಕೆಳಗಡೆ ಇರತಕ್ಕಂಥ ಪೋಸ್ಟ್‌ಗಳನ್ನು ತುಂಬುವುದಕ್ಕೋಸ್ಕರ ನಮಗೆ ಖರ್ಚು ಜಾಸ್ತಿಯಾಗುತ್ತದೆ. ಆದರೆ, ಕೆಲವೊಮ್ಮೆ ಅನಿವಾರ್ಯ. ಆದುದರಿಂದ ಇಲಾಖೆಯ ವಿಚಾರ, ಅವರ ಬೇಡಿಕೆ ಯಾವ ರೀತಿ ಬರುತ್ತದೆ, ಕಾರಣಗಳು ಏನು ಎನ್ನುವುದನ್ನು ನೋಡಿ

ಶ್ರೀ ಎಚ್. ವಿಶ್ವನಾಥ್ : ಮಾನ್ಯ ಅಧ್ಯಕ್ಷರೇ, ಶ್ರೀ ಬಂಗಾರಪ್ಪನವರು ಈ ರಾಜ್ಯದ ಹೆಗ್ಗಳಿಕೆ, ಹಿಂದಳಿದ ವರ್ಗಕ್ಕೆ ಸೇರಿದ ಮುಖ್ಯಮಂತ್ರಿಗಳು ಶ್ರೀ ಬಂಗಾರಪ್ಪನವರು, ಅವರು ಮಂತ್ರಿಗಳಾಗಿದ್ದಾಗ, ವಿರೋಧಪಕ್ಷದ ನಾಯಕರಾಗಿದ್ದಾಗ ಈ ರಾಜ್ಯದ 62 ಶೇಕಡ ಭಾಗ ಹಿಂದುಳಿದ ಜನಾಂಗಗಳ ಆಶಾಕಿರಣವಾಗಿರತಕ್ಕ ಚಿನ್ನಪ್ಪರೆಡ್ಡಿ ವರದಿಯನ್ನು ಜಾರಿಗೆತರಬೇಕೆಂದು ಹಲವು ಸಲ ಒತ್ತಾಯ ಮಾಡಿದ್ದಾರೆ. ತಾವು ಮುಖ್ಯಮಂತ್ರಿಗಳಾಗಿ 10-11 ತಿಂಗಳುಗಳು ಕಳೆದರೂ ಸಹಾ. ಚಿನ್ನಪ್ಪರೆಡ್ಡಿ ವರದಿ ಇನ್ನೂ ನೆನೆಗುದಿಗೆ ಬಿದ್ದಿದೆ. ಇದನ್ನು ತಾವು ಯಾವಾಗ ಜಾರಿಗೆ ತರುತ್ತೀರಿ? ಮತ್ತು ಯಾವ ರೀತಿ ಕಾರ್ಯಕ್ರಮಗಳನ್ನು ತಾವು ಹಾಕುತ್ತೀರಿ? ಈ ರಾಜ್ಯದ 62 ಶೇಕಡ ಹಿಂದುಳಿದ ಜನರು ತಮ್ಮನ್ನು, ತಮ್ಮ ಸರ್ಕಾರವನ್ನು ಎದುರು ನೋಡುತ್ತಿದ್ದಾರೆ. ಆದುದರಿಂದ, ಸರಿಯಾದ ರೀತಿಯಲ್ಲಿ ನನ್ನ ಪ್ರಶ್ನೆಗೆ, ನನ್ನ ಸಂಶಯಕ್ಕೆ ತಾವು ಉತ್ತರ ಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ನಾನು ಆಗಲೇ ಉತ್ತರ ಕೊಟ್ಟೆ. ಆ ಸಮಯದಲ್ಲಿ ಇವರು ಇದ್ದರೋ ಏನೋ ಗೊತ್ತಿಲ್ಲ. ಮಾನ್ಯ ಜಾಲಪ್ಪನವರು ಅದರ ಬಗ್ಗೆ ಕೇಳಿದ್ದರು ಉತ್ತರ ಕೊಟ್ಟಿದ್ದೇನೆ. ಈ ಬಗ್ಗೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಉತ್ತರ ಕೊಟ್ಟಿದ್ದರೆ ಮತ್ತೊಮ್ಮೆ ಪ್ರತಿಪಾದನೆ ಮಾಡುವ ಅವಶ್ಯಕತೆ ಇಲ್ಲ. ಮಾನ್ಯ ಸದಸ್ಯರು ಈಗತಾನೆ ಬಂದಿದ್ದನ್ನು ನಾನು ನೋಡಿದೆ. ಈಗ ಬೇಡಿಕೆ ಮೇಲೆ ಚರ್ಚೆ ಮುಕ್ತಾಯವಾಯಿತು. ನಾನು ಪ್ರಸ್ತಾಪವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾಪವೇನೆಂದರೆ:

"ದಿನಾಂಕ 31.3.92ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ 23,30,26,54,50,59,42,51,52,53,55,56,17,18,19,20, 22, 39, 40, 41, 43, ಮತ್ತು 21 ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರು ಮಾಡಿರುವ ಮೊಬಲಗನ್ನು ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಲ್ಪಟ್ಟ ಮೊಬಲಗಿಗೆ ಮೀರದ ಮೊತ್ತವನ್ನು ಮಂಜೂರು ಮಾಡುವುದು"

ಪ್ರಸ್ತಾಪವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

ಅಧ್ಯಕ್ಷರ ಆದೇಶದಂತೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿತವಾಗಿದೆ.

ಅಭಿಯಾಚನೆ ಕ್ರಮಾಂಕ 17 - ವರಮಾನ ತೆರಿಗೆ, ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳು,

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವರಮಾನ ತೆರಿಗೆ ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 72, 38, 92,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 18-ವಿಮೆ, ಖಜಾನೆ ಮತ್ತು ಲೇಖಾ ಇಲಾಖೆಗಳ ಆಡಳಿತ.

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಮೆ, ಖಜಾನೆ ಮತ್ತು ಲೇಖಾ ಇಲಾಖೆಗಳ ಆಡಳಿತಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 16,37,80,000ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 19- ವಿಶ್ರಾಂತಿವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 297,80,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 20- ಸರಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು,

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 2,90,00,000 ರೂ.ಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 13,98,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 22- ಇತರ ವಿವಿಧ ಸೇವೆಗಳು

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಇತರೇ ವಿವಿಧ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 22,32,83,000 ರೂ,ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 6,03,00,000 ರೂ.ಗಳಿಗೆ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 39- ಚುನಾವಣೆಗಳು

ಶ್ರೀಯುತರೇ,

ರಾಜ್ಯಪಾಲ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚುನಾವಣೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 12,45,99,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 40 - ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ

ಶ್ರೀಯುತರೇ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯಪಾಲರು ಮಂತ್ರಿಗಳು ಮತ್ತು ಲೋಕಸೇವಾ ಆಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,73,46,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 41- ಸಚಿವಾಲಯ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಚಿವಾಲಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 19,55,16,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 43- ಮುಖ್ಯಮಂತ್ರಿಯವರ ವಿವಿಧ ಅಭಿಯಾಚನೆ

ಶ್ರೀಯುತಗೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುಖ್ಯಮಂತ್ರಿಯವರ ವಿವಿಧ ಅಭಿಯಾಚನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 22,20,47,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 13,42,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

(ಸಾರಿಗೆ, ವಕ್ಫ್ ಮತ್ತು ಹಜ್ ಸಮಿತಿ ಮಂತ್ರಿಗಳು)

ಅಭಿಯಾಚನೆ ಕ್ರಮಾಂಕ 26- ವಾಹನ ತೆರಿಗೆ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾಹನ ತೆರಿಗೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 9,89,16,000 ರೂ.ಗಳಿಗಿಂತ ಮೀರದ

ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 30-ರಸ್ತೆ ಸಾರಿಗೆ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆ ಸಾರಿಗೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 50,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 54 - ವಕ್ಫ್

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಕ್ಫ್‌ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 90,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 42 - ಜಿಲ್ಲಾಡಳಿತ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜಿಲ್ಲಾಡಳಿತಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 32,48.72,000ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು(ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ 50- ಭೂ ಕಂದಾಯ ಇತ್ಯಾದಿ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂ ಕಂದಾಯ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 70,23.78,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10,01,75,000ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 51-ಮುದ್ರಾಂಕ (ಸ್ಟಾಂಪುಗಳು) ಮತ್ತು ನೋಂದಣಿ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುದ್ರಾಂಕ (ಸ್ಟಾಂಪು)ಗಳು ಮತ್ತು ನೋಂದಣಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 7,72,97,000

ರೂ.ಗಳಿಗಿಂತ ಮೀರಿದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 52- ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೈಸರ್ಗಿಕ ವಿಕೋಪಗಳ ಪರಿಹಾರಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 27,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 23-ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 74,88,06,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ,

(ಗಣಿ ಮತ್ತು ಭೂ ವಿಜ್ಞಾನ ರಾಜ್ಯಮಂತ್ರಿಗಳು)

ಅಭಿಯಾಚನೆ ಕ್ರಮಾಂಕ 7-ಗಣಿಗಳು ಮತ್ತು ಭೂ ವಿಜ್ಞಾನ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗಣಿಗಳು ಮತ್ತು ಭೂ ವಿಜ್ಞಾನಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 8,40,41,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಮಂಜೂರು ಸೇರಿದಂತೆ ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 59 - ಕಾರ್ಮಿಕ ಮತ್ತು ಉದ್ಯೋಗ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಾರ್ಮಿಕ ಮತ್ತು ಉದ್ಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 45,85,52,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಶ್ರೀ ರಾಜ ಅಮರೇಶ್ ನಾಯಕ್ (ಧಾರ್ಮಿಕ ದತ್ತಿ ರಾಜ್ಯ ಮಂತ್ರಿಗಳು)

ಅಭಿಯಾಚನೆ ಕ್ರಮಾಂಕ 53-ಮತೀಯ ಮತ್ತು ಧರ್ಮದಾಯ ಸಂಸ್ಥೆಗಳು ಇತ್ಯಾದಿ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮತೀಯ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 12,22,22,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಎಸ್.ಆರ್. ಮೋರೆ (ಸಹಕಾರ ರಾಜ್ಯ ಮಂತ್ರಿಗಳು)

ಅಭಿಯಾಚನೆ ಕ್ರಮಾಂಕ 55 - ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು)

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರಕ್ಕೆ (ಕ್ರಮ ಪಡಿಸಿದ ಮಾರುಕಟ್ಟೆಗಳ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 56,50,18,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 18,97,02,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 56- ಕ್ರಮಪಡಿಸಿದ ಮಾರುಕಟ್ಟೆಗಳು

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗಳ್ಳುವ ಆರ್ಥಿಕ ವರ್ಷದಲ್ಲಿ ಕ್ರಮಪಡಿಸಿದ ಮಾರುಕಟ್ಟೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 13,15,98,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ,

ಅಧ್ಯಕ್ಷರು: ಈಗ ಬೇಡಿಕೆಗಳನ್ನು ಮಂಡಿಸುವುದು.

ಅಭಿಯಾಚನೆ ಕ್ರಮಾಂಕ 25-ರಾಜ್ಯದ ಅಬಕಾರಿ

ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯದ ಅಬಕಾರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 15,11,98,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ: 27- ಪೋಲೀಸ್

ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪೋಲೀಸ್ ಸೇವೆಗಳಿಗೆ ಸಂದಾಯ ಮಾಡುವಲ್ಲಿ

ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 202,95,90,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 28- ಜೈಲು

ಶ್ರೀ ಡಿ.ಕೆ. ಶಿವಕುಮಾರ್ (ಬಂದೀಖಾನ್ ಮತ್ತು ಗೃಹರಕ್ಷಕ ರಾಜ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜೈಲಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 7,68,23,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ : 11-ಲೇಖನ ಸಾಮಗ್ರಿ ಮತ್ತು ಮುದ್ರಣ

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೇಖನ ಸಾಮಗ್ರಿ ಮತ್ತು ಮುದ್ರಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 15,85,77,000ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ : 12- ಉಚ್ಚ ಶಿಕ್ಷಣ

ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉಚ್ಚ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 207,98,16, 000ರೂ.ಗಳಿಗಿಂದ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 25,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನ.

ಅಭಿಯಾಚನೆ ಕ್ರಮಾಂಕ : 15 - ಪ್ರಾಥಮಿಕ ಶಿಕ್ಷಣ

ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 4,84,26,74,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ

ಅಭಿಯಾಚನೆ ಕ್ರಮಾಂಕ : 16 - ಸೆಕೆಂಡರಿ ಶಿಕ್ಷಣ

ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸೆಕೆಂಡರಿ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 2,85,51,37,000

ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ : 37 - ರಾಜ್ಯ ವಿಧಾನ ಮಂಡಲ

ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯ ವಿಧಾನ ಮಂಡಲಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 9,19,87,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ : 38 - ನ್ಯಾಯ ಪರಿಪಾಲನೆ

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನ್ಯಾಯ ಪರಿಪಾಲನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 36,85,45,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ : 1 -ಭೂಸಾರ ಮತ್ತು ಜಲ ರಕ್ಷಣೆ, ವ್ಯವಸಾಯ (ತೋಟಗಾರಿಕೆ ಮತ್ತು ಖುಷ್ಕಿ ಭೂಮಿ ಅಭಿವೃದ್ಧಿ ಹೊರತು)

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂಸಾರ ಜಲರಕ್ಷಣೆ ಮತ್ತು ವ್ಯವಸಾಯಕ್ಕೆ (ತೋಟಗಾರಿಕೆ ಮತ್ತು ಖುಷ್ಕಿ ಭೂಮಿ ಅಭಿವೃದ್ಧಿ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 134,97,2,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 17,92,50,000 ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ : 2 - ಖುಷ್ಕಿ ಭೂಮಿ ಅಭಿವೃದ್ಧಿ

ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಖುಷ್ಕಿ ಭೂಮಿ ಅಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 21,25,91,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ : 3- ತೋಟಗಾರಿಕೆ

ಶ್ರೀ ಎಂ. ಎಸ್. ಆತ್ಮಾನಂದ (ತೋಟಗಾರಿಗೆ ರಾಜ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ತೋಟಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು

ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 26,21,32,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 41,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ : 4- ಪಶುಸಂಗೋಪನಾ ಮತ್ತು ಡೈರಿ ಅಭಿವೃದ್ಧಿ

ಶ್ರೀ ಬಸವರಾಜಪಾಟೀಲ್ (ಪಶುಸಂಗೋಪನೆ ರಾಜ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪಶು ಸಂಗೋಪನಾ ಮತ್ತು ಡೈರಿ ಅಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 54,,40,38,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ : 44 - ಯೋಜನಾ ಇಲಾಖೆಯ ಅಭಿಯಾಚನೆಗಳು ಇತ್ಯಾದಿ

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಯೋಜನೆ ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯೋಜನಾ ಇಲಾಖೆಯ ಅಭಿಯಾಚನೆಗಳು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 86,74,88,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ : 10- ರೇಷ್ಮೆ ವ್ಯವಸಾಯ

ಶ್ರೀ ವಿ. ಮುನಿಯಪ್ಪ (ರೇಷ್ಮೆ ವ್ಯವಸಾಯ ರಾಜ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇಷ್ಮೆ ವ್ಯವಸಾಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 82,22,32,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 9,33,29,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ : 6- ಉದ್ಯಮಗಳು (ಚಿಕ್ಕಪುಟ್ಟ ಉದ್ಯಮಗಳು, ಸಹಕಾರ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯ ಹೊರತು)

ಶ್ರೀಮತಿ ಮನೋರಮ ಮಧ್ವರಾಜ್ (ದೊಡ್ಡ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉದ್ಯಮಗಳಿಗೆ (ಚಿಕ್ಕ ಪುಟ್ಟ ಉದ್ಯಮಗಳು, ಸಹಕಾರ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯದಿಂದ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 35,23,74,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 12,13,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ

ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ: 9-ಸಹಕಾರ ಉದ್ಯಮಗಳು

ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರ ಉದ್ಯಮಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 2,74,96,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 8;52,14,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ :8 - ಚಿಕ್ಕಪುಟ್ಟ ಉದ್ಯಮಗಳು

ಶ್ರೀ ನಜೀರ್ ಅಹಮ್ಮದ್ (ಸಣ್ಣ ಪ್ರಮಾಣದ ಕೈಗಾರಿಕೆಗಳ ರಾಜ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚಿಕ್ಕಪುಟ್ಟ ಉದ್ಯಮಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 54,48,34,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ : 7- ಗಣಿಗಳು ಮತ್ತು ಭೂ ವಿಜ್ಞಾನ

ಶ್ರೀ ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗಣಿಗಳು ಮತ್ತು ಭೂ ವಿಜ್ಞಾನಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 8,40,41,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ : 60- ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣ

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 115,36,20,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3,40,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ : 61 - ಮಹಿಳಾ ಮತ್ತು ಮಕ್ಕಳ ಕಲ್ಯಾಣ

ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚವನು [illegible]

141,88,76,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ : 31- ವೈದ್ಯಕೀಯ, ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ ಸೇವೆಗಳು

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವೈದ್ಯಕೀಯ, ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 305,88,79,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ : 29- ವಾರ್ತ ಮತ್ತು ಪ್ರವಾಸೋದ್ಯಮ

ಶ್ರೀ ಬಿ. ಶಿವಮೂರ್ತಿ (ವಾರ್ತಾ ಮತ್ತು ಪ್ರಮಾಸೋದ್ಯಮ ರಾಜ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ರಾಜ್ಯಾಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾರ್ತಾ ಮತ್ತು ಪ್ರವಾಸೋದ್ಯಮಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 10,49,58,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 110,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು(ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 13- ಯುವಜನ ಸೇವೆ

ಶ್ರೀ ಎಸ್. ರಮೇಶ್ (ಯುವಜನ ಸೇವೆ ರಾಜ್ಯ ಮಂತ್ರಿಗಳು) : ಮಾನ್ಯ ಅಧಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯುವಜನ ಸೇವೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 15,86,15,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ-14 ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ

ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 6,27,59,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಶ್ರೀ ಈ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅರಣ್ಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂತ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 111,84,33,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 25,24,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು : ಈ ಎಲ್ಲಾ ಬೇಡಿಕೆಗಳೂ ಈಗ ಸಭೆಯ ಮುಂದೆ ಚರ್ಚೆಗೆ ಇವೆ.

ಶ್ರೀ ಆರ್. ವಿ. ದೇಶಪಾಂಡೆ : ಚರ್ಚೆಗೆ ಅವಕಾಶ ಇಲ್ಲ, ಟೈಂ ಇಲ್ಲ. ಅಪ್ರೋಪ್ರಿಯೇಷನ್ ಬಿಲ್ ಪಾಸ್ ಮಾಡಬೇಕಾಗಿದೆ. ಇದನ್ನು ಗಿಲಿಟನ್‌ಗೆ ಹಾಕಿ ಮುಗಿಸಿಕೊಂಡು ಹೋಗಬಹುದು.

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾವು ಒಪ್ಪಿಕೊಂಡಿರುವಂತೆ 23ನೇ ತಾರೀಖು ಇದನ್ನು ಮುಗಿಸಿಕೊಡುವುದಕ್ಕೆ ಸರ್ಕಾರಕ್ಕೆ ನಾವು ಸಹಕಾರ ಕೊಡಬೇಕಾಗುತ್ತದೆ. ನಮಗೆ ಇದರ ಬಗ್ಗೆ ಚರ್ಚೆ ಮಾಡಬೇಕೆಂಬ ಮನಸ್ಸಿದೆ. ಬಹಳಷ್ಟು ಇಲಾಖೆಗಳ ಬಗ್ಗೆ ನಾವು ಹೇಳಬೇಕಾದಂಥ ವಿಚಾರಗಳು ಇದ್ದರೂ ಕೂಡ ಈಗಾಗಲೇ ನಾವು ತಮ್ಮ ಮುಂದೆ ಒಪ್ಪಿಕೊಂಡಿದ್ದೇವೆ. ಆದುದರಿಂದ ಮತ್ತೆ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋದರೆ ಇನ್ನೂ 8 ದಿವಸವಾಗುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ : ಈ ಸಾರಿ ನಮ್ಮ ಅಧಿವೇಶನ ಪ್ರಾರಂಭವಾದುದೇ ಬಹಳ ತಡವಾಗಿದೆ. ಇದರಿಂದಾಗಿ ಇಂಥ ಸಮಸ್ಯೆ ಬಂದಿದೆ. ಇದರ ಮಧ್ಯೆ ಕೆಲವು ರಜಾ ದಿನಗಳೂ ಕೂಡ ಬಂದವು. ಆದುದರಿಂದ ಇನ್ನು ಮುಂದೆ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಬಜೆಟ್ ಮೇಲೆ ಸಾಕಷ್ಟು ಸಮಯವನ್ನು ಕೊಟ್ಟರೆ ನಾವು ಚರ್ಚೆಮಾಡಬಹುದು. ಒಂದೊಂದು ಡಿಮ್ಯಾಂಡ್‌ನ್ನು ತೆಗೆದುಕೊಂಡರೂ ಕನಿಷ್ಟ 1-2 ದಿವಸ ಚರ್ಚೆ ಮಾಡಬೇಕಾಗುತ್ತದೆ. ಇವತ್ತು ಸುಮಾರು 26 ಡಿಮ್ಯಾಂಡ್ಸ್ ಮೇಲೆ ನಾವು ಹೇಗೆ ಚರ್ಚೆ ಮಾಡುವುದಕ್ಕೆ ಸಾಧ್ಯವಿದೆಯೇ? ಚರ್ಚೆಯನ್ನು ಶುರು ಮಾಡಲಿಕ್ಕೆ ಸಾದ್ಯವಿಲ್ಲ ಎಂದು ಈಗಾಗಲೇ ನಾವು ಒಪ್ಪಿಕೊಂಡಿರುವುದರಿಂದ ಇದನ್ನು ನಾವು ಪಾಸ್ ಮಾಡಿಕೊಡತ್ತೇವೆ. ನಾನು ತಮ್ಮ ಮುಖಾಂತರ ಸರ್ಕಾರದಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಇನ್ನು ಮುಂದೆ ಈ ರೀತಿ ಹುಬರಿಯಲ್ಲಿ ಯಾವುದೇ ಡಿಮ್ಯಾಂಡ್‌ನ್ನೂ ಕೂಡ ತೆಗೆದುಕೊಳ್ಳಬಾರದು. ಏಕೆಂದರೆ ಅವರಿಗೂ ಗೌರವ ಇಲ್ಲ, ನಮಗೂ ಗೌರವ ಇಲ್ಲ. ಜನರು ನಮ್ಮ ಬಗ್ಗೆ ಏನು ತಿಳಿದುಕೊಳ್ಳುತ್ತಾರೆ. ಇಲ್ಲಿ ಇವರು ಏತಕ್ಕೆ ಬರುತ್ತಾರೆಂದು ಜನ ತಿಳಿದುಕೊಳ್ಳುತ್ತಾರೆ. ಈ ರೀತಿ ಮಾಡಿದರೆ ತಮಗೂ ಗೌರವ ಇಲ್ಲ, ನಮಗೂ ಗೌರವ ಇಲ್ಲ. ಆದುದರಿಂದ ಇನ್ನು ಮುಂದೆ ಈ ಪ್ರಕಾರ ಆಗಬಾರದು. ಪ್ರತಿಯೊಂದು ಡಿಮ್ಯಾಂಡ್ ಬಗ್ಗೆ ಚರ್ಚೆ ಪೂರ್ಣವಾಗಿ ಆಗಬೇಕು. ನಾವು ಒಳ್ಳೆಯ ಸಲಹೆಗಳನ್ನು ಕೊಡಬಹುದು. ಟೀಕೆ ಟಿಪ್ಪಣಿ ಮಾಡಬಹುದು. ಇವತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸರ್ಕಾರದ ವತಿಯಿಂದ ಕೆಲವು ಉತ್ತಮ ಯೋಜನೆಗಳನ್ನು ಮಂಜೂರು ಮಾಡಿರುವ ವಿಚಾರವನ್ನು ಹೇಳಿದ್ದಾರೆ. ಇದರಿಂದ ಅವರಿಗೂ ...

ಸಂತೋಷವಾಯಿತು. ಇದೇ ರೀತಿ ಎಜುಕೇಷನ್ ಡಿಪಾರ್ಟ್‌ಮೆಂಟ್ ಇನ್ನೂ ಬೇರೆ ಬೇರೆ ಇಲಾಖೆಗಳಲ್ಲಿ ಒಳ್ಳೊಳ್ಳೆಯ ಕೆಲಸಗಳನ್ನು ಮಾಡಿರಬಹುದು. ಅದನ್ನು ಹೇಳುವುದಕ್ಕೂ ತಮಗೆ ಅವಕಾಶ ಇತ್ತು. ಆದರೆ ಆ ಅವಕಾಶ ನಿಮಗೆ ಇವತ್ತು ಸಿಕ್ಕುತ್ತಿಲ್ಲ ನಾವೂ ಕೂಡ ಕೆಲವು ಟೀಕೆ ಟಿಪ್ಪಣಿಗಳನ್ನು ಮಾಡಬಹುದಿತ್ತು. ಅದಕ್ಕೂ ಅವಕಾಶ ಇಲ್ಲ. ಆದುದರಿಂದ ಇನ್ನು ಮುಂದೆ ಈ ರೀತಿ ಆಗಬಾರದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಪೂರ್ಣ ಚರ್ಚೆ ಮಾಡಬೇಕೆಂಬ ಉತ್ಸಾಹವನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ಆದರೆ ಚರ್ಚೆಮಾಡಬಾರದೆಂದು ಏನೂ ಇಲ್ಲ. ಈಗ 17 ಜನ ಮಂತ್ರಿಗಳ 26 ಬೇಡಿಕೆಗಳು ಏನಿವೆ ಇದು ಬಹುಶ: ಕರ್ನಾಟಕ ಶಾಸನ ಸಭೆಯ ಇತಿಹಾಸದಲ್ಲೇ ಈ ರೀತಿ...

ಅಧ್ಯಕ್ಷರು : ಬಜೆಟ್ ಅಧಿವೇಶನದಲ್ಲಿ ಅವಿಶ್ವಾಸ ನಿರ್ಣಯವನ್ನು ತಂದಿದ್ದನ್ನು ಈ ಇತಿಹಾಸದಲ್ಲೇ ಎಲ್ಲೂ ಕೂಡ ನಾನು ಕೇಳಿರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ಒಪ್ಪುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಏನು ಮಾಡುವುದಕ್ಕೆ ಬರುತ್ತದೆ ಸ್ವಾಮಮಿ? ಅನಿವಾರ್ಯ ಸಂದರ್ಭ ಬಂದಾಗ ಸರ್ಕಾರದ ಮೇಲೆ ಗುರುತರವಾದ ಆರೋಪ ಇದ್ದಾಗ ನಾವು ನಮ್ಮ ಕರ್ತವ್ಯವನ್ನು ಮಾಡಿದ್ದೇವೆ. ನಾವು ಅನಾವಶ್ಯಕವಾಗಿ ಮಾಡಿಲ್ಲ.

ಅಧ್ಯಕ್ಷರು : ಮಾಡಿದ್ದೀರಿ ಎಂದು ಅಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ತಮ್ಮ ಮೇಲೆ ನಾವು ಆಪಾದನೆ ಮಾಡುತ್ತಿಲ್ಲ. ಆ ಭಾವನೆಯನ್ನು ನಾವು ಇಟ್ಟುಕೊಂಡಿಲ್ಲ. ತಮ್ಮನ್ನು ನಾವು ಅನೇಕ ಸಾರಿ ಭೇಟಿ ಮಾಡಿದಾಗ ಹೇಳಿದ್ದೇವೆ. ಈ ಸಭೆ ಒಂದು ವರ್ಷದಲ್ಲಿ ಕನಿಷ್ಟು 100 ದಿವಸವಾದರೂ ನಡೆಯುವಂಥ ವ್ಯವಸ್ಥೆ ಆಗಬೇಕು.

ಅಧ್ಯಕ್ಷರು : ಅದನ್ನು ನಾನು ಒಪ್ಪುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಈ ಸಭೆಯನ್ನು ಕರೆಯತಕ್ಕಂಥ ನಾಯಕರು, ತಮಗೆ ಸಲಹೆಯನ್ನು ಮಾಡತಕ್ಕವರು, ರಾಜ್ಯಪಾಲರಿಗೆ ಹೇಳತಕ್ಕವರು ಎಷ್ಟು ದಿವಸ ಕರೆಯಬೇಕೆಂದು ಯೋಚನೆ ಮಾಡಿ ಮಾಡಬೇಕು. ನಿನ್ನೆ ಮತ್ತು ಇವತ್ತು ನಡೆದಿರತಕ್ಕದ್ದರ ಬಗ್ಗೆ ನಿಜವಾಗಿ ಹೇಳುವುದಾದರೆ ನಮ್ಮ ಆತ್ಮಸಾಕ್ಷಿಗೆ ಒಪ್ಪುವುದಿಲ್ಲ. ಈ ಸದನದಲ್ಲಿ ಕೂತಿರತಕ್ಕ ನಮಗೆಲ್ಲರಿಗೂ ಇರತಕ್ಕ ಇಚ್ಛೆ ಎಂದರೆ ಪ್ರತಿಯೊಂದು ಇಲಾಖೆಯ ಬಗ್ಗೆ ಸಮಗ್ರವಾಗಿ ಚರ್ಚೆಮಾಡಿ ಈ ಸರ್ಕಾರಕ್ಕೆ ಅನೇಕ ಸಲಹೆಗಳನ್ನು ಕೊಡಬೇಕೆಂಬುದು. ಮಾನ್ಯ ಮಂತ್ರಿಗಳಿಂದ ಉತ್ತರ ಬರಬೇಕೆಂದು. ಈ ಸಭೆ ಬಹಳ ಪವಿತ್ರವಾದುದು. ಈ ಸದನಕ್ಕಿರತಕ್ಕ ಮಹತ್ತರ ಶಕ್ತಿ ಬೇರೆ ಯಾವುದಕ್ಕೂ ಇಲ್ಲ. ಆದರೆ ಈ ರೀತಿ ಬೇಡಿಕೆಗಳನ್ನು ಮಂಡಿಸುವುದರಿಂದ ಈ ಸದನದ ಶಕ್ತಿ ಸಂಪೂರ್ಣವಾಗಿ ಕಡಿಮೆಯಾಗುತ್ತದೆ. ಈ ಸಂದಸದೀಯ ವ್ಯವಸ್ಥೆಯಲ್ಲಿ ಈ ರೀತಿ ಆಗಬಾರದಿತ್ತು. ಇವತ್ತು ಬಹಳವಾಗಿ ಮಾತನಾಡಬೇಕೆಂಬ ಉತ್ಸಾಹದಿಂದ ನಾನು ಎಲ್ಲ ಇಲಾಖೆಗಳ ಬಗ್ಗೆ ಅನೇಕ ವಿಚಾರಗಳನ್ನು ಸಂಗ್ರಹಿಸಿಕೊಂಡು ಬಂದಿದ್ದೆ. ಎಲ್ಲ ಇಲಾಖೆಗಳಲ್ಲಿರತಕ್ಕ ಸಮಸ್ಯೆಗಳನ್ನು ಇಲ್ಲಿ ತಂದು ಮಾತನಾಡಬೇಕೆಂಬ ಭಾವನೆಯಿಂದ ಅನೇಕ ವಿಷಯಗಳನ್ನು ಸಂಗ್ರಹಿಸಿಕೊಂಡು ಬಂದಿದ್ದೆ. ತಾವೂ ನೋಡುತ್ತಿದ್ದೀರಿ, ನಾವು ಪ್ರಾಮಾಣಿಕವಾಗಿ ಇಲ್ಲಿ ಕುಳಿತುಕೊಂಡು ಕೆಲಸ ಮಾಡತಕ್ಕ ಸದಸ್ಯರುಗಳಿದ್ದೇವೆ. ಬೆಳಿಗ್ಗೆ ಬಂದರೆ ರಾತ್ರಿ ಎಷ್ಟೇ ಹೊತ್ತಾದರೂ

ಪ್ರಾಮಾಣಿಕವಾಗಿ ಕೂತು ನಮ್ಮ ಕರ್ತವ್ಯವನ್ನು ಮಾಡುತ್ತಿದ್ದೇವೆ. ಆದರೆ ಇವತ್ತು ನಮ್ಮ ಮನಸ್ಸಿಗೆ ಎಷ್ಟು ನೋವಾಗುತ್ತಿದೆ ಎಂಬುದನ್ನು ಹೇಳುವುದಕ್ಕಾಗುತ್ತಿಲ್ಲ. ಇಷ್ಟೊಂದು ಬೇಡಿಕೆಗಳನ್ನು ಬಹಳ ಲಘುವಾಗಿ ಬಿಟ್ಟುಬಿಡುತ್ತಿದ್ದೇವೆ. ಇದಕ್ಕೆ ಕಾರಣ ನಮ್ಮ ಮೇಲೆ ಅಲ್ಲ, ತಮ್ಮ ಮೇಲೆ ಅಲ್ಲ. ಪರಿಸ್ಥಿತಿಯ ಒತ್ತಡದಿಂದ ನಾವು ಇದನ್ನು ಬಿಟ್ಟುಬಿಡುತ್ತಿದ್ದೇವೆ. ಇದರಿಂದ ನಮ್ಮ ರಾಜ್ಯದ ಜನರಿಗೆ ನ್ಯಾಯವನ್ನು ಒದಗಿಸುವುದಕ್ಕೆ ಸಾಧ್ಯ ಆಗುತ್ತಿಲ್ಲ. ಏಕೆಂದರೆ ಸರ್ಕಾರದ ವಿವಿಧ ಇಲಾಖೆಗಳ ಬಗ್ಗೆ ಸಮಗ್ರವಾಗಿ ಚಿಂತನೆಯನ್ನು ನಾವೂ ಮಾಡಿಲ್ಲ ಎಂದರೆ ನಮ್ಮ ಕರ್ತವ್ಯವನ್ನು ಮಾಡಿದಂತಾಗುವುದಿಲ್ಲ. ಜನರಿಗೆ ನಾವು ನ್ಯಾಯಾವನ್ನು ದೊರಕಿಸಿದಂತಾಗುವುದಿಲ್ಲ ಎನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ.

ಇವತ್ತು ಗೃಹ ಇಲಾಖೆ, ಅಬ್ಕಾರಿ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಬಗ್ಗೆ ಅನೇಕ ರೀತಿಯ ಬೆಳಕನ್ನು ಚೆಲ್ಲಬೇಕೆಂದು ನಾನು ತಮಗೆ ಹೇಳುತ್ತಾ ಬಂದೆ. ಆದರೆ ಇವತ್ತು ಬಹಳ ನೊಂದ ಮನಸ್ಸಿನಿಂದ ಈ ಚರ್ಚೆಯಲ್ಲಿ ಭಾಗವಹಿಸದೇ ನಿಲ್ಲಬೇಕಾಗಿದೆ. ತಮಗೆ ಹೇಳುವುದಾದರೆ ಈ ಸಭೆಯಲ್ಲಿ ಅನೇಕ ವಸ್ತುಗಳನ್ನು ತರಬಾರದು ಎನ್ನತಕ್ಕಂಥ ನಿಯಮಗಳು ಇದೆ. ನಿನ್ನೆ ನಾನು ಇಲ್ಲಿ ಅಕ್ಕಿಯನ್ನು ತಂದಾಗ ವಿರೋಧ ಮಾಡಿದಿರಿ. ಈ ಒಂದು ಸರ್ಕಾರಕ್ಕೆ ಅನೇಕ ತೆರಿಗೆ ರೂಪದಲ್ಲಿ ಬರತಕ್ಕಂಥದ್ದು ಅಬ್ಕಾರಿ ಇಲಾಖೆಯಿಂದ. ಈ ಮದ್ಯಪಾನ ಪ್ರಿಯರು ಯಾರಿದ್ದಾರೆ ಅವರಿಂದಲೇ ಬಹುಶ: ಒಂದು ಕಾಲು ಭಾಗ ಸರ್ಕಾರ ನಡೆಯತಕ್ಕಂಥದ್ದು ಅವರ ತೆರಿಗೆಯಿಂದಲೇ ಅವರು ಕೊಡತಕ್ಕ ರಮ್ಮು ಬಹಳ ಕಳಪೆ ಮಟ್ಟದ ರಮ್‌ಗಳನ್ನು ಕೊಡುತ್ತಿದ್ದರಂತೆ. ಯಾರೋ ಒಬ್ಬ ಮದ್ಯಪಾನ ಪ್ರಿಯ ಕುಡಿದವನು ಹೇಳಿದ್ದು, ಸ್ವಾಮಿ, ನನ್ನ ಜೀವನದಲ್ಲಿ ಅದನ್ನು ಮುಟ್ಟೇ ಇಲ್ಲ, ನಾನು ಎಂದೂ ಮುಟ್ಟಿದವನಲ್ಲ. ಸ್ವಾಮಿ ನಮ್ಮ ಪರಿಸ್ಥಿತಿ ಹೀಗಿದೆ. ಆ ಮನುಷ್ಯ ಏನು ಹೇಳಿದ ಅದು ನನ್ನ ಅನುಭವ ಸ್ವಾಮಿ. ಇಷ್ಟೆಲ್ಲ ಪರಿಸ್ಥಿತ ಇದೆ. ಈ ಡಿಸ್ಟಿಲರಿಗಳಲ್ಲಿ ತಾವು.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು : ಶ್ರೀಮತಿ ಮೋಟಮ್ಮನವರು ಒಂದು ಪಾಯಿಂಟ್ ಆಫ್ ಆರ್ಡರ್ ಹೇಳುತ್ತಾರಂತೆ ಕೇಳಿ.

ಶ್ರೀಮತಿ ಮೋಟಮ್ಮ : ಅವರು ಮುಟ್ಟದಲ್ಲೇ ಹೀಗೆ ಹೇಳುತ್ತಿದ್ದಾರೆ, ಅಂಥದ್ದೇನಾದರೂ ಮುಟ್ಟಿದರೆ ಇನ್ನು ಹೇಗೆ ಆಡುತ್ತೀರಾ?

ಶ್ರೀ ವಾಟಾಳ್ ನಾಗರಾಜ್: ನಿಜ, ನಿಜ, ಅದರ ಬಗ್ಗೆ ಬಹಳ ಗಹನವಾಗಿ ಚಿಂತನೆ ಮಾಡಬೇಕಾಗಿದೆ. ಇದು ಚರ್ಚೆಗೆ ಒಂದು ಒಳ್ಳೆಯ ವಸ್ತುವಾಗಿ ತೆಗೆದುಕೊಂಡು ಚರ್ಚೆಮಾಡಿ ಅದನ್ನು ಕಾರ್ಯರೂಪಕ್ಕೆ ತರಬೇಕಾಗುತ್ತದೆ. ಇದು ಯಾವರೀತಿ ಆಗಬಹುದು ಎಂದು. ಆದರೆ ನಾನು ಆಗುವುದಕ್ಕೆ ನಾನು ತಯಾರಾಗಿಲ್ಲ. ನೋಡೋಣ ಇದರ ಬಗ್ಗೆ, ಮುಂದೆ ತಮ್ಮ ಸಲಹೆ ಕೇಳುತ್ತೇನೆ. ಅದಕ್ಕೆ ಹೋಗುವುದಿಲ್ಲ ನಿಜವಾಗಿಯೂ ಇದರ ಬಗ್ಗೆ ನಾನು ಹಾಸ್ಯಕ್ಕಿಂತ ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಒಬ್ಬ ರಸ್ತೆಯಲ್ಲಿ ಬರುವಾಗ ನೋಡಿದೆ. ಸ್ವಾಮಿ, ವಾಟಾಳ್ ನಾಗರಾಜ್‌ರವರೇ ನೀವು ಅನೇಕ ಸಮಸ್ಯೆಗಳನ್ನು ರಾಜ್ಯದ ಬಗ್ಗೆ ಹೇಳುತ್ತೀರಿ. ನಮ್ಮ ಮದ್ಯಪಾನ ಪ್ರಿಯರ ಬಗ್ಗೆ ತಾವು ಒಂದು ಮಾತನ್ನು ಹೇಳುತ್ತಿಲ್ಲವೆಲ್ಲವೆಂದು ಹೇಳಿದೆ. ಆಯಿತಪ್ಪ, ಏನು ಮಾಡಬೇಕೆಂದು ಹೇಳುತ್ತೀಯ ಎಂದು ಕೇಳಿದೆ. ನನ್ನ ಕೈಗೇ ಒಂದು ಮದ್ಯದ ಬಾಟಲಿಯನ್ನು ತಂದುಕೊಟ್ಟೇಬಿಟ್ಟ. ಅದನ್ನು ನನ್ನ ಕೈಯಾರೆ ಹಿಡಿದುಕೊಂಡು ನೋಡಿದ

ಅದೇನೆಂದು. ನಾನು ನೋಡಿದೆ ಹಿಂದೆ ನಂಜನಗೂಡಿನ ಡಿಸ್ಟಲರಿ ಇತ್ತಲ್ಲ ಆ ನೀರು ಇರಬಹುದೆಂದು. ಆದರೆ ಇದು ಸೀಲಾಗಿರತಕ್ಕಂಥದ್ದು ಯಾವುದೋ ಒಂದು ದಾಸಪ್ಪ ಅಂಡ್ ಕಂಪೆನಿಯಲ್ಲಿ ತಯಾರಾಗಿರತಕ್ಕಂಥ ರಮ್. ಅದರ ಮೇಲೆ 100 ರೂಪಾಯಿ ಅಂತ ಇತ್ತು. ಅದು ನನ್ನ ಕೈಗೆ ಅಂತ ಅನ್ನಿಸಿತು, ಬಂದಾಗ ನಾನು ಎಂಥ ಪಾಪದ ಕೆಲಸವನ್ನು ಮಾಡುತ್ತಿದ್ದೇನಲ್ಲ ನನ್ನ ಜೀವನದಲ್ಲಿ ಎಂದೂ ಮುಟ್ಟಿದವನಲ್ಲ, ಆದರೂ ಚಿಂತೆ ಇಲ್ಲ. ಈ ಸರ್ಕಾರಕ್ಕೆ ಹೆಚ್ಚಿನ ಬೆಲೆ ಬರತಕ್ಕಂಥದ್ದು ತೆರಿಗೆ ಬರತಕ್ಕಂಥದ್ದು. ಈ ಪಾನ ಪ್ರಿಯರಿಂದ. ಆದ್ದರಿಂದ ಸಂಪೂರ್ಣವಾಗಿ ನಾನು ರಾಜ್ಯದಲ್ಲಿ ಪಾನ ನಿಯಂತ್ರಣವಾಗಲೇಬೇಕಂದು ಹೇಳುವ ಮನುಷ್ಯ. ಆದರೂ ವಿಧಿಯಿಲ್ಲ, ಹಣ ನಮ್ಮ ಸರ್ಕಾರಕ್ಕೆ ಬರುತ್ತಿದೆ. ಅದಕ್ಕೋಸ್ಕರ ಅದನ್ನು ತಂದಿಲ್ಲಿ ಬೇಡವೆಂದರೆ ಕೊಟ್ಟು ಕಳುಹಿಸಿ ಬಿಡುತ್ತೇನೆ. ತಮಗೆ...

(ರಮ್ ಬಾಟಲನ್ನು ಪ್ರದರ್ಶನ ಮಾಡುವರು)

-ಗೊಂದಲ-

ಶ್ರೀ ವಾಟಾಳ್ ನಾಗರಾಜ್ : ಬೇಡ, ಬೇಡ.

-ಗೊಂದಲ-

ಶ್ರೀ ಆರ್. ದಯಾನಂದರಾವ್ : ನಾಳೆ ಸಾರಾಯಿಯನ್ನು ತೆಗೆದುಕೊಂಡು ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಅದಕ್ಕೆ ಏನು ತೊಂದರೆ, ಏನು ಅನಾನುಕೂಲವೆಂದರೆ ಸೀಲುಹಾಕಿದ್ದಾರೆ. ನಾನು ತರಬಾರದು. ನನ್ನ ಪರಿಸ್ಥಿತಿಯನ್ನು, ತಾವು ಅರ್ಥಮಾಡಿಕೊಳ್ಳಿ. ನಾನು ಯಾವತ್ತು ಮುಟ್ಟತಕ್ಕಂಥವನಲ್ಲ, ತಾವು ನೋಡಿದ್ದೀರಿ.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಶ್ರೀಮತಿ ಮೋಟಮ್ಮನವರು ಹೇಳಿರುವುದನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಒಂದು ಕೆಲಸ ಮಾಡಬಹುದಾಗಿತ್ತು. ಏತಕ್ಕೆಂದರೆ ಶ್ರೀಮತಿ ಮೋಟಮ್ಮನವರು ಕಳಕಳಿಯಿಂದ ನಿಮಗೆ ಸ್ಫೂರ್ತಿ ಬಂದು ಇವತ್ತು ಏನಾದರೂ..

(ನಗು)

ಆದ್ದರಿಂದ ನಾನು ನಿಮ್ಮನ್ನು ಅದರಿಂದ ವಿಮುಕ್ತಿ ಮಾಡಬೇಕಾಗಿದೆ. ಆದ್ದರಿಂದ ಅದನ್ನು ಆಚೆಗೆ ಕಳುಹಿಸಬೇಕಾಗುತ್ತದೆ ಒಂದು, ಎರಡನೆಯದೇನೆಂದರೆ ಇಂಥದ್ದು ಏನಾದರೂ ಬಂದಾಗ ನೀವು ಸಂಬಂಧಪಟ್ಟ ಸಚಿವರಿಗೆ ಕಾಗದ ಬರೆದು ಇಂಥದ್ದು ಕೆಟ್ಟದ್ದು ಇರುತ್ತದೆ, ಕಲಬೆರಕೆಯಾಗಿದೆ ಎಂದು ಹೇಳಬಹುದಾಗಿತ್ತು.

ಶ್ರೀ ವಾಟಾಳ್ ನಾಗರಾಜ್ : ಶ್ರೀಮತಿ ಮೋಟಮ್ಮನವರ ಬಗ್ಗೆ ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿರಿ.

ಅಧ್ಯಕ್ಷರು : ಆ ಔಷಧಿಯನ್ನು ತೆಗೆದುಕೊಳ್ಳಬೇಡಿ ಎಂದು ಹೇಳಿದರು.

ಶ್ರೀ ವಾಟಾಳ್ ನಾಗರಾಜ: ಅದಕ್ಕೆ ತಮ್ಮ ಹತ್ತಿರ ನಾನು ಮಾತನಾಡುತ್ತೇನೆ. ಅದರ ಬಗ್ಗೆ ಏನು ಎನ್ನುವುದನ್ನು ತಮ್ಮ ಹತ್ತಿರ ಸಲಹೆ ಕೇಳಿದ ಮೇಲೆ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಈ ಡಿಸ್ಟಿಲರಿ ದಾಸಪ್ಪ ಅಂಡ್ ಕಂಪೆನಿಯಲ್ಲಿ ತಯಾರಾಗಿರತಕ್ಕಂಥ ರಮ್‌ನಲ್ಲಿ ಕೆಟ್ಟ ಪದಾರ್ಥಗಳು ಹುಳು ಎಲ್ಲ ಬರುತ್ತಿದೆ. ನಾವು ಕುಡಿಯತಕ್ಕಂಥವರು ರಾತ್ರಿಯಲ್ಲಿ ಕುಡಿಯುತ್ತೇವೆ, ಹಗಲೇ ಈ ಪರಿಸ್ಥಿತಿ ಹೀಗಿರಬೇಕಾದರೆ ರಾತ್ರಿ ಕುಡಿದರೆ,

ಸಿಕ್ಕಾಪಟ್ಟೆ ಕುಡಿದರೆ ವಿಷವಾಗಿರಬಹುದು, ಕೆಟ್ಟದಾಗಿರಬಹುದು ಇಂಥ ಪರಿಸ್ಥಿತಿಯನ್ನು ತಪ್ಪಿಸುವುದಕ್ಕೆ ಸರ್ಕಾರ ಪ್ರಯತ್ನ ಪಡಬೇಕೆನ್ನುವುದು ಒಂದು ವಿಚಾರ ಅಷ್ಟೇ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಾವು ಸಹ ಬಿ.ಎ.ಸಿ. ಕಮಿಟಿಯಲ್ಲಿ ಸೇರಿದ ಸಮಯದಲ್ಲಿ ಇವತ್ತು ಏನು ಪ್ರಮುಖವಾದ ಬೇಡಿಕೆಗಳ ಬಗ್ಗೆ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ಸಾಕಷ್ಟು ಸಮಯ ಸಿಗಲಿಲ್ಲ. ಸರಿಯಾದ ಉಪಯೋಗ ಮಾಡಿಕೊಳ್ಳುವುದಕ್ಕೆ ನಮಗೆ ಆಗಲಿಲ್ಲ ಎನ್ನುವ ಆತಂಕವನ್ನು ವ್ಯಕ್ತಪಡಿಸಿದ್ದೀರಾ. ಒಂದು ದೃಷ್ಟಿಯಿಂದ ಇದು ಟೀಕೆ ಟಿಪ್ಪಣಿಗಳಿಗಿಂತ ಹೆಚ್ಚಿನ ಸಂಬಂಧಪಟ್ಟ ಅಧಿಕಾರಿಗಳು ಆ ಇಲಾಖೆಯಲ್ಲಿ ಒಬ್ಬ ಶಾಸಕರಾಗಿ ಓಡಾಟ ಮಾಡಿದಾಗ ನಮಗೆ ಕಂಡಂಥ ಸತ್ಯ ಸಂಗತಿಗಳು ಇರಬಹುದು. ಆಗಿರತಕ್ಕಂಥ ಲೋಪದೋಷವಿರಬಹುದು. ಅದನ್ನು ತಿಳಿಸಿದಾಗ ಅಧಿಕಾರಿಗಳು ಸ್ವಲ್ಪ ಚೆನ್ನಾಗಿ ಕೆಲಸಮಾಡಲಿಕ್ಕೆ, ಅವರಲ್ಲಿರತಕ್ಕಂಥ ಲೋಪದೋಷಗಳನ್ನು ಸರಿಪಡಿಸಿಕೊಳ್ಳುವುದಕ್ಕೆ ಸಂಬಂಧಪಟ್ಟ ಮಂತ್ರಿಗಳು ಸಹ ಸರಿಯಾದ ರೀತಿಯಲ್ಲಿ ಕೆಲಸ ಮಾಡಲಿಕ್ಕೆ, ಅನುಕೂಲಕರವಾದಂಥ ಒಂದು ಚರ್ಚೆಯಲ್ಲಿ ನಾವು ಭಾಗವಹಿಸಿ ಅನೇಕ ಲೋಪದೋಷಗಳನ್ನು ಸರ್ಕಾರದ ಗಮನಕ್ಕೆ ತರುವಂಥ ಒಂದು ಒಳ್ಳೆಯ ಸಂದರ್ಭವಿತ್ತು.

ಈ ಒಂದು ಚರ್ಚೆಯಲ್ಲಿ ನಾವು ಭಾಗವಹಿಸಿ ಅನೇಕ ಲೋಪದೋಷಗಳನ್ನು ಸರ್ಕಾರದ ಗಮನಕ್ಕೆ ತರುವಂಥ ಒಂದು ಒಳ್ಳೆಯ ಸಂದರ್ಭ ಇದು. ನಾನು ಈ ಸಂದರ್ಭದಲ್ಲಿ ವಿನಂತಿ ಮಾಡುವಂಥಾದ್ದು. ಈಗ ಇಲ್ಲಿ ಕುಳಿತವರಿಗಿಂತ ಯಾರು ಆಡಳಿತ ಪಕ್ಷದಲ್ಲಿ ಕುಳಿತಿರುತ್ತಾರೆ. ಅವರು ಈ ತರಹ ಪ್ರಾಮುಖ್ಯವಾದಂಥ ಬೇಡಿಕೆಗಳ ಬಗ್ಗೆ ಚರ್ಚೆಯಾಗುವಂಥ ಅಧಿವೇಶನ ಕರೆದಾಗ ಸಾಕಷ್ಟು ಸಮಯ ಇಟ್ಟುಕೊಂಡು ಕರೆಯಬೇಕಾಗುತ್ತದೆ. ಈಗ ಏನಾಗಿದೆ ಎಂದರೆ ಒಂದು ರೀತಿಯಲ್ಲಿ ನಾವು ಆರೋಪಕ್ಕೆ ಗುರಿಯಾಗುವಂಥ ಸ್ಥಿತಿ ನಮಗೆ ಒದಗಿ ಬಂದಿದೆ. ಇವತ್ತು ಅವಿಶ್ವಾಸ ನಿರ್ಣಯ ಮಂಡನೆ ಮಾಡಿ ನಾವು ಮೂರು ದಿವಸ ಚರ್ಚೆ ಮಾಡಿದೆವು. ನಾವು ತಮ್ಮ ಕೊಠಡಿಗೆ ಬಂದು ಹೇಳಿದ್ದೆವು. ಬೇಡಿಕೆ ಸಂದರ್ಭದಲ್ಲಿ ಸ್ವಲ್ಪ ಕಡಿಮೆ ಸಮಯ ಬಂದರೂ ಚಿಂತೆ ಇಲ್ಲ ಎಂದು, ಈ ಮಾತನ್ನು ಹೇಳಿದ್ದುಂಟು. ಆದರೆ, ಇವತ್ತು ಬಹಳ ಪ್ರಾಮುಖ್ಯವಾದ ಅರಣ್ಯ ಇಲಾಖೆ ಬಗ್ಗೆ, ಎಕ್ಸೈಸ್ ಇಲಾಖೆ ಬಗ್ಗೆ, ಶಿಕ್ಷಣ ಇಲಾಖೆ ಬಗ್ಗೆ ವಿಚಿತ್ರವಾದಂಥ ಪರಿಸ್ಥಿತಿ ಒದಗಿಬಂದಿದೆ. ನಾವು ಸತ್ಯಸಂಗತಿಗಳನ್ನು ಹೇಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಅನೇಕ ವಿಷಯಗಳ ಬಗ್ಗೆ ಮಾತನಾಡಬಹುದು ಎಂದು ನಾನು ಕಳೆದ ಒಂದು ವಾರದಿಂದ ಸಿದ್ಧತೆ ಮಾಡಿಕೊಂಡು ಬಂದೆ. ಮಾನ್ಯ ಶಿಕ್ಷಣ ಸಚಿವರಾದ ಶ್ರೀ ಮೊಯಿಲಿಯವರು ಇಲ್ಲಿ ಇದ್ದಾರೆ. ಒಂದು ಆಶ್ಚರ್ಯದ ಸಂಗತಿ ಎಂದರೆ ಯಾರೂ ನಂಬಲಿಕ್ಕಿಲ್ಲ. ಮೆಡಿಕಲ್ ಸೀಟ್ಸ್‌ನ ಮೂರನೇ ಲಿಸ್ಟನ್ನು ಅನೌನ್ಸ್ ಮಾಡಿದಂಥ ಸಂದರ್ಭದಲ್ಲಿ, ಇವತ್ತು ಸುಮಾರು 61 ಸೀಟುಗಳನ್ನು ಅನೌನ್ಸ್ ಮಾಡಿದಾಗ 17 ಸೀಟುಗಳು ಕಾನೂನು ಬಾಹಿರವಾಗಿ ಯಾರಿಗೆ ಮೆರಿಟ್‌ನಂತೆ ಸಿಗಬಾರದಾಗಿತ್ತೋ ಅಂತಹವರಿಗೆ ಸಿಕ್ಕಿವೆ. ಮತ್ತು ಇದರಲ್ಲಿ ಒಂದು ಆಶ್ಚರ್ಯದ ಸಂಗತಿ ಎಂದರೆ ಆ 17 ಜನರಲ್ಲಿ ಒಂದು ರಿಜಿಸ್ಟರ್ ನಂಬರ್ ಎಎ 1995. ಇವರಿಗೆ ಅಲ್‌ಅಮೀನ್ ಕಾಲೇಜ್, ಬಿಜಾಪುರ ಇಲ್ಲಿಗೆ ಸೀಟು ಸಿಕ್ಕಿದೆ. ಯಾರೂ ಎಂಟರೆನ್ಸ್ ಎಕ್ಸಾಮಿನೇಶನ್‌ನಲ್ಲಿ ಫೇಲಾಗಿದ್ದಾರೆ, ಅವರಿಗೆ ಎಂ. ಬಿ. ಬಿ. ಎಸ್. ಸೀಟನ್ನು ಗವರ್ನಮೆಂಟ್ ಕೋಟಾದಲ್ಲಿ ಕೊಟ್ಟಿದ್ದಾರೆ. ನಾನು ಜವಾಬ್ದಾರಿಯಿಂದ ಹೇಳುತ್ತಿದ್ದೇನೆ, ರಿಜಿಸ್ಟರ್ ನಂಬರನ್ನು ಬರೆದುಕೊಳ್ಳಿ. ಮೂರನೇ ಲಿಸ್ಟ್‌ನಲ್ಲಿ ಒಟ್ಟು 61 ಸೀಟುಗಳು ಅನೌನ್ಸ್ ಆಯಿತು. ಅದರಲ್ಲಿ 17 ಸೀಟುಗಳು ಈ ರೀತಿ ಯಾರಿಗೆ ಕೊಡಬೇಕೋ, ಆ ರೀತಿ ಅಲ್ಲದಂಥವರಿಗೆ ಸಿಕ್ಕಿದೆ. ಅದರಲ್ಲಿ ರಿಜಿಸ್ಟರ್ ನಂ. ಎಎ

1995 - ಅವರಿಗೆ ಅಲ್‌ಅಮೀನ್ ಕಾಲೇಜ್, ಬಿಜಾಪುರದಲ್ಲಿ ಸೀಟು ಸಿಕ್ಕಿದೆ. ಇವರು ಎಂಟರೆನ್ಸ್ ಪರೀಕ್ಷೆಯಲ್ಲಿ ಫೇಲಾಗಿದ್ದಾರೆ. ಅಂದರೆ ಇನ್ನು ಮೊದಲನೇ ಮತ್ತು ಎರಡನೇ ಪಟ್ಟಿಯಲ್ಲಿ ಏನಾಗಿರಬಹುದು? ಈ ವಿಷಯದಲ್ಲಿ ನಾನು ತನಿಖೆ ಮಾಡಿ ನೋಡಿಬಿಟ್ಟು, ನನಗೆ ಮನದಟ್ಟಾದಮೇಲೆ ತಮಗೆ ಕಳಿಸಿಕೊಡುತ್ತಿದ್ದೇನೆ. ಇನ್ನು ಮೊದಲನೇ ಎರಡನೇ ಪಟ್ಟಿಯಲ್ಲಿ ಏನಾಗಿದೆಯೋ ಭಗವಂತನಿಗೇ ಗೊತ್ತು. ಈ ರೀತಿ ಅನೇಕ ಪ್ರಮುಖವಾದಂಥ ವಿಷಯಗಳು ಇದ್ದವು. ಅರಣ್ಯ ಸಚಿವರು, ಶಿಕ್ಷಣ ಸಚಿವರ ಗಮನಕ್ಕೆ ತರುವಂಥ ಅನೇಕ ವಿಷಯಗಳು ಇದ್ದವು. ಆದರೆ ಅವಕಾಶ ಸಿಗುತ್ತಿಲ್ಲ. ಇನ್ನು ಮುಂದಾದರೂ ದಯಮಾಡಿ ಚರ್ಚೆಗೆ ಹೆಚ್ಚಿನ ಕಾಲಾವಕಾಶ ಸಿಗುವ ರೀತಿಯಲ್ಲಿ ಆಡಳಿತ ಪಕ್ಷ ಯೋಚನೆ ಮಾಡಿದರೆ ಅನೇಕ ಸಂಗತಿಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಸಾಧ್ಯವಾಗಬಹುದು. ಇದರ ಬಗ್ಗೆ ಸರ್ಕಾರ ವಿಶೇಷವಾದ ಎಚ್ಚರಿಕೆಯನ್ನು ವಹಿಸಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಈಗಾಗಲೇ ಸಾಕಷ್ಟು ಸಮಯ ಆಗಿದೆ. ಸದನದ ಕಾರ್ಯಕಲಾಪಗಳ ಸಮಿತಿ ಸಭೆಯಲ್ಲಿ ನಾವು ಒಪ್ಪಿಕೊಂಡಿದ್ದೇವೆ. ಮುಂದಿನ ಕಾರ್ಯಕಲಾಪಗಳು ಆಗಬೇಕಾದ ಕಾರಣ ಇಷ್ಟು ಮಾತುಗಳನ್ನು ಮಾತ್ರ ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ) : ಸನ್ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ಉಪನಾಯಕರು, ಸನ್ಮಾನ್ಯ ಹಿರಿಯ ನಾಯಕರಾದಂಥ ಶ್ರೀ ವಾಟಾಳ್ ನಾಗರಾಜ್ ಅವರು, ಶ್ರೀ ಯಡಿಯೂರಪ್ಪನವರು ಈ ಬಜೆಟ್ ಚರ್ಚೆ ಬಗ್ಗೆ ಮಾತನಾಡಿದ್ದರು. ಇದನ್ನು ನಾನು ಒಪ್ಪುತ್ತೇನೆ. ವಿಸ್ತಾರವಾಗಿ ಚರ್ಚೆಯಾಗಬೇಕು ಮತ್ತು ನಮಗೂ ಇದರಿಂದ ಹೆಚ್ಚಿನ ಲಾಭ ಸಿಗುತ್ತದೆ. ಸನ್ಮಾನ್ಯ ಶ್ರೀ ದೇಶಪಾಂಡೆ ಅವರೂ ಕೂಡ ಹೇಳಿದರು. ಈಗ ಏನಾಯಿತು ಎಂದರೆ, ತಮಗೆ ಗೊತ್ತಿದೆ ಮಾಮೂಲಾಗಿ ಇದನ್ನು ತೆಗೆದುಕೊಂಡೆವು. ಇದು ಸುಮಾರು 19 ದಿವಸ ನಮ್ಮ ಸಿಟ್ಟಿಂಗ್ಸ್ ಆಯಿತು. ಇದರಲ್ಲಿ ಸುಮಾರು 17 ದಿವಸ ಕ್ಲಿಯರ್ ಆಗಿ ಸಿಟ್ಟಿಂಗ್ ಆಗಿದೆ. ಹಿಂದೆ ಕೂಡ ಅಷ್ಟೆ. ಬೇಡಿಕೆಗಳ ಮೇಲೆ ಚರ್ಚೆ ಸಾಮಾನ್ಯವಾಗಿ ಹಿಂದೆ 1989ರಲ್ಲಿ 21 ದಿವಸ- ಜನರಲ್ ಡಿಸ್ಕಶನ್ ಆನ್ ಬಜೆಟ್ ಕೂಡಿ. 1990ರಲ್ಲಿ 26 ದಿವಸ, ಜನರಲ್ ಡಿಸ್ಕಶನ್ ಆನ್ ಬಜೆಟ್ ಸೇರಿಸಿ. ಜನರಲ್ ಡಿಸ್ಕಶನ್ ಸೇರಿಸಿದರೆ ಸುಮಾರು 23-34 ದಿವಸ ಆಗುತ್ತದೆ ಇವತ್ತೂ ಕೂಡಿ. ಆದರೆ ಇದರಿಂದ ನಮಗೆ ತೃಪ್ತಿ ಇಲ್ಲ. ಇದದರ ಬಗ್ಗೆ ವ್ಯಾಪಕವಾಗಿ,ವಿಸ್ತಾರವಾಗಿ ಚರ್ಚೆ ಆಗಬೇಕು. ಏನಾಯಿತು ಎಂದರೆ, ಈ ಮಧ್ಯೆ ಅವಿಶ್ವಾಸ ನಿರ್ಣಯ ಬಂತು.. ಈ ಸದನದ ಸದಸ್ಯರ ಹಕ್ಕಿಗೆ ಅಡ್ಡಿ ಬರತಕ್ಕಂಥ ಮಾತನ್ನು ನಾನು ಹೇಳುತ್ತೇನೆಂದು ದಯವಿಟ್ಟು ತಿಳಿದುಕೊಳ್ಳಬೇಡಿ. ಬಹುಶ: ನಾವು ಇದರ ಒಂದು ಮಾರ್ಜಿನ್ ಇಟ್ಟುಕೊಳ್ಳಬಹುದಿತ್ತು. ಅದಕ್ಕೆ ಅವಕಾಶ ಇತ್ತು.

ಆದರೆ ಅವಿಶ್ವಾಸ ನಿರ್ಣಯದ ಬಗ್ಗೆ ಹೆಚ್ಚು ದಿವಸ ಆದದ್ದರಿಂದ ಬಹುಶ: ಇದುವರೆಗೆ ಆಗದೆ ಇರತಕ್ಕ ನಮ್ಮ ಲೆಕ್ಕಚಾರ ತಪ್ಪಿದೆ. ಅಷ್ಟೆ ಹೊರತು, ಎಷ್ಟು ನಿಗದಿತ ಸಮಯಬೇಕೋ ಅಷ್ಟನ್ನು ನಾವು ಇಟ್ಟಿದ್ದೇವೆ. ಅವರ ಜೊತೆಯಲ್ಲಿ ಸಹಮತದಿಂದ ಇದ್ದೇವೆ. ಇಷ್ಟರವರೆಗೆ ನಾವು ಹೆಚ್ಚು ಸಮಯ ಸಭೆ ಸೇರಿದ್ದು ಅಂದರೆ 1973ರಲ್ಲಿ 97 ದಿವಸ. 1972ರಲ್ಲಿ 80 ದಿವಸ. ಆಯಾಯ ವರ್ಷದಲ್ಲಿ ಸಿಟ್ಟಿಂಗ್ 1982ರಲ್ಲಿ 74 ದಿವಸ. ಆಮೇಲೆ ಅದು ಕಡಿಮೆಯಾಗುತ್ತಾ ಬಂತು. 48-49 ದಿವಸದವರೆಗೆ ಇಳಿದಿದೆ. ಅದೆ 1985ರಲ್ಲಿ 48 ದಿವಸ, 1986ರಲ್ಲಿ 51 ದಿವಸ,

1987ರಲ್ಲಿ 49 ದಿವಸ, 1988ರಲ್ಲಿ 58 ದಿವಸ. ಇದು ಕಡಿಮೆಯಾಗುತ್ತಾ ಬರುತ್ತಿದೆ. ನಾವು ಹೆಚ್ಚು ಮಾಡುತ್ತಾ ಹೋಗೋಣ. ಅದನ್ನು ನಾವು ಒಪ್ಪುತ್ತೇವೆ. ಇನ್ನು ಮುಂದೆ ಕುಳಿತುಕೊಳ್ಳುವ ಸಮಯದಲ್ಲಿ 100 ದಿವಸ ಪೂರ್ತಿ ದಿವಸ ಮಾಡುವುದಕ್ಕೆ ಎಷ್ಟು ದಿವಸ ಬೇಕೋ ಅಷ್ಟು ದಿವಸ ಕುಳಿತುಕೊಳ್ಳುವುದಕ್ಕೆ we are prepared to sit. What is there? We are ready. ಏತಕ್ಕೆ ಈ ಪರಿಸ್ಥಿತಿಗೆ ಬಂದಿದ್ದೇವೆಂದರೆ ಬಹುಶ: ಅದು ಒಂದು ನಮ್ಮ ಅಂದಾಜಿಗೆ ಅದು ಸ್ವಲ್ಪ ಮೀರಿ ಹೋದದ್ದರಿಂದ ಈ ರೀತಿ ಆಯಿತೇ ಹೊರತು ನಾವು ಅದನ್ನು ಕಡಿತ ಮಾಡುಬೇಕೆಂದು ಆ ಉದ್ದೇಶದಿಂದ ಅನ್ಯತಾ ಮಾಡಿಲ್ಲ. ತಾವು ಏನು ಆದೇಶ ಕೊಡುತ್ತೀರಿ, ಮುಂದೆ ಹೆಚ್ಚು ದಿವಸ ಕೂರಲಿಕ್ಕೆ ಅದಕ್ಕೆ ನಾವೆಲ್ಲ ಸಿದ್ಧರಿದ್ದೇವೆ. ಆದರೆ ಇವತ್ತು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದರ ಗುಣಾವಗುಣಗಳನ್ನು ನಾವು ವಿಶ್ಲೇಷಣೆ ಮಾಡಿಯೇ ನಾವು ಈ ದಿವಸ ಅಪ್ರೋಪ್ರಿಯೇಷನ್ ಬಿಲ್ ಪಾಸ್ ಮಾಡಬೇಕೆಂದು ಹೇಳಿದ್ದೇವೆ. ಅದಕ್ಕೆ ತಾವು ಸಹಕಾರ ಕೊಟ್ಟಿದ್ದೀರಿ. ಅದಕ್ಕೆ ನಾವು ಸ್ಪಂಧಿಸುತ್ತೇವೆ. ಆದರೆ ಮುಂದೆ ಬರತಕ್ಕ ದಿವಸಗಳಲ್ಲಿ ಇನ್ನು ಹೆಚ್ಚು ದಿವಸ ದಾಖಲೆಯ ರೀತಿಯಲ್ಲಿ ನಾವು ಸಿಟ್ಟಿಂಗ್ ಮಾಡುವುದಕ್ಕೆ ನಮ್ಮ ಕಡೆಯಿಂದ ನಾವು ಸಿದ್ಧರಿದ್ದೇವೆ.

ಅಧ್ಯಕ್ಷರು : ಈ ವರ್ಷ ಇದು ಒಂದು ಅಸಾಧಾರಣ ವರ್ಷ. ಏಕೆಂದರೆ ಓಟ್ ಆನ್ ಅಕೌಂಟ್ ತೆಗೆದುಕೊಳ್ಳಬೇಕಾಯಿತು. ಮತ್ತೆ ಚುನಾವಣೆಗಳು ಬಂದವು. ಅನಂತರ ಸರ್ಕಾರದ ಪರವಾಗಿ ಸಂಸದೀಯ ವ್ಯವಹಾರಗಳ ಸಚಿವರು ನಿಮ್ಮ ಅನಿಸಿಕೆಗಳಿಗೆ ಅವರು ಸ್ಪಂದಿಸಿದ್ದಾರೆ. ಇನ್ನು ಮುಂದೆ ಕನಿಷ್ಠ ನೂರು ದಿವಸಾದರೂ ನಾವು ಸಭೆ ಸೇರಬೇಕು. ಎನ್ನುವದಕ್ಕೆ ತಾತ್ವಿಕವಾಗಿ ಒಪ್ಪಿಗೆಯನ್ನು ಅವರು ಕೊಟ್ಟಿದ್ದಾರೆ. ಅದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಅದನ್ನು ಕಾರ್ಯರೂಪಕ್ಕೆ ತರತಕ್ಕದ್ದನ್ನು ನೀವು ಮಾಡಿದರೆ ಬಹುಶ: ಒಂದು ಹೊಸ ದಾಖಲೆಯನ್ನು ಸೃಷ್ಟಿ ಮಾಡುತ್ತೇವೆ. 1972-73ರಲ್ಲಿ ಮಾತ್ರ 82 ಅಥವಾ 88 ದಿವಸ ಸೇರಿದ್ದೇವೆ. ನಾವು ನೀವೆಲ್ಲ ಸೇರಿ ನೂರು ದಿವಸಗಳಿಗೆ ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಚಲನ ಚಿತ್ರೋತ್ಸವದವರು ಈ ಸದನದಲ್ಲಿ ಬಂದು ಸಭೆ ಮಾಡಬೇಕೆಂದು ಇದ್ದಾರೆನ್ನುವ ಸುದ್ದಿ ಇದೆ. ಈ ಸದನ ಏನಿದ್ದರೂ ಶಾಸನಸಭೆ ನಡೆಸುವುದಕ್ಕೆ ಮೀಸಲಾಗಿರಬೇಕು. ತಾವು ಈ ಸಭೆಯ ಅಧ್ಯಕ್ಷರಾಗಿದ್ದೀರಿ. ಶಾಸನಸಭೆಯನ್ನು ಯಾವುದೇ ಸಭೆ ಸಮಾರಂಭಗಳನ್ನು ನಡೆಸುವುದಕ್ಕೆ ಕೊಡಬಾರದೆಂದು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

ಅಧ್ಯಕ್ಷರು : ಗಮನದಲ್ಲಿಟ್ಟುಕೊಳ್ಳುತ್ತೇನೆ. ಅದು ಅಲ್ಲದೆ, ಇನ್ನೊಂದು ವಿಚಾರ ಏನೆಂದರೆ ಯಾವ ವರ್ಷ ಕೂಡ ಯಾವುದೇ ವಿಧಾನಸಭೆಯಲ್ಲಿ ಕೂಡ ಎಲ್ಲಾ ಡಿಮಾಂಡ್‌ಗಳನ್ನು ಕೂಡ ಚರ್ಚೆಮಾಡುವುದಕ್ಕೆ ಸಾಧ್ಯವಾಗಿಲ್ಲ. ಇನ್‌ಎವಿಟಬಲ್ ಗಿಲಿಟನ್ ಆಗತಕ್ಕ ಹಲವಾರು ದೃಷ್ಟಾಂತಗಳಿವೆ. ಆದ್ದರಿಂದ ನಾನು ಕೂಡ ಬಹಳ ನೊಂದ ಮನಸ್ಸಿನಿಂದ 26 ಬೇಡಿಕೆಗಳನ್ನು ಒಟ್ಟಿಗೆ ಮತಕ್ಕೆ ಹಾಕಬೇಕಾದ ಸನ್ನಿವೇಶಗಳ ಒತ್ತಡ ಹಾಗಂಥ ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಹೇಳಿದ್ದಾರೆ, ಆ ಸನ್ನಿವೇಶಗಳ ಒತ್ತಡಗಳ ಪರಿಣಾಮವಾಗಿ ಈ 26 ಬೇಡಿಕೆಗಳನ್ನು ಮತಕ್ಕೆ ಹಾಕುತ್ತೇನೆ.

ಪ್ರಸ್ತಾಪ ಏನೇಂದರ್ : "ದಿನಾಂಕ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆಗಳ ಸಂಖ್ಯೆ 25,27,28,11,12,15,16,37,38,1,2,3,4,44, 10,6,9,8,7,60,61,31,29,14,13,24 ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರ್ಕಾರಕೆ, ಲೇಖಾನುದಾನದಲಿ ಮಂಜೂರಾದ

ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡಬೇಕು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ಕ್ರಮಾಂಕ 25- ರಾಜ್ಯದ ಅಬಕಾರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯದ ಅಬಕಾರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 15,11,98,000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 27-ಪೋಲೀಸ್

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪೋಲೀಸ್ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 202,95,90,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5,00,000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 28-ಜೈಲು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 313-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜೈಲಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 7,68,23,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕು.

ಅಭಿಯಾಚನೆ ಕ್ರಮಾಂಕ 11 - ಲೇಖನ ಸಾಮಗ್ರಿ ಮತ್ತು ಮುದ್ರಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೇಖನ ಸಾಮಗ್ರಿ ಮತ್ತು ಮುದ್ರಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂತ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 15,85,77,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 12-ಉಚ್ಚ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಉಚ್ಚ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 207,98,16,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 25,00,000ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 15 -ಪ್ರಾಥಮಿಕ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ಪ್ರಾಥಮಿಕ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 4,84,26,74,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 16- ಸೆಕೆಂಡರಿ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸೆಕೆಂಡರಿ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 2,85,51,37,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 37- ರಾಜ್ಯ ವಿಧಾನ ಮಂಡಲ

ರಾಜ್ಯಾಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯ ವಿಧಾನ ಮಂಡಲಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 9,19,87,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 38 - ನ್ಯಾಯ ಪರಿಪಾಲನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನ್ಯಾಯ ಪರಿಪಾಲನೆಗೆಗ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 36,85,45,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 1- ಭೂಸಾರ ಮತ್ತು ಜಲ ರಕ್ಷಣೆ, ವ್ಯವಸಾಯ (ತೋಟಗಾರಿಕೆ ಮತ್ತು ಖುಷ್ಕಿ ಭೂಮಿ ಅಭಿವೃದ್ಧಿ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂಸಾರ ಜಲ ರಕ್ಷಣೆ ಮತ್ತು ವ್ಯವಸಾಯಕ್ಕೆ (ತೋಟಗಾರಿಗೆ ಮತ್ತು ಖುಷ್ಕಿ ಭೂಮಿ ಅಭಿವೃದ್ಧಿ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 134,97,28,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 17,92,50,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 2-ಖುಷ್ಕಿ ಭೂಮಿ ಅಭಿವೃದ್ಧಿ

ರಾಜ್ಯಾಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಖುಷ್ಕಿ ಭೂಮಿ ಅಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ

ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 3- ತೋಟಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ತೋಟಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 26,21,32,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 41,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 4 - ಪಶುಸಂಗೋಪನಾ ಮತ್ತು ಡೈರಿ ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪಶುಸಂಗೋಪನಾ ಮತ್ತು ಡೈರಿ ಅಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 54,40,38,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 44 - ಯೋಜನಾ ಇಲಾಖೆಯ ಅಭಿಯಾಚನೆಗಳು ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯೋಜನಾ ಇಲಾಖೆಯ ಅಭಿಯಾಚನೆಗಳು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 86,74,88,000ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 10-ರೇಷ್ಮೆ ವ್ಯವಸಾಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇಷ್ಮೆ ವ್ಯವಸಾಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 82,22,32,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 9,33,29,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 6 - ಉದ್ಯಮಗಳು (ಚಿಕ್ಕ ಪುಟ್ಟ ಉದ್ಯಮಗಳು, ಸಹಕಾರ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉದ್ಯಮಗಳಿಗೆ (ಚಿಕ್ಕಪುಟ್ಟ ಉದ್ಯಮಗಳು ಸಹಕಾರ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯದ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 35,23,74,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 12,13,00.000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 9- ಸಹಕಾರ ಉದ್ಯಮಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರ ಉದ್ಯಮಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 2,74,96,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 8,52,14,000 ರೂ.ಗಳಿಗಿಂತ ಮೀರದ ಮೊತ್ತವನ್ನ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 8 - ಚಿಕ್ಕ ಪುಟ್ಟ ಉದ್ಯಮಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚಿಕ್ಕಪುಟ್ಟ ಉದ್ಯಮಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 54,48,34,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 8,51,58,000ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 7- ಗಣಿಗಳು ಮತ್ತು ಭೂ ವಿಜ್ಞಾನ

ರಾಜ್ಯಾಪಾಲರ ಶಿಫಾರಸ್ಸಿನ ಮೇರಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗಣಿಗಳು ಮತ್ತು ಭೂ ವಿಜ್ಞಾನಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 8,40,41,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 60- ಹರಿಜನ ಗಿರಿಜನ ಮತ್ತು ಹಿಂದುಳಿತ ವರ್ಗದವರ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 115,36,20,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3,10,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 61-ಮಹಿಳಾ ಮತ್ತು ಮಕ್ಕಳ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 141,88,76,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 31- ವೈದ್ಯಕೀಯ, ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವೈದ್ಯಕೀಯ, ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 305,88,79,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 29- ವಾರ್ತಾ ಮತ್ತು ಪ್ರವಾಸೋದ್ಯಮ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾರ್ತಾ ಮತ್ತು ಪ್ರವಾಸ್ತೋಧ್ಯಮಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು - ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 10,49,58,000 ರೂ.ಗಳಿಗಿಂತ ಮೀರದ - ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 14- ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ

ರಾಜ್ಯಾಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 6,27,59,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 13-ಯುವಜನ ಸೇವೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯುವಜನ ಸೇವೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 15,86,15,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 24- ಅರಣ್ಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅರಣ್ಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 111,84,33,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 25,24,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

1991ನೇ ಇಸವಿಯ ಕರ್ನಾಟಕ ಧನವಿನಿಯೋಗ (ನಂ.2) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೆ, 1991ನೇ ಇಸವಿಯ ಕರ್ನಾಟಕ ಧನವಿನಿಯೋಗ (ನಂ. 2) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ "1991ನೇ ಇಸವಿಯ ಕರ್ನಾಟಕ ಧನ ವಿನಿಯೋಗ (ನಂ.2) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, 1991ನೇ ಇಸವಿಯ ಕರ್ನಾಟಕ ಧನ ವಿನಿಯೋಗ (ನಂ. 2) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು): ಮಾನ್ಯ ಸಭಾಧ್ಯಕ್ಷರೆ, 1991ನೇ ಇಸವಿಯ ಕರ್ನಾಟಕ ಧನವಿನಿಯೋಗ (ನಂ.2)ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು.

ಶ್ರೀ ಎಚ್. ಏಕಾಂತಯ್ಯ (ಚಿತ್ರದುರ್ಗ) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿರುವ ಈ ಮಸೂದೆಯನ್ನು ವಿರೋಧ ಮಾಡುತ್ತಾ ಒಂದೆರಡು ವಿಚಾರಗಳನ್ನು ಮಾತ್ರ ತಮ್ಮ ಗಮನಕ್ಕೆ ತರಬಯಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ನಾನು ಈ ಕೆಲವು ಬೇಡಿಕೆಗಳ ಬಗ್ಗೆ ವಿಸ್ತಾರವಾಗಿ ಚರ್ಚೆ ಮಾಡಬೇಕೆಂದು ಹಲವಾರು ಸರ್ಕಾರಿ ಆದೇಶಗಳನ್ನು ಮತ್ತು ವಿಚಾರಗಳನ್ನು ಪಡೆಯುವುದಕ್ಕೋಸ್ಕರ ನಾನು ಪ್ರಯತ್ನ ಪಟ್ಟೆ. ಇಲ್ಲಿ ನಮ್ಮ ಶಾಸಕರ ಸ್ಥಿತಿ ಏನಾಗಿದೆ ಎಂದರೆ ನಾನು ಇದರ ಬಗ್ಗೆ ತಮ್ಮ ರಕ್ಷಣೆಯನ್ನು ಕೋರುತ್ತೇನೆ. ಮುಖ್ಯಮಂತ್ರಿಗಳು ಕೂಡ ಇದರ ಬಗ್ಗೆ ಗಮನಹರಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ನಾವು ನಮ್ಮ ಕೆಲಸವನ್ನು ಮಾಡಬೇಕಾದರೆ ಸರ್ಕಾರದಿಂದ ಏನು ಸಹಾಯವಾಗಬೇಕೋ ಅದು ಆಗಬೇಕು. ನಾನು ಕೆಲವು ಬೇಡಿಕೆಗಳ ಬಗ್ಗೆ ಮಾತನಾಡುವುದಕ್ಕೋಸ್ಕರ ಕೆಲವು ಸರ್ಕಾರಿ ಆದೇಶಗಳನ್ನು ದೊರಕಿಸಿಕೊಡಬೇಕೆಂದು ತಮ್ಮ ಸಿಬ್ಬಂದಿಯವರಲ್ಲಿ ನಾನು ಕೇಳಿಕೊಂಡೆ. ನಾನು ನಿನ್ನೆ ಬೆಳಗ್ಗೆ ಕೇಳಿಕೊಂಡರೂ ಬಹಳ ದು:ಖಕರವಾದ ರೀತಿಯಲ್ಲಿ ಸರ್ಕಾರದ ಸಂಬಂಧಪಟ್ಟ ಅಧಿಕಾರಿಗಳು ವರ್ತನೆ ಮಾಡಿದ್ದಾರೆ. ಅದನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ, ಸನ್ಮಾನ್ಯ ಅಧ್ಯಕ್ಷರೆ, ಕೆಲವು ಇಲಾಖೆಯಲ್ಲಿ ಕೆಲವು ಸರ್ಕಾರಿ ಆದೇಶಗಳು ಆಗಿವೆ. ಆ ಆದೇಶಗಳನ್ನು ನೋಡಿ ಅದು ಜನಪ್ರಿಯವಾದ ಆದೇಶಗಳೇ ಅಥವಾ ಅದರಲ್ಲಿ ಏನಾದರೂ ತಪ್ಪಿದೆಯೇ ಎಂಬ ಬಗ್ಗೆ ನಾವು ಅಭ್ಯಾಸ ಮಾಡಿ ಇದನ್ನು ಶಾಸನಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಕೆಲವು ಆದೇಶಗಳನ್ನು ಕೇಳಿದೆ. ಹಾಗೆ ಕೇಳಿದಾಗ ಸಂಬಂಧಪಟ್ಟ ಇಲಾಖಾ ಕಾರ್ಯದರ್ಶಿಗಳು ಅಥವಾ ಸಂಬಂಧಪಟ್ಟ ಅಧಿಕಾರಿಗಳು ಅದನ್ನು ಕೊಡುವುದಕ್ಕಾಗುವುದಿಲ್ಲ ಎಂಬ ಮಾತನ್ನು ಹೇಳಿದ್ದಾರೆ. ಈ ರೀತಿ ಸರ್ಕಾರದ ಸಂಬಂಧಪಟ್ಟ ಅಧಿಕಾರಿಗಳು ವರ್ತನೆ ಮಾಡುವುದಾದರೆ ಶಾಸಕರಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ನಾನು ಮುಖ್ಯವಾಗಿ ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುತ್ತೇನೆ ಮತ್ತು ತಮ್ಮ ರಕ್ಷಣೆಯನ್ನು ಕೇಳುತ್ತೇನೆ. ಶಾಸಕರಾಗಿ ಕಾರ್ಯನಿರ್ವಹಣೆ ಮಾಡುವುದಕ್ಕೆ ಬೇಕಾದ ಎಲ್ಲ ಸಹಾಯವನ್ನು ವಿಚಾರವನ್ನು ವಿಷಯಕ್ಕೆ ಸಂಬಂಧಪಟ್ಟಂತೆ ಕಾನೂನು ಪ್ರಕಾರ ಏನು ಒದಗಿಸಿಕೊಡಬೇಕೋ ಅಂಥ ಸರ್ಕಾರಿ ಆದೇಶಗಳನ್ನು ಸಹ ಸಂಬಂಧಪಟ್ಟವರು ಕೊಡುವುದಿಲ್ಲ ಎಂದರೆ ನಾವು ಹೇಗೆ ಕೆಲಸ ಮಾಡುವುದಕ್ಕೆ ಸಾಧ್ಯ? ಅದರ ಬಗ್ಗೆ ಸರ್ಕಾರ ಸೂಕ್ತವಾದ ವಿವರಣೆಯನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಬಹಳ ದುರದೃಷ್ಟಕರ ಸಂಗತಿ ಎಂದರೆ ಸುಮಾರು 6786 ಕೋಟಿ ರೂಪಾಯಿಗಳಲ್ಲಿ ಮುಕ್ಕಾಲು ಭಾಗಕ್ಕಿಂತ ಹೆಚ್ಚು [illegible]

ಒತ್ತಡ ಸನ್ನಿವೇಶಗಳು ಎಂದು ತಾವು ಹೇಳಿದ್ದೀರಿ. ಅದಕ್ಕೆ ಅವರು ಎಷ್ಟರಮಟ್ಟಿಗೆ ಜವಾಬ್ದಾರರೋ ನಾವು ಅಷ್ಟೇ ಮಟ್ಟಿಗೆ ಜವಾಬ್ದಾರರು ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾವಿಬ್ಬರೂ ತಮ್ಮ ಸಹಾಯದಿಂದ ಇನ್ನು ಮುಂದೆ ಇಂಥ ತಪ್ಪುಗಳು ಆಗದಂತೆ ನೋಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಆಶ್ವಾಸನೆಯನ್ನು ಸರ್ಕಾರದಿಂದ ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಮತ್ತು ಇದರ ಬಗ್ಗೆ ಸೂಕ್ತವಾದ ಆದೇಶವನ್ನು ತಾವು ನೀಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು): ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರಾದ ಏಕಾಂತಯ್ಯನವರು ಯಾವ ವಿವರಗಳನ್ನು ಕೇಳಿದ್ದಾರೆ ಎನ್ನತಕ್ಕದ್ದು ಈ ವಿವರಗಳು . ನನಗೆ ಸಿಕ್ಕಿಲ್ಲ.

Sri H. Ekanthaiah: Through the Legislature Secretariat I have approached them. They are unable to give to me. They are helpless.

ಶ್ರೀ ಎಸ್. ಬಂಗಾರಪ್ಪ : ಯಾವುದೆಂದು ಗೊತ್ತಾದರೆ ನಾನು ಕಳುಹಿಸಿಕೊಡತಕ್ಕ ಪ್ರಯತ್ನ ಮಾಡುತ್ತೇನೆ. ಸರ್ಕಾರಿ ಆದೇಶಗಳನ್ನು ಮುಚ್ಚಿಡತಕ್ಕ ಪ್ರಶ್ನೆ ಯಾರಿಗೂ ಬರುವುದಿಲ್ಲ.

Sri. H. Ekanthaiah: Thank you, Sir,

ಶ್ರೀ ಎಸ್. ಬಂಗಾರಪ್ಪ : ಸುಮಾರು 67, 863,70 ಸಾವಿರಕ್ಕೂ ಮೀರಿದ ಮೊಬಲಗನ್ನು ನಾವು ರಾಜ್ಯದ ಸಂಚಿತ ನಿಧಿಯಿಂದ ಹಣವನ್ನು ಪಡೆದು ಈ ವರ್ಷದ ಆರ್ಥಿಕ ಅಂತ್ಯದ ವೇಳೆಗೆ ಖರ್ಚು ಮಾಡತಕ್ಕ ಒಂದು ಒಪ್ಪಿಗೆಗಾಗಿ ಒಂದು ಧನ ವಿನಿಯೋಗ ಮಸೂದೆಯನ್ನು ಈ ಸದನದ ಒಪ್ಪಿಗೆಗಾಗಿ ಸದನದಲ್ಲಿ ಮಂಡನೆ ಮಾಡಲಾಗಿದೆ. ಇಲ್ಲಿ ಯಾವ್ಯಾವ ಇಲಾಖೆಗಳು ಎನ್ನುವ ವಿವರವನ್ನು ನಾವು ಕೊಟ್ಟಿದ್ದೇವೆ. ನಾನು ಈ ಸಂದರ್ಭದಲ್ಲಿ ಆ ವಿವರಗಳಿಗೆ ಹೋಗದೆ ಕೆಲವು ವಿಚಾರಗಳ ಬಗ್ಗೆ ಮಾನ್ಯ ಸದಸ್ಯರಾದ ವೀರಭದ್ರಪ್ಪನವರು ಹಾಗೂ ಕೆಲವು ಮಾನ್ಯ ಸದಸ್ಯರು ಹಿಂದೆ ಚರ್ಚೆ ನಡೆದಂತಹ ಕಾಲದಲ್ಲಿ ಹಾಗೂ ಬೇರೆ ಸಂದರ್ಭಗಳಲ್ಲಿ ಕೂಡ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದರು. ಇವತ್ತು ಕೂಡ ಪ್ರಸ್ತಾಪ ಮಾಡಿದರು. ನಾನು ಅಪ್ರೋಪ್ರಿಯೇಷನ್ ಬಿಲ್ ಬಂದಾಗ ನಾನು ಹೇಳುತ್ತೇನೆ ಎನ್ನತಕ್ಕ ಮಾತನ್ನು ಆ ಸಂದರ್ಭದಲ್ಲಿ ತಮಗೆ ಹೇಳಿದ್ದೆ. ಆವೊಂದು ದೃಷ್ಟಿಯಿಂದ ಕೆಲವು ವಿಚಾರಗಳನ್ನು ಈ ಸಂದರ್ಭದಲ್ಲಿ ಪ್ರಕಟ ಮಾಡಬೇಕಾಗಿದೆ. ಅದಕ್ಕೆ ತಮ್ಮ ಅನುಮತಿಯನ್ನು ಪಡೆದು ಪ್ರಕಟ ಮಾಡಬೇಕೆಂದು ನಾನು ಎದ್ದು ನಿಂತಿದ್ದೇನೆ. ಇಲ್ಲಿ ರಾಜ್ಯದ ಹಣಕಾಸಿನ ಪರಿಸ್ಥಿತಿಯ ಬಗ್ಗೆ ತಾವು ಏನೇ ಮಾತನಾಡಿದರೂ ಕೂಡ ನಾವೇನು ವರಮಾನವನ್ನು ನಿರೀಕ್ಷೆ ಮಾಡಿದ್ದೇವೆ ಪ್ರಾನ್ಸೈಜ್ ಏನಿದೆ ಅದನ್ನು ಸಂಪೂರ್ಣವಾಗಿ ಮುಟ್ಟುವುದಕ್ಕೋಸ್ಕರ ಹಲವಾರು ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಇಲಾಖೆಗಳ ಖರ್ಚಿಗೋಸ್ಕರ ನಾವು ಈ ದಿಸೆಯಲ್ಲಿ ಹೆಜ್ಜೆಯನ್ನು ಸ್ಪಷ್ಟವಾಗಿ ಇಡುತ್ತಾ ಹೊರಟಿದ್ದೇವೆ. ಇವತ್ತು ಕಮರ್ಷಿಯಲ್ ಟ್ಯಾಕ್ಸಸ್ ಏನಿದ ಅದು 1800 ಕೋಟಿ ರೂಪಾಯಿ ಎಂದು ಸ್ವಲ್ಪ ಹೆಚ್ಚುಕಡಿಮೆ ಹೇಳಿದ್ದರೂ ಕೂಡ ಅದರಲ್ಲಿ ಕಳೆದ ವರ್ಷ 1400ಕೋಟಿ ಚಿಲ್ಲರೆ ಅಥವಾ 1500ಕೋಟಿ ಎಂದು ನಾವು ಇಟ್ಟುಕೊಂಡಿದ್ದೇವೆ. ಈ ವರ್ಷ ಸುಮಾರು 1800 ಕೋಟಿ ಎಂದು ನಾವು ಇಟ್ಟುಕೊಂಡಿದ್ದೇವೆ. ಆದರೆ ನಾವು ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತರುವುದಾದರೆ, ಎರಡು ಸಾವಿರ ಕೋಟಿಗೂ ಮುಟ್ಟಿತಕ್ಕ ವಿಚಾರವನ್ನು ನಾವು ಇಟ್ಟುಕೊಂಡಿದ್ದೇವೆ. ಈ ಬಗ್ಗೆ ತ್ವರಿತ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಆದೇಶವನ್ನು ಇಲಾಖೆಗೆ ಕೊಟ್ಟಿದ್ದೇವೆ. ಯಾರ್‍ಯಾರು ಡಿಫಾಲ್ಟರ್ಸ್

ಇದ್ದಾರೆ ಎಲ್ಲೆಲ್ಲಿ ಲೂಪ್ ಹೋಲ್ಸ್ ಇದೆ ಅದನ್ನು ರದ್ದು ಮಾಡಬೇಕು ಅಷ್ಟು ಮಾಡಿದರೂ ಕೂಡ ನಾವು ಸಂಪೂರ್ಣ ಮಾಡಿದ್ದೇವೆನ್ನುವ ಮಾತನ್ನು ಆಡುವುದಿಲ್ಲ. ಆದರೆ ಹೆಚ್ಚಿನ ವರಮಾನವನ್ನು ನಮ್ಮ ನಿಧಿಗೆ ಪಡೆಯುವುದಕ್ಕೋಸ್ಕರ ರಾಜ್ಯದಲ್ಲಿ ಹಲವಾರು ಬಾಬುಗಳಿಗೋಸ್ಕರ ಖರ್ಚು ಮಾಡುವುದಕ್ಕೋಸ್ಕರ ಹಣವನ್ನು ನಾವು ಶೇಖರಣೆ ಮಾಡುವ ವಿಚಾರದಲ್ಲಿ ನಾವು ಮುಂದುವರಿದು ಹೊರಟಿದ್ದೇವೆ. ಈ ಸಂದರ್ಭದಲ್ಲಿ ಕಮರ್ಷಿಯಲ್, ಟ್ಯಾಕ್ಸ್ ವಿಚಾರದಲ್ಲಿ ನಾನು ಈ ಆರ್ಥಿಕ ವರ್ಷಕ್ಕೆ ಸಂಬಂಧಪಟ್ಟ ಹಾಗೆ ನಮ್ಮ ಬಜೆಟ್ ಸ್ಪೀಚ್‌ನಲ್ಲಿ ನಾನು ಹೇಳಿದ್ದೇನೆ "to withdraw the tax concession given to the oil seeds".

ಮಾನ್ಯ ಕಡೂರು ಶಾಸಕರಾದ ವೀರಭದ್ರಪ್ಪನವರು ಹೇಳಿರತಕ್ಕ ವಿಚಾರವಿದು. under the Karnataka SAles Tax Act. ಆ ವಿಚಾರದ ಬಗ್ಗೆ ನಾನು ಹೇಳಿದ್ದೆ to reduce the rate of tax on edible oil from 4% to 3%. ಎನ್ನತಕ್ಕಂಥ ಮಾತನ್ನು ತಿಳಿಸಿದ್ದೆ. This proposal has been given effect to from 1st of April 1991. ಅನೇಕ ಸಂಘ ಸಂಸ್ಥೆಗಳಾದ ಹಾಗೂ ತಾವು ಹೇಳಿದ್ದೀರಿ, ಬೇರೆಯವರು ಕೂಡ ಬಂದು ಹೇಳಿದ್ದಾರೆ. ಹುಬ್ಬಳ್ಳಿ-ಧಾರವಾಡದವರು ಬಂದು ಹೇಳಿದ್ದಾರೆ. ಬೇರೆಯವರು ಕೂಡ ಬಂದು ತಿಳಿಸಿದ್ದಾರೆ. ಟ್ರೇಡ್ ಬಾಡೀಸ್‌ನವರು ಬಂದು ಹೇಳಿದ ಮೇಲೆ ಅಂದರೆ ಅವರುಏನಿದೆ ಅದು continuation of Taxes ಕನ್‌ಸೇಷನ್ ಏನಿದೆ ಅದನ್ನು 1987-88ರಿಂದ ಮುಂದುವರಿಸಿಕೊಂಡು ಬರಬೇಕೆಂದು ಅವರು ಹೇಳಿರತಕ್ಕದ್ದು 'withdrawal of the tax concession has rendered oil mills in our State un-competitive compared to the neighbouring States, like Maharashtra.

ಮಹಾರಾಷ್ಟ್ರ ಮತ್ತೊಂದು ರಾಜ್ಯದ್ದು ಅವರು ಹೇಳಿದ್ದಾರೆ. ಅದನ್ನು ನಾವು ಕೇರ್‌ಫುಲ್ ಆಗಿ ಎಕ್ಸಾಮಿನ್ ಮಾಡಿದ್ದೇವೆ. ನಮ್ಮ oil ಇಂಡಸ್ಟ್ರೀಸ್‌ಗಳಿಗೆ ಸಪ್ಪೋರ್ಟ್ ಮಾಡುವುದಕ್ಕೋಸ್ಕರ I now propose to continue the tax concession which had been available to the oil seeds prior to the Ist April 1991.

The tax concessions will be continued with retrospective effect, namely from the Ist April 1991, but the rate of tax on edible oils ಅದೇನಿದೆ ರೇಟ್ ವಿಚಾರದಲ್ಲಿ that will be enhanced from the existing rate of 3% to 4%. This is from Ist of next month.

ಮುಂದಿನ ತಿಂಗಳು Iನೇ ತಾರೀಕಿನಿಂದ. ಅನಂತರ ಸೇಲ್ಸ್ ಟ್ಯಾಕ್ಸ್ ಪಾಲಿಸಿ ವಿಚಾರದಲ್ಲಿ ಇದನ್ನು ಸ್ವಲ್ಪ ಸ್ಟ್ರೀಮ್‌ಲೈನ್ ಮಾಡತಕ್ಕಂಥ ವಿಚಾರವನ್ನು ನಾವು ಇಟ್ಟುಕೊಂಡಿದ್ದೇವೆ. ಅದಕ್ಕೋಸ್ಕರ ಈ dealers in small turnovers ಏನಿದ್ದಾರೆ, ಅವರಿಗೆ ಇನ್ನೂ ಸ್ವಲ್ಪ ಕನ್ಸೆಶನ್ ಕೊಡಬೇಕು ಎನ್ನತಕ್ಕಂಥ ವಿಚಾರವನ್ನು ನಾವು ಮಾಡಿದ್ದೇವೆ. ಈಗ ಇರತಕ್ಕದ್ದು every dealer whose turnover in a year is not less than Rs. 1 lakh, ಅಂದರೆ ಒಂದು ಲಕ್ಷಕ್ಕಿಂತ ಮೀರಿ ಇರತಕ್ಕವರಿಗೆ They are required to compulsorily obtain registration under the Karnataka Sales Tax Act.

ಶ್ರೀ ಬಿ. ಎಸ್. ಯಡಿಯೂರಪ್ಪ : ಇದಾದ ನಂತರ ಪ್ರಶ್ನೋತ್ತರ ಇದೆ. ಅದರಲ್ಲಿ ನಾವು ಯಾರೂ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ತಾವು..

ಅಧ್ಯಕ್ಷರು : ಮುಖ್ಯಮಂತ್ರಿಗಳು ಸಭೆಗೆ ತಿಳಿಸುತ್ತಾರೆ.

ಶ್ರೀ ಎಸ್. ಬಂಗಾರಪ್ಪ : ಅನೌನ್ಸ್‌ಮೆಂಟ್ ಇದು. ನಾನು ಮಾಡುತ್ತಿರುವುದು ಚರ್ಚೆಗೆ ಉತ್ತರ ಅಲ್ಲ. ನಾನು ಕೆಲವು ಅನೌನ್ಸ್‌ಮೆಂಟ್ ಕೊಡುತ್ತಿದ್ದೇನೆ. ಏಕೆಂದರೆ ಈ ಟೈಮ್ ಬಿಟ್ಟರೆ ಮತ್ತೆ ಆಗುವುದಿಲ್ಲ. ಇನ್ನು ಬೇರೆ ಬೇರೆ ಬಿಲ್‌ಗಳು ಬರುತ್ತವೆ. ಆದ್ದರಿಂದ ಈಗ ಅನೇಕ ರೆಪ್ರೆಸಂಟೇಶನ್ಸ್, ಇದೆಲ್ಲ ಬಂದಮೇಲೆ I propose that this minimum turn over limit be raised from Rs. 1 lakh to Rs.2 lakhs, with effect from 1st of next month.

ಇದರಿಂದ ಸುಮಾರು 25,500 ಡೀಲರ್ಸ್‌ಗೆ ಬೆನಿಫಿಟ್ ಸಿಗುತ್ತದೆ ಎನ್ನತಕ್ಕಂಥ ವಿಚಾರವನ್ನು ನಾವು ಇಟ್ಟುಕೊಂಡಿದ್ದೇವೆ. ಎರಡು ಲಕ್ಷದವರೆಗೆ ಇರತಕ್ಕಂಥವರು ಇದರ ಬಗ್ಗೆ ಯೋಚನೆ ಮಾಡತಕ್ಕಂಥ ಅವಶ್ಯಕತೆ ಇಲ್ಲ. Secondly the Registered Dealers, whose annual turnover is up to Rs. 1 lakh, they have been given facilities of acceptance of their reutrns without being called to attend the departmental officers with books accounts for enquiry and all those things. This practice of non-scrutiny assessment by accepting the returns was adopted as another simplification measure to relieve the small dealers from the harassment from officers.

ಆಫೀಸರ್ಸ್ ಹೆರಾಸ್ ಮಾಡುತ್ತಾರೆ, ಮತ್ತೊಂದು ಮಾಡುತ್ತಾರೆ ಎನ್ನತಕ್ಕಂಥ ವಿಚಾರ ಹೇಳುತ್ತಾ ಇದ್ದಾರೆ. ಅದಕ್ಕೋಸ್ಕರ I propose to extend non-scrutiny assessment to all the dealers whose turnover is less than Rs. 2.5 lakhs upto 1990-91. This extension will relieve about 32,000 small dealers from the rigorous assessment procedures.

ಅಷ್ಟು ಜನರಿಗೆ ಅದು ಅನುಕೂಲವಾಗುತ್ತದೆ. ಇನ್ನು, ಮೂರನೇಯದಾಗಿ ಈ Karnataka Sales Tax Act ಪ್ರಕಾರ Dealers should file their monthly statement of turnover. ಪ್ರತಿ ತಿಂಗಳೂ ಕೂಡ ಅದನ್ನು ಹಾಕಬೇಕು ಎನ್ನತಕ್ಕಂಥಾದ್ದು and pay taxes on that basis ಅದು ಇರತಕ್ಕಂಥಾದ್ದು. ಇದು ಕೂಡ ನಮಗೆ ತೊಂದರೆಯಾಗುತ್ತಿದೆ. ಎಂದು ಅನೇಕ ಜನ ರೆಪ್ರೆಸೆಂಟೇಶನ್ಸ್ ಅದೆಲ್ಲ ಕೊಟ್ಟಿದ್ದರು. Taking note of this hardships, Government have now granted the facility of quarterly filling up of statements of turnovers and also payment of tax on that basis in respect of dealers whose annual turnover does not exceed Rs. 2.5 lakhs. There have been many representation for the extension of this facility.

ಅದೆಲ್ಲ ಬಂದಮೇಲೆ ನಾನು ಇಲ್ಲಿ ಪ್ರಪೋಸ್ ಮಾಡತಕ್ಕದ್ದು We Would be extending this facility to all those whose annual turnover is up to Rs. 5 lakhs.

ಇದು 2.5 ಲಕ್ಷದಿಂದ 5 ಲಕ್ಷಕ್ಕೆ ತೆಗೆದುಕೊಂಡು ಹೋಗುತ್ತಿದ್ದೇವೆ. By this an additional 29,000 dealers in the State will be required to visit the departmental officers only 4 times a year. ಇದನ್ನು ಕೂಡ ಸಿಂಪ್ಲಿಫೈ ಮಾಡಿ ಈ ವಿಚಾರವನ್ನು ಕೂಡ ನಾವು ಕಾರ್ಯಕ್ರಮ ಹಾಕತಕ್ಕಂಥಾದ್ದರ ಬಗ್ಗೆ ಈಗ ಪ್ರಕಟ ಮಾಡಿದ್ದೇನೆ. ಇದರ ಜೊತೆಯಲ್ಲಿ ಮತ್ತೊಂದು ವಿಚಾರ, ಇರಿಗೇಶನ್ ಬಗ್ಗೆ ಅನೇಕ ಜನ

ಮಾನ್ಯ ಸದಸ್ಯರು ನಾವು ಇದರ ಬಗ್ಗೆ ಹೆಚ್ಚು ವಿಚಾರ ಬೆಳಕು ಚೆಲ್ಲುವುದಕ್ಕೆ ಆಗಲಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದಾಗ ಮಾನ್ಯ ದೊಡ್ಡ ನೀರಾವರಿ ಸಚಿವರಾದ ಮಲ್ಲಾರಿಗೌಡ ಪಾಟೀಲರಿಗೆ ನಾನು ಹೇಳಿದ್ದೆ ಅಷ್ಟರೊಳಗೆ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ನೋಡಿ, ಅಪ್ರೋಪ್ರಿಯೋಶನ್ ಬಿಲ್ ಬಂದ ಕಾಲದಲ್ಲಿ ಆ ವಿಚಾರವನ್ನು ಹೇಳುತ್ತೇನೆ. ಎನ್ನತಕ್ಕಂಥ ಮಾತನ್ನು ಸದನಕ್ಕೆ ತಿಳಿಸಿ, ಎಲ್ಲಾ ಮಾತನ್ನು ಕೂಡ ಹೇಳಿದ್ದೆ.

This is a commitment. ಆ ದೃಷ್ಟಿಯಿಂದ, ಕೆಲವು ಕಾರ್ಯಕ್ರಮಗಳು ಬಾಂಬೆ ಕರ್ನಾಟಕ ಭಾಗದಲ್ಲಿ ಹಾಗೆಯೇ ಉಳಿದಿದೆ, ಎನ್ನತಕ್ಕಂಥ ವಿಚಾರ ಪದೇಪದೇ, ಬೆಳಗಾಂ, ಬಿಜಾಪುರ, ಧಾರವಾಡ ಈ ಕಡೆ ಉಳಿದಿವೆ ಎಂಬ ವಿಚಾರ ಬರುತ್ತಿತ್ತು. ಉದಾಹರಣೆಗಾಗಿ, ಅಪ್ಪರ್ ಕೃಷ್ಣ ವಿಭಾಗದ, ಹಿಪ್ಪರಗಿ ಬ್ಯಾರೇಜ್, ಇದು ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿತ್ತು. ನಾವು ಸದನದಲ್ಲೂ ಕೂಡ ಮಾತು ಕೊಟ್ಟಿದ್ದೇವೆ. ಹಿಪ್ಪರಗಿ ಬ್ಯಾರೇಜ್ ಮತ್ತು ಬೇರೆ 3-4-5 ಸ್ಕೀಮುಗಳು ಇವೆ. ಇದಕ್ಕೆ ಹಣವನ್ನು ಒದಗಿಸಿಕೊಡುತ್ತೇವೆ ಎಂಬ ಮಾತನ್ನು ಹೇಳಿದ್ದೆವು. ನಮಗಿರತಕ್ಕ ಆರ್ಥಿಕ ಶಕ್ತಿಯನ್ನು ಅನುಸರಿಸಿ, ನಾವು ಹಣವನ್ನು ಇದೇ ವರ್ಷದಿಂದ, ಅಂದರೆ 1991-92ಕ್ಕೇ ಕೊಡಬೇಕೆಂಬ ವಿಚಾರವನ್ನು ಕೂಡ ಮಾಡಿ, ಸುಮಾರು, in terms of bachawat Award, we are required to utilise 12.81 TMC under Krishna II basin by 2000 AD. ಇದು ಎರಡು ಸಾವಿರ ಎ.ಡಿ. ಒಳಗೆ ನಾನು ಈ ಸಂದರ್ಭದಲ್ಲಿ ಹೆಚ್ಚಿನ ವಿವರಗಳಿಗೆ ಹೋಗುವುದಿಲ್ಲ. ನಾವು ಎಷ್ಟು ಹಣವನ್ನು ಕೊಟ್ಟಿದ್ದೇವೆ ಎನ್ನುವ ಮಾತನ್ನು ಹೇಳುತ್ತೇನೆ. ಹಿಪ್ಪರಗಿ ಬ್ಯಾರೇಜ್‌ನಿಂದ ಸುಮಾರು 1.25 ಲಕ್ಷ ಎಕರೆ ಭೂಮಿಯಲ್ಲಿ ನೀರಾವರಿಯಾಗುತ್ತದೆ. ಇದರಲ್ಲಿ, ಕೆಲವು ಟೆಕ್ನಿಕಲ್ ಸಮಸ್ಯೆಗಳು ಮತ್ತೊಂದು ಇತ್ತು ಎಂದು ನಮ್ಮ ಗಮನದಲ್ಲಿತ್ತು. ಅವುಗಳನ್ನೂ ಬಗೆಹರಿಸತಕ್ಕ ತೀರ್ಮಾನವನ್ನು ಮಾಡಿದ್ದೇವೆ. ನಾವು ಟೆಂಡರುಗಳನ್ನು ಕರೆದು, ಕೆಲಸಗಳನ್ನು ಇನ್ನು ಮೇಲೆ ಪ್ರಾರಂಭ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. I propose to make an additional provision of Rs. 2 1/2 crores for this work. ಏಕೆಂದರೆ, ನಮಗೆ ಉಳಿದಿರತಕ್ಕಂಥಾದ್ದು, ಇನ್ನು ಆರು ತಿಂಗಳು ಮಾತ್ರ ಉಳಿದುಕೊಂಡಿದೆ. ಮಾರ್ಚ್ ಹಣಕಾಸಿನ ವರ್ಷದ ಕೊನೆಗೆ, ಅಷ್ಟರೊಳಗೆ ಖರ್ಚುಮಾಡುವುದಕ್ಕೆ ಮೂರುವರೆ ಕೋಟಿ ಹಣವನ್ನು, ಇದಕ್ಕೆ ಜಾಸ್ತಿ ತೆಗೆದಿಡುತ್ತಿದ್ದೇನೆ.

This is over and above the budget provision of Rs. 1 1/2 crores already made, making a total of Rs. 5 crores.

ಒಂದೂವರೆ ಮತ್ತು ಮೂರುವರೆ ಒಟ್ಟು 5 ಕೋಟಿ ರೂಪಾಯಿಗಳ ಹಣವನ್ನು ಈ ಆರ್ಥಿಕ ವರ್ಷದಲ್ಲಿ ಹಿಪ್ಪರಗಿ ಬ್ಯಾರೇಜ್‌ಗಾಗಿ ತೆಗೆದಿಟ್ಟಿದ್ದೇವೆ. ಈ ಪ್ರಕಟಣೆಯನ್ನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ. ನಾವು ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಇನ್ನೊಂದು ಮುಳವಾದ ಲಿಫ್ಟ್ ಇರಿಗೇಶನ್ ಸ್ಕೀಮ್. ಬಿಜಾಪುರದಿಂದ ಬಂದಿರತಕ್ಕಂಥ ಮಾನ್ಯ ಸದಸ್ಯರು ಇಲ್ಲಿ ಕುಳಿತುಕೊಂಡಿದ್ದಾರೆ. ಇದೂ ಕೂಡ, part and parcel of U.K.P.

ಇದು ಹೆಡ್ ವರ್ಕ್ಸ್ ಮತ್ತೊಂದು ಇದಕ್ಕೆಲ್ಲ ಪೂರ್ಣವಾಗಿ, ಮೆಯಿನ್‌ಗೆ ಸೇರಿಸಿಕೊಂಡಿರತಕ್ಕ ವಿಚಾರ ಕೂಡ ಹೌದು. ಇದು ಯು.ಕೆ.ಪಿ. ಎರಡನೇ ಹಂತಕ್ಕೆ ಸೇರಿಸಿರತಕ್ಕಂಥಾದ್ದು. ನಾವು ಈಗ ಇಟ್ಟಿರತಕ್ಕ ಹಣದ ಬಗ್ಗೆ ಮಾತ್ರ ಹೇಳುತ್ತಿದ್ದೇನೆ. ಈ ಸಂದರ್ಭದಲ್ಲಿ ನಾನು ವಿವರಗಳಿಗೆ ಹೋಗುವುದಿಲ್ಲ. Sepecial provision of

Rs. 3 crores to be made for the construction of Mulawada Lift Irrigation Scheme Stage I Head works, for which clearance is already available from the Government of India. ಮೂರುವರೆ ಕೋಟಿ ಹಣವನ್ನು ಮುಳವಾಡ ಲಿಫ್ಟ್ ಇರಿಗೇಷನ್ ಸ್ಕೀಮ್ ಗೆ ಈಗಲೇ ಕೊಡುತ್ತಿದ್ದೇನೆ. Mahadai Diversion scheme. This is a multi-purpose project. Irrigation and Power Generation. ಕೂಡ ಹುಬ್ಬಳ್ಳಿ, ಧಾರವಾಡ ಕಾರ್ಪೋರೇಶನ್ ಭಾಗಕ್ಕೆ ಬರುತ್ತದೆ. This contemplates diversion of 9 TMC of water from Mahadai basin to Malaprabha valley.

ಟೋಟಲ್ ಬರತಕ್ಕಂಥಾದ್ದು. I am proposing a provision of Rs. 5 crores. during the current year for this work.

ಇದಕ್ಕೆ ಬೇರೆ 5 ಕೋಟಿ ರೂಪಾಯಿ ಕೊಡುತ್ತಿದ್ದೇವೆ. ಇದರಲ್ಲಿ ಇನ್ನು ಉಳಿದಿರತಕ್ಕಂಥಾದ್ದು ಪವರ್ ಎಷ್ಟು, ಮತ್ತೊಂದು ಆ ಡೀಟೈಲ್ಸ್, ಅದರ ವಿಚಾರ ನಮಗೆ ಈಗ ಬೇಕಾಗಿಲ್ಲ.

8.10 ಪಿ.ಎಂ

ಇದೇ ಸಂದರ್ಭದಲ್ಲಿ ಅಪ್ಪರ್ ತುಂಗಾ ಪ್ರಾಜೆಕ್ಟ್ ಬಗ್ಗೆ ತಾವು ಹೇಳಿದ್ದೀರಿ. ಇದು ರಾಣಿಬೆನ್ನೂರು ಹಾನಗಲ್, ಹಾವೇರಿ, ಹಿರೇಕೆರೂರು..

ಶ್ರೀ ಪಿ.ಜಿ.ಆರ್. ಸಿಂಧ್ಯ : ಸೊರಬಾನೂ ಇದೆ.

ಶ್ರೀ ಎಸ್. ಬಂಗಾರಪ್ಪ : ಸೊರಬ ಇಲ್ಲ. ಇದರಲ್ಲಿ ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲ್ಲೋಕು, ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕು, ರಾಣಿಬೆನ್ನೂರು ತಾಲ್ಲೂಕಿನ ಕೆಲವು ಭಾಗಗಳು, ಸ್ವಲ್ಪ ಭಾಗ, ಚಿತ್ರದುರ್ಗ ಜಿಲ್ಲೆಯ ಹರಿಹರ ತಾಲ್ಲೂಕು, ಸೇರುತ್ತವೆ. ಹಾವೇರಿ ತಾಲ್ಲೋಕಿನಲ್ಲಿ ಒಂದು ಲಕ್ಷ ಚಿಲ್ಲರೆ ಎಕರೆ, ರಾಣಿಬೆನ್ನೂರು ತಾಲ್ಲೂಕಿನಲ್ಲಿ ...

ಶ್ರೀ ಬಿ.ಹೆಚ್. ಬನ್ನಿಕೋಡ್ : ರಾಣಿಬೆನ್ನೂರು ತಾಲ್ಲೋಕಿನಲ್ಲಿ ಒಂದು ಲಕ್ಷ 7 ಸಾವಿರ ಎಕರೆ ನೀರಾವರಿಯಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ : ಒಂದು ಲಕ್ಷ ಚಿಲ್ಲರೆ ಎಂದು ನಾನೇ ಹೇಳಿದೆನಲ್ಲ. ಹಾವೇರಿ ತಾಲ್ಲೂಕಿನಲ್ಲಿ 70-80 ಸಾವಿರ ಎಕರೆ, ಈ ರೀತಿ ಇದೆ, ಆ ವಿವರಗಳು ಏನೇ ಇರಲಿ.

ಶ್ರೀ ವಾಟಾಳ್ ನಾಗರಾಜ್ : ಹಿಂದೆ ಹಳೇ ಕಾಲದಲ್ಲಿ ಮಹಾರಾಜರ ಹತ್ತಿರ ಎಲ್ಲರೂ ಹೋಗಿ ನಮಗೆ ಕೊಡಿ ಸ್ವಾಮಿ, ನಮಗೆ ಕೊಡಿ ಸ್ವಾಮಿ ಎಂದು ಕೇಳುತ್ತಿದ್ದರು. ಈಗ ಆ ಪರಿಸ್ಥಿತಿ ಹೋಯಿತು, ಆದರೆ ಈಗಲೂ ನಿಮ್ಮ ಹತ್ತಿರ ಅವರು ಕೇಳುವುದು ನೀವು ಕೊಡುವುದು, ಇದು ಏನು ಹಣೆಬರಹ.

(ನಗು)

ಶ್ರೀ ಎಸ್. ಬಂಗಾರಪ್ಪ : ಅಲ್ಲಿ ಅಪ್ಪರ್ ತುಂಗಾ ಪ್ರಾಜೆಕ್ಟ್ ಯಾವುದೇ ಡ್ಯಾಮನ್ನು ಕಟ್ಟತಕ್ಕಂಥ ಪ್ರಶ್ನೆ ಇಲ್ಲ. ಮುಳುಗಡೆ ಪ್ರಶ್ನೆ ಇಲ್ಲ. ನೂರು ಎಕರೆಗಳ ಜಾಗ ಬೇಕಾಗುತ್ತದೆ. ಅದಕ್ಕೆ ಕಂಪೆನ್‌ಸೇಷನ್ ಕೊಟ್ಟು ಎಲ್ಲಾ ಮುಗಿದು ಹೋಗಿದೆ ಎಂಬ ಹಿನ್ನಲೆಯಲ್ಲಿ, ಕೇವಲ ಕ್ರೆಸ್ಟ್ ಗೇಟ್‌ಗಳನ್ನು ಹಾಕಿ ನೀರನ್ನು ಉಪಯೋಗ ಮಾಡಿಕೊಂಡು ಹೋಗುವುದು ಇದೆ. The scheme provides for erection of crest

gates of 30.75 ft. high to the existing Tunga Anicut and thereby to create storage facilities to additional water to irrigate 2.34 lakh acrea in Shimoga, Dharwar and Chitradurga Districts. For this the cost is about 271 crores. This is of 1988-89 S.R. ರ ಪ್ರಕಾರ ಇರತಕ್ಕಂಥಾದ್ದು ಇದೆ 211 ಪೈಲಿ, ಟೋಟಲ್ ಚಾನಲ್ ಹೋಗತಕ್ಕಂಥಾದ್ದು, ಅಷ್ಟು ದೂರ ಬರುತ್ತದೆ ಎಂಬುದು ಇದೆ. ಇವಕ್ಕೆ ನಾವು ವರ್ಕ್ ಸ್ಟಾರ್ಟ್ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇದೇ ವರ್ಷದಿಂದ ಕೇಸ್ ಪ್ರಾರಂಭ ಮಾಡುವುದಕ್ಕೆ ಉಳಿದಿರತಕ್ಕಂಥ ಆರ್ಥಿಕ ವರ್ಷದಲ್ಲಿ ನಾವು ಜಾಸ್ತಿ ಹಣ ಇಟ್ಟರೆ ಖರ್ಚು ಮಾಡುವುದಕ್ಕೆ ಆಗುವುದಿಲ್ಲ. ಸಿದ್ಧತೆ ಮಾಡುವುದರಲ್ಲಿಯೇ ಟೈಮ್ ಹೊರಟು ಹೋಗುತ್ತದೆ. ಇಷ್ಟಾದರೂ ಕೂಡಾ ಈ ಫೈನಾನ್ಷಿಯಲ್ ಇಯರ್‌ನಲ್ಲಿ 5 ಕೋಟಿ ರೂಪಾಯಿ ಹಣವನ್ನು ಇಟ್ಟು ಈ ಅಪ್ಪರ್ ತುಂಗಾ ಪ್ರಾಜೆಕ್ಟನ್ನು ಪ್ರಾರಂಭ ಮಾಡುತ್ತೇವೆ. ಆಮೇಲೆ ಕೊನೆಯದು ಈ ದೂಧ್‌ಗಂಗಾ ಪ್ರಾಜೆಕ್ಟ್ ವಿಚಾರ. ಇದು ಬೆಳಗಾಂ ಜಿಲ್ಲೆಯಲ್ಲಿ ಬರುತ್ತದೆ. ಮಹಾರಾಷ್ಟ್ರ - ಕರ್ನಾಟಕ ಅಗ್ರಿಮೆಂಟ್ ಪ್ರಕಾರ ಇರತಕ್ಕಂಥ ವಿಚಾರ. ಇದೂ ಕೂಡಾ ಮಲ್ಟಿಪರ್ಪಸ್ ಪ್ರಾಜೆಕ್ಟ್. ಜಾಯಿಂಟ್ ವೆಂಚರ್ ಆಫ್ ಕರ್ನಾಟಕ-ಮಹಾರಾಷ್ಟ್ರ ಗೌರ್ನಮೆಂಟ್ಸ್. ಈ ಕೆಲಸಕ್ಕೆ ನಾವು ಈಗಾಗಲೇ..

ಶ್ರೀ ಬಿ. ಎಸ್. ಯಡಿಯೂರಪ್ಪ : ಅಪ್ಪರ್ ತುಂಗಾ ಪ್ರಾಜೆಕ್ಟ್ 212 ಕೋಟಿ ರೂಪಾಯಿ ಬೇಕು. ಅದಕ್ಕೆ 5 ಕೋಟಿ ರೂಪಾಯಿ ತೆಗೆದಿಟ್ಟಿರುತ್ತೀರಿ. ಇದು ಗುದ್ದಲಿ, ಹಾರೆ, ಪಿಕಾಸಿಗೂ ಸಾಲುವುದಿಲ್ಲ. ತುಟಿಗೆ ತುಪ್ಪ ಸವರುವ ಕೆಲಸ ಮಾಡಬೇಡಿ. ಇನ್ನೂ ಜಾಸ್ತಿ ಹಣ ತೆಗೆದಿಡಬೇಕು.

ಶ್ರೀ ಎಸ್. ಬಂಗಾರಪ್ಪ : ಸಿದ್ಧತೆಗಳನ್ನು ಮಾಡಿಕೊಂಡು ಕೆಲಸ ಪ್ರಾರಂಭ ಮಾಡುವುದಕ್ಕೆ ಮಾರ್ಚ್ ಎಂಡ್ ತನಕ ಇಷ್ಟನ್ನು ಕೊಡಲಾಗಿದೆ. ಇನ್ನು 6 ತಿಂಗಳು ಮಾತ್ರ ಉಳಿದಿರತಕ್ಕಂಥಾದ್ದು ಅಷ್ಟರಲ್ಲಿ ಎಷ್ಟು ಕೆಲಸ ಮಾಡುವುದಕ್ಕೆ ಸಾಧ್ಯ? ಪ್ರಾರಂಭ ಆದಮೇಲೆ ಜಾಸ್ತಿ ಹಣ ಕೊಡೋಣ.

ಶ್ರೀ. ಆರ್.ವಿ. ದೇಶಪಾಂಡೆ : ಹಣ ಕೊಟ್ಟರೂ ಖರ್ಚಾಗುವುದಿಲ್ಲ. ಈಗ.

ಶ್ರೀ ಎಸ್. ಬಂಗಾರಪ್ಪ : ಇದು ತಮ್ಮ ಅನುಮತಿಯನ್ನು ಪಡೆದು ಪ್ರಕಟ ಮಾಡುತ್ತಿದ್ದೇನೆ. ಹಣದ ಕೊರತೆ ಬಿದ್ದರೆ, ಮಾನ್ಯ ಬನ್ನಿಕೋಡ್‌ರವರಿಗೆ, ಕೋಳಿವಾಡ್‌ರವರಿಗೆ ಇಡೀ ಸದನದ ಗಮನಕ್ಕೆ ತರುವುದು ಏನೆಂದರೆ, ಮತ್ತೆ ಹಣದ ಕೊರತೆ ಬಿದ್ದರೆ ಅಡಿಶನಲ್ ಆಗಿ ಕೊಡುವಂತಹ ಪ್ರಯತ್ನ ಮಾಡುತ್ತೇವೆ. ಇಡೀ ಆರ್ಥಿಕ ವರ್ಷದಲ್ಲಿ ಮತ್ತೆ ಬೇಕಾದರೆ ಪ್ರೊವಾಯ್ಡ್ ಮಾಡುತ್ತೇನೆ. Let us start the work. ಪ್ರಾರಂಭ ಮಾಡದೇ, ಸುಮ್ಮನೆ ಇಟ್ಟುಕೊಂಡು, ಮುಂದೆ ಮಂಜೂರು ಮಾಡುತ್ತೇವೆ ಎಂದು ಹೇಳುವುದರಲ್ಲಿ ಅರ್ಥ ಇದೆಯೇ? ಈ ದೃಷ್ಟಿಯಿಂದ ಇಷ್ಟನ್ನು ಪ್ರೊವಾಯ್ಡ್ ಮಾಡಿರುತ್ತೇವೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಅಲ್ಲಿಗೇ ಪ್ರತ್ಯೇಕವಾಗಿ ಒಂದು ಎಂಜಿನಿಯರಿಂಗ್ ಸರ್ಕಲ್ ಪ್ರಾರಂಭಿಸಬೇಕು, ಡೀಟೇಲ್ ಸರ್ವೆ ಆಗಬೇಕು, ಪ್ರಿಲಿಮಿನರಿ ಕೆಲಸ ಆಗಬೇಕೆಂದು ಅಲ್ಲಿಗೇ ಒಂದು ಪ್ರತ್ಯೇಕ ಸರ್ಕಲ್ ಬೇಕೆಂದು ಮನವಿ ಮಾಡಿರುತ್ತೇವೆ. ಅಲ್ಲಿಗೇ ಒಂದು ಪ್ರತ್ಯೇಕ ಎಂಜಿನಿಯರಿಂಗ್ ಸರ್ಕಲ್ ವ್ಯವಸ್ಥೆ ಮಾಡಿರಿ.

ಶ್ರೀ ಬಿ. ಹೆಚ್. ಬನ್ನಿಕೋಡ್: ಪ್ರತ್ಯೇಕ ಎಂಜಿನಿಯರಿಂಗ್ ಸರ್ಕಲ್ ಮಾಡುವುದಕ್ಕೆ ತಾವೇ ಒಪ್ಪಿಕೊಂಡಿದ್ದೀರಿ. ರಾಣಿಬೆನ್ನೂರ್ ಸರ್ಕಲ್ ಮಾಡುತ್ತೇವೆ ಎಂದು ಹೇಳಿದ್ದೀರಿ. ಈ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಎಂಜಿನಿಯರಿಂಗ್ ಸರ್ಕಲ್ ಮಾಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ : ಇನ್ನು ದೂಧ್‌ಗಂಗಾ ಪ್ರಾಜೆಕ್ಟ್ 11 ಕೋಟಿ ರೂಪಾಯಿ ಕೊಡಬೇಕೆನ್ನತಕ್ಕಂಥ ಅಗ್ರಿಮೆಂಟ್ ಪ್ರಕಾರ, ಗೌರ್ನಮೆಂಟ್ ಆಫ್ ಕರ್ನಾಟಕದಿಂದ 4 ಕೋಟಿ ಹಣವನ್ನು ಆಗಲೇ ಕೊಟ್ಟಿರುತ್ತೇನೆ. ಉಳಿದಿರತಕ್ಕಂಥ ಹಣವನ್ನು ಕೊಡಬೇಕೆಂಬ ಮಾತನ್ನು ಹೇಳಿರುತ್ತಾರೆ. By making a special budget provision of Rs. 3 crores during the current year itself, 3 ಕೋಟಿ ಹಣವನ್ನು ನಾವು ಅಗ್ರಿಮೆಂಟ್ ಪ್ರಕಾರ ದೂಧ್‌ಗಂಗಾ ಪ್ರಾಜೆಕ್ಟ್‌ಗೆ ಕೊಡುತ್ತಿದ್ದೇವೆ.

ಇಷ್ಟು ನೀರಾವರಿ ವಿಚಾರದಲ್ಲಿ ಆದರೆ ಇನ್ನು ನಮ್ಮ ಮುಂದೆ ಉಳಿದಿರತಕ್ಕ ಕಾರ್ಯಕ್ರಮಗಳು ಏನಿದ್ದಾವೇ ಈ ಆರ್ಥಿಕ ವರ್ಷದಲ್ಲಿ ಅವುಗಳಿಗೆ ನಾವು ಖರ್ಚು ಮಾಡತಕ್ಕಂಥ ಹಣ ಎಷ್ಟು ಎನ್ನುವ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ನಾವು ಇವತ್ತು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕ್ಕೊಂಡಿದ್ದೇವೆ. ಮೊದಲನೆಯದು ಆರಾಧನ ಕಾರ್ಯಕ್ರಮ. ಈಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. We have now made a budget provision of Rs. 1.90 crores. ಟೋಟಲ್ ನಾವಿಟ್ಟಿರತಕ್ಕಂಥಾದ್ದು. ಮಾನ್ಯ ಕಂದಾಯ ಸಚಿವರು ಮಾತನಾಡುತ್ತಾ ಹೇಳಿದರು ಒಂದು ಕೋಟಿ 90 ಲಕ್ಷ ರೂಪಾಯಿಗಳು ಸಾಕಾಗುವುದಿಲ್ಲವೆಂದು.

ಮಸೀದಿ ಇರಬಹುದು, ಚರ್ಚ್ ಇರಬಹುದು ದೇವಸ್ಥಾನಗಳು ಇರಬಹುದು ಅವುಗಳ ಜೀರ್ಣೋದ್ಧಾರಕ್ಕೆ ಒಂದು ಕೋಟಿ 90 ಲಕ್ಷ ರೂಪಾಯಿಗಳನ್ನು ನಾವು ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದ್ದೇವು. ಅದಕ್ಕೆ ನಾವೀಗ ಒಟ್ಟು 3 ಕೋಟಿ ಇಟ್ಟಿದ್ದೇವೆ. ಹಿಂದೆ ಇಟ್ಟಿದ್ದಕ್ಕೆ 10 ಲಕ್ಷ ರೂಪಾಯಿಗಳು ಅಡಿಶನಲ್ ಗ್ರ್ಯಾಂಟ್ ಕೊಟ್ಟಿದ್ದೇವೆ. ಕೊನೆಯ ಪಕ್ಷ 15-20 ತಾಲ್ಲೂಕುಗಳಾದರೂ ದೇವಸ್ಥಾನಗಳ ರಿಪೇರಿ ಕೆಲಸ ಮಾಡಬೇಕೆನ್ನುವ ದೃಷ್ಟಿಯಿಂದ ಮಾನ್ಯ ಅಧ್ಯಕ್ಷರೇ ನಾವಿಲ್ಲಿ ಅಡಿಶನಲ್ ಪ್ರಾವಿಜನ್ ಈ ವರ್ಷ 3-10 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಒಟ್ಟು ಹಿಂದೆ ಇಟ್ಟಿದ್ದ 1-90 ಲಕ್ಷ ರೂಪಾಯಿಗಳು ಮತ್ತು ಈಗ ಇಟ್ಟಿರುವ ಹಣ ಸೇರಿ 5 ಕೋಟಿ ರೂಪಾಯಿಗಳ ಹಣವನ್ನು ನಾವು ಈ ಆರ್ಥಿಕ ವರ್ಷದಲ್ಲಿ ಈ ಆರಾಧನ ಕಾರ್ಯಕ್ರಮಕ್ಕೆ ನಾವು ಇಟ್ಟುಕೊಂಡಿದ್ದೇವೆ. ನಂತರ ಇನ್ನು ನಮ್ಮ "ಆಶ್ರಯ ಕಾರ್ಯಕ್ರಮ" ಏನಿದೆ ಮನೆ ಕಟ್ಟಿಕೊಡತಕ್ಕಂಥ ವಿಚಾರದಲ್ಲಿ ನಾವು ಈಗಾಗಲೇ ಕೆಲಸಕಾರ್ಯಗಳನ್ನು ಪ್ರಾರಂಭಮಾಡಿದ್ದೇವೆ. ಇದರಲ್ಲಿ ಕೂಡ ಕರ್ನಾಟಕ ಹೌಸಿಂಗ್ ಬೋರ್ಡ್ ಏನು ಇದೆ ಅದರ ಮುಖಾಂತರ ಆಗಬೇಕೆಂದು ಹೇಳಿ ನಾವು ಆದಷ್ಟು ಪ್ರೀ ಫ್ಯಾಬ್ರಿಕೇಟೆಡ್ ಮೆಟೀರಿಯಲ್ಸ್ ಉಪಯೋಗ ಮಾಡಬೇಕು ಈಗ ಇರತಕ್ಕಂಥ ಮನೆಗಳು ಅಷ್ಟು ಬಾಳಿಕೆ ಬರುತ್ತಿಲ್ಲವೆಂದು ಸರ್ಕಾರಕ್ಕೆ ಸಿಕ್ಕಾಪಟ್ಟೆ ದೂರುಗಳು ಬಂದಿವೆ. ಆದ್ದರಿಂದ ಸರ್ಕಾರ ಕೂಡ ಆ ಅಭಿಪ್ರಾಯಕ್ಕೆ ಬಂದಿದೆ. ನಾವು ಆರ್ಥಿಕ ವರ್ಷದಲ್ಲಿ ಒಂದು ವರ್ಷಕ್ಕೆ ಒಂದು ಸಾವಿರ ಮನೆ ಕಟ್ಟಿಕೊಡಬೇಕೆಂದು ಇದ್ದು ಅದಕ್ಕಿಂತ ಹಿಂದೆ ಹೋಗುವಂತಹ ಪ್ರಶ್ನೆಯೇ ಇಲ್ಲ. ಈಗ ನಾವು ಪ್ರೀ ಫ್ಯಾಬ್ರಿಕೇಟೆಡ್ ಇದನ್ನು ಬೇರೆಯವರು ಮಾಡಿದ್ದಾರೋ, ಬಿಟ್ಟಿದ್ದಾರೋ ಎನ್ನತಕ್ಕಂಥ ಪ್ರಶ್ನೆ ನಮಗೆ ಅದು ಅಮುಖ್ಯ. ಆದರೆ ಇದು ಒಂದು 5 ವರ್ಷದ ಅವಧಿಯವರೆಗೆ ಸುಮಾರು ಆರುನೂರು ಏಳುನೂರು ಕೋಟಿ ಹಣವನ್ನು ನಾವು ತೊಡಗಿಸಬೇಕೆಂದರೆ, ನಮ್ಮ

ದೇಶ ಮತ್ತು ವಿದೇಶಿ ಮಟ್ಟದಲ್ಲಿ ಕೂಡಾ ನಾವು ಗಮನ ಕೊಡತಕ್ಕಂಥ ವಿಚಾರಕ್ಕೆ ನಾವು ಕೈ ಹಾಕಿದ್ದೇವೆ. ಎರಡನೆಯದು, ಗ್ರಾಮ ಮಟ್ಟದಲ್ಲಿರತಕ್ಕಂಥ ಶಾಸನಸಭಾ ಕ್ಷೇತ್ರದಲ್ಲಿ ನಾವು ಪ್ರಾರಂಭ ಮಾಡುತ್ತಿದ್ದೇವೆ. ತಾವು ತಮ್ಮ ತಮ್ಮ ಕ್ಷೇತ್ರದಲ್ಲಿ ತಾವೇ ಉದ್ಘಾಟನೆ ಮಾಡಬೇಕು ಎಂದು ನನ್ನ ಪತ್ರದ ಒಕ್ಕಣೆಯೂ ಕೂಡಾ ಇದೆ. ಅದು ಅಧಿಕಾರ ರೂಢ ಮಾನ್ಯ ಸದಸ್ಯರಿರಬಹುದು ಅಥವಾ ಬೇರೆಯವರಿರಬಹುದು. ಅದರ ಬಗ್ಗೆ ಭಿನ್ನಾಭಾವ ಮಾಡಿಲ್ಲ. ತಮ್ಮ ತಮ್ಮ ಕ್ಷೇತ್ರದಲ್ಲಿ ತಾವೇ ಮಾಡಬೇಕು. ನಾವೆಲ್ಲರೂ ಸೇರಿಕೊಂಡು ಇದನ್ನು ಹಮ್ಮಿಕ್ಕೊಳ್ಳಬೇಕೆಂದು ಒಂದು ಸದುದ್ದೇಶದಿಂದ ಇದನ್ನು ಪ್ರಾರಂಭಮಾಡುತ್ತಿದ್ದೇವೆ. ಇನ್ನು ಪಟ್ಟಣ, ನಗರ ಪ್ರದೇಶಗಳಲ್ಲಿ ಬರತಕ್ಕಂಥ ಪ್ರದೇಶಗಳೇನಿವೆ ನಾವು ಅವನ್ನೂ ಕೂಡಾ ಪ್ರಾರಂಭ ಮಾಡುತ್ತಿದ್ದೇವೆ. ಅದು ನವಂಬರ್ 19ನೇ ತಾರೀಖಿನ ದಿವಸ ಪ್ರಾರಂಭ ಮಾಡುತ್ತಿದ್ದೇವೆ. ಅದಕ್ಕೆ ಇನ್ನೂ ಸ್ವಲ್ಪ ಸಿದ್ಧತೆಗಳು ಆಗಬೇಕಾಗಿದೆ. ನವಂಬರ್ 19ನೇ ತಾರೀಖಿನ ದಿವಸ ಪಟ್ಟಣ, ನಗರ ಪ್ರದೇಶಗಳಲ್ಲಿ 'ವಿಶ್ವ' ಕಾರ್ಯಕ್ರಮವನ್ನು ನಾವು ಪ್ರಾರಂಭ ಮಾಡುತ್ತಿದ್ದೇವೆ. ಗುಜರಾತ್‌ನಲ್ಲಿ ಅಮುಲ್ ಆನಂದ್ ಮಿಲ್ಕ್ ಯೂನಿಯನ್ ಲಿಮಿಟೆಡ್ ಏನಿದೆ ಅದಕ್ಕೆ ಬಹಳ ಒಳ್ಳೆಯ ಹೆಸರಿದೆ. ಮಿಸ್ಟರ್ ಕುರಿಯನ್ ಎಂಬುವವರು ಬಂದಿದ್ದರು. ಮಾನ್ಯ ಸಭಾಧ್ಯಕ್ಷರೆ, ನಿಜ ಹೇಳಬೇಕೆಂದರೆ, ಭಾರತರತ್ನ ಪ್ರಶಸ್ತಿ ಏನಾದರೂ ಕೊಡತಕ್ಕಂಥಾದ್ದು ಇದ್ರೆ ಅವರಿಗೇ ಕೊಡಬೇಕು. ಅಂಥವರಿಗೆ ಕೊಡಬೇಕು ಎನ್ನತಕ್ಕಂಥ ಆಸೆ ಇದೆ. I have already made a request to him.. ಇಲ್ಲಿಗೆ ಬರಬೇಕೆಂಬ ಮಾತನ್ನು ಹೇಳಿದ್ದೇನೆ. ನಮ್ಮ ಸರ್ಕಾರಕ್ಕೆ ಗೈಡೆನ್ಸ್ ಕೊಡಬೇಕೆಂದು ನಾನು ಅವರಿಗೆ ಹೇಳಿದ್ದೇನೆ. He is aged about 79 or 80 years ... ಅದಕ್ಕೆ ತಮ್ಮನ್ನು ತಾವೇ ಧಾರೆ ಎರೆದು ಕೊಂಡುಬಿಟ್ಟಿದ್ದಾರೆ. ಗುಜರಾತ್‌ನಲ್ಲಿ ಅವರನ್ನು ಬಿಟ್ಟುಕೊಡುವುದಕ್ಕೂ ತಯಾರಿಲ್ಲ. ಹಾರ್ಟಿಕಲ್ಚರ್ ವಸ್ತುಗಳನ್ನು ಇಡುವ ಶೀಥಲಗಾರಗಳನ್ನು ಕ್ರೋಸ್ ಆಫ್ ರೂಪೀಸ್ ವೆಚ್ಚದಲ್ಲಿ ಮಾಡಿದ್ದಾರೆ. ಅದನ್ನು ಬಂದು ನೋಡಬೇಕೆಂದು ನನ್ನನ್ನೂ ಕರೆದಿದ್ದಾರೆ. ಅಂಥಾ ದೊಡ್ಡದಾಗಿ ಇಲ್ಲಿ ಮಾಡಿದ್ದಾರೆ. ಇವತ್ತು ಹಾರ್ಟಿಕಲ್ಚರ್ ಅಂದರೆ, ಉದಾಹರಣೆಗೆಗ ಬಿಜಾಪುರ ಜಿಲ್ಲೆ ಇದೆ. ಈಗಾಗಲೇ ಬೆಂಗಳೂರು ಸುತ್ತಮುತ್ತ ಸ್ಪೈಡ್ ಹೊಡೆದುಕೊಂಡು ಬರುತ್ತಿದೆ. ಪೊಮಗ್ರಾನೈಟ್, ದ್ರಾಕ್ಷಿ ಇತ್ಯಾದಿ ಇತ್ಯಾದಿ ತರಕಾರಿ ವಿಚಾರದಲ್ಲಿ. ಇವತ್ತು ಬೆಂಗಳೂರು ಇರಬಹುದು, ಕರ್ನಾಟಕ ರಾಜ್ಯದಲ್ಲಿ ಗಾರ್ಡ್ನ್ ಸಿಟಿ ಎಂದು ಬೆಂಗಳೂರಿಗೆ ಕರೆದರೆ, this itself is a garden city ಎನ್ನುವ ಭಾವನೆ ಬಂದಿದೆ. ಇವತ್ತು ಬೆಳಗಾಂ it is not a small district.. ಉದಾಹರಣೆಗೆ ಹೇಳುವುದಾದರೆ, ಆದ್ದರಿಂದ ನಾವು ಏನಾದರೂ ಮಾಡಿ ಇದಕ್ಕೆ ಹೆಚ್ಚಿನ ಥ್ರಸ್ಟ್ ಕೊಟ್ಟು, ಗಮನಕೊಟ್ಟು ಅಭಿವೃದ್ಧಿ ಮಾಡಬೇಕು ಎನ್ನತಕ್ಕಂಥಾದ್ದು, ಡೈರಿ ಡೆವಲಪ್‌ಮೆಟ್, ಹಾರ್ಟಿಕಲ್ಚರ್, including flower growing ... ನಾವು ಮಾಡಿಕೊಂಡು ಫಾರಿನ್ ಎಕ್ಸಚೇಂಜ್ ಅರ್ನ್ ಮಾಡತಕ್ಕಂಥ ಮಟ್ಟಕ್ಕೆ ನಾವು ಹೋಗದಿದ್ದರೆ ಇದು ಉಪಯೋಗವಾಗುವುದಿಲ್ಲ, ಅದಕ್ಕೋಸ್ಕರ ಅವರಿಗೆ ನಾನು ಹೇಳಿದ್ದೇನೆ. ಅವರು ಬಂದು ಸಂಪೂರ್ಣವಾಗಿ ಕೋ-ಆಪರೇಟಿವ್ ಸೆಕ್ಟಾರ್‌ನಲ್ಲಿ ಏನು ಸಾಧನೆ ಮಾಡಿದ್ದಾರೆ ಆ ರೀತಿ ಮಾಡಿಕೊಡುತ್ತೇವೆನ್ನುವ ಮಾತನ್ನು ನಮಗೆ ತಿಳಿಸಿದ್ದೀರಿ. ವಿವರಗಳನ್ನು ನಾವು ಅವರಿಂದ ಪಡೆದು ನಾವು ಮುಂದಕ್ಕೆ ಹೋದರೆ ಅದು ಬಹಳ ಒಳ್ಳೆಯದು ಎನ್ನುವ ದೃಷ್ಟಿಯಿಂದ ಈ ಮಾತನ್ನು ತಮ್ಮ ಗಮನಕ್ಕೆ ಇಟ್ಟಿದ್ದೇನೆ. ನಾನು ಆ ವಿವರಗಳಿಗೆ ಈ ಸಂದರ್ಭದಲ್ಲಿ ಹೋಗಿದ್ದೇನೆ, ಮಾನ್ಯ ಸಭಾಧ್ಯಕ್ಷರೆ, ವಿರೋಧ ಪಕ್ಷದ ನಾಯಕರು, ನಾಯಕರುಗಳು, ಮಾನ್ಯ ಸದಸ್ಯರುಗಳು, ಸಹಜವಾಗಿ ಅಭಿಪ್ರಾಯಗಳನ್ನು ಹೇಳಬೇಕಾದರೆ ಬಜೆಟ್ ಸೇಷನ್ ಲಾಂಗ್ ಪೀರಿಯಡ್

ಇರತಕ್ಕಂಥಾದ್ದು ಬರುತ್ತದೆ. ವಿಭಿನ್ನವಾಗಿರತಕ್ಕಂಥ ವ್ಯಾಖ್ಯಾನಗಳು ವಿಭಿನ್ನವಾಗಿರತಕ್ಕಂಥ ಅಭಿಪ್ರಾಯಗಳು, ತೀಕ್ಷ್ಣವಾಗಿರತಕ್ಕಂಥ ಕಟು ಟೀಕೆಗಳು, ಇದು ಸಹಜ ನಾವು ಅದನ್ನು ತುಂಬು ಸಹೃದಯದಿಂದ ಸ್ವೀಕಾರ ಮಾಡುತ್ತೇವೆ. ತಪ್ಪುಗಳು ಸರ್ಕಾರದ ಹತ್ತಿರ ಇಲ್ಲ ಅನ್ನತಕ್ಕಂಥ ಮಾತನ್ನು ನಾನು ಆಡುತ್ತಿಲ್ಲ. ಇರಬಹುದು. ಈ ಕಾರ್ಯಕ್ರಮವನ್ನು ನಾವು ಏನು ಲಾಂಚ್ ಮಾಡುತ್ತಿದ್ದೇವೆ ಅದರಲ್ಲೂ ಕೂಡಾ ಕೆಲವು ಅಲ್ಪ ಸ್ವಲ್ಪ ತಪ್ಪುಗಳು ಬಂದೇ ಬರುತ್ತವೆ. ಅದಕ್ಕೆ ತಮ್ಮ ಸಲಹೆ ಸಹಕಾರದ ಹಿನ್ನಲೆಯಲ್ಲಿ ಸ್ವಾಗತ ಮಾಡುವುದಕ್ಕೆ ಸದಾಕಾಲ ನಮ್ಮ ಸರ್ಕಾರ ಸಿದ್ಧವಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಅಷ್ಟೇ ತುಂಬು ಹೃದಯದಿಂದ ಮತ್ತೊಂದು ಸಾರಿ ಅಧ್ಯಕ್ಷರ ಮುಖಾಂತರ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಎಲ್ಲಾ ಕಾಲದಲ್ಲೂ ಕೂಡಾ ಸಹಕಾರವನ್ನು ಸದನದ ಎಲ್ಲಾ ಮೂಲೆಗಳಿಂದಲೂ ಕೂಡಾ ಎಲ್ಲಾ ಮಾನ್ಯ ಮಿತ್ರರುಗಳಿಂದ ಕೂಡಾ ನಾನು ಸ್ವಾಗತ ಮಾಡುತ್ತೇನೆ, ಕಾಯುತ್ತಿರುತ್ತೇವೆ. ಸರ್ಕಾರ ಕಾಯುತ್ತಿರುತ್ತದೆ. ಇಡೀ ಮಂತ್ರಿ ಮಂಡಲದ ಸದಸ್ಯರು ಕಾಯುತ್ತಿರುತ್ತೇವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಆಡಿ ಕರ್ನಾಟಕ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ನಮಗಿರತಕ್ಕಂಥ ಆರ್ಥಿಕ ಶಕ್ತಿ ಹಿನ್ನಲೆಯಲ್ಲಿ ಈ ಆರ್ಥಿಕ ವರ್ಷ ಇರಬಹುದು, ಮುಂದಿನ ಆರ್ಥಿಕ ವರ್ಷ ಇರಬಹುದು, ನಾವು ಸ್ಪಷ್ಟವಾಗಿ ಪ್ರಗತಿ ಕಡೆಗೆ ಸಾಧ್ಯವಾದಷ್ಟು ದಾಪು ಹೆಜ್ಜೆಯನ್ನು ಇಟ್ಟುಕೊಂಡು ಹೋಗತಕ್ಕಂಥ ವಿಚಾರದಲ್ಲಿ ಒಗ್ಗಟ್ಟಾಗಿ ಹೋಗೋಣ ಎನ್ನುವ ಮಾತನ್ನು ಅಡಿ ಅಧ್ಯಕ್ಷರಿಗೆ ಮತ್ತು ಮಾನ್ಯ ಸದಸ್ಯರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನ ಹಾಗೂ ವಿಧೇಯಕಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ : ಸನ್ಮಾನ್ಯ ಮುಖ್ಯ ಮಂತ್ರಿಗಳು ನಿಜವಾಗಿಯೂ ಕೆಲವು ವಿಷಯಗಳ ಬಗ್ಗೆ ಬೆಳಕು ಚೆಲ್ಲಿ ರಾಜ್ಯಕ್ಕೆ ಅನುಕೂಲ ಮಾಡುವುದಕ್ಕೆ ಹೊರಟಿದ್ದಾರೆ. ಬಹಳ ಸಂತೋಷ ನೀರಾವರಿಗೆ ಹೆಚ್ಚುವರಿ 20 ಕೋಟಿ ರೂಪಾಯಿ ತಾವು ಖರ್ಚು ಮಾಡುತ್ತಿದ್ದೀರಿ ಮತ್ತು ಒಂದೊಂದು ತಾಲ್ಲೂಕಿಗೆ ಒಂದು ಕೋಟಿ 20 ಲಕ್ಷ ರೂಪಾಯಿಗಳಷ್ಟು ಗೃಹನಿರ್ಮಾಣದ ಕೆಲಸಗಳನ್ನು ತೆಗೆದುಕೊಳ್ಳುತ್ತಾ ಇದ್ದೀರಿ ಅಡಿಶನಲ್ ರಿಸೋರ್ಸಸ್‌ಗೆ ಏನು ಪ್ರಾವಿಷನ್ಸ್ ಇದೆ? ಇದನ್ನು ತಾವುಗಳು ಹೇಗೆ ಮೀಟ್ ಮಾಡುತ್ತೀರಿ? ಇಷ್ಟು ಹಣವನ್ನು ನೀವು ಯಾವ ರೀತಿಯಲ್ಲಿ ಮೀಟ್ ಮಾಡುತ್ತೀರಿ? ಕೆಲವು ಜಿಲ್ಲೆಗಳಲ್ಲಿ ಸುಮಾರು 20 ಕೋಟಿ ರೂಪಾಯಿಗಳ ಅಡಿಶನಲ್ ಫಂಡ್ಸನ್ನು ಇರಿಗೇಶನ್‌ಗೆ ಖರ್ಚು ಮಾಡುತ್ತೀರಿ, ತಾವುಗಳು ಈ ಬಯಲುಸೀಮೆಯಲ್ಲಿರುವ ಬಗ್ಗೆ ನೀವೇನಾದರೂ ಯೋಚನೆ ಮಾಡಿದ್ದೀರಾ? ಬೆಂಗಳೂರು, ಕೋಲಾರ, ತುಮಕೂರು, ಯಾವಾಗಲೂ ಕ್ಷಾಮಪೀಡಿತ ಪ್ರದೇಶಗಳು ಇವೆಯಲ್ಲ, ಇವುಗಳ ಬಗ್ಗೆ ತಾವೇನಾದರೂ ಯೋಚನೆ ಮಾಡಿದ್ದೀರಾ? ಬಹಳ ವರ್ಷಗಳಿಂದ ಈ ಕಡೆಗೆ ಗಮನ ಕೊಟ್ಟಿಲ್ಲ. 20 ಕೋಟಿ ರೂಪಾಯಿಗಳನ್ನೂ ನೀರಾವರಿಗೋಸ್ಕರವಾಗಿ ಖರ್ಚು ಮಾಡುತ್ತಾ ಇದ್ದೀರಿ, ಅದರ ಬೆಂಗಳೂರು, ಕೋಲಾರ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಯ ಕೆಲವು ಭಾಗಗಳು, ರಾಯಚೂರ್‌ನಲ್ಲಿಯ ಕೆಲವು ಭಾಗಗಳು ಇವೆ, ಇವುಗಳ ಕಡೆ ಇರಿಗೇಶನ್ ಪೊಟೆನ್‌ಶಿಯಾಲಿಟಿ ಜಾಸ್ತಿ ಮಾಡುವುದಕ್ಕೆ ತಾವುಗಳು ಏಕೆ ಯೋಚನೆ ಮಾಡಿಲ್ಲ? ಆದ್ದರಿಂದ ಈಗಲಾದರೂ ಯೋಚನೆ ಮಾಡುವುದಕ್ಕೆ ಸಾಧ್ಯವಿದೆಯೇ?

ಶ್ರೀ ಎಸ್. ಬಂಗಾರಪ್ಪ : ನಾವು ಸಂಪನ್ಮೂಲಗಳ ಕ್ರೋಢೀಕರಣ ಮಾಡತಕ್ಕಂಥ ವಿಚಾರದಲ್ಲಿ ಹೆಚ್ಚಿನ ನಿಗಾವನ್ನು ಕೊಡದಿದ್ದರೆ, we cannot reach the total annual plan target. That is why I said at the outset..

ನಾವು ಮೀಟ್ ಮಾಡುವುದಕ್ಕೆ ಆಗುವುದಿಲ್ಲ. ನಾವು ರಿಸೋರ್ಸ್‌ನ್ ಮೊಬಲೈಸ್ ಮಾಡಲೇಬೇಕಾಗುತ್ತದೆ. ಇನ್ನು ನಮ್ಮ ಕಮರ್ಷಿಯಲ್ ಟ್ಯಾಕ್ಸ್‌ನಿಂದ 1,800 ಕೋಟಿ ರೂಪಾಯಿಗಳು ಎಂದು ಅಂದಾಜು ಮಾಡಿದ್ದೇವೆ. ಈ ವರ್ಷ 300 ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಬರಬೇಕೆಂದು ಅಂದಾಜು ಮಾಡಿ ಕೊಂಡಿದ್ದೇನೆ. ನಾನು ತಮಗೆ ಹೇಳಿದ ಹಾಗೆ 1800 ಕೋಟಿಗಳು ಎನ್ನತಕ್ಕ ಮಾತನ್ನು ಆಡಿದ್ದರೂ ಕೂಡ, we are likely to cross two thousand crores ನಾವು ಈಗಾಗಲೇ ಹಾಕಿಕೊಂಡ ಕಾರ್ಯಕ್ರಮವನ್ನು ನೋಡಿದರೆ, ಮತ್ತು ಅದಕ್ಕಿಂತಲೂ 200 ಕೋಟಿ ರೂಪಾಯಿಗಳಷ್ಟು ಜಾಸ್ತಿ ಆಗುತ್ತದೆ. ಅಂದರೆ, ಕಳೆದ ವರ್ಷಕ್ಕೆ ನಾವು ಹೋಲಿಸಿದಾಗ ಸುಮಾರು 500 ಕೋಟಿ ಜಾಸ್ತಿ ಹಣ ಈ ವಾರ್ಷಿಕ ಲೆಕ್ಕದಲ್ಲಿ ಬರೇ ಕಮರ್ಷಿಯಲ್ ಟ್ಯಾಕ್ಸ್‌ನಿಂದ ಬರುತ್ತದೆ. ಅದೇ ನಮಗೆ ಮೇಜರ್. ಇದು first ಎರಡನೇಯದು ಎಕ್ಸೈಜ್ ಮೂರನೇಯದು ಮೋಟಾರ್ ವೆಹಿಕಲ್ಸ್, ರೆವಿನ್ಯೂ, ಸ್ಟಾಂಪ್ಸ್, ಇತ್ಯಾದಿಗಳು ಬರುತ್ತವೆ. ಆ ತರಹ ನಾವು ಸಂಪನ್ಮೂಲಗಳ ಬಗ್ಗೆ ತಾವು ಏನು ಹೇಳಿದ್ದೀರಿ, ಅದನ್ನು ಗಮನದಲ್ಲಿಟ್ಟುಕೊಂಡೇ ನಾವು ಇಂಥ ಕಾರ್ಯಕ್ರಮಗಳಿಗೆ ಕೈ ಹಾಕಿದ್ದೇವೆ. ಇನ್ನೊಂದು ವಿಚಾರವನ್ನು ಹೇಳಿದಿರಿ. ನೀರಾವರಿಗೆ ಸುಮಾರು 20ಕೋಟಿ ರೂಪಾಯಿಗಳು ಜಾಸ್ತಿ ಕೊಡುತ್ತೇವೆಂದು ನಾವು ಅನೌನ್ಸ್ ಮಾಡಿದ್ದೇವೆ. ಈ ರೀತಿಯಾಗಿ ಅದಕ್ಕೆ ಹಣವನ್ನು ಕೊಡುವುದಕ್ಕೆ ನಮ್ಮಿಂದ ಸಾಧ್ಯತೆ ಇರುವುದರಿಂದ ಇಂಥ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಅದು ಮುಳುವಾಡ ಯೋಜನೆ ಇರಬಹುದು, ಅಪ್ಪರ್ ತುಂಗಭದ್ರದ ಯೋಜನೆ ಇರಬಹುದು, ಮತ್ತೊಂದು ಇರಬಹುದು ಅದಕ್ಕೆಲ್ಲಾ ಹಣವನ್ನು ಕೊಡುವುದಕ್ಕೆ ನಮಗೆ ಸಾಧ್ಯ ಇದೆ. ಇನ್ನು ಬಯಲು ಸೀಮೆ ಭಾಗಗಳು ಕೋಲಾರ ಇರಬಹುದು, ತುಮಕೂರು ಇರಬಹುದು, ಯಾವುದೇ ಇರಬಹುದು, ತಮಗೆ ಗೊತ್ತಿರುವ ಹಾಗೆ ನೀರಾವರಿಗೆ ಏನು ಮಾಡಿದ್ದೇವೆ, ಅಂದರೆ ಕಾವೇರಿನ ನೀರನ್ನು ತುಮಕೂರಿಗೆ ತರತಕ್ಕಂಥ ಪ್ರಯತ್ನವನ್ನು ಮಾಡಿದ್ದೇವೆ, ಅದಕ್ಕೆ ಹಣವನ್ನು ಇಟ್ಟಿದ್ದೇವೆ, ಅದರ ಖರ್ಚಿಗೆ ಹಣದ ಕೊರತೆ ಇಲ್ಲ, ಒಂದು ವೇಳೆ ಕಡಿಮೆ ಬಿದ್ದರೆ ನಾವು ಕೊಡುತ್ತೇವೆ. ಈ ಮಾತನ್ನು ನಾವು ಸದಸದಲ್ಲಿಯೂ ಹೇಳಿದ್ದೇನೆ. ಹಾಗೆಯೇ ಕೋಲಾರ ಜಿಲ್ಲೆಯೂ ಎಲ್ಲಾದರೂ ನೀರು ಬರತಕ್ಕಂಥ ಒಂದು ಸಂದರ್ಭ ಇದ್ದರೆ ತಾವುಗಳು ಹೇಳಿದ್ದೀರಿ, ಅದರ ಬಗ್ಗೆಯೂ ನಾವು ವಿಚಾರ ಮಾಡೋಣ. ಅದನ್ನು ಹೇಗೆ ಮಾಡಬೇಕು, ಅದರ ಬಗ್ಗೆ ಏನು ಮಾಡಬೇಕೆಂಬುದನ್ನು ವಿಚಾರ ಮಾಡೋಣ. ನಾವು ಇಂಥ ವಿಚಾರಗಳ ಬಗ್ಗೆ ಗಂಭೀರವಾಗಿ ವಿಚಾರ ಮಾಡುತ್ತಾ ಇದ್ದೇವೆ. ಪದೇ ಪದೇ ಬರಗಾಲ ಬರತಕ್ಕಂಥ ಕೋಲಾರ ಜಿಲ್ಲೆಯ ಭಾಗಗಳು ಇರಬಹುದು. ತುಮಕೂರು ಜಿಲ್ಲೆಯ ಕೆಲವು ಭಾಗಗಳು ಇರಬಹುದು, ಚಿತ್ರದುರ್ಗ, ಬೆಂಗಳೂರು ರೂರಲ್ ಭಾಗಗಳು ಇರಬಹುದು. ಇವುಗಳ ಬಗ್ಗೆ ಹೇಗೆ ಮಾಡಬೇಕೆಂಬ ಬಗ್ಗೆ ತಾವುಗಳು ಅಮೂಲ್ಯವಾದಂಥ ಸಲಹೆಗಳನ್ನು ಕೊಟ್ಟಿದ್ದೀರಿ. ಅದನ್ನು ಸ್ವೀಕಾರ ಮಾಡುತ್ತೇವೆ. ಇನ್ನು ಅಕ್ಷಯ ಯೋಜನೆಯ ಕಾರ್ಯಕ್ರಮದ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ನಾವು ಆ ಅಕ್ಷಯ ಕಾರ್ಯಕ್ರಮವನ್ನು ಕೈಬಿಟ್ಟಿಲ್ಲ ಈ ಅಕ್ಷಯ ಕಾರ್ಯಕ್ರಮದ ಶಾಲೆಯ ಮಕ್ಕಳಿಗೆ ಮಧ್ಯಾಹ್ನದ ಊಟವನ್ನು ಒದಗಿಸಿಕೊಡತಕ್ಕಂಥಾದ್ದು. ಈ ಕಾರ್ಯಕ್ರಮದಲ್ಲಿ ಕುರಿತು ತಮಿಳುನಾಡಿನಲ್ಲಿ ಎಂ.ಜಿ.ಆರ್. ಸರಕಾರದವರು ಹೇಗೆ ಕಾರ್ಯಗತ ಮಾಡಿದ್ದಾರೆ ಎಂಬುದರ ಬಗ್ಗೆ ವರದಿಯಲ್ಲಿ ತರಿಸಿ ನೋಡಿದ್ದೇವೆ. ಇದರ ಬಗ್ಗೆ ಸಾಕಷ್ಟು ಚರ್ಚೆಯನ್ನು ನಾವು ಮಾಡಿದ್ದೇವೆ. ಹೀಗೆ ವಿಚಾರ ಮಾಡಿದಾಗ ಅದರ ಬಗ್ಗೆ ಪರ ಮತ್ತು ವಿರೋಧವಾದಂಥ ಅಭಿಪ್ರಾಯಗಳು ಬಂದಿವೆ. ಆ ಯೋಜನೆಯು ಕಾರ್ಯಗತವಾಗುವಲ್ಲಿ ಇರುವ ಎಡರುತೊಡರುಗಳನ್ನು ಗಮನಿಸಲಾಗಿದೆ,

ಪಾತ್ರೆಗಳು ವ್ಯತ್ಯಾಸ ಆಗುವುದು, ಅದರ ಮೂಲಕ ಫುಡ್‌ಪಾಯಿಸನ್ ಆಗುವುದು, ಶುಚಿತ್ವದ ವಿಚಾರದಲ್ಲಿ ಬರುವ ಸಮಸ್ಯೆಗಳು, ಮಿಸ್‌ಯೂಸ್ ಮಾಡಿಕೊಳ್ಳುವುದು, ಹಣದ ದುರುಪಯೋಗ ಮಾಡುವುದು, ಮುಂತಾದ ದೂರುಗಳು ಈ ಬಗ್ಗೆ ಸಹಜವಾಗಿ ಬಂದೇ ಬರುತ್ತವೆ. ಈ ಕುರಿತು ಮಹಾರಾಷ್ಟ್ರದಲ್ಲಿ ಒಂದು ಯೋಜನೆ ಇದ್ದು, ಅಲ್ಲಿ ಟ್ರೈಬಲ್ ಮಕ್ಕಳಿಗೆ ದಿವಸಕ್ಕೆ 80 ಪೈಸೆ, ಒಂದು ರೂಪಾಯಿಯಷ್ಟು ಹಣವನ್ನು ಕೊಡುತ್ತಾರೆ. ಅದನ್ನು ಪರಿಶೀಲಿಸುತ್ತೇವೆ, ಅಲ್ಲಿ ಅದೊಂದು ಅಟ್ರಾಕ್ಟಿವ್ ಸ್ಕೀಮ್ ಆಗಿದೆ. ಈ ಅಭಿಪ್ರಾಯಗಳನ್ನು ಎಲ್ಲಾ ಗಮನಿಸಿ ಅವುಗಳನ್ನು ತುಲನೆ ಮಾಡಿ ನೋಡುತ್ತಾ ಇದ್ದೇವೆ. ಈ ಸದನ ಮುಗಿಯುವುದರೊಳಗಾಗಿ ಮೆಟೀರಿಯಲ್ಸ್‌ಗೆ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಆಮೇಲೆ ನಾವು ಚಕ್, ಚಕ್ ಅಂತ ಮನೆ ಕಟ್ಟಬಹುದು. ಎರಡು ವರ್ಷಗಳಲ್ಲಿ ಮುಗಿಸುವಂತಹ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಇನ್ನು ಡಾಕ್ಟರ್ ಬಿ.ಆರ್. ಅಂಬೇಡ್ಕರ್ ಜನ್ಮಶತಾಬ್ದಿ ಅಂಗವಾಗಿ ಒಂದು ಲಕ್ಷ ಮನೆಗಳನ್ನು ಕಟ್ಟಲು ಒಂದು ವಿಶೇಷ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಅದು 4 ವರ್ಷಗಳಲ್ಲಿ ಅಂದರೆ ಒಂದು ಆರ್ಥಿಕ ವರ್ಷದಲ್ಲಿ 25 ಸಾವಿರ ಮನೆಗಳು ಬರುತ್ತವೆ. ಹೀಗೆ ಸರಿ ಮಾಡಬೇಕೆಂದು ಹೇಳುವ ವಿಚಾರದಲ್ಲಿ ಕೂಡ ನಾವು ಹೆಚ್ಚಿನ ಗಮನ ಕೊಟ್ಟಿದ್ದೇವೆ. ಅದೇ ರೀತಿಯಾಗಿ ಶುಶ್ರೂಷಾ ಕಾರ್ಯಕ್ರಮದಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕೆನ್ನುವ ಉದ್ದೇಶದಿಂದ ಸ್ವಲ್ಪ ತಡವಾಯಿತು. ಅದನ್ನು ಸಹ ಮುಂದುವರಿಸುತ್ತೇವೆ.

ಶ್ರೀ ಆರ್. ಎಲ್. ಜಾಲಪ್ಪ : ಆಶ್ರಯ ಯೋಜನೆಯಲ್ಲಿ ಈ ವರ್ಷ ಎಷ್ಟು ಮನೆಗಳನ್ನು ತೆಗೆದುಕೊಳ್ಳುತ್ತೀರಿ?

ಶ್ರೀ ಎಸ್. ಬಂಗಾರಪ್ಪ : ಒಂದು ತಾಲ್ಲೂಕಿಗೆ ಕಡಿಮೆ ಅಂದರೂ ಒಂದು ಸಾವಿರ ಮನೆಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇವೆ. ಅರ್ಬನ್ ಏರಿಯಾದಲ್ಲಿ 60 ಸಾವಿರ ಮನೆಗಳು ಅದು ಟೌನ್ ಇರಬಹುದು, ಸಿಟಿ ಇರಬಹುದು, ಸ್ಲಮ್ ಇರಬಹುದು, ಬರುತ್ತವೆ. ಗ್ರಾಮಾಂತರ ಪ್ರದೇಶಗಳಲ್ಲಿ ಕಡಿಮೆ ಅಂದರೆ ಒಂದು ಸಾವಿರ ಮನೆಗಳು ಅಲ್ಲಿಗೆ ಒಂದು ಲಕ್ಷ 75 ಸಾವಿರ ಮನೆಗಳು ಈ 25 ಸಾವಿರ ಮನೆಗಳು ಸೇರಿ ಮಾಡಬೇಕೆನ್ನುವ ಗುರಿ ಇಟ್ಟುಕೊಂಡಿದ್ದೇವೆ. ಇನ್ನು ಶುಶ್ರೂಷ ಕಾರ್ಯಕ್ರಮ ಕೂಡ ಪ್ರಾರಂಭವಾಗಿದೆ. ಇದಕ್ಕೆ ಇನ್ನು ಸ್ವಲ್ಪ ತಿದ್ದುಪಡಿಯಾಗಬೇಕಾಗಿದೆ. ಎಂದು ಮಾನ್ಯ ಸದಸ್ಯರುಗಳು ಒಂದು ಅಭಿಪ್ರಾಯ ಪಟ್ಟಿದ್ದಾರೆ. ಪ್ರೈವೇಟ್ ಡಾಕ್ಟರ್ ಮತ್ತು ಸರ್ಕಾರಿ ವೈದ್ಯರುಗಳು ಬಹಳ ಒಳ್ಳೆಯ ರೀತಿಯಲ್ಲಿ ಬೆಂಬಲ ಕೊಟ್ಟಿರತಕ್ಕಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆ. ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಹಣಕೊಟ್ಟರು ಸಾಕಾಗುವುದಿಲ್ಲವೆಂದು ಹೇಳತಕ್ಕಂಥದ್ದು ನನ್ನ ಗಮನಕ್ಕೂ ಸಹ ಬಂದಿದೆ. ಇನ್ನು ಕೊನೆಯದಾಗಿ ತಮ್ಮ ಗಮನಕ್ಕೆ ಒಂದು ವಿಚಾರ ತರಬೇಕಾಗಿದೆ. ಅದರ ಬಗ್ಗೆ ಮಾನ್ಯ ಸಣ್ಣ ಕೈಗಾರಿಕಾ ಮಂತ್ರಿಗಳಿಗೆ ಉತ್ತರ ಕೊಡುವುದಕ್ಕೆ ಆಗಲಿಲ್ಲ. ನಾವು ಆ ಪತ್ರಕ್ಕೆ ರುಜು ಹಾಕಿದ್ದೇವೆ. ಆ ಪತ್ರ ತಮಗೆಲ್ಲರಿಗೂ ಬರುತ್ತದೆ. ತಮಗೂ ಬರುತ್ತದೆ. ಈ ಸದನದ ಎಲ್ಲಾ ಸದಸ್ಯರಿಗೂ ಬರುತ್ತದೆ. ಪಾರ್ಲಿಮೆಂಟ್ ಸದಸ್ಯರಿಗೂ ಅದು ರಾಜ್ಯ ಸಭಾ ಸದಸ್ಯರಿಸಬಹುದು, ಲೋಕಸಭಾ ಸದಸ್ಯರಿರಬಹುದು ಎಲ್ಲರಿಗೂ ಕೂಡ ಬರುತ್ತದೆ. ಅಕ್ಟೋಬರ್ ಎರಡನೇ ತಾರೀಖು ಮಹಾತ್ಮಾಗಾಂಧೀಜಿಯವರ ಜಯಂತಿ ಆ ದಿನ ನಾವು we are launching a programme called 'vishwa' ಎನ್ನತಕ್ಕ ಕಾರ್ಯಕ್ರಮವನ್ನು ನಮ್ಮ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದ್ದೇವೆ. ಅದಕ್ಕಾಗಿ ಹಣ ತೆಗೆದಿಟ್ಟಿದ್ದೇವೆ. It is a massive programme, Which is a production and employment oriented programme in the rural areas. ಅಕ್ಟೋಬರ್ ಎರಡರಂದು

ಪ್ರಾರಂಭ ಮಾಡುತ್ತೇವೆ. ನಾವು ಮೊದಲು ಒಂದು ಶಾಸನ ಸಭಾ ಕ್ಷೇತ್ರದಲ್ಲಿಯ ಒಂದು ಹಳ್ಳಿಯಲ್ಲಿ ಪ್ರಾರಂಭ ಮಾಡುತ್ತೇವೆ. ಹಾಗೆ ಮಾಡಿದಾದ ಮೇಲೆ ಒಂದೊಂದು ಹಳ್ಳಿಯಲ್ಲೂ ಪ್ರಾರಂಭ ಮಾಡುವವರಿದ್ದೇವೆ. ಏತಕ್ಕೆಂದರೆ ಇದಕ್ಕೆ ಸುಮಾರು 500-700 ಕೋಟಿ ರೂಪಾಯಿಗಳವರೆಗೆ ಹಣ ಬೇಕಾಗುತ್ತದೆ. ಯಾರಿಗೆ ಉದ್ಯೋಗ ಇಲ್ಲ, ಯಾರು ಘನತೆ ಗೌರವದಿಂದ ಜೀವನ ಮಾಡುವುದಕ್ಕೆ ಸಾಧ್ಯವಿಲ್ಲ ಅದರಲ್ಲೂ ಕೂಡ ಕಡು ಬಡ ವರ್ಗದವರಿದ್ದಾರೆ ಆ ವರ್ಗದವರಿಗೆ ಉದ್ಯೋಗ ಕೊಡತಕ್ಕಂಥಾದ್ದು ತನ್ಮುಖಾಂತರ ಉತ್ಪನ್ನವನ್ನು ಮಾಡಿಕೊಳ್ಳುವಂತಹ ಒಂದು ಬೃಹತ್ ಕಾರ್ಯಕ್ರಮವಿದು.

ಈ ತಿಂಗಳ ಕೊನೆಯೊಳಗಾಗಿ ಇದರ ಬಗ್ಗೆ ಅಂತಿಮವಾದ ತೀರ್ಮಾನವನ್ನು ನಾವು ಮಾಡಿ ಆ ಬಗ್ಗೆ ಸದನದಲ್ಲಿ ಪ್ರಕಟ ಮಾಡುತ್ತೇವೆ. ಅಂದರೆ 27-9-91ರೊಳಗೆ ಪ್ರಕಟ ಮಾಡುತ್ತೇವೆ. ಅಕ್ಷಯ ಯೋಜನೆಯನ್ನು ಮುಂದಿನ ತಿಂಗಳಿಂದ ಪ್ರಾರಂಭ ಮಾಡಬೇಕಾಗುತ್ತದೆ.

ಇನ್ನು ಈಗ ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ಲಂಬಾಣಿ ತಾಂಡಗಳು ಮತ್ತೊಂದು ಇವೆ ಅಂಥ ಕಡೆಗಳಲ್ಲಿ ಆಶ್ರಮ ಶಾಲೆಗಳನ್ನು ತೆರೆಯಬೇಕೆಂದು ಮಾನ್ಯ ಸದಸ್ಯರುಗಳು ಒತ್ತಾಯ ಮಾಡುತ್ತಾ ಇದ್ದಾರೆ. ಹೀಗೆ ಆ ಸ್ಥಳಗಳಲ್ಲಿ ಆಶ್ರಮ ಶಾಲೆಗಳನ್ನು ಕೊಡದಿದ್ದರೆ ನಮಗೆ ಕಷ್ಟವಾಗುತ್ತದೆ ಎಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಅದಕ್ಕೆ ಜಾಸ್ತಿ ಹಣವನ್ನು ತೆಗೆದಿಟ್ಟು ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನ ಮೂಲಕ ಇದನ್ನು ಮಾಡಿಸಬೇಕು. ಇದರ ಬಗ್ಗೆ ಎಷ್ಟೆಷ್ಟು ಸಾಧ್ಯ ಎಂಬುದನ್ನು ನೋಡಿ ಈ ಆಶ್ರಮ ಶಾಲೆಗಳನ್ನು ಕೊಡುವುದರ ಬಗ್ಗೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ಡಾಕ್ಟರ್ ನಾಗಪ್ಪ..

Dr. Y. Nagappa : Hon'ble speaker Sir and Hon'ble Members of this August House, I am bringing before the House an important matter. This concern with three Ministers. One Revenue Minister. second - Horticulture Minister and third Rural Development Minister. There is a land in my talukapalya Village, Malebennue Hobli. It was a revenue land- The survey number 32, out of 45 acres, 22 acres of land has been handed over to Horticulture Department.

Mr. Speaker: You can pass on the whole document to the Horticulture Minister or the Chief Minister.

Dr. Y. Nagappa : I will complete within 2 minutes, Sir. This 22 acres of land have been handed over to the Horticulture Department in the year 1974-75 for the development of garden but unfortunately though they developed the garden due to lack of supervision it was spoiled and recently kin Zill parishad working Committee they resolved to lease this land to a private person worth for about 15-20 lakhs and decided to lease for 25 years just for Rs. 49,000. I am asking through the Chair to the concerned Minister, whether the Zilla Parishad is vested with such powers given by the revenue department to give this lease to a private person Sir our country is full of poor people, people belonging to SC/STs and we have taken a decision on

the floor of this House that these lands should be reserved for SC/STs and inspite of that the Zilla Parishad Secretary he himself being a Scheduled Caste Officer he is not aware of this Government Plans and Schemes and implement them. I am very sorry to say this. I therefore urge upon the Government that this land should be recovered from that private party and it must be kept reserved for distrubution among SC/ST people and I appeal to the Hon'ble Chief Minister who has all concern for the welfare of SC/STs backward classes and other sections of the society to take drastic and immediate action and to give a stay to this and help the people in the matter. I thank the Chair for having given an opportunity to speak.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಮುಖ್ಯಮಂತ್ರಿಯವರು ಮಾತನಾಡುವಾಗ ಗಡಿ ಭಾಗಗಳಿಗೆ ಹೆಚ್ಚಿನ ಹಣವನ್ನು ಇಡುತ್ತೇವೆ ಎಂದು ಹಿಂದೆ ಹೇಳಿದ್ದೀರಿ. 10-15 ಕೋಟೀ ರೂಪಾಯಿಗಳು ಇರುತ್ತವೆ. ಎಂದು ಧಾರಾಳತನವನ್ನು ತೋರಿಸಿದ್ದೀರಿ. ನಾನು ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ ಒಂದು 50 ಕೋಟಿ ರೂಪಾಯಿಗಳನ್ನಾದರೂ ಈ ಬಾಬಿಗೆ ಇಡುವ ಧಾರಾಳ ತನವನ್ನು ತೋರಿಸ ಬೇಕೆಂದು ಕೇಳಿಕೊಳ್ಳುತ್ತೇನೆ. ಯಾಕೆಂದರೆ ಗಡಿಭಾಗಗಳ ಬಗ್ಗೆ ತಮಗೆ ಅಪಾರವಾದಂಥ ಅಭಿಮಾನ ಇದೆ ಗಡಿಬೆಳವಣಿಗೆ ಬಗ್ಗೆ ನಿಮಗೆ ಚಿಂತನೆ ಇದೆ. ಈ ಬಗ್ಗೆ ಮೊದಲಿನಿಂದಲೂ ನಾವು ನೀವು ಇಬ್ಬರೂ ಬೆಳಗಾವಿ ಗಡಿ ಬಗ್ಗೆ ಮತ್ತು ಇತರ ಗಡಿಗಳ ಬಗ್ಗೆ ಕಪ್ಪು ಬಾವುಟ ಹಿಡಿದು ಹೋಗುತ್ತಾ ಇದ್ದೇವು. ನಾಳೆ ನಾವು ನೀವು ದೆಲ್ಲಿಗೆ ಹೋಗುತ್ತಾ ಇದ್ದೇವೆ ಅಲ್ಲಿ ಅಂಥದೇನೂ ಆಗುವುದಿಲ್ಲ. ಅದು ಬೇರೆ ವಿಚಾರ ಅದನ್ನು ತಮಗೆ ನೆನಪಿಸುತ್ತಾ ಇದ್ದೇನೆ. ಹಾಗೆಯೇ ತಾವುಗಳು ಈ ಸದನಕ್ಕೆ ಇವೊತ್ತು ವಂದನಾರ್ಪಣೆಯನ್ನು ಹೇಳಿದ್ದೀರಿ. ಇದು ಏಕೆ ಹಾಗೆ ಹೇಳಿದ್ದೀರಿ ಎಂದು ನನಗೆ ಸ್ವಲ್ಪ ಅನುಮಾನ ಬಂತು ಇದರ ಬಗ್ಗೆಯೂ ತಾವುಗಳು ಹೇಳಬೇಕು.

ಶ್ರೀ ಎಸ್ ಬಂಗಾರಪ್ಪ : ಗಡಿ, ಗಡಿ, ಅಷ್ಟೇನೆ....

ಶ್ರೀ ವಾಟಾಳ್ ನಾಗರಾಜ್ : ನನ್ನನ್ನು ತಾವು ಗಡಿಪಾರು ಮಾಡಬೇಡಿ ನಾವೆಲ್ಲರೂ ಗಡಿಭಾಗದಿಂದ ಬಂದಂಥ ಜನರು

ಶ್ರೀ ಎಸ್. ಬಂಗಾರಪ್ಪ : ವಾಟಾಳ್ ನಾಗರಾಜ್‌ರವರು ನಾಳೆ ದೆಲ್ಲಿಗೆ ಹೋಗಲಿದ್ದಾರೆ. ಹಿಂದಿನ ನೆನಪು ಮಾರುಕಳಿಸುತ್ತಾ ಇರಬಹುದು. ಪಾರ್ಲಿಮೆಂಟ್‌ನ ಹೆಬ್ಬಾಗಿಲಿನ ಗಮನ ಅವರಿಗೆ ನೆನಪಾಗಿರಬಹುದು ಅಂಥ ನೆನಪು ಮರುಗಳಿಸಲು ಇದೊಂದು ಸುಸಂಧರ್ಭ. ಸಂದರ್ಭದಲ್ಲಿ ಸ್ವಲ್ಪ ಹಣವನ್ನು ಇಡಬೇಕೆಂದು ತಾವುಗಳು ಹೇಳಿದ್ದೀರಿ ಕೊಡತಕ್ಕಂಥ ಪ್ರಯತ್ನವನ್ನು ನಾವು ಮಾಡುತ್ತೇವೆ. ಮಾನ್ಯ ವೇಂಕಯೇಶ್‌ರವರು ಕೂಡ ಬಹಳ ಒತ್ತಾಯವನ್ನು ಹಾಕುತ್ತಾ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಯವರು ಒಂದು ಒಳ್ಳೆಯ ವಾತಾವರಣದಲ್ಲಿ ಕೆಲವು ಅನುಕೂಲತೆಗಳನ್ನು ಪ್ರಕಟಿಸಿದ್ದಾರೆ. ಅದೇ ರೀತಿಯಲ್ಲಿ ಕೂಡ ಸ್ವಲ್ಪ ಜಾಸ್ತಿ ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ : ಆಯಿತು ಕೊಡಲು ಪ್ರಯತ್ನಿಸೋಣ. ತಾವುಗಳು ಸಲಹೆ ಕೊಟ್ಟ ಮೇಲೆ ಇಲ್ಲ ಎಂದು ನಾವು ಹೇಳುತ್ತೇವೆಯೇ? ಇವಕ್ಕೆ ಐದು ಕೋಟಿ ರೂಪಾಯಿಗಳನ್ನು ಜಾಸ್ತಿ ಮಾಡುತ್ತೇವೆ ಎಂದು ಮೊದಲೇ ಹೇಳಿದ್ದೇನೆ.

ಅಧ್ಯಕ್ಷರು : ಈ ಐದು ಕೋಟಿ ರೂಪಾಯಿಗಳಲ್ಲಿ ಎಷ್ಟು ಖರ್ಚಾಗಿದೆ?

ಶ್ರೀ ಎಂ.ಪಿ. ವೆಂಕಟೇಶ್ : ಎಲ್ಲಾ ಹಣ ಖರ್ಚಾಕಿದೆ ಸ್ವಾಮಿ.

ಅಧ್ಯಕ್ಷರು : ಹಾಗಾದರೆ ಖರ್ಚಾದ ಮೇಲೆ ಮತ್ತೆ ಕೊಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಲೆನಾಡು ಅಭಿವೃದ್ಧಿ ಮಂಡಳಿಗೆ ಈ ಸಾರಿ ತಾವು ಸುಮಾರು 10 ಕೋಟಿ ರೂಪಾಯಿಗಳನ್ನು ಕೊಡಬೇಕೆಂದಿದ್ದೀರಿ ಎಂದು ಕೇಳಿದ್ದೇನೆ. ತಮಗೆ ಗೊತ್ತಿರುವ ಹಾಗೆ ಶಿವಮೊಗ್ಗ ಜಿಲ್ಲೆಯಲ್ಲಿ 27 ತಾಲ್ಲೂಕುಗಳಲ್ಲಿ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇವೊತ್ತಿನ ದಿವಸ ಆ ಭಾಗದಲ್ಲಿಯ ಎಲ್ಲಾ ರಸ್ತೆಗಳು ಸಂಚಾರ ಯೋಗ್ಯವಾಗಿಲ್ಲ ಎಂಬುದು ತಿಳಿದಂಥ ವಿಚಾರವಾಗಿದೆ. ಯಾವ ತಾಲ್ಲೂಕಿನಲ್ಲಿಯೂ ರಸ್ತೆಗಳು ಸರಿಯಾಗಿಲ್ಲ. ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಕನಿಷ್ಟ ಪಕ್ಷ 25 ಕೋಟಿ ರೂಪಾಯಿಗಳನ್ನಾದರೂ ಬಿಡುಗಡೆ ಮಾಡಿ ಕೆಲಸ ಪ್ರಾರಂಭಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಮಲೆನಾಡು ಅಭಿಪ್ರಾಯದ ಬಗ್ಗೆ ಹೇಳಿದರು. ಆ ಬಗ್ಗೆ ನಾನು ಮೊನ್ನೆ ಹೇಳಿದ್ದೇನೆ 25ನೇ ತಾರೀಖಿಗೆ ನಾವು ಪುನಃ ಏನು......

ಶ್ರೀ ವಾಟಾಳ್ ನಾಗರಾಜ್ : ಈ ವಿಚಾರದಲ್ಲಿ ನೀವೆಲ್ಲರೂ ಒಂದಾಗಿದ್ದೀರಿ ಎಂದು ನಮಗೆ ಗೊತ್ತು.

ಶ್ರೀ ಎಸ್. ಬಂಗಾರಪ್ಪ : ಒಂದು ಬಿಲ್ ಬಂದಾಗ ಇದರ ಬಗ್ಗೆ ವಿವರಣೆಗೆ ಹೋಗೋಣ ಎಂದು ಇದ್ದೇನೆ. ಅದೇ ರೀತಿಯಾಗಿ ಹೈದ್ರಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಬಗ್ಗೆ ಬಿಲ್ ಕೊಡಿ ಅದೇ ರೀತಿಯಲ್ಲಿ ಬರುತ್ತದೆ. ಅಲ್ಲಿಯೂ ಕೂಡ 50 ಕೋಟಿ ರೂಪಾಯಿಗಳನ್ನು ಪ್ರತಿ ವರ್ಷವೂ we have set apart ಅದನ್ನು ಕೂಡ ಜಾಸ್ತಿ ಮಾಡಬೇಕು ಎಂಬ ಒತ್ತಾಯ ಆ ಕಡೆಯ ಸದಸ್ಯರಿಂದ, ಜನರಿಂದ ಬರುತ್ತಾ ಇದೆ. ಅದನ್ನು ಕೂಡ ಜಾಸ್ತಿ ಮಾಡಬೇಕಾಗಿದೆ. ಆದ್ದರಿಂದ ಆ ಬಿಲ್ ಬಂದಾಗ ಆ ವಿಚಾರವನ್ನು ತೆಗೆದುಕೊಳ್ಳೋಣ. ಹಾಗೆ ಜಾಸ್ತಿ ಮಾಡತಕ್ಕಂಥ ಪ್ರಯತ್ನವನ್ನು ಮಾಡುತ್ತೇವೆ. We have made budget provision only for 10 crores in the budget ಅದು ಸಾಕಾಗುವುದಿಲ್ಲ ಎಂಬ ಅಭಿಪ್ರಾಯವನ್ನು ನಾನು ಕೂಡ ಒಪ್ಪುತ್ತೇನೆ. ಅದನ್ನು ಯಾವ ರೀತಿಯಲ್ಲಿ ಮಾಡಬೇಕೆಂಬುದನ್ನು ಬಿಲ್‌ನಲ್ಲಿ ಚರ್ಚಿಸೋಣ.

ಶ್ರೀ ಆರ್.ಎಲ್. ಜಾಲಪ್ಪ : ಒಂದು ಕಡೆ ಬಾಂಬೆ ಕರ್ನಾಟಕ ಅಭಿವೃದ್ಧಿ ಮಂಡಳಿ ಮಹಾರಾಷ್ಟ್ರ ಕರ್ನಾಟಕ ಅಭಿವೃದ್ಧಿ ಮಂಡಳಿ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಮಲೆನಾಡು ಅಭಿವೃದ್ಧಿ ಮಂಡಳಿ ಹೀಗೆಲ್ಲಾ ಇದೆ ಅಂದರೆ ನಮ್ಮ ಗತಿ ಏನು? ನಮ್ಮನ್ನು ಯಾರು ನೋಡಿಕೊಳ್ಳುತ್ತಾರೆ?

ಶ್ರೀ ಆರ್.ವಿ. ದೇಶಪಾಂಡೆ : ನೀವೂ ಒಂದು ಮಂಡಳಿ ಮಾಡಿಕೊಳ್ಳಿರಿ ಯಾರು ಬೇಡ ಎಂದು ಹೇಳುತ್ತಾರೆ ನಿಮಗೆ?

(ಗೊಂದಲ)

8.40 ಪಿ.ಎಂ

ಶ್ರೀ ಪಿ.ಜಿ.ಆರ್. ಸಿಂಧ್ಯ : ತುಮಕೂರು ಬೆಂಗಳೂರು ಮೈಸೂರು ಮಂಡ್ಯ ಕೋಲಾರ ಈ ಜಿಲ್ಲೆಗಳವರು ನಾವು ತಿರುಪತಿಗೆ ಬಹಳ ಹತ್ತಿರದಲ್ಲಿದ್ದೇವೆ. ನಮಗೂ ಅಲ್ಲಿಗೆ ಕಳುಹಿಸಿಬಿಡಿ.

(ನಗು)

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಆಯಿತು. ಮಲೆನಾಡು ಅಭಿವೃದ್ಧಿ ಮಂಡಳಿ ಮುಂಬೈ ಕರ್ನಾಟಕ ಅಭಿವೃದ್ಧಿಯನ್ನು ಕೂಡಾ ಮಾಡಬೇಕು ನಾವು ಪದೇ ಪದೇ ಸದಸ್ಯರುಗಳೆಲ್ಲಾ ಒತ್ತಾಯ ಮಾಡುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ನಾಳೆ ತರತಕ್ಕಂಥ ಬಿಲ್‌ನಲ್ಲಿ ಮುಂಬೈ ಕರ್ನಾಟಕವನ್ನು ಕೂಡಾ ಸೇರಿಸಬೇಕು ಎಂದು ಹೇಳುತ್ತೇನೆ.

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೇ ಬೆಂಗಳೂರು ನಗರದಲ್ಲಿ ಜನಸಾಂಧ್ರತೆ ಹೆಚ್ಚಾಗಿ ಟ್ರಾಫಿಕ್ ಹೆಚ್ಚಾಗಿ ಜನಸಾಮಾನ್ಯರಿಗೆ ಸಿಗಬೇಕಾದಂಥ ನೀರು ವಸತಿ ಲೈಟ್ ಇವೆಲ್ಲಾ ಸಿಗದೆ ಕಷ್ಟವಾಗಿರುವುದರಿಂದ ನಮ್ಮ ನೆಲಮಂಗಲ ತಾಲ್ಲೂಕು ಬೆಂಗಳೂರಿಗೆ ಅತೀ ಸಮೀಪವಾಗಿರುವುದರಿಂದ ಅದನ್ನು ಸೆಟ್‌ಲೈಟ್ ಟೌನ್ ಆಗಿ ಮಾರ್ಪಾಡು ಮಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ ಬೆಂಗಳೂರಿನ ಪರಿಸ್ಥಿತಿ ಅದೇ ರೀತಿಯಾಗಿದೆ. ಎಲ್ಲರೂ ಸೇರಿ ಬೇಕಾದಷ್ಟು ಸಾರಿ ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ಮತ್ತೊಂದು ಟೌನ್‌ಷಿಪ್‌ನ್ನು ತಯಾರು ಮಾಡಬೇಕು ಎನ್ನತಕ್ಕಂಥದ್ದು ಇದೆ. ಆಗಿಂದಾಗ್ಗೆ ಕೇಳಿಕೇಳಿದಾಗೆಲ್ಲಾ ಹೂ ಎನ್ನುವುದಕ್ಕೆ ಅಲ್ಲ ನಾನು ಇರುವುದು. ಅದನ್ನು ಮಾಡತಕ್ಕಂಥ ಅವ್ಯಶ್ಯಕತೆ ಇದೆ. ಜಪಾನ್ ದೇಶದವರು ಕೂಡ ಬೇಕಾದಷ್ಟು ಇಂಡಸ್ಟ್ರೀಗಳನ್ನು ಬೆಂಗಳೂರು ಪಕ್ಕದಲ್ಲಿ ಡೆವಲಪ್‌ಮೆಂಟ್ ಮಾಡಬೇಕು ಎಂದು ಬಂದಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ದಯವಿಟ್ಟು ನಮಗೇನೂ ಬೇಡ ಸ್ವಾಮಿ.

ಶ್ರೀ ಅಂಜನಮೂರ್ತಿ : ಕನಕಪುರಕ್ಕೆ ಬೇಡ. ನಾನು ನೆಲಮಂಗಲಕ್ಕೆ ಕೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ನಾನು ಕನಕಪುರ ರೋಡು ಎಂದು ಹೇಳಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಭರವಸೆಯನ್ನು ಕೊಡುತ್ತಿದ್ದಾರೆ. ದಯವಿಟ್ಟು ನಾನು ನಿಮಗೆ ಒಂದು ಹಿನ್ನೆಲೆಯನ್ನು ಹೇಳುತ್ತೇನೆ. ಅದು ಏನಾಗುತ್ತದೆ ಎಂದರೆ ಬೆಂಗಳೂರರು ಸಿಟಿಯ ಸುತ್ತ ಮುತ್ತ ಅವರಿಗೆಲ್ಲಾ ಗೊತ್ತಿರುವಂತೆ ಲ್ಯಾಂಡ್ ವ್ಯಾಲ್ಯೂ ಪ್ರತಿನಿತ್ಯ ಎಷ್ಟೊಂದು ಜಾಸ್ತಿಯಾಗುತ್ತಿದೆ ಎಂದು ಹೇಳಿ ಗೊತ್ತಿದೆ. ಈಗ ಕನಕಪುರ ರಾಮನಗರ ಮಾಗಡಿ ದೇವನಹಳ್ಳಿ ನೆಲಮಂಗಲ ನೀವು ಇವುಗಳನ್ನು ಸೆಟ್‌ಲೈಟ್‌ರ್ಡಾ ಮಾಡುತ್ತೇವೆ. ಗ್ರೇಟರ್ ಬೆಂಗಳೂರು ಆಗಿ ಮಾಡುತ್ತೇವೆ ಎಂದು ಹೇಳಿದ ತಕ್ಷಣ ಅಲ್ಲಿ 50 ಸಾವಿರ ಒಂದು ಲಕ್ಷ ರೂಪಾಯಿಗಳ ಸರ್‌ಕ್ಯೂಲೇಷನ್ ಜಾಸ್ತಿಯಾಗುತ್ತದೆ. ಅದು ಒಂದು ದೊಡ್ಡ ವ್ಯವಹಾರ ದಯವಿಟ್ಟು ಆ ರೀತಿಯ ಒಂದು ಅಸ್ಯೂರೆನ್ಸ್‌ನ್ನು ನೀವು ಕೊಡುವುದಕ್ಕೆ ಹೋಗಬೇಡಿ. ನೆಲಮಂಗಲಕ್ಕೆ ಕೊಡಿ. ನನಗೆ ಬೇಡ ಎಂದು ಹೇಳಿದೆ ಅಷ್ಟೆ.

ಶ್ರೀ ಅಂಜನಮೂರ್ತಿ : ಮಾನ್ಯ ಸಿಂಧ್ಯಾರವರು ಹೇಳಿದ ಪ್ರಕಾರ ನನಗೆ ಬರೀ ಅಸ್ಯೂರೆನ್ಸ್ ಬೇಕಾಗಿಲ್ಲ ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಹೇಳುತ್ತೇನೆ.

ನೆಲಮಂಗಲವನ್ನು ಸೆಟ್‌ಲೈಟ್ ಟೌನ್ ಆಗಿ ಅದನ್ನು ಕಾರ್ಯರೂಪಕ್ಕೆ ತನ್ನಿ ಎಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ ಬೆಂಗಳೂರು ಬೆಳೆಯುತ್ತಿರತಕ್ಕಂಥ ಜನಸಂಖ್ಯೆ ಇರತಕ್ಕಂಥ ಸಮಸ್ಯೆಗಳ ಪ್ರಮಾಣ ಇವುಗಳನ್ನು ಗಮನಿಸಿದಾಗ ನಾವು ಒಂದು ಸೆಟ್‌ಲೈಟ್ ಮಾಡತಕ್ಕಂಥದ್ದು ಅವಶ್ಯಕತೆ ಇದೆ. ಯಾವ ಕಡೆಯಲ್ಲಿಯೇ ಇರಲಿ. ಅದನ್ನು ಮಾಡತಕ್ಕಂಥ ಅವಶ್ಯಕತೆ ಇದೆ. ಅದರ ಬಗ್ಗೆ ಚರ್ಚೆಯನ್ನು ಕೂಡಾ ನಾವು ಮಾಡುತ್ತಿದ್ದೇವೆ.

ಶ್ರೀ ಆರ್. ದಯಾನಂದರಾವ್ :. ಮಾನ್ಯ ಅಧ್ಯಕ್ಷರೇ 100ಕೋಟಿ ರೂಪಾಯಿಗಳನ್ನು ಬೆಂಗಳೂರು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಮುಖ್ಯಮಂತ್ರಿಗಳ ಫಂಡ್‌ನಿಂದ ತೆಗೆದು ಇಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದನ್ನು ಎಮರ್ಜನ್ಸಿ ಕಾರ್ಯಕ್ರಮಗಳಿಗೆ ಎಂದು ಹೇಳಿ ಈ ಫಂಡನ್ನು ಇಟ್ಟಿದ್ದರೆ ಒಳ್ಳೆಯದು ಎಂದು ನಾನು ಹೇಳುತ್ತೇನೆ.

ಶ್ರೀ. ಕೆ.ಬಿ. ಕೋಳಿವಾಡ್ : ಸನ್ಮಾನ್ಯ ಅಧ್ಯಕ್ಷರೇ ಡಿಮ್ಯಾಂಟ್ ನಂ 55....

ಅಧ್ಯಕ್ಷರು : ಅದು ಪಾಸಾಗಿ ಹೋಯಿತಲ್ಲ.

ಶ್ರೀ .ಕೆ.ಬಿ. ಕೋಳಿವಾಡ್: ಅಧ್ಯಕ್ಷರೇ Industries under co-operative sector ಬಗ್ಗೆ ಈಗ ಕ್ಯಾಪಿಟಲ್ ಎಕ್ಸ್‌ಪೆಂಡಿಚರನ್ನು 18 ಕೋಟಿ 97 ಲಕ್ಷ ರೂಪಾಯಿಗಳು ಎಂದು ಹೇಳಿ ಇಟ್ಟೇದ್ದಾರೆ. ಆದರೆ ಇದರಲ್ಲಿ industries like co-operative spinning mills, co-operative sugar factories, oil mills, ಇವುಗಳಿಗೆ ಬಹಳ ಹೆಚ್ಚು ಹಣ ಬೇಕಾಗುತ್ತದೆ. ಇನ್ನು ಕೂಡಾ ಹತ್ತು ಕೋಟಿ ರೂಪಾಯಿಗಳು ಅತ್ಯವಶ್ಯಕವಾಗಿ ಬೇಕಾಗುತ್ತದೆ. ಈ ಹಣವನ್ನು ಹೆಚ್ಚು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಆಲ್‌ರೈಟ್ ಹೆಚ್ಚು ಮಾಡುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ನನಗೆ ಅನಿಸುತ್ತಿದೆ. ಅವರು ಏನು ಭರವಸೆಗಳನ್ನು ಕೊಟ್ಟಿದ್ದಾರೆ ಆ ಭರವಸೆಗಳು ಮನೆ ಕಟ್ಟುವ ಬಗ್ಗೆಯಾಗಲಿ ನೀರಾವರಿ ಬಗ್ಗೆಯಾಗಲಿ ಇಂಪ್ಲಿಮೆಂಟ್ ಮಾಡಿದರೆ ನಿಜವಾಗಿಯೂ ನಮ್ಮೆಲ್ಲರ ಅಭಿನಂದನೆಗೆ ಮೆಚ್ಚುಗೆಗೆ ಪಾತ್ರರಾಗುತ್ತಾರೆ. ನಾನು ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಆ ಶಕ್ತಿಯನ್ನು ದೇವರು ಅವರಿಗೆ ಕೊಡಲಿ ಎಂದು ಹೇಳಿ ಈಗಾಗಲೇ ಅವರು ಸ್ವಲ್ಪ ಕೊಟ್ಟಿದ್ದು 300-600 ಕೋಟಿ ರೂಪಾಯಿಗಳ ಅಡಿಷನ್ ಇದೆ. ಯಾವ ಪ್ರಕಾರವಾಗಿ ಅವರು ರಿಸೋರ್ಸ್ ಬಿಲ್ಡ್ ಅಪ್ ಮಾಡುತ್ತಾರೋ ಗೊತ್ತಿಲ್ಲ. ಅವೆಲ್ಲವನ್ನೂ ಮಾಡುವಾಗ ನೀರಾವರಿಗೆ ಪ್ರಾಧ್ಯನ್ಯತೆಯನ್ನು ಕೊಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ಇನ್ನು ನಮ್ಮ ಮಲೆನಾಡು ಭಾಗದಲ್ಲಿ ಇವತ್ತು ಮೇಜರ್ ಮೀಡಿಯಂ ಇರಿಗೇಷನ್ ಇಲ್ಲ. ಏನಾದರೂ ಇದ್ದರೆ ಒಂದು ಸಣ್ಣ ಕರೆ ಅಥವಾ ಲಿಫ್ಟ್ ಇರಿಗೇಷನ್ ಇಷ್ಟೇ ಇರುವುದು. ಹಾಗಾಗಿ ತಾವು ಈ ಲಿಫ್ಟ್ ಇರಿಗೇಷನ್ ಸ್ಕೀಮ್‌ಗೆ ಸ್ವಲ್ಪ ಹೆಚ್ಚಿನ ಪ್ರಧಾನ್ಯತೆಯನ್ನು ಕೊಟ್ಟು ಹೆಚ್ಚಿನ ಹಣವನ್ನು ಒದಗಿಸಿ ಕೊಡಬೇಕಾಗುತ್ತದೆ. ಇವತ್ತು ಮೇಜರ್ ಮೀಡಿಯಂ ಇರಿಗೇಷನ್‌ನಲ್ಲಿ ನಾವು ಯೋಜನೆಗಳನ್ನು ಜಾರಿ ಮಾಡುತ್ತೇವೆ ಯೋಜನೆಗಳನ್ನು ಮಂಜೂರು ಮಾಡುತ್ತೇವೆ ಅದನ್ನು ಎಕ್ಸಿಕ್ಯೂಟ್ ಮಾಡುತ್ತೇವೆ. ರೈತರಿಗೆ ಕೊಟ್ಟ ಯಾವುದೇ ಹಣವನ್ನು ವಸೂಲು ಮಾಡುವುದಿಲ್ಲ. ನೀರನ್ನು ಕೊಟ್ಟು ಟ್ಯಾಕ್ಸನ್ನು ತೆಗೆದುಕೊಳ್ಳುತ್ತೇವೆ. ಆದರೆ ಲಿಫ್ಟ್ ಇರಿಗೇಷನ್ ಸ್ಕೀಮನಲ್ಲಿ

ತಾವು ಮೊದಲು ಲಯಬಲಿಟೀಯನ್ನು ಕಾಂಟ್ರಿಬ್ಯೂಟ್ ಮಾಡಿ ಎಂದು ಏನು ಹೇಳಿತ್ತೀರಿ 25 ಪರ್‌ಸೆಂಟ್ ಹಣವನ್ನು ತನ್ನಿ ಅದರ ನಂತರ ನಾವು ಲಿಫ್ಟ್ ಇರಿಗೇಷನ್‌ನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತೀರಿ. ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ 38 ಲಿಫ್ಟ್ ಇರಗೇಷನ್ ಸ್ಕೀಮ್‌ಗಳು ರೆಡಿ ಆಗಿದೆ. ಆದರೆ ಮೂರು ನಾಲ್ಕು ವರ್ಷಗಳಲ್ಲಿ ಒಂದು ಸ್ಕೀಮ್ ಟೇಕ್‌ಆಫ್ ಆಗಿಲ್ಲ. ಆದ್ದರಿಂದ ಈ ಲಿಫ್ಟ್ ಇರಿಗೇಷನ್ ಬಗ್ಗೆ ಗಮನವನ್ನು ಹರಿಸಬೇಕು. ಆದಷ್ಟು ಹೆಚ್ಚಿನ ಹಣವನ್ನು ಲಿಫ್ಟ್ ಇರಿಗೇಷನ್ನಿಗೆ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ ಮಾನ್ಯ ದಯಾನಂದರಾವ್ ರವರು ಹೇಳಿರತಕ್ಕ ವಿಷಯದಲ್ಲಿ Chief Minister's Fund for Bangalore city development ಬೆಂಗಳೂರು ಸಿಟಿ ಡೆವಲಪ್‌ಮೆಂಟ್‌ಗೆ 100 ಕೋಟಿ ರೂಪಾಯಿಗಳನ್ನು ನಾವು ಇಟ್ಟುಕೊಂಡಿದ್ದೇವೆ ನಾನು ಈ ಸದನಕ್ಕೆ ಇತ್ತೀಚೆಗೆ ಬಂದಾಗ ಅದರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಅದರ ಬಗ್ಗೆ ಕೆಲವು ಕಂಪನಿಯವರನ್ನು ಕರೆದು ಸಭೆ ಮಾಡಲಿಕ್ಕೆ ಕಾಲಾವಕಾಶ ಸಿಕ್ಕಿಲ್ಲ ಎನ್ನುವಂಥ ಮಾತನ್ನು ನಾನು ಹೇಳಿದ್ದೇನೆ. ಈ ಸದನ ಮುಗಿದ ಮೇಲೆ ನಾನು ಅದರ ಬಗ್ಗೆ ಒಂದು ಸಭೆಯನ್ನು ಕರೆದು ಖಾಯಂ ಆಗಿ ಫಂಡ್ ಅನ್ನು ಮಾಡುವಂತಹ ಉದ್ದೇಶ ಇದೆ. ಅದರ ಬಗ್ಗೆ ಸಭೆ ಕರೆಯಬೇಕಾದ ವಿಚಾರಕ್ಕೆ preliminary discussion is already over. ಎಂದು ಮಾತನಾಡಿಕೊಂಡಿದ್ದೇವೆ. ವಿವರಗಳನ್ನು ಯಾರು ಕರೆಯಬೇಕು ಏನು ಮಾಡಬೇಕೆನ್ನುವ ವಿಚಾರ ಮಾತ್ರ ಉಳಿದುಕೊಂಡಿದೆ. ಮುಂದಿನ ತಿಂಗಳು ಆ ಸಭೆಯನ್ನು ಕರೆಯುವಂತಹ ವಿಚಾರವನ್ನು ಇಟ್ಟುಕೊಂಡಿದ್ದೇವೆ. ಎರಡನೇಯದು ಕೋ ಆಪರೇಟಿವ್ ಸ್ಪಿನಿಂಗ್ ಮಿಲ್ ವಿಚಾರದಲ್ಲಿಯೂ ಕೂಡ ಕೋಳಿವಾಡ್ ರವರು ನನ್ನ ಹತ್ತಿರವೂ ಕೂಡ ಚರ್ಚೆಯನ್ನು ಮಾಡಿದ್ದಾರೆ. ಅದನ್ನು ಗಮನದಲ್ಲಿಟ್ಟುಕೊಂಡು ನಾವು ತೀರ್ಮಾನವನ್ನು ಮಾಡಬೇಕು ಅದನ್ನು ಮಾಡಿ ನಾವು ಬಜೆಟ್‌ನಲ್ಲಿ ತೋರಿಸದಿದ್ದರೆ ಮೇಲುಕಡೆಯಿಂದ ಹಣವನ್ನು ತರುವುದಕ್ಕೆ ಕಷ್ಟವಾಗುತ್ತದೆ ಅದರ ಬಗ್ಗೆ ತಕ್ಷಣ ಹೇಳುವುದಕ್ಕೆ ಆಗುವುದಿಲ್ಲ. ಇನ್ನು ಸ್ವಲ್ಪ ಚರ್ಚೆ ಮಾಡಿ ಅದರ ಬಗ್ಗೆ ತೀರ್ಮಾನ ಮಾಡತಕ್ಕದ್ದು ಅಲ್ಲಿದೆ. I totally agree with you. ಮಲೆನಾಡು ಅಭಿವೃದ್ಧಿ ಮಂಡಳಿ ಮುಖಾಂತರ ಬರುವ ಕಾಮಗಾರಿಗಳಿಗೆ 10 ಕೋಟಿ ರೂಪಾಯಿಗಳನ್ನು ಇಟ್ಟು ನೀರಾವರಿಯ ಬಗ್ಗೆ ವಿಚಾರ ಮಾಡಿದಾಗ it is only small pickups and then lift irrigation, ಇದು ಎರಡೇ ನಮಗೆ ಬರುವುದು. ಉಳಿದಿರತಕ್ಕದ್ದು ಮಲೆನಾಡು ಆ ಭಾಗದಲ್ಲಿ ಏನು ಬರುವುದಿಲ್ಲ. ಅದಕ್ಕೆ ಹೆಚ್ಚಿನ ಹಣವನ್ನು ಆ ಕಾನೂನು ಬಂದ ಕೂಡಲೇ ಅಂದರೆ ಮೀನುಗಾರಿಕೆ.... ಬರುತ್ತದೆ ನೀರಾವರಿ ಬರುತ್ತದೆ ರೋಡ್ಸ್ ಅಂಡ್ ಬ್ರಿಡ್ಜಸ್ ಬರುತ್ತದೆ. ಇದರ ಬಗ್ಗೆ ಹೆಚ್ಚಿನ ಹಣವನ್ನು ತೊಡಗಿಸತಕಂಥಹ ವಿಚಾರ ಇದೆ. ಅದರ ಬಗ್ಗೆ ನಾವು ಗಮನವನ್ನು ಕೊಡೋಣ. ಆ ಬಿಲ್ ಬಂದಾಗ ವಿವರಗಳಿಗೆ ತಾವು ಸಲಹೆಯನ್ನು ಮಾಡೇ ಮಾಡುತ್ತೀರಿ ಅದಕ್ಕಾಗಿ ನಾನು ಆ ವಿಚಾರಗಳ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗಲಿಲ್ಲ.

ಶ್ರೀ ರಾಮನಾಥ್ ರೈ : ರಾಜ್ಯದಲ್ಲಿ ಕಳೆದ ಸಾರಿ ಹಿಂಗಾರು ಬಹಳ ಜೋರಾಗಿ ಬೀಸಿ ರಾಜ್ಯದಲ್ಲಿ ಹೆಚ್ಚಿಗೆ ಮಳೆ ಬಿದ್ದು ಅದರಲ್ಲಿಯೂ ವಿಶೇಶವಾಗಿ....

ಅಧ್ಯಕ್ಷರು : ಅದರ ಬಗ್ಗೆ ಅಪೂರ್ಣ ಚರ್ಚೆಯಾಗಿದೆ. 25ನೇ ತಾರೀಖು ನಿಮ್ಮನ್ನು ಕರೆಯುತ್ತೇನೆ. ಮಳೆಯಿಂದ ಆಗಿರತಕ್ಕ ಹಾನಿ ಅದಕ್ಕೆ ಕೊಡತಕ್ಕ ಪರಿಹಾರದ ಬಗೆ ಚರ್ಚೆ ಮಾಡೋಣ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮುಂಬೈ ಕರ್ನಾಟಕ ಅಭಿವೃದ್ಧಿಯ ಬಗ್ಗೆ ಮುಖ್ಯಮಂತ್ರಿಗಳು ತಮ್ಮ ಅಭಿಪ್ರಾಯವನ್ನು ಹೇಳಿಲ್ಲ. ಆ ವಿಚಾರ ಇದೆಯೋ ಅಥವಾ ಇಲ್ಲವೋ ಮಾಡುತ್ತಾರೋ ಅಥವಾ ಇಲ್ಲವೋ ಎಂಬ ಮಾತನ್ನು ಹೇಳಿಲ್ಲ. ನಾನು ಎರಡೂ ಮೂರು ಸಾರಿ ಒತ್ತಾಯ ಮಾಡಿದ್ದೇನೆ. ಸರ್ಕಾರದ ಅಭಿಪ್ರಾಯವನ್ನು ಹೇಳಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ನಮ್ಮ ತಾಲ್ಲೂಕಿನಲ್ಲಿ ಒಂದು ಲಕ್ಷ 7 ಸಾವಿರ ಎಕರೆಗೆ ನೀರು ಬರುತ್ತಿದೆ.

ಅಧ್ಯಕ್ಷರು : ಬರದೆ ಇನ್ನೆಲ್ಲಿ ಹೋಗುತ್ತದೆ. ಅದಕ್ಕಿಂತ ಇನ್ನೇನು ಬೇಕು?

ಶ್ರೀ ಆರ್.ಎಲ್. ಜಾಲಪ್ಪ : ಕುಡಿಯುವ ನೀರಿಲ್ಲದೆ ಲಾಟರಿಯನ್ನು ಹೊಡೆಯುತ್ತಿದ್ದೇವೆ. ನಮ್ಮನ್ನು ಕೇಳುವವರೇ ಗತಿ ಇಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಜಾಲಪ್ಪನವರೆ ಈಗ ನೀರು ಬಂದು ಬಿಡುತ್ತದೆ.

ಅಧ್ಯಕ್ಷರು : ಬನ್ನಿಕೋಡ್‌ರವರೆ ನೀವು ಲಕ್ಕಿಡಿಪ್ ಮೆಂಬರ್ ಅವರು ಲಾಟರಿ ಮೆಂಬರ್.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ 1991ನೇ ಇಸವಿಯ ಕರ್ನಾಟಕ ಧನ ವಿಯೋಗ (ನಂ.2) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ವಿಧೇಯಕವನ್ನು ಖಂಡಖಂಡವಾಗಿ ಪರ್ಯಾಲೋಚಿಸುವುದು.

ಖಂಡ 2ರಿಂದ 3ರವರೆಗೆ

ಅಧ್ಯಕ್ಷರು: ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತ್ತು

(ಖಂಡ 2 ಮತ್ತು 3 ಎರಡೂ ಸೇರಿದಂಥೆ ಈ ವಿಧೇಯತಕ್ಕೆ ಸೇರಿಸಲ್ಪಟ್ಟಿತು)

ಖಂಡ 2 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ ಮೊದಲನೇಯ ಖಂಡ ಧೀರ್ಘ ಶಿರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ , ವಿಧೇಯಕದ ಭಾಗವಾಗಿತುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಂಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಅಧ್ಯಕ್ಷರು : ಈಗ ಮುಖ್ಯಮಂತ್ರಿಗಳು ಪ್ರಸ್ಥಾವವನ್ನು ಅಂಗೀರಿಸಲು ಮಂಡಿಸುವುದು.

ಶ್ರೀ ಎಸ್. ಬಂಗಾರಪ್ಪ : ಪ್ರಸ್ತಾವದ ಅಂಗೀಕಾರ 1991ರ ಕರ್ನಾಟಕ ಧನ ವಿನಿಯೋಗ (2) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ 1991 ಕರ್ನಾಟಕ ಧನ ವಿನಿಯೋಗ (2) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು : ಈಗ ಚುಕ್ಕೆ ಗುರ್ತಿನ ಪ್ರಶ್ನೆಗಳನ್ನು ಶುರು ಮಾಡೋಣ ನಾನು ಏತಕ್ಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುವುದಕ್ಕೆ ಅವಕಾಶ ಕೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಸಭಾಧ್ಯಕ್ಷರೆ ಸರ್ಕಾರಕ್ಕೆ ನನ್ನದೊಂದು ಸಲಹೆ ಇದೆ. ಈಗ ಸದನವು 25-9-91, 26-9-91 ಮತ್ತು 27-9-91 ಈ ಮೂರು ದಿನಗಳಲ್ಲಿ ಕುಳಿತುಕೊಂಡು ಬಜೆಟ್ ಬಗ್ಗೆ ಅನೇಕ ವಿಚಾರಗಳ ಬಗ್ಗೆ ನಾವು ಸಾಕಷ್ಟು ಚರ್ಚೆಮಾಡಬೇಕೆಂಬ ಆಸೆ ಇದ್ದರೂ ಆಗಿಲ್ಲ. ಅನೇಕ ವಿಚಾರಗಳಿವೆ ಅದನ್ನು ಈ ಸದನದಲ್ಲಿ ಒಡ್ಡಬೇಕಾಗಿದೆ. ಸರ್ಕಾರದ ಪರವಾಗಿ ಕೆಲವು ಮಸೂದೆಗಳನ್ನು ಸಹಾ ಮಂಡಿಸಿದ್ದಾರೆ. ನಾವು ಅಪ್ರೋಪ್ರಿಯೇಶನ್ ಬಿಲ್ಲನ್ನು ಪಾಸ್ ಮಾಡಿಕೊಟ್ಟಿದ್ದೇವೆ. ಬಹುಶಃ ಹನ್ನೆರಡು ಗಂಟೆಗಳ ಕಾಲ ನಾವು ಹೇಳಿದ ಪ್ರಕಾರವಾಗಿ 20ನೇ ತಾರೀಖು ನಾವು ಮಾಡಿಕೊಡುತ್ತೇವೆಂದು ಹೇಳಿದ್ದೇವು ಅದೇ ರೀತಿ ಮಾಡಿಕೊಟ್ಟಿದ್ದೇವೆ. ಸದನವನ್ನು ನಾಲ್ಕೈದು ದಿವಸಗಳವರೆಗೆ ಮುಂದಕ್ಕೆ ಹಾಕಿ. ಅನೇಕ ವಿಚಾರಗಳ ಬಗ್ಗೆ ಸವಿಸ್ತಾರವಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳಲ್ಲಿ ಮತ್ತು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : 25ನೇ ತಾರೀಖು ಸದನದ ಕಾರ್ಯಕಲಾಪಗಳ ಸಮಿತಿ ಕರೆಯುತ್ತೇನೆ ಅವತ್ತಿನ ದಿವಸ ನಡೆಯುತ್ತದೆ. ನೀವು ಇದನ್ನು ಮಂಡಿಸಬಹುದು. ಈಗ ಚುಕ್ಕೆಗುರುತಿನ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸುವುದು.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು: ಮಾನ್ಯ ಅಧ್ಯಕ್ಷರೆ ದಿನಾಂಕ 20-9-91ರ ಚುಕ್ಕೆ ಗುರುತಿನ ಹಾಗೂ ಚುಕ್ಕೆ ರಹಿತ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ದ. ಕನ್ನಡ ಜಿಲ್ಲೆಯಲ್ಲಿ ಸಿಗಡಿ ಸಂಸ್ಕರಣ ಕೇಂದ್ರ

3690 - ಶ್ರೀ ಆರ್.ಬಿ. ಚೌದರಿ (ಸಿಂಧಗಿ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ಕೆಎಸ್ಐಐಡಿಸಿ ಸಂಸ್ಥೆಯವರು ಪ್ರಾನ್ ಫಾರಂ ವಿತ್ ಇನ್‌ಹೌಸ್ ಪ್ರೊಸೆಸಿಂಗ್ ಫೆಸಿಲಿಟಿಯ ಮೇರೆಗೆ ಜಂಟಿ ವಲಯದಲ್ಲಿ ಪ್ರಾನ್ ಫಾರಂನ್ನು ಸ್ಥಾಪಿಸಲು ಜಾಹಿರಾತು ನೀಡಿತ್ತೇ?

ಆ) ಮಾನ್ಯ ಮುಖ್ಯಮಂತ್ರಿಗಳು ಆಗಸ್ಟ್ 7, 1991 ರಂದು ಪ್ರಕಟಿಸಿರುವ ಕೈಗಾರಿಕಾ ತತ್ವಗಳ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯ ಉದ್ದಿಮೆದಾರರಿಗೆ ಆಧ್ಯತೆ ನೀಡಿದೆಯೇ?

ಇ) ಈ ಘಟಕವು ಮೀನುಗಾರರ ಉದ್ದಿಮೆಯಾದ ಕಾರಣ, ಮೀನುಗಾರರ ಜನಾಂಗಕ್ಕೆ ಆಧ್ಯತೆ ನೀಡಲಾಗಿದೆಯೇ?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಹೌದು.

ಆ) ಹೌದು.

ಇ) ಹೌದು.

ಕುಡುಚಿ ಜನಾಂಗದವರ ಬಗ್ಗೆ

3709 - ಶ್ರೀ ರಮಾನಾಥ ರೈ (ಬಂಟ್ವಾಳ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕನಿಷ್ಟ ಹಿಂದುಳಿದಿರುವ ಕುಡುಚಿ ಜನಾಂಗದ ಜನಜೀವನದ ಬಗ್ಗೆ ಸರ್ಕಾರದಲ್ಲಿ ಮಾಹಿತಿ ದೊರೆಯುವುದೇ?

ಆ) ಮಾಹಿತಿಯದ್ದಲ್ಲಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಬಹಳಷ್ಟು ಹಿಂದುಳಿದಿರುವ ಈ ಪಂಗಡವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆಯೇ?

ಇ) ಇಲ್ಲವಾದಲ್ಲಿ ಈ ಬಗ್ಗೆ ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುವುದೇ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು.

ಆ) ಇಲ್ಲ.

ಇ) ಪರಿಶಿಷ್ಟ ಜಾತಿ ವರ್ಗದ ಪಟ್ಟಿಗೆ ಸೇರಿಸಬೇಕೆಂಬ ಈ ಜನಾಂಗದ ಬೇಡಿಕೆಯನ್ನು ಇದಕ್ಕಾಗಿಯೇ ರಚಿತವಾಗಿರುವ ಸಮಿತಿಯ ಮುಂದೆ ಇಡಲಾಗಿದೆ. ಸಮಿತಿಯ ಶಿಫಾರಸ್ಸಿನ ಮೇಲೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ಹೊನ್ನಾಳಿ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು

3717 - ಡಾ ಡಿ.ಬಿ. ಗಂಗಪ್ಪ (ಹೊನ್ನಾಳಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊನ್ನಾಳಿಯ ಸರಕಾರಿ ಆಸ್ಪತ್ರೆಯನ್ನು 50 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಪರಿಗಣಿಸಿ ಮೇಲ್ದರ್ಜೆಗೇರಿಸಲು ಸರ್ಕಾರವು ಕ್ರಮ ಕೈಗೊಂಡಿದೆಯೇ?

ಆ) ಹಾಗಿದ್ದಲ್ಲಿ ಅದು ಯಾವ ಹಂತದಲ್ಲಿದೆ?

ಶ್ರೀ ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಆಂಗ್ಲೋ ಇಂಡಿಯನ್ ಜನಾಂಗವನ್ನು ಹಿಂದುಳಿದ ಪಟ್ಟಿಗೆ ಸೇರಿಸುವ ಬಗ್ಗೆ

3745 - ಶ್ರೀ ಡೇರಿಕ್ ಎಂ.ಬಿ. ಫುಲನ್ ಷಾ (ನಾಮನಿರ್ದೇಶ ಹೊಂದಿದವರು): ಮಾನ್ಯ ಸಮಾಜಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೂರನೇ ಹಿಂದುಳಿದ ವರ್ಗಗಳ ಆಯೋಗದ ವರದಿಯ ಬಗ್ಗೆ ರಚಿಸಲಾಗಿರುವ ಸಂಪುಟ ಉಪ ಸಮಿತಿ ಅಖಿಲ ಭಾರತ ಪ್ರಗತಿಪರ ಆಂಗ್ಲೋ ಇಂಡಿಯನ್ ಸಾಮಾಜಿಕ ಸಾಂಸ್ಕೃತಿಕ ಶೈಕ್ಷಣಿಕ ಮತ್ತು ಆರ್ಥಿಕ ಕಲ್ಯಾಣ ಸಂಘದವರು ಆಂಗ್ಲೋ ಇಂಡಿಯನ್ ಸಮುದಾಯದವರನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸುವ ಸಲುವಾಗಿ ಮನವಿಯನ್ನು ಸಲ್ಲಿಸಿರುತ್ತಾರೆಯೇ?

ಆ) ಸರ್ಕಾರವು ಆಂಗ್ಲೋ ಇಂಡಿಯನರ ಅತಿ ಹಿಂದುಳಿದಿರುವಿಕೆಯನ್ನು ಗಮನಿಸಿದೆಯೇ?

ಇ) ಹಾಗಿದ್ದಲ್ಲಿ ಸದರಿ ಸಮುದಾಯದ ಏಳಿಗೆಗಾಗಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) ಹೌದು.

ಆ) ಹೌದು.

ಇ) ಭಾರತ ಸಂವಿಧಾನದ ಅನುಛೇದ 15(4) ಮತ್ತು 16(4) ರಂತೆ ಶೈಕ್ಷಣಿಕ ಮತ್ತು ಔದ್ಯೋಗಿಕ ಸೌಲಭ್ಯಗಳನ್ನು ಆಂಗ್ಲೋ ಇಂಡಿಯನರು "ಇ" ಗುಂಪಿನಡಿಯಲ್ಲಿ ಪಡೆಯಬಹುದಾಗಿದೆ. ಆಂಗ್ಲೋ ಇಂಡಿಯನ್ ಸಮುದಾಯದ ಜನರನ್ನು ಧಾರ್ಮಿಕ ಅಲ್ಪಸಂಖ್ಯಾತರೆಂದು ಪರಿಗಣಿಸಲಾಗಿದೆ ಮತ್ತು ಕುಟುಂಬ ವಾರ್ಷಿಕ ಆದಾಯ ರೂ 6000-00 ಗಳನ್ನು ಮೀರದಿದ್ದಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ಇದರ ಮೂಲಕ ಸೌಲಭ್ಯಗಳನ್ನು ಪಡೆಯಬಹುದಾಗಿದೆ.

ಎಲ್ಲಾ ತಾಲ್ಲೂಕುಗಳಲ್ಲಿ ಸಮಾಜ ಕಲ್ಯಾಣ ಕಛೇರಿ ಬಗ್ಗೆ

3739 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ರಾಜ್ಯದಲ್ಲಿರುವ ಎಲ್ಲಾ 175 ತಾಲ್ಲೂಕುಗಳಲ್ಲಿ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಕಛೇರಿ ಅಸ್ತಿತ್ವದಲ್ಲಿದೆಯೇ ?

ಆ) ಇಲ್ಲದ ಪಕ್ಷದಲ್ಲಿ ಇತರೆ ಸರ್ಕಾರಿ ಇಲಾಖೆಗಳ ತಲ್ಲೂಕು ಕಛೇರಿಗಳಂತೆ ತಾಲ್ಲೂಕು ಸಮಾಜಕಲ್ಯಾಣ ಕಛೇರಿಗಳನ್ನು ಸಹ ಎಲ್ಲಾ ತಾಲ್ಲೂಕುಗಳಲ್ಲಿ ಎಂದಿನಿಂದ ಪ್ರಾರಂಭಿಸುವುದು ?

ಇ) ಈ ಕಛೇರಿಗಳನ್ನು ಎಲ್ಲಾ ತಾಲ್ಲೂಕುಗಳಲ್ಲಿ ಪ್ರಾರಂಭಿಸಲು ಸರ್ಕಾರಕ್ಕಿರುವ ತೊಂದರೆಗಳೇನು ?

ಈ) ಈ ತೊಂದರೆಗಳನ್ನು ಬಗೆಹರಿಸುವ ಉಪಾಯಗಳೇನು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) ಇಲ್ಲ.

ಆ) 10 ಇಲಾಖಾ ಸಂಸ್ಥೆಗಳು ಇದ್ದು ಮತ್ತು 50,000 ಕ್ಕೆ ಹೆಚ್ಚಿಗೆ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಜನಸಂಖ್ಯೆ ಇದ್ದ ತಾಲ್ಲೂಕುಗಳಲ್ಲಿ ನಿಗಧಿಪಡಿಸಿದ ಸೂತ್ರದಂತೆ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಕಛೇರಿಗಳನ್ನು ಪ್ರಾರಂಭಿಸಲಾಗುವುದು.

ಇ) ಮೇಲಿನ ಸೂತ್ರಗಳು ಈಡೇರಿಸಿದಲ್ಲಿ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಕಛೇರಿಗಳನ್ನು ಪ್ರಾರಂಭಿಸುವಲ್ಲಿ ಸರ್ಕಾರಕ್ಕೆ ಯಾವ ತೊಂದರೆಯೂ ಇರುವುದಿಲ್ಲ.

ಈ) ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಕಛೇರಿಗಳು ಇಲ್ಲದ ಸ್ಥಳಗಳಲ್ಲಿ ಸಮಾಜ ಕಲ್ಯಾಣ ವಿಸ್ತರಣಾಧಿಕಾರಿಯವರು ಈ ಕೆಲಸವನ್ನು ನಿರ್ವಹಿಸುತ್ತಿದ್ದಾರೆ.

ಮಹಿಳಾ ವೈದ್ಯಾಧಿಕಾರಿಯ ಹುದ್ದೆಯನ್ನು ಭರ್ತಿಮಾಡುವುದು

3768 - ಶ್ರೀ ಆಂಜನಮೂರ್ತಿ (ನೆಲಮಂಗಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನೆಲಮಂಗಲ ವಿಧಾನ ಸಭಾ ಕ್ಷೇತ್ರಕ್ಕೆ ಸೇರಿದ ಯಾವ ಯಾವ ಆರೋಗ್ಯ ಕೇಂದ್ರಗಳಲ್ಲಿ ಮಹಿಳಾ ವೈದ್ಯಾಧಿಕಾರಿಗಳ ಹುದ್ದೆ ಖಾಲಿ ಇದೆ ?

ಆ) ಹಾಗಿದ್ದಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಸಚಿವರು):

ಅ) ಯಾವುದೇ ಮಹಿಳಾ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇರುವುದಿಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶಿರಾ ತಾಲ್ಲೂಕಿನಲ್ಲಿ ರಾಜಧನ ಸಂಗ್ರಹಿಸದೆ ಇರುವುದು

3682 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿರಾ ತಾಲ್ಲೂಕಿನಲ್ಲಿ ತೆಗೆಯಲಾದ ಮರಳು ಮತ್ತು ಕಟ್ಟಡದ ಕಲ್ಲು ಮುಂತಾದುವುಗಳಿಂದ ಸಂಗ್ರಹಿಸಿದ ರಾಜಧನದ ಮೊತ್ತವೆಷ್ಟು ?

ಆ) ತುಮಕೂರು ಜಿಲ್ಲೆಯಲ್ಲಿ ವಿಶೇಷವಾಗಿ ಶಿರಾ ತಾಲ್ಲೂಕಿನಲ್ಲಿ ನಡೆಯುತ್ತಿರುವ ಉಪ ಖನಿಜಗಳ ಕಳ್ಳ ಸಾಗಾಣಿಯನ್ನು ತಡೆಯುವಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಕ್ರಮ ತೆಗೆದುಕೊಳ್ಳುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು):

ಅ) 1989ನೇ ಇಸವಿಯಲ್ಲಿ 4002-00 ಮತ್ತು 1990ನೇ ಇಸವಿಯಲ್ಲಿ 9167-00 ರೂ ರಾಜಧನವು 2 ಕಟ್ಟಡದ ಕಲ್ಲು ಹಾಗೂ ಒಂದು ಸಾದಾ ಮರಳಿನ ಕಲ್ಲು ಗಣಿ ಗುತ್ತಿಗೆಗಳಿಂದ ಸಂದಾಯವಾಗಿರುತ್ತದೆ.

ಆ) ಇಲ್ಲ.

ಬೈಂದೂರು ಕ್ಷೇತ್ರದ ವೈದ್ಯರ ಹುದ್ದೆ ಖಾಲಿ

3687 - ಶ್ರೀ ಜಿ.ಎಸ್. ಆಚಾರ್ (ಬೈಂದೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಕ್ಷೇತ್ರದ ಕೊಲ್ಲೂರು ಹಳ್ಳಿಹೊಳೆ ಹಕ್ಲಾಡಿ ಆಸ್ಪತ್ರೆಗಳಲ್ಲಿ ಬಹುಕಾಲದಿಂದ ವೈದ್ಯಾಧಿಕಾರಿಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಗ್ರಾಮೀಣ ಪ್ರದೇಶದ ಕೆಲವು ಆಸ್ಪತ್ರೆಗಳಲ್ಲಿ ಒಂದಕ್ಕಿಂತ ಹೆಚ್ಚು ವೈದ್ಯರಿದ್ದಲ್ಲಿ ವೈದ್ಯರೆ ಇಲ್ಲದ ಕಡೆಗೆ ವರ್ಗಾಯಿಸಲಾಗುವುದೆಂದು ಹಿಂದೆ ತಿಳಿಸಿದ್ದರೂ ಅದನ್ನು ಕಾರ್ಯಗತ ಗೊಳಿಸದಿರಲು ಕಾರಣವೇನು ?

ಇ) ವೈದ್ಯರ ನೇಮಕಕ್ಕೆ ಯಾವ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಸಚಿವರು):

ಅ) ಸರ್ಕಾರದ ಗಮನಕ್ಕೆ ಬಂದಿದ್ದು ಕೊಲ್ಲೂರು ಹಳ್ಳಿಹೊಳೆ ಆಸ್ಪತ್ರೆಗಳಿಗೆ ವೈದ್ಯರನ್ನು ನೇಮಿಸಲಾಗಿದೆ. ಹಕ್ಲಾಡಿ ಆಸ್ಪತ್ರೆಯಲ್ಲಿನ ಹುದ್ದೆ 3ನೇ ದರ್ಜೆ ವೈದ್ಯರ ಹುದ್ದೆಯಾಗಿದ್ದು ಖಾಲಿ ಇದೆ.

ಆ) ವೈದ್ಯರು ಇಲ್ಲದಿರುವ ಆಸ್ಪತ್ರೆಗಳಿಗೆ ಹತ್ತಿರದ ಆಸ್ಪತ್ರೆಯ ವೈದ್ಯರನ್ನು ಹೆಚ್ಚಿನ ಪ್ರಭಾವದಲ್ಲಿದ್ದು ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲಾಗುತ್ತಿದೆ.

ಹಕ್ಲಾಡಿ ಆಸ್ಪತ್ರೆಯ ಹುದ್ದೆ 3ನೇ ದರ್ಜೆಯಾಗಿದ್ದು 3ನೇ ದರ್ಜೆ ವೈದ್ಯರ ನೇಮಕಾತಿ ಈಗ ಮಾಡುತ್ತಿಲ್ಲ. ಈ ಹುದ್ದೆಯನ್ನು ಮೇಲ್ದರ್ಜೆಗೆ ಏರಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಅನಾಥಾಲಯಗಳ ಸಂಖ್ಯೆ

3680 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ಅನಾಥಾಲಯಗಳಿವೆ?

ಆ) ಸರ್ಕಾರದ ಸಹಾಯಧನದಿಂದ ನಡೆಸಲ್ಪಡುವ ಎಷ್ಟು ಅನಾಥಾಲಯಗಳಿವೆ?

ಇ) ಇಂತಹ ಅನಾಥಾಲಯಗಳಿಗೆ ಸರ್ಕಾರವು ಯಾವ ತರದ ಸಹಾಯವನ್ನು ಕೊಡುತ್ತಿದೆ?

ಈ) ಸರ್ಕಾರವು ಕೊಡುವ ಸಹಾಯಧನ ಕಮ್ಮಿಯಾಗಿದ್ದು ಈ ಬಗ್ಗೆ ದೂರುಗಳು ಸರ್ಕಾರಕ್ಕೆ ಬಂದಿವೆಯೇ?

ಉ) ಅನಾಥ ಮಕ್ಕಳಿಗೆ ಹಿತರಕ್ಷಣೆಯಿಂದ ಸಹಾಯಧನ ಹೆಚ್ಚು ಮಾಡುವ ಆಲೋಚನೆ ಇದೆಯೇ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) 26.

ಆ) 26.

ಇ) ಭೋಜನ ವೆಚ್ಚದ ಅನುದಾನವಾಗಿ ಪ್ರತಿ ಮಗುವಿಗೆ ಮಾಸಿಕ 50-00 ರೂ. ನೀಡಲಾಗುತ್ತಿದೆ.

ಇ) ಹೌದು.

ಈ) ಇದೆ.

ಕೈಗಾರಿಕಾ ನೀತಿಯನ್ನು ಪುನರ್ ರೂಪಿಸುವುದು

3714 - ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಬಾರಿ ಮತ್ತು ಮಧ್ಯಮ ಕೈಗಾರಿಗಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೈಗಾರಿಕಾ ನೀತಿಯನ್ನು ಪುನರ್ ರೂಪಿಸಲು ಸರ್ಕಾರವು ಯೋಚಿಸಿದೆಯೇ?

ಆ) ಹಾಗಿದ್ದಲ್ಲಿ ಇದರ ರೂಪರೇಷಗಳೇನು?

ಶ್ರೀಮತಿ ಮನೋರಮ ಮಾದ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಭಾರತ ಸರ್ಕಾರವು ಇತ್ತೀಚೆಗೆ ಕೈಗಾರಿಕಾ ನೀತಿಯನ್ನು ಪರಿಸ್ಕೃತಗೊಳಿಸಿರುವ ಹಿನ್ನೆಲೆಯಲ್ಲಿ ಕೈಗಾರಿಕಾ ನೀತಿಯನ್ನು ಪರಿಸ್ಕೃತಗೊಳಿಸುವ ವಿಷಯ ಕರ್ನಾಟಕ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಅತಿ ಶೀಘ್ರದಲ್ಲಿಯೇ ರಾಜ್ಯ ಸರ್ಕಾರದ ಹೊಸ ಕೈಗಾರಿಕಾ ನೀತಿಯನ್ನು ರೂಪಿಸಿ ಆದೇಶವನ್ನು ಹೊರಡಿಸಲಾಗುವುದು.

ಚಿತ್ರದುರ್ಗ ಜಿಲ್ಲೆ ಆಸ್ಪತ್ರೆಯ ನೌಕರರಿಗೆ ವಸತಿ ಗೃಹ

3762 - ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಚಿತ್ರದುರ್ಗ ಜಿಲ್ಲೆ ಹರಿಹರದಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಸಾಕಷ್ಟು ನಿವೇಶನವಿದ್ದು ಅಲ್ಲಿನ ಕೆಲಸ ಮಾಡತಕ್ಕಂಥ ಎಲ್ಲಾ ವರ್ಗದ ನೌಕರಿಗೆ ಕ್ವಾಟ್ರಸ್ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಹಾಗೂ ಇದನ್ನು ಯಾವಾಗ ಸಂಪೂರ್ಣಗೊಳಿಸಲಾಗುವುದು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿದೆ.

ಆ) ಪರಿಶೀಲಿಸಲಾಗುತ್ತಿದೆ.

ಚಿಕ್ಕೋಡಿ ತಾಲ್ಲೂಕಿನ ಹಿಂದುಳಿದ ವರ್ಗಗಳ ವಿಧ್ಯಾರ್ಥಿನಿಲಯಗಳ ಸಂಖ್ಯೆ

3772 - ಶ್ರೀ ವೀರಕುಮಾರ್ ಎ. ಪಾಟೀಲ (ಸದಲಗ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕೋಡಿ ತಾಲ್ಲೂಕಿನಲ್ಲಿರುವ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿಧ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು?

ಆ) ಮಂಡಲ್ ಪಂಚಾಯಿತಿವಾರು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ವಿಧ್ಯಾರ್ಥಿನಿಲಯ ಪ್ರಾರಂಭಿಸಲು ಪ್ರಸ್ತಾಪಿಸಲಾಗಿದೆಯೇ?

ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) 4.

ಆ) ಇಲ್ಲ.

ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಅರ್ಹತೆ ಆಧಾರದ ಮೇಲೆ ಸೀಟುಗಳ ಹಂಚಿಕೆ

3675 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಖಾಸಗಿ ವೈದ್ಯಕೀಯ ಕಾಲೇಜುಗಳು ಸರ್ಕಾರ ನಿಗಧಿ ಮಾಡಿರುವ ಕ್ಯಾಪಿಟೇಶನ್ ಫೀಯನ್ನು ಒಪ್ಪಿಕೊಂಡ ಮೇಲೆ ಪ್ರತಿಯೊಂದು ಖಾಸಗಿ ಕಾಲೇಜುಗಳ ಸೀಟುಗಳನ್ನು ಕ್ಯಾಪಿಟೇಶನ್ ಫೀ ಆಧಾರದ ಮೇಲೆ ಸರ್ಕಾರವೇ ಮೆರಿಟ್ ಆಧಾರದ ಮೇಲೆ ಸೀಟುಗಳನ್ನು ಹಂಚುವುದಾಗಿ ಈ ಹಿಂದೆ ಆಶ್ವಾಸನೆ ನೀಡಲಾಗಿದ್ದು ನಿಜವಲ್ಲವೇ ಹಾಗಿದ್ದಲ್ಲಿ ಆಶ್ವಾಸನೆ ನೀಡಿದಂತೆ 1991-92ನೇ ಸಾಲಿನಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳದಿರಲು ಕಾರಣವೇನು?

ಆ) ಸರ್ಕಾರದ ಖಾಸಗಿ ಕಾಲೇಜುಗಳ ಪೂರ್ಣ ಸೀಟುಗಳನ್ನು ಮೆರಿಟ್ ಆಧಾರದ ಮೇಲೆ ಹಂಚಲು ಆಗದಿದ್ದರೆ ಸರ್ಕಾರ ನಿಗಧಿ ಮಾಡಿದ ಕ್ಯಾಪಿಟೇಶನ್ ಫೀಯನ್ನು ತೆಗೆಯಬಾರದೇಕೆ?

ಇ) ಸರ್ಕಾರದ ನಿಬಂಧನೆಗಳನ್ನು ಒಂದು ಪಕ್ಷ ಈ ವೈದ್ಯಕೀಯ ಕಾಲೇಜುಗಳು ಪಾಲಿಸದಿದ್ದರೆ ಮತ್ತೆ ಮತ್ತೆ ಇವರಿಗೆ ಹೆಚ್ಚಿಗೆ ಸೀಟುಗಳನ್ನು ಕೊಡಲು ಕಾರಣವೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

1991-92 ನೇ ಶೈಕ್ಷಣಿಕ ವರ್ಷದಿಂದ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ

ಮೆರಿಟ್ ಆಧಾರದ ಮೇಲೆ ನೀಡಬೇಕೆಂದು ಅಧಿಕೃತ ಸ್ಥಾಪನೆ ಸಂಖ್ಯೆ ಆಕುಕ 166 ಎಮ್.ಎಸ್.ಎಫ್. 91 ದಿನಾಂಕ 25.5.1991ರಲ್ಲಿ ಸೂಚಿಸಲಾಗಿದೆ ಸದರಿ ಅಧಿಕೃತ ಸ್ಥಾಪನಕ್ಕೆ ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠ ತಡೆಯಾಜ್ಞೆ ನೀಡಿದೆ.

ಆ) ಕ್ಯಾಪಿಟೇಷನ್ ಶುಲ್ಕ ವಸೂಲಾತಿಯನ್ನು ಈಗಾಗಲೇ ರದ್ದಿಪಡಿಸಲಾಗಿದೆ ಆದ್ದರಿಂದ ಕ್ಯಾಪಿಟೇಶನ್ ಶುಲ್ಕ ವಸೂಲಾತಿಯ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರವೇಶ ಸಾಮರ್ಥ್ಯವನ್ನು ಹೆಚ್ಚಿಸಿರುವುದಿಲ್ಲ.

ಶಿಕಾರಿಪುರ ತಾಲ್ಲೂಕಿಗೆ ಅಂಗನವಾಡಿ ಯೋಜನೆ

3684 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿಕಾರಿಪುರ ತಾಲ್ಲೂಕಿಗೆ ಅಂಗನವಾಡಿ ಯೋಜನೆ ಮಂಜುರಾಗಿದೆಯೇ?

ಆ) ಹಾಗಿದ್ದಲ್ಲಿ ಇದನ್ನು ಎಂದು ಪ್ರಾರಂಭಿಸಲಾಗುವುದು?

ಇ) ಶಿಕಾರಿಪುರ ತಾಲ್ಲೂಕು ಅಲ್ಲದೆ ಬೇರೆ ಯಾವ ಯಾವ ತಾಲ್ಲೂಕುಗಳಿಗೆ ಅಂಗನವಾಡಿ ಯೋಜನೆ ಮಂಜೂರಾಗಿದೇ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) ಹೌದು

ಆ) ಶೀಘ್ರದಲ್ಲಿಯೇ ಪ್ರಾರಂಭಿಸಲಾಗುವುದು

ಇ) ತರೀಕೆರೆ ಕಲಘಟಗಿ ರಾಯಚೂರು ಸಿರಗುಪ್ಪ ಮತ್ತು ಗುಡಿಬಂಡೆ.

ಕೋಲಾರದ ಚಿನ್ನದ ಗಣಿಯಲ್ಲಿ ಕಡಿಮೆ ಪ್ರಮಾಣದ ಚಿನ್ನದ ಉತ್ಪತ್ತಿ

3686 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಗಣಿ ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೋಲಾರ ಚಿನ್ನದ ಗಣಿಯಲ್ಲಿ ಚಿನ್ನ ಉತ್ಪತ್ತಿ ಕಡಿಮೆಯಾಗಿರುವ ಪ್ರಯುಕ್ತ ಗಣಿಗಳನ್ನು ಮುಚ್ಚುವ ಪ್ರಮೇಯವು ಬಂದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸುಮಾರು ಹತ್ತು ಸಾವಿರ ಗಣಿ ಕಾರ್ಮಿಕರ ನಿರುದ್ಯೋಗಿಗಳಾಗುವುದು ತಪ್ಪಿಸಲು ಕ್ರಮ ಕೊಳ್ಳಬೇಕೆಂದು ಕೇಂದ್ರಕ್ಕೆ ಒತ್ತಾಯಿಸುವರೇ?

(ಶ್ರೀ ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು):

ಅ) ಬಂದಿದೆ.

ಆ) ಹೌದು.

ದ.ಕ. ಜಿಲ್ಲೆಯಲ್ಲಿ ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ ಬಿಡುಗಡೆಯಾದ ಹಣ

3685 - ಶ್ರೀ ಇದಿನಬ್ಬ (ಉಳ್ಳಾಲ) : ಸಣ್ಣ ಕೈಗಾರಿಗಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1988-89 1989-90 1990-91 ರಲ್ಲಿ ಸ್ವಯಂ ಉದ್ಯೋಗ ಯೋಜನೆಯಲ್ಲಿ ಎಷ್ಟು ಜನರಿಗೆ ಉದ್ಯೋಗ ಒದಗಿಸಲಾಗಿದೆ?

ಆ) ಈ ಯೋಜನೆಗೆ ಮೇಲ್ಕಂಡ ಸಾಲುಗಳಲ್ಲಿ ಬಿಡುಗಡೆಯಾದ ಹಣವೆಷ್ಟು?

ಇ) ಸ್ವಯಂ ಉದ್ಯೋಗ ಅಭ್ಯರ್ಥಿಗಳಿಗೆ ಈ ಯೋಜನೆಯ ಫಲ ದೊರಕಲು ಆಯ್ಕೆ ಸಮಿತಿಯಲ್ಲಿ ಅಧಿಕಾರೇತರರಿಗೆ ಅವಕಾಶ ಕಲ್ಪಿಸಿ ಕೊಡಲಾಗುವುದೇ?

ಶ್ರೀ ನಜೀರ್ ಅಹಮದ್ (ಸಣ್ಣ ಕೈಗಾರಿಕಾ ರಾಜ್ಯ ಸಚಿವರು):

ಅ) 1988-89 1989-90 ಮತ್ತು 1990-91ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವಯಂ ಉದ್ಯೋಗ ಯೋಜನೆಯಲ್ಲಿ ಒಟ್ಟು 1187 ಜನರಿಗೆ ಉದ್ಯೋಗ ಒದಗಿಸಲಾಗಿದೆ. ವರ್ಷವಾರು ಮಾಹಿತಿ ಕೆಳಕಂಡಂತಿದೆ.

1988-89	564 ಫಲಾನುಭವಿಗಳು.
1989-90	400 ಫಲಾನುಭವಿಗಳು.
1990-91	223 ಫಲಾನುಭವಿಗಳು.
	1187

ಆ) ಈ ಯೋಜನೆಯಲ್ಲಿ ಮೇಲ್ಕಂಡ ಸಾಲುಗಳಲ್ಲೆ ಬಿಡುಗಡೆಯಾದ ಹಣದ ಮೊತ್ತ ರೂ 273.10 ಲಕ್ಷಗಳು ವರ್ಷವಾರು ಹಣದ ಮೊತ್ತ ಈ ಕೆಳಕಂಡಂತಿದೆ

1988-89 ರೂ	130.90 ಲಕ್ಷಗಳು
1989-90 ರೂ	92.80 ಲಕ್ಷಗಳು
1990-91 ರೂ	50.12 ಲಕ್ಷಗಳು
	273.10

ಇ) ಈ ಯೋಜನೆಯಡಿಯಲ್ಲಿ ಭಾರತ ಸರ್ಕಾರದ ಕಾರ್ಯಸೂಚಿಯಂತೆ ಅಧಿಕಾರೇತರರಿಗೆ ಆಯ್ಕೆ ಸಮಿತಿಯಲ್ಲಿ ಅವಕಾಶ ಇರುವುದಿಲ್ಲ.

ಕೊಡಗು ಜಿಲ್ಲೆಯಲ್ಲಿ ಔಷಧಿಗಳನ್ನು ಸರಿಯಾಗಿ ವಿತರಣೆ ಮಾಡದಿರುವುದು

3688 - ಶ್ರೀಮತಿ ಸುಮ ವಸಂತ್ (ವೀರಾಜಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿರುವ ಔಷಧಿಗಳನ್ನು ಸರಬರಾಜು ಮಾಡುವ ಸಲುವಾಗಿ ಕೊಟ್ಟಿರುವ ಹಣದ ಪ್ರಮಾಣವೆಷ್ಟು?

ಆ) ಗ್ರಾಮಾಂತರ ಪ್ರದೇಶದ ಆಸ್ಪತ್ರೆಗಳಿಗೆ ಔಷಧಿಗಳ ಸರಬರಾಜನ್ನು ಸೂಕ್ತವಾಗಿ ಪೂರೈಸುತ್ತಿದ್ದರೂ ಗ್ರಾಮಾಂತರ ಪ್ರದೇಶಗಳ ಆಸ್ಪತ್ರೆಗಳಲ್ಲಿ ಔಷಧಿಗಳು ದೊರೆಯುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸರ್ಕಾರವು ಈ ಬಗ್ಗೆ ಯಾವ ಕ್ರಮಗಳನ್ನು ಕೈಗೊಳ್ಳಲಿದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ರೂ 20,69,000-00 (1991-92)

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಚುಕ್ಕೆ ರಹಿತ ಪ್ರಶ್ನೋತ್ತರಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ವಿಶ್ವಬ್ಯಾಂಕಿನ ನೆರವಿನಿಂದ ಹಳಿಯಾಳದಲ್ಲಿ ಮಹಿಳಾ ಐ.ಟಿ.ಐ.

3370 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳ ಸಂಖ್ಯೆ ಎಷ್ಟು? ಮತ್ತು ಅವು ಎಲ್ಲೆಲ್ಲಿವೆ?

ಆ) ವಿಶ್ವ ಬ್ಯಾಂಕಿನ ನೆರವಿನಿಂದ ರಾಜ್ಯದ ಇಪ್ಪತ್ತು ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಆಧುನಿಕರಿಸಲು ಸರ್ಕಾರ ನಿರ್ಧರಿಸಿರುವುದ ನಿಜವೇ?

ಇ) ಅದಕ್ಕಾಗಿ ಯೋಜನೆಗಳನ್ನೇನಾದರೂ ಸಿದ್ಧಪಡಿಸಿದೆಯೇ ಸಿದ್ಧಪಡಿಸಿದ್ದಲ್ಲಿ ಆ ಯೋಜನೆಗಳ ವಿವರಗಳೇನು ಮತ್ತು ಅದಕ್ಕಾಗಿ ವಿಶ್ವ ಬ್ಯಾಂಕಿನಿಂದ ಪಡೆಯಲಿರುವ ನೆರವಿನ ಹಣವೆಷ್ಟು? ಆ ಯೋಜನೆಗಳು ಕಾರ್ಯರೂಪಕ್ಕೆ ಬರಲು ಎಷ್ಟು ವರ್ಷಗಳ ಅಗತ್ಯವಿದೆ?

ಈ) ಹಳಿಯಾಳದಲ್ಲಿ ಮಹಿಳಾ ಕೈಗಾರಿಗಾ ತರಬೇತಿ ಕೇಂದ್ರವಿದೆಯೇ?

ಉ) ಇಲ್ಲದಿದ್ದಲ್ಲಿ ಬಹಳ ಹಿಂದುಳಿದ ತಾಲ್ಲೂಕಾದ ಹಳಿಯಾಳದಲ್ಲಿ ಮಹಿಳಾ ಕೈಗಾರಿಕಾ ತರಬೇತಿ ಕೇಂದ್ರವನ್ನು ಪ್ರಾರಂಭಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):

ಅ) 35.

ಆ) ಪಟ್ಟಿ ಲಗತ್ತಿಸಿದೆ.

ಇ) ಹೌದು.

ಈ) ಹೌದು. ಯೋಜನೆಗಳನ್ನು ಸಿದ್ಧ ಪಡಿಸಲಾಗಿದೆ. ಕೈಗಾರಿಗಾ ತರಬೇತಿ ಸಂಸ್ಥೆಗಳ ಆಧುನಿಕರಣಕ್ಕಾಗಿ ಒಟ್ಟು ರೂ. 540.00 ಲಕ್ಷ ರೂಗಳು ನಿಗದಿಪಡಿಸಿದ್ದು ರಾಜ್ಯ ಮತ್ತು ಕೇಂದ್ರಗಳು 50.50 ಪಾಲು ಇರುತ್ತದೆ. ವಿಶ್ವಬ್ಯಾಂಕ್ ನೆರವಿನ ಈ ಕಾರ್ಯಕ್ರಮಗಳು 1989-90 ರಿಂದ 1994-95 ರವರೆಗೆ ವಿಸ್ತೃತವಾಗಿರುತ್ತದೆ.

ಈ) ಇಲ್ಲ.

ಉ) ಸದ್ಯಕ್ಕೆ ಹಳಿಯಾಳದಲ್ಲಿ ಕೈಗಾರಿಗಾ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸಲು ಯಾವುದೇ ಕಾರ್ಯಕ್ರಮ ಇರುವುದಿಲ್ಲ.

LIST OF GOVERNMENT INDUSTRIAL TRAINING INSTITUTES

Sl No.	*Name of the ITI*
1.	Industrial Training Institute. Ammasandra, Tumkur Dist.
2.	ITI Hosur Road, Bangalore
3.	-do- Tumkur Road, Bangalore
4.	-do- Bellary
5.	-do- Bhadravathi, Shimoga Dist.

6. -do- Bijapur
7. -do- Belgaum
8. -do- Belgaum (Women)
9. -do- Bidar
10. -do- Chikmagalur
11. -do- Davanagere, Chitradurga Dist.
12. -do- Devarayasamudra, Kolar Dist.
13. -do- Devanahalli, Bangalore Dist.
14. -do- Gulbarga.
15 -do- Gulburga (Women)
16. -do- Hubli
17. -do- Hassan,
18. -do-. Haliyal Uttar Kannada Dist.
19. -do- Holenarsipura, Hassan Dist.
20. -do- Honnavar Uttara kannada Dist.
21. -do- Hoovinahadagali Bellary Dist.
22. -do- KGF Kolar Dist.
23. -do- Karwar, Uttara Kannada Dist.
24. -do- Kanakapura Bangalore Dist.
25. -do- Mysore
26. -do- Mangalore
27. -do- Madikeri
28. -do- Malavalli Mandya Dist.
29. -do- Mandya
30. -do- Raichur
31. -do- Ponnampet (Women) Coorg Dist.
32. -do- Shimoga (Women)
33. -do- Tumkur.
34. -do- Wadi, Gulbarga Dist.
35. -do- Gouribidanur, Kolar Dist. (Women)

ಹಳಿಯಾಳದಲ್ಲಿನ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರದ ಕಟ್ಟಡದ ನಿರ್ಮಾಣ

3652 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೇ?

ಅ) ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಲ್ಲಿನ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರದ ಕಟ್ಟಡದ ನಿರ್ಮಾಣ ಕೆಲಸವನ್ನು ಎಂದು ಪ್ರಾರಂಭಿಸಲಾಯಿತು? ಹಾಗೂ ಇದಕ್ಕಾಗಿ ಇಲ್ಲಿಯವರೆಗೂ ಖರ್ಚಾಗಿರುವ ಹಣ ಎಷ್ಟು?

ಆ) ಕಟ್ಟಡದ ನಿರ್ಮಾಣದ ಕೆಲಸ ಮುಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಕಟ್ಟಡದ ನಿರ್ಮಾಣ ಕೆಲಸವನ್ನು ತ್ವರಿತವಾಗಿ ಮುಕ್ತಾಯಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):

ಅ) ಕಟ್ಟಡದ ನಿರ್ಮಾಣ ಕೆಲಸವನ್ನು 1986-87ರಲ್ಲಿ ಪ್ರಾರಂಭಿಸಲಾಯಿತು. ಇದುವರೆಗೆ ಖರ್ಚಾಗಿರುವ ಹಣ 12.34 ಲಕ್ಷಗಳು.

ಆ) ಹೌದು.

ಇ) ಕಟ್ಟಡದ ನಿರ್ಮಾಣರು ಅಯವ್ಯಯದ ಕೊರತೆ ಕಾರಣ ಮುಂದಗತಿಯಲ್ಲಿದೆ. ಇದಕ್ಕೆ ಹೆಚ್ಚಿನ ಅಯವ್ಯಯ ವ್ಯವಸ್ಥೆ ಮಾಡಲು ಪ್ರಯತ್ನಿಸಲಾಗುವುದು.

ರಾಜ್ಯದಲ್ಲಿರುವ ಆಶ್ರಮ ಶಾಲೆಗಳ ಸಂಖ್ಯೆ

3699 - ಶ್ರೀ ಎಲ್.ಆರ್. ಶಿವರಾಗಮೇಗೌಡ (ನಾಗಮಂಗಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಸಮಾಜ ಕಲ್ಯಾಣ ಇಲಾಖೆಯು ನಡೆಸುತ್ತಿರುವ ಆಶ್ರಮ ಶಾಲೆಗಳ ಸಂಖ್ಯೆ ಎಷ್ಟು ಇವುಗಳು ಕಾರ್ಯ ನಿರ್ವಹಿಸುತ್ತಿರುವ ಸ್ಥಳ ಹಾಗೂ ವಿಧ್ಯಾರ್ಥಿಗಳ ಸಂಖ್ಯೆ ಎಷ್ಟು?

ಆ) ಮೇಲ್ಕಂಡ ಆಶ್ರಮ ಶಾಲೆಗಳಿಗಾಗಿ ವೆಚ್ಚ ಮಾಡುತ್ತಿರುವ ಹಣದ ಮೊತ್ತವೆಷ್ಟು?

ಇ) ಮೇಲ್ಕಂಡ ಆಶ್ರಮ ಶಾಲೆಗಳಿಗೆ 1-10-90ರಿಂದ ಸಚಿವರು ಒಂದು ಬಾರಿಯಾದರೂ ಬೇಟಿ ನೀಡಿಲ್ಲವೆಂದು ವರದಿಗಳು ನಿಜವೇ?

ಈ) ಭೇಟಿ ನೀಡಿದಲ್ಲಿ ಆಶ್ರಮ ಶಾಲೆಗಳ ಸುಧಾರಣೆಗಾಗಿ ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

1) ಪರಿಶಿಷ್ಟ ವರ್ಗದವರ ಆಶ್ರಮ ಶಾಲೆಗಳು 62

2) 62 ಸ್ಥಳಗಳು

3) ಪರಿಶಿಷ್ಟ ವರ್ಗ ವಿಧ್ಯಾರ್ಥಿಗಳು - 3900

ಆ) 13.32 ಲಕ್ಷ ರೂ.ಗಳು

ಇ) ಇಲ್ಲ

ಈ) ಬೋಧನಾ ಮಟ್ಟವನ್ನು ಮತ್ತು ಅತ್ಯುತ್ತಮ ಆಹಾರವನ್ನು ಒದಗಿಸುವಂತೆ ಆದೇಶ ನೀಡಿರುತ್ತಾರೆ.

ಓ.ಎಸ್.ಐ. ಏಜೆಂಟರ ಬಗ್ಗೆ

3702 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಮೈಸೂರು ಮಿನರಲ್ಸ್ ಲಿ. ಸಂಸ್ಥೆಯ ಪರವಾಗಿ ನವಮಂಗಳೂರು ಬಂದರಿನಲ್ಲಿ ಕೆಲಸ ಮಾಡುತ್ತಿರುವ ಖಾಸಗಿ ಸಿ.ಎಸ್.ಐ. ಏಜಂಟರುಗಳು ಯಾರು?

ಆ) ಮೇಲ್ಕಂಡ ಕೆಲಸಗಳನ್ನು ಸಾರ್ವತ್ರಿಕ ಪ್ರಕರಣೆ ನೀಡದೆ ಸಮೀಕರಿಸಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸದರೀ ವಿಚಾರದ ಬಗ್ಗೆ ವಿಚಾರಣೆ ನಡೆಸಲು ಸರ್ಕಾರ ಸಿದ್ಧವಿದೆಯೇ?

ಶ್ರೀ ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು):

1) ಎಕ್ಸಪೋರ್ಟ್ ಟ್ರೇಡ್ ಲಿಂಕ್ ಏಜೆನ್ಸೀಸ್ ಲಾಲ್‌ಬಾಗ್, ಮಂಗಳೂರು ಅವರು ಗ್ರಾನೈಟ್ ಕಲ್ಲುಗಳ ಬಂದರು ಕಾರ್ಯಕ್ಕಾಗಿ.

2) ಮೆ: ಅಲ್ವಾರೀಸ್ ಅಂಡ್ ಥಾಮಸ್, ಹಂಪನ ಕಟ್ಟೆ, ಮಂಗಳೂರು ಅವರು ಕ್ರೋಮೈಟ್ ಅದುರಿನ ಬಂದರು ಕಾರ್ಯಕ್ಕಾಗಿ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಸರ್ಕಾರಿ ಸ್ವಾಮ್ಯದ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹಂಚಿಕೆ

3703 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಸಣ್ಣ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.?

ಅ) ರಾಜ್ಯ ಸರ್ಕಾರಿ ಸ್ವಾಮ್ಯದ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮವು 1-1-91 ರಿಂದ 15-8-91ರ ವರೆಗೆ ಯಾವ್ಯಾವ ಸಂಸ್ಥೆಗಳ ಮೇಲೆ ಬಂಡವಾಳ ಹೂಡಿದೆ, (ವಿವರಗಳನ್ನೊದಗಿಸುವುದು)

ಆ) ಮೇಲ್ಕಂಡ ಉದ್ಯಮಗಳ ವಿವರಗಳು ಹಾಗೂ ಹೂಡಲಿರುವ ಬಂಡವಾಳದ ಮೊತ್ತದ ವಿವರಗಳನ್ನೊದಗಿಸುವುದು.

ಇ) ಮೇಲ್ಕಂಡ ಉದ್ಯಮಗಳ ಆಯ್ಕೆಗೆ ಸರ್ಕಾರ ಅನುಸರಿಸಿದ ನೀತಿಗಳೇನು?

ಶ್ರೀ ನಜೀರ್ ಅಹಮದ್ (ಸಣ್ಣ ಕೈಗಾರಿಕಾ ರಾಜ್ಯ ಸಚಿವರು):

ಅ) ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮವು ಈ ಕೆಳಕಂಡ ಸಂಸ್ಥೆಗಳಿಗೆ ಬಂಡವಾಳವನ್ನು ಹೂಡಿದೆ :

1) ಕೆ.ಜಿ.ಗ್ಲೂಕೋ ಬಿಯಾಲ್ಸ್ ಲಿ.

2) ಆದಿತ್ಯ ಹಾರೋಲಾಜಿಕಲ್ಸ್ ಲಿಮಿಟೆಡ್

3) ಕರ್ನಾಟಕ ಆಂಟಿಬಯಾಟಿಕ್ಸ್ ಲಿ.

4) ಕರ್ನಾಟಕ ಬೇಲ್‌ಡ ಅಟೋ ಲಿ.

5) ವಿಕ್ರಾಂತ್ ಟೈರ್ಸ್ ಲಿ.

6) ಯುಕೇನ್ ಇಂಡಿಯಾ ಲಿ.

7) ಸಹ್ಯಾದ್ರಿ ಇಂಡಸ್ಟ್ರೀಯಲ್ ಗ್ಯಾಸೆಸ್ ಲಿ.

ಆ)

	(ರೂ. ಲಕ್ಷಗಳಲ್ಲಿ)
1) ಕೆ.ಜಿ.ಗ್ಲೂಕೋ ಬಿಯಾಲ್ಸ್ ಲಿ.	64.35
2) ಆದಿತ್ಯಾ ಹಾರೋಲಾಜಿಕಲ್ ಲಿ.	3.85

3) ಕರ್ನಾಟಕ ಆಂಟಿಬಿಯಾಟಿಕ್ಸ್ ಲಿ.		11.82
4) ಕರ್ನಾಟಕ ಬೆಲಾದ್ ಆಟೋ ಲಿ.		0.90
5) ವಿಕ್ರಾಂತ್ ಟೈರ್ಸ್ ಲಿಮಿಟೆಡ್		200.00
6) ಯುಕೇನ್ ಇಂಡಿಯಾ ಲಿಮಿಟೆಡ್		5.41
7) ಸಹ್ಯಾದ್ರಿ ಇಂಡಸ್ಟ್ರೀಯಲ್ಲಿ ಗ್ಯಾಸಸ್ ಲಿ.		1.85
ಒಟ್ಟು		**288.18**

ಇ) ಯೋಜನಾ ವರದಿಯನ್ನು ತಯಾರಿಸಿದ ನಂತರ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮವು ಪ್ರಮುಖ ದಿನಪತ್ರಿಕೆಗಳಾದ ಡೆಕಾನ್ ಹೆರಾಲ್ಡ್ ಎಕಾನಾಮಿಕ್ ಟೈಮ್ಸ್, ಪ್ರಜಾವಾಣಿ, ಫೈನಾನ್ಸಿಯಲ್ ಎಕ್ಸ್‌ಪ್ರೆಸ್‌ಗಳಲ್ಲಿ ಜಂಟಿಯಾಗಿ ಉದ್ಯಮವನ್ನು ಸ್ಥಾಪಿಸಲು ಆಹ್ವಾನಿಸಿ ಪ್ರಕಟಿಸಲಾಗುವುದು.

ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮದಿಂದ ರಚಿಸಲ್ಪಟ್ಟ ಉಪ ಸಮಿತಿಯ ನಿರ್ದೇಶಕ ಮಂಡಳಿಯು ಉದ್ಯಮದಾರರ ಆರ್ಥಿಕ ಸ್ಥಿತಿ ಉದ್ಯೋಗ ಪ್ರಾವಿಣ್ಯತೆ, ಹಾಗೂ ಇತರೆ ಹಿನ್ನಲೆಗಳ ಆಧಾರದ ಮೇಲೆ ಸಂದರ್ಶನ ನಡೆಸಿ, ಜಂಟಿ ಉದ್ಯಮದಾರರನ್ನು ಆಯ್ಕೆ ಮಾಡಲಾಗುವುದು. ಉಪ ಸಮಿತಿಯ ನಿರ್ದೇಶಕರ ಮಂಡಳಿಯ ತೀರ್ಮಾನವನ್ನು ಜಂಟಿ ಉದ್ಯಮದಾರರಿಗೆ ತಿಳಿಸುವ ಮುನ್ನ ಮಂಡಳಿಯ ಅನುಮೋದನೆಯನ್ನು ಪಡೆಯಲಾಗುವುದು. ಸ್ಥಳಿಯ ಉದ್ಯಮದಾರರಿಗೆ ಆದ್ಯತೆ ನೀಡಲಾಗುವುದು.

ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಅವರಿಂದ ರೆಕ್ಟಿಫೈಡ್ ಸ್ಪಿರಿಟ್ ಖರೀದಿ.

3704 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಲಿಮಿಟೆಡ್ ಮಂಡ್ಯರವರಿಗೆ ಸಂಸ್ಥೆಗೆ ಬೇಕಾದ ರೆಕ್ಟಿಫೈಡ್ ಸ್ಪಿರೀಟನ್ನು ಬಹಿರಂಗ ಮಾರುಕಟ್ಟೆಯಲ್ಲಿ ಖರೀದಿ ಮಾಡುತ್ತಿದೆಯೇ?

ಆ) ಮೈಸೂರು ಅಸಿಟೇಟ್ ಸಂಸ್ಥೆಗೆ ಬೇಕಾಗ ರೆಕ್ಟಿಫೈಡ್ ಸ್ಪಿರೀಟನ್ನು ಒದಗಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು?

ಇ) ಮೈಸೂರು ಅಸಿಟೇಟ್ ಸಂಸ್ಥೆ ಅನುಭವಿಸುತ್ತಿರುವ ನಷ್ಟದ ಪ್ರಮಾಣವೇನು ಕಳೆದ 3 ವರ್ಷದ ಪ್ರತ್ಯೇಕ ವಿವರಗಳನ್ನೊದಗಿಸುವುದು?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಇಲ್ಲ.

ಆ) ರೆಕ್ಟಿಫೈಡ್ ಸ್ಪಿರಿಟಿನ ಲಭ್ಯತೆಯನ್ನು ಅನುಸರಿಸಿ ಒದಗಿಸಲಾಗುತ್ತಿದೆ.

ಇ) ಕಂಪನಿಯ ಕಳೆದ 3 ವರ್ಷದ ಲಾಭ:ನಷ್ಟದ ವಿವರಗಳು ಈ ಕೆಳಕಂಡಂತಿವೆ.

1988-89 ರೂ. 125 ಲಕ್ಷ (ನಷ್ಟ)

1989-90 ರೂ. 150 ಲಕ್ಷ (ಲಾಭ)

1990-91 ರೂ. 462 ಲಕ್ಷ (ಲಾಭ)

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹೆಸರಿನ ಮೇಲೆ ಸುಳ್ಳು ಜಾತಿ ಸರ್ಟಿಫಿಕೇಟ್ ಪಡೆದಿರುವ ವಿಚಾರ.

3674 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1991ನೇ ಮಾರ್ಚ್ ತಿಂಗಳ ಅಂತ್ಯದವರೆಗೆ ಹರಿಜನ-ಗಿರಿಜನ ಹೆಸರಿನ ಮೇಲೆ ಎಷ್ಟು ಜನ ಸುಳ್ಳು ಜಾತಿ ಸರ್ಟಿಫಿಕೇಟ್ ಪಡೆದಿರುವರು?

ಆ) ಈ ಸರ್ಟಿಫಿಕೇಟ್ ಆಧಾರದ ಮೇಲೆ ಎಷ್ಟು ಜನ ಸರ್ಕಾರಿ ಉದ್ಯೋಗ ಪಡೆದಿರುವರು?

ಸುಳ್ಳು ಜಾತಿ ಸರ್ಟಿಫಿಕೇಟನ್ನು ಪಡೆದು ವೈದ್ಯಕೀಯ ಕಾಲೇಜುಗಳಲ್ಲಿ ಹಾಗೂ ಇಂಜನಿಯರಿಂಗ್ ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು: (ವಿವರಗಳನ್ನೊದಗಿಸುವುದು)

ಇ) ಸುಳ್ಳು ಜಾತಿ ಸರ್ಟಿಫಿಕೇಟನ್ನು ಪಡೆದವರನ್ನು ಯಾವ ರೀತಿ ಪತ್ತೆ ಹಚ್ಚಲಾಗುತ್ತಿದೆ: ಇದಕ್ಕೆ ಸರ್ಕಾರದಲ್ಲಿ ಯಾವುದಾದರು ಸ್ಪೆಶಲ್ ಬ್ರಾಂಚ್ ಇದೆಯೇ ಇಲ್ಲದಿದ್ದರೆ ಇವುಗಳನ್ನು ಪತ್ತೆಹಚ್ಚಲು ಸರ್ಕಾರ ಯಾವರೀತಿ ಯೋಚನೆ ಮಾಡುತ್ತದೆ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) 1981 ರಿಂದ 1991ನೇ ಮಾರ್ಚ್ ಅಂತ್ಯದವರೆಗೆ 756 ವ್ಯಕ್ತಿಗಳು ಸುಳ್ಳು ಜಾತಿ ಸರ್ಟಿಫಿಕೇಟ್‌ಗಳನ್ನು ಪಡೆದಿರುತ್ತಾರೆ.

ಆ) ಸರ್ಕಾರದಲ್ಲಿ ಉದ್ಯೋಗ ಪಡೆದಿರುವವರ ಸಂಖ್ಯೆ - 644

ವೈದ್ಯಕೀಯ ಕಾಲೇಜಿನಲ್ಲಿ ಪ್ರವೇಶ ಪಡೆದಂತಹ ವಿದ್ಯಾರ್ಥಿಗಳ ಸಂಖ್ಯೆ -10

ಇಂದಿನಿಯರಿಂಗ್ ಕಾಲೇಜಿನಲ್ಲಿ ಪ್ರವೇಶ ಪಡೆದಂತಹ ವಿದ್ಯಾರ್ಥಿಗಳ ಸಂಖ್ಯೆ-6

(ವಿವರಗಳನ್ನು ಅನುಬಂಧ-ಎ ನಲ್ಲಿ ನೀಡಲಾಗಿದೆ)

ಇ) ಸಾರ್ವಜನಿಕರಿಂದ, ರಾಜ್ಯಸರ್ಕಾರ, ಕೇಂದ್ರ ಸರ್ಕಾರ ಮತ್ತು ಸಾರ್ವಜನಿಕ ಉದ್ದಿಮೆಗಳಿಂದ ಸುಳ್ಳು ಜಾತಿ ಪತ್ರಗಳ ಬಗ್ಗೆ ದೂರುಗಳು ಬಂದಾಗ, ನಾಗರೀಕ ಹಕ್ಕು ಜಾರಿ ಘಟಕದವರು ವಿಚಾರಣೆ ಕೈಗೊಳ್ಳುತ್ತಾರೆ, ಮತ್ತು ಸುಳ್ಳು ಜಾತಿ ಪತ್ರಗಳನ್ನು ಪತ್ತೆ ಮಾಡುತ್ತಾರೆ.

ಅನುಬಂಧ – 'ಎ'

ವೈದ್ಯಕೀಯ ವಿದ್ಯಾರ್ಥಿಗಳು :

1. ಕುಮಾರಿ. ಶಕುಂತಲ ಪೂಜಾರಿ,
   ಡಿ: ಓ ಶ್ರೀ ಲಿಂಗಪ್ಪ ಪೂಡಾರಿ,
   ಮೊದಲನೆ ಎಂ.ಬಿ.ಬಿ.ಎಸ್. ವಿದ್ಯಾರ್ಥಿ,
   ಶಾಹಬಾದ್, ಚಿತ್ತಪುರ ತಾಲ್ಲೂಕ್,
   ಗುಲ್ಬರ್ಗ ಜಿಲ್ಲೆ,
2. ಶ್ರೀ ಪಾಲಾಕ್ಷಪ್ಪ,
   ಎಸ್. ಓ, ಸಿ.ಎಂ. ಲಿಂಗಪ್ಪ,

ವೈದ್ಯಕೀಯ ವಿದ್ಯಾರ್ಥಿ,
ಬೆಂಗಳೂರು.

3. ಕುಮಾರಿ, ಕೆ.ವಿ. ಮಂಜುಳಾ,
ಡಿ. ಓ ಕೆ. ವೀರಣ್ಣ,
ವೈದ್ಯಕೀಯ ವಿದ್ಯಾರ್ಥಿ,
ಬೆಂಗಳೂರು.

4. ಶ್ರೀ ಎನ್. ಆಕಾಶ್,
ಮೊದಲನೆ ಎಂ.ಬಿ.ಬಿ.ಎಸ್. ವಿದ್ಯಾರ್ಥಿ,
ಬೆಂಗಳೂರು.

5. ಶ್ರೀ ಎಸ್.ಆರ್. ರೇವಣ್ಣ,
ಎಸ್.ಓ ಎಸ್. ರಾಮಯ್ಯ,
ಮೊದಲನೆ ಎಂ.ಬಿ.ಬಿ.ಎಸ್. ವಿದ್ಯಾರ್ಥಿ
ಬೆಂಗಳೂರು.

6. ಕುಮಾರಿ ವಿ. ಮೀನಾಕ್ಷಿ,
ಡಿ.ಓ ಕೇಶವಮೂರ್ತಿ,
ಮೊದಲನೆ ಎಂ.ಬಿ.ಬಿ.ಎಸ್. ವಿದ್ಯಾರ್ಥಿ,
ಬೆಂಗಳೂರು-71.

7. ಕುಮಾರಿ ಕೆ. ವಾಣಿಕುಮಾರಿ,
ಡಿ.ಓ ಶಾಂತರಾಮ್,
ವೈದ್ಯಕೀಯ ವಿದ್ಯಾರ್ಥಿ,
ಕೆ.ಎಂ.ಸಿ. ಹುಬ್ಬಳ್ಳಿ,

8. ಶ್ರೀ ಸಿ.ವಿ. ಸುರೇಶ್ ಬಾಬು,
ವಿದ್ಯಾರ್ಥಿ, ಪಶುವೈದ್ಯ ಕಾಲೇಜು,
ಹೆಬ್ಬಾಳ,
ಬೆಂಗಳೂರು.

9. ಶ್ರೀ ಬಿ.ಎನ್. ವೀರನಾಯಕ್,
4ನೇ ಬಿ.ವಿ.ಎಸ್.ಸಿ. ಪಶುವೈದ್ಯ ಕಾಲೇಜು,
ಹೆಬ್ಬಾಳ,
ಬೆಂಗಳೂರು.

10. ಶ್ರೀ ಬಿ.ಎನ್. ಶಿವರಾಮ್,
ವಿದ್ಯಾರ್ಥಿ, ಪಶುವೈದ್ಯ ಕಾಲೇಜು,
ಹೆಬ್ಬಾಳ,
[illegible]

ಇಂಜಿನಿಯರಿಂಗ್ ವಿದ್ಯಾರ್ಥಿಗಳು:

1. ಶ್ರೀ ಜಿ.ಎಸ್. ಚಿತ್ರಪ್ಪ,
   ಎಸ್.ಓ,ಜಿ. ಶಿವಣ್ಣಪ್ಪ,
   ಬಿ.ಡಿ.ಟಿ. ಕಾಲೇಜು,
   ದಾವಣಗೆರೆ,
   ಚಿತ್ರದುರ್ಗ ಜಿಲ್ಲೆ.
2. ಶ್ರೀ ಟಿ.ಎನ್. ವೆಂಕಟೇಶ್ವರ ರಾವ್,
   ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜು,
   ಬೆಂಗಳೂರು.
3. ಶ್ರೀ ಸತೀಶ ರಾಮಕೃಷ್ಣ ರಾವ್,
   ಹಾಸನ ಮಲ್ನಾಡ್ ಇಂಜಿನಿಯರಿಂಗ್ ಕಾಲೇಜು,
   ವಿದ್ಯಾರ್ಥಿ.
4. ಶ್ರೀ ಅನಿಲ್ ವಿಠಲ್ ಬರಿಕೇರಿ,
   3ನೇ ವರ್ಷದ ಬಿ.ಇ. ವಿದ್ಯಾರ್ಥಿ,
   ಗುಲ್ಬರ್ಗಾ.
5. ಕುಮಾರಿ. ಕಲ್ಪನಾ,
   ಡಿ.ಓ ರಾಧಕೃಷ್ಣ
   ವಿಜಯನಗರ ಇಂಜಿನಿಯರಿಂಗ್ ಕಾಲೇಜು,
   ಬಳ್ಳಾರಿ.
6. ಶ್ರೀ ಜಿ. ಕಿರಣ್ ಕುಮಾರ್,
   ವಿದ್ಯಾರ್ಥಿ, ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜು,
   ಮಂಡ್ಯ.

ಬೈಲ ಹೊಂಗಲ ನಗರದಲ್ಲಿ ಕಾಟೇಜ್ ಆಸ್ಪತ್ರೆ ಕಟ್ಟಡ ಸ್ಥಗಿತ.

3681 - ಶ್ರೀ ಶಿವಾನಂದ್ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವಿರೆ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ನಗರದಲ್ಲಿ ಕಟ್ಟುತ್ತಿರುವ 50 ಹಾಸಿಗೆ ಆಸ್ಪತ್ರೆ ಕಟ್ಟಡ ಅರ್ಧಕ್ಕೆ ನಿಂತ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಕಟ್ಟಡ ಕೆಲಸವನ್ನು ಪೂರ್ಣ ಮುಗಿಸಲು ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು?

ಇ) ಈ ವರ್ಷ ಸದರಿ ಕೆಲಸಕ್ಕೆ ಆಯವ್ಯಯದಲ್ಲಿ ಎಷ್ಟು ಹಣವನ್ನು ಒದಗಿಸಲಾಗಿದೆ ಮತ್ತು ಇದಕ್ಕೆ ಖರ್ಚಾದ ಹಣವೆಷ್ಟು?

ಈ) ಕಳೆದ ವರ್ಷ ಈ ಕಟ್ಟಡದ ಕೆಲಸ ಸಂಪೂರ್ಣವಾಗಿ ನಿಂತು ಹೋಗಿದ್ದ ಸಂಗತಿ ನಿಜವೇ?

ಉ) ಇಲ್ಲಿಯವರೆಗೆ ಈ ಕೆಲಸಕ್ಕೆ ಎಷ್ಟು ಹಣ ಖರ್ಚು ಆಗಿರುವುದು ಹಣಕಾಸಿನ ತೊಂದರೆಯಿಂದ ಈ ಕಟ್ಟಡದ ಕೆಲಸ ಅರ್ಧಕ್ಕೆ ನಿಂತ ಸಂಗತಿ ನಿಜವೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿದೆ.

ಆ) ಬೆಳಗಾವಿ ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗ ಗುತ್ತಿಗೆದಾರರೊಂದಿಗೆ ವ್ಯವಹರಿಸಿ ಗುತ್ತೇದಾರರು ಕೆಲಸವನ್ನು ಪ್ರಾರಂಭಿಸಲು ಒಪ್ಪಿದ್ದಾರೆ.

ಇ) 1991-92ರ ಸಾಲಿಗೆ ಈ ಕಾಮಗಾರಿಗಾಗಿ 11.00 ಲಕ್ಷ ರೂ.ಗಳನ್ನು ಇರಿಸಲಾಗಿದೆ. ಜುಲೈ 1991ರ ಅಂತ್ಯದವರೆಗೆ ರೂ. 0.06 ಲಕ್ಷಗಳನ್ನು ಖರ್ಚು ಮಾಡಿದೆ.

ಈ) ನಿಜವಲ್ಲ 1990-91ರ ಸಾಲಿನಲ್ಲಿ ರೂ.6.93 ಲಕ್ಷಗಳನ್ನು ಕಟ್ಟಡ ನಿರ್ಮಾಣಕ್ಕಾಗಿ ಖರ್ಚು ಮಾಡಿದೆ.

ಉ) ಜುಲೈ 1991ರ ಅಂತ್ಯದವರೆಗೆ ಒಟ್ಟು 20.92 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ಹಣ ಕಾಸಿನ ತೊಂದರೆಯಿಂದ ಕಟ್ಟಡದ ಕೆಲಸ ಅರ್ಧಕ್ಕೆ ನಿಂತಿರುವುದಿಲ್ಲ.

ವಿಜಯ ನಗರ ಉಕ್ಕು ಕಾರ್ಖಾನೆಯನ್ನು ಜಂಟಿ ವಲಯದಲ್ಲಿ ಸ್ಥಾಪಿಸುವ ಬಗ್ಗೆ

3781- ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಬಾರಿ ಮತ್ತು ಮದ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ವಿಜಯನಗರ ಉಕ್ಕು ಕಾರ್ಖಾನೆಯನ್ನು ಜಂಟಿ ವಲಯದಲ್ಲಿ ಸ್ಥಾಪಿಸಲು ಕೇಂದ್ರ ಸರ್ಕಾರವು ಅನುಮತಿ ನೀಡಿದೆಯೇ?

ಆ) ಜಂಟಿ ವಲಯದಲ್ಲಿ ಈ ಯೋಜನೆಯನ್ನು ಅನುಮತಿ ಕೋರಿ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಅಭಿವೃದ್ಧಿ ನಿಗಮ ಕಳುಹಿಸಿದ ಸೂಚನೆಯನ್ನು ಕೇಂದ್ರ ಸರ್ಕಾರವು ಒಪ್ಪಿಕೊಳ್ಳಲಾಗಿದೆಯೇ.

ಇ) ಈ ಯೋಜನೆಗೆ ಎಷ್ಟು ಕೋಟಿ ರೂ. ತಗಲುವುದು ಮತ್ತು ಇನ್ನು ಎಷ್ಟು ದಿವಸಗಳಲ್ಲಿ ಈ ಕೆಲಸ ಪ್ರಾರಂಭವಾಗುವುದು.

ಈ) ಕೂಡಲೇ ಈ ಯೋಜನೆಯನ್ನು ಪ್ರಾರಂಭಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು ಮತ್ತು ಈ ವರ್ಷ ಎಷ್ಟು ಹಣ ಖರ್ಚು ಮಾಡಬೇಕೆಂದು ನಿಗಧಿಪಡಿಸಲಾಗಿದೆ?

ಶ್ರೀಮತಿ ಮನೋರಮ ಮದ್ವರಾಜ್ (ಭಾರಿ ಮತ್ತು ಮದ್ಯಮ ಕೈಗಾರೀಕಾ ಸಚಿವರು);

ಅ) ಭಾರತ ಸರ್ಕಾರದ ತನ್ನ ನೂತನ ಕೈಗಾರಿಕಾ ನೀತಿಯ ಅಡಿಯಲ್ಲಿ ಉಕ್ಕು ಸ್ಥಾವರಗಳನ್ನು ಪರವಾನಗಿರಹಿತ ಕೈಗಾರಿಕೆ ಎಂದು ತಿಳಿಸಿದೆ.

ಆದಕಾರಣ, ಈ ಪ್ರಸ್ತಾವನೆಗೆ ಕೇಂದ್ರ ಸರ್ಕಾರದ ಅನುಮತಿ ಪಡೆಯುವ ಅಗತ್ಯವಿಲ್ಲ. ಈ ಘಟಕದ ಸ್ಥಾಪನೆಯನ್ನು ರಾಜ್ಯ ಸರ್ಕಾರದ ಕೆಎಸ್‌ಐಐಡಿಸಿ ನಿಗಮಕ್ಕೆ ವಹಿಸಿರುತ್ತದೆ.

ಆ) ಮೇಲಿರುವಂತೆ.

ಇ) ವಿಜಯನಗರ ಉಕ್ಕು ಸ್ಥಾವರದ ಮೊದಲನೇ ಹಂತಕ್ಕೆ ರೂ. 2000 ಕೋಟಿಗಳು ಆಗಬಹುದೆಂದು ಮತ್ತು ಅಂತಿಮ ಘಟ್ಟಕ್ಕೆ (3 ಎಂಟಿಪಿಎ ಸಾಮರ್ಥ್ಯ ತಲುಪಿದಾಗ) ರೂ 5000 ಕೋಟಿಗಳು ಆಗಬಹುದೆಂದು ಅಂದಾಜು ಮಾಡಲಾಗಿದೆ. ಈ ಯೋಜನೆಗೆ ಸಂಬಂಧಪಟ್ಟ ಎಲ್ಲಾ ತರಪುಗಳು ಬಂದ 36 ರಿಂದ 48 ತಿಂಗಳುಗಳ ಒಳಗಾಗಿ ಉತ್ಪಾದನಾ ಕಾರ್ಯವನ್ನು ಪ್ರಾರಂಭಿಸಲಾಗುವುದು. ಈ ಯೋಜನೆಯು 1994-95ಇಸವಿಯ ಒಳಗೆ ಉತ್ಪಾದನಾ ಕಾರ್ಯಕ್ರಮವನ್ನು ಪ್ರಾರಂಭಿಸಲು ಊಹಿಸಲಾಗಿದೆ.

ಎ) ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಆರ್ಥಿಕ ಆಯುಕ್ತರು ಹಣಕಾಸು ಇಲಾಖೆ, ಆಯುಕ್ತರು ಮತ್ತು ಕಾರ್ಯದರ್ಶಿಗಳಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಕೆಎಸ್ಐಐಡಿಸಿ ಮತ್ತು ಶ್ರೀ ರವಿರೂಯ ಶ್ರೀ ವೆಂಕಟೇಶನ್, ಶ್ರೀ ದ್ವಾರಕಾನಾಥ್ ಡಾ: ಇ.ಆರ್. ಚಂದ್ರಶೇಖರ್ ಇವರುಗಳನ್ನೊಳಗೊಂಡಂತೆ ಒಂದು ಯೋಜನಾ ಸಮಿತಿಯನ್ನು ರಚಿಸಲಾಗಿ ಇದು ಆಗಿಂದಾಗ್ಗೆ ಸಭೆ ಸೇರಿ ಈ ಘಟಕದ ಬಗ್ಗೆ ಕೂಲಂಕುಷವಾಗಿ ಚರ್ಚಿಸುತ್ತಿರುತ್ತದೆ. ಹಾಗೂ ಈ ಘಟಕವನ್ನು ಸ್ಥಾಪಿಸುವ ಬಗ್ಗೆ ನಿರ್ಧಾರಗಳನ್ನು ಕೈಗೊಳ್ಳಲಿದೆ.

ಬಿ) ಶ್ರೀ ಇ.ಆರ್. ಚಂದ್ರಶೇಖರ್ ಮಾಜಿ ಉಪಾಧ್ಯಕ್ಷರು ಎಸ್ಎಐಎಲ್ ಮತ್ತು ಮಾಜಿ ಕಾರ್ಯ ನಿರ್ವಾಹಕ ನಿರ್ದೇಶಕರು, ಬಿಲ್ಲಾಯ್ ಸ್ಟೀಲ್ ರವರನ್ನು ಈ ಯೋಜನೆಯ ಕಾರ್ಯ ನಿರ್ವಾಹಕರಾಗಿ ನೇಮಿಸಲಾಗಿದೆ.

ಸಿ) ಈ ಘಟಕಕ್ಕೆ ಚೀನಾ ದೇಶದ ತಾಂತ್ರಿಕ ಸಹಯೋಗದ ನೆರವನ್ನು ಪಡೆಯಲಾಗುತ್ತಿದೆ.

ಡಿ) ಮೆಕಾನ್ (ಭಾರತ ಸರ್ಕಾರದ ಉದ್ದಿಮೆ) ಎಂಬ ಸಂಸ್ಥೆಯಿಂದ ಟೆಕ್ನೋ ಎಕಾನಾಮಿಕ್ ಫಿಸಿಬಿಲಿಟಿ ರಿಪೋರ್ಟನ್ನು ಪಡೆಯಲಾಗುತ್ತಿದೆ. ಈ ವರದಿಯು ಇನ್ನೂ ಕಲವೇ ವಾರಗಳಲ್ಲಿ ಪಡೆಯುವ ನಿರೀಕ್ಷೆಯಿದೆ.

ಇ) ಭಾರತ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುವ ಮೆ: ರೈಟ್ಸ್ ಎಂಬ ಸಂಸ್ಥೆಗೆ ಕೆಎಸ್ಐಐಡಿಸಿ ಯು ಕಲ್ಲಿದ್ದಲು, ಸ್ಟೀಮ್ ಕೋಲ್ ಖನಿಜಗಳನ್ನು ರೈಲು ಹಾಗೂ ಸಮುದ್ರ ಮಾರ್ಗಗಳಲ್ಲಿ ಕೊಂಡೊಯ್ಯುವ ಬಗ್ಗೆ ಒಂದು ಸವಿಸ್ತರವಾದ ವರದಿಯನ್ನು ಪಡೆಯಲಾಗಿದೆ.

ಎಫ್) ರಾಜ್ಯ ಸರ್ಕಾರವು ಸುಮಾರು ರೂ. 5 ಕೋಟಿಗಳನ್ನು ಪ್ರಸ್ತುತ ವರ್ಷದಲ್ಲಿ ಈ ಘಟಕಕ್ಕೆ ವೆಚ್ಚ ಮಾಡುವ ನಿರೀಕ್ಷೆಯಿದೆ.

ಹುಬ್ಬಳ್ಳಿ ಉದ್ಯೋಗ ವಿನಿಮಯ ಕಛೇರಿಯ ಬಗ್ಗೆ.

3693 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಕಾರ್ಮಿಕ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ?

ಅ) ಹುಬ್ಬಳ್ಳಿ ಉದ್ಯೋಗ ವಿನಿಮಯ ಕಛೇರಿಯಲ್ಲಿ ಉದ್ಯೋಗದ ಸಲುವಾಗಿ ನೋಂದಣಿ ಮಾಡಿಸಿಕೊಂಡಿರುವ ಅಭ್ಯರ್ಥಿಗಳ ಸಂಖ್ಯೆ ಎಷ್ಟು?

ಆ) ಸರ್ಕಾರದ ವಿವಿಧ ಮಂಡಳಿ ಮತ್ತು ನಿಗಮ ಹಾಗೂ ಇಲಾಖೆಗಳಿಂದ ವಿನಿಮಯ ಕೇಂದ್ರಕ್ಕೆ ಜಾಹೀರಾತುಗಳನ್ನು ಕಳುಹಿಸಿಕೊಡುತ್ತಿದ್ದರೂ ಈ ಬಗ್ಗೆ ಅಭ್ಯರ್ಥಿಗಳಿಗೆ ಯಾವುದೇ ಮಾಹಿತಿಯನ್ನು ನೀಡದೆ ತಮಗೆ ಬೇಕಾದವರಿಗೆ ಸಂದರ್ಶನಗಳನ್ನು ಕಳುಹಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಸರ್ಕಾರ ಇನ್ನು ಮುಂದೆ ಉದ್ಯೋಗ ವಿನಿಮಯ ಕೇಂದ್ರಕ್ಕೆ ನೇಮಕಾತಿ ಜಾಹೀರಾತುಗಳನ್ನು ಕಳುಹಿಸದೇ ವೃತ್ತ ಪತ್ರಿಕೆಗಳ ಮೂಲಕ ಜಾಹೀರಾತು ನೀಡಿದರೆ ನಿರುದ್ಯೋಗಿಗಳಿಗೆ ಸಹಾಯವಾಗುವುದಿಲ್ಲವೆ?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):

ಅ) 94,381 (ಜೂನ್ 1991ರ ಅಂತ್ಯದ ವರೆಗೆ)

ಆ) ಇಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಕೃಷಿ ಕಾರ್ಮಿಕರ ಸಂಖ್ಯೆ.

3694 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿರುವ ಕೃಷಿ ಮತ್ತು ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು?

ಆ) ಇವರುಗಳಿಗೆ ವಿಮಾ ಯೋಜನೆಯನ್ನು ಪ್ರಾರಂಭಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಇ) ಇದ್ದಲ್ಲಿ ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):

ಅ) 1981ರ ಜನಗಣತಿಯ ವರದಿಯ ಮೇರೆಗೆ ರಾಜ್ಯದಲ್ಲಿ 36,55,000 ಕೃಷಿ ಕಾರ್ಮಿಕರು ಮತ್ತು 8,16,900ಕಾರ್ಮಿಕರು ಕೈಗಾರಿಕೆಗಳಲ್ಲಿ ಮತ್ತು ಇತರೇ ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿರುತ್ತಾರೆ.

ಆ) ಇವರುಗಳಿಗೆ ವಿಮಾ ಯೋಜನೆ ಪ್ರಾರಂಭಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

ಇ) ಉಪ ಪ್ರಶ್ನೆ "ಆ" ಯಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ದ.ಕ. ಜಿಲ್ಲೆಯಲ್ಲಿ ವೈದ್ಯರ ಕೊರತೆ.

3708 - ಶ್ರೀ ಬಿ. ರಾಮನಾಥ್ ರೈ (ಬಂಟ್ವಾಳ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಎಷ್ಟು ಆರೋಗ್ಯ ಕೇಂದ್ರಗಳಲ್ಲಿ ವೈದ್ಯರುಗಳ ಕೊರತೆ ಇದೆ?

ಆ) ಸಾಕಷ್ಟು ಸ್ಥಳಗಳಲ್ಲಿ ವೈದ್ಯರುಗಳ ನೇಮಕಾತಿಯಾಗಿದ್ದರೂ ಕೂಡ ಅವರಲ್ಲಿ ಕೆಲಸಕ್ಕೆ ಸೇರ್ಪಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಸರ್ಕಾರವು ಈ ಬಗ್ಗೆ ಕೈಗೊಂಡ ಕ್ರಮವೇನು?

ಈ) ಈ ಪೈಕಿ ಬಂಟ್ವಾಳ ತಾಲ್ಲೂಕಿನ ಆಸ್ಪತ್ರೆಯಲ್ಲಿ ಎಷ್ಟು ವೈದ್ಯರುಗಳ ಕೊರತೆ ಇದೆ. ದನ್ನು ಯಾವಾಗ ತುಂಬಲಾಗುವುದು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲೆಯ 10 ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಹುದ್ದೆ ಖಾಲಿ ಇದೆ.

ಆ) ಹೌದು.

ಇ) ನೇಮಿಸಿದ ಸ್ಥಳದಲ್ಲಿ ಕೆಲಸಕ್ಕೆ ಹಾಜರಾಗದೆ ಇರುವ ವೈದ್ಯರುಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

ಈ) ಬಂಟ್ವಾಳ ತಾಲ್ಲೂಕು ಆಸ್ಪತ್ರೆಯಲ್ಲಿ ಎರಡು ಹುದ್ದೆ ಖಾಲಿ ಇದ್ದು ಅವುಗಳನ್ನು ಶೀಘ್ರದಲ್ಲಿಯೇ ತುಂಬಲಾಗುವುದು.

ರಾಜ್ಯದಲ್ಲಿರುವ ಅಂಗವಿಕಲರ ಸಂಖ್ಯೆ

3713 - ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ಎಷ್ಟು ಅಂಗವಿಕಲರಿದ್ದಾರೆ?

ಆ) ಇವರ ಉನ್ನತಿಗಾಗಿ ಸರ್ಕಾರವು ಯಾವುದಾದರೂ ಯೋಜನೆ ತಯಾರುಮಾಡಿದೆಯೇ?

ಇ) ಹಾಗಿದ್ದಲ್ಲಿ, ಇವರ ರೂಪರೇಷೆಗಳೇನು?

ಈ) ದೈಹಿಕವಾಗಿ ಅಸಮರ್ಥರಾಗಿರುವ ವಿದ್ಯಾವಂತ ವ್ಯಕ್ತಿಗಳಿಗೆ ಸರ್ಕಾರದ ಯಾವ ಗುಂಪಿನ ಹುದ್ದೆಗಳಿಗೆ ಮೀಸಲಾತಿ ಸೌಲಭ್ಯವನ್ನು ಒದಗಿಸಲಾಗುವುದೇ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) ಅಂಗವಿಕಲರ ಸಮೀಕ್ಷೆ ಇನ್ನೂ ಮುಗಿದಿಲ್ಲವಾದ್ದರಿಂದ ಮಾಹಿತಿ ಲಭ್ಯವಿಲ್ಲ.

ಆ) ಹೌದು.

ಇ) ಪಟ್ಟಿ ಲಗತ್ತಿಸಲಾಗಿದೆ.

ಈ) ಅಂಗವಿಕಲರಿಗೆ ಗುಂಪು 'ಸಿ' ಮತ್ತು 'ಡಿ' ಹುದ್ದೆಗಳಲ್ಲಿ ಶೇಕಡ 4 ರಷ್ಟು ಮೀಸಲಾತಿ ಸೌಲಭ್ಯ ಒದಗಿಸಲಾಗಿದೆ.

ಅನುಬಂಧ

ಅಂಗವಿಕಲರಿಗಾಗಿ ರಾಜ್ಯ ಸರ್ಕಾರದ ವಿವಿದ ಯೋಜನೆಗಳ ಪಟ್ಟಿ:

1) ಅಂಗವಿಕಲ ವಿದ್ಯಾರ್ಥಿಗಳಿಗಾಗಿ ವಿಶೇಷ ಶಾಲೆಗಳು,

2) ಶಿಕ್ಷಣ, ತರಬೇತಿ, ಪುನರ್ವಸತಿ ಯೋಜನೆ ಹಾಗೂ ಅಂಧರಿಗಾಗಿ ಕೈಗಾರಿಕಾ ತರಬೇತಿ ಕೇಂದ್ರ,

3) ಅಂಗವಿಕಲ ನೌಕರರು ಮತ್ತು ತರಬೇತಿದಾರರಿಗೆ ವಸತಿ ನಿಲಯ,

4) ಅಂಗವಿಕಲರಿಗೆ ಮಾಸಿಕ ರೂ. 50-00ಗಳ ಪೋಷಣಾ ಭತ್ಯೆ,

5) ಅಂಗವಿಕಲರಿಗಾಗಿ ಸಾಧನ ಸಲಕರಣೆಗಳನ್ನು ಕೊಳ್ಳಲು ಆರ್ಥಿಕ ನೆರವು ಮತ್ತು ಅಂಗವಿಕಲರಿಗೆ ವಿದ್ಯಾರ್ಥಿ _ ವೇತನ.

6) ಸ್ವಯಂ ಉದ್ಯೋಗಕ್ಕಾಗಿ ಕರ್ನಾಟಕ ಹಣಕಾಸು ನಿಗಮದ ಮೂಲಕ ರೂ.25,000-00 ರ ತನಕ ಶೇಕಡ 25ರಷ್ಟು ರಿಯಾಯಿತಿಯಲ್ಲಿ ಸಾಲ ಸೌಲಭ್ಯ ವಿತರಣೆ,

7) ಬ್ರೈಲ್ ಮುದ್ರಣಾಲಯ,

8) ವೃದ್ಧರು ಮತ್ತು ಅಬಲರಿಗಾಗಿ ಸಮಾಜ ಸೇವಾ ಸಂಕೀರ್ಣ.

ಸೇಡಂ ನಗರದ ಆಸ್ಪತ್ರೆಯ ಔಷಧಿಗಳಿಗಾಗಿ ಮಂಜೂರು ಮಾಡುವ ಹಣ

2726 - ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಲಿಗೆ ದಯವಿಟ್ಟು ಉತ್ತರಿಸುವಿರೆ ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರತಿ ತಿಂಗಳು ಚಿಕಿತ್ಸೆ ಪಡೆಯುತ್ತಿರುವ ಹೊರ ರೋಗಿಗಳ ಮತ್ತು ಒಳರೋಗಿಗಳ ಸಂಖ್ಯೆ ಎಷ್ಟು ?

ಆ) ಈ ಆಸ್ಪತ್ರೆಯಲ್ಲಿ ಪ್ರತಿ ತಿಂಗಳು ಔಷಧಿಗಾಗಿ ಖರ್ಚು ಮಾಡುತ್ತಿರುವ ಹಣವೆಷ್ಟು? ಹಾಗೂ ಈ ಔಷಧಿಗಳನ್ನು ಖರೀದಿ ಮಾಡುವವರು ಜಿಲ್ಲಾ ಪರಿಷತ್ತಿನವರೋ ಅಥವಾ ಸರ್ಕಾರದವರೋ ?

ಇ) ಸರ್ಕಾರದ ಔಷಧಿಗಳಿಗಾಗಿ ಮಂಜೂರು ಮಾಡುವ ಹಣವು ಪ್ರತಿ ತಿಂಗಳು ಚಿಕಿತ್ಸೆ ಪಡೆಯುವ ರೋಗಿಗಳಿಗೆ ಸಕಾಗುವುದೇ ?

ಈ) ಒಂದು ವೇಳೆ ಸಾಕಾದ ಪಕ್ಷದಲ್ಲಿ ಬಡ ರೋಗಿಗಳ ಆರೋಗ್ಯಕ್ಕಾಗಿ ಸರ್ಕಾರವು ಮಾಡುವ ವ್ಯವಸ್ಥೆಯೇನು ? ಹಾಗೂ ಎಂದಿನಿಂದ ಮಾಡಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹೊರ ರೋಗಿಗಳು - 3638

ಒಳ ರೋಗಿಗಳು - 69

ಆ) ಪ್ರತಿ ತಿಂಗಳು ಈ ಆಸ್ಪತ್ರೆಯಲ್ಲಿ ಔಷಧಿಗಾಗಿ ಸರಾಸರಿ ರೂ. 9000 ಹಣ ಖರ್ಚು ಮಾಡಲಾಗುತ್ತಿದೆ. 90-91ನೇ ಸಾಲಿನಲ್ಲಿ ಜಿಲ್ಲಾ ಪರಿಷತ್‌ನಿಂದ ಔಷಧಿ ಖರೀದಿಸಲಾಗಿದೆ. ಈ ಸಾಲಿನಲ್ಲಿ ಶೇಕಡಾ 60ರಷ್ಟು ಸರ್ಕಾರದಿಂದಲೂ ಶೇಕಡಾ 40ರಷ್ಟು ಜಿಲ್ಲಾ ಪರಿಷತ್‌ನಿಂದಲೂ ಖರೀದಿ ಮಾಡಲಾಗುವುದು.

ಇ) ಇಲ್ಲ.

ಈ) ಅವಶ್ಯಕತೆ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶಕರು ಅಂದಾಜು ಮಾಡಿದ್ದು, ಆ ಆಧಾರದ ಮೇಲೆ ಆಯವ್ಯಯದಲ್ಲಿ ಹಣದ ಲಭ್ಯತೆಯನ್ನು ಅನುಸರಿಸಿ ಹೆಚ್ಚಿಗೆ ಹಣವನ್ನು ಒದಗಿಸಲಾಗುವುದು.

ಚಿಂಚೋಳಿ ತಾಲ್ಲೂಕಿನ ವಿರಾಣ್ಯ ಗ್ರಾಮದ ಗೈರಾಣ ಭೂಮಿಯಲ್ಲಿ ರೈತರು ಉಪಯೋಗಿಸುವ ಹಾದಿಯನ್ನು ಗುತ್ತಿಗೆ ನೀಡಿದ ಬಗ್ಗೆ.

3718 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಲಿಗೆ ದಯವಿಟ್ಟು ಉತ್ತರಿಸುವಿರೆ ?

ಅ) ಸರ್ಕಾರಿ ಗೈರಾಣ ಭೂಮಿ ಶಹಾಬಾದ ಗಣಿಗಳ ಪರ್ಸಿ ತೆಗೆಯಲು ಕಾನೂನು ಪ್ರಕಾರ 4 ಎಕರೆ 37 ಗುಂಟೆಗಿಂತಲೂ ಹೆಚ್ಚು ಗುತ್ತಿಗೆ ಮಂಜೂರು ಮಾಡಲು ನಿರ್ಬಂಧವಿದೆಯೇ ?

ಆ) ಭೂಮಿತಿ ಹಿಡುವಳಿ ತಕ್ಕಮಿತಿಯಲ್ಲಿ ಭೂಮಿ ಇದ್ದರೆ ಅವರಿಗೆ ಪುನಃ ಹೆಚ್ಚಿನ ಭೂಮಿ ಗುತ್ತಿಗೆ ಆಧಾರದ ಮೇಲೆ ಕೊಡಬಹುದೇ ?

ಇ) ಸರ್ಕಾರಿ ಗೈರಾಣ ಭೂಮಿಯಲ್ಲಿ ರೈತರಿಗೆ ಅವರ ಎತ್ತು ಬಂಡಿಗಳನ್ನು ಹೊಗಿ ಬರಲು ಪುರಾತನ ಕಾಲದಿಂದ ಹಾದಿ ಇದ್ದರೆ ಆ ಹಾದಿಯನ್ನು ಕಡೆಗಣಿಸಿ ಗುತ್ತಿಗೆ ಆಧಾರದ ಮೇಲೆ ಕೊಡಬಹುದೇ ?

ಈ) ಮಕ್ಕಳು ಅಪ್ರಾಪ್ತರು ಇರುವಾಗ ಅವರ ಹೆಸರಿನಲ್ಲಿ ಖರೀದಿ ಮಾಡಿದ ಭೂಮಿ ತಂದೆ ಹಿಡುವಳಿಯಲ್ಲಿ ಸೇರುವುದಿಲ್ಲವೇ?

ಉ) ಈ ಪ್ರಕಾರ ಕಾನೂನು ಬಾಹಿರವಾದರೆ ಗುಲ್ಬರ್ಗ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಮಿರ್‍ಯಾಣ ಗ್ರಾಮದ ಸರ್ವೆ ನಂ. 149:1 ರಲ್ಲಿ 8 ಎಕರೆ ಶ್ರೀ ಕಾಶಿನಾಥ್ ಎಂಬುವರರಿಗೆ ಅವರ ಅಪ್ರಯಸ್ಥ ಮಗನಿಗೆ ಕೊಡಿ ಹೆಚ್ಚು ಭೂಮಿ ಇದ್ದರೆ ಸಹ ಪುರಾತನ ಕಾಲದಲ್ಲಿ ಇರುವ ಹಾದಿಯನ್ನು ಕಡೆಗಣಿಸಿ ಸ್ಥಳೀಯ ಅಧಿಕಾರಿಗಳ ವರದಿಯನ್ನು ಲೆಕ್ಕಿಸದೆ ಗುತ್ತಿಗೆ ನೀಡಿದ್ದೇಕೆ?

ಊ) ಕಾನೂನು ಪ್ರಕಾರ ಇದನ್ನು ಸರಿಪಡಿಸಬಹುದೆ?

ಋ) ಮಿರ್‍ಯಾಣ ಗ್ರಾಮದ ರೈತರಿಗೆ ಈ ಹಾದಿಯನ್ನು ಸರ್ಕಾರಿ ಹಾದಿಯೆಂದು ಘೋಷಿಸಿ ರೈತರಿಗೆ ತೊಂದರೆಯಾಗದಂತೆ ವ್ಯವಸ್ಥೆ ಮಾಡುವುದು ಯಾವಾಗ.

ಶ್ರೀ ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು)

ಅ) ಇಲ್ಲ.

ಆ) ಕಲ್ಲುಗಣಿ ಗುತ್ತಿಗೆ ನೀಡುವುದಕ್ಕೆ ಭೂಮಿತಿ ಹಿಡುವಳಿ ಮಿತಿ ಅನ್ವಯಿಸುವುದಿಲ್ಲ. ಆದ್ದರಿಂದ ಕೊಡಬಹುದು.

ಇ) ಅಂತಹ ಸಂದರ್ಭದಲ್ಲಿ ಸಾರ್ವಜನಿಕರಿಗೆ ಅನಾನುಕೂಲವಾಗದಂತೆ ಕಲ್ಲುಗಣಿ ಮಾಡಲು ಷರತ್ತುಗಳನ್ನು ಒಳಗೂಡಿಸಿ ಗುತ್ತಿಗೆ ನೀಡಬಹುದು.

ಇ) ಕಲ್ಲುಗಣಿ ಗುತ್ತಿಗೆಗೆ ಭೂ ಹಿಡುವಳಿ ಮಿತಿ ಅನ್ವಯಿಸುವುದಿಲ್ಲವಾದ್ದರಿಂದ ಇದ್ದಕೆ ಉತ್ತರ ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಸರಿಪಡಿಸುವುದು.

ಋ) ರೈತರಿಗೆ ಹಾದಿಗೆ ತೊಂದರೆಯಾಗಿದ್ದರೆ ಆ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆಮುಕೊಳ್ಳಲು ಸೂಚಿಸಲಾಗುವುದು.

ಚಿತ್ತಾಪುರ ತಾಲ್ಲೂಕಿನ ಅಳ್ಳಹಳ್ಳಿ ಆಯುರ್ವೇದಿಕ ಆಸ್ಪತ್ರೆಯ ವೈದ್ಯಾಧಿಕಾರಿಯ ಗೈರು ಹಾಜರಿ.

3715 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಅಳ್ಳಹಳ್ಳಿ ಆಯುರ್ವೇದ ಆಸ್ಪತ್ರೆಯ ವೈದ್ಯಾಧಿಕಾರಿಯವರ ಗೈರು ಹಾಜರಿಯಿಂದ ಗ್ರಾಮದ ಜನರು ಚಿಕಿತ್ಸೆಗಾಗಿ ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಬಂದಿದ್ದಲ್ಲಿ, ಬದಲಿ ವ್ಯವಸ್ಥೆ ಮಾಡದಿರಲು ಕಾರಣವೇನು. ಒಂದು ಪಕ್ಷ ಅನಧಿಕೃತವಾಗಿ ಗೈರು ಹಾಜರಾಗಿದ್ದಲ್ಲಿ ಸರ್ಕಾರವು ಇವರ ಮೇಲೆ ತೆಗೆದುಕೊಂಡಿರುವ ಕ್ರಮವೇನು?

ಇ) ಕಳೆದ ಸ್ವಾತಂತ್ರ್ಯ ದಿನೋತ್ಸವದಂದು ಈ ಆಸ್ಪತ್ರೆಯಲ್ಲಿ ವೈದ್ಯಾದಿಕಾರಿಯವರು ಗೈರು ಹಾಜರಿದ್ದ ಕಾರಣವೇನು?

ಈ) ಅನಧಿಕೃತವಾಗಿ ಗೈರುಹಾಜರಿದ್ದ ಆಯುರ್ವೇದ ವೈದ್ಯಾಧಿಕಾರಿಗಳ ಮೇಲೆ ಸರ್ಕಾರವು ಕೈಗೊಂಡ ಕ್ರಮವೇನು? ಹಾಗೂ ವೈದ್ಯಾಧಿಕಾರಿಯ ಬದಲಿ ವ್ಯವಸ್ಥೆಯನ್ನು ಎಂದಿನಿಂದ ಮಾಡಲಾಗುವುದು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಇಲ್ಲ. ಡಾ: ಎನ್. ಮೋಹನ್‌ರಾವ್ ಎಂಬುವವರು ದಿನಾಂಕ 28-7-90ರಿಂದ ಸದರಿ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಆ) ಉದ್ಭವಿಸುವುದಿಲ್ಲ.

ಇ) ದಿನಾಂಕ 14-8-1991ರಂದು ಒಂದು ದಿವಸದ ಸಾಂದರ್ಭಿಕ ರಜೆ ಮಂಜೂರಾತಿಯೊಂದಿಗೆ ಹಾಗೂ ದಿನಾಂಕ 15-8-91ರಂದು ಅನುಮತಿ ರಜೆಯೊಂದಿಗೆ ತೆರಳಿದ್ದರು.

ಈ) ಉದ್ಭವಿಸುವುದಿಲ್ಲ.

ಗ್ರಾಮೀಣ ಪ್ರದೇಶಗಳಲ್ಲಿರುವ ಮಹಿಳಾ ವೈದ್ಯರು ಮತ್ತು ಸಿಬ್ಬಂದಿಗೆ ವಿಶೇಷ ಭತ್ಯೆ.

3716 - ಶ್ರೀ ಎನ್.ಜಿ. ನಾಯಕ್ (ಮೊಳಕಾಲ್ಮೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರ ?

ಅ) ಚಿತ್ರದುರ್ಗ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ವೈದ್ಯರು ಹಾಗೂ ಇತರೆ ವೈದ್ಯಕೀಯ ಸಂಬಂಧ ವರ್ಗಕ್ಕೆ ಸೇರಿದವರು ಎಷ್ಟು ಜನರಿದ್ದಾರೆ ?

ಆ) ಅವರಿಗೆ ವಿಶೇಷ ಭತ್ಯೆ ಕೊಡುವ ಯೋಜನೆ ಸರ್ಕಾರಕ್ಕೆ ಇದೆಯೇ ?

ಇ) ಹಾಗಿದ್ದಲ್ಲಿ ವಿವರಗಳನ್ನು ಒದಗಿಸುವುದು.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ)	1) ಸರ್ಕಾರಿ ವೈದ್ಯರ ಸಂಖ್ಯೆ	: 122
	2) ಇತರೆ ವೈದ್ಯಕೀಯ ಸಂಬಂಧ ವರ್ಗದವರು	: 805
	ಒಟ್ಟು	: 927

ಆ) ಹೌದು.

ಇ) ಕುಷ್ಠರೋಗ, ಮಲೇರಿಯಾ, ಫೈಲೇರಿಯಾ, ಕ್ಷಯ, ಸ್ಮಾಲ್ ಪಾಕ್ಸ್, ಯೋಜನೆ ಅಡಿಯಲ್ಲಿ ಕಾರ್ಯ ನಿರ್ವಹಿಸುವ ವೈದ್ಯಕೀಯ ಸಂಬಂಧಪಟ್ಟವರಿಗೆ ಅವರ ವೇತನದ ಶ್ರೇಣಿ ಆಧಾರದ ಮೇಲೆ ಶೇಕಡ 4 ರಷ್ಟು ವಿಶೇಷ ಭತ್ಯೆ ಕೊಡುವ ಯೋಜನೆ ಸರ್ಕಾರಿ ಆದೇಶದ ದಿನಾಂಕ 20-5-80 ರಂತೆ ಇದೆ.

ಕುಂದಾಪುರ ತಾಲ್ಲೂಕಿನ ವಿದ್ಯಾರ್ಥಿನಿಲಯಗಳಲ್ಲಿ ಸಂಖ್ಯೆ ಹೆಚ್ಚಿಸುವ ಬಗ್ಗೆ.

3689 - ಶ್ರೀ ಜಿ.ಎಸ್. ಆಚಾರ್ (ಬೈಂದೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರ ?

ಅ) ಕುಂದಾಪುರ ತಾಲ್ಲೂಕಿನ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಮತ್ತು ಹಿಂದುಳಿದ ವರ್ಗಗಳ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಸೇರ್ಪಡೆ ಸಂಖ್ಯೆ ತುಂಬಾ ಇದ್ದು ಸಂಖ್ಯೆ ಹೆಚ್ಚಿಸಲು ಬೇಡಿಕೆ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಬಂದಿದ್ದಲ್ಲಿ, ಅಲ್ಲಿ ಹೆಚ್ಚಿಗೆ ಸ್ಥಳಾವಕಾಶ ಕಲ್ಪಿಸಲು ಯಾವ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯ ಕಟ್ಟಡ.

7321 - ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ನಗರದ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿನ ಅರ್ಧಕ್ಕೆ ನಿಂತಿರುವ ಕಟ್ಟಡ ನಿರ್ಮಾಣವನ್ನು ಯಾವಾಗ ಪೂರೈಸಲಾಗುವುದು ?

ಆ) ಮೈಸೂರು ನಗರದ ಪ್ರಸಕ್ತ ಜನಸಂಖ್ಯೆಗೆ ಅನುಗುಣವಾಗಿ ಆಸ್ಪತ್ರೆಯನ್ನು ಸಂಪೂರ್ಣವಾಗಿ ಸಜ್ಜುಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು ?

ಇ) ಆಸ್ಪತ್ರೆಗೆ ಬೇಕಾಗಿರುವಂತ ನೂತನ ಎಕ್ಸ್‌ರೇ, ಹೃದ್ರೋಗಕ್ಕೆ ಬೇಕಾಗುವಂತಹ ಹಾಗೂ ಪತ್ತೆ ಹಚ್ಚುವ ಯಂತ್ರೋಪಕರಣಗಳನ್ನು ಯಾವಾಗ ಸರಬರಾಜು ಮಾಡಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ದುರಸ್ತಿ ಕಾಮಗಾರಿಯು ಪ್ರಗತಿಯಲ್ಲಿದೆ. ಬಾಕಿ ಉಳಿದಿರುವ ಕಾಮಗಾರಿಯನ್ನು ಪೂರ್ಣಗೊಳಿಸುವ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) ಮೈಸೂರು ನಗರದ ಜನಸಂಖ್ಯೆಗೆ ಅನುಗುಣವಾಗಿ ಮೈಸೂರು ನಗರದ ಆಸ್ಪತ್ರೆಯಲ್ಲಿ ಈಗಿರುವ ಸೌಲಭ್ಯದಲ್ಲಿ ಸಾರ್ವಜನಿಕರಿಗೆ ಸಾಕಷ್ಟು ಅನುಕೂಲವನ್ನು ಒದಗಿಸಲಾಗುತ್ತಿದೆ. ಆದಾಗ್ಯೂ ಸರ್ಕಾರವು ಇಷ್ಟಕ್ಕೆ ತೃಪ್ತಿಗೊಂಡಿಲ್ಲ. ಹಣದ ಲಭ್ಯತೆಯನ್ನು ಅನುಸರಿಸಿ, ನಗರದಲ್ಲಿರುವ ಸರ್ಕಾರಿ ಆಸ್ಪತ್ರೆಗಳ ಅವಶ್ಯಕತೆಗಳನ್ನು ಪೂರೈಸಲಾಗುವುದು.

ಇ) ಹೊಸ ಕ್ಷ-ಕಿರಣ ಯಂತ್ರಗಳನ್ನು ಮತ್ತು ಹೃದ್ರೋಗ ಪತ್ತೆ ಹಚ್ಚಲು ಬೇಕಾಗುವ ಹೆಚ್ಚುವರಿ ಯಂತ್ರೋಪಕರಣಗಳನ್ನು ಒದಗಿಸಲು ಆರ್ಥಿಕ ಅನುಕೂಲತೆಯನ್ನು ನೋಡಿಕೊಂಡು ಕ್ರಮ ತೆಗೆದುಕೊಳ್ಳಲಾಗುವುದು.

ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳ ಸಂಖ್ಯೆ.

3736 - ಶ್ರೀ ಕೆ. ಹರ್ಷಕುಮಾರಗೌಡ (ಚಾಮರಾಜ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದಲ್ಲಿ ಪ್ರಸಕ್ತ ಇರುವ ಮೆಡಿಕಲ್ ಕಾಲೇಜುಗಳೆಷ್ಟು ಮತ್ತು ಅವುಗಳ ಹೆಸರುಗಳೇನು ?

ಆ) ವಿವಿಧ ಮೆಡಿಕಲ್ ಕಾಲೇಜುಗಳಲ್ಲಿ ಪ್ರವೇಶ ಕೊಡಲು ಸರ್ಕಾರ ಅನುಮತಿ ಕೊಟ್ಟಿರುವ ಸಂಖ್ಯೆ ಎಷ್ಟು ?

ಇ) ಈ ಮೆಡಿಕಲ್ ಕಾಲೇಜುಗಳಲ್ಲಿ ಸರ್ಕಾರ ಮಂಜೂರು ಮಾಡಿರುವುದಕ್ಕಿಂತ ಮೀರಿ ಪ್ರವೇಶ ಕೊಟ್ಟಿರುವ ಕಾಲೇಜುಗಳ ಹೆಸರುಗಳೇನು ?

ಈ) ಹೊಸದಾಗಿ ವೈದ್ಯಕೀಯ ಕಾಲೇಜು ಪ್ರಾರಂಭ ಮಾಡಲು ಅರ್ಜಿ ಸಲ್ಲಿಸಿರುವ ಸಂಸ್ಥೆಗಳ ಹೆಸರುಗಳೇನು ? ಇವುಗಳಿಗೆ ಅನುಮತಿ ನೀಡಲು ಸರ್ಕಾರ ಯಾವಾಗ ತೀರ್ಮಾನಿಸಿರುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 18.

ಸರ್ಕಾರಿ ಮೆಡಿಕಲ್ ಕಾಲೇಜುಗಳು

1) ಬೆಂಗಳೂರು ಮೆಡಿಕಲ್ ಕಾಲೇಜು, ಬೆಂಗಳೂರು
2) ಮೈಸೂರು ಮೆಡಿಕಲ್ ಕಾಲೇಜು, ಮೈಸೂರು
3) ಕರ್ನಾಟಕ ಮೆಡಿಕಲ್ ಕಾಲೇಜು, ಹುಬ್ಬಳ್ಳಿ
4) ಬಳ್ಳಾರಿ ಮೆಡಿಕಲ್ ಕಾಲೇಜು, ಬಳ್ಳಾರಿ

ಖಾಸಗಿ ಮೆಡಿಕಲ್ ಕಾಲೇಜುಗಳು

5) ಕಸ್ತೂರಬಾ ಮೆಡಿಕಲ್ ಕಾಲೇಜು, ಮಂಗಳೂರು
ಕಸ್ತೂರಬಾ ಮೆಡಿಕಲ್ ಕಾಲೇಜು ಮಣಿಪಾಲ್
6) ಸೆಂಟ್ ಜಾನ್ಸ್ ಮೆಡಿಕಲ್ ಕಾಲೇಜು, ಬೆಂಗಳೂರು
7) ಜೆ.ಎನ್.ಮೆಡಿಕಲ್ ಕಾಲೇಜು, ಬೆಳಗಾಂ
8) ಜೆ.ಜೆ.ಎಂ. ಮೆಡಿಕಲ್ ಕಾಲೇಜು ದಾವಣಗೆರೆ
9) ಎಂ.ಆರ್.ಮೆಡಿಕಲ್ ಕಾಲೇಜು, ಗುಲ್ಬರ್ಗಾ
10) ಜೆ.ಎಸ್.ಎಸ್.ಮೆಡಿಕಲ್ ಕಾಲೇಜು, ಮೈಸೂರು
11) ಎಂ.ಎಸ್. ರಾಮಯ್ಯ ಮೆಡಿಕಲ್ ಕಾಲೇಜು, ಬೆಂಗಳೂರು
12) ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಂಗಳೂರು
13) ಡಾ. ಬಿ.ಆರ್. ಅಂಬೇಡ್ಕರ್ ಮೆಡಿಕಲ್ ಕಾಲೇಜು, ಬೆಂಗಳೂರು
14) ಆದಿಚುಂಚನಗಿರಿ ಇನ್ಸ್ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಬೆಂಗಳೂರು
15) ಶ್ರೀ ದೇವರಾಜ ಅರಸ್ ಮೆಡಿಕಲ್ ಕಾಲೇಜು, ಕೋಲಾರ
16) ಅಲ್ ಅಮೀನ್ ಮೆಡಿಕಲ್ ಕಾಲೇಜು, ಬಿಜಾಪುರ
17) ಬಿಎಲ್‌ಡಿಇಎ ಮೆಡಿಕಲ್ ಕಾಲೇಜು, ಬಿಜಾಪುರ
18) ಶ್ರೀ ಸಿದ್ದಾರ್ಥ ಮೆಡಿಕಲ್ ಕಾಲೇಜು, ತುಮಕೂರು

ಆ)

1) ಬೆಂಗಳೂರು ಮೆಡಿಕಲ್ ಕಾಲೇಜು, ಬೆಂಗಳೂರು -200
2) ಮೈಸೂರು ಮೆಡಿಕಲ್ ಕಾಲೇಜು, ಮೈಸೂರು -175
3) ಕರ್ನಾಟಕ ಮೆಡಿಕಲ್ ಕಾಲೇಜು, ಹುಬ್ಬಳ್ಳಿ - 130
4) ಬಳ್ಳಾರಿ ಮೆಡಿಕಲ್ ಕಾಲೇಜು, ಬಳ್ಳಾರಿ 180
5) ಕಸ್ತೂರಬಾ ಮೆಡಿಕಲ್ ಕಾಲೇಜು, ಮಂಗಳೂರು - 300
ಕಸ್ತೂರಬಾ ಮೆಡಿಕಲ್ ಕಾಲೇಜು, ಮಣಿಪಾಲ್ - 250
6) ಸೆಂಟ್‌ಜಾನ್ಸ್ ಮೆಡಿಕಲ್ ಕಾಲೇಜು, ಬೆಂಗಳೂರು - 60
7) ಜಿಎನ್ ಮೆಡಿಕಲ್ ಕಾಲೇಜು ಬೆಳಗಾಂ. - 175
8) ಎಂಆರ್ ಮೆಡಿಕಲ್ ಕಾಲೇಜು, ಗುಲ್ಬರ್ಗಾ 170

9) ಜೆಜೆಎಂ ಮೆಡಿಕಲ್ ಕಾಲೇಜು, ದಾವಣಗೆರೆ - 300

10) ಎಂಎಸ್ ರಾಮಯ್ಯ ಮೆಡಿಕಲ್ ಕಾಲೇಜು, ಬೆಂಗಳೂರು - 100

11) ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಂಗಳೂರು-100

12) ಡಾ.ಬಿ.ಆರ್. ಅಂಬೇಡ್ಕರ್ ಮೆಡಿಕಲ್ ಕಾಲೇಜು, ಬೆಂಗಳೂರು -100

13) ಅಲ್ ಅಮೀನ್ ಮೆಡಿಕಲ್ ಕಾಲೇಜು, ಬಿಜಾಪುರ -120

14) ಜೆಎಸ್‌ಎಸ್ ಮೆಡಿಕಲ್ ಕಾಲೇಜು, ಮೈಸೂರು -200

15) ಆದಿಚುಂಚನಗಿರಿ ಇನ್ಸ್‌ಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಬೆಳ್ಳೂರು-75

16) ಬಿಎಲ್‌ಡಿಇಎ ವೈದ್ಯಕೀಯ ಕಾಲೇಜು, ಬಿಜಾಪುರ - 160

17) ಶ್ರೀ ದೇವರಾಜ ಅರಸ್ ಮೆಡಿಕಲ್ ಕಾಲೇಜು, ಕೋಲಾರ - 150

18) ಶ್ರೀ ಸಿದ್ದಾರ್ಥ ಮೆಡಿಕಲ್ ಕಾಲೇಜು, ತುಮಕೂರು - 175

ಇ) ಇಲ್ಲ.

ಈ)

1) ಶ್ರೀ ಜಗದ್ಗುರು ಮುರುಘರಾಜೇಂದ್ರ ವಿದ್ಯಾಪೀಠ, ಚಿತ್ರದುರ್ಗ

2) ಸಿದ್ಧಗಂಗಾ ಎಜುಕೇಷನ್ ಸೊಸೈಟಿ, ತುಮಕೂರು

3) ಅಲ್ ಮಹಮದ್ ಸೊಸೈಟಿ, ಭದ್ರಾವತಿ

4) ಶರವೇಶ್ವರ ವಿದ್ಯಾಪೀಠ, ಬಳ್ಳಾರಿ

5) ನಿಟ್ಟೆ ಎಜುಕೇಷನ್ ಟ್ರಸ್ಟ್, ಕಾರ್ಕಳ, ದಕ್ಷಿಣ ಕನ್ನಡ

6) ಅಕಾಡೆಮಿ ಆಫ್ ಲಿಬರಲ್ ಎಜುಕೇಷನ್, ಸುಳ್ಯ, ದಕ್ಷಿಣ ಕನ್ನಡ

7) ಕರ್ನಾಟಕ ಲಾ ಸೊಸೈಟಿ ಬೆಳಗಾಂ

8) ಮಲೆನಾಡು ಮೆಡಿಕಲ್ ಕಾಲೇಜು ಬಿ.ಆರ್.ಅಂಬೇಡ್ಕರ್ ಮಿಷನ್ ಶಿವಮೊಗ್ಗ)

9) ರಾಷ್ಟ್ರೀಯ ಶಿಕ್ಷಣ ಸಮಿತಿ, ಶಿವಮೊಗ್ಗ

10) ಫಾದರ್‌ಮುಲ್ಲರ್ ಇನ್ಸ್‌ಸ್ಟಿಟ್ಯೂಟ್, ಕಂಕನಾಡಿ ಮಂಗಳೂರು

11) ಸಹ್ಯಾದ್ರಿ ಎಜುಕೇಷನ್ ಟ್ರಸ್ಟ್, ಶಿವಮೊಗ್ಗ

12) ಶ್ರೀ ವೀಣಾಶಾರದ ಎಜುಕೇಷನ್ ಸೊಸೈಟಿ, ಹಾಸನ

13) ತಾರನಾಥ ಶಿಕ್ಷಣ ಸಂಸ್ಥೆ, ರಾಯಚೂರು

14) ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ, ಬೀದರ್

15) ಖಾಜಾ ಶಿಕ್ಷಣ ಸಂಸ್ಥೆ, ಗುಲ್ಬರ್ಗಾ

16) ಅಲ್ ಮಹಮದ್ ವಿದ್ಯಾಸಂಸ್ಥೆ, ಶಿವಮೊಗ್ಗ

17) ಶರಭೇಶ್ವರಿ ವಿದ್ಯಾಪೀಠ, ಬಂಡಿಪೋಟ್, ಬಳ್ಳಾರಿ

18) ನಾನಕ್‌ಬೀರ್ ಫೌಂಡೇಶನ್, ಬೀದರ್

19) ಜಗದ್ಗುರು ಮೂರುಸಾವಿರದ ಮಠ ಜೆ.ಜೆ.ಸಹಕಾರ ಸಂಘ ರೂರಲ್ ಮೆಡಿಕಲ್ ಕಾಲೇಜು, ಹುಬ್ಬಳ್ಳಿ

20) ಶ್ರೀ ವೀಣಾಶಾರದ ಎಜುಕೇಷನ್ ಸೊಸೈಟಿ, ಶಿವಮೊಗ್ಗ

21) ಚಾಮುಂಡಿ ಮೆಡಿಕಲ್ ಫೌಂಡೇಶನ್, ಬೆಂಗಳೂರು

22) ಕರ್ನಾಟಕ ಪೀಪಲ್ ಎಜುಕೇಷನ್ ಸೊಸೈಟಿ ಗುಲ್ಬರ್ಗಾ

ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿರುವ ದಂತ ವೈದ್ಯ ಕಾಲೇಜುಗಳ ಸಂಖ್ಯೆ.

3737 - ಶ್ರೀ ಕೆ. ಹರ್ಷಕುಮಾರಗೌಡ (ಚಾಮರಾಜ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

ಅ) ಕರ್ನಾಟಕ ರಾಜ್ಯದಲ್ಲಿ ಪ್ರಸಕ್ತ ಕಾರ್ಯನಿರ್ವಹಿಸುತ್ತಿರುವ ದಂತ ವೈದ್ಯ ಕಾಲೇಜುಗಳೆಷ್ಟು. ಮತ್ತು ಇವುಗಳ ಹೆಸರುಗಳೇನು ?

ಆ) ದಂತ ವೈದ್ಯ ಕಾಲೇಜುಗಳಲ್ಲಿ ಸರ್ಕಾರಿ ಮತ್ತು ಖಾಸತಗಿಯವುಗಳು ಎಷ್ಟು ?

ಇ) ವಿವಿಧ ದಂತ ವೈದ್ಯ ಕಾಲೇಜುಗಳಲ್ಲಿ ಪ್ರತಿ ವರ್ಷ ಪ್ರವೇಶ ಅವಕಾಶ ಪಡೆಯುತ್ತಿರುವ ಅಭ್ಯರ್ಥಿಗಳ ಸಂಖ್ಯೆ ಎಷ್ಟು ?

ಈ) ಈಗಿನ ಸರ್ಕಾರ ಪ್ರಸಕ್ತ ಮಂಜೂರು ಮಾಡಿರುವ ದಂತ ವೈದ್ಯ ಕಾಲೇಜುಗಳ ಸಂಖ್ಯೆ ಮತ್ತು ಹೆಸರುಗಳೇನು ಮತ್ತು ಹೊಸದಾಗಿ ಪ್ರಾರಂಭಿಸಲು ಅರ್ಜಿ ಸಲ್ಲಿಸಿರುವ ಸಂಸ್ಥೆಗಳ ಹೆಸರುಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕು.ಕ.ಸಚಿವರು):

ಅ) 16

1. ಸರ್ಕಾರಿ ದಂತ ಕಾಲೇಜು, ಬೆಂಗಳೂರು 1

ಖಾಸಗಿ ದಂತ ಕಾಲೇಜುಗಳು

1. ಕಸ್ತೂರಬಾ ವೈದ್ಯಕೀಯ ಕಾಲೇಜು, ಮಂಗಳೂರು ವಿಂಗ್
2. ಕಸ್ತೂರಬಾ ವೈದ್ಯಕೀಯ ಕಾಲೇಜು, ಮಣಿಪಾಲ್ ವಿಂಗ್
3. ಎ.ಬಿ.ಶೆಟ್ಟಿ, ದಂತ ಕಾಲೇಜು, ಮಂಗಳೂರು
4. ರಮಾಬಾಯಿ ಅಂಬೇಡ್ಕರ್ ದಂತ ಕಾಲೇಜು, ಬೆಂಗಳೂರು
5. ಎಸ್.ಡಿ.ಎಂ. ದಂತ ಕಾಲೇಜು, ಧಾರವಾಡ
6. ಎಸ್.ಜೆ.ಎಂ. ದಂತ ಕಾಲೇಜು, ಚಿತ್ರದುರ್ಗ
7. ಕೆ.ಎಲ್.ಇ. ದಂತ ಕಾಲೇಜು, ಬೆಳಗಾಂ
8. ಜೆ.ಎಸ್.ಎಸ್. ದಂತ ಕಾಲೇಜು, ಮೈಸೂರು
9. ಪಿ.ಎಂ. ನಾಡಗೌಡ ದಂತ ಕಾಲೇಜು, ಬಾಗಲಕೋಟೆ
10. ಬಾಪೂಜಿ ದಂತ ಕಾಲೇಜು, ದಾವಣಗೆರೆ
11. ಹೆಚ್.ಕೆ.ಇ. ದಂತ ಕಾಲೇಜು, ಗುಲ್ಬರ್ಗಾ
12. ಒಕ್ಕಲಿಗರ ಸಂಘ ದಂತ ಕಾಲೇಜು, ಬೆಂಗಳೂರು

13. ಸೋಮನಾಥ ಶಿಕ್ಷಣ ಸಂಸ್ಥೆ ದಂತ ಕಾಲೇಜು, ಬೀದರ್

14. ಕೆ.ವಿ.ಜಿ. ದಂತ ಕಾಲೇಜು, ಸುಳ್ಯ, ದಕ್ಷಿಣ ಕನ್ನಡ ಜಿಲ್ಲೆ

15. ಹಾಸನಾಂಬ ಶಿಕ್ಷಣ ಟ್ರಸ್ಟ್, ಹಾಸನ

ಆ) ಸರ್ಕಾರಿ ದಂತ ಕಾಲೇಜು -1

ಖಾಸಗಿ ದಂತ ಕಾಲೇಜುಗಳು -15

ಇ) 1211

ಈ) 1991-92ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ 3 ಹೊಸ ದಂತ ಕಾಲೇಜುಗಳಿಗೆ ಮಂಜೂರಾತಿ ನೀಡಿದೆ, ಅವುಗಳ ಹೆಸರುಗಳು ಈ ಕೆಳಕಂಡಂತೆ ಇದೆ.

1. ಸೋಮನಾಥ ಶಿಕ್ಷಣ ಸಂಸ್ಥೆ ದಂತ ಕಾಲೇಜು, ಬೀದರ್

2. ಕೆ.ವಿ.ಜಿ. ದಂತ ಕಾಲೇಜು ಸುಳ್ಯ, ದಕ್ಷಿಣ ಕನ್ನಡ ಜಿಲ್ಲೆ

3. ಹಾಸನಾಂಬ ಶಿಕ್ಷಣ ಟ್ರಸ್ಟ್, ಹಾಸನ

ಅರ್ಜಿಗಳನ್ನು ಸಲ್ಲಿಸಿರುವ ಸಂಸ್ಥೆಗಳ ಹೆಸರುಗಳು ಈ ಕೆಳಕಂಡಂತೆ ಇವೆ:

1) ಅಕಾಡೆಮಿ ಆಫ್ ಲಿಬರಲ್ ವಿದ್ಯಾಸಂಸ್ಥೆ, ಕುರಂಜಿಬಾಗ್ ಸುಳ್ಯ

2. ಆರ್.ಆರ್.ಕೆ. ಸಮಿತಿ, ಬೀದರ್

3. ಶಿವಾಜಿ ಎಜುಕೇಷನ್ ಸೊಸೈಟಿ, ಕಾರವಾರ

4. ಅಕಾಡೆಮಿ ಆಫ್ ಲಿಬರಲ್ ಎಜುಕೇಷನ್, ರಾಯಚೂರು

5. ಮರಾಠ ಮಂಡಳ್ ಬೆಳಗಾಂ

6. ಪಿ.ಸಿ. ದಂತ ಕಾಲೇಜು ಮತ್ತು ಆಸ್ಪತ್ರೆ, ಹೊಸಕೋಟೆ

7. ಅಲ್ ಅಮೀನ್ ಚಾರಿಟಬಲ್ ಫಂಡ್ ಟ್ರಸ್ಟ್ ಬಿಜಾಪುರ

8. ಮಹಾತ್ಮಾಗಾಂಧಿ ವಿದ್ಯಾಪೀಠ, ಟ್ರಸ್ಟ್ ಬೆಂಗಳೂರು

9. ಎಸ್.ಜೆ.ಆರ್. ಟೆಕ್ನಿಕಲ್ ಮತ್ತು ಎಜುಕೇಷನ್ ಸೊಸೈಟಿ, ಬೆಂಗಳೂರು

10. ಎಂ. ವಿಶ್ವೇಶ್ವರಯ್ಯ, ಎಜುಕೇಶನ್ ಟ್ರಸ್ಟ್, ಬೆಂಗಳೂರು

11. ಗೋಕುಲ್ ಎಜುಕೇಷನ್ ಫೌಂಡೇಷನ್, ಬೆಂಗಳೂರು

12. ಕೆ.ಎಲ್.ಇ. ದಂತ ಕಾಲೇಜು, ಬೆಳಗಾಂ (ಹೆಣ್ಣು ಮಕ್ಕಳಿಗೆ)

ರಾಜ್ಯದಲ್ಲಿ ಕನಿಷ್ಟ ವೇತನವಿಲ್ಲದ ಕಾರ್ಖಾನೆಗಳ ಸಂಖ್ಯೆ.

7353 - ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ಕನಿಷ್ಠ ವೇತನ ಜಾರಿಯಲ್ಲಿಲ್ಲದ ಕಾರ್ಖಾನೆಗಳಾವುವು?

ಆ) ಈ ಕಾರ್ಖಾನೆಗಳು ಕನಿಷ್ಠ ವೇತನವನ್ನು ಯಾವ ಕಾರಣಕ್ಕಾಗಿ ನಿಗದಿ ಮಾಡಿಲ್ಲ?

ಇ) ನಿಗದಿ ಮಾಡದಿದ್ದರೆ ಎಂದಿನಿಂದ ಮಾಡಲಾಗುವುದು?

ಈ) ಕನಿಷ್ಠ ವೇತನ ನಿಗದಿ ಮಾಡದ ಕಾರ್ಖಾನೆಗಳ ಮೇಲೆ ಸರ್ಕಾರವು ಕೈಗೊಂಡ ಕ್ರಮವೇನು?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):

ಅ) 23 ಉದ್ದಿಮೆಗಳಿವೆ, ಅವುಗಳು :

1) ರೆಗ್ಯೂಲೇಟಿಂಗ್ ಮಾರ್ಕೆಟ್ಸ್ ಮಂಡಿಸ್ ಮತ್ತು ಬಜಾರ್ಸ್,

2) ವುಲ್ಲನ್ ಕಾರ್ಪೆಟ್ ಮೇಕಿಂಗ್ ಅಥವಾ ಶಾಲ್ ವೇವಿಂಗ್ ಉದ್ಯಮ,

3) ಮೆಟಲ್ ರೋಲಿಂಗ್, ರಿ. ರೋಲಿಂಗ್ ಕೈಗಾರಿಕೆ (ಪೆರರ್ಸ್)

4) ಮೆಟಲ್ ರೋಲಿಂಗ್, ರಿ-ರೋಲಿಂಗ್ (ನಾನ್ ಪೆರರ್ಸ್)

5) ಬಿಸ್ಕಟ್ಸ್,

6) ರಬ್ಬರ್ ಪ್ರಾಡಕಟ್ಸ,

7) ಮಿನಿ ಸಿಮೆಂಟ್ ಪ್ಲಾಂಟ್ ಇಂಡಸ್ಟ್ರೀ,

8) ಮೊಸಾಯಿಕ್ ಟೈಲ್ಸ್, ಫ್ಲೋರಿಂಗ್ ಟೈರ್ಸ್ ಅಥವಾ ಕ್ಲೇಜಿಂಗ್ ಟೈಲ್ಸ್

9) ಪ್ಲಾಸ್ಟಿಕ್, ಪೋಲಿಪ್ಲಾಸ್ಟಿಕ್, ರಬ್ಬರ್ ಮತ್ತು ಪಿ.ವಿ.ಸಿ. ಪೈಪ್ಸ್ ಮ್ಯಾನುಫ್ಯಾಕ್ಚರಿಂಗ್ ಕ್ವಿಪ್‌ಮೆಂಟ್ಸ್,

10) ಸ್ಪನ್ ಪೈಪ್ಸ್, ಕಾಂಕ್ರೀಟ್ ಪೈಪ್ಸ್ ಸ್ಯಾನಿಟರಿ ಪಿಟ್ಟಿಂಗ್ಸ್, ಪಿ.ವಿ.ಸಿ. ರ್.ಸಿ.ಎಸ್. ಪೋಲ್ಸ್ ಮತ್ತು ಆರ್.ಸಿ.ಸಿ. ಪೈಪ್ಸ್ ಮ್ಯಾನುಫ್ಯಾಕ್ಚರಿಂಗ್

11) ಬ್ರಾಸ್, ಕಾರರ್ ಮತ್ತು ಅಲ್ಯೂಮಿನಿಯಂ ಮ್ಯಾನುಪ್ಯಾಕ್ಚರಿಂಗ್

12) ಪ್ರಕ್ಯೂರ್‌ಮೆಂಟ್ ಪ್ರೋಸಸಿಂಗ್ ಮತ್ತು ಡಿಸ್ಟ್ರಿಬ್ಯೂಷನ್ ಆಫ್ ಮಿಲ್ಕ್,

13) ಎಲ್.ಪಿ.ಜಿ. ವಿತರಣೆ,

14) ಎರೇಟೆಡ್ ವಾಟರ್ ಮ್ಯಾನುಫ್ಯಾಕ್ಚರಿಂಗ್

15) ಪ್ರೊಡಕ್ಷನ್ ಆಫ್ ಎಲೆಸ್ಟ್ರೀಸಿಟಿ (ಇರಿಗೇಷನ್ ಅಥವಾ ಜಲವಿದ್ಯುತ್) ್ರೊಡಕ್ಷನ್ ಪ್ಲಾಂಟ್

16) ಮ್ಯಾನುಫ್ಯಾಕ್ಚರಿಂಗ್ ಆಫ್ ಲಿಕ್ಕರ್ (ಬ್ರಿವರೀಸ್) ಡಿಸ್ಟಲರೀಸ್ ಇನ್‌ಕ್ಲೂಡಿಂಗ್ ಎಟ್‌ಲಿಂಗ್ ಆಫ್ ಲಿಕ್ಕರ್,

17) ಸೆಕ್ಯೂರಿಟ್ ಏಜೆನ್ಸಿ (ಇಂಡಸ್ಟ್ರೀಸ್) ವೇರ್ ಆಫೀಸ್ ಸ್ಟಾಫ್ ಅಪಾಯಿಂಟೆಡ್ ಸಬ್ ಏಜೆನ್ಸಿ ಸೆಕ್ಯೂರಿಟಿ ಗಾರ್ಡ್ಸನ್ ಸೇರಿದಂತೆ,

18) ಪ್ರೈವೇಟ್ ಫೈನಾನ್ಷಿಯಲ್ ಕಾರ್ಪೊರೇಷನ್ ಮತ್ತು ಚಿಟ್‌ಫಂಡ್ಸ್,

19) ಬ್ರಿಕ್ಸ್

20) ಎಜುಕೇಶನ್ ಇನ್‌ಸ್ಟಿಟ್ಯೂಶನ್ಸ್

21) ಲಾಂಡ್ರೀಸ್,

22) ಪೆಟ್ರೋಲ್ ಮತ್ತು ಡಿಸಲ್ ಆಯಿಲ್ ಪಂಪ್ಸ್.

23) ಫಾರೆಸ್ಟ್ರೀ ಮತ್ತು ಟಿಂಬರಿಂಗ್ ಆಪರೇಶನ್ಸ್

ಆ) ಕನಿಷ್ಠ ವೇತನವನ್ನು ನಿಗದಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಕನಿಷ್ಠ ವೇತನ ಕಾಯ್ದೆ ಅನ್ವಯ ಅನುಸರಿಸಬೇಕಾದ ಎಲ್ಲಾ ಕಾನೂನಿನ ವಶ್ಯಕತೆಗಳನ್ನು ಪೂರೈಸಿದ ನಂತರ ಕನಿಷ್ಠ ವೇತನ ನಿಗದಿ ಮಾಡಲಾಗುವುದು.

ಈ) ಸೂಕ್ತ ಕ್ರಮವನ್ನು ಕೈಗೊಳ್ಳಲಾಗುತ್ತಿದೆ.

ಅಂಗನವಾಡಿ ಕಾರ್ಯಕರ್ತೆಯರನ್ನು ಮುಖ್ಯಸೇವಿಕ ಮೇಲ್ವಿಚಾರಕಿ ಮತ್ತು ಶಿಕ್ಷಕರ ಹುದ್ದೆಗೆ ನೇಮಕ.

3770 - ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಅಂಗನವಾಡಿ ಕಾರ್ಯಕರ್ತೆಯರನ್ನು ಮುಖ್ಯಸೇವಿಕೆಯರ, ಗ್ರಾಮಸೇವಕಿಯರ ಮತ್ತು ಪ್ರಾಥಮಿಕ ಶಿಕ್ಷಕಿಯರ ಹುದ್ದೆಗೆ ನೇರ ನೇಮಕಾತಿ ಮಾಡುವುದರಲ್ಲಿ ಸರ್ಕಾರಕ್ಕೆ ಇರುವ ತೊಂದರೆಯೇನು?

ಆ) ಮಹಾರಾಷ್ಟ್ರ ಸರ್ಕಾರದಲ್ಲಿ ಇದರ ಬಗ್ಗೆ ಆದೇಶ ಇರುವುದರಿಂದ ನಮ್ಮ ಸರ್ಕಾರ ಇದನ್ನು ಅನುಸರಿಸಲು ಇರುವ ತೊಂದರೆಯೇನು?

ಇ) 17 ವರ್ಷಗಳಿಂದ ಅನುಭವ ಪಡೆದ ಅಂಗನವಾಡಿ ಕಾರ್ಯಕರ್ತೆಯವರಿಗೆ ಸಹಾಯ ಮಾಡಿದಂತೆ ಆಗುವುದಿಲ್ಲವೆ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಮುಖ್ಯಸೇವಿಕಾ ಮೇಲ್ವಿಚಾರಕಿಯರಿಗೆ ಶೇಕಡ 75ರಷ್ಟು ಹುದ್ದೆಗಳನ್ನು ನೇರ ನೇಮಕಾತಿಗಳಿಗಾಗಿ ನಿಗದಿ ಪಡಿಸಲಾಗಿದೆ. ನೇರ ನೇಮಕಾತಿಗಳಿಗಾಗಿ ಎಸ್.ಎಸ್.ಎಲ್.ಸಿ. ಪಾಸಾದ 10 ವರ್ಷ ಅಂಗನವಾಡಿ ಕಾರ್ಯಕರ್ತೆಯರಾಗಿ ಸೇವೆಸಲ್ಲಿಸಿದವರು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. 10 ವರ್ಷ ಅಂಗನವಾಡಿ ಕಾರ್ಯಕರ್ತೆಯರೆಂದು ಸೇವೆ ಸಲ್ಲಿಸಿದವರಿಗೆ ನೇಮಕಾತಿಯಲ್ಲಿ ಆದ್ಯತೆ ಕೊಡಲಾಗುತ್ತದೆ. ಅಂಗನವಾಡಿ ಕಾರ್ಯಕರ್ತೆಯರೆಂದು ಸೇವೆ ಸಲ್ಲಿಸಿರುವ ಗರಿಷ್ಠ 15 ವರ್ಷ ಸೇವೆ ಮತ್ತು ವಯೋಮಿತಿ 45 ವರ್ಷಗಳವರೆಗೆ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ವಯೋಮಿತಿಯನ್ನು ಸಡಿಲಗೊಳಿಸಲಾಗಿದೆ. ಪ್ರಾಥಮಿಕ ಶಾಲಾ ಶಿಕ್ಷಕರ ಬಗ್ಗೆ ಶಿಕ್ಷಣ ಇಲಾಖೆಯೊಡನೆ ಸಮಾಲೋಚಿಸಲಾಗುತ್ತಿದೆ.

ಆ) ಸರ್ಕಾರಕ್ಕೆ ಮಹಾರಾಷ್ಟ್ರ ಸರ್ಕಾರದ ಆದೇಶದ ಬಗ್ಗೆ ಮಾಹಿತಿ ಇಲ್ಲ.

ಇ) ಇದು ಅನ್ವಯಿಸುವುದಿಲ್ಲ.

ಕಟುಕ ಜನಾಂಗದವರ ಸಂಖ್ಯೆ.

3771 - ಶ್ರೀಯುತರಾದ ಚೌಡಾರೆಡ್ಡಿ (ಚಿಂತಾಮಣಿ), ಬಿ. ಸ್ವಾಮಿರಾವ್ (ಹೊಸನಗರ), ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಕಟಿಕರು ಅಥವಾ ಕಟುಕರ ಜನಸಂಖ್ಯೆ ಎಷ್ಟು?

ಆ) ಇವರು ಸಾಮಾಜಿಕವಾಗಿ ಆರ್ಥಿಕವಾಗಿ ಶೈಕ್ಷಣಿಕವಾಗಿ ರಾಜಕೀಯವಾಗಿ ಅತ್ಯಂತ ಹಿಂದುಳಿದಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಜನಾಂಗದವರು ತಮ್ಮನ್ನು ಪರಿಶಿಷ್ಟ ಜಾತಿಗೆ ಸೇರಿಸುವಂತೆ ಹೋರಾಟ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದ ಧೋರಣೆ ಏನು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) 2ನೇ ಹಿಂದುಳಿದ ವರ್ಗಗಳ ಆಯೋಗದ ವರದಿ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಕಾಟಿಕ್/ಕಟುಕರ ಜನ ಸಂಖ್ಯೆ 60,586 ಎಂದು ನಮೂದಿಸಲಾಗಿದೆ.

ಆ) ಹೌದು-ಸರ್ಕಾರಿ ಆದೇಶ ಸಂಖ್ಯೆ : ಸಕಕಾ 66 ಬಿಸಿಎ 86 ದಿನಾಂಕ 13-10-86ರ ಪ್ರಕಾರ ಸದರೀ ಜನಾಂಗವನ್ನು ಇತರೆ ಹಿಂದುಳಿದ ವರ್ಗಗಳ 'ಬಿ' ಗುಂಪಿನಲ್ಲಿ ಸೇರಿಸಲಾಗಿದೆ.

ಇ) ಹೌದು.

ಈ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿಸುವಂತೆ ಕೋರಿ ಹಲವಾರು ಜನಾಂಗದವರು ಸಲ್ಲಿಸಿರುವ ಮನವಿಗಳನ್ನು ಪರಿಶೀಲಿಸಲು ಸರ್ಕಾರ ತನ್ನ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಎಲ್ 126 ಎಸ್‌ಎಡಿ 88 ದಿನಾಂಕ 5-1-1991ರಲ್ಲಿ ರಚಿಸಿರುವ ಸಮಿತಿಯ ಮುಂದೆ ಕಟುಕ ಜನಾಂದವರ ಬೇಡಿಕೆಯನ್ನು ಸಹ ಇಡಲಾಗಿದೆ.

ಪ್ರಕೃತಿ ಚಿಕಿತ್ಸಾ ಕಾಲೇಜು ತೆರೆಯುವ ಬಗ್ಗೆ.

3730 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಆಯುರ್ವೇದ ಹೋಮಿಯೋಪತಿ, ಯುನಾನಿ ಸರ್ಕಾರಿ ಕಾಲೇಜುಗಳಿದ್ದು, ಪೂರ್ಣ ಪ್ರಮಾಣದ ಪ್ರಕೃತಿ ಮತ್ತು ಯೋಗ ಕಾಲೇಜನ್ನು ಇಲ್ಲಿಯವರೆಗೆ ಏಕೆ ಸ್ಥಾಪಿಸಿಲ್ಲ?

ಆ) ಈಗ ಅದರ ಸ್ಥಾಪನೆಯು ಯಾವ ಹಂತದಲ್ಲಿದೆ?

ಇ) ಯಾವ ವರ್ಷ ಈ ಕಾಲೇಜನ್ನು ಸ್ಥಾಪಿಸಲಾಗುವುದು?

ಈ) ರಾಜ್ಯದಲ್ಲಿ ಎಷ್ಟು ಜನ ಪ್ರಕೃತಿ ಚಿಕಿತ್ಸಕ ವೈದ್ಯರಿದ್ದಾರೆ?

ಉ) ಮೈಸೂರು ಮತ್ತು ಬೆಂಗಳೂರಿನ ಯಾವ ಯಾವ ಬಡಾವಣೆಗಳಲ್ಲಿ ಎಷ್ಟೆಷ್ಟು ಪ್ರಕೃತಿ ಚಿಕಿತ್ಸಾ ಶಿಬಿರಗಳು ನಡೆದಿವೆ? ಇತರೆ ಜಿಲ್ಲೆಗಳಲ್ಲಿ ಏಕೆ ಮಾಡಿಲ್ಲ?

ಊ) ಔಷಧಿ ತಯಾರಕರು, ವಿತರಕರು ಸಂಬಂಧಪಟ್ಟ ಜಾಹೀರಾತುಗಳು ಪ್ರಕೃತಿ ಚಿಕಿತ್ಸೆಯಲ್ಲಿ ಇದೆಯೆ?

ಋ) ಇಲ್ಲದಿದ್ದರೆ ಸಾರ್ವಜನಿಕರಿಗೆ ತಿಳುವಳಿಕೆ ನೀಡಲು ಮತ್ತು ವ್ಯಾಪಕವಾಗಿ ಪ್ರಚಾರ ಮಾಡಲು ಪ್ರತಿ ಜಿಲ್ಲೆಯಲ್ಲೂ ಪ್ರಚಾರವನ್ನು ಏಕೆ ನೇಮಿಸಬಾರದು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಪ್ರಕೃತಿ ಚಿಕಿತ್ಸಾ ಡಿಪ್ಲೋಮಾ ಕಾಲೇಜು ಸದ್ಯಕ್ಕೆ ಮೈಸೂರಿನ ಸರ್ಕಾರಿ ಭಾರತೀಯ ವೈದ್ಯಕೀಯ ಮಹಾವಿದ್ಯಾಲಯದ ಕಟ್ಟಡದಲ್ಲಿ ನಡೆಯುತ್ತಿದ್ದು ಸದರಿ ಕಾಲೇಜನ್ನು ಪೂರ್ಣ ಪ್ರಮಾಣದ ಕಾಲೇಜನ್ನಾಗಿ ಪ್ರಾರಂಭಿಸಲು ಪ್ರಾಥಮಿಕವಾಗಿ ಅಗತ್ಯ ಕಟ್ಟಡ ಸೌಲಭ್ಯ, ಬೋಧಕ ಸಿಬ್ಬಂದಿ ಇತ್ಯಾದಿ ಸೌಲಭ್ಯಗಳು ಬೇಕಾಗುತ್ತದೆ. ಅಲ್ಲದೆ ಯೋಜನೆಯಡಿಯಲ್ಲಿ ಅಗತ್ಯ ಹೆಚ್ಚಿನ ಆಯವ್ಯಯವು ಬೇಕಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಸದರಿ ಕಾಲೇಜನ್ನು ಪೂರ್ಣ ಪ್ರಮಾಣದ ಕಾಲೇಜನ್ನಾಗಿ ಪ್ರಾರಂಭಿಸಲು ಈ ವರೆಗೆ ಕ್ರಮಕೈಗೊಂಡಿರಲಿಲ್ಲ.

ಆ) ಮೇಲೆ (ಅ) ಕ್ಕೆ ಕೊಟ್ಟ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಇ) ಪ್ರಸಕ್ತ ಸಾಲಿನಲ್ಲಿ ಈ ಪ್ರಸ್ತಾವನೆ ಮಂಜೂರಾತಿ ಪಡೆದಲ್ಲಿ ಸದರಿ ಮಹಾವಿದ್ಯಾಲಯವನ್ನು 1992-93ನೇ ಆರ್ಥಿಕ ವರ್ಷದಿಂದ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಈ) ಮೈಸೂರಿನ ಪ್ರಕೃತಿ ಚಿಕಿತ್ಸೆ ಡಿಪ್ಲೊಮಾ ಮಹಾವಿದ್ಯಾಲಯದಿಂದ ಇದುವರೆವಿಗೂ 23 ವೈದ್ಯರುಗಳು ಡಿಪ್ಲೊಮಾ ಪದವಿ ಪಡೆದಿರುತ್ತಾರೆ. ಅಲ್ಲದೆ ಹೈದರಾಬಾದಿನ ಗಾಂಧಿ ಪ್ರಕೃತಿ ಚಿಕಿತ್ಸಾ ಮಹಾ ವಿದ್ಯಾಲಯದಿಂದ ಕರ್ನಾಟಕದ ಕೆಲವರು ಪದವಿ ಪಡೆದಿರುತ್ತಾರೆ. ಆದರೆ ಅವರ ಸಂಖ್ಯೆ ಬಗ್ಗೆ ವಿವರಗಳು ದೊರೆಯುತ್ತಿಲ್ಲ.

ಉ) ಪ್ರಕೃತಿ ಚಿಕಿತ್ಸೆ ಪದ್ಧತಿಯಲ್ಲಿ ಶಿಬಿರಗಳನ್ನು ಬೆಂಗಳೂರಿನ ಯಾವ ಬಡಾವಣೆಗಳಲ್ಲಿಯೂ ಹಾಗೂ ಇತರ ಯಾವ ಜಿಲ್ಲೆಗಳಲ್ಲಿಯೂ ಮಾಡಿರುವುದಿಲ್ಲ. ಆದರೆ ಯೋಗ ಶಿಬಿರಗಳನ್ನು ಮಾತ್ರ ಶ್ರೀ ಜಯಚಾಮರಾಜೇಂದ್ರ ಭಾರತೀಯ ವೈದ್ಯಕೀಯ ಸಂಸ್ಥೆ ಮತ್ತೆ ಮೈಸೂರಿನ ಸರ್ಕಾರಿ ಭಾರತೀಯ ವೈದ್ಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ ಪ್ರಚುರಪಡಿಸಲಾಗುತ್ತಿದೆ.

ಊ) ಈ ಚಿಕಿತ್ಸಾ ಪದ್ಧತಿ ಔಷಧಿ ರಹಿತ ಪದ್ಧತಿಯಾದ್ದರಿಂದ ಕಾರಣ ಇದು ಉದ್ಭವಿಸುವುದಿಲ್ಲ.

ಋ) ಸದ್ಯಕ್ಕೆ ಸರ್ಕಾರದ ಮುಂದೆ ಇಂತಹ ಪ್ರಸ್ತಾವವು ಯಾವುದೂ ಇರುವುದಿಲ್ಲ.

ಬೆಂಗಳೂರಿನಲ್ಲಿ ಪ್ರಕೃತಿ ಚಿಕಿತ್ಸೆ ಆಸ್ಪತ್ರೆ

3731 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿ 25 ಹಾಸಿಗೆಗಳ ಪ್ರಕೃತಿ ಚಿಕಿತ್ಸಾ ಆಸ್ಪತ್ರೆ ಪ್ರಾರಂಭಿಸಲು ಸಾರ್ವಜನಿಕರಿಂದ ಹಾಗೂ ಸರ್ಕಾರಿ ನೌಕರರಿಂದ ಬೇಡಿಕೆ ಬಂದಿದೆಯೆ?

ಆ) ಬಂದಿದ್ದರೆ ಏನು ಕ್ರಮ ಕೈಗೊಳ್ಳಲಾಗಿದೆ?

ಇ) ಯಾವ ವರ್ಷ ಎಷ್ಟು ಹಾಸಿಗೆಗಳ ಆಸ್ಪತ್ರೆ ತೆರೆಯುವುದನ್ನು ನಿರೀಕ್ಷಿಸಬಹುದು?

ಈ) ಸರ್ಕಾರಿ ನೌಕರರಿಗೆ ಇತರೆ ವೈದ್ಯಕೀಯ ಪದ್ಧತಿಗಳಲ್ಲಿ ಮರುಪಾವತಿ ಸೌಲಭ್ಯವಿದ್ದು, ಪ್ರಕೃತಿ ಚಿಕಿತ್ಸೆ ಪದ್ಧತಿಯಲ್ಲಿ ಏಕೆ ನೀಡುತ್ತಿಲ್ಲ?

ಉ) ಈ ಸೌಲಭ್ಯ ಎಂದಿನಿಂದ ನೀಡಲಾಗುತ್ತದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿದೆ.

ಆ) 1991-92ರ ಸಾಲಿನ ಆಯವ್ಯಯದಲ್ಲಿ ಈ ಕಾರ್ಯಕ್ರಮಕ್ಕೆ ಅವಕಾಶ ಮಾಡಿರುವುದಿಲ್ಲ. ಮುಂದಿನ ಆರ್ಥಿಕ ವರ್ಷದಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಇ) 1992-93ನೇ ಆರ್ಥಿಕ ವರ್ಷದಲ್ಲಿ 10 ಹಾಸಿಗೆಗಳ ಪ್ರಕೃತಿ ಚಿಕಿತ್ಸಾ ಆಸ್ಪತ್ರೆಯನ್ನು ತೆರೆಯಲು ಕ್ರಮ ಕೈಗೊಳ್ಳಲಾಗುವುದು.

ಈ) ಪ್ರಕೃತಿ ಚಿಕಿತ್ಸಾ ಪದ್ಧತಿಯು ಔಷಧಿರಹಿತ ಚಿಕಿತ್ಸಾ ಪದ್ಧತಿಯಾಗಿರುವುದರಿಂದ ಈ ಪದ್ಧತಿಯಲ್ಲಿ ಔಷಧಿಗಳ ಅಗತ್ಯವಿರುವುದಿಲ್ಲ. ಸರ್ಕಾರಿ ಪ್ರಕೃತಿ ಚಿಕಿತ್ಸಾ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಸೌಲಭ್ಯಗಳು ಉಚಿತವಾಗಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಮೈಸೂರು ಪ್ರಕೃತಿ ಚಿಕಿತ್ಸೆ ಕಾಲೇಜನ್ನು ಅಭಿವೃದ್ಧಿ ಪಡಿಸುವ ಬಗ್ಗೆ.

3735 - ಶ್ರೀ ಪ್ರಭಾಕರರಾಣೆ (ಕಾರವಾರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನ ಪ್ರಕೃತಿ ಚಿಕಿತ್ಸಾ ಡಿಪ್ಲೊಮಾ ಕಾಲೇಜನ್ನು ಪೂರ್ಣ ಪ್ರಮಾಣದ ಕಾಲೇಜನ್ನಾಗಿ ಪ್ರಾರಂಭಿಸಲು ಸರ್ಕಾರ ಇನ್ನೂ ಏಕೆ ಕ್ರಮ ಕೈಗೊಂಡಿಲ್ಲ?

ಆ) ಕ್ರಮ ಕೈಗೊಂಡಿದ್ದರೆ ಯಾವ ಹಂತದಲ್ಲಿದೆ ಮತ್ತು ಯಾವ ವರ್ಷದಿಂದ ಪ್ರಾರಂಭಿಸಲಾಗುವುದು?

ಇ) ಈ ಕಾಲೇಜಿಗೆ ಎಷ್ಟು ಹಾಸಿಗೆಗಳ ಆಸ್ಪತ್ರೆ ಮಂಜೂರಾಗಿದೆ ಹಾಗೂ ಯಾವಾಗ ಮಂಜೂರಾಗಿದೆ?

ಈ) ಈ ಆಸ್ಪತ್ರೆ ಎಲ್ಲಿ ನಡೆಯುತ್ತದೆ?

ಉ) ಪ್ರಾರಂಭದಿಂದ ಇಲ್ಲಿಯವರೆಗೆ ಎಷ್ಟು ಒಳ ಮತ್ತು ಹೊರ ರೋಗಿಗಳಿಗೆ ಪ್ರಕೃತಿ ಚಿಕಿತ್ಸೆ ಪದ್ಧತಿಯಿಂದ ಚಿಕಿತ್ಸೆ ನೀಡಲಾಗಿದೆ? (ವರ್ಷವಾರು ವಿವರ ನೀಡಬೇಕಾಗಿ ವಿನಂತಿ).

ಊ) ಈ ಆಸ್ಪತ್ರೆಯನ್ನು ಸುಸಜ್ಜಿತ ಆಸ್ಪತ್ರೆಯನ್ನಾಗಿ ಮಾಡಲು ಕೈಗೊಳ್ಳುವ ಕ್ರಮಗಳನ್ನು ವಿವರವಾಗಿ ತಿಳಿಯಬಹುದೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಪ್ರಕೃತಿ ಚಿಕಿತ್ಸಾ ಡಿಪ್ಲೊಮಾ ಕಾಲೇಜು ಸದ್ಯಕ್ಕೆ ಮೈಸೂರಿನ ಸರ್ಕಾರಿ ಭಾರತೀಯ ವೈದ್ಯಕೀಯ ಮಹಾವಿದ್ಯಾಲಯ ಕಟ್ಟಡದಲ್ಲಿ ನಡೆಯುತ್ತಿದ್ದು ಸದರಿ ಕಾಲೇಜನ್ನು ಪೂರ್ಣ ಪ್ರಮಾಣದ ಕಾಲೇಜನ್ನಾಗಿ ಪ್ರಾರಂಭಿಸಲು ಪ್ರಾಥಮಿಕವಾಗಿ ಪ್ರತ್ಯೇಕವಾದ ಅಗತ್ಯ ಕಟ್ಟಡದ ಸೌಲಭ್ಯ ಬೋಧಕ ಸಿಬ್ಬಂಧಿ ಇತ್ಯಾದಿ ಸೌಲಭ್ಯಗಳು ಬೇಕಾಗುತ್ತವೆ. ಅಲ್ಲದೆ ಯೋಜನೆಯಡಿಯಲ್ಲಿ ಅಗತ್ಯ ಹೆಚ್ಚಿನ ಆಯವ್ಯಯವು ಬೇಕಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಸದರಿ ಕಾಲೇಜನ್ನು ಪೂರ್ಣಪ್ರಮಾಣದ ಕಾಲೇಜನ್ನಾಗಿ ಪ್ರಾರಂಭಿಸಲು ಕ್ರಮ ಕೈಗೊಂಡಿರಲಿಲ್ಲ.

ಆ) ಈ ಬಗ್ಗೆ ಸೂಕ್ತ ಪ್ರಸ್ತಾವನೆಯನ್ನು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಪರಿಶೀಲಿಸಲು ಉದ್ದೇಶಿಸಲಾಗಿದೆ. ಈ ಬಗ್ಗೆ ಪೂರ್ಣ ಪ್ರಮಾಣದ ಕಾಲೇಜನ್ನು ತೆರೆಯಲು ಬೇಕಾಗುವ ಪತ್ರಕ್ರಮದ ಮಾಹಿತಿಯನ್ನು ಈಗ ತಯಾರಿಸಲಾಗುತ್ತಿದೆ. ಇದು

ಮಂಜೂರಾದಲ್ಲಿ ಸದರಿ ಮಹಾವಿದ್ಯಾಲಯವನ್ನು 1992-93ನೇ ಆರ್ಥಿಕ ವರ್ಷದಿಂದ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಇ) ಈ ಕಾಲೇಜಿಗೆ 5 ಹಾಸಿಗೆಗಳು, ಯೋಗ ಮತ್ತು ಪ್ರಕೃತಿ ಚಿಕಿತ್ಸೆಗಾಗಿ 6 ಹಾಸಿಗೆಗಳು ಒಟ್ಟು 11 ಹಾಸಿಗೆಗಳ ಆಸ್ಪತ್ರೆ ಇರುತ್ತದೆ. 5 ಹಾಸಿಗೆಗಳ ಯೋಗಾ ಆಸ್ಪತ್ರೆ 1979-80ರಲ್ಲಿ, 6 ಹಾಸಿಗೆಗಳ ಪ್ರಕೃತಿ ಚಿಕಿತ್ಸಾ ಆಸ್ಪತ್ರೆ 1986-87ನೇ ಸಾಲಿನಲ್ಲಿ ಮಂಜೂರಾಗಿರುತ್ತದೆ.

ಈ) ಈ ಆಸ್ಪತ್ರೆ ಮೈಸೂರಿನ ಸರ್ಕಾರಿ ಭಾರತೀಯ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಕಟ್ಟಡದಲ್ಲಿ ನಡೆಯುತ್ತಿದೆ.

ಉ)

ವರ್ಷ	ಹೊರರೋಗಿಗಳ ಚಿಕಿತ್ಸೆ	ಒಳರೋಗಿಗಳ ಚಿಕಿತ್ಸೆ
1988-89	2,986	22
1989-90	3,350	12
1990-91	3,536	13

ಊ) ಹಾಲಿ ಇರುವ ಪ್ರಕೃತಿ ಚಿಕಿತ್ಸಾ ಡಿಪ್ಲೊಮಾ ಕಾಲೇಜು ಪೂರ್ಣ ಪ್ರಮಾಣದ ಕಾಲೇಜಾಗಿ, ಪ್ರಾರಂಭವಾದ ನಂತರ, ವಿದ್ಯಾರ್ಥಿಗಳ ಸೇರ್ಪಡೆಗೆ ಸಂಬಂಧಿಸಿದಂತೆ ನಾರ್ಮ್ಸ್ ಪ್ರಕಾರ ಹಾಸಿಗೆಗಳನ್ನು ಹೆಚ್ಚಿಸುವುದು ಹಾಗೂ ವಿದ್ಯಾರ್ಥಿಗಳ ಬೋಧನಾ ಕ್ರಮಕ್ಕೆ ಪ್ರಾಯೋಗಿಕವಾಗಿ ಅಭ್ಯಾಸ ಮಾಡಲು ಬೇಕಾಗುವ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ಸಮಾಜ ಕಲ್ಯಾಣ ಇಲಾಖೆಯ 'ಸಿ'ದರ್ಜೆ ನೌಕರರ ಸಂಖ್ಯೆ.

3740 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರಿ?

ಅ) ಹಾಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ 15 ವರ್ಷಕ್ಕಿಂತ ಮೇಲ್ಪಟ್ಟು ಸೇವೆ ಸಲ್ಲಿಸಿರುವ 'ಸಿ' ದರ್ಜೆಯ ನೌಕರರ ಸಂಖ್ಯೆ ಎಷ್ಟು?

ಆ) ಇವರಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಪ್ರಥಮ ದರ್ಜೆಯ ಸಹಾಯಕರಾಗಿ ಹಾಗೂ ಸಮಾಜ ಕಲ್ಯಾಣ ವಿಸ್ತರಣಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿರುವವರ ಸಂಖ್ಯೆ ಹಾಗೂ ವಿವರಗಳು ಎಷ್ಟು?

ಇ) ಈ ನೌಕರರಿಗೆ ಯಾವಾಗ ಮುಂಬಡ್ತಿ ನೀಡಲಾಗುವುದು.

ಈ) ಈ ಇಲಾಖೆಯಲ್ಲಿ 'ಸಿ' ದರ್ಜೆ ನೌಕರರಾದ ಪ್ರಥಮ ದರ್ಜೆ ಸಹಾಯಕರ ವೇತನಶ್ರೇಣಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಮಾಜ ಕಲ್ಯಾಣ ವಿಸ್ತರಣಾಧಿಕಾರಿಗಳ ಹುದ್ದೆಯನ್ನು ಕಛೇರಿ ಅಧೀಕ್ಷಕರ ಹುದ್ದೆಯ ವೇತನಶ್ರೇಣಿಗೆ ಮುಂಬಡ್ತಿಯನ್ನು ನೀಡುವ ಅವಕಾಶ ಏತಕ್ಕೆ ಮಾಡಿಕೊಡಬಾರದು.

ಉ) ಇದರಿಂದ ಸರ್ಕಾರಕ್ಕೆ ಆರ್ಥಿಕ ವೆಚ್ಚವಿಲ್ಲದೆ ಹೆಚ್ಚಿನ ಹುದ್ದೆಗಳನ್ನು ಸೃಷ್ಟಿಸದೇ 'ಸಿ' ದರ್ಜೆ ನೌಕರರಿಗೆ ಈ ಇಲಾಖೆಯಲ್ಲಿ ಮುಂಬಡ್ತಿ ಅವಕಾಶ ಮಾಡಿ ಕೊಡಬಹುದಲ್ಲವೇ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) 1088

ಆ) 1) ಎರಡನೇ ದರ್ಜೆ ಗುಮಾಸ್ತರು :

ಗುಮಾಸ್ತೆ ಹಾಗೂ ಬೆರಳಚ್ಚುಗಾರರು-14

2) ಪ್ರಥಮ ದರ್ಜೆ ಗುಮಾಸ್ತರು :

ಸಮಾಜ ಕಲ್ಯಾಣ ವಿಸ್ತರಣಾಧಿಕಾರಿಗಳು -178

ಇ) ಅಂತಿಮ ಜೇಷ್ಠತಾ ಪಟ್ಟಿಯು ಪೂರ್ಣಗೊಂಡ ನಂತರ ಮುಂಬಡ್ತಿಯನ್ನು ಪರಿಶೀಲಿಸಲಾಗುವುದು.

ಈ) ವೃಂದ ಮತ್ತು ನೇಮಕಾತಿಯಲ್ಲಿ ಅವಕಾಶ ಕಲ್ಪಿಸಿಕೊಡಲಾಗಿದೆ.

ಉ) ಆರ್ಥಿಕ ಹೊಣೆ ಇಲ್ಲದೆ ಉನ್ನತ ಹುದ್ದೆಗಳನ್ನು ಸೃಜಿಸದೆಯೇ ಮುಂಬಡ್ತಿ ನೀಡಲು ಸಾಧ್ಯವಿಲ್ಲ.

ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಖಾಯಂ.

3741 - ಶ್ರೀ ಸಿ.ಎಂ. ಲಿಂಗಪ್ಪ(ರಾಮನಗರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಲಿ 35 ತಾಲ್ಲೂಕುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳನ್ನು ಖಾಯಂ ಮಾಡಲಾಗಿದೆಯೇ.

ಆ) ಇಲ್ಲದ ಪಕ್ಷದಲ್ಲಿ ಇವರನ್ನು ಯಾವಾಗ ಖಾಯಂ ಮಾಡಲಾಗುವುದು.

ಇ) ಖಾಯಂ ಮಾಡಲು ವಿಳಂಬವಾಗಲು ಕಾರಣಗಳೇನು?

ಈ) ಹಾಲಿ ಇವರಿಗೆ ನೀಡಿರುವ ಡೆಲಿಗೇಷನ್ ಆಫ್ ಪವರ್ಸ್‌ಗಳು ಯಾವುವು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) ಇಲ್ಲ.

ಆ) ಹಾಲಿ ಇರುವ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಈ ಹುದ್ದೆಗಳನ್ನು ಕೇರ್ಪಡೆಯಾದ ನಂತರ ಮತ್ತು ಹುದ್ದೆಗಳು ಸೃಜನೆಯಾದ 5 ವರ್ಷಗಳ ನಂತರ.

ಇ) ಹಾಲಿ ಇರುವ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಈ ಹುದ್ದೆಗಳ ಸೇರ್ಪಡೆಯಾಗಿಲ್ಲ.

ಈ) ತಾಲ್ಲೂಕಿನಲ್ಲಿರುವ ಎಲ್ಲಾ ಸಮಾಜ ಕಲ್ಯಾಣ ಇಲಾಖಾ ಸಂಸ್ಥೆಗಳ ಮೇಲ್ವಿಚಾರಣೆ ಮತ್ತು ತನಿಖೆ.

ಸಮಾಜ ಕಲ್ಯಾಣ ಇಲಾಖೆಯಲ್ಲಿ ಮುಂಬಡ್ತಿಯ ಬಗ್ಗೆ.

3738 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ 1987 ರಿಂದೀಚೆಗೆ ಮುಂಬಡ್ತಿಯಿಂದ ತುಂಬಬೇಕಾದ ಗ್ರೂಪ್ ಎ,ಬಿ, ಸಿ ಹಾಗೂ ಡಿ ಹುದ್ದೆಗಳು ಹಾಗೆಯೇ ಖಾಲಿ ಉಳಿದಿರುವುದು ನಿಜವೇ?

ಆ) ಹಾಗಿದ್ದಲ್ಲಿ ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡದೇ ಇರಲು ಕಾರಣವೇನು?

ಇ) ಈ ಮುಂಬಡ್ತಿಯಿಂದ ತುಂಬಬೇಕಾದ ಹುದ್ದೆಗಳನ್ನು ಬರ್ತಿ ಮಾಡಲು ಇನ್ನು ಎಷ್ಟು ಕಾಲ ಹಿಡಿಯುತ್ತದೆ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) ಗ್ರೂಪ್ ಬಿ ಮತ್ತು ಸಿ ವೃಂದಗಳಲ್ಲಿ ಮಾತ್ರ ಬಡ್ತಿಯನ್ನು ನೀಡಬೇಕಾದ ಹುದ್ದೆಗಳು ಖಾಲಿ ಇರುತ್ತವೆ.

ಆ) 1) ಕಛೇರಿ ಅಧೀಕ್ಷಕರ ಮೊದಲನೇ ದರ್ಜೆ ಎರಡನೇ ದರ್ಜೆ ಹಾಗೂ ಬೆರಳಚ್ಚುಗಾರರ ಜೇಷ್ಠತಾಪಟ್ಟಿಯು ಪರಿಶೀಲನೆಯಲ್ಲಿದೆ.

2) ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳ ತಾತ್ಕಾಲಿಕ ಜೇಷ್ಠತಾಪಟ್ಟಿಯು ಪರಿಶೀಲನೆಯಲ್ಲಿದೆ.

ಇ) ಸ್ಥಳೀಯ ಅಭ್ಯರ್ಥಿಗಳ ಸೇವೆಯನ್ನು ಕ್ರಮಬದ್ಧಗೊಳಿಸಿದ ನಂತರ, ಮತ್ತು ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಯ ಜೇಷ್ಠತಾ ಪಟ್ಟಿಯನ್ನು ಪರಿಶೀಲಿಸಿದ ನಂತರ ಬಡ್ತಿ ಸ್ಥಾನಗಳನ್ನು ತುಂಬಲಾಗುವುದು.

ಕೊಪ್ಪಳದಲ್ಲಿ ಉದ್ಯೋಗ ವಿನಿಮಯ ಕಛೇರಿ.

3750- ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ್ (ಕೊಪ್ಪಳ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಅ) ಕೊಪ್ಪಳ ಯಲ್‌ಬುರ್ಗಾ, ಕುಷ್ಟಗಿ ಹಾಗೂ ಗಂಗಾವತಿ ತಾಲ್ಲೂಕಿನ ಬಡ ಹಾಗೂ ಅಶಕ್ತ ಅಭ್ಯರ್ಥಿಗಳು 200 ಕಿ.ಮೀ. ದೂರದ ಉದ್ಯೋಗ ವಿನಿಮಯ ಕಛೇರಿ, ರಾಯಚೂರ್‌ದಲ್ಲಿ ನೋಂದಣಿ ಮಾಡಿಕೊಳ್ಳಲಾಗಿದೆ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಆ) ಈ ತೊಂದರೆ ಹಾಗೂ ಕಷ್ಟವನ್ನು ತಪ್ಪಿಸಲು ಯಲಬುರ್ಗಾ, ಕುಷ್ಟಗಿ ಹಾಗೂ ಗಂಗಾವತಿಗಳಿಗೆ ಮಧ್ಯವರ್ತಿ ಸ್ಥಳವಾದ ಕೊಪ್ಪಳದಲ್ಲಿ ಉದ್ಯೋಗ ವಿನಿಮಯ ಕಛೇರಿ ಸರ್ಕಾರ ಸ್ಥಾಪಿಸುವುದೇ?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):

ಅ) ಹೌದು.

ಆ) ರಾಯಚೂರು ಜಿಲ್ಲೆಯ ಕೊಪ್ಪಳದಲ್ಲಿ ಒಂದು ನಗರ ಉದ್ಯೋಗ ವಿನಿಮಯ ಕಛೇರಿಯನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಹಾಸನ ಜಿಲ್ಲೆಯಲ್ಲಿ ಓ.ಬಿ.ಸಿ. ಹಾಸ್ಟೆಲುಗಳ ಮಂಜೂರಾತಿ.

3755 - ಶ್ರೀ ಕೆ.ಹೆಚ್ ಹನುಮೇಗೌಡ (ಹಾಸನ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯ ಯಾವ ಯಾವ ಅಸೆಂಬ್ಲಿ ಕ್ಷೇತ್ರಗಳಲ್ಲಿ ಪ್ರೌಢ ಶಾಲೆಯ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಓ.ಬಿ.ಸಿ. ಹಾಸ್ಟೆಲ್‌ಗಳನ್ನು ಸರ್ಕಾರ ಮಂಜೂರು ಮಾಡಿದೆ. (ವಿವರಗಳನ್ನೊದಗಿಸುವುದು)

ಆ) ಆಯಾ ವಿದ್ಯಾರ್ಥಿನಿಲಯಗಳಲ್ಲಿ ಎಷ್ಟೆಷ್ಟು ವಿದ್ಯಾರ್ಥಿಗಳಿದ್ದಾರೆ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ)

	ವಿಧಾನಸಭಾ ಕ್ಷೇತ್ರದ ಹೆಸರು	ನಿಲಯಗಳ *ಸಂಖ್ಯೆ*	ವಿದ್ಯಾಥಿಗಳ *ಸಂಖ್ಯೆ*
1.	ಹಾಸನ	4	200
2.	ಗಂಡಸಿ	2	100
3.	ಅರಸೀಕೆರೆ	3	140
4.	ಹೊಳೆನರಸೀಪುರ	5	250
5.	ಶ್ರವಣಬೆಳಗೊಳ	4	170
6.	ಅರಕಲಗೂಡು	4	180
7.	ಬೇಲೂರು	2	90
8.	ಸಕಲೇಶಪುರ	4	200
		28	1330

ಹರಿಹರ ಸರ್ಕಾರಿ ಆಸ್ಪತ್ರೆ ಎಕ್ಸರೇ ಕಟ್ಟಡ

3763 - ಡಾ|| ವೈ. ನಾಗಪ್ಪ (ಹರಿಹರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಚಿತ್ರದುರ್ಗ ಜಿಲ್ಲೆ ಹರಿಹರ ಸರ್ಕಾರಿ ಆಸ್ಪತ್ರೆಗೆ ದಾನಿಯೊಬ್ಬರು ಎಕ್ಸ್‌ರೇ ಪ್ಲಾಂಟ್ ಕಟ್ಟಡಕ್ಕೆ 25,000-00 ರೂ. ದೇಣಿಗೆ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

2) ದೇಣಿಗೆ ಕೊಟ್ಟು ಎಷ್ಟು ವರ್ಷಗಳಾದವು? ಇದರ ಬಗ್ಗೆ ತೆಗೆದುಕೊಂಡ ಕ್ರಮ ಏನು ಮತ್ತು ಯಾವಾಗ ಇದನ್ನು ಸಂಪೂರ್ಣಗೊಳಿಸಲಾಗುವುದು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿಲ್ಲ.

ಆ) ಉದ್ಭವಿಸುವುದಿಲ್ಲ.

3ನೇ ಮತ್ತು 4ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಬಗ್ಗೆ.

3765 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 3ನೇ ಮತ್ತು 4ನೇ ತರಗತಿಯಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳನ್ನು ಸಾರ್ವಜನಿಕ ಹಾಸ್ಟೆಲ್‌ಗಳಲ್ಲಿ ಸೇರಿಸಿಕೊಳ್ಳದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಆ) ಹಾಗಿದ್ದಲ್ಲಿ ಸರ್ಕಾರ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಸ್ಟೆಲ್‌ಗಳಲ್ಲಿ 3 ಮತ್ತು 4ನೇ ತರಗತಿಯಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಬೇಕೆಂದು ಆದೇಶ ನೀಡುವುದೇ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) ಹೌದು.

ಆ) 3 ಮತ್ತು 4ನೇ ದರ್ಜೆಯ ಬಾಲಕರು ತಮ್ಮ ಸೌಕರ್ಯಗಳನ್ನು ತಮಗೆ ತಾವೇ ನೋಡಿಕೊಳ್ಳಲು ಅಸಾಧ್ಯವಿರುವುದರಿಂದ ಅವರನ್ನು ವಿಧ್ಯಾರ್ಥಿನಿಲಯಕ್ಕೆ ಸೇರಿಸಲು ಸಾಧ್ಯವಿಲ್ಲ. ಹಿರಿಯ ವಿದ್ಯಾರ್ಥಿನಿಯರು ತಮ್ಮ ಕಿರಿಯ ವಿದ್ಯಾರ್ಥಿನಿಯರನ್ನು ಸಾಮಾನ್ಯವಾಗಿ ಚೆನ್ನಾಗಿ ನೋಡಿಕೊಳ್ಳುವುದರಿಂದ 3ನೇ ಮತ್ತು 4ನೇ ದರ್ಜೆಯ ಬಾಲಕಿಯರನ್ನು ವಿದ್ಯಾರ್ಥಿನಿಲಯಕ್ಕೆ ಸೇರಿಸಿಕೊಳ್ಳಲಾಗುವುದು. ಈ ಪ್ರವೇಶವು ವಸತಿನಿಲಯಗಳಲ್ಲಿ ಸ್ಥಳ ಖಾಲಿ ಇದ್ದಲ್ಲಿ ಮಾತ್ರ ಅನ್ವಯಿಸುತ್ತದೆ.

ಹರಿಜನ ಗಿರಿಜನ ಏಳಿಗೆಗೆ ಮೀಸಲಿಟ್ಟಿರುವ ಹಣದ ವಿವರ.

3767 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1983 ರಿಂದ 1990ರವರೆಗೆ ಸರ್ಕಾರ ಹರಿಜನ ಗಿರಿಜನರ ಸರ್ವೋತೋಮುಖ ಏಳಿಗೆಗಾಗಿ ಎಷ್ಟು ಹಣ ಒದಗಿಸಲಾಗಿತ್ತು ಹಾಗೂ ಅದರಲ್ಲಿ ಎಷ್ಟು ಹಣ ಖರ್ಚು ಆಗಿದೆ

(ವರ್ಷವಾರು ಮಾಹಿತಿ ನೀಡುವುದು)

ಆ) ಈ ದಿಸೆಯಲ್ಲಿ ಒದಗಿಸಿದ ಹಣವನ್ನು ಕಾನೂನು ಬದ್ಧವಾಗಿ ಖರ್ಚು ಮಾಡದ ಅಧಿಕಾರಿಗಳ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

	ಒದಗಿಸಿದ ಹಣ	*ಖರ್ಚಾದ ಹಣ*
	(ಲಕ್ಷ	*ರೂ.ಗಳಲ್ಲಿ)*
1983-84	9677.46	8399.96
1984-85	11211.68	11042.62
1985-86	11216.37	11003.07
1986-87	15979.03	13654.36
1987-88	14803.32	13120.76
1988-89	16011.79	13978.12
1989-90	17479.49	13506.44
1990-91	15542.21	14934.58

ಆ) ಇಂತಹ ಪ್ರಸಂಗಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.

ಎಸ್.ಸಿ/ಎಸ್.ಟಿ.// ಟಿ.ಸಿ.ಹೆಚ್. ಬಿ.ಎಡ್. ಆದ ವಿದ್ಯಾರ್ಥಿಗಳ ಸಂಖ್ಯೆ.

3775 - ಶ್ರೀ ಆರ್.ಟಿ. ತಿಮ್ಮಾಪ್ಪುರ (ಮುದೋಳ್) : ಮಾನ್ಯ ಕಾರ್ಮಿಕ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ?

ಅ) ಎಂಪ್ಲಾಯಮೆಂಟ್ ಎಕ್ಸ್‌ಚೇಂಜ್ ಆಫೀಸಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗ ಬಿ.ಎಡ್. ಟಿ.ಸಿ.ಹೆಚ್. ಆದ ವಿದ್ಯಾರ್ಥಿಗಳು 1990-91ನೇ ಸಾಲಿನಲ್ಲಿ ರಿಜಿಸ್ಟರ್ ಮಾಡಿಸಿದವರ ಸಂಖ್ಯೆ ಎಷ್ಟು?

ಆ) ಇಲ್ಲಿಯವರೆಗೆ ಬಿ.ಎಡ್., ಟಿ.ಸಿ.ಹೆಚ್.ಆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಬ್ಯರ್ಥಿಗಳಿಗೆ ನೌಕರಿ ಅವಕಾಶ ಸಿಕ್ಕಿದೆಯೆ?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):

ಅ) ಬಿ.ಎಡ್ ಪಧವೀಧರರ ಸಂಖ್ಯೆ : 1321

(ಪರಿಶಿಷ್ಟ ಜಾತಿ-1176 ಪರಿಶಿಷ್ಟ ಪಂಗಡ 145)

ಟಿ.ಸಿ.ಹೆಚ್. ಮಾಡಿದವರು ಸಂಖ್ಯೆ : 8124

(ಪರಿಶಿಷ್ಟ ಜಾತಿ-7377 ಪರಿಶಿಷ್ಟ ಪಂಗಡ -747)

(ಜೂನ್ 1991ರ ಅಂತ್ಯದವರೆಗೆ).

ಆ) ದಿನಾಂಕ 11-1-91ರ ವರೆಗೆ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಎಲ್ಲಾ ಟಿ.ಸಿ.ಹೆಚ್ ಆದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಅಭ್ಯರ್ಥಿಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಅಧಿಸೂಚಿತರಾದ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳಿಗೆ ಪುರಸ್ಕರಿಸಲಾಗಿದೆ. ಜುಲೈ 1990ರಿಂದ ಜೂನ್ 1991ರವರೆಗೆ ಉದ್ಯೋಗ ವಿನಿಮಯ ಕಛೇರಿಗಳಲ್ಲಿ ನೋಂದಾಯಿಸಿದ 3138 ಪರಿಶಿಷ್ಟ ಜಾತಿ ಹಾಗೂ 374 ಪರಿಶಿಷ್ಟ ವರ್ಗಕ್ಕೆ ಸೇರಿದ ಬಿ.ಎಡ್. ಅಭ್ಯರ್ಥಿಗಳನ್ನು ವಿವಿಧ ನೇಮಕಾತಿ ಆಯ್ಕೆ ಪ್ರಾಧಿಕಾರದಿಂದ ಅಧಿಸೂಚಿತವಾದ ಹುದ್ದೆಗಳಿಗೆ ಪುರಸ್ಕರಿಸಲಾಗಿದೆ.

ಕೈಗಾರಿಕಾ ಅಭಿವೃದ್ಧಿ ಮಂಡಳಿಯ ಕಾರ್ಯ.

1846 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಪ್ರಾರಂಭವಾದುದು ಯಾವಾಗ.

ಆ) ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ನಿರ್ಮಾಣ ಮಾಡಿರುವ ಪ್ರದೇಶದ ಗ್ರಾಮದ ಹೆಸರುಗಳನ್ನು ತಾಲ್ಲೂಕು ಮತ್ತು ಜಿಲ್ಲಾವಾರು ವಿವರಗಳನ್ನೊದಗಿಸುವುದು, ಈ ಪ್ರದೇಶದಲ್ಲಿ ವಿಂಗಡಿಸಿರುವ ಒಟ್ಟು ನಿವೇಶನಗಳ ಸಂಖ್ಯೆ ಎಷ್ಟು, ಮಾಹಿತಿಗಳನ್ನು ಒದಗಿಸುವುದು.

ಇ) ಕೈಗಾರಿಕಾ ನಿವೇಶನಗಳನ್ನು ಮಾಡಲು ಸರ್ಕಾರದಿಂದ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದ ಆರ್ಥಿಕ ಸೌಲಭ್ಯವೆಷ್ಟು ಬ್ಯಾಂಕುವಾರು ಮತ್ತು ವರ್ಷವಾರು ವಿವರವನ್ನು ಒದಗಿಸುವುದು.

ಈ) ಇದುವರೆವಿಗೂ ಕೈಗಾರಿಕಾ ನಿವೇಶನಗಳನ್ನು ಯಾವ ಯಾವ ಪಂಗಡದ ಜನಾಂಗದವರುಗಳಿಗೆ ಹಂಚಲಾಗಿದೆ, ಸದರಿಯವರಿಂದ ವಸೂಲಾದ ಹಣದ ಮೊತ್ತವೆಷ್ಟು.

ಉ) ಕೈಗಾರಿಕಾ ನಿವೇಶನಗಳ ಮಾರಾಟದಿಂದ ಬಂದ ಹಣದಿಂದ ಸರ್ಕಾರ ಮತ್ತು ಬ್ಯಾಂಕುಗಳಿಂದ ಪಡೆದ ಯಾವ ಯಾವ ಬ್ಯಾಂಕಿಗೆ ಸಾಲ ಮರುಪಾವತಿ

ಮಾಡಲಾಗಿದೆ ಎಂಬ ಅಂಕಿ-ಅಂಶಗಳೊಂದಿಗೆ ವರ್ಷವಾರು ವಿವರಗಳನ್ನೊದಗಿಸುವುದು.

ಊ) ಕೈಗಾರಿಕಾ ಅಭಿವೃದ್ಧಿ ಮಂಡಳಿಯಲ್ಲಿರುವ ನೌಕರರ ಒಟ್ಟು ಸಂಖ್ಯೆ ಎಷ್ಟು ಆ ಪೈಕಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಗ್ರೂಪ್ 'ಎ'ರವರ ಸಂಖ್ಯೆ ಎಷ್ಟು ಇವರಲ್ಲಿ ಯಾವ ವರ್ಗದವರ ಕೊರತೆ, ಸರ್ಕಾರ ಈ ಕೊರತೆಯನ್ನು ಸರಿಪಡಿಸಲು ಕೈಗೊಂಡಿರುವ ಕ್ರಮಗಳೇನು.

ಋ) ರಾಜ್ಯದಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು ಭೂ ಸ್ವಾಧೀನಪಡಿಸಿಕೊಳ್ಳಲಿರುವ ಗ್ರಾಮಗಳಾವುವು, ತಾಲ್ಲೂಕು ಮತ್ತು ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು.

ಋ) ಕೈಗಾರಿಕಾ ನಿವೇಶನವನ್ನು ಯಾವ ಯಾವ ಗ್ರೂಫ್‌ಗಳಿಗೆ ಮಂಜೂರು ಮಾಡಲಾಗಿದೆ ವಿವರಗಳನ್ನು ಒದಗಿಸುವುದು?

ಶ್ರೀಮತಿ ಮನೋರಮ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) 14-05-1966 ರಂದು ಅಸ್ತಿತ್ವ ಗೊಂಡಿತು.

ಆ) ಅನುಬಂಧ 1 ರಲ್ಲಿ ನೀಡಲಾಗಿದೆ.

ಇ) ಇದುವರೆಗೂ ರಾಜ್ಯ ಸರ್ಕಾರ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದ ಆರ್ಥಿಕ ಸೌಲಭ್ಯ ರೂ. 751.03 ಲಕ್ಷಗಳು ಉಳಿದ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಈ) 1. ಮುಂದುವರಿದ ಜನಾಂಗ

2. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ

3. ಹಿಂದುಳಿದ ಜನಾಂಗ

4. ಅನಿವಾಸಿ ಭಾರತೀಯರು

5. ಮಹಿಳಾ ಉದ್ಯಮಿಗಳು

ಸದರಿಯವರಿಂದ ವಸೂಲಾದ ಮೊತ್ತ ರೂ. 54.61 ಕೋಟಿಗಳು.

ಉ) ಅನುಬಂಧ-2ರಲ್ಲಿ ನೀಡಲಾಗಿದೆ.

ಊ) ಅನುಬಂಧ-3 ರಲ್ಲಿ ನೀಡಲಾಗಿದೆ.

ಋ) ಅನುಬಂಧ-4ರಲ್ಲಿ ನೀಡಲಾಗಿದೆ.

ಋ) 1. ಮುಂದುವರಿದ ಜನಾಂಗ

2. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗ

3. ಹಿಂದುಳಿದ ವರ್ಗ

4. ಅನಿವಾಸಿ ಭಾರತೀಯರು

5. ಮಹಿಳಾ ಉದ್ಯಮಿಗಳು.

ಅನುಬಂಧ-1

ಕ್ರಮ ಸಂಖ್ಯೆ	ಗ್ರಾಮದ ಹೆಸರು	ತಾಲ್ಲೂಕು	ನಿವೇಶನಗಳ ಸಂಖ್ಯೆ
1	2	3	4
	ಬೆಂಗಳೂರು ಜಿಲ್ಲೆ		
1)	ಪೀಣ್ಯ ಕೈಗಾರಿಕಾ ಪ್ರದೇಶ ಪೀಣ್ಯ, ಚೊಕ್ಕಸಂದ್ರ, ನಲ್ಲಕರೆನಹಳ್ಳಿ, ಲಗ್ಗೆರೆ	ಬೆಂಗಳೂರು ಉತ್ತರ	842
2)	ದೊಡ್ಡನಕುಂಡಿ: ದ್ಯಾವಸಂದ್ರ ಕೈಗಾರಿಕಾ ಪ್ರದೇಶ, ದೊಡ್ಡನಕುಂಡಿ, ಹೂಡಿ, ಮಹದೇವಪುರ, ದ್ಯಾವಸಂದ್ರ	ಬೆಂಗಳೂರು ದಕ್ಷಿಣ	155
3)	ಕಾಡುಗೋಡಿ: ಸದರಮಂಗಲ 2ನೇ ಹಂತ	ಹೊಸಕೋಟೆ, ಬೆಂಗಳೂರು ದಕ್ಷಿಣ	27
4)	ಕಾಡುಗೋಡಿ 2ನೇ ಹಂತ ಕಾಡುಗೋಡಿ, ಪ್ಲಾನ್‌ಟೇಷನ್	ಹೊಸಕೋಟೆ, ಬೆಂಗಳೂರು ದಕ್ಷಿಣ	38
5)	ಕುಂಬಳಗೋಡು ಕೈಗಾರಿಕಾ ಪ್ರದೇಶ, ಕುಂಬಳಗೋಡು	ಬೆಂಗಳೂರು ದಕ್ಷಿಣ	86
6)	ಹೊಸಕೋಟೆ ಕೈಗಾರಿಕಾ ಪ್ರದೇಶ, ಚೊಕ್ಕಹಳ್ಳಿ	ಹೊಸಕೋಟೆ	160
7)	ದೊಡ್ಡಬಳ್ಳಾಪುರ ಕೈಗಾರಿಕಾ ಪ್ರದೇಶ, ದೊಡ್ಡಬಳ್ಳಾಪುರ, ಬಾಸೆಟ್ಟಿಹಳ್ಳಿ, ವೀರಾಪುರ ಮತ್ತು ಯಳ್ಳುಪುರ	ದೊಡ್ಡಬಳ್ಳಾಪುರ	95
8)	ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಬೊಮ್ಮಸಂದ್ರ, ಹೆಬ್ಬಗೋಡಿ	ಆನೇಕಲ್	465
9)	ಜಿಗಣಿ ಕೈಗಾರಿಕಾ ಪ್ರದೇಶ, ಜಿಗಣಿ	ಆನೇಕಲ್	185
10)	ಅತ್ತಿಬೆಲೆ ಕೈಗಾರಿಕಾ ಪ್ರದೇಶ, ಬಳಗಾರನಹಳ್ಳಿ, ಇಚಂಗ್ಊರು, ಕೃಷ್ಣಸಾಗರ	ಆನೇಕಲ್	112
11)	ವೀರಸಂದ್ರ ಕೈಗಾರಿಕಾ ಪ್ರದೇಶ, ವೀರಸಂದ್ರ	ಆನೇಕಲ್	71
12)	ಕೋಲಾರ ಜಿಲ್ಲೆ. ಚಿಕ್ಕಬಳ್ಳಾಪುರ ಕೈಗಾರಿಕಾ ಪ್ರದೇಶ, ಕಂದಾವರ	ಚಿಕ್ಕಬಳ್ಳಾಪುರ	50
13)	ಮಾಲೂರು ಕೈಗಾರಿಕಾ ಪ್ರದೇಶ, ಕೊರಂಡಹನಹಳ್ಳಿ, ನೂಸೀರೆಗೆ ಕನಚಿಕನ ಹಳ್ಳಿ	ಮಾಲೂರು	86

14)	ತಮಕಾ ಕೈಗಾರಿಕಾ ಪ್ರದೇಶ	ತಮಕಾ,ಕೋಲಾರ	40
15)	ಬಂಗಾರಪೇಟೆ ಕೈಗಾರಿಕಾ ಪ್ರದೇಶ	ಬಂಗಾರಪೇಟೆ	60
	ಮೈಸೂರು ಜಿಲ್ಲೆ		
16)	ಬೆಳಗೋಳ ಕೈಗಾರಿಕಾ ಪ್ರದೇಶ, ಹೆಬ್ಬಾಳ್, ಮೆಟಗಳ್ಳಿ	ಮೈಸೂರು	153
17)	ಬೆಳವಾಡಿ ಕೈಗಾರಿಕಾ ಪ್ರದೇಶ, ಬೆಳವಾಡಿ	ಮೈಸೂರು	40
18)	ಹೂಟಗಳ್ಳಿ ಕೈಗಾರಿಕಾ ಪ್ರದೇಶ, ಹೂಟಗಳ್ಳಿ, ಕೂರ್ಗಳ್ಳಿ	ಮೈಸೂರು	75
19)	ಹೆಬ್ಬಾಳ ಕೈಗಾರಿಕಾ ಪ್ರದೇಶ, ಹೆಬ್ಬಾಳ	ಮೈಸೂರು	458
20)	ನಂಜನಗೂಡು ಕೈಗಾರಿಕಾ ಪ್ರದೇಶ, ಕಲ್ಲಹಳ್ಳಿ, ಚಾಮಲಾಪುರ	ನಂಜನಗೂಡು	75
21)	ತಾಂಡ್ಯ ಕೈಗಾರಿಕಾ ಪ್ರದೇಶ, ತಾಂಡ್ಯ	ನಂಜನಗೂಡು	14
	ಮಂಡ್ಯ ಜಿಲ್ಲೆ		
22)	ಸೋಮನಹಳ್ಳಿ ಕೈಗಾರಿಕಾ ಪ್ರದೇಶ	ಮದ್ದೂರು	65
23)	ಮಂಡ್ಯಾ ಕೈಗಾರಿಕಾ ಪ್ರದೇಶ, ಯಲಿಯೂರು, ಯಲಚಕನಹಳ್ಳಿ	ಮಂಡ್ಯ	77
	ಕೊಡಗು ಜಿಲ್ಲೆ		
24)	ಕುಶಾಲ್‌ನಗರ ಕೈಗಾರಿಕಾ ಪ್ರದೇಶ, ಕುಡ್‌ಲೂರು.ಕೆ.	ಸೋಮವಾರಪೇಟೆ	37
	ದಕ್ಷಿಣ ಕನ್ನಡ ಜಿಲ್ಲೆ		
25)	ಬೈಕಂಪಾಡಿ ಕೈಗಾರಿಕಾ ಪ್ರದೇಶ, ಬೈಕಂಪಾಡಿ	ಮಂಗಳೂರು	300
26)	ಶಿವಳ್ಳಿ ಕೈಗಾರಿಕಾ ಪ್ರದೇಶ, ಶಿವಳ್ಳಿ	ಉಡುಪಿ	80
27)	ಕಾರ್ನಾಡ್ ಕೈಗಾರಿಕಾ ಪ್ರದೇಶ, ಕಾರ್ನಾಡ್	ಮಂಗಳೂರು	66
	ಶಿವಮೊಗ್ಗ ಜಿಲ್ಲೆ		
28)	ಶಿವಮೊಗ್ಗ-ಭದ್ರಾವತಿ ಕೈಗಾರಿಕಾ ಪ್ರದೇಶ, ಮೆಚ್‌ನಹಳ್ಳಿ, ಜಡಿಕಟ್ಟೆ	ಶಿವಮೊಗ್ಗ-ಭದ್ರಾವತಿ ಕಲ್ಲೂರು	110
29)	ಮಂಡಲಿ ಕೈಗಾರಿಕಾ ಪ್ರದೇಶ, ಮಂಡಲಿ, ಕಲ್ಲೂರು	ಕಲ್ಲೂರು	46
	ಚಿತ್ರದುರ್ಗ ಜಿಲ್ಲೆ		
30)	ದಾವಣಗೆರೆ ಕೈಗಾರಿಕಾ ಪ್ರದೇಶ, ಅವರಗೆರ	ದಾವಣಗೆರೆ	62

31)	ಹರಳಾಪುರ ಕೈಗಾರಿಕಾ ಪ್ರದೇಶ, ಹರಳಾಪುರ	ಹರಿಹರ	43
32)	ಕೆಳಕೋಟೆ ಕೈಗಾರಿಕಾ ಪ್ರದೇಶ, ಕೆಳಕೋಟೆ	ಚಿತ್ರದುರ್ಗ	80
	ತುಮಕೂರು ಜಿಲ್ಲೆ		
33)	ಹಿರೇಹಳ್ಳಿ ಕೈಗಾರಿಕಾ ಪ್ರದೇಶ, ಹಿರೇಹಳ್ಳಿ, ಮಂಚಕಲಕುಪ್ಪೆ	ತುಮಕೂರು	77
34)	ಸತ್ಯಮಂಗಲ ಕೈಗಾರಿಕಾ ಪ್ರದೇಶ, ಸತ್ಯಮಂಗಲ	ತುಮಕೂರು	35
35)	ಅಂತರಸನಹಳ್ಳಿ ಕೈಗಾರಿಕಾ ಪ್ರದೇಶ, ಅಂತರಸನಹಳ್ಳಿ,ಲಿಂಗಾಪುರ	ತುಮಕೂರು	92
36)	ಕುಣಿಗಲ್ ಕೈಗಾರಿಕಾ ಪ್ರದೇಶ, ಕಲ್ಲನಾಯಕನಹಳ್ಳಿ	ಕುಣಿಗಲ್	85
	ಬೆಳಗಾಂ ಜಿಲ್ಲೆ		
37)	ಕಾಕತಿ-ಕಂಗ್ರಳ್ಳಿ ಕೈಗಾರಿಕಾ ಪ್ರದೇಶ, ಕಾಕತಿ-ಕಂಗ್ರಳ್ಳಿ ಬಿ.ಕೆ.	ಬೆಳಗಾಂ	80
38)	ಹೊನಗಾ ಕೈಗಾರಿಕಾ ಪ್ರದೇಶ, ಹೊನಗಾ	ಬೆಳಗಾಂ	182
39)	ಗೋಕಾಕ್ ಕೈಗಾರಿಕಾ ಪ್ರದೇಶ, ಗೋಕಾಕ್	ಗೋಕಾಕ್	8
40)	ಮಾಚ್ ಕೈಗಾರಿಕಾ ಪ್ರದೇಶ, ಮಾಚ್	ಬೆಳಗಾಂ	3
	ರಾಯಚೂರು ಜಿಲ್ಲೆ		
41)	ರಾಯಚೂರು ಕೈಗಾರಿಕಾ ಪ್ರದೇಶ, ರಾಯಚೂರು	ರಾಯಚೂರು ಜಿಲ್ಲೆ	87
42)	ಡೆಸಗೂರ್ ಕೈಗಾರಿಕಾ ಪ್ರದೇಶ, ಡೆಸಗೂರ್	ರಾಯಚೂರು ಜಿಲ್ಲೆ	25
	ಧಾರವಾಡ ಜಿಲ್ಲೆ		
43)	ಸುತ್ತೂರ್ ಕೈಗಾರಿಕಾ ಪ್ರದೇಶ, ಸುತ್ತೂರ್	ಧಾರವಾಡ	21
44)	ಲಕ್ಕಮ್ಮನಹಳ್ಳಿ ಕೈಗಾರಿಕಾ ಪ್ರದೇಶ, ಲಕ್ಕಮ್ಮನಹಳ್ಳಿ	ಧಾರವಾಡ	39
45)	ರಾಯಪುರ ಕೈಗಾರಿಕಾ ಪ್ರದೇಶ, ರಾಯಪುರ	ಧಾರವಾಡ	90
46)	ತಾರೀಹಾಳ್ ಕೈಗಾರಿಕಾ ಪ್ರದೇಶ, ತಾರೀಹಾಳ್	ಹುಬ್ಬಳ್ಳಿ	220
47)	ಬೇಲೂರು ಕೈಗಾರಿಕಾ ಪ್ರದೇಶ, ಗುಂಗನಕಟ್ಟೆ, ಮುಮ್ಮಿನಕಟ್ಟೆ, ನೀನಲಕಟ್ಟೆ	ಧಾರವಾಡ	335

48.	ಗೋಕುಲ ಕೈಗಾರಿಕಾ ಪ್ರದೇಶ, ಗೋಕುಲ	ಧಾರವಾಡ	10
	ಬೀದರ್ ಜಿಲ್ಲೆ		
49.	ನವಬಾದ್ ಕೈಗಾರಿಕಾ ಪ್ರದೇಶ, ನವಬಾದ್	ಬೀದರ್	75
50.	ಕೊಲ್‌ಹಾಲ್ ಕೈಗಾರಿಕಾ ಪ್ರದೇಶ, ಕೊಲ್‌ಹಾಲ್ ಬ್ಯಾಬಚವಾಡಿ, ನಿಜಾಮ್‌ಪುರ, ನವಬಾದ್, ಬೆಲ್ಲೂರ	ಬೀದರ್	390
51.	ಹುಮ್ನಾಬಾದ್ ಕೈಗಾರಿಕಾ ಪ್ರದೇಶ, ಗಡವಂತಿ	ಬೀದರ್	150
	ಬಿಜಾಪುರ ಜಿಲ್ಲೆ		
52.	ಮಹಲ್‌ಬಾಗಾಯತ್ ಕೈಗಾರಿಕಾ ಪ್ರದೇಶ, ಮಹಲ್‌ಬಾಗಯತ್	ಬಿಜಾಪುರ	112
53.	ಆಸಂಗಿ ಕೈಗಾರಿಕಾ ಪ್ರದೇಶ, ಜಮಖಂಡಿ	ಿಃ	
	ಹಾಸನಜಿಲ್ಲೆ		
54.	ಹಾಸನ ಕೈಗಾರಿಕಾ ಪ್ರದೇಶ, ಬಿ. ಕಟ್ಟಿಹಳ್ಳಿ	ಹಾಸನ	48
	ಗುಲ್ಬರ್ಗಾ ಜಿಲ್ಲೆ		
55.	ಗುಲ್ಬರ್ಗಾ ಕೈಗಾರಿಕಾ ಪ್ರದೇಶ, ಕಪನೂರು	ಗುಲ್ಬರ್ಗಾ	207
	ಬಳ್ಳಾರಿ ಜಿಲ್ಲೆ		
56.	ಹೊಸಪೇಟೆ ಕೈಗಾರಿಕಾ ಪ್ರದೇಶ, ಸಂಕಲಾಪುರ	ಹೊಸಪೇಟೆ	16
57.	ಬಳ್ಳಾರಿ ಕೈಗಾರಿಕಾ ಪ್ರದೇಶ, ಮುಂಡರಗಿ	ಬಳ್ಳಾರಿ	45
	ಉತ್ತರ ಕನ್ನಡ ಜಿಲ್ಲೆ		
58.	ಶಿರವಾಡ ಕೈಗಾರಿಕಾ ಪ್ರದೇಶ, ಶಿರವಾಡ	ಶಿರವಾಡ	45
59.	ಬಳ್ಳಾರಿ-ಅನಂತಪುರ ಕೈಗಾರಿಕಾ ಪ್ರದೇಶ	ಬಳ್ಳಾರಿ	26

ಅನುಬಂಧ-2

ಬ್ಯಾಂಕುವಾರು ಮತ್ತು ಹಣಕಾಸು ಸಂಸ್ಥೆವಾರು ಹಾಗೂ ವರ್ಷವಾರು ಆರ್ಥಿಕ ಸೌಲಭ್ಯ ಮತ್ತು ಸಾಲ ಮರುಪಾವತಿ ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರಮ ಸಂಖ್ಯೆ	ಸಂಸ್ಥೆಗಳ ಹೆಸರು	ವರ್ಷ	ಆರ್ಥಿಕ ಸಹಾಯ (ರೂ. ಲಕ್ಷಗಳಲ್ಲಿ)		ಮರುಪಾವತಿ ಮಾಡಲಾದ ಮೊತ್ತ		ಈಗಿರುವ ಸಾಲದ ಮೊತ್ತ (ರೂ. ಲಕ್ಷಗಳಲ್ಲಿ)	
1.	ಭಾರತೀಯ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ (ಐಡಿಬಿಐ)	1988-89 1991-92	200.00 100.00	300.00	124.98	175.02	(ಜಂಟಿಯಾಗಿರುತ್ತದೆ) ಕೆಐಎಡಿಬಿ ಕೆಇಬಿ ಕೆಎಸ್‌ಆರ್‌ಟಿಸಿ	68.72 87.40 18.90
2.	ಸ್ಟೇಟ್ ಬ್ಯಾಂಕ್ ಆಫ್ ಮೈಸೂರು	1985-86	-	25.00	25.00	-		
3.	ಸ್ಟೇಟ್ ಬ್ಯಾಂಕ್ ಆಫ್ ಪಾಟಿಯಾಲ	1985-86 86-87 88-89	 35.47 4.53	15.00 40.00	 55.00	-		
4.	ಕರ್ನಾಟಕ ರಾಜ್ಯ ಹಣಕಾಸು ನಿಗಮ	1985-86	-	60.00	60.00	-		
5.	ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಬಂಡವಾಳ ಅಭಿವೃದ್ಧಿ ನಿಗಮ.	1986-87	-	11.03	11.03			
6.	ಎಚ್.ಡಿ.ಎಫ್.ಸಿ	1984-85 1986-87	45.00 60.00	105.00	105.00	-		
7.	ರಾಜ್ಯ ಸರ್ಕಾರದಿಂದ ಪಡೆದ ಸಾಲ	1989-90 1990-91	90.00 105.00	195.00	-	195.00		
				751.03	381.01	370.02		

(*) ಕೈಗಾರಿಕಾ ರಹಿತ ಬೀದರ್ ಜಿಲ್ಲೆಯಲ್ಲಿ ಪೂರ್ವಭಾವೀ ರಚನಾ ಸೌಲಭ್ಯಗಳ ಅಭಿವೃದ್ಧಿಗಾಗಿ ನಮ್ಮ ಮಂಡಳಿಯು ಪ್ರಮುಖ ಏಜೆನ್ಸಿಯಾಗಿ ಇತರ ಸಂಸ್ಥೆಗಳ ಪರವಾಗಿ ಭಾರತೀಯ ಕೈಗಾರಿಕಾ ಅಭಿವೃದ್ಧಿ ಬ್ಯಾಂಕಿನಿಂದ ಜಂಟಿಯಾಗಿ ಸಾಲ ಪಡೆದಿರುತ್ತದೆ.

ಅನುಬಂಧ-3

1) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಒಟ್ಟು ನೌಕರರ ಸಂಖ್ಯೆ: 505.

(ಮಂಡಳಿಯ ನೌಕರರ ಸಂಖ್ಯೆ 443

ಎರವಲು ಸೇವೆಯ ನೌಕರರ ಸಂಖ್ಯೆ 62

ಒಟ್ಟು 505

2) ಪರಿಶಿಷ್ಟ ಜಾತಿಗೆ ಸೇರಿದ ನೌಕರರ ಸಂಖ್ಯೆ : 24

ಪರಿಶಿಷ್ಟ ವರ್ಗಕ್ಕೆ ಸೇರಿದ ನೌಕರರ ಸಂಖ್ಯೆ : 10

ಗ್ರೂಪ್ 'ಎ' ಗೆ ಸೇರಿದ ನೌಕರರ ಸಂಖ್ಯೆ : 2

3) ವಿವಿಧ ವರ್ಗದವರ ಕೊರತೆಯು ಈ ಕೆಳಕಂಡಂತೆ ಇರುತ್ತದೆ :

1)	ಯೋಜನಾಧಿಕಾರಿಗಳು:	ಎಸ್.ಸಿ. :	ಸೂಕ್ತ ಅಭ್ಯರ್ಥಿ ಸಿಗದ ಕಾರಣ ಸಾಮಾನ್ಯ ಅಭ್ಯರ್ಥಿಯನ್ನು ತುಂಬಲಾಗಿದೆ, ಮುಂದೆ ಸೂಕ್ತ ಅಭ್ಯರ್ಥಿ ದೊರಕಿದಲ್ಲಿ ಕ್ರಮ ಕೈಗೊಳ್ಳಲಾಗುವುದು.
2)	ವ್ಯವಸ್ಥಾಪಕರು (ಆಂತರಿಕ ಲೆಕ್ಕ ಪರಿಶೋಧನೆ)	ಎಸ್.ಸಿ	-"-
3)	ಕಿರಿಯ ಅಭಿಯಂತರು (ವಿದ್ಯುತ್)	ಎಸ್.ಸಿ.	-"-
4)	ಸಹಾಯಕರು (ಹೆಚ್ಚುವರಿ ಪಟ್ಟಿಯಲ್ಲಿ)	ಎಸ್.ಟಿ.	-"-
5)	ಕಿರಿಯ ಸಹಾಯಕರು (ಹೆಚ್ಚುವರಿ ಪಟ್ಟಿಯಲ್ಲಿ)	ಎಸ್.ಟಿ.	-"-
6)	ಉಪ ಅಭಿವೃದ್ಧಿ ಅಧಿಕಾರಿಗಳು	ಎಸ್.ಟಿ.	ಸಹಾಯಕ ಅಭಿಯಂತರರ ಹುದ್ದೆಯಲ್ಲಿ ಸೂಕ್ತ ಅಭ್ಯರ್ಥಿಗಳು ಇರಲಿಲ್ಲವಾದ ಕಾರಣ ಸಾಮಾನ್ಯ ಅಭ್ಯರ್ಥಿಯನ್ನು ತುಂಬಲಾಗಿದೆ.
7)	ಸಹಾಯಕ ಅಭಿಯಂತರರು	ಎಸ್.ಟಿ.	-"-
8)	ಸಹಾಯಕ ಅಭಿಯಂತರರು (ವಿದ್ಯುತ್)	ಎಸ್.ಟಿ.	-"-

ಅನುಬಂಧ-4

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	ಗ್ರಾಮ
1	2	3	4
1.	ಗುಲ್ಬರ್ಗ	ಚಿಂಚೋಳಿ	ಚಿಂಚೋಳಿ
		ಶಪುರ್	ಗೋಗಿ
		ಗುಲ್ಬರ್ಗ	ಬೆಳವಾಡ
		ಸೇಡಂ	ಸೇಡಂ
2.	ಬೀದರ್	ಬೀದರ್	ಜನವಾಡ
			ಮರ್‌ಕಲ್
			ಅಲಿಯಾಬಾದ್
			ಬಾಕ್‌ಜೋಡಿ
			ಬೇಲ್ಲೂರ
		ಬಸವಕಲ್ಯಾಣ	ತಿಪ್ರಾಂತ್
		ಹುಮ್ನಬಾದ್	ಸಿಂಧಬಂಧಗಿ
3.	ರಾಯಚೂರು	ರಾಯಚೂರು	ಕುಕನೂರು
			ಯಗನೂರು
			ಚಿಕ್ಕಸಗೂರು
			ವಡಲೂರು
			ಯರಾಮರಸ
			ಪುತಗಲ
		ಕುಷ್ಟಗಿ	ಕುಷ್ಟಗಿ
		ದೇವದುರ್ಗ	ದೇವದುರ್ಗ
		ಮಾನ್ವಿ	ಮಾನ್ವಿ ಮತ್ತು ಬಾಪುರ
		ಗಂಗಾವತಿ	ಮರಳಿ
		ಸಂಧನೂರ್	ಹೊಸಹಳ್ಳಿ
		ಯಲ್ಬರ್ಗ	ಯಲ್ಬರ್ಗ
4.	ಬಳ್ಳಾರಿ	ಬಳ್ಳಾರಿ	ಮೀನಹಳ್ಳಿ
			ಮುಂಡರಗಿ ಮತ್ತು ಹಲಗುಂದಿ
		ಕುಡ್ಲಗಿ	ಕುಡ್ಲಗಿ
		ಹರಪನಹಳ್ಳಿ	ಹರಪನಹಳ್ಳಿ
		ಸಿರಗುಪ್ಪ	ದೇವಲಾಪುರ
			ಹೊನ್ನಾರಹಳ್ಳಿ
			ಹಲ್‌ಕೋಟೆ
		ಸಂದೂರು	ಕೃಷ್ಣನಗರ

5.	ದಾರವಾಡ	ದಾರವಾಡ	ಬೇಲೂರ್
			ಮಮ್ಮಿಗಟ್ಟಿ
			ಗುಂಗರಕಟ್ಟಿ
			ನರೇಂದ್ರ
			ಕೆಲಗೇರಿ
		ರಾಣಿಬೆನ್ನೂರು	ಕವಲೆತ್ತು
		ಹುಬ್ಬಳ್ಳಿ	ಎಂ.ಟಿ.ಸಾಗರ್
			ತಾರೀಹಾಳ
			ಗೋಕುಲ
			ರೇವತಿಹಾಲ್
		ಕಲಗಟಗಿ	ಚಲಮಟ್ಟಿ
			ಬನಹಟ್ಟಿ
			ಗುಡಿಹಾಲ
		ಗದಗ	ಗದಗ
		ರೋಣ	ರೋಣ
		ಶಿಗ್ಗಾಂವ್	ಶಿಗ್ಗಾಂವ್
		ಹಿರೇಕೇರೂರ್	ಹಿರೇಕೇರೂರ್
		ಹನಗಲ	ಹನಗಲ
6.	ಉತ್ತರ ಕನ್ನಡ	ಕಾರವಾರ	ಮಜಲಿ
			ಕಠಿಣಕೋಣ
			ಚಿಟಕಲ
			ಶಿರವಾಡ
		ಅನ್‌ಕೋಲ	ಬಸಗೋಡಿ
7.	ಬಿಜಾಪುರ	ಬದಾಮಿ	ಬದಾಮಿ
			ನಾಗರಾಳ
			ಪಟ್ಟದಕಲ್ಲು
		ಇಂಡಿ	ಇಂಡಿ
		ಶಿಂಡಗಿ	ಶಿಂಡಗಿ
		ಬಿಜಾಪುರ	ಮಹಲ್‌ಬಾಗಯತ್
		ಮುದೋಳ	ನಾಗಣಾಪುರ
8.	ಬೆಳಗಾಂ	ಚಿಕ್ಕೋಡಿ	ನಿಪ್ಪಾಣಿ
		ಸೌಂದತ್ತಿ	ಎಡ್ರಾವಿ
		ಹುಕ್ಕೇರಿ	ಕನಗಲ
		ಗೋಕಾಕ್	ಗೋಕಾಕ್
			ಶಿವಪುರ
			ಕೋನೂರ್
		ಬೆಳಗಾಂ	ಕನಬುರ್ಗಿ
			ಮಾಚಿ
			ಕಂಗ್ರಳ್ಳಿ
			ಕಾಕತಿ, ಯಮುನಾಪುರ

9.	ಬೆಂಗಳೂರು	ಬೆಂಗಳೂರು ದಕ್ಷಿಣ ಹೊಸಕೋಟೆ ನೆಲಮಂಗಲ ಚನ್ನಪಟ್ಟಣ ಆನೇಕಲ್	ಹೂಡಿ, ಪಟ್ಟಂದೂರು ಅಗ್ರಹಾರ ದೊಡ್ಡತೇಗೂರು ಚೊಕ್ಕಹಳ್ಳಿ, ಕನಿಕಲ ದೇವನಗುಂದಿ ದೊಡ್ಡದಾಸರಹಳ್ಳಿ ತರಬಳ್ಳಿ, ನಿಡವಂದ ಭಾರತೀಪುರ, ಯಡೇನಹಳ್ಳಿ ತಗಟೀಗೆರೆ ಯಾರಂಡಹಳ್ಳಿ ಜಿಗಣಿ, ಬುಕ್ಕಸಾಗರ
10.	ಕೋಲಾರ	ಶ್ರೀನಿವಾಸಪುರ ಕೋಲಾರ ಬಾಗೇಪಳ್ಳಿ ಗುಡೇಬಂಡೇ ಮಾಲೂರು	ಕೊಲ್ಲೂರ್, ತಮಕ ಕೊಂಡರೆಡ್ಡಿಪಲ್ಲಿ ದೊಡ್ಡನಚಾರ್ಲು ಸೊಸಿಗೇರೇ ಕಂಚಕನಹಳ್ಳಿ ಕೋರಂಡಹಳ್ಳಿ
11.	ಶಿವಮೊಗ್ಗ	ಹೊನ್ನಾಳಿ ಶಿವಮೊಗ್ಗ	ಹೊನ್ನಾಳಿ, ಹಿರೇಮಠ ಕಲ್ಲಹಳ್ಳಿ, ಗೋಪಾಲ
12.	ಚಿತ್ರದುರ್ಗ	ಚಿತ್ರದುರ್ಗ ಜಗಲೂರು, ಹರೀಹರ	ಮದಕರಿಪುರ, ಕೆಳಕೋಟೆ ಜಗಲೂರು, ಹರಲಪುರ
13.	ತುಮಕೂರು	ತುರುವೇಕೆರೆ ತಿಪಟೂರು ತುಮಕೂರು ಕೊರಟಗೆರೆ ಪಾವಗಡ ಚಿಕ್ಕನಾಯಕಹಳ್ಳಿ ಕುಣಿಗಲ್	ತುರುವೇಕೆರೆ, ಕಿಬ್ಬನಹಳ್ಳಿ ತಿಪಟೂರು ಯೇಡೇನಹಳ್ಳಿ ಅಂತರಸನಹಳ್ಳಿ ಬುಕ್ಕ ಪಟ್ಟಣ ಅಗ್ರಹಾರ, ಪಾವಗಡ ಎಳನಾಡ್ ನಿಡಮಾವಿನಪುರ
14.	ದಕ್ಷಿಣಕನ್ನಡ	ಮಂಗಳೂರು	ಬಾಲ, ತೋಗುರ್ ಕುಲ್ಯೆ, ಸರ್ಪಾಡಿ ಚಲ್ಯೆರಿ, ಕುತೆತ್ತೂರ್ ಕಲಾವರ್, ಪಾರ್‌ಮಡಿ ಮದ್ಯ, ಬೈಕಂಪಾಡಿ

15.	ಮೈಸೂರು	ಮೈಸೂರು	ಹೆಬ್ಬಾಳ್, ಹಿನಕಲ್ ಮೇಟಗಳ್ಳಿ, ಬೆಲವತ್ತ ನಾಗನಹಳ್ಳಿ, ಕೂರ್ಗಳ್ಳಿ ಸತ್ಯಗಲ, ಮುಡಿಗುಂಡ ಕಲ್ಲಹಳ್ಳಿ, ಅಲಗಂಜ
		ಕೊಳ್ಳೇಗಾಲ	ಮಲ್ಲುಪುರ, ಚಮಲಪುರ
		ನಂಜನಗೂಡು	ಕತವಡಿಪುರ
		ಹುಣಸೂರು	ಮಕ್ಕೇನಹಳ್ಳಿ
16.	ಮಂಡ್ಯ	ಮಳವಳ್ಳಿ	ಮಂಚನಪುರ ಪಂಡಿತನಹಳ್ಳಿ ಬಾಚನಹಳ್ಳಿ
		ಮದ್ದೂರು	ಮಾಚನಪಲ್ಲಿ
		ಮಂಡ್ಯ	ಸೋಮನಹಳ್ಳಿ ಗಜ್ಜಲಗೆರೆ, ಗುತ್ತಲು
17.	ಹಾಸನ	ಹಾಸನ	ಬೊಮ್ಮನಾಯಕನಹಳ್ಳಿ ದೊಡ್ಡಬಸವನಹಳ್ಳಿ ಚಿಕ್ಕಬಸವನಹಳ್ಳಿ ಕೌಶಿಕ ಚೆನ್ನಪಟ್ಟಣ ಶಂಕಲಪುರ ನಾಗತವಳ್ಳಿ ಬಿ.ಕಾಟಹಳ್ಳಿ ಕಾಚನಾಯಕನಹಳ್ಳಿ ಉಪ್ಪನಹಳ್ಳಿ ತಿಮ್ಮೇನಹಳ್ಳಿ

ಸಣ್ಣ ಕೈಗಾರಿಕಾ ಅಭಿವೃದ್ಧಿ ಸಂಸ್ಥೆಯ ಮೂಲಕ ಷೆಡ್ಡುಗಳು

1847 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ಸಂಸ್ಥೆ ಪ್ರಾರಂಭವಾದದ್ದು ಯಾವಾಗ ?
ಇದುವರೆವಿಗೂ ನಿರ್ಮಾಣ ಮಾಡಿರುವ ಕೈಗಾರಿಕಾ ಶೆಡ್ಡುಗಳೆಷ್ಟು ?

ಆ) ಕೈಗಾರಿಕಾ ಶೆಡ್ಡುಗಳನ್ನು ಯಾವ ಯಾವ ಪ್ರದೇಶದಲ್ಲಿ ನಿರ್ಮಿಸಲಾಗಿದೆ ? (ವಿವರ ನೀಡುವುದು)

ಇ) ಕೈಗಾರಿಕಾ ಶೆಡ್ಡುಗಳನ್ನು ನಿರ್ಮಾಣ ಮಾಡಲು ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದಿರುವ ಸಾಲದ ಮೊತ್ತವೆಷ್ಟು ? ಬ್ಯಾಂಕುಗಳವಾರು, ವರ್ಷವಾರು, ಅಂಕಿ ಅಂಶಗಳ ಮಾಹಿತಿಯನ್ನು ನೀಡುವುದು.

ಈ) ಕೈಗಾರಿಕಾ ಶೆಡ್ಡುಗಳನ್ನು ನಿರ್ಮಾಣ ಮಾಡಲೂ ಪಡೆದಿರುವ ಸಾಲದಲ್ಲಿ ಮರುಪಾವತಿ ಮಾಡಿರುವ ಹಣವೆಷ್ಟು? ವರ್ಷವಾರು, ಬ್ಯಾಂಕುವಾರು, ಅಂಕಿ ಅಂಶಗಳ ಮಾಹಿತಿಯನ್ನು ಒದಗಿಸುವುದು.

ಉ) ರಾಜ್ಯದಲ್ಲಿ ನಿರ್ಮಾಣವಾಗಿರುವ ಶೆಡ್ಡುಗಳಲ್ಲಿ ಹರಿಜನ-ಗಿರಿಜನ ಅಲೆಮಾರಿ ಜನಾಂಗ ಹಾಗೂ ಇತರರಿಗೆ ಹಂಚಿರುವ ಶೆಡ್ಡುಗಳೆಷ್ಟು? ಇವರಿಂದ ವಸೂಲಾದ ಹಣವನ್ನು ಸರ್ಕಾರಕ್ಕೆ ಮರುಪಾವತಿಯಾಗಿರುವ ಹಣವೆಷ್ಟು? ವಿವರವನ್ನು ನೀಡುವುದು, ವರ್ಷವಾರು.

ಊ) ಕೈಗಾರಿಕಾಭಿವೃದ್ಧಿ ನಿಗಮದ ಆಡಳಿತ ಕಛೇರಿಯ ನವೀಕರಣಕ್ಕಾಗಿ ಖರ್ಚು ಮಾಡಿರುವ ಹಣವೆಷ್ಟು? ಅಂಕಿ ಅಂಶಗಳೊಂದಿಗೆ ವರ್ಷವಾರು, ಐಟಂವಾರು, ಯೂನಿಟ್‌ವಾರು, ವಿವರಗಳನ್ನು ಒದಗಿಸುವುದು.

ಋ) ಕೈಗಾರಿಕಾಭಿವೃದ್ಧಿ ನಿಗಮದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು? ಈ ಪೈಕಿ ಪರಿಶಿಷ್ಟ ಜಾತಿ-ವರ್ಗ ಗ್ರೂಪ್ ಎ ಹಾಗೂ ಇತರೇ ವರ್ಗದವರು ರಾಜ್ಯದಲ್ಲಿರುವ ಸಂಖ್ಯೆಯ ಪ್ರಮಾಣವನ್ನು ಶೇಕಡಾವಾರು ತಿಳಿಸುವುದು, ಇದರಲ್ಲಿ ಕೊರತೆಯಿರುವ ಗುಂಪು ಯಾವುದು?

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು)

ಅ) 1960.

4197.

ಆ) ವಿವರಣಾ ಪಟ್ಟಿಯನ್ನು ಲಗತ್ತಿಸಲಾಗಿದೆ.

ಇ) ರೂ. 2521.54 ಲಕ್ಷಗಳು

ವಿವರಣಾ ಪಟ್ಟಿಯನ್ನು ಲಗತ್ತಿಸಲಾಗಿದೆ.

ಈ) ರೂ.1447.48 ಲಕ್ಷಗಳು ವಿವರಣಾ ಪಟ್ಟಿಯನ್ನು ಲಗತ್ತಿಸಲಾಗಿದೆ.

ಉ) 116

29.33 ಲಕ್ಷಗಳು ಇದರಲ್ಲಿ ರೂ. 0.78 ಲಕ್ಷ ಸರ್ಕಾರಕ್ಕೆ ಹಾಗೂ 24.74 ಲಕ್ಷ ರೂ. ಬ್ಯಾಂಕುಗಳಿಗೆ ಮರುಪಾವತಿ ಮಾಡಲಾಗಿದೆ.

ಊ) ಕಟ್ಟಡದ ನವೀಕರಣಕ್ಕಾಗಿ ರೂ. 11.19 ಲಕ್ಷಗಳಷ್ಟು ಅಂದಾಜಿನ ಕೆಲಸವನ್ನು ಕೈಗೆತ್ತಿಕೊಳ್ಳಲಾಗಿದ್ದು, ಸದರೀ ಕೆಲಸವು ಪ್ರಗತಿಯಲ್ಲಿರುತ್ತದೆ.

ಋ) 663

	ನೌಕರರಸಂಖ್ಯೆ	ಶೇಕಡಾವಾರು
ಪ.ಜಾತಿ	111	16.74
ಪ.ಪಂಗಡ	26	3.92
ಇತರರು	526	79.34

ಗ್ರೂಪ್ 'ಬಿ'ಗೆ ಸರಿಸಮನಾದ 2 ಹುದ್ದೆಗಳನ್ನು ಅಂದರೆ, ಒಂದು ಪರಿಶಿಷ್ಟ ಜಾತಿಯಲ್ಲಿ ಹಾಗೂ ಒಂದು ಪರಿಶಿಷ್ಟ ಪಂಗಡದಲ್ಲಿ ಕೊರತೆ ಎಂದು ಗುರುತಿಸಲಾಗಿದ್ದು. ಅವುಗಳ ನೇಮಕಾತಿಗೆ ಕ್ರಮ ಕೈಗೊಳ್ಳಲಾಗಿದೆ.

Grand Total	5330.17,95,000	1455,85,75,000	6786,03,70,000

KARNATAKA STATE SMALL INDUSTRIES DEVELOPMENT CORPORATION LIMITED
(A GOVERNMENT OF KARNATAKA CONCERN)

Details of Industrial Estate in Karnataka

Sl. No.	Name of the Indl. Estate	District	Year of Completion of sheds	No. of Sheds		Remarks
				Completed	Under construction	
1	2	3	4	5	6	7
1.	Rajajinagar	Bangalore	1960	143	-	
2.	Peenya I Stage	"	1974	411	5	
3.	Peenya II Stage	"	1978	434	10	
4.	Peenya III Stage	"	1986	108	18	
5.	Yalahanka	"	1983	35	-	
6.	Dyavasandra	"	1972	116	-	
7.	HAL	"	1973	10	-	
8.	NGEF	"	1980	22	-	
9.	Kumbalagodiu	"	1988	20	-	
10.	KEONICS	"	1985	126	-	
11.	BEL	"	1984	20	-	
12.	Bommasandra	Bangalore Rural	1988	59	9	

13.	Veerasandra	"	1982	94	-	
14.	Ramanagaram	"	1962	24	-	
15.	Hoskote	B'lore Rural	1988	22	-	
16.	DOddaballapura	"	1986	50	8	
17.	Magadi	"	1988	8	-	
18.	Kanakapura	"	1991	5	-	
19.	K.G.F.	Kolar	1980	38	4	
20.	Muddenahalli	"	1980	12	-	
21.	Tamaka	"	1984	20	-	
22.	Chintamani	"	1985	20	-	
23.	Malur	"	1985	12	-	
24.	Mulbagal	"	1990	10	-	
25.	Sidlaghatta	"	1991	6	-	
26.	Gouribidanoor	"	1991	8	-	
27.	Tumkur	Tumkur	1973	32	-	
28.	Anantharasanahalli	"	1985	10	-	
29.	Hirehalli	"	1984	20	-	
30.	Sira	"	1969	10	-	
31.	Tiptur	"	1984	8	-	
32.	Kunigal	"	1987	10	-	
33.	Yadavagiri	Mysore	1972	210	6	
34.	Metagalli	"	1983	86	-	
35.	Hebbal	"	1987	61	18	
36.	Kollegal	"	1967	24	-	

	Hunsur.	"	1980	16	-	
	Seegur	"	1980	10	-	
	Nanjangud	"	1984	8	4	
	Hubli Ist stage	Dharwad	1960	377	16	
	Hubli IInd stage	"	1990			
	Gadag	"	1977	12	4	
	Ranebennur	"	1983	4	-	
	Lakamanahalli.	"	1984	16	-	
	Haveri	"	1990			
	Chitradurga	Chitradurga	1981	36	-	
	Harihar	"	1978	63	-	
	Hosadurga.	"	1986	16	-	
	Davanagere.	"	1972	28	-	
	Sirsi	North Kanara	1980	34	-	
	Dandeli	"	1965	16	-	
	Kumta	"	1985	24	-	
	Haliyal	"	1986	8	-	
	Bhatkal	"	1987	10	-	
	Ramanagara (Soopa)	"	1989	2	-	
	Kharwar	"	1991	10	-	
	Belgaum, (Udyambag)	Belgaum	1961	92	4	
	Anugol	"	1982	110	8	
	Khanapur	"	1984	22	-	
	Gokak	"	1986	16	-	

61.	Bylahongal	"	1990	-	8	
62.	Gulbarga	Gulbarga.	1962	34	-	
63.	Kapanur	"	1984	35	4	
64.	Shahabad	"	1982	8	-	
65.	Chithapur	"	1983	8	-	
66.	Aland	"	1990	-	4	
67.	Shorapur	"	1990	-	4	
68.	Raichur	Raichur	1981	48	-	
69.	Lingasagur	"	1991	-	4	
70.	Bellary	Bellary	1966	32	12	
71.	Hospet	"	1981	46	-	
72.	Bijapur	Bijapur	1980	44	-	
73.	Jamakhandi	"	1965	16	-	
74.	Bhagalkot	"	1983	28	-	
75.	Gunj	Bidar	1968	22	-	
76.	Navabad	"	1986	32	-	
77.	Humnabad	"	1985	22	-	
78.	Bhalki	"	1986	8	-	
79.	Mandya I Stage	Mandya	1976	26	-	
80.	Mandya II stage	"	1988	20	-	
81.	Srirangapatna	"	1982	20	-	
82.	Pandavapura	"	1990	-	8	
83.	Hassan	Hassan	1982	38	4	
84.	Sakaleshapur	"	1983	12	-	

85.	Arasikere	"	1984	8	-	
86.	Channarayapatna.	"	1987	8		
87.	Holenarasipura	"	1985	10	-	
88.	Madikere	Kodagu	1967	18	4	
89.	Kushalanagar	"	1987	8	-	
90	Shimoga	Shimoga	1968	78	4	
91.	Bhadravathi	"	1979	18	2	
92.	Shiralkoppa.	"	1967	6	-	
93.	Sagar	"	1984	28	-	
94.	Chickmagalur	Chickmagalur	1983	16	-	
95.	Kadur	"	1962	10	-	
96.	Yeyyadi	Dakshina Kannada	1960	51	3	
97.	Bykampady	"	1974	146	6	
98.	Manipal	"	1982	38	6	
99.	Karkala	"	1979	10	-	
100.	Moodabidare	"	1983	8	-	
101.	Koteswara	"	1990	6	-	
	Total			**4,197**	**187**	

KARNATAKA STATE SMALL INDUSTRIES DEVELOPMENT CORPORATION LTD

A = YEAR-WISE LOAN DRAWALS FROM BANKS

Sl. No.	Bank/Instn Name	78-79	79-80	80-81	81-82	82-83	83--84	84-85	85-86	86-87	87-88	88-89	89-90	90-91	91-92 (Aug)	Total
1.	Syndicate Bnk BLR 10		1788000	2053060	238000	102000		2606100	746700							7533800
2.	I.D.B. KG Rd BLR 09		18686000	934000	950000			9035000	930290							13715200
3.	S.B. Saurastra BLR 27						3908240	3891200	4985740	1448100						14233240
4.	S.B.M. BLR BR BLR-2	1600000	180000	4159000	1667000	1750700	135179	4263300	4142400	2842600	3531600					24271779
5.	S.B.I BLR - 44	1475000	155000	3869000	499000	197000		1774500	540060		5477700					14137200
6.	S.B.I. JC RD BLR-2								2470700	3280600						5751300
7.	Vysya Bnk-BLR-1								3820400	902300						4722700
8.	United Bnk of India		1141000		1310100	1540900	140700	2007000	3741700	2838900						12776300
9.	K.S.I.I.D.C BLR-52					—	4529000	4750000		3061000			7615000		40821000	60776000
10.	Canara Bank BLR-10	1600000	187000		2218000					1571600	14059000					19645600
11.	Vysya Bnk BLR-3		479000	559000	82000			—	4299900	181300						5601200
12.	Karnatak Bnk BLR-10		594000	1335000	47000	47000		1698200	139900							3851100

13.	S.B.I. Race Course BLR							2929500	1734900							4664400
14.	I.F.C.I. New Delhi								20800000	1600000		7000000				29400000
15.	Bank of India BLR-9		659000	1422000	228000	91000			1190300	1837500						5427800
16.	P.N.B. BLR-5		605000	1041000										15012000	369000	17227000
17.	Allhabad Bank BLR-9		2346000	1142000												3488000
18.	Central Bnk BLR-56		698000	1132000												1872000
19.	Corpn Bank BLR-20			1372000												1453200
20.	Syndicate Bnk BDVT		1617000													1612000
	Totals	4325000	12560000	14013000	7305100	3785500	8713119	32954800	49542800	19563900	23068300	7000000	7615000	15012000	41190000	252153819

B = YEAR-WISE LOAN PAYMENTS TO BANKS

Sl. No.	Bank/Instn Name	78-79	79-80	80-81	81-82	82-83	83--84	84-85	85-86	86-87	87-88	88-89	89-90	90-91	91-92 (Aug)	Total
1.	Syndicate Bnk BLR 10			178000	374600	420711	420711	420711	178800	662622	178800	1997245	336000	336000		5525000
2.	I.D.B. KG Rd BLR 09				311000	717000	406000	406000	95000	1309660	3416292	3691640	672500	672500		11677792
3.	S.B. Saurastra BLR 27									1152317	3567215	1202900	1032500	1032500	862100	9932840
4.	S.B.M. BLR BR BLR-2		178000	178000	648200	559200	1159970	981970	1413850	1796320	6066679	3372560	4162760	662760		21180269
5.	S.B.I BLR - 44		178000	178000	648200	648200	631675	631075	249200	1051450	28480	2873320	7020200			14137200
6.	S.B.I. JC RD BLR-2									303830	303830	303830	4839810			5751300
7.	Vysya Bnk BLR-1									402170	402170	430060	1232190	367685		2884275
8.	United Bnk of India			119100	119000	309902	371108	450414		1434708	429380	4477318	5059370			12770300
9.	K.S.I.I.D.C BLR-52							400000	400000	463000	7135000	1464000	1464000	714000	250000	12295000
10.	Canara Bank BLR-10		179700		179700	401500	561200	401500		704422		1881298	2575310	1322710	1319260	9546600
11.	Vysya Bnk BLR-3			40000	184000	112000	112000	112000		672120	448120	3920960				5601200
12.	Karnatak Bnk BLR-10			201300	201300	201300	201300	201300	143786	511406		2189408				3851100
13.	S.B.I. Race Course BLR									546900	231100	389000	389000	389000	389000	2334000
14.	I.F.C.I. New Delhi											2943000	3924000	3924000	1962000	12753000
15.	Bank of India BLR-9				240000	240000	240000	240000	240000	542780	542780	1022780	302780	302780	302780	4216680
16.	P.N.B. BLR-5			80500	215000	122412	182412	182412	592838	91205	45603	273628				1846000
17.	Allhabad Bank BLR-9				368000	390000	390000	390000	195000	585000	195000	975000				3488000
18.	Central Bnk BLR-56				187700	187200	187200	187200	187200	187200	187200	561600				1872000
19.	Corpn Bank BLR-20					1396000	291910		197039	291910		532741				1453200
20.	Syndicate Bnk BDVT			161200	161200	161200	161200	161200	161200	161200	161200	322400				1612000
	Total		535700	1136900	3857400	4670225	5336086	5556606	4746397	12875420	2338849	34874678	33010420	9723935	5085140	144747756

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಎಲ್.ಎಫ್. ಔಷದಾಲಯ ತೆರೆಯುವುದು.

3712 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ:

ಅ) *ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ಆಂಜನೇಯಪ್ಪ ಗಾರ್ಡನ್‌ನಲ್ಲಿ ಎಲ್.ಎಫ್. ಔಷಧಾಲಯವಿದೆಯೇ?*

ಆ) *ಇಲ್ಲದಿದ್ದಲ್ಲಿ 1991-92ನೇ ಸಾಲಿನಲ್ಲಿ ಇಲ್ಲಿ ಎಲ್.ಎಫ್. ಡಿಸ್ಪೆನ್ಸರಿ ಮಂಜೂರು ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ?*

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇಲ್ಲ.

ಆ) ಪ್ರಾಥಮಿಕ ಆರೋಗ್ಯ ಘಟಕ : ಎಲ್.ಎಫ್ ಡಿಸ್ಪೆನ್ಸರಿಗಳನ್ನು ಮಂಜೂರು ಮಾಡುವ ಯೋಜನೆಯನ್ನು ನಿಲ್ಲಿಸಲಾಗಿದೆ.

ಮಾಗಡಿ ರಸ್ತೆಯಲ್ಲಿ ಸಾರ್ವಜನಿಕ ಆಸ್ಪತ್ರೆಯನ್ನು ತೆರೆಯುವ ಪ್ರಸ್ತಾವನೆ.

3710 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ:

ಅ) *ಬೆಂಗಳೂರಿನ ಮಾಗಡಿ ರಸ್ತೆಯಲ್ಲಿ ಸಾರ್ವಜನಿಕ ಆಸ್ಪತ್ರೆಯನ್ನು ತೆರೆಯುವ ಪ್ರಸ್ತಾವನೆಯೇನಾದರೂ ಇದೆಯೇ?*

ಆ) *ಇಲ್ಲದಿದ್ದರೆ ಕೆಂಪಾಪುರ ಅಗ್ರಹಾರ, ಬಿನ್ನಿಪೇಟೆ ಹಾಗೂ ಮಾಗಡಿ ರಸ್ತೆ ಆಸುಪಾಸಿನಲ್ಲಿ ಜೀವಿಸುತ್ತಿರುವ ಬಡ ಜನರಿಗೆ ವೈದ್ಯೋಪಚಾರ ಪಡೆಯಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಈಗಿರುವ ಕುಷ್ಠರೋಗದ ಆಸ್ಪತ್ರೆಯನ್ನು ಬೇರೆಡೆಗೆ ವರ್ಗಾಯಿಸಿ ಆ ಜಾಗದಲ್ಲಿ ಸಾರ್ವಜನಿಕ ಆಸ್ಪತ್ರೆಯನ್ನು ತೆರೆಯಲು ಸರ್ಕಾರ ಯಾವುದಾದರೂ ಕ್ರಮ ತೆಗೆದು ಕೊಳ್ಳುವುದೇ?*

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇಲ್ಲ

ಆ) ಹೌದು

ಇ) ಈಗ ಹಾಲಿ ಇರುವ ಕುಷ್ಠರೋಗ ಆಸ್ಪತ್ರೆಯಲ್ಲಿ ಒಬ್ಬ ವೈದ್ಯರು ಮಾಗಡಿ ರಸ್ತೆಯ ಆಸುಪಾಸಿನಲ್ಲಿ ವಾಸಿಸುತ್ತಿರುವ ಬಡರೋಗಿಗಳ ವೈದೇಯಕೀಯ ತಪಾಸಣೆ ಮಾಡುತ್ತಿದ್ದಾರೆ, ಒಂದು ಲಕ್ಷ ರೂ ಹಣವನ್ನು ಬಡರೋಗಿಗಳಿಗೆ ಔಷದವನ್ನು ಖರೀದಿಸುವ ಸಲುವಾಗಿ ಒದಗಿಸಿದೆ. ಪ್ರತಿ ನಿತ್ಯವೂ 50 ರಿಂದ 75 ಬಡ ರೋಗಿಗಳು ಸಾಮಾನ್ಯವಾಗಿ ಖಾಯಿಲೆಗಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸ್ಟೀಲ್ ಪೀಠೋಪಕರಣಗಳ ದರ ಒಪ್ಪಂದದ ಬಗ್ಗೆ

3711 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ:

ಅ) ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮ ನಿಯಮಿತವು 1990 ಅಕ್ಟೋಬರ್‌ನಿಂದ 1991 ಜುಲೈವರೆಗೆ ಸ್ಟೀಲ್ ಪೀಠೋಪಕರಣ ದರ ಒಪ್ಪಂದವನ್ನು ಕೊಟ್ಟಿರುವ ಘಟಕಗಳ ಹೆಸರುಗಳೇನು?

ಆ) ಪ್ರತಿಯೊಂದು ಸಣ್ಣ ಕೈಗಾರಿಕಾ ಘಟಕಗಳಿಗೆ ದರ ಒಪ್ಪಂದದ ಮೌಲ್ಯವನ್ನು ಕೊಟ್ಟಿರುವ ಬಗ್ಗೆ.

ಇ) ಸ್ಟೀಲ್ ಪೀಠೋಪಕರಣಗಳನ್ನು ತಯಾರಿಸುವ ಸಲುವಾಗಿ ಕಸಕೈಮಾನಿನಿಯಲ್ಲಿ ಎಷ್ಟು ಸಣ್ಣ ಕೈಗಾರಿಕಾ ಘಟಕಗಳು ನೋಂದಾಯಿಸಿವೆ.

ಈ) ಆ ಘಟಕಗಳ ಹೆಸರುಗಳೇನು?

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು)

ಅ) ಪಟ್ಟಿ ಲಗತ್ತಿಸಿದೆ.

ಆ) ಪಟ್ಟಿ ಲಗತ್ತಿಸಿದೆ.

ಇ) 162 ಘಟಕಗಳು.

ಈ) ಪಟ್ಟಿ ಲಗತ್ತಿಸಿದೆ.

ANNEXURE 'A'

Names of the SSI units to whom Rate contract for Steel furniture vere given by KSIMC from October 90 to end of July 91.

Sl. No.	Name & address of the Rate contract holder	Amount of Rate contract orders procured.
	M/S.	Rs.
1.	Abenaya Industries, No.2/19, Behind SBI, JC road, Bangalore-2.	8,86,143-00
2.	Abhivrudhi Steel Industries, 2/17, SVLV Press compound, JC road, Bangalore-2.	8,55,950-00
3.	Anil Industries, 1414, II Stage, 12th B-cross, West of chord road, Bangalore-86	5,02,295-00
4.	Anupam Fabs, 235-B, III Main road, 4th Stage, West of chord road, Indl. Town, Rajajinagar, Bangalore-44.	6,54,660-00

5.	Aryamitra Industries, Kalastrinagar New Extn., T. Dasarahalli, Bangalore-57.	1,57,470-00
6.	Ashoka Steel Industries 3,Munikalappa Bldg., Kummanahalli main road, Bangalore-33.	8,05,865-00
7.	Balaji Industries, Malagala village, Magadi road, Bangalore-79.	10,40,160-00
8.	Bangalore Agencies 30/1, MC Layout, Magadi main road, Bangalore-40.	30,740-00
9.	Bangalore Engineering, 2/1, M.T. Street, BVK Iyengar road, cross, Bangalore-53.	6,50,187-00
10.	Balan Industries 113, 3rd A-Main road, Near Unity Flourings, Indl. Town, Rajajinagar, Indl. Town, Bangalore-44.	3,07,890-00
10.	Bangalore Steel Corporation, 2/17. SVLV Press compund, J.C. road, Bangalore-2.	9,75,917-00
11.	Benaka Engineering Works, No. 1749, Ist C-main road, D-Block, II Stage, Rajajinagar, Bangalore-10.	9,63,745Ë00
12.	Chandan Electrical Industries No. 2/3, M.T. Street, BVK Iyengar road cross, Bangalore-53.	9,65,290Ë00

13.	Delite Industries, 27/6, Kalasipalyam, (Behind Mariswamy Mutt) Bangalore-2.	7,81,795-00
14.	Fine & Fine Steel Associates, 24/2, 2nd Corss, Robertson block, Ramachandrapuram, Bangalore-21.	24,415-00
15.	Hassan Industries, 7/1, Krishna singh lane, SJP road cross, Bangalore-2.	3,84,660-00
16.	Hospital Care, 365, Main road, G.M. Palya, CV Ramannagar post, Behind B& ML rail coach, Bangalore-93.	18,600-00
17.	Industrial Packers & General Enterprises, 17/5, Binnamangala, Old Madras road, Bangalore-38.	7,38,988-00
18.	Jagannath Traders, 107/A, I Main road, 3rd cross, New No. 3, 7th main road, Prakashnagar, Bangalore-21.	1,28,545-00
19.	Jhansi Steel Industries, No. 221/E&F, 7th cross, I Main road, I Stage, III Phase, Majunathanagar, Bangalore-10.	11,480-00
20.	Karnataka VV Steel Industries, 50/A, III Main road, 4th cross,	44,655-00

	Prakashnagar, Bangalore-21.	
21.	Kavitha Enterprises, 10/3-b, Dr. Kuvempu road, Ramaswamypalya, Lingarajapuram Extn., Bangalore-33.	7,47,615-00
22.	Kempapura Cottage & Vyavasaya Abhivridhi Sangha, 78, Magadi roadm Bangalore-23.	9,380-00
23.	Kumar Industries, 354, 5th cross Indl. Town, Rajajinagar, Bangalore-44.	3,66,620-00
24.	Mahendra Trading Corporation, 41, Setty Muddanna lane, Cottonpet Corss, Bangalore-53.	6,28,431-00
25.	Murthy Engg. Corporation MSR Indl. Estate, Gokul post, Bangalore-54.	1,73,425-00
26.	Mysore Steel & Surgical Industries 13, 3rd cross, Nagappa block, Bangalore-21.	1,35,940-00
27.	Nandi Indl. Products, 39/2, Chelarapalya, Magadi road, Bangalore-23.	7,83,755-00
28.	Pamadi Engg. Enterprises, 36/1, Hanumanthapura.	72,291-00

	Okalipuram Extn., Sriramapuram, Bangalore-21.	
29.	Pari Steel Industries, 1690, 80 ft road, Prakashnagar, Bangalore-21.	11,770-00
30.	P.M. Raja Traders, 633/120, 9th main road, III Stage, Rajajinagar (Prakashnagar), Bangalore-21.	1,54,082-00
31.	Pragathi Steel Industries, 31, Cholarapalya, Magadi road, Bangalore-23.	5,85,590-00
32.	Pramila Industries, 58, I Cross, 3rd Main, Ramachandrapuram, Bangalore-21.	3,13,235-00
33.	Ravi Enterprises 126/7-2, 5th cross, Kalasipalyam New Extn., Bangalore-22.	2,53,525-00
34.	Sabari Steel P.Ltd., 99/2, New Timberyard Layout, Mysore road, Bangalore-26.	....
35.	Shason Industries, 24/2, I Cross, JC road, Behind Poornima Theatre, Bangalore-27.	2,750-00
36.	S.K. Steel Industries 1305/B, 5th cross, 6th A-Main road, Prakashnagar,	10,36,935-00

37. Sri Sadananda Enterprises, 18, West of chord road, Shivanagar, Opp. Power House, Rajajinagar, Bangalore-10.	1,01,875-00
38. South India Fabricators, 9,II Main road, Seshadripuram, Bangalore-20.	4,96,560-00
39. Sri Channakeshava Enterprises, Benniganahalli, Old Madras road, Bangalore-16.	....
40. Sri Rajalakshmi Industries, 130, 2nd Main road, III A-Cross, Prakashnagar, Bangalore-21.	2,14,025-00
41. Sri Rajarajeswari Industrial Corporation, 3132, II Stage, Mariyappanapalya, Sriramapuram, Bangalore-21.	3,47,515-00
42. Sri Siddalingeswara Workshop, 1700, 17th cross, Magadi road, Chord road, Vijayanagar, Bangalore-40.	6,45,609-00
43. Suresh Steel Industries, 1690, 80 ft. road, Prakashanagar, Bangalore-21.	95,630-00
44. Surgical Instruments Mfg. Co. 1/3, Mysore road, Behind Indian Bank, New Guddadahalli, Bangalore-26.	3,96,810-00

45. Techno Fab, 1,84,310-00
185, Arya Indigara Sangha Hostel Bldg.
Opp. Central Talkies,
Seshadripuram,
Bangalore-20.

46. Triveni Industries, 3,90,520-00
No. 192, 18th Cross, 20th Main,
Vijayanagar, Bangalore-560040.

47. Vijaya Engineering Industries, 2,49,395-00
No. 740, 3rd Block, Rajajinagar,
Bangalore-560010.

48. Vijay Surgical, 12,88,605-00
No.45/4, 6th Block, 7th Cross,
80 ft. Road Rajajinagar,
Bangalore-560010.

49. Vivek Engineers, 85,410-00
282/A, M.S.R. Indl. Estate,
Gokula Post, Bangalore-54.

50. Vishal Industries, 2,21,375-00
(Near Najundeshwara Touring Talkies)
Hebbal, Bangalore-24.

BELLARY DIST.

51. Durga Metal Industries, 11,51,502-00
C-11, Indl. Estate, Bellary.

BELGAM DIST.

52. Panjabi Steel Furnitures, 1,36,504-00
Plot No. 73, 3rd Railway Gate,
Tilakwadi, Belgaum.

BIDAR DIST.

53. Kiran Industries, 74,565-00
6-7-40, Main Road,
Near Vegetable market,
Bidar-585401.

54. Nandi Metal Works, Near Ambedkar Circle, Station Road, Bidar-584101.	62,660-00
BIJAPUR DIST.	
55. Supreme Steel Furnitures, Jambagi Road Jamkhandi-587301.	13,340-00
56. Swastik Industries, D-18, Indl. Estate, Station Back Road, BIJAPUR - 586101.	1,61,476-00
CHIKMAGALUR	
57. Hindustan Furnishes, Muneer Complex, Opp. Firoze Shadi Mahal, Chikamagalur - 577101.	23,995-00
58. Quallty Steel Furniture, Rathnagiri Road, Chikmagalur.	10,285-00
59. Sreenivasa Steel Furniture, Industries, Aravindanagar, Chikmagalur-577101.	1,14,890-00
60. Steel Furnitures, Market Road, Chikmagalur.	....
CHITRADURGA DIST.	
61. Kiran Enterprises, Vinoba Nagar, 4th Main I Cross, Davangere-4.	20,000-00
62. Maganahalli Wooden & Steel Furniture Works, APMC Road, Shekarappa Nagara, Davanegre-4.	3,46,928-00

63.	Modern Industries, 185/6, Opp, Telcom Director of Engineering Office, P.B.Road, Davanagere-4.	14,856-00
64.	M.S. Industires, A.P.M.C.Road, Davangere-577004.	1,99,922-00
65.	M.S.R. Industries, Vinbha Nagar, 4th Main Road, 1St. Cross (Kundwad Road), Davanagere-4.	41,750-00

DAKSHINA KANNADA DIST.

66.	Bharath Iron Works, Janardhana Temple Street, Ukir-574240.	5,94,559-00
67.	Dinesh Engg. Industires, S.M. 49, Indl. Estate, Yayyadi, Mangalore-575008.	1,71,050-00
68.	J.K.Steel Industries, Near Urva market, Mangalore-575006.	1,54,531-00
69.	New Mangalore Furniture, Milagers Centre , Hampankata, Mangalore.	1,60,178-00
70.	Somayaji Indl. Estate, B.C.Road, Bantwal-574219.	

DHARWAD DISTRICT

71.	Akshaya Industries, Plot No. 158, Near Highway Rd. Nekar Nagar, Old Hubli-580024.	3,22,200-00
72.	Ambadas and Company, 2279, Station Road, Hubli - 580020.	2,94,381-00

73.	Arkay Industries, No.11, K.V.V.S. Complex, Azad Park Road, Dharwad	....
74.	Dorwek Fabrications, Rama Nivas, 2nd Main, 1st Cross Narayanapur (west), Dharwad-580020.	....
75.	Habib & Co., Station Road, Hubli -580020.	4,120-00
76.	Mohara Steel Furnitures, Behind Chandrakala Theatre, Station Road, Hubli-580020.	11,80,081-00
77.	Premier Industries, No.9,Ayodhyanagar, Karwar Road, Hubli.	1,82,300-00
78.	Smarth Sadguru Industries, Gokul Road, Plot No. 26, Hubli -580020.	31,765-00
79.	Samrat Steel Works, Station Road, Hubli-580020.	3,17,110-00
80.	Vijay Industries, 17/1, New Cotton Market, Hubli- 580029.	28,530-00
81.	Vijalakshmi Industries, B-174, Indl. Estate, Gokul Road, Hubli-580030.	12,750-00

GULBARGA DIST.

82.	Ambika Steel Furniture Works, N.G.P's Jewargi Road, Colony, Gulbarga-585102.	6,26,030-00

83.	Arvind Metal Works, Opp.M.R. Medical College, Sedam Road, Gulbarga - 585016.	11,12,092-00
84.	Bhawani Steels, 10-448, Bramampur, Gulbarga.	17,590-00
85.	J.K.Metal Work, 3-1019, Durga Road, Gulbarga-585101.	10,30,775-00
86.	Lahoti Fabricators, Opp. KEB Station Road, Gulbarga-585101.	5,42,290-00
87.	MIK Fabricators, Hagaraga X-Ring Road, Mehaboob Nagar, Gulbarga- 585104.	66,495-00
88.	Vishal Metal Works, Saraf Bazar, Bhoi Galli, Gulbarga-585101.	3,57,486-00
HASSAN DIST.		
89.	Ashoka Steel Industries, Slaters Memorial Hall Road, Hassan - 573201.	1,96,760-00
90.	Rashmi Industries, Slaters Memorial Hall Road, Hassan - 573201.	
KODAGU DIST.		
91.	General Engg. Corporation, Hill Road, Madikeri-571201.	4,15,335-00
MANDYA DIST.		
92.	Jeevan Khadi Gramodyoga Association, Annur, K.M.Doddi post, Maddur Tq. Mandya Dist.	

93. Jyothi Engg. Works. D-15, Indl. Estate, Mandya.	76,266-00
94. Shiva Engineering Works, Opp. PSSK, Pandavapura R.S.	
95. Surgical Enterprises, M-35, Indl. Estate, Srirangapatana-571438.	2,93,655-00
96. Vijaya Steel Furniture Indl. K.R.Road, Subhasnagar, near Shivanjappa park, Mandya-571401.	

MYSORE DISTRICT:

97. Adarsha [illegible]athi 101, 2nd Cross Gokulam 1st Stage, Gokulam Main Road, Mysore-2	....
98. Balaji Industries M-2, Indl. Estate, Kollegal, Mysore Dist.	7,47,182-00 7,47,182-00
99. Musthaq Steel Industries, 3251, Kabir Temple Road, Mysore.	5,87,293-00
100. Shenoy Enterprises CH 70, 6th Main Road, Saraswathipuram, Mysore-9	4,63,570-00
101. Sunbeam Steel Furniture Inds. Upadhyaya Building, S.R.Road, Mysore.	4,41,210-00
102. V.R.& Brothers Polt No.19, Metagalli KRS Road, Mysore-16	6,59,285-00

103. Zenith Steel Furniture 1648/5, Ismail Building Gandhi Square, Mysore-1	8,79,284-00
RAICHUR DISTRICT :	
104. Adnan Steel Fabricators 4-11-76, Ashok Road, Raichur-584101	
105. A.K. Industries & Co. Jail Road, Raichur	1,22,695-00
106. Safty Steel Furniture Co. Gunj Road, Raichur-584 102.	96,250-00
107. Siddarameshwar & Co. Polt No. 40, Indl. Area, Raichur - 584 102.	1,61,953-00
108. Sri and Sri Fabricators (P) Ltd. C-16, Indl. Estate, Raichur - 584102.	10,000-00
SHIMOGA DISTRICT :	
109. Geetha Udyog Centre L-2, Indl. Estate, Shimoga - 577 201	4,08,821-00
TUMKUR DIST.	
110. Ajantha Industries Plot No. 5, L1 Indl. Estate, Tumkur-2.	9,72,930-00
111. Engineers Indl. Co-op. Society Ltd. Industrial Estate, Tumkur - 572 102.	2,80,855-00
112. Janatha Enterprises D-1, Indl. Estate, Tumkur - 572 102	1,19,150-00
113. Yeleeyes Engineering Works	21,71,148-00

Shopping Complex,
Railway Station Road,
Tiptur - 572 201.

UTTARA KANNADA DIST.

114. Jayashree Engg. works Moorooru Road, Kumta.	4,000-00
115. Umashankar Steel Inds. Shed No. D-25, Indl. Estate, Banavasi Road, Sirsi - 581 401	50,191-00
116. Chandra Steel Industries, A/8, I Cross, Right side Magadi road, Bangalore-25	9,730-00
117. Hospital Equipments Co., 74, 24th 'A' Cross Road, 4th Main, Banashankari II Stage, Bangalore- 560 070	....
118. Crystal Industries 23/3, IV Cross, Magadi Road, Bangalore-23.	96,100-00
119. S.K.B. Enterprises No. 737, 6th Block, Rajajinagar, Opp: Dasashrama, Bangalore-10	26,855-00
120. Sri Venkateswara Enterprises No. 8, L.N.Puram, Srirampuram, Bangalore-21.	72,565-00
121. Sree Vejalakshmi Steel ... Furniture, No. 138, A/4, 4th Cross, Prakashnagar, Bangalore-21.	1,35,465-00

BELLARY DIST.	
122. Siddarameshwara Steel Products, 192-A, Kappagal Road, Gandhinagar, Bellary - 583 103.	12,612-00
BIJAPUR DIST.	
123. Vishal Industries near Datri Masjid, Bagalkot Rd, Bijapur.	....
CHICKMAGALUR DIST.	
124. Metal Wood, Basavanahalli, Chickmagalur-577 101.	62,355-00
CHITRADURGA DIST.	
125. Aswini Enterprises Harihar road, Near Kundavada, Toll Gate, 866/289& 2B10 Davanagere-577004 M.S. Industries, A.P.M.C. Road, Davanagere	
126. M.M. Industries, D-3, Indl. Estate, P.B.Road, Chitradurga	4,56,237-00
127. Sharada Steel Construction Ginning Compound, P.B.Road, Davanagere-2	
DAKSHINA KANNADA DIST :	
128. Swastik Industries, 209, KIADB Indl. Area, Baikempady, Mangalore.	2,90,295-00
GULBARGA DIST :	
129. Moquaddam Steel Inds. D.No. 2-118, Opp: Kannor, Indl. Estate, Gulbarga-4	5,26,920-00

130. Venkateswara Metal Works,
9/905/3, Aland Road,
Gulbarga- 585 103.

KOLAR DIST :

131. Sri Gowri Metal Inds.
Aravindanagar,
Gouribidannur

SHIMOGA DIST :

132. Hubli Treasury Company, 3,66,475-00
B.H. Road, Vinayaka Talkies,
Compound, Shimoga.

TUMKUR DIST :

133. Lotus Enterprises 1,09,590-00
Vinobangar,
Tumkur

UTTARA KANNADA DIST :

134. M/s. Gurukrupa Engineering
Industries, Kurswada Cross,
Kajubag,
Karwar.

135. M/s. K.R. Jyothi Steel 20,415-00
Furnitures,
Makan Galli,
Gadag-582101.

136. M/s. Balaji Engineering Co.,
Site No. 2A (back side)
Bismillanagar, Tavarekere,
Bannerghatta Road Cross,
Bangalore-29.

137. Bharath Medico Mechanics,
No. 74, 3rd Cross, A.N. Pura,
Bangalore - 560 016.

138. Ganesha Engineering Works, 41-B, 3rd Cross, Jigani, Indl. Area, Anekal Taluk. Bangalore Dist.	
139. Laxmi Steel Works, 10, 9th Main, 3rd Phase, Peenya Indl.Area, Bangalore - 58.	2,61,340-00
140. Manu Engineering Works, No. 1132/A, Ist C Cross Road, 8th Main, RPC Layout, Vijayanagar, Bangalore- 40.	
141. MPEE Enterprises, Sujatha Complex, II floor, I Main, Gandhinagar, Bangalore- 560 009.	
142. Mythri Systems Fabricators & Engineers, 53/3, Indl. Area, Magadi Main Road, Kamakshipalya, Bangalore- 560 079.	1,76,770-00
143. M/s. Vasu Steels, 1305/B-1/5th Cross, 6th A-Main, Prakashnagar, Bangalore - 560 021.	4,65,860-00
BELLARY DISTRICT :	
144. Gayathri Industries, 125/A1 Bangalore Road, Bellary.	9,70,640-00
145. Span Engineering Fabricators, No. 16/14, 7th Ward, T.G. Oil Mill Compund, Bellary - 583 101.	11,360-00

BODAR DIST :

146. Kiran Industries,
C-9, Indl. Estate, Naubad,
Bidar - 585403,

DAKSHINA KANNADA DIST :

147. R.K. Steel Industries,
Plasa Complex, Bendore Wall,
Mangalore.
J.K. Steel Industries,
Near Urva Market,
Mangalore - 575 006.

GULBARGA DISTRICT :

148. Ashoka Metal Works,
8-821, Lohar Galli,
Gulbarga.
149. Indian Metal Works, 84,410-00
7-1004, Dargah Road,
Mijgori, GULBARGA - 585104
150. Mayur Fabricators, 62,650-00
B-1, Indl. Estate,
Kempoor, Gulbarga
151. Poonam Steel Furniture Inds.,
Kahaja Colony,
H.No. 5-40G/10,
Gulbarga.
Venkateshwara Metal works,
9/905/3, Aland Road,
Gulbarga - 585103.

KOLAR DISTRICT :

152. Shubhaprathiba Enterprises,
Chikkathirupathi - Lakkur Road,
Jagadenahalli, Malur Tq.
Kolar District.

BIDAR DIST :

153. Chavan Industries,
H.H.9, Humanabad,
Bidar Dist.

DHARWAR DIST :

154. Super Enterprises, 3,400-00
Mahaboobnagar,
Behind Veterinary Hospital,
P.B. Road, Hubli.

GULBARGA DIST :

155. Ammoo Enterprises,
Mehaboob Nagar, Ring Road,
Gulbarga -585104.

TUMKUR DISTRICT

156. Sri Ranganatha Metals, 4,04,890-00
Annapura, Halepalya Posr,
TIPTUR Tq.

BELLARY DIST :

Gayathri Industries,
125/A1, Bangalore Road,
Bellary- 583101.

BELGAUM DIST :

157. Patil Safe Company,
832, Vaccine Depot. Road,
Tilakavadi,
BELGAUM.

SHIMOGA DIST :

158. Siddeswara Company, 2,85,100-00
Vinayaka Talkies Compound,
Shimoga.

159. Visvesaraya Industries,
B.H.Road,
Bhadravathi.

TUMKUR DIST.

160. Ganga Steel Products, Polt No. 38/D, Hirehally Indl. Area, Tumkur. 26, 725-00

MANDYA DIST :

161. M/s. Souryalatha Steel Industries, 100 Ft. Road, Mandya -1. 43,850-00

DAKSHINA KANNADA :

162. M/s. Rural Engineering Industries, Mamachakal Road, Kaptadi, Udipi, (D.K.)

ಶ್ರೀ ಜಯಚಾಮರಾಜೇಂದ್ರ ಭಾರತೀಯ ವೈದ್ಯಕೀಯ ಸಂಸ್ಥೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ.

3722 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನ ಶ್ರೀ ಜಯಚಾಮರಾಜೇಂದ್ರ ಭಾರತೀಯ ವೈದ್ಯಕೀಯ ಸಂಸ್ಥೆಯಲ್ಲಿ ಕುಡಿಯುವ ನೀರು ಸರಬರಾಜು ವ್ಯವಸ್ಥೆಯು ಅಸಮರ್ಪಕವಾಗಿದೆಯೆ?

ಆ) ಈ ಸಂಸ್ಥೆಯಲ್ಲಿ ಹೊಸ ನೀರಿನ ಟ್ಯಾಂಕುಗಳ ನಿರ್ಮಾಣ ಅಥವಾ ಸಿನಂಟೆಕ್ಸ್ ಟ್ಯಾಂಕ್‌ಗಳನ್ನು ಖರೀದಿಸಲು ಕ್ರಮ ಕೈಗೊಳ್ಳಲಾಗಿದೆಯೆ ?

ಇ) ಇಲ್ಲದಿದ್ದಲ್ಲಿ ಸರ್ಕಾರ ಈ ಬಗ್ಗೆ ತೆಗೆದು ಕೊಂಡಿರುವ ಕ್ರಮವೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು.

ಆ) ಸಾಕಷ್ಟು ಓವರ್‌ಹೆಡ್ ಟ್ಯಾಂಕುಗಳ ಸೌಲಭ್ಯವಿದೆ. ಆದರೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಸಾಕಷ್ಟು ನೀರು ಆಸ್ಪತ್ರೆಗೆ ಸರಬರಾಜು ಆಗುತ್ತಿಲ್ಲ.

ಇ) ಮೇಲಿನ (ಆ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಚಿಕ್ಕನಾಯಕನಹಳ್ಳಿ ತಾಲ್ಲೋಕು ಹುಳಿಯಾರು ಗ್ರಾಮಕ್ಕೆ ಪ್ರಸೂತಿ ಗೃಹ ಮಂಜೂರು.

3683 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೋಕು ಹುಳಿಯಾರು ಗ್ರಾಮಕ್ಕೆ ಪ್ರಸೂತಿಗೃಹ ಮಂಜೂರು ಮಾಡಲು ಬಹಳ ಹಿಂದೆ 80,000ರೂ.ಗಳನ್ನು ಹುಳಿಯಾರು ಪಂಚಾಯಿತಿಯಿಂದ ಠೇವಣಿ ಇಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹುಳಿಯಾರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮಹಿಳಾ ವೈದ್ಯಾಧಿಕಾರಿಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ ಹುಳಿಯಾರ್ ಗ್ರಾಮಕ್ಕೆ ಹೆರಿಗೆ ಆಸ್ಪತ್ರೆ ಮತ್ತು ಮಹಿಳಾ ವೈದ್ಯಾಧಿಕಾರಿಗಳ ಹುದ್ದೆ ಮಂಜೂರು ಮಾಡಲು ಸರಕಾರ ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರೂ. 70,500-00 ಮಾತ್ರ ಠೇವಣಿಯಾಗಿಟ್ಟಿರುತ್ತಾರೆ.

ಆ) ಇಲ್ಲ.

ಇ) ತುಮಕೂರು ಜಿಲ್ಲಾ ಪರಿಷತ್‌ನಿಂದ ಪ್ರಸ್ತಾವನೆ ಸ್ವೀಕೃತವಾದಲ್ಲಿ ಪರಿಶೀಲಿಸಲಾಗುವುದು.

ನೇತ್ರ ಚಿಕಿತ್ಸೆಯಲ್ಲಿ ಸರ್ಕಾರಿ ಆಯುರ್ವೇದ ಆಸ್ಪತ್ರೆ ಒಳ್ಳೆ ಫಲಿತಾಂಶವನ್ನು ನೀಡಿರುವುದು.

3692 - ಶ್ರೀ ಮನೋಹರ್ ಐನಾಪುರ್ (ಬಳ್ಳೊಳ್ಳಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೇತ್ರ ಚಿಕಿತ್ಸೆಯಲ್ಲಿ ಸರ್ಕಾರಿ ಆಯುರ್ವೇದ ಆಸ್ಪತ್ರೆ, ಬಿಜಾಪುರವು ಒಳ್ಳೆ ಫಲಿತಾಂಶವನ್ನು ನೀಡಿದೆ ಎಂಬ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸುಮಾರು 500 ರೋಗಿಗಳು ಈ ಆಸ್ಪತ್ರೆಗೆ ನೇತ್ರ ಚಿಕಿತ್ಸೆ ಪಡೆಯಲು ಬರುತ್ತಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಗಮನಕ್ಕೆ ಬಂದಲ್ಲಿ ಸೂಕ್ತ ಆಯವ್ಯಯ ಸಿಬ್ಬಂದಿ ಮತ್ತು ಸಾಧನ ಸಾಮಗ್ರಿ ಸಲಕರಣೆಗಳನ್ನು ಈ ಆಸ್ಪತ್ರೆಗೆ ಒದಗಿಸದೇ ಇರುವುದಕ್ಕೆ ಕಾರಣವೇನು?

ಈ) ಸದರಿ ಸೌಲಭ್ಯಗಳನ್ನು ಒದಗಿಸಲಾಗುವುದೇ

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿದೆ.

ಆ) ಬಂದಿದೆ.

ಇ) ಸದರಿ ಆಸ್ಪತ್ರೆಯ ಆಯವ್ಯಯದ ಅಂದಾಜಿಗೆ ಪೂರಕವಾಗಿ ಬೇಡಿಕೆಗೆ ಅನುಗುಣವಾಗಿ ಸೂಕ್ತ ಆಯವ್ಯಯವನ್ನು ನೀಡಲಾಗಿದೆ. ಅದೇ ರೀತಿ ವೈದ್ಯಾಧಿಕಾರಿಗಳ ಕೋರಿಕೆಯ ಮೇರೆಗೆ ಅಗತ್ಯ ಸಾಧನ ಸಾಮಗ್ರಿ ಸಲಕರಣೆಗಳನ್ನು ಪೂರೈಸಲಾಗಿದೆ. ನೇತ್ರ ಚಿಕಿತ್ಸೆಗೆ ಸಂಬಂಧಪಟ್ಟಂತೆ ಸಿಬ್ಬಂದಿ ಕೊರತೆ ಇರುವುದಿಲ್ಲ. ಒಬ್ಬರು ದಾದಿ, ಒಬ್ಬರು ಔಷಧಿ ವಿತರಕರು ಹಾಗು ಮೂರು ಗ್ರೂಪ್ -ಡಿ ಹುದ್ದೆಗಳನ್ನು ಮಾತ್ರ ಸದರಿ ಆಸ್ಪತ್ರೆಯಲ್ಲಿ ಖಾಲಿ ಇರುವುದರಿಂದ, ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಈ) ಒದಗಿಸಲಾಗಿದೆ.

ಬಂಗಾರಪೇಟೆಯ ಸಂಯುಕ್ತ ಆಸ್ಪತ್ರೆಯನ್ನು ಸಾರ್ವಜನಿಕ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವುದು.

3696 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆ ಬಂಗಾರಪೇಟೆಯ ಸಂಯುಕ್ತ ಆಸ್ಪತ್ರೆಯನ್ನು ಸಾರ್ವಜನಿಕ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೇ ಏನಾದರೂ ಸರ್ಕಾರದ ಮುಂದಿದೆಯೇ?

ಆ) ಇಲ್ಲದಿದ್ದಲ್ಲಿ, ಮೇಲ್ದರ್ಜೆಗೇರಿಸುವ ಅಗತ್ಯ ಮತ್ತು ಹೆಚ್ಚಿನ ಬೇಡಿಕೆ ಇರುವುದರಿಂದ ಸರ್ಕಾರವು ಈ ಆಸ್ಪತ್ರೆಯನ್ನು ಸಾರ್ವಜನಿಕ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇದೆ.

ಆ) ಮೇಲಿನ (ಅ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕೋಲಾರ ಜಿಲ್ಲೆ ಆಂಡರ್‌ಸನ್ ಪೇಟೆ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ

3697 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕೋಲಾರ ಜಿಲ್ಲೆ ಆಂಡರ್‌ಸನ್ ಪೇಟೆ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ ಯಾವಾಗ ನಿರ್ಮಾಣವಾಯಿತು?

2) ಕಟ್ಟಡ ದುರಸ್ತಿ ಇಲ್ಲದೆ ಶಿಥಿಲಗೊಂಡಿರುವುದು ನಿಜವೇ?

3) ಸದರಿ ಕಟ್ಟಡದ ರಿಪೇರಿಗಾಗಿ ಸರ್ಕಾರವು ಕ್ರಮ ಕೈಗೊಂಡಿದೆಯೇ?

4) ಇಲ್ಲದಿದ್ದರೆ ಸರ್ಕಾರವು 1991-92ನೇ ಸಾಲಿನಲ್ಲಿ ದುರಸ್ಥಿ ಕ್ರಮ ಕೈಗೊಳ್ಳಲು ಕ್ರಮ ಕೈಗೊಳ್ಳುವುದೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1) ಇದು ಕೆ.ಜಿ.ಎಫ್. ಪುರಸಭೆಯ ಕಟ್ಟಡ ನಿರ್ಮಾಣದ ವರ್ಷ ಸದ್ಯದಲ್ಲಿ ಲಭ್ಯವಿಲ್ಲ.

2) ಹೌದು.

3) ಇಲ್ಲ.

4) ಪುರಸಭೆಯವರೇ ದುರಸ್ಥಿ ಮಾಡಿ ಕೊಡಬೇಕು.

ಕೆ.ಜಿ.ಎಫ್.ನಲ್ಲಿ ಹಿಂದುಳಿದ ವರ್ಗದ ಕಾಲೇಜು ವಸತಿ ಗೃಹದ ಕಟ್ಟಡ

3695 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಜಿ.ಎಫ್.ನಲ್ಲಿರುವ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ವಸತಿ ನಿಲಯದ ಕಟ್ಟಡ ನಿರ್ಮಾಣದ ಅಂದಾಜು ವೆಚ್ಚ ಮತ್ತು ನಕ್ಷೆಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆಯೇ ?

ಆ) ಹಾಗಿದ್ದಲ್ಲಿ ವಸತಿನಿಲಯದ ಕಟ್ಟಡದ ಅಂದಾಜು ವೆಚ್ಚವೆಷ್ಟು?

ಇ) ಟೆಂಡರ್‌ಗಳನ್ನು ಕರೆಯಲಾಗಿದೆಯೇ.

ಈ) ಹಾಗಿದ್ದಲ್ಲಿ ಯಾವಾಗ ಕರೆಯಲಾಗಿದೆ.

ಉ) ನಿರ್ಮಾಣ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು.

ಊ) ಕಟ್ಟಡದ ನಿರ್ಮಾಣ ಕಾರ್ಯ ಯಾವಾಗ ಮುಗಿಯುಬಹುದು.

ಋ) ಈ ಕೆಲಸಕ್ಕಾಗಿ 1991-92ರ ಸಾಲಿನಲ್ಲಿ ನಿಗದಿಗೊಳಿಸಿರುವ ಹಣವೆಷ್ಟು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) ಹೌದು - ನಕ್ಷೆ ಮತ್ತು ಅಂದಾಜು ವೆಚ್ಚವನ್ನು ಕೋಲಾರದ ಜಿಲ್ಲಾ ಪರಿಷತ್ತಿನವರು ಮಂಜೂರು ಮಾಡಿರುತ್ತಾರೆ.

ಆ) ರೂ. 6,79,000-00

ಇ) ಇಲ್ಲ - ನಿರ್ಮಾಣದ ಕೆಲಸವನ್ನು ಕರ್ನಾಟಕ ಲ್ಯಾಂಡ್ ಆರ್ಮಿ ಕಾರ್ಪೋರೇಷನ್ನಿಗೆ ವಹಿಸಲಾಗಿದೆ.

ಈ) 'ಇ'ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಉ) 1989ರ ಸೆಪ್ಟೆಂಬರ್‌ನಲ್ಲಿ ನಿರ್ಮಾಣ ಕೆಲಸ ಪ್ರಾರಂಭವಾಗಿದೆ.

ಊ) ಕೆಲಸವು ಶೀಘ್ರದಲ್ಲಿಯೇ ಮುಗಿಯುವ ನಿರೀಕ್ಷೆ ಇದೆ.

ಋ) ಈ ನಿರ್ಮಾಣ ಕೆಲಸಕ್ಕಾಗಿಯೇ ಪ್ರತ್ಯೇಕ ಹಣವಕಾಶ ಮಾಡಿಕೊಂಡಿಲ್ಲ, ಆದರೂ 1991-92ರ ಜಿಲ್ಲಾ ಘಟಕದ ಆಯವ್ಯಯದಲ್ಲಿ ವಿದ್ಯಾರ್ಥಿನಿಲಯಗಳ ಕಟ್ಟಡಗಳ ನಿರ್ಮಾಣಕ್ಕಾಗಿ 15-00 ಲಕ್ಷ ರೂ.ಗಳ ಅನುವು ಮಾಡಿದೆ.

ಭದ್ರಾವತಿಯ ಮೈಸೂರು ಕಾಗದ ಕಾರ್ಖಾನೆ ಬೀಗ ಮುದ್ರೆ

3706 - ಶ್ರೀ ಸಿ. ಬೈರೇಗೌಡ (ವೇಮಗಲ್) ; ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಕಾಗದ ಕಾರ್ಖಾನೆ ಭದ್ರಾವತಿಯಲ್ಲಿ ದಿ. 12-4-90 ರಿಂದ 23-4-90ರವರೆಗೆ ಬೀಗ ಮುದ್ರೆ ಘೋಷಿಸಲು ಕಾರಣಗಳೇನು?

ಆ) ಬೀಗ ಮುದ್ರೆಯ ನಿರ್ಣಯವನ್ನು ಯಾವಾಗ ತೆಗೆದುಕೊಳ್ಳಲಾಯಿತು? ಯಾರು ತೆಗೆದುಕೊಂಡರು ? ಯಾರ ಸಲಹೆಯ ಮೇಲೆ ತೆಗೆದುಕೊಂಡರು?

ಇ) ಬೀಗಮುದ್ರೆಯು ಕಾನೂನು ಬದ್ಧವಾಗಿದೆಯೇ ಅಥವಾ ಕಾನೂನು ಬಾಹಿರವೇ ಕಾನೂನು ಬಾಹಿರವಾಗಿದ್ದ ಪಕ್ಷದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏನು ಕ್ರಮ ಜರುಗಿಸಲಾಯಿತು?

ಈ) ಬೀಗ ಮುದ್ರೆಯ ಅವಧಿಗೆ ನೌಕರರಿಗೆ ವೇತನವನ್ನು ನೀಡಲಾಯಿತೆ ?

ಉ) ಬೀಗ ಮುದ್ರೆಯ ಅವಧಿಯ 12 ದಿನಗಳಲ್ಲಿ ಉಂಟಾದ ಒಟ್ಟು ನಷ್ಟವೆಷ್ಟು?

ಊ) ಇಬ್ಬರು ಅಧಿಕಾರಿಗಳ ಸೇವೆಯನ್ನು ವಿಚಾರಣೆ ನಡೆಸದೆ ಬರ್ತಪ್‌ಗೊಳಿಸಿರುವುದು ನಿಜರೇ?

ಋ) ಇಬ್ಬರು ಅಧಿಕಾರಿಗಳನ್ನು ಕಾನೂನು ಬಾಹಿರರಾಗಿ ಬರ್ತಪ್‌ಗೊಳಿಸಿರುವುದರ ವಿರುದ್ಧ ನೌಕರರು ಕಾರ್ಯನಿಲುಗಡೆ ಮಾಡಿ ವಿರೋಧ ವ್ಯಕ್ತಪಡಿಸಿರುವುದು ನಿಜವೇ?

ೠ) ಬರ್ತಪ್‌ಗೊಳಿಸಿದ ಅಧಿಕಾರಿಗಳನ್ನು ಮತ್ತೆ ಸೇವೆಯಲ್ಲಿ ಮುಂದುವರಿಸಿರುವುದು ನಿಜವೇ? ಹಾಗಿದ್ದಲ್ಲಿ ಈ ಬಗ್ಗೆ ನೌಕರರು ಮುಷ್ಕರ ಹೂಡಿದಾಗ ಏಕೆ ಈ ನಿರ್ಣಯ ತೆಗೆದುಕೊಳ್ಳಲಿಲ್ಲ ?

ಏ) ಸಾರ್ವಜನಿಕ ಉದ್ಯಮಿಗಳ ಅಧಿಕಾರಿಗಳನ್ನು ಟ್ರೇಡ್ ಯೂನಿಯನ್ ಚಟುವಟಿಕೆಗಳಲ್ಲಿ ಭಾಗವಹಿಸದಂತೆ ನಿಷೇಧಿಸಿರುವುದು ನಿಜವೇ?

ಶ್ರೀಮತಿ ಮನೋರಮ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು):

ಅ) ಮೈಸೂರು ಕಾಗದ ಕಾರ್ಖಾನೆ ಭದ್ರಾವತಿಯಲ್ಲಿ ಈ ಕೆಳಕಂಡ ಕಾರಣಗಳಿಂದ 12-4-90ರಿಂದ 23-4-90ರವರೆಗೆ ಬೀಗಮುದ್ರೆಯನ್ನು ಘೋಷಿಸಲಾಯಿತು : 1) 12-4-90 ರಿಂದ ಕಾರ್ಮಿಕರ ಕಾನೂನು ಬಾಹಿರ ಮತ್ತು ಮಿಂಚಿನ ಟೂಲ್‌ಡೌನ್ ಮುಷ್ಕರ ಮಾಡಿದರು.

2) ಯೂನಿಯನ್‌ಗಳ ಒಳಜಗಳ ಮತ್ತು ಮಿಲ್ಲಿನ ಆವರಣದಲ್ಲಿ ಅಶಿಸ್ತು.

3) ನೌಕರರ ಚಿತಾವಣೆ, ಅಶಿಸ್ತು, ಹಿಂಸೆಯ ಬೆದರಿಕೆ ಹಾಗೂ ಮಿಷನರಿ ಮತ್ತು ಇತರೆ ಪದಾರ್ಥಗಳಿಗೆ ಹಾನಿ ಉಂಟು ಮಾಡುವ ಸಂಭವ.

ಆ) ಬೀಗ ಮುದ್ರೆಯ ನಿರ್ಣಯವನ್ನು ದಿ. 12-4-90 ರಂದು ಆಡಳಿತ ವರ್ಗ ತೆಗೆದುಕೊಂಡಿತು.

ಇ) ಬೀಗ ಮುದ್ರೆಯು ಕಾನೂನು ಬದ್ಧವಾಗಿದೆ ಆದ್ದರಿಂದ ಇತರೆ ವಿಷಯಗಳು ಉದ್ಭವಿಸುವುದಿಲ್ಲ.

ಈ) ಬೀಗಮುದ್ರೆಯ ಅವಧಿಗೆ ನೌಕರರಿಗೆ ಕಷ್ಟ ಕಾಲದ ಭತ್ಯೆಯನ್ನು ಅಂದರೆ ಸಂಬಳದ ಶೇಕಡ 80 ರಷ್ಟು (ವೇತನ ಮತ್ತು ತುಟ್ಟಿ ಭತ್ಯೆ) ನೀಡಲಾಯಿತು.

ಉ) ರೂ.231 ಲಕ್ಷ.

ಊ) ಹೌದು.

ಋ) ಇಲ್ಲ.

ೠ) ಹೌದು. ನೌಕರರು ಈ ವಿಷಯಕ್ಕಾಗಿಯೇ ಮುಷ್ಕರ ಹೂಡಿರಲಿಲ್ಲ.

ಏ) ಇಲ್ಲ.

ಎನ್.ಜಿ.ಇ.ಎಫ್. ಮತ್ತು ಮೈಸೂರು ಲ್ಯಾಂಪ್ಸ್ ವರ್ಕ್ಸನ ಅಂಗ ಸಂಸ್ಥೆಗಳನ್ನು ಕುಣಿಗಲ್ ತಾಲ್ಲೂಕಿನಲ್ಲಿ ಸ್ಥಾಪಿಸುವ ಪ್ರಸ್ತಾವನೆ

3724 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಭಾರಿ ಮತ್ತು ಮದ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎನ್.ಜಿ.ಇ.ಎಫ್ ಮತ್ತು ಮೈಸೂರು ಲ್ಯಾಂಪ್ಸ್ ವರ್ಕ್ಸನ ಅಂಗ ಸಂಸ್ಥೆಗಳನ್ನು ಕುಣಿಗಲ್ ತಾಲ್ಲೂಕಿನಲ್ಲಿ ಸ್ಥಾಪಿಸುವ ಪ್ರಸ್ತಾವನೆ ಇದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಸ್ಥಾಪನೆ ಮಾಡಲಾಗುವುದು?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

Setting up of Electronic Industries in Tumkur:

3742 - Sri K.Lakkappa (Kunigal): Will the Minister for Large and Medium Industries be pleased to state.

a) *Number of Electronic Industries both in Medium and Large Scale and SSI Sector in Tumkur district;*

b) *Out of this number, the number of them in Public, Private and Joint Sector;*

c) *Whether there is any proposal to set up more electronic industries with Japanese assistance in Tumkur;*

d) *If so, the number of such Electronic Industries proposed to be started?*

Smt. Monorama Madhvaraj (Minister For Large & Medium Industries.)

a) SSI - 15 Nos.
Large & Medium - 1

b) All 15 Small Scale Industries are in Private sector. One Medium Scale Industry is Public Limited Company.

c) There is no such proposal.

d) Does not arise.

ತುಮಕೂರಿನಲ್ಲಿ ಅಪಘಾತ ಮತ್ತು ಪುನರ್ವಸತಿ ಸಂಸ್ಥೆಯನ್ನು ಪ್ರಾರಂಭಿಸುವ ಪ್ರಸ್ತಾವ.

3743 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಂಜಯ ಗಾಂಧೀ ಅಪಘಾತ ಪುನರ್ನಿವೇಶನ ಮತ್ತು ಶಾರೀರಿಕ ಔಷದ ಸಂಸ್ಥೆ, ಬೆಂಗಳೂರಿನಂತೆ ತುಮಕೂರಿನಲ್ಲಿ ಅಪಘಾತ ಮತ್ತು ಪುನರ್ನಿವೇಶನ ಸಂಸ್ಥೆಯನ್ನು ತೆರೆಯುವ ಪ್ರಸ್ತಾಪ ಇದೆಯೆ?*

ಆ) *ಇಲ್ಲದ ಪಕ್ಷದಲ್ಲಿ ಸರ್ಕಾರವೇ ಈ ಬಗ್ಗೆ ಕ್ರಮ ತೆಗೆದುಕೊಂಡು ತುಮಕೂರಿನಲ್ಲಿ ಅಪಘಾತ ಸಂಸ್ಥೆಯನ್ನು ಪ್ರಾರಂಭಿಸಿದರೆ, ಇದರಿಂದ ಅನೇಕ ಜೀವಗಳನ್ನು ಉಳಿಸುವ ಸಾಧ್ಯತೆವಿದೆಯಲ್ಲ?*

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಇಲ್ಲ,

ಆ) ಸಂಜಯ ಗಾಂಧಿ ಅಪಘಾತ ಪುನರ್ನಿವೇಶನ ಮತ್ತು ಶಾರೀರಿಕ ಔಷಧ ಸಂಸ್ಥೆ, ಬೆಂಗಳೂರು ಈ ಸಂಸ್ಥೆಯು ಬೆಂಗಳೂರು ಆಸುಪಾಸಿನಲ್ಲಿರುವ ವೈದ್ಯರುಗಳಿಗೆ ಅಪಘಾತಗೊಂಡವರಿಗೆ ಶುಶ್ರೂಷೆ ಕೊಡುವ ದಿಸೆಯಲ್ಲಿ ತರಬೇತಿ ನೀಡಲಾಗುವುದು. ಬೆಂಗಳೂರಿನ ವಿವಿದೆಡೆಯಲ್ಲಿ, ಗಾಯಾಳುಗಳ ಶುಶ್ರೂಷೆಗಾಗಿ ತುರ್ತುವಾಹನದ ಸೌಲಭ್ಯದ ಅವಕಾಶವನ್ನು ನೀಡುವ ಯೋಜನೆ ಈ ಸಂಸ್ಥೆಗೆ ಇದೆ. ಇನ್ನು ಆರು ತಿಂಗಳ ಕಾಲಾವಕಾಶದಲ್ಲಿ ಸಂಜಯಗಾಂಧಿ ಅಪಘಾತ ಪುನರ್ನಿವೇಶನ ಮತ್ತು ಶಾರೀರಿಕ ಔಷಧ ಸಂಸ್ಥೆ ಸಹಭಾಗಿತ್ವದಲ್ಲಿ ಮತ್ತು ಇತರೆ ಸಾರ್ವಜನಿಕ ಆಸ್ಪತ್ರೆಗಳ ನೆರವಿನಿಂದ ತುಮಕೂರಿನಲ್ಲೂ ಈ ಸೌಲಭ್ಯ ವಿಸ್ತರಿಸುವ ಯೋಜನೆ ಇದೆ

ವೃದ್ಧ ಅನಾಥರಿಗೆ ಆಶ್ರಯ ಒದಗಿಸುವ ಬಗ್ಗೆ.

3727-ಶ್ರೀ ಡೆರಿಕ್ ಎಂ.ಬಿ. ಫುಲಿನ್ ಫ್ಲೋ,(ನಾಮನಿರ್ದೇಶನ ಹೊಂದಿದವರು): ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಮಾಜ ಕಲ್ಯಾಣ ಇಲಾಖೆಯು ಸಮಾಜದ ಅನಾಥ ವಯೋವೃದ್ಧರಿಗಾಗಿ ವೃದ್ಧಾಶ್ರಮಗಳನ್ನು ನಡೆಸುತ್ತಿದೆಯೇ?

ಆ) ಬೆಂಗಳೂರು ನಗರ ಹಾಗೂ ರಾಜ್ಯ ಇನ್ನಿತರ ಸ್ಥಳಗಳಲ್ಲಿರುವ ಇಂತಹ ಸಂಸ್ಥೆಗಳು ಎಷ್ಟು? ಮತ್ತು ಪ್ರತಿಯೊಂದು ಸಂಸ್ಥೆಯ ಸಾಮರ್ಥ್ಯ ಮತ್ತು ನಿವಾಸಿಗಳ ಸಂಖ್ಯೆ ಎಷ್ಟು?

ಇ) ದತ್ತಿ ಮೂಲಕ ಮತ್ತು ಸಮಾಜ ಸೇವಾ ಸಂಸ್ಥೆಗಳ ಸಹಾಯದಿಂದ ಸರ್ಕಾರವು ಇಂತಹ ಸಂಸ್ಥೆಗಳನ್ನು ಸ್ಥಾಪಿಸಲು ಪರಿಶೀಲಿಸುತ್ತಿದೆಯೇ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) ಹೌದು.

ಆ) ಐದು - ವಿವರಗಳು ಈ ಕೆಳಕಂಡಂತೆ ಇವೆ.

	ಸಂಸ್ಥೆಯ ಹೆಸರು	ಸಾಮರ್ಥ್ಯ	ನಿವಾಸಿಗಳ ಸಂಖ್ಯೆ
1)	ಸಮಾಜ ಸೇವಾ ಸಂಕೀರ್ಣ, ಬೆಂಗಳೂರು.	100	48
2)	ಫ್ರೆಂಡ್ ಇನ್ ನೀಡ್ ಸೊಸೈಟಿ, ಬೆಂಗಳೂರು	44	44
3)	ಛೆಷೈರ್ ಹೋಂ, ಬೆಂಗಳೂರು.	68	68
4)	ಛೆಷೈರ್ ಹೋಂ ಇಂಡಿಯಾ, ಮಂಗಳೂರು.	24	24
5)	ಅಭಯ ಆಶ್ರಯ, ಮಂಗಳೂರು.	87	87

ಇ) ಹೌದು.

ಹಿಂದುಳಿದಿರುವ ಆಂಗ್ಲೋ ಇಂಡಿಯನ್ ಬಗ್ಗೆ.

3747-ಶ್ರೀ ಡೆರಿಕ್ ಎಂ.ಬಿ. ಫುಲಿನ್ ಫಾ (ನಾಮನಿರ್ದೇಶನ ಹೊಂದಿದವರು): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಂಗ್ಲೋ ಇಂಡಿಯನ್ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಹಿಂದುಳಿದಿರುವಿಕೆಯನ್ನು ಸರ್ಕಾರವು ಗುರ್ತಿಸಿದೆಯೇ?

ಆ) ಆಂಗ್ಲೋ ಇಂಡಿಯನ್ ಸಮುದಾಯದ ಆರ್ಥಿಕ ಸಾಮಾಜಿಕ ಸ್ಥಿತಿಗತಿಗಳನ್ನು ಸುಧಾರಿಸಲು ಮತ್ತು ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಇ) ರಾಜ್ಯ ಸರ್ಕಾರಿ ಕಛೇರಿಯಲ್ಲಿ ಕಂಪನಿಗಳಲ್ಲಿ ನಿಗಮಗಳಲ್ಲಿ ರಾಜ್ಯ ಸರ್ಕಾರದ ಸ್ವಾಮ್ಯಕ್ಕೊಳಪಟ್ಟಿರುವ ಉದ್ಯಮಗಳಲ್ಲಿ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಎಷ್ಟು ಜನ ಆಂಗ್ಲೋ ಇಂಡಿಯನ್ನರು ಉದ್ಯೋಗದಲ್ಲಿರುತ್ತಾರೆ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) ಹೌದು.

ಆ) ಸರ್ಕಾರದ ಆದೇಶದ ಸಂಖ್ಯೆ: ಸಕಕಾ 66 ಬಿಸಿಎ 86 ದಿನಾಂಕ : 13-10-86ರ ಪ್ರಕಾರ ಭಾರತೀಯ ಸಂವಿಧಾನ 15(4) ಮತ್ತು 16(4)ನೇ ವಿಧಿಗಳ ಪ್ರಕಾರ ಶೈಕ್ಷಣಿಕ ಮತ್ತು ಔದ್ಯೋಗಿಕ ಮೀಸಲಾತಿಯನ್ನು 'ಇ' ಗುಂಪಿನಡಿಯಲ್ಲಿ ವಾರ್ಷಿಕವಾಗಿ ಆದಾಯ ರೂ. 8000.00ಕ್ಕಿಂತ ಕಡಿಮೆ ಇದ್ದಲ್ಲಿ ಪಡೆಯಬಹುದಾಗಿದೆ. ಇದರ ಜೊತೆಗೆ ಸ್ವಾವಲಂಬನ ಯೋಜನೆಯಡಿಯಲ್ಲಿ ಸಾಲದ ಸೌಲಭ್ಯ ಫೋರ್ಮನ್‌ಶಿಪ್ ತರಬೇತಿ ಮತ್ತು ವಾಹನ ಚಾಲನ ತರಬೇತಿ ಸೌಲಭ್ಯಗಳನ್ನು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಮತೀಯ ಅಲ್ಪಸಂಖ್ಯಾತರು ಪಡೆದುಕೊಳ್ಳಬಹುದಾಗಿದೆ.

ಇ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹಾಗೂ ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ಉದ್ಯಮಗಳಲ್ಲಿ ಒಟ್ಟು 33 ಜನ ಆಂಗ್ಲೋ ಇಂಡಿಯನ್ನರು ಸೇವೆ ಸಲ್ಲಿಸುತ್ತಿದ್ದಾರೆ.

ಆಂಗ್ಲೋ ಇಂಡಿಯನ್ ಜನಾಂಗದ ಏಳಿಗೆ.

3748 - ಶ್ರೀ ಡೆರಿಕ್ ಎಂ.ಬಿ. ಫುಲಿನ್ ಫಾ (ನಾಮನಿರ್ದೇಶನ ಹೊಂದಿದವರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆವಿಟ್ಟು ಉತ್ತರಿಸುವರೆ ?

ಅ) *ಆಂಗ್ಲೋ ಇಂಡಿಯನ್ ಸಮುದಾಯದಲ್ಲಿ ಶೇಕಡಾ 90 ಕ್ಕಿಂತ ಹೆಚ್ಚಿನವರು ಬಡತನ ರೇಖೆಗಿಂದ ಕೆಳಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಶೇಕಡಾ 40 ರಿಂದ 50ರಷ್ಟು ಈ ಸಮುದಾಯದ ಜನರ ಸ್ಥಿತಿ ತುಂಬಾ ಕೆಳಮಟ್ಟದಲ್ಲಿರುವುದು ಮತ್ತು ಇವರಿಗೆ ತಕ್ಷಣದ ಪುನರ್ವಸತಿ ಕಾರ್ಯಕ್ರಮದ ಆವಶ್ಯಕತೆ ಇದೆ ಎಂಬುದು ನಿಜವೇ?*

ಇ) *ಹಾಗಿದ್ದಲ್ಲಿ ಸರ್ಕಾರವು ಈ ಜನಾಂಗದವರಿಗೆ ತುರ್ತು ಪರಿಹಾರ ಮತ್ತು ಪುನರ್ವಸತಿ ಕಲ್ಪಿಸಿ, ಮೇಲಕ್ಕೆತ್ತಲು ಕ್ರಮ ಕೈಗೊಳ್ಳುವುದೇ?*

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)ಃ

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಆಂಗ್ಲೋ ಇಂಡಿಯನ್ ಸಮುದಾಯದ ಜನರನ್ನು ಧಾರ್ಮಿಕ ಅಲ್ಪಸಂಖ್ಯಾತರೆಂದು ಪರಿಗಣಿಸಲಾಗಿದೆ ಮತ್ತು ಕುಟುಂಬದ ವಾರ್ಷಿಕ ಆದಾಯ ರೂ.6000-00ಕ್ಕಿಂತ ಮೀರದಿದ್ದಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ) ಇದರ ಮೂಲಕ ಸೌಲಭ್ಯಗಳನ್ನು ಪಡೆಯಬಹುದು.

ಆಂಗ್ಲೋ ಇಂಡಿಯನ್ ಪಂಗಡದವರಿಗೆ ದೊರೆಯುವ ಸೌಲಭ್ಯಗಳು.

3746 - ಶ್ರೀ ಡೆರಿಕ್ ಎಂ. ಬಿ. ಫುಲಿನ್ ಫಾ (ನಾಮನಿರ್ದೇಶನ ಹೊಂದಿದವರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಆಂಗ್ಲೋ ಇಂಡಿಯನ್ ಪಂಗಡದವರಿಗೆ ಯಾವುದಾದರೂ ಯೋಜನೆಯಲ್ಲಿ ಸೌಲಭ್ಯ ದೊರೆಯುವುದೇ?*

ಆ) *ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಸದರಿ ಯೋಜನೆಗಳಡಿಯಲ್ಲಿ ಸೌಲಭ್ಯ ಹೊಂದಿದ ಆಂಗ್ಲೋ ಇಂಡಿಯನ್ನರ ಸಂಖ್ಯೆ*

ಇ) ಈ ಯೋಜನೆಯ ಉಪಯೋಗ ಹೊಂದಲು ಸಾಕಷ್ಟು ಅಲ್ಪಸಂಖ್ಯಾತರ ಪಂಗಡದವರುಗಳು ಮುಂದೆ ಬರದಿರುವುದು ನಿಜವೇ, ಹಾಗಿದ್ದಲ್ಲಿ ಇದಕ್ಕೆ ಕಾರಣಕೊಡಿ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಆಂಗ್ಲೋ ಇಂಡಿಯನ್ ಪಂಗಡದವರು ಈ ಕೆಳಕಂಡ ಯೋಜನೆಗಳಲ್ಲಿ ಸೌಲಭ್ಯಗಳನ್ನು ಪಡೆಯಬಹುದು.

1. ಸ್ವಾವಲಂಬನ ಯೋಜನೆ

2. ವಾಹನ ಚಾಲನಾ ತರಬೇತಿ ಯೋಜನೆ

3. ಫೋರ್‌ಮನ್‌ಶಿಪ್ ತರಬೇತಿ ಯೋಜನೆ

4. ಕಂಪ್ಯೂಟರ್ ಟ್ರೈನಿಂಗ್ ಯೋಜನೆ.

ಆ) ಆಂಗ್ಲೋ ಇಂಡಿಯನ್‌ರನ್ನು ಒಳಗೊಂಡಂತೆ ಸೌಲಭ್ಯಗಳನ್ನು ಪಡೆದುಕೊಂಡಿರುವ ಕ್ರಿಶ್ಚಿಯನ್ ಜನಾಂಗದವರ ವಿವರಗಳು ಕೆಳಕಂಡಂತಿವೆ:

ಸ್ವಾವಲಂಬನ ಯೋಜನೆ	-	360
ವಾಹನ ಚಾಲನಾ ತರಬೇತಿ ಯೋಜನೆ	-	339
ಫೋರ್‌ಮನ್‌ಶಿಪ್ ತರಬೇತಿ	-	007
ಕಂಪ್ಯೂಟರ್ ಟ್ರೈನಿಂಗ್	-	003

ಇ) ನಿಜವಲ್ಲ - ನಿಗಮದ ಎಲ್ಲಾ ಯೋಜನೆಗಳಿಗೂ ಹೆಚ್ಚಿನ ಬೇಡಿಕೆ ಇದ್ದು ಅಲ್ಪಸಂಖ್ಯಾತರ ಪಂಗಡದವರು ಎಲ್ಲಾ ಯೋಜನೆಗಳನ್ನು ಅತ್ಯುತ್ತಮವಾಗಿ ಉಪಯೋಗಿಸಿಕೊಂಡಿರುತ್ತಾರೆ.

ಕಾರ್ಮಿಕರಿಗೆ ಕನಿಷ್ಟ ವೇತನವನ್ನು ಪರಿಷ್ಕರಿಸುವುದು

3729 - ಶ್ರೀ ಸುಭಾಷ್ ಜೋಷಿ (ನಿಪ್ಪಾಣಿ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅನೇಕ ವರ್ಷಗಳಿಂದ ಟೋಬಾಕೋ ಮತ್ತು ಬೀಡಿ ಉದ್ದಿಮೆಯ ಕಾರ್ಮಿಕರಿಗೆ ಕನಿಷ್ಟ ವೇತನವನ್ನು ಪರಿಷ್ಕರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಯಾವಾಗ ಪರಿಷ್ಕರಿಸಲಾಗುವುದು ?

ಇ) ಕನಿಷ್ಠ ವೇತನದ ಬಗ್ಗೆ ಕಾರ್ಮಿಕ ಆಯುಕ್ತರು ಮುಂದೆ ಒಂದು ಒಪ್ಪಂದವಾಗಿದ್ದರೂ ಅದನ್ನು ಅನುಷ್ಠಾನಗೊಳಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):

ಅ) ಹೌದು

ಆ) ಈ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಇ) ಉತ್ತರ ಕನ್ನಡ ಮತ್ತು ಧಾರವಾಡ ಜಿಲ್ಲೆಯಲ್ಲಿನ ಬೀಡಿ ಕಾರ್ಮಿಕರಿಂದ ದೂರುಗಳನನು ಸ್ವೀಕರಿಸಲಾಗಿದೆ. ಒಪ್ಪಂದಗಳನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಬಾಪೂಜಿ ವಿದ್ಯಾಸಂಸ್ಥೆ ನಡೆಸುತ್ತಿರುವ ದಂತ ಕಾಲೇಜು

3782 - ಶ್ರೀ ಪ್ರಭಾಕರ್ ಎಸ್. ರಾಣೆ (ಕಾರವಾರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಾಪೂಜಿ ವಿದ್ಯಾಸಂಸ್ಥೆ ನಡೆಸುತ್ತಿರುವ ದಂತ ಕಾಲೇಜು ದಾವಣಗೆರೆಗೆ 105 ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶಕ್ಕಾಗಿ ಅನುಮತಿ ನೀಡಿರುವುದು ನಿಜವಲ್ಲವೇ ?

ಆ) ಸರ್ಕಾರದ ಪೂರ್ವಾನುಮತಿ ಇಲ್ಲದೇ ಮೇಲಿನ ಕಾಲೇಜಿಗೆ 200 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿರುವುದು ಅವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ವಿದ್ಯಾರ್ಥಿಗಳ ಈ ಅನಧಿಕೃತ ಪ್ರವೇಶದ ಬಗ್ಗೆ ವಿಚಾರಣೆಯನ್ನು ನಡೆಸಲಾಗುವುದೇ ಮತ್ತು ವಿದ್ಯಾರ್ಥಿಗಳ ಹಿತಾಸಕ್ತಿಯಿಂದ ಹೆಚ್ಚಿನ ಪ್ರವೇಶವನ್ನು ಇತರೇ ವೈದ್ಯಕೀಯ ಕಾಲೇಜುಗಳಿಗೆ ವರ್ಗ ಮಾಡಲಾಗುವುದೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇಲ್ಲ

ಆ) ಸರ್ಕಾರವು ಅನುಮತಿ ನೀಡಿರುವ ಸರ್ಕಾರಿ ಆದೇಶ ಸಂಖ್ಯೆ :ಆಕುಕ 126 ಎಂಎಂಇ 90, ದಿನಾಂಕ.19.2.91 5.3.1991 ಮತ್ತು 12.8.1991 ರಂತೆ 90-91 ಮತ್ತು 1991-92ನೇ ಸಾಲಿಗೆ ಮೊದಲನೇ ಬಿಡಿಎಸ್‌ಗೆ ಬಾಪೂಜಿ ದಂತ ಕಾಲೇಜು, ದಾವಣಗೆರೆಗೆ 110+90 ಪ್ರವೇಸ ಸ್ಥಾನಗಳನ್ನು ನಿಗದಿಪಡಿಸಿರುತ್ತದೆ.

ಇ) ಉದ್ಭವಿಸುವುದಿಲ್ಲ.

ದಂತ ಕಾಲೇಜು ಮತ್ತು ಅದಕ್ಕೆ ಸಂಬಂಧಿಸಿದ ಆಸ್ಪತ್ರೆಗಳಿಗೆ ತನಿಖೆ ನಡೆಸಿರುವುದು.

3783 - ಶ್ರೀ ಪ್ರಭಾಕರ್ ಎಸ್. ರಾಣೆ (ಕಾರವಾರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ಕಾರ್ಯದರ್ಶಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ವತಿಯಿಂದ ವೈದ್ಯಕೀಯ: ದಂತ ಕಾಲೇಜುಗಳಿಗೆ ಮತ್ತು ಅದಕ್ಕೆ ಸಂಬಂಧಿಸಿದ ಆಸ್ಪತ್ರೆಗಳಿಗೆ ಕ್ರಮವಾಗಿ ತನಿಖೆಯನ್ನು ನಡೆಸುತ್ತಿರುವುದು ನಿಜವಲ್ಲ, ಅಲ್ಲವೇ ?

ಆ) ಹಾಗಿದ್ದಲ್ಲಿ ಈಗ ತನಿಖೆ ನಡೆಸದಿರಲು ಕಾರಣವೇನು ?

ಇ) ಮೇಲಿನ ಸಂಸ್ಥೆಗಳಲ್ಲಿ ಬೋಧನಾ ಸಿಬ್ಬಂದಿಯ ಸರಿಯಾದ ಹಾಜರಾತಿ ಇಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಗಮನಕ್ಕೆ ಬಂದಿದೆಯೇ ?

ಈ) ಈ ಲೋಪದೋಷವನ್ನು ಸರಿಪಡಿಸಲು ಸರ್ಕಾರ ತೆಗೆದುಕೊಳ್ಳಬಹುದಾದ ಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ವೈದ್ಯಕೀಯ :ದಂತ ಕಾಲೇಜುಗಳಿಗೆ ಮತ್ತು ಅದಕ್ಕೆ ಸಂಬಂಧಿಸಿತ ಆಸ್ಪತ್ರೆಗಳಿಗೆ ನಿರ್ದೇಶಕರು, ವೈದ್ಯಕೀಯ ಶಿಕ್ಷಣ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ಕಾರ್ಯದರ್ಶಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣರವರು ತನಿಖೆ ನಡೆಸುತ್ತಿರುವುದು ನಿಜ.

ಆ) ಉದ್ಭವಿಸುವುದಿಲ್ಲ

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

PHCs and PHUs in Chikkodi Taluk.

3773 - Sri. Veera Kumar. A. Patil (Sadalga) : Will the Minister for Health and Family Welfare be pleased to state.

a) *The number of PHCs & PHUs in Chikkodi Taluka.,*

b) *Whether all the PHCs & PHUs have been provided with qualified Doctors & other Staff.,*

c) *Whether all the PHCs/PHUs are functioning in Government Building at Chikkodi Taluka.,*

d) *The number of PHC/PHUs that are functioning in rented building?*

Shri. G. Puttaswamy Gowda (Minister of Health and Family Welfare)

a)	P.H.Cs	11
	P.H.Us	3

b) Yes

c) Yes

d) Does not arise in view of reply (c) above.

ಬೀದರ್ ಜಿಲ್ಲಾ ಆಸ್ಪತ್ರೆಯ ಬಗ್ಗೆ.

3778 - ಶ್ರೀ ನಾರಾಯಣರಾವ್, ಮನಹಳ್ಳಿ (ಬೀದರ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಬೀದರ್ ಜಿಲ್ಲಾ ಆಸ್ಪತ್ರೆಯಲ್ಲಿ ಹಾಲಿ ಇರುವ ಹಾಸಿಗೆಗಳ ಸಂಖ್ಯೆ 283 ಸಾಕಾಗುವುದಿಲ್ಲ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?*

2) *ಹಾಗಾದರೆ ಈ ಹಾಸಿಗೆಗಳ ಸಂಖ್ಯೆಯನ್ನು ಯಾವಾಗ ಹೆಚ್ಚಿಸಲಾಗುವುದು?*

3) *ಬೀದರ್ ಜಿಲ್ಲಾ ಆಸ್ಪತ್ರೆಯಲ್ಲಿ ಐ.ಸಿ.ಸಿ.ಯು, ರಕ್ತನಿಧಿ ಕೇಂದ್ರ, ಹೆವಿ ಡ್ಯೂಟಿ ಜನರೇಟರ್, ಹೈಡ್ರಾಲಿಕ್ ಓ.ಟಿ. ಟೇಬಲ್ ಮತ್ತು ಎಂಡೋಸ್ಕಪಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

4) *ಹಾಗಾದರೆ ಯಾವಾಗ ಈ ಅಗತ್ಯಗಳನ್ನು ಪೂರೈಸಲಾಗುವುದು?*

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

1) ಇಲ್ಲ.

2) ಉದ್ಭವಿಸುವುದಿಲ್ಲ.

3) ಹೌದು.

4) ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಮತ್ತು ಈ ಆಸ್ಪತ್ರೆಗೆ ಈ ವರ್ಷ ಲಭ್ಯವಿರುವ ಹಣದ ಪ್ರಮಾಣವನ್ನು ಅನುಸರಿಸಿ ಈ ಆಧುನಿಕ ಉಪಕರಣಗಳನ್ನು ಒದಗಿಸಲಾಗುವುದು.

ಬೀದರ್ ಜಿಲ್ಲೆಯ ರೋಗಿಗಳಿಗೆ ಚಿಕಿತ್ಸೆ ನೀಡಲು ಹೆಚ್ಚು ಕೇಂದ್ರಗಳನ್ನು ತೆರೆಯುವುದು.

3777 - ಶ್ರೀ ನಾರಾಯಣರಾವ್ ಮನ್ನಹಳ್ಳಿ (ಬೀದರ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಬೀದರ್ ಜಿಲ್ಲೆಯ ರೋಗಿಗಳಿಗೆ ಚಿಕಿತ್ಸೆ ನೀಡಲು ಈಗಿರುವ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳು ಸಾಕಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

2) ಹಾಗಿದ್ದಲ್ಲಿ, ಹೊಸ ಆಸ್ಪತ್ರೆ ಅಥವಾ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಘಟಕಗಳಲ್ಲಿ ಹಾಸಿಗೆ ಸಂಖ್ಯೆ ಏರಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ?

3) ಸರ್ಕಾರದ ನಿಯಮದ ಪ್ರಕಾರ ಜನಸಂಖ್ಯೆ - ವೈದ್ಯರ ಪ್ರಮಾಣದ ಮಾದರಿ ಏನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

1) ಬಂದಿದೆ.

2) ಇದೆ.

3) ಜನ ಸಂಖ್ಯೆ : ವೈದ್ಯರ ಪ್ರಮಾಣ 2450:1

ಬೀದರ್ ಜಿಲ್ಲಾ ಆಸ್ಪತ್ರೆಗೆ ಔಷಧಿಯನ್ನು ಕೊಳ್ಳಲು ಮಂಜೂರಾದ ಹಣದ ಮೊತ್ತ

3776 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೀದರ್ ಜಿಲ್ಲಾ ಆಸ್ಪತ್ರೆಗೆ ಔಷಧಿಯನ್ನು ಕೊಳ್ಳಲು ಮಂಜೂರಾಗಿರುವ ಹಣವೆಷ್ಟು ?

ಆ) ಈ ಮಂಜೂರಾಗಿರುವ ಹಣ ಈ ಆಸ್ಪತ್ರೆಗೆ ಔಷಧಗಳಿಗೆ ಕನಿಷ್ಠ ಅವಶ್ಯಕತೆಯನ್ನು ಪೂರೈಸುತ್ತದೆಯೇ ?

ಇ) ಇಲ್ಲದಿದ್ದರೆ ಸರ್ಕಾರ ಹೆಚ್ಚುವರಿ ಹಣ ಮಂಜೂರು ಮಾಡಲು ಏನು ಕ್ರಮ ಕೈಗೊಂಡಿದೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 1991-92ನೇ ಸಾಲಿಗೆ ಔಷಧಿಗಾಗಿ ರೂ.11.5 ಲಕ್ಷವನ್ನು ಮಂಜೂರು ಮಾಡಿದೆ.

ಆ) ಸಾಕಾಗುತ್ತದೆ.

ಇ) ಉದ್ಭವಿಸುವುದಿಲ್ಲ.

ಅಧ್ಯಕ್ಷರು :- ಪ್ರಶ್ನೋತ್ತರಗಳ ಪಟ್ಟಿಯನ್ನು ಮಂಡಿಸಲಾಯಿತು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

1. ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಗೃಹ ಹಾಗೂ ಅಬಕಾರಿ ಮಂತ್ರಿ) ಅವರು :-

1952ನೇ ಇಸವಿಯ ವಿಚಾರಣಾ ಆಯೋಗದ ಅಧಿನಿಯಮದ 3(4)ನೇ ಕಲಮಿನ ಮೇರೆಗೆ.

16-2-1987ರಂದು ಪಾವಗಡದಲ್ಲಿ ನಡೆದ ಪೋಲೀಸ್ ಗೋಲಿಬಾರಿನ ಬಗ್ಗೆ ವಿಚಾರಣೆ ನಡೆಸಿದ ವಿಚಾರಣಾ ಆಯೋಗದ ವರದಿಯನ್ನು ಸಭೆಯ ಮುಂದಿಡುವುದು.

2. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿ) /

1980ನೇ ಇಸವಿಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿಯ ಅಧಿನಿಯಮದ 25ನೇ ಕಲಮಿನ ಮೇರೆಗೆ.

1990-91ನೇ ಸಾಲಿನ ಕಾವೇರಿ ಜಲಾನಯನ ಯೋಜನೆಗಳ ಮೈಸೂರು ಅಚ್ಚುಕಟ್ಟು ಪ್ರದೈಶಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುವುದು.

3.ಶ್ರೀ ಎ.ಎಂ. ಬೆಳ್ಳಿಯಪ್ಪ (ಮೀನುಗಾರಿಕೆ, ಬಂದರು ಹಾಗೂ ಅಂತರ್ಜಲ ಸಾರಿಗೆ ರಾಜ್ಯಮಂತ್ರಿ)ಅವರು :-

1956ನೇ ಇಸವಿಯ ಕಂಪನಿ ಅಧಿನಿಯಮದ 619(ಎ) ಕಲಮಿನ ಮೇರೆಗೆ

1990-91ನೇ ಸಾಲಿನ ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತದ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುವುದು.

4. ಶ್ರೀ ಎಂ.ರಾಮಪ್ಪ (ಇಂಧನ ರಾಜ್ಯ ಮಂತ್ರಿ) ಅವರು :-

1948ನೇ ಇಸವಿಯ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮದ 75(1)ನೇ ಕಲಮಿನ ಮೇರೆಗೆ

1989-90ನೇ ಸಾಲಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ವಾರ್ಷಿಕ ಆಡಳಿತ ವರದಿಯನ್ನು ಸಭೆಯ ಮುಂದಿಡುವುದು.

ಅಧ್ಯಕ್ಷರು :-ಮಂಡಿಸಲಾಯಿತು. ಈಗ ಸದನವು ಮುಂದೂಡಿ ಪುನಃ ನಾಳೆ ಬೆಳಿಗ್ಗೆ 11.00ಗಂಟೆಗೆ ಸೇರುವುದು.

(ಸದನವು ರಾತ್ರಿ 8.53 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ದಿನಾಂಕ 25.9.91ರಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ತೀರ್ಮಾನಿಸಲಾಯಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ANNEXURE-I

KARNATAKA LEGISLATIVE ASSEMBLY

(ninth Assembly)

FIFTH SESSION

(Adjourned Meetings)

THE KARNATAKA APPROPRIATION (No.2) BILL, 1991 (L.A. Bill No.27 of 1991)

A Bill to authorise payment and appropriation of certain sums from and out of the Consolidated Fund of the State of Karnataka for the services for the financial year 1991-92.

Whereas it is expedient to authorise payment and appropriation of certain sums from and out of the Consolidated Fund of the State for the services for the financial year 1991-92.

Be it enacted by the Karnataka State Legislature in the Fortysecond Year of the Republic of India as follows:-

1. **Short title.**-This Act may be called the Karnataka Appropriation (No.2)Act.1991.

2. **Issue of Rupees 6786,03,70,000 out of the Consolidated Fund of the State of Karnataka for the financial year 1991-92.**- From and out of the Consolidated Fund of the State of Karnataka, there may be paid and applied sums not exceeding those specified in column 5 of the Schedule amounting in the aggregate to the sum of Rupees Six Thousand Seven hundred Eighty Six Crores Three Lakhs and Seventy Thousand only towards defraying the several charges which will come in course of payment during the financial year 1991-92 in respect of the services specified in column 2 of the Schedule.

3. **Appropriation.**- The sums authorised to be paid and applied from and out of the Consolidated Fund of the State of Karnataka by this Act shall be appropriated for the services and purposes expressed in the Schedule in relation to the said year.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು		ಮೀರದ ಮೊಬಲಗು		
			ವಿಧಾನ ಸಭೆಯಿಂದ ಪುರಸ್ಕೃತ ವಾದುದನ್ನು	ಸಂಚಿತ ನಿಧಿಯಿಂದ ಪ್ರಭೃತವಾದುದನ್ನು	ಒಟ್ಟು
1		2	3	4	5
1	ಭೂಸುರ ಮತ್ತು ಜಲ ರಕ್ಷಣೆ ವ್ಯವಸಾಯ (ತೋಟಗಾರಿಕೆ ಮತ್ತು ಖುಷ್ಕಿ ಭೂಮಿ (ಅಭಿವೃದ್ಧಿ ಹೊರತು)	ರಾಜಸ್ವ ಬಂಡವಾಳ	134,97,23,000 17,92,50,000	81,000	134,98,04.000 17,92,50,000
2.	ಖುಷ್ಕಿ ಭೂಮಿ ಅಭಿವೃದ್ಧಿ	ರಾಜಸ್ವ	21,25,91,000	....	21,25,91,000
3.	ತೋಟಗಾರಿಗೆ	ರಾಜಸ್ವ ಬಂಡವಾಳ	26,21,32,000 41,00,000	....	26,21,32,000 41,00,000
4.	ಪಶು ಸಂಗೋಪನ ಮತ್ತು ಹೈನು ಅಭಿವೃದ್ಧಿ	ರಾಜಸ್ವ	54,40,38,000	56,000	54,40,94,000
5.	ಮೀನುಗಾರಿಕೆ	ರಾಜಸ್ವ ಬಂಡವಾಳ	10,82,27,000 82,50,000	73,000	10,82,00,000 82,50,000
6.	ಉದ್ಯಮಗಳು (ಚಿಕ್ಕಪುಟ್ಟ ಉದ್ಯಮಗಳು, ಸಹಕಾರ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯ ಹೊರತುಪಡಿಸಿ)	ರಾಜಸ್ವ ಬಂಡವಾಳ	35,23,74,000 12,13,00,000	30,000	35,24,04,000 12,13,00,000
7.	ಗಣಿಗಳು ಮತ್ತು ಭೂ ವಿಜ್ಞಾನ	ರಾಜಸ್ವ	8,40,41,000	5,000	8,40,46,000
8.	ಚಿಕ್ಕ ಪುಟ್ಟ ಉದ್ಯಮಗಳು	ರಾಜಸ್ವ ಬಂಡವಾಳ	54,48,34,000 8,51,58,000	24,000	54,48,58,000 8,51,58,000

9.	ಸಹಕಾರ ಉದ್ಯಮಗಳು	ರಾಜಸ್ವ ಬಂಡವಾಳ	2,74,96,000 8,52,14,000	....	2,74,96,000 8,52,14,000
10.	ರೇಷ್ಮೆ ವ್ಯವಸಾಯ	ರಾಜಸ್ವ ಬಂಡವಾಳ	82,22,32,000 9,33,29,000	....	82,22,32,000 9,33,29,000
11.	ಲೇಖನ ಸಾಮಗ್ರಿ ಮತ್ತು ಮುದ್ರಣ	ರಾಜಸ್ವ	15,85,77,000	....	15,85,77,000
12.	ಉಚ್ಛ ಶಿಕ್ಷಣ	ರಾಜಸ್ವ ಬಂಡವಾಳ	207,98,16,000 25,00,000	55,000	207,98,71,000 25,00,000

SCHEDULE

(See Sections 2 and 3)

Demand No.	Service and Purposes		Sums not exceeding		
			Voted by the Legislative Assembly	Charged on the consolidated Fund	Total
1	2		3	4	5
..	Reduction or Avoidance of Debt.	Revenue ...	....	57,44,00,000	57,44,00,000
...	Interest, Payments	Revenue ...	....	5,23,21,15,000	5,23,21,15,000
..	Internal Debt. Loans from Central Government and Inter-State Settlement	Capital ...	....	858,48,61,000	858,48,61,000
17	Taxes on Income, Professions, Sales and other Services	Revenue ...	72,38,92,000	20,000	72,39;12,000
18	Insurance, Treasury and Accounts Administration	Revenue ...	16,37,80,000	5,000	16,37,85,000
19	Pension and other Retirement Benefits	Revenue ...	2,97,80,00,000	1,10,00,000	298,90,00,000
20.	Assistance to Government Servants and Miscellaneous Loans	Revenue .. Capital ...	2,90,00,000 13,98,00,000	....	2,90,00,000 13,98,00,000
21.	Small Savings	Revenue ...	4,93,00,000	.....	4,93,00,000
22.	Other Miscellaneous Services	Revenue... Capital ...	22,32,83,000 6,03,00,000	30,000	22,33,13,000 6,03,00,000

23.	Food and Civil Supplies	Revenue ..	74,88,06,000	25,000	74,88,31,000
24.	Forest	Revenue .. Capital ...	111,84,33,000 25,24,000	5,00,51,000	1,16,84,84,000 25,24,000
25.	State Excise	Revenue ..	15,11,98,000	2,000	15,12,00,000
26.	Taxes on Vehicles	Revenue ..	9,89,16,000	5,00,000	9,94,16,000
27.	Police	Revenue .. Capital ...	202,95,90,000 5,00,000	1,07,000 ...	2,02,96,97,000 5,00,000
28.	Jails etc	Revenue ..	7,68,23,000	10,000	7,68,33,000
29.	Information and Tourism	Revenue .. Capital ...	10,49,58,000 1,10,00,000	....	10,49,58,000 1,10,00,000
30.	Road Transport	Revenue .. Capital ...	50,00,000 10,00,00,000	....	50,00,000 10,00,00,000
31.	Medical, Family Welfare and Public Health Services	Revenue ..	305,88,79,000	75,000	3,05,89,54,000 ....
32.	Housing (Excluding Govt., Residential Buildings)	Revenue .. Capital ...	23,24,25,000 15,83,55,000	....	23,24,25,000 15,83,55,000
32.	ಗೃಹನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳನ್ನು ಹೊರತುಪಡಿಸಿ)	ರಾಜಸ್ವ ಬಂಡವಾಳ	23,24,25,000 15,83,55,000	....	23,24,25,000 15,83,55,000
33.	ನಗರಾಭಿವೃದ್ಧಿ ಇತ್ಯಾದಿ	ರಾಜಸ್ವ ಬಂಡವಾಳ	38,04,60,000 12,87,93,000	....	38,04,60,000 12,87,93,000
34.	ನಗರ ಪಾಲಿಕೆಗಳು ಮತ್ತು ಪಟ್ಟಣ ಪಂಚಾಯಿತಿಗಳಿಗೆ ಅನುದಾನ	ರಾಜಸ್ವ	75,60,15,000	.....	75,60,15,000
35.	ಸಣ್ಣ ನೀರಾವರಿ	ರಾಜಸ್ವ ಬಂಡವಾಳ	47,78,71,000 17,62,14,000	 5,00,000	47,78,71,000 17,67,14,000

36.	ನೀರಾವರಿ, ಜಲಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು	ರಾಜಸ್ವ ಬಂಡವಾಳ	2,29,45,91,000 3,76,92,98,000	 2,89,00,000	2,29,45,91,000 3,79,81,98,000
37.	ರಾಜ್ಯ ವಿಧಾನ ಮಂಡಲ	ರಾಜಸ್ವ	9,19,87,000	19,64,000	9,39,51,000
38.	ನ್ಯಾಯ ಪರಿಪಾಲನೆ	ರಾಜಸ್ವ	36,85,45,000	....	36,85,45,000
39.	ಚುನಾವಣೆಗಳು	ರಾಜಸ್ವ	12,45,99,000	.....	12,45,99,000
40.	ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ	ರಾಜಸ್ವ	1,73,46,000	2,17,00,000	3,90,46,000
41.	ಸಚಿವಾಲಯ	ರಾಜಸ್ವ	19,55,16,000	99,000	19,56,15,000
42.	ಜಿಲ್ಲಾಡಳಿತ	ರಾಜಸ್ವ	32,48,72,000	28,000	32,49,00,000
43.	ಮುಖ್ಯಮಂತ್ರಿಯವರ ವಿವಿಧ ಅಭಿಯಾಚನೆ	ರಾಜಸ್ವ ಬಂಡವಾಳ	22,20,47,000 13,42,00,000	4,88,25,000	27,08,72,000 13,42,00,000
44.	ಯೋಜನಾ ಇಲಾಖೆಯ ಅಭಿಯಾಚನೆಗಳು ಇತ್ಯಾದಿ	ರಾಜಸ್ವ	86,74,88,000	.....	86,74,88,000
45.	ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು)	ರಾಜಸ್ವ ಬಂಡವಾಳ	107,43,36,000	10,50,000	1,07,53,86,000 ....
46.	ಕಟ್ಟಡಗಳು	ರಾಜಸ್ವ ಬಂಡವಾಳ	8,63,82,000 46,34,26,000	5,00,000 2,50,000	8,68,82,000 46,36,76,000
47.	ರಸ್ತೆಗಳು ಮತ್ತು ಸೇತುವೆಗಳು	ರಾಜಸ್ವ ಬಂಡವಾಳ	1,27,24,18,000 35,27,43,000	....	1,27,24,18,000 35,27,43,000
48.	ರೇವು ಮತ್ತು ಜಲಸಾರಿಗೆ ಸೇವೆಗಳು	ರಾಜಸ್ವ ಬಂಡವಾಳ	2,43,96,000 3,50,00,000	....	2,43,96,000 3,50,00,000
49.	ವಿದ್ಯುಚ್ಛಕ್ತಿ ಯೋಜನೆಗಳು	ರಾಜಸ್ವ ಬಂಡವಾಳ	20,57,90,000 3,35,92,80,000	....	20,57,90,000 3,35,92,80,000

50.	ಭೂ ಕಂದಾಯ ಇತ್ಯಾದಿ ರಾಜಸ್ವ ಬಂಡವಾಳ	70,23,78,000 10,01,75,000	10,23,000		70,34,01,000 10,01,75,000
50.	Land Revenue, etc., Revenue ... Capital	70,23,78,000 10,01,75,000	10,23,000	70,34,01,000 10,01,75,000	
51.	Stamps and Registration	Revenue ..	7,72,97,000	3,000	7,73,00,000
52.	Relief on Account of Natural Calamities	Revenue ... Capital	27,00,00,000 2,00,000	....	27,00,00,000 2,00,000
53.	Religious and Charitable Institutions, etc.	Revenue ..	12,22,22,000	.....	12,22,22,000
54.	Wakfs	Revenue ..	90,00,000	.....	90,00,000
55.	Co-operation (Excluding Regulated Markets)	Revenue ... Capital	56,50,18,000 18,97,02,000	....	56,50,18,000 18,97,02,000
56.	Regulated Markets	Revenue ..	13,15,98,000	.....	13,15,98,000
57.	Rural Water Supply and Sanitation	Revenue ..	77,20,00,000	.....	77,20,00,000
58.	Rural Development and Employment	Revenue ..	2,76,44,15,000	.....	2,76,44,15,000
59.	Labour and Employment	Revenue ..	45,85,52,000	8,000	45,85,60,000
60.	Welfare of SC/ST. and Backward Classes	Revenue ... Capital	115,36,20,000 3,40,00,000	88,000	115,37,08,000 3,40,00,000
61.	Women and Children Welfare	Revenue ... Capital	141,88,76,000 2,00,00,000	19,000	141,88,95,000 2,00,00,000

Statement of Objects and Reasons

This Bill is introduced in pursuance of the provisions of Article 204 of the Constitution of India to provide for the appropriation out of the Consolidated Fund of the State towards defraying the several charges which will come in course of payment during the financial year 1991-92.

S. BANGARAPPA,
Chief Minister.

M. INNASAPPA,
Secretary.

BLANK PAGE

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ ೨೫ನೇ ಸೆಪ್ಟಂಬರ್ ೧೯೯೧ ಆಶ್ವಯುಜ ೩, ಶಕ ೧೯೧೩

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೯.೧೫ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಪೋಲೀಸ್ ವಸತಿ ಗೃಹಗಳ ನಿರ್ವಹಣೆ

1815 -ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) *ಮಾಗಡಿ ರಸ್ತೆ ಪೋಲೀಸ್ ಕ್ವಾರ್ಟರ್ಸ್ ಮತ್ತು ಜಾರಕ ಬಂಡೆ ಕಾವಲ್ ಪೋಲಿಸ್ ಕ್ವಾರ್ಟರ್ಸ್‌ಗಳಿಗೆ ಸಂಬಂಧಪಟ್ಟಂತೆ 1990-91ರ ಸಾಲಿಗೆ ನಿರ್ವಹಣೆಗೆ (ಮೈನ್‌ಟೈನ್‌ನೆಸ್) ಒದಗಿಸಿದ್ದ ಹಣ ಎಷ್ಟು*

ಆ) *ಈ ಹಣವನ್ನು ಪೂರ್ಣವಾಗಿ ಖರ್ಚು ಮಾಡಲಾಗಿದೆಯೆ ಹಾಗೂ ಹೆಚ್ಚುವರಿ ಕೆಲಸಗಳಿಗೆ ಎಷ್ಟು ಹಣ ನೀಡಲಾಗಿದೆ.*

ಇ) *೧೯೯೧-೯೨ ಸಾಲಿಗೆ ಸದರಿ ಕ್ವಾರ್ಟರ್ಸ್‌ನ ನಿರ್ವಹಣೆಗಾಗಿ ಹಣವನ್ನು ಮಂಜೂರು ಮಾಡಲಾಗಿದೆ ಹಾಗೂ ಹೆಚ್ಚುವರಿ ಕೆಲಸಗಳಿಗೆ ಎಷ್ಟು ಹಣ ಮೀಸಲಿಡಲಾಗಿದೆ?*

ಶ್ರೀ ಜಿ.ಹೆಚ್. ಅಶ್ವಥ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು):

ಅ) ಎಲ್ಲಾ ಕಟ್ಟಡಗಳ ನಿರ್ವಹಣೆಗಳನ್ನು ಇಡುಗಂಟಿನ ಅನುದಾನದಲ್ಲಿ ಭರಿಸುತ್ತಿರುವದರಿಂದ 1990-91 ರಲ್ಲಿ ಈ ಕ್ವಾರ್ಟರ್ಸ್‌ಗಳಿಗಾಗಿ ಪ್ರತ್ಯೇಕ ಹಣ ಒದಗಿಸುವ ಪ್ರಶ್ನೆ ಬರುವುದಿಲ್ಲ.

ಆ) ಮೇಲಿನ 'ಅ' ದಲ್ಲಿ ನೀಡಲಾದ ಉತ್ತರದಿಂದ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ

ಶ್ರೀ ಕೆ. ಲಕ್ಕಣ್ಣ: ಮಾಗಡಿ ರಸ್ತೆ ಪೋಲೀಸ್ ಕ್ವಾರ್ಟರ್ಸ್ ಮತ್ತು ಜಾರಕ್‌ಬಂಡೆ ಕಾವಲ್ ಪೋಲೀಸ್ ಕ್ವಾರ್ಟರ್ಸ್ ರಿಪೇರಿಗೆ ಅಂದಾಡು ವೆಚ್ಚು ಎಷ್ಟು ಎಂದು ಕೇಳಿದ್ದೆ ಕ್ವಾರ್ಟರ್ಸ್ ರಿಪೇರಿಗೆ ಒಟ್ಟಿಗೆ ರಿಪೇರಿಗೆ ಹಣ ಬಡುಗಡೆ ಮಾಡುತ್ತೇವೆಂದು ಉತ್ತರ ಬಂದಿದೆ ಅವು 30 ವರ್ಷಗಳ ಹಿಂದೆ ಕಟ್ಟಿದ ವಸತಿ ಗೃಹಗಳು ಈಗ ಏನು ರಿಪೇಲಿಗೆಂದು ಹಣ ಕೊಡುತ್ತೀರಿ.

ಅದರಲ್ಲಿ ಸುಣ್ಣ ಕೂಡ ಬಳಿಸುವುದಕ್ಕಾಗುವುದಿಲ್ಲ ಕ್ವಾರ್ಟರ್ಸ್‌ಗಳು ತುಂಬಾ ದುಸ್ಥಿತಿಯಲ್ಲಿವೆ. ಇದನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ಏನು ವೆಚ್ಚ ತಗಲುತ್ತದೆ ಆ ಪ್ರಕಾರ ವಾರ್ಷಿಕ ರಿಪೇರಿಗೆ ಹಣ ಕೊಡುವುದಕ್ಕೆ ಸಾಧ್ಯವೇ? ಹೇಗೆ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಮಾಗಡಿ ರಸ್ತೆ ಪೊಲೀಸ್ ಕ್ವಾರ್ಟರ್ಸ್‌ಗೆ ಈ ವರ್ಷ ಸುಮಾರು ಒಂದು ಲಕ್ಷದ 61 ಸಾವಿರ ರೂಪಾಯಿಗಳನ್ನು ಇಟ್ಟಿದ್ದೇವೆ. ಜಾರ್ಕ್‌ಬಂಡೆ ಕಾವಲ್ ಪೊಲೀಸ್ ಕ್ವಾರ್ಟರ್ಸ್‌ಗೆ 1.3 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ನಮಗೆ ಎಷ್ಟು ಅನುದಾನ ಬರುತ್ತದೆ ಅದರ ಮೇಲೆ ಕಟ್ಟಡಗಳ ರಿಪೇರಿಗೆ ಹಣ ಇಡುತ್ತೇವೆ. ನಾವು 70 ರೂಪಾಯಿಗಳನ್ನು ಮೆಯಿಂಟೆನೆನ್ಸ್‌ಗೆ ಎಂದು ಕೇಳಿದ್ದರೆ 40 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಎಷ್ಟು ಪ್ರಮಾಣದಲ್ಲಿ ಹಣ ಬರುತ್ತದೆ ಅದನ್ನು ಅನುಸರಿಸಿ ಈ ಕ್ವಾರ್ಟರ್ಸ್ ರಿಪೇರಿ ಮಾಡಿಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಲಕ್ಕಣ್ಣ : ಹಿಂದೆ ಕಟ್ಟಡದ ವೆಚ್ಚದ ಪ್ರಕಾರ ಇಂತಿಷ್ಟು ಭಾಗ ಎಂದು ಕೊಡುತ್ತಿದ್ದರು ಅದು ಈಗಿನ ಬೆಲೆಯಲ್ಲಿ ಅದು ಏನೇನು ಸಾಕಾಗುವುದಿಲ್ಲ ಇದರಿಂದ ಆ ಕ್ವಾರ್ಟರ್ಸ್ ಕೊಳಚೆ ಪ್ರದೇಶಗಳಂತೆ ಕಾಣುತ್ತಿವೆ. ನಿಮಗೆ ರಿಪೇರಿ ಮಾಡಿಸಲು ಸಾಧ್ಯವಿಲ್ಲವೆಂದರೆ ಅವರಿಗೆ ಸ್ವಂತಕ್ಕೆ ಕೊಟ್ಟು ಹಣ ವಸೂಲ್ಮಾಡಿದರೆ ಅವರೇ ಸ್ವತ ರಿಪೇರಿ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಇದು ಸಾಧ್ಯವೆ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಆ ನೀತಿ ಬಗ್ಗೆ ಸರ್ಕಾರದಲ್ಲಿ ಚರ್ಚೆ ಮಾಡಿ ತೀರ್ಮಾನ ಮಾಡಬೇಕಾಗುತ್ತದೆ. ಆದರೆ ಈ ವರ್ಷ ಹೆಚ್ಚಿನ ಅನುದಾನ ಕೊಡಬೇಕು, ರಿಪೇರಿ ಮಾಡಿಸಬೇಕೆಂಬ ಉದ್ದೇಶ ಸರ್ಕಾಕ್ಕಿದೆ. ಆ ಪ್ರಕಾರ ಈ ವರ್ಷ ಒಂದು ಲಕ್ಷದ ೬೦ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಮುಂದಿನ ವರ್ಷ ಅದಕ್ಕೆ ಹೆಚ್ಚಿನ ಅನುದಾನ ನೀಡುವ ಪ್ರಯತ್ನ ಮಾಡಲಾಗುವುದು. ೭೦ ಕೋಟಿ ಕೇಳಿದ್ದರಲ್ಲಿ ಕೇವಲ ೪೦ ಕೋಟಿ ರೂಪಾಯಿಗಳನ್ನು ಮಾತ್ರ ಬಿಲ್ಡಿಂಗ್ ಮೆಯಿಂಟೆನೆನ್ಸ್‌ಗೆಂದು ಕೊಟ್ಟಿದ್ದಾರೆ. ಇದರಿಂದ ತೊಂದರೆಯಾಗಿದೆ ಅದಷ್ಟು ಜಾಗ್ರತೆ ಕ್ವಾರ್ಟರ್ಸ್ ರಿಪೇರಿಗೋಸ್ಕರ ಏನು ಮಾಡಬೇಕು ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅವರಿಗೇ ಸ್ವಂತಕ್ಕೆ ಕೊಡುವುದಕ್ಕೆ ಆಗುವುದಿಲ್ಲ, ಆ ಪ್ರಶ್ನೆ ಉದ್ಭವಿಸುವುದಿಲ್ಲ.

ಹಿರೇಕೆರೂರುನಲ್ಲಿ ನ್ಯಾಯಾಲಯ ಕಟ್ಟಡದ ನಿರ್ಮಾಣ ಸ್ಥಗಿತಗೊಂಡಿರುವುದು

1877 - ಬಿ.ಹೆಚ್. ಬನ್ನಿಕೊಡು (ಹಿರೇಕೆರೂರು) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಧಾರವಾಡ ಜಿಲ್ಲೆಯ ಹಿರೇಕೆರತೂರು ತಾಲ್ಲೂಕಿನ ಮುನಿಸೀಫ್ ಮತ್ತು ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಕಟ್ಟಡದ ನಿರ್ಮಾಣ ಕೆಲಸದ ಗುತ್ತಿಗೆದಾರ ಬಿಟ್ಟು ಹೋಗಿರುವುದರಿಂದ ಕಟ್ಟಡದ ಕೆಲಸ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ, ಸದರಿ ಕಟ್ಟಡವನ್ನು ತೀವ್ರಗತಿಯಲ್ಲಿ ಪ್ರಾರಂಭಿಸಿ ಪೂರ್ಣಗೊಳಿಸಲು ಹೊಸದಾಗಿ ಗುತ್ತಿಗೆದಾರರನ್ನು ನೇಮಿಲಸಲು ಕ್ರಮ ಕೈಗೊಳ್ಳಲಾಗಿದೆಯೇ

ಇ) ಗುತ್ತಿಗೆದಾರರು ಬಾಲರದೇ ಇದ್ದಲ್ಲಿ ಇಲಾಖೆಯವರೇ ಅಪೂರ್ಣವಾಗಿರುವ ಕಟ್ಟಡದ ಕೆಲಸವನ್ನು ಪೂರ್ಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಈ) ಸದರಿ ಕಟ್ಟಡವನ್ನು ಪೂರ್ಣಗೊಳಿಸಲು ಬೇಕಾಗಿರುವ ಅವಧಿಯೆಷ್ಟು

ಶ್ರೀ ಬಿ.ಹೆಚ್. ಅಶ್ವಥರೆಡ್ಡಿ (ಲೋಕೋಪಯೋಗಿ ಮಂತ್ರಿಗಳು)

ಅ) ಹೌದು.

ಆ) ಹೌದು ವಹಿಸುವ ಆಧಾರದ ಮೇಲೆ.

ಇ) ಹೌದು.

ಈ) ಸುಮಾರು ಎರಡು ವರ್ಷಗಳು ಬೇಕಾಗುತ್ತದೆ.

ಬಿ.ಹೆಚ್. ಬನ್ನಿಕೊಡ್: ಹಿರೇಕೆರೂರಿನಲ್ಲಿ ಮುನ್ಸಿಫ್ ಮತ್ತು ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಕಟ್ಟಡವನ್ನು ಕಟ್ಟುತ್ತಿದ್ದು ಆ ಗುತ್ತಿಗೆದಾರ ಬಿಟ್ಟುಹೋಗಿರುವುದು ನಿಜವೆಂದು ಸರ್ಕಾರ ಒಪ್ಪಿಕೊಂಡಿದೆ ಆ ಕೆಲಸವನ್ನು ಪುನಃ ಪ್ರಾರಂಭಿಸುತ್ತೇವೆಂದು ಹೇಳಿದ್ದಾರೆ. ಇಲ್ಲಿ ಗಮನಿಸತಕ್ಕ ವಿಷಯ ಅಂದರೆ ಅಲ್ಲಿ ಕೆಲಸ ವಿಳಂಬ ಆಗಲಿಕ್ಕೆ ಮತ್ತು ಗುತ್ತಿಗೆದಾರ ಬಿಟ್ಟು ಹೋಗುವುದಕ್ಕೆ ಸರ್ಕಾರದಿಂದ ಹಣ ಕೊಡುವುದರಲ್ಲಿ ತಡವಾಗಿದ್ದರೆ ಬಿಟ್ಟು ಹೋಗಬಹುದು ಆದರೆ ಇಲ್ಲಿ ಯಾವುದೇ ಕಾರಣ ಇಲ್ಲದೆ ಬಜೆಟ್‌ನಲ್ಲಿ ಹಣ ಇದ್ದರೂ ಗುತ್ತಿಗೆದಾರ ಕೆಲಸ ಮಾಡುತ್ತಿದರೂ ಸಹ ಒಂದೂವರೆ ವರ್ಷದ ಕೆಲಸ ವಿಳಂಬವಾಗಲು ಯಾರು ಕಾರಣ? ಮೊದಲಿನ ಅಂದಾಜು ವೆಚ್ಚ ಎನಿತ್ತು? ಯಾವುದೇ ಸಕಾರಣ ಇಲ್ಲದೆ ವಿಳಂಬವಾದುದರಿಂದ ಈಗ ಹೆಚ್ಚಿಗೆ ತಗಲತಕ್ಕ ವೆಚ್ಚ ಎಷ್ಟಿತ್ತು? ಇದಕ್ಕೆ ಜವಾಬ್ದಾರರು ಯಾರು? ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಳ್ಳುತ್ತದೆ?

ಶ್ರೀ ಜಿ.ಹೆಚ್. ಅಶ್ವತ್ತ ರೆಡ್ಡಿ: ಈ ಕಟ್ಟಡದ ಒಟ್ಟು ವೆಚ್ಚ ಸುಮಾರು 30 ಲಕ್ಷ ರೂಪಾಯಿಗಳು. 19 ಲಕ್ಷ ಚಿಲ್ಲರೆ ಈಗಾಗಲೇ ಖರ್ಚಾಗಿದೆ. ಏತಕ್ಕೆ ವಿಳಂಬವಾಗಿದೆ ಎಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಆಗಿನ ಸಭಾಧ್ಯಕ್ಷರಾದ ಶ್ರೀ ಬಣಕಾರ್‌ರವರು ಈ ಪ್ಲಾನ್ ಸರಿಯಾಗಿಲ್ಲವೆಂದು ಬೇರೆ ತರಹ ಕಟ್ಟಡ ಕಟ್ಟಬೇಕೆಂದು ಪ್ರಯತ್ನ ಮಾಡಿದರು. ಆದರೆ ಅದಕ್ಕೆ ಇಲಾಖೆಯವರು ಒಪ್ಪಲಿಲ್ಲ ಅದರಿಂದ ತಡವಾಯಿತು. ಆಮೇಲೆ ಗುತ್ತಿಗೆದಾರರು ನನ್ನ ಕೈಯಲ್ಲಿ ಆಗುವುದಿಲ್ಲವೆಂದು ಬಿಟ್ಟುಹೋದ ಕಾರಣ ಕೆಲಸ ನಿಂತಿದೆ ಈಗ 30 ಲಕ್ಷ ರೂಪಾಯಿಗಳ ಬದಲು 60 ಲಕ್ಷ ರೂಪಾಯಿ ಖರ್ಚಾಗುತ್ತದೆ.

ಶ್ರೀ ಬಿ.ಎಸ್. ಬನ್ನಿಕೋಡ್: ಮಾನ್ಯ ಅಧ್ಯಕ್ಷರೇ ಹೈಕೋರ್ಟಿನವರು ಆ ಒಂದು ನೀಲಿನಕ್ಷೆ ತಯಾರು ಮಾಡಿ ಅಪ್ರೂವ್ ಮಾಡಿರುತ್ತಾರೆ. ಲೋಕೋಪಯೋಗಿ ಇಲಾಖೆಯವರೂ ಅದನ್ನು ಒಪ್ಪಿಕೊಂಡು ಕಾರ್ಯ ಪ್ರಾರಂಭವಾಗಿ ಸುಮಾರು 10 ಲಕ್ಷ ರೂಪಾಯಿ ಹಣ ಖರ್ಚು ಮಾಡಿದಮೇಲೆ ಆ ಕಟ್ಟಡದ ಮುಖ ಈ ಕಡೆ ಆಗಬೇಕು ಆ ಕಡೆ ಆಗಬೇಕು ಎಂಬ ಸಣ್ಣ ಕಾರಣಕ್ಕಾಗಿ ಅದೂ ಸಕಾರಣ ಅಲ್ಲ ಎಂದು ಹೇಳಿದರೂ ಸಹ ಒಂದೂವರೆ ವರ್ಷದಲ್ಲಿ ಮಾಡಿ ಸುಮಾರು 30 ಲಕ್ಷ ರೂಪಾಯಿ ಸಾರ್ವಜನಿಕರ ಹಣ ಹಾಳಾಗಿಹೋಯಿತು ಹೆಚ್ಚಿಗೆ ತೆರಬೇಕಾಯಿತು. ಕಟ್ಟಡ ಪೂರ್ತಿ ಆಗಲಿಲ್ಲ, ಆದ್ದರಿಂದ ಮಾನ್ಯ ಸಚಿವರು ಯಾವುದೇ ಸಾಮಾಜಿಕ ಕಾರ್ಯಕರ್ತರು ರಾಜಕಾರಣಿಗಳು ಸಕಾರಣ ಇಲ್ಲದೆ ಇಂಥ ಕಾರ್ಯಗಳನ್ನು ಎಸಗಿದರೆ ಸಮಾಜಕ್ಕೆ ರಾಜ್ಯದ ಹಣವನ್ನು ಹಾಳಾಗುವುದಕ್ಕೆ ಪೋಲಾಗುವುದಕ್ಕೆ ಆಸ್ಪದ ಕೊಟ್ಟರೆ ಸರ್ಕಾರದವರು ಏನಾದರೂ ಒಂದು ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ವಿಚಾರ ಮಾಡುತ್ತೀರಾ ಎಂದು ಕೇಳಬಯಸುತ್ತೇನೆ.

ಶ್ರೀ ಜಿ.ಎಸ್. ಅಶ್ವತ್ಥ ರೆಡ್ಡಿ: ಅಧ್ಯಕ್ಷರೇ ಅವರು ಬಹಳ ಜವಾಬ್ದಾರಿಯಿಂದ ಹೇಳಿರತಕ್ಕ ಕೆಲಸ ಅದು. ಆದರೆ ಸರ್ಕಾರ ಒಪ್ಪಿಲ್ಲ ಸರ್ಕಾರ ಅದನ್ನು ಕಂಪ್ಲೀಟ್ ಮಾಡಿಸುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್: ಎಷ್ಟು ದಿವಸದಲ್ಲಿ ಮುಗಿಸುತ್ತೀರಿ?

ಆದಷು ಜಾಗ್ರತೆ ಮುಗಿಸುವುದಕ್ಕೆ ಎಷ್ಟು ದಿವಸ ತೆಗೆದುಕೊಳ್ಳುತ್ತೀರಿ?

ಶ್ರೀ ಜಿ.ಎಚ್. ಅಶ್ವತ್ಥರೆಡ್ಡಿ: ಇನ್ನು ಒಂದೂವರೆ ವರ್ಷದಲ್ಲಿ ಅದನ್ನು ಕಂಪ್ಲೀಟ್ ಮಾಡುತ್ತೇವೆ. ಸುಮಾರು 30 ಲಕ್ಷ ರೂಪಾಯಿ ಹೆಚ್ಚು ಖರ್ಚಾಗುತ್ತದೆ.

ಅಂತರಜಲ ಮಟ್ಟ ಇಳಿಮುಖವಾಗಿರುವ ತಾಲ್ಲೂಕುಗಳ ಸಂಖ್ಯೆ

2156 - ಶ್ರೀ ರಾಜುಗೌಡ (ಹನೂರು) : ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಹಾಗೂ ಎಷ್ಟು ತಾಲ್ಲೂಕುಗಳಲ್ಲಿ ಅಂತರ್ಜಲಮಟ್ಟ ಇಳಿಮುಖವಾಗಿದೆ.

ಆ) ಇದನ್ನು ಸರಿಯಾಗಿಸಲು ಸರ್ಕಾರ ಕೈಗೊಳ್ಳುವ ಕಾರ್ಯಕ್ರಮಗಳೇನು?

ಶ್ರೀ ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು):

ಅ) ರಾಜ್ಯದ 17 ಜಿಲ್ಲೆಗಳ 117 ತಾಲ್ಲೂಕುಗಳಲ್ಲಿ ಅಂತರ್ಜಲವು ಇಳಿಮುಖವಾಗಿರುವುದು.

ಆ) ಅಂತರ್ಜಲ ಮರುಪೂರೈಕೆ ವಿಧಾನಗಳ ಬಗ್ಗೆ ಸಮೀಕ್ಷೆಯನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಪ್ರಸಕ್ತ ಸಾಲಿನಲ್ಲಿ ಮಾಡಲು ಕಾರ್ಯಕ್ರಮ ಹಮ್ಮಿಕ್ರೊಳ್ಳಲಾಗಿದೆ.

ಶ್ರೀ ರಾಜುಗೌಡ: ಸ್ವಾಮಿ ಎಷ್ಟು ತಾಲ್ಲೂಕುಗಳಲ್ಲಿ ಮತ್ತು ಯಾವಯಾವ ಜಿಲ್ಲೆಯಲ್ಲಿ ಈ ಅಂತರಜಲ ಮಟ್ಟ ಕಡಿಮೆಯಾಗಿದೆ ಎಂಬುದನ್ನು ಹೇಳುತ್ತೀರಾ?

ಶ್ರೀ ಎಂ.ಎಲ್. ಉಸ್ತಾದ್: ಸನ್ಮಾನ್ಯ ಅಧ್ಯಕ್ಷರೆ 17 ಜಿಲ್ಲೆಗಳ ಪೈಕಿ ಒಟ್ಟು 117 ತಾಲ್ಲೂಕುಗಳಲ್ಲಿ ಗ್ರೌಂಡ್ ವಾಟರ್ ಇಳಿಮುಖವಾಗಿದ್ದು ಕಂಡುಬಂದಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಜಿ. ರಾಜುಗೌಡ: ಮಳೆ ನೀರು ಏನು ಹರಿಯುತ್ತದೆಯೋ ಆ ಮಳೆ ನೀರನ್ನು ಸಣ್ಣ ಸಣ್ಣ ಹಳ್ಳಕೊಳ್ಳ ಮತ್ತು ತೊರೆಗಳಲ್ಲಿ ತಡೆಗೋಡೆಗಳನ್ನು ನಿರ್ಮಿಸಿ ಆ ಮಳೆನೀರನ್ನು ಭೂಮಿಗೆ ಇಳಿಯುವಂತೆ ಮಾಡಿ ಅಂತರ್ಜಲ ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದು ಪ್ರಶ್ನೆ ಹಳ್ಳಕೊಳ್ಳಗಳು ಇಲ್ಲದಿದ್ದರೆ ಮಳೆ ನೀರು ಬಿದ್ದಾಗ ಆ ಮಳೆ ನೀರು ಪೋಲಾಗುತ್ತದೆ. ಅದನ್ನು ತಡೆಗಟ್ಟುವ ಸಲುವಾಗಿ ಪ್ರತಿಯೊಂದು ಹಳ್ಳಕೊಳ್ಳಗಳಲ್ಲಿ ತಡೆಗೋಡೆಗಳನ್ನು ನಿರ್ಮಿಸಿ ತನ್ಮೂಲಕ ನೀರನ್ನು ಕೆಳಗೆ ಇಳಿಸಿ ಜಲಸಂಗ್ರಹ ಜಾಸ್ತಿ ಮಾಡುವ ಬಗ್ಗೆ ತಾವು ಏನಾದರೂ ಯೋಚನೆ ಮಾಡಿದ್ದೀರಾ? ಅಂಥ ಕಾರ್ಯಕ್ರಮ ಏನಾದರೂ ಸರ್ಕಾರದಲ್ಲಿದೆಯೆ?

ಶ್ರೀ ಎಂ.ಎಲ್. ಉಸ್ತಾದ್: ಈ ವರ್ಷ "Artifical récharge of ground water" ಎಂದು ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಅದರ ಸಲುವಾಗಿ ಫಸ್ಟ್ ಟೈಂ ಎಕ್ಸ್‌ಪರಿಮೆಂಟ್ ಮಾಡುತ್ತಿದ್ದೇವೆ. ಇದಕ್ಕೆ 30 ಲಕ್ಷ ರೂಪಾಯಿ ಈ ವರ್ಷ ನಿಗದಿಪಡಿಸಲಾಗಿದೆ. 17 ಜಿಲ್ಲೆಗಳ 117 ತಾಲ್ಲೂಕಿನಲ್ಲಿ ಏನು ಇಳಿಮುಖವಾಗುತ್ತಿದೆ ಅಂತರ್ಜಲ ಮಟ್ಟ ಅದಕ್ಕೆ ಕಾರಣ ಬೋರ್‌ವೆಲ್‌ಗಳನ್ನು ಹೆಚ್ಚಾಗಿ ತೆಗೆದಿರುವುದು ಕಳೆದ ಎರಡು ದಶಕದಲ್ಲಿ ನಾಲ್ಕು ಪಟ್ಟು ಅಂತರ್ಜಲ ಕೆಳಗೆ ಹೋಗಲಿಕ್ಕೆ ಹತ್ತಿದೆ. ಈ ಸಲ 30 ಲಕ್ಷ ರೂಪಾಯಿ ಇದರ ಸಲುವಾಗಿಯೇ ನಿಗದಿಪಡಿಸಲಾಗಿದೆ. ಅಂದರೆ ಒಂದು ಹನಿ ನೀರು ಸಹ ವೇಸ್ಟ್ ಆಗದಂತೆ ಮಾಡಬೇಕು ಎಂದು ಒಂದು ಎಕ್ಸ್‌ಪರಿಮೆಂಟ್ ಎಂದು ತೆಗೆದುಕೊಂಡಿದ್ದೇವೆ. ಅವರು ಹೇಳಿದಹಾಗೆ ಎಲ್ಲೆಲ್ಲಿ ನೀರು ಹೋಗುತದೆ ಆ ನೀರು ಹರಿಗುಹೆ.ಇಂಗದೇ

ಇರುವ ರೀತಿ ನೋಡಿಕೊಳ್ಳುವಹಾಗೆ ಕಾರ್ಯಕ್ರಮವನ್ನು ಈ ವರ್ಷ ಹಾಕಿಕೊಂಡಿದ್ದೇವೆ. ಈ ಸಲ ನಾವು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ರಾಜುಗೌಡ : ಅಂತರ್ಜಲ ಇಳಿಮುಖವಾಗುವುದಕ್ಕೆ ಮುಖ್ಯ ಕಾರಣ ಏನೆಂದರೆ ತಾವು ತಾಲ್ಲೂಕಿನಲ್ಲಿ ಲಭ್ಯವಾಗತಕ್ಕ ಗ್ರೌಂಡ್ ವಾಟರ್ ಗ್ರಹಿಸಿ ಅದಕ್ಕೆ ತಕ್ಕಂತೆ ಕೊಳವೆ ಬಾವಿ ತೆಗೆದರೆ ಈ ಪ್ರಶ್ನೆ ಬರುವುದಿಲ್ಲ. ಎಲ್ಲೆಲ್ಲಿ ಲಭ್ಯವಿಲ್ಲವೋ ಅದಕ್ಕಿಂತ ಜಾಸ್ತಿ ಕೊಳವೆ ಬಾವಿ ತೆಗೆದು ಕಾರಣ ಜಲಮಟ್ಟ ಕಡಿಮೆಯಾಗಿದೆ. ದಯಮಾಡಿ ಪ್ರತಿಯೊಂದು ತಾಲ್ಲೂಕಿನಲ್ಲಿ ತಾವು ಸಮೀಕ್ಷೆ ಮಾಡಿಸಬೇಕು ಎಷ್ಟು ತಾಲ್ಲೂಕುಗಳಲ್ಲಿ ಕೊಳವೆ ಬಾವಿ ಹಾಕಿಸುವುದಕ್ಕೆ ಸಾಧ್ಯ ಎಂದು. ಅದಕ್ಕಿಂತ ಜಾಸ್ತಿ ಹಾಕಿದಾಗ ಇಂಥ ಪರಿಸ್ಥಿತಿ ಉಂಟಾಗುತ್ತದೆ. ದಯಮಾಡಿ ಇದರ ಬಗ್ಗೆ ಸರ್ಕಾರ, ಯೋಚನೆ ಮಾಡುತ್ತದೆಯೆ?

ಶ್ರೀ ಎಂ.ಎಲ್. ಉಸ್ತಾದ್: 1973ನೇ ಇಸವಿಯಿಂದ ಇವತ್ತಿನವರೆಗೆ ಇಡೀ ನಮ್ಮ ರಾಜ್ಯದಲ್ಲಿ 1540 ಬಾವಿಗಳಲ್ಲಿ ಈ ಫ್ಲಕ್ಚುಯೇಷನ್ ಆಫ್ ವಾಟರ್ ಅನ್ನು ಕಂಡುಹಿಡಿದಿದ್ದೇವೆ. ಆದರೆ 20 ವರ್ಷಗಳಿಂದ ಏನಾಗಿದೆಯೆಂದರೆ there ix no legislation for drilling of these borewells so far as urban areas and rural areas are concerned. ಹಾಗಾಗಿ ಹಾಗೇಯೇ ಕೊರೆಯುವುದಕ್ಕೆ ಹತ್ತಿದ್ದೇವೆ. ಅದರ ಸಲುವಾಗಿ ಇದರ ಬಗ್ಗೆ ಒಂದು ಲೆಜಿಸ್ಲೇಷನ್ ತರಲಿಕ್ಕೆ ಸರ್ಕಾರ ವಿಚಾರ ಮಾಡುತ್ತಿದೆ. ಈಗ ಎಕ್ಸ್‌ಪರಿಮೆಂಟ

ಮಾಡುತ್ತಿದ್ದೇವೆ. ಅದರ ಸಲುವಾಗಿ 30 ಲಕ್ಷ ರೂಪಾಯಿ ಈ ವರ್ಷ ನಿಗದಿಪಡಿಸಿದ್ದೇವೆ. ಈಗ ತಾವು ಏನು ಹೇಳುತ್ತೀರಿ ಅದು ಆಗಿರುವುದು ನಿಜ ಅಂತರ್ಜಲ day by day it is declining because of drilling of these borewells. That is why this year we are making an experment for this purpose only

30 ಲಕ್ಷ ರೂಪಾಯಿ ನಾವು ಇದಕ್ಕಾಗಿ ಇಟ್ಟಿದ್ದೇವೆ. ಈ ಪ್ರಕಾರವಾಗಿ ಸಮೀಕ್ಷೆ ಮಾಡಿ ಅಂತರ್ಜಲ ಮಟ್ಟ ಕೆಳಗೆ ಹೋಗದಂತೆ ಈ ಸಲ ನೋಡಿಕೊಳ್ಳುತ್ತೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ: ಮಾನ್ಯ ಅಧ್ಯಕ್ಷರೇ ಇರತಕ್ಕ ಪರಿಸ್ಥಿತಿಯನ್ನು ಆಲೋಚನೆ ಮಾಡಿದರೆ ತೀರಾ ಭಯಾನಕವಾದ ಪರಿಸ್ಥಿತಿಗೆ ನಾವು ಹೋಗುತ್ತಿದ್ದೇವೆ. ಇದನ್ನು ಆದಷ್ಟು ಬೇಗ ಸರಿ ಮಾಡುವುದಕ್ಕೆ ನಮ್ಮ ರಾಜ್ಯದಲ್ಲಿ ಅಷ್ಟೇ ಅಲ್ಲ ದೇಶದ ಹೊರಗಡೆಯಿಂದಾಗಲೀ ಪರಿಣತರನ್ನು ಗೊತ್ತು ಮಾಡಿ ಇದಕ್ಕೆ ಪರಿಹಾರ ಕಂಡುಹಿಡಿಯಬೇಕು. ಇದಕ್ಕೆ ಪರಿಹಾರ ಏನು ಎಂದು ಆದಷ್ಟು ಬೇಗ ತಿಳಿದುಕೊಳ್ಳುವುದಕ್ಕೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದು ಮಾನ್ಯ ಮಂತ್ರಿಗಳ ಉತ್ತರದಿಂದ ಸ್ಪಷ್ಟವಾಗುತ್ತಿಲ್ಲ. ಆದ್ದರಿಂದ ಪರಿಣತರನ್ನು ಜಾಗ್ರತೆ ಗೊತ್ತುಮಾಡಿ ನೀರನ್ನು ಎಲ್ಲೆಲ್ಲಿ ತಡೆಗಟ್ಟಲು ಸಾಧ್ಯವೆಂದು ತಿಳಿದುಕೊಳ್ಳಬೇಕು. ಮಾನ್ಯ ರಾಜೂಗೌಡರು ಹೇಳಿದಹಾಗೆ ಅದು ಒಂದು ಸಾಮಾನ್ಯವಾಗಿ ನಾವು ತಿಳಿದುಕೊಂಡಿರತಕ್ಕ ವಿಷಯ. ಆದರೆ ಈ ವಿಚಾರದಲ್ಲಿ ಹೆಚ್ಚು ಪರಿಣತರಾಗಿರುವವರನ್ನು ಕರೆಸಿ ಸಮಾಲೋಚನೆ ಮಾಡುವುದಕ್ಕೆ ಕೂಡಲೇ ಕ್ರಮ ಕೈಗೊಳ್ಳಬೇಕು. ಈ ದಿಸೆಯಲ್ಲಿ ಸರ್ಕಾರ ಏನು ಆಲೋಚನೆ ಮಾಡುತ್ತದೆ?

ಶ್ರೀ ಎಂ.ಎಲ್. ಉಸ್ತಾದ್: ಮಾನ್ಯ ಸದಸ್ಯರು ಹೇಳಿದಂತಹದ್ದನ್ನು ಗಮನದಲ್ಲಿ ಇಟ್ಟುಕೊಂಡು ಈ ಸಲ ಮಾಡುತ್ತೇವೆ.

ಕರ್ನಾಟಕದಲ್ಲಿ ಹೊಸ ರೈಲು ಮಾರ್ಗಗಳ ಪ್ರಾರಂಭ

1851-ಶ್ರೀ ಎಂ.ವಿ ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಪ್ರಶ್ನೆಗಳಿಗೆ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ರಾಜ್ಯದಲ್ಲಿ ಹೊಸದಾಗಿ ರೈಲು ಮಾರ್ಗಗಳನ್ನು ಪ್ರಾರಂಭಿಸಲು ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ತಿಳಿಸಿರುತ್ತಾರೆಯೇ?

ಆ) ಹಾಗಿದ್ದಲ್ಲಿ, ಆ ಮಾರ್ಗಗಳು ಯಾವುವು?

ಇ) ಬೆಂಗಳೂರು ಮೈಸೂರು ರೈಲು ಮಾರ್ಗವು ಬೇಗನೆ ಮುಗಿಸುವಂತೆ ಸರ್ಕಾರದವರು ಕೇಂದ್ರಕ್ಕೆ ಒತ್ತಾಯ ತರುವರೇ?

ಈ) ಕೊಂಕಣ ರೈಲ್ವೆ ಮಾರ್ಗಕ್ಕೆ ಇದುವರೆವಿಗೂ ರಾಜ್ಯ ಸರ್ಕಾರದವರು ಒದಗಿಸಿರುವ ಹಣವೆಷ್ಟು?

ಶ್ರೀ ಜಿ.ಹೆಚ್. ಅಶ್ವಥ ರೆಡ್ಡಿ ((ಲೋಕೋಪಯೋಗಿ ಮಂತ್ರಿಗಳು)

ಅ) ಹೌದು

ಆ) ಹೊಸ ರೈಲು ಮಾರ್ಗಗಳು

1) ಹುಬ್ಬಳ್ಳಿ – ಕಾರವಾರ ರೈಲ್ವೆ ಲೈನ್

2) ಕೊಂಕಣ ರೈಲ್ವೆ (ವೆಸ್ಟ್ ಕೋಸ್ಟ್ ರೈಲ್ವೆ)

3) ಕೊಟ್ಟೂರು – ಹರಿಹರ ರೈಲ್ವೆ ಲೈನ್

4) ಚಾಮರಾಜನಗರ – ಸತ್ಯಮಂಗಲ ಮತ್ತು ಮೆಟ್ಟಪಾಳ್ಯಂ ನಡುವೆ ಹೊಸ ಬ್ರಾಡ್‌ಗೇಜ್ ಲೈನ್

5) ಹೊಸಪೇಟೆ – ಕೊಟ್ಟೂರು ರೈಲ್ವೆ ಲೈನನ್ನು ಹರಿಹರದ ವರೆಗೆ ಮುಂದುವರೆಸುವುದು.

6) ಚಿತ್ರದುರ್ಗ-ರಾಯದುರ್ಗ ರೈಲ್ವೆ ಲೈನ್ ಇತ್ಯಾದಿ

ಗೇಜ್ ಪರಿವರ್ತನೆ

1) ಬೆಂಗಳೂರು ಮೈಸೂರು ಗೇಜ್ ಪರಿವರ್ತನೆ.

2) ಬೆಂಗಳೂರು ಮೀರಜ್ ನಡುವಿನ ಮೀಟರ್ ಗೇಜ್ ಲೈನನ್ನು ಬ್ರಾಡ್‌ಗೇಜಾಗಿ ಪರಿವರ್ತಿಸುವುದು.

ಇ) ಹೌದು ಒತ್ತಾಯ ತರಲಾಗಿದೆ.

ಈ) ರೂ 1,000ಗಳ ಒಂದು ಪಾಲಿನ ವಂತಿಗೆ ಮತ್ತು 20 ಕೋಟಿ ರೂಗಳ ಇಕ್ವಿಟಿ ಕಾಂಟ್ರಿಬ್ಯೂಷನ್.

ಶ್ರೀ ಎಂ.ವಿ ವೆಂಕಟಪ್ಪ: ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಹೊಸ ರೈಲು ಮಾರ್ಗಗಳು 6 ಹಾಗೂ ಎರಡು ಗೇಜ್ ಪರಿವರ್ತನೆ ಬಗ್ಗೆ ಕೇಳಿದ್ದೀರಿ ಆದರೆ ಬೆಂಗಳೂರು-ಬಂಗಾರಪೇಟೆ (ಚಿಕ್ಕಬಳ್ಳಾಪುರ ಕೋಲಾರ ಚಿಂತಾಮಣಿ ಮೂಲಕ) ರೈಲು ಮಾರ್ಗದ ಬಗ್ಗೆ ನಾನು ಪ್ರಥಮಬಾರಿಗೆ ಎಂಎಲ್‌ಸಿ ಆದಾಗಿನಿಂದ ಎಂದರೆ ಕಳೆದ ವರ್ಷಗಳಿಂದ ಕೇಳುತ್ತಿದ್ದೇನೆ. ಏಕೆ ಸರ್ಕಾರ ಕೋಲಾರ ಜಿಲ್ಲೆಯ ಬಗ್ಗೆ ಮಲತಾಯಿ ಧೋರಣೆ ತೋರಿಸುತ್ತಿದೆ?

ಶ್ರೀ ವಾಟಾಳ್ ನಾಗರಾಜ್: ಯಾವ ಸರ್ಕಾರ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ: ಕೋಲಾರ ಜಿಲ್ಲೆ ಎಂದರೆ ಮಲತಾಯಿ ಧೋರಣೆ ಎಂದು ಏನೂ ಇಲ್ಲ ಈ ಸರ್ಕಾರ ಅವರ ಕಳಕಳಿಯನ್ನು ಅರ್ಥಮಾಡಿಕೊಂಡಿದೆ. ಈ ಬಗ್ಗೆ ನಮ್ಮ ಸರ್ಕಾರ ಪ್ರಯತ್ನ ಮಾಡಿ ಕೇಂದ್ರ ಸರ್ಕಾರಕ್ಕೆ ರೆಕಮೆಂಡೇಷನ್‌ನ್ನು ಕಳುಹಿಸಿಕೊಡುತ್ತದೆ.

ಶ್ರೀ ಎಂ.ವಿ ವೆಂಕಟಪ್ಪ: ನಮ್ಮ ರಾಜ್ಯದವರೇ ರೈಲ್ವೆ ಮಂತ್ರಿಗಳು ಇರುವಾಗ ಅವರು ಬಂದಾಗ ತಾವು ಪರ್ಸನಲ್ಲಾಗಿ ಮೀಟ್ ಮಾಡಿ ನ್ಯಾರೋಗೇಜನ್ನು ಮೀಟರ್‌ಗೇಜಾಗೋ ಅಥವಾ ಬ್ರಾಡ್‌ಗೇಜಿಗೋ ಕನ್ವರ್ಟ್ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಜಿ.ಹೆಚ್. ಅಶ್ವತ್ಥ ರೆಡ್ಡಿ: ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು: ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಎಲ್ಲೋ ಅರ್ಜೆಂಟಾಗಿ ಹೋಗಬೇಕಾಗಿದೆ ಎಂದು ಹೇಳಿ ಕಾಗದ ಕೊಟ್ಟು ಹೋಗಿದ್ದಾರೆ. ಶ್ರೀ ಸಿಂಧ್ಯಾ ಅವರೇ ನಿಮ್ಮ ಪ್ರಶ್ನೆ 1876 ನ್ನು ನಾಳೆ ತೆಗೆದುಕೊಳ್ಳೋಣ

ಶ್ರೀ ಪಿ.ಜಿ.ಆರ್. ಸಿಂಧ್ಯಾ: ನಾಳೆ ತೆಗೆದುಕೊಳ್ಳೋಣ

ಅಧ್ಯಕ್ಷರು: ಈಗ ಮುಂದಿನ ಪ್ರಶ್ನೆ.

ನಂಜನಗೂಡು ತಾಲ್ಲೂಕಿನಲ್ಲಿ ನೀರು ಸರಬರಾಜು ಯೋಜನೆಗೆ ಮಂಜೂರಾದ ಮೊಬಲಗು

1816 - ಶ್ರೀ ಎಂ. ಮಹದೇವ್(ನಂಜನಗೂಡು) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:

ಅ) *ನಂಜನಗೂಡು ತಾಲ್ಲೂಕಿನ ಮಾದನಹಳ್ಳಿ ಗುಡ್ಡ ಮೂಳ್ಳೂರುಗುಡ್ಡ ಕಡಜಟ್ಟಿ ಗುಡ್ಡಗಳಿಗೆ ರೂ 580 ಲಕ್ಷ ರೂಪಾಯಿಗಳ ಗ್ರಾಮಾಂತರ ಕುಡಿಯುವ ನೀರಿಗೆ ಸರ್ಕಾರದ ಮಂಜೂರಾತಿ ದೊರಕಿದೆಯೇ?*

ಆ) *ಹಾಗಿದ್ದಲ್ಲಿ, ಅದು ಇನ್ನೂ ಕಾರ್ಯಗತವಾಗಿಲ್ಲದಿರುವುದಕ್ಕೆ ಕಾರಣವೇನು?*

ಇ) *ಈ ಕುಡಿಯುವ ನೀರಿನ ಯೋಜನೆಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ವಹಿಸಿ ಕೆಲಸ ನಿರ್ವಹಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ?*

ಈ) *ಈ ಬಗ್ಗೆ ಪೂರ್ಣ ವಿವರದಿಂದ ಕೂಡಿದ ನಕ್ಷೆ ಅಂದಾಜು ವರದಿಗಳು ಸರ್ಕಾರದಲ್ಲಿದೆಯೇ?*

ಉ) *ಈ ಯೋಜನೆಗಳ ಬಗ್ಗೆ ಯಾವಾಗ ಕೆಲಸ ಪ್ರಾರಂಭಿಸಲಾಗುವುದು.*

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಹೌದು.

ಆ) ಪೂರ್ಣ ವಿವರದಿಂದ ಕೂಡಿದ ನಕ್ಷೆ ಅಂದಾಜು ವರದಿಗಳು ಸಿದ್ಧವಾಗಿರುವುದಿಲ್ಲ.

ಇ) ಈ ಬಗ್ಗೆ ತೀರ್ಮಾನ ಕೈಗೊಳ್ಳಲಾಗಿದೆ.

ಈ) ಇಲ್ಲ

ಉ) ಪೂರ್ಣ ವಿವರದಿಂದ ಕೂಡಿದ ನಕ್ಷೆ ಅಂದಾಜು ವರದಿಗಳು ಸಿದ್ಧವಾಗಿ ಮಂಜೂರಾದ ನಂತರ ಕೆಲಸ ಪ್ರಾರಂಭಿಸಲಾಗುವುದು.

ಶ್ರೀ ಎಂ. ಮಹದೇವ್: ಮಾನ್ಯ ಅಧ್ಯಕ್ಷರೇ ಈ ಗ್ರಾಮಾಂತರ ಕುಡಿಯುವ ನೀರು ಯೋಜನೆಗೆ 580 ಲಕ್ಷ ಮಂಜೂರಾಗಿದೆ ಎಂದು ಹೇಳಿದ್ದಾರೆ. ಆದರೆ ಒಂದು ವರ್ಷದಿಂದ ಇನ್ನೂ ಅಂದಾಜು ನಕ್ಷೆ ತಯಾರು ಮಾಡುತ್ತಿದ್ದೇವೆ ಎಂದು ಹೇಳುತ್ತಾ ಬರುತ್ತಿದ್ದಾರೆ. ಏಕೆ ಇಷ್ಟು ಡಿಲೆ ಆಗುತ್ತದೆ? ಮತ್ತು ಕೊನೇ ಪ್ರಶ್ನೆಯಲ್ಲಿ ಮಂಜೂರಾತಿ ಇನ್ನೂ ನೀಡಿಲ್ಲ ಎಂದು ಹೇಳಿದ್ದಾರೆ. ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಂಡು ಒಂದು ವರ್ಷ ಆಗಿದೆ. ಆದರೂ ಈ ರೀತಿ ವ್ಯತ್ಯಾಸ ಏಕೆ ಬರುತ್ತಾ ಇದೆ?

ಶ್ರೀ ಕೆ.ಹೆಚ್. ಪಾಟೀಲ್: ಇಲ್ಲಿ ಡಿಲೇ ಆಗಿಲ್ಲ ಆದರೆ ಮಾನ್ಯ ಸದಸ್ಯರು ಮೇಲಿಂದ ಮೇಲೆ ಬೇರೆ ಬೇರೆ ರೀತಿಯಿಂದ ಈ ಸ್ಕೀಮನ್ನು ಬದಲಾವಣೆ ಮಾಡಬೇಕೆಂದು ಒತ್ತಾಯ ತಂದುದಕ್ಕೆ ಅದಕ್ಕೆ ಅನುಸಾರವಾಗಿ ಅಂದಿನ ಮುಖ್ಯಮಂತ್ರಿಗಳು ಸ್ಕೀಮ್‌ಗೆ ಮೊದಲು ಅಡ್ಮಿನಿಸ್ಟ್ರೇಷನ್ ಅಪ್ರೂವಲ್ ಕೊಟ್ಟು ಆ ಸ್ಕೀಮ್‌ಗೆ ಟೆಕ್ನಿಕಲ್ ಅಪ್ರೂವಲ್ ಬರುವ ಮೊದಲೇ ಪುನಃ ಮತ್ತೆ ಒಂದು ಬದಲಾವಣೆ ಮಾಡಬೇಕೆಂದು ಹೇಳಿದರು. ಅದನ್ನು ಅವರು ಅದಕ್ಕೆ ತಿರುಗಿ ವಾಟರ್ ಸಪ್ಲೈ ಬೋರ್ಡ್‌ಗೆ ಎಂಟ್ರಸ್ಟ್ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಆರ್ಡರ್ ಮಾಡಿರುವುದರಿಂದ ತಡ ಆಗಿದೆ.

ಶ್ರೀ ಎಂ. ಮಹದೇವ್: ಇಲ್ಲಿ ಮೂರು ಯೋಜನೆಗಳು ಇದ್ದು ಇವನ್ನು ಯಾವ ಯಾವ ಹಂತದಲ್ಲಿ ತೆಗೆದುಕೊಳ್ಳುತ್ತೀರಿ? ಈ ವರ್ಷ 2 ಯೋಜನೆ ತೆಗೆದುಕೊಳ್ಳುತ್ತೀರಾ ಅಥವಾ 1 ಯೋಜನೆ ತೆಗೆದುಕೊಳ್ಳುತ್ತೀರಾ? ಅದನ್ನು ತೆಗೆದುಕೊಂಡರೆ ಅದಕ್ಕೆ ಹಣವನ್ನು ದಯವಿಟ್ಟು ಬಿಡುಗಡೆ ಮಾಡುತ್ತೀರಾ?

ಶ್ರೀ ಕೆ.ಹೆಚ್. ಪಾಟೀಲ್: ಮಾದನಹಳ್ಳಿ ಗುಡ್ಡದ ಜನ 200 ಲಕ್ಷ ರೂಪಾಯಿಗಳದ್ದು ಇದೆ. ಇನ್ನೊಂದು ರೀಜನಲ್ ವಾಟರ್ ಸ್ಕೀಂ 13 ಹಳ್ಳಿಗಳದ್ದು 160 ಲಕ್ಷದ ಯೋಜನೆ ಇದ್ದು ಮತ್ತೆ 10 ಹಳ್ಳಿಗಳು ಯೋಜನೆ 220 ಲಕ್ಷ ರೂಪಾಯಿಗಳದ್ದು ಇದೆ. ಈಗಾಗಲೇ ಕೆಲವು ಹಳ್ಳಿಗಳಿಗೆ ನೀರು ಬಂದಿದೆ ಎಂದು ನಾನು ಕೇಳಿದ್ದೇನೆ. ಹೇಗೆ ನೀರು ಬಂದಿದೆ ಎಂದು ನಾನು ನೋಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಮತ್ತು ಒಂದು ಸ್ಕೀಮ್ ಆದ ನಂತರ ಇನ್ನೊಂದು ಸ್ಕೀಮನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಮಹದೇವ್: ಮಾನ್ಯ ಅಧ್ಯಕ್ಷರೆ ನೀರು ಎಲ್ಲಿ ಬರುತ್ತದೆ? ನಾವು ಕಪಿಲ ನದಿನೀರಿನಿಂದ ಗುಡ್ಡದ ಮುಖಾಂತರ ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸುವ ಯೋಜನೆಯನ್ನು ನಾವು ಹಾಕಿಕೊಂಡಿದ್ದೇವೆ. ನದಿಯಿಂದ ಗುಡ್ಡದ ಮೂಲಕ ನೀರು ಸರಬರಾಜು ಮಾಡದೇ ಹಳ್ಳಿಗೆ ನೀರು ಹೋಗಲಿಕ್ಕೆ ಸಾಧ್ಯವಿಲ್ಲ ಆದ್ದರಿಂದ ನೀರು ಹೇಗೆ ಬರುತ್ತದೆ? ಎರಡನೆಯದಾಗಿ ಈ ವರ್ಷದಲ್ಲಿ ಒಂದು ಗುಡ್ಡದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಯಾವ ಗುಡ್ಡದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಿ? ಅದಕ್ಕೆ ಎಷ್ಟು ಹಣವನ್ನು ತಾವು ಬಿಡುಗಡೆ ಮಾಡುತ್ತೀರಿ?

ಶ್ರೀ ಕೆ.ಹೆಚ್. ಪಾಟೀಲ್: ಮಾನ್ಯ ಅಧ್ಯಕ್ಷರೆ ಈಗಾಗಲೇ ಬಜೆಟ್ ಸ್ಪೀಚ್‌ನಲ್ಲಿ ನಾನು ಹೇಳಿದ್ದೇನೆ. ಒಟ್ಟು ಈ ಸಲ 700 ಹಳ್ಳಿಗಳನ್ನು ಟ್ಯಾಪ್‌ವಾಟರ್ ಸ್ಕೀಮ್‌ನಲ್ಲಿ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಆ ಟ್ಯಾಪ್ ವಾಟರ್ ಸ್ಕೀಮ್‌ದೊಳಗೆ ಇದು ಬರುತ್ತದೆಯೋ ಇಲ್ಲವೋ ಎನ್ನುವುದು ನನಗೆ ನಿರ್ಧಿಷ್ಟವಾಗಿ ಗೊತ್ತಿಲ್ಲ.

ಆದರೂ ಸಹ ಶಕ್ಯವಾದಷ್ಟು ಬೇಗ ಈ ಸ್ಕೀಮ್‌ನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಮಹದೇವ್: ಮಾನ್ಯ ಅಧ್ಯಕ್ಷರೆ ನನಗೆ ಸ್ಪಷ್ಟವಾದ ಉತ್ತರ ಸರ್ಕಾರದಿಂದ ಬರಬೇಕು. ಇದು ಬರುತ್ತದೆಯೋ ಇಲ್ಲವೋ ಅದು ನನಗೆ ಗೊತ್ತಿಲ್ಲವೆಂದು ಮಂತ್ರಿಗಳು ಹೇಳಿದರೆ ನಾನು ಹೇಗೆ ತಿಳಿದುಕೊಳ್ಳಬೇಕಾಗುತ್ತದೆ? ಕ್ಯಾಬಿನೆಟ್‌ನಲ್ಲಿ 580 ಲಕ್ಷ ರೂಪಾಯಿ ಮಂಜೂರು ಆಗಿದೆ. ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್‌ನ ಕಾಪಿ ನನಗೆ ಬಂದಿದೆ. ಟೆಕ್ನಿಕಲ್ ಸ್ಯಾಂಕ್ಷನ್ ಆಗಿದೆ ಈ ವರ್ಷ ಒಂದು ಯೋಜನೆಯನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ ಅದಕ್ಕೆ ಹಣವನ್ನು ಬಿಡುಗಡೆ ಮಾಡಬೇಕು ತಾವು ದಯವಿಟ್ಟು ಪೂರ್ಣ ಮಾಹಿತಿಯನ್ನು ಕೊಟ್ಟು ನನಗೆ ತಿಳಿಸಿದರೆ ಬಹಳ ಒಳ್ಳೆಯದೆಂದು ನಾನು ಭಾವಿಸಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್: ಮಾನ್ಯ ಅಧ್ಯಕ್ಷರೇ ನನ್ನ ಹತ್ತಿರವಿದ್ದ ಮಾಹಿತಿಗಳಿಗಿಂತ ಹೆಚ್ಚಾಗಿ ಮಹದೇವ್‌ರವರಿಗೆ ಕೊಡುವುದಕ್ಕೆ ಸಾಧ್ಯವಿಲ್ಲ ಇವತ್ತು ಯಾವುದೇ ಸ್ಕೀಮ್ ಮಂಜೂರು ಆದ ಕೂಡಲೇ ಎಲ್ಲಾ ರಕಂ ಅನ್ನು ಅವರಿಗೆ ಬಿಡುವುದಿಲ್ಲ. ಸ್ಕೀಮ್ ಮಂಜೂರು ಆದಮೇಲೆ ಹಂತ ಹಂತವಾಗಿ ಲೆಟರ್ ಆಫ್ ಅಥರೈಸೇಷನ್ ಕೊಡಬೇಕಾಗುತ್ತದೆ. ಅದನ್ನು ಕೊಡುತ್ತಿದ್ದೇವೆ. ನಿಮ್ಮ ಊರಿಗೆ ಕೊಡುವ ಹಾಗೆ ಉಳಿದ ಊರುಗಳಿಗೂ ಕೊಡುತ್ತೇವೆ. ಆದರೂ ಸಹ ಮಾನ್ಯ ಮಹದೇವ್‌ರವರು ಒತ್ತಾಯವನ್ನು ಗಮನಿಸಿ ಹೆಚ್ಚು ಬೇಗ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ ಮಹದೇವ್: ಮಾನ್ಯ ಮಂತ್ರಿಗಳಿಗೆ ಇಲಾಖೆಯವರು ತಮಗೆ ಸರಿಯಾದ ಮಾಹಿತಿಯನ್ನು ಒದಗಿಸಿಲ್ಲವೆಂದು ನಾನು ಭಾವಿಸುಕೊಂಡಿದ್ದೇನೆ. ಇಲಾಖೆಯವರು ಮಾಹಿತಿಯನ್ನು ಕೊಟ್ಟೇ ಕೊಡಬೇಕಾಗುತ್ತದೆ. ನಾನು ಸರ್ಕಾರದಿಂದ ನಿರ್ಧಿಷ್ಟವಾದ ಉತ್ತರವನ್ನು ಅಪೇಕ್ಷೆ ಪಡುತ್ತೇನೆ. ಇಂತಹ ಸ್ಕೀಮ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಈ ವರ್ಷ ಇಷ್ಟು ಹಣವನ್ನು ಬಿಡುಗಡೆ ಮಾಡುತ್ತೇವೆ ಇಂತಹ ತಾರೀಖಿನಲ್ಲಿ ಅಥವಾ ಯಾವ ತಿಂಗಳಿನಲ್ಲಿ ಮಾಡುತ್ತೇವೆಂದು ಹೇಳಿದರೆ ನನಗೆ ಸರಿಯಾದ ಉತ್ತರ ಬರುತ್ತದೆ ಮಾನ್ಯ ಮಂತ್ರಿಗಳು ನಾನು ಹೇಳಿದ ಊರುಗಳನ್ನು ಈ ಸ್ಕೀಮಿನಲ್ಲಿ ಅಳವಡಿಸಿದ್ದಾರೋ ಇಲ್ಲವೋ ಗೊತ್ತಿಲ್ಲ ಎಂದು ಹೇಳಿದರೆ ನನ್ನನ್ನು ಇಕ್ಕಟಿಗೆ ಸಿಕ್ಕಿಸಿದಹಾಗೆ ಆಗುತ್ತದೆ. ಆದ್ದರಿಂದ ನಿರ್ದಿಷ್ಟವಾದ ಉತ್ತರವನ್ನು ಸರ್ಕಾರದಿಂದ ನಾನು ನಿರೀಕ್ಷೆ ಮಾಡುತ್ತೇನೆ. ಈಗಾಗಲೇ ಮಂಜೂರಾತಿ ಕೊಡಲಾಗಿದೆ. 2 ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಲಾಗಿದೆ. ಮುಂದಿನ ತಿಂಗಳು ಉದ್ಘಾಟನೆಯನ್ನು ಮಾಡುತ್ತಾರೆಂದೂ ಇದಕ್ಕಾಗಿ 67 ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡುತ್ತಾರೆಂದು ನಾನು ನನ್ನ ಕ್ಷೇತ್ರದಲ್ಲಿ ಪ್ರವಾಸ ಮಾಡುವಾಗ ಹೇಳಿ ಬಂದಿದ್ದೇನೆ. ಈಗ ತಮಗೆ ಆ ಮಾಹಿತಿ ಸಿಕ್ಕಿಲ್ಲವೆಂದರೆ ಬಹಳ ಕಷ್ಟವಾಗುತ್ತದೆ

ಶ್ರೀ ಕೆ.ಹೆಚ್. ಪಾಟೀಲ್: ನಮ್ಮನ್ನು ಕೇಳದೆ ಮಾನ್ಯ ಸದಸ್ಯರು ತಮ್ಮ ಕ್ಷೇತ್ರದ ಜನರಿಗೆ ಹೇಳಿದ್ದರೆ ಅದಕ್ಕೆ ನಾನು ಹೊಣೆಗಾರನಲ್ಲ ನನ್ನ ಹೊಣೆಗಾರಿಕೆಯ ಮಟ್ಟಿಗೆ ಹೇಳುವುದಾದರೆ ನನ್ನ ಹತ್ತಿರ ಎಷ್ಟು ಹಣವಿರುತ್ತದೆ ಆ ಹಣವನ್ನು ವಾಸ್ತವಿಕವಾಗಿ ಯಾವು ಯಾವುದಕ್ಕೆ ಪ್ರಿಯಾರಿಟಿ ಕೊಡಬೇಕೆಂದು ನೋಡಿ ಹಣವನ್ನು ರಿಲೀಸ್ ಮಾಡುತ್ತೇನೆ. ಈ ಸ್ಕೀಮ್‌ನ್ನು ಸಹ ತೀವ್ರ ತಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಮಹದೇವ್: ಮಾನ್ಯ ಅಧ್ಯಕ್ಷರೆ ಹಣ ಸ್ಯಾಂಕ್ಷನ್ ಆದ ಮಾಹಿತಿ ನನಗೆ ದೊರಕಿದೆ. ಶಾಸಕನಾದ ನನಗೆ ಮಾಹಿತಿ ದೊರತ ಮೇಲೆ ನಾನು ನನ್ನ ಕ್ಷೇತ್ರದ ಜನರಿಗೆ ಹೇಳಿದ್ದೇನೆ. ಅಷ್ಟು ಜವಾಬ್ದಾರಿಯಿಂದ ನಾನು ಮಾಡಲಿಲ್ಲವೆಂದರೆ ಹೇಗೆ ಅಧ್ಯಕ್ಷರೆ?

ಅಧ್ಯಕ್ಷರು: ನೀವು ಚೆನ್ನಾಗಿ ಮಾಡಿದ್ದೀರಿ.

ಖಾಸಗಿ ವ್ಯಕ್ತಿಗಳಿಗೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ನಿಗಮದ ಹೋಟೆಲುಗಳನ್ನು ವಹಿಸುವುದರ ಬಗ್ಗೆ

1850 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ವಾರ್ತಾ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದಲ್ಲಿ ಮತ್ತು ಹೊರ ರಾಜ್ಯಗಳಲ್ಲಿರುವ ಕೆ.ಎಸ್.ಟಿ.ಡಿ.ಸಿ. ಹೋಟೆಲುಗಳ ಸಂಖ್ಯೆ ಎಷ್ಟು?

ಆ) ಸದರಿ ಹೋಟೆಲುಗಳು ಇರುವ ಸ್ಥಳಗಳು

ಇ) ಅದರಲ್ಲಿ 1990-91ರಲ್ಲಿ ಒಟ್ಟಾರೆ ನಷ್ಟದಲ್ಲಿರುವ ಹೋಟೆಲುಗಳ ಸಂಖ್ಯೆ ಎಷ್ಟು?

ಈ) ನಷ್ಟದಲ್ಲಿ ನಡೆಯುತ್ತಿರುವ ಹೋಟೆಲುಗಳನ್ನು ಖಾಸಗಿಯವರಿಗೆ ಕೊಡಲು ಪ್ರಸ್ತಾಪನೆ ಏನಾದರೂ ಇದೆಯೇ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು):

ಅ) ರಾಜ್ಯದಲ್ಲಿ 15 ಹೋಟೆಲುಗಳು ಮತ್ತು 5 ಉಪಹಾರ ಗೃಹಗಳು

ಹೊರ ರಾಜ್ಯದಲ್ಲಿ 2 ಹೋಟೆಲುಗಳು ಒಟ್ಟು 17 ಹೋಟೆಲುಗಳು 5 ಉಪಹಾರ ಗೃಹಗಳು

ಆ) ಪಟ್ಟಿ ಲಗತ್ತಿಸಿದೆ

ಇ)

1) ಹೋಟೆಲ್‌ಮಯೂರ ಬಹಮನಿ ಗುಲ್ಬರ್ಗ

2) ಹೋಟೆಲ್ ಮಯೂರ ಬರೀದ್ ಶಾಹಿ ಬಿದರ್

3) ಹೋಟೆಲ್ ಮಯೂರ ಕೆಂಪೇಗೌಡ ಬೆಂಗಳೂರು

4) ಹೋಟೆಲ್ ಮಯೂರ ಕೇಶವ ಸೋಮನಾಥಪುರ

5) ಹೋಟೆಲ್ ಮಯೂರ ಸಹ್ಯಾದ್ರಿ ದಾಂಡೇಲಿ

ಈ) ಇಲ್ಲ.

LIST OF HOTELS OF K.S.T.D.C.

Sl No	*Name*
1.	Mayura adilashahi Bijapur
2.	Mayura Baridshahi Bidar
3.	Mayura Chalukya Badami
4.	Mayura Bahamani Gulbarga

5. Mayura Sahyadri, Dandeli
6. Mayura Vijayanagara T.B. Dam, (Hospet)
7. Mayura Velapuri Belur
8. Mayura Riverview Srirangapatna
9. Mayura Keshava Somanathapur
10. Mayura Hoysala Mysore
11. Mayura Cauvery K.R.S.
12. Mayura Valleyview Mercara
13. Mayura Netravathi Mangalore
14. Mayura Sudarashan Ooty
15. Mayura Pine-top Nandi Hills
16. Mayura Sapthagiri, Tirumala
17. Mayura Kempegowda Bangalore

RESTAURANTS

1. Mayura Cubbon park Resturant Bangalore.
2. Mayura Vanashree Restaurant Bannerghatta
3. Mayura banyan Tree Restaurant Ramohalli
4. Mayura highway Restaurant Maddur
5. Mayura Nisarga Restaurant Muthyalamaduvu.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ: ಮಾನ್ಯ ಅಧ್ಯಕ್ಷರೆ ಕರ್ನಾಟಕ ಸ್ಟೇಟ್ ಟೂರಿಸಂ ಡೆವಲಪ್‌ಮೆಂಟ್ ಕಾರ್ಪೋರೇಷನ್ ಕರ್ನಾಟಕದಲ್ಲಿ ಟೂರಿಸಂ ಡೆವಲಪ್‌ಮೆಂಟ್ ಮಾಡುವುದಕ್ಕೆ ಇದೆ ಆದರೆ ಅದು ತಮಿಳುನಾಡು ರಾಜ್ಯದಲ್ಲಿ ತಿರುಪತಿಯಲ್ಲಿ ಇವರು ಟೂರಿಸಂ ಹೋಟೆಲುಗಳನ್ನು ಓಪನ್ ಮಾಡುತ್ತಿದ್ದಾರೆ. ಕರ್ನಾಟಕ ಟೂರಿಸಂ ಡೆವಲಪ್‌ಮೆಂಟ್ ಕಾರ್ಪೋರೇಷನ್ ಇರುವ ಉದ್ದೇಶ ಅಲ್ಲಿ ಹೋಟೆಲುಗಳನ್ನು ಓಪನ್ ಮಾಡುವುದಕ್ಕೆ ಇದ್ದೆಯೇ? ಅದು ನನಗೆ ಗೊತ್ತಾಗುತ್ತಿಲ್ಲ, ನನ್ನ ಎರಡನೆಯ ಪ್ರಶ್ನೆಗೆ ಐದು ಹೋಟಲ್‌ಗಳು ವರ್ಷದಲ್ಲಿ ನಡೆಯುತ್ತಿವೆ ಎಂದು ಹೇಳಿದ್ದಾರೆ. ಈ ಐದು ಹೋಟೆಲ್‌ಗಳು ಏತಕ್ಕೆ ಲಾಸಸ್‌ನಲ್ಲಿ ನಡೆಯುತ್ತಿವೆ? ಇವು ಲಾಸ್‌ನಲ್ಲಿ ನಡೆಯುತ್ತಿರುವ ಬಗ್ಗೆ ಇನ್ಸ್ಪಿಗೇಷನ್ ಮಾಡಿ ಲಾಭ ನಡೆಯುವಂತೆ ಮಾಡಲಿಕ್ಕೆ ತಾವು ನೋಡಿ ಏನಾದರೂ ಮಾಡಿದ್ದೀರಾ? ಆದರ ಬಗ್ಗೆ ಅಧಿಕಾರಿಗಳನ್ನು ವಿಚಾರಿಸಿದ್ದೀರಾ ಎಂದು ಪ್ರಶ್ನೆಯನ್ನು ಕೇಳುತ್ತೇನೆ. ನನ್ನ ಮೂರನೆಯ ಪ್ರಶ್ನೆ ಏನೆಂದರೆ ಮೈಸೂರು ಬೆಂಗಳೂರು ಗುಲ್ಬರ್ಗ ಮತ್ತು ಮಂಗಳೂರು ಇಂತಹ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಎಲ್ಲಿ ಫೈವ್‌ಸ್ಟಾರ್ ಹೋಟಲ್‌ಗಳಿವೆ ತ್ರೀಸ್ಟಾರ್ ಹೋಟಲ್‌ಗಳಿವೆ ಅಂತಹ ಕಡೆ ಟೂರಿಸಂ ಡೆವಲಪ್‌ಮೆಂಟ್ ಕಾರ್ಪೋರೇಷನ್‌ರವರು ಹೋಟೆಲ್‌ಗಳನ್ನು ಮತ್ತು ರೆಸ್ಟೋರೆಂಟ್‌ಗಳನ್ನು ಓಪನ್ ಮಾಡಿದರೆ ಟೂರಿಸಂ ಡೆವಲಪ್‌ಮೆಂಟ್ ಉದ್ದೇಶ ಸಫಲವಾಗುವುದಿಲ್ಲ ಅದನ್ನು ಏತಕ್ಕೋಸ್ಕರ ಓಪನ್ ಮಾಡಿದ್ದೀರರಿ? ಅಂತಹ ಕಡೆಗಳಲ್ಲಿರುವ ಹೋಟೆಲ್

ಮತ್ತು ರೆಸ್ಟೋರೆಂಟ್‌ಗಳನ್ನು ಮುಚ್ಚಬೇಕು. ಅತಿ ಮುಖ್ಯವಾಗಿ ಸ್ಥಳಗಳಲ್ಲಿ ಟೂರಿಸಂ ಸ್ಥಳಗಳಲ್ಲಿ ಹಿಲ್ ಸ್ಟೇಷನ್‌ಗಳಲ್ಲಿ ಹೋಟೆಲ್‌ಗಳನ್ನು ತೆರೆಯಬೇಕು. ಸಿಟಿಗಳಲ್ಲಿರುವ ಹೋಟೆಲ್‌ಗಳನ್ನು ಮುಚ್ಚಿ ನಾನು ಹೇಳಿದ ಸ್ಥಳಗಳಲ್ಲಿ ಹೋಟೆಲ್‌ಗಳನ್ನು ತೆರೆಯಲಾಗುವುದೇ ಎಂದು ನಾನು ಪ್ರಶ್ನೆ ಕೇಳುತ್ತೇನೆ?

ಶ್ರೀ ಕೆ. ಶಿವಮೂರ್ತಿ: ಮಾನ್ಯ ಅಧ್ಯಕ್ಷರೇ ಕೆ.ಎಸ್.ಟಿ.ಡಿ.ಸಿ.ಯಿಂದ ಈಗ ನಾವು ಸುಮಾರು 22ಹೋಟೆಲುಗಳನ್ನು ನಡೆಸುತ್ತಿದ್ದೇವೆ. ಇದರಲ್ಲಿ 17ಹೋಟೆಲ್‌ಗಳು ಮತ್ತು 5 ರೆಸ್ಟೋರೆಂಟುಗಳು ಇದರಲ್ಲಿ 5 ಹೋಟೆಲ್‌ಗಳು ಲಾಸ್‌ನಲ್ಲಿ ನಡೆಯುತ್ತಿವೆ. ಇದು ಯಾವರೀತಿ ಲಾಸ್ ಆಗುತ್ತಿದೆ ಏಕೆ ಆಗುತ್ತಿದೆ ಎನ್ನುವುದರ ಬಗ್ಗೆ ಸರ್ಕಾರ ತೀವ್ರವಾಗಿ ಪರಿಶೀಲನೆ ಮಾಡುತ್ತಿದೆ. ನಾವು ಸಾಕಷ್ಟು ಮಟ್ಟಿಗೆ ಎಲ್ಲರ ಹತ್ತಿರ ಚರ್ಚೆ ಮಾಡಿ ಅಧಿಕಾರಿಗಳ ಹತ್ತಿರ ಚರ್ಚೆಮಾಡಿ ಇದು ಯಾವ ಕಾರಣದಿಂದ ಲಾಸ್ ಆಗುತ್ತಿದೆ ಎನ್ನುವುದರ ಬಗ್ಗೆ ಸರ್ಕಾರ ಬಹಳ ತೀವ್ರವಾಗಿ ಪರಿಶೀಲನೆ ಮಾಡುತ್ತಿದೆ. ಈಗ ಈ ಹೋಟೆಲುಗಳ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿ ಎಲ್ಲಿ ಟೂರಿಸ್ಟ್ ಸೆಂಟರ್ಸ್ ಇವೆಯೋ ಆ ಜಾಗದಲ್ಲಿ ಹೋಟೆಲ್‌ಗಳನ್ನು ತೆರೆಯತಕ್ಕಂಥ ವ್ಯವಸ್ಥೆ ಮಾಡುತ್ತೀರಾ ಎಂದು ಕೇಳಿದ್ದಾರೆ. ತಮಿಳುನಾಡಿನಲ್ಲಿ ಯಾವರೀತಿ ವ್ಯವಸ್ಥೆ ಮಾಡಿದ್ದಾರೆ ಆ ದಿಸೆಯಲ್ಲಿ ಇಲ್ಲಿ ಆಗಬೇಕು ಎಂದು ಮಾನ್ಯ ಸದಸ್ಯರು ಕೇಳಿದ್ದಾರೆಂದು ನಾನು ಭಾವಿಸಿಕೊಂಡಿದ್ದೇನೆ. ಅದೇರಿತಿಯಲ್ಲಿ ನಾವು ಸಹ ಬೇರೆ ರಾಜ್ಯದಲ್ಲಿ ಯಾವ ರೀತಿ ಒಳ್ಳೆಯ ಫೆಸಿಲಿಟೀಸ್ ಕೊಟ್ಟಿದ್ದಾರೋ ಅದೇರೀತಿಯಲ್ಲಿ ನಮ್ಮ ಕರ್ನಾಟಕದಲ್ಲೂ ಫೆಸಿಲಿಟೀಸ್ ಕೊಡಬೇಕು ಎನ್ನುವ ಉದ್ದೇಶ ಸರ್ಕಾರಕ್ಕೆ ಇದೆ ಆದರೆ ಅದಕ್ಕೆ ಸಾಕಷ್ಟು ಮಟ್ಟಿಗೆ ಇನ್‌ಸ್ಟ್ರಕ್ಚರ್ ಫೆಸಿಲಿಟೀಸ್ ಕೊಡಿಲಿಕ್ಕೆ ಹಣಕಾಸಿನ ಇತಿಮಿತಿಯನ್ನು ನಾವು ಇಟ್ಟುಕೊಂಡು ಮುಂದಕ್ಕೆ ಹೆಚ್ಚು ಹಾಕಬೇಕಾಗುತ್ತದೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಈ ಐದು ಹೋಟೇಲ್‌ಗಳ ಬಗ್ಗೆ ಏಕೆ ಲಾಸ್ ಆಗಿದೆ ಎನ್ನುವುದರ ಬಗ್ಗೆ ಸರ್ಕಾರ ತೀವ್ರವಾಗಿ ಪರಿಶೀಲನೆ ಮಾಡಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಈ ಐದು ಹೋಟೆಲ್‌ಗಳು ಯಾವುದೆಂದರೆ 1 ಹೋಟೇಲ್ ಮಯೂರ ಬಹಮನಿ ಗುಲ್ಬರ್ಗಾ 2 ಹೋಟೆಲ್ ಮಯೂರ ಬರೀದ್ ಶಾಹಿ ಬೀದರ್ 3. ಹೋಟೆಲ್ ಮಯೂರ ಕೆಂಪೇಗೌಡ ಬೆಂಗಳೂರು 4 ಹೋಟೆಲ್ ಮಯೂರ ಕೇಶವ ಸೋಮನಾಥಪುರ 5 ಹೋಟೇಲ್ ಮಯೂರ ಸಹ್ಯಾದ್ರಿ ದಾಂಡೇಲಿ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ: ನನ್ನ ಎರಡನೇ ಮತ್ತು ಮೂರನೇ ಪ್ರಶ್ನೆಗೆ ತಾವು ಉತ್ತರಕೊಟ್ಟಿಲ್ಲ. 2ನೇ ಪ್ರಶ್ನೆ ರಾಜ್ಯದ ಹೊರಗಡೆ ಊಟಿಯಲ್ಲಿ ತಿರುಪತಿಯೊಳಗೆ ಕರ್ನಾಟಕ ಟೂರಿಸಂ ಡೆವಲಪ್‌ಮೆಂಟ್ ಮಾಡುವುದಕ್ಕೆ ಅಲ್ಲಿ ಏಕೆ ಓಪನ್ ಮಾಡಿದ್ದೀರಾ? ನಮ್ಮ ಕರ್ನಾಟಕ ರಾಜ್ಯದಲ್ಲೇ ಮಾಡಿದರೆ ನಮ್ಮ ಕರ್ನಾಟಕ ಟೂರಿಸಂ ಡೆವಲಪ್ ಆಗುತ್ತದೆ. ಮತ್ತು ಮೂರನೇ ಪ್ರಶ್ನೆ ಎಂದರೆ ಮೈಸೂರು ಗುಲ್ಬರ್ಗಾ ಬೆಂಗಳೂರು ಮತ್ತು ಮಂಗಳೂರು ಇಂಥ ದೊಡ್ಡ ದೊಡ್ಡ ಸಿಟಿಗಳಲ್ಲಿ ತ್ರೀಸ್ಟಾರ್ ಹೋಟೆಲ್‌ಗಳು ಫೈವ್‌ಸ್ಟಾರ್ ಹೋಟೆಲ್‌ಗಳು ಇವೆ. ಇಂಥ ಕಡೆ ನೀವೂ ಟೂರಿಸ್ಟ್ ಹೋಟೆಲ್‌ಗಳನ್ನು ಓಪನ್ ಮಾಡಿದ್ದೀರಿ ಇದು ಟೂರಿಸಂ ಡೆವಲಪ್‌ಮೆಂಟ್‌ಗೋಸ್ಕರ ಮಾಡಿದ್ದೀರೋ ಇಲ್ಲವೋ? ಬರೀ ಸರ್ಕಾರಿ ಅಧಿಕಾರಿಗಳು ಹೋಗಿ ಇದ್ದು ಬರುವುದಕ್ಕೋಸ್ಕರ ಮಾಡಿದ್ದೀರೋ? ಈ ಎರಡು ಪ್ರಶ್ನೆಗಳಿಗೆ ನಾನು ಉತ್ತರ ಕೇಳುತ್ತೇನೆ.

ಶ್ರೀ ಕೆ. ಶಿವಮೂರ್ತಿ: ಈಗ ದೇಶವಿದೇಶಗಳಿಂದ ಪ್ರವಾಸಿಗರು ಬರುತ್ತಾರೆ. ಅವರ ಮಟ್ಟಕ್ಕೆ ಸರಿಯಾದುದು ಮತ್ತು ಅವರ ಸ್ಟ್ಯಾಂಡರ್ಡ್‌ಗೆ ಸರಿಯಾದ ಹೋಟೆಲುಗಳನ್ನು ಹಿಂದೆ ಸ್ಥಾಪನೆ ಮಾಡಿದ್ದಾರೆ. ಮಾನ್ಯ ಸದಸ್ಯರಾದ ಪೆರಿಕಲ್

ಮಲ್ಲಪ್ಪನವರು ಹೋದಸಾರಿ ಏರ್‌ಟ್ರಿಪ್ಸ್ ಬೇಕು ಅಂತ ಹೇಳಿದ್ದರು ಅದು ಬರೇ ಫಾರೀನ್ ಟೂರಿಸ್ಟ್‌ಗೋಸ್ಕರ ಅವರು ಫೈವ್‌ಸ್ಟಾರ್ ತ್ರೀಸ್ಟಾರ್ ಹೋಟೆಲ್‌ಗಳು ಬೇಕು ಅಂತ ಕೇಳುತ್ತಾರೆ ಆದರೆ ನಮ್ಮ ದೇಶೀಯವಾಗಿ ಬರತಕ್ಕಂಥ ಟೂರಿಸ್ಟ್‌ಗಳು ಯಾರಿದ್ದಾರೆ ಅವರಿಗೆ ಅಷ್ಟು ಕಾಸ್ಟನ್ನು ಕೊಡುವುದಕ್ಕಾಗುವುದಿಲ್ಲ, ಹಿಂದೆ ಕಟ್ಟಿದ ಹೋಟೇಲ್‌ಗಳು ಪಟ್ಟಣಗಳಲ್ಲಿವೆ ಈಗ ಕಟ್ಟತಕ್ಕಂಥ ಹೋಟೆಲ್‌ಗಳು ಮತ್ತು ಮುಂದೆ ಕಟ್ಟತಕ್ಕಂಥಾದ್ದು ಟೂರಿಸ್ಟ್ ಸ್ಪಾಟ್‌ಗಳು ಎಲ್ಲಿ ಜಾಸ್ತಿ ಪ್ರವಾಸಿಗರು ಹೋಗುತ್ತಾರೆ ಅಂಥಹ ಸ್ಥಳಗಳನ್ನು ನಾವು ಗುರುತಿಸಿದ್ದೇವೆ ಗುರುತಿಸಿ ಕೆಲವು ಕಡೆ ಇಂಥ ಕಟ್ಟಡ ಬೇಕೆಂದು ಸರ್ಕಾರಕ್ಕೆ ಪ್ರಪೋಸಲ್ ಕೊಟ್ಟಿದ್ದೇವೆ. ಅದು ಪರಿಶೀಲನೆಯ ಹಂತದಲ್ಲಿದೆ.

ಅಧ್ಯಕ್ಷರು: ಶ್ರೀ ಸಾದತ್ ಅಲಿಖಾನ್‌ರವರೇ ನಿಮ್ಮ ಪ್ರಶ್ನೆ 2137 ಮಾನ್ಯ ನೀರಾವರಿ ಮಂತ್ರಿಗಳು ಅರ್ಜೆಂಟಾಗಿ ಎಲ್ಲೋ ಹೋಗಬೇಕಾಗಿದೆ ಎಂದು ಹೇಳಿದ್ದಾರೆ. ಬಹುಶಃ ಅವರು ನಿಮಗೆ ತಿಳಿಸಿರಬೇಕೆಂದು ಕಾಣುತ್ತದೆ.

ಶ್ರೀ ಸಾದತ್ ಅಲಿಖಾನ್: ಇಲ್ಲ

ಅಧ್ಯಕ್ಷರು: ನಾನು ತಿಳಿಸುತ್ತಿದ್ದೇನೆ 27ನೇ ತಾರೀಖಿಗೆ ಇದನ್ನು ತೆಗೆದುಕೊಳ್ಳೋಣ.

ಶ್ರೀ ಸಾದತ್ ಅಲಿಖಾನ್: ಆಗಬಹುದು

ಕೊಡಗು ಜಿಲ್ಲೆ ಪರಿಷತ್ತಿಗೆ ವ್ಯಾಪ್ತಿಗೆ ಬರುವ ರಸ್ತೆಗಳು

1907 - ಶ್ರೀ ಮತಿ ಸುಮಾ ವಸಂತ (ವೀರಾಜಪೇಟೆ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ಕೊಡಗು ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರುವ ಒಟ್ಟು ರಸ್ತೆಗಳೆಷ್ಟು? (ತಾಲ್ಲೂಕು ವಿವರಗಳನ್ನು ಒದಗಿಸುವುದು)

ಆ) ಇವುಗಳಲ್ಲಿ ಮುಖ್ಯ ಜಿಲ್ಲಾ ರಸ್ತೆಗಳು ಇತರ ಜಿಲ್ಲಾ ರಸ್ತೆಗಳು ಹಾಗೂ ಗ್ರಾಮೀಣಾ ರಸ್ತೆಗಳೆಷ್ಟು? (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು)

ಇ) ಇವುಗಳು ದುಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಇವುಗಳ ದುರಸ್ತಿ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?

ಉ) 1988-89 1989-90ನೇ ಸಾಲುಗಳಲ್ಲಿ ವೀರಾಜಪೇಟೆ ಕ್ಷೇತ್ರದಲ್ಲಿ ಎಷ್ಟು ಉದ್ದದ ರಸ್ತೆಯನ್ನು ರಾಷ್ಟ್ರೀಕರಣ ಮಾಡಲಾಗಿದೆ (ಮಂಡಲವಾರು ಮಾಹಿತಿಯನ್ನು ಒದಗಿಸುವುದು)

ಶ್ರೀ ಜಿ.ಹೆಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು):

ಅ) ಕೊಡಗು ಜಿಲ್ಲಾಪರಿಷತ್ ವ್ಯಾಪ್ತಿಗೆ ಬರುವ ರಸ್ತೆಗಳ ತಾಲ್ಲೂಕುವಾರು ವಿವರ ಕೆಳಕಂಡಂತಿದೆ.

	ಕಿ.ಮೀ.ಗಳು
ಮಡಿಕೇರಿ	255.51
ಸೋಮವಾರ ಪೇಟೆ	302.60
ವೀರಾಜಪೇಟೆ	388.51
ಒಟ್ಟು	**956.62**

ಆ) ಮುಖ್ಯ ಜಿಲ್ಲಾ ರಸ್ತೆಗಳು ಜಿಲ್ಲಾಪರಿಷತ್ ವ್ಯಾಪ್ತಿಗೆ ಬರುವುದಿಲ್ಲ ಇತರ ಜಿಲ್ಲಾ ರಸ್ತೆಗಳು ಇಲ್ಲ ಗ್ರಾಮೀಣ ದರ್ಜೆ ರಸ್ತೆಗಳು ಮೇಲಿನ ಉತ್ತರ (ಅ)ದಲ್ಲಿದ್ದಂತೆ.

ಇ) ಸರ್ಕಾರದ ಗಮನಕ್ಕೆ ಬಂದಿದೆ.

ಈ) ಕೊಡಗು ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿ ರಸ್ತೆಗಳ ನಿರ್ವಹಣೆಗಾಗಿ 1991-92ನೇ ಸಾಲಿನಲ್ಲಿ 47.89ಲಕ್ಷ ರೂಗಳನ್ನು ಒದಗಿಸಲಾಗಿದ್ದು ಲಭ್ಯವಿರುವ ಅನುದಾನದಲ್ಲಿ ಈ ರಸ್ತೆಗಳನ್ನು ಸಾಧ್ಯವಾದಷ್ಟು ಸುಸ್ಥಿಯಲ್ಲಿಡಲಾಗುತ್ತಿದೆ.

ಉ) ವೀರಾಜಪೇಟೆ ಕ್ಷೇತ್ರದಲ್ಲಿ ಯಾವುದೇ ರಸ್ತೆಗಳನ್ನೂ ರಾಷ್ಟ್ರೀಕರಣ ಮಾಡಿರುವುದಿಲ್ಲ.

ಶ್ರೀ ಸುಮಾವಸಂತ್: ಸನ್ಮಾನ್ಯ ಅಧ್ಯಕ್ಷರೇ ನಾನು ಮೇಜರ್ ಡಿಸ್ಟ್ರಿಕ್ಟ್ ರೋಡ್ಸ್ ಎಷ್ಟು ಇದೆ ಎಂದು ಕೇಳಿದರೆ ಯಾವುದೂ ಸಹ ಬರುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ ಮತ್ತೆ ಕೊಡಗು ಜಿಲ್ಲೆಯಲ್ಲಿ 956 ಕಿಲೋಮೀಟರ್ ಉದ್ದದ ರಸ್ತೆ ಇದೆಯೆಂದು ಉತ್ತರ ಇದೆ. 1991-92ನೇ ಸಾಲಿನಲ್ಲಿ 47 ಲಕ್ಷರೂಪಾಯಿಗಳ ಅನುದಾನ ಒದಗಿಸಲಾಗಿದ್ದು ಲಭ್ಯವಿರುವ ಅನುದಾನದಲ್ಲಿ ಈ ರಸ್ತೆಗಳನ್ನು ಸಾಧ್ಯವಾದಷ್ಟು ಸುಸ್ಥಿಯಲ್ಲಿಡಲಾಗುತ್ತಿದೆ ಎಂದು ಹೇಳಿದ್ದಾರೆ. ಕೊಡಗು ಜಿಲ್ಲೆಗೆ ಯಾವ ಆಧಾರದಮೇಲೆ ಅನುದಾನ ಕೊಡುತ್ತಿದ್ದಾರೆ ಎಂದು ನಾನು ಕೇಳುತ್ತೇನೆ ಹೀಗೆ ಕೊಟ್ಟರೆ ಒಂದೊಂದು ತಾಲ್ಲೂಕಿಗೆ 15 ಲಕ್ಷ ಬರುತ್ತದೆ ಇದರಲ್ಲಿ ಆಗಿರುವ ಹೊಂಡ ಮುಚ್ಚಲಿಕ್ಕೆ ಮಣ್ಣು ಹಾಕುವುದಕ್ಕೆ ಸಾಕಾಗುವುದಿಲ್ಲ ಆದ್ದರಿಂದ ಈ ರಸ್ತೆ ಕೆಲಸ ಯಾವರೀತಿ ಮಾಡುವುದಕ್ಕೆ ಸಾಧ್ಯ ಎಂದು ನಾನು ಕೇಳುತ್ತೇನೆ.

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಅಧ್ಯಕ್ಷರೇ, ಸುಮಾರು 70 ಕೋಟಿ ರೂಪಾಯಿಗಳನ್ನು, ಸರ್ಕಾರದವತಿಯಿಂದ ಕರ್ನಾಟಕ ರಾಜ್ಯದಲ್ಲಿರತಕ್ಕ ರಸ್ತೆಗಳ ರಿಪೇರಿಗೆಂದು ಕೊಟ್ಟಿದ್ದಾರೆ. ಇದರಲ್ಲಿ ಸರ್ಕಾರದ ವತಿಯಿಂದ 40 ಕೋಟಿ ರೂಪಾಯಿ ಬಂದಿದೆ. ಈ ಕೋಟಿ ರೂಪಾಯಿಗಳಲ್ಲಿ, ಒಂದೂವರೆ ಕೋಟಿ ರೂಪಾಯಿ ಜಿಲ್ಲಾಪರಿಷತ್ ರೋಡ್ಸ್ ಮತ್ತು ಸ್ಟೇಟ್ ಎಂ.ಡಿ.ಆರ್ ರೋಡ್‌ಗಳಿಗೆಂದು ಕೂರ್ಗುಜಿಲ್ಲೆಗೆ ಕೊಟ್ಟಿದ್ದೇವೆ.

ಶ್ರೀಮತಿ ಸುಮಾವಸಂತ್ : ಕೊಡಗು ಜಿಲ್ಲೆ ಮಲೆನಾಡು ಪ್ರದೇಶ ಮತ್ತು ಗುಡ್ಡಗಾಡು ಪ್ರದೇಶ. ಅಲ್ಲಿ ಆರು ತಿಂಗಳು ಮಳೆ ಇರುತ್ತದೆ. ಇನ್ನು 6 ತಿಂಗಳು ಮಾತ್ರ ನಾವು ಕೆಲಸ ಮಾಡುವುದಕ್ಕೆ ಸಾಧ್ಯ. ನಾನು ಹೇಳುತ್ತಿರುವುದೇನೆಂದರೆ, ಮಲೆನಾಡು ಪ್ರದೇಶ ಏನಿದೆ, ಇದನ್ನು ಬೇರೆ ಜಿಲ್ಲೆಗಳಾದ ದಾವಣಗೆರೆ, ಗುಲ್ಬರ್ಗಾ, ಧಾರವಾಡ ಎಷ್ಟು ತರಹ ಟ್ರೀಟ್‌ಮಾಡದೆ ಬೇರೆ ಯಾವುದಾದರೂ ರೀತಿಯಲ್ಲಿ ಹೆಚ್ಚಿನ ರೀತಿಯಲ್ಲಿ ಹಣವನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ. ಇದಲ್ಲದೆ, ನಮ್ಮಲ್ಲಿ ಒಂದು ಕಿಲೋಮೀಟರ್‌ನಲ್ಲಿ 4-5 ಕಲ್ವರ್ಟ್ ಇರುತ್ತದೆ. ಸೇತುವೆಗಳು ಜಾಸ್ತಿ ಇರುತ್ತವೆ. ಬೇರೆ ಪ್ರದೇಶದಲ್ಲಿ ಕಲ್ವರ್ಟ್‌ಗಳು ಕಡಿಮೆ ಇರುತ್ತವೆ. ಇವರು ಈ ಕಲ್ವರ್ಟ್‌ಗಳಿಗೆಂದು ಹಣವನ್ನೇ ಕೊಡುವುದಿಲ್ಲ, ಯಾವಾಗ ಕೇಳಿದರೂ ಗ್ಯಾಂಗ್‌ಮನ್‌ಗಳು ಇರುವುದಿಲ್ಲ. ಜಿಲ್ಲೆ ಇರುವುದಿಲ್ಲ ಎಂದು ಹೇಳುತ್ತಾರೆ. ಜೊತೆಗೆ ನಿರ್ವಹಣಾ ಗ್ರಾಂಟ್ಸ್ ಎಂದು ಕಳೆದ 15 ವರ್ಷಗಳಿಂದ ಕೊಡುತ್ತಾ ಇಲ್ಲ. ಈ ರೀತಿಯಾಗಿ ಮಲೆನಾಡು

ಪ್ರದೇಶದ ರಸ್ತೆಗಳು ತುಂಬಾ ಅಧೋಗತಿಯಲ್ಲಿವೆ. ಇದಕ್ಕೆ ನೀವು ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಅಧ್ಯಕ್ಷರೇ, ಸರ್ಕಾರಕ್ಕೆ ಫ್ಲಡ್ ರಿಲೀಫ್‌ನಿಂದ ರಸ್ತೆ ರಿಪೇರಿಗೋಸ್ಕರ 13 ಕೋಟಿ ಕೇಳಿದ್ದೇವೆ. ಇದರಲ್ಲಿ ಈ ವರ್ಷ ಅನುದಾನ ಬಂದಿಲ್ಲ. ಇದು ಬಂದತಕ್ಷಣ ಹೆಚ್ಚಿನದಾಗಿ ಮಲೆನಾಡು ಪ್ರದೇಶದ ರಸ್ತೆಗಳನ್ನು ರಿಪೇರಿ ಮಾಡುವುದಕ್ಕೆ ಹಣ ಒದಗಿಸಲು ಪ್ರಯತ್ನ ಮಾಡುತ್ತೇನೆ. ಸುಮಾರು ಒಂದೂವರೆ ಕೋಟಿ, ಅಂದರೆ, ಒಂದು ಕಿಲೋಮೀಟರ್‌ಗೆ 10 ಸಾವಿರ ರೂಪಾಯಿಗಳನ್ನು ಕೊಡಗಿಗೆ ಕೊಟ್ಟಹಾಗೆ ಆಗುತ್ತದೆ. ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ, ಇದು ಜಾಸ್ತಿ ಎಂದು ನನ್ನ ಭಾವನೆ. ಇನ್ನೂ ಹೆಚ್ಚಿನದಾಗಿ ಫ್ಲಡ್ ರಿಲೀಫ್‌ನಲ್ಲಿ ಹಣ ಬಂದರೆ, ಅಲ್ಲಿಗೆ ಹೆಚ್ಚಿನ ಆದ್ಯತೆ ಕೊಟ್ಟು ರೋಡ್‌ಗಳನ್ನು ರಿಪೇರಿ ಮಾಡಿಸುತ್ತೇವೆ.

ಶ್ರೀಮತಿ ಸುಮಾ ವಸಂತ್ : ನಮ್ಮಲ್ಲಿ ವೀರಾಜಪೇಟೆಯಿಂದ ಕೇರಳಕ್ಕೆ ಹೋಗುವ ರಸ್ತೆ ಇದೆ. ಇದು 28 ಕಿಲೋಮೀಟರ್ ಇದೆ. ಇವರು ಈ ಸಲ ಬಾರ್ಡರ್ ಡೆವಲಪ್‌ಮೆಂಟ್‌ಗೆಂದು 5 ಲಕ್ಷ ಮಾತ್ರ ಹಣವನ್ನು ಕೊಟ್ಟಿದ್ದಾರೆ. 28 ಕಿಲೋಮೀಟರ್ ರಸ್ತೆಯಲ್ಲಿ ಒಂದು ಸಲ ಮಳೆ ಬಂದಾಗ ಬೀಳತಕ್ಕ ಹೊಂಡಗಳನ್ನು ಮುಚ್ಚುವುದರಲ್ಲಿಯೇ ಟೈಮ್ ಆಗುತ್ತದೆ. ಬೇರೆ ಕೆಲಸ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಅಲ್ಲಿ ಜಾಸ್ತಿ ಹಣ ಕೊಡಬೇಕೆಂದು ಹೇಳುತ್ತೇನೆ. ಬೇರೆ ಕಡೆ ಇರಿಗೇಷನ್ ರೋಡ್‌ಗಳಿಗೆ ಹೆಚ್ಚಿನ ಹಣವನ್ನು, ಕಬ್ಬು ಬೆಳೆಯುವ ಪ್ರದೇಶದ ರಸ್ತೆಗಳಿಗೆ ಮತ್ತೆ ಮೀನುಗಾರಿಕಾ ಬಂದರು ಪ್ರದೇಶದ ರಸ್ತೆಗಳಿಗೆ ಹೆಚ್ಚಿನ ಹಣವನ್ನು ಕೊಡುತ್ತಿದ್ದಾರೆ. ಅದೇ ರೀತಿ ಮಲೆನಾಡು ಪ್ರದೇಶದಲ್ಲಿ ಕಾಫಿ ಬೆಳೆಯುತ್ತಿದ್ದಾರೆ. ಇದರಿಂದ ಸರ್ಕಾರಕ್ಕೂ ಹೆಚ್ಚಿನ ಆದಾಯವನ್ನು ಕೊಡುತ್ತಿದ್ದೇವೆ. ಆದ್ದರಿಂದ ಕಾಫಿ ಬೆಳೆಯುವ ಪ್ರದೇಶಕ್ಕೆ ಎಂದು ಏನಾದರೂ ಹೆಚ್ಚಿನ ಹಣವನ್ನು ಬಿಡುಗಡೆ ಮಾಡುತ್ತೀರಾ ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಅಧ್ಯಕ್ಷರೇ, ಈ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ, ಆದರೆ ಅವರು ಹೇಳಿದಪ್ರಕಾರ, ಮಲೆನಾಡು ಏರಿಯಾಕ್ಕೆ ಹೆಚ್ಚು ಹಣ ಬೇಕೆಂದು ಒತ್ತಿ ಒತ್ತಿ ಹೇಳುತ್ತಿದ್ದಾರೆ. ಇದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುವುದಕ್ಕೆ ನಾನು ಸಹ ಇಷ್ಟಪಡುತ್ತೇನೆ. ಮತ್ತು ಬಾರ್ಡರ್ ಏರಿಯಾದಲ್ಲಿ ರಸ್ತೆಗಳನ್ನು ಮಾಡುವುದಕ್ಕೆ ಹೇಳಿದ್ದಾರೆ. ಈಗ ಜಿಲ್ಲಾಧಿಕಾರಿಗಳ ವಶದಲ್ಲಿ 5 ಲಕ್ಷ ಹಣವನ್ನು ಕೊಟ್ಟಿದ್ದೇವೆ. ಈ ಸಾರಿ ಇನ್ನೂ ಹೆಚ್ಚಿನ ಹಣವನ್ನು ಕೊಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀಮತಿ ಮೋಟಮ್ಮ : ಶ್ರೀಮತಿ ಸುಮಾ ವಸಂತ್ ಅವರು ಹೇಳಿದಂತೆ ಈಗ ಕಬ್ಬು ಬೆಳೆಯುವ ಏರಿಯಾದ ರಸ್ತೆಗಳಿಗೆ ಮೀನುಗಾರರು ಇರತಕ್ಕ ಪ್ರದೇಶಗಳ ರಸ್ತೆಗಳಿಗೆ ಇರಿಗೇಷನ್ ಪ್ರಾಜೆಕ್ಟ್ ಅಥವಾ ಎಲ್ಲಿ ಹೆಚ್ಚು ಭತ್ತ ಬೆಳೆಯುತ್ತಾರೋ ಅಂತಹ ಕಡೆಗಳಲ್ಲಿ ಹೆಚ್ಚು ಹಣ ಕೊಟ್ಟಿರುವುದು ಇದೆ. ಅದೇ ರೀತಿ, ಅವರು ಹೇಳಿದಹಾಗೆ ಮಲೆನಾಡಿನಲ್ಲಿ ನಾವು ಕಾಫಿ ಜಾಸ್ತಿ ಬೆಳೆಯುತ್ತೇವೆ. ಇದರಿಂದ ಸರ್ಕಾರಕ್ಕೆ ಸಾಕಷ್ಟು ರೆವಿನ್ಯೂ ಬರುತ್ತದೆ. ಮಳೆಗಾಲದಲ್ಲಿ ಕಾಫಿ ಟನ್‌ಗಟ್ಟಲೆ ಹೋಗಬೇಕಾದರೆ, ರೋಡ್‌ಗಳು ಹಾಳಾಗುತ್ತವೆ. ಹಾಗೆಯೇ ಟಿಂಬರ್ಸ್ ಕಾಂಟ್ರಾಕ್ಟ್, ಮಳೆಗಾಲದಲ್ಲಿಯೇ ಕೊಡುತ್ತಾರೆ. ಲೋಡ್‌ಗಟ್ಟಲೆ ಮರಗಳು ಹೋಗುತ್ತವೆ.

ಹೀಗಾಗಿ ರಸ್ತೆಗಳು ಹಾಳಾಗುತ್ತವೆ. ಅದರ ಮೇಲೆ ಟ್ಯಾಕ್ಸ್ ಹಾಕಿ, ಒಟ್ಟಾಗಿ ಕಾಫಿ ರೋಡ್ಸ್ ಎಂದು ಮಾಡುವುದಕ್ಕೆ ಏಕೆ ಪರಿಶೀಲನೆ ಮಾಡಬಾರದು.

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಅದನ್ನು ಪರಿಶೀಲನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ ರಸ್ತೆಗಳು

1835-ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಒಳಪಟ್ಟಿರುವ ರಸ್ತೆಗಳ ಉದ್ದಳತೆ ಎಷ್ಟು?

ಆ) ಜಿಲ್ಲಾ ಪರಿಷತ್ತಿಗೆ ವಹಿಸಿದ ಬಳಿಕ ರಸ್ತೆಗಳು, ಹಣದ ಕೊರತೆಯಿಂದ ಹಳ್ಳಿ ಸಂಚಾರಕ್ಕೆ ಯೋಗ್ಯವಿಲ್ಲದಂತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ, ಆ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಈ) ಪ್ರತಿ ತಾಲ್ಲೂಕಿನಲ್ಲಿ 30 ಕಿಲೋಮೀಟರ್ ರಸ್ತೆಯನ್ನು ಜಿಲ್ಲಾ ಪರಿಷತ್ತಿನಿಂದ ಸರ್ಕಾರಕ್ಕೆ ವಹಿಸಿಕೊಳ್ಳುವ ಉದ್ದೇಶ ಸರ್ಕಾರ ಇಟ್ಟುಕೊಂಡಿದೆಯೇ?

ಉ) ಹಾಗಿದ್ದಲ್ಲಿ, ಅದನ್ನು ಯಾವಾಗ ಕಾರ್ಯರೂಪಕ್ಕೆ ತರಲಾಗುವುದು?

ಅ) ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ಒಟ್ಟು ಉದ್ದ ಕೆಳಕಂಡಂತಿದೆ:

1) ಇತರ ಜಿಲ್ಲಾರಸ್ತೆ:	76 ಕಿ.ಮೀ
2) ಹಳ್ಳಿ ದರ್ಜೆ ರಸ್ತೆ	2156 ಕಿ.ಮೀ.
ಒಟ್ಟು	2232 ಕಿ.ಮೀ.

ಆ) ಜಿಲ್ಲಾ ಪರಿಷತ್ತಿಗೆ ವಹಿಸಿದ ಎಲ್ಲಾ ರಸ್ತೆಗಳು ಸಂಚಾರಕ್ಕೆ ಯೋಗ್ಯವಿಲ್ಲ ಎಂಬುದು ಸರಿಯಲ್ಲ ಹಣದ ಕೊರತೆಯಿಂದ ಹಾಗೂ ಅತಿವೃಷ್ಟಿಯಿಂದ ಕೆಲವು ರಸ್ತೆಗಳು ದುಸ್ಥಿತಿಯಲ್ಲಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಲಭ್ಯವಿರುವ ಅನುದಾನದಲ್ಲಿ ರಸ್ತೆಗಳನ್ನು ಆದಷ್ಟು ಮಟ್ಟಿಗೆ ಸುಸ್ಥಿತಿಯಲ್ಲಿಡಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಈ ಸಾಲಿನಲ್ಲಿ ರಸ್ತೆ ನಿರ್ವಹಣೆಗೆ ಹೆಚ್ಚುವರಿ ಅನುದಾನ ನೀಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಈ) ಉದ್ದೇಶವಿದೆ.

ಉ) ಆದಷ್ಟು ಶೀಘ್ರದಲ್ಲಿ ಕಾರ್ಯರೂಪಕ್ಕೆ ತರಲಾಗುವುದು.

ಶ್ರೀ ಬಿ.ಎಂ. ಇದಿನಬ್ಬ : ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಹಳ್ಳಿದರ್ಜೆ ರಸ್ತೆ 2,156 ಕಿಲೋಮೀಟರ್ ಎಂದು ಹೇಳಿ ಬರೆದು, ಒಟ್ಟು 2,532 ಕಿಲೋಮೀಟರ್ ಎಂದು ಹೇಳಿದ್ದಾರೆ. ಇದು ನಾ ದುರಸ್ತಿಯಲ್ಲಿದೆ. ಹಣದ ಕೊರತೆಯಿಂದಲೋ ಏನೋ ಈ ರೀತಿ ಏಕೆ ಕೊರತೆಯಾಗಿದೆ. ಎಂದು ಕೇಳಿದ್ದಕ್ಕೆ, ಜಿಲ್ಲಾಪರಿಷತ್ತಿಗೆ ವಹಿಸಿದ ಎಲ್ಲಾ ರಸ್ತೆಗಳೂ ಸಂಚಾರಕ್ಕೆ ಯೋಗ್ಯವಿಲ್ಲ ಎಂಬುದು ಸರಿಯಲ್ಲ, ಹಣದ ಕೊರತೆಯಿಂದ ಹಾಗೂ ಅತಿವೃಷ್ಟಿಯಿಂದ ಕೆಲವು ರಸ್ತೆಗಳು ನಾ ದುಸ್ಥಿತಿಯಲ್ಲಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳುತ್ತಿದ್ದಾರೆ. ನಾನು ಹೇಳುವುದು, 100ಕ್ಕೆ 95 ರಸ್ತೆಗಳು ದುರಸ್ತಿಯಲ್ಲಿವೆ,

ಹೊಂಡಗಳ ರಾಶಿಯೇ ಬಿದ್ದಿದೆ. ಗ್ರಾಮಾಂತರ ಪ್ರದೇಶದ ಯಾವ ರಸ್ತೆಗಳಿಗೂ ಪ್ರತಿನಿಧಿಗಳಾದಂಥ ನಾವು ಹೋಗಿ ಕಾಲಿಡುವುದಕ್ಕೆ ಸಾಧ್ಯವಿಲ್ಲ.

ಜನ ಮುತ್ತಿಗೆ ಹಾಕುತ್ತಾರೆ. ಏನು ಸ್ವಾಮಿ, ಇದೊಂದು ರಸ್ತೆಯನ್ನಾದರೂ ಸರಿಮಾಡುವುದಕ್ಕೆ ನಿಮ್ಮಿಂದ ಸಾಧ್ಯ ಇಲ್ಲದಿದ್ದರೆ ನೀವು ಮಾಡುವುದು ಆದರೂ ಏನೂ ಎಂದು ಕೇಳುತ್ತಾರೆ. ಆಗ ಅವರಿಗೆ ಯಾವ ಉತ್ತರವನ್ನೂ ಕೊಡುವುದಕ್ಕೆ ಆಗುವುದಿಲ್ಲ, ಆದುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ರಸ್ತೆಗಳು 100ಕ್ಕೆ 95ರಷ್ಟು ಹಾಳಾಗಿವೆ. ಹೊಂಡ ಬಿದ್ದಿವೆ, ಅದನ್ನು ರಿಪೇರಿ ಮಾಡುವುದಕ್ಕೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಅಧ್ಯಕ್ಷರೇ ಕಾರ್ಯಕ್ರಮ ಇದೆ. ರಸ್ತೆ ರಿಪೇರಿ ಹಾಗೂ ಮೇಂಟೆನೆನ್ಸ್‌ಗೋಸ್ಕರ 40 ಕೋಟಿ ರೂಪಾಯಿಗಳನ್ನು ಸರಕಾರ ಖರ್ಚು ಮಾಡುತ್ತಿದೆ. ಆದರೆ ಇದು ಮಲೆನಾಡು ಪ್ರದೇಶವಾದುದರಿಂದ ಹೆಚ್ಚು ಹಣ ಬೇಕಾಗುತ್ತದೆ. ನಾನು ಆಗಲೇ ಉತ್ತರದಲ್ಲಿ ಹೇಳಿದಹಾಗೆ ಫ್ಲಡ್ ರಿಲೀಫ್ ಬಾಬತ್ತಿನಲ್ಲಿ ಹೆಚ್ಚಿನ ಹಣವನ್ನು ಸರಕಾರದಿಂದ ಪಡೆದು ಈ ಕೆಲಸ ಮಾಡಲು ಪ್ರಯತ್ನ ಮಾಡುತ್ತೇವೆ. ಸರ್ಕಾರದಿಂದ ಹೆಚ್ಚಿನ ಹಣವನ್ನು ತೆಗೆದುಕೊಂಡು, ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಲ್ಲಿ ರಸ್ತೆಗಳು ಏನು ಕೆಟ್ಟು ಹೋಗಿವೆ ಅದನ್ನು ರಿಪೇರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ.ಎಂ. ಇದಿನಬ್ಬ : ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ದೊಡ್ಡ ತೊಂದರೆ ಎಂದರೆ ಲೆಕ್ಕಕ್ಕಿಂತ ಜಾಸ್ತಿ ಮಳೆ ಬರುವುದರಿಂದ ರಸ್ತೆಗಳಿಗೆ ಹಾನಿಯಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಜಿಲ್ಲಾ ಪರಿಷತ್‌ನವರು ಯಾವ ಕೆಲಸವನ್ನೂ ಮಾಡುವುದಕ್ಕೆ ಹೊರಟಂತೆ ಎಲ್ಲಿಯೂ ಕಾಣುವುದಿಲ್ಲ, ಆದುದರಿಂದ ಪ್ರಮುಖವಾದಂಥ ಗ್ರಾಮಾಂತರ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳುವ ಮನಸ್ಸು ಮಾಡುತ್ತೀರಾ? ಹಾಗೆ ಮಾಡಿದರೆ ನಿಜವಾಗಿ ಬಹಳ ದೊಡ್ಡ ಉಪಕಾರವಾಗುತ್ತದೆ.

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಪ್ರಯತ್ನ ನಡೆಯುತ್ತಿದೆ. ಒಂದು ಜಿಲ್ಲೆಯಲ್ಲಿ ಸುಮಾರು 400 ಕಿಲೋಮೀಟರ್ ಜಿಲ್ಲಾ ಪರಿಷತ್ ರಸ್ತೆಯನ್ನು ಪಿ.ಡಬ್ಲ್ಯೂ.ಡಿ. ಇಲಾಖೆಗೆ ತೆಗೆದುಕೊಳ್ಳಬೇಕೆಂದು ಪ್ರಯತ್ನ ನಡೆಸಿದ್ದೇವೆ. ಅದಕ್ಕೆ ಕೆಲವು ಪ್ರಪೋಸಲ್ಸ್ ಕೂಡಾ ಬಂದಿದೆ. ದಕ್ಷಿಣ ಕನ್ನಡ ಜಿಲ್ಲೆಯಿಂದಲೂ ಬಂದಿದೆ. ಅದನ್ನು ಶೀಘ್ರವಾಗಿ ಪರಿಶೀಲಿಸಿ ಜಿಲ್ಲಾ ಪರಿಷತ್ ರಸ್ತೆಗಳನ್ನು ಪಿ.ಡಬ್ಲ್ಯೂ.ಡಿ. ರಸ್ತೆಗಳನ್ನಾಗಿ ಪರಿವರ್ತನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್.ಹೆಚ್. ಕೌಜಲಗಿ : ಈ ವರ್ಷ ಜಿಲ್ಲಾ ಪರಿಷತ್‌ನಿಂದ ಎಷ್ಟು ಕಿಲೋಮೀಟರ್ ರಸ್ತೆಗಳನ್ನು ಪಿ.ಡಬ್ಲ್ಯೂಡಿಗೆ ತೆಗೆದುಕೊಳ್ಳುತ್ತೀರಿ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಕರ್ನಾಟಕ ರಾಜ್ಯದ ಎಲ್ಲಾ ತಾಲ್ಲೂಕುಗಳಿಂದ ಸೇರಿ, ಸುಮಾರು ಆರು ಸಾವಿರ ಕಿಲೋಮೀಟರ್ ತೆಗೆದುಕೊಳ್ಳಬೇಕೆಂದಿದ್ದೇವೆ.

ಶ್ರೀ ಆರ್. ಎಲ್. ಜಾಲಪ್ಪ : ಇದರ ಬಗ್ಗೆ ಬೇಗ ಆರ್ಡರ್ ಮಾಡುತ್ತೀರಾ? ಏಕೆಂದರೆ ಇದು ಒಂದು ವರ್ಷದಿಂದ ಪೆಂಡಿಂಗ್ ಇದೆ. ಹಿಂದೆ ಮಾನ್ಯ ಪುಟ್ಟಸ್ವಾಮಿಗೌಡರು ಮಂತ್ರಿಗಳಾಗಿದ್ದಾಗ ರೆಕಮೆಂಡೇಷನ್ ಮಾಡಿದ್ದರು. ಈ ಫೈಲ್ ಮಾನ್ಯ ಮುಖ್ಯಮಂತ್ರಿಗಳ ಟೇಬಲ್ ಮೇಲಿತ್ತು. ಈಗ ನಿಮ್ಮ ಟೇಬಲ್‌ಗೆ ಬಂದಿರಬಹುದು. ಎಷ್ಟು ದಿವಸದಲ್ಲಿ ತಾವು ಆರ್ಡರ್ ಮಾಡುತ್ತೀರಾ.

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಅತೀ ಶೀಘ್ರವಾಗಿ ಮಾಡುತ್ತೇವೆ.

ಶ್ರೀ ಆರ್.ಎಲ್. ಜಾಲಪ್ಪ : ಎಷ್ಟು ಒಂದು ತಿಂಗಳೇ; ಎರಡು ತಿಂಗಳೇ, ಒಂದು ವರ್ಷವೇ?

ಶ್ರೀ ಜಿ.ಹೆಚ್. ಅಶ್ವತ್ಥ್‌ರೆಡ್ಡಿ : ನೋಡೋಣ.

ಶರಾವತಿ ಸೇತುವೆಯ ಮೇಲೆ ಭಾರಿ ವಾಹನಗಳ ಓಡಾಟವನ್ನು ನಿರ್ಬಂಧ

1912-ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಶರಾವತಿ ಸೇತುವೆಯ ಮೇಲೆ ಭಾರಿ ವಾಹನಗಳನ್ನು ನಿರ್ಭಂಧಿಸಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ, ಈ ನಿರ್ಭಂಧವನ್ನು ಎಂದಿನಿಂದ ಜಾರಿಗೊಳಿಸಲಾಗಿದೆ?

ಇ) ಈ ಸೇತುವೆಯ ಮೇಲಿನ ಸಂಚಾರವನ್ನು ನಿರ್ಭಂಧಿಸಿರುವುದರಿಂದ ಉತ್ತರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಸಂಪರ್ಕಕ್ಕೆ ವ್ಯಾಪಾರ ಜನಗಳ ಓಡಾಟಕ್ಕೆ ತೊಂದರೆಯಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಸೇತುವೆಯ ದುರಸ್ತಿ ಕಾರ್ಯವನ್ನು ಸಮರೋಪಾದಿಯಲ್ಲಿ ಮುಕ್ತಾಯಗೊಳಿಸಲು ಸರ್ಕಾರದ ಮುಂದಿನ ಕ್ರಮಗಳೇನು?

ಉ) ಈ ಸೇತುವೆಯ ದುರಸ್ತಿ ಕಾರ್ಯ ಮುಗಿಯುವವರೆಗೆ ಬದಲಿ ವ್ಯವಸ್ಥೆಯನ್ನೇನಾದರೂ ಸರ್ಕಾರದ ಮಾಡಿದೆಯೇ?

ಊ) ಮಾಡಿದ್ದಲ್ಲಿ ಆ ವ್ಯವಸ್ಥೆ ಯಾವುದು?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು)

ಅ) ನಿಜ

ಆ) ಈ ನಿರ್ಭಂಧವನ್ನು ದಿನಾಂಕ : 26-7-91ರಿಂದ ಜಾರಿಗೊಳಿಸಲಾಗಿದೆ.

ಇ) ಬಂದಿದೆ

ಈ) ಈ ಸೇತುವೆಯ ದುರಸ್ತೆ ಮಾಡಲು ವಿದೇಶಿ ತಂತ್ರಜ್ಞರ ಸಲಹೆಯನ್ನು ಪಡೆದು ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ. ಕೇಂದ್ರ ಸರ್ಕಾರದ ಅನುಮತಿ ದೊರಕಿದನಂತರ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುವುದು.

ಉ) ಮಾಡಿದೆ

ಊ) ಹಾಲಿ ಇರುವ ಸೇತುವೆಯ ಮೇಲೆ ಹಗುರ ವಾಹನಗಳನ್ನು ಬಿಡಲಾಗುತ್ತಿದೆ ಮತ್ತು ಭಾರಿ ವಾಹನಗಳನ್ನು ಯಂತ್ರಚಾಲಿತ ದೋಣಿಗಳಲ್ಲಿ ಒಂದು ದಡದಿಂದ ಮತ್ತೊಂದು ಎಡಕ್ಕೆ ಕೊಂಡೊಯ್ಯಲು ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ ಎರಡು ಬದಲಿ ರಸ್ತೆಗಳನ್ನು ಅಭಿವೃದ್ಧಿಪಡಿಸುತ್ತಿದ್ದು, ಭಾರಿ ವಾಹನಗಳನ್ನು ಬದಲಿ ರಸ್ತೆಯಲ್ಲಿ ಬಿಡಲಾಗುತ್ತಿದೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ನನ್ನ ಎರಡನೇ ಪ್ರಶ್ನೆಗೆ ಉತ್ತರ ಕೊಡುವಾಗ ಕಮ್ಯುನಿಕೇಷನ್, ಟ್ರೇಡ್, ಪಬ್ಲಿಕ್ ಮೂವ್‌ಮೆಂಟ್‌ಗೆ ತೊಂದರೆಯಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ನಾನು ಇದೇ ಸದನಲ್ಲಿ 10-12 ತಿಂಗಳ ಹಿಂದೆ ಈ ವಿಷಯ ಪ್ರಸ್ತಾಪ ಮಾಡಿ ಆ ಸಮಯದಲ್ಲಿ ಸಹ ಹೇಳಿದ್ದೆ. ಈ ಸೇತುವೆಗೆ ರಿಪೇರಿ ಬಹಳ ಅವಶ್ಯಕವಾಗಿದೆ. ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದೆ, ಕ್ರಮ ತೆಗೆದುಕೊಳ್ಳುತ್ತೇವೆಂದು ಸರಕಾರದವರು

ಹೇಳಿದ್ದರು. ಆದರೆ ಸರಕಾರ ಈ ವಿಚಾರದಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಯಾವುದೇ ರೀತಿಯ ಕ್ರಮವನ್ನು ಸರಕಾರ ತೆಗೆದುಕೊಂಡಿಲ್ಲ. ಅಷ್ಟೇ ಅಲ್ಲ, ಇವತ್ತು, ತಾವು ಕೇಂದ್ರ ಸರಕಾರಕ್ಕೆ ಪ್ರಪೋಸಲ್ಸ್ ಕಳುಹಿಸಿದ್ದೇವೆ ಎಂದು ಹೇಳಿದ್ದೀರಿ. ಆ ಪ್ರಪೋಸಲ್ಸ್ ಯಾವಾಗ ಕಳುಹಿಸಿದ್ದೀರಿ, ಆ ಪ್ರಪೋಸಲ್ಸ್ ಏನು ಎಂದು ಸ್ವಲ್ಪ ಹೇಳಬೇಕು. ಎರಡನೆಯದಾಗಿ ಇವತ್ತು ಎರಡು ರೂಟ್‌ನಿಂದ ಟ್ರಾಫಿಕ್ ಹೋಗುತ್ತಿದೆ ಎಂದು ಹೇಳಿದ್ದೀರಿ. ಆ ಎರಡು ರೂಟ್ಸ್ ಯಾವುವು ಎಂದು ಸ್ವಲ್ಪ ಸ್ಪಷ್ಟೀಕರಣ ಕೊಡಬೇಕು. ಮೆಕನೈಸ್ಡ್ ಬೋಟ್ಸ್ ಮೂಲಕ ಹೆವಿ ವೆಹಿಕಲ್ಸ್ ಹೋಗುತ್ತಿದೆ ಎಂದು ಹೇಳಿದಿರಿ. ನನ್ನ ದೃಷ್ಟಿಯಿಂದ ಅಲ್ಲಿ ಒಂದೇ ಒಂದು ಬಾಜ್ ಇತ್ತು. ಅದರ ಕಂಡೀಷನ್ ಸಹ ಸರಿ ಇಲ್ಲ, ನಾನು ಕಳೆದ ತಿಂಗಳು ಹೋದಾಗ ಅಲ್ಲಿ ಯಾವುದೂ ಬಾಜ್ ಕೆಲಸ ಮಾಡುತ್ತಿಲ್ಲ. ಆದ್ದರಿಂದ ಅದರ ಬಗ್ಗೆ ಸಹ ಸ್ಪಷ್ಟೀಕರಣ ಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ: ಮಾನ್ಯ ಅಧ್ಯಕ್ಷರೇ ಕೇಂದ್ರ ಸರ್ಕಾರದ ಆದೇಶದ ಪ್ರಕಾರ ಜುಲೈ 91ರಿಂದ ಸಂಚಾರಕ್ಕೆ ಹೆವಿ ವೆಹಿಕಲ್ಸ್ ಹೋಗುವುದಕ್ಕೆ ಬರುತ್ತಿಲ್ಲ, ಏಕೆಂದರೆ ಬಿಡ್ಜ್‌ನಲ್ಲಿ ಬಿರುಕು ಬಂದಿದೆ ಅಂಥ ಬಿಡುತ್ತಿಲ್ಲ ಅದನ್ನು ರಿಪೇರಿ ಮಾಡುವುದಕೋಸ್ಕರ ಎಲೆಕ್ಟ್ರೋ ಕೆಮಿಕಲ್ ರೀಸರ್ಚ್ ಲ್ಯಾಬೋಲೇಟರಿಗೆ ಸುಮಾರು 3 ಲಕ್ಷ ರೂಪಾಯಿಗಳ ಚಾರ್ಜ್ಸ್ ಕೂಡ ಕೊಟ್ಟಿದ್ದೇವೆ. ಅವರಿಂದ ರಿಪೇರಿ ಆಗಬೇಕೆಂದು ಹೇಳಿ ರಿಪೇರಿ ಕೆಲಸಕೆಂದು ಯು ಕೆಫರ್ಮ್ ಕೂಡ ಕೊಟ್ಟಿದ್ದೇವೆ. 1 ಕೋಟಿ 3 ಲಕ್ಷ ರೂಪಾಯಿಗಳ ಅಂದಾಜು ವೆಚ್ಚ ಇದನ್ನು ಆಗುತ್ತದೆಂದು ಬಲಪಡಿಸಲು ಅವರು ಹೇಳಿದ್ದಾರೆ ಮತ್ತು ಹೊಸ ಬ್ರಿಡ್ಜ್ ಕಟ್ಟಬೇಕೆಂದು ಹೇಳಿ ಸುಮಾರು 15 ಕೋಟಿ ರೂಪಾಯಿಗಳ ಎಸ್ಟಿಮೇಟ್‌ನಲ್ಲಿ ಅಂದಾಜು ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆಕಳುಹಿಸಿ ಕೊಟ್ಟಿದ್ದೇವೆ. ಕೇಂದ್ರ ಸರ್ಕಾರದಿಂದ 45 ಲಕ್ಷ ರೂಪಾಯಿಗಳನ್ನು ಪಡೆದು ಈಗಾಗಲೇ ರಿಪೇರಿ ಕೆಲಸ ಕೂಡ ಮಾಡಿಸಿದ್ದೇವೆ. ಅಲ್ಲಿ ಈಗ ಲೆಟ್ ವೆಹಿಕಲ್ಸ್ ಪಾಸಾಗುತ್ತಿವೆ. ಅಲ್ಲೀಗ ಒಂದು ಬಾರ್ಜ್ ಇದೆ. ಅಲ್ಲಿ ಈಗ ಲೈಟ್ ವೆಹಿಕಲ್ಸ್ ಹೋಗಬಹುದು. ಮತ್ತು ಲೋ ಕಾಸ್ಟ್ ಟ್ರಾನ್ಸ್‌ಪೋರ್ಟ್ ವೆಹಿಕಲ್ ಬಂದಿದೆ. ಪ್ರತಿ ತಿಂಗಳಿಗೆ 2 ವಾಹನಗಳಂತೆ ನಾಲ್ಕು ವಾಹನಗಳನ್ನು 20 ಲಕ್ಷ ರೂಪಾಯಿಗಳಲ್ಲಿ ಸರ್ಕಾರ ಖರೀದಿ ಮಾಡುವುದಕ್ಕೆ ಕೇಂದ್ರ ಸರ್ಕಾರ ಅನುಮತಿ ಕೊಟ್ಟಿದೆ ನಾವು ಎಲ್ಲಾ ಪ್ರಯತ್ನ ಮಾಡುತ್ತಿದ್ದೇವೆ ಮತ್ತು ಇದಾದ ನಂತರ ಹಳೆಯ ಬ್ರಿಡ್ಜ್ ಏನಿದೆ ಅದನ್ನು ಬಲಪಡಿಸುವುದಕ್ಕೆ 1.6 ಕೋಟಿ ರೂಪಾಯಿಗಳನ್ನು ಖರ್ಚುಮಾಡಲು ಕೇಂದ್ರ ಸರ್ಕಾರ ಒಪ್ಪಿಗೆ ಕೊಟ್ಟಿದೆ. ಈ ಕೆಲಸವನ್ನು ಸಹ ಮಾಡುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ : ಇದರಿಂದ ಇದೇ ಜಿಲ್ಲೆ ಅದರಲ್ಲೂ ಕರಾವಳಿ ಪ್ರದೇಶದ ಒಂದು ಎಕಾನಮಿ ಮೇಲೆ ಅಫೆಕ್ಟ್ ಆಗುತ್ತಿದೆ. ಮತ್ತು ಅದರಲ್ಲೂ ನಮ್ಮ ಜಿಲ್ಲೆಯಿಂದ ದೊಡ್ಡ ಪ್ರಮಾಣದಲ್ಲಿ ಜಪಾನ್‌ಗೆ ಮತ್ತು ಬೇರೆ ಬೇರೆ ಪ್ರದೇಶಗಳಿಗೆ ಮೀನು ಎಕ್ಸ್ ಪೋರ್ಟ್ ಆಗುತ್ತದೆ. ಆದರೆ ಇವತ್ತು ಈ ಬ್ರಿಡ್ಜ್‌ನಿಂದ ದೊಡ್ಡ ಸಮಸ್ಯೆಯಾಗಿದೆ. ಇವತ್ತು ಸಾಧಾರಣವಾಗಿ 70-80 ಕಿಲೋಮೀಟರ್ ದೂರದಿಂದ ಟ್ರಾನ್ಸ್‌ಪೋರ್ಟ್ ಆಗಬೇಕು. ಹಾಗಾಗಿ ಸಾಕಷ್ಟು ಪರಿಣಾಮ ಈ ಒಂದು ಉದ್ಯೋಗದ ಮೇಲೆ ಆಗುತ್ತಿದೆ. ಅಷ್ಟೇ ಅಲ್ಲ ಟೈಲ್ ಇಂಡಸ್ಟ್ರೀ ಮೇಲೆ ಎಫೆಕ್ಟ್ ಆಗಿದೆ. ತಾವು ಈಗ ಹೇಳಿದಿರಿ 1 ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದಿಂದ ಬಂದಿದೆ ಎಂದು. ಕೊಟ್ಟಿದ್ದರೆ ಆ

ಹಣವನ್ನು ತಾವು ತಕ್ಷಣ ಕೊಟ್ಟು ಕೆಲಸ ಶುರು ಮಾಡಿಸ ಬೇಕು. ಒಂದು ಕೋಟಿ ರೂಪಾಯಿ ಸಣ್ಣ ಮೊತ್ತವೇನೂ ಅಲ್ಲ. ಈಗ 45 ಲಕ್ಷ ಖರ್ಚು ಮಾಡಿದ್ದೇವೆಂದು ತಾವು ಹೇಳಿದಿರಿ; ಆದರೆ 45 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದಂತೆ ಕಾಣಲಿಲ್ಲ. ಅಲ್ಲಿ ಎರಡು ಕಡೆ ಸ್ಪ್ಯಾನ್ ಒಂದು ಸ್ಪ್ಯಾನ್ ಎರಡು ಡ್ಯಾಮೇಜ್ ಏನಾಗಿದೆ ಅಲ್ಲಿ ಸ್ವಲ್ಪ ಪಿಚ್ಚಿಂಗ್ ಮಾಡಿಕೊಂಡಿದ್ದಾರೆ. ಅದಕ್ಕೆ 45 ಲಕ್ಷ ಏತಕ್ಕೆ ಖರ್ಚು ಮಾಡಿದ್ದಾರೋ ಗೊತ್ತಿಲ್ಲ. ತಾವು ಸ್ವಲ್ಪ ಇದನ್ನು ಪರಿಶೀಲನೆ ಮಾಡಬೇಕು. ಅಷ್ಟೇ ಅಲ್ಲ ನಾನು ತಮ್ಮನ್ನು ಖಾಸಗಿ ಆಗಿ ಭೇಟಿ ಮಾಡಿ ಕೆಲವು ಸಲಹೆಗಳನ್ನು ಕೊಟ್ಟಿದ್ದೆ. ಇವತ್ತು ಅಲ್ಲಿಗೆ ಇನ್ನೊಂದು ಬಾರ್ಜ್ ಹಾಕಬೇಕು. ಈಗಿರುವುದು ಕೆಲಸ ಮಾಡುತ್ತಿಲ್ಲ. ಆ ಬ್ರಿಡ್ಜ್ ಕೆಲಸ ತಾವು ಎಷ್ಟು ಹೇಳಿದರೂ ಇನ್ನೂ ಒಂದೂವರೆ ವರ್ಷಕ್ಕಿಂತ ಬೇಗ ಆಗಲು ಸಾಧ್ಯವಿಲ್ಲ. ಅದಕ್ಕೆ ನಾನು ಒಂದೆರಡು ಸಲಹೆಗಳನ್ನು ಕೊಡುತ್ತೇನೆ. ತಕ್ಷಣ ನಾವು ನಾಲ್ಕು ಬಾರ್ಜ್‌ಗಳನ್ನು ಹಾಕಬೇಕು. ಈ ಕೆಲಸವನ್ನು ವಾರ್ ಫುಟ್ಟಿಂಗ್‌ನಲ್ಲಿ ಪ್ರೈಯಾರಿಟಿ ಬೇಸಿಸ್‌ನಲ್ಲಿ ಮಾಡಬೇಕು. ಎರಡನೆಯದು, ಭಟ್ಕಳ ವೈಯಾ ಒಂದು ರೋಡ್ ಇದ್ದು ಅದು ಬಹಳ ನ್ಯಾರೋ ರೋಡ್ ಇದ್ದು ಅದನ್ನು ಅಭಿವೃದ್ಧಿ ಮಾಡಲಿಕ್ಕೆ ನಾನು ಸಲಹೆ ಮಾಡಿದ್ದೆ. ಅದಕ್ಕೆ ಸ್ವಲ್ಪ ರಿಪೇರ್ಸ್ ಆಗಬೇಕು, ಅದಕ್ಕೆ ಹಣ ರಿಲೀಜ್ ಮಾಡಿ ಅಂತ ಹೇಳಿದ್ದೆ. ಅದಕ್ಕೆ ಹಣ ಇದುವರೆಗೂ ಅಲ್ಲಿ ಹೋಗಿ ಮುಟ್ಟಿಲ್ಲ. ಈಗ ಮುಟ್ಟಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಮೊನ್ನೆ 15-20 ದಿವಸಗಳ ಕೆಳಗೆ ಅಲ್ಲಿ ಕೇಳಿದೆ, ನಮಗೆ ಹಣ ಇನ್ನೂ ಬಂದು ಮುಟ್ಟಿಲ್ಲ ಅಂತ ಅಲ್ಲಿನ ಅಧಿಕಾರಿಗಳು ಹೇಳಿದರು. ತಕ್ಷಣ ಹಣ ರಿಲೀಜ್ ಮಾಡಿ ಆ ರಸ್ತೆ ರಿಪೇರಿ ಮಾಡಬೇಕು ಮತ್ತು ಆ ರಸ್ತೆ ಮೇಲೆ ಒಂದು ಕ್ರೇನ್ ಇಡಬೇಕಾಗುತ್ತದೆ. ಯಾವ ಪ್ರಕಾರ ಬಾಂಬೆ ಪೂನಾ ರಸ್ತೆಯಲ್ಲಿಟ್ಟಿದ್ದಾರೆ ಹಾಗೆ ಇಡಬೇಕು. ಏನೆಂದರೆ ಅದು ಒಂದು ಸಣ್ಣರೋಡು. ,ಅಲ್ಲಿ ಏನಾದರೂ ಒಂದು ವಾಹನ ಕೆಟ್ಟರೆ ಇಡೀ ವಾಹನ ಸಂಚಾರಕ್ಕೆ ತೊಂದರೆಯಾಗುತ್ತದೆ. ಮತ್ತೊಂದು ಸಲಹೆ ಏಕೆಂದರೆ ಹೊನ್ನಾವರದಿಂದ ಮತ್ತೊಂದು ರೋಡು ಇದೆ, ನಾವಿದ್ದಾಗ ಜಿಲ್ಲಾಪರಿಷತ್ತು ವತಿಯಿಂದ 7 ಬ್ರಿಡ್ಜ್‌ಗಳಿಗೆ ಹಣ ಮಂಜೂರು ಮಾಡಿದ್ದೆವು. 1 ಕೋಟಿ 30 ಲಕ್ಷ ರೂಪಾಯಿಗಳಲ್ಲಿ 5 ಬ್ರಿಡ್ಜ್‌ಗಳು ಪೂರ್ಣವಾಗಿದೆ. ಒಂದು ಬ್ರಿಡ್ಜ್ ಕಂಪ್ಲೀಟ್ ಆಗಬೇಕಾಗಿದೆ. ಅದಕ್ಕೆ ಸ್ವಲ್ಪ ಹಣ ತಮ್ಮ ಡಿಪಾರ್ಟ್‌ಮೆಂಟ್‌ನಿಂದ ಜಿಲ್ಲಾಪರಿಷತ್ತಿಗೆ ಸ್ಪೆಷಲ್ ಆಗಿ ಕೊಟ್ಟರೆ ಆ ಬ್ರಿಡ್ಜ್ ಕೆಲಸ ಬೇಗ ಆಗುತ್ತದೆ. ತಾವು ಜಾಗ್ರತೆ ತೀರ್ಮಾನ ತೆಗೆದುಕೊಳ್ಳಬೇಕು. ಮತ್ತೆ ತಾವು ಸಾರಿಗೆ ಇಲಾಖೆ ಸಚಿವರ ಜೊತೆ ಮಾತನಾಡಬೇಕು ಏಕೆಂದರೆ, ಇವತ್ತು ಮಂಗಳೂರಿನಿಂದ ಜನ ಏನು ಬರುತ್ತಾರೆ ಅವರು ಬ್ರಿಡ್ಜ್ ಹತ್ತಿರ ಇಳಿದು ಬ್ರಿಡ್ಜ್ ಕ್ರಾಸ್ ಮಾಡಿ ಮತ್ತೊಂದು ಬಸ್ಸು ಹತ್ತಬೇಕು. ಇದರಿಂದ ಹೆಣ್ಣು ಮಕ್ಕಳಿಗೆ ಹುಡುಗರಿಗೆ ಸಾಕಷ್ಟು ತೊಂದರೆಯಾಗುತ್ತದೆ. ಮಳೆಗಾಲದಲ್ಲಿ ಸಾಕಷ್ಟು ತೊಂದರೆಯಾಗುತ್ತದೆ. ಅದಕ್ಕೆ ನಾನೊಂದು ಸಲಹೆ ಮಾಡುವುದೇನೆಂದರೆ ಅಲ್ಲಿ ಮಿನಿ ಬಸ್ಸು ಓಡಿಸಲು ವ್ಯವಸ್ಥೆ ಮಾಡಿ. ಈಗ ಲೈಟ್ ವೆಹಿಕಲ್ಸ್ ಹೋಗುತ್ತಿರುವುದರಿಂದ ಮಿನಿ ಬಸ್ಸುಗಳನ್ನು ಓಡಿಸಿದರೆ ಪ್ರಯಾಣಿಕರಿಗೆ ಆಗುತ್ತಿರುವ ಅನಾನುಕೂಲ ಕಡಿಮೆಯಾಗುತ್ತದೆ. ಆದ್ದರಿಂದ ಈ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಮಾನ್ಯ ಸಭಾಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದಂತೆ ಅಲ್ಲಿ ತೊಂದರೆ ಇದೆ. ತೊಂದರೆ ಇಲ ಎಂದು ನಾನು ಹೇಳುತಿಲ

ಅಲ್ಲಿ ವ್ಯವಸ್ಥೆ ಕೂಡ ಮಾಡಿದ್ದೇವೆ. ಅಲ್ಲಿ ಮಿನಿ ಟ್ರಾನ್ಸ್‌ಪೋರ್ಟ್ ಅಂತ ಎರಡುಮೂರು ಬಸ್ಸು ಇಟ್ಟಿದ್ದೇವೆ. ಅಲ್ಲಿ ಟೆಂಪರರಿ ಆಗಿ ಕೆ.ಎಸ್.ಆರ್.ಟಿ.ಸಿ. ಯವರು ಡಿಪೋ ಸಹ ಓಪನ್ ಮಾಡಿದ್ದಾರೆ. ಈಗ ಅಲ್ಲಿಗೆ ಒಂದು ಬಾರ್ಜ್ ಬಂದಿದೆ. ಈ ತಿಂಗಳ ಕೊನೆಗೆ ಇನ್ನೊಂದು ವೆಹಿಕಲ್ ಬರುತ್ತದೆ. ಮುಂದಿನ ತಿಂಗಳು 2 ಬರುತ್ತವೆ. ಇದರಿಂದ ಸುಮಾರಾಗಿ 150 ಲಾರಿಗಳಷ್ಟು ಒಂದು ದಿವಸಕ್ಕೆ ಟ್ರಾನ್ಸ್‌ಪೋರ್ಟ್ ಮಾಡಬಹುದು. ಮತ್ತು ಭಟ್ಕಳ ಮತ್ತು ಜೋಗ್ ರಸ್ತೆಗೂ ಮತ್ತು ಸಾಗರ ರೋಡಿಗೂ ನಾವು 75 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ. ನಾನು ಖುದ್ದಾಗಿ ಪರಿಶೀಲನೆ ಮಾಡಿದ್ದೇನೆ. ಅಲ್ಲಿ ಕೆಲಸ ನಡೆಯುತ್ತಿದೆ. ಮತ್ತು ನ್ಯಾರೋ ರೋಡು ಬ್ರಿಡ್ಜ್ ಬಗ್ಗೆ ತಾವು ಏನು ಕೇಳಿದಿರಿ ಅದಕ್ಕೂ ಮೊನ್ನೆ ಮುಖ್ಯಮಂತ್ರಿಗಳು ಅಪ್ರೂವಲ್ ಕೊಟ್ಟಿದ್ದಾರೆ. ಒಂದು ಕೋಟಿ ಚಿಲ್ಲರೆ ಎಕ್ಸ್‌ಟ್ರಾ ಗ್ರ್ಯಾಂಟ್ ಕೊಟ್ಟು ಆ ರಸ್ತೆ ರಿಪೇರಿ ಮಾಡಿಸಬೇಕೆಂದು ಸರ್ಕಾರ ಆದೇಶ ನೀಡಿದೆ.

ಶ್ರೀ ಎಸ್. ಎಂ. ಯಾಹ್ಯಾ : ಶರಾವತಿ ಸೇತುವೆಯು ಹೆದ್ದಾರಿ ಹೈವೆ 47 ರ ಮೇಲೆ ಇರುವಂಥಾ ದೊಡ್ಡ ಸೇತುವೆ. ಇದು ಸಮುದ್ರದ ತೀರದಲ್ಲಿದೆ. ಈ ಸೇತುವೆ ಮಹಾರಾಷ್ಟ್ರಕ್ಕೂ ಲಿಂಕ್ ಆಗುವಂಥಾದ್ದು. ಇದರಿಂದ ಮೊದಲನೆಯದಾಗಿ ಬಹಳ ಜನರಿಗೆ ತೊಂದರೆಯಾಗುತ್ತಿದೆ. ಯಾವ ಕೆಲಸ ಆಗಬೇಕಾಗಿತ್ತೋ ಆ ಕೆಲಸ ಆಗುತ್ತಿಲ್ಲ. ಆಮೇಲೆ, ನೀವು ಹೆವಿ ವೆಹಿಕಲ್ಸ್‌ನ್ನು ನಿಲ್ಲಿಸಿದ್ದೇವೆಂದು ಹೇಳಿದಿರಿ. ಅಲ್ಲಿರುವ ಕರಪ್ಷನ್ ನೋಡಬೇಕೆಂದರೆ ಸಾಯಾಂಕಾಲ 6-7 ಘಂಟೆಗೆ ಎಲ್ಲಾ ಲಾರಿಗಳನ್ನು ಎರಡೂ ಕಡೆಯಲ್ಲಿ ನಿಲ್ಲಿಸಿರುತ್ತಾರೆ, ಅವರು ದೂರ ಬಳಸಿಕೊಂಡು ಹೋಗುವುದಕ್ಕೆ ಬಯಸುವುದಿಲ್ಲ. ದುಡ್ಡು ಕೊಡುತ್ತಾರೆ—ರಾತ್ರಿ ಎಲ್ಲಾ ವೆಹಿಕಲ್ಸ್‌ನ್ನು ಪಾಸ್ ಮಾಡುತ್ತಾರೆ. ಅದು ಆಗುತ್ತಿದೆ. ಇದರಿಂದ ಬಿರುಕುಬಿಟ್ಟಿರುವ ಸೇತುವೆ ಯಾವಾಗ ಮುರಿಯುತ್ತದೋ ಅನ್ನತಕ್ಕಂಥ ಸ್ಥಿತಿಯಲ್ಲಿದೆ. ಈ ಬ್ರಿಡ್ಜ್‌ನ್ನು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ 25 ವರ್ಷಗಳ ಹಿಂದೆ ಕಟ್ಟಲಾಗಿತ್ತು. ಇದು ನೂರಾರು ವರ್ಷಗಳ ಕಾಲ ಇರಬೇಕಾಗಿತ್ತು.

ಗೋವಾದಲ್ಲಿ ಮಾಂಡವಿನಲ್ಲಿ ಯಾವ ಕಂಪನಿಯವರು ಸೇತುವೆ ಕಟ್ಟಿದ್ದರೋ ಅದೇ ಕಂಪನಿಯವರು ಇದನ್ನೂ ಮಾಡಿದ್ದಾರೆ. ಗೋವಾದಲ್ಲಿ ಕಟ್ಟಿದ್ದು ಬಿದ್ದುಹೋಗಿ ಜನ ಸತ್ತುಹೋದರು. ಆ ಕಂಪನ್ನಿ ಮಾಡಿರುವ ಕೆಲಸದ ಬಗ್ಗೆ ಏನಾದರೂ ತನಿಖೆ ಮಾಡಿದ್ದೀರೋ ಅಥವಾ ಏನಾದರೂ ಕ್ರಮ ತೆಗೆದುಕೊಂಡಿದ್ದಿರೋ? ಪುನಃ ಹೊಸ ಬ್ರಿಡ್ಜ್ ಮಾಡುವಾಗ ಈ ರೀತಿ ಸಬ್ ಸ್ಟ್ಯಾಂಡರ್ಡ್ ವರ್ಕ್ ಆಗಿ ಪುನಃ ಬ್ರಿಡ್ಜ್ ಬೀಳುವಂಥ ಪರಿಸ್ಥಿತಿ ಆಗುಬಹುದು. ಅದಕ್ಕೆ ಏನಾದರೂ ಕ್ರಮಗಳನ್ನು ತೆಗೆದುಕೊಂಡಿದ್ದೀರೋ ಎಂದು ತಿಳಿಸಬೇಕು.

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಮಾಂಡವಿ ಬ್ರಿಡ್ಜ್ ಮತ್ತು ಶರಾವತಿ ಬ್ರಿಡ್ಜ್ ಕಟ್ಟಿದಂಥ ಕಂಟ್ರಾಕ್ಟರ್‌ಗಳ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದೆ. ಕೋರ್ಟ್‌ಗೂ ಕೂಡಾ ಹೋಗಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ಮಾಂಡವಿ ಸೇತುವೆ ಗೋವಾ ಸರ್ಕಾರಕ್ಕೆ ಸೇರಿದ್ದುದು.

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಗೋವಾ ಸರ್ಕಾರವೂ ಕೂಡ ಕ್ರಮ ತೆಗೆದುಕೊಂಡಿದೆ ಅದೇ ರೀತಿ ಕರ್ನಾಟಕ ಸರ್ಕಾರದವರೂ ಈ ಸೇತುವೆ ವಿಷಯದಲ್ಲಿ ಆ ಕಂಟ್ರಾಕ್ಟದಾರರ ಮೇಲೆ ಮೊಕದ್ದಮೆ ಹಾಕಲಾಗಿದೆ. ಮತ್ತು

ತಾವು ಹೇಳಿದ ಹಾಗೆ ಮತ್ತೆ ಅದೇ ರೀತಿ ಆಗದ ಹಾಗೆ ಆಸಕ್ತಿ ವಹಿಸಿ ಪರಿಣಿತರಾಗಿರತಕ್ಕಂಥ ಕಂಪನಿಗಳಿಗೆ ಕೆಲಸ ಕೊಡಬೇಕೆಂದು ಕೇಂದ್ರ ಸರ್ಕಾರ ಪ್ರಯತ್ನ ಮಾಡಿದೆ. ಅದಕ್ಕಾಗಿ ಸುಮಾರು 20 ಕೋಟಿ ರೂಪಾಯಿಗಳ ಅಂದಾಜು ವೆಚ್ಚ ಮಾಡಿದ್ದಾರೆ. ಈ ತರಹ ಇನ್ನು ಮುಂದೆ ಆಗುವುದಿಲ್ಲವೆಂದು ನನ್ನ ಭಾವನೆ. ಇದು ಬಹಳ ಪ್ರಾಮುಖ್ಯವಾದಂಥ ಬ್ರಿಡ್ಜ್ ಇದು ಎಲ್ಲರಿಗೂ ಗೊತ್ತಿರುವ ವಿಷಯ. ಈಗ ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಮಹಾರಾಷ್ಟ್ರಕ್ಕೂ, ಎಲ್ಲಾ ಕಡೆಗೂ ಹೋಗುವುದಕ್ಕೆ ಬಹಳ ತೊಂದರೆಯಾಗುತ್ತಿದೆ. ಅದಕ್ಕೆ ಹೆಚ್ಚಿನ ಆದ್ಯತೆಯನ್ನು ಸರ್ಕಾರದವತಿಯಿಂದ ಕೊಡುತ್ತಿದ್ದೇವೆ ಮತ್ತು ಲೈಟ್ ಟ್ರಾನ್ಸ್‌ಪೋರ್ಟ್ ವೆಹಿಕಲ್ ಸುಮಾರು 80 ಲಕ್ಷ ರೂಪಾಯಿ ವೆಚ್ಚದಲ್ಲಿ ಬರುತ್ತಿದೆ. ಅಕ್ಕಪಕ್ಕದಲ್ಲಿರುವ ಎಲ್ಲಾ ರಸ್ತೆಗಳನ್ನು ರಿಪೇರಿ ಮಾಡಿಸುತ್ತಿದ್ದೇವೆ. ಇನ್ನು ಒಂದು ವರ್ಷದಲ್ಲಿ ಅಥವಾ ಒಂದೂವರೆ ವರ್ಷದಲ್ಲಿ ಹೊಸ ಬ್ರಿಡ್ಜ್ ಆಗುವುದಕ್ಕೆ ಬಹಳ ಪ್ರಾಮುಖ್ಯತೆ ಕೊಟ್ಟಿದ್ದೇವೆ. ಕೇಂದ್ರ ಸರ್ಕಾರದ 1991-92ನೇ ಸಾಲಿನಲ್ಲಿ ಬಜೆಟ್‌ನಲ್ಲೂ ಕೂಡಾ ಸೇರಿಸಿದ್ದಾರೆ. ಎಲ್ಲಾ ರೀತಿಯಿಂದಲೂ ಪ್ರಯತ್ನ ಮಾಡುತ್ತಿದ್ದೇವೆ. ಇದು ನ್ಯಾಚುರಲ್ ಕೆಲಾಮಿಟಿ. ಇದನ್ನು ನಾವೂ ನೀವು ಮಾಡಿದ್ದಲ್ಲ. ಬ್ರಿಡ್ಜ್ ಕಟ್ಟಿದಂಥ ಪುಣ್ಯಾತ್ಮರು ಈ ತರಹ ಮಾಡಿದ್ದಾರೆ. ಸರ್ಕಾರ ಅವರ ಮೇಲೆ ತೀವ್ರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಎಸ್.ಎಂ. ಯಾಹ್ಯಾ : ಈಗ ರಾತ್ರಿ ಎಲ್ಲಾ ಹೆವಿ ವೆಹಿಕಲ್ಸ್ ಹೋಗುತ್ತಿವೆ.

ಶ್ರೀ ಜಿ.ಹೆಚ್. ಅಶ್ವತರೆಡ್ಡಿ : ಮಾನ್ಯ ಅಧ್ಯಕ್ಷರೆ, ಅದರ ಮೇಲೆ ಹೆವಿ ವೆಹಿಕಲ್ಸ್, ಮತ್ತಿತರೇ ವೆಹಿಕಲ್ಸ್ ಹೋಗುವುದಕ್ಕೆ ಆಗುವುದೇ ಇಲ್ಲ, ಎತ್ತರವನ್ನು ಕಡಿಮೆ ಮಾಡಿದ್ದೇವೆ ಮತ್ತು...

ಶ್ರೀ ಎಸ್.ಎಂ. ಯಾಹ್ಯಾ : ನೀವು ಒಂದು ಸಾರಿ ಅಲ್ಲಿಗೆ ಹೋಗಿ ನೋಡಿ.

ಶ್ರೀ ಜಿ.ಹೆಚ್. ಅಶ್ವತರೆಡ್ಡಿ : ನಾನು ಭಟ್ಕಳಕ್ಕೆ ಹೋಗಿ ಬಂದಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಯಾಹ್ಯಾ ಸಾಹೇಬರು ಏನು ಮಾತನ್ನು ಹೇಳಿದರೋ ಅದು ನಿಜ. 2 ತಿಂಗಳ ಹಿಂದೆ ಸಂಜೆ 6-7 ಗಂಟೆವರೆಗೆ ಬ್ರಿಡ್ಜ್ ಪಕ್ಕದಲ್ಲಿ ವೆಹಿಕಲ್‌ಗಳನ್ನು ನಿಲ್ಲಿಸಿ ಅನಂತರ ರಾತ್ರಿ ಎಲ್ಲಾ ನೂರಾರು ವೆಹಿಕಲ್ಸ್‌ಗಳನ್ನು ಪಾಸ್ ಮಾಡುತ್ತಾರೆ. 50-100ರೂಪಾಯಿ ಕೊಟ್ಟು ಹೋಗುತ್ತಿದ್ದರು. ಬಳಸಿಕೊಂಡು ಹೋದರೆ ಡೀಸೆಲ್, ಪೆಟ್ರೋಲ್ ಕಾಸ್ಟ್ ಎಷ್ಟು ಸೇವೆ ಆಗುತ್ತದೆ? ಬಳಸಿಕೊಂಡು ಹೋದರೆ 80 ಕಿಲೋ ಮೀಟರ್ ಜಾಸ್ತಿಯಾಗುತ್ತದೆ. ನ್ಯಾಷನಲ್ ಇಂಟರೆಸ್ಟ್‌ನಲ್ಲೂ ಇದಕ್ಕೆ ಇಂಪಾರ್ಟೆನ್ಸ್ ಕೊಟ್ಟು ಈ ಬ್ರಿಡ್ಜ್ ಕೆಲಸ ಜಾಗ್ರತೆ ಮುಗಿಸಬೇಕು. ಮಾನ್ಯ ಸಚಿವರು ಮತ್ತೊಂದು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕಳೆದ 20-25 ದಿವಸಗಳಿಂದ ವೆಹಿಕಲ್ಸ್ ಹೋಗುವುದನ್ನು ಬಂದ್ ಮಾಡಿದ್ದಾರೆ. ಬ್ರಿಡ್ಜ್ ಮೇಲೆ ಐರನ್ ರಾಡ್ಸ್ ಎರಡೂ ಕಡೆ ಹಾಕಿ ಎತ್ತರ ಕಡಿಮೆ ಮಾಡಿ ಹೆವಿ ವೆಹಿಕಲ್ಸ್ ಹೋಗದ ಹಾಗೆ ಮಾಡಿದ್ದೀರಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು : ಶ್ರೀ ಎಂ.ಡಿ. ನಂಜುಂಡಸ್ವಾಮಿಯವರೇ, ನಿಮ್ಮ ಪ್ರಶ್ನೆಯನ್ನು 27 ನೇ ತಾರೀಖು ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್‌ರವರು 1901ನೇ ಪ್ರಶ್ನೆಯನ್ನು 27ನೇ ತಾರೀಖು ತೆಗೆದುಕೊಳ್ಳುತ್ತೇನೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ದಶಲಕ್ಷ ಬಾವಿ ಯೋಜನೆ.

1906-ಶ್ರೀ ಅಂಜನ ಮೂರ್ತಿ (ನೆಲಮಂಗಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 1990-91ನೇ ಸಾಲಿನಲ್ಲಿ ದಶಲಕ್ಷ ಮತ್ತು ನೂರು ಬಾವಿ ಯೋಜನೆಯಡಿಯಲ್ಲಿ ಸರಕಾರ ನಿಗಧಿಪಡಿಸಿದ ಗುರಿ ಎಷ್ಟು ?

ಆ) ಅದರಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ಬಾವಿಗಳನ್ನು ತೋಡಲಾಗಿದೆ ಹಾಗೂ ಅದಕ್ಕಾಗಿ ಎಷ್ಟು ಹಣ ಖರ್ಚಾಗಿದೆ (ಹೋಬಳಿವಾರು, ಗ್ರಾಮ ವಾರು ಮಾಹಿತಿ ನೀಡುವುದು).

ಇ) ಮೇಲ್ಕಂಡ ಕೆಲಸ ಮುಗಿಸಿರುವ ಎಷ್ಟು ಬಾವಿಗಳಿಗೆ ವಿದ್ಯುತ್ ಸರಬರಾಜು ನೀಡಲಾಗಿದೆ.

ಈ) ಉಳಿದವುಗಳಿಗೆ ಏನು ಕ್ರಮ ಕೈಗೊಂಡಿದೆ ?

ಶ್ರೀ ಕೆ.ಹೆಚ್. ಪಾಟೀಲ್, (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) *ದಶಲಕ್ಷ ಬಾವಿ ಯೋಜನೆ : 1990-91*

ಭೌತಿಕ ಗುರಿ : ಇಲ್ಲ

ಆರ್ಥಿಕ ಗುರಿ ರೂ. 115.04 ಲಕ್ಷಗಳು.

ನೂರು ಬಾವಿ ಯೋಜನೆ 1990-91

ಭೌತಿಕ ಗುರಿ : 293

ಆರ್ಥಿಕ ಗುರಿ ರೂ. 22 ಲಕ್ಷಗಳು.

ಆ) ನೂರು ಬಾವಿ ಯೋಜನೆಯಡಿಯಲ್ಲಿ 1990-91ನೇ ಸಾಲಿನಲ್ಲಿ, 579 ಬಾವಿಗಳನ್ನು ತೋಡಲಾಗಿದೆ. ಅದಕ್ಕಾಗಿ ರೂ. 34,12,900ಖರ್ಚಾಗಿದೆ. (ತೋಡಲಾದ ಬಾವಿಗಳ ಹೋಬಳಿವಾರು ಮತ್ತು ತಾಲ್ಲೂಕುವಾರು ಮಾಹಿತಿಯನ್ನು ಲಗತ್ತಿಸಿರುವ ತಃಖ್ತೆಯಲ್ಲಿ ನೀಡಲಾಗಿದೆ)

ದಶಲಕ್ಷ ಬಾವಿ ಯೋಜನೆಯಡಿಯಲ್ಲಿ ತೆರೆದ ಬಾವಿಗಳು ಫಲಪ್ರದವಾಗಿರುವುದಿಲ್ಲವಾದ್ದರಿಂದ ಯಾವುದೇ ಬಾವಿಗಳನ್ನು ತೋಡಿರುವುದಿಲ್ಲ. ಆದ್ದರಿಂದ ಹಣ ಖರ್ಚಾಗಿರುವುದಿಲ್ಲ. ಆ ಯೋಜನೆಯಂತೆ ಭೂ ಸಾರ ಸಂರಕ್ಷಣೆ ಕಾರ್ಯಕ್ರಮಕ್ಕಾಗಿ ಒಟ್ಟು ರೂ. 58.716 ಲಕ್ಷ ಖರ್ಚಾಗಿರುತ್ತದೆ.

ಇ) 1990-91ನೇ ಸಾಲಿನಲ್ಲಿ ತೋಡಿರುವ ಎಲ್ಲಾ ಕೊಳವೆ ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡಲಾಗಿದೆ.

ಈ) ಉದ್ಭವಿಸುವುದಿಲ್ಲ.

1990-91ನೇ ಸಾಲಿನಲ್ಲಿ 100 ಬಾವಿ ತಂಖ್ತೆ ಯೋಜನೆಯಲ್ಲಿ 579 ಬಾವಿಗಳನ್ನು ತೋಡಿರುವ ಮತ್ತು ಆದಕ್ಕೆ ಖರ್ಚಾದ ಹಣದ ವಿವರ

ಕ್ರ. ಸಂ.	ತಾಲ್ಲೂಕು	ಹೋಬಳಿ	100 ಬಾವಿ ಯೋಜನೆಯಲ್ಲಿ ತೋಡಿರುವ ಬಾವಿಗಳು
1.	ಚನ್ನಪಟ್ಟಣ	ಕಸಬಾ ಮಳೂರು ವಿರೂಪಾಕ್ಷಿಪುರ	32 42 32 **106**
2.	ರಾಮನಗರ	ಬಿಡದಿ ಕಸಬ ಕೈಲಂಚ ಕೂಟಗಲ್ಲು	24 12 13 16 **65**
3.	ನೆಲಮಂಗಲ	ಕಸಬ ತ್ಯಾಮಗೊಂಡ್ಲು ಸೋಂಪುರ	34 37 24 **95**
4.	ಮಾಗಡಿ	ಕುದೂರು ಸೋಲೂರು ಕಸಬ ಮಾಡಬಾಳ್	24 12 39 26 **101**
5.	ಕನಕಪುರ	ಕಸಬ ಮರಳವಾಡಿ ಉಯ್ಯಂಬಳ್ಳಿ ಕೋಡಿಹಳ್ಳಿ	110
6.	ದೊಡ್ಡಬಳ್ಳಾಪುರ	ಕಸಬ, ಹಾರೋಹಳ್ಳಿ ತೂಬಗೆರೆ ದೊಡ್ಡಬೆಳವಂಗಲ ಮಧುರೆ, ಸಾಸಲು	102
			579

ಶ್ರೀ ಅಂಜನ ಮೂರ್ತಿ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಇದ್ದುದು ದಶಲಕ್ಷ ಬಾವಿ ಯೋಜನೆ ಬಗ್ಗೆ ಮತ್ತು ನೂರು ಬಾವಿ ಯೋಜನೆಗಳ ಬಗ್ಗೆ. ದಶಲಕ್ಷ ಬಾವಿ ಯೋಜನೆ ಬಗ್ಗೆ ಉತ್ತರದಲ್ಲಿ ಭೌತಿಕ ಗುರಿ ಏನೂ ಇಲ್ಲ ಎಂದು ಮತ್ತು ಆರ್ಥಿಕ ಗುರಿ 115.04 ಲಕ್ಷ ರೂಪಾಯಿಗಳನ್ನು ಎಂದು ಹೇಳಿದ್ದಾರೆ. ನನ್ನ ಎರಡನೇ ಪ್ರಶ್ನೆ 'ಆ' ದಲ್ಲಿ ಉತ್ತರ ಹೀಗೆ ಕೊಟ್ಟಿದ್ದಾರೆ. ದಶಲಕ್ಷ ಬಾವಿ ಯೋಜನೆಯಡಿಯಲ್ಲಿ ತೆರೆದ ಬಾವಿಗಳು ಫಲಪ್ರದವಾಗಿರುವುದಿಲ್ಲವಾದರಿಂದ

ಯಾವುದೇ ಬಾವಿಗಳನ್ನು ತೋಡಿರುವುದಿಲ್ಲ, ಆದ್ದರಿಂದ ಹಣ ಖರ್ಚಾಗಿರುವುದಿಲ್ಲ ಎಂದು ಹೇಳಿದ್ದಾರೆ. ನಾನು ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ. ಏನು ಈ ದಶಲಕ್ಷ ಬಾವಿ ಯೋಜನೆಯು ಸಣ್ಣ ರೈತರಿಗೆ, ಹರಿಜನ ಗಿರಿಜನರ ಬಗ್ಗೆ ಹಿಂದುಳಿದ ವರ್ಗದವರಿಗೆ, ಹಾಕಿಕೊಂಡಿರತಕ್ಕ ಒಂದು ಕಾರ್ಯಕ್ರಮ ಆಗಿದೆ. ಈಗ ಇಲ್ಲಿ ಹಣ ಖರ್ಚು ಮಾಡದೇ ಇದ್ದ ಮೇಲೆ ವಿಶೇಷ ಘಟಕ ಯೋಜನೆಯಲ್ಲಿ ಅಥವಾ 100 ಬಾವಿ ಯೋಜನೆಯಡಿಯಲ್ಲಿ ಆ ಹಣವನ್ನು ಬಡವರಿಗೋಸ್ಕರ, ಸಣ್ಣ ರೈತರಿಗೆ ಖರ್ಚು ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ ಎನ್ನುವುದು. ಇದು ಒಂದು, ಮತ್ತೆ ನನ್ನ ಎರಡನೆಯ ಪ್ರಶ್ನೆಗೆ ಉತ್ತರವಾಗಿ ಎರಡನೆಯ ಪ್ಯಾರಾದಲ್ಲಿ ಈ ಯೋಜನೆಯಂತೆ ಭೂ ಸಾರ ಸಂರಕ್ಷಣೆ ಕಾರ್ಯಕ್ರಮಕ್ಕಾಗಿ ಒಟ್ಟು ರೂ. 58.716 ಲಕ್ಷ ರೂಪಾಯಿಗಳು ಖರ್ಚಾಗಿರುತ್ತದೆ ಎಂದು ಹೇಳುತ್ತಾರೆ.

ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಭೂ ಸಾರ ಸಂರಕ್ಷಣೆಗೆ ಸರ್ಕಾರದ ಬೊಕ್ಕಸದಿಂದ ಸುಮಾರು ಕೋಟಿ ರೂಪಾಯಿಗಳು ಖರ್ಚಾಗುತ್ತಿದೆ. ಖಂಡಿತವಾಗಿ ಹೇಳುವುದಾದರೆ ಈ ಭೂಸಾರ ಸಂರಕ್ಷಣೆಯಿಂದ ಯಾವ ರೈತರಿಗೂ ಸಹಾಯ ಆಗುವುದಿಲ್ಲ. ಏನು ಭೂಸಾರ ಸಂರಕ್ಷಣೆ ಎಂದು ಹೇಳುತ್ತಾರೋ, ಅದರಿಂದ ಅಧಿಕಾರಿಗಳ ಸಂರಕ್ಷಣೆ ಆಗುತ್ತಿದೆ. ಈ ಹಣ ಪೋಲು ಆಗದಂತೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದೇ ? ಮೂರನೆಯದಾಗಿ 1990-91ನೇ ಸಾಲಿನಲ್ಲಿ ತೋಡಿರುವ ಎಲ್ಲಾ ಕೊಳವೆ ಬಾವಿಗಳಿಗೆ ವಿದ್ಯುತ್ತನ್ನು ಸರಬರಾಜು ಮಾಡಲಾಗಿದೆಯೇ ಎಂಬ ಪ್ರಶ್ನೆಗೆ, ಪೂರೈಕೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಇದು ಸತ್ಯಕ್ಕೆ ದೂರವಾದ ಮಾತು. ಒಂದೇ ಒಂದು ಉದಾಹರಣೆ ಕೊಡುತ್ತೇನೆ. ನನ್ನ ಕ್ಷೇತ್ರದಲ್ಲಿ ಸೋಲೂರು ಹೋಬಳಿ ಮೂನಗೂರು ಎಂಬ ಪ್ರದೇಶ ಇದೆ. ಸುಮಾರು ಒಂದು ಒಂದೂವರೆ ವರ್ಷದ ಹಿಂದೆ ನೂರು ಬಾವಿ ಯೋಜನೆ ಅಡಿಯಲ್ಲಿ ಬಾವಿಗಳನ್ನು ತೋಡಿದ್ದರೂ ಸಹ ವಿದ್ಯುತ್ ಒದಗಿಸುವುದಿಲ್ಲ.

ಅಧ್ಯಕ್ಷರು : ಪ್ರಶ್ನೆ ಕೇಳಿ.

ಶ್ರೀ ಅಂಜನಮೂರ್ತಿ : ಈ ರೀತಿ ಸುಳ್ಳು ಮಾಹಿತಿ ಕೊಡುವುದರಿಂದ ರೈತರಿಗೆ ಯಾವುದೇ ರೀತಿಯ ಸಹಾಯ ಆಗುವುದಿಲ್ಲ ಸುಳ್ಳು ಮಾಹಿತಿ ಕೊಡದಂತೆ ಅಧಿಕಾರಿಗಳಿಗೆ ಸರ್ಕಾರ ಕಟ್ಟು ನಿಟ್ಟಾದ ಒಂದು ಕ್ರಮವನ್ನು ಕೈಗೊಳ್ಳುತ್ತದೆಯೇ ಎಂದು ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಈ ಸ್ಕೀಮ್ ಸೆಂಟ್ರಲ್ ಗವರ್ನಮೆಂಟಿನಿಂದ ಮಂಜೂರು ಆಗಿರುವುದು ಷೆಡ್ಯೂಲ್ ಕಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ ಅವರುಗಳ ಸಲುವಾಗಿ. ಇದರೊಳಗೆ ಮಿಲಿಯನ್ ವೆಲ್ಸ್ ಸ್ಕೀಮ್ಸ್ ಪ್ರಕಾರ ಎಲ್ಲೆಲ್ಲಿ ಓಪನ್ ವೆಲ್ ತೆಗೆದುಕೊಳ್ಳುವುದಕ್ಕೆ ಸಾಧ್ಯ ಇದೆ ಅಲ್ಲಿ ತೆಗೆದುಕೊಳ್ಳಬೇಕು. ಎಲ್ಲಿ ಓಪನ್ ವೆಲ್ ತೆಗೆಯುವುದಕ್ಕೆ ಸಾಧ್ಯ ಇಲ್ಲವೋ ಅಲ್ಲಿ ಭೂ ಸಂರಕ್ಷಣೆ ಸಲುವಾಗಿ ಸಾಯಿಲ್ ಕನ್ಸರ್‌ವೇಷನ್ ಮಾಡಬೇಕೆಂಬ ಉದ್ದೇಶ ಇದೆ. ಇವುಗಳನ್ನು ಬಿಟ್ಟು ನಾವು ಬೇರೆ ಉದ್ದೇಶಗಳಿಗೆ ಹಣ ಖರ್ಚು ಮಾಡುವುದಕ್ಕೆ ಬರುವುದಿಲ್ಲ. ಅನೇಕ ಕಡೆಗಳಿಂದ ಸಹಿತ ಸಾಯಿಲ್ ಕನ್ಸರ್ವೇಷನ್ ಮಾಡಬೇಕು ಎನ್ನತಕ್ಕ ಬಗ್ಗೆ ಡಿಮಾಂಡ್ ಹೆಚ್ಚು ಆಗಿದೆ. ಆ ಡಿಮಾಂಡ್ ಹೆಚ್ಚು ಆಗಿದೆ ಎನ್ನುವ ಕಾರಣ ನಾವು ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ ಎಲ್ಲಾದರೂ ಅಧಿಕಾರಸ್ಥರು ದುಡ್ಡು ಹೊಡೆದಿದ್ದಾರೆ ಎಂದು ನನ್ನ ಗಮನಕ್ಕೆ ತಂದುಕೊಟ್ಟರೆ [illegible] ವಾಗಿ ನಾನು ಸೌಕರಿಯಿಂದ ತೆಗೆಯುತ್ತೇನೆಂದು

ಹೇಳುವುದಿಲ್ಲ ಆದರೆ ಉಗ್ರವಾದ ತನಿಖೆಯನ್ನು ಮಾಡುತ್ತೇನೆ ಎನ್ನತಕ್ಕ ಆಶ್ವಾಸನೆಯನ್ನು ಕೊಡುತ್ತೇನೆ. ಷೆಡ್ಯೂಲ್ ಕಾಸ್ಟ್‌ನವರು ಸರಿಯಾಗಿ ಇದರ ವಿನಿಯೋಗ ಮಾಡಿಕೊಳ್ಳಬೇಕು. ನಾವು ಈಗಾಗಲೇ ಭೌತಿಕವಾಗಿ ಎಷ್ಟು ಮತ್ತು ಆರ್ಥಿಕವಾಗಿ ಎಷ್ಟು ಎನ್ನುವುದನ್ನು ತಃಖ್ತೆಯಲ್ಲಿ ಕೊಟ್ಟಿದ್ದೇವೆ. ಭೌತಿಕ ಗುರಿ ಏತಕ್ಕೆ ಹಾಕಲಿಲ್ಲ ಎಂದರೆ ಯಾವ ಏರಿಯಾದೊಳಗೆ ಓಪನ್ ವೆಲ್ ಮಾಡುವುದರಿಂದ ನೀರು ಬೀಳುವುದಿಲ್ಲ ಎಂದು ತಜ್ಞರ ಅಭಿಪ್ರಾಯ ಆಗಿದೆಯೋ ಅಂತಹ ಕಡೆ ಹಣ ಖರ್ಚು ಮಾಡಿ ವ್ಯಯ ಮಾಡಬಾರದು ಎಂಬ ದೃಷ್ಟಿಯಿಂದ ಭೌತಿಕ ಗುರಿ ಇಟ್ಟಿಲ್ಲ, ಆರ್ಥಿಕ ಗುರಿಯಲ್ಲಿ 38 ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. 38 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದರೂ ಸಹ ಇನ್ನೂ ಸಾಕಷ್ಟು ಹಣ ಇದೆ. ಅದನ್ನು ಉಪಯೋಗ ಮಾಡಿಕೊಳ್ಳಬೇಕೆಂದು ನಾವು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಅಂಜನ ಮೂರ್ತಿ : ನನ್ನ ಕಳಕಳಿಯ ಮನವಿ ಇಷ್ಟೆ, ಏನು ಈ ಹಣ ದಶಲಕ್ಷ ಯೋಜನೆಯಲ್ಲಿ ಖರ್ಚು ಆಗುತ್ತಿಲ್ಲವೋ ಆ ಹಣವನ್ನೂ ಸ್ಪೆಷಲ್ ಕಾಂಪೊನೆಂಟ್ ಪ್ಲಾನ್‌ನಲ್ಲಿಯೋ ಅಥವಾ ನೂರು ಬಾವಿ ಯೋಜನೆಯಡಿಯಲ್ಲಿ ಏತಕ್ಕೆ ಉಪಯೋಗಿಸಬಾರದು. ಇದರಿಂದ ಸಣ್ಣ ರೈತರಿಗೆ ಹಿಂದುಳಿದಿರತಕ್ಕವರಿಗೆ ಸಹಾಯ ಆಗುವುದಿಲ್ಲವೇ ಎಂದು ಕೇಳುತ್ತಿದ್ದೇನೆ. ಇದಕ್ಕೆ ಉತ್ತರವನ್ನು ಮಾನ್ಯ ಸಚಿವರು ಹೇಳಬೇಕು.

ಶ್ರೀ ಕೆ.ಹೆಚ್. ಪಾಟೀಲ್ : ಕೇಂದ್ರದವರು ಯಾವ ಯಾವ ಸ್ಕೀಮಿನ ಸಲುವಾಗಿ ಹಣ ಕೊಟ್ಟಿದ್ದಾರೋ ಅದಕ್ಕೇ ಖರ್ಚು ಮಾಡಬೇಕಾಗಿದೆಯೋ ವಿನಹ ಅದನ್ನು ಬಿಟ್ಟು ಬೇರೆಯದಕ್ಕೆ ಖರ್ಚು ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಅಂಜನಮೂರ್ತಿ : ಅದಕ್ಕೋಸ್ಕರವಾಗಿ ನಾನು ಕೇಳುತ್ತಿದ್ದೇನೆ. ಈ ಭೂಸಾರ ಸಂರಕ್ಷಣೆಯಿಂದ ಅಧಿಕಾರಿಗಳ ಸಂರಕ್ಷಣೆ ಆಗುತ್ತಿದೆ. ಭೂಸಾರ ಸಂರಕ್ಷಣೆ ಎಲ್ಲೂ ಆಗುತ್ತಿಲ್ಲ. ಆ ಹಣ ಪೋಲು ಆಗುವುದಕ್ಕೆ ಬದಲಾಗಿ ಇಂತಹ ಒಳ್ಳೆಯ ಜನೋಪಯೋಗಿ ಕೆಲಸಕ್ಕೆ ಉಪಯೋಗಿಸಿಕೊಳ್ಳಬೇಕು ಎಂದು ಮತ್ತೆ ಮತ್ತೆ ನಾನು ಮನವಿ ಮಾಡುತ್ತಿದ್ದೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಭೂಸಂರಕ್ಷಣಾ ಕೆಲಸ ಎಲ್ಲಿ ಆಗಿಲ್ಲವೆಂದು ತಿಳಿಸಿದರೆ ಅಲ್ಲಿ ನಾವು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಅಂಜನಮೂರ್ತಿ : ಈ ಬಗ್ಗೆ ನೀವು ಮಾಹಿತಿ ತರಿಸಿಕೊಂಡಿದ್ದೀರಾ?.

ಅಧ್ಯಕ್ಷರು : ನೀವು ಮಾಹಿತಿ ಕೊಡಿ, ಅವರು ತಕ್ಷಣ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಈ ದಶಲಕ್ಷ ಬಾವಿ ಮತ್ತು ನೂರು ಬಾವಿ ಯೋಜನೆಯಲ್ಲಿ ಬರುವ ಬಾವಿ ಅಂದರೆ ಕೊಳವೆ ಭಾವಿಗಳೋ ಅಥವಾ ದೊಡ್ಡ ಬಾವಿಗಳೋ? ದಶಲಕ್ಷ ಬಾವಿಗಳನ್ನು 90-91ಕ್ಕೆ ನಿಗದಿಪಡಿಸಲಾಗಿದೆ. ಸ್ವಲ್ಪ ಹೆಚ್ಚು ಕಡಿಮೆ ಪ್ರತಿ ಒಂದು ಹಳ್ಳಿಯಲ್ಲಿಯೂ 40 ಬಾವಿ ಬರುತ್ತವೆ.

ಶ್ರೀ ಕೆ.ಹೆಚ್. ಪಾಟೀಲ್ : ದಶಲಕ್ಷ ನಮ್ಮ ರಾಜ್ಯಕ್ಕೆ ಅಲ್ಲ, ಒಟ್ಟು ಕೇಂದ್ರ ಸರ್ಕಾರದ ಯೋಜನೆಯಲ್ಲಿ ಮಂಜೂರಾಗಿರುವುದು. ಮಿಲಿಯನ್ ವೆಲ್ ಸ್ಕೀಮ್ ಎಂದು ಮಾಡಿದ್ದಾರೆ. ಮಿಲಿಯನ್ ವೆಲ್ ಸ್ಕೀಮ್ ಸರ್ಕಾರ [illegible]

ಬರುತ್ತದೆ. ಮತ್ತು ಭೂಸಾರ ಸಂರಕ್ಷಣೆ ಯೋಜನೆಗೂ ಹಣ ಖರ್ಚು ಮಾಡುವುದಕ್ಕೆ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಇಡೀ ದೇಶಕ್ಕೆ ದಶಲಕ್ಷಬಾವಿಗಳೆಂದರೆ ಆ ಪೈಕಿ ನಮ್ಮ ರಾಜ್ಯಕ್ಕೆ ಎಷ್ಟು ಹೇಳಿ.

ಶ್ರೀ ಕೆ.ಹೆಚ್. ಪಾಟೀಲ್ : ನೀವು ಎಷ್ಟು ಖರ್ಚು ಮಾಡ್ತೀರಿ ಅಷ್ಟು.

ಶ್ರೀ ಹೆಚ್. ಏಕಾಂತಯ್ಯ : ಅಧ್ಯಕ್ಷರೇ, ಇದು ಬೆಂಗಳೂರು ಜಿಲ್ಲೆಗೆ ಸೀಮಿತವಾಗಿದ್ದರೂ ಈಗಾಗಲೇ ನಾನು ಸಚಿವರ ಗಮನಕ್ಕೆ ತಂದಿದ್ದೇನೆ. ಈ ದಶಲಕ್ಷ ಬಾವಿಗಳ ಯೋಜನೆಯಡಿಯಲ್ಲಿ ಶೇಕಡ 20ರಷ್ಟು ಜವಾಹರ್ ಯೋಜನೆಯ ಅಡಿ ಹಣ ಖರ್ಚು ಮಾಡಬೇಕಾಗಿದೆ. ಇಲ್ಲೇನಾಗಿದೆ. ಅಂದರೆ, ಆ ಯೋಜನೆಯ ಮಾರ್ಗಸೂಚಿ ಪ್ರಕಾರ ಫಲಾನುಭವಿಗಳ ಆಯ್ಕೆಯಾಗುತ್ತಿಲ್ಲ ಆ ಫಲಾನುಭವಿಗಳ ಮೂಲಕವೇ ಈ ಯೋಜನೆಯನ್ನು ಕಾರ್ಯಗತಮಾಡಬೇಕೆಂದು ಇದ್ದರೂ ಕೂಡ ಅವರು ಫಲಾನುಭವಿಗಳ ಮೂಲಕ ಮಾಡುತ್ತಿದ್ದಾರೆಯೇ ಇಲ್ಲವೇ ಎಂಬುದನ್ನು ನಾನು ತಿಳಿಯಬಯಸುತ್ತೇನೆ. ಮತ್ತು ಎರಡನೆಯದಾಗಿ ಈ ಯೋಜನೆಯ ಹಣ ಏನಿದೆ ಅದನ್ನು ತಾವು ಹೇಳಿದಂತೆ ಭೂಮಿಯನ್ನು ಅಭಿವೃದ್ಧಿಪಡಿಸಲಿಕ್ಕೂ ಸಹ ಬಳಸಬಹುದು. ಈ ದಶಲಕ್ಷ ಬಾವಿಗೆ ಕೊಡುವ ಹಣ ಚಿತ್ರದುರ್ಗ ಜಿಲ್ಲೆಯಲ್ಲಿ ಮತ್ತು ಬೇರೆ ಕಡೆಗೆ ಬಾವಿ ತೊಡುವುದಕ್ಕೆ ಆಗುವುದಿಲ್ಲ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ಆ ಹಣವನ್ನು ಬೋರ್‌ವೆಲ್ ತೆಗಸಲಿಕ್ಕೆ ಕೇಂದ್ರದ ಅನುಮತಿ ಕೋರಿ ಖರ್ಚು ಮಾಡುವ ಆಸಕ್ತಿ ಸರ್ಕಾರಕ್ಕಿದೆಯೋ ?

ಶ್ರೀ ಕೆ.ಹೆಚ್. ಪಾಟೀಲ್ : ಚಳ್ಳಕೆರೆ ಏರಿಯ ಸೆಲೆಕ್ಟ್ ಮಾಡಿದ್ದಾರೆ. ಆ ಏರಿಯಾದಲ್ಲಿ ಮಾತ್ರ ಖರ್ಚು ಮಾಡಬೇಕು. ಈಗ ಉದಾಹರಣೆಗೆ ಬೆಂಗಳೂರು ಜಿಲ್ಲೆಯಲ್ಲಿ ಹೊಸಕೋಟೆ ಮತ್ತು ದೇವನಹಳ್ಳಿಗಳಲ್ಲಿ ಖರ್ಚು ಮಾಡಲು ಬರುವುದೇ ಇಲ್ಲ. ಆದ್ದರಿಂದ ಯಾವ ಏರಿಯಾ ಸೆಲೆಕ್ಟ್ ಮಾಡಿದ್ದಾರೆ ಅಲ್ಲಿ ಮಾತ್ರ ಖರ್ಚು ಮಾಡಬೇಕಾಗುತ್ತದೆ.

ಶ್ರೀ ಹೆಚ್. ಏಕಾಂತಯ್ಯ : ಎಸ್.ಸಿ.ಎಸ್.ಟಿ.ಗಳಿಗೆ ಜವಾಹರ್ ಯೋಜನೆ ಹಣದಲ್ಲಿ ಶೇಕಡ 20ರಷ್ಟು ಖರ್ಚುಮಾಡಬೇಕಾಗಿದೆ ಆದರೆ ಈ ಹಣವನ್ನು ರಾಜ್ಯದ ಎಲ್ಲ ಕಡೆ ಖರ್ಚುಮಾಡಲು ಸಾಧ್ಯವಾಗಿಲ್ಲ, ಏತಕ್ಕಾಗಿ ಅಂದರೆ ಅಲ್ಲಿ ಓಪನ್‌ವೆಲ್ಸ್ ತೆಗೆಯಲು ಸಾಧ್ಯವಿಲ್ಲ, ಆದ್ದರಿಂದ ನಾನು ಕೇಳೋದೇನೆಂದರೆ, ಕೇಂದ್ರದ ಮಾರ್ಗಸೂಚಿ ಪ್ರಕಾರ ಓಪನ್‌ವೆಲ್ಸ್ ತೆಗೆಯಬೇಕೆಂದು ಇದೆ.

ಶ್ರೀ ಕೆ.ಹೆಚ್. ಪಾಟೀಲ್ : ಸುದೈವದಿಂದ ಈ ಪಾಪ್ಯುಲರ್ ಸ್ಕೀಮ್‌ಗಳು ಏನಿವೆ, ಇವಕ್ಕೆ ಬೇರೆ ಬೇರೆ ರೀತಿಯಿಂದ ಹಣ್ಣತ್ತೆಗೆದಿಟ್ಟಿದ್ದಾರೆ, ಅವುಗಳಿಗೆ ಸಾಕಾಗುವಷ್ಟು ಹಣ ಇದೆ. ಬೋರ್‌ವೆಲ್‌ಗಳಿಗೆ ಹಣ ನಮಗೆ ಕಡಿಮೆ ಬೀಳುತ್ತದೆಂದು ಏನೂ ಇಲ್ಲ, ಆದ್ದರಿಂದ 250ಕ್ಕೂ ಹೆಚ್ಚು ಪಾಪ್ಯುಲೇಶನ್ ಇರುವ ಹಳ್ಳಿಗೆ ಇಂದು ನಾವು ಬೋರ್‌ವೆಲ್ ಕೊಡುತ್ತೇವೆ.

ಶ್ರೀ ಹೆಚ್. ಏಕಾಂತಯ್ಯ : ನಾನು ಕೇಳುತ್ತಿರುವುದು ಕುಡಿಯುವ ನೀರು ಈ ದಶಲಕ್ಷ ಬಾವಿ ಯೋಜನೆಯಲ್ಲಿ ಎಸ್.ಸಿ.ಎಸ್.ಟಿ.ಗಳಿಗೆ ನೀರಾವರಿ ಬಾವಿ ತೆಗೆಸುವುದಕ್ಕೆ ತಾವು ಹಣವನ್ನು ಮೀಸಲಿಟ್ಟಿದ್ದೀರಿ. ಇದು ಕೋಟ್ಯಂತರ ರೂ. ಇದೆ ಅನೇಕ ಜಿಲ್ಲೆಗಳಲ್ಲಿ ಈ ಹಣ ಖರ್ಚಾಗ್ತಾ ಇಲ್ಲ. ಈ ಓಪನ್ ವೆಲ್ ಬಾವಿಗಳಿಗೆ ಬದಲು ವೈಯಕ್ತಿಕವಾಗಿ ನೀರಾವರಿ ಬಾವಿಗಳನ್ನು ತೆಗೆಯಲಿಕ್ಕೆ ಈ

ಹಣ ಬಳಸಲು ಏಕೆ ನೀವು ಕೇಂದ್ರ ಮಾರ್ಗಸೂಚಿಯನ್ನು ಬದಲಾಯಿಸಲಿಕ್ಕೆ ಒತ್ತಾಯ ಮಾಡಬಾರದು?

ಶ್ರೀ ಕೆ.ಹೆಚ್. ಪಾಟೀಲ್ : ಕೇಂದ್ರಸರ್ಕಾರಕ್ಕೆ ಈ ಬಗ್ಗೆ ಪತ್ರ ಬರೆಯುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಮಾಹಿತಿಗಳನ್ನು ತರಿಸಿಕೊಳ್ಳಿ. ಶಿವಮೊಗ್ಗ ಜಿಲ್ಲಾಪರಿಷತ್‌ನಲ್ಲೂ ಈ ಬಗ್ಗೆ ಸಾಕಷ್ಟು ಚರ್ಚೆಯಾಯಿತು ಶಾಸಕರು ನಾವೆಲ್ಲಾ ಸೇರಿ ತಾಲ್ಲೂಕು ಪಂಚಾಯಿತಿ ಲೆವೆಲ್‌ನಲ್ಲೂ ಚರ್ಚೆಯಾಗಿದೆ. ದಶಲಕ್ಷ ಬಾವಿ ಯೋಜನೆಯಲ್ಲಿ ಏನು ದುಡ್ಡು ಬರ್‍ತಾ ಇದೆ, ಅದು ಖರ್ಚಾಗಿಲ್ಲ, ಎರಡನೆಯದು ಯಾವುದಾದರೂ ಒಂದು ತಾಲ್ಲೂಕನ್ನು ನೀವು ಸ್ಯಾಂಪಲ್ಲಾಗಿ ಸರ್ವೆ ಮಾಡಿಸಿ ಪೂರ್ಣ ಹಣ ದುರುಪಯೋಗ ಆಗಿರುವುದು ನಿಮಗೆ ಕಾಣುತ್ತದೆ ಆದರಿಂದ ಈ ಯೋಜನೆ ಫಲಪ್ರದವಾಗಿಲ್ಲ. ಹೋದವರ್ಷ ಎಷ್ಟು ಖರ್ಚಾಗಿದೆ ಎಷ್ಟು ಬಾವಿಯಾಗಿದೆ ಎಂದು ನೋಡಿದರೆ ಆಶ್ಚರ್ಯ ಪಡುವಷ್ಟು ಹಣ ದುರುಪಯೋಗವಾಗಿರುವುದು ಕಾಣುತ್ತದೆ. ಆದ್ದರಿಂದ ತಾವು ಈ ಬಗ್ಗೆ ವರದಿ ತರಿಸಿಕೊಂಡು ಸಮಗ್ರ ತನಿಖೆ ಮಾಡಿಸಿ ಇದನ್ನು ಬೇರೆ ರೂಪದಲ್ಲಾದರೂ ಎಸ್.ಸಿ. ಎಸ್.ಟಿ. ಗಳಿಗೆ ಅನುಕೂಲವಾಗುವ ರೀತಿ ಖರ್ಚು ಮಾಡ್ತೀರಾ ಎಂದು ಕೇಳುತ್ತೇನೆ.

SRI K.H. PATIL : It is a good suggestion. We will carry on.

ಮೇಲ್ದರ್ಜೆಗೇರಿಸಿದ ರಸ್ತೆಗಳ ವಿವರ ಕುರಿತು.

2049- ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ): ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ:

ಅ) *ಕರ್ನಾಟಕ ರಾಜ್ಯದಲ್ಲಿ ಮೇಲ್ದರ್ಜೆಗೇರಿಸಲು ತೀರ್ಮಾನಿಸಿರುವ 4,600 ಕಿಲೋಮೀಟರ್ ಜಿಲ್ಲಾ ಪರಿಷತ್ ರಸ್ತೆಗಳ ಪೈಕಿ ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಕಿ.ಮೀ. ರಸ್ತೆ ಮೇಲ್ದರ್ಜೆಗೇರಿಸಲಾಗುತ್ತಿದೆ ?*

ಆ) *ಅವುಗಳು ಯಾವುವು (ತಾಲ್ಲೂಕುವಾರು ಪಟ್ಟಿಕೊಡುವುದು) ?*

ಶ್ರೀ ಬಿ.ಹೆಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಸಚಿವರು)

ಅ) ಮಂಡ್ಯ ಜಿಲ್ಲೆಯಲ್ಲಿ ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿ ಬರುವ 274 ಕಿ.ಮೀ. ರಸ್ತೆಗಳನ್ನು ಮೇಲ್ದರ್ಜೆಗೇರಿಸಲು ಪ್ರಸ್ತಾವನೆಗಳು ಸರ್ಕಾರಕ್ಕೆ ಬಂದಿದೆ.

ಆ) ವಿವರವನ್ನು ಅನುಬಂಧದಲ್ಲಿ ಕೊಡಲಾಗಿದೆ.

ಅನುಬಂಧ

ಮಂಡ್ಯ ಜಿಲ್ಲೆಯಲ್ಲಿ ಜಿಲ್ಲಾ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುವ 274 ಕಿ.ಮೀ. ಇತರ ಜಿಲ್ಲಾ ಹಾಗೂ ಹಳ್ಳಿ ರಸ್ತೆಗಳ ತಾಲ್ಲೂಕುವಾರು ವಿವರ ಈ ರೀತಿಯಾಗಿದೆ.

1) ಮಂಡ್ಯ ತಾಲ್ಲೂಕು - 44.60 ಕಿ.ಮೀ.

ಅ) ಬಿ.ಎಸ್. ರಸ್ತೆಯ 95ನೇ ಕಿ.ಮೀ.ನಿಂದ ಬಿ.ಎಸ್. ರಸ್ತೆಯ ೧೦೩ನೇ ಕಿ.ಮೀ ರಸ್ತೆ (ಹಳೆಯ ಎಂ.ಸಿ. ರಸ್ತೆ) : 7.50 ಕಿ.ಮೀ.

ಆ) ಮಂಡ್ಯದಿಂದ ಕಿರುಗಾವಲ್ ರಸ್ತೆ ಮಾರ್ಗ ಹೆಬ್ಬಕಾವಡಿ - ಚಿಕ್ಕಮಲಗುಡು 10.00 ಕಿ.ಮೀ.

ಇ) ಹನಕೆರಿಯಿಂದ ಕೊಪ್ಪ ರಸ್ತೆ ಮಾರ್ಗ ದನಯಕನಪುರ, ವಿಧ್ಯಾಪೀಠದ ಶಿವರ, ಮರಗೌಡನಹಳ್ಳಿ ಗೋಲೂರು 13.50 ಕಿ.ಮೀ.

ಈ) ಸಿವಹಳ್ಳಿಯಿಂದ ಎಂ.ಎನ್. ರಸ್ತೆಯ 14ನೇ ಕಿ.ಮೀ. ನಿಂದ ಗಾಸ್ವೆಕಹಳ್ಳಿ ಮಲ್‌ಘಟ್ಟ ಹೊಡಘಟ್ಟ ಮತ್ತು ಹೊನಗಾನಹಳ್ಳಿ 13.60 ಕಿ.ಮೀ.

2) ಮದ್ದೂರು ತಾಲ್ಲೂಕು - 33.00 ಕಿ.ಮೀ.

ಅ) ಮದ್ದೂರು - ವಿಧ್ಯನಾಥಪುರ ರಸ್ತೆಯನ್ನು ಎಂ.ಎಸ್.ಸಿ. ಪಾಲ್ಸ್ ರಸ್ತೆಗೆ ಜೋಡಿಸುವ ರಸ್ತೆ 15.50 ಕಿ.ಮೀ.

ಆ) ಹೊಸಗಾವಿಯಿಂದ ಬೆಸಗರಹಳ್ಳಿ ಮಾರ್ಗ ಕೊಪ್ಪ 11.00 ಕಿ.ಮೀ.

ಇ) ಹನಕೆರೆಯಿಂದ ಕೊಪ್ಪಕ್ಕೆ ಮಾರ್ಗ ದನಯಕನಪುರ ವಿಧ್ಯಾಘಟ್ಟ ಶಿವರ ಮಾರಗೌಡನಹಳ್ಳಿ, ಗೋಳೂರು 6.50 ಕಿ.ಮೀ.

3) ಮಳವಳ್ಳಿ ತಾಲ್ಲೂಕು 49.40 ಕಿ.ಮೀ.

ಅ) ಬಿ.ಎಂ. ರಸ್ತೆಯಿಂದ ನೆಲಮಾಕನಹಳ್ಳಿ ಮಾರ್ಗ ಅಂಚೆದೊಡ್ಡಿ ಮತ್ತಿ ತಾಲೇಶ್ವರ ದೇವಸ್ಥಾನ ಕೆ.ಕೆ. ರಸ್ತೆಯನ್ನು ಜೋಡಿಸುವುದು.10.00 ಕಿ.ಮೀ.

ಆ) ಕೊರಟಗೆರೆ-ಕೊಳ್ಳೇಗಾಲ ರಸ್ತೆಯಿಂದ ಬೆಲಕವಾಡಿ ಮಾರ್ಗ ಹೊಸಹಳ್ಳಿ: 4.40 ಕಿ.ಮೀ.

ಇ) ಪಂಡಿತಹಳ್ಳಿ-ಶಿಂರಾಪುರ ರಸ್ತೆ 9.00 ಕಿ.ಮೀ.

ಈ) ಮಳವಳ್ಳಿಯಿಂದ 10ನೇ ಮೈಲಿ ಮಂಡ್ಯ ಬನ್ನೂರು ರಸ್ತೆಯನ್ನು ಸೇರಿಸುವ ರಸ್ತೆ 15.00 ಕಿ.ಮೀ.

ಉ) ಮಂಡ್ಯ-ಕಿರಗಾವಲ್ ರಸ್ತೆ ಮಾರ್ಗ ಹೆಬ್ಬತಾವಡಿ ಮತ್ತು ಚಿಕ್ಕಮುಲಗೂಡ್ 11.00 ಕಿ.ಮೀ.

4) ನಾಗಮಂಗಲ ತಾಲ್ಲೂಕು 35.40 ಕಿ.ಮೀ.

ಅ) ನಾಗಮಂಗಲದಿಂದ ಮುತಸಂದ್ರ ಮಾರ್ಗ ಮೈಲಾರಪಟ್ಟಣ 14.40 ಕಿ.ಮೀ.

ಆ) ಬಸರಾಲುದಿಂದ ಬ್ರಹ್ಮ ದೇವರಹಳ್ಳಿ ಮಾರ್ಗ ಮನ್ನಹಳ್ಳಿಯಿಂದ ರಾಜ್ಯ ಹೆದ್ದಾರಿಗೆ ಸೇರುವುದು 6.00 ಕಿ.ಮೀ.

ಇ) ವರಾಹ ಸಂದ್ರ -ಮಾಯಸಂದ್ರ ರಸ್ತೆ 15.00 ಕಿ.ಮೀ.

5) ಕೆ.ಆರ್. ಪೇಟೆ ತಾಲ್ಲೂಕು 38.30 ಕಿ.ಮೀ.

ಅ) ಭೂಕಿನಕೆರೆಯಿಂದ ಮಚಗೌಡನಹಳ್ಳಿ ಮಾರ್ಗ ದೊಡ್ಡಗಾಡಿಗನಹಳ್ಳಿ 4.80 ಕಿ.ಮೀ.

ಆ) ಹೊಸಹೊಳಲುನಿಂದ ಹರಿಹರಪುರ-ಲಿಂಗಪುರ ರಸ್ತೆಯನ್ನು ಸೇರಿಸುವ ರಸ್ತೆ ಮಾರ್ಗ ಬೆಲ್ಲಕೆರೆ, ನಟನಹಳ್ಳಿ 9.00 ಕಿ.ಮೀ.

ಇ) ಕೆ.ಆರ್. ಪೇಟೆಯಿಂದ ಶ್ರವಣಬೆಳಗೊಳ ರಸ್ತೆ ಮಾರ್ಗ ಕೊರಟಗೆರೆ, ಭಾರತೀಪುರ 12.80 ಕಿ.ಮೀ.

ಈ) ಶ್ರೀರಂಗಪಟ್ಟಣ- ಚೆನ್ನರಾಯಪಟ್ಟಣ ರಸ್ತೆಯ 24ನೇ ಕಿ.ಮೀ.ನಿಂದ ಸಿಲನೆರೆ ಮಾರ್ಗ ರಾಜಘಟ್ಟ ಗುಡೆನಹಳ್ಳಿ ಪಿ.ಬಿ. ಮಂಚೇನಹಳ್ಳಿ 6.50 ಕಿ.ಮೀ.

ಉ) ಎನ್.ಸಿ. ರಸ್ತೆಯ 48ನೇ ಕಿ.ಮೀ. ನಿಂದ ಕುಂದೂರು5.20 ಕಿ.ಮೀ.

6) ಶ್ರೀರಂಗಪಟ್ಟಣ ತಾಲ್ಲೂಕು 38.30 ಕಿ.ಮೀ.

ಅ) ಪಾಲಹಳ್ಳಿ - ಕಲಸ್ತವಾಡಿ ರಸ್ತೆ (ಪಿ.ಕೆ. ರಸ್ತೆ)3.00 ಕಿ.ಮೀ.

ಆ) ಗಂಜವರ್-ಕರಿಘಟ್ಟ ರಸ್ತೆ (ಜಿ.ಕೆ. ರಸ್ತೆ) 1.80 ಕಿ.ಮೀ.

ಇ) ಕೋಟೆ ರಾಮಪೋರ್ಟ್ ರಸ್ತೆ (ಎಫ್.ಆರ್.ರಸ್ತೆ) 4.00 ಕಿ.ಮೀ.

ಈ) ಚಿನ್ನನಾಯಕನಹಳ್ಳಿಯಿಂದ ಟುಬಿನಕೆರೆ ಮಾರ್ಗ ಅಲ್ಲಪಟ್ಟಣ, ನೀಲನಕೊಪ್ಪಲು, ಟಿ.ಎಂ. ಹೊಸೂರು ಕಾಳೇನಹಲ್ಲಿ, ಚನ್ನನಕೆರೆ, ಮತ್ತು ಜಕ್ಕನಹಳ್ಳಿ 15.00 ಕಿ.ಮೀ.

ಉ) ಮೈಸೂರು - ಬನ್ನೂರು ರಸ್ತೆಯಿಂದ ಮೈಸೂರು ಮಹದೇವಪುರ ರಸ್ತೆಗೆ ಸೇರಿಸುವ ರಸ್ತೆ ಮಾರ್ಗ ಭೂತಗಹಳ್ಳಿ, ಸುಗ್ಗನಹಳ್ಳಿ ಕೊಕ್ಕರೆ ಹುಂಡಿ, ಚಿನ್ನನಾಯಕನಹಳ್ಳಿ, ಹುರಳಿಕ್ಯಾತನಹಳ್ಳಿ ಹಂಪಾಪುರ 8.50 ಕಿ.ಮೀ.

ಊ) ಮೈಸೂರು-ಮಹಾದೇವಪುರ ರಸ್ತೆಯಿಂದ ಹೊಸೂರು ರಸ್ತೆಯನ್ನು ಸೇರಿಸುವ ರಸ್ತೆ ಮಾರ್ಗ ಹೆಬ್ಬಾಡಿ ಮತ್ತು ಹೆಬ್ಬಾಡಿ ಹುಂಡಿ 4.50 ಕಿ.ಮೀ.

ಋ) ಎಂ.ಸಿ. ರಸ್ತೆಯಿಂದ ಮೈಸೂರು - ಕೆ.ಆರ್.ಎಸ್. ರಸ್ತೆಯನ್ನು ಸೇರಿಸುವ ರಸ್ತೆ ಮಾರ್ಗ ಹೊಸ ಆನಂದೂರು

7) ಪಾಂಡವಪುರ ತಾಲ್ಲೂಕು 35.00 ಕಿ.ಮೀ.

ಅ) ಬೇವಿನ ಕುಪ್ಪೆ-ಶಾಂಬವನಹಳ್ಳಿ ರಸ್ತೆ 19.20 ಕಿ.ಮೀ.

ಆ) ಚಿನ್ನಕುರಳಿ -ಕಟ್ಟೆಹೇರಿ ರಸ್ತೆ 11.00 ಕಿ.ಮೀ.

ಇ) ಚಿನ್ನಕುರಳಿ -ಭೂತನಕೇರಿ ರಸ್ತೆ 4.80 ಕಿ.ಮೀ.

274.00 ಕಿ.ಮೀ.

ಶ್ರೀ ಎಲ್.ಆರ್. ಶಿವರಾಮೇಗೌಡ : ಅಧ್ಯಕ್ಷರೇ, ಸುಮಾರು 6 ಸಾವಿರ ಕಿ.ಮೀ. ರಸ್ತೆಯನ್ನು ಜಿಲ್ಲಾಪರಿಷತ್‌ಗಳಿಂದ ವಾಪಸ್ ಪಡೆದು ಪಿ.ಡಬ್ಲ್ಯೂ.ಡಿ.ಗೆ ವಹಿಸಿಕೊಳ್ಳುತ್ತೇವೆಂದು ಮಾನ್ಯ ಸಚಿವರು ಈಗ ತಾನೆ ಹೇಳಿದರು ಇದರೊಳಗೆ ಮಂಡ್ಯ ಜಿಲ್ಲೆಯಲ್ಲಿ 274 ಕಿ.ಮೀ.ರಸ್ತೆಯನ್ನು ಮೇಲ್ದರ್ಜೆಗೇರಿಸಬೇಕೆಂದು ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆ ಎಂದು ಹೇಳಿದ್ದಾರೆ ಇದರಲ್ಲಿ ನಾಗಮಂಗಲಕ್ಕೆ 35ಕಿ.ಮೀ., ತಮ್ಮ ಕ್ಷೇತ್ರವಾದ ಮದ್ದೂರಿಗೆ 33 ಕಿ.ಮೀ. ಕೆ.ಆರ್.ಪೇಟೆಗೆ 38 ಕಿ.ಮೀ. ಮಂಡ್ಯಕ್ಕೆ 44 ಕಿ.ಮೀ. ಮಳವಳ್ಳಿಗೆ 49 ಕಿ.ಮೀ. ಈ ಹೆಚ್ಚುಕಡಿಮೆ ಇರೋದರಿಂದ ಮೇಲ್ದರ್ಜೆಗೇರಿಸುವಾಗ ಅನುಸರಿಸುವ ನಿಯಮಾವಳಿಗಳು ಯಾವುವು? ಯಾರಿಂದ ಶಿಫಾರಸಾಗಿ ಬಂದಿರುವ ರಸ್ತೆಗಳನ್ನು ಸರ್ಕಾರ ತೆಗೆದುಕೊಳ್ಳುತ್ತದೆ ? ಜಾಲಪ್ಪನವರು ಕೇಳಿದಾಗ ಇವುಗಳನ್ನು ಮೇಲ್ದರ್ಜೆಗೇರಿಸುತ್ತೇವೆ, ಒಂದೂವರೆ ವರ್ಷದಿಂದ ಹೀಗೆ ಇವೆ ಎಂದು ಹೇಳಿದಿರಿ ಹಳ್ಳಿಗಾಡ ಕಡೆ ಬಂಡೀಪುರದ ರಸ್ತೆಗಿಂತ ನಮ್ಮ ಹಳ್ಳಿ ರಸ್ತೆಗಳು ಕಡೆ ಇವೆ. ನಾವು ಯಾರೂ ಊರೊಳಕ್ಕೆ ಹೋಗೋ ಹಂಗಿಲ್ಲ ಓಟು ತಗೊಂಡು ಆದ್ದರಿಂದ ಯಾವಾಗ ತಗೊಳ್ತೀರಿ ಎಂದು ಸ್ಪಷ್ಟವಾಗಿ ಹೇಳಬೇಕು. ಇಂಥ ದಿವಸದಿಂದ ಈ ಕೆಲಸ ತೆಗೆದುಕೊಳ್ಳುತ್ತೇವೆಂದು ತಾವು ತಿಳಿಸಬೇಕು.

ಶ್ರೀ ಜಿ.ಹೆಚ್. ಅಶ್ವತರೆಡ್ಡಿ : ಅಧ್ಯಕ್ಷರೇ, ಜಿಲ್ಲಾಪರಿಷತ್ತಿನ ರಸ್ತೆಗಳನ್ನು ಪಿ.ಡಬ್ಲ್ಯೂ.ಡಿ.ಗೆ ತೆಗೆದುಕೊಳ್ಳಬೇಕಾದರೆ ಕೆಲವು ನಾರ್ಮ್ಸ್ ಇವೆ. ದೊಡ್ಡಳ್ಳಿಯಾಗಿರಬೇಕು. ಕನೆಕ್ಷನ್ ಇರಬೇಕು ಹೀಗೆ, ಆದರೆ ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಮೂರ್ನಾಲ್ಕು ಕಿ.ಮೀ ಜಾಸ್ತಿ ಅಥವಾ ಕಮ್ಮಿ ಇರಬಹುದು, 40.1 ಬಂದರೂ ಅದು ವ್ಯತ್ಯಾಸ ಅಂತ ನೀವು ತಿಳಿದುಕೊಳ್ಳಬಾರದು. ರಸ್ತೆಗಳ ಪರಿಸ್ಥಿತಿ ನೋಡಿ ತೆಗೆದುಕೊಳ್ಳುತ್ತೇವೆ. ಸುಮಾರು 10 ಸಾವಿರ ಕಿ.ಮೀ. ರಸ್ತೆಯಪೈಕಿ 6 ಸಾವಿರ ಕಿ.ಮೀ. ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ಸೇರಿಸಬೇಕೆಂದು ಇದೆ. ಅದಕ್ಕೆ ಸುಮಾರು 100 ಕೋಟಿ ಖರ್ಚಾಗುತ್ತದೆ. ಪ್ರತಿವರ್ಷ 10 ಕೋಟಿ ಖರ್ಚುಮಾಡಿ 10 ವರ್ಷದಲ್ಲಿ ಆ ರಸ್ತೆಗಳನ್ನು ಚೆನ್ನಾಗಿ ದುರಸ್ತಿ ಮಾಡಬೇಕೆಂದು ಸರ್ಕಾರದ ಇಚ್ಛೆಯಿದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಕೇಳಿದ್ದುದು ಯಾವ ಡೇಟಿನಿಂದ ಎಂದು?

ಅಧ್ಯಕ್ಷರು : ಸಚಿವರು ಹೇಳಿದರಲ್ಲಿ , 10 ವರ್ಷದಲ್ಲಿ ಮಾಡ್ತೀವಿ ಅಂತ.

ಶ್ರೀ ಎಲ್.ಆರ್. ಶಿವರಾಮೇಗೌಡ : ತಮಗೇ ಗೊತ್ತಿದೆ, ನಾವ್ಯಾರೂ ಹಳ್ಳಿಗಳಲ್ಲಿ ತಿರುಗಾಡೋ ಹಂಗಿಲ್ಲ.

MR. SPEAKER : I have to give protection to the Minister also.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಈಗಿರುವ ವ್ಯವಸ್ಥೆಯೇ ಒಳ್ಳೆಯದು. 10 ವರ್ಷದ ನಂತರ ಇವರು ಮಾಡೋದಾದರೇ ಪಿ.ಡಬ್ಲ್ಯೂ.ಡಿಗೆ ವಹಿಸೋ ಅವಶ್ಯಕತೆಯಾದರೂ ಏನಿದೆ? ಶೀಘ್ರವೇ ಅವನ್ನು ಮೇಲ್ದರ್ಜೆಗೇರಿಸಿ ರಿಪೇರಿ ಮಾಡಲು ಸರ್ಕಾರ ಹೆಚ್ಚು ಹಣ ಕೊಟ್ಟರೆ ಏನಾದರೂ ಉಪಯೋಗ ಆಗುತ್ತದೆ.

ಶ್ರೀ ಜೆ.ಹೆಚ್. ಅಶ್ವತ್ಥ ರೆಡ್ಡಿ : ಬನ್ನಿಕೋಡರಿಗೆ ಕನ್ನಡ ಚೆನ್ನಾಗಿ ಬರುತ್ತದೆ. 10 ವರ್ಷದ ಅವಧಿ ತೆಗೆದುಕೊಳ್ಳುತ್ತೇವೆ. ಅದರಲ್ಲಿ 5 ವರ್ಷದಲ್ಲಿ ಆಗಬಹುದು, ಎರಡು ಅಥವಾ ಮೂರು ವರ್ಷದಲ್ಲಿ ಆಗಬಹುದು. ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಅದು ಜಾಸ್ತಿಬಂದರೆ ಎರಡೇ ವರ್ಷದಲ್ಲಿ ಮಾಡ್ತೀವಿ.

ಎಲ್.ಆರ್. ಶಿವರಾಮೇಗೌಡ : 10 ವರ್ಷಕ್ಕೇ ಇದು ಮುಗಿಯಲಿ, ಕೊನೆಯ ಪಕ್ಷ ಪ್ರಾರಂಭಮಾಡುವ ದಿನಾಂಕನಾದರೂ ಹೇಳಿ.

ಶ್ರೀ ಜೆ.ಹೆಚ್. ಅಶ್ವತರೆಡ್ಡಿ : ಆದಷ್ಟು ಜಾಗ್ರತೆ ಅವರಿಗೆ ತಿಳಿಸುತ್ತೇವೆ.

ಅಧ್ಯಕ್ಷರು : 10 ವರ್ಷಕ್ಕೆ ಮೊದಲು ಪ್ರಾರಂಭ ಮಾಡೋದು ತಾನೆ.

ಶ್ರೀ ವಿ.ವೈ. ಚವಾಣ್ : ಈ ರಸ್ತೆಗಳನ್ನು ಸರ್ಕಾರದವರೇ ವಹಿಸಿಕೊಳ್ಳುವವರೆಗೆ ಮೇಂಟೇನ್ ಮಾಡೋಕ್ಕಾದರೂ ಯಾರನ್ನಾದರೂ ನೇಮಿಸ್ತಾರ ಅಂತ ಹೇಳಲಿ, ಜೊತೆಗೆ ಈ ಹಳ್ಳಿ ರಸ್ತೆಗಳನ್ನು ಅಪ್‌ಗ್ರೇಡಶನ್ ಮಾಡಲಿಕ್ಕೆ 25 ವರ್ಷದಿಂದ ಹೈದರಾಬಾದ್ ಕರ್ನಾಟಕದಲ್ಲಿ ಇಲಾಖೆಯವರು ಲಕ್ಷ್ಯವನ್ನೇ ಕೊಟ್ಟಿಲ್ಲ. ಮೇಲಾಗಿ ಹೆವಿ ವೆಹಿಕಲ್ಸ್ ಓಡಾಡುವ ರಸ್ತೆಯನ್ನು ಅಪ್‌ಗ್ರೇಡ್ ಮಾಡುವ ವಿಚಾರ ಕೂಡ ಇಲಾಖೆಗಿಲ್ಲ ಇದಕ್ಕೆ ಉದಾಹರಣೆ ಕೊಡಬೇಕಾದರೆ ನಮ್ಮ ಜಿಲ್ಲಾಕೇಂದ್ರದಿಂದ ಶಹಾಬಾದ್‌ಗೆ ಹೋಗಬೇಕಾದರೆ, ಆ ರಸ್ತೆಯಲ್ಲಿ ಸಾಕಷ್ಟು ವೆಹಿಕಲ್ಸ್ ಓಡುತ್ತವೆ. ಆದರೂ ಸರ್ಕಾರ ಈವರೆಗೆ ಗಮನ ಕೊಟ್ಟು ಅದನ್ನು ಅಪ್‌ಗ್ರೇಡ್ ಮಾಡಿಲ್ಲ.

ಅದರ ಬಗ್ಗೆ ಲಕ್ಷ್ಯ ಕೊಟ್ಟಿಲ್ಲ, ಅದಕ್ಕಾಗಿ ನಾನು ಸಚಿವರನ್ನು ಕೇಳುತ್ತೇನೆ, ಇಂತಹ ಅಪ್‌ಗ್ರೇಡೇಶನ್ ವಿಚಾರದಲ್ಲಿ ಜಿಲ್ಲಾ ಅಥವಾ ವಿಭಾಗ ಮಟ್ಟದಲ್ಲಿ ಎಲ್ಲ ಶಾಸಕರನ್ನು ಕರೆಯಿಸಿ ಕೂಡಲೇ ಚರ್ಚೆ ಮಾಡಿ ಸೂಕ್ತ ಏರ್ಪಾಡು ಮಾಡ್ತಾರಾ ಇಲ್ಲವಾ ಅಂತ ಸಚಿವರು ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಜಿ.ಹೆಚ್. ಅಶ್ವತರೆಡ್ಡಿ : ಅಧ್ಯಕ್ಷರೇ ಅಪ್‌ಗ್ರೇಡೇಶನ್ ರಸ್ತೆಗಳ ಬಗ್ಗೆ ಶಾಸಕರು ಕೊಟ್ಟ ಅಭಿಪ್ರಾಯದಂತೆ ಜಿಲ್ಲಾಪರಿಷತ್ತಿಂದ ನಮಗೆ ಶಿಫಾರಸಾಗಿ ಬಂದಿರುತ್ತದೆ. ಶ್ರೀಮಾನ್ ಚವಾಣ್‌ರವರು ಹೈದರಾಬಾದ್ ಕರ್ನಾಟಕದ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸಿಲ್ಲವೆಂದರು. ಆದರೆ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ಗೆ ಈ ವರ್ಷವೇ 23 ಕೋಟಿ ಹೆಚ್ಚಿಗೆ ಕೊಟ್ಟಿದ್ದೇವೆ. ಅಲ್ಲಿಗೆ ಹೆಚ್ಚಿನ ಆದ್ಯತೆ ಕೊಟ್ಟಿದ್ದೇವೆ. ರಸ್ತೆಗಳೂ ರಿಪೇರಿಯಾಗ್ತಿವೆ. ಸಾಕಷ್ಟು ಸೇತುವೆಗಳ ಕೆಲಸ ನಡೆಯುತ್ತಿವೆ ಎಲ್ಲ ಏರಿಯಾಕ್ಕಿಂತ ಹೆಚ್ಚಿನ ಕೆಲಸ ಅಲ್ಲಿ ಆಗುತ್ತಿದೆ. 200,300 ಕೋಟಿ ಕೊಟ್ಟರೂ ಅವರ ಹೈದರಾಬಾದ್ ಕರ್ನಾಟಕಕ್ಕೆ ಸಾಲದೇ ಬರುತ್ತದೆ. ಆದರೂ ಹಂತಹಂತವಾಗಿ ಈ ಕೆಲಸ ಮಾಡಬೇಕಾಗಿದೆ.

ಶ್ರೀ ಜೆ.ಸಿ. ಮಧುಸ್ವಾಮಿ ; ಇದು ಒಂದು ಸಲ ಪಟ್ಟಿ ಮಾಡಿದ ಮೇಲೆ ಜಿಲ್ಲಾಪರಿಷತ್‌ನವರಂತೂ ದುರಸ್ತಿ ಕಾರ್ಯ ಮಾಡೋಲ್ಲ 10 ವರ್ಷದವರೆಗೆ ಆ ರಸ್ತೆ ಸ್ಥಿತಿಯೇನಾಗಬೇಕು ? ತಾವು ಜಿಲ್ಲಾಪರಿಷತ್‌ಗೆ ಹಣ ಕೊಡಬೇಕಾದರೆ ಎಷ್ಟುದ್ದ ರಸ್ತೆ ಇದೆ ಎಂಬ ಆಧಾರದ ಮೇಲೆ ಕೊಡ್ತೀರಿ. ಆ ಹಣವನ್ನು ಜಾಸ್ತಿ ಅವರು ಮೇಂಟೆನ್ ಮಾಡೋ ವ್ಯವಸ್ಥೆ ಆದರೂ ಮಾಡ್ತೀರಾ

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಈ ರಸ್ತೆಗಳೆಲ್ಲ ಜಿಲ್ಲಾಪರಿಷತ್‌ನಿಂದಲೇ ಮೇಂಟೇನಾಗ್ತಿವೆ. ಈಗ ಸಮಸ್ಯೆಗಳು ಏನೂ ಇಲ್ಲ, ನಮ್ಮ ಸರ್ಕಾರದಿಂದ ..

(ಗೊಂದಲ)

12.15 ಪಿ.ಎಂ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ, ಮಳೆ ಬಂದು ಎಲ್ಲಾ ರಸ್ತೆಗಳೂ ಕೆಟ್ಟುಹೋಗಿದೆ. ಬಸ್‌ಗಳು ಓಡಾಡುವುದಕ್ಕೇ ಆಗುತ್ತಿಲ್ಲ, ರಸ್ತೆಗಳು ಕೆಟ್ಟಿದೆ. ಇಷ್ಟೆಲ್ಲಾ ತಮಗೆ ಗೊತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ಇದು ಇಡೀ ರಾಜ್ಯಾದ್ಯಂತ ಇರತಕ್ಕಂತ ಸಮಸ್ಯೆ . ಇಂತಹ ರಸ್ತೆಗಳನ್ನು ಮೇಲ್ದರ್ಜೆಗೇರಿಸಿ ಈ ಕೆಲಸಕಾರ್ಯಗಳನ್ನು ಕೂಡಲೇ ಮಾಡಿದರೆ ಬಹಳ ಉತ್ತಮ ಎಂದು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ಈಗ ಸದನದಲ್ಲಿ ಒಕ್ಕೊರಲಿನಿಂದ ಒಂದು ಕೂಗು ಕೇಳುತ್ತಿದೆ. ಅದನ್ನು ಮೇಲ್ದರ್ಜೆಗೆ ಏರಿಸಬೇಕು ಎಂದು ಹೇಳಿ. ಅಥವಾ ಪಿ.ಡಬ್ಲ್ಯೂ.ಡಿ ಅವರು ತೆಗೆದುಕೊಳ್ಳಬೇಕು ಎಂದು ಹೇಳಿ. ನಾನು ಕೇಳುತ್ತೇನೆ. ಪಿ. ಡಬ್ಲ್ಯೂ.ಡಿ, ವಶದಲ್ಲಿರತಕ್ಕಂಥ ರಸ್ತೆಗಳು ಸ್ಥಿತಿ ಏನಾಗಿದೆ ? ಅವುಗಳನ್ನು ತೆಗೆದುಕೊಳ್ಳುವುದರಿಂದ ಈ ಸಮಸ್ಯೆಯೇನೂ ಬಗೆಹರಿಯುವುದಿಲ್ಲ. ಜಿಲ್ಲಾಪರಿಷತ್ತಿನಲ್ಲಿ ಹಣವನ್ನು ಬಿಡುಗಡೆ ಮಾಡಿ ಕೆಲಸ ಆಗುವ ಹಾಗೆ ನೋಡಬೇಕು. ಅತಿವೃಷ್ಟಿಯಿಂದ ಮಳೆ ಜಾಸ್ತಿ ಬಿದ್ದು ರಸ್ತೆಗಳೆಲ್ಲಾ ಹಾಳು ಬಿದ್ದುಹೋಗಿವೆ. ಈ ಕೆಲಸ ಆಗುವ ಹಾಗೆ ಸೂಪರ್‌ವಿಷನ್ ಕೊಟ್ಟು ವಿಶೇಷ ಗಮನವನ್ನು ಕೊಡಬೇಕು ಎಂದು ಹೇಳುತ್ತೇನೆ. ಜಿಲ್ಲಾಪರಿಷತ್ತಿನಿಂದ ಪಿ.ಡಬ್ಲ್ಯೂ.ಡಿ

ವಾಹನಗಳು ಓಡಾಡಬಹುದೇ ಮನುಷ್ಯರು ಓಡಾಡಬಹುದೇ ? ಇದರಿಂದ ಖಂಡಿತವಾಗಿಯೂ ಸಮಸ್ಯೆ ಬಗೆಹರಿಸುವುದಿಲ್ಲ. ಇರುವುದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಇವರು ಏನಾದರೂ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಾರೆಯೇ? ಏಕೆಂದರೆ ಅಲ್ಲಿಂದ ಇಲ್ಲಿಗೆ ಬದಲಾವಣೆ ಮಾಡಿದರೆ ಈ ಸಮಸ್ಯೆ ಏನು ಬಗೆಹರಿಯುವುದಿಲ್ಲ.

ಶ್ರೀ ಎಂ.ಪಿ. ವೆಂಕಟೇಶ್ : ಎಂ.ಎಲ್.ಎ. ಗ್ರಾಂಟ್ ಏನು ಇದೆ, ಶಾಸಕರುಗಳು ಎಲ್ಲಿಗೆ ಹೇಳುತ್ತಾರೋ, ಆ ರಸ್ತೆಗಳ ಕೆಲಸಗಳನ್ನು ರಿಪೇರಿ ಮಾಡುವುದಕ್ಕೆ ಅವಕಾಶಕೊಟ್ಟರೆ ಅನುಕೂಲವಾಗುತ್ತದೆ. ಈಗ ಏನು ಶಾಸಕರಿಗೆ ಗ್ರಾಂಟನ್ನು ಕೊಡುತ್ತಿದ್ದಾರೆ, ಅದನ್ನು ಜಿಲ್ಲಾಪರಿಷತ್ತಿನವರಿಗೆ ಅದನ್ನು ರಿಪೇರಿ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಎಂ.ವಿ. ವೆಂಕಟಪ್ಪ : ರಸ್ತೆಗಳ ಅಭಿವೃದ್ಧಿಯ ಬದಲಾಗಿ ಬಿಲ್‌ಗಳು ತಯಾರಾಗುತ್ತಿವೆ. ರಸ್ತೆಗಳ ಅಭಿವೃದ್ಧಿಯೇನೂ ಆಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಲೋಕೋಪಯೋಗಿ ಮತ್ತು ಜಿಲ್ಲಾಪರಿಷತ್ತು ಈ ಎರಡೂ ರಸ್ತೆಗಳು ಕುಲಗೆಟ್ಟಿವೆ. ಅದು ಸರಿ, ಇದು ಸರಿ ಎಂದು ಹೇಳುವುದಕ್ಕಾಗುವುದಿಲ್ಲ. ಎರಡೂ ಕುಗೆಟ್ಟಿವೆ. ಎರಡೂನರಕ ಇದ್ದಹಾಗೆ. ಅದರಲ್ಲಿ ಏನೂ ಅನುಮಾನವಿಲ್ಲ.

ಶ್ರೀಮತಿ ಮೋಟಮ್ಮ : ಈಗ ಮಾನ್ಯ ಮಂತ್ರಿಗಳು ಉತ್ತರ ಹೇಳಿದ ಹಾಗೆ ಇದನ್ನು ತೆಗೆದುಕೊಳ್ಳುವುದಕ್ಕೆ ಹತ್ತು ವರ್ಷ ಆದರೂ ಆಗಬಹುದು ಎಂದು ಹೇಳಿದ್ದಾರೆ. ನಮ್ಮ ಒಂದೊಂದು ಕ್ಷೇತ್ರದಿಂದ 30 ಕಿಲೋ ಮೀಟರ್, 40 ಕಿಲೋಮೀಟರ್‌ವರೆಗೆ ರಸ್ತೆಯನ್ನು ಅಪ್‌ಗ್ರೇಡೇಷನ್‌ಗೆ ಕೇಳಿರುವುದು ಆಗಿದೆ. ಅದರಲ್ಲಿ ತಾವು ಈಗ ಹಿಂದಿನ ಸಾರಿ ಪ್ರತಿ ಶಾಸಕರ ಕ್ಷೇತ್ರಗಳಿಗೆ 12 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ, ಈ ಸಾರಿ ಒಂದೊಂದು ಕ್ಷೇತ್ರಕ್ಕೆ 20 ಲಕ್ಷ ರೂಪಾಯಿಗಳನ್ನು ಕೊಟ್ಟು ಆ ರಸ್ತೆಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಾರೆಯೇ? ಇದರಿಂದ ಹಳ್ಳಿಗಳ ರಸ್ತೆಗಳನ್ನು ಸಹ ಅಭಿವೃದ್ಧಿಪಡಿಸಿದಂತೆ ಆಗುತ್ತದೆ. ಮತ್ತು ಹಳ್ಳಿಗಳ ಅಭಿವೃದ್ಧಿಯನ್ನೂ ಸಹ ಮಾಡಿದಂತಾಗುತ್ತದೆ. ಅದರಿಂದ ನೀವು ಈ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೀರಾ?

ಅಧ್ಯಕ್ಷರು : ಶಾಸಕರಿಗೆ ಹಣವನ್ನು ಕೊಡುತ್ತಾರೆಂದು ಹೇಳಿದರೆ ಯಾರಾದರೂ ತಪ್ಪು ತಿಳಿದುಕೊಂಡು ಬಿಟ್ಟಾರು.

ಶ್ರೀ ವಾಟಾಳ್ ನಾಗರಾಜ್ : ಶಾಸಕರಿಗೆ ಯಾವ ಹಣವನ್ನು ಕೊಡುತ್ತಾರೆ? ಅದು ನಮಗೆ ಬಂದಿಲ್ಲ. ಅದರ ಬಗ್ಗೆ ಸ್ವಲ್ಪ ಹೇಳಬೇಕು. ಯಾವ ಶಾಸಕರಿಗೆ ಯಾವ ಹಣವನ್ನು ಕೊಡುತ್ತಾರೆ, ಯಾವ ಲೆಕ್ಕದಲ್ಲಿ ಕೊಡುತ್ತಿದ್ದಾರೆಂದು ಹೇಳಬೇಕು.

ಅಧ್ಯಕ್ಷರು : ಮೋಟಮ್ಮನವರು ಏನೋ ಪಾಪ, ಯಾವ ಉದ್ದೇಶದಿಂದಲೂ ಹೇಳಲಿಲ್ಲ. 15 ವರ್ಷದ ಮೇಲೆ ಈ ನಡವಳಿಕೆಗಳನ್ನು ಓದಿದವರು 1991ನೇ ಇಸವಿಯಲ್ಲಿ ಶಾಸಕರಿಗೂ ಹಣವನ್ನು ಕೊಡುತ್ತಿದ್ದರೂ ಎಂದು ಹೇಳಿ ಬೇರೆಯವರು ಏನಾದರೂ ತಪ್ಪು ತಿಳಿದುಕೊಂಡರೆ ಹೇಗೆ ?

ಶ್ರೀಮತಿ ಮೋಟಮ್ಮ : ಅವರ ಕ್ಷೇತ್ರಗಳಿಗೆ ಅಧ್ಯಕ್ಷರೇ, ಕ್ಷಮಿಸಬೇಕು, ಹಿಂದಿನ ಸಾರಿ 12 ಲಕ್ಷ ರೂಪಾಯಿಗಳನ್ನು ಅವರವರ ಕ್ಷೇತ್ರಗಳಿಗೆ ಕೊಟ್ಟಿದ್ದಾರೆ. ನಿಮ್ಮ ಕ್ಷೇತ್ರಕ್ಕೂ ಸಿಕ್ಕಿರಬಹುದು.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಈ ಸಂಬಂಧದಲ್ಲಿ ಮಾನ್ಯ ಮಂತ್ರಿಗಳು ನನಗೂ ಒಂದು ಉತ್ತರವನ್ನು ಕಳುಹಿಸಿದ್ದಾರೆ. ಒಟ್ಟು ರಾಜ್ಯದಲ್ಲಿ ರಾಜ್ಯ ಹೆದ್ದಾರಿ ಸುಮಾರು 11 ಸಾವಿರ ಕಿಲೋ ಮೀಟರ್ ಇದೆ ಮೇಜರ್ ಡಿಸ್ಟ್ರಿಕ್ಟ್ ರೋಡ್ಸ್ ಸುಮಾರು 17 ಸಾವಿರ ಕಿಲೋಮೀಟರ್ ಇದೆ. ಅಂದರೆ ಒಟ್ಟು 30 ಸಾವಿರ ಕಿಲೋಮೀಟರ್ ರಸ್ತೆಗಳು ಈಗಾಗಲೇ ಪಿ.ಡಬ್ಲ್ಯೂ.ಡಿ ವಶದಲ್ಲಿದೆ. ಎಂ.ಡಿ.ಆರ್. ಮತ್ತು ಸ್ಟೇಟ್ ಹೈವೇಯನ್ನು ಸೇರಿಸಿ. ಈಗ ಇವರು ಕೊಟ್ಟಿರತಕ್ಕಂಥ ಉತ್ತರದ ಪ್ರಕಾರ ಒಂದು ವರ್ಷಕ್ಕೆ ಮೆಯಿನ್‌ಟೆನೆನ್ಸ್‌ಗೆ ಎಂದು ಹೇಳಿ 48 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಅಂದರೆ ಒಂದು ಕಿಲೋ ಮೀಟರ್ ರಸ್ತೆಗೆ ಹತ್ತು ಸಾವಿರ ರೂಪಾಯಿಗಳನ್ನು ಮೆಯಿನ್‌ಟೆನೆನ್ಸ್‌ಗೆ ಖರ್ಚು ಮಾಡುತ್ತಿದ್ದೇವೆಂದು ಹೇಳಿ ಇವರು ಉತ್ತರವನ್ನು ಕೊಟ್ಟಿದ್ದಾರೆ. ನನಗೆ ನಿಜವಾಗಿಯೂ ಆಶ್ಚರ್ಯವಾಗುತ್ತಿದೆ.

ಈಗ ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಈ ಜಿಲ್ಲಾಪರಿಷತ್ತಿನಿಂದ ಹೊಸದಾಗಿ ರೋಡುಗಳನ್ನು ತೆಗೆದುಕೊಳ್ಳುವುದರಿಂದ ಏನೂ ಉಪಯೋಗವಾಗುವುದಿಲ್ಲ. ಇರತಕ್ಕಂಥ ರೋಡುಗಳನ್ನು ಸರಿಯಾಗಿ ಮೆಯಿನ್‌ಟೆನೆನ್ಸ್‌ನ್ನು ಈಗ ಮಾಡುವುದಕ್ಕೆ ವಾಸ್ತವಾಂಶದಲ್ಲಿ ಆಗುತ್ತಿಲ್ಲ. ನನಗೆ ಒಂದು ಆಶ್ಚರ್ಯವಾಗುತ್ತಿದೆ, ಇದರ ಬಗ್ಗೆ ತಾವು ಸ್ವಲ್ಪ ಗಮನವನ್ನು ಹರಿಸುವುದಕ್ಕೆ ಸಾಧ್ಯವೇ ಎಂದು ನಾನು ಕೇಳುತ್ತಿದ್ದೇನೆ. ಒಂದು ಕಿಲೋಮೀಟರ್‌ಗೆ ಹತ್ತು ಸಾವಿರ ರೂಪಾಯಿಗಳು ಆಕ್ಚುಯಲ್ ಆಗಿ ಮೆಯಿನ್‌ಟೆನೆನ್ಸ್‌ಗೆ ಖರ್ಚಾಗುತ್ತಿದೆಯೇ ಎಂದು ತಿಳಿಸಬೇಕು.

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಮಾನ್ಯ ಅಧ್ಯಕ್ಷರೇ, ನ್ಯಾಷನಲ್ ಹೈವೇಗೆ..

ಶ್ರೀ ಪಿ.ಜಿ.ಆರ್. ಸಿಂಧ್ಯ : ನ್ಯಾಷನಲ್ ಹೈವೇ ಅಲ್ಲ .ಒಟ್ಟು ರಾಜ್ಯದಲ್ಲಿ ನ್ಯಾಷನಲ್ ಹೈವೇ ಇರತಕ್ಕಂಥದ್ದು 1997 ಕಿಲೋಮೀಟರ್. ಅದರ ಮೆಯಿನ್‌ಟೆನೆನ್ಸ್‌ಗೆ ಸೆಂಟ್ರಲ್ ಗೌರ್ನಮೆಂಟ್‌ನಿಂದ ಹಣವನ್ನು ಕೊಡುತ್ತಾರೆ. 987 ಲಕ್ಷ ರೂಪಾಯಿಗಳನ್ನು ಅಷ್ಟೇ ನೀವು ಖರ್ಚುಮಾಡುತ್ತಿರತಕ್ಕಂಥದ್ದು. ಈಗ ರಾಜ್ಯದಲ್ಲಿ ಸ್ಟೇಟ್ ಹೈವೇ ಮತ್ತು ಎಂ.ಡಿ.ಆರ್. ಸೇರಿಸಿದರೆ ಸುಮಾರು 30 ಸಾವಿರ ಕಿಲೋಮೀಟರ್ ಬರುತ್ತದೆ. ಈ 30 ಸಾವಿರ ಕಿಲೋಮೀಟರ್‌ಗೆ 48 ಕೋಟಿ ರೂಪಾಯಿಗಳು ಅಂದರೆ ಒಂದು ಕಿಲೋ ಮೀಟರ್‌ಗೆ ಹತ್ತು ಸಾವಿರ ರೂಪಾಯಿಗಳಾಯಿತು. ಹತ್ತು ಸಾವಿರ ರೂಪಾಯಿಗಳು ಎಲ್ಲಿ ಖರ್ಚಾಗುತ್ತಿದೆ ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಅದರಲ್ಲಿ ಎಷ್ಟಾಬ್ಲಿಷ್ಮೆಂಟ್ ಖರ್ಚು ಎಲ್ಲಾ ಸೇರಿ ಒಂದು ಕಿ.ಮೀಟರಿಗೆ 7 ಸಾವಿರ ರೂಪಾಯಿ ಆಗುತ್ತದೆ.. ಅಷ್ಟು ಸಾಕಾಗುತ್ತದೆ. ಶ್ರೀಮತಿ ಮೋಟಮ್ಮನವರೂ ಸಹ ಎಂ.ಎಲ್.ಎ. ಗ್ರಾಂಟ್ 12ಲಕ್ಷ . ರೂಪಾಯಿಯನ್ನು ಕೊಡಬೇಕೆಂದು ಕೇಳಿದ್ದಾರೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ ಅದರ ಬಗ್ಗೆ ಸರ್ಕಾರ ತೀವ್ರವಾಗಿ ಪರಿಶೀಲಿಸಿ ಕ್ರಮತೆಗೆದುಕೊಳ್ಳುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಒಂದು ಕಿ.ಮೀಟರ್ ರಸ್ತೆ ರಿಪೇರಿಗೆ ಎಸ್ಟಾಬ್ಲಿಷ್‌ಮೆಂಟ್ ಖರ್ಚು ಗ್ಯಾಂಗ್‌ಮೆನ್ ಸ್ಯಾಲರಿ ಸೇರಿ 10 ಸಾವಿರ ಅಂದರೆ ಬರೀ ಮಣ್ಣನ್ನು ಹಾಕುತ್ತಾರೆ. ಒಂದು ಕಿ.ಮೀಟರ್‌ನಲ್ಲಿ ಎರಡು-ಮೂರು ಪ್ಯಾಚ್ ಇದ್ದರೆ ಅದಕ್ಕೆ ಜಲ್ಲಿ ಹಾಕಿ ಟಾರ್ ಹಾಕುತ್ತಾರೆ. ಅಷ್ಟೆ ಅದು ಬಿಟ್ಟರೆ ಇನ್ನೇನು ಮಾಡುತ್ತಿದ್ದಾರೆ. ಮೇನ್‌ಟೆನೆನ್ಸ್ ಗ್ರಾಂಟ್ ಬಗ್ಗೆ ನಾನು ಸ್ಪೆಸಿಫಿಕ್

ಕ್ವಶ್ಚನ್ ಕೇಳಿರುವುದು. ನೀವು ಇದರ ಬಗ್ಗೆ ತನಿಖೆ ಮಾಡಿಸಿ, 4 ಜನ ಎಕ್ಸ್‌ಪರ್ಟ್ ಜನರನ್ನು ಕರೆದುಕೊಂಡು ಹೋಗಿ ಸ್ಟೇಟ್‌ನಲ್ಲಿ ಎಂ.ಡಿ.ಆರ್. ಮತ್ತು ಸ್ಟೇಟ್ ಹೈವೇನಲ್ಲಿ ಎಲ್ಲೆಲ್ಲಿ ಎಷ್ಟೆಷ್ಟು ಖರ್ಚು ಮಾಡಿದ್ದಾರೆಂದು ಆವರೇಜ್ ತೆಗೆದುಕೊಂಡು ತನಿಖೆ ನಡೆಸಲು ಸಾಧ್ಯವಾಗುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಜಿ.ಹೆಚ್. ಅಶ್ವಥ್ ರೆಡ್ಡಿ : ಎಲ್ಲಾ ರಸ್ತೆಗೂ ಕೂಡ ಪ್ಲೈನ್ ರಸ್ತೆ ಇರುವುದಿಲ್ಲ, ಬ್ರಿಡ್ಜ್‌ಗಳು ಹಾಳಾಗಿದ್ದರೆ ಅದನ್ನು ಸಹ ರಿಪೇರಿಯಲ್ಲಿ ಸೇರಿಸುತ್ತಾರೆ. ಅದಕ್ಕೆ ಹೆಚ್ಚಿನ ಹಣ ಬೇಕಾಗುತ್ತದೆ. ಸರಾಸರಿಯಾಗಿ 1 ಕಿ.ಮೀಟರಿಗೆ ಸುಮಾರು 7 ಸಾವಿರ ರೂಪಾಯಿ ಖರ್ಚಾಗುತ್ತದೆ. ಆದರೂ ಕೂಡ ಈ ಬಗ್ಗೆ ತನಿಖೆಯನ್ನು ಮಾಡಿಸೋಣ.

ಕಾವಾಡಿ ಹೊಳೆಗೆ ಸೇತುವೆ ನಿರ್ಮಾಣ ಮಾಡುವ ಬಗ್ಗೆ.

1917-ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) *ದಕ್ಷಿಣ ಕನ್ನಡ ಜಿಲ್ಲೆಯ ಸಾಲಿಗ್ರಾಮ ಪುರಸಭೆಯ ಕಾರ್ಕಡ ಗ್ರಾಮದ ಕಾವಡಿ ಹೊಳೆಗೆ ಸೇತುವೆ ಒಡ್ಡನ್ನು ನಿರ್ಮಿಸುವುದರ ತುರ್ತು ಆವಶ್ಯಕತೆಯ ಮನವಿ ಸರ್ಕಾರಕ್ಕೆ ಬಂದಿದೆಯೆ?*

ಆ) *ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ?*

(ವಿವರಗಳನ್ನು ತಿಳಿಸುವುದು)

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಬಂದಿದೆ.

ಆ) ಕಾವಡಿ ಹೊಳೆಗೆ ಸೇತುವೆ ನಿರ್ಮಾಣ ಮಾಡುವ ಕಾಮಗಾರಿಯು ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿನ ಕಾರ್ಯ ವ್ಯಾಪ್ತಿಯಲ್ಲಿದ್ದು, ಸೇತುವೆ ರಚನೆಗೆ 30.00 ಲಕ್ಷ ರೂ.ಗಳ ವೆಚ್ಚಗಳಾಗುತ್ತದೆ. ಸದರಿ ಕಾಮಗಾರಿಯು ಜಿಲ್ಲಾ ಪರಿಷತ್ತಿನ ಯಾವುದೇ ಕ್ರಿಯಾ ಯೋಜನೆಯಲ್ಲಿ ಸೇರಿರುವುದಿಲ್ಲ.

ನದಿದಂಡೆ ಎತ್ತರಿಸುವ ಒಡ್ಡು ನಿರ್ಮಾಣ ಕಾಮಗಾರಿಯು ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ಬರುತ್ತಿದ್ದು ಈ ಕಾಮಗಾರಿಗೆ ಸುಮಾರು 5.00 ಲಕ್ಷ ರೂ.ಗಳು ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ. ಈ ಕಾಮಗಾರಿಯು 1991-92ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಸೇರಿರುವುದಿಲ್ಲ. ಅನುದಾನದ ಲಭ್ಯತೆಯ ಮೇಲೆ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಪರಿಶೀಲಸಲಾಗುವುದು.

ಶ್ರೀ ಪಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, ಸಾಲಿಗ್ರಾಮ ಕಾವಡಿ ನದಿ ದಂಡೆಯನ್ನು ಎತ್ತರಿಸುವ ಒಡ್ಡು ನಿರ್ಮಾಣದ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆ. ಆ ಕಾಮಗಾರಿಗೆ 5 ಲಕ್ಷ ರೂಪಾಯಿ ಖರ್ಚಾಗುತ್ತದೆಂದು ಉತ್ತರ ಕೊಟ್ಟಿದ್ದಾರೆ. ಆ ನದಿ ದಂಡೆಯನ್ನು ಎತ್ತರ ಮಾಡದೇ ಇರುವುದರಿಂದ ಸುಮಾರು ನೂರಾರು ಎಕರೆ ಜಮೀನಿಗೆ ಉಪ್ಪು ನೀರು ನುಗ್ಗಿ ಅವರ ಬೆಳೆಗಳಿಗೆ ತುಂಬಾ ಹಾನಿಯಾಗಿರುವುದರಿಂದ ಅದನ್ನು ಈ ವರ್ಷದಲ್ಲಿಯೇ ಕೈಗೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಹೆಚ್. ಅಶ್ವಥ್ ರೆಡ್ಡಿ : ಅದನ್ನು ಪರಿಶೀಲಿಸಲಾಗುತ್ತದೆ.

ಶ್ರೀ ಪಿ. ಬಸವರಾಜ್ : ಅದೇ ರೀತಿ ಅದೇ ಹೊಳೆಗೆ ಸೇತುವೆಯನ್ನು ನಿರ್ಮಾಣ ಮಾಡಲು ಪ್ರಸ್ತಾವನೆಯನ್ನು ಮಾಡಿದ್ದಕ್ಕೆ, 30 ಲಕ್ಷ ಅಂದಾಜು ವೆಚ್ಚ ಆಗುತ್ತದೆಂದು ಉತ್ತರರನ್ನು ಕೊಟ್ಟಿದ್ದಾರೆ. ಇದು ಸದರಿ ಜಿಲ್ಲಾಪರಿಷತ್ತಿನ ಯಾವುದೇ ಯೋಜನೆಯಲ್ಲಿ ಸೇರಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ತಮಗೆ ಗೊತ್ತಿರುವ ಹಾಗೆ ಜಿಲ್ಲಾಪರಿಷತ್ತಿನಲ್ಲಿ ಯೋಜನೆಯಲ್ಲಿ ಸೇರಿಸಲಿಕ್ಕೆ ಹಣದ ಕೊರತೆ ಇರುವುದರಿಂದ, ಆ ಯೋಜನೆಯಲ್ಲಿ ಇದನ್ನು ಸೇರಿಸಲಿಕ್ಕೆ ಆಗಲಿಲ್ಲ. ಆದ್ದರಿಂದ ಇದಕ್ಕೆ ಸರ್ಕಾರವೇ ಹಣವನ್ನು ಕೊಡಿಸಿ ಈ ವರ್ಷವೇ ರಾಜ್ಯದ ಯೋಜನೆಯಲ್ಲಿ ಸೇರಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಜಿ.ಹೆಚ್. ಅಶ್ವಥ್ ರೆಡ್ಡಿ : ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಕೆಲಸವನ್ನು ಮಾಡುತ್ತೇವೆ.

ಕೂಡ್ಲಗಿ ತಾಲ್ಲೂಕಿನಲ್ಲಿರುವ ತಿಪ್ಪೇನಹಳ್ಳಿ ಕೆರೆಯ ದುರಸ್ತಿ ಕಾರ್ಯ.

2720- ಶ್ರೀ ರವೀಂದ್ರನಾಥ್ ಬಾಬು (ಕೊಟ್ಟೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ:

1) *ಹಿಂದಿನ ಬಜೆಟ್ ಅಧಿವೇಶನದಲ್ಲಿ ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ ತಿಪ್ಪೇನಹಳ್ಳಿ ಕೆರೆಯ ದುರಸ್ತಿ ಕೆಲಸವನ್ನು 1991-92ನೇ ಸಾಲಿನ ಜಿಲ್ಲಾಪರಿಷತ್ತಿನ ಆಯವ್ಯಯದಲ್ಲಿ ಕೈಗೊಳ್ಳಲಾಗುವುದೆಂದು ತಿಳಿಸಿರುವುದು ಸರಿಯೇ ?*
2) *ಇದರ ಬಗ್ಗೆ ಜಿಲ್ಲಾ ಪರಿಷತ್‌ಗೆ ಸರ್ಕಾರದಿಂದ ಯಾವುದೇ ಸೂಚನೆ ನೀಡಿಲ್ಲದಿರುವುದು ಗೊತ್ತಿದೆಯೆ ?*
3) *ಈಗಾಲಾದರೂ ಮೇಲ್ಕಂಡ ಕೆರೆಯ ದುರಸ್ತಿ ಕೆಲಸವನ್ನು ತೆಗೆದುಕೊಳ್ಳುವ ಬಗ್ಗೆ ಸರ್ಕಾರವು ನಿರ್ದಿಷ್ಟವಾಗಿ ಉತ್ತರ ನೀಡುವುದೇ ?*

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು)

1) ಹೌದು.

2) ಈ ಕಾಮಗಾರಿಯು ಜಿಲ್ಲಾ ಪರಿಷತ್ತಿನ ಕಾರ್ಯವ್ಯಾಪ್ತಿಯಲ್ಲಿ ಬರುತ್ತದೆ. ಸಂಬಂಧಪಟ್ಟ ಜಿಲ್ಲಾ ಪರಿಷತ್ತಿನ ಕಾರ್ಯ ನಿರ್ವಾಹಕ ಅಭಿಯಂತರು ಈ ಕೆಲಸವನ್ನು 1991-92ನೇ ಸಾಲಿನ ಜಿಲ್ಲಾಪರಿಷತ್ತಿನ ಆಯವ್ಯಯದಲ್ಲಿ ಸೇರಿಸುವ ಸಲುವಾಗಿ ಪ್ರಸ್ತಾವನೆಯನ್ನು ಜಿಲ್ಲಾಪರಿಷತ್ತಿನ ಯೋಜನಾ ವಿಭಾಗಕ್ಕೆ ಕಳುಹಿಸಿರುತ್ತಾರೆ.

3) ಈ ಬಗ್ಗೆ ಜಿಲ್ಲಾಪರಿಷತ್ತಿನವರು ಕ್ರಮ ಕೈಗೊಳ್ಳಬೇಕಾಗುವುದು.

ಶ್ರೀ ಕೆ.ವಿ. ರವೀಂದ್ರನಾಥ ಬಾಬು : ನಾನು ಹೋದ ಅಸೆಂಬ್ಲಿಯಲ್ಲಿ ಈ ಪ್ರಶ್ನೆಯನ್ನು ಕೇಳಿದಾಗ ಮಂತ್ರಿಗಳು ಜಿಲ್ಲಾಪರಿಷತ್ತಿಗೆ ಆರ್ಡರನ್ನು ಕಳುಹಿಸಿದ್ದೇವೆ, ಅವರು ಮಾಡುತ್ತಾರೆಂದು ಹೇಳಿದ್ದರು. 1991-92ರ ಬಜೆಟ್‌ನಲ್ಲಿ ಅವರು ಸೇರಿಸಿಕೊಳ್ಳುತ್ತಾರೆಂದು ನಮಗೆ ಭರವಸೆಯನ್ನು ಕೊಟ್ಟಿದ್ದರು. ಆದರೆ ಜಿಲ್ಲಾಪರಿಷತ್ತಿನವರನ್ನು ಕೇಳಿದರೆ ನಮಗೆ ಆ ರೀತಿಯಾಗಿ ಸರ್ಕಾರದಿಂದ ಯಾವುದೂ ಆದೇಶ ಬಂದಿಲ್ಲ. ನಾವು ಯಾವುದನ್ನೂ ಮಾಡಲಿಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಏಕೆ ಈ ರೀತಿ ಸುಳ್ಳು ಹೇಳುತ್ತಿದ್ದಾರೆಂದು ನಮಗೆ ಅರ್ಥವಾಗುತ್ತಿಲ್ಲ. ಇದನ್ನು 1991-92ರ ಬಜೆಟಿಗೆ ಸೇರಿಸುತ್ತಾರಾ ಅಥವಾ ಇಲ್ಲವಾ? ಈ ಮೈನರ್ ಇರಿಗೇಷನ್ನಿಗೆ ಸಂಬಂಧಪಟ್ಟಂತೆ ಮೇಜರ್ ಸುಳ್ಳು ಹೇಳಿದರೆ ಹೇಗೆ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಇದು ಜಿಲ್ಲಾಪರಿಷತ್ತಿನ ಕಾರ್ಯವ್ಯಾಪ್ತಿಗೆ ಬರುತದೆ. ಆದರಿಂದ ಜಿಲಾಪರಿಷತಿನವರೇ ಮಾಡಬೇಕು.

ಅಧ್ಯಕ್ಷರು : ಮೈನರ್ ಇರಿಗೇಷನ್‌ರವರು ನಿಮ್ಮ ಸುಳ್ಳನ್ನು ಮೈನರ್ ಹಾಗೆಯೇ ಇಟ್ಟುಕೊಳ್ಳಿ ಮೇಜರಿಗೆ ಹೋಗಬೇಡಿ.

ಶ್ರೀ ಕೆ.ವಿ. ರವೀಂದ್ರನಾಥ ಬಾಬು : 1991-92ಕ್ಕೆ ಇವರು ಬಜೆಟ್ ಪ್ರಾವಿಜನ್ ಮಾಡಿ ಕೊಟ್ಟರೆ, ಜಿಲ್ಲಾಪರಿಷತ್ತಿನವರು ಮಾಡುತ್ತಾರೆ. ಇಲ್ಲದಿದ್ದರೆ ಅವರೂ ಸಹ ಮಾಡುವುದಿಲ್ಲ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಇದು ಜಿಲ್ಲಾಪರಿಷತ್ತಿಗೆ ಸಂಬಂಧಪಟ್ಟ ವಿಚಾರವಾಗಿದೆ.

ಅಧ್ಯಕ್ಷರು : ನೀವು ಜಿಲ್ಲಾಪರಿಷತ್ತಿನಲ್ಲಿ ಕೇಳಿ.

ಶ್ರೀ ಕೆ.ವಿ. ರವೀಂದ್ರನಾಥ ಬಾಬು : ನಮಗೆ ಆ ರೀತಿ ಯಾವುದೂ ಆದೇಶ ಬಂದಿಲ್ಲ. ಸರ್ಕಾರದವರು ದುಡ್ಡುಕೊಟ್ಟರೆ ಮಾತ್ರ ಮಾಡಲಿಕ್ಕೆ ಆಗುತ್ತದೆಂದು ಹೇಳುತ್ತಾರೆ.

ಅಧ್ಯಕ್ಷರು : ಸರ್ಕಾರವನ್ನು ಜನವರಿ ತಿಂಗಳು ಆದಮೇಲೆ ಕೇಳಿ.

ಶ್ರೀ ಕೆ.ಹೆಚ್ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮೈನರ್ ಇರಿಗೇಶನ್ ಟ್ಯಾಂಕ್ಸ್ ಮತ್ತು ಉಳಿದ ವರ್ಕ್ಸ್ ಇನ್ನೂ ಜಿಲ್ಲಾಪರಿಷತ್ತಿಗೆ ಟ್ರಾನ್ಸ್‌ಫರ್ ಆಗಿಲ್ಲ. ಟ್ರಾನ್ಸ್‌ಫರ್ ಆಗದ ಹೊರತು ಅನಾವಶ್ಯಕವಾಗಿ ಜಿಲ್ಲಾಪರಿಷತ್ತಿನ ಹೆಸರು ತಂದು ಈ ರೀತಿಹೇಳುವುದು ಸರಿಯಲ್ಲಿ Either he must transfer the funds or he must take the responsibility.

ಶ್ರೀ ಕೆ.ವಿ. ರವೀಂದ್ರನಾಥ ಬಾಬು : ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಏನು ಹೇಳುತ್ತಾರೆ ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಜಿಲ್ಲಾಪರಿಷತ್ತಿನ ಕೆರೆಗಳಿಗೋಸ್ಕರ 17 ಕೋಟಿ ರೂಪಾಯಿಯನ್ನು ಇಟ್ಟಿದ್ದೇವೆ. ಅದನ್ನು ಕೊಡುತ್ತೇವೆ.

ಶ್ರೀ ಕೆ.ವಿ. ರವೀಂದ್ರನಾಥ ಬಾಬು : ಹಾಗಾದರೆ 1991-92ನೇ ಇಸವಿಗೆ ಅವರೇ ಕೊಡುತ್ತಾರೆಂದು ಆಯಿತು, ತಿಪ್ಪೇಹಳ್ಳಿ ಕೆರೆಗೆ ಇವರೇ ಕೊಡುತ್ತಾರೆಂದು ಆಯಿತು.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಜಿಲ್ಲಾಪರಿಷತ್ತಿನ ವ್ಯಾಪ್ತಿಗೆ ಬರತಕ್ಕದ್ದನ್ನು ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಸ್.ಹೆಚ್. ಕೌಜಲಗಿ : ಮೈನರ್ ಇರಿಗೇಷನ್ ಟ್ಯಾಂಕ್ಸ್‌ಗಳ ಬಗ್ಗೆ ಒಂದಾದರೂ ಸರ್ವೆ ಆಗಿದ್ದರೆ ಹೇಳಿ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಸುಮಾರು 400 ಚಿಲ್ಲರೆ ಕೆರೆಗಳು ಮಾತ್ರ ನಮಗೆ ಬರುತ್ತದೆ. ಇನ್ನೂ ಮೂವತ್ತುಸಾವಿರ ಚಿಲ್ಲರೆ ಕೆರೆಗಳು ಜಿಲ್ಲಾಪರಿಷತ್ತಿನ ವ್ಯಾಪ್ತಿಗೆ ಬರುತ್ತದೆ. ಆ ಕೆರೆಗಳಷ್ಟನ್ನೂ ಮೈನರ್ ಇರಿಗೇಷನ್ನಿಗೆ ಕೊಟ್ಟರೆ ನಾವು ಕೆಲಸವನ್ನು ಮಾಡಿಸುತ್ತೇವೆಂದು ನಾವು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಗ್ರಾಜ್ಯುಯಲ್ ಆಗಿ ಜಿಲ್ಲಾ ಪರಿಷತ್ತುಗಳ ಮತ್ತು ಮಂಡಲ್ ಪಂಚಾಯಿತ್ತಿಗಳ ಅಧಿಕಾರವನ್ನು ಮೊಟಕು ಮಾಡಬೇಕೆನ್ನುವುದೇ ಈ ಸರ್ಕಾರದ ಉದ್ದೇಶವಾಗಿದೆ. ಮೀನುಗಾರಿಕೆಗೆ ಸ್ವಂತ

ಒಂದು ರಿಸೋರ್ಸ್ ಮೊಬಲೈಸೇಷನ್ ಇದೆಯಲ್ಲ, ಮೀನು ಸಾಕುವುದರಿಂದ ಹಣ ಸಂಪಾದನೆ ಮಾಡುವುದು ಏನಿದೆ, ಇದು ಅಗ್ರಿಕಲ್ಚರ್ ಫಾರ್ಮ್ಸ್ ಮತ್ತು ಹಾರ್ಟಿಕಲ್ಚರ್ ಫಾರ್ಮ್ಸ್ ಇವೆಲ್ಲವೂ ಮೊದಲೂ ಲಾಸ್‌ನಲ್ಲಿ ಇದ್ದು, ಈಗ ಲಾಭದಲ್ಲಿವೆ. ಲಾಭದ ಹಣವನ್ನು ಸರ್ಕಾರಕ್ಕೆ ಜಮಾ ಮಾಡಿ ಎಂದು ಆರ್ಡರ್ಸ್‌ನ್ನು ಇಶ್ಯೂ ಮಾಡಿದ್ದೀರಿ. ಅವರು ಸ್ವಂತ ಮೊಬಲೈಸ್ ಮಾಡಿದ ಹಣವನ್ನೇ ಸರ್ಕಾರಕ್ಕೆ ಜಮಾ ಮಾಡಿ ಎಂದು ಆರ್ಡರ್ಸ್ ಇಶ್ಯೂ ಮಾಡಿದಾಗ, ಇನ್ನು ಜಿಲ್ಲಾ ಪರಿಷತ್ತಿಗೆ ಎಲ್ಲಿಂದ ಹಣವನ್ನು ಕೊಡುತ್ತೀರಿ ?

ಶ್ರೀ ಬಿ.ಹೆಚ್. ಬನ್ನಿಕೋಡ್ : ಕಾಲುವೆಗಳಲ್ಲಿ ಹೂಳು ತೆಗೆದಿಲ್ಲ, ಕೆರೆಗಳಲ್ಲಿ ನೀರು ತುಂಬಿದೆ. ಆದರೆ ಹೂಳು ತೆಗೆಯುವುದಕ್ಕೆ ಹಣವಿಲ್ಲದ ಪರಿಸ್ಥಿತಿ ಈ ಸರ್ಕಾರಕ್ಕೆ ಬಂದಿದೆ. ಆ ಕಾಲುವೆಗಳನ್ನು ದುರಸ್ತಿ ಮಾಡಿಸಿ, ಇರುವಂಥ ನೀರನ್ನು ಜಮೀನುಗಳಿಗೆ ಒದಗಿಸಿಕೊಡುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಈ ಸಲ ಹೂಳು ತೆಗೆಯುವುದಕ್ಕೆ ನಾಲ್ಕು ಮಿಶನ್‌ಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಇದಕ್ಕಾಗಿ ಸುಮಾರು ಮೂರು ಕೋಟಿ ರೂ.ಗಳನ್ನು ಇಟ್ಟಿದ್ದೇವೆ. ಖಂಡಿತವಾಗಿಯೂ ಈ ಕೆಲಸವನ್ನು ಮಾಡುತ್ತೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಕಾಲುವೆಗಳಲ್ಲಿ ಹೂಳು ತೆಗೆದು ಜಮೀನಿಗೆ ನೀರನ್ನು ಒದಗಿಸುವಂಥ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಬರುವುದಿಲ್ಲ, ಇದಕ್ಕಾಗಿ ಹಣವನ್ನು ಬಿಡುಗಡೆ ಮಾಡಿ ಎಂದು ಕೇಳಿದೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಕಾಲುವೆಗಳಲ್ಲಿರುವ ಹೂಳು ತೆಗೆಯುವುದಕ್ಕೆ ಮಿಶನ್‌ಗಳನ್ನು ಉಪಯೋಗಿಸಬಹುದೆಂದು ಮಾನ್ಯ ಸದಸ್ಯರಿಗೆ ಮನವರಿಕೆ ಮಾಡಿಕೊಡುತ್ತೇನೆ. ಇದರ ಬಗ್ಗೆ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ.

ನಿವೇಶನ ರಹಿತರಿಗೆ ನಿವೇಶನ ಹಂಚುವಾಗ 400 ರೂಪಾಯಿಗಳನ್ನು ವಸೂಲಿ ಮಾಡುತ್ತಿರುವ ಬಗ್ಗೆ

3547 - ಶ್ರೀ ಕೆ. ಗಂಗಾಧರ ಗೌಡ (ಬೆಳ್ತಂಗಡಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ನಿವೇಶನ ರಹಿತರಿಗೆ, ನಿವೇಶನ ಹಂಚುವಾಗ ಬಡ ವ್ಯಕ್ತಿಗಳಿಂದ 400-00 ರೂಪಾಯಿ ವಸೂಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ?

ಆ) ಬಂದಿದ್ದಲ್ಲಿ, ಸರ್ಕಾರ ವಾಗ್ದಾನ ಕೊಟ್ಟಂತೆ ಶುಲ್ಕ ಮಾಫಿ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಇ) ಹಾಗಿದ್ದಲ್ಲಿ, ಆ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುವುದು ?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಯಾವುದೇ ಹಣವನ್ನು ಗ್ರಾಮೀಣ ಬಡ ಜನರಿಂದ ವಸೂಲು ಮಾಡುತ್ತಿಲ್ಲ,

ಆ) ಉದ್ಭವಿಸುವುದಿಲ್ಲ,

ಇ) ಉದ್ಭವಿಸುವುದಿಲ್ಲ.

ಶ್ರೀ ಕೆ. ಗಂಗಾಧರ ಗೌಡ : ಇಲ್ಲಿ ಅಚ್ಚಾಗಿರುವಂಥ ಉತ್ತರಗಳು ಸತ್ಯಕ್ಕೆ ದೂರವಾಗಿದೆ. ನಾಲ್ಕು ನೂರು ರೂ.ಗಳನ್ನು ನಿವೇಶನರಹಿತ ಬಡವರಿಗೆ ನಿವೇಶನ ಹಂಚುವುದಕ್ಕಾಗಿ ಈಗಲೂ ವಸೂಲು ಮಾಡುತ್ತಿದ್ದಾರೆ. ಇಲ್ಲಿ ವಸೂರು ಮಾಡುತ್ತಿಲ್ಲವೆನ್ನುವ ಉತ್ತರವನ್ನು ಕೊಟ್ಟಿದ್ದಾರೆ. ನಿವೇಶನ ಪಡೆದುಕೊಳ್ಳಬೇಕಾದರೆ ಅವರು ತುಂಬಾ ಕಷ್ಟವನ್ನು ಅನುಭವಿಸುತ್ತಿದ್ದಾರೆ . ತಾಲ್ಲೂಕ್ ಕಛೇರಿಗೆ ವಿಲೇಜ್ ಅಕೌಂಟೆಂಟ್ ಹತ್ತಿರ ರೆವಿನ್ಯೂ ಇನ್ಸ್‌ಪೆಕ್ಟರ್, ಹತ್ತಿರ ಹೋಗಿ ಅವರುಗಳ ಕೈಬಿಸಿ ಮಾಡಿದ ನಂತರವೇ ಅವನಿಗೆ ಸೈಟ್ ದೊರೆಯುತ್ತದೆ. ಒಂದು ಸೈಟನ್ನು ಅವನು ಪಡೆದುಕೊಳ್ಳಬೇಕಾದರೆ ಒಂದು ಸಾವಿರ ರೂ.ಗಳಿಂದ ಒಂದು ಸಾವಿರದ ಐದು ನೂರು ರೂ. ಗಳವರೆಗೆ ಖರ್ಚು ಮಾಡಬೇಕಾಗುತ್ತದೆ. ಸದನದ ಒಳಗೆ ಮತ್ತು ಹೊರಗೆ ಮಾನ್ಯ ಮುಖ್ಯ ಮಂತ್ರಿಯವರು ಬಡವರಿಗೆ ಸೈಟ್ ಕೊಡುವುದಾಗಿ ಮತ್ತು ಬಡವರು ಕೊಡಬೇಕಾದ ಹಣವನ್ನು ಮಾಫಿ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ನಾನು ತಿಳಿದ ಮಾಹಿತಿಯ ಪ್ರಕಾರ ಹಣವನ್ನು ಇನ್ನೂ ವಸೂಲು ಮಾಡುತ್ತಿದ್ದಾರೆ. ಇದನ್ನು ಯಾವ ರೀತಿ ನಿಲ್ಲಿಸುತ್ತೀರೆಂದು ಕೇಳುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಸರ್ಕಾರ ಕೊಟ್ಟಿರುವ ಆದೇಶದಂತೆ ಯಾರ ಆದಾಯ ರೂ. 2000ಕ್ಕಿಂತ ಕಡಿಮೆ ಇದೆಯೋ, ಅಂಥವರಿಗೆ ಮೊಫತ್ತಾಗಿ ಮನೆಗಳನ್ನು ಕೊಡಬೇಕೆಂದು ನಿರ್ಧಿಷ್ಟವಾದ ಹುಕುಂ ಅನ್ನು ಕಳುಹಿಸಿದೆ. ಅದಕ ಪ್ರಕಾರ ಅವರು ಒಂದು ಪೈಸೆ ಕೂಡ ಮನೆಗೆ ಕೊಡಬೇಕಾಗಿಲ್ಲ, ಅವರಿಗೆ ಮೊಫತ್ತಾಗಿ ಮನೆ ಸಿಗುತ್ತದೆ. ಯಾರು ಮೋಸ ಮಾಡಿ ಹಣವನ್ನು ವಸೂಲು ಮಾಡಿದ್ದರೆ, ಅಂಥಾದ್ದನ್ನು ನನ್ನ ಗಮನಕ್ಕೆ ತಂದರೆ, ಅವರ ಮೇಲೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಗಂಗಾಧರಗೌಡ : ಸೈಟನ್ನು ರೆವಿನ್ಯೂ ಇಲಾಖೆಯವರು ಕೊಡುತ್ತಾರೋ, ಆರ್.ಡಿ.ಸಿ. ಇಲಾಖೆಯವರು ಕೊಡುತ್ತಾರೋ? ಮತ್ತು ಮನೆಯನ್ನು ಯಾರು ಕಟ್ಟಿಸಿಕೊಡುತ್ತಾರೆ ಎಂಬುದನ್ನು ದಯವಿಟ್ಟು ಮಾನ್ಯ ಮಂತ್ರಿಯವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಸೈಟ್‌ಗಳನ್ನು ಸೆಲೆಕ್ಟ್ ಮಾಡಲು ಈಗಾಗಲೇ ಒಂದು ಕಮಿಟಿಯನ್ನು ಮಾಡಿದ್ದಾರೆ. ಆ ಕಮಿಟಿಯವರು ಸೈಟ್‌ಗಳನ್ನು ಸೆಲೆಕ್ಟ್ ಮಾಡುತ್ತಾರೆ. ಪ್ರತಿ ಕಮಿಟಿಯಲ್ಲಿ ಎಂ.ಎಲ್.ಎ.ಗಳು ಇದ್ದಾರೆ. ಅವರ ಅಡ್ವೈಸ್ ತೆಗೆದುಕೊಂಡು ಸೈಟ್‌ಗಳನ್ನು ಸೆಲೆಕ್ಟ್ ಮಾಡುತ್ತಾರೆ. ನಂತರ ಬಡವರಿಗೆ ಮನೆಗಳನ್ನು ಪುಕ್ಕಟ್ಟೆಯಾಗಿ ಕಟ್ಟುವಂತಹ ಕೆಲಸವನ್ನು ಹೌಸಿಂಗ್ ಬೋರ್ಡ್‌ನವರಿಗೆ ಎಂಟ್ರಸ್ಟ್ ಮಾಡುತ್ತಾರೆ.

ಶ್ರೀ ಕೆ. ಗಂಗಾಧರ ಗೌಡ : ಕಮಿಟಿಯನ್ನು ಮಾಡುವುದರ ಬಗ್ಗೆ ತಮ್ಮ ಸುತ್ತೋಲೆ ಬಂದಿದೆ. ಈ ಹಿಂದೆ ತಹಶೀಲ್ದಾರ್‌ರವರು ಸೈಟ್‌ಗಳನ್ನು ಕೊಡುತ್ತಿದ್ದರು, ಹಾಗೂ ಅವರು ಹಣವನ್ನು ವಸೂಲು ಮಾಡುತ್ತಿದ್ದರು. ಈಗ ಕಮಿಟಿ ರಚನೆ ಆಗಿದ್ದರೂ ಇನ್ನೂ ಅದರ ಸಿಟ್ಟಿಂಗ್ ಆಗಿಲ್ಲ, ಸೈಟ್‌ಗಳನ್ನು ರೆವಿನ್ಯೂ ಇಲಾಖೆಯವರು ಕೊಡುತ್ತಿದ್ದರು ಮತ್ತು ಮನೆಗಳನ್ನು ರೂರಲ್ ಡೆವಲಪ್‌ಮೆಂಟ್‌ನವರು ಕಟ್ಟಿಸಿಕೊಡುತ್ತಿದ್ದರು, ಮಾನ್ಯ ಮಂತ್ರಿಯವರು ಯಾರಿಗೆ ವಾರ್ಷಿಕ ವರಮಾನ 2000ರೂ.ಗಳಿಗಿಂತ ಕಡಿಮೆ ಇರುತ್ತದೋ ಅಂಥವರಿಗೆ ಮನೆಗಳನ್ನು ಕಟ್ಟಿಸಿಕೊಡಲಾಗುತ್ತದೆ ಎಂದು ಹೇಳಿದಾರೆ. ರು. 2000 ವಾರ್ಷಿಕ ಆದಾಯ ಸಾಮಾನ್ಯವಾಗಿ ಎಲ್ಲರಿಗೂ

ಇರುತ್ತದೆ. ಆದ್ದರಿಂದ ಈ ವಾರ್ಷಿಕ ಆದಾಯದ ಮಿತಿಯನ್ನು ರೂ. 5000-6000ಕ್ಕೆ ಏರಿಸಲು ಸರ್ಕಾರ ಕ್ರಮವನ್ನು ತೆಗೆದುಕೊಳ್ಳುವುದೇ ಎಂದು ಮಾನ್ಯ ಮಂತ್ರಿಯವರನ್ನು ಕೇಳಬಯಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಈಗಾಗಲೇ ಮನೆ ಕಟ್ಟಿಸುವುದಕ್ಕೆ ಈ ರೀತಿಯ ಆದೇಶ ಕೊಟ್ಟಿದೆಯೆಂದು ಹೇಳಿದ್ದೇನೆ. ಆದೇಶ ಕೊಟ್ಟ ನಂತರ ಅವರು ಹಣ ಕೊಡುತ್ತಿದ್ದರೆ ನಾನೇನು ಮಾಡುವುದಕ್ಕಾಗುತ್ತದೆ? ಅಂಥವರ ಹೆಸರನ್ನು ಕೊಡಿ ಹಣ ಕೊಡಬಾರದೆಂದು ಪ್ರಚಾರ ಮಾಡಿರಿ. ನಿಮ್ಮ ವರ್ಚಸ್ಸನ್ನು ಉಪಯೋಗ ಮಾಡಿ ಯಾರು ಯಾವುದೇ ರೀತಿಯಲ್ಲಿ ಹಣ ಕೊಡಬಾರದು, ಸರ್ಕಾರದವರು ಹಣ ತೆಗೆದುಕೊಳ್ಳಬಾರದೆಂದು ನಿರ್ಧಿಷ್ಟವಾದಂಥ ಆದೇಶ ಕೊಟ್ಟಿದೆಯೆಂದು ಹೇಳಿರಿ. ಆದರೂ ಸಹ ಯಾರಾದರೂ ಹಣ ಪಡೆದರೆ ಅವರು ಲಂಚಕೋರರೆಂದು ಭಾವಿಸಿ ಅಂತಹವರ ಹೆಸರನ್ನು ನಮ್ಮ ನಜರಿಗೆ ತೆಗೆದುಕೊಂಡು ಬನ್ನಿ.

ಶ್ರೀ ಜೆ.ಸಿ. ಮಧುಸ್ವಾಮಿ : ಸ್ವಾಮಿ, ಈ ಸಮಸ್ಯೆ ಬೇರೆ ರೀತಿಯಾಗಿದೆ. ತಾವು ಸೈಟ್ ಫಾರ್ಮೇಶನ್ ಮಾಡಲಿಕ್ಕಾಗಿ ಮತ್ತು ಲೇಔಟ್ ಮಾಡಲಿಕ್ಕೆ ರೆವಿನ್ಯೂ ಅವರಿಗೆ ಹಣ ಕೊಟ್ಟಿಲ್ಲ. ಬಿ.ಡಿ.ಒ. ಅನ್ನು ಕಮಿಟಿಯಲ್ಲಿ ಹಾಕಿ ಸೈಟ್ ಫಾರ್ಮೇಷನ್ ಮಾಡಬೇಕೆಂದು ನೀವು ಹೇಳುತ್ತೀರಿ ಆದರೆ ಅವರ ಹತ್ತಿರ ಯಾವ ಹಣವೂ ಇಲ್ಲ. ಮಂಡಲ ಪಂಚಾಯಿತಿ ಅವರು ಒಂದು ಸೈಟಿಗೆ ಇಪ್ಪತ್ತೈದು ರೂಪಾಯಿ ಮೇಲೆ ಕೊಡುವುದಕ್ಕೆ ಬರುವುದಿಲ್ಲವೆಂದು ನಿರ್ಧಿಷ್ಟವಾಗಿ ಕಾನೂನು ಮಾಡಿದ್ದೀರಿ. ಬಿಡಿಒ ಆಫೀಸ್‌ಗಳಲ್ಲಿ ಹಣ ಇಲ್ಲ. ಸೈಟ್ ಫಾರ್ಮೇಶನ್ ಇದೇ ಸ್ಥಿತಿ ಮುಂದುವರಿದರೆ ಆಗುವುದೇ ಇಲ್ಲ, ತಾವು ಹೇಗೆ ಅದನ್ನು ಬಗೆಹರಿಸುತ್ತೀರಿ ? ಎಂಬ ಪ್ರಶ್ನೆ ಕೇಳುತ್ತಿದ್ದೇನೆ. ರೆವಿನ್ಯೂ ಅವರಿಗೆ ಸೈಟ್ಸ್ ಹಂಚುವುದಕ್ಕೆ ಮಾತ್ರ ಅಧಿಕಾರ ಕೊಟ್ಟಿದ್ದೀರಿ . ಅದನ್ನು ಲೇಔಟ್ ಮಾಡುವುದು ಅಥವಾ ಸೈಟ್ ಫಾರ್ಮೇಶನ್ ಮಾಡುವುದು ಯಾರು ಎಂದು ತಾವು ಸ್ಪಷ್ಟವಾಗಿ ಹೇಳಬೇಕು. ಅದಕ್ಕೇನಾದರೂ ತಾವು ಹಣ ಬಿಡುಗಡೆ ಮಾಡಬೇಕಾಗುತ್ತದೆ.

ಶ್ರೀ ಕೆ.ಹೆಚ್. ಪಾಟೀಲ್ : ಈಗ ನಾವು ಕಮಿಟಿ ಏನು ಮಾಡಿದ್ದೇವೆ. ಆ ಕಮಿಟಿಯವರು ಎಲ್ಲೆಲ್ಲಿ ಸೈಟ್ಸ್ ಸಿಗುತ್ತದೆಂದು ಐಡೆಂಟಿಫೈ ಮಾಡಿ ನಮಗೆ ತಿಳಿಸಬೇಕು. ಈಗಾಗಲೇ ನಾವು ಡಿ.ಸಿ.ಯವರಿಗೆ ಇನ್‌ಸ್ಟ್ರಕ್ಷನ್ ಕೊಟ್ಟು, ಎಲ್ಲೆಲ್ಲಿ ಗೌರ್ನಮೆಂಟ್ ಸೈಟ್ಸ್ ಇದೆ, ಅಲ್ಲಿ "ಗೌರ್ನಮೆಂಟ್ ಸೈಟ್" ಎಂದು ರಿಸ್‌ರ್ವ್ ಮಾಡಬೇಕು ಮತ್ತು ಎಲ್ಲಿ ಗೌರ್ನಮೆಂಟ್ ಸೈಟ್ಸ್ ಇಲ್ಲವೋ, ಆಗ ವಿಲೇಜ್‌ನೊಳಗೆ ಅಕ್ವೈರ್ ಮಾಡಬೇಕೆಂದು ಅಥವಾ ಪ್ರೈವೇಟ್ ನೆಗೋಷಿಯೇಶನ್ ಹೊಂದಿಸಿಕೊಳ್ಳಬೇಕೆಂದು ತಿಳಿಸಿದ್ದೇವೆ. ಹೊಂದಿಸಿಕೊಂಡ ನಂತರ ಸೈಟ್ ರಿಸರ್ವ್ ಮಾಡಿ ಪ್ರತಿಯೊಬ್ಬರಿಗೂ ಒಂದೊಂದು ಸೈಟ್ ಕೊಡಬೇಕೆಂದು ನಾವು ನಿರ್ಣಯ ಮಾಡಿದ್ದೇವೆ. ಅದಕ್ಕೆ ಜಾತಿ ಇಲ್ಲ, ಗೋತ್ರ ಇಲ್ಲ, ಶ್ರೀಮಂತರು, ಬಡವರು ಎನ್ನದೆ ಎಲ್ಲರಿಗೂ ಯಾರಿಗೆ ಸೈಟ್ ಇಲ್ಲ, ಅವರಿಗೆ ಕೊಡಬೇಕೆಂದು ತಿಳಿಸಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಈ ರೀತಿ ಸುತ್ತೋಲೆ ಕಳುಹಿಸಿದ ಮೇಲೆ ಇಡೀ ರಾಜ್ಯದಲ್ಲಿ ಯಾವುದಾದರೊಂದು ಜಿಲ್ಲೆಯಲ್ಲಿ ತಾವು ಹೇಳಿದಂತೆ ಜಿಲ್ಲಾಧಿಕಾರಿಗಳು ಬಡವರಿಗೋಸ್ಕರ ಅಕ್ವೈರ್ ಮಾಡಿಕೊಂಡು ಸೈಟ್ಸ್ ಪಂಚಿದ್ದಾರೆಂಬ ಒಂದು ಉದಾಹರಣೆ ಹೇಳಿ.

ಶ್ರೀ ಕೆ.ಎಚ್. ಪಾಟೀಲ್ : ಧಾರವಾಡ ಜಿಲ್ಲೆಯಲ್ಲಿ ಸೈಟ್ ಸೆಲೆಕ್ಷನ್ ಪ್ರಯತ್ನ ಮಾಡಲಿಕ್ಕೆ ಶುರು ಮಾಡಿದ್ದಾರೆ. ಈಗ ಕೆಲವು ಸಿಕ್ಕಿವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮದು ಪ್ರತ್ಯಕ್ಷ ಅನುಭವವೇನೆಂದರೆ, ಸೈಟ್ ಫಾರ್ಮೇಶನ್ ಮಾಡುವುದಕ್ಕೆ ಬಿಡಿಓ ಹತ್ತಿರ ದುಡ್ಡಿಲ್ಲ, ಮಂಡಲ ಪಂಚಾಯಿತಿಯವರಿಗೆ ಮಾಡುವುದಕ್ಕೆ ಬರುವುದಿಲ್ಲ. ಈಗಲಾದರೂ ಸೈಟ್ ಫಾರ್ಮೇಶನ್‌ಗಾಗಿ ಇಂತಿಷ್ಟು ದುಡ್ಡೆಂದು ಬಿಡುಗಡೆ ಮಾಡುತ್ತೀರಾ?

ಶ್ರೀ ಕೆ.ಎಚ್.ಪಾಟೀಲ್ : ನಾವು ಬಿಡಿಓನವರಿಗೆ ಸೈಟ್ ಸೆಲೆಕ್ಷನ್ ಮಾಡಿ, ಖರೀದಿ ಮಾಡಬೇಕೆಂದು ಅಧಿಕಾರ ಕೊಟ್ಟಿಲ್ಲ, ಅವರು ಐಡೆಂಟಿಫೈ ಮಾಡುತ್ತಾರೆ. ನಂತರ D.C. will acquire the land or purchase the land. It is not given to any other person. The DC is empowered and he will identify it in his own way.

ಶ್ರೀ ಜೆ.ಸಿ. ಮಾಧುಸ್ವಾಮಿ :ಸೈಟ್ ಅಕ್ವೈರ್ ಮಾಡಿದ ನಂತರ ಫಾರ್ಮೇಶನ್‌ಗಾಗಿ ಹಣ ಕೊಡಲಿಲ್ಲವೆಂದು ನಾವು ಕೇಳುತ್ತಿದ್ದೇವೆ.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರಗಳು ಮುಗಿಯಿತು. ಈಗ......

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ನನ್ನ ಪ್ರಶ್ನೆಗೆ ಉತ್ತರ ಇದುವರೆವಿಗೂ ಬಂದಿಲ್ಲ. ತಾವು ಆಶ್ವಾಸನೆ ಕೊಟ್ಟಿದ್ದೀರಿ. ಬೆಳಗಾವಿ ಕೃಷಿ ಭವನದ ಕೋಟಾ ವ್ಯವಹಾರದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆ. ಒಂದು ವಾರದೊಳಗಾಗಿ ಉತ್ತರ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದೀರಿ. ಇಲ್ಲಿಯತನಕ ಏನೋ ಒಳ ವ್ಯವಹಾರ ನಡೆಯುತ್ತಿದೆಯೋ ಏನೋ ನನಗೆ ಗೊತ್ತಿಲ್ಲ, ಆ ಕಾರಣ, ಮಾನ್ಯಮಂತ್ರಿಗಳಿಂದ ಉತ್ತರ ಕೊಡಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ರೇಷ್ಮೆ ಹುಳು ಗಂಟುರೋಗದ ಬಗ್ಗೆ ಚರ್ಚೆಯಾಗಬೇಕೆಂದು ನಾವು ಪ್ರಾರಂಭದಿಂದಲೂ ಕೇಳುತ್ತಿದ್ದೇವೆ.

ಅಧ್ಯಕ್ಷರು : ನಾಳೆ ಮಧ್ಯಾಹ್ನ ತೆಗೆದುಕೊಳ್ಳೋಣ. ಈಗ ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸಬೇಕು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ಬೆಂಗಳೂರು ಮೈಸೂರು ನಡುವೆ ವೇಗದ ಹೆದ್ದಾರಿ ಯೋಜನೆಯ ಮಂಜೂರಾತಿ

1819-ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು-ಮೈಸೂರು ಹೆದ್ದಾರಿ ನಡುವೆ ವೇಗದ ಹೆದ್ದಾರಿ ಯೋಜನೆ ಮಂಜೂರಾಗಿದೆಯೆ?*

ಆ) *ಮಂಜೂರಾಗಿದ್ದಲ್ಲಿ, ಅದನ್ನು ಯಾವಾಗ ಪ್ರಾರಂಭಿಸಲಾಗುವುದು, ಹಾಗೂ ಅದಕ್ಕೆ ತಗಲುವ ವೆಚ್ಚ ಎಷ್ಟು?*

ಇ) *ಈ ಯೋಜನೆಯಿಂದ ಎಷ್ಟು ಕಿ.ಮೀ. ಉಳಿತಾಯವಾಗುವುದು?*

ಶ್ರೀ ಜಿ.ಹೆಚ್. ಅಶ್ವಥ ರೆಡ್ಡಿ (ಲೋಕೋಪಯೋಗಿ ಸಚಿವರು)

ಅ) ಇಲ್ಲ.

ಆ) ಬೆಂಗಳೂರು ಮೈಸೂರು ಮಧ್ಯೆ ಪ್ರತ್ಯೇಕವಾದ ವೇಗದ ಹೆದ್ದಾರಿಯ ನಿರ್ಮಾಣದ ಯೋಜನೆಯು ಸರ್ಕಾರದ ಉನ್ನತಮಟ್ಟದ ಕಮಿಟಿಯ ಪರಿಶೀಲನೆಯಲ್ಲಿದೆ. ಯೋಜನೆಯು ಮಂಜೂರು ಆದ ನಂತರ ಪ್ರಾರಂಭಿಸಲಾಗುವುದು. ಇದಕ್ಕೆ ಸುಮಾರು 200 ಕೋಟಿ ರೂ.ಗಳ ಅಂದಾಜು ಆಗುತ್ತದೆ.

ಇ) ಸುಮಾರು 10 ಕಿ.ಮೀ. ನಷ್ಟು ದೂರ ಕಡಿಮೆ ಆಗುವುದೇ ಅಲ್ಲದೇ ವೇಳೆಯ ಉಳಿತಾಯವೂ ಅಪಘಾತ ರಹಿತವೂ ಆಗುತ್ತದೆ.

ಬೀದರ್ ಜಿಲ್ಲೆಯಲ್ಲಿ ಜಿಲ್ಲಾಪರಿಷತ್ತಿನಿಂದ ಲೋಕೋಪಯೋಗಿ ಇಲಾಖೆಗೆ ರಸ್ತೆಗಳನ್ನು ತೆಗೆದುಕೊಂದಿರುವುದರ ಬಗ್ಗೆ.

1908-ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ(ಔರಾದ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91ಮತ್ತು 1991-92ನೆ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಜಿಲ್ಲಾಪರಿಷತ್ತಿನಿಂದ ಎಷ್ಟು ಕಿ.ಮೀ.ರಸ್ತೆಯನ್ನು ಲೋಕೋಪಯೋಗಿ ಇಲಾಖೆಯವರು ತೆಗೆದುಕೊಂಡಿರುತ್ತಾರೆ (ವಿವರಗಳನ್ನು ನೀಡುವುದು).

ಆ) ಲೋಕೋಪಯೋಗಿ ಇಲಾಖೆಗೆ ತೆಗೆದುಕೊಂಡಿರುವ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಕ್ರಮಗಳೇನು.

ಇ) ಮುಂಬರುವ ವರ್ಷದಲ್ಲಿ ಎಷ್ಟು ಕಿಲೋಮೀಟರ್ ರಸ್ತೆಯನ್ನು ಜಿಲ್ಲಾ ಪರಿಷತ್ತಿನಿಂದ ಲೋಕೋಪಯೋಗಿ ಇಲಾಖೆಯು ವಹಿಸಿಕೊಳ್ಳಲಿದೆ?

ಶ್ರೀ ಜಿ.ಹೆಚ್. ಅಶ್ವಥರೆಡ್ಡಿ (ಲೋಕೋಪಯೋಗಿ ಸಚಿವರು)

ಅ) 1990-92 ಮತ್ತು 1991-92ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತಿನಿಂದ ಯಾವುದೇ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಂಡಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಸುಮಾರು ಒಟ್ಟು 6000 ಕಿ.ಮೀ. ಉದ್ದದ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಿ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಿಂದ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ತೆಗೆದುಕೊಳ್ಳುವ ವಿಷಯವನ್ನು ಶೀಘ್ರದಲ್ಲಿ ತೀರ್ಮಾನಿಸಲಾಗುವುದು.

ಪಶ್ಚಿಮ ಘಟ್ಟ ಯೋಜನೆಯಡಿಯಲ್ಲಿ ಕಲಘಟಗಿ ತಾಲ್ಲೂಕನ್ನು ಸೇರಿಸುವುದರ ಬಗ್ಗೆ.

1910-ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಕಲಘಟಗಿ ತಾಲ್ಲೂಕನ್ನು ಪಶ್ಚಿಮಘಟ್ಟ ಯೋಜನೆಯಡಿಯಲ್ಲಿ ಸೇರಿಸಬೇಕೆಂದು ಧಾರವಾಡ ಜಿಲ್ಲಾ ಪರಿಷತ್ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರವು ಅದರ ಬಗ್ಗೆ ಕೈಗೊಂಡ ಕ್ರಮಗಳೇನು?

ಇ) ಈ ಪ್ರದೇಶವು ಮಲೆನಾಡು ಪ್ರದೇಶ ಹಾಗೂ ಹಿಂದುಳಿದ ಪ್ರದೇಶವಾಗಿರುವುದರಿಂದ ಹಾಗೂ ಗುಡ್ಡಗಾಡು ಪ್ರದೇಶವಾಗಿರುವುದರಿಂದ ಕಲಘಟಗಿ ತಾಲ್ಲೂಕನ್ನು ಪಶ್ಚಿಮಘಟ್ಟ ಯೋಜನೆಯಡಿಯಲ್ಲಿ ಸೇರಿಸಿ ಅಭಿವೃದ್ಧಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಕೆ.ಹೆಚ್. ಪಾಟೀಲ್. (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).

ಅ) ಧಾರವಾಡ ಜಿಲ್ಲಾ ಪರಿಷತ್ ಈ ಬಗ್ಗೆ ಯಾವುದೇ ಶಿಫಾರಸ್ಸನ್ನು ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಹೆಚ್ಚುವರಿ 18 ತಾಲ್ಲೂಕುಗಳನ್ನು (ಕಲಘಟಗಿ ತಾಲ್ಲೂಕು ಸೇರಿ) ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಗೆ ಸೇರಿಸುವ ಪ್ರಸ್ತಾಪವನ್ನು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಯೋಜನಾ ಆಯೋಗಕ್ಕೆ ಕಳುಹಿಸಿದೆ.

ಬೇತಮಂಗಲವನ್ನು ಪ್ರವಾಸಿ ಸ್ಥಳವೆಂದು ಘೋಷಣೆ.

1903-ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ವಾರ್ತಾ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಕೋಲಾರ ಜಿಲ್ಲೆಯ ಬೇತಮಂಗಲ ಮತ್ತು ಗುಟ್ಟಹಳ್ಳಿ (ಬಂಗಾರು ತಿರುಪತಿ) ಪ್ರೇಕ್ಷಣೀಯ ಸ್ಥಳಗಳಾಗಿವೆ ಎಂಬುದು ನಿಜವೆ?

ಆ) ಬೇತಮಂಗಲವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಸರ್ಕಾರ ಯಾವುದಾದರೂ ಕ್ರಮ ಕೈಗೊಂಡಿದೆಯೆ?

ಇ) ಹಾಗಿಲ್ಲದ ಪಕ್ಷದಲ್ಲಿ ಬೇತಮಂಗಲವನ್ನು ಪ್ರೇಕ್ಷಣೀಯ ಸ್ಥಳವೆಂದು ಘೋಷಿಸಲು ಪ್ರಸ್ತುತ ವರ್ಷದಲ್ಲಿ ಅಭಿವೃದ್ಧಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಪ್ರವಾಸೋದ್ಯಮ ಸಚಿವರು)

ಅ) ಹೌದು.

ಆ) ಇಲ್ಲ.

ಇ) ಬೇತಮಂಗಲವನ್ನು ಈಗಾಗಲೇ ಗುರುತಿಸಿರುವ ಪ್ರವಾಸಿ ಸ್ಥಳಗಳ ಪಟ್ಟಿಯಲ್ಲಿ ಸೇರಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮಂತ್ರಿಗಳು) :ಸನ್ಮಾನ್ಯ ಅಧ್ಯಕ್ಷರೆ, 15ನೇ ಪಟ್ಟಿಯಲ್ಲಿರುವ ಚುಕ್ಕೆ ಗುರುತಿಲ್ಲದ 21 ಪ್ರಶ್ನೆಗಳ ಪೈಕಿ 20 ಪ್ರಶ್ನೆಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

ಮಾಗಡಿ ರೋಡ್ ಪೋಲೀಸ್ ವಸತಿಗಳಿಗೆ ನೀರು ಸರಬರಾಜು.

1815ಎ - ಕೆ.ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಮಾಗಡಿ ರೋಡ್ ಮತ್ತು ಜಾರಕ ಬಂಡೆ ಕಾವಲ್ ಪೋಲೀಸ್ ಕ್ವಾರ್ಟರ್ಸ್ ಗಳಲ್ಲಿ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಬಂದಿದ್ದಲ್ಲಿ, ಆ ಸಮಸ್ಯೆಯನ್ನು ನಿವಾರಿಸಲು ತೆಗೆದುಕೊಂಡ ಕ್ರಮ ಏನು?

ಶ್ರೀ ಜಿ.ಹೆಚ್. ಅಶ್ವಥರೆಡ್ಡಿ (ಲೋಕೋಪಯೋಗಿ ಮಂತ್ರಿಗಳು)

ಅ) ಬಂದಿದೆ.

ಆ) (1) ಮಾಗಡಿ ರೋಡ್ ಪೋಲೀಸ್ ವಸತಿಗಳಿಗೆ ಕೊಳವೆ ಬಾವಿಗಳ ಮೂಲಕ ನೀರನ್ನು ಒದಗಿಸಲಾಗುತ್ತಿದೆ.

(2) ಜಾರಕ ಬಂಡೆ ಕಾವಲ್‌ನಲ್ಲಿನ ವಸತಿಗಳಿಗೆ ನೀರನ್ನೊದಗಿಸುವ ಬಗ್ಗೆ, ಬಿ.ಡಿ.ಎ., ಬಿ.ಡಬ್ಲ್ಯೂ.ಎಸ್.ಎಸ್. ಮತ್ತು ಪೋಲೀಸ್ ಇಲಾಖೆಯವರೊಂದಿಗೆ ಸಮಾಲೋಚಿಸಿ ನೀರು ಸರಬರಾಜನ್ನು ಅಭಿವೃದ್ಧಿ ಪಡಿಸಲೂ ಕ್ರಮ ಕೈಗೊಳ್ಳಲಾಗುತ್ತದೆ.

ದಕ್ಷಿಣ ಕನ್ನಡದಲ್ಲಿ ಜವಾಹರ್ ರೋಜ್‌ಗಾರ್ ಯೋಜನೆ ಅಡಿಯಲ್ಲಿ ನಿರ್ಮಿಸಿದ ಮಾನವ ದಿನಗಳ ಕುರಿತು.

1873-ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) ; ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಜವಾಹರ್ ರೋಜ್‌ಗಾರ್ ಯೋಜನೆಯಡಿ 1989-90, 90-91ನೇ ಡಿಸೆಂಬರ್ ಅಂತ್ಯದವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಮಾನವ ದಿನಗಳನ್ನು ಸೃಷ್ಟಿಸಲಾಯಿತು? ಹಾಗೂ ಈ ಉದ್ದೇಶಕ್ಕಾಗಿ ಖರ್ಚು ಮಾಡಲಾದ ಹಣವೆಷ್ಟು?

ಆ) ಇದರಲ್ಲಿ ಕಾರ್ಮಿಕರಿಗೆ ವೇತನದ ಒಂದು ಭಾಗವಾಗಿ ನೀಡಲಾದ ಆಹಾರ ಧಾನ್ಯಗಳ ಒಟ್ಟು ಮೌಲ್ಯವೆಷ್ಟು?

ಶ್ರೀ. ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) 1989-90ನೇ ಸಾಲಿನಲ್ಲಿ 18.0578 ಮಾನವ ದಿನಗಳನ್ನು ಸೃಷ್ಟಿಸಲಾಗಿದ್ದು, ಈ ಬಗ್ಗೆ 402.89 ಲಕ್ಷ.ರೂ.ಗಳನ್ನು ವಿನಿಯೋಗವಾಗಿದೆ. 90-91ನೇ ಸಾಲಿನಲ್ಲಿ ಡಿಸೆಂಬರ್ ಅಂತ್ಯದವರೆಗೆ 4.77076 ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಗಿದ್ದು, ಈ ಬಗ್ಗೆ 122.735 ಲಕ್ಷ ರೂ.ಗಳ ವಿನಿಯೋಗವಿಗಿದೆ.

ಆ) 1989-90ನೇ ಸಾಲಿನಲ್ಲಿ ರೂ. 45.405 ಲಕ್ಷ ರೂ. ಹಾಗೂ 90-91ರಲ್ಲಿ (ಡಿಸೆಂಬರ್ ಅಂತ್ಯದವರೆಗೆ) ರೂ.10.129 ಲಕ್ಷ ಮೌಲ್ಯದ ಆಹಾರ ಧಾನ್ಯಗಳನ್ನು ವೇತನದ ಭಾಗವಾಗಿ ಕಾರ್ಮಿಕರಿಗೆ ಹಂಚಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರೆತ

1874 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಸಲದ ಮಳೆಗಾಲದ ಋತುವಿನಲ್ಲಿ ಯಾವ ಯಾವ ಕಡೆಗಳಲ್ಲಿ ಸಮುದ್ರ ಕೊರೆತ ಉಂಟಾಗಿದೆಯೆಂಬ ವರದಿ ಸರ್ಕಾರಕ್ಕೆ ಬಂದಿದೆಯೆ (ಸ್ಥಳದ ವಿವರ ಮತ್ತು ಉಂಟಾದ ಹಾನಿಯ ಬಗ್ಗೆ ವಿವರವನ್ನೊದಗಿಸುವುದು)

ಆ) ಉಡುಪಿ ತಾಲ್ಲೂಕು ಕೋಡಿಬೆಂಗ್ರೆಯಲ್ಲಿ ಸಮುದ್ರ ಕೊರೆತಕ್ಕೆ ಒಳಗಾದ ಪ್ರದೇಶದ ವಿಸ್ತೀರ್ಣವೆಷ್ಟು ಉದ್ದ -ಅಗಲ ಹಾಗೂ ಸಂತ್ರಸ್ತರ ಮತ್ತು ಹಾನಿಯ ವಿವರ ನೀಡುವುದು.

ಇ) ಈ ಸಂಬಂಧದಲ್ಲಿ ಸರ್ಕಾರದವರು ಕೈಗೊಂಡ ಪರಿಹಾರ ಕಾರ್ಯಕ್ರಮಗಳೇನು?

ಈ) ಕೇರಳ ರಾಜ್ಯದಲ್ಲಿ ಇರುವ ಕರಾವಳಿ ಪ್ರದೇಶದಲ್ಲಿರುವಂತೆ ಶಾಶ್ವತ ತಡೆಗೋಡೆಗಳನ್ನು ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ನಿರ್ಮಿಸುವ ಯೋಜನೆಯು ಸರ್ಕಾರದ ಮುಂದಿದೆಯೆ, ಹಾಗಿದ್ದಲ್ಲಿ ಅದರ ವಿವರಗಳೇನು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಬಂದಿದೆ. ಸಮುದ್ರ ಕೊರೆತಕ್ಕೊಳಗಾದ ಸ್ಥಳಗಳು :

(1) ಮಂಗಳೂರು ತಾಲ್ಲೂಕಿನ ಉಳ್ಳಾಲ ಮತ್ತು ಮುಕ್ಕ (2) ಉಡುಪಿ ತಾಲ್ಲೂಕಿನ ಹೆಜಮಾಡಿಕೋಡಿ, ಬಡಾಉಚ್ಚಿಲ, ಉಳಿಯಾರಗೋಳಿಪಡುಕೆರೆ, ಅಡ್ಡಬೆಂಗ್ರೆ ಮತ್ತು ಕೋಡಿಬೆಂಗ್ರೆ (3) ಕುಂದಾಪುರ ತಾಲ್ಲೂಕಿನ ಕಸಬಾ ಕೋಡಿ ಮತ್ತು ಗುಜ್ಜಾಡಿ. (ಹಾನಿಯ ವಿವರವನ್ನು ಲಗತ್ತಿಸಲಾಗದೆ)

ಆ) ಕೋಡಿಬೆಂಗ್ರೆಯಲ್ಲಿ ಹಾನಿಗೊಳಗಾದ ಪ್ರದೇಶದ ವಿಸ್ತೀರ್ಣ ಉದ್ದ ಸುಮಾರು 920 ಮೀ; ಅಗಲ 15ರಿಂದ 20 ಮೀ ; ಒಟ್ಟು 14 ಜನರ ಆಸ್ತಿ ಪಾಸ್ತಿಗಳಿಗೆ ಹಾನಿ ಉಂಟಾಗಿದೆ. 51 ತೆಂಗಿನ ಮರಗಳು ಮತ್ತು 37 ಗಾಳಿ ಮರಗಳು ಸಮುದ್ರದ ಪಾಲಾಗಿವೆ.

ಇ) ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಮೇಲ್ಕಂಡ ಎಲ್ಲಾ ಸ್ಥಳಗಳಲ್ಲಿ ಸಮುದ್ರ ಕೊರೆತ ಪ್ರತಿಬಂಧಿಸಲು ತುರ್ತು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೇರಳ ರಾಜ್ಯದಲ್ಲಿರುವಂತೆ ಶಾಶ್ವತ ತಡೆಗೋಡೆಗಳನ್ನು ರಾಜ್ಯ ಸರ್ಕಾರದ ವತಿಯಿಂದ ಈಗಾಗಲೇ ಮಾಡಲಾಗುತ್ತಿದೆ. 1991ರ ಮಾರ್ಚ್ ಅಂತ್ಯದ ವೇಳೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 7.965 ಕಿ.ಮೀ. ಉದ್ದ ತಡೆಗೋಡೆಗಳನ್ನು 340.188 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ. ರಾಜ್ಯದಲ್ಲಿ ಸಮುದ್ರ ಕೊರೆತ ತಡೆಗೋಡೆಗಳನ್ನು ನಿರ್ಮಿಸಲು ರೂ. 145 ಕೋಟಿ, ರೂ. 40 ಕೋಟಿ ಮತ್ತು ರೂ. 15 ಕೋಟಿ 3 ಸಮಗ್ರ ಯೋಜನೆಗಳನ್ನು ತಯಾರಿಸಿ ಕೇಂದ್ರ ಸರ್ಕಾರದ ಆರ್ಥಿಕ ನೆರವಿಗಾಗಿ ಕಳುಹಿಸಲಾಗಿದೆ.

ಈ ಸಲದ ಮಳೆಗಾಲದ ಋತುವಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಹಲವಾರು ಕಡೆ ತೀವ್ರ ಸಮುದ್ರ ಕೊರೆತ ಉಂಟಾಗಿದ್ದು ಅವುಗಳ ವಿವರಗಳು ಈ ಕೆಳಕಂಡಂತಿವೆ.

ಸಂಖ್ಯೆ	*ಸಮುದ್ರ ಕೊರೆತಕ್ಕೊಳಗಾದ ಪ್ರದೇಶದ ಹೆಸರು ಮತ್ತು ಉದ್ದ*	*ಹಾನಿಯ ವಿವರ*
1.	ಮಂಗಳೂರು ತಾಲ್ಲೂಕು ಉಳ್ಳಾಲ 230 ಮೀ.	ಸುಮಾರು 20 ಮೀ. ಅಗಲಕ್ಕೆ ಭೂ ಪ್ರದೇಶವು ಸಮುದ್ರ ಪಾಲಾಗಿದ್ದು 3 ಮನೆಗಳು ಭಾಗಶಃ ಹಾನಿಗೊಳಗಾಗಿದೆ.
2.	ಅದೇ- ಮುಕ್ಕ 320 ಮೀ.	ಸುಮಾರು 15 ಮೀ. ಅಗಲಕ್ಕೆ ಭೂ ಪ್ರದೇಶವು ಸಮುದ್ರ ಪಾಲಾಗಿದ್ದು 30 ಮೀ. ಉದ್ದಕ್ಕೆ ಮೀನುಗಾರಿಕಾ ರಸ್ತೆ ಸಮುದ್ರ ಪಾಲಾಗಿರುತ್ತದೆ. 2 ಮನೆಗಳು ಭಾಗಶಃ ಹಾನಿಗೊಂಡಿವೆ. 10 ತೆಂಗಿನ ಮಾರ ಮತ್ತು 25 ಗಾಳಿ ಮರಗಳು ಕೊಚ್ಚಿ ಹೋಗಿವೆ.

3.	ಉಡುಪಿ ತಾಲ್ಲೂಕು ಹೆಜಮಾಡಿ ಕೋಡಿ 100 ಮೀ.	ಸುಮಾರು 20 ಮೀ. ಅಗಲಕ್ಕೆ ಭೂ ಪ್ರದೇಶವು, 12 ತೆಂಗಿನ ಮರಗಳು ನಾಶವಾಗಿವೆ. 50 ಮೀ. ಉದ್ದಕ್ಕೆ ರಸ್ತೆಯು ನೀರು ಪಾಲಾಗಿರುತ್ತದೆ.
4.	-ಅದೇ- ಬಡ ಉಚ್ಚಿಲ 320 ಮೀ.	ಸುಮಾರು 30 ಮೀ. ಅಗಲಕ್ಕೆ ಭೂ ಪ್ರದೇಶವು ಸಮುದ್ರ ಪಾಲಾಗಿದ್ದು 30 ತೆಂಗಿನ ಮರಗಳು ಉರುಳಿ ಬಿದ್ದಿರುತ್ತದೆ.
5.	-ಅದೇ- ಉಳಿಯಾರಗೋಳಿ ಪಡುಕೆರೆ 200 ಮೀ.	ಸುಮಾರು 10 ಮೀಟರ್ ಅಗಲಕ್ಕೆ ಭೂ ಪ್ರದೇಶವು ಸಮುದ್ರ ಪಾಲಾಗಿದ್ದು 200 ಮೀ. ಉದ್ದದ ಮೀನುಗಾರಿಕಾ ರಸ್ತೆಯು ಭಾಗಶ: ಹಾನಿಗೊಂಡಿದೆ.
6.	-ಅದೇ- ಅಡ್ಡಬೆಂಗ್ರೆ 300 ಮೀ.	ಸುಮಾರು 15 ಮೀ.ರಿಂದ 20 ಮೀ. ಅಗಲಕ್ಕೆ ಭೂ ಪ್ರದೇಶವು ಸಮುದ್ರ ಪಾಲಾಗಿದೆ.
7.	-ಅದೇ- ಕೋಡಿಬೆಂಗ್ರೆ 920ಮೀ.	ಸುಮಾರು 15 ರಿಂದ 20 ಮೀ. ಅಗಲಕ್ಕೆ ಭೂ ಪ್ರದೇಶರು ಸಮುದ್ರ ಪಾಲಾಗಿದ್ದು 51 ತೆಂಗಿನ ಮರಗಳು ಮತ್ತು 37 ಗಾಳಿ ಮರಗಳು ಸಮುದ್ರ ಪಾಲಾಗಿವೆ. ಒಟ್ಟು 14 ಜನರ ಆಸ್ತಿ ಪಾಸ್ತಿಗಳಿಗೆ ಹಾನಿ ಉಂಟಾಗಿದೆ.
8.	ಕುಂದಾಪುರ ತಾಲ್ಲೂಕು ಕಸಬಾ ಕೋಡಿ 200 ಮೀ.	ಮೀನುಗಾರಿಕಾ ರಸ್ತೆಯು ಅಪಾಯದ ಹಂತದಲ್ಲಿದೆ. ಕರ್ನಾಟಕ ವಿದ್ಯುತ್ ಮಂಡಳಿಯ ಒಂದು ಟ್ರಾನ್ಸ್‌ಫಾರ್ಮರ್ ಕುಸಿಯುವ ಹಂತದಲ್ಲಿದೆ.
9.	-ಅದೇ- ಗುಜ್ಜಾಡಿ 75 ಮೀ.	ಈ ಸ್ಥಳದಲ್ಲಿರುವ ಮೀನುಗಾರರ ಹಾಗೂ ಪರಿಶಿಷ್ಟ ಜಾತಿಗೆ ಸೇರಿದವರ ಮನೆಗಳು ಮತ್ತು ಗುಡಿಸಲುಗಳು ಕೂಡ ಅಪಾಯದ ಅಂಚಿನಲ್ಲಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಸ್ತೆಗಳ ದುರಸ್ತಿಯ ಬಗ್ಗೆ

1918 -ಶ್ರೀ ಪಿ. ಬಸವರಾಜ್(ಬ್ರಹ್ಮಾವರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಪರೀತ ಮಳೆಯಿಂದಾಗಿ ರಸ್ತೆಯಗಳೆಲ್ಲಾ ಮೂಲ ಸ್ವರೂಪ ಕಳೆದುಕೊಂಡಿರುವುದು ನಿಜವಲ್ಲವೆ:

ಆ) ಇದರಿಂದ ಸಾರ್ವಜನಿಕರಿಗೆ ರಸ್ತೆಯ ಮೇಲೆ ಸಂಚಾರಕ್ಕೆ ಮತ್ತು ವಾಹನಗಳ ಓಡಾಟಕ್ಕೆ ಕಷ್ಟಕರ ಪರಿಸ್ಥಿತಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

ಇ) ಮಳೆಗಾಲದ ಅಂತ್ಯದ ವೇಳೆಗೆ ವಿಶೇಷ ಅನುದಾನ ಬಿಡುಗಡೆ ಮಾಡಿ ರಸ್ತೆಯಯ ಯಥಾಸ್ಥಿತಿಗೆ ಅನುಕೂಲ ಮಾಡಿಕೊಡುವಲ್ಲಿ ಸರ್ಕಾರ ಯೋಚಿಸಬಹುದೆ?

ಶ್ರೀ ಜಿ. ಹೆಚ್. ಅಶ್ವಥ ರೆಡ್ಡಿ (ಲೋಕೋಪಯೋಗಿ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚಿನ ಅತಿವೃಷ್ಟಿಯಿಂದ ರಸ್ತೆಗಳಿಗೆ ಹಾನಿ ಉಂಟಾಗಿದೆ.

ಆ) ಬಂದಿದೆ.

ಇ) ರಸ್ತೆಗಳ ನಿರ್ವಹಣೆ ಹಾಗೂ ದುರಸ್ತಿಗಾಗಿ ಹೆಚ್ಚುವರಿ ಅನುದಾನ ನೀಡುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.

ಉಡುಪಿ ತಾಲ್ಲೂಕು 41ನೇ ಶಿರೂರು ಗ್ರಾಮದ ಉಡುಪಿ ಕಂಬಳದ ಬಳಿ ಚಿಕ್ಕ ಸೇತುವೆ

1919-ಶ್ರೀ ವಿ. ಬಸವರಾಜ್ (ಬ್ರಹ್ಮಾವರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಉಡುಪಿ ತಾಲ್ಲೂಕು 41ನೇ ಶಿರೂರು ಗ್ರಾಮದ ಉಡುಪರ ಕಂಬಳದ ಬಳಿಯ ನದಿಗೆ ಚಿಕ್ಕ ಸೇತುವೆಯ ನಿರ್ಮಾಣದ ಅವಶ್ಯಕತೆಯ ಕುರಿತು ಸತತವಾಗಿ ಸಾರ್ವಜನಿಕರಿಂದ ಲೋಕೋಪಯೋಗಿ ಇಲಾಖೆಗೆ ಮನವಿ ಬಂಧಿರುವುದ ನಿಜವಲ್ಲವೆ?

ಆ) ಈ ತುರ್ತು ಅವಶ್ಯಕತೆ ಕುರಿತು ಲೋಕೋಪಯೋಗಿ ಇಲಾಖೆ ಕೈಗೊಂಡು ಕ್ರಮಗಳೇನು? ವಿವರ ತಿಳಿಸುವುದು?

ಶ್ರೀ ಜಿ.ಹೆಚ್. ಅಶ್ವಥ ರೆಡ್ಡಿ (ಲೋಕೋಪಯೋಗಿ ಸಚಿವರು):

ಅ) ನಿಜ, ಬಂದಿದೆ.

ಆ) ಸದರಿ ಕಾಮಗಾರಿಯು ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿದ್ದು ಅನುದಾನ ದೊರೆತಲ್ಲಿ ಕ್ರಿಯಾಯೋಜನೆಯಲ್ಲಿ ಸೇರಿಸಲಾಗುವುದು.

ರಾಜ್ಯದಲ್ಲಿರುವ ಲೋಕೋಪಯೋಗಿ ರಸ್ತೆಗಳ ಬಗ್ಗೆ

1878- ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ ಅಡಿಯಲ್ಲಿರುವ ರಾಷ್ಟ್ರೀಯ, ರಾಜ್ಯ ಹಾಗೂ ಜಿಲ್ಲಾ ರಸ್ತೆಗಳ ಸಂಖ್ಯೆ ಎಷ್ಟು?

ಆ) ಇವುಗಳ ನಿರ್ವಹಣೆಗಾಗಿ 1990-91ನೇ ಸಾಲಿನಲ್ಲಿ ಖರ್ಚಾಗಿರುವ ಹಣವೆಷ್ಟು?

ಇ) 1991-92ನೇ ಸಾಲಿನಲ್ಲಿ ಈ ರಸ್ತೆಗಳಿಗಾಗಿ ಖರ್ಚು ಮಾಡುಲುದ್ದೇಶಿಸಿರುವ ಮೊತ್ತ, ಎಷ್ಟು ಹಾಗೂ ಈ ಹಣ ಸಾಕಾಗುವುದೇ?

ಶ್ರೀ ಜಿ. ಎಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಸಚಿವರು) :

ಅ) ರಾಜ್ಯದಲ್ಲಿರುವ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ವಿವರ ಕೆಳಕಂಡಂತಿದೆ :

1. ರಾಷ್ಟ್ರೀಯ ಹೆದ್ದಾರಿ 1997 ಕಿ.ಮೀ.

... ಮುಖ್ಯ ಜಿಲ್ಲಾ ರಸ್ತೆಗಳು 17,997 ಕಿ.ಮೀ.

ಆ) 1990-91ನೇ ಸಾಲಿಗೆ ನಿರ್ವಹಣೆಗೆ ಆಗಿರುವ ವೆಚ್ಚ ಕೆಳಕಂಡಂತಿದೆ:

1.ರಾಷ್ಟ್ರೀಯ ಹೆದ್ದಾರಿ : 883. 04 ಲಕ್ಷ ರೂ.

2. ರಾಜ್ಯ ಹೆದ್ದಾರಿ

3. ಮುಖ್ಯ ಜಿಲ್ಲಾ ರಸ್ತೆ : 4382.74 ಲಕ್ಷ ರೂ.

ಇ) 1991-92ನೇ ಸಾಲಿನಲ್ಲಿ ರಾಜ್ಯದ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ರಾಜ್ಯ ಹೆದ್ದಾರಿ ಹಾಗೂ ಮುಖ್ಯ ಜಿಲ್ಲಾ ರಸ್ತೆಗಳ ನಿರ್ವಹಣೆಗೆ ಖರ್ಚು ಮಾಡಲು ಉದ್ದೇಶಿಸಿರುವ ಹಣ 4011 ಲಕ್ಷ ರೂ. ಗಳು. ಇದು ರಸ್ತೆ ಗಳನ್ನು ಒಳ್ಳೆಯ ಸ್ಥಿತಿಯಲ್ಲಿಡಲು ಸಾಕಾಗುವುದಿಲ್ಲ.

ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರಿನ ಸರಬರಾಜಿನ ಬಗ್ಗೆ

1879-ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪಶ್ನಗಳಿಗೆ ದಯವಿಟ್ಟು ಉತ್ತವಿಸುವರೆ?

1) ರಾಜ್ಯದಲ್ಲಿ ಕುಡಿಯುವ ನೀರಿಗಾಗಿ ಗ್ರಾಮೀಣ ಪ್ರದೇಶಗಳಲ್ಲಿ ಖರ್ಚಾಗಿರುವ ಹಣ ಎಷ್ಟು ? (ಕಳೆದ ಮೂರು ವರ್ಷಗಳ ವಿವರ ಕೊಡುವುದು (ವರ್ಷಾವಾರು))

2) ಇದಕ್ಕಾಗಿ ಒದಗಿಸಿದ ಹಣವು ಸಾಕಾಗಿದೆಯೇ?

3) ವಿಶ್ವ ಬ್ಯಾಂಕಿನಿಂದ ಈ ಕಾರ್ಯ ಕ್ರಮಕ್ಕಾಗಿ ಸಾಲ ತೆಗೆದುಕೊಳ್ಳುವ ಯೋಜನೆ ಸರ್ಕಾರದ ಮುಂದೆ ಇದೆಯೇ?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಸಚಿವರು):

ವರ್ಷ	*ಖರ್ಚಾಗಿರುವ ಹಣ*
1988-89	5,344.83 ಲಕ್ಷ ರೂ.
1989-90	5,101.03 ಲಕ್ಷ ರೂ.
1990-91	4,216.39 ಲಕ್ಷ ರೂ.
ಒಟ್ಟು	**14,662.30 ಲಕ್ಷ ರೂ.**

2) ವಾರ್ಷಿಕ ಹಾಗೂ ಪಂಚವಾರ್ಷಿಕ ಯೋಜನೆಗೆ ಅನುಗುಣವಾಗಿ ಹಣವನ್ನು ಒದಗಿಸಲಾಗಿದೆ.

3) ಹೌದು.

ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ

1902-ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ವಾರ್ತಾ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ರಾಜ್ಯದಲ್ಲಿ ಪ್ರವಾಸೋದ್ಯಮದ ಬಗ್ಗೆ ಸಮಗ್ರ ಯೋಜನೆಯನ್ನೇನಾದರೂ ಸಿದ್ಧಪಡಿಸಲಾಗಿರುವುದೆ?

ಶ್ರೀ ಕೆ. ಶಿವಮೂರ್ತಿ (ವಾರ್ತಾ, ಪ್ರವಾಸೋದ್ಯಮ ಸಚಿವರು) :

ಅ) ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:

1) ಪ್ರವಾಸಿಗರಿಗೆ ವಸತಿ ಸೌಲಭ್ಯ

2) ರಸ್ತೆ ಬದಿ ಸೌಲಭ್ಯ

3) ಉಪಹಾರ ಮಂದಿರ ಮತ್ತು ಶೌಚಾಲಯಗಳ ಸೌಲಭ್ಯ

4) ವಿವಿಧ ಮಾಧ್ಯಮಗಳ ಮೂಲಕ ಪ್ರವಾಸೋಧ್ಯಮ ಸಂಪತ್ತಿನ ಪ್ರಚಾರ

5) ದೋಣಿ ವಿಹಾರ ಸೌಲಭ್ಯ ಹಾಗೂ ಜಲಕ್ರೀಡಿ

6) ವ್ಯವಸ್ಥಿತ ಪ್ರವಾಸಗಳು

7) ವಿಮಾನ ನಿಲ್ದಾಣ ಅಭಿವೃದ್ಧಿ

8) ಕರ್ನಾಟಕದ ಪ್ರಮುಖ ಉತ್ಸವಗಳ ಆಚರಣೆ

ಆ) ಹೌದು.

ಕೋಲಾರ ಜಿಲ್ಲಾ ಪರಿಷತ್ ಅಧೀನಕ್ಕೆ ಸೇರಿದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳು

1904- ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ಕೋಲಾರ ಜಿಲ್ಲಾ ಪರಿಷತ್ ಅಧೀನಕ್ಕೆ ಒಳಪಡುವ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಗ್ರೂಪ್ ಸಿ ಮತ್ತು ಡಿ ಹುದ್ದೆಗಳ ಸಂಖ್ಯೆ ಎಷ್ಟು?

ಬಿ) ಖಾಲಿ ಇರುವ ಹುದ್ದೆಗಳಲ್ಲಿ ದಿನಗೂಲಿ ಆಧಾರದಲ್ಲಿ ನೇಮಕ ಮಾಡಿ ತಾತ್ಕಾಲಿಕವಾಗಿ ಭರ್ತಿ ಮಾಡಲಾದ ಸಂಖ್ಯೆ ಎಷ್ಟು?

ಸಿ) ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು?

ಡಿ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಬೇಕಾಗಿರುವ ಕಾಲಾವಧಿ?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆ ಸಚಿವರು):

ಎ) ಕೋಲಾರ ಜಿಲ್ಲಾ ಪರಿಷತ್ ಅಧೀನದ ವಿವಿಧ ಇಲಾಖೆಗಳಲ್ಲಿ ಒಟ್ಟು 855 ಗ್ರೂಪ್ ಸಿ ಹುದ್ದೆಗಳು ಹಾಗೂ 240 ಗ್ರೂಪ್ ಡಿ ಹುದ್ದೆಗಳು ಖಾಲಿ ಇರುತ್ತವೆ. (ಇಲಾಖಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.)

ಬಿ) 31 ಗ್ರೂಪ್ ಸಿ ಹುದ್ದೆಗಳು ಹಾಗೂ 52 ಗ್ರೂಪ್ ಡಿ ಹುದ್ದೆಗಳನ್ನು ತಾತ್ಕಾಲಿಕವಾಗಿ ದಿನಗೂಲಿ ಆಧಾರದಲ್ಲಿ ನೇಮಕ ಮಾಡಿ ಭರ್ತಿ ಮಾಡಲಾಗಿದೆ.

ಸಿ) 1481 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ.

ಡಿ) ಪ್ರಸ್ತುತ ನೇಮಕಾತಿ ನಿಯಮಗಳ ಪ್ರಕಾರ ಜಿಲ್ಲಾ ಪರಿಷತ್‌ನ ಹುದ್ದೆಗಳನ್ನು (ಅಭಿವೃದ್ಧಿ ಇಲಾಖೆ ಹುದ್ದೆ ಬಿಟ್ಟು) ಸರ್ಕಾರದ ವಿವಿಧ ಇಲಾಖೆಗಳ ನೌಕರರಿಂದ ನಿಯೋಜನೆ ಮಾಡಬೇಕಾಗಿರುತ್ತದೆ. ಖಾಲಿ ಇರುವ ಹುದ್ದೆಗಳನ್ನು ವಿವಿಧ ಇಲಾಖೆಗಳಿಂದ ನಿಯಮಗಳ ಪ್ರಕಾರ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

ANNEXURE-I

Sl. No.	*Departments under control of Zilla Parishads.*	*No. of Group C posts that are vocant in various Dept. Under the Control of Z.P. Kolar*	*Out of which No. of them that are filled Temporarily by appointing in Daily wages.*	*No. of Vacancies of primary school Teachers are vacant*
1.	Zilla Parishad Kolar	13	7	—
2.	Mandal Panchayats	12	—	—
3.	Taluk Panchayat Samithi	4	—	—
4.	Executive Engineers Engineering Divn.	18	—	—
5.	Education Department	120	—	1481
6.	Social Welfare Dept.	37	10	—
7.	Women & Child Dept.. Department	95	—	—
8.	Youth Services and Sports Department.	—	—	—
9.	Health Department	244	—	—
10.	Horticulture Department	1	—	—
11.	Social Forestry Dept.	5	—	—
12.	Backward Class and Minorities Department.	21	5	—
13.	Mines and Geology Dept.	—	—	—
14.	Animal Husbandary and Veterinary Services	—	—	—
15.	Khadi & Village Industries	97	—	—
16.	Fisheries Department	8	—	—
17.	Sericulture Department	3	—	—
18.	Soil Conservation Dept.	4	—	—
19.	Agriculture Department	162	—	—
	Total	855	21	1481

Sl. No.	Departments coming under the control of Zilla parishad	No. of group 'D' posts that that are vacant in various Depts under the control of Zilla Parishad	Out of which No. of them that are filled temprarily by appointing on daily wages.
1.	Zilla Parishad, Kolar	Nil	Nil
2.	Mandal Panchayats	Nil	Nil
3.	Taluk Panchayar Samithis	3	1
4.	Executive Engineer, Zilla Parishad Engineering Division.	22	—
5.	Education Department	36	—
6.	Social Welfare Department	39	33
7.	Women and Children Development.	3	1
8.	Youth Service and Sports Department	Nil	Nil
9.	Health and Family Welfare.	37	Nil
10.	Horticulture Department	Nil	Nil
11.	Social Forestry	Nil	Nil
12.	Backward Classes and Minoritie	41	
13.	Mines and Geology	Nil	Nil
14.	Animal Husbandary and Vety. Services.	41	Nil
15.	Khadi and Village Industries.	5	Nil
16.	Fisheries	2	Nil
17.	Sericulture	Nil	Nil
18.	Soil Conservation	Nil	Nil
19.	Agriculture	11	Nil
	Total	240	92

ವಯೋವೃದ್ಧ ಪತ್ರಕರ್ತರು ಕ್ಲಿಷ್ಟ ಪರಿಸ್ಥಿತಿಯಲ್ಲಿರುವ ಬಗ್ಗೆ

1905-ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೆಲವರು ವಯೋವೃದ್ಧ ಪತ್ರಕರ್ತರು ಕ್ಲಿಷ್ಟ ಪರಿಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಅರ್ಹ ಪತ್ರಕರ್ತರಿಗೆ ಮಾಸಾಶನ ಮಂಜೂರು ಮಾಡುವ ಯೋಜನೆ ಇದೆಯೇ ?

ಇ) ಇಲ್ಲದಿದ್ದಲ್ಲಿ ಅರ್ಹ ಪತ್ರಕರ್ತರಿಗೆ ಮಾಸಾಶನ ಮಂಜೂರು ಮಾಡಲು ಸರ್ಕಾರ ಸಮಿತಿಯನ್ನು ರಚಿಸುವುದೇ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು):

ಅ) ಹೌದು.

ಆ) ಹೌದು.

ಇ) ಉದ್ಭವಿಸುವುದಿಲ್ಲ.

ನೆಲಮಂಗಲ ಟೌನ್‌ನಲ್ಲಿ ಕ್ರೀಡಾಂಗಣ ನಿರ್ಮಾಣ

1937 - ಶ್ರೀ ಅಂಜನಾ ಮೂರ್ತಿ (ನೆಲಮಂಗಲ) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ಟೌನ್‌ನಲ್ಲಿ ಸ್ಥಳೀಯ ಶಾಸಕರಿಂದ ಖಾಲಿ ಇರುವ ಆಟದ ಮೈದಾನದಲ್ಲಿ ಒಂದು ಕ್ರೀಡಾಂಗಣ ಬೇಕೆಂದು ಸರ್ಕಾರಕ್ಕೆ ಒಂದು ಮನವಿ ಬಂದಿರುವುದು ನಿಜವೇ?

ಆ) ಹಾಗಿದ್ದಲ್ಲಿ ಸರ್ಕಾರವು ಕ್ರೀಡಾಪಟುಗಳ ಹಿತದೃಷ್ಟಿಯಿಂದ ಮನವಿಯನ್ನು ಪರಿಗಣಿಸುವುದೇ?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):

ಅ) ಹೌದು.

ಆ) ಹೌದು, ಸರ್ಕಾರದ ಪರಿಶೀಲನೆಯಲ್ಲಿದೆ.

ಔರಾದ್ ತಾಲ್ಲೂಕಿನಲ್ಲಿ ಸ್ಟೇಡಿಯಂ ನಿರ್ಮಾಣ

1909-ಶ್ರೀ ಗುರುಪಾದಪ್ಪ ನಾಗಮಾರ್‌ಪಲ್ಲಿ (ಔರಾದ್) : ಮಾನ್ಯ ಯುವಜನಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿ ಸರ್ಕಾರದ ವತಿಯಿಂದ ಸ್ಟೇಡಿಯಂ ನಿರ್ಮಿಸಲಾಗಿದೆಯೆ?

ಆ) ಇಲ್ಲದಿದ್ದರೆ ಹಿಂದುಳಿದ ತಾಲ್ಲೂಕಾದ ಔರಾದ್‌ವಲ್ಲಿ ಕ್ರೀಡಾ ಚಟುವಟಿಕೆಗಳನ್ನು ಉತ್ತೇಜಿಸುವ ಸಲುವಾಗಿ ಸರ್ಕಾರದಿಂದ ಒಂದು ಸ್ಟೇಡಿಯಂ ನಿರ್ಮಿಸುವ ಬಗ್ಗೆ ಸರ್ಕಾರದ ಪರಿಶೀಲಿಸುತ್ತಿದೆಯೆ?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) :

ಅ) ಇಲ್ಲ.

ಆ) ಹೌದು.

ಶಿರವಾಡ ಸವಣೂರು ರಸ್ತೆಯ ದುರಸ್ತಿ

1911-ಶ್ರೀ ಪಿ. ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಹಾಗಿದ್ದಲ್ಲಿ ಇದುವರೆವಿಗೂ ಅತ್ಯಂತ ದುಸ್ಥಿತಿಯಲ್ಲಿರುವ ಈ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯವರು ದುರಸ್ತಿ ಮಾಡದಿರಲು ಕಾರಣವೇನು?

ಇ) ಆದ್ದರಿಂದ ವಾಹನ ಸಂಚಾರಕ್ಕೆ ತಡೆಯುಂಟಾಗಿ ಎಷ್ಟೋಸಲ ವಾಹನ ಸಂಚಾರವನ್ನು ಸ್ಥಗಿತಗೊಳಿಸಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಅದನ್ನು ಗಮನಿಸಿ ಸರ್ಕಾರವು ಈ ಕೂಡಲೇ ರಸ್ತೆಯನ್ನು ದುರಸ್ತಿ ಮಾಡಲು ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್. ಅಶ್ವಥ ರೆಡ್ಡಿ (ಲೋಕೋಪಯೋಗಿ ಸಚಿವರು) :

ಅ) ಶಿರೆವಾಡ - ಸವಣೂರು ರಸ್ತೆಯು ಧಾರವಾಡ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿಯೇ ಇದೆ.

ಆ) ಈ ರಸ್ತೆಯ ಅತಿಕೆಟ್ಟುಹೋದ ಭಾಗಗಳ ದುರಸ್ತಿ ಕಾರ್ಯವನ್ನು ಜಿಲ್ಲಾಪರಿಷತ್ತಿನವರು ತೆಗೆದುಕೊಂಡಿದ್ದಾರೆ.

ಇ) ದಿನಾಂಕ: 12-8-91ರಿಂದ 16-8-91ರವರೆವಿಗೆ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳ ಸಂಚಾರ ನಿಲ್ಲಿಸಲ್ಪಟ್ಟಿತ್ತೆಂದು ಸರ್ಕಾರದ ಗಮನಕ್ಕೆ ಬಂದಿದೆ.

ಈ) ಈ ರಸ್ತೆಯನ್ನು ದುರಸ್ತಿ ಮಾಡಿ ಸುಸ್ಥಿತಿಯಲ್ಲಿಡಲು ಜಿಲ್ಲಾ ಪರಿಷತ್ತಿನವರಿಗೆ ಸೂಚಿಸಲಾಗಿದೆ, ಹಾಗೂ ಈ ರಸ್ತೆಯನ್ನು ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳುವ ಬಗ್ಗೆ ಶೀಘ್ರವೇ ತೀರ್ಮಾನಿಸಲಾಗುತ್ತದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಹುಡ್ಕೋ ಮತ್ತು ಜನತಾಮನೆಗಳ ನಿರ್ಮಾಣದ ಬಗ್ಗೆ

1913 - ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಗೆ 1988-89, 1989-90 ಮತ್ತು 1991-92ನೇ ಸಾಲಿನಲ್ಲಿ ಜನತಾ ಮತ್ತು ಹುಡ್ಕೋ ಯೋಜನೆಯಡಿಯಲ್ಲಿ ಎಷ್ಟೆಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ (ವರ್ಷಾವಾರು ವಿವರಗಳನ್ನು ನೀಡುವುದು)?

ಆ) ಈ ಯೋಜನೆಗಳಿಗಾಗಿ 1988-89ರಿಂದ 1991-92ರವರೆವಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ (ವರ್ಷಾವಾರು ವಿವರಗಳನ್ನು ನೀಡುವುದು)?

ಇ) ಈ ಹಣದಲ್ಲಿ ಸಾಲದ ರೂಪದಲ್ಲಿರುವ ಹಣವೆಷ್ಟು ಮತ್ತ ಸಹಾಯಧನದ ರೂಪದಲ್ಲಿರುವ ಹಣದ ಮೊತ್ತವೆಷ್ಟು?

ಈ) 1988-89 ರಿಂದ 1991-92 ರವರೆವಿಗೆ ಜಿಲ್ಲೆಯಲ್ಲಿ ಎಷ್ಟು ಜನತಾ ಮನೆಗಳು ಮತ್ತು ಹುಡ್ಕೋ ಮನೆಗಳನ್ನು ನಿರ್ಮಿಸಲಾಗಿದೆ (ತಾಲ್ಲೂಕುವಾರು ವಿವರಗಳನ್ನು ನೀಡುವುದು) ಮತ್ತು ಇದಕ್ಕಾಗಿ ವೆಚ್ಚವಾದ ಹಣವೆಷ್ಟು?

ಶ್ರೀ ಕೆ. ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆ ಸಚಿವರು):

ಅ)	1988-89	1782	ಮನೆಗಳು
	1989-90	1540	ಮನೆಗಳು

1991-92 1600 ಮನೆಗಳು

ಆ) 1988-89 28.77 ಲಕ್ಷ

1989-90 39.98 ಲಕ್ಷ

1990-91 15.875 ಲಕ್ಷ

1991-92 ಬಿಡುಗಡೆ ಮಾಡಲಾಗುತ್ತದೆ.

ಇ) ಸಾಲ ಸಹಾಯಧನ

(ರೂ. ಲಕ್ಷಗಳಲ್ಲಿ)

1988-89 28.77 ಲಕ_

1989-90 39.98 ಲಕ್ಷ

1990-91 15.875 ಲಕ್ಷ

1991-92 ಬಿಡುಗಡೆ ಮಾಡಲಾಗುತ್ತಿದೆ.

ಈ) 1988-89 ಇಲ್ಲ

1989-90 201 ಮನೆಗಳು

1990-91 ಇಲ್ಲ

1991-92 ಇಲ್ಲ

ತಾಲ್ಲೂಕುವಾರು ವಿವರ ಈ ಕೆಳಗಿನಂತಿವೆ.

	ನಿರ್ಮಿಸಲಾದ ಮನೆಗಳು	ವೆಚ್ಚವಾದ ಹಣ (ಲಕ್ಷ ರೂ. ಗಳಲ್ಲಿ)
ಕಾರವಾರ	10	0.20
ಅಂಕೋಲ	10	0.20
ಕುಮುಟ	18	0.36
ಹೊನ್ನಾವರ	30	0.60
ಸಿರಸಿ	30	0.60
ಸಿದ್ಧಾಪುರ	200	0.40
ಎಲ್ಲಾಪುರು	10.	0.20
ಮುಂಡುಗೋಡ್	26	0.52
ಭಟ್ಕಳ	14	0.28
ಹಳಿಯಾಳ	20	0.40
ಸೂಪ(ಜೋಯಿಡ್)	13	0.26
ಮೊತ್ತ	201	4.02

ಜಿಲ್ಲಾ ಪರಿಷತ್‌ಗಳಿಗೆ ಚುನಾವಣೆ ನಡೆಸುವುದರ ಬಗ್ಗೆ

1914 - ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರಸ್ತುತ ಜಿಲ್ಲಾಪರಿಷತ್ತುಗಳ ಅವಧಿ ಎಂದಿಗೆ ಕೊನೆಗೊಳ್ಳುವುದು ?

ಆ) ಈ ಅವಧಿ ಮುಗಿದ ನಂತರ ಸರ್ಕಾರವು ಜಿಲ್ಲಾಪರಿಷತ್ತುಗಳಿಗೆ ಚುನಾವಣೆ ನಡೆಸಲು ಕ್ರಮ ಕೈಗೊಳ್ಳುವುದೇ ?

ಶ್ರೀ ಕೆ. ಹೆಚ್.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):

ಅ) ದಿನಾಂಕ : 12-1-1992ಕ್ಕೆ ಕೊನೆಗೊಳ್ಳುವುದು.

ಆ) ಕಾನೂನಿಗನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು.

ಸ್ಥಳೀಯ ಸಂಸ್ಥೆಗಳ ಕಾನೂನು ಬದಲಾವಣೆ

2050-ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಈಗಿರುವ ಪಂಚಾಯತ್ ರಾಜ್ ಜಿಲ್ಲಾ ಪರಿಷತ್ ಮಂಡಲ ಪಂಚಾಯಿತಿ ಕಾನೂನನ್ನು ಬದಲಾಯಿಸುವ ಯೋಜನೆ ಸರ್ಕಾರಕ್ಕಿದೆಯೆ ?

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಬದಲಾಯಿಸಲಾಗುವುದು.

ಇ) 1992ರ ಜನವರಿಯಲ್ಲಿ ಈಗಿರುವ ಜಿಲ್ಲಾ ಪರಿಷತ್ ಮಂಡಲ ಪಂಚಾಯಿತಿಗಳ ಅವಧಿ ಮುಗಿಯುವುದರಿಂದ ಚುನಾವಣೆಗಳನ್ನು ನಡೆಸಲಾಗುವುದೇ ?

ಈ) ಇಲ್ಲದಿದ್ದಲ್ಲಿ ಸರ್ಕಾರದ ಯೋಚನೆ ಏನು ?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):

ಅ) ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಇ) ಕಾನೂನಿಗನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು.

ಈ) ಉದ್ಭವಿಸುವುದಿಲ್ಲ.

ಕಾವೇರಿ ಜಲಾನಯನ ಪ್ರದೇಶದಲ್ಲಿ ಯೋಜನೆಗಳನ್ನು ಬೇಗ ಮುಗಿಸುವ ಬಗ್ಗೆ

2051 - ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ): ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಾವೇರಿ ಜಲಾನಯನ ಪ್ರದೇಶದ ವಿವಿಧ ಯೋಜನೆಗಳಿಗೆ ಕಳೆದ 3 ವರ್ಷದಲ್ಲಿ ಎಷ್ಟು ಹಣ ಬಜೆಟ್‌ನಲ್ಲಿ ಇಡಲಾಗಿತ್ತು, ಹಾಗೂ ಎಷ್ಟು ಹಣ ಖರ್ಚಾಗಿದೆ ?

ಆ) ಈ ಎಲ್ಲಾ ಯೋಜನೆಗಳನ್ನು ಮುಗಿಸಲು ಬೇಕಾಗಿರುವ ಒಟ್ಟು ಹಣ ಎಷ್ಟು ? ಹಾಗೂ ಈ ಎಲ್ಲಾ ಯೋಜನೆಗಳನ್ನು ಯಾವಾಗ ಮುಗಿಸಲಾಗುವುದು ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು):

ಅ)

ವರ್ಷ	ಅನುದಾನ	ಮಾಡಿದ ಖರ್ಚು
	ಕೋಟಿ	ರೂ.ಗಳಲ್ಲಿ
1988-89	92.37	69.78
1989-90	119.86	91.95
1990-91	124.44	102.68

ಆ) ಇದಕ್ಕೆ ಬೇಕಾದ ಹಣ ಸುಮಾರು 1475 ಕೋಟಿ ರೂ.ಗಳಾಗಿರುತ್ತದೆ. (ಈ ವರ್ಷದ ಅನುದಾನ ರೂ. 140.47 ಕೋಟಿಗಳ ಹೊರತಾಗಿ) ಆದಷ್ಟು ಶೀಘ್ರವಾಗಿ ಮುಗಿಸಲು ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು : ಮಂಡಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1) ಕರ್ನಾಟಕ ರಾಜ್ಯದ ನರ್ಸಿಂಗ್ ಅಸೋಸಿಯೇಷನ್‌ನವರು ಸತ್ಯಾಗ್ರಹ ಮಾಡುತ್ತಿರುವ ಬಗ್ಗೆ ಹಾಗೂ ಏಡ್ಸ್ ರೋಗಕ್ಕೆ ತುತ್ತಾಗಿರುವ ಶ್ರೀಮತಿ ಸುಮಿತ್ರಾ ಅವರಿಗೆ ಸರ್ಕಾರದಿಂದ ಆರ್ಥಿಕ ಸಹಾಯ.

+ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ಒಂದು ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕಾಗಿ ತಮ್ಮ ಅಪ್ಪಣೆ ಕೋರಿದ್ದೆ. ಮಾನ್ಯ ಆರೋಗ್ಯ ಸಚಿವರ ಗಮನವನ್ನು ವಿಶೇಷವಾಗಿ ಮತ್ತು ಸರ್ಕಾರದ ಗಮನಕ್ಕೂ ಸಹಾ ಈ ಸಮಸ್ಯೆಯನ್ನು ತರಬೇಕೆಂದು ನಾನು ಬಯಸುತ್ತೇನೆ. ಬಹಳ ಮುಖ್ಯವಾಗಿ ಕರ್ನಾಟಕ ರಾಜ್ಯದ ನರ್ಸಿಂಗ್ ಅಸೋಷಿಯೇಶನ್‌ಗೆ ಸೇರಿದ ಹಾಗೂ ನಮ್ಮ ಸರ್ಕಾರಿ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥ ಎಲ್ಲಾ ನರ್ಸ್‌ಗಳು, ಈ ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ನಿನ್ನೆಯಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ. ಇದರಿಂದ ರೋಗಿಗಳಿಗೆ ತೊಂದರೆಯಾಗತಕ್ಕಂಥ ಸಂಭವವಿದೆ. ಹಲವಾರು ವರ್ಷಗಳಿಂದ ಅವರ ಕೆಲವು ಬೇಡಿಕೆಗಳಿವೆ. ಅವುಗಳಲ್ಲಿ ಒಂದೆರಡು ಬೇಡಿಕೆಗಳು ಸರ್ಕಾರ ಪರಿಶೀಲನೆ ಮಾಡಲು ಯೋಗ್ಯವಾಗಿರತಕ್ಕಂಥವು ಮತ್ತು ಅರ್ಹವಾಗಿರತಕ್ಕಂಥವು. ಅವರು ಸುಮಾರು 16-17 ವರ್ಷಗಳ ಹಿಂದೆ ತಮ್ಮ "ವಾಷಿಂಗ್ ಅಲೋಯೆನ್ಸ್" ಹೆಚ್ಚು ಮಾಡಬೇಕೆಂದು ಕೇಳಿದ್ದರು. ಹಿಂದಿನ ಸರ್ಕಾರಗಳು ಅದನ್ನು ಮಾಡುತ್ತೇವೆಂದು ಇದುವರೆಗೂ ಭರವಸೆ ಕೊಡುತ್ತಾ ಬರುತ್ತಿದೆ ನಾನು ಆಗ ಆರೋಗ್ಯ ಮಂತ್ರಿಯಾಗಿದ್ದಾಗ ಭಾಗಶಃ ಅವರ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಪ್ರಯತ್ನ ಮಾಡಿದ್ದೆ. ಆದರೂ ಕೆಲವು ಆಗಿಲ್ಲ. ಆದುದರಿಂದ, ಇವೊತ್ತು ಅವರು ಬೀದಿಗಿಳಿದು ಸತ್ಯಾಗ್ರಹ ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ತೀವ್ರವಾಗಿ ಗಮನಹರಿಸಿ, ಅವರ ಪ್ರತಿನಿಧಿಗಳ ಜೊತೆ ಕುಳಿತುಕೊಂಡು ಚರ್ಚೆ ಮಾಡುವುದು ಮೊದಲನೆಯದು. ಇನ್ನು ಎರಡನೆಯದು, ಒಂದು ವರ್ಷದ ಹಿಂದೆ ಈ ಸದನದಲ್ಲಿ ಶಾಸಕರಾಗಿರತಕ್ಕ ಸನ್ಮಾನ್ಯ ಜೋಶಿಯವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು.

SRI SUBHASH SRIDHAR JOSHI : Sir, last year I had raised a question regarding blood transfusion to a 25 years old lady, with AIDs virus during her operation at Mission Hospital, Miraj, And on the floor of the House, the then Health Minister assured that all possible help will be given to her. So far not a single doctor visited her house. Now, her husband is also suffering from AIDS. She is a pregnant of a child. I do not know about the future of that child. Not a single rupee has come as help from the Government. She is Sumithra Heggammavar and her husband is Vasant(32 years) and they are from Athini. There was lot of 'galata' from our marathi people and now the Mission Hospital is giving some help. My request is that the Joint Director, or DHO or any other Senior Health Department Officers in Belgaum should be sent to Miraj today only from our State. For no fault of her, the whole family is destroyed. I have learnt that Mr. Vasanth is also suffering from paralysis attack. He is a coolie and belongs to SC community. I demand a statement from the Government by tomorrow or by today evening, as to what the Government is going to do. I also request the Chief Minister to release at least Rs. 10,000 or 20,000 immediately as there is no livelihood for her family. I want an answer from the Hon'ble Health Minister.

+ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೆ, ಈ ನರ್ಸಿಂಗ್ ಅಸೋಸಿಯೇಷನ್ ಅವರು ಪ್ರತಿವರ್ಷವೂ ಸರ್ಕಾರಕ್ಕೆ ಅವರ ಸಮಸ್ಯೆಗಳ ಬಗ್ಗೆ ಮೊರೆ ಇಡುತ್ತಿದ್ದಾರೆ. ಅವರ ಸಮಸ್ಯೆಯನ್ನು.......

ಅಧ್ಯಕ್ಷರು : ಅವರು ಏಡ್ಸ್ ಬಗ್ಗೆ ಮಾತನಾಡುತ್ತಿದ್ದಾರೆ. ಅದು ಮುಗಿದುಬಿಡಲಿ..

ಶ್ರೀ ಎಸ್.ಎಸ್. ಜೋಶಿ : ನನಗೆ ಉತ್ತರ ಬೇಕು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಅಸೋಷಿಯೇಷನ್ಸ್ ಇದೆ. ಒಂದು ಅಸೋಷಿಯೇಷನ್ ನಮ್ಮ ಹತ್ತಿರ ಬಂದು ಮಾತನಾಡಿ ಒಪ್ಪಿಕೊಂಡು ಹೋದರು. ಇನ್ನೊಂದು ಅಸೋಷಿಯೇಷನ್ ಸ್ಟ್ರೈಕ್ ಮಾಡುತ್ತಿದ್ದಾರೆಂದು ಕೇಳಿದ್ದೇನೆ. ಅವರನ್ನೂ ಕೂಡ ಕರೆದು ನಾವು ಮಾತನಾಡಿ ಇದಕ್ಕೆ ಕೂಡಲೇ ಒಂದು ತೀರ್ಮಾನ ತೆಗೆದುಕೊಳ್ಳುತ್ತೇನೆಂಬ ಭರವಸೆಯನ್ನು ಕೊಡಬಯಸುತ್ತೇನೆ. ಮಾನ್ಯ ಸಿಂಧ್ಯರವರು ಹೇಳಿದ ಹಾಗೆ ಒಂದು ಬೇಡಿಕೆಯನ್ನು ಈಡೇರಿಸುವುದು ಸರ್ಕಾರಕ್ಕೆ ಕಷ್ಟವೇನು ಇಲ್ಲ. ಅವರು ಕೇಳುವುದು ಸಹಜವಿದೆ.

ಡ್ರೆಸಿಂಗ್ ಅಲೋಯನ್ಸ್ ಬಗ್ಗೆ ನಾನು ಒಪ್ಪುತ್ತೇನೆ. ಅವರು ಖಾಲಿ ಹುದ್ದೆಗಳನ್ನು ಭರ್ತಿಮಾಡಬೇಕು. ಮತ್ತು ಇತರೇ ಬೇಡಿಕೆಗಳ ಬಗ್ಗೆ ಕೇಳುತ್ತಿದ್ದಾರೆ. ಅದು ನಮ್ಮ ಸರ್ಕಾರದ ಆರ್ಥಿಕ ಪರಿಸ್ಥಿತಿಯನ್ನು ಅವಲಂಬನೆಯಾಗಿದೆ.

ಶ್ರೀ ವಾಟಾಳ್ ನಾಗರಾಜ್ : ತಾವು ಅವರನ್ನು ಕರೆದು ಮಾತನಾಡಿ. ಒಟ್ಟಿನಲ್ಲಿ ಒಂದು ಒಳ್ಳೆಯ ವಾತಾವರಣ ನಿರ್ಮಾಣ ಮಾಡಿ.

SRI D.B. CHANDREGOWDA : The Minister should request the concerned to withdraw the strike. ಅವರು ಅದನ್ನಾದರೂ ಮಾಡದಿದ್ದರೆ, ಅವರನ್ನು ಕರೆದು ಮಾತನಾಡುತ್ತೇವೆ, ಸತ್ಯಾಗ್ರಹವನ್ನು ವಾಪಸ್ಸು ತೆಗೆದುಕೊಳ್ಳಿ ಎಂದಾದರೂ ಹೇಳಬೇಕಲ್ಲ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ : ಈಗಾಗಲೇ ನಾನು ಮುಷ್ಕರವನ್ನು ಹಿಂದಕ್ಕೆ ತೆಗೆದುಕೊಳ್ಳಿ ಎಂದು ಒಂದುಕರೆಯನ್ನು ಕೊಟ್ಟಿದ್ದೇವೆ. ಈಗಲೂ ಕೂಡ ತಮ್ಮ ಮೂಲಕ ಅವರಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ. ಪ್ರಾರ್ಥಿಸಿಕೊಳ್ಳುತ್ತೇನೆ, ಅವರು ಕೂಡಲೇ ಮುಷ್ಕರವನ್ನು ನಿಲ್ಲಿಸಿ ನಮ್ಮ ಜೊತೆ ಮಾತುಕತೆಗೆ ಬರಬೇಕು. ನಾವು ಹೇಗಿದ್ದರೂ ಅವರ ಬೇಡಿಕೆಗಳನ್ನು ಪರಿಶೀಲಿಸುವುದಕ್ಕೆ ಸಿದ್ಧರಿದ್ದೇವೆ. ಅವರು ಆಸ್ಪತ್ರೆಯ ಕೆಲಸಕಾರ್ಯಗಳನ್ನು ಉತ್ತಮವಾದ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕೆಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತಿದ್ದೇನೆ.

2) ವಿಷಯ : ಬೆಳಗಾಂ, ಹುಬ್ಬಳ್ಳಿ ಮತ್ತು ರಾಜ್ಯದ ವಿವಿಧ ಭಾಗಗಳಲ್ಲಿ ಗಣೇಶ ಮೂರ್ತಿ ವಿಸರ್ಜನೆ ಸಮಯದಲ್ಲಿ ಗಲಭೆ.

+ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ): ಸನ್ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಅನುಮತಿಯನ್ನು ಕೇಳಿದ್ದೇನೆ. ಬೆಳಗಾವಿ, ಹುಬ್ಬಳ್ಳಿ ಮತ್ತು ರಾಜ್ಯದ ವಿವಿಧ ಭಾಗಗಳಲ್ಲಿ ಗಣೇಶ ಮೂರ್ತಿ ವಿಸರ್ಜನೆ ಸಮಯದಲ್ಲಿ ಸಾಕಷ್ಟು ಗಲಾಟೆಗಳಾಗಿವೆ. ಪೋಲೀಸ್ ಲಾಟಿ ಚಾರ್ಜ್ ಆಗಿವೆ. ಮತ್ತು ಗೋಲಿಬಾರ್ ಆಗಿದೆ. ಟಿಯರ್ ಗ್ಯಾಸ್ ಸೆಲ್ ಉಪಯೋಗ ಮಾಡಿದ್ದಾರೆ. ಈಗತಾನೆ ಬೆಳಗಾಂನಿಂದ ನನಗೆ ಫೋನ್ ಬಂದಿತ್ತು. ಅಲ್ಲಿಯ ಪರಿಸ್ಥಿತಿ ಚೆನ್ನಾಗಿಲ್ಲ. ಅಲ್ಲಿ ಬಹಳಷ್ಟು ಶಾಪ್‌ಗಳನ್ನು ಲೂಟಿ ಮಾಡಿದ್ದಾರೆ, ಕಲ್ಲು ತೂರಾಟ ಮಾಡಿದ್ದಾರೆ. ಇದರಿಂದಾಗಿ ಬೆಳಗಾಂನಲ್ಲಿ ಪೋಲೀಸ್ ಕಮೀಷನರ್ ಅವರು ಗಾಯಗೊಂಡಿದ್ದಾರೆ. ಮತ್ತು ಹುಬ್ಬಳ್ಳಿ ಶಾಸಕರು ಗಾಯಗೊಂಡಿದ್ದಾರೆಂದು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಬೆಳಗಾಂನಲ್ಲಿ ನನ್ನ ಇನ್‌ಫಾರ್‌ಮೇಶನ್ ಪ್ರಕಾರ 2-3 ಜನಸತ್ತಿದ್ದಾರೆ. ಆದರೆ ಪತ್ರಿಕೆಯಲ್ಲಿ ಒಂದು ಎಂದು ಬಂದಿದೆ. ಇವತ್ತು ಸರ್ಕಾರದಿಂದ ಯಾವುದೇ ಕ್ರಮವನ್ನು ಇದರ ಬಗ್ಗೆ ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಬೆಳಗಾಂನಲ್ಲಿ ಎಂತಹ ವಾತಾವರಣ ಇದೆಯೆಂದರೆ ಅಲ್ಲಿ ಇನ್‌ಡಿಸ್ಕ್ರಿಮಿನೇಟ್ ಅರೆಸ್ಟ್ ಮಾಡುತ್ತಿದ್ದಾರೆ. ಮನೆ ಮನೆಗೆ ಹೋಗಿ ಅರೆಸ್ಟ್ ಮಾಡುತ್ತಿದ್ದಾರೆ. ಬೆಳಗಾಂ ಪೇಪರ್‌ನಲ್ಲಿ ಏನು ಹಾಕಿದ್ದಾರೆಂದರೆ ಮನೆಯಿಂದ ಹೊರಗೆ ಹೋದ ಮನುಷ್ಯ ವಾಪಸ್ಸು ಬರಲಿಲ್ಲವೆಂದರೆ ಅವರು ಕೂಡಲೇ ಪೋಲೀಸ್‌ರವರಿಗೆ ಜೊತೆ ಮಾತನಾಡಬೇಕಾಗಿದೆ. ಇನ್‌ಡಿಸ್ಕ್ರಿಮಿನೇಟ್ ಅರೆಸ್ಟ್ ಮಾಡಿದ್ದಾರೆ. ಕಠಿಣವಾದಂತಹ ಪರಿಸ್ಥಿತಿ ಬೆಳಗಾಂನಲ್ಲಿದೆ. ಇವತ್ತು ಪ್ರಾಪರ್ಟೀಸ್ ಡ್ಯಾಮೇಜ್ ಆಗಿದ್ದು, ಅದನ್ನು ಸರ್ಕಾರದಿಂದ ಯಾವುದೇ ರೀತಿ ಅಸೆಸ್‌ಮೆಂಟ್ ಮಾಡುತ್ತಾ ಇಲ್ಲ. ಹೀಗಾದರೆ ಹೇಗೆ? ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗೃಹಸಚಿವರು ಸ್ಪಷ್ಟ ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಯಾರು ಇನೋಸೆಂಟ್ ಇದ್ದಾರೆ, ಅವರಿಗೆ ಯಾವ ರೀತಿಯ ಅಪಾಯವೂ ಆಗಬಾರದು; ಕೂಡಲೇ ಅವರ ಬಿಡುಗಡೆಯಾಗಬೇಕು. ಇವತ್ತು ಬೆಳಗಾಂನಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ಎಲ್ಲೆಲ್ಲಿ ಶಾಪ್‌ಗಳು ಲೂಟಿಯಾಗಿವೆ. ಅದರ ಅಸೆಸ್‌ಮೆಂಟ್ ಆಗಬೇಕು. ಅವರಿಗೆ ಕಾಂಪೆನ್‌ಸೇಷನ್ ಕೊಡಬೇಕು. ಅಲ್ಲಿ ಸಾಕಷ್ಟು ಜನ ಇನಜೂಡ್ಜ್ ಆಗಿದ್ದಾರೆ, ಅವರಿಗೆ ಮೆಡಿಕಲ ಟ್ರೀಟ್‌ಮೆಂಟ್ ಮತ್ತು ಕಾಂಪನಸೇಷನ್ ಕೊಡಬೇಕಾಗುತ್ತದೆ. ಮತ್ತು ಯಾರು

ಈ ಸಂದರ್ಭದಲ್ಲಿ ತಮ್ಮ ಜೀವವನ್ನು ಕಳೆದುಕೊಂಡಿದ್ದಾರೆ. ಅವರ ಕಡೆಯವರಿಗೆ ತಕ್ಷಣ ಕಾಂಪೆನ್‌ಸೇಷನ್ ಕೊಡುವ ವ್ಯವಸ್ಥೆ ಯನ್ನು ಸರ್ಕಾರ ಮಾಡಬೇಕೆಂದು ತಮ್ಮ ಮೂಲಕ ಕೇಳುತ್ತೇನೆ. ಸರ್ಕಾರ ಈ ಗಲಾಟೆ, ಮತ್ತು ಗಲಭೆಗಳ ಬಗ್ಗೆ ವಿಚಾರಣೆ ಮಾಡಬೇಕಾಗುತ್ತದೆ. ನ್ಯಾಯಾಂಗ ತನಿಖೆ ಆಗಬೇಕಾಗುತ್ತದೆ. ಏಕೆಂದರೆ ಇಂತಹ ಗಲಾಟೆಗಳು ಎಲ್ಲಾ ಕಡೆಯಾಗುತ್ತಿವೆ. ಇಂತಹ ಗಲಾಟೆ ಆಗಬಾರದು. ಇನ್ನು ಮುಂದೆ ಇದನ್ನು ನಿಲ್ಲಿಸಬೇಕಾಗುತ್ತದೆ. ಇದರೊಳಗೆ ಪೋಲೀಸ್‌ನವರದು ತಪ್ಪು ಇದೆಯೋ ಅಥವಾ ಬೇರೆಯವರದು ತಪ್ಪು ಇದೆಯೋ ಎಂದು ಸುಮ್ಮನೆ ಹೇಳುವುದು ಸರಿಯಲ್ಲ. ಪೋಲೀಸರು ಅಲ್ಲಿ ತಕ್ಷಣವೆ ಅಪರಾಧಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತು. ಆದರೆ ಅವರು ಕ್ರಮತೆಗೆದುಕೊಳ್ಳುವಲ್ಲಿ ಅಲ್ಲಿ ವಿಫಲರಾಗಿದ್ದಾರೆ. ಇಂತಹ ಸಮಯದಲ್ಲಿ ಇದನ್ನು ಸದನದ ಗಮನಕ್ಕೆ ತರುತ್ತಿದ್ದೇನೆ. ಇದರ ಬಗ್ಗೆ ಮಾನ್ಯ ಸಚಿವರು ಹೇಳಿಕೆ ಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ಗಣಪತಿ ಉತ್ಸವದ ಸಂದರ್ಭದಲ್ಲಿ ಇಂತಹ ಗಲಭೆಗಳ ನಡೆಯುವಂಥದ್ದು ಸರ್ವೇಸಾಮಾನ್ಯವಾಗಿದೆ. ಬೆಳಗಾಂನಲ್ಲಾಗಿದೆ. ರಾಜ್ಯದ ವಿವಿಧ ಭಾಗಗಳಲ್ಲಿ ಸಹ ಈ ರೀತಿಯ ಗಲಭೆಗಳಾಗಿವೆ.

+ ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧಪಕ್ಷದ ನಾಯಕರು) : ದೊಡ್ಡ ಪ್ರಮಾಣದ್ದಾಗಿದೆಯೆಂದರೆ ಗಲಭೆ ಪೀಡಿತ ಪ್ರದೇಶಗಳಿಗೆ ಸಶಸ್ತ್ರ ಮೀಸಲು ಪಡೆಯಿಂದ ಧ್ವಜ ಸಂಚಲನವಾಗಿ ಕರ್ಫ್ಯೂ ಜಾರಿಯಲ್ಲಿದೆಯೆಂದರೆ ಇದು ನಮ್ಮ ಕೈಮೀರಿ ಹೋಗಿರುವಂತಹ ಪರಿಸ್ಥಿತಿ. ಬಹುಶ: ಸಾಧಾರಣವಾಗಿ ಆಗುವಂತಹ ವ್ಯಾಪ್ತಿಯನ್ನು ಮೀರಿ ಈ ಒಂದು ಸಶಸ್ತ್ರ ಮೀಸಲು ಪದೆಯಿಂದ ಧ್ವಜ ಸಂಚಲನವಾಗುತ್ತಿದೆ ಎಂದರೆ ನಮಗೆಲ್ಲರಿಗೂ ಆತಂಕವನ್ನು ಉಂಟು ಮಾಡುವ ಪ್ರಸಂಗ. ಆದರೆ ಈ ಸ್ಥಿತಿಗೆ ಹೋಗುವುದಕ್ಕೆ ಮುನ್ನವೇ ಅವು ಸ್ವಲ್ಪ ಸೆನ್ಸೀಟೀವ್ ಏರಿಯಾಸ್ ಎಂದು ಸರ್ಕಾರಕ್ಕೆ ಗೊತ್ತಿರುತ್ತದೆ. ಅಂತಹ ಕಡೆ ಪೋಲೀಸ್ ವ್ಯವಸ್ಥೆ ಮೊದಲೇ ಯಾವ ರೀತಿ ಮಾಡಿದರು ಮತ್ತು ಮುಂದೆ ಆಗಬಹುದಾದಂಥ ಘಟನೆಗಳನ್ನು ತಪ್ಪಿಸುವುದಕ್ಕೆ ಸಾಧ್ಯವೇ ಇರಲಿಲ್ಲವೇ? ಹಾಗೆ ಸಾಧ್ಯವಿಲ್ಲದೆ ಇರುವಂತಹ ಸ್ಥಿತಿ ಏನಿತ್ತು? ಈಗ ಅಲ್ಲಿ ಏನು ಪರಿಸ್ಥಿತಿ ಇದೆ ಎನ್ನುವುದರ ಬಗ್ಗೆ ಹೋಮ್ ಮಿನಿಸ್ಟರ್‌ರವರಿಂದ ನಾನು ಹೇಳಿಕೆಯನ್ನು ನಿರೀಕ್ಷಣೆ ಮಾಡುತ್ತೇನೆ.

ಈಗ ಪರಿಸ್ಥಿತಿ ಹತೋಟಿಯಲ್ಲಿದೇ ಇದ್ದರೆ, ಅದನ್ನು ಹತೋಟಿಗೆ ತರತಕ್ಕಂಥ ಪ್ರಯತ್ನ ಏನು ನಡೆದಿದೆ ಎಂದು ತಿಳಿಸಬೇಕು. ಇದು ಬೆಳಗಾವಿಯಲ್ಲಿ ಮಾತ್ರವಲ್ಲ, ಗುಲ್ಬರ್ಗ ಮತ್ತು ಹುಬ್ಬಳ್ಳಿಯಲ್ಲಿಯೂ ಆಗಿದೆ. ಆದ್ದರಿಂದ, ಇದರ ಬಗ್ಗೆ ಒಂದು ವಿಸ್ತಾರವಾದ ಹೇಳಿಕೆಯನ್ನು ತಾವು ಕೊಡಬೇಕು. ಈ ಗಲಭೆಪೀಡಿತ ಪ್ರದೇಶಗಳಲ್ಲಿ ಸಶಸ್ತ್ರ ಮೀಸಲು ಪಡೆಯಿಂದ ಧ್ವಜ ಸಂಚಲನೆ ಮಾಡಿರತಕ್ಕಂತಾದು ನಿಜವೇ, ಆಗಿದ್ದರೆ, ಅಂತಹ ಸ್ಥಿತಿ ನಿರ್ಮಾಣವಾಗುವುದಕ್ಕೆ ಕಾರಣ ಏನು ಎನ್ನುವುದನ್ನು ಈ ಸದನಕ್ಕೆ ತಾವು ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಅವರು ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ಇವೊತ್ತು ಬೆಳಗಾವಿ, ಗುಲ್ಬರ್ಗದಲ್ಲಿರಬಹುದು. ಪ್ರತಿವರ್ಷ ಗಣಪತಿ ಉತ್ಸವ ನಡೆಯುವಂತ ಸಂಧರ್ಭದಲ್ಲಿ ಗಲಭೆಗಳಾಗುತ್ತಿರುವಂಥಾದ್ದು ಸರ್ವೇ ಸಾಮಾನ್ಯವಾಗುತ್ತಿದೆ. ಈಗ ತಾನೆ ಮಾನ್ಯ ದೇಶಪಾಂಡೆಯವರು ಮಾತನಾಡುತ್ತಾ ಬೆಳಗಾಂನಲ್ಲಿ ಒಂದು ಸಾವು ಆಗಿದೆ. ಎಂದು ಪತ್ರಿಕೆಯಲ್ಲಿ ಬಂದಿದೆ. ಅಲ್ಲಿ ಎರಡು ಮೂರು ಸಾವು ಆಗಿದೆ ಎನ್ನುವ

ಬಂದು ಇದೆ. ಎಂದು ಹೇಳಿದರು. ಅದಕ್ಕೋಸ್ಕರ ಯಾವುದೇ ಒಂದು ಸಮಾಜದಲ್ಲಿ ಮೆರವಣಿಗೆಯಾಗುವಂಥ ಸಂದರ್ಭದಲ್ಲಿ, ಇತ್ತೀಚಿನ ದಿವಸಗಳಲ್ಲಿ ಈ ರೀತಿ ಗಲಭೆ ಆಗುವಂತಾದ್ದು, ಗೋಲಿಬಾರ್ ಆಗುವಂಥಾದ್ದು ಇದು ಸರ್ವೇಸಾಮಾನ್ಯವಾಗಿದೆ. ಅದಕ್ಕೆ ನಾನು ಹೇಳುವಂಥಾದ್ದು ಏನೆಂದರೆ, ಎಲ್ಲಾ ಸಮಾಜದ ಬಂಧುಗಳನ್ನು ಕರೆದು ಶಾಂತಿ ಸಮಿತಿಗಳನ್ನು ಮಾಡಿ ಒಳ್ಳೆಯ ರೀತಿಯಿಂದ ಉತ್ಸವಗಳು ನಡೆಯುವ ರೀತಿಯಲ್ಲಿ ವ್ಯವಸ್ಥೆಯ ಮಾಡುವಂಥಾದ್ದು ಪದ್ಧತಿಗಳು ಇತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ಗಲಭೆಗಳ ನಂತರ ಶಾಂತಿ ಸಭೆ ಕರೆಯುವಂಥಾದ್ದು ತಕ್ಷಣ ಪೋಲೀಸ್ ಧಾವಿಸಿ ಹೋಗಿ ಅಲ್ಲಿ ಒಂದು ತರಹದ ಗೊಂದಲದ ವಾತಾವರಣ ಉಂಟುಮಾಡುವಂಥಾದ್ದು, ಕರ್ಫ್ಯೂ ಜಾರಿ ಕೊಡುವಂತಾದ್ದು ಗೋಲೀಬಾರ್ ಮಾಡುವಂಥಾದ್ದು ಏನೆಂದರೆ, ನಿಮಗೆ ಆ ರೀತಿಯ ಸೆನ್‌ಸಿಟೀವ್ ಪ್ಲೇಸ್ ಯಾವುದು ಎಂದು ಗೊತ್ತಿದೆ. ಗಣಪತಿ ಉತ್ಸವ ಇದುವರೆಗೆ ಒಳ್ಳೆಯ ಶಾಂತರೀತಿಯಲ್ಲಿ ನಡೆಯುತ್ತಿದ್ದು, ಎಲ್ಲ ಸಮಾಜದ ಬಂಧುಗಳು ಸೇರಿ ಮಾಡುತ್ತಿರುವಂಥಾದ್ದರ ಕಡೆ ಉದ್ದೇಶಪೂರ್ವಕವಾಗಿ ಈ ರೀತಿ ಗಲಭೆಗಳಾಗುವಂಥಾದ್ದು, ನೋಡಿದರೆ ಇದನ್ನು ನಾಳೆ ಕಂಟ್ರೋಲ್ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ, ಒಂದು ಭಯದ ವಾತಾವರಣ ಇದೆ. ಈಗ ತಾನೇ ದೇಶಪಾಂಡೆಯವರು ಹೇಳಿದಂತೆ, ನಿರಪರಾಧಿಗಳನ್ನು ಸಹ ಪೋಲೀಸರು ಅರೆಸ್ಟ್ ಮಾಡಿ ಸ್ಟೇಷನ್‌ಗೆ ತುಂಬುವಂಥಾದ್ದು ಆಗಿದೆ. ಇದು ಸರ್ವೇಸಾಮಾನ್ಯವಾಗಿದೆ. ಗೊಂದಲ ಜಾಸ್ತಿಯಾಗುತ್ತಿದೆ, ನನಗೆ ಗೊತ್ತಿರುವಂತಹ ಒಂದು ಸುದ್ದಿ ಪ್ರಕಾರ ನಿಮ್ಮ ಸನ್ಮಾನ್ಯ ಮಲ್ಲಾರಿಗೌಡ ಪಾಟೀಲರು ನೀರಾವರಿ ಸಚಿವರು ಅಲ್ಲಿದ್ದಾರೆ. ಅವರು ಆ ಒಂದು ಕಾರ್ಯಕ್ರಮದಲ್ಲಿ, ಮೆರವಣಿಗೆಯಲ್ಲಿ, ಶಾಂತಿ ಸಭೆಯಲ್ಲಿ ಭಾಗವಹಿಸಿದ್ದನ್ನು ನಾನು ಕೇಳಿದ್ದೇನೆ. ದರ ಬಗ್ಗೆ ಸರ್ಕಾರದ ಅಧಿಕೃತ ಮಾಹಿತಿ ಏನು, ಗಲಭೆ ಆಗುವುದಕ್ಕೆ ಮುಂಚೆ ಅಥವಾ ಗಣಪತಿ ಉತ್ಸವ ಈ ದೇಶದಲ್ಲಿ, ಈ ರಾಜ್ಯದಲ್ಲಿ ನಡೆಯಬಾರದೇ? ಇದಕ್ಕೆ ಯಾರು ಅಡ್ಡಿ ಮಾಡುತ್ತಿದ್ದಾರೆ. ಇದಕ್ಕೆ ಮುಂಚೆ ಮುಂಜಾಗ್ರತೆ ಕ್ರಮ ಯಾವ ರೀತಿ ತೆಗೆದುಕೊಂಡಿದ್ದೀರಿ; ಈ ಗಲಭೆಗೆ ಮೂಲಕಾರಣ ಏನು? ಇದರ ಬಗ್ಗೆ ಸರ್ಕಾರದ ಹತ್ತಿರ ಸರಿಯಾದಂಥ ಮಾಹಿತಿ ಇದ್ದರೆ, ವರದಿಯನ್ನು ಕೊಡಬೇಕು. ಅಗತ್ಯವಿದ್ದರೆ ತಾವು ಸ್ಥಳಕ್ಕೆ ಹೋಗಿಬರಬೇಕು. ಪೋಲೀಸ್ ದೌರ್ಜನ್ಯ ಜಾಸ್ತಿಯಾಗುವಂತಾದ್ದು, ನಿರಪರಾಧಿಗಳನ್ನು ಅರೆಸ್ಟ್ ಮಾಡಿ ಅವರಿಗೆ ಕೊಡುವಂತಾದ್ದು ಹಾಗೂ ಭಯದ ವಾತಾವರಣ ತರುವಂತಾದ್ದು ಏನು ನಡೆಯುತ್ತಿದೆ, ಇದರಿಂದ ಒಂದು ಶಾಂತರೀತಿಯ ವಾತಾವರಣ ತರುತ್ತೇವೆ ಎನ್ನುವ ಒಂದು ಪ್ರಯತ್ನ ಪೋಲೀಸರಿಂದ ಏನು ನಡೆಯುತ್ತಿದೆ, ಇದು ನಿಜಕ್ಕೂ ಸಹ ರಾಜ್ಯದಲ್ಲಿ ಒಂದು ಶಾಂತಿ ಸುವ್ಯವಸ್ಥೆ ಕಾಪಾಡುವುದರಲ್ಲಿ ನೀವು ಯಶಸ್ವಿಯಾಗುವುದಿಲ್ಲ ಪೋಲೀಸರು ಇದರಲ್ಲಿ ಸಂಪೂರ್ಣ ವಿಫಲರಾಗುತ್ತಿದ್ದಾರೆ. ಈ ಹಿನ್ನಲೆಯಲ್ಲಿ, ಅಲ್ಲಿ ನಡೆದಂಥ ಸತ್ಯ ಘಟನೆ ಏನು ಎಷ್ಟು ಸಾವು ಆಗಿದೆ, ಅದಕ್ಕೆ ಕಾರಣಗಳು ಏನು, ನಿರಪರಾಧಿಗಳನ್ನು ಏತಕ್ಕೆ ಅರೆಸ್ಟ್ ಮಾಡಿದ್ದೀರೆಂಬ ಬಗ್ಗೆ ವಿವರವನ್ನು ಒದಗಿಸಬೇಕೆಂದು ನಾನು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ.

+ SRI. B.I. PATIL (UCHAGAON) : Mr. Speaker, Sir, during the course of Ganapthi immersion procession in Belgaum City on 22-9-1991, some disturbances took place. This was happened mainly due to negligence on the part of the police in maintaining law and order. Knowing fully well the likelihood of such disturbances, the police could have taken

precautionary measures. I would like the Hon'ble Home Minister to enquire into the matter immediately and take necessary action. Further, I would also demand a judicial enquiry into this matter. As stated by Sri Deshpande, innocent people are arrested and I therefore request the Hon'ble Minister for Home to take steps to see that innocent people are freed.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ಇದೇ ತರಹ ಹೋದ ವರ್ಷ ಒಂದು ಗಲಭೆ ಪ್ರಾರಂಭವಾಯಿತು. ಆಗ ಅನೇಕ ಕಡೆಗಳಲ್ಲಿ ಬಹಳ ಗಂಭೀರವಾದಂಥ ಪರಿಸ್ಥಿತಿ ನಿರ್ಮಾಣವಾಯಿತು. ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇಡೀ ರಾಜ್ಯದ ಎಲ್ಲ ವಿರೋಧಪಕ್ಷದ ನಾಯಕರನ್ನು ಕರೆದು ರಾಜ್ಯಮಟ್ಟದಲ್ಲಿ ಶಾಂತಿಯನ್ನು ಕಾಪಾಡುವುದಕ್ಕೋಸ್ಕರ, ಒಂದು ಸಮಿತಿಯನ್ನು ಮಾಡಿದರು. ಅದು ಹೋದ ವರ್ಷ ಮಾಡಿದ್ದು ಆದಮೇಲೆ ಮೊನ್ನೆ ಒಂದು ತಿಂಗಳ ಹಿಂದೆ ಸಭೆ ಕರೆದಿದ್ದಾಗ ನಾನು ಒಂದು ಸಲಹೆಯನ್ನು ಸರ್ಕಾರಕ್ಕೆ ಕೊಟ್ಟೆ. ಅದೇನೆಂದರೆ, ಇದು ಕೇವಲ ರಾಜ್ಯಮಟ್ಟದಲ್ಲಿ ಆಗುವುದು ಬೇಡ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಈ ಸಮಿತಿಗಳನ್ನು ರಚನೆ ಮಾಡಬೇಕು; ಇಂಥ ಉತ್ಸವಗಳು ಧಾರ್ಮಿಕ ಉತ್ಸವಗಳು ನಡೆಯುವಾಗ ಸಮಿತಿಯ ಸಭೆಯನ್ನು ಕರೆದು, ಕಲೆತು, ಯಾವುದೇ ವರ್ಗವಾಗಿರಲಿ, ಕರೆದು ಮಾತನಾಡಿ ಶಾಂತಿಯನ್ನು ಕಾಪಾಡಬೇಕು ಎನ್ನತಕ್ಕ ಮಾತು ಆಯಿತು. ಇದರ ಬಗ್ಗೆ ಸರ್ಕಾರದವರು ಇನ್ನೂ ಏನು ಮಾಡಿದ್ದಾರೋ, ಬಿಟ್ಟಿದ್ದಾರೋ ನನಗೆ ಇನ್ನೂ ಅರ್ಥವಾಗಿಲ್ಲ, ಆವೊತ್ತು ಒಂದು ರಾಜ್ಯಮಟ್ಟದ ಸಭೆ ಕರೆದರು. ನಾವೆಲ್ಲಾ ಡೆಲ್ಲಿಯಲ್ಲಿದ್ದಾಗ ಪತ್ರಿಕೆಯಲ್ಲಿ ನೋಡಿದಾಗ, ಬೆಳಗಾವಿ ಮತ್ತು ಹುಬ್ಬಳ್ಳಿ ಬಹಳ ಗಂಭೀರವಾದ ಪರಿಸ್ಥಿತಿ ಇದೆ ಎಂದು ಗೊತ್ತಾಯಿತು. ಇದು ಪ್ರಾರಂಭವಾಗಿದೆ ಈ ಪ್ರಾರಂಭ ನೋಡಿದರೆ, ಬಹುಶ: ರಾಜ್ಯದಲ್ಲಿ ಇನ್ನೂ ಬಹಳ ದೊಡ್ಡ ಪ್ರಮಾಣದಲ್ಲಿ ಇಂತಹ ಗಲಭೆಗಳು ಪ್ರಾರಂಭವಾಗತಕ್ಕಂಥ ಸೂಚನೆಗಳು ಈಗಾಗಲೇ ಇದೆ. ಈ ಬಗ್ಗೆ ಸರ್ಕಾರದವರು ಮುನ್ನೆಚ್ಚರಿಕೆ ಕ್ರಮ ಏನೇನು ಕೈಗೊಂಡಿದ್ದಾರೆ, ಮುಂದೆ ಏನು ಮಾಡಬೇಕಾಗಿದೆ. ಮತ್ತು ಈ ಶಾಂತಿ ಸಮಿತಿಯನ್ನು ಜಿಲ್ಲಾಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ರಚನೆ ಮಾಡಲಿಕ್ಕೆ ಸರ್ಕಾರದವರು ಕ್ರಮ ಕೈಗೊಂಡಿದ್ದಾರೆಯೇ ಎನ್ನುವ ಬಗ್ಗೆ ಸರ್ಕಾರ ಬಹಳ ತೀವ್ರವಾದಂಥ ಒಂದು ಹೇಳಿಕೆಯನ್ನು ಕೊಡಬೇಕು. ತಾವು ಅದನ್ನು ಕೈಗೊಳ್ಳದಿದ್ದರೆ, ಈ ಕೂಡಲೇ ಎಲ್ಲಾ ವರ್ಗದವರನ್ನು ಎಲ್ಲಾ ಧರ್ಮದವರನ್ನು ಕರೆದು ಶಾಂತಿ ಸಮಿತಿಯನ್ನು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಮಾಡಬೇಕೆಂದು ಹೇಳಿ ಈ ಸದನದಲ್ಲಿ ತಮ್ಮ ಮೂಲಕ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

+ ಪ್ರೊ. ಎಂ. ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ): ಸನ್ಮಾನ್ಯ ಅಧ್ಯಕ್ಷರೇ, ಈ ಗಣೇಶನ ಹಬ್ಬದ ಸುತ್ತಮುತ್ತ ಗಲಭೆಗಳಾಗುತ್ತದೆಂದು ನಾನು ನನ್ನ ಸ್ನೇಹಿತರ ಜೊತೆಯಲ್ಲಿ ಬಹಳ ದಿವಸದಿಂದ ಮಾತನಾಡುತ್ತಿದ್ದೆ. ಈಗ ನಾವು 20ನೇ ಶತಮಾನದ ಕೊನೆಯಲ್ಲಿದ್ದೇವೆ. ಇಂಥ ಗಲಭೆಗಳು, ಘಟನೆಗಳು ನಮಗೆಲ್ಲಾ ಅಪಮಾನ ತರುವುದರಿಂದ ಇದಕ್ಕೆ ನಾವು ಪರಿಹಾರವನ್ನು ಸರಿಯಾಗಿ ಕಂಡುಕೊಳ್ಳಬೇಕು. ಗಲಭೆಗೆ ಮುಂಚೆ ಶಾಂತಿ ಸಮಿತಿಯನ್ನು ರಚನೆ ಮಾಡುವುದು,

ಅಥವಾ ಗಲಭೆಯ ನಂತರ ಶಾಂತಿ ಸಮಿತಿಯನ್ನು ರಚಿಸುವುದು ಇದಕ್ಕೆ ಪರಿಹಾರವಾಗುವುದಿಲ್ಲ. ಧರ್ಮಕ್ಕೆ ಅಪಚಾರ ಆಗಬಾರದು. ನಾವು ಮೂಲಭೂತವಾಗಿ ಈ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳದಿದ್ದರೆ ಇಂತಹ ಗಲಭೆಗಳು ಇನ್ನೂ ಹೆಚ್ಚಾಗಿ ಆಗುತ್ತದೆ. ಏಕೆಂದರೆ, There are forces which are trying to deliberately communalise politics. ಇಂಥ ಶಕ್ತಿಗಳನ್ನು ನಾವು ಯಾವ ರೀತಿ ನಿಯಂತ್ರಣ ಮಾಡಬೇಕೆಂಬುದನ್ನು ಮಾನ್ಯ ಗೃಹಮಂತ್ರಿಗಳು ಆಲೋಚನೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ದೇಶದಲ್ಲಿ ನಮ್ಮದು ಮೊದಲನೇ ರಾಜ್ಯವಾಗಬೇಕು. ನಮ್ಮ ದೇಶದ ಎಲ್ಲ ರಾಜ್ಯಗಳಿಗೂ ನಮ್ಮ ರಾಜ್ಯ ಮಾರ್ಗದರ್ಶಕವಾದ ರಾಜ್ಯ ಆಗಬೇಕೆಂಬುದು ನನ್ನ ಆಸೆ. ಯಾರ್‍ಯಾರು ಧಾರ್ಮಿಕ ನಾಯಕರಿದ್ದಾರೆ ಅವರನ್ನೆಲ್ಲಾ ತಾವು ಕರೆಸಿ ಮಾತನಾಡಿ, ಧರ್ಮ ಎಂದರೇನು ಎಂಬುದನ್ನು ನಾವು ಈ ಧಾರ್ಮಿಕ ನಾಯಕರಿಗೆ ಪಾಠ ಹೇಳಿಕೊಡತಕ್ಕ ಸ್ಥಿತಿಗೆ ಬಂದಿದ್ದೇವೆ. ಧರ್ಮ ಎಂದರೇನು? ಇದು ವೈಯಕ್ತಿಕ ಚಟುವಟಿಕೆಯೆ? ಅಥವಾ ಗುಂಪು ಚಟುವಟಿಕೆಯೆ? ಗುಂಪು ಚಟುವಟಿಕೆಯ ಧಾರ್ಮಿಕ ಚಟುವಟಿಕೆ ಎಂದು ಅನಿಸಿಕೊಳ್ಳುವುದಿಲ್ಲ. ನಮ್ಮ ಸಂವಿಧಾನದಲ್ಲಿ ಕೂಡ ಧಾರ್ಮಿಕ ಹಕ್ಕು ಎನ್ನತಕ್ಕದ್ದು ವೈಯಕ್ತಿಕ ಹಕ್ಕು. Right to freedom of religion. It is an individual right and not a right conferred on a group. Right to freedom of religion is an individual right and not conferred on the group .ಆದುದರಿಂದ ನಾನು ವಿನಂತಿಸಿಕೊಳ್ಳುತ್ತಿದ್ದೇನೆ, ಈ ಗುಂಪು ಚಟುವಟಿಕೆ ಧರ್ಮಕ್ಕೆ ಸಂಬಂಧಪಟ್ಟಂತೆ ಏನಿದೆ ಅದನ್ನು ನಾವು ಮಾತುಕತೆಗಳ ಮುಖಾಂತರ ಅವರಿಗೆ ಸರಿಯಾದ ರೀತಿಯಲ್ಲಿ ಸ್ಪಷ್ಟೀಕರಣವನ್ನು ಕೊಟ್ಟು ಇದನ್ನು ನಿಷೇಧ ಮಾಡಬೇಕೆಂಬ ತೀರ್ಮಾನವನ್ನು ನಮ್ಮ ರಾಜ್ಯ ಸರ್ಕಾರದವರು ತೆಗೆದುಕೊಳ್ಳಬೇಕು. ದೇವರನ್ನು ಬೀದಿಗೆ ತಂದು ಮೆರವಣಿಕೆಮಾಡತಕ್ಕದ್ದು...

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನನ್ನದೊಂದು ಕ್ರಿಯಾಲೋಪವಿದೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ : ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಕುಳಿತುಕೊಳ್ಳಿ ಎಂದು ನನಗೆ ಹೇಳುವುದಕ್ಕೆ ಇವರು ಯಾರು? ಮಾನ್ಯ ಅಧ್ಯಕ್ಷರು ಹೇಳಬೇಕು.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುವುದಕ್ಕೆ ನನಗೆ ಅಧಿಕಾರ ಇಲ್ಲವೆ?

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ. ಆದುದರಿಂದ ತಾವು ನನಗೆ ಅವಕಾಶ ಮಾಡಿಕೊಡಬೇಕು.

ಪ್ರೊ: ಎಂ. ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುವಾಗ...

(ಗೊಂದಲ)

ಅಧ್ಯಕ್ಷರು : ಈಗ ನಾವು ಯಾವ ಪರಿಸ್ಥಿತಿಯಲ್ಲಿದ್ದೇವೆಂಬುದನ್ನು ಹೇಳಬೇಕಾದರೆ

ಶ್ರೀ ವಾಟಾಳ್ ನಾಗರಾಜ್ : ಈಗ ಸದನದಲ್ಲೇ ಶಾಂತಿ ಸಮಿತಿಯನ್ನು ರಚನೆ ಮಾಡಬೇಕಾಗಿದೆ.

(ಗೊಂದಲ)

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಇದು ಒಂದು ತಮಾಷೆ ಆಗಿದೆ. people who are creating disorder are raising point of order.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನನ್ನ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ನಾನು ಏನು ಹೇಳುತ್ತಿದ್ದೇನೆಂದರೆ...

ಅಧ್ಯಕ್ಷರು : ನಿಮ್ಮ ಪಾಯಿಂಟ್ ಆಫ್ ಆರ್ಡರ್ ಯಾವಾಗ ಬರುತ್ತದೆಂದರೆ...

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ರೆಕಾರ್ಡ್‌ಗೆ ಹೋಗುತ್ತಿದೆ.

(ಗೊಂದಲ)

ಅಧ್ಯಕ್ಷರು : ಆರ್ಡರ್, ಆರ್ಡರ್..

ಶ್ರೀ ಬಿ. ಎಸ್. ಯಡಿಯೂರಪ್ಪ: ಮೆರವಣಿಗೆ ಹೇಗೆ ನಡೆಯಬೇಕು, ಏಕೆ ನಡೆಯಬೇಕು ಎಂದು ಅವರು ಹೇಳುವುದು ಇಲ್ಲಲ್ಲ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಏತಕ್ಕೆ ಹೇಳಬಾರದು?

ಅಧ್ಯಕ್ಷರು : ಮಾನ್ಯ ಪ್ರೊ. ನಂಜುಂಡಸ್ವಾಮಿಯವರು...

ಪ್ರೊ. ಎಂ.ಡಿ. ನಂಜುಂಡಸ್ವಾಮಿ: ನಾನು ಹೇಳುತ್ತಿದ್ದೆ...

ಶ್ರೀ ಬಿ. ಎಸ್. ಯಡಿಯೂರಪ್ಪ : ನಾವು ಹೇಳುವುದನ್ನು ಅಡ್ಡಿ ಮಾಡತಕ್ಕ ಅಧಿಕಾರ ನಿಮಗಿಲ್ಲ.

ಅಧ್ಯಕ್ಷರು : ಅವರದ್ದು ಆದಮೇಲೆ ನಿಮ್ಮನ್ನು ಕರೆಯುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಪೂಜೆ, ಪುರಸ್ಕಾರ, ಮೆರವಣಿಗೆಗಳನ್ನು ಹೀಗೇ ಮಾಡಬೇಕು, ಹಾಗೇ ಮಾಡಬೇಕೆಂದು ಹೇಳುವಂಥ ಅಧಿಕಾರ ಅವರಿಗೆ ಇಲ್ಲ.

(ಗೊಂದಲ)

ಅಧ್ಯಕ್ಷರು : ನಾನು ಅನಂತರ ನಿಮ್ಮನ್ನು ಕರೆಯುತ್ತೇನೆ.

(ಗೊಂದಲ)

ಅಧ್ಯಕ್ಷರು : ಆರ್ಡರ್.. ಆರ್ಡರ್.. ಆರ್ಡರ್

ಶ್ರೀ ಬಿ. ಎಸ್. ಯಡಿಯೂರಪ್ಪ: ದೇವರನ್ನು ಬೀದಿಗೆ ತಂದು ಮೆರವಣಿಗೆ ಯಾವ ರೀತಿ ಮಾಡಬೇಕು ಎನ್ನುವುದು ದೇಶದ ಜನತೆಗೆ ಚೆನ್ನಾಗಿ ಗೊತ್ತಿದೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ನಂಜುಂಡಸ್ವಾಮಿಯವರು ಮಾತನಾಡಿದಮೇಲೆ ನಿಮ್ಮನ್ನು ಕರೆಯುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ: ದೇವರು ಅವರ ಪ್ರಾಪರ್ಟಿನೇ?

ಅಧ್ಯಕ್ಷರು : ಪ್ರೊ. ನಂಜುಂಡಸ್ವಾಮಿಯವರೇ ತಾವು ಹೇಳಿ ಸಂಕ್ಷಿಪ್ತವಾಗಿ ಮುಗಿಸಿ.

ಇರಬಹುದು, ಅವರಿಗೆ ಸ್ವಾತಂತ್ರ್ಯ ಇದೆ. ಅವರು ಅವರದೇ ಆದ ರೀತಿಯಲ್ಲಿ ಸಮಾಜದಲ್ಲಿ ಬದುಕಿಬಾಳುತ್ತಿದ್ದಾರೆ ಹಾಗೂ ಸಮಾಜದಲ್ಲಿ ದುಡಿಯುತ್ತಿದ್ದಾರೆ. ಅವರ ಬಗ್ಗೆ ಅಪಾರ್ಥ ಬರುವ ರೀತಿಯಲ್ಲಿ ಅಗೌರವ ತೋರಿಸುವ ರೀತಿಯಲ್ಲಿ ನಡೆದುಕೊಳ್ಳುವುದು ಸರಿಯಲ್ಲ. ಪ್ರೊ. ನಂಜುಂಡಸ್ವಾಮಿಯವರು ಏನು ಈ ರಾಜ್ಯದ ಹಿತದೃಷ್ಟಿಯಿಂದ ಮೆರವಣಿಗೆಗಳು ಆಗಬಾರದೆಂದು ಸಲಹೆ ಕೊಟ್ಟಿದ್ದಾರೆ, ಇದು ಸಾಧ್ಯವಿಲ್ಲ. ಈ ರಾಜ್ಯದಲ್ಲಿ ಧಾರ್ಮಿಕ ಮೆರವಣಿಗೆಗಳನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಒಂದು ವೇಳೆ ನಿಲ್ಲಿಸಿದರೆ ಕ್ರಾಂತಿ ಆಗಬಹುದು. ಆದ್ದರಿಂದ ಯಾವುದೇ ಸರ್ಕಾರ ಇದಕ್ಕೆ ಕೈಹಾಕದೆ ಮೆರವಣಿಗೆಗಳು ಶಾಂತ ರೀತಿಯಿಂದ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಸರ್ಕಾರ ಈ ಬಗ್ಗೆ ಎಚ್ಚರಿಕೆಯಿಂದ ಗಮನ ಕೊಡಬೇಕಾಗಿದೆ. ಎಲ್ಲಿಯೂ ಗೊಂದಲಕ್ಕೆ ಅವಕಾಶ ಆಗಬಾರದು. ಅದಕ್ಕೋಸ್ಕರ ಗೃಹ ಸಚಿವರು ಉತ್ತರಿಸುವಾಗ ಸ್ಪಷ್ಟವಾಗಿ ಹೇಳಬೇಕು ಗಣಪತಿ ಮೆರವಣಿಗೆ ಎಲ್ಲಿ ನಡೆಯಬೇಕು, ಯಾವ ರಸ್ತೆಯಲ್ಲಿ ಆಗಬೇಕೆಂದು ಸರ್ಕಾರ ತೀರ್ಮಾನಿಸುವುದಕ್ಕೆ ಆಗುವುದಿಲ್ಲ. ಯಾವುದೇ ಸಮಾಜದವರು ಮೆರವಣಿಗೆ ಮಾಡುವಾಗ ಅದಕ್ಕೆ ಅಡ್ಡಿ ಮಾಡುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ಗೊಂದಲಕ್ಕೆ ಅವಕಾಶವಾಗುತ್ತದೆ. ಗಣಪತಿ ಉತ್ಸವದ ಸಂದರ್ಭದಲ್ಲಿ ಗಲಭೆ ಮಾಡುವುದಕ್ಕೆ ಬರುವ ಜನರನ್ನು ತಡೆಯುವುದಕ್ಕೆ ಸರ್ಕಾರದಿಂದ ಸಾಧ್ಯವಾಗಿಲ್ಲ. ಯಶಸ್ವಿಯಾಗಿ ಮೆರವಣಿಗೆ ಆಗುವಂತೆ ನೋಡಿಕೊಳ್ಳುವುದಕ್ಕೆ ಆಗಿಲ್ಲ. ಆದ್ದರಿಂದ ಸರಿಯಾಗಿ ವಿಶೇಷ ಬಂದೋಬಸ್ತು ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

SRI QUMARUL ISLAM (GULBARGA) : Mr. Speaker Sir, about 3 years back, when Ganesha Utsava and Id-milad processions were going on, on the same day throughout the State, except 2-3 places, such disturbances took place. I will quote the example of my own city. Even though an All-party delegation had to go to Delhi to meet the Prime Minister, I expressed and regretted myself that I will not be able to accompany. I told the Chief Minister that I wanted to be in Gulbarga. We created history in Gulbarga. In the list of police, Gulbarga is prone to Communal disturbances. In the peace committee meeting, I said that the procession route is fixed, the timing is fixed but with mutual understanding, we can just change the timing. We are leading our procession and at the same time, about 6 Ganesha Mandalis have also started their processions. I said, why not our Hindu brothers coËoperate with us since we have participated in their Utsavas many a time. I wish to submit here that I was leading the procession in 6 places. Even the people belonging to BJP, Janatha Dal Corporators garlanded us. When the Ganapathi Utsava was going on at one place, they stopped and played Quawwali. This is the real brotherhood. We should build up this in our heart. We have also put, sprinkled rose water, Affar on them and embrassed each other.

Sir, the only thing is, even after 40 years of independence, why these things are happening? In the heart, we should build up that brotherhood. We are not pointing out those culprits who create that mischief. These culprits any how try to escape. That is why we told the police to come to our rescue. What happened in Yedrani, your own Constitutency? It is not Hindu -Muslim galata or anything of that sort. It so happened that the Ganesha Utsava Procession was going on, there was fight between the two groups. The house of ZP Member was attacked. One tractor was burnt. There is nothing of the sort of clash between Hindu-Muslim. Sir, some people purposely take the advantage in such situtations. If this is informed to police, definitelytheycantakeaction.Whythesethingshavehappened? Whetherpre-emptive or precautionary measures have been taken by the police or not We should form State Integration Committee, District level Integration Committee and also Taluka level Integration Committee, irrspective of political parties that we come from. We should celebrate these Utsavas not only for the community but for creation of National broherhood. Sir, with these few words, I end my submission.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಸನ್ಮಾನ್ಯ ಅಧ್ಯಕ್ಷರೆ, ನಾವು ಒಂದು ಬಹಳ ರಾಷ್ಟ್ರೀಯ ಸಮಸ್ಯೆ ಬಗ್ಗೆ ಇಲ್ಲಿ ವಿಚಾರ ಮಂಥನ ಮಾಡಿದ್ದೇವೆ. ನಮ್ಮ ದೇಶದಲ್ಲಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾವು ಬಹಳ ಬೇಗ ಈ ಬಗ್ಗೆ ತೀರ್ಮಾನವನ್ನು ಮಾಡಬೇಕಾಗುತ್ತದೆ. ಏನೆಂದರೆ ಈ ದೇಶದಲ್ಲಿ ಬಡವನ ಹೊಟ್ಟೆ ತುಂಬಿಸತಕ್ಕದ್ದು ಮೊದಲೇ ನಮ್ಮ ಕರ್ತವ್ಯವೋ ಅಥವಾ ಬೇರೆ ವಿಚಾರಗಳಿಗೆ ಹೆಚ್ಚಿನ ಮಹತ್ವ ಕೊಡಬೇಕೋ ಎಂಬುದನ್ನು ಬಹಳ ಬೇಗ ತೀರ್ಮಾನ ಮಾಡತಕ್ಕ ಕಾಲ ಬಂದಿದೆ ಎಂದು ನಾನಾದರೂ ತಿಳಿದಿದ್ದೇನೆ. ಅಂಥ ಒಂದು ಕ್ರಾಂತಿ ಆಗುತ್ತದೆಂದು ಯಾರಾದರೂ ಭಾವಿಸಿಕೊಂಡರೆ ಆ ಕ್ರಾಂತಿ ಆದಷ್ಟು ಬೇಗ ಆಗುವುದು ಒಳ್ಳೆಯದು. ನಾವು ಎಲ್ಲಿ ನಿಲ್ಲುತ್ತೇವೆ, ಅವರು ಎಲ್ಲಿ ನಿಲ್ಲುತ್ತಾರೆ, ಹೊಟ್ಟೆಗೆ ಹಿಟ್ಟಿಲ್ಲದೇ ಇರುವವರು ಮುಂಚೆ ನಿಲ್ಲುತ್ತಾರೋ ಅಥವಾ ಬೇರೆಯವರು ಮುಂಚೆ ನಿಲ್ಲುತ್ತಾರೋ ಎನ್ನತಕ್ಕ ಒಂದು ಈಗಿನ ಒಂದು ವ್ಯವಸ್ಥೆ ಬದಲಾವಣೆಯಾಗಲು ಆಗುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ. ನಾನಾದರೂ ಮಾನ್ಯ ಮುಖ್ಯಮಂತ್ರಿಗಳಿಗೆ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಗಣೇಶನ ಹಬ್ಬ ಆಗಿ ಬಹಳ ದಿನ ಆಯಿತು. ನಮ್ಮ ರಾಜ್ಯದಲ್ಲಿ ಎಲ್ಲೂ ಗಲಾಟೆ ಆಗಿರಲಿಲ್ಲ. ಆದರೆ ಕಳೆದ 8-10 ದಿನಗಳಲ್ಲಿ ಚನ್ನಪಟ್ಟಣದಲ್ಲಿ ಏತಕ್ಕೆ ಗಲಾಟೆ ಆಯಿತು? ಗುಲ್ಬರ್ಗದಲ್ಲಿ ಏತಕ್ಕಾಯಿತು? ಬೆಳಗಾಂನಲ್ಲಿ ಏತಕ್ಕಾಯಿತು? ಹುಬ್ಬಳ್ಳಿಯಲ್ಲಿ ಏತಕ್ಕೆ ದೊಡ್ಡ ಪ್ರಮಾಣದಲ್ಲಿ ಆಗುತ್ತಿದೆ? ಚನ್ನಪಟ್ಟಣದಲ್ಲಿ ಟೆನ್‌ಷನ್ ಇದೆ ಎಂಬುದು ನನಗೆ ಗೊತ್ತಿದೆ. ಆದರೆ ಇದು ಏತಕ್ಕಾಗುತ್ತಿದೆ? ಇದರ ಬಗ್ಗೆ ಏನಾದರೂ ಪಿತೂರಿ ಇದೆಯೆ ಎಂಬುದನ್ನು ಗಮನಿಸಬೇಕಾಗಿದೆ. ಧಾರವಾಡ ಉಪ ಚುನಾವಣೆಗಳನ್ನು ನವೆಂಬರ್ ಡಿಸೆಂಬರ್‌ನಲ್ಲಿ ನಡೆಸುತ್ತಾರೆ ಎಂಬ ಹಿನ್ನಲೆಯಲ್ಲಿ ಈ ಗಲಭೆಗಳಾಗುವುದಕ್ಕೆ ಕಾರಣ ಏನು ಎಂಬುದನ್ನು ತಾವು ವಿಚಾರ ಮಾಡಬೇಕು. ಇವತ್ತು ಸಮಿತಿಗಳನ್ನು ಮಾಡತಕ್ಕದ್ದು ಅಥವಾ ಹೃದಯಗಳು ಒಟ್ಟಿಗೆ ಆಗದೆ ಕೇವಲ ನಾವು ಅವರು ಅತ್ತರಗಳನ್ನು ಹಂಚಿಕೊಳ್ಳುವುದರಲ್ಲಿ ಅರ್ಥ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ.

ಹೃದಯಗಳು ಪರಿವರ್ತನೆಯಾಗಬೇಕೆಂದು ಅವರೇ ಹೇಳಿದರು. ಈ ಹೃದಯಗಳು ಒಂದಾಗಬೇಕೆಂದರೆ ಕೆಲವರ ಹೃದಯಗಳು ಪರಿವರ್ತನೆಯಾಗುವುದೇ ಇಲ್ಲ, ಇದು ಪುರಾಣಗಳ

ಕಾಲದಿಂದಲೂ ನಡೆಯುಕೊಂಡು ಬಂದಿರತಕ್ಕದ್ದು. ಅವರಿಗೆ ಶಿಕ್ಷೆಯನ್ನು ಕೊಡಬೇಕಾಗುತ್ತದೆ. ಅದಕ್ಕೋಸ್ಕರ ಸರ್ಕಾರ ಇದೆ. ಸರ್ಕಾರ ಅಂತಹ ಶಕ್ತಿಗಳನ್ನು ಸಂಪೂರ್ಣವಾಗಿ ದಮನ ಮಾಡಬೇಕಾಗುತ್ತದೆ. ಅವರ ಮೇಲೆ ಕ್ರಮತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೋಸ್ಕರವಾಗಿ ನಾನು ಸರ್ಕಾರಕ್ಕೆ ಸೂಚನೆ ಕೊಡುವುದಕ್ಕೆ ಬಯಸುತ್ತೇನೆ. ಇದರ ಹಿಂದೆ ಇರತಕ್ಕ ಶಕ್ತಿಗಳನ್ನು ತಾವು ಗುರ್ತಿಸಬೇಕು. ಮತ್ತು ಇದಕ್ಕೆ ರಾಜಕೀಯ ಕಾರಣಗಳು ಏನಾದರು ಇದೆಯೇ ಎಂದು ತಾವು ತಕ್ಷಣ ತಿಳಿದುಕೊಳ್ಳಬೇಕಾಗುತ್ತದೆ. ನಮ್ಮಲ್ಲಿ ಒಳ್ಳೆಯ ಪೋಲೀಸ್ ಅಧಿಕಾರಿಗಳು ಇದ್ದಾರೆ. ಅವರನ್ನು ತಕ್ಷಣ ಕಳುಹಿಸಿ ಆ ಭಾಗದಲ್ಲಿ ಇರುವ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ತಾವು ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ತಾವು ಇಲ್ಲಿ ಬಂದು ಹೇಳಿಕೆ ಕೊಡುತ್ತೀರಿ. ಇಲ್ಲಿ ಇಷ್ಟು ಪೋಲೀಸ್ ಹಾಕಿದ್ದೇವೆ. ಇಂತಹ ಕಡೆ ಪೋಲೀಸ್ ಕಾವಲು ಇದೆ, ಪರಿಸ್ಥಿತ ನಿಯಂತ್ರಣದಲ್ಲಿ ಇದೆ ಎನ್ನುವ ಹೇಳಿಕೆಯನ್ನು ಇವತ್ತು ಸಾಯಂಕಾಲವೋ ಅಥವಾ ನಾಳೆಯೋ ಕೊಡಿ. ಆದರೆ ತಾವು ನಮ್ಮ ಸಭಾನಾಯಕರಾಗಿದ್ದುಕೊಂಡು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದುಕೊಂಡು ಕಳೆದ ಒಂದು ವಾರದಲ್ಲಿ ನಡೆದಿರತಕ್ಕ ಗಲಭೆ ಏನಿದೆ ಇದರ ಹಿಂದೆ ಇರತಕ್ಕ ಶಕ್ತಿಗಳು ಎಷ್ಟೆ ದೊಡ್ಡದಿರಲಿ, ಯಾವುದೇ ಪಕ್ಷದವರಾಗಿರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಭರವಸೆಯನ್ನು ಈ ಸದನಕ್ಕೆ ಕೊಡಬೇಕೆಂದು, ದುಷ್ಟಶಕ್ತಿಗಳಿಗೆ ಎಚ್ಚರಿಕೆಯನ್ನು ಕೊಡಬೇಕೆಂದು ನಾನು ಹೇಳಬಯಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಚನ್ನಪಟ್ಟಣ, ಗುಲ್ಬರ್ಗಾ ಹಾಗೂ ಮತ್ತಿತರ ಕಡೆ ನಡೆದಿರತಕ್ಕ ಗಲಭೆಯಲ್ಲಿ ಯಾರ ಕೈವಾಡ ಇದೆ ಎಂದು ತಿಳಿದುಬರಲು ಒಂದು ಸಮಿತಿಯನ್ನು ಮಾಡಿ. ಅದು ವಿಚಾರವನ್ನು ತಿಳಿದುಕೊಂಡು ಬರಲಿ. ಸಾಧ್ಯವಾದರ ಈ ಬಗ್ಗೆ ಇವತ್ತು ಸಂಜೆಯೊಳಗೆ ಹೇಳಿಕೆ ಕೊಡಬೇಕು.

ಶ್ರೀ ಆರ್.ವಿ. ದೇಶಪಾಂಡೆ: ಇವತ್ತು ಬೆಳಗಾಂನಲ್ಲಿ ಸಿಚ್ಯುಯೇಷನ್ ಗಂಭೀರವಾಗಿದೆ. ಇವತ್ತು ಹುಬ್ಬಳ್ಳಿ, ಬೆಳಗಾಂನ ಜನರಲ್ಲಿ ಕಾನ್ಫಿಡೆನ್ಸ್‌ಗೆ ಕ್ರಿಯೇಟ್ ಮಾಡಲೂ ಇವತ್ತು ನಿರಪರಾಧಿಗಳು ಯಾರು ಅರಸ್ಟ್ ಆಗಿದ್ದಾರೆ ಅವರನ್ನು ಬಿಡುಗಡೆ ಮಾಡಬೇಕಾಗುತ್ತದೆ. ಎಷ್ಟೋ ಜನ ಮನೆ ಬಿಟ್ಟವರು ಮನೆಗೆ ಬಂದು ಸೇರಿಲ್ಲ, ಇನ್ನು ಮಾನ್ಯ ನಂಜುಂಡಸ್ವಾಮಿಯವರು ಒಂದು ಮಾತನ್ನು ಹೇಳಿದರು. ಏನೆಂದರೆ

ಅಧ್ಯಕ್ಷರು : ವಿವರಕ್ಕೆ ಹೋಗುವುದು ಬೇಡ.

ಶ್ರೀ ಆರ್.ವಿ. ದೇಶಪಾಂಡೆ : ಇವತ್ತು ಮೆರವಣಿಗೆಯಾಗಲೀ, ಮೈಕ್‌ಸೆಟ್ ಹಾಕುವುದ ರಾಗಲೀ ಬಂದ್ ಮಾಡಬೇಕೆಂದು ಅವರು ಏನು ಹೇಳಿದರು, ಅದು ಆಗುವುದಿಲ್ಲ, ನೂರಾರು ವರ್ಷಗಳಿಂದ ಈ ಪದ್ಧತಿ ನಡೆದುಕೊಂಡು ಬಂದಿದೆ. ಮುಸ್ಲಿಮರಾಗಲೀ, ಕ್ರಿಶ್ಚಿಯನ್ನರಾಗಲೀ, ಹಿಂದೂಗಳಾಗಲೀ ಅವರವರ ಧರ್ಮವನ್ನು ಅವರು ಆಚರಣೆ ಮಾಡುವುದನ್ನು ಯಾರೂ ತಡೆಯುವುದಕ್ಕಾಗುವುದಿಲ್ಲ. Muslims are responsible, Hindus are responsible, antisociall elements are responsible.ಇದನ್ನು ಕಂಟ್ರೋಲ್ ಮಾಡಬೇಕು. ಆಂಟಿಸೋಶಿಯಲ್ ಎಲಿಮೆಂಟ್ಸ್ ಇದರ ಲಾಭವನ್ನು ಪಡೆದುಕೊಳ್ಳುತ್ತಿವೆ. ಸರ್ಕಾರ ಇದನ್ನು ಕಂಟ್ರೋಲ್ ಮಾಡಬೇಕು. ಇವತ್ತು ಪ್ರೊಸೆಷನ್ ಕಂಟ್ರೋಲ್ ಮಾಡಿದರೆ ಯಾವ ಸಮಸ್ಯೆಯೂ ಬಗೆಹರಿಯುವುದಿಲ್ಲವೆಂದು ನನ್ನ ಅಭಿಪ್ರಾಯ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ, ನಾನು ಅದನ್ನೆ ಹೇಳುತ್ತಾ ಇದ್ದೆ. ಇದು ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿದೆ ಎಂದು ಹೇಳುತ್ತಿದ್ದಾರೆ. ಸಾವಿರಾರು ವರ್ಷದ ರೋಗ ಇದು. ಅದನ್ನೇ ನಾನು ಹೇಳಿದ್ದು. ಅದನ್ನು ವಾಸಿಮಾಡಿಕೊಳ್ಳುತ್ತೀರೋ ಅಥವಾ ಅದೇ ರೋಗವನ್ನು ಇಟ್ಟುಕೊಂಡು ಮುಂದುವರಿಯುತ್ತೀರೋ?

ಶ್ರೀ ವಾಟಾಳ್ ನಾಗರಾಜ್ : ಇದಕ್ಕೆ ರಾಷ್ಟ್ರೀಯ ಚಿಂತನೆ ಆಗಬೇಕು; ಅದಕ್ಕಾಗಿ ಬೇರೆ ದಿವಸ ಚರ್ಚೆ ಮಾಡೋಣ.

ಅಧ್ಯಕ್ಷರು : ತಕ್ಷಣ ಅದಕ್ಕೆ ನೀವು ನೋಟೀಸ್ ಕೊಡಿ. ಚರ್ಚೆಗೆ ಏರ್ಪಾಡು ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ಇನ್ನು 3ದಿವಸಗಳೊಳಗೆ ಚರ್ಚೆಗೆ ವ್ಯವಸ್ಥೆ ಮಾಡುವುದಾದರೆ ನಾನು ನೋಟೀಸ್ ಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಏನು ಈ ಪದ್ಧತಿಯನ್ನು ರೋಗ ಎಂದು ಕರೆದೂ ಈ ಧಾರ್ಮಿಕ ಮುಖಂಡರುಗಳಿಗೆ, ಈ ವ್ಯವಸ್ಥೆಗೆ, ಸಮಾಜಕ್ಕೆ ಅಪಮಾನ ಮಾಡುವಂತಹ ಶಬ್ಧಗಳನ್ನು ಏನು ಉಪಯೋಗ ಮಾಡಿದ್ದಾರೆ ಅದನ್ನು ಕಡತದಿಂದ ತಾವು ತೆಗೆದುಹಾಕಬೇಕು. ಅದನ್ನು ಉಳಿಸಿಕೊಳ್ಳುವುದಾದರೆ ನನ್ನ ಅಭ್ಯಂತರ ಇಲ್ಲ, ಆದರೆ ಸಾವಿರಾರು ವರ್ಷಗಳಿಂದ ಮೆರವಣಿಗೆ ಪೂಜೆ ಪುರಸ್ಕಾರಗಳು ನಡೆದುಕೊಂಡು ಬಂದಿವೆ. ಇದರಿಂದ ನಮ್ಮ ಸಮಾಜಕ್ಕೆ ಒಳ್ಳೆಯದಾಗಿದೆಯೋ ಅಥವಾ ಕೆಟ್ಟದ್ದಾಗಿದೆಯೋ? ಇತ್ತೀಚಿನ ದಿವಸಗಳಲ್ಲಿ ಇದಕ್ಕೆ ಬೇರೆ ರೂಪ ಬರುವುದಕ್ಕೆ ಯಾವುದೇ ಶಕ್ತಿ, ಯಾವುದೇ ಜಾತಿ ಹಾಗೂ ಪಕ್ಷದವರು ಇರಲಿ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಪೋಲೀಸ್ ಇದೆ, ಸರ್ಕಾರ ಇದೆ, ಅಧಿಕಾರ ಇದೆ. ಅದನ್ನು ಬಿಟ್ಟು ಜನರ ಭಾವನೆಗಳಿಗೆ ಧಕ್ಕೆ ತರತಕ್ಕ ಮಾತು ಸಲ್ಲದು ಎಂದು ನಾನು ಹೇಳುತ್ತೇನೆ.

SRI K.C. MODGEKAR DESAI : Belgaum City has been able to maintain cordial and brotherly relations amongest Hindus and the Muslims since many years and the same is being explaimed by one and all the countrymen. Almost all the festivals...

(interruptions)

SRI K.C.MODGEKAR DESAI : Almost all the festivals of Hindus and the Muslims are being celebrated with all anxiety, peace of mind and devotion. As usual and in vogue, the higher authorities of the Police Department had a Peace Committee meeting.

MR.SPEAKER : What is it that are trying to read out? Are you making a statement?

SRI K.C.MODGEKAR DESAI : Yes.

Mr. SPEAKER : Then you have to come this side for making statement.

SRI K.C. MODGEKAR DESAI: I am telling the facts as to what happened there.

MR. SPEAKER : Minister is going to make a statement on this.

SRI K.C.MODGEKAR DESAI : I am stating as to what happened there?

MR. SPEAKER : Would you kindly convey it to the Minister either by way of a written statement or by way of a letter?

SRI K.C. MODGEKAR DESAI : I was in that procession..

MR. SPEAKER : You convey it to the Minister for Home. He is making a statement later in the evening or tomorrow.

+ ಶ್ರೀ ಧರ್ಮಸಿಂಗ್ (ಗೃಹಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು. ದೇಶಪಾಂಡೆಯವರು, ಸಿಂಧ್ಯಾರವರು, ಯಡಿಯೂರಪ್ಪನವರು ಮತ್ತು ನಂಜುಂಡ ಸ್ವಾಮಿ ಅವರು ಬಹಳ ಮೂಲಭೂತವಾದ ಸಮಸ್ಯೆಯ ಬಗ್ಗೆ ಹೇಳಿದ್ದಾರೆ. ಹುಬ್ಬಳ್ಳಿಯಲ್ಲಿ ಆದ ಘಟನೆಗಿಂತ ಬೆಳಗಾಂನಲ್ಲಿ ಈಗ ಏನಾಗಿದೆ ಅದು ಅಷ್ಟು ದೊಡ್ಡ ಘಟನೆಯಲ್ಲ. ಈಗ ಏನಾಗಿದೆ ಅಂದರೆ ಬೆಳಗಾಂನಲ್ಲಿ ಆದಂತಹ ಘಟನೆಯ ಬಗ್ಗೆ ಪೋಲೀಸ್‌ರವರು ಹತೋಟಿಗೆ ತಂದಿದ್ದಾರೆ. ಈಗ ಅಲ್ಲಿ ಶಾಂತಿಯುತವಾಗಿದೆ. ಮಾನ್ಯ ಮಂತ್ರಿಗಳಾದ ಮಲ್ಲಾರಿಗೌಡ ಪಾಟೀಲ್‌ರವರು ಸ್ಥಳಕ್ಕೆ ಹೋಗಿ ಸಮಾಲೋಚನೆ ಮಾಡಿ ಬರಲಿಕ್ಕೆ ಅಲ್ಲಿಗೆ ಕಳುಹಿಸಿಕೊಟ್ಟಿದ್ದೇವೆ. ಹುಬ್ಬಳ್ಳಿಯಲ್ಲಿ ಆದಂತಹ ಘಟನೆಯನ್ನು ನಿಯಂತ್ರಣಕ್ಕೆ ತಂದಿದ್ದೇನೆ. ಈ ಸಾರಿ ಗಣೇಶ ಹಬ್ಬ ಮತ್ತು ಈದ್‌ಮೀಲಾದ್ ಎರಡೂ ಒಂದೇ ದಿವಸ ಬಂದಿವೆ. ಗಣೇಶ ಹಬ್ಬದಲ್ಲಿ ಯಾವರೀತಿಯಾಗಿ ಸಮಸ್ಯಗಳು ಉದ್ಭವವಾಗುತ್ತದೆ ಎನ್ನುವುದು ತಮಗೆ ಗುರುತು ಇದೆ. ಈ ಸಾರಿ ಕರ್ನಾಟಕ ರಾಜ್ಯದಲ್ಲಿ ಎರಡೂ ಹಬ್ಬಗಳು ಒಂದೇ ಸಾರಿ ಬಂದಿವೆ. ಅಲ್ಲಿ ಮಾನ್ಯ ಸದಸ್ಯರಾದ ಕಮರುಲ್ಲ ಇಸ್ಲಾಮ್ ರವರು ಹೇಳಿದ ಹಾಗೆ ಶಾಂತಿ ಸಭೆಗಳನ್ನು ಮಾಡಿದ್ದೇವೆ. ಶಾಂತಿ ಸಭೆಯಲ್ಲಿ ವಾಗ್ದಾನವಾದಂತೆ ಎಲ್ಲ ಸರಿಯಾಗಿ ನಡೆದುಕೊಂಡು ಹೋಗಿದೆ. ಕೆಲವು ಕಡೆಗಳಲ್ಲಿ ವಿಶೇಷವಾಗಿ ಆಗಿದ್ದರೆ ಅಂತಹ ಕಡೆಗಳಲ್ಲಿ ಪೋಲೀಸ್‌ನವರು ಬಂದೋಬಸ್ತು ಮಾಡಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಪೋಲೀಸ್‌ನವರು ಮಿಲಿಟರಿ ಪೆರೇಡ್ ಮಾಡಿದಹಾಗೆ ಅಲ್ಲಿ ಮಾಡಿದ್ದಾರೆಂದು ಹೇಳಿದರು. We have anticipated the situation.

ಏತಕ್ಕೆ ಆ ರೀತಿ ಮಾಡಲಾಯಿತು ಅಂದರೆ, ಅಲ್ಲಿ ಒಬ್ಬ ಹುಡುಗನ ಸಾವು ಆದಮೇಲೆ ಮುಂದೆ ಏನಾದರೂ ಅನಾಹುತವಾಗಬಹುದು ಎಂದು ಸ್ವಲ್ಪ ಎಚ್ಚರಿಕೆ ವಹಿಸಿ ಪರಿಸ್ಥಿತಿಯನ್ನು ಹತೋಟಿಯಲ್ಲಿ ತಂದಿದ್ದೇವೆ. ಹುಬ್ಬಳ್ಳಿಯಲ್ಲಿ ಹೇಗಾಯಿತು ಅಂದರೆ ಪ್ರೊಸೇಷನ್ ಎರಡೂ ಒಂದೇ ದಿವಸ ಹೊರಟಾಗ ನಾವು ಹಾಗೆ ಹೋಗಬೇಕು. ಹೀಗೆ ಹೋಗಬೇಕು ಎನ್ನತಕ್ಕ ಒತ್ತಡದಿಂದ ಹೀಗೆ ಆಗಿದೆ. ಚನ್ನಪಟ್ಟಣದಲ್ಲಿ ಆಗಲಿ, ಗುಲ್ಬರ್ಗಾದಲ್ಲಿ ಆಗಲಿ ಆದದ್ದು ಗಣೇಶ ಹಬ್ಬದಿಂದ ಆಗಿಲ್ಲ. ಅದು ಬೇರೆ ಕಾರಣದಿಂದ ಆಗಿದೆ. ಯಾವುದೇ ಕಾರಣದಿಂದ ಆಗಿದ್ದರೂ ಅದನ್ನು ಹತೋಟಿಯಲ್ಲಿ ತಂದಿದ್ದೇವೆ. ಇವತ್ತು ಹುಬ್ಬಳ್ಳಿಯಲ್ಲಿ ಆಗಲಿ ಅಥವಾ ಬೆಳಗಾಂನಲ್ಲಿ ಆಗಲಿ ಎಲ್ಲಾ ಕಡೆ ಪರಿಸ್ಥಿತಿ ಹತೋಟಿಯಲ್ಲಿದೆ. ನಮ್ಮ ಇಲಾಖೆಯ ಉನ್ನತಮಟ್ಟದ ಅಧಿಕಾರಿಗಳು ಹೋಗಿ ಶಾಂತಿ ಸಭೆಗಳನ್ನು ನಡೆಸಿದ್ದಾರೆ. ಅದರ ಬಗ್ಗೆ ತಾವು ತಮ್ಮ ಮನಸ್ಸಿನಲ್ಲಿ ಯಾವುದೇ ಭಾವನೆ ತಾಳಬೇಕಾಗಿಲ್ಲ. ಇದರ ಬಗ್ಗೆ ವಿವರವಾದ ಹೇಳಿಕೆಯನ್ನು ಸದನಕ್ಕೆ ನಾಳೆ ನಾನು ಕೊಡುತ್ತಿದ್ದೇನೆ. ಮಾನ್ಯ ದೇಶಪಾಂಡೆಯವರು ಹೇಳಿದ ಹಾಗೆ ಪರಿಸ್ಥಿತಿ ಈಗ ಹತೋಟಿಯಲ್ಲಿದೆ. ಶಾಂತಿ ನೆಲೆಸಲಿಕ್ಕೆ ಸರ್ಕಾರ ಕ್ರಮ ತೆಗೆದುಕೊಂಡಿದೆ. ಆಸ್ತಿ ನಷ್ಟದ ಬಗ್ಗೆ ನಮ್ಮ ಅಧಿಕಾರಿಗಳು ವಿವರವನ್ನು ಸಂಗ್ರಹ ಮಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಷ್ಟದ ಬಗ್ಗೆ ಯಾವಾಗ ವಿಷಯ ಸಂಗ್ರಹ ಮಾಡಿದ್ದೀರಿ?

ಶ್ರೀ ಧರ್ಮಸಿಂಗ್ : ರಾಜ್ಯಮಟ್ಟದ ಅಧಿಕಾರಿಗಳು ಸಭೆಯನ್ನು ನಡೆಸಿದ್ದೇವೆ. ನಿರಪರಾಧಿಗಳು ಯಾರಾದರೂ ಬಂಧನದಲ್ಲಿದ್ದರೆ ಅವರನ್ನು ಬಿಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಶಾಂತಿ ಸಮಿತಿ ಸಭೆಗಳನ್ನು ರಾಜ್ಯಮಟ್ಟದಲ್ಲಿ ಮಾಡಿದಂತೆ ಜಿಲ್ಲಾಮಟ್ಟದಲ್ಲಿ ಮತ್ತು ತಾಲ್ಲೂಕುಮಟ್ಟಗಳಲ್ಲೂ ಮಾಡಬೇಕೆಂದು ನಾನು ಹೇಳಿದ್ದೇನೆ.

3) ಹಾಸನದಲ್ಲಿ ಕಾಲೇಜು ವಿದ್ಯಾರ್ಥಿಗಳ ಮುಷ್ಕರ.

ಶ್ರೀ ಕೆ. ಹೆಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೇ, ಕಳೆದ ನಾಲ್ಕು ದಿವಸಗಳಿಂದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಕಾಲೇಜಿಗೆ ಹೋಗದೆ ಹಾಸನದಲ್ಲಿ ಮುಷ್ಕರ ಮಾಡುತ್ತಿದ್ದಾರೆ. ಯಾರೂ ಕೂಡ ಕಾಲೇಜಿಗೆ ಹೋಗುತ್ತಿಲ್ಲ. ಯಾರೋ ಒಬ್ಬ ಪೋಲೀಸ್ ಆಫೀಸರ್ ಅವಾಚ್ಯ ಶಬ್ದಗಳಿಂದ ಮಾತನಾಡಿದರು ಎಂಬ ಕಾರಣದಿಂದ ಮುಷ್ಕರಕ್ಕೆ ವಿದ್ಯಾರ್ಥಿಗಳು ಇಳಿದಿದ್ದಾರೆ. ಯಾರೂ ಕಾಲೇಜುಗಳಿಗೆ ಹೋಗುತ್ತಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ : ಬರದು ಕಳುಹಿಸಿದ್ದೇನೆ.

ಅಧ್ಯಕ್ಷರು : ಅದನ್ನು ನಾನು ನೋಡುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ : ಈಗ ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ. ಕಾಲೇಜುಗಳಿಗೆ ಒಬ್ಬರು ಹೋಗುತ್ತಿಲ್ಲ. ಅಲ್ಲಿ ಗದ್ದಲಕ್ಕೆ ಅವಕಾಶವಾಗುತ್ತದೆ. ದಯಮಾಡಿ ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ಹೇಳಬೇಕು.

ಅಧ್ಯಕ್ಷರು : ಅದನ್ನು ನಾನು ನೋಡುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ : ನಾನು ಬರೆದು ಕೊಟ್ಟು ಆಗಲೇ ನಾಲ್ಕೈದು ದಿವಸ ಆಯಿತು.

ಅಧ್ಯಕ್ಷರು : ಆಗಲ್.

ಶ್ರೀ ಕೆ.ಹೆಚ್. ಹನುಮೇಗೌಡ : ಮಂತ್ರಿಗಳು ಯಾವಾಗ ಸ್ಟೇಟ್‌ಮೆಂಟ್ ಮಾಡುತ್ತಾರೆ? ಪರಿಸ್ಥಿತಿ ಕಂಟ್ರೋಲ್ಗೆ ತರುವುದಕ್ಕೆ ಏನು ಮಾಡುತ್ತೀರಿ ಅಷ್ಟು ಹೇಳಿ ಸಾಕು.

ಅಧ್ಯಕ್ಷರು : ಹೇಳಿಕೆಯನ್ನು ಯಾವಾಗ ಮಾಡುತ್ತೀರೆಂದು ಕೇಳುತ್ತಿದ್ದಾರೆ.

ಶ್ರೀ ಕೆ.ಹೆಚ್. ಹನುಮೇಗೌಡ : ಯಾವಾಗ ಅಲ್ಲಿನ ಪರಿಸ್ಥಿತಿಯನಾನು ಹತೋಟಿಗೆ ತರುತ್ತೀರಿ ಎಂದು ಕೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್ : ಹಾಸನದಲ್ಲಿ ಆಗಿರತಕ್ಕ ಗಲಭೆ ಸರ್ಕಾರದ ಗಮನಕ್ಕೆ ಬಂದಿದೆ. ಈಗಾಗಲೇ ನಾನು ಎಸ್.ಪಿ.ಯವರ ಜೊತೆಯಲ್ಲಿ ಮಾತನಾಡಿದ್ದೇನೆ. ಡಿಐಜಿಯವರು ಕೂಡ ಅಲ್ಲಿಗೆ ಹೋಗಿ ಬಂದಿದ್ದಾರೆ. ಮತ್ತೆ ಏನಾದರೂ ಸಮಸ್ಯೆ ಇದ್ದರೆ ಶಾಸಕರು ನನ್ನನ್ನು ಭೇಟಿ ಮಾಡಿ ತಿಳಿಸಿದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಮಾನ್ಯ ಮುಖ್ಯಮಂತ್ರಿಗಳು ಡೆಲ್ಲಿಗೆ ಹೋಗಿ ಬಂದ ವಿಚಾರ ತಿಳಿಸಿಲ್ಲ. ರೈತರೆಲ್ಲ ಕಾತರರಾಗಿದ್ದಾರೆ. ರೈತರ ಸಾಲ ಮನ್ನಾ ಬಗ್ಗೆ, ರಸಗೊಬ್ಬರದ ಬಗ್ಗೆ ಸರ್ವಪಕ್ಷಗಳ ನಿಯೋಗ ಹೋಗಿಬಂದಿದ್ದು, ಇದರ ಬಗ್ಗೆ ಏನಾದರೂ ಹೇಳಿಕೆಯನ್ನು ಅವರು ಕೊಡಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ : ಇಡೀ ರಾಜ್ಯದ ಜನರು ಎದುರು ನೋಡುತ್ತಿದ್ದಾರೆ.

ಅಧ್ಯಕ್ಷರು : ಯಡಿಯೂರಪ್ಪನವರು ಎಲ್ಲಿ ಹೋದರು?

ಶ್ರೀ ಕೆ.ಎಸ್. ಈಶ್ವರಪ್ಪ : ಹೊರಗಡೆ ಹೋಗಿದ್ದಾರೆ. ಮುಖ್ಯಮಂತ್ರಿಗಳು ಈಗ ಇಲ್ಲಿ ಬಂದಿದ್ದಾರೆ. ರಸಗೊಬ್ಬರದ ಬಗ್ಗೆ ಏನಾಯಿತು ? ಸಾಲ ಮನ್ನಾ ಬಗ್ಗೆ ಏನಾಯಿತು? ಜನ ಕಾಯುತ್ತಿದ್ದಾರೆ. ದಯವಿಟ್ಟು ತಿಳಿಸಬೇಕು. ದೆಹಲಿಗೆ ಹೋಗಿಬಂದದ್ದು ಏನಾದರೂ ಅನುಕೂಲ ಆಯಿತೇ?

ಶ್ರೀ ವಾಟಾಳ್ ನಾಗರಾಜ : ಇರದರ ಬಗ್ಗೆ ಒಂದು ಹೇಳಿಕೆಯನ್ನು ಕೊಡಬೇಕು. ವಿರೋಧ ಪಕ್ಷದವರೆಲ್ಲಾ ಹೋಗಿದ್ದರು.

(ಗೊಂದಲ)

ಶ್ರೀ ಬಿ.ಎಚ್. ಬನ್ನಿಕೋಡ್ : ಜನರ ಈ ಬಗ್ಗೆ ಕಾತರತೆಯಿಂದ ಕೇಳುತ್ತಿದ್ದಾರೆ;ಮುಖ್ಯ ಮಂತ್ರಿಗಳು ಏನಾದರೂ ರೈತರ ಸಹಾಯಕ್ಕೆ ಬಂದಿದ್ದಾರೆಯೇ ಎಂದು ತಿಳಿಸಬೇಕು;

ಶ್ರೀ ವಾಟಾಳ್ ನಾಗರಾಜ್ : ಹೇಳಿಕೆ ಆಗುವುದು ಒಳ್ಳೆಯದು.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ರೈತರ ಸಾಲ ಮನ್ನಾ ಮಾಡುತ್ತಿದ್ದೇವೆಂದು ಅವರು ಹೇಳಲಿ ಸ್ವಾಮಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಹೋದವರು ನೀವು ಬಾಯಿ ಮುಚ್ಚಿಕೊಂಡು ಕುಳಿತಿದ್ದೀರೆ. ಹೋದವರ ಪರವಾಗಿ ಮುಖ್ಯಮಂತ್ರಿಗಳು ಏನಾದರೂ ಹೇಳಬೇಕಲ್ಲ?

ಶ್ರೀ ಆರ್.ವಿ.ದೇಶಪಾಂಡೆ : ಮುಖ್ಯಮಂತ್ರಿಗಳು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ದೇಶಪಾಂಡೆಯವರು ಹೇಳಲಿ ಎಂದು ನಾನು ಹೇಳುತ್ತಿಲ್ಲ. ನಾನು ಕೇಳುತ್ತಿರುವುದು ಮುಖ್ಯಮಂತ್ರಿಗಳೇ ಒಂದು ಹೇಳಿಕೆಯನ್ನು ಕೊಡಬೇಕು ಎಂದು.

ಅಧ್ಯಕ್ಷರು : ಈಗಾಗಲೇ ನಾನು ಹೇಳಿದ್ದೇನೆ. ಸರ್ಕಾರದವರು ಈ ಬಗ್ಗೆ ಒಂದು ಹೇಳಿಕೆಯನ್ನು ಕೊಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಈಗಲೇ ಕೊಡುತ್ತೇನೆ. ನಾನು ಕೊಟ್ಟರೂ ಒಂದೇ, ವಿರೋಧ ಪಕ್ಷದ ನಾಯಕರು ಅಥವಾ ಶ್ರೀ ವಾಟಾಳ್ ನಾಗರಾಜ್ ಅವರು ಕೊಟ್ಟರೂ ಒಂದೇ;

ಶ್ರೀ ವಾಟಾಳ್ ನಾಗರಾಜ್ : ನಮ್ಮನ್ನೆಲ್ಲ ಕರೆದುಕೊಂಡು ಹೋಗಿ ನೀವು ಕೊಡಬೇಕಾಗಿದೆ. ಕರೆದುಕೊಂಡು ಹೋದವರು ನೀವು. ಆದ್ದರಿಂದ ಏನು ಹೇಳಿಕೆ ಕೊಡಬೇಕೋ ಅದನ್ನು ನೀವು ಕೊಡಿ.

ಅಧ್ಯಕ್ಷರು : ಅವರು ಕರೆದುಕೊಂಡು ಹೋಗಲಿಲ್ಲ. ನಮ್ಮನ್ನು ಕರೆದುಕೊಂಡು ಹೋಗಿ ಅಂದ ನೀವು ಕೇಳಿದ್ದಿರಿ. ಅವರು ಕರೆದುಕೊಂಡು ಹೋದರು.

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ಹೋದರೆ ಅದು ಬೇರೆ ದಾರಿಗೆ ತಿರುಗುತ್ತದೆ. ದಯವಿಟ್ಟು ಬೇಡ ಸ್ವಾಮಿ.

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಕರೆದುಕೊಂಡು ಹೋಗಿ ಎಂದು ಹೇಳಲಿಲ್ಲ. ರೆಕಾರ್ಡಿಗೆ ತಪ್ಪು ಹೋಗಬಾರದು. ಹಾಗೆಂದು ನಾವು ಕೇಳಿರಲಿಲ್ಲ. ಕೇಳಿದವರೂ ಇದ್ದಾರೆ. ಇಲ್ಲ ಅಂತ ಅಲ್ಲ. ಆದರೆ ನಾವು ಕೇಳಿಲಿಲ್ಲ.

ಮುಖ್ಯಮಂತ್ರಿಗಳ ಹೇಳಿಕೆ.

ವಿಷಯ : ರೈತರ ಸಾಲ ಮನ್ನಾ ವಿಚಾರ ಮತ್ತು ರಸಗೊಬ್ಬರದ ವಿತರಣೆಯ ಬಗ್ಗೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೇ ಈ ಸಭೆಯ ತೀರ್ಮಾನದ ಪ್ರಕಾರ ನಾವೆಲ್ಲರೂ ಹೋಗಿ ಬಂದಿದ್ದೇವೆ. ಯಾರು ಕರೆದುಕೊಂಡು ಹೋದರು, ಯಾರು ಬಂದರು ಆ ಪ್ರಶ್ನೆ ಈಗ ಬೇಕಾಗಿಲ್ಲ ಅಂತಲೇ ಇಟ್ಟುಕೊಳ್ಳೋಣ. ಆ ಸದನದ ಸದಸ್ಯರು, ನಾವು ಎಲ್ಲ ಸೇರಿ ಹೋಗಿದ್ದೇವೆ. ಹೋದಮೇಲೆ ಪ್ರಧಾನಮಂತ್ರಿಗಳನ್ನು ಹೋದ

ದಿವಸವೇ ಕಂಡು ಮಾದನಾಡಿದ್ದೇನೆ. ಹಣಕಾಸಿನ ಸಚಿವರನ್ನು ಅದೇ ದಿವಸ ಕಂಡು ಮಾತನಾಡಿದ್ದೇನೆ. ಮಾರನೇ ದಿವಸ ಎಂದರೆ ಭಾನುವಾರ, ವ್ಯವಸಾಯ ಸಚಿವರಾದ ಶ್ರೀ ಬಲರಾಮ್‌ಜಾಕಡ್‌ಜೀ ಅವರನ್ನು ಕಂಡು ನಾವು ಎರಡ ವಿಚಾರಗಳಲ್ಲಿ ಮಾತುಕತೆ ಮಾಡಿದ್ದೇವೆ. ಒಂದು ಗೊಬ್ಬರದ ವಿಚಾರದಲ್ಲಿ, ಇನ್ನೊಂದು ರೈತರ ಸಾಲ ವಿಚಾರದಲ್ಲಿ. ಈ ಎರಡೂ ವಿಚಾರಗಳಲ್ಲಿ ಕೂಡ ನಾವು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡತಕ್ಕಂಥ ಸಂದರ್ಭದಲ್ಲಿ ಅದರಲ್ಲೂ ಹಣಕಾಸು ಸಚಿವರಾದ ಶ್ರೀ ಮನಮೋಹನಸಿಂಗ್ ಅವರು ಬಹಳ ವಿವರವಾದ ಚಿತ್ರವನ್ನು ಅವರ ದೃಷ್ಟಿಯಿಂದ ಹೇಗೆ ಆಗುತ್ತದೆ ಎನ್ನತಕ್ಕಂಥ ವಿಚಾರವನ್ನು ಅವರು ನಮಗೆ ಕೊಟ್ಟಿದ್ದಾರೆ. ಒಂದು ಮಾತನ್ನು ಅವರು ಏನು ಹೇಳಿದ್ದಾರೆ ಎಂದರೆ, ಪ್ರಧಾನ ಮಂತ್ರಿಗಳ ಜೊತೆಯಲ್ಲಿ ಮತ್ತು ಉಳಿದಿರತಕ್ಕಂಥ ಸಂಬಂಧಪಟ್ಟವರ ಜೊತೆಯಲ್ಲಿ ಮಾತುಕತೆ ಮಾಡಿ ಆ ಬಗ್ಗೆ ನಾವು ಗಮನಹರಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ನಮ್ಮ ಈ ನಿಯೋಗ ಏನು ಹೋಗಿತ್ತು. ಹೋದಾಗ ಈ ಒಂದು ಅಭಿಪ್ರಾಯದಲ್ಲಿ ಭಿನ್ನಾಭಿಪ್ರಾಯ ಏನೇನೂ ಇರಲಿಲ್ಲ. ನಾವೆಲ್ಲರೂ ಒಗ್ಗಟ್ಟಾಗಿ ಹೋಗಿದ್ದೇವೆ, ಒಗ್ಗಟ್ಟಾಗಿ ವಿಚಾರವನ್ನು ಇಟ್ಟಿದ್ದೇವೆ. ಒಗ್ಗಟ್ಟಾಗಿ ನಾವು ಮೆಮರಂಡಮ್ ಅನ್ನು ಕೂಡ ಅವರಿಗೆ ಕೊಟ್ಟಿದ್ದೇನೆ. ಕೊಟ್ಟಿರತಕ್ಕಂಥ ವಿಚಾರದಲ್ಲಿ ನಮ್ಮದು ಭಿನ್ನಾಭಿಪ್ರಾಯ ಏನೂ ಇಲ್ಲವೆಂದ ಮೇಲೆ, ಅದಕ್ಕೆ ಸಂಬಂಧಪಟ್ಟ ಹಾಗೆ ಅವರು ಉತ್ತರವನ್ನು ನಮಗೆ ಕೊಡತಕ್ಕಂಥ ಸಂದರ್ಭದಲ್ಲಿ ಪುನಃ ಪರಿಶೀಲಿಸಿ ಮಾಡಬೇಕೆಂಬ ವಿಚಾರವನ್ನು ಎಲ್ಲರೂ ಸೇರಿ ಪ್ರಸ್ತಾಪ ಮಾಡಿರತಕ್ಕದ್ದು ನಮಗೆಲ್ಲ ಗೊತ್ತಿದೆ. ಏತಕ್ಕೆಂದರೆ ಇವತ್ತು ಒಂದು ತೀರ್ಮಾನ ಮಾಡಿದರೆ ಬರೇ ಕರ್ನಾಟಕಕ್ಕೋಸ್ಕರ ಸೀಮಿತಗೊಂಡಂತೆ ತೀರ್ಮಾನ ಮಾಡುವುದಕ್ಕೆ ಬರುವಹಾಗಿಲ್ಲ, ಇದೊಂದು ಪಾಲಿಸಿ ವಿಚಾರವಾದ ಕಾರಣ ಅವರು ಇಡೀ ರಾಷ್ಟ್ರಕ್ಕೇ ಸಂಬಂಧ ಪಟ್ಟ ಹಾಗೆ ಒಂದು ತೀರ್ಮಾನ ಮಾಡತಕ್ಕ ವಿಚಾರ ಕೂಡ ಇದರಲ್ಲಿದೆ. ನಾವು ಗೊಬ್ಬರದ ವಿಚಾರ ಮಾತನಾಡತಕ್ಕಂಥ ಸಂದರ್ಭದಲ್ಲಿ, ಲೋನ್ ವಿಚಾರ ಮಾತನಾಡತಕ್ಕಂಥ ಸಂದರ್ಭದಲ್ಲಿ ಇರಿಗೇಶನ್ ಪ್ರಾಜೆಕ್ಟ್ಸ್ ಬಗ್ಗೆ ನಮಗೆ ನೆರವು ಜಾಸ್ತಿ ಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಒತ್ತು ಕೊಟ್ಟು ಹೇಳಿರತಕ್ಕದ್ದು ಮತ್ತು ಅದಕ್ಕೆ ನಾವೆಲ್ಲರೂ ಸೇರಿ ಒತ್ತನ್ನು ಕೊಟ್ಟು ಮಾತನಾಡಿದೆವು. ಏಕೆಂದರೆ, ನಾನು ಇದಕ್ಕಿಂದ ಮೊದಲು ಪ್ಲಾನಿಂಗ್ ಕಮೀಷನ್ ಹತ್ತಿರ ಮಾತನಾಡಬೇಕಾದರೆ, ಪ್ರಧಾನಮಂತ್ರಿಗಳ ಹತ್ತಿರ ಮಾತನಾಡ ಬೇಕಾದರೆ, ಮಾತನಾಡಿರತಕ್ಕಂಥ ವಿಚಾರಗಳು as for as I am concerned or Govt. is concerned; ತಾವು ಕೂಡ ಅದೇ ಅಭಿಪ್ರಾಯವನ್ನು ಇಟ್ಟಾಗ ಅದರಲ್ಲಿ ಭಿನ್ನಾಭಿಪ್ರಾಯ ನಮ್ಮಲ್ಲಿ ಕೂಡ ಏನೂ ಇರಲಿಲ್ಲ. ಈ ಇರಿಗೇಶನ್ ಪ್ರಾಜೆಕ್ಟ್ಸ್ ಮತ್ತೊಂದು ವಿಚಾರದಲ್ಲಿ ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಏನು ಸಭೆ ಸೇರುತ್ತದೆ. ಆ ಸಂದರ್ಭದಲ್ಲಿ ಈ ವಿಚಾರವನ್ನು ತೆಗೆದುಕೊಳ್ಳತಕ್ಕಂಥಾದ್ದು ಇರುತ್ತದೆ. ಹಿಂದೆ ಪ್ಲಾನಿಂಗ್ ಕಮೀಷನ್, ಡಪ್ಯೂಟಿ ಚೇರ್ಮನ್ ಹೇಳಿರತಕ್ಕಂಥ ವಿಚಾರವನ್ನು ಈಗಲೂ ತೀರ್ಮಾನ ಮಾಡಬೇಕು, ಕೇಂದ್ರಸರ್ಕಾರ ಕೂಡ ತೀರ್ಮಾನ ಮಾಡರಬೇಕೆಂಬ ವಿಚಾರದಲ್ಲಿ ಬಹಳ ಒತ್ತಾಯಪೂರ್ವಕವಾಗಿ ಹೇಳಿದ್ದೇವೆ. ಇದೇ ಮಾತನ್ನು ಪ್ರಧಾನ ಮಂತ್ರಿಯವರು ಮತ್ತು ವ್ಯವಸಾಯ ಸಚಿವರ ಹತ್ತಿರವೂ ಸಾಂದರ್ಭಿಕರಾಗಿ ಹೇಳಿದ್ದೇವೆ. ನೇರವಾಗಿ ಇರಿಗೇಷನ್ ಬಾಂಡ್ಸ್ ಅಥವಾ ಪವರ್ ಬಾಂಡ್ಸ್ ವಿಚಾರ ಬರದೇ ಇದ್ದರೂ ಕೂಡ, ಪ್ರಧಾನ ಮಂತ್ರಿ ಮತ್ತು ಹಣಕಾಸಿನ ಸಚಿವರು ಮಾತನಾಡುವಾಗ ಈ ವಿಚಾರವನ್ನು ಬಹಳ ಒತ್ತಾಯಪೂರ್ವಕವಾಗಿ ಪ್ರಸ್ತಾಪ ಮಾಡಿದ್ದೇವೆ. ಇವತ್ತು ಇರಿಗೇಷನ್ ಬಾಂಡ್ಸ್‌ಗೆ ಸಂಬಂಧಪಟ್ಟ ಹಾಗೆ, ಎನ್.ಡಿ.ಸಿ. ಮತ್ತು ಇಂಡಿಯಾ ಸರ್ಕಾರದವರು ತೀರ್ಮಾನ ಮಾಡಬೇಕು. ಇನ್ನು ಉಳಿದಿರತಕ್ಕಂತಾದ್ದು, ಗೊಬ್ಬರದ ವಿಚಾರದಲ್ಲಿ ಏನು ಅನ್ಯಾಯವಾಗುತ್ತಿದೆ ಎನ್ನುವ ಮಾತು ಬಂದಾಗ, ಅಲ್ಲಿ ಮಾನ್ಯಕೃಷಿ ಸಚಿವರಾದ ಶ್ರೀಮಾನ್ ಬಲರಾಮ್ ಜಾಕಡ್‌ರವರು

ನಮ್ಮ ಅಭಿಪ್ರಾಯಕ್ಕೆ ಸಂಪೂರ್ಣವಾಗಿ ಒಪ್ಪಿದರು. ಅಂದರೆ ನಾವೇನು ಸಣ್ಣ ಅಥವಾ ಮಾರ್ಜಿನಲ್ ರೈತರು ಮತ್ತು ಬೇರೆ ರೈತರು ಎನ್ನತಕ್ಕಂಥ ವ್ಯತ್ಯಾಸ ಮಾಡತಕ್ಕಂಥಾದ್ದು ಏನಿತ್ತು ಅದು ಸರಿಯಲ್ಲವೆಂಬ ನಮ್ಮ ಈ ವಾದವನ್ನು ಸಂಪೂರ್ಣವಾಗಿ ಅವರು ಒಪ್ಪಿಕೊಂಡರು. ಅವರು ನಮ್ಮ ಅಭಿಪ್ರಾಯವನ್ನು ಒಪ್ಪಿದಮೇಲೆ, ಈ ನೀತಿಯನ್ನು ಬದಲಾವಣೆ ಮಾಡತಕ್ಕ ವಿಚಾರದಲ್ಲಿ ಮಾತ್ರ ಅವರು ಗಮನಹರಿಸಬೇಕಾಗುತ್ತದೆ. ಇದೇ ಮಾತನ್ನು ನಾವು ಪ್ರಧಾನ ಮಂತ್ರಿಗಳ ಎದುರಿಗೂ, ಹಣಕಾಸಿನ ಸಚಿವರ ಎದುರಿಗೂ ಇಟ್ಟಿದ್ದೇವೆ. ಅಲ್ಲಿ ಹಣಕಾಸಿನ ಪರಿಸ್ಥಿತಿಯಲ್ಲಿ ಸಬ್ಸಿಡಿ ಕೊಡತಕ್ಕ ವಿಚಾರದಲ್ಲಿ, ಅವರ ತೊಂದರೆಗಳು ನಮಗೆ ಗೊತ್ತಿಲ್ಲ ಎಂದುನಾವು ಏನೂ ಹೇಳಿಲ್ಲ, ನಮಗೆ ಅರ್ಥವಾಗಲಿಲ್ಲ ಎಂಬ ಪ್ರಶ್ನೆಯಲ್ಲ. ಆದರೆ, ಈ ರೀತಿ ವ್ಯತ್ಯಾಸ ಮಾಡತಕ್ಕಂಥಾದ್ದು, ಹಳೇ ರೇಟ್, ಹೊಸ ರೇಟ್ ಇವೆಲ್ಲವನ್ನೂ ಮಾಡಿಕೊಂಡು ಹೋಗುವುದು, ಇದು ಇಡೀ ದೇಶದ ರೈತಸಮುದಾಯಕ್ಕೆ ತೊಂದರೆ ಆಗುತ್ತದೆ ಎನ್ನತಕ್ಕ ವಿಚಾರದಲ್ಲಿ ಅವರಿಗೆ ಮನವರಿಕೆ ಮಾಡತಕ್ಕ ವಿಚಾರದಲ್ಲಿ ನಾವು ಶಕ್ತಿಮೀರಿ ಹೇಳಿದ್ದೇವೆ. ತಾವೇನು ಸದನದ ಸಮಿತಿಯನ್ನು ಎಲ್ಲಾ ಪಕ್ಷದವರೂ ಸೇರಿ ಕಳುಹಿಸಿ ಕೊಟ್ಟಿದ್ದಿರಿ, ನಾವೆಲ್ಲರೂ ಇದರ ಬಗ್ಗೆ ನಮ್ಮ ಕರ್ತವ್ಯವನ್ನು ಮಾಡಿದ್ದೇವೆ. ಇದಕ್ಕಿಂತ ಹೆಚ್ಚು ಮಾಡಿರತಕ್ಕಂಥಾದ್ದು ನಮ್ಮಲ್ಲಿ ಏನೂ ಇಲ್ಲ. ನಾವು ನಮ್ಮ ಕರ್ತವ್ಯ ಮಾಡಿದ ಮೇಲೆ, ಇದರ ಬಗ್ಗೆ ಪರಿಶೀಲನೆ ಮಾಡಿ, ಚರ್ಚೆ ಮಾಡಿ ಪುನಃ ಇದರ ಬಗ್ಗೆ secondthoughtorsecondlookಕೊಡುತ್ತೇವೆ ಎಂದು ಅವರು ಹೇಳಿರತಕ್ಕಂಥ ಉತ್ತರ ನಮಗೆ ಸಿಕ್ಕಿದೆ. ಕೆಲವು ಸಾರಿ, ಈಗಲೇ ನಮಗೆ ಪರಿಹಾರ ಸಿಕ್ಕಬೇಕೆಂಬ ಆಸೇ ಇಟ್ಟುಕೊಂಡರೂ ಕೂಡ, ಅವರ ಹಣಕಾಸಿನ ಹಿನ್ನೆಲೆಯಲ್ಲಿ ತಕ್ಷಣ ಉತ್ತರ ಕೊಡುವುದಕ್ಕಾಗು ವುದಿಲ್ಲ, ಇದನ್ನು ಮತ್ತೆ ವಿಚಾರ ಮಾಡಿ, ಉತ್ತರ ಹೇಳುತ್ತೇವೆಂಬ ಮಾತನ್ನು ಹೇಳಿದ್ದಾರೆ. ಕೇಂದ್ರಸರ್ಕಾರಕ್ಕೆ ನಾವು ಹೇಳಿದ್ದೇವೆ. ಏನು ಮಾಡುತ್ತಾರೆ ಎನ್ನತಕ್ಕ ವಿಚಾರದಲ್ಲಿ ಮಾತ್ರ ನಾವು, ಪ್ರಧಾನ ಮಂತ್ರಿಯವರ, ಹಣಕಾಸಿನ ಸಚಿವರ ಹಾಗೂ ಕೃಷಿ ಸಚಿವರ ಹತ್ತಿರ, ಅರ್ಥಾತ್ ಕೇಂದ್ರಸರ್ಕಾರಕ್ಕೆ ಏನು ಬಿಟ್ಟಿದ್ದೇವೆ, what exactly the decision they are going to take in future ಎನ್ನತಕ್ಕ ವಿಚಾರವನ್ನು ಅವರಿಗೇ ಬಿಟ್ಟು ಕಾದುನೋಡೋಣ. ಇದಿಷ್ಟು ನಡೆದಿರತಕ್ಕ ವಿಚಾರ. ಇದನ್ನು ವಿರೋಧಪಕ್ಷದ ನಾಯಕರೂ ಹೇಳಬಹುದು. ಸರ್ಕಾರದ ಪತಿಯಿಂದ ನಾನು ಮುಖ್ಯಮಂತ್ರಿಯಾಗಿ ಹೇಳಬೇಕೆಂಬುದನ್ನು ಬಿಟ್ಟರೆ, ಇದರಲ್ಲಿ ಬೇರೆ ಏನೂ ಇಲ್ಲ, ಇದು ನಮಗೆಲ್ಲಾ ಗೊತ್ತಿರತಕ್ಕ ವಿಚಾರ. ಇಷ್ಟು ವಿಚಾರಗಳನ್ನು, ತಮ್ಮ ಅಪ್ಪಣೆ ಪಡೆದು, ಈ ಸದನದಲ್ಲಿ ಇಟ್ಟಿದ್ದೇನೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಹಿಂಗಾರಿ ಹಂಗಾಮು ಈಗ ಪ್ರಾರಂಭವಾಗಿದೆ. ರೈತರಿಗೆ ಈಗ ಗೊಬ್ಬರ ಬೇಕಾಗಿದೆ. ಯಾವರೀತಿಯಿಂದ ಗೊಬ್ಬರವನ್ನು ಹಂಚುತ್ತೀರಿ ಎಂಬುದನ್ನು ರಾಜ್ಯಸರ್ಕಾರ ಸ್ಪಷ್ಟವಾಗಿ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಿಯೋಗ ಬಹಳ ಆಸೆ ಇಟ್ಟುಕೊಂಡು, ಡೆಲ್ಲಿ ಬಹಳ ದೂರದಲ್ಲಿ ಇದ್ದರೂ, ನಮಗೆ ಏನೋ ಅನುಕೂಲವಾಗುತ್ತದೆ ಎಂಬ ಉದ್ದೇಶ ಇಟ್ಟುಕೊಂಡು ನಿಯೋಗ ಹೋಯಿತು. ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದೆವು, ಕೃಷಿ ಸಚಿವರನ್ನು ಮತ್ತು ಆರ್ಥಿಕ ಸಚಿವರನ್ನೂ ಭೇಟಿ ಮಾಡಿದೆವು. ಒಂದು ರೀತಿ ನಮಗೆ ಎಲ್ಲರೂ ಉಪದೇಶ ಮಾಡಿದರು. ದೇಶ ಹಾಗಿದೆ, ಪ್ರಶ್ನೆ ಹೀಗಿದೆ ನಾವು ಕಷ್ಟದಲ್ಲಿದ್ದೇವೆ ಎನ್ನತಕ್ಕಂಥ ಉಪದೇಶ ಮಾಡಿದರು. ಆದರಿಂದ ನಮ್ಮ ಮನಸ್ಸಿಗೆ ಅಷ್ಟು ಸಂತೋಷವಾಗಲಿಲ್ಲ. ಯಾವ ಉದ್ದೇಶದ ಬಗ್ಗೆ ಸಂತೋಷವಂತೂ ಆಗಲಿಲ್ಲ. ಆದರೂ, ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿದಾಗ, ನನಗೆ ಮನಸ್ಸಿನಲ್ಲಿ ಬಹಳ ದುಗುಡವಾಯಿತು. ಗೊಬ್ಬರದ ಸಮಸ್ಯೆ ಒಂದೇ ಅಲ್ಲ

ಮತ್ತು ರೈತರ ಸಮಸ್ಯೆ, 10 ಸಾವಿರ ಸಾಲದ ಸಮಸ್ಯೆ ಒಂದೇ ಅಲ್ಲ, ಇಡೀ ಕರ್ನಾಟಕ ರಾಜ್ಯಕ್ಕೆ ಸಮಗ್ರವಾಗಿ ಮೊದಲಿನಿಂದಲೂ ಅನ್ಯಾಯ ನಡೆಯುತ್ತಿದೆ, ನಮ್ಮ ಕರ್ನಾಟಕ ರಾಜ್ಯವನ್ನು ಮೊದಲಿನಿಂದರೂ ಮಲತಾಯಿ ಧೋರಣೆಯಿಂದ ನೋಡುತ್ತಿದ್ದೀರಿ, ಎಂಬ ಎಲ್ಲಾ ವಿಚಾರದಲ್ಲೂ ಸ್ಪಷ್ಟವಾಗಿ ಹೇಳಬೇಕೆಂದು ನನ್ನ ಮನಸ್ಸಿನಲ್ಲಿ ವ್ಯಾಕುಲ....

ಶ್ರೀ ಎಸ್. ಬಂಗಾರಪ್ಪ : ನೀವು ಇಲ್ಲಿ ಮಲತಾಯಿ ಧೋರಣೆ ಮತ್ತೊಂದು ಮಾತನ್ನು ಇಲ್ಲಿತಂದು ಹೇಳುವುದಕ್ಕೆ ಬರುವುದಿಲ್ಲ. ನಾವು ಹೋಗಿರುವುದು ಮುಖ್ಯವಾಗಿ ಗೊಬ್ಬರದ ವಿಚಾರಕ್ಕೆ ಹೋದರೂ ಕೂಡ, ಸಾಲದ ವಿಚಾರ ಬಂದಾಗ ಕೂಡ, ಅದನ್ನೂ ಹೇಳೋಣ ಎಂದು ನಾನೇ ಸಲಹೆ ಕೊಟ್ಟೆ; ಇದರ ಬಗ್ಗೆ ಸಹ ಒಟ್ಟಿಗೆ ಹೇಳಿದ್ದೇವೆ. ಇರಿಗೇಷನ್ ಬಾಂಡ್ಸ್ ರಾಜ್ಯದ ಹಿತದೃಷ್ಟಿಯಿಂದ ಹೇಳಿದ್ದೇವೆ. ನೀವು ಮಲತಾಯಿ ಧೋರಣೆ ಎಂದು ಹೇಳಿದರೆ, altogether it becomes a different subject matter.

ಶ್ರೀ ವಾಟಾಳ್ ನಾಗರಾಜ್ : ನಾನು ಏನು ಹೇಳುತ್ತಿದ್ದೇನೆ ಎಂದರೆ

ಶ್ರೀ ಎಸ್. ಬಂಗಾರಪ್ಪ : ಡೆಲಿಗೇಷನ್ ಏತಕ್ಕೆ ಕಳುಹಿಸಿಕೊಟ್ಟರು. ಅದನ್ನು ನಾನೂ ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಗಮನಕ್ಕೆ ತರುವುದು ಎಂದರೆ, ಮಾನ್ಯ ಪ್ರಧಾನಮಂತ್ರಿಯವರು ನಮ್ಮನ್ನು ಬಹಳ ಸಂತೋಷದಿಂದ ಸ್ವಾಗತ ಮಾಡಿದರು. ನಮ್ಮ ಸಮಸ್ಯೆಯನ್ನು ಕೇಳಿದರು. ಆದರೂ ಸಹ ನಾನು ಹೇಳಿದೆ, ತಾವು ಈ ದೇಶದ ಪ್ರಧಾನಿಗಳಾಗಿದ್ದೀರಿ, ನಮ್ಮ ಪಕ್ಕದ ರಾಜ್ಯದವರಾದ ತಾವು ಪ್ರಧಾನಿಗಳಾಗಿದ್ದೀರಿ. ನಮ್ಮ ರಾಜ್ಯದ ಪರಿಸ್ಥಿತಿ ತಮಗೆ ಗೊತ್ತಿದೆ, ಮೊದಲಿನಿಂದಲೂ ಕರ್ನಾಟಕ ರಾಜ್ಯವನ್ನು ಕಡೆಗಣಿಸಿದ್ದೀರಿ, ನಿಮ್ಮ ಕಾಲದಲ್ಲಾದರೂ ಕರ್ನಾಟಕ ರಾಜ್ಯಕ್ಕೆ ಆಗಬೇಕಾದಂಥ ನ್ಯಾಯವನ್ನು ದೊರಕಿಸಿಕೊಡಬೇಕೆಂದು ನನ್ನ ಭಾಷೆಯಾದ ಕನ್ನಡದಲ್ಲಿ ಅವರನ್ನು ಕೇಳಿದೆ. ಇದು ತಮಗೂ ಗೊತ್ತಿರಬಹುದು. ಆಗ ಅವರು ಬಹಳ ಸಂತೋಷ ಪಟ್ಟರು. ಅದುವರಿಗೆ ಒಂದು ರೀತಿ ಗಂಭೀರವಾಗಿ ಇದ್ದವರು, ಕನ್ನಡದಲ್ಲಿ ನಾನು ಮಾತನಾಡಿದ ತಕ್ಷಣ ಸಂತೋಷ ಪಟ್ಟರು. ನಾನು ತಮ್ಮ ಮೂಲಕ ಒಂದು ವಿಚಾರವನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ನಾವು ಕರ್ನಾಟಕದ ಜನರು ಹೋಗಿದ್ದೆವು. ಶಾಸಕರ ದೊಡ್ಡ ನಿಯೋಗ ಮಾನ್ಯ ಮುಖ್ಯಮಂತ್ರಿಗಳ ನಾಯಕತ್ವದಲ್ಲಿ ಹೋಗಿತ್ತು. ನಮ್ಮ ರಾಜ್ಯದ 5 ಜನರು ಕೇಂದ್ರದಲ್ಲಿ ಮಂತ್ರಿಗಳಾಗಿದ್ದಾರೆ. ನಮ್ಮ ನಿಯೋಗ ಬಂದಿದೆ ಎಂದು ತಿಳಿದು, ಒಬ್ಬ ಮಂತ್ರಿಯಾದರೂ ಬಂದು ನೋಡಲಿಲ್ಲ, ನೀವಾದರೂ ಬನ್ನಿ ಎಂದು ಕರೆಯಲಿಲ್ಲ, ನಮ್ಮನ್ನು ಭೇಟಿ ಮಾಡಲೂ ಇಲ್ಲ. ಬೇರೆ ರಾಜ್ಯದ ಅನೇಕ ನಿಯೋಗಗಳು ಹೋದಾಗ ಆ ರಾಜ್ಯಕ್ಕೆ ಸಂಬಂಧಪಟ್ಟ ಕೇಂದ್ರದ ಮಂತ್ರಿಗಳು ಅವರನ್ನು ಕರೆದು ಆಮಂತ್ರಣ ಕೊಟ್ಟು ನಿಮ್ಮ ಪ್ರಶ್ನೆ ಏನು, ನಿಮ್ಮ ಪರಿಸ್ಥಿತಿ ಏನು ಎಂದು ಕೇಳುತ್ತಾರೆ. ಭೇಟಿಯಾಗುತ್ತಾರೆ. ಆದರೆ ಕೇಂದ್ರದಲ್ಲಿ ಮಂತ್ರಿಗಳಾಗಿರುರ ನಮ್ಮ ರಾಜ್ಯದ ಒಬ್ಬ ಸಚಿವರಾದರೂ ನಮ್ಮ ನಿಯೋಗ ಬಂದಿದ್ದರೂ ನಮ್ಮನ್ನು ಭೇಟಿಯಾಗಲಿಲ್ಲ, ನಿಮ್ಮ ಸಮಸ್ಯೆಗಳು ಏನು ಎಂದು ಕೇಳತಕ್ಕಂಥಾದ್ದರ ಗೋಜಿಗೆ ಹೋಗದೆ, ನಮ್ಮ ರಾಜ್ಯಕ್ಕೆ ಬಹಳ ಅಗೌರವ ಮಾಡಿದ್ದಾರೆ. ಇದನ್ನು ಅತ್ಯಂತ ನೊಂದ ಮನಸ್ಸಿನಿಂದ ನಾನು ಹೇಳುತ್ತಿದ್ದೇನೆ. ಮತ್ತು ತಮ್ಮ ಮೂತಕ ಕೇಂದ್ರ ಸಚಿವರುಗಳಿಗೆ ಪ್ರತಿಭಟನೆಯನ್ನು ಸಲ್ಲಿಸುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಸರ್ವಪಕ್ಷಗಳ ನಿಯೋಗ ಹೋಗಿದ್ದ ವಿಚಾರ ಏನಾಯಿತು ಎಂದು ಈ ರಾಜ್ಯದ ಜನ ಎದುರು ನೋಡುತ್ತಿದ್ದರು. ಒಳ್ಳೆಯ ಫಲಿತಾಂಶ ಬರಬಹುದೆಂಬ ಕಲ್ಪನೆಯನ್ನು ನಾವು ಹೊಂದಿದ್ದೆವು. ಆದರೆ ಈಗ ಏನಾಗಿದೆ ಎಂದರೆ, ಪರಿಶೀಲನೆ ಮಾಡುತ್ತೇವೆ,

ಅನುಕೂಲಗಳನ್ನು ಮಾಡಿಕೊಡುತ್ತೇವೆ ಎಂದು ಅವರು ಹೇಳಿದ್ದಾರೆ ಎಂದು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಈ ಪ್ರಶ್ನೆಗೆ ಕೇಂದ್ರ ಸರ್ಕಾರ ಏನು ಪರಿಹಾರ ಕೊಡುತ್ತದೆ ಅಲ್ಲಿಯವರೆಗೆ ಕಾಯುವ ಸ್ಥಿತಿಯಲ್ಲಿ ಕರ್ನಾಟಕ ರಾಜ್ಯದ ರೈತರು ಇವತ್ತು ಇಲ್ಲ. ದೊಡ್ಡ ರೈತ, ಸಣ್ಣ ರೈತ ಎಂಬ ತೊಂದರೆ ಒಂದು ಕಡೆ, ಗೊಬ್ಬರ ಸಿಗದೇ ಇರುವುದು ಇನ್ನೊಂದು ಕಡೆ, ಸಿಕ್ಕಿದರೂ ಸಿಕ್ಕಾಬಟ್ಟೆ ಬೆಲೆ ಜಾಸ್ತಿ; ಈ ಸಂದರ್ಭದಲ್ಲಿ ನಮ್ಮ ರಾಜ್ಯದ ರೈತರು ಏನು ಮಾಡಬೇಕು. ತಕ್ಷಣ ಉದ್ಭವವಾಗಿರುವ ಪರಿಸ್ಥಿತಿಯ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು, ನಮ್ಮ ರಾಜ್ಯ ಸರ್ಕಾರ ಏನು ಹೇಳುತ್ತದೆ. ಈ ರಾಜ್ಯದ ರೈತರ ಸಾಲ ಮನ್ನಾ ಬಗ್ಗೆ ಅಲ್ಲಿಂದ ಬಂದ ತಕ್ಷಣ ಇದರ ಬಗ್ಗೆ ಗಮನ ಕೊಡುತ್ತೇನೆ ಎಂದು ಸ್ಪಷ್ಟವಾಗಿ ತಿಳಿಸಿದ್ದರು. ಆದ್ದರಿಂದ ಈ ಎರಡೂ ಅಂಶಗಳ ಬಗ್ಗೆ ನಿಮ್ಮ ಸರ್ಕಾರದ ಧೋರಣೆ ಏನು ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ಇಡೀ ರಾಜ್ಯದ ಜನ ಇವತ್ತು ಅಪೇಕ್ಷೆ ಪಡುತ್ತಿದ್ದಾರೆ.

Sri. D.A. CHINNAPPA : Why do you want to create a problem here? ಧೋರಣೆ ಎಂದು ಹೇಳುತ್ತಿದ್ದಾರೆ. ಎರಡು ವರ್ಷದಿಂದ ಧೋರಣೆ ಏನು, ಧೋರಣೆ ಏನು ಎಂದು ಕೇಳುತ್ತಿದ್ದಾರೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಇಡೀ ಸದನ ನಿರೀಕ್ಷೆ ಮಾಡುತ್ತಿದೆ. ಇಡೀ ರಾಜ್ಯದ ಜನತೆ ನಿರೀಕ್ಷೆ ಮಾಡುತ್ತಿದೆ. ತಕ್ಷಣ ಇದಕ್ಕೆ ಏನು ಪರಿಹಾರ ಸಿಗಬಹುದು ಎಂದು ನೋಡುತ್ತಿದೆ. ಗೊಬ್ಬರ ರೇಟ್ ಜಾಸ್ತಿ ಒಂದು ಕಡೆ, ಸಣ್ಣ ರೈತರು ದೊಡ್ಡ ರೈತರು ಎಂಬ ತೊಂದರೆ ಬೇರೆ.

(ಗೊಂದಲ)

ಅಧ್ಯಕ್ಷರು : ಮುಖ್ಯಮಂತ್ರಿಗಳ ಹೇಳಿಕೆಯಿಂದ ರಾಜ್ಯದ ಜನತೆಗೆ ನಿಯೋಗ ಹೋದುದರ ಫಲಶೃತಿ ಏನಾಯಿತು ಎಂಬುದು ನಾಳೆ ಗೊತ್ತಾಗುತ್ತದೆ. ಆದುದರಿಂದ ತಾವು ಕಳವಳ ಪಡಬೇಡಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಆದರೆ ಪರಿಹಾರ ಏನು ಗೊತ್ತಾಗಬೇಕಲ್ಲ. ದೆಹಲಿಗೆ ಹೋಗಿ ಬಂದಿರುವುದಕ್ಕೆ ಪರಿಹಾರ ಏನು ಎಂದು ಇನ್ನೂ ಕ್ಲಿಯರ್ ಆಗಿ ಹೇಳುತ್ತಿಲ್ಲ.

ಅಧ್ಯಕ್ಷರು: ಹೋಗಿ ಬರುವುದೇ ಪರಿಹಾರ, ಇನ್ನೇನು?

ಶ್ರೀ ಕೆ.ಎಸ್. ಈಶ್ವರಪ್ಪ : ಹೋಗಿ ಬಂದುದಷ್ಟೇ ಸಮಾಧಾನ ಎಂದು ಹೇಗೆ ಹೇಳುವುದಕ್ಕೆ ಆಗುತ್ತದೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಈ ಬಗ್ಗೆ ಇನ್ನೂ ಸ್ಪಷ್ಟವಾಗಲಿಲ್ಲ ಮಾನ್ಯ ಅಧ್ಯಕ್ಷರೇ,

ಶ್ರೀ ಕೆ.ಎಸ್. ಈಶ್ವರಪ್ಪ : ಗೊಬ್ಬರವನ್ನು ಯಾವ ರೀತಿ ಹಂಚಿಕೆ ಮಾಡುತ್ತಾರೆ. ಈ ಬಗ್ಗೆ ಸರಕಾರದ ಕ್ರಮ ಏನು?

ಅಧ್ಯಕ್ಷರು : ಬರೆದು ಕಳುಹಿಸಿಕೊಡಿ, ನಾನು ಇದನ್ನು ನೋಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, I must place on record mainly two things. ನಾವು ಅರ್ಥ ಸಚಿವರನ್ನು ಭೇಟಿ ಮಾಡಿದಾಗ ಸುದೀರ್ಘವಾಗಿ ಚರ್ಚೆ ಮಾಡಿದೆವು. ಸಮಯಕ್ಕಾಗೀ, ಚರ್ಚೆಗಾಗಲೀ ಕೊರತೆ ಏನೂ ಆಗಲಿಲ್ಲ. ಒಂದು ನನ್ನ ಮನಸ್ಸಿಗೆ ಆದ

ಸಮಾಧಾನ ಎಂದರೆ, ಮಾನ್ಯ ಅರ್ಥ ಮಂತ್ರಿಗಳು ಒಂದು ಮಾತನ್ನು ಹೇಳಿದರು. ನೀವೆಲ್ಲಾ ಜನರಿಂದ ಚುನಾಯಿತರಾಗಿ ಬಂದಂಥ ಜನ. ಅಲ್ಲಿಯ ಸಮಸ್ಯೆಗಳ ಅರಿವು ನಿಮಗಿದ್ದಷ್ಟು ನನಗೆ ಇಲ್ಲ ಎಂದು ಸ್ಪಷ್ಟವಾಗಿ ಒಪ್ಪಿಕೊಂಡರು. ಆದುದರಿಂದ ನೀವು ಬಂದಿದ್ದೀರಿ, ಸಂತೋಷ, ಸಣ್ಣ ಮತ್ತು ಅತಿಸಣ್ಣ ರೈತರು ಎಂಬ ಇರತಕ್ಕಂಥ ವಿಭಜನೆ ಏನಿದೆ, ಇದು ನಬಾರ್ಡ್‌ನವರದ್ದು ಒಂದು ಮತ್ತು ಐ ಆರ್ ಡಿ ಪಿ ಲೋನ್‌ಗೆ ಮತ್ತೊಂದು, ಇದರ ಕಲ್ಪನೆ ಅವರಿಗೆ ಅಷ್ಟಾಗಿ ಇದ್ದಹಾಗೆ ಕಾಣುತ್ತಿಲ್ಲ. ಆತರೆ ಸಂತೋಷಪಟ್ಟರು, ಈ ವಿಷಯ ನನ್ನ ಗಮನಕ್ಕೆ ತಂದಿದ್ದೀರಿ ಎಂದು ಸಂತೋಷಪಟ್ಟರು. ಆದರೆ ಇಂದಿನ ರಾಷ್ಟ್ರೀಯ ಆರ್ಥಿಕ ಸ್ಥಿತಿಯಲ್ಲಿ ಇದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೋ ಇಲ್ಲವೋ ಗೊತ್ತಿಲ್ಲ; ಆದರೆ ನಿಮ್ಮ ಒಟ್ಟಾರೆ ಅಭಿಪ್ರಾಯವನ್ನು ಒಪ್ಪುತ್ತೇನೆ ಮೆಚ್ಚುತ್ತೇನೆ ಎಂಬ ಎರಡು ಮಾತನ್ನು ಹೇಳಿದರು. ಮತ್ತು ನನಗೆ ಸಂಬಂಧಪಟ್ಟಂತೆ, ಪ್ರಧಾನಮಂತ್ರಿಗಳ ಜೊತೆಗೂ ಹಾಗೂ ಸಂಬಂಧಪಟ್ಟಂತಹ ಮಂತ್ರಿಗಳ ಜೊತೆಗೆ ಚರ್ಚೆ ಮಾಡಿ ಏನು ಪರಿಹಾರ ಕೊಡುವುದಕ್ಕೆ ಸಾಧ್ಯ ಇದೆ ಎಂಬ ಬಗ್ಗೆ ಪ್ರಯತ್ನ ಮಾಡುತ್ತೇನೆ ಎಂಬ ಭರವಸೆ ಕೊಟ್ಟರು. ನಾನು ಅವರಿಗೆ ಒಂದು ಮಾತು ಹೇಳಿದೆ. ನಾವು ಎರಡು ಕಾರ್ಯಕ್ರಮಗಳ ಬಗ್ಗೆ ಇಲ್ಲಿ ಚರ್ಚೆ ಮಾಡುತ್ತೇವೆ. ಒಂದು ಸಾಲ ಮನ್ನಾ ವಿಚಾರ. ಮತ್ತೊಂದು ಗೊಬ್ಬರದ ದ್ವಿಮುಖ ನೀತಿ. ಈ ಎರಡೂ ನೀತಿಗಳು ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿರತಕ್ಕಂಥಾವು. ಆದ್ದರಿಂದ ಪರಿಹಾರ ಅಲ್ಲೇ ಸಿಗುತ್ತದೆಂದು ನಾವು ಅಲ್ಲಿಗೆ ಹೋದೆವೇ ಹೊರತು, ಪರಿಹಾರ ಇಲ್ಲಿ ಕೊಡುವುದಿದ್ದರೆ ಇಲ್ಲೇ ಒಪ್ಪಿಕೊಳ್ಳಲಿಕ್ಕೆ ಸಾಧ್ಯವಿದ್ದಿದ್ದರೆ ನಾವು ಅಲ್ಲಿಗೆ ಹೋಗಬೇಕಾಗಿರಲಿಲ್ಲ. ಈ ಮಾತನ್ನು ನಾನು ಅವರಿಗೆ ಸ್ಪಷ್ಟವಾಗಿ ತಿಳಿಸಿದ ಮೇಲೆ ಅವರಿಗೂ ಸ್ವಲ್ಪ ಮಟ್ಟಿಗೆ ಅರ್ಥವಾಗಿದೆ. ಪ್ರಧಾನ ಮಂತ್ರಿಗಳು ಕೂಡ ನಾವು ವಿಶೇಷವಾಗಿ ಅರ್ಥ ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇವೆನ್ನತಕ್ಕಂಥ ಕಾರಣದಿಂದ ಅವರು ಹೆಚ್ಚು ವಿಸ್ತಾರವಾದ ಚರ್ಚೆ ಅಗತ್ಯವಿಲ್ಲ, ನಾನು ಅವರಿಂದ ಹೆಚ್ಚು ತಿಳಿದುಕೊಳ್ಳುತ್ತೇನೆಂದು ಹೇಳಿದ್ದಾರೆ. ಆದ್ದರಿಂದ ಇದರ ಫಲಿತಾಂಶ ಏನೆಂದರೆ ನಮ್ಮ ರಾಜ್ಯದ ಸಾಧಕಭಾಧಕಗಳನ್ನು ನಾವು ಅವರಿಗೆ ಹೇಳುವ ಪ್ರಯತ್ನ ಮಾಡಿದ್ದೇವೆ. ಅವರು ಸಹ ಅರ್ಥ ಮಾಡಿಕೊಂಡಿದ್ದಾರೆ; ಮುಂದೆ ಪರಿಹಾರ ಸಿಕ್ಕುತ್ತದೋ ಅಥವಾ ಇಲ್ಲವೋ ಎನ್ನುವುದು ಗೊತ್ತಿಲ್ಲ. ಅವರು ತಕ್ಷಣಕ್ಕೆ ಏನನ್ನೂ ಹೇಳಲಿಲ್ಲ. ಮತ್ತೆ ಗೊಬ್ಬರದ ಬಗ್ಗೆ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ, ಆ ಬಗ್ಗೆ ಮಾರನೆಯ ದಿವಸ ಕೃಷಿ ಸಚಿವರನ್ನು ಭೇಟಿ ಮಾಡಿದಾಗ ಅವರು ಮತ್ತೊಂದು ಮಾತನ್ನು ಹೇಳಿದರು. ನಮಗೆ ಇದುವರೆಗೂ ನಮಗೆ ಆಯಾತಕ್ಕೆ ಅವಕಾಶ ಇರಲಿಲ್ಲ. ಈಗ ಕೇಂದ್ರ ಸರ್ಕಾರ ಆಯಾತ ಮಾಡಿಕೊಳ್ಳುವುದಕ್ಕೆ ಅಪ್ಪಣೆ ಕೊಟ್ಟಿದೆ, ಆದ್ದರಿಂದ ನಿಮಗೆ ಗೊಬ್ಬರದ ಕೊರತೆ ಆಗುವುದಿಲ್ಲ, ನಿಮ್ಮ ರಾಜ್ಯಕ್ಕೆ ಎಷ್ಟು ಗೊಬ್ಬರ ಬೇಕೋ ಅಷ್ಟು ಗೊಬ್ಬರವನ್ನು ನಾನು ಕೊಡುವುದಕ್ಕೆ ಸಿದ್ಧವಾಗಿದ್ದೇನೆ ಎಂಬ ಮಾತನ್ನು ಅವರು ಹೇಳಿದರು. ಈ ಮಾತನ್ನು ಹೇಳದೆ ಮಾನ್ಯ ಮುಖ್ಯಮಂತ್ರಿಗಳು ಬಿಟ್ಟಿದ್ದರಿಂದ ನಾನು ಹೇಳಬೇಕಾಯಿತು. ಮತ್ತೆ ಮಾನ್ಯ ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಏನು ಪ್ರಸ್ತಾಪ ಮಾಡಿದರು, ಅದನ್ನು ನಾನು ನಿರೀಕ್ಷೆ ಮಾಡಿದ್ದೆ. ನಮ್ಮ ಪ್ರತಿನಿಧಿಗಳು ರಾಜ್ಯದಿಂದ ಇಂಡಹ ಒಂದು ದೊಡ್ಡ ನಿಯೋಗ ಹೋಗಿರುವಾಗ ಅಲ್ಲಿನ ನಮ್ಮ ಕೇಂದ್ರದ ಮಂತ್ರಿಗಳು ನಮ್ಮನ್ನು ಕರೆದು ಚರ್ಚೆ ಮಾಡಿ ನಮ್ಮ ಅನಿಸಿಕೆಗಳನ್ನು ಕೇಳಬೇಕಾಗಿತ್ತು. ಇಲ್ಲವೇ ಅವರ ಅನಿಸಿಕೆಗಳನ್ನು ಹೇಳಬೇಕಾಗಿತ್ತು. ಆ ಕೆಲಸ ಅವರು ಮಾಡಿಲ್ಲ ಎಂಬುದು ನಮ್ಮ ಮನಸ್ಸಿಗೆ ಆದ ಆಘಾತವನ್ನು ನಾವು ಅಭಿವ್ಯಕ್ತ ಮಾಡದೆ ಬೇರೆ ಮಾರ್ಗ ಇಲ್ಲ. ಬಹಳ ಮುಖ್ಯವಾಗಿ ನಾವು ಅಲ್ಲಿಂದ ಗೊಬ್ಬರ ತುಂಬಿಕೊಂಡು ಬಂದು ಇಲ್ಲಿ ಹಂಚುತ್ತೇವೆಂದು ಹೋಗಿರಲಿಲ್ಲ; ನಮ್ಮ ನಿರೀಕ್ಷೆಗೆ ಬೇಕಾದ ಫಲಿತಾಂಶ ತಕ್ಷಣಕ್ಕೆ ಸಿಕ್ಕಿಲ್ಲ. ಏಕೆಂದರೆ ಈ ಸಮಸ್ಯೆ ಕೇವಲ ಕರ್ನಾಟಕ್ಕೇ ಸೀಮಿತವಾಗಿರಲಿಲ್ಲ ಎಂಬುದನ್ನು ನಾನು ಒಪ್ಪುತ್ತೇನೆ.

ಆದರೆ ಪರಿಸ್ಥಿತಿಯನ್ನು ಅವರಿಗೆ ಅರಿವು ಮಾಡಿಕೊಡುವುದರಲ್ಲಿ ನಾವು ಯಶಸ್ವಿ ಆಗಿದ್ದೇವೆ ಎನ್ನುವುದೇ ನಮ್ಮ ಸಂತೋಷ.

(ಶ್ರೀ ಬಸವರಾಜ ಪಾಟೀಲ್ ಅಟ್ಟೂರು ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ನಿಯಮ 334ರ ಮೇರೆಗೆ ಚರ್ಚೆ

1) ಬ್ರಹ್ಮಾವರ ಪೋಲೀಸ್ ಠಾಣೆ ವ್ಯಾಪ್ತಿಯಲ್ಲಿ ಮೇ ತಿಂಗಳಲ್ಲಿ ನಡೆದ ಕೊಲೆ ಪ್ರಕರಣ.

ಶ್ರೀ ಪಿ. ಬಸವರಾಜು (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೇ, ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದ ಬ್ರಹ್ಮಾವರ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿರುವ ನೀಲಾವರ ಗ್ರಾಮದ ಎಳ್ಳಂಪಳ್ಳಿಯಲ್ಲಿ ದಿನಾಂಕ: 23-5-91ರಂದು ಹಾಡುಹಗಲೇ ಭಾಸ್ಕರ ನಾಯ್ಕ ಎನ್ನುವ ವ್ಯಕ್ತಿಯೋರ್ವರನ್ನು ಅದೇ ಗ್ರಾಮದ ಕೆಲವರು ಅಮಾನುಷವಾಗಿ ಕೊಲೆಗೈದಿರುತ್ತಾರೆ. ಈ ವಿಷಯದ ಕುರಿತು ಸ್ಥಳೀಯ ಪ್ರಮುಖ ದಿನಪತ್ರಿಕೆಯು ವರದಿ ಮಾಡಿರುತ್ತದೆ. ಈ ಸಂಬಂಧ ಸ್ಥಳೀಯ ಗ್ರಾಮಸ್ಥರು ಸಂಭಾವ್ಯ ಆಪಾದಿತರ ಸುಳಿವು ಪೋಲೀಸರಿಗೆ ನೀಡಿದ್ದಾಗ್ಯೂ ಇದುವರೆಗೆ ಆಪಾದಿತರನ್ನು ಪತ್ತೆ ಹಚ್ಚುವಲ್ಲಿ ಪೋಲೀಸರು ಅಸಮರ್ಥರಾಗಿರುತ್ತಾರೆ. ನಾನು ವೈಯುಕ್ತಿಕವಾಗಿ ಜಿಲ್ಲಾ ಪೋಲೀಸ್ ಅಧಿಕಾರಿಯವರಿಗೆ ಈ ಕುರಿತು ಪತ್ರ ಬರೆದಿದ್ದೆ ಆದರೆ ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಸ್ಥಳೀಯ ಪೋಲೀಸರೆ ಆಪಾದಿತರಿಗೆ ರಕ್ಷಣೆ ನೀಡುತ್ತಿದ್ದಾರೆನ್ನು ಮಾಹಿತಿಯು ಗ್ರಾಮಸ್ಥರನ್ನು ಭಯಭೀತರಾ ಗಿಸಿದೆ. ಈ ಸಂಬಂಧ ಈಗ ಕೈಗೊಂಡ ಕ್ರಮವನ್ನು ಮತ್ತೆ ಮುಂದೆ ಕೈಗೊಳ್ಳುವ ಕ್ರಮದ ವಿವರದ ಕುರಿತು ಮಾನ್ಯ ಗೃಹ ಸಚಿವರ ಗಮನ ಸೆಳೆಯುತ್ತೇನೆ:

ಶ್ರೀ ಧರ್ಮಸಿಂಗ್ (ಗೃಹಸಚಿವರು) : ಸನ್ಮಾನ್ಯ ಅಧ್ಯಕ್ಷರೇ,

ಈ ಪ್ರಕರಣದ ಬಗ್ಗೆ ಪಶ್ಚಿಮ ವಿಭಾಗದ ಮಂಗಳೂರಿನ ಡಿ.ಐ.ಜಿ.ಯವರಿಂದ ವಿವರಗಳನ್ನು ಪಡೆದುಕೊಂಡಿದ್ದೇನೆ. ಈ ಪ್ರಕರಣದ ವಿವರಗಳು ಹೀಗಿವೆ:

ಬ್ರಹ್ಮಾವರ ಪೋಲಿಸ್ ಠಾಣೆಯಲ್ಲಿ ಮೇ ತಿಂಗಳಲ್ಲಿ ಒಂದು ಕೊಲೆ ಪ್ರಕರಣದ ಅಪರಾಧ ದಾಖಲಾಗಿದೆ. ದಿನಾಂಕ 29-5-91ರ ರಾತ್ರಿ ಸುಮಾರು 9.30ಸಮಯದಲ್ಲಿ ಯಲ್ಲಂಪಲ್ಲಿ ನೀಲಾವರ ಗ್ರಾಮದ ಮಂಜುನಾಥ ನಾಯಕ್ ಅವರ ಮಗ ಭಾಸ್ಕರ ನಾಯಕ್ ಅವರು ಕುಂಜಾಲುನಿಂದ ಅವರ ಮನೆ ಕಡೆಗೆ ಹೋಗುತ್ತಿದ್ದರು. ದೀಪನಗುಡ್ಡೆ ಬಸ್ ನಿಲ್ದಾಣದ ಸಮೀಪ ಮೂರ್‍ನಾಲ್ಕು ಜನ ಅಪರಿಚಿತರು ಇವರನ್ನು ಅಪಾಯಕಾರಿ ಆಯುಧಗಳಿಂದ (ಕ್ಲಬ್ಸ್) ಅಸಾಲ್ಟ್ ಮಾಡಿದರು. ಈ ಕಿರಣದಿಂದ ಸದರಿಯವರಿಗೆ ರಕ್ತಸ್ರಾವದ ಗಾಯಗಳಾಗಿ ಸ್ಥಳದಲ್ಲೇ ನೆಲದ ಮೇಲೆ ಬಿದ್ದರು. ಮರುದಿನ ಅಂದರೆ 30-5-91ರಂದು ಬೆಳಿಗ್ಗೆ, ಸದರಿ ಬಸ್ ನಿಲ್ದಾಣದ ಸಮೀಪವೇ ವಾಸವಾಗಿರುವ ಇವರ ಸಹೋದರಿ ಪಾರ್ವತಿ ಎನ್ನುವವರು ಇದನ್ನು ಗಮನಿಸಿದರು. ಹಾಗೂ ವಿಚಾರಿಸಿದಾಗ, ಗಾಯಗೊಂಡಿದ್ದ ಸದರಿ ಭಾಸ್ಕರ ನಾಯಕ್ ಅವರು ಅಪರಿಚಿತ ನಾಲ್ಕು ಜನ ತಮ್ಮನ್ನು ಕಳೆದ ರಾತ್ರಿ ಆಯುಧಗಳಿಂದ ಹೊಡೆದರೆಂದು ತಿಳಿಸಿದರು. ಶ್ರೀಮತಿ ಪಾರ್ವತಿಯವರು ಆತನಿಗೆ ಕುಡಿಯಲು ನೀರು ಕೊಟ್ಟು ನಂತರ ತನ್ನ ಇಬ್ಬರು ತಮ್ಮಂದಿರು ಸದಾಶಿವ ನಾಯಕ್ ಮತ್ತು ಬಾಲಕೃಷ್ಣ ನಾಯಕ್ ಇವರಿಗೆ ಈ ವಿಷಯವನ್ನು ತಿಳಿಸಿದರು. ಸದಾಶಿವ ನಾಯಕ್ ಅವರು ತಕ್ಷಣ ಸ್ಥಳಕ್ಕೆ ಬಂದು ಬ್ರಹ್ಮಾರರದಿಂದ ಆಂಬುಲೆನ್ಸ್ ಒಂದನ್ನು ತರಿಸಿಕೊಂಡು ಗಾಯಾಳುವನ್ನು ಉಡುಪಿ ಸರ್ಕಾರಿ ಆಸ್ಪತ್ರೆಗೆ ಸಾಗಿಸಿ ಅಲ್ಲಿ ಅವರನ್ನು ದಾಖಲ್ಮಾಡಿಸಿದರು. ಅಲ್ಲಿ ಉಪಚಾರದ ಲ್ಲಿದ್ದಾಗ ಸಂಜೆ ಸುಮಾರು 6-45ರ ಸಮಯದಲ್ಲಿ ಸದರಿ ಗಾಯಾಳು ಮೃತರಾದರು. ಈ ವಿಚಾರದಲ್ಲಿ ಶ್ರೀ ಸದಾಶಿವ ನಾಯಕ್ ಅವರ ದೂರಿನ ಮೇಲೆ ಬ್ರಹ್ಮಾವರ ಪೋಲಿಸ್ ಠಾಣೆಯಲ್ಲಿ ದಿನಾಂಕ 30-5-91ರಂದು ಕ್ರೈಮ್ ನಂ.50-91 ಅನ್ನು ದಾಖಲ್ಮಾಡಿಕೊಳ್ಳಲಾಗಿದೆ. ಈ ದೂರಿನಲ್ಲಿ ಮೃತನಾದ ತನ್ನ ತಮ್ಮ ಭಾಸ್ಕರ ನಾಯಕನಿಂದ ತನಗೆ ಗೊತ್ತಾದ ವಿವರಗಳನ್ನು ತಿಳಿಸಿದ್ದಾರೆ.

ದಿನಾಂಕ 31-5-91ರಂದು ಮೃತರ ಸಂಬಂಧಿಗಳು ಮತ್ತು ಪಂಚರ ಸಮಕ್ಷಮದಲ್ಲಿ ಮೃತನ ದೇಹದ ಇಂಕ್ವೆಸ್ಟ್ ಮಾಡಲಾಯಿತು.

ಕುಂದಾಪುರ ಸರ್ಕಲ್ ಇನ್‌ಸ್ಪೆಕ್ಟರ್ ಅವರು ಶ್ರೀಮತಿ ಪಾರ್ವತಿ ಮತ್ತು ಇತರರನ್ನು ಬೇಟಿಯಾಗಿ ತನಿಖೆ ಮಾಡಿಸಿದ್ದಾರೆ. ಇದುವರೆಗೂ ಅಪರಾಧಿಗಳ ಬಗ್ಗೆ ಅಥವಾ ಅಪರಾಧದ ಬಗ್ಗೆ ಯಾವ ಸುಳಿವೂ ಸಿಕ್ಕಿಲ್ಲ. ಜುಲೈ 91ರ ಮೊದಲನೇ ವಾರದಲ್ಲಿ ನೀಲಾವರ ಗ್ರಾಮದವರೆಂದು ಹೇಳಲಾದ ಒಂದು ಅನಾಮಧೇಯ ಪತ್ರ ಬಂದಿದ್ದು ಇದರಲ್ಲಿ ಮೃತನ ಚಿಕ್ಕ ತಮ್ಮ ಬಾಲಕೃಷ್ಣ ನಾಯಕ್ ಮತ್ತು ಇತರೆ ಎಂಟು ಜನ ಈ ಕೊಲೆಗೆ ಜವಾಬ್ದಾರರೆಂದು ಈ ಪತ್ರದಲ್ಲಿ ತಿಳಿಸಲಾಗಿತ್ತು. ಈ ವಿಚಾರವನ್ನು ಆಧರಿಸಿ ತನಿಖೆ ನಡೆಸಲಾಯಿತು. ಇವರ ಪೈಕಿ ಸಂತೋಷ್ ಕುಮಾರ್ ಹೆಗ್ಡೆ ಎನ್ನುವವರು ತಲೆ ತಪ್ಪಿಸಿಕೊಂಡಿದ್ದಾರೆಂದು ತಿಳಿದು ಬಂದಿತು. ಇತರ ಜೊತೆಗೆ ದಿನಾಂಕ 24-8-91ರಂದು ಇಂಥದೇ ಒಂದು ಅನಾಮಧೇಯ ಪತ್ರವನ್ನು ಮಾನ್ಯ ಸದಸ್ಯ ಶ್ರೀ ಪಿ. ಬಸವರಾಜ್ ಅವರೂ ಸಹ ಡಿ.ಐ.ಜಿ.ಯವರಿಗೆ ಕಳುಹಿಸಿದರು. ಈ ಪತ್ರದಲ್ಲೂ ಸಹ ಮೇಲ್ಕಂಡವರ ಹೆಸರುಗಳು ಸೂಚಿಸಲ್ಪಟ್ಟಿದ್ದು ಇವರು ಚಕ್ರಾಡಿ ಗ್ರಾಮದ ಉದಯಶೆಟ್ಟಿ, ಬ್ರಹ್ಮಾವರದ ಅಭಿನೇತ್ರಿ ಮತ್ತು ಕೊಕ್ಕರಣೆ ಗ್ರಾಮದ ಸೀತಾರಾಮ ಹೆಗ್ಗಡೆ ಮತ್ತು ಇನ್ನೂ ಇತರ ಮೂವರ ಮನೆಗಳಲ್ಲಿ ಆಶ್ರಯ ಪಡೆಯುತ್ತಿದ್ದಾರೆಂದೂ ತಿಳಿಸಲಾಗಿತ್ತು. ಈ ಪತ್ರಗಳನ್ನು ಕೊಡುತ್ತಾ ಶ್ರೀ ಬಸವರಾಜ್ ಅವರು ಈ ಪ್ರಕರಣವನ್ನು ಕೂಲಂಕುಶವಾಗಿ ತನಿಖೆ ಮಾಡಬೇಕೆಂದು ಸಹ ತಿಳಿಸಿದರು. ಇದರಂತೆ ಈ ಆರು ಜನರ ಮನೆಗಳನ್ನು ಉಡುಪಿ ಡಿ.ವೈ.ಎಸ್.ಪಿ. ಕುಂದಾಪುರ ಮತ್ತು ಬ್ರಹ್ಮಾವರದ ಸಿ.ಪಿ.ಐ. ಮತ್ತು ಸಿಬ್ಬಂದಿಯವರು ತಕ್ಷಣ ತಪಾಸಣೆ ಮಾಡಿದರು. ತಪಾಸಣೆಯಿಂದ ಯಾವ ಸುಳಿವುಗಳೂ ದೊರೆತಿಲ್ಲ. ಶ್ರೀ ಸಂತೋಷ್ ಹೆಗಡೆ, ಹರೀಶ್ ಶೆಟ್ಟಿ ಮತ್ತು ಅರುಣ ಹೆಗ್ಗಡೆ ಇವರ ಮನೆಗಳನ್ನೂ ಸಹ ತಪಾಸಣೆ ಮಾಡಲಾಯಿತು. ಇದುವರೆಗೂ ಇವರ ಸುಳಿವು ಸಿಕ್ಕಿಲ್ಲ. ಉಡುಪಿ ಡಿ.ಎಸ್.ಪಿ. ಮತ್ತು ಕುಂದಾಪುರದ ಸಿ.ಪಿ.ಐ. ಇವರು ಖುದ್ದಾಗಿ ತನಿಖೆ ಮುಂದುವರೆಸಿದ್ದು ಗೋಪ್ಯವಾಗಿಯೂ ಸಹ ತನಿಖೆ ಮುಂದುವರೆಸಿದ್ದಾರೆ. ಆದರೂ, ಸದರಿ ಸಂತೋಷ ಹೆಗ್ಗಡೆ, ಹರೀಶ್ ಶೆಟ್ಟಿ ಮತ್ತು ಅರುಣ್ ಹೆಗ್ಗಡೆ ಇವರುಗಳು ಈ ಕೊಲೆ ಬಗ್ಗೆ ಹೊಂದಿರಬಹುದಾದ ಯಾವುದೇ ಸುಳಿವಿನ ಬಗ್ಗೆಯೂ ಯಾರೂ ವರ್ತಮಾನ ನೀಡಿಲ್ಲ.

ತನಿಖೆಯಿಂದ ಹೊರಬಂದ ಇನ್ನೊಂದು ವಿಚಾರವೆಂದರೆ, ಕಳೆದ 1985ನೇ ಮೇ ತಿಂಗಳಲ್ಲಿ ಮೃತನು ತಮ್ಮ ನೆರೆಯ ಕುಮಾರಿ ಲೀಲಾ ಎಂಬುವರ ಮೇಲೆ ಅತ್ಯಾಚಾರ ನಡೆಸಿದ್ದು ಸೆಷನ್ಸ್ ಕೋರ್ಟಿನಲ್ಲಿ ವಿಚಾರಣೆಯಾಗಿ, ಜೀವಾವಧಿ ಶಿಕ್ಷೆ ವಿಧಿಸಲ್ಪಟ್ಟಿದ್ದು, 1987ರಲ್ಲಿ ಸಲ್ಲಿಸಿದ ಮೇಲ್ಮನವಿಯ ಪ್ರಕಾರ ಹೈಕೋರ್ಟ್‌ನಲ್ಲಿ ಅಕ್ವಿಟ್ ಆದನೆಂದು ಮತ್ತು ಅವಿವಾಹಿತನಾಗಿದ್ದನೆಂದೂ, 1990ರ ಅಕ್ಟೋಬರ್‌ನಲ್ಲಿ ನೀಲಾವರಕ್ಕೆ ವಾಪಸ್ ಬಂದಿದ್ದನೆಂದೂ ತಿಳಿದುಬಂದಿದೆ. ಈ ಹಿನ್ನೆಲೆಯಲ್ಲಿ ಕುಮಾರಿ ಲೀಲಾ ಇವರ ಸಂಬಂಧಿಗಳನ್ನು ಸಹ ಈ ಕೊಲೆಯ ಬಗ್ಗೆ ತನಿಖೆ ಮಾಡಲಾಗಿದೆ. ಇವರಿಂದಲೂ ಸಹ ಯಾವ ಸುಳಿವೂ ದೊರೆತಿಲ್ಲ. ತನಿಖೆ ಮುಂದುವರೆದಿದೆ. ಈ ತನಿಖೆಗಾಗಿ ಉಡುಪಿ ಡಿ.ಎಸ್.ಪಿ.ಯವರ ಒಂದು ವಿಶೇಷ ದಳವನ್ನು ರಚಿಸಲಾಗಿದೆ. ಆಪಾದಿತರನ್ನು ಪತ್ತೆ ಹಚ್ಚಲು ಪ್ರಾಮಾಣಿಕ ಪ್ರಯತ್ನ ಮುಂದುವರೆದಿದೆ.

ಮಾನ್ಯ ಅಧ್ಯಕ್ಷರೇ, ಈ ಎಲ್ಲ ವಿವರಗಳನ್ನು ನಮ್ಮ ಡಿ.ಐ.ಜಿ.ಯವರು ಶ್ರೀ ಬಸವರಾಜ್ ಅವರಿಗೂ ವಿವರಿಸಿದ್ದಾರೆ.

ಚೇರ್‌ಮನ್ : ಈಗ ಸಭೆಯಲ್ಲಿ ಶ್ರೀ ಸಿದ್ಧಯ್ಯನವರು ಹಾಜರಿಲ್ಲ. ಆದ್ದರಿಂದ ಶ್ರೀ ಅನಂತಕೃಷ್ಣ ಅವರು ನಿಯಮ 334ರ ಮೇರೆಗೆ ವಿಷಯ ಪ್ರಸ್ತಾಪ ಮಾಡಬಹುದು.

2) ಬೆಂಗಳೂರು ಮಹಾನಗರ ಪಾಲಿಕೆಯವರಿಂದ ಪ್ಯಾಲೆಸ್ ರಸ್ತೆ ಕೆಲಸ

SRI A.K. ANANTHAKRISHNA:(SHIVAJINAGAR): MR. SPEAKER SIR, I understand that the Bangalore City Corporation has taken up for execution the Place Road, from Mount Carmel College, longback towards Sankey Road passing through Bangalore-Madras Railway line Under Bridge in Vasanthanagar. The original estimate has been revised many times resulting in heavy expenditure. The work is being delayed and is being entrusted to many contractors in succession. The Public are put to lot of avoidable inconveniences. Now I urge the Government to give a statement to this House with regard to the original estimated cost, number of times this was revised, the number of contractors entrusted with this work and the time required to complete this road so as to remove avoidable inconvenience being caused to the people.

SRI BLASIUS M.D'SOUZA (On behalf of the Minister for Housing and Urban Development) MR: SPEAKER SIR, The Railway authorities have construted the Railway bridge and completed the same at their end. The approach road on both the sides of the bridge have to be formed by Bangalore City Corporation. Accordingly, an estimate has been prepared for Rs 82.00 lakhs and the Government has accorded approval for the same vide No. G.O. No. HUD 273 MNY 84, dated 11-3-83. These approach roads consist of two portions. One, one Vasanthanagar side costing Rs 20.24 lakhs and the other on Palace cross road costing Rs 42.24 lakhs. The cost of shifting of service lines and for land acquisition costing Rs 19.52 lakhs, totalling to Rs 82.00 lakhs.

Formtion of approach road Vasanthanagar side was put to tender and tender has been approved at a cost of Rs 26.82 lakhs and work order has been issued to the contractor to take up the work during June 1990. The contractor has Started the work and completed the earth work quickly. Before laying the soiling the existing service lines as well as trees are to be removed by other agencies like Bangalore water Supply and Sewerage Board, P &T, Karnataka Electricity Board and Forest Department. There is dealy in shifting of these service lines as the alternative arrangements are to be made by respective departments without distrubing the normal services. However there was an agitation from the local residents in removal of trees. It also took considerable time in convincing the local residents. Finally, trees were removed taking the public in to confidence. This has attributed to the delay in completing the work. As soon as these items are settled, the contractor has resumed the work immediately and now the work is almost nearing completion. It is expected to complete the work by the end of December 1991.

The formation of approach road on other side. i.e. on Palace road was also put to tender. Tender has been received amounting to Rs 67.44 lakhs. Due to the urgency of the work, work order has been issued on 3-8-91 to the contractor pending approval by the Government. To tackle this work, major portion of the Palace property is to be acquired, for which acquisition proposals have ben initiated already during 1988 and submitted to the Government for approval. Unfortunately, the Palace authorities have brought the Stay from the High Court. Hence land acquisition could not be processed further. However, due to urgency instructins have been issued by the Chief Secretary to send fresh proposal for acquisition under Special clause. Accordingly land acquistion proposal under Special clause has been sent to the special Land Acquisition Officer on 9-9-91 Approval is awaited from the Special Land Acquisition Officer. Hence, the formation of approach road on palance road could not be taken up though the work order has been issued to the contractor. As soon as the vacant land is made available by the Land Acquisition Officer, work will be started and completed early.

3) ಅರಕಲ ಗೂಡು ತಾಲ್ಲೋಕು ಕೊಣನೂರು ಅರಕ್ಷಕ ಠಾಣೆ ವ್ಯಾಪ್ತಿಗೆ ಸೇರಿದ ಶ್ರೀ ಗೋತು ಗ್ರಾಮದ ಶ್ರೀ ಬಸಪ್ಪನವರ ಮಗ ಬಸವರಾಜಪ್ಪನವರ ಜಮೀನನಲ್ಲಿ ಅಡಿಕೆ, ಬಾಳೆ, ತೆಂಗಿನ ಮರಗಳನ್ನು ಕಡಿದು ಹಾಕಿರುವುದರ ಬಗ್ಗೆ

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಅಧ್ಯಕ್ಷರೇ ಅರಕಲಗೂಡು ತಾಲ್ಲೂಕು ಕೊಣನೂರು ಆರಕ್ಷಕ ಠಾಣೆ ವ್ಯಾಪ್ತಿಗೆ ಸೇರಿದ ಶ್ರೀಗೋರು ಗ್ರಾಮದ ಶ್ರೀ ಬಸಪ್ಪನವರ ಮಗ ಬಸವರಾಜಪ್ಪನವರ ಜಮೀನಿನಲ್ಲಿದ್ದ ಸುಮಾರು 1200ಅಡಿಕೆ ಮರಗಳನ್ನು 1000ಬಾಳೆ ಗಿಡಗಳನ್ನು ಹಾಗೂ ಕೆಲವು ತೆಂಗಿನ ಮರಗಳನ್ನೂ ದಿನಾಂಕ 26-9-1991 ರ ರಾತ್ರಿ ಕೆಲವು ದುಷ್ಕರ್ಮಿಗಳು ಕಡಿದು ಹಾಕಿದ್ದು ಸುಮಾರು ಎರಡು ಲಕ್ಷ ರೂಪಾಯಿಗಳ ನಷ್ಟ ಸಂಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ? ಬಂದಿದ್ದರೆ ಸರ್ಕಾರ ತಪ್ಪಿತಸ್ಥರ ವಿರುದ್ಧ ಏನು ಕ್ರಮ ಕೈಗೊಂಡಿರುತ್ತದೆ ಮತ್ತು ನಷ್ಟ ಅನುಭವಿಸಿದ ಭೂಮಾಲೀಕರಿಗೆ ಪರಿಹಾರ ಕೊಡಲು ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ಎಂದು ತಿಳಿಯಬಯಸುತ್ತೇನೆ.

ಶ್ರೀ ಧರ್ಮಸಿಂಗ್ (ಗೃಹ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ ಮೆಲ್ಕಂಡ ವಿಷಯದ ಬಗ್ಗೆ ನಾನು ಮೈಸೂರು ವಿಭಾಗದ ಡಿ.ಐ.ಜಿ. ಯಾವರಿಂದ ವಿಚಾರಿಸಿದ್ದೇನೆ. ಪ್ರಕರಣದ ವಿವರಗಳು ಹಿಗಿವೆ

ಈ ಪ್ರಕರಣದ ಹಿನ್ನೆಲೆ ಸೀಗೋಡು ಗ್ರಾಮದ ಗ್ರಾಮ ದೇವತೆ ಕೆಂಪಮ್ಮ ದೇವರ ದೇವಸ್ಥಾನದ ಜಮೀನಿನ ಅನುಭವದ ಬಗ್ಗೆ ಸಂಬಂಧಿಸಿದೆ.

ಗ್ರಾಮ ದೇವತೆ ಕೆಂಪಮ್ಮ ದೇವರ ದೇವಸ್ಥಾನಕ್ಕೆ ಸರ್ವೆ ನಂ 79. ರಲ್ಲಿ ಒಂದು ಎಕರೆ ನಾಲ್ಕು ಗುಂಟೆ ಜಮೀನು ಇದೆ. ಸುಮಾರು ಇಪ್ಪತ್ತು ಇಪ್ಪತ್ತೈದು ವರ್ಷಗಳಿಂದಲೂ ಇದೇ ಗ್ರಾಮದ ಶ್ರೀ ಗೋಪಾಲರಜೇ ಅರಸ್ ಎನ್ನುವವರು ಈ ದೇವಸ್ಥಾನದ ಅರ್ಚಕರಾಗಿದ್ದು ದೇವಸ್ಥಾನದ ಈ ಜಮೀನನ್ನು ಸಾಗುವಳಿ ಮಾಡುತ್ತಿದ್ದರು. ಕಳೆದ ವರ್ಷ ಈ ಅರ್ಚಕರ ಬದಲಾವಣೆಯಾಗಿ ವಿಷಕಂಠ ಎಂಬುವವರನ್ನು ಅರ್ಚಕರಾಗಿ ನೇಮಕ ಮಾಡಲಾಯಿತು. ಆದರೂ

ಹಿಂದಿನ ಅರ್ಚಕ ಗೋಪಾಲ ರಾಜೇ ಅರಸ್ ಅವರೇ ಸದರಿ ಜಮೀನನ್ನು ಉಳುತ್ತಿದ್ದರು. ದಿನಾಂಕ 8-9-91 ರಂದು ಬಸವಾಜ ಮತ್ತು ಇತರರು ಈ ಜಮೀನನ್ನು ಉಳಲು ವಿರ್ಪಾಡು ಮಾಡುತ್ತಿದ್ದಾರೆಂದು ಶ್ರೀ ಗೋಪಾಲರಜೇ ಅರಸ್ ಅವರು ದೂರೊಂದನ್ನು ಕೊಟ್ಟರು. ಈ ದೂರನ್ನು ದಾಖಲಿಸಿಕೊಂಡು ಸ್ಥಳೀಯ ಪೋಲೀಸರು ಎರಡು ಪಕ್ಷದವರನ್ನು ಕರೆಸಿ ವಿಚಾರಿಸಲಾಗಿ ಬಸವರಾಜ್ ಮತ್ತು ಅವರ ಕಡೆಯವರು ಕಾನೂನು ಪ್ರಕಾರ ನಡೆಮಕೊಳ್ಳಲು ಒಪ್ಪಿಕೊಂಡರು.

ದಿನಾಂಕ 7-9-91 ರಂದು ಶ್ರೀ ಗೋಪಾಲರಾಜೇ ಅರಸ್ ಅವರು ಅರಕಲಗೂಡು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಸಿವಿಲ್ ಕೇಸ್ ಒಂದನ್ನು ದಾಖಲ್ಮಾಡಿ ಟೆಂಪೊರರಿ ಇಂಜಕ್ಷನ್ ಒಂದನ್ನು ತಮ್ಮ ಪರವಾಗಿ ಪಡೆದುಕೊಂಡರು ಹಾಗೂ ಈ ಜಮೀನಿನಲ್ಲಿ ಭತ್ತದ ಸಸಿ ನಾಟಿ ಮಾಡಿದರು. ದಿನಾಂಕ 13-9-91ರಂದು ಸದರಿ ಗೋಪಾರಾಜೇ ಅರಸ್ ಅವರ ಮಗ ಸುಬ್ರಹ್ಮಣ್ಯ ಅರಸ್ ಅವರು ಕೊಣನೂರು ಪೋಲೀಸ್ ಠಾಣೆಗೆ ಬಂದು ಬಸವರಾಜಪ್ಪ ಮತ್ತು ಇತರ ಒಂಭತ್ತು ಜನ ತಮ್ಮ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ಬತ್ತದ ಪೈರನ್ನೆಲ್ಲಾ ಹಾಳು ಮಾಡಿದರೆಂದೂ ಮತ್ತು ತಮಗೆ ಬೆದರಿಕೆ ಹಾಕಿದರೆಂದೂ ದೂರೊಂದನ್ನು ಕೊಟ್ಟರು. ಈ ದೂರನ್ನು ಪೋಲೀಸ್ ಠಾಣೆಯಲ್ಲಿ ಕ್ರೈಮ್ ನಂ 93. ಎಂದು ದಾಖರಿಸಿಕೊಂಡು ತನಿಖೆ ಮುಂದುವರೆದಿದೆ.

ದಿನಾಂಕ 17-9-91ರಂದು ಬಸಪ್ಪ ಎಂಬುವವರ ಮಗ ಬಸವಾರಾಜು ಎನ್ನುವವರು ಇದೇ ಪೋಲೀಸ್ ಠಾಣೆಗೆ ಬಂದು ಗೋಪಾಲರಾಜೇ ಅರಸ್ ಮತ್ತು ಇತರೆ 13 ಜನರು ಹಿಂದಿನ ರಾತ್ರಿ ತಮ್ಮ ಜಮೀನು ಸರ್ವೆ 203-5 ಅನ್ನು ಅತಿಕ್ರಮಿಸಿ ಪ್ರವೇಶಿಸಿ ಸುಮಾರು 1200 ಅಡಿಕೆ ಸಸಿಗಳನ್ನು 1000 ಬಾಳೀ ಸಸಿಗಳನ್ನು ಮತ್ತು 4 ತೆಂಗಿನ ಸಸಿಗಳನ್ನು ಒಟ್ಟು ಸುಮಾರು ಎರಡು ಲಕ್ಷ ರೂಪಾಯಿ ಬೆಲೆ ಬಾಳುವ ಆಸ್ತಿಯನ್ನು ನಾಶಪಡಿಸಿದರೆಂದು ದೂರು ಕೊಟ್ಟರು. ಈ ದೂರನ್ನೂ ಸಹ ಕ್ರೈಮ್ ನಂ. 95-91 ಎಂದು ದಾಖಲಿಸಿಕೊಂಡು ತನಿಖೆ ಮುಂದುವರೆದಿದೆ.

ದಿನಾಂಕ 19-9-91 ರಂದು ಶ್ರೀ ಗೋಪಾಲರಾಜೇ ಅರಸ್ ಅವರನ್ನು ಬಂಧಿಸಿ ಕೋರ್ಟ್ ಮುಂದೆ ಹಾಜರ್ಪಡಿಸಲಾಯಿತು. ಮರುದಿನ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು ಇನ್ನೊಬ್ಬ ಅಪರಾಧಿ ನಾಗರಾಜು ಅವರನ್ನು ದಿನಾಂಕ 21-9-91ರಂದು ಬಂಧಿಸಿ ಕೋರ್ಟ್ ಮುಂದು ಹಾಜರ್ಪಡಿಸಲಾಗಿದ್ದು ಅವರು ಈಗ ಜುಡಿಷಿಯಲ್ಲಿ ಕಸ್ಟಡಿಯಲ್ಲಿದ್ದಾರೆ. ಅರಕಲಗೂಡ ತಹಸಿಲ್ದಾರ್ ಅವರು ಸಿ.ಆರ್.ಪಿ.ಸಿ. 144ನೇ ಕಲಂ ಅನ್ನು ದಿನಾಂಕ 139-91 ರಂದು ಜಾರಿಗೊಳಿಸಿ ಸರ್ವೆ 79ರ ಜಮೀನಿನ ಸಮೀಪ ಯಾರೂ ಹೋಗುವುದನ್ನು ಬಹಿಷ್ಕರಿಸಿದ್ದಾರೆ. ದಿನಾಂಕ 20-9-91 ರಂದು ಎರಡೂ ಗುಂಪುಗಳ ವಿರುದ್ಧ ಕ್ರೈಮ್ ನಂ. 97-91 ಮತ್ತು 98-91 ದಾಖಲ್ಮಾಡಿಕೊಂಡು ಸಿ.ಆರ್.ಪಿ.ಸಿ. 107ನೇ ಸೆಕ್ಷನ್ ಜಾರಿಗೊಳಿಸಲಾಗಿದೆ.

ಈ ಪ್ರಕರಣ ಒಂದು ಕ್ರಿಮಿನಲ್ ತರಹೆಯ ಪ್ರಕಣವಾಗಿರುವುದರಿಂದ ಆಸ್ತಿ ನಷ್ಟಕ್ಕೆ ಪರಿಹಾರ ಒದಹಾರ ಒದಗಿಸುವುದು ಕಾನೂನು ರೀತ್ಯಾ ಸಾಧ್ಯವಿಲ್ಲವೆಂದು ಜಿಲ್ಲಾಧಿಕಾರಿಗಳು ಅಭಿಪ್ರಾಯ ಪಟ್ಟಿದ್ದಾರೆ. ತನಿಖೆ ಮುಂದುವರೆದಿದೆ.

ಮಾನ್ಯ ಅಧ್ಯಕ್ಷರೇ ಈ ಪ್ರಕರಣವನ್ನು ಕಳೆದ ಶುಕ್ರವಾರ ನನ್ನ ಗಮನಕ್ಕೂ ಸಹ ತರಲಾಯಿತು. ನಾನು ತಕ್ಷಣ ದಕ್ಷಿಣ ವಲಯದ ಡಿ.ಐ.ಜಿ. ಯವರಿಗೆ ಸ್ಥಳ ತನಿಖೆ ಮಾಡಲು ಆದೇಶ ನೀಡಿದೆ. ಇದರಂತೆ ಡಿ.ಐ.ಜಿ. ಯವರು ಹಾಸನದ ಎಸ್.ಪಿ. ಯವರು ಮತ್ತು ಹಾಸನದ ಜಿಲ್ಲಾಧಿಕಾರಿ ಯವರು ಸ್ಥಳಕ್ಕೆ ಭೇಟಿ ಕೊಟ್ಟು ಸೂಕ್ತ ಕ್ರಮ ಕೈಗೊಂಡಿದ್ದಾರೆ. ಮಾನ್ಯ ಸದಸ್ಯ ಶ್ರೀ

ರಾಮಸ್ವಾಮಿಯವರೂ ಸೇರಿದಂತೆ ಎರಡೂ ಪಂಗಡದವರಿಗೂ ಮತ್ತು ಗ್ರಾಮಸ್ಥರಿಗೂ ಶಾಂತಿ ಸುವ್ಯಸ್ಥೆ ಕಾಪಾಡಿಕೊಂಡು ಬರಲು ಮನದಿ ಮಾಡಿದ್ದಾರೆ ತನಿಖೆ ಮುಂದುವರೆದಿದೆ. ಪರಿಸ್ಥಿತಿ ಶಾಂತವಾಗಿದೆ. ಜಿಲ್ಲಾ ಸಶಸ್ತ್ರ ಪಡೆಯ ಒಂದು ತುಕಡಿಯನ್ನು ಸಹ ಈ ಗ್ರಾಮದಲ್ಲಿ ಇಡಲಾಗಿದೆ.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಬೆಳಗಾಂ ಜಿಲ್ಲೆಯ ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಗಿನಲ್ಲಿ ಲಿಫ್ಟ್ ಇರಿಗೇಷನ್ ಯೋಜನೆ

ಎಸ್.ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಅಧ್ಯಕ್ಷರೆ ಬೆಳಗಾಂ ಜಿಲ್ಲೆಯ ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕಿನ ಜಮೀನುಗಳು ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾಗಿರುತ್ತವೆ. ಈ ಮುಳುಗಡೆಯಾದ ಜಮೀನು ಮಾಲೀಕರಿಗೆ ನೀರನ್ನು ಕೊಡುವ ಉದ್ದೇಶದಿಂದ ಅಲ್ಲಿ ಎಂಬು ಲಿಫ್ಟ್ಇರಿಗೇಶನ್‌ಗಳನ್ನು ಮಾಡಲಾಗಿದೆ.

ಮಾಟೊಳ್ಳಿ ಏಣಗಿ ವಕ್ಕುಂದ ಹಾಗೂ ಸುತ್ತಗಟ್ಟಿ ಮತ್ತು ಸಂಗೊಳ್ಳಿ ದೇವಲಾಪುಲ ಗ್ರಾಮದ ಜಮೀನುಗಳು ಲಿಫ್ಟ್ ಇರಿಗೇಶನ್ ಕಮಾಂಡ್ ಏರಿಯಾದಲ್ಲಿ ಬರುತ್ತವೆ. ಈ ಗ್ರಾಮದ ಜಮೀನುಗಳು ಲಿಫ್ಟ್ ಇರಿಗೇಶನ್ ಕಮಾಂಡ್ ಏರಿಯಾದಲ್ಲಿ ಬರುತ್ತಿದ್ದರೂ ಕೂಡ ಈ ಜಮೀನುಗಳು ಟೆಲೆಎಂಡ್‌ನಲ್ಲಿ ಇರುವುದರಿಂದ ನೀರು ಸರಿಯಾಗಿ ಜಮೀನುಗಳಿಗೆ ಬರುವುದಿಲ್ಲ.

ಈಗಾಗಿ ಮಟೊಳ್ಳಿ ಏಣಗಿ ವಕ್ಕುಂದ ಸಂಗೋಳ್ಳಿ ದೇವಲಾಪುರ ಗ್ರಾಮಗಳಲ್ಲಿ ಅಗಮೆಂಟೇಶನ ಆಫ್ ಲಿಫ್ಟ್ ಇರಿಗೇಶನ್ ಸ್ಕಿಂ ಮಾಡಬೇಕೆಂದು ಅಲ್ಲಿಯ ಇಂಜಿನಿಯರುಗಳ ಅಭಿಪ್ರಾಯವಿದ್ದು ಹಾಗೂ ಈ ಲಿಫ್ಟ್ ಇರಿಗೇಶನ್ ಸ್ಕೀಂಗಳನ್ನು ತೆಗೆದುಕೊಳ್ಳಬೇಕೆಂದು ಸ್ಥಳಿಯ ಕಾಡಾ ಮೀಟಿಂಗ್‌ನಲ್ಲಿ ಮತ್ತು ಇರಿಗೇಶನ್ ಮೀಟಿಂಗ್‌ನಲ್ಲಿ ನಿರ್ಣಯ ಸಹ ಆಗಿರುತ್ತದೆ.

ಆದ ಕಾರಣ ತಜ್ಞರ ಅಭಿಪ್ರಾಯದ ಪ್ರಕಾರ ಮತ್ತು ಮೇಲೆ ಬರೆದ ಮೀಟಿಂಗ್‌ಗಳಲ್ಲಿ ಠರಾಯಿಸಿದ ಪ್ರಕಾರ ಅಲ್ಲಿ ಕೂಡಲೇ ಲಿಫ್ಟ್ಇರಿಗೇಶನ್ ಸ್ಕೀಂಗಳನ್ (ಅಗ್‌ಮೆಂಟೇಶನ್) ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಭಾರಿ ಮತ್ತು ದೊಡ್ಡ ನೀರಾವರಿ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ ಭಾರಿ ಮತ್ತು ಮಧ್ಯಮ ನೀರಾವರಿಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ಮಾಡುತ್ತೇನೆ.

ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾದ ಗ್ರಾಮಗಳ ಜಮೀನುಗಳಿಗೆ ನೀರನ್ನು ಒದಗಿಸುವ ಉದ್ದೇಶದಿಂದ ಎಂಟು ಏತ ನೀರಾವರಿ ಯೋಜನೆಗಳನ್ನು ನಿರ್ಮಾಣ ಮಾಡಲಾಗಿದೆ. ಆ ಯೋಜನೆಗಳ ವಿವರಗಳು ಈ ರೀತಿ ಇವೆ:

ಯೋಜನೆಯ ಹೆಸರು	ಉದ್ದೇಶಿತ ನೀರಾವರಿ ಪ್ರದೇಶ (ಹೆಕ್ಟೇರುಗಳಲ್ಲಿ)	ನೀರಾವರಿ ಆದ ಪ್ರದೇಶ (ಹೆಕ್ಟೇರುಗಳಲ್ಲಿ)
1. ಸವದತ್ತಿಯ ಹೆಡ್‌ರೆಗ್ಯೂಲೇಟರ್	8093	6393
2. ಸಿಂಗಾರಕೊಪ್ಪ	2913	3917
3. ಘಳಗಿ ಹಿಟಣಗಿ	1884	1863

4.	ಕೆಂಗನೂರು	2913	2243
5.	ಬೂದಿಹಾಳ್	1478	1419
6.	ಜಾಲಿಕೊಪ್ಪ	1952	1831
7.	ಹೊಸೂರ್ಒಕ್ಕುಂದ	1277	1162
8.	ಮಲ್ಲೂರ್‌ಮಟೊಳ್ಳಿ	2832	2240
	ಒಟ್ಟು	23342	21140

ಉದ್ದೇಶಿತ ನೀರಾವರಿ ಪ್ರದೇಶಕ್ಕೆ ಸಂಪೂರ್ಣವಾಗಿ ನೀರು ಒದಗಿಸಲು ಸಾಧ್ಯವಾಗುತ್ತಿಲ್ಲ. ಎಂಬ ಅಂಶವು ಮೇಲಿನ ವಿವರಗಳಿಂದ ವ್ಯಕ್ತವಾಗುತ್ತದೆ. ಸಾಮಾನ್ಯವಾಗಿ ಹೆಡ್ ರೀಚ್‌ಸಲ್ಲಿ ಇರುವ ರೈತರು ಜಾಸ್ತಿ ನೀರನ್ನು ಬಳಸಿಕೊಳ್ಳುವ ಪ್ರವೃತ್ತಿ ಇರುವುದರಿಂದ ಟೈಲೆಂಡ್ ರೀಚ್‌ನವರಿಗೆ ಕಡಿಮೆ ಪ್ರಾಮಾಣದ ನೀರು ಲಭ್ಯವಾಗುತ್ತದೆ. ಈ ರೀತಿ ಟೈಲೆಂಡ್ ಪ್ರದೇಶಕ್ಕೆ ನೀರು ಕಡಮೆಯಾಗಿದ್ದರೆ ಈ ಪ್ರದೇಶಗಳಿಗೆ ಪರ್ಯಾಯ ವ್ಯವಸ್ಥೆ ಏನಾದರೂ ಮಾಡಲು ಸಾಧ್ಯವಿದೆಯೇ ಎಂಬುದನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಕೊಲಾರ ಜಿಲ್ಲೆ ರೈತರಿಗೆ ವಿದ್ಯುಚ್ಛಕ್ತಿ ಅಭಾವದಿಂದ ತೊಂದರೆ

ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯುತ್ ಮಂತ್ರಿಗಳು ಈ ಕೆಳಗಿನ ವಿಷಯದ ಬಗ್ಗೆ ಹೇಳಿಕೆ ನೀಡಬೇಕೆಂದು ವಿನಂತಿ:

ಕೋಲಾರ ಜಿಲ್ಲಾ ರೈತರಿಗೆ ವಿಧ್ಯಚ್ಛಕ್ತಿ ಅಭಾವವನ್ನು ನೀಗಲು 125ಮೆಗಾವ್ಯಾಟ್ ವಿದ್ಯುಚ್ಛಕ್ತಿ ಉತ್ಪಾದನೆಯಾಗುವಂತಹ ಡೀಸೆಲ್ ಜನರೇಟರ್ ಒಂದನ್ನು ಸ್ಥಾಪನೆ ಮಾಡಲು ಸೂಮಾರು ಎರಡು ವರ್ಷಗಳಿಂದ ಸರ್ಕಾರದವರು ಹೇಳಿಕೆ ಕೊಡುತ್ತಿದ್ದಾರೆ ಮತ್ತು ಜರೂರಾಗಿ ಸ್ಥಾಪನೆ ಮಾಡಲು ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬುದಾಗಿ ಸರ್ಕಾರದವರೂ ವಿಧಾನ ಸಭೆಯಲ್ಲಿ ಉತ್ತರ ಕೊಟ್ಟಿರುತ್ತಾರೆ. ಆದರೆ ಸ್ಥಾಪನೆಯ ಬಗ್ಗೆ ಯಾವ ಕಾರ್ಯಕ್ರಮ ಕೈಗೊಂಡಂತಿಲ್ಲ ಇದರ ಬಗ್ಗೆ ಸ್ಥಾಪನೆ ಮಾಡಿರುವ ಕೈಗೊಂಡಿರುವ ಕಾರ್ಯಕ್ರಮಗಳ ಬಗ್ಗೆ ಹೇಳಿಕೆ ಕೊಡುವುದಲ್ಲದೆ ಕನಿಷ್ಠ ಎಷ್ಟು ತಿಂಗಳಲ್ಲಿ ಪ್ರಾರಂಭ ಮಾಡುತ್ತಾರೆ. ಇತ್ತೀಚೆಗಂತೂ ವಿಧ್ಯುಚ್ಛಕ್ತಿ ಸರಬರಾಜು ಸರಿಯಾಗಿಲ್ಲದೆ ರೈತರಿಗೆ ತೊಂದರೆಯಾಗಿದೆ ಕೂಡಲೇ ಡೀಸಲ್ ಜನರೇಟರ್ ಸ್ಥಾಪನೆ ಮಾಡಲು ಕಾರ್ಯಕ್ರಮ ಕೈಗೊಳ್ಳುವುದು ಹಾಗೇನಾದರೂ ತೊಂದರೆಗಳಿದ್ದಲ್ಲಿ ಅವುಗಳನ್ನು ನಿವಾರಣೆ ಮಾಡಿಕೊಂಡು ಕಾರ್ಯಕ್ರಮ ಕೈಗೊಳ್ಳವುದು.

ಶ್ರೀ ಎಂ ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ ವೋಲ್ಟೇಜ್ ಪರಿಸ್ಥಿತಿಯನ್ನು ಸುಧಾರಿಸಲು ನಾಲ್ಕು ಆಯ್ದ ಸ್ಥಳಗಳಲ್ಲಿ ಡೀಸೆಲ್ ಜನರೇಟಿಂಗ್ ಸೆಟ್ ಸ್ಥಾಪಿಸುವ ಪ್ರಾಸ್ತಾಪವನ್ನು ಕರ್ನಾಟಕ ನಿಗಮವು ತಯಾರಿಸಿತ್ತು. ಈ ಸ್ಥಳಗಳು ಬೀದರ್ 'ಇಂಡಿ' ಜಮಖಂಡಿ ಮತ್ತು ಕೋಲಾರ ಆಗಿರುತ್ತದೆ. ಒಟ್ಟು 77.76 ಮೆಗಾವ್ಯಾಟ್ ಸಾಮರ್ಥ್ಯದ ಯೋಜನೆಯಲ್ಲಿ ಪ್ರತಿ ಸ್ಥಳದಲ್ಲಿ 19.44 ಮೆಗಾ ವ್ಯಾಟ್ ಸಾಮರ್ಥ್ಯದ ಘಟಕಗಳನ್ನು ಸ್ಥಾಪಿಸುವ ಯೋಜನೆ ಇದೆ. ಅದೆಲ್ಲಾ ಘಾಡಕಗಳಿಂದ ವಾರ್ಷಿಕ 420 ದಶಲಕ್ಷ ಯೂನಿಟ್ ವಿದ್ಯುಚ್ಛಕ್ತಿಯನ್ನು ಉತ್ಪಾದಿಸ ಬಹುದು. 58 ಕೋಟಿ ರೂಪಾಯಿಗಳ ಅಂದಾಜು ವೆಚ್ಚದ ಈ ಯೋಜನೆಗೆ ಫೆಬ್ರವರಿ 1987ರಲ್ಲಿ ಕೇಂದ್ರ ಯೋಜನಾ ಆಯೋಗ ಒಪ್ಪಿಗೆ ನೀಡಿದೆ. ಈ ಯೋಜನೆಯ ಈಗಿನ ಅಂದಾಜು ವೆಚ್ಚದ ಸುಮಾರು 90ಕೋಟಿ ರೂಪಾಯಿಗಳು. ಈ ಯೋಜನೆಯನ್ನು ಮುಂದೂಡಿತ ಸಾಲಗಳ ಮೂಲಕ ಹಣ ತೊಡಗಿಸುವ ಯೋಜನೆ ಇತ್ತು. ಈ ರೀತಿಯಲ್ಲಿ ಕಾರ್ಯಗತ ಗೊಳಿಸಲಾಗಲಿಲ್ಲ. ಈಗ ವಿಧೇಶಿ ನೆರವಿನಿಂದ ಈ ಯೋಜನೆಯನ್ನು ಮತ್ತು ಕೈಗೆತ್ತಿಕೊಳ್ಳುವ ಯೋಜನೆ ಇದೆ. ಇದಲ್ಲದೆ ಈ ಯೋಜನೆಯನ್ನು ಖಾಸಗಿ ಸಂಸ್ಥೆಗಳ ಸಹಭಾಗಿತ್ವದಿಂದಲೂ ಕೈಗೆತ್ತಿಗೊಳ್ಳಲು ಪತ್ರಿಕೆಗಳಲ್ಲಿ

ಜಾಹೀರಾದು ಕೊಡಲಾಗಿತ್ತು. ಆದರೆ ಇದುವರೆವಿಗೂ ಯಾವ ಖಾಸಗಿ ಸಂಸ್ಥೆಯವರೂ ಈ ಯೋಜನೆಯನ್ನು ಕೈಗೊಳ್ಳುವ ವಿಚಾರದಲ್ಲಿ ಮುಂದೆ ಬಂದಿಲ್ಲ ಡೀಸೆಲ್ ಸೆಟ್ಟುಗಳನ್ನು ಕೊಳ್ಳಲು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಈ ಯೋಜನೆ ಕಾರ್ಯಗತಗೊಳಿಸಲು ಸುಮಾರು 18 ತಿಂಗಳ ಕಾಲಾವಕಾಶ ಬೇಕಾಗುತ್ತದೆ.

ಚಿಕ್ಕಮಂಗಳೂರು ಜಿಲ್ಲೆಯ ಶೃಂಗೇರಿ ಕೊಪ್ಪ ಎನ್.ಆರ್.ಪುರ ತಾಲ್ಲೂಕಿನಲ್ಲಿ ಅಧಿಕ ಮಳೆಯಿಂದ ಪ್ರಾವಾಹ ಬಂದು ಅನೇಕ ರೈತರಿಗೆ ತೊಂದರೆ

ಶ್ರೀ ಶಾಮಣ್ಣ ಯುಕೆ ಶೃಗೇರಿ: ಮಾನ್ಯ ಅಧ್ಯಕ್ಷರೇ ಚಿಕ್ಕಮಂಗಳೂರು ಜಿಲ್ಲೆಯ ಶ್ರಿಂಗೇರಿ ಕೊಪ್ಪ ಎನ್.ಆರ್.ಪುರ ತಾಲ್ಲೂಕಿನಲ್ಲಿ ಅಧಿಕ ಮಳೆಯಿಂದ ಪ್ರವಾಹ ಬಂದು ಭತ್ತದ ಗದ್ದೆ ಅಡಿಕೆ ತೋಟಗಳಲ್ಲಿ ಮರಳು ಕಲ್ಲುಗಳಿಂದ ತುಂಬಿವೆ ಇದನ್ನು ತೆಗೆಸಿ ಮಟ್ಟಮಾಡಲು ಸರ್ಕಾರ ಸಹಾಯ ಮಾಡಲು ಸಾಧ್ಯವೇ?

ಶ್ರೀ ಬ್ಲೇಶಿಯಸ್ ಎಂ. ಡಿಸೋಜ (ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೆ ಇದಕ್ಕೆ ಉತ್ತರ ಇನ್ನೂ ಬಂದಿಲ್ಲ ಉತ್ತರವನ್ನು ಬೇಗನೆ ಒದಗಿಸುವಂತೆ ಮಾನ್ಯ ಕಂದಾಯ ಸಚಿವರಿಗೆ ತಿಳಿಸುತ್ತೇನೆ.

ಚಿಕ್ಕಮಂಗಳೂರು ಪಟ್ಟಣದ ಜನರಲ್ ಆಸ್ಪತ್ರೆಯ ಬಗ್ಗೆ

SRI SADTH ALI KHAN (Chinnapatana): The Hon'ble Minister for Health and Family Welfare be pleased to state that the General hospital was constructed in the year 1986, for 50 bedded and the same was running since 1986, the citizens of Channapatna Taluk felt that the 50 bedded hospital is insufficient because of the huge out-patients numbering about 700 to 800 every day and inpatients of about 150. The citizens of Chanapatna formed a Committee of donors to put up an aditional First Floor Block at the cost of Rs 21 lakhs. and the same is completed in the month of April 1991. The State Government accorded the permission also upgrading it to 100 bedded hospital vide order No HFW/159/CGH/90 dated 1.8.90. The above additionala block of the hospital is yet to open for want of additional staff like doctors, nurses, and Group 'D' employees.

Hence, I request the Government to sanction the additional staff immediately for 100 bedded hospital norms.

Hope the concerned Hon'ble health Minister will take immediate action for early opening of the additional block.

SRI BLASIUS M D' SOUZA (Minister for Law) (On behalf of Minister for Health and Family Welfare) : Madam Deputy Speaker.

The bed strength of the General hospital, Channapatna Bangalore Rural, Bangalore was enhanced from 50 to 100 beds and permission was also accorded to the donor to construction the additional 50 bedded hospital building at an estimated cost of Rs 13.50 lakhs in Government Order. No HFW 159 CGM 90, dated 1.8.1990. The construction of the additional building is completed during the month of April 1991. The existing staff in the hospital is as follows.

1)	Deputy Surgeon	1
2)	Asst. Surgeon-cum-H.O.	5
3)	Asst. Dental Surgeon	1
4)	X-ray Technician	1
5)	X-Ray Attender	1
6)	Sr. Lab. Technician	1
7)	Jr. Lab. Technician	1
8)	Lab.Attender	1
9)	Group 'D'	4
10)	Helpers for every 3 beds	16
11)	Cook	2
12)	Helper for cook	2
13)	Dhobi	1
14)	Helper for Dhobi	2
15)	Stretcher Carrier	2
16)	Drivers	2
17)	Pharmacist	3
18)	Jr. health Ast (Female)	2
19)	Staff Nurse	7
20)	Nursing Supdt., Grade-II	1
21)	Office Supdt.,	1
22)	First Div.Asst.	3
23)	Second Div. Asst	5
24)	Typist-cum-Cleark	1

The additional staff required as per norms is as follows :

1)	Surgeon	1
2)	Helpers for every 3 beds	17
3)	Staff Nurse	1
4)	Sanitary Defedars	1
5)	Security Staff	1

Recurring expenditure per annum :

Staff	Rs. 4,27,903
Drugs	1,50,000
Diet	1,00,000

Bedding & Linen	50,000
Contingency	20,000
P.O.L.	35.000
Rs.	7,82,908

Non-recurring expenditure

Equipments & Apparatus. Rs. 3,00,000

The prosal to sanction of additional staff, requrring and non-recurring expenditure is under active consideration.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ: ಮಾನ್ಯ ಉಪಾಧ್ಯಕ್ಷರೇ ಈ ಕೆಳಕಂಡ ಸೂಚನೆಯನ್ನು ಪ್ರಸಕ್ತ ಅಧಿವೇಶನದಲ್ಲಿ ಪ್ರಸ್ತಾವಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ. 1990ನೇ....

ಶ್ರೀ ಆರ್. ವಿ. ದೇಶಪಾಂಡೆ: ಮಾನ್ಯ ಉಪಾಧ್ಯಕ್ಷರೇ ನನ್ನದೊಂದು ಕ್ರಿಯಾಲೋಪವಿದೆ. ಏನೆಂದರೆ ಇಲ್ಲಿ ಇದನ್ನು ಪರಿಶೀಲನೆ ಮಾಡುವಾಗ ಯಾರೊಬ್ಬರು ಮಂತ್ರಿಗಳು ಕೂಡಾ ಇಲ್ಲ.

SRI BLASIUS M D'SOUZA : I am just asking for the extension of time for the joint Select Committee on Hindu Succession Amendment Bill. This is not a Bill.

SRI R.V. DESHPANDE:Then it is okay.

ಹಿಂದೂ ಉತ್ತಾರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕ

(ಜಂಟಿ ಪರಿಶೀಲನಾಸಮಿತಿ ಅವದಿ ವಿಸ್ತರಣೆಯ ಬಗ್ಗೆ ಪ್ರಸ್ತಾಪ)

ಶ್ರೀ ಬ್ಲೇಸಿಯಸ್ ಎಂ ಡಿಸೋಜ (ಕಾನೂನು ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೇ 1990ನೇ ಸಾಲಿನ ಹಿಂದೂ ಉತ್ತರಾಧಿಕಾರ ಕರ್ನಾಟಕ ತಿದ್ದುಪಡಿ ವಿಧೇಯದ ಬಗ್ಗೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಗೆ 92ನೇ ಮಾರ್ಚ್ ತಿಂಗಳ ಅಂತ್ಯದವರೆಗೆ ಕಾಲಾವಧಿಯನ್ನು ವಿಸ್ತರಿಸಬೇಕೆಂದು ಕೋರುತ್ತೇನೆ. (ಪ್ರಸ್ತಾಪಕ್ಕೆ ಅಂಗೀಕಾರ ನೀಡಲಾಯಿತು).

ಉಪಾಧ್ಯಕ್ಷರು : ಈಗ ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಬಿಲನ್ನು ಇಂಟ್ರಡ್ಯೂಸ್ ಮಾಡಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಈ ಬಗ್ಗೆ ನಮ್ಮದು ಪಾಯಿಂಟ್ ಆಫ್ ಆರ್ಡರ್ ಇದೆ. ಏಕೆಂದರೆ ಈ ಬಗ್ಗೆ ಸರ್ಕಾರಕ್ಕೆ ಯಾವುದೇ ತರಹದ ಸೀರಿಯಸ್‌ನೆಸ್ ಇಲ್ಲ. ಕಾವೇರಿಯ ಬಗ್ಗೆ ಬಿಲ್ ಆಗಲಿ ಲೋಕಾಯುಕ್ತದ ಬಗ್ಗೆ ಬಿಲ್ ಆಗಲೀ ಅವುಗಳನ್ನು ಇಂಟ್ರಡ್ಯೂಸಸ್ ಮಾಡುವಾಗ ಸಂಬಂಧಪಟ್ಟಂಥ ಒಬ್ಬರು ಮಂತ್ರಿಗಳೂ ಕೂಡಾ ಇಲ್ಲಿ ಇಲ್ಲ.

ಉಪಾಧ್ಯಕ್ಷರು : ಇದು ಬರೀ ಇಂಟ್ರಡ್ಯೂಸ್ ಮಾಡುವುದು ಅಷ್ಟೆ.

ಶ್ರೀ ಹೆಚ್. ಏಕಾಂತಯ್ಯ : ಇಲ್ಲಿ ನನ್ನದು ಕ್ರಿಯಾಲೋಪ ಇದೆ. ಅದೇನೆಂದರೆ ಯಾರು ಪ್ರಸ್ತಾವನೆಯನ್ನು ಮಂಡಿಸಬೇಕು ಎಂದು ಅವರ ಹೆಸರು ಇದೆ. ಅವರು ಇರಬೇಕು. ಬೇರೆ ಮಂತ್ರಿಗಳು ಅದನ್ನು ಇಡಲಿಕ್ಕೆ ಬರುವುದಿಲ್ಲ.

ಉಪಾಧ್ಯಕ್ಷರು : ಬರೀ ಇಂಟ್ರಡಕ್ಷನ್ ಅಷ್ಟೇ.

SRI H. EKANTHAIAH : No, Madam, I am sorry.

SRI D.B. CHANDREGOWDA : Even at the time of introduction the concerned minister should be there. The Law Minister....

ಶ್ರೀ ಆರ್.ವಿ. ದೇಶಪಾಂಡೆ : ಸಂಬಂಧಪಟ್ಟಂಥ ಮಂತ್ರಿಗಳು ಇಲ್ಲ.

ಶ್ರೀ ಹೆಚ್. ಏಕಾಂತಯ್ಯ : ಪಾರ್ಲಿಮೆಂಟ್‌ನಲ್ಲಿ ಕೂಡಾ ಕ್ಯಾಬಿನೆಟ್ ಮಂತ್ರಿಗಳು ಇಲ್ಲದೇ ಇದ್ದಾಗ ಡೆಪ್ಯೂಟಿ ಮಿನಿಸ್ಟರ್ ಅದನ್ನು ಇಂಟ್ರಡ್ಯೂಸ್ ಮಾಡಲಿಕ್ಕೆ ಅಧಿಕಾರ ಇಲ್ಲ ಎಂದು ರೂಲಿಂಗ್ ಇದೆ.

ಉಪಾಧ್ಯಕ್ಷರು: ಈಗ ಸಭೆಯನ್ನು ಅರ್ಧ ಗಂಟೆಗಳ ಕಾಲ ಮುಂದೂಡಲಾಗಿದೆ. ಮತ್ತೆ ಸಭೆಯು 2-30 ಗಂಟೆಗೆ ಮತ್ತು ಸಮಾವೇಶಗೊಳ್ಳುತ್ತದೆ.

(ಸಭೆಯು ಪುನಃ 3 ಗಂಟೆಗೆ ಸಮಾವೇಶಗೊಂಡಿತು)

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶಾಸನ ರಚನಾ ಕಾರ್ಯಕಲಾಪಗಳು

(ವಿಧೇಯಕವನ್ನು ಮಂಡಿಸುವುದು)

ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ವಿಧೇಯಕ 1991

(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಕೆ.ಜೆ. ಜಾರ್ಜ್: (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ವಿಧೇಯಕ 1991 ಸಭೆಯ ಮುಂದೆ ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "1991ರ ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗೊಳಿಸುವ ವಿಧೇಯಕವನ್ನು" ಮಂಡಿಸಲು ಅನುಮತಿ ನೀಡುವುದು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಕೆ.ಜೆ. ಜಾರ್ಜ್ : (ವಸದಿ ಮತ್ತು ನಗರಾಭಿವೃದ್ಧಿ ಸಚಿವರು) ಮಾನ್ಯ ಉಪಾಧ್ಯಕ್ಷರೆ 1991 ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ 1991

ಪರ್ಯಾಲೋಚನ ಪ್ರಸ್ತಾವ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೆ 1991ರ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೆ, ಕರ್ನಾಟಕ ಭೂ ಕಂದಾಯ ವಿಧೇಯಕಕ್ಕೆ ಈವೊಂದು ಸಣ್ಣ ತಿದ್ದುಪಡಿಯನ್ನು ನಾನು ಮಂಡಿಸಿದ್ದೇನೆ. ಇದರಲ್ಲಿ ಸೆಕ್ಷನ್ -163 ಅದರ ಅನ್ವಯ ಹಿಂದೆ ಲ್ಯಾಂಡ್ ರೆವಿನ್ಯೂ ಅರಿಯರ್ಸ್ ಎಂದು ಜಮೀನನ್ನು ಮುಟ್ಟುಗೋಲು ಮಾಡಿಕೊಳ್ಳತಕ್ಕ ಒಂದು ಅಧಿಕಾರ ತಹಶೀಲ್ದಾರ್‌ರವರಿಗೆ ಇತ್ತು. 10ಸಾವಿರದ ಒಳಗೆ ಯಾರದು ಬಾಕಿ ಇರುತ್ತದೆ ಅಂತಹವರ ಜಮೀನನ್ನು ಮುಟ್ಟುಗೋಲು ಮಾಡಿಕೊಳ್ಳಬಾರದು. ಯಥಾಪ್ರಕಾರ ಲ್ಯಾಂಡ್ ರೆವಿನ್ಯೂ ಆಕ್ಟ್ ಪ್ರಕಾರ ಅದನ್ನು ರಿಕವರಿ ಮಾಡಿಕೊಳ್ಳಬೇಕು ಎನ್ನುವ ಬಗ್ಗೆ ಈ ತಿದ್ದುಪಡಿಯನ್ನು ನಾವು ತಂದಿದ್ದೇವೆ. ಇದಕ್ಕೆ ವಿರೋಧಪಕ್ಷದ ಅನೇಕ ಮಾನ್ಯ ಸದಸ್ಯರು ಸಲಹೆ ಕೊಟ್ಟಿದ್ದರು. ರೈತ ಸಂಘದವರು ಜನತಾದಳದವರು, ಭಾರತೀಯ ಜನತಾ ಪಕ್ಷದವರು ಇದರ ಬಗ್ಗೆ ಸಲಹೆ ಕೊಟ್ಟಮೇಲೆ ಮತ್ತು ಅದೇ ರೀತಿಯಲ್ಲಿ ನಮ್ಮ ಪಕ್ಷದ ಸದಸ್ಯರುಗಳು ಕೂಡ ಇಂತಹ ಒಂದು ತಿದ್ದುಪಡಿಯನ್ನು ತಂದರೆ ರೈತರಿಗೆ ಸಹಾಯವಾಗುತ್ತದೆಂದು ಹೇಳಿದ್ದರು. ಆದ್ದರಿಂದ ನಾನು ಇವತ್ತು ಈ ತಿದ್ದುಪಡಿಯನ್ನು ತಂದಿದ್ದೇನೆ. ಎಲ್ಲರೂ ಇದಕ್ಕೆ ಒಪ್ಪಿಗೆ ಕೊಡುತ್ತಾರೆಂದು ನಾನು ಭಾವಿಸಿದ್ದೇನೆ.

+ ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) : ಮಾನ್ಯ ಉಪಾಧ್ಯಕ್ಷಿಣಿಯವರೆ, ಕರ್ನಾಟಕ ಭೂ ಕಂದಾಯ ಎರಡನೆಯ ತಿದ್ದುಪಡಿ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತಾ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಇಚ್ಛಿಸುತ್ತೇನೆ. ಇದುವರೆಗೆ ಭೂಮಿಯ ಮೇಲೆ ಕಂದಾಯ ಹಾಕುತ್ತಿದ್ದರು. ಕಂದಾಯ it was a charge . ಈಗೊಂದು ತಿದ್ದುಪಡಿ ತರುವ ಮುಖಾಂತರ 10 ಸಾವಿರದವರೆಗೂ ಕಂದಾಯ ಬಾಕಿ ಇದ್ದರೂ ಅಂದರೆ, arrears of revenure, arrears whixh could be recovered...

Prof. M.D. NANJUNDA SWAMY : Any arrears which can be recovered as land revenue..

SRI M. MALLIKARJUNA KHARGE : Whatever provision is there earlier, for that we have put a rider of 10,000/

ಶ್ರೀ ಸಿ. ಬೈರೇಗೌಡ : ಇದರಲ್ಲಿ ಕಮರ್ಷಿಯಲ್ ಬ್ಯಾಂಕುಗಳು ರೈತರಿಗೆ ಸಾಲ ಕೊಟ್ಟರೆ, ನಂತರ ಅದನ್ನು ತೀರಿಸದಿದ್ದರೆ ಅದನ್ನೂ ಅರಿಯರ್ಸ್ ಆಫ್ ಲ್ಯಾಂಡ್ ರೆವಿನ್ಯೂ ಎಂದು ವಸೂಲಿ ಮಾಡಬೇಕೆಂದು ಹಿಂದೆ ಕಾನೂನು ಮಾಡಿದ್ದರು. ಅದೂ ಸಹ ಇದರಲ್ಲಿ ಸೇರಿಕೊಂಡಿದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸದಸ್ಯರು ಸೆಕ್ಷನ್ -163 ನೋಡಿದರೆ ಗೊತ್ತಾಗುತ್ತದೆ.

"The Tahsildar may declare the occupancy or alienated holding in respect of which an arrear of land revenue is due to be forfeited to the State Government and shall or otherwise dispose of the same under the provisions of Section 87, 88 and credit the proceeds, if any, to the defaulter's account."

ಮುಂದೆ ಎಲ್ಲಾ ಪ್ರೊಸೀಜರ್ ಕೂಡ ಕೊಟ್ಟಿದ್ದೇವೆ. ಅದಕ್ಕಾಗಿ ಇಲ್ಲಿ ಒಂದು ಹತ್ತು ಸಾವಿರ ಎಂದು rider ಹಾಕಿದ್ದೇವೆ.

Prof: M.D. NANJUNDASWAMY: This relates to only farmers and agricultural lands.

ಶ್ರೀ ಎಚ್. ಏಕಾಂತಯ್ಯ : ಮಾನ್ಯ ಪ್ರೊಫೆಸರ್ ಅವರು ಹೇಳಿದ ಹಾಗೆ, ಈ ಭೂಕಂದಾಯ ಏನು ವಸೂಲಾಗಬೇಕಾಗಿದೆ, ಅದರ ಒಟ್ಟು ಮೊತ್ತ ಹತ್ತು ಸಾವಿರ ರೂಪಾಯಿಗಿಂತ ಹೆಚ್ಚಿಲ್ಲದಂಥ ಸಂದರ್ಭದಲ್ಲಿ ಇದನ್ನು ಮುಟ್ಟುಗೋಲು ಹಾಕಿಕೊಳ್ಳದಿರುವುದಕ್ಕೆ ಈ ತಿದ್ದುಪಡಿ ಅವಕಾಶ ನೀಡುತ್ತದೆ. ನಾನು ಪ್ರಶ್ನೆ ಮಾಡುವುದು ಇಷ್ಟೆ. ಇದು ಕೇವಲ ಭೂಕಂದಾಯಕ್ಕೆ ಮಾತ್ರ ಅನ್ವಯವಾಗುತ್ತದೋ ಅಥವಾ Whether it is applicable to all the arrears which could be recovered as arrears of land revenue?

ಈ ಭೂಕಂದಾಯವು ಭೂಮಿಯ ಮೇಲಿನ ಪ್ರಧಾನ ಚಾರ್ಜು ಆಗಿರುವುದು ಸೆಕ್ಷನ್ 27ರ ಪ್ರಕಾರ ಇದಾದಮೇಲೆ ತಾವು ಸೆಕ್ಷನ್ 163 ಪ್ರಕಾರ ಈಗ ಏನು ವಿನಾಯಿತಿ ಕೊಟ್ಟಿದ್ದೀರಿ ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ, ಇದು ಕೇವಲ ಜಮೀನಿನ ಮೇಲೆ ಕಂದಾಯ ಏನು ಬಾಕಿ ಇದೆ. ಅದಕ್ಕೆ ಮಾನ್ಯ ಅನ್ವಯವಾಗುತ್ತದೋ ಅಥವಾ ಆ ಭೂಮಿಯನ್ನು ಹರಾಜು ಮಾಡುವುದರ ಮುಖಾಂತರ ಕೆಲವು ತೆರಿಗೆಗಳನ್ನು ವಸೂಲು ಮಾಡುತ್ತೀರಿ. Which could be recovered as arrears of land revenue ಅಂತಹ ಸಂದರ್ಭದಲ್ಲೂ ಸಹ ಈ ಸೆಕ್ಷನ್ 163ರ ಪ್ರಕಾರ ತಾವು..

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಸಭಾಧ್ಯಕ್ಷಿಣಿಯವರೇ, ಇದು ಬರೇ ಕಂದಾಯವನ್ನು ಮಾತ್ರ ಭೂಕಂದಾಯದ ರೀತಿಯಲ್ಲಿ ವಸೂಲು ಮಾಡುವಂಥ ಕಾನೂನೇನಲ್ಲ.ಅದಕ್ಕೋಸ್ಕರ ಶ್ರೀ ಏಕಾಂತಯ್ಯನವರು ಒಂದು ಸ್ಪಷ್ಟೀಕರಣ ಕೇಳುತ್ತಿರುವುದು, ಸರ್ಕಾರಿ ಸಾಲ ಇದ್ದರೂ ಕೂಡ, ಸರ್ಕಾರಿ ಸಾಲದ ಬಾಕಿಯನ್ನು ಸಹ ಭೂಕಂದಾಯದ ರೀತಿಯಲ್ಲಿ ವಸೂಲು ಮಾಡಬಹುದು ಎಂದು ತಮ್ಮ ಕಾನೂನು ಇರುವುದು ಆ ಕಾರಣ ಶ್ರೀ ಏಕಾಂತಯ್ಯನವರು ಸ್ಪಷ್ಟೀಕರಣ ಕೇಳುತ್ತಿರುವುದೂ ಇದೇನೇ . ಇಂತಹ ಬಾಕಿಗಳಿಗೂ ಈ ಕಾನೂನು ಅನ್ವಯವಾಗುತ್ತದೆಯೇ?

ಶ್ರೀ ಡಿ.ಬಿ. ಚಂದ್ರೇಗೌಡ : ಇದು ಇಷ್ಟೇ ಅಲ್ಲ. ನಿಮ್ಮ ಲೆಜಿಸ್ಲೇಟರ್ಸ್ ಹೋಮ್‌ನಲ್ಲಿ ಬಾಕಿ ಇದ್ದರೂ ಕೂಡ ಡೆಪ್ಯುಟಿ ಕಮೀಷನರ್‌ನ್ನು ಕಳಿಸಿ, ತಹಶೀಲ್ದಾರರನ್ನು ಕಳಿಸಿ it could be recovered as arrears of land revenue. ಶಾಸಕರದ್ದು ಟೆಲಿಫೋನ್ ಬಾಕಿ ಇದ್ದರೂ ಸಹ ಇದೆಲ್ಲವೂ ಈ ವ್ಯಾಪ್ತಿಯಲ್ಲಿ ಬರುತ್ತದೆ. ಆಮೇಲೆ ಕಮರ್ಶಿಯಲ್ ಬ್ಯಾಂಕ್‌ನಲ್ಲಿ ಸಾಲ ಮಾಡಿರುತ್ತೇವೆ. ಇಂಡಸ್ಟ್ರೀಸ್‌ಗೆ ಕೆಲವು ಸಲ ಭೂಮಿಯನ್ನು ಪರಭಾರೆ, ಎನ್‌ಕಂಬರೆನ್ಸ್ ನಿರ್ಮಾಣ ಆಗಿರುತ್ತದೆ. Does it cover all, well within the limit of Rs.10,000/ or pertaining only to the land revenue and the cooperative loans, water rates or agricultural operations? ಇಷ್ಟಕ್ಕೆ ಮಾತ್ರ ಸೀಮಿತವಾಗಿರುತ್ತದೆಯೋ ಅಥವಾ You please have to clarify that.

SRI M. MALLIKARJUNA KHARGE : "All Government dseu which are treated as arrears of land revenue" ಎಂದು.

ಆ ಎಲ್ಲಾ ಗವರ್ನಮೆಂಟ್ ಡ್ಯೂಸ್ ಯಾವುದು ಲ್ಯಾಂಡ್ ರೆವಿನ್ಯೂಸ್ ಅಂತ ಹೇಳಿ ನಮಗೆ ಕಳಿಸಿಕೊಡುತ್ತಾರೋ ಅದು 10 ಸಾವಿರ ಒಳಗಡೆ ಇರತಕ್ಕ ಎಲ್ಲದಕ್ಕೂ ಕೂಡ ಅನ್ವಯಿಸುತ್ತದೆ. ಅಂಥಾದ್ದಕ್ಕೆ ಲ್ಯಾಂಡ್ ರೆವಿನ್ಯೂ ಆಕ್ಟ್‌ನ ಕೆಳಗೆ ನಾವು ಪ್ರೊಸೀಡ್ ಆಗಬೇಕೇ ಹೊರತಾಗಿ forfeiture ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಿದ್ದೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಸರ್ಕಾರದವರು ಬಹಳ ಅವಸರವಾಗಿ ಈ ತಿದ್ದುಪಡಿಯನ್ನು ತಂದಿದ್ದಾರೆ ಇಲ್ಲಿ ಉದ್ದೇಶ ಇದ್ದದ್ದು ರೈತರ ಜಮೀನನ್ನು ಅವರ ಬಾಕಿ ಎಷ್ಟೇ ಕಡಿಮೆ ಇದ್ದರೂ ಇಡೀ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳುವಂಥ ಒಂದು ಕಾನೂನಿನ ವಿರುದ್ಧ ನಾವು ಕೇಳಿದ್ದರಿಂದ ಈ ತಿದ್ದುಪಡಿಯನ್ನು ತಂದಿರುವುದು.

ಇಲ್ಲಿ ಏಕೆ ಅವಸರ ಮಾಡಿದ್ದಾರೆ ಎಂದರೆ, ಬರೀ 163ನೇ ಸೆಕ್ಷನ್ ಲ್ಯಾಂಡ್ ರೆವಿನ್ಯೂ ಆಕ್ಟ್‌ನ್ನು ತಿದ್ದುಪಡಿ ಮಾಡುವಂಥ ಒಂದು ಪ್ರಯತ್ನ ಮಾಡುತ್ತಿದ್ದಾರೆ. ಈ ತಿದ್ದುಪಡಿ 161ನೇ ಸೆಕ್ಷನ್‌ನಿಂದ ಪ್ರಾರಂಭ ಆಗಬೇಕು. ನಾನು ಅದನ್ನು ಓದುತ್ತೇನೆ- Section 161 Land Revenue Act : The Title is 'Process for recovery of Arrears'.

"An arrear of land revenue, may after serving a written notice of demand on the defaulter under Section 162, be recovered by any one or more of the following Processes viz.,"

"(i) by forfoiture of the occupancy or alienated holding in respect of which the arrears is due under Scetion 163.

ಇಲ್ಲಿ ತಿದ್ದುಪಡಿ ಪ್ರಾರಂಭವಾಗಬೇಕು. ಜಮೀನನ್ನು ಸರ್ಕಾರಿ ಪಡಾ ಎಂದು ಬರೆಯುವಂಥ ಪದ್ಧತಿ ಹೋಗಬೇಕು. ಸೆಕ್ಷನ್ 163 ರಲ್ಲಿ ಇವರು ತಿದ್ದುಪಡಿ ಮಾಡುವುದಕ್ಕೆ ಹೊರಟಿರುವುದು as for as ಜಮೀನನ್ನು ಅದಿಭೋಗ ಅಥವಾ ಪರಭಾರ್ ಮಡಲಾದ ಹಿಡುವಳಿಯನ್ನು ರಾಜ್ಯಸರ್ಕಾರಕ್ಕೆ ಮುಟ್ಟುಗೋಲು ಹಾಕುವ ಅಗತ್ಯವಿಲ್ಲವೆಂದು ಪರಿಗಣಿಸಿರುವುದರಿಂದ ಎಂದು ಅಬ್ಜೆಕ್ಟ್‌ನಲ್ಲಿ ಹೇಳಿದ್ದಾರೆ. ಆ ಕಾರಣ, ಇದು ಇನ್ನೂ ಸ್ಪಷ್ಟೀಕರಣ ಆಗಬೇಕು. ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳುವುದರ ವಿರುದ್ಧ ಮಾಡಿರತಕ್ಕ ತಿದ್ದುಪಡಿಯೋ ಅಥವಾ ನಮ್ಮ ಸ್ನೇಹಿತರು ಹೇಳಿದಹಾಗೆ ಎಲ್ಲಾ ಬಾಕಿಗಳಿಗೂ ಅನ್ವಯಿಸುತ್ತದೆಯೇ ಎಂದು ಇದನ್ನು ಸ್ಪಷ್ಟೀಕರಣ ಮಾಡಬೇಕು. ಆ ಕಾರಣ ಈ ತಿದ್ದುಪಡಿ ಬಗ್ಗೆ ಹೇಳಬೇಕೆಂದರೆ the entire drafting itself, I think, has been made in a hurry or without giving much thought to it.

ಶ್ರೀ ಹೆಚ್. ಏಕಾಂತಯ್ಯ : ಸಭಾಧ್ಯಕ್ಷಿಣಿಯವರೇ ನಾನು ಪ್ರಸ್ತಾಪ ಮಾಡುವುದೇನೆಂದರೆ Arrears of land revenue is quite diffirent and there are arrears which could be recovered as arrears of land revenue. ಉದಾಹರಣೆಗೆ ಸಹಕಾರ ಸಂಘದ ಸಾಲ ಇದ್ದರೂ ಸಹ ಅದನ್ನು ಡಿ.ಸಿ.ಯವರಿಗೆ ಸರ್ಟಿಫಿಕೇಟ್ ಕೊಟ್ಟು it could be reated as an arrears of land revenue and it could be recovered.

ಅದೇರೀತಿ ಒಂದು ಪಕ್ಷ ಸೇಲ್ಸ್‌ಟ್ಯಾಕ್ಸ್ ಕೊಡದಿದ್ದರೆ, ರೈತನೇ ಮಾತ್ರವಲ್ಲ, ಸೇಲ್ಸ್ ಕೊಡತಕ್ಕ ಒಬ್ಬ ವ್ಯಾಪಾರಿ, ಸೇಲ್ಸ್ ಟ್ಯಾಕ್ಸ್ ಕೊಡದಿದ್ದರೆ ಆತನಿಗೆ ಭೂಮಿ ಇದ್ದರೆ ಆ ಭೂಮಿಯನ್ನು ಸಹ ಹರಾಜು ಮಾಡುವ ಮುಖಾಂತರ ಅದನ್ನು ಭೂ ಕಂದಾಯದ ಬಾಕಿ ಎಂದು ತೀರ್ಮಾನ ಮಾಡಿ ಅದನ್ನೂ ಸಹ ರಿಕವರಿ ಮಾಡುವುದಕ್ಕೆ ಅವಕಾಶ ಇದೆ. ಆದ್ದರಿಂದ ಮಾನ್ಯ ಸಚಿವರಿಂದ ನಾನು ಬಯಸುವುದೇನೆಂದರೆ ಸೆಕ್ಷನ್ 187 ಮತ್ತು ಸೆಕ್ಷನ್ 163 ರಲ್ಲಿ ಏನು ತಾವು ಲ್ಯಾಂಡ್ ರೆವಿನ್ಯೂ ಎಂದು ಹೇಳಿದ್ದೀರಿ ಇದು ಲ್ಯಾಂಡ್ ರೆವಿನ್ಯೂ ಎಂದು ಹೇಳುವುದು. ಆ ಭೂಮಿಯಿಂದ ಸರ್ಕಾರಕ್ಕೆ ಬರಬೇಕಾದ ಕಂದಾಯದ ಬಾಕಿ ಮಾತ್ರ ಆಗುತ್ತದೆಯೇ ಹೊರತು, ಬೇರೆ ತಾವು ಹೇಳುವಂತ ಎಲ್ಲಾ ವಿವರಗಳೂ ಇದರಲ್ಲಿ ಸೇರುತ್ತವೆಯೇ ಹೇಗೆ ಎಂಬ ಬಗ್ಗೆ ವಿವರಣೆ ಬಾಕಾಗುತ್ತದೆ. ಇಲ್ಲಿ ಮುಖ್ಯವಾಗಿ ಇದು ಕೇವಲ ಭೂಕಂದಾಯ ಏನಿದೆ ರಿಕವರಿ ಮಾಡುವುದಕ್ಕೆ 10 ಸಾವಿರದ ಒಳಗಡೆ ಇದ್ದಾಗ ಮಾತ್ರ ಮುಟ್ಟುಗೋಲು ಮಾಡಿಕೊಳ್ಳಬಾರದು ಎಂದು ಈ ಕಾನೂನನ್ನು ತಿದ್ದುಪಡಿ ಮಾಡುತ್ತಿದ್ದೀರೇ ಹೊರತು ಬೇರೆ ವಿಧವಾದ ಅಂದರೆ ಪ್ರೊ ನಂಜುಂಡಸ್ವಾಮಿಯವರು ಹೇಳಿದಹಾಗೆ ಮಾನ್ಯ ಬೈರೋಗೌಡರು ಹೇಳಿದಹಾಗೆ ಎಲ್ಲಾ ಪ್ರಕರಣಗಳಿಗೂ ಇದು ಅನ್ವಯವಾಗುವ ರೀತಿಯಲ್ಲಿ ಇವತ್ತಿನದಿವಸ ಈ ತಿದ್ದುಪಡಿ ಉದ್ದೇಶ ಇಲ್ಲ ಎಂದು ನನ್ನ ಭಾವನೆ. ಇದರ ಬಗ್ಗೆ ಸರ್ಕಾರ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಮತ್ತು ನಮ್ಮ ಉದ್ದೇಶವನ್ನು ಈಡೇರಿಸುವುದಕ್ಕೆ ಬೇಕಾದ ತಿದ್ದುಪಡಿಯನ್ನು ಪ್ರಸ್ತಾವನೆ ಮಾಡಬೇಕಾಗುತ್ತದೆ.

ಆದ್ದರಿಂದ 10ಸಾವಿರ ರೂಪಾಯಿಗಳವರೆಗೆ ಕಂದಾಯ ಯಾರದ್ದೂ ಬಾಕಿ ಇರುವುದಿಲ್ಲ ಕೇವಲ 2-3-10ರೂಪಾಯಿ ಇರಬಹುದು. 10ಸಾವಿರ ಯಾವಾಗ ಆಗುವುದಕ್ಕೆ ಸಾಧ್ಯವಿದೆ ಎಂದು ನಾನು ಕೇಳುತ್ತಿದ್ದೇನೆ. ವಾಟರ್ ರೇಟ್ ಕೂಡ ಇದರಲ್ಲಿ ಸೇರುತ್ತದೆಯೇ?

ಶ್ರೀ ಸಿ. ಬೈರೇಗೌಡ : ನಾನು ತಿಳಿದುಕೊಂಡಿರುವಮಟ್ಟಿಗೆ ಇನ್ನೊಂದು ಸೆಕ್ಷನ್ ಪ್ರಕಾರ arrears of land revenue ಎಂದು ಟ್ರೀಟ್ ಮಾಡಬೇಕು. ಅದಾದಮೇಲೆ ಈ ಸೆಕ್ಷನ್ ಅನ್ವಯವಾಗುತ್ತದೆಂದು ನಾನು ತಿಳಿದುಕೊಂಡಿರುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ನಾವು ತಿಳಿದುಕೊಂಡಿರುವುದು ಬೇಡ. ಈ ಲ್ಯಾಂಡ್ ರೆವಿನ್ಯೂ ತಿದ್ದುಪಡಿ ಆಕ್ಟ್ ಏನಿದೆ. ಇದರ ಮುಖಾಂತರ They will not come under this Act. All the arrears which could be treated as arrears of land revenue could be recovered under different laws.

ವಾಟರ್ ರೇಟ್ Act ಇದೆ. ಇದನ್ನು ಹೇಗೆ ರಿಕವರಿ ಮಾಡಬಹುದೆಂದು ಇದೆ. ಅದು ಇದರಲ್ಲಿ ಬರುತ್ತದೆಯೇ? ಸೇಲ್ಸ್‌ಟ್ಯಾಕ್ಸ್ ಆಕ್ಟ್ ಅದೇರೀತಿ ಕೋ ಅಪರೇಟಿವ್ ಸೊಸೈಟೀಸ್ ಆಕ್ಟ್ ಇದೆ. ಹೀಗೆ ಬೇರೆ ಬೇರೆ ಕಾನೂನುಗಳ ಅಡಿಯಲ್ಲಿ ಸರ್ಕಾರಕ್ಕೆ ಬರಬೇಕಾದ ಬಾಕಿ ಏನಿದೆ ಅಥವಾ ಸರ್ಕಾರದ ಸಂಘಗಳಿಗೆ ಬರಬೇಕಾದ ಬಾಕಿ ಏನಿದೆ ಅದನ್ನೂ ಸಹ ಕಂದಾಯ ಬಾಕಿ ಎಂದು ಪರಗಣಿಸಿ ವಸೂಲ್ಮಾಡುವುದಕ್ಕೆ ಅಧಿಕಾರ ಇದೆಯೇ? ಇಂತಹ ಎಲ್ಲಾ ಬಾಕಿಗಳೂ ಇದು ಅನ್ವಯವಾಗುತ್ತದೆಯೇ ಇಲ್ಲವೇ ಎಂಬ ಪ್ರಶ್ನೆ ಇದೆ. ಈ ಕಾನೂನು ತಿದ್ದುಪಡಿ ಏನು ತಂದಿದ್ದೀರಿ ಇದು ನನ್ನ ಪ್ರಕಾರ ಹೇಳುವುದಾದರೆ ಅಂತಹ ಯಾವುದೇ ಬಾಕಿಗಳಿಗೆ ಇದು ಅನ್ವಯವಾಗುವುದಿಲ್ಲ, ಇದು ಕೇವಲ ಭೂಮಿಗೆ ಸಂಬಂಧಪಟ್ಟಂತೆ ಭೂ ಕಂದಾಯ ಏನು ನಿಗದಿ ಮಾಡಿದ್ದೀರಿ, ಅಂತಹ ಭೂಕಂದಾಯ 10 ಸಾವಿರ ರೂಪಾಯಿ ಮೀರದೆ ಇದ್ದಂಥ ಸಂದರ್ಭದಲ್ಲಿ ಅದನ್ನು ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬ ಮಾತನ್ನು ಮಾತ್ರ ಹೇಳಿದ್ದೀರಿ. ಯಾವ ಉದ್ದೇಶದಿಂದ ಈ ತಿದ್ದುಪಡಿಯನ್ನು ತರಬೇಕೆಂದು ರೈತಸಂಘದ ಪದಾಧಿಕಾರಿಗಳಾಗಲೀ ಅಥವಾ ರೈತಸಂಘದ ಮತ್ತು ರೈತರ ಬೇಡಿಕೆ ಏನಿತ್ತು ಆ ಬೇಡಿಕೆಯನ್ನು ಪೂರ್ಣವಾಗಿ ಈಡೇರಿಸಿದಂತಾಗುವುದಿಲ್ಲ.

ಅದಕ್ಕೆ ಬದಲಾಗಿ not even a fraction.

ಶೇಕಡ 1ರಷ್ಟು ಸಹ ಇವತ್ತಿನ ದಿವಸ ರೈತರಿಗೆ ಅನುಕೂಲವಾಗುತ್ತಿಲ್ಲ. ಆದುದರಿಂದ ಇದರ ಬಗ್ಗೆ ಸರಕಾರ ಚಿಂತನೆ ಮಾಡಬೇಕು. ನಾನು ತಮ್ಮನ್ನು ಕೇಳುವುದು ಇಷ್ಟೇ? ನಿರ್ದಿಷ್ಟವಾಗಿ ಹೇಳಿ ನಿಮ್ಮ ನೀತಿ ಏನು? ನಿಮ್ಮ ನೀತಿ ಕೇವಲ ಭೂಕಂದಾಯವನ್ನು ಮಾತ್ರ ಇದರ ವ್ಯಾಪ್ತಿಗೆ ತರುತ್ತೇವೆ ಎಂದು ಮಾಡಿದ್ದೀರಾ ಅಥವಾ ಭೂ ದಾಯ ಎಂದು ರಿಕವರಿ ಮಾಡಬೇಕಾದ ಎಲ್ಲಾ ಸಾಲಗಳೂ ಈ ಆಕ್ಟ್‌ನಲ್ಲಿ ತರುತ್ತೇವೆ. ಅಂತಹ ಎಲ್ಲಾ ಸಾಲಗಳು ಹತ್ತು ಸಾವಿರಕ್ಕೆ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳುವುದಿಲ್ಲ ಎನ್ನುವುದಾದರೆ ಆ ಮಾತನ್ನು ಮಾನ್ಯ ಕಂದಾಯ ಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು. ಆದುದರಿಂದ ಇದರ ಬಗ್ಗೆ ಹೆಚ್ಚು ಮಾತನಾಡುವ ಅವಶ್ಯಕತೆ ಇಲ್ಲ ಎಂದು ಭಾವಿಸಿದ್ದೇನೆ. ನಿಮ್ಮ ಉದ್ದೇಶ ನಿಜವಾಗಿ ಏನಿದೆ ಒಳ್ಳೆಯದಾದರೂ ಸಹ ಪೂರ್ಣವಾಗಿ ಎಲ್ಲಾ ರೈತರಿಗೂ ಉಪಯೋಗ ಆಗದಿರುವುದರಿಂದ ಈ ಕಾನೂನನ್ನು ವಾಪಸ್ ತೆಗೆದುಕೊಂಡು ಸೂಕ್ತವಾದ ತಿದ್ದುಪಡಿಯನ್ನು ತಂದು ಇದರ ಬಗ್ಗೆ ತಮ್ಮ ಸಹಕಾರದ ನೀತಿ ಏನಿದೆ ಅದನ್ನು ಜಾರಿಗೊಳಿಸುವುದಕ್ಕೆ ಬೇಕಾದ ರೀತಿಯಲ್ಲಿ ತಿದ್ದುಪಡಿಯನ್ನು ತರಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಪ್ರೊ ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಂಮಾಂತರ) : ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಇದರ ಉದ್ದೇಶಗಳು ಎನ್ನುವುದರಲ್ಲಿ ಭೂಕಂದಾಯ ಬಾಕಿಯ 10ಸಾವಿರ

ರೂಪಾಯಿಗಳನ್ನು ಮೀರದ ಯೋವುದೇ ಅಧಿಬೋಗ ಮಾಡಲಾದ ಹಿಡುವಳಿಯನ್ನು ರಾಜ್ಯ ಸರಕಾರಕ್ಕೆ ಮುಟ್ಟುಗೋಲು ಹಾಕುವ ಅಗತ್ಯ ಇಲ್ಲ ಎಂದು ಪರಿಗಣಿಸಿರುವುದರಿಂದ ಎಂದು ಬರೆದಿರುತ್ತಾರೆ. ಯಾವ ಕಾರಣದಿಂದ ಇವರು ಅಗತ್ಯ ಇಲ್ಲ ಎಂದು ಪರಿಗಣಿಸುತ್ತಿದ್ದಾರೆ ಎಂಬುದನ್ನು ಸ್ಪಷ್ಟ ಪಡಿಸಿಲ್ಲ. ಮತ್ತೆ ಈ ಸರಕಾರದ ಆಲೋಚನಾ ಕ್ರಮಗದಲ್ಲಿ ದೋಷ ಇದೆ ಎನ್ನುವುದಕ್ಕೆ ಈಗ ಮೂರು ದಿವಸದ ಹಿಂದೆ ಇವರು ಒಂದು ಪ್ರಕಟಣೆ ಮಾಡಿದರು. ಮಂತ್ರಿಮಂಡಲದ ಸಭೆ ಸಹಕಾರಿ ಕಾನೂನಿನ ಸೆಕ್ಷನ್ 101 (ಸಿ)ಯನ್ನು ರದ್ದು ಮಾಡುವಂತಹ ತಿರ್ಮಾನ ತೆಗೆದುಕೊಂಡಿತು ಸಹಕಾರಿ ಕಾನೂನಿನ 101 (ಸಿ) ಅದರಿಂದ ಏನು ಪರಿಣಾಮಗಳು ಆಗುತ್ತಿದ್ದವು ಅದೇ ಪರಿಣಾಮವನ್ನು ಇಲ್ಲಿ ಕಂದಾಯ ಕಾನೂನು 161ಮತ್ತು 163ನೇ ಸೆಕ್ಷನ್‌ಗಳು ಮಾಡುತ್ತಿವೆ ಸಹಕಾರ ಕಾನೂನಿನ 101 (ಸಿ) ಕೂಡಾ ಸಹಕಾರಿ ಕಾನೂನಿನಲ್ಲಿ ಹಿಂದೆ ಇಲ್ಲದಿರುವಂತಹ ಅಧಿಕಾರವನ್ನು ಹಿಂದಿನ ಸರಕಾರ ಸಹಕಾರಿ ಕಾನೂನಿಗೆ ತಂದುಕೊಟ್ಟಿತು. ರೈತನ ಸಹಕಾರಿ ಸಾಲ ಎಷ್ಟೇ ಕಡಿಮೆ ಮೊತ್ತದ್ದೇ ಇರಲಿ ಅವನ ಇಡೀ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳುವಂತಹ ಒಂದು ಕರಾಳ ಶಾಸನವನ್ನು ಹಿಂದಿನ ಸರಕಾರ ಮಾಡಿತ್ತು. 161 ಮತ್ತು 163ನೇ ಸೆಕ್ಷನ್ ಭೂ ಕಂದಾಯ ಕಾಯಿದೆ ಇದು ಹಿಂದಿನ ಬ್ರಿಟೀಷ್ ಆಡಳಿತದಲ್ಲಿ ಮಾಡಿದ ಕಾನೂನು ಇದು ಬ್ರಿಟೀಷರು ಈ ದೇಶದಲ್ಲಿದ್ದಾಗ ಮಾಡಿದಂಥ ಕಾನೂನು. This takes away the entire occupancy of the entire holding even for a paltry sum of money that is due to the Government which directly violates Article 21 of the Constitution. ನನ್ನದು ಐದುನೂರು ರೂಪಾಯಿ ಆರುನೂರು ರೂಪಾಯಿ ಇರಲಿ ನನ್ನ ಇಡೀ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಸರಕಾರಿ ಪರ ಎಂದು ಬರೆದುಕೊಳ್ಳುವುದು ಆದರಿಂದಾಗುವ ಪರಿಣಾಮ ಏನು? ನನ್ನ ಸಂಪೂರ್ಣ ಜೀವನದ ವ್ಯವಹಾರ ನಿಂತು ಹೋಗುತ್ತದೆ. I demand this Government to justify the continuance of this law after we adoprted a democratic constitution. ಇದು ನನ್ನ ಮೊದಲನೇಯ ವಿರೋಧ ಎರಡನೇಯ ವಿರೋಧ 10 ಸಾವಿರ ರೂಪಾಯಿವರೆಗಿನ ಬಾಕಿ ಇದ್ದರೆ 10 ಸಾವಿರಕ್ಕಿಂತ ಕಡಿಮೆ ಇದ್ದರೆ ಅದನ್ನು ಮುಟ್ಟುಗೋಲು ಹಾಕಿಕೊಳ್ಳುವುದಿಲ್ಲ 10 ಸಾವಿರಕ್ಕಿಂತ ಜಾಸ್ತಿ ಇದ್ದರೆ ಮುಟ್ಟುಗೋಲು ಹಾಕಿಕೊಳ್ಳುತ್ತೀರಿ. ಈ ಲ್ಯಾಂಡ್ ರೆವಿನ್ಯೂ ಆಕ್ಟ್ ಮೂಲತಃ ನಮ್ಮ ದೇಶದ ಪ್ರೊಸಿಜರ್ ಎಂದು ಏನು ಹೇಳುತ್ತೇವೆ ಸಿವಿಲ್ ಪ್ರೋಸಿಜರ್ ಕೊಡ್‌ಗೆ ತದ್ವಿರುದ್ಧವಾಗಿರತಕ್ಕಂಥ ಕಾನೂನು ಇದು. Karnatak Land revenue Act is in direct contradicition with the Civil Procedure Code. ಅದರಲ್ಲಿರುವ ಪ್ರೊಸೀಜರ್ ಪ್ರಕಾರ This is a highbreed of British Jurisprudence and Indian Jurisprudence and I would call it a product of Anglo-Indian Jurisprudence.ಮಾನ್ಯ ಅಧ್ಯಕ್ಷಣಿಯವರೇ ತಾವು ಲ್ಯಾಂಡ್ ರವಿನ್ಯೂ ಆಕ್ಟ್‌ನ ಪುಸ್ತಕ ತೆಗೆದು ನೋಡಬೇಕು. 164ನೇ ಸೆಕ್ಷನ್‌ನಿಂದ ಸಿವಿಲ್ ಪ್ರೊಸೀಜರ್ ಕೋಡ್‌ನ ಕಾನೂನುಗಳು ಏನಿವೆ ಅವು ಪ್ರಾರಂಭವಾಗುತ್ತವೆ. ಈ ದೇಶದ ಬೇರೆ ಎಲ್ಲಾ ಪ್ರಜೆಗಳಿಗೂ ಏನೆಲ್ಲಾ ಅನ್ವಯವಾಗುತ್ತದೆ ಬಾಕಿ ಇದ್ದರೆ ಆ ಬಾಕಿಯನ್ನು ಯಾವ ರೀತಿ ವಸೂಲು ಮಾಡಬೇಕೆನ್ನುವ ಸಿವಿಲ್ ಪ್ರೊಸೀಜರ್ ಕೋಡ್‌ನಲ್ಲಿದೆ ಆ ಕಾನೂನು ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ಕೂಡ ಇದೆ. ಅದು ಪ್ರಾರಂಭ ಆಗುವುದು 164 ನೇ ಸೆಕ್ಷನ್‌ನಿಂದ. 164ನೇ ಸೆಕ್ಷನ್ ಏನನ್ನು ಹೇಳುತ್ತದೆಂದರೆ Attachment and sale of movable property Section 161 says 'Attachment and sale of immovable property ' Section 166 says 'Attachment how to be made?'ಹಾಗೆ ಬರುತ್ತಾ ಸಿವಿಲ್ ಪ್ರೊಸೀಜರ್ ಕೊಡ್ ಯಾವ ರೀತಿ ಬೇರೆ ಪ್ರಜೆಗಳಿಗೆ ಅನ್ವಯವಾಗುತ್ತದೆ. ಅದೇ ರೀತಿಯಲ್ಲಿ ಈ ರೈತರಿಗೂ ಅನ್ವಯವಾಗುವಂತಹ ಒಂದು ಸೆಕ್ಷನ್ ಇದೆ ಅದನ್ನು ಮಾನ್ಯ ಕಂದಾಯ ಮಂತ್ರಿಗಳು ನೋಡಬೇಕು. ಸೆಕ್ಷನ್ 173

Which falls in line with the Constitution of India. Section 173 says 'Sale not to be excessivel : The property to be sold, movable or immovable under the provisions of this chapter, shall, as far as may be practicable, be proportionate to the amount of the Land Revenue to be recovered and the expenses of attachment and sale. ಮುಟ್ಟುಗೋಲು ಹಾಕಿಕೊಳ್ಳತಕ್ಕಂಥ ಆಸ್ತಿ ಅದಷ್ಟು ಎಷ್ಟು ಬಾಕಿ ಇದೆಯೋ ಅದಕ್ಕೆ ಸಮನಾಗಿರಬೇಕು. This is the protection given to all citizens under the civil Procedure Code. But, Sections 161 and 163 of the Land Revenue Act take away all my properties -the entire property I have. ಇಲ್ಲಿ ನಾವು ಅಂದರೆ ರೈತರ ಸರ್ಕಾರವನ್ನು ಒತ್ತಾಯ ಮಾಡಿದ್ದುದು attachment must also be as far as possible be equivalent to the money that is due.ಲ್ಯಾಂಡ್ ರೆವಿನ್ಯೂ ಆಕ್ಟ್‌ನ್ನು ಸಂವಿಧಾನಕ್ಕೆ ತಕ್ಕ ಹಾಗೆ ತರಬೇಕೆನ್ನುವ ಆಸೆ ನಿಮಗಿದ್ದರೆ 173ನೇ ಸೆಕ್ಷನ್ 'Sale not to be excessive' ಅಂತ ಏನಿದೆ, ಅದೇ ಪರಿಣಾಮ ಮಾಡತಕ್ಕಂಥ ಒಂದು ತಿದ್ದುಪಡಿಯನ್ನು ಲ್ಯಾಂಡ್ ರೆವಿನ್ಯೂ ಆಕ್ಟ್‌ಗೆ ತರಬೇಕು. Attachment must not also be excessive ಈಗ ನೀವು ತಂದಿರುವ ಅಮೆಂಡ್‌ಮೆಂಟ್‌ನಲ್ಲಿ ಸೆಕ್ಷನ್ 161 ರಲ್ಲಿ ಏನು ಮಾಡಿದ್ದೀರಿ? Forfeiture of the entire occupancy, even after passing this amendment, continues in Karnataka. Forfeiture of occupancy will continue even after we accept this amendment.ಈ ಕಾರಣದಿಂದ ಈ ಅಮೆಂಡ್‌ಮೆಂಟನ್ನು ನಮ್ಮ ಒತ್ತಾಯದ ಮೇಲೆ ತಾವು ತಂದ್ದಿದ್ದರೂ ಸಹ ನಾನು ಇದನ್ನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆ. ತಾವು ದಯವಿಟ್ಟು ಇದನ್ನು ವಾಪಸ್ ತೆಗೆದುಕೊಳ್ಳಬೇಕು. ಮತ್ತು You can draft it and bring it back to the Legislature.

+ ಶ್ರೀ ಬೈರೇಗೌಡ (ವೇಮಗಲ್) : ಮಾನ್ಯ ಉಪಾಧ್ಯಕ್ಷಣೆಯವರೆ ಈ ತರಹದ ತಿದ್ದುಪಡಿಯನ್ನು ತರಬೇಕೆನ್ನತಕ್ಕಂಥದರ ಬಗ್ಗೆ ರೈತರು ಸಂಘಟನೆ ಮಾಡಿರತಕ್ಕಂಥ ಎಲ್ಲಾ ಸಂಘಟನೆಗಳಿಂದ ಒತ್ತಾಯ ಇದೆ. ರೈತರಿಂದಲೂ ಕೂಡಾ ಒತ್ತಾಯ ಇದೆ. ಆದರೆ ಈಗ ತಂದಿರತಕ್ಕ ತಿದ್ದುಪಡಿ ಹೇಗಿದೆ ಅಂದರೆ ನಾನು ವಕೀಲ ಅಲ್ಲದಿದ್ದರೂ ಸಹಾ ನಾನೊಬ್ಬ ಸಾಮಾನ್ಯ ರೈತನಾಗಿ ನನ್ನ ದೃಷ್ಟಿಯಲ್ಲಿ ಹೇಳಬೇಕಾಗಿದ್ದರೆ ನಮ್ಮ ಒತ್ತಾಯ ಏನಿತ್ತು? ಆ ಒತ್ತಾಯವನ್ನು ಸ್ವಲ್ಪವಾದರೂ ಮುಟ್ಟತಕ್ಕಂಥ ಪ್ರಯತ್ನ ಇಲ್ಲಿ ನಡೆದಲ್ಲಿ ನಾವು ವಸಾಹತುಷಾಹಿಯಿಂದ ಬಳುವಳಿಯಾಗಿ ಪಡೆದಿರತಕ್ಕಂಥ ಅನೇಕ ಕಾನೂನುಗಳ ಪೈಕಿ ಇದೂ ಕೂಡಾ ಒಂದು ಕಾನೂನು. ಹಿಂದೆಯಿಂದಲು ನಮ್ಮದು ವ್ಯವಸಾಯ ಪ್ರಧಾನವಾದ ದೇಶ. ಈ ವ್ಯವಸಾಯ ಪ್ರಧಾನವಾದ ದೇಶದಲ್ಲಿ ಭೂಮಿಯೇ ಮುಖ್ಯ ಉತ್ಪತ್ತಿ ಸಾಧನ ಅದರ ಮೇಲೆ ಆಗ ಇದ್ದಂಥ ಸರ್ಕಾರ ಅಥವಾ ಹಿಂದೆ ಇದ್ದಂಥ ಬ್ರಿಟೀಷರು ಈ ಭೂಮಿ ಮೇಲೆ ಕಣ್ಣಿಟ್ಟು ಮಾಡಿದ್ದರು. ಆಗಿನ ಕಾಲಕ್ಕೆ ಅದು ಸರಿ ಇರಬಹುದು. ಆದರೆ ಈಗ ಈ ದೇಶದಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಈಗ ಉತ್ಪಾದನೆ ವ್ಯವಸಾಯ ರಂಗದಲ್ಲೂ ನಡೆಯುತ್ತಿದೆ. ಕೈಗಾರಿಗಾ ರಂಗದಲ್ಲೂ ಕೂಡಾ ನಡೆಯುತ್ತಿದೆ. ಆದರೆ, ಈ ರೀತಿಯಾದಂಥ Draconian laws. ಎಂದು ಏನು ಕರೆಯುತ್ತೇವೆ ಅವು ಕೇವಲ ವ್ಯವಸಾಯಕ್ಕೆ ಸಂಭಂಧಪಟ್ಟಂಥ ಭೂಮಿ ಅಥವಾ ವ್ಯವಸಾಯಕ್ಕೆ ಸಂಬಂಧಿಸಿದ್ದಕ್ಕೆ ಮಾತ್ರ ಈ ರೀತಿಯಾದ ಕಾನೂನುಗಳು ಇರುತ್ತವೆ. ಈಗ ಉದಾಹರಣೆಗಾಗಿ ಕೋಟ್ಯಾಂತರ ರೂಪಾಯಿಗಳನ್ನು ದೊಡ್ಡ ದೊಡ್ಡ ಕಾರ್ಖಾನೆ ಮಾಲೀಕರು ಸಾಲವನ್ನು ಪಡೆದಿದ್ದಾರೆ. ಕೋಟಿ ಕೋಟಿಗಟ್ಟಲೆ ಹಣವನ್ನು ಇವತ್ತಿನ ದಿವಸ ಎಲ್ಲಾ ಬ್ಯಾಂಕುಗಳಿಂದಲೂ ಕೂಡಾ ಸಾಲ ಪಡೆಯುತ್ತಿದ್ದಾರೆ. ಇವರು ಸಾಲ ಪಡೆಯದೇ ಇರತಕ್ಕಂಥ ಉದ್ಯಮಗಳೇ ಇಲ್ಲ, ಅನೇಕ ಖಾಸಗಿ ರಂಗದಲ್ಲಿರತಕ್ಕಂಥ ಕಾರ್ಖಾನೆ ಗಳವರು ಕೇವಲ ಇಲ್ಲಿರತಕ್ಕಂಥ ಸಾಲ ಸೌಲಭ್ಯಗಳನ್ನು ಉಪಯೋಗಿಸಿ ಕೊಳ್ಳುವು

ದಕ್ಕೋಸ್ಕರ ಕಾರ್ಖಾನೆಗಳನ್ನು ತೆಗೆಯುತ್ತಾರೆ. ನಂತರ ಅವರೇ ನಷ್ಟ ಮಾಡುತ್ತಾರೆ. ಆಗ ಅವರಿಗೆ ಸರ್ಕಾರದಿಂದ ಅನೇಕ ರಿಯೀಯಿತಿಗಳು ದೊರೆಯುತ್ತವೆ. ಮತ್ತೆ ಇನ್‌ಸೆಂಟೀವ್ ಕೂಡಾ ದೊರೆಯುತ್ತದೆ. ಕಾರ್ಖಾನೆಗಳನ್ನು ಪ್ರಾರಂಭ ಮಾಡುವುದು ಏತಕ್ಕೋಸ್ಕರವೆಂದರೆ, ಇವೆಲ್ಲಾ ಸೌಲಭ್ಯ ಪಡೆಯುವುದಕ್ಕೋಸ್ಕರ, ಇವೆಲ್ಲಾ ಪಡೆದಾದ ಮೇಲೆ ಒಂದು ದಿವಸ ಇದ್ದಕಿದ್ದ ಹಾಗೆ ಬಾಗಿಲು ಹಾಕುತ್ತಾರೆ. ಇದರಿಂದ ಕೋಟ್ಯಾಂತರ ರೂಪಾಯಿ ಹಣ ಹೋಗುತ್ತದೆ. ಆ ತರಹ ಹಣ ವ್ಯವಸಾಯರಂಗದಲ್ಲಿ ಕೇವಲ ಸ್ವಲ್ಪ ಇರಬಹುದು. ಮಹಾ ಜಾಸ್ತಿ ಎಂದರೆ 50 ಸಾವಿರ 60 ಸಾವಿರ 1 ಲಕ್ಷ ಇರಬಹುದು. ಅದಕ್ಕಿಂತ ಹೆಚ್ಚು ಹಣ ವ್ಯವಸಾಯರಂಗದಲ್ಲಿ ರೈತರಿಂದ ಬಾಕಿ ಬರಬೇಕಾದ ಸಂದರ್ಭಗಳು ಬಹಳ ಕಡಿಮೆ. ಆದರೆ. ಕೈಗಾರಿಕಾ ರಂಗದಲ್ಲಿ ಬರಬೇಕಾಗಿರತಕ್ಕಂಥ ಹಣ ಏನಿದೆ ಅದು ಹತ್ತಾರು ಕೋಟಿ ರೂಪಾಯಿಗಳು ಕೆಲವು ಸಂದರ್ಭಗಳಲ್ಲಿ ಅದು ನೂರಾರು ಕೋಟಿ ರೂಪಾಯಿಗಳೂ ಇದ್ದರೂ ಇರಬಹುದು. ಆದರೆ ಈ ರಿತಿಯಾದಂಥ ಕಾನೂನನ್ನು ತಂದು ಆ ಹಣವನ್ನು ವಸೂಲಿ ಮಾಡತಕ್ಕಂಥಾದ್ದಕ್ಕೆ ನಮ್ಮಲ್ಲಿ ಸಾಧನ ಇಲ್ಲ. ಆದರೆ ವ್ಯವಸಾಯ ರಂಗದಲ್ಲಿ ಮಾತ್ರ ವ್ಯವಸಾಯ ಅಭಿವೃದ್ಧಿಗೋಸ್ಕರ ಮಾಡಿರತಕ್ಕಂಥ ಸಾಲ ಏನಿದೆ ಅದನ್ನು ವಸೂಲಿ ಮಾಡುತ್ತಾರೆ. ರೈತರುಗಳಿಗೆ ಒಂದಲ್ಲ, ನೂರಾರು ತಾಪತ್ರಯಗಳು ಇರುತ್ತವೆ. ರೈತರುಗಳು ಒಂದು ತರಹ ತೊಂದಲೇಯಲ್ಲ ರೈತರು ನೂರಾರು ಫ್ಯಾಕ್ಟರ್ಸ್ ಅವಲಂಬಿಸಿ ವ್ಯವಸಾಯದ ಕೆಲಸ ಮಾಡಬೇಕಾಗುತ್ತದೆ. ಇವತ್ತಿನ ದಿವಸ ಏನಾದರೂ ಹೆಚ್ಚು ಕಡಿಮೆಯಾದರೆ ಅವನು ಹಾಕಿರುವ ಬಂಡವಾಳ ಕಳೆದು ಕೊಳ್ಳುತಕ್ಕಂಥ ಪರಿಸ್ಥಿತಿ ಇವತ್ತಿನ ದಿವಸ ಇದೆ. ಇಂಥಾ ಸಂದರ್ಭದಲ್ಲಿ ಮೂರಭೂತವಾದ ಸಮಸ್ಯೆ ಏನು ಇದೆ ಅದನ್ನು ತೊಡೆದುಹಾಕುವುದಕ್ಕೆ ಈ ಕಾನೂನಿನಲ್ಲಿ ಅವಕಾಶ ಮಾಡಿಕೊಟ್ಟಿಲ್ಲ. ಮತ್ತು ವ್ಯವಸಾಯ ರಂಗದಲ್ಲಿ ಮಾತ್ರ ಈ ಕಾನೂನು ಲಾಗೂ ಆಗತಕ್ಕಂಥ ಪರಿಸ್ಥಿತಿ ಇದೆ. ಕೈಗಾರಿಗಾ ರಂಗದಲ್ಲಿ ಈ ತರಹ ಕಾನೂನು ಇಲ್ಲ. ಆದ್ದರಿಂದ ಏನು ಒಂದು ರಂಗದಿಂದ ಮತ್ತೊಂದು ರಂಗಕ್ಕೆ ಈ ವ್ಯತಿರಿಕ್ತವಾದಂಥ ಮತ್ತು ಕೈಗಾರಿಕಾ ರಂಗವನ್ನು ಪೂರ್ತಿ ಕೈಬಿಟ್ಟಿರತಕ್ಕಂಥ ಒಂದು ಪರಿಸ್ಥಿತಿ ಏನಿದೆ. ಅದು ಹೋಗಬೇಕಾಗುತ್ತದೆ. ಈ ಕಾರಣದಿಂದ ಇವತ್ತು ಮಾನ್ಯ ಮಂತ್ರಿಗಳು ವಿವರಣೆ ಕೊಡಬೇಕಾಗುತ್ತದೆ. ರೈತರು ಮಾಡಿರತಕ್ಕಂಥ ಪ್ರತಿಯೊಂದು ಸಾಲ ಕೂಡ ಇದರಲ್ಲಿ ಸೇರುತ್ತದೆ. ಪ್ರತಿ ರೈತರು ಮಾಡಿರತಕ್ಕಂಥಾ ಪ್ರತಿಯೊಂದು ಸಾಲ ಸೇರುಸೋರುವುದಾಧರೆ ಕೈಗಾರಿಗಾ ರಂಗದಲ್ಲಿ ಮಾಡಿರತಕ್ಕ ಸಾಲಕ್ಕೆ ಕೂಡಾ ಏನು ಬ್ಯಾಂಕ್‌ನಿಂದ ಪಡೆದಿರತಕ್ಕಂಥ ಸಾಲಗಳಿವೆ? ಅದನ್ನು ಕೂಡಾ ವಸೂಲು ಮಾಡತಕ್ಕಂಥದ್ದಕ್ಕೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಇದಕ್ಕೆಲ್ಲಾ ವಿವರಣೆ ಕೊಡಬೇಕು ಮತ್ತು inprinciple ಈ ರೀತಿಯಾದಂತ ಕಾನೂನು ಇಲ್ಲಿ ಇರತಕ್ಕಂಥಾದ್ದು ತಮಗೆ ಅವಮಾನಕರ ಅನ್ನುತಕ್ಕಂಥ ಒಂದು ಅಲೋಚನೆ ರಾಜ್ಯದ ರೈತರಲ್ಲಿ ಏನು ಮೂಡಿಬರುತ್ತಿದೆ. ಅದಕ್ಕೆ ಇದು ವಿರುದ್ಧವಾಗಿರುವ ಕಾರಣದಿಂದ ಈ ತಿದ್ದುಪಡಿಯನ್ನು ಮಾನ್ಯ ಮಂತ್ರಿಗಳು ವಾಪಸ್ ಪಡೆದು ಸಮಗ್ರವಾದಂಥ ಮತ್ತು ಮೂಲಭೂತವಾದ ಸಮಸ್ಯೆಗಳನ್ನು ಮೂಲೋತ್ಪಾದನೆ ಮಾಡತಕ್ಕಂಥ ಒಂದು ತಿದ್ದುಪಡಿಯನ್ನು ತರಬೇಕಾದ ಅವಶ್ಯಕತೆ ಇದೆ. ಆದ್ದರಿಂದ ಈಗ ನೀವು ತಂದಿರತಕ್ಕ ಉದ್ದೇಶ ಪೂರ್ತಿ ಈಡೇರಲಿಲ್ಲ. ನೂರಕ್ಕೆ ನೂರರಷ್ಟು ರೈತರ ಉದ್ದೇಶ ಈಡೇರಬೇಕಾಗಿದ್ದರೆ ಸಂಪೂರ್ಣವಾಗಿ 10 ಸಾವಿರ ಅನ್ನತಕ್ಕಂಥಾದ್ದು ಏನಿಗೆ ಅದನ್ನು ತೆಗೆದುಹಾಕಬೇಕು ವ್ಯವಸಾಯರಂಗದಲ್ಲಿ ಇದಕ್ಕೆ ಸಂಪೂರ್ಣವಾದಂಥ ರಿಯಾಯಿತಿಯನ್ನು ಕೊಡಿ. ಕೈಗಾರಿಗಾ ರಂಗದಲ್ಲೂ ಕೂಡಾ ಈ ರೀತಿ ಅಲೋಚನೆ ಮಾಡುವುದಾದರೆ ನಾವು ಇದನ್ನು ಯೋಚನೆ ಮಾಡಬಹುದಾಗಿತ್ತು ಆದರೆ ಅದನ್ನು ಬಿಟ್ಟು ಕೇವಲ ವ್ಯವಸಾಯರಂಗಕ್ಕೆ ಮಾಡಿರುವ ಕಾರಣದಿಂದ ಇದನ್ನು ದಯಮಾಡಿ ವಾಪಸ್ ಪಡೆಯಬೇಕೆಂಬ ಮಾತನ್ನು ಅಧ್ಯಕ್ಷರ ಮುಖಾಂತರ ಹೇಳಿ ನನ್ನನ್ನು ಮಾತುಗಳನ್ನು ಮುಗಿಸುತ್ತೇನೆ.

3.30 ಪಿ.ಎಂ.

+ ಶ್ರೀ ಎಂ ಮಲ್ಲಿಕಾರ್ಜನ ಖರ್ಗೆ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೇ ಈಗಾಗಲೇ ಶ್ರೀ ಮಾನ್ ಏಕಾಂತಯ್ಯನವರು ಪ್ರೊ ನಂಜುಂಡಸ್ವಾಮಿ ಅವರು ಮತ್ತು ಗೆಳೆಯರಾದ ಮಾನ್ಯ ಬೈರೇಗೌಡರು ಕೂಡ ಇದರ ಮೇಲೆ ಮಾತನಾಡಿದ್ದಾರೆ ಮತ್ತು ಬೆಳಕನ್ನು ಚೆಲ್ಲಿದ್ದಾರೆ. ನಾನು ಒಪ್ಪಿಕೊಳ್ಳುತ್ತೇನೆ. ಎಲ್ಲಾ ಅರಿಯರ್ಸ್ ಇದರಲ್ಲಿ ಅಳವಡಿಸಿಕೊಳ್ಳದೇ ಹೋದರೂ ಕೂಡ ರೈತರಿಗೆ ಸಂಬಂಧಪಟ್ಟ ಸೀಮಿತವಾದ ರೀತಿ ಅಮೆಂಡ್‌ಮೆಂಟ್ ಇದೆ. ಇದನ್ನು ಒಪ್ಪಿಕೊಳ್ಳುತ್ತೇನೆ ಇದರಲ್ಲಿ ಇನ್ನೂ ಸುಧಾರಣೆ ಆಗಬೇಕಾಗಿತ್ತು ಮತ್ತು ಬೇರೆ ನ್ಯಾಷನಲೈಸ್ ಬ್ಯಾಂಕ್‌ಗಳು ಆಗಲಿ ಬೇರೆ ಲೋನ್ ಆಗಲೀ, ಆ ಲೋನ್ ತಗೆದುಕೊಂಡಿದ್ದರೆ ಇದರಲ್ಲಿ ಅವಕಾಶ ಮಾಡಿಕೊಡ ಬೇಕಾಗಿತ್ತು ಎನ್ನತಕ್ಕ ಮಾತನ್ನು ತಾವು ಹೇಳಿದ್ದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಬೇಕಾದರೆ ಇನ್ನೂ ಒಂದು ತಿದ್ದುಪಡಿ ತರುವುದಕ್ಕೆ ನಾನು ಸಿದ್ದನಿದ್ದೇನೆ. ಇದು ಪ್ರತಿಷ್ಠೆಯ ಪ್ರಶ್ನೆ ಅಲ್ಲ ನಿಮ್ಮ ಹತ್ತಿರ ಕನ್‌ಸಲ್ಟ್ ಮಾಡಿದ ಮೇಲೆ ರೈತರಿಗೆ ಅನುಕೂಲ ಅಗಲಿ ಎನ್ನುವ ದೃಷ್ಟಿಯಿಂದ ಬಾಕಿ 10 ರೂಪಾಯಿ ಇಲ್ಲವೇ 100 ರೂಪಾಯಿ ಇರಬಹುದು. ಅಷ್ಟಾದರೂ ಕೂಡ ನಾವು ಫೋರ್‌ಫಿಚರ್ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬಾರದು ಎನ್ನುವ ದೃಷ್ಟಿಯಿಂದ ಇದನ್ನು ತಂದಿದ್ದೇನೆ. ಇಲ್ಲಿಯವರೆಗೆ 100ರೂಪಾಯಿಗಳಿಂದ ಸಾವಿರ ರೂಪಾಯಿ ಬಾಕಿ ಇದ್ದರೂ ಫೋರ್‌ಪಿಚರ್ ಮಾಡುತ್ತಿದ್ದೇವು. ಆ ದೃಷ್ಟಿಯಿಂದ ಇದನ್ನು ತಪ್ಪಿಸಬೇಕು ಎಂದು ಮತ್ತು ರೈತರಿಗೆ ಹರಾಸ್‌ಮೆಂಟ್ ಆಗಬಾರದು ಎನ್ನುವ ದೃಷ್ಟಿಯಿಂದ ಇದನ್ನು ತಂದಿದ್ದೇನೆ. ತಾವು ಕೊಟ್ಟಿಂತಹ ಸಲಹೆ ಅಥವಾ ಮಾನ್ಯ ಪ್ರೋ ನಂಜುಂಡಸ್ವಾಮಿ ಅವರು ಕೊಟ್ಟಿರತಕ್ಕ ಸಲಹೆಯನ್ನು ನಾನು ಪರಿಶೀಲಿಸುತ್ತೇನೆ. ಈಗ ಏನು ನೀಮಿತವಾಗಿ ತಂತಿದ್ದೇವೆ. ಇದನ್ನು ತಾವು ಪಾಸ್ ಮಾಡಬೇಕು ಮತ್ತು ಉಳಿದಿದ್ದುನ್ನು ಪರಿಶೀಲನೆ ಮಾಡುತ್ತೇನೆ. ಈಗಾಗಲೇ ಲಾ ಡಿಪಾರ್ಟ್‌ಮೆಂಟ್ ಸೆಕ್ರೆಟರಿ ಜೊತೆ ಮಾತನಾಡಿದ್ದೇನೆ. ತಾವು ಹೇಳಿದ್ದನ್ನು ಕೂಡ ಪರಿಶೀಲನೆ ಮಾಡಿ,ಬೇಕಾದರೆ ಅದಕ್ಕೂ ಕೂಡ ಸೂಕ್ತ ಅಮೆಂಡ್‌ಮೆಂಟ್ ತರೋಣ.

ಪ್ರೋ ಎಂ.ಡಿ. ನಂಜುಂಡಸ್ವಾಮಿ : ಇದು ರೈತರಿಗೆ ಸಂಬಂಧಪಟ್ಟದ್ದು ಸೆಕ್ಷನ್ 87ನೇ ಮೊದಲನೇ ಪ್ಯಾರಾಗ್ರಾಫ್‌ಗೆ ಸೆಂಬಂಧಿಸದ ಹಾಗೆ ಇದನ್ನು ತಂದಿದ್ದೇವೆ ಎನ್ನುತ್ತಾರೆ. Sec.87(1) reads: like this

"Arrears of land revenue due on account of the land by any land holder shall be a paramount charge on the holding and every part there of .....

Land revenue is defined in Section 60.

Section 60 reads like this:

(b) 'land revenue' means all sums and payments in money or in kind received or claimable by, or on behalf of Government from any person on account of land held by, or vested in him and includes any tax, cess, rate other impost payable under the prvisions of any law for the time being in force.....

ಇದನ್ನು ನಾವು ಬಹಳ ಉದಾರವಾಗಿ ವಿಶ್ಲೇಷಣೆ ಮಾಡಿದರೂ ಸಹ ಇದರೊಳಗೆ ನೀರಿನ ತೆರಿಗೆ ಇವೆಲ್ಲಾ ಬರುತ್ತದೆ. ಆದರೆ ಸಾಲ ಮಾತ್ರ ಬರುವುದಿಲ್ಲ, ಸಾಲದ ಬಾಕಿಗೆ ಇವರು ಇನ್ನು ಮುಂದೆಯೂ ಕೂಡ ಸರ್ಕಾರಿ ಪಡಾ ಎಂದು ಬರೆಯ ಬಹುದು. ಇದನ್ನು ಹೇಗೆ ಬಗೆಹರಿಸುತ್ತೀರಿ ? ಇನ್ನೂ ಒಂದು ತಿದ್ದುಪಡಿ ತರುತ್ತೇನೆ ಎಂದು ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಡಬಹುದು...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪ್ರೊ ನಂಜುಂಡಸ್ವಾಮಿಯವರಿಗೆ ಆಶ್ವಾಸನೆ ಕೊಟ್ಟಿದ್ದೆವು ಅದರಲ್ಲಿ 90 ಪರ್ಸೆಂಟ್ ಪೂರೈಸಿದ್ದೇವೆ. ಇದನ್ನು ಬೇಕಾದರೂ ಕೂಡ ರೀ ಎಕ್ಸಾಮಿನೇಷನ್ ಮಾಡಿಸುತ್ತೇನೆ. ಲಾ ಡಿಪಾರ್ಟ್‌ಮೆಂಟ್ ಸೆಕ್ರೆಟರಿಯವರನ್ನು ಕರೆಯಿಸಿ ಮಾತನಾಡೋಣ I am not going back. I will definitely examine.

ಪ್ರೊ ಎಂ.ಡಿ. ನಂಜುಂಡಸ್ವಾಮಿ : 1946 ನೇ ಇಸವಿಯಲ್ಲಿ ನಾವು ಸಂವಿಧಾನವನ್ನು ಒಪ್ಪಿಕೊಂಡೆವು. 1949ರಿಂದ ನಮ್ಮ ಸಂವಿಧಾನದ ಹಕ್ಕು ಮೊಟಕು ಆಗುತ್ತಿದೆ. ಇನ್ನೂ ನಾವು ತಡ ಮಾಡುತ್ತೇವೆ ಎಂದರೆ ಹೇಗೆ? ಆ ಕಾರಣ ನಾನು ಸರ್ಕಾರವನ್ನು ವಿನಂತಿ ಮಾಡುವುದು. ಏನು ಇಷ್ಟು ವರ್ಷ ಆಗಿದೆ. ಅದನ್ನು ಸರಿಪಡಿಸುವುದಕ್ಕೆ ಅವಸರ ಮಾಡುವುದು ಏನು ಬೇಡ. ಬೇಕಿದ್ದರೆ ಮುಂದಿನ ಅಧಿವೇಶನದಲ್ಲಿ ಇದನ್ನು ಸಮಗ್ರವಾಗಿ ಸಂವಿಧಾನಕ್ಕೆ ವಿರುದ್ಧವಾಗದ ರೀತಿಯಲ್ಲಿ ಬೇರೆ ಒಂದು ಮಸೂದೆಯನ್ನು ತಂದು ಮಂಡಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜು ಖರ್ಗೆ : ಮಾನ್ಯ ಅಧ್ಯಕ್ಷರೆ ಈ ಬಗ್ಗೆ ನಾನು ಈಗಾಗಲೇ ಯಾವಯಾವ ತಿದ್ದುಪಡಿ ಬೇಕು ಎಂಬುದರ ಬಗ್ಗೆ ಪರಿಶೀಲಿಸುತ್ತೇನೆ. ಎಂದ ಹೇಳಿದ್ದೇನೆ ಇದನ್ನು ಆರ್ಡಿನೆನ್ಸ್ ಮಾಡಿದ್ದಕ್ಕಾಗಿ ತಂದದ್ದೇವೆ. ಇದರಿಂದ ಸಣ್ಣಪುಟ್ಟ ರೈತರಿಗೂ ಇದರಿಂದ ಅನುಕೂಲವಾಗುತ್ತದೆ. ಎಲ್ಲರಿಗೂ ಅನುಕೂಲವಾಗದಿದ್ದರೂ ಕೂಡ ಲ್ಯಾಂಡ್ ರೆವಿನ್ಯೂ ಅರಿಯರ್ಸ್‌ನಲ್ಲಿರತಕ್ಕಂಥ ನಮ್ಮ ರೈತರು ಯಾರು ಇದ್ದಾರೆ ಅವಿರಗಾದರೂ ಅನುಕೂಲವಾಗುತ್ತದೆ. ಆದ್ದರಿಂದ ತಾವುಗಳು ಇದನ್ನು ಒಪ್ಪಬೇಕು ಪುನಃ ಉಳಿದಂಥ ವಿಷಯಗಳ ಬಗ್ಗೆ ನಾನು ಪರಿಶೀಲಿಸಿ ಸೂಕ್ತವಾದಂಥ ಕ್ರಮವನ್ನು ಕೈಗೊಳ್ಳುತ್ತೇನೆ.

profM.D.NANJUNDASWAMY:ThisGovernmentcannotmakediscrimination between a farmer owning land less than Rs 10,000 and farmer owning more than Rs. 10,000. This amounts to discrimination and this amendment even if this house adopts cannot stand the test of law even for a single minute ಆ ಕಾರಣ ಯಾಕೆ ಮಾಡುತ್ತಿರೀ ಎಂದು ನಾನು ಕೇಳುತ್ತಾ ಇದ್ದೇನೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ ಎಲ್ಲಿಯಾದರೂ ಒಂದು ಕಾಡಿವಾಣವನ್ನು ಹಾಕಲೇಬೇಕಲ್ಲ. ಈಗ ಅನೇಕ ವಿಷಯದಲ್ಲಿ ಕಡಿವಾಣ ಹಾಕಿದ್ದೇವೆ. ಸ್ಮಾಲ್, ಮಾರ್ಜಿನಲ್ ಐ.ಆರ್.ಡಿ.ಗೆ ಸ್ಕೀಮ್‌ಗೆ ಪವರ್‌ಲೈನನ್ನು ನಿಗದಿ ಮಾಡಿರುವಂತೆ ಎಲ್ಲಾ ಕಡೆಗಳಲ್ಲಿಯೂ ಕೂಡ ಮಾಡಿದ್ದೇವೆ. ಇದರಲ್ಲಿಯೂ ಕೂಡ ಪುನಃ ಪರಿಶೀಲನೆ ಮಾಡುವುದಕ್ಕೆ ನಾನು ಸಿದ್ದನಿದ್ದೇನೆ. ಅದನ್ನು ನೋಡೋಣವೆಂದು ಹೇಳಿದ್ದೇನೆ.

ಉಪಾಧ್ಯಕ್ಷಿಣಿಯವರು : ಪ್ರಸ್ತಾವ ಏನೆಂದರೆ 1991ನೇ ಸಾಲಿನ ಕರ್ನಾಟಕ ಭೂಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 4ರ ವರೆಗೆ:

ಉಪಾಧ್ಯಕ್ಷಣಿಯವರು: ಖಂಡ 2ರಿಂದ 4ರ ವರೆಗೆ ಎರಡೂ ಸೇರಿದಂತೆ ಈ ವಿಧೇಯದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ :

"ಉಪಾಧ್ಯಕ್ಷಿಣಿಯವರು : ಪ್ರಸ್ತಾವ ಏನೆಂದರೆ ಮೊದಲನೇ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ಈ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ 1991ನೇ ಸಾಲಿನ ಕರ್ನಾಟಕ ಭೂಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷಿಣಿಯವರು : ಪ್ರಸ್ತಾವ ಏನೆಂದರೆ "1991ನೇ ಸಾಲಿನ ಕರ್ನಾಟಕ ಭೂಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ಭೂಸುಧಾರಣಾ (ತಿದ್ದುಪಡಿ) ವಿಧೇಯಕ 1991

ಪರ್ಯಾಲೋಚನಾ ಪ್ರಸ್ತಾವ

ಎಂ. ಮಲ್ಲೀಕಾರ್ಜುನ ಖರ್ಗೆ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಭೂಸುಧಾರಣ (ತಿದ್ದುಪಡಿ) ವಿಧೇಯಕ 1991ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, ಇದು ಒಂದು ಸಣ್ಣ ತಿದ್ದುಪಡಿ ಇದೆ. ಇದರ ಮುಖ್ಯ ಉದ್ದೇಶವೇನೆಂದರೆ ಕೆಲವು ಕಾರ್ಪೋರೇಷನ್‌ಗಳು ಬೋರ್ಡ್‌ಗಳು ಮತ್ತು ಅರ್ಬನ್ ಡೆವಲಪ್‌ಮೆಂಟ್ ಅಥಾರಿಟೀಸ್‌ಗಳಿಗೆ ಸೆಕ್ಷನ್ 79 ಎ ಮತ್ತು 79ಬಿ ಮತ್ತು 80 ಪ್ರಕಾರ ಇವರು ಜಮೀನನ್ನು ಖರೀದಿ ಮಾಡುವುದಕ್ಕೆ ಅವಕಾಶವಿರಲಿಲ್ಲ ಆದರಿಂದ ಅನೇಕ ಹೌಸಿಂಗ ಆಕ್ಟಿವಿಟೀಸ್ ನಿಂತುಹೋಗಿದ್ದುವು. ಆದ್ದರಿಂದ ಅವರಿಗೂ ಕೂಡ ರಿಯಾಯಿತಿ ಕೊಟ್ಟು ನೇರವಾಗಿ ಹೌಸಿಂಗ್‌ಬೋರ್ಡ್‌ನವರು ಬಿ.ಡ್.ಎ. ನವರು ಹಾಗೂ ಎಲ್ಲಿ ಜಿಲ್ಲೆಗಳ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿ ನೇರವಾಗಿ ಪರ್ಚೇಸ್ ಮಾಡಬೇಕು ಮತ್ತು ಕೊಳಚೆ ನಿರ್ಮೂಲನಾ ಮಂಡಲಿಯನ್ನೂ ಸಹ ಇದರಲ್ಲಿ ಸೇರಿಸಿದ್ದೇವೆ ಹೀಗೆ ಇವೆಲ್ಲರಿಗೂ ಇದರಲ್ಲಿ ರಿಯಾಯಿತಿ ಕೊಟ್ಟರೆ ನೇರವಾಗಿ ಅವರು ಜಮೀನನ್ನು ಖರೀದಿ ಮಾಡಿಕೊಂಡು ಅವರೇ ಪ್ಲಾಟ್ಸ್ ಮಾಡುವುದಕ್ಕೆ ಇಂಡಸ್ಟ್ರೀಸ್ ಶೇಡ್ ಮಾಡುವುದಕ್ಕೆ ಎಲ್ಲ ಹೌಸಿಂಗ್ ಆಕ್ಟಿರಿಟೀಸ್‌ಗೂ ಅನುಕೂಲವಾಗುತ್ತದೆ ಎಂಬ ದೃಷ್ಟಿಯಿಂದ ಈ ತಿದ್ದುಪಡಿಯನ್ನು ನಾವು ತಂದಿದ್ದೇವೆ. ಇದನ್ನು ಎಲ್ಲರೂ ಒಪ್ಪುತ್ತಾರೆಂದು ನನ್ನ ಭಾವನೆ. ಏಕೆಂದರೆ ಇದರಿಂದ ಅನೇಕ ತೊಂದರೆಗಳು ನಿಂತುಹೋಗುತ್ತವೆ ಮತ್ತು ರೈತರು ಕೂಡ ನೇರವಾಗಿ ಕನ್‌ಸೆಂಟ್ ಕೊಟ್ಟು

ತೆಗೆದುಕೊಳ್ಳುವುದಕ್ಕೆ ಒಂದು ಅವಕಾಶ ಆಗುತ್ತದೆ. ಜೊತೆಗೆ ಮಿಡಲ್‌ಮೆನ್ ಏನಿದ್ದಾರೆ ಆದರೂ ಕೂಡ ಎಲಿಮಿನೇಟ್ ಇದರಿಂದ ಆಗಿಬಿಡ್ತಾರೆ. ಆದ್ದರಿಂದ ಎಲ್ಲರೂ ಕೂಡ ಒಮ್ಮತದಿಂದ ಒಪ್ಪುತ್ತಾರೆಂದು ನನ್ನ ಭಾವನೆ ಇದೆ. ಇದಕ್ಕೆ ಎಲ್ಲರೂ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) : ಮಾನ್ಯ ಅಧ್ಯಕ್ಷಣಿಯವರೇ ಕರ್ನಾಟಕ ಭೂಸುಧಾರಣಾ ತಿದ್ದುಪಡಿ ವಿಧೇಯಕ ಏನಿದೆ ಇದರ 79ಗೆ ತಿದ್ದುಪಡಿ ಮಾಡುವಾಗ 12 ಸಾವಿರಕ್ಕೆ ಬದಲಾಗಿ ನಾವು 50ಸಾವಿರ ರೂಗಳಿಗೆ ಪರಿಮಿತಿಯನ್ನು ಹೆಚ್ಚಿಸಿದ್ದೇವೆ. ವ್ಯವಸಾಯೇತರ ಆದಾಯ 50ಸಾವಿರ ಇದ್ದರೆ ಈ ಭೂಮಿ ಕೊಳ್ಳಲು ಇರುವ ನಿರ್ಬಂಧ ಇರುತ್ತದೆ, ಅದಕ್ಕಿಂಥ ಕಡಿಮೆ ಇದ್ದರೆ ಇರುವುದಿಲ್ಲವೆಂದು ಹೇಳಿದ್ದರು.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ : ಅದು 12ಸಾವಿರದಿಂದ 50ಸಾವಿರದವರೆಗೆ ಕಳೆದಸಲ ತಿದ್ದುಪಡಿ ತಂದಿದ್ದುದು.

ಶ್ರೀ ಹೆಚ್. ಏಕಾಂತಯ್ಯ : ಈಗ ತಂದಿಲ್ಲವೇ? 79 (2ಎ) ಏಕೆ? ತಂದಿದ್ದೀರಿ ಅವತ್ತು 79ಎ ಒಂದರಲ್ಲಿ ತಂದಿರಿ, ನಿಮ್ಮ ಸರ್ಕಾರ ಮತ್ತು ಅಧಿಕಾರಿಗಳು ಹೇಗೆ ಕೆಲಸ ಮಾಡುತ್ತಾರೆಂದರೆ 79(2) ನಲ್ಲಿ 12ಸಾವಿರ ಎಂದಿದ್ದುದನ್ನು 50ಸಾವಿರ ಮಾಡಲಿಕ್ಕೆ ಆಗಲಿಲ್ಲ, ಇವತ್ತು ಮೊದಲನೇ ಸಲ ಅದನ್ನು ನೋಡಿದಿರಿ. ಅಂದರೆ ಒಂದು ವಿಧೇಯಕವನ್ನು ಸಭೆಯ ಮುಂದೆ ಮಂಡಿಸಬೇಕಾದರೆ ಯಾವರೀತಿ ಅದನ್ನು ಸೀರಿಯಸ್ಸಾಗಿ ಗಮನ ಹರಿಸಬೇಕೋ ಅಂತಹ ಗಮನ ಹರಿಸುವ ಪ್ರವೃತ್ತಿ ಈ ಸರ್ಕಾರಕ್ಕೆ ಆಗಲಿ ಅಥವಾ ಅಧಿಕಾರಿಗಳಿಗೇ ಆಗಲಿ ಇಗ್ಗ ಎಂಬುದಕ್ಕೆ ಇದಕ್ಕಿಂತ ದೊಡ್ಡ ಉದಾಹರಣೆ ಬೇಕಾಗಿಲ್ಲ. ತಾವು 79 ಎ ಒಂದರಲ್ಲಿ ಮಾತ್ರ 12 ಸಾವಿರದಿಂದ 50 ಸಾವಿರಕ್ಕೆ ಇಳಿಸಿದ್ದಿರಿ. 79 ಎ ನಲ್ಲಿ ಎರಡನೇ ಉಪಪ್ರಕರಣ ಏನಿದೆ., ಅದನ್ನು ಏಕೆ ಸ್ವಾಮಿ ಮಾಡೋಕಾಗಲಿಲ್ಲ? ಇಂತಹ ನಿರ್ಲಕ್ಷ್ಯತನದ ವರ್ತನೆಯನ್ನು ಬೇಜವಾಬ್ದಾರಿ ವರ್ತನೆಯೆಂದು ಕರೆಯಬೇಕು? ಒಂದೇ ಪ್ರಕರಣದಲ್ಲಿ ಒಂದು ಸಬ್‌ಸೆಕ್ಷನ್ ಮಾಡ್ತಾರೆ. ಮತ್ತೊಂದು ಸಬ್‌ಸೆಕ್ಷನ್ ಅನ್ನು ಮಾಡಲು ಅದನ್ನು ನೋಡುವಷ್ಟು ತಳ್ಮೆ ಸಂಭಂದಿಸಿದ ಅಧಿಕಾರಿಗಳಿಗೆ ಇಲ್ಲ ಅಂದರೆ ಎಷ್ಟರಮಟ್ಟಿಗೆ ಡ್ರಾಫ್ಟ್ ಆಗಿರಬಹುದು ಇದು ಸರಿನಾ? ಏಕೆಂದರೆ ಅದು ಬ್ಲಾಕ್ ಅಂಡ್ ವೈಟ್‌ನಲ್ಲಿದೆ. ಆದ್ದರಿಂದ ಯಾವುದಾದರೂ ಕಾನೂನನ್ನು ತಿದ್ದುಪಡಿ ಮಾಡಬೇಕಾದರೆ ಸಂಬಂಧಿಸಿದವರು ತೀವ್ರವಾದ ರೀತಿ ಗಮನಹರಿಸಿ ಎಲ್ಲ ಕನ್‌ಸೀಕ್ವೆನ್ಸ್ ಏನಾಗುತ್ತದೆಂದು ನೋಡಿ ಮಾಡಬೇಕಾದ್ದು ಅವರ ಕರ್ತವ್ಯ ಆದ್ರೆ ಆ ರೀತಿ ಮಾಡಿಲ್ಲ ಎಂಬುದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಅವತ್ತು ಈ ಕಡೆಯಿಂದ ಈ ಬಗ್ಗೆ ನಾವುಗಳು ಪ್ರಸ್ತಾಪಮಾಡಿ ಏನು ತಾವು 50 ಸಾವಿರಕ್ಕೆ ಇದನ್ನು ಹೆಚ್ಚಿಸಬೇಕೆಂದು ಮಾಡಿದಿರಿ ಇದನ್ನು ಹಿಂದಿನಿಂದ ಜಾರಿಗೆ ತರಬೇಕೆಂದು ಹೇಳಿದ್ದಾಗ ತಾವು ಪರಿಶೀಲಿಸುವುದಾಗಿ ಅವತ್ತು ಹೇಳಿದ್ದಿರಿ. ನಾನು ಇವತ್ತು ಕೂಡ ಕೇಳ್ತಾಯಿದ್ದೇನೆ. ಇದರಿಂದ ಏನು ಅನಾಹುತವಾಗುತ್ತದೆ ಅಂದರೆ ಇಂದು ನನಗೆ ಗೊತ್ತಿರುವಂತೆ ತಹಸೀಲ್ದಾರ್ ಕಚೇರಿಯಲ್ಲಿ ಅಥವಾ ವಿಭಾಗಾಧಿಕಾರಿಗಳ ಕಛೇರಿಯಲ್ಲಿ ಇದೊಂದು ದೊಡ್ಡ ದಂಧೆ ಆಗಿ ನಡೆಯುತ್ತಿದೆ. ಬೇಕಾದರೆ ಹೋಗಿ ನೋಡಿ ಎಷ್ಟೋ ಜನರ ಆದಾಯ 12ಸಾವಿರಕ್ಕಿಂತ ಹೆಚ್ಚಿದೆ ವ್ಯವಸಾಯೇತರ ಮೂಲಗಳಿಂದ ಅವರು ಗೊತ್ತಿದ್ದೊ ಗೊತ್ತಿಲ್ಲದೆಯೋ ತಿಳಿದುಕೊಂಡಿದ್ದಾರೆ ಈಗ ಅದನ್ನು ರೇಗ್ಯುಲರೈಸ್ ಮಾಡಲು ದೊಡ್ಡ ವ್ಯಾಪಾರ ನಡೆಯುತ್ತಿದೆ ಈ ಬ್ರಷ್ಟ ವ್ಯವಸ್ಥೆಯನ್ನು ತಪ್ಪಿಸುವ ಸಲುವಾಗಿ ಆದರೂ ತಾವು ಮನಸ್ಸು ಮಾಡಬೇಕು. ಇವತ್ತು ನೀವು ಏನು 50 ಸಾವಿರಕ್ಕೆ ಹೆಚ್ಚಿಸಿದ್ದೀರಿ ಅದನ್ನು ಅವತ್ತಿನಿಂದ ಬದಲಾಗಿ ಹಿಂದಿನಿಂದಲೂ ಜಾರಿಗೆ ಬರುವಂತೆ ಇವತ್ತಾದರೂ ತಾವು ಮನಸ್ಸು ಮಾಡಿ ಇದಕ್ಕೆ ತಿದ್ದುಪಡಿ ತರುತ್ತೀರಿ ಎಂದು ನಾನು ಭಾವಿಸಿದ್ದೆ. ಏತಕ್ಕೆ ಎಂದರೆ ಹಿಂದಿನ ಸಭೆಯಲ್ಲಿ ಇದು ಚರ್ಚೆಯಾದಾಗ ತಾವು ನಮಗೆ ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಇದನ್ನು ಸಹ ನಾನು ಪರಿಶೀಲನೆ ಮಾಡುತ್ತೇನೆ ಮತ್ತು ಅವಶ್ಯಕವಾದ

ತಿದ್ದುಪಡಿಯನ್ನು ತರುತ್ತೇನೆ ಎಂಬ ಮಾತನ್ನು ತಾವು ಹೇಳಿದ್ದೀರಿ. ಆದರೆ ನೀವು ಇಲ್ಲಿ ವಿಫಲರಾಗಿದ್ದೀರಿ. ಅದರ ಬಗ್ಗೆ ಸರ್ಕಾರದ ಪ್ರತಿಕ್ರಿಯೆ ಏನು ಎಂಬುದನ್ನು ತಿಳಿಯಬಯಸುತ್ತೇನೆ ಇನ್ನು ಕೊನೆಯದಾಗಿ ಇನ್ನು 79(ಎ) (ಬಿ) ಮತ್ತು 80 ಏನು ಇದೆ ಆ ವಿಧಿಗಳನ್ನು ಕೆಲವು ಸಂಸ್ಥೆಗಳಿಗೆ ಅಡ್ಡಿ ಮಾಡಿದಂಥ ರೀತಿಯಲ್ಲಿ ಅಂದರೆ ಜಮೀನನ್ನು ಕೊಂಡುಕೊಳ್ಳುವುದಕ್ಕೆ ಮತ್ತು ಮಾರಾಟ ಮಾಡುವುದಕ್ಕೆ ಪರವಾನಿಗೆ ಬೇಕಾಗಿತ್ತೋ ಆ ಪರವಾನಿಗೆಯನ್ನು ಕೊಟ್ಟಿದ್ದೀರಿ. ಅದನ್ನು ನಾವು ಸ್ವಗತ ಮಾಡುತ್ತೇವೆ. ಆದರೆ ಇದರಲ್ಲಿ ಒಂದು ಎಚ್ಚರಿಕೆಯನ್ನು ತಾವು ವಹಿಸಬೇಕಾಗುತ್ತದೆ. "ನೆಪಕ್ಕೆ ಒಬ್ಬ ಗಂಡ" ಎಂದು ಇದು ಆಗಬಾರದು ಇವತ್ತಿನ ದಿವಸ ಬಿ.ಡಿ.ಎ. ಇರಬಹುದು ಹೌಸಿಂಗ್ ಬೋರ್ಡ್ ಇರಬಹುದು ಇವರು ಭೂಮಿಯನ್ನು ಸ್ವಾದೀನಪಡಿಸಿಕೊಳ್ಳುವುದು ಮತ್ತೆ ಯಾರಿಗೆ ಕೊಡಬಾರದೋ ಅಂಥವರಿಗೆ ಭೂಮಿಯನ್ನು ಒಟ್ಟಾಗಿ ಕೊಡತಕ್ಕಂಥ ನೀತಿ ಇದ್ದರೆ ಅದನ್ನು ತಾವು ಇರತ್ತಿನ ದಿವಸ ವಿರೋಧ ಮಾಡಬೇಕಾಗುತ್ತದೆ. ನಿಮ್ಮ ಮೂಲ ಉದ್ದೇಶ ಏನು ಇರುವುದು ಈ ದೇಶದ ಜನಸಾಮಾನ್ಯರಿಗೆ ಬೇಕಾದ್ದಂಥ ನಿವೇಶನಗಳನ್ನು ಇಲ್ಲವೇ ಕಟ್ಟಡಗಳನ್ನು ನಿರ್ಮಾಣ ಮಾಡಿ ಕಡಿಮೆ ಬೆಲೆಯಲ್ಲಿ ದುರ್ಬಲವರ್ಗದವರಿಗೆ ಕೊಡಬೇಕು ಎಂಬ ಕಾರಣದಿಂದ....

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, ಇಲ್ಲಿ ಅವರು ಕರ್ಚೀಸ್ ಮಾಡಲು ಎಕ್ಸ್‌ಪೆನ್ಸನ್ನು ಕೊಡುತ್ತಿದ್ದೇವೆ. ನಂತರ ಅವರು ಅಲಾಟ್ ಮಾಡುವುದಕ್ಕೆ ಯಾವ ನೀತಿಯನ್ನು ಅನುಸರಿಸಬೇಕೋ ಅದನ್ನು ಆ ಡಿಪಾರ್ಟ್‌ಮೆಂಟ್‌ನವರಿಗೆ ಹೇಳಬೇಕು ಹೊರತಾಗಿ ನಮಗೆ ಈ ರೀತಿ ಹೇಳಿದರೆ ಹೇಗೆ?

ಶ್ರೀ ಹೆಚ್. ಏಕಾಂತಯ್ಯ : ನೀವು ತಪ್ಪು ತಿಳಿದುಕೊಂಡಿಲ್ಲ ಎಂದು ನಾನು ಭಾವಿಸಿದ್ದೇನೆ. ನಾನು ತಮಗೆ ಹೇಳುವುದು ಏನೆಂದರೆ ಇವತ್ತು ಉದ್ದಾಹರಣೆಗೆ ಬಿ.ಡಿ.ಎ. ಗೆ 500 ಇಲ್ಲವೆ 1000 ಎಕರೆಯನ್ನು ಕೊಡುತ್ತಿರೀ ಒಂದು ಸಾವಿರ ಎಕರೆ ಭೂಮಿಯನ್ನು ತೆಗೆದುಕೊಂಡು ಅದನ್ನು ಯಾವುದಕ್ಕೆ ಉಪಯೋಗಿಸಬೇಕು. ಸ್ವಾಮಿ. ಅದಕ್ಕೆ ತಮ್ಮ ಹಿಡಿತ ಬೇಕಲ್ಲಾ ನೀವು ಕೆಲವು ನಿಬಂಧನೆಗಳನ್ನು ಹಾಕಬೇಕಾಗುತ್ತದೆ. ಭೂಸ್ವಾದೀನದ ಬಗ್ಗೆ ತಾವು ಅನುಮತಿಯನ್ನು ಕೊಡಬೇಕಾದರೆ ಏನು ಭೂಸ್ವಾದೀನದ ಬಗ್ಗೆ ಸಂಬಂಧಪಟ್ಟವರಿಗೆ ನೀವು ನಿವೇಶನಗಳನ್ನು ಮಾಡಿ ಹಂಚಬೇಕೆಂದು ಹೇಳಬೇಕೇ ಹೊರತು ಅವರು ಒಬ್ಬೊಬ್ಬರಿಗೆ 50 ಎಕರೆಯನ್ನು ಕೊಡುವುದಕ್ಕೆ ತಾವು ಪರ್ಮಿಷನನ್ನು ಕೊಡುತ್ತಿರಾ? ದೊಡ್ಡ ದೊಡ್ಡ ಕಂಪನಿಗಳಿಗೆ ಅಥಾವ ದೊಡ್ಡ ದೊಡ್ಡ ಬಂಡವಾಳಶಾಹಿಗಳು ಯೂರು ಇದ್ದಾರೆ ಅವರಿಗೆ ಬಿ.ಡಿ.ಎ. ಏನು ಸ್ವಾಧೀನಪಡಿಸಿಕೊಳ್ಳುತ್ತದೆ. ಆ ಭೂಮಿಯನ್ನು ಒಟ್ಟಾರೆ ಕೊಡುವುದಕ್ಕೆ ತಾವು ಅನುಮತಿಯನ್ನು ಕೊಡುತ್ತೀರಾ? ಆದುದರಿಂದ ನಾನು ತಮಗೆ ಕೇಳುತ್ತಿದ್ದೇನೆ ಇದರ ಮೂಲ ಉದ್ದೇಶ ಏನು ಇದೆ ಇದು ಕರ್ನಾಟಕ ಗೃಹನಿರ್ಮಾಣ ಆಗಿರಬಹುದು ಅಥವಾ ನಗರ ಪ್ರಾಧಿಕಾರಗಳು ಆಗಿರಬಹುದು ಅಥವಾ ಬಿ.ಡಿ.ಎ. ಆಗಿರಬಹುದು. ಇವುಗಳಿಗೆ ಕೊಟ್ಟಂಥ ಭೂಮಿ ಏನು ಇದೆ ಸ್ವಾದೀನ ಪಡಿಸಿಕೊಡಂಥ ಭೂಮಿ ಏನು ಇದೆ ಆ ಭೂಮಿಯನ್ನು ಯಾವ ಉದ್ದೇಶಕ್ಕೋಸ್ಕರ ಸ್ವಾಧೀಸಪಡಿಸಿಕೊಂಡಿದ್ದೇಯೋ ಅದೇ ಉದ್ದೇಶಕ್ಕೆ ಅದು ಉಪಯೋಗವಾಗುತಕ್ಕಂಥ ರೀತಿಯಲ್ಲಿ ತಾವು ನೋಡಬೇಕಾಗುತ್ತದೆ. ಅದು ಅತ್ಯಂತ ಅವಶ್ಯಕ ಎಂಬ ಮಾತನ್ನು ಹೇಳಿ ಈ ಮಸೂದೆಯನ್ನು ನಾನು ಅಷ್ಟರಮಟ್ಟಿಗೆ ನಾನು ಸಮರ್ಥಿಸುತ್ತೇನೆ.

+ ಶ್ರೀ ಬಿ.ಹೆಚ್. ಬನ್ನಿಕೊಡ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೇ ಈಗಾಗಲೇ ಮಾನ್ಯ ಕಂಧಾಯ ಸಚಿವರು ತಂದಿರತಕ್ಕಂಥ ಈ ತಿದ್ದುಪಡಿ ಬಗ್ಗೆ ಹೇಳಬೇಕೆಂದರೆ ಈ ಮೊದಲು ಸೆಕ್ಷನ್ 79 (ಎ) ಮತ್ತು 79 (ಬಿ) ಮತ್ತು 80 ರ ಪರಿಣಾಮ ಏನು ಇತ್ತು ಮತ್ತು ಈ ತಿದ್ದುಪಡಿಯಿಂದ ಆಗಬಹುದಾದಂಥ ಪರಿಣಾಮ ಏನು ಎನ್ನುವುದನ್ನು ಸರ್ಕಾರ ಪೂರ್ಣವಾಗಿ

ವಿವೇಚನೆ ಮಾಡದೇ ಆತುರದಲ್ಲಿ 79(ಎ) ತಿದ್ದುಪಡಿಗೆ ಪೂರಕವಾಗಿ ಈ ತಿದ್ದುಪಡಿಯನ್ನು ಇವತ್ತು ತಂದಿದ್ದಾರೆ. ಆ ಕಾಲದಲ್ಲಿ ತಿದ್ದುಪಡಿಯನ್ನು ತಂದಾಗಲೂ ಸಹಿತ ಹೇಳಿದ್ದೆವು. ಇಲ್ಲಿ ಕೃಷಿಯೇತರ ಉತ್ಪನ್ನ 12 ಸಾವಿರಕ್ಕಿಂತ ಮಿಕ್ಕಿ ಇದ್ದರೆ ಸಾಗುವಳಿ ಜಮೀನನ್ನು ಕೊಳ್ಳುವುದಕ್ಕೆ ಬರುವುದಿಲ್ಲ ಎನ್ನತಕ್ಕಂಥ ಒಂದು ನಿರ್ಬಂಧ 79(ಎ) ರಲ್ಲಿ ಇತ್ತು, ನಂತರ 12 ಸಾವಿರ ರೂಪಾಯಿಗಳಿಂದ 50ಸಾವಿರ ರೂಪಾಯಿಗಳವರೆಗೆ ಕೃಷಿಯೇತರ ಉತ್ಪನ್ನ ಇದ್ದರೂ ಸಹಾ ಕೃಷಿ ಭೂಮಿಯನ್ನು ಕೊಳ್ಳಬಹುದು ಎಂದು ತಿದ್ದುಪಡಿ ಮಾಡಿದ ಕಾಲಕ್ಕೆ ನಾವು ಹೇಳಿದೆವು. ರೈತರಿಗೆ ಮಾತ್ರ ಈ ತರಹದ ನಿರ್ಬಂಧವನ್ನು ಆಗ ಜಮೀನನ್ನು ಮಾರಾಟ ಮಾಡಿದಾಗ ಅವರಿಗೆ ಯೋಗ್ಯ ಬೆಲೆ ಸಿಗದೇ ಇರತಕ್ಕಂಥ ಒಂದು ಕಾನೂನನ್ನು ತಂದಿದ್ದಾರೆ. ಆದರೆ ಉದ್ಯೋಗವತಿಗಳಿಗೆ ದೊಡ್ಡ ಉದ್ಯಮಿಗಳಿಗೆ ಅವರು ಇವತ್ತು ಒಂದಲ್ಲ ನೂರಾರು ದೊಡ್ಡ ಉದ್ಯಮದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಇವತ್ತು ತೊಡಗಿಸಿದರೂ ಸಹಾ ಅವರಿಗೆ ಯಾವುದೇ ನಿರ್ಬಂಧವಿಲ್ಲ, ಈ ರಾಷ್ಟದಲ್ಲಿ ದೇಶದಲ್ಲಿ ಈ ರಾಜ್ಯದಲ್ಲಿಯೂ ಅದೇ ರೀತಿಯಾಗಿದೆ. ಎಷ್ಟೇ ಸಾವಿರ ಕೋಟಿ ರೂಪಾಯಿಗಳನ್ನು ಇವತ್ತು ಇನ್‌ವೆಸ್ಟ್ ಮಾಡಿ ಬಂಡವಾಳವನ್ನು ತೊಡಗಿಸಿ ಅನೇಕ ದೊಡ್ಡ ಉದ್ಯಮಗಳನ್ನು ಮಾಡಿದರೂ ಸಹಿತ ಈ ರೀತಿಯ ನಿರ್ಬಂಧವಿಲ್ಲ. ಅದೇ ಒಬ್ಬ ರೈತ ಕೃಷಿಯೇತರ ಉತ್ಪನ್ನದಲ್ಲಿ ತೊಡಗಿದ್ದರೆ. ಅಂದರೆ, ಯಾರಾದರೂ ಒಬ್ಬ ಸಿಪಾಯಿ ಕೆಲಸವನ್ನು ಮಾಡುತ್ತಿದ್ದರೆ ಯಾರಾದರೂ ಒಬ್ಬ ಸರ್ಕಾರದಲ್ಲಿ ಸಣ್ಣ ನೌಕರಿಯಲ್ಲಿ ಇದ್ದರೂ ಸಹಿತ 12 ಸಾವಿರ ರೂಪಾಯಿಗಳಿಗಿಂತ ಹೆಚ್ಚಿಗೆ ಅವರ ಉತ್ಪನ್ನ ಇದ್ದರೆ ಅವರು ಭೂಮಿಯನ್ನು ಕೊಳ್ಳವುದಕ್ಕೆ ಆಗುವುದಿಲ್ಲ ಎನ್ನತಕಂಥ ನಿರ್ಬಂಧ ಇರುವುದು ನ್ಯಾಯ ಸಮ್ಮತ್ರವಾದುದಲ್ಲ. ಸಂವಿಧಾನದ ಪ್ರಕಾರ ಇದು ತಾರತಮ್ಯವನ್ನು ಮಾಡತಕ್ಕಂಥದ್ದು ಇದೆ. ಈ ಕಲಂನ್ನು ತೆಗೆದು ಹಾಕಬೇಕು ಎಂದು ಮಾನ್ಯ ಸಚಿವರಿಗೆ ನಾವು ಹೇಳಿದೆವು ಏತಕ್ಕೆ ಈ ನಿರ್ಬಂಧ ರೈತರ ಬಗ್ಗೆ ಈ ಕಾನೂನಿನಲ್ಲಿ ಇರಬೇಕು. ಇದನ್ನು ತೆಗೆದುಹಾಕಬೇಕು. ಒಂದು ಲಕ್ಷ ರೂಪಾಯಿಗಳವರೆಗೆ ಹೆಚ್ಚು ಮಾಡುತ್ತೇವೆ ಎಂದು ಹೇಳಿ ಆಶ್ವಾಸನೆಯನ್ನು ಕೊಟ್ಟಿದ್ದರು ಅದನ್ನು ಸಹ ಮಾಡಲಿಲ್ಲ ಆ ಕಾಲಂನ್ನು ತೆಗೆದುಹಾಗುತ್ತೇವೆ ಎಂದು ಹೇಳಿದ್ದರು. ಅದನ್ನು ತೆಗೆದುಹಾಗಿಲ್ಲ, ಇದು ರೈತಡ ಬಗ್ಗೆ ಸರ್ಕಾರ ಮಾಡತಕ್ಕಂಥ ಅಪಚಾರ ಉದ್ದಿಮೇದಾರರ ಬಗ್ಗೆ ಒಂದು ತರಹ ಈ ರೈತರ ಬಗ್ಗೆ ಮತ್ತೊಂದು ರೀತಿಯ ತಾರತಮ್ಯ ಮಾಡುವುದನ್ನು ಬಿಟ್ಟು ಸೆಕ್ಷನ್ 79(ಎ) ಅನ್ನು ಸರ್ಕಾರ ತೆಗೆದುಹೋಕುವುದಕ್ಕೆ ಮನಸ್ಸು ಮಾಡಬೇಕೆಂದು ಹೇಳುತ್ತೇನೆ. ಇಲ್ಲಿ 79 (ಬಿ) ಮತ್ತು 80 ರಲ್ಲಿ ತಂದಂತಹ ತಿದ್ದುಪಡಿ ಅಂದರೆ ಗೃಹ ನಿರ್ಮಾಣ ಮಂಡಳಿ ಮತ್ತು ಉಳಿದ ಸಂಘಗಳು ವಾಸದ ಮನೆಗಳನ್ನು ಕಟ್ಟಲಿಕ್ಕೆ ಉಪಯೋಗಿಸಬಹುದು ಎಂಬುದು ನಿಜವಾಗಿಯೂ ಸ್ವಾಗತಾರ್ಹವಾದುದು ಅನೇಕ ಜನ ಈ ಕಾನೂನಿಗೆ ವಿರುದ್ಧವಾಗಿ ನಡೆದುಕೊಡಿದ್ದರೂ ಸಹ ಅವರಿಗೆ ರಕ್ಷಣೆ ಮಾಡತಕ್ಕ ವಿಚಾರವನ್ನು ಹೇಳದೆ ಹೋದರೆ ತಪ್ಪಾಗಬಹುದು ಈಗಾಗಲೇ ಕಾನೂನು ಬಾಹಿರವಾಗಿ ಅನೇಕ ಸಂಘಸಂಸ್ಥೆ ಗಳವರು ಇದನ್ನು ಮಾಡಿದ್ದಾರೆ. ಅವರ ರಕ್ಷಣೆಯು ಸಹಿತ ಇದರಲ್ಲಿ ಅಡಗಿದೆ. ಮುಂದಿನ ವ್ಯವಹಾರಗಳಿಗೆ ಇದು ಒಳ್ಳೆಯದಿದ್ದರೂ ಸಹಿತ ಈಗಾಗಲೇ ತಪ್ಪು ಮಾಡಿದಂತಹವರನ್ನು ರಕ್ಷಣೆ ಮಾಡಲಿಕ್ಕೆ ಸರ್ಕಾರ ಮುಂದಾಗಿದೆ ಎನ್ನುವ ಮಾತನ್ನು ಹೇಳದೇ ಇರಲಿಕ್ಕೆ ಆಗುವುದಿಲ್ಲ. ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾದುದೆಂದು ಅಥವಾ ಕೈಹಾಕಲೆಂದು ಭಾವಿಸುವಂತಹ ತಿದ್ದುಪಡಿ ಇದಾಗಿದೆ ಎಂದು ಹೇಳಿದ್ದಾರೆ. ಆದರೆ 79 (ಎ) ನಲ್ಲಿ ಇದನ್ನು ಹೇಳಿಲ್ಲ, ಇದನ್ನು ಪೂರ್ವಾನ್ವಯವಾಗಿ ಜಾರಿಗೆ ಮಾಡಬೇಕೆಂದು ನಾವು ಹೇಳಿದೆವು. ಅನೇಕ ವ್ಯಾಜ್ಯಗಳು ಇವತ್ತು ಕೋರ್ಟಿನಲ್ಲಿವೆ. ತಹಶೀಲ್ದಾರ್‌ರ ಹತ್ತಿರ ಇವೆ ಎ.ಸಿ. ಯವರ ಹತ್ತಿರ ಇವೆ ಡಿ.ಸಿ. ಯವರ ಹತ್ತಿರ ಇವೆ ಟ್ರಿಬ್ಯೂನಲ್‌ನಲ್ಲಿ ಇವೆ. 12 ಸಾವಿರಕ್ಕಿಂತ ಹೆಚ್ಚು ಉತ್ಪನ್ನ ಇದ್ದವರು ಜಮೀನನ್ನು ಕೊಂಡರು. ಅದಕ್ಕೆ ನಿರ್ಭಧ ಇತ್ತು ಈಗ 79(ಎ) ಗೆ ತಿದ್ದುಪಡಿ ಆದರೂ ಅದರ ಪ್ರಯೋಜನ ಸಿಗುತ್ತಿಲ್ಲ ಆದ್ದರಿಂದ ಇದನ್ನು ಪೂರ್ವಾನ್ವಯವಾಗಿ ಜಾರಿಗೆ ಕೊಡಬೇಕು. ಇರತಕ್ಕ ವ್ಯಾಜ್ಯಗಳನ್ನು

ಕೊನೆಗೊಳಿಸಬೇಕೆಂದು ವಿನಂತಿ ಮಾಡಿಕೊಂಡು ಈ ಒಂದು ತಿದ್ದುಪಡಿ ಸಮಗ್ರವಾಗಿ ಎಲ್ಲರ ಹಿತವನ್ನು ಕಾಯುತ್ತಿಲ್ಲ ಎನ್ನುವಂತಹ ದೃಷ್ಟಿಯಿಂದ ನಾನು ಇದನ್ನು ವಿರೋಧ ಮಾಡುತ್ತಿದ್ದೇನೆ.

+ಶ್ರೀ ಸಿ. ಬೈರೇಗೌಡ : (ವೇಮ್‌ಗಲ್) ಮಾನ್ಯ ಅಧ್ಯಕ್ಷರೆ, ಈ ಭೂಸುಧಾರಣಾ ಕಾನೂನಿಗೆ ತಂದಿರತಕ್ಕ ತಿದ್ದುಪಡಿಯನ್ನು ನಾನು ಸ್ವಾಗತಿಸುತ್ತೇನೆ. ಕಾರಣವೇನೆಂದರೆ ಗ್ರಾಮಾಂತರ ಪ್ರದೇಶಗಳಲ್ಲೂ ಮತ್ತು ನಗರ ಪ್ರದೇಶಗಳಲ್ಲೂ ಇವತ್ತು ನಿವೇಶನಗತಳನ್ನು ಮಾಡಿ, ಕೋಟ್ಯಾಂತರ ರೂಪಾಯಿಯ ಹಗಲು ದರೋಡೆಯನ್ನು ಮಾಡುವುದಕ್ಕೆ ಈ ರೀತಿಯಾದಂತಹ ಕಾನೂನುಗಳು ಏನಿವೆ, ಇವು ಅಡ್ಡಿಬರುತ್ತಿದ್ದವು. ಇಲ್ಲಿಯವರೆಗೂ ದರೋಡೆಗಾರರಿಗೆ ಸಹಕಾರಿಯಾಗುವಂತಹ ಕಾನೂನು ಇತ್ತು. ಅದನ್ನು ತೆಗೆಯತಕ್ಕಂಥಹ ಪ್ರಯತ್ನವನ್ನು ಮಾಡುತ್ತಿದ್ದಾರೆ. ಆದ್ದರಿಂದಲೇ ನಾನು ಇದನ್ನು ಸ್ವಾಗತ ಮಾಡುತ್ತಿದ್ದೇನೆಂದು ಹೇಳುತ್ತಿರುವುದು. ಭೂಸುಧಾರಣಾ ಕಾನೂನಿನಲ್ಲಿ ವ್ಯಕ್ತಿಗಳು ಅಲ್ಲದೆ ಇರತಕ್ಕವರು ವ್ಯವಸಾಯ ಭೂಮಿಯನ್ನು ಹೊಂದುವುದಕ್ಕೆ ಅವಕಾಶವಿಲ್ಲ. ಆದರೆ ವ್ಯವಸಾಯೇತರ ಭೂಮಿಯನ್ನು ವ್ಯಕ್ತಿಗಳಲ್ಲದೆ ಇರತಕ್ಕವರು non-individuals can own non-agricultural land.

ಆದರೆ ವ್ಯಕ್ತಿತಗಳಾಗಿರತಕ್ಕವರು ಮಾತ್ರ ವ್ಯವಸಾಯ ಭೂಮಿಯನ್ನು ಹೊಂದುವುದಕ್ಕೆ ಅವಕಾಶವಿತ್ತು. ತೊಡಕಿನಿಂದ ಆ ದುರುಪಯೋಗಪಡಿಸಿಕೊಂಡು ಇವತ್ತು ಬೆಂಗಳೂರು ಸುತ್ತ ಮುತ್ತ ಅಲ್ಲ, ದೊಡ್ಡ ದೊಡ್ಡ ಬೇರೆ ನಗರ ಪ್ರದೇಶಗಳ ಸುತ್ತಮುತ್ತಲೂ ಸಹ ರಾಕೆಟಿಂಗ್ ಏನೂ ನಡೆಯುತ್ತಿತ್ತು. ಅದಕ್ಕೆ ಸಹಾಯಕವಾದ ರೀತಿ ಕಾನೂನು ಇತ್ತು. ಅದನ್ನು ಈಗ ತಿದ್ದುಪಡಿ ಮಾಡುತ್ತಿದ್ದಾರೆ. ಆದರಿಂದಲೇ ನಾನು ಇದನ್ನು ಸ್ವಾಗತ ಮಾಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದು 12ಸಾವಿರಕ್ಕಿಂತ ಮೇಲೆ ವರಮಾನ ಇರುವವರಿಗೆ ಹೊಸದಾಗಿ ಭೂಮಿಯನ್ನು ಕೊಂಡು ಕೊಳ್ಳುವಂತಹ ಅವಕಾಶ ಆಗ ಇರಲಿಲ್ಲ. ಈಗಿರತಕ್ಕ ಭೂಸುಧಾರಣಾ ತಿದ್ದುಪಡಿ ಕಾನೂನು 1974ರಲ್ಲಿ ಜಾರಿಗೆ ಬಂತು. ಈ ತಿದ್ದುಪಡಿ ಕಾನೂನು ಜಾರಿಗೆ ಬಂದಂತಹ ಕಾಲದಲ್ಲಿ ಮಾನ್ಯ ಹುಚ್ಚಮಾಸ್ತಿಗೌಡರು ಕಂದಾಯ ಮಂತ್ರಿಗಳಾಗಿದ್ದರು. ಖರ್ಗೆಯವರು ಸಹ ಇದೇ ವಿಧಾನ ಸಭೆಯಲ್ಲಿದ್ದರು. ನಾವು ಸಹ ವಿರೋಧ ಪಕ್ಷದಲ್ಲಿ ಇಲ್ಲೇ ಕುಳಿತ್ತಿದ್ದೆವು. ಅವತ್ತು ಇಡೀ ದೇಶಾದ್ಯಂತ ಒಬ್ಬ ವ್ಯಕ್ತಿಗೆ ಒಂದೇ ಉದ್ಯೋಗ ಎಂಬ ನೀತಿ ಆಗ ಪ್ರಚಲಿತವಾಗಿತ್ತು. ಆ ಕಾನೂನಿಗೆ ಅನುಸಾರವಾಗಿ ವ್ಯವಸಾಯೇತರರು ಅವರ ಆದಾಯ 12 ಸಾವಿರಕ್ಕಿಂತ ಮೇಲೆ ಇದ್ದರೂ ಸಹ ಅವರು ವ್ಯವಸಾಯದಲ್ಲಿ ಹಣವನ್ನು ತೊಡಗಿಸಿ, ಬ್ಲಾಕ್‌ಮನಿಯನ್ನು ಜನರೇಟ್ ಮಾಡತಕ್ಕ ಬದಲು, ವ್ಯವಸಾಯದಲ್ಲಿ ಅದನ್ನು ತೊಡಗಿಸಿ ಬ್ಲಾಕ್‌ಮನಿಯನ್ನು ವೈಟ್ ಮನಿ ಮಾಡುತ್ತಾರೆ ಎನ್ನತಕ್ಕ ಒಂದು ಪ್ರತೀತಿ ಇತ್ತು. ಅದಕ್ಕೆ ಅವಕಾಶ ಕೊಡಬಾರದು ಎನ್ನುವ ಕಾರಣಕ್ಕೋಸ್ಕರ 12 ಸಾವಿರ ರೂಪಾಯಿಯ ಮಿತಿಯನ್ನು ಹಾಕಿರತಕ್ಕದ್ದು. ಈಗ ಕಾಲ ಬದಲಾವಣೆಯಾಗಿದೆ. ಈಗ ರೂಪಾಯಿಯ ಬೆಲೆ ಏನಾಗುತ್ತಿದೆ ಎಂದು ಪ್ರತಿನಿತ್ಯ ನಮಗೆ ಅರ್ಥವಾಗುತ್ತಿದೆ. ಈಗ ಇದನ್ನು 12 ಸಾವಿರದಿಂದ 50 ಸಾವಿರಕ್ಕೆ ಏರಿಸಿದ್ದಾರೆ. ಇದು ಸಹ ಸಾಕಾಗತುವುದಿಲ್ಲ. ವಾಸ್ತವಾಂಶವನ್ನು ಗಮನಿಸಿದರೆ ಇದು ಸಾಕಾತಗುವುದಿಲ್ಲ. ಕನಿಷ್ಟ ಇದನ್ನು ಒಂದು ಲಕ್ಷ ರೂ.ಗಳಿಗೆ ಏರಿಸಿ ಎಂದು ಒತ್ತಾಯ ಮಾಡುತ್ತಿದ್ದೇವೆ. ಮಾನ್ಯ ಕಂದಾಯ ಸಚಿವರು ಇದರಲ್ಲಿ ಏಕೆ ಚೌಕಾಸಿ ಮಾಡುತ್ತಿದ್ದಾರೆಂದು ಗೊತ್ತಾಗುತ್ತಿಲ್ಲ. ಈ ರೀತಿ ದಯವಿಟ್ಟು ಮಾಡಬಾರದೆಂದು ಅವರನ್ನು ಕೇಳುತ್ತೇನೆ. ಇದರಿಂದ ನಿಮಗೆ ಯಾವ ಪ್ರಯೋಜನವೂ ಆಗುವುದಿಲ್ಲ. ಅನೈತಿಕವಾಗಿ ಅಕ್ರಮವಾಗಿ ಹಣವನ್ನು ಸಂಪಾದನೆ ಮಾಡಿಕೊಳ್ಳಲು ಇಂತಹ ಕಾನೂನುಗಳು ಸಹಕಾರಿಯಾಗುತ್ತದೆ. ಅದನ್ನು ತೊಡದುಹಾಕುವ ಅವಶ್ಯಕತೆ ಇದೆ ಎಂಬ ಮಾತನ್ನು ಒತ್ತಿ ಒತ್ತಿ ಹೇಳಬಯಸುತ್ತೇನೆ. ಮತ್ತೆ ತಗ್ರಾಮಾಂತರ ಪ್ರದೇಶದಲ್ಲಿ ಈ ಭೂಸುಧಾಕಣಾ ಕಾನೂನು ಬಹಳ ಯಶಸ್ವಿಯಾಗಿ ಜಾರಿಯಾಗಿದೆ. ಅದು ಭೂಮಿತಿಯನ್ನು ನಿಷ್ಕರ್ಷೆ ಮಾಡುವಂಥ ವಿಚಾರದಲ್ಲಿ ಇರಬಹುದು, ಅಥವಾ ಗೇಣೀಯನ್ನು ನಿಷ್ಕರ್ಷೆ ಮಾಡಿ ಕೊಟ್ಟಿರುವುದು ಇರಬಹುದು, ಗೇಣೀದಾರರನ್ನು ಭೂ

ಒಡೆಯರನ್ನಾಗಿ ಮಾಡಿರುವಂಥ ಕಲಂ ಇರಬಹುದು. ಇವೆಲ್ಲಾ ಕಲಂಗಳು ಗ್ರಾಮಾಂತರ ಪ್ರದೇಶದಲ್ಲಿ ಬಹಳ ಯಶಸ್ವಿಯಾಗಿ ಜಾರಿಯಾಗಿದೆ. ಆದರೆ ಬೆಂಗಳೂರಿನ ಸುತ್ತಮುತ್ತ ಅಂದರೆ ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕುಗಳಲ್ಲಿ ಈ ಭೂಸುಧಾರಣಾ ಕಾನೂನನ್ನು ಉಲ್ಲಂಘನೆ ಮಾಡಿರುವ ಸಾವಿರಾರು ಪ್ರಕರಣಗಳು ಇವೆ. ಬೆಂಗಳೂರು ಉತ್ತರ ಹಗೂ ದಕ್ಷಿಣ ತಾಲ್ಲೂಕುಗಳಲ್ಲಿ ಮತ್ತು ದೇವನಹಳ್ಳಿ ತಾಲ್ಲೂಕಿಗೆ ಸಂಬಂಧ ಪಟ್ಟಹಾಗೆ ಈ ಭೂಸುಧಾರಣಾ ಕಾನೂನನ್ನು ಉಲ್ಲಂಘನೆ ಮಾಡಿರುವಂಥ ಪ್ರಕರಣಗಳು ಎಷ್ಟು ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ತನಿಖೆ ಆಗಬೇಕೆಂದು ನಾನು ಸತತವಾಗಿ ಒತ್ತಾಯ ಮಾಡುತ್ತಿದ್ದೇನೆ. ಇದನ್ನು ಮಾಡಿದರೆ ಬಹಳ ದೊಡ್ಡ ಜನರು ಸಿಕ್ಕಿಕೊಳ್ಳುತ್ತಾರೆ. ಎಂದೂ ಸರ್ಕಾರಕ್ಕೆ ಇದಕ್ಕೆ ಕೈಹಾಕಲು ಮನಸ್ಸು ಇಲ್ಲ, ಕಾರಣ ಏನೆಂದರೆ, ಇಂದು ಸರ್ಕಾರ ನಡೆಸುವಂಥ ಅನೇಕರು ಇದರಲ್ಲಿ ಸಿಕ್ಕಿಬೀಳುತ್ತಾರೆ ಎಂದು.

ಶ್ರೀಮತಿ ಮೋಟಮ್ಮ : ನಿಮ್ಮ ಕಾಲದಲ್ಲಿ ಇದು ಆಗಿಲ್ಲವೇ?

ಶ್ರೀ ಸಿ. ಬೈರೇಗೌಡ : ಆದುದರಿಂದಲೇ ನಾನು ಸತತವಾಗಿ ಎಂದು ಹೇಳಿದ್ದೇನೆ. ಇಂತಹ ಜನರನ್ನು ರಕ್ಷಣೆ ಮಾಡುವಂಥ ಪ್ರಯತ್ನ ಸತತವಾಗಿ ನಡೆದಿದೆ. ಬೆಂಗಳೂರು ಜಿಲ್ಲೆ ಮುಖ್ಯವಾಗಿ ಗ್ರಾಮಾಂತರ ಮತ್ತು ನಗರ ಜಿಲ್ಲೆಯಲ್ಲಿ ಈ ಭೂಸುಧಾರಣ ಕಾನೂನನ್ನು ಉಲ್ಲಂಘನೆ ಮಾಡಿರುವ ಸಾಕಷ್ಟು ಪ್ರಕರಣಗಳು ಇವೆ. ಇದನ್ನು ಮಾನ್ಯ ಕಂದಾಯ ಸಚಿವರು ಬೆಳಕಿಗೆ ತರಬೇಕೆಂದು ಹೇಳುತ್ತೇನೆ. ಈ ಬಗ್ಗೆ ಇರುವಂತಹ ಕಾನೂನನ್ನು ಜಾರಿಮಾಡದೇ ಇರುವಂಥದ್ದಕ್ಕೆ ಕಾರಣವಾದರೂ ಏನು? ಇದರ ಬಗ್ಗೆ ಈ ಸದನದಲ್ಲಿ ಎರಡನೇ ಅಥವಾ ಮೂರನೇ ಸಲ ಪ್ರಸ್ತಾಪ ಮಾಡುತ್ತಿದ್ದೇನೆ. ಆದರೆ ಅದಕ್ಕೆ ಪ್ರತಿಫಲ ಸಿಗುತ್ತಿಲ್ಲ. ಯಾರು ಈ ಕಾನೂನನ್ನು ಉಲ್ಲಂಘನೆ ಮಾಡಿದ್ದಾರೆ, ಅಂಥವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು. ಅಂಥ ಪ್ರಕರಣಗಳನ್ನು ಬೆಳಕಿಗೆ ತರಬೇಕು.

ಈ ಕಾನೂನನ್ನು ಸರ್ಕಾರ ತ್ವರಿತಗತಿಯಲ್ಲಿ ಜಾರಿಗೆ ತಂದೆ, ಮತ್ತು ಪ್ರಾಮಾಣಿಕವಾಗಿ ಆಗಿ ಕಾರ್ಯಗತ ಮಾಡಿದರೆ, ಒಂದು ವರ್ಷ ಸರ್ಕಾರವನ್ನು ನಡೆಸಬಹುದಾದಷ್ಟು ಹಣ ಸರ್ಕಾರದ ಬೊಕ್ಕಸಕ್ಕೆ ಬರುತ್ತದೆ, ಒಂದು ವರ್ಷದ ಬಜೆಟ್ ಹಣ ಎಷ್ಟಿದೆ, ಅಷ್ಟು ಹಣ ಕೇವಲ ಬೆಂಗಳೂರು ಜಿಲ್ಲೆಯೊಂದರಿಂದಲೇ ಬರುವುದಕ್ಕೆ ಅವಕಾಶ ಇದೆ. ಆದ್ದರಿಂದ ದಯವಿಟ್ಟು ಈ ಕಾನೂನನ್ನು ಜಾರಿ ಮಾಡಿ. ಬೆಂಗಳೂರು ಸುತ್ತಮುತ್ತ ಇದಕ್ಕೆ ಸಂಬಂಧಪಟ್ಟಂತೆ ಬೇರೆ ಒಂದು ಕಾನೂನು ಇಲ್ಲ, ಹಳ್ಳಿಗಳ ಸುತ್ತಮುತ್ತ ಇರುವಂಥ ಕಾನೂನೇ ಬೆಂಗಳೂರಿನಲ್ಲಿ ಇರುವಂಥದ್ದು. ಆದುದರಿಂದ ಈ ಕಾನೂನಿನಲ್ಲಿ ವಯೋಲೇಷನ್ ಆಗಿರುವಂಥ ಸೆಕ್ಷನ್ ಏನಿದೆ ಇದರ ಬಗ್ಗೆ ಬೆಳಕನ್ನು ಚೆಲ್ಲಬೇಕೆಂದು ಮಾನ್ಯ ಕಂದಾಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ಇಲ್ಲದಿದ್ದರೂ ಬೇರೆ ಸಂದರ್ಭದಲ್ಲಿ ಇದರ ಬಗ್ಗೆ ಬೆಳಕನ್ನು ಚೆಲ್ಲಬೇಕೆಂದು ಮಾನ್ಯ ಕಂದಾಯ ಸಚಿವರಲ್ಲಿ ಒತ್ತಾಯ ಮಾಡುತ್ತಾ, ಇಷ್ಟು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

4.00 ಪಿ.ಎಂ

+ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಅಧ್ಯಕ್ಷಣೆಯವರೇ, ನಾನು ಇದನ್ನು ವಿರೋಧ ಮಾಡುತ್ತಿಲ್ಲ. ಆದರೆ, ಈಗ 12,000 ಇನ್‌ಕಮ್ ಲಿಮಿಟ್ ಏನಿತ್ತು? ಅದನ್ನು 50,000ಕ್ಕೆ ಹೆಚ್ಚು ಮಾಡಿದ್ದಾರೆ. ಆದರೆ 50,000 ಇನ್‌ಕಮ್ ಲಿಮಿಟ್ ಇರಬಾರದು, ಇದನ್ನು ತೆಗೆದು ಹಾಕಬೇಕಾಗುತ್ತದೆ. ಏಕೆಂದರೆ, ಅದರೂ ಒಂದು ಸಮಯದಲ್ಲಿ ಅವಶ್ಯಕತೆ ಇತ್ತು. ಯಾವಾಗ ದಿನಾಂಕ 1.3.74ರಲ್ಲಿ ಭೂ ಸುಧಾರಣಾ ಕಾಯಿದೆ ಜಾರಿಗೆ ಬಂತು, ಒಂದು ಕ್ರಾಂತಿಕಾರಿ ಅಮೆಂಡ್‌ಮೆಂಟ್ ಅನ್ನು ದಿವಂಗತ ದೇವರಾಜ್ ಅರಸ್‌ರವರು ತಂದಾಗ ಇದರ

ಅವಶ್ಯಕತೆ ಇತ್ತು, ಆದರೆ, ಇವೊತ್ತು ಕೆಲವು ಕಡೆ ಹಳ್ಳಿಗಳಲ್ಲಿ ಭೂಮಿ ಸಾಗುಮಾಡಲಿಕ್ಕೆ ಜನರು ಸಿಗುತ್ತಿಲ್ಲ, ಆದರಲ್ಲಿ ನಾವು ಸೀಲಿಂಗ್ ಹಾಕಿದ್ದೇವೆ. ಹೆಚ್ಚೆಂದರೆ, ಹತ್ತು ಎಕರೆ 'ಎ' ಕ್ಲಾಸ್ ಲ್ಯಾಂಡ್ ಮತ್ತು 54 ಎಕರೆ 'ಡಿ' ಕ್ಲಾಸ್ ಲ್ಯಾಂಡ್ ಒಬ್ಬರು ಇಟ್ಟುಕೊಳ್ಳಬಹುದು ಇದರ ಮೇಲೆ ಯಾರಿಗೂ ಒಂದು ಇಂಚು ಲ್ಯಾಂಡ್ ಅನ್ನು ರಿಸರ್ವ್ ಮಾಡುವುದಕ್ಕಾಗುವುದಿಲ್ಲ. ಇವೊತ್ತು ನಾವು ಸೀಲಿಂಗ್ ಹಾಕಿ ಹಿಡುವಳಿ ಮೇಲೆ ಒಂದು ಅಗ್ರಿಕಲ್ಚರಿಸ್ಟ್ ಆಗಬೇಕಾದರೆ ಅಥವಾ ಭೂಮಿ ಪರ್ಚೇಸ್ ಮಾಡಬೇಕಾದರೆ, other than ಅಗ್ರಿಕಲ್ಚರ್ ಸೋರ್ಸ್ , ತಾವು 50,000 ಇನ್‌ಕಮ್ ಏನು ಮಾಡುತ್ತೀರಿ ಅದು ಸರಿಯಲ್ಲ. ಏಕೆಂದರೆ, ಇವೊತ್ತು 50,000 ಇನ್‌ಕಮ್ ಎಂದರೆ ಹೆಚ್ಚೇನಲ್ಲ. ಹಾಗಾಗಿ, ಇಂದು ಮಹಾರಾಷ್ಟ್ರದಲ್ಲಿ ಟೆನೆನ್ಸಿಯಲ್ಲಿ ಒಳ್ಳೆಯ ಪ್ರೋಗ್ರೆಸ್ ಮಾಡಿದ್ದಾರೆ. ಆದರೆ, ಅಲ್ಲಿ ಈ ರೀತಿ ಯಾವುದೇ ತರಹದ ಇನ್‌ಕಮ್ ಲಿಮಿಟ್ ಇಲ್ಲ. ಗೋವಾದಲ್ಲಿ ಇನ್‌ಕಮ್ ಲಿಮಿಟ್ ಇಲ್ಲ. ತಮಿಳುನಾಡಿನಲ್ಲಿ ಇನ್‌ಕಮ್ ಲಿಮಿಟ್ ಇಲ್ಲ. ಆದರೆ, ಕರ್ನಾಟಕದಲ್ಲಿ ಮಾತ್ರ ಇನ್‌ಕಮ್ ಲಿಮಿಟ್ ಹಾಕಿ ಏನು ಸಾಧನೆ ಮಾಡುವುದಕ್ಕೆ ತಾವು ಹೊರಟಿದ್ದೀರಿ ಎಂದು ನಾನು ಕೇಳುತ್ತಿದ್ದೇನೆ. ತಾವು 12,000 ವನ್ನು ನಿಜವಾಗಿಯೂ, ಟೋಟಲ್ ಇನ್‌ಕಮ್ ಅನ್ನು ಅಬಾಲಿಶ್ ಮಾಡಿದರೆ, ನಾನು ನಿಜವಾಗಿಯೂ ನಿಮ್ಮನ್ನು ಮೆಚ್ಚುತ್ತೇನೆ. ಇವೊತ್ತು ನೀವು ಪುನಃ ಇನ್‌ಕಮ್ ಲಿಮಿಟ್ ಹಾಕಿದರೆ, ಪುನಃ ಫಾಲ್ಸ್ ಸರ್ಟಿಫಿಕೇಟ್, ಫಾಲ್ಸ್ ಡಿಕ್ಲರೇಶನ್ ಬರುತ್ತದೆ. ಇದನ್ನು ತಾವು ಪುನಃ ಪರಿಶೀಲನೆ ಮಾಡಬೇಕು ಮತ್ತು ಟೋಟಲ್ ಇನ್‌ಕಮ್ ಅನ್ನು ತೆಗೆದುಹಾಕಿದರೆ ಬಹಳ ಒಳ್ಳೆಯದಾಗಬಹುದು. ಎಷ್ಟೋ ಜನರು ಏನು ಮಾಡುತ್ತಾರೆಂದರೆ, ತಾವು 50,000 ಇನ್‌ಕಮ್ ಲಿಮಿಟ್ ಹಾಕಿದರೆ ಅದಕ್ಕಾಗಿ ಸುಳ್ಳು ಸರ್ಟಿಫೀಕೇಟ್ ತರುವುದು, ಮತ್ತೊಂದು ಮಾಡುವುದು ಆಗುತ್ತದೆ ಮತ್ತು ಯಾರೂ ಸಹ ಉಳುಮೆ ಮಾಡುವುದಿಲ್ಲ. ಇದರ ಬಗ್ಗೆ ಎನ್‌ಕರೇಜ್ ಮಾಡಲಿಕ್ಕೆ ಏನು ತೊಂದರೆ ಇದೆ? ಇವತ್ತು ಎಷ್ಟೋ ಹಳ್ಳಿಗಳಲ್ಲಿ ಭೂಮಿ ಮಾಡಲಿಕ್ಕೆ ಜನರು ಸಿಗುತ್ತಿಲ್ಲ. ಆ ಜನರಿಗೆ ಎನಕರೇಜ್ ಮಾಡಿದರೆ ತೊಂದರೆಯಿಲ್ಲ ಬಿರ್ಲಾ ಆಗಲಿ, ಟಾಟಾ ಆಗಲಿ, ಆರ್.ವಿ. ದೇಶಪಾಂಡೆ ಆಗಲಿ ಅಥವಾ ಖರ್ಗೆಯವರಾಗಲಿ 'ಡಿ' ಕ್ಲಾಸ್ ಲ್ಯಾಂಡ್‌ನ್ನು 54 ಎಕರೆ ಮೇಲೆ ತೆಗೆದುಕೊಳ್ಳುವುದಕ್ಕಾ ಗುವುದಿಲ್ಲ. concentration of property ಇವರ ಕೈಯಲ್ಲಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೋಸ್ಕರ, ಇನ್‌ಕಮ್ ಲಿಮಿಟ್ ಅನ್ನು ತೆಗೆಯಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ. ಅದೇ ಪ್ರಕಾರವಾಗಿ ಹೌಸಿಂಗ್ ಬೋರ್ಡ್, ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಮತ್ತು ಕರ್ನಾಟಕ ಇಂಡಸ್ಟ್ರಿಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ they can hold land ಎಂದು ತಿದ್ದುಪಡಿ ತಂದಿದ್ದೀರಿ. ನನಗೆ ಒಂದೇ ಒಂದು ಭಯ. ಮಾನ್ಯ ಸಚಿವರ ಉದ್ದೇಶವೇನೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ನನ್ನ ಭಯವೇನೆಂದರೆ, ಇವೊತ್ತು ದಿನೇದಿನೇ ಅಗ್ರಿಕಲ್ಚರ್ ಲ್ಯಾಂಡ್ಸ್ ಕಡಿಮೆಯಾಗುತ್ತಿದೆ. Agricultural land on the earth is restricted. ಅದನ್ನು ಹೆಚ್ಚು ಮಾಡುವುದಕ್ಕಾಗುವುದಿಲ್ಲ. ಇವೊತ್ತು ಅಗ್ರಿಕಲ್ಚರ್ ಲ್ಯಾಂಡ್ ಕನ್ವರ್ಟ್ ಆಗುತ್ತಾ ಆಗುತ್ತಾ ನ್ಯಾಷನಲ್ ಪ್ರಾಬ್ಲಮ್ ಕ್ರಿಯೇಟ್ ಆಗಬಹುದು ಆಹಾರದ ಉತ್ಪಾದನೆ ಸಮಸ್ಯೆ ಕ್ರಿಯೇಟ್ ಆಗಬಹುದು. ಹಾಗಾಗಿ, ನಾಳೆ ಹೌಸಿಂಗ್ ಬೋರ್ಡಿನವರು, ಇಂಡಸ್ಟ್ರಿಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡಿನವರು, ಬಿಡಿಎನವರು ವ್ಯವಸಾಯದ ಜಮೀನನ್ನು for the purpose of housing acquire ಮಾಡುತ್ತಾ ಹೋದರೆ ಒಂದು ಸ್ಟೇಜ್ ಬರಬಹುದು. ಬೆಂಗಳೂರು ಸುತ್ತ-ಮುತ್ತ, ಪ್ರತಿಯೊಂದು ಪಟ್ಟಣದಲ್ಲೂ, ಅದು ಬೆಳಗಾಂ ಇರಬಹುದು, ಹುಬ್ಬಳ್ಳಿ ಇರಬಹುದು, ಅಥವಾ ಒಂದು ಸಣ್ಣ ಪಟ್ಟಣ ಇರಬಹುದು ಇವುಗಳ ಸುತ್ತ-ಮುತ್ತವಿರುವ ಎಲ್ಲ ಅಗ್ರಿಕಲ್ಚರಲ್ ಲ್ಯಾಂಡ್ ಹೋಗುತ್ತದೆ, ಆಗ ಬಹಳಷ್ಟು ಸಮಸ್ಯೆಗಳು ನಿರ್ಮಾಣವಾಗಬ ಹುದು. 'ಒಂದು ಅಗ್ರಿಕಲ್ಚರಲ್ ಲ್ಯಾಂಡ್ ಎಷ್ಟು ಇಡಲಿಕ್ಕೆ ಸಾಧ್ಯವೋ ಅಷ್ಟನ್ನು ಇಡಲು ನಾವು ಪ್ರಯತ್ನ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಇವೊತ್ತು ಹೌಸಿಂಗ್ ಬೋರ್ಡ್‌ಗೆ, ಇಂಡಸ್ಟ್ರಿಯಲ್

ಏರಿಯಾ ಡೆವಲಪ್‌ಮೆಂಟ್ ಭೋರ್ಡ್ ಮತ್ತು ಬಿಡಿಎಗಳಿಗೆ ಏನು ಅಧಿಕಾರ ಕೊಡುತ್ತಿದ್ದೀರಿ, ಅದರ ಬಗ್ಗೆ ತಾವು ಪುನರ್ ಪರಿಶೀಲನೆ ಮಾಡಬೇಕು. ಅವರು ಎಷ್ಟು ಲ್ಯಾಂಡನ್ನು ಅವರು ಹೋಲ್ಡ್ ಮಾಡಬೇಕು ಎಂಬ ಬಗ್ಗೆ ಒಂದು ರಿಸ್ಟ್ರಿಕ್ಷನ್ ಇರಬೇಕು. ಅದು ಎಲ್ಲಿರಬೇಕು ಎಂಬುದನ್ನು ತಾವು ತಿಳಿಸಬೇಕು. ಕೊನೆಯ ಪಕ್ಷ ಒಂದು ಪಟ್ಟಣದಿಂದ ಇಷ್ಟು ಕಿಲೋಮೀಟರ್‌ವರೆಗೆ ಇರಬಾರದು ಎಂದು ರಿಸ್ಟ್ರಿಕ್ಷನ್ ಇರಬೇಕು. ಇಲ್ಲವೆಂದರೆ, ನಾವು ಲ್ಯಾಂಡನ್ನು ತೆಗೆದುಕೊಳ್ಳುತ್ತಾ ಹೋಗಬಹುದೆಂದು ತಿಳಿದು ಅವರು ಲ್ಯಾಂಡನ್ನು ಅಕ್ವೈರ್ ಮಾಡುತ್ತಾ ಹೋಗುತ್ತಾರೆ, ನಾಳೆ ಒಂದು ದೊಡ್ಡ ಸಮಸ್ಯೆ ನಿರ್ಮಾಣವಾಗಿ, ಅಗ್ರಿಕಲ್ಚರಲ್ ಲ್ಯಾಂಡ್ ಏನಿದೆ? ಅದರ ಪರ್ಸೆಂಟೇಜ್ ಕಡಿಮೆಯಾಗಬಹುದೆಂದು ನನ್ನ ಅನಿಸಿಕೆ. ಅದೇನೇ ಇರಲಿ. ತಾವು ಈ ಬಿಲ್ ತಂದಿದ್ದೀರಿ, ನಾನು ವಿರೋಧ ಮಾಡುತ್ತಿಲ್ಲ, ತಮಗೆ ಸೂಚನೆ ಕೊಟ್ಟಿದ್ದೇನೆ. ಇದನ್ನು ತಾವು ಗಮನದಲ್ಲಿಟ್ಟು ಕೊಂಡು ಇವೊತ್ತೇ ಆದಾಯ ಮಿತಿಯನ್ನು ಪೂರ್ತಿಯಾಗಿ ತೆಗೆದು ಹಾಕಿದರೆ ಒಳ್ಳೆಯದಾಗುತ್ತ ದೆಂದು ನನ್ನ ಅನಿಸಿಕೆ.

+ ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು) : ಮಾನ್ಯ ಊಪಾಧ್ಯಕ್ಷಿಣಿಯವರೆ, ಕೃಷಿಯೇತರರು ಕೃಷಿ ಜಾಗವನ್ನು ಪರ್ಚೇಸ್ ಮಾಡಬೇಕಾಗಿದ್ದರೆ 12,000 ರೂ.ಗಳ ಆದಾಯದ ಮಿತಿ ಏನಿದೆ, ಇದರಿಂದ ಮುಖ್ಯರಾಗಿ ನೌಕರರಿಗೂ ಕೂಡಾ ಈ ಒಂದು ಕಡಿವಾಣದಿಂದ ತುಂಬಾ ತೊಂದರೆಯಾಗಿತ್ತು. ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಂತೆ ಮಾನ್ಯ ಮಂತ್ರಿಗಳ ಗಮನಕ್ಕೂ ಕೂಡ ಹೆಚ್ಚಿನ ರೀತಿಯಲ್ಲಿ ಇದನ್ನು ತಂದಿದ್ದೆವು. ಆಗ ಅದನ್ನು ಗಣನೆಗೆ ತೆಗೆದುಕೊಂಡು 12 ಸಾವಿರದಿಂದ 50 ಸಾವಿರಕ್ಕೆ ಏರಿಸಿದರು. ಈ ರೀತಿ 12 ಸಾವಿರದಿಂದ 50 ಸಾವಿರಕ್ಕೆ ಏರಿಸುವ ಅಮೆಂಡ್‌ಮೆಂಟ್‌ನ್ನು ತಂದಿರತಕ್ಕದ್ದು 1991ನೇ ಇಸವಿಗೆ ಅನ್ವಯವಾಗುತ್ತದೆ. ಹಿಂದೆ ಕೊಂಡು ಕೊಂಡಿದ್ದ ಹಲವಾರು ನ್ಯಾಯಯುತವಾದ ಹಿಡುವಳಿದಾರರಿಗೆ ಇದರಿಂದ ತೊಂದರೆ ಆಗಿದೆ, ಈ ಬಗ್ಗೆ ಈಗ ಕೋರ್ಟಿನಲ್ಲಿ ವ್ಯಾಜ್ಯ ನಡೆಯುತ್ತಿದೆ. ಅವರು ಜಮೀನನ್ನು ಸರ್ಕಾರಕ್ಕೆ ವಾಪಸ್ ಕೊಡುವಂತಹ ಸಂದರ್ಭಗಳಿವೆ. ಆದ್ದರಿಂದ ಹಿಂದೆ 12 ಸಾವಿರಕ್ಕಿಂತ ಜಾಸ್ತಿ ಆದಾಯವಿದ್ದವರು ಜಮೀನು ಕೊಂಡುಕೊಂಡಿದ್ದಕ್ಕೂ ಕೂಡ ಈ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ : (ಉಳ್ಳಾಲ) ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಕಂದಾಯಮಂತ್ರಿಗಳು ತಂದಿರತಕ್ಕ ಈ ತಿದ್ದುಪಡಿಯನ್ನು ನಾನು ಸ್ವಾಗತಿಸಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈವತ್ತು ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ ನೋಡಿದರೆ, ಮನೆಗಳನ್ನು ಕಟ್ಟಿಕೊಳ್ಳಬೇಕೆಂದು ಆಲೋಚನೆಯನ್ನು ಮಾಡಿದರೆ ಎಲ್ಲೂ ಕೂಡ ಜಾಗವಿಲ್ಲ, ನಿವೇಶನವಿಲ್ಲ, ಅಲ್ಲಿ ಜಾಗ ಏನಾದರೂ ಕ್ರಮ ತೆಗೆದುಕೊಳ್ಳಬೇಕೆಂದು ಗೃಹಮಂಡ ಳಿಯವರು ಆಲೋಚನೆ ಮಾಡಿದರೆ, ಪ್ರಾಧಿಕಾರದವರು ಆಲೋಚನೆ ಮಾಡಿದರೆ ಅವರಿಗೆ ಅನೇಕ ಎಡರುತೊಡರುಗಳು, ತೊಂದರೆಗಳಿರುವುದರಿಂದ ಅವರಿಗೆ ಯಾವರೂಪದಲ್ಲಾದರೂ ತೆಗೆದು ಕೊಳ್ಳಲು ಸಾಧ್ಯವಾಗುತ್ತಿಲ್ಲ, ಈ ದೃಷ್ಟಿಯಿಂದ ನಿವೇಶನವಿಲ್ಲದವರಿಗೆ, ಮನೆಕಟ್ಟಿಕೊಳ್ಳಬೇಕೆಂದು ಆಲೋಚನೆ ಇದ್ದವರಿಗೆ ಬಹಳ ತೊಂದರೆಯಾಗಿದೆ. ಅದು ಮಾತ್ರವಲ್ಲ, ಮಾಡಬೇಕೆಂಬ ಆಲೋಚನೆ ಇದ್ದವರಿಗೂ ಕೂಡ ದಿಗ್ಬಂದನವಿರುವುದರಿಂದ, ಬೇರೆ ಬೇರೆ ರೀತಿಯಾದ ತೊಂದರೆಗಳು ಇರುವುದರಿಂದ ಅವರುಗಳಿಗೆ ಮಾರಲು ಸಾಧ್ಯವಾಗುತ್ತಿಲ್ಲ, ಆದುದರಿಂದ ಈ ರೀತಿಯಾಗಿ ಗೃಹಮಂಡಳಿಯವರು ಆ ಜಮೀನನ್ನು ಸುಲಭವಾಗಿ ತೆಗೆದುಕೊಂಡು ಯಾವ ರೀತಿಯಾಗ ಕಾನೂನಿನ ತೊಂದರೆಯೂ ಇಲ್ಲದೆ ನಿವೇಶನ ಮಾಡಿದರೆ ಅನೇಕರಿಗೆ ನಿವೇಶನ ಸಿಗುವ ಒಂದು ಸಂದರ್ಭ ಒದಗಿಬರುತ್ತದೆ. ಆದುದರಿಂದ ಈ ತಿದ್ದುಪಡಿ ಅತ್ಯಂತ ಉಪಯುಕ್ತವಾದುದು ಎಂದು ಹೇಳಿ ಇದನ್ನು ನಾನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೆ, 6ಜನ ಮಾನ್ಯ ಸದಸ್ಯರು, ಇದರ ಮೇಲೆ ಮಾತನಾಡಿದರು. ಅದರಲ್ಲಿ ಒಬ್ಬರು ಮಾತ್ರ ವಿರೋಧ ಮಾಡಿದರು. ಬೇರೆಯವರು ಅಂದರೆ ಶ್ರೀ ದೇಶ್‌ಪಾಂಡೆ ಮತ್ತು ಶ್ರೀ ಏಕಾಂತಯ್ಯನವರನ್ನು ಸೇರಿಸಿ ಎಲ್ಲ ಸಹ ಇದನ್ನು ಸ್ವಾಗತ ಮಾಡಿದ್ದಾರೆ. ಏಕಾಂತಯ್ಯನವರು ಅರ್ಧ ಸ್ವಾಗತ ಮಾಡುತ್ತೇನೆಂದು ಹೇಳಿದ್ದಾರೆ. ಆದರೆ ಸಂಪೂರ್ಣವಾಗಿ ಸ್ವಾಗತ ಮಾಡಿದವರು ಶ್ರೀ ಭೈರೇಗೌಡರು ಮತ್ತು ಉಳಿದ ಸದಸ್ಯರು. ಈಗಾಗಲೇ ಶ್ರೀ ಭೈರೇಗೌಡರು ಹೇಳಿರುರ ಹಾಗೆ ಈ ಆದಾಯದ ಮಿತಿಯನ್ನು ಹಾಕತಕ್ಕ ಉದ್ದೇಶ ಹಿಂದೆ ಏನಿತ್ತು ಅಂದರೆ ಒಬ್ಬರಿಗೆ ಒಂದು ಉದ್ಯೋಗ ಇರಲಿ ಎಂದು ; ಇದರ ಜೊತೆಗೆ ಕೆಲವು ಜನ ಹಣವಂತರು ಅಥರಾ ಬಿಸ್‌ನೆಸ್-ಮನ್‌ಗಳು, ಕೈಗಾರಿಕೋದ್ಯಮಿಗಳು ಇವರೇ ಈ ಜಮೀನುಗಳನ್ನು ಪಡೆದುಕೊಂಡು ಹೋಗಬಾರದು ಮತ್ತು ಕರ್ನಾಟಕದಲ್ಲಿ ಕೇವಲ ಹೊರಗಿನಿಂದ ಬಂದವರ ಹಾವಳಿ ಜಾಸ್ತಿಯಾಗಬಾರದು ಎನ್ನುವ ದೃಷ್ಟಿಯಿಂದಲೇ ಈ ಲ್ಯಾಂಡ್ ರಿಫಾರ್ಮ್ಸ್ ಕಾಯಿದೆಯಲ್ಲಿ ಆದಾಯದ ಮಿತಿಯನ್ನು ಹಿಂದೆ ಹಾಕಿದರು. ಮುಖ್ಯವಾಗಿ ನಮ್ಮಲ್ಲಿರುವ ವ್ಯವಸಾಯಗಾರರು ಅಥವಾ ರೈತರು ತಮ್ಮ ಜಮೀನನ್ನು ಸುಲಭವಾಗಿ ಕಳೆದುಕೊಳ್ಳಬಾರದು ಅಥವಾ ಬೇರೆಯವರೂ ಕೊಳ್ಳಬಾರದು, ಸುಲಭವಾಗಿ ಬೇರೆಯವರ ಕೈಗೆ ಜಮೀನು ಸಿಗಬಾರದು ಎನ್ನುವ ದೃಷ್ಟಿಯಿಂದ ಈ ಒಂದು ಆದಾಯದ ಮಿತಿಯನ್ನು ಹಾಕಿದ್ದು. ಆದರೆ 12 ಸಾವಿರ ಆದಾಯದ ಮಿತಿ ಬಹಳ ಕಡಿಮೆಯಾಯಿತು, ಇದನ್ನು ಒಂದು ಲಕ್ಷಕ್ಕೆ ಹೆಚ್ಚಿಸಬೇಕೆಂದು ಹೋದ ಮೇ ಮತ್ತು ಜೂನ್ ತಿಂಗಳಿನಲ್ಲಿ ಇಲ್ಲೇ ವಾದವಿವಾದ ನಡೆಯಿತು. ಕೊನೆಗೆ ನಾವು ಅದನ್ನು 50 ಸಾವಿರಕ್ಕೆ ಲಿಮಿಟ್ ಮಾಡಿದೆವು. ಈಗ ಆ ಕಾನೂನು ಜಾರಿಯಲ್ಲಿದೆ. ಕೇವಲ 3-4ತಿಂಗಳಿನಿಂದ ಈ ಕಾನೂನು ಜಾರಿಯಲ್ಲಿದೆ. ಇದರಿಂದ ಕೆಲವರಿಗೆ ಸ್ವಲ್ಪಮಟ್ಟಿನ ಲಾಭವಾಗುತ್ತಿದೆ. ಆದರೆ ನೀವು ಹೇಳಿದಂತೆ ಈ ಸರ್ಕಾರಿ ನೌಕರರಿಗೆ ಅಂದರೆ ತಿಂಗಳಿಗೆ 2-3 ಸಾವಿರ ಪಗಾರವಿದ್ದವರಿಗೆ ತೊಂದರೆಯಾಗಿರಬಹುದು ಮತ್ತು ಇದನ್ನು ಪೂರ್ವಾನ್ವಯವಾಗಿ ಜಾರಿಗೆ ಕೊಡಬೇಕೆಂದು.....

(ಶ್ರೀಮತಿ ಮೋಟಮ್ಮನವರು ಅಧ್ಯಕ್ಷರ ಪೀಠದಲ್ಲಿ ಉಪಸ್ಥಿತರಾದರು)

ರೈತರೂ ಕೂಡ, ಮತ್ತೆ ಯಾರ್ಯಾರು ಜಮೀನು ಕೊಂಡು-ಕೊಂಡಿದ್ದಾರೋ ಅವರೆಲ್ಲರೂ ಕೂಡ ಒತ್ತಾಯಿಸಿದ್ದಾರೆ. ಸರ್ಕಾರಿ ನೌಕರರು ಇರಬಹುದು, ವ್ಯವಸಾಯೋತ್ಪನ್ನ ಆಸ್ತಿಗಳನ್ನು ಇನ್‌ಹೆರಿಟ್ ಮಾಡಿದವರಿರಬಹುದು ಅಥವಾ ವ್ಯವಸಾಯದ ಹಿನ್ನೆಲೆ ಇಲ್ಲದವರಿರಬಹುದು ; ಇಂತಹವರು ಜಮೀನು ತೆಗೆದುಕೊಂಡಿದ್ದರೆ ತೊಂದರೆಯಾಗಿದೆ ಎನ್ನುವ ಮಾತು ನನ್ನ ಗಮನಕ್ಕೆ ಬಂದಿದೆ. ಇದರ ಬಗ್ಗೆ ಈಗಾಗಲೆ ನಾನು ಲಾ-ಡಿಪಾರ್ಟ್‌ಮೆಂಟ್‌ಗೆ ಬರೆದಿದ್ದೇನೆ.

ಶ್ರೀ ಸಿ. ಭೈರೇಗೌಡ : ಉಪಾಧ್ಯಕ್ಷಣಿಯರೆ, ಬೋನಾಫೈಡ್ ಆಗಿ ಯಾರು ಇದ್ದಾರೋ ಅವರಿಗೆ ಏನೂ ತೊಂದರೆಯಾಗಿಲ್ಲ, ಈ ನಾನ್-ಬೋನಾಫೈಡಿ ಇದ್ದಾರಲ್ಲಾ, ಅವರಿಗೇ ತೊಂದರೆಯಾಗಿದೆ. ಆದುದರಿಂದ ನಾನು ಹೇಳುತ್ತೇನೆ ದಯಮಾಡಿ ಇದರ ಬಗ್ಗೆ ಕ್ರಮತೆಗೆದು ಕೊಳ್ಳಿ, ಬರೀ ಬೆಂಗಳೂರು ಜಿಲ್ಲೆ ಒಂದನ್ನು ಮಾಡಿ ನೋಡೋಣ, ಆಗ ನೀವು ಮಲ್ಲಿಕಾರ್ಜುನ ಖರ್ಗೆಯವರು ಕಂದಾಯ ಮಂತ್ರಿಯಾಗಿದ್ದಕ್ಕೆ ಸಾರ್ಥಕವಾಗುತ್ತದೆ. ದಯಮಾಡಿ ಇದನ್ನೊಂದನು ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಏಕಾಂತಯ್ಯನವರು ಮತ್ತು ಶ್ರೀ ಬನ್ನಿಕೋಡ ಅವರು ಇದೇ ಕಾರಣದಿಂದ ಇದನ್ನು ಪೂರ್ವಾನ್ವಯವಾಗಿ ಜಾರಿಗೆ ಕೊಡಿ ಎಂದು ಹೇಳಿದರು. ಅದಕ್ಕಾಗಿ ನಾನು ಈಗ ಇದನ್ನು ಪರಿಶೀಲನೆ ಮಾಡಿ ಎಂದು ಲಾ ಡಿಪಾರ್ಟ್‌ಮೆಂಟಿಗೆ ಕಳುಹಿಸಿದ್ದೇನೆ. ಏಕೆಂದರೆ ಇದು ಪೂರ್ತಿ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ಗೆ ಹೊಡೆತ ಬೀಳಬಾರದು. ಮತ್ತು ನಾವು 1974ರಿಂದ ಜಾರಿಗೆ ಕೊಡುತ್ತಾ ಬಂದರೆ ಅನೇಕ ತೊಂದರೆಗಳು ಕೂಡ ಆಗುತ್ತವೆ.

ಇಡೀ ದೇಶದಲ್ಲಿ Karnataka Land Reforms Act most progressive ಅಂತ ಹೇಳಿ ವೆಸ್ಟ್ ಬಂಗಾಳದವರು ಮತ್ತು ಕೇರಳದವರು ಇದನ್ನು ಅಪ್ರಿಸಿಯೇಟ್ ಮಾಡಿದಂತಹ ಒಂದು ಸಂದರ್ಭವಿದೆ. ನಮ್ಮ ಕಾನೂನು ಒಳ್ಳೆಯದು ಎಂದು ನಮ್ಮ ಮಾನ್ಯ ಸದಸ್ಯರುಗಳಿಗೂ ಕೂಡ ಗೊತ್ತಿದೆ. ಇಂಥ ಒಂದು ಹೊಗಳಿಕೆ ಸಿಕ್ಕಿದೆ. ಇಂತಹ ಪ್ರೊಗ್ರೆಸೀವ್ ಕಾನೂನನ್ನು ಸಂಪೂರ್ಣವಾಗಿ ತೆಗೆದು ಹಾಕುತ್ತಾರೆ ಎಂಬ ಭಾವನೆ ಅವರಲ್ಲಿ ಬರಬಾರದು. ಈಗಿನ ತೊಂದರೆಯನ್ನು ನಾವು ಯಾವ ರೀತಿ ಕಡಿಮೆ ಮಾಡಬಹುದು ಎನ್ನುವ ದೃಷ್ಟಿಯಿಂದ ಈಗಾಗಲೇ ಪರಿಶೀಲನೆ ಮಾಡಬೇಕೆಂದು ಲಾ ಡಿಪಾರ್ಟ್‌ಮೆಂಟಿಗೆ ಕಳುಹಿಸಿದ್ದೇನೆ ; ಅದನ್ನು ಮುಂದೆ ನೋಡೋಣ. ಆದರೆ ಉಳಿದಂತಹ ಸ್ಟಾಟ್ಯುಟರಿ ಸಂಸ್ಥೆಗಳಿಗೆ ಹಾಗೂ ನಮ್ಮ ಕರ್ನಾಟಕ ಸ್ಲಮ್ ಕ್ಲಿಯರೆನ್ಸ್ ಬೋರ್ಡಿಗೆ ನಾವು ಏನು ರಿಯಾಯಿತಿ ಕೊಟ್ಟಿದ್ದೇವೆ, ಇದರಿಂದ ನೇರವಾಗಿ ರೈತರಿಗೆ ಸಹಾಯವಾಗುತ್ತದೆ ಎಂಬ ಮಾತನ್ನು ಇಂದು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ, ಇಲ್ಲಿಯವರೆಗೆ ಏನಾಗುತ್ತಿತ್ತೆಂದರೆ ಹೌಸಿಂಗ್ ಸೊಸೈಟಿಯವರು ನೇರವಾಗಿ ರೈತರ ಹತ್ತಿರ ಹೋಗಿ ಕುಳಿತು ಅವರ ಜೊತೆ ಮಾತುಕತೆ ಮಾಡಿಕೊಂಡು ಅಗ್ರಿಮೆಂಟ್ ಮಾಡಿಕೊಳ್ಳುತ್ತಿದ್ದರು. ನಂತರ ಲ್ಯಾಂಡ್ ಅಕ್ವಿಸೇಷನ್ ಪ್ರೊಸೀಡಿಂಗ್ಸ್ ನಮ್ಮ ಹತ್ತಿರ ಬರುತ್ತಿತ್ತು. ಇದರಿಂದ ಬಿ.ಡಿ.ಎ.ನವರಿಗೆ ಲ್ಯಾಂಡ್ ಪರ್ಚೇಸ್ ಮಾಡುವುದಕ್ಕೆ ಅವಕಾಶವಿಲ್ಲ, ಹೌಸಿಂಗ್ ಬೋರ್ಡ್‌ನವರಿಗೆ, ಅರ್ಬನ್ ಡೆವಲಪ್‌ಮೆಟ್ ಅಥಾರಿಟೀಸ್ ಮತ್ತು ಸ್ಲಮ್ ಕ್ಲಿಯರೆನ್ಸ್ ಬೋರ್ಡ್‌ನವರಿಗೆ ಅವರಕಾಶವಿಲ್ಲ, ಅವರು ತಮ್ಮ ಕೆಲಸ ಆಗಬೇಕಾದರೆ ಎರಡು, ಮೂರು ವರ್ಷ ಅಕ್ವಿಸೇಷನ್ ಮಾಡಿಕೊಂಡು ಕೂರಬೇಕಾಗಿತ್ತು. ಈ ಮಧ್ಯೆ ಖಾಸಗಿಯವರು ಲ್ಯಾಂಡ್ ಅಕ್ವಿಸೇಷನ್ ಅಗ್ರಿಮೆಂಟ್ ಮಾಡಿಕೊಂಡು ತಕ್ಷಣ ಸರ್ಕಾರದ ಹತ್ತಿರ ಬಂದು ಬಿಡುತ್ತಿದ್ದರು. ಸಾವಿರಾರು ಎಕರೆ ಜಮೀನನ್ನು ಇವತ್ತಿನ ದಿವಸ ಬೆಂಗಳೂರು ಒಂದು ಕಡೆಯಲ್ಲಿ, ಬೇರೆ ಜಿಲ್ಲೆಗಳಲ್ಲಿ, ತಾಲ್ಲೂಕು ಮಟ್ಟಗಳಲ್ಲಿ ತೆಗೆದುಕೊಳ್ಳುತ್ತಿದ್ದಾರೆ. ಅದನ್ನು ತಪ್ಪಿಸಬೇಕೆಂದು ಇದನ್ನು ತಂದಿದ್ದೇವೆ. ಬಹುಶಃ ಇದರಿಂದ ಅವರ ಹೌಸ್ ಬಿಲ್ಡಿಂಗ್ ಕೋ-ಆಪರೇಟೀವ್ ಸೊಸೈಟಿ ಅಕ್ಟಿವಿಟೀಸ್ 75 ಪರ್ಸೆಂಟ್ ಕರ್ಬ ಆಗುವಂತಹದ್ದು ಇದೆ. ಈ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈ ಉದ್ದೇಶಕ್ಕಾಗಿ ಇದು ಎಲ್ಲರೂ ಒಪ್ಪಿಕೊಳ್ಳತಕ್ಕಂತಹ ಕಾನೂನು ಎಂದು ನಾನು ಹೇಳುತ್ತಿದ್ದೇನೆ. ಇಲ್ಲದಿದ್ದರೆ ಏನಾಗುತ್ತಿತ್ತೆಂದರೆ ಸುಮ್ಮನೆ ಅವರ ಕೇಸ್‌ಗಳು ಬಂದಾಗ ಮೂರು ಮೂರು ವರ್ಷ ಕ್ವೈರಿ ಹಾಕಿಕೊಂಡು 4(1),5(1), 6(1) ನೋಟಿಫಿಕೇಷನ್ ಆಗಿದೆಯೇ, ಅವಾರ್ಡ್ ಆಗಿದೆಯೇ, ಪೊಜಿಷನ್ ಆಗಿದೆಯೇ ಎಂದು ಕೇಳಿಕೊಂಡು ಕಾಲತಳ್ಳಲಾಗುತ್ತಿತ್ತು, ಈ ಮಧ್ಯೆ ಯಾರಾದರೂ ಕೋರ್ಟ್‌ಗೆ ಹೋಗಿ ಸ್ಟೇ ತಂದರೆ ಮುಗಿದೇ ಹೋಯಿತು. ಆಮೇಲೆ ಒತ್ತಡ ಬಂತು ಎಂದರೆ ನೋಟಿಫಿಕೇಷನ್ ಡೀ-ನೋಟಿಫಿಕೇಷನ್ ಶಾಸಕರು ಹೇಳಿದರೂ ಮಾಡುತ್ತೇವೆ, ಸೋಷಿಯಲ್ ವರ್ಕರ್ಸ್ ಹೇಳಿದರೂ ಮಾಡುತ್ತೇವೆ. ಕೊನೆಗೆ ರೈತ ಹೇಳಿದರೂ ಕೂಡ ಮಾಡುತ್ತೇವೆ. ಅದಕ್ಕೋಸ್ಕರ ಇದು ಆಗಬಾರದು ಎನ್ನುವ ದೃಷ್ಟಿಯಿಂದಲೇ ನಾನು ಇದನ್ನು ವಿಚಾರ ಮಾಡಿಕೊಂಡೇ....

ಶ್ರೀ ಬಿ. ಹೆಚ್. ಬನ್ನಿಕೋಡ್ : ಶಾಸಕರು ಹೇಳಿದರೆ, ರೈತರು ಹೇಳಿದರೆ ಮಾಡುತ್ತೇವೆಂದು ತಾವು ಹೇಳುವುದು ಸತ್ಯಕ್ಕೆ ದೂರವಾದುದು, ಯಾರು ಹೇಳಿದರೆ ಮಾಡುತ್ತೀರೆಂದು ತಮಗೇ ಗೊತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ರೀತಿ ಹೇಳಿದರೆ ನಾನು ಸಹ ಹೇಳಬೇಕಾಗುತ್ತದೆ. ನಾನು ಇದ್ದ ಸ್ಥಿತಿ ಬಗ್ಗೆ ಮಾತನಾಡುತ್ತಿದ್ದೇನೆ. ಅನೇಕ ಸಲ ನಾವು ಹೇಳುವುದಿಲ್ಲವೇ; ಇವನು ಬಡ ರೈತ, ಇವನಿಗೆ ಸಹಾಯ ಮಾಡಿ ಡೀ-ನೋಟಿಫೈ ಮಾಡಿ ಎಂದು ಹೇಳುವುದಿಲ್ಲವೇ? ಇಲ್ಲಿ ಅಂತಹ ತೊಂದರೆ ಇದ್ದರೆ ಸರ್ಕಾರಕ್ಕೆ ಮನವಿ ಮಾಡುತ್ತಾರೆ. ನಂತರ ಅದು ಸರ್ಕಾರಕ್ಕೆ ಬಿಟ್ಟಿದ್ದು; ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಹೀಗೆ ಮಾಡಿಸಿ ಮಾಡಿಸಿ ಆ ಬಿ.ಡಿ.ಎ.ಗೆ ಹೌಸಿಂಗ್ ಬೋರ್ಡ್‌ಗೆ ಮತ್ತು ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಗಳಿಗೆ

ಕೆಲಸವಿಲ್ಲದ ಹಾಗೆ ಆಗಿತ್ತು. ಅದಕ್ಕೆ ಈಗ ನೇರವಾಗಿ ಅವರೇ ರೈತರ ಕನ್‌ಸೆಂಟ್ ಮೇಲೆ ಮಾರ್ಕೆಟ್ ವ್ಯಾಲ್ಯು ಅಥವಾ ಪ್ರಿವೈಲಿಂಗ್ ರೇಟ್ ಏನು ಇದೆ ಅದನ್ನು ಕೊಟ್ಟು ಖರೀದಿ ಮಾಡುವಂತಹ ಅವಕಾಶವಿರುತ್ತದೆ. ಯಾರಾದರೂ ಕೊಡುವುದಿಲ್ಲವೆಂದರೆ ಲ್ಯಾಂಡ್ ಅಕ್ವಿಸೇಷನ್ ಆಕ್ಟ್ ಏನು ಇದೆ, ಅದರ ಕೆಳಗೆ ನಾವು ಅಕ್ವೈರ್ ಮಾಡಬಹುದು. ಈ ರೀತಿ ಎರಡೂ ದೃಷ್ಟಿಯಿಂದ ಅನುಕೂಲವಾಗುತ್ತದೆ ಮತ್ತು ಈ ಹೌಸಿಂಗ್ ಆಕ್ಟಿವಿಟೀಸ್‌ಗೆ ಒಂದು ಹೊಸ ದಿಕ್ಕನ್ನು ತೋರಿಸಿದ ಹಾಗೆ ಆಗುತ್ತದೆ. ಅದಕ್ಕೆ ಇದೊಂದು ಒಳ್ಳೆಯ ತಿದ್ದುಪಡಿಯಿದೆ. ಇದನ್ನು ಎಲ್ಲರೂ ಒಮ್ಮತದಿಂದ ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ಟೋಟಲ್ ಇನ್‌ಕಂ ಲಿಮಿಟನ್ನು ಈಗ 50 ಸಾವಿರ ಮಾಡಿದ್ದೀರಿ. ಈ 50 ಸಾವಿರ ಲಿಮಿಟ್ ಅನ್ನು ತೆಗೆಯಲು ಏನು ಪ್ರಾಬ್ಲಮ್ ಇದೆ. ಏಕೆಂದರೆ ಸೀಲಿಂಗ್ ಇದೆ; ಈ ಸೀಲಿಂಗ್ ಮೇಲೆ ಯಾರೂ ಸಹ ಅಕ್ವೈರ್ ಮಾಡಿಲಿಕ್ಕೆ ಭೂಮಿ ಇಲ್ಲ. ಸೀಲಿಂಗ್ ತನಕ ಯಾರು ಬೇಕಾದರೂ ತೆಗೆದುಕೊಳ್ಳಬಹುದು. ಆದರೆ ಈಗ ಸೀಲಿಂಗ್ ತನಕ ಯಾರಿಗೂ ತೆಗೆದುಕೊಳ್ಳಲಿಕ್ಕೆ ಸಾಧ್ಯವಿಲ್ಲ, ಅಂತಹ ಪ್ರಾಬ್ಲಮ್ ಈಗ ಇದೆ. ಅದೇ ಮಹಾರಾಷ್ಟ್ರದಲ್ಲಿ, ಗೋವಾದಲ್ಲಿ, ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ ಈ ತರಹ ಸೀಲಿಂಗ್ ಲಿಮಿಟ್ ಇಲ್ಲ. Why we should have it redendant? ಅದೇ 1974ರಲ್ಲಿ ಮಾಡಿದ್ದು ಸರಿ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈಗ 50 ಸಾವಿರದ ಲಿಮಿಟ್ ಅನ್ನು ಏತಕ್ಕೆ ತೆಗೆಯಬಾರದು ? Why should we not give up ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಂದಿನ ಕಾಲದಲ್ಲಿ ಅದು ಒಂದು ಫಿಲಾಸಫಿ ಇತ್ತು. ಈಗಾಗಲೇ ಮಾನ್ಯ ಬೈರೇಗೌಡರು ಹೇಳಿದ ಹಾಗೆ ಒನ್ ಮ್ಯಾನ್ ಒನ್ ಪ್ರೊಫೆಷನ್ ಎಂದು ಒಪ್ಪಿ ಇದನ್ನು ಮಾಡಿದ್ದು. ಇದ್ದವರೇ ಎಲ್ಲವನ್ನೂ ಕೂಡ ತೆಗೆದುಕೊಳ್ಳಬಾರದೆಂದು ಮಾಡಿದ್ದು. ನಾಳೆ ಹಾಗಾದರೆ ನೀವು ಎಲ್ಲದ್ದಕ್ಕೂ ಎಕ್ಸೆಮ್ಷನ್ ಕೊಡಿ ; ಸೀಲಿಂಗ್ ಏತಕ್ಕೆ ಬೇಕು. ಲ್ಯಾಂಡ್ ಸೀಲಿಂಗ್ ಏತಕ್ಕೆ ಬೇಕು. ನಾಳೆ ಅದೂನೂ ಬರಬಹುದು. ಈಗ ಏನಾಗಿದೆ ಅಂದರೆ ದುರ್ದೈವದಿಂದ ರಷ್ಯಾದಲ್ಲಿ ಗೋರ್ಬಚೇವ್ ಥಿಯರಿ ಬಂದಮೇಲೆ ಎಲ್ಲಾಕಡೆ ಡೀನ್ಯಾಷನಲೈಸ್ ಮಾಡಿರಿ, ಸೀಲಿಂಗ್ ಎಕ್ಸಾಮ್ಪ್ಟ್ ಮಾಡಿರಿ, ಇನ್‌ಕಮ್ ಲಿಮಿಟ್ ತೆಗೆದುಹಾಕಿರಿ, ಎಂಬ ಕೂಗು ಎಲ್ಲಾ ಕಡೆ ಎದ್ದುಬಿಟ್ಟಿದೆ. ಆದರೆ ಇಲ್ಲಿನ ದೃಷ್ಟಿಯಿಂದ ಯೋಚನೆ ಮಾಡಿ. ಇನ್ನೂ ಅನೇಕ ಜನ ಸಮಾಜದಲ್ಲಿ ತುಳಿತಕ್ಕೆ ಒಳಪಟ್ಟಂಥ ಜನ ಪಾವರ್ಟಿಲೈನ್, ಬಿಲೋ ಪಾವರ್ಟಿಲೈನ್ ಕೂಡ 48 ಪರ್ಸೆಂಟ್ ಜನ ಇದ್ದಾರೆ. ಅವರ ಬಗ್ಗೆ ಕೂಡ ಚಿಂತನೆ ಮಾಡಿ ; ಎಲ್ಲರ ಬಗ್ಗೆ ಚಿಂತನೆ ಮಾಡಿಕೊಂಡು ಇವೊತ್ತು ಹೆಜ್ಜೆ ಇಡಬೇಕು. ಇವೊತ್ತು ನಮ್ಮಲ್ಲಿರತಕ್ಕಂಥ 75 ಪರ್ಸೆಂಟ್ ನಮ್ಮ ಜನ ಕೂಲಿಗಾರರಾಗಲಿ, ರೈತರಾಗಲಿ. ಡಿಪೆಂಡ್ ಇರತಕ್ಕಂತಾದ್ದು ಭೂಮಿಯ ಮೇಲೆ, ನೀವು ಹೇಳಿದ ಹಾಗೆ ಭೂಮಿ ಎಕ್ಸ್‌ಪ್ಯಾಂಡ್ ಮಾಡಲಿಕ್ಕೆ ಬರುವುದಿಲ್ಲ. ಇರತಕ್ಕಂಥ ಭೂಮಿಗೆ ಸರಿಯಾದ ರೀತಿಯಿಂದ ಉಪಯೋಗ ಮಾಡಿಕೊಂಡು ಅದರ ಮೇಲೆ ಹೆಚ್ಚಿನ ಜನರಿಗೆ ಕೆಲಸಕೊಡತಕ್ಕಂಥ ವ್ಯವಸ್ಥೆ ಮಾಡಿ ಅದರ ಮೇಲೆ ಹೆಚ್ಚಿನ ಪ್ರೊಡಕ್ಷನ್ ತೆಗೆಯತಕ್ಕ ಕೆಲಸ ಮಾಡತಕ್ಕಂತಾದ್ದು ನಮಗೆ ಉಳಿದಿದೆ. ಅದನ್ನು ಯಾವ ರೀತಿ ಮಾಡಬೇಕೆಂದು ಹೇಳಿದರು ನಾನು ಒಪ್ಪುತ್ತೇನೆ. ಆದರೆ ಸಂಪೂರ್ಣವಾಗಿ ಇನ್‌ಕಮ್ ಲಿಮಿಟ್ ತೆಗೆಯುವುದಕ್ಕೆ ಹೋದರೆ ಒಂದು ತಾಪತ್ರಯ ಏನು ಬರಬಹುದು ಅಂದರೆ ಇದ್ದವವು ಹೆಚ್ಚಿನ ರೀತಿಯಲ್ಲಿ ಪರ್ಚೇಸ್ ಮಾಡಿಕೊಂಡು, ಕೊನೆಗೆ ಏನಿವತ್ತು ಕಡುಬಡವನಿದ್ದಾನೆ, ಅವನಿಗೆ ನೀವು ಹೇಳಿದ ಹಾಗೆ 20-30-40 ಸಾವಿರ ಇನ್‌ಕಮ್ ಇದ್ದರೆ ಅವನಿಗೆ ಪರ್ಚೇಸ್ ಮಾಡತಕ್ಕಂಥ ಪವರ್ ಅಲ್ಲ, ಪಾಪ ಅವನ್ ಪರ್ಚೇಸ್ ಮಾಡತಕ್ಕಂತಾದ್ದಕ್ಕೆ ಅವ ಹೋದರೆ, ಇನ್ನೊಬ್ಬ ಹೆಚ್ಚಿಗೆ ಇನ್‌ಕಮ್ ಇರತಕ್ಕವನು, ನಾನು ಹತ್ತು ಸಾವಿರ ಎಕರೆ ಅಂದರೆ ಇನ್ನೊಬ್ಬ ಬರುತ್ತಾನೆ. 20 ಸಾವಿರ ಎಕರೆ

ಎಂದು ಬರುತ್ತಾನೆ. ನೀವು ಲಿಮಿಟ್ ಅವನಿಗೆ ಕ್ರಾಸ್ ಮಾಡಿಲಿಕ್ಕೆ ಅವಕಾಶ ಮಾಡಿಕೊಟ್ಟರೆ, ಸಾವಿರಾರು ಎಕರೆ ತೆಗೆದುಕೊಳ್ಳುವುದಕ್ಕೆ ಸಿದ್ಧರಿದ್ದಾರೆ. ಆದ್ದರಿಂದ, ಇದಕ್ಕೆ ಅವಕಾಶ ಮಾಡಿಕೊಟ್ಟರೆ, ಸಾವಿರಾರು ಎಕರೆ ತೆಗೆದುಕೊಳ್ಳುವುದಕ್ಕೆ ಸಿದ್ಧರಿದ್ದಾರೆ. ಆದ್ದರಿಂದ, ಇದಕ್ಕೆ ಏನಾದರೂ ಒಂದು ಕಡಿವಾಣ ಇರಬೇಕು ಎನ್ನತಕ್ಕ ದೃಷ್ಟಿಯಿಂದ ನಾವು ಇದನ್ನುಪ ತಂದಿದ್ದೇವೆ. ಇನ್‌ಕಮ್ ಇನ್ನೂ ಹೆಚ್ಚು ಮಾಡಬೇಕೆಂದು ಅನೇಕ ಸದಸ್ಯರು ಹೇಳಿದ್ದಾರೆ. ಅದರ ಬಗ್ಗೆ ಬೇಕಾದರೆ ಮರು ಪರಿಶೀಲನೆ ಮಾಡೋಣ. ಆದರೆ ಈಗ ಒಂದು ರೈಡರ್ ಇರಬೇಕು ಎನ್ನತಕ್ಕ ದೃಷ್ಟಿಯಿಂದ ಈ ರೀತಿ ಲಿಮಿಟ್ ಹಾಕಿದ್ದೇವೆ. ನೀವು ಹೇಳಿದ ಹಾಗೆ ಮದ್ರಾಸ್‌ನಲ್ಲಿ ಇಲ್ಲ ಬೇರೆ ಕಡೆ ಇಲ್ಲ ಎಂದು ತಾವು ಹೇಳಿದ್ದೀರಿ. ನೋಯಿಂಗ್‌ಲಿ ಆ ಕಾಲದಲ್ಲಿ ನಮ್ಮ ಎಲ್ಲಾ ಲೆಜಿಸ್ಲೇಟರ್ಸ್ ಆಗ ಯುನಾನಿಮಸ್‌ಲಿ ತಂದಂಥ ಒಂದು ಕಾನೂನು. ಆದ್ದರಿಂದ, ಈಗ ಅದನ್ನು ಪರಿಶೀಲನೆ ಮಾಡತಕ್ಕ ಅವಶ್ಯಕತೆ ಇಲ್ಲ, ಅದನ್ನು ಮುಂದೆ ನೋಡೋಣ.

ಶ್ರೀ ಆರ್. ವಿ. ದೇಶಪಾಂಡೆ: ಸೀಲಿಂಗ್ ಏರಿಯಾ ತೆಗೆಯಬೇಕೆಂದು ನಾನು ಹೇಳಲಿಲ್ಲ. ಸೀಲಿಂಗ್ ಏರಿಯಾ ಇರಲಿಕ್ಕೆ ಬೇಕು. ಆದರೆ ಹೆಚ್ಚು ರಿಸ್ಟ್ರಿಕ್ಷನ್ ಆದಷ್ಟೂ ಹೆಚ್ಚು ಕರಪ್ಷನ್ ಆಗುತ್ತದೆ.

ಮೊದಲು 12 ಸಾವಿರ ಇನ್‌ಕಮ್ ಲಿಮಿಟ್ ಇತ್ತು. ಒಬ್ಬ ಜವಾನನ, ಒಬ್ಬ ಡ್ರೈವರ್‌ನ ಸಂಬಳ ಎರಡು ಸಾವಿರ ರೂಪಾಯಿ ಆಗಿದೆ. ಆದ್ದರಿಂದ, ಅದರ ಸಲುವಾಗಿ ನೀವು 50 ಸಾವಿರ ರೂಪಾಯಿ ಮಾಡಿ. ಆದರೆ 12ಸಾವಿರ ರೂಪಾಯಿ ಇನ್‌ಕಮ್ ಇದ್ದಾಗ ಬೆಂಗಳೂರು ಸುತ್ತಮುತ್ತ ದೊಡ್ಡ ದೊಡ್ಡ ಸಿನಿಮಾ ಸ್ಟಾರ್ಸ್ ಲ್ಯಾಂಡ್ ತೆಗೆದುಕೊಂಡಿಲ್ಲವೇನು? The Cinema stars, those who are multi-millionaires, they have taken lands all round Bangalore.

ಇವರೆಲ್ಲರೂ ಹೇಗೆ ತೆಗೆದುಕೊಂಡರು? ವಹಿದಾರೆಹಮಾನ್, ರಾಜೇಶ್ ಖನ್ನಾ, Mehmood, ರಾಜಕುಮಾರ್ ಇವರೆಲ್ಲರೂ ಹೇಗೆ ತೆಗೆದುಕೊಂಡರು? ಅವರ ಇನ್‌ಕಮ್ 12 ಸಾವಿರ ಮಾತ್ರ ಇದೆಯೇ? ಇಲ್ಲ, ಅವರು ಹೇಗೆ ಮಾಡುತ್ತಾರೆ ಅಂದರೆ, ಬೇನಾಮಿ ಟ್ರಾನ್‌ಸ್ಯಾಕ್ಷನ್ ಮಾಡಬಹುದು, ಅಥವಾ ಸಬ್‌ರಿಜಿಸ್ಟ್ರಾರ್ ಹಿಡಿದುಕೊಂಡು ಮಾಡಬಹುದು. By putting such restrictions, you are trying to increase more corruption. ಇದು ನಿಜ ಸಂಗತಿ ಇದರಿಂದ ಗೌರ್ನಮೆಂಟಿಗೆ ರೆವಿನ್ಯೂ ಇಲ್ಲ. How could they take? They have managed to get through benami transactions. By putting such restrictions, you are trying to increase more corruption. ಕರಪ್ಷನ್ ಹೆಚ್ಚಾಗುತ್ತಿದೆ. Let us be frank. You fix the ceiling area that it should be so much. You fix the ceiling area.

ಈಗ ರಿಸ್ಟ್ರಿಕ್ಷನ್ ಹೆಚ್ಚು ಮಾಡುತ್ತೀರಿ ಅಷ್ಟು ಕರಪ್ಷನ್ ಹೆಚ್ಚು. ಆಗಲೇ 12 ಸಾವಿರ ರೂಪಾಯಿ ಇನ್‌ಕಮ್ ಇಟ್ಟುಕೊಂಡು ದೊಡ್ಡ ದೊಡ್ಡವರು ತೆಗೆದುಕೊಂಡಿದ್ದಾರೆ. ಯಾರಿಗೆ ಪಾಪ ಕಾನೂನು ಭಯ ಇದೆ ಅವರು ತೆಗದುಕೊಳ್ಳುವುದಕ್ಕೆ ಹೋಗಿಲ್ಲ. ಯಾರಿಗೆ ಕಾನೂನು ಭಯ ಇಲ್ಲ ಅವರು ತೆಗೆದುಕೊಂಡಿದ್ದಾರೆ. ಮಾನ್ಯ ಖರ್ಗೆಯವರು ಇನ್‌ಕಂ ಲಿಮಿಟನ್ನು 50 ಸಾವಿರ ಮಾಡಿದ್ದಾರೆ ಅವನು ಏನು ಮಾಡುತ್ತಾನೆ ಅಂದರೆ, ಮತ್ತೊಂದು ಬೇನಾಮಿ ತೆಗೆದುಕೊಳ್ಳುತ್ತಾನೆ. ಮುಂದೆ ಸುಮಾರು ಎರಡು ಲಕ್ಷ ಆಗುತ್ತದೆಂದು ಗೊತ್ತಿರುತ್ತದೆ. Let us be frank. There should not be restriction. As far as the ceiling is concerned there should be restriction. ನಿಮಗೆ ನಾನು ಅಷ್ಟೆ ರಿಕ್ವೆಸ್ಟ್ ಮಾಡುತ್ತೇನೆ.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೆ, ಈಗ ಏನಾಗುತ್ತದೆಂದರೆ, ನಮ್ಮ ದೇಶಪಾಂಡೆಯವರು ಹೇಳಿದ ಹಾಗೆ ಮಿತಿ ಇಲ್ಲದಿದ್ದರೆ ಈ ಆಬ್ಸೆಂಟೀವ್ ಲ್ಯಾಂಡ್‌ಲಾರ್ಡ್ಸ್ ಏನಿದ್ದರು, ಅವರೆಲ್ಲರೂ ಮತ್ತೆ ಈ ಜಮೀನುಗಳನ್ನು ಕೊಂಡುಕೊಳ್ಳುತ್ತಾರೆ. ಆಗ ರೈತರು ಹತ್ತಿರ ಹತ್ತಿರ ಸಾಗುವಳಿ ಮಾಡಿ ಮತ್ತೊಂದು ಸಾರಿ ಟೆನೆಂಟ್ಸ್ ಆಗಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಈಗ ಕರಪ್ಷನ್ ಇರಬಹುದು, ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಅಂಥದ್ದರ ಮೇಲೆ ಕಾನೂನಿನ ಕಡಿವಾಣವನ್ನು ಹಾಕದಿದ್ದರೆ ಸರ್ಕಾರವಾದರೂ ಏತಕ್ಕೆ ಇರಬೇಕು ? ಅವರೂ ಕೂಡ ಸರ್ಕಾರವನ್ನು ನಡೆಸಿದ್ದಾರೆ. ಯಾರೋ 4-5 ಜನ ದೊಡ್ಡವರು ತಪ್ಪಿಸಿಕೊಂಡರು ಎಂದು ಹೇಳಿ ಸಾವಿರಾರು ಜನರಿಗೆ ಅನುಕೂಲವಾಗುವಂಥ ಈ ಕಾನೂನನ್ನು ಸಡಿಲಮಾಡತಕ್ಕದ್ದು ಮುಂದಿನ ಹಿತ ದೃಷ್ಟಿಯಿಂದ ಒಳ್ಳೆಯದಲ್ಲ. ಏಕೆಂದರೆ ಜಮೀನೇ ಸಿಕ್ಕದೇ ಇರತಕ್ಕ ಪರಿಸ್ಥಿತಿಯನ್ನು ದುಡ್ಡಿರುವವರು ನಿರ್ಮಾಣ ಮಾಡುತ್ತಾರೆ. ಈಗ ಅವರು ಹೇಳಿದ್ದರೆ ಸೀಲಿಂಗ್ ಲಿಮಿಟ್‌ಗೆ ಒಂದನ್ನು ತೆಗೆದುಕೊಳ್ಳಬಹುದು, ಇನ್ನೊಬ್ಬರ ಹೆಸರಿಗೆ ಇನ್ನೊಂದು ಸೀಲಿಂಗ್ ಲಿಮಿಟ್, ಅದೇ ರೀತಿ ಮತ್ತೊಬ್ಬರ ಹೆಸರಿಗೆ ಮತ್ತೊಂದು ಸೀಲಿಂಗ್ ಹೀಗೆ, ಆ ಕುಟುಂಬದಲ್ಲಿರುವವರೆಲ್ಲರ ಹೆಸರಿನಲ್ಲೂ ಸೀಲಿಂಗ್ ಲಿಮಿಟ್‌ನಲ್ಲಿ ಜಮೀನನ್ನು ತೆಗೆದುಕೊಂಡು ಇವತ್ತು-ಒಬ್ಬರೇ ನೂರು ಎಕರೆಯನ್ನು ಪರ್ಚೇಸ್ ಮಾಡುತ್ತಾರೆ. ಈಗ ನೀವು ಇನ್‌ಕಂ ಸೀಲಿಂಗ್ ಲಿಮಿಟ್‌ನ್ನು ತೆಗೆದುಹಾಕಿದರೆ ಇವತ್ತು 50ಎಕರೆಯನ್ನು ಕೊಂಡುಕೊಳ್ಳುವುದಕ್ಕೆ ಆಗದೇ ಇರುವವನೂ ಕೂಡ ನಾಳೆ ನೂರು ಎಕರೆಯನ್ನು ಪರ್ಚೇಸ್ ಮಾಡುತ್ತಾನೆ. ಆದುದರಿಂದ ಈಗಿರತಕ್ಕ ಇನ್‌ಕಂ ಸೀಲಿಂಗ್ ಲಿಮಿಟ್ ಬಹಳ ಸೂಕ್ತವಾಗಿದೆ. ಇದನ್ನು ತಾವು ದಯವಿಟ್ಟು ಏರಿಸದೇ ಇದ್ದರೆ ಇನ್ನೊಬ್ಬರು ಅಂದರೆ ಬಡವರು ಜಮೀನನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶ ಸಿಕ್ಕುತ್ತದೆ. ಈ ಕಾರಣದಿಂದಾಗಿ ತಾವು ಈ ಸೀಲಿಂಗ್ ಲಿಮಿಟ್‌ನ್ನು ತೆಗೆಯಬಾರದೆಂದು ನನ್ನ ಅಭಿಪ್ರಾಯ .

ಶ್ರೀ ಬಿ. ಹೆಚ್ ಲಕ್ಷ್ಮಣ್ಣಯ್ಯ : ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ದೇಶಪಾಂಡೆಯವರು ಹೇಳಿದಂತೆ ಇನ್‌ಕಂ ಸೀಲಿಂಗ್ ಲಿಮಿಟ್‌ನ್ನು ತೆಗೆಯುವುದು ಸೂಕ್ತವಲ್ಲ. ಮಾನ್ಯ ಕರಿಯಣ್ಣನವರು ಹೇಳಿದಂತೆ ಇನ್‌ಕಂ ಸೀಲಿಂಗ್ ಲಿಮಿಟ್‌ನ್ನು ತೆಗೆದಕೂಡಲೇ ಭೂಮಿಯಬೆಲೆ ಜಾಸ್ತಿಯಾಗುತ್ತದೆ. ಕೈಗಾರಿಕೋದ್ಯಮಿಗಳು ಮತ್ತು ಬೇರೆಯವರು ಹೆಚ್ಚಿನ ಹಣವನ್ನು ಕೊಟ್ಟು ಜಮೀನನ್ನು ತೆಗೆದುಕೊಂಡು ಮಾರ್ಕೆಟ್ಟಿನಲ್ಲಿ ಭೂಮಿಯ ಬೆಲೆಯನ್ನು ಜಾಸ್ತಿ ಮಾಡುತ್ತಾರೆ. ಒಬ್ಬ ಸಣ್ಣ ರೈತ 1-3 ಎಕರೆ ಭೂಮಿಯನ್ನು ಕೊಂಡುಕೊಳ್ಳಬೇಕೆಂದಿರುವವನು ಅಷ್ಟೊಂದು ಬೆಲೆಯನ್ನು ಕೊಟ್ಟು ಕೊಂಡುಕೊಳ್ಳುವುದಕ್ಕಾಗುವುದಿಲ್ಲ, ಇವತ್ತು ಇನ್‌ಕಂ ಸೀಲಿಂಗ್ ಲಿಮಿಟ್ ಇಲ್ಲದೇ ಹೋದರೆ ಟ್ಯಾಕ್ಸ್‌ನ್ನು ಕಡಿಯುವ ದೃಷ್ಟಿಯಿಂದ ಅವರೆಲ್ಲರೂ ಭೂಮಿಯನ್ನು ಕೊಂಡುಕೊಳ್ಳುತ್ತಾರೆ. ಇದರಿಂದಾಗಿ ಮಾರ್ಕೆಟ್‌ನಲ್ಲಿ ಭೂಮಿಯ ಬೆಲೆ ಜಾಸ್ತಿಯಾಗಿ ಸಣ್ಣ ಪುಟ್ಟ ವ್ಯಾಪಾರಗಾರರು, ಕಾರ್ಮಿಕರು, ವ್ಯವಸಾಯಗಾರರು ಈ ಭೂಮಿಯನ್ನು ಕೊಂಡು ಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಈಗ 50ಸಾವಿರ ಎಂದು ಇನ್‌ಕಂ ಸೀಲಿಂಗ್ ಲಿಮಿಟ್ ಮಾಡಿರತಕ್ಕದ್ದೇ ಬಹಳ ಜಾಸ್ತಿಯಾಯಿತು. ಆದುದರಿಂದ ಸರ್ಕಾರ ಈ ಇನ್‌ಕಂ ಸೀಲಿಂಗ್‌ನ್ನು ತೆಗೆಯಬಾರದೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷಿಣಿಯವರೆ, ಈಗಾಗಲೇ ನಾನು ಏನು ಹೇಳಿದ್ದೇನೆ ಅದನ್ನೇ ಮಾನ್ಯ ಸದಸ್ಯರೂ ಹೇಳಿದ್ದಾರೆ. ನಾನು ಎಲ್ಲದಕ್ಕೂ ಉತ್ತರ ಕೊಟ್ಟಿದ್ದೇನೆ.

ಛೇರ್ಮನ್ : ಪ್ರಸ್ತಾವ ಏನೆಂದರೆ "1991ನೇ ಸಾಲಿನ ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2

ಛೇರ್ಮನ್ : "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ 3ಕ್ಕೆ ತಿದ್ದುಪಡಿ

ಛೇರ್ಮನ್ : ಖಂಡ 3ಕ್ಕೆ ಮಾನ್ಯ ಮಂತ್ರಿಗಳು ತಿದ್ದುಪಡಿಯನ್ನು ಸೂಚಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷಿಣಿಯವರೆ, ಇದು ಬಿಟ್ಟು ಹೋಗಿತ್ತು. ಆದ್ದರಿಂದ ಈ ಖಂಡ 3ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"That in clause 3 of the said Bill after the brackets, words, figures and comma, "(the Karnataka Act 18 of 1966)" the following shall be inserted namely :

"the Karnataka Slum Clearance Board established under the Karnataka Slum Arear's (Improvement and Clearance) Act, 1973 (Karnataka act 33 of 1974)".

The amendment was proposed.

ಈಗ ಹೌಸಿಂಗ್ ಬೋರ್ಡ್, ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬೋರ್ಡ್, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ನಗರಾಭಿವೃದ್ಧಿ ಪ್ರಾಧಿಕಾರ, ಇವು ಆದಮೇಲೆ ಕರ್ನಾಟಕ ಸ್ಲಂ ಕ್ಲಿಯರೆನ್ಸ್ ಬೋರ್ಡ್ ಎಂದು ಸೇರಿಸಿಕೊಳ್ಳಬೇಕೆಂದು ಇಲ್ಲಿ ತಿದ್ದುಪಡಿ ಮಾಡಲಾಗಿದೆ.

ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ಮಂತ್ರಿಗಳು ತಂದಿರತಕ್ಕ ಈ ತಿದ್ದುಪಡಿಯನ್ನು ಸ್ವಾಗತ ಮಾಡಿ ಅವರಿಗೆ ನನ್ನ ಒಂದು ಸೂಚನೆ ಏನೆಂದರೆ, ಈಗಾಗಲೇ ನನ್ನ ಕೆಲವು ಸ್ನೇಹಿತರು ಏನು ಪ್ರಸ್ತಾಪ ಮಾಡಿದಂತೆ ನೋಟಿಫಿಕೇಷನ್, ಡೀ ನೋಟಿಫಿಕೇಷನ್, ರೀ ಕನ್ವೇಯನ್ಸ್ ಇದನ್ನು ದಯವಿಟ್ಟು ಮಾಡುವುದು ಬೇಡ. ಇದನ್ನು ತಾವು ಈ ಕಾನೂನಿನಲ್ಲಿ ಅಳವಡಿಸಿದರೆ ಸೂಕ್ತ ಎನಿಸುತ್ತದೆ. ಕಾರಣ ಏನೆಂದರೆ ಕೆಲವು ಕಡೆ ಎಲ್ಲಿ ಚೆನ್ನಾಗಿ ತೋಟವನ್ನು ಮಾಡಿ ಮರಗಿಡಗಳನ್ನು ಬೆಳಿಧಿದ್ದಾರೆ ಆ ಜಾಗವನ್ನು ನಾವು ಸೈಟ್‌ಗಾಗಿ ಅಕ್ವೈರ್ ಮಾಡಿಕೊಳ್ಳುತ್ತೇವೆಂದು ಅಭಿವೃದ್ಧಿ ಪ್ರಾಧಿಕಾರದವರು, ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯವರು ಹೇಳುತ್ತಿದ್ದಾರೆ. ಈಗಾಗಲೇ ಅರಣ್ಯ ಪ್ರದೇಶದ ವಿಸ್ತೀರ್ಣ, ಹಸಿರು ಪ್ರದೇಶದ ವಿಸ್ತೀರ್ಣ ಕಡಿಮೆಯಾಗುತ್ತಿದೆ.

ಇದರಿಂದ ಪ್ರಕೃತಿಯ ಸಮತೋಲನ ಏನಿದೆ ಇದಕ್ಕೆ ಅಡ್ಡಿಯಾಗುತ್ತದೆನ್ನತಕ್ಕಂಥ ಮಾತು ಕೇಳಿ ಬರುತ್ತಿದೆ. ಇವತ್ತಿನದಿವಸ ಪ್ರಪಂಚದಲ್ಲಿ ಎಲ್ಲಿಹೋದರೂ ಕೂಡ ಪ್ರಕೃತಿಯ ಬಗ್ಗೆ ಜನತೆಯಲ್ಲಿ ಪ್ರಜ್ಞೆ ಮೂಡುತ್ತಾ ಬಂದಿದೆ. ಅದಕ್ಕೆ ತಕ್ಕಹಾಗೆ ಇರತಕ್ಕಂಥ ಮರಗಳನ್ನು ಕಡಿದು ನೀವು ಸೈಟು ಮಾಡುತ್ತೇವೆಂದರೆ ಅದು ಅರ್ಥವಿಲ್ಲದಂತಾಗುತ್ತದೆ. ಆ ಮರವನ್ನು ಬೆಳೆಸಬೇಕಾದರೆ ಸಾವಿರಾರು ರೂಪಾಯಿಗಳಿಂದ ಲಕ್ಷಾಂತರ ರೂಪಾಯಿ ಖರ್ಚಾಗುತ್ತದೆ. ಒಂದು ಕಡೆ ಬೆಳೆದಿರತಕ್ಕಂಥ ಮರಗಳನ್ನು ಕಡಿಯುತ್ತೇವೆ. ಇನ್ನೊಂದು ಕಡೆ ವಾಷಿಂಗ್‌ಟನ್‌ಗೆ ಹೋಗಿ ವರ್ಲ್ಡ್ ಬ್ಯಾಂಕಿನಿಂದ, ವಿಶ್ವಬ್ಯಾಂಕಿನಿಂದ ನಾವು ಹಣವನ್ನು ಮರ ಬೆಳೆಸುವುದಕ್ಕೆ ತರುತ್ತೇವೆ. ಈ

ವಿಪರ್ಯಾಸವೇನಿದೆ ಈ ವಿಪರ್ಯಾಸಕ್ಕೆ ಸರ್ಕಾರ ಅವಕಾಶ ಮಾಡಿಕೊಡುವುದು ಬೇಡ. ಇವತ್ತಿನದಿವಸ ಅದು ಬೆಂಗಳೂರು ಸುತ್ತಮುತ್ತಲಿರಬಹುದು, ಅಥವಾ ಕರ್ನಾಟಕದಲ್ಲಿರತಕ್ಕಂಥ ಯಾವುದೇ ಸಾಗರ ಪ್ರದೇಶವಿರಬಹುದು, ಎಲ್ಲಿ ಬೆಳೆದು ನಿಂತಿರತಕ್ಕಂಥ ಮರಗಳಿವೆ, ದಟ್ಟವಾಗಿರತಕ್ಕಂಥ ಮರಗಳಿವೆ ಅಂಥಕಡೆ ಎಂಥ ಪರಿಸ್ಥಿತಿ ಬಂದರೂ ಕೂಡ ಅದನ್ನು ವಶಪಡಿಸಿಕೊಳ್ಳುವುದು ಖಂಡಿತಬೇಡ. ನೀವು ಆ ರೀತಿಯಾದಂಥ ಒಂದು ತಿದ್ದುಪಡಿಯನ್ನು ದಯವಿಟ್ಟು ತರುವುದು ಸೂಕ್ತವೆಂದು ನನಗನ್ನಿಸುತ್ತದೆ. ಅದಕ್ಕೆ ಇಲ್ಲಿ ಅವಕಾಶ ಇಲ್ಲದಿದ್ದರೂ ಕೂಡ ಈ ಭೂಸುಧಾರಣ ಮಸೂದೆಯಲ್ಲಿ ಅವಕಾಶವಿಲ್ಲದಿದ್ದರೂ ಸಹ ನೀವು ಈಗ ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿಯಾದರೂ ತಿದ್ದುಪಡಿಯನ್ನು ತಂದು ಈಗಿರತಕ್ಕಂಥ ಮರಗಳನ್ನು ರಕ್ಷಣೆ ಮಾಡತಕ್ಕಂಥದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬೇಕೆಂದು ಹೇಳಿ ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಲ್ಲಿ ವಿನಂತಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಎಕ್ಸ್‌ಪ್ಲೈನ್ ಮಾಡಿದ ಹಾಗೆ ಇದು ಸಂಬಂಧಪಟ್ಟಂಥ ಬಿ.ಡಿ.ಎ. ಆಗಲಿ ಅಥವಾ ಹೌಸಿಂಗ್ ಬೋರ್ಡ್ ಆಗಲಿ, ಹೀಗೆ ಯಾವ ಯಾವ ಶಾಸನಬದ್ಧ ಪ್ರಾಧಿಕಾರಗಳಿವೆ ಅವು ಜಮೀನನ್ನು ಅಕ್ವಯರ್ ಮಾಡುವಾಗ ಅವರು ಕೂಡ ಇದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಮತ್ತು ಎಂಥ ಜಮೀನನ್ನು ಅಕ್ವಯರ್ ಮಾಡಬೇಕು ಬಿಡಬೇಕು ಎನ್ನುವುದನ್ನು ನಾವು ಕನ್‌ಸೆಂಟ್‌ಮೇಲೆ ತೆಗೆದುಕೊಳ್ಳತಕ್ಕಂಥದ್ದು ಇದೆ. ಈಗ ಜಮೀನನ್ನು ಖರೀದಿ ಮಾಡಲೂ ಸರ್ಕಾರದಿಂದ ಅವರಿಗೆ ಎಕ್ಸಮ್‌ಷನ್ ಕೊಡುತ್ತಿದ್ದೇವೆ. ಅದರಲ್ಲಿ ಇದು ಬರುವುದಿಲ್ಲ, ಏತಕ್ಕೆಂದರೆ ಬೇರೆ ವಿಚಾರವನ್ನು ಏನು ಪ್ರಸ್ತಾಪ ಮಾಡಿದ್ದೀರಿ. ಅದು ಫಾರೆಸ್ಟ್ ಆಕ್ಟ್‌ನಲ್ಲಿಯೂ ಬರಬಹುದು. ಪರಿಸರ ಇಲಾಖೆ ಆಕ್ಟ್‌ನಲ್ಲಿಯೂ ಬರಬಹುದು, ತದನಂತರ ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿಯೂ ಕೂಡ ಯಾವರೀತಿ ಕ್ರಮ ತೆಗೆದುಕೊಳ್ಳಬೇಕು ಇಲ್ಲವೇ ಅಮೆಂಡ್‌ಮೆಂಟ್ ತರಬೇಕು ಎಂಬುದನ್ನು ನೋಡೋಣ. ಆದರೆ ಇದನ್ನು ಕೇವಲ..

ಶ್ರೀ ಸಿ. ಬೈರೇಗೌಡ : ಮುಂದೆ ತಿದ್ದುಪಡಿ ತರುತ್ತೇವೆಂದಾದರೂ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೋಡೋಣ. ಏಕೆಂದರೆ, ಒಂದು ಏರಿಯಾ ಡೆವಲಪ್‌ಮೆಂಟ್ ಮಾಡುತ್ತೇವೆ. ಅದರ ಮಧ್ಯೆ ತಾವು ಹೇಳಿದಂತಹ ಪ್ರದೇಶ ಒಂದೆರಡು ಗುಂಟೆ ಇರಬಹುದು. ಆಗ ಅದನ್ನು ಬಿಟ್ಟು ಮಾಡಿಲಿಕ್ಕೆ ಆಗುವುದಿಲ್ಲ.

ಶ್ರೀ ಸಿ. ಬೈರೇಗೌಡ : ಈಗ ಗ್ರೀನ್ ಬೆಲ್ಟ್ ಏರಿಯಾ ಎಂದು ಹಸಿರು ಪ್ರದೇಶ ವಿಶಾಲವಾಗಿರತಕ್ಕಂಥ ಪ್ರದೇಶವನ್ನು ಕರೆಯಿರಿ. ಅದೇ 1-2-10 ಎಕರೆ ಹಸಿರು ವಲಯ ಇದ್ದರೆ ಅಂಥಾದ್ದನ್ನು ಗ್ರೀನ್ ಪ್ಯಾಚ್ ಎಂದು ಕರೆಯಿರಿ. ಆ ಗ್ರೀನ್ ಪ್ಯಾಚ್ ಯಾವತ್ತಿಗೂ ಕೂಡ ಅದೇ ರೀತಿ ಇರಬೇಕು. ಮರ ಕಡಿಯುವುದಕ್ಕೆ ಮಾತ್ರ ದಯವಿಟ್ಟು ಹೋಗಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಯಿತು. ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಆಕ್ಟ್ ಇದೆ. ಅದರ ಪ್ರಕಾರ ಅದನ್ನೆಲ್ಲಾ ಅವರು ನೋಡಿಕೊಳ್ಳುತ್ತಾರೆ. ಅದಕ್ಕಾಗಿ ಈ ತಿದ್ದುಪಡಿಯನ್ನು ಎಲ್ಲರೂ ಒಮ್ಮತದಿಂದ ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

MR. CHAIRMAN: I will put the Amendment to clause 3 to the vote of the House. The question is,

"In clause 3 of the said Bill after the brackets, words, figures and comma" (the Karnataka Act 18 of 1966)" the following shall be inserted namely :-

"The Karnataka Slum Clearance Board established under the Karnataka Slum Areas (Improvement and Clearance) Act, 1973(Karnataka Act 33 of 1974)".

The amendment was proposed

The motion was adopted

(Amendement to clause 3 was added to the Bill).

ಖಂಡ 3 ತಿದ್ದುಪಡಿಯಾಗಿರುವಂತೆ

ಛೇರ್ಮನ್ : " ಖಂಡ 3,ತಿದ್ದುಪಡಿಯಾಗಿರುವಂತೆ" ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು.

(ಖಂಡ 3 ತಿದ್ದುಪಡಿಯಾಗಿರುವಂತೆ ಈ ವಿಧೇಯಕಕ್ಕೆ ಸೇಸಿರಸಲ್ಪಟ್ಟಿತು.)

ಖಂಡ 4

ಛೇರ್ಮನ್ : ' ಖಂಡ ನಾಲ್ಕು ಈ ವಿಧೇಯಕದ ಅಂಗವಾಗಿರುತ್ತದೆ.'

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು.

(ಖಂಡ 4 ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ.

ಛೇರ್ಮನ್ : ಪ್ರಸ್ತಾವ ಏನೆಂದರೆ "ಮೊದಲನೆ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸು ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆ ಖಂಡ, ದೀರ್ಘ ಶಿರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು) : 1991ನೇ ಸಾಲಿನ ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಮಾಡಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಛೇರ್ಮನ್ : ಪ್ರಸ್ತಾವ ಏನೆಂದರೆ " 1991ನೇ ಸಾಲಿನ ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ವಿಧೇಯಕವನ್ನು, ತಿದ್ದುಪಡಿ ಮಾಡಿರುವಂತೆ, ಅಂಗೀಕರಿಸುವುದು".

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

1991ರ ಕರ್ನಾಟಕ ಪೌರ ನಿಗಮಗಳು(ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಕೆ. ಜಿ ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು) : ಮಾನ್ಯ ಅಧ್ಯಕ್ಷಿಣಿಯವರೆ, 1991ರ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು.

ಶ್ರೀ ಕೆ. ಜೆ. ಜಾರ್ಜ್(ವಸತಿ ಮತ್ತು ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ಕೆ.ಎಂ.ಸಿ. ಆ್ಯಕ್ಟಿನ ಸೆಕ್ಷನ್ 10 (1)ರ ಪ್ರಕಾರ ಕಾರ್ಪೊರೇಷನ್ ಚುನಾವಣೆ ಆದಮೇಲೆ ಪ್ರತಿವರ್ಷವೂ ಫರ್ಸ್ಟ್ ಮೀಟಿಂಗ್‌ನಲ್ಲಿ ಮೇಯರ್ ಮತ್ತು ಡೆಪ್ಯೂಟಿ ಮೇಯರ್ ಅನ್ನು ಎಲೆಕ್ಟ್ ಮಾಡಬೇಕಾಗಿತ್ತು. ಆದರೆ ಈ ವರ್ಷ ಲೋಕಸಭಾ ಚುನಾವಣೆ ಅದೇ ಸಮಯಕ್ಕೆ ಬಂದದ್ದರಿಂದ ಒಂದು ತಿಂಗಳ ಕಾಲ ಸ್ಟ್ಯಾಂಡಿಂಗ್ ಕಮಿಟಿ, ಮೇಯರ್ ಮತ್ತು ಡೆಪ್ಯೂಟಿ ಮೇಯರ್ ಅನ್ನು ನೇಮಿಸುವುದು ಪೋಸ್ಟ್‌ಪೋನ್ ಮಾಡಿದೆವು. ಅದರ ಸಲುವಾಗಿ ಆರ್ಡಿನೆನ್ಸ್ ಹೊರಡಿಸಿದ್ದೆವು. ಈಗ ಅದರ ಜಾಗದಲ್ಲಿ ಈ ತಿದ್ದುಪಡಿ ಮಸೂದೆಯನ್ನು ತರಬೇಕಾಯಿತು. ಇದನ್ನು ತರದಿದ್ದರೆ ಈ ವರ್ಷದ ಮೇಯರ್, ಡೆಪ್ಯುಟಿ ಮೇಯರ್ ಮತ್ತು ಸ್ಟ್ಯಾಂಡಿಂಗ್ ಕಮಿಟಿಯ ಕಾಲಾವಧಿ 11ತಿಂಗಳು ಮಾತ್ರ ಆಗುತ್ತಿತ್ತು. ಅದಕ್ಕಾಗಿ ಈ ತಿದ್ದುಪಡಿತರಬೇಕಾಯಿತು. ಇದರಿಂದಾಗಿ ಮುಂದಿನ ವರ್ಷದಿಂದ ಅದೇ ತಿಂಗಳಲ್ಲಿ ಚುನಾವಣೆ ಆಗುತ್ತದೆ; ಮತ್ತು ಮೇಯರ್ ಮತ್ತು ಡೆಪ್ಯೂಟಿ ಮೇಯರ್‌ಗೆ 12 ತಿಂಗಳ ಕಾಲಾವಧಿ ಇರುತ್ತದೆ. ಆದ್ದರಿಂದ ದಯಮಾಡಿ ಈ ಮಸೂದೆಗೆ ಸಭೆಯು ಒಪ್ಪಿಗೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

(ಮಾನ್ಯ ಉಪಾಧ್ಯಕ್ಷಿಣಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಆರ್. ವಿ. ದೇಶಪಾಂಡೆ(ಹಳಿಯಾಳ) : ಮಾನ್ಯ ಉಪಾಧ್ಯಕ್ಷಿಣಿಯವರೆ, ಇಂಥ ಶಾಸನವನ್ನು ನಾವು ನಿಜವಾಗಿಯೂ ವಿರೋಧ ಮಾಡಬೇಕಾಗುತ್ತದೆ. ಏಕೆಂದರೆ, ತಾವು ಕೊಟ್ಟ ಕಾರಣ ಲೋಕಸಭಾ ಚುನಾವಣೆ ಇತ್ತು, ಅದರಿಂದ ಮೇಯರ್ ಮತ್ತು ಡೆಪ್ಯೂಟಿ ಮೇಯರ್ ಚುನಾವಣೆ ಮಾಡಲಿಕ್ಕೆ ಸಾಧ್ಯವಾಗಲಿಲ್ಲ ಎಂದು. ಇದು ಸರಿಯಲ್ಲ. ಮೇಯರ್ ಮತ್ತು ಡೆಪ್ಯೂಟಿ ಮೇಯರ್ ಚುನಾವಣೆಯನ್ನು ಪ್ರತಿ ವರ್ಷ ಮಾಡಬೇಕು. ಲೋಕಸಭಾ ಚುನಾವಣೆಗೂ ಮೇಯರ್ ಚುನಾವಣೆಗೂ ಯಾವುದೇ ಸಂಬಂಧ ಇಲ್ಲ. ಈ ಹಿಂದೆ ಕೂಡ ಕಾರ್ಪೊರೇಷನ್ ಚುನಾವಣೆ ಮತ್ತು ಮುನಿಸಿಪಾಲಿಟಿ ಚುನಾವಣೆಗಳನ್ನು ಮುಂದೆ ಹಾಕುವ ಅಧಿಕಾರವನ್ನು ತೆಗೆದುಕೊಂಡಿರಿ. ಈಗ ಈ ಮೇಯರ್ ಚುನಾವಣೆಯನ್ನು ಏತಕ್ಕೆ ಸಕಾಲದಲ್ಲಿ ಮಾಡಲಿಕ್ಕೆ ಆಗಲಿಲ್ಲ? ಏನು ಕಾರಣ? ಲೋಕಸಭಾ ಚುನಾವಣೆಗೆ ಮೇಯರ್ ಏನು ಕ್ಯಾಂಡಿಡೇಟ್ ಇದ್ದರೆ?ಅಥವಾ ಬೇರೆ ಏನಾದರೂ ಸಮಸ್ಯೆ ಇತ್ತೆ? ಅಂಥ ಸಮಸ್ಯೆ ಇರಲಿಕ್ಕೆ ನಿಮ್ಮ ಪಕ್ಷದಲ್ಲಿ ಇಂಟರ್‌ನಲ್ ಫೈಟ್ಸ್ ಇತ್ತು. ಇದನ್ನು ವಿಚಾರ ಮಾಡಲು ನಿಮಗೆ ಸಮಯ ಇರಲಿಲ್ಲ. ಈ ಆರ್ಡಿನೆನ್ಸ್ ಹೊರಡಿಸುವುದಕ್ಕೆ ಸರ್ಕಾರದ ತನ್ನ ಎನರ್ಜಿಯನ್ನು ಎಷ್ಟು ವೇಸ್ಟ್ ಮಾಡಿದೆ ಎಂದು; ಸಮಯಕ್ಕೆ ಸರಿಯಾಗಿ ಚುನಾವಣೆ ಮಾಡಿದ್ದರೆ ಈ ತೊಂದರೆಯೇ ಇರುತ್ತಿರಲಿಲ್ಲ. ಇಂಥ ಶಾಸನಗಳನ್ನು ಆದಷ್ಟು ಮಟ್ಟಿಗೆ ತರುವುದಕ್ಕೆ ಪ್ರಯತ್ನ ಮಾಡಬಾರದು. ಯಾವ ಚುನಾವಣೆ ಯಾವ ಕಾಲದಲ್ಲಿ ಆಗಬೇಕೋ ಆ ಕಾಲದಲ್ಲೇ ಆಗಬೇಕು. ಸಹಕಾರ ಸಂಘಗಳ ಚುನಾವಣೆ ಇರಬಹುದು ಮತ್ತೊಂದು ಇರಬಹುದು. ಎಲ್ಲವನ್ನೂ ಆಯಾಯ ಸಂದರ್ಭದಲ್ಲೇ ಮಾಡಬೇಕು. ಈ ಮೇಯರ್ ಚುನಾವಣೆ ಬೆಂಗಳೂರಿಗೆ ಸಂಬಂಧಪಟ್ಟದ್ದು. ಆ ಚುನಾವಣೆಯನ್ನು ಮಾಡುವುದಕ್ಕೆ ಏನೇನು ತೊಂದರೆ ಇರಲಿಲ್ಲ. ಆದರೆ ಈ ಆರ್ಡಿನೆನ್ಸ್ ತಂದು ನಂತರ ಬಿಲ್ ತರುವ ಅವಶ್ಯಕತೆ ಇರಲಿಲ್ಲ. You are misusing the Authority. ಸುಮ್ಮನೆ ವ್ಯಕ್ತಿಗತವಾಗಿ ಸಹಾಯ ಮಾಡಲಿಕ್ಕೆ ಇದನ್ನು ತಂದಿರಿ. ಮುಂದೆ ಈ ರೀತಿ ಆಗಬಾರದೆಂದು ಕಾಷನ್ ಮಾಡುತ್ತಿದ್ದೇನೆ. ಈ

ಸಂದರ್ಭದಲ್ಲಿ, ಕಾಂಪ್ರಹೆನ್‌ಸೀವ್ ಬಿಲ್ ತಂದು ಕಾರ್ಪೊರೇಷನ್ ಮತ್ತು ಮುನಿಸಿಪಲ್ ಆಕ್ಟ್‌ಗೆ ಅಮೆಂಡ್‌ಮೆಂಟ್ ತರಬೇಕೆಂದು ಸಲಹೆ ಮಾಡುತ್ತೇನೆ. ಏಕೆಂದರೆ ಪ್ರತಿ ವರ್ಷ ಮೇಯರ್, ಡೆಪ್ಯೂಟಿ ಮೇಯರ್ ಅನ್ನು ಆಯ್ಕೆ ಮಾಡುತ್ತೀರಿ. ಆದರೆ ಅವರ 6-8 ತಿಂಗಳ ಕಾಲಾವಧಿವರೆಗೆ ಸತ್ಕಾರ ಸಮಾರಂಭಗಳಲ್ಲಿ ಕಳೆಯುತ್ತದೆ. ಅವರು ನಿಜವಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಕನಿಷ್ಟ ಮೇಯರ್‌ಗೆ 4 ವರ್ಷವಾದರೂ ಇರಬೇಕು. ಆ ದೃಷ್ಟಿಯಿಂದ ಕಾರ್ಪೊರೇಷನ್ ಮತ್ತು ಮುನಿಸಿಪಲ್ ಆಕ್ಟ್‌ಗೆ ಆದಷ್ಟು ಬೇಗ ತಾವು ತಿದ್ದುಪಡಿಯನ್ನು ತರಬೇಕು.

ಸಾಕಷ್ಟು ಎಕ್ಸರ್‌ಸೈಜ್ ನಮ್ಮ ಸರ್ಕಾರ ಇದ್ದಾಗಲೂ ಈ ಬಗ್ಗೆ ಆಗಿದೆ. ಫೈಲ್ಸ್ ಬಿಲ್ಡ್ ಅಪ್ ಆಗಿದೆ. ಆದ್ದರಿಂದ ಅದಕ್ಕೆ ಪ್ರಾಧಾನ್ಯತೆ ಹೆಚ್ಚು ಕೊಟ್ಟು ಕಾಂಪ್ರಿಹೆನ್ಸೀವ್ ಅಮೆಂಡ್‌ಮೆಂಟ್ ಬಿಲ್ ಲಘು ತರಬೇಕೆಂದು ಹೇಳಿ ಈ ವಿಧೇಯಕವನ್ನು ನಾನು ವಿರೋಧಿಸುತ್ತೇನೆ.

ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ) : ಮಾನ್ಯ ಅಧ್ಯಕ್ಷರೇ, ಇದನ್ನು ಸನ್ಮಾನ್ಯ ದೇಶಪಾಂಡೆಯವರು ವಿರೋಧ ಮಾಡಿದರು. ತಮ್ಮ ಮೂಲಕ ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಆದರೆ ಅವರು ಏನು ವಿರೋಧ ಮಾಡಿದ್ದಾರೆ ಅದನ್ನು ನಾವು ವಿರೋಧಮಾಡ ಬೇಕಾಗುತ್ತದೆ. ಏಕೆಂದರೆ ಇವತ್ತು 11 ತಿಂಗಳ ಕಾಲ...

ಶ್ರೀ ಸಿ. ಬೈರೇಗೌಡ : ಮೈಸೂರಿನಲ್ಲಿ ಚುನಾವಣೆಯಲ್ಲಿ ಏನಾಯಿತು ಎಂದರೆ ಅವರು ವಿರೋಧ ಮಾಡಿದ್ದನ್ನು ನಾವು ವಿರೋಧ ಮಾಡಬೇಕು ಎಂದು ಹೇಳುತ್ತಾರಲ್ಲ, ಅದೇ ಆಗಿದ್ದು ಅಲ್ಲಿ.

ಶ್ರೀ ಕೆ. ಹರ್ಷಕುಮಾರ್ ಗೌಡ : ಆಗಿದೆ. ಆದರೆ ಬೈರೇಗೌಡರು ಇದ್ದಾರಲ್ಲ, ಅವರು ಮಾಡಿದ ಕೆಲಸವನ್ನು ನಮ್ಮ ಪಕ್ಷವಾಗಲೀ ನಮ್ಮ ಸರ್ಕಾರವಾಗಲೀ ಮಾಡಲಿಲ್ಲ. ಏಕೆಂದರೆ ಆರು ವರ್ಷಗಳ ಕಾಲ ನೀವು ಚುನಾವಣೆ ನಡೆಸಲಿಲ್ಲ. ಆರನೇ ಮೇಯರ್ ಅವರನ್ನು ಮೈಸೂರಿನಲ್ಲಿ ಅವಧಿ ಮುಗಿದ ಮೇಲೂ 6 ತಿಂಗಳ ಕಾಲ ಕೂರಿಸಿದರು.

ಶ್ರೀ ಆರ್.ವಿ. ದೇಶಪಾಂಡೆ : ನಾವಿದ್ದಾಗ ಚುನಾವಣೆ ನಡೆಸಲಿಲ್ಲ, ಅಂದರೆ ಏನು ಸ್ವಾಮಿ? ಏನಿದು?

ಶ್ರೀ ಸಿ. ಬೈರೇಗೌಡ : ಅವರು ಗೊತ್ತಿಲ್ಲದೆ ಏನೋ ಮಾತನಾಡುತ್ತಿದ್ದಾರೆ. ಗೊತ್ತಿಲ್ಲದೆ ಏತಕ್ಕೆ ಮಾತನಾಡುತ್ತೀರಿ? ದಯವಿಟ್ಟು ಗೊತ್ತಿರುವುದನ್ನು ಮಾತನಾಡಿ.

ಶ್ರೀ ಪಿ.ಜಿ. ಆರ್. ಸಿಂಧ್ಯಾ : ಆಗ ಹರ್ಷಕುಮಾರ್ ಅವರೂ ನಮ್ಮ ಜೊತೆಯಲ್ಲಿದ್ದರು. 10 ವರ್ಷ ಕಾಂಗ್ರೆಸ್ಸಿನವರು ಚುನಾವಣೆ ನಡೆಸಲಿಲ್ಲ ಎಂದು 14 ವರ್ಷ ನಮ್ಮ ಜೊತೆಯಲ್ಲಿದ್ದು ಪಾಪ/ಹೋರಾಟ ಮಾಡಿದ್ದಾರೆ. ಅಕಸ್ಮಾತ್ ಅವರ ಪೊಸಿಷನ್ ಕನ್‌ಫ್ಯೂಸ್ ಮಾಡಿಕೊಂಡು ಬಿಟ್ಟಿದ್ದಾರೆ. ಈಗ ನೀವು ಆಡಳಿತ ಪಕ್ಷದಲ್ಲಿದ್ದೀರಿ.

ಶ್ರೀ ಸಿ. ಬೈರೇಗೌಡ : ಅವರು ಹರ್ಷಕುಮಾರ್ ಹೋಗಿ ಹರ್ಷಕುಮಾರ್ ಗೌಡ ಆದರು.

ಶ್ರೀ ಕೆ. ಹರ್ಷಕುಮಾರ್ ಗೌಡ : ಯಾರು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟುಕೊಂಡಿದ್ದಾರೆ. ಯಾರು ಚುನಾವಣೆ ನಡೆಸಿದ್ದೇವೆಂದು ಹೇಳುತ್ತಾರೆ. ಅಂತಹವರು ಐದೂವರೆ ವರ್ಷ ಆದರೂ ಮತ್ತೆ ಚುನಾವಣೆ ನಡೆಸಲಿಲ್ಲ, ಮೈಸೂರು ನಗರದಲ್ಲಿ 6 ತಿಂಗಳ ಕಾಲ 6ನೇ ಮೇಯರ್ ಅವರನ್ನು ಅಧಿಕಾರದಲ್ಲಿ ಕೂರಿಸಿದರು. ಇವತ್ತು ಈ ವಿಧೇಯಕವನ್ನು ತಂದಿದ್ದಾರೆ. ಇದನ್ನು ಸ್ವಾಗತ ಮಾಡಬೇಕಾದುದು ಏತಕ್ಕೆ? ಈ ಪ್ರಜಾಪ್ರಭುತ್ವದಲ್ಲಿ ಯಾರು ಮೇಯರ್ ಆಗಬೇಕು ಅವರು ಆಗುತ್ತಾರೆ. ಆದರೆ ಅವಧಿ 11 ತಿಂಗಳಿದೆ; ಇದನ್ನು 12 ತಿಂಗಳು ಮಾಡಬೇಕು ಅದು ಎಂದು ತಿದ್ದುಪಡಿ ತಂದಿದ್ದಾರೆ. ಆದರೆ ಅಲ್ಲಿ ಆರು ತಿಂಗಳು ಎಕ್ಸ್‌ಟ್ರಾ ಅಧಿಕಾರ ನಡೆಸಲು 6ನೇ

ಮೇಯರ್ ಅವರನ್ನು ಅಧಿಕಾರದಲ್ಲಿ ಕೂರಿಸಿದ ನೀವು ಹೇಗೆ ಈ ತಿದ್ದುಪಡಿ ಬಿಲ್ಲನ್ನು ವಿರೋಧ ಮಾಡುತ್ತೀರಿ ?

SRI QAMARUL ISLAM (GULBARGA) : Madam Deputy Speaker. I am also just supporting this amendment but at the same time I want to give two suggestions.

SHRI P.G.R. SINDHYA : That means you oppose...

SHRI QAMARUL ISLAM 1 I know when we have to support and what we have to support. Ours is a party which is issue-based and not personality based. We bo by the issues. The minorities, whom I am representing, are facing serious problems. If this Government goes against our interest, I am here to oppose but at the same time if the Government is interested in uplifting the minorities, I am here to openly support them. I am not just to oppose for the sake of opposition. My party is for constructive opposition. My experience is, the term of one year.

SHRI D.B. CHANDRE GOWDA : There is no need for explanation to be offered to me or to my party. Let the Hon'ble member speak to the Chair.

SHRI QAMARUL ISLAM : My friend, the Deputy Leader of Opposition, is taking it lightly. I am very serious. This one year term is not enough. Throught on the country there are different Corporations, in different States. I want to make a suggestion through this House that this one year term is to be extended by two years and the total term is to be extended to six years. Also madam, today in the Corporations, most of the elected representatives are in the age group of 25/30 years and no elderly persons are there. In so may states, after the elections, some elderly persons are nomiated to the Corporations. In Maharashtra it is followed and in Delhi also it is followed. So I want to give a suggestion that just to guide the elected representatives of the Corporations, some three or four elderly persons should be nominated so that they can guide the Corporations. These two suggestions I wanted to give. The Hon'ble Minister said that because of the Lok Sabha elections this amemdment has come necessary. That was the problem of the Ruling Party. Whether it was the problem of the Ruling Party or the Opposition Party, my party is not going to rule in the very near future, so I am not making any allegation that it was the problem of the Ruling Party. I have just given two important constructive suggestions through you, Madam, to the House.

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು) : ಮಾನ್ಯ ಸಭಾಧ್ಯಕ್ಷಿಣಿಯವರೆ, ಸರ್ಕಾರವು ಸದುದ್ದೇಶದಿಂದಲೇ ಈ ಒಂದು ಮೇಯರ್ ಮತ್ತು ಡೆಪ್ಯುಟಿ ಮೇಯರ್ ಅವರುಗಳ ಎಲೆಕ್ಷನ್‌ನ್ನು ಮುಂದೆ ಹಾಕಿದೆ. ಆ ಸಮಯದಲ್ಲಿ ಲೋಕಸಭೆ ಚುನಾವಣೆ ಹಾಗೂ ಇತರ ಕೆಲಸ ಕಾರ್ಯಗಳು ಬಂದಿದ್ದರಿಂದ ಚುನಾವಣೆಯನ್ನು ಸದುದ್ದೇಶದಿಂದಲೇ ಮುಂದೆ ಹಾಕಿದ್ದೇವೆ. ಈ ವರ್ಷ ಮಾತ್ರ 11 ತಿಂಗಳಿಗೆ ಮಾಡಿ ಬರುವ ವರ್ಷದಿಂದ 12

ತಿಂಗಳಿಗೆ ಯಥಾಪ್ರಕಾರ ಮಾಡುವ ಬಗ್ಗೆ ಈ ಬಿಲ್ಲಿಗೆ ತಿದ್ದುಪಡಿಯನ್ನು ತಂದಿದ್ದೇವೆ. ದಯವಿಟ್ಟು ಎಲ್ಲರೂ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ,"1991ನೇ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ರಿಂದ 4 ರವರೆಗೆ

ಉಪಾಧ್ಯಕ್ಷರು : 'ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ ಈ ವಿಧೇಕದ ಅಂಗವಾಗಿರುತ್ತದೆ.'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯ್ಕದ ಭಾಗವಾಗಿರುತ್ತದೆ"

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನುಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಕೆ.ಜೆ.ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು) : 1991ನೇ ಕರ್ನಾಟಕ ಪೌರ ನಿಗಮಗಳ (ತಿದ್ದಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, "1991ನೇ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಅಲ್ಪಕಾಲಾವಧಿ ಚರ್ಚೆ

ರಾಜ್ಯದಲ್ಲಿ ಇತ್ತೀಚೆಗೆ ಬಿದ್ದ ಭಾರಿ ಮಳೆ ಹಾಗೂ ನೆರೆ ಪಾವಳಿಯಿಂದ ಹಾನಿ ಉಂಟಾಗಿರುವ ಬಗ್ಗೆ ಸರ್ಕಾರದಿಂದ ಕೈಗೊಂಡ ಪರಿಹಾರ ಕಾರ್ಯಕ್ರಮಗಳು.

+ ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷಿಣಿಯವರೆ, ನಾವು ಚರ್ಚೆ ಮಾಡುವುದಕ್ಕೆ ಕಂದಾಯ ಮಂತ್ರಿಗಳು ಇಲ್ಲ, ನೀರಾವರಿ ಮಂತ್ರಿಗಳೂ ಸಹ ಇಲ್ಲ.

ಶ್ರೀ ಎಸ್.ಹೆಚ್. ಕೌಜಲಗಿ : ಮಾನ್ಯ ಬಸವಲಿಂಗಪ್ಪನವರು ಇದ್ದಾರೆ ಅವರು ಇದ್ದರೆ ನಮಗೆ ಎಲ್ಲರೂ ಇದ್ದಹಾಗೆ. ಅವರು ಇವರು ಇಲ್ಲವೆಂದು ಹೇಳುವುದಕ್ಕೆ ಹೋಗಬೇಡಿ. ಬಸವಲಿಂಗಪ್ಪವರು ಇದ್ದರೆ ಎಲ್ಲರೂ ಇದ್ದ ಹಾಗೆ. ಅವರು ಇದ್ದರೆ 'ಸಭಾ ಭೂಷಣ' ಇದ್ದಹಾಗೆ. ಪರಿಸರ ಮಂತ್ರಿಗಳು ಅಂದರೆ ಎಲ್ಲರೂ ಇದ್ದಹಾಗೆ ಆಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅಲ್ಲಿ ಒಟ್ಟಾರೆ ಪರಿಸರ ಮಾಲಿನ್ಯವಾಗಿ ಹೋಗಿದೆ. ಅವರು ಏನಾದರೂ ಪರಿಹಾರ ಮಾಡುತ್ತಾರಾ ಎಂದು ನೋಡಬೇಕು. ನಾನು ಸುದೀರ್ಘವಾಗಿ ಈ ನೆರೆ ಹಾವಳಿ ಬಗ್ಗೆ ಆಗಾಗಲೇ ಪ್ರಸ್ತಾಪ ಮಾಡಿದ್ದೇನೆ. ಆದ್ದರಿಂದ ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಇದರ ಚರ್ಚೆ ಬಹಳ ತಡವಾಗಿ ಆಗಿ ಅದರ ಮಹತ್ವ ಕಡಿಮೆಯಾಯಿ ತೇನೋ ಎಂದು ನನಗನ್ನಿಸುತ್ತಿದೆ.ಮಳೆಗಾಲ ಮುಗಿದ ಮೇಲೆ ಮಳೆಯಿಂದ ಆದ ಹಾನಿಯ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಬಹಳ ಮುಖ್ಯವಾಗಿ ಇದು ಒಂದು ಇಲಾಖೆಗೆ ಸಂಬಂಧಪಟ್ಟಿದ್ದು ಅಲ್ಲ. ನಾನು ಈವೊಂದು ನೋಟೀಸನ್ನು ತಮಗೆ ಕೊಡುವಾಗ ಅದರಲ್ಲಿ ಕಂದಾಯ ಇಲಾಖೆಗೆ ಸೇರಿದಂತಹ ಕೆಲವು ಬಾಬ್ತುಗಳಿವೆ. ನೀರಾವರಿ ಇಲಾಖೆಗೆ ಸೇರಿದಂತಹ ಕೆಲವು ಬಾಬುಗಳಿವೆ. ಲೋಕೋಪಯೋಗಿ ಇಲಾಖೆಗೆ ಸೇರಿದಂತಹ ಕೆಲವು ಬಾಬ್ತುಗಳಿವೆ. ಬಹುಶ: ಎಲ್ಲಾ ಮಂತ್ರಿಗಳಿಗೆ ಸೇರಿದ ಬಹು ಬಾಬುಗಳು ಇದರಲ್ಲಿ ಇವೆ. ಏತಕ್ಕೆ ಮಂತ್ರಿಮಂಡಲದ ಎಲ್ಲಾ ಸದಸ್ಯರಿಗೆ ಸೇರಿದ ಬಾಬ್ತುಗಳಿವೆಯೆಂದು ಹೇಳುತ್ತಿದ್ದೇನೆಂದರೆ, ಈ ಸಾರಿಯ ಪ್ರಸಕ್ತ ನೆರೆ ಹಾವಳಿ ಪ್ರಕೃತಿಯಿಂದ ಆದದ್ದು ಸ್ವಲ್ಪ. ಆದರೆ ಆಡಳಿತ ದೋಷದಿಂದ ಆದದ್ದು ಬಹಳ. ಸಭೆಯ ಹೊರಗಡೆ ಕೂಡ ಕೆಲವು ಹಿರಿಯ ಸದಸ್ಯರು ಇದನ್ನು ಪ್ರಸ್ತಾಪ ಮಾಡಿದ್ದಾರೆ. ಯಾವರೀತಿ ಪರಿಹಾರದ ಹಣ ವಿತರಣೆ ಆಗಿದೆ ಎನ್ನತಕ್ಕದ್ದು ಅದು ಪತ್ರಿಕೆಗಳಲ್ಲಿ ಸಾಕಷ್ಟು ಮಟ್ಟಿಗೆ ಬಂದಿದೆ. 6 ರೂಪಾಯಿ, 12ರೂಪಾಯಿ, 15ರೂಪಾಯಿ ಚೆಕ್ ಕೊಟ್ಟಿರತಕ್ಕದ್ದು ಬಂದಿದೆ. ನಾನು ಪ್ರತಿಯೊಂದು ಭಾಗಗಳಿಗೆ ಸಾಧ್ಯವಾದಷ್ಟು ಮಟ್ಟಿಗೆ ಹೋಗಿ ಸ್ವತ: ನೋಡಿಕೊಂಡು ಬಂದಿರುವವನು. ಕೆಲವು ಟೆಲಿ ಗ್ರಾಮ್‌ಗಳು ಕೂಡ ನನಗೆ ಇತ್ತೀಚೆಗೆ ಬಂದಿವೆ. ಅದರಲ್ಲಿ ಒಂದು ಹಾನಗಲ್‌ನಿಂದ ಬಂದಿದೆ.

"Flood Relief Fund 21 lakhs for agriculturists not released. Jail Bharo Chaluvali held before Hangal Talluk Office. - C.M. Udasi, Ex-MLA."

ಸುಮಾರು 500 ಜನ ರೈತರು ಜೈಲು ತುಂಬತಕ್ಕ ಚಳುವಳಿ ಕೆಲಸ ಮಾಡಿದ್ದೇವೆಂದು ಟೆಲಿಗ್ರಾಂ ಬಂದಿದೆ. ನನಗೆ ಕೊಟ್ಟಿರತಕ್ಕ ವರದಿಯ ಪ್ರಕಾರ ಸುಮಾರು ಒಟ್ಟಾರೆ ಪಟ್ಟಿಯಲ್ಲಿ 1237ಲಕ್ಷ ಲುಕ್ಸಾನು ಎಂದು ಹೇಳಿದ್ದಾರೆ. ಮಂಡ್ಯ ಜಿಲ್ಲೆಯ ಮಂದಗೆರೆಯಲ್ಲಿ ಪ್ರವಾಹದಿಂದಾಗಿ 6 ಜನರ ಪ್ರಾಣ ಹಾನಿಯಾಗಿದೆ. ಈ ಪ್ರಾಣಹಾನಿಯಾದದ್ದು ಆ ದಿವಸ ಬಂದ ಮಳೆಯಿಂದ ಅಲ್ಲ. ಹೇಮಾವತಿ ಅಣೆಕಟ್ಟಿನಿಂದ ರೈತರಿಗೆ ಮುಂದಾಗಿ ತುರ್ತು ನೋಟೀಸನ್ನು ಕೊಡದೆ ಏಕಾಏಕಿ ನೀರು ಬಿಟ್ಟಿದ್ದರಿಂದ ಈ ಹಾನಿಯಾಗಿದೆ. ಆ ದಿವಸ ಅಥವಾ ಅದರ ಮಾರನೆಯ ದಿವಸ ಅಲ್ಲಿಗೆ ಆಹಾರ ಮತ್ತು ನಾಗರಿಕ ಸರಬರಾಜು ಮಂತ್ರಿಗಳು ಹೋಗಿದ್ದಾರೆ. 24 ಗಂಟೆಯೊಳಗೆ ಅಲ್ಲಿ ನೊಂದಿರತಕ್ಕ ರೈತರು ಆ ಕಡೆ ಈ ಕಡೆ ಇರತಕ್ಕವರಿಗೆ ಅನುಕೂಲವಾಗುವಂತೆ ಒಂದು ದೋಣಿಯನ್ನು ಕೊಡುತ್ತೇನೆಂದು ಹೇಳಿ ರೈಲು ಬಿಟ್ಟು ಬಂದಿದ್ದಾರೆ. ದೋಣಿ ಕೊಡುತ್ತೇನೆಂದು ಹೇಳಿ ರೈಲು ಬಿಟ್ಟು ಬಂದಿದ್ದಾರೆ. ಇವತ್ತಿನವರೆಗೂ ಅಲ್ಲಿಗೆ ದೋಣಿ ಹೋಗಿಲ್ಲ. ಆದ್ದರಿಂದ ನಾವು ಅದನ್ನು ರೈಲು ಎಂದು ತಿಳಿಯಬೇಕಲ್ಲ. ನಾನು ಅಲ್ಲಿಗೆ ಹೋದಾಗ ಜನರು ಹೇಳಿದರು. ಇಲ್ಲಿಗೆ ಮಂತ್ರಿಗಳು ಬಂದಿದ್ದರು, ದೋಣಿ ಕಳುಹಿಸುತ್ತೇವೆಂದು ಹೇಳಿದರು; ಆದರೆ ಕಳುಹಿಸಲಿಲ್ಲವೆಂದು ಹೇಳಿದರು. ಇದುವರೆಗೂ ಅಲ್ಲಿಗೆ ದೋಣಿ ಕಳಿಸಿಲ್ಲ. ಬಹಳ ಹಳೆಯ ಅಣೆಕಟ್ಟು ಅದು. ಆ ಅಣೆಕಟ್ಟು ಇವತ್ತು ಒಡೆದುಹೋಗಿದೆ. ಬಲದಂಡೆ ನಾಲೆಯಲ್ಲಿ ಸುಮಾರು ಅಂದಾಜು 9 ಸಾವಿರ ಎಕರೆಯಷ್ಟು, ಎಡದಂಡೆ ನಾಲೆಯಲ್ಲಿ ಸುಮಾರು 24 ಸಾವಿರ ಎಕರೆ ಭೂಮಿಗೆ ನೀರು ಕೊಡತಕ್ಕಂಥ ಈ ಒಂದು ಅಣೆಕಟ್ಟು ಒಡೆದುಹೋಗಿದೆ. ಅದಕ್ಕೆ ತಾತ್ಕಾಲಿಕವಾದಂಥ ಒಂದು ವ್ಯವಸ್ಥೆಯನ್ನು ಮಾಡಿದ್ದರು. ಮೊನ್ನೆ ನೋಡಿದರೆ ಆ ತಾತ್ಕಾಲಿಕ ವ್ಯವಸ್ಥೆ ಕೂಡ ವಾಶ್ ಆಫ್ ಆಗಿದೆ ಎಂಬ ವಿಷಯವನ್ನು ನಾನು ಪತ್ರಿಕೆಯಲ್ಲಿ ನೋಡಿದ್ದೇವೆ. ಈ ಜನರಿಗೆ ಶ್ರೀಮಾನ್ ಖರ್ಗೆಯವರ ಇಲಾಖೆಯಿಂದ, ಕಂದಾಯ ಇಲಾಖೆಯಿಂದ ಬರತಕ್ಕಂಥ

ಪರಿಹಾರ ಒಂದು ರೀತಿಯದ್ದಾದರೆ, ನಿಮ್ಮ ನೀರಾವರಿ ಇಲಾಖೆಯಲ್ಲಿ ಈ ಅಣೆಕಟ್ಟನ್ನು ಪುನರ್ ನಿರ್ಮಾಣ ಮಾಡಿ ಈಗ ರೈತರಿಗೆ ತಕ್ಷಣ ಒಣಗಿಹೋಗಿರತಕ್ಕಂಥ ಬೆಳೆಗಳನ್ನು ರಕ್ಷಣೆ ಮಾಡುವುದಕ್ಕೆ ನೀರಾವರಿ ಇಲಾಖೆಯವರು ಮಾಡಿರತಕ್ಕಂಥ ಅಥವಾ ಹಾಕಿಕೊಂಡಿರತಕ್ಕಂಥ ಕಾರ್ಯಕ್ರಮಗಳೇನು ಎಂಬ ಬಗ್ಗೆ ಕೂಡ ತಾವು ಉತ್ತರ ಹೇಳುವಾಗ ನನಗೆ ಸ್ವಲ್ಪ ಮಾಹಿತಿ ನೀಡುತ್ತೀರೆಂದು ನಾನು ಭಾವನೆ ಮಾಡಿದ್ದೇನೆ. ಮಾನ್ಯ ಕಂದಾಯ ಮಂತ್ರಿಗಳು ಅವತ್ತು ಕೊಟ್ಟಂತಹ ಮಾಹಿತಿ ಮಾನವಹಾನಿ 133,ಜಾನುವಾರು ಹಾನಿ 1363;ಮನೆಗಳ ಹಾನಿ 17,189 ಮತ್ತು ಬೆಳೆಹಾನಿ ಒಂದು ಲಕ್ಷ ಹೆಕ್ಟೇರ್‌ಗಳು; ಸಣ್ಣ ಮತ್ತು ಅತಿಸಣ್ಣ ರೈತರು ನೊಂದವರು 89,173 ಎಂದಿದ್ದಾರೆ. ಕಟ್ಟಡಗಳಿಗೆ ಆಗಿರತಕ್ಕಂಥ ಹಾನಿ 820. ಇಲ್ಲಿಯವರೆಗೆ ನೊಂದ ಸಣ್ಣ ಮತ್ತು ಅತಿಸಣ್ಣ ರೈತರ ಸಂಖ್ಯೆಗೆ ಇದು ನಿಮ್ಮ ಹಿಂದಿನ ನೋಟಿಫಿಕೇಶನ್‌ದಲ್ಲಿರತಕ್ಕಂಥ ಮೌಲ್ಯಮಾಪನದ ವ್ಯಾಪ್ತಿ ಮನೆ ಬಿದ್ದುಹೋದರೆ ಪರಿಹಾರ ಕೊಡಲು 6600ರೂಪಾಯಿ ವಾರ್ಷಿಕ ಆದಾಯ ಇರಬೇಕೆಂದು ನಿಗದಿ ಮಾಡಿದ್ದೀರಿ. ಭೂಮಿಯ ಬೆಳೆ ನಷ್ಟ ಆದರೆ ಯಾವ ರೂಪದಲ್ಲಿ ಪರಿಹಾರ ಕೊಡುತ್ತಿದ್ದೀರಿ ಎಂದು ಸಾಕಷ್ಟು ಆಗಲೇ ಹೇಳಿದ್ದೇನೆ. ಅದನ್ನು ನಾನು ಪುನ: ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ, ಆದರೆ ಒಂದೊಂದು ಜಿಲ್ಲೆಯಲ್ಲಿ ಒಂದೊಂದು ರೀತಿಯಾದಂಥ ಹಾನಿಯಾಗಿದೆ. ಆದರೆ ಇಲ್ಲಿ ಮುಂದೆ ಕಟ್ಟಡಗಳ ಹಾನಿ 821 ಎಂದರು. ಇದೆಲ್ಲ ಬಹುತೇಕ ಸರ್ಕಾರಿ ಕಟ್ಟಡಗಳು. ಈಗ ಇಲ್ಲಿ ಮಂತ್ರಿಗಳಿಗೆ ಶಾಸಕರ ಹಾವಳಿ ಜಾಸ್ತಿಯಾಗಿದೆ. ಹೀಗಾಗಿ ನಮ್ಮ ಚರ್ಚೆಯಿಂದ ಏನೂ ಪ್ರಯೋಜನವಾಗುವುದಿಲ್ಲ. ನಾವು ನಮ್ಮ ರೈತರ ಸಮಸ್ಯೆ ಬಗ್ಗೆ ಚರ್ಚೆ ಮಾಡುತ್ತಿದ್ದರೆ ಕೈಗಾರಿಕಾ ಮಂತ್ರಿಗಳು ಮಧ್ಯೆ ಬಂದುಬಿಡುತ್ತಾರೆ. ಬಹಳ ಕಷ್ಟ; ನೀವು ಅವರಿಗೂ ಪ್ರಿಫರೆನ್ಸ್ ಕೊಡಬೇಕಾಗುತ್ತದೆ. ಹಾಗೆಯೇ ಬಹಳ ಪ್ರಾಮುಖ್ಯವಾದದ್ದು ನಮ್ಮ ಸಮಸ್ಯೆಗಳು ಉಳಿದುಬಿಡುತ್ತವೆ. ಈ ಕಟ್ಟಡಗಳಿಗೆ ಆಗಿರತಕ್ಕಂಥ ಹಾನಿ ಜಾಸ್ತಿ. ರಸ್ತೆ ಹಾನಿ, ಸೇತುವೆ ಮತ್ತು ಅಡಿಕಾಲುವೆಗಳು; ಕಟ್ಟಡಗಳು 820,ರಸ್ತೆ 5114,ಸೇತುವೆ ಮತ್ತು ಅಡಿಕಾಲುವೆಗಳು 998,ಕಾಲುವೆ ಮತ್ತು ಕೆರೆಗಳು 143,ಸಣ್ಣ ನೀರಾವರಿ ಕೆರೆಗಳು 1112;ಒಳಚರಂಡಿ 19.ಅಂದರೆ ಈ ಎರಡನೇ ಬಾಬ್ತು ಏನಿದೆ, ಅಂದರೆ ಕಟ್ಟಡಗಳಿಂದ ಹಿಡಿದು ಒಳಚರಂಡಿವರೆಗೆ ಇದಕ್ಕೆ ನೀವು ಪರಿಹಾರ ಕೊಡುವುದಕ್ಕೆ ಬರುವುದಿಲ್ಲ. ಅಥವಾ ನಿಮ್ಮ ಪರಿಹಾರದ ವ್ಯಾಪ್ತಿಯಲ್ಲಿ ಇದು ಬರುವುದಿಲ್ಲ, ಇದಕ್ಕೆ ಪರಿಹಾರ ಮಾಡುವವರು ಯಾರು? ಸರ್ಕಾರ ಈಗ ಆಗಿರತಕ್ಕಂಥ ಈ ಹಾನಿಗೆ ಏನಾದರೂ ಒಂದು ರೀತಿಯ ವಿಶೇಷವಾದ ಪರಿಸ್ಥಿತಿ ಎಂದು ಗಮನಿಸಿ ಒಂದು ಸ್ಪೆಶಲ್ ಗ್ರಾಂಟ್ ಏನಾದರೂ ಸರ್ಕಾರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇದೆಯೆ? ಇದು ವಿಶೇಷವಾಗಿ ಮಲೆನಾಡು ಪ್ರದೇಶದಲ್ಲಿ ಆಗಿರತಕ್ಕಂಥ ಹಾನಿ. ಇವರ ಲೆಕ್ಕಕ್ಕೆ ಸಿಗದೇ ಇರತಕ್ಕಂಥಾದ್ದು ಸಾಕಷ್ಟು ಇವೆ. ಇದರಲ್ಲಿ ವಿಶೇಷವಾಗಿ ಮಲೆನಾಡಿನ ರಸ್ತೆಗಳು. ಈಗ ಕುಸಿದುಬಿದ್ದಿವೆ. ಒಂದಡಿ, ಎರಡಡಿ ರಸ್ತೆಗಳು ಕುಸಿದು ಕೆಳಗಡೆ ಹೋಗಿವೆ. ಓಡಾಡಗಾದದಂಥ ಸ್ಥಿತಿ ಇದೆ. ಮಲೆನಾಡು ಪ್ರದೇಶದಲ್ಲಿ ಆಗತಕ್ಕಂಥ ಹಾನಿ ನೀರಾವರಿಗಾಗಿ ಅಲ್ಲಿ ಮುಳುಗಡೆಯಿಂದ ಆಗುತ್ತದೆ;

ವಿದ್ಯುಚ್ಛಕ್ತಿಗಾಗಿ ಮುಳುಗಡೆಯಾಗುತ್ತದೆ. ಅರಣ್ಯ ಶೋಷಣೆಯಲ್ಲಿ ಮುಳುಗಡೆ ಆಗುತ್ತದೆ. ಸಂಪರ್ಕ ಸಂಪೂರ್ಣವಾಗಿ ಇಂತಹ ಮಳೆಗಾಲದಲ್ಲಿ ಕುಸಿಯುತ್ತದೆ. ಯಾವುದಕ್ಕೂ ವಿಶೇಷವಾದ ಒಂದು ಕಾರ್ಯಕ್ರಮ ಹಮ್ಮಿಕ್ಕೊಂಡಿರುವುದು ಇಲ್ಲಿ ಕಾಣಲಿಲ್ಲ. ಆ ಕಾರಣ ಇಂತಹ 5,114 ಕಿಲೋಮೀಟರ್ ಇಲ್ಲಿ ನೀವೇನು ರಸ್ತೆಗಳನ್ನು ಕಾಣಿಸಿದ್ದೀರಿ, ಈ ರಸ್ತೆಗಳನ್ನು ವಿಶೇಷವಾಗಿ ಗಮನಿಸಿ, ಬೇರೆ ಪರಿಹಾರಗಳನ್ನು ಕೊಟ್ಟಹಾಗೆ, ಸಂಪರ್ಕವೂ ಕೂಡ ಅತಿ ಮುಖ್ಯವಾದ ಬದುಕಿನ ಒಂದು ಭಾಗ ಎಂದು ಹೇಳಿ ತಾವು ಭಾವನೆ ಮಾಡಿ, ಇದಕ್ಕೆ ವಿಶೇಷವಾದ ಕಾರ್ಯಕ್ರಮವನ್ನು ಸರ್ಕಾರ ರೂಪಿಸಿಕೊಂಡು, ಜಾರಿಗೆ ಕೊಡಬೇಕೆಂದು, ನಾನು ತಮ್ಮ ಮೂಲಕ ಸರ್ಕಾರವನ್ನು ಮತ್ತು ಕಂದಾಯ ಮಂತ್ರಿಗಳ ಮೂಲಕ ಪಿ.ಡಬ್ಲ್ಯು.ಡಿ. ಇಲಾಖೆಯನ್ನು ಪ್ರಾರ್ಥನೆ ಮಾಡುತ್ತೇನೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ನನಗೆ ಬಂದಿರತಕ್ಕ ವರದಿಗಳ ಪ್ರಕಾರ, ಸುಮಾರು 3 ಕೋಟಿಗಿಂತ

ಹೆಚ್ಚು ಲುಕ್ಸಾನಾಗಿದೆ. ಆದರೆ ಸುಮಾರು 30 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದಾರೆ. ಇವರು ಗ್ರಾಮೀಣ ಪ್ರದೇಶಗಳಿಗೆ ಹೆಚ್ಚು ಹಣ ಬಿಡುಗಡೆ ಮಾಡುವುದಿಲ್ಲ, ಬಿಡುಗಡೆ ಮಾಡಿರತಕ್ಕ ಹಣ ಏನಾಗಿದೆ ಎಂದರೆ, ಮೂಡಿಗೆರೆ, ಶೃಂಗೇರಿ, ಕೊಪ್ಪ, ನರಸಿಂಹರಾಜಪುರ ಭಾಗಗಳಲ್ಲಿ ಹೆಚ್ಚು ಹಾನಿಯಾಗಿದೆ. ಆದರೆ, ಹಣ ಬಿಡುಗಡೆಯಾಗಿರುವುದು ಕಡಿಮೆ. ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಕಡಿಮೆ ಹಾನಿ, ಹೆಚ್ಚು ಹಣ ಬಿಡುಗಡೆಯಾಗಿದೆ.ಅಲ್ಲಿ ಬಿಡುಗಡೆಯಾದ ಹಣ ಸಾಕಾಗುವಷ್ಟು ಅಥವಾ ಹೆಚ್ಚು ಬಿಡುಗಡೆ ಮಾಡಿದ್ದೀರಿ ಎಂದಲ್ಲ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ; ನಾವು ಬಿಡುಗಡೆ ಮಾಡುವುದಿಲ್ಲ, ಜಿಲ್ಲಾಧಿಕಾರಿಯವರು ಬಿಡುಗಡೆ ಮಾಡುತ್ತಾರೆ. ಶ್ರೀಮತಿ ಮೋಟಮ್ಮನವರೂ ಇದೇ ಹೇಳುತ್ತಿದ್ದರು, ಎಲ್ಲಿ ಹಾನಿಯಾಗಿದೆ, ಅಲ್ಲಿ ಹೆಚ್ಚು ಹಣ ಬಿಡುಗಡೆಯಾಗಿಲ್ಲ, ಎಲ್ಲಿ ಬಯಲುಸೀಮೆ ಇದೆ, ಅಲ್ಲಿ ಹೆಚ್ಚು ಹಣ ಖರ್ಚಾಗಿದೆ ಎಂದು ಹೇಳುತ್ತಿದ್ದರು.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಹಾಸನ ಜಿಲ್ಲೆಯಲ್ಲಿ ಇದುವರೆಗೂ ಹಣ ಬಿಡುಗಡೆಯಾಗಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಹಾಗೆಯೇ, ನಾನು ಹಾಸನ ಜಿಲ್ಲೆಯ ಸಕಲೇಶಪುರ ಮತ್ತು ಬೇಲೂರಿನ ಭಾಗಗಳಿಗೂ ಹೋಗಿ ಬಂದಿದ್ದೇನೆ. ಏಕೆಂದರೆ, ನಿಮ್ಮ ಲೋಕಸಭಾ ಸದಸ್ಯರು, ಮಂತ್ರಿಗಳಂತೂ ಬರಲಿಲ್ಲ; ವಿರೋಧಪಕ್ಷದ ನಾಯಕರಾದವರೂ ಬರಬೇಕಾಗಿತ್ತು ಎಂದು ಹೇಳಿದ್ದಾರೆ. ನಾವು ಹೋಗಿ ಬಂದಿರುವುದು ಇವರ ಗಮನಕ್ಕೆ ಬರುವುದಿಲ್ಲ, ಇನ್ನು ಮೇಲೆ, ನಾವು ಹೋಗಿ ಬರುವುದನ್ನು ಅವರಿಗೂ ತಿಳಿಸುವ ಪ್ರಯತ್ನ ಮಾಡುತ್ತೇನೆ. ಆದರೆ, ನಾನು ಇಲ್ಲಿ ಹೋಗಿದ್ದೇನೆ, ನನಗೆ ಗೊತ್ತಿದೆ, ಸಕಲೇಶಪುರ ಮತ್ತು ಬೇಲೂರಿಗೆ ಹೋಗತಕ್ಕ ಮಾರ್ಗದಲ್ಲಿ ಸೇತುವೆ ಕುಸಿದಿರತಕ್ಕಂಥದ್ದು, ಹಾಗೂ ಅಲ್ಲಿನ ರಸ್ತೆಗೆ ಬಹಳವಾಗಿ ಹಾನಿಯಾಗಿದೆ. ಆದ್ದರಿಂದ, ಈ ಬಗ್ಗೆ ಮಾನ್ಯ ಲಕ್ಷ್ಮಯ್ಯನವರ ಮಾತಿಗೆ ನನ್ನದೂ ಸಹಮತವಿದೆ. ಆ ಕಾರಣಕ್ಕಾಗಿ ಇದನ್ನು ವಿಶೇಷ ಪರಿಸ್ಥಿತಿ ಎಂದು...

ಶ್ರೀ ಸಿ. ಬೈರೇಗೌಡ : ತಾವು ಕೆಲವು ಕಡೆ ಹೋಗಿದ್ದೀರಿ, ಮತ್ತೆ ಕೆಲವು ಕಡೆ ಹೋಗಿಲ್ಲ...

ಶ್ರೀ ಡಿ.ಬಿ. ಚಂದ್ರೇಗೌಡ : ಎಷ್ಟು ಕಡೆ ಸಾಧ್ಯವೋ ಅಷ್ಟು ಕಡೆಗಳಿಗೆ ಹೋಗುತ್ತೇವೆ. ಹೋಗದೇ ಇರತಕ್ಕ ಕಡೆಗೆ ನಾವು ಏನು ಮಾಡುವುದು?..

ಶ್ರೀಮತಿ ಮೋಟಮ್ಮ : "ಸಂತೆಯಲ್ಲಿ ಉಪ್ಪಿನವರು ಅಯ್ಯೋ ಎಂದು ಅಳುತ್ತಿದ್ದರೆ, ತೆಂಗಿನಕಾಯಿ ವ್ಯಾಪಾರಿಯೂ ಅಳುತ್ತಿದ್ದನಂತೆ" ಹಾಗಾಯಿತು ನಿಮ್ಮ ಕತೆ..

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಬೈರೈಗೌಡರೇ, ನೀವು ಮಳೆಯೇ ಇಲ್ಲವೆಂದು ಜಾತಕ ಪಕ್ಷಿಯಂತೆ ಎದುರು ನೋಡುತ್ತೀರಿ, ನಮಗೆ ಮಳೆ ಬಿದ್ದು ಅನಾಹುತವಾಗಿದೆ ಎಂದು ಹೇಳಿದರೆ, ನಿಮಗೂ ಅನಾಹುತವೇ?...

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಅದಕ್ಕಾಗಿಯೇ ಹೇಳಿದೆ. ಕಂದಾಯ ಇಲಾಖೆಗೆ ಬರತಕ್ಕ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳುವ ಬಗ್ಗೆ ಇವತ್ತು ಮತ್ತೊಂದು ಪ್ರಶ್ನೆ ಬಂದಿತ್ತು. ಅರಕಲಗೂಡು ತಾಲ್ಲೂಕು ಮತ್ತು ಹಾಸನ ಜಿಲ್ಲೆ ವಿಶೇಷವಾಗಿ ಮರುಳು ಬಂದು ಕುಳಿತಿರತಕ್ಕ ಪ್ರದೇಶ. ಅಲ್ಲಿಯ ರೈತರ ಪರಿಸ್ಥಿತಿಯನ್ನು ದಯಮಾಡಿ ತಾವು ಹೋಗಿ ನೋಡಬೇಕು. ಇಲ್ಲಿ ನಾನು ಉತ್ಪ್ರೇಕ್ಷೆಗಾಗಿ ಹೇಳುತ್ತಿಲ್ಲ. ಒಂದು ಕಡೆ ಮರಗಳು ಬಿದ್ದುಹೋಗಿವೆ, ಇದರಿಂದ ಸಂಪರ್ಕ ಕಡಿದುಹೋಯಿತು. ಭೂಮಿಯ ಮೇಲೆ 1-2 ಅಡಿ ಮರಳು ಕುಳಿತಿದೆ. ಸದ್ಯಕ್ಕೆ ಇದನ್ನು ತೆಗೆದು ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯನ್ನು ಮಾಡಲಾರದಂಥ ಸ್ಥಿತಿಯಲ್ಲಿದೆ. ಆ ಕಾರಣ, ನಿಮ್ಮ ಹಳೆಯ ನೋಟಿಫಿಕೇಶನ್ ಏನಿದೆ, ಇದರ ಬಗ್ಗೆ ನಾನಾಗಲೇ ಸಾಕಷ್ಟು ದೀರ್ಘವಾಗಿ ಹೇಳಿದ್ದೇನೆ. ಈ ಹಳೆಯ ನೋಟಿಫಿಕೇಷನ್ ತಿದ್ದುಪಡಿ ಮಾಡಿ, ದಯಮಾಡಿ ಪರಿಹಾರವನ್ನು ಕೊಡುವಾಗ,

ಎಕರೆಗೆ ಇಷ್ಟು, ಅವನ ಯೋಗ್ಯತೆ ಇಷ್ಟು, ಕಳೆದುಹೋಗಿರುವುದು ಇಷ್ಟು ಎಂದು 6 ರೂಪಾಯಿ, 12 ರೂಪಾಯಿ ಎಂದು ಮಾಡಲು ಹೋಗಬೇಡಿ.

5.00 ಪಿ.ಎಂ

ಕನಿಷ್ಟ ಬೇರೆ ರಾಜ್ಯಗಳಲ್ಲಿ ಇದ್ದಹಾಗೆ ಮಿನಿಮಮ್ 300 ರೂಪಾಯಿ ಎಂದು ಮಾಡಬೇಕು. ಆದರೂ ಅವನಿಗೆ ಆಗಿರತಕ್ಕಂಥ ಲುಕ್ಸಾನನ್ನು ಲೆಕ್ಕಹಾಕಿ, ತಕ್ಷಣ ಅವನನ್ನು to put back the farmers into the proper rails. ಈ ಬಗ್ಗೆ ತಾವು ಏನಾದರೂ ಒಂದು ಆಲೋಚನೆ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಮಗೆ ಗೊತ್ತಿದ್ದಹಾಗೆ ಈಗ ಮಿನಿಮಮ್ 100 ರೂಪಾಯಿ ಎಂದು ಮಾಡಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮೊನ್ನೆ ಮಾಡಿರುತ್ತೀರಿ. ಮತ್ತೊಂದು ಹೇಮಾವತಿ ಹಾನಿ ವಿಚಾರ. ನನ್ನ ಹತ್ತಿರ ಇರುವ ಮಾಹಿತಿಗಳ ಪ್ರಕಾರ ನಾನು ಅಲ್ಲಿಗೆ ಹೋದಾಗ ರೈತರು ಹೇಳಿದ ಪ್ರಕಾರ ಆ ಮೂರು ದಿವಸಗಳ ಕಾಲ ಅಂದರೆ 27, 28, 29 ಮತ್ತು ಭಾಗಶಃ 30ನೇ ತಾರೀಖಿನ ದಿವಸ, ಒಂದು ಲಕ್ಷದ ಇಪ್ಪತ್ತಾರು ಸಾವಿರ ಕ್ಯೂಸೆಕ್ಸ್ ನೀರನ್ನು ಬಿಡುಗಡೆ ಮಾಡಿದರು ಎಂದು ಹೇಳಿದ್ದೀನಿ. ಅದರ ಪರಿಣಾಮ ಕೆಳಗಡೆ ಇರತಕ್ಕಂಥವರಿಗೆ ಲುಕ್ಸಾನು. ಇಲ್ಲಿ ಇರಿಗೇಷನ್ ಇಲಾಖೆಯವರಗೂ ಮತ್ತು ಕಂದಾಯ ಇಲಾಖೆಯವರಿಗೂ ಹೊಂದಾಣಿಕೆ ಇಲ್ಲ. ಅದು ಆಡಳಿತಾತ್ಮಕವಾದ ದೋಷ ಇರಬಹುದು. ಕಂದಾಯ ಇಲಾಖೆಯ ಆಯುಕ್ತರು ಮೈಸೂರಿನಲ್ಲಿ ಕೊಟ್ಟ ಹೇಳಿಕೆಯನ್ನು ನಾನು ಸ್ವಾಗತಿಸುತ್ತೇನೆ. ಇದು ಪ್ರಕೃತಿಯಿಂದ ಆದುದಲ್ಲ. ಬಹಳ ಮಟ್ಟಿಗೆ ಮಾನವ ನಿರ್ಮಿತವಾದಂಥ ಒಂದು ಅಪಘಾತ ಎಂದು ಹೇಳಬಹುದು. ಈ ಕಾರಣ ಹೇಮಾವತಿಯಲ್ಲಿ ಆಗಿರತಕ್ಕಂಥ ಪ್ರಕರಣದ ತನಿಖೆಗೆ ನಾನು ಆಗ್ರಹ ಪಡಿಸಿದ್ದೆ. ಇದರ ತನಿಖೆ ಎಂದು ಹೇಳುವಾಗ ಪ್ರತಿಯೊಂದಕ್ಕೂ ನಾವು ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿ ಎಂದು ಕೇಳುತ್ತೇವೆ. ಇಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿ ವಿಚಾರಣೆ ಮಾಡುತ್ತಿದ್ದಾರೆ. ಇಲ್ಲಿ ನಿಮ್ಮ ಚೀಫ್ ಎಂಜಿನಿಯರ್ ಇರಲಿ, ಸೂಪರಿಂಟೆಂಡಿಂಗ್ ಎಂಜಿನಿಯರ್ ಅವರನ್ನು ಜಿಲ್ಲಾಧಿಕಾರಿಯವರು ಕರೆದರೆ, ನೀನು ಯಾರಯ್ಯ ನನ್ನನ್ನು ಕರೆಯುವುದಕ್ಕೆ ಎಂದು ಹೇಳುತ್ತಾನೆ. ತಹಸೀಲ್ದಾರರು, ಅಸಿಸ್ಟೆಂಟ್ ಎಂಜಿನಿಯರ್‌ಗೆ, ನೀವು ನೀರು ಬಿಡುತ್ತೇವೆ ಎಂಬುದನ್ನು ಮೊದಲೇ ಹೇಳಿದ್ದರೆ ಜನರನ್ನು ಅಲ್ಲಿಂದ ಸ್ಥಳಾಂತರ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೆ ಎಂದರೆ, ಕೆ.ಆರ್.ಪೇಟೆಯಲ್ಲಿ ನಿಮ್ಮ ತಹಸೀಲ್ದಾರರನ್ನು ಇಂಜಿನಿಯರ್ಸ್ ಹಿಡಿದು ಕೊಂಡು ಹೊಡೆಯುತ್ತಾರೆ. ಇದನ್ನು ತನಿಖೆ ಮಾಡುವುದಕ್ಕೆ ಡಿ.ಸಿ.ಯನ್ನು ಹಾಕಿದರೆ ನಿಮ್ಮ ಚೀಫ್ ಎಂಜಿನಿಯರ್ ಡಿ.ಸಿ.ಗೆ ಹಿಡಿದುಕೊಂಡು ಹೊಡೆದರೆ ಯಾರು ಜವಾಬ್ದಾರರು? ಅದಕ್ಕಾಗಿ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿ, ಜ್ಯುಡಿಷಿಯಲ್ ಎನ್‌ಕ್ವೈರಿಯಲ್ಲಿ ಯಾವ ಯಾವ ಇಲಾಖೆಯ ಜವಾಬ್ದಾರಿ ಏನು ಎಂಬುದು ಗೊತ್ತಾಗಲಿ. ನೀರು ಬಂತು ಎಂದರೆ ಬಿಟ್ಟು ಬಿಡುವುದೇ? ನೀರು ಬಿಡುವುದಕ್ಕೆ ಏನಾದರು ಕ್ರಮಗಳು ಇಲ್ಲವೇ? ನೀರು ಬಿಟ್ಟು ಬಿಟ್ಟು ನಂತರ ನಿಮ್ಮ ಎಂಜಿನಿಯರ್ಸ್ ಏನು ಹೇಳುತ್ತಾರೆ ಎಂದರೆ ಫ್ಲಾಷ್ ಫ್ಲಡ್ ಎಂದು ಹೇಳುತ್ತಾರೆ. ಜುಲೈ ತಿಂಗಳಲ್ಲಿ ಕೊನೆಯ ವಾರದಲ್ಲಿ ಇದನ್ನು ಫ್ಲಾಷ್ ಫ್ಲಡ್ ಎಂದು ಕರೆದರೆ ಇದು ಅನನುಭವ ಪರಮಾವಧಿ. ಯಾವುದೇ ಅನುಭವಿಗೆ ಗೊತ್ತಿರುತ್ತದೆ, ಜುಲೈ ತಿಂಗಳ ಕೊನೆಗಾಲದಲ್ಲಿ ಅದು ದೊಡ್ಡ ಮಳೆಗಾಲ ಎಂದು 1961ನೇ ಇಸವಿಯಲ್ಲಿ ಒಂದೇ ದಿನ ಕೊಟ್ಟಿಗೆದಾರದಲ್ಲಿ 28 ಇಂಚು ಮಳೆ ಬಿದ್ದಿತು. ನೂರಾರು ಎಕರೆ ಭೂಮಿ ಜಾರಿತು. ಆಗ ನಿಮ್ಮ ಹೇಮಾವತಿ ಅಣೆಕಟ್ಟು ಇರಲಿಲ್ಲ. ಅಣೆಕಟ್ಟು ಇಲ್ಲದೆ ಇದ್ದಾಗ ಕೂಡಾ ಕೃಷ್ಣರಾಜಸಾಗರದಲ್ಲಿ ಕೆಳಗಡೆಯವರಿಗೆ ತೊಂದರೆಯಾಗದಹಾಗೆ ಮ್ಯಾನೇಜ್ ಮಾಡಿದರು. ಈಗ ಕೃಷ್ಣರಾಜಸಾಗರದ ಕೆಳಗಡೆ ಇರುವವರಿಗೂ ತೊಂದರೆಯಾಯಿತು. ಹೇಮಾವತಿ ಕೆಳಗಡೆ ಇರುವವರಿಗೂ ತೊಂದರೆ ಆಯಿತು. ಇದು ಮಾನವ ನಿರ್ಮಿತ ಅಪಘಾತ.

ಈ ಕೆಲಸ ಆಗಿರಲಿಕ್ಕೆ ಸಾಕು. ನಿಮ್ಮ ಇರಿಗೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಕಮ್ಯುನಿಕೇಷನ್‌ಗೆ ಟೆಲಿಫೋನ್ ಇದ್ದರೂ ಸಹ ಮಳೆಗಾಲದಲ್ಲಿ ಟೆಲಿಫೋನ್ ಕೆಟ್ಟು ಹೋಗುವುದು ಸಹಜ. ಅದನ್ನು ಬಿಟ್ಟರೆ ಪೋಲೀಸ್‌ಗೆ ತಿಳಿಸಬೇಕು. ನಂತರ ಅವರ ಹತ್ತಿರ ಇರುವ ವಾಕಿ ಟಾಕಿನಲ್ಲಿ ತಿಳಿಸಬೇಕು. ಅದೂ ಕೂಡಾ ಒಂದು ಇತಿಮಿತಿಯೊಳಗೆ ಕೆಲಸ ಮಾಡುತ್ತದೆ. ಹಾಗಾಗಿ ಸರಿಯಾದ ಕಮ್ಯುನಿಕೇಷನ್ ದೊರಕುವುದಕ್ಕೆ ಸಾಧ್ಯ ಇಲ್ಲ. ಇಲ್ಲಿ ನನ್ನ ಆಪಾದನೆ ಏನಿದೆ, ಹೇಮಾವತಿ ಜಲಾಶಯದಿಂದ ನೀರು ಮಂದಗೆರೆಗೆ ಬರುವುದಕ್ಕೆ ಕನಿಷ್ಠ 14ರಿಂದ 16 ಘಂಟೆಗಳು ಬೇಕು. ಅಷ್ಟು ಸಮಯದಲ್ಲಿ ರೈತರಿಗೆ ತಿಳುವಳಿಕೆ ಕೊಡುವುದಕ್ಕೆ ಆಗಲಿಲ್ಲ. ಅವರನ್ನು ಖಾಲಿ ಮಾಡಿಸುವುದಕ್ಕೆ ಆಗಲಿಲ್ಲವೆಂದು ಹೇಳಿದರೆ ಇದು ಮಾನವ ನಿರ್ಮಿತ ಎಂಬುದನ್ನು ನೀವು ಒಪ್ಪಿಕೊಳ್ಳಬೇಕಾಗುತ್ತದೆ.

ಆದ್ದರಿಂದ ಈ ಒಂದು ನ್ಯಾಯಾಂಗ ತನಿಖೆ ಮಾಡುವುದರಿಂದ ಆಗತಕ್ಕಂಥ ಲಾಭ ಏನೆಂದರೆ ನೀರಾವರಿ ಇಲಾಖೆಗೆ ಬೇಕಾಗಿರತಕ್ಕಂಥ ಅವಶ್ಯಕವಾದ ಸಲಕರಣೆಗಳ ದೋಷ ಏನಾದರೂ ಇದ್ದರೆ, ಅದನ್ನು ಅವರು ಹೇಳಬಹುದು, ರೆವಿನ್ಯೂ ಇಲಾಖೆಗೂ ಮತ್ತು ನೀರಾವರಿ ಇಲಾಖೆಗೂ ಇರತಕ್ಕಂಥ ಅಸಮರ್ಪಕವಾದ ಅಥವಾ ವ್ಯವಹಾರಿಕವಾದ ಸಂಬಂಧ ಸರಿಯಾಗಿಲ್ಲದಿದ್ದರೆ ಅದನ್ನು ಸರಿ ಮಾಡುವುದಕ್ಕೆ ಅವರು ಮಾರ್ಗವನ್ನು ಸೂಚನೆ ಮಾಡಬಹುದು. ಮತ್ತು ನೀವು ಕೊಡತಕ್ಕಂಥ ಪರಿಹಾರ ಏನು ಇದೆ, ಅದು ಪ್ರಕೃತಿಯಿಂದ ಆದರೆ ಒಂದು ಭಾಗ ನಿಮ್ಮ ಅಧಿಕಾರಿಗಳು ಮಾಡಿದ ತಪ್ಪಿನಿಂದಾಗಿ ನಿಮ್ಮ ಕಂದಾಯ ಇಲಾಖೆ ವ್ಯಾಪ್ತಿಯಲ್ಲಿ ತಂದು ಅವರಿಗೆ ಏತಕ್ಕೆ ಶಿಕ್ಷೆ ವಿಧಿಸಿದ್ದೀರಿ. ಅದೇ ರೀತಿ ಮೈಸೂರು ಜಿಲ್ಲೆ ಮತ್ತು ಮಂಡ್ಯ ಜಿಲ್ಲೆಯ ಕೆಳಗಿನ ಭಾಗದಲ್ಲಿ ಆದ ಹಾನಿಗೆ ಕೂಡ ಇದೇ ಕಾರಣ. ಇವೆಲ್ಲವನ್ನೂ ಒಳಗೊಂಡಂತೆ ನ್ಯಾಯಾಂಗ ತನಿಖೆ ಮಾಡಬೇಕೆಂದು ಹೇಳಿ ನಾನು ಈ ಮೂಲಕ ಒತ್ತಾಯ ಮಾಡುತ್ತೇನೆ. ಮುಖ್ಯವಾಗಿ ಈ ಒಂದು ಪ್ರಕರಣದಿಂದಾಗಿ ನಮ್ಮ ಒಟ್ಟಾರೆ ನೀರಾವರಿ ಜಲಾನಯನ ಪ್ರದೇಶದಲ್ಲಿ ನಾವು ಎಷ್ಟರ ಮಟ್ಟಿಗೆ ಇದನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೆ ಸಾಧ್ಯ ಇದೆಯೋ ಅಷ್ಟು ನೀರು ಶೇಖರಣೆ ಮಾಡಿ ಇಟ್ಟುಕೊಳ್ಳತಕ್ಕ ವ್ಯವಸ್ಥೆ ನಮಗೆ ಇಲ್ಲ ಎಂಬ ಕಟು ಸತ್ಯಯನ್ನು ನಾವು ಕಂಡುಕೊಂಡಿದ್ದೇವೆ. ನಾವು ಇದರಲ್ಲಿ ವಿಶೇಷವಾಗಿ ಕರ್ನಾಟಕದ ಹೊರ ಜಗತ್ತಿಗೆ ಇಲ್ಲಿ ನಮ್ಮಲ್ಲಿ ಸರಿಯಾದ ನೀರಾವರಿ ಮ್ಯಾನೇಜ್‌ಮೆಂಟ್ ಇಲ್ಲ ಎನ್ನತಕ್ಕಂಥ ಕಲ್ಪನೆ ಕೂಡ ಕೊಡಬಾರದು. ಈ ಎಲ್ಲಾ ಕಾರಣದಿಂದ ಆ ದಿವಸ ಹೇಮಾವತಿ ಜಲಾಶಯದಿಂದ ನೀರು ಬಿಟ್ಟಂತಹ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒತ್ತಾಯ ಮಾಡಬೇಕು. ಎರಡನೆಯದಾಗಿ ಪರಿಹಾರವನ್ನು ಕೊಡುವಾಗ ಹಳೆಯ ಒಂದು ಮೆಥೆಡ್ ಏನಿದೆ, ಅದನ್ನು ಕೈಬಿಟ್ಟು ಈ ಸಲ ಒಂದು ವಿಶೇಷವಾದ ಕಾರ್ಯಕ್ರಮವನ್ನು ಹಾಕಿಕೊಂಡು ರೈತರಿಗೆ ಅದರಲ್ಲೂ ಮಲೆನಾಡು ರೈತರಿಗೆ ಸಹಾಯ ಮಾಡಬೇಕು. ಹೂಳು ಮುಚ್ಚಿರತಕ್ಕಂಥ ಕೆರೆಗಳಿಂದ ಹೊಳು ತೆಗೆಸುವುದರ ಜೊತೆಗೆ ಭೂಮಿ ಮೇಲೆ ಬಂದು ಕೂತಿರುವ ಮರಳನ್ನು ತೆಗೆಸಲು ವಿಶೇಷವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಮತ್ತು ಈ ಪ್ರದೇಶದಲ್ಲಿರತಕ್ಕಂಥ ಮತ್ತು ಕಟ್ಟೆಗಳ ಹಾಗೂ ಕೆರೆಗಳ ರಿಪೇರಿಗೆ ವಿಶೇಷವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕೆಲಸ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಂಡು ಮಾನ್ಯ ಮಂತ್ರಿಗಳು ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಒಂದು ಸಮಗ್ರವಾದ ಹೇಳಿಕೆಯನ್ನು ಕಂದಾಯ ಇಲಾಖೆಯನ್ನು ಹೊರತುಪಡಿಸಿ ಒಂದು ವಿಶೇಷವಾದ ಉತ್ತರ ಕೊಡುತ್ತಾರೆಂದು ನಾನು ನಿರೀಕ್ಷೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೇ ಕಳೆದ 30ವರ್ಷಗಳಲ್ಲಿ ಹಿಂದೆ ಎಂದೂ ಆಗದ ರೀತಿಯಲ್ಲಿ ಮಹಾಪೂರ ಬಂದಿದೆ. ಸತತ ಮೂರು ತಿಂಗಳ ಕಾಲ ಮಳೆ ಬಂದಿದೆ. ಇದನ್ನು ಸರ್ಕಾರ ಕೂಡ ಗಮನಿಸಿದೆ. ಅಲ್ಲಿರತಕ್ಕಂಥ ರಸ್ತೆಗಳು ಕೂಡ ಇವತ್ತು ದುಸ್ಥಿತಿಗೆ ಬಂದಿವೆ. ಕೆರೆಕುಂಟೆಗಳಲ್ಲಿ ನೀರಾವರಿ ಕಾಲುವೆಗಳಲ್ಲಿ ಹೂಳು ತುಂಬಿದೆ. ಇದನ್ನು

ಸರ್ಕಾರ ಅರಿತಿದ್ದರೂ ಸಹ ಈ ಸದನದಲ್ಲಿ ಒಂದು ಹೇಳಿಕೆ ಕೊಡುವಂತಹ ಕೆಲಸ ಮಾಡಲಿಲ್ಲ. ಹಾನಿಯಾದ ಹಣ ಕೋಟ್ಯಾಂತರ ರೂಪಾಯಿಗಳು. ಈ ಬಗ್ಗೆ ಸರ್ಕಾರದಿಂದ ಬಿಡುಗಡೆಯಾದ ಹಣ ಎಷ್ಟು? ಸರ್ಕಾರ ಬಿಡುಗಡೆ ಮಾಡಿದ ಹಣವನ್ನು ಜಿಲ್ಲಾಧಿಕಾರಿಗಳು ಸಂಬಂಧ ಪಟ್ಟವರಿಗೆ ಇನ್ನೂ ಬಿಡುಗಡೆ ಮಾಡಿಲ್ಲ, ಮತ್ತೆ ನನ್ನ ಕ್ಷೇತ್ರವಾದ ಹಿರೇಕೆರೂರು ಕ್ಷೇತ್ರಕ್ಕೆ ಸಂಬಂಧಪಟ್ಟಂತೆ 50 ಲಕ್ಷ ರೂಪಾಯಿಗಳ ಹಾನಿ ಆಗಿದೆ. ರಸ್ತೆಗಳು ಕೆಟ್ಟಿವೆ, ಕೆರೆಕುಂಟೆಗಳು ಒಡೆದಿದ್ದಾವೆಂದು ನಿಮ್ಮ ಅಧಿಕಾರಿಗಳೇ ವರದಿ ಕೊಟ್ಟಿದ್ದಾರೆ. ಅದೇ ರೀತಿಯಾಗಿ ಹಾನಗಲ್ ತಾಲ್ಲೂಕಿನಲ್ಲಿ 45 ಲಕ್ಷ ರೂಪಾಯಿಗಳ ಹಾನಿ ಆಗಿದೆ. ರೈತರ ಬೆಳೆನಾಶ ಆಗಿದೆ. ಮತ್ತು ಅಲ್ಲಿ ರಸ್ತೆಗಳು ಹಾಳಾಗಿವೆ. ಈ ಬಗ್ಗೆ ನಾನು ಇಲ್ಲಿ ಒಂದು ಮಾತು ಹೇಳಿದರೆ ಮಾನ್ಯ ಸಚಿವರಿಗೆ ಕೋಪಬರಬಹುದು. ನೂರು ರೂಪಾಯಿ ಹಾನಿಯಾಗಿದ್ದರೆ 2 ರೂಪಾಯಿ ಮಾತ್ರ ಬಿಡುಗಡೆ ಮಾಡಿದ್ದಾರೆ. ಇವತ್ತು ಇವರ ಅಂಕಿಅಂಶಗಳನ್ನು ನೋಡಿದರೆ ಇದು ಗೊತ್ತಾಗುತ್ತದೆ. ನೂರು ರೂಪಾಯಿಗಳಷ್ಟು ಹಾನಿಯಾಗಿದ್ದರೆ ಶೇಕಡ 2ರೂಪಾಯಿನಂತೆ ಮಾತ್ರ ಬಿಡುಗಡೆ ಮಾಡಿದ್ದಾರೆ. ಇದು ಯಾವುದಕ್ಕೂ ಸಾಲದಂತೆ ಆಗಿದೆ.

ರಸ್ತೆಗಳು ಕೆಟ್ಟಿರುವುದರಿಂದ ಇವತ್ತು ಬಸ್‌ಗಳ ಓಡಾದ ನಿಂತುಹೋಗಿದೆ. ಕೆರೆಗಳಲ್ಲಿರತಕ್ಕಂಥ ನೀರನ್ನು ರೈತರು ತಮ್ಮ ಭೂಮಿಗೆ ಹಾಯಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲವಾಗಿದೆ. ಈ ಬಗ್ಗೆ ಸರ್ಕಾರ ವಿಶೇಷವಾದ ಗಮನವನ್ನು ಹರಿಸಿಲ್ಲ. ಹಾನಗಲ್ ತಾಲ್ಲೂಕಿನಲ್ಲಿ ಮಾಜಿ ಶಾಸಕರಾದ ಮಾನ್ಯ ಉದಾಸಿಯವರು ರೈತರುಗಳಿಗೆ ಪರಿಹಾರ ಕೊಟ್ಟಿಲ್ಲವೆಂದು ಜೈಲ್‌ಭರೋ ಕಾರ್ಯಕ್ರಮವನ್ನು ಹಾಕಿಕೊಂಡರೂ ಸಹಿತ ಸರ್ಕಾರ ಆ ಕಡೆ ದೃಷ್ಟಿಯನ್ನು ಹರಿಸಿಲ್ಲ. ಹಾನಗಲ್ ತಾಲ್ಲೂಕ್‌ನಲ್ಲಿ ಬೆಳೆಗೆ ಆಗಿರತಕ್ಕಂಥ ನಷ್ಟ ಸರ್ಕಾರದ ವರದಿ ಪ್ರಕಾರ 42 ಲಕ್ಷ ರೂಪಾಯಿ ಆದರೆ ಸರ್ಕಾರ ಕೊಟ್ಟಿರುವುದು 30 ಸಾವಿರ ರೂಪಾಯಿಗಳನ್ನು ಮಾತ್ರ. ಇದು ಯಾವ ನ್ಯಾಯ? ನಿಜವಾಗಿ ಸರ್ಕಾರಕ್ಕೆ ಏನಾದರೂ ಕಳಕಳಿ ಇದೆಯೇ? ನನ್ನ ತಾಲ್ಲೂಕಿನಲ್ಲಿ 50 ಲಕ್ಷ ರೂಪಾಯಿಗಳು ಹಾನಿಯಾಗಿದೆಯೆಂದು ವರದಿ ಮಾಡಿದರೆ ಇವರು ಕೊಟ್ಟಿರತಕ್ಕಂಥಾದ್ದು ಕೇವಲ ೧ ಲಕ್ಷ ೮ ಸಾವಿರ ರೂಪಾಯಿಗಳು. ಅದಕ್ಕಾಗಿ ಪ್ರತಿಶತ ನೂರಕ್ಕೆ ಎರಡು ರೂಪಾಯಿಗಳು ಎನ್ನುವ ಮಾತನ್ನು ನಾನು ಹೇಳಿದೆ. ಈಗಾದಾರೂ ಈ ರಸ್ತೆಗಳ ಹಾನಿಯ ಬಗ್ಗೆ ಕೆರೆಕಟ್ಟೆಗಳು ಒಡೆದದ್ದರ ಬಗ್ಗೆ ಮತ್ತು ಈ ಕಾಲುವೆಯಲ್ಲಿ ಹೂಳನ್ನು ತೆಗೆಯುವುದಕ್ಕೆ ಮತ್ತೆ ಬೆಳೆ ಹಾನಿಯಾಗಿದ್ದಕ್ಕೆ ಹಾಗೂ ಈ ಜನರ ಸಂಕಷ್ಟವನ್ನು ದೂರ ಮಾಡಲಿಕ್ಕೆ ಸರ್ಕಾರ ಹಾಕಿಕೊಂಡಿರತಕ್ಕ ಕಾರ್ಯ ಕ್ರಮ ಏನು? ಕೇವಲ ಕಣ್ಣು ಒರೆಸುವ ಕೆಲಸ ಮಾಡದೆ, ಸರ್ಕಾರ ನಿಜವಾಗಿ ಸಂಕಷ್ಟದಲ್ಲಿರುವಂಥ ಜನರಿಗೆ ಪರಿಹಾರ ಒದಗಿಸುವುದಕ್ಕೆ ಹಾಕಿಕೊಂಡಿರತಕ್ಕ ಅಳತೆಗೋಲೇನು? ಎಕರೆಗೆ 300 ರೂಪಾಯಿ ಕೊಡುತ್ತೇವೆಂದು ಹೇಳಿದ್ದರು. ಅದನ್ನಾದರೂ ಕೊಡುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಎಷ್ಟು ಕ್ಷೇತ್ರಗಳಲ್ಲಿ ಈ ತರಹ ಹಾಳಾಗಿದೆ? 300 ರೂಪಾಯಗಳನ್ನು ಆದರೂ ಕೊಡುವುದಕ್ಕೇನಾದರೂ ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದೆಯೇ? ಹಾನಗಲ್ ತಾಲ್ಲೂಕಿನಲ್ಲಿ 42ಲಕ್ಷ ರೂಪಾಯಿ ಹಾನಿಯಾಗಿದ್ದರೆ ಬಿಡುಗಡೆಯಾಗಿದ್ದು 30ಸಾವಿರ ಮಾತ್ರ. ತಮ್ಮದ್ದೇ ಆದಂಥ ವರದಿ ಇದೆ. ನಿಮ್ಮ ಅಧಿಕಾರಿಗಳೇ ಇದನ್ನು ಕೊಟ್ಟದ್ದು. ಇವತ್ತು ನೀವು ಹಾಕಿಕೊಂಡಂಥ ಕಾರ್ಯಕ್ರಮದ ಪ್ರಕಾರ ಒಂದು ಅಳತೆಗೋಲಿನ ಪ್ರಕಾರ, ಪರಿಹಾರ ಎಷ್ಟು ಬೇಕಾಗುತ್ತದೆ? ಎಷ್ಟು ಕೊಟ್ಟಿದ್ದೀರಿ? ಯಾವಾಗ ಈ ಹಣವನ್ನು ಬಿಡುಗಡೆ ಮಾಡಿ ಈ ರಸ್ತೆಗಳ ರಿಪೇರಿ, ನೀರಾವರಿ ಯೋಜನೆಗಳನ್ನು ರಿಪೇರಿ ಮಾಡುವುದು ಹಾಗೂ ಈ ಬೆಳೆ ಹಾನಿಯನ್ನು ತುಂಬಿಕೊಡುತ್ತೀರೆಂದು ಮಾನ್ಯ ಸಚಿವರು ತಮ್ಮ ಹೇಳಿಕೆಯಲ್ಲಿ ಹೇಳಬೇಕಾಗುತ್ತದೆ. ಇಲ್ಲವೆಂದರೆ ನಾವು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಸರ್ಕಾರ ಕಣ್ಣು ಒರೆಸುವ ಕೆಲಸ ಮಾಡುತ್ತದೆ, ಜನರ ಸಂಕಷ್ಟಗಳಿಗೆ ಸ್ಪಂದಿಸುತ್ತಿಲ್ಲ ಎನ್ನುವ ಮಾತನ್ನು ಅನಿವಾರ್ಯವಾಗಿ ನಾನು ಹೇಳಬೇಕಾಗುತ್ತದೆ. ಹಾಗೆ ಆಗದಂತೆ,

ಮಾನ್ಯ ಸಚಿವರು ಸಮಗ್ರವಾಗಿ ವಿಚಾರ ಮಾಡಿ ಈ ಪರಿಹಾರಕ್ಕೆ ಕನಿಷ್ಠ ಸಹಾಯವನ್ನಾದರೂ ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

+ ಶ್ರೀ ಸಿ. ಬೈರೇಗೌಡ (ವೇಮಗಲ್) : ಸನ್ಮಾನ್ಯ ಅಧ್ಯಕ್ಷಣಿಯವರೆ, ಈಗಾಗಲೇ ನಮ್ಮ ಕೆಲಸ ಸ್ನೇಹಿತರು ಮಾತನಾಡಿ ಅನೇಕ ವಿಚಾರಗಳನ್ನು ತಿಳಿಸಿದ್ದಾರೆ. ಈ ವಿಚಾರ ಬಹಳ ಹಳೆಯದಾಗಿದೆ. ಇದು ಮೊದಲೇ ಚರ್ಚೆಯಾಗಿದ್ದರೆ ಜನಕ್ಕೆ ಎಷ್ಟು ಪ್ರಯೋಜನವಾಗಬೇಕಾಗಿತ್ತೋ ಅದಾದರೂ ಕೂಡ ಆಗುತ್ತಿತ್ತು. ಆದರೆ ಎಲ್ಲಾ ಆದಮೇಲೆ ನಾವು ಚರ್ಚೆ ಮಾಡುವುದಕ್ಕೆ ಹೊರಟಿದ್ದೇವೆ. ಆದರೂ ಸಹ ಏನಾಗಿದೆ ಎನ್ನತಕ್ಕಂಥಾದ್ದನ್ನು ವಿಮರ್ಶೆ ಮಾಡತಕ್ಕಂಥ ಅವಶ್ಯಕತೆ ಇದೆಯೆಂದು ನಾನು ಭಾವಿಸಿದ್ದೇನೆ. ಈಗಾಗಲೇ ಮಾತನಾಡಿದಂಥ ವಿರೋಧ ಪಕ್ಷದ ನಾಯಕರು ಒಂದು ಮಾತನ್ನು ಹೇಳಿದರು. ಏನೆಂದರೆ ಇದು ಮಳೆ ಹಾನಿಯಿಂದ ಆಗಿರತಕ್ಕಂಥದ್ದಕ್ಕಿಂಥ ಹೆಚ್ಚಿಗೆ ಮಾನವ ನಿರ್ಮಿತ ಪ್ರವಾಹದಿಂದ ಆಗಿರತಕ್ಕಂಥ ಅನಾಹುತ ಹೆಚ್ಚು ಎಂದು ಹೇಳಿದ್ದಾರೆ. ಅದಂತೂ ನಿಜ. ಉದಾಹರಣೆಗಾಗಿ ಕೃಷ್ಣರಾಜಸಾಗರದಲ್ಲಿ 124 ಅಡಿವರೆಗೂ ನೀರನ್ನು ನಿಲ್ಲಿಸುವುದಕ್ಕೆ ಸಾಧ್ಯವಿದೆ, ಅಲ್ಲಿ 124ಅಡಿ ಮುಟ್ಟಲೇ ಇಲ್ಲ. 121ಅಡಿವರೆಗೆ ನೀರು ಇರುವಾಗಲೇ ಸುಮಾರು 6ಅಡಿ ನೀರನ್ನು ಬಿಟ್ಟು 117ಅಡಿಗೋ 118ಅಡಿಗೋ ತಂದು ನಿಲ್ಲಿಸಿದರು. ಇದರಲ್ಲಿ ಕಂದಾಯ ಇಲಾಖೆ ಮತ್ತು ನೀರಾವರಿ ಇಲಾಖೆ ಎರಡರದ್ದೂ ಕೂಡ ಜವಾಬ್ದಾರಿ ಇದೆ. 124 ಅಡಿಯವರೆಗೆ ನೀರನ್ನು ನಿಲ್ಲಿಸತಕ್ಕಂಥ ಅವಕಾಶ ಅಲ್ಲಿರುವಾಗ 124 ಅಡಿ ನೀರು ಮುಟ್ಟದೇ ಇರತಕ್ಕಂಥ ಸಂದರ್ಭದಲ್ಲೂ ಸಹಿತ ನೀರನ್ನು ಬಿಟ್ಟದ್ದಕ್ಕೆ ಕಾರಣ ಏನು? ಇದು ನಿಗೂಢವಾಗಿದೆ. ಇದರಲ್ಲಿ ನನಗೆ ತಿಳಿದಿರುವಷ್ಟು ಮಟ್ಟಿಗೆ ಇದರಲ್ಲಿ ಮಾನವ ನಿರ್ಮಿತ ಅನ್ನುವುದಕ್ಕಿಂಥ ಹೆಚ್ಚಿಗೆ, ಕೆಲವು ರಾಜಕೀಯ ಕಾರಣಗಳಿಗೋಸ್ಕರ ನೀರು 124 ಅಡಿಯವರೆಗೆ ಮುಟ್ಟದೇ ಇದ್ದರೂ ಸಹ ಕೃಷ್ಣರಾಜಸಾಗರದಿಂದ ತಮಿಳುನಾಡಿಗೆ ನೀರು ಬಿಡತಕ್ಕಂಥ ಪ್ರಯತ್ನ ನಡೆದಿದೆ. ತಮಿಳುನಾಡಿನ ಲ್ಲಿರತಕ್ಕಂಥವರ ಒತ್ತಾಯದ ಮೇಲೆ, ಅದೂ ಕೇಂದ್ರ ಸರ್ಕಾರದ ಒತ್ತಾಯದ ಮೇಲೆ, ನಮ್ಮ ಸರ್ಕಾರದವರು ನಮ್ಮ ಕರ್ನಾಟಕ ರಾಜ್ಯದ ಜನರ ಹಿತವನ್ನು ಕಡೆಗಾಣಿಸಿ ಅವರಿಗೆ ನೀರನ್ನು ಬಿಡತಕ್ಕ ಪ್ರಯತ್ನವನ್ನು ಮಾಡಿದ್ದಾರೆ. ಇಲ್ಲದೇ ಇದ್ದಲ್ಲಿ ಕೆ.ಆರ್.ಸಾಗರದಿಂದ ನೀರನ್ನು ದಿಢೀರ್ ಎಂದು ಬಿಡತಕ್ಕ ಅವಶ್ಯಕತೆ ಇರಲಿಲ್ಲ, ನೀರನ್ನು ಯಾವ ಕಾರಣಕ್ಕೂ ಕೂಡ ಬಿಡಬೇಕಾದಂಥ ಅವಶ್ಯಕತೆ ಇರಲಿಲ್ಲ. 30ವರ್ಷಗಳ ಹಿಂದೆ ಕೂಡ ಈಗಾಗಲೇ ಹೇಳಿದ ಹಾಗೆ ಇದಕ್ಕಿಂತ ಹೆಚ್ಚು ಮಳೆ ಬಿದ್ದಿದೆ. ಆ ಸಂದರ್ಭದಲ್ಲಿ ಸಹ ಈ ರೀತಿ ನೀರನ್ನು ದಿಢೀರ್ ಎಂದು ಬಿಡತಕ್ಕ ಪ್ರಯತ್ನ ಮಾಡಲಿಲ್ಲ, ಬಿಡಲೂ ಇಲ್ಲ, ಆಗ ಹಾನಿ ಏನೂ ಆಗಿರತಕ್ಕ ಬಗ್ಗೆ ದಾಖಲೆ ಕೂಡ ಇಲ್ಲ. ಆದರೂ ಕೂಡ ನಾನು ತಿಳಿಸಿದ ಕಾರಣಕ್ಕೋಸ್ಕರ, ರಾಜಕೀಯ ಕಾರಣಕ್ಕೋಸ್ಕರವಾಗಿ, ಇವರ ಗದ್ದುಗೆಯನ್ನು ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಭದ್ರ ಪಡಿಸಿಕೊಳ್ಳುವ ಕಾರಣಕ್ಕೋಸ್ಕರವಾಗಿ ನೀರನ್ನು ಬಿಡತಕ್ಕ ಪ್ರಯತ್ನವನ್ನು ಮಾಡಿದ್ದಾರೆ ಎನ್ನುವ ಮಾತನ್ನು ನಾನು ಗತ್ಯಂತರ ಇಲ್ಲದೆ ಹೇಳತಕ್ಕ ಪರಿಸ್ಥಿತಿ ಇವತ್ತು ಒದಗಿ ಬಂದಿದೆ. ಇವತ್ತು ನೀರು ಬಿಡಬೇಕಾಯಿತು. ಅದಕ್ಕೆ ನಿಯಮಾವಳಿಗಳು ಇವೆ. ಯಾವಾಗ ನಿಯಮ ಪಾಲನೆ ಮಾಡದ್ದೀರಿ? ದಿಢೀರ್ ಎಂದು ನೀರನ್ನು ಕ್ರಸ್ಟ್ ಗೇಟ್‌ನಿಂದ ಬಿಡುವುದಕ್ಕೆ ಮೊದಲು ಜನರಿಗೆ ತಿಳುವಳಿಕೆ ಕೊಡಬೇಕಾಗುತ್ತದೆ. ನೀವು ಜನರಿಗೆ ತಿಳುವಳಿಕೆ ಕೊಡತಕ್ಕ ಪ್ರಯತ್ನವನ್ನು ಏಕೆ ಮಾಡಲಿಲ್ಲ? ಸರ್ಕಾರದವರು ಹೇಳಬಹುದು. ಇವತ್ತು ಮಳೆ ಬಂದು ಟೆಲಿಫೋನ್ ಸಂಪರ್ಕ ಹಾಳು ಆಯಿತು ಎಂದು. ನಿಜ, ಅದು ಹಾಳು ಆಗಿರಬಹುದು. ಆದರೆ ವೈರ್‌ಲೆಸ್ ಇದೆ. ವೈರ್‌ಲೆಸ್ ಇಲ್ಲದೇ ಇದ್ದರೂ ಕೂಡ ಒಂದು ಕಡೆ ಟೆಲಿಫೋನ್ ಹಾಳಾದರೆ ಇಡೀ ರಾಜ್ಯದಾದ್ಯಂತ ಟೆಲಿಫೋನ್ ಏನೂ ಹಾಳಾಗಿರಲಿಲ್ಲ, ಮೈಸೂರಿನಿಂದ ಬೆಂಗಳೂರಿಗೆ ಟೆಲಿಫೋನ್ ಏನೂ ಹಾಳಾಗಿರಲಿಲ್ಲ, ಮೈಸೂರಿನಿಂದ ಕೃಷ್ಣರಾಜ ಸಾಗರಕ್ಕೆ ಇರತಕ್ಕ ದೂರ 12ಅಥವಾ 14ಮೈಲಿಗಳು ಅಷ್ಟೇ. ಅಲ್ಲಿಂದ ವಾಹನ ಸಂಪರ್ಕ ಇತ್ತು. ಮೈಸೂರಿನಿಂದ ಬೇರೆ ಊರಿಗೆ ಟೆಲಿಫೋನ್ ಸಂಪರ್ಕ ಇತ್ತು, ಬೆಂಗಳೂರಿಗೆ ಬೇರೆ ಕಡೆಯಿಂದ

ತಿಳಿಸಿ ಆ ಜನರನ್ನು ಪಾರುಮಾಡತಕ್ಕ ಪ್ರಯತ್ನ ಮಾಡುವುದಕ್ಕೆ ಸಾಧ್ಯ ಇತ್ತು. ಆದರೆ ಅದನ್ನು ಮಾಡಲಿಲ್ಲ. ಇದರಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಇದಕ್ಕೆ ಕಾರಣ ಏನು? ಅಲ್ಲಿರತಕ್ಕ ಅಧಿಕಾರಿಗಳು ಪರಮಾವಧಿ ಬೇಜವಾಬ್ದಾರಿಯಿಂದ ನಡೆದುಕೊಂಡಿದ್ದಾರೆ. ಅವರಿಗೆ ಜನರ ಬಗ್ಗೆಯಾಗಲೀ, ರೈತರ ಬಗ್ಗೆ ಆಗಲೀ ಕಾಳಜಿ ಇಲ್ಲ. ಏನೋ ಅಧಿಕಾರಿಗಳಾಗಿ ಅಲ್ಲಿ ಅಧಿಕಾರಕ್ಕಾಗಿ ಕುಳಿತಿದ್ದಾರೆ. ಇದರಿಂದಾಗಿ ಅಲ್ಲಿ ರೈತರು ಕೋಟ್ಯಾಂತರ ರೂಪಾಯಿಗಳಷ್ಟು ನಷ್ಟ ಅನುಭವಿಸಿದ್ದಾರೆ. ಹಾಸನ ಜಿಲ್ಲೆಯಲ್ಲಿ ಮೂರು ರೂಪಾಯಿ, ಆರು ರೂಪಾಯಿಗೆ ಚೆಕ್ ಕೊಡುತ್ತೀರಿ. ಎಂತಹ ನಾಗರೀಕ ಸರ್ಕಾರಕ್ಕೂ ಸಹ ಈ ರೀತಿ ಮೂರು ರೂಪಾಯಿ, ಆರು ರೂಪಾಯಿ, ಹತ್ತು ರೂಪಾಯಿ, ಹನ್ನೆರಡು ರೂಪಾಯಿ ಚೆಕ್ ಕೊಡತಕ್ಕದ್ದು ಅವಮಾನಕರ ಪ್ರಸಂಗ. ಇಂತಹ ಅವಮಾನಕರ ಪ್ರಸಂಗ ಹಿಂದೆ ಎಂದೂ ಆಗರಲಿಲ್ಲ ಎಂದು ನಾನು ಭಾವಿಸಿದ್ದೇನೆ. ಅವರು ಹೇಳಬಹುದು, ಪ್ರಕೃತಿ ವಿಕೋಪದಿಂದ ಇಷ್ಟು ಹಾನಿ ಆದರೆ ಇಷ್ಟು ಪರಿಹಾರ ಕೊಡಬೇಕೆಂದು ನಿಯಮಾವಳಿ ಇದೆ, ಆ ಪ್ರಕಾರ ಕೊಟ್ಟಿದ್ದೇವೆಂದು ಮಾನ್ಯ ಕಂದಾಯ ಮಂತ್ರಿಗಳು ಹೇಳಬಹುದು, ಅದು ನಿಜ ಇರಬಹುದು. ಹಿಂದೆ ನೀವು ಅಧಿಕಾರದಲ್ಲಿ ಇದ್ದಾಗ ಏನು ಮಾಡಿದ್ದೀರಿ ಎಂದು ಕೇಳಬಹುದು. ಆಗ ಕೂಡ ಇದೇ ನಿಯಮಾವಳಿ ಇತ್ತು. ಆದರೂ ಯಾವಾಗಲೂ ಕೂಡ ಮೂರು ರೂಪಾಯಿ, ಆರು ರೂಪಾಯಿ ಚೆಕ್ ಕೊಟ್ಟಿರತಕ್ಕ ನಿದರ್ಶನಗಳು ಇಲ್ಲ, ಕೊಟ್ಟಿರುವಂತಹ ನಿದರ್ಶನಗಳು ಇದ್ದರೆ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಮಿನಿಮಮ್ 100 ರೂಪಾಯಿ ಕೊಟ್ಟಿರುವ ಮಾತು ಹೇಳಿ. ಆರು ರೂಪಾಯಿ ಮಾತ್ರ ಹೇಳುತ್ತಿದ್ದೀರಲ್ಲ. ಈಗ ಮಿನಿಮಮ್ ನೂರು ರೂಪಾಯಿ, ಆರು ರೂಪಾಯಿ ಹೋಯಿತು.

ಶ್ರೀ ಸಿ. ಬೈರೇಗೌಡ : ನೀವು ಆರು ರೂಪಾಯಿ ಕೊಟ್ಟಿದ್ದೀರಲ್ಲ, ಅದಕ್ಕೋಸ್ಕರವಾಗಿ ಹೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಿನಿಮಮ್ ನೂರು ರೂಪಾಯಿ ಕೊಟ್ಟಿರುವುದಕ್ಕೆ ಅಪ್ರಿಷಿಯೇಟ್ ಮಾಡಬೇಕು. ಮಿನಿಮಮ್ ಒಂದು ಗುಂಟೆ ಜಮೀನು ಇದ್ದರೂ ಅಲ್ಲಿಯ ತಹಶೀಲ್ದಾರ್‌ರು ಸಹಾಯ ಮಾಡಿದ್ದಾರೆ. ಆದರೆ ಚೆಕ್ ಕೊಟ್ಟಿದ್ದು ತಪ್ಪು. ಹತ್ತು ರೂಪಾಯಿ ಆಗಲಿ, ಎರಡು ರೂಪಾಯಿ ಆಗಲಿ ನೇರವಾಗಿ ಅವರ ಊರಿಗೆ ಹೋಗಿ ಹಣ ಕೊಡಬೇಕಾಗಿತ್ತು. ಆದರೆ ಹಣಕೊಟ್ಟರೆ ಮಿಸ್ ಯೂಸ್ ಆಗುತ್ತದೆ, ಮಿಸ್ ಅಪ್ರೋಪ್ರಿಯೇಷನ್ ಆಗುತ್ತದೆ ಎಂದು ಚೆಕ್ ಕೊಟ್ಟಿದ್ದಾರೆ. ಇದರಿಂದ ರೈತರಿಗೆ ತೊಂದರೆ ಆಗುತ್ತದೆಂದು ನಾನೇ ಒಪ್ಪಿಕೊಂಡು. ಮಿನಿಮಮ್ 100ರೂ.ಗಳೆಂದು ನಾವು ಮಾಡಿದ್ದೇವೆ. ನೀವು ಹಿಂದೆ ಈ ರೀತಿ ಮಾಡಿದ್ದೀರಾ?

ಶ್ರೀ ಸಿ. ಬೈರೇಗೌಡ : ನೀವು ಇದೇ ಉತ್ತರ ಹೇಳುತ್ತೀರೆಂದು ನಾನು ಮೊದಲೇ ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಪದೇ ಪದೇ ಈ ರೀತಿ ಮಾತನಾಡಿ ಹೇಳುತ್ತೀರಿ ಎಂದು ನಾನು ಎಲ್ಲ ಕಾಗದ ಪತ್ರವನ್ನು ತಂದಿದ್ದೇನೆ. ಯಾರ ಯಾರ ಕಾಲದಲ್ಲಿ ಎಷ್ಟೆಷ್ಟು ಕೊಡಲಾಗಿದೆ ಎಂಬ ವಿವರಗಳನ್ನು ಅಧ್ಯಕ್ಷರಿಗೂ ಕೊಡುತ್ತೇನೆ. ತಮಗೂ ಕೊಡುತ್ತೇನೆ. ನೋಡಿಕೊಳ್ಳಿ.

ಶ್ರೀ ಸಿ. ಬೈರೇಗೌಡ : ಇದನ್ನೇ ನೀವು ಹೇಳುತ್ತೀರಿ ಎಂದು ನಾನು ಮೊದಲೇ ಹೇಳಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ : ಒಂದೊಂದು ಸಾರಿ ಮಾನ್ಯ ಖರ್ಗೆಯವರಿಗೆ ಬಹಳ ಧೈರ್ಯ ಬರುತ್ತದೆ.

ಶ್ರೀ ಸಿ. ಬೈರೇಗೌಡ : ಇವರ ಧೈರ್ಯ ಎಲ್ಲಿಯವರೆಗೆ ಎಷ್ಟಿದೆ ಎಂದು ಹೇಳುತ್ತೇನೆ. ತಾವು ಮಿನಿಮಮ್ ಮೂರು ರೂಪಾಯಿ ಇದ್ದುದನ್ನು ನೂರು ರೂಪಾಯಿ ಮಾಡಿದ್ದೇವೆ ಎಂದು ಹೇಳಿದಿರಿ. ಇದನ್ನು ನಾವು ಸ್ವಾಗತ ಮಾಡುತ್ತೇವೆ.

ಈ ವಿಚಾರದಲ್ಲಿ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ನೀವು ಒಳ್ಳೆಯ ಕೆಲಸ ಮಾಡಿದಾಗ ನಿಮ್ಮನ್ನು ಅಭಿನಂದಿಸಲು ನಾನು ಹಿಂದೆ ಹೋಗುವುದಿಲ್ಲ. ಆದರೆ ಅಲ್ಲಿರತಕ್ಕಂಥ ಹಾಸನದ ಜಿಲ್ಲಾಧಿಕಾರಿ ಸ್ಥಳಕ್ಕೆ ಹೋಗದೆ ಹಾಗೂ ಅಲ್ಲಿ ಸಂಪೂರ್ಣವಾಗಿ ಸಹಕಾರ ಕೊಡ ರೈತರಿಗೆ ಇರತಕ್ಕಂಥ ತೊಂದರೆಗಳನ್ನು ಕಷ್ಟಗಳನ್ನು ಖುದ್ದಾಗಿ ಹೋಗಿ ವಿಚಾರಿಸದೆ ಮತ್ತು ಅಲ್ಲಿ ಹಣವನ್ನು ಬಟವಾಡೆ ಮಾಡತಕ್ಕಂಥಾದ್ದರಲ್ಲಿ ಸಂಪೂರ್ಣವಾಗಿ ವಿಫಲರಾದ ಕಾರಣ ಈ ಮಾತನ್ನು ಹೇಳಬೇಕಾಗಿದೆ. ಮೈಸೂರು ವಿಭಾಗಾಧಿಕಾರಿಯನ್ನು ಅಲ್ಲಿಗೆ ಕಳುಹಿಸುತ್ತೀರಿ ಯಾವ ಕಾರಣಕ್ಕಾಗಿ? ಅವರು ಹಾಸನಕ್ಕೆ ಹೋಗುತ್ತಾರೆ, ರೈತರಿಗೆ ಈ ಹಣವನ್ನು ಬಟವಾಡೆ ಮಾಡುವುದಕ್ಕೋಸ್ಕರವಾಗಿ ಅವರು ಏತಕ್ಕಾಗಿ ಹೋಗಬೇಕಾಗಿ ಬಂತು? ಇದನ್ನು ಯಾರು ಮಾಡಬೇಕು? ಒಬ್ಬ ಜಿಲ್ಲಾಧಿಕಾರಿ ಮಾಡತಕ್ಕಂಥ ಕೆಲಸವನ್ನು ಒಬ್ಬ ವಿಭಾಗಾಧಿಕಾರಿ ಏತಕ್ಕೆ ಮಾಡಬೇಕು? ಅಂತಹ ಜಿಲ್ಲಾಧಿಕಾರಿಗೆ ಏತಕ್ಕಾಗಿ ನೀವು ರಕ್ಷಣೆ ಮಾಡುತ್ತಾ ಇದ್ದೀರಿ? ಅವರ ಮೇಲೆ ಈ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ಇಂಥ ಕೆಲವು ಸಂದರ್ಭಗಳಲ್ಲಿ ವಿಫಲರಾಗಿದ್ದಾರೆ ಎಂಬ ಮಾತನ್ನು ಮಾನ್ಯ ಮಂತ್ರಿಗಳೇ ಒಪ್ಪಿಕರೆ. ವಿಫಲರಾಗಿದ್ದರೆ ಅದಕ್ಕೆ ಕಾರಣಗಳೇನು? ಈ ರೀತಿ ಲೋಪಮಾಡಿರ ತಕ್ಕಂಥ ಅಧಿಕಾರಿ ಯಾರಿದ್ದಾರೆ, ಅದಕ್ಕೆ ಕಾರಣಕರ್ತರು ಯಾರಿದ್ದಾರೆ. ಹೀಗೆ ಬೇಜವಾಬ್ದಾರಿಯಾಗಿ ಜನರು ಕಷ್ಟದಲ್ಲಿರತಕ್ಕಂಥ ಸಂದರ್ಭದಲ್ಲಿ ಜನರು ನೀರಿನ ಪಾಲಾಗುತ್ತಿರುವ ಸಂದರ್ಭದಲ್ಲಿ ಅಧಿಕಾರಿಗಳು ಅದರಲ್ಲಿಯೂ ಪ್ರಮುಖರಾಗಿರತಕ್ಕಂಥ ಜಿಲ್ಲಾಧಿಕಾರಿ ಆದವರು ಮೋಜು ಮಾಡುತ್ತಾ ಕುಳಿತಿದ್ದರೆ ಅವರನ್ನು ನೋಡುತ್ತಿದ್ದ ಸರ್ಕಾರವನ್ನು ನಾವು ಏನೆಂದು ಕರೆಯಬೇಕು? ಹಾಗಾದರೆ ಇದನ್ನು ನಾಗರೀಕ ಸರಕಾರ ಎಂದು ಕರೆಯಬೇಕೋ ಅಥವಾ ಇದೊಂದು ಕಿರಾತಕ ಸರಕಾರ ಎಂದು ಹೇಳಬೇಕೋ ಎಂದು ನನಗಂತೂ ಅರ್ಥವಾಗುತ್ತಾ ಇಲ್ಲ, ಅಂಥ ಅಧಿಕಾರಿಯ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಅದನ್ನು ಬಿಟ್ಟು 3 ರೂಪಾಯಿಗಳು ಇದ್ದುದನ್ನು 100 ರೂಪಾಯಿ ಮಾಡಿದ್ದೇವೆ ಎಂದು ಹೇಳುತ್ತೀರಿ. ಅದನ್ನು ನಾವು ಒಪ್ಪಿಕೊಳ್ಳೋಣ.ಆದರೆ ಇಂತಹ ಅನಾಹುತಕ್ಕೆ ಕಾರಣರಾಗಿರತಕ್ಕಂಥ ಅಧಿಕಾರಿಯಾರಿದ್ದಾರೆ. ಜನರಿಗೆ ಸೂಕ್ತವಾಗಿ ಪರಿಹಾರ ಕೊಡತಕ್ಕದ್ದನ್ನು ಕೊಡದೇ ಇರುವ ಅಧಿಕಾರಿ ಯಾರಿದ್ದಾರೆ, ಅಲ್ಲಿಯ ಜನರನ್ನು ನೀರು ಪಾಲು ಆಗುತ್ತಿರುವಾಗ ಅವರ ರಕ್ಷಣೆಯನ್ನು ಮಾಡದೇ ಇರತಕ್ಕಂಥ ಅಧಿಕಾರಿ ಯಾರಿದ್ದಾರೆ, ಅವರ ಮೇಲೆ ನೀವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ಇಲ್ಲಿಯವರೆಗೆ ಅಂಥ ಯಾವ ಕ್ರಮವನ್ನೂ ಕೂಡ ನೀವು ತೆಗೆದುಕೊಂಡಿಲ್ಲ. ಹಾಗೆ ತೆಗೆದುಕೊಳ್ಳುವುದಕ್ಕೆ ನೀವು ತಯಾರಾಗಿಲ್ಲ. ಬದಲಾಗಿ ಅಂಥವರನ್ನು ರಕ್ಷಣೆ ಮಾಡತಕ್ಕಂಥ ಕೆಲಸ ಸಮರ್ಪಕವಾಗಿ ನಡೆದಿದೆ ಎಂದು ವಿಶ್ವಾಸನೀಯವಾಗಿ ನನಗೆ ತಿಳಿದುಬಂದಿದೆ. ಆದ್ದರಿಂದ ತಪ್ಪಿತಸ್ಥ ಅಧಿಕಾರಿಗಳನ್ನು ರಕ್ಷಣೆ ಮಾಡುವಂಥ ಮತ್ತು ಜನರ ತೊಂದರೆಯನ್ನು ನೋಡಲಾರದ ಸರಕಾರ ಇದು ಎಂದು ನಾನು ಗತ್ಯಂತರವಿಲ್ಲದೆ ಹೇಳಬೇಕಾಗಿದೆ.

ಹಿಂದೆ ಇದ್ದಂಥ ಯಾವ ಸರಕಾರಗಳೂ ಸಹ 3 ರೂಪಾಯಿಗಳ ಇಲ್ಲವೇ 6 ರೂಪಾಯಿಗಳ ಚೆಕ್‌ನ್ನು ಕೊಟ್ಟ ಉದಾಹರಣೆಗಳಿಲ್ಲ. ಅಂಥ ಸಂದರ್ಭ ಅವರಿಗೆ ಒದಗಿರಲಿಲ್ಲ. ಈ ರೀತಿಯಾಗಿ ಯಾವ ಅಧಿಕಾರಿಯೂ ವರ್ತನೆ ಮಾಡಿರಲಿಲ್ಲ. ಯಾವ ಸರಕಾರವೂ ವರ್ತನೆ ಮಾಡಿರಲಿಲ್ಲ. ಇಲ್ಲಿ ಅಧಿಕಾರಿಗಳ ಕರ್ತವ್ಯಲೋಪವಾಗಿದೆ. ಈಗ ತಾವುಗಳು 3 ರ ಬದಲಾಗಿ 100 ರೂಪಾಯಿಗಳನ್ನು ಕೊಡುವ ಕಾರ್ಯಕ್ರಮವನ್ನು ಹೇಗೆ ಹಾಕಿಕೊಂಡಿದ್ದೀರೋ ಅದನ್ನು ಮೊದಲೇ ಮಾಡಬೇಕಾಗಿತ್ತು. ಈ ರೀತಿಯಲ್ಲಿ ಇವೊತ್ತಿನ ದಿವಸ ಕೆಲವು ಅಧಿಕಾರಿಗಳು ತಮಗೆ ಇದ್ದಂಥ ಅಧಿಕಾರವನ್ನು ಜನತೆಗೆ ಪ್ರಯೋಜನವಾಗದಿರುವ ರೀತಿಯಲ್ಲಿ ಚಲಾಯಿಸಿದ್ದಾರೆ. ಜನರಿಗೆ ಉಪಕಾರವನ್ನು ಮಾಡದೇ ಅವರಿಗೆ ವಿರುದ್ಧವಾಗಿ ವರ್ತಿಸಿರುವುದರಿಂದ ಇವೊತ್ತಿನ ದಿವಸ ಈ ಪರಿಸ್ಥಿತಿ ಉಂಟಾಗಿದೆ. ಈ ರೀತಿಯ ಅಕ್ರಮಗಳು ಹಿಂದೆ ಆಗಿರಲಿಲ್ಲ. ಆದ್ದರಿಂದ ಅದನ್ನು ತಿದ್ದುಪಡಿ ಮಾಡಬೇಕಾದಂಥ ಅವಶ್ಯಕತೆ ಹಿಂದೆ ಇರಲಿಲ್ಲ ಎಂದು ಹೇಳಬೇಕಾಗುತ್ತದೆ. ಹಾಗೆಯೇ ಅಲ್ಲಿ ರೈತರನ್ನು ಸಣ್ಣ ಮತ್ತು ದೊಡ್ಡ ರೈತರು ಎಂದು ವಿಭಜನೆ ಮಾಡದ್ದೀರಿ. ಇಷ್ಟು ನಷ್ಟ

ರೈತರಿಗೆ ಆದರೆ ಅದಕ್ಕೆ ಇಷ್ಟು ಮಾತ್ರ ಹಣ ಕೊಡಬೇಕೆಂದು ಇದೆ. ನನ್ನ ಕ್ಷೇತ್ರದಲ್ಲಿ 1988ರಲ್ಲಿ ಇದೇ ರೀತಿಯಾಗಿ ಒಂದು ಘಟನೆ ನಡೆಯಿತು. ಕೇವಲ ಪ್ರವಾಹದಿಂದಾಗಿ ಮರಳು ಬಂದರೆ ಭೂಮಿ ಹಾಳಾಗುವುದಿಲ್ಲ, ಕೆಲವು ಸಲ ದೊಡ್ಡ ಅನೇಕಲ್ಲುಗಳು ಬೀಳುತ್ತವೆ, ಬಿದ್ದುಹೆಪ್ಪುಗಟ್ಟುತ್ತವೆ. ಹೀಗೆ ಒಂದರೆಡು ದಿವಸಗಳ ಕಾಲ ಅವುಗಳು ಕರಗದೆ ಇರತಕ್ಕಂಥಾದ್ದು ಕೂಡ ಇದೆ. ಇಂಥ ಭೂಮಿಯಲ್ಲಿ ಒಂದೆರಡು ವರ್ಷಗಳ ಕಾಲ ಏನೂ ಬೆಳೆ ಆಗದಿರತಕ್ಕಂಥ ಪರಿಸ್ಥಿತಿಯೂ ಕೂಡ ಇದೆ. ಅಂತಹ ಪರಿಸ್ಥಿತಿಯನ್ನು ನನ್ನ ಕ್ಷೇತ್ರದಲ್ಲಿ ನನ್ನ ಜಿಲ್ಲೆಯಲ್ಲಿ ಜನರು ಅನುಭವಿಸಿದ್ದಾರೆ. ಆದರೆ ಅಂಥವರಿಗೆ ನೀವು ಯಾವುದೇ ಪರಿಹಾರವನ್ನು ಕೊಡುತ್ತಾ ಇಲ್ಲ. ಒಳ್ಳೆಯ ಬೆಳೆ ಬೆಳೆಯ ಬೇಕಾದರೆ ಭೂಮಿಯಲ್ಲಿ ಒಂದು ಮಟ್ಟದಲ್ಲಿ ಶಾಖ ಇರಬೇಕಾಗುತ್ತದೆ. ಅನೇಕಲ್ಲು ಮಳೆ ಬಿದ್ದರೆ ಆ ಭೂಮಿಯು ಮಂಜುಗಡ್ಡೆಯ ಹಾಗೆ ಬೆಳ್ಳಗೆ ಆಗುತ್ತದೆ. ಅದನ್ನು ನಾನು ಕಣ್ಣಾರೆ ನೋಡಿದ್ದೇನೆ. ಹೀಗೆ ಬಿದ್ದ ವರ್ಷ ಮಾತ್ರವಲ್ಲ, ಮುಂದಿನ ವರ್ಷಗಳಲ್ಲಿಯೂ ಕೂಡ ಅಲ್ಲಿ ಬೆಳೆಯಾಗುವುದಿಲ್ಲ. ಪ್ರವಾಹ ಬಂದು ಮರಳು, ತುಂಬುವುದು ಇದ್ದ ಮಣ್ಣು ಕೊಚ್ಚಿಕೊಂಡು ಹೋಗುವುದು ಒಂದು ರೀತಿಯಾದರೆ, ಈ ರೀತಿಯಾಗಿ ಮಂಜುಗಡ್ಡೆ ಬಿದ್ದರೆ ಇನ್ನೊಂದು ರೀತಿಯಾಗಿ ತೊಂದರೆ ಹಾಗೂ ಹಾನಿಯನ್ನು ಉಂಟು ಮಾಡುತ್ತದೆ. ಇದಕ್ಕೂ ಕೂಡ ಯಾವುದೇ ಪರಿಹಾರವಿಲ್ಲ.

ಒಟ್ಟಿನಲ್ಲಿ ಜಲಾಶಯಗಳಿಂದ ನೀರನ್ನು ಬಿಡುವುದರಲ್ಲಿ ಅಧಿಕಾರಿಗಳು ಕರ್ತವ್ಯ ಲೋಪ ಮಾಡಿದ್ದಾರೆ, ಅಂಥವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲೇ ಬೇಕು ಇದಕ್ಕೆ ಕಾರಣವೇನು? ಕೃಷ್ಣರಾಜಸಾಗರದಲ್ಲಿ 124 ಅಡಿಗೆ ನೀರು ಏರಿರಲಿಲ್ಲ, 121 ಅಡಿ ಇದ್ದಾಗ ತಮಿಳುನಾಡಿಗೆ ನೀರು ಬಿಡಲು ಕಾರಣವೇನು? ಇದು ನಿಗೂಢವಾದದ್ದು ಹಾಸನದ ಜಿಲ್ಲಾಧಿಕಾರಿಗಳು ನಡೆದುಕೊಂಡಿರುವ ಬಗ್ಗೆ ವಿಚಾರಣೆ ಆಗಬೇಕಾಗಿದೆ. ಅಲ್ಲಿ ಉಸ್ತುವಾರಿ ಮಾಡುವ ಜಿಲ್ಲಾಧಿಕಾರಿಗಳನ್ನು ಬಿಟ್ಟು ಮೈಸೂರಿನಿಂದ ವಿಭಾಗಾಧಿಕಾರಿಗಳು ಹೋಗಿ ಜಿಲ್ಲಾಧಿಕಾರಿಗಳ ಕೆಲಸ ಮಾಡಬೇಕಾದರೆ ಜಿಲ್ಲಾಧಿಕಾರಿಗಳು ಇರಬೇಕಾದ ಅವಶ್ಯಕತೆ ಏನು? ಈ ಎಲ್ಲಾ ದೃಷ್ಟಿಯಿಂದ ಕರ್ತವ್ಯಲೋಪ ಯಾರ್‍ಯಾರು ಮಾಡಿದ್ದಾರೆ ಮತ್ತು ನೀರು ಬಿಡುವ ಬಗ್ಗೆ ಎಚ್ಚರಿಕೆ ಕೊಡುವುದರಲ್ಲಿ ಯಾರು ವಿಫಲರಾಗಿದ್ದಾರೆ ಅವರಿಗೆ ಶಿಕ್ಷೆ ಮಾಡಬೇಕಾದದ್ದು ಅವಶ್ಯಕ. ಮುಂದೆ ಈ ರೀತಿ ಆದರೆ ಏನೇನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂಬ ಬಗ್ಗೆ ಕಾನೂನಿನಲ್ಲಿ ತಿದ್ದುಪಡಿ ಮಾಡಬೇಕಾಗಿದ್ದರೆ ಅದನ್ನೂ ಸಹ ಮಾಡಬೇಕು. ಈ ಎಲ್ಲಾ ವಿಚಾರಗಳ ಬಗ್ಗೆ ಕೂಡ ನ್ಯಾಯಾಂಗ ತನಿಖೆ ನಡೆಸುವ ಮೂಲಕ ಸತ್ಯ ಹೊರತರಲು ಸಾಧ್ಯ. ಹಾಸನದ ಜಿಲ್ಲಾಧಿಕಾರಿಗಳು ಎಸಗಿರುವ ಕರ್ತವ್ಯಲೋಪ ಅಕ್ಷಮ್ಯವಾದುದು. ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವುದು ಅತಿ ಅವಶ್ಯಕ. ಈ ಕಾರಣಗಳಿಗಾಗಿ ನ್ಯಾಯಾಂಗ ತನಿಖೆ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಪ್ರಬಲವಾಗಿ ಒತ್ತಾಯ ಮಾಡಿ ನನ್ನ ಮಾತು ಮುಗಿಸುತ್ತೇನೆ.

+ ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಅಧ್ಯಕ್ಷಿಣಿಯವರೇ ಈ ಪ್ರವಾದ ಹಾನಿ ಬಗ್ಗೆ ನಾನೂ ಸಹ ನಾಲ್ಕು ಮಾತನಾಡಲು ಇಷ್ಟಪಡುತ್ತೇನೆ. ನಮ್ಮ ಚಿಕ್ಕಮಗಳೂರು ಜಿಲ್ಲೆ ಇತಿಹಾಸದಲ್ಲೇ ಈ ವರ್ಷ ಬಿದ್ದಷ್ಟು ಮಳೆ ಇನ್ನೆಂದೂ ಬಿದ್ದಿರಲಿಲ್ಲ, ನನಗೆ ತಿಳಿದಂತೆ 30 ವರ್ಷದ ಹಿಂದೆ ಈ ರೀತಿ ಮಳೆ ಬಿದ್ದಿದ್ದಂತೆ. ಕಡೂರಿನಲ್ಲಿ ಸುಮಾರು 328.40 ಎಂಎಂ ಮಳೆಯಾಗಿದ್ದರೆ ಕೊಪ್ಪದಲ್ಲಿ 2876.50 ಎಂಎಂ ಮಳೆಯಾಗಿದೆ, ಮೂಡಿಗೆರೆಯಲ್ಲಿ 2814.20 ಮಳೆಯಾದರೆ ಎನ್‌ಆರ್ ಪುರದಲ್ಲಿ 1525 ಎಂಎಂ ಮಳೆಯಾಗಿದೆ. ಇಷ್ಟು ಮಳೆ ಈ ವರ್ಷದಲ್ಲಿ ಬಿದ್ದಿದ್ದರಿಂದ ಎಷ್ಟೋ ನದಿಗಳು ತನ್ನ ಪಾತ್ರ ಬದಲಾಯಿಸಿ ಏರುಪೇರಾಗಿ ಸಾಕಷ್ಟು ಹಾನಿ ಮಾಡಿದೆ ಗದ್ದೆಗಳ ಮೇಲೆ ಹರಿದಿದೆ, ನದಿ ದಡಗಳೆಲ್ಲಾ ಕೊಚ್ಚಿಹೋಗಿವೆ. ಆದರೆ ನಮಗೆ ಬಂದಿರುವ ಪರಿಹಾರದ ಪ್ರಮಾಣ ನೋಡಿದರೆ ಬಹಳ ಕಮ್ಮಿ, ಸುಮಾರು 3 ಕೋಟಿಯಷ್ಟು ಇಡೀ ಜಿಲ್ಲೆಯಲ್ಲಿ ನಷ್ಟವಾಗಿದ್ದರೆ ನಮಗೆ ಬಂದಿರುವುದು ಕೇವಲ 30 ಲಕ್ಷ ಮಾತ್ರ ಇದರಲ್ಲಿ

Vol. VIII 60

ಒಂದೊಂದು ತಾಲ್ಲೂಕಿಗೆ ಅದರಲ್ಲೂ ವಿರೋಧಪಕ್ಷದ ನಾಯಕರು ಹೇಳಿದಂತೆ ಮೂಡಿಗೆರೆಗೆ 5 ಲಕ್ಷ ಕೊಪ್ಪಕ್ಕೆ 4 ಲಕ್ಷ ಚಿಕ್ಕಮಗಳೂರಿಗೆ 7 ಲಕ್ಷ ಕೊಟ್ಟಿದ್ದಾರೆ. ಇದರಲ್ಲಿ ಡಿಸ್‌ಪ್ಯಾರಿಟಿಯಾಗಿದೆ ಯೆಂದು ನಾನು ಸಚಿವರಿಗೆ ಮೊದಲೇ ತಿಳಿಸಿದ್ದೇನೆ. ಈಸಲ ಮಳೆಯಾಗಿರುವ ಅಂಕಿಅಂಶಗಳನ್ನು ನೋಡಿದರೆ ಎಲ್ಲಿ ಹೆಚ್ಚು ಮಳೆಯಾಗಿದೆ ಅಲ್ಲಿ ಹೆಚ್ಚು ಹಾನಿಯಾಗಿದೆ. ಪ್ರವಾಹ ಉಕ್ಕಿದ ಕಡೆ ಪರಿಹಾರ ಕೊಡುವ ಬದಲು ಬೇರೆ ಎಲ್ಲೋ ಯಾರದೋ ಒಂದು ಪ್ರೆಷರ್‌ಗೆ ಒಳಗಾಗಿ ಕೊಟ್ಟ ಹಾಗೆ ಇದೆ. ಅದು ಆಗಬಾರದು. ಜಾಸ್ತಿ ಹಾನಿಯಾಗಿರುವ ಪ್ರದೇಶ ತಾಲ್ಲೂಕುಗಳಿಗೆ ಹೆಚ್ಚು ಪರಿಹಾರ ಒದಗಿಸಲು ತಕ್ಷಣ ಆದೇಶವನ್ನು ಜಿಲ್ಲಾಧಿಕಾರಿಗಳಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಳೆ ಹಾನಿಯಿಂದ ಆದ ಬೆಳೆಗಳ ನಷ್ಟ ಅಷ್ಟಿಷ್ಟಲ್ಲ ನಾಟಿ ಮಾಡಿದ್ದು ಮರಳಿನಿಂದ ಮುಚ್ಚಿಹೋಗಿಬಿಟ್ಟಿದೆ. ನಾಟಿ ಮಾಡದೇ ಇರುವ ಗದ್ದೆಯ ಮೇಲೂ ಸಹ ಎರಡು ಮೂರು ಅಡಿಗಳಷ್ಟು ಮರಳು ಕೂತಿದೆ, ಅದನ್ನು ತೆಗೆಯಲು ಎಕರೆಗೆ 300 ರಿಂದ 400 ರೂ ಕೊಟ್ಟರೆ ಹೇಗೆ ಬಡ ರೈತ ಎರಡು ಲಾರಿ ಮೂರು ಲಾರಿಯಷ್ಟು ಮರಳು ತೆಗೆಸಬೇಕಾದರೆ ಎಷ್ಟು ಖರ್ಚಾಗುತ್ತದೆ ಎಂಬುದನ್ನು ತಾವೇ ಯೋಚನೆ ಮಾಡಿ. ಉದಹಾರಣೆಗೆ ಮೂಡಿಗೆರೆ ತಾಲ್ಲೂಕಿನಲ್ಲಿರುವ ಕುದುರೆಮುಖ ಏರಿಯಾದಲ್ಲಿ ಒಂದು ಲಕ್ಯಾ ಡ್ಯಾಮಿದೆ. ಕುದುರೆ ಮುಖದಲ್ಲಿ ಐರನ್ ಓರ್ ತೆಗೆಯಲು ಮಣ್ಣನ್ನು ಬ್ಲಾಸ್ಟ್ ಮಾಡುತ್ತಾರೆ ಅಲ್ಲಿನ ಮಣ್ಣು ಮತ್ತು ಐರನ್ ಚೂರುಗಳು ಒಟ್ಟಿಗೆ ಬಂದು ಈ ಲಕ್ಯಾ ಡ್ಯಾಮಿಗೆ ಬೀಳುತ್ತದೆ. ಇದರಿಂದಾಗಿ ಆ ಡ್ಯಾಮಿನಲ್ಲಿ ನೀರು ತುಂಬಿ ಏಳೆಂಟು ಎಕರೆ ಮೇಲೆ ಆ ನೀರು ಹರಿದಿದೆ, ಇದರಿಂದ ಜೀವನಪರ್ಯಂತ ಆ ಗದ್ದೆಯಲ್ಲಿ ನಾಟಿ ಮಾಡಲು ಆಗುವುದಿಲ್ಲ ಏಕೆಂದರೆ ಮರಳು ಮತ್ತು ಐರನ್ ತುಂಡುಗಳು ಅದರಲ್ಲಿ ಮಿಕ್ಸಾಗಿ ಬಿಟ್ಟಿದೆ.

5-30 ಪಿಂಎಂ

ಅವನು ಹೇಗೆ ಗದ್ದೆಯನ್ನು ಮಾಡುವುದ್ಕೆ ಆಗುತ್ತದೆ? ಇವರು ಕೊಟ್ಟಿರುವ ಪರಿಹಾರವಾದರೂ ಏನು? 300 ರೂಪಾಯಿಯಲ್ಲಿ ಪುನಃ ಒಂದು ಎಕರೆ ಎರಡು ಎಕರೆ ಮೇಲೆ ಮಣ್ಣು ಮತ್ತು ಕಬ್ಬಿಣದ ಅಂಶ ಕೂತಿದೆಯೆಲ್ಲಾ ಅದನ್ನು ತೆಗೆದು ನಾಟಿ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನುವುದನ್ನು ತಾವು ಯೋಚನೆ ಮಾಡಬೇಕು ಇಂಥ ಕಡೆಗೆ ನಾರ್ಮ್ಸ್ ಏನು ಇದೆ ಇಷ್ಟಕ್ಕೆ ಇಷ್ಟನ್ನು ಕೊಡಬೇಕು ಸಾವಿರ ರೂಪಾಯಿ ನಷ್ಟವಾಗಿದ್ದರೆ 25 ಪರ್‌ಸೆಂಟ್ ಕೊಡಬೇಕು ಎಂದು ಇದೆಯೆಲ್ಲಾ ಅದನ್ನೆಲ್ಲಾ ತೆಗೆದುಹಾಕಿ ಹೆಚ್ಚಿನ ಒಂದು ಪರಿಹಾರವನ್ನು ಕೊಡುವುದಕ್ಕೆ ನಿಮ್ಮ ಕಾಲದಲ್ಲಾದರೂ ಪ್ರಯತ್ನವನ್ನು ಮಾಡಿ. ಜೊತೆಗೆ ಕೇಂದ್ರ ಸರ್ಕಾರದ ಏನು ಒಂದು ನಾರ್ಮ್ಸ್ ಇದೆ ಈ ಪ್ರವಾಹ ಪರಿಹಾರವಾಗಲಿ ಪ್ರಕೃತಿಯ ವಿಕೋಪಕ್ಕೆ ಸಿಕ್ಕಿದಾಗ ನೀವು ಕೊಡುವ ಒಂದು ಪರಿಹಾರ ಇದೆಯಲ್ಲಾ ಅದರ ನಾರ್ಮ್ಸ್‌ನ್ನು ಬದಲಾಯಿಸುವುದಕ್ಕೆ ನೀವು ಶಿಫಾರಸ್ಸನ್ನು ಮಾಡಿ. ಅದರಿಂದ ತುಂಬಾ ಜನರಿಗೆ ಅನುಕೂಲವಾಗುತ್ತದೆ ಇದರ ಜೊತೆಗೆ ಇನ್ನೊಂದು ಹೇಳಿದರೆ ನಮ್ಮಲ್ಲಿ ಸುಮಾರು 53 ಲಕ್ಷಕ್ಕಿಂತ ಅಷ್ಟು ಬೆಳೆ ಹಾನಿಯಾಗಿದೆ. ಕೊಟ್ಟಿರುವುದನ್ನು ನಾವು ಈಗ ಹಂಚಿರುವುದು ಸುಮಾರು ಐದು ಲಕ್ಷ ಇಡೀ ಜಿಲ್ಲೆಯಲ್ಲಿ ಹಂಚಿದ್ದೇವೆ. ಅದರಲ್ಲಿಯೂ ನನ್ನ ಕ್ಷೇತ್ರದಲ್ಲಿ ಇವತ್ತು ಒಂದು ಲಕ್ಷ ಚಿಲ್ಲರೆಯನ್ನು ಹಂಚಿದ್ದಾರೆ. ಸುಮಾರು ನಾಲ್ಕು ಲಕ್ಷದಷ್ಟು ಬೆಳೆ ನಾಶವಾಗಿದೆ. ಉಳಿದವರು ದಿನಾ ಮನೆಗೆ ಬರುತ್ತಾರೆ. ನಾನು ಮನೆಗೆ ಹೋದರೆ ಸಾಕು ಪ್ರತಿಯೊಬ್ಬರೂ ಅರ್ಜಿಯನ್ನು ಹಿಡಿದುಕೊಂಡು ಬರುತ್ತಾರೆ. ನಮಗೆ ಪರಿಹಾರ ಸಿಕ್ಕಿಲ್ಲ ನಾವು ಏನು ಮಾಡಬೇಕು ನಮ್ಮ ಪರಿಸ್ಥಿತಿ ಏನು ಎಂದು ಕೇಳುತ್ತಾರೆ. ನಾನು ಮೊನ್ನೆ ಮಾನ್ಯ ಮಂತ್ರಿಗಳಲ್ಲಿ ಈ ಪ್ರಸ್ತಾವನೆಯನ್ನು ಮಾಡಿದಾಗ ಎರಡನೇ ಕಂತನ್ನು ಕೂಡಲೇ ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದರು. ಆದರೆ ಇನ್ನು ಕೂಡಾ ಬಿಡುಗಡೆ ಆಗಿಲ್ಲ. ಅವರ ಗತಿ ಏನಾಗಬೇಕು? ಈಗಾಗಲೇ ನಾಟಿ ಕಾಲ ಮುಗಿಯುತ್ತಾ ಬಂತು. ನಮ್ಮ ಅದೃಷ್ಟವೇನೋ ಸ್ವಲ್ಪ

ಸ್ವಲ್ಪ ಮಳೆ ಬೀಳುತ್ತಿದೆ. ನಾನು ಮಾತನಾಡುವಾಗ ಮಾನ್ಯ ಭೈರೈಗೌಡರಿಗೆ ಹೇಳಿದೆ. ನಮ್ಮಲ್ಲಿ ಇನ್ನೂ ಮಳೆ ಆಗುತ್ತಿದೆ ಎಂದು. ಈ ಸಂದರ್ಭದಲ್ಲಿ ಏನಾದರೂ ಕೊಟ್ಟಿದ್ದೇ ಆದರೆ ಅವರಿಗೆ ಹೆಚ್ಚು ಅನುಕೂಲವಾಗುತ್ತದೆ. ಇದರ ಜೊತೆಗೆ ಸ್ವಲ್ಪ ಗೊಬ್ಬರ ಮತ್ತು ಬೀಜದ ಭತ್ತವನ್ನು ಕೊಟ್ಟಿದ್ದಾರೆ. ಅದು ಎಷ್ಟರಮಟ್ಟಿಗೆ ಅವರಿಗೆ ಅನುಕೂಲವಾಗುತ್ತದೆ ಎನ್ನುವುದನ್ನು ನಾವು ಕಾದು ನೋಡಬೇಕಾಗುತ್ತದೆ. ಏಕೆಂದರೆ ನೀವು ಪರಿಹಾರವನ್ನು ಕೊಟ್ಟರೆ ಅವರು ಮರಳನ್ನು ಎತ್ತಿಹಾಕಿಸಿ ಮತ್ತೆ ಉಳುಮೆ ಮಾಡಿ ನಾಟಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದಲ್ಲದೇ ಈ ರಸ್ತೆಗಳ ಬಗ್ಗೆ ಹೇಳಿದರೆ ನಿಜವಾಗಿಯೂ ಅದು ಹೇಗೆ ಎಂದು ಹೇಳುವುದಕ್ಕಾಗುವುದಿಲ್ಲ ನಿಮಗೆಲ್ಲಾ ಮನಸ್ಸಿಗೆ ಇದರ ಬಗ್ಗೆ ಹೇಗೆ ಅನಿಸುತ್ತದೆಯೋ ಗೊತ್ತಾಗುವುದಿಲ್ಲ. ಏಕೆಂದರೆ ಒಂದು ದಿನಕ್ಕೆ ಏನಿಲ್ಲಾ ಅಂದರೆ ಇವತ್ತು ಮೂವತ್ತಿಂಚು ಮಳೆ ಬಿದ್ದರೆ ನೆಲ ಎಷ್ಟು ಒದ್ದೆಯಾಗುಬಹುದು ಎಷ್ಟು ಕುಸಿಯಬಹುದು ಎನ್ನುವುದನ್ನು ತಾವೇ ಲೆಕ್ಕ ಹಾಕಬೇಕು. ಈ ಘಾಟ್ ರಸ್ತೆಯಲ್ಲಂತೂ ಅರ್ಧಕ್ಕೆ ಗುಡ್ಡಗಳು ಕುಸಿದಿದೆ. ಅದರ ಜೊತೆಗೆ ದೊಡ್ಡ ದೊಡ್ಡ ಮರಗಳೂ ಬಿದ್ದುಹೋಗಿದೆ. ಇನ್ನು ಶಿರಾಡಿ ಘಾಟನ್ನು ನೋಡಬೇಕು ನಮ್ಮ ಚಾರ್ಮುಡಿ ಘಾಟ್ ಅಂತೂ ಮೂರು ತಿಂಗಳು ಬಂದ್ ಆಗಿತ್ತು. ಈಗಲೂ ಚಾರ್ಮುಡಿ ಘಾಟ್‌ನಲ್ಲಿ ಮನುಷ್ಯರಾದವರು ಅಡ್ಡಾಡುವ ಹಾಗೆಯೇ ಇಲ್ಲ ಮಂತ್ರಿಗಳೇನಾದರೂ ಚಾರ್ಮುಡಿ ಘಾಟ್‌ನಲ್ಲಿ ಮಂಗಳೂರಿಗೆ ಪ್ರಯಾಣ ಮಾಡಿದರೆ ತಮಗೆ ಗೊತ್ತಾಗುತ್ತದೆ. ಸೊಂಟಾಗಿಂಟ ನೋವು ಬಂದರೆ ನಿಮಗೆ ಗೊತ್ತಾಗೂತ್ತದೆ. ಹೌದು. ರಸ್ತೆಗಳಿಗೆ ನಾವು ರಿಪೇರಿಗೆ ಸಾಕಷ್ಟು ಹಣವನ್ನು ಕೊಡಬೇಕು ಎಂದು ಹೇಳಿ ಗೊತ್ತಾಗುತ್ತದೆ.

ಇವರು ಕೊಟ್ಟಿರುವ 30 ಲಕ್ಷದಲ್ಲಿ ಒಂದು ಬಿಡಿಕಾಸು ಸಹಾ ಕೊಟ್ಟಿಲ್ಲ ಪಿ.ಡಬ್ಲ್ಯೂ.ಡಿ ರಸ್ತೆಗಳನ್ನು ರಿಪೇರಿ ಮಾಡುವುದಕ್ಕೆ ಪರಿಸ್ಥಿತಿ ಏನಾಗಬೇಕು? ಜೊತೆಗೆ ನಾನು ಹೇಳಿದ ಹಾಗೆ ಕುದುರೆಮುಖ ಮತ್ತು ಕೊಟ್ಟಿಗೆಹಾರ್ ರಸ್ತೆ ಅದು ಬಹಳ ಪ್ರಮುಖವಾದ ರಸ್ತೆ ಕುದುರೆಮುಖ ಪ್ರಾಜೆಕ್ಟ್‌ಗೆ ಸಾಕಷ್ಟು ಪ್ರಯಾಣಿಕರು ಆ ಕಡೆ ಹೋಗುತ್ತಾರೆ. ನಮ್ಮದೇ ಐದಾರು ಸರ್ಕಾರಿ ಬಸ್‌ಗಳು ಓಡಾಡುತ್ತವೆ. ಒಂದು ಕಡೆ ರಸ್ತೆ ಕೆಳಗಡೆ ಸೈಡ್ ಕುಸಿಯುತ್ತಿದೆ. ಟಾರ್ ರಸ್ತೆಗಳೇ ಕೆಳಗಡೆ ಕುಸಿದಿದೆ. ಇದುವರೆಗೂ ಇದರ ಬಗ್ಗೆ ರಿಪೇರಿಗೆ ಇದನ್ನು ತೆಗೆದುಕೊಂಡಿಲ್ಲ ಏಕೆಂದರೆ ಪಿ.ಡಬ್ಲ್ಯೂ.ಡಿ ಇಲಾಖೆಯಲ್ಲಿ ರಿಪೇರಿಗೆ ಅವರ ಹತ್ತಿರ ದುಡ್ಡು ಇಲ್ಲ. ಪ್ರವಾಹ ಪರಿಹಾರದಲ್ಲಿ ಒಂದು ಪೈಸೆಯನ್ನು ಇವರು ಕೊಟ್ಟಿಲ್ಲ ಏನು ಮಾಡಬೇಕು? ನಾನಂತೂ ಕಳಸ ,ಕುದುರೆಮುಖ ಏರಿಯಾಗೆ ಹೋಗುವ ಹಾಗೆ ಇಲ್ಲ. ಜೊತೆಗೆ ಕಂದಾಯ ಮಂತ್ರಿಗಳನ್ನು ಏನಾದರೂ ಅಲ್ಲಿ ಗಲಾಟೆ ಮಾಡಿದರೆ ಅವರನ್ನು ರಕ್ಷಣೆಗೆ ಕರೆದುಕೊಂಡು ಹೋಗಬೇಕೋ ಏನೋ ಆ ಪರಿಸ್ಥಿತಿ ಬಂದಿದೆ. ಒಂದು ಸಾರಿ ಇದೆಲ್ಲಾ ಆದಮೇಲೆ ನೀವು ಆ ಕಡೆಯ ಭಾಗದಲ್ಲಿ ಪ್ರವಾಸ ಮಾಡಿದರೆ ಒಳ್ಳೆಯದು ಎಂದೆನಿಸುತ್ತದೆ. ಇನ್ನು ಸಕಲೇಶಪುರ ಮೂಡಿಗೆರೆ ರಸ್ತೆಯ ಬಗ್ಗೆಯೂ ಹಾಗೆಯೇ ಆಗಿದೆ. ಅಲ್ಲಿ ಚರಂಡಿ ಎಲ್ಲಿದೆ ರಸ್ತೆ ಎಲ್ಲಿದೆ ಎನ್ನುವುದು ಗೊತ್ತಾಗುತ್ತಿಲ್ಲ. ಏಕೆಂದರೆ ಮರಳೆಲ್ಲಾ ಚರಂಡಿಯಲ್ಲಿ ಬಂದು ಚರಂಡಿಯಲ್ಲೇ ಕುಳಿತುಬಿಟ್ಟಿದೆ. ಪಿ.ಡಬ್ಲ್ಯೂ.ಡಿ ಅವರು ಈ ಚರಂಡಿಯನ್ನು ಬಿಡುಸುತ್ತಿರಲಿಲ್ಲಾ ಅಷ್ಟು ವರಸ್ಟ್ ಕಂಡೀಷನ್‌ನಲ್ಲಿದೆ. ಅದಕ್ಕೆ ನಾನು ಈ ರಸ್ತೆ ರಿಪೇರಿಗೆ ನೀವು ಸಾಕಷ್ಟು ಹಣವನ್ನು ಕೊಡಬೇಕಾಗುತ್ತದೆ ಎಂದು ಹೇಳುತ್ತೇನೆ ಮುಖ್ಯವಾಗಿ ಕೆಲವು ಕಡೆ ಇರುವ ಮೋರಿಗಳು ಕೂಡ ಕಟ್ ಆಗಿದೆ. ಆಮೇಲೆ ಮೇಜರ್ ಬ್ರಿಜಸ್ ಕೂಡ ಕೆಲವುಗಳು ಕೊಲಾಪ್ಸ್ ಆಗಿದೆ. ಅಂಥ ಕಡೆಗೆ ಅಂಥದ್ದನ್ನು ರಿಪೇರಿ ಮಾಡುವುದಕ್ಕೆ ಏನು ಹಣವನ್ನು ಕೇಳಿದ್ದಾರೆ ಅಷ್ಟು ಹಣವನ್ನಾದರೂ ಕೊಟ್ಟರೆ ಒಳ್ಳೆಯದಾಗುತ್ತದೆ. ಜೊತೆಗೆ ಈ ರೀಪೇರಿಯನ್ನು ಮಾಡಿದರೆ ಆ ಭಾಗದ ಜನರಿಗೆ ನೀವು ಉಪಕಾರವನ್ನು ಮಾಡಿದಂತಾಗುತ್ತದೆ. ಇದಲ್ಲದೇ ಕಟ್ಟಡಗಳ ಸ್ಥಿತಿಯಂತೂ ಹೇಳಲಿಕ್ಕೆ ಸಾಧ್ಯವಿಲ್ಲ ನಾವು ಪ್ರತಿ ಮಳೆಗಾಲದಲ್ಲಿಯೂ ಮಳೆ ಬಂದು ಬಂದು ಎಲ್ಲಾ ಗೋಡೆಗಳೂ ಒದ್ದೆಯಾಗಿದೆ. ಎಲ್ಲಾ ಹಸಿರು ಪಾಚಿ ಕಟ್ಟಿ ಬಿಟ್ಟಿದೆ ಯಾರಾದರೂ ಅಕಸ್ಮಾತ್ ನೀವು ಆ ಕಡೆಗೆ ಹೋದರೆ ಮನುಷ್ಯರು ಒಳಗಡೆ ಅದರಲ್ಲಿ ವಾಸವಾಗಿದ್ದಾರೆಯೇ ಎಂದು

ನೆನೆಸುವುದಕ್ಕೂ ಸಾಧ್ಯವಿಲ್ಲ ಅದರ ಮೇಲೆ ಹುಲ್ಲು ಕೂಡಾ ಬೆಳೆದುಬಿಟ್ಟಿದೆ. ಈ ರೀತಿ ವರಸ್ಟ್ ಕಂಡೀಷನ್‌ನ್ನಲ್ಲಿ ಕೆಲವು ಕಟ್ಟಡಗಳೆಲ್ಲಾ ಬಿದ್ದುಹೋಗಿದೆ ಸುಮಾರು ನಾಲ್ಕು ಶಾಲೆಗಳು ನನ್ನ ಕ್ಷೇತ್ರದಲ್ಲಿ ಬಿದ್ದುಹೋಗಿದೆ. ಬೆಟ್ಟದ ಮನೆ ಶಾಲೆ ಎಂದು ಒಂದು ಹಳೆಯ ಕೋಟೆಯಲ್ಲಿ ಒಂದು ಶಾಲೆ ಬಿದ್ದು ಹೋಗಿದೆ. ಇನ್ನು ದೇವರುಂದ ಎಂದು ಒಂದು ಮೂಲೆ. ಅಲ್ಲಿ ಶಾಲೆ ಇದ್ದು ಅದೂ ಕೂಡ ಬಿದ್ದುಹೋಗಿದೆ. ಈ ರೀತಿ ಗೋಡೆಗಳು ಬಿದ್ದಿರುವುದರಿಂದ ಮತ್ತೆ ಎಲ್ಲಿಯಾದರೂ ಕುಸಿದೀತು ಎಂದು ಹೇಳಿ ಆ ಮಕ್ಕಳಿಗೆ ಎಲ್ಲಿಯೋ ಶಾಲೆಯನ್ನು ಒಂದು ಭಾಗದಲ್ಲಿ ನಡೆಸುತ್ತಿದ್ದಾರೆ. ಆದರೆ ಕಟ್ಟಡಗಳ ರಿಪೇರಿಗೆ ಇವರು ಪ್ರವಾಹ ಪರಿಹಾರದಲ್ಲಿ ಒಂದು ಪೈಸೆಯನ್ನೂ ಕೊಟ್ಟಿಲ್ಲ ಹೀಗಿರಬೇಕಾದರೆ ನಾವು ಜನರಿಗೆ ಏನು ಉತ್ತರವನ್ನು ಹೇಳಬೇಕು ಅಥವಾ ಈ ಶಾಲೆಗಳನ್ನು ಎಲ್ಲಿಯಾದರೂ ನಡೆಸಬೇಕು? ಮಳೆ ಬೇರೆ ಬರುತ್ತದೆ. ಆದುದರಿಂಧ ನಾನು ಮಾನ್ಯ ಅಧ್ಯಕ್ಷಿಣಿಯವರೇ ತಮ್ಮ ಮೂಲಕ ಒತ್ತಾಯ ಮಾಡಿಕೊಳ್ಳುತ್ತಿದ್ದೇನೆ ಈ ಕೂಡಲೇ ನಮಗೆ ಸಾಕಷ್ಟು ಹಣವನ್ನು ಬಿಡುಗಡೆ ಮಾಡಬೇಕಾಗುತ್ತದೆ.

ಈಗ ಏನು ಮೂರು ಕೋಟಿ ರೂಪಾಯಿ ಅಲ್ಲಿ ಹಾನಿಯಾಗಿದೆ, ಅದಕ್ಕೆ ಕನಿಷ್ಟ ಪಕ್ಷ ಒಂದು ಕೋಟಿ ರೂಪಾಯಿಯನ್ನು ಎರಡು ಇನ್‌ಸ್ಟಾಲ್‌ಮೆಂಟಿನಲ್ಲಿ ಬಿಡುಗಡೆ ಮಾಡಿದರೆ ಸಾಕಷ್ಟು ಕೆಲಸಗಳನ್ನು ಮತ್ತು ಕಾಮಗಾರಿಗಳನ್ನು ಮಾಡಲು ಅನುಕೂಲವಾಗುತ್ತದೆ. ಮತ್ತು ಸತ್ತವರಿಗೆ ಪರಿಹಾರವನ್ನು ಕೊಡಬೇಕಾಗುತ್ತದೆ. ಮನುಷ್ಯರು ಅಂದರೆ ಎಲ್ಲರೂ ಒಂದೇ. ಆನೆ ತುಳಿತಕ್ಕೆ ಸಿಕ್ಕವರಿಗೆ ಪರಿಹಾರ ಕೊಡುವುದರ ಬಗ್ಗೆ ಹಿಂದೆ ನಾನು ಮಾತನಾಡಿದ್ದೇನೆ. ಒಂದು ರೀತಿ ಫ್ಲೈಟ್ ಅಪಘಾತದಲ್ಲಿ ಸತ್ತರೆ ಅವರಿಗೆ ಒಂದು ರೀತಿಯ ಪರಿಹಾರವನ್ನು ಕೊಡುತ್ತಾರೆ. ಅವರೇನು ಸೂಪರ್ ಹ್ಯೂಮನ್‌ಗಳೇನು? ನಮ್ಮ ರೈತರು ಸತ್ತರೆ ಅವರಿಗೆ ಕೊಡುವ ಪರಿಹಾರ ಏನೂ ಇಲ್ಲ. ಅವರೇನೂ ಮನುಷ್ಯರಲ್ಲವೇ? ಅವರಿಗೂ ಸರಿಯಾದ ಪರಿಹಾರವನ್ನು ಕೊಡಬೇಕು. 1990-91ರಲ್ಲಿ ನಮ್ಮಲ್ಲಿ ಫ್ಲೆಡ್ ಬಂದಾಗ ಸುಮಾರು 63 ಲಕ್ಷ ಪರಿಹಾರ ಕೊಟ್ಟಿದ್ದಾರೆ. ಅದು ಏನೂ ಸಾಲದು. ಇನ್ನೂ ಸುಮಾರು 19 ಲಕ್ಷ ರೂಪಾಯಿಗಳ ಪೆಂಡಿಂಗ್ ಬಿಲ್‌ಗಳು ಇವೆ. ಈ ಬಗ್ಗೆ ನಮ್ಮ ಜಿಲ್ಲಾಧಿಕಾರಿಯವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. ಇವರು ಪೆಂಡಿಂಗ್ ಬಿಲ್ಸ್ ಇಲ್ಲ ಎಂದು ಹೇಳುತ್ತಾರೆ. ಕೊಟ್ಟಿಗೆ ಹಾರ ಮತ್ತು ಧರ್ಮಸ್ಥಳಕ್ಕೆ ಹೋಗುವ ದಾರಿಯಲ್ಲಿ ಇರತಕ್ಕ ಕೆಲವು ಏರಿಯಾದಲ್ಲಿ ಒಂದು ಶಾಲೆ ಬಿದ್ದು ಹೋಯಿತು. ಆ ಶಾಲೆ ರಿಪೇರಿ ಮಾಡಿದ ಕಂಟ್ರಾಕ್ಟರ್‌ಗೆ ಇನ್ನೂ 2 ಲಕ್ಷ ರೂಪಾಯಿಯ ಬಿಲ್ ಪಾಸ್ ಮಾಡಿ ಕೊಟ್ಟಿಲ್ಲ. ಹಾಗೆಯೇ ಆನೂರು ಕೋಟೆ ಬಹಳ ಇಂಟೀರಿಯರ್ ಏರಿಯಾದಲ್ಲಿದೆ. ಅಲ್ಲಿ ರಸ್ತೆ ಕುಸಿದು ಹೋಗಿತ್ತು. ಅದಕ್ಕೆ ಒಂದು ಲಕ್ಷ ರೂಪಾಯಿಯನ್ನು ಅಪ್ರೂವಲ್ ಮಾಡಿದರು. ಆದರೆ ಇನ್ನೂ ಬಿಲ್ ಪಾಸ್ ಮಾಡಿ ಕೊಟ್ಟಿಲ್ಲ. ಈ ರೀತಿ 19 ಲಕ್ಷ ರೂಪಾಯಿಗಳ ಬಿಲ್ ಪೆಂಡಿಂಗ್ ಇದೆ. ದಯವಿಟ್ಟು ಈ ಹಣವನ್ನೂ ಕೂಡಲೇ ರಿಲೀಸ್ ಮಾಡಲು ತಾವು ಕ್ರಮ ಕೈಗೊಳ್ಳಬೇಕು. ಎಲ್ಲೆಲ್ಲಿ ಏನೇನು ಈ ಪ್ರವಾಹದಿಂದ ಆಗಿದೆ ಎಂಬುದರ ಬಗ್ಗೆ ನಾವು ವಿಡಿಯೋ ಕ್ಯಾಸೆಟ್ ಮಾಡಿದ್ದೇವೆ. ಅದರಲ್ಲಿ ಹೇಮಾವತಿಯಲ್ಲಿ ಪ್ರವಾಹ ಹೇಗೆ ಉಕ್ಕಿತು ಯಾವರೀತಿ ಸೋಮವಾಹಿನಿ ನದಿ ತನ್ನ ಪಾತ್ರವನ್ನು ಬದಲಾಯಿಸಿ , ರಸ್ತೆ ಮೇಲೆ ಹರಿದು ಹೇಗೆ ನಾಲ್ಕು ಮನೆಗಳು ಹಾಳಾಗಿ ಹೋದವು ಎಂದುದೆಲ್ಲಾ ಇದೆ. ಇವರು ಒಬ್ಬನಿಗೆ 5 ಸಾವಿರ ರೂಪಾಯಿಯನ್ನು ಪರಿಹಾರ ಕೊಟ್ಟಿದ್ದಾರೆ. ಅಲ್ಲಿ ಅವನು ಹೋಟೆಲ್ ಅನ್ನು ಇಟ್ಟುಕೊಂಡಿದ್ದನು. ಅವನ ಪಾತ್ರೆ , ಬಟ್ಟೆ ಬರೆ ಎಲ್ಲಾ ಕೊಚ್ಚಿಕೊಂಡು ಹೋಯಿತು. ಆದರೆ ಅವನು ಉಳಿದುಕೊಂಡಿದ್ದಾನೆ. ಯಾರೋ ರಸ್ತೆಯಲ್ಲಿ ಬರುತ್ತಿದ್ದರು. ಮೇಲಿಂದ ನೀರು ಒಂದೇ ಸಮನೆ ಬರುತ್ತಿತ್ತು. ಹಿಂದಿರುಗಿ ನೋಡಿದರೆ ನದಿ ಪ್ರವಾಹ ಹುಕ್ಕಿ ಬರುತ್ತಿತ್ತು. ಸೇತುವೆ ದಡದಲ್ಲಿದ್ದವರೆಲ್ಲರೂ ಓಡಿ ಹೋದರು. ಇದರಿಂದ ಜೀವ ಹಾನಿಯಾಗಲಿಲ್ಲ. ಇಂತಹದೆಲ್ಲವನ್ನೂ ವಿಡಿಯೋ ಕ್ಯಾಸೆಟ್ ಮಾಡಿ ಇಟ್ಟುಕೊಂಡಿದ್ದೇವೆ. ಬೇಕಾದರೆ ಮಾನ್ಯ ಕಂದಾಯ ಮಂತ್ರಿಗಳಿಗೆ ಆ ವಿಡಿಯೋ ಕ್ಯಾಸೆಟ್ ಅನ್ನು ಕೊಡುತ್ತೇನೆ.

ಪ್ರವಾಹದಿಂದ ಎಷ್ಟು ಹಾನಿಯಾಗಿದೆ ಎಂಬುದನ್ನು ತಾವು ಪರಿಶೀಲನೆ ಮಾಡಬೇಕು. 3 ಕೋಟಿ ರೂಪಾಯಿ ನಷ್ಟವಾಗಿದೆ. ಆದ್ದರಿಂದ ನಮಗೆ ಸಾಕಷ್ಟು ಪರಿಹಾರವನ್ನು ಒದಗಿಸಿಕೊಡಬೇಕೆಂದು ಕೇಳಿಕೊಂಡು ಮಾನ್ಯ ಉಪಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಅಧ್ಯಕ್ಷರೆ, ನಿಸರ್ಗ ವಿಕೋಪಕ್ಕಿಂತ ಸರ್ಕಾರಿ ವಿಕೋಪ ನಮಗೆ ಜಾಸ್ತಿಯಾಗಿದೆ. ನಿಸರ್ಗ ವಿಕೋಪದಿಂದ ಹಾನಿಯಾಗಿರುವುದನ್ನು ತುಂಬಿಕೊಳ್ಳಲು ಸಾಧ್ಯವಿಲ್ಲ. ನಾವು ಫಸ್ಟ್ ಏಡ್ ಸಹಾಯ ಮಾಡುವವರು ಮಾತ್ರ ಎಂದು ಮಾನ್ಯ ಮಂತ್ರಿಗಳು ಹೇಳಿದರು. ನಮಗೆ ಫಸ್ಟ್ ಏಡ್ ಪರಿಹಾರ ನಿಮ್ಮ ಸರ್ಕಾರದಿಂದ ಬೇಕಾಗಿಲ್ಲ. ನಿಮ್ಮ ಸರ್ಕಾರದಿಂದ ಏನು ನಮಗೆ ಹಾನಿಯಾಗಿದೆ ಅದನ್ನು ತುಂಬಿ ಕೊಡುತ್ತೀರಾ ಎಂದು ಕೇಳುತ್ತೇನೆ. ಯಾರೋ ಇಂಜಿನಿಯರ್ ಕೆರೆ ವೇಸ್ಟ್‌ವೇರ್ ಎಷ್ಟು ಕಟ್ಟಬೇಕು ಎಂಬ ಜ್ಞಾನವಿಲ್ಲದೆ ಕಟ್ಟಿದ ಕಾರಣ ಬಾದಾಮಿ ತಾಲ್ಲೂಕಿನ ಕೆರೆ ಖಾನಾಪುರ ಎಂಬ ಗ್ರಾಮದಲ್ಲಿ ಒಂದು ಕೆರೆಗೆ ವಿಪರೀತ ನೀರು ಬಂದು ರೈತರ ಪಟ್ಟ ಭೂಮಿ ಎಲ್ಲಾ ಮುಳುಗಿ ಹೋಯಿತು. ಸುಮಾರು 120 ಕುಟುಂಬಗಳ 300-350 ಎಕರೆ ಜಮೀನು ಹಾಳಾಗಿಹೋಯಿತು. ರೈತರು ಸಬ್ ಮರ್ಸಿಬಲ್ ಪಂಪ್ ಅನ್ನು ಹಾಕಿದ್ದರು. ಸಾಲ ಮಾಡಿ, 50 ಸಾವಿರ ರೂಪಾಯಿಯನ್ನು ಖರ್ಚು ಮಾಡಿ ಅಲ್ಲ ತೋಟ ಮಾಡಿಕೊಂಡಿದ್ದರು. ಯಾರೋ ಒಬ್ಬ ಇಂಜಿನಿಯರ್ ತಪ್ಪಿನಿಂದ ಇವತ್ತು ಆ 120 ಕುಟುಂಬಗಳು ಪ್ರತಿದಿವಸ ತಹಶೀಲ್ದಾರ್ ರವರ ಕಛೇರಿಗೆ, ಅಸಿಸ್ಟೆಂಟ್ ಕಮೀಷನರ್ ಮತ್ತು ನೀರಾವರಿ ಇಲಾಖೆಯ ಕಛೇರಿಗೆ ಅಲೆದಾಡುತ್ತಿದ್ದಾರೆ. ನಿಸರ್ಗಿಕ ವಿಕೋಪದ ಪರಿಹಾರ ನಮಗೆ ಬೇಕಾಗಿಲ್ಲ. ನೀವು ಸರ್ಕಾರದವರು ದಕ್ಷತೆಯಿಂದ ಕೆಲಸ ಮಾಡಲಿಲ್ಲ ಎಂಬ ಒಂದೇ ಕಾರಣದಿಂದ ನಾವು ಇವತ್ತು ಭಿಕಾರಿಗಳಾಗಿದ್ದೇವೆ ಎಂದು ಆ ರೈತರು ಎಲ್ಲರಿಗೂ ಪತ್ರ ಬರೆದಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಮಾನ್ಯ ಕಂದಾಯ ಮಂತ್ರಿಗಳಿಗೆ ಪತ್ರ ಬರೆದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ವೇಸ್ಟ್‌ವೇರ್ ಕಡಿಮೆ ಮಾಡಿ ನೀರನ್ನು ಖಾಲಿ ಮಾಡಿ, ನಮಗೆ ಸಬ್ ಮರ್ಸಿಬಲ್ ಪಂಪ್ ಗಳನ್ನು ಉಳಿಸಿಕೊಡಿ ಎಂದು ರೈತರು ಕೇಳಲಿಕ್ಕೆ ಹೋದರೆ, ಅದಕ್ಕೆ ಅವರು ನಮಗೆ ಸಂಬಂಧವಿಲ್ಲ, ನೀರಾವರಿ ಇಲಾಖೆಗೆ ಹೋಗಿ ಕೇಳಿ ವೇಸ್ಟ್‌ವೇರ್ ಕಡಿಮೆ ಮಾಡಲಿಕ್ಕೆ ಎಂದು ಹೇಳುತ್ತಾರೆ. ನೀರಾವರಿ ಇಲಾಖೆಯವರು ಇನ್ನೊಂದು ಇಲಾಖೆಯವರನ್ನು ಕೇಳಿ ಎನ್ನುತ್ತಾರೆ. ಇವರಿಗೆ ಪರಿಹಾರಬೇಕಾಗಿಲ್ಲ. ನಿಮ್ಮ ನೀರು ಖಾಲಿ ಮಾಡಿ, ನಮ್ಮ ಭೂಮಿ ಖಾಲಿ ಮಾಡಿಕೊಡಿ ಎಂದು ಕೇಳುತ್ತಿದ್ದಾರೆ. ಒಂದು ಇಲಾಖೆಯವರು ಇನ್ನೊಂದು ಇಲಾಖೆಗೆ ಕೈ ಮಾಡಿ ತೋರಿಸುವುದು ನಡೆದುಕೊಂಡು ಬರುತ್ತಿದೆ. ತಹಶೀಲ್ದಾರರ್ ಬಂದರು, ಅಸಿಸ್ಟೆಂಟ್ ಕಮೀಷನ್ನರ್ ಬಂದರು, ರಿಪೋರ್ಟ್ ಕೊಟ್ಟರು. ರೈತರ ಭೂಮಿ ಪಟ್ಟ ಭೂಮಿ , ಸುಮಾರು 300-350 ಎಕರೆ ಮುಳುಗಿದೆ. ಸಾಕಷ್ಟು ಸಬ್ ಮರ್ಸಿಬಲ್ ಪಂಪ್‌ಗಳು ಕೂಡ ಮುಳುಗಿ ಹೋಗಿವೆ. ಈಗ ಸ್ಟ್ಯಾಂಡಿಂಗ್ ಕ್ರಾಪ್ ಕೂಡ ಮುಳುಗಿ ಹೋಗಿದೆ. ಆದರೆ ಇದನ್ನು ಖಾಲ್ಲಾ ಯಾವ ರೀತಿಯಲ್ಲಿ ಮಾಡಬೇಕೆಂದು ತೋಚದೆ ಆ 120ಕುಟುಂಬಗಳನ್ನು ಭಿಕಾರಿಗಳನ್ನಾಗಿ ಮಾಡಿದ್ದಾರೆ. ಇದು ಯಾರ ಶಾಪ? ಈ ಕಾರಣದಿಂದ ಮಾನ್ಯ ಮಂತ್ರಿಗಳು ಇದರ ಕಡೆ ಕೂಡಲೇ ಗಮನ ಹರಿಸಿ ಅಲ್ಲಿ ಸರ್ಕಾರದ ತಪ್ಪಿನಿಂದ ಏನು ಅನ್ಯಾಯ ರೈತರಿಗೆ ಆಗಿವೆ ಅದನ್ನು ನಿವಾರಣೆ ಮಾಡಬೇಕಾಗಿದೆ. ವೇಸ್ಟ್‌ವೇರ್ ನ್ನು ಕಡಿಮೆ ಮಾಡಿ ಭೂಮಿಯನ್ನು ಖಾಲ್ಲಾ ಮಾಡಿಕೊಡಿ. ಬೆಳೆಯೆಲ್ಲಾ ನೀರಿನಿಂದ ಮುಳುಗಡೆಯಾಗಿ ನಾಶವಾಗಿದ್ದಕ್ಕೆ ಆ ಬೆಳೆಗೆ ಪರಿಹಾರ ಕೊಡಿ. ಇದು ರೈತರ ಒಂದು ಬೇಡಿಕೆಯಾಗಿದೆ. ಅವರಿಗೆ ನಿಮ್ಮ ಪರಿಹಾರ ಬೇಕಾಗಿಲ್ಲ. ಮಾನ್ಯ ಮಂತ್ರಿಗಳು ಇದನ್ನು ಖುದ್ದಾಗಿ ಹೋಗಿ ನೋಡಿದರೆ ಒಳ್ಳೆಯದು. ಇದರ ಬಗ್ಗೆ ಅಲ್ಲಿಯ ಡಿಸಿಯವರ ರಿಪೋರ್ಟ್ ಇದೆ. ಎಸಿಯವರ ರಿಪೋರ್ಟ್ ಕೂಡ ಇದೆ. ಅದನ್ನು ಬೇಕಾದರೆ ತೋರಿಸುತ್ತೇನೆ. ಧಾರವಾಡ ತಾಲ್ಲೂಕಿನಲ್ಲಿ ಒಂದು ಕೆರೆ ಒಡೆಯಿತು. ಕೆರೆ ಒಡೆದು ಅಮೀನಬಾವಿ ಎನ್ನುವ ಸ್ಥಳದಲ್ಲಿ ಸುಮಾರು 85 ಮನೆಗಳು ಒಂದೇ ಒಂದು ಗಂಟೆಯಲ್ಲಿ ಕೊಚ್ಚಿಕೊಂಡು

ಹೋದವು. ಆ ಸ್ಥಳಕ್ಕೆ ಯಾವುದೇ ಅಧಿಕಾರಿಗಳೂ ಹೋಗಲಿಲ್ಲ. ನಾವು ಸ್ವಲ್ಪ ಗಲಾಟೆ ಮಾಡಿದ ನಂತರ ಅವರು ಬಂದರು. ತಾತ್ಕಾಲಿಕವಾದ ಪರಿಹಾರವನ್ನು ಕೊಡಲು ಯಾವ ಅಧಿಕಾರಿಯೂ ಮುಂದೆ ಬಂದಿಲ್ಲ. ನಾನು ಎಲ್ಲಾ ಅಧಿಕಾರಿಗಳನ್ನು ದೂಷಿಸುತ್ತಿಲ್ಲ. ಕಾಗೆ ಕೋಳಿಗಳು ಸಹ ಅವರ ಜಾತಿಯವರಿಗೆ ಏನಾದರೂ ತೊಂದರೆಯಾದರೆ ಅವುಗಳನ್ನು ಮೇಲೆತ್ತುವ ಕೆಲಸವನ್ನು ಮಾಡುತ್ತವೆ. ಆದರೆ ಈ ಅಧಿಕಾರಿಗಳು ಕಾಗೆ ಕೋಳಿಗಳಿಗಿಂತ ಕಡಿಮೆಯೇ ಎನ್ನುವ ಭಾವನೆ ನಮಗೆ ಬಂದಿದೆ. ಭ್ರಷ್ಟಾಚಾರಕ್ಕಾಗಿ ಆ ರೆಕಾರ್ಡ್ ತೆಗೆದುಕೊಂಡು ಬಾ, ಈ ರೆಕಾರ್ಡ್ ತೆಗೆದುಕೊಂಡು ಬಾ, ಇವತ್ತು ಬಾ, ನಾಳೆ ಬಾ ಎಂದು ಜನರನ್ನು ಸತಾಯಿಸಿ, 8-10ದಿವಸವಾದ ಮೇಲೆ 500.ರೂ.ಗಳನ್ನು ಕೊಡುವಂಥ ಕೆಲಸ ಮಾಡಿದ್ದಾರೆ. ಇವತ್ತು 80-85ಮನೆಗಳು ಮುಳುಗಿ ಅವರು ನಿರ್ಗತಿಕರಾಗಿದ್ದಾರೆ. ಅವರೆಲ್ಲಾ ಹಿಂದುಳಿದ ಜಾತಿಯವರು. ಅವರ ಮನೆಗಳೆಲ್ಲಾ ಜನತಾ ಮನೆಗಳು. ಮಾನ್ಯ ಮಂತ್ರಿಯವರು ಒಂದು ವಿಶೇಷ ಕಾರ್ಯಕ್ರಮವನ್ನು ಹಾಕಿ ಅವರನ್ನು ಬೇರೆ ಕಡೆ ಶಿಫ್ಟ್ ಮಾಡುವ ಕೆಲಸ ಮಾಡಬೇಕಾಗಿದೆ. ಏಕೆಂದರೆ ಇಂದೋ ನಾಳೆಯೋ ಮತ್ತೆ ಕೆರೆಗಳು ಒಡೆದರೆ, ಮತ್ತೆ ಆ ಮನೆಗಳು ಹೋಗುತ್ತವೆ. ಯಾರೋ ಪುಣ್ಯಾತ್ಮರು ಇವರಿಗೆ ಮನೆಗಳನ್ನು ಇಂಥ ಜಾಗದಲ್ಲಿ ಕಟ್ಟಿಸಿಕೊಟ್ಟಿದ್ದಾರೆ. ಆ ಕಾರಣ, ಇವರಿಗೆ ಬೇರೆ ಸ್ಥಳಗಳನ್ನು ಕೊಟ್ಟು ಕನಿಷ್ಟ ಜನತಾ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಅಮೀನಭಾವಿ, ಧಾರವಾಡ ಜಿಲ್ಲೆಗೆ ಸಂಬಂಧಪಟ್ಟಿದ್ದುದು. ಇನ್ನು ರಸ್ತೆಗಳ ಬಗ್ಗೆ ಅನೇಕ ಸ್ನೇಹಿತರು ಮಾತನಾಡಿದ್ದಾರೆ. ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ಕೇವಲ ಸಾವಿರ ಚಿಲ್ಲರೆ ರೂ.ಗಳ ಕೆಲಸಕ್ಕಾಗಿ 500-600 ಮಕ್ಕಳು ಶಾಲೆಗೆ, ಕಾಲೇಜಿಗೆ ಸುಮಾರು ಒಂದು ತಿಂಗಳ ತನಕ ಹೋಗಲಿಲ್ಲ. ಇದರ ಬಗ್ಗೆ ಡಿಸಿಯವರಿಗೆ ಫೋನ್ ಮಾಡಿ ಕೇಳಿದೆ. ನೀವು ಸಾವಿರ ಚಿಲ್ಲರೆ ರೂ.ಗಳನ್ನು ಖರ್ಚು ಮಾಡಿ ಬಸ್‌ನ್ನು ಪ್ರಾರಂಭ ಮಾಡಿಸಿ. ಇಷ್ಟೂ ಮಾಡಿಸಿದ್ದರೆ ಹೇಗೆ ಎಂಬುದಾಗಿ ಕೇಳಿದೆ. ಸರ್ಕಾರಕ್ಕೆ ಬರೆದು ಹಣವನ್ನು ತರಿಸಿಕೊಳ್ಳಿ ಒಂದು ಸಹ ಹೇಳಿದೆ. ನಮಗೆ ಹಣ ಕೊಟ್ಟಿಲ್ಲ. ಫ್ಲಡ್ ಡ್ಯಾಮೇಜಿಗೆ ಕೊಡಲೂ ಸಹ ಹಣ ನಮ್ಮಲ್ಲಿ ಇಲ್ಲವೆಂದರು. ಹಾಗೂ ನಾವಲಗಟ್ಟಿ ಎನ್ನುವ ಗ್ರಾಮಕ್ಕೆ ಬಸ್ ಬಂದ್ ಮಾಡಿದ ಕಾರಣ 5ಗ್ರಾಮದ ಮಕ್ಕಳು ಒಂದು ತಿಂಗಳು ತನಕ ಶಾಲೆಗೆ ಹೋಗಲಿಲ್ಲ. ಖೋದಾಲ್‌ಪುರ್ ಹತ್ತಿರ ಒಂದು ಸಣ್ಣ ತೊಂದರೆಯಾಗಿತ್ತು. ಈವರೆಗೂ ಕೂಡ ಆ ಬಸ್ ಪ್ರಾರಂಭವಾಗಲಿಲ್ಲ. ಆ ಮಕ್ಕಳು ಶಾಲೆಗೆ ಹೋಗಲಿಲ್ಲ. ಮತ್ತೆ ವೀರಾಪುರ ಎಂಬ ಗ್ರಾಮ ಒಂದು ಇದೆ. ಇಲ್ಲಿ ಕೂಡ ಬಸ್ ಪ್ರಾರಂಭವಾಗದೇ ಮಕ್ಕಳು ಶಾಲೆಗೆ ಹೋಗಲಿಲ್ಲ. ಇದು ಕೇವಲ ಒಂದೆರಡು ಸಾವಿರ ರೂ.ಗಳ ಕೆಲಸ., ಅಷ್ಟೇ. ಇಷ್ಟೂ ಮಾಡದ ಸರ್ಕಾರ ಬಹುತೇಕ ದೊಡ್ಡ ಕೆಲಸಗಳನ್ನು ಮಾಡುತ್ತದೆ ಎಂಬ ನಂಬಿಕೆ ನಮಗೆ ಇಲ್ಲ. ಆದ್ದರಿಂದ ಈ ಫ್ಲಡ್ ಡ್ಯಾಮೇಜ್ ಕೆಲಸಕ್ಕಾಗಿ ತಾತ್ಕಾಲಿಕ ಪರಿಹಾರವನ್ನು ಕೊಡುವುದಕ್ಕೆ ಸರ್ಕಾರ ಒಂದು ಯೋಜನೆಯನ್ನು ರೂಪಿಸುವುದು ಉತ್ತಮ ಎಂದು ಹೇಳಬಯಸುತ್ತೇನೆ. ಇನ್ನು ನಮ್ಮ ಮಲಪ್ರಭಾ ರಿಸರ್‌ವಾಯರ್ ಪೂರ್ತಿಯಾಗಿ ತುಂಬಿ ಹರಿದ ಕಾರಣ, ಅಲ್ಲಿರುವಂಥ ರೈತರ ಪಟ್ಟಾ ಭೂಮಿ ಮುಳುಗಡೆಯಾಗಿದೆ. ಇಲ್ಲಿ ಸುಮಾರು 20ಗ್ರಾಮಗಳ ರೈತರಿಗೆ ಇರುವಂಥ ಒಂದೆರಡು ಎಕರೆ ಭೂಮಿ ಕೂಡ ಮುಳುಗಡೆಯಾಗಿದೆ. ಇನ್ನು ನವಿಲು ತೀರ್ಥ ರಿಸರ್ ವಾಯರ್ ನಿಂದ ಮುಳುಗಡೆಯಾಗುವ ಪ್ರದೇಶವಲ್ಲದೆ , ಸುಮಾರು 20ಗ್ರಾಮದ ಪಟ್ಟಾ ಭೂಮಿಯೂ ಸಹ ಇವತ್ತು ಮುಳುಗಡೆಯಾಗಿದೆ. ರೈತರು ಎಷ್ಟು ಕೇಳಿಕೊಂಡರೂ ಅಧಿಕಾರಿಗಳು ಅವರಿಗೆ ಪರಿಹಾರವನ್ನು ಒದಗಿಸಿಕೊಟ್ಟಿಲ್ಲ. ಇಂಥ ಅನೇಕ ಸಮಸ್ಯೆಗಳನ್ನು ಹೊತ್ತು ತಿರುಗುತ್ತಿರುವ ರೈತರನ್ನು ಪ್ರತಿ ದಿವಸ ಕಷ್ಟಕ್ಕೆ ಸಿಕ್ಕಿಸದೆ , ಸರ್ಕಾರ ರಾಜ್ಯಾದ್ಯಾಂತ ಸರ್ವೆ ಮಾಡಿಸಿ ಅವರಿಗೆ ಪರಿಹಾರವನ್ನು ಒದಗಿಸಿಕೊಡಬೇಕೆಂದು ಮಾನ್ಯ ಮಂತ್ರಿಯವರನ್ನು ಕೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ನಾನು ಈ ವಿಚಾರದಲ್ಲಿ ಹೆಚ್ಚು ಮಾತನಾಡಲು ಬಯಸುವುದಿಲ್ಲ. ಒಂದೆರಡು ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡಬಯಸುತ್ತೇನೆ. ಬಹಳ ಮುಖ್ಯವಾಗಿ ಈ ಒಂದು ತತ್ವದ ವಿಚಾರವನ್ನು ನಾನು ಈ ಸದನದಲ್ಲಿ ಪ್ರಸ್ತಾಪ ಮಾಡಲು ಬಯಸುತ್ತೇನೆ. ಪ್ರಕೃತಿ ವಿಕೋಪ ಉಂಟಾಗಿ ಹಾನಿಯಾದಂಥ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಗಳಿಗೆ ಕೊಡತಕ್ಕಂಥ ಅನುದಾನ ಏನಿದೆ, ಆ ನೀತಿ ಸರಿಯಲ್ಲಿ ಎನ್ನತಕ್ಕಂಥಾದ್ದು ನನ್ನ ಅಭಿಪ್ರಾಯ. ಈ ನೀತಿಯನ್ನು ಬದಲಾವಣೆ ಮಾಡಲಿಕ್ಕೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಬೇಕು ಎನ್ನತಕ್ಕಂಥಾದ್ದು ನನ್ನ ಅಭಿಪ್ರಾಯ. ಕಾರಣ, ಈಗ ಅವರು ಒಂದು ಲಿಮಿಟ್ ಅನ್ನು ಫಿಕ್ಸ್ ಮಾಡಿಕೊಂಡಿದ್ದಾರೆ. ಆದ್ದರಿಂದ ಆ ಲಿಮಿಟ್ ಮೇಲೆ ಕೊಡಲಿಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತಿದ್ದೇನೆ. ದೆಹಲಿಯಿಂದ ದೂರ ಇರತಕ್ಕಂಥ ಜನರು ಯಾರಿದ್ದಾರೆ, ಇವರ ಕೂಗು ಅವರಿಗೆ ಕೇಳಿಸುವುದಿಲ್ಲ. ವಿಶೇಷವಾಗಿ ನಮ್ಮ ರಾಜ್ಯದ ಬಗ್ಗೆ ಮಾತನಾಡಬೇಕೆಂದು ಹೇಳಿದಾಗ ನಮ್ಮ ರಾಜ್ಯ ಸರ್ಕಾರ ಈ ದೃಷ್ಟಿಯಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎನ್ನತಕ್ಕಂಥ ಮಾತನ್ನು ನಾನು ಹೇಳಬೇಕಾಗಿದೆ. ಈಗ ಮಾನ್ಯ ಖರ್ಗೆಯವರು ಪ್ರವಾಹದಿಂದ 133 ಜನ ಸತ್ತಿದ್ದಾರೆಂದು ಹೇಳಿಕೆ ಕೊಟ್ಟಿದ್ದಾರೆ. ಸುಮಾರು 12 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ ಎನ್ನತಕ್ಕಂಥ ಅಂದಾಜನ್ನು ಅಧಿಕಾರಿಗಳು ಕೊಟ್ಟಿರತಕ್ಕಂಥ ಪಟ್ಟಿಯನ್ನು ಈ ಸದನದ ಮುಂದೆ ಮಾನ್ಯ ಸಚಿವರು ಮಂಡಿಸಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಇದು 12 ಕೋಟಿಗಿಂತಲೂ ಜಾಸ್ತಿ ಇದೆ. ಈಗ ಇರತಕ್ಕ ತಹಶೀಲ್ದಾರರುಗಳೇ ಅಸಿಸ್ಟೆಂಟ್ ಕಮೀಷನರ್‌ಗಳೇ ನಾವು ಸರ್ಕಾರದಲ್ಲಿ ಇದ್ದಾಗಲೂ ಇದ್ದರು. ನಿಮ್ಮ ಸರ್ಕಾರದಲ್ಲೂ ಅವರೇ ಇರುವವರು. ನಾವು ಜಿಲ್ಲಾಧಿಕಾರಿಗಳಿಗೆ ನೀವು ಹೋಗಿ ತಿಳಿದುಕೊಂಡು ಬನ್ನಿ ಎಂದು ಸೂಚನೆ ಕೊಡುತ್ತೇವೆ. ಒಂದು ಮಾತನ್ನು ಮಾನ್ಯ ಸದಸ್ಯರಾದ ಶ್ರೀ ಬಾಬುಗೌಡ ಪಾಟೀಲ್ ರವರು ಮತ್ತು ಶ್ರೀಮತಿ ಮೋಟಮ್ಮನವರು ಹೇಳಿದರು. ನಾನು ಹಿಂದೆ ಮಂತ್ರಿಯಾಗಿದ್ದಾಗ ಹೋಗಿ ನೋಡಿದ್ದೇನೆ. ವಿಶೇಷವಾಗಿ ಎಲ್ಲಿ ಪ್ರವಾಹದಿಂದ ಕೆರೆ ಕಟ್ಟೆ ಕುಂಟೆಗಳು ಒಡೆಯುತ್ತವೆ ಅಂತಹ ಪ್ರದೇಶಗಳ ಕೆಳಗಡೆ ಕೃಷಿ ಮಾಡತಕ್ಕಂಥ ಪ್ರದೇಶ ಸಂಪೂರ್ಣವಾಗಿ ಹಾಳಾಗಿ ಹೋಗುತ್ತದೆ. ಅದನ್ನು 4-5 ವರ್ಷಗಳ ಕಾಲ ಅಲ್ಲ, 15-20 ವರ್ಷಗಳ ಕಾಲ ಮಟ್ಟ ಹೊಡೆಯುವಂತಹ ಶಕ್ತಿ ಆ ರೈತರಿಗೆ ಇರುವುದಿಲ್ಲ, ಅದು ಸಾಧ್ಯವೂ ಇಲ್ಲ. ಆ ಭೂಮಿಯನ್ನು ಮತ್ತೆ ಸರಿ ಮಾಡುವುದಕ್ಕಾಗುವುದಿಲ್ಲವೆಂಬುದು ತಮಗೂ ಗೊತ್ತಿದೆ. ಅಂತಹ ಸಂದರ್ಭದಲ್ಲಿ ಈ ನಮ್ಮ ಅಸಿಸ್ಟೆಂಟ್ ಕಮೀಷನರ್‌ಗಳು ಅಥವಾ ತಹಶೀಲ್ದಾರ್‌ಗಳು ಕೊಟ್ಟಿರತಕ್ಕಂಥ ವರದಿ ಏನಿದೆ, ಈ ವರದಿ ವಾಸ್ತವಾಂಶಕ್ಕೆ ಬಹಳ ದೂರ ಇರತಕ್ಕಂಥಾದ್ದು ಎಂಬುದನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ಇದು ಮಾನ್ಯ ಸಚಿವರಿಗೂ ಗೊತ್ತಿದೆಯೆಂದು ನಾನು ತಿಳಿದಿದ್ದೇನೆ. ಈಗ ಪ್ರವಾಹದಿಂದ 133 ಜನ ಸತ್ತಿದ್ದಾರೆ.

ಅವರ ಜೀವಕ್ಕೆ ನಾವು ಬೆಲೆ ಕಟ್ಟುವುದಕ್ಕಾಗುವುದಿಲ್ಲ. ಎಂಬುದು ಸಹಿತ ತಮಗೆ ಗೊತ್ತಿರತಕ್ಕ ವಿಚಾರ. ಇಂಥ ಸಂದರ್ಭದಲ್ಲೂ ಸಹಾ ನಮ್ಮ ರಾಜ್ಯಕ್ಕೆ ಕೇಂದ್ರ ಸರ್ಕಾರದ ಯಾವ ಮಂತ್ರಿಗಳೂ ಸಹ ಬರಲಿಲ್ಲ. ಇತ್ತೀಚೆಗೆ ಒರಿಸ್ಸಾ ರಾಜ್ಯದಲ್ಲಿ ಕೂಡಾ ಪ್ರವಾಹ ಉಂಟಾಯಿತು. ಅಲ್ಲಿಗೆ ಪ್ರಧಾನಮಂತ್ರಿಗಳು ಹೋಗಿದ್ದರು. ಅಲ್ಲಿನ ಮುಖ್ಯಮಂತ್ರಿಗಳಾದ ಶ್ರೀ ಬಿಜು ಪಟ್ನಾಯಕ್ ಅವರ ಜೊತೆಯಲ್ಲಿ ಪ್ರವಾಸ ಮಾಡಿದ್ದಾರೆ. ಅಲ್ಲಿರತಕ್ಕಂಥ ಪರಿಸ್ಥಿತಿಯನ್ನು ಸ್ವತಃ ಅವರು ನೋಡಿದರು. ಒಂದು ಸಾರಿ ಪ್ರಧಾನಮಂತ್ರಿಗಳು ಅಲ್ಲಿಗೆ ಹೋಗಿ ನೋಡಿದ್ದಾರೆಂದರೆ ಸ್ವಾಭಾವಿಕವಾಗಿ ಅಲ್ಲಿರತಕ್ಕಂಥ ಅಧಿಕಾರಿಗಳು ಹೆಚ್ಚಿನ ಹಣವನ್ನು ರಾಜ್ಯಕ್ಕೆ ಕೊಡಲಿಕ್ಕೆ ಪ್ರಯತ್ನ ಮಾಡುತ್ತಾರೆ. ತಾವು ಅದರ ಕಡೆ ಪ್ರಯತ್ನ ಮಾಡಿದ್ದೀರೋ ಇಲ್ಲವೋ ನನಗಂತೂ

ಗೊತ್ತಿಲ್ಲ, ಪ್ರಧಾನಿಗಳಂತೂ ಬರಲಿಲ್ಲ, ಪ್ರಧಾನಿಗಳು ಬರುವುದು ಬೇಡ. ಕೊನೆಪಕ್ಷ, ಕೇಂದ್ರ ಸರ್ಕಾರದ ಯಾರಾದರೂ ಒಬ್ಬ ಮಂತ್ರಿಗಳನ್ನಾದರೂ ಕರೆಸಿದ್ದೀರಾ? ಅವರೂ ಬರಲಿಲ್ಲ, ಇವೊತ್ತು ಕೇಂದ್ರ ಸರ್ಕಾರದಲ್ಲಿ ನಮ್ಮ ರಾಜ್ಯದಿಂದ ಐದು ಮಂತ್ರಿಗಳಿದ್ದಾರೆ. ಅವರಲ್ಲಿ ಯಾರಾದರೂ ಒಬ್ಬ ಮಂತ್ರಿ ಬಂದು ನಮ್ಮ ರಾಜ್ಯಕ್ಕೆ ಕಳೆದ 10-15 ವರ್ಷಗಳಿಂದ ಹೆಚ್ಚಿನ ಮಳೆಯಿಂದ ಇಂತಹ ನಷ್ಟವಾಗಿಲ್ಲ. ಈ ಸಾರಿ ಆಗಿದೆ, ಏನಾದರೂ ಸಹಾಯ ಮಾಡಬೇಕೆಂದು ಹೇಳಿ ರಾಜ್ಯದ ಜನತೆಯ ಸಂಕಷ್ಟಗಳಿಗೆ ತಮ್ಮ ಧ್ವನಿಗೂಡಿಸಿದ್ದಾರೆಯೇ? ಆ ಕೆಲಸವನ್ನೂ ಸಹಿತ ಮಾಡಿಲಿಲ್ಲ, ಇದು ನಿಜವಾಗಿಯೂ ಬಹಳ ದುಃಖದ ವಿಚಾರವೆಂದು ನಾನು ಹೇಳಬೇಕಾಗಿದೆ. ಕೊನೆಪಕ್ಷ ಕೇಂದ್ರ ಸರ್ಕಾರದ ಒಬ್ಬ ಮಂತ್ರಿಯಾದರೂ ಬಂದು ಆ ಪ್ರವಾಹ ಪೀಡಿತ ಪ್ರದೇಶಕ್ಕೆ ಭೇಟಿ ಕೊಟ್ಟು ರಾಜ್ಯ ಸರ್ಕಾರದ ಜೊತೆಯಲ್ಲಿ ಕುಳಿತು ಚರ್ಚೆ ಮಾಡತಕ್ಕಂಥ ಕನಿಷ್ಟ ಸೌಜನ್ಯ ತೋರಿಸಬೇಕಾಗಿತ್ತೆಂದು ನನ್ನ ಅಭಿಪ್ರಾಯ. ಮತ್ತೆ ರಾಜ್ಯ ಸರ್ಕಾರವೂ ಸಹಾ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತಂದು ಹೆಚ್ಚಿನ ಹಣವನ್ನು ಗಳಿಸಲಿಕ್ಕೆ, ಹೆಚ್ಚಿನ ಪರಿಹಾರದ ಹಣವನ್ನು ಗಳಿಸಲಿಕ್ಕೆ ಸಹ ವಿಫಲವಾಗಿದೆ ಎನ್ನತಕ್ಕಂಥ ಮಾತನ್ನು ನಾನು ಹೇಳಬೇಕಾಗಿದೆ. ಇವೊತ್ತು ಎಲ್ಲಾ ವಿಚಾರಗಳಲ್ಲೂ ಕೂಡ ಕರ್ನಾಟಕಕ್ಕೆ ದೊಡ್ಡ ಅನ್ಯಾಯವಾಗಿದೆ. ನಾನು ಈ ಸದನದಲ್ಲಿ ಬೇರೆ ವಿಚಾರಗಳ ಬಗ್ಗೆ ಮಾತನಾಡುತ್ತಾ, ಕಳೆದ 40 ವರ್ಷಗಳಲ್ಲಿ ನಮ್ಮ ರಾಜ್ಯ ಸರ್ಕಾರಕ್ಕೆ ವಿಶೇಷವಾಗಿ ಕೇಂದ್ರ ಸರ್ಕಾರದಿಂದ ಆಗಿರತಕ್ಕ ಅನ್ಯಾಯ ಅದು ಯಾವುದೇ ಸರ್ಕಾರವಿರಲಿ, ಜನತಾ ದಳ ಸರ್ಕಾರವಿರಲಿ, ಕಾಂಗ್ರೆಸ್ ಸರ್ಕಾರವಿರಲಿ, ಈ ವಿಷಯವನ್ನು ಪ್ರಸ್ತಾಪ ಮಾಡುವ ತೀರ್ಮಾನ ಮಾಡಿದ್ದೇನೆ. ಆದರೆ, ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ. ಈ ಪ್ರವಾಹದಿಂದ 133 ಜನ ಸತ್ತಿದ್ದರೂ ಸಹ ನಮ್ಮ ಪ್ರತಿನಿಧಿಗಳು ಅನ್ನಿಸಿಕೊಂಡಿರುವವರೂ ಕೇಳಲಿಲ್ಲ. ಅಂದರೆ ಸರ್ಕಾರಕ್ಕೆ ಇನ್ನು ಏನು ಹೇಳಬೇಕು ಎಂಬುದು ನನಗಂತೂ ಅರ್ಥವಾಗುವುದಿಲ್ಲ. ಏಕೆಂದರೆ ಸಂವಿಧಾನದ ಚೌಕಟ್ಟು ಈ ಸದನದ ನಿಯಮದೊಳಗಡೆ ನಾನು ಮಾತನಾಡಬೇಕಾಗಿದೆ. ಅದನ್ನು ಮೀರುವುದಕ್ಕೆ ಆಗುವುದಿಲ್ಲ. ಇದು ತೀರಾ ಖಂಡನೀಯವಾಗಿರತಕ್ಕ ವಿಚಾರವೆಂದು ನಾನು ಹೇಳಬೇಕಾಗಿದೆ. ಇದು ಬಹಳ ದುಃಖದ ವಿಚಾರ, ಅದೇ ಬೇರೆ ರಾಜ್ಯಗಳಲ್ಲಿ 100 ಜನರು ಸತ್ತಿದ್ದಿದ್ದರೆ, ಎಷ್ಟು ಜನ ಓಡಿಹೋಗುತ್ತಿದ್ದರು. ಲೆಕ್ಕಚಾರ ಹಾಕಿ.

ಇಂತಹ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿ ಕೊನೆ ಪಕ್ಷ ಪ್ರತಿನಿಧಿಗಳೆನಿಸಿಕೊಂಡಿರುವವರು, ಮಂತ್ರಿಗಳೆನಿಸಿಕೊಂಡಿರುವವರು, ಏನು ಮಾಡಿದ್ದಾರೆ ಎಂಬುದರ ಬಗ್ಗೆ ಬೆಳಿಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡಿದರು. ನಾವು ದೆಹಲಿಗೆ ಸರ್ವಪಕ್ಷಗಳ ನಿಯೋಗದಲ್ಲಿ ಹೋದಂತಹ ಸಂದರ್ಭದಲ್ಲಿ ಕೊನೆಯಪಕ್ಷ ನಿಮ್ಮ ಕಷ್ಟಸುಖಗಳೇನು, ಯಾವುದಕ್ಕಾಗಿ ನೀವು ಬಂದಿದ್ದೀರಿ, ನೀವು ನೋಡಿದಿರಾ ಎನ್ನತಕ್ಕ ಸೌಜನ್ಯವನ್ನು ತೋರಿಸಲಿಲ್ಲ, ಇವರುಗಳು ಇನ್ನೇನು ಮಾಡುತ್ತಾರೆ? ಪ್ರಧಾನಮಂತ್ರಿಗಳು ನಮ್ಮ ಮಾತನ್ನು ಕೇಳಿದ್ದಾರೆ. ಹಣಕಾಸಿನ ಮಂತ್ರಿಗಳು ಮತ್ತು ವಿಶೇಷವಾಗಿ ಕೃಷಿಸಚಿವರು ನಮ್ಮ ಅನೇಕ ಭಾವನೆಗಳನ್ನು ಪ್ರತಿಬಿಂಬಿಸಿದರು. ಅದನ್ನು ನಾನು ಹೇಳುತ್ತಿಲ್ಲ, ಆದರೆ ಅವರ ಭಾವನೆ ಏನಿದೆ, ನಮ್ಮ 5 ಜನ ಮುಖಂಡರಾಗಿರತಕ್ಕವರು ಏನು ಮಾಡಿದ್ದಾರೆ? ಬಹುಶಃ ಮೊದಲಸಾರಿ ಕರ್ನಾಟಕದಲ್ಲಿ ಪ್ರವಾಹದಿಂದ ಇಷ್ಟೊಂದಪ ಜನ ಸತ್ತಿರತಕ್ಕದ್ದು. ಕನಿಷ್ಟ ಸೌಜನ್ಯವನ್ನು ತೊರಿಸದಿರತಕ್ಕ ಜನರಿಗೆ ಖಂಡಿಸದೆ ಬೇರೆ ಮಾರ್ಗ ಏನು ಇದೆ? ಬಹುಶಃ ಖಂಡನೆ ಮಾಡತಕ್ಕದ್ದು ತೀರಾ ಗೌರವಯುತವಾದ ಶಬ್ದವೆಂದು ನಾನು ಅಂದುಕೊಂಡಿದ್ದೇನೆ. ನಾನು ಸರ್ಕಾರದಲ್ಲಿ ಜವಾಬ್ದಾರಿಯುತವಾದ ಸ್ಥಾನದಲ್ಲಿದ್ದವನು. ನೀವು ಕೆಲಸ ಮಾಡಿಲ್ಲವೆಂದು ಹೇಳುವುದಿಲ್ಲ, ತಾವು ಈ ಕೆಳವರ್ಗದ ಜನರ ಬಗ್ಗೆ ವಿಶೇಷವಾದ ಒಂದು ಕಾಳಜಿಯನ್ನು ಇಟ್ಟುಕೊಂಡಿರತಕ್ಕ ಮುಖಂಡರು, ತಮಗೆ ಕಷ್ಟಸುಖ ಗೊತ್ತಿದೆ. ಇವರ ಜೊತೆಯಲ್ಲಿ ಇರತಕ್ಕ ಜನ ನೀವು ವಿಶೇಷವಾಗಿ

ರೈತರ ಕಷ್ಟಸುಖಗಳನ್ನು ತಿಳಿದುಕೊಂಡಿರತಕ್ಕವರು ನೀವು, ಬಡವರ ದುಃಖ ದುಮ್ಮಾನಗಳಲ್ಲಿ ನೀವು ಒಬ್ಬರಾಗಿರತಕ್ಕವರು. ತಮ್ಮಲ್ಲಿ ನಾನು ಅರಿಕೆ ಮಾಡಿಕೊಳ್ಳುವುದು ಇಷ್ಟೆ. ಮತ್ತೆ ನೀವು ಈ ಇಲಾಖೆಯ ಮಂತ್ರಿಗಳಾಗದೇ ಇರಬಹುದು, ಆದರೆ ತಾವು ಒಂದು ಒಳ್ಳೆಯ ಕೆಲಸ ಮಾಡಿದಿರಿ. ಇಂತಹ ಪ್ರಕೃತಿ ವಿಕೋಪದಿಂದಾಗುವ ಸಂದರ್ಭದಲ್ಲಿ ಈ 50 ರೂ. 500 ರೂ. 200 ರೂ. ಸಾವಿರರೂಪಾಯಿಗಳನ್ನು ಕೊಡುವುದರಲ್ಲಿ ಅರ್ಥವಿಲ್ಲ, ದೊಡ್ಡದೊಡ್ಡ ಕೈಗಾರಿಕೆಗಳು ಮುಳುಗಿಹೋಗುತ್ತದೆ, ಅವರಿಗೆ ಏನು ತೊಂದರೆಯಾಗುವುದಿಲ್ಲ, ಯಾಕೆಂದರೆ ಅವರ ಬಂಡವಾಳದ ಹತ್ತರಷ್ಟು ಸಾಲ ಬ್ಯಾಂಕಿನಲ್ಲಿ ತೋರಿಸಿರುತ್ತಾರೆ. ಅಥವಾ ಬೆಂಕಿಯ ಅಪಘಾತದಿಂದ ಫ್ಯಾಕ್ಟರಿಯು ಸುಟ್ಟುಹೋದರೆ ಅವರಿಗೆ ಏನೂ ತೊಂದರೆಯಾಗುವುದಿಲ್ಲ. ಆದರೆ ನಮ್ಮ ಮಾನ್ಯ ಬಾಬುಗೌಡಪಾಟೀಲರು ಹೇಳಿದ ಹಾಗೆ ಅಮ್ಮಿನಬಾವಿಯಲ್ಲಿ ಇರತಕ್ಕ ಮನೆಯನ್ನು ಅವರು ಈ ಜನ್ಮದಲ್ಲಿ ಕಟ್ಟಿಸಲು ಆಗುವುದಿಲ್ಲ. ಏಕೆಂದರೆ ನಮ್ಮ ನಮ್ಮ ಕ್ಷೇತ್ರದಲ್ಲಿ ನಾವು ನೋಡಿದ್ದೇವೆ. ಒಂದೊಂದು ಕ್ಷೇತ್ರದಲ್ಲಿ ಕೊನೆಯಪಕ್ಷ 5 ರಿಂದ 10 ಸಾವಿರ ಮನೆಗಳನ್ನು ಕಟ್ಟಿಸಬೇಕಾಗುತ್ತದೆ.

ಅದು ಸಾಧ್ಯವೇ ಇಂದಿನ ಪರಿಸ್ಥಿತಿಯಲ್ಲಿ? ಆದುದರಿಂದ ಕೊನೆಯಪಕ್ಷ ಇಂತಹ ಪ್ರಕೃತಿವಿಕೋಪದ ಸಂದರ್ಭದಲ್ಲಿ ಹಾನಿಗೊಳಗಾಗಿರತಕ್ಕ ಬಡವರಿಗೆ, ಯಾರ ಮನೆಗಳು ಸಂಪೂರ್ಣವಾಗಿ ನಾಶವಾಗಿರುತ್ತದೋ ಅವುಗಳನ್ನು ಒಂದು ವರ್ಷದಲ್ಲಿಯೋ ಅಥವಾ 6 ತಿಂಗಳಲ್ಲಿಯೋ ಕಟ್ಟಿಸಿ ಕೊಡತಕ್ಕ ಜವಾಬ್ದಾರಿ ಸರ್ಕಾರದ್ದು, ನಮ್ಮದು ನಿಮ್ಮದು ಆಗಬೇಕು. ಅಂತಹ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕು. ಅದಕ್ಕೆ ಬೇಕಾದ ಕಾನೂನನ್ನು ಮಾಡಿ. ಇದು ಮೊದಲನೆಯದು. ಇನ್ನು ಕೆರೆಗಳು ಹೊಡೆದುಹೋದಾಗ, ರಸ್ತೆಗಳು ಹಾಳಾದಾಗ, ಅಂತಹ ರಸ್ತೆಗಳು ಮತ್ತು ಕೆರೆಗಳನ್ನು ಒಂದು ವರ್ಷದಲ್ಲಿಯೋ ಅಥವಾ ಎರಡು ವರ್ಷದಲ್ಲಿಯೋ ಪುನರ್ನಿರ್ಮಾಣ ಮಾಡತಕ್ಕಂತಹ ಜವಾಬ್ದಾರಿ ಸರ್ಕಾರದ್ದು ಆಗಬೇಕು. ಇದು ಎರಡನೆಯದು. ಇನ್ನು ಈ ಭೂಮಿ ಎನಿದೆ. ಸಣ್ಣ ರೈತರು ಅಥವಾ ದೊಡ್ಡ ರೈತರು ಯಾರೇ ಇರಲಿ, ಕೃಷಿ ಮಾಡತಕ್ಕ ಭೂಮಿ ವ್ಯವಸಾಯವನ್ನು ಮಾಡಲು ಅನರ್ಹವಾಗಿದ್ದರೆ, ಮಣ್ಣು ಕುಳಿತುಕೊಂಡಿರಬಹುದು, ಅಥವಾ ಕೊರಕಲು ಇರಬಹುದು, ಇಲ್ಲದಿದ್ದರೆ ದೊಡ್ಡದೊಡ್ಡ ಗುಂಡಿಗಳು ಬಿದ್ದಿರಬಹುದು, ಅಂತಹ ಒಂದು ಭೂಮಿಯನ್ನು ಸರಿಮಾಡತಕ್ಕ ಜವಾಬ್ದಾರಿ ಸರ್ಕಾರದ ವೆಚ್ಚದಲ್ಲಿ ಆಗಬೇಕು. ಈ ಡಿಸ್ಟ್ರಿಬ್ಯೂಷನ್‌ನಿಂದ ಯಾವ ಪ್ರಯೋಜನವಾಗುವುದಿಲ್ಲ, ಅದು ಕೆಳಮಟ್ಟದಲ್ಲಿರತಕ್ಕ, ಮಿಡಲ್‌ಮನ್‌ಗಳಿಗೆ ಅನುಕೂಲವಾಗುತ್ತದೆಯೇ ಹೊರತು ಇದು. ಆ ಜನರಿಗೆ ಏನೋ ಒಂದು 15 ದಿನಕ್ಕೆ ಸ್ಕೂಲ್‌ನಲ್ಲಿ ಸ್ಥಳಕೊಟ್ಟು, ಒಂದೆರಡು ಜೊತೆ ಬಟ್ಟೆ ಒಂದು ಜಮಖಾನ, ಕಂಬಳಿ, ಎರಡು ಹೊತ್ತು ಗಂಜಿಯನ್ನು ಕೊಡುವುದರಿಂದ ಉಪಯೋಗವಾಗುವುದಿಲ್ಲ, ಇದು ನಿಮಗೂ ಗೊತ್ತಿದೆ ನಮಗೂ ಗೊತ್ತಿದೆ. ಇದಕ್ಕೆ ಒಂದು ಶಾಶ್ವತವಾಗಿ ಒಂದು ಕಾನೂನನ್ನು ಮಾಡಬೇಕೆಂಬುದು ನನ್ನ ಅಭಿಪ್ರಾಯ. ವಿಶೇಷವಾಗಿ ಇಂತಹ ಪ್ರವಾಹ ಪೀಡಿತ ಪ್ರದೇಶಕ್ಕೆ ಒಳಗಾಗತಕ್ಕ ಬಡವರಿಗೆ ಅನುಕೂಲವಾಗತಕ್ಕ ಅವರ ಭೂಮಿಯನ್ನು ಸಂರಕ್ಷಣೆ ಮಾಡಿಕೊಡತಕ್ಕದ್ದು ಒಡೆದು ಹೋಗಿರುವ ಕೆರೆಕಟ್ಟೆಗಳನ್ನು ನಿರ್ಮಾಣ ಮಾಡತಕ್ಕದ್ದು ಮತ್ತೆ ಯಾವ ಮನೆಗಳು ಸಂಪೂರ್ಣವಾಗಿ ನಾಶವಾಗಿರುತ್ತದೋ ಅವುಗಳನ್ನು ಸರ್ಕಾರಿ ವೆಚ್ಚದಲ್ಲಿ ಕಟ್ಟಿಸಿಕೊಡತಕ್ಕದ್ದು ಇವು ಮುಖ್ಯವಾಗಿ ಸರ್ಕಾರ ಮಾಡಬೇಕಾದ ಕೆಲಸಗಳು.

ಇದಕ್ಕೆ ಹಣಕಾಸಿನ ತೊಂದರೆ ಇದೆ. ಒಂದು ವರ್ಷದಲ್ಲಿ ಮಾಡುವುದಕ್ಕೆ ಆಗುವುದಿಲ್ಲ ಎಂಬುದು ನನಗೆ ಗೊತ್ತಿದೆ. ಇದಕ್ಕಾಗಿ ಒಂದು ಕಾನೂನನ್ನಾದರೂ ಮಾಡಿ. ಈಗ ನಾವು ಒಂದು ಕಾನೂನನ್ನು ಮಾಡಿದ್ದೇವೆ. ಅದೇನೆಂದರೆ ರೈತರ ಜಮೀನುಗಳು ನೀರಾವರಿ ಯೋಜನೆಗಳಿಂದ ಮುಳುಗಡೆಯಾದಾಗ ಅಂದರೆ ಹೊಸದಾಗಿ

ಯೋಜನೆಗಳನ್ನು ನಿರ್ಮಾಣ ಮಾಡಿದಾಗ ನಾವು ರೈತರಿಗೆ ಪರಿಹಾರ ಕೊಡುವುದಕ್ಕೆ ಅವರ ಒಂದು ರಿಯಾಬಿಲಿಟೇಷನ್‌ಗೋಸ್ಕರ ಒಂದು ಕಾನೂನನ್ನು ಮಾಡಿದ್ದೇವೆ. ರಿಯಾಬಿಲಿಟೇಷನ್‌ಗೋಸ್ಕರ ಸ್ಕೀಮ್‌ಗಳನ್ನು ಮಾಡಿದ್ದೇವೆ. ಅದೇರೀತಿಯಲ್ಲಿ ಇದಕ್ಕೂ ಸಹಿತ ಒಂದು ಕಾನೂನನ್ನು ಶಾಶ್ವತವಾಗಿ ಮಾಡಿದರೆ ಒಳ್ಳೆಯದು. ನಾನು ಎಲ್ಲಾ ಸೇರಿಸಿ ಮಾಡಿಕೊಡಿ ಎಂದು ಹೇಳುವುದಿಲ್ಲ, ಇವರಿಗೆ ಮನೆಗಳನ್ನು ಕಟ್ಟಿಸಿಕೊಡುವುದು, ಜಮೀನುಗಳನ್ನು ಸರಿಮಾಡಿಸಿಕೊಡತಕ್ಕದ್ದು, ಕೆರೆಕುಂಟೆಗಳನ್ನು ಕಟ್ಟಿಕೊಡತಕ್ಕದ್ದು, ಯಾರು ಸಾಯುತ್ತಾರೆ, ಅವರ ಮನೆಯಲ್ಲಿ ಯಾರಾದರೂ ದುಡಿಯುವವರು ಇದ್ದರೆ ಅವರಿಗೆ ಒಂದು ಉದ್ಯೋಗವನ್ನು ದೊರಕಿಸಿಕೊಡುವುದು, ಇಂತಹ ಕಾನೂನು ಮಾಡಿದರೆ ತಮಗೂ ಒಳ್ಳೆಯ ಹೆಸರು ಬರುತ್ತದೆ. ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ. ರಾಜ್ಯಸರ್ಕಾರ ಈ ಸಂದರ್ಭದಲ್ಲಿ ಅಲ್ಪಸ್ವಲ್ಪ ಪ್ರಯತ್ನ ಮಾಡಿದೆ. ಆದರೆ ಆದರಿಂದ ಏನೂ ಉಪಯೋಗವಾಗಿಲ್ಲ, ಕೇಂದ್ರಸರ್ಕಾರದ ಧೋರಣೆಯನ್ನು ನಾನು ಮತ್ತೊಮ್ಮೆ ಖಂಡಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ಬೀಕರವಾದಂತಹ ಪ್ರವಾಹವನ್ನು ಕರ್ನಾಟಕದ ಜನ ಹಿಂದೆಂದೂ ಕಂಡಿರಲಿಲ್ಲವೆಂದು ನನಗನಿಸುತ್ತದೆ. ಇಡೀ ರಾಜ್ಯದಲ್ಲಿ ಅಂಕಿ ಅಂಶಗಳ ಪ್ರಕಾರ ಈ ಪ್ರವಾಹದಲ್ಲಿ ಸುಮಾರು 133 ಜನ ಸತ್ತಿದ್ದಾರೆ. ನಾವು ಇದನ್ನು ಬಹಳ ಲಘುವಾಗಿ ತಿಳಿದುಕೊಳ್ಳುವಂತಹದ್ದಲ್ಲ. ಕೋಲಾರದಲ್ಲಿಯೂ ಸಹ ಒಬ್ಬರು ಸತ್ತಿದ್ದಾರೆ. ಈ ಪ್ರದೇಶದಲ್ಲಿ ಸಾಮಾನ್ಯವಾಗಿ ಸರಿಯಾಗಿ ಮಳೆಯಾಗುವುದಿಲ್ಲ. ನಿಮ್ಮ ಅಂಕಿ ಅಂಶ ನೋಡಿದರೆ ಅಲ್ಲೂ ಇಂತಹ ಮಳೆಯ ಹಾವಳಿಯಿಂದ ಸತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ : ಸನ್ಮಾನ್ಯ ಅಧ್ಯಕ್ಷಿಣಿಯವರೇ, ತಪ್ಪಾಗಿ ರೆಕಾರ್ಡ್‌ಗೆ ಹೋಗಬಾರದು ಕೆ.ಜಿ.ಎಫ್.ನಲ್ಲಿ ಹರಕು ಮುರುಕು ಮನೆಗಳಿವೆ. ಅಲ್ಲಿ ಮನೆ ಬಿದ್ದು ಸತ್ತಿರುವಂತಹದ್ದು ಅಷ್ಟೆ. ಸಾಧಾರಣ ಮಳೆ ಬಿದ್ದರೂ ಸಹ ಕೆಲವು ಮನೆಗಳು ಉರುಳಿ ಬೀಳುತ್ತವೆ. ಏಕೆಂದರೆ ಅಂತಹ ಮನೆಗಳಲ್ಲಿ ಬಡವರು ವಾಸ ಮಾಡುತ್ತಿರುತ್ತಾರೆ. ಕೆ.ಜಿ.ಎಫ್.ನಲ್ಲಿ ತಮಗೆ ಗೊತ್ತಿರುವ ಹಾಗೆ ಟೆಂಪೊರೆರಿಯಾಗಿ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ಅದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಅಲ್ಲಿ ಗಣಿ ಒಳಗಡೆ ಏರ್‌ಬ್ಲಾಸ್ಟ್ ಆಗುತ್ತದೆ. ಬಹಳ ಬಡವರು ವಾಸಮಾಡುವಂತಹ ಮನೆಗಳು ಅವು. ಅವರಿಗೆ ಪರ್ಮನೆಂಟ್ ಮನೆಗಳಿಲ್ಲ. ಅಂತಹ ಮನೆಗಳು ಬಿದ್ದು ಒಬ್ಬ ಹುಡುಗ ಚರಂಡಿಯಲ್ಲಿ ಕೊಚ್ಚಿಕೊಂಡು ಹೋಗಿರುವುದು ನಿಜ.

ಶ್ರೀ ವಾಟಾಳ್ ನಾಗರಾಜ್ : ಈ ಪರಿಸ್ಥಿತಿ ಇರಬಹುದು. ಇಂಥ ಪ್ರವಾಹದಲ್ಲಿ ಸತ್ತಿರತಕ್ಕವರ ಬಗ್ಗೆ ಅನೇಕರು ಮಾತನಾಡಿದ್ದೇವೆ. ಅವರ ಕುಟುಂಬಕ್ಕೆ ಸರ್ಕಾರ ಪರಿಹಾರ ಕೊಡುವಂತಾದ್ದು ಎಂಟು ಸಾವಿರ ರೂಪಾಯಿಗಳು ಮಾತ್ರ. ಇದು ಯಾವ ನ್ಯಾಯ ಎಂದು ಅನೇಕ ಮಾನ್ಯ ಸದಸ್ಯರು ಕೇಳಿದ್ದಾರೆ. ಅನೇಕ ಸಂದರ್ಭಗಳಲ್ಲಿ ಜನರು ಸತ್ತಾಗ ಬೇರೆ ಬೇರೆ ವಿಧದಲ್ಲಿ ಹಣವನ್ನು ಕೊಡುತ್ತಿದ್ದಾರೆ ಎಂದು ಕೆಲವು ಸದಸ್ಯರುಗಳು ತಿಳಿಸಿದ್ದಾರೆ. ಮನುಷ್ಯನ ಪ್ರಾಣಕ್ಕೆ ಇಷ್ಟೇ ಹಣ ಎಂದು ನಿರ್ಧಾರ ಮಾಡಿರತಕ್ಕದ್ದು. ಇದು ಸಮಾಜದಲ್ಲಿ ಅತ್ಯಂತ ನಾಚಿಕೆಗೇಡು. ತಮ್ಮ ಗಮನಕ್ಕೆ ತರಬೇಕೆಂದರೆ ಅನೇಕ ಶ್ರೀಮಂತರ ಮನೆಯ ಒಂದು ನಾಯಿ ಬೆಲೆ ಒಂದು ಲಕ್ಷ ರೂಪಾಯಿ. ಒಂದು ಲಕ್ಷ ರೂಪಾಯಿಗೆ ಒಂದು ನಾಯಿ ಸಾಕುವವರೂ ಉಂಟು.

ಶ್ರೀಮತಿ ರೇಣುಕಾ ರಾಜೇಂದ್ರನ್ : ಅವರು ಇನ್ಸೂರೆನ್ಸ್ ಸಹ ಮಾಡಿಸಿರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಅವರು ಜೀವವಿಮೆ ಮಾಡಿಸಿರುತ್ತಾರೆ, ಆ ನಾಯಿ ಸತ್ತರೆ ಅದಕ್ಕೆ ಎರಡು ಲಕ್ಷ ರೂಪಾಯಿ ಜೀವವಿಮೆ ಬರುತ್ತದೆ. ನಾಯಿ

ಸಾಕುವುದಕ್ಕೆ ಒಂದು ತಿಂಗಳಿಗೆ ಕನಿಷ್ಠ 25 ಸಾವಿರ ರೂಪಾಯಿ ಖರ್ಚು ಮಾಡುವುದು ಉಂಟು. ಈ ಒಂದು ಸಮಾಜದಲ್ಲಿ ಏಕೆ ಈ ತಾರತಮ್ಯ? ನಮ್ಮ ಸಮಾಜವನ್ನು ತಾವು ನೋಡಬೇಕು. ಈ ಮಟ್ಟದಲ್ಲಿ ಇದೆ. ಇವತ್ತು ಪ್ರವಾಹದಲ್ಲಿ ಸತ್ತಂತಹ ಮನುಷ್ಯನ ಜೀವಕ್ಕೆ ಇವತ್ತು ಕೊಡುವಂತಹ ಬೆಲೆ ಕೇವಲ ಎಂಟು ಸಾವಿರ ರೂಪಾಯಿ, ನೀವು ಹೇಳಬಹುದು, ನಮಗೆ ಸರ್ಕಾರ ನಿಗದಿ ಮಾಡಿರತಕ್ಕಂಥ ಹಣವನ್ನು ಕೊಡುತ್ತೇವೆ ಎಂದು, ಇದರ ಪ್ರಕಾರ ಪ್ರವಾಹದಲ್ಲಿ ಸತ್ತವರಿಗೆ ಎಂಟು ಸಾವಿರ ರೂಪಾಯಿ, ಮತೀಯ ಗಲಭೆಯಲ್ಲಿ ಸತ್ತವರಿಗೆ ಐವತ್ತು ಸಾವಿರ ರೂಪಾಯಿ, ರೈತ ಹೋರಾಟದಲ್ಲಿ ಸತ್ತವರಿಗೆ ಇಪ್ಪತ್ತು ಸಾವಿರ ರೂಪಾಯಿ, ವಿಮಾನದಲ್ಲಿ ಬಿದ್ದವರಿಗೆ ಐದು ಲಕ್ಷ ರೂಪಾಯಿ. ವಿಮಾನದಲ್ಲಿ ಪ್ರಯಾಣ ಮಾಡುವವರು ಜೀವವಿಮೆ ಮಾಡಿಸಿರುತ್ತಾರೆ. ಮತ್ತು ರೈಲಿನಿಂದ ಬಿದ್ದವರಿಗೆ ಒಂದು ಲಕ್ಷ ಹೀಗೆ ನಿಗದಿ ಮಾಡಿದ್ದಾರೆ.

6.00 ಪಿ.ಎಂ.

ಈ ಪರಿಸ್ಥಿತಿ ಇರುವಾಗ ಕೇಂದ್ರ ಸರ್ಕಾರವಾಗಲಿ, ರಾಜ್ಯಸರ್ಕಾರವಾಗಲಿ ಇಂತಹ ಪ್ರವಾಹದಲ್ಲಿ ಸಿಕ್ಕಿಸತ್ತವರಿಗೆ, ಮತೀಯ ಗಲಭೆಯಿಂದ ಸತ್ತವರಿಗೆ, ರೈಲ್ವೆ ದುರಂತದಲ್ಲಿ ಸತ್ತವರಿಗೆ ಇಂಥವರಿಗೆಲ್ಲಾ ಒಂದೇರೀತಿಯ ಪರಿಹಾರವನ್ನು ಸರ್ಕಾರ ಕೊಡುವುದಕ್ಕೆ ಚಿಂತನೆ ಮಾಡಬೇಕು. ಈ 8 ಸಾವಿರ ರೂಪಾಯಿಗಳನ್ನು ಕಂದಾಯ ಮಂತ್ರಿಗಳಾದ ಮಾನ್ಯ ಖರ್ಗೆಯವರೇ ಮಾಡಿದರು ಅಥವಾ ಕರ್ನಾಟಕ ಸರ್ಕಾರ ಮಡಿತು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈ ಪ್ರಶ್ನೆ ಬಂದಾಗ ಮನುಷ್ಯನನ್ನು ಒಂದು ನಾಯಿಗಿಂತಲೂ ಕಟ್ಟಕಡೆಯಾಗಿ ನಮ್ಮ ಈ ಸಮಾಜದಲ್ಲಿ, ಪ್ರಜಾ ಪ್ರಭುತ್ವದಲ್ಲಿ ಕಾಣುತ್ತಿರುವುದು ಅತ್ಯಂತ ನಾಚಿಕೆಗೇಡಿನ ವಿಚಾರ. ಆದುದರಿಂದ ಸರ್ಕಾರ ಈಗ ಕೊಟ್ಟಿರತಕ್ಕ 8 ಸಾವಿರ ಪರಿಹಾರ ಧನವನ್ನು ಕನಿಷ್ಠ ಒಂದು ಲಕ್ಷ ರೂ.ಗಾದರೂ ಏರಿಸಿ ಮಿಕ್ಕ ಹಣವನ್ನು ಸತ್ತ ವ್ಯಕ್ತಿಗತಳ ಮನೆಯವರಿಗೆ, ಅವರ ಸಂಬಂಧೀಕರಿಗೆ ಕೊಡಬೇಕೆಂದು ಈ ಸದನದ ಮುಖಾಂತರ ಅತ್ಯಂತ ಕಳಕಳಿಯಿಂದ ಒತ್ತಾಯ ಮಾಡುತ್ತೇನೆ. ಈ ಪ್ರವಾಹದ ಬಗ್ಗೆ ಒಂದು ನ್ಯಾಯಾಂಗ ತನಿಖೆ ಆಗಬೇಕೆಂದು ಹೇಳುತ್ತಿದ್ದೇನೆ. ಹೇಮಾವತಿ ಪ್ರವಾಹ ಬಂದ ದಿವಸ ನಾನು ಶ್ರೀರಂಗಪಟ್ಟಣ ಮತ್ತು ಕೃಷ್ಣರಾಜಸಾಗರದಲ್ಲಿ ಇದ್ದೆ. ಕೆ.ಆರ್.ಎಸ್.ನ ನೀರು ಭಯಂಕರವಾಗಿ ಬರುವಾಗ ಶ್ರೀರಂಗಪಟ್ಟಣದ ಹಳೇ ಸೇತುವೆಯ ಮೇಲೆ 3 ಅಡಿ ನೀರು ನುಗ್ಗುತ್ತಿತ್ತು. ಅಂದರೆ ಎಷ್ಟು ದಿಢೀರನೆ ಪ್ರವಾಹ ಬಂತು. ಇದರ ಬಗ್ಗೆ ಸಮಗ್ರವಾದ ತನಿಖೆಯನ್ನು ಮಾಡಿಸುತ್ತೇನೆಂದು ಸಂಬಂಧಪಟ್ಟ ನೀರಾವರಿ ಸಚಿವರು ಆವತ್ತು ಹೇಳಿದ್ದರು. ಅದರ ಬಗ್ಗೆ ತನಿಖೆಯನ್ನು ನಿಗದಿ ಮಾಡಿದ್ದಿರಾ? ಇದನ್ನು ತನಿಖೆಯನ್ನು ಮಾಡುತ್ತಿರುವವರು ಯಾರು? ಈ ತನಿಖಾ ವರದಿ ಬಂದಿದೆಯೇ ? ಆ ವರದಿಯ ಸಾರಾಂಶ ಏನು ಎಂಬುದು ಈ ಸದನಕ್ಕೆ ಬೇಕು. ಮಾನ್ಯ ಸಚಿವರು ಹೇಳಿಕೆಯನ್ನು ಕೊಟ್ಟಿದ್ದಾರೆ, ಇದರಲ್ಲಿ 133 ಜನ ಸತ್ತಿದ್ದಾರೆ. 12.37 ಕೋಟಿ ರೂ. ನಷ್ಟವಾಗಿದೆ ಎಂದು. ಇದು ಸರ್ಕಾರದ ಅಧಿಕಾರಿಗಳು ಕೊಟ್ಟಿರತಕ್ಕ ಪಟ್ಟಿ. ಆದುದರಿಂದ ನಾನು ತಮ್ಮ ಮುಖಾಂತರ ಕೇಳುತ್ತೇನೆ, ತನಿಖೆ ಆಗಿದ್ದರೆ ಅದರ ವರದಿ ಏನೆಂಬುದನ್ನು ಈ ಸಭೆಯಮುಂದಿಡಬೇಕು. ಎಷ್ಟು ಜನರು ಹಾನಿಗೆ ಈಡಾಗಿದ್ದಾರೆ, ಪ್ರವಾಹದಿಂದ ಏನೇನು ತೊಂದರೆಯಾಗಿದೆ ಎಂಬುದು ಸಮಗ್ರ ತನಿಖೆಯಿಂದ ಹೊರಗೆ ಬರುತ್ತದೆ. ತನಿಖೆ ಇನ್ನೂ ಆಗಿಲ್ಲ ಎಂದರೆ ಅದು ಬಹಳ ದುಃಖಕರವಾದುದು. ಈಗಲೂ ಸಹ ತನಿಖೆಯನ್ನು ನಡೆಸುವುದಕ್ಕೆ ಕಾಲ ಮಿಂಚಿಲ್ಲ. ತಾವು ತನಿಖೆಯನ್ನು ಇದರ ಬಗ್ಗೆ ನಡೆಸಬೇಕೆಂಬುದು ನನ್ನ ಒತ್ತಾಯ.

ಮೈಸೂರು ಜಿಲ್ಲಾಧಿಕಾರಿಗಳ ಹೇಳಿಕೆಯ ಪ್ರಕಾರ ಮೈಸೂರು ಜಿಲ್ಲೆಯಲ್ಲಿ 16 ಸಾವಿರ ಕುಟುಂಬಗಳು ಈ ತೊಂದರೆಗೆ ಒಳಗಾಗಿವೆ. ಸುಮಾರು 6 ಸಾವಿರ ಎಕರೆಗೂ ಹೆಚ್ಚು ಪ್ರದೇಶ ಜಲಾವೃತವಾಗಿ ಬೆಳೆಗೆ ಹಾನಿಯಾಗಿದೆ. ಕೇವಲ ಮೈಸೂರು ಜಿಲ್ಲೆಯಲ್ಲೇ ಈ ಪರಿಸ್ಥಿತಿ ಆದರೆ, ಮೈಸೂರು, ಮಂಡ್ಯ, ಹಾಸನ, ಶಿವಮೊಗ್ಗ ಇವನ್ನೆಲ್ಲಾ ತೆಗೆದುಕೊಂಡರೆ ಸರ್ಕಾರ ಕೊಟ್ಟಿರತಕ್ಕ ಈ ಅಂಕಿಅಂಶಗಳಲ್ಲಿ ನನಗೆ ನಂಬಿಕೆಯೇ ಇಲ್ಲ. ಆದ್ದರಿಂದ ಇದರ ಬಗ್ಗೆ ಪರಿಣಾಮಕಾರಿಯಾದಂತಹ ಸಮಗ್ರವಾದಂತಹ ತನಿಖೆಯಾಗಬೇಕು. ಆಗ ಈ ತನಿಖೆಯಿಂದ ಸತ್ಯಾಂಶ ಹೊರಬರುತ್ತದೆಂದು ನಾನು ಹೇಳಬಯಸುತ್ತೇನೆ. ಜಲಾವೃತವಾದ ಪ್ರದೇಶದ ಜನರಿಗೆ ~~ಒಂದು ಎಕರೆಗೆ~~ 120 ರೂ.ನಂತೆ ಪರಿಹಾರವನ್ನು ಕೊಡುತ್ತಿದ್ದೀರಿ. ಮೊದಲು ಇದು 50-60 ರೂ. ಇತ್ತು. ಈಗ ಅದನ್ನು ಎಕರೆಗೆ 120 ರೂ. ಎಂದು ಮಾಡಿದ್ದೀರಿ. ಇವತ್ತು ಒಂದು ಎಕರೆ ಪ್ರದೇಶದಲ್ಲಿ ಆಲೂಗಡ್ಡೆ, ಈರುಳ್ಳಿ ಮುಂತಾದುವನ್ನು ಬೆಳೆಯುವವರಿಗೆ 2 ಸಾವಿರ, 3 ಸಾವಿರ, 4 ಸಾವಿರ, 10 ಸಾವಿರ, ರೂಪಾಯಿ ಈ ತರಹ ದರ ಇರುವಾಗ ನೀವು ಭಿಕ್ಷೆ ಕೊಟ್ಟಂತೆ ಎಕರೆಗೆ 120 ರೂ.ನಂತೆ ಕೊಟ್ಟರೆ ಇದರಿಂದ ಏನು ಪ್ರಯೋಜನ? 120 ರೂ ಬಿಕ್ಷೆ, 2 ರೂ ಭಿಕ್ಷೆ 5 ರೂ ಭಿಕ್ಷೆ, ಈ ದುಡ್ಡನ್ನು ತೆಗೆದುಕೊಳ್ಳಬೇಕಾದರೆ ಸ್ಟಾಂಪ್ ಹಾಕಿ ಅರ್ಜಿಯನ್ನು ಬರೆದು ಜಿಲ್ಲಾಧಿಕಾರಿಗಳ ಆಫೀಸಿಗೆ ಹೋಗಬೇಕು, ತಹಶೀಲ್ದಾರರ ಆಫೀಸಿಗೆ ಹೋಗಬೇಕು. ಅವರು ಅಲ್ಲಿ ಕೈಕಟ್ಟಿಕೊಂಡು ನಿಲ್ಲಬೇಕು. ಏನಿದು ನೀತಿ? ಇದಲ್ಲ, ಸರ್ಕಾರ ಒಂದು ನೀತಿ ಮಾಡಬೇಕು. ಇದೆಲ್ಲವನ್ನೂ ಜಾಸ್ತಿ ಮಾಡಬೇಕು. ಯಾವುದೋ ಒಂದು ಓಬಿರಾಯನ ಕಾಲದಲ್ಲಿ ಕೊಡುತ್ತಿದ್ದುದನ್ನು ನೋಡಿ ಅದೇ ಪ್ರಕಾರ ಈ ಹತ್ತು ವರ್ಷದಲ್ಲಿ 2 ರೂಪಾಯಿ ಕೊಟ್ಟಿದ್ದೇವೆ, ಈ ವರ್ಷದಲ್ಲಿ 2 ರೂಪಾಯಿ ಕೊಟ್ಟುಬಿಡೋಣವೆನ್ನುವ ಪ್ರಶ್ನೆ ಬೇಡ. ಈಗ ಕೊಡತಕ್ಕಂಥ ಪರಿಹಾರವನ್ನು ಜಾಸ್ತಿ ಮಾಡಬೇಕು. ನದಿ ಪ್ರವಾಹ ಕಾವೇರಿಯಾಗಲಿ, ಕಪಿಲಾ ಆಗಲಿ ಯಾವುದೇ ನದಿಗಳಾಗಲೀ, ಇದುವರೆಗೆ ನಮ್ಮ ಸರ್ಕಾರಕ್ಕೆ ಗೊತ್ತಿದೆ. ಇಂಥ ಪ್ರವಾಹಗಳು ಬಂದಾಗ ಎಷ್ಟು ಹಳ್ಳಿಗಳಿಗೆ ಎಷ್ಟು ಪಟ್ಟಣಗಳಿಗೆ ನಷ್ಟವಾಗುತ್ತದೆ, ಎಷ್ಟು ನಾಶವಾಗುತ್ತದೆನ್ನುವುದು. ನನಗನಿಸುತ್ತದೆ ಈ ನದಿಯ ಪಕ್ಕದಲ್ಲಿ ಯಾವ ಯಾವ ಗ್ರಾಮಗಳಿಗೆ, ಯಾವ ಯಾವ ಪಟ್ಟಣಗಳಿಗೆ ನಷ್ಟವಾಗುತ್ತದೆನ್ನತಕ್ಕಂಥದ್ದು ಸುಮಾರು ಒಂದು 20 ವರ್ಷದ ಸರಾಸರಿ ಅಂಕಿಅಂಶಗಳನ್ನು ನೋಡಿದಾಗ ಇಂಥ ಹಳ್ಳಿಯಲ್ಲಿ ಇಂಥ ಪಟ್ಟಣದಲ್ಲಿ ಇಷ್ಟು ನಷ್ಟವಾಗುತಿದೆ ಎಂದು ಗೊತ್ತಾಗುತ್ತದೆ. ಈ ನಷ್ಟವನ್ನು ಸರಿಪಡಿಸುವುದಕ್ಕೆ ಒಂದು ಸಮಗ್ರವಾದಂಥ ಯೋಜನೆಯನ್ನು ಮಾಡಬೇಕು. ಪ್ರತಿಸಾರಿ ಪ್ರವಾಹ ಬಂದಾಗ ಹಳ್ಳಿಗಳನ್ನು ನಾವು ಬೇರೆ ಕಡೆಗೆ ಸ್ಥಳಾಂತರ ಮಾಡಿಸುತ್ತೇವೆ. ಪ್ರತಿಸಾರಿ ಪ್ರವಾಹ ಬಂದಾಗ ಹಳ್ಳಿಗಳನ್ನು ಸ್ಥಳಾಂತರ ಮಾಡುವುದಕ್ಕೆ ಬದಲಾಗಿ ಒಂದು ಹೊಸ ಹಳ್ಳಿಗಳನ್ನೇ ನಿರ್ಮಾಣ ಮಾಡಬೇಕು. ಅದಕ್ಕೆ ಬೇಕಾದಂಥ ಎಲ್ಲಾ ಸವಲತ್ತುಗಳನ್ನು ಕೊಡುವುದರ ಮೂಲಕ ಒಂದು ಸಮಗ್ರ ಯೋಜನೆಯನ್ನು, ಒಂದು ಮಾಸ್ಟರ್‌ಪ್ಲಾನ್‌ನ್ನು ಸರ್ಕಾರ ತಯಾರು ಮಾಡಿದರೆ ಇದು ನಿಜವಾಗಿಯೂ ಬಹಳ ಅನುಕೂಲವಾಗುತ್ತದೆ. ಇಂಥ ಒಂದು ಸಮಗ್ರ ಯೋಜನೆ ಸರ್ಕಾರದ ಮುಂದೆ ಬರಬೇಕಾಗಿದೆ. ಇದಕ್ಕಾಗಿ ವಿಶೇಷವಾದಂಥ ಹಣವನ್ನು ಕೂಡ ಇಡಬೇಕಾದ್ದು ನಮ್ಮ ಕರ್ತವ್ಯ. ತಮಗೆ ತಿಳಿದಹಾಗೆ ಮೈಸೂರು ಜಿಲ್ಲೆಯ ಕೊಳ್ಳೇಗಾಲ ಮತ್ತು ಟಿ.ನರಸೀಪುರಗಳಲ್ಲಿ ಈ ನದಿ ಹುಟ್ಟಿದಾಗಿನಿಂದಲೂ ಈ ಊರುಗಳು ಪ್ರವಾಹಕ್ಕೆ ಒಳಗಾಗುತ್ತಲೇ ಇದೆ. ತಮಗೆ ಹೇಳುವುದಾದರೆ ಅಧ್ಯಕ್ಷರೇ ಅಲ್ಲಿ ಒಂದು ತಿರುಮಕೂಡಲು ಎಂದು ಇದೆ. ಅದು ಒಂದು ಪ್ರಸಿದ್ಧವಾದ ಪುಣ್ಯ ಕ್ಷೇತ್ರ ಕಾವೇರಿ ಮತ್ತು ಕಪಿಲಾ ಎರಡು ನದಿಗಳು ಸಂಗಮವಾಗುವ ಸ್ಥಳ. ಈ ಕಾವೇರಿ ಕಪಿಲ ಎರಡು ನದಿಗಳು ಬಂದಿತು ಎಂದರೆ ಇಡೀ ಊರೇ ಮುಳುಗುತ್ತದೆ. 1921ರಲ್ಲಿ ಸಂಪೂರ್ಣ ಊರೇ ಮುಳುಗಿತ್ತು ಎಂದು ಹೇಳುತ್ತಾರೆ. ಇದೆಲ್ಲಾ ಸರ್ಕಾರಕ್ಕೆ ಗೊತ್ತಿದ್ದು

ಈ ಪರಿಸ್ಥಿತಿಯನ್ನು ಅರಿತು ಸುಮ್ಮನಿರುವುದು ಸರಿಯಲ್ಲ, ಆ ಊರು ನೀರಿನಲ್ಲಿ ಮುಳುಗದಂತೆ ನೋಡಿಕೊಳ್ಳಲು ಗೋಡೆಯನ್ನು ಕಟ್ಟಬೇಕೇ ಯಾವರೀತಿ ತಡೆಯಲು ಸಾಧ್ಯವೆಂಬ ಬಗ್ಗೆ ತಜ್ಞರ ಸಮಿತಿಯನ್ನು ನೇಮಕ ಮಾಡಿ ಸಮಿತಿಯ ಮೂಲಕ ಸಮಗ್ರವಾಗಿ ಪರಿಹಾರವನ್ನು ಕಂಡುಕೊಳ್ಳುವ ಕಾರ್ಯಕ್ರಮವನ್ನು ತಾವು ಹಾಕಿಕೊಳ್ಳುವುದಕ್ಕೆ ಕ್ರಮ ಕೈಗೊಳ್ಳಬೇಕು. ನಿಜ ಇವತ್ತು ನಮ್ಮ ಕೇಂದ್ರದ ಹಣಕಾಸಿನ ಪರಿಸ್ಥಿತಿಯನ್ನು ನೋಡಿದಾಗ ಕರ್ನಾಟಕಕ್ಕೇಇಂಥ ಪ್ರವಾಹ ಸಂದರ್ಭದಲ್ಲಿ ಹೆಚ್ಚಿನರೀತಿಯಲ್ಲಿ ಅವರಿಂದ ನಮಗೆ ಹಣ ಬರಬೇಕು. ಯಾರು ಇದನ್ನು ಕೇಳತಕ್ಕಂಥವರು? ಒತ್ತಾಯ ಮಾಡತಕ್ಕಂಥವರು ಯಾರು? ನಮ್ಮ ಪ್ರತಿನಿಧಿಗಳು ಏನು ಮಾಡುತ್ತಿದ್ದಾರೆ? ಇದು ಬಹಳ ಗಂಭೀರವಾದ ಪ್ರಶ್ನೆ. ನಾನು ಈಗಾಗಲೇ ಬೆಳಿಗ್ಗೆ ತಮ್ಮ ಗಮನಕ್ಕೆ ತಂದಿದ್ದೆ. ನಾವು ನಮ್ಮ ನಿಯೋಗ ಹೋಗಿದ್ದಾಗ ಒಬ್ಬ ಮಂತ್ರಿಯಾಗಲಿ ನೀವು ನಿಯೋಗ ಬಂದಿದ್ದೀರಿ. ಯಾವುದಕ್ಕೋಸ್ಕರ ಬಂದಿದ್ದೀರಿ, ನಿಮ್ಮ ಪ್ರಶ್ನೆ ಏನು, ನಿಮ್ಮ ಮನವಿ ಏನು. ಕೊನೆಗೆ ಅಭಿಮಾನಕ್ಕಾದರೂ ನಮ್ಮನ್ನು ಕರೆದು ಮಾತನಾಡಲಿಲ್ಲ. ಒಬ್ಬ ಮಂತ್ರಿಯು ಕೂಡ ನಮ್ಮ ಹತ್ತಿರ ಬರಲಿಲ್ಲ, ಕರ್ನಾಟಕಭವನದಲ್ಲಿ ಬಂದು ನೀವು ಏನು ಬಂದಿದ್ದೀರಿ. ಯಾವ ಕೆಲಸಕ್ಕೆ ಬಂದಿದ್ದೀರಿ ಎಂದು ಒಬ್ಬ ಮಂತ್ರಿಯಾದರೂ ಬಂದು ಅಭಿಮಾನಕ್ಕಾದರೂ ಕೇಳತಕ್ಕ ಸೌಜನ್ಯ ಕೂಡ ತೋರಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಸ್ಟೇಟ್‌ನಿಂದ ಡೆಲಿಗೇಷನ್ ಅಪೋಜಿಷನ್‌ನವರು ಮತ್ತು ಮುಖ್ಯಮಂತ್ರಿಗಳು ಹೋಗಿದ್ದೀರಿ. ನೀವು ಹೋಗಿದ್ದುದು ಪರ್ಟಿಲೈಸರ್ಸ್ ಮತ್ತು ಬೇರೆ ಬೇರೆ ವಿಷಯದ ಬಗ್ಗೆ ಮಾತನಾಡಿಕೊಂಡುಬರಬೇಕೆಂದು ಹೇಳಿ ಡೆಲಿಗೇಶನ್ ಹೋಗಿದ್ದಿರಿ. ಈಗ ಅವರನ್ನು ಬಂದಿಲ್ಲ ನೋಡಲಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದು ಸರಿಯಲ್ಲ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಅವರಿಗೆ, ಏನೂ ಸಂಬಂಧವಿಲ್ಲವೇ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮಗೆ ಗೊತ್ತಿದೆ, ಕೇಂದ್ರ ಮಂತ್ರಿಗಳು ನಿಮ್ಮನ್ನು ಕರೆಸಿ ಮಾತನಾಡುತ್ತಾರೆ, ನೀವು ಹೋದಾಗ ಸೌಜನ್ಯದಿಂದ ಮಾತನಾಡುತ್ತಾರೆ.

ಶ್ರೀ ಸಿ. ಬೈರೇಗೌಡ : ಚಿಕ್ಕಮಗಳೂರಿನಲ್ಲಿ ಏನಾಗಿದೆ ಎಂದು ಶ್ರೀಮತಿ ಮೋಟಮ್ಮನವರು ಮಾತನಾಡಿದರು. ಅವರ ಕ್ಷೇತ್ರದಲ್ಲಿ ಬಹಳ ಅನಾಹುತವಾಗಿದೆ. ಕೊನೇಪಕ್ಷ ಬೇರೆ ರಾಜ್ಯಗಳ ಬಗ್ಗೆ ಕಾಳಜಿ ಇಲ್ಲದಿದ್ದರೂ ಅವರವರ ಕ್ಷೇತ್ರದಲ್ಲಿ ಆಗಿರತಕ್ಕ ತೊಂದರೆಗಳ ಬಗ್ಗೆ ಏನಾಯಿತು ಏನು ಹೋಯಿತು ಎಂಬುದರ ಬಗ್ಗೆಯಾದರೂ ಗಮನ ಹರಿಸಬೇಕೇ ಬೇಡವೇ? ಲೋಕಸಭೆಯಲ್ಲಿರಾಜ್ಯಸಭೆಯಲ್ಲಿ ನಮ್ಮ ರಾಜ್ಯದ ಪರವಾಗಿ ಪ್ರತಿನಿಧಿಸತಕ್ಕವರು ಶ್ರದ್ಧೆವಹಿಸಬೇಕಾದುದು ಅವರ ಕರ್ತವ್ಯ.

ಶ್ರೀ ವಾಟಾಳ್ ನಾಗರಾಜ್ : ಒಂದು ರೀತಿಯಲ್ಲಿ ಕೇಂದ್ರದ ಮಂತ್ರಿಗಳು ನಮ್ಮ ರಾಜ್ಯದ ನಿಯೋಗಕ್ಕೆ ಮಾಡಿರುವ ಅಗೌರವ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಈ ಕೊನೆಯ ಸದಸ್ಯರಲ್ಲ. ಅವರ ಬಗ್ಗೆ ಇಲ್ಲಿ ಕ್ರಿಟಿಸೈಸ್ ಮಾಡುವು ಅಗತ್ಯವಿಲ್ಲ. ನಾವು ಎಲ್ಲಿ ತಪ್ಪಿದ್ದೇವೆ, ಏನು ತಪ್ಪು ಮಾಡಿದ್ದೇವೆ, ಆ ಬಗ್ಗೆ ತಮ್ಮಿಂದ ಮಾರ್ಗದರ್ಶನ ಪಡೆದು ಏನು ಮಾಡಬೇಕೋ ಅದನ್ನು ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ನಮ್ಮ ರಾಜ್ಯದ ಬಗ್ಗೆ ಕೇಂದ್ರದ ಮಂತ್ರಿಗಳಿಗೆ ಎಷ್ಟು ಕಾಳಜಿ ಇದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಕಾವೇರಿ ಪ್ರಶ್ನೆ ಬಂದಾಗ ತಮಿಳುನಾಡಿನ ಎಲ್ಲಾ ಸಚಿವರು ಪಕ್ಷಭೇದ ಮರೆತು ನಿಂತರು ಮತ್ತು

ಶ್ರೀ ರಾಮಮೂರ್ತಿಯವರು ರಾಜೀನಾಮೆ ಕೊಟ್ಟರು. ಆದರೆ ನಮ್ಮವರು ಬಂದು ನೋಡಿ ಏತಕ್ಕೋಸ್ಕರ ನಿಯೋಗ ಬಂದಿದ್ದೀರಿ, ನಿಮ್ಮ ಸಮಸ್ಯೆ ಏನು, ನಾವು ನಿಮ್ಮ ಜೊತೆ ಬರೋಣ ಎಂದು ಒಬ್ಬ ಮಂತ್ರಿಯೂ ಕೇಳಲಿಲ್ಲವಲ್ಲಾ ; ಅವರು ನಮ್ಮ ರಾಜ್ಯದ ಮಂತ್ರಿಗಳೇ ಅಲ್ಲ. ಅವರು ಕೂಡಲೇ ರಾಜೀನಾಮೆ ಕೊಡಬೇಕೆಂದು ಈ ಸಭೆಯಲ್ಲಿ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೂ ಇದಕ್ಕೂ ಸಂಬಂಧ ಇಲ್ಲ. ಈಗ ಫ್ಲಡ್ ಮೇಲೆ ಮಾತನಾಡಿ. ಯಾವುದು ಸರಿ ಮಾಡಬೇಕು, ಏನು ಮಾಡಬೇಕೆಂಬ ಬಗ್ಗೆ ಸಲಹೆಗಳನ್ನು ಕೊಡಿ. ಇನ್ನೂ ಹೆಚ್ಚಿಗೆ ರಿಲೀಫ್ ಕೊಡಬೇಕೇ, ಎಂಬುದನ್ನು ಹೇಳಿ. ಅದನ್ನು ಬಿಟ್ಟು ಕೇಂದ್ರದ ಮಂತ್ರಿಗಳನ್ನು ಹಿಡಿದುಕೊಂಡು ಕುಳಿತಿದ್ದೀರಲ್ಲ.

ಶ್ರೀ ವಾಟಾಳ್ ನಾಗರಾಜ್ : ಏನಾಗಿದೆ ಎಂದರೆ, ಕೆಲವರಿಗೆ ಏತಕ್ಕೆ ಕೋಪ ಬರುತ್ತದೋ ಅರ್ಥವಾಗುವುದಿಲ್ಲ. ಆದುದರಿಂದ ತಮಗೆ ಹೇಳುತ್ತಿದ್ದೇನೆ, ಕೇಂದ್ರ ಸರ್ಕಾರದಿಂದ ನಮಗೆ ಹೆಚ್ಚಿನ ರೀತಿಯಲ್ಲಿ ಏನು ನೆರವು ಬರಬೇಕಾಗಿದೆ. ಈ ನೆರವನ್ನು ಪಡೆಯುವವರು ಯಾರು? ನಾವೇ, ಆದ್ದರಿಂದ ನಮ್ಮ ಪರವಾಗಿ ಇರತಕ್ಕ ಮಂತ್ರಿಗಳಿಂದ ಒತ್ತಾಯ ಬರಬೇಡವೇ? ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ,ಪ್ರವಾಹ ಒಂದೇ ಅಲ್ಲ, ಕರ್ನಾಟಕ ರಾಜ್ಯದ ಸಮಗ್ರ ಪರಿಸ್ಥಿತಿಯ ಬಗ್ಗೆ ಪ್ರಧಾನ ಮಂತ್ರಿಗಳಿಗೆ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೆ ಪ್ರಾಮಾಣಿಕವಾಗಿ ಹೇಳಿದಾಗ ಅವರಿಗೆ ಅರಿವಾಯಿತು, ನಮ್ಮ ಬೇಡಿಕೆಗಳನ್ನು ಸಮಾಧಾನದಿಂದ ಕೇಳಿದರು. ಕರ್ನಾಟಕ ಸರ್ಕಾರವನ್ನು ಸಂಪೂರ್ಣವಾಗಿ ಕಡೆಗಣಿಸಿದ್ದೀರಿ, ತಾವು ಇದರ ಬಗ್ಗೆ ಗಮನ ಹರಿಸಬೇಕೆಂದು ಹೇಳಿದೆ. ಕರ್ನಾಟಕದಿಂದ ನಿಯೋಗ ಬರುತ್ತದೆ, ಪ್ರವಾಹಕ್ಕೆ ಎಷ್ಟು ಹಣ ಬರುತ್ತದೆ ಎಂದು ಎಷ್ಟು ಜನ ಮಂತ್ರಿಗಳು ದಿಢೀರನೆ ಬಂದರು? ಬೇರೆ ರಾಜ್ಯವಾಗಿದ್ರೆ ಮಂತ್ರಿಗಳು ಧಡಧಡನೆ ಹೋಗುತ್ತಿದ್ದರು. ಇವತ್ತು ಕರ್ನಾಟಕ ರಾಜ್ಯವನ್ನು ಕೇಂದ್ರ ಸಂಪೂರ್ಣವಾಗಿ ಕಡೆಗಣಿಸಿದ, ರಾಜ್ಯ ಸರ್ಕಾರ ಸಹ ಈ ಪ್ರವಾಹದಲ್ಲಿ ನೊಂದವರ ಬಗ್ಗೆ ಮೊಸಳೆ ಕಣ್ಣೀರು ಸುರಿಸಿದೆ ; ಪ್ರವಾಹದಲ್ಲಿ ನೊಂದವರಿಗೆ ಪರಿಹಾರ ಕೊಡುವುದರಲ್ಲಿ ಸಂಪೂರ್ಣ ವಿಫಲವಾಗಿದೆ.

ಒಬ್ಬ ಮಾನ್ಯ ಸದಸ್ಯರು : ಲೋಕಸಭಾ ಸದಸ್ಯರಾಗಲಿ, ಕೇಂದ್ರದ ಸಚಿವರಾಗಲಿ ಈ ಸಭೆಯ ಸದಸ್ಯರಲ್ಲ. ಅವರ ಬಗ್ಗೆ ಮಾತನಾಡುವುದಕ್ಕೆ ಅಧ್ಯಕ್ಷರ ಅನುಮತಿ ಕೇಳಬೇಕು. ಉತ್ತರ ಹೇಳುವುದಕ್ಕೆ ಅವರು ಇಲ್ಲಿ ಇದ್ದಾರೆಯೇ? ಇದನ್ನೆಲ್ಲಾ ತಿಳಿದು ಮಾನ್ಯ ಸದಸ್ಯರು ಮಾತನಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಕರ್ನಾಟಕ ರಾಜ್ಯದಲ್ಲಿ ಸಮಗ್ರವಾಗಿ ನಡೆದಿರತಕ್ಕ ಪ್ರವಾಹ ಹಾವಳಿ ಬಗ್ಗೆ, ಅದರಲ್ಲೂ ಹೇಮಾವತಿ ನದಿ ತುಂಬಿ ದಿಢೀರನೆ ಬಂದಿರಬೇಕಾದರೆ ಅದರ ಬಗ್ಗೆ ಸಮಗ್ರವಾಗಿ ತನಿಖೆ ಆಗಬೇಕು. ತನಿಖೆ ಆಗಬೇಕೆಂದು ಸದನದಲ್ಲಿ ಮತ್ತು ಸದನದ ಹೊರಗಡೆ ಮಂತ್ರಿಗಳು ಕೂಡ ಅನೇಕ ಬಾರಿ ಹೇಳಿದ್ದಾರೆ. ದಿಢೀರನೆ ನೀರು ಬಂದಿರುವುದು ಸರಿಯಲ್ಲ, ಅದರ ಬಗ್ಗೆ ತನಿಖೆ ಮಾಡಿಸುತ್ತೇನೆಂದು ಹೇಳಿದ್ದಾರೆ ಆದರೆ ಸರ್ಕಾರದವರು ಇದುವರೆಗೆ ಏತಕ್ಕೆ ತನಿಖೆಗೆ ಆಜ್ಞೆ ಮಾಡಿಲ್ಲ? ಇದಕ್ಕೆ ಕಾರಣವೇನು? ಆ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಗಂಭೀರವಾಗಿ ಇದರ ಬಗ್ಗೆ ತಮ್ಮ ವಿಚಾರಧಾರೆಯನ್ನು ಹೇಳಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಬಿ. ಎಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಅಧ್ಯಕ್ಷಣಿಯವರೆ, ಈ ಪ್ರವಾಹದಿಂದ ಹಾನಿ ಉಂಟಾಗಿ ಸುಮಾರು ಒಂದು ತಿಂಗಳ ಮೇಲಾಯಿತು. ಆದರೂ ಸಹ ಇವತ್ತಿನವರೆಗೆ ಯಾವುದೇ ರೀತಿಯ ಪರಿಹಾರ ಹಾನಿಯಾದ

ಪ್ರದೇಶಗಳಿಗೆ ಸಿಕ್ಕಿಲ್ಲ, ನನ್ನ ಬೇಲೂರು ಕ್ಷೇತ್ರದಲ್ಲಿ ಹೇಳುವುದಾದರೆ ಪ್ರವಾಹದಿಂದ ತುಂಬಾ ಹಾನಿಯುಂಟಾಗಿದೆ. ಹೇಮಾವತಿ ನದಿ ಮತ್ತು ಯಗಚಿ ನದಿಗಳಿಂದ ಪ್ರವಾಹ ಬಂದು ತುಂಬಾ ಹಾನಿಯಾಗಿದೆ. ಅದೂ ಅಲ್ಲದೆ ಒಂದೇ ದಿವಸ 14 ಇಂಚು ಮಳೆ ಬಂದರೆ ಎಷ್ಟರ ಮಟ್ಟಿಗೆ ಹಾನಿಯಾಗಬಹುದೆಂದು ತಾವು ಯೋಚನೆ ಮಾಡಿ. 14 ಇಂಚು ಒಂದೇ ದಿವಸದಲ್ಲಿ ನನ್ನ ಕ್ಷೇತ್ರದಲ್ಲಿ ಮಳೆಯಾಗಿದೆ. ಎರಡನೇ ದಿವಸದಲ್ಲಿ 5 ಇಂಚು ಮಳೆಯಾಗಿದೆ. ಅಂದರೆ ಹಾನಿ ಪ್ರಮಾಣ ಎಷ್ಟಾಗಬಹುದು ಎಂಬುದನ್ನು ತಮಗೇ ಊಹೆ ಮಾಡುವುದಕ್ಕೆ ಬಿಡುತ್ತೇನೆ. ಇದುವರೆಗೆ ಬೆಳೆ ಪರಿಹಾರವನ್ನು ಕೊಟ್ಟಿರುವುದು ಬಿಟ್ಟರೆ ಬಾಕಿ ಕಾಮಗಾರಿಗಳಾಗಲೀ ಕೆರೆ ಕಟ್ಟೆಗಳು ಒಡೆದಿರುವುದು, ರಸ್ತೆಗಳ ರಿಪೇರಿ ಯಾವುದೂ ಸಹ ಆಗಲಿಲ್ಲ. ಅದಕ್ಕಾಗಿ ಹಣ ಸಹ ಮಂಜೂರಾಗಲಿಲ್ಲ. ಬೆಳೆ ಪರಿಹಾರ ಕೊಟ್ಟಿರತಕ್ಕದ್ದು ಸಹ ಮಾತನಾಡಿದ ಅನೇಕ ಸದಸ್ಯರು ಹೇಳಿದ ಹಾಗೆ 50, 100,10 ರೂಪಾಯಿ, ಸೀಗೆಲ್ಲಾ ಕೊಟ್ಟಿರತಕ್ಕದ್ದು ನ್ಯಾಯವಲ್ಲ. ರೈತರು ಪೂರ್ಣವಾಗಿ - ಒಂದು ಬೆಳೆಯನ್ನು ಆ ವರ್ಷದ ಅವಧಿಗೆ ನೆಚ್ಚಿಕೊಂಡಿರುತ್ತಾರೆ. ಅಂಥವರಿಗೆ ಬೆಳೆ ಹೋದರೆ ಭೂಮಿ ಮೇಲೆ ಪ್ರವಾಹದಿಂದ ಹಾನಿಯಾದರೆ ಅವರಿಗೆ 10 ರೂಪಾಯಿ 20 ರೂಪಾಯಿ 50 ರೂಪಾಯಿ ಕೊಟ್ಟರೆ ಅವರು ಆ ಭೂಮಿ ಸರಿಪಡಿಸುವುದಕ್ಕೆ ದುಡ್ಡು ಎಷ್ಟು ಖರ್ಚು ಮಾಡಬೇಕಾಗುತ್ತದೆ ಮತ್ತೆ ವರ್ಷದ ಬೆಳೆ ಕಳೆದುಕೊಂಡಿರುವಾಗ ಕಳೆದುಕೊಂಡಿರುವ ಬೆಳೆಗೆ ಎಷ್ಟು ಬೆಲೆಯಾಗುತ್ತದೆ, ಇದರ ಬಗ್ಗೆ ಯೋಚನೆ ಮಾಡಬೇಕು. ಇವತ್ತು ಯಾವುದೇ ಬೇರೆ ತರಹದಲ್ಲಿ ರಾಜ್ಯದಲ್ಲಿ ಅನಾಹುತ ನಡೆದಾಗ ಅವರಿಗೆ ಪರಿಹಾರ ಕೊಡುವುದಕ್ಕೂ ರೈತರಿಗೆ ಕೊಡುವುದಕ್ಕೂ ಬಹಳ ಅಜಗಜಾಂತರ ವ್ಯತ್ಯಾಸ ಇದೆ. ಮಾನ್ಯ ಕಂದಾಯ ಸಚಿವರು ರೈತರ ಬಗ್ಗೆ ಬಡವರ ಬಗ್ಗೆ ಹೆಚ್ಚಿನ ಕಳಕಳಿ ಉಳ್ಳವರು. ಅವರು ಇದರ ಬಗ್ಗೆ ಯೋಚನೆ ಮಾಡಬೇಕು. ಈಗ ಕೇಂದ್ರ ಸರ್ಕಾರದವರು ಮಾರ್ಗಸೂಚಿ ಮಾಡಿದ್ದಾರೆ, ಅದರಂತೆ ಕೊಡುತ್ತಿದ್ದೇವೆ ಅಂದರೆ ಸಾಲದು. ಕೇಂದ್ರ ಸರ್ಕಾರದವರು ಇಡೀ ಭಾರತ ದೇಶದ ಲೆಕ್ಕಾಚಾರದಲ್ಲಿ ಒಂದು ಮಾರ್ಗಸೂಚಿ ಮಾಡಿರುತ್ತಾರೆ, ಆದರೆ ಆ ಪ್ರಮಾಣದಲ್ಲಿ ಪರಿಹಾರ ಕೊಟ್ಟರೆ ಯಾತಕ್ಕೂ ಪ್ರಯೋಜನ ಇಲ್ಲ. ಅಂಥ ಪರಿಹಾರ ಕೊಡದೇ ಇರುವುದು ವಾಸಿ. ಸರ್ಕಾರ ಪರಿಹಾರ ಕೊಡುತ್ತೇವೆಂದು ಹೇಳಿಕೊಳ್ಳುವುದಕ್ಕಿಂತ ಕೊಡದೇ ಇರುವುದು ಮೇಲು ಎಂದು ನಾನು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಈಗ 72 ಕೆರೆಗಳು ಒಡೆದು ಹೋಗಿವೆ. 54 ರಸ್ತೆಗಳು ಹಾಳಾಗಿವೆ. 6 ಕಲ್‌ಘರ್ಟ್‌ಗಳು ಹೋಗಿವೆ. 4 ಪಿಕಪ್‌ಗಳು ಹೋಗಿವೆ. ಈಗ ರೆವಿನ್ಯೂ ಅಧಿಕಾರಿಗಳು, ಪಿ. ಡಬ್ಲ್ಯೂ. ಡಿ. ಅಧಿಕಾರಿಗಳು ಜಿಲ್ಲಾ ಪರಿಷತ್ತಿನವರು 1 ಕೋಟಿ 2 ಲಕ್ಷ ರೂಪಾಯಿ ಎಂದು ಅಂದಾಜು ಮಾಡಿದ್ದಾರೆ. ಇಷ್ಟೊಂದು ಪ್ರಮಾಣಕ್ಕೆ ಬರೀ 1 ಕೋಟಿ 2 ಲಕ್ಷದಲ್ಲಿ ಆಗುತ್ತದೆಯೇ ಎಂಬುದು ವಿಚಾರ ಮಾಡಬೇಕು. ಅಂದಾಜು ತಯಾರಿಸಿ ಕಳುಹಿಸಿದ್ದಾರೆ. 72 ಕೆರೆಗಳು 54 ರಸ್ತೆಗಳು, 6 ಕಲ್‌ವರ್ಟ್‌ಗಳು, ಪಿಕಪ್‌ಗಳು ಇಷ್ಟು ಕೆಲಸವನ್ನು ಈ 1 ಕೋಟಿ 2 ಲಕ್ಷ ರೂಪಾಯಿನಲ್ಲಿ ಮಾಡಿಸುವುದಕ್ಕೆ ಸಾಧ್ಯವೇ? ಈ ಅಂದಾಜು ಸರಿಯಾಗಿದೆಯೇ? ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ಅದರಿಂದ ಈ ಅಂದಾಜುಗಳನ್ನು ಪುನರ್‌ವಿಮರ್ಶೆ ಮಾಡುವುದಕ್ಕೋಸ್ಕರ ಅಧಿಕಾರಿಗಳನ್ನು ಕಳುಹಿಸಿ ಸರಿಯಾದ ರೀತಿಯಲ್ಲಿ ಅಂದಾಜು ತಯಾರಿಸಿ ಅದಕ್ಕೆ ಹಣ ಒದಗಿಸಬೇಕು. ರಸ್ತೆಗಳು ಏನಾಗಿವೆ ಅಂದರೆ ಒಂದು ತಾಲ್ಲೂಕಿನಲ್ಲಿ 54 ರಸ್ತೆಗಳು ಎಂದರೆ ಇಡೀ ತಾಲ್ಲೂಕಿನ ವಾಹನಗಳು ಓಡಾಟವೇ ನಿಂತುಹೋಗುತ್ತದೆ. ರಸ್ತೆಗಳು ಇಲ್ಲದಿದ್ದರೆ ವಾಹನ ಓಡಾಡುವುದು ಹೇಗೆ? ಮನುಷ್ಯರು ಓಡಾಡುವುದೂ ಹೇಗೆ? ಮಕ್ಕಳು ಸ್ಕೂಲಿಗೆ ಹೋಗುವುದು ಹೇಗೆ? ಈ ಪರಿಸ್ಥಿತಿ ಉಂಟಾಗಿದೆ.

ಆದರೆ ಒಂದು ತಿಂಗಳಾದರೂ ಕೂಡ ಇವತ್ತಿನವರೆವಿಗೂ ಒಂದೇ ಒಂದು ಅಣೆಯನ್ನು ಸರ್ಕಾರ ಮಂಜೂರು ಮಾಡಿಲ್ಲ. ಅದಕ್ಕೋಸ್ಕರ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇವತ್ತು ಅಲ್ಲಿನ ರಸ್ತೆಗಳ ಅಗತ್ಯದ ಬಗ್ಗೆ ಮಲೆನಾಡಿನಿಂದ

ಬಂದಿರುವವರಿಗೆ ಮಾತ್ರ ಗೊತ್ತಾಗುತ್ತದೆ. ನೀರು ನುಗ್ಗಿದಾಗ ರಸ್ತೆಗಳು ಕೊಚ್ಚಿಹೋಗುತ್ತವೆ. ಅಂತಹ ಕಡೆ ವಾಹನಗಳು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತು ಆ ರಸ್ತೆ ರಿಪೇರಿಗೆ ಹೆಚ್ಚು ಹಣ ಖರ್ಚಾಗುತ್ತದೆ. ರಸ್ತೆಗಳು ಇಷ್ಟೊಂದು ಪ್ರಮಾಣದಲ್ಲಿ ಹಾನಿಯಾಗಿರುವುದರಿಂದ ಈ ರಸ್ತೆಗಳ ರಿಪೇರಿ ಬಗ್ಗೆ ಕೂಡಲೇ ಗ್ರಾಂಟ್ಸ್ ಅನ್ನು ಬಿಡುಗಡೆ ಮಾಡಬೇಕು. ಮತ್ತು 72 ಕೆರೆಗಳ ಒಡೆದುಹೋಗಿವೆ. ಈಗಾಗಲೇ ಮಳೆಗಾಲ ಮುಗಿಯುತ್ತ ಬರುತ್ತಿದೆ. ಈ ಕೆರೆಗಳ ರಿಪೇರಿ ಬಗ್ಗೆ ಯುದ್ಧೋಪಾದಿಯಲ್ಲಿ ಕೆಲಸ ಪ್ರಾರಂಭ ಮಾಡಿ ಪರಿಹಾರ ಕಾರ್ಯಕ್ರಮ ಮಾಡಿದ್ದಾರೂ ಇಷ್ಟು ಹೊತ್ತಿಗೆ ಎಷ್ಟೋ ರಿಪೇರಿ ಆಗಿ ಕೊನೆಯ ಮಳೆಯಲ್ಲಿ ಅಷ್ಟೋ ಇಷ್ಟೋ ನೀರು ನಿಂತು ಬೆಳೆಗಳಿಗೆ ಅನುಕೂಲವಾಗುತ್ತಿತ್ತು. ಇವತ್ತು ಮಲೆನಾಡಿನ ಭಾಗದಲ್ಲಿ ಮಳೆಗಾಲ ಮುಗಿಯುತ್ತಿದೆ. ಬಯಲು ಸೀಮೆಯಲ್ಲಿ ಹಿಂಗಾರು ಮಳೆ ಬರುವಹಾಗೆ ಮಲೆನಾಡಿನಲ್ಲಿ ಹಿಂಗಾರು ಮಳೆ ಬೀಳುವುದಿಲ್ಲ. ಮಲೆನಾಡಿನಲ್ಲಿ ಮುಂಗಾರಿನಲ್ಲೇ ನೀರನ್ನು ಸ್ಟೋರ್ ಮಾಡಬೇಕಾಗುತ್ತದೆ. ಆದ್ದರಿಂದ ಕೂಡಲೇ ಈ ಕೆರೆಗಳನ್ನು ದುರಸ್ತಿ ಮಾಡಿಸಿ ದನಕರುಗಳು ನೀರು ಕುಡಿಯುವುದಕ್ಕಾದರೂ ಅಲ್ಲಿ ನೀರು ನಿಲ್ಲುವ ಬಗ್ಗೆ ಅಗತ್ಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಇನ್ನು ಕಲ್ವರ್ಟ್, ಪಿಕಪ್‌ಗಳ ವಿಷಯ. ಹೇಮಾವತಿ ನಾಲೆಯ ಪಿಕಪ್ ಒಂದು ಒಡೆದು ಹೋಗಿ ಅವರು ಟೆಂಪರರಿ ಅರೇಂಜ್‌ಮೆಂಟ್ ಮಾಡಿದ್ದಾರೆ. ಇನ್ನೊಂದು ವಿಷಯ ಏನೆಂದರೆ ಒಂದು ಡ್ಯಾಮ್ ಕಟ್ಟುವಾಗಲೇ ಒಂದು ಅಂದಾಜು ತಯಾರು ಮಾಡಿರುತ್ತಾರೆ. ಡ್ಯಾಮ್‌ನಲ್ಲಿ ನೀರು ಪೂರ್ಣಮಟ್ಟ ನಿಂತಾಗ ಇಷ್ಟು ಎಕರೆ ನೀರು ಮುಳುಗಡೆಯಾಗುತ್ತದೆ, ಇಂತಿಂತ ಊರಿನಲ್ಲಿ ಇಂತಿಂತ ಸರ್ವೇ ನಂಬರ್‌ಗಳಲ್ಲಿ ನೀರು ಮುಳುಗಡೆಯಾಗುತ್ತದೆ ಎಂದು ಅಂದಾಜು ಮಾಡಿರುತ್ತಾರೆ. ಆದರೆ ಓಟೆಹೊಳೆ ಪ್ರಾಜೆಕ್ಟ್ ತಯಾರಿಸುವಾಗ ಮಾಡಿದ್ದ ಅಂದಾಜು ಇವತ್ತು ತಲೆಕೆಳಗಾಗಿದೆ. ಅಲ್ಲಿ ಅವರು ಎಷ್ಟುದೂರ ಹಿನ್ನಲೆ ನೀರು ನಿಲ್ಲುತ್ತದೆ ಎಂದು ಅಂದಾಜು ಮಾಡಿದ್ದರೋ ಅದಕ್ಕಿಂತಲೂ ಜಾಸ್ತಿ ನೀರು ನಿಂತಿದ್ದು, ಅದರ ಮೇಲೆ ಇದ್ದಂತಹ ರಸ್ತೆ 40 ಅಡಿ ನೀರು ಮುಳುಗಡೆಯಾಗಿದೆ. ಆ ಭಾಗದಲ್ಲಿ 40 ಅಡಿ ಮುಳುಗಡೆಯಾಗಿದ್ದು ಎಷ್ಟರ ಮಟ್ಟಿಗೆ ಎಂಜಿನಿಯರ್ಸ್ ಅಂದಾಜು ಮಾಡಿದ್ದಾರೆಂದು ಇದರಿಂದ ಗೊತ್ತಾಗುತ್ತದೆ. ಅಲ್ಲಿ ರಸ್ತೆ ಬಗ್ಗೆ ಟೆಂಪರರಿಯಾಗಿ ಏನೋ ಕೆಲಸ ಮಾಡಿದ್ದಾರೆ. ಇಷ್ಟೊಂದು ಮುಳುಗಡೆ ಆಗಬೇಕಾದರೆ ಎಂಜಿನಿಯರುಗಳ ಮೇಧಾವಿತನ ಎಷ್ಟರಮಟ್ಟಿನದು? ಇಷ್ಟು ಪ್ರಮಾಣದಲ್ಲಿ ಅಲ್ಲಿ ನೀರು ನಿಲ್ಲುತ್ತದೆಂದು ಅವರಿಗೆ ಗೊತ್ತಿರಲಿಲ್ಲವೇ? ಇವತ್ತು ಎರಡು ಕಡೆ ಪ್ರಯಾಣ ನಿಂತು ಹೋಗಿ ಅಲ್ಲಿ ಖಾಸಗೀ ವ್ಯಕ್ತಿಗಳು ತೆಪ್ಪ ಇಟ್ಟುಕೊಂಡು ಜನರನ್ನು ಸಾಗಿಸುತ್ತಿದ್ದಾರೆ. ಆ ತೆಪ್ಪಗಳಲ್ಲಿ 8-10 ಜನರು ಕುಳಿತು ಸ್ವಲ್ಪ ಆ ಕಡೆ ಈ ಕಡೆ ವಾಲಿದರೆ ಪೂರ್ತಿ ತೆಪ್ಪ ನೀರುಪಾಲಾಗುತ್ತದೆ. ಇವತ್ತಿನವರೆಗೆ ಅಲ್ಲಿ ಮೋಟಾರ್ ಬೋಟ್‌ಗಳನ್ನು ಪ್ರೊವೈಡ್ ಮಾಡುವುದಕ್ಕೆ ಆಗಿಲ್ಲ. ಇವತ್ತು ಅಲ್ಲಿ ವಿದ್ಯಾರ್ಥಿಗಳು, ಸಾರ್ವಜನಿಕರು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಬೇಕಾಗಿದ್ದು ಒಂದು ಮೋಟಾರ್ ಬೋಟ್ ಒದಗಿಸುವ ಬಗ್ಗೆ ಎಂಜಿನಿಯರಿಂಗ್ ಡಿಪಾರ್ಟ್‌ಮೆಂಟ್‌ನವರು ಎಷ್ಟೇ ಪ್ರಯತ್ನ ಮಾಡಿದರೂ ಇವತ್ತಿನವರೆಗೆ ಆಗಿಲ್ಲ. ಇದರಿಂದ ಎಷ್ಟು ತೊಂದರೆ ಆ ಭಾಗದ ಜನರಿಗೆ ಆಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವತ್ತು ರಸ್ತೆಗಳ ಕೆರೆಗಳ ಮತ್ತು ಕಲ್ವರ್ಟ್‌ಗಳ ಕೆಲಸ ತುರ್ತಾಗಿ ಆಗಬೇಕು. ಇದಕ್ಕೆ ಎಷ್ಟು ದಿವಸಗಳಲ್ಲಿ ಹಣ ಬಿಡುಗಡೆ ಮಾಡುತ್ತೀರಿ? ಎಷ್ಟು ಬೇಗ- ಕಟ್ಟಿಸಿಕೊಡುತ್ತೀರಿ ಎಂಬು ತಮ್ಮ ಉತ್ತರದಲ್ಲಿ ಹೇಳಬೇಕೆಂದು ಹೇಳುತ್ತೇನೆ. ಇನ್ನು ಬೆಳೆ ಹಾನಿಯಾಗಿರತಕ್ಕ ಬಗ್ಗೆ ಬರೀ ಸಣ್ಣ ರೈತರಿಗೆ, 2 ಎಕರೆಗಿಂತ ಕಡಿಮೆ ಭೂಮಿ ನೊಂದವರಿಗೆ ಪರಿಹಾರವನ್ನು ಕೊಡುತ್ತಿದ್ದೀರಿ. ಇದು 2 ಎಕರೆಗಿಂತ ಹೆಚ್ಚು ಭೂಮಿ ಇರುವವರಿಗೆ ಬರುವುದಿಲ್ಲ. ಆದ್ದರಿಂದ ಕನಿಷ್ಟ ಪಕ್ಷ 10 ಎಕರೆಯವರೆವಿಗೂ ಬೆಳೆ ಹಾನಿ

ಆಗಿರತಕ್ಕವರಿಗೆ ಕಾಂಪನ್‌ಸೇಷನ್ ಕೊಡುವ ವ್ಯವಸ್ಥೆಯಾಗಬೇಕೆಂದು ನಾನು ಹೇಳುತ್ತೇನೆ. ಹಾಗೆ ಕೊಡದೇ ಇದ್ದರೆ ಅವರಿಗೆ ಭಾರಿ ಅನ್ಯಾಯ ಮಾಡಿದ ಹಾಗೆ ಆಗುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡಿ ನನ್ನ ಎರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀಮತಿ ಸುಮ ವಸಂತ್ (ವಿರಾಜಪೇಟೆ) : ಮಾನ್ಯ ಉಪಾಧ್ಯಕ್ಷಿಣಿಯವರೆ ...

ಶ್ರೀ ವಾಟಾಳ್ ನಾಗರಾಜ್ : ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಸಭೆಯಲ್ಲಿ ಇಲ್ಲ. ನೀರಾವರಿ ಸಚಿವರು ಇಲ್ಲ.

ಉಪಾಧ್ಯಕ್ಷರು : ಮಂತ್ರಿಗಳು ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಈ ಸಭೆಗೆ ಶೋಭೆ ತರುವ ಕೆಲಸವೇ? ಅಷ್ಟೊಂದು ಜನ ಮಂತ್ರಿಗಳಿದ್ದಾರೆ. ಹೊಸದಾಗಿ ಮಂತ್ರಿಗಳು ಆಗಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನನ್ನ ಖಾತೆಗೆ ಸಂಬಂಧಪಟ್ಟ ವಿಷಯವನ್ನು ಹಿಡಿದು ಕೊಂಡು ಕುಳಿತ್ತಿದ್ದೀರಿ, ನಾನು ಅದಕ್ಕೆ ಇಲ್ಲೇ ಇದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಬಗ್ಗೆ ನನ್ನದೇನೂ ಇಲ್ಲ.

ಶ್ರೀ ಸಿ.ಬೈರೇಗೌಡ : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಬೆಳಿಗ್ಗೆಯಿಂದ ಏತಕ್ಕೆ ಇಲ್ಲಿ ಕುಳಿತಿದ್ದಾರೆಂದರೆ, ಹರಿಕಥೆ ನಡೆಯುವಾಗ ಯಾರೋ ಒಬ್ಬರು ಬೆಳಿಗ್ಗೆ ಆಗುವವರೆಗೆ ಕುಳಿತಿದ್ದರಂತೆ. ಏತಕ್ಕೆ ನೀನೊಬ್ಬನೇ ಬೆಳಿಗ್ಗೆಯಾಗುವವರೆಗೆ ಕುಳಿತಿದ್ದೆ ಅಂದರೆ ಹರಿಕಥೆ ದಾಸರು ಕುಳಿತಿರುವ ಚಾಪೆ ನನ್ನದು ಅದಕ್ಕೋಸ್ಕರ ನಾನು ಕಾಯುತ್ತಿದ್ದೇನೆ ಅಂದನಂತೆ. ಅದೇ ರೀತಿಯಲ್ಲಿ ಕಂದಾಯ ಮಂತ್ರಿಗಳು ನನ್ನ ಖಾತೆಯ ಮೇಲೆ ಚರ್ಚೆ ಮುಗಿದರೆ ಸಾಕಪ್ಪ ಎಂದು ಇಲ್ಲಿದ್ದಾರೆ. ಇಲ್ಲದಿದ್ದರೆ ಅವರು ಇಲ್ಲಿ ಇರುತ್ತಿರಲಿಲ್ಲ.

ಶ್ರೀಮತಿ ಸುಮ ವಸಂತ : ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ವರ್ಷ ಹೆಚ್ಚು ಮಳೆಯಿಂದಾಗಿ ನಷ್ಟಕ್ಕೆ ಒಳಗಾಗಿರುವ ಬಗ್ಗೆ ನಾನು ಕೊಡಗು ಜಿಲ್ಲೆಗೆ ಸಂಬಂಧಪಟ್ಟಹಾಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಬೇರೆ ಮಂತ್ರಿಗಳು ಯಾರೂ ಇಲ್ಲ; ನೀವು ಮಾತನಾಡುತ್ತೀರಾ?

ಶ್ರೀಮತಿ ಸುಮ ವಸಂತ : ಈಗ ಸದ್ಯಕ್ಕೆ ಕಂದಾಯ ಮಂತ್ರಿಗಳಿದ್ದಾರೆ. ಅವರಿಗೆ ಹೇಳುತ್ತೇನೆ. ಮಂತ್ರಿಗಳು ಇಲ್ಲದೆ ನೀವು ಏತಕ್ಕೆ ಮಾತನಾಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ಅದೇ ನಾನು ತಪ್ಪು ಮಾಡಿದ್ದೇನೆ.

ಶ್ರೀಮತಿ ಸುಮ ವಸಂತ : ಸದ್ಯಕ್ಕೆ ಕಂದಾಯ ಮಂತ್ರಿಗಳು ಪರಿಹಾರ ಕೊಡಬೇಕಾಗಿದೆ. ಕೊಡಗು ಜಿಲ್ಲೆಗೆ ಸಂಬಂಧಪಟ್ಟಹಾಗೆ ಎರಡು ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಈ ಸಲ ನಮಗೆ ಮೇ ತಿಂಗಳಿನಲ್ಲಿಯೇ ಮಳೆ ಶುರುವಾಗಿದೆ. ಇನ್ನು ಸಹ ಕೊಡಗಿನಲ್ಲಿ ಮಳೆ ನಿಲ್ಲಲೇ ಇಲ್ಲ. ಪ್ರತಿಯೊಂದು ವಿಚಾರದಲ್ಲಿಯೂ ಕೊಡಗು ಜಿಲ್ಲೆಯನ್ನು ತುಂಬಾ ನಿರ್ಲಕ್ಷ್ಯ ಮಾಡಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಇತ್ತೀಚಿಗೆ ಆದಾಯ ಮಿತಿಯನ್ನು 6500 ರೂಪಾಯಿಗಳು ಎಂದು ಮಾಡಿದ್ದಾರೆ. ಕೂಲಿ ಕಾರ್ಮಿಕರಿಗೂ ಸಹ 6500 ರೂಪಾಯಿ ಆದಾಯ ಇರುತ್ತದೆ. ಅದನ್ನು ಸಡಿಲಗೊಳಿಸಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಕೊಡಗು ಜಿಲ್ಲೆಯಲ್ಲಿ ರೈತರು ಪರಿಹಾರವನ್ನು ಕೇಳುವುದಕ್ಕೆ ಹೋದರೆ

ಒಂದು ಎಕರೆ ಅರ್ಧ ಎಕರೆ ಕಾಫಿ ತೋಟವಿದ್ದರೆ ಅಂತಹವರಿಗೆ ಪರಿಹಾರ ಕೊಡುವುದಿಲ್ಲ. ಒಂದು ಎಕರೆ ಅರ್ಧ ಎಕರೆ ಕಾಫಿತೋಟದಲ್ಲಿ ಏನು ಬೆಳೆಯುವುದಕ್ಕೆ ಸಾಧ್ಯವಿದೆ? ಈವೊಂದು ಮಿತಿಯನ್ನು ಕೂಡ ತೆಗೆದು ಯಾರಿಗೆ ಒಂದು ಎಕರೆ ಅರ್ಧ ಎಕರೆ ಕಾಫಿ ತೋಟವಿದೆ ಅಂತಹ ರೈತರಿಗೆ ಮತ್ತು ಯಾರ ಗದ್ದೆಯ ಫಸಲು ನಷ್ಟವಾಗಿದೆ ಅಂತಹವರಿಗೆ ಪರಿಹಾರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ ಕಾವೇರಿ ನದಿ ನೀರು ಹರಿಯುತ್ತದೆ. ಈ ಸಲ ಹೆಚ್ಚು ಮಳೆಯಿಂದಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಲಿಕ್ಕೆ ರಸ್ತೆ ಮತ್ತು ಬ್ರಿಡ್ಜ್‌ಗಳು ನೀರಿನಲ್ಲಿ ಮುಳುಗಿರುವುದರಿಂದ ಮತ್ತು ಹಾಳಾಗಿರುವುದರಿಂದ ಸಂಚಾರಕ್ಕೆ ಅವ್ಯವಸ್ಥೆಯಾಗಿದೆ. ಇದಕ್ಕೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿ ರಸ್ತೆ ದುರಸ್ತಿ ಮತ್ತು ಸೇತುವೆ ದುರಸ್ತಿ ಮಾಡುವುದಕ್ಕೆ ಹಣವನ್ನು ಬಿಡುಗಡೆ ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಅದೇ ರೀತಿಯಲ್ಲಿ ನಮ್ಮಲ್ಲಿ ಕಟ್ಟಡಗಳು ಮತ್ತು ರಸ್ತೆಗಳು ತುಂಬಾ ಹಾನಿಗೀಡಾಗಿವೆ. ಅದಕ್ಕೂ ಕೂಡ ತಾವು ಪರಿಹಾರವನ್ನು ಕೊಟ್ಟಿದ್ದೀರಿ. ಅದು ಸಾಕಾಗುವುದಿಲ್ಲ, ತಾವು 2 ಕೋಟಿ ರೂಪಾಯಿ ಹಣವನ್ನು ಹೆಚ್ಚಿಗೆ ಬಿಡುಗಡೆ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ನಮ್ಮ ಜಿಲ್ಲೆಗೆ ಏನು ಅನುದಾನ ಕೊಡುತ್ತೀರಿ ಅದು ತುಂಬಾ ಕಡಿಮೆ. ಜನಸಂಖ್ಯೆಯ ಆಧಾರದ ಮೇಲೆ ಅನುದಾನವನ್ನು ಕೊಡುತ್ತಿದ್ದಾರೆ. ಅದು ಸಿಬ್ಬಂದಿ ವರ್ಗದವರಿಗೆ ಅವರ ಸಂಬಳ ಸಾರಿಗೆ ಕೊಡುವುದಕ್ಕೆ ಸಾಕಾಗುವುದಿಲ್ಲ. ತಾವು ಪರಿಹಾರ ರೂಪದಲ್ಲಿ ಹೆಚ್ಚಿನ ಹಣವನ್ನು ಕೊಡಗು ಜಿಲ್ಲೆಗೆ ಬಿಡುಗಡೆ ಮಾಡಬೇಕೆಂದು ಕೇಳಿಕೊಂಡು ನಾನು ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎಂ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಉಪಾಧ್ಯಕ್ಷಿಣಿಯವರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಸಲ ಬಹುಶ: ವಿಪರೀತ ಮಳೆಯಿಂದಾಗಿ ನಮ್ಮ ಜಿಲ್ಲೆಯ ಆರ್ಥಿಕ ಬೆಳೆಯಾದ ಅಡಿಕೆ ಬೆಳೆ ನೂರರಲ್ಲಿ ಅರವತ್ತು ಭಾಗ ಲಾಸ್ ಆಗಿದೆ. ಅಡಿಕೆ ಬೆಳೆಗೋಸ್ಕರ ಸಹಕಾರ ಸಂಘಗಳಿಂದ ಸಾಲದಲ್ಲಿ ಗೊಬ್ಬರ ತೆಗೆದುಕೊಂಡು ಅಡಿಕೆ ಬೆಳೆಸಿದ್ದರು. ಈಗ ಅವರೆಲ್ಲರೂ ತುಂಬಾ ಕಷ್ಟದಲ್ಲಿದ್ದಾರೆ. ಅವರ ಬೆಳೆ ನಷ್ಟದ ಸರ್ವೆ ಮಾಡಿಸಿ ಅವರಿಗೆ ಎಷ್ಟು ನಷ್ಟವಾಗಿದೆ ಅಷ್ಟು ಪರಿಹಾರ ಕೊಡುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ನಾನು ತಮ್ಮ ಮೂಲಕ ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ಅದೇ ರೀತಿಯಲ್ಲಿ ವಿಪರೀತ ಮಳೆ ಬಂದ ಸಂದರ್ಭದಲ್ಲಿ ನೀರು ಹರಿದು ಹೋಗುತ್ತದೆ. ಅದಕ್ಕೆ ನಾವು ತೋಡಿನ ಎರಡೂ ಬದಿಯಲ್ಲಿ ತೆಂಗಿನ ಮರಗಳು ಮತ್ತು ಎರಡು ಬೆಳೆ ಬತ್ತ ಬೆಳೆಯತಕ್ಕ ಗದ್ದೆ ಇರುತ್ತದೆ. ಪ್ರತಿ ದಿನ ವಿಪರೀತ ಮಳೆ ಬಂದು ತೋಡಿನ ಎರಡೂ ಬದಿಯಲ್ಲಿರತಕ್ಕ ಭೂಮಿ ಜರುಗಿ ಮರುಳು ಮತ್ತು ಗದ್ದೆಗೆ ಹೋಗಿ ಸಂಪೂರ್ಣ ಬತ್ತದ ಬೆಳೆ ನಷ್ಟವಾಗಿದೆ. ನೀರು ಗದ್ದೆಗೆ ಉರುಳದಂತೆ ಮಾಡಿಕೊಳ್ಳುವ ಶಕ್ತಿ ರೈತನಿಗೆ ಇರುವುದಿಲ್ಲ. ಅದನ್ನು ಸರಿಮಾಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಿಸುತ್ತೇನೆ. ಮಳೆ ಬಿದ್ದಾಗ ಸಾಂಕೇತಿಕವಾಗಿ ಒಂದು ಸಾವಿರ ಎರಡು ಸಾವಿರ ಪರಿಹಾರವನ್ನು ಕೊಡುತ್ತಿದ್ದಾರೆ ಅದು ಖಂಡಿತವಾಗಿಯೂ ಸಾಲುವುದಿಲ್ಲ.

ಸಾಮಾನ್ಯವಾಗಿ ಬಡಕುಟುಂಬದ ಒಬ್ಬ ವ್ಯಕ್ತಿ ಮನೆಯನ್ನು ಕಳೆದುಕೊಂಡಾಗ ಕನಿಷ್ಠ ಪಕ್ಷ ಹತ್ತು ಸಾವಿರ ರೂಪಾಯಿಯಾದರೂ ಪರಿಹಾರ ಸಿಗದೇ ಇದ್ದರೆ ಖಂಡಿತವಾಗಿಯೂ ಪುನ: ಮನೆ ಕಟ್ಟಿಕೊಳ್ಳುವುದಕ್ಕೆ ಅವನಿಗೆ ಸಾಧ್ಯವಿಲ್ಲ. ಆದ್ದರಿಂದ ಸಾಂಕೇತಿಕವಾಗಿ ಕೊಡುವಂಥ ಒಂದೆರಡು ಸಾವಿರ ರೂಪಾಯಿಗಳನ್ನು ಕೊಡುವುದನ್ನು

ಬಿಟ್ಟು ಕಡೆಯಪಕ್ಷ ಹತ್ತು ಸಾವಿರ ರೂಪಾಯಿ ಆದರೂ ಕೊಡಬೇಕು. ನೇತ್ರಾವತಿ ನದಿ ದಾಟುವ ಸಂದರ್ಭದಲ್ಲಿ ಮೊನ್ನೆ ತಾನೆ ವಿಪರೀತ ಮಳೆ ಬಂದು ಎಷ್ಟೋ ಜನ ನೀರಲ್ಲಿ ಮುಳುಗಿ ಸತ್ತರು. ಅವರಿಗೆ ಕೇವಲ ಎಂಟು ಸಾವಿರ ರೂಪಾಯಿ ಮಾತ್ರ ಪರಿಹಾರಧನವಾಗಿ ಒಬ್ಬ ವ್ಯಕ್ತಿಗೆ ಅಂತ ಕೊಟ್ಟರು. ಕಡಿಮೆ ಪಕ್ಷ ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ, ಒಂದು ಲಕ್ಷ ರೂಪಾಯಿ ಕೊಡಬೇಕಿತ್ತು. ಮತ್ತೆ ಅಲ್ಲಿ ದಾಟಲಿಕ್ಕೆ ದೋಣಿ ಇದೆ. ಆ ದೋಣಿಯ ಬದಲು ಯಾಂತ್ರಿಕ ದೋಣಿಯನ್ನು ಹಾಕುವ ವ್ಯವಸ್ಥೆಯನ್ನು ಕೂಡ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಮತ್ತು ಶಿವಮೊಗ್ಗದಲ್ಲಿ ಅಂಗಳಯ್ಯನಕೆರೆ ಅಂತ ಹರಿಜನ ಕಾಲೋನಿ ಇದೆ. ಅಲ್ಲಿ ಮಳೆಯ ಪ್ರವಾಹದಿಂದಾಗಿ ಸುಮಾರು 200-300 ಮನೆಗಳು ಹಾಳಾಗಿವೆ. ಒಂದು ಮನೆಗೆ 5 ಕೆ.ಜಿ. ಅಕ್ಕಿ ಮತ್ತು 50 ರೂಪಾಯಿ ಅಂತ ಕೊಟ್ಟಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ಸರ್ಕಾರ ಹೀಗೆ ಕೊಟ್ಟಿರುವುದು ಏನೇನೂ ಸಾಲದು. ನಿಜವಾಗಿಯೂ ಅವರಿಗೆ ಎಷ್ಟು ಅವಶ್ಯಕತೆ ಇದೆ, ಅದನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಇದರ ಜೊತೆಗೆ ಶಿವಮೊಗ್ಗ ಜಿಲ್ಲೆಯಲ್ಲಿ ಹತ್ತಿ ಬೆಳೆ ನಷ್ಟವಾಗಿದೆ. ಅದಕ್ಕೂ ಸರಿಯಾದ ಪರಿಹಾರ ಕೊಡುವಂಥ ವ್ಯವಸ್ಥೆ ಮಾಡಬೇಕು. ಇವತ್ತು ಎಲ್ಲಾ ಕಡೆ ಮಳೆ ಬಂದು ಎಲ್ಲಾ ರಸ್ತೆಗಳು ಹಾಳಾಗಿವೆ. ಅದು ಪಿ. ಡಬ್ಲ್ಯೂ. ಡಿ. ರಸ್ತೆ ಇರಬಹುದು ಅಥವಾ ಜಿಲ್ಲಾ ರಸ್ತೆಗಳು ಇರಬಹುದು. ಯಾವುದೇ ರಸ್ತೆಗಳಲ್ಲಿ ಕೂಡ ಇವತ್ತು ವಾಹನ ಸಂಚಾರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೆ ಆದಷ್ಟು ಹೆಚ್ಚಿಗೆ ಹಣ ಬಿಡುಗಡೆ ಮಾಡಬೇಕು. ಈ ರಸ್ತೆಗಳೆಲ್ಲಾ ಹಾಳಾಗಿ, ಪೂರ್ತಿಯಾಗಿ ರಸ್ತೆ ರಿಪೇರಿ ಮಾಡುವಂಥ ವ್ಯವಸ್ಥೆ ಇವತ್ತು ಆಗಬೇಕಾಗಿದೆ. ಮೊನ್ನೆತಾನೆ ಮುಖ್ಯಮಂತ್ರಿಗಳು ನಮ್ಮ ಶಿವಮೊಗ್ಗ ಮುನಿಸಿಪಾಲಿಟಿಗೆ ಹೋದಾಗ, ಮುನಿಸಿಪಾಲಿಟಿ ಕ್ಷೇತ್ರದೊಳಗೆ ಒಂದು ಕೋಟಿ ಅಂದಾಜು ವೆಚ್ಚ, ರಸ್ತೆ ರಿಪೇರಿಗೆಂದು ಮಾಡಿದ್ದಾರೆ. ಅದನ್ನು ಆದಷ್ಟು ಬೇಗ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿ, ಖಂಡಿತವಾಗಿ ಈ ರಸ್ತೆಗಳ ತುರ್ತು ರಿಪೇರಿ ಮಾಡುವ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಾ) : ಮಾನ್ಯ ಅಧ್ಯಕ್ಷರೇ, ಪ್ರವಾಹದ ಬಗ್ಗೆ ಮಾನ್ಯ ಸಚಿವರು ಹೇಳಿಕೆಯನ್ನು ನೀಡಿದ್ದಾರೆ. ಈ ವರ್ಷ ನಮ್ಮ ರಾಜ್ಯದಲ್ಲಿ ವಿಪರೀತಿ ಮಳೆ ಬಂತು, ಪ್ರವಾಹ ಬಂತು. ಸುಮಾರು 170 ತಾಲ್ಲೂಕುಗಳಲ್ಲಿ ವಿಪರೀತಿ ಮಳೆಯಿಂದ ಪ್ರವಾಹ ಬಂದು ರಸ್ತೆಗಳು ಕೊಚ್ಚಿಹೋಗಿವೆ, ಕೆರೆಗಳು ಒಡೆದುಹೋಗಿವೆ. ಜೀವಹಾನಿಯಾಗಿದೆ ಮತ್ತು ಜಾನುವಾರುಗಳು ಸತ್ತುಹೋಗಿವೆ. ಆದರೆ ಈ ಸರ್ಕಾರ ಕೇವಲ 11 ಕೋಟಿ 30 ಲಕ್ಷ ರೂಪಾಯಿ ಮಾತ್ರ ಈ ಒಂದು ಪರಿಹಾರಕ್ಕಾಗಿ ನೀಡಿದೆ. ಆದರೆ ಈ ಪರಿಹಾರ ಕಾರ್ಯಕ್ಕಾಗಿ ನೀಡಿದಂಥ ಹಣ ಅತ್ಯಂತ ಕಡಿಮೆ. ಮಾನ್ಯ ಕಂದಾಯ ಸಚಿವರಾದ ಶ್ರೀ ಖರ್ಗೆಯವರು ಏನು ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕಿತ್ತೋ, ಆ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತನ್ನು ಕೊಟ್ಟಿಲ್ಲ, ಹೆಚ್ಚು ಹಣ ನೀಡುವಲ್ಲಿ ಸರ್ಕಾರ ಬಹಳಷ್ಟು ವಿಫಲವಾಗಿದೆ. ಅದಕ್ಕೆ ಒಂದು ಕಾರಣ ಇದೆ. ಮಾನ್ಯ ಉಪನಾಯಕರಾದ ಶ್ರೀ ಸಿಂಧ್ಯ ಅವರು ಮಾತನಾಡುವಾಗ 8ನೇ ಪ್ಲಾನಿಂಗ್ ಕಮಿಷನ್‌ನಲ್ಲಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳಿಗೆ ಪ್ರಕೃತಿ ವಿಕೋಪಗಳಿಗೆ ಇಷ್ಟೇ ಹಣ ಎಂದು, ಅದು ಅತಿವೃಷ್ಟಿ ಇರಲಿ, ಅನಾವೃಷ್ಟಿ ಇರಲಿ, ನಿಗದಿಮಾಡಿದೆಯೆಂದೂ ಕರ್ನಾಟಕ್ಕೆ ಕೇವಲ 27 ಕೋಟಿ ರೂಪಾಯಿಗಳನ್ನು ಮೀಸಲು ಮಾಡಿಟ್ಟಿದ್ದಾರೆಂದು ಹೇಳಿದರು. ಇದರಿಂದ ರಾಜ್ಯಸರ್ಕಾರಕ್ಕೆ ಸಾಕಷ್ಟು ತೊಂದರೆಯಾಗುತ್ತದೆ. ಇದರ ಬಗ್ಗೆ ಎರಡನೇ ಮಾತಿಲ್ಲ. ಆದ್ದರಿಂದ ಕೊನೆಯಪಕ್ಷ ಮುಖ್ಯಮಂತ್ರಿಗಳು ಮತ್ತು ಕಂದಾಯ ಮಂತ್ರಿಗಳು ಕೇಂದ್ರ ಸರ್ಕಾರಕ್ಕೆ

ಒತ್ತಾಯಮಾಡಿ ಏನು ಎಂಟನೇ ಫೈನಾನ್ಸ್ ಕಮೀಷನ್‌ನಲ್ಲಿ ಹಣ ನಿಗದಿಪಡಿಸಿದ್ದಾರೆ, ಅದನ್ನು ನೀವು ತೆಗೆದುಹಾಕದಿದ್ದರೆ ರಾಜ್ಯಸರ್ಕಾರ ಕೆಲಸ ಮಾಡುವುದಕ್ಕೆ ಆಗುವುದಿಲ್ಲ ಮತ್ತು ನಮ್ಮ ಸ್ವಂತ ಹಣಕಾಸಿನಿಂದ ಖರ್ಚುಮಾಡುವ ಶಕ್ತಿ ಸರ್ಕಾರಕ್ಕೆ ಇಲ್ಲ. ಅದೇನೇ ಇರಲಿ, ಮುಖ್ಯವಾಗಿ ಕೇಂದ್ರದ ಜೊತೆಯಲ್ಲಿ ಮಾತನಾಡಿ ಇವತ್ತು ಏನು ನ್ಯಾಚುರಲ್ ಕೆಲಮಿಟೀಸ್ ಕೋಡ್ ಇಟ್ಟಿದ್ದಾರೆ, ಅದನ್ನು ದಯವಿಟ್ಟು ತಿದ್ದುಪಡಿ ಮಾಡಬೇಕೆಂದು ನಾನು ಕೇಳುತ್ತೇನೆ. ಇನ್ನು ಮಳೆ ಹೇಗೆ ಆಗಿದೆ ಎಂಬುದನ್ನು ನೋಡಬೇಕು ಜೂನ್, ಜುಲೈ ತಿಂಗಳಲ್ಲಿ ಮಾತ್ರ ವಿಪರೀತ ಮಳೆ ಇದೆ. ಈ ಸಾರಿ 5 ಮಿಲಿಮೀಟರ್ ಮಳೆ ಬೀಳುವ ಕಡೆ 30-40 ಮೀ. ಮೀಟರ್ ಮಳೆ ಬಿದ್ದಿದೆ. ಆದರೆ ಆಗಸ್ಟ್ ತಿಂಗಳಲ್ಲಿ ಮಳೆ ಇಲ್ಲ. ಎಲ್ಲರೂ ತಿಳಿದುಕೊಂಡಿದ್ದರು ಬರಗಾಲ ಪರಿಹಾರವಾಗಿದೆ ಎಂದು. ಆದರೆ ಆಗಸ್ಟ್‌ನಲ್ಲಿ ಮಳೆ ಆಗದೇ ಇರುವುದರಿಂದ, ಕೇವಲ ಹಸಿರು ಕಾಣಿಸುತ್ತಿದೆಯೇ ಹೊರತು ರೈತರಿಗೆ ಶೇಂಗಾ ಬೀಜ ಬಾರದೇ ಇರುವ ಪರಿಸ್ಥಿತಿ ಇದೆ. ಜೋಳ ಬೆಳೆದಿದೆ, ಆದರೆ ತೆನೆ ಇಲ್ಲ. ಯಾವುದೇ ಬೆಳೆಗೆ ಪೈರು ಬಂದಿಲ್ಲ. ದಯವಿಟ್ಟು ಮಳೆ ಜಾಸ್ತಿಯಾಗಿದೆ ಎಂದು ಹೇಳಿ ನಿಮ್ಮ ಆಣೆವಾರಿ ಲೆಕ್ಕದಲ್ಲಿ ನಿಮ್ಮ ತಲಾಟಿಗಳು ಏನು ಮಾಡುತ್ತಾರೆ ಎಂದರೆ ಈ ವರ್ಷ ಬರಗಾಲ ಇಲ್ಲವೆಂದು ಹೇಳುತ್ತಾರೆ. ರೈತರಿಗೆ ಕಂದಾಯ ಮತ್ತು ಇನ್ನಿತರೆ ವಸೂಲ್ಮಾಡುವುದಕ್ಕೆ ಹೋಗುತ್ತೀರಿ. ಅದಕ್ಕೆ ದಯಮಾಡಿ, ಈ ಮಳೆ ಅಣೆವಾರಿಯನ್ನು ಕೈಬಿಟ್ಟು, ಬೆಳೆ ಅಣೆವಾರಿಯನ್ನು ಕೊಡಿಸಿದರೆ ಮಾತ್ರ ರೈತರಿಗೆ ಸಾಧ್ಯವಾಗುತ್ತದೆ. ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಇವರ ಉತ್ತರದಲ್ಲಿ ಕಂದಾಯ ಇಲಾಖೆಯವರು ಹೇಳಿದ್ದಾರೆ. ಒಟ್ಟು 133 ಜನ ಈ ಮಳೆಯಿಂದ ಮತ್ತು ಪ್ರವಾಹದಿಂದ ಸತ್ತಿದ್ದಾರೆ ಎಂದು. ಇವರಿಗೆ ಕೇವಲ 8 ಸಾವಿರ ರೂಪಾಯಿ ಕೊಡುತ್ತಾರೆ, ಇದು ಸಾಲದು. ದಯಮಾಡಿ, ಸತ್ತಂಥವರಿಗೆ ಒಂದು ಲಕ್ಷ ರೂಪಾಯಿ ಕೊಡುವುದಕ್ಕೆ ಪ್ರಯತ್ನ ಮಾಡಿ. ಅಂದರೆ, ಕೇವಲ ಒಂದು ಕೋಟಿ 33 ಲಕ್ಷ ರೂಪಾಯಿಗಳು ಸಾಕಾಗುತ್ತದೆ. ಅದೇ ರೀತಿ ಜಾನುವಾರುಗಳ ಬಗ್ಗೆ ಹೇಳಬೇಕಾದರೆ, ಬಹಳಷ್ಟು ಸಣ್ಣ ರೈತರ ಎಮ್ಮೆ ಸತ್ತಿವೆ, ಕುರಿಗಳು ಸತ್ತಿವೆ, ಎತ್ತುಗಳು ಸತ್ತಿವೆ, ಆಡುಗಳು ಸತ್ತಿವೆ. ಇದರಿಂದ ಬಹಳಷ್ಟು ರೈತರಿಗೆ ತೊಂದರೆಯಾಗಿದೆ. ಇದ್ದಕ್ಕೆ ಪರಿಹಾರಧನ ಕೇವಲ ಮುನ್ನೂರು ರೂಪಾಯಿ ಕೊಡುತ್ತೀರಿ. ಯಲಬುರ್ಗಾ ತಾಲ್ಲೂಕಿನಲ್ಲಿ ಒಬ್ಬ ರೈತರ 26 ಕುರಿಗಳು ಪ್ರವಾಹದಿಂದ ಸತ್ತಿವೆ. ಕೇವಲ 300 ರೂಪಾಯಿ ಕೊಟ್ಟಿದ್ದಾರೆ. ಇದು ಏತಕ್ಕೂ ಸಾಲದು. ದಯಮಾಡಿ, ಯಾವುದೇ ಪ್ರಾಣಿ ಸತ್ತರೂ ಕೂಡ 500 ರೂಪಾಯಿ ಕೊಡುವ ಹಾಗೆ ಮಾಡಿದರೆ, ಕೇವಲ 13 ಕೋಟಿಯಾಗುತ್ತದೆ. ಈ ದಿಸೆಯಲ್ಲಿ ಜಾನುವಾರುಗಳಿಗೆ ಮತ್ತು ಮಾನವ ಹಾನಿಗೆ, ದಯಮಾಡಿ ಒಂದು ಲಕ್ಷ ರೂಪಾಯಿ ಕೊಡುವುದಕ್ಕೆ ತಾವು ತುರ್ತು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ, ಕೊನೆಯದಾಗಿ, ಒಂದು ಮಾತನ್ನು ಹೇಳುತ್ತೇನೆ. ರಾಯಚೂರು ಜಿಲ್ಲೆಗೆ ಕೇವಲ ಮಾನ್ಯ ಸಚಿವರು 30 ಲಕ್ಷ ರೂಪಾಯಿ ಒದಗಿಸಿದ್ದಾರೆ. ಈ 30 ಲಕ್ಷ ಏತಕ್ಕೂ ಸಾಲದು. ಏಕೆಂದರೆ, ಬೇರೆ ಬೇರೆ ಜಿಲ್ಲೆಗಳಿಗೆ ಹೋಲಿಸಿದಾಗ, ನಮಗೆ ಅತ್ಯಂತ ಕಡಿಮೆ ಹಣವನ್ನು ಕೊಟ್ಟಿದ್ದಾರೆ. ದಯಮಾಡಿ, ತಾವು ಕೂಡಲೇ ಇನ್ನೊಂದು 20 ಲಕ್ಷ ರೂಪಾಯಿ ಪ್ರವಾಹ ನಿಧಿಯಿಂದ ಕೊಡಬೇಕು. ಮತ್ತೆ ಆಗಸ್ಟ್ ತಿಂಗಳಿನಿಂದ ಮಳೆ ಆಗಿಲ್ಲ, ಈಗ್ಗೆ ಎರಡು ತಿಂಗಳಿನಿಂದ ಮಳೆ ಇಲ್ಲ. ಬರಗಾಲದ ಛಾಯೆ ಬಂದಿದೆ. ಇವತ್ತು ಕೂಲಿ ಕೆಲಸಗಾರರಿಗೆ ಕೆಲಸ ಇಲ್ಲ. ಈ ರೀತಿ ಅನಾವೃಷ್ಟಿ ವಿಚಾರದಲ್ಲೂ ಕೂಡ ತಾವು ಕಾರ್ಯಮಗ್ನರಾಗಬೇಕೆಂದು ಕೇಳಿಕೊಂಡು, ಎರಡು ಮಾತನ್ನು ಹೇಳುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಡಿ. ಹಲಗೇಗೌಡ (ಪಾಂಡವಪುರ) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಪ್ರವಾದ ಪರಿಸ್ಥಿತಿ ಬಗ್ಗೆ ಮಾನ್ಯ ಸದಸ್ಯರು ಹೇಳಿರತಕ್ಕಂಥ ಅಭಿಮತಗಳಿಗೆ ನನ್ನ ಒಮ್ಮತ್ರವನ್ನು ಕೊಟ್ಟು, ಕೆಲವು ವಿಚಾರಗಳನ್ನು, ನಾನು ಕೂಡ ಹೇಳಬೇಕೆಂದು ಇಚ್ಛೆಪಡುತ್ತೇನೆ. ಇಲ್ಲಿಯವರೆಗೆ ಮಾತನಾಡಿದ ಬಂಧುಗಳೆಲ್ಲರೂ, ಗೆಳೆಯರೆಲ್ಲರೂ ಕೂಡ ಸರ್ಕಾರ, ಪ್ರವಾಹ ಬಂದು ಇಷ್ಟು ದಿವಸವಾದರೂ ಕೂಡ ಏನೂ ಮಾಡಿಲ್ಲ, ಪರಿಹಾರವನ್ನು ಒದಗಿಸಿಕೊಟ್ಟಿಲ್ಲ ಎಂಬತಕ್ಕಂಥ ಮಾತನ್ನು ಬಹುವಾಗಿ ಹೇಳಿದರೆಂದು ಕಾಣಿಸುತ್ತದೆ. ಆದರೆ, ನನ್ನ ಜಿಲ್ಲೆಯಲ್ಲಿ ಬರಗಾಲ ಮತ್ತು ಪ್ರವಾಹ ಎರಡೂ ಬೆರೆಕೆಯಾಗಿರತಕ್ಕಂಥ ಒಂದು ಕ್ಷೇತ್ರದಿಂದ ಬಂದಂಥ ಸದಸ್ಯ ನಾನು . ಕಾಲು ಭಾಗ ಪ್ರವಾಹಕ್ಕೆ ಒಳಪಟ್ಟಿದ್ದು, ಮುಕ್ಕಾಲು ಭಾಗ ಬರಗಾಲ ಪ್ರದೇಶಕ್ಕೆ ಒಳಪಟ್ಟಿದ್ದು. ಜಿಲ್ಲೆಯಲ್ಲಿ ಆಗಿರತಕ್ಕಂಥ ಪ್ರವಾಹ ಪರಿಸ್ಥಿತಿ ಬಗ್ಗೆ, ನನ್ನ ಹತ್ತಿರ ಕೆಲವು ಮಾಹಿತಿಗಳು ಇವೆ. ಕೃಷ್ಣರಾಜಸಾಗರದಲ್ಲಿ ಬಂದಂಥ ಪ್ರವಾಹ, ಅದು ಪ್ರಕೃತಿ ವಿಕೋಪದಿಂದ ಆದದ್ದಲ್ಲ, ಮಾನವಕೃತ ಅಪರಾಧ ಎಂದು ನನಗಾದರೂ ಕೂಡ ಅನಿಸುತ್ತದೆ. ಈ ವಿಚಾರವಾಗಿ ಮಾನ್ಯ ಬ್ಯೆರೇಗೌಡರು ಹೇಳಿದ್ದನ್ನು ನಾನು ಒಪ್ಪುತ್ತಾ, ಕೃಷ್ಣರಾಜಸಾಗರದಲ್ಲಿ ಅವತ್ತಿ ದಿವಸ ಇದ್ದಂಥ ನೀರು ಕೇವಲ 120 ಅಡಿ. ಈ 120 ಅಡಿಯಿಂದ 124 ಅಡಿ ಹೋಗಬೇಕಾದರೆ, ಕೊನೇ ಪಕ್ಷ ಆ ಜಲಾಶಯದದ $\frac{1}{5}$ ಭಾಗ ನೀರು ಇನ್ನೂ ಉಳಿಕೆ ಇತ್ತು. ಇಷ್ಟು ಹೆಚ್ಚು ನೀರನ್ನು ಒಂದೇ ಸಲ ಹೊಳೆಗೆ ಬಿಡತಕ್ಕ ಪ್ರಮೇಯ ಇರಲಿಲ್ಲ. ಕೂಡಲೇ ಅಷ್ಟು ನೀರನ್ನು ಬಿಟ್ಟಿದ್ದಾರೆ. ಅಲ್ಲಿದ್ದಂಥ ಎಕ್ಸಿಕ್ಯುಟಿವ್ ಇಂಜನಿಯರ್ ಆ ಸ್ಥಳದಲ್ಲಿ ಇದ್ದರೇ? ಅವರು ಮೈಸೂರಿನಲ್ಲಿ ಆರಾಮವಾಗಿ ಇದ್ದಂಥ ಜನ. ಪ್ರವಾಹ ಹೆಚ್ಚು ಹೊರಗೆ ಬಿಟ್ಟಿದ್ದನ್ನು ನೋಡಿ, ಅದಕ್ಕಿಂತ ಉನ್ನತವಾದ ಇಂಜಿನಿಯರು ಬಂದು ನಿಭಾಯಿಸಬೇಕಾಗಿ ಬಂತು. ಆ ಇಂಜಿನಿಯರೂ ಕೂಡ ಲೆಕ್ಕಾಚಾರ ಇಲ್ಲದೇ ನೀರನ್ನು ಬಿಟ್ಟರು. ಈ ರೀತಿ ಬಿಡುವುದಕ್ಕೂ ಮೊದಲು ಹಿಂದಿನ ಪದ್ಧತಿ ಏನಿತ್ತು, ಎಂದರೆ ಕೊನೇಪಕ್ಷ 24 ಗಂಟೆ ಮುಂದೆ ಪ್ರವಾಹದ ಪರಿಸ್ಥಿತಿಯನ್ನು ತಿಳಿಸುವ ಮುಂಜಾಗ್ರತೆ, ಕೆಳಹಂತದಲ್ಲಿರತಕ್ಕ ಹಳ್ಳಿಗಳಿಗೆ ವಾಸಮಾಡತಕ್ಕ ಜನರಿಗೆ ಕೊಡುತ್ತಿದ್ದರು. ಆದರೆ, ಈಗ ಈ ಸಮಾಚಾರವನ್ನೇ ನೋಡಲಿಲ್ಲ. ಹಳೇ ಕಾಲದಲ್ಲಿ ಈಗ ಇರತಕ್ಕ ಉಪಕರಣಗಳು ಇರಲಿಲ್ಲ. ಆದರೂ ಕೂಡ ಪ್ರವಾಹ ಪರಿಸ್ಥಿತಿ ಬಗ್ಗೆ ಮುನ್ನೆಚ್ಚರಿಕೆಯನ್ನು ಕೊಡುತ್ತಿದ್ದರು. ಈಗ ವಾಕಿಟಾಕಿಗಳಿವೆ, ವೈರ್‌ಲೆಸ್ ಇವೆ, ಫೋನ್‌ಗಳಿವೆ, ಇವುಗಳೆಲ್ಲಾ ಇದ್ದರೂ ಸಹ ದಡದಲ್ಲಿರತಕ್ಕ ಜನರಿಗೆ ಯಾವುದೇ ರೀತಿಯ ಮುನ್ನಚ್ಚರಿಕೆಯನ್ನು ಕೊಡದೇ, ಏಕಾಏಕಿ ಅಷ್ಟು ನೀರನ್ನು ಬಿಟ್ಟು ತೊಂದರೆಗೆ ಕಾರಣರಾಗಿದ್ದಾರೆ. ಇದು ಮಾನವಕೃತ ಮತ್ತು ಅಧಿಕಾರಿಕೃತ ಘಟನೆಯೇ ಹೊರತು, ಪ್ರಕೃತಿ ವಿಕೋಪದಿಂದ ಆದುದಲ್ಲವೆಂಬ ಮಾತನ್ನು ಹೇಳಬಯಸುತ್ತೇನೆ.

ಇದರ ಬಗ್ಗೆ ಪರಿಹಾರ ಕೊಡವುದರಲ್ಲಿ ರೆವಿನ್ಯೂ ಇಲಾಖೆಯವರು ಮಾತ್ರ ಬಹಳ ಶ್ಲಾಘನೀಯವಾದ ರೀತಿಯಲ್ಲಿ ನಮ್ಮ ಜಿಲ್ಲೆಯಲ್ಲಿ ಕೆಲಸ ಮಾಡಿದ್ದಾರೆ. ಪ್ರವಾಹದ ವಿಕೋಪಕ್ಕೆ ಒಳಗಾದ ಜನರಿಗೆ ಕೇವಲ ಮೂರು ದಿವಸದಲ್ಲಿ ಅವರ ಮನೆ ಬಾಗಿಲಿಗೇ ಹೋಗಿ ಪರಿಹಾರ ಕೊಟ್ಟಿದ್ದಾರೆ. ಅವರಿಗೆ ಆಗಿರತಕ್ಕಂಥ ಬೆಳೆ ನಷ್ಟವನ್ನು ಅಂದಾಜು ಮಾಡಿ, ಬೆಳೆಯ ಜೊತೆಗೆ ಕೆಲವು ಊರುಗಳಿಗೆ ನೀರು ನುಗ್ಗಿದುದರಿಂದ ಮನೆಗಳಿಗೆ, ಹುಲ್ಲಿನ ಬಣವೆಗಳಿಗೆ, ಆಹಾರ ಧಾನ್ಯಗಳಿಗೆ ಆಗಿರುವಂತಹ ನಷ್ಟವನ್ನು ಗಮನಿಸಿ, ಮೂರು ನಾಲ್ಕು ದಿವಸದಲ್ಲಿ ಅವರ ಮನೆಯ ಬಾಗಿಲಿಗೇ ಹೋಗಿ ಚೆಕ್ಕನ್ನು ವಿತರಿಸಿದ್ದೇವೆ. ನಾನೂ ಕೂಡಾ ಜೊತೆಯಲ್ಲಿ ಹೋಗಿ ಸಹಕರಿಸಿದ್ದೇನೆ. ಇದರ ಬಗ್ಗೆ ನಮ್ಮ ಜಿಲ್ಲೆಯಲ್ಲಿ ರೆವಿನ್ಯೂ ಅಧಿಕಾರಿಗಳಿಂದ ಆಗಿರುವ ಕೆಲಸ ಉಪಕಾರ ಮರೆಯುವುದಕ್ಕೆ ಸಾಧ್ಯ ಇಲ್ಲ. ಎಂಜಿನಿಯರಿಂಗ್ ಇಲಾಖೆಯವರು ಹತ್ತಿರ ಬಾರದೇ ದೂರ ಉಳಿದಾಗ, ರೆವಿನ್ಯೂ ಇಲಾಖೆಯವರು ಹೋಗಿ ಯಾರು ಯಾರಿಗೆ

ನಷ್ಟ ಆಗಿದೆ ಎಂಬುದನ್ನು ವಿಲೇಜ್ ಆಕೌಂಟೆಂಟ್, ರೆವಿನ್ಯೂ ಇನ್‌ಸ್ಪೆಕ್ಟರ್, ತಹಸೀಲ್ದಾರ್‌ರ ಮೂಲಕ ಮಾಹಿತಿ ಸಂಗ್ರಹಿಸಿ ಕೇವಲ ಮೂರು ನಾಲ್ಕು ದಿವಸದಲ್ಲಿ ತಹಸೀಲ್ದಾರ್‌ರವರು ಅವರ ಮನೆ ಬಾಗಿಲಗೇ ಹೋಗಿ ಚೆಕ್ಕನ್ನು ಕೊಟ್ಟಿದ್ದಾರೆ. ನನ್ನ ತಾಲೋಕಿನಲ್ಲಿ, ನನ್ನ ಕ್ಷೇತ್ರದಲ್ಲಿ ಎಷ್ಟು ಪರಿಹಾರ ನೀಡಿದ್ದಾರೆ ಎಂದರೆ, ಕಡೆಯ ಪಕ್ಷ 250 ರೂಪಾಯಿ ಇದ್ದರೆ, ಅತೀ ಹೆಚ್ಚು ಎಂದರೆ 1750 ರೂಪಾಯಿಗಳನ್ನು ನೀಡಿದ್ದಾರೆ. ಬೆಳೆ ಪರಿಹಾರ ಎಂದು ಕೊಡಲಾಗಿದೆ. ಈ 1750 ರೂಪಾಯಿ ಗರಿಷ್ಟ ಬೆಳೆ ಪರಿಹಾರ ಎಂದು ಕೊಟ್ಟಿದ್ದರೂ, ಇದು ಸಾಲದು. 20 ಸಾವಿರ ರೂಪಾಯಿ ನಷ್ಟ ಸಂಭವಿಸಿದ್ದರೂ ಕೂಡಾ ಗರಿಷ್ಟ 1750 ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದು ಬೆಳೆ ಪರಿಹಾರವಾದುದರಿಂದ, ಅದು ನಿಯಮದಲ್ಲಿರತಕ್ಕದ್ದು ಕೊಟ್ಟಿದ್ದಾರೆ. ಇದು ಬೆಳೆ ಪರಿಹಾರವಾದುದರಿಂದ, ಅದು ನಿಯಮದಲ್ಲಿರತಕ್ಕದ್ದು, ಹೆಚ್ಚುಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ಸ್ವಾಮಿ, ಈ ನಿಯಮ ಎಷ್ಟೋ ವರ್ಷಗಳ ಹಿಂದೆ ಆದುದು. ಸಾಮಾನ್ಯವಾಗಿ ಯಾವುದೇ ಒಂದು ಕಾರ್ಖಾನೆಗಾಗಲೀ, ಕೈಗಾರಿಕೆಗಳಿಗಾಗಲೀ ನಷ್ಟವಾದರೆ, ಅಲ್ಲಿನ ಸಾಮಾನು ಸರಂಜಾಮುಗಳಿಗೆ ನಷ್ಟವಾದರೆ, ಎಷ್ಟು ಹಾನಿ ಆಗಿದೆಯೋ ಅಷ್ಟೇ ಹಣವನ್ನು ಕೊಡುತ್ತಾರೆ. ವಾಹನಗಳಿಗೆ ಕೊಡುತ್ತಾರೆ. ಆದರೆ ರೈತ ಬೆಳೆದ ಬೆಳೆಗೆ ಏತಕ್ಕೆ ಕೊಡಬಾರದು? ರೈತ ಬೆಳೆದ ಬೆಳೆಗೆ ಕನಿಷ್ಠ ಪಕ್ಷ ಒಂದು ಎಕರೆಗೆ 12 ಸಾವಿರ ದಿಂದ 15 ಸಾವಿರ ರೂಪಾಯಿ ಖರ್ಚಾಗುತ್ತದೆ. ಅಂತಹದರಲ್ಲಿ 1750 ರೂಪಾಯಿ ಕೊಟ್ಟರೆ ಅದು ಯಾವ ಪರಿಹಾರ ದೊರಕಿಸಿದಂತೆ ಆಯಿತು? ಇದು ಭಿಕ್ಷೆ ರೀತಿ ಆಗಲಿಲ್ಲವೇ? ಆದುದರಿಂದ ಕಾನೂನು ಪ್ರಕಾರ ಬೆಳೆಗೆ ಕೊಡುವ ಪರಿಹಾರದ ಮೊತ್ತವನ್ನು ಹೆಚ್ಚಿಸಿ, ಒಂದು ಎಕರೆ ಬೆಳೆಗೆ ಇಷ್ಟು ಎಂದು ಕೊಡಬೇಕು. ಹಾಗೂ ಜಮೀನಿನಲ್ಲಿರುವ ಬೆಳೆಯ ಮೇಲೆ ಆಧಾರ ಮಾಡಿ ಕೊಡಬೇಕು. ಕಬ್ಬಿನ ಬೆಳೆ, ತರಕಾರಿ ಬೆಳೆ, ಭತ್ತದ ಬೆಳೆ ಬೆಳೆದಿದ್ದಾನೆಯೇ ಎಂಬುದನ್ನು ನೋಡಿ, ಬೆಳೆ ಎಷ್ಟಾಗಿದೆ, ಅದರ ಬೆಲೆ ಎಷ್ಟು ನಷ್ಟವಾಗಿದೆ ಎಂದು ಸರಿಯಾಗಿ ಲೆಕ್ಕಾಚಾರ ಮಾಡಿ ಪರಿಹಾರ ಒದಗಿಸಕೊಡಬೇಕು. ಕೇವಲ ಬೆಳೆ ಪರಿಹಾರ ಎಂದು ಕೊಡುವುದಲ್ಲ, ಕೃಷ್ಣರಾಜಸಾಗರ ಕೆಳಗಡೆ ಇರತಕ್ಕಂಥ ಪ್ರವೇಶ ನಮ್ಮದಾದುದರಿಂದ, ಅಲ್ಲಿಂದ ಬಂದಂಥ ನೀರಿನಿಂದ ಇಡೀ ಜಮೀನನ್ನು ಕೊಚ್ಚಿಹಾಕಿದೆ. ಪರಿಹಾರ ಕೊಡಲು ಕಾನೂನನ್ನು ಬದಲಾವಣೆ ಮಾಡಬೇಕು. ಯಾವ ಯಾವುದೋ ಕಾನೂನನ್ನು ಬದಲಾವಣೆ ಮಾಡಬಹುದು, ರೈತರ ಬಗ್ಗೆ ಏತಕ್ಕೆ ಕಾನೂನು ಬದಲಾವಣೆ ಮಾಡಬಾರದು? ರೈತನ ಮೇಲೆ ಕಳಕಳಿ ಇದ್ದರೆ ಇದನ್ನು ಮಾಡಿ ಸರಿಯಾದ ಪರಿಹಾರ ಒದಗಿಸಿಕೊಡಬೇಕು. ಸಾಲದ್ದಕ್ಕೆ ಬೆಳೆದ ಬೆಳೆ ಹೊರಟು ಹೋಗುತ್ತದೆ. ಕೇವಲ ಬೆಳೆ ಹೋಗುವುದಲ್ಲದೆ, ಜಮೀನು ಸಹ ಹಾಳಾಗುತ್ತದೆ. ನೀರಾವರಿ ಪ್ರದೇಶಗಳಲ್ಲಿ, ನದಿ ಪ್ರದೇಶದಲ್ಲಿ ಜಮೀನು ಬಹಳ ಬೆಲೆ ಬಾಳುತ್ತದೆ. ಬಹಳ ಫಲವತ್ತಾದ ಜಮೀನು. ಒಂದು ಎಕರೆ ಜಮೀನಿಗೆ 75 ಸಾವಿರದಿಂದ ಒಂದು ಲಕ್ಷದವರೆಗೆ ಆಗುತ್ತದೆ. ಒಳ್ಳೆಯ ಬೆಲೆ ಬಾಳತಕ್ಕಂಥ ಜಮೀನಿನ ಮೇಲೆ ಪ್ರವಾಹ ಬಂದು, ಆ ಜಮೀನಿನ ಮೇಲಿನ ಮಣ್ಣು ಹಾಳಾಗಿ ಕೊಚ್ಚಿಕೊಂಡು ಹೋಗಿರುತ್ತದೆ. ಈ ಜಮೀನುಗಳಲ್ಲಿ 5-6 ಅಡಿವರೆಗೆ ಮರಳು ತುಂಬಿಕೊಂಡಿರುತ್ತದೆ. ಒಳ್ಳೆಯ ರೂಪದಲ್ಲಿರುವ ಜಮೀನನ್ನು ವಿರೂಪಗೊಳಿಸಿರುತ್ತದೆ. ಇಂತಹ ಜಮೀನನ್ನು ಸರಿಯಾದ ಸ್ಥಿತಿಗೆ ತರಬೇಕಾದರೆ ಎಷ್ಟೋ ಲಕ್ಷ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಆದುದರಿಂದ ರೈತನಿಗೆ ಇದಕ್ಕೆ ಹಣದ ಮುಖಾಂತರ ಪರಿಹಾರ ಕೊಡದಿದ್ದರೂ ಕೂಡಾ, ಇಲಾಖೆಯ ಮುಖಾಂತರ ಆ ಜಮೀನನ್ನು, ಸುಸ್ಥಿತಿಗೆ ತಂದು ವ್ಯವಸಾಯ ಯೋಗ್ಯವನ್ನಾಗಿ ಮಾಡಿಸಿಕೊಟ್ಟರೆ ಒಳ್ಳೆಯದು. ಬೇರೆ ಇಲಾಖೆಗಳ ಮುಖಾಂತರ ಈ ಕೆಲಸ ಮಾಡಬೇಕು. ಕೃಷಿ ಇಲಾಖೆ ಇದೆ, ಎಂಜಿನಿಯರಿಂಗ್ ಇಲಾಖೆ ಇದೆ, ಅನೇಕ ಇಲಾಖೆಗಳು ಇವೆ, ಆ ಇಲಾಖೆಗಳ ಮುಖಾಂತರ ಅವನ ಜಮೀನನ್ನು

ದುರಸ್ತಿ ಮಾಡಿಸಿಕೊಟ್ಟರೆ ಎಷ್ಟೋ ಉಪಕಾರ ಮಾಡಿದಂತಾಗುತ್ತದೆ ಎಂಬ ಮಾತನ್ನು ಹೇಳುತ್ತೇನೆ.

ಉಪಾಧ್ಯಕ್ಷಿಣಿಯವರು : ಮಾನ್ಯ ಹಲಗೇಗೌಡರೇ, ಇನ್ನೂ ಮೂರು ಜನ ಮಾತನಾಡುವವರು ಇದ್ದಾರೆ. ಬೇಗ ಮುಗಿಸಿ.

ಶ್ರೀ ಡಿ. ಹಲಗೇಗೌಡ : ಇನ್ನು ಬೆಳೆ ವಿಮೆ ಯೋಜನೆ ಬಗ್ಗೆ ಹೇಳುವುದಾದರೆ ರೈತರು ಬೆಳೆ ವಿಮೆ ಮಾಡಿಸಬೇಕೆಂದು ಹೇಳುತ್ತಿದ್ದಾರೆ. ಈ ವಿಮಾ ಕಂಪನಿಯವರೂ ಕೂಡಾ ರೈತನ ಬಗ್ಗೆ ತಾತ್ಸಾರ ಮನೋಭಾವನೆಯನ್ನು ಇಟ್ಟುಕೊಂಡಿದ್ದಾರೆ. ವಾಹನಕ್ಕಾಗಲೀ, ಕಾರ್ಖಾನೆಗಾಗಲೀ, ಕೈಗಾರಿಕೆಗಳಿಗಾಗಲೀ, ವಿಮೆ ಮಾಡಿದ್ದಾರೆ. ಅಲ್ಲಿ 10 ಸಾವಿರ ರೂಪಾಯಿನ ಪದಾರ್ಥ ಇದ್ದರೂ 20 ಸಾವಿರ ರೂಪಾಯಿಗೆ ವಿಮೆ ಮಾಡಿಸಿದ್ದರೆ. ಅದೆಲ್ಲಾ ಸುಟ್ಟು ಹೋದರೆ 20 ಸಾವಿರ ರೂಪಾಯಿ ಕೊಡುತ್ತಾರೆ. ಆದರೆ ಬೆಳೆವಿಮೆ ಮಾಡಿದಂಥವರ ಬೆಳೆ ಹೋದರೆ ಕೂಡಾ ವಿಮೆ ತೆಗೆದುಕೊಳ್ಳಬಹುದು, ಆದರೆ ಇದನ್ನು ತೆಗೆದುಕೊಳ್ಳಬೇಕಾದರೆ ಅವರು ಕೊಡುವ ವಿಮೆಯ ಹಣಕ್ಕಿಂತ ನಾಲ್ಕರಷ್ಟು ಹಣ ಖರ್ಚಾಗುತ್ತದೆ, ಜೊತೆಗೆ ಅದಕ್ಕೆ ನಾಲ್ಕರಷ್ಟು ತ್ರಾಸವಾಗುತ್ತದೆ. ರೈತನಿಗೆ ವಿಮೆಯೂ ಬೇಡ, ಹಣವೂ ಬೇಡ, ಕಂಬದಿಂದ ಕಂಬಕ್ಕೆ ಸುತ್ತುವ ಪಾಡೂ ಬೇಡ ಎಂಬ ಒಂದು ಜಿಗುಪ್ಸೆ ಮೂಡುವಂತೆ ಆಗುತ್ತದೆ. ಆದುದರಿಂದ ಈ ಬಗ್ಗೆ ಕೂಡಾ ಸರಿಯಾದ ವ್ಯವಸ್ಥೆ ಮಾಡಬೇಕು. ಬೆಳೆ ವಿಮೆಯನ್ನು ಸರಿಯಾದ ರೀತಿ ಕೊಡಬೇಕು, ಸಕಾಲದಲ್ಲಿ ಸೂಕ್ತ ಕಾಲದಲ್ಲಿ ತಕ್ಷಣ ಪರಿಹಾರ ಕೊಡುವಂತೆ ಮಾಡಬೇಕು.

ಅಲ್ಲಿ ಬಹುಶಃ ರಸ್ತೆಗಳೆಲ್ಲಾ ಹೊರಟು ಹೋಗಿವೆ. ಮತ್ತು ಮೊನ್ನೆ ನಮ್ಮ ಕೃಷ್ಣರಾಜಸಾಗರದಿಂದ ಬರತಕ್ಕಂಥ ವಿಶ್ವೇಶ್ವರಯ್ಯ ನಾಲೆ ಒಡೆದು 100 ಅಡಿಗಳಷ್ಟು ರಸ್ತೆ ಕೆಟ್ಟು ಹೋಗಿದೆ. ಆದರೆ ಅದನ್ನು ಸರಿಮಾಡಲು ಇಂಜನಿಯರಿಗ್ ಇಲಾಖೆಯವರು ಶ್ರಮ ವಹಿಸಿ ಕೆಲಸ ಮಾಡಿದ್ದಾರೆ. ಕೇವಲ ಇನ್ನು 5-6 ದಿವಸಗಳಲ್ಲಿ ಅದನ್ನು ಪೂರ್ಣ ಮಾಡಿ ಕೊಡತಕ್ಕಂಥ ಮಾತನ್ನು ಹೇಳಿದ್ದಾರೆ. ಅಲ್ಲಿಗೆ ಮಾನ್ಯ ಸಚಿವರು ಕೂಡ ಬಂದಿದ್ದರು. ಮತ್ತು ಅಧಿಕಾರಿಗಳು ಕೂಡ ಒಳ್ಳೆಯ ಕೆಲಸ ಮಾಡಿದ್ದಾರೆ. ಅಲ್ಲಿ ಸಮರೋಪಾದಿಯಲ್ಲಿ ಕೆಲಸವನ್ನು ಮಾಡಿ ರೈತರಿಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸರ್ಕಾರ ಹಣ ಕೊಟ್ಟರೆ ಕೆಲಸವನ್ನು ಬೇಗ ಮಾಡಿ ಮುಗಿಸಲು ಅನುಕೂಲವಾಗುತ್ತದೆ. ಅಲ್ಲಿ ಹಣದ ಕೊರತೆ ಇದೆ. ರೈತರಿಗೆ ಅನ್ಯಾಯ ಮಾಡುವುದು ಬೇಡ. ಈ ಕೆಲಸವನ್ನು ಅದಷ್ಟು ಬೇಗ ಮಾಡಿ ಕೊಡಬೇಕು. ಹಾನಿಗೊಳಗಾದ ರೈತರಿಗೆ ಹೆಚ್ಚು ಹೆಚ್ಚು ಪರಿಹಾರ ಕೊಡಬೇಕು ಅವರ ಭೂಮಿಗೆ ಆಗಿರತಕ್ಕಂಥ ನಷ್ಟವನ್ನು ಬರಿಸಿಕೊಡಬೇಕೆಂದು ಹೇಳಿ ಈ ಬಗ್ಗೆ ಮಾನ್ಯ ರೆವಿನ್ಯೂ ಮಂತ್ರಿಗಳು ಗಮನ ಹರಿಸುತ್ತಾರೆಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎಸ್. ಎಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಭಾಧ್ಯಕ್ಷಣೀಯವರೇ, ನಾನು ಹೆಚ್ಚು ವೇಳೆ ತೆಗೆದುಕೊಳ್ಳದೆ ನಾನು ನಮ್ಮ ಬೆಳಗಾಂ ಜಿಲ್ಲೆಗೆ ಸಂಬಂಧಪಟ್ಟಂತೆ ಮಾತ್ರ ತಮ್ಮ ಮುಂದೆ ಎರಡು ಮಾತುಗಳನ್ನು ಹೇಳುತ್ತೇನೆ. ನಿಜವಾಗಿಯಾ ಇವತ್ತಿನ ದಿವಸ ನಮ್ಮ ಬೆಳಗಾಂ ಜಿಲ್ಲೆಯಲ್ಲಿ ಕಳೆದ 10-12 ವರ್ಷಗಳ ಹಿಂದೆ ಆಗಿದ್ದಂತಹ ಮಳೆ ಈ ವರ್ಷ ಆಯಿತು. ಆ ಮಳೆಯಿಂದ ಪ್ರತಿಯೊಂದು ರಸ್ತೆ ಹಾಗೂ ಟ್ಯಾಂಕ್‌ಗಳು ಶಾಲೆಗಳು ಮತ್ತು ಮನೆಗಳು ಇವತ್ತು ಬಿದ್ದು ಹೋಗಿವೆ. ಆದರೆ ಇಷ್ಟೆಲ್ಲಾ ಆದರೂ ಸಹ ನಿಜವಾಗಿಯೂ ನಮಗೆ ಖೇದವೆನಿಸುತ್ತದೆ. ಸರ್ಕಾರ ಯಾವುದೇ ರೀತಿಯ ಪರಿಹಾರವನ್ನು ನಮ್ಮ ಜಿಲ್ಲೆಗೆ ಕೊಟ್ಟಿಲ್ಲವೆಂದು ನಾನು ವಿಷಾದದಿಂದ ಹೇಳುತ್ತೇನೆ. ಮಾನ್ಯ ಮಂತ್ರಿಗಳು ಬೆಳಗಾಂ ಜಿಲ್ಲೆಗೆ ಪರಿಹಾರ ಎಷ್ಟು ರೂಪಾಯಿಗಳನ್ನು ಯಾರ ಕಡೆ ಕೊಟ್ಟಿದ್ದೀರಿ ಎಂಬುದನ್ನು ಹೇಳಬೇಕು. ನಾವು

ಅಲ್ಲಿನ ಜಿಲ್ಲಾಧಿಕಾರಿಗಳನ್ನು ಕೇಳಿದಾಗ ನಮ್ಮ ಕಡೆ ಹಣ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಮತ್ತು ಜಿಲ್ಲಾ ಪರಿಷತ್ತಿನಲ್ಲಿ ಮುಖ್ಯ ಕಾರ್ಯದರ್ಶಿಯವರನ್ನು ಕೇಳಿದಾಗ ಇದು ಪ್ಲಡ್ ರಿಲೀಫ್ ನಮಗೆ ಬರುವುದಿಲ್ಲ ಇದು ಜಿಲ್ಲಾಧಿಕಾರಿಗಳಿಗೆ ಬರುತ್ತದೆ ಎನ್ನುತ್ತಾರೆ. ಈ ಇಬ್ಬರೂ ಸಹ ಇವತ್ತಿನ ದಿವಸ ಏನೂ ಹಣವನ್ನು ಬೆಳಗಾಂ ಜಿಲ್ಲೆಯಲ್ಲಿ ಖರ್ಚು ಮಾಡಿಲ್ಲ, ಹಣ ಬಿಡುಗಡೆಯಾಗಿಲ್ಲ. ಏಪ್ರಿಲ್ ತಿಂಗಳಿಂದ ಇವತ್ತಿನವರೆಗೂ ಎಲ್ಲಿ ಎಷ್ಟು ಹಣ ಖರ್ಚಾಗಿದೆ ಎನ್ನುವುದನ್ನು ತಾವು ಹೇಳಬೇಕು. ನಾವು ಲೋಕೋಪಯೋಗಿ ಇಲಾಖೆಯವರನ್ನು ಕೇಳಿದಾಗ ಇದು ನಮ್ಮ ನಾರಮ್ಸ್‌ನಲ್ಲಿ ಬರುವುದಿಲ್ಲ ಅಂತ ಹೇಳುತ್ತಾರೆ. ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರನ್ನು ಕೇಳಿದಾಗ ರಸ್ತೆ ರಿಪೇರಿ ನಮಗೆ ಬರುವುದಿಲ್ಲವೆಂದು ಹೇಳುತ್ತಾರೆ. ಇವತ್ತಿದಿವಸ ಇರಿಗೇಷನ್ ಡಿಪಾರ್ಟ್‌ಮೆಂಟ್‌ನಲ್ಲೂ ಹಣ ಇಲ್ಲ. ಅವರು ಜಿಲ್ಲಾ ಪರಿಷತ್ತನವರನ್ನು ಕೇಳಿ ಎಂದು ಹೇಳುತ್ತಾರೆ. ಜಿಲ್ಲಾ ಪರಿಷತ್ತಿನವರನ್ನು ಕೇಳಿದಾಗ ಲೋಕೋಪಯೋಗಿ ಇಲಾಖೆಯವರು ನಮಗೆ ಹಣ ಕೊಟ್ಟಿಲ್ಲವೆಂದು ಹೇಳುತ್ತಾರೆ. ಮೂರು ಮಂದಿ ಸೇರಿಕೊಂಡು ಗಂಡ ಹೆಂಡಿರ ಜಗಳದಲ್ಲಿ ಕೂಸ ಬಡವಾದಂತೆ ಆಗಿದೆ ನಮ್ಮ ಪರಿಸ್ಥಿತಿ ಬೆಳಗಾಂ ಜಿಲ್ಲೆಯಲ್ಲಿ ರಸ್ತೆಗಳೆಲ್ಲಾ ಹಾಳಾಗಿವೆ. ಆ ರಸ್ತೆಗಳಲ್ಲಿ ಸಂಚಾರ ಮಾಡಲು ಸಾಧ್ಯವೇ ಇಲ್ಲ, ಆ ಕಡೆ ಗಾಡಿಗಳು ಬಂದರೆ ಚಾಸಿಗಳು ಹಾಳಾಗಿ ಹೋಗುತ್ತವೆ. ಆ ಕಡೆ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ಸುಗಳನ್ನು ಸ್ಟಾಪ್ ಮಾಡಿದ್ದಾರೆ. ಕಳೆದು ಮೂರು ತಿಂಗಳುಗಳಿಂದ ಬಸ್ಸು ಓಡಾಡುತ್ತಾ ಇಲ್ಲ. ನಿಜವಾಗಿಯೂ ಮಾನ್ಯ ಮಂತ್ರಿಗಳು ವಿರೋಧ ಪಕ್ಷದಲ್ಲಿದ್ದಾಗ ಚುರುಕಾಗಿದ್ದರು. ಬೆಳಗಾಂನಲ್ಲಿ ಪರಿಸ್ಥಿತಿ ಉತ್ತಮ ಇಲ್ಲ, ಎಲ್ಲಾ ರಸ್ತೆಗಳು ಕೆಟ್ಟಿವೆ. ಅವರು ಅಸೋಸಿಷನ್‌ನಲ್ಲಿದ್ದಾಗ ಬರಪರಿಹಾರ ಪರಿಸ್ಥಿತಿ ಬಗ್ಗೆ ಒಂದು ಉತ್ತಮ ರಿಪೋರ್ಟ್ ಕೊಟ್ಟಿದ್ದಾರೆ. ಅವರು ಆಗ ನಮ್ಮ ರಾಜ್ಯದ ತುಂಬಾ ಪ್ರವಾಸ ಮಾಡಿ ಒಳ್ಳೆಯ ಹೆಸರು ಪಡೆದಿದ್ದರು. ಆದರೆ ಈ ಸಾರಿ ರಾಜ್ಯದಲ್ಲಿ ಎಲ್ಲಾ ಕಡೆ ಪ್ಲಡ್ಸ್ ಬಂದರೂ ಮಾನ್ಯ ಮಂತ್ರಿಗಳು ನಮ್ಮ ನಾಲ್ಕು ಜಿಲ್ಲೆಗಳಿಗೆ ಒಂದು ಸಾರಿಯಾ ಭೇಟಿ ಕೊಟ್ಟಿಲ್ಲ, ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಇದಕ್ಕೆ ಕಾರಣ ಗೊತ್ತಿಲ್ಲ. ಇವತ್ತಿನದಿವಸ ರಸ್ತೆಗಳ ರಿಪೇರಿ ಸಲುವಾಗಿ ಹಣ ಬಿಡುಗಡೆ ಮಾಡಬೇಕು ಮತ್ತು ನಾವು ಬಡವರಿಗೆ 6 ಸಾವಿರ ಅಥವಾ 12 ಸಾವಿರಕ್ಕೆ ಮನೆ ಕಟ್ಟಿ ಕೊಡುವ ಬಗ್ಗೆ ಮಾತನಾಡುತ್ತೇವೆ. ಹರಿಜನ ಮತ್ತು ಗಿರಿಜನ ಬಗ್ಗೆ ಮಾತನಾಡುತ್ತೇವೆ. ಆದರೆ ಅವರ ಕೆಲಸ ಮಾತ್ರ ಮಾಡುವುದಕ್ಕೆ ಯಾರೂ ತಯಾರಾಗಿಲ್ಲ. ಅವರು ಮನೆಗಳು ಬಿದ್ದು ಹೋಗಿವೆ. ನಾವು ಹರಿಜನ ಮತ್ತು ಗಿರಿಜನರ ಓಟು ಕೇಳುತ್ತೇವೆ. ಅವರ ಬಗ್ಗೆ ಮಾತನಾಡುತ್ತೇವೆ. ಆದರೆ ಒಬ್ಬರಿಗೂ ಇವತ್ತಿನ ದಿವಸ ಹರಿಜನ ಮತ್ತು ಗಿರಿಜನರ ಬಗ್ಗೆ ನಿಜವಾದ ಕಳಕಳಿ ಇಲ್ಲ ಎಂದು ನಾನು ಸರ್ಕಾರದ ಮೇಲೆ ನೇರವಾದ ಆಪಾದನೆ ಮಾಡುತ್ತಿದ್ದೇನೆ. ಇಷ್ಟೆಲ್ಲಾ ಮನೆ ಬಿದ್ದರೂ ಕೂಡ ಅವರ ಬಗ್ಗೆ ಯಾರೂ ಕಾಳಜಿ ತೆಗೆದುಕೊಂಡಿಲ್ಲ. ಅವರಿಗೆ ಇವತ್ತಿನ ದಿವಸ ಅವರಿಗೆ ಒಂದು ವಾಸದ ಮನೆ ಕಟ್ಟಿಕೊಡುವಸಲುವಾಗಿ ಯಾರೂ ಮುಂದೆ ಬಂದಿಲ್ಲ, ಅವರಿಗೆ ಮನೆ ಕಟ್ಟಿಕೊಡುವ ಕೆಲಸವನ್ನು ಕೂಡಲೇ ಕೈಗೊಳ್ಳಬೇಕು.

ಇದಲ್ಲದೆ ಇನ್ನೊಂದು ಬ್ರಿಡ್ಜ್ ಕೊಲಾಪ್ಸ್ ಆಯಿತು. ಬ್ರಿಡ್ಜ್ ಕೊಲಾಪ್ಸ್ ಆಗಿ ಹೊಲಗಳಿಗೆ ಪೂರ್ಣವಾಗಿ ಡ್ಯಾಮೇಜ್ ಆಯಿತು. ನಾವು ಇವತ್ತಿನ ದಿವಸ ಎಷ್ಟೋ ಲೆಟರ್ ಮಾನ್ಯ ಮಂತ್ರಿಗಳಿಗೆ ಕೊಟ್ಟೆವು. ನಮ್ಮ ಕಡೆ ರಸ್ತೆಗಳು ಇವತ್ತಿನ ದಿವಸ ಪೂರ್ಣ ಕೆಟ್ಟು ಹೋಗಿದೆ. ಹಾನ್‌ಗಲ್ ಹೊಸೂರು ಹಾಗೂ ಮರುತುಂಬಿ ಹಾನ್‌ಗಲ್ ರಸ್ತೆ ಪೂರ್ಣ ಕೆಟ್ಟುಹೋಗಿದೆ. ಇಷ್ಟೆಲ್ಲಾ ರಸ್ತೆ ಕೆಟ್ಟುಹೋಗಿದ್ದರೂ ಸಹಿತ ಯಾವುದೇ ರೀತಿಯಿಂದ ಕೆಲಸ ಮಾಡುವಂಥ ಕ್ರಮ ಕೈಗೊಂಡಿಲ್ಲ. ಆದಕಾರಣ, ನಾನು ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ, ಮೊದಲು ಎಲ್ಲಾ ರಸ್ತೆಗಳನ್ನು ರಿಪೇರಿ ಮಾಡಿಸಬೇಕು. ಆನಂತರ ಬ್ರಿಡ್ಜ್ ರಿಪೇರಿ ಮಾಡಬೇಕು. ಶಾಲೆಗಳ

ಕೋಣೆಗಳನ್ನು ರಿಪೇರಿ ಮಾಡಬೇಕು. ಮತ್ತು ಜನತಾ ಮನೆಗಳು ಏನಿವೆ ಅವುಗಳನ್ನು ರಿಪೇರಿ ಮಾಡಬೇಕೆಂದು ಹೇಳಿ ಸರ್ಕಾರದವರು ಈ ಕೆಲಸಗಳನ್ನು ಮಾಡಿಸುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು) : ಸನ್ಮಾನ್ಯ ಅಧ್ಯಕ್ಷಿಣಿಯವರೇ, ನಾನಾದರೂ ಈ ಪ್ರಕೃತಿ ವಿಕೋಪದ ಬಗ್ಗೆ ಹೇಳಬೇಕಾದರೆ, ನಮ್ಮ ಕಡೆಗೆ ಮಲೆನಾಡು ಪ್ರದೇಶ ಎಂದು ಹೇಳುತ್ತಾರೆ. ದಕ್ಷಿಣ ಕನ್ನಡ, ಕಾರವಾರ ಜಿಲ್ಲೆ ಉತ್ತರ ಕನ್ನಡ ಜಿಲ್ಲೆ ಮತ್ತ ಕರಾವಳಿ ಪ್ರದೇಶದ ಜನರು ಒಂದು ಕಡೆಯಿಂದ ಮಳೆಯ ಪ್ರವಾಹಕ್ಕೆ ಮತ್ತೊಂದು ಕಡೆ ಸಮುದ್ರದ ಕೊರೆತಕ್ಕೆ ಒಳಗಾಗುತ್ತರೆ. ನಮ್ಮಲ್ಲಿ ಬರೀ ಮಳೆ ಮಾತ್ರದಿಂದ ಹಾನಿಯಾಗುವುದಲ್ಲದೆ ಬಿರುಗಾಳಿಯಿಂದಲೂ ಹಾನಿಯಾಗುತ್ತದೆ. ಇದರ ಜೊತೆಗೆ ಸಿಡಿಲು, ಮಿಂಚುಗಳಿಂದ ಅನೇಕ ಅನಾಹುತಗಳು ಸಂಭವಿಸುತ್ತವೆ. ಉದಾಹರಣೆಗೆ ನಮ್ಮಲ್ಲಿ ಸಿಡಿಲು ಬಿದ್ದು ಒಬ್ಬ ರೈತನ ತೋಟ ಎಲ್ಲಾ ಸಂಪೂರ್ಣವಾಗಿ ನಾಶವಾಗಿ ಹೋಯಿತು. ಇನ್ನು ಮುಂದೆ ಆ ತೋಟದಿಂದ ಆದಾಯ ಬರುವ ಹಾಗಿಲ್ಲ. ಆದ್ದರಿಂದ, ಇದಕ್ಕೂ ಸರಿಯಾದ ರೀತಿಯಲ್ಲಿ ಪರಿಹಾರ ಸಿಗುವಂಥ ರೀತಿಯಲ್ಲಿ ಕಂದಾಯ ಮಂತ್ರಿಗಳು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಆಮೇಲೆ ಹುಲ್ಲಿನಿಂದ ಮಾಡಿದ ಗುಡಿಸಲುಗಳು ಬಿರುಗಾಳಿ ಬಂದಾಗ ಸಂಪೂರ್ಣವಾಗಿ ನಾಶವಾಗುತ್ತದೆ. ಆ ಮನೆಗಳ ಮಾಡು ಬಿರುಗಾಳಿಯಿಂದ ಬಿದ್ದು ಹೋಗುತ್ತದೆ. ಅದಕ್ಕೆ ಎರಡು ನೂರು, ಮೂರು ನೂರು ರೂಪಾಯಿಗಳನ್ನು ಪರಿಹಾರವಾಗಿ ಕೊಟ್ಟರೆ ಅದರಿಂದ ಯಾವ ರೀತಿ ವ್ಯವಸ್ಥೆ ಮಾಡಲಿಕ್ಕೆ ಸಾಧ್ಯವಿದೆ ಎಂದು ಅರ್ಥಮಾಡಿಕೊಂಡು ಸರ್ಕಾರ ಸಮಗ್ರವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಇದರ ಜೊತೆಯಲ್ಲಿ ಕೊಳೆ ರೋಗವು ಈ ಸಲ ಅಡಿಕೆ ಬೆಳೆಗೆ ಬಂದಿವೆ. ಇದು ಬಹಳ ದೊಡ್ಡ ರೋಗ. ಇದರ ಬಗ್ಗೆ ಮಾನ್ಯ ತೋಟಗಾರಿಕಾ ಇಲಾಖೆ ಸಚಿವರು ಒಂದು ಹೇಳಿಕೆ ಕೊಟ್ಟಿದ್ದಾರೆ. ಈ ಖಾಲೆಯಿಂದ ರೈತರುಗಳಿಗೆ ಬಹಳ ದೊಡ್ಡ ಪೆಟ್ಟು ಬಿದ್ದಂತಾಗಿದೆ. ಇದರಿಂದ ರೈತರುಗಳಿಂದ ಬರಬೇಕಾದ ಆದಾಯ ನಿಂತುಹೋಗಿದೆ. ಇದರ ಬಗ್ಗೆ ಸಮಗ್ರವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಈ ಅಧಿವೇಶನ ಮುಗಿದ ನಂತರ ಮಾನ್ಯ ಕಂದಾಯ ಸಚಿವರು ಹಾಗೂ ತೋಟಗಾರಿಕಾ ಇಲಾಖೆ ಸಚಿವರು ನಮ್ಮ ಜಿಲ್ಲೆಗೆ ಬಂದು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಕರೆದು ಸಭೆ ಮಾಡಿ ತೊಂದರೆಗೀಡಾದ ರೈತರುಗಳಿಗೆ ಪರಿಹಾರ ಕೊಡುವಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಅದೇ ರೀತಿ ಮಳೆ ಹೆಚ್ಚು ಬೀಳುವಂಥ ನಮ್ಮ ಪ್ರದೇಶಗಳಲ್ಲಿ ಮಾರ್ಗಗಳ ಪರಿಸ್ಥಿತಿ ಹೇಗಿರಬಹುದೆಂದು ಸರ್ಕಾರ ಆಲೋಚನೆ ಮಾಡಬೇಕು. ಒಂದೊಂದು ತಾಲ್ಲೂಕಿಗೆ ಒಂದೊಂದು ಲಕ್ಷ ರೂಪಾಯಿಗಳನ್ನು ಕೊಟ್ಟರೆ ಯಾವ ರೀತಿ ಮಾರ್ಗಗಳನ್ನು ರಿಪೇರಿ ಮಾಡಿಸುವುದಕ್ಕೆ ಸಾಧ್ಯವಾಗುತ್ತದೆ? ಈ ದಿಸೆಯಲ್ಲಿ ಸಮಗ್ರವಾಗಿ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಮಾನ್ಯ ಕಂದಾಯ ಸಚಿವರಿಗೆ ತಮ್ಮ ಮೂಲಕ ಹೇಳಿ ನನ್ನ ಮಾತುಗಳಿಂದ ಮುಗಿಸುತ್ತೇನೆ.

+ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಸನ್ಮಾನ್ಯ ಅಧ್ಯಕ್ಷಿಣಿಯವರೆ, ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಆದರೆ ಈ ಒಂದು ಸರ್ಕಾರದಿಂದ ಕೊಟ್ಟಂಥ ಮಾಹಿತಿಯನ್ನು ನೋಡಿದಾಗ ಬಹಳ ಆಶ್ಚರ್ಯವಾಗುತ್ತದೆ. ಇವತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಅತಿವೃಷ್ಟಿಯಾಗಿ ಸುಮಾರು 14 ಜನ ಜೀವವನ್ನು ಕಳೆದುಕೊಂಡಿದ್ದಾರೆ. ಇದು ತಮ್ಮ ಸ್ಟೇಟ್‌ಮೆಂಟ್ ಪ್ರಕಾರವೇ ಇದೆ. ಆದರೆ, ಅಗ್ರಿಕಲ್ಚರ್ ಲ್ಯಾಂಡ್ ಅಫೆಕ್ಟ್ ಆಗಿರುವುದು ತಮ್ಮ ಹೇಳಿಕೆ ಪ್ರಕಾರ 295 ಹೆಕ್ಟೇರ್ ಮಾತ್ರ. ಆದರೆ, ನನ್ನ ಮತ ಕ್ಷೇತ್ರದಲ್ಲೇ ಸುಮಾರು 1 ಸಾವಿರ ಹೆಕ್ಟೇರ್

ಭೂಮಿ ಅಫೆಕ್ಟ್ ಆಗಿದೆ. ಕಾಟನ್ ಕ್ರಾಪ್ ಅಫೆಕ್ಟ್ ಆಗಿದೆ. ತಮ್ಮ ಅಧಿಕಾರಿಗಳು ಕೇವಲ ಪ್ಯಾಡಿ ಕ್ರಾಪ್ ಬಗ್ಗೆ ಅಷ್ಟೇ ತಮಗೆ ತಿಳಿಸಿದ್ದಾರೋ ಅಥವಾ ಬೇರೆ ಕ್ರಾಪ್ ಬಗ್ಗೆಯೂ ತಿಳಿಸಿದ್ದಾರೋ ನನಗೆ ಗೊತ್ತಿಲ್ಲ, ಆದರೆ, ಒಂದು ಸಾವಿರ ಹೆಕ್ಟೇರ್ ಕಾಟನ್ ಕ್ರಾಪ್‌ಗೆ ಅಫೆಕ್ಟ್ ಆಗಿದೆ. ನಾನು ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ. ಇದನ್ನು ವೆರಿಫೈ ಮಾಡಿಕೊಳ್ಳಬೇಕು. ಅದೇ ಪ್ರಕಾರ ಮಾನ್ಯ ಸೊರ್ಕೆಯವರು ಹೇಳಿದ ಹಾಗೆ ಉತ್ತರ ಕನ್ನಡ ಜಿಲ್ಲೆ, ಶಿವಮೊಗ್ಗ, ಮಲೆನಾಡು ಹಾಗೂ ಕೊಡಗು ಜಿಲ್ಲೆಗಳ ಪರಿಸ್ಥಿತಿ ಬೇರೆ ಭಾಗಗಳಿಗಿಂತ ಬೇರೆಯಾಗಿದೆ. ಇವತ್ತು ಅಲ್ಲಿ ಅತಿವೃಷ್ಟಿಯಾದಾಗ ಬಹಳ ಅನಾಹುತವಾಗಿದೆ. ಇವತ್ತು ಎಷ್ಟು ತೆಂಗಿನ ಮರಗಳು, ಅಡಿಕೆ ಮರಗಳು ಬಿದ್ದಿವೆ ಎಂಬ ಇನ್‌ಫರ್ಮೇಷನ್‌ನ್ನು ನಿಮ್ಮ ತೋಟಗಾರಿಕಾ ಇಲಾಖೆಯವರು ಕೊಟ್ಟಿದ್ದಾರೆಯೇ ? ಇವತ್ತು ಸಾವಿರಾರು ತೆಂಗು ಮತ್ತು ಅಡಿಕೆ ಮರಗಳು ಬಿದ್ದಿವೆ. ಇದರಿಂದ ತೋಟಗಾರರಿಗೆ ಸಾಕಷ್ಟು ಲಾಸ್ ಆಗಿದೆ. ಇದರ ಬಗ್ಗೆ ಏನೂ ಫಿಗರ್ಸ್ ಇಲ್ಲಿ ಕೊಟ್ಟಿಲ್ಲ. ಹಾಗಾಗಿ ಇವತ್ತು ಉತ್ತರ ಕನ್ನಡ ಜಿಲ್ಲೆಯ ಪಿಕ್ಚರ್ ಏನು ತೋರಿಸಿದ್ದೀರಿ ಅದು ಸರಿಯಲ್ಲವೆಂದು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಈ ಒಂದು ಜಿಲ್ಲೆಗೆ ತಮ್ಮ ಸರ್ಕಾರ ಬಂದ ನಂತರ ಮಲತಾಯಿ ಧೋರಣೆಯಿಂದ ನೋಡಲು ಹೊರಟಿದ್ದೀರಿ. ಇವತ್ತು ಅಲ್ಲಿಯ ಅಭಿವೃದ್ಧಿಗೆ ಹಣ ಇಲ್ಲ. ನಮ್ಮ ಜಿಲ್ಲೆಗೆ ಮಂತ್ರಿಗಳೂ ಸಹ ಇಲ್ಲ. ಏಕೆಂದರೆ ತಮಗೆ ನಮ್ಮ ಜಿಲ್ಲೆಯ ಬಗ್ಗೆ ಇಂಟರೆಸ್ಟ್ ಇಲ್ಲ. ತಾವು ಏನು ಕೊಡುತ್ತೀರಿ ಅದನ್ನು ಭಿಕ್ಷೆ ತೆಗೆದುಕೊಂಡ ಹಾಗೆ ತೆಗೆದುಕೊಳ್ಳಬೇಕು. ಇಲ್ಲಿ ನಿಮ್ಮ ಜೊತೆ ಫೈಟ್‌ಮಾಡಿ ನಮ್ಮ ಜಿಲ್ಲೆಗೆ ಏನಾದರೂ ಮಾಡಬೇಕು ಅನ್ನುವವರು ಮಂತ್ರಿಮಂಡಲದಲ್ಲಿ ಯಾರೂ ಇಲ್ಲ. ಮಾನ್ಯ ಮುಖ್ಯಮಂತ್ರಿಗಳೇ ಹೇಳಿದ್ದಾರೆ ಜಿಲ್ಲೆಗೆ ಒಬ್ಬ ರೆಪ್ರೆಸೆಂಟೇಟಿವ್ ಇರಬೇಕೆಂದು, ಆ ರೀತಿ ಇದ್ದಾರೆ ತನ್ನ ಜಿಲ್ಲೆಯ ಸ್ವಾರ್ಥಕತೆ, ಅಭಿವೃದ್ಧಿಯಾಗಬೇಕು ಎನ್ನುವ ಇಚ್ಛೆ ಆ ಮಂತ್ರಿಯವರಿಗೆ ಇರುತ್ತದೆ. ಇವತ್ತು ಕೊಟ್ಟಿರುವ ಫಿಗರ್ಸ್ ಸರಿಯಿಲ್ಲ. ಮಾನ್ಯ ಸಚಿವರು ಇದರ ಬಗ್ಗೆ ಪುನಃ ವೆರಿಫೈ ಮಾಡಬೇಕೆಂದು ನಾನು ವಿನಯದಿಂದ ಹೇಳುತ್ತಿದ್ದೇನೆ. ಇವತ್ತು ನಮ್ಮ ಜಿಲ್ಲೆಯಲ್ಲಿ ರಸ್ತೆಗಳು ಹಾಳಾಗಿದೆ, ಸಾಕಷ್ಟು ಮನೆಗಳು ಬಿದ್ದಿವೆ. ಎಲ್ಲದಕ್ಕೂ ನೀವು ಕೊಟ್ಟಿರುವ ಫಿಗರ್ಸ್‌ಗಳನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಏಕೆಂದರೆ ನಾನು ಅಲ್ಲಿಗೆ ಭೇಟಿ ಕೊಟ್ಟಿದ್ದೇನೆ. ಅಲ್ಲಿನ ಪರಿಸ್ಥಿತಿ ಬಗ್ಗೆ ನನಗೆ ಚೆನ್ನಾಗಿ ಗೊತ್ತಿದೆ. ಈ ದೃಷ್ಟಿಯಿಂದ ಸರ್ಕಾರ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಸಾಕಷ್ಟು ಹಣ ಬಿಡುಗಡೆ ಮೊದಲು ನಿಮಗೆ ತೊಂದರೆಯಿದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇವತ್ತು ಕೇಂದ್ರ ಸರ್ಕಾರದವರೂ ಕೇವಲ ಇಪ್ಪತ್ತೇಳು ಕೋಟಿ ರೂಪಾಯಿ ಕೊಡುತ್ತೇವೆ ಅದರಲ್ಲೇ ಮಾಡಿಕೊಳ್ಳಿ ಎಂದು ಹೇಳುತ್ತಾರೆ. ಆ ಕೇಂದ್ರ ಸರ್ಕಾರದ ಮಿತಿಯಲ್ಲಿ ಯಾವ ಬದಲಾವಣೆಯಾಗುವುದಿಲ್ಲ. ಈಗ ತಮಗೆ ತೊಂದರೆಯಾಗುತ್ತದೆ. ಆದರೆ ತಾವು ಫೈಟ್ ಮಾಡಬೇಕಾಗುತ್ತದೆ. ಈ ಮಿತಿಯನ್ನು ಹೆಚ್ಚು ಮಾಡಿಸುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನ ಮಾಡಬೇಕಾಗುತ್ತದೆ. ಯಾವ ಸರ್ಕಾರ ಈ ನೀತಿಯಲ್ಲಿ ಬದಲಾವಣೆಯಾಗುವುದಿಲ್ಲವೋ, ಆ ಸರ್ಕಾರ ರೈತರಿಗೆ, ಪರಿಹಾರ ಕೊಡುವುದಕ್ಕಾಗುವುದಿಲ್ಲ. ಮೊನ್ನೆ ತಾವು ಏನು ಹೇಳಿದಿರಿ, ನಾವು ರೈತರಿಗೆ ಮೂರು ಐದು ರೂಪಾಯಿ ಕೊಡಲಿಕ್ಕೆ ಹೋಗಿಲ್ಲ, ಕನಿಷ್ಠ ಐವತ್ತು ಅಥವಾ ನೂರು ರೂಪಾಯಿ ಕೊಡುತ್ತೇವೆಂದು ಹೇಳಿದಿರಿ. ಹಣಕಾಸಿನ ತೊಂದರೆಯಾಗುತ್ತದೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೂ ಸಹಿತ ಇವತ್ತು ರೈತ 365 ದಿನ ಹಗಲೂರಾತ್ರಿ ದುಡಿದು ಭತ್ತ, ಜೋಳ ಬೆಳೆಯುತ್ತಾನೆ. ಅವನಿಗೆ ಹತ್ತು ಲಕ್ಷ ರೂಪಾಯಿ ಲುಕ್ಸಾನು ಆದಾಗ ನೀವು 200-300 ರೂಪಾಯಿ ಕೊಟ್ಟರೆ ಅವನ ಪರಿಸ್ಥಿತಿ ಏನಾಗಬೇಕು? ಹೀಗಾಗಿ ಈಗ ನೀವು ಅದಕ್ಕೆ ಬೇರೆ ವ್ಯವಸ್ಥೆಯನ್ನು ನಿರ್ಮಾಣ ಮಾಡಬೇಕು. ನಾನು ನಿಮ್ಮನ್ನು ಆಪಾದನೆ ಮಾಡುತ್ತಿಲ್ಲ. ಹಿಂದಿನ

ಸರ್ಕಾರದವರೂ ಸಹ ಕೇಂದ್ರ ಸರ್ಕಾರಗೆ ಇದ್ದಾರೆ. ಇದೇ ಪ್ರಕಾರ ನಾವು ಹೇಳುತ್ತಾ ಹೋದರೆ ಸಮಸ್ಯೆ ಪರಿಹರಿಸಲಿಕ್ಕೆ ಸಾಧ್ಯವಾಗುವುದಿಲ್ಲ, ನಮ್ಮ ಜಿಲ್ಲೆಯಲ್ಲಿ 14 ಜನ ಸತ್ತಿದ್ದಾರೆ. ಅವರಿಗೆ ಎಂಟು ಸಾವಿರ ರೂಪಾಯಿ ಪರಿಹಾರ ಕೊಟ್ಟರೆ ಅದರಿಂದ ಏನು ಆಗಲಿಕ್ಕೂ ಸಾಧ್ಯವಿಲ್ಲ. ರೋಡ್ಸ್‌ಗಳು ಡ್ಯಾಮೇಜ್ ಆಗಿವೆ. ಅದಕ್ಕೂ ಸಹ ತಾವು ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕು. ಇದು ನಿಮ್ಮ ಇಲಾಖೆಗೆ ಬರುವುದಿಲ್ಲವೆಂಬುದು ನನಗೆ ಗೊತ್ತು. ಆದರೆ ಇವತ್ತು ಅತಿವೃಷ್ಟಿ ಬಗ್ಗೆ ಚರ್ಚೆ ಮಾಡುವಾಗ ರಾಜ್ಯದ ಬೇರೆ ಬೇರೆ ಭಾಗದಲ್ಲಿ ಮಳೆಯಿಲ್ಲದಿರುವುದನ್ನೂ ಸಹ ನಾವು ಗಮನಿಸಬೇಕು. ಇದರಿಂದ ಬರಗಾಲ ಪರಿಸ್ಥಿತಿ ಎಲ್ಲಿ ನಿರ್ಮಾಣವಾಗುತ್ತದೆಂಬ ಭಯ. ನನಗಿದೆ. ಈಗ ನಮ್ಮ ಜಿಲ್ಲೆಯಲ್ಲಿ ಪ್ಯಾಡಿ ಕ್ರಾಪ್‌ಗೆ ಅಫೆಕ್ಟ್ ಆಗಿದೆ. ಏಕೆಂದರೆ ಮಳೆಯಿಲ್ಲ, ಇದು ತಮ್ಮ ಇಲಾಖೆಗೆ ಸಂಬಂಧವಿಲ್ಲ, ಆದರೂ ಸಹ ತಾವು ಕೃಷಿ ಇಲಾಖೆಯ ಮೇಲೆ ಮತ್ತು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ಕ್ರಾಪ್ ಇನ್‌ಷ್ಯೂರೆನ್ಸ್ ಅನ್ನು ಆದಷ್ಟು ಬೇಗ ಜಾರಿಗೆ ತರಬೇಕು. ಏಕೆಂದರೆ ನಾವು ದೆಹಲಿಗೆ ಹೋದಾಗ ನಮ್ಮ ಕೃಷಿ ಸಚಿವರಾದ ಡಾ:ಬಲರಾಂ ಜಾಕಡ್‌ರವರ ಜೊತೆ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ. ಒಂದು ತಾಲ್ಲೂಕಿನ ಒಂದು ಭಾಗದಲ್ಲಿ ಕ್ರಾಪ್‌ಗೆ ಅಫೆಕ್ಟ್ ಆದರೆ ರೈತರಿಗೆ ಯಾವುದೇ ಲಾಭ ಸಿಗುವುದಿಲ್ಲ. ಅವರು ಹೇಳಿದ ಹಾಗೆ ಇಡೀ ತಾಲ್ಲೂಕಿನಗೆ ಅಫೆಕ್ಟ್ ಆಗಬೇಕಾಗಿಲ್ಲ, ಹಾಳಾದರೆ ಅಷ್ಟು ರೇಟ್‌ನ್ನು ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ. ನಮ್ಮ ಸರ್ಕಾರ ಇದ್ದಾಗ ನಾವು ಕೇಂದ್ರ ಸರ್ಕಾರಕ್ಕೆ ಅಟ್‌ಲೀಸ್ಟ್ ಮಂಡಲ್ ಅನ್ನು ಯೂನಿಟ್ ಮಾಡಿ ಎಂದು ಹೇಳಿದ್ದೆವು. ಮಂಡಲವನ್ನು ಯೂನಿಟ್ ಮಾಡಿದರೆ ಆ ರೈತರಿಗೆ ಏನಾದರೂ ಹಾನಿ ಆದರೆ ಅದರ ಲಾಭವಾಗುತ್ತದೆ! ಎನ್ನುವ ದೃಷ್ಟಿಯಿಂದ ಆ ರೀತಿ ಕೇಂದ್ರಕ್ಕೆ ಒತ್ತಾಯ ಮಾಡಿದ್ದೆವು. ಆದರೆ ಆ ಬಗ್ಗೆ ಏನೂ ಕ್ರಮವನ್ನು ತೆಗೆದುಕೊಳ್ಳಲಿಲ್ಲ, ರಾಜ್ಯ ಸರ್ಕಾರವು ಈವತ್ತು ಕೇಂದ್ರ ಸರ್ಕಾರಕ್ಕೆ ಒತ್ತಾಯ ತರಬೇಕು. ನೀವು ಕೇಂದ್ರಸರ್ಕಾರಕ್ಕೆ ಒತ್ತಾಯ ತಂದರೆ ನ್ಯಾಚುರಲ್ ಕೆಲಾಮಿಟೀಸ್ ಮತ್ತು ಹೆವಿ ರೈನ್ಸ್‌ನಿಂದ ರೈತರು ತೊಂದರೆಗೊಳಗಾದಾಗ ಸರ್ಕಾರದಿಂದಾಗಲಿ ಕ್ರಾಫ್ ಇನ್‌ಷ್ಯೂರೆನ್ಸ್‌ನಿಂದಾಗಲಿ ಸಹಾಯ ಮಾಡಲಿಕ್ಕೆ ಅನುಕೂಲವಾಗುತ್ತದೆ. ನಮ್ಮ ಜಿಲ್ಲೆಗೆ ತಾವು ಕಡಿಮೆ ಹಣವನ್ನು ಬಿಡುಗಡೆ ಮಾಡಿದ್ದೀರಿ. ಒಂದು ಸರಿಯಾದ ಫಿಕ್ಚರ್‌ನ್ನು ನಿಮ್ಮ ಮುಂದೆ ಅಧಿಕಾರಿಗಳು ಇಟ್ಟಿಲ್ಲ, ಆದ್ದರಿಂದ ಪುನಃ ಇದರ ಬಗ್ಗೆ ಸರಿಯಾದ ಮಾಹಿತಿಯನ್ನು ತರಿಸಿ ಆದಷ್ಟು ಬೇಗ ಕ್ರಮವನ್ನು ತೆಗದುಕೊಂಡು ರೈತರಿಗೆ ಹಣವನ್ನು ಬಿಡುಗಡೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ನಮ್ಮ ಮಿತ್ರರಾದಂತಹ ಸುಮಾರು 11 ಮಂದಿ ಮಾನ್ಯ ಸದಸ್ಯರುಗಳು ಈ ವಿಷಯದ ಬಗ್ಗೆ ಮಾತನಾಡಿದ್ದಾರೆ. ಅವರುಗಳೆಲ್ಲರೂ ಅನೇಕ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅದೇ ರೀತಿಯಾಗಿ ಇಲ್ಲಿ ಸರ್ಕಾರ ಸರಿಯಾದ ರೀತಿಯಲ್ಲಿ ಕೆಲಸವನ್ನು ಮಾಡಿಲ್ಲವೆಂಬ ಟೀಕೆಯನ್ನು ಕೂಡ ಮಾಡಿದ್ದಾರೆ. ಅದು ಸಹಜವಾದುದು.

9.00 ಪಿ.ಎಂ

ಇಂಥ ರಿಲೀಫ್ ಕೆಲಸವನ್ನು ತೆಗೆದುಕೊಳ್ಳುವಾಗ ಎಲ್ಲವೂ ಕೂಡ ಬಹಳ ಒಳ್ಳೆಯ ರೀತಿಯಂದ ನಡೆದಿದೆ, ಅಥವಾ ಎಲ್ಲವನ್ನೂ ಕೂಡ ಬಹಳ ಸಮರ್ಪಕವಾಗಿ ನಾವು ಮಾಡಿದ್ದೇವೆ ಎಂಬುದನ್ನು ನಾನು ಹೇಳದಿದ್ದರೂ ಕೂಡ ಒಂದು ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಇವೊತ್ತು ತೊಂದರೆಯಲ್ಲಿದ್ದಂಥ ರೈತರಿಗೆ ಸಹಾಯ ಮಾಡಬೇಕೆನ್ನುವ ಸರಕಾರದ ಒಂದು ನಿಲುವು ಏನಿದೆ, ಮತ್ತು ಅದೇ ದಿಕ್ಕಿನಲ್ಲಿ

ಹಲವಾರು ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಆ ಬಗ್ಗೆ ಕೆಲಸವನ್ನು ಮಾಡಿದ್ದೇವೆ. ಆದರೆ ಒಂದು ತೊಂದರೆ ಏನು ಬಂದಿದೆ ಅಂದರೆ, ಇವೊತ್ತು ಕೇಂದ್ರ ಸರಕಾರವಾಗಲಿ, ರಾಜ್ಯ ಸರಕಾರವಾಗಲಿ, ಅದಕ್ಕೆ ನಿಗಧಿತವಾದಂಥ ಒಂದು ಹಣವನ್ನು ಒದಗಿಸಿದ್ದಾರೆ. ನ್ಯಾಚುರಲ್ ಕೆಲಾಮಿಟೀಸ್ ಫಂಡ್ ಎಂದು ಏನಿದೆ, ಇದರಲ್ಲಿ ನಮ್ಮ ರಾಜ್ಯಕ್ಕೆ 27 ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ. ಇದರಲ್ಲಿ ಮುಕ್ಕಾಲು ಭಾಗ ಕೇಂದ್ರ ಸರಕಾರದ್ದು ಮತ್ತು ಕಾಲು ಭಾಗ ರಾಜ್ಯಸರಕಾರದ್ದು ಇರುತ್ತದೆ. ಈ ನ್ಯಾಚುರಲ್ ಕೆಲಾಮಿಟೀಸ್ ಫಂಡ್‌ನ ಹಣವನ್ನು ನಾವು ಯಾವ ರೀತಿಯಾಗಿ ಉಪಯೋಗ ಮಾಡಬೇಕೆಂಬ ಬಗ್ಗೆ ಅವರು ಕೆಲವೊಂದು ಗೈಡ್‌ಲೈನ್ಸ್ ಕೊಟ್ಟಿದ್ದಾರೆ. ಅದರ ಪ್ರಕಾರವೇ ನಾವು ಖರ್ಚು ಮಾಡಬೇಕಾಗುತ್ತದೆ. ಅದನ್ನು ಬಿಟ್ಟು ನಾವು ಖರ್ಚು ಮಾಡಬಾರದು ಎಂದು ಅವರ ಆದೇಶ ಇರುತ್ತದೆ. ಆ ಗೈಡ್‌ಲೈನ್ಸ್ ಪ್ರಕಾರ ನಾವು ಖರ್ಚು ಮಾಡಿದಾಗ ಮಾತ್ರ ನಮಗೆ ಹಣವನ್ನು ಬಿಡುಗಡೆ ಮಾಡುತ್ತಾರೆ. ಇದೇ ರೀತಿಯಲ್ಲಿ ರಾಜ್ಯ ಸರಕಾರವೂ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿಕೊಂಡು ಬೇರೆ ರೀತಿಯಲ್ಲಿ ಸಹಾಯ ಮಾಡುವುದಕ್ಕೆ ಬರುವುದಿಲ್ಲವೇ ಎಂಬ ಪ್ರಶ್ನೆಯನ್ನು ತಾವು ಕೇಳಬಹುದು. ಬರುತ್ತದೆ, ನಾವು ಕೂಡ ಅದನ್ನು ಸ್ವಲ್ಪಮಟ್ಟಿಗೆ ಸಪ್ಲಿಮೆಂಟ್ ಮಾಡಿ ಸರಿಯಾದಂಥ ರೀತಿಯಲ್ಲಿ ಸ್ವಲ್ಪ ಹೆಚ್ಚಿನ ಸಹಾಯ ಮಾಡುವುದಕ್ಕೆ ಆಗಬಹುದು. ಆದರೆ ಅದನ್ನು ಸ್ವಲ್ಪಮಟ್ಟಿಗೆ ಮಾತ್ರ ಮಾಡಬಹುದು. ಈ ನ್ಯಾಚುರಲ್ ಕೆಲಾಮಿಟೀಸ್ ಫಂಡ್ ಪ್ರಕಾರ ನಾವು ಕೊಡತಕ್ಕಂಥಾದ್ದು..

ಶ್ರೀ ಸಿ. ಬೈರೇಗೌಡ : ತಾವುಗಳು ನ್ಯಾಚುರಲ್ ಕೆಲಾಮಿಟೀಸ್ ಬಗ್ಗೆ ಮಾತನಾಡುತ್ತಿದ್ದೀರಿ. ಆದರೆ ಇದು ಮ್ಯಾನ್‌ಮೇಡ್ ಕೆಲಾಮಿಟಿ. ಅದರ ಬಗ್ಗೆಯೂ ತಾವುಗಳು ದಯಮಾಡಿ ಹೇಳಿ. ಈ ಬಗ್ಗೆ ಸ್ಪಷ್ಟವಾಗಿ ಮಾನ್ಯ ಸದಸ್ಯರುಗಳು ಹೇಳಿದ್ದಾರೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ನೂರಾರು ಕುಟುಂಬಗಳು ಇವೊತ್ತು ಬೀದಿಪಾಲಾಗಿದ್ದಾವೆ...

ಶ್ರೀ ಸಿ. ಬೈರೇಗೌಡ : ಕೃಷ್ಣರಾಜಸಾಗರದಲ್ಲಿ ನೀರು ಬಿಡಬೇಕಾಗಿದ್ದರೆ.. ಅದು ಮ್ಯಾನ್‌ಮೇಡ್ ಕೆಲಾಮಿಟಿ...

ಉಪಾಧ್ಯಕ್ಷಿಣಿಯವರು : ಅವರು ಮಾತನಾಡುತ್ತಿದ್ದಾರೆ. ಈ ರೀತಿ ಮಧ್ಯೆ ಮಾತನಾಡಿದರೆ ಮಂತ್ರಿಯವರು ನಿಮ್ಮ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವುದಾದರೂ ಹೇಗೆ?

(ಗೊಂದಲ)

ಶ್ರೀ ಸಿ. ಬೈರೇಗೌಡ : ಅಧಿಕಾರಿಳಾಗಿರತಕ್ಕಂಥವರು, ಹಾಸನ ಜಿಲ್ಲಾಧಿಕಾರಿ ಯಾವ ರೀತಿಯಲ್ಲಿ ನಡೆದುಕೊಂಡಿದ್ದಾರೆ ಎಂಬುದು ಗೊತ್ತಾಗಬೇಕು. ಇದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕೆಂದು ನಾವು ಕೇಳಿಕೊಂಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಈ ಬಗ್ಗೆ ನ್ಯಾಯಾಂಗ ತನಿಖೆ ಮಾಡಿಸಲು ಸರಕಾರದವರು ಒಂದು ತೀರ್ಮಾಣ ಮಾಡಬೇಕು. ತನಿಖೆ ಮಾಡುತ್ತೇವೆ ಎಂದು ಹೇಳಿದರೆ ಅದು ಆಗುವುದಿಲ್ಲ.

ಶ್ರೀ ಸಿ. ಬೈರೇಗೌಡ : ಅವರು ನ್ಯಾಚುರಲ್ ಕೆಲಾಮಿಟೀಸ್ ಬಗ್ಗೆ ಹೇಳುತ್ತಿದ್ದಾರೆ. ಮ್ಯಾನ್‌ಮೇಡ್ ಕೆಲಾಮಿಟಿ ಬಗ್ಗೆ ಹೇಳುತ್ತಾ ಇಲ್ಲ. ಅದಕ್ಕೆ ಮೊದಲು ಅವರು ಉತ್ತರವನ್ನು ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಚಿವರು ಮಾತನಾಡಲಿ ಬೇಡ ಎಂದು ಹೇಳುತ್ತಿಲ್ಲ, ಅವರ ನೀತಿ ನ್ಯಾಯಾಂಗ ತನಿಖೆ ಮಾಡುವ ವಿಚಾರದಲ್ಲಿ ಇಲ್ಲ....

ಉಪಾಧ್ಯಕ್ಷಿಣಿಯವರು: ಅವರು ಮಾತನಾಡಿ ಮುಗಿಸಿದ್ದರೆ, ನಿಮಗೆ ಅರ್ಥವಾಗುತ್ತಿತ್ತು. ಅವರು ಇನ್ನೂ ಈಗ ಶುರು ಮಾಡುತ್ತಿದ್ದಾರೆ, ನೀವು ಮಧ್ಯೆ ಮಾತನಾಡಿದರೆ ಹೇಗೆ?

ಶ್ರೀ ಸಿ. ಬೈರೇಗೌಡ : ಮ್ಯಾನ್‌ಮೇಡ್ ಕೆಲಾಮಿಟಿ ಇರತಕ್ಕದ್ದು ಕೆಆರ್‌ಎಸ್ ಮತ್ತು ಹೇಮಾವತಿಯ ಕೆಳಗಡೆ ಇರತಕ್ಕದ್ದು. ಅಲ್ಲಿರತಕ್ಕಂಥ ಅಧಿಕಾರಿಗಳು ಬಹಳ ಬೇಜವಾಬ್ದಾರಿಯಿಂದ ನಡೆದುಕೊಂಡಿದ್ದಾರೆ. ಬೇರೆ ಜಿಲ್ಲೆಗಳಲ್ಲಿ ಈವತ್ತು ನೈಸರ್ಗಿಕ ವಿಕೋಪವಾದುದನ್ನು ಒಪ್ಪಿಕೊಳ್ಳಬಹುದು.......

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದುವರೆಗೆ ಸರಕಾರ ಏನು ಹೇಳಿದೆ? ನ್ಯಾಯಾಂಗ ತನಿಖೆ ಏನು ಹೇಳಿದ್ದಾರೆ? ಅವರು ಪ್ರಾರಂಭದಲ್ಲಿಯೇ ಈ ಬಗ್ಗೆ ಒಂದು ತಿಳುವಳಿಕೆಯನ್ನು ಕೊಡಬೇಕು. ಅದನ್ನು ಅವರು ಕೊಟ್ಟಿಲ್ಲ.

(ಗೊಂದಲ)

ಉಪಾಧ್ಯಕ್ಷಿಣಿಯವರು : ದಯಮಾಡಿ ತಾವುಗಳು ಕುಳಿತುಕೊಳ್ಳಿ. ಕೊನೆಗೆ ಕೊಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಬೈರೇಗೌಡರು ಹಿರಿಯ ಸದಸ್ಯರು, ವಾಟಾಳ್ ನಾಗರಾಜ್‌ರವರೂ ಕೂಡ ಹಿರಿಯ ಸದಸ್ಯರು. ನಾನು ಪ್ರಾರಂಭ ಈಗ ಮಾಡಿದ್ದೇನೆ, ನಾನು ಏನು ಹೇಳಬೇಕೆಂಬುದನ್ನು ಅವರೇ ಹೇಳಿಕೊಂಡರೆ ನಾನು ಹೇಳುವುದು ಏನು ಉಳಿಯುತ್ತದೆ? ನನ್ನ ಉತ್ತರ ಕೇಳಿದ ಮೇಲೆ ತೃಪ್ತಿ ಪಡದೇ ಹೋದಾಗ, ಸರಿಯಪ್ಪ ಎಂದು ಹೇಳುತ್ತೇನೆ. ಆದರೆ ನಾನು ಇನ್ನೂ ಪ್ರಾರಂಭದಲ್ಲಿಯೇ ಇದ್ದೇನೆ.

ಉಪಾಧ್ಯಕ್ಷಿಣಿಯವರು : ಹೀಗೆ ಎಲ್ಲರೂ ಎದ್ದು ನಿಂತು ಮಾತನಾಡಿದರೆ ಮಂತ್ರಿಯವರು ಉತ್ತರ ಕೊಡುವುದು ಬೇಡವೇ? ಅವರ ಉತ್ತರ ನಿಮಗೆ ಬೇಡ ಎಂದರೆ ನಾನು ಏನು ಮಾಡುವುದಕ್ಕಾಗುವುದಿಲ್ಲ, ಮಾನ್ಯ ಸಚಿವರು ಮಾತನಾಡುತ್ತಿದ್ದಾರೆ, ಆ ಮೇಲೆ ತಾವುಗಳು ಏನು ಕೇಳಬೇಕು ಅದನ್ನು ಕೇಳಬಹುದು.

ಶ್ರೀ ಟಿ.ಎಂ. ಮಂಜುನಾಥ್ : ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಹೋಗಬೇಕಾಗಿದೆ, ಆದ್ದರಿಂದ ಏನಾದರೂ ಮಾಡಿ ವಾಕ್‌ಔಟ್ ಮಾಡಿ ಹೋಗ ಬೇಕೆಂದಿದ್ದಾರೋ ಏನೋ..ಮತ್ತೇನಿಲ್ಲ

ಶ್ರೀ ವಾಟಾಳ್ ನಾಗರಾಜ್ : ಏನು ಹೇಳುತ್ತೀರಿ ನೀವು? ನಾವು ಹಾಗಾದರೆ ವಾಕ್‌ಔಟ್ ಮಾಡಬಾರದೆ? ನಾವು ಸಭಾತ್ಯಾಗ ಮಾಡಬಾರದೇ? ಪ್ರತಿಭಟನೆ ಮಾಡಬಾರದೇ? ಎಲ್ಲವನ್ನೂ ನಾವು ಸಮಯ ಬಂದಾಗ ಮಾಡುತ್ತೇವೆ. ತಾವುಗಳು ಬಹಳ ಬೇಜಾಬ್ದಾರಿಯಿಂದ ಮಾತನಾಡುತ್ತಿದ್ದೀರಿ.

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ : ದಯಮಾಡಿ ಸ್ವಲ್ಪ ಕೇಳಿ.. ನಾನು ಹೇಳಿದ್ದು...

ಶ್ರೀ ವಾಟಾಳ್ ನಾಗರಾಜ್ : ಕೇಳುವುದು ಏನಿಲ್ಲ, ನಿಮ್ಮ ಸರಕಾರದ ನೀತಿಯನ್ನು ನಾನು ಮೊದಲಿಂದಲೂ ನೋಡುತ್ತಾ ಬಂದಿದ್ದೇವೆ.

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ : ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾ ಇದ್ದಾರೆ...

ಉಪಾಧ್ಯಕ್ಷಿಣಿಯವರು : ಹೀಗೆ ತಾವುಗಳು ಮೂರು ಜನರೂ ನಿಂತು ಮಾತನಾಡಿದರೆ ಹೇಗೆ, ದಯಮಾಡಿ ಕುಳಿತುಕೊಳ್ಳಿ, ಸಚಿವರು ಉತ್ತರವನ್ನು ಕೊಡುತ್ತಿದ್ದಾರೆ. ಅವರ ಉತ್ತರವಾದ ಮೇಲೆ ತಾವುಗಳು ಮಾತನಾಡಬಹುದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದು ಸರಿಯಲ್ಲ.

ಶ್ರೀ ಟಿ.ಎಂ. ಮಂಜುನಾಥ : ಅವರು ಉತ್ತರ ಕೊಡುವುದಕ್ಕೆ ಅವಕಾಶ ಕೊಡಬೇಕು, ಸಮರ್ಪಕವಾಗಿಲ್ಲದಿದ್ದರೆ ಕ್ಲಾರಿಫಿಕೇಷನ್ ಮತ್ತೆ ಕೇಳಬಹುದು....

ಶ್ರೀ ವಾಟಾಳ್ ನಾಗರಾಜ್ : ನಾವು ಸಭಾತ್ಯಾಗ ಮಾಡಬಾರದೇ? ಈ ಸದನದಲ್ಲಿ ಸಭಾತ್ಯಾಗ ಮಾಡುತ್ತೇವೆ. ಧರಣಿ ಮಾಡುತ್ತೇನೆ.

(ಗೊಂದಲ)

ನಮಗೆ ಅವರ ಬಗ್ಗೆ ವೈಯಕ್ತಿವಾಗಿ ದ್ವೇಷ ಇಲ್ಲ. ನಿಮ್ಮ ಮಂತ್ರಿಗಳ ಬಗ್ಗೆ ನಮಗೆ ವೈಯಕ್ತಿಕ ಅಭಿಪ್ರಾಯವಿಲ್ಲ. ಮಂತ್ರಿಗಳ ಒಂದು ಧಾಟಿಯನ್ನು ನೋಡಿದರೆ ಒಂದು ಹೇಳಿಕೆಕೊಟ್ಟು ಬಿಟ್ಟು ನಮ್ಮ ಮುಖಕ್ಕೆ ಒಂದು ಚೀಟಿ ಹಚ್ಚಿಬಿಡುತ್ತಾರೆ. ಈ ಬಗ್ಗೆ ಸಮಗ್ರ ತನಿಖೆಯಾಗಲೇಬೇಕು. ಇದು ಕಡಿಮೇದೇನೂ ಅಲ್ಲ 133 ಜನ ಸತ್ತಿದ್ದಾರೆ. 5-6 ರೂ ಭಿಕ್ಷೆ ಕೊಟ್ಟಹಾಗೆ ಕೊಟ್ಟಿದ್ದಾರೆ.

(ಗೊಂದಲ)

ಉಪಾಧ್ಯಕ್ಷಿಣಿಯವರು: ತಾವುಗಳೆಲ್ಲರೂ ಕುಳಿತುಕೊಳ್ಳ ಬೇಕು. ಮೊದಲು ಅವರು ಮಾತನಾಡಲಿ ಆಮೇಲೆ ತಾವುಗಳು ಏನು ಕೇಳಬೇಕು ಅದನ್ನು ಕೇಳಿ. ನಿಮಗೆ ಅವಕಾಶ ಇದೆ. ಮೊದಲು ಸಚಿವರು ಉತ್ತರವನ್ನು ಕೊಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಈಗಾಗಲೇ ಪ್ರಾರಂಭ ಮಾಡಿ ಒಂದೆರಡು ನಿಮಿಷ ಮಾತ್ರ ಆಗಿದೆ. ಹೇಳುವಾಗ ನೀವು ಹೇಳಿದ ಹಾಗೆ ನ್ಯಾಚುರಲ್ ಕೆಲಾಮಿಟಿ ಏನು, ಮ್ಯಾನ್‌ಮೇಡ್ ಕೆಲಾಮಿಟಿ ಏನು? ಸರಕಾರದ ಆದೇಶ ಏನು? ಅನೇಕ ವಿಚಾರಗಳನ್ನು ನೀವು ಪ್ರಸ್ತಾಪ ಮಾಡಿರುವುದರ ಬಗ್ಗೆ ನಾವು ಹೇಳ ಬೇಕಾದುದನ್ನು ಈಗಾಗಲೇ ನಾನು ಹೇಳಿದ ಹಾಗೆ ನ್ಯಾಚುರಲ್ ಕೆಲಾಮಿಟೀಸ್ ಫಂಡ್‌ನ್ನು ಸರಕಾರದವರು ನಿಗದಿ ಮಾಡಿದ್ದಾರೆ. ಇಂಥ ಪ್ರಶ್ನೆಗಳನ್ನು ನಾವು ನೀವು ಕೂಡಿ ಬಗೆಹರಿಸಿಬೇಕಾದಂಥ ಪ್ರಮೇಯ ಇದೆ. ನಮ್ಮ ಆದೇಶ ಸರಿ ಎಂದು ನಾನು ಹೇಳುವುದಿಲ್ಲ, ಕೇಂದ್ರ ಸರಕಾರ ಮಾಡಿದ್ದು ತಪ್ಪು ಎಂದು ನಾನು ಹೇಳುವುದಿಲ್ಲ. ಇದು ಯಾವುತ್ತೂ ನಡೆದುಕೊಂಡು ಬಂದಿರತಕ್ಕಂಥಾದ್ದು. ನಿಮಗೆ ಸಮಾಧಾನ ಆದರೆ ಸರಿ, ಇಲ್ಲವಾದರೆ ಇದಕ್ಕೆ ಏನು ಮಾಡಬೇಕೆಂದು ಹೇಳಿ...

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದೇನು? ಎಲ್ಲಿದ್ದಾರೆ ಮುಖ್ಯ ಮಂತ್ರಿಯವರು? ನಿಮ್ಮ ಮಂತ್ರಿಗಳು ಎಲ್ಲಿದ್ದಾರೆ? ಕೋರಂ ಇಲ್ಲ, ಕೋರಂ ತೋರಿಸಿ, ಕರೆಗಂಟೆ ಹಾಕಿಸಿ. ಇಂತರ ಪ್ರಮುಖವಾದ ವಿಚಾರ ಇಲ್ಲಿ ಚರ್ಚೆಯಾಗುವಾಗ ಯಾವ ಮಂತ್ರಿಗಳೂ ಇಲ್ಲಿಲ್ಲ, ನನ್ನದು ಕ್ರಿಯಲೋಪ ಇದೆ.

ಮಾನ್ಯ ಮಂಜುನಾಥ ಅವರು ಹೇಳಿದರು ನೀವು ಸಭಾತ್ಯಾಗ ಮಾಡಿ ಎಂದು. ನಿಮ್ಮ ಮಂತ್ರಿಗಳು ಎಲ್ಲಿಗೆ ಹೋಗಿದ್ದಾರೆ? ನಿಮ್ಮ ಮುಖ್ಯ ಮಂತ್ರಿಗಳು ಎಲ್ಲಿ ಇದ್ದಾರೆ? ಮಿಕ್ಕ ಮಂತ್ರಿಗಳು ಎಲ್ಲಿ ಇದ್ದಾರೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಇದ್ದೇನಲ್ಲ

ಶ್ರೀ ವಾಟಾಳ್ ನಾಗರಾಜ್ :—ನೀವು ಇದ್ದೀರಿ, ನಮಗೆ ಗೊತ್ತು ನೀವು ಇರಲೇಬೇಕು.

ಉಪಾಧ್ಯಕ್ಷಿಣಿಯವರು : ಈಗ ಅವರು ಉತ್ತರ ಕೊಡುತ್ತಿದ್ದಾರೆ. ಉತ್ತರ ಕೊಡತಕ್ಕ ಮಂತ್ರಿಗಳು ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಹೇಳಿಕೆ ಇದೆ, ಇರಲೇಬೇಕು ಇದ್ದೀರಿ. ಈ ಸಭೆಯಲ್ಲಿ ಕೋರಮ್ ಇಲ್ಲ, ಕೋರಂ ತೋರಿಸಿ. ದಯಮಾಡಿ ಗಂಟೆ ಹಾಕಿ, ಕೋರಂ ತೋರಿಸಿ. ಇಂತಹ ಪ್ರಮುಖವಾದ ವಿಚಾರದಲ್ಲಿ ಚರ್ಚೆ ನಡೆಯುವಾಗ ಸರ್ಕಾರದ ಮಂತ್ರಿಗಳಿಗೆ ಜವಾಬ್ದಾರಿ ಬೇಡವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನ್ನ ಸಬ್ಜೆಕ್ಟ್ ಇದೆ. ನಾನು ಇದ್ದೇನೆ.

ಉಪಾಧ್ಯಕ್ಷಿಣಿಯವರು : ಈಗ ಯಾವ ಮಂತ್ರಿಗಳು ಉತ್ತರ ಕೊಡಬೇಕೋ ಅವರು ಇದ್ದಾರಲ್ಲಾ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈಗ ಮಾನ್ಯ ಮಂಜುನಾಥ್ ಅವರು ಹೇಳಿದರು ನಾವು ಸಭಾತ್ಯಾಗ ಮಾಡುತ್ತೇನೆ ಎಂದು. ಹೊಸದಾಗಿ ಅವರು ಲಾಟರಿ ಮಂತ್ರಿಗಳಾಗಿದ್ದಾರೆ. ಆದರೆ ಇದು ಲಾಟರಿ ಸಭೆಯಲ್ಲ.

ಶ್ರೀ ಟಿ.ಎಂ. ಮಂಜುನಾಥ್: ಹಾಗೆಲ್ಲಾ ಲಘುವಾಗಿ ಮಾತನಾಡಬಾರದು

ಶ್ರೀ. ವಾಟಾಳ್ ನಾಗರಾಜ್ : ನೀವೂ ಸಹ ಲಘುವಾಗಿ ಮಾತನಾಡಬಾರದು. ನಮ್ಮ ಬಗ್ಗೆ ಎಷ್ಟು ಲಘುವಾಗಿ ಮಾತನಾಡಿದಿರಿ ನೀವು? ನಾವು ಏನು ಸಭಾತ್ಯಾಗ ಮಾಡುತ್ತೇವೆಯಾ?

ಉಪಾಧ್ಯಕ್ಷಿಣಿಯವರು : ಅವರಿಗೆ ಲಾಟರಿ ಇಲಾಖೆ ಜೊತೆಗೆ ಸಣ್ಣ ಉಳಿತಾಯ ಖಾತೆಯೂ ಇದೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಖರ್ಗೆ ಅವರ ಮೇಲಿನ ಅಭಿಮಾನಕ್ಕೋಸ್ಕರ ನಾನು ಸುಮ್ಮನೇ ಕುಳಿತಿದ್ದೇನೆ.

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್ : ನೋಡಿರಿ......

ಶ್ರೀ ವಾಟಾಳ್ ನಾಗರಾಜ್ : ನೋಡಿ ಎಂದರೆ ಏನು ನೋಡುವುದು? ನೋಡಿರಿ ಎಂದರೆ ಏನು?

ಶ್ರೀ ಟಿ.ಎಂ. ಮಂಜುನಾಥ್ : ವಿವೇಚನೆಯಿಂದ ಮಾತನಾಡಿ. ನನ್ನ ಮೇಲೆ ಆರೋಪ ಮಾಡಿದ್ದಾರೆ. ಅದಕ್ಕಾಗಿ ನಾನು ಮಾತನಾಡುತ್ತಿದ್ದೇನೆ.

(ಗೊಂದಲ)

ಉಪಾಧ್ಯಕ್ಷಿಣಿಯವರು : ಹೀಗೆ ನೀವು ಅವರಿಗೆ ನೇರವಾಗಿ ಉತ್ತರ ಹೇಳುವುದು ಸರಿಯಲ್ಲ. ದಯಮಾಡಿ ತಾವು ಕುಳಿತುಕೊಳ್ಳಿ. ಈಗ ಮಾನ್ಯ ಮಂತ್ರಿಗಳು ಉತ್ತರವನ್ನು ಮುಗಿಸುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಲಾಟರಿ ಇಲಾಖೆ ಇಲ್ಲವಾ? ಲಾಟರಿ ಎಂದು ಹೇಳಿದರೆ ಏನು ತಪ್ಪು?

ಶ್ರೀ ಟಿ.ಎಂ. ಮಂಜುನಾಥ್ : ಹೇಳುವುದು ತಪ್ಪು ಎಂದಲ್ಲ...

ಶ್ರೀ ವಾಟಾಳ್ ನಾಗರಾಜ್ : ಇವರನ್ನು ಕಂದಾಯ ಮಂತ್ರಿಗಳು ಎಂದು ಹೇಳುತ್ತೇವೆ. ಅವರಿಗೆ ಲಾಟರಿ ಮಂತ್ರಿ ಎಂದು ಹೇಳುತ್ತೇವೆ. ಇನ್ನು ಏನು?...

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್ : ಅದು ತಪ್ಪು ಏನೂ ಅಲ್ಲ. ಮಾನ್ಯ ನಾಗರಾಜ್ ಅವರೇ ನಿಮ್ಮ ವಿಚಾರದಲ್ಲಿ ಎಲ್ಲಾ ಗೊತ್ತಿದೆ. ದಯವಿಟ್ಟು ಹೆಚ್ಚಿಗೆ ವಿಷಯ ಬೆಳೆಸುವುದು ಬೇಡ.....

ಶ್ರೀ ವಾಟಾಳ್ ನಾಗರಾಜ್ : ನಿಮ್ಮದು ನಮಗೂ ಗೊತ್ತಿದೆ. ನಮ್ಮದು ಏನು ಗೊತ್ತಿದೆ ಹೇಳಿ...

ಶ್ರೀ ಟಿ.ಎಂ. ಮಂಜುನಾಥ್: ಈಗ ಈ ಪ್ರಶ್ನೆ ಬೇಡ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಗೊತ್ತಿದೆ ಎಂದು ಹೇಳಿದಿರಲ್ಲಾ ಏನು ಗೊತ್ತಿದೆ ಎಂಬುದನ್ನು ಹೇಳಿ. ಗೊತ್ತಿರುವುದನ್ನು ಆಮೇಲೆ ನೋಡಿಕೊಳ್ಳೋಣ. ಈಗ ಸಂಬಂಧಪಟ್ಟ ಮಂತ್ರಿಗಳನ್ನು ಕರೆಯಿಸಿ.

ಉಪಾಧ್ಯಕ್ಷಿಣಿಯವರು : ಇನ್ನೊಬ್ಬರು ಬಂದರು...

ಶ್ರೀ ವಾಟಾಳ್ ನಾಗರಾಜ್ : ಯಾರು ಬಂದರು?

ಉಪಾಧ್ಯಕ್ಷಿಣಿಯವರು : ಮಾನ್ಯ ಆತ್ಮಾನಂದ ಅವರು ಬಂದಿದ್ದಾರೆ..

ಶ್ರೀ ವಾಟಾಳ್ ನಾಗರಾಜ್ : ಅವರು ಇಲ್ಲೇ ಓಡಾಡುತ್ತಿದ್ದರು. ಬಂದಿದ್ದಾರೆ.

(ಗೊಂದಲ)

ಉಪಾಧ್ಯಕ್ಷಿಣಿಯವರು : ಈ ವಿಷಯಕ್ಕೆ ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ. ಉತ್ತರ ಯಾರು ಕೊಡಬೇಕು ಅವರು ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಸಭೆಯಲ್ಲಿ ಕೋರಂ ಇದೆಯಾ ಹೇಳಿ.

ಶ್ರೀ ಸಿ. ಬೈರೇಗೌಡ : ಇದಕ್ಕೆ ನ್ಯಾಯವಾಗಿ ನೀರಾವರಿ ಮಂತ್ರಿಗಳು ಇಲ್ಲಿ ಇರಬೇಕಾಗಿತ್ತು. ಏಕೆಂದರೆ ಇವತ್ತಿನ ದಿವಸ...

ಶ್ರೀ ವಾಟಾಳ್ ನಾಗರಾಜ್ : ಅವರಿಗೆ ಎಷ್ಟು ಜವಾಬ್ದಾರಿ ಇದೆ ನೋಡಿ?

ಶ್ರೀ ಸಿ. ಬೈರೇಗೌಡ : ನಾವು ಹೇಳುತ್ತಾ ಇರತಕ್ಕದ್ದು ಮ್ಯಾನ್ ಮೇಡ್ ಫ್ಲಡ್ ಅದು ಅದಕ್ಕೆ ಉತ್ತರ ಕೊಡಬೇಕಾಗಿರತಕ್ಕವರು ಯಾರು?

ಶ್ರೀ ವಾಟಾಳ್ ನಾಗರಾಜ್: ನಾವು ಪ್ರತಿದಿನ ಒತ್ತಾಯ ಮಾಡಿ ಇವತ್ತು ಈ ವಿಷಯ ಚರ್ಚೆಗೆ ಬಂದಿದೆ.

ಉಪಾಧ್ಯಕ್ಷಿಣಿಯವರು : ಈಗ ಕೋರಂ ಬೆಲ್ ಹಾಕಿಸುತ್ತೇನೆ

ಶ್ರೀ ಆರ್.ವಿ. ದೇಶಪಾಂಡೆ : ಕೋರಂ ಬೇಡ ಬಿಡಿ

ಶ್ರೀ ವಾಟಾಳ್ ನಾಗರಾಜ್ : ಕೋರಂ ನಿಮಗೆ ಬೇಡ ಎಂದಾಗ ಬೇಡ. ಬೇಕು ಎಂದಾಗ ಬೇಕೇನು?

ಉಪಾಧ್ಯಕ್ಷಿಣಿಯವರು : ಶ್ರೀಯುತ ವಾಟಾಳ್ ನಾಗರಾಜ್ ಅವರೇ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ನಾವು ಭಾಷಣ ಮಾಡುವಾಗ ಕೂಡ ಕೋರಂ ಇರಲಿಲ್ಲ.

(ಗೊಂದಲ)

ಉಪಾಧ್ಯಕ್ಷಿಣಿಯವರು : ಆಗಲೇ 10-15 ನಿಮಿಷ ಉತ್ತರ ಕೊಟ್ಟುಬಿಟ್ಟಿದ್ದಾರೆ. ಅವರು ಉತ್ತರ ಕೊಟ್ಟು ಬಿಡಲಿ. ಮುಗಿದೇ ಹೋಗುತ್ತದೆ.

ಶ್ರೀ ಆರ್.ವಿ ದೇಶಪಾಂಡೆ : ನಮ್ಮದ್ದೇನೂ ಆಕ್ಷೇಪಣೆ ಇಲ್ಲ.....

ಶ್ರೀ ವಾಟಾಳ್ ನಾಗರಾಜ್ : ತಾವು ಹೇಗೆ ಮಾತನಾಡಿದರೂ ಹಾಗೆ ನಾನು ಮಾತನಾಡಬಹುದು ಅದರಲ್ಲಿ ತಪ್ಪೇನೂ ಇಲ್ಲ ಕೋರಂ ಇಲ್ಲವೇ ಸಭೆಯನ್ನು ನಡೆಸಬೇಕಾದರೆ ನಡೆಸಿ ನಿಮ್ಮ ಹುಕುಂ ಪ್ರಕಾರ ಸಭೆ ನಡೆಯಲಿ. ತಾವು ಈ ಮಾತನ್ನು ಒಪ್ಪುತ್ತೀರಾ?

ಶ್ರೀ ಸಿ. ಬೈರೇಗೌಡ : ಈ ವಿಷಯಕ್ಕೆ ಸಂಬಂಧಪಟ್ಟಂತೆ ಎರಡು ಅಂಶಗಳು ಇದೆ. ಒಂದು ನೀರಾವರಿಗೆ ಸಂಬಂಧಪಟ್ಟಿರತಕ್ಕ ಅಂಶ. ಮತ್ತೊಂದು ಪರಿಹಾರಕ್ಕೆ ಸಂಬಂಧಪಟ್ಟಿರತಕ್ಕ ಅಂಶ.ಪರಿಹಾರಕ್ಕೆ ಸಂಬಂಧಪಟ್ಟಿದ್ದರ ಬಗ್ಗೆ ಮಾನ್ಯ ಖರ್ಗೆಯವರು ಉತ್ತರ ಕೊಡುತ್ತಿದ್ದಾರೆ. ನಾನು ಅದನ್ನು ಒಪ್ಪುತ್ತೇನೆ. ಆದರೆ ನೀರಾವರಿಗೆ ಸಂಬಂಧಪಟ್ಟ ವಿಚಾರಗಳನ್ನು ಅನೇಕ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ಯಾರು ಉತ್ತರ ಕೊಡುತ್ತಾರೆ? ಇದು ಸ್ವಾಭಾವಿಕವಾಗಿ ಆಗಿರತಕ್ಕದ್ದು ಅಲ್ಲ. ಇದು ಮನುಷ್ಯ ನಿರ್ಮಿತವಾದಂತಹ ಪ್ರವಾಹ.

ಉಪಾಧ್ಯಕ್ಷಣಿಯವರು : ಈಗ ಅವರು ಮುಗಿಸಲಿ.

ಶ್ರೀ ಸಿ. ಬೈರೇಗೌಡ : ಮನುಷ್ಯನಿಂದ ನಿರ್ಮಿತವಾದಂತಹ ಪ್ರವಾಹ ಇದು. ಮನುಷ್ಯನಿಂದ ನಿರ್ಮಿತವಾದಂಹ ಪ್ರವಾಹಕ್ಕೆ ಉತ್ತರ ಕೊಡಬೇಕಾಗಿದ್ದರೆ ಭಾರಿ ನೀರಾವರಿ ಮಂತ್ರಿಯವರು ಸಭೆಗೆ ಬರಬೇಕಾಗಿತ್ತು ಇವತ್ತಿನ ದಿವಸ ಅವರು ಇಲ್ಲ ಇದಕ್ಕೆ ಯಾರು ಉತ್ತರ ಕೊಡುತ್ತಾರೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ಮಾನ್ಯ ಬೈರೇಗೌಡ ಮತ್ತು ಬಾಬಾ ಗೌಡರು ಇರಿಗೇಷನ್ ಟ್ಯಾಂಕ್ ಒಡೆದು ಹೋಗಿರುವುದರ ಬಗ್ಗೆ ಮತ್ತು ಹೇಮಾವತಿಯಲ್ಲಿ ಹೆಚ್ಚಿನ ನೀರನ್ನು ಬಿಟ್ಟು ಮ್ಯಾನ್‌ಮೇಡ್ ಕ್ಯಾಲಾಮಿಟೀಸ್ ಏನಾಗಿದೆ ಅದರ ಬಗ್ಗೆ ನೀವು ಹೇಳಿ ಎಂದು ಹೇಳುತ್ತಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ನೀರಾವರಿ ಮಂತ್ರಿಗಳು ಹೋದ ಸಲ ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಈಗ ಸಂಪೂರ್ಣವಾದಂತಹ ಸ್ಟೇಟ್‌ಮೆಂಟ್ ಬೇಕೆಂದು ಕೇಳುತ್ತಿದ್ದಾರೆ. ಈಗಾಗಲೇ ಜಿಲ್ಲಾಧಿಕಾರಿಗಳು ಎನ್‌ಕ್ವೈರಿ ಮಾಡಿದ್ದಾರೆ. ಅದರ ಬಗ್ಗೆ ನಾಳೆ ನೀಡಿದ್ದು ಬೆಳಿಗ್ಗೆ ಅವರ ಕೈಯಿಂದ ಸ್ಟೇಟ್‌ಮೆಂಟ್ ಅನ್ನು ನಾನು ಮಾಡಿಸುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ: ಅವರ ಕಡೆಯಿಂದ ಬೇಕಾದರೆ ಮಾಡಿಸುತ್ತೇವೆಂದರೆ ಹೇಗೆ? ಈಗ ನೀರಾವರಿ ರಸ್ತೆಗಳು ಸಹ ಕೊಟ್ಟುಹೋಗಿವೆ.

(ಗೊಂದಲ)

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: ಅವರಿಂದ ಒಂಧು ಸ್ಟೇಟ್‌ಮೆಂಟ್ ಅನ್ನು ಮಾಡಿಸೋಣ

ಉಪಾಧ್ಯಕ್ಷಣಿಯವರು: ನಾಡಿದ್ದು ಅವರು ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ಎಸ್.ಹೆಚ್. ಕೌಜಲಗಿ: ಇಲ್ಲಿ ಇರಿಗೇಷನ್ ಬಗ್ಗೆ ಯಾರೂ ಕೇಳುವವರು ಹೇಳುವವರು ಇಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ: ನಾವು ಇದೊಂದು ವಿಶೇಷವಾದಂತಹ ಚರ್ಚೆ ಎನ್ನುವಂತಹ ಕಾರಣಕ್ಕಾಗಿ ಸಮಯ ಮೀರಿದ್ದರೂ ಕುಳಿತಿದ್ದೇವೆ. ನಾವು ಏನನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೇವೆ ಅದಕ್ಕೆ ಸರ್ಕಾರದಿಂದ ಸಮಂಜಸವಾದಂತಹ ಉತ್ತರ ಬರುತ್ತದೆಂದು ತಿಳಿದುಕೊಂಡಿದ್ದೇವೆ. ನಾನು ಅದಕ್ಕೆ ಪ್ರಾರಂಭದಲ್ಲಿಯೇ ಮಾನ್ಯ ಬೈರೇಗೌಡರು ಹೇಳಿದ ಹಾಗೆ ಹೇಳಿದ್ದೇನೆ. ಇದು ಒಂದು ಇಲಾಖೆಗೆ ಸೀಮಿತವಾದುದ್ದಲ್ಲ ಇದು ಪಿಡಿ. ಡಬ್ಲ್ಯೂಡಿ ಇಲಾಖೆಗೆ ಸಂಬಂಧಪಟ್ಟಿದೆ. ಇರಿಗೇಷನ್‌ಗಂತೂ ನೇರವಾದಂತಹ ಸಂಬಂಧವಿದೆ. ಅದನ್ನು ತನಿಖೆ ಮಾಡಬೇಕೆಂದು ಹೇಳಿದ್ದೇನೆ. ಜ್ಯುಡಿಷಿಯಲ್ ಎನ್‌ಕ್ವೈರಿಗೆ ನಾವು ಕಾರಣಗಳನ್ನು ಕೂಡ ಹೇಳಿದ್ದೇವೆ. ಈಗ ಸಂಬಂಧಪಟ್ಟಂತಹ ಸದಸ್ಯರುಗಳೂ ಇಲ್ಲ, ಸಂಬಂಧಪಟ್ಟ ಮಂತ್ರಿಗಳು ಇಲ್ಲ ನಾವು ಈ ಬಗ್ಗೆ ಇಲ್ಲಿ ಹೇಳಿದ್ದೆಲ್ಲಾ ಸುಮ್ಮನೆ ಅರಣ್ಯರೋದನವಾಗುತ್ತಿದೆ. ಅರಣ್ಯರೋದವನ್ನು ಮಾಡುವುದಕ್ಕೆ ನಾವು ಈ ಶಾಸನಸಭೆಗೆ ಬರಬೇಕಾಗಿಲ್ಲ. ಹೊರಗಡೆ ಕುಳಿತು ಪ್ರೆಸ್ ಕಾನ್ಫರೆನ್ಸ್ ಕರೆದು ಹೇಳಬಹುದು. ಏನಾದರೂ ಒಂದು ಪರಿಹಾರ ಸಿಕ್ಕುತ್ತದೆ ಎಂದು ಇಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇವೆ. ಅದಕ್ಕೆ ನನ್ನ ಸಲಹೆ ಏನೆಂದರೆ ಮಾನ್ಯ ಕಂದಾಯ ಮಂತ್ರಿಗಳಿಗೆ ನಾನು ಚರ್ಚೆ ಪ್ರಾರಂಭ ಮಾಡಿದ್ದಾಗಲೂ ಹೇಳಿದ್ದೇನೆ. ಪುನಃ ಪುನಃ ಅದನ್ನೇ ಹೇಳಿದ್ದೇನೆ. ಈವತ್ತು ಆಗಿರತಕ್ಕಂಥಹ ಎರಡು ಕಾರಣಗಳಿಗೆ ಒಂದು ಪ್ರಕೃತಿನಿರ್ಮಿತವಾದದ್ದು ಇನ್ನೊಂದು ಸ್ವಯಂ ಕೃತ ಅಪರಾಧ ಈ ಎರಡಕ್ಕೂ ಒಟ್ಟಾರೆ ನಿಮ್ಮಿಂದ ಉತ್ತರ ನಿರೀಕ್ಷೆ ಸಾಧ್ಯವಿಲ್ಲ. ಆದ್ದರಿಂದ ಸಂಬಂಧಪಟ್ಟ ಇಲಾಖೆಯ ಮಂತ್ರಿಗಳಿಗೆ ಹೇಳಿ ತನಿಖೆ ಮಾಡುತ್ತೇವೆಂದು ಹೇಳಿ ಅದೂ ಹೇಳುವುದಿಲ್ಲ ಅಂದರೆ ಹೇಗೆ? ಉತ್ತರ ಅಂದರೆ ಇಲ್ಲಿ ವರದಿ ಮಾತ್ರ ಕೊಟ್ಟಿದ್ದಾರೆ.

ಉಪಾಧ್ಯಕ್ಷಿಣಿಯವರು : ಈಗ ತಾನೇ ನಾಳೆ ದಿವಸ ಸಂಬಂಧಪಟ್ಟ ಮಂತ್ರಿಯವರಿಂದ ಉತ್ತರ ಕೊಡಿಸುತ್ತೇವೆಂದು ಹೇಳಿದರು.

ಶ್ರೀ ಡಿ.ಬಿ. ಚಂದ್ರೇಗೌಡರು : ನಮಗೆ ಬೇಕಾಗಿರತಕ್ಕದ್ದು ಅವರ ಪರಿಹಾರದ ಬಗ್ಗೆ ಹಾಗೂ ಸ್ವಯಂಕೃತ ಅಪರಾಧದ ಪರಿಸ್ಥಿತಿಯನ್ನು ಈ ಸದನದ ಗಮನಕ್ಕೆ ತರಬೇಕು. ಜೊತೆಗೆ ಆಳುವ ಪಕ್ಷದ ಮೇಲೆ ಆಪಾದನೆ ಮಾಡಬೇಕೆನ್ನುವ ದೃಷ್ಟಿ ಅಲ್ಲಿ ಅವರೇ ಒಪ್ಪಿಕೊಂಡಿದ್ದಾರೆ. ರಾಜ್ಯದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಆಗಿರತಕ್ಕ ಈ ಅಪರಾಧದಿಂದ 12 ಕೋಟಿಗಿಂತ ಹೆಚ್ಚು ನಷ್ಟವಾಗಿದೆ. 133 ಜನ ಸತ್ತು ಹೋಗಿದ್ದಾರೆ. ನಾನು ಅದಕ್ಕೆ ಪ್ರಾರಂಭದಲ್ಲಿ ಹೇಳಿದೆ ಕೇಳಿ ಕೇಳಿ ಕೊನೆಗೆ ಅತ್ತು ಕರೆದು ಏನೋ ಒಂದು ಕನ್ನಡದ ಗಾದೆ ಇದೆ. ಅದನ್ನು ನಾನು ಪೂರ್ತಿ ಹೇಳಬಾರದು. ಹಾಗೆ ತಮ್ಮನ್ನು ಕರೆಸಿಕೊಂಡು ಇವತ್ತು ಚರ್ಚೆ ಮಾಡುತ್ತಿದ್ದೇವೆ. ಹಾಗೆಯೇ ಅತ್ತು ಕರೆದು ಉತ್ತರವನ್ನು ತೆಗೆದುಕೊಂಡು ಹೋಗುವುದಕ್ಕೆ ನಾನಂತೂ ಸಿದ್ದವಿಲ್ಲ ನಿಜವಾಗಿಯೂ ಸರ್ಕಾರಕ್ಕೆ ಇದರ ಬಗ್ಗೆ ಆಸಕ್ತಿ ಕಳಕಳಿ ಇದ್ದರೆ ದಯಮಾಡಿ ಇಬ್ಬರೂ ಮಂತ್ರಿಗಳು ಸೇರಿ ಒಂದಾಗಿ ಒಟ್ಟಾರೆ ಉತ್ತರ ಕೊಡಲಿ. ಇಲ್ಲ ನಾವು ಎತ್ತಿದೆವು ಅದಕ್ಕೆ ಅವರು ಉತ್ತರ ಹೇಳಿದರು ಅನ್ನುವುದಾದರೆ ಅದು ಅವರಿಗೆ ಬಿಟ್ಟಿದ್ದುದು.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಈಗ 120 ಕುಟುಂಬಗಳು ಬೀದಿಯಲ್ಲಿ ಕುಳಿತಿರುವಾಗ ಸರ್ಕಾರಕ್ಕೆ ಇಮ್ಮಿಡಿಯೇಟ್ ಕನ್ಸರ್ನ್ ಇದ್ದಿದ್ದರೆ ಕೂಡಲೇ ಆ ವೇಸ್ಟ್‌ವೇರನ್ನು ಕಡಿಮೆ ಮಾಡಿ ಪಟ್ಟಾ ಭೂಮಿಯನ್ನು ಮಾಡಿಕೊಡುತ್ತೇವೆಂದು ಹೇಳಬೇಕಾಗಿತ್ತು. ಇವತ್ತಿಗೂ ಪರಿಹಾರ ಸಾಧ್ಯವಿದೆ ನಿಮ್ಮ ದುಡ್ಡು ಬೇಕಾಗಿಲ್ಲ, ಯಾರೋ ಒಬ್ಬ ಇಂಜಿನಿಯರ್ ವೇಸ್ಟ್‌ವೇಟ್ ಎತ್ತರ ಕಟ್ಟಿದ ಎಂದು ಹೇಳಿ 120 ಕುಟುಂಬಗಳು ಪೂರ್ಣ ನಾಶವಾಗಿ ಹೋದಾಗ ಇಮ್ಮಿಡಿಯೇಟ್ ಕನ್ಸರ್ನ್ ಏನಾದರೂ ಎಂಬುದನ್ನು ಕೇಳುತ್ತಿದ್ದೇನೆ. ನಾವು ಪ್ರತಿಭಟನೆ ಮಾಡಬೇಕು ಯಾವರೀತಿ ಪ್ರತಿಭಟನೆ

ಉಪಾಧ್ಯಕ್ಷಿಣಿಯವರು : ಈಗ ಸರ್ಕಾರದ ವತಿಯಿಂದ ಮಾನ್ಯ ಕಂದಾಯ ಸಚಿವರು ಉತ್ತರ ಕೊಡಬೇಕು.

ಶ್ರೀ ಎಂ ಮಲ್ಲಿಗಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷಿಣಿಯವರೇ ಈಗ ಕಷ್ಟ ಏನಾಗಿದೆ ಎಂದರೆ ನನಗೆ ಪ್ರಾರಂಭ ಮಾಡುವುದಕ್ಕೆ ಅವಕಾಶ ಕೊಡಲಿಲ್ಲ ನನಗೆ ಉತ್ತರವನ್ನು ಕೊಡಲು ಬಿಡಲಿಲ್ಲ ಅವರು ಏನೇನು ಹೇಳಿದ್ದಾರೆ ಅದನ್ನು ನಾನು ಹೇಳಬೇಕಾಗುತ್ತದೆ. ಅವರು ಹೇಳಿದಂಥ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಸಂಬಂಧಪಟ್ಟ ಇಲಾಖೆಗಳಿಗೆ ಇನ್‌ಸ್ಟ್ರಕ್ಷನ್ ಕೊಡುತ್ತೇನೆ. ಇನ್ನೂ ನಾನು ಉತ್ತರವನ್ನೇ ಹೇಳಿಲ್ಲ. ಯಾವಾಗ ಮಾಡುತ್ತೀರೆಂದು ಕೇಳಿದರೆ ಏನು ಮಾಡುವುದು? ನಾನು ಇದೇ ಮೊದಲು ಈ ರೀತಿಯಾದ ಇಕ್ಕಟ್ಟಿನ ಪರಿಸ್ಥಿತಿಗೆ ಸಿಕ್ಕಿಕೊಂಡಿರುವುದು. ನಾನು ಉತ್ತರ ಕೊಡುವ ಮೊದಲೇ ಮಾನ್ಯ ಸದಸ್ಯರು ಅವರು ಏನು ಹೇಳುತ್ತಾರೆ ಹೇಳಲ್ಲಿ ಅವರು ಏನು ಮಾಡುತ್ತಾರೆ ಹೇಳಲಿ ಎಂದು ಕೇಳತಕ್ಕದ್ದು ಇದು ಮೊದಲನೇ ಸಲ ನನ್ನ ಅನುಭವಕ್ಕೆ ಬರುತ್ತಿರುವುದು. ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ ನ್ಯಾಚುರಲ್ ಕೆಲಾಮಿಟೀಸ್ ಬಗ್ಗೆ ನಾನು ಹೇಳಿದ್ದೇನೆ. ನಮಗೆ ಈಗಾಗಲೇ ಕೇಂದ್ರ ಸರ್ಕಾರದಿಂದ ಒಂದು ಆದೇಶ ಬಂದಿದೆ. ಅದನ್ನು ಸದನದ ಗಮನಕ್ಕೆ ತರಬಯಸುತ್ತೇನೆ.

"Recommendtions made by the 9th Finance Commission regarding revision in the existing scheme of financing of relief expenditure accepted by the Central Government.

The Commission recommended the constitution of the calamity relief fund for each state with earmarked amount with effect from 1st April 1990. 75% of this amount would be contributed by the Government of India as a non-plan grant. The balance of 25% shall be contributed by the State Government out of its own resources. the modalities for the operations of calamity fund including the norms for increasing the expenditure on various items being worked out and would be communicated soon. Till such time fresh guidelines norms are issued. The state Government is requested to continue to undertake relief operations on the basis of the existing Central norms guidelines issued wide G.O. No 4/8/85-86, dated 18th June 1986. the expenditure so incurred on this basis with effect from 1-4-1990 would only be taken into account against the proposed calamity relief fund".

ಮಾನ್ಯ ಉಪಾಧ್ಯಕ್ಷಿಣಿಯವರೇ: ಮೊದಲಿನಿಂದ ಪ್ರಾರಂಭ ಮಾಡಬೇಕಾಗುತ್ತದೆ. ನೋಟೀಸ್ ಏನಿದೆ it reads like this:

" Damages caused due to floods in the State recently due to the neglegence of the officers of departments like Chief Engineer etc., and the rellief matters taken by the Government".

Could the Minister replay to the fact of the matter that we have raised or some of the hon'ble Members have raised about the negligence of the officers like Chief Engineer? That should be the first reply.

ಶ್ರೀ ಎಸ್.ಹೆಚ್. ಕೌಜಲಗಿ : ಬೆಳಗಾಂ ಚೀಫ್ ಇಂಜಿನಿಯರ್ (ಇರಿಗೇಷನ್)

ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಅಲ್ಲಿ ರಸ್ತೆಗಳೂ ಸರಿಯಾಗಿಲ್ಲ, ನಾವು ಏನು ಕೆಲಸವನ್ನು ಮಾಡುವುದಕ್ಕೂ ಆಗುತ್ತಿಲ್ಲ.....

ಉಪಾಧ್ಯಕ್ಷಿಣಿಯವರು : ಮಾನ್ಯ ಕೌಜಲಗಿಯವರೇ ನಿಮ್ಮ ನಾಯಕರು ಮಾತನಾಡಲು ನಿಂತಿದ್ದಾರೆ ನೀವು ಮಾತನಾಡುತ್ತಿದ್ದೀರಲ್ಲಾ.

ಶ್ರೀ ಡಿ.ಬಿ. ಚಂದ್ರೇಗೌಡ : ಕಂದಾಯ ಇಲಾಖೆ ಅವರಿಗೆ ಸೀಮಿತವಾಗಿ ಉತ್ತರ I can understand his limitation.

ಉಪಾಧ್ಯಕ್ಷಿಣಿಯವರು : ಅವರ ಇಲಾಖೆಯ ಬಗ್ಗೆ ಅವರು ಉತ್ತರ ಕೊಡುತ್ತಿದ್ದಾರೆ.

Sri D.B. CHANDE GOWDA : I can understand ಕಂದಾಯ ಇಲಾಖೆಯಿಂದ್ಲ ನಿರೀಕ್ಷೆ ಮಾಡಿದ ಉತ್ತರಕ್ಕಿಂತ ನಾವು ಆ ವ್ಯಾಪ್ತಿಯನ್ನು ಮೀರಿ ನಾವು ಇಲ್ಲಿ ಚರ್ಚೆ ಮಾಡಿದ್ದೇವೆ.ಈಗ ಕಂದಾಯ ಇಲಾಖೆಯು ಫ್ಲಡ್ ರಿಲೀಫ್ ಫಂಡ್‌ನಲ್ಲಿ ಕೆಲಾಮಿಟಿಸ್ ರಿಲೀಫ್ ಫಂಡ್‌ನಲ್ಲಿ ಏನಾಗಿತ್ತು ಏನು ಬಿಟ್ಟಿದ್ದು ಅದರ ಬಗ್ಗೆ ನಾನು ಸಾಕಷ್ಟು ಹೇಳಿದ್ದೇನೆ. ಈಗ ಸಂಬಂಧಪಟ್ಟ ಮಿನಿಸ್ಟರ್ ಇಲ್ಲ ನಾಳೆ ಎರಡೂ ಸೇರಿ ಉತ್ತರ ಹೇಳಿದರೆ ಏನಾಗುತ್ತದೆ?

ಉಪಾಧ್ಯಕ್ಷಿಣಿಯವರು : ಅವರ ಇಲಾಖೆಗೆ ಏನು ಬಂದಿತ್ತು ಅದಕ್ಕೆ ಅವರು ಉತ್ತರ ಕೊಡುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅವರ ಇಲಾಖೆಗೆ ಬಂದದ್ದನ್ನು ಹೇಳುತ್ತಾರೆ. ಉಳಿದ ಇಲಾಖೆಯ ಬಗ್ಗೆ ಯಾರು ಉತ್ತರ ಹೇಳುತ್ತಾರೆ?

ಉಪಾಧ್ಯಕ್ಷಿಣಿಯವರು : ಅವರು ನಾಳೆ ದಿವಸ ಆ ಮಂತ್ರಿಗಳಿಗೆ ಹೇಳಿ ಸ್ಟೇಟ್‌ಮೆಂಟ್ ಮಾಡಿಸುತ್ತೇನೆಂದು ಹೇಳಿದರಲ್ಲಾ.

ಶ್ರೀ ಡಿ.ಬಿ. ಚಂದ್ರೇಗೌಡ : ಕೊನೆಗೆ ನಾವೇ ನಾಲ್ಕು ಜನ ಕುಳಿತುಕೊಳ್ಳಬೇಕಾಗುತ್ತದೆ. ಹೇಳುವವರು ಒಬ್ಬರು ಕೇಳುವವರು ಒಬ್ಬರು ನಮ್ಮಿಬ್ಬರು ಸರಿಯಾಗಿ ನಡೆದುಕೊಳ್ಳುತ್ತೀವಾ ಎಂಬುದನ್ನು ನೋಡುವುದಕ್ಕೆ ತಾವು ಒಬ್ಬರು ಇದ್ದುಬಿಟ್ಟರೆ ಅದು ಒಂದು ಪ್ರಶ್ನೆ ಉತ್ತರ ಎಂದು ಆಗುವುದಿಲ್ಲ. ನೀವು ಉತ್ತರವನ್ನು ಯಾರಿಗೆ ಹೇಳುತ್ತಿದ್ದೀರಿ? ನಾವು ನೀರಾವರಿ ಮಂತ್ರಿಗಳನ್ನು ಕೇಳಿದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ ನೀವು ನನ್ನ ರಕ್ಷಣೆಗೆ ಬರಬೇಕು. ಎಲ್ಲರ ಕೈಯಲ್ಲಿ ಹೇಳಿಸಿಕೊಂಡು ಸಾಕಾಗಿ ಸುಸ್ತಾಗಿ ಕುಳಿತಿದ್ದೆ ಈಗ ನಾನೇನಾದರೂ ಹೇಳಬೇಕೆಂದಾಗ ನೀವಲ್ಲ ನೀರಾವರಿ ಮಂತ್ರಿಗಳು ಬೇಕೆಂದರೆ ಏನು ಮಾಡುವುದು? ಅವರ ಇಲಾಖೆಗೆ ಸಂಬಂಧಪಟ್ಟ ವಿಷಯಗಳು ಏನಿದೆ ಅದನ್ನು ಪ್ರಸ್ತಾಪ ಮಾಡುತ್ತೇನೆ. ಉಳಿದ ವಿಷಯಗಳೇನಾದರೂ ಇದ್ದರೆ ಅವರಿಂದ ಸ್ಟೇಟ್‌ಮೆಟ್ ಕೊಡಿಸುತ್ತೇನೆಂದು ಹೇಳಿದ್ದೇನೆ.

ಶ್ರೀ ಬಾಬಾ ಗೌಡ ರುದ್ರಗೌಡ ಪಾಟೀಲ್ : ಮಾನ್ಯ ಉಪಾಧ್ಯಕ್ಷಿಣಿಯವರೆ 120 ಕುಟುಂಬಗಳು ಬೀದಿಯಲ್ಲಿ ಕುಳಿತಿವೆ ಅವರ ಬಗ್ಗೆ ಸ್ಪಂದನೆ ಇಲ್ಲದಿದ್ದರೆ ಏನು ಕೇಳಬೇಕು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೇಕಾದರೆ ಫರ್ದರ್ ಕ್ಲಾರಿಫಿಕೇಷನ್‌ಗೆ ಏನಾದರೂ ಹೊಸ ಸ್ಟೇಟ್‌ಮೆಂಟ್ ಮಾಡಬೇಕಾಗಿದ್ದರೆ ನೋಡೋಣ.

ಉಪಾಧ್ಯಕ್ಷಿಣಿಯವರು : ಈಗ ಕೋರಂ ಇಲ್ಲ ಎಂದು ಬಹಳ ಸಲ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ ಆದುದರಿಂದ ಈಗ ಚರ್ಚೆ ಮುಗಿದಿದೆ. ತಮ್ಮ

ಉತ್ತರವನ್ನು ನಾಳಿದ್ದು ಕೊಡಬಹುದು. ಈಗ ಒಂದು ಪ್ರಕಟಣೆ ಇದೆ. ಆ ಪ್ರಕಟಣೆಯನ್ನು ಓದಿದ ನಂತರ ಸಭೆಯನ್ನು ಮುಂದೂಡುತ್ತೇನೆ.

ಪ್ರಕಟಣೆ

ವಿಷಯ : ವಿಧಾನ ಪರಿಷತ್ತಿನಲ್ಲಿ ಕರ್ನಾಟಕ ಧನ ವಿನಿಯೋಗ ಸಂಖ್ಯೆ 2 ವಿಧೇಯಕ ಅನುಮೋದನೆಗೊಂಡಿರುವ ಬಗ್ಗೆ ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 114ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕೃತವಾದ ಕರ್ನಾಟಕ ಧನ ವಿನಿಯೋಗ ಸಂಖ್ಯೆ 2 ವಿಧೇಯಕ 1991 ಅನ್ನು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ 25.9.91ರಂದು ಅನುಮೋದಿಸಲಾಯಿತೆಂದು ತಿಳಿಸಿದ್ದೇನೆ.

ಈಗ ಸದನವು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11.00 ಗಂಟೆಗೆ ಪುನಃ ಸೇರುವುದು.

(ಸದನವು ರಾತ್ರಿ 7 ಗಂಟೆ 28 ನಿಮಿಷಕ್ಕೆ ಮುಕ್ತಾಯವಾಗಿ ಪುನಃ 26ನೇ ಸೆಪ್ಟೆಂಬರ್ 1991ರ ಗುರುವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು.)

ಕರ್ನಾಟಕ ವಿಧಾನಸಭೆ

ಒಂಬತ್ತನೆಯ ವಿಧಾನಸಭೆ

(ಐದನೇ ಅಧಿವೇಶನ)

(ಮುದುವರೆದ ಉಪವೇಶಗಳು)

ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ವಿಧೇಯಕ 1991

(1991ರ 28ನೇ ಸಂಖ್ಯೆಯ ವಿಧಾನ ಸಭಾ ವಿಧೇಯಕ)

ನಗರ ಪ್ರದೇಶಗಳಲ್ಲಿರುವ ಕೆಲವು ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ವಿಧೇಯಕ

ನಗರ ಪ್ರದೇಶಗಳಲ್ಲಿರುವ ಕೆಲವು ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ

ಭಾರತ ಗಣರಾಜ್ಯದ ನಲವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:

1. **ಚಿಕ್ಕ ಹೆಸರು ಮತ್ತು ಪ್ರಾರಂಭ:** 1) ಈ ಅಧಿನಿಯಮವನ್ನು ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ಅಧಿನಿಯಮ 1991 ಎಂದು ಕರೆಯತಕ್ಕದ್ದು.

2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದುದಾದ ಅಂಥ ದಿನಾಂಕದಂದು ಜಾರಿಯಲ್ಲಿ ಬರತಕ್ಕದು.

2. **ಪರಿಭಾಷೆಗಳು:** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು:

1) ಪ್ರಾಧಿಕಾರ ಎಂದರೆ

i) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 1976 (1976ರ ಕರ್ನಾಟಕ ಅಧಿನಿಯಮ 12) ರ ಅಡಿಯಲ್ಲಿ ರಚಿತವಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಥವಾ

ii) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 (1987ರ ಕರ್ನಾಟಕ ಅಧಿನಿಯಮ 34) ರ ಅಡಿಯಲ್ಲಿ ರಚಿತವಾದ ನಗರಾಭಿವೃದ್ಧಿ ಪ್ರಾಧಿಕಾರ ಅಥವಾ

iii) ಕರ್ನಾಟಕ ಸುಧಾರಣಾ ಮಂಡಲಿಗಳ ಅಧಿನಿಯಮ 1976 (1976ರ ಕರ್ನಾಟಕ ಅಧಿನಿಯಮ 11) ರ ಅಡಿಯಲ್ಲಿ ಸ್ಥಾಪಿತವಾದ ಒಂದು ಸುಧಾರಣಾ ಮಂಡಲಿ

2) ನಿರ್ಮಾಣ ಎಂದರೆ ಯಾವುದೇ ಖಾಯಂ ನಿರ್ಮಿತಿ

3) ಒಬ್ಬ ವ್ಯಕ್ತಿಯ ಸಂಬಂಧದಲ್ಲಿ ಕುಟುಂಬ ಎಂದರೆ ಒಬ್ಬ ವ್ಯಕ್ತಿ ಸಂದಭಾರ್ಧನುಸಾರ ಅಂಥ ವ್ಯಕ್ತಿಯ ಪತ್ನಿ ಅಥವಾ ಪತಿ ಮತ್ತು ಅವರ ಅವಿವಾಹಿತ ಅಪ್ರಾಪ್ತ ವಯಸ್ಕ ಮಕ್ಕಳು:

4) ಖಾಯಂ ನಿರ್ಮಿತಿ ಎಂದರೆ ಕಲ್ಲು ಇಟ್ಟಿಗೆಗಳು ಮರ ಮಣ್ಣು ಲೋಹದಿಂದಾಗಲಿ ಅಥವಾ ಯಾವುದೇ ಇತರ ಸಾಮಗ್ರಿಯಿಂದಾಗಲಿ ರಚಿತವಾದ ಯಾವುದೇ ಕಟ್ಟಡ:

5) ರೆವಿನ್ಯೂ ನಿವೇಶನ ಎಂದರೆ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 (1964ರ ಕರ್ನಾಟಕ ಅಧಿನಿಯಮ 12) ರ 95ನೇ ಪ್ರಕರಣಕ್ಕೆ ಅನುಸಾರವಾಗಿ ಪರಿವರ್ತನವಾಗಿರದ ಭೂಮಿಯ ಮೇಲೆ ಪಟ್ಟಣ ಅಥವಾ ಗ್ರಾಮಾಂತರ ಯೋಜನೆಗೆ ಅಥವಾ ಕಟ್ಟಡಗಳ ನಿರ್ಮಾಣಕ್ಕೆ ಸಂಬಂಧಪಟ್ಟ ಸುಸಂಗತ ಕಾನೂನಿನ ಅಡಿಯಲ್ಲಿ ಅನುಮೋದನೆಯಲ್ಲಿ ರೂಪಗೊಂಡದ ಒಂದು ನಿವೇಶನ

6) ಪರಿಶೋಧನ ಸಮಿತಿ ಎಂದರೆ 6ನೇ ಪ್ರಕರಣದ ಅಡಿಯಲ್ಲಿ ರಚಿತವಾದ ಒಂದು ಪರಿಶೋಧನಾ ಸಮಿತಿ:

7) ಅನಧಿಕೃತ ನಿರ್ಮಾಣ : ಎಂದರೆ ಕಟ್ಟಡದ ಲೈಸನ್ಸ್‌ನ್ನು ಪಡೆಯದೆ ರಚಿತವಾದ ಅಥವಾ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶ ಯೋಜನೆಗೆ ಸಂಬಂಧಪಟ್ಟ ಯಾವುದೇ ಕಾನೂನಿನ ಉಲ್ಲಂಘನೆಯಲ್ಲಿ ನೀಡಲಾದ ಒಂದು ಕಟ್ಟಡದ ಲೈಸೆನ್ಸನ್ನು ಪಡೆದ ತರುವಾಯ ಕಟ್ಟಲಾದ ಯಾವುದೇ ನಿರ್ಮಾಣ ಅಥವಾ ಕಟ್ಟಡದ ನಿರ್ಮಾಣಕ್ಕೆ

8) ನಗರ ಪ್ರದೇಶ ಎಂದರೆ

i) ಕರ್ನಾಟಕ ಪುರಸಭೆಗಳ ಅಧಿನಿಯಮ 1964 (1964ರ ಕರ್ನಾಟಕ ಅಧಿನಿಯಮ 22) ರ ಅಡಿಯಲ್ಲಿ ಘೋಷಿಸಲಾದ ಒಂದು ನಗರ ಪುರಸಭೆ ಅಥವಾ ಪಟ್ಟಣ ಪುರಸಭೆಯ ಪರಿಮಿತಿಗಳೊಳಗಿರುವ ಯಾವುದೇ ಪ್ರದೇಶ:

ii) ಕರ್ನಾಟಕ ಸುಧಾರಣಾ ಮಂಡಲಿಗಳ ಅಧಿನಿಯಮ 1976 (1976ರ ಕರ್ನಾಟಕ ಅಧಿನಿಯಮ 11) ರ ಅಡಿಯಲ್ಲಿ ಸ್ಥಾಪಿಸಲಾದ ಒಂದು ಸುಧಾರಣಾ ಮಂಡಲಿಯ ಪರಿಮಿತಿಗಳೊಳಗಿರುವ ಯಾವುದೇ ನಗರ ಪ್ರದೇಶ:

iii) ಬೆಂಗಳೂರು ಅಭಿವೃದ್ಧಿ ಪ್ರಾದಿಕಾರ ಅಧಿನಿಯಮ 1976 (1976ರ ಕರ್ನಾಟಕ ಅಧಿನಿಯಮ 12) ರಲ್ಲಿ ಪರಿಭಾಷಿಸಲಾದಂಥ ಬೆಂಗಳೂರು ಮಹಾನಗರ ಪ್ರದೇಶ

iv) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 (1987ರ ಕರ್ನಾಟಕ ಅಧಿನಿಯಮ 34) ರಲ್ಲಿ ಪರಿಭಾಷಿಸಲಾದಂಥ ಯಾವುದೇ ನಗರ ಪ್ರದೇಶ ಮತ್ತು ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪೂರ್ವೋಕ್ತ ಪ್ರದೇಶಕ್ಕೆ ಹೊಂದಿಕೊಂಡ ಅಂಥ ಇತರ ಪ್ರದೇಶವನ್ನು ಒಳಗೊಳ್ಳುತ್ತದೆ.

3. ಸಕ್ರಮಗೊಳಿಸುವುದು : ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ ಆದರೆ ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟ 4ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದವುಗಳನ್ನು ಹೊರತುಪಡಿಸಿ 1990ರ ಮಾರ್ಚ್ ಮೂವತ್ತೊಂದನೇ ದಿನಾಂಕಕ್ಕೆ ಮುಂಚಿತವಾಗಿ ಯಾವೊಬ್ಬ ವ್ಯಕ್ತಿಯು

i) ರಾಜ್ಯ ಸರ್ಕಾರಕ್ಕೆ ಸೇರಿದ ಅಥವಾ

ii) ಅವನ ಒಡೆತನದಲ್ಲಿರುವ ಒಂದು ರೆವಿನ್ಯೂ ನಿವೇಶನವಾಗಿರುವ ಅಥವಾ

iii) ಅವನಿಗೆ ಸೇರಿದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 1976ರ ಅಥವಾ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯ 1987ರ 17ನೇ ಪ್ರಕರಣದ ಅಡಿಯಲ್ಲಿ ಅಥವಾ ಕರ್ನಾಟಕ ಸುಧಾರಣಾ ಮಂಡಲಿಗಳ ಅಧಿನಿಯಮ 1976ರ 15ನೇ ಪ್ರಕರಣದ ಅಡಿಯಲ್ಲಿ ಒಂದು ಪ್ರಾಧಿಕಾರದ ಯಾವುದೇ ಅಭಿವೃದ್ಧಿ ಯೋಜನೆಯ ಸಂಬಂಧದಲ್ಲಿ ಅರ್ಜಿಸಬೇಕೆಂದು ಪ್ರಸ್ತಾವಿಸಲಾದ ಭೂಮಿಯ ಸಂಬಂಧದಲ್ಲಿ ಒಂದು ಅಧಿಸೂಚನೆಯನ್ನು ಪ್ರಕಟಿಸಗಿದ್ದು ಯಾವ ಪ್ರಾಧಿಕಾರಕ್ಕಾಗಿ ಅರ್ಜನೆಯನ್ನು ಪ್ರಸ್ತಾವಿಸಲಾಗಿತ್ತೋ ಆ ಯಾವುದೇ ಪ್ರಾಧಿಕಾರದಲ್ಲಿ ಇನ್ನೂ ನಿಹಿತಗೊಂಡಿರದ

ಯಾವುದೇ ನಗರ ಪ್ರದೇಶದಲ್ಲಿ ರಚಿಸಲಾದ ಯಾವುದೇ ಅನಧಿಕೃತ ನಿರ್ಮಾಣವನ್ನು ಅಂಥ ವ್ಯಕ್ತಿಯು ಈ ಅಧಿನಿಯಮವು ಪ್ರಾರಂಭವಾದ ಅರವತ್ತು ದಿನಗಳೊಳಗಾಗಿ ಸಲ್ಲಿಸಿದ ಅರ್ಜಿಯ ಮೇಲೆ ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಸಕ್ರಮ ಗೊಳಿಸಬಹುದು.

4. ಸಕ್ರಮಗೊಳಿಸಬಾರದ ಅನಧಿಕೃತ ನಿರ್ಮಾಣಗಳು ಈ ಮುಂದಿನ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸತಕ್ಕದಲ್ಲ ಎಂದರೆ

i) ಈಗಿರುವ ಅಥವಾ ಪ್ರಸ್ತಾವಿತ ರಸ್ತೆಗಳು ಮತ್ತು ರೈಲು ಮಾರ್ಗಗಳು ಸಂಪರ್ಕ ಮಾರ್ಗಗಳು ಮತ್ತು ಇತರ ನಾಗರಿಕ ಸೌಲಭ್ಯಗಳು ಅಥವಾ ಸಾರ್ವಜನಿಕ ಉಪಯುಕ್ತತೆಗಳಿಗೆ ಅಡ್ಡವಾಗಿ ಬರುತ್ತಿರುವ ಅನಧಿಕೃತ ನಿರ್ಮಾಣಗಳು

ii) ಕಟ್ಟಡಗಳ ನಿರ್ಮಾಣದ ಬಗೆಗಿನ ನಿಯಮಗಳು ಉಪ ಕಾನೂನುಗಳು ಅಥವಾ ವಿನಿಯಮಗಳ ಅಡಿಯಲ್ಲಿ ರಸ್ತೆಗಳು ರೈಲು ಮಾರ್ಗಗಳು. ಸಂಪರ್ಕ ಮಾರ್ಗಗಳು ಮತ್ತು ಇತರ ನಾಗರಿಕ ಸೌಲಭ್ಯಗಳು ಅಥವಾ ಸಾರ್ವಜನಿಕ ಉಪಯುಕ್ತತೆಗಳಿಂದ ಇರಬೇಕೆಂದು ಅಗತ್ಯ ಪಡಿಸಲಾದ ಅಂತರ ಯಾವುದಾದರೂ ಇದ್ದರೆ ಅದರೊಳಗೆ ಬರುವ ಅನಧಿಕೃತ ನಿರ್ಮಾಣ ಅಥವಾ ಅದರ ಯಾವುದೇ ಭಾಗ:

iii) ಅರಣ್ಯ ಭೂಮಿಯಲ್ಲಿ ಅಥವಾ ಕೆರೆ ದಂಡೆಯ ಮೇಲೆ ರಚಿಸಲಾದ ಅನಧಿಕೃತ ನಿರ್ಮಾಣಗಳು:

iv) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶ ಯೋಜನಾ ಅಧಿನಿಯಮ 1961 (1963ರ ಕರ್ನಾಟಕ ಅಧಿನಿಯಮ ಅಡಿಯಲ್ಲಿ ರೂಪಿಸಲಾದ ಸಮಗ್ರ ಅಭಿವೃದ್ಧಿ ಯೋಜನೆ ಅಥವಾ ಸ್ಥೂಲ ಅಭಿವೃದ್ಧಿ ಯೋಜನೆಯಲ್ಲಿ ಹಸಿರು ಪಟ್ಟಿಯೊಂದು ನಿರ್ದಿಷ್ಟಪಡಿಸಲಾದ ಅಥವಾ ಭೂ ಕಂದಾಯ ಅಧಿನಿಯಮ 1964 (1964ರ ಕರ್ನಾಟಕ ಅಧಿನಿಯಮ 12)ರ 95ನೇ ಪ್ರಕರಣದ (3ಎ) ಉಪ ಪ್ರಕರಣದ ಅಡಿಯಲ್ಲಿ ಹಸಿರು ಪಟ್ಟಿಯೆಂದು ಘೋಷಿಸಲಾದ, ಯಾವುದೇ ಪ್ರದೇಶದಲ್ಲಿ ರಚಿಸಲಾದ ಅನಧಿಕೃತ ನಿರ್ಮಾಣಗಳು:

v) ಬೇರೊಬ್ಬ ವ್ಯಕ್ತಿಗೆ ಸೇರಿದ್ದು ತನಗೆ ಹಕ್ಕಿಲ್ಲದ ಭೂಮಿಯ ಮೇಲೆ ಒಬ್ಬ ವ್ಯಕ್ತಿಯು ರಚಿಸದ ಅನಧಿಕೃತ ನಿರ್ಮಾಣಗಳು

vi) ನೆಲ ಮಹಡಿಯೂ ಸೇರಿದಂತೆ ಎರಡಕ್ಕಿಂತ ಹೆಚ್ಚು ಅಂತಸ್ತನ್ನು ಹೊಂದಿರುವ ಅನಧಿಕೃತ ನಿರ್ಮಾಣಗಳು:

vii) ನಗರ (ಭೂ ಪರಿಮಿತಿ ಮತ್ತು ವಿನಿಯಮನ) ಅಧಿನಿಯಮ 1976 (1976ರ ಕೇಂದ್ರಾಧಿನಿಯಮ 33) ಉಲ್ಲಂಘನೆಯಲ್ಲಿ ರಚಿಸಲಾದ ಅನಧಿಕೃತ ನಿರ್ಮಾಣಗಳು:

viii) ಯಾವುದೇ ಪ್ರಾಧಿಕಾರ ಅಥವಾ ಒಂದು ಸ್ಥಳೀಯ ಪ್ರಾಧಿಕಾರಕ್ಕೆ ಸೇರಿದ ಅಥವಾ ಅದರಲ್ಲಿ ನಿಹಿತವಾದ ಭೂಮಿಯ ಮೇಲೆ ರಚಿಸಲಾದ ಅನಧಿಕೃತ ನಿರ್ಮಾಣಗಳು ಮತ್ತು

ix) ಉದ್ಯಾನವನಗಳು ಆಟದ ಮೈದಾನಗಳು ಬಹಿರಂಗ ಸ್ಥಳಗಳು ಅಥವಾ ಯಾವುದೇ ನಾಗರೀಕ ಸೌಕರ್ಯಗಳನ್ನು ಕಲ್ಪಿಸುವುದಕ್ಕಾಗಿ ಮೀಸಲಿರಿಸಲಾದ ಯಾವುದೇ ಭೂಮಿಯ ಮೇಲೆ ರಚಿಸಲಾದ ಅನಧಿಕೃತನಿರ್ಮಾಣಗಳು.

5. ಸಕ್ರಮಗೊಳಿಸುವುದಕ್ಕೆ ಷರತ್ತುಗಳು: 1) ಸಕ್ರಮಗೊಳಿಸುವುದಕ್ಕಾಗಿ ಅರ್ಜಿಯನ್ನು ಸಲ್ಲಿಸಿದ ವ್ಯಕ್ತಿ ಅಥವಾ ಅವನ ಕುಟುಂಬದ ಯಾವೊಬ್ಬ ಸದಸ್ಯನು ಸಕ್ರಮಗೊಳಿಸಬೇಕೆಂದು ಕೋರಲಾದ ಅನಧಿಕೃತನಿರ್ಮಾಣವಿರುವ ನಗರ ಪ್ರದೇಶದೊಳಗೆ ಯಾವುದೇ ಕಟ್ಟಡ ಅಥವಾ ನಿವೇಶನದ ಒಡೆತನವನ್ನು ಹೊಂದಿದ್ದರೆ. ಅಂಥ ಅನಧಿಕೃತ ನಿರ್ಮಾಣವನ್ನು ಸಕ್ರಮಗೊಳಿಸಕ್ಕೂದಲ್ಲ.

2) ಯಾವೊಬ್ಬ ವ್ಯಕ್ತಿಯು ತನ್ನ ಹೆಸರಿನಲ್ಲಿ ಅಥವಾ ತನ್ನ ಕುಟುಂಬದ ಯಾವೊಬ್ಬ ಸದಸ್ಯನ ಹೆಸರಿನಲ್ಲಿ ಒಂದಕ್ಕಿಂತ ಹೆಚ್ಚು ಅನಧಿಕೃತ ನಿರ್ಮಾಣವನ್ನು ಸಕ್ರಮಗೊಳಿಸಬೇಕೆಂದು ಕೋರಲು ಅರ್ಹನಿರತಕ್ಕುದಲ್ಲ.

6. ಪರಿಶೋಧನಾ ಸಮಿತಿ: 1) ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ಉದ್ದೇಶಕ್ಕಾಗಿ ರಚಿಸಲಾದ ಒಂದು ಪರಿಶೋಧನಾ ಸಮಿತಿಯು ಇರತಕ್ಕುದು.

2) ಬೆಂಗಳೂರು ಜಿಲ್ಲೆಯನ್ನು ಹೊರತುಪಡಿಸಿ ಎಲ್ಲ ಜಿಲ್ಲೆಯಲ್ಲಿರುವ ಪರಿಶೋಧನಾ ಸಮಿತಿಗಳು ಈ ಮುಂದಿನ ಸದಸ್ಯರನ್ನು ಹೊಂದಿರತಕ್ಕುದು:

i) ಡೆಪ್ಯೂಟಿ ಕಮಿಷನರು ಅಧ್ಯಕ್ಷರು

ii) ಸಂಬಂಧಪಟ್ಟ ರೆವಿನ್ಯೂ ಉಪವಿಭಾಗದ ಅಸಿಸ್ಟೆಂಟ್ ಕಮಿಷನರು ಸಧಸ್ಯರು

iii) ಕಮಿಷನರು ನಗರಾಭಿವೃದ್ಧಿ ಪ್ರಾಧಿಕಾರ ಸದಸ್ಯರು

iv) ಸಂದರ್ಭಾನುಸಾರ ಪಟ್ಟಣ ಯೋಜನೆಯ ಸಹ ನಿರ್ದೇಶಕರು ಸದಸ್ಯರು ಅಥವಾ ಸಹಾಯಕ ನಿರ್ದೇಶಕರು

v) ಕಮಿಷನರು ಮುನಿಸಿಪಲ್ ಕಾರ್ಪೋರೇಷನ್ ಅಥವಾ ಸಂಬಂಧಪಟ್ಟ ಸಿಟಿ ಅಥವಾ ಟೌನ್ ಮುನಿಸಿಪಲ್ ಕೌನ್ಸಿಲಿನ ಮುಖ್ಯಾದಿಕಾರಿ

vi) ನಗರಾಭಿವೃದ್ದಿ ಪ್ರಾಧಿಕಾರದ ಪಟ್ಟಣ ಯೋಜನಾ ಸದಸ್ಯರು ಸದಸ್ಯ ಕಾರ್ಯದರ್ಶಿ

3. ಬೆಂಗಳೂರು ಜಿಲ್ಲೆಗೆ ಸಂಬಂಧಿಸಿದಂತೆ ಪರಿಶೋಧನಾ ಸಮಿತಿಯ ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು:

i) ಕಮೀಷನರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರು

ii) ಡೆಪ್ಯೂಟಿ ಕಮೀಷನರು ಬೆಂಗಳೂರು ಜಿಲ್ಲೆ ಸದಸ್ಯರು

iii) ಬೆಂಗಳೂರು ನಗರಾಡಳಿತ ನಿಗಮದ ಡೆಪ್ಯುಟಿ ಕಮಿಷನರು ಸದಸ್ಯರು

iv) ಸಂಬಂಧಪಟ್ಟ ರೆವಿನ್ಯೂ ಉಪವಿಭಾಗದ ಅಸಿಸ್ಟೆಂಟ್ ಸದಸ್ಯರು ಕಮಿಷನರು

v) ಅನಧಿಕೃತಿ ನಿರ್ಮಾಣಗಳ ಪ್ರತಿಬಂಧದ ಪ್ರಭಾರದಲ್ಲಿರುವ ಸದಸ್ಯರು ಅಸಿಸ್ಟೆಂಟ್ ಕಮಿಷನರು

vi) ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಸದಸ್ಯರು ಪಟ್ಟಣ ಯೋಜನೆಯ ಸಹ ನಿರ್ದೇಶಕರು

vii) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪಟ್ಟಣ ಸದಸ್ಯರು ಸದಸ್ಯ ಕಾರ್ಯದರ್ಶಿ

4) ಪರಿಶೋಧನಾ ಸಮಿತಿಯು 3ನೇ ಪ್ರಕರಣದ ಆಡಿಯಲ್ಲಿ ಸ್ವೀಕರಿಸಲಾದ ಅರ್ಜಿಯನ್ನು ಪರಿಶೀಲಿಸತಕ್ಕುದು ಮತ್ತು ನಿಯಮಿಸಬಹುದಾದ ಅಂಥ ನಿಯಮಗಳಿಗನುಸಾರವಾಗಿ

ಒಳಗೊಂಡಿರುವ ಉಪಬಂಧಗಳಿಗನುಸಾರವಾಗಿ ಮಾಡಲಾಗುವ ಸಂದಾಯಕ್ಕೆ ಒಳಪಟ್ಟು ಅನಧಿಕೃತ ನಿರ್ಮಾಣವನ್ನು ಸಕ್ರಮಗೊಳಿಸುವುದಕ್ಕೆ ಆದೇಶಿಸತಕ್ಕದು ಮತ್ತು ಅಂಥ ನಿರ್ಮಾಣವು ರಾಜ್ಯ ಸರ್ಕಾರಕ್ಕೆ ಸೇರಿದ ಭೂಮಿಯಲ್ಲಿದ್ದಲ್ಲಿ ನಿರ್ಮಾಣವನ್ನು ಸಕ್ರಮಗೊಳಿಸುವ ಉದ್ದೇಶಕ್ಕಾಗಿ ನಿಯಮಿಸಬಹುದಾದಂಥ ಗರಿಷ್ಠ ವಿಸ್ತೀರ್ಣಕ್ಕೆ ಒಳಪಟ್ಟು ನಿರ್ಮಾಣಕ್ಕೆ ಸೇರಿರುವ ಭೂಮಿಯನ್ನು ನೀಡುವುದಕ್ಕಾಗಿ ಸಹ ಶಿಫಾರಸು ಮಾಡತಕ್ಕುದು.

5) ಅನಧಿಕೃತ ನಿರ್ಮಾಣವನ್ನು 1990 ಮಾರ್ಚ್ ಮೂವತ್ತೊಂದನೇ ದಿನಾಂಕಕ್ಕೆ ಮುಂಚಿತವಾಗಿ ಮಾಡಲಾಗಿತ್ತೆಂಬುದನ್ನು ರುಜುವಾತುಪಡಿಸುವ ಭಾರವು ಅಂಥ ಅನಧಿಕೃತ ನಿರ್ಮಾಣವನ್ನು ಸಕ್ರಮಗೊಳಿಸಬೇಕೆಂದು ಕೋರುವ ಅರ್ಜಿದಾರನ ಮೇಲೆ ಇರತಕ್ಕದ್ದು.

7. ಮೊಬಲಗಿನ ಸಂದಾಯ ಮತ್ತು ಭೂಮಿಯ ನೀಡಿಕೆ 1) ಪರಿಶೋಧನಾ ಸಮಿತಿಯಿಂದ ಸಕ್ರಮಗೊಳಿಸುವ ಆದೇಶವನ್ನು ಸ್ವೀಕರಿಸಲಾದ ದಿನಾಂಕದಿಂದ ಎರಡು ತಿಂಗಳೊಳಗಾಗಿ ನಿಯಮಿಸಬಹುದಾದಂಥ ಮೊಬಲಗನ್ನು ಯಾವ ವ್ಯಕ್ತಿಯ ಪರವಾಗಿ ಅಂಥ ಆದೇಶವನ್ನು ಮಾಡಲಾಗಿದೆಯೋ ಅವನು ಸಂದಾಯ ಮಾಡತಕುದು ವಿವಿಧ ನಗರ ಪ್ರದೇಶಗಳು ಅಥವಾ ವ್ಯಕ್ತಿಗಳು ವರ್ಗ ಅಥವಾ ವರ್ಗಗಳ ಸಂಬಂಧದಲ್ಲಿ ಬೇರೆ ಬೇರೆ ಮೊಬಲಗನ್ನು ನಿಯಮಿಸಬಹುದು.

2) 1) ನೇ ಉಪಪ್ರಕರಣಕ್ಕನುಸಾರವಾಗಿ ಮೊಬಲಗನ್ನು ಸಂದಾಯ ಮಾಡಿದ ಮೇಲೆ

i) ರಾಜ್ಯ ಸರ್ಕಾರಕ್ಕೆ ಸೇರಿದ ಭೂಮಿಯ ಸಂದರ್ಭದಲ್ಲಿ ಪರಿಶೋಧನಾ ಸಮಿತಿಯ ಸದಸ್ಯ ಕಾರ್ಯದರ್ಶಿಯು ಸಕ್ರಮಗೊಳಿಸಬೇಕೆಂದು ಆದೇಶಿಸಲಾದ ಭೂಮಿಯನ್ನು ನೀಡಿದ ಬಗ್ಗೆ ಒಂದು ಆದೇಶವನ್ನು ಹೊರಡಿಸತಕ್ಕುದು ಮತ್ತು ಅಂಥ ನೀಡಿಕೆಯ ತರುವಾಯ ಭೂಮಿಯನ್ನು ಪಡೆದವರು ತನ್ನ ಹೆಸರಿನಲ್ಲಿ ತನ್ನ ಖರ್ಚಿನಲ್ಲಿ ಅಂಥ ಭೂಮಿಯ ಬಗ್ಗೆ ಮಾರಾಟ ಪತ್ರವನ್ನು ಬರೆಸಿಕೊಳ್ಳಲು ಹಕ್ಕುಗಳವನಾಗತಕುದು ಮತ್ತು ತದನಂತರ ಅಲ್ಲಿ ಇರುವ ಅನಧಿಕೃತ ನಿರ್ಮಾಣವನ್ನು ಸಕ್ರಮಗೊಳಿಸಲಾಗಿದೆಯೆಂದು ಭಾವಿಸತಕ್ಕುದು:

ii) i) ನೇ ಖಂಡದ ಅಡಿಯಲ್ಲಿ ಬರದ ಸಂದರ್ಭಗಳಲ್ಲಿ ಅನಧಿಕೃತ ನಿರ್ಮಾಣವನ್ನು ಸಕ್ರಮಗೊಳಿಸಲಾಗಿದೆಯೆಂದು ಭಾವಿಸತಕ್ಕದ್ದು.

8. ಸಕ್ರಮಗೊಳಿಸದ ಅನಧಿಕೃತ ನಿರ್ಮಾಣವನ್ನು ಕೆಡವಬೇಕು. ಈ ಅಧಿನಿಯಮದ ಅಡಿಯಲ್ಲಿ ಸಕ್ರಮಗೊಳಿಸಿರದ ಎಲ್ಲಾ ಅನಧಿಕೃತ ನಿರ್ಮಾಣಗಳು ಕೆಡಹುವಿಕೆಗೆ ಬದ್ಧವಾಗತಕ್ಕುದು ಮತ್ತು ಅಂಥ ನಿರ್ಮಾಣಗಳನ್ನು ಮಾಡಿದ ವ್ಯಕ್ತಿಗಳು ಸುಸಂಗತ ಕಾನೂನಿಗನುಸಾರವಾಗಿ ಕ್ಷಿಪ್ರವಾಗಿ ಹೊರದೂಡುವಿಕೆಗೆ ಬದ್ಧರಾಗಿರತಕ್ಕುದು.

9 ನಿಯಮಗಳ ರಚನಾಧಿಕಾರ – 1) ರಾಜ್ಯ ಸರ್ಕಾರವು ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿಸುವ ಉದ್ದೇಶಕ್ಕಾಗಿ ಪೂರ್ವ ಪ್ರಕಟಣೆಯ ತರುವಾಯ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

2) ವಿಶೇಷವಾಗಿ ಮತ್ತು ಪೂರ್ವೋಕ್ತ ಉಪಬಂಧಗಳ ಸಾಮಾನ್ಯತೆಗೆ ಪ್ರತಿ ಕೂಲವಾಗದಂತೆ ಅಂಥ ನಿಯಮಗಳು

ಎ) 6ನೇ ಪ್ರಕರಣದ 4) ನೇ ಉಪಪ್ರಕರಣದ ಅಡಿಯಲ್ಲಿ ನಡೆಸಬೇಕಾದ ವಿಚಾರಣೆಯ ರೀತಿ

ಬಿ) 7ನೇ ಪ್ರಕರಣದ ಅಡಿಯಲ್ಲಿ ಸಂದಾಯ ಮಾಡಬೇಕಾದ ಮೊಬಲಗು

ಸಿ) ಈ ಅಧಿನಿಯಮದ ಅಡಿಯಲ್ಲಿ ರಚಿಸಬೇಕಾದ ನಿಯಮಗಳು ಅಥವಾ ಅಗತ್ಯ ವಿರುವ ಯಾವುದೇ ಇತರ ವಿಷಯ.

ಇವುಗಳ ಬಗ್ಗೆ ಉಪಬಂಧ ಕಲ್ಪಿಸಬಹುದು.

3) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚಿನ ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಮೂವತ್ತು ದಿನಗಳ ಒಟ್ಟು ಅವಧಿಯವರೆಗೆ ರಾಜ್ಯ ವಿಧಾನ ಮಂಡಲವು ಅಧಿವೇಶನದಲ್ಲಿರುವಾಗ ಮಂಡಿಸತಕ್ಕುದು ಮತ್ತು ಅದನ್ನು ಹಾಗೆ ಮಂಡಿಸಲಾದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವ ಮೊದಲು ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಉಭಯ ಸದನಗಳು ಒಪ್ಪಿದರೆ ಅಥವಾ ನಿಯಮಗಳನ್ನು ರಚಿಸಬಾರದೆಂದು ಉಭಯ ಸದನಗಳು ಒಪ್ಪಿದರೆ ತದನಂತರ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕುದು ಅಥವಾ ಪರಿಣಾಮಕಾರಿಯಾಗತಕ್ಕುದ್ದಲ್ಲ ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಲಾದ ಯಾವುದರ ಮಾನ್ಯತೆಗೂ ಪ್ರತಿಕೂಲವಾಗಿರತಕ್ಕುದ್ದಲ್ಲ.

10. ತೊಂದರೆಗಳ ನಿವಾರಣೆ – ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ತೊಂದರೆ ನಿವಾರಣೆಗಾಗಿ ಅಗತ್ಯವೆಂದು ಅಥವಾ ಯುಕ್ತವೆಂದು ತೋರುವ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದ ಅಂಥ ಉಪಬಂಧಗಳನ್ನು ಕಲ್ಪಿಸಬಹುದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ನಗರ ಪ್ರದೇಶಗಳಲ್ಲಿ ಅಳತೆ ಮೀರಿ ಹೆಚ್ಚಿರುವ ಅನಧಿಕೃತ ನಿರ್ಮಾಣಗಳಿಂದಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಇತರ ಸ್ಥಳೀಯ ಪ್ರಾಧಿಕಾರಗಳಿಗೆ ಮನೆ ನಿವೇಶನಗಳಿಗಾಗಿ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸುವುದು ಕಷ್ಟವಾಗುತ್ತಿದೆ. ಹಲವಾರು ವರ್ಷಗಳ ಅವಧಿಯಲ್ಲಿ ಈಗಾಗಲೇ ನಿರ್ಮಿಸಿರುವ ಅನಧಿಕೃತ ನಿರ್ಮಾಣಗಳನ್ನು ಕೆಡಹುವುದು ಸಾಧ್ಯವಿಲ್ಲ ಮತ್ತು ಸಾರಾಸಗಟು ಕೆಡಹುಕೆಯಿಂದ ರಾಷ್ಟ್ರೀಯ ಸಂಪತ್ತಿನ ಹಾನಿ ಮಾತ್ರವಲ್ಲ ಕೆಲವು ಸಂದರ್ಭಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆಗಳು ಉದ್ಭವಿಸಬಹುದಾಗಿದೆ ಮೇಲಿನ ಅಂಶಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಕೆಲವೊಂದು ರೀತಿಯ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವುದಕ್ಕಾಗಿ ಒಂದು ಸಮಗ್ರ ಶಾಸನವನ್ನು ರಚಿಸುವುದು ಅಗತ್ಯವೆಂದು ಭಾವಿಸಲಾಯಿತು.

ಆದ್ದರಿಂದ ವಿಧೇಯಕ.

ಆರ್ಥಿಕ ಜ್ಞಾಪನಪತ್ರ

ರಚಿಸಲು ಉದ್ದೇಶಿಸಲಾಗಿರುವ ಪರಿಶೋಧನಾ ಸಮಿತಿಯ ಎಲ್ಲ ಸದಸ್ಯರು ಅಧಿಕಾರಿಗಳಾಗಿರುತ್ತಾರೆ ಅಲ್ಲದೆ ಈಗಿರುವ ಅಧಿಕಾರಿಗಳು ಈ ಉದ್ದೇಶಿತ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುತ್ತಾರೆ. ಆದ್ದರಿಂದ ಆರ್ಥಿಕ ಹೊರೆ ಬೀಳುವುದಿಲ್ಲ.

ಪ್ರತ್ಯಾಯೋಜಿತ ಶಾಸನರಚನಾಧಿಕಾರ ಕುರಿತು ಜ್ಞಾಪನಪತ್ರ

ಖಂಡ 3

ಈ ಖಂಡವು ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವುದಕ್ಕೆ ಸಂಬಂಧ ಪಟ್ಟಂತೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ 6

6ನೇ ಖಂಡದ (4)ನೇ ಉಪ ಖಂಡವು ನಿರ್ಮಾಣಗಳಿಗೆ ಸೇರಿದ ಭೂಮಿಯನ್ನು ನೀಡಬಹುದಾದ ಬಗ್ಗೆ ಗರಿಷ್ಠ ಪ್ರಮಾಣವನ್ನು ನಿಯಮಗಳ ಮೂಲಕ ನಿಗಧಿಪಡಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ 7

7ನೇ ಖಂಡದ (1) ನೇ ಉಪಖಂಡವು ಅನಧಿಕೃತ ನಿರ್ಮಾಣಗಳನ್ನು ಸಕ್ರಮ ಗೊಳಿಸುವುದಕ್ಕಾಗಿ ಸಂದಾಯ ಮಾಡಬಹುದಾದ ಮೊಬಲಗಳನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಖಂಡ 9

ಈ ಖಂಡವು ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ಸಾಮಾನ್ಯ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಪ್ರಸ್ತಾವಿತ ಪ್ರತ್ಯಾಯೋಜಿತ ಶಾಸನ ರಚನಾಧಿಕಾರವು ವಾಡಿಕೆಯ ಸ್ವರೂಪದ್ದಾಗಿರುತ್ತದೆ.

ಕೆ.ಜೆ. ಜಾರ್ಜ್
ವಸತಿ ಮತ್ತು ನಗರಾಭಿವೃದ್ಧಿ ಸಚಿವರು

ಎಂ ಇನ್ನಾಸಪ್ಪ
ಕಾರ್ಯದರ್ಶಿ

ಅನುಬಂಧ

(ಕರ್ನಾಟಕ ಭೂ ಕಂದಾಯ ಅಧಿನಿಯಮ,1964(1964ರ ಕರ್ನಾಟಕ ಅಧಿನಿಯಮ ಸಂಖ್ಯೆ. 12) ರ ಉದ್ಧೃತ ಭಾಗ)

XX XX XX

95.ಬೇಸಾಯದ ಭೂಮಿಯ ಉಪಯೋಗಗಳು ಮತ್ತು ಬೇಸಾಯದ ಭೂಮಿಯನ್ನು ಇತರ ಉದ್ದೇಶಕ್ಕಾಗಿ ಉಪಯೋಗಿಸುವ ಬಗೆಗಿನ ವಿಧಾನ –(1) ಕಟ್ಟಡಗಳನ್ನು ಕಟ್ಟುವುದು ಅಥವಾ ಬಾವಿಗಳನ್ನು ಅಥವಾ ಕೆರೆಗಳನ್ನು ನಿರ್ಮಿಸುವುದು ಇವುಗಳ ಬಗ್ಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿಗೆ ಒಳಪಟ್ಟು ಕಂದಾಯ ವಿಧಿಸಲಾದ ಅಥವಾ ಬೇಸಾಯದ ಉದ್ದೇಶಕ್ಕಾಗಿ ಹೊಂದಿರುವ ಭೂಮಿಯ ಅಧಿಬೋಗದಾರನು ಆ ಭೂಮಿಯ ಉತ್ತಮ ಕೃಷಿಗಾಗಿ ಅಥವಾ ಮೇಲೆ ಹೇಳಿದ ಉದ್ದೇಶದ ಬಗ್ಗೆ ಅದರೆ ಹೆಚ್ಚಿನ ಅನುಕೂಲಕರ ಉಪಯೋಗಕ್ಕಾಗಿ, ತಾನು ಖುದ್ದಾಗಿ ಅಥವಾ ತನ್ನ ನೌಕರರ, ಗೇಣಿದಾರರ, ಅಭಿಕರ್ತರ ಅಥವಾ ಇತರ ವಾರಸುದಾರರ ಮೂಲಕ ಬೇಸಾಯದ ಕಟ್ಟಡಗಳನ್ನು ಕಟ್ಟಲು, ಬಾವಿ ಅಥವಾ ಕೆರೆಗಳನ್ನು ನಿರ್ಮಿಸಲು, ಅಥವಾ ಬೇರೆ ಯಾವುದೇ ಸುಧಾರಣೆಗಳನ್ನು ಮಾಡಲು ಹಕ್ಕುಳ್ಳವನಾಗಿರುತ್ತಾನೆ.

(2) ಕಂದಾಯ ವಿಧಿಸಲಾಗಿರುವ ಅಥವಾ ಬೇಸಾಯದ ಉದ್ದೇಶಕ್ಕಾಗಿ ಹೊಂದಿರುವ ಭೂಮಿಯ ಯಾವನೇ ಅಧಿಭೋಗದಾರನು ಅಂಥ ಭೂಮಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಯಾವುದೇ ಇತರ ಉದ್ದೇಶಕ್ಕಾಗಿ ಬದಲಿಸಲು ಇಚ್ಛಿಸಿದರೆ, ಅವನು ಅನುಮತಿಗಾಗಿ ಡೆಪ್ಯುಟಿ ಕಮಿಷನರಿಗೆ ಅರ್ಜಿಯನ್ನು ಸಲ್ಲಿಸತಕ್ಕುದು. ಡೆಪ್ಯುಟಿ ಕಮಿಷನರು ಈ ಪ್ರಕರಣದ ಉಪಬಂಧಗಳಿಗೆ ಮತ್ತು ಈ ಅಧಿನಿಯಮದ ಮೇರೆಗೆ ಮಾಡಿದ ನಿಯಮಗಳಿಗೆ ಒಳಪಟ್ಟು ಅನುಮತಿಯನ್ನು ನಿರಾಕರಿಸಬಹುದು ಅಥವಾ ತಾನು ಯುಕ್ತವೆಂದು ಆಲೋಚಿಸುವಂಥ ಷರತ್ತುಗಳಿಗೆ ಒಳಪಟ್ಟು.

(ಎ) ಕರ್ನಾಟಕ ಭೂಸುಧಾರಣೆಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 10)ರ 48 ಎ ಪ್ರಕರಣದ ಅಡಿಯಲ್ಲಿ ಅಂಥ ಭೂಮಿಯ ಅಧಿಭೋಗದಾರನಾಗಿ ನೋಂದಾಯಿತನಾದ ಅಥವಾ ನೋಂದಾಯಿಸಲು ಬದ್ಧನಾಗಿರುವ ವ್ಯಕ್ತಿಯಾಗಿಲ್ಲದ; ಅಥವಾ

(ಬಿ) ಸದರಿ ಅಧಿನಿಯಮದ 77ನೇ ಪ್ರಕರಣದ ಅಡಿಯಲ್ಲಿ ಅಂಥ ಭೂಮಿಯನ್ನು ಪಡೆದವನಾಗಿಲ್ಲದ ;

ಖುಷ್ಕಿ (ಪುಂಜ) ಭೂಮಿಯ ಅಧಿಭೋಗದಾರನು ಈ ಉಪ-ಪ್ರಕರಣದ ಅಡಿಯಲ್ಲಿ ಅಗತ್ಯವಿರುವ ಅನುಮತಿಯನ್ನು ಪಡೆಯದೆ ಮತ್ತು ಅದರಲ್ಲಿ ಏನೇ ಇದ್ದರೂ, ತಹಸೀಲ್ದಾರರಿಗೆ ನಿಯಮಿಸಲಾದ ಪ್ರಪತ್ರದಲ್ಲಿ ಈ ಬಗ್ಗೆ ಪೂರ್ವ ಸೂಚನೆಯನ್ನು ಕಳುಹಿಸಿದ ತರುವಾಯ ಮತ್ತು (7)ನೇ ಉಪ-ಪ್ರಕರಣದ ಮೇರೆಗೆ ನಿಯಮಿಸಲಾದ ಜುಲ್ಮಾನೆಯನ್ನು ನಿಯಮಿಸಲಾದ ರೀತಿಯಲ್ಲಿ ಸಂದಾಯ ಮಾಡಿದ ತರುವಾಯ ಅಂಥ ಭೂಮಿ ಅಥವಾ ಅದರ ಭಾಗವನ್ನು ಇತರ ಉದ್ದೇಶಕ್ಕಾಗಿ ಬಳಸಬಹುದು.

(3) ಜಿಲ್ಲಾಧಿಕಾರಿಯವರು, ಬೇರೆ ಉದ್ದೇಶಕ್ಕಾಗಿ ಬಳಸುವುದಕ್ಕೆ ಅನುಮತಿಯನ್ನು ಅಂಥ ಬಳಕೆಯು ಸಾರ್ವಜನಿಕ ಉಪದ್ರವವನ್ನುಂಟು ಮಾಡುವ ಸಂಭವವಿದೆ ಅಥವಾ ಅದು ಸಾಮಾನ್ಯರ ಹಿತಕ್ಕಾಗಿ ಅಲ್ಲ ಅಥವಾ (4)ನೇ ಉಪ-ಪ್ರಕರಣದ ಅಡಿಯಲ್ಲಿ ವಿಧಿಸಬಹುದಾದ ಷರತ್ತುಗಳನ್ನು ಪಾಲಿಸಲು ಅಧಿಭೋಗದಾರನು ಅಸಮರ್ಥನಾಗಿದ್ದಾನೆ

..(3ಎ) ರಾಜ್ಯ ಸರ್ಕಾರವು, ಪರಿಸರವನ್ನು ಸಂರಕ್ಷಿಸುವ ಮತ್ತು ಸುಧಾರಿಸುವ ದೃಷ್ಟಿಯಿಂದ, 1976ರ ಕರ್ನಾಟಕ ಪುರಸಭಾ ನಿಗಮಗಳ ಅಧಿನಿಯಮದ (1977ರ ಕರ್ನಾಟಕ ಅಧಿನಿಯಮ 14) ಮೇರೆಗಿನ ನಗರಗಳ ಪರಿಮಿತಿಯೊಳಗೆ ಅಥವಾ ನಗರ ಪರಿಮಿತಿಯೊಳಗೆ ಗೊತ್ತುಪಡಿಸಲಾದ ಅಂತರದೊಳಗೆ ಅಥವಾ 1964ರ ಕರ್ನಾಟಕ ಪುರಸಭೆಗಳ ಅಧಿನಿಯಮದ (1964ರ ಕರ್ನಾಟಕ ಅಧಿನಿಯಮ 22) ಮೇರೆಗೆ ರಚಿತವಾದ ಅಥವಾ ರಚಿತವಾದುದೆಂದು ಭಾವಿಸಲಾದ ನಗರ ಸಭೆಗಳು, ಪುರಸಭೆಗಳು ಮತ್ತು ಅಧಿಸೂಚಿತ ಪ್ರದೇಶಗಳ ಪರಿಮಿತಿಯೊಳಗಿರುವ ಅಥವಾ ಯಾವುದೇ ಪ್ರದೇಶವನ್ನು, ಅಧಿಸೂಚನೆಯನ್ನು ಹೊರಡಿಸುವ ಮೂಲಕ ಹಸಿರು ವಲಯವೆಂದು ಘೋಷಿಸಬಹುದು ಮತ್ತು ಅಂತಹ ಪ್ರತಿಯೊಂದು ನಗರ, ನಗರಸಭೆ ಟೌನ್, ಪುರಸಭೆ ಅಥವಾ ಅಧಿಸೂಚಿತ ಪ್ರದೇಶಗಳಿಗೆ ಬೇರೆ ಬೇರೆ ದೂರಗಳನ್ನು ಗೊತ್ತುಪಡಿಸಬಹುದು.

(3ಬಿ) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಹಸಿರು ವಲಯದ ಪರಿಮಿತಿಗಳ ಒಳಗೆ ವ್ಯವಸಾಯದ ಉದ್ದೇಶಕ್ಕೆಂದು ನಿರ್ಧರಿಸಿರುವ ಅಥವಾ ಹೊಂದಿರುವ ಯಾವುದೇ ಭೂಮಿ ಅಥವಾ ಅದರ ಭಾಗವನ್ನು ಬೇರೆ ಯಾವುದೇ ಉದ್ದೇಶಕ್ಕಾಗಿ ಬಳಸಲು ಅನುಮತಿ ನೀಡತಕ್ಕುದಲ್ಲ.

(4) ಆರೋಗ್ಯ, ಸುರಕ್ಷೆ ಮತ್ತು ಸೌಕರ್ಯಗಳನ್ನು ಕಾಪಾಡುವುದಕ್ಕಾಗಿ ಮತ್ತು ಕಟ್ಟಡದ ನಿವೇಶನಗಳೆಂದು ಉಪಯೋಗಿಸಲಾಗುವ ಭೂಮಿಯ ಸಂಬಂಧದಲ್ಲಿ ಇವಲ್ಲದೆ, ನಿವೇಶನಗಳ ಅಳತೆ, ವ್ಯವಸ್ಥೆ ಮತ್ತು ನಿವೇಶನಗಳಿಗೆ ಪ್ರವೇಶಾವಕಾಶ ಇವುಗಳು ಅಧಿಭೋಗದಾರರ ಆರೋಗ್ಯಕ್ಕೆ ಮತ್ತು ಸೌಕರ್ಯಕ್ಕೆ ಸಾಕಷ್ಟಾಗಿವೆ ಅಥವಾ ಆ ಸ್ಥಳ ಪ್ರದೇಶಕ್ಕೆ ಸೂಕ್ತವಾಗಿವೆ ಮತ್ತು ಪಟ್ಟಣ ಮತ್ತು ಗ್ರಾಮಾಂತರದ ಯೋಜನೆಗೆ ಅಥವಾ ಕಟ್ಟಡಗಳ ಕಟ್ಟುವಿಕೆಗೆ ಸಂಬಂಧಪಟ್ಟ ಯಾವುದೇ ಕಾನೂನಿನ ಉಪಬಂಧಗಳನ್ನು ಉಲ್ಲಂಘಿಸುತ್ತಿಲ್ಲವೆಂಬುದನ್ನು ಖಚಿತಗೊಳಿಸಿಕೊಳ್ಳುವುದರ ಸಲುವಾಗಿ ಬದಲಿಸುವ ಬಗೆಗೆ ಕೊಡುವ ಅನುಮತಿಯ ಮೇಲೆ ಷರತ್ತುಗಳನ್ನು ವಿಧಿಸಬಹುದು.

(5) (2)ನೆಯ ಉಪ-ಪ್ರಕರಣದ ಮೇರೆಗೆ ಸಲ್ಲಿಸಿದ ಅರ್ಜಿಯ ಮೇಲೆ, ಆ ಅರ್ಜಿಯು ತಲುಪಿದ ದಿನಾಂಕದಿಂದ ನಾಲ್ಕು ತಿಂಗಳ ಅವಧಿಯೊಳಗಾಗಿ ಡೆಪ್ಯೂಟಿ ಕಮಿಷನರು ತನ್ನ ತೀರ್ಮಾನವನ್ನು ಅರ್ಜಿದಾರನಿಗೆ ತಿಳಿಸಲು ತಪ್ಪಿದಲ್ಲಿ, ಕೇಳಿಕೊಂಡ ಅನುಮತಿಯನ್ನು ಮಂಜೂರು ಮಾಡಲಾಗಿದೆಯೆಂದು ಭಾವಿಸತಕ್ಕುದು.

(6) ಡೆಪ್ಯುಟಿ ಕಮಿಷನರು ಯಾವುದೇ ವಿಶಿಷ್ಟ ಸಂದರ್ಭದಲ್ಲಿ ಅನ್ಯಥಾ ನಿರ್ದೇಶಿಸಿದ ಹೊರತು, (2)ನೆಯ ಉಪ-ಪ್ರಕರಣದ ಮೇರೆಗೆ ಯಾವುದೆ ಅರ್ಜಿಯನ್ನು ಅದನ್ನು ಅಧಿಭೋಗದಾರನು ಸಲ್ಲಿಸಿದ ಹೊರತು ಮಾನ್ಯ ಮಾಡತಕ್ಕುದಲ್ಲ.

(6ಎ) ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 1981ರ ಪ್ರಾರಂಭದ ದಿನಾಂಕಕ್ಕೆ ಮುಂಚೆ, ದಕ್ಷಿಣ ಕನ್ನಡ ಜಿಲ್ಲೆ, ಕೊಡಗು ಜಿಲ್ಲೆ ಮತ್ತು ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕುಗಳಲ್ಲಿ, ಕೃಷಿ ಉದ್ದೇಶಕ್ಕಾಗಿ ನಿರ್ಧರಣೆ ಮಾಡಲಾದ ಅಥವಾ ಬಳಸಲಾದ ಯಾವುದೇ ಭೂಮಿಯನ್ನು ಯಾವುದೇ ಇತರ ಉದ್ದೇಶಗಳಿಗಾಗಿ ಬದಲಿಸಲಾಗಿದ್ದರೆ ಅಥವಾ ಬಳಸಲಾಗಿದ್ದರೆ, ಅಲ್ಲಿರುವ ಯಾವುದೇ ಕಟ್ಟಡಕ್ಕೆ (ಫಾರ್ಮ್‌ಹೌಸ್ ಅಲ್ಲದ) ಹೊಂದಿಕೊಂಡಿರುವ ಅಂಥ ಕಟ್ಟಡದ ನಿರ್ಮಾಣ ಪ್ರದೇಶದ ಮೂರರಷ್ಟು ಮೀರದ ಭೂಮಿಯೊಂದಿಗೆ ಹಾಗೆ ಬಳಸಲಾದ ಭೂಮಿಯನ್ನು ಅಂಥ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕೃಷಿಯಲ್ಲದ ಉದ್ದೇಶಗಳಿಗಾಗಿ ಬಳಸಲು ಅನುಮತಿಸಲಾಗಿದೆಯೆಂದು ಭಾವಿಸತಕ್ಕುದು.

(7) ಕಂದಾಯ ವಿಧಿಸಲಾಗಿರುವ ಅಥವಾ ಬೇಸಾಯದ ಉದ್ದೇಶಕ್ಕಾಗಿ ಹೊಂದಿರುವ ಯಾವುದೇ ಭೂಮಿಯನ್ನು ಬೇಸಾಯಕ್ಕೆ ಸಂಬಂಧಿಸಿರದ ಯಾವುದೇ ಉದ್ದೇಶಕ್ಕಾಗಿ ಉಪಯೋಗಿಸಲು (2)ನೇ ಉಪ-ಪ್ರಕರಣದ ಮೇರೆಗೆ ಅನುಮತಿಯನ್ನು ಕೊಟ್ಟಿರುವಾಗ (ಅಥವಾ ಸದರಿ ಉಪ-ಪ್ರಕರಣದ ಪರಂತುಕದ ಅಡಿಯಲ್ಲಿ ಬದಲಿಸಲಾಗಿದ್ದರೆ) ಅಥವಾ (5)ನೇ ಉಪ-ಪ್ರಕರಣದ ಅಥವಾ (6ಎ) ಉಪ-ಪ್ರಕರಣದ ಮೇರೆಗೆ ಅನುಮತಿಯನ್ನು ಕೊಡಲಾಗಿದೆಯೆಂದು ಭಾವಿಸಿರುವಾಗ, ಡೆಪ್ಯುಟಿ ಕಮಿಷನರು, ಈ ಬಗ್ಗೆ ರಾಜ್ಯ ಸರ್ಕಾರವು ರಚಿಸಬಹುದಾದಂಥ ನಿಯಮಗಳಿಗೊಳಪಟ್ಟು, ಜುಲ್ಮಾನೆಯನ್ನು ಸಂದಾಯಮಾಡಲು ಅಗತ್ಯಪಡಿಸಬಹುದು. ಆ ತರುವಾಯ 83ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗಲ್ಲದೆ ಅಂಥ ಭೂಮಿಯ ಮೇಲೆ ಯಾವ ಕಂದಾಯವನ್ನೂ ವಿಧಿಸತಕ್ಕುದಲ್ಲ.

ವಿವರಣೆ - ಈ ಪ್ರಕರಣದ ಉದ್ದೇಶಕ್ಕಾಗಿ "ಅಧಿಭೋಗದಾರ" ಎಂಬುದು ಮೂಲಗೇಣಿದಾರ ಅಥವಾ ಒಬ್ಬ ಖಾಯಂ ಗೇಣಿದಾರರನ್ನು ಒಳಗೊಳ್ಳುತ್ತದೆ.

** ** ** **

(ಬೆಂಗಳೂರು ಅಭಿವೃದ್ಧಿ ಪ್ರಾದಿಕಾರ ಅಧಿನಿಯಮ, 1976,1976ರ ಕರ್ನಾಟಕ ಅಧಿನಿಯಮ 12ರ ಉದ್ಧೃತ ಭಾಗ)

** ** ** **

೧೭. ಯೋಜನೆಯು ಪೂರ್ಣಗೊಂಡ ಮೇಲಿನ ಕ್ರಿಯೆ - (1) ಅಭಿವೃದ್ಧಿ ಯೋಜನೆಯನ್ನು ತಯಾರಿಸಿದಾಗ, ಯೋಜನೆಯನ್ನು ತಯಾರು ಮಾಡಿರುವ ಸಂಗತಿಯನ್ನು ಮತ್ತು ಅದರಲ್ಲಿ ಅಡಕವಾಗಿರುವ ಪ್ರದೇಶ ಪರಿಮಿತಿಗಳನ್ನು ನಿರೂಪಿಸಿ, ಮತ್ತು ಯೋಜನೆಯ ವಿವರಗಳನ್ನು, ಅದರಲ್ಲಿ ಅಡಕವಾಗಿರುವ ಪ್ರದೇಶದ ನಕ್ಷೆಯನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ಉದ್ದೇಶಿಸಲಾಗಿರುವ ಭೂಮಿಯನ್ನು ಮತ್ತು ಯಾವ ಭೂಮಿಯ ಬಗ್ಗೆ ಅಭಿವೃದ್ಧಿ ತೆರಿಗೆಯನ್ನು ವಿಧಿಸಬಹುದಾಗಿಯೋ ಆ ಭೂಮಿಯನ್ನು ನಿರ್ದಿಷ್ಟಪಡಿಸುವ ವಿವರಣ ಪತ್ರವನ್ನು ಯಾವ ಸ್ಥಳದಲ್ಲಿ ಎಲ್ಲ ಯುಕ್ತ ಕಾಲದಲ್ಲಿ ನೋಡಬಹುದೊ ಆ ಸ್ಥಳವನ್ನು ಹೆಸರಿಸಿ ಪ್ರಾಧಿಕಾರವು ಅಧಿಸೂಚನೆಯನ್ನು ತಯಾರಿಸತಕ್ಕದು.

(2) ಸದರಿ ಅಧಿಸೂಚನೆಯ ಪ್ರತಿಯನ್ನು ನಿಗಮಕ್ಕೆ ಕಳುಹಿಸತಕ್ಕುದು ಮತ್ತು ಅದು ತಲುಪಿದ ಮೂವತ್ತು ದಿನದೊಳಗೆ, ಆ ಯೋಜನೆಗೆ ಸಂಬಂಧಿಸಿದಂತೆ ನಿಗಮವು ತಾನು ಸೂಕ್ತವೆಂದು ಆಲೋಚಿಸಬಹುದಾದ ಯಾವುದೇ ಮನವಿಯನ್ನು, ಇದರಲ್ಲಿ ಇನ್ನು ಮುಂದೆ ಉಪಬಂಧಿಸಿರುವಂತೆ ಸರ್ಕಾರಕ್ಕೆ ಕಳುಹಿಸಿಕೊಡುವುದಕ್ಕಾಗಿ, ಪ್ರಾಧಿಕಾರಕ್ಕೆ ಕಳುಹಿಸಿಕೊಡತಕ್ಕದು.

(3) ಸದರಿ ಅಧಿಸೂಚನೆಯ ಪ್ರತಿಯು, ಸರ್ಕಾರಿ ರಾಜ್ಯಪತ್ರದ ಒಂದಾದ ಮೇಲೊಂದು ಬರುವ ಮೂರು ಸಂಚಿಕೆಗಳಲ್ಲಿ ಪ್ರಕಟಿತವಾಗುವಂತೆ ಪ್ರಾಧಿಕಾರವು ಮಾಡತಕ್ಕುದು ಮತ್ತು ಅದನ್ನು ತನ್ನ ಸ್ವಂತ ಕಚೇರಿಯ, ಡೆಪ್ಯುಟಿ ಕಮೀಷನರ್ ಕಚೇರಿಯ ನಿಗಮದ ಕಚೇರಿಯ ಎದ್ದು ಕಾಣುವ ಭಾಗದಲ್ಲಿ ಮತ್ತು ಪ್ರಾಧಿಕಾರವು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಇತರ ಸ್ಥಳಗಳಲ್ಲಿ ಅಂಟಿಸುವಂತೆ ಮಾಡತಕ್ಕುದು.

(4) (2)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ನಿಗಮದಿಂದ ಯಾವ ಮನವಿಯೂ ಬರದಿದ್ದರೆ, ನಿಗಮವು ಆ ಯೋಜನೆಗೆ ಸಹಮತಿಸಿರುವುದೆಂದು ಭಾವಿಸತಕ್ಕುದು.

(ಕರ್ನಾಟಕ ಸುಧಾರಣಾ ಮಂಡಲಿಗಳ ಅಧಿನಿಯಮ, 1976, 1976ರ ಕರ್ನಾಟಕ ಅಧಿನಿಯಮ 11 ರ ಉದ್ಧೃತ ಭಾಗ)

** ** ** **

15. ಯೋಜನೆಯನ್ನು ತಯಾರಿಸಿದ ನಂತರದ ಪ್ರಕ್ರಿಯೆ - (1) ಯಾವುದೇ ಅಭಿವೃದ್ಧಿ ಯೋಜನೆಯನ್ನು ಅಥವಾ ಮೇಲ್ಪಟ್ಟ ಯೋಜನೆಯನ್ನು ತಯಾರಿಸುವಾಗ , ಯೋಜನೆಯನ್ನು ತಯಾರಿಸಲಾಗಿರುವ ಸಂಗತಿಯನ್ನು ನಿರೂಪಿಸಿದ ಮತ್ತು ಯೋಜನೆಯ ವಿವರಗಳನ್ನು ಅದರಲ್ಲಿ ಅಡಕವಾಗಿರುವ ಪ್ರದೇಶದ ನಕ್ಷೆಯನ್ನು ಮತ್ತು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿರುವ ಭೂಮಿಯನ್ನು ನಿರ್ದಿಷ್ಟಪಡಿಸುವ ಹಾಗೂ ಯಾವ ಭೂಮಿಯ ಬಗ್ಗೆ ಅಭಿವೃದ್ಧಿ ತೆರಿಗೆಯನ್ನು ವಸೂಲು ಮಾಡಲು ಉದ್ದೇಶಿಸಲಾಗಿದೆಯೋ ಆ ಭೂಮಿಯ ವಿವರ ಪತ್ರವನ್ನು ಯಾವ ಸ್ಥಳದಲ್ಲಿ ಎಲ್ಲ ಯುಕ್ತ ಕಾಲಗಳಲ್ಲೂ ಕಾಣಬಹುದೋ ಆ ಸ್ಥಳವನ್ನು ಹೆಸರಿಸಿ ಒಂದು ಅಧಿಸೂಚನೆಯ ಕರಡನ್ನು ತಯಾರಿಸತಕ್ಕುದು, ಮತ್ತು

(ಕ) ಅಂಥ ಅಧಿಸೂಚನೆಯ ಪ್ರತಿಯನ್ನು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಕ್ಕೆ ಕಳುಹಿಸತಕ್ಕುದು ಮತ್ತು ಅದು, ಅದನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗೆ, ಯೋಜನೆಯ ಬಗ್ಗೆ ಸಲ್ಲಿಸುವುದು ಸೂಕ್ತವೆಂದು ಸ್ಥಳೀಯ ಪ್ರಾದಿಕಾರವು ಭಾವಿಸುವ ಯಾವುದೇ ಮನವಿಯನ್ನು, ಇದರಲ್ಲಿ ಇನ್ನು ಮುಂದೆ ಉಪಬಂಧಿಸಿರುವಂತೆ, ಸರ್ಕಾರಕ್ಕೆ ರವಾನಿಸುವುದಕ್ಕಾಗಿ, ಮಂಡಲಿಗೆ ಕಳುಹಿಸತಕ್ಕುದು, ಮತ್ತು

(ಖ) ಸದರಿ ಅದಿಸೂಚನೆಯ ಪ್ರತಿಯನ್ನು ಸರ್ಕಾರೀ ರಾಜ್ಯಪತ್ರದಲ್ಲಿ ಪ್ರಕಟಿಸುವಂತೆ ಮತ್ತು ಮಂಡಲಿಯು ಕಛೇರಿಯ, ಡೆಪ್ಯುಟಿ ಕಮೀಷನರ ಕಛೇರಿಯ, ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಕಛೇರಿಯು, ಎದ್ದು ಕಾಣುವ ಭಾಗದಲ್ಲಿ ಮತ್ತು ಮಂಡಲಿಯು ಅವಶ್ಯವೆಂದು ಬಾವಿಸಬಹುದಾದಂಥ ಸ್ಥಳಗಳಲ್ಲಿ ಅಂಟಿಸುವಂತೆ ಮಾಡತಕ್ಕುದು.

(2) (1) ಉಪ-ಪ್ರಕರಣದ (ಕ) ಖಂಡದ ಮೇರೆಗಿನ ಪತ್ರದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸ್ಥಳೀಯ ಪ್ರಾಧಿಕಾರದಿಂದ ಮನವಿಯು ಬಾರದಿದ್ದಲ್ಲಿ, ಸ್ಥಳೀಯ ಪ್ರಾಧಿಕಾರವು ಆ ಪ್ರಸ್ತಾವಕ್ಕೆ ಸಹಮತಿಯನ್ನು ಕೊಟ್ಟಿರುವುದಾಗಿ ಭಾವಿಸತಕ್ಕುದು.

(3) ಸರ್ಕಾರೀ ರಾಜ್ಯ ಪತ್ರದಲ್ಲಿ ಅಂಥ ಅಧಿಸೂಚನೆಯು ಪ್ರಕಟವಾದ ದಿನದಿಂದ ನಿಕಟ ತರುವಾಯದ ಮೂವತ್ತು ದಿನಗಳ ಅವಧಿಯಲ್ಲಿ, ಯೋಜನೆಯಲ್ಲಿ ಅಡಕವಾಗಿರುವ ಪ್ರದೇಶವು ಯಾವ ಸ್ಥಳೀಯ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳಲ್ಲಿ ಇದೆಯೋ ಆ ಸ್ಥಳೀಯ ಪ್ರಾಧಿಕಾರದ ಕರ ನಿರ್ಧಾರಣೆಯ ಪಟ್ಟಿಯಲ್ಲಿ ಅಥವಾ ಭೂ ಕಂದಾಯದ ರಿಜಿಸ್ಟರಿನಲ್ಲಿ ಹೆಸರು ಇರುವ ಪ್ರತಿಯೊಬ್ಬ ವ್ಯಕ್ತಿಗೆ ಆ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿರುವ ಯಾವುದೇ ಕಟ್ಟಡದ ಅಥವಾ ಭೂಮಿಯ ಬಗ್ಗೆ ಸ್ವತ್ತು ತೆರಿಗೆಯನ್ನು ಅಥವಾ ಭೂ ಕಂದಾಯವನ್ನು ಸಂದಾಯ ಮಾಡಲು ಅವನು ಪ್ರಥಮತಃ ಹೊಣೆಗಾರನಾಗಿರುವನೆಂದು ನೋಟೀಸನ್ನು ಜಾರಿ ಮಾಡತಕ್ಕುದು ಮತ್ತು ನೋಟಿಸಿನಲ್ಲಿ ನಿರ್ದಿಷ್ಟಪಡಿಸಲಾಗಿರುವ ಕಟ್ಟಡವನ್ನು ಅಥವಾ ಆ ಭೂಮಿಯನ್ನು ಏಕೆ ಸ್ವಾಧೀನಪಡಿಸಿಕೊಳ್ಳಬಾರದೆಂಬುದಕ್ಕೆ ಮತ್ತು ಪುರೋಭಿವೃದ್ಧಿ ತೆರಿಗೆಯನ್ನು ಏಕೆ ವಸೂಲ್ಮಾಡಬಾರದೆಂಬುದಕ್ಕೆ ಮೂವತ್ತು ದಿನಗಳೊಳಗೆ ಕಾರಣವನ್ನು ತೋರಿಸಬೇಕೆಂದು ಅಂಥ ವ್ಯಕ್ತಿಯನ್ನು ಅಗತ್ಯಪಡಿಸತಕ್ಕುದು.

** ** ** **

(5)ಯೋಜನೆಯನ್ನು ಕಾರ್ಯಗತ ಮಾಡುವಲ್ಲಿ ಯಾವುದನ್ನು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿದೆಯೋ ಅಥವಾ ಯಾವುದರ ಬಗ್ಗೆ ಅಭಿವೃದ್ಧಿ ತೆರಿಗೆಯನ್ನು ವಸೂಲು ಮಾಡಲು ಪ್ರಾಧಿಕಾರವು ಉದ್ದೇಶಿಸಿದೆಯೋ ಅಂಥ ಯಾವುದೇ ಕಟ್ಟಡದ ಅಥವಾ ಭೂಮಿಯ ಮೇಲೆ ಸ್ವತ್ತು ತೆರಿಗೆಯನ್ನು ಅಥವಾ ಭೂ ಕಂದಾಯವನ್ನು ಸಂದಾಯ ಮಾಡಲು ಪ್ರಥಮತಃ ಹೊಣೆಗಾರನಾಗಿರುವ ಯಾವ ವ್ಯಕ್ತಿಯ ಹೆಸರು ಸ್ಥಳೀಯ ಪ್ರಾಧಿಕಾರದ ಕರನಿರ್ಧಾರಣ ಪಟ್ಟಿಯಲ್ಲಿ ಅಥವಾ ಭೂ ಕಂದಾಯದ ರಿಜಿಸ್ಟರಿನಲ್ಲಿ ಕಂಡು ಬರುತ್ತದೆಯೋ ಆ ಪ್ರತಿಯೊಬ್ಬ ವ್ಯಕ್ತಿಗೆ ಅಂಥ ಅಧಿಸೂಚನೆಯು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿತವಾದ ದಿನಾಂಕದ ನಿಕಟ ತರುವಾಯದ ಮೂವತ್ತು ದಿನಗಳೊಳಗೆ ಪ್ರಾಧಿಕಾರವು ನೋಟೀಸನ್ನು ಕೊಡತಕ್ಕುದು ಮತ್ತು ಆ ಕಟ್ಟಡವನ್ನು ಅಥವಾ ಭೂಮಿಯನ್ನು ಏಕೆ ಸ್ವಾಧೀನ ಪಡಿಸಿಕೊಳ್ಳಬಾರದೆಂಬ ಬಗ್ಗೆ, ಮತ್ತು ಅಭಿವೃದ್ಧಿ ತೆರಿಗೆಯನ್ನು ಏಕೆ ವಸೂಲು ಮಾಡಕೂಡದೆಂಬ ಬಗ್ಗೆ ಈ ನೋಟೀಸು ತಲುಪಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಕಾರಣ ತೋರಿಸುವಂತೆ ಅಂಥ ವ್ಯಕ್ತಿಯನ್ನು ಅಗತ್ಯಪಡಿಸತಕ್ಕುದು.

(6) ಅಧ್ಯಕ್ಷರು ಅಥವಾ ಅವನ ಆದೇಶದ ಮೇರೆಗೆ ಯಾರಾದರೂ ನೋಟೀಸಿಗೆ ಸಹಿ ಮಾಡತಕ್ಕುದು, ಮತ್ತು ಅದನ್ನು

(ಕ) ಅವನಿಗೆ ಖುದ್ದಾಗಿ ಕೊಡುವ ಮೂಲಕ ಅಥವಾ ಅಂಥ ವ್ಯಕ್ತಿಯು ಗೈರುಹಾಜರಾಗಿದ್ದರೆ, ಅಥವಾ ಸಿಕ್ಕದಿದ್ದರೆ, ಅವನ ಏಜೆಂಟನಿಗೆ, ಅಥವಾ ಯಾವ ಏಜೆಂಟನೂ ಸಿಕ್ಕದಿದ್ದರೆ ಅಥವಾ ಆ ಭೂಮಿಯ ಅಥವಾ ಕಟ್ಟಡದ ಮೇಲೆ ಇಡುವುದರ ಮೂಲಕ ಅಥವಾ;

(ಖ) ಅಂಥ ವ್ಯಕ್ತಿಯು ಮಾಮೂಲಾಗಿ ವಾಸಿಸುತ್ತಿದ್ದ ಅಥವಾ ವ್ಯವಹಾರ ನಡೆಸುತ್ತಿದ್ದ ಅಥವಾ ವಾಸುತ್ತಿದ್ದನೆಂದು ಅಥವಾ ವ್ಯವಹಾರ ನಡೆಸುತ್ತಿದ್ದನೆಂದು ಕೊನೆಯದಾಗಿ ತಿಳಿದು ಬಂದ ಸ್ಥಳದಲ್ಲಿ ಅದನ್ನು ಇಡುವ ಮೂಲಕ; ಅಥವಾ

(ಗ) ಅಂಥ ವ್ಯಕ್ತಿಯು ಮಾಮೂಲಾಗಿ ವಾಸಿಸುತ್ತಿದ್ದ ಅಥವಾ ವ್ಯವಹಾರ ನಡೆಸುತ್ತಿದ್ದ ಅಥವಾ ವಾಸಿಸುತ್ತಿದ್ದನೆಂದು ಅಥವಾ ವ್ಯವಹರಿಸುತ್ತಿದ್ದನೆಂದು ಕೊನೆಯದಾಗಿ ತಿಳಿದುಬಂದ ಸ್ಥಳದ ವಿಳಾಸಕ್ಕೆ ನೋಂದಾಯಿತ ಅಂಚೆಯ ಮೂಲಕ ಜಾರಿಮಾಡತಕ್ಕುದು.

** ** ** **

(ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ವಿಧೇಯಕ, 1987,1981ರ ಕರ್ನಾಟಕ ಅಧಿನಿಯಮ 34ರ ಉದ್ಧೃತ ಭಾಗ)

** ** ** **

17. ಯೋಜನೆಯನ್ನು ಪೂರ್ಣಗೊಳಿಸುವುದಕ್ಕೆ ಕಾರ್ಯವಿಧಾನ - (1) ಒಂದು ಅಭಿವೃದ್ಧಿ ಸ್ಕೀಮನ್ನು ಸಿದ್ಧಪಡಿಸಿದಾಗ, ಪ್ರಾಧಿಕಾರವು, ಸ್ಕೀಮನ್ನು ರೂಪಿಸಲಾಗಿದೆಯೆಂಬ ಅಂಶದ ಹೇಳಿಕೆಯನ್ನು, ಅದರಲ್ಲಿ ಒಳಗೊಂಡಿರುವ ಪ್ರದೇಶದ ಪರಿಮಿತಿಗಳು ಮತ್ತು ಯಾವ ಸ್ಥಳದಲ್ಲಿ ಎಂಬ ಬಗೆಗಿನ ಸ್ಕೀಮಿನ ವಿವರಗಳು, ಅದರಲ್ಲಿ ಒಳಗೊಂಡ ಕ್ಷೇತ್ರದ ನಕ್ಷೆ ಅರ್ಜನೆ ಮಾಡಲು ಉದ್ದೇಶಿಸಲಾದ ಭೂಮಿಯನ್ನು ನಿರ್ದಿಷ್ಟಪಡಿಸುವ ಮತ್ತು ಪುರೋಭಿವೃದ್ಧಿ ತೆರಿಗೆಯನ್ನು ವಿಧಿಸಬಹುದಾದ ಭೂಮಿಯ ಕುರಿತು ಹೇಳಿಕೆ ನೀಡಿ ಎಲ್ಲ ಸಮುಚಿತ ಅವಧಿಗಳಲ್ಲಿ ನೋಡಬಹುದಾದ ಸ್ಥಳವನ್ನು ಹೆಸರಿಸುವಂಥ ಒಂದು ಅಧಿಸೂಚನೆಯನ್ನು ಸಿದ್ಧಪಡಿಸತಕ್ಕುದು.

(2) ಸದರಿ ಅಧಿಸೂಚನೆಯ ಒಂದು ಪ್ರತಿಯನ್ನು ಸ್ಥಳೀಯ ಪ್ರಾಧಿಕಾರಕ್ಕೆ ಕಳುಹಿಸತಕ್ಕುದು. ಅದು, ಅದನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಸ್ಥಳೀಯ ಪ್ರಾಧಿಕಾರವು ಸ್ಕೀಮಿನ ಬಗ್ಗೆ ಮಾಡಲು ತಾನು ಉಚಿತವೆಂದು ಭಾವಿಸುವ ಯಾವುದೇ ಮನವಿ ಪತ್ರವನ್ನು ಇದರಲ್ಲಿ ಇನ್ನು ಮುಂದೆ ಉಪಬಂಧಿಸಿರುವಂತೆ ಸರ್ಕಾರಕ್ಕೆ ರವಾನಿಸುವುದಕ್ಕಾಗಿ ಪ್ರಾಧಿಕಾರಕ್ಕೆ ಕಳುಹಿಸತಕ್ಕುದು.

(3) ಪ್ರಾಧಿಕಾರವು, ಸದರಿ ಅಧಿಸೂಚನೆಯ ಪ್ರತಿಯನ್ನು ಪ್ರದೇಶದಲ್ಲಿ ವ್ಯಾಪಕ ಪ್ರಸಾರವಿರುವ ಸ್ಥಳೀಯ ವೃತ್ತಪತ್ರಿಕೆಗಳ ಎರಡು ನಿರಂತರ ಸಂಚಿಕೆಗಳಲ್ಲಿ ಪ್ರಕಟವಾಗುವಂತೆ ಮತ್ತು ತನ್ನ ಕಛೇರಿ, ಡೆಪ್ಯುಟಿ ಕಮೀಷನರ ಕಛೇರಿ, ಸ್ಥಳೀಯ ಪ್ರಾಧಿಕಾರದ ಕಛೇರಿ, ಮತ್ತು ಪ್ರಾಧಿಕಾರವು ಅವಶ್ಯವೆಂದು ಪರಿಗಣಿಸಬಹುದಾದ ಅಂಥ ಇತರ ಸ್ಥಳಗಳಲ್ಲಿಯ ಯಾವುದಾದರೂ ಎದ್ದು ಕಾಣುವ ಭಾಗದಲ್ಲಿ ಅಂಟಿಸುವಂತೆ ಮಾಡತಕ್ಕುದು.

(4) (2)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಸ್ಥಳೀಯ ಪ್ರಾಧಿಕಾರವು ಯಾವುದೇ ಮನವಿ ಪತ್ರವನ್ನು ಸ್ವೀಕರಿಸದಿದ್ದರೆ, ಯೋಜನೆಗೆ ಸ್ಥಳೀಯ ಪ್ರಾಧಿಕಾರವು ಸಹಮತಿ ನೀಡಿದೆಯೆಂದು ಭಾವಿಸತಕ್ಕುದು.

(5) ಸ್ಥಳೀಯ ವೃತ್ತ ಪತ್ರಿಕೆಗಳಲ್ಲಿ ಅಂಥ ಅಧಿಸೂಚನೆಯು ಪ್ರಕಟವಾದ ದಿನಾಂಕದ ತರುವಾಯದ ಮೂವತ್ತು ದಿನಗಳ ಅವಧಿಯಲ್ಲಿ ಪ್ರಾಧಿಕಾರವು ಸ್ಕೀಮನ್ನು ಕಾರ್ಯಗತಗೊಳಿಸಲು ಅರ್ಜಿ ಸಲ್ಲಿಸಬೇಕೆಂದು ಪ್ರಸ್ತಾವಿಸಿರುವ ಅಥವಾ ಪ್ರಾಧಿಕಾರವು ಪುರೋಭಿವೃದ್ಧಿ ತೆರಿಗೆಯನ್ನು ವಸೂಲು ಮಾಡಲು ಪ್ರಸ್ತಾವಿಸಿರುವ ಯಾವುದೇ ಕಟ್ಟಡ ಅಥವಾ ಭೂಮಿಯ ಮೇಲೆ ಆಸ್ತಿ ತೆರಿಗೆ ಅಥವಾ ಭೂ ಕಂದಾಯ ನಿರ್ಧಾರಣೆಯನ್ನು ಸಂದಾಯ ಮಾಡಲು ಪ್ರಾಥಮಿಕವಾಗಿ ಬದ್ಧನಾಗಿರುವುದಕ್ಕಾಗಿ ಸ್ಥಳೀಯ ಪ್ರಾಧಿಕಾರದ ನಿರ್ಧಾರಣಾ ಪಟ್ಟಿಯಲ್ಲಿ ಅಥವಾ ಭೂ ಕಂದಾಯದ ರಿಜಿಸ್ಟರಿನಲ್ಲಿ ಹೆಸರಿರುವ ಪ್ರತಿಯೊಬ್ಬ ವ್ಯಕ್ತಿಗೂ ನೋಟೀಸನ್ನು ಕಳುಹಿಸಿ, ಅಂಥ ಕಟ್ಟಡ ಅಥವಾ ಭೂಮಿಯ ಅರ್ಜನೆ ಮತ್ತು ಪುರೋಭಿವೃದ್ಧಿ ತೆರಿಗೆ ವಸೂಲಿಯನ್ನು ಏಕೆ ಮಾಡಬಾರದು ಎಂಬುದಕ್ಕೆ, ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಕಾರಣವನ್ನು ತೋರಿಸಲೂ ಅಂಥ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

(6) ಕಮೀಷನರಿಂದ ಸಹಿ ಆದ ಅಥವಾ ಆದೇಶಾನುಸಾರ ಸಹಿ ಮಾಡಲಾದ ನೋಟೀಸನ್ನು-

(ಎ) ಸಮಕ್ಷಮ ರವಾನೆ ಮೂಲಕ ಅಥವಾ ಅಂಥ ವ್ಯಕ್ತಿಯು ಗೈರು ಹಾಜರಿದ್ದರೆ ಅಥವಾ ಕಂಡುಬರದಿದ್ದರೆ ಅವನ ಏಜಂಟಿಗೆ ಅಥವಾ ಅಂಥ ಏಜಂಟ್ ಇಲ್ಲದಿದ್ದರೆ ಭೂಮಿ ಅಥವಾ ಕಟ್ಟಡದ ಮೇಲೆ ಅದನ್ನು ಇಡುವ ಮೂಲಕ, ಅಥವಾ

(ಬಿ) ಅಂಥ ವ್ಯಕ್ತಿಯು ಸಾಮಾನ್ಯವಾಗಿ ಅಥವಾ ಅವನು ಕಡೆಯದಾಗಿ ವಾಸಿಸುತ್ತಿದ್ದನೆಂದು ತಿಳಿದು ಬರುವ ವಾಸದ ಅಥವಾ ವ್ಯವಹಾರದ ಸ್ಥಳದಲ್ಲಿ ಅದನ್ನು ಇಡುವ ಮೂಲಕ, ಅಥವಾ

(ಸಿ) ಅಂಥ ವ್ಯಕ್ತಿಯು ಸಾಮಾನ್ಯವಾಗಿ ಅಥವಾ ಅವನು ಕಡೆಯದಾಗಿ ವಾಸಿಸುತ್ತಿದ್ದನೆಂದು ತಿಳಿದು ಬರುವ ವಾಸ ಅಥವಾ ವ್ಯವಹಾರದ ಸ್ಥಳದ ವಿಳಾಸಕ್ಕೆ ನೋಂದಾಯಿತ ಅಂಚೆಯ ಮೂಲಕ

- ಜಾರಿಗೊಳಿಸತಕ್ಕುದು.

** ** ** **

ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಗುರುವಾರ ೨೬ನೇ ಸೆಪ್ಟೆಂಬರ್ ೧೯೯೧

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೨೫ ಘಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: ಶ್ರೀ ಎಸ್.ಎಂ. ಕೃಷ್ಣರವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಭಾರೀ ಮತ್ತು ಮಧ್ಯಮ ಕಾಲುವೆಗಳು.

2061 - ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ) : ಮಾನ್ಯ ಭಾರೀ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಳೆಯ ಕಾಲುವೆಗಳಾದ ವಿರಿಜಾ, ಆರ್.ಬಿ.ಎಲ್.ಎಲ್. ದೇವರಾಯ, ಬಂಗಾರದೊಡ್ಡಿ, ಚಿಕ್ಕದೇವರಾಯ ಸಾಗರ ನಾಲೆಗಳು ನೆರೆಯ ಹಾವಳಿಯಿಂದ ಹಾನಿಗೊಳಗಾಗಿರುವುದನ್ನು ದುರಸ್ತಿಗೊಳಿಸುವ ಬಗ್ಗೆ ಪ್ರಸ್ತಾವನೆ ಇದೆಯೆ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರೀ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ಇದೆ.

ಶ್ರೀಮತಿ ದಮಯಂತಿ ಬೋರೇಗೌಡ : ಮಾನ್ಯ ಅಧ್ಯಕ್ಷರೆ, ಈ ಕಾಲುವೆಗಳು ಎಷ್ಟು ಹಳೆಯದಾಗಿವೆ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಕೃಷ್ಣರಾಜ ಸಾಗರ ನಿರ್ಮಾಣವಾದಾಗ ಈ ಕಾಲುವೆಗಳು ನಿರ್ಮಾಣವಾಗಿವೆ. ಈಗಾಗಲೇ ಮಾನ್ಯ ಸದಸ್ಯಣಿಯವರು ಮತ್ತು ನಾನು ಆ ಸ್ಥಳಗಳಿಗೆ ಹೋಗಿ ಬಂದಿದ್ದೇವೆ. ನಾನು ಅಲ್ಲಿಗೆ ಹೋದಾಗ ಹೇಳಿದ್ದಾರೆ. ಮತ್ತೇನಾದರೂ ಪ್ರಶ್ನೆ ಇದ್ದರೆ ಕೇಳಿದರೆ ನಾನು ಅದನ್ನು ಸರಿಮಾಡುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ : ಈ ಕಾಲುವೆಗಳು ನಿರ್ಮಾಣವಾಗಿ 200-300 ವರ್ಷಗಳಾಯಿತು. ಇದು ರಾಜ ಮಹಾರಾಜರುಗಳ ಕಾಲದಲ್ಲಿ ಆಗಿದ್ದು ಈಗ ಏನಾಗಿವೆ ಅಂದರೆ ಅವುಗಳು ರಿಪೇರಿಯಾಗದೆ, ಅವುಗಳಲ್ಲಿರತಕ್ಕ ಸಿಲ್ಟನ್ನು ತೆಗೆಯದೆ ನೀರು ಕಾಲುವೆಗಳಲ್ಲಿ ಮುಂದೆ ಹೋಗುತ್ತಿಲ್ಲ, ಹಾಗಾಗಿ ರೈತರಿಗೆ ಬಹಳ ಹಾನಿಯಾಗಿದೆ. ಆದ್ದರಿಂದ ನೀವು ಈ ರಿಪೇರಿ ಕೆಲಸವನ್ನು ಯಾವಾಗ ಶುರು ಮಾಡುತ್ತೀರಿ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನಾನು ಅವರ ಜೊತೆ ಹೋದಾಗ ನನ್ನ ತಿಳುವಳಿಕೆ ಪ್ರಕಾರ ಅವರು ಹೇಳಿದ ವಿಚಾರ ಇರಬಹುದು ಅಂತ ನಾನು

ಹೇಳಿದೆ. ದಯವಿಟ್ಟು ಕ್ಷಮಿಸಬೇಕು. ಇದು ಸುಮಾರು ಮುನ್ನೂರು ವರ್ಷ ಹಳೆಯ ಕಾಲುವೆ. ಇದರ ಬಗ್ಗೆ ಏನು ಕೆಲಸ ಮಾಡಬೇಕಾಗಿದೆ ಮತ್ತು ಆ ಕೆಲಸದಲ್ಲಿ National Water Management Project ಅನ್ವಯ ವರ್ಲ್ಡ್ ಬ್ಯಾಂಕ್‌ಗೆ ಈ ಪ್ರಪೋಸಲ್ಸ್‌ನ್ನು ಕಳಿಸುತ್ತಿದ್ದೇವೆ. ಯೋಗ್ಯ ಸಮಯದಲ್ಲಿ ಪೂರ್ತಿ ಕೆಲಸ ಮಾಡಿಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ : ಈ ಕೆಲಸಗಳಿಗೆ ಎಲ್.ಓ.ಸಿ. ಕೊಡುವಲ್ಲಿ ಸಹಿತ ತುಂಬಾ ತಾರತಮ್ಯ ಆಗುತ್ತಿದೆ. ತಾವು ಅದನ್ನು ಸರಿಪಡಿಸುತ್ತೀರಾ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಅದನ್ನು ನಾನು ನೋಡುತ್ತೇನೆ.

ಪ್ರಶ್ನೆ ಸಂಖ್ಯೆ : 2066 - ಮಾನ್ಯ ಸದಸ್ಯರಾದ ಶ್ರೀಮತಿ ಮೋಟಮ್ಮ ಅವರು ಹಾಜರಿರಲಿಲ್ಲ.

ತುಂಗಭದ್ರಾ ಎಡದಂಡೆ ನಾಲೆಯ ದುರಸ್ತಿ

2071 - ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ತುಂಗಭದ್ರಾ ಎಡದಂಡೆ ನಾಲೆಯ ದುರಸ್ತಿಗಾಗಿ 1983 ರಿಂದ 1991 ರವರೆಗೆ ಮಂಜೂರಾದ ಹಣವೆಷ್ಟು?

ಆ) ಎಷ್ಟು ಚೈನ್ ಕಾಮಗಾರಿಯನ್ನು 1983 ರಿಂದ 1991 ರವರೆಗೆ ಪೂರೈಸಲಾಗಿದೆ?

ಇ) ಇದಕ್ಕೆ ತಗಲಿದ ಹಣ ಎಷ್ಟು ಹಾಗೂ ಉಳಿದಿರುವ ಹಣವೆಷ್ಟು?

ಈ) ದುರಸ್ತಿ ಕಾರ್ಯ ಯಾವ ಹಂತದಲ್ಲಿದೆ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ತುಂಗಭದ್ರಾ ಎಡದಂಡೆ ನಾಲೆಯ ದುರಸ್ತಿಗಾಗಿ 1983 ರಿಂದ 1991 ರವರೆಗೆ ರೂ. 2,959.41 ಲಕ್ಷಗಳು ಮಂಜೂರಾಗಿರುತ್ತದೆ. ಒಳಮೈ ಭದ್ರಪಡಿಸುವ ಕೆಲಸಕ್ಕೆ ರೂ.1,986 ಲಕ್ಷ ಮಂಜೂರಾಗಿದೆ.

ಆ) ಅಗತ್ಯವಿದ್ದೆಡೆ ದುರಸ್ತಿ ಕೆಲಸಗಳನ್ನು ನಿರ್ವಹಿಸಲಾಗಿದೆ ಮತ್ತು ಒಳಮೈ ಭದ್ರಪಡಿಸುವ ಕೆಲಸವನ್ನು 2288 ಚೈನುಗಳಲ್ಲಿ ಪೂರೈಸಲಾಗಿದೆ.

ಇ) ದುರಸ್ತಿಗೆ ತಗಲಿರುವ ಹಣ 2,959.41 ಲಕ್ಷ ರೂ.ಗಳು ಮತ್ತು ಒಳಮೈ ಭದ್ರಪಡಿಸುವಿಕೆಗೆ ರೂ.1,986 ಲಕ್ಷ ರೂ.ಗಳು. ಹಣ ಉಳಿದಿಲ್ಲ.

ಈ) ಕ್ಲೋಸರ್ ಸಮಯದಲ್ಲಿ ಕೈಗೊಂಡಿದ್ದ ದುರಸ್ತಿ ಕಾರ್ಯವು ಮುಗಿದಿದೆ.

ಶ್ರೀ ಬಿ. ಹಂಪನಗೌಡ : ಮಾನ್ಯ ಅಧ್ಯಕ್ಷರೇ, ತುಂಗಭದ್ರಾ ಎಡದಂಡೆ ನಾಲೆ ಬಗ್ಗೆ ನಾನು ಪ್ರಶ್ನೆ ಕೇಳಿದ್ದೆ. ಅದು ಸುಮಾರು 25-30 ವರ್ಷಗಳಷ್ಟು ಹಿಂದೆ ಮಾಡಿರತಕ್ಕಂಥ ನಾಲೆ. ಅದರ ಒಳಮೈ ದುರಸ್ತಿಗೆ ಸರ್ಕಾರ ಈಗಾಗಲೇ, 29 ಕೋಟಿ ರೂಪಾಯಿ ಅಂದಾಜು ಖರ್ಚು ಮಾಡಿದ್ದಾರೆ. ಆದರೆ ಎಕ್ಸ್‌ಪರ್ಟ್ಸ್ ಕಮಿಟಿಯವರು 1989ರಲ್ಲಿ ಏನು ಆ ನಾಲೆಯ ದುರಸ್ತಿ ಕೆಲಸ ತೆಗೆದುಕೊಳ್ಳಬೇಕು ಎಂದು ನಿರ್ಣಯ ತೆಗೆದುಕೊಂಡ ಮೇಲೆ ಅದರಲ್ಲಿ ಕೆಲವು ಭಾಗಗಳನ್ನು ಬಿಟ್ಟಿದ್ದಾರೆ. ನನ್ನ ಕ್ಷೇತ್ರದಲ್ಲಿ ಸುಮಾರು 150 ಚೈನ್ ಅಂದಾಜಿನ ಕೆಲಸಗಳನ್ನು ತೆಗೆದುಕೊಳ್ಳಬೇಕಾಗಿದೆ. ಆದ್ದರಿಂದ ಸರ್ಕಾರಕ್ಕೆ ಈ ಕೆಲಸ ತೆಗೆದುಕೊಳ್ಳುವ ಉದ್ದೇಶ ಇದೆಯೆ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಸದಸ್ಯರು ಒಂದು ಬೇಡಿಕೆಯನ್ನು ಏನು ಇಟ್ಟಿದ್ದಾರೆ, ಅದರ ಬಗ್ಗೆ ಕೂಡ ಪರಿಶೀಲನೆ ನಡೆದಿದೆ. ಉತ್ತರ ಬಂದಮೇಲೆ ಬೇಕಾದರೆ ಅವರಿಗೆ ಉತ್ತರವನ್ನು ಒದಗಿಸುತ್ತೇನೆ.

ಪಿರಿಯಾಪಟ್ಟಣ ತಾಲ್ಲೂಕಿನ ಕರಡಿಲಕ್ಕನ ಕೆರೆ ಏತ ನೀರಾವರಿ ಯೋಜನೆ

2135 - ಶ್ರೀ ಕೆ.ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾಪಟ್ಟಣ ತಾಲ್ಲೂಕಿನ ಕರಡಿಲಕ್ಕನ ಕೆರೆ ಏತ ನೀರಾವರಿ ಯೋಜನೆಯಿಂದ ಎಷ್ಟು ಎಕರೆಗೆ ನೀರಾವರಿ ಸೌಲಭ್ಯ ದೊರಕುವುದು ಹಾಗೂ ಇದಕ್ಕೆ ತಗಲುವ ಖರ್ಚೆಷ್ಟು;

ಆ) ಈ ಕಾರ್ಯ ಯಾವ ಹಂತದಲ್ಲಿದೆ ಹಾಗೂ ಈ ಯೋಜನೆಗಾಗಿ ಇದುವರೆವಿಗೂ ಖರ್ಚಾದ ಮೊತ್ತವೆಷ್ಟು?

ಇ) ಈ ಯೋಜನೆ ಹಾರಂಗಿ ಯೋಜನೆಯಡಿಯಲ್ಲಿ ಸೇರಿದೆಯೆ?

ಈ) ಈ ಪಿರಿಯಾಪಟ್ಟಣ ಏತ ನೀರಾವರಿ ಯೋಜನೆಗಾಗಿ ಎಷ್ಟು ಟಿಂ.ಎಂ.ಸಿ. ನೀರನ್ನು ಇಟ್ಟಿದೆ ಈ ಯೋಜನೆಯನ್ನು ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ಅಚ್ಚುಕಟ್ಟು ಪ್ರದೇಶ 30,000 ಎಕರೆಗಳು ಅಂದಾಜು ವೆಚ್ಚ 19.60 ಕೋಟಿ ರೂ.ಗಳು (1985-86ರ ದರಗಳ ಪ್ರಕಾರ)

ಆ) ಈ ಯೋಜನೆಗೆ ಬೇಕಾಗುವ ವಿದ್ಯುಚ್ಛಕ್ತಿ ಸರಬರಾಜಿನ ಬಗ್ಗೆ ತೀರ್ಮಾನ ಕೈಗೊಳ್ಳಬೇಕಾಗಿದೆ. ಇದುವರೆಗೂ ಮಾಡಲಾಗಿರುವ ವೆಚ್ಚ 30 ಲಕ್ಷ ರೂ.ಗಳು.

ಇ) ಸೇರಿದೆ.

ಈ) 5.82 ಟಿ.ಎಂ.ಸಿ. ಕಾಮಗಾರಿ ಪ್ರಾರಂಭಿಸಿದ ನಂತರ, ಹಣದ ಲಭ್ಯತೆಯನ್ನವಲಂಬಿಸಿ 3 ವರ್ಷಗಳ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು.

ನಾನು ಮತ್ತು ಶ್ರೀ ಕಾಳಮರಿಗೌಡ ಅವರು ಕೂಡಿ ಮೊನ್ನೆ ಅವರ ಕ್ಷೇತ್ರದಲ್ಲಿ ಪ್ರವಾಸ ಮಾಡಿದ್ದೇವೆ. ಅವರು ನಾನು ಕೂಡಿ ಆ ಸ್ಥಳವನ್ನು ಕೂಡ ನೋಡಿದ್ದೇವು. ಆದಷ್ಟು ಶೀಘ್ರ ಆ ಕಾರ್ಯವನ್ನು ಮುಗಿಸಿಕೊಡಿತ್ತೇನೆ ಎಂದು ಭರವಸೆಯನ್ನು ಈಗಾಗಲೇ ನಾನು ಕೊಟ್ಟಿದ್ದೇನೆ, ಅದನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಕೆ.ಎಸ್. ಕಾಳಮರಿಗೌಡ : ನಾವಿಬ್ಬರೂ ಪ್ರವಾಸ ಕೈಗೊಂಡಿದ್ದೆವು, ಆದಷ್ಟು ಬೇಗ ಮುಗಿಸಿಕೊಡುತ್ತೇನೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಆದಷ್ಟು ಬೇಗ ಎಂದರೆ ಎಷ್ಟು ದಿವಸಗಳಲ್ಲಿ ಅಥವಾ ಎಷ್ಟು ತಿಂಗಳಲ್ಲಿ ಎಂಬ ಭರವಸೆ ಕೊಟ್ಟರೆ ಸಾಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮೂರು ವರ್ಷಗಳಲ್ಲಿ ಈ ಕೆಲಸವನ್ನು ಕಂಪ್ಲೀಟ್ ಆಗಿ ಮುಗಿಸುತ್ತೀರಾ? ಅದಕ್ಕಿಂತ ಮುಂಚೆ ಕೆ.ಇ.ಬಿ. ಯದ್ದು ಎಷ್ಟು ದಿವಸಗಳಲಿ ಮುಗಿಸುತೀರಿ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಇದಕ್ಕೆ 9 ಮೆಗಾವ್ಯಾಟ್ ವಿದ್ಯುಚ್ಛಕ್ತಿ ಬೇಕಾಗಿದ್ದು ಅದನ್ನು ಕ್ಯಾಬಿನೇಟ್ ಮುಂದೆ ತೆಗೆದುಕೊಂಡು ಹೋಗುತ್ತಿದ್ದೇನೆ. ಅದು ಅಪ್ರುವಲ್ ಆದ ಕೂಡಲೇ ಕೆಲಸ ಪ್ರಾರಂಭ ಆಗುತ್ತದೆ.

ಬೆಳಗಾವಿ ಜಿಲ್ಲೆಯ ನೀರಾವರಿ ಕೆರೆಗಳು

2138 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕು ಚಿಕ್ಕಬೂದನೂರು ನೀರಾವರಿ ಟ್ಯಾಂಕ್ ಕಟ್ಟಡ ಕಟ್ಟುವ ಕೆಲಸಕ್ಕೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಯಾವಾಗ ನೀಡಲಾಯಿತು ಮತ್ತು ಎಷ್ಟು ಹಣಕ್ಕೆ ಮಂಜೂರಾತಿ ನೀಡಲಾಯಿತು?

ಆ) ಈಗ ಹೊಸ ಸ್ಥಳಕ್ಕೆ (ಚೇಂಜ್ ಆಫ್ ಸೈಟ್) ಮಂಜೂರಾತಿ ನೀಡುವ ಸಲುವಾಗಿ ಮುಖ್ಯ ಅಭಿಯಂತರರು ಸಣ್ಣ ನೀರಾವರಿ ಇಲಾಖೆಯಲ್ಲಿ ಒಪ್ಪಿಗೆಗಾಗಿ ಉಳಿದಿರುವುದು ನಿಜವೇ ಮತ್ತು ಇನ್ನೂ ಎಷ್ಟು ದಿವಸಗಳಲ್ಲಿ ಇದಕ್ಕೆ ಒಪ್ಪಿಗೆ ಕೊಡಲಾಗುವುದು?

ಇ) ಈ ಹೊಸ ನೀರಾವರಿ ಕೆರೆಯಿಂದ (ಚೇಂಜ್ ಆಫ್ ಸೈಟ್) ಎಷ್ಟು ಎಕರೆಗೆ ನೀರಾವರಿ ಆಗುವುದು, ಮತ್ತು ಯಾವ ಕ್ಷೇತ್ರಗಳಿಗೆ ಯಾವ ಯಾವ ಊರಲ್ಲಿ ಎಷ್ಟು ಎಕರೆಗೆ ನೀರಾವರಿ ಸೌಲಭ್ಯ ದೊರಕುವುದು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಚಿಕ್ಕಬೂದನೂರು ನೀರಾವರಿ ಕೆರೆಯ ಅಂದಾಜಿಗೆ ಮೊದಲನೆಯ ನಿವೇಶನಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ರೂ. 79.69 ಲಕ್ಷಗಳಿಗೆ ದಿನಾಂಕ 10-07-89ರಂದು ಮತ್ತು ತಾಂತ್ರಿಕ ಮಂಜೂರಾತಿಯನ್ನು ದಿನಾಂಕ 27-07-89ರಂದು ರೂ.76.52 ಲಕ್ಷಗಳಿಗೆ ನೀಡಲಾಗಿದೆ.

ಆ) ಹೌದು. ಹೊಸ ಸ್ಥಳದಲ್ಲಿ ಕೆರೆ ನಿರ್ಮಾಣ ಮಾಡಲು ಹೈಡ್ರಾಲಜಿ ಮತ್ತು ಸರ್ವೆ ಕಾರ್ಯ ಕೈಗೊಂಡಿದ್ದು ಮಾರ್ಚ್ 92ರ ವೇಳೆಗೆ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು.

ಇ) ಸರ್ವೆ ಕಾರ್ಯ ಮುಗಿದು ಅಂದಾಜು ಪಟ್ಟಿ ತಯಾರಾದ ಮೇಲೆ ವಿವರಗಳು ದೊರಕುವುವು.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೆ, ಈವತ್ತಿನ ದಿವಸ ಈ ಹೊಸ ಸೈಟ್ ಸಲುವಾಗಿ, ಟೆಕ್ನಕಲ್ ಸ್ಯಾಂಕ್ಷನ್ ಕೊಡುವ ಸಲುವಾಗಿ, ಚೀಫ್ ಇಂಜಿನಿಯರ್ ಅವರ ಆಫೀಸಿಗೆ ಎಷ್ಟು ದಿವಸಗಳ ಹಿಂದೆ ಹೋಯಿತು? ಇನ್ನು ಎಷ್ಟು ದಿವಸಗಳಲ್ಲಿ ಇದಕ್ಕೆ ಟೆಕ್ನಿಕಲ್ ಸ್ಯಾಂಕ್ಷನ್ ಕೊಡುತ್ತೀರಿ? ಹೋದವರ್ಷ ಸಹಿತ 30 ಲಕ್ಷ ರೂಪಾಯಿಗಳನ್ನು ಈ ಕೆಲಸಕ್ಕೆ ಇಟ್ಟಿದ್ದು ಅದು ಲ್ಯಾಪ್ಸ್ ಆಯಿತು. ಸರ್ಕಾರದವರು ಕೊನೆಯ ಪಕ್ಷ ಈ ವರ್ಷದಿಂದ ಕೆಲಸ ಪ್ರಾರಂಭಿಸಿ ಆ ಹಣ ಲ್ಯಾಪ್ಸ್ ಆಗದಹಾಗೆ ನೋಡುತ್ತಾರೆಯೇ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಕೆಲವಾರು ತಾಂತ್ರಿಕ ಕಾರಣಗಳಿಂದ ಅದು ಮುಂದುವರೆದಿತ್ತು. ಮಾನ್ಯ ಸದಸ್ಯರು ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರ ಸಮೇತ 1991ನೇ ಇಸವಿ ಜನವರಿಯಲ್ಲಿ ಈಗಿರತಕ್ಕ ಸೈಟನ್ನು ಬದಲಾವಣೆ

ಮಾಡತಕ್ಕಂಥ ಯೋಜನೆಯನ್ನು ಹಾಕಿಕೊಂಡು ಹೋಗಿ ನೋಡಿಕೊಂಡು ಬಂದಿದ್ದಾರೆ. ಅಲ್ಲಿ ಜಮೀನು ಬಿಟ್ಟುಕೊಡದೆ ತಾಪತ್ರಯ ಆಗಿತ್ತು. ಅದನ್ನು ಮಾನ್ಯ ಸದಸ್ಯರು ನೋಡಿಕೊಂಡು ಬಂದಿದ್ದಾರೆ. ಈಗ ಬೇರೆ ಸೈಟು ಬದಲಾವಣೆಗೆ ತಿಳಿಸಿದ್ದೀರಿ.

ಅದು ನಮ್ಮ ಚೀಫ್ ಇಂಜಿನಿಯರ್ ಆಫೀಸಿನಲ್ಲಿ ಇದೆ. ಶೀಘ್ರವಾಗಿ ಈ ಕೆಲಸವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್.ಹೆಚ್. ಕೌಜಲಗಿ : ಟೆಕ್ನಿಕಲ್ ಸ್ಯಾಂಕ್ಷನ್ ಕೊಡುವ ಸಲುವಾಗಿ, ಚೀಫ್ ಇಂಜಿನಿಯರ್ ಆಫೀಸಿನಲ್ಲಿ ಎಷ್ಟು ದಿವಸದಿಂದ ಪೆಂಡಿಂಗ್ ಇದೆ; ಇನ್ನು ಎಷ್ಟು ದಿವಸದಲ್ಲಿ ಕೊಡುತ್ತೀರಿ? ಇದು ಮುಖ್ಯವಾದುದು. ಒಂದು ಟೆಕ್ನಿಕಲ್ ಸ್ಯಾಂಕ್ಷನ್ ಕೊಡಬೇಕಾದರೆ ಚೀಫ್ ಇಂಜಿನಿಯರ್ ಆಫೀಸಿನಲ್ಲಿ 6 ತಿಂಗಳು, 9 ತಿಂಗಳು ಬಿಟ್ಟುಕೊಂಡು ಕುಳಿತರೆ, ಬಜೆಟ್‌ನಲ್ಲಿರತಕ್ಕ ಹಣ ಹೇಗೆ ಖರ್ಚಾಗುತ್ತದೆ? ಅಲ್ಲಿ ಈಗ ಲ್ಯಾಂಡ್ ಸಮಸ್ಯೆ ಇಲ್ಲ. ಎಲ್ಲರೂ ಬರೆದುಕೊಟ್ಟಿದ್ದಾರೆ. ಹೊಸ ಸೈಟ್‌ನಲ್ಲಿ ಮಾಡುವುದಕ್ಕೆ ನಮ್ಮದೇನೂ ತಕರಾರೂ ಇಲ್ಲವೆಂದು ಹೇಳಿದ್ದಾರೆ. ಈ ರೀತಿ ಬರೆದುಕೊಟ್ಟ ನಂತರ, ಚೀಫ್ ಇಂಜಿನಿಯರ್ ಆಫೀಸಿನಲ್ಲಿ ಎಷ್ಟು ದಿವಸದಿಂದ ಪೆಂಡಿಂಗ್ ಇದೆ. That is important

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಶೀಘ್ರದಲ್ಲಿಯೇ ಮಾಡಿಸಿಕೊಡುತ್ತೇವೆ.

ಶ್ರೀ ಎಸ್.ಹೆಚ್. ಕೌಜಲಗಿ : 1974ರಿಂದ ಇಲ್ಲಿಯವರೆಗೂ ಹೀಗೆಯೇ ಮುಂದಕ್ಕೆ ಹೋಗುತ್ತಿದೆ. ಆಡಳಿತಾತ್ಮಕ ಮಂಜೂರಾತಿ ಕೊಡಲು, ಮೂರನೇ ಒಂದು ಭಾಗ ಹಣ ಇಲ್ಲವೆಂದು ಹೇಳುತ್ತಿದ್ದರು. ಈಗ ಮೂರನೇ ಒಂದು ಭಾಗ ಹಣ ಬಂದಿದೆ, ಟೆಕ್ನಿಕಲ್ ಸ್ಯಾಂಕ್ಷನ್ 9 ತಿಂಗಳಿಂದ ಬಂದಿಲ್ಲ.

ಅಧ್ಯಕ್ಷರು : 9 ತಿಂಗಳು ಬೇಕಲ್ಲಾ...

ಶ್ರೀ ಎಸ್.ಹೆಚ್. ಕೌಜಲಗಿ : ತಮಗೂ ಗೊತ್ತಿದೆ, ಇರಿಗೇಷನ್ ತೆಗೆದುಕೊಳ್ಳಬೇಕೆಂದು ಎಲ್ಲರಿಗೂ ಆಸೆ ಇದೆ. ಆದಕಾರಣ, ದಯಮಾಡಿ, ಶೀಘ್ರವಾಗಿ ತಾವು ಮನಸ್ಸಿಗೆ ತೆಗೆದುಕೊಂಡು, ಹೆಚ್ಚಿನ ಆಸಕ್ತಿ ವಹಿಸಿ, ಟೆಕ್ನಿಕಲ್ ಸ್ಯಾಂಕ್ಷನ್ ಕೊಡಿಸಬೇಕು. ನಾವು ನಿಮ್ಮಿಂದಲೇ ಅಡಿಗಲ್ಲು ಹಾಕಬೇಕೆಂದು ತೀರ್ಮಾನಿಸಿರುತ್ತೇವೆ. ತಾವು ಬಂದು ಅಡಿಗಲ್ಲು ಹಾಕಿ, ಕೆಲಸ ಪ್ರಾರಂಭ ಮಾಡಿದರೆ ನನ್ನ ಮನಸ್ಸಿಗೆ ಸಮಾಧಾನವಾಗುತ್ತದೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಸರ್ವೇ ಕಾರ್ಯ, ಎನರ್ಜಿ ಕಾರ್ಯ ಎಲ್ಲಾ ಮುಗಿದಿದೆ. ತಾಂತ್ರಿಕವಾಗಿ ಮತ್ತು ಆರ್ಥಿಕ ಸೌಲಭ್ಯ ನೋಡಿಕೊಂಡು ಸಾಧ್ಯವಾದಷ್ಟು ಮಾಡಿಕೊಡುತ್ತೇವೆ.

ಶ್ರೀ ಎಸ್.ಹೆಚ್. ಕೌಜಲಗಿ : ತಾವು ಬಜೆಟ್‌ನಲ್ಲಿರತಕ್ಕ ಹಣವನ್ನು ಖರ್ಚು ಮಾಡಿ...

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಈಗ ಮತ್ತೆ ರಿವೈಸ್ ಆಗಿದೆ...

ಶ್ರೀ ಎಸ್.ಹೆಚ್. ಕೌಜಲಗಿ : ಬಜೆಟ್‌ನಲ್ಲಿರುವುದನ್ನು ಖರ್ಚುಮಾಡಿ, ರಿವೈಸ್ಡ್ ಆಗಿದೆ ಎಂದು ಹೇಳುತ್ತೀರಿ, ಈ ರೀತಿ ರಿವೈಸ್, ಮತ್ತೆ ಇದಕ್ಕೆ ರಿವೈಸ್ ಎಂದು ಹೇಳಿಕೊಂಡು ಹೋದರೆ, ಯಾರು ಮಾಡಬೇಕು? ಉತ್ತರ ಕರ್ನಾಟಕದಲ್ಲಿ ಯಾವುದೇ ಒಂದು ಕೆಲಸ ಮಾಡಬೇಕಾದರೂ ಮಂತ್ರಿಗಳ ಕೈ ನಡುಗುತ್ತದೆ. ಇದು 1974ರಿಂದ ಹೀಗೆಯೇ ಬರುತ್ತಿದೆ. ಹೋದವರ್ಷ ಮೂರನೇ ಒಂದು ಭಾಗ

ಹಣ ಬೇಕೆಂದು ಹೇಳುತ್ತಿದ್ದರು. ಈ ವರ್ಷ ಮತ್ತೆ ರಿವೈಸ್ ಆಗಬೇಕೆಂದು ಹೇಳುತ್ತೀರಿ, ನಾವು ಮಾತೆತ್ತಿದರೆ, ಉತ್ತರ ಕರ್ನಾಟಕ ಎಂದು ಹೇಳುತ್ತೇವೆ ಎಂದು ನೀವು ಹೇಳುತ್ತಿರುತ್ತೀರು. ಇದು ಉದ್ದೇಶಪೂರ್ವಕವಾಗಿ ಆಗುತ್ತಿದೆ. ನೀವು ಮಾಡಿದರೆ ಮಾಡುತ್ತೇವೆಂದು ಹೇಳಿ; ಇಲ್ಲದಿದ್ದರೆ ಇಲ್ಲ ಎಂದು ಹೇಳಿ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಶೀಘ್ರದಲ್ಲಿಯೇ ಮಾಡಿಕೊಡುತ್ತೇವೆ.

ಅಧ್ಯಕ್ಷರು : ನೀವು ಕೋಪಿಸಿಕೊಂಡರೆ ಹೇಗೆ ಆಗುತ್ತದೆ?

ಶ್ರೀ ಎಸ್.ಹೆಚ್. ಕೌಜಲಗಿ : ಅಲ್ಲಿ ಒಂದು ಕೆಲಸ ಆಗಿಲ್ಲ. ಮೂರನೇ ಒಂದು ಭಾಗ ಹಣ ಇಲ್ಲವೆಂದು ಆಡಳಿತಾತ್ಮಕ ಮಂಜೂರಾತಿ ಕೊಡಲಿಲ್ಲ. ಹಣಕಾಸಿನ ಇಲಾಖೆಯನ್ನು ಹಿಡಿದುಕೊಂಡು, ಮೂರನೇ ಒಂದು ಭಾಗ ಹಣ ಮಾಡಿಸಿದ್ದಾಯಿತು. ಮತ್ತೆ ಈಗ ಟೆಕ್ನಿಕಲ್ ಅಡ್ಡ ಬಂದಿದೆ. ಈ ವರ್ಷವೂ ಹಣ ಲ್ಯಾಪ್ಸ್ ಆಗುತ್ತದೆ; ಹೋದವರ್ಷ 30 ಲಕ್ಷ ರೂಪಾಯಿ ಹಣ ಲ್ಯಾಪ್ಸ್ ಆಯಿತು. ಈ ರೀತಿ 30 ಲಕ್ಷ ರೂಪಾಯಿ ಲ್ಯಾಪ್ಸ್ ಆಯಿತೆಂದರೆ, ನಮಗೆ ಏನಾಗಬೇಕು? ಈ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್ ಕ್ಲೋಸ್ ಮಾಡಬೇಕು. ಇಲ್ಲಿ ಏನೇನೂ ಕೆಲಸ ಆಗುತ್ತಿಲ್ಲ. ಒಂದೇಒಂದು ಕೆಲಸ ಮಾಡಿಲ್ಲ. ಹೊಸ ಎಸ್ಟಿಮೇಟ್ ಮಾಡುತ್ತೀರಾ? ಹೊಸ ಪ್ಲಾನ್ ಮಾಡುತ್ತೀರಾ? ಹೊಸ ನೀರಾವರಿ ತೆಗೆದುಕೊಂಡಿದ್ದೀರಾ? ಅವರು ಸುಮ್ಮನೆ ಕುಳಿತುಕೊಂಡು ಪಗಾರ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ: ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಆವೇಶದಿಂದ ಇದ್ದಾರೆಂದು ಕಾಣಿಸುತ್ತದೆ. ನನಗೆ ಸಣ್ಣ ನೀರಾವರಿ ಬಗ್ಗೆ ಇರತಕ್ಕ ಕಾಳಜಿ ಅವರಿಗೂ ಖಂಡಿತವಾಗಿಯೂ, ಪೀಜಿಬಿಲಿಟಿ ನೋಡಿಕೊಂಡು, ಮಾಡಿಸಿಕೊಡುತ್ತೇವೆಂದು ಭರವಸೆ ಕೊಡುತ್ತೇನೆ.

ಅಧ್ಯಕ್ಷರು : ಹೊರಗಡೆ ಚೆನ್ನಾಗಿದ್ದಾರೆಯೇ, ನಿಮ್ಮ ಜೊತೆಯಲ್ಲಿ ಅವರು?

ಶ್ರೀ ಬಿ.ಹೆಚ್. ಬನ್ನಿಕೋಡ್ : ಅಧಿಕಾರಿಗಳಿಗೆ ತೀವ್ರವಾಗಿ ಕೆಲಸ ಮಾಡುವುದಕ್ಕೆ ಹೇಳಿ. ಇದರಲ್ಲಿ ವೈಯಕ್ತಿಕವಾಗಿ ಯಾವುದೂ ಇಲ್ಲ. ಸರ್ಕಾರ ಹಣ ಒದಗಿಸಿದ್ದರೂ, ಕೆಲಸ ಆಗಿಲ್ಲ.

ಶ್ರೀ ಎಸ್.ಹೆಚ್. ಕೌಜಲಗಿ : ಬಜೆಟ್‌ನಲ್ಲಿ ಹಣ ಬರಬೇಕಾದರೆ ಎಷ್ಟು ತ್ರಾಸ್ ಆಯಿತು. ಆದ್ದರಿಂದ, ಬಜೆಟ್‌ನಲ್ಲಿ ಬಂದಿರುವ ಹಣವನ್ನು ಖರ್ಚು ಮಾಡಿ, ಕೆಲಸ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತಿದ್ದೇವೆ. ಅಲ್ಲಿ, ನಿಮ್ಮಿಂದಲೇ ಅಡಿಗಲ್ಲು ಆಗಬೇಕು, ನಿಮ್ಮಿಂದಲೇ ಕೆಲಸ ಪ್ರಾರಂಭವಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಸರ್ವೆ ಕಾರ್ಯ ಮುಗಿದಿದೆ, ಖಂಡಿತವಾಗಿಯೂ ಈ ಕೆಲಸವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ನೀವು ಏರ್ಪಾಡು ಮಾಡಿ, ಅಡಿಗಲ್ಲಿಗೆ, ಏಕೆಂದರೆ ಅವರು ಮೂರು ತಿಂಗಳಿನಲ್ಲಿಯೇ ಮಾಡುತ್ತಾರೆ.

ಮುಲ್ಕಿಯಲ್ಲಿರುವ ಕಿರಿದಾದ ರಸ್ತೆಗಳು

2239 - ಶ್ರೀ ಸೋಮಪ್ಪ ಸುವರ್ಣ (ಮುಡಬಿದರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಮುಲ್ಕಿ ಫಿರ್ತಾದ ಕಟೀಲು ದೇವಸ್ಥಾನದ ವಠಾರದಲ್ಲಿ ಅಗಲ ಕಿರಿದಾದ ರಸ್ತೆಯಿಂದಾಗಿ ವಾಹನ ಸಂಚಾರಕ್ಕೆ ತೊಂದರೆಯಾಗಿರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೆ?

ಆ) ಇಲ್ಲಿಗೆ ಒಂದು ಬೈಪಾಸು ರಸ್ತೆ ರಚಿಸಿದರೆ ತಗಲಬಹುದಾದ ಖರ್ಚೆಷ್ಟು?

ಇ) ಇದು ಬಜ್ಪೆ ನಿಲ್ದಾಣಕ್ಕೆ ಹೋಗುವ ಪ್ರಾಮುಖ್ಯ ರಸ್ತೆಯಾಗಿರುವ ಕಾರಣ ಈ ರಸ್ತೆಯ ಕಾಮಗಾರಿಯನ್ನು ಎಂದು ಪ್ರಾರಂಭಿಸಲಾಗುವುದು?

ಈ) ಆಗಿಂದಾಗ್ಗೆ ಈ ರಸ್ತೆಯಲ್ಲಿ ಅಪಘಾತಗಳು ಸಂಭವಿಸುತ್ತಿರುವುದರಿಂದ ಪ್ರಸಕ್ತ ವರ್ಷವೇ ಈ ರಸ್ತೆಯ ಕಾಮಗಾರಿಯನ್ನು ಪ್ರಾರಂಭಿಸಲಾಗುವುದೇ?

ಶ್ರೀ ಜಿ.ಹೆಚ್. ಅಶ್ವಥ್ ರೆಡ್ಡಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) 10.00 ಲಕ್ಷ ರೂ.ಗಳ ಅಂದಾಜು ಆಗುತ್ತದೆ.

ಇ) ಈ ಕಾಮಗಾರಿಯನ್ನು 1992-93ರ ಸಾಲಿನ ಅಂದಾಜಿನಲ್ಲಿ ಸೇರಿಸಿ ಪ್ರಾರಂಭಿಸುವ ಪ್ರಸ್ತಾಪವಿದೆ.

ಈ) ಈ ಕಾಮಗಾರಿಯನ್ನು1992-93ರ ಸಾಲಿನ ಅಂದಾಜಿನಲ್ಲಿ ಸೇರಿಸಿ ಪ್ರಾರಂಭಿಸುವ ಪ್ರಸ್ತಾಪವಿದೆ.

ಶ್ರೀ ಕೆ. ಸೋಮಪ್ಪ ಸುವರ್ಣ : ಸ್ವಾಮಿ ಅಧ್ಯಕ್ಷರೇ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಟೀಲು ಬಹಳ ಯಾತ್ರಾರ್ಥಿಗಳು ಬರುವಂತಹ ಸ್ಥಳವಾಗಿದ್ದು, ಅದರ ಬದಿಯಲ್ಲೇ ಪ್ರಾಥಮಿಕ ಶಾಲೆ, ಹೈಸ್ಕೂಲು, ಕಾಲೇಜು ಎಲ್ಲಾ ಇದೆ. ನೂರಾರು ಕಾರು ಬಸ್‌ಗಳಲ್ಲಿ ಬರುವುದರಿಂದ ಆ ದಾರಿಯಲ್ಲಿಯೇ ಹೋಗಬೇಕು. ಜನ ಹೋಗಲಿಕ್ಕೆ ಬಹಳ ತೊಂದರೆಯಾಗಿದೆ. ಬಜಪೆ ವಿಮಾನ ನಿಲ್ದಾಣಕ್ಕೆ ಕುಂದಾಪುರದವರು, ಉತ್ತರ ಕನ್ನಡ ಜಿಲ್ಲೆಯ ಜನರೂ ಸಹ ಈ ರಸ್ತೆಯಲ್ಲಿಯೇ ಹೋಗಬೇಕಾಗಿದೆ. ಯಾವಾಗ ನೋಡಿದರೂ ಇಲ್ಲಿ ಬಸ್‌ಗಳು ತಡೆ ಹಿಡಿಯಲ್ಪಟ್ಟು ವಿಮಾನ ನಿಲ್ದಾಣಕ್ಕೆ ಕ್ಲುಪ್ತ ಕಾಲದಲ್ಲಿ ಹೋಗಿ ಮುಟ್ಟುವುದಕ್ಕೆ ಆಗುವುದಿಲ್ಲ. ಆದುದರಿಂದ ಇದಕ್ಕೆ ಬೈಪಾಸ್ ಬೇಕೆಂದು ಹಲವಾರು ವರ್ಷಗಳಿಂದ ಕೇಳುತ್ತಿದ್ದೇವೆ. ತಾವು ತಮ್ಮ ಉತ್ತರದಲ್ಲಿ ಮುಂದಿನ ವರ್ಷ ಇದನ್ನು ಪ್ರಾರಂಭಿಸುವುದರ ಬಗ್ಗೆ ಆಲೋಚಿಸುವುದಾಗಿ ತಿಳಿಸಿದ್ದೀರಿ. ಅಲ್ಲಿ ಅನೇಕ ಆಕ್ಸಿಡೆಂಟ್ಸ್‌ಗಳು ಆಗುತ್ತಿರುವ ವಿಚಾರವನ್ನು ನೀವು ತಿಳಿದುಕೊಂಡಿದ್ದೀರಿ. ಆದುದರಿಂದ ಈ ವರ್ಷವೇ ಆ ಕೆಲಸವನ್ನು ಪ್ರಾರಂಭಿಸಲಿಕ್ಕೆ ತಾವು ಮುಂದಾಗಬೇಕು, ಅಲ್ಲಿಯ ಜನರು ಇದಕ್ಕೆ ಬೇಕಾದ ಸ್ಥಳವನ್ನು ಕೊಡುವುದಕ್ಕೆ ಸಹ ಮುಂದಾಗಿದ್ದಾರೆ. ಆದುದರಿಂದ ತಾವು ಸ್ಪಷ್ಟವಾದ ಅಭಿಪ್ರಾಯವನ್ನು ಈ ಸದನದಲ್ಲಿ ಹೇಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ : ಅಧ್ಯಕ್ಷರೇ, ಆ ದೇವಸ್ಥಾನವನ್ನು ನಾನೂ ಕೂಡಾ ನೋಡಿದ್ದೇನೆ. ಅಲ್ಲಿ ರಸ್ತೆ ಬಹಳ ಇಕ್ಕಟ್ಟಾಗಿದೆ. ಆಕ್ಸಿಡೆಂಟ್ ಆಗುವುದಕ್ಕೆ ಹೆಚ್ಚಿನ ಅವಕಾಶ ಇದೆ. 1992-93ನೇ ಸಾಲಿನಲ್ಲಿ ಕೆಲಸ ಪ್ರಾರಂಭ ಮಾಡುತ್ತೇವೆಂದು ಉತ್ತರದಲ್ಲಿ ಸ್ಪಷ್ಟವಾಗಿ ತಿಳಿಸಿದ್ದೇನೆ. ಅದಕ್ಕೋಸ್ಕರ 10 ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿರುತ್ತೇನೆ.

ಶ್ರೀ ಕೆ. ಸೋಮಪ್ಪ ಸುವರ್ಣ : ಈಗಾಗಲೇ ಆ ಊರಿನವರು ಸ್ಥಳ ಕೂಡಾ ಕೊಡುತ್ತೇವೆಂದು ಹೇಳಿದ್ದಾರೆ. ಆ ಸ್ಥಳವನ್ನು ಪಡೆದುಕೊಂಡು ಬಿಟ್ಟರೆ ಒಳ್ಳೆಯದು. ಮುಂದಿನ ವರ್ಷ ಕೆಲಸ ಪ್ರಾರಂಭ ಮಾಡುವುದಕ್ಕೆ ಆಗುತ್ತದೆ. ಇವತ್ತಿನ ಪರಿಸ್ಥಿತಿ ಮುಂದಿನ ವರ್ಷ ಇರುವುದಿಲ್ಲ. ಅಲ್ಲೇ ಒಂದು ಆಸ್ಪತ್ರೆ

ಕಟ್ಟುವುದಕ್ಕೆ ಐದು ಲಕ್ಷ ರೂಪಾಯಿ ದೇವಸ್ಥಾನದವರು ಕೊಟ್ಟರು. ಮೊದಲು ಇದಕ್ಕೆ ಸ್ಥಳವನ್ನು ಕೊಡುತ್ತೇವೆಂದು ಹೇಳಿದರೂ ಈಗ ತಪ್ಪಿಸಿಕೊಂಡಿದ್ದಾರೆ. ಆದುದರಿಂದ ಈಗಲೇ ರಸ್ತೆಗಾಗಿ ಸ್ಥಳವನ್ನು ಕೊಡುತ್ತೇವೆಂದು ಏನು ಮುಂದೆ ಬಂದಿದ್ದಾರೆ, ಅದನ್ನು ಶೀಘ್ರವಾಗಿ ಸ್ವಾಧೀನ ಪಡಿಸಿಕೊಂಡು ಈ ವರ್ಷವೇ ಸ್ವಲ್ಪ ಹಣವನ್ನು ಖರ್ಚು ಮಾಡಿ, ರಸ್ತೆಗಾಗಿ ಒಂದು ಶಂಕುಸ್ಥಾಪನೆಯನ್ನು ಮಾಡಿ ಕೆಲಸವನ್ನು ಪ್ರಾರಂಭ ಮಾಡಿದರೆ ಮುಂದಿನ ವರ್ಷ ಸುಲಭವಾಗುತ್ತದೆ. ಈ ವರ್ಷ ಅದನ್ನು ಮಾಡುವುದಕ್ಕೆ ಸಾಧ್ಯ ಉಂಟೇ ಎಂದು ಕೇಳುತ್ತೇನೆ.

ಶ್ರೀ ಜಿ.ಹೆಚ್. ಅಶ್ವಥ್ ರೆಡ್ಡಿ : ನಿರ್ದಿಷ್ಟವಾಗಿ ಹೇಳಿದ್ದೇನೆ. 92-93ರಲ್ಲಿ ಕೆಲಸ ಪ್ರಾರಂಭ ಮಾಡುತ್ತೇವೆಂದು ಸರಕಾರದ ವತಿಯಿಂದ ಹೇಳುತ್ತಿದ್ದೇನೆ. ರಸ್ತೆಗೆ ಜಾಗ ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಇದರ ಉದ್ದ ಸುಮಾರು 1.8 ಕಿಲೋಮೀಟರ್ ಆಗುತ್ತದೆ. ರಸ್ತೆ ಮಾಡುವುದಕ್ಕೆ 10 ಲಕ್ಷ ಆಗುತ್ತದೆ. ಸ್ಯಾಂಕ್ಷನ್ ಮಾಡಿರುತ್ತೇವೆ. 92 ರಿಂದ ಶುರು ಮಾಡಿಸುತ್ತೇವೆ.

ಬಂಟ್ವಾಳ ತಾಲ್ಲೂಕಿನಲ್ಲಿರುವ ರಸ್ತೆಗಳ ದುರಸ್ತಿ

2174 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಬಂಟ್ವಾಳ ತಾಲ್ಲೂಕಿನ ಮಾಣಿ-ಉಳ್ಳಾಲ ಜಿಲ್ಲಾ ಪರಿಷತ್ ರಸ್ತೆ ಸಂಪೂರ್ಣ ದುರಸ್ತಿಯಾಗದೆ ಇರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಇದು ಇಲ್ಲಿಯ ಪ್ರಾಮುಖ್ಯ ರಸ್ತೆಯಾದುದರಿಂದ ಇದನ್ನು ರಾಜ್ಯ ರಸ್ತೆ (ಲೋಕೋಪಯೋಗಿ)ಯನ್ನಾಗಿ ಮಾಡಿ ದುರಸ್ತಿ ಪಡಿಸಲು ಸರ್ಕಾರ ಉದ್ದೇಶಿಸಿದೆಯೇ?

ಇ) ಹಾಗಿದ್ದಲ್ಲಿ ಇದನ್ನು ಎಂದಿನಿಂದ ದುರಸ್ತಿ ಮಾಡಬಹುದು?

ಶ್ರೀ ಜಿ.ಹೆಚ್. ಅಶ್ವಥ್ ರೆಡ್ಡಿ (ಲೋಕೋಪಯೋಗಿ ಸಚಿವರು)

ಅ) ಬಂದಿದೆ.

ಆ) ಈ ರಸ್ತೆಯು ಹಳ್ಳಿ ರಸ್ತೆಯಾಗಿದ್ದು ಜಿಲ್ಲಾ ಮುಖ್ಯ ರಸ್ತೆಯ ದರ್ಜೆಗೆ ಮೇಲ್ದರ್ಜೆಗೇರಿಸಲು ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಈ ರಸ್ತೆಯನ್ನು ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳುವವರೆವಿಗೆ, ಲಭ್ಯವಿರುವ ಅನುದಾನದಲ್ಲಿ ನಿರ್ವಹಣೆ ಮಾಡಿ ಸುಸ್ಥಿತಿಯಲ್ಲಿಡುವಂತೆ ಮಂಗಳೂರು ಜಿಲ್ಲಾ ಪರಿಷತ್ತಿನವರಿಗೆ ಸೂಚಿಸಲಾಗುವುದು.

ಶ್ರೀ ಎ. ರುಕ್ಮಯ್ಯ ಪೂಜಾರಿ : ಅಧ್ಯಕ್ಷರೇ, ಈ ಮಾಣಿ - ಉಳ್ಳಾಲ ರಸ್ತೆ ಬಹಳ ಪ್ರಮುಖವಾದುದು. ಇದು ಕೇರಳ ಮತ್ತು ಕರ್ನಾಟಕ ಅಂತರರಾಜ್ಯ ರಸ್ತೆ ಮತ್ತು ಹಲವಾರು ಗ್ರಾಮಗಳನ್ನು ಇದು ಸೇರಿಸುತ್ತದೆ. ಅದು ಮಾತ್ರವಲ್ಲ, ಮಂಗಳೂರು-ಬೆಂಗಳೂರು ಹೈವೇ ಏನಿದೆ ಇದು ಈ ವರ್ಷ ಅತಿಯಾದ ಮಳೆಯಿಂದ, ನಡುವೆ ಏನು ಬ್ರಿಡ್ಜಸ್ ಇದೆ ಅದು ತುಂಬಾ ಹಾಳಾಗಿ ಎರಡು ಮೂರು ದಿನ ಬಂದ್ ಆಗಿತ್ತು. ನೆರೆ ಬಂದಾಗ ಕೂಡಾ ಇದು ಬದಲಿ ರಸ್ತೆ ಆಗಿತ್ತು. ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿಗೆ ಇದು ಬದಲಿ ರಸ್ತೆಯಾಗಿದೆ. ಇಷ್ಟು ಪ್ರಾಮುಖ್ಯವಾದ ರಸ್ತೆ ತುಂಬಾ ಮಳೆಯಿಂದ ದೊಡ್ಡ ದೊಡ್ಡ ಹೊಂಡ ಬಿದ್ದು ವಾಹನ ಸಂಚಾರ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದು ಜಿಲ್ಲಾ ಪರಿಷತ್ ರಸ್ತೆ. ಇದನ್ನು ಮೇಲ್ದರ್ಜೆಗೆ ಏರಿಸಿ, ಈ ವರ್ಷ ಜಿಲ್ಲಾ ಪರಿಷತ್ ಎಂಜಿನಿಯರಿಂಗ್ ವಿಭಾಗದವರು ಅದರ ರಿಪೇರಿಗಾಗಿ 35 ಲಕ್ಷ ರೂಪಾಯಿಗಳ ಅಂದಾಜು ತಯಾರಿಸಿದ್ದಾರೆ.

ಈ ರಸ್ತೆಯನ್ನು ಕೂಡಲೇ ಮೇಲ್ದರ್ಜೆಗೇರಿಸಿ ತಕ್ಷಣ ಇದರ ರಿಪೇರಿಗೆ 35 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ, ಕೂಡಲೇ ರಿಪೇರಿ ಮಾಡಬೇಕೆಂದು ತಮ್ಮ ಮೂಲಕ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜಿ.ಹೆಚ್. ಅಶ್ವಥ್ ರೆಡ್ಡಿ : ಅಧ್ಯಕ್ಷರೇ, ಜಿಲ್ಲಾ ಪರಿಷತ್‌ನವರು ಈ ಸಾಲಿನಲ್ಲಿ ಸುಮಾರು 47 ಸಾವಿರ ರೂಪಾಯಿಗಳನ್ನು ಈ ರಸ್ತೆ ರಿಪೇರಿ ಮಾಡುವುದಕ್ಕೋಸ್ಕರ ಇಟ್ಟಿದ್ದಾರೆ. ಇದು ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿರತಕ್ಕಂಥ ರಸ್ತೆ. ಇದನ್ನು ಪಿ.ಡಬ್ಲ್ಯು.ಡಿ. ಇಲಾಖೆಗೆ ಸೇರಿಸಿ ಹೆಚ್ಚಿನದಾಗಿ ವೆಚ್ಚ ಮಾಡಬೇಕೆಂದು ಹೇಳಿ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅದನ್ನು ಪರಿಶೀಲಿಸಿ ಮುಂದಿನ ಆಯವ್ಯಯದಲ್ಲಿ ಇದನ್ನು ಸೇರಿಸಿ, ಇದನ್ನು ತೆಗೆದುಕೊಳ್ಳಬೇಕೆಂದು ಸರಕಾರದ ನಿರ್ಧಾರ ಇದೆ. 92-93ರಲ್ಲಿ ಈ ಕೆಲಸ ಪೂರ್ಣ ಮಾಡಬೇಕೆಂದು ಸರಕಾರದ ಇಚ್ಛೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಈ ರಸ್ತೆಯನ್ನು ಆದಷ್ಟು ಬೇಗ ಮೇಲ್ದರ್ಜೆಗೇರಿಸಿ. ಈಗೇನು ರಿಪೇರಿಗೆ ಹಣ ಇಟ್ಟಿದ್ದಾರೆ ಅದು ಏನೇನೂ ಸಾಲದು. ಅದನ್ನು ಜಾಸ್ತಿ ಮಾಡಿ ರಿಪೇರಿ ಮಾಡಬೇಕು. ಕೂಡಲೇ 35 ಲಕ್ಷ ರೂಪಾಯಿಗಳನ್ನು ಮಂಜೂರಾತಿ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಜಿ.ಹೆಚ್. ಅಶ್ವಥ್ ರೆಡ್ಡಿ : ಪಿ.ಡಬ್ಲ್ಯು.ಡಿ ಯವರು ಇದಕ್ಕಾಗಿ 20 ಸಾವಿರ ರೂಪಾಯಿಗಳನ್ನು ಮೊದಲೇ ಖರ್ಚು ಮಾಡಿರುತ್ತಾರೆ. ಜಿಲ್ಲಾ ಪರಿಷತ್‌ನವರು 42 ಸಾವಿರ ರೂಪಾಯಿ ಇಟ್ಟಿದ್ದಾರೆ. ಅದು ಸಾಲದು ಎಂದು ನನಗೂ ಚೆನ್ನಾಗಿ ಗೊತ್ತು. ಈ ರಸ್ತೆಯನ್ನು ಮೇಲ್ದರ್ಜೆಗೇರಿಸಿ ಹೆಚ್ಚಿನ ಹಣ ಕೊಟ್ಟು ಮುಂದಿನ ವರ್ಷ ರಿಪೇರಿ ಕಾರ್ಯ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಹೇಮಾವತಿ ಯೋಜನೆ ಕಾಮಗಾರಿ ಕೆಲಸ

2210 - ಶ್ರೀ ಎಸ್. ಶಫಿಅಹ್ಮದ್ (ತುಮಕೂರು) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ಯೋಜನೆಯ ಮುಖ್ಯ ನಾಲೆಯ ಕಾಮಗಾರಿಗಳು ಯಾವ ದಿನಾಂಕದಂದು ಪೂರ್ಣಗೊಳ್ಳುತ್ತವೆ.

ಆ) ಈ ನಾಲೆಯ ಕೆಲಸಗಳಿಗಾಗಿ ಇದುವರೆಗೆ ವ್ಯಯ ಮಾಡಲಾದ ಹಣ ಎಷ್ಟು? (ವರ್ಷಾವಾರು ಕೆಲಸಗಳ ಪ್ರಗತಿಯನ್ನು ಕೊಡುವುದು)

ಇ) ಯಾವ ದಿನಾಂಕದಿಂದ ಇದನ್ನು ಪ್ರಾರಂಭಿಸಲಾಯಿತು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ಹೇಮಾವತಿ ಯೋಜನೆಯ ಮುಖ್ಯ ನಾಲೆಯ ಕಾಮಗಾರಿಗಳನ್ನು ಮಾರ್ಚ್ 1985ರ ವೇಳೆಗೆ ಪೂರ್ಣಗೊಳಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಆ) ಹೇಮಾವತಿ ಎಡದಂಡೆಯ ಕಾಮಗಾರಿಗಳು ಮತ್ತು ತುಮಕೂರು ನಾಲಾ ಕಾಮಗಾರಿಗಳು ಹಾಗೂ ನಾಗಮಂಗಲ ಶಾಖಾ ನಾಲೆಯ ಕಾಮಗಾರಿಗಳಿಗೆ ವ್ಯಯ ಮಾಡಿದ ಹಣದ ವಿವರಗಳು ಈ ಕೆಳಕಂಡಂತಿವೆ.

ವರ್ಷ	ವ್ಯಯ(ಲಕ್ಷ ರೂ.ಗಳಲ್ಲಿ)
1979-80	2,561.30
1980-81	665.57
1981-82	672.69

1982-83	1,240.01
1983-84	1,180.75
1984-85	2,188.12
1985-86	2,726.67
1986-87	2,258.61
1987-88	1,654.30
1988-89	1,784.74
1989-90	2,359.49
1990-91	2,460.95
1991-92(7-91 ರವರೆಗೆ)	741.38
ಒಟ್ಟು ರೂ.	**22,499.58**

ಇ) ತುಮಕೂರು ಉಪನಾಲೆಯ ಕಾಮಗಾರಿಗಳನ್ನು ೧೯೮೫ನೇ ಡಿಸೆಂಬರ್‌ನಲ್ಲಿ ಪ್ರಾರಂಭಿಸಲಾಯಿತು.

ಶ್ರೀ ಎಸ್. ಶಫಿ ಅಹ್ಮದ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರದಲ್ಲಿ ಪ್ರತಿ ವರ್ಷ ಬಿಡುಗಡೆ ಮಾಡಿದ ಹಣ ಕೊಟ್ಟಿದ್ದಾರೆ. ಆದರೆ ಕಳೆದ ವರ್ಷ ಸಾಕಷ್ಟು ಹಣ ಬಿಡುಗಡೆ ಆಗಲಿಲ್ಲ. ಆದ್ದರಿಂದ ಕೆಲಸ ಕುಂಠಿತವಾಗಿದೆ. ಆದ್ದರಿಂದ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈವತ್ತು ಹೇಮಾವತಿ ಯೋಜನೆಯ ಮೈನ್ ಕೆನಾಲ್‌ನಲ್ಲಿ ಈ ಡೀಫ್ ಕಟು ಮತ್ತು ಅದರ ಡಿಸ್ಟ್ರಿಬ್ಯೂಟರೀಸ್ ಯಾವಾಗ ಶುರು ಮಾಡುತ್ತೀರಿ ಎಂದು ಕೇಳುತ್ತೇನೆ. ಮತ್ತು ಹಾಸನ ಜಿಲ್ಲಾಧಿಕಾರಿಗಳು ಮತ್ತು ತುಮಕೂರು ಜಿಲ್ಲಾಧಿಕಾರಿಗಳ ವ್ಯಾಪ್ತಿಯಲ್ಲಿ ಬರುವ ಲ್ಯಾಂಡ್ ಕಾಂಪನ್‌ಸೇಷನ್ಸ್ ಕೇಸಸ್ ಪೆಂಡಿಂಗ್ ಇದೆ ಅದನ್ನು ಯಾವಾಗ ಮುಗಿಸುತ್ತೀರಿ? ಎಂದು ಕೇಳುತ್ತಿದ್ದೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ ನಾನು ಅಲ್ಲಿನ ಯೋಜನಾ ಕ್ಷೇತ್ರದಲ್ಲಿ ಟೂರ್ ಮಾಡಿ ಬಂದಿದ್ದೇನೆ. ಬಾಗೂರು ನವಿಲೇ ಕೆನಾಲ್ ಕೆಲಸ ಪೂರ್ತಿ ಮುಗಿದಿದೆ. ಅದರ ಮುಂಭಾಗದಲ್ಲಿ ಸ್ವಲ್ಪ ತೊಂದರೆ ಇದೆ. ಲ್ಯಾಂಡ್ ಅಕ್ವಿಸಿಷನ್‌ಗೆ ಸಂಬಂಧಪಟ್ಟ ಹಾಗೆ ಈ ವರ್ಷ ಸುಮಾರು 65 ಕೋಟಿ ರೂಪಾಯಿಗಳನ್ನು ಒದಗಿಸಿ ಕೆಲಸಮಾಡಲು ನಿಗಧಿ ಮಾಡಿದ್ದೇವೆ. ಎಲ್ಲೆಲ್ಲಿ ಲ್ಯಾಂಡ್ ಅಕ್ವಿಸಿಷನ್ ಪ್ರಾಬ್ಲಮ್ ಇದೆ ಅವುಗಳನ್ನು ಬೇಗನೆ ಮುಗಿಸಬೇಕೆಂದು ನಾನು ವಿಶೇಷ ಸೂಚನೆಯನ್ನು ಕೂಡ ಹಾಸನ ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇನೆ. ಮತ್ತು ಅಲ್ಲಿ ಏನಾದರೂ ಮತ್ತೆ ತೊಂದರೆ ಬಂದರೆ ಮಾನ್ಯ ಶಾಸಕರು ಮತ್ತು ನಾವು ಹೋಗಿ ಬಗೆಹರಿಸಬಹುದು ಈ ದೃಷ್ಟಿಯಿಂದ ಸ್ವಲ್ಪ ದಿವಸ ಸಮಯ ಕೊಟ್ಟರೆ ಒಳ್ಳೆಯದು.

ಶ್ರೀ ಕೆ. ಲಕ್ಕಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಮೊನ್ನೆ ಅಸೆಂಬ್ಲಿಯಲ್ಲಿ ನೀರಾವರಿ ಬೇಡಿಕೆಗಳ ಬಗ್ಗೆ ಮಾತನಾಡುತ್ತಾ ಕೊಟ್ಟಿದ್ದರು. ಅದೇನೆಂದರೆ ಈ ಶತಮಾನದ ಅಂತ್ಯದಲ್ಲಿ ಹೇಮಾವತಿ ಯೋಜನೆ ಕಾರ್ಯಗತವಾಗುತ್ತದೆಂದು ಈ ಶತಮಾನ ಆಗಬೇಕಾದರೆ ಇನ್ನೂ 9 ವರ್ಷಗಳು ಬೇಕಾಗುತ್ತದೆ. ಆದರೆ ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಹೋಗಿ ಗುದ್ದಲಪೂಜೆ

ಮಾಡಿದ್ದಾರೆ. ಆ ಗುದ್ದಲಿ ಪೂಜೆ ಏತಕ್ಕೆ ಮಾಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ, ಅಲ್ಲಿಗೆ ಇನ್ನೂ ಕಾಲುವೆ ಬರಬೇಕಾದರೆ ಎಷ್ಟು ವರ್ಷವಾಗುತ್ತದೆ, ಎಷ್ಟು ಖರ್ಚಾಗುತ್ತದೆ, ಎಷ್ಟು ದಿವಸದಲ್ಲಿ ಮುಗಿಯುತ್ತದೆ. ಈಗ ಅಲ್ಲಿ ಹಾಕಿರತಕ್ಕಂಥ ಹಣ ಎಷ್ಟು ಅಲ್ಲಿ ಕಾಲುವೆ ಕೆಲಸ ನಿಂತು ಹೋಗಿದೆ. ತಾವು ಕೊಟ್ಟ ಹಣವೆಲ್ಲಾ ಸಿಬ್ಬಂದಿ ವೆಚ್ಚಕ್ಕೆ ಖರ್ಚು ಮಾಡುತ್ತಿದ್ದಾರೆ. ಆದ್ದರಿಂದ ಇನ್ನು ಎಷ್ಟು ವರ್ಷಗಳಲ್ಲಿ ತುಮಕೂರು ನಗರಕ್ಕೆ ನೀರು ಬರುತ್ತದೆ ಎನ್ನುವ ಬಗ್ಗೆ ಖಚಿತವಾದ ಅಭಿಪ್ರಾಯ ತಮ್ಮ ಹತ್ತಿರ ಇದೆಯೇ? ಅಂಕಿಅಂಶಗಳೇನಾದರೂ ಇದಯೇ? ಅದಕ್ಕೆ ಸಾಕಷ್ಟು ಹಣವನ್ನು ಒದಗಿಸಿದ್ದೀರಾ ನೀವು? ಇಲ್ಲದೆ ಹೋದರೆ ಈ ಒಂದು ಗುದ್ದಲಿ ಪೂಜೆಯನ್ನು ಮಾಡಿ ಇನ್ನು ಇದು ಶತಮಾನದವರೆಗೆ ಕೂಡ ಮುಂದುವರಿದರೆ ಗುದ್ದಲಿ ಪೂಜೆ ಮಾಡಿದವರಿಗೆ ಮರ್ಯಾದೆ ಇರುವುದಿಲ್ಲ. ಇಂತಹ ಒಂದು ಪರಿಸ್ಥಿತಿಯನ್ನು ನೀವು ನಿರ್ಮಾಣ ಮಾಡದೆ ಈಗ ಎಷ್ಟು ಹಣ ಹಾಕಿ ಅದನ್ನು ಎಷ್ಟು ದಿವಸಗಳಲ್ಲಿ ನೀವು ಪೂರ್ಣಗೊಳಿಸುತ್ತೀರಾ ಎನ್ನತಕ್ಕಂಥಾದ್ದನ್ನು ಈ ಸಭೆಗೆ ತಿಳಿಸುತ್ತೀರಾ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷಲೇ, ಮಾನ್ಯ ಹಿರಿಯ ಸದಸ್ಯರು ಹೇಳಿದ ಪ್ರಕಾರ ಸುಮಾರು ಇಲ್ಲಿಯವರೆಗೆ 490 ಕೋಟಿ ರೂಪಾಯಿಗಳನ್ನು ಈ ಒಂದು ಯೋಜನೆಗೆ ಖರ್ಚು ಮಾಡಿದ್ದೇವೆ. ಇನ್ನು 650 ಕೋಟಿ ರೂಪಾಯಿಗಳನ್ನು ಈ ಯೋಜನೆಗೆ ಖರ್ಚು ಮಾಡಬೇಕಾಗುತ್ತದೆ.

ಶ್ರೀ ಕೆ. ಲಕ್ಕಪ್ಪ : ಈಗ ಎಷ್ಟು ಹಣ ಹಾಕಿದ್ದೀರಿ ಅದನ್ನು ಹೇಳಬೇಕು, ಹಳೆಯದು ಬೇಡ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಈಗ 65 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಅಲ್ಲಿ ಕೆಲಸ ನಡೆಯುತ್ತಿದೆ. ಮಾನ್ಯ ಹಿರಿಯ ಸದಸ್ಯರಾದ ಶ್ರೀ ಲಕ್ಕಪ್ಪನವರು ನನ್ನ ಜೊತೆ ಬಂದರೆ ನಾನು ಅವರ ಜೊತೆಗೆ ಬರುತ್ತೇನೆ. ಅಲ್ಲಿ ಏನು ಕೆಲಸ ನಡೆಯುತ್ತಿದೆ ಎನ್ನುವುದನ್ನು ತೋರಿಸುತ್ತೇನೆ, ಮತ್ತೇ ಅಲ್ಲಿ ಏನಾದರೂ ಅವಶ್ಯಕತೆ ಕಂಡಲ್ಲಿ ನಾನು ಇನ್ನೂ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಲಕ್ಕಪ್ಪ : ಅಲ್ಲಿ 65 ಕೋಟಿ ರೂಪಾಯಿಗಳನ್ನು ಹಾಕಿದ್ದರೂ ಕೆಲಸ ನಡೆಯುತ್ತಿಲ್ಲ, ಏತಕ್ಕೆಂದರೆ ಅಲ್ಲಿ ಅಕ್ವಿಸಿಷನ್ ಪ್ರೊಸಿಡಿಂಗ್ಸ್ ಏನು ಇದೆ ಅದು ಡಿಲೇ ಆಗಿ ಕೆಲಸ ನಿಂತು ಹೋಗಿದೆ. ಆ ಕೆಲಸ ನಿಂತು ಹೋದ ಮೇಲೆ ಈ ಹಣ ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಅಧಿಕಾರಿಗಳು ಹೇಳುತ್ತಿದ್ದಾರೆ ನಮಗೆ ಹಣ ಸಾಕಾಗುವುದಿಲ್ಲ ಮತ್ತು ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಮುಗಿಸುವುದಕ್ಕಾಗುವುದಿಲ್ಲ ವೆಂದು ಆದ್ದರಿಂದ ಈ ಬಗ್ಗೆ ಏನಾದರೂ ಚರ್ಚೆ ನಡೆಸಿ ಅಧಿಕಾರಿಗಳ ಮಟ್ಟದಲ್ಲಾಗಲೀ ಅಥವಾ ಇಂಜನೀಯರ್ಸ್‌ಗಳ ಮಟ್ಟದಲ್ಲಿಯಾಗಲೀ, ಇದನ್ನು ಸುಧಾರಣೆ ಮಾಡಿ ಬೇಗ ಕೆಲಸ ಮಾಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ?

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಸರ್ವೇ ಸಾಮಾನ್ಯವಾಗಿ ತುಮಕೂರು ಎಡದಂಡೆ ಕೆನಾಲ್ ಏರಿಯಾದಲ್ಲಿ ತೊಂದರೆ ಇದೆ. ಉಳಿದ ಕಡೆ ಕೆಲಸ ಮಾಡಲು ಕ್ರಮ ತೆಗೆದುಕೊಂಡಿದ್ದೇವೆ. ಅವರನ್ನು ನಾನು ಒಂದು ಮಾತು ಕೇಳುತ್ತೇನೆ. ಅಲ್ಲಿನ ಸದಸ್ಯರು ಗುದ್ದಲಿ ಪೂಜೆಗೆ ಒತ್ತಾಯ ಮಾಡಿದಾರೆ ಅದಕೆ ಮಾಡಿರಬಹುದು. ನಾನು ಶಾಸಕನಾಗಿದ್ದಾಗ ಬರಬೇಕೆಂದು

ಒತ್ತಾಯ ಮಾಡಿದರೆ ಬರಲೇಬೇಕಾಗುತ್ತದೆ. ಆ ದೃಷ್ಟಿಯಿಂದ ಮಾಡಿದ್ದಾರೆ. ಕೆಲಸ ಪೂರ್ಣ ಮಾಡಲಿಕ್ಕೆ....

ಶ್ರೀ ಕೆ. ಲಕ್ಕಪ್ಪ : ನೀವು ಗುದ್ದಲಿ ಪೂಜೆ ಮಾಡಿ ಹಣ ಕೊಡದೆ ಕೆಲಸ ಆಗದಿದ್ದರೆ ಅಭಾಸವಾಗುತ್ತದೆ. ಈ ರೀತಿ ಏನಾದರೂ ಮಾಡಿದರೆ ಅಲ್ಲಿನ ಜನಗಳು ಏನು ತಿಳಿದುಕೊಳ್ಳುತ್ತಾರೆ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಆ ಕೆಲಸವನ್ನು 1995ನೇ ಇಸವಿಯೊಳಗೆ ಪೂರ್ಣ ಮಾಡಲಿಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಹಣಕಾಸಿನ ತೊಂದರೆ ಆಗಲಿ, ಅಥವಾ ಬೇರೆ ಏನಾದರೂ ತೊಂದರೆ ಇದ್ದರೆ ಅದನ್ನು ನನ್ನ ಗಮನಕ್ಕೆ ಅದನ್ನು ತಂದರೆ ನಾನು ಅಲ್ಲಿನ ಎಲ್ಲಾ ಶಾಸಕರ ಸಭೆ ಕರೆದು ಚರ್ಚೆ ಮಾಡುತ್ತೇನೆ. ತಾವು ಸಲಹೆ ಕೊಡಿ. ಎಲ್ಲಿ ತೊಂದರೆ ಇದೆ ಅಲ್ಲಿಗೆ ನಾನೂ ಸಹ ನಿಮ್ಮ ಜೊತೆಯಲ್ಲಿ ಬರುತ್ತೇನೆ. ಆ ತೊಂದರೆಯನ್ನು ಬಗೆಹರಿಸಿ ಕೆಲಸ ಮಾಡಲು ಪ್ರಯತ್ನ ಮಾಡುತ್ತೇನೆ. ಆ ಕೆಲಸವನ್ನು ಮಾಡಲು ಸರ್ಕಾರ ಕೂಡ ಪ್ರಾಮಾಣಿಕ ಪ್ರಯತ್ನ ಮಾಡುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಈಗ ಅಲ್ಲಿ ಕೆಲಸ ಏನು ನಡೆಯುತ್ತಿದೆ ಎನ್ನುವುದು ತಮಗೆಲ್ಲರಿಗೂ ಗೊತ್ತಿದೆ. ನಾಲೆಯ ಕೆಲಸಕ್ಕೆ ಅಲ್ಲಿಂದ ಮುಂದಕ್ಕೆ ಎಷ್ಟು ದುಡ್ಡು ಬೇಕು ಲ್ಯಾಂಡ್ ಅಕ್ವಿಸಿಷನ್ ಅವಶ್ಯಕತೆ ಇದೆ ಅದನ್ನು ಆಲೋಚನೆ ಮಾಡದೆ ಇದ್ದರೆ ಹೇಗೆ? ಇದಕ್ಕೆ ಏನಾದರೊಂದು ಕಾಲಮಿತಿಯನ್ನು ಸರ್ಕಾರ ಗೊತ್ತು ಮಾಡಿದೆಯೇ?

ಎರಡನೆಯದು, ಈ ತುಮಕೂರು ಪಕ್ಕದಲ್ಲಿ ಕುಡಿಯುವ ನೀರಿಗೆ ಕೊಡುವಷ್ಟು ದೂರು. ಕಾಲುವೇದು ಇರಲಿ, ಈ ಸುರಂಗ ಮಾರ್ಗ ಆದ ತಕ್ಷಣವೇ ಒಂದು ದೊಡ್ಡ ಕೆಲಸ ಉಳಿದಿದೆ. ಅದಕ್ಕೆ ಈಗ ಸಾಕಾದಷ್ಟು ಹಣ ಒದಗಿಸಿ ಕಾರ್ಯಕ್ರಮ ತೆಗೆದುಕೊಂಡು ಹೆಚ್ಚು ತ್ವರಿತಗತಿಯಲ್ಲಿ ಆ ಕೆಲಸ ನಡೆಯುವುದಕ್ಕೆ ಏನು ಕಾರ್ಯಕ್ರಮ ಕೈಗೊಂಡಿದ್ದೀರಿ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಸುರಂಗ ಮಾರ್ಗ ಮುಗಿದ ಮೇಲೆ ಕಟ್ ಅಂಡ್ ಕವರ್ ಅನ್ನತಕ್ಕಂಥ ಏನು ಕಾರ್ಯಕ್ರಮ ಮಾಡಬೇಕಾಗಿದೆ ಆ ಬಗ್ಗೆ ಆ ಸ್ಥಳಕ್ಕೆ ನಾನು ಖುದ್ದಾಗಿ ಭೇಟಿ ಕೊಟ್ಟಿದ್ದೇನೆ. ಆ ಕಟ್ ಅಂಡ್ ಕವರನ್ನು ಏನು ಸುಮಾರು 5 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೇವೆ, ಅದರಲ್ಲಿ ಪರಿವರ್ತನೆ ಮಾಡತಕ್ಕ ಆದೇಶ ಕೂಡ ಕೊಟ್ಟಿದ್ದೇವೆ. ಇಷ್ಟೊಂದು ದೊಡ್ಡ ಮೊತ್ತದ ಹಣವನ್ನು ಖರ್ಚು ಮಾಡಿ ಕಟ್ ಅಂಡ್ ಕವರ್ ಮಾಡುವ ಅವಶ್ಯಕತೆ ಇಲ್ಲ. ಆ ಕೆರೆಗೆ ಏನು ನೀರು ಬಿಡಬೇಕಾಗಿದೆ, ಆ ಕೆರೆಗೆ ನೀರು ಬಿಡತಕ್ಕಂಥ ಒಂದು ಅಕ್ವಡಕ್ಟ್ ಅನ್ನು ತಯಾರು ಮಾಡಲಿಕ್ಕೆ ಒಂದು ಪ್ಲಾನ್ ಎಸ್ಟಿಮೇಟ್ ಮಾಡಿ ಒಂದು ಸ್ವಲ್ಪ ಉಳಿತಾಯ ಮಾಡಬೇಕೆಂದು ಆದೇಶ ಕೊಟ್ಟಿದ್ದೇನೆ. ಅಲ್ಲಿ ಏನು ತೊಂದರೆ ಬಂದಿದೆ? ಆ ತೊಂದರೆ ನಿವಾರಣೆ ಮಾಡುವ ಸಲುವಾಗಿ ಸಕಲ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸಂಬಂಧಪಟ್ಟ ಡಿ.ಸಿ.ಯವರಿಗೆ ಸಂಬಂಧಪಟ್ಟಂಥ ಚೀಫ್ ಇಂಜಿನೀಯರ್‌ರವರಿಗೆ ಸಂಬಂಧಪಟ್ಟಂಥ ಇಂಜಿನೀಯರಿಂಗ್ ಚೀಫ್ ಅವರ ಜೊತೆಯಲ್ಲಿ ಹೋಗಿ ಆ ಕಾರ್ಯಕ್ರಮವನ್ನು ನಾವು ತೆಗೆದುಕೊಂಡಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ : ನನ್ನ ಎರಡನೇ ಪ್ರಶ್ನೆಗೆ ಉತ್ತರ ಬರಲಿಲ್ಲ. ಏನೆಂದರೆ, ಇವತ್ತು ತುಮಕೂರಿನ ಸಮೀಪದಲ್ಲಿ ಎಲ್ಲಿ ನಾಲೆ ನಿಂತಿದೆಯೋ, ಅದರ ಕಾರ್ಯಕ್ರಮ ಆಯಿತು, ಅವರು ಹೇಳಿದ ಉತ್ತರ. ಸುರಂಗ ಮಾರ್ಗ ಕಳೆದ ಕೂಡಲೇ ಒಂದು ದೊಡ್ಡ ಅಡಚಣೆ ಬಂದಿದೆ. ಅದು ಬಹಳ ಹೆಚ್ಚು ಖರ್ಚಾಗತಕ್ಕಂಥ ಕೆಲಸ. ಅದಕ್ಕೆ ಎಷ್ಟು ಹಣ ಒದಗಿಸಿದ್ದೀರಿ? ಆ ಕೆಲಸವನ್ನು ಎಷ್ಟು ದಿವಸದಲ್ಲಿ ಮುಗಿಸಬೇಕೆಂದು ತೀರ್ಮಾನ ಮಾಡಿಕೊಂಡಿದ್ದೀರಿ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಅದರ ಬಗ್ಗೆ ವಿವರವಾದ ವರದಿ ನನ್ನ ಕಡೆ ಇಲ್ಲ. ನಂತರ ಅವರಿಗೆ ಒದಗಿಸಿಕೊಡುತ್ತೇನೆ.

ಶ್ರೀ ಎಸ್. ರುದ್ರಪ್ಪ : ಹೇಮಾವತಿ ನೀರು ತರುವ ಬಗ್ಗೆ ಕೆಲಸ ಏನಾಗಿದೆಯೆಂದು ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ : ಈ ಸಂಪೂರ್ಣವಾದಂಥ ಯೋಜನೆಯನ್ನು 95ನೇ ಇಸವಿಗೆ ಮುಗಿಸಬೇಕೆಂದು ಹೇಳುತ್ತಿದ್ದೇವೆ. ಇನ್ನೂ 4 ವರ್ಷ ಬೇಕು. ಆ ದೃಷ್ಟಿಯಿಂದ ಎಲ್ಲಾ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಆ ಡೀಪ್ ಕಟ್ ಅಂಡ್ ಕವರ್ ಬಗ್ಗೆ ನಾನು ಸ್ಥಳಾ ಎಲ್ಲಾ ನೋಡಿದ್ದೇನೆ. ಅದು ಖರ್ಚು ಮಾಡತಕ್ಕಂಥ ಪರಿಸ್ಥಿತಿ ಏನಿದೆ ಅದನ್ನು ಸ್ವಲ್ಪ ವಿಮರ್ಶೆ ಮಾಡಬೇಕಾಗುತ್ತದೆ. ಯಾರೋ ಹಿಂದೆ ಮಾಡಿರಬಹುದು. ಆ ದೃಷ್ಟಿಯಿಂದ ನಾನು ಪರಿಶೀಲನೆ ಮಾಡುತ್ತೇನೆ. ಆದಷ್ಟು ಶೀಘ್ರ ಆ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಈ ಪ್ರಾಜೆಕ್ಟ್ ನಾನ್ ಪ್ಲಾನ್ ಸ್ಕೀಮ್‌ನಲ್ಲಿ ಇಂಪ್ಲಿಮೆಂಟ್ ಮಾಡುತ್ತಿದ್ದಾರೆ. ಆದ್ದರಿಂದ, ಪೂರ್ಣ ಪ್ರಮಾಣದ ಹಣವನ್ನು ರಾಜ್ಯ ಸರ್ಕಾರವೇ ಖರ್ಚು ಮಾಡಬೇಕು. ಈಗ ನಮ್ಮ ಕಾವೇರಿ ಜಲ ವಿವಾದದ ಪ್ರಶ್ನೆ ವ್ಯಾಪ್ತಿಯಲ್ಲಿ ಬರುವುದರಿಂದ ಈ ಕಾರ್ಯ ಬೇಗ ಮುಗಿಸಬೇಕೆಂಬುದೇ ನಾವು ಹಮ್ಮಿಕೊಂಡಿರತಕ್ಕಂಥ ಸ್ಟ್ರಾಟಜಿ. ಈ ತಾವು ಏನು ಹೇಳುತ್ತಿದ್ದೀರಿ? ತುಮಕೂರಿಗೆ ಕುಡಿಯುವ ನೀರು ಕೊಡತಕ್ಕಂಥ ಪ್ರಶ್ನೆ. ಹೌದು. ಮಾನ್ಯ ಹಿರಿಯ ಸದಸ್ಯರು ಹೇಳುತ್ತಾರೆ. ನಮಗೆ ಗೊತ್ತಿಲ್ಲದೆ ಈ ಕಾರ್ಯಕ್ರಮ ನಡೆದಿದೆಯೆಂದು. ಸ್ಥಳೀಯ ಶಾಸಕರಿಗೆ ಗೊತ್ತಿಲ್ಲದೆ ಈ ಕಾರ್ಯಕ್ರಮ ನಡೆದಿರತಕ್ಕಂಥಾದ್ದು ಒಂದು ಭಾಗ. ಆ ರಾಜಕಾರಣಕ್ಕೆ ನಾನು ಹೋಗುವುದಿಲ್ಲ. ಆದರೆ, ಕುಡಿಯುವ ನೀರು ಕೊಡತಕ್ಕಂಥ ಈ ಕಾರ್ಯಕ್ರಮ ಏನಿದ್ದೆ, ಇದರ ಅವಶ್ಯಕತೆಯನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಿ, ಪ್ಲಾನಿಂಗ್ ಕ್ಲಿಯರೆನ್ಸ್‌ಗೆ ಏನಾದರೂ ನಿಮ್ಮ ಪ್ರಯತ್ನ ನಡೆದಿದೆಯೋ? ಎರಡನೆಯದು, ಬಾಗೂರು ನವಿಲೆ ಟನಲ್ ತಾವು ಹೇಳುತ್ತೀರಿ ತ್ರೂ ಆಗಿದೆಯೆಂದು. ನಮ್ಮ ವರದಿ ಇದೆ. ನಮ್ಮ ಆಲೋಚನೆಗೆ 10 ಪಟ್ಟು ಅದಕ್ಕೆ ಹಣ ಖರ್ಚಾಗಿದೆಯೆಂದು. ಅದಕ್ಕಿಂಥ ಮುಂದಿನ ಕೆಲಸ ಎಷ್ಟು ಆಗಬೇಕಾಗಿತ್ತೋ ಆ ಕೆಲಸ ಆಗಿಲ್ಲ ಅನ್ನುವುದು. ಆ ಕೆಲಸ ಆಗುವುದಕ್ಕೆ ವಿಶೇಷವಾದಂಥ ಕಾರ್ಯಕ್ರಮ ಏನು ಹಾಕಿಕೊಂಡಿದ್ದೀರಿ.

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಹೇಳಿದ ಪ್ರಕಾರ ಸ್ವಲ್ಪ ಮಟ್ಟಿಗೆ ಹೆಚ್ಚಿನ ಹಣ ಖರ್ಚಾಗಬಹುದು. ಆದರೆ, ಸುರಂಗ ಮಾರ್ಗದ ಕೆಲಸ ಸಂಪೂರ್ಣವಾಗಿದೆ. ಅದರ ಮುಂಭಾಗದಲ್ಲಿರತಕ್ಕಂಥ ಸ್ಥಳಕ್ಕೆ ನಾನು ಭೇಟಿ ಕೊಟ್ಟಿದ್ದೇನೆ. ಲ್ಯಾಂಡ್ ಅಕ್ವಿಸಿಷನ್ ಆದಾಗ ತೆಂಗಿನ ಮರಗಳು ಇರತಕ್ಕಂಥ ಮಾಲೀಕರಿಗೆ ಹೆಚ್ಚಿನ ಹಣಕಾಸಿನ ಸಹಾಯ ಕೊಡಬೇಕೆನ್ನುವ

ಒತ್ತಾಯ ನಮ್ಮ ಮೇಲೆ ಬರುತ್ತಿದೆ. ಆ ದೃಷ್ಟಿಯಿಂದ ಅಲ್ಲಿರತಕ್ಕಂಥ ಯಾರೂ ಡಿ.ಸಿ.ಯವರು ಇದ್ದಾರೆ ಅವರು ನನ್ನ ಜೊತೆಗೆ ಬಂದಿದ್ದರೆ, ಅವರಿಗೆ ಕೂಡ ಹೇಳಿ, ಇದನ್ನು ಪರಿಹರಿಸಿ ಮುಂದಿನ ಕೆಲಸಕ್ಕೆ ಬೇಕಾಗುವ ಎಲ್ಲಾ ಧನ ಸಹಾಯ ಬೇಕಾಗಿದೆ ಅದನ್ನೆಲ್ಲಾ ಮಾಡುತ್ತೇವೆಂದು ಹೇಳಿದ್ದೇನೆ. ತಾವು ಏನು ಒಂದು ಸೂಚನೆ ಕೊಟ್ಟಿದ್ದೀರಿ, ಕುಡಿಯುವ ನೀರಿನ ಬಗ್ಗೆ, ಆ ಸೂಚನೆಯನ್ನು ನಾನು ಗಮನದಲ್ಲಿಟ್ಟುಕೊಂಡು ಆ ದೃಷ್ಟಿಯಿಂದ ಏನಾದರೂ ಕೇಂದ್ರ ಸರ್ಕಾರದಿಂದ ಹಣಕಾಸಿನ ವ್ಯವಸ್ಥೆ ಪಡೆಯುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸನ್ಮಾನ್ಯ ಸಚಿವರು ಪ್ರಶ್ನೆಗೆ ಈ ಉತ್ತರ ಕೊಡುತ್ತಾ ಹೇಮಾವತಿ ಯೋಜನೆ ಮುಖ್ಯ ನಾಲೆಯ ಕಾಮಗಾರಿಗಳು ಯಾವ ದಿನಾಂಕದಂದು ಪೂರ್ಣಗೊಳ್ಳುತ್ತವೆ ಎಂಬ ಪ್ರಶ್ನೆಗೆ ಹೇಮಾವತಿ ಮುಖ್ಯ ನಾಲೆಗಳ ಕಾಮಗಾರಿಗಳನ್ನು ಮಾರ್ಚ್ 1985ರೊಳಗೆ ಪೂರ್ಣಗೊಳಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆಯೆಂದು ಹೇಳಿದ್ದಾರೆ. 1985 ಎಂದರೆ ಅರ್ಥವಾಗುತ್ತಿಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಅಧ್ಯಕ್ಷರೆ, ನಾನು ಹೇಳಿದ್ದೇನೆ 95ಕ್ಕೆ ಮುಗಿಸುತ್ತೇವೆಂದು. ಮಾನ್ಯ ವಿರೋಧಿ ಪಕ್ಷದ ನಾಯಕರು ತಪ್ಪು ಹುಡುಕುವುದಕ್ಕೆ ಪ್ರಯತ್ನ ಮಾಡಿದ್ದಕ್ಕೆ ನನ್ನ ಧನ್ಯವಾದಗಳು.

ಶೇಕಡಾವಾರು ಹಣ ವಸೂಲಾತಿ

2260-ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) *ನೀರಾವರಿ ಇಲಾಖೆಯಲ್ಲಿ ವರ್ಷದಿಂದ ವರ್ಷಕ್ಕೆ ಕೆಲಸಗಳ ಗುತ್ತಿಗೆದಾರರಿಂದ ಶೇಕಡಾವಾರು ಹಣ ವಸೂಲಿ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ಹಾವಳಿಯಿಂದ ನೀರಾವರಿ ಕಾಮಗಾರಿ ಕೆಲಸಗಳ ಗುಣಮಟ್ಟ ತೀರಾ ಕುಸಿಯುತ್ತಿರುವುದು ನಿಜವೆ?*

ಇ) *ಇಂತಹ ಕಳಪೆ ಕೆಲಸಗಳ ವಿವರಗಳೇನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೆ?*

ಈ) *ಬಂದಿದ್ದರೆ ಅದರ ಹೊಣೆಗಾರಿಕೆಯನ್ನು ಯಾರ ಮೇಲೆ ನಿಗದಿಪಡಿಸಲಾಗಿರುತ್ತದೆ?*

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) *ಇಂತಹ ಪ್ರಕರಣಗಳು ಕಂಡು ಬಂದಿಲ್ಲ.*

ಆ) *ಉದ್ಭವಿಸುವುದಿಲ್ಲ.*

ಇ) *ಇಂತಹ ವಿವರಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.*

ಈ) *ಉದ್ಭವಿಸುವುದಿಲ್ಲ.*

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ನೀರಾವರಿ ಇಲಾಖೆಯಲ್ಲಿ ವರ್ಷದಿಂದ ವರ್ಷಕ್ಕೆ ಕೆಲಸಗಳ ಗುತ್ತಿಗೆದಾರರಿಂದ ಶೇಕಡಾವಾರು ಹಣ ವಸೂಲಿ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದೇನೆ. ಇದು ಬಹಳ ಗಂಭೀರವಾದ ಸಮಸ್ಯೆ; ಗಹನವಾದ ವಿಚಾರ. ಇವತ್ತು ಸಮಾಜವನ್ನು ಕಿತ್ತು ತಿನ್ನತಕ್ಕ ವಿಚಾರ ಎನ್ನತಕ್ಕ ಭಾವನೆಯಿಂದ ನಾನು ಕೇಳಿದ ಪ್ರಶ್ನೆಗೆ ಅವರು

ಸಾಮಾನ್ಯ ಜನರಿಂದ ಹಿಡಿದು ಅಂದರೆ ಹೊಲ ಉಳತಕ್ಕ ಜನರಿಂದ ಹಿಡಿದು ಈಗ ಶಾಲೆಗೆ ಹೋಗಲು ಪ್ರಾರಂಭ ಮಾಡಿರುವ ಮಗುವಿಗೂ ಕೂಡ ಗೊತ್ತಿದೆ. ಪರ್ಸೆಂಟೇಜ್ ವಸೂಲಿ ಈ ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ನೀರಾವರಿ ಇಲಾಖೆಯಲ್ಲಿ ಹೆಚ್ಚುತ್ತಿದೆ ಹಾಗೂ ಕೆಲಸಕಾರ್ಯಗಳ ಗುಣಮಟ್ಟ ಬಹಳ ಕಳಪೆಯಾಗುತ್ತಿದೆ ಎಂದು. ಏತಕ್ಕೆ ಈ ಸಮಸ್ಯೆ ನಾನು ಎತ್ತಿದೆ ಅಂದರೆ ಯಾವುದೇ ಯೋಜನೆಯ ಫಲ ಸಾಮಾನ್ಯ ಜನರಿಗೆ ತಲುಪುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ ಈ ಪರ್ಸೆಂಟೇಜ್ ವಸೂಲಿ ಹೆಚ್ಚಾಗಿರುವುದು. ಮಿನಿಸ್ಟರಿಗೆ ಕೂಡ ನಾವು ಕೆಲವು ಪರ್ಸೆಂಟ್ ಕೊಡಬೇಕಾಗಿದೆ, ಅದಕ್ಕಾಗಿ ಪರ್ಸೆಂಟೇಜ್ ವಸೂಲು ಮಾಡುತ್ತಿದ್ದೇವೆ ಎಂದು ಕೆಲವರು ಹೇಳುತ್ತಾರೆ. ಇದೇನಾದರೂ ಮಿನಿಸ್ಟರ್‌ಗೂ ಕೂಡ ತಲುಪುತ್ತಿದೆಯೋ ಎಂದು ನಾನು ನೇರವಾದ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ನಾವೆಲ್ಲಾ ಈವತ್ತು ಆತ್ಮಶೋಧನೆಯನ್ನು ಮಾಡಿಕೊಂಡು ಕೆಲಸ ಮಾಡಬೇಕಾಗಿದೆ. ಇಲ್ಲ ಎಂದರೆ ಯಾವುದೇ ಯೋಜನೆಯ ಫಲ ಸಾಮಾನ್ಯ ಜನರಿಗೆ ಮುಟ್ಟದ ಹಾಗೆ ನಾವೇ ಮಾಡಿದ ಹಾಗೆ ಆಗುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಮುಖ್ಯ ಅಭಿಯಂತರರುಗಳು ಕೂಡ ಪರ್ಸೆಂಟೇಜ್ ಕೊಟ್ಟು ಎಲ್ ಓ ಸಿ ತೆಗೆದುಕೊಂಡು ಹೋಗುತ್ತಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯಾ? ಮತ್ತೆ ಇರಿಗೇಷನ್ ಸೌತ್, ಅಲ್ಲಿನ ಮುಖ್ಯ ಅಭಿಯಂತರವರನ್ನು ರಜೆಯ ಮೇಲೆ ಕಳಿಸಿದ್ದಾರೆ. ಏತಕ್ಕಾಗಿ ಕಳಿಸಿದ್ದಾರೆ ಎನ್ನತಕ್ಕ ವಿಚಾರವನ್ನು ಅವರು ತಿಳಿಸಬೇಕೆಂದು ತಮ್ಮ ಮೂಲಕ ಕೇಳುತ್ತಿದ್ದೇನೆ. ನಮ್ಮ ಸ್ಥಳೀಯ ಗುತ್ತಿಗೆದಾರರಿಗೆ ಹೆಚ್ಚು ಪ್ರೋತ್ಸಾಹವನ್ನು ಕೊಡದೇ ರಾಜ್ಯದ ಹೊರಗಿನ ಗುತ್ತಿಗೆದಾರರಿಗೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತಿದ್ದಾರೆ. ಏಕೆ ಎಂಬುದನ್ನು ಮಾನ್ಯ ಮಂತ್ರಿಗಳು ದಯಮಾಡಿ ತಿಳಿಸುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಪರ್ಸೆಂಟೇಜ್ ಬಗ್ಗೆ ನನಗಂತೂ ಗೊತ್ತಿಲ್ಲ. ಆ ವಿಷಯಕ್ಕೆ ನಾನು ಹೋಗುವುದಿಲ್ಲ. ಮಾನ್ಯ ಸದಸ್ಯರು

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಂತ್ರಿಗಳಿಗೆ ಗೊತ್ತಿರದಿದ್ದರೆ ಮತ್ತೆ ಯಾರಿಗೆ ಗೊತ್ತಿರುತ್ತದೆ? ಮಂತ್ರಿಗಳ ಮೇಲೆ ಪರ್ಸೆಂಟೇಜ್ ನಿಗದಿ ಮಾಡುವವರು ಬೇರೆ ಯಾರಾದರೂ ಇದ್ದಾರಾ?

ಶ್ರೀ ಸಿ. ಬೈರೇಗೌಡ : ನಿಮ್ಮ ಪರ್ಸೆಂಟೇಜ್ ನಿಮಗೆ ಗೊತ್ತಿಲ್ಲದೇ ಇರಬಹುದು. ಆದರೆ ಇಂಜಿನಿಯರ್ಸ್ ತೆಗೆದುಕೊಳ್ಳುವ ಪರ್ಸೆಂಟೇಜ್ ಗೊತ್ತಿಲ್ಲವೇ ಎಂಬುದೇ ಅವರ ಮುಖ್ಯ ಪ್ರಶ್ನೆ ಇರತಕ್ಕದ್ದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಪ್ರತಿ ಒಬ್ಬ ಮನುಷ್ಯನಿಗೂ ತನ್ನ ಪರ್ಸೆಂಟೇಜ್ ಏನೆಂಬುದು ಗೊತ್ತೇ ಇರುತ್ತದೆ. ಮಾನ್ಯ ಬೈರೇಗೌಡರಿಗೆ ಅವರ ಪರ್ಸೆಂಟೇಜ್ ಅವರಿಗೆ ಗೊತ್ತಿದೆ. ನನಗೆ ಏನು ಅಂದರೆ ಇಲಾಖೆಯಲ್ಲಿ ಪರ್ಸೆಂಟೇಜ್ ನಡೆಯುತ್ತಿದೆ ಎನ್ನತಕ್ಕ ದೂರುಗಳು ಈ ಸದನದಲ್ಲಿ ಪ್ರಸ್ತಾವನೆ ಮಾಡಿದ್ದಾರೆ. ಇದರ ಬಗ್ಗೆ ನಾನು ಇನ್ನೂ ಕೂಡ ಪ್ರಾಮಾಣಿಕವಾಗಿ ಹೇಳುತ್ತೇನೆ, ಈ ದೃಷ್ಟಿಯಿಂದ ನನಗೆ ಯಾರ ಕಡೆಯಿಂದ ದೂರು ಬಂದಿಲ್ಲ. ಯಾವುದಾದರೂ ನಿರ್ದಿಷ್ಟವಾದ ದೂರು ಇಂತಹ ಕ್ಷೇತ್ರದಲ್ಲಿ ನಡೆದಿದೆ, ಇಂತಹವರು ಎನ್ನತಕ್ಕಂಥ ಏನಾದರೂ ನಿರ್ದಿಷ್ಟವಾದ ಹೇಳಿಕೆ ಅಥವಾ ವಿಚಾರವನ್ನು ತಿಳಿಸಿದರೆ ಅವರ ಮೇಲೆ [illegible] ತೆಗೆದುಕೊಳ್ಳುತ್ತದೆ ಎಂದು ಹೇಳುತ್ತಿದ್ದೇನೆ

ಶ್ರೀ ಬಿ.ಹೆಚ್. ಬನ್ನಿಕೋಡ್ : ಬೇಲಿಯೇ ಎದ್ದು ಹೊಲ ಮೇಯ್ದರೆ ಏನೂ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ. ನಿರ್ದಿಷ್ಟವಾದ ದಾಖಲೆಗಳನ್ನು ಕೊಡುವುದಕ್ಕೆ ಆಗುವುದಿಲ್ಲ. ಅದನ್ನು ಪರಿಶೀಲನೆ ಮಾಡಿ. ತಾವು ಹಾಗೆ ಎಂದು ಹೇಳುತ್ತಿಲ್ಲ. ನಿಮ್ಮ ಮೇಲೆ ಏನಾದರೂ ಪರ್ಸಂಟೇಜ್ ವಸೂಲು ಮಾಡತಕ್ಕ ವ್ಯವಸ್ಥೆ ಇದೆಯಾ ಎಂದು ಕೇಳುತ್ತಿರುವುದು...

ಶ್ರೀ ಎ.ಟಿ. ರಾಮಸ್ವಾಮಿ : ನಿರ್ದಿಷ್ಟವಾದ ಪ್ರಕರಣ ಅಲ್ಲ. ಇದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ನಾನು ಹೇಳಿದೆನಲ್ಲಾ ಇವತ್ತು ಶಾಲೆಗೆ ಹೋಗುವ ಮಗುವಿನಿಂದ ಹಿಡಿದು ಹೊಲ ಉಳತಕ್ಕ ಸಾಮಾನ್ಯ ಪ್ರಜೆಗಳಿಗೂ ಗೊತ್ತಿರತಕ್ಕ ವಿಚಾರ ಇದು. ಸರ್ಕಾರಕ್ಕೆ ಗೊತ್ತಿಲ್ಲ ಎಂದರೆ ಹೇಗೆ?. ನಾನು ಅದಕ್ಕಾಗಿ ಹೇಳಿದೆ, ನಾವು ಕೂಡ ತಲೆತಗ್ಗಿಸಬೇಕಾಗುತ್ತದೆ ಎನ್ನತಕ್ಕ ವಿಚಾರವನ್ನು ಮೊದಲನೆಯದಾಗಿ ಪ್ರಸ್ತಾಪ ಮಾಡಿದೆ. ಈಗ ಕಳಪೆ ಕಾಮಗಾರಿಗಳು ಆಗತಕ್ಕದ್ದು ತಮಗೆ ಗೊತ್ತಿಲ್ಲವಾ? ತಮ್ಮ ಗಮನಕ್ಕೆ ಬಂದಿಲ್ಲವಾ? ಏಕೆ ಕಳಪೆ ಕಾಮಗಾರಿ ಕೆಲಸಗಳು ಆಗುತ್ತಿದೆ ಮತ್ತು ಇರಿಗೇಷನ್ ಸೌತ್ ಮುಖ್ಯ ಅಭಿಯಂತರರನ್ನು ರಜೆಯ ಮೇಲೆ ಏತಕ್ಕಾಗಿ ಕಳಿಸಿದ್ದೀರಿ? ದಯಮಾಡಿ ಅದಕ್ಕೆ ಸಚಿವರು ಉತ್ತರ ಹೇಳಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಕೆಲವೊಂದು ಸಂದರ್ಭದಲ್ಲಿ ಕೆಲವೊಂದು ಅಧಿಕಾರಿಗಳನ್ನು ಕಳಿಸಬೇಕಾಗುತ್ತದೆ. ಆ ದೃಷ್ಟಿಯಿಂದ ನಾನು ಕಳಿಸಿದ್ದೇನೆ. ಅದರ ಬಗ್ಗೆ ವಿವರವಾದ ವರದಿಯನ್ನು ಸಲ್ಲಿಸಬೇಕು ಎಂದಾಗ ನಾನು ಸಲ್ಲಿಸುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ : ಕಳುಹಿಸಿದ್ದಕ್ಕೆ ಕಾರಣ ಏನು? ನಾನು ಅಂದುಕೊಂಡಿದ್ದೇನೆ, ಈ ಶೇಕಡಾವಾರು ವಸೂಲಿ ಆ ಪ್ರದೇಶದಲ್ಲಿ ಹೆಚ್ಚು ಇದ್ದುದ್ದರಿಂದ ನೀವು ರಜೆಯ ಮೇಲೆ ಅವರನ್ನು ಕಳಿಸಿದ್ದೀರಿ ಎಂದು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದೀರಿ. ಇದು ಸರಿಯಾದ ಉತ್ತರ ಅಲ್ಲ ಎಂಬುದನ್ನು ನಾನು ಕಂಡುಕೊಂಡಿದ್ದೇನೆ. ಎಸ್ಟಿಮೇಟ್ ಮಾಡುವುದಕ್ಕೆ, ಪ್ರೊಪೋಸಲ್ ಕಳಿಸುವುದಕ್ಕೆ, ಎಂಟ್ರಸ್ಟ್‌ಮೆಂಟ್ ಮಾಡುವುದಕ್ಕೆ, ಬೆಲೆ ಮಾಡುವುದಕ್ಕೆ ಹೀಗೆ ಎಲ್ಲಾ ಕಡೆಯಲ್ಲೂ ಕೂಡ ಪರ್ಸಂಟೇಜ್ ವಸೂಲು ನಡೆಯುತ್ತಿದೆ. ಇದು ಜಗಜ್ಜಾಹೀರಾಗಿದೆ. ಇದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ದಯಮಾಡಿ ಈ ವಿಚಾರ ಬಹಳ ಗಹನವಾದ ವಿಚಾರ ಎಂದು ಸರ್ಕಾರ ತಿಳಿದುಕೊಂಡು ಇದರ ಬಗ್ಗೆ ಗಮನ ಹರಿಸಿ ಪರ್ಸಂಟೇಜ್ ವಸೂಲಿಯನ್ನು ಆದಷ್ಟು ಕಡಿಮೆ ಆದರೂ ಮಾಡಿ. ನೀವು ಪೂರ್ಣವಾಗಿ ನಾಶ ಮಾಡುವುದಕ್ಕೆ ಆಗುವುದಿಲ್ಲ. ಜನ ನಮ್ಮ ಮೇಲೆ ವಿಶ್ವಾಸವಿಟ್ಟು, ೧೬೮ ಜನರನ್ನು ಆಯ್ಕೆ ಮಾಡಿ ಕಳಿಸಿದ್ದಾರೆ. ಎಂಎಲ್‌ಎಗಳು ಜಾಸ್ತಿ ಆದ ಹಾಗೆ ಪರ್ಸಂಟೇಜ್ ವಸೂಲಿಯೂ ಸಹ ಜಾಸ್ತಿ ಆಗಬಾರದು. ದಯಮಾಡಿ ಕಡಿಮೆ ಮಾಡಬೇಕು ಎಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ.

ಸಭಾಧ್ಯಕ್ಷರು : ತಮ್ಮ ಸೀಲಿಂಗ್ ಲಿಮಿಟ್ ಏನು ಎಂಬುದರ ಬಗ್ಗೆ ಒಂದು ಸೂಚನೆ ಕೊಡಿ ನೋಡೋಣ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಇದು ಗಂಭೀರವಾದಂಥ ಪ್ರಶ್ನೆ. ಈ ವಿಚಾರದ ಬಗ್ಗೆ ನಾವು ನಿಷ್ಪಕ್ಷವಾದ ಮನಸ್ಸಿನಿಂದ ಹೇಳುತ್ತಾ ಇದ್ದೇವೆ. ಈ ವಿಷಯ ಬಹಳ ವರ್ಷಗಳಿಂದ ಚರ್ಚೆಯಲ್ಲಿದೆ. ಮಾನ್ಯ ಸದಸ್ಯರು ಕೆಲವೊಂದು ವಿಚಾರ ಆ ಬಗ್ಗೆ ಏನು ನಡೆದಿದೆ ಅದು ತಮ್ಮ ಗಮನಕ್ಕೆ ಬಂದಿದೆ ಎಂದು

ಹೇಳಿದ್ದಾರೆ. ಆ ಕುರಿತು ಮಾನ್ಯ ಸದಸ್ಯರಲ್ಲಿ ವಿವರವಾದಂಥ ವರದಿ ಏನಾದರೂ ಅವರಲ್ಲಿ ಇದ್ದರೆ ದಯಮಾಡಿ ಅದನ್ನು ನನಗೆ ಕೊಡಲಿ. ನಾನು ಆ ದೃಷ್ಟಿಯಿಂದ ಕೆಲಸ ಮಾಡುತ್ತಾ ಇದ್ದೇನೆ ಎಂಬುದನ್ನು ಕೂಡ ಅವರು ಒಪ್ಪಿಕೊಳ್ಳುತ್ತಾರೆ ಎಂದು ನಾನು ಭಾವಿಸುತ್ತೇನೆ. ನಾನು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಈ ಇಲಾಖೆಯಲ್ಲಿ ಕೆಲವು ಮಟ್ಟಿನ ತೀವ್ರ ಕಾರ್ಯಕ್ರಮಗಳನ್ನು ನಾನು ತೆಗೆದುಕೊಳ್ಳುತ್ತಾ ಇದ್ದೇನೆ ನನಗೆ ತಾವುಗಳು ಸ್ವಲ್ಪ ಅವಕಾಶವನ್ನು ಕೊಡಿ. ಅವಕಾಶ ಕೊಟ್ಟಮೇಲೆ ನಾನು ಅವರ ಮನಸ್ಸಿಗೆ ಮತ್ತು ಅವರ ಅನಿಸಿಕೆಯ ಪ್ರಕಾರ ಕೆಲಸ ಮಾಡುತ್ತೇನೆ.

ರಾಜ್ಯದ ಕರಾವಳಿ ತೀರದಲ್ಲಿ ಸಮುದ್ರ ಕೊರೆತ

2209 - ಶ್ರೀ ವಿಜಯಕುಮಾರ್ ಶೆಟ್ಟಿ (ಸೂರತ್ಕಲ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) *ರಾಜ್ಯದ ಕರಾವಳಿ ತೀರದಲ್ಲಿ ಸಮುದ್ರ ಕೊರೆತವನ್ನು ಶಾಶ್ವತವಾಗಿ ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

ಆ) *ತಡೆಗೋಡೆ ನಿರ್ಮಾಣಕ್ಕಾಗಿ ಸರ್ಕಾರ ಈವರೆಗೆ ಖರ್ಚು ಮಾಡಿದ ಹಣವೆಷ್ಟು?*

ಇ) *ಸಮುದ್ರ ಕೊರೆತದಿಂದ 1991ನೇ ಇಸವಿಯಲ್ಲಿ ಆಗಿರುವ ಹಾನಿಯ ಅಂದಾಜು ಮೊತ್ತವೆಷ್ಟು?*

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) *ಪದೇಪದೇ ಹಾನಿಗೊಳಗಾಗುವಂತಹ ತೀರ ಪ್ರದೇಶಗಳನ್ನು ಗುರುತಿಸಿ ಅಲ್ಲಿ ಶಾಶ್ವತವಾಗಿ ಸಮುದ್ರ ಕೊರೆತವನ್ನು ತಡೆಗಟ್ಟಲು ಒಂದು ಸಮಗ್ರಯೋಜನೆಯನ್ನು* 145 *ಕೋಟಿ ರೂ.ಗಳಿಗೆ ತಯಾರಿಸಿ ಕೇಂದ್ರ ಸರ್ಕಾರ ಸಹಾಯಕ್ಕಾಗಿ ಸಲ್ಲಿಸಲಾಗಿದೆ. ಈ ಯೋಜನೆಯಲ್ಲಿ ಸೇರಿರುವ ಕೆಲಸಗಳ ಪೈಕಿ ಆದ್ಯತಾ ಪ್ರದೇಶಗಳಿಗೆ ರಕ್ಷಣೆ ಒದಗಿಸಲು* 40 *ಕೋಟಿ ರೂ. ಉಳಿದ ಪ್ರದೇಶಗಳಿಗೆ* 15 *ಕೋಟಿ ರೂ.ಗಳಿಗೆ ಎಂದು ಪ್ರತ್ಯೇಕ ಯೋಜನೆಗಳನ್ನು ತಯಾರಿಸಿ ಆರ್ಥಿಕ ಸಹಾಯಕಕ್ಕಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.*

ಆ) *ಜೂನ್* 1991*ರವರೆಗೆ ರೂ.* 490.73 *ಲಕ್ಷ ವೆಚ್ಚ ಮಾಡಲಾಗಿದೆ.*

ಇ) 2.30 *ಲಕ್ಷ ರೂ.ಗಳು.*

ಶ್ರೀ ವಿಜಯಕುಮಾರಶೆಟ್ಟಿ : ಮಾನ್ಯ ಅಧ್ಯಕ್ಷರೆ, ನಾವು ಈ ಪ್ರಶ್ನೆಯನ್ನು ಪ್ರತಿವರ್ಷದ ಮಳೆಗಾಲದ ಸಂದರ್ಭದಲ್ಲಿ ಕೇಳುತ್ತಾ ಇದ್ದೇವೆ. ಅದಕ್ಕೆ ಈ ಬಗ್ಗೆ ಕೇಂದ್ರಸರಕಾರಕ್ಕೆ ಎಸ್ಟಿಮೇಟ್ ಕಳುಹಿಸಿಕೊಟ್ಟಿದ್ದೇವೆ ಎಂಬ ಉತ್ತರವು ಬರುತ್ತಾ ಇದೆ. ಆದರೆ ನಿಜವಾಗಿಯೂ ಅಲ್ಲಿ ಕೆಲಸ ಏನೂ ಆಗುತ್ತಾ ಇಲ್ಲ. ತಾವುಗಳು ಕೋಸ್ಟಲ್‌ಲೈನ್‌ನಲ್ಲಿ ಪ್ರತಿವರ್ಷವೂ ಮಳೆಗಾಲದ ಸಂದರ್ಭದಲ್ಲಿ ಲಕ್ಷಾಂತರ ರೂಪಾಯಿಗಳ ಕಷ್ಟನಷ್ಟವಾಗುವುದನ್ನು ತಡೆಗಟ್ಟಲು ಖಾಯಂ ಆಗಿ ಏನಾದರೂ ಪರಿಹಾರೋಪಾಯವನ್ನು ಕಂಡುಕೊಳ್ಳಬೇಕು. ಈಗ ನಮ್ಮಲ್ಲಿ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ, ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ಎಂದು ಮಾಡಿಕೊಂಡಿದ್ದೇವೆ, ಅದೇ ರೀತಿಯಲ್ಲಿ ಕೋಸ್ಟಲ್ ಲೈನ್ ಡೆವಲಪ್‌ಮೆಂಟ್ ಬೋರ್ಡನ್ನು ಕೂಡ ಮಾಡುವುದು ಒಳ್ಳೆಯದು ಎಂದು ನಾನು ಹೇಳಬಯಸುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ನಾವು ಈಗಾಗಲೇ ಈ ಕುರಿತು ಒಂದು ಪ್ರಸ್ತಾವನೆಯನ್ನು ಕೇಂದ್ರ ಸರಕಾರಕ್ಕೆ ಕಳುಹಿಸಿದ್ದೇನೆ. ಕೇರಳದಲ್ಲಿರುವಂಥ ರೀತಿಯಲ್ಲಿ ಸಿಮೆಂಟ್ ಸ್ಲಾಬ್ಸ್, ಹಾಕತಕ್ಕಂಥಾದ್ದು ಮತ್ತು ಅಲ್ಲಿ ತೆಗೆದುಕೊಂಡ

ಕಾರ್ಯಕ್ರಮಗಳ ರೀತಿಯಲ್ಲಿಯೇ ಇಲ್ಲಿಯೂ ತೆಗೆದುಕೊಳ್ಳಬೇಕೆಂದು ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ಮೊನ್ನೆ 15 ಕೋಟಿ ರೂಪಾಯಿಗಳ ಒಂದು ಪ್ರಸ್ತವನೆಯನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಮಾನ್ಯ ಶುಕ್ಲಾರವರೊಡನೆ ಮಾತನಾಡಿಕೊಂಡು ಬಂದಿದ್ದೇನೆ. ಅವರೂ ಸಹಿತ ಇದರ ಬಗ್ಗೆ ಭರವಸೆಯನ್ನು ಕೊಟ್ಟಿದ್ದಾರೆ. ಅನಂತರ ಕೂಡ ಅವರಿಗೆ ಒಂದು ಕಾಗದವನ್ನು ಬರೆದಿದ್ದೇವೆ. ಆ ಕೆಲಸವು ಶೀಘ್ರವಾಗಿ ಆಗುತ್ತದೆ ಎಂದು ಹೇಳಬಯಸುತ್ತೇನೆ.

ಶ್ರೀ ವಿಜಯಕುಮಾರ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಇದು ಒಂದು ರೀತಿಯಲ್ಲಿ ಭರವಸೆ ಮಾತ್ರ ಆಗುತ್ತಾ ಇದೆ. ಆದರೆ ಪ್ರಾಯೋಗಿಕವಾಗಿ ಯಾವುದೂ ಅಲ್ಲಿ ಆಗುತ್ತಾ ಇಲ್ಲ. ಅ ಪ್ರದೇಶದಲ್ಲಿ ಕಳೆದ ವರ್ಷ ಈ ಸಮುದ್ರ ಕಿನಾರೆಯಲ್ಲಿ ಹಾಗೂ ಇದರಿಂದಾಗಿ ಸುಮಾರು 10 ಜನರು ತೀರಿಕೊಂಡರು. ಆಗಿನ ಮಾನ್ಯ ಸಚಿವರಾದ ಶ್ರೀ ಟಿ.ಎನ್. ನರಸಿಂಹಮೂರ್ತಿಯವರು ನೊಂದವರ ಮನೆಗೆ ಒಂದು ಉದ್ಯೋಗವನ್ನು ಕೊಡುತ್ತೇವೆ ಎಂದು ಆಶ್ವಾಸನೆಯನ್ನು ಕೂಡ ಕೊಟ್ಟಿದ್ದರು. ಒಂದು ವರ್ಷ ಕಳೆಯಿತು, ಆದರೆ ಯಾವುದೇ ಭರವಸೆಯೂ ಈಡೇರಲಿಲ್ಲ. ಹಾಗೆ ತೀರಿಕೊಂಡವರಲ್ಲಿ ಎಲ್ಲರೂ ಯುವಕರು. ಹೀಗಾಗಿ ಅವರ ಮನೆಯವರು ತುಂಬಾ ಕಷ್ಟಕ್ಕೀಡಾಗಿದ್ದಾರೆ. ಆದ್ದರಿಂದ ಈ ವಿಚಾರಗಳನ್ನು ಸರಕಾರದವರು ಗಮನಿಸಿ, ಅಂಥ ಮೃತರ ಮನೆಯವರಿಗೆ ಒಂದು ಉದ್ಯೋಗವನ್ನು ಕೊಡುವ ಕೆಲಸವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಮಾನ್ಯ ಸದಸ್ಯರು ತಿಳಿಸಿದ ವಿಚಾರದ ಬಗ್ಗೆ ಯೋಚನೆ ಮಾಡುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ : ನಮ್ಮ ಕರಾವಳಿ ಪ್ರದೇಶದಲ್ಲಿ ಸಮುದ್ರದ ತಡೆಗೋಡೆಯನ್ನು ನಿರ್ಮಿಸುವ ವಿಚಾರದಲ್ಲಿ ಕಳೆದ 3-4 ವರ್ಷಗಳಿಂದ ನಾವು ಹೇಳುತ್ತಾ ಇದ್ದೇವೆ. ಆದರೆ ಈ ದಿಸೆಯಲ್ಲಿ ಮಾನ್ಯ ಸಚಿವರು ಮನಸ್ಸು ಮಾಡುತ್ತಾ ಇರುವುದು ಸಂತೋಷದ ವಿಚಾರವಾಗಿದೆ. ಆದರೆ ನಮ್ಮಲ್ಲಿಯೂ ಕೇರಳದ ಮಾದರಿಯಲ್ಲಿಯೇ ಶಾಶ್ವತ ತಡೆಗೋಡೆ ಮಾಡತಕ್ಕಂಥ ಕೆಲಸ ಮತ್ತು ವ್ಯವಸ್ಥೆಯೂ ಆಗಬೇಕಾಗಿದೆ. ಅದನ್ನು ಬಿಟ್ಟು ತಾತ್ಕಾಲಿಕವಾಗಿ ಕಲ್ಲುಗಳನ್ನು ಹಾಕಿದರೆ ಅದರಿಂದ ಯಾವ ಪ್ರಯೋಜನವೂ ಇಲ್ಲ. ಒಂದು ಜನಜನಿತ ಗಾದೆಯ ಹಾಗೆ ಸಮುದ್ರಕ್ಕೆ ಕಲ್ಲು ಹಾಕುವುದು ಒಂದೇ ಗುಡ್ಡಕ್ಕೆ ಮಣ್ಣು ಹೊರುವುದು ಎರಡೂ ಒಂದೇ. ಹೇಳಿದ ಹಾಗೆ ನಾವು ಲಕ್ಷಗಟ್ಟಲೆ ದುಡ್ಡನ್ನು ಖರ್ಚು ಮಾಡುತ್ತಿದ್ದಾರೆಯೇ ವಿನಹ ಅದರಿಂದ ಯಾವುದೇ ಪ್ರಯೋಜನವೂ ಕಂಡುಬಂದಿಲ್ಲ. ಆದ್ದರಿಂದ ಉಳ್ಳಾಲದಿಂದ ಕರಾವಳಿಯ ಬೈಂದೂರಿನವರೆಗೆ ಇರತಕ್ಕಂಥ ಶಾಶ್ವತ ತಡೆಗೋಡೆಯನ್ನು ಶಾಶ್ವತವಾಗಿ ನಿರ್ಮಿಸುವುದಕ್ಕೆ ಮಾನ್ಯ ಸಚಿವರ ಕಾಲದಲ್ಲಿ ಶತಪ್ರಯತ್ನವನ್ನು ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಈ ವಿಚಾರದ ಬಗ್ಗೆಯೂ ಸಹ ನಾವು ಕೇಂದ್ರ ಸರಕಾರದ ಜೊತೆಗೆ ಮಾತನಾಡಿ, ಪ್ರಸ್ತಾವನೆಯನ್ನು ಕೊಟ್ಟಿದ್ದೇವೆ. ಅದನ್ನು ಆದಷ್ಟು ಬೇಗ ತರಿಸಿಕೊಂಡು ಕರಾವಳಿ ಪ್ರದೇಶದಲ್ಲಿ ಶಾಶ್ವತವಾದಂಥ ಕೇರಳದಲ್ಲಿರುವ ಹಾಗೆ ತಡೆಗೋಡೆಯನ್ನು ನಿರ್ಮಿಸುವ ಕಾರ್ಯವನ್ನು ಹಮ್ಮಿಕೊಳ್ಳುತ್ತೇವೆ ಎಂದು ಹೇಳಬಯಸುತ್ತೇನೆ.

ಶ್ರೀ ಸಿ. ಭೈರೇಗೌಡ : ಈ ಪ್ರಸ್ತಾವನೆಯನ್ನು ಕೇಂದ್ರಕ್ಕೆ ಬಹಳ ವರ್ಷಗಳ ಹಿಂದೆ ಕಳುಹಿಸಲಾಗಿತ್ತು. ಅದು ಸುಮಾರು 150 ಕೋಟಿ ರೂಪಾಯಿಗಳ ಯೋಜನೆಯಾಗಿತ್ತು. ಪ್ರತಿವರ್ಷವೂ ಮುಂಗಾರು ಬಂತು ಎಂದರೆ ಕರಾವಳಿಯುದ್ದಕ್ಕೂ ತಮ್ಮ ಜೀವವನ್ನು ಕೈಯಲ್ಲಿ ಇಟ್ಟುಕೊಂಡು ಓಡಾಡತಕ್ಕ ಪರಿಸ್ಥಿತಿಯನ್ನು ನಾನೂ ಸಹ ಅನೇಕ ಸಲ ಹೋಗಿ ನೋಡಿದ್ದೇನೆ. ಅಲ್ಲಿ ಸಣ್ಣಪುಟ್ಟ ಕೆಲಸ ನಡೆಯುತ್ತಾ ಇದೆ. ಮಾನ್ಯ ಇದಿನಬ್ಬನವರು ಹೇಳಿದ ಹಾಗೆ ಸಮುದ್ರಕ್ಕೆ ಕಲ್ಲು ಹಾಕಿದರೆ ಎಷ್ಟು ಪ್ರಯೋಜನ ಆಗುತ್ತದೋ ಅಷ್ಟು ಪ್ರಯೋಜನ ಈಗ ಮಾಡಿರತಕ್ಕ ಕೆಲಸ. ಅದೆಲ್ಲಾ ನಿಷ್ಪ್ರಯೋಜನವಾಗಿರುವುದನ್ನು ನಾನು ಕೂಡ ಕಣ್ಣಾರೆ ಕಂಡಿದ್ದೇನೆ. ಆದ್ದರಿಂದ ಅಲ್ಲಿ ಶಾಶ್ವತವಾದಂಥ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳತಕ್ಕಂಥ ಅತಿ ಅವಶ್ಯಕವಾಗಿದೆ. ಹಾಗೂ ಅತಿ ಜರೂರು ಕೂಡ ಆಗಿದೆ. ಈಗ ಮಳೆಗಾಲದಲ್ಲಿ ಅಲ್ಲಿ ಅನೇಕ ತೆಂಗಿನ ಮರಗಳು, ಮನೆಗಳು ಕೊಚ್ಚಿಕೊಂಡು ಹೋಗುತ್ತಾ ಇವೆ. ಪ್ರಾಣಹಾನಿಯೂ ಆಗುತ್ತಾ ಇದೆ. ಇದನ್ನೆಲ್ಲಾ ಶಾಶ್ವತವಾಗಿ ತಡೆಗಟ್ಟಬೇಕಾದ ಅವಶ್ಯಕತೆ ಇದೆ. ಆದ್ದರಿಂದ ಆದಷ್ಟು ಜಾಗ್ರತೆಯಾಗಿ ಕೇಂದ್ರ ಸರಕಾರದೊಂದಿಗೆ ವ್ಯವಹರಿಸಿ ಅಲ್ಲಿನ ಆ ಜನತೆಗೆ ರಕ್ಷಣೆ ಕೊಡತಕ್ಕಂಥ ಕೆಲಸವನ್ನು ಮಾಡಬೇಕಾಗಿ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಮಾನ್ಯ ಅಧ್ಯಕ್ಷರೇ, 145 ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ನಾವು ಕಳುಹಿಸಿರುವುದು ನಿಜ. 1989ರಲ್ಲಿಯೇ ಕಳುಹಿಸಿದ್ದೇವೆ, ಅದು ದೊಡ್ಡ ಮೊತ್ತ ಎಂದು ತಿಳಿದುಕೊಂಡು ಅದನ್ನು ಇಳಿಸಿ 15 ಕೋಟಿ ರೂಪಾಯಿಗೆ ಕಳುಹಿಸಿದ್ದಾರೆ. ಸಧ್ಯ 15 ಕೋಟಿ ರೂಪಾಯಿಗಳು ಸ್ಯಾಂಕ್ಷನ್ ಆದಮೇಲೆ ಉಳಿಕೆ ಕೆಲಸವನ್ನು ತೆಗೆದುಕೊಳ್ಳೋಣ ಎನ್ನುವ ಒಂದು ದೃಷ್ಟಿಯಿಂದ ಕಳುಹಿಸಿದ್ದೇವೆ. 15 ಕೋಟಿ ರೂಪಾಯಿಯೇನೂ ಭಾರತ ಸರ್ಕಾರಕ್ಕೆ ದೊಡ್ಡ ಮೊತ್ತವಾಗಲಾರದು. ಕೇಂದ್ರ ಸಚಿವರಾದ ಮಾನ್ಯ ವಿ.ಸಿ. ಶುಕ್ಲ ಅವರ ಜೊತೆಯಲ್ಲಿ ಮಾತನಾಡಿದಾಗ ಅವರು ನನಗೆ ಭರವಸೆಯನ್ನು ಕೊಟ್ಟಿದ್ದಾರೆ. ಯಾವುದಾದರೂ ಹಣವನ್ನು ಕೊಡುತ್ತೇನೆ, ಆ ಕೆಲಸವನ್ನು ಮಾಡಿ ಎಂದು ಅವರು ಹೇಳಿದ್ದಾರೆ.

ಶ್ರೀ ಜಿ.ಎಸ್. ಆಚಾರ್ : ಮಾನ್ಯ ಅಧ್ಯಕ್ಷರೇ, ತಡೆಗೋಡೆ ವಿಚಾರ ಬಹಳ ಮಹತ್ವವಾದುದು, ಬಹಳ ವರ್ಷಗಳಿಂದ ಬರುತ್ತಿದೆ. ಕೇಂದ್ರಕ್ಕೇ ಬರೆದಿದ್ದೇವೆ, ಎಸ್ಟಿಮೇಟ್ ಆಗಿದೆ, ಮತ್ತೊಂದು ಆಗಿದೆ ಎಂದು ಹೇಳುತ್ತಾರೆ. ಏತಕ್ಕೆ ಆಗುವುದಿಲ್ಲ? ಹಿಂದಿನ ಮಂತ್ರಿಗಳೆಲ್ಲಾ ಬಂದರು. ಮಾನ್ಯ ಭೈರೇಗೌಡರು ಹೇಳಿದರು, ಅವರೆಲ್ಲಾ ಬಂದು ಆಶ್ವಾಸನೆಯನ್ನು ಕೊಟ್ಟಿದ್ದೇ ಕೊಟ್ಟಿದ್ದು. ಒಂದು ತಡೆಗೋಡೆಯನ್ನು ಮಾಡುವುದು, ಡ್ರೆಜ್ಜಿಂಗ್ ಮಾಡುವುದು, ಈ ಎರಡೂ ಕಾರ್ಯಗಳು ಆಗುವುದಿಲ್ಲ. ಕೇರಳದಲ್ಲಿ ಆಗಿದೆ. ಕೇರಳದಲ್ಲಿ ಆಗತಕ್ಕಂಥ ಕೆಲಸ ಕರ್ನಾಟಕದಲ್ಲಿ ಏತಕ್ಕೆ ಆಗುವುದಿಲ್ಲ? ನೀವು ಕಳುಹಿಸುವುದಿಲ್ಲವೇ? ಏನಾಗಿದೆ ಎಂಬುದು ನನಗೆ ಅರ್ಥವಾಗುವುದಿಲ್ಲ. ಈ ಕೆಲಸವನ್ನು ಈ ವರ್ಷ ಖಂಡಿತವಾಗಿಯೂ ತೆಗೆದುಕೊಳ್ಳಬೇಕು. ಇದರ ಬಗ್ಗೆ ಸರ್ಕಾರದವರು ವಾಗ್ದಾನವನ್ನು ಮಾಡಬೇಕು.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಮಾತನಾಡಿದ್ದೇನೆ. ನಾನು ಈಗಾಗಲೇ ಒಂದು ಸಾರಿ ಮಾನ್ಯ ವಿ.ಸಿ. ಶುಕ್ಲಾ ಅವರನ್ನು ಇದರ ಬಾಬ್ತು ನೋಡಿದ್ದೇನೆ. ಮತ್ತೊಂದು ಸಾರಿ ಸಧ್ಯದಲ್ಲಿಯೇ ನಾನು

ಹೋಗಿ ಇದರ ಬಗ್ಗೆ ಪ್ರಸ್ತಾವನೆಯನ್ನು ಮಾಡಿ ಖಂಡಿತವಾಗಿಯೂ ಸಹ 15 ಕೋಟಿ ರೂಪಾಯಿಗಳ ಹಣವನ್ನು ತರತಕ್ಕಂಥ ಪ್ರಯತ್ನವನ್ನು ಮಾಡುತ್ತೇನೆಂದು ಹೇಳುತ್ತೇನೆ.

ಬೆಳಗಾವಿ ಜಿಲ್ಲಾ ಪರಿಷತ್ತಿನ ವಿರುದ್ಧ ಕ್ರಮ

2270-ಶ್ರೀ ಸುಭಾಷ್ ಜೋಷಿ (ನಿಪ್ಪಾಣಿ) : ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ ನಾಲ್ಕು ತಿಂಗಳಿನಿಂದ ಬೆಳಗಾವಿ ಜಿಲ್ಲಾ ಪರಿಷತ್‌ನ ಸಾಮಾನ್ಯ ಸಭೆಯನ್ನು ನಡೆಸಿಲ್ಲವೆಂಬುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರವು ಜಿಲ್ಲಾ ಪರಿಷತ್ ವಿರುದ್ಧ ಯಾವ ಕ್ರಮವನ್ನು ತೆಗೆದುಕೊಳ್ಳಲಿದೆ? ಯಾವಾಗ

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಬೆಳಗಾವಿ ಜಿಲ್ಲಾ ಪರಿಷತ್‌ನ ಸಾಮಾನ್ಯ ಸಭೆ ದಿನಾಂಕ : 30-04-91 ರಂದು ಕರೆಯಲಾಗಿತ್ತು. ಆದರೆ ಲೋಕಸಭೆಯ ಚುನಾವಣೆ ಪ್ರಯುಕ್ತ ಮುಂದೂಡಲಾಯಿತು. ಈ ರೀತಿ ಮುಂದೂಡಿದ ಸಭೆಯನ್ನು ಪುನ: 31-05-91ಕ್ಕೆ ಕರೆಯಲಾಗಿದ್ದು ಆ ಸಭೆಯೂ ಸಹ ಶ್ರೀ ರಾಜೀವ್ ಗಾಂಧಿಯವರ ಹತ್ಯೆಯ ಕಾರಣದಿಂದಾಗಿ ದಿನಾಂಕ : 20-06-91ಕ್ಕೆ ಮುಂದೂಡಲ್ಪಟ್ಟಿತು. ದಿನಾಂಕ: 20-06-91ಕ್ಕೆ ಕರೆಯಲಾಗಿದ್ದ ಸಭೆಯೂ ಸಹ ಮುಂದೂಡಲ್ಪಟ್ಟು ಅಂತಿಮವಾಗಿ 16-08-91ರಂದು ನಡೆದಿದೆ.

ಆ) ಸಭೆಯನ್ನು ಸಕಾರಣಗಳಿಂದ ಮುಂದೂಡಲ್ಪಟ್ಟಿರುವುದರಿಂದ ಜಿಲ್ಲಾ ಪರಿಷತ್ತಿನ ಮೇಲೆ ಸರ್ಕಾರವು ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

SRI SUBASH JOSHI : For fixing the meeting on 20.6.91, reason was not given. Whether the Hon'ble Minister knows that because the meeting was not convened for four months, all the developmental works in Belgaum district are in stand-still.

SRI K.H. PATIL : The Hon'ble Member is aware that I have visited the Zilla Parishad and called a meeting. It is true that the meeting was adjourned for three times. Under the constitution of Zilla Parishads, they have a right to adjourn the meeting by majority. But, whether the valid ground for adjournment is taken or not, is a point for consideration.

Anyway, it was an unanimous resolution and therefore, I did not take any action against them. But, they said that once they adjourned the meeting for some reason and second time for Rajiv Gandhi's death and third time, the Officer was absent. The officer has been warned not to be like that hereafter. Now the meeting has already been convened. In my presence the meeting was held and therefore, everything is smooth now.

SRI SUBASH JOSHI : Whether the officer's absence is the only reason for cancelling or postponing the meeting? What about the developmental works?

SRI K.H. PATIL : I did not venture to support the officer. The officer was wrong in remaining absent without taking leave. Therefore, he has been warned not to behave like that.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಬೆಳಗಾವಿ ಜಿಲ್ಲಾಪರಿಷತ್ತು ಸುಮಾರು 120 ಕೋಟಿ ರೂಪಾಯಿಗಳ ವ್ಯವಹಾರವನ್ನು ಮಾಡುವಂಥ ಒಂದು ಮಿನಿ ಸರ್ಕಾರ ಅದು. ನಾಲ್ಕು ತಿಂಗಳಿಂದ ಸಭೆಯನ್ನೇ ನಡೆಸಿಲ್ಲ. ಕಾರಣ ಎಂದರೆ ವಿಚಿತ್ರ ಕಾರಣ ಇದು. ಮೊದಲ ಎರಡು ಕಾರಣಗಳನ್ನು ಕೊಟ್ಟರು. ಏನೋ ಸ್ವಲ್ಪ ಸಮಾಧಾನ. ಲೋಕಸಭೆ ಚುನಾವಣೆ ಮತ್ತು ರಾಜೀವ್ ಗಾಂಧಿಯವರ ಹತ್ಯೆ. ಮೂರನೆಯದು ಸುಮ್ಮನೆ 20-08-91ಕ್ಕೆ ಮುಂದೂಡಲ್ಪಟ್ಟಿತು. ಸರ್ಕಾರಿ ಡಿಕ್ಷನರಿಯೊಳಗೆ ಮುಂದೂಡಲ್ಪಟ್ಟಿತು, ಸಭೆ ನಡೆಯದೇ ಇರುವುದಕ್ಕೆ ಇದು ಕಾರಣವೇನು? ಮುಂದುಡಲ್ಪಟ್ಟಿತು ಎನ್ನುವುದಕ್ಕೆ ಬೇರೆ ಏನಾದರೂ ಅರ್ಥವಿದೆಯೇ ಏನು ಕಾರಣ ಇದು? ಏನು ಮುಂದೂಡಲ್ಪಟ್ಟಿತು, ಮುಂದೂಡಲ್ಪಟ್ಟಿತು ಎಂದು ಹಾಗೆಯೇ ಬರೆದುಕೊಳ್ಳುತ್ತಾ ಹೋದರೆ ನಾಲ್ಕು ತಿಂಗಳಿಂದ ವ್ಯವಹಾರ ಸ್ಥಗಿತಗೊಂಡರೆ ಯಾವ ರೀತಿಯಲ್ಲಿ ಕೆಲಸವನ್ನು ಅಲ್ಲಿ ಮಾಡಿರಬಹುದು ಎಂಬುದನ್ನು ತಾವೇ ಹೇಳಬೇಕು.

ಶ್ರೀ ಕೆ.ಹೆಚ್. ಪಾಟೀಲ್ : ಮಾನ್ಯ ಸದಸ್ಯರು ಹೇಳುವ ಅಭಿಪ್ರಾಯವನ್ನು ಒಪ್ಪುವುದಾದರೂ ಸಹಾ ಜಿಲ್ಲಾ ಪರಿಷತ್ತಿನವರು ಯುನಾನಿಮಸ್ ಆಗಿ ರೆಸಲ್ಯೂಷನನ್ನು ಮಾಡಿರುವುದರಿಂದ ಯಾವ ಕಾರಣದ ಸಲುವಾಗಿ ಮುಂದೆ ಹಾಕಿದರು ಎಂದು ಕಾರಣವನ್ನು ಬರೆಯದೇ ಮುಂದೂಡಲ್ಪಟ್ಟಿದೆ ಎಂದು ಹೇಳಿದ್ದಾರೆ. ಹಾಗೆ ಮಾಡುವುದು ಸರಿಯಲ್ಲ. ಕಾರಣವನ್ನು ತೋರಿಸಬೇಕು. ಅವರು ತೋರಿಸಿಲ್ಲ. ಅದಕ್ಕೆ ಈಗ ವಾರ್ನಿಂಗನ್ನು ಕೊಟ್ಟಿದ್ದೇವೆ. ಇದಕ್ಕಿಂತ ಹೆಚ್ಚಿನ ಪನಿಷ್‌ಮೆಂಟ್ ಅದಕ್ಕೆ ಅನಾವಶ್ಯಕ.

ಶ್ರೀ ಎಸ್.ಹೆಚ್. ಕೌಜಲಗಿ : ಯುನಾನಿಮಸ್ ರೆಸಲ್ಯೂಷನ್ ಜಿಲ್ಲಾ ಪರಿಷತ್ತಿನಲ್ಲಿ ಮಾಡಿಲ್ಲ. ಸ್ವಂತ ಪ್ರೆಸಿಡೆಂಟ್‌ರವರೇ ಮುಂದಕ್ಕೆ ಹಾಕಿದ್ದಾರೆ. ನಾಲ್ಕನೆಯ ಸಾರಿಗೆ ಆಫೀಸರ್ ಅಬ್ಸೆಂಟ್ ಎಂದು ಹೇಳಿದಿರಿ. ಆದರೆ ಆಫೀಸರ್ ಬೆಂಗಳೂರಿಗೆ ಹೋಗಿದ್ದರು. ಚೀಫ್ ಸೆಕ್ರೆಟರಿ ಆಬ್ಸೆಂಟ್ ಎಂದು ಮುಂದಕ್ಕೆ ಹಾಕಿದ್ದಾರೆ. ಚೀಫ್ ಸೆಕ್ರೆಟರಿ ಆಬ್ಸೆಂಟ್ ಇದ್ದರೆ, ಡೆಪ್ಯೂಟಿ ಸೆಕ್ರೆಟರಿ ಇರುತ್ತಾರೆ. ಉಳಿದ ಆಫೀಸರ್ ಇರುತ್ತಾರೆ. ನಾಲ್ಕನೆಯ ಸಾರಿ ಮುಂದಕ್ಕೆ ಹಾಕಿರುವುದು ಸರಿಯಲ್ಲ. ಮೂರು ನಾಲ್ಕು ಸಾರಿ ಸುವೋಮೋಟೋ ಪೋಸ್ಟ್‌ಪೋನ್ ಮಾಡುತ್ತಾರೆ. ಕಾರಣ ಇಲ್ಲದೆ ಪೋಸ್ಟಪೋನ್ನ ಮಾಡುತ್ತಾರೆ ಒಂದು ರೆಸಲ್ಯೂಷನ್ ನಾಲ್ಕು ತಿಂಗಳಿಂದ ಅಪ್ರೂವ್ ಕನ್‌ಫರ್ಮ್ ಆಗಿಲ್ಲ. ಹೀಗಾಗಿ ನಾಲ್ಕು ತಿಂಗಳಿಂದ ಬೆಳಗಾಂ ಜಿಲ್ಲಾಪರಿಷತ್ತಿನ ಕೆಲಸ ನಿಂತುಹೋಗಿದೆ. ಇದಕ್ಕೆ ಕೋಟ್ಯಾಂತರ ರೂಪಾಯಿಯನ್ನು ಖರ್ಚು ಮಾಡಬೇಕಾಗಿದೆ. ಸರ್ಕಾರದವರು ನಾವು ಏನು ಮಾಡುವುದಕ್ಕೆ ಬರುವುದಿಲ್ಲ ಅಂದರೆ, ಯಾರು ಕ್ರಮ ತೆಗೆದುಕೊಳ್ಳುತ್ತಾರೆಂದು ನಾನು ಕೇಳುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಚೀಫ್ ಮಿನಿಸ್ಟರ್‌ರವರು ಹ್ಯಾಂಡ್‌ಲೂಮ್ಸ್ ಅಂಡ್ ಪವರ್‌ಲೂಮ್ಸ್ ಪಾಲಿಸಿ ಡಿಸಿಷನ್ ಮಾಡಲಿಕ್ಕೆ ಬೆಂಗಳೂರಿಗೆ ಕರೆದಿದ್ದಾರೆ. ಅದರ

ಸಲುವಾಗಿ ಅವರು ಹೋಗಿದ್ದಾರೆ. ಹೋಗಿದ್ದಕ್ಕಾಗಿ ಮುಂದಕ್ಕೆ ಹಾಕಿದ್ದೇವೆಂದು ಅವರು ಹೇಳಿದರು.

ಶ್ರೀ ಎಸ್.ಹೆಚ್. ಕೌಜಲಗಿ : ಚೀಫ್ ಸೆಕ್ರೆಟರಿ ಇಲ್ಲದಿದ್ದರೆ ಡೆಪ್ಯೂಟಿ ಸೆಕ್ರೆಟರಿ ಇರುತ್ತಾರೆ.

ಶ್ರೀ ಕೆ.ಹೆಚ್. ಪಾಟೀಲ್ : ನಾನು ಇಲ್ಲ ಎಂದು ಹೇಳಲಿಲ್ಲ. ಪ್ರೆಸಿಡೆಂಟರು ಹೇಳಿದರು. ಅದು ಸೂಕ್ತವಿರಲಿ, ಇಲ್ಲದಿರಲಿ, ಎಲ್ಲರೂ ಒಪ್ಪಿದ್ದೀರೆಂದೂ ತಿಳಿದುಕೊಂಡು ನಾನು ಸುಮ್ಮನಾದೆ. ಆದರೆ ಹೀಗೆ ಮಾಡುವುದು ಸರಿಯಲ್ಲ. ಇನ್ನು ಮೇಲೆ ಹೀಗೆ ಮಾಡಬಾರದೆಂದು ನಾವು ತಿಳಿಸಿದ್ದೇವೆ. ಸೆಕ್ರೆಟರಿ ಇರಲಿ, ಅಥವಾ ಸತ್ತಿರಲಿ, ಇದ್ದವರ ಮೇಲೆ ಅದು ನಡೆಯಬೇಕು.

ಶ್ರೀ ಬಾಬುಗೌಡ ರುದ್ರನಗೌಡ ಪಾಟೀಲ್ : ಇಂತಹ ಅವಕಾಶ ಮುಂದೆ ಆಗಬಾರದು ಎನ್ನುವುದನ್ನು ಶಾಸನಬದ್ಧ ನಿಯಮಗಳನ್ನು ಏನಾದರೂ ಮಾಡುತ್ತೀರಾ?

ಶ್ರೀ ಸಿ. ಬೈರೇಗೌಡ : ಈಗ ಇರತಕ್ಕ ನಿಯಮಾವಳಿಯಲ್ಲಿ ಅವರ ಮೇಲೆ ಈ ರೀತಿಯಾಗಿ ಅನಾವಶ್ಯಕವಾಗಿ ಸಭೆಯನ್ನು ೪ ತಿಂಗಳು ಮುಂದೂಡುತ್ತಿದ್ದರೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ.

ಶ್ರೀ ಕೆ.ಹೆಚ್. ಪಾಟೀಲ್ : ಈಗ ಇರುವಂತಹ ಕಾನೂನಿನಲ್ಲಿಯೂ ಲೋಪದೋಷಗಳು ಇಲ್ಲ. ಮೀಟಿಂಗನ್ನು ಸೆಕ್ರೆಟರಿ ಅಥವಾ ಪ್ರೆಸಿಡೆಂಟ್ ಇಲ್ಲದೆ ಇದ್ದರೆ, ಮೀಟಿಂಗನ್ನು ಮುಂದಕ್ಕೆ ಹಾಕಬೇಕೆಂದು ಎಲ್ಲಿಯೂ ಇಲ್ಲ. ಅವರು ಇಲ್ಲದಿದ್ದರೆ ವೈಸ್ ಪ್ರೆಸಿಡೆಂಟ್ ನಡೆಸಬೇಕು. ಸೆಕ್ರೆಟರಿ ಇಲ್ಲದಿದ್ದರೆ ಡೆಪ್ಯೂಟಿ ಸೆಕ್ರೆಟರಿ ನಡೆಸಬೇಕು. ಆದರೆ ತಪ್ಪನ್ನು ಮಾಡಿದ್ದಾರೆ, ಅದಕ್ಕೆ ಈ ಕಾನೂನಿನೊಳಗೂ ಬರುತ್ತದೆ, ಮುಂದೂ ನಿಮ್ಮ ಕಾನೂನಿಗೆ ಬರುತ್ತದೆ. ಆಗ ನೀವು ಏನು ತಿದ್ದುಪಡಿ ಮಾಡುತ್ತೀರು, ಅದಕ್ಕೆ ನಾವು ಒಪ್ಪುತ್ತೇವೆ.

ಕೃಷ್ಣಾ ಕಣಿವೆ ಯೋಜನೆಗಳು

2281 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಭಾರಿ ಹಾಗೂ ಮಧ್ಯಮ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಕೃಷ್ಣಾ ಕಣಿವೆ ಕೊಳ್ಳದ ರಾಜ್ಯದ ಹಕ್ಕಿನ ನೀರಿನ ಪಾಲಿನ ಯೋಜನೆಗಳಿಗೆ ಎಷ್ಟು ಹಣ ಬೇಕಾಗುತ್ತದೆ?

ಆ) 2000ದ ಇಸವಿಯೊಳಗಾಗಿ ಈ ಯೋಜನೆಗಳನ್ನು ಮುಗಿಸಲು ಸರ್ಕಾರ ಯೋಜನೆಯನ್ನು ಹಾಕಿಕೊಂಡಿದೆಯೇ?

ಇ) ಈ ವರ್ಷ ಈ ಕಣಿವೆಗೆ ಸಂಬಂಧಿಸಿದ ಯೋಜನೆಗಳಿಗೆ ಆಯವ್ಯಯದಲ್ಲಿ ಎಷ್ಟು ಹಣವನ್ನು ಮೀಸಲಾಗಿಡಲಾಗಿದೆ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ಈಗಿನ ದರಗಳ ಪ್ರಕಾರ 3,600 ಕೋಟಿ ರೂಪಾಯಿಗಳು ಬೇಕಾಗುತ್ತದೆ.

ಆ) ಹೌದು.

ಇ) 180.07 ಕೋಟಿ ರೂ.ಗಳು.

ಶ್ರೀ ಬಾಬಾಗೌಡ ರುದ್ರನಗೌಡ ಪಾಟೀಲ್ : ಈ ಪ್ರಶ್ನೆಯು ಸದನದಲ್ಲಿ ಎರಡು-ಮೂರು ಸಾರಿ ಪ್ರಸ್ತಾಪವಾಗಿದೆ. ಮಾನ್ಯ ಮಂತ್ರಿಗಳು ಉತ್ತರವನ್ನು

ಕೊಟ್ಟಿದ್ದಾರೆ. 3,600 ಕೋಟಿ ರೂಪಾಯಿ ಈ ಯೋಜನೆಗೆ ಬೇಕಾಗುತ್ತದೆ. 2000 ಇಸವಿಯೊಳಗೆ ಈ ಯೋಜನೆಯನ್ನು ಮುಗಿಸಲು ಸರ್ಕಾರ ಯೋಜನೆಯನ್ನು ಹಾಕಿಕೊಂಡಿದೆಯೇ ಎಂದು ಕೇಳಿದ್ದಕ್ಕೆ ಹೌದು ಎಂದು ಹೇಳಿದ್ದಾರೆ. ಹಣಕ್ಕಾಗಿಯೇ ಈ ಯೋಜನೆಯನ್ನು ಹಾಕಿಕೊಂಡಿದ್ದಾರೆಯೇ ಎನ್ನುವಂತಹದ್ದು ನನ್ನ ಪ್ರಶ್ನೆ. 3,600 ಕೋಟಿ ರೂಪಾಯಿಯ ಇವತ್ತಿನ ಮಿತಿಗೆ ಸುಮಾರು 6-7 ಸಾವಿರ ಕೋಟಿ ರೂಪಾಯಿ ಆಗಬಹುದು. 8 ವರ್ಷದಲ್ಲಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡಬೇಕೆನ್ನುವ ಬಗ್ಗೆ ಹಣಕಾಸನ್ನು ಒದಗಿಸುವಂಥ ಯೋಜನೆಯನ್ನು ಕೊಟ್ಟಿದ್ದರೆ ನಮಗೆ ನಂಬಿಕೆಯಾಗುತ್ತಿತ್ತು. ಕೇವಲ 180 ಕೋಟಿ ರೂಪಾಯಿಯನ್ನು ಕೊಟ್ಟಿದ್ದೇವೆಂದರೆ ಈ ಯೋಜನೆಯು ಮುಗಿಯುತ್ತದೆ ಎನ್ನುವ ಭರವಸೆ ನನಗೆ ಇಲ್ಲ. ಆ ಕಾರಣ ರೈತರಿಗೆ ತಮ್ಮ ಹಕ್ಕನ್ನು ಉಳಿಸಿಕೊಳ್ಳಲಿಕ್ಕೆ ಕಾವೇರಿ ವಾಟರ್ ಬಗ್ಗೆ ಏನು ಒಂದು ಕಾನೂನನ್ನು ತಂದಿದ್ದೀರಿ ಅದೇ ರೀತಿ ಕೃಷ್ಣಾ ವಾಟರ್ ಪ್ರೊಟೆಕ್ಷನ್ ಬಗ್ಗೆ ಒಂದು ಬಿಲ್ಲನ್ನು ತಂದು ಸಭೆಯ ಮುಂದಿಟ್ಟು ನೀರಿನ ಹಕ್ಕಿನ ರಕ್ಷಣೆಯನ್ನು ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಮಲ್ಲಾರಿ ಗೌಡ ಪಾಟೀಲ್ : ಅಪ್ಪರ್ ಕೃಷ್ಣಾ ಯೋಜನೆಗೆ ವಿಶ್ವ ಬ್ಯಾಂಕಿನಿಂದ ನಾವು ನೆರವನ್ನು ಪಡೆಯುತ್ತಿದ್ದೇವೆ. ಉಳಿದ ಯೋಜನೆಗೆ 3,600 ಕೋಟಿ ರೂಪಾಯಿ ಬೇಕೆಂದು ನಾನು ಉತ್ತರದಲ್ಲಿ ಹೇಳಿದ್ದೇನೆ. ಇದರ ಬಗ್ಗೆ ಈಗಾಗಲೇ ಸದನದಲ್ಲಿಯೂ ಹೇಳಿದ್ದೇನೆ. ಕೇಂದ್ರ ಸರ್ಕಾರದಿಂದ ಈ ಎಲ್ಲಾ ಯೋಜನೆಗಳ ಬಗ್ಗೆ ಇರಿಗೇಷನ್ ಬಾಂಡ್ ಮಾಡಲಿಕ್ಕೆ ಏನಾದರೂ ಅವರು ಅವಕಾಶ ಕೊಟ್ಟರೆ ಈ ಯೋಜನೆಯನ್ನು ಬೇಗ ಮಾಡಿ ಮುಗಿಸಬಹುದು. ಇಲ್ಲದೆ ಹೋದರೆ ಇದರ ಬಗ್ಗೆ ನಾವು ಯೋಗ್ಯವಾದಂತಹ ಕಾರ್ಯಕ್ರಮ ಏನಾದರೂ ತೆಗೆದುಕೊಳ್ಳಬೇಕಾಗುತ್ತದೆ. ಇದು ಬಜಾವತ್ ಅವಾರ್ಡ್ ಇರುವುದರಿಂದ, ಕಾವೇರಿ ಬೆಸಿನ್‌ನಲ್ಲಿ ಯಾವರೀತಿ ಮಾಡುತ್ತಿದ್ದೇವೆ ಆ ಅವಶ್ಯಕತೆ ನನಗಂತೂ ಕಂಡುಬರುವುದಿಲ್ಲ.

ಶ್ರೀ ಬಾಬಾಗೌಡ ರುದ್ರನಗೌಡ ಪಾಟೀಲ್ : ಈ ರೀತಿಯ ಉತ್ತರ ಬೇಡ ಜನರಿಗೆ ಭರವಸೆಯು ಬರುವಂತಹ ಉತ್ತರ ಏನಾದರೂ ಕೊಡುತ್ತೀರಾ? ಕೊನೆಯ ಪಕ್ಷ ಕಾನೂನಿನಿಂದ ರಕ್ಷಣೆಯನ್ನು ಮಾಡುತ್ತೀರಾ ಹೇಗೆ?

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ : ಬಚಾವತ್ ಅವಾರ್ಡ್ ಪ್ರಕಾರ ಅದರ ಹಕ್ಕು ನಮಗೆ ಇದೆ. ನಾವು ಎಷ್ಟು ನೀರನ್ನು ಉಪಯೋಗ ಮಾಡಬೇಕು ಎಂಬುದು ಈಗಾಗಲೇ ನಿರ್ಣಯವಾಗಿದೆ. ಆ ದೃಷ್ಟಿಯಿಂದ ನಾವು ಕಾವೇರಿ ಬೆಸಿನ್‌ನಲ್ಲಿ ಯಾವ ವಿಧೇಯಕವನ್ನು ಮಾಡಿದ್ದೇವೆ, ಆ ವಿಧೇಯಕವನ್ನು ಮಾಡುವುದಕ್ಕೆ ಅವಶ್ಯಕತೆ ಇಲ್ಲ. ಆ ದೃಷ್ಟಿಯಿಂದ ನಾನು ಉತ್ತರ ಕೊಡುತ್ತಿದ್ದೇನೆ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ನಾನು ಇದೇ ಪ್ರಶ್ನೆಯನ್ನು ಕೇಳೋಣವೆಂದು ಎದ್ದಿರುವುದು. ಇವತ್ತಿನ ರೇಟ್ಸ್ ಪ್ರಕಾರ 3,600 ಕೋಟಿ ರೂಪಾಯಿ ಆಗುತ್ತದೆ ಈ ವರ್ಷ 180 ಕೋಟಿ ರೂಪಾಯಿಯನ್ನು ಒದಗಿಸಿದ್ದಾರೆ.

ಸಾಮಾನ್ಯ ಗಣಿತದ ಪ್ರಕಾರ ಇನ್ನೂ 20 ವರ್ಷ ಬೇಕು ಪ್ರೈಸ್ ಎಸ್ಕಲೇಷನ್ ಆದರೆ ಇನ್ನೂ ಎಷ್ಟು ವರ್ಷ ಬೇಕಾಗುತ್ತದೆ ಎಂಬುದು ನಮಗೆ ಗೊತ್ತಿಲ್ಲ. ಈಗ ಮಂತ್ರಿಗಳು ಹೇಳುತ್ತಿದ್ದಾರೆ, ಇರಿಗೇಷನ್ ಬಾಂಡ್‌ಗಳನ್ನು ಫ್ಲೋಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು. ನಾನು ಒಬ್ಬ ರೈತರ ಪ್ರತಿನಿಧಿಯಾಗಿ ಈ ಸರ್ಕಾರಕ್ಕೆ ಹೇಳುತ್ತಿರುವ ಮಾತು ಏನೆಂದರೆ, ಇವರು ಕೆಲಸ ಮಾಡುವ ರೀತಿ ನೋಡಿ

ಯಾವ ರೈತರೂ ಇವರ ಇರಿಗೇಷನ್ ಬಾಂಡ್‌ಗಳನ್ನು ಕೊಂಡುಕೊಳ್ಳುವುದಿಲ್ಲ. ಆ ಆಲೋಚನೆಯನ್ನು ತಾವು ದಯವಿಟ್ಟು ಕೈಬಿಡಬೇಕು. ಹಿಂದೆ ಇದ್ದ ಹಣಕಾಸು ಮಂತ್ರಿಯವರೂ ಆ ಆಲೋಚನೆಯನ್ನು ಕೈಬಿಟ್ಟಿದ್ದರು. ಏಕೆಂದರೆ ಅವರಿಗೆ ರೈತರ ಬಗ್ಗೆ ಸ್ವಲ್ಪ ಮಾಹಿತಿ ಇದ್ದಿರಬಹುದು. ಈ ಸರ್ಕಾರದ ಬಗ್ಗೆ ವಿಶ್ವಾಸವನ್ನು ಇಟ್ಟುಕೊಂಡು ಯಾವ ರೈತನೂ ಇದರ ಇರಿಗೇಷನ್ ಬಾಂಡನ್ನು ಕೊಂಡುಕೊಳ್ಳುವುದಿಲ್ಲ. ಇನ್ನು ಹತ್ತು ವರ್ಷಕ್ಕೆ ನೀರು ಕೊಡುತ್ತೇವೆ ಎಂದರೆ ಖಂಡಿತವಾಗಿಯೂ ಇರಿಗೇಷನ್ ಬಾಂಡನ್ನು ಕೊಂಡುಕೊಳ್ಳುವುದಿಲ್ಲ. It is totally irrelevent to him if you assure him irrigation in the coming 20 or 30 years.

ಹಿಂದೆ ಇದ್ದ ಸರ್ಕಾರ ರೈತರ ಬಗ್ಗೆ ಏನು ಮಾಡಿದೆ, ಈಗಿರುವ ಸರ್ಕಾರ ಏನು ಮಾಡುತ್ತದೆ, ಇದನ್ನು ನೋಡಿ ನೀವು ರೈತರ ಹಕ್ಕುಗಳನ್ನು ರಕ್ಷಣೆ ಮಾಡುತ್ತೀರಿ ಎನ್ನುವ ವಿಶ್ವಾಸ ನಮಗಂತೂ ಹೋಗಿದೆ. ಈ ಬಗ್ಗೆ ನಿನ್ನೆ ಒಂದು ಪ್ರಶ್ನೆ ಕೇಳಿದ್ದೆ. ಕಾವೇರಿ ಬೇಸಿನ್‌ಗೆ ಮಾಡಿರುವಂಥ ಕಾನೂನನ್ನು ಕೃಷ್ಣ ಬೇಸಿನ್‌ಗೂ ಮಾಡುತ್ತೀರಾ ಎಂದು ಕೇಳಿದ್ದೆ. ಮಾಡುವ ಅವಶ್ಯಕತೆ ಇಲ್ಲವೆಂದು ನಿನ್ನೆ ಉತ್ತರ ಕೊಟ್ಟಿದ್ದಾರೆ. ಮಂತ್ರಿಗಳು ನಿನ್ನೆ ಇರಲಿಲ್ಲ, ನಾಳೆ ಬಂದು ಉತ್ತರ ಕೊಡುತ್ತೇನೆ ಎಂದು ಹೇಳಿದ್ದರು. ನಾನು ಆಯಿತು ಎಂದು ಹೇಳಿದ್ದೆ. ಅದರ ಅವಶ್ಯಕತೆ ಉಂಟು. ಏಕೆಂದರೆ ಈ ಕಾನೂನಿನ ಪ್ರಕಾರ ನೀವು ಪ್ರಜೆಗಳ ಕೈಗೆ ಹಕ್ಕನ್ನು ಕೊಡುತ್ತಾ ಇದ್ದೀರಿ. ನಿಮಗೆ ರಕ್ಷಣೆ ಮಾಡುವುದಕ್ಕೆ ಶಕ್ತಿ ಇಲ್ಲ, ಆದರೆ ಹಕ್ಕನ್ನು ಕೊಡುವಂಥ ಒಂದು ಕಾನೂನನ್ನು ಆದರೂ ಮಾಡಲೇಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಹಿರಿಯ ಸದಸ್ಯರಾದ ಪ್ರೊ. ನಂಜುಂಡಸ್ವಾಮಿಯವರು ಹೇಳಿದ ಹಾಗೆ, ಈ ಯೋಜನೆಗಳಿಗೆ ನಿರ್ದಿಷ್ಟವಾದ ಹಣಕಾಸಿನ ವ್ಯವಸ್ಥೆಯನ್ನು ಮಾಡಲೇಬೇಕಾಗುತ್ತದೆ. ಅವರು ಹೇಳಿದ್ದಾರೆ ರೈತರು ಈ ಇರಿಗೇಷನ್ ಬಾಂಡನ್ನು ತೆಗೆದುಕೊಳ್ಳುವುದಿಲ್ಲ, ಬಾಂಡ್‌ಗಳಿಗೆ ಅಷ್ಟು ಬೆಲೆ ಬರುವುದಿಲ್ಲ ಎಂದು. ಇದು ಅವರ ಅಭಿಪ್ರಾಯ ಇರಬಹುದು. ನಾವು ಸರ್ಕಾರದಲ್ಲಿ ಇರುವುದರಿಂದ, ಪ್ರಯತ್ನವನ್ನು ಮಾಡಲೇಬೇಕಾಗುತ್ತದೆ. ಆ ದೃಷ್ಟಿಯಿಂದ ನಾವು ಪ್ರಯತ್ನವನ್ನು ಮಾಡುತ್ತಿದ್ದೇವೆ; ಆ ಪ್ರಯತ್ನದಲ್ಲಿ ಯಶಸ್ಸು ಸಾಮಾನ್ಯವಾಗಿ ಸಿಗುತ್ತದೆ ಎಂದು ನನಗಂತೂ ಇದೆ. ಬಚಾವತ್ ಅವಾರ್ಡ್ ಪ್ರಕಾರ ಈ ಕೃಷ್ಣ ಬೇಸಿನ್‌ನಲ್ಲಿ ಸುಮಾರು 757 ಟಿಎಂಸಿ ನೀರನ್ನು ಈಗಾಗಲೇ ನಮಗೆ ನಿಗಧಿ ಮಾಡಿದ್ದಾರೆ. ಅದು ಕಾವೇರಿ ಬೇಸಿನ್‌ನಲ್ಲಿ ಇನ್ನೂ ತೀರ್ಮಾನವಾಗದೇ ಇರುವುದರಿಂದ ನಾವು ಆ ವಿಷಯಕ್ಕೆ ಕೈಹಾಕಬೇಕಾಗಿದೆ. ಕೃಷ್ಣ ಬೇಸಿನ್‌ನಲ್ಲಿ ನೀರಿನ ಬಗ್ಗೆ ತೀರ್ಮಾನವಾಗಿರುವುದರಿಂದ, ಈ ರೀತಿಯೂದ ಪ್ರಶ್ನೆ ಉದ್ಭವವಾಗುವುದಿಲ್ಲವೆಂದು ನನ್ನ ಭಾವನೆ. ಮಾನ್ಯ ಸದಸ್ಯರು ವಿಶೇಷವಾಗಿ ಏನಾದರೂ ಚರ್ಚೆ ಮಾಡಬೇಕೆಂದು ಇದ್ದರೆ ನಾನು ಅವರ ಜೊತೆಯಲ್ಲಿ ಚರ್ಚೆ ಮಾಡಲಿಕ್ಕೆ ನಾನು ಸಿದ್ಧನಿದ್ದೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ತಾವು ಕೊಡುತ್ತಿರುವ ಅಂಕಿಅಂಶ ಬಚಾವತ್ ಅವಾರ್ಡ್‌ನ ಸ್ಕೀಮ್ 'ಎ' ಪ್ರಕಾರ. Scheme 'B' relates to suplus water. ಅದರ ಬಗ್ಗೆ ಅವರು ಅಂಕಿಅಂಶವನ್ನು ಕೊಡುತ್ತಿಲ್ಲ. ಸರ್‌ಪ್ಲಸ್ ವಾಟರನ್ನು ನೀವು ಉಪಯೋಗಿಸಿಕೊಳ್ಳದೇ ಇದ್ದರೆ ನಾವು ಆ ಹಕ್ಕನ್ನು ಕಳೆದುಕೊಳ್ಳುತ್ತೇವೆ. ಆ ಹಕ್ಕನ್ನು ನಮಗೆ ಕೊಡುವ ರೀತಿಯಲ್ಲಿ ನೀವು ಕಾನೂನನ್ನು ಮಾಡಲೇಬೇಕು. ಹಾಗೆ ಮಾಡದೇ ಹೋದರೆ, ನೀವು ಜನಗಳ ಶಾಪಕ್ಕೆ ಗುರಿಯಾಗುತ್ತೀರಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನಮ್ಮ ಹಕ್ಕನ್ನು ಕಾಪಾಡಿಕೊಳ್ಳಲು ಈಗಾಗಲೇ ನಾವು ಯೋಜನೆಗಳನ್ನು ಶೀಘ್ರವಾಗಿ ಮಾಡಲು ಪ್ರಯತ್ನಪಡುತ್ತಿದ್ದೇವೆ. 2000 ಇಸವಿಯೊಳಗೆ ಆ ಹಕ್ಕನ್ನು ಕಾಪಾಡದಿದ್ದರೆ ಮಾತ್ರ ಆ ಪ್ರಶ್ನೆ ಬರುತ್ತದೆ. ಮಾನ್ಯ ಸದಸ್ಯರಾದ ನಂಜುಂಡಸ್ವಾಮಿಯವರು ಯಾವ ರೀತಿಯಾದ ಸಲಹೆಯನ್ನು ಕೊಟ್ಟಿದ್ದಾರೆ, ಅದನ್ನು ಗಮನದಲ್ಲಿಟ್ಟುಕೊಂಡು ಈ ಯೋಜನೆಯನ್ನು ಶೀಘ್ರವಾಗಿ ಕಾರ್ಯಗತ ಮಾಡುವ ಪ್ರಯತ್ನವನ್ನು ನಾವು ಮಾಡುತ್ತೇವೆಂಬ ವಿಶ್ವಾಸ ನನಗಿದೆ. ಈ ಬಗ್ಗೆ ಅವರೂ ಕೂಡ ವಿಶ್ವಾಸ ಇಟ್ಟುಕೊಳ್ಳಬೇಕೆಂದು ಈ ಸದನದ ಮೂಲಕ ಅವರಿಗೆ ಕೋರುತ್ತೇನೆ.

ಡಾ॥ ಎ.ಬಿ. ಮಲ್ಕಾರೆಡ್ಡಿ : ಸರ್ಕಾರವು ಒದಗಿಸಿರುವ ಉತ್ತರದ ಪ್ರಕಾರ ಬಹಳ ಅಸಂಬದ್ಧತೆ ಇದೆ. ಮಂತ್ರಿಗಳು 2000 ಇಸವಿಯೊಳಗೆ ಈ ಎಲ್ಲಾ ಯೋಜನೆಗಳನ್ನು ಕಂಪ್ಲೀಟ್ ಮಾಡುತ್ತೇವೆ ಎಂದು ಹೇಳಿದ್ದಾರೆ, ಹಾಗೂ ಅದಕ್ಕಾಗಿ 3,600 ಕೋಟಿ ರೂ.ಗಳು ಬೇಕೆಂದೂ ಸಹ ಹೇಳಿದ್ದಾರೆ. ಇದರ ಗಂಭೀರತೆಯನ್ನು ಅರಿತು ಸರ್ಕಾರವು ಈ ಯೋಜನೆಗೆ ಹಣವನ್ನು ಒದಗಿಸುತ್ತದೆ ಎಂದು ನಾವೂ ನಂಬಿರುತ್ತೇವೆ, ಜನರೂ ನಂಬಿರುತ್ತಾರೆ. ಈ ವರ್ಷ 180 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಒಂದು ಸಲ 180 ಕೋಟಿ ಕೊಡುತ್ತಾರೆ, ಇನ್ನೊಂದು ಸಲ 200 ಕೋಟಿ ರೂ.ಗಳನ್ನು ಕೊಡುತ್ತಾರೆ. ಅವರು ಕೊಟ್ಟಂಥ ಹಣ ಕೂಡ ಈ ಯೋಜನೆಗಳಿಗೆ ಸರಿಯಾಗಿ ಖರ್ಚಾಗುತ್ತಿಲ್ಲ. ಇದು ಸರ್ಕಾರ ಕೊಟ್ಟಂಥ ಅಂಕಿಅಂಶಗಳಿಂದಲೇ ಗೊತ್ತಾಗುತ್ತದೆ. ಕೊಡುತ್ತಿರುವ ಹಣ ಕಡಿಮೆ. ಇವರು ಇದೇ ಆವರೇಜ್‌ನಲ್ಲಿ ಕೊಡುತ್ತಾ ಹೋದರೂ, 9 ವರ್ಷದಲ್ಲಿ 1,620 ಕೋಟಿ ರೂ.ಗಳಾಗುತ್ತದೆ. ಆದರೆ ಯೋಜನೆಗೆ ಬೇಕಾಗಿರುವ ಹಣ 3,600 ಕೋಟಿ ರೂ.ಗಳು. ಇದರಿಂದ ಮತ್ತೆ ಎಸ್ಕಲೇಷನ್ ಆಗುತ್ತದೆ. ಎಸ್ಕಲೇಷನ್‌ನಿಂದ 9 ವರ್ಷದಲ್ಲಿ ಇದಕ್ಕೆ ನನಗೆ ತಿಳಿದ ಮಟ್ಟಿಗೆ 5,000 ಕೋಟಿ ರೂಪಾಯಿಗ್ಗಳು ಬೇಕಾಗುತ್ತದೆ. ನೀವು ಕೊಡತಕ್ಕಂಥ ಹಣ ಕಡಿಮೆ. ಕಡಿಮೆ ಹಣ ಕೊಟ್ಟರೂ ಕೂಡಾ ಅದನ್ನು ಖರ್ಚು ಮಾಡುವುದಿಲ್ಲ. ಉದಾಹರಣೆಗೆ: ಯುಕೆಪಿಗೆ ನೀವು 731 ಟಿಎಂಸಿ ಖರ್ಚು ಮಾಡುಬೇಕು. ಯುಕೆಪಿ ಪಾಲು 173 ಟಿಎಂಸಿ. ಈ 173 ಟಿಎಂಸಿಗೆ ವಿಶ್ವ ಬ್ಯಾಂಕ್ ನಿಂದ ಧನ ಸಹಾಯ ಇದೆ. ಈ ವಿಶ್ವ ಬ್ಯಾಂಕ್ ಧನ ಸಹಾಯ ಯಾವ ಪ್ರಾಜೆಕ್ಟ್‌ಗೆ ಸಿಗುತ್ತದೆ, ಅದರಲ್ಲೂ ಕೂಡಾ ನೀವು ಸಾಕಷ್ಟು ಕೆಲಸ ಮಾಡುತ್ತಿಲ್ಲ, ಹಣ ಅಲ್ಲಿ ಕೂಡ ಉಳಿತಾಯವಾಗುತ್ತದೆ. ಇದಕ್ಕಾಗಿ ಹೋದ ಸಲ 120 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಈ ಸಲ 80 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ನೀವು 80 ಕೋಟಿ ಕೂಡ ಖರ್ಚು ಮಾಡಿಲ್ಲ, ಒಂದು ಕಡೆ ಹಣ ಇಲ್ಲ, ಇನ್ನೊಂದು ಕಡೆ ಆಮೆ ವೇಗದಿಂದ ಹೋಗುತ್ತಿದ್ದೀರಿ. ಇದರಿಂದ ಸರ್ಕಾರದಲ್ಲಿ ಗಂಭೀರತೆ ಇದೆಯೇ? ಯಾಂತ್ರಿಕವಾಗಿ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು ಈ ರೀತಿ ಉತ್ತರ ಕೊಡುತ್ತಾ ಹೋದರೆ, ಏನೂ ಪ್ರಯೋಜನವಿಲ್ಲ. ನೀವು ಸದನಗಳಲ್ಲಿ ಜನರಿಗೆ ಕಾರ್ಯರೂಪಕ್ಕೆ ತರುವುದಾಗಿ ಆಶ್ವಾಸನೆ ಕೊಡುತ್ತೀರಿ. ಖಚಿತವಾಗಿ, ಗಂಭೀರವಾಗಿ ಹಣವನ್ನು ಒದಗಿಸಲಿಕ್ಕೆ ಮತ್ತು ಒದಗಿಸಿದ ಹಣವನ್ನು ಖರ್ಚು ಮಾಡಲಿಕ್ಕೆ ತಾವು ಯಾವ ಆಲೋಚನೆ ಮಾಡಿದ್ದೀರಿ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಉಪಸಭಾಪತಿಗಳಾಗಿ ಕೆಲಸ ಮಾಡಿದ್ದಾರೆ. ಬರೇ ಅಧಿಕಾರಿಗಳು ಬರೆದುಕೊಡುವಂಥದ್ದನ್ನು ಓದುವ ಸ್ವಭಾವ ನನ್ನದಲ್ಲ, ಅದರ ಬಗ್ಗೆ ಅವರಿಗೆ ಗೊತ್ತಿದೆ. ನನ್ನಲ್ಲಿರತಕ್ಕಂಥ ವಿಶೇಷವಾದಂಥ ಏನು ಅನಿಸಿಕೆ ಇದೆ, ಆ ಅನಿಸಿಕೆ ಹಿನ್ನೆಲೆಯಲ್ಲಿ ನಾನು ಈ

ಉತ್ತರವನ್ನು ಕೊಡುತ್ತಿದ್ದೇನೆ. ಮಾನ್ಯ ಶಾಸಕರಾದ ಡಾ: ಮಲಕರೆಡ್ಡಿಯವರು ಏತಕ್ಕೆ ಹಣ ಖರ್ಚಾಗುತ್ತಿಲ್ಲ ಎಂದು ಕೇಳಿದ್ದಾರೆ. ಕೆಲಸಕ್ಕೆ ನಿಗಧಿಯಾದ ಹಣ ಖರ್ಚಾಗದೆ ಹೋದರೆ ಅಂಥ ಅಧಿಕಾರಿಗಳ ಮೇಲೆ ನಾವು ಯೋಗ್ಯವಾದಂಥ ಕ್ರಮ ತೆಗೆದುಕೊಳ್ಳುವುದಕ್ಕೆ ಕೂಡ ಹಿಂದು-ಮುಂದು ನೋಡುವುದಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಪ್ರೊ. ನಂಜುಂಡಸ್ವಾಮಿಯವರ ಪ್ರಶ್ನೆಗೆ ಉತ್ತರವಾಗಿ ಕಾವೇರಿ ಜಲ ಸಂರಕ್ಷಣೆಗೆ ಏನು ಒಂದು ಆಜ್ಞೆ ಮಾಡಿದ್ದಾರೆ, ಅದೇ ರೀತಿ ಕೃಷ್ಣಾ ಬೇಸಿನ್‌ಗೆ ಮಾಡತಕ್ಕಂಥ ಅವಶ್ಯಕತೆ ಇಲ್ಲ ಎನ್ನುವ ಅರ್ಥ ಬರುವಂತೆ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಮತ್ತೆ ಪ್ರೊ: ನಂಜುಂಡಸ್ವಾಮಿಯವರು ಕೂಡಾ ಅದಕ್ಕೆ ಸಹಾಯಕವಾಗುವ ರೀತಿಯಲ್ಲಿ ಮತ್ತೊಂದು ಮರು ಪ್ರಶ್ನೆ ಕೇಳಿದ್ದಾರೆ. ಏನೆಂದರೆ, ಸರ್‌ಪ್ಲಸ್ ವಾಟರ್ ಸ್ಕೀಮ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಉತ್ತರ ಕೊಡಬೇಕಾಗುತ್ತದೆ. ಈಗಾಗಲೇ ಆಂಧ್ರಪ್ರದೇಶದವರು ತೆಲುಗು ಗಂಗಾ ಯೋಜನೆ ಪ್ರಾರಂಭ ಮಾಡಿದ್ದಾರೆ. ಈ ಹಿನ್ನಲೆಯಲ್ಲಿ ನಮಗೆ ಅಂಥ ಕಾನೂನನ್ನು ಮಾಡತಕ್ಕಂಥ ಅವಶ್ಯಕತೆ ಇದೆಯೋ ಇಲ್ಲವೊ?

ಶ್ರೀ ಎಸ್. ಮಲ್ಲಾರಿಗೌಡ ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಈಗಾಗಲೇ ಮೂರು ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ನಡೆಯುತ್ತಿದೆ. ಬರುವ ಒಂದು ತಿಂಗಳಲ್ಲಿ ಅಥವಾ ಒಂದು ತಿಂಗಳಿನ ನಂತರ ಮೂರು ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯಲ್ಲಿ ಚರ್ಚೆ ಮಾಡಿ ಒಂದು ಅಂತಿಮ ತೀರ್ಮಾನಕ್ಕೆ ಬರುವಂತೆ ಸರ್ಕಾರ ಪ್ರಯತ್ನ ಮಾಡುತ್ತಿದೆ.

ಶ್ರೀ ಕೆ.ಹೆಚ್. ರಂಗನಾಥ್ : ಇವೊತ್ತು ಒಂದು ಕಾನೂನು ಅವಶ್ಯವಾಗ ಬೇಕಾಗಿದೆ. ಕಾವೇರಿ ಬೇಸಿನ್‌ನಲ್ಲಿ ಇವೊತ್ತು ರೈತರ ಹಕ್ಕನ್ನು ಕಾಪಾಡುವುದಕ್ಕೋಸ್ಕರ ಒಂದು ಕಾನೂನನ್ನು ಮಾಡಿದ್ದೇವೆ. ಅಲ್ಲಿ ಮಾತುಕತೆಗೂ ಇದಕ್ಕೂ ಸಂಬಂಧವಿಲ್ಲ. ಅದು ಆಗಬೇಕೆಂದು ಏನಾದರೂ ವಿಚಾರ ಮಾಡಿದ್ದೀರಾ? ಆ ಒಂದು ಅನಿಸಿಕೆ ಸರ್ಕಾರದ ಮಟ್ಟದಲ್ಲಿ ಇದೆಯೇ ಹೇಗೆ?

ಶ್ರೀ ಎಸ್. ಮಲ್ಲಾರಿಗೌಡ ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಹೇಳಿದ್ದೇನೆ. ಅವಶ್ಯಕತೆ ಈಗ ಇಲ್ಲವೆಂದು ನನ್ನ ಭಾವನೆ. ನೀವು ಹಿರಿಯ ಸದಸ್ಯರಾಗಿದ್ದೀರಿ. ನೀವೇನಾದರೂ ವಿಶೇಷವಾದಂಥ ಸಲಹೆ ಹೇಳುವುದಾದರೆ ಅದನ್ನು ನಾನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, 'ಬಚಾವತ್ ಅವಾರ್ಡ್' ನಲ್ಲಿ ಎರಡು ಭಾಗ ಇದೆ. ಒಂದು ಸ್ಕೀಮ್ 'ಎ' ಮತ್ತೊಂದು ಸ್ಕೀಮ್ 'ಬಿ'. ಸ್ಕೀಮ್ 'ಎ' ನೋಟಿಫೈ ಆಗಿದೆ. ಆದರೆ, ಇದುವರೆಗೆ ಸ್ಕೀಮ್ 'ಬಿ' ನೋಟಿಫೈ ಆಗಲಿಲ್ಲ. ಸ್ಕೀಮ್ 'ಬಿ' ನೋಟಿಫೈ ಆಗದೆ ಇರುವುದರಿಂದ, ನಮಗೆ ಈ ನೀರಿನ ಮೇಲೆ ಹಕ್ಕು ಬರುವುದಿಲ್ಲ. ತಮ್ಮ ಪ್ರಶ್ನೆಗೆ ಪೂರಕವಾಗಿ ಕೇಳುತ್ತಿದ್ದೇನೆ. ಆದುದರಿಂದ, ಹಕ್ಕು ನಮಗೆ ಬರಬೇಕಾದರೆ, ಸ್ಕೀಮ್ 'ಬಿ'ಯಲ್ಲಿ ನೋಟಿಫಿಕೇಷನ್ ಆಗದೆ ಇರುವುದರಿಂದ ನಮಗೆ ಆಫನ್ ಉಳಿದಿದೆ; ಹಕ್ಕು ಬರುವುದಿಲ್ಲ, ಉಪಯೋಗಿಸಿಕೊಂಡರೆ ಹಕ್ಕು ಬರುತ್ತದೆ. ಇದು ಮುಖ್ಯವಾಗಿರತಕ್ಕ ಪ್ರಶ್ನೆ. ಆ ಕಾರಣದಿಂದ ಸ್ಕೀಮ್ 'ಬಿ'ಯನ್ನು ಟ್ರಿಬ್ಯೂನಲ್‌ನವರು ಇನ್ನೂ

ನೋಟಿಫೈ ಮಾಡಲಿಲ್ಲ. ಕೇಂದ್ರ ಸರ್ಕಾರ ಈ ಸ್ಕೀಮ್ 'ಬಿ' ಯನ್ನು ನೋಟಿಫೈ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದೆಯೇ ಇಲ್ಲವೇ ಎಂಬುದನ್ನು ತಿಳಿಸಬೇಕು. ಪರ್ಯಾಯವಾಗಿ ಶ್ರೀಮಾನ್ ರಂಗನಾಥರವರು ಏನು ಸಲಹೆ ಮಾಡಿದ್ದಾರೆ ಹಾಗೆ ನೀರಿನ ಹಕ್ಕನ್ನು ಉಪಯೋಗಿಸಿಕೊಳ್ಳುವುದಕ್ಕೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಮಾಡಿರತಕ್ಕಂಥ ಶಾಸನವನ್ನೇ ಕೃಷ್ಣಾ ಜಲಾನಯನಕ್ಕೂ ಮಾಡುವುದಕ್ಕೆ ಪ್ರಯತ್ನ ನಡೆಯಬೇಕು. ಎರಡರಲ್ಲಿ ಒಂದಾಗಬೇಕು. ಸ್ಕೀಮ್ 'ಬಿ' ಯನ್ನು ನೋಟಿಫೈ ಮಾಡಿಸಿ, ಇಲ್ಲವೇ ಈ ಹಕ್ಕನ್ನು ಪ್ರತಿಪಾದನೆ ಮಾಡುವುದಕ್ಕಾಗಿ ತಾವು ತಂದಿರತಕ್ಕಂಥ ಮತ್ತೊಂದು ಶಾಸನವನ್ನು ಮಂಜೂರು ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಎರಡನೆಯದಾಗಿ, ಕೃಷ್ಣಾ ನದಿ ನೀರಿನ ಹೆಚ್ಚಿನ ಬಳಕೆಯನ್ನು ಈವತ್ತು ಆಂಧ್ರಪ್ರದೇಶದವರು ಏನು ಮಾಡುತ್ತಿದ್ದಾರೆ, ಮುಂದೆ ಅವರು ನಾವು ಬಳಕೆ ಮಾಡಿಕೊಂಡಿದ್ದೇವೆ ಎಂಬ ಕಾರಣಕ್ಕಾಗಿ ಅಲ್ಲಿ ಹಕ್ಕನ್ನು ಪ್ರತಿಷ್ಠಾಪನೆ ಮಾಡಲು ಪ್ರಯತ್ನ ನಡೆಸಬಹುದು. ಅದಕ್ಕೆ ಪೂರ್ವಭಾವಿಯಾಗಿ ಕರ್ನಾಟಕ ಸರ್ಕಾರದ ಸಿದ್ಧತೆ ಏನು? ಇದರ ಲಾಭವನ್ನು ಪಡೆದುಕೊಳ್ಳಲು ನಿಮ್ಮ ಸಿದ್ಧತೆ ಏನು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಸಭಾಧ್ಯಕ್ಷರೇ, ಈಗಾಗಲೇ ಇದರ ಬಗ್ಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ವಿರೋಧಪಕ್ಷದ ನಾಯಕರು ಏನು ಸೂಚನೆಯನ್ನು ಕೊಟ್ಟಿದ್ದಾರೆ ಮತ್ತು ಮಾನ್ಯ ಹಿರಿಯ ಸದಸ್ಯರಾದಂತಹ ಶ್ರೀಮಾನ್ ರಂಗನಾಥ್‌ರವರು ಇದರ ಬಗ್ಗೆ ಏನು ಒಂದು ಸೂಚನೆಯನ್ನು ಕೊಟ್ಟಿದ್ದಾರೊ ಅದನ್ನು ಪರಿಶೀಲನೆ ಮಾಡಿ, ಅದು ಅವಶ್ಯಕತೆ ಕಂಡುಬಂದರೆ ಅದನ್ನು ಕೂಡ ಮಾಡಲು ಪ್ರಯತ್ನ ಮಾಡುತ್ತೇನೆ.

(ಗೊಂದಲ)

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಸಭಾಧ್ಯಕ್ಷರೇ, ಕಾನೂನನ್ನು ಮಾಡಲು ಅವಶ್ಯಕತೆ ಇಲ್ಲವೆಂದು ಹೇಳುತ್ತಿದ್ದಾರೆ.

ಸಭಾಧ್ಯಕ್ಷರು : ಅವಶ್ಯಕತೆ ಇಲ್ಲ ಎಂದು ಅವರು ಹೇಳಲಿಲ್ಲ. ನಿಮ್ಮ ಜೊತೆಯಲ್ಲಿ ಮಾತನಾಡಿ ಆಮೇಲೆ ಮಾಡುತ್ತೇನೆ ಎಂದು ಹೇಳಿದ್ದಾರೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಅಧ್ಯಕ್ಷರೆ, ನಾನು ಮಂತ್ರಿಗಳಿಗೆ ಏನು ಕೇಳುತ್ತೇನೆಂದರೆ, ಹಾಗಾದರೆ ಈ ಕಾವೇರಿ ಜಲಾನಯನದ ಬಗ್ಗೆ ಇನ್ನೂ ಅವಶ್ಯಕತೆ ಇಲ್ಲವೆಂದು ನಾನು ಹೇಳುತ್ತೇನೆ. ಅದನ್ನು ನೀವು ಒಪ್ಪಿಕೊಳ್ಳುತ್ತೀರಾ? ಈವತ್ತು ಮಸೂದೆಯನ್ನು ಮಂಡಿಸುತ್ತಿದ್ದಾರೆ. ಇವರು ಏನು ಬರೆಯುತ್ತಾರೆ ಎಂಬುದನ್ನು ಹೇಳುತ್ತೇನೆ. Section 4 of the bill Overriding effect of the Act:- "The provisions of this Act, and of any rules and orders made there under shall have effect notwith standing anything contained in any order, report or decision of any Court or Tribunal."

ಈಗ ಬಜಾವತ್ ಅವಾರ್ಡ್ ಬಂದಿದೆ. ಹೌದು. ಮಧ್ಯಾಂತರ ಆರ್ಡರ್ ಬಂದರೂ ಕೂಡ ಈ ಕಾವೇರಿ ಜಲಾನಯನದ ಬಗ್ಗೆ ಕಾನೂನನ್ನು ಮಾಡುತ್ತಿದ್ದಾರೆ. ಅದೇ ರೀತಿ 'ಬಜಾವತ್ ಅವಾರ್ಡ್' ಬಂದಿದ್ದರೂ ಕೂಡ ಕೃಷ್ಣಾ ಬೇಸಿನ್‌ಗೂ ಕಾನೂನನ್ನು ಮಾಡುವ ಅವಶ್ಯಕತೆ ಇದೆ. We are very sure that you are

incapable of utilising the surplus water, but we don't want to lose our rights because of your inefficiency and corruption.

ಆ ಕಾರಣ ಮಾಡಲೇಬೇಕು ಎಂದು ಒತ್ತಾಯ ಮಾಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಸಭಾಧ್ಯಕ್ಷರೇ, ಪ್ರೊ. ನಂಜುಂಡಸ್ವಾಮಿಯವರು ಹೇಳಿದ ಮಾತಿನ ಹಿನ್ನೆಲೆಯನ್ನು ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಸರ್ಕಾರದಲ್ಲಿ ಶಕ್ತಿ ಇರುವ ಹಾಗೆ ಸಮಾಜದಲ್ಲಿಯೂ ಕೂಡ ಶಕ್ತಿ ಇರಬೇಕಾಗುತ್ತದೆ. ಸರ್ಕಾರದ ಮೇಲೆ ಬರೇ ಒಂದು ಗೂಬೆಯನ್ನು ಕೂಡಿಸಿಕೊಂಡು ನಾವು ಬೇರೆಕಡೆ ಹೋಗಲು ಆಗುವುದಿಲ್ಲ. ಪ್ರೊ. ನಂಜುಂಡಸ್ವಾಮಿಯವರು ರೈತ ಸಮಾಜದಿಂದ ಬಂದಿದ್ದಾರೆ; ನಾನೂ ಕೂಡ ಅದೇ ಸಮಾಜದಿಂದ ಬಂದಿದ್ದೇನೆ. ಹಕ್ಕನ್ನು ಕಾಪಾಡತಕ್ಕ ಪರಿಸ್ಥಿತಿ ಬಂದರೆ, ಅವಶ್ಯಕತೆಯನ್ನು ಅನುಗುಣವಾಗಿ ಆ ಕಾರ್ಯ ನಾನು ತೆಗೆದುಕೊಳ್ಳುತ್ತೇನೆಂದು ನಾನು ಈಗಾಗಲೇ ಹೇಳಿದ್ದೇನೆ. ಇದರ ಬಗ್ಗೆ ವಿರೋಧಪಕ್ಷದ ನಾಯಕರು ಹೇಳಿದ್ದಾರೆ; ಸನ್ಮಾನ್ಯ ಹಿರಿಯ ಸದಸ್ಯರಾದ ಮಾನ್ಯ ರಂಗನಾಥ್‌ರವರೂ ಸಹ ಹೇಳಿದ್ದಾರೆ. ಅವರಿಗೂ ಕೂಡ ಹೇಳಿದ್ದೇನೆ. ನಾನು ಕಾನೂನಿನ ವ್ಯಾಪ್ತಿಯಲ್ಲಿ ಒಂದು ಸ್ವಲ್ಪ ಚರ್ಚೆಮಾಡಿ ಅವಶ್ಯಕತೆ ಇದ್ದರೆ ಅದಕ್ಕೆ ಹಿಂದೇಟು ಹಾಕುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆ ದೃಷ್ಟಿಯಿಂದ ಅವರು ಹೇಳಿದರು. ಸರ್ಕಾರ ಇನ್‌ಕೇಪಬಲ್ ಇದೆ ಎಂದು ಈ ರೀತಿಯ ಸಂಶಯ ಯಾಕೆ ಅವರಿಗೆ? ತಾವು ಕೂಡ ಅದರಲ್ಲಿ ಸಮಾವೇಶಗೊಳ್ಳಬೇಕೆಂದು ನಾನು ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ.

(ಗೊಂದಲ)

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಆದುದರಿಂದ ನಾನು ಹೇಳುತ್ತಿದ್ದೇನೆ, ಸಮಾಜದಲ್ಲಿಯೂ ಶಕ್ತಿ ಇರಬೇಕೆಂದು ಹೇಳಿದ್ರಲ್ಲಾ that is why I am asking the Government to confer rights on the people.

ಶ್ರೀ ಡಿ.ಬಿ. ಚಂದ್ರೇಗೌಡ : ಈಗ ಅವರು ಪ್ರಯತ್ನ ಮಾಡುತ್ತೇವೆ ಎಂದರೆ, ಯಾವುದಾದರೊಂದು ಪ್ರಯತ್ನಕ್ಕೆ ಹೊಸ ರೂಪ ಬರಬೇಕು. ನಾವು ಇದಕ್ಕಾಗಿಯೇ ಪದೇ ಪದೇ ರಾಜ್ಯಸರ್ಕಾರ ತನ್ನ ಹಣ ಖರ್ಚು ಮಾಡಿ ಎಷ್ಟು ಸಾಧ್ಯವೋ ಅಷ್ಟನ್ನು ಮಾಡಬಹುದು. ಫಲಾನುಭವಿಗಳನ್ನು ಕೂಡ ಇಂತಹ ಕ್ರಮವನ್ನು ಜಾರಿಗೊಳಿಸಲು ಬಳಕೆ ಮಾಡಿಕೊಳ್ಳಬಹುದು. ಅದಕ್ಕಾಗಿ ಪದೇ ಪದೇ ನಾವು ನೀರಾವರಿಯ ಬಾಂಡ್‌ಗಳನ್ನಾದರೂ ಮಾಡಿ, ರೈತರನ್ನು ಇದರಲ್ಲಿ ಇನ್‌ವಾಲ್ವ್ ಮಾಡಿ, ಸ್ವಲ್ಪಮಟ್ಟಿಗೆ ಅದರ ಲಾಭವನ್ನು ತೆಗೆದುಕೊಳ್ಳಿ ಎಂದು ಹಣಕಾಸಿನ ಇಂದಿನ ಪರಿಸ್ಥಿತಿಯನ್ನು ನೋಡಿದರೆ ಇನ್ನು 20 ವರ್ಷಗಳಾದರೂ ಈ ಪ್ರಾಜೆಕ್ಟ್‌ಗಳನ್ನು ಮುಗಿಸಲು ನಮ್ಮಿಂದ ಆಗುವುದಿಲ್ಲ.

ಅಧ್ಯಕ್ಷರು : ಅದನ್ನೇ ಸ್ಪಷ್ಟವಾಗಿ ಹೇಳಿದ್ದಾರೆ. ನೀರಾವರಿ ಬಾಂಡ್‌ಗಳನ್ನು ಮಾಡುತ್ತೇನೆಂದು.

ಶ್ರೀ ಡಿ.ಬಿ. ಚಂದ್ರೇಗೌಡ : ಯಾಕೆಂದರೆ ಕಾವೇರಿ ಜಲಾನಯನ ಪ್ರದೇಶದಲ್ಲಿರುವ ತೊಂದರೆಗಳು ಕೃಷ್ಣಾ ಜಲಾನಯನ ಪ್ರದೇಶದಲ್ಲಿಲ್ಲ.

ಅಧ್ಯಕ್ಷರು : ಅದನ್ನು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಾರೆ. He has not ruled out that possibility.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಅಧ್ಯಕ್ಷರೆ, ಈ ಸದನದಲ್ಲೇ ಎರಡು ಅಭಿಪ್ರಾಯಗಳಿವೆ. ವಿರೋಧಪಕ್ಷದ ನಾಯಕರು ನೀರಾವರಿ ಬಾಂಡ್‌ಗಳನ್ನು ಮಾಡಬೇಕೆಂದು ಹೇಳುತ್ತಾರೆ. ಪ್ರೊ. ನಂಜುಂಡಸ್ವಾಮಿಯವರು ಬಾಂಡ್‌ಗಳನ್ನು ಮಾಡುವುದು ಸರಿಯಲ್ಲವೆಂದು ಹೇಳುತ್ತಾರೆ. ಅವರು ಅದರ ಅವಶ್ಯಕತೆ ಇಲ್ಲವೆನ್ನುವ ಹಿನ್ನೆಲೆಯಲ್ಲಿ ಮಾತನಾಡುತ್ತಿದ್ದಾರೆ. ನನಗೆ ವಿಶ್ವಾಸ ಇದೆ ಈ ನೀರಾವರಿ ಬಾಂಡ್ ಗಳಿಗೆ ಕೇಂದ್ರ ಸರ್ಕಾರದವರು ಏನಾದರೂ ಒಪ್ಪಿಗೆ ಕೊಟ್ಟರೆ ಅದು ಯಾವುದೇ ಪರಿಸ್ಥಿತಿಯಲ್ಲಿಯೂ ನಾವು ಸಕ್ಸಸ್ ಆಗುತ್ತೇವೆ. ಈ ಯೋಜನೆಗಳನ್ನು ಪೂರ್ಣ ಮಾಡಲಿಕ್ಕೆ.

Mr. SPEAKER - ಸರಿ. I Wish you all the best

ನೀರಾವರಿ ಯೋಜನೆ

2276 - ಶ್ರೀ ಅಲ್ಲಂ ವೀರಭದ್ರಪ್ಪ (ಕೆರೆಗೋಡು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ ಮೂರು ವರ್ಷಗಳಲ್ಲಿ ಅನುಮೋದಿಸಲಾದ ಸಣ್ಣ ನೀರಾವರಿ ಯೋಜನೆಗಳ ಸಂಖ್ಯೆಯೆಷ್ಟು?

ಆ) ಮೇಲ್ಕಂಡ ಯಾವುದೇ ಯೋಜನೆಗಳನ್ನು ಕಾರ್ಯರೂಪಕ್ಕೆ ತರದಿರಲು ಕಾರಣಗಳೇನು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಸಣ್ಣ ನೀರಾವರಿ ಕಾ.ಜ.ಏ.ನಿ.ಕೃ.ಜಾ.ಭಿ. ನಿ.ಒಟ್ಟು

ಬೆಂಗಳೂರು	ಮೈಸೂರು	ಬಿಜಾಪುರ
56	60	116

ಆ) ಸಣ್ಣ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಕಾರಣಗಳು. ವಿವರವಾದ ತನಿಖೆ ನಡೆಸಬೇಕಾದ್ದರಿಂದ, ಅರಣ್ಯ ಭೂಮಿ ಬಿಡುಗಡೆಯಾಗದೇ ಇರುವುದರಿಂದ, ಭೂ ಸ್ವಾಧೀನ ತಡೆಯಿಂದಾಗಿ, ಹಾಗೂ ಸಾಕಷ್ಟು ಅನುದಾನವನ್ನು ಆಯವ್ಯಯದಲ್ಲಿ ಮಾಡದಿರುವುದು.

ನಿಗಮದ ನಿಯಮದಂತೆ, ಯೋಜನಾ ವೆಚ್ಚದ ಶೇಕಡ 15ರಷ್ಟು ಹಣವನ್ನು ಫಲಾನುಭವಿಗಳು ತುಂಬಲು ನಿರಾಕರಿಸಿರುವುದರಿಂದಲೂ, ಹಾಗೂ ನಿಗಮ ಮತ್ತು ನಬಾರ್ಡ್‌ಗಳ ಮಧ್ಯ ಯೋಜನಾ ವರದಿಗಳನ್ನು ತಯಾರಿಸುವಲ್ಲಿ ಮತ್ತು ವರದಿಗಳಲ್ಲಿ ಅವಶ್ಯಕ ಅಳವಡಿಕೆಗಳನ್ನು ಪ್ರಸ್ತಾಪಿಸಿರುವುದರಿಂದ ತಡವಾಗಿದೆ.

ಶ್ರೀ ಅಲ್ಲಂ ವೀರಭದ್ರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಕಳೆದ ಮೂರು ವರ್ಷಗಳಿಂದ ನಮ್ಮ ಬಳ್ಳಾರಿ ತಾಲ್ಲೂಕಿನಲ್ಲಿ ಎಷ್ಟು ಪ್ರಾಜೆಕ್ಟ್‌ಗಳು ಸಣ್ಣ ನೀರಾವರಿ, ಏತ ನೀರಾವರಿ ಆಗಿದ್ದಾವೆಂದರೆ ನಿಲ್ ಎಂದು ತಿಳಿಸಿದ್ದಾರೆ. ಒಂದು ಸಲವೂ ಸಣ್ಣ ನೀರಾವರಿ ಸರ್ಕಾರದಿಂದ ಆಗಿಲ್ಲ, ಆದರೆ ನನಗೆ ತಿಳಿದಮಟ್ಟಿಗೆ ಮಾನ್ಯ ದೇವೇಗೌಡರು ಬಂದಾಗ ಕೂಡ ಅಲ್ಲಿ ಬಹಳಷ್ಟು ಫೌಂಡೇಷನ್ಸ್ ಹಾಕಿ ಎಸ್ಟಿಮೇಷನ್ ತಯಾರು ಮಾಡಿ ಎಸ್ಟಿಮೇಟ್ಸ್‌ಗಳನ್ನು ಸರ್ಕಾರಕ್ಕೂ ಕೊಟ್ಟಿದ್ದಾರೆ. ಬಜೆಟ್ ಸ್ಯಾಂಕ್ಷನ್ ಆಗಿಲ್ಲ. ಎರಡನೆಯ ಪ್ರಶ್ನೆ ಕೇಳಿದಾಗ ಒಂದು ಫಾರೆಸ್ಟ್ ಲ್ಯಾಂಡ್ ಇದ್ದು ಸರ್ಕಾರ ಇದನ್ನು ಭೂ ಸ್ವಾಧೀನ ಮಾಡಿಲ್ಲ ಎಂಬ ಒಂದು ರಾಂಗ್ ಇನ್‌ಫಾರ್‌ಮೇಷನ್ ಕೊಟ್ಟಿದ್ದಾರೆ. ಇದಕ್ಕೆ ಫಾರೆಸ್ಟ್ ಬರುವುದೂ ಇಲ್ಲ; ಲ್ಯಾಂಡ್ ಅಕ್ವಿಸಿಷನ್ ಬರುವುದೂ ಇಲ್ಲ.

ಕೆಲಸ ಪ್ರಾರಂಭ ಮಾಡಿಲ್ಲ. ನಾನು ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್‌ರವರನ್ನು ಕರೆಸಿದಾಗ ಈ ವರ್ಷ ಸ್ಟಾರ್ಟ್ ಮಾಡುತ್ತೇವೆ, ಇನ್ನು ಆರು ತಿಂಗಳಲ್ಲಿ ಸ್ಟಾರ್ಟ್ ಮಾಡುತ್ತೇವೆಂದು ಕಳೆದ ಎರಡು ವರ್ಷಗಳಿಂದ ಹೇಳುತ್ತಿದ್ದಾರೆ. ಆ ಕಾರಣ ಮಂತ್ರಿಗಳು ಸರಿಯಾದ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಸನ್ಮಾನ್ಯ ಅಧ್ಯಕ್ಷರೇ, ಯಾವುದೇ ಕಾರ್ಯವನ್ನು ನಾವು ಸಣ್ಣ ನೀರಾವರಿಯಲ್ಲಿ ಫಿಸಿಬಿಲಿಟಿ ಬಂದರೆ ಖಂಡಿತ ತೆಗೆದುಕೊಳ್ಳುತ್ತೇವೆ ಎಂಬ ಮಾತನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಅಲ್ಲಂ ವೀರಭದ್ರಪ್ಪ : ಶಿರಗೊಪ್ಪ ತಾಲ್ಲೂಕಿನಲ್ಲಿ ಬಹಳಷ್ಟು ತುಂಗಭದ್ರಾ ನದಿಯ ಉಪ ಕಾಲುವೆಗಳು ವೇಸ್ಟಾಗಿ ಕರ್ನಾಟಕದಿಂದ ಬಹಳಷ್ಟು ನೀರು ಆಂಧ್ರಾಕ್ಕೆ ಹೋಗುತ್ತಿದೆ. ಅದನ್ನು ತಡೆಗಟ್ಟಬೇಕು. ನಮ್ಮ ರೈತರಿಗೆ ಒಳ್ಳೆಯದಾಗಬೇಕು ಅಂದರೆ ಬಹಳಷ್ಟು ಸಣ್ಣ ನೀರಾವರಿ ಮಾಡಬೇಕು. ಆ ದೃಷ್ಟಿಯಿಂದ ತಮಗೆ ಕೂಡ ಒಂದು ಲೆಟರ್ ಬರೆದಿದ್ದೇನೆ. ಬಳ್ಳಾರಿ ಡಿವಿಜನ್ ಮಾಡಬೇಕು. ಈಗ ಕರ್‌ಸ್ಪಾಂಡೆನ್ಸ್ ಬಹಳ ಲೇಟಾಗಿ ಧಾರವಾಡಕ್ಕೆ ಬಿಜಾಪುರಕ್ಕೆ ಹೋಗಿ ಬಹಳಷ್ಟು ರೈತರಿಗೆ ಅನ್ಯಾಯವಾಗುತ್ತದೆ ಎಂದು ತಿಳಿಸಿ ಕಾಗದ ಬರೆದಿದ್ದೇನೆ. ಇಂಥ ನೀರಾವರಿ ಸ್ಕೀಮ್‌ಗಳು ಕೋಲಾರದಂತಹ ಕಡೆ ಮಾಡಲು ಆಗುವುದಿಲ್ಲ. ಆದರೆ ಬಳ್ಳಾರಿಯಲ್ಲಿ ಬಹಳಷ್ಟು ನೀರು ಇರುವುದಕ್ಕೋಸ್ಕರ ಅದನ್ನು ಉಪಯೋಗಿಸಬೇಕು ಎನ್ನುವ ದೃಷ್ಟಿಯಿಂದ ಅಲ್ಲಿ ಒಂದು ಡಿವಿಷನಲ್ ಆಫೀಸನ್ನು ಮಾಡಿ ಕಾರ್ಯಕ್ರಮವನ್ನು ಆದಷ್ಟು ಬೇಗ ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಸನ್ಮಾನ್ಯ ಅಧ್ಯಕ್ಷರೇ, ಬಹುತೇಕ ಸದಸ್ಯರಿಗೆ ಗೊತ್ತಿರಬಹುದು, ಇದನ್ನು ನಮ್ಮ ಬಿಜಾಪುರ ಕಾರ್ಪೋರೇಷನ್ ಅಡಿಯಲ್ಲಿ ಕೈಗೊಳ್ಳುವುದಕ್ಕೆ ಆಗುವುದಿಲ್ಲ, ಏಕೆಂದರೆ ನಬಾರ್ಡ್‌ನಿಂದ ಹಣಕಾಸಿನ ಸಹಾಯ ಬರುವುದಿಲ್ಲ. ಮೈನರ್ ಇರಿಗೇಷನ್‌ನಲ್ಲಿ ಲಿಫ್ಟ್ ಮಾಡುವಂತಹದ್ದು ಏನಾದರೂ ಇದ್ದರೆ ಅದನ್ನು ನಾನು ಖಂಡಿತ ಯೋಚನೆ ಮಾಡುತ್ತೇನೆ.

ತುಂಗಾ ಮೇಲ್ದಂಡೆ ಯೋಜನೆ

2358 - ಶ್ರೀ ಕೆ.ಬಿ. ಕೋಳಿವಾಡ (ರಾಣೆಬನ್ನೂರು) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ತುಂಗಾ ಮೇಲ್ದಂಡೆ ಯೋಜನೆಯನ್ನು ರಾಜ್ಯದ ತಾಂತ್ರಿಕ ಸಮಿತಿಯು ಒಪ್ಪಿಗೆ ನೀಡಿದೆಯೇ?

ಆ) ಯೋಜನೆ ತಗಲುವ ವೆಚ್ಚ ಎಷ್ಟು?

ಇ) ಈ ಯೋಜನೆಯ ಕಾರ್ಯವನ್ನು ಕೈಗೆತ್ತಿಕೊಳ್ಳಲು ಬೇಕಾಗುವ ಸಮಯ

ಈ) ಈ ಯೋಜನೆಯನ್ನು ಕಾರ್ಯಗತಗೊಳಿಸುವ ಸಲುವಾಗಿ ರಾಣೆಬೆನ್ನೂರಿನಲ್ಲಿ ಇಂಜಿನಿಯರಿಂಗ್ ವೃತ್ತದ ಕಛೇರಿಯನ್ನು ತೆರೆಯಲು ಸರ್ಕಾರದ ಉದ್ದೇಶವಿದೆಯೇ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ನೀಡಿದೆ.

ಆ) 271.41 ಕೋಟಿ ರೂಪಾಯಿಗಳು (1988-89ರ ಸಾಲಿನ ಪ್ರಕಾರ).

ಇ) ಯೋಜನೆಗೆ ಕೇಂದ್ರ ಸರ್ಕಾರದ ಅನುಮತಿ ದೊರೆತ ನಂತರ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.

ಈ) ಯೋಜನೆಯನ್ನು ಪ್ರಾರಂಭಿಸುವ ಸಮಯದಲ್ಲಿ ಈ ವಿಚಾರವನ್ನು ಪರಿಶೀಲಿಸಲಾಗುವುದು.

ಶ್ರೀ ಕೆ.ಬಿ. ಕೋಳಿವಾಡ್ : ಸನ್ಮಾನ್ಯ ಅಧ್ಯಕ್ಷರೆ, ಅಪ್ಪರ್ ತುಂಗಾ ಯೋಜನೆಯನ್ನು ಎಂದು ಕೈಗೊತ್ತಿಗೊಳ್ಳಲಾಗುವುದು ಎಂದು ನಾನು ಕೇಳಿದ್ದೇನೆ, ಅದಕ್ಕೆ ಮಾನ್ಯ ಮಂತ್ರಿಗಳು ಯೋಜನೆಗೆ ಕೇಂದ್ರ ಸರ್ಕಾರದ ಅನುಮತಿ ದೊರೆತ ನಂತರ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದೆಂದು ಹೇಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಈಗ ಪ್ರಾರಂಭವಾಗಿರುವಂತಹ ಯೋಜನೆಗಳೆಲ್ಲಾ ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆದ ನಂತರವೇ ಪ್ರಾರಂಭವಾಗಿದೆಯೇ ಹೇಗೆ? ಎರಡನೆಯದಾಗಿ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಅಪ್ಪರ್ ತುಂಗಾ ಯೋಜನೆಗೆ ಐದು ಕೋಟಿ ರೂಪಾಯಿಗಳನ್ನು ಮಾರ್ಚ್ ಒಳಗೆ ಖರ್ಚು ಮಾಡಲಿಕ್ಕೆ ಒದಗಿಸಿದ್ದೇವೆ ಎಂಬ ಒಂದು ವಿಶೇಷವಾದಂತಹ ಪ್ರಕಟಣೆ ಮಾಡಿದ್ದಾರೆ. ಈ ಯೋಜನೆಯ ಕಾರ್ಯವನ್ನು ಕೈಗೆತ್ತಿಕೊಳ್ಳದೇ ಹೋದರೆ ಆ ಹಣವನ್ನು ಯಾವ ರೀತಿ ಖರ್ಚು ಮಾಡುತ್ತೀರಿ? ನನ್ನ ಈ ಎರಡು ಪ್ರಶ್ನೆಗಳಿಗೆ ತಾವು ಸ್ಪಷ್ಟವಾಗಿ ಉತ್ತರ ಹೇಳಬೇಕು. ಕೂಡಲೇ ಈ ಕಾರ್ಯವನ್ನು ಕೈಗೆತ್ತಿಕೊಂಡು ರಾಣಿಬೆನ್ನೂರಿನಲ್ಲಿ ಒಂದು ಇಂಜಿನಿಯರಿಂಗ್ ಸರ್ಕಲ್ ಪ್ರಾರಂಭ ಮಾಡಿ ಐದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಸರ್ಕಾರ ಯಾವ ಕಾರ್ಯಕ್ರಮ ಹಾಕಿಕೊಳ್ಳುತ್ತದೆ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ಆ ಯೋಜನೆ ಬಗ್ಗೆ ವಿಶೇಷವಾದಂಥ ಹಣಕಾಸಿನ ವ್ಯವಸ್ಥೆ ಬಗ್ಗೆ ವಿವರಣೆ ನೀಡಿದ್ದಾರೆ. ಮಾನ್ಯ ಕೋಳಿವಾಡರ ಹಾಗೂ ಇನ್ನು ಉಳಿದ ಆ ಭಾಗದ ಶಾಸಕರದು ಏನು ಒಂದು ಇಚ್ಛೆ ಇತ್ತು, ಆ ಇಚ್ಛೆ ಪ್ರಕಾರ ಆ ಒಂದು ಕೆಲಸವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ನಾವು ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆ ವರದಿಯನ್ನು ಕೇಂದ್ರಸರ್ಕಾರದ ಮನ್ನಣೆಗೆ ಮಾರ್ಚ್ 1991ರಂದು ನಾವು ಸಲ್ಲಿಸಿದ್ದೇವೆ. ಆದರೆ ಕೆಲವೊಂದು ತಾಂತ್ರಿಕ ತೊಂದರೆ ಇರುವುದರಿಂದ ಅದು ವಾಪಸ್ಸು ಬಂದಿದೆ. ಅದನ್ನು ಆದಷ್ಟು ಶೀಘ್ರವಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ, ಶೀಘ್ರಗತಿಯಿಂದ ಈ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ.ಬಿ. ಕೋಳಿವಾಡ್ : ಈ ಯೋಜನೆಯನ್ನು ಕೇಂದ್ರ ಸರ್ಕಾರದ ಮನ್ನಣೆ ಪಡೆದ ನಂತರ ಪ್ರಾರಂಭ ಮಾಡುತ್ತೀರೋ ಅಥವಾ ತಕ್ಷಣವೇ ಪ್ರಾರಂಭ ಮಾಡುತ್ತೀರಾ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದ್ದೇನೆ ಆದಷ್ಟು ಶೀಘ್ರವಾಗಿ ಕಾರ್ಯ ಪ್ರಾರಂಭ ಮಾಡುತ್ತೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಐದು ಕೋಟಿ ರೂಪಾಯಿಯ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಈ ಯೋಜನೆಗೆ ಮಾತ್ರ ಕೇಂದ್ರ ಸರ್ಕಾರದ ಅನುಮತಿ ಬೇಕು ಎಂದು ಹೇಳುತ್ತಿದ್ದೀರಿ, ರಾಜ್ಯದ ಸುಮಾರು 15 ಯೋಜನೆಗಳನ್ನು ಕೇಂದ್ರಸರ್ಕಾರದ ಅನುಮತಿ ಇಲ್ಲದೇ ಪ್ರಾರಂಭ ಮಾಡಿದ್ದೀರಿ,

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಐ.ಆರ್.ಡಿ.ಪಿ. ಯೋಜನೆ

2360 - ಶ್ರೀ ಜಿ.ಎಸ್. ಆಚಾರ್ (ಬೈಂದೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಐ.ಆರ್.ಡಿ.ಪಿ. ಯೋಜನೆಯನ್ವಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1990-91 ನೇ ಸಾಲಿಗೆ ವಿತರಣೆ ಮಾಡಿದ ಸಾಲ ಎಷ್ಟು ಮತ್ತು ಫಲಾನುಭವಿಗಳಿಗಳ ಸಂಖ್ಯೆ ಎಷ್ಟು?

ಆ) ಈ ಯೋಜನೆಯ ಫಲಾನುಭವಿಗಳ ಆಯ್ಕೆ ಯಾವ ರೀತಿ ಮಾಡಲಾಗಿದೆ.

ಇ) ಫಲಾನುಭವಿಗಳನ್ನು ಆಗಾಗ ಬದಲಾಯಿಸುವ ಕಾರಣವೇನು?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ವಿತರಣೆ ಮಾಡಿದ ರೂ. 266.565 ಲಕ್ಷ

ಒಟ್ಟು 9,783 ಫಲಾನುಭವಿಗಳು

ಆ) ಬಡತನ ರೇಖೆ ಕೆಳಗಿರುವಂತಹ ಬಡವರ ಪಟ್ಟಿಯಿಂದ ಗ್ರಾಮಸಭೆಯಲ್ಲಿ ಫಲಾನುಭವಿಗಳನ್ನು ಆರಿಸಲಾಗುವುದು ಹಾಗೂ ನಿಗದಿತ ಪ್ರಮಾಣದಲ್ಲಿ ಮೀಸಲು ಮಾಡಿದಂತೆ ಫಲಾನುಭವಿಗಳನ್ನು ಆರಿಸಲಾಗಿದೆ.

ಇ) ಫಲಾನುಭವಿಗಳ ಆಯ್ಕೆಯ ನಂತರ ಯೋಜನೆಯ ಪ್ರಯೋಜನವನ್ನು ಕಾರಣಾಂತರಗಳಿಂದ ಪಡೆಯದೇ ಹೋದಲ್ಲಿ ಅಥವಾ ನಿಗದಿತ ದಾಖಲೆಗಳನ್ನು ಹಾಜರುಪಡಿಸದಿದ್ದಲ್ಲಿ ಫಲಾನುಭವಿಗಳ ಬದಲಾವಣೆ ಅನಿವಾರ್ಯ.

ಶ್ರೀ ಜಿ.ಎಸ್. ಆಚಾರ್ : ಅಧ್ಯಕ್ಷರೆ, ಐ.ಆರ್.ಡಿ.ಪಿ. ಯೋಜನೆಯಲ್ಲಿ ಫಲಾನುಭವಿಗಳ ಆಯ್ಕೆಯನ್ನು ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಲಾಗುತ್ತದೆ. ಹಾಗೂ ನಿಗದಿತ ದಾಖಲೆಗಳು ಇಲ್ಲದೇ ಇದ್ದಲ್ಲಿ ಬದಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ನನಗೆ ತಿಳಿದ ಹಾಗೆ ಗ್ರಾಮ ಸಭೆಗಳು ಹರಕೆ ತೀರಿಸುವ ಸಭೆಗಳಾಗಿವೆ. ಅದರಲ್ಲಿ ಕೇವಲ ಏಳೆಂಟು ಜನರು ಇರುತ್ತಾರೆ. ನನ್ನ ಕ್ಷೇತ್ರದಲ್ಲಿಯೇ ಒಂದು ಗ್ರಾಮ ಸಭೆಯಲ್ಲಿ ಒಂದು ನಿರ್ಣಯ ಮಾಡಿ ಜಿಲ್ಲಾ ಪರಿಷತ್‌ಗೆ ಕಳುಹಿಸಿದರು - ಶಾಸಕರು ಅಟೆಂಡ್ ಆಗುವುದಿಲ್ಲವೆಂದು ನಾನೇ ಅಲ್ಲಿಗೆ ಹೋಗಿ ನೋಡಿದಾಗ ಏಳೆಂಟು ಜನರು ಇದ್ದಾರೆ, ಇಲ್ಲಿ ಫಲಾನುಭವಿಗಳ ಆಯ್ಕೆ ಹೇಗೆ ಅಂದರೆ, ಇಲ್ಲಿ ಪ್ರಚಾರ ಮಾಡಲೇ ಇಲ್ಲ, ಜನರು ಬಾರದೇ ಇದ್ದುದರಿಂದ, ಒಂದೊಂದು ಮಂಡಲ್ ಪಂಚಾಯತ್ ಸದಸ್ಯರೂ ಒಬ್ಬೊಬ್ಬನನ್ನು ಆಯ್ಕೆ ಮಾಡುವುದು ಎಂದು ಅವರೇ ಹಂಚಿಕೊಂಡುಬಿಟ್ಟರು. ಫೈನಲ್‌ನಲ್ಲಿ ಅವರ ಮನೆಯವರಿಗೆ, ಅವರ ಕೆಲಸದವರು, ತಮ್ಮಂದಿರು, ಇವರೇ ಆಯ್ಕೆಯಾಗಿರುವವರು, ಇದು ತಪ್ಪಾದ ಒಂದು ಕ್ರಮ. ಗ್ರಾಮಸಭೆಗಳನ್ನು ಸಮರ್ಪಕವಾಗಿ ಕರೆದು ಆಯ್ಕೆ ಮಾಡಬೇಕು. ಅದರಲ್ಲಿ ಎಲ್ಲಾ ಫಲಾನುಭವಿಗಳಿಗೂ ತಿಳಿಸಬೇಕು. ಕನ್ ಸರ್ನ್ಡ್ ಬ್ಯಾಂಕಿಂಗ್ ಇನ್ಸಿಟ್ಯೂಷನ್ ನವರು ಯಾರು ಇದ್ದಾರೆ ಅವರು ಬರಬೇಕು. ಅವರು ಇದ್ದು ಆಯ್ಕೆ ಮಾಡುವಾಗ, ಅವರು ಡಿಫಾಲ್ಟರ್ ಹೌದೋ,

ಪ್ರಸಂಗ ಬರುವುದಿಲ್ಲ. ಈ ರೀತಿ ಸಮರ್ಪಕವಾಗಿ ನಡೆಯುವುದಕ್ಕೆ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ ಎಂಬುದನ್ನು ಕೇಳಲಿಕ್ಕೆ ಇಚ್ಛಿಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಮಾನ್ಯ ಸದಸ್ಯರು ಪ್ರಶ್ನೆಗೆ ಉತ್ತರ ಕೇಳುವುದಕ್ಕೆ ಮೊದಲು ಅವರೇ ಉತ್ತರ ಹೇಳಿದ್ದಾರೆ. ಆದರೂ ಸಹ ಅವರ ಸಮಾಧಾನಕ್ಕೆ ಉತ್ತರ ಹೇಳುತ್ತೇನೆ. ಇದು ಸಮಗ್ರ ಗ್ರಾಮೀಣ ಯೋಜನೆ. ಈ ಯೋಜನೆಯನ್ವಯ ಸಣ್ಣ ರೈತರಿಗೆ ಶೇಕಡಾ 25ರಷ್ಟು ಸಹಾಯಧನ, ಅತೀ ಸಣ್ಣ ರೈತರಿಗೆ ಶೇಕಡ 33ರಷ್ಟು ಸಹಾಯಧನ ಮತ್ತು ಪರಿಶಿಷ್ಟ ಜನಾಂಗ ಮತ್ತು ಪಂಗಡದವರಿಗೆ ಶೇಕಡ 50ರಷ್ಟು ಸಹಾಯಧನ ಕೊಡುತ್ತಾರೆ. ಉಳಿದ ಹಣವನ್ನು ಬ್ಯಾಂಕ್‌ನಿಂದ ಕೊಡಿಸಬೇಕಾಗುತ್ತದೆ. ಇವೆರಡೂ ಕೂಡಿದಾಗ ಮಾತ್ರ ಗ್ರಾಮೀಣ ಯೋಜನೆ ಕೆಲಸ ಆಗತ್ತದೆ. ಈಗಾಗಲೇ ಸೌತ್ ಕೆನರಾದಲ್ಲಿ ನಾವು ಒಟ್ಟು 24,115 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. 1990-91ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 9,783 ಫಲಾನುಭವಿಗಳಿಗೆ 2 ಲಕ್ಷದ 66 ಸಾವಿರ ರೂಪಾಯಿ ಸಹಾಯಧನವನ್ನು ಒದಗಿಸಲಾಗಿದೆ. ಈ ರೀತಿ ಸಹಾಯ ಮಾಡಿದ ಒಟ್ಟು ಜನರ ಪೈಕಿ 3,767 ಜನ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಸೇರಿದ್ದಾರೆ. ಅವರುಗಳಿಗೆ 72 ಲಕ್ಷ ರೂಪಾಯಿ ಸಹಾಯ ಧನ ಒದಗಿಸಲಾಗಿದೆ. ಈಗ ತಾವು ಹೇಳಿದಂತೆ ಪ್ರಚಾರದ ಬಗ್ಗೆ ಎಷ್ಟೇ ಪತ್ರಿಕೆಗಳನ್ನು ಪ್ರಕಟಣೆ ಮಾಡಿದರೂ ಸಹ ಇನ್ನೂ ಆಗಿಲ್ಲ. ಮಾನ್ಯ ಸದಸ್ಯರಿಗೆ ಪುಸ್ತಕಗಳನ್ನು ಕಳುಹಿಸಲಿಕ್ಕೆ ಹೇಳುತ್ತೇನೆ ತಮ್ಮ ತಮ್ಮ ಕಾನ್‌ಸ್ಟ್ಯೂಯೆನ್ಸಿಯಲ್ಲಿ ಅದರ ಪ್ರಚಾರವನ್ನು ಹೆಚ್ಚು ಮಾಡಬೇಕು.

ಶ್ರೀ ಜಿ.ಎಸ್. ಆಚಾರ್ : ಅಧ್ಯಕ್ಷರೇ, ಈ ಆಯ್ಕೆಯ ಒಂದು ವಿಪರ್ಯಾಸದ ಜೊತೆಗೆ ವಿತರಣೆಯಲ್ಲೂ ತೊಂದರೆ ಇದೆ. ಪ್ರತಿ ತಿಂಗಳಿನಲ್ಲಿಯೂ ತಾಲ್ಲೂಕು ಮಟ್ಟದಲ್ಲಿ, ಅಸಿಸ್ಟೆಂಟ್ ಕಮೀಷನರ್ ಅಧ್ಯಕ್ಷತೆಯಲ್ಲಿ ಈ ಬ್ಯಾಂಕಿಂಗ್ ಇನ್‌ಸ್ಟಿಟ್ಯೂಷನ್ ಸಭೆ ನಡೆಯುತ್ತದೆ, ರೆವ್ಯೂ ಮಾಡುತ್ತಾರೆ. ಆದರೂ ಸಹ ತಿಂಗಳು, ತಿಂಗಳಲ್ಲಿ ಕೊಡಬೇಕಾದ ಸಾಲವನ್ನು ಕೊಡದೇ, ವರ್ಷಾಂತ್ಯದವರೆಗೆ ಕಾಯ್ದಿಟ್ಟುಕೊಂಡು ಅನೇಕ ಬ್ಯಾಂಕಿಂಗ್ ಇನ್ಸಿಟಿಟ್ಯೂಷನ್‌ಗಳು ಇದ್ದವರಿಗೆ ಕೊಡಲಿಕ್ಕೆ ಬರುವುದಿಲ್ಲವೆಂದು ತೀರ್ಮಾನ ಮಾಡಿರುತ್ತಾರೆ. ಆ ರೀತಿಯಾಗಿ ನಿಗದಿತ ಗುರಿಯನ್ನು ಮುಟ್ಟುವುದಕ್ಕೆ ಆಗುವುದಿಲ್ಲ, ವರ್ಷಾಂತ್ಯದಲ್ಲಿ ಬ್ಯಾಂಕಿಂಗ್ ಇನ್‌ಸ್ಟಿಟ್ಯೂಷನ್‌ನವರು ಮತ್ತು ಮಂಡಲ್ ಪಂಚಾಯತ್‌ರವರು ಯಾರೋ ಸೇರಿಕೊಂಡು, ಯಾರಿಗೋ ಕೊಟ್ಟು ಇದನ್ನು ಮುಗಿಸಿಬಿಡುತ್ತಾರೆ. ಈ ರೀತಿಯ ಕಾರ್ಯಕ್ರಮ ಆಗಬಾರದು. ಬಡವರಿಗೆ ಇರತಕ್ಕಂಥ ಕಾರ್ಯಕ್ರಮವನ್ನು ಯಾರೋ ತಿಂದು ಯಾರೋ ಹೊಟ್ಟೆಯನ್ನೊರೆಯುವ ಕಾರ್ಯಕ್ರಮವಾಗುತ್ತದೆ. ಈ ರೀತಿ ಆದರೆ, ಯಾವ ಸರ್ಕಾರ ಇದ್ದರೂ ಅದಕ್ಕೆ ಕೆಟ್ಟ ಹೆಸರು ಬರುತ್ತದೆ. ಆದ್ದರಿಂದ, ಇದರ ಅನುಷ್ಠಾನದಲ್ಲಿ ಸಮರ್ಪಕವಾದ ವ್ಯವಸ್ಥೆಯಾಗುವಂತೆ ನೋಡಿಕೊಳ್ಳಬೇಕೆಂದು ನನ್ನ ಪ್ರಶ್ನೆ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಕೆ.ಹೆಚ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಅಭಿಪ್ರಾಯ ಸರಿಯಾಗಿದೆ. ಬ್ಯಾಂಕಿನವರು ಹಣ ಕೊಡುವುದರಲ್ಲಿ ತಡ ಮಾಡುತ್ತಿದ್ದಾರೆ. ಕಾರಣವೇನೆಂದರೆ, ಹಿಂದೆ ಕೊಟ್ಟಿರತಕ್ಕ ಹಣವೇ ಇನ್ನೂ ವಸೂಲಾಗಿಲ್ಲ. ಸಮಯಕ್ಕೆ ಸರಿಯಾಗಿ ಹಣವನ್ನು ಕಟ್ಟತಕ್ಕ ಪದ್ಧತಿ ನಮ್ಮಲ್ಲಿಲ್ಲ. ಆದುದರಿಂದ ಅವರು ಮುಂದೆ ಹಣವನ್ನು ಕೊಡುವುದಕ್ಕೆ ಹಿಂದೇಟು ಹಾಕುತ್ತಿದ್ದಾರೆ. ಆದರೂ ನಾವು ಪ್ರಯತ್ನ ನಡೆಸಿದ್ದೇವೆ. ಆರ್ಥಿಕ ಇಲಾಖೆಯವರಿಗೆ ಬರೆದು ಪ್ರಯತ್ನ ಮಾಡುತ್ತಿದ್ದೇವೆ. ಪ್ಲಾನಿಂಗ್

ಡಿಪಾರ್ಟ್‌ಮೆಂಟ್‌ನವರು ಎಲ್ಲಾ ಬ್ಯಾಂಕಿನವರನ್ನೂ ಕರೆದು ಅಡ್ವೈಸ್ ಮಾಡಿ ಎಂದು ಹೇಳಿದ್ದೇವೆ. ಆ ರೀತಿ ಮಾಡಿ ಸರಿಯಾದ ವ್ಯವಸ್ಥೆ ಮಾಡೋಣ.

ಅನಿಲ ಸ್ಥಾವರಗಳು

2037-ಶ್ರೀ ಎಸ್. ರುದ್ರಪ್ಪ (ತುರುವೇಕೆರೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1982-83 ರಿಂದ 1985-86 ರವರೆಗೆ ಒಟ್ಟು ಸ್ಥಾಪಿಸಲಾಗಿರುವ ಅನಿಲ (ಗೋಬರ್) ಯಂತ್ರಗಳು ಎಷ್ಟು?

ಆ) ಈ ಪೈಕಿ 74 ಅನಿಲ ಯಂತ್ರಗಳು : (ಡೂಮ್ ಮಾದರಿ ಅನಿಲ ಯಂತ್ರಗಳು) ಸ್ಥಾಪನೆಯಾಗಿರುವುದು ನಿಜವೇ?

ಇ) ಈ ಪೈಕಿ 66 ಅನಿಲ ಯಂತ್ರಗಳು : ಕಾರ್ಯನಿರ್ವಹಿಸದೇ ಕೆಟ್ಟು ಹೋಗಿರುವುದು ನಿಜವೇ?

ಈ) ಅದಕ್ಕೆ ಕಾರಣವೇನು ಹಾಗೂ ಅವುಗಳ ದುರಸ್ತಿ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?

ಉ) ಕೆಟ್ಟು ಹೋದ ಅನಿಲ ಯಂತ್ರಗಳಿಗೆ 2,000 ರೂ.ಗಳಿಂದ 2,500 ರೂ.ಗಳವರೆಗೆ ಸಹಾಯಧನ ನೀಡಲಾಗುತ್ತಿರುವುದು ನಿಜವೇ?

ಊ) ಕೆಟ್ಟು ಹೋದ ಅನಿಲ ಯಂತ್ರಗಳನ್ನು ದುರಸ್ತಿಗೊಳಿಸಲು ಸಾಧ್ಯವಾಗದಿದ್ದಲ್ಲಿ ಸದರಿ ಸಾಲವನ್ನು ಮನ್ನಾ ಮಾಡಲು ಅವಕಾಶವಿದೆಯೇ?

ಋ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು ಹಾಗೂ ಈ ಬಗ್ಗೆ ಸರ್ಕಾರದ ಅಭಿಪ್ರಾಯವೇನು?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) 15,481 ಸ್ಥಾವರಗಳು.

ಆ) 15,481 ಸ್ಥಾವರಗಳ ಪೈಕಿ 3,036 ಡೂಮ್ ಮಾದರಿ ಸ್ಥಾವರಗಳು.

ಇ) ಸುಮಾರು 2000 ಭಾಗ್ಯಲಕ್ಷ್ಮಿ ಮಾದರಿ ಸ್ಥಾವರಗಳು ಕಾರ್ಯನಿರ್ವಹಿಸಲಿಲ್ಲ.

ಈ)

1. ನಿರ್ಮಾಣದ ದೋಷದಿಂದ ಪಚನತೊಟ್ಟಿ (ಡೈಜೆಸ್ಟರ್) ಗೋಡೆಗಳು ಹಾಗೂ ಸಿಮೆಂಟ್ ಕಾಂಕ್ರೀಟ್ ಗುಮ್ಮಟ (ಡೂಮ್) ದಲ್ಲಿ ಬಿರುಕುಗಳಾಗಿ ಅನಿಲ ಸೋರಿ ಹೋಗುವುದು.
2. ಲಭ್ಯವಾಗುವ ಸಗಣಿಯನ್ನು ಸರಿಯಾಗಿ ಅಂದಾಜು ಮಾಡದೆ ಹೆಚ್ಚಿನ ಗಾತ್ರದ ಸ್ಥಾವರಗಳನ್ನು ನಿರ್ಮಿಸಿರುವುದು.
3. ಕ್ಷೇತ್ರ ಕಾರ್ಯಕರ್ತರಲ್ಲಿ ತಾಂತ್ರಿಕ ಜ್ಞಾನ ಕೊರತೆ ಇರುವುದು. ಇದು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು ದುರಸ್ತಿಗಾಗಿ: ಪುನರ್ ರಚನೆಗಾಗಿ ಈ ಮಾದರಿ ಸ್ಥಾವರಗಳಿಗೆ ವಿಶೇಷ ದುರಸ್ತಿ ಸಹಾಯಧನ 400 ಸ್ಥಾವರಗಳಿಗೆ ಸ್ಥಾವರ ಒಂದಕ್ಕೆ ರೂ. 2,500 ಗಳವರೆಗೂ ಕೊಡುವುದಕ್ಕೆ ಕೇಂದ್ರ ಒಪ್ಪಿಕೊಂಡಿದೆ. ಈ ವಿಶೇಷ ಸೌಲಭ್ಯ ಉಪಯೋಗ ಮಾಡಿಕೊಂಡು ಇಲ್ಲಿಯವರೆಗೆ 240 ಫಲಾನುಭವಿಗಳು ಮಾತ್ರ ಸ್ಥಾವರ ದುರಸ್ತಿ ಮಾಡಿಕೊಂಡಿರುತ್ತಾರೆ. ಸಾಮಾನ್ಯವಾಗಿ ಸ್ಥಾವರ ದುರಸ್ತಿಗೆಂದು ಕೇಂದ್ರ ಸರ್ಕಾರದ ಸಹಾಯಧನ ಗರಿಷ್ಠ ರೂ.750-00 ವರೆಗೆ ನೀಡುವ ಅವಕಾಶವಿರುತ್ತದೆ. ಇದಕ್ಕಿಂತ ಖರ್ಚು ಹೆಚ್ಚಾದಲ್ಲಿ ಪ್ರತಿ ಪ್ರಕರಣದ ಆಧಾರದ ಮೇಲೆ ಕೇಂದ್ರ ಸರ್ಕಾರದ ಅನುಮತಿ ಪಡೆಯಲು ಪ್ರಸ್ತಾವನೆಯನ್ನು

ಕಳಿಸಬೇಕಾಗುತ್ತದೆ. ಈ ರೀತಿ ಸೂಕ್ತ ಕ್ರಮ ತೆಗೆದುಕೊಳ್ಳಲು ಎಲ್ಲಾ ಜಿಲ್ಲಾ ಪರಿಷತ್ತುಗಳಿಗೆ ಆಗಾಗ್ಗೆ ತಿಳುವಳಿಕೆ ನೀಡಲಾಗುತ್ತಿದೆ.

ಉ) ಮೇಲೆ ವಿವರಿಸಲಾಗಿದೆ.

ಊ) ಇಲ್ಲ.

ಋ) ಬ್ಯಾಂಕಿನವರು ಸಾಲ ಮನ್ನಾ ಮಾಡಲು ಒಪ್ಪಿರುವುದಿಲ್ಲ. ಆದರೆ ಸರ್ಕಾರವತಿಯಿಂದ ಕಾರ್ಯನಿರ್ವಹಿಸದೇ ಇರುವ ಭಾಗ್ಯಲಕ್ಷ್ಮಿ ಸ್ಥಾವರಗಳ ಸಮೀಕ್ಷೆ ನಡೆಸಿ ಮತ್ತು ಕೇಂದ್ರ ಸರ್ಕಾರ ನೀಡುವ ಧನಸಹಾಯ ಸೌಲಭ್ಯ ಉಪಯೋಗಿಸಿಕೊಂಡು ದುರಸ್ತಿ ಮಾಡಲಾಗುವಂತಹ ಸ್ಥಾವರಗಳನ್ನು ದುರಸ್ತಿ ಮಾಡಲಾಗುವುದು.

ಶ್ರೀ ಎಸ್. ರುದ್ರಪ್ಪ : ರಾಜ್ಯದಲ್ಲಿ 1982-83 ರಿಂದ 1985-86 ರವರೆಗೆ ಒಟ್ಟು ಸ್ಥಾಪಿಸಲಾಗಿರುವ ಅನಿಲ ಯಂತ್ರಗಳೆಷ್ಟು ಎಂದು ನಾನು ಕೇಳಿರುವ ಪ್ರಶ್ನೆಗೆ 15,481 ಅನಿಲ ಯಂತ್ರಗಳನ್ನು ಸ್ಥಾಪಿಸಲಾಗಿದೆ ಎಂದು ಹೇಳಿದ್ದಾರೆ. ಅದರಲ್ಲಿ ಕೆಟ್ಟು ಹೋಗಿರತಕ್ಕ ಅನಿಲ ಯಂತ್ರಗಳು ಎಷ್ಟು ಎಂದು ಕೇಳಿರುವುದಕ್ಕೆ ಸುಮಾರು 2000 ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇನ್ನು ದುರಸ್ತಿ ಬಗ್ಗೆ ಸರ್ಕಾರ ಕೈಗೊಂಡಿರುವರ ಕಾರ್ಯವೇನು ಎಂದು ನಾನು ಕೇಳಿರುವುದಕ್ಕೆ ಒಂದು ಅನಿಲ ಸ್ಥಾವರಕ್ಕೆ 2,500 ರೂ. ಕೊಡಲಾಗುತ್ತಿದೆ ಎಂದು ಹೇಳಿದ್ದಾರೆ. 400 ಅನಿಲ ಸ್ಥಾವರಕ್ಕೆ ಈಗಾಗಲೇ ಹಣವನ್ನೊದಗಿಸಿದ್ದೇವೆಂದು ಹೇಳಿದ್ದಾರೆ. ಸುಮಾರು 2000 ಅನಿಲ ಸ್ಥಾವರಗಳು ಕೆಟ್ಟು ಹೋಗಿರುವುದರಿಂದ ಇನ್ನು 1600 ಯಂತ್ರಗಳಿಗೆ ಏತಕ್ಕೆ ಹಣವನ್ನು ಕೊಟ್ಟಿಲ್ಲ ಎಂದು ಸನ್ಮಾನ್ಯ ಸಚಿವರನ್ನು ನಾನು ಕೇಳುತ್ತಿದ್ದೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಈ ಅನಿಲ ಯೋಜನೆಯ ಪ್ರಕಾರ ವಾಸ್ತವವಾಗಿ ಕೊಡಬೇಕಾದುದು 1,400 ರೂ.ಗಳು ಮಾತ್ರ. ಆದರೆ ನಾವು ಕೇಂದ್ರ ಸರ್ಕಾರಕ್ಕೆ ವಿಶೇಷವಾಗಿ ಬರೆದ ನಂತರ ಅವರು 2,500 ರೂ. ಕೊಡುವುದಕ್ಕೆ ಒಪ್ಪಿದ್ದಾರೆ. ಆದರೆ ಹೆಚ್ಚಿಗೆ ಕೊಡಬೇಕಾದರೆ ಎಲ್ಲೆಲ್ಲಿ ಅವಶ್ಯಕತೆ ಇದೆ ಅದನ್ನು ಸ್ಪೆಷಲ್ ಕೇಸ್ ಎಂದು ಮಾಡಿ ಅವರ ಮಂಜೂರಾತಿಯನ್ನು ತೆಗೆದುಕೊಂಡು ಕೊಡಬೇಕಾಗುತ್ತದೆ. ಅಂಥಾದ್ದು ಯಾವುದಾದರೂ ಪ್ರಕರಣ ಇದ್ದರೆ ಅದನ್ನು ತಾವು ನನ್ನ ಗಮನಕ್ಕೆ ತಂದರೆ ಮಂಜೂರಾತಿಯನ್ನು ತೆಗೆದುಕೊಂಡು ಹಣ ಕೊಡಿಸುವುದಕ್ಕೆ ಪ್ರಯತ್ನಮಾಡುತ್ತೇನೆ.

ಶ್ರೀ ಎಸ್. ರುದ್ರಪ್ಪ : ಕೇಂದ್ರದವರು ಕೊಡುತ್ತಿರುವ ಹಣ 2,500 ರೂ. ಆದರೆ ಉಳಿದ ಹಣವನ್ನು ರೈತರು ಹಾಕಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಹೆಚ್ಚಿಗೆ ಹಣವನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಅವರು ಹಣವನ್ನೂ ಹಾಕಿಕೊಳ್ಳುವುದಕ್ಕಾಗುವುದಿಲ್ಲ; ಮತ್ತು ಗೊಬ್ಬರ ಹಾಕಿಕೊಳ್ಳುವುದಕ್ಕೂ ಆಗುವುದಿಲ್ಲ ಹಾಕಿದ ಗೊಬ್ಬರವನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳುವುದಕ್ಕೂ ಆಗುವುದಿಲ್ಲ, ಅವು ಏನಾದರೂ ಬಿರುಕನ್ನು ಬಿಟ್ಟರೆ ಆ ಬಿರುಕನ್ನೂ ಮುಚ್ಚಿಕೊಳ್ಳುವುದಕ್ಕೆ ಆಗುವುದಿಲ್ಲ ಎಂದರೆ ಸರ್ಕಾರದವರು ಇದಕ್ಕೆ ಏನು ಮಾಡಬೇಕೆಂದು ನಿಮ್ಮ ಅಭಿಪ್ರಾಯ?

ಮಹದಾಯೀ ಯೋಜನೆ ಬಗ್ಗೆ

2036 - ಶ್ರೀ ಗೋಪಿನಾಥ್ ಆರ್. ಸಾಂಡ್ರಾ (ಹುಬ್ಬಳ್ಳಿ ಗ್ರಾಮಾಂತರ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಉತ್ತರ ಕರ್ನಾಟಕ ಹಾಗೂ ಹುಬ್ಬಳ್ಳಿ-ಧಾರವಾಡ ನಗರದ ಮಹಾಜನರ ಮಹದಾಯೀ ಯೋಜನೆಯ ಬೇಡಿಕೆ ಯಾವ ಹಂತದಲ್ಲಿದೆ.

ಆ) ಇದ್ದಲ್ಲಿ ಅದನ್ನು ಎಂದು ಪ್ರಾರಂಭ ಮಾಡಲಾಗುವುದು.

ಇ) ಈ ಯೋಜನೆಗಳಿಗೆ ಬಜೆಟ್ ನಲ್ಲಿ ಹಣ ಒದಗಿಸಿಲ್ಲವಾದರೆ ಒದಗಿಸುವ ವ್ಯವಸ್ಥೆ ಮಾಡುವುದಾಗಿ ನೀವು ಹೇಳಿರುವಂತೆ ಮಾಡುವಿರಾ?

ಈ) ಮಾಡಿದ್ದರೆ ಎಷ್ಟು ಹಣ ಒದಗಿಸಲಾಗಿದೆ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ಯೋಜನೆಯ ವರದಿಯನ್ನು ಸಿದ್ಧಪಡಿಸಲಾಗುತ್ತಿದೆ.

ಆ) ಯೋಜನೆಗೆ ತಾಂತ್ರಿಕ ಸಮಿತಿಯ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಒಪ್ಪಿಗೆ ದೊರೆತ ಕೂಡಲೆ.

ಇ) ಪ್ರಸ್ತುತ ಸಾಲಿನಲ್ಲಿ ಈ ಯೋಜನೆಗೆ ಹಣ ಒದಗಿಸಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಗೋಪಿನಾಥ ಆರ್. ಸಾಂಡ್ರಾ : ಮಾನ್ಯ ಅಧ್ಯಕ್ಷರೆ, ಭಾರಿ ನೀರಾವರಿ ಮಂತ್ರಿಗಳು ಉತ್ತರ ಕರ್ನಾಟಕದವರು. ಈ ಯೋಜನೆ ಬೆಳಗಾಂ ಜಿಲ್ಲೆಗೂ ಉಪಯುಕ್ತವಾಗಿದೆ, ಧಾರವಾಡ ಜಿಲ್ಲೆಗೂ ಉಪಯುಕ್ತವಾಗಿದೆ. ಮಾನ್ಯ ಮಂತ್ರಿಗಳ ಉತ್ತರವನ್ನು ನೋಡಿದರೆ ಇವರಿಗೆ ಇದರ ಬಗ್ಗೆ ನಿರ್ಲಕ್ಷ್ಯತನ, ಆಲಸ್ಯತನ ಕಂಡುಬರುತ್ತದೆ. ನಿನ್ನೆಯೂ ಕೂಡ ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುತ್ತಾ ಈ ಯೋಜನೆಗೆ ಹಣವನ್ನು ಬಜೆಟ್‌ನಲ್ಲಿ ಪ್ರೊವೈಡ್ ಮಾಡದಿದ್ದರೂ ಕೂಡ ಈ ವರ್ಷ ಇದಕ್ಕೆ ಹಣವನ್ನು ಕೊಡುತ್ತೇನೆ ಮತ್ತು ಇದನ್ನು ಕೈಗೊಳ್ಳುತ್ತೇನೆ ಎಂದು ಹೇಳಿದ್ದಾರೆ. ಈಗ ಮಾನ್ಯ ಮುಖ್ಯ ಮಂತ್ರಿಗಳು ಹಣವನ್ನೂ ಕೂಡ ಇದಕ್ಕೆ ಕೊಟ್ಟಿದ್ದಾರೆ. ಆದರೆ ಈ ವಿಚಾರ ಮಾನ್ಯ ಮಂತ್ರಿಗಳಿಗೆ ಗೊತ್ತಿಲ್ಲ, ಇವರಿಗೆ ಏತಕ್ಕೆ ಗೊತ್ತಿಲ್ಲವೋ, ಮತ್ತು ಏತಕ್ಕೆ ಈ ರೀತಿ ಉತ್ತರವನ್ನು ಕೊಟ್ಟಿದ್ದಾರೋ ಗೊತ್ತಿಲ್ಲ. ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುವಾಗ ಅಲಕ್ಷ್ಯತೆಯಿಂದ ಮತ್ತು ಬೇಜವಾಬ್ದಾರಿಯಿಂದ ಕೊಡಬಾರದೆಂದು ಹೇಳಬಯಸುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಸಾಂಡ್ರಾರವರಿಗೆ ಉತ್ತರವನ್ನು ಕೊಡಬೇಕಾಗಿದ್ದ ತಾರೀಕು 2-9-91. ಆದರೆ ಅನಿವಾರ್ಯ ಕಾರಣದಿಂದಾಗಿ ಇದು ಇವತ್ತು ಬಂದಿದೆ. ನಾನು ಬೇಜವಾಬ್ದಾರಿಯಿಂದ ಉತ್ತರವನ್ನೇನೂ ಕೊಟ್ಟಿರಲಿಲ್ಲ. ಏಕೆಂದರೆ ಅವತ್ತು ಏನು ಉತ್ತರ ಇತ್ತೋ ಅದೇ ಉತ್ತರವನ್ನೇ ಇವತ್ತು ಮಾನ್ಯ ಸದಸ್ಯರಿಗೆ ಒದಗಿಸುತ್ತಿದ್ದೇನೆ. ಇದು ಅವರಿಗೂ ಕೂಡ ಗೊತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ಹಣಕಾಸಿನ ವ್ಯವಸ್ಥೆಯನ್ನು ಮಾಡಿದ್ದಾರೆ. ಈ ಯೋಜನೆಯನ್ನು ನಾವು ತೆಗೆದುಕೊಳ್ಳುತ್ತೇವೆ. ಆದುದರಿಂದ ಇದರ ಬಗ್ಗೆ ಮಾನ್ಯ ಸದಸ್ಯರು ಆಲೋಚನೆ ಮಾಡುವ ಅವಶ್ಯಕತೆ ಇಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಗೋಪಿನಾಥ ಆರ್. ಸಾಂಡ್ರಾ : ಈ ಯೋಜನೆಯನ್ನು ಯಾವಾಗ ತೆಗೆದುಕೊಳ್ಳುತ್ತೀರಿ? ಇದಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದೀರಿ? ಮತ್ತು ಯಾವಾಗ ಪ್ರಾರಂಭ ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಇದು ತಮಗೂ ಗೊತ್ತಿದೆ. ಆದಷ್ಟು ಶೀಘ್ರವಾಗಿ ಪ್ರಾರಂಭ ಮಾಡುತ್ತೇವೆ. ನಾನು ಹಿಂದೆ ಸರ್ಕಾರೀ ಮುಖ್ಯ ಸಚೇತಕನಾಗಿದ್ದಾಗ, ಆ ಸ್ಥಳಕ್ಕೆ ನಾನು ಭೇಟಿ ಕೊಟ್ಟಾಗ, ಅವನು ಬರಲಿಲ್ಲ, ಅನಂತರ ಕೆಲಸ ಪ್ರಾರಂಭವಾದ ಮೇಲೆ...

ಶ್ರೀ ಡಿ.ಎ. ಚಿನ್ನಪ್ಪ : ಮಾನ್ಯ ಅಧ್ಯಕ್ಷರೆ, ಚು.ಪ್ರ. 2110 ನನಗೆ ಉತ್ತರವೇ ಬಂದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :

Sri K.H. PATIL : I am sorry Sir. I don't have the information. Tomorrow it can be taken up.

Mr. Speaker : You don't have the answers.

Sri K.H. PATIL : It can be taken up tomorrow.

MR. Speaker : O.K. I will list it for tomorrow.

ಗಡಿ ಪ್ರದೇಶದ ಅಭಿವೃದ್ಧಿ

3549 - ಶ್ರೀ ಅಲ್ಲಂ ವೀರಭದ್ರಪ್ಪ (ಕಿರಗೋಡು) : ಮಾನ್ಯ ಯೋಜನಾ ಮತ್ತು ಸಾಂಖ್ಯಿಕ ಹಣಕಾಸು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಡಿ ಪ್ರದೇಶದ ಅಭಿವೃದ್ಧಿಗಾಗಿ ಸರ್ಕಾರದವರು ನಿಗಧಿಪಡಿಸಿರುವ ಹಣವೆಷ್ಟು?
ಆ) ಇದರಲ್ಲಿ ಬಳ್ಳಾರಿ ಜಿಲ್ಲೆಯ ಗಡಿ ಪ್ರದೇಶದ ಅಭಿವೃದ್ಧಿಗೆ ಮೀಸಲಾಗಿಟ್ಟಿರುವ ಹಣವೆಷ್ಟು?

ಶ್ರೀಮತಿ. ಕೆ.ಎಸ್. ನಾಗರತ್ನಮ್ಮ (ಯೋಜನೆ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಮಂತ್ರಿಗಳು)

ಅ) 1991-92ನೇ ಸಾಲಿಗೆ ಗಡಿ ಪ್ರದೇಶ ಅಭಿವೃದ್ಧಿಗಾಗಿ 10 ಕೋಟಿ ರೂಪಾಯಿಗಳನ್ನು ಸರ್ಕಾರವು ನಿಗದಿ ಪಡಿಸಿದೆ.
ಆ) ಗುಲ್ಬರ್ಗಾ ವಿಭಾಗದ ನಾಲ್ಕು ಜಿಲ್ಲೆಗಳು ಹೈದರಾಬಾದ್-ಕರ್ನಾಟಕ ಪ್ರದೇಶದ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಹಣ ಪಡೆಯುತ್ತಿರುವುದರಿಂದ ಬಳ್ಳಾರಿ ಜಿಲ್ಲೆಗೆ ಗಡಿ ಪ್ರದೇಶದ ಅಭಿವೃದ್ಧಿಯಲ್ಲಿ ಹಣ ಬಿಡುಗಡೆ ಮಾಡಿರುವುದಿಲ್ಲ.

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಅಧ್ಯಕ್ಷರೇ, ಈ ವರ್ಷ ಡೆವಲಪ್ ಮೆಂಟ್ ಬಾರ್ಡರ್ ಫಂಡ್ಸ್ ಎಂದು ಹೇಳಿ ಹೈದರಾಬಾದ್ ಕರ್ನಾಟಕ ಡೆವಲಪ್ ಮೆಂಟ್‌ಗೆ ಎಕ್ಸ್‌ಟ್ರಾ ಫಂಡ್ಸ್ ಕೊಟ್ಟಿರುವುದಕ್ಕೋಸ್ಕರ ಈ ವರ್ಷಕ್ಕೆ ಕೊಡುವುದಕ್ಕಾಗುವುದಿಲ್ಲ, ಆದಕಾರಣ ಅದರಲ್ಲಿಯೇ ಉಪಯೋಗಿಸಿಕೊಳ್ಳಬೇಕೆಂದು ಹೇಳುತ್ತಿದ್ದೀರಿ. ಮಾನ್ಯ ಮಂತ್ರಿಗಳಿಗೆ ಕೇಳುವುದೇನೆಂದರೆ, ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬಾರ್ಡರ್ ಫಂಡ್ಸ್ ಬಂದು ಇನ್ನರ್ ಲೋಡ್ಸ್, ಆಸ್ಪತ್ರೆಗಳಿಗೆ, ಎಜ್ಯುಕೇಷನ್ ಡೆವಲಪ್‌ಮೆಂಟ್ಸ್‌ಗೆಂದು ಮಾಡಿದ್ದಾರೆ. ಇದು ಬಾರ್ಡರ್ ಡೆವಲಪ್‌ಮೆಂಟ್‌ಗೆ ಸಂಬಂಧಪಟ್ಟಿದ್ದು. ನಮ್ಮ ಬಳ್ಳಾರಿ ತಾಲ್ಲೂಕಿನಲ್ಲಿ ಬಹಳಷ್ಟು ಡಕಾಯತ್, ನಕ್ಸಲೈಟ್ ಆಕ್ಟಿವಿಟೀಸ್ ಇದೆ. ಆದಕಾರಣ ತಾವು ದಯವಿಟ್ಟು ಇದನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಮಾನ್ಯ ಅಧ್ಯಕ್ಷರೇ, ಇದು ಪಾಲಿಸಿ ಮ್ಯಾಟರ್. ಹೈದರಾಬಾದ್ ಡೆವಲಪ್ ಮೆಂಟ್ ಫಂಡ್ಸ್ ನಲ್ಲಿರುವುದರಿಂದ ಈ ಮೂರು ಜಿಲ್ಲೆಗಳಿಗೆ ಹಣವನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ತೀರ್ಮಾನವಾಗಿದೆ.

ಶ್ರೀ ಅಲ್ಲಂ ವೀರಭದ್ರಪ್ಪ : ಇವತ್ತು ನಾವು ರೊಟ್ಟಿಯನ್ನು ಕೊಟ್ಟು ಅನ್ನ ನೀಡುವುದಿಲ್ಲ, ಅನ್ನ ನೀಡಿ ಸಾರು ಕೊಡುವುದಿಲ್ಲವೆಂದರೆ ತಪ್ಪಾಗುತ್ತದೆ. ಇಲ್ಲಿ ಬಹಳಷ್ಟು ನಕ್ಸಲೈಟ್ ಆಕ್ಟಿವಿಟೀಸ್ ಇದೆ. The purpose of the border development fund is to avoid naxalites and naxalits activities. So, it is one of the reasons for giving it. I think I must ask the Hon'ble Speaker to ask the Minister to give reasons and what is the purpose in giving this fund. Please enlighten me madam.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಮಾನ್ಯ ಅಧ್ಯಕ್ಷರೇ, ಹೈದರಾಬಾದ್ ಡೆವಲಪ್ ಮೆಂಟ್ ನಲ್ಲಿ ದುಡ್ಡು ಕೊಟ್ಟಿರುವುದರಲ್ಲಿ ಬಹಳ ಮಟ್ಟಿಗೆ ವ್ಯತ್ಯಾಸವಾಗಿದೆ. ಬಾಕಿ ಕಡೆಗೂ ಅಲ್ಲಿಗೂ, ಸರ್ವಾಭಿವೃದ್ಧಿಯಾಗಬೇಕು, ಸಕಲ ರೀತಿಯಲ್ಲಿ ಎಂದು ದುಡ್ಡನ್ನು ಕೊಟ್ಟಿದ್ದಾರೆ. ಇವರಿಗೆ ಹೆಚ್ಚಿಗೆ ದುಡ್ಡು ಕೊಟ್ಟಿದ್ದಾರೆ. ಬಾರ್ಡರ್ ಡೆವಲಪ್‌ಮೆಂಟ್ ನಲ್ಲೂ ಅದೇ ರೋಡ್, ಅದೇ ಹೆಲ್ತ್ ಎಲ್ಲವೂ ಇದೆ. ಇದರ ಬಗ್ಗೆ ಕೆಲವು ಗೈಡ್ ಲೈನ್ಸ್ ಕೂಡ ಕೊಟ್ಟಿದ್ದಾರೆ. ಅದರಲ್ಲಿ ಇವರಿಗೆ ಹೆಚ್ಚಿಗೆ ಹಣವನ್ನು ಕೊಟ್ಟಿರುವುದರಿಂದ ಇದರಲ್ಲೂ ಕೊಡುವುದಕ್ಕೆ ಬರುವುದಿಲ್ಲ.

ಶ್ರೀ ಅಲ್ಲಂ ವೀರಭದ್ರಪ್ಪ : ಹಾಗಲ್ಲ, ಅವರು ಹೇಳುತ್ತಿರುವುದೇನೆಂದರೆ .....

Mr. SPEAKER : The question need not be argumentative and debatable. She disputes it. The hon'ble Minister does not agree with you. So, you will have to take recourse to some other course.

ಬೆಳಗಾವಿ ನಗರದ ಕೃಷಿ ಭವನ ವಿಚಾರ

2288 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಬೆಳಗಾವಿ ನಗರದ ಬಸ್ ನಿಲ್ದಾಣದ ಪಕ್ಕದಲ್ಲಿ ರೈತರ ಉಪಯೋಗಕ್ಕಾಗಿ ಕಟ್ಟಿರುವ ಕೃಷಿಭವನದ ವಿಚಾರವು ಸರ್ಕಾರಕ್ಕೆ ತಿಳಿದಿದೆಯೇ?

ಆ) ಹಾಗಿದ್ದಲ್ಲಿ, ಕರಾರಿಗೆ ವಿರುದ್ಧವಾಗಿ ಸದರಿ ಕೃಷಿ ಭವನದಲ್ಲಿ ಈಗ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ನಡೆಸುತ್ತಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಕರಾರು ಉಲ್ಲಂಘನೆ ಮಾಡಿದ್ದ ಪಕ್ಷದಲ್ಲಿ ಕೃಷಿ ಭವನವನ್ನು ಸರ್ಕಾರವು ಕೂಡಲೇ ವಶಪಡಿಸಿಕೊಳ್ಳುವ ಕ್ರಮವನ್ನೇನಾದರೂ ಕೈಗೊಳ್ಳುವುದೇ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು)

ಅ) ಕೃಷಿ ಇಲಾಖೆಗೆ ಸಂಬಂಧಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಬಾಬಾಗೌಡ ಆರ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಈ ಸರ್ಕಾರದ ಮೆದುಳಿಗೆ ಏನಾದರೂ ಪೆಟ್ಟು ಹತ್ತಿದಿಯೋ ಏನೋ ಅದಕ್ಕೆ ತಾವು ಚಿಕಿತ್ಸೆ ಮಾಡಿಸಬೇಕಾಗಿದೆ. ಮೊನ್ನೆ ಇದೇ ರೀತಿಯಾದ ಉತ್ತರವನ್ನು ಮಾನ್ಯ ಸಚಿವರು ಕೊಟ್ಟರು. ತಾವು ಹೇಳಿದಿರಿ, ಇದು ಕೃಷಿ ಮಂತ್ರಿಗಳಿಗೆ ಸಂಬಂಧಿಸಿಲ್ಲ ಅರ್ಬನ್ ಡೆವಲಪ್‌ಮೆಂಟ್ ಮಿನಿಸ್ಟರ್ ರವರು ಇದಕ್ಕೆ ಉತ್ತರವನ್ನು ಕೊಡುತ್ತಾರೆ. ಇನ್ನು ಒಂದು ವಾರ ಅವಕಾಶ ಕೊಡಬೇಕೆಂದು ಹೇಳಿದ್ದಿರಿ.

ಅಧ್ಯಕ್ಷರು : ನಿಮ್ಮ ಬೆಳಗಾಮ್ ಲೋನ್‌ದು ತಾನೇ.

ಶ್ರೀ ಬಾಬಾಗೌಡ ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಜನರೂ ಬಹಳವಾಗಿ ಆರೋಪ ಮಾಡುತ್ತಿದ್ದಾರೆ. ನನಗೂ ಗುಮಾನಿ ಇದೆ, ತೋಟ ವ್ಯವಹಾರ ಮಾಡುತ್ತಿರುವಂಥ ವ್ಯಕ್ತಿ ಒಳಗಿಂದೊಳಗೆ ಸರ್ಕಾರದ ಅಧಿಕಾರಿಯನ್ನು ಹಿಡಿದುಕೊಂಡು ಕೋಟ್ಯಾವಧಿ ರೂಪಾಯಿಯ ಆಸ್ತಿಯ ಒಂದು ವ್ಯವಹಾರ ಇದು.

ಅಧ್ಯಕ್ಷರು : ಉತ್ತರ ಬಂದಿದೆ, ಈಗ ಉತ್ತರವನ್ನು ಕೊಡುತ್ತಾರೆ.

ಶ್ರೀ ಎನ್. ಚಿಕ್ಕೇಗೌಡ : ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸಲಾಗಿದೆ.

ಶ್ರೀ ಬಾಬಾಗೌಡ ಆರ್. ಪಾಟೀಲ್ : ಈ ಉತ್ತರ ಕೃಷಿ ಇಲಾಖೆಗೆ ಸಂಬಂಧವಿರುವುದಿಲ್ಲ.

ಶ್ರೀ ಎನ್. ಚಿಕ್ಕೇಗೌಡ : ನಾನು ಹೆಚ್ಚಿನ ವಿವರಗಳನ್ನು ತರಿಸಿದ್ದೇನೆ. ಮಾನ್ಯ ಸದಸ್ಯರು ಕೇಳಿರತಕ್ಕಂಥ ಕೃಷಿಭವನ ಕರ್ನಾಟಕ ಕೃಷಿ ಸಮಾಜಕ್ಕೂ ಸೇರಿಲ್ಲ, ವ್ಯವಸಾಯ ಇಲಾಖೆಗೂ ಸೇರಿಲ್ಲ, ಇದು ಪಿ.ಡಬ್ಲ್ಯೂ.ಡಿ. ಇಲಾಖೆಯವರು 1967ರಲ್ಲಿ ಹನುಮಣ್ಣನವರ್ ಎಂಬುವರಿಗೆ ಲೀಸ್‌ಗೆ ಕೊಟ್ಟಿದ್ದಾರೆ. ಅದಕ್ಕೆ ಉತ್ತರ ತರಿಸಿದ್ದೇನೆ. ನಾನು ಖಚಿತವಾಗಿ ಹೇಳುತ್ತೇನೆ 1967ರಲ್ಲಿ ನಮ್ಮ ಲೋಕೋಪಯೋಗಿ ಇಲಾಖೆಯವರು ಹನುಮಣ್ಣನವರ್‌ರವರಿಗೆ 99 ವರ್ಷಗಳ ಕಾಲ ಲೀಸ್‌ಗೆ ಕೊಟ್ಟಿದ್ದಾರೆ.

ಶ್ರೀ ಬಾಬಾಗೌಡ ಆರ್. ಪಾಟೀಲ್ : ಕೇವಲ 120 ರೂಪಾಯಿಗೆ ಕೊಟ್ಟಿದ್ದಾರೆ.

ಶ್ರೀ ಎನ್. ಚಿಕ್ಕೇಗೌಡ : ಇರಬಹುದು, ನಾನು ಅದನ್ನು ಹೇಳುತ್ತಿಲ್ಲ. ಲೀಸ್ ಆಗಿ ಈಗ ಅವರ ಅನುಭವದಲ್ಲಿದ್ದಾರೆ ಮತ್ತೆ ಇವರು ಕೇಳುತ್ತಿರತಕ್ಕಂಥದ್ದು ಬಹಳ ದೂರದಲ್ಲಿರುವುದು. ಇದು ಕೃಷಿ ಇಲಾಖೆಗೆ ಸೇರಿರತಕ್ಕದ್ದು. ಆದ್ದರಿಂದ ನಾನು ಸ್ಪಷ್ಟವಾದ ಉತ್ತರವನ್ನು ತರಿಸಿದ್ದೇನೆ. ಇದರಲ್ಲೇನೂ ಮುಚ್ಚುಮರೆ ಇಲ್ಲ. ಸರ್ಕಾರದವರು ಚಾಪೆ ಕೆಳಗಾಗಲಿ ಅಥವಾ ಕೈಗೆ ಟವಲ್ ಹಾಕಿಕೊಂಡು ಹಿಚುಕಿ ನೋಡತಕ್ಕಂಥದ್ದು ಏನೂ ಇಲ್ಲ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಮಂತ್ರಿಗಳು ಹೇಳುವಂಥ ವಿಚಾರ ಸರಿಯಲ್ಲ. ರೈತರು ಎಲ್ಲಾ ಅಲ್ಲಿ ಒಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಕೃಷಿಭವನ ಕಟ್ಟುತ್ತೇವೆಂದು ಹೇಳಿ ಅಲ್ಲಿ ಅಪೊಲೋ ಬಾರ್ ನಡೆಸುತ್ತಿದ್ದಾರೆ. ಅದು ಕೋಟ್ಯಾಂತರ ರೂಪಾಯಿಗಳ ಆಸ್ತಿಯ ವ್ಯವಹಾರ. ಅವರು ಈಗ ರೈತರ ಹೆಸರಿನಲ್ಲಿ ಅವ್ಯವಹಾರ ಮಾಡುತ್ತಿದ್ದಾರೆ. ಅವರು ಕಟ್ಟಡವನ್ನು ತೆಗೆದುಕೊಳ್ಳುವಾಗ ಕರಾರು ಬರೆದುಕೊಟ್ಟಿದ್ದಾರೆ. ಅದರಲ್ಲಿ ನಾವು ಈ ಕರಾರಿಗೆ ತಕ್ಕಂತೆ ನಡೆದುಕೊಳ್ಳದಿದ್ದರೆ ಸರ್ಕಾರ ಕಟ್ಟಡವನ್ನು ವಾಪಸ್ಸು ತನ್ನ ವಶಕ್ಕೆ ತೆಗೆದುಕೊಳ್ಳಬಹುದೆಂದು ಹೇಳಿದ್ದಾರೆ. ಆ ಪ್ರಕಾರ ಮಂತ್ರಿಗಳು ಅದನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಯೇ?

ಶ್ರೀ ಎನ್. ಚಿಕ್ಕೇಗೌಡ : ಇದು 1967ರಲ್ಲಿ ಆಗಿರತಕ್ಕ ಲೀಸ್. ಆಗಿನ ಲೋಕೋಪಯೋಗಿ ಇಲಾಖೆಯವರು ಸರ್ಕಾರದ ಪರವಾಗಿ ಲೀಸ್ ಮಾಡಿಕೊಟ್ಟಿರುವುದು. ನಾವು ಈಗ ಕ್ರಮ ತೆಗೆದುಕೊಳ್ಳುವುದಕ್ಕೆ ಹೋದರೆ ಕೋರ್ಟಿಗೆ ಹೋಗುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಲೀಸ್ ಅಗ್ರಿಮೆಂಟ್ ಏನು? ಈ ಭವನವನ್ನು ಯಾವ ಉದ್ದೇಶಕ್ಕೋಸ್ಕರ ಕೊಟ್ಟಿದ್ದೀರೆಂಬುದನ್ನು ಹೇಳಬೇಕು.

ಶ್ರೀ ಎನ್. ಚಿಕ್ಕೇಗೌಡ : ಮಾನ್ಯ ಸದಸ್ಯರು ಇದರ ಬಗ್ಗೆ ಇಷ್ಟು ಚಿಂತನೆ ಕಾತುರ ಪಡಬೇಕಾಗಿಲ್ಲ. ಲೀಸ್ ಅಗ್ರಿಮೆಂಟ್ ಕಾಪಿಯನ್ನು ಬೇಕಾದರೆ ಒದಗಿಸುತ್ತೇನೆ. ನಾನು ಇಲಾಖೆಯಿಂದ ಅದನ್ನು ತರಿಸಿದ್ದೇನೆ. ಆಗಿನ ಎಕ್ಸಿಕ್ಯೂಟೀವ್ ಇಂಜಿನಿಯರ್ ಏನು ಲೀಸ್ ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ ಅದರ ಕಾಪಿಯನ್ನು ಬೇಕಾದರೆ ಮಾನ್ಯ ಸದಸ್ಯರಿಗೆ ಒದಗಿಸಿಕೊಡುತ್ತೇನೆ. ಮತ್ತೇನಾದರೂ ಅನುಮಾನ ಇದ್ದರೆ ಕೇಳಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮೂಲ ಪ್ರಶ್ನೆ ಏನೆಂದರೆ ಆ ಲೀಸ್ ನಲ್ಲಿ ನಿರ್ದಿಷ್ಟವಾದ ಉದ್ದೇಶಕ್ಕೋಸ್ಕರ ಆ ಭವನವನ್ನು ಲೀಸ್ ಮಾಡಿದ್ದಾರೆ. ಅದರಲ್ಲಿ ಬಾರ್ ಅಥವಾ ಹೋಟೆಲ್ ನಡೆಸುವುದಕ್ಕೆ ಕೊಟ್ಟಿದ್ದರೆ ಅಭ್ಯಂತರವಿಲ್ಲ. ಬೇರೆ ಉದ್ದೇಶಕ್ಕೆ ಕೊಟ್ಟಿದ್ದು ಅದನ್ನು ದುರುಪಯೋಗ ಮಾಡಿಕೊಂಡರೆ ಅದನ್ನು ಸರ್ಕಾರ ವಾಪಸ್ಸು ತೆಗೆದುಕೊಳ್ಳುವುದು ಧರ್ಮವಲ್ಲವೇ? ದಯವಿಟ್ಟು ಅದನ್ನು ಪರಿಶೀಲನೆ ಮಾಡಿ ಕಂಡೀಷನ್ ಅನ್ನು ಓವರ್‌ಲುಕ್ ಮಾಡಿದ್ದರೆ, ಬೇರೆ ರೀತಿಯಾಗಿ ದುರುಪಯೋಗ ಮಾಡಿಕೊಂಡಿದ್ದರೆ ಅದನ್ನು ವಿತ್‌ಡ್ರಾ ಮಾಡಿಕೊಳ್ಳುವುದಕ್ಕೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆಯೇ?

ಶ್ರೀ ಎನ್. ಚಿಕ್ಕೇಗೌಡ : ಆ ಅಗ್ರಿಮೆಂಟ್‌ನಲ್ಲಿ ಏನೇನು ಕಂಡೀಷನ್ ಹಾಕಿ, ಯಾವ ಉದ್ದೇಶಕ್ಕೋಸ್ಕರ ಬಿಲ್ಡಿಂಗ್ ಕಟ್ಟಿ ಉಪಯೋಗಿಸಿಕೊಳ್ಳಬಹುದೆಂದು ಲೀಸ್ ಡೀಡ್‌ನಲ್ಲಿ ಹೇಳಿದ್ದು, ಅದಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದರೆ ಖಂಡಿತವಾಗಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳುವುದಕ್ಕೆ ಹಿಂದುಮುಂದು ನೋಡುವುದಿಲ್ಲ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಕರಾರಿನಲ್ಲಿ ಸಾಯಿಲ್ ಟೆಸ್ಟಿಂಗ್ ಲ್ಯಾಬರೇಟರಿ ಕಟ್ಟುತ್ತೇವೆ, ರೈತರಿಗೆ ಬೀಜ ಗೊಬ್ಬರ ಕೊಡುವುದಕ್ಕೆ ವ್ಯಾಪಾರ ಮಳಿಗೆ ಕಟ್ಟುತ್ತೇವೆ, ರೈತರು ಮಲಗಿಕೊಳ್ಳುವುದಕ್ಕೆ ಒಂದು ಬೆಡ್ಡಿಗೆ 8 ಆಣೆಯಂತೆ ಒದಗಿಸುವ ವ್ಯವಸ್ಥೆ ಮಾಡುತ್ತೇವೆಂದು ಇದೆ. ಆ ಕಂಡೀಷನ್‌ಗಳನ್ನು ವೈಯಲೇಟ್ ಮಾಡಿದ್ದಾರೆಂದು ಖಚಿತವಾದ ಮೇಲೆ ಆ ಪ್ರೆಮಿಸಸ್ ಅನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಇರತಕ್ಕ ಆತಂಕವಾದರೂ ಏನು?

ಶ್ರೀ ಎನ್. ಚಿಕ್ಕೇಗೌಡ : ಈ ಒಂದು ಅಗ್ರಿಮೆಂಟ್‌ನಲ್ಲಿರುವ ಕಂಡೀಷನ್‌ಗಳನ್ನು ಉಲ್ಲಂಘನೆ ಮಾಡಿದ್ದರೆ ಈಗಲೂ ಸಹ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂದುಮುಂದು ನೋಡುವುದಿಲ್ಲ, ಯಾರಿಗೂ ಸರ್ಕಾರ ರಕ್ಷಣೆ ಕೊಡುವುದಿಲ್ಲ. ಈ ಒಂದು ಅಗ್ರಿಮೆಂಟ್‌ನಲ್ಲಿ ಏನು ವ್ಯವಹಾರ ಇದೆ, ಅದರ ಪ್ರಕಾರ ಏನಾದರೂ ಉಲ್ಲಂಘನೆ ಆಗಿದ್ದರೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ. ಈ ಅಗ್ರಿಮೆಂಟ್ ಕಾಪಿಯನ್ನೂ ಸಹ ಸಭೆಯ ಮುಂದೆ ಇಡುತ್ತೇನೆ

ಅಧ್ಯಕ್ಷರು : ಅಗ್ರಿಮೆಂಟ್ ಕಾಪಿಯಲ್ಲಿ ಕಡ್ಡಾಯವಾಗಿ ಬಾರ್ ನಡೆಸಬೇಕೆಂದು ಕಡ್ಡಾಯವಾದ ಷರತ್ತು ಇದೆಯೇ?

ಶ್ರೀ ಎನ್. ಚಿಕ್ಕೇಗೌಡ : ಅದನ್ನು ಹೇಳುವುದಕ್ಕಾಗುವುದಿಲ್ಲ. ಅಗ್ರಿಮೆಂಟ್ ಕಾಪಿ ನೋಡಿ ಹೇಳುತ್ತೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಈಗ ತಾನೇ ಕೃಷಿ ಮಂತ್ರಿಗಳು ತಾವು ಕೇಳಿದ ಪ್ರಶ್ನೆಗೆ ಉತ್ತರ ಹೇಳುವುದಕ್ಕೆ ಬರುವುದಿಲ್ಲವೆಂದು ಹೇಳಿದರು; ಆದರೆ ನನಗೆ ಹೇಳುವುದಕ್ಕೆ ಬರುತ್ತದೆ. ಏಕೆಂದರೆ ಆ ಲೀಸ್ ಅಗ್ರಿಮೆಂಟ್ ಕಾಪಿ ನನ್ನ ಹತ್ತಿರ ಇದೆ. ಸಂಪೂರ್ಣ ಲೀಸ್ ಕಂಡೀಷನ್ಸ್ ಏನಿದೆ ಅದನ್ನು ವೈಯಲೇಟ್ ಮಾಡಿದ್ದಾರೆ. ಇದನ್ನು ನಾವು ಹತ್ತು ವರ್ಷದಿಂದ ಹೇಳುತ್ತಿದ್ದೇವೆ. ಮತ್ತು ಬಹಳ ಸರ್ಕಾರಗಳನ್ನು ನೋಡಿದ್ದೇವೆ. ಯಾವ ಸರ್ಕಾರಗಳಿಂದಲೂ, ಆ ಅಪೊಲೋ ಬಾರ್ ನಡೆಸುತ್ತಿರುವ ಹನುಮಣ್ಣನವರನ್ನು ಮುಟ್ಟುವುದಕ್ಕೆ ಆಗಿಲ್ಲ. 12.55 ಪಿ.ಎಂ. ಆದ್ದರಿಂದ ನಾವು ಈಗಾಗಲೇ ಅವನಿಗೆ 15 ದಿವಸ ನೋಟೀಸ್ ಕೊಟ್ಟಿದ್ದೇವೆ. ೧೫ ದಿವಸ ನೋಟೀಸ್ ಕೊಟ್ಟಿದ್ದೇವೆ ಅಪೊಲೊ ಬಾರ್‌ನವನಿಗೆ. 15 ದಿವಸದೊಳಗೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳದೇ ಇದ್ದರೆ ನಾವೇ ಅವನನ್ನು ಒದ್ದು ಆಚೆಗೆ ಹಾಕುತ್ತೇವೆಂದು ಸರ್ಕಾರಕ್ಕೆ ತಿಳಿಸುತ್ತಿದ್ದೇವೆ. ನಾನು ತಿಳಿಸಬೇಕಾದ ಅವಶ್ಯಕತೆಯೂ ಇಲ್ಲ.

ಶ್ರೀ ಎಸ್.ಎಚ್. ಕೌಜಲಗಿ : ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ 99 ವರ್ಷಕ್ಕೆ ಲೀಸ್ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಲೀಸ್ ಪ್ರಕಾರ ಈಗಾಗಲೇ ಅವರು ವಯಲೇಟ್ ಮಾಡಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ಇಲ್ಲವೇ? ಬಂದಿದ್ದರೆ, ಸರ್ಕಾರದವರು ಎಷ್ಟು ದಿವಸದೊಳಗೆ ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಎನ್. ಚಿಕ್ಕೇಗೌಡ : ಮಾನ್ಯ ಅಧ್ಯಕ್ಷರೆ, ಇದು ನನ್ನ ಖಾತೆಗೆ ಸಂಬಂಧಪಡದಿದ್ದರೂ ಸಹ, ವಿವರವನ್ನು ತರಿಸುವುದಕ್ಕೆ...........

(ಗೊಂದಲ)

ಶ್ರೀ ಎನ್. ಚಿಕ್ಕೇಗೌಡ : ಆಯಿತು. ಕೂತ್ಕೊಳ್ಳಿ, ಹೇಳುತ್ತೇನೆ ಕೇಳಿ. ನೀವು ಮಂತ್ರಿಯಾಗಿದ್ದಾಗಲೂ ಇದಕ್ಕಿಂತ ಹೆಚ್ಚಿಗೆ ಕೊಡುವುದಕ್ಕಾಗುವುದಿಲ್ಲ. ಕಾನೂನು ಪ್ರಕಾರ ಲೀಸ್ ಅಗ್ರಿಮೆಂಟ್‌ನಲ್ಲಿ ವಯಲೇಷನ್ ಆಗಿದ್ದರೆ, ನಾನು ಕಾನೂನು ಪಂಡಿತರನ್ನು ಕರೆಸಿ, ಕೇಳಿ ಏನು ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ ಅದು ಮಾಡಬೇಕೇ ಹೊರತು ನಾನು ಇದರ ಬಗ್ಗೆ ಏಕ್‌ದಮ್ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಸದಸ್ಯರುಗಳು ಹೇಳಿರುವುದನ್ನು ನಾನು ಗಣನೆಗೆ ತೆಗೆದುಕೊಂಡು, ಕಾನೂನಿನ ಚೌಕಟ್ಟಿನಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಈ ಸಭೆಯಲ್ಲಿ ಹಿಂದೆ ಬಂದಿದ್ದಾಗಲೂ ಸಹ ಇಷ್ಟೇ ಚರ್ಚೆ ಆಯಿತು. ಅದಕ್ಕೋಸ್ಕರ ಇದನ್ನು ಆಳವಾಗಿ ಅಧ್ಯಯನ ಮಾಡಬೇಕು ಎಂದು ಮುಂದೂಡಲಾಯಿತು. ಸ್ವಾಮಿ, ಇದು ಮೂರು ಇಲಾಖೆಗೆ ಸೇರುತ್ತದೆ. ಒಂದು, ಅಲ್ಲಿ ಬಾರ್ ನಡೆಸುತ್ತಾ ಇರುವುದು ಸತ್ಯ, ನಿಜ. ಅಂದಮೇಲೆ ಅದು ಅಬ್ಕಾರಿ ಇಲಾಖೆಗೆ ಹೋಗುತ್ತದೆ. ಮತ್ತು ಮನೆ ಕಟ್ಟಿರುವ ಸ್ಥಳಕ್ಕೆ ಲೈಸೆನ್ಸ್ ಕೊಟ್ಟಿದ್ದರೆ ಅದು ನಗರಾಭಿವೃದ್ಧಿ ಮಂಡಳಿಗೆ ಅದು ಹೋಗುತ್ತದೆ. ಈಗ ಯಾವ ಉದ್ದೇಶಕ್ಕೋಸ್ಕರ ಮಾಡಿದ್ದಾರೆ ಎಂದರೆ ಅದು ಇವರಿಗೆ ಹೋಗುತ್ತದೆ. ಮೂರು ಜನ ಮಂತ್ರಿಗಳಿಗೆ ಸಂಬಂಧಪಟ್ಟಿದ್ದು ಆಗಿದೆ. ಲೀಸಿನ ಕರಾರು ನಿಮ್ಮ ಕಡತದಲ್ಲಿ

ಬಾರ್ ನಡೆಸಬೇಕು ಎಂಬ ಉದ್ದೇಶ ಇದ್ದರೆ ಅಲ್ಲಿಗೆ ಸಮಸ್ಯೆ ಬಗೆಹರಿಯುತ್ತದೆ. ಆದ್ದರಿಂದ ಕರಾರು ಏನಿದೆ? ಕರಾರು ಮುಚ್ಚಿಡುವ ಉದ್ದೇಶ ಏನು? ಕರಾರು ಸಭೆಯ ಮುಂದೆ ಓದಿ.

ಶ್ರೀ ಎನ್. ಚಿಕ್ಕೇಗೌಡ : ಅಧ್ಯಕ್ಷರೇ, ನಾನು ಕರಾರು ಪ್ರತಿಯನ್ನು ಇಲ್ಲಿ ಒದಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಓದಿ ಸ್ವಾಮಿ. ಕರಾರು ಏನು ಎಂಬುದನ್ನು ಓದಿ.

ಶ್ರೀ ಎನ್. ಚಿಕ್ಕೇಗೌಡ : ಮೂರು ನಾಲ್ಕು ಪೇಜ್ ಇದೆ. ಜೊತೆಗೆ ನಾನು ಒಂದು ಸ್ಪಷ್ಟವಾಗಿ ಹೇಳುತ್ತೇನೆ. ಯಾವುದೇ ಇಲಾಖೆಗೆ ಸೇರಿರಲಿ ಪಿ.ಡಬ್ಲ್ಯು.ಡಿ. ಆಗಲೀ ಎಚ್.ಯು.ಡಿ. ಆಗಲೀ, ನಮ್ಮ ಇಲಾಖೆಗೆ ಸೇರಿರಲಿ, ನಾವು ಮೂರು ಜನ ಮಂತ್ರಿಗಳೂ ಸೇರಿ ಕಾನೂನು ಪಂಡಿತರನ್ನು ಕರೆಸಿ ಇದರ ಉಲ್ಲಂಘನೆಯಾಗಿದ್ದರೆ ಖಂಡಿತ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಈ ಪಂಡಿತರನ್ನು ಕರೆಸತಕ್ಕ ಪ್ರಶ್ನೆ ಇಲ್ಲ. ಯಾವ ಪಂಡಿತರೂ ಬೇಕಾಗಿಲ್ಲ, ಕರಾರು ಏನಿದೆ ಎಂಬುದನ್ನು ಹೇಳಿದರೆ ಸಾಕು.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ, ನಿಮಗೆ ಸರ್ಕಾರ ನಡೆಸಿ ಅನುಭವ ಇಲ್ಲ. ಸರ್ಕಾರ ನಡೆಸತಕ್ಕ ವಿಧಾನ ಏನು ಎಂದರೆ ಅವರು ಹೇಳತಕ್ಕದ್ದೇ ಸರಿ. ಮೊದಲು ಅವರು ಲಾ ಡಿಪಾರ್ಟ್‌ಮೆಂಟಿಗೆ ರೆಫರ್ ಮಾಡಿ ಕರಾರಿನ ವಯಲೇಷನ್ ಮಾಡಿದ್ದಾರೆ, ಆದ್ದರಿಂದ ಇವನ ಲೀಸ್ ಅಗ್ರಿಮೆಂಟ್ ಟರ್ಮಿನೇಟ್ ಮಾಡಬೇಕು ಎಂದು ಒಪೀನಿಯನ್ ತೆಗೆದುಕೊಂಡು ಕ್ರಮ ತೆಗೆದುಕೊಳ್ಳಬೇಕು. ಅದನ್ನು ಮಾಡುತ್ತೇವೆ ಎಂದು ಸ್ಪಷ್ಟವಾಗಿ ಯಾವ ವಿಧವಾದ ಸಂಶಯಕ್ಕೂ ಆಸ್ಪದ ಕೊಡದೇ ಹೇಳುತ್ತಿದ್ದಾರೆ. ಸರ್ಕಾರದ ವತಿಯಿಂದ ಬರತಕ್ಕ ಉತ್ತರ ಸಮಾಧಾನಕರವಾಗಿದೆ.

ಶ್ರೀ ವಾಟಾಳ್ ನಾಗರಾಜ್ : ನಮ್ಮ ಕಿವಿಗೂ ಸ್ವಲ್ಪ ಕರಾರು ಏನು ಎಂಬುದು ಗೊತ್ತಾಗಲಿ ಹಾಗೂ ಇದು ಸಭೆಗೂ ಗೊತ್ತಾಗಲಿ ಎಂದು.

ಅಧ್ಯಕ್ಷರು : ಸಭೆ ಮುಂದೆ ಇಡುತ್ತಾರೆ ಅದನ್ನು. I direct the Minister for Agriculture to place the copy of the Lease Agreement on the Table of the House.

SRI N. CHIKKEGOWDA : I will place it Sir.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಸಚಿವರು ಹೇಳಿದರು ಬೇರೆ ಇಲಾಖೆ ಇದೆ ನಿಜ. ನಾನು ಒಪ್ಪಿ ಕೊಳ್ಳುತ್ತೇನೆ ಅದು ಸರಿ. ಈ ಬಿಲ್ಡಿಂಗ್ ಬಗ್ಗೆ ನಮ್ಮ ಕಲ್ಪನೆ ಬೆಳಗಾಂನಲ್ಲಿ ಏನಿದೆ ಎಂದರೆ ಸನ್ಮಾನ್ಯ ದಿವಂಗತ ಹನುಮಣ್ಣನವರ್‌ರವರು ಸಿಟಿ ಇಂಪ್ರೂವ್ಮೆಂಟ್ ಟ್ರಸ್ಟ್ ಬೋರ್ಡ್ ಪ್ರೆಸಿಡೆಂಟ್ ಇದ್ದಾಗ ಈ ಬಿಲ್ಡಿಂಗ್ ಕಟ್ಟಿಸಿದ್ದರು. We were under the impression that this building belongs to Sri Hanmannavar. ಈಗ ಮಾನ್ಯ ಬಾಬಾಗೌಡರು ರೈಸ್ ಮಾಡಿದಾಗ ಗೊತ್ತಾಯಿತು ಇದು. ಬೆಳಗಾಂನವರಿಗೆ ಕೇಳಿದರೆ ಅದು ಹನುಮಣ್ಣನವರ್‌ರವರ ಬಿಲ್ಡಿಂಗ್ ಎಂಬ ಇಂಪ್ರೆಷನ್ನೆ ಇದೆ. ಇದು ಗೌರ್ನಮೆಂಟ್ ಬಿಲ್ಡಿಂಗ್ ಎಂದು ಯಾರಿಗೂ ಗೊತ್ತಿಲ

ಅಧ್ಯಕ್ಷರು : ಈ ಪ್ರಶ್ನೆ ಬಂದಿರುವುದರಿಂದ ಈಗ ಸಾರ್ವಜನಿಕರಿಗೆ ಗೊತ್ತಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ಈಗ ಅಲ್ಲಿ ಬಹಳ ದೊಡ್ಡ ಬಿಲ್ಡಿಂಗ್ ಇದೆ. ಸೆಂಟ್ರಲ್ ಬಸ್ ಸ್ಟ್ಯಾಂಡ್ ಆಪ್ಪೋಸಿಟ್‌ನಲ್ಲಿ ಈ ಬಿಲ್ಡಿಂಗ್ ಇದೆ. ಅಲ್ಲಿ ಬಾರ್ ಅಷ್ಟೇ ಅಲ್ಲ, ಸಾಕಷ್ಟು ಅಂಗಡಿಗಳಿವೆ. ಹನುಮಣ್ಣನವರ್ ಯಾವುದೂ ಅಂಗಡಿ ನಡೆಸುತ್ತಿಲ್ಲ. ನನ್ನ ದೃಷ್ಟಿಯಲ್ಲಿ ಬಾರ್ ಷಾಪ್ ಸಹ ಹನುಮಣ್ಣನವರ್ ನಡೆಸುತ್ತಿಲ್ಲ. ಅಲ್ಲಿ ಲೀಸ್‌ನಲ್ಲಿ ಸಬ್‌ಲೀಸ್ ಆಗಿದೆ. You have to verify this fact.

ಎರಡನೆಯದಾಗಿ, ಅಲ್ಲಿ ಮಂತ್ರಿಗಳಿಗೆ ಏನು ತೊಂದರೆ ಎಂದರೆ ದಿವಂಗತ ಹನುಮಣ್ಣನವರು ಬಹಳ ಸೀನಿಯರ್. ಅವರ ಬಗ್ಗೆ ಗೌರವ ಇದೆ. He was a very senior party worker of your party and he was the Chairman of the City Improvement Board.

ಅಧ್ಯಕ್ಷರು : ನೀವು ಅಧಿಕಾರದಲ್ಲಿ ಇದ್ದಾಗ ತೆಗೆಸಬಹುದಿತ್ತಲ್ಲವೇ?

Sri R.V. DESHPANDE : ಲಾಸ್ಟ್ ಟೈಮ್ ಮಾನ್ಯ ಬಾಬಾಗೌಡರು ರೈಸ್ ಮಾಡಿದಾಗ, I was under the impression that the building belonged to Hanumannavar. None of the buildings have been run by Hanumannavar and the bar is not by Hanumannavar. It was sub-leased. ಇಲ್ಲಿ ಲೀಸ್‌ಗೆ ಸಬ್ ಲೀಸ್ ಆಗಿದೆ ಎಂದು ಹೇಳುತ್ತಿದ್ದೇನೆ.

Mr. SPEAKER : You will have to dispel this impression that the Government property cannot be appropriate by an individual either by design or by accident.

ಶ್ರೀ ಎನ್. ಚಿಕ್ಕೇಗೌಡ : ಸಭಾಧ್ಯಕ್ಷರ ಮೂಲಕ ನಾನು ನಮ್ರತೆಯಿಂದ ಕೇಳುತ್ತೇನೆ. ದಯವಿಟ್ಟು ಯಾರೂ ತಪ್ಪು ತಿಳಿದುಕೊಳ್ಳಬಾರದು. ಹಿಂದೆ 1967ರಲ್ಲೇ ಇದು ಆಗಿದೆ. ಹಿಂದೆ ದೇಶಪಾಂಡೆಯವರೇ ಮಂತ್ರಿಗಳಾಗಿದ್ದಾಗ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬಹುದಿತ್ತಲ್ಲವೇ?

ಅಧ್ಯಕ್ಷರು : ಮಾನ್ಯ ಹನುಮಣ್ಣನವರದ್ದೇ ಆ ಬಿಲ್ಡಿಂಗ್ ಎಂದು ಅವರು ತಿಳಿದುಕೊಂಡಿದ್ದರು ಎಂದು ಈಗ ತಾನೇ ಹೇಳಿದರು.

ಶ್ರೀ ಆರ್.ವಿ. ದೇಶಪಾಂಡೆ : ಬೆಳಗಾಂನಲ್ಲಿ ಯಾರೇ ಕೇಳಿದರೂ ಅದು ಹನುಮಣ್ಣನವರ ಬಿಲ್ಡಿಂಗ್ ಎಂದೇ ಹೇಳುತ್ತಾರೆ. Till Sri Babagowda raised it, we were not aware that this building belongs to the Government. ಅದಕ್ಕೋಸ್ಕರ ಹೇಳುತ್ತಿದ್ದೇನೆ. ಲೀಸ್‌ನಲ್ಲಿ ಸಬ್‌ಲೀಸ್ ಆಗಿದೆ. Hanumannavar's son was my classmate and we were under the impression that the building belongs to them.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ನೀರಾವರಿ ಕೆರೆಗಳ ದುರಸ್ತಿ

2066 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಸಣ್ಣ ನೀರಾವರಿ ಖಾತೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಬರುವ ಕೆರೆಗಳು ಹಾಗೂ ಅಣೆಕಟ್ಟುಗಳ ಸಂಖ್ಯೆ ಎಷ್ಟು?

ಆ) ಈ ಸಾರಿ ಭಾರಿ ಮಳೆಯಿಂದ ಇವುಗಳಿಗೆ ಹಾನಿಯಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಹಾನಿಗೊಂಡಿರುವ ಕೆರೆ, ಅಣೆಕಟ್ಟುಗಳ ದುರಸ್ತಿಗೊಳಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ವಲಯದ ವ್ಯಾಪ್ತಿಯಲ್ಲಿ ಯಾವುದೇ ಕೆರೆಗಳು ಇರುವುದಿಲ್ಲ. ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ಬರುವ ಅಣೆಕಟ್ಟುಗಳು ಎರಡು. (1) ಕೋವಿ ಪಿಕಪ್ ಚಾನಲ್ (2) ಮುರುಡನಕೆರೆ ಚಾನಲ್.

ಆ) ಯಾವ ಹಾನಿಯೂ ಆಗಿರುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಭಾರಿ ನೀರಾವರಿ ಯೋಜನೆಗಳು

2127 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) 1989 ರಿಂದ 1991 ರವರೆಗೆ ರಾಜ್ಯದಲ್ಲಿ ಹೊಸದಾಗಿ ಮಂಜೂರಾದ ಭಾರಿ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು? (ಅವುಗಳ ಹೆಸರುಗಳನ್ನೊಳಗೊಂಡ ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)?

ಆ) ಪ್ರತಿಯೊಂದು ನೀರಾವರಿ ಯೋಜನೆಗಳಿಗೆ ತಗಲುವ ವೆಚ್ಚ ಎಷ್ಟು?

ಇ) ಇದರ ಜಾರಿಗಾಗಿ ಈಗಾಗಲೇ ಬಿಡುಗಡೆ ಮಾಡಲಾದ ಹಣವೆಷ್ಟು ಹಾಗೂ ಖರ್ಚಾದ ಹಣವೆಷ್ಟು?

ಈ) ಈ ಯೋಜನೆಗಳ ಕಾರ್ಯ ಯಾವ ಹಂತದಲ್ಲಿದೆ ಹಾಗೂ ಇವುಗಳನ್ನು ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ಯಾವುದೂ ಇಲ್ಲ.

ಇ) ಮೇಲಿನ ಪ್ರಶ್ನೆ (ಅ)ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆಗಳಿಗೆ ಉತ್ತರ ಉದ್ಭವಿಸುವುದಿಲ್ಲ.

ಹಳ್ಳಿ ರಸ್ತೆಗಳ ದುರಸ್ತಿ

2291 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ ನಿಡವಂದದಿಂದ ಮೂವತ್ತೂರು ಗ್ರಾಮಕ್ಕೆ ಹೋಗುವ ರಸ್ತೆ ತೀರ ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸದರಿ ರಸ್ತೆ ಕೆಲಸವನ್ನು ದುರಸ್ತಿ ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು)

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅಧ್ಯಕ್ಷರು : ಈಗ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವುದು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ : ಮಾನ್ಯ ಅಧ್ಯಕ್ಷರೇ, 26.09.91ರ ಲಿಖಿತ ರೂಪದಲ್ಲಿ ಉತ್ತರಿಸುವ 20ನೇ ಪಟ್ಟಿಯಲ್ಲಿ 54 ಪ್ರಶ್ನೆಗಳ ಪೈಕಿ 48 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ. ಹಾಗೂ 13ನೇ ದಿನಾಂಕದ 28ನೇ ಪಟ್ಟಿಯ 20 ಪ್ರಶ್ನೆಗಳ ಪೈಕಿ 20 ಪ್ರಶ್ನೆಗಳಿಗೂ ಉತ್ತರಗಳನ್ನು ಸಭೆಯ ಮುಂದೆ ಇಡುತ್ತೇನೆ.

ಕೊಡಗು ಜಿಲ್ಲೆಯ ಗಡಿ ಪ್ರದೇಶದ ಅಭಿವೃದ್ಧಿ ಯೋಜನೆ

2361 - ಶ್ರೀಮತಿ ಸುಮ ವಸಂತ (ವೀರಾಜಪೇಟೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಕೊಡಗು ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳಲ್ಲಿ 1982ರಿಂದ ಇಲ್ಲಿಯವರೆಗೆ ಕೊಡಗು ಜಿಲ್ಲಾ ಪರಿಷತ್‌ನವರು ಪ್ರತಿ ವರ್ಷ ಎಷ್ಟು ಕಿ.ಮೀ. ಜಲ್ಲಿ ಹಾಕಿರುತ್ತಾರೆ ಹಾಗೂ ಎಷ್ಟು ಕಿ.ಮೀ. ಡಾಂಬರು ಹಾಕಲಾಗಿದೆ?

ಆ) ರೋಜಗಾರ್ ಯೋಜನೆಯ ಅಂಗವಾಗಿ ರಸ್ತೆಗಳನ್ನು ನಿರ್ಮಿಸಲು ಯಾವ ಯಾವ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟೆಷ್ಟು ಹಣ ಖರ್ಚು ಮಾಡಲಾಗಿದೆ ಮತ್ತು ಎಷ್ಟು ಕಿ.ಮೀ. ಪ್ರತಿಯೊಂದು ಕ್ಷೇತ್ರದಲ್ಲಿ ಎಷ್ಟು ಉದ್ದದ ಜಲ್ಲಿ ರಸ್ತೆಯನ್ನು ನಿರ್ಮಿಸಲಾಗಿದೆ (ವಿವರವನ್ನು ಒದಗಿಸುವುದು)?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಮಡಿಕೇರಿ ಜಿಲ್ಲಾ ಪರಿಷತ್ ಇಂಜಿನೀಯರಿಂಗ್ ವಿಭಾಗವು ದಿನಾಂಕ: 29-06-87 ರಿಂದ ಅಸ್ತಿತ್ವಕ್ಕೆ ಬಂದಿರುವ ಕಾರಣ, ಕೊಡಗು ಜಿಲ್ಲಾ ಪರಿಷತ್‌ನಿಂದ 1987-88 ರಿಂದ 1990-91 ರವರೆಗೆ ಒಟ್ಟು 254.72 ಕಿ.ಮೀ. ಉದ್ದದ ಜಲ್ಲಿ ರಸ್ತೆಯನ್ನು ಮತ್ತು 187.00 ಕಿ.ಮೀ. ಉದ್ದದ ಡಾಂಬರು ರಸ್ತೆಯನ್ನು ಮಾಡಲಾಗಿದೆ. ವಿವರವನ್ನು ತ:ಖ್ತೆ 1ರಲ್ಲಿ ಲಗತ್ತಿಸಿದೆ.

ಆ) ಜವಾಹರ್ ರೋಜಗಾರ್ ಯೋಜನೆಯಲ್ಲಿ ಈ ಕೆಳಗಿನಂತೆ ರಸ್ತೆಗಳನ್ನು ನಿರ್ಮಿಸಿ ವೆಚ್ಚ ಮಾಡಲಾಗಿದೆ.

ಕ್ಷೇತ್ರ	ಜಲ್ಲಿ ಹಾಕಿದ ರಸ್ತೆ ಉದ್ದ	ಖರ್ಚು
ಮಡಿಕೇರಿ	6.522 ಕಿ.ಮೀ.	2.824 ಲಕ್ಷ
ಸೋಮವಾರಪೇಟೆ	7.392 ಕಿ.ಮೀ.	3.254 ಲಕ್ಷ
ವೀರಾಜಪೇಟೆ	5.448 ಕಿ.ಮೀ.	2.403 ಲಕ್ಷ
	19.362 ಕಿ.ಮೀ.	8.481 ಲಕ್ಷ

ವಿವರಗಳ ಬಗ್ಗೆ ತ:ಖ್ತೆ 2ರಲ್ಲಿ ಲಗತ್ತಿಸಿದೆ.

STATEMENT-II

Zilla Parishad Engineering Division, Madikeri

Kodagu Zila Parishad

Details of Metalled Road Formed in Each Taluk Under JRY During 1989-90 And 1990-91

By Kodagu Zilla Parishad Engineering Division, Madikeri (To End of 30.3.1991)

		1989-90		1990-91		Total		
Sl. No.	Taluk	Length of Metalled road formed in Kms.	Expenditure incurred on Metalled Road (Rs. in lakhs)	Length of metalled road formed in Kms.	Expenditure incurred on metalled road (Rs.in lakhs)	Total length of metalled road formed.	Total Expenditure incurred on Metalled Road	Remarks
1.	Madikeri	4.38	1.752	2.144	1.072	6.522	2.824	
2.	Somwarpet	4.44	1.778	2.952	1.476	7.392	3.254	
3.	Virajpet	3.23	1.294	2.218	1.109	5.448	2.403	
	Total	12.05	4.824	7.314	3.657	19.362	8.481	

STATEMENT-I

Zilla Parishad Engineering Division, Madikeri

Kodagu Zilia Parishad

Details of Metalled and Asphalted Road Formed in Each Taluk During 1987 to 1991 By Kodagu Zilla Parishad Engineering Division, Madikeri (To End of 30.3.91)

		1987-88		1988-89		1989-90		1990-91	Total Form 1987-91		Remarks
Sl. No.	Taluk	Length of Metalled Roads	Length of Asphalted Roads	Length of Metalled Roads	Length of Asphalted Roads	Length of Metalled Roads	Length of Asphalted Roads	Length of Metalled Roads	Length of Asphalted Roads	Length Metall-Roads led	Length of Alphalted Roads
1.	Madikeri	10.00	8.25	6.80	5.80	24.80	17.95	30.60	22.08	72.20	54.08
2.	Somwarpet	20.50	16.10	15.57	14.87	30.30	19.65	25.80	20.60	92.17	71.22
3.	Virajpet	18.40	6.20	10.50	12.00	21.45	18.50	40.00	25.00	90.35	61.70
	Total	**48.90**	**30.55**	**32.87**	**32.67**	**76.55**	**56.10**	**96.40**	**67.68**	**254.72**	**187.00**

ಕೊಡಗು ಜಿಲ್ಲೆಯಲ್ಲಿ ಸಾಲ ಸೌಲಭ್ಯಗಳು

2082 - ಶ್ರೀಮತಿ ಸುಮಾವಸಂತ (ವಿರಾಜಪೇಟೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಕೊಡಗು ಜಿಲ್ಲೆಯಲ್ಲಿ 1989-90ನೇ ಸಾಲಿನಲ್ಲಿ ಎಷ್ಟು ಜನರಿಗೆ ಸಮಗ್ರ ಗ್ರಾಮೀಣ ಅಭಿವೃದ್ಧಿಯ ಕಾರ್ಯಕ್ರಮದಡಿಯಲ್ಲಿ ಸಾಲ ಸೌಲಭ್ಯಗಳನ್ನೊದಗಿಸಲಾಗಿದೆ. (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ವೀರಾಜಪೇಟೆ ತಾಲ್ಲೂಕಿನಲ್ಲಿ ಶಿಫಾರಸ್ಸು ಮಾಡಲ್ಪಟ್ಟವರ ಪೈಕಿ ಹರಿಜನ, ಗಿರಿಜನ, ಹಾಗೂ ಇತರೆ ಹಿಂದುಳಿದ ವರ್ಗದವರೆಷ್ಟು (ಮಂಡಲವಾರು ಮಾಹಿತಿ ನೀಡುವುದು)

ಇ) ಈ ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಸಾಲ ಮಂಜೂರಾತಿಯಿಂದ ಹರಿಜನ ಗಿರಿಜನ ಆರ್ಥಿಕ ಮಟ್ಟ ಸುಧಾರಣೆಯಾಗಿದೆಯೇ?

ಈ) ಹಾಗಿದ್ದಲ್ಲಿ ಪ್ರತಿಶತ ಪ್ರಮಾಣವೆಷ್ಟು ಹಾಗೂ ಇದರಿಂದ ಅವರು ಬಡತನ ರೇಖೆ ದಾಟಿದ್ದಾರೆಯೇ?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರು)

ಅ)

ಮಡಿಕೇರಿತಾಲ್ಲೂಕು	744
ವೀರಾಜಪೇಟೆತಾಲ್ಲೂಕು	1421
ಸೋಮವಾರಪೇಟೆ ತಾಲ್ಲೂಕು	1250
	3415

ಆ)

ಮಂಡಲಗಳ ಹೆಸರು	ಹಿಂದುಳಿದ ವರ್ಗ	ಎಸ್.ಸಿ	ಎಸ್.ಟಿ
1) ಪೊನ್ನಂಪೇಟೆ	-	6	1
2) ಬಿರುನಾಣಿ	-	5	-
3) ಬೇಟೋಳಿ	13	12	10
4) ಕಡಂಗಮರೂರು	4	17	-
5) ಬಾಳೆಲೆ	3	6	2
6) ಕಾನೂರು	6	12	2
7) ಪಾಲಿಬೆಟ್ಟ	12	9	-
8) ಗೋಣಿಕೊಪ್ಪ	4	8	-
9) ಅರುವತ್ತೊಕ್ಲು	5	6	-
10) ನಾಲ್ಕೇರಿ	4	2	15
11) ಕನಂಗಾಲ	3	6	1
12) ತಿತಿಮತಿ	2	-	25
13) ಹಾತೂರು	1	0	-
14) ಕಿರಗೂರು	8	9	-
15) ಶ್ರೀಮಂಗಲ	-	8	8
16) ಹುದಿಕೇರಿ	-	9	1
17) ಚಂಬೆಬೆಳ್ಳೂರು	2	7	-
18) ಮಾಲ್ದಾರೆ	6	126	
19) ವಿರಾಜಪೇಟೆ	6	10	-
20) ಅಮ್ಮತ್ತಿ	10	12	-
21) ಕ್ಕಾಮಾಡು	17	10	-

22)	ಕುಟ್ಟ	5	-	8
23)	ದೇವಪುರ	5	3	2
24)	ಸಿದ್ದಾಪುರ	7	7	3
25)	ಬೆಟ್ಟಂಗಾಲ	4	5	-
26)	ಕದನೂರು	3	11	-
	ಒಟ್ಟು	130	192	84

ಇ) ಹೌದು.

ಈ) ಈ ಯೋಜನೆಯಡಿ ಪ್ರಯೋಜನ ಪಡೆದ ಫಲಾನುಭವಿಗಳ ಪೈಕಿ ಬಡತನ ರೇಖೆ ದಾಟಿರುವ ಬಗ್ಗೆ ಫಲಾನುಭವಿಗಳ ಸಂಖ್ಯೆಯನ್ನು ತಿಳಿದುಕೊಳ್ಳಲು ಮೌಲ್ಯಮಾಪನ ಕೈಗೊಂಡಿಲ್ಲವಾದರೂ ಯೋಜನೆಯ ಮುಖ್ಯ ಉದ್ದೇಶಗಳು ತಕ್ಕ ಮಟ್ಟಿಗೆ ಈಡೇರಿದೆ ಎಂದು ಜಿಲ್ಲಾ ಪರಿಷತ್ ವರದಿ ಮಾಡಿದೆ.

ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿ ಚುನಾವಣೆ

2057 - ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) *ಈಗಿರುವ ಪಂಚಾಯತ್ ರಾಜ್ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿ ಕಾನೂನನ್ನು ಬದಲಾಯಿಸುವ ಯೋಜನೆ ಸರ್ಕಾರಕ್ಕೆ ಇದೆಯೇ?*

ಆ) *ಹಾಗಿದ್ದಲ್ಲಿ, ಅದನ್ನು ಎಂದಿನಿಂದ ಜಾರಿಗೆ ತರಲಾಗುವುದು?*

ಇ) 1992*ರ ಜನವರಿಯಲ್ಲಿ ಈಗಿರುವ ಜಿಲ್ಲಾ ಪರಿಷತ್ ಮಂಡಲ ಪಂಚಾಯಿತಿಗಳ ಅವಧಿ ಮುಗಿಯುವುದರಿಂದ ಚುನಾವಣೆಗಳನ್ನು ನಡೆಸಲಾಗುವುದೇ?*

ಈ) *ಇಲ್ಲದಿದ್ದಲ್ಲಿ ಈ ಬಗ್ಗೆ ಸರ್ಕಾರದ ನಿಲುವೇನು?*

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಅ) ಹೌದು.

ಆ) ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಇ) ಕಾನೂನಿಗನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು.

ಈ) ಉದ್ಭವಿಸುವುದಿಲ್ಲ.

ಕೊಡಗು ಜಿಲ್ಲೆಯಲ್ಲಿ ಹರಿಜನ, ಗಿರಿಜನ ಹಾಗೂ ಬಡವರಿಗೆ ನೀಡಿರುವ ಜನತಾ ಮನೆಗಳ ಕುರಿತು

2362 - ಶ್ರೀಮತಿ ಸುಮಾ ವಸಂತ್ (ವಿರಾಜಪೇಟೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) *ಕೊಡಗು ಜಿಲ್ಲೆಯಲ್ಲಿ ಬಡವರು ಮತ್ತು ಹರಿಜನ ಗಿರಿಜನರಿಗಾಗಿ ಇದುವರೆಗೆ ಕೊಟ್ಟಿರುವ ಜನತಾ ಮನೆಗಳ ಸಂಖ್ಯೆ ಎಷ್ಟು? (*1988-89 89-90 90-91 *ವರ್ಷಗಳ ವಿವರವನ್ನೊದಗಿಸುವುದು)*

ಆ) 1990-91 *ರ ಯೋಜನೆಯಲ್ಲಿ ನಿಗದಿಪಡಿಸಿರುವ ಗುರಿ ಎಷ್ಟು?*

ಇ) 1991-92*ಕ್ಕೆ ಯೋಜಿಸಿರುವ ಗುರಿ ಎಷ್ಟು?*

ಈ) *ಜನತಾ ಮನೆ ಹೊಂದಿರುವವರಿಂದ ಸರ್ಕಾರಕ್ಕೆ ಬರಬೇಕಾಗಿರುವ ಒಟ್ಟು ಹಣವೆಷ್ಟು?*

ಉ) *ಆ ರೀತಿ ಬರಬೇಕಾಗಿರುವ ಹಣವನ್ನು ಸರ್ಕಾರ ಮನ್ನಾ ಮಾಡುವ ಆಲೋಚನೆ ಏನಾದರೂ ಇದೆಯೇ? (ತಾಲೂಕುವಾರು ಮಾಹಿತಿಗಳು*

ಒದಗಿಸುವುದು) (ವಿರಾಜಪೇಟೆ ತಾಲ್ಲೂಕಿನ ಮಂಡಲವಾರು ವಿವರಗಳನ್ನು ಒದಗಿಸುವುದು)

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಅ)

1988-89	860 ಮನೆಗಳು
1989-90	683 ಮನೆಗಳು
1990-91	382 ಮನೆಗಳು

ಆ) 382 ಮನೆಗಳು (1990-91 ರ ಗುರಿಯನ್ನು ವಿಲೀನಗೊಳಿಸಲಾಗಿದೆ)

ಇ) 2510 ಮನೆಗಳು

ಈ) ರೂ. 143.87 ಲಕ್ಷ

ಉ)

ಇಲ್ಲ

ಮಡಿಕೇರಿ	ರೂ.	51.72	ಲಕ್ಷ
ಸೋಮವಾರಪೇಟೆ	ರೂ.	62.00	ಲಕ್ಷ
ವಿರಾಜಪೇಟೆ	ರೂ.	30.15	ಲಕ್ಷ
ಒಟ್ಟು	ರೂ.	143.87	ಲಕ್ಷ

ಜನತಾ ವಸತಿ ಯೋಜನೆಯನ್ವಯ ಮನೆ ಕಟ್ಟಲು 1978-79 ರಿಂದಲೂ ಸಾಲ ಕೊಡುತ್ತಿದ್ದು, ಮಂಡಲ ಪಂಚಾಯತಿಗಳು 1987 ರಿಂದ ಮಾತ್ರ ಅಸ್ತಿತ್ವಕ್ಕೆ ಬಂದಿರುತ್ತದೆ. ಆದ್ದರಿಂದ ಮಂಡಲವಾರು ವಿವರಗಳು ಲಭ್ಯವಿರುವುದಿಲ್ಲ.

ಉಡುಪಿ ತಾಲ್ಲೂಕು 41ನೇ ಶೀರೂರು ಗ್ರಾಮಸ್ಥರಿಗೆ ರಸ್ತೆ ಸಂಪರ್ಕ ಕಲ್ಪಿಸುವ ಕುರಿತು

2357-ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉಡುಪಿ ತಾಲ್ಲೂಕು 41ನೇ ಶೀರೂರು ಗ್ರಾಮದ 'ಕಾಪಾಡಿ' ಪರಿಸರದಲ್ಲಿ ರಸ್ತೆ ಸಂಪರ್ಕ ಇಲ್ಲದಿರುವುದು ನಿಜವಲ್ಲವೆ; ಹಾಗೂ ಈ ಪರಿಸರದ ವಿದ್ಯಾರ್ಥಿಗಳು, ಸಾರ್ವಜನಿಕರು ತುಂಬಾ ತೊಂದರೆ ಅನುಭವಿಸುವುದು ಸರ್ಕಾರಕ್ಕೆ ತಿಳಿದಿಲ್ಲವೆ?*

ಆ) *ಈ ಗ್ರಾಮಸ್ಥರು ಹತ್ತಿರದ ಹರಿಖಂಡಿಗೆಗೆ ಸುತ್ತು ಬಳಸಿ 2 ಮೈಲು ನಡೆದುಕೊಂಡು ಬರಬೇಕಾದ ಪರಿಸ್ಥಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ? (ಲೋಕೋಪಯೋಗಿ ಇಲಾಖೆಯ ಗಮನಕ್ಕೆ ಬಂದಿಲ್ಲವೆ)*

ಇ) *ಗ್ರಾಮಸ್ಥರು ಮೂಲಭೂತ ಅವಶ್ಯಕತೆಯಾದ ರಸ್ತೆ ಸಂಪರ್ಕವನ್ನು ಒದಗಿಸುವ ಸಲುವಾಗಿ ಸರ್ಕಾರ ಈವರೆಗೆ ಕೈಗೊಂಡ ಕ್ರಮವೇನು? (ಲೋಕೋಪಯೋಗಿ ಇಲಾಖೆಯವರು ಈವರೆಗೆ ಕೈಗೊಂಡ ಕ್ರಮಗಳೇನು ತಿಳಿಸಬಹುದು).*

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು) :

ಅ) ಶೀರೂರು ಗ್ರಾಮದ ಸುಮಾರು 150 ಜನಸಂಖ್ಯೆ ಇರುವ ಕಾಪಾಡಿ ಪರಿಸರಕ್ಕೆ ಮುಖ್ಯ ಗ್ರಾಮಾಂತರ ರಸ್ತೆಯಿಂದ 4.00 ಕಿ.ಮೀ. ಉದ್ದದ ಒಂದು

ರಸ್ತೆ ಹರಿಖಂಡಿಗೆಯಿಂದ 3.00 ಕಿ.ಮೀ ಉದ್ದದ ಒಂದು ರಸ್ತೆ ಹೀಗೆ ಎರಡು ಕಚ್ಚಾ ರಸ್ತೆಗಳ ಸಂಪರ್ಕ ಇರುತ್ತದೆ. ಇವು ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರುತ್ತವೆ.

ಆ) ಹರಿಖಂಡಿಗೆ ಹತ್ತಿರದ ದಾರಿಯಾದ 3.00 ಕಿ.ಮೀ ಉದ್ದದ ಕಚ್ಚಾ ರಸ್ತೆಯಲ್ಲಿ 6.00 ಮೀಟರ್ ಅಗಲದ ಒಂದು ಹಳ್ಳ ಹರಿಯುತ್ತಿದ್ದು ಇದಕ್ಕೆ ಸೇತುವೆ ಇಲ್ಲದಿರುವುದರಿಂದ ಸಾರ್ವಜನಿಕರು ಹತ್ತಿರದ ದಾರಿಯನ್ನು ಬಿಟ್ಟು ಸುತ್ತು ಬಳಸಿದ 4.00 ಕಿ.ಮೀ ಉದ್ದದ ರಸ್ತೆಯನ್ನು ಉಪಯೋಗಿಸುತ್ತಿದ್ದಾರೆ.

ಇ) ಕಾಪಾಡಿ ಪರಿಸರಕ್ಕೆ ಹರಿಖಂಡಿಯಿಂದ 3 ಕಿ.ಮೀ ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಿ ಹಳ್ಳಕ್ಕೆ ಸೇತುವೆ ನಿರ್ಮಿಸಿ ಸರ್ವಋತು ರಸ್ತೆಯನ್ನಾಗಿ ಮಾಡುವುದಕ್ಕೆ 10.50 ಲಕ್ಷ ರೂ.ಗಳ ಅಂದಾಜು ಆಗುತ್ತದೆ. ಮಂಗಳೂರು ಜಿಲ್ಲಾ ಪರಿಷತ್ತಿನವರಿಗೆ ಈ ಕಾಮಗಾರಿಯ ಅವಶ್ಯಕತೆಯನ್ನು ಅವಲೋಕಿಸಿ ಸರ್ವಋತು ರಸ್ತೆ ನಿರ್ಮಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗುವುದು.

ಕಾವೇರಿ ಜಲಾನಯನ ಪ್ರದೇಶದಲ್ಲಿನ ಯೋಜನೆಗಳ ಕುರಿತು

2059 - ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಕಾವೇರಿ ಜಲಾನಯನ ಪ್ರದೇಶದ ವಿವಿಧ ಯೋಜನೆಗಳಿಗೆ ಕಳೆದ 3 ವರ್ಷಗಳಲ್ಲಿ ಬಜೆಟ್‌ನಲ್ಲಿ ಒದಗಿಸಲಾಗಿದ್ದ ಹಣವೆಷ್ಟು ಹಾಗೂ ಖರ್ಚಾದ ಹಣವೆಷ್ಟು? (ವಿವರ ನೀಡುವುದು)

ಆ) ಈ ಎಲ್ಲಾ ಯೋಜನೆಗಳನ್ನು ಪೂರ್ಣಗೊಳಿಸಲು ಬೇಕಾಗಿರುವ ಒಟ್ಟು ಹಣ ಎಷ್ಟು ಹಾಗೂ ಈ ಯೋಜನೆಗಳನ್ನು ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ)

ವರ್ಷ	ಅನುದಾನಮಾಡಿದ	ಖರ್ಚು (ಕೋಟಿ ರೂ.ಗಳಲ್ಲಿ)
1988-89	92.37	69.78
1989-90	119.86	91.95
1990-91	124.44	102.68

(ಯೋಜನಾವಾರು ಪಟ್ಟಿಯನ್ನು ಲಗತ್ತಿಸಲಾಗಿದೆ)

ಆ) ಇದಕ್ಕೆ ಬೇಕಾದ ಹಣ ಸುಮಾರು 1475 ಕೋಟಿ ರೂ.ಗಳಾಗಿರುತ್ತದೆ. (ಈ ವರ್ಷದ ಅನುದಾನ ರೂ.140.47 ಕೋಟಿಗಳ ಹೊರತಾಗಿ) ಆದಷ್ಟು ಶೀಘ್ರವಾಗಿ ಮುಗಿಸಲು ಕ್ರಮ ಕೈಗೊಳ್ಳಲಾಗುವುದು.

STATEMENT SHOWING THE GRANT AND EXPENDITURE FOR THE PAST 3 YEARS (1988-89, 1989 -90 & 1990-91) FOR THE IRRIGATION PROJECTS IN CAUVERY BASIN

Sl. No.	Project	1988-89		1989-90		1990-91		Total	
		Grant	Expdr.	Grant	Expdr	Grant	Expdr.	Grant	Expdr.
1.	K.R.S. Modernisation	500	243.64	385	349.28	100	356.12	985	949.04
2.	Harangi	975	655.15	1350	1007.21	1275	883.01	3600	2545.37
3.	Hemavathi	3990	3221.89	5000	4197.52	5500	4960.60	14490	12380.01
4.	Kabini	800	740.65	1600	1256.24	1300	1427.57	3700	3424.46
5.	D.Devarajurs Canal	355	249.41	500	380.02	500	353.48	1355	982.91
6.	Yagachi	135	111.82	300	253.90	500	335.67	935	701.39
7.	Manchanabele	300	256.75	250	167.43	175	149.83	725	574.01
8.	Taraka	20	25.21	16	82.42	-	-	36	107.63
9.	Votehole	250	27.04	200	109.52	100	146.94	550	283.50
10	Arkavathy	175	29.61	300	31.05	500	174.12	975	234.78
11.	Chikkahole Diversion	20	5.10	20	7.12	-	-	40	12.22
12.	Chiklihole	45	61.54	80	81.92	75	55.59	200	199.05
13.	Iggalur	135	40.32	200	45.04	300	61.60	635	146.96
14.	Kamasamudra	85	76.48	200	72.38	250	77.10	535	225.96
15.	Hutchanakoplu	-	-	-	-	250	41.00	250	41.00
16.	Uduthorehalla	85	14.24	200	11.96	500	346.60	785	372.80
17.	L.I.Corporation	200	43.85	250	45.43	50	111.36	500	200.64
18.	Minor Irrigation	1167	1175.00	1135	1098.00	1069	787.00	3300	3060.00
	Total	**9237**	**6977.70**	**11986**	**9195.44**	**12444**	**10267.59**	**33667**	**26440.73**

ನಿರ್ಮಾಣ ಹಂತದಲ್ಲಿರುವ ನೀರಾವರಿ ಯೋಜನೆಗಳನ್ನು ಬೇಗ ಮುಕ್ತಾಯಗೊಳಿಸುವುದು

2058-ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿಶ್ವಬ್ಯಾಂಕ್ ಸಹಾಯದಿಂದ ನಿರ್ಮಾಣ ಹಂತದಲ್ಲಿರುವ ನೀರಾವರಿ ಯೋಜನೆಗಳು ಯಾವುವು? (ವಿವರಗಳನ್ನೊದಗಿಸುವುದು)

ಆ) ಇವುಗಳು ಪ್ರಾರಂಭವಾದ ವರ್ಷ ಹಾಗೂ ಇದುವರೆವಿಗೂ ಖರ್ಚಾಗಿರುವ ಹಣ ಎಷ್ಟು?

ಇ) ಈ ಯೋಜನೆಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು ಹಾಗೂ ಯೋಜನೆಗಳ ಕಾರ್ಯಗತ ತಡವಾಗಲೂ ಕಾರಣಗಳೇನು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ರಾಜ್ಯದಲ್ಲಿ ವಿಶ್ವಬ್ಯಾಂಕ್ ಸಹಾಯದಿಂದ ಕೆಳಗೆ ತಿಳಿಸಿದ ಎರಡು ನೀರಾವರಿ ಯೋಜನೆಗಳು ನಿರ್ಮಾಣ ಹಂತದಲ್ಲಿವೆ:- (1) ಕೃಷ್ಣಾ ಮೇಲ್ದಂಡೆ ಯೋಜನೆ - ಘಟ್ಟ-1 ಹಂತ 2 (2) ರಾಷ್ಟ್ರೀಯ ಜಲ ನಿರ್ವಹಣಾ ಯೋಜನೆ.

ಆ) ಕೃಷ್ಣ ಮೇಲ್ದಂಡೆ ಯೋಜನೆ ಘಟ್ಟ-1 ಹಂತ-2.

(1) ಪ್ರಾರಂಭವಾದ ವರ್ಷ .. 1989

(2) ಇದುವರೆಗೂ ಖರ್ಚಾಗಿರುವ ಹಣ .. 86.65 ಕೋಟಿ ರೂ.ಗಳು

ರಾಷ್ಟ್ರೀಯ ಜಲ ನಿರ್ವಹಣಾ ಯೋಜನೆ:

(1) ಪ್ರಾರಂಭವಾದ ವರ್ಷ..1986-87

(2) ಮೇ 1991ರವರೆಗೆ ಖರ್ಚಾಗಿರುವ ಹಣ..20.55 ಕೋಟಿ ರೂ.ಗಳು.

ಇ) ಕೃಷ್ಣ ಮೇಲ್ದಂಡೆ ಯೋಜನೆ ಘಟ್ಟ-1 ಹಂತ-2

(1) ಪೂರ್ಣಗೊಳಿಸಲು ಉದ್ದೇಶಿಸಲಾದ ವರ್ಷ .. 1996

(2) ಯೋಜನೆಯ ಕಾರ್ಯಗತ ತಡವಾಗಿರುವುದಕ್ಕೆ ಮುಖ್ಯ ಕಾರಣಗಳು ಈ ರೀತಿ ಇವೆ:-

(ಅ) ಭೂಸ್ವಾಧೀನದಲ್ಲಿ ಆದ ವಿಳಂಬ.

(ಆ) ಕೊಲ್ಲಿ ಯುದ್ಧ ಪರಿಣಾಮದಿಂದ ಇಂಧನದ ಪೂರೈಕೆಯಲ್ಲಿ ಆದ ಕಡಿತ.

(ಇ) ವಿಶ್ವಬ್ಯಾಂಕ್ ಸಹಮತಿಯೊಂದಿಗೆ ಗುತ್ತಿಗೆ ಕರಾರಿನ ಕರಡು ದಾಖಲೆಗಳಲ್ಲಿ ಆಗಿಂದಾಗ್ಗೆ ಅನಿವಾರ್ಯವಾಗಿ ಮಾಡಬೇಕಾದ ಮಾರ್ಪಾಡುಗಳು.

(ಈ) ಎಸ್.ಪಿ.ಡಿ. ದರಗಳ ರೀತ್ಯ ಸಿಮೆಂಟ್ ಸರಬರಾಜಿನಲ್ಲಿ ಕೊರತೆ.

ರಾಷ್ಟ್ರೀಯ ಜಲ ನಿರ್ವಹಣ್ ಯೋಜನೆ:

(1) ಪೂರ್ಣಗೊಳಿಸಲು ಉದ್ದೇಶಿಸಲಾದ ವರ್ಷ 1992-93

(2) ಯೋಜನೆಯ ಕಾರ್ಯಗತ ತಡವಾಗಿರುವುದಕ್ಕೆ ಮುಖ್ಯ ಕಾರಣಗಳು ಈ ರೀತಿ ಇವೆ:-

(ಅ) ಸಮಯಕ್ಕೆ ಸರಿಯಾಗಿ ಸಿಮೆಂಟ್ ಮತ್ತು ಉಕ್ಕು ದೊರಕದೇ ಇದ್ದುದು.

(ಆ) ಹಣದ ಕೊರತೆ.

ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಗಳು

2271 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಕಳೆದ ಆರು ವರ್ಷಗಳಲ್ಲಿ ರಾಜ್ಯದ ಎಷ್ಟು ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮಾಡಲಾಗಿದೆ? ಅವು ಯಾವುವು?

ಆ) ಅವುಗಳ ಡಾಂಬರೀಕರಣ ಪೂರ್ಣವಾಗಿದೆಯೇ?

ಇ) ಹೊಸ ರಾಷ್ಟ್ರೀಯ ಹೆದ್ದಾರಿಗಳನ್ನು ಮಾಡಲು ಸರ್ಕಾರ ಹಾಕಿಕೊಂಡ ಕಾರ್ಯಕ್ರಮಗಳೇನು?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು)

ಅ) ಯಾವುವೂ ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) 1973 ರಿಂದ ಇದುವರೆಗೆ 13 ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲು ಕೇಂದ್ರಕ್ಕೆ ಶಿಫಾರಸ್ಸು ಮಾಡಲಾಗಿದೆ. (ಪಟ್ಟಿ ಲಗತ್ತಿಸಲಾಗಿದೆ)

APPENDIX

Roads proposed in Karnataka State for being declared as National Highways

Sl.No.	*Name of the State Highway*	*Length in KM in Karnataka*
1.	Coorty on NH 7 in Andhra Pradesh-Guntakal-Bellary-Hospet-Koppal-Gadag-Hu bli-Yellapur-Baleguli-Karwar (to join NH 17)	422
2.	Bangalore-Mysore-Nanjangud-Gundlupet-Ooty-Coimb atore (to join NH 47 in Tamilnadu)	220
3.	Mysore-Srirangapatna-Nagamangala-Chikkanayakanah alli-Huliyur-Hiriyur-Bellary-Sirguppa-Shahapur-Gulbarga-Humnabad (to join NH 9)	678
4.	Tumkur-Arasikere-Shimoga-Sagar-Honnavar (to join NH 17)	332
5.	Bangalore-Mysore-Mercara-Mangalore (to join NH 17)	385
6.	Belgaum-Bijapur-Gulbarga-Humnabad (to join NH 9)	364
7.	Belgaum-Bagalkot-Raichur-Mehaboobnagar in Andhra Pradesh	336

8.	Chitradurga-Holalkere-Hosadurga-Chickmagalur-Mu digere-Belthangadi-Bantwal-Mangalore (to join NH 17)	283
9.	Dharwar-Londa-Anmod-Panaji (to join NH 17)	95
10.	Padubidri-Karkala-Sringeri-Thirthahalli-Shikari pura-Shiralkoppa-Hubli-Bagalkot-Hungund	550
11.	Sira (on NH4 Bangalore-Poona road)-Madhugiri-Gouribidanur-Chickballapur-Chintamani-Srinivasapura-Mulbagal (on NH 4 Bangalore-Madras road)	160
12.	Chitradurga-Shimoga-Chickmagalur-Sakleshpur-Mercara-Tellicheri	325
13.	Bangalore-Kanakapura-Malavalli-Mysore-Nanjangud - Sultan Battery-Calicut	240

ರಾಷ್ಟ್ರೀಯ ಹೆದ್ದಾರಿಗಳನ್ನು ಹೆಚ್ಚಿಸುವುದು

2060 - ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳ ಒಟ್ಟು ಸಂಖ್ಯೆ ಎಷ್ಟು ಹಾಗೂ ಅವುಗಳ ಉದ್ದ ಎಷ್ಟು?

ಆ) ಇವುಗಳ ನಿರ್ವಹಣೆಗಾಗಿ ಕೇಂದ್ರ ಸರ್ಕಾರದಿಂದ ಬರುತ್ತಿರುವ ಹಣವೆಷ್ಟು?

ಇ) ಕೇಂದ್ರ ಸರ್ಕಾರಕ್ಕೆ ರಾಜ್ಯದಿಂದ ರಾಷ್ಟ್ರೀಯ ಹೆದ್ದಾರಿಗಳನ್ನು ಹೆಚ್ಚು ಮಾಡಲು ಪ್ರಸ್ತಾವನೆಗಳನ್ನು ಕಳುಹಿಸಲಾಗಿದೆಯೇ?

ಈ) ಹಾಗಿದ್ದಲ್ಲಿ ಇವುಗಳನ್ನು ಎಂದು ಕಳುಹಿಸಲಾಯಿತು, ಹಾಗೂ ಈ ಪ್ರಸ್ತಾವನೆಗಳ ಸಂಖ್ಯೆ ಎಷ್ಟು?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು)

ಅ) ಏಳು (7) 1997 ಕಿ.ಮೀ. ಗಳು.

ಆ) *8.5* ಕೋಟಿ ರೂ.ಗಳು.

ಇ) ಹೌದು.

ಈ) ಇದುವರೆಗೂ ಒಟ್ಟು 13 ರಾಜ್ಯ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲು ಕೇಂದ್ರಕ್ಕೆ ಪತ್ರದ ಸಂಖ್ಯೆ ಪಿಡಬ್ಲ್ಯುಡಿ 63 ಸಿಎನ್‌ಹೆಚ್ 73, ದಿನಾಂಕ: 3-5-73, 3-9-84, 11-7-90 ಮತ್ತು 25-1-91ರಲ್ಲಿ ಕಳುಹಿಸಲಾಗಿದೆ.

ಬೀದರ್ ಜಿಲ್ಲೆಯಲ್ಲಿರುವ ಪ್ರವಾಸಿ ತಾಣಗಳ ಅಭಿವೃದ್ಧಿ

2074 - ಶ್ರೀ ಗುರುಪಾದಪ್ಪ ನಾಗ್ಮರ್‌ಪಲ್ಲಿ (ಔರಾದ್) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಕೆಲವು ಸ್ಥಳಗಳು ಐತಿಹಾಸಿಕ ಸ್ಥಳಗಳಾಗಿರುವ ವಿಚಾರ ಸರ್ಕಾರದ ಗಮನದಲ್ಲಿದೆಯೇ ?

ಆ) ಹಾಗಿದ್ದಲ್ಲಿ, ಈ ಸ್ಥಳಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಪ್ರವಾಸಿ ವರ್ಷ 'ಭಾರತ ಸಂದರ್ಶಿಸಿ' ದಲ್ಲಿ ಜಿಲ್ಲೆಯಲ್ಲಿರುವ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಯಾವುದಾದರೂ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆಯೆ ?

ಇ) ಹಾಗಿದ್ದಲ್ಲಿ ಆ ಕಾರ್ಯಕ್ರಮಗಳಾವುವು ?

ಈ) ಇದಕ್ಕಾಗಿ ವೆಚ್ಚ ಮಾಡಲಿರುವ ಹಣವೆಷ್ಟು ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು)

ಅ) ಇದೆ.

ಆ) ಹೌದು.

ಇ) 1) ಕೇಂದ್ರ ಸರ್ಕಾರದ ನೆರವಿನ ಯೋಜನೆ ಅಡಿಯಲ್ಲಿ ಬೀದರ್‌ನಲ್ಲಿರುವ ಮಹ್ಮದ್ ಗವಾನ್ ಮದರಸಕ್ಕೆ ಹೊನಲು ಬೆಳಕಿನ ವ್ಯವಸ್ಥೆ ಮಂಜೂರಾಗಿದ್ದು, ಈ ಕಾರ್ಯವನ್ನು 1991-92ರಲ್ಲಿ ಕೈಗೆತ್ತಿಕೊಳ್ಳಲಾಗುವುದು.

2) ಬೀದರ್ ಜಿಲ್ಲೆಯ ಹುಮ್ನಾಬಾದ್‌ನಲ್ಲಿ ಹೆದ್ದಾರಿ ಸೌಲಭ್ಯವನ್ನು ನಿರ್ಮಿಸಲಾಗಿದೆ.

ಈ) 1) ಮಹ್ಮದ್ ಗವಾನ್ ಮದರಸಕ್ಕೆ ಹೊನಲು ಬೆಳಕಿನ ವ್ಯವಸ್ಥೆಗಾಗಿ ಸುಮಾರು ರೂ.5.00 ಲಕ್ಷಗಳನ್ನು ವೆಚ್ಚ ಮಾಡಲಾಗುವುದು.

2) ಹುಮ್ನಾಬಾದ್‌ನಲ್ಲಿ ನಿರ್ಮಿಸಿರುವ ಹೆದ್ದಾರಿ ಸೌಲಭ್ಯಕ್ಕೆ ರೂ.೩.೪೧ ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಕೃಷ್ಣಾ ಮೇಲ್ದಂಡೆಯಲ್ಲಿ ಕಾಮಗಾರಿಗಳನ್ನು ಚುರುಕುಗೊಳಿಸುವುದು.

2359-ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೃಷ್ಣಾ ಮೇಲ್ದಂಡೆಯಲ್ಲಿ ಕಾಮಗಾರಿಗಳನ್ನು ಚುರುಕುಗೊಳಿಸುವಲ್ಲಿ ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳಾವುವು:-

ಆ) ಈ ಯೋಜನೆಗಾಗಿ ಪ್ರಸಕ್ತ ಆಯವ್ಯಯದಲ್ಲಿ ನಿಗಧಿಪಡಿಸಿದ ಹಣವೆಷ್ಟು ?

ಇ) ಇದಕ್ಕಾಗಿ ಇದುವರೆವಿಗೂ ಬಿಡುಗಡೆ ಮಾಡಲಾದ ಹಣವೆಷ್ಟು ?

ಈ) ಈ ಯೋಜನೆಗೆ ವಿಶ್ವಬ್ಯಾಂಕ್ ನೆರವು ನೀಡಲು ಸಿದ್ಧವಾಗಿದ್ದರೂ ಸರ್ಕಾರ ಇರುವ ಹಣವನ್ನೇ ಖರ್ಚು ಮಾಡಲು ವಿಳಂಬ ಮಾಡುತ್ತಿರುವುದಕ್ಕೆ ಕಾರಣಗಳೇನು ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿನ ಕಾಮಗಾರಿಗಳನ್ನು ಚುರುಕುಗೊಳಿಸಲು ಸರ್ಕಾರವು ಈ ಕೆಳಕಂಡ ಮುಖ್ಯ ಕ್ರಮಗಳನ್ನು ಕೈಗೊಂಡಿದೆ:-

(1) ನಿರ್ಮಾಣ ಹಂತದಲ್ಲಿರುವ ಮೊದಲ ಘಟ್ಟದ 2ನೇ ಹಂತದ ಯೋಜನೆಗೆ ವಿಶ್ವ ಬ್ಯಾಂಕಿನ ನೆರವು ಪಡೆಯಲಾಗಿದೆ.

(2) ಕಾಲಕಾಲಕ್ಕೆ ಆದ್ಯತೆಯ ಮೇಲೆ ಯೋಜನೆಯ ಕಾಮಗಾರಿಗಾಗಿ ಹಣ ಬಿಡುಗಡೆ ಮಾಡುವುದು.

(3) ಕಾಲುವೆ ಮತ್ತು ರಸ್ತೆ ನಿರ್ಮಾಣಕ್ಕಾಗಿ ಬೇಕಾದ ಭೂಮಿಯನ್ನು ತ್ವರಿತಗತಿಯಲ್ಲಿ ಸ್ವಾಧೀನಪಡಿಸಿಕೊಳ್ಳುವ ಸಲುವಾಗಿ ಒಪ್ಪಿಗೆ ತೀರ್ಪು (Consentaward) ನೀಡುವುದು.

(4) ಗುತ್ತಿಗೆದಾರರ ವ್ಯಾಜ್ಯಗಳನ್ನು ಶೀಘ್ರವಾಗಿ ಬಗೆಹರಿಸಲು ಒಂದು ಸಮಿತಿಯನ್ನು ರಚಿಸಲು ಪರಿಶೀಲಿಸಲಾಗುತ್ತಿದೆ.

(5) ಯೋಜನೆಯಲ್ಲಿನ ಎಲ್ಲಾ ಖಾಲಿ ಹುದ್ದೆಗಳನ್ನು ಆದ್ಯತೆಯ ಮೇಲೆ ಭರ್ತಿ ಮಾಡುವುದು.

(6) ಯೋಜನೆಯಿಂದ ಹೊರಕ್ಕೆ ಸಿಬ್ಬಂದಿಯನ್ನು ವರ್ಗಾವಣೆ ಮಾಡದೆ ಇರುವುದು.

(7) ಯೋಜನೆಯ ಪ್ರಗತಿಯನ್ನು ಕಾಲಕಾಲಕ್ಕೆ ಪರಿಶೀಲಿಸಿ ಸಲಹೆ/ನಿರ್ಧಾರ ನೀಡಲು ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಒಂದು ಹೈ ಪವರ್ ಸಮಿತಿಯನ್ನು ರಚಿಸಲಾಗಿದೆ.

(8) ಮುಖ್ಯ ಮಂತ್ರಿಗಳು ಸೇರಿದಂತೆ ವಿವಿಧ ಹಂತಗಳಲ್ಲಿ ಯೋಜನಾ ಪ್ರಗತಿಯ ಪರಿಶೀಲನೆ.

ಅ) ಪ್ರಸಕ್ತ ಸಾಲಿನಲ್ಲಿ ಈ ಯೋಜನೆಗಾಗಿ 107 ಕೋಟಿ ರೂ.ಗಳ ಅನುದಾನ ಒದಗಿಸಲಾಗಿದೆ.

ಇ) ಇದುವರೆವಿಗೂ ನಿರ್ಮಾಣ ಕಾರ್ಯಗಳಿಗಾಗಿ 21.7 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

ಈ) ಯೋಜನೆಯ ಪ್ರಗತಿಯಲ್ಲಿ ಇದುವರೆವಿಗೂ ಆದ ವಿಳಂಬಕ್ಕೆ ಮುಖ್ಯ ಕಾರಣಗಳು ಈ ರೀತಿ ಇವೆ:-

(1) ಭೂಸ್ವಾಧೀನದಲ್ಲಿ ಆದ ವಿಳಂಬ

(2) ಕೊಲ್ಲಿ ಯುದ್ಧದ ಪರಿಣಾಮದಿಂದಾಗಿ ನಿರ್ಬಂಧಿತ ಇಂಧನ ಪೂರೈಕೆ

(3) ಎಸ್‌ಪಿಡಿ ದರಗಳಂತೆ ಸಿಮೆಂಟ್ ಪೂರೈಕೆಯಲ್ಲಿ ಆದ ವಿಳಂಬ.

(4) ವಿಶ್ವ ಬ್ಯಾಂಕಿನ ಸಹಮತಿಯೊಂದಿಗೆ ಆಗಿಂದಾಗ್ಗೆ ಟೆಂಡರ್ ನಿಯಮಾವಳಿಗಳಲ್ಲಿ ಅನಿವಾರ್ಯವಾಗಿ ಮಾಡಬೇಕಾದ ಮಾರ್ಪಾಡಿನಲ್ಲಿ ಆದ ವಿಳಂಬ.

(5) ಹಣ ಭರವಸೆ ಪತ್ರ ಬಿಡುಗಡೆಯಲ್ಲಿ ಆದ ಕೊರತೆ.

ಬೀದರ್ ಜಿಲ್ಲೆಯಲ್ಲಿರುವ ಕೆರೆಗಳು

2073 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿರುವ ಕೆರೆಗಳ ಒಟ್ಟು ಸಂಖ್ಯೆ ಎಷ್ಟು;-

ಆ) ಈ ಕೆರೆಗಳ ಪೈಕಿ ಜಿಲ್ಲಾ ಪರಿಷತ್ತಿನ ಅಧೀನದಲ್ಲಿ ಬರುವ ಕೆರೆಗಳೆಷ್ಟು? ಸಣ್ಣ ನೀರಾವರಿ ಅಧೀನದಲ್ಲಿ ಬರುವ ಕೆರೆಗಳೆಷ್ಟು ಮತ್ತು ದೊಡ್ಡ ನೀರಾವರಿ ಅಧೀನದಲ್ಲಿ ಬರುವ ಕೆರೆಗಳೆಷ್ಟು? (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಇ) ಇವುಗಳ ಪೈಕಿ ಎಷ್ಟು ಕೆರೆಗಳಲ್ಲಿ ನೀರಿದೆ ಹಾಗೂ ಎಷ್ಟು ಕೆರೆಗಳು ಬತ್ತಿವೆ?

ಈ) ಈ ಕೆರೆಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರದ ಮುಂದಿರುವ ಯೋಜನೆಗಳೇನು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಬೀದರ್ ಜಿಲ್ಲೆಯಲ್ಲಿ ಒಟ್ಟು 91 ಕೆರೆಗಳಿವೆ.

ಆ) ಈ ಕೆರೆಗಳ ಪೈಕಿ ಜಿಲ್ಲಾ ಪರಿಷತ್ತಿನ ಅಧೀನದಲ್ಲಿ 55 ಕೆರೆಗಳು, ಸಣ್ಣ ನೀರಾವರಿ ಅಧೀನದಲ್ಲಿ 36 ಕೆರೆಗಳು ಬರುತ್ತವೆ ಮತ್ತು ದೊಡ್ಡ ನೀರಾವರಿ ಅಧೀನದಲ್ಲಿ ಯಾವುದೇ ಕೆರೆಗಳು ಇರುವುದಿಲ್ಲ.

ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ:

		ಸಣ್ಣ ನೀರಾವರಿ ಕೆರೆಗಳು	ಜಿಲ್ಲಾ ಪರಿಷತ್ ಕೆರೆಗಳು
1.	ಬಸವಕಲ್ಯಾಣ	2	13
2.	ಔರಾದ್	18	12
3.	ಭಾಲ್ಕಿ	4	4
4.	ಹುಮ್ನಾಬಾದ್	5	9
5.	ಬೀದರ್	7	17
	ಒಟ್ಟು	36	55

ಇ) ಇವುಗಳ ಪೈಕಿ 73 ಕೆರೆಗಳಲ್ಲಿ ನೀರಿದೆ ಮತ್ತು 18 ಕೆರೆಗಳಲ್ಲಿ ನೀರಿಲ್ಲ.

ಈ) ನೀರಿಲ್ಲದ ಕೆರೆಗಳು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುವುದರಿಂದ ಅವುಗಳನ್ನು ಅಭಿವೃದ್ಧಿಪಡಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚನೆ ನೀಡಲಾಗುವುದು.

ಸೇಡಂ ತಾಲ್ಲೂಕಿನ ಮಂಡಲ್ ಪಂಚಾಯಿತಿಗಳ ಜವಾಹರ್ ರೋಜ್‌ಗಾರ್ ಯೋಜನೆ ಕುರಿತು

2355-ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಜವಾಹರ್ ರೋಜಗಾರ್ ಯೋಜನೆಯಡಿಯಲ್ಲಿ ಕೆಲಸಗಳು ಪೂರ್ತಿಯಾಗದೆ ಹಣ ದುರುಪಯೋಗವಾಗಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಈ ಯೋಜನೆಯಡಿಯಲ್ಲಿ ಪಂಚಾಯತ್‌ಗಳಲ್ಲಿ ಆಗಿರುವ ಒಂದೊಂದು ಕೆಲಸದ ಪ್ರತ್ಯೇಕವಾದ ವಿತರಣೆ ಹಾಗೂ ಆ ಒಂದೊಂದು ಕೆಲಸಕ್ಕೆ ತಗಲಿರುವ ವೆಚ್ಚ ಎಷ್ಟು? (ಪ್ರತಿ ಮಂಡಲದಲ್ಲಿ ಮಾಡಿರುವ ಕೆಲಸಗಳ ಹೆಸರು ಮತ್ತು ತಗಲಿರುವ ವೆಚ್ಚದ ವಿವರವನ್ನು ನೀಡುವುದು)

ಇ) ಈ ಯೋಜನೆಯಡಿಯಲ್ಲಿ ಆಹಾರ ಧಾನ್ಯ ಅಕ್ಕಿ, ಗೋಧಿ ಇತ್ಯಾದಿ ಒಂದು ವರ್ಷಕ್ಕಿಂತ ಹೆಚ್ಚಾಗಿ ಮಂಡಲ್ ಪಂಚಾಯತ್‌ಗಳಲ್ಲಿ ಉಳಿದು ನುಚ್ಚು ಹಿಡಿದದ್ದು ಕೆಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ, ವಿವಿಧ ಮಂಡಲಗಳಲ್ಲಿ ಉಳಿದಿರುವ ಆಹಾರ ದಾನ್ಯ ಪ್ರಮಾಣ ತೋರಿಸಲಾಗಿದೆ. ಅವುಗಳಲ್ಲಿ ಖರ್ಚಾಗಿದ್ದ ವಿವರವನ್ನು ಒದಗಿಸುವುದು.

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಸೇಡಂ ತಾಲ್ಲೂಕಿನಲ್ಲಿ ಜವಾಹರ್ ರೋಜಗಾರ್ ಯೋಜನೆಯಲ್ಲಿ 6.58 ಕ್ವಿಂಟಾಲ್ ಅಕ್ಕಿ ಕ್ಲುಪ್ತ ಸಮಯದಲ್ಲಿ ಕಾಮಗಾರಿಗೆ ಉಪಯೋಗಿಸದೆ ಕೆಟ್ಟು ಹೋಗಿರುವುದು ಮಾತ್ರ ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ಯೋಜನೆಯಡಿಯಲ್ಲಿ ಪಂಚಾಯತ್‌ಗಳಲ್ಲಿ ಆಗಿರುವ ಪ್ರತಿಯೊಂದು ಕೆಲಸದ ವಿತರಣೆ ಹಾಗೂ ತಗಲಿರುವ ವೆಚ್ಚದ ವಿವರವನ್ನು ಮಂಡಲವಾರು ತಃಖ್ತೆ 1ರಲ್ಲಿ ಲಗತ್ತಿಸಿದೆ.

ತಃಖ್ತೆ - 1

ಸೇಡಂ ತಾಲ್ಲೂಕಿನ ಜವಾಹರ ರೋಜಗಾರ್ ಯೋಜನೆಯಡಿಯಲ್ಲಿ ಮುಗಿದ ಕೆಲಸಗಳ ಯಾದಿ.

ಕ್ರ ಸಂ	ಕಾಮಗಾರಿಯ ಹೆಸರು ಮತ್ತು ಮಂಡಳ ಪಂಚಾಯಿತಿ	ಕೂಲಿ ಆಹಾರಧಾನ್ಯ	ನಗದು	ಸಾಮಗ್ರಿ	ಒಟ್ಟು	ಮಾನವ ದಿನಗಳು ಪಜಾ	ಪಪಂ	ಇತರ	ಒಟ್ಟು	ಹೆಣ್ಣು	ಕೆಲಸದ	ವರಾ
1	2	3	4	5	6	7	8	9	10	11	12	13
01	ಮಂಡಲ ಪಂಚಾಯಿತಿ ಅಡಕಿ:											
01	ಕಕ್ಕಸ ಮಹಿಳೆಯರಿಗೆ ಕಾ.ತಾಂಡಾ	1062-30	5362-15	1568-00	7792-45	123	-	128	251	76	ಮುಗಿದಿದೆ.	
02	ಕಕ್ಕಸ ಅಡಕಿ ಹೂಡಾ	1008-60	5321-05	1562-00	7991-65	27	-	199	226	71	"	
03	ಕಕ್ಕಸ ಕೂಂತಪಲ್ಲಿ	587-40	5456-15	1954-00	7994-55	93	-	85	178	72	"	
04	ಒಳ ರಸ್ತೆ ಮದಕಲ್	844-80	3136-80	6000-00	9981-60	48	-	208	256	144	"	
05	ಒಳರಸ್ತೆ ಹರಿಜನವಾಡಾ ಮದಕಲ್	974-40	2512-00	4500-00	7986-40	72	-	168	240	112	"	
06	ಪಿಂಟಿಂಗ್ ಕೆಲಸ ಲಿಂಗಂಪಲ್ಲಿ ಅಡಕಿ	2160-00	7837-50	-	9997-50	220	-	260	480	80	"	
07	ಕಕ್ಕಸ ಮಹಿಳೆಯರಿಗೆ ಕಂ.ಗಲ್ಲಿ ಅಡಕಿ	741-00	5309-20	1944-00	7995-25	67	-	120	187	89	"	
08	ಕಕ್ಕಸ ಮಹಿಳೆಯರಿಗೆ ಹರಿಜನವಾಡಾ	965-40.	5495-85	1434-00	7895-25	58	-	232	290	126	"	
09	ಒಳರಸ್ತೆ ರಾಜೋಳ(ಕೆ)	1021-50	3557-85	50408-00	9987-65	78	-	196	274	89	"	
10	ಒಳರಸ್ತೆ ಹರಿಜನವಾಡಾ	914-10	2994-65	4080-00	7988-75	69	-	114	283	70	"	
11	ಶಾಲಾ ದುರಸ್ತಿ ಮದಕಲ್	1102-50	3164-00	3469-15	7735-65	84	-	161	245	116	"	
12	ಒಳರಸ್ತೆ ಕೊಂತನಪಲ್ಲಿ	745-80	3623-20	5623-50	9992-50	226	-	-	226	131	"	
13	ಒಳರಸ್ತೆ ಸೋಮಪಲ್ಲಿ	686-40	3239-20	4441-30	8367-10	32	-	176	208	144	"	

1	2	3	4	5	6	7	8	9	10	11	12	13
14	ಕಕ್ಕಸ ಮಹಿಳೆಯರಿಗೆ ಆಗತಿಸಿ ಆಗಟಿ ಹತ್ತಿರ	1030-50	4820-60	2024-00	7935-10	31	-	198	229	129	”	
15	ಕಕ್ಕಸ ಮಹಿಳೆಯರಿಗೆ ಆಗಟಿ ಹತ್ತಿರ	517-50	3390-20	4080-00	7935-10	33	--	90	123	41	”	
16	ಒಳರಸ್ತೆ ಬಮದೇಪಲ್ಲಿ ಭಾಗ 1	904-20	3975-60	5120-00	9999-80	108	-	166	274	120	”	
17	” !” ಭಾಗ 2	2358-00	13762-00	14480-00	30000-00	100	-	424	524	74	”	
18	ಶಾಲಾ ಕಟ್ಟಡ ರಂಗಂಪಲ್ಲಿ	1044-60	5133-40	3812-00	9990-00	84	-	128	212	74	”	
19	ಪಿಟಿಂಗ್ ಕೆಲಸ ಘಸಲಾದ ತಾಂಡಾ	594-00	2202-80	7200-00	9996-80	64	-	68	132	52	”	
20	ಕಕ್ಕಸ ಮಹಿಳೆಯರಿಗೆ ಅಡಕಿ ನಂ.5	607-50	3416-00	3968-00	7992-10	36	-	99	135	27	”	
21	ಕಕ್ಕಸ ಮಹಿಳೆಯರಿಗೆ ಅಡಕಿ ನಂ.6	607-50	3416-00	3968-00	7992-40	46	-	99	135	27	ಮುಗಿದಿದೆ	
22	ಒಳಚರಂಡಿ ನಿರ್ಮಾಣ	639-40	2429-40	4122-00	7190-00	36	-	106	142	34	”	
23	ಒಳರಸ್ತೆ ಇರ್ಕಾಪಲ್ಲಿ	517-50	3039-50	3636-00	7193-00	48	-	67	115	31	”	
24	ಪರೀದಸಾಗರ ಕಾಲುವೆ ಸುಧಾರಣ ಇರ್ಕಾಪಲ್ಲಿ	1543-50	6362-50	12094-00	20000-0	75	-	268	348	93	”	
25	ಕೂಡುರಸ್ತೆ ಸೋಮಪಲ್ಲಿದಿಂದ- dōpōgāvøGâāpōgō	-	9840-00	-	9840-00	360	-	460	620	320	”	
26	ಶಾಲಾ ದುರಸ್ತಿ ಅಡಕಿ	214-50	9623-00	21008-85	30846-35	100	-	325	425	100	”	
27	ಟ್ರೇಡಿಂಗ್ ಕೆಲಸ ಅಡಕಿಯಿಂದ ಮೈಲವಾರ ಅಡಕಿ ರಾಜೋಳಿ ರಸ್ತೆ	5005-00	10955-00	3250-00	19210-00			1516	1516	200	”	
28	ನರಸರಿ ಬೆಳೆಸುವುದು ಅಡಕಿ	421-30	4987-65	1138-65	6951-60	171	-	-	171	170	”	
	ಒಟ್ಟು	5426-30	15846-65	4381-65	26951-60	171	-	1516	1687	270		
	1ರಿಂದ 28 ಒಟ್ಟು ಮೊತ್ತ	28900-00	140362-75	135672-45	304935-30	2479	-	6161	8640	2713		

ತಃಖ್ತೆ – 2

2ನೇ ಹಂತದಲ್ಲಿ ಮಂಜೂರಾಗಿರುವ ಹಣ ಹಾಗೂ ಆಹಾರಧಾನ್ಯದಿಂದ ಆಗಿರುವ ಕೆಲಸಗಳ ಮಂಡಲ ಪಂಚಾಯತವಾರು ಖರ್ಚಿನ ಮಾಹಿತಿ : ತಾ ಪಂ ಸ ಸೇಡಂ

ಕ್ರ ಸಂ	ಮಂಡಲ ಪಂಚಾಯತಿ ಹೆಸರು	ಮುಂದುವರೆದ ಕಾಮಗಾರಿಗಳ ಸಂಖ್ಯೆ	ಹೊಸ ಕಾಮಗಾರಿಗಳ ಸಂಖ್ಯೆ	ಒಟ್ಟು ಕಾಮಗಾರಿಗಳ ಸಂಖ್ಯೆ	ಪೂರ್ಣಗೊಂಡ ಕಾಮಗಾರಿ ಸಂಖ್ಯೆ	ನಗದು	ಆಹಾರ	ಸಾಮಗ್ರಿ	ಒಟ್ಟು
1	2	3	4	5	6	7	8	9	10
1.	ಅಡಕಿ	9	13	22	3	69012-75	26177-25	63460-00	158650-00
2.	ಇಟ್ಕಾಲ್	10	28	38	-	-	-	80800-00	80800-00
3.	ಕುಕ್ಕುಂದಾ	04	19	23	-	12000-00		102700-00	114700-00
4.	ಕುರಕುಂಟಾ	-	47	47	12	67476-10	10208-90	78815-00	150500-00
5.	ಕೋಡ್ಲಾ	-	29	29	3	30291-00	9000-00	104044-00	153325-00
6.	ಕೋಲಕುಂಡಾ	12	20	32	-	60640-00	19000-00	55840-00	165480-00
7.	ಬಟಗೇರಾ ಸಿಟಿ	15	22	37	9	21035-30	5266-70	63989-15	902910-05
8.	ಮದನಾ	16	26	42	-	65250-00	24750-00	65292-00	155292-00
9.	ಮಲಖೇಡ	-	49	49	-	44000-00	-	90500-10	134500-00
10.	ಮುಧೋಳ	3	25	28	-	99680-10	33226-75	55265-10	188171-75
11.	ರಿಬ್ಬನಪಲ್ಲಿ	1	33	34	1	53000-00	20000-00	51560-10	124500-00
	ಒಟ್ಟು	70	311	381	28	532375-15	147629-60	842205-05	1522209-80

ತಃಖ್ತೆ - 3

ಸೇಡಂ ತಾಲ್ಲೂಕಿನಲ್ಲಿ 11 ಮಂಡಲ ಪಂಚಾಯತ್ತುಗಳಿದ್ದು 1989-90ನೇ ಸಾಲಿನಲ್ಲಿ ಮಂಡಲವಾರು ಬಿಡುಗಡೆ ಮಾಡಿದ ಮತ್ತು ಎತ್ತುವಳಿಯಾಗಿ ಹಂಚಿ ಉಳಿದ ಆಹಾರಧಾನ್ಯದ ಮಾಹಿತಿಯನ್ನು ದಿನಾಂಕ 1-4-89ರಿಂದ 31-3-90 ರವರೆಗೆ ಈ ಕೆಳಗಿನಂತೆ ಇರುತ್ತದೆ.

ಕ್ರ ಸಂ	ಮಂಡಲ್ ಪಂಚಾಯಿತಿಯ ಹೆಸರು	ಜಿ.ಪ.ಗು ಬಿಡುಗಡೆಯಾದ ಆಹಾರಧಾನ್ಯ (ಕ್ವಿಂಟಲ್‌ಗಳಲ್ಲಿ)	ಮ.ಪಂ.ಗಳು ಎತ್ತುವಳಿ ಮಾಡಿದ ಆಹಾರ ಧಾನ್ಯ	ಹಂಚಿದ್ದು	ಉಳಿದದ್ದು	ಷರಾ
1	2	3	4	5	6	7
1	ಅಡಕಿ	111-00	111-00	111-00	—	—
2	ಇಟಕಲ್	108-00	108-00	64-89	43-11	—
3	ಕುಕ್ಕುಂಡಾ	78-00	78-00	76-59	1.41	—
4	ಕುರಕುಂಟಾ	126.00	126.00	69.19 1/2	56.78 1/2	—
5	ಕೋಡ್ಲಾ	129.00	129.00	91.50	26-49 1/2	—
6	ಕೋಲಕುಂಡಾ	102.00	102.00	41.45 1/2	60.54 1/2	—
7	ಬಟಗೇರಾ(ಜ)	106.00	106.00	90.80 1/2	15.19 1/2	—
8	ಮದನಾ	117.00	117.00	117.00	-	—
9	ಮಳಖೇಡಾ	128.00	128.00	127.52	0.48	—
10	ಮುಧೋಳ	113.00	113.00	106.29 1/2	6.70 1/2	—
11	ರಿಬ್ಬನಪಳ್ಳಿ	113.00	113.00	113.00	—	—
	ಒಟ್ಟು	1231.00	1231.00	1020.75 1/2	210.24 1/2	

ಇದರ ಪೈಕಿ ಕುರುಕುಂಟಾ ಮಂಡಲ ಪಂಚಾಯತ್ ದಲ್ಲಿ 6 ಕ್ವಿಂ 10 ಕೆ.ಜಿ. ಮತ್ತು ಮಳಖೇಡ ಮಂಡಲ ಪಂಚಾಯತ್ ದಲ್ಲಿ0-48 ಕೆ.ಜಿ ಆಹಾರ ಧಾನ್ಯವು ಹಾಳಾಗಿರುವುದು ವರದಿಯಾಗಿದೆ. ಸದರಿ ಹಾಳಾದ ಆಹಾರ ಧಾನ್ಯದ ಮೊತ್ತವನ್ನು ಸಂಬಂಧಪಟ್ಟ (ಕಾರ್ಯದರ್ಶಿಗಳಿಂದ ವಸೂಲಿ ಮಾಡಲು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. 1990-91ನೇ ಸಾಲಿಗೆ ಜವಾಹರ್ ರೋಜಗಾರ್ ಯೋಜನೆಯಡಿಯಲ್ಲಿ ಆಹಾರಧಾನ್ಯವನ್ನು ಮಂಡಲ ಪಂಚಾಯತುಗಳಿಗೆ ಒದಗಿಸಿರುವುದಿಲ್ಲ.

ಮಂಡಲ್ ಪಂಚಾಯತ್ ಕೋಡ್ಲಾ

2	3	4	5	6	7	8	9	10	11	12	13
ಬಸ್ ಶೆಲ್ಟರ್ ಕೋಡ್ಲಾ	297-00	1067-25	610-00	1974-25	27	-	63	90	27		
ಬಸ್ ಶೆಲ್ಟರ್ ಗೌಡನಳ್ಳಿ	247-50	936-75	-	1184-25	22	-	53	75	22	-	
ಬಸ್ ಶೆಲ್ಟರ್ ಹಂದರಕಿ	630-00	1580-60	2514-19	4734-79	42	-	98	140	42	-	
ಮುಷ್ಟಳ್ಳಿ ಒಳಹಂದ್ರಕಿ ಶಾಲಾ ದುರಸ್ತಿ	508-20	2003-05	3421-66	=3932-91	35	-	84	119	34	-	
1. ಒಳರಸ್ತೆ ಹಂದ್ರಕಿ (ಅರಣ್ಯದಿಂದ)	-	-	5000-00	5000-00	80	-	90	90	80	-	
.. ಒಳರಸ್ತೆ ಹುಳಗೋಳ (ಅರಣ್ಯದಿಂದ)	924-00	300-50	5000-00	8928-50	84	-	196	280	84	-	
ಒಳರಸ್ತೆ ಗೌಡನಳ್ಳಿ (ಅರಣ್ಯದಿಂದ)	2295-00	5246-25	4000-00	11541-25	153	-	353	206	153	-	
ಶಾಲಾ ಕಟ್ಟಡ ದುರಸ್ತಿ ಕೋಡ್ಲಾ	549-00	1330-00	3331-64	5210-64	36	-	86	122	36	-	
ಒಳರಸ್ತೆ ಬೆನಕನಹಳ್ಳಿ (ಅರಣ್ಯದಿಂದ)	1458-00	3567-00	5000-00	10025-00	97	-	227	324	97	-	
0 ಒಳರಸ್ತೆ ಕೋಡ್ಲಾ (ಬಾಡಿಗೆ ಅಂಗಡಿ)	1666-50	6099-00	13154-85	20920-35	151	-	354	505	151	-	
1 ಒಳರಸ್ತೆ ನಾಮವಾರ (ಅರಣ್ಯದಿಂದ)	855-00	2372-50	5000-00	8227-50	57	-	133	190	57	-	
2 ಒಳರಸ್ತೆ ಭೂಸಪೂರ (ಅರಣ್ಯದಿಂದ)	697-50	1872-25	5000-00	7569-75	193	-	272	465	193	-	
3 ಒಳರಸ್ತೆ ಕೋಡ್ಲಾ (ಅರಣ್ಯದಿಂದ)	495-00	2442-00	5000-00	7937-00	45	-	105	150	45	-	

ಮಂಡಲ ಪಂಚಾಯಿತಿ/ ಕುರಕುಂಟಾ

1	2	3	4	5	6	7	8	9	10	11	12	13
1.	ತೆಲ್ಲೂರ ಶಾಲಾ ದುರಸ್ಥಿ	666-60	3092-60	2237-00	5999-20	84	-	118	202	73	ಕೆಲಸ ಮುಗಿದಿದೆ.	
2.	ಸಂಗಾವಿ(ಬಿ) ಒಳರಸ್ತೆ	2052-60	9281-46	2110-00	13444-06	296	-	326	622	208	ಕೆಲಸ ಮುಗಿದಿದೆ	

ಮಂಡಲ ಪಂಚಾಯತ್ ಬಟಗೇರಾ (ಬಿ)

1	2	3	4	5	6	7	8	9	10	11	12	13
1.	ಕಮುನಿಟಿ ಹಾಲ್ ಬಟಗೇರಾ (ಬಿ)	1202-70	3819-40	10999-90	16022-00	-	-	324	324	-	ಕೆಲಸ ಮುಗಿದಿದೆ.	
2.	ಒಳರಸ್ತೆ ಇಂಜೇಪಲ್ಲಿ	551-88	2632-22	2087-00	5271-10	-	-	178	178	-	ಕೆಲಸ ಮುಗಿದಿದೆ	
3.	ಒಳರಸ್ತೆ ಅಳ್ಳೊಳ್ಳಿ	1815-00	6039-05	12335-00	20189-05	-	-	479	479	-	ಕೆಲಸ ಮುಗಿದಿದೆ	
4.	ಒಳರಸ್ತೆ ರಂಚೋಳ	514-80	2206-85	4194-00	6915-65	-	-	165	165	-	ಕೆಲಸ ಮುಗಿದಿದೆ	
5.	ಒಳರಸ್ತೆ ದುರಸ್ಥಿ ಸಿಂಧನಮಡು	620-40	2182-05	2670-00	5472-45	-	-	197	197	-	ಕೆಲಸ ಮುಗಿದಿದೆ	
6.	ಒಳರಸ್ತೆ ತುರ್ಕಬೊಮ್ಮನಹಳ್ಳಿ	438-90	1574-00	3032-05	5044-95	-	-	133	133	-	ಕೆಲಸ ಮುಗಿದಿದೆ	
7.	ಒಳರಸ್ತೆ ಮದರಾಸಾಗಸಂಪಲ್ಲಿ	1197-00	3733-20	3300-00	8230-20	-	-	354	354	-	ಕೆಲಸ ಮುಗಿದಿದೆ	
8.	ರಸ್ತೆ ಹರಿಜನವಾಡಾ ಅಳೊಳ್ಳಿ ಕಕ್ಕಸ	627-00	2221-50	2232-00	5080-50	-	-	220	220	.	ಕೆಲಸ ಮುಗಿದಿದೆ	

ಮಂಡಲ ಪಂಚಾಯತ್ ಇಟ್ಕಾಲ್

1	2	3	4	5	6	7	8	9	10	11	12
1.	ಶಾಲಾ ದುರಸ್ತಿ ಮೋತಕಪಲ್ಲಿ	1800-00	3000-00	5200-00	10000-00	180	-	220	400	80	ಮುಗಿದಿದೆ
2.	ಕಕ್ಕಸ ಸುಧಾರಣೆ ಮೋತಕಪಲ್ಲಿ	810-00	2682-00	1500-00	4992-00	45	-	135	180	45	ಮುಗಿದಿದೆ
3.	ಒಳರಸ್ತೆ ನಿರ್ಮಾಣ ಇಟಕಾಲ	1692-00	5628-00	6500-00	13820-00	286	-	90	376	30	ಮುಗಿದಿದೆ
4.	ಒಳರಸ್ತೆ ನಿರ್ಮಾಣ ಶಕಲಾತಪಲ್ಲಿ	1800-00	3000-00	5200-00	10000-00	180	-	220	400	80	ಮುಗಿದಿದೆ
5.	ಒಳರಸ್ತೆ ನಿರ್ಮಾಣ ಮೋತಕಪಲ್ಲಿ	1665-00	3351-00	4940-00	9956-00	98	-	272	370	34	ಮುಗಿದಿದೆ
6.	ಒಳರಸ್ತೆ ನಿರ್ಮಾಣ ಬುರಗಪಲ್ಲಿ	1800-00	3000-00	5200-00	10000-00	180	-	220	400	80	ಮುಗಿದಿದೆ
7.	ಒಳರಸ್ತೆ ನಿರ್ಮಾಣ ಯಾನಾಗುಂದಿ	900-00	1500-00	5200-00	7600-00	80	-	220	200	40	ಮುಗಿದಿದೆ
9.	ಒಳರಸ್ತೆ ನಿರ್ಮಾಣ ಶೊಲಮಾಮಡಿ	900-00	1500-00	200-00	7600-00	80	-	220	220	40	ಮುಗಿದಿದೆ
	ಒಟ್ಟು										

(10) ಮಂಡಲ ಪಂಚಾಯತ್ ಮುಧೋಳ

1	2	3	4	5	6	7	8	9	10	11	12	13
1.	ಶಾಲಾಕೋಣೆ(1) ದುರಸ್ತಿ ಬನ್ನೂರು	792-00	2088-00	2080-00	4960-00	60	-	180	240	120	ಮುಗಿದಿದೆ	
2.	ಕೂಡುವ ರಸ್ತೆ ಸುಧಾರಣೆ ಬಿದರಬೇಡ	1712-70	4515-30	9360-00	15588-00	160	-	359	519	200	ಮುಗಿದಿದೆ	
3.	ಕೂಡುವ ರಸ್ತೆ ಗುಂಡೇಪಲ್ಲಿ	2973-30	7838-70	19670-00	30482-00	200	-	641	901	200	ಮುಗಿದಿದೆ	
4.	ಕೂಡುವ ರಸ್ತೆ ಕಡಚೆರ್ಲಾ	1211-10	3192-00	6560-00	9963-10	110	-	257	367	157	ಮುಗಿದಿದೆ	
5.	ಒಳರಸ್ತೆ ಕೋಲಿವಾಡಾ ಉಪ್ಪಾಂಗಲ್ಲಿ	4326-30	13097-70	12442-00	29866-00	360	-	951	1411	3-00	ಮುಗಿದಿದೆ	
6.	ಒಳರಸ್ತೆ ಹರಿಜನವಾಡಾ ಕದಲಾಪುರ	1034-55	6432-45	-	7467-80	171	-	144	285	-	ಮುಗಿದಿದೆ	
7.	ಒಳರಸ್ತೆ ಮುಧೋಳ ಆರಣ್ಯ	4900-50	12919-50	1300-00	30820-00	720	-	765	1485	630	ಮುಗಿದಿದೆ	
8.	ರಸ್ತೆ ಸುಧಾರಣೆ ಮುಧೋಳ ಮತ್ತು	6111-00	-	-	-	830	-	1022	1852	787	ಮುಗಿದಿದೆ	

(8) ಮದನಾ ಮಂಡಲ ಪಂಚಾಯತ್

1	2	3	4	5	6	7	8	9	10	11	12	13
1	ಶಾಲಾ ದುರಸ್ತಿ ಮದನಾ	1228-50	3124-00	4090-00	8442-50	78	-	195	273	113	ಕೆಲಸ ಮುಗಿದಿದೆ	
2	ಒಳರಸ್ತೆ ಹ.ವಾ ಚಂದಾ ಪೂರ ಬದಲಾಗಿ ಆಂಜನೇಯ ಮಂದಿರದಿಂದ ಸಮಾಜ ಮಂದಿರದವರೆಗೆ	2875-50	6078-70	6180-00	15134-20	200	-	439	639	90	"	
3	ಒಳರಸ್ತೆ ಚಂದಾಪೂರದಲ್ಲಿದೆ	3240-00	6739-80	6810-00	16789-80	220	-	500	720	200	"	
4	ಸಮಾಜ ಮಂದಿರ ಕಟ್ಟಡ ವೆಂಕಟಾಪುರ	1593-00	4331-00	12320-00	18244-00	144	-	210	354	30	"	
5	ಶಾಲಾ ದುರಸ್ತಿ ಕಡತಾಲ ತಾಂಡಾ	117-00	241-20	900-00	1258-20	10	-	16	26	-	"	
6	ಒಳರಸ್ತೆ ಕೋನಾಪೂರ	3591-00	8664-60	8100-00	20355-60	300	-	498	798	100	"	
	ಒಟ್ಟು											
	ಸಾಮಾಜಿಕ ಅರಣ್ಯ											
7	ಗಾಡದನ್ನಾ	769-50	2330-78	-	3200-2	71	-	100	171	-	-	
8	ವೆಂಕಟಾಪುರ	6822-00	4649-50	-	11471-50	350	-	1166	1516	-	-	

ಮಂಡಲ್ ಪಂಚಾಯತ್ ಕೋಲಕುಂದಾ

1	2	3	4	5	6	7	8	9	10	11	12	13
1	ನಾಚವಾರ	941-00	2967-00	4311-60	819260-00	116	-	116	277	39	ಮುಗಿದಿದೆ	
2	ಹರಿಜನವಾಡಾ ಕೋಲಕುಂದಾ ರಸ್ತೆ	854-70	2955-30	5590-00	9400-00	132	-	127	259	44	"	
3.	" ದುಗನೂರ ರಸ್ತೆ	792-00	2736-00	3457-50	6985-50	108	-	132	240	48	"	
4.	" ರಸ್ತೆ ಬಿಲ್‌ಕಲ್	198-00	738-00	1062-50	1998-40	36	-	24	60	16	"	
5	" ರಸ್ತೆ ಮಲಕಾಪಲ್ಲಿ	834-00	2795-10	4995-90	8625-00	121	-	132	253	33.	"	
6	ಒಳರಸ್ತೆ ಕೋಲಕುಂದಾ	1818-3-	6505-70	13622-15	21946-13	339	-	212	551	64	"	
7	ಒಳರಸ್ತೆ ಮಲಕಾಪಲ್ಲಿ	663-30	2180-70	7115-00	9959-00	88	-	113	201	27	"	
8	" ದೇವನೂರು	396-00	1950-00	7605-00	9951-00	54	-	66	120	24	"	
9	" ನಾಚವಾರ	198-00	738-00	1062-50	1998-50	36	-	24	60	16	"	
10	" ಬಿಲ್ ಕಲ್	198-00	738-00	1062-50	1998-50	36	-	24	60	16	"	
11	" ದುಗನೂರು	1254-00	4332-90	8235-00	13821-00	197	-	183	380	102	"	

ಮಂಡಲ್ ಪಂಚಾಯತ್ ಮುಳಖೇಡ

1	ಒಳರಸ್ತೆ ನೀಲಹಳ್ಳಿ	1643-40	6545-50	5654-00	13842-90	166	-	332	498	63	ಮುಗಿದಿದೆ	
2	ಶಾಲಾ ದುರಸ್ತಿ ಮಳಖೇಡ	2851-00	12439-45	27402-57	42693-22	324	-	541	865	220	"	
3	" " ಬಿಜನಳ್ಳಿ	316-80	1462-08	3090-57	4869-45	48	-	48	96	24	"	
4	ಒಳರಸ್ತೆ ಹೊಡಾ (ಬಿ)	4857-60	32741-32	10901-02	48499-94	677	-	1220	1897	432	"	
5	ಒಳರಸ್ತೆ ಹೊಡಾ (ಕೆ)	1491-60	6866-78	6234-84	14594-22	154	-	334	488	152	"	
6	ಕಕ್ಕಸ ಕಟ್ಟಡ ಬೀರನಹಳ್ಳಿ	778-80	2954-50	2738-81	6472-21	100	-	136	236	48	"	
7	ಕಕ್ಕಸ ಕಟ್ಟಡ ದುರಸ್ತಿ ಊಡಗಿ	396-00	1899-30	1314-54	3609-84	60	-	60	120	30	"	
8	ಒಳರಸ್ತೆ ಹೊಸಳ್ಳಿ	664-70	17778-50	10736-48	29170-68	448	-	544	992	160	"	
9	ಶಾಲಾ ಕಟ್ಟಡ ದುರಸ್ತಿ ಹೊಡಾ(ಕೆ)	653-40	2471-10	784-00	3908-50	110	-	88	198	48	"	

ಮಂಡಲ್ ಪಂಚಾಯತ್ ಕುಕ್ಕುಂದಾ

	2	3	4	5	6	7	8	9	10	11	12
1	ಕಕ್ಕಸ ಹರಿಜನವಾಡ ಕೊಂಕನಹಳ್ಳಿ	767-60	3778-85	4300-49	8847-04	116	-	117	233	40	ಮುಗಿದಿದೆ
2	ಕಾಚೂರ ಸೇಡಂ ರಸ್ತೆ ಬಿಬ್ಬಳ್ಳಿ ಕೂಡು ರಸ್ತೆ	2819-38	8972-83	4427-38	16219-59	280	-	433	713	145	
3	ಒಳರಸ್ತೆ ಹರಿಜನವಾಡಾ ಕುಕ್ಕುಂದಾ	1158-30	4757-07	6065-07	11980-62	163	-	188	351	87	
4	ಚರಂಡಿಕುಕ್ಕುಂದಾ	1870-50	7407-69	6943-70	16221-89	290	-	235	525	117	
5	ಒಳರಸ್ತೆ ಹರಿಜನವಾಡಾ ಕುಕ್ಕುಂದಾ	1801-50	7079-70	3956-98	12838-18	260	-	195	455	115	
6	ಶಾಲಾ ಕಟ್ಟಡ ಅರೆಬೊಮ್ಮನಹಳ್ಳಿ	335-60	1374-89	2838-75	4550-23	42	-	60	102	35	
7	ಶಾಲಾ ಕಟ್ಟಡ ದುರಸ್ತಿ ಮೀನಹಾಬಾಳ	1170-00	4718-90	4976-10	10863-00	170	-	184	354	102	
8	ಕಕ್ಕಸ ಮಹಿಳೆಯರಿಗೆ ಬಿಬ್ಬಳ್ಳಿ	605-70	2486-71	3740-00	66892-41	82	-	95	177	26	
9	ಒಳರಸ್ತೆ ತೊಟ್ನಳ್ಳಿ	855-00	2423-70	780-00	4058-70	80	-	110	190	40	
10	ಒಳರಸ್ತೆ ತೊಟ್ನಳ್ಳಿ	1869-00	6240-00	2682-88	10792-18	210	-	240	450	140	
11	ಒಳರಸ್ತೆ ಯಡಗಾ	1080-00	3510-60	889-52	5480-12	100	-	140	240	80	
12	ಕಕ್ಕಸ ಮೀನಹಾಬಾಳ	792-00	3537-40	2200-00	6529-40	120	-	120	240	50	
13	ಒಳರಸ್ತೆ ಮೀನಹಾಬಾಳ	2016-00	6326-40	2600-00	10942-40	192	-	256	448	96	
14	ಚರಂಡಿ ಕೆಲಸ ತರನಳ್ಳಿ	675-00	2202-00	2187-88	5154-88	70	-	100	170	30	
15	ಕಕ್ಕಸ ಅರೆಬೊಮ್ಮನಹಳ್ಳಿ	-	3466-00	2980-00	6446-00	80	-	100	130	50	
16	ಶಾಲಾ ಕಟ್ಟಡ ದುರಸ್ತಿ ಕಾಚೂರ	-	1849-00	810-00	2659-00	50	-	60	110	20	
17	ಮಂಡಲ ಪಂಚಾಯತ್ ಕಾರ್ಯಾಲಯ ಕುಕ್ಕುಂದಾ		27347-52	32864-00	60211-52	720	-	704	1424	384	
18	ಶಾಲಾ ಕಟ್ಟಡ ದುರಸ್ತಿ ಶರನಳ್ಳಿ	-	-	7800-00	7800-00	-	-	-	-	-	
19	ಒಳರಸ್ತೆ ಬಿಬ್ಬಳ್ಳಿ	-	1893-80	520-00	2413-90	-	-	60	102	24	

(11) ಮಂಡಲ ಪಂಚಾಯತ್ ಒಬ್ಬನಹಳ್ಳಿ

1	2	3	4	5	6	7	8	9	10	11	12
1	ಸಮುದಾಯ ಭವನ ಕಟ್ಟಡ ಬಿಂಡಿದಾಯಪಲ್ಲಿ	1632-00	8477-20	4890-00	1499-20	189	-	283	472	165	ಮುಗಿದಿದೆ
2	-ಅದೇ- ಅನಂತಪುರ	1765-00	7253-90	7690-00	18708-90	107	-	282	389	79	"
3	ಕಕ್ಕಸ ಮಹಿಳೆಯರಿಗೆ ನಾಡೇಪಲ್ಲಿ	968-70	5111-90	1904-00	7984-60	84	-	211	295	147	"
4	-ಅದೇ- ರಿಬ್ಬನಪಲ್ಲಿ	1381-50	4706-00	1904-00	7992-40	113	-	194	307	167	"
5	ಒಳರಸ್ತೆ ರಿಬ್ಬನಪಲ್ಲಿ	1485-00	3763-60	4746-25	9994-85	81	-	149	330	97	"
6	ಸಮುದಾಯಭವನ ದುರಸ್ತಿ ಸಿಲಾರಕೋಟೆ	667-00	2442-80	1685-00	4795-00	137	-	59	196	15	"
7	-ಅದೇ- ಶಂಕರಾಪುರ	1754-10	8001-30	5240-00	14995-40	242	-	269	501	148	"
8	-ಅದೇ- ಗಂಗಾದಾಸಲಪಲ್ಲಿ	1343-40	6817-00	6840-00	15000-40	190	-	188	378	340	"
9	ಪಿಚಿಂಗ್ ಕೆಲಸ ಸಿಲಾರಕೋಟೆ	1679-70	-	8309-90	9989-60	272	-	237	509	146	"
10	ಕೆಡಿಬಿ ಕಟ್ಟಡ ತಾಳಗಡ್ಡಾ	3405-60	28599-55	32215-95	64221-10	372	-	660	1032	298	"
11	-ಅದೇ- ರಿಬ್ಬನಪಲ್ಲಿ	3108-50	27659-90	33316-90	64084-30	362	-	711	1073	338	"
12	ಸಮುದಾಯ ಭವನ ಕಟ್ಟಡ ಮಲ್ಲಾಬಾದ	1280-40	68808-20	6890-00	14998-00	166	-	222	388	86	"
13	-ಅದೇ- ಕಟ್ಟಡ ದುರಸ್ತಿ ಮದಕ	778-50	3977-10	840-00	5595-60	144	-	29	173	84	"
14	ಕೂಡುರಸ್ತೆ ಸುಧಾರಣೆ ಮದಕ	2129-50	11577-60	1232-00	14989-00	220	-	359	579	95	"
15	ಪಿಚಿಂಗ್ ಕೆಲಸ ಸಿಲಾರಕೋಟೆ(2)	1141-90	6787-60	-	7988-40	168	-	178	346	73	"
16	-ಅದೇ- ದಾನಾಗಡ್ಡಾ	1590-60	9330-40	-	10121-00	200	-	182	482	98	"
17	ಸಮುದಾಯ ಭವನ ದುರಸ್ತಿ ನಾಡೇಪಲ್ಲಿ	581-40	2335-40	1572-00	4488-80	68	-	74	142	76	"
18	ಕಕ್ಕಸ ಮಹಿಳೆಯರಿಗೆ ನಾಡಪಲ್ಲಿ	514-80	2778-45	4704-00	7997-25	45	-	111	156	36	"
19	ಕಕ್ಕಸ ಮಹಿಳೆಯರಿಗೆ ದಾನಾಗಡ್ಡಾ	514-80	2778-45	4704-00	7997-25	45	-	111	156	36	"

[illegible]515-25

ಇ) ಬಿಡುಗಡೆಯಾದ ಆಹಾರ ಧಾನ್ಯದಲ್ಲಿ ಖರ್ಚಾಗಿರುವ ಮತ್ತು ಉಳಿದಿರುವ ಹಾಗೂ ಆ ಪೈಕಿ ಉಪಯೋಗಿಸಿದ ಆಹಾರ ಧಾನ್ಯದ ವಿವರಗಳನ್ನು ತ:ಖ್ತೆ 2ರಲ್ಲಿ ಲಗತ್ತಿಸಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ನೀರು ಸರಬರಾಜು ಯೋಜನೆಗಳ ಆಪರೇಟರ್‌ಗಳ ನೇಮಕಾತಿ

2352-ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಗ್ರಾಮಾಂತರ ಪ್ರದೇಶಗಳಲ್ಲಿ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಾಗಲಿ, ಗ್ರಾಮಾಂತರ ನೀರು ಸರಬರಾಜು ಯೋಜನೆಯಲ್ಲಾಗಲಿ, ಆಪರೇಟರುಗಳ ನೇಮಕಾತಿ ಮಾಡಿಕೊಳ್ಳಲು ಜಿಲ್ಲಾ ಪರಿಷತ್‌ಗಳಿಗಾಗಲಿ, ಮಂಡಲ ಪಂಚಾಯಿತಿಗಳಿಗಾಗಲಿ, ಅಧಿಕಾರವಿಲ್ಲದಕ್ಕಾಗಿ ನೀರು ಸರಬರಾಜು ಆಗದೇ ಕುಡಿಯುವ ನೀರಿನ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಚುಕ್ಕೆ ಗುರುತಿನ ಪ್ರಶ್ನೆ 288ಕ್ಕೆ ದಿನಾಂಕ: 17.12.90 ರಂದು ಕೆಲವೊಂದು ಮಂಡಲ್ ಪಂಚಾಯ್ತಿಗಳಲ್ಲಿ ತೊಂದರೆಯಾಗಿದ್ದು ತಿಳಿದು ಬಂದಿರುತ್ತದೆಂದು ತಿಳಿಸಲಾಗಿದೆ. ಈ ತೊಂದರೆ ಇಡೀ ರಾಜ್ಯಕ್ಕೆ ಅನ್ವಯವಾಗುವುದು ಸರ್ಕಾರಕ್ಕೆ ತಿಳಿದಿದೆಯೇ?

ಆ) ಕೆಲವೊಂದು ಮಂಡಲ್ ಪಂಚಾಯ್ತಿಗಳಲ್ಲಿ ತೊಂದರೆ ಇದೆಯೆಂದು ಉತ್ತರ ನೀಡಿರುವುದು ಕೆಲವು ಜಿಲ್ಲೆಗಳಲ್ಲಿ ಆಪರೇಟರ್‌ಗಳನ್ನು ತೆಗೆದುಕೊಳ್ಳಲು ಅನುಮತಿ ನೀಡಲಾಗಿದೆ ಎಂಬ ಅರ್ಥವಲ್ಲವೇ?

ಇ) ಒಂದು ವೇಳೆ ಆ ಪ್ರಕಾರ ಅನುಮತಿ ನೀಡಿದ್ದರೆ ಆ ಜಿಲ್ಲೆಗಳು ಯಾವುವು?

ಈ) ನನ್ನ ಪ್ರಶ್ನೆಗೆ ಯೋಜನೆಗಳ ಚಾಲ್ತಿಗಾಗಿ ತೊಂದರೆಯಾಗದಂತೆ ಆಪರೇಟರ್‌ಗಳನ್ನು ನೇಮಕ ಮಾಡಲು ಸರ್ಕಾರ ಯೋಜಿಸುತ್ತಿದೆ ಎಂದು ತಿಳಿಸಿ ಸುಮಾರು ಒಂದು ವರ್ಷವಾದರೂ ಸಹ ಇವುಗಳ ಬಗ್ಗೆ ಯಾವ ಕ್ರಮ ಕೈಗೊಂಡಿಲ್ಲದಿರುವುದಕ್ಕೆ ಕಾರಣವೇನು?

ಉ) ಇದಕ್ಕಾಗಿ ಸರ್ಕಾರ ಮುಂದಿನ ವ್ಯವಸ್ಥೆ ಯಾವಾಗ ಮಾಡುವುದು?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಇಡೀ ರಾಜ್ಯದಲ್ಲಿ ಆಪರೇಟರ್‌ಗಳ ಕೊರತೆಯಿಂದಾಗಿ ಕುಡಿಯುವ ನೀರು ಸರಬರಾಜಿನ ಮೂಲಕ ನೀರನ್ನು ಒದಗಿಸಲು ಸಾಧ್ಯವಾಗದೇ ಇರುವ ಪರಿಸ್ಥಿತಿಯು ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ಅಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉ)

ನೀರು ಸರಬರಾಜು ಯೋಜನೆಯನ್ನು ನಡೆಸಲು ಮಂಡಲ ಪಂಚಾಯತಿಗಳೇ ಸ್ಥಳೀಯವಾಗಿ ವ್ಯವಸ್ಥೆ ಮಾಡಿಕೊಂಡಿರುತ್ತವೆ.

ಸೇಡಂ ಕ್ಷೇತ್ರದ ಮಳಖೇಡ ರಿಬ್ಬನ್‌ಪಲ್ಲಿ ಹಾಗೂ ಸೇಡಂ ಕೊಡ್ಲಾ ರಸ್ತೆಗಳ ಕುರಿತು

2351 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಮಳಖೇಡ ರಿಬ್ಬನ್‌ಪಲ್ಲಿ 92 ರಿಂದ 122 ಕಿ.ಮೀ. ರಸ್ತೆಯವರೆಗೆ ಕೆಲಸ ಪ್ರಾರಂಭವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1629 ದಿನಾಂಕ 1991ರ ಉತ್ತರದಲ್ಲಿ ಈ ರಸ್ತೆಯ 122 ಕಿ.ಮೀ.ನಿಂದ 140.20 ಕಿ.ಮೀ (ಆಂಧ್ರ ಗಡಿ) ವರೆಗೆ ಅಂದಾಜುಪತ್ರ ತಯಾರಾಗುತ್ತಿದೆಯೆಂದು ಶೀಘ್ರದಲ್ಲಿಯೇ ಗುತ್ತಿಗೆಗಳನ್ನು ಕರೆಯಲಾಗುವುದೆಂದು ತಿಳಿಸಲಾಗಿದ್ದರೂ ಈ ಕೆಲಸ ಇನ್ನೂ ಪ್ರಾರಂಭವಾಗದಿರಲು ಕಾರಣಗಳೇನು?

ಇ) ಹಾಗಿದ್ದಲ್ಲಿ ಈ ಕೆಲಸ ಎಂದಿನಿಂದ ಪ್ರಾರಂಭವಾಗುವುದು?

ಈ) 1990-91ನೇ ಸಾಲಿನಲ್ಲಿ ಮಳಖೇಡದಿಂದ ರಿಬ್ಬನ್‌ಪಲ್ಲಿ ಗಡಿ ಪ್ರಾಂತದವರೆಗೆ 1.70 ಲಕ್ಷ ರೂ.ಗಳು ಹಾಗೂ ಸೇಡಂ ಕೂಡ್ಲಾ ರಸ್ತೆ ದುರಸ್ತಿಗಾಗಿ 2.53 ಲಕ್ಷ ಮಳಖೇಡ ರಾಜಶ್ರೀ ಸಿಮೆಂಟ್ ಕಾರ್ಖಾನೆ ಕ್ರಾಸಿನವರೆಗೆ 0.24 ಲಕ್ಷ ರೂ.ಗಳು ಖರ್ಚಾಗಿದೆಯೇ? ಹಾಗಿದ್ದಲ್ಲಿ ಯಾವ ಯಾವ ಕಿ.ಮೀ.ಗಳಲ್ಲಿ ಎಷ್ಟು ಹಣ ಖರ್ಚಾಗಿದೆ (ವಿವರಗಳನ್ನೊದಗಿಸುವುದು)

ಉ) ಈ ಪ್ರಕಾರ ಹಣ ಖರ್ಚು ಮಾಡಿದರೂ ಸಹ ಈ ರಸ್ತೆಗಳ ಮೇಲೆ ದೊಡ್ಡ ದೊಡ್ಡ ಕೊರಕಲು ಸದಾಕಾಲಕ್ಕೂ ಹಾಗೆಯೇ ಉಳಿದಿರಲು ಕಾರಣಗಳೇನು? ಇದನ್ನು ಸರಿಪಡಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು)

ಅ) ಈ ರಸ್ತೆಯ ಕಾಮಗಾರಿಯು ಪ್ರಾರಂಭವಾಗಿದ್ದು ಪ್ರಗತಿಯಲ್ಲಿದೆ.

ಆ) ಟೆಂಡರನ್ನು ಕರೆಯಲಾಗಿದ್ದು, ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ 7.9.91. ಟೆಂಡರ್ ತೀರ್ಮಾನವಾದ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಇ) ಟೆಂಡರ್ ನಿರ್ಧಾರವಾದ ನಂತರ ಈ ಕೆಲಸ ಪ್ರಾರಂಭ ಮಾಡಲಾಗುವುದು.

ಈ) ವಿವರಗಳು ಕೆಳಕಂಡಂತಿವೆ:

	ರಸ್ತೆಯ ಭಾಗ	ಸಿಬ್ಬಂದಿಗಳ ವೇತನ	ರಸ್ತೆಯ ದುರಸ್ತಿಗಾಗಿ ಮಾಡಿದ ವೆಚ್ಚ	ಒಟ್ಟು	ಕೆಲಸ ಕೈಕೊಂಡ ಕಿ.ಮೀಗಳ ವಿವರ
1)	ಮಳಖೇಡದಿಂದ ರಿಬ್ಬನಪಲ್ಲಿ ಗಡಿ ಪ್ರಾಂತದವರೆಗೆ	0.48	1.22	1.70	ಕಿ.ಮೀ. 102 ದಿಂದ 10.20
2)	ಸೇಡಂ ಕೋಡ್ಲಾ ರಸ್ತೆ	0.38	2.15	2.53	ಕಿ.ಮೀ. 152 ರಿಂದ 212 ವರೆಗೆ
3)	ಮಳಖೇಡದಿಂದ ರಾಜಶ್ರೀ ಸಿಮೆಂಟ್ಸ್ ಕಾರ್ಖಾನೆ ಕ್ರಾಸ್ ವರೆಗೆ	0.12	0.12	0.24	ಕಿ.ಮೀ. 11.20 ರಿಂದ 13.20 ವರೆಗೆ

ಮೇಲಿನ ಮೂರು ರಸ್ತೆಗಳು ಸಿಮೆಂಟ್ ಕಾರ್ಖಾನೆಗಳು ಮತ್ತು ಶಹಾಬಾದ್ ಹಾಸುಬಂಡೆ ಖಣಿಗಳಿಂದ ಸುತ್ತುವರಿದಿವೆ. ಸಿಮೆಂಟ್ ಮತ್ತು ಶಹಾಬಾದ್ ಹಾಸುಬಂಡೆಗಳು ಕರ್ನಾಟಕ ಪ್ರಾಂತ್ಯ ಹಾಗೂ ನೆರೆಯ ರಾಜ್ಯ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳಿಗೆ ಈ ರಸ್ತೆಗಳ ಮುಖಾಂತರವೇ ಸಾಗಿಸಬೇಕಾಗಿದೆ. ಆದಕಾರಣ ನಿಬಿಡವಾದ ಹಾಗೂ ಭಾರವುಳ್ಳ ವಾಹನಗಳ ಸಂಚಾರದಿಂದ ರಸ್ತೆಗಳ ತಳಹದಿ ಕುಸಿದು ರಸ್ತೆಗಳ ಮೇಲ್ಮೈ ಮೇಲಿಂದ ಮೇಲೆ ಹಾಳಾಗಿ ತಗ್ಗು ದಿನ್ನೆಗಳು ಕಾಣಿಸಿಕೊಳ್ಳುತ್ತಿವೆ. ಇವುಗಳನ್ನು ಮುಚ್ಚಿ ಸಂಚಾರಕ್ಕೆ ಅನುವು ಮಾಡಲು ಲಭ್ಯವಿರುವ ಅನುದಾನದಿಂದ ನಿರ್ವಹಿಸಲಾಗುತ್ತಿಗೆ.

ಉ) *ಮಳಖೇಡದಿಂದ ರಿಬ್ಬನ್‌ಪಲ್ಲಿ ರಸ್ತೆಯು ರಾಜ್ಯ ಹೆದ್ದಾರಿ ಸಂಖ್ಯೆ 10ರ ಒಂದು ಭಾಗವಾಗಿದೆ ಹಾಗೂ ಸೇಡಂ ಕೋಡ್ಲಾ ರಸ್ತೆಯು ರಾಜ್ಯ ಹೆದ್ದಾರಿ ಸಂಖ್ಯೆ 15ರ ಒಂದು ಭಾಗವಾಗಿದೆ. ಈ ರಸ್ತೆಗಳ ಅಭಿವೃದ್ಧಿ ಕಾರ್ಯವನ್ನು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಮಂಜೂರಾಗಿದ್ದು ಈ ಕೆಲಸಗಳು ಈಗಾಗಲೇ ಪ್ರಾರಂಭವಾಗಿದ್ದು ಪ್ರಗತಿಯಲ್ಲಿವೆ ಹಾಗೂ ಮಳಖೇಡದಿಂದ ರಾಜಶ್ರೀ ಸಿಮೆಂಟ್ಸ್ ಕಾರ್ಖಾನೆ ಕ್ರಾಸಿನ ಅಭಿವೃದ್ಧಿ ಕಾರ್ಯವನ್ನು ಪ್ರತಿ ಶಾಸಕರ ಮತ ಕ್ಷೇತ್ರಕ್ಕೆ ಒದಗಿಸಿದ ಹಣದಲ್ಲಿ ಮಂಜೂರಾಗಿದ್ದು ಈ ಕೆಲಸಕ್ಕೆ ಈಗಾಗಲೇ ಗುತ್ತಿಗೆ ನಿಗದಿಪಡಿಸಲಾಗಿದೆ. ಅಭಿವೃದ್ಧಿ ಕಾರ್ಯದಲ್ಲಿ ಡಾಂಬರೀಕರಣ ಸೇರಿದ್ದರಿಂದ ಕೆಲಸವನ್ನು ಮಳೆಗಾಲದ ನಂತರ ಪ್ರಾರಂಭಿಸಿ ಮುಗಿಸಲಾಗುವುದು.*

ರಾಜ್ಯದ ರಾಜಧಾನಿಯ ಕಲಾ ಮಂಟಪಗಳಲ್ಲಿ ಕಲಾ ಪ್ರದರ್ಶನ

2350 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) *ರಾಜ್ಯದ ರಾಜಧಾನಿಯ ಯವನಿಕಾದಲ್ಲಿ ಸಂಘ ಸಂಸ್ಥೆಗಳ, ಯುವಕ ಮಂಡಲಿಗಳ ಶ್ರೇಷ್ಠ ಪ್ರದರ್ಶನಗಳಿಗೆ ನಗದು ಸಹಿತ ಪ್ರೋತ್ಸಾಹ ನೀಡಿ ಅವಕಾಶ ಮಾಡಿ ಕೊಡಲಾಗುವುದೇ?*

ಆ) *ಯುವನಿಕಾ ಬಿಟ್ಟು ರಾಜಧಾನಿಯ ಉಳಿದ ಯಾವ ಕಲಾ ಮಂಟಪಗಳಲ್ಲಿ ಕಲಾ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿ ಕೊಡಲಾಗುವುದು (ವಿವರ ನೀಡುವುದು)*

ಇ) *ಈ ರೀತಿ ಅವಕಾಶ ನೀಡುವುದಾದರೆ ಎಷ್ಟು ಪ್ರದರ್ಶನಗಳಿಗೆ ಮಿತಿಗೊಳಿಸಲಾಗುವುದು ಮತ್ತು ಎಷ್ಟು ಮಂದಿಗೆ ನಗದು ಪ್ರೋತ್ಸಾಹವನ್ನು ನೀಡಲಾಗುವುದು?*

ಈ) *ಉಡುಪಿ ತಾಲ್ಲೂಕು ಸಾಸ್ತಾನದ ಸವಿನಯ ಯುವಕ ಮಂಡಲವು ರಾಜ್ಯ ಮಟ್ಟದ ಯುವಜನ ಮೇಳದಲ್ಲಿ ಪ್ರಥಮ ಬಹುಮಾನ ಪಡೆದ ತನ್ನ ನಾಟಕ ಪ್ರದರ್ಶನಕ್ಕೆ ರಾಜಧಾನಿಯಲ್ಲಿ ಅವಕಾಶ ಮಾಡಿಕೊಡುವಂತೆ ಮನವಿ ಸಲ್ಲಿಸಿತ್ತೇ?*

ಉ) *ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?*

ಶ್ರೀ ಎಸ್. ರಮೇಶ್ (ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಹೌದು.

ಆ) ರವೀಂದ್ರ ಕಲಾಕ್ಷೇತ್ರ.

ಇ) ಆಯವ್ಯಯ ಅವಕಾಶವನ್ನು ಪರಿಶೀಲಿಸಿ ಕಾರ್ಯಕ್ರಮ ನೀಡಲಾಗುತ್ತದೆ.

ಈ) ಹೌದು

ಉ) ನಾಟಕ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿಕೊಡಲು ಸಂಬಂಧಪಟ್ಟವರಿಗೆ ಸೂಚಿಸಲಾಗಿದೆ.

ರಾಷ್ಟ್ರೀಯ ಹೆದ್ದಾರಿಗಳ ಬಗ್ಗೆ

2011-ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು-ಬೆಳಗಾಂ ರಸ್ತೆ (ಎನ್.ಹೆಚ್-೪)ಹೆದ್ದಾರಿಯಲ್ಲಿ ವಾಹನ ಸಂಚಾರ ಅಧಿಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಮೇಲ್ಕಂಡ ಹೆದ್ದಾರಿಯನ್ನು ವಿಸ್ತರಿಸಲು ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು? ಹಾಗೂ ಇದಕ್ಕಾಗಿ ಮೀಸಲಾಗಿಟ್ಟ ಹಣವೆಷ್ಟು ಹಾಗೂ ಖರ್ಚಾದ ಹಣವೆಷ್ಟು?

ಇ) ಮೇಲ್ಕಂಡ ಹೆದ್ದಾರಿಯ ಡಾಂಬರೀಕರಣವು ಕಳಪೆ ಸಾಮಗ್ರಿಗಳಿಂದ ನಡೆಯುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯ? ಹಾಗೂ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು)

ಅ) ಬಂದಿದೆ

ಆ) ರಾಷ್ಟ್ರೀಯ ಹೆದ್ದಾರಿಗಳು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುತ್ತವೆ. ಬೆಂಗಳೂರು-ಬೆಳಗಾಂ ರಸ್ತೆಯು ಹಂತ ಹಂತವಾಗಿ 4 ಪಥದ ರಸ್ತೆಯನ್ನಾಗಿ ವಿಸ್ತರಿಸಲಾಗುತ್ತಿದೆ. ಕೇಂದ್ರ ಸರ್ಕಾರ ವಾರ್ಷಿಕ ಯೋಜನೆಗಳನ್ನು ಮಂಜೂರು ಮಾಡುತ್ತಾರೆ. ಪ್ರಸಕ್ತ ವಾರ್ಷಿಕ ಯೋಜನೆಯಲ್ಲಿ (1991-92) ಈ ವಿಸ್ತರಣಾ ಕಾರ್ಯ ಸೇರಿರುವುದಿಲ್ಲ. ನೆಲಮಂಗಲದಿಂದ ತುಮಕೂರು ಅಂದರೆ ಕಿ.ಮೀ. 30ರಿಂದ 66 ರವರೆಗೆ ಈಗಿರುವ ದ್ವಿಪಥ ರಸ್ತೆಯು 4 ಪಥವನ್ನಾಗಿ ವಿಸ್ತರಿಸುವ ಬಗ್ಗೆ ೮ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲು ಶಿಫಾರಸ್ಸು ಮಾಡಲಾಗಿದೆ. ಇದಕ್ಕಾಗಿ ಯಾವ ಹಣವನ್ನು ಮೀಸಲಾಗಿಟ್ಟಿಲ್ಲ.

ಬೆಂಗಳೂರು-ಪೂನಾ ರಸ್ತೆಯು ಕಿ.ಮೀ. 10 ರಿಂದ 30 ರವರೆಗೆ 2 ಪಥಗಳ ರಸ್ತೆಯನ್ನು 4 ಪಥಗಳ ರಸ್ತೆಯನ್ನಾಗಿ ವಿಸ್ತರಿಸುವ ಕಾರ್ಯವನ್ನು ಸುಮಾರು 550.00 ಲಕ್ಷ ರೂ.ಗಳ ವೆಚ್ಚದಲ್ಲಿ ಮಾಡಿ ಮುಗಿಸಲಾಗಿದೆ.

ಇ) ಕೇಂದ್ರ ಸರ್ಕಾರದ ವಿಶಿಷ್ಟ ವಿವರಣೆಗಳಿಗೆ ಅನುಗುಣವಾಗಿ ಕೆಲಸ ಮಾಡಲಾಗುತ್ತದೆ. ಕಳಪೆ ಸಾಮಗ್ರಿಗಳನ್ನು ಉಪಯೋಗಿಸುತ್ತಿರುವುದಿಲ್ಲ.

ಕುಮುದ್ವತಿ ನದಿಗೆ ಅಡ್ಡಲಾಗಿ ಸೇತುವೆ ಕಟ್ಟುವ ಬಗ್ಗೆ

2078 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ನೆಲಮಂಗಲ ತಾಲ್ಲೂಕು ಕಸಬಾ ಹೋಬಳಿಗೆ ಸೇರಿದ ಆಗಲಕುಪ್ಪೆ ಮತ್ತು ಹೊಸಹಳ್ಳಿ ಗ್ರಾಮಗಳ ಮಧ್ಯೆ ಕುಮುದ್ವತಿ ನದಿ ಹಳ್ಳಕ್ಕೆ ಸೇತುವೆ ಇಲ್ಲದಿರುವುದರಿಂದ ಆ ಭಾಗದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅವಶ್ಯವಿರುವ ಮೇಲ್ಕಂಡ ಸೇತುವೆ ನಿರ್ಮಿಸಲು ಸರ್ಕಾರವು ಕೂಡಲೇ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು)

ಅ) ಹೌದು

ಆ) ಈ ಸೇತುವೆ ನಿರ್ಮಾಣಕ್ಕೆ 10 ಲಕ್ಷ ರೂ.ಗಳ ಅಂದಾಜು ಮೊತ್ತವನ್ನು 1991-92ನೇ ಕ್ರಿಯಾ ಯೋಜನೆಯಲ್ಲಿ ಸೇರಿಸಿ, ಜಿಲ್ಲಾ ಪರಿಷತ್ ಅನುಮೋದನೆ ಕೋರಿದ್ದು ಅನುಮತಿ ದೊರೆತ ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದು.

ಪ್ರವಾಸೋದ್ಯಮದ ಅಭಿವೃದ್ಧಿ ಕುರಿತು

2067 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಕೈಗೊಂಡಿರುವ ಕ್ರಮಗಳೇನು?

ಆ) ಪ್ರವಾಸೋದ್ಯಮ ಅಭಿವೃದ್ಧಿ ವಿಶ್ವ ಬ್ಯಾಂಕಿನ ನೆರವನ್ನು ಪಡೆಯಲಾಗಿರುವುದೇ?

ಶ್ರೀ ಕೆ. ಶಿವಮೂರ್ತಿ, (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು)

ಅ) ಕರ್ನಾಟಕದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ:

1) ಪ್ರವಾಸಿಗರಿಗೆ ವಸತಿ ಸೌಲಭ್ಯ
2) ರಸ್ತೆಬದಿ ಸೌಲಭ್ಯ
3) ಉಪಹಾರ ಮಂದಿರ ಮತ್ತು ಶೌಚಾಲಯಗಳ ಸೌಲಭ್ಯ
4) ವಿವಿಧ ಮಾಧ್ಯಮಗಳ ಮೂಲಕ ಪ್ರವಾಸೋದ್ಯಮ ಸಂಪತ್ತಿನ ಪ್ರಚಾರ
5) ದೋಣಿ ವಿಹಾರ ಸೌಲಭ್ಯ ಹಾಗೂ ಜಲಕ್ರೀಡೆ
6) ವ್ಯವಸ್ಥಿತ ಪ್ರವಾಸಗಳು
7) ವಿಮಾನ ನಿಲ್ದಾಣ ಅಭಿವೃದ್ಧಿ
8) ಕರ್ನಾಟಕದ ಪ್ರಮುಖ ಉತ್ಸವಗಳ ಆಚರಣೆ

ಆ) ಇಲ್ಲ.

ಕೊಳವೆ ಬಾವಿಗಳ ರಿಪೇರಿ ಕುರಿತು

2068-ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳವೆ ಬಾವಿ ರಿಪೇರಿ ಮತ್ತು ಹೆಚ್ಚಿನ ಆಳ ಕೊರೆಯಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಆ) ಮಂಡಲ ಪಂಚಾಯಿತಿಗಳಲ್ಲಿ ಹಣದ ಕೊರತೆ ಇರುವುದರಿಂದ ಕೊಳವೆ ಬಾವಿಗಳನ್ನು ರಿಪೇರಿ ಮಾಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

1) ಕೊಳವೆ ಬಾವಿ ರಿಪೇರಿಯನ್ನು ಮಂಡಲಪಂಚಾಯತ್ ಮತ್ತು ಜಿಲ್ಲಾ ಪರಿಷತ್‌ನವರು

2) ಹೆಚ್ಚಿನ ಆಳ ಕೊರೆಯುವ ಕೆಲಸವನ್ನು ಅಭಾವಪೀಡಿತ ಹಣದಲ್ಲಿ ಜಿಲ್ಲಾಧಿಕಾರಿಗಳು ನಿರ್ವಹಿಸುತ್ತಾರೆ. ಕೊಳವೆ ಬಾವಿಯನ್ನು ಪುನ: ಹೆಚ್ಚಿನ ಆಳಕ್ಕೆ ಕೊರೆಯಲಾಗದಿದ್ದರೆ, ಹೊಸ ಬಾವಿಯನ್ನು ಜಿಲ್ಲಾ ಪರಿಷತ್‌ಗಳು ಕೊರೆಯುತ್ತಾರೆ.

3) ಕೊಳವೆ ಬಾವಿಗಳಲ್ಲಿ ಅಳವಡಿಸಿರುವ ಕೈ ಪಂಪುಗಳನ್ನು ಸಕಾಲದಲ್ಲಿ ರಿಪೇರಿ ಮಾಡಲು ಅನುಕೂಲವಾಗುವಂತೆ ಸಾಕಷ್ಟು ಸಂಚಾರಿ ವಾಹನವನ್ನು ಜಿಲ್ಲಾ ಪರಿಷತ್‌ಗಳಿಗೆ ನೀಡಲಾಗಿದೆ. ಅದರಲ್ಲಿ ಈಗ ಪ್ರತಿ 500 ಕೊಳವೆ ಬಾವಿಗಳಿಗೆ ಒಂದರಂತೆ ಸಂಚಾರಿ ವಾಹನಗಳ ಲಭ್ಯವಿರುತ್ತದೆ.

4) ದೈನಂದಿನ ಕೈಪಂಪು ಉಸ್ತುವಾರಿಗಾಗಿ ಕೈಪಂಪು ಮೇಲ್ವಿಚಾರಕ ಸಿಬ್ಬಂದಿಯವರಿಗೆ ತರಬೇತಿ ಸಹ ನೀಡಲಾಗುತ್ತಿದೆ.

5) ಯಾವುದಾದರೂ ಕೊಳವೆ ಬಾವಿಗಳ ನೀರಿನ ಮಟ್ಟ ಹಾಗೂ ಇಳುವರಿ ಕಡಿಮೆ ಆದಲ್ಲಿ ಅವುಗಳನ್ನು ಸರಿಪಡಿಸಲು ಭೂ ಭೌತಿಕ ತನಿಖೆ ಮಾಡಿಸಿ ಅವುಗಳನ್ನು ಆಳವಡಿಸುವುದಾಗಲೀ ಅಥವಾ ಹೊಸ ಕೊಳವೆ ಬಾವಿಗಳನ್ನು ತೋಡಲು ಸೂಕ್ತಕ್ರಮವನ್ನು ಸಂಬಂಧಪಟ್ಟ ಜಿಲ್ಲಾ ಪರಿಷತ್‌ನವರೇ ಕೈಗೊಳ್ಳುತ್ತಾರೆ.

ಅ) ಕೊಳವೆ ಬಾವಿಗಳನ್ನು ಸಮರ್ಪಕವಾಗಿ ನಿರ್ವಹಿಸಲು ಬೇಕಾಗುವ ತಲಾ 275 ರೂಪಾಯಿಗಳ ವಾರ್ಷಿಕ ನಿರ್ವಹಣಾ ವೆಚ್ಚವನ್ನು ಸಂಬಂಧಪಟ್ಟ ಜಿಲ್ಲಾ ಪರಿಷತ್‌ಗಳಿಗೆ ಅನುದಾನ ನೀಡಲಾಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲಾ ಪ್ರವಾಸ ತಾಣಗಳಿಗೆ ರಾಜ್ಯ ಪ್ರವಾಸೋದ್ಯಮ ಬಸ್ಸುಗಳನ್ನು ಓಡಿಸುವುದು

2048 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ಪ್ರದೇಶಗಳನ್ನು ಸರ್ಕಾರ ಪ್ರವಾಸಿ ಸ್ಥಳಗಳೆಂದು ಗುರುತಿಸಿರುವುದು?

ಆ) ಇದರಲ್ಲಿ ಉಳ್ಳಾಲ-ಸೋಮೇಶ್ವರ ಕಡಲು ತೀರವೂ ಸೇರಿರುವುದೆ?

ಇ) ಈ ಪ್ರವಾಸಿ ತಾಣಗಳಿಗೆ ಕರ್ನಾಟಕ ಪ್ರವಾಸೋದ್ಯಮ ಬಸ್ಸುಗಳ ಸಂಚಾರವನ್ನು ಏರ್ಪಡಿಸಲಾಗಿದೆಯೇ?

ಈ) ಇಲ್ಲದಿದ್ದಲ್ಲಿ, ಸರ್ಕಾರ ಈ ಸ್ಥಳಗಳಿಗೆ ಪ್ರವಾಸೋದ್ಯಮ ನಿಗಮದ ಬಸ್ಸುಗಳ ಸಂಚಾರವನ್ನು ಏರ್ಪಡಿಸಲು ಕ್ರಮ ಕೈಗೊಳ್ಳುವುದೆ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು)

ಅ) ಪ್ರವಾಸೋದ್ಯಮ ಇಲಾಖೆಯು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಕೆಳಕಂಡ ಸ್ಥಳಗಳನ್ನು ಪ್ರವಾಸಿ ತಾಣಗಳೆಂದು ಗುರುತಿಸಲಾಗಿದೆ:

1. *ಮಂಗಳೂರು* 2. *ಕಾರ್ಕಳ* 3. *ಮೂಡಬಿದರೆ* 4. *ಉಡುಪಿ*
5. ಮರವಂತೆ 6. ಧರ್ಮಸ್ಥಳ 7. ಸೂರತ್‌ಕಲ್ 8. ಕೊಲ್ಲೂರು
9. ಕುಂದಾಪುರ 10. ಪಣಂಬೂರು 11. ಉಳ್ಳಾಲ 12. ಸೋಮೇಶ್ವರ
13. ಬಸರಾಳು 14. ಕಾಪು 15. ವೇಣೂರು 16. ಬೇಂದ್ರೆ ತೀರ್ಥ
17. ಸೇಂಟ್ ಮೇರೀಸ್ ಐಲ್ಯಾಂಡ್ 18. ಸುಬ್ರಮಣ್ಯ 19. ಮಲ್ಪೆ

ಆ) ಹೌದು.

ಇ) ಪ್ರವಾಸೋದ್ಯಮ ನಿಗಮದ ಬಸ್ಸುಗಳ ಸಂಚಾರವನ್ನು ಉಳ್ಳಾಲಕ್ಕೆ ಒದಗಿಸಲಾಗಿದೆ.

ಈ) ಸೋಮೇಶ್ವರಕ್ಕೆ ಬಸ್ ಸಂಚಾರ ಒದಗಿಸುವ ಕಾರ್ಯಕ್ರಮವಿಲ್ಲ.

ತುಂಗಾ ಮೇಲ್ದಂಡೆ ಯೋಜನೆ ಕುರಿತು

2044 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ತುಂಗಾ ಮೇಲ್ದಂಡೆ (ಅಪ್ಪರ್ ತುಂಗಾ) ನೀರಾವರಿ ಯೋಜನೆಯನ್ನು ಕಾರ್ಯಗತ ಮಾಡಲು ಸರ್ಕಾರ ಉದ್ದೇಶಿಸಿದೆಯೆ?

ಆ) ಹಾಗಿದ್ದಲ್ಲಿ, ಈ ಯೋಜನೆಯಿಂದ ನೀರಾವರಿ ಸೌಲಭ್ಯ ದೊರಕಿಸಬಲ್ಲ ತಾಲ್ಲೂಕುಗಳು ಹಾಗೂ ಕ್ಷೇತ್ರಗಳಾವುವು?

ಇ) ಈ ಯೋಜನೆಯನ್ನು ಕಾರ್ಯಗತ ಮಾಡಲು ತಗಲುವ ವೆಚ್ಚ ಎಷ್ಟು?

ಈ) 1991-92ರ ಆಯವ್ಯಯದಲ್ಲಿ ಈ ಯೋಜನೆಗೆ ಹಣವನ್ನು ಮೀಸಲಾಗಿಡಲಾಗಿದೆಯೆ:

ಉ) ಈ ಯೋಜನೆಯನ್ನು ಇನ್ನು ಎಷ್ಟು ವರ್ಷಗಳಲ್ಲಿ ಕಾರ್ಯಗತ ಮಾಡಿ ಪೂರ್ಣಗೊಳಿಸಲು ಸರ್ಕಾರ ಯೋಜಿಸಿದೆ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ಹೌದು

ಆ)

ತಾಲ್ಲೂಕು	ನೀರಾವರಿ ಪಡೆಯುವ ಕ್ಷೇತ್ರ (ಎಕರೆಗಳಲಿ)
ಶಿವಮೊಗ್ಗ	5,250
ಹೊನ್ನಾಳಿ	14,780
ಹರಿಹರ	610
ಹಿರೇಕೆರೂರು	27,310
ರಾಣಿಬೆನ್ನೂರು	1,07,200
ಹಾವೇರಿ	74,820
ಹಾನಗಲ್	4,030
ಒಟ್ಟು	2,34,000

ಇ) 271.41 ಕೋಟಿ ರೂ.ಗಳು (1988-89ನೇ ಸಾಲಿನ ದರಗಳ ಪ್ರಕಾರ)

ಈ) ಇಲ್ಲ

ಉ) ಹಣದ ಲಭ್ಯತೆಯನ್ನವಲಂಭಿಸಿ, ಕಾಮಗಾರಿ ಪ್ರಾರಂಭವಾದ ನಂತರ 10 ವರ್ಷಗಳಲ್ಲಿ ಪೂರ್ಣಗೊಳಿಸುವ ಸಾಧ್ಯತೆ ಇದೆ.

ರಸ್ತೆ ರಿಪೇರಿ ಬಗ್ಗೆ

2081 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳ ಸಂಖ್ಯೆ ಎಷ್ಟು?

ಆ) ಅವುಗಳ ದುರಸ್ತಿಗಾಗಿ ಈ ವರ್ಷದ ಆಯವ್ಯಯದಲ್ಲಿ ಬಿಡುಗಡೆಯಾದ ಹಣವೆಷ್ಟು?

ಇ) ಈ ರಸ್ತೆಗಳು ಬಹಳ ಶಿಥಿಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮವೇನು?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು)

ಅ) ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ 2 ರಾಜ್ಯ ಹೆದ್ದಾರಿ ಹಾಗೂ 6 ಜಿಲ್ಲಾ ಮುಖ್ಯರಸ್ತೆ ಸೇರಿದಂತೆ ಒಟ್ಟು 8 ರಸ್ತೆಗಳಿವೆ.

ಆ) 12.01 ಲಕ್ಷ ರೂ.ಗಳು.

ಇ) ರಸ್ತೆಗಳು ಸಂಚಾರಕ್ಕೆ ಯೋಗ್ಯವಾಗಿವೆ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಉತ್ತರ ಕನ್ನಡ ಜಿಲ್ಲಾ ಪರಿಷತ್ತಿನ ಇಂಜಿನಿಯರಿಂಗ್ ವಿಭಾಗಗಳಲ್ಲಿ ಖಾಲಿ ಇರುವ ಹುದ್ದೆಗಳು

2173 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಉತ್ತರ ಕನ್ನಡ ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗ ಹಾಗೂ ಉಪ ವಿಭಾಗಕ್ಕೆ ಮಂಜೂರಾಗಿರುವ ಎಕ್ಸಿಕ್ಯುಟಿವ್ ಇಂಜಿನಿಯರ್ ಹಾಗೂ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಈ ಹುದ್ದೆಗಳ ಪೈಕಿ ಭರ್ತಿಯಾದ ಹುದ್ದೆಗಳ ಸಂಖ್ಯೆ ಎಷ್ಟು ಹಾಗೂ ಭರ್ತಿಯಾಗದೇ ಇರುವ ಹುದ್ದೆಗಳ ಸಂಖ್ಯೆ ಎಷ್ಟು (ಇ.ಇ. ಮತ್ತು ಎ.ಇ.ಇ. ಗಳ ಬಗ್ಗೆ ಪ್ರತ್ಯೇಕ ವಿವರಗಳನ್ನು ನೀಡುವುದು)

ಇ) ಈ ಹುದ್ದೆಗಳು ಎಂದಿನಿಂದ ಖಾಲಿ ಇವೆ?

ಈ) ಸಾರ್ವಜನಿಕ ಹಿತದೃಷ್ಟಿಯಿಂದ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಉ) ಹಾಗಿದ್ದಲ್ಲಿ, ಎಂದಿನಿಂದ?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಅ) ಉತ್ತರ ಕನ್ನಡ ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗ ಹಾಗೂ ಉಪ ವಿಭಾಗಕ್ಕೆ ಮಂಜೂರಾಗಿರುವ ಕಾರ್ಯಪಾಲಕ ಅಭಿಯಂತರರ ಹುದ್ದೆಗಳ ಸಂಖ್ಯೆ 2 ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಗಳ ಸಂಖ್ಯೆ 12.

ಆ) 1. ಕಾರ್ಯಪಾಲಕ ಅಭಿಯಂತರರು-2 ಹುದ್ದೆಗಳು ಭರ್ತಿಯಾಗಿವೆ. ಖಾಲಿ ಯಾವುದೂ ಇಲ್ಲ.

2. ಸಹಾಯಕ ಕಾರ್ಯಪಾಲಕ ಅಭಿಯಂತರರು-8 ಹುದ್ದೆಗಳು ಭರ್ತಿಯಾಗಿದ್ದು 4 ಹುದ್ದೆಗಳು ಖಾಲಿ ಇರುವುದು.

ಇ) ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗ ಕಾರವಾರ 9-2-88 ರಿಂದ ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ಉಪ ವಿಭಾಗ ಕಾರವಾರ 18-4-90 ರಿಂದ

ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ಉಪ ವಿಭಾಗ ಅಂಕೋಲಾ 22-7-91 ರಿಂದ
ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ಉಪ ವಿಭಾಗ ಕುಮಟಾ 1-7-91 ರಿಂದ

ಈ) ಜಿಲ್ಲಾ ಪರಿಷತ್‌ನಲ್ಲಿನ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಗಳನ್ನು ನೇಮಕಾತಿ ನಿಯಮಗಳ ಪ್ರಕಾರ ಲೋಕೋಪಯೋಗಿ ಇಲಾಖೆಯಿಂದ ನಿಯೋಜನೆ ಮೇಲೆ ಭರ್ತಿ ಮಾಡಬೇಕಾಗಿರುತ್ತದೆ. ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಉ) ಪ್ರಶ್ನೆ (ಈ)ಗೆ ಕೊಟ್ಟಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಬ್ಯಾರೇಜ್ ನಿರ್ಮಾಣ

2043 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನಲ್ಲಿ ಕುಮದ್ವತಿ ನದಿಗೆ (1)ಯಲಿಪಾಳ (2)ರಟ್ಟಿಹಳ್ಳಿ ಮತ್ತು (3)ಕುಡಪಲಿ ಗ್ರಾಮಗಳ ಹತ್ತಿರ ಬ್ಯಾರೇಜ್ ನಿರ್ಮಾಣ ಮಾಡಿ ನೀರಾವರಿ ಸೌಲಭ್ಯ ಒದಗಿಸಿ ಕೊಡಲು ಬಹಳ ವರ್ಷಗಳಿಂದ ಸಾರ್ವಜನಿಕರ ಒತ್ತಾಯ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) 1991-92ನೇ ಆಯವ್ಯಯದಲ್ಲಿ ಮೇಲ್ಕಂಡ ಯಾವುದಾದರೂ ಬ್ಯಾರೇಜ್ ನಿರ್ಮಾಣಕ್ಕಾಗಿ ಸರ್ಕಾರ ಹಣವನ್ನು ಮೀಸಲಾಗಿಟ್ಟಿದೆಯೇ?

ಇ) ಮೇಲ್ಕಂಡ ಬ್ಯಾರೇಜ್‌ಗಳನ್ನು ನಿರ್ಮಾಣ ಮಾಡುವ ಬಗ್ಗೆ ಸರ್ಕಾರದ ಕ್ರಮ ಹಾಗೂ ನೀತಿಯೇನು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಬಂದಿದೆ.

ಆ) ಇಲ್ಲ.

ಇ) ನೀರಿನ ಲಭ್ಯತೆ ಹಾಗೂ ಹಣಕಾಸಿನ ಪರಿಸ್ಥಿತಿಯನ್ನು ಅನುಸರಿಸಿ, ಮೇಲ್ಕಂಡ ಬ್ಯಾರೇಜುಗಳನ್ನು ಆಯವ್ಯಯದಲ್ಲಿ ಸೇರಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಕಾವೇರಿ ಜಲಾನಯನ ಪ್ರದೇಶಗಳಿಗಾಗಿ ಖರ್ಚು ಮಾಡಿದ ಹಣ

2042 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಕಳೆದ 8 ವರ್ಷಗಳಿಂದ ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರಾವರಿ ಅಭಿವೃದ್ಧಿಗಾಗಿ ಬಡ್ಜೆಟ್‌ನಲ್ಲಿ ತೆಗೆದಿಟ್ಟ ಮೊತ್ತವೆಷ್ಟು ಹಾಗೂ ಪ್ರತಿ ವರ್ಷ ಅದಕ್ಕಾಗಿ ಖರ್ಚು ಮಾಡಿದ ಹಣವೆಷ್ಟು?

ಆ) ಎಷ್ಟು ಎಕರೆ ಪ್ರದೇಶ ನೀರಾವರಿಗೆ ಒಳಪಟ್ಟಿದೆ?

ಇ) ಇನ್ನು ಎಷ್ಟು ಎಕರೆ ಪ್ರದೇಶ ನೀರಾವರಿಗೆ ಅಳವಡಿಸಲು ಸರ್ಕಾರ ಯೋಜಿಸಿದೆ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):

ವರ್ಷ	ಅನುದಾನ (ಕೋಟಿ	ಮಾಡಿದ ಖರ್ಚು ರೂ.ಗಳಲ್ಲಿ)
1983-84	55.57	50.39
1984-85	80.95	67.01
1985-86	78.88	81.78
1986-87	87.45	86.10
1987-88	119.41	63.36
1988-89	92.37	69.78
1989-90	119.86	91.95
1990-91	124.44	102.68

ಆ) 8,68,191 ಎಕರೆಗಳು.

ಇ) 8,91,195 ಎಕರೆಗಳು.

ರಾಜ್ಯದ ಜಲ ಸಂಪನ್ಮೂಲದ ರಕ್ಷಣೆ

2040 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ರಾಜ್ಯದ ಜಲ ಸಂಪನ್ಮೂಲವನ್ನು ರಕ್ಷಣೆ ಮಾಡಲು ರಾಜ್ಯ ಸರ್ಕಾರವು ನಿರ್ಧರಿಸಿದೆಯೆ?

ಆ) ಹಾಗಿದ್ದಲ್ಲಿ, ಯಾವ ರೀತಿ ರಕ್ಷಣೆ ಮಾಡಲಾಗುತ್ತಿದೆ: (ವಿವರಗಳನ್ನು ಒದಗಿಸುವುದು)?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ,ಆ) *ರಾಜ್ಯದ ಜಲಂಪನ್ಮೂಲವನ್ನು ರಕ್ಷಣೆ ಮಾಡಲು ಯಾವ ಕಾರ್ಯಕ್ರಮವು ಇಲ್ಲ, ಆದರೆ ಈ ಜಲಸಂಪನ್ಮೂಲದಲ್ಲಿ ರಾಜ್ಯದ ನೀರಿನ ಪಾಲನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲು ಸಮಗ್ರ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಅವಲಂಭಿಸಿ ಸಮಗ್ರ ಯೋಜನೆಯ ಪ್ರಕಾರ ರೂಪಿಸಿರುವ ಎಲ್ಲಾ ಯೋಜನೆಗಳನ್ನು ನಿಯಮಿತ ಅವಧಿಯೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.*

ವಿವಿಧ ಅಕಾಡೆಮಿಗಳಿಗೆ ಅಧ್ಯಕ್ಷರನ್ನು ನೇಮಿಸುವುದು

2041 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಯುವಜನ ಕ್ರೀಡೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ರಾಜ್ಯದ ವಿವಿಧ ಅಕಾಡೆಮಿಗಳಿಗೆ ಅಧ್ಯಕ್ಷರನ್ನು ನೇಮಿಸಲು ಸರ್ಕಾರ ಏಕೆ ವಿಳಂಬ ಮಾಡುತ್ತಿದೆ?

ಆ) ಅವುಗಳಿಗೆ ಯಾವಾಗ ಅಧ್ಯಕ್ಷರನ್ನು ನೇಮಿಸಲಾಗುವುದು?

ಇ) ಅಕಾಡೆಮಿಗಳಿಗೆ ಸ್ವಾಯತ್ತತೆ ಕೊಡಲು ಸರ್ಕಾರ ನಿರ್ಧರಿಸಿದೆಯೆ?

ಈ) ಸ್ವಾಯತ್ತತೆಗೆ ಅನೇಕ ಜನ ಒತ್ತಾಯ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ರಮೇಶ್ (ಯುವಜನ ಸೇವೆ ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಸರ್ಕಾರದ ಮಟ್ಟದಲ್ಲಿ ತೀವ್ರ ಪರಿಶೀಲನೆಯಲ್ಲಿದೆ.

ಆ)ಆದಷ್ಟು ಶೀಘ್ರವಾಗಿ ನೇಮಿಸಲಾಗುವುದು.

ಇ) ಸ್ವಾಯತ್ತತೆಯನ್ನು ಈಗಾಗಲೇ ಕೊಡಲಾಗಿದೆ.

ಈ) ಉದ್ಭವಿಸುವುದಿಲ್ಲ.

ಕೆ.ಆರ್.ಎಸ್. ನೀರಿನ ಬಗ್ಗೆ

2278 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:-

ಅ) ಕಳೆದ 5 ವರ್ಷಗಳಿಂದ ಕೆ.ಆರ್.ಎಸ್. ಅಣೆಕಟ್ಟೆಯಿಂದ ತಮಿಳುನಾಡಿಗೆ ಬಿಟ್ಟಿರುವ ನೀರಿನ ಪ್ರಮಾಣವೆಷ್ಟು? (ಸರಾಸರಿ ಮಾಹೆಯಾನ ನೀರಿನ ಪ್ರಮಾಣವೆಷ್ಟು)

ಆ) ರಾಜ್ಯದ ಕಾವೇರಿ ಕೊಳ್ಳದ ವಿವಿಧ ಜಲಾಶಯಗಳಲ್ಲಿರುವ ನೀರಿನ ಶೇಖರಣಾ ಸಾಮರ್ಥ್ಯವೆಷ್ಟು?

ಇ) ಕಾವೇರಿ ಕೊಳ್ಳದ ವಿವಿಧ ಯೋಜನೆಗಳಡಿ ನೀರಾವರಿಗೊಳಪಟ್ಟ ಜಮೀನಿನ ವಿಸ್ತೀರ್ಣವೆಷ್ಟು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) 1986-87 ರಿಂದ 1990-91 ರವರೆಗೆ ಕೃಷ್ಣರಾಜಸಾಗರದಿಂದ ಬಿಡುಗಡೆ ಮಾಡಿದ ನೀರಿನ ಪ್ರಮಾಣ 158.70 ಟಿ.ಎಂ.ಸಿ. ಇದೇ ಅವಧಿಯಲ್ಲಿ ತಮಿಳುನಾಡಿನ ಮೆಟ್ಟೂರು ಜಲಾಶಯಕ್ಕೆ ತಲುಪಿರುವ ನೀರಿನ ಪ್ರಮಾಣ 785.90 ಟಿ.ಎಂ.ಸಿ.

ಆ) 132.58 ಟಿ.ಎಂ.ಸಿ.

ಇ) 3,58,590 ಹೆಕ್ಟೇರುಗಳು (1-4-91ರವರೆಗೆ)

ನೀರಾವರಿ ಯೋಜನೆಗಳು

2282 - ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:-

ಅ) ರಾಜ್ಯದ ಪೂರ್ಣಗೊಂಡಿರುವ ಮತ್ತು ಹಾಲಿ ಕೆಲಸ ನಡೆಯುತ್ತಿರುವ ಕಾಮಗಾರಿಗಳು ಮಧ್ಯಮದಲ್ಲಿ ಹಾಗೂ ಭಾರಿ ನೀರಾವರಿ ಯೋಜನೆಗಳಲ್ಲಿ ಮುಗಿದಾಗ ಶೇಕಡಾ ಎಷ್ಟು ಭೂಮಿಯು ನೀರಾವರಿಗೆ ಒಳಪಡಿಸಿದಂತಾಗುತ್ತದೆ?

ಆ) ಯಾವ ಯಾವ ನದಿಗಳಿಂದ ಎಷ್ಟೆಷ್ಟು ನೀರನ್ನು ಉಪಯೋಗಿಸಕೊಂಡಂತಾಗುತ್ತದೆ?

ಇ) ಎಲ್ಲಾ ಕಾಮಗಾರಿಗಳನ್ನು ಎಷ್ಟು ವರ್ಷಗಳಲ್ಲಿ ಮುಗಿಸಲಾಗುವುದು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) 25%

ಆ) ಕೊಳ್ಳ	ನೀರಿನ ಉಪಯೋಗ(ಟಿಎಮ್‌ಸಿ)
ಕೃಷ್ಣಾ	646
ಕಾವೇರಿ	380
ಗೋದಾವರಿ	20
ಇತರೆ	40
ಒಟ್ಟು	**1086**

ಇ) ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಅವಲಂಬಿಸಿ ಆದಷ್ಟು ಬೇಗ ಮುಗಿಸಲಾಗುವುದು.

ಸವದತ್ತಿ ತಾಲ್ಲೂಕಿಗೆ ಮಲಪ್ರಭಾ ಜಲಾನಯನ ಪ್ರದೇಶಾಭಿವೃದ್ಧಿ

2272 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳ ಮಲಪ್ರಭಾ ಜಲಾನಯನ ಪ್ರದೇಶಾಭಿವೃದ್ಧಿಯ ವ್ಯಾಪ್ತಿಯಲ್ಲಿ ಬರುವ ಸಂಗೊಳ್ಳಿ, ಗುಡದೂರ, ಹಿಂಗಳಗಿ-ಹೊಸೂರು ಹಿಟ್ಟಣಗಿ ಮತಗಟ್ಟೆ ರಸ್ತೆಗಳು ಸಂಪೂರ್ಣವಾಗಿ ನಾಶವಾಗಿದ್ದು ಇವುಗಳನ್ನು ದುರಸ್ತಿ ಮಾಡಲು ನೀರಾವರಿ ಇಲಾಖೆಯ ಕಾರ್ಯದರ್ಶಿಯವರು ಮಾರ್ಚ್ 91ರಂದು ಬೆಳಗಾವಿ ಉತ್ತರ ವಲಯದ ಮುಖ್ಯ ಇಂಜಿನಿಯರ್‌ರವರಿಗೆ ಆದೇಶ ನೀಡಿರುವರೇ?

ಆ) ಆ ರಸ್ತೆಗಳ ದುರಸ್ತಿಗಾಗಿ ಸರ್ಕಾರವು ಮಂಜೂರ್ಮಾಡಿದ ಹಣವೆಷ್ಟು?

ಇ) ಜುಲೈ 1991 ರವರೆಗೆ ಈ ರಸ್ತೆಗಳಿಗಾಗಿ ಖರ್ಚಾಗಿರುವ ಹಣವೆಷ್ಟು?

ಈ) ಈ ರಸ್ತೆಗಳ ದುರಸ್ತಿಗಾಗಿ ಮಂಜೂರಾದ ಹಣವು ಪೂರ್ತಿಯಾಗಿ ಖರ್ಚಾಗದಿದ್ದಲ್ಲಿ ಕಾರಣಗಳೇನು ಹಾಗೂ ಈ ಕೆಲಸವನ್ನು ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ಸದರೀ ರಸ್ತೆಗಳ ದುರಸ್ತಿ ಕಾರ್ಯವನ್ನು ಕೈಗೆತ್ತಿಕೊಳ್ಳಲು ಮುಖ್ಯ ಇಂಜಿನಿಯರ್‌ರವರಿಗೆ ಮಾರ್ಚ್ 1991 ರಲ್ಲಿ ಆದೇಶ ನೀಡಲಾಯಿತು.

ಆ) ಸದರೀ ಕಾಮಗಾರಿಗಳಿಗಾಗಿ ಬೇಕಾದ ಹಣ ಸುಮಾರು 53 ಲಕ್ಷ ರೂ.ಗಳಾಗಿದ್ದು, ಈ ಕಾಮಗಾರಿಗಳಿಗಾಗಿ ಪ್ರತ್ಯೇಕವಾಗಿ ಹಣ ಬಿಡುಗಡೆ ಮಾಡಲಾಗಿಲ್ಲ.

ಇ) ಏನೂ ಇಲ್ಲ.

ಈ) ಉದ್ಭವಿಸುವುದಿಲ್ಲ. ಈ ಕಾಮಗಾರಿಗಳಿಗಾಗಿ ಹಣ ದೊರಕಿದ ನಂತರ ಅವುಗಳನ್ನು ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು.

ಸವದತ್ತಿ ತಾಲ್ಲೂಕು ಇಂಗಳಗಿ ಗ್ರಾಮದ ಕುಡಿಯುವ ನೀರಿನ ಬಗ್ಗೆ

2139 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕು ಇಂಗಳಗಿ ಗ್ರಾಮದ ಕುಡಿಯುವ ನೀರಿನ ಯೋಜನೆಗೆ ಎಂದು ಆಡಳಿತಾತ್ಮಕ ಮಂಜೂರಾತಿ ಕೊಡಲಾಯಿತು ಮತ್ತು ಇದಕ್ಕೆ ಎಷ್ಟು ಹಣ ಕೊಡಲಾಯಿತು ?

ಆ) ಈ ಕಾಮಗಾರಿಗಾಗಿ ಪುನರ್ ವಿಮರ್ಶಿತ ಅಂದಾಜಿಗೆ ಎಂದು ಅನುಮತಿ ಕೊಡಲಾಯಿತು ?

ಇ) ಈ ಯೋಜನೆ ಮುಗಿಸಲು ಇನ್ನೂ ಎಷ್ಟು ಸಮಯ ಬೇಕಾಗುವುದು, ಮತ್ತು ಹಣಕಾಸಿನ ತೊಂದರೆಯಿಂದ ಈ ಕೆಲಸ ನಿಂತ ಸಂಗತಿ ನಿಜವೆ?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರು)

ಅ) ಈ ಯೋಜನೆಗೆ ದಿನಾಂಕ: 29-12-79 ರಲ್ಲಿ ರೂ.96,800-00 ಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಡಲಾಗಿತ್ತು, ಮತ್ತು ಈ ಕಾಮಗಾರಿಗೆ ಇದುವರೆವಿಗೆ ರೂ.1,25,000-00 ಗಳನ್ನು ವೆಚ್ಚ ಮಾಡಲಾಗಿದೆ.

ಆ) ಪುನರ್ ವಿಮರ್ಶಿತ ಅಂದಾಜು ಪಟ್ಟಿಗೆ ಅನುಮತಿ ನೀಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಈ ಯೋಜನೆಯನ್ನು ಮಾರ್ಚ್ 1992ರ ಒಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ ಮತ್ತು ಈ ಕೆಲಸವು ಹಣಕಾಸಿನ ತೊಂದರೆಯಿಂದ ನಿಂತಿರುವುದಿಲ್ಲ.

ಮೂಡಬಿದ್ರೆಯ ಕ್ರೀಡಾಂಗಣದ ಬಗ್ಗೆ

2136 - ಶ್ರೀ ಕೆ. ಸೋಮಪ್ಪ ಸುವರ್ಣ (ಮುಡಬಿದ್ರ) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಬಿದ್ರೆಯ ಕ್ರೀಡಾಂಗಣಕ್ಕೆ ಸರ್ಕಾರವು ಎಷ್ಟು ಎಕರೆ ಜಮೀನನ್ನು ನೀಡಿದೆ?

ಆ) ಇಲ್ಲಿ ರಚಿಸಬೇಕೆಂದಿರುವ ಕ್ರೀಡಾಂಗಣವು ದೊಡ್ಡದಾಗಬೇಕಾಗಿರುವುದರಿಂದ ಇದಕ್ಕೆ ಹೆಚ್ಚಿನ ಜಮೀನನ್ನು ಸರ್ಕಾರವು ಒದಗಿಸುವುದೇ?

ಇ) ಮೂಡಬಿದ್ರೆಯಲ್ಲಿರುವ ಏಕಲವ್ಯ ಕ್ರೀಡಾ ತರಬೇತಿ ಸಂಸ್ಥೆಯ ಹಾಗೂ ಊರಿನ ಇತರ ಕಾಲೇಜು ಪ್ರೌಢಶಾಲೆಗಳಿಗೆ ಆವಶ್ಯವಿರುವ ಈ ಕ್ರೀಡಾಂಗಣಕ್ಕೆ ಯಾವ ರೀತಿಯಲ್ಲಿ ಧನಸಹಾಯ ನೀಡಲಾಗುವುದು?

ಈ) ಕೇಂದ್ರ ಸರ್ಕಾರವು ಈ ಕ್ರೀಡಾಂಗಣದ ಯೋಜನೆಗೆ ಧನಸಹಾಯ ನೀಡುವುದೇ?

ಶ್ರೀ ಎಸ್. ರಮೇಶ್ (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) 3,86 ಎಕರೆ ಜಮೀನನ್ನು ನೀಡಿದೆ.

ಆ) ಕೇಂದ್ರ ಸರ್ಕಾರದ ಮಾರ್ಗದರ್ಶಿ ಪ್ರಕಾರ ಕ್ರೀಡಾಂಗಣ ಕಟ್ಟಲು 8 ಎಕರೆ ಭಾಗ ಬೇಕಾಗುವುದು. ಇದಕ್ಕೆ ಹೆಚ್ಚುವರಿಯಾಗಿ 3.14 ಎಕರೆ ಜಮೀನನ್ನು ನೀಡುವಂತೆ ಜಿಲ್ಲಾಧಿಕಾರಿ ದಕ್ಷಿಣ ಕನ್ನಡ ಇವರಿಗೆ ಕೋರಲಾಗಿದೆ.

ಇ) ಸದ್ಯ ಹೋಬಳಿ ಮಟ್ಟದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಧನಸಹಾಯವನ್ನು ವಿಸ್ತರಿಸುವ ಯೋಜನೆ ಇರುವುದಿಲ್ಲ. ಆದಾಗ್ಯೂ ತಾಲ್ಲೂಕು ಮಟ್ಟದ ಕ್ರೀಡಾಂಗಣ ಕಾರ್ಯವನ್ನು ಮುಕ್ತಾಯಗೊಳಿಸಿದ ನಂತರ, ಹೋಬಳಿ ಮಟ್ಟದಲ್ಲಿ ಕ್ರೀಡಾಂಗಣಗಳ ನಿರ್ಮಾಣ ಕಾರ್ಯದ ಧನಸಾಯವನ್ನು ವಿಸ್ತರಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಈ) ಹೌದು.

ನೆಲಮಂಗಲ ತಾಲ್ಲೂಕು ಪ್ರವಾಸಿಗರ ಕೇಂದ್ರಗಳ ಬಗ್ಗೆ

2080 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ನೆಲಮಂಗಲ ತಾಲ್ಲೂಕು ಸೋಂಪುರ ಹೋಬಳಿ ಶಿವಗಂಗೆ ಕ್ಷೇತ್ರವನ್ನು ಹಾಗೂ ದೊಡ್ಡಬಳ್ಳಾಪುರ ಮದುರೆ ಹೋಬಳಿ ಕನಸವಾಡಿ ಗ್ರಾಮದಲ್ಲಿ ನೆಲೆಸಿರುವ ಶ್ರೀ ಶನಿಮಹಾತ್ಮ ದೇವಸ್ಥಾನದ ಕ್ಷೇತ್ರವನ್ನು ಪ್ರವಾಸಿಗರ ಕೇಂದ್ರವನ್ನಾಗಿ ಮಾಡಬೇಕೆಂದು ಮನವಿ ಬಂದಿರುವುದು ನಿಜವೆ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು)

ಅ) ಹೌದು

ಆ) *1) ಪ್ರವಾಸೋದ್ಯಮ ಇಲಾಖೆಯು ಗುರುತಿಸಿರುವ ಪ್ರವಾಸಿ ಕ್ಷೇತ್ರಗಳಲ್ಲಿ ಶಿವಗಂಗೆಯು ಸೇರಿದೆ. ಆರ್ಥಿಕ ಸಂಪನ್ಮೂಲಗಳು ಲಭ್ಯವಾದ ಹಾಗೆ ಈ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲಾಗುವುದು.*

2) ಕನಸವಾಡಿ ಗ್ರಾಮದ ಶನಿಮಹಾತ್ಮ ದೇವಸ್ಥಾನವನ್ನು ಪ್ರೇಕ್ಷಣೀಯ ಸ್ಥಳವೆಂದು ಗುರುತಿಸಲಾಗುವುದು.

ರಾಜ್ಯದಲ್ಲಿರುವ ಜಲಾಶಯಗಳ ರಕ್ಷಣಾ ಕ್ರಮಗಳು

2047 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ರಾಜ್ಯದಲ್ಲಿರುವ ಜಲಾಶಯಗಳನ್ನು ವಿಧ್ವಂಸಕಾರರು ಬಾಂಬ್ ಸ್ಫೋಟನೆಯಿಂದ ನಾಶಪಡಿಸುವ ಸಂಭವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅವುಗಳ ಭದ್ರತೆಗೆ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ಬಂದಿದೆ.

ಆ) ರಾಜ್ಯದಲ್ಲಿರುವ ಭಾರಿ ನೀರಾವರಿ ಜಲಾಶಯಗಳ ಅಣೆಕಟ್ಟುಗಳ ಎಲ್ಲಾ ಪ್ರವೇಶ ದ್ವಾರಗಳನ್ನು ಮುಚ್ಚಲಾಗಿದ್ದು ಕೇವಲ ಒಂದು ದ್ವಾರ ತೆಗೆಯಲಾಗಿದ್ದು, ಜಲಾಶಯದ ಸ್ಥಳದಲ್ಲಿ ಹಗಲುರಾತ್ರಿ ಪಹರೆ ಹಾಕಲಾಗಿದೆ.

ಕೆ.ಜಿ.ಎಫ್-ರಾಮಕುಪ್ಪಂ ಮಧ್ಯೆ ಇರುವ ರಸ್ತೆಗೆ ಡಾಂಬರೀಕರಣ ಮಾಡುವುದು

2070 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಕೆ.ಜಿ.ಎಫ್ ರಾಮಕುಪ್ಪಂ ಮಧ್ಯೆ ಇರುವ ರಸ್ತೆಯ ಉದ್ದವೆಷ್ಟು?

ಆ) ಈ ರಸ್ತೆಗೆ ಡಾಂಬರೀಕರಣ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ?

ಇ) ಹಾಗಿದ್ದಲ್ಲಿ, ಯಾವಾಗ ಮಾಡಲಾಗುವುದು ಮತ್ತು ಅದಕ್ಕೆ ತಗಲುವ ವೆಚ್ಚವೆಷ್ಟು?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು)

ಅ) ಕೆ.ಜಿ.ಎಫ್ ಹಾಗೂ ರಾಮಕುಪ್ಪಂನ ಮಧ್ಯೆ ರಸ್ತೆಯ ಉದ್ದ 26 ಕಿ.ಮೀ (ಕರ್ನಾಟಕದಲ್ಲಿ 24 ಕಿ.ಮೀ ಹಾಗೂ ಆಂಧ್ರ ಪ್ರದೇಶದಲ್ಲಿ 2 ಕಿ.ಮೀ.)

ಆ) ರಾಜ್ಯದಲ್ಲಿ ಬರುವ ಈ ರಸ್ತೆಯ 24 ಕಿ.ಮೀ. ಉದ್ದದಲ್ಲಿ 18.80 ಕಿ.ಮೀ ಉದ್ದಕ್ಕೆ ಡಾಂಬರು ಮೇಲ್ಮೈ ಇರುತ್ತದೆ. ಮಿಕ್ಕ 5.20 ಕಿ.ಮೀ. ಉದ್ದವು ಜಲ್ಲಿ ಮೇಲ್ಮೈ ಹೊಂದಿದ್ದು ಈ ಸಾಲಿನಲ್ಲಿ ಡಾಂಬರು ಮಾಡುವ ಪ್ರಸ್ತಾಪವಿದೆ.

ಇ) ಬಾಕಿ ಇರುವ 5.20 ಕಿ.ಮಿ. ಉದ್ದದ ಜಲ್ಲಿ ರಸ್ತೆಯ ಪೈಕಿ 2.30 ಕಿ.ಮೀ. ಉದ್ದಕ್ಕೆ 2.84 ಲಕ್ಷ ರೂ.ಗಳ ಅಂದಾಜಿನಲ್ಲಿ ಡಾಂಬರನ್ನು ಈ ಸಾಲಿನಲ್ಲಿ ಮಾಡಲಾಗುವುದು. ಉಳಿದ 2.90 ಕಿ.ಮೀ. ಉದ್ದದ ರಸ್ತೆಗೆ ಡಾಂಬರು ಮಾಡಲು 4.0 ಲಕ್ಷ ರೂ.ಗಳನ್ನು ಗಡಿಪ್ರದೇಶ ಅಭಿವೃದ್ಧಿ ಯೋಜನೆಯಡಿ ಅನುದಾನವನ್ನು ಕೋರಲಾಗಿದ್ದು ಈ ಸಾಲಿನಲ್ಲಿಯೇ ತೆಗೆದುಕೊಳ್ಳುವ ಉದ್ದೇಶವಿದೆ.

ಇಂಜಿನಿಯರ್‌ಗಳ ಹೊಣೆಗಾರಿಕೆ

2279 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಲೋಕೋಪಯೋಗಿ ಇಲಾಖೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಕಟ್ಟಡಗಳನ್ನು ಕಟ್ಟಿದ ಮೇಲೆ ನಿರ್ದಿಷ್ಟ ಅವಧಿಯೊಳಗೆ ಏನಾದರೂ ತಾಂತ್ರಿಕ ದೋಷದಿಂದ ಅಪಾಯ ಆದಲ್ಲಿ ಸಂಬಂಧಿಸಿದ ಎಂಜಿನಿಯರ್ ಮತ್ತು ಕಂಟ್ರಾಕ್ಟರರನ್ನು ನಷ್ಟಕ್ಕೆ ಹೊಣೆಗಾರರನ್ನಾಗಿ ಮಾಡುವ ವಿಚಾರ ಸರ್ಕಾರದ ಮುಂದಿದೆಯೆ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಮಂತ್ರಿಗಳು)

ಅ) ಪ್ರಸ್ತುತ ಈಗಿರುವ ಕಾನೂನಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಅವಕಾಶವಿರುವುದರಿಂದ ಈ ಪ್ರಶ್ನೆ ಮತ್ತೆ ಸರ್ಕಾರದ ಮುಂದಿಲ್ಲ.

ಕುಕ್ಕುಂಡ ಮಂಡಲ ಪಂಚಾಯಿತ್ತಿಯಲ್ಲಿ ನಡೆದ ಅವ್ಯವಹಾರಗಳು

2353 - ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಕುಕ್ಕುಂಡ ಮಂಡಲ ಪಂಚಾಯಿತ್ತಿಯಲ್ಲಿ ರೂ.63,684.45 ಅವ್ಯವಹಾರವಾಗಿರುವುದನ್ನು ನನ್ನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 661ಕ್ಕೆ ಒಪ್ಪಿ ವಿಚಾರಣೆ ನಡೆಸಲಾಗುವುದೆಂದು ತಿಳಿಸಿದ್ದು ಇಲ್ಲಿಯವರೆಗೆ ಕೈಗೊಂಡಿರುವ ಕ್ರಮಮೇನು?

ಆ) ಈ ಹಣ ವಸೂಲಿಯಾಗಿ ಸಂಬಂಧಪಟ್ಟ ಮಂಡಲಿ ಪಂಚಾಯತಿ ಕುಕ್ಕುಂಡ ಖಾತೆಗೆ ಜಮಾ ಮಾಡಲಾಗಿದೆಯೇ ಅಥವಾ ಇಲ್ಲವೇ?

ಇ) ಇಲ್ಲದಿದ್ದಲ್ಲಿ, ಈ ಅವ್ಯವಹಾರದಲ್ಲಿ ತೊಡಗಿದವರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

(ಅ), (ಆ) ಮತ್ತು (ಇ) ಈವರೆವಿಗೂ ಸ್ಥಳೀಯ ಅಧಿಕಾರಿಗಳು ಯಾವುದೇ ನಿರ್ಧಿಷ್ಟ ಕ್ರಮವನ್ನು ಕೈಗೊಂಡಿರುವುದಿಲ್ಲ. ಗುಲ್ಬರ್ಗಾ ಜಿಲ್ಲಾ ಪರಿಷತ್ತು ಮುಖ್ಯ ಕಾರ್ಯದರ್ಶಿಗಳವರಿಗೆ ದುರುಪಯೋಗವಾದ ಹಣವನ್ನು ವಸೂಲು ಮಾಡಲು ಸಂಬಂಧಪಟ್ಟ ಸರ್ಕಾರಿ ನೌಕರರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಮಾಡಲು ಹಾಗೂ ಶಿಸ್ತಿನ ಕ್ರಮವನ್ನು ನಿಯಮಗಳಿಗೆ ಅನುಸಾರವಾಗಿ ತೆಗೆದುಕೊಳ್ಳುವಂತೆ ಸೂಚನೆಗಳನ್ನು ನೀಡಲಾಗಿದೆ.

ಪ್ರವಾಸಿ ಸ್ಥಳಗಳ ಅಭಿವೃದ್ಧಿ

2065 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಈ ವರ್ಷವನ್ನು ಪ್ರವಾಸಿ ವರ್ಷವೆಂದು ಪರಿಗಣಿಸಿರುವುದು ಸರ್ಕಾರದ ಗಮನದಲ್ಲಿದೆಯೇ ?

ಆ) ಹಾಗಿದ್ದಲ್ಲಿ, ಮೂಡಿಗೆರೆ ತಾಲ್ಲೂಕಿನ ಐತಿಹಾಸಿಕ ಸ್ಥಳಗಳಾದ ಅಂಗಡಿ (ಹೊಯ್ಸಳ ಮೂಲ ಸ್ಥಳ) ಬಲ್ಲಾಳರಾಯನ ದುರ್ಗಾ, ಈ ಸ್ಥಳಗಳನ್ನು ಪ್ರವಾಸಿ ಸ್ಥಳಗಳನ್ನಾಗಿ ಅಭಿವೃದ್ಧಿಪಡಿಸುವುದು ಸರ್ಕಾರದ ಮುಂದಿದೆಯೆ ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು)

ಅ) ಹೌದು

ಆ) ಸದ್ಯಕ್ಕೆ ಅಂಥ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ.

ಜಿಲ್ಲಾ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳುವುದು

2045 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿರುವ ಎಲ್ಲಾ ಜಿಲ್ಲಾ ರಸ್ತೆಗಳನ್ನೂ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಳ್ಳುವ ಬಗ್ಗೆ ಪ್ರಸ್ತಾಪವು ಸರ್ಕಾರದಲ್ಲಿ ಇದೆಯೆ ?

ಆ) ಹಾಗಿದ್ದಲ್ಲಿ, ಪ್ರತಿಯೊಂದು ಜಿಲ್ಲೆಯಲ್ಲಿ ತೆಗೆದುಕೊಳ್ಳಲಾಗದ ರಸ್ತೆಗಳ ಉದ್ದವೆಷ್ಟು ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು)

ಅ) ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ಬರುವ ಕೆಲವು ಇತರೆ ಜಿಲ್ಲಾ ರಸ್ತೆಗಳು ಹಾಗೂ ಹಳ್ಳಿ ದರ್ಜೆ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಳ್ಳುವ ಪ್ರಸ್ತಾಪವು ಸರ್ಕಾರದಲ್ಲಿ ಇದೆ.

ಆ) ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುವ ಒಟ್ಟು ಸುಮಾರು 6000 ಕಿ.ಮೀ. ಉದ್ದದ ರಸ್ತೆಯನ್ನು ಅಂದರೆ ಪ್ರತಿ ಜಿಲ್ಲೆಗೆ ಸರಾಸರಿ 300 ಕಿ.ಮೀ.ನಷ್ಟು ರಸ್ತೆಯನ್ನು ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಳ್ಳುವ ಪ್ರಸ್ತಾಪವಿದೆ.

ಕೃಷ್ಣರಾಜಸಾಗರ ಅಣೆಕಟ್ಟಿನ ಮೇಲೆ ಸಂಚಾರ ನಿಲ್ಲಿಸಿರುವುದು

2176 - ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಕೃಷ್ಣರಾಜಸಾಗರ ಅಣೆಕಟ್ಟಿನ ಮೇಲೆ ಸಂಚಾರವನ್ನು ನಿಲ್ಲಿಸಲಾಗಿದೆಯೆ?

ಆ) ಹಾಗಿದ್ದಲ್ಲಿ, ಎಂದಿನಿಂದ ಅದನ್ನು ನಿಲ್ಲಿಸಲಾಯಿತು ಮತ್ತು ಇದಕ್ಕೆ ಕಾರಣಗಳೇನು?

ಇ) ಬೃಂದಾವನ ಉದ್ಯಾನವನಕ್ಕೆ ಹೋಗಲು ಅನುಕೂಲವಾಗುವಂತೆ ಕೃಷ್ಣರಾಜಸಾಗರದ ಬಳಿ ಹೊಸ ಸೇತುವೆಯನ್ನು ಕಟ್ಟುವ ಪ್ರಸ್ತಾವೆ ಇದೆಯೇ?

ಈ) ಹಾಗಿದ್ದಲ್ಲಿ, ಇದರ ಅಂದಾಜು ವೆಚ್ಚವೆಷ್ಟು?

ಉ) ಸದರಿ ಕಾಮಗಾರಿಯನ್ನು ಎಂದು ಪ್ರಾರಂಭಿಸಲಾಗುವುದು ಹಾಗೂ ಎಂದು ಮುಗಿಸಲಾಗುವುದು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ಹೌದು

ಆ) 28-7-1991 ರಿಂದ ಈ ಕೆಳಗೆ ಸೂಚಿಸಿರುವ ಕಾರಣಗಳಿಂದ ವಾಹನಗಳ ಸಂಚಾರ ನಿಲ್ಲಿಸಲಾಗಿದೆ.

1) ಇತ್ತೀಚಿನ ನೆರೆ ಹಾವಳಿಯಿಂದಾಗಿ
2) ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳುವುದರಿಂದ
3) ದುರಸ್ತಿ ಕಾಮಗಾರಿಗಳನ್ನು ಕೈಗೊಂಡಿರುವುದರಿಂದ ಸಾರ್ವಜನಿಕರ ಹಿತ ರಕ್ಷಣೆಗಾಗಿ
4) ಭದ್ರತೆಗಾಗಿ.

ಇ) ಹೌದು

ಈ) 7 ಕೋಟಿ ರೂಪಾಯಿಗಳು (ಇತ್ತೀಚಿನ ದರಪಟ್ಟಿಯ ಪ್ರಕಾರ)

ಉ) ಹಣಕಾಸು ಒದಗಿಸಿದ ತಕ್ಷಣ ಕಾಮಗಾರಿಗಳನ್ನು ಕೈಗೊಂಡು 2-3 ವರ್ಷಗಳ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು.

ಲೋಕೋಪಯೋಗಿ ಇಲಾಖೆಯಲ್ಲಿರುವ ಪಂಚಾಯಿತಿ ಪ್ರಕರಣ

2175-ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯಲ್ಲಿ ಬಾಕಿ ಉಳಿದಿರುವ ಪಂಚಾಯಿತಿ ಪ್ರಕರಣಗಳು ಎಷ್ಟಿವೆ-

ಆ) ಪಂಚಾಯಿತಿಗೆ ವಹಿಸಿರುವ ಪ್ರಕರಣಗಳು ಎಷ್ಟು? ಹಾಗೂ ವಹಿಸಿರುವ ದಿನಾಂಕ?

ಇ) ಆರು ತಿಂಗಳಿಂದ ಬಾಕಿ ಇರುವ ಪಂಚಾಯಿತಿ ಪ್ರಕರಣಗಳು ಎಷ್ಟು?

ಈ) ಪಂಚಾಯಿತಿ ಪ್ರಕರಣಗಳನ್ನು ಬೇಗ ತೀರ್ಮಾನ ಮಾಡಲು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು):

ಅ) ಲೋಕೋಪಯೋಗಿ ಇಲಾಖೆಯಲ್ಲಿ ಯಾವುದೇ ಪಂಚಾಯಿತಿ ಪ್ರಕರಣಗಳು ಇರುವುದಿಲ್ಲ.

ಆ) ಯಾವುದೂ ಇಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಕೋಲಾರ ಜಿಲ್ಲಾ ಪರಿಷತ್ ತಾಂತ್ರಿಕ ಇಂಜಿನಿಯರಿಂಗ್ ವಿಭಾಗಕ್ಕೆ ಒದಗಿಸಿದ ಸಿಮೆಂಟ್

2069 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) 1990-91 ನೇ ಸಾಲಿಗೆ ಕೋಲಾರ ಜಿಲ್ಲಾ ಪರಿಷತ್ ತಾಂತ್ರಿಕ ಇಂಜಿನಿಯರಿಂಗ್ ವಿಭಾಗಕ್ಕೆ ಒದಗಿಸಿದ ಸಿಮೆಂಟ್ ಎಷ್ಟು?

ಆ) ಜನವರಿ 91 ರಿಂದ ಜುಲೈ 91 ರವರೆಗೆ ಒದಗಿಸಿದ ಒಟ್ಟು ಸಿಮೆಂಟ್ ಎಷ್ಟು?

ಇ) ಅವಶ್ಯಕತೆಗನುಗುಣವಾಗಿ ಸಿಮೆಂಟನ್ನು ಒದಗಿಸದ ಕಾರಣ ಅಭಿವೃದ್ಧಿ ಕೆಲಸಗಳು ಸ್ಥಗಿತಗೊಂಡಿರುವುದು ನಿಜವೇ?

ಈ) ಕೋಲಾರ ಜಿಲ್ಲಾ ಪರಿಷತ್ ತಾಂತ್ರಿಕ ವಿಭಾಗಕ್ಕೆ ಸಿಮೆಂಟ್ ಒದಗಿಸಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಕೋಲಾರ ಜಿಲ್ಲಾ ಪರಿಷತ್ ತಾಂತ್ರಿಕ ಇಂಜಿನಿಯರಿಂಗ್ ವಿಭಾಗಕ್ಕೆ 1990-91ನೇ ಸಾಲಿನಲ್ಲಿ 2391.60 ಮೆಟ್ರಿಕ್ ಟನ್‌ನಷ್ಟು ಸಿಮೆಂಟನ್ನು ಒದಗಿಸಲಾಗಿದೆ.

ಆ) ಜನವರಿ 1991 ರಿಂದ ಮಾರ್ಚ್ 1991 ರ ತನಕ ೧೯೪೨.೩೫ ಮೆಟ್ರಿಕ್ ಟನ್ ಸಿಮೆಂಟನ್ನು ಒದಗಿಸಲಾಗಿದೆ.

ಇ) ಅವಶ್ಯಕತೆಗನುಗುಣವಾಗಿ ಸಿಮೆಂಟನ್ನು ಒದಗಿಸದ ಕಾರಣ ಅಭಿವೃದ್ಧಿ ಕೆಲಸಗಳು ಸ್ಥಗಿತಗೊಂಡಿವೆ ಎಂಬುದು ಸರಿ ಅಲ್ಲ. ಕೋಲಾರ ಜಿಲ್ಲಾ ಪರಿಷತ್ ತಾಂತ್ರಿಕ ವಿಭಾಗಕ್ಕೆ 1990-91ನೇ ಸಾಲಿಗೆ ಅವಶ್ಯಕತೆಗನುಗುಣವಾಗಿ ಸಿಮೆಂಟನ್ನು ಸರಬರಾಜು ಮಾಡಲಾಗಿದೆ ಹಾಗೂ ಹೆಚ್ಚಿನ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ.

ಈ) ಕ್ರಮಬದ್ಧವಾಗಿ ಸಿಮೆಂಟ್ ಸರಬರಾಜು ಆಗುವ ಬಗ್ಗೆ ಸರ್ಕಾರದಿಂದ ಆದೇಶ ನೀಡಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರಿಗೆ ಶೌಚಾಲಯಗಳು

2046 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರಿಗೆ ಶೌಚಾಲಯಗಳ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಆ) ಹಾಗಿದ್ದಲ್ಲಿ, ಈ ಸಮಸ್ಯೆಯನ್ನು ಪರಿಹರಿಸಲು ಕೈಗೊಂಡ ಕ್ರಮಗಳೇನು?

ಇ) ನಿರ್ಮಲೀಕರಣ ಯೋಜನೆಯಡಿಯಲ್ಲಿ 1990-91 ರ ಸಾಲಿನಲ್ಲಿ ಕಟ್ಟಲಾಗಿರುವ ಶೌಚಾಲಯಗಳ ಸಂಖ್ಯೆ ಎಷ್ಟು?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಹೌದು, ಬಂದಿರುತ್ತದೆ.

ಆ) ಗ್ರಾಮೀಣ ಜನತೆಯ ಅದರಲ್ಲೂ ಪ್ರಮುಖವಾಗಿ ಮಹಿಳೆಯರು ಶೌಚಾಲಯಗಳಿಲ್ಲದೆ ಅನುಭವಿಸುತ್ತಿರುವ ಕಷ್ಟಗಳನ್ನು ಪರಿಗಣಿಸಿ ೧೯೮೮-೮೯ ರಿಂದ ಗ್ರಾಮೀಣ ಪ್ರದೇಶಗಳಲ್ಲಿ ಕಡಿಮೆ ವೆಚ್ಚದ ಶೌಚಾಲಯಗಳನ್ನು ಕಟ್ಟಿಸಿಕೊಡುವ ಕಾರ್ಯಗಳನ್ನು ಸರ್ಕಾರವು ಹಮ್ಮಿಕ್ಕೊಂಡಿದೆ. ಅಲ್ಲದೆ ಇಂತಹ ಶೌಚಾಲಯಗಳನ್ನು ಕಟ್ಟುವಿಕ್ಕೆ, ಅವುಗಳ ಉಪಯೋಗ ಹಾಗೂ ನಿರ್ವಹಣೆ ಬಗ್ಗೆ ಗ್ರಾಮೀಣ ಜನತೆಯಲ್ಲಿ ಅರಿವು ಮೂಡಿಸುವ ಕಾರ್ಯವೂ ಸಹ ಕೈಗೊಂಡಿರುತ್ತದೆ. ಈ ಕಾರ್ಯಕ್ರಮಕ್ಕೆ ಅಪಾರ ಹಣ ಬೇಕಾಗಿರುವುದರಿಂದ ಇದನ್ನು ಹಂತ ಹಂತವಾಗಿ ಕಾರ್ಯರೂಪಕ್ಕೆ ತರಲಾಗುತ್ತದೆ.

ಇ) 1990-91 ರ ಸಾಲಿನಲ್ಲಿ ವಿವಿಧ ನಿರ್ಮಲೀಕರಣ ಯೋಜನೆಗಳ ಅಡಿಯಲ್ಲಿ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಒಟ್ಟು ೮೪೦೩ ಕಡಿಮೆ ವೆಚ್ಚದ ಜಲಬದ್ಧ ಶೌಚಾಲಯಗಳನ್ನು ಕಟ್ಟಲಾಗಿದೆ.

ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿ

2039 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿಗಳ ಮೇಲೆ ಹಾಕಲಾಗಿರುವ ವೇಗ ತಡೆಯ ವಿನ್ಯಾಸದ ಸ್ಟ್ಯಾಂಡರ್ಡ್.

ಆ) ಈ ಮೇಲ್ಕಂಡ ಸ್ಟ್ಯಾಂಡರ್ಡನ್ನು ಹೆದ್ದಾರಿಗಳ ಮೇಲೆ ಅಳವಡಿಸಲಾಗಿದೆಯೇ?

ಇ) ಹಾಗಿಲ್ಲದ ಪಕ್ಷದಲ್ಲಿ ಸರ್ಕಾರವು ಈ ತಾಂತ್ರಿಕ ವಿನ್ಯಾಸವಿಲ್ಲದ ವೇಗ ತಡೆಗಳನ್ನು ತೆಗೆಸಿ ತಾಂತ್ರಿಕ ವಿನ್ಯಾಸವುಳ್ಳ ರಂಬಲ್ ಸ್ಟ್ರಿಪ್‌ಗಳನ್ನು 60 ದಿನಗಳಲ್ಲಿ ಹಾಕುವರೇ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು)

ಅ) ಕೇಂದ್ರ ಸರ್ಕಾರವು ಸೂಚಿಸಿರುವ ವಿನ್ಯಾಸ ವಿಶಿಷ್ಟ ವಿವರಣೆಗಳಿಗೆ ಅನುಗುಣವಾಗಿರುತ್ತದೆ.

ಆ) ಹೌದು.

ಇ) ಹಾಕಲಾಗುವ ಎಲ್ಲಾ ವೇಗ ತಡೆಗಳು ಸಹ ಮೇಲ್ಕಂಡ ಸುತ್ತೋಲೆಗೆ ಅನುಗುಣವಾಗಿಯೇ ಇರಬೇಕು. ವಿನ್ಯಾಸಕ್ಕನುಗುಣವಾಗಿಲ್ಲದ ವೇಗತಡೆಗಳು ಇದ್ದಲ್ಲಿ ಅಂತಹವನ್ನು ಕೂಡಲೇ ತೆಗೆಸಿ, ವಿನ್ಯಾಸಕ್ಕನುಗುಣವಾಗಿ ರಂಬಲ್ ಸ್ಟ್ರಿಪ್ ಹಾಕಿಸುವಂತೆ ಆದೇಶ ನೀಡಲಾಗಿದೆ.

13-9-1991ರ ಚುಕ್ಕೆ ರಹಿತ ಪ್ರಶ್ನೆಗಳು

ವೈದ್ಯಕೀಯ ಕಾಲೇಜುಗಳ ಬಗ್ಗೆ

2960 - ಶ್ರೀ ಎನ್.ಜಿ. ನಾಯ್ಕ (ಮೊಳಕಾಲ್ಮೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಕರ್ನಾಟಕದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳು ಎಷ್ಟು? ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳು ಎಷ್ಟು? ಯಾವ ಯಾವ ಪಂಗಡದವರಿಗೆ ಕೊಟ್ಟಿದ್ದೀರಿ?

ಆ) ಹಾಗಿದ್ದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿನ (1987-88, 88-89, 90-91, 91-92) ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? ಎಷ್ಟು ಜನ ತೇರ್ಗಡೆಯಾಗಿದ್ದಾರೆ?

ಇ) ಖಾಸಗಿಯ ವೈದ್ಯಕೀಯ ಕಾಲೇಜುಗಳಲ್ಲಿ ಮೇಲೆ ನಮೂದಿಸಿದಂತೆ ವಿವರಗಳನ್ನು ಕೊಡಿ.

ಈ) ಈ ವರ್ಷ ವೈದ್ಯಕೀಯ ಸರ್ಕಾರಿ ಕಾಲೇಜುಗಳನ್ನು ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳನ್ನು ತೆರೆಯಲು ಸರ್ಕಾರದ ಗಮನದಲ್ಲಿ ಇದೆಯೆ?

ಉ) ಹಾಗಿದ್ದಲ್ಲಿ ಖಾಸಗಿಯ ವೈದ್ಯಕೀಯ ಕಾಲೇಜುಗಳಲ್ಲಿ ಈ ವರ್ಷ ಎಷ್ಟು ಅರ್ಜಿಗಳು ಸಲ್ಲಿಸಿದ್ದಾರೆ? ಸಂಪೂರ್ಣ ಮಾಹಿತಿ ಕೊಡಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಸರ್ಕಾರಿ ವೈದ್ಯಕೀಯ ಕಾಲೇಜು - 4, ಖಾಸಗಿ ವೈದ್ಯಕೀಯ ಕಾಲೇಜು 14. ಸಾಮಾನ್ಯ ಹಿಂದುಳಿದ, ಪರಿಶಿಷ್ಟ ಜಾತಿ, ಪಂಗಡ, ಅಲ್ಪ ಸಂಖ್ಯಾತ, ಭಾಷಾ ಅಲ್ಪ ಸಂಖ್ಯಾತ ವರ್ಗಗಳು.

ಆ) ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ. 1991-92ನೇ ಸಾಲಿಗೆ ಸಂಬಂಧಿಸಿದಂತೆ ಪ್ರವೇಶ ಕಾರ್ಯ ಮುಕ್ತಾಯ ಹಂತದಲ್ಲಿದೆ. ನಂತರದ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. 1991-92ನೇ ಸಾಲಿಗೆ ಸಂಬಂಧಿಸಿದಂತೆ ಪ್ರವೇಶ ಕಾರ್ಯ ಮುಕ್ತಾಯ ಹಂತದಲ್ಲಿದೆ. ನಂತರದ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಇಲ್ಲ.

ಉ) 22-ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

Statement showing the Number of students studying and passed out in various Government & Private Medical Colleges

No.	Name of the Medical College	Total Students studying				No.of Students passed out			
		1987-88	88-89	89-90	90-91	87-88	88-89	89-90	90-91
	Karnataka Medical College, Hubli	571	726	587	553	105	101	123	143
	Kempe Gowda Inst. of Med. Science, Bangalore	836	811	782	796	100	137	134	37
	J.N. Medical College, Belgaum	796	855	875	947	75	96	143	155
	Medical College, Mysore	499	575	712	765	115	94	087	183
	Sri Devaraj Urs Medical College, Kolar	291	441	584	732	Results of I Batch Final year awaited.			
	Bellary Medical College, Bellary	596	615	647	654	107	106	105	117
	Sri Siddhartha Medical College, Tumkur	150	150	150	150	The college started in the year 1988-89 The students passed out from the year 88-89 to 90-91 does not arise.			
	M.S. Ramaiah Medical College, Bangalore	905	840	829	881	July 87 - 242 Jan. 88 - 317 July 88 - 365 Jan 89 - 482 July 89 - 523 Jan 90 - 593 July 90 - 641			
	Bangalore Medical College, Bangalore	1142	923	943	1005	July 87 - 36			

						Jan	88 - 115
						July	88 - 56
						Jan	89 - 145
						July	89 - 19
						Jan	90 - 122
						July	90 - 39
10.	K.M.C. Manipal	1011	1115	1228	1339	July	87 - 59
						Jan	88 - 88
						July	88 - 68
						Jan	89 - 71
						July	89 - 72
						Jan	90 - 69
						July	90 - 75
						Jan	91 - 84
1.	K.M.C. Mangalore	Jan. 87 to June 87			663	Jan.	87 - 100
		June 87 to Dec. 87			860	July	87 - 28
		Jan. 88 to June 88			797	Jan.	88 - 49
		June 88 to Dec. 88			987	July	88 - 73
		Jan. 88 to June 89			931	Jan	89 - 57
		June 89 to Dec. 89			1119	Aug	89 - 55
		Jan. 90 to June 90			1064	Jan.	90 - 61
		June 90 to Dec. 90			1283	July	90 - 53
		Jan 91 to June 91			1220	Jan	91 - 63

12.	J.S.S. Medical College, Mysore	186	150	200	199	<u>Final MBBS</u> July 89 - 22 Jan 90 - 28 July 90 - 53 Jan 91 - 53			
13.	St. John's Medical College, Bangalore	301	303	304	302	87-88 48 88-89 54 89-90 75 90-91 06 (January results yet to be announced).			
14.	Al-Ameen Medical College, Bijapur	413	527	606	701	<u>I Phase II Phase III phase</u> No.of cand .approved			
					May 87	77	01		-do-
					Dec. 87	37	10		-do-
					May 88	84	15		-do-
					Dec. 88	53	18		-do-
					May 89	36	38		09
					Dec. 89	59	49		09
					May 90	63	59		24
					Dec. 90	67	30		28
15.	M.R. Medical College, Gulbarga	978	821	851	1137	109	105	116	142
16.	Dr. B.R. Ambedkar Medical College, Bangalore	1058	1027	059	733	87		23	

					July	87 32		
					Jan	88 76		
					July	88 67		
					Jan	89 66		
					July	89 66		
					Jan	90 53		
					July	90 63		
J.J.M. Medical College, Dawangere	1114	1225	1352	1512	114	85	104	173
Adichunchanagiri Inst. of Medical Science, Bellur	456	597	747	890			028	29
BLDE Medical College, Bijapur	130	160	160	160	<u>I MBBS</u>			
		106	101		Dec.	1987 - 27		
					May	1988 - 40		
					Dec.	1988 - 66		
					May	1989 - 41		
					Dec.	1989 - 60		
		<u>II MBBS</u>			May	1990 - 33		
	May	89 23			Dec.	1990 - 64		
	Dec	89 25			May	1991 - 30		
	May	90 48			<u>III MBBS</u>			
	Dec	90 42			Dec.	90 - 20		
	May	91 48			May.	91 - 15		

ಅನುಬಂಧ-2

ಕ್ರ ಸಂ.	ಸಂಸ್ಥೆಯ ಹೆಸರು, ವೈದ್ಯಕೀಯ ಕಾಲೇಜುಗಳು
1.	ಶ್ರೀ ಜಗದ್ಗುರು ಮುರುಘರಾಜೇಂದ್ರ ವಿದ್ಯಾಪೀಠ, ಚಿತ್ರದುರ್ಗಾ
2.	ಸಿದ್ಧಗಂಗಾ ಎಜುಕೇಷನ್ ಸೊಸೈಟಿ, ತುಮಕೂರು
3.	ಆಲ್ ಮಹಮದ್ ಸೊಸೈಟಿ, ಭದ್ರಾವತಿ
4.	ಅಕಾಡೆಮಿ ಆಫ್ ಲಿಬರಲ್ ಎಜುಕೇಷನ್, ಸುಳ್ಯ, ಡಿ.ಕೆ.
5.	ಶರಬೇಶ್ವರ ವಿದ್ಯಾಪೀಠ, ಬಳ್ಳಾರಿ
6.	ನಿಟ್ಟೆ ಎಜುಕೇಷನ್ ಟ್ರಸ್ಟ್, ಕಾರ್ಕಳ, ಡಿ.ಕೆ.
7.	ಕರ್ನಾಟಕ ಲಾ ಸೊಸೈಟಿ, ಬೆಳಗಾಂ
8.	ಮಲೆನಾಡು ಮೆಡಿಕಲ್ ಕಾಲೇಜು (ಬಿ.ಆರ್. ಅಂಬೇಡ್ಕರ್ ಮಿಷನ್) ಶಿವಮೊಗ್ಗ
9.	ರಾಷ್ಟ್ರೀಯ ಶಿಕ್ಷಣ ಸಮಿತಿ, ಶಿವಮೊಗ್ಗ
10.	ಫಾದರ್‌ಮುಲ್ಲರ್ ಇನ್‌ಸ್ಟಿಟ್ಯೂಟ್, ಕಂಕನಾಡಿ, ಮಂಗಳೂರು
11.	ಸಹ್ಯಾದ್ರಿ ಎಜುಕೇಷನ್ ಟ್ರಸ್ಟ್, ಶಿವಮೊಗ್ಗ
12.	ಶ್ರೀ ವೀಣಾಶಾರದ ಎಜುಕೇಷನ್ ಸೊಸೈಟಿ, ಹಾಸನ
13.	ತಾರನಾಥ ಶಿಕ್ಷಣ ಸಂಸ್ಥೆ, ರಾಯಚೂರು
14.	ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ, ಬೀದರ್
15.	ಖಾಜಾ ಶಿಕ್ಷಣ ಸಂಸ್ಥೆ, ಗುಲ್ಬರ್ಗಾ
16.	ಆಲ್ ಮಹಮದ್ ವಿದ್ಯಾಸಂಸ್ಥೆ, ಶಿವಮೊಗ್ಗ
17.	ಶರಭೇಶ್ವರಿ ವಿದ್ಯಾಪೀಠ, ಬಂಡಿಪೋಟ್, ಬಳ್ಳಾರಿ
18.	ನಾನಕಜೀರ್ ಫೌಂಡೇಷನ್, ಬೀದರ್
19.	ಜಗದ್ಗುರು ಮೂರುಸಾವಿರದ ಮಠ, ಜೆ.ಜಿ. ಸಹಕಾರ ಸಂಘ ರೂರಲ್ ಮೆಡಿಕಲ್ ಕಾಲೇಜು ಹುಬ್ಬಳ್ಳಿ
20.	ಶ್ರೀ ವೀಣಾಶಾರದ ಎಜುಕೇಷನ್ ಸೊಸೈಟಿ, ಶಿವಮೊಗ್ಗ
21.	ಚಾಮುಂಡಿ ಮೆಡಿಕಲ್ ಫೌಂಡೇಷನ್, ಬೆಂಗಳೂರು
22.	ಕರ್ನಾಟಕ ಪೀಪಲ್ ಎಜುಕೇಷನ್ ಸೊಸೈಟಿ, ಗುಲ್ಬರ್ಗಾ

ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ಪೈಕಿ ವಕ್ಕುಂದ ಗ್ರಾಮದಲ್ಲಿ ನೇಕಾರರಿಗೆ ವಸತಿಗೃಹ ಹಾಗೂ ವರ್ಕ್‌ಶೆಡ್ ಕಟ್ಟಿಸುವ ಬಗ್ಗೆ.

2911 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ವಕ್ಕುಂದ ಗ್ರಾಮದಲ್ಲಿ ನೇಕಾರರ ಅಭಿವೃದ್ಧಿಗಾಗಿ ವಸತಿಗೃಹ ಹಾಗೂ ವರ್ಕ್‌ಶೆಡ್ ಕಟ್ಟುವ ಸಲುವಾಗಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾದ ಜನರು ವಕ್ಕುಂದ ಗ್ರಾಮದಲ್ಲಿ ವಲಸೆ ಬಂದು ನೆಲೆಸಿದ್ದು ಆ ಮುಳುಗಡೆ ನೇಕಾರರ ವಸತಿಗಾಗಿ ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು:-

ಇ) ಅವರುಗಳಿಗೆ ವರ್ಕ್‌ಶೆಡ್ ಕಟ್ಟುವ ಬಗ್ಗೆ ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು?

ಈ) ಬೈಲಹೊಂಗಲ ತಾಲ್ಲೂಕಿನಲ್ಲಿ ಹಾಗೂ ವಕ್ಕುಂದ ಗ್ರಾಮದಲ್ಲಿ ನೇಕಾರರಿಗೆ ಇನ್ನೂ ಹೆಚ್ಚಿನ ಕೈಮಗ್ಗಗಳ ಬೇಡಿಕೆ ಇದ್ದರೂ ಸಹ ಆ ನೇಕಾರರಿಗೆ ಕೈಮಗ್ಗಗಳನ್ನು ಇದುವರೆಗೂ ಪೂರೈಸದೇ ಇರಲು ಕಾರಣಗಳೇನು? ಹಾಗೂ ಅದನ್ನು ಪೂರೈಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು?

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು)

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ವಕ್ಕುಂದ ಗ್ರಾಮದಲ್ಲಿ ೫೦ ನೇಕಾರರನ್ನು ನಿಗಮಕ್ಕೆ ಅಳವಡಿಸಿಕೊಳ್ಳಲಾಗಿದೆ. ಈ ಪೈಕಿ ೧೩ ನೇಕಾರರಿಗೆ ಕಾರ್ಯಾಗಾರ ಮತ್ತು ವಸತಿ ನಿರ್ಮಾಣಕ್ಕಾಗಿ ಸಹಾಯಧನವನ್ನು ಮಂಜೂರು ಮಾಡಲಾಗಿದೆ. ಈ ನೇಕಾರರು ನಿವೇಶನವನ್ನು ಹೊಂದಿದ್ದರೆ, ಕಾರ್ಯಾಗಾರಕ್ಕಾಗಿ ರೂ.೩,೦೦೦ ಮತ್ತು ವಸತಿ ಹಾಗೂ ಕಾರ್ಯಾಗಾರಕ್ಕಾಗಿ ರೂ. ೬,೦೦೦-೦೦ ಸಹಾಯಧನವನ್ನು ನೀಡಲಾಗುವುದು.

ಆ) ವಲಸೆ ಬಂದ ನೇಕಾರರಿಗೆ ನಿರ್ದಿಷ್ಟ ಕಾರ್ಯಕ್ರಮವನ್ನು ಸರ್ಕಾರ ರೂಪಿಸಿಲ್ಲ.

ಇ) ಕ್ರಮಸಂಖ್ಯೆ 2 ರಲ್ಲಿನ ಪ್ರಶ್ನೆಗೆ ಉತ್ತರ ನೀಡಿರುವುದರಿಂದ ಉದ್ಭವಿಸುವುದಿಲ್ಲ.

ಈ) ಸರ್ಕಾರವು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲವೆಂದು ಹೇಳುವುದು ಸರಿಯಲ್ಲ. ನೇಕಾರ ಸದಸ್ಯರ ಕೋರಿಕೆಯನ್ನು ಪರಿಗಣಿಸಿ ವಕ್ಕುಂದ ಗ್ರಾಮದಲ್ಲಿ ೫೦ ನೇಕಾರರಿಗೆ ಮಗ್ಗಗಳನ್ನು ಒದಗಿಸಲಾಗಿದೆ ಮತ್ತು ಬೈಲಹೊಂಗಲ ತಾಲ್ಲೂಕಿಗೆ 620 ಮಗ್ಗಗಳನ್ನು ಅಳವಡಿಸಿದೆ. ಇದರಲ್ಲಿ ವಕ್ಕುಂದ ಗ್ರಾಮದ ೫೦ ಮಗ್ಗಗಳೂ ಸೇರಿವೆ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಮುಖಾಂತರ ನೇಕಾರರನ್ನು ಅಳವಡಿಸಿಕೊಳ್ಳಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ.

ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಹೆಚ್ಚಿಗೆ ಸೀಟುಗಳನ್ನು ಕೊಟ್ಟಿರುವ ವಿಚಾರ

2904 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) 1990-91ನೇ ಸಾಲಿನಲ್ಲಿ ಅನೇಕ ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಹೆಚ್ಚಿನ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಲು ಸರ್ಕಾರ ಅನುಮತಿ ಕೊಟ್ಟಿರುವುದು ನಿಜವೆ?

ಆ) ಕೊಟ್ಟಿದ್ದಲ್ಲಿ, ಆ ಕಾಲೇಜುಗಳು ಅಥವಾ ವಿದ್ಯಾ ಸಂಸ್ಥೆಗಳಾವುವು ಹಾಗೂ ಎಷ್ಟು ಹೆಚ್ಚಿಗೆ ಸೀಟುಗಳನ್ನು ನೀಡಲಾಗಿದೆ (ವಿವರಗಳನ್ನು ನೀಡುವುದು)

ಇ) ಒಂದು ಪಕ್ಷ ಹೆಚ್ಚಿಗೆ ಸೀಟುಗಳನ್ನು ಕೊಟ್ಟಿದ್ದಲ್ಲಿ ಅದರಲ್ಲಿ ಹರಿಜನ ಗಿರಿಜನ ಮಕ್ಕಳಿಗೆ ಕಡೆಯ ಪಕ್ಷ ಹದಿನೆಂಟರ ಮೀಸಲಾತಿಯ ಸವಲತ್ತಿನ, ಸೀಟುಗಳನ್ನಾದರೂ ಡೊನೇಷನ್ ಇಲ್ಲದೆ ಕೊಡುವಂತೆ ಆದೇಶ ಮಾಡಲಾಗುವುದೇ?

ಈ) ಹರಿಜನ - ಗಿರಿಜನರಿಗೆ ಇದರಲ್ಲಿ ಮೀಸಲಾತಿ ಇಲ್ಲದೆ ಇದ್ದಲ್ಲಿ ಸರ್ಕಾರವೇ ಹರಿಜನ-ಗಿರಿಜನರ ಮಕ್ಕಳಿಗೆ ಮೀಸಲಾತಿಯನ್ನು ಮೋಸ ಮಾಡಿದಂತೆ ಆಗುವುದಿಲ್ಲವೇ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಆರೋಗ್ಯ ಇಲಾಖೆಯ ಭಾರತೀಯ ವೈದ್ಯ ಪದ್ಧತಿ ಬಗ್ಗೆ

2940 - ಶ್ರೀ ಎಸ್. ರುದ್ರಪ್ಪ (ತುರುವೇಕೆರೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಔಷಧಾಲಯಗಳು ಮತ್ತು ಆಸ್ಪತ್ರೆಗಳು ಎಷ್ಟು ಇವೆ:-

ಆ) ಅಸ್ತಿತ್ವದಲ್ಲಿರುವ ಈ ಆಸ್ಪತ್ರೆಗಳಿಗೆ ಸಂಬಂಧಿಸಿದ ವಿದ್ಯಾರ್ಹತೆ ಇರುವ ವೈದ್ಯರುಗಳನ್ನು ನೇಮಿಸಲಾಗಿದೆಯೇ? ಹಾಗೂ ಇಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು?

ಇ) ಬೆಂಗಳೂರಿನ ಎಸ್.ಜೆ.ಐ.ಎಂ. ನಲ್ಲಿ ಈ ಪದ್ಧತಿಯ ವಿಭಾಗ ಇರುವುದು ನಿಜವೆ?

ಈ) ಹಾಗಿದ್ದಲ್ಲಿ ಅಲ್ಲಿರುವ ವೈದ್ಯರು ಯಾರು? ಮತ್ತು ಎಷ್ಟು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ?

ಉ) ಈ ವಿಭಾಗವನ್ನು ನೋಡಿಕೊಳ್ಳಲು ಬೆಂಗಳೂರಿನಲ್ಲಿ ಬೇರೆ ಯಾವುದೇ ಅರ್ಹ ವೈದ್ಯರಿಲ್ಲವೆ? (ಹಾಗಿದ್ದಲ್ಲಿ ಅವರುಗಳ ಪದನಾಮ ಮತ್ತು ನಿರ್ವಹಿಸುತ್ತಿರುವ ಕರ್ತವ್ಯಗಳನ್ನು ತಿಳಿಸುವುದು)

ಊ) ಈ ಪದ್ಧತಿಯನ್ನು ರಾಜ್ಯದ ಇತರೆ ವಿಭಾಗಗಳಲ್ಲಿ ಪ್ರಚಾರಗೊಳಿಸಲು ಉದ್ದೇಶಿಸಲಾಗಿದೆಯೇ?

ಋ) ಹಾಗಿದ್ದಲ್ಲಿ ಬೆಂಗಳೂರಿನಲ್ಲಿಯ ಯೋಗ್ಯ ವೈದ್ಯರುಗಳನ್ನು ಬಳ್ಳಾರಿ ಆಸ್ಪತ್ರೆಗೆ ವರ್ಗಾಯಿಸಿ, ನೇಮಿಸುವುದರಲ್ಲಿ ಸರ್ಕಾರಕ್ಕಿರುವ ತೊಂದರೆಯೇನು?

ಋ) ಇದಕ್ಕೆ ಯಾರ ಬೆಂಬಲವಿದೆ? ಇಲ್ಲದಿದ್ದಲ್ಲಿ ಪ್ರಸ್ತುತ ಸಾಲಿನಲ್ಲಿ ವರ್ಗಾವಣೆ ಮಾಡಲಾಗುವುದೇ?

ಎ) ಇವರು ಪ್ರಸ್ತುತ ವರ್ಗಾವಣೆ ನಿಯಮದ ಪ್ರಕಾರ ಬೆಂಗಳೂರಿನಲ್ಲಿ ಎರಡು ವರ್ಷಗಳಿಗಿಂದ ಹೆಚ್ಚಿಗೆ ಇರುವುದರಿಂದ ಇವರು ವರ್ಗಾವಣೆಗೆ ಅರ್ಹರಲ್ಲವೆ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಪ್ರಕೃತಿ ಚಿಕಿತ್ಸೆ ಔಷಧಾಲಯಗಳು - 5

ಪ್ರಕೃತಿ ಚಿಕಿತ್ಸೆ ಆಸ್ಪತ್ರೆ - 1

ಆ) ಹೌದು. 4 ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಡಿಪ್ಲೊಮೊ ಹೊಂದಿರುವ ಅಭ್ಯರ್ಥಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಇನ್ನುಳಿದ 4 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಇ) ಹೌದು.

ಈ) ಡಾ: ರಾಮರಾವ್. ದಿನಾಂಕ 4-2-80 ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ.

ಉ) ಇಲ್ಲ.

ಊ) ಹೌದು.

ಋ) ಇವರನ್ನು ವರ್ಗಾವಣೆ ಮಾಡಬಹುದಾದರೂ ಇವರ ಜಾಗಕ್ಕೆ ಯೋಗ್ಯ ವೈದ್ಯರಿಲ್ಲದ ಕಾರಣ ಮಾಡಿರುವುದಿಲ್ಲ. ಅಲ್ಲದೆ ಈಗ ನಡೆಯುತ್ತಿರುವ ಯೋಗ ಶಿಬಿರಗಳನ್ನು ನಿಲ್ಲಿಸಬೇಕಾಗುತ್ತದೆ. ಮತ್ತು ಆಸ್ಪತ್ರೆಯ ಯೋಗ ವಿಭಾಗಕ್ಕೆ ವೈದ್ಯರಿಲ್ಲದೆ ಇರಬೇಕಾಗುತ್ತದೆ.

ಋ) ಮೇಲೆ ಹೇಳಿದ ಕಾರಣಗಳಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಎ) ಹೌದು. ಆದರೆ ಪ್ರಶ್ನೆ (ಋ) ಉತ್ತರದಲ್ಲಿ ಹೇಳಿರುವ ಕಾರಣಗಳಿಂದ ಇವರನ್ನು ಬೆಂಗಳೂರಿನಲ್ಲಿಯೇ ಉಳಿಸಿಕೊಳ್ಳಲಾಗಿದೆ.

ಆಸ್ಪತ್ರೆಯ ಅಭಿವೃದ್ಧಿಯ ಬಗ್ಗೆ

2894 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಬೆಂಗಳೂರು ನಗರದಲ್ಲಿರುವ ಹೃದ್ರೋಗ ಆಸ್ಪತ್ರೆಯ ಅಭಿವೃದ್ಧಿಗಾಗಿ ಧನಸಹಾಯ ನೀಡುತ್ತಿದೆಯೆ?

ಆ) ಅವರಿಂದ ಇನ್ನೂ ಹೆಚ್ಚಿನ ಸಹಾಯಧನಕ್ಕಾಗಿ ಸರ್ಕಾರಕ್ಕೆ ಮನವಿಯೇನಾದರೂ ಮಾಡಲಾಗಿದೆಯೆ?

ಇ) ಈ ಸದರಿ ಆಸ್ಪತ್ರೆಗೆ ಅನೇಕ ಉಪಕರಣಗಳು ಬೇಕಾಗಿರುವುದರಿಂದ, ಈ ಬೇಡಿಕೆ ಈಡೇರಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು.

ಆ) ಹೌದು.

ಇ) ಕೆಲವು ಅವಶ್ಯಕ ಅತ್ಯಾಧುನಿಕ ಉಪಕರಣಗಳ ಅವಶ್ಯಕತೆಯನ್ನು ಮನಗಂಡು ಸರ್ಕಾರವು ಹೆಚ್ಚು ಅನುದಾನವನ್ನು 1991-92 ರ ಸಾಲಿನಲ್ಲಿ ಬಿಡುಗಡೆ ಮಾಡಿದೆ.

ರಾಜ್ಯದಲ್ಲಿರುವ ಕೈಗಾರಿಕೆಗಳ ಬಗ್ಗೆ

2912 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಮುಲ್ಕಿಯ ಕೈಗಾರಿಕಾ ಎಸ್ಟೇಟಿನಲ್ಲಿ ಈಗ ಎಷ್ಟು ಕೈಗಾರಿಕೆಗಳು ಆರಂಭವಾಗಿವೆ?

ಆ) ಈ ಎಸ್ಟೇಟಿನಲ್ಲಿ ಹೆಚ್ಚಿನ ಕೈಗಾರಿಕೆಗಳು ಆರಂಭವಾಗದಿರಲು ಕಾರಣವೇನು?

ಇ) ಹಳ್ಳಿ ವಲಯದ ವಿಶೇಷ ಸೌಲಭ್ಯವನ್ನು ಈ ಕೈಗಾರಿಕಾ ಕೇಂದ್ರಕ್ಕೆ ಕೊಟ್ಟಲ್ಲಿ ಇದು ಅಭಿವೃದ್ಧಿ ಹೊಂದುವುದೆಂದು ಬಂದ ಮನವಿಗೆ ಸರಕಾರ ಏನು ಕ್ರಮ ಕೈಗೊಂಡಿದೆ.

ಈ) ಈ ಕೇಂದ್ರದ ಅಭಿವೃದ್ಧಿಗೆ ಸರಕಾರ ಏನು ಯೋಜನೆ ರೂಪಿಸಿದೆ?

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು)

ಅ) ಇರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಸಣ್ಣ ಉದ್ದಿಮೆದಾರರಿಂದ ಮಳಿಗೆಗಳಿಗಾಗಿ ಬೇಡಿಕೆ ಬಂದಲ್ಲಿ ಕೈಗಾರಿಕಾ ವಸಾಹತುವನ್ನು ಸ್ಥಾಪಿಸಲು ಪರಿಗಣಿಸಲಾಗುವುದು.

ಜಾತಿ ಪ್ರಮಾಣ ಪತ್ರ

2959 - ಶ್ರೀ ಎನ್.ಜಿ. ನಾಯಕ್ (ಮೊಳಕಾಲ್ಮೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಯಕ, ನಾಯ್ಕ, ಬೇಡ, ವಾಲ್ಮೀಕಿ ಪರಿವಾರ ಈ ಉಪ ಪಂಗಡಗಳಿಗೆ ವಿದ್ಯಾರ್ಥಿಗಳಿಗೆ ಜಾತಿಯ ಸರ್ಟಿಫಿಕೇಟ್ ಕೆಲಸಕ್ಕೆ ಕೊಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ನಾಯಕ, ನಾಯ್ಕ, ಬೇಡ, ವಾಲ್ಮೀಕಿ ಪರಿವಾರ ಉಪ-ಪಂಗಡಗಳನ್ನು ಕೇಂದ್ರ ಸರ್ಕಾರ ಪರಿಶಿಷ್ಟ ವರ್ಗಕ್ಕೆ ಸೇರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸರ್ಕಾರದ ಕೆಲಸಕ್ಕಾಗಿ ವಿದ್ಯಾರ್ಥಿಗಳಿಗೆ ಪರಿಶಿಷ್ಟ ವರ್ಗದ ಜಾತಿ ಸರ್ಟಿಫಿಕೇಟ್‌ಗಳನ್ನು ಕೊಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಇದುವರೆಗೂ ರಾಜ್ಯ ಸರ್ಕಾರ ಆದೇಶ ಹೊರಡಿಸದೇ ಇರುವುದು ಕಾರಣವೇನು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) ಇಲ್ಲ.

ಆ) ನಾಯಕ, ನಾಯ್ಕ, ಬೇಡ, ವಾಲ್ಮೀಕಿ ಪಂಗಡಗಳನ್ನು ಕೇಂದ್ರ ಸರ್ಕಾರ ಪರಿಶಿಷ್ಟ ವರ್ಗವಾಗಿ ಪರಿಗಣಿಸಿರುವುದು ನಿಜ. ಆದರೆ ಪರಿವಾರ ಪಂಗಡವನ್ನು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಸೇರಿಸಿರುವುದಿಲ್ಲ.

ಇ) ಇಲ್ಲ.

ಈ) ನಾಯ್ಕ, ನಾಯಕ, ಬೇಡ, ಬೇಡರ್ ಮತ್ತು ವಾಲ್ಮೀಕಿ ಈ ಜನಾಂಗಗಳನ್ನು ಪರಿಶಿಷ್ಟ ವರ್ಗವೆಂದು ಪರಿಗಣಿಸಿ ಕೇಂದ್ರ ಸರ್ಕಾರ ಹೊರಡಿಸಿದ ಸುಗ್ರೀವಾಜ್ಞೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿ: 9-5-91 ರಂದು ಪ್ರಕಟಿಸಲಾಗಿದೆ ಮತ್ತು ಇದರ ಬಗ್ಗೆ ಸಂಖ್ಯೆ: ಎಸ್‌ಡಬ್ಲ್ಯೂಎಲ್ 104 ಎಸ್‌ಎಡಿ 91 ದಿನಾಂಕ: 28-6-91ರಲ್ಲಿ ಸೂಕ್ತ ಸುತ್ತೋಲೆಯನ್ನು ಸಹ ಹೊರಡಿಸಲಾಗಿದೆ.

ನಿರುದ್ಯೋಗಿ ಪದವೀಧರರ ಬಗ್ಗೆ

2925 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಕಾರ್ಮಿಕ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೇ:-

ಅ) ಕರ್ನಾಟಕದ 'ನಿರುದ್ಯೋಗಿ' ಪದವೀಧರರ ಸಂಖ್ಯೆ ಎಷ್ಟು?

ಆ) ಈ ನಿರುದ್ಯೋಗಿ ಪದವೀಧರರಿಗೆ ಉದ್ಯೋಗ ಸಿಗುವವರೆಗೆ ನಿರುದ್ಯೋಗಿ ಭತ್ಯೆವು ಕೊಡುವ ಬಗ್ಗೆ ಸರ್ಕಾರ ಗಮನ ಹರಿಸುವುದೆ?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು)

ಅ) 1991ರ ಜೂನ್ ಅಂತ್ಯಕ್ಕೆ 1,24,750.

ಆ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್ ಒದಗಿಸುವ ಬಗ್ಗೆ.

2926 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಸಣ್ಣ ಕೈಗಾರಿಕೆ ಪ್ರಾರಂಭಿಸಲು ಈಗಾಗಲೇ ಅನೇಕ ಕೈಗಾರಿಕೋದ್ಯಮಿಗಳು ಕೆ.ಎಸ್.ಎಫ್.ಸಿ. ಹಾಗೂ ಬ್ಯಾಂಕ್‌ಗಳಿಂದ ಸಾಲ ಪಡೆದು ಇಡೀ ಘಟಕ ತಯಾರಾಗಿದ್ದರೂ ಸಹ ಸರ್ಕಾರ ಈ ಘಟಕಗಳಿಗೆ ವಿದ್ಯುತ್ ಒದಗಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ವಿದ್ಯುತ್ ಇಲ್ಲದೆ ತಯಾರಿಯಾಗದ ಕೇವಲ ಬಡ್ಡಿ ಮಾತ್ರ ಕಟ್ಟುತ್ತಿರುವ ಸಣ್ಣ ಕೈಗಾರಿಕೋದ್ಯಮಿಗಳ ನೆರವಿಗೆ ಸರ್ಕಾರ ಬರುವುದೇ?

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು)

ಅ) ಹೌದು.

ಆ) ಹೌದು. ಎಲ್ಲಾ ಪ್ರಕರಣಗಳಲ್ಲಿ ವಿದ್ಯುತ್ತೀಕರಣವನ್ನು ಮಾಡಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯೊಂದಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆ.

ತುಮಕೂರು ಜಿಲ್ಲೆ ಆಸ್ಪತ್ರೆಯನ್ನು ಆಧುನೀಕರಣಗೊಳಿಸುವುದು

2920 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ತುಮಕೂರು ಜಿಲ್ಲಾ ಆಸ್ಪತ್ರೆಯನ್ನು ಆಧುನೀಕರಣಗೊಳಿಸಲು 1991-92ನೇ ಸಾಲಿನಲ್ಲಿ ಸರ್ಕಾರ ಹಣವನ್ನು ಬಿಡುಗಡೆ ಮಾಡಿದೆಯೇ?

ಆ) ಹಾಗಿಲ್ಲದಿದ್ದಲ್ಲಿ ತುಮಕೂರು ಆಸ್ಪತ್ರೆಯನ್ನು ಆಧುನೀಕರಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕೋಲಾರ ಜಿಲ್ಲೆಯ ಬಂಗಾರುಪೇಟೆ ಕಂಬೈಂಡ್ ಆಸ್ಪತ್ರೆಯಲ್ಲಿ ಕ್ಷ-ಕಿರಣ ಯಂತ್ರಗಳ ಬಗ್ಗೆ.

2946 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಕೋಲಾರ ಜಿಲ್ಲೆಯ ಬಂಗಾರುಪೇಟೆ ಕಂಬೈಂಡ್ ಆಸ್ಪತ್ರೆಯಲ್ಲಿ ಕ್ಷ - ಕಿರಣ ಯಂತ್ರ ಇದೆಯೇ?

ಆ) ಇಲ್ಲದೇ ಇದ್ದ ಪಕ್ಷದಲ್ಲಿ ಸರ್ಕಾರವು ಕೋಲಾರ ಜಿಲ್ಲೆಯ ಬಂಗಾರುಪೇಟೆ ಕಂಬೈಂಡ್ ಆಸ್ಪತ್ರೆಗೆ ಕ್ಷ-ಕಿರಣ ಯಂತ್ರವನ್ನು ಒದಗಿಸಲು ಕ್ರಮ ತೆಗೆದುಕೊಳ್ಳುವುದು?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇದೆ.

ಆ) ಉದ್ಭವಿಸುವುದಿಲ್ಲ.

ಹೊಸ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಬಂದ ಅರ್ಜಿಗಳ ಕುರಿತು.

2922 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಹೊಸ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಬಂದಿರುವ ಅರ್ಜಿಗಳೆಷ್ಟು:-

ಆ) ಯಾವ ಸ್ಥಳದಲ್ಲಿ ವೈದ್ಯಕೀಯ ಕಾಲೇಜು ತೆರೆಯಲು ಅರ್ಜಿದಾರರು ಇಚ್ಛಿಸಿರುತ್ತಾರೆ?

ಇ) ಕೆಲವು ಸಂಸ್ಥೆಗಳ ವ್ಯಕ್ತಿಗತವಾದ ಅರ್ಜಿಗಳನ್ನು ಪರಿಗಣಿಸುವಂತೆ ವರಿಷ್ಠ ನ್ಯಾಯಾಲಯ ಅಥವಾ ಉಚ್ಛ ನ್ಯಾಯಾಲಯದಿಂದ ಏನಾದರೂ ನಿರ್ದೇಶನವು ಇದೆಯೇ?

ಈ) ಹಾಗಿದ್ದಲ್ಲಿ ಅಂತಹ ಸಂಸ್ಥೆಗಳ ವ್ಯಕ್ತಿಗತಗಳ ಹೆಸರುಗಳೇನು?

ಉ) 1991-92ನೇ ಸಾಲಿನಲ್ಲಿ ರಾಜ್ಯದಲ್ಲಿ ಯಾವುದಾದರೂ ಖಾಸಗಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸುವ ಪ್ರಸ್ತಾಪವಿದೆಯೇ?

ಊ) ಹಾಗಿದ್ದಲ್ಲಿ ಸ್ವೀಕರಿಸುವ ಅರ್ಜಿಗಳಿಗೆ ಸಂಬಂಧಿಸಿದಂತೆ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) 22

ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಹೌದು.

ಈ) ಶ್ರೀ ಜಗದ್ಗುರು ಮುರುಘರಾಜೇಂದ್ರ ವಿದ್ಯಾಪೀಠ, ಚಿತ್ರದುರ್ಗ.

೨) ಸಿದ್ದಗಂಗಾ ಎಜುಕೇಷನ್ ಸೊಸೈಟಿ, ತುಮಕೂರು.

೩) ಅಕಾಡೆಮಿ ಆಫ್ ಲಿಬರಲ್ ಎಜುಕೇಷನ್, ಸುಳ್ಯ, ಡಿ.ಕೆ.

೪) ಅಲ್ ಮಹಮದ್ ಸೊಸೈಟಿ, ಭದ್ರಾವತಿ.

ಊ) ಉದ್ಭವಿಸುವುದಿಲ್ಲ.

2922ರ ಅನುಬಂಧ

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು
೧.	ಶ್ರೀ ಜಗದ್ಗುರು ಮುರುಘರಾಜೇಂದ್ರ ವಿದ್ಯಾಪೀಠ, ಚಿತ್ರದುರ್ಗ
೨	ಸಿದ್ಧಗಂಗಾ ಎಜುಕೇಷನ್ ಸೊಸೈಟಿ, ತುಮಕೂರು
೩.	ಆಲ್ ಮಹಮದ್ ಸೊಸೈಟಿ, ಭದ್ರಾವತಿ
೪.	ಅಕಾಡೆಮಿ ಆಫ್ ಲಿಬರಲ್ ಎಜುಕೇಷನ್, ಸುಳ್ಯ, ಡಿ.ಕೆ.
೫.	ಶರಬೇಶ್ವರ ವಿದ್ಯಾಪೀಠ, ಬಳ್ಳಾರಿ
೬.	ನಿಟ್ಟೆ ಎಜುಕೇಷನ್ ಟ್ರಸ್ಟ್, ಕಾರ್ಕಳ, ಡಿ.ಕೆ.
೭.	ಕರ್ನಾಟಕ ಲಾ ಸೊಸೈಟಿ, ಬೆಳಗಾಂ
೮.	ಮಲೆನಾಡು ಮೆಡಿಕಲ್ ಕಾಲೇಜು (ಬಿ.ಆರ್. ಅಂಬೇಡ್ಕರ್ ಮಿಷನ್) ಶಿವಮೊಗ್ಗ
೯.	ರಾಷ್ಟ್ರೀಯ ಶಿಕ್ಷಣ ಸಮಿತಿ, ಶಿವಮೊಗ್ಗ
೧೦.	ಫಾದರ್ ಮುಲ್ಲರ್ ಇನ್ಸಟಿಟ್ಯೂಟ್, ಕಂಕನಾಡಿ, ಮಂಗಳೂರು
೧೧.	ಸಹ್ಯಾದ್ರಿ ಎಜುಕೇಷನ್ ಟ್ರಸ್ಟ್, ಕಂಕನಾಡಿ, ಶಿವಮೊಗ್ಗ
೧೨.	ಶ್ರೀ ವೀಣಾಶಾರದ ಎಜುಕೇಷನ್ ಸೊಸೈಟಿ, ಹಾಸನ
೧೩.	ತಾರನಾಥ ಶಿಕ್ಷಣ ಸಂಸ್ಥೆ, ರಾಯಚೂರು
೧೪.	ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ, ಬೀದರ್
೧೫.	ಖಾಜಾ ಶಿಕ್ಷಣ ಸಂಸ್ಥೆ, ಗುಲ್ಬರ್ಗಾ
೧೬.	ಆಲ್ ಮಹಮದ್ ವಿದ್ಯಸಂಸ್ಥೆ, ಶಿವಮೊಗ
೧೭.	ಶರಭೇಶ್ವರಿ ವಿದ್ಯಾಪೀಠ, ಬಂಡಿಪೋಟ್, ಬಳ್ಳಾರಿ
೧೮.	ನಾನಕಜೀರ್ ಫೌಂಡೇಷನ್, ಬೀದರ್
೧೯.	ಜಗದ್ಗುರು ಮೂರುಸಾವಿರದ ಮಠ, ಕೆ.ಜಿ. ಸಹಕಾರ ಸಂಘ ರೂರಲ್ ಮೆಡಿಕಲ್ ಕಾಲೇಜು ಹುಬ್ಬಳ್ಳಿ
೨೦.	ಶ್ರೀ ವೀಣಾಶಾರಧ ಎಜುಕೇಷನ್ ಸೊಸೈಟಿ, ಶಿವಮೊಗ್ಗ
೨೧.	ಚಾಮುಂಡಿ ಮೆಡಿಕಲ್ ಫೌಂಡೇಷನ್, ಬೆಂಗಳೂರು
೨೨.	ಕರ್ನಾಟಕ ಪೀಪಲ್ ಎಜುಕೇಷನ್ ಸೊಸೈಟಿ, ಗುಲ್ಬರ್ಗಾ.

ಹೊಸ ವೈದ್ಯಕೀಯ ದಂತ ಕಾಲೇಜುಗಳಿಗೆ ಮಂಜೂರಾತಿ.

2951 - ಶ್ರೀ ಪ್ರಭಾಕರ.ಎಸ್. ರಾಣೆ (ಕಾರವಾರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ರಾಜ್ಯದಲ್ಲಿ ಹೊಸ ವೈದ್ಯಕೀಯ ದಂತ ಕಾಲೇಜುಗಳಿಗೆ ಮಂಜೂರಾತಿಗಾಗಿ ಸರ್ಕಾರದ ಮುಂದೆ ಏನಾದರೂ ಪ್ರಸ್ತಾವನೆ ಇದೆಯೇ?

ಆ) ಹಾಗಿದ್ದಲ್ಲಿ ಮೇಲಿನ ಕಾಲೇಜನ್ನು ಪ್ರಾರಂಭಿಸುವ ಉದ್ದೇಶಕ್ಕಾಗಿ ಅರ್ಜಿಯನ್ನು ಸಲ್ಲಿಸಿರುವ ಸಂಸ್ಥೆ ವ್ಯಕ್ತಿಗಳ ಹೆಸರುಗಳೇನು?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು

ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

2951ರ ಅನುಬಂಧ

ಕ್ರಮ
ಸಂಖ್ಯೆ ಸಂಸ್ಥೆಯ ಹೆಸರು ವೈದ್ಯಕೀಯ ಕಾಲೇಜುಗಳು

೧.ಶ್ರೀ ಜಗದ್ಗುರು ಮುರುಘರಾಜೇಂದ್ರ ವಿದ್ಯಾಪೀಠ, ಚಿತ್ರದುರ್ಗ
೨.ಸಿದ್ಧಗಂಗಾ ಎಜುಕೇಷನ್ ಸೊಸೈಟಿ, ತುಮಕೂರು
೩.ಅಲ್ ಮಹಮದ್ ಸೊಸೈಟಿ, ಭದ್ರಾವತಿ
೪.ಅಕಾಡೆಮಿ ಆಫ್ ಲಿಬರಲ್ ಎಜುಕೇಷನ್, ಸುಳ್ಯ, ಡಿ.ಕ.
೫.ಶರಬೇಶ್ವರ ವಿದ್ಯಾಪೀಠ, ಬಳ್ಳಾರಿ
೬.ನಿಟ್ಟೆ ಎಜುಕೇಷನ್ ಟ್ರಸ್ಟ್, ಕಾರ್ಕಳ, ಡಿ.ಕ.
೭.ಕರ್ನಾಟಕ ಲಾ ಸೊಸೈಟಿ, ಬೆಳಗಾಂ
೮.ಮಲೆನಾಡು ಮೆಡಿಕಲ್ ಕಾಲೇಜು (ಬಿ.ಆರ್. ಅಂಬೇಡ್ಕರ್ ಮಿಷನ್) ಶಿವಮೊಗ್ಗ
೯.ರಾಷ್ಟ್ರೀಯ ಶಿಕ್ಷಣ ಸಮಿತಿ, ಶಿವಮೊಗ್ಗ
೧೦.ಫಾದರ್‌ಮುಲ್ಲರ್ ಇನ್‌ಸ್ಟಿಟ್ಯೂಟ್, ಕಂಕನಾಡಿ, ಮಂಗಳೂರು
೧೧.ಸಹ್ಯಾದ್ರಿ ಎಜುಕೇಷನ್ ಟ್ರಸ್ಟ್, ಶಿವಮೊಗ್ಗ
೧೨.ಶ್ರೀ ವೀಣಾಶಾರದ ಎಜುಕೇಷನ್ ಸೊಸೈಟಿ, ಹಾಸನ
೧೩.ತಾರನಾಥ ಶಿಕ್ಷಣ ಸಂಸ್ಥೆ, ರಾಯಚೂರು
೧೪.ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ, ಬೀದರ್
೧೫.ಖಾಜಾ ಶಿಕ್ಷಣ ಸಂಸ್ಥೆ, ಗುಲ್ಬರ್ಗಾ
೧೬.ಅಲ್ ಮಹಮದ್ ವಿದ್ಯಸಂಸ್ಥೆ, ಶಿವಮೊಗ್ಗ
೧೭.ಶರಭೇಶ್ವರಿ ವಿದ್ಯಾಪೀಠ, ಬಂಡಿಪೋಟ್, ಬಳ್ಳಾರಿ
೧೮.ನಾನಕಜೀರ್ ಫೌಂಡೇಷನ್, ಬೀದರ್
೧೯.ಜಗದ್ಗುರು ಮೂರುಸಾವಿರದ ಮಠ, ಜೆ.ಜಿ. ಸಹಕಾರ ಸಂಘ ರೂರಲ್ ಡಿಕಲ್ ಕಾಲೇಜು ಹುಬ್ಬಳ್ಳಿ
೨೦.ಶ್ರೀ ವೀಣಾಶಾರದ ಎಜುಕೇಷನ್ ಸೊಸೈಟಿ, ಶಿವಮೊಗ್ಗ
೨೧.ಚಾಮುಂಡಿ ಮೆಡಿಕಲ್ ಫೌಂಡೇಷನ್, ಬೆಂಗಳೂರು
೨೨.ಕರ್ನಾಟಕ ಪೀಪಲ್ ಎಜುಕೇಷನ್ ಸೊಸೈಟಿ, ಗುಲ್ಬರ್ಗಾ.

ಂತ ಕಾಲೇಜುಗಳು

೧.ಅಕಾಡೆಮಿ ಆಫ್ ಲಿಬರಲ್ ವಿದ್ಯಾಸಂಸ್ಥೆ, ಕುರಂಜಿಬಾಗ್, ಸುಳ್ಯ
೨.ಆರ್.ಆರ್.ಕೆ. ಸಮಿತಿ, ಬೀದರ್
೩.ಶಿವಾಜಿ ಎಜುಕೇಷನ್ ಸೊಸೈಟಿ, ಕಾರವಾರ
೪.ಅಕಾಡೆಮಿ ಆಫ್ ಲಿಬರಲ್ ಎಜುಕೇಷನ್, ರಾಯಚೂರು
೫.ಸೋಮನಾಥ ಶಿಕ್ಷಣ ಸಂಸ್ಥೆ, ಬೀದರ್

೭.ಮರಾಠ ಮಂಡಲ್, ಬೆಳಗಾಂ

೭.ಪಿ.ಸಿ. ದಂತ ಕಾಲೇಜು ಮತ್ತು ಆಸ್ಪತ್ರೆ, ಹೊಸಕೋಟೆ

೮.ಅಲ್ ಅಮೀನ್ ಚಾರಿಟಬಲ್ ಫಂಡ್ ಟ್ರಸ್ಟ್, ಬಿಜಾಪುರ

೯.ಮಹಾತ್ಮಗಾಂಧಿ ವಿದ್ಯಾಪೀಠ ಟ್ರಸ್ಟ್, ಬೆಂಗಳೂರು

೧೦.ಎಸ್.ಜೆ.ಆರ್. ಟೆಕ್ನಿಕಲ್ ಮತ್ತು ಎಜುಕೇಷನ್ ಸೊಸೈಟಿ, ಬೆಂಗಳೂರು

೧೧.ಎಂ. ವಿಶ್ವೇಶ್ವರಯ್ಯ ಎಜುಕೇಷನ್ ಟ್ರಸ್ಟ್, ಬೆಂಗಳೂರು

೧೨.ಗೋಕುಲ ಎಜುಕೇಷನ್ ಫೌಂಡೇಷನ್, ಬೆಂಗಳೂರು

೧೩.ಕೆ.ಎಲ್.ಇ. ದಂತ ಕಾಲೇಜು, ಬೆಳಗಾಂ (ಹೆಣ್ಣು ಮಕ್ಕಳಿಗೆ)

ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಇಂಚಾಲಾ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆ.

2936 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಇಂಚಾಲ್ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪನೆ ಮಾಡಲು ತತ್ವಶ: ಸರ್ಕಾರವು ಒಪ್ಪಿಕೊಂಡಿರುತ್ತದೆಯೇ?

ಆ) ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲು ಪ್ರಸ್ತಾವನೆಯಲ್ಲಿ ಇಂಚಾಲಾ ಗ್ರಾಮವನ್ನು ಸಹ ಸೇರಿಸಿ ಕಳುಹಿಸಲು ಬೆಳಗಾಂ ಜಿಲ್ಲಾ ಪರಿಷತ್ತಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳು ನಿರ್ದೇಶನ ನೀಡಿದ್ದಾರೆಯೇ?

ಇ) ಹಾಗಿದ್ದಲ್ಲಿ ಇಂಚಾಲಾ ಗ್ರಾಮವನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡುವ ಪ್ರಸ್ತಾವನೆಯ ಪಟ್ಟಿಯಲ್ಲಿ ಸೇರಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯದರ್ಶಿಯವರ ನಿರ್ದೇಶನದಂತೆ ಸರ್ಕಾರಕ್ಕೆ ಕಳುಹಿಸಿದ್ದಾರೆಯೇ?

ಈ) ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕು ಇಂಚಾಲಾ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲು ಸರ್ಕಾರವು ತೆಗೆದುಕೊಂಡ ಕ್ರಮವೇನು?

ಉ) ಇದಕ್ಕಾಗಿ ರೂ.೨೫,೦೦೦-೦೦ ಗಳನ್ನು ಹಾಗೂ ೪ ಎಕರೆ ಜಮೀನನ್ನು ಪುಕ್ಕಟೆಯಾಗಿ ಸಾರ್ವಜನಿಕರು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಹಾಗಿದ್ದಲ್ಲಿ ಇಂಚಾಲಾ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲು ಸರ್ಕಾರವು ತೆಗೆದುಕೊಂಡ ಕ್ರಮವೇನು?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು

ಆ) ಹೌದು

ಇ) ಹೆಚ್ಚುವರಿ ಪಟ್ಟಿಯಲ್ಲಿ ಸೇರಿಸಿ ಕಳುಹಿಸಿದ್ದಾರೆ.

ಈ) ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಇನ್ನು ಮಂಜೂರು ಮಾಡಬೇಕಾಗಿದೆ.

ಉ) ಹೌದು

ಊ) ೧೯೯೧-೯೨ನೇ ಸಾಲಿನಲ್ಲಿ ಇಂಜಾಲಾ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲು ಪರಿಶೀಲಿಸಲಾಗುವುದು.

ಬಂಗಾರಪೇಟೆ ತಾಲ್ಲೂಕು ಬೇತಮಂಗಲ ಕಂಬೈಂಡ್ ಆಸ್ಪತ್ರೆ ತೆರೆಯುವುದು.

2917 - ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕು ಬೇತಮಂಗಲದಲ್ಲಿ ಕಂಬೈಂಡ್ ಆಸ್ಪತ್ರೆಯನ್ನು ತೆರೆಯಲು ಸರ್ಕಾರದಲ್ಲಿ ಪ್ರಸ್ತಾವನೆ ಇದೆಯೇ?

ಆ) ಇಲ್ಲದಿದ್ದಲ್ಲಿ, ಸರ್ಕಾರವು ಹೆಚ್ಚಿನ ರೋಗಿಗಳಿಗೆ ಸಹಾಯವಾಗುವಂತೆ ಪ್ರಸ್ತಾವಿತ ಆಸ್ಪತ್ರೆಯನ್ನು ತೆರೆಯುವ ಉದ್ದೇಶವಿದೆಯೇ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಮನವಿಯು ಬಂದಿರುತ್ತದೆ.

ಆ) ಮನವಿಯನ್ನು ಕೋಲಾರ ಜಿಲ್ಲಾ ಪರಿಷತ್‌ನೊಡನೆ ಸಮಾಲೋಚನೆ ಮಾಡಿ ಪರಿಶೀಲಿಸಲಾಗುವುದು.

ಕರ್ನಾಟಕ ವಿಧಾನಸಭೆ

ಹಿಂದುಳಿದ ವರ್ಗಗಳ ಬಗ್ಗೆ ನ್ಯಾಯಮೂರ್ತಿ ಚಿನ್ನಪ್ಪರೆಡ್ಡಿ ಆಯೋಗವು ಮಾಡಿರುವ ಶಿಫಾರಸ್ಸಿನ ಬಗ್ಗೆ.

2418 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಹಿಂದುಳಿದ ವರ್ಗಗಳ ಬಗ್ಗೆ ನ್ಯಾಯಮೂರ್ತಿ ಓ. ಚಿನ್ನಪ್ಪರೆಡ್ಡಿ ಆಯೋಗವು ಮಾಡಿರುವ ಶಿಫಾರಸ್ಸುಗಳಲ್ಲಿ ಅನೇಕ ಹಿಂದುಳಿದ ವರ್ಗಗಳು ಬಿಟ್ಟು ಹೋಗಿರುವುದು ನಿಜವೇ?

ಆ) ಹಾಗಿದ್ದಲ್ಲಿ ಹಿಂದುಳಿದ ವರ್ಗಗಳಿಗೆ ನ್ಯಾಯ ದೊರಕಿಸಲು ಸರ್ಕಾರವು ನ್ಯಾಯಮೂರ್ತಿ ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಪರಿಶೀಲಿಸಲು ಎಲ್ಲಾ ವರ್ಗಗಳಿಗೆ ಸೂಕ್ತ ಪ್ರಾತಿನಿಧ್ಯವನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) ಹೌದು

ಆ) ನ್ಯಾಯಮೂರ್ತಿ ಓ. ಚಿನ್ನಪ್ಪರೆಡ್ಡಿಯವರ ಆಯೋಗದ ಶಿಫಾರಸ್ಸುಗಳನ್ನು ಪರಿಶೀಲಿಸಲು ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪ ಸಮಿತಿಯನ್ನು ಈಗಾಗಲೇ ರಚಿಸಿರುವುದರಿಂದ ಮತ್ತೊಂದು ಪರಿಶೀಲನಾ ಸಮಿತಿಯನ್ನು ರಚಿಸುವ ಅಗತ್ಯತೆ ಇರುವುದಿಲ್ಲ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಅಧ್ಯಕ್ಷರು : ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು, ಮಾನ್ಯ ಮುಖ್ಯಮಂತ್ರಿಗಳು ಈಗ ಕಾಗದಪತ್ರಗಳನ್ನು ಮಂಡಿಸಬೇಕು.

(ಯಾರೂ ಮಂಡಿಸಲಿಲ್ಲ)

ಅಧ್ಯಕ್ಷರು : ಈಗ ಶಿಕ್ಷಣ ಸಚಿವರು ಕಾಗದಪತ್ರಗಳನ್ನು ಮಂಡಿಸಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : (ಕಂದಾಯ ಮಂತ್ರಿಗಳು) ಮಾನ್ಯ ಅಧ್ಯಕ್ಷರೇ, ಮಾನ್ಯ ಶಿಕ್ಷಣ ಸಚಿವರ ಪರವಾಗಿ ಈ ಕೆಳಕಂಡ ಕಾಗದಪತ್ರಗಳನ್ನು ಸಭೆಗೆ ಮಂಡಿಸುತ್ತೇನೆ.

1975ನೇ ಇಸವಿಯ ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳು (ಶಿಸ್ತು ಮತ್ತು ನಿಯಂತ್ರಣ) ಅಧಿನಿಯಮದ 15(2)ನೇ ಕಲಮಿನ ಮೇರೆಗೆ

1978ರ ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ಶಿಸ್ತು ಮತ್ತು ನಿಯಂತ್ರಣ) ನಿಯಮಗಳನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು : ಈಗ ಗೃಹ ಮಂತ್ರಿಗಳು ಕಾಗದಪತ್ರಗಳನ್ನು ಮಂಡಿಸಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : (ವಿರೋಧ ಪಕ್ಷದ ನಾಯಕರು) ಮಾನ್ಯ ಮುಖ್ಯಮಂತ್ರಿಗಳ ಕಾಗದಪತ್ರಗಳನ್ನು ಮಂಡನೆ ಮಾಡುವುದಕ್ಕೆ ಯಾರೂ ಒಬ್ಬ ಮಂತ್ರಿಯೂ ಇಲ್ಲವೇ?

ಶ್ರೀ ಬಿ.ಹೆಚ್. ಬನ್ನಿಕೋಡ್ : ಮುಖ್ಯಮಂತ್ರಿಗಳ ಬಗ್ಗೆ ಯಾರಿಗೂ ಈ ಸದನದಲ್ಲಿ ಜವಾಬ್ದಾರಿ ಇಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : (ಕಂದಾಯ ಮಂತ್ರಿಗಳು) ಮಾನ್ಯ ಅಧ್ಯಕ್ಷರೇ, ಮಾನ್ಯ ಗೃಹ ಮಂತ್ರಿಗಳ ಪರವಾಗಿ ಈ ಕೆಳಕಂಡ ಕಾಗದಪತ್ರಗಳನ್ನು ಸಭೆಗೆ ಮಂಡಿಸುತ್ತೇನೆ.

1964ನೇ ಇಸವಿಯ ಕರ್ನಾಟಕ ಚಲನಚಿತ್ರ (ವಿನಿಮಯ) ಅಧಿನಿಯಮದ ೨೦ನೇ ಕಲಮಿನ ಮೇರೆಗೆ

ಅ) ರಾಯಚೂರು ಜಿಲ್ಲೆ ಎಂ:_ಎಸ್ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ ಇವರು ೩೫ ಎಂ.ಎಂ. ಚಲನಚಿತ್ರ ಪ್ರದರ್ಶಿಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ 17-9-91 ರಂದು ಹೊರಡಿಸಿದ ಆದೇಶ ಸಂಖ್ಯೆ ಹೆಚ್‌ಡಿ 210 ಸಿಎನ್‌ವಿ 91 ಹಾಗೂ

ಆ) ಪ್ರಸಿದ್ಧ ಬರಹಗಾರರು, ಚಿತ್ರಕಾರರು ಹಾಗೂ ಸಮಾಜ ಕಾರ್ಯಕರ್ತರ ಮೇಲೆ ತಯಾರಿಸಿದ ಸಾಕ್ಷ್ಯ ಚಿತ್ರಗಳನ್ನು ಪ್ರದರ್ಶಿಸಲು ಅನುಮತಿ ನೀಡುವುದಕ್ಕೆ ಸಂಬಂಧಿಸಿದಂತೆ ವಾರ್ತಾ ಮತ್ತು ಪ್ರಚಾರ ಇಲಾಖೆಯವರು ದಿನಾಂಕ 6-9-91 ರಂದು ಹೊರಡಿಸಿದ ಆದೇಶ ಸಂಖ್ಯೆ ಹೆಚ್‌ಡಿ 211 ಸಿಎನ್‌ವಿ 91ನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು : ಈಗ ಲೋಕೋಪಯೋಗಿ ಮಂತ್ರಿಗಳು ಸಭೆಯ ಮುಂದೆ ಕಾಗದಪತ್ರಗಳನ್ನು ಇಡಬೇಕು.

(ಯಾರೂ ಮಂಡಿಸಲಿಲ್ಲ)

ಅಧ್ಯಕ್ಷರು : ಈಗ ರೇಷ್ಮೆ ಖಾತೆ ರಾಜ್ಯ ಮಂತ್ರಿಗಳು ಕಾಗದಪತ್ರಗಳನ್ನು ಮಂಡಿಸುವುದು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : (ಕಂದಾಯ ಮಂತ್ರಿಗಳು) ಮಾನ್ಯ ಅಧ್ಯಕ್ಷರೇ, ಮಾನ್ಯ ರೇಷ್ಮೆ ಖಾತೆ ರಾಜ್ಯ ಸಚಿವರ ಪರವಾಗಿ ಈ ಕೆಳಕಂಡ ಕಾಗದಪತ್ರಗಳನ್ನು ಮಂಡಿಸುತ್ತೇನೆ.

1956ನೇ ಇಸವಿಯ ಕಂಪನಿ ಅಧಿನಿಯಮದ 619(ಎ) ಕಲಮಿನ ಮೇರೆಗೆ 1989-90ನೇ ಸಾಲಿನ ಕರ್ನಾಟಕ ರೇಷ್ಮೆ ಕೈಗಾರಿಕೆ ನಿಗಮ ನಿಯಮಿತದ ೧೧ನೇ ವಾರ್ಷಿಕ ವರದಿಯನ್ನು ಸಭೆಗೆ ಮಂಡಿಸುತ್ತೇನೆ.

ಅಧ್ಯಕ್ಷರು : ಈಗ ಅರ್ಜಿಗಳನ್ನು ಒಪ್ಪಿಸುವುದು. ಮಾನ್ಯ ಚೌಡರೆಡ್ಡಿಯವರು ಅರ್ಜಿಯನ್ನು ಒಪ್ಪಿಸಬೇಕು.

ಶ್ರೀ ವಾಟಾಳ್ ನಾಗರಾಜ್: ಯಾರು ಯಾರಿಗಾಗಿ ಕಾಗದಪತ್ರಗಳನ್ನು ಇಡುತ್ತಿದ್ದಾರೋ ಏನೇನು ಕಾಗದಪತ್ರಗಳನ್ನು ಇಡುತ್ತಿದ್ದಾರೋ ಗೊತ್ತಾಗುತ್ತಾ ಇಲ್ಲ, ಇಲ್ಲಿ ಏನು ನಡೆಯುತ್ತಿದೆ ಎಂದು ಗೊತ್ತಾಗುತ್ತಾ ಇಲ್ಲ. ವಿವರಗಳು ನಮಗೆ ಗೊತ್ತಾಗುತ್ತಾ ಇಲ್ಲ, ಇಲ್ಲಿ ಏನು ನಡೆಯುತ್ತಿದೆ?

ಶ್ರೀ ಬಿ.ಹೆಚ್. ಬನ್ನಿಕೋಡ್ : ನಾಲ್ಕಾರು ದಿವಸಗಳಿಂದ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳೇ ನಮಗೆ ಸಿಗುತ್ತಾ ಇಲ್ಲ, ಹೀಗಾದರೆ ಹೇಗೆ?

ವಿಷಯ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರ ಪತ್ನಿಯವರು ಜನಮನ ಶೀರ್ಷಿಕೆಯಲ್ಲಿ ಬರೆದಿರುವ ಪತ್ರದ ಬಗ್ಗೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಒಂದು ಪತ್ರವನ್ನು ಬರೆದಿದ್ದೇನೆ. ನನ್ನ ಪತ್ರದಲ್ಲಿ ಬರೆದಿರತಕ್ಕದ್ದು ಏನೆಂದರೆ, ಇವತ್ತಿನ ದಿವಸ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಒಂದು ವರದಿ ಬಂದಿದೆ. ಮಾನ್ಯ ಅಧ್ಯಕ್ಷರೇ, ಜನಮನ ಶೀರ್ಷಿಕೆಯಲ್ಲಿ ನನಗೂ ಆಮಂತ್ರಣ ಇತ್ತು ಎಂದು ಶ್ರೀಮತಿ ಶ್ರೀರಂಗಮ್ಮ ಎನ್ನುವವರು ಒಂದು ಪತ್ರವನ್ನು ಬರೆಯುತ್ತಾರೆ. ಅದು ತಮಗೂ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅನೇಕ ಜನ ಸದಸ್ಯರಿಗೆ ಇದು ಬಂದಿದೆ. ಇಲ್ಲಿ ಮೂಲತ: ಪ್ರಶ್ನೆ ಏನೆಂದರೆ ನಾವು ಸದನದಲ್ಲಿ ಯಾವ ರೀತಿ ಕೆಲಸ ಮಾಡಬೇಕು, ನಮಗೆ ಕೆಲಸ ಮಾಡತಕ್ಕ ನಡವಳಿಕೆಯನ್ನು ತಾವು ನಿರ್ದೇಶನ ಮಾಡುತ್ತೀರೋ ಅಥವಾ ಸದನದ ಹೊರಗಡೆ ಇರುವವರು ನಿರ್ದೇಶನ ಮಾಡುತ್ತಾರೋ ಅಥವಾ ಅಧಿಕಾರಿಗಳು ನಿರ್ದೇಶನ ಮಾಡುತ್ತಾರೋ, ಇದು ಬಹಳ ಮುಖ್ಯವಾದ ವಿಚಾರ. ಮಾನ್ಯ ಅಧ್ಯಕ್ಷರೇ, ಈ ಪತ್ರದಲ್ಲಿ ಏನಿದೆ ಎಂಬುದನ್ನು ದಾಖಲೆಗೆ ಹೋಗಬೇಕೆನ್ನುವ ದೃಷ್ಟಿಯಿಂದ ತಮ್ಮ ಅನುಮತಿ ಪಡೆದು ಓದುತ್ತಿದ್ದೇನೆ.

'ನನಗೂ ಆಮಂತ್ರಣ ಇತ್ತು'

ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಅಧ್ಯಕ್ಷರಾಗಿರುವ ನನ್ನ ಪತಿಯ (ಪಿ. ನರಸಿಂಹಮೂರ್ತಿ) ಜೊತೆಯಲ್ಲಿ ನಾನೂ ವಿದೇಶ ಪ್ರವಾಸ ಮಾಡಿದ ಬಗ್ಗೆ ಪ್ರತಿ ಪಕ್ಷ ನಾಯಕ ಡಿ.ಬಿ. ಚಂದ್ರೇಗೌಡರು ವಿಧಾನಸಭೆಯಲ್ಲಿ ಪ್ರಸ್ತಾಪಿಸಿರುವುದನ್ನು ಪತ್ರಿಕೆಯಲ್ಲಿ ಓದಿ ನನ್ನ ಮನಸ್ಸಿಗೆ ನೋವಾಗಿದೆ. ನನ್ನಂತೆಯೇ ತಮ್ಮ ಪತಿಯ ಜೊತೆಯಲ್ಲಿ ಬಂದಿದ್ದ ಚೀಫ್ ಎಂಜಿನಿಯರ್ ದೊರೆಸ್ವಾಮಿಯವರ ಪತ್ನಿ ಶ್ರೀಮತಿ ದೊರೆಸ್ವಾಮಿಯವರ ಬಗ್ಗೆ ಅವರು ಏಕೆ ಪ್ರಸ್ತಾಪಿಸಲಿಲ್ಲ? ಇದಕ್ಕೆ ರಾಜಕೀಯ ಕಾರಣವೇ? ನನ್ನ ಪತಿಯನ್ನು ಮುಖ್ಯ ಅತಿಥಿಯನ್ನಾಗಿ 'ಪೀಲ್ ಸ್ಟಿಕ್' ಕಂಪೆನಿಯವರು ಪ್ಯಾರಿಸ್‌ಗೆ ಆಹ್ವಾನಿಸಿದಾಗ ನನ್ನನ್ನೂ ಸಮಾರಂಭದಲ್ಲಿ ಹಾಜರಿರುವಂತೆ ಕೋರಿ ತಕ್ಕ ಏರ್ಪಾಟು ಮಾಡಿದುದರಿಂದ ನಾನು ವಿದೇಶ ಪ್ರವಾಸವನ್ನು ಮಾಡಿದನೇ ಹೊರತು ಹಳ್ಳಿಯ ರೈತನ ಮಗಳಾಗಿ ನನಗೆ ಯಾವ ಆಕಾಂಕ್ಷೆಗಳೂ ಇರಲಿಲ್ಲ. ಈಗಲೂ ಇಲ್ಲ. ಹಿಂದೆ ಶ್ರೀ ಪಿ.ವಿ. ರಾಮಯ್ಯ, ಶ್ರೀ ಕಲಗಲ್, ಶ್ರೀ ಸದಾಶಿವಮೂರ್ತಿ ಇತ್ಯಾದಿ ಅಧ್ಯಕ್ಷರ ಪತ್ನಿಯರು ತಂತಮ್ಮ ಪತಿಯ ಜೊತೆ ವಿದೇಶಕ್ಕೆ ಹೋಗಿರಲಿಲ್ಲವೆ?

ನಾವು 'ಗಿರಿಜನ' ವರ್ಗಕ್ಕೆ ಸೇರಿರುವುದು ಒಂದು ಅಪರಾಧವೇ? ನಮಗೆ ಉತ್ತರ ಕೊಡುವ ಅವಕಾಶವಿಲ್ಲದಿರುವಾಗ ಒಬ್ಬ ಹೆಣ್ಣುಮಗಳ ಹೆಸರನ್ನು ವಿಧಾನಸಭೆಯಲ್ಲಿ ತಂದು ಅವಮಾನಕ್ಕೆ ಗುರಿ ಮಾಡಿರುವುದು ಸರಿಯಲ್ಲ. ಅವರ ಹೆಣ್ಣುಮಕ್ಕಳ ಬಗ್ಗೆ ಈ ರೀತಿ ಅವಮಾನವಾಗಿದ್ದರೆ ಅವರಿಗೆ ಎಷ್ಟು ನೋವಾಗಿರುತ್ತಿತ್ತು ಎನ್ನುವುದನ್ನು ಅವರಂತಹ ಹಿರಿಯ ರಾಜಕಾರಣಿಗಳು ಯೋಚನೆ ಮಾಡಬೇಕು. ಇದರಿಂದ ನನಗೆ ಸಮಾಜದಲ್ಲಿ, ನಮ್ಮ ಬಂಧುಗಳಲ್ಲಿ ಅವಮಾನಕ್ಕೆ ಅವರೇ ಕಾರಣರಾಗಿ, ಮುಂದೇನಾದರೂ ನನಗೆ ತೊಂದರೆಯಾದರೆ ಅವರೇ ಜವಾಬ್ದಾರರಾಗುತ್ತಾರೆ ಎಂದು ತಿಳಿಸಬಯಸುತ್ತೇನೆ.

- ಶ್ರೀರಂಗಮ್ಮ, ಬೆಂಗಳೂರು.

ಮಾನ್ಯ ಅಧ್ಯಕ್ಷರೆ: ಮುಖ್ಯವಾಗಿ ಈ ಕೆಇಬಿ ಇಲಾಖೆಯ ಮೇಲೆ ಚರ್ಚೆ ಮಾಡುವಾಗ ನಾನು ಸೂಕ್ಷ್ಮವಾಗಿ ಒಂದು ಮಾತನ್ನು ಹೇಳಿದ್ದೇನೆ. I will quote from my own speech.

ದಿನಾಂಕ 17-9-91 ರಂದು ಶ್ರೀಮತಿ ನರಸಿಂಹಮೂರ್ತಿಯವರು ಫ್ರಾನ್ಸ್ ದೇಶಕ್ಕೆ ವಿದೇಶಿಪ್ರವಾಸ ಹೋಗುತ್ತಾರೆ. ಅದಕ್ಕೆ ಬೇಕಾಗಿರತಕ್ಕ ವಿದೇಶಿ ವಿನಿಮಯ ಮತ್ತು ಟಿಕೆಟ್‌ಗಳನ್ನು ಯಾರು ಕೊಂಡರು ದಯಮಾಡಿ ಈ ಸಭೆಗೆ ತಿಳಿಸಬೇಕೆಂದು ಹೇಳಿದ್ದೇನೆ. ಇದನ್ನು ಹೇಳುವುದಕ್ಕೆ ಕಾರಣ ಶ್ರೀಮತಿ ನರಸಿಂಹ ಮೂರ್ತಿಯವರು ವಿದೇಶಕ್ಕೆ ಹೋದದ್ದು ಅಪರಾಧವೆಂದು ಅಲ್ಲ, ಅಥವಾ ಅವರು ಹೋಗಬಾರದೂ ಎಂದೂ ಅಲ್ಲ; ಅಥವಾ ಅವರೇ ಹೇಳಿಕೊಂಡಿರುವ ಹಾಗೆ ಗಿರಿಜನರ ಸಮಾಜಕ್ಕೆ ಸೇರಿದವರು ಅಂತ ಅಲ್ಲ; ಅಥವಾ ಅವರು ಹೆಣ್ಣುಮಗಳು ಅನ್ನುವ ಕಾರಣವಲ್ಲ. ನಾನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದು ನರಸಿಂಹಮೂರ್ತಿಯವರು ಕೆಇಬಿ ಯ ಅಧ್ಯಕ್ಷರಾದ ಕಾರಣ ಕೆಇಬಿ ಅಧ್ಯಕ್ಷರ ಜೊತೆಯಲ್ಲಿ ಅವರ ಶ್ರೀಮತಿಯವರು ಹೋಗಬಾರದೆಂದೇನೂ ಇಲ್ಲ. ನಾನು ಕೆಇಬಿ ಇಲಾಖೆಯಲ್ಲಿ 35 ವರ್ಷಗಳಿಂದ ಹಿಂದಿನ ಅಧ್ಯಕ್ಷರುಗಳು ಯಾರ್‍ಯಾರು ಯಾರ್‍ಯಾರನ್ನು ಕರೆದುಕೊಂಡು ಹೋಗಿದ್ದಾರೆ ಎನ್ನುವುದನ್ನು ಪರಿಶೀಲನೆ ಮಾಡಲು ಪ್ರಯತ್ನ ಮಾಡಿದ್ದೇನೆ. ಇಂತಹ ಪ್ರಸಂಗ ನಡೆದಿಲ್ಲ. ನನಗೆ ಗೊತ್ತಿರತಕ್ಕದ್ದು ಗಂಡು-ಹೆಣ್ಣು ಎರಡೇ ಜಾತಿ. ನಾನು ಆ ಪ್ರವೃತ್ತಿಯಿಂದ ಸಾರ್ವಜನಿಕ ಜೀವನವನ್ನು ಮಾಡುವವನು ಅಲ್ಲ, ಇನ್ನು ಮುಂದೆ ಮಾಡುವುದಿಲ್ಲವೆನ್ನತಕ್ಕ ಆಶ್ವಾಸನೆಯನ್ನು ಸದನದ ಮೂಲಕ ಯಾರು ಪತ್ರ ಬರೆದಿದ್ದಾರೆ ಅವರಿಗೆ ತಿಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದರೆ ಒಂದಂಶ ಏನು, ಭ್ರಷ್ಟ ಅಧಿಕಾರಿಗಳದ್ದೇ ಒಂದು ಜಾತಿ ಇದೆ. ಆ ಜಾತಿಗೆ ಹರಿಜನ-ಗಿರಿಜನರು ಒಕ್ಕಲಿಗರು, ಲಿಂಗಾಯಿತರು, ಬ್ರಾಹ್ಮಣರು, ಹಿಂದುಳಿದವರು ಎನ್ನುವ ಮುಖವಾಡವನ್ನು ಹಾಕಿ ನಾವು ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲವಾದರೆ ಜನತಂತ್ರ ವ್ಯವಸ್ಥೆಗೆ ಏನೇನೂ ಅರ್ಥವಿಲ್ಲ. ಆ ದಿವಸ ನಾನು ವಾದ ಮಾಡಿರತಕ್ಕದ್ದು ಕೆಇಬಿಯಲ್ಲಿ ನಡೆದಿರತಕ್ಕ ಅವ್ಯವಹಾರಕ್ಕೆ ಸೀಮಿತವಾದ ಪ್ರಶ್ನೆ. ಆ ಪ್ರಶ್ನೆಯನ್ನು ಎತ್ತುವಾಗ ಆ ವಿಚಾರವನ್ನು ಪ್ರಸ್ತಾಪ ಮಾಡಿದಾಗ ನನಗೆ ಸಂಶಯವಿತ್ತು. ನಾನು ಅವರಿಗೆ ಋಣಿಯಾಗಿದ್ದೇನೆ, ಆದ್ದರಿಂದ ಅವರಿಗೆ ಕೃತಜ್ಞತೆಯನ್ನು ಸಮರ್ಥನೆ ಮಾಡುತ್ತೇನೆ. ಒಂದಂತೂ ನಿಜವಾಯಿತು. ಅದು ನನ್ನ ಪತ್ನಿಯನ್ನು ಪೀಲ್ ಸ್ಟಿಕ್ ಕಂಪನಿಯವರು ಅತಿಥಿಯಾಗಿ ಪ್ಯಾರಿಸ್‌ಗೆ ಆಹ್ವಾನಿಸಿದ್ದರು. ಈ ಪೀಲ್ ಸ್ಟಿಕ್ ಕಂಪನಿ ಯಾವುದು? ಏತಕ್ಕಾಗಿ ಕೆಇಬಿಯ ಅಧ್ಯಕ್ಷರನ್ನು ಆಹ್ವಾನಿಸಿದ್ದರು. ಆ ಆಹ್ವಾನದ ಜೊತೆಯಲ್ಲಿ ಅವರ ಶ್ರೀಮತಿಯವರಿಗೆ ಆಹ್ವಾನವನ್ನು ಕೊಡತಕ್ಕ ಕಾರಣ ಏನಿತ್ತು? ಕೊಡಬಹುದು. ಯಾವುದೇ ಕಂಪನಿಯವರು ಕರೆಯುವುದು ತಪ್ಪು ಅಪರಾಧವೆಂದು

ನಾನು ಹೇಳುವುದಿಲ್ಲ. ಆದರೆ ಪೀಲ್ ಸ್ಟಿಕ್ ಕಂಪನಿಗೆ ಮತ್ತು ಕೆಇಬಿಗೆ ಇರತಕ್ಕ ಸಂಬಂಧವೇನು? ಆ ಸಂಬಂಧ ನಾನು ಎತ್ತಿದ ಕಾರಣ, ಒಂದು ವೇಳೆ ಈ ಪೀಲ್ ಸ್ಟಿಕ್ ಕಂಪನಿ ಕೆಇಬಿಗೆ ಬೇಕಾಗಿರತಕ್ಕ ಸಾಮಗ್ರಿಗಳನ್ನು ಒದಗಿಸತಕ್ಕ ಕಂಪನಿ ಆಗಿದ್ದರೆ ಅಂತಹ ಕಂಪನಿ ಕೊಡತಕ್ಕ ಒಂದು ಆಹ್ವಾನವನ್ನು ಮನ್ನಣೆ ಮಾಡಿ ಅಧ್ಯಕ್ಷರು ಹೋಗುವುದಾದರೆ, ರಾಜ್ಯಸರ್ಕಾರಕ್ಕೆ ಜವಾಬ್ದಾರಿ ಇರತಕ್ಕ ಈ ಕಂಪನಿ ಅವರಿಗೆ ಆಹ್ವಾನವನ್ನು ಕೊಟ್ಟು ಅವರನ್ನು ಕರೆಯುತ್ತಾರೆಂದು ಹೇಳಿದರೆ ವ್ಯವಹಾರ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಆಗುವುದಿಲ್ಲ ಎನ್ನತಕ್ಕ ಸದ್ವಿಚ್ಛೆಯಿಂದ ನಾನು ಪ್ರಸ್ತಾಪ ಮಾಡಿದ್ದೇನೆ. ಎರಡನೆಯದು, ವಿದೇಶಕ್ಕೆ ಅವರು ಹೋಗಿರುವುದು ಪೀಲ್ ಸ್ಟಿಕ್ ಕಂಪನಿ ಆಹ್ವಾನದ ಮೇರೆಗೆ ಶ್ರೀ ಮತ್ತು ಶ್ರೀಮತಿ ನರಸಿಂಹಮೂರ್ತಿ ಹೋಗಿದ್ದರೆ? ಇವರಿಗೆ ಖರ್ಚನ್ನು ಯಾರು ಒದಗಿಸಿದರು? ಸರ್ಕಾರ ಏನಾದರೂ ಇದಕ್ಕೆ ಖರ್ಚು ಮಾಡಿದೆಯೋ ಅಥವಾ ಪೀಲ್ ಸ್ಟಿಕ್ ಕಂಪೆನಿಯಿಂದಲೇ ಇದಕ್ಕೆ ಖರ್ಚು ಮಾಡಿದ್ದಾರೋ? ಈ ಪ್ರಕರಣ ನಮಗೆ ಸದನಕ್ಕೆ ಗೊತ್ತಾಗಬೇಕಾಗುತ್ತದೆ. ಮೇಲಾಗಿ ನನಗೆ ಗೊತ್ತು, ಈ ಸದನದ ಹೊರಗೆ ಇರತಕ್ಕಂಥ ಸದಸ್ಯರು ಇಲ್ಲಿ ತಮ್ಮನ್ನು ತಾವು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅವರ ಪ್ರಸ್ತಾಪ ಮಾಡಬಾರದು ಎನ್ನತಕ್ಕಂಥ ಕನಿಷ್ಠ ಸೌಜನ್ಯ ನನಗೆ ತಿಳಿಯದೇ ಇದ್ದರೆ ನಾನು ಈ ಸದನದಲ್ಲಿ ಕೆಲಸ ಮಾಡುವುದಕ್ಕೆ ಯೋಗ್ಯನಾಗುವುದಿಲ್ಲ. ಆದ್ದರಿಂದ ನಾನು ಅವರ ಚಾರಿತ್ರ್ಯವನ್ನಾಗಲೀ, ಅವರು ಹೋದದ್ದು ಅಪರಾಧ ಅಂತಾಗಲೀ, ಅಥವಾ ಅವರು ಹೋಗಬಾರದು ಅಂತಾಗಲೀ ಪ್ರಸ್ತಾಪ ಮಾಡಲಿಲ್ಲ. ನಾನು ಪ್ರಸ್ತಾಪ ಮಾಡಿರತಕ್ಕಂಥಾದ್ದು, ನಾನು ಅಲ್ಲಿಂದ ಮುಂದೆ ಅದರ ವಿಚಾರವನ್ನು ನಾನು ದೀರ್ಘವಾಗಿ ಎಳೆಯುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಇಲ್ಲಿ ಮೊದಲನೇ ಭಾಗ blackmail. ನಾವು ಯಾವುದೇ ಅಧಿಕಾರಿಯ ವಿರುದ್ಧ ಇಲ್ಲಿ ಆಪಾದನೆಯನ್ನು ಮಾಡಿದರೆ, ಸದಸ್ಯರ ವಿರುದ್ಧ blackmail ಮಾಡತಕ್ಕಂಥ ಪ್ರವೃತ್ತಿ ಏನಿದೆ ಅದಕ್ಕೆ ಮನೆಯವರನ್ನು ಬಳಸಿಕೊಳ್ಳತಕ್ಕಂಥ ಪ್ರವೃತ್ತಿ ಏನಿದೆ, ಇದನ್ನು ಸದಸ್ಯರೆಲ್ಲರೂ ಏಕಕಂಠದಿಂದ ಖಂಡಿಸಬೇಕು. ಹಾಗೆ ಖಂಡನೆ ಮಾಡದೇ ಇದ್ದರೆ ಬಹುಶ: ನಾವು ಶಾಸನಸಭೆಯಲ್ಲಿ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ಎರಡನೇಯದ್ದು, ನಮಗೆ ಭಯ ಹುಟ್ಟಿಸಿರತಕ್ಕಂಥಾದ್ದು, ಇವರ ಜೀವಕ್ಕೆ ಏನಾದರೂ ಭಯ ಉಂಟು ಮಾಡುತ್ತೇನೆ ಎಂದು ಹೇಳಿದ್ದೇನೋ? ಸಂಬಂಧಪಟ್ಟಿದ್ದನ್ನು ನಾನೇನಾದರೂ ಈ ವಿಚಾರ ಹೇಳಿದ್ದೇನೋ? ಒಂದು ವೇಳೆ ಅಂಥಾದ್ದು ಆಗಿದ್ದರೆ ತಮ್ಮ ಗಮನಕ್ಕೆ ತರಬಹುದಿತ್ತು. ತಾವು ಅಧ್ಯಕ್ಷರು ಇದ್ದೀರಿ. ತಾವು ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಸದಸ್ಯರಿಗೆ ಅವಕಾಶ ಕೊಟ್ಟಿದ್ದೀರಿ ಎಂದು ತಮ್ಮ ಗಮನಕ್ಕೆ ತರಬಹುದಿತ್ತು. ಹಾಗೆ ತರುವುದಿಲ್ಲ, ಸದಸ್ಯರಿಗೆ ಪತ್ರ ಬರೆಯುವುದು, ಪತ್ರಿಕೆಯಲ್ಲಿ ಹೇಳಿಕೆ ಕೊಡತಕ್ಕಂಥಾದ್ದು. ನಾನು ತಮ್ಮನ್ನು ಕೇಳುತ್ತೇನೆ. ಈ ವಿಷಯದಿಂದ ನಾವು ಸದನದಲ್ಲಿ ಕೆಲಸ ಮಾಡುವುದಕ್ಕೆ ಭಾದಕ ಆಗುವುದಾದರೆ - I should have moved a contempt of the House, I should have moved a privilege motion. ನಾನು ಈ ಸದನದಲ್ಲಿ ಕೆಲಸ ಮಾಡತಕ್ಕಂಥ ನನ್ನ ಹಕ್ಕು ಚ್ಯುತಿ ಬಗ್ಗೆ ಪ್ರಸ್ತಾಪ ಮಾಡಬಹುದಿತ್ತು. ಆದರೂ ಕೂಡ ಅಷ್ಟು ದೂರಕ್ಕೆ ನಾನು ಹೋಗಲಿಲ್ಲ. ಕಾರಣ ಏನು? ಪಾಪ, ಈ ತಾಯಿಗೆ ಏನಾದರೂ ನಮ್ಮ ಪ್ರಸ್ತಾಪದಿಂದ ಮನಸ್ಸು ನೊಂದಿದ್ದರೆ, ಆ ನೋವು ನಮಗೂ ಆಗುತ್ತದೆ. ಆದರೆ ಇಲ್ಲಿ ಪ್ರಸ್ತಾಪ ಮನನೊಂದಿದ್ದಕ್ಕಾಗಿ ಆಗಿಲ್ಲ. ಇದೇನು ಬ್ಲಾಕ್‌ಮೇಲ್ ಮಾಡುವುದಕ್ಕೆ ಅಧಿಕಾರಿ ಪ್ರಯತ್ನ ನಡೆಸಿದ್ದಾರೆ ತಮ್ಮ ಮನೆಯವರ ಮೂಲಕ ಎನ್ನತಕ್ಕಂಥ ಅಭಿಪ್ರಾಯವನ್ನು

ಹೊಂದುವುದಕ್ಕೂ ಅವಕಾಶ ಇದೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ನಾನು ಕೇಳುತ್ತೇನೆ, ಆವತ್ತು ನಾನು ಎತ್ತಿತಂಥ ಪ್ರಶ್ನೆಗೆ ಉತ್ತರಿಸಬೇಕಾದಂಥ ಮುಖ್ಯಮಂತ್ರಿಗಳಿಂದ ಯಾವುದೇ ರೀತಿಯಾದಂಥ ನಿರಾಕರಣೆಯಾಗಲೀ, ಸಕಾರಣ ಕೊಟ್ಟು ಅದನ್ನು ವಿವರಿಸುವುದಕ್ಕೆ ಅವಕಾಶ ಇದ್ದಂಥ ಮುಖ್ಯಮಂತ್ರಿಗಳಿಂದ ನಿರೀಕ್ಷಿತ ಉತ್ತರ ಬರುವುದಿಲ್ಲ. ಅದಕ್ಕೆ ನಾನು ಹೊಣೆಗಾರನಲ್ಲ. ಇವತ್ತು ಶ್ರೀಮತಿಯವರು ಏನು ಪತ್ರ ಬರೆದಿದ್ದಾರೆ, ಅದೇ ಕೆಲಸವನ್ನು ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಗಳು ಮಾಡಬಹುದಾಗಿತ್ತು. ಈ ಕೆಲಸ ಅವರು ಮಾಡುವುದಿಲ್ಲ. ಹೀಗೆ ಮಾಡದಿದ್ದ ಕಾರಣ ಹೊರಗಡೆಯಿಂದ ಪತ್ರ ಬರೆಯತಕ್ಕಂಥ ಸ್ಥಿತಿಗೆ ನಾವು ಹೋಗಿದ್ದೇವೆ. ಅದಕ್ಕಾಗಿ ನಾನು ಕೇಳುತ್ತೇನೆ. ಇಲ್ಲಿ ನಾವು ಹಿಂದೆ ಹೇಳಿರತಕ್ಕದ್ದು EMP Peel Stic Company ಅಂತ. ಪತ್ರಿಕೆಯಲ್ಲಿ ಬಂದಿರತಕ್ಕಂಥಾದ್ದು ಬರೇ Peel Stic Company.. ಅವರು ಹೇಳುತ್ತಾರೆ invitation extend ಮಾಡಿದ್ದರು ನಮಗೆ ಎಂದು. "This is the type of invitation: Sri Gundappa, one of the Technical Member of the Committee has also during August 1989 has received. This is the usual invitation normally the companies extend. But it does not specifically state wives. But it is learnt, orally they intimate to bring their wives also.." It is altogether a different matterr. I do not want to go into that question.

ಇನ್ನೊಂದು ವಿಷಯ ಅವರು ಹೇಳಿ ಬಹಳ ಒಳ್ಳೆಯ ಇನ್‌ಫಾರ್ಮೇಶನ್ ಕೊಟ್ಟಿದ್ದಾರೆ. ಅದು ಇವರನ್ನು ಮಾತ್ರ ಕರೆಯಲಿಲ್ಲ, ಇವರ ಜೊತೆಗೆ ಚೀಫ್ ಇಂಜಿನಿಯರ್ ದೊರೆಸ್ವಾಮಿ, ಅವರ ಪತ್ನಿ ಶ್ರೀಮತಿ ದೊರೆಸ್ವಾಮಿಯವರನ್ನು ಕರೆದಿದ್ದು ಅವರ ಬಗ್ಗೆ ಏಕೆ ಪ್ರಸ್ತಾಪ ಮಾಡಿಲ್ಲ ಎಂದು ಕೇಳಿದ್ದಾರೆ. ಆಗ ಚೀಫ್ ಇಂಜಿನಿಯರ್ ದೊರೆಸ್ವಾಮಿ ಅವರು ಹೋಗಿದ್ದ ವಿಚಾರ ಬಂದಿರಲಿಲ್ಲ. ಇಲ್ಲಿ ಬಂದಿದ್ದು ಕೆ.ಇ.ಬಿ. ಚರ್ಚೆ. ಆದ್ದರಿಂದ ಕೆ.ಇ.ಬಿ. ಅಧ್ಯಕ್ಷರ ಕಾಂಡಕ್ಟ್‌ನ್ನು ನಾನು ಪ್ರಶ್ನೆ ಮಾಡಿದ್ದೇನೆಯೇ ಹೊರತು ಇನ್ನೇನೂ ಅಲ್ಲ. ಆದ್ದರಿಂದ ದೊರೆಸ್ವಾಮಿಯವರು ತಮ್ಮ ಶ್ರೀಮತಿಯವರನ್ನು ಕರೆದುಕೊಂಡು ಹೋಗಿದ್ದರು ಎನ್ನತಕ್ಕಂಥ ವಿಚಾರ ಏನು ಪ್ರಸ್ತಾಪ ಮಾಡಿದ್ದಾರೆ, ಇದೂ ಕೂಡ ತನಿಖೆಗೆ ಯೋಗ್ಯವಾದಂಥ ವಿಚಾರ. ಹಾಗೆಯೇ ಅನೇಕ ಹೆಸರುಗಳನ್ನು ಹೇಳಿದ್ದಾರೆ. ಪಿ.ವಿ. ರಾಮಯ್ಯನವರು ಹೋಗಿದ್ದಾರೆ. ಕಲಗಲ್ ಸದಾಶಿವಮೂರ್ತಿಯವರು ಹೋಗಿದ್ದಾರೆ. ಇವರ ವಿಚಾರ ಏಕೆ ಪ್ರಸ್ತಾಪ ಮಾಡಲಿಲ್ಲ? ನನಗೆ ಪ್ರಸ್ತಾಪಕ್ಕೆ ಆ ದಿವಸ ಪ್ರಸಕ್ತವಾದದ್ದು ಕೆ.ಇ.ಬಿ. ಇಲಾಖೆಯ ಅಧ್ಯಕ್ಷರ ವಿಚಾರ.

ಅಷ್ಟನ್ನು ಮಾತ್ರ ಪ್ರಸ್ತಾಪ ಮಾಡಿದ್ದೇನೆ. ಉಳಿಕೆ ಯಾರು ಯಾರದ್ದು, ಎಲ್ಲೆಲ್ಲಿ, ಯಾವ ಯಾವ ಕಾಲದಲ್ಲಿ ಪ್ರಸ್ತಾಪ ಮಾಡಬೇಕೋ ಆಗ ಮಾಡುತ್ತೇನೆ. ಮುಖ್ಯ ಕಾರ್ಯದರ್ಶಿಯವರ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ, ಫೈನಾನ್ಸ್ ಸೆಕ್ರೆಟರಿಯವರ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ, ಇಂಡಸ್ಟ್ರೀಸ್ ಸೆಕ್ರೆಟರಿಯವರ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ನಾನು ಪ್ರಸ್ತಾಪ ಮಾಡಿರತಕ್ಕ ಅನೇಕ ವಿಚಾರಗಳಲ್ಲಿ ಇದು ಒಂದು ಭಾಗ. ಆಡಳಿತಾತ್ಮಕವಾದ ಈ ವ್ಯವಸ್ಥೆಯನ್ನು ನಾವು ಇಲ್ಲಿ ಪ್ರಸ್ತಾಪ ಮಾಡುವಾಗ, ನಮ್ಮ ಮೇಲೆ ಇಂತಹ ಆಪಾದನೆಗಳು ಪತ್ರಿಕೆಯಲ್ಲಿ ಬರುವುದಕ್ಕೆ ಪ್ರಾರಂಭವಾದರೆ, ನಾನು ತಮ್ಮಿಂದ ನಿರೀಕ್ಷಣೆ ಮಾಡುತ್ತೇನೆ, ಈ ಸದನದಲ್ಲಿ ಯಾವರೀತಿ ಕೆಲಸ ಮಾಡಬೇಕು ಎನ್ನುವುದಕ್ಕೆ ತಾವು ಮಾರ್ಗದರ್ಶನ ಹಾಕಿ ಕೊಡಬೇಕು. ಸರ್ಕಾರದವರು, ನಾವು ಎತ್ತಿರತಕ್ಕ ವಿಚಾರಗಳಿಗೆ ಸರಿಯಾದ ರೀತಿಯಲ್ಲಿ ಉತ್ತರವನ್ನು ಕೊಡದಿದ್ದರೆ, ಅದರ ಪರಿಣಾಮ ಏನು ಎನ್ನುವುದು ಇಲ್ಲಿ

ಅಭಿವ್ಯಕ್ತವಾಗುತ್ತದೆ. ಈ ವಿಚಾರದಲ್ಲಿ ಮತ್ತೊಂದು ಬರತಕ್ಕಂಥಾದ್ದು ಏನೆಂದರೆ, ಶ್ರೀಮಾನ್ ಚಂದ್ರೇಗೌಡರು, ಅವರು ಹೇಳಿರತಕ್ಕ ಭಾಷೆ ಏನು, ನಾವು ಗಿರಿಜನರು ಎನ್ನುವ ಕಾರಣಕ್ಕಾಗಿ ಎತ್ತಿದ್ದಾರೆ. ನಾನು ಈ ಸದನದಲ್ಲಿ ಪ್ರಮಾಣ ಮಾಡಿ ಹೇಳುತ್ತೇನೆ. ನರಸಿಂಹಮೂರ್ತಿಯವರು ಯಾವ ಜಾತಿಗೆ ಸೇರಿದ್ದಾರೋ, ಅವರ ಶ್ರೀಮತಿಯವರು ಯಾವ ಜಾತಿಗೆ ಸೇರಿದ್ದಾರೋ ನನಗೆ ತಿಳಿದಿಲ್ಲ. ನನಗೆ ತಿಳಿದಿರತಕ್ಕಂತಾದ್ದು, ನಾನು ಕೇಳಿ ತಿಳಿದಿರತಕ್ಕಂಥ ಈ ಭ್ರಷ್ಟ ಜಾತಿಗೆ ಅವರು ಸೇರಿದ್ದಾರೆ ಎನ್ನತಕ್ಕಂತಾದ್ದು ನನ್ನ ಆಪಾದನೆ. ಈ ಆಪಾದನೆಯಲ್ಲಿ ಹುರುಳಿದೆಯೋ ಬಿಟ್ಟಿದೆಯೋ, ಸರ್ಕಾರ ಇದನ್ನು ವಿಚಾರಣೆ ಮಾಡಬೇಕು. ಅದಕ್ಕೆ ಗಿರಿಜನರ ಮುಖವಾಡವನ್ನು ಹಾಕಿ, ಹಿಂದುಳಿದವರ ಮುಖವಾಡವನ್ನು ಹಾಕಿ, ಒಕ್ಕಲಿಗರ ಮುಖವಾಡವನ್ನು ಹಾಕಿ, ಲಿಂಗಾಯಿತರ ಮುಖವಾಡವನ್ನು ಹಾಕಿ, ತಪ್ಪಿಸಿಕೊಳ್ಳುವುದಾದರೆ, ನಾವು ಈ ಸದನದಲ್ಲಿ ಕೆಲಸಮಾಡುವುದು ಕಷ್ಟವಾಗುತ್ತದೆ. ಆದ್ದರಿಂದ, ನಾನು ತಮ್ಮಲ್ಲಿ ಸವಿನಯವಾಗಿ ಪ್ರಾರ್ಥನೆ ಮಾಡುತ್ತೇನೆ. ಈ ವಿಚಾರ ಪತ್ರಿಕೆಯಲ್ಲಿ ಏನು ಬಂದಿದೆ, ಇದನ್ನು ತಮ್ಮ discretion ಗೆ ಬಿಡುತ್ತೇನೆ. ಇದು contempt of the House ಆಗಬಹುದು, ಪ್ರಿವಿಲೇಜ್ ಆಗಬಹುದು. ಇದಕ್ಕೆ ಸಂಬಂಧಪಟ್ಟ ಸರ್ಕಾರ ವಿವರಣೆ ಕೊಡಬೇಕು. ವಿವರಣೆ ಕೊಡದೇ ಸರ್ಕಾರ ತಪ್ಪಿಸಿಕೊಂಡು, ನಮ್ಮ ಮೇಲೆ ಹಾಕತಕ್ಕ ಹೊರೆಯನ್ನು ತಾವು ತಪ್ಪಿಸಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇಂತಹ ಪ್ರಕರಣಗಳು ಮತ್ತೆ ಆಗದ ಹಾಗೆ, ತಡೆಗಟ್ಟದೇ ಇದ್ದರೆ, ಈ ಸದನದಲ್ಲಿ ಕೆಲಸ ಮಾಡುವುದಕ್ಕೆ ಕಷ್ಟವಾಗಬಹುದು. ಹಾಗೆ ಕೆಲಸ ಮಾಡುವುದು ಅಪರಾಧ ಎಂದು ತಾವು ಭಾವನೆ ಮಾಡುವುದಾದರೆ, ಅದನ್ನು ತಿಳಿಸಿದರೂ ಕೂಡ, ನಾನು ಅದರಂತೆ ನಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI H. EKANATHAIAH : The alleged imputation of motive to the speech of any Member of this House amounts to a Breach of Privilege. Prima facie, I would request the Chair to look into all the documents and give a ruling in this matter.

MR. SPEAKER : If you feel that there is breach of privilege or contempt of this House has be committed, I should have something in writing to that effect.

SRI H. EKANATHAIAH : That is exactly the point.

SRI D.B. CHANDRE GOWDA : You can straightaway refer it. You are the custodian of our rights and privileges. You should come to our rescue. Therefore, I said, you have the inherent right, authority and power to straightaway refer the matter to the Privilege Committee even without looking into the documents.

ಇದು ಪತ್ರಿಕೆಯಲ್ಲಿ ಮಾತ್ರ ಬಂದಿಲ್ಲ, ತಮಗೂ ಪತ್ರ ಬಂದಿದೆ. ನನ್ನ ತಿಳುವಳಿಕೆ ಪ್ರಕಾರ ಇದರ ನಕಲು ತಮಗೂ ಬಂದಿದೆ. ಏಕೆಂದರೆ, ಅವರು ನನಗೆ ಹೇಳಿದ್ದಾರೆ, ಅಧ್ಯಕ್ಷರಿಗೂ ಪತ್ರವನ್ನು ಕಳುಹಿಸಿದ್ದೇನೆಂದು ಹೇಳಿದ್ದಾರೆ. ಜೊತೆಗೆ ಏನೋ ನನಗೆ ಮುಂದೆ ಏನಾದರೂ ಆದರೆ, ನಾನು ಕಾರಣ ಎಂದರೆ, ನಾನು

ಮಾತನಾಡಿದ್ದು ಕಾರಣವೇ? ಹಾಗಿದ್ದರೆ, This is a fit case straightaway using your discretion to refer the matter to the Privilege Committee. If I have committed any... ಆಯಮ್ಮನ ಮನಸ್ಸಿಗೆ ನೋವಾಗುವುದು ಕಂಡರೆ, ನಾನು ಒಂದು ನಿಮಿಷ ಈ ಸದನದಲ್ಲಿ ಕೆಲಸ ಮಾಡುವುದಕ್ಕೆ ತಯಾರಿಲ್ಲ, ಆದರೆ, ತಾವು ನಮ್ಮ ರಕ್ಷಣೆಗೆ ಬರುವುದನ್ನು ತಮಗೇ ಬಿಡುತ್ತೇನೆ. I therefore request the Chair that this is a fit case to refer the matter straightaway even without my requesting you to refer it to the Privilege Committee.

MR. SPEAKER : I will look into it.

ORI D.B. CHANDRE GOWDA : Otherwise, the Government should come out with the explanation as to why these things are happening.

MR. SPEAKER : This is nothing to do with the Government. The Government is not made a party to this. This is something between an outsider who is questioning an Hon'ble Member of this House with reference to certain statements made on the floor of the House. So, the Government does not come into the picture at all.

SRI D.B. CHANDREGOWDA : That is why I said, attaching imputations.

MR. SPEAKER : That is exactly what it amounts ultimately. I will certainly look into it.

ನಿಲುವಳಿ ಸೂಚನೆ

ಭದ್ರಾ ಬಲದಂಡೆ ನಾಲೆ ಒಡೆದುಹೋಗಿರುವ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಒಂದು ಪ್ರಮುಖವಾದ ವಿಚಾರವನ್ನು ನಿಲುವಳಿ ಸೂಚನೆ ಮೂಲಕ ಮೊನ್ನೆ ಪ್ರಸ್ತಾಪ ಮಾಡಿದಾಗ, ಬಿ.ಆರ್. ಪ್ರಾಜೆಕ್ಟ್ ಹತ್ತಿರ, ಭದ್ರಾ ಬಲದಂಡೆ ನಾಲೆ ಒಡೆದು ಹೋಗಿರುವ ವಿಚಾರ ಪ್ರಸ್ತಾಪಕ್ಕೆ ಬಂದಿತ್ತು.

ಸನ್ಮಾನ್ಯ ನೀರಾವರಿ ಸಚಿವರು ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಿಕೊಂಡು ಬಂದಿದ್ದಾರೆ. ಒಂದು ವಿಚಾರ ತಮ್ಮ ಗಮನಕ್ಕೆ ತರುವುದು ಎಂದರೆ, ಆ ಚಾನಲ್‌ಗೆ ಸಂಬಂಧಪಟ್ಟಂತೆ ಒಂದು ದೊಡ್ಡ ಗರ್ಡರ್ಸ್ ಹಾಕಿದ್ದರು. ರಕ್ಷಣೆ ಮಾಡುವುದಕ್ಕೆ ಹಾಕಿದ್ದ, ಸುಮಾರು ೨೫-೩೦ ಲಕ್ಷ ರೂಪಾಯಿ ಬೆಲೆ ಬಾಳುವ ಈ ಗರ್ಡರ್ಸ್ ಅನ್ನು ೧೯೮೬ನೇ ಇಸವಿಯಲ್ಲಿ ಯಾರ ಅನುಮತಿಯನ್ನೂ ಕೇಳದೆ ಒಡೆದು ಹಾಕಿದ್ದಾರೆ. ಅದರ ಪರಿಣಾಮವಾಗಿ ವೈಬ್ರೇಷನ್‌ನಿಂದ ಈಗ ಆ ಚಾನಲ್‌ಗೆ ಧಕ್ಕೆ ಬಂದಿದೆ. ಅಲ್ಲಿದ್ದ ಸುಮಾರು ೩೦ ಲಕ್ಷ ರೂಪಾಯಿ ಬೆಲೆಯ ಗರ್ಡರ್ಸ್ ಸಹ ಮಂಗಮಾಯವಾಗಿದೆ ಎಂಬ ಆರೋಪ ಸಹ ಇದೆ. ನೀವು ತಕ್ಷಣ ಲಕ್ಷಾಂತರ ಜನ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ, ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಿರುತ್ತೀರಿ, ನೋಡಿರುತ್ತೀರಿ, ಕಾರ್ಯಪ್ರವೃತ್ತರಾಗಿರುತ್ತೀರಿ ಎಂದು ನಾನು ಕೇಳಿದ್ದೇನೆ. ರೈತರಿಗೆ ಅನಾನುಕೂಲ ಆಗದ ರೀತಿಯಲ್ಲಿ ನೀರನ್ನು ತಾವು ಯಾವಾಗ ಕೊಡುತ್ತೀರಿ? ಹಿಂದೆ ಅಲ್ಲಿ ಗರ್ಡರ್ಸ್

ಹಾಕಿದ್ದು ನಿಜವೇ? 1983ನೇ ಇಸವಿಯಲ್ಲಿ ಸಂಬಂಧಪಟ್ಟ ಒಬ್ಬ ಎಂಜಿನಿಯರ್ ಯಾರದೇ ಅನುಮತಿಯನ್ನೂ ಕೇಳದೇ, ೨೫ ಲಕ್ಷ ರೂಪಾಯಿ ಬೆಲೆ ಬಾಳುವ ಗರ್ಡರ್ಸ್ ತೆಗೆದುಹಾಕುವಂತಹ ಸಂದರ್ಭದಲ್ಲಿ, ವೈಬ್ರೇಷನ್ ಆಗಿ, ಅದರ ಪರಿಣಾಮವಾಗಿ ಬಿರುಕು ಬಿಟ್ಟಿದೆ ಎಂಬುದು ಸತ್ಯವೇ? ಇದರ ಬಗ್ಗೆ ತನಿಖೆ ಮಾಡಿ, ಆ ರೀತಿ ತಪ್ಪು ಮಾಡಿರುವ ಅಧಿಕಾರಿಗಳಿಗೆ, ಕಾನೂನು ಬಾಹಿರವಾಗಿ ಆ ರೀತಿ ಮಾಡಿರುವ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ? ರೈತರಿಗೆ ರಕ್ಷಣೆ ಕೊಡುವ ದೃಷ್ಟಿಯಿಂದ ಇದನ್ನು ಮಾಡುತ್ತೀರಾ? ಸನ್ಮಾನ್ಯ ಅಧ್ಯಕ್ಷರೇ, ನೀರಾವರಿ ಸಚಿವರು ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಿಕೊಂಡು ಬಂದಿದ್ದಾರೆ. ಏನಾಗಿದೆ ಎಂದರೆ ನಾಳೆ ಈ ಸದನ ಮುಗಿಯುವಂತಹ ಸಂದರ್ಭ ಇದೆ, ಆದುದರಿಂದ ಅವರು ಇದರ ಬಗ್ಗೆ ಒಂದು ಹೇಳಿಕೆ ಕೊಡಬೇಕೆಂದು ಒತ್ತಾಯಿಸುತ್ತೇನೆ. ಮಂತ್ರಿಗಳೂ ಇದ್ದಾರೆ, ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಿರುತ್ತಾರೆ. ಅಲ್ಲಿ ಏನಾಗಿದೆ ಎಂಬ ಬಗ್ಗೆ ಒಂದು ಹೇಳಿಕೆ ಕೊಡುತ್ತಾರೆಯೇ?

ಅಧ್ಯಕ್ಷರು : ಅದನ್ನು ಬರೆದು ಕಳುಹಿಸಿ ಕೊಡಿರಿ. ಸರಕ್ ಎಂದು ಈ ಸಭೆಯಲ್ಲಿ ಎದ್ದದ್ದು ಮಂತ್ರಿಗಳನ್ನು ನೋಡಿದ ತಕ್ಷಣ, ಬ್ರೀಚ್ ಆಗಿಹೋಗಿದೆ, ಹೇಳಿ ಎಂದು ಕೇಳುವುದಲ್ಲ. ನೀವು ನನಗೆ ಬರೆದು ಕಳುಹಿಸಬೇಕು, ಅದನ್ನು ನಾನು ಅವರಿಗೆ ಕಳುಹಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಹೇಳಿಕೆ ಕೊಡುತ್ತೇವೆಂದು ಹೇಳಿದ್ದಾರೆ.

ಅಧ್ಯಕ್ಷರು : ಹೇಳಿಕೆ ಕೊಡುತ್ತೇನೆಂದು ಅವರು ಹೇಳಿದ್ದಾರೆಯೇ? ಹಾಗಿದ್ದರೆ ಸರಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಈ ಸಭೆಯಲ್ಲಿ ಈ ಪ್ರಸ್ತಾವನೆ ಬಂದಾಗ ನಾನು ಹೋಗಿ ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಿರುತ್ತೇನೆ. ಈಗಾಗಲೇ ಅಲ್ಲಿ ಕೆಲಸ ಪ್ರಾರಂಭವಾಗಿದೆ. ಅಕ್ಟೋಬರ್ ಮೊದಲನೇ ವಾರದೊಳಗೆ ನಾವು ಏನು ರೈತರಿಗೆ ತೊಂದರೆ ಆಗದ ರೀತಿಯಲ್ಲಿ ಅಲ್ಲಿ ಕೆಲಸಗಳನ್ನು ಪ್ರಾರಂಭ ಮಾಡಿದ್ದೇವೆ. ೨ನೇ ತಾರೀಖಿನ ನಂತರ ನೀರು ಕೊಡುತ್ತೇವೆ. ಅದರ ಬಗ್ಗೆ ಭಯ ಬೀಳುವುದು ಬೇಡ. ಬೇರೆ ವಿಷಯ ಪ್ರಸ್ತಾಪ ಮಾಡಿದ್ದಾರೆ. ತಾವು ಅದರ ಬಗ್ಗೆ ನನಗೆ ವಿವರವಾದ ಟಿಪ್ಪಣಿಯನ್ನು ಕಳುಹಿಸಿದರೆ ಅದರ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸದನದಲ್ಲಿ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ನೀವು ತನಿಖೆ ಮಾಡುವುದು, ತನಿಖೆ ಮಾಡುವುದು ಸರಕಾರದ ಜವಾಬ್ದಾರಿ, ಅದು ನಿಮ್ಮ ಇಲಾಖೆಗೆ ಸಂಬಂಧಪಟ್ಟಿದ್ದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಅವರು ಏನು ಹೇಳಿದರು ಅದನ್ನು ಬರೆದುಕೊಟ್ಟರೆ ಒಳ್ಳೆಯದು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಹೇಳಿದ್ದು ರೆಕಾರ್ಡ್ಸ್‌ಗೆ ಹೋಗಿದೆ. ಗರ್ಡರ್ಸ್ ಅನ್ನು ಚಾನಲ್ ಪಕ್ಕದಲ್ಲಿ ಗಟ್ಟಿಯಾಗಿ ಉಳಿಯಬೇಕೆಂದು ಹಾಕಿದ್ದರು. ೧೯೮೩ರಲ್ಲಿ ಅದನ್ನು ಕಟ್ ಮಾಡಿದರು. ಆ ಗರ್ಡರ್ಸ್ ೨೫ ರಿಂದ ೩೦ ಲಕ್ಷ ರೂಪಾಯಿ ಬೆಲೆ ಬಾಳುತ್ತದೆ. ಗರ್ಡರ್ಸ್ ಇದ್ದದ್ದು ನಿಜವೇ, ಅದನ್ನು ಕಟ್ ಮಾಡಿದ್ದು ನಿಜವೇ? ಇದನ್ನು ತನಿಖೆ ಮಾಡಿಸಿ. ಈವತ್ತಲ್ಲ, ನಾಳೆ ಹೇಳಿಕೆ ಕೊಡಿ. ಒಂದು ನೀವು ಕೊಡುವಂತಾದು. ಅಲ್ಲಿ ನಾಲೆ ಹಾಳಾಗಿ, ಲಕ್ಷಾಂತರ

ರೂಪಾಯಿ ಅನಾಹುತಕ್ಕೆ ಯಾರು ಕಾರಣರು? ಆ ಇಂಜಿನಿಯರ್ ರಕ್ಷಣೆ ಮಾಡಬೇಕಾದವನೇ, ಆ ಗರ್ಡರ್ಸ್‌ಗಳನ್ನು ಮಾರುವ ಮಟ್ಟಕ್ಕೆ ಬಂದಿದ್ದಾನೆ. ಈ ಸದನದಲ್ಲಿ ಜವಾಬ್ದಾರಿ ಶಾಸಕನಾಗಿ ನಾನು ನನ್ನ ಕಾರ್ಯನಿರ್ವಹಿಸುತ್ತಿದ್ದೇನೆ. ಇದು ಹೌದೋ ಅಲ್ಲವೋ ತಾವು ಹೇಳಿ. ಕಾಲುವೆ ಏತಕ್ಕೆ ಬಿರುಕು ಬಿಟ್ಟಿದೆ, ಅಲ್ಲಿ ಏನಾಗಿದೆ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ಕಾಲುವೆ ಏತಕ್ಕೆ ಬಿರುಕು ಬಿಟ್ಟಿತು ಎಂಬುದನ್ನು ಹೇಳಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ೨ನೇ ತಾರೀಖಿನ ನಂತರ ನೀರು ಕೊಡುತ್ತೇವೆಂದು ಹೇಳಿರುತ್ತೇನೆ. ಇದರ ಬಗ್ಗೆ ಕಮಿಟಿ ಕೂಡಾ ಮಾಡಿ ಬಂದಿದ್ದೇನೆ. ವಿವರವಾದ ವರದಿ ಬಂದ ಮೇಲೆ ಸದನಕ್ಕೆ ಒಪ್ಪಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಆ ಕಮಿಟಿಯಲ್ಲಿ ಯಾರನ್ನು ಹಾಕಿದ್ದೀರಿ? ಏನು ಸಮಿತಿ ಮಾಡಿರುತ್ತೀರಿ, ತನಿಖಾ ಸಮಿತಿಯೇ, ಆ ಸಮಿತಿಯಲ್ಲಿ ಯಾರು ಯಾರಿದ್ದಾರೆ ಎಂಬುದರ ಬಗ್ಗೆ ಸಮಗ್ರವಾಗಿ ಒಂದು ಹೇಳಿಕೆ ಮಾಡಿ, ಈ ಸದನದಲ್ಲಿ ಮುಚ್ಚಿಡುತ್ತಿದ್ದೀರಿ, ಇದರಿಂದ ಮನಸ್ಸಿಗೆ ಬಹಳ ನೋವಾಗುತ್ತದೆ. ನಿಜವಾಗಿ ಬಹಳ ಭೀಕರವಾದ ಪರಿಸ್ಥಿತಿ ಬಂದಿದೆ. ನೀವು ವಿಚಾರವನ್ನು ಮುಚ್ಚಿಡುತ್ತಿದ್ದೀರಿ ಎಂದು ಹೇಳುತ್ತಿದ್ದೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮುಚ್ಚಿಡುವ ಅವಶ್ಯಕತೆ ಏನೂ ಇಲ್ಲ, ವಿವರವಾದ ವರದಿ ತರಿಸುತ್ತೇನೆ. ಸಮಿತಿಗೆ ಏನು ಕೆಲಸ ಕೊಟ್ಟಿದ್ದೇವೆ, ಅವರು ಏನು ಮಾಡುತ್ತಿದ್ದಾರೆ, ಅದರಲ್ಲಿ ಯಾರ್‍ಯಾರು ಇದ್ದಾರೆ ಎಂಬ ಬಗ್ಗೆ ದೀರ್ಘವಾದ ವರದಿ ತರಿಸುತ್ತೇನೆ. ಮಾನ್ಯ ಯಡಿಯೂರಪ್ಪನವರೇ, ತಾವು ಹೇಳಿದ ವಿಚಾರ ನನ್ನ ಗಮನಕ್ಕೆ ಬಂದಿರಲಿಲ್ಲ. ಈ ವಿಷಯ ಈಗತಾನೆ ನನ್ನ ಗಮನಕ್ಕೆ ಬಂದಿದೆ. ಅದರ ಬಗ್ಗೆ ಕೂಡಾ ವರದಿ ತರಿಸುತ್ತೇನೆ.

ಅಧ್ಯಕ್ಷರು : ಅದನ್ನು ನೋಡಿಸುತ್ತಾರೆ ಬಿಡಿ. ಈಗ ಅರ್ಜಿಗಳನ್ನು ಒಪ್ಪಿಸುವುದು.

ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿರುವ ಅವ್ಯವಹಾರಗಳ ಬಗ್ಗೆ.

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೇ, ನಾನು ನಿನ್ನೆ ದಿವಸ ತಮಗೆ ನೋಟೀಸ್ ಕಳುಹಿಸಿದ್ದೇನೆ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿರತಕ್ಕಂಥ ಅವ್ಯವಹಾರಗಳ ಬಗ್ಗೆ, ಹಿಂದೆ ಒಂದು ಸಾರಿ ಇಲ್ಲಿ ಮಾನ್ಯ ವಿದ್ಯಾ ಸಚಿವರು ಹೇಳಿಕೆ ಕೊಟ್ಟು ನಾವು ಅದನ್ನು ಸರಿಪಡಿಸುತ್ತೇನೆ, ವಿಚಾರಣೆ ಮಾಡುಸುತ್ತೇನೆ ಎಂಬ ಮಾತನ್ನು ಹೇಳಿದ್ದರು. ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಈಗಾಗಲೇ ವಿಚಾರಣೆ ನಡೆದು ಆ ಒಂದು ವರದಿ ಬಂದಿದೆ. ಅದು ರಾಜ್ಯಪಾಲರಿಗೆ ಅಂದರೆ ಪ್ರೋ - ಚಾನ್ಸಲರ್‌ಗೆ ಹೋಗಿದೆ ಎಂಬುದನ್ನು ಮಂತ್ರಿಗಳೂ ಕೂಡಾ ಹೇಳಿದ್ದಾರೆ. ಅದು ಏನಾಯಿತು? ಇವತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ ವಿದ್ಯಾರ್ಥಿಗಳು ಒಂದು ಕಡೆ, ಅಧ್ಯಾಪಕರ ವರ್ಗದವರು ಒಂದು ಕಡೆ, ಅಲ್ಲಿರತಕ್ಕಂಥ ಉಪಕುಲಪತಿಗಳು ಮತ್ತೊಂದು ಕಡೆ ಹೀಗಾಗಿದೆ. ವಿಶ್ವವಿದ್ಯಾನಿಲಯದಲ್ಲಿ ಯಾವ ತರಹದ ಒಂದು ವಾತಾವರಣ ಇರಬೇಕಾಗಿತ್ತು ಅದಿಲ್ಲ.

ಅಧ್ಯಕ್ಷರು : ಅದನ್ನು ಬರೆದು ಕಳುಹಿಸಿಕೊಡಿ

ಶ್ರೀ ಸಿ. ಬೈರೇಗೌಡ : ನಿನ್ನೆ ದಿವಸ ಕಳುಹಿಸಿದ್ದೇನೆ

ಅಧ್ಯಕ್ಷರು : ಅದನ್ನು ನೋಡುತ್ತೇನೆ.

ಶ್ರೀ ಸಿ. ಭೈರೇಗೌಡ : ದಯವಿಟ್ಟು ಇದಕ್ಕೆ ಒಂದು ಹೇಳಿಕೆಯನ್ನು ಕೊಡಿಸಬೇಕು. ಈ ಸದನ ಪ್ರಾರಂಭ ಆದಾಗ ಒಂದು ವಿಚಾರದ ಬಗ್ಗೆ ನಾನು ನೋಟೀಸ್ ಅನ್ನು ಕೊಟ್ಟಿದ್ದೆ.

1.25 ಪಿ.ಎಂ.

ಗಲ್ಬರ್ಗಾದಲ್ಲಿ ಜಿಲ್ಲಾ ಪರಿಷದ್ ಸದಸ್ಯರು ಹಾಗೂ ಸ್ಥಾಯಿ ಸಮಿತಿ ಅಧ್ಯಕ್ಷರು ಕೊಲೆಯಾಗಿರುವ ಬಗ್ಗೆ

ಗುಲ್ಬರ್ಗಾದಲ್ಲಿ ದಿನಾಂಕ ೧-೬-೯೧ರಲ್ಲಿ ಭೀಕರವಾದ ಕೊಲೆ ನಡೆದಿದೆ. ಹಗಲು ೧೧ ಘಂಟೆ ಸಮಯದಲ್ಲಿ ನಮ್ಮ ಪಕ್ಷದ ಕಾರ್ಯಕರ್ತರಾದ ಶ್ರೀ ಗೌಡಪ್ಪಗೌಡರ ಕೊಲೆ ನಡೆದಿದೆ. ಅವರು ಒಬ್ಬ ಜಿಲ್ಲಾ ಪರಿಷತ್ತು ಸದಸ್ಯರಾಗಿದ್ದು ಮತ್ತು ಒಂದು ಸ್ಥಾಯಿ ಸಮಿತಿ ಅಧ್ಯಕ್ಷರು ಕೂಡ ಆಗಿದ್ದಾರೆ. ಹಗಲು ೧೧ ಘಂಟೆ ಸಮಯದಲ್ಲಿ ಕೊಲೆ ನಡೆದಿದೆ. ಅಪರಾಧಿಗಳನ್ನು ನೋಡಿರತಕ್ಕಂಥವರು ಇದ್ದಾರೆ. ಮತ್ತು ಅವರನ್ನು ಇಲ್ಲಿಯವರೆಗು ಅರೆಸ್ಟ್ ಮಾಡಿಲ್ಲ. ಮತ್ತು ಅವರಿಗೆ ರಕ್ಷಣೆ ಕೊಡತಕ್ಕಂಥ ಪ್ರಯತ್ನ ಕೂಡ ಇವತ್ತು ನಡೆದಿದೆ. ಹಗಲು ೧೧ ಘಂಟೆಯಲ್ಲಿ ಕೊಲೆಯಾಗಿದೆ. ಇದು ಒಬ್ಬ ರಾಜಕೀಯ ಪಕ್ಷದ ಮುಖಂಡರನ್ನು ಕೊಲೆ ಮಾಡಿರತಕ್ಕ ವಿಷಯವಾಗಿದೆ. ಇದರ ಬಗ್ಗೆ ಸರ್ಕಾರ ಇನ್ನೂ ಕೂಡ ಕ್ರಮ ತೆಗೆದುಕೊಂಡಿಲ್ಲ. ಇದರ ಹಿಂದೆ ಪ್ರಬಲವಾದ ಜನ ಸಾಕಷ್ಟು ಇದ್ದಾರೆ. ಇದರಲ್ಲಿ ಮಾನ್ಯ ಗೃಹ ಮಂತ್ರಿಗಳ ಕೈ ಕಟ್ಟಿದೆ ಎಂದು ನನಗೆ ತಿಳಿದಿದೆ. ಆದ್ದರಿಂದ ಇವತ್ತು ಇದರ ಬಗ್ಗೆ ತೀವ್ರವಾದ ಕ್ರಮವನ್ನು ಮಾನ್ಯ ಗೃಹ ಮಂತ್ರಿಗಳು ತೆಗೆದುಕೊಳ್ಳಬೇಕು. ಇದು ಅವರ ಕೈ ಮೀರಿರುವಂತಹ ಪ್ರಯತ್ನ ನಡೆದಿದೆ. ಇದರ ಬಗ್ಗೆ ಒಂದು ಹೇಳಿಕೆ ಕೊಡುವುದಕ್ಕೆ ದಯವಿಟ್ಟು ತಾವು ಹೇಳಬೇಕು ಮತ್ತು ನಾನು ಈ ವಿಷಯ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ಮತ್ತು ಅಲ್ಲಿ ಸಾಕ್ಷಿಗಳು ಏನಿದ್ದಾರೆ ಅವರನ್ನು ಬೆದರಿಸತಕ್ಕಂಥ ಕೆಲಸ ಸಹ ನಡೆಯುತ್ತಿದೆ.

ಅರ್ಜಿಗಳನ್ನೊಪ್ಪಿಸುವುದು

೧) ಶ್ರೀ ಚೌಡರೆಡ್ಡಿ : ಚಿಂತಾಮಣಿಯ ಚಿತ್ರಮಂದಿರಗಳ ಮಾಲೀಕರು ತೆರಿಗೆಯನ್ನು ವಂಚಿಸುತ್ತಿರುವುದರಿಂದ ಪುರಸಭೆಗೆ ಆಗುತ್ತಿರುವ ಆದಾಯ ಖೋತಾದ ಬಗ್ಗೆ ಅರ್ಜಿಯನ್ನೊಪ್ಪಿಸುತ್ತಿದ್ದೇನೆ.

೨) ಶ್ರೀ ಟಿ.ಬಿ. ಜಯಚಂದ್ರ : ಶಿರಾ ತಾಲ್ಲೂಕು ಭಟ್ಟಿಗನಹಳ್ಳಿ ಗ್ರಾಮದ ಪರಿಶಿಷ್ಟ ಜನಾಂಗಕ್ಕೆ ಮಾದನ ಹಳ್ಳಿಯಲ್ಲಿರುವ ಅರಣ್ಯ ಇಲಾಖೆಗೆ ಸೇರಿದ ಜಮೀನನ್ನು ಸಾಗುವಳಿಗೆ ಮಂಜೂರು ಮಾಡುವ ಬಗ್ಗೆ ಅರ್ಜಿಯನ್ನೊಪ್ಪಿಸುತ್ತಿದ್ದೇನೆ.

೩) ಶ್ರೀ ಪ್ರಭಾಕರ ಎಸ್. ರಾಣೆ. ಧಾರವಾಡ ಜಿಲ್ಲೆಯ ಕ್ಯಾರಕೊಪ್ಪ ಮತ್ತು ಚಿಕ್ಕಮಲಗವಾಡ ಗ್ರಾಮಗಳ ಸುತ್ತಮುತ್ತ ನೀಲಗಿರಿ ಮರಗಳನ್ನು ಕಡಿದಿರುವ ಬಗ್ಗೆ ಅರ್ಜಿಯನ್ನೊಪ್ಪಿಸುವುದು.

೪) ಶ್ರೀ ಜಿ.ಎಸ್. ಆಚಾರ್ : ಈ ಕೆಳಕಂಡ ಅರ್ಜಿಗಳನ್ನೊಪ್ಪಿಸುವುದು ಕುಂದಾಪುರ ತಾಲ್ಲೂಕಿನ ಪಡುವರಿ ಗ್ರಾಮಕ್ಕೆ ಕುಡಿಯುವ ನೀರಿನ ಪೂರೈಕೆ ಬಗ್ಗೆ ಅರ್ಜಿಯನ್ನೊಪ್ಪಿಸುತ್ತಿದ್ದೇನೆ

ಅ) ಕೊಂಕಣ ರೈಲ್ವೆ ಮಾರ್ಗದಲ್ಲಿ ಚಕ್ರನದಿ ಮತ್ತು ಕೊಲ್ಲೂರು ಹೊಳೆಗೆ ಸೇತುವೆ ನಿರ್ಮಿಸುವಾಗ ಜೊತೆಗೆ ವಾಹನ ಸೇತುವೆ ನಿರ್ಮಿಸುವ ಬಗ್ಗೆ ಹಾಗೂ

ಆ) ಕುಂದಾಪುರ ತಾಲ್ಲೂಕು ಪಡುವರಿ ಗ್ರಾಮಕ್ಕೆ ರಸ್ತೆ ನಿರ್ಮಾಣ ಕುರಿತು ಹಾಗೂ

ಇ) ಕುಂದಾಪುರ ತಾಲ್ಲೂಕು ಕಿರಿಮಂಜೇಶ್ವರ ಗ್ರಾಮದಿಂದ ಕೊಡೇರಿಯ ಗ್ರಾಮಕ್ಕೆ ಹೊಸ ರಸ್ತೆ ರಚಿಸುವ ಬಗ್ಗೆ ಬಂದ ಸಾರ್ವಜನಿಕರ ಅರ್ಜಿಗಳನ್ನು ತಮ್ಮ ಮೂಲಕ ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಈ ಎಲ್ಲಾ ಅರ್ಜಿಗಳನ್ನು ಒಪ್ಪಿಸಲಾಯಿತು.

(ಛೇರ್ಮನ್ ಶ್ರೀ ಬಿ.ಎಂ. ಇದಿನಬ್ಬ ಅವರು ಅಧ ಪೀಠವನ್ನು ಅಲಂಕರಿಸಿದರು)

ನಿಯಮ 334ರ ಮೇರೆಗೆ

(1) ಸಂಚಾರಿ ಪೋಲೀಸ್ ಹಾಗೂ ಜೀಬ್ರಾ ಕ್ರಾಸಿಂಗ್ ಹಾಕುವುದು

ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ರಾಜಾಜಿನಗರದ ೬ನೇ ಬಡಾವಣೆಯಲ್ಲಿ ಬಹಳಷ್ಟು ಶಾಲೆಗಳನ್ನು ಒಳಗೊಂಡಿದ್ದು ಅಂದರೆ ಸೆಂಟ್‌ಹ್ಯಾನ್ಸ್, ಸೆಂಟ್‌ಮಿರಾಸ್, ಪೇರೆಟ್ ಹೈಸ್ಕೂಲ್ ಮತ್ತು ಸರ್ಕಾರಿ ಪ್ರೌಢಶಾಲೆಗಳಿದ್ದು ಶಾಲೆಯ ವೇಳೆಯಲ್ಲಿ ಹಾಗೂ ಕಛೇರಿಯ ವೇಳೆಯಲ್ಲಿ ಮಕ್ಕಳು ಹಾಗೂ ಇತರರು ರಸ್ತೆಯನ್ನು ದಾಟುವುದಕ್ಕೆ ಬಹಳಷ್ಟು ತೊಂದರೆಯಾಗುತ್ತಿದೆ. ೮೦" ರಸ್ತೆಯಲ್ಲಿ ಖಾಸಗಿ, ಸರ್ಕಾರಿ ಹಾಗೂ ವಾಹನಗಳು ಬಹಳಷ್ಟು ಓಡಾಡುತ್ತಿದ್ದು ಶಾಲಾ ಮಕ್ಕಳು ರಸ್ತೆಯನ್ನು ದಾಟುವಾಗ ಅನೇಕ ವೇಳೆ ಪ್ರಾಣವನ್ನು ಕಳೆದುಕೊಂಡಿರುವ ಸಂದರ್ಭಗಳಿರುತ್ತವೆ. ಈ ಹಿನ್ನೆಲೆಯಲ್ಲಿ ಸಂಬಂಧ ಪಟ್ಟ ಪೊಲೀಸ್ ಹಾಗೂ ಸಂಚಾರಿ ಪೊಲೀಸನ್ನು ಹಾಕಿಸಲು ಅಲ್ಲಿಯ ಸ್ಥಳೀಕರು ಸಂಬಂಧಪಟ್ಟ ಅಧಿಕಾರಿಗಳನ್ನು ಕೋರಿಕೊಂಡಿದ್ದರು ಸಹ ಇದುವರೆಗಾಯ್ತು ಯಾವುದೇ ಕ್ರಮ ಕೈಗೊಂಡಿರುವುದಲ್ಲ. ಅದು ಅಲ್ಲದೆ ೭೫ನೇ ಕ್ರಾಸಿನ ಬಳಿ ಆಟೋ ರಿಕ್ಷಾಗಳು ನಿಲ್ಲುವುದನ್ನು ತಡೆಗಟ್ಟಲು, ಶಾಲಾ ವೇಳೆಯಲ್ಲಿ (ದಿನವೂ ಇದ್ದರೂ ಒಳ್ಳೆಯದೆ) ಸಂಚಾರಿ ಪೊಲೀಸನ್ನು ನೇಮಿಸಲು ಹಾಗೂ ಜೀಬ್ರಾ ಕ್ರಾಸಿಂಗ್ ಹಾಕಿಸುವ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ಮಾನ್ಯ ಗೃಹ ಸಚಿವರ ಗಮನಕ್ಕೆ ತರಲಾಗಿದೆ. (ಸಂಬಂಧಪಟ್ಟ ಮಾಹಿತಿಗಳನ್ನು ಲಗತ್ತಿಸಲಾಗಿದೆ)

ಶ್ರೀ ಜಿ. ಪುಟ್ಟಸ್ವಾಮಿಗೌಡ: (ಆರೋಗ್ಯಸಚಿವರು) : ಗೃಹಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಗಳನ್ನು ಮಾಡಲಿಚ್ಛಿಸುತ್ತೇನೆ.

ಬೆಂಗಳೂರು ನಗರದಲ್ಲಿ ಪಾದಚಾರಿಗಳು ರಸ್ತೆ ದಾಟಬೇಕಾದ ಕಡೆಗಳಲ್ಲಿ ಜೀಬ್ರಾ ಕ್ರಾಸಿಂಗ್ಸ್ (ಪೆಡೆಸ್ಟ್ರಿಯನ್ಸ್ ಕ್ರಾಸಿಂಗ್ಸ್) ಸ್ಥಳಗಳಲ್ಲಿ ಬಣ್ಣ ಹಚ್ಚಿಸಬೇಕಾದದ್ದು ಬೆಂಗಳೂರು ಮಹಾ ನಗರ ಪಾಲಿಕೆ ಮಾಡಬೇಕಾಗಿದೆ. ಎಲ್ಲೆಲ್ಲಿ ಹೀಗೆ ಬಣ್ಣ ಹಚ್ಚಬೇಕಾಗಿದೆ ಎಂದು ಸ್ಥಳಗಳನ್ನು ಗುರುತಿಸಿ, ಬೆಂಗಳೂರು ನಗರ ಸಂಚಾರಿ ಪೋಲೀಸಿನವರು ನಗರಪಾಲಿಕೆಗೆ ತಿಳಿಸುತ್ತಾರೆ. ಈ ವರ್ಷದ ಮೊದಲ ಭಾಗದಲ್ಲಿ ಬೆಂಗಳೂರು ಮಹಾನಗರದ ಯಾವ ಯಾವ ರಸ್ತೆಗಳಿಗೆ ಹೀಗೆ ಬಣ್ಣ ಹಚ್ಚಿಸಬೇಕಾಗಿದೆಯೆಂಬ ಒಟ್ಟಾರೆ ಪ್ರಸ್ತಾವನೆಯನ್ನು ಬೆಂಗಳೂರು ಮಹಾನಗರಪಾಲಿಕೆಗೆ ಈಗಾಗಲೇ ತಿಳಿಸಲಾಗಿದೆ. ಇದಕ್ಕೆ ತಗಲುವ ಅಂದಾಜು ವೆಚ್ಚ ಸುಮಾರು ಐದು ಲಕ್ಷ ರೂಪಾಯಿಗಳು. ಈ ಪ್ರಸ್ತಾವನೆ ಇನ್ನೂ ಮಹಾನಗರಪಾಲಿಕೆಯ ಪರಿಶೀಲನೆಯಲ್ಲೇ ಇದೆ. ಇತ್ತೀಚಿನ

ಮಳೆಯಿಂದ ಈ ಮುಂಚೆ ಪೆಡೆಸ್ಟ್ರಿಯನ್ ಕ್ರಾಸಿಂಗ್ಸ್‌ನಲ್ಲಿ ಹಚ್ಚಲಾಗಿದ್ದ ಜೀಬ್ರಾ ಕ್ರಾಸಿಂಗ್ಸ್ ಅಳಿಸಿಹೋಗಿರಲೂ ಬಹುದು ಮತ್ತು ಕಾಣಿಸದಂತೆಯೂ ಆಗಿರಬಹುದಾದ ಪುನ: ಬಣ್ಣ ಬಳೆಯುವ ಕೆಲಸ ಮಹಾನಗರಪಾಲಿಕೆಯಿಂದ ಮಂಜೂರಾತಿ ಅಥವಾ ಬಳೆಯುವ ಬಣ್ಣ ಒದಗಿಸಿದ ಕೂಡಲೇ ಮಾಡಲು ನಗರ ಸಂಚಾರಿ ಪೋಲೀಸರು ಸಿದ್ಧರಿದ್ದಾರೆ. ಈ ಬಗ್ಗೆ ಮಹಾನಗರಪಾಲಿಕೆಯನ್ನು ಶೀಘ್ರ ಮಂಜೂರಾತಿಗಾಗಿ ಜ್ಞಾಪಿಸುತ್ತಿರಲಾಗಿದೆ. ಈ ಕೆಲಸಕ್ಕಾಗಿ ನಗರ ಪೋಲೀಸ್ ಸಂಚಾರಿ ವಿಭಾಗಕ್ಕೆ ಪ್ರತ್ಯೇಕವಾದ ಹಣ ಗೊತ್ತುಪಡಿಸಿಲ್ಲ.

ಹೀಗಿದ್ದು, ರಸ್ತೆ ದಾಟುವ ಪಾದಚಾರಿಗಳು ಮತ್ತು ಶಾಲಾ ಮಕ್ಕಳು ಇವರ ಸುರಕ್ಷತೆಯ ದೃಷ್ಟಿಯಿಂದ ಹಾಲಿ ಇರುವ ಸಂಚಾರಿ ಪೋಲಿಸ್ ಸಿಬ್ಬಂದಿಯಲ್ಲಿ ಕೆಲವರನ್ನು, ಮಾನ್ಯ ಸದಸ್ಯರು ಸೂಚಿಸಿರುವಂತೆ ರಾಜಾಜಿನಗರ ಆರನೇ ಬ್ಲಾಕ್‌ನಲ್ಲೂ ಸಹ ಟ್ರಾಫಿಕ್ ಪೇದೆಯನ್ನು ನೇಮಿಸುವ ಏರ್ಪಾಡು ಮಾಡಲಾಗಿದೆ. ಮತ್ತು ೭೫ನೇ ಕ್ರಾಸ್ ಬಳಿ ಆಟೋರಿಕ್ಷಾಗಳು ಸುವ್ಯವಸ್ಥಿತವಾಗಿ ಪಾದಚಾರಿಗಳಿಗೆ ತೊಂದರೆಯಾಗದಂತೆ ಒಂದು ಗೊತ್ತಾದ ಸ್ಥಳದಲ್ಲಿ ಪಾರ್ಕ್ ಮಾಡುವ ವ್ಯವಸ್ಥೆಯನ್ನು ಮಾಡಲಾಗಿದೆ.

ಮಾನ್ಯ ಸದಸ್ಯರು ಮತ್ತು ರಾಜಾಜಿನಗರ ಆರನೇ ಬದಾಲಾವಣೆಯ ನಾಗರಿಕರು ದಿನಾಂಕ ೯-೮-೯೧ ರಂದು ನನಗೆ ಈ ಬಗ್ಗೆ ಮನವಿಯೊಂದನ್ನು ಕೊಟ್ಟಿದ್ದರು. ಈ ವಿಷಯವನ್ನು ನಾನು ನಗರ ಪೋಲಿಸ್ ಕಮಿಷನರ್ ಮತ್ತು ಸಂಚಾರಿ ವಿಭಾಗದ ಡಿ.ಸಿ.ಪಿ.ಯಾರೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲು ಈಗಾಗಲೇ ಆದೇಶ ನೀಡಿದ್ದೇನೆ.

ಮಾನ್ಯ ಸದಸ್ಯರು ಮತ್ತು ರಾಜಾಜಿನಗರ ಆರನೇ ಬಡಾವಣೆಯ ನಾಗರಿಕರು ದಿನಾಂಕ 9-8-91ರಂದು ನನಗೆ ಈ ಬಗ್ಗೆ ಮನವಿಯೊಂದನ್ನು ಕೊಟ್ಟಿದ್ದರು. ಈ ವಿಷಯವನ್ನು ನಾನು ನಗರ ಪೋಲಿಸ್ ಕಮಿಷನರ್ ಮತ್ತು ಸಂಚಾರಿ ವಿಭಾಗದ ಡಿ.ಸಿ.ಪಿ. ಯವರೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲು ಈಗಾಗಲೇ ಆದೇಶ ನೀಡಿದ್ದೇನೆ.

ಸಂಚಾರಿ ಪೋಲೀಸ್ ಹಾಗೂ ಜೀಬ್ರಾ ಕ್ರಾಸಿಂಗ್ ಹಾಕುವ ಬಗ್ಗೆ

ಮೇಲ್ಕಂಡ ವಿಷಯಕ್ಕೆ ಸಂಬಂಧ ಪಟ್ಟಂತೆ ರಾಜಾಜಿನಗರದ 6ನೇ ಬಡಾವಣೆಯ ನಾಗರೀಕರು ಕೇಳಿಕೊಳ್ಳುವುದೇನೆಂದರೆ, ರಾಜಾಜಿನಗರದ 6ನೇ ಬಡಾವಣೆಯು ಬಹಳಷ್ಟು ಶಾಲೆಗಳನ್ನು ಒಳಗೊಂಡಿರುತ್ತದೆ. ಅವುಗಳು ಯಾವುವೆಂದರೆ ಸೆಂಟ್‌ಜ್ಯಾನ್ಸ್, ಸೆಂಟ್ ಮಿನಾನ್, ಪೇರೆಂಟ್ಸ್ ಹೈಸ್ಕೂಲ್ ಮತ್ತು ಸರ್ಕಾರಿ ಪ್ರೌಢಶಾಲೆಗಳಾಗಿರುತ್ತದೆ. ಈ ಎಲ್ಲಾ ಶಾಲೆಗಳು ಬಹಳಷ್ಟು ಹತ್ತಿರದಲ್ಲಿ ಇರುವುದರಿಂದ, 80 ಅಡಿ ರಸ್ತೆಯಲ್ಲಿ ಬಹಳಷ್ಟು ವಾಹನಗಳು ಅಂದರೆ ಬಿ.ಟಿ.ಎಸ್ ಮತ್ತು ಖಾಸಗಿ ವಾಹನಗಳು ಓಡಾಡುವುದರಿಂದ, ಮಕ್ಕಳು ಮತ್ತು ಪಾದಾಚಾರಿಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ರಸ್ತೆಗಳನ್ನು ದಾಟಲು ಬಹಳಷ್ಟು ತೊಂದರೆಯಾಗಿರುತ್ತದೆ. ಇದು ಅಲ್ಲದೆ ಪಾಠಶಾಲೆಯ ಮಕ್ಕಳನ್ನು ದಾಟಿಸಬೇಕಾದರೆ ಒಂದು ಪ್ರಯಾಸದ ಕೆಲಸವೇ ಆಗುತ್ತದೆ. ಈ ಬಗ್ಗೆ ಅಲ್ಲಿಯ ಪೋಲಿಸ್ ಠಾಣೆಗೆ (ಮಾಗಡಿ ರಸ್ತೆ) ಮಕ್ಕಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ರಸ್ತೆ ದಾಟಿಸಲು ಹಾಗೂ ವಾಹನಗಳನ್ನು ನಿಯಂತ್ರಿಸಲು ಕೇಳಿಕೊಂಡಿದ್ದಾಗ್ಯೂ ಸಹ ಯಾವುದೇ ರೀತಿಯ ಕ್ರಮ ಕೈಗೊಂಡಿರುವುದಿಲ್ಲ. ಇದರ ಜೊತೆಗೆ 80 ಅಡಿ ರಸ್ತೆಯ ೭೫ನೇ ಕ್ರಾಸ್ ಮುಂದೆ ಬಸ್ ನಿಲ್ದಾಣ ಇದ್ದು, ಬಹಳಷ್ಟು ಆಟೋ ರಿಕ್ಷಾಗಳು ಸಹ ನಿಲ್ಲುತ್ತವೆ. ಇದರಿಂದ ಸಾಕಷ್ಟು ಅಪಘಾತಗಳಾಗಿ ಪ್ರಾಣಗಳನು ತೆಗೆದುಕೊಂಡಿರುವ ಸಂದರ್ಭಗಳುಂಟು.

ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಈ ಕೆಳಕಂಡ ಸೌಲಭ್ಯಗಳನ್ನು ನಮಗೆ ಕೂಡಲೇ ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇವೆ.

1. 80 ಅಡಿ ರಸ್ತೆಯಲ್ಲಿರುವ ಕರ್ನಾಟಕ ಪ್ರಾವಿಷನ್ ಸ್ಟೋರ್ಸ್ ಮುಂದುಗಡೆ ಜೀಬ್ರಾ ಕ್ರಾಸಿಂಗ್ ಹಾಕಿಸುವುದು.

2. 80 ಅಡಿ ರಸ್ತೆಯಲ್ಲಿ ಬಹಳಷ್ಟು ವಾಹನಗಳು ಓಡಾಡುವುದರಿಂದ ಹಾಗೂ ಅಡ್ಡ ರಸ್ತೆಗಳು ಇರುವುದರಿಂದ ರೋಡ್ ಹಂಪ್‌ಗಳನ್ನು ಹಾಕಿಸುವುದು.

3. ಶಾಲೆಯ ವೇಳೆಯಲ್ಲಿ ಮಕ್ಕಳು ರಸ್ತೆಯನ್ನು ದಾಟಲು ಅನುಕೂಲವಾಗುವಂತೆ, ಹಾಗೂ ಇದೇ ವೇಳೆಯಲ್ಲಿಯೇ ಕಛೇರಿಯ ಬಸ್ಸುಗಳು ಓಡಾಡುವುದರಿಂದ ವಾಹನಗಳನ್ನು ನಿಯಂತ್ರಿಸಲು ಹಾಗೂ ಮಕ್ಕಳು ಸುಲಭವಾಗಿ ರಸ್ತೆಯನ್ನು ದಾಟಲು ಸಂಚಾರಿ ಪೋಲೀಸರನ್ನು ನೇಮಿಸುವುದು.

4. ಭಾಷ್ಯಮ್ ವೃತ್ತದಿಂದ ಪ್ರಸನ್ನಾದ ಕಡೆ ಬರುವಾಗ ಮತ್ತೊಂದು ವೃತ್ತವು ಇದ್ದು ಅದನ್ನು ದಾಟುವಾಗ ಅಪಘಾತವಾಗುವ ಸಂಭವವಿರುವುದರಿಂದ, ಕ್ಷೇಮದ ದೃಷ್ಟಿಯಿಂದ ಹಂಪ್‌ಗಳನ್ನು ಹಾಕಿಸುವುದು.

5. 75ನೇ ಕ್ರಾಸ್ ಮುಂದೆ ಇರುವ ಬಸ್ ನಿಲ್ದಾಣದ ಹತ್ತಿರ ಆಟೋರಿಕ್ಷಾಗಳು ನಿಲ್ಲದಂತೆ ತಡೆಯುವುದು.

6. 75ನೇ ಕ್ರಾಸ್‌ಗೆ (80 ಅಡಿ ರಸ್ತೆಯಲ್ಲಿರುವ) ಸಂಬಂಧಿಸಿದಂತೆ ಇರುವ ಹಾಲಿನ ಬೂತನ್ನು ಸ್ಥಳಾಂತರಿಸುವುದು.

ಈ ಮೇಲ್ಕಂಡ ಎಲ್ಲಾ ಸೌಲಭ್ಯಗಳು ನಾಗರೀಕರಿಗೆ ಅತ್ಯಂತ ಅವಶ್ಯಕವಾಗಿರುವುದರಿಂದ ಈ ಕೂಡಲೇ ಎಲ್ಲಾ ಸೌಲಭ್ಯಗಳನ್ನು ನಮಗೆ ಕಲ್ಪಿಸಿಕೊಡಬೇಕೆಂದು ಮತ್ತೊಮ್ಮೆ ಕೋರುತ್ತೇವೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿಗಳು.

(2) ಕನಕಪುರ ತಾಲ್ಲೂಕು ಸಾತನೂರು ಹೋಬಳಿ ಹರಿಹರ ಕೆರೆಯ ನಿರ್ಮಾಣ ಕಾರ್ಯ ಕುರಿತು.

ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ಅಧ್ಯಕ್ಷರೇ, ಕನಕಪುರ ತಾಲ್ಲೂಕು ಸಾತನೂರು ಹೋಬಳಿ ಹರಿಹರ ಕೆರೆ ನಿರ್ಮಾಣ ಕಾರ್ಯ ಪೂರ್ಣಗೊಂಡು ಸುಮಾರು ಹತ್ತು ವರ್ಷಗಳೇ ಕಳೆದಿದ್ದು ಈ ತನಕ ಒಮ್ಮೆಯೂ ಈ ಕೆರೆ ತುಂಬಿಲ್ಲ. ಕೆರೆಗೆ ಹೆಚ್ಚುವರಿ ನೀರನ್ನು ಹರಿಸುವ ದೃಷ್ಟಿಯಿಂದ ಕಿತ್ತಳೆ ಹಳ್ಳಕ್ಕೆ ಅಡ್ಡಲಾಗಿ ಅಣೆಕಟ್ಟು ಕಟ್ಟಿಸಿ, ಅಲ್ಲಿಂದ ಫೀಡ್ ಚಾನಲ್ ಮೂಲಕ ಕೆರೆಗೆ ನೀರನ್ನು ಹರಿಸಲು ತಯಾರಿಸಲಾಗಿದ್ದ ಯೋಜನೆಯ ಅನುಷ್ಠಾನ ಯಾವಾಗ ಮಾಡಲಾಗುತ್ತದೆ ಎಂಬುದರ ಬಗ್ಗೆ ಸರ್ಕಾರದ ವತಿಯಿಂದ ತಿಳಿಯಬಯಸುತ್ತಾ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಮಾನ್ಯ ಸಿ.ಎಂ. ಲಿಂಗಪ್ಪನವರ ಪ್ರಶ್ನೆಗೆ ಬೆಂಗಳೂರು ಜಿಲ್ಲಾಪರಿಷತ್ತಿನಿಂದ ಸರಿಯಾದ ಮಾಹಿತಿ ದೊರಕಿಲ್ಲ. ಆಫೀಸರ್‌ಗಳೂ ಈಗಾಗಲೇ ಕಾಂಟಾಕ್ಟ್ ಮಾಡಿದ್ದಾರೆ. ಮಾಹಿತಿ ಬಂದ ಕೂಡಲೇ ಉತ್ತರ ಒದಗಿಸಿಕೊಡುತ್ತೇವೆ.

(ಮಾನ್ಯ ಸದಸ್ಯರಾದ ಡಾ, ಆರ್.ಬಿ. ಚೌದರಿಯವರು ಸದನದಲ್ಲಿ ಗೈರು ಹಾಜರಾಗಿದರು)

(3) ಕರ್ನಾಟಕ ರಾಜ್ಯದಲ್ಲಿ ಖಾಸಗಿ ಬಸ್ಸುಗಳಿಗೆ ರಹದಾರಿ ನೀಡುವ ಕುರಿತು.

ಶ್ರೀ ಜಿ.ಎಸ್. ಆಚಾರ್ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸ, ವಿವಾಹ ಸಂಬಂಧ ಪ್ರಯಾಣ, ಸಾಂಸ್ಕೃತಿಕ ಪ್ರವಾಸ, ರೈತರ ಯುವಕರ ಪ್ರಯಾಣಕ್ಕಾಗಿ ಹಿಂದೆ ಖಾಸಗಿ ಬಸ್ಸುಗಳನ್ನು ಬಾಡಿಗೆಗೆ ಪಡೆದುಕೊಳ್ಳುವ ಅವಕಾಶವಿದ್ದಿತು. ಈ ರಹದಾರಿ ನೀಡುವ ಕ್ರಮದ ರದ್ದಿಯಾಯಿತಿಯಿಂದಾಗಿ ಸಾರ್ವಜನಿಕರಿಗೆ ತುಂಬಾ ತೊಂದರೆ ಆಗಿದೆ. ಆದರೆ, ಕೇರಳ, ತಮಿಳುನಾಡು ಹೀಗೆ ಗಡಿ ಭಾಗದ ಬಸ್ಸುಗಳಿಗೆ ಕರ್ನಾಟಕದಲ್ಲಿ ಸಂಚರಿಸಲು ರಹದಾರಿ ನೀಡಲಾಗುತ್ತದೆ. ಇದರಿಂದ ರಾಜ್ಯದ ಬೊಕ್ಕಸಕ್ಕೂ ನಷ್ಟ. ಸಾರ್ವಜನಿಕರಿಗೂ ತೊಂದರೆ. ಈ ವಿಚಾರ ಪುನರ್ ಪರಿಶೀಲಿಸಿ ರಾಜ್ಯದಲ್ಲಿ ಖಾಸಗಿ ಬಸ್ಸುಗಳಿಗೆ ರಹದಾರಿ ನೀಡುವ ವ್ಯವಸ್ಥೆ ಮಾಡಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಇದನ್ನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿ ಉತ್ತರವನ್ನು ಒದಗಿಸಲಾಗುತ್ತದೆ.

(4) ಬಗರ್ ಹುಕುಂ ಸಾಗುವಳಿ ಭೂಮಿಯನ್ನು ಸಕ್ರಮಗೊಳಿಸಲು ಕಾಲದ ಮಿತಿಯನ್ನು ಒಂದು ತಿಂಗಳು ಮುಂದುವರಿಸುವುದು.

ಶ್ರೀ ಜಿ. ರಾಜೂಗೌಡ : ಮಾನ್ಯ ಅಧ್ಯಕ್ಷರೇ, ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸಲು ಕಾಲದ ಮಿತಿಯನ್ನು ಗೊತ್ತು ಮಾಡಿದ್ದುದು ಸರಿಯಷ್ಟೇ. ಈ ಕಾಲಮಿತಿ 17-9-1991 ಕ್ಕೆ ಮುಗಿದಿರುತ್ತೆ. ಅನೇಕ ಗ್ರಾಮಾಂತರ ಮತ್ತು ಬೆಟ್ಟದ ತಪ್ಪಲ ವಾಸಿಗಳಿಗೆ ಕಾಲಮಿತಿಯ ಅರಿವಿಲ್ಲದಿರುವುದರಿಂದಲೂ, ಈವಾಗ ಪ್ರತಿನಿತ್ಯ ನೂರಾರು ಅರ್ಜಿಗಳು ತಾಲ್ಲೂಕು ಕಛೇರಿಗೆ ಬರುತ್ತಿರುವುದರಿಂದಲೂ ನಮ್ಮ ಸರ್ಕಾರದ ಗುರಿ, ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವ ಕೆಲಸ ಪೂರ್ಣಮಟ್ಟದಲ್ಲಿ ನೆರವೇರಬೇಕಾದರೆ ತಾವು ಕನಿಷ್ಠ ಇನ್ನೊಂದು ತಿಂಗಳಾದರೂ ಅವಧಿಯನ್ನು ವಿಸ್ತರಿಸಬೇಕೆಂದು ಈ ಮುಖಾಂತರ ಮಾನ್ಯ ಕಂದಾಯ ಸಚಿವರನ್ನು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ರಾಜ್ಯಾದ್ಯಂತ ಸರ್ಕಾರಿ ಜಮೀನುಗಳಲ್ಲಿ ನಡೆದಿರುವ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸುವ ಸಲುವಾಗಿ ಕರ್ನಾಟಕ ಭೂ ಕಂದಾಯ ಕಾಯಿದೆ 1964 ಕ್ಕೆ ತಿದ್ದುಪಡಿಯನ್ನು ಮಾಡಿ ಕಲಂ ೯೪ಎ ಅನ್ನು ಸೇರಿಸಲಾಗಿದೆ. ಸದರಿ ತಿದ್ದುಪಡಿ ಕಾಯಿದೆಯು 20-3-1991 ರಿಂದ ಜಾರಿಗೆ ಬಂದಿರುತ್ತದೆ. ಇದರಡಿಯಲ್ಲಿ, ಸಕ್ರಮಗೊಳಿಸಲು ಅರ್ಜಿಗಳನ್ನು ಈ ತಿದ್ದುಪಡಿ ಕಾಯಿದೆಯು ಜಾರಿಗೆ ಬಂದಂದಿನಿಂದ ಆರು ತಿಂಗಳೊಳಗಾಗಿ ಸಂಬಂಧಪಟ್ಟ ತಹಶೀಲ್ದಾರರಿಗೆ ಸಲ್ಲಿಸಬೇಕಾಗಿದೆ. ಈ ಅವಧಿಯು ದಿನಾಂಕ 19.9.1991 ಕ್ಕೆ ಅಂತ್ಯವಾಗಿರುತ್ತದೆ. ಸಕ್ರಮೀಕರಣಗೊಳಿಸಲು ಅರ್ಜಿಗಳನ್ನು ಸಲ್ಲಿಸಲು ಮಾತ್ರ ಕಾಲಮಿತಿಯನ್ನು ಗೊತ್ತುಪಡಿಸಿದೆ, ಸಕ್ರಮೀಕರಣಗೊಳಿಸಲಿಲ್ಲ.

ಸಾರ್ವಜನಿಕರಿಂದ, ಇಲ್ಲಿಯವರೆಗೆ ಅನಧಿಕೃತ ಸಾಗುವಳಿಗಳನ್ನು ಸಕ್ರಮಗೊಳಿಸುವ ಸಲುವಾಗಿ ಸ್ವೀಕರಿಸಲಾದ ಅರ್ಜಿಗಳ ಬಗ್ಗೆ ಕೆಲವು ಜಿಲ್ಲೆಗಳಿಂದ ಬಂದಿರುವ ಮಾಹಿತಿಯ ಪ್ರಕಾರ, ಸರ್ಕಾರವು ನಿರೀಕ್ಷಿಸಿದ್ದ ಅರ್ಜಿಗಳ ಸಂಖ್ಯೆಗಿಂತ ಸುಮಾರು ಐದರಿಂದ ಹತ್ತರಷ್ಟು ಹೆಚ್ಚಾಗಿ ಬಂದಿರುವುದು ತಿಳಿದು ಬರುತ್ತದೆ. ಆದುದರಿಂದ ಈ ಅವಧಿಯನ್ನು ವಿಸ್ತರಿಸಲು ಯಾವುದೇ ಕಾರಣಗಳಿರುವುದು ಕಂಡುಬರುತ್ತಿಲ್ಲವಾದ್ದರಿಂದ

ಸದರಿ ಅವಧಿಯನ್ನು ವಿಸ್ತರಿಸಬೇಕಾದಲ್ಲಿ ಪುನಃ ಕರ್ನಾಟಕ ಭೂ ಕಂದಾಯ ಕಾಯಿದೆ 1964 ಕ್ಕೆ ಸೂಕ್ತ ತಿದ್ದುಪಡಿಯನ್ನು ವಿಧಾನಸಭೆಯಲ್ಲಿ ಮಂಡಿಸಿ ಸಭೆಯ ಅಂಗೀಕಾರವನ್ನು ಪಡೆದ ನಂತರ ಮಾಡಬೇಕಾಗುತ್ತದೆ.

(5) ಮೂಡಿಗೆರೆ ತಾಲ್ಲೂಕಿನ ಕಳಸಾದಲ್ಲಿ ಕುಡಿಯುವ ನೀರಿನ ತೊಂದರೆ ಕುರಿತು.

ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಅಧ್ಯಕ್ಷರೇ, ಮೂಡಿಗೆರೆ ತಾಲ್ಲೂಕಿನ ಕಳಸಾ ಮಂಡಲ ಪಂಚಾಯಿತಿಗೆ ಸೇರಿದ ಕಳಸಕ್ಕೆ ಕುಡಿಯುವ ನೀರಿನ ಯೋಜನೆ, 1979ರಲ್ಲಿ 22 ಲಕ್ಷಕ್ಕೆ ಮಂಜೂರಾಗಿದ್ದರೂ ಕಳಸದ ಜನರಿಗೆ ಸರಿಯಾಗಿ ಕುಡಿಯುವ ನೀರು ಒದಗಿಸಲಾಗುತ್ತಿಲ್ಲ.

ಈಗ ಕಳಸ ಹೋಬಳಿ ಕೇಂದ್ರವಾಗಿದೆ. ಜನಸಂಖ್ಯೆ ಈಗ 9 ಸಾವಿರಕ್ಕೂ ಹೆಚ್ಚಾಗಿರುತ್ತದೆ. ಇರುವ ವ್ಯವಸ್ಥೆ ಸರಿಯಾಗಿಲ್ಲದೆ ಆಗಾಗ ಪಂಪ್ ಸೋರಿಹೋಗಿ ವಾರಗಟ್ಟಲೆ ಜನರಿಗೆ ನೀರು ದೊರೆಯದೆ ಪರಿತಾಪ ಪಡುವಂತಾಗಿದೆ. ಕೂಡಲೇ ಈ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಕಳಸ ಗ್ರಾಮದ ಜನಸಂಖ್ಯೆಯು 1981ನೇ ಇಸವಿಯ ಜನಗಣತಿಯಂತೆ 9,668 ಇದ್ದು ಈಗಿನ ಜನಸಂಖ್ಯೆಯು ಸುಮಾರು 12,000 ಕ್ಕೂ ಮೇಲ್ಪಟ್ಟಿದೆ. ಈಗಿರುವ ನೀರು ಸರಬರಾಜು ಯೋಜನೆ ಈ 1980 ರಲ್ಲಿ 12 ಲಕ್ಷ ರೂಪಾಯಿಗಳಿಗೆ ಮಂಜೂರಾಗಿದ್ದು ಅದರ ಪ್ರಕಾರ ಈ ಗ್ರಾಮಕ್ಕೆ ಸಾಕಷ್ಟು ನೀರು ಸರಬರಾಜು ಆಗುತ್ತಿಲ್ಲ, ಅಲ್ಲದೆ, ಈಗಿರುವ ೪೦ ಅಶ್ವ ಶಕ್ತಿಯ ಪಂಪುಗಳು ಕೂಡ ಕೆಟ್ಟಿದ್ದು ಅದರಲ್ಲಿ ಒಂದನ್ನು ಈಗಾಗಲೇ ರಿಪೇರಿ ಮಾಡಿ ನೀರು ಸರಬರಾಜಿನ ವ್ಯವಸ್ಥೆ ಮಾಡಲಾಗಿದೆ. ಇನ್ನು ಹೊಸದಾಗಿ ಒಂದು ಪಂಪುಸೆಟ್ಟನ್ನು ಕೊಳ್ಳಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದ್ದು ಅದನ್ನು ಅಳವಡಿಸಿದ ನಂತರ ಈ ನೀರಿನ ಸರಬರಾಜು ಸುಧಾರಿಸಲಾಗುವುದು.

ಈ ಗ್ರಾಮದ ನೀರು ಸರಬರಾಜು ಅಭಿವೃದ್ಧಿ ಯೋಜನೆಗೆ ಸುಮಾರು 14-15 ಲಕ್ಷ ರೂಪಾಯಿಗಳು ಬೇಕಾಗಿದ್ದು ಈ ಬಗ್ಗೆ ವಿವರವಾದ ಅಂದಾಜು ತಯಾರಿಸಿ ಪಡೆದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

(6) ಮೈಸೂರು ನಗರದ ಸುತ್ತಮುತ್ತಲಿರುವ ಯಾವುದಾದರೂ ಪ್ರದೇಶವನ್ನು "ಹಸಿರು ಪಟ್ಟಿ" ವಲಯವೆಂದು ಸರ್ಕಾರದವರು ಗುರುತಿಸಿರುವರೇ ಎಂಬುದರ ಬಗ್ಗೆ ಕುರಿತು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಮೈಸೂರು ನಗರದ ಸುತ್ತಮುತ್ತಲಿರುವ ಯಾವುದಾದರೂ ಪ್ರದೇಶವನ್ನು "ಹಸಿರು ಪಟ್ಟಿ" ವಲಯವೆಂದು ಸರ್ಕಾರದವರು ಗುರುತಿಸಿದ್ದಾರೆಯೇ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜಾ (ಕಾನೂನು ಮಂತ್ರಿಗಳು) (ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರ ಪರವಾಗಿ) : ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ವಯ ಮೈಸೂರು ನಗರಕ್ಕೆ ದಿನಾಂಕ 20-6-1966 ರಂದು ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿತ್ತು.

ಈಗ ಸರಕಾರದಿಂದ 23-9-1981 ರಂದು ಅಂತಿಮ ಅನುಮೋದನೆಯಾದ ವ್ಯಾಪಕ ಅಭಿವೃದ್ಧಿ ಯೋಜನೆಯು ಜಾರಿಯಲ್ಲಿದೆ. ಈ ವ್ಯಾಪಕಾಭಿವೃದ್ಧಿ ಯೋಜನೆಯಲಿ

ಮೈಸೂರು ನಗರಕ್ಕೆ 2001 ರವರೆಗಿನ ಬೆಳವಳಿಗೆಗೆ ಬೇಕಾದ ನಗರೀಕರಣದ ಎಲ್ಲೆ (ಕಾನಬೇ಼ಶನ್ ಎಲ್ಲೆ) ಯನ್ನು ನಿಗಧಿ ಪಡಿಸಲಾಗಿದೆ. ನಗರೀಕರಣದ ಎಲ್ಲೆಯ ಮತ್ತು ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯ ನಡುವಿನ ಪ್ರದೇಶವನ್ನು ವ್ಯವಸಾಯ ವಲಯ (ಹಸಿರು ವಲಯ) ವೆಂದು ಪರಿಗಣಿಸಲಾಗಿದೆ. ಮೈಸೂರು ನಗರಕ್ಕೆ 141 ಚದರ ಕಿ.ಮೀ. ಪ್ರದೇಶವನ್ನು ಹಸಿರು ವಲಯವೆಂದು ಗುರುತಿಸಲಾಗಿದೆ. ಅನುಮೋದಿತವಾದ ವ್ಯಾಪಕಾಭಿವೃದ್ಧಿಯ ವಲಯ ನಿಯಮಾವಳಿಗಳನ್ವಯ ಈ ಹಸಿರು ವಲಯದಲ್ಲಿಯ ಬೆಳವಣಿಗೆಗಳನ್ನು ನಿಯಂತ್ರಿಸಲಾಗುತ್ತದೆ.

ಇದಲ್ಲದೆ ಕರ್ನಾಟಕ ಭೂ ಕಂದಾಯ ಶಾಸನದಡಿಯಲ್ಲಿಯೂ ಕಂದಾಯ ಇಲಾಖೆಯವರು ಹಸಿರು ಪಟ್ಟೆಯನ್ನು ಘೋಷಿಸಿ ಅಧಿಸೂಚನೆ ಹೊರಡಿಸಲು ಅವಕಾಶವಿದೆ. ಇದಕ್ಕೆ ಬೇಕಾದ ಸರ್ವೆ ನಂಬರಿನ ವಿವರಗಳನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಸರಕಾರಕ್ಕೆ ಕಳುಹಿಸಿದೆ. ಇಂಥ ಅಧಿಸೂಚನೆ ಹೊರಡಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತದೆ.

(7) ಬೆಳಗಾಂ ತಾಲ್ಲೂಕಿನ ನಾವಗೆ ಎಂಬಲ್ಲಿ ಜೀತಪದ್ಧತಿ ಕಂಡುಬಂದು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದು.

SRI SUBHASH JOSHI : In Belgaum taluk in village of Navage bonded labourers are found, complaints are also made against the concerned firm. But, the Deputy Commissioner has not taken any action. According to Bonded Labour Abolition Act, the Home Department has to take the action. I request the Home Minister to take immediate action.

ಶ್ರೀ ಬಿ. ಶಿವಣ್ಣ (ಸಮಾಜಕಲ್ಯಾಣ ಸಚಿವರು) (ಮಾನ್ಯ ಗೃಹಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಉತ್ತರವನ್ನು ತರಿಸಿಕೊಡುತ್ತೇನೆ.

(8) ಸುಳ್ಯ ತಾಲ್ಲೂಕಿನ ಸುಳ್ಯ ನಗರದಲ್ಲಿ ನೀರು ಸರಬರಾಜು ಯೋಜನೆಯ ಕುರಿತು.

ಶ್ರೀ ಕೆ. ಕುಶಾಲ (ಸುಳ್ಯ) : ಸುಳ್ಯ ತಾಲ್ಲೂಕಿನ ಸುಳ್ಯ ನಗರ ನೀರು ಸರಬರಾಜು ಯೋಜನೆಯನ್ನು ಕೈಕೊಂಡು ಎಷ್ಟು ವರ್ಷಗಳಾದವು, ಸದ್ರಿ ಯೋಜನೆಗೆ ಇಲಾಖೆಯಿಂದ ಈ ತನಕ ಯಾವ ಯಾವ ಬಾಬುಗಳಿಗೆ ಎಷ್ಟೆಷ್ಟು ಹಣ ಖರ್ಚು ಮಾಡಲಾಗಿದೆ. ಈ ನೀರು ಸರಬರಾಜು ಯೋಜನೆಗೆ ಸಂಬಂಧಿಸಿದಂತೆ ಯಾವ ಬಾಬುಗಳ ಕಾಮಗಾರಿಗಳು, ಯಾವ ಹಂತವನ್ನು ತಲುಪುತ್ತದೆ. ಸದ್ರಿ ನೀರು ಸರಬರಾಜು ಯೋಜನೆಗೆ ಎಷ್ಟು ಓವರ್ ಹೆಡ್‌ಟ್ಯಾಂಕ್‌ಗಳ ನಿರ್ಮಾಣವಾಗಿದೆ, ಇನ್ನು ಎಷ್ಟು ಟ್ಯಾಂಕ್‌ಗಳ ರಚನೆ ಬಾಕಿ ಇದೆ. ಈ ಯೋಜನೆಗೆ ಬೇಕಾದ ನೀರೆತ್ತುವ ಪಂಪುಸೆಟ್ಟುಗಳ ಖರೀದಿ ಮತ್ತು ಪಂಪು ಹೌಸು ನಿರ್ಮಾಣ ಮಾಡಲಾಗಿದೆಯೇ, ಈ ಮೇಲಿನ ಯಾವುದೇ ಕೆಲಸಗಳನ್ನು ಕೈಕೊಳ್ಳದ ಕಳೆದ 6 ವರ್ಷಗಳ ಹಿಂದೆಯೇ ಕೇವಲ ಪೈಪುಗಳನ್ನು ಮಣ್ಣಿನಲ್ಲಿ ಹೂತು ಅಳವಡಿಸಲಾಗಿ ಸದ್ರಿ ಪೈಪುಗಳಲ್ಲಿ ಹಾಗೂ ಟಾಂಕಿಗಳಲ್ಲಿ ಪ್ರಾಯೋಗಿಕವಾಗಿ ನೀರು ಹಾಲಿ ದೃಢಪಡಿಸಿಕೊಳ್ಳುವ ಕೆಲಸವನ್ನು ಮಾಡದೇ ಇರಲು ಕಾರಣವೇನು? ಸದ್ರಿ ಕಾಮಗಾರಿಯನ್ನು 1987 ರಲ್ಲಿ ಜಿಲ್ಲಾಪರಿಷತ್‌ಗೆ ವಹಿಸಲು ಕೇಳಿದ್ದರೂ ವಹಿಸದೆ ಇದ್ದು ಕಾಮಗಾರಿಯನ್ನು ಪೂರ್ತಿಗೊಳಿಸದೆ, ಇಲಾಖೆಯು ಆದ ತೊಂದರೆ, ಮತ್ತು ಈಗ ಒಂದು ವಾರದಿಂದ ಸುಳ್ಯ ನಗರದ ಬಳಕೆದಾರರು ಕುಡಿಯುವ ನೀರಿನ ಸಮಸ್ಯೆ ಇವುಗಳನ್ನು ಕೂಡಲೇ

ಬಗೆಹರಿಸಲು ಇಲಾಖೆಯು ಏನು ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಸರಕಾರದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಸುಳ್ಯ ಪಟ್ಟಣವು ಮಧ್ಯಂತರ ಮಂಡಳವಾಗಿದೆ. ಇದರ ಜನಸಂಖ್ಯೆ 1981 ರ ಜನಗಣತಿಯ ಪ್ರಕಾರ 10,394 ಇರುತ್ತದೆ. ಇದಕ್ಕೆ ಕುಡಿಯುವ ನೀರು ಸರಬರಾಜು ಅಭಿವೃದ್ಧಿ ಯೋಜನೆಯನ್ನು 26 ಲಕ್ಷ ರೂಪಾಯಿಗಳ ವೆಚ್ಚದಲ್ಲಿ, ಅಂದಾಜಿನಲ್ಲಿ ಕರ್ನಾಟಕ ರಾಜ್ಯ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಕೈಕೊಂಡಿರುತ್ತಾರೆ. ಇದರ ಪರಿಷ್ಕೃತ ಅಂದಾಜು 48 ಲಕ್ಷದ 56 ಸಾವಿರ ರೂಪಾಯಿಗಳು. ಈ ಕಾಮಗಾರಿಗಳನ್ನು ಆದಷ್ಟು ಶೀಘ್ರವಾಗಿ ಮುಗಿಸಿ ನೀರು ಸರಬರಾಜು ಮಾಡಲು ಮಂಡಳಿಯವರಿಗೆ ಈಗಾಗಲೇ ಸೂಚನೆ ನೀಡಲಾಗಿದೆ.

ಮೈಸೂರು ದಸರಾ ಹಬ್ಬದ ವ್ಯವಸ್ಥೆಯ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರಬೇಕಾಗಿದೆ. ಮೈಸೂರು ದಸರ ವ್ಯವಸ್ಥೆಯು ನಡೆಯುತ್ತಾ ಇದೆ. ಅದಕ್ಕೆ ವಿರೋಧ ಪಕ್ಷದ ನಾಯಕರು, ಉಪನಾಯಕರು, ವಿರೋಧ ಪಕ್ಷದ ಇತರ ಮುಖಂಡರುಗಳು, ಇವರುಗಳನ್ನು ಕರೆದು ಮಾತನಾಡಬೇಕಾತಂತಹ ಒಂದು ಸೌಜನ್ಯವನ್ನು ಅಲ್ಲಿಯ ವ್ಯವಸ್ಥಾಪಕರಿಗೆ ಇಲ್ಲ. ಇವೊತ್ತಿನವರೆಗೂ ಯಾರನ್ನೂ ಕೂಡ ಕರೆದು ಮಾತನಾಡಲಿಲ್ಲ. ಮೈಸೂರು ದಸರ ಎಂದರೆ ಪಾವಿತ್ರ್ಯತೆ ಮತ್ತು ಪವಿತ್ರವಾದಂಥ ಹಾಗೂ ಜಗತ್‌ಪ್ರಸಿದ್ಧವಾದಂಥ ದಸರ ಎಂದು ಕರೆಯಲ್ಪಡುತ್ತದೆ. ಅಲ್ಲಿ ಅಧಿಕಾರಿಗಳದ್ದೇ ಮೇಲುಗೈ ಆಗಿದೆ, ಅಧಿಕಾರಿಗಳೇ ಅದಕ್ಕೆ ಅಧ್ಯಕ್ಷರು. ಅಲ್ಲಿ ಹೈಪವರ್ ಕಮಿಟಿ ಎಂದು ಬಹಳ ಉನ್ನತವಾದಂಥ ಸಮಿತಿಯು ಇದೆ. ಅದರಲ್ಲಿ ನಮ್ಮೆಲ್ಲರ ಹೆಸರುಗಳು ಕೂಡ ಇದೆ. ಆದರೆ ವರ್ಷಕ್ಕೊಮ್ಮೆ ಯಾವುದೋ ಕಾಟಾಚಾರಕ್ಕಾಗಿ ಒಂದು ಸಮಿತಿಯನ್ನು ಕರೆಯುತ್ತಾರೆ, ಬೇರೆ ಉದ್ದೇಶಗಳು ಇಲ್ಲ. ಮೈಸೂರು ನಗರದ ಮತ್ತು ಪ್ರಾಚೀನವಾಗಿ ಮತ್ತು ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕಂಥ ಈ ದಸರ ಉತ್ಸವಕ್ಕೆ ವಿರೋಧ ಪಕ್ಷದ ನಾಯಕರನ್ನು ಕರೆಯಬೇಕು, ಆ ಸದನದ ವಿರೋಧಪಕ್ಷದ ನಾಯಕರನ್ನು ಕರೆಯಬೇಕು, ವಿರೋಧಪಕ್ಷದ ಮುಖಂಡರುಗಳನ್ನು ಕರೆಯಬೇಕು. ಏನೇನು ಉತ್ಸವ ಮಾಡುತ್ತೇವೆ ಎನ್ನುವಂಥ ಒಂದು ಪ್ರಸ್ತಾಪವು ಇಲ್ಲ; ಅಲ್ಲಿ ಸಂಪೂರ್ಣವಾಗಿ ಅಧಿಕಾರಿಗಳ ದರ್ಬಾರು ನಡೆಯುತ್ತಿದೆ. ಒಂದು ಕಾಲದಲ್ಲಿ ಮಹಾರಾಜರುಗಳ ದರ್ಬಾರು ಇತ್ತು. ಈಗ ಅಧಿಕಾರಿಗಳ ದರ್ಬಾರು ನಡೆದಿದೆ. ಈ ಬಗ್ಗೆ ಚರ್ಚೆಗೆ ತಾವುಗಳು ಅವಕಾಶ ಮಾಡಿಕೊಡಿ.

ಶ್ರೀ ಎಂ.ಪಿ. ವೆಂಕಟೇಶ್ : ಅಲ್ಲಿ ವಸ್ತು ಪ್ರದರ್ಶನದಲ್ಲಿ ಕೃಷಿ ಇಲಾಖೆಯವರು ವಾಟರ್‌ಶೆಡ್ ಮಾಡುತ್ತಾ ಇದ್ದಾರೆ. ಕರ್ನಾಟಕ ಎಲ್ಲಾ ಜಿಲ್ಲಾಪರಿಷತ್‌ನವರು ಕೂಡ ಅಲ್ಲಿ ವಾಟರ್‌ಶೆಡ್ ಎಂದು ಪ್ರದರ್ಶನ ಮಾಡುತ್ತಿದ್ದಾರೆ. ಅದಕ್ಕೆ ಪ್ರತಿಯೊಂದು ಜಿಲ್ಲಾ ಪರಿಷತ್‌ನಿಂದ ಐದು ಲಕ್ಷರೂಪಾಯಿಗಳ ಖರ್ಚು ಬರುತ್ತದೆ. ಒಂದೇ ಸ್ಕೀಮ್‌ನ್ನು ಎಲ್ಲಾ ಜಿಲ್ಲಾಪರಿಷತ್‌ನವರೂ ತೋರಿಸುತ್ತಿದ್ದಾರೆ. ಕೃಷಿ ಇಲಾಖೆಯವರೂ ತೋರಿಸುತ್ತಿದ್ದಾರೆ. ಇದಕ್ಕಾಗಿ ಎಲ್ಲಾ ಜಿಲ್ಲಾಪರಿಷತ್ ಅಧಿಕಾರಿಗಳು ಮೈಸೂರಿಗೆ ಕಾರ್‌ನಲ್ಲಿ ಬಂದು ರೂಮ್ ರಿಸರ್ವೇಶನ್ ಇತ್ಯಾದಿ ಖರ್ಚು ವೆಚ್ಚ ಮಾಡುತ್ತಿದ್ದಾರೆ. ಇದಕ್ಕಾಗಿ ಲಕ್ಷಾಂತರ ರೂಪಾಯಿಗಳ ಖರ್ಚು ಆಗುತ್ತಿದೆ. ಇದೇ ರೀತಿಯಾಗಿ ಅರಣ್ಯ ಇಲಾಖೆಯವರೂ ಮಾಡುತ್ತಿದ್ದಾರೆ. ಹೀಗೆ ಹಣದ ಲೂಟಿ ಆಗುತ್ತಿದೆ.

ಛೇರ್ಮನ್ : ನಾನು ಸಂಬಂಧಪಟ್ಟ ಸಚಿವರು ಬಂದ ಮೇಲೆ ತಮಗೆ ಉತ್ತರವನ್ನು ಕೊಡಿಸುತ್ತೇನೆ. ಈಗ ಅವರು ಸದನದಲ್ಲಿ ಉಪಸ್ಥಿತರಿಲ್ಲ ; ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ಉತ್ಸವದ ಸಮಿತಿಯವರು ಮೈಸೂರು ನಗರದ ಮೇಯರ್‌ರವರನ್ನು ಕೂಡ ಕರೆದಿಲ್ಲ. ಅವರನ್ನೂ ಕಡೆಗಾಣಿಸಿದ್ದಾರೆ. ಅಲ್ಲಿಯ ಜಿಲ್ಲಾಪರಿಷತ್ ಅಧ್ಯಕ್ಷರನ್ನು ಕೂಡ ಕಡೆಗಣಿಸಿದ್ದಾರೆ. ಅಲ್ಲಿಯ ವಿಭಾಗಾಧಿಕಾರಿಯವರು ಸಂಪೂರ್ಣವಾಗಿ ತನ್ನ ಸರ್ವಾಧಿಕಾರತ್ವದಿಂದ ವರ್ತಿಸುತ್ತಿದ್ದಾರೆ. ಮೈಸೂರು ದಸರದ ವಸ್ತು ಪ್ರದರ್ಶನ ಅಂದರೆ ಯಾರೋ ಬಂದು ನಾಲ್ಕು ಚಕ್ಕುಲಿ ಅಂಗಡಿಗಳನ್ನು, ನಿಪ್ಪಟ್ಟು ಅಂಗಡಿಗಳನ್ನು ಹಾಕಿಕೊಂಡು ಉತ್ಸವವನ್ನು ಮಾಡಿ ಮುಗಿಸುವುದಿಲ್ಲ, ಅದಕ್ಕೆ ತನ್ನದೇ ಆದ ಒಂದು ಸಂಸ್ಕೃತಿಯು ಇದೆ. ಮೈಸೂರು ದಸರ ಅಂದರೆ ಅಲ್ಲಿ ಕರ್ನಾಟಕದ ಭವ್ಯಪರಂಪರೆಯನ್ನು, ಕನ್ನಡದ ಸಂಸ್ಕೃತಿಯನ್ನು ಬಿಂಬಿಸುವಂತೆ ಇರಬೇಕು, ಅದನ್ನು ಜನರಿಗೆ ತೋರಿಸತಕ್ಕಂಥಾದ್ದು ವ್ಯವಸ್ಥೆಯಾಗಬೇಕು, ವಸ್ತು ಪ್ರದರ್ಶನದ ಕಾರ್ಯಕ್ರಮಗಳಲ್ಲಿ ಸಂಗೀತ, ಸಾಹಿತ್ಯ ಕಾರ್ಯಕ್ರಮಗಳಲ್ಲಿ ಕನ್ನಡಿಗರಿಗೆ ಪ್ರೋತ್ಸಾಹ ಕೂಡ ಕೊಡುತ್ತಿಲ್ಲ ಇದಕ್ಕೆ ಒಂದು ಚರ್ಚೆಗೆ ಅವಕಾಶ ಮಾಡಿಕೊಡಬೇಕು. ವಸ್ತು ಪ್ರದರ್ಶನ ಎಂದರೆ ಕರ್ನಾಟಕದ ಸಮಗ್ರತೆಯನ್ನು, ಕನ್ನಡದ ಸಂಸ್ಕೃತಿಯನ್ನು, ಕನ್ನಡದ ಇತಿಹಾಸವನ್ನು, ಕರ್ನಾಟಕದ ಪರಂಪರೆಯನ್ನು, ಅರಮನೆಯ ವೈಭವವನ್ನು ಇವೆಲ್ಲವನ್ನೂ ತೋರಿಸತಕ್ಕಂಥದ್ದು ಒಂದು ವಸ್ತು ಪ್ರದರ್ಶನ. ಇದು ಯಾವುದೂ ಇಲ್ಲ. ಮತ್ತು ಸಂಗೀತ, ಸಾಹಿತ್ಯದ ಬಗ್ಗೆ ಅವಕಾಶವನ್ನು ಕನ್ನಡಿಗರಿಗೆ ಅಲ್ಲಿ ಕೊಡುತ್ತಿಲ್ಲ. ಈ ರೀತಿಯಾದಂಥ ಪರಿಸ್ಥಿತಿಯ ಅನೇಕ ಸಮಸ್ಯೆಗಳು ಅಲ್ಲಿ ಉದ್ಭವವಾಗಿದೆ. ದಯಮಾಡಿ.........

ಛೇರ್ಮನ್ : ಮಂತ್ರಿಗಳು ಬಂದಾಗ ಅದಕ್ಕೆ ಸರಿಯಾದ ಉತ್ತರವನ್ನು ಕೊಡಿಸೋಣ. ಈ ವಿಷಯದ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಇಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಹೆಸರಿಗೆ ಉನ್ನತವಾದ ಸಮಿತಿಯೆಂದು ಮಾಡಿದ್ದಾರೆ. ಆ ಸಮಿತಿಯಲ್ಲಿ ಇವತ್ತಿನ ದಿನ ಈ ಸದನದ ವಿರೋಧ ಪಕ್ಷದ ನಾಯಕರು ಬರಬೇಕಾಗಿತ್ತು. ಆ ಸದನದ ವಿರೋಧ ಪಕ್ಷದ ನಾಯಕರು ಬರಬೇಕಾಗಿತ್ತು. ಎಲ್ಲಾ ಪಕ್ಷದ ಅಧ್ಯಕ್ಷರು, ಪಕ್ಷದ ಮುಖಂಡರುಗಳನ್ನು ಕರೆಯಿರಿ ಎಂದು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಸಲಹೆಯನ್ನು ಕೊಟ್ಟೆ. ಇವತ್ತಿನವರೆಗೂ ಪಕ್ಷದ ಯಾವ ಮುಖಂಡರುಗಳನ್ನು ಕರೆದಿಲ್ಲ. ಇದರ ಬಗ್ಗೆ ತಕ್ಷಣ ಅವರನ್ನು ಕರೆಯಬೇಕು. ಮೈಸೂರು ಎಂದರೆ ಅದು ಬರೀ ಮೈಸೂರು ಜಿಲ್ಲೆಯಲ್ಲ. ಜಗತ್‌ಪ್ರಸಿದ್ಧವಾದಂಥ ಒಂದು ಪವಿತ್ರವಾದಂಥ ದಸರಾ ಉತ್ಸವ. ಆ ಉತ್ಸವಕ್ಕೆ ಬರುವಂಥ ಪ್ರವಾಸಿಗರು ಲಕ್ಷಾಂತರ ಮಂದಿ ಬರುತ್ತಾರೆ. ಅವರ ವ್ಯವಸ್ಥೆಯೇನು? ರಸ್ತೆಯ ವ್ಯವಸ್ಥೆಯೇನು? ಯಾವುದೂ ನಮಗೆ ಗೊತ್ತಿಲ್ಲ. ಸಂಪೂರ್ಣವಾಗಿ ನಾವು ಕಗ್ಗತ್ತಲಲ್ಲಿ ಕುಳಿತಿದ್ದೇವೆ. ಆದುದರಿಂದ ದಯಮಾಡಿ ಸರ್ಕಾರದವರು ಪರಿಣಾಮಕಾರಿಯಾದಂಥ ಹೇಳಿಕೆಯನ್ನು ಕೊಡಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಛೇರ್ಮನ್ : ಸಂಬಂಧಪಟ್ಟಂಥ ಮಂತ್ರಿಗಳು ಇಲ್ಲ. ಅವರು ಬಂದಮೇಲೆ ಉತ್ತರವನ್ನು ಕೊಡಿಸೋಣ.

ಶ್ರೀ ವಾಟಾಳ್ ನಾಗರಾಜ್ : ಹೋದಸಾರಿ ಉತ್ಸವ ಒಂದು ಸಾರಿ ಬನ್ನಿಮಂಟಪಕ್ಕೆ ಹೋಗಿ ಮತ್ತೆ ಉತ್ಸವ ಹಿಂದಕ್ಕೆ ಬರಬೇಕು ಎನ್ನತಕ್ಕಂಥಾದ್ದು ಇತ್ತು.

ಈ ಸಾರಿ ಒಂದೇ ಸಾರಿ ಉತ್ಸವ ಹೋಗಬೇಕು, ಮತ್ತೆ ಹಿಂದಕ್ಕೆ ಬರಬಾರದು ಎನ್ನತಕ್ಕಂಥ ಉದ್ದೇಶ ಇದೆ.

ಛೇರ್ಮನ್ : ಇದಕ್ಕೆಲ್ಲಾ ಸರಿಯಾದ ಉತ್ತರವನ್ನು ಸಂಬಂಧಪಟ್ಟಂಥ ಮಂತ್ರಿಗಳಿಂದ ಕೊಡಿಸೋಣ.

ಶ್ರೀ ವಾಟಾಳ್ ನಾಗರಾಜ್ : ಆದುದರಿಂದ ತಾವು ಇದರ ಬಗ್ಗೆ ಒಂದು ಪರಿಣಾಮಕಾರಿಯಾಗಿರತಕ್ಕಂಥ ಹೇಳಿಕೆಯನ್ನು ಕೊಡಿಸಬೇಕು. ಈ ಉತ್ಸವ ಇದು ಬಹಳ ಚೆನ್ನಾಗಿ ನಡೆಯಬೇಕು. ಎಲ್ಲರೂ ಸಂತೋಷವಾಗಿರಬೇಕು. ಎಲ್ಲರಿಗೂ ಬೇಕಾಗತಕ್ಕಂಥ ಉತ್ಸವ ಆಗಬೇಕು. ಅದಕ್ಕೋಸ್ಕರ ನಾನು ತಮಗೆ ಹೇಳುತ್ತಿದ್ದೇನೆ.

ಛೇರ್ಮನ್ : ಈಗ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಕಾನೂನು ಮಂತ್ರಿಗಳು ಪರ್ಯಾಲೋಚನಾ ಪ್ರಸ್ತಾಪವನ ಮಂಡಿಸಬೇಕು. 1991 ನೇ ಇಸವಿಯ ಕರ್ನಾಟಕ ಲೋಕಾಯುಕ್ತ ತಿದ್ದುಪಡಿ ವಿಧೇಯಕ.

ಶಾಸನ ರಚನಾ ಕಾರ್ಯಕಲಾಪಗಳು

1991ರ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ

ಶ್ರೀ ಬ್ಲೇಸಿಯಸ್ ಎಂ. ಡಿಸೋಜಾ (ಕಾನೂನು ಮಂತ್ರಿಗಳು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, 1991 ರ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

(ಪ್ರಸ್ತಾಪವನ್ನು ಮಂಡಿಸಲಾಯಿತು)

SRI BLASIUS M. D'SOUZA : It is a very simple amendment to the Lokayuktha Act.......

ಶ್ರೀ ವಾಟಾಳ್ ನಾಗರಾಜ್ : ಇದು ಸಣ್ಣ ತಿದ್ದುಪಡಿಯಾದರೂ ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕಾಗುತ್ತದೆ. ಆದುದರಿಂದ ಅರ್ಧ ಘಂಟೆ, ಮುಕ್ಕಾಲು ಘಂಟೆ ಮಧ್ಯೆ ಯಾವಾಗಲೂ ಪ್ರತಿದಿನ ಊಟಕ್ಕೆ ಅವಕಾಶ ಕೊಡುತ್ತಿದ್ದಂತೆ, ಈಗ ಸಭೆಯನ್ನು ಮುಂದುವರಿಸಿ ನಂತರ ಈ ಚರ್ಚೆಗೆ ಅವಕಾಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಇವರಿಗೆ ಲೋಕಾಯುಕ್ತದ ಬಗ್ಗೆ ವಿಶ್ವಾಸ ಇಲ್ಲ, ಆ ವರದಿಗೆ ಬೆಲೆ ಇಲ್ಲ. ಅವರಿಗೆ ಅಲ್ಲಿ ಕೊಡತಕ್ಕಂಥ ಸಂಬಳವನ್ನು ಹೆಚ್ಚಿಗೆ ಮಾಡಿದರೆ ಏನು ಅರ್ಥ? ಈ ಮೊಸಳೆ ಕಣ್ಣೀರು ಬೇಡ. ಅಲ್ಲಿಂದ ಬಂದಂಥ ವರದಿಗಳಿಗೆ ಸರ್ಕಾರ ಏನು ಬೆಲೆಯನ್ನು ಕೊಟ್ಟಿದೆ? ಏನೂ ಬೆಲೆಯನ್ನೂ ಕೊಟ್ಟಿಲ್ಲ. ಅದನ್ನು ಕಸದ ಬುಟ್ಟಿಗೆ ಹಾಕುತ್ತಿದೆ.

ಛೇರ್ಮನ್ : ಈಗ ಮಾನ್ಯ ಮಂತ್ರಿಗಳು ಪ್ರಸ್ತಾಪವನ್ನು ಮಾಡಲಿ.

SRI BLASIUS M. D'SOUZA : The Government of India has enhanced the pay of Chief Justice of the Supreme Court and the High Court Judges. The above amendment is brought before this House to put the Lokayuktha on par with the Chief Justice of High Court and the Judge of the High Court. The salaries have been increased the amendment is very simple. I would request the Hon'ble Members to pass this bill because there is absolutely no other amendment proposed to this Bill.

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಈ ಮಸೂದೆಯನ್ನು ಮಂಡಿಸುವಾಗ ಬಹಳ ಸಿಂಪಲ್ ಅಂದರೆ ಸರಳವಾದುದು ಎಂದು ಹೇಳಿದರು. ಸಂಬಳವನ್ನು ಜಾಸ್ತಿ ಮಾಡುವುದು ಈ ಸರ್ಕಾರಕ್ಕೆ ಎಷ್ಟು ಸರಳ! ಇದು ಒಂದು ಭಾಗ. ಈ ಒಂದು ಮಸೂದೆ 1984 ರಲ್ಲಿ ತಂದ ಕೀರ್ತಿ ಹಿಂದಿನ ಸರ್ಕಾರಕ್ಕೆ ಅದು ಸಲ್ಲುತ್ತದೆ. ಆಗ ತಂದಂಥ ಉದ್ದೇಶ ಸಾರ್ವಜನಿಕ ಜೀವನದಲ್ಲಿ ಸ್ವಚ್ಛತೆ ಇರಬೇಕು; ಆ ಸ್ವಚ್ಛತೆ ಪರೀಕ್ಷೆಗೆ ಒಳಪಡಬೇಕು ಎನ್ನುವಂಥ ಸದಿಚ್ಛೆಯಿಂದ. ಈಗ ಪರೀಕ್ಷೆ ಎಷ್ಟರ ಮಟ್ಟಿಗೆ ನಡೆಯುತ್ತಿದೆ, ಅದರ ವಿವರಣೆಗೆ ಹೋಗುವುದಕ್ಕೆ ಮುಂಚೆ, ಈ ಲೋಕಾಯುಕ್ತ ಮತ್ತು ಉಪಲೋಕಾಯುಕ್ತರನ್ನು ಆಯ್ಕೆ ಮಾಡತಕ್ಕಂಥ ಜವಾಬ್ದಾರಿಯನ್ನು ಸೆಕ್ಷನ್ 3 ರಲ್ಲಿ ವಿರೋಧ ಪಕ್ಷದ ನಾಯಕರುಗಳಿಗೂ ನೀಡಲಾಗಿದೆ. ಅವರು ಸರ್ವೋಚ್ಛ ನ್ಯಾಯಾಧೀಶರಾಗಿ ಅಥವಾ ಒಂದು ಉಚ್ಛ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿ ಮತಧಾರಣೆ ಮಾಡತಕ್ಕಂಥ ವ್ಯಕ್ತಿಯಾಗಿರತಕ್ಕದ್ದು. ಈ ರೀತಿ ನೇಮಕ ಮಾಡುವಾಗ ಮುಖ್ಯಮಂತ್ರಿಯೂ, ಕರ್ನಾಟಕ ರಾಜ್ಯದ ಉಚ್ಛನ್ಯಾಯಾಲಯದ ಮುಖ್ಯ ನ್ಯಾಯಾಧೀಶ, ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ, ಕರ್ನಾಟಕ ವಿಧಾನಸಭೆಯ ಅಧ್ಯಕ್ಷ, ಕರ್ನಾಟಕ ವಿಧಾನಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕರು, ಮತ್ತು ಕರ್ನಾಟಕ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರು ಸೇರಿ ಸಮಾಲೋಚನೆ ನಡೆಸಿ ಸಲಹೆಯನ್ನು ಕೊಡಬೇಕು ಎನ್ನುವಂತಹ ಮಾತನ್ನು ಹೇಳಿದ್ದಾರೆ. ಈ ಆಯ್ಕೆ ಸರ್ಕಾರದ ಕಾರುಣ್ಯಕ್ಕೆ ಸಿಕ್ಕಂತಹ ವ್ಯಕ್ತಿ ಆಗಬಾರದು ಎನ್ನತಕ್ಕಂಥ ಇಚ್ಛೆ. ಹಿಂದಿನ ಸಾರಿ ಲೋಕಾಯುಕ್ತರನ್ನು ಆಯ್ಕೆ ಮಾಡುವಾಗ ಮಾನ್ಯ ಮುಖ್ಯಮಂತ್ರಿಗಳು ನಮಗೆ ಒಂದು ಪತ್ರವನ್ನು ಬರೆದಿದ್ದರು. ಆ ಪತ್ರಕ್ಕೆ ಸುದೀರ್ಘವಾಗಿ ಉತ್ತರವನ್ನು ಕೊಡುತ್ತಾ, ಆ ಆಯ್ಕೆ ಸಮಂಜಸವಾಗುವುದಿಲ್ಲ ಎನ್ನುವಂತಹ ಮಾತನ್ನು ಹೇಳಿದರು. ಹಾಗೆ ಪ್ರತಿಪಕ್ಷದ ನಾಯಕರು ಹೇಳಿದ್ದರು ಅನ್ನತಕ್ಕದ್ದು ನನಗೆ ಬಂದಿರುವ ವರದಿ ದಾಖಲೆ ಸಹಿತ ಮುಂದಿಟ್ಟಿದ್ದಾರೆ. ಕಲ್ಕತ್ತಾ ಹೈಕೋರ್ಟ್ ಜಡ್ಜ್‌ಮೆಂಟ್ ಕೊಟ್ಟರೂ ಅದಕ್ಕೆ ಏನೂ ಪುರಸ್ಕಾರ ಸಿಗಲಿಲ್ಲ. ಈಗ ಉಪಲೋಕಾಯುಕ್ತದ ಆಯ್ಕೆಗಾಗಿ ಒಂದು ಪತ್ರವನ್ನು ಬರೆದಿದ್ದಾರೆ. ಅದಕ್ಕೆ "ಗೌಪ್ಯ" ಅನ್ನತಕ್ಕದ್ದನ್ನು ಹಾಕಿರುವುದರಿಂದ ನಾನು ಅದನ್ನು ಪ್ರಸ್ತಾಪ ಮಾಡುವುದಿಲ್ಲ. ತಮ್ಮ ಮೂಲಕ ಮಂತ್ರಿಗಳಿಗೂ ಸದನದ ಮೂಲಕ ಈ ರಾಜ್ಯಕ್ಕೂ ಹೇಳುತ್ತಿದ್ದೇನೆ, ಯಾವ ಸಮಿತಿ ಈ ಲೋಕಾಯುಕ್ತ ಮತ್ತು ಉಪಲೋಕಾಯುಕ್ತ ನೇಮಕ ಮಾಡುವುದಕ್ಕೆ ನಿರ್ದೇಶನ ಇದೆ ಬರೀ ಮಾರ್ಗದರ್ಶನ, ಒಂದು ಮ್ಯಾನ್ ಡೇಟರಿ ಪ್ರಾವಿಷನ್ ಇದೆ, ಅದಕ್ಕೆ ಗೌರವ ಕೊಡದೇ ಇರತಕ್ಕ ಒಂದು ಸ್ಥಿತಿಗೆ ಈ ಸರ್ಕಾರ ಬಂದಿರುವುದರಿಂದ ನಾನು ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದಿದ್ದೇನೆ. ನಮ್ಮ ಅಭಿಪ್ರಾಯಕ್ಕೆ ಬೆಲೆ ಇಲ್ಲದ ಇರುವುದರಿಂದ ಗೌರವ ಇಲ್ಲದೆ ಇರುವುದರಿಂದ, ನೀವು ಯಾರನ್ನಾದರೂ ಮಾರಿಕೊಳ್ಳಿ ನನ್ನ ಅಭಿಪ್ರಾಯವನ್ನು ಹೇಳುವುದಿಲ್ಲ ಅನ್ನತಕ್ಕ ಮಾತನ್ನು ಹೇಳಿದ್ದೇನೆ. I declained it ಎನ್ನತಕ್ಕಂತಹ ಮಾತನ್ನು ಸಹ ಹೇಳಿದ್ದೇನೆ. ಈ ಮಾತನ್ನು ಹೇಳುವುದಕ್ಕೆ ಸಾಕಷ್ಟು ಕಾರಣಗಳು ಇವೆ. ಲೋಕಾಯುಕ್ತ ಕೆಲವು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವಂತಹ ಪ್ರಯತ್ನ ಮಾಡಿದೆ. ಹೋಗಿ ರೈಡ್ ಮಾಡುವುದು. ಇವತ್ತು ನಮ್ಮ ಇಂಡಸ್ಟ್ರೀಸ್ ಸೆಕ್ರೆಟರಿಯ ಮನೆಯನ್ನು ರೈಡ್ ಮಾಡಿದರು. ಪತ್ರಿಕೆಗಳಲ್ಲಿ ಪ್ರಚಾರ ಜಾಹೀರಾತುಗಳಲ್ಲಿ ಬಂದಹಾಗೆ ಬಂತು. ಆಮೇಲೆ ಇಲ್ಲಿ ಅಪರಾಧ ಆಗಿಲ್ಲ ಎಂದು ಹೇಳಿ ಒಂದು ಸಣ್ಣದಾಗಿ "ಬಿ" ರಿಪೋರ್ಟ್ ಕೊಡುವುದು. ಲೋಕಾಯುಕ್ತವನ್ನು ನೀವು ಯಾವುದಕ್ಕೆ ಬಳಕೆ ಮಾಡುತ್ತಿದ್ದೀರಿ ಅಂದರೆ ಅಧಿಕಾರಿಗಳ

ಚಾರಿತ್ರಹರಣ ಮಾಡುವುದಕ್ಕಾಗಿ ಬಳಕೆ ಮಾಡುತ್ತಿದ್ದೀರಿ. ಲೋಕಾಯುಕ್ತ ಇಂತಹ ವಿಚಾರಗಳನ್ನು ಪ್ರಸಿದ್ಧಿ ಪಡಿಸುವುದಕ್ಕೆ ಮುನ್ನ ಪ್ರೈಮಾಫೇಸ್ ಕೇಸ್ ಇಲ್ಲದೇ ಅಧಿಕಾರಿಗಳ ಮನೆಗೆ ಹೇಗೆ ಪ್ರವೇಶ ಮಾಡುತ್ತಾರೆ? ಪ್ರೈಮಾಫೇಸಿ ಕೇಸ್ ಇತ್ತು ಎಂದರೆ ಅದು ಪ್ರಸಿದ್ಧಿಗೆ ಯೋಗ್ಯವೋ ಅಥವಾ ಅದು ಉದ್ದೇಶವೋ ಅಥವಾ ಇದರ ಉದ್ದೇಶ ಇಲ್ಲಿ ಆಗುತ್ತಾ ಇರತಕ್ಕ ತಪ್ಪುಗಳನ್ನು ನ್ಯಾಯವಾದ ರೀತಿಯಲ್ಲಿ ಪರಿಶೀಲನೆ ಮಾಡಿ ಅದಕ್ಕೆ ಬೇಕಾಗಿರತಕ್ಕಂತಹ ಮಾರ್ಗದರ್ಶನ ಕೊಡುವುದೋ? ಹಾಗಾಗಿ ಇವತ್ತು ಲೋಕಾಯುಕ್ತದಲ್ಲಿ ಇಬ್ಬರು ಪ್ರಮಾಣಿಕ ಅಧಿಕಾರಿಗಳನ್ನು ವರ್ಗ ಮಾಡಿದ್ದೀರಿ. ಆ ಅಧಿಕಾರಿಗಳಿಗೆ ಸರ್ಟಿಫಿಕೇಟ್ ಕೊಟ್ಟವರು ಹಿಂದಿನ ಮುಖ್ಯಮಂತ್ರಿಯವರು ಮತ್ತು ಹಿಂದಿನ ಲೋಕಾಯುಕ್ತರು. ಆ ಆಯುಕ್ತರು ಬದಲಾವಣೆ ಆದಕೂಡಲೇ ಅಧಿಕಾರಿಗಳು ಬದಲಾವಣೆಯಾದರು. ಜ್ಯುರಿಷಿಯರಿ ಬಗ್ಗೆ ನಾವು ಎಷ್ಟರಮಟ್ಟಿಗೆ ಗೌರವ ಇಟ್ಟುಕೊಳ್ಳಬೇಕು; ಒಬ್ಬ ನ್ಯಾಯಾಧೀಶರು ಬದಲಾವಣೆ ಆದ ಕೂಡಲೇ ಆ ಇಲಾಖೆಯಲ್ಲಿ ಇರತಕ್ಕ ಅಧಿಕಾರಿಗಳನ್ನೆಲ್ಲಾ ಬದಲಾವಣೆ ಮಾಡುವುದು. ಇನ್ವೆಸ್ಟಿಗೇಷನ್ ಆಫೀಸರ್ಸ್ ಎಲ್ಲಾ ಬದಲಾವಣೆ ಮಾಡುವುದು, ಏನು ಕಾರಣ? ಯಾವ ಕಾರಣಕ್ಕಾಗಿ ಅವರನ್ನು ಬದಲಾವಣೆ ಮಾಡುತ್ತೀರಿ? ನೀವು ಕೊಡುವ ಕಾರಣ, ಲೋಕಾಯುಕ್ತರು ಬರೆದಿದ್ದರು, ಆ ಕಾರಣಕ್ಕಾಗಿ ನಾವು ಬದಲಾವಣೆಯನ್ನು ಮಾಡಿದ್ದೇವೆ. ಅಂದರೆ ಲೋಕಾಯುಕ್ತರಿಂದ ತನಗೆ ಅನುಕೂಲವಾಗುವ ಹಾಗೆ ನೀವು ಬರೆದುಕೊಂಡರೋ ಅಥವಾ ಅವರಿಗೆ ಅನಾನುಕೂಲವಾಗಿತ್ತು ಎಂದು ಹೇಳಿ ಅಧಿಕಾರಿಗಳಿಂದ ವರ್ಗ ಮಾಡಿ ಎಂದು ಬರೆದರೋ? ನಿಷ್ಪಕ್ಷಪಾತವಾಗಿ ಇರಬೇಕೆನ್ನತಕ್ಕ ಸದಿಚ್ಛೆಯಿಂದ ಲೋಕಾಯುಕ್ತವನ್ನು ಮಾಡಿದ್ದೇವೆ. ಅಲ್ಲಿ ಕೂಡ ಸರ್ಕಾರ ತನ್ನ ಮೂಗು ತೂರಿಸತಕ್ಕಂತಹ ಕೆಲಸ ಮಾಡಿದರೆ, ಜನರ ನಿರೀಕ್ಷೆ ಮಟ್ಟಕ್ಕೆ ಅದು ಬರದೇ ಇದ್ದರೆ, ಯಾವ ಸದಿಚ್ಛೆಯಿಂದ ನಾವು ಅದನ್ನು ಮಾಡಿದ್ದೇವೋ, ಅದರ ಪ್ರತಿಫಲ ಜನಕ್ಕೆ ಸಿಗುವುದಿಲ್ಲ. ಅದರ ಪರಿಣಾಮ ಏನು?

1.55 ಪಿ.ಎಂ

ಸಾರ್ವಜನಿಕ ಜೀವನದಲ್ಲಿ ಕೆಲಸ ಮಾಡುವಂಥ ನಮ್ಮಂಥವರಿಗೆ ಉತ್ತರ ಹೇಳುವುದಕ್ಕೆ ಬೇರೆ ವೇದಿಕೆಗಳಿಲ್ಲ. ಅದ್ದರಿಂದ ನಮ್ಮನ್ನು ಅಪರಾಧಿ ಎಂದು ಯಾರಾದರೂ ಸಾರ್ವಜನಿಕರು ಆ ಸ್ಥಾನದಲ್ಲಿ ನಿಲ್ಲಿಸಿದರೆ ಅದನ್ನು ವಿಚಾರಣೆ ಮಾಡುವಂಥ ಏಕೈಕ ಮಾರ್ಗ ಈ ಲೋಕಾಯುಕ್ತ. ಈ ಲೋಕಾಯುಕ್ತ ಇನ್‌ಸ್ಟಿಟ್ಯೂಷನ್ ಅನ್ನು ಮಾನ್ಯ ಮುಖ್ಯ ಮಂತ್ರಿಯವರು ಸರಿ ಪಡಿಸಬೇಕಾಗಿದೆ. ಲೋಕಾಯುಕ್ತಕ್ಕೆ ಶಾಸನಸಭಾ ಸದಸ್ಯರು, ಮಂತ್ರಿಗಳು ತಮ್ಮ ಆಸ್ತಿ ವಿವರಣೆಯ ಬಗ್ಗೆ ಡಿಕ್ಲರೇಷನ್ ಕೊಡಬೇಕು. ಇದು ಕಾನೂನುಬದ್ಧವಾಗಿದೆ. ಆದರೆ ಮುಖ್ಯ ಮಂತ್ರಿಯವರು ನಾನು ಆಸ್ತಿ ವಿವರಣೆ ಕೊಡುವುದಿಲ್ಲವೆಂದು ಹೇಳಿದ್ದಾರೆ. ಅನೇಕ ಶಾಸನಸಭಾ ಸದಸ್ಯರು ವಿವರಣೆ ಮಾಡುವುದಕ್ಕೆ ಬಿಲ್ ತರುತ್ತಿದ್ದೀರಿ. ಏನು ಇದರ ಉದ್ದೇಶ? ಮೊನ್ನೆ ಈ ಸದನದಲ್ಲಿ ಗೃಹ ಸಚಿವರು ಸಿಬಿಐ ತನಿಖೆಯನ್ನು ವಿತ್‌ಡ್ರಾ ಮಾಡುವಾಗ ಕೊಟ್ಟಂಥ ಕಾರಣ ಏನು? ಅದರ ಚರ್ಚೆ ಬಂದಾಗ ನಾನು ವಿವರಕ್ಕೆ ಹೋಗುತ್ತೇನೆ. ಏಕಾಏಕಿ ಈ ಸರ್ಕಾರಕ್ಕೆ ಈ ಲೋಕಾಯುಕ್ತದ ಬಗ್ಗೆ ಎಲ್ಲಿಲ್ಲದ ಅಭಿಮಾನ ಬಂದಿದೆ. ಈ ಸದನದಲ್ಲಿ ಉತ್ತರ ಹೇಳುತ್ತಾ Statement of the Minister for Home & Excise on a matter of public importance raised by Sri K.H. Ranganath, MLA, here, on the floor of the House I quote: "as regards integrity in public life, let me remine the House that the former Government headed by Sri Ramakrishna Hegde has passed in this House the

Karnataka Lokayuktha and the Uplokayuktha Act in 1985.." He gave credit to us for having passed this Act. "With the prior approval of the Government of India under this Act, Chief Minister, all other Ministers, MLAs, MLCs, non-official Chairman of the various statutory bodies, Government servants are liable for investigative action and punishment thereafter...."

ಈ ಶಾಸನ ಇರುವ ಕಾರಣ ನಾವು ಸಿಬಿಐಗೆ ಕೊಡುವಂಥ under the prevention of corruption Act ಏನಿದೆ, ಈ ಮಸೂದೆಯನ್ನು ಆ ವ್ಯಾಪ್ತಿಯಿಂದ ಹೊರಗಿಟ್ಟಿದ್ದೇವೆ ಎನ್ನುವ ವಿವರಣೆಯನ್ನು ಕೊಡುತ್ತಾರೆ. ಅರ್ಥಾತ್, ಈ ಸರ್ಕಾರಕ್ಕೆ ಲೋಕಾಯುಕ್ತದ ಬಗ್ಗೆ ಎಲ್ಲಿಲ್ಲದ ಪ್ರೀತಿ, ವಿಶ್ವಾಸ. ತುಂಬಾ ಸಂತೋಷ. ಯಾವ ಸದಿಚ್ಛೆಯಿಂದ ಈ ಶಾಸನವನ್ನು ಮಾಡಿ ಈ ಮಸೂದೆಯ ಮೂಲಕ ಜಾರಿಗೆ ಕೊಟ್ಟಂತಹ ಈ ಲೋಕಾಯುಕ್ತದ ಬಗ್ಗೆ ಇವತ್ತು ಯಾರ ನಿರೀಕ್ಷೆಗೆ ಏನಿದೆಯೋ ನನಗೆ ಗೊತ್ತಿಲ್ಲ, ನನಗೆ ಭ್ರಮೆ ನಿರಸನವಾಗಿದೆ. ನನಗೆ ಭ್ರಮನಿರಸನವಾಗಿರಲು ಕಾರಣ, ಸರ್ಕಾರ ಈ ಲೋಕಾಯುಕ್ತದಲ್ಲಿ ಮಧ್ಯೆ ಪ್ರವೇಶ ಮಾಡುವಂಥದ್ದು. ಲೋಕಾಯುಕ್ತ ಇನ್‌ಸ್ಟಿಟ್ಯೂಷನ್‌ನಲ್ಲಿ ಕೆಲಸ ಮಾಡುವಂಥ ನಿಷ್ಠಾವಂತ ಅಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡಲಾಗುತ್ತಿದೆ. ನೇಮಕದಲ್ಲಿ ಆ ಸಮಿತಿಯ ಅಭಿಪ್ರಾಯಕ್ಕೆ ಮನ್ನಣೆ ಸಿಕ್ಕದೇ ಇರತಕ್ಕದ್ದು. ಇಂಥ ಸಂದರ್ಭದಲ್ಲಿ ಇವರ ಸಂಬಳ ಜಾಸ್ತಿ ಮಾಡಿದ್ದೀರಿ, ಸಂತೋಷ ಮಾಡಿ. ಏಕೆಂದರೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು, ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಈ ಸ್ಥಾನಕ್ಕೆ ತರುತ್ತಿರುವುದರಿಂದ, ಅವರ ಅಂತಸ್ತನ್ನು, ಗೌರವವನ್ನು, ಸ್ಥಿತಿಗತಿಗಳನ್ನು ಕಾಪಾಡಿಕೊಂಡು ಬರಬೇಕಾದ್ದು ನಮ್ಮ ಕರ್ತವ್ಯ. ಹಾಗೆಯೇ ಲೋಕಾಯುಕ್ತ ತನ್ನ ಕರ್ತವ್ಯಗಳನ್ನು ಅಭಾಧಿತವಾಗಿ, ನಿರ್ಭಾಧಿತವಾಗಿ ಮಾಡುವುದಕ್ಕೆ ಸರ್ಕಾರದ ಸಹಾಯ ಬೇಕಾಗುತ್ತದೆ. ಸಾರ್ವಜನಿಕರ ಸಹಾಯ ಬೇಕಾಗುತ್ತದೆ. ಇಲ್ಲದಿದ್ದರೆ ಲೋಕಾಯುಕ್ತ ಮತ್ತು ಉಪಲೋಕಾಯುಕ್ತ ಬರೀ ಹಾಸ್ಯಾಸ್ಪದ ವೇದಿಕೆಗಳಾಗಿ ಉಳಿಯುತ್ತದೆ. ಆದುದರಿಂದ, ಉತ್ತರ ಕೊಡುವಾಗ ಈ ಲೋಕಾಯುಕ್ತದ ಮೇಲೆ ವಿಶ್ವಾಸ ಇಲ್ಲ ಎನ್ನತಕ್ಕಂಥಾದ್ದು ಹಾಗೂ ತಮ್ಮ ಆಸ್ತಿಯನ್ನು ಅವರ ಮುಂದೆ ಡಿಕ್ಲೇರ್ ಮಾಡುವುದಿಲ್ಲವೆಂದು ಹೇಳಿದಂತಹ ಮುಖ್ಯಮಂತ್ರಿಗಳು ಇವೊತ್ತು ಈ ಸದನದ ಮೂಲಕ ಅವರಿಗೆ ಭಾರಿಯಾದಂತಹ ಈ ರೀತಿಯ ಕುಡೋಸ್ ಕೊಡತಕ್ಕ ಪ್ರಯತ್ನ ಏನು ಮಾಡಿದ್ದಾರೆ, ಇದರ ಹಿಂದೆ ಯಾವುದೋ ರೀತಿಯಾದಂಥ ಸಂಶಯಕ್ಕೆ ಎಡೆ ಕೊಡತಕ್ಕಂಥ ಸಂಬಂಧವಿದೆ ಎನ್ನತಕ್ಕಂಥ ಒಂದು ಅಭಿಪ್ರಾಯಕ್ಕೆ ನಾವು ಬಂದರೆ ಸದನ ಅಥವಾ ಸದನದ ಮುಖಾಂತರ ಸಾರ್ವಜನಿಕರು ನನ್ನನ್ನು ತಪ್ಪು ತಿಳಿದುಕೊಳ್ಳುವುದಿಲ್ಲವೆಂಬ ಭಾವನೆಯಿಟ್ಟುಕೊಂಡು, ಈ ಮಸೂದೆಗೆ ಹೆಚ್ಚು ವಿಸ್ತಾರವಾಗಿ ಶ್ರೀಮಾನ್ ಏಕಾಂತಯ್ಯನವರು ಮಾತನಾಡುವ ಕಾರಣ, ನಾನು ಇಷ್ಟು ಅಭಿಪ್ರಾಯವನ್ನು ಹೇಳಿ, ತಾವು ಇಂತಹ ಒಂದು ಶಾಸನದ ಮೇಲೆ ಚರ್ಚೆ ಮಾಡುವಾಗ ಖಾಲಿ ಹೊಟ್ಟೆಯಲ್ಲಿ ಚರ್ಚೆ ಮಾಡುವುದು ಕಷ್ಟ. ಆದುದರಿಂದ, ನಮಗೆ ಊಟಕ್ಕೆ ಒಂದು ಘಂಟೆಗಳ ಕಾಲ ಅವಕಾಶ ಮಾಡಿಕೊಟ್ಟರೆ ಸ್ವಲ್ಪ ಸಮಾಧಾನದಲ್ಲಿ ಚರ್ಚೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

(ಸಭೆಯು 2 ಘಂಟೆ 2 ನಿಮಿಷಕ್ಕೆ ಮುಕ್ತಾಯವಾಯಿತು ಮತ್ತೆ ಅರ್ಧ ಘಂಟೆಯ ನಂತರ ಸೇರಲು ತೀರ್ಮಾನಿಸಿತು) (ಸಭೆಯು 3-05 ನಿಮಿಷಕ್ಕೆ ಸಮಾವೇಶಗೊಂಡಿತು)

(ಉಪಾಧ್ಯಕ್ಷಣಿಯವರಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

+ ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಉಪಾಧ್ಯಕ್ಷಿಣೀಯವರೇ, ಕರ್ನಾಟಕ ಲೋಕಾಯುಕ್ತ ತಿದ್ದುಪಡಿ ವಿಧೇಯಕವನ್ನು ಏನು ಈ ಸಭೆಯಲ್ಲಿ ಮಂಡಿಸಿದ್ದಾರೆ, ಆ ವಿಧೇಯಕವನ್ನು ವಿರೋಧಿಸಿ ನಾನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ಇದನ್ನು 1984ನೇ ಇಸವಿಯಲ್ಲಿ ಲೋಕಾಯುಕ್ತ ವಿಧೇಯಕವನ್ನು ಮೊಟ್ಟ ಮೊದಲು ಅಂದು ಇದ್ದಂತಹ ಜನತಾ ಸರ್ಕಾರ ಇದನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಿತು. ಜಾರಿಗೆ ತಂದ ಮೇಲೆ ಎರಡು ಭಾರಿ ಈ ವಿಧೇಯಕಕ್ಕೆ ತಿದ್ದುಪಡಿ ಮಾಡುವಂತಹ ಅಧಿನಿಯಮಗಳನ್ನು ಈ ಸಭೆಯಲ್ಲಿ ಮಂಡಿಸಿ ಅವು ಚರ್ಚೆಯಾಯಿತು. ಚರ್ಚೆಯಾದಂತಹ ಸಂದರ್ಭದಲ್ಲಿ ಒಂದು ತಿದ್ದುಪಡಿ ವಿಧೇಯಕ ಈಗ ಏನು ತಂದಿದ್ದಾರೆ 5ನೇ ಉಪ ಪ್ರಕರಣಕ್ಕೆ ಸಂಬಂಧಿಸಿದ್ದು ಆಗಿತ್ತು. ಅಂತಹ ಸಂದರ್ಭದಲ್ಲಿ ಅಂದು ಈ ಕಡೆ ಕುಳಿತುಕೊಂಡಿದ್ದಂತಹ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಂಗಾರಪ್ಪನವರು ಮತ್ತು ಅವರ ಹಿರಿಯ ಸಚಿವರು ಏನಿದ್ದಾರೆ ಅವರು ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು. ಮಾನ್ಯ ಅಧ್ಯಕ್ಷರೇ, ಜನತಂತ್ರ ವ್ಯವಸ್ಥೆಯಲ್ಲಿ ಅಧಿಕಾರದ ಹಸ್ತಾಂತರ ಅನಿವಾರ್ಯ ಮತ್ತು ಅನೇಕ ಸಂದರ್ಭಗಳಲ್ಲಿ ಅಗತ್ಯ ಕೂಡ ಹೌದು. ಅದೇ ರೀತಿ ಯಾವುದೇ ಒಂದು ಪಕ್ಷದ /ವ್ಯಕ್ತಿಯ ಬದಲಾವಣೆ ಆಗುವುದು ಸ್ವಾಭಾವಿಕ. ಆದರೆ ಆ ಅಭಿಪ್ರಾಯ ಬದಲಾವಣೆಯಾಗಬೇಕಾದರೆ, ಅದು ಎಷ್ಟರ ಮಟ್ಟಿಗೆ ಸದುದ್ದೇಶದಿಂದ ಕೂಡಿದೆ ಎಂಬುದನ್ನು ನಾವು ಪರಿಶೀಲನೆ ಮಾಡಬೇಕಾಗುತ್ತದೆ. ಅಂದು ತಂದಂತಹ ತಿದ್ದುಪಡಿಯನ್ನು ವಿರೋಧ ಮಾಡಿ ಮಾತನಾಡಿದಂತಹ ಅನೇಕ ಹಿರಿಯರು ಮುಖ್ಯಮಂತ್ರಿಗಳೂ ಸೇರಿದಂತೆ ಕೆಲವು ಅಭಿಪ್ರಾಯಗಳನ್ನು ಹೇಳಿದ್ದಾರೆ. ಆ ಒಂದು ಅಭಿಪ್ರಾಯಗಳಿಗೆ ಈ ದಿನವೂ ಬದ್ಧರೇ ಎನ್ನುವುದನ್ನು ನಾನು ಅವರಿಂದ ತಿಳಿಯಬಯಸುತ್ತೇನೆ. ಒಂದು ಪಕ್ಷ ಅವರು ಅಂದು ಹೇಳಿದಂಥ ಅಭಿಪ್ರಾಯಗಳಿಗೆ ಏನಾದರೂ ಬದಲಾವಣೆಯನ್ನು ಮಾಡಿಕೊಂಡಿದ್ದರೆ, ಅದಕ್ಕೆ ಅವರು ಕಾರಣವನ್ನು ಹೇಳಬೇಕಾಗುತ್ತದೆ. ಈ ರಾಜ್ಯದ ಜನತೆಗೆ ಅವರ ಸದುದ್ದೇಶವನ್ನು ತಿಳಿಸಿ ವಿವರಣೆಯನ್ನು ಕೊಡಬೇಕಾಗುತ್ತದೆ. ಅಂದು ಇದ್ದಂಥ ವಿರೋಧ ಪಕ್ಷದ ನಾಯಕರುಗಳು ಈ ಲೋಕಾಯುಕ್ತದ ಬಗ್ಗೆ ತೀವ್ರವಾದಂಥ ಟೀಕೆಯನ್ನು ಮಾಡಿದ್ದರು. ಅಷ್ಟೇ ಅಲ್ಲ, ಅದರಲ್ಲಿ ನಂಬಿಕೆಯನ್ನು ವ್ಯಕ್ತ ಮಾಡಲಿಕ್ಕೆ ಸಂಶಯ ವ್ಯಕ್ತ ಮಾಡಿದ್ದರು. ಎಲ್ಲಕ್ಕಿಂತ ಹೆಚ್ಚಾಗಿ, ಅದರ ವಿಶ್ವಾಸಾರ್ಹತೆಯನ್ನು ಛೇಡಿಸಿದ್ದರು. ಈಗ ಇದ್ದಕ್ಕಿದ್ದ ಹಾಗೆ ಲೋಕಾಯುಕ್ತದ ಬಗ್ಗೆ ವಿಶೇಷವಾದಂಥ ಪ್ರೇಮ ಅಥವಾ ಪ್ರೀತಿ ಏತಕ್ಕೋಸ್ಕರ ಬಂತು? ಅದರ ವಿವರಣೆಯನ್ನು ಅವರಿಂದ ತಿಳಿಯಲಿಕ್ಕೆ ನಾವು ಇಷ್ಟ ಪಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಅವರು ಈಗ ಸದನದಲ್ಲಿ ಇಲ್ಲ.

ಶ್ರೀ ಹೆಚ್. ಏಕಾಂತಯ್ಯ : ಅವರು ಇಲ್ಲದಿದ್ದರೆ, ಅವರ ಗೈರುಹಾಜರಿಯಲ್ಲೇ ಕೆಲವು ವಿಷಯಗಳನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಆಗ ಏನು ಲೋಕಾಯುಕ್ತ ಮಸೂದೆ ಇತ್ತು, ಆ ಮಸೂದೆ ಪ್ರಕಾರ ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತರಿಗೆ ಎಷ್ಟು ಸಂಭಾವನೆ ಕೊಡಬೇಕೆಂಬುದರ ಬಗ್ಗೆ ಒಂದು ತಿದ್ದುಪಡಿಯನ್ನು ಈ ಹಿಂದೆ ತಂದಿದ್ದೆವು. ಆಗ 5 ಸಾವಿರ ಮತ್ತು 4 ಸಾವಿರ ಎಂಬ ಪದಗಳಿಗೆ ಬದಲಾಗಿ 7500 ಮತ್ತು 6000 ಎಂಬ ಪದಗಳನ್ನು ಪ್ರಸ್ತಾಪಿಸತಕ್ಕದ್ದು ಎಂಬುದು ಮುಖ್ಯವಾದಂಥ ತಿದ್ದುಪಡಿ. ಸನ್ಮಾನ್ಯ ಅಧ್ಯಕ್ಷಣಿಯವರೇ, ಆ ಸಂದರ್ಭದಲ್ಲಿ ಇಂದು ಆಡಳಿತ ನಡೆಸುತ್ತಿರುವಂಥ, ಹೊಣೆಗಾರಿಕೆ ಜಾಗದಲ್ಲಿರುವಂಥ

ಜನ ಅಂದು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದರು. ಈಗ ನಾನು ಆ ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ, ಆ ಹಿನ್ನೆಲೆಯನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈವತ್ತಿನ ದಿವಸ ಈಗ ಸನ್ಮಾನ್ಯ ಮುಖ್ಯಮಂತ್ರಿಗಳಾಗಿರತಕ್ಕ ತಾವು ಈ ಒಂದು ಹೇಳಿಕೆಯನ್ನು ನೀಡಿದ ನಂತರ ಏತಕ್ಕೋಸ್ಕರ ತಮ್ಮ ನಿಲುವನ್ನು ಈಗ ಬದಲಾಯಿಸಿದ್ದೀರಿ? ಈ ವಿವರಣೆಯನ್ನು ಕೇಳುವಂಥ ದೃಷ್ಟಿಯಲ್ಲಿ ನಾನು ಹೇಳುತ್ತಿದ್ದೇನೆ. ಆಗ ಈ ತಿದ್ದುಪಡಿ ಬಗ್ಗೆ ಅಂದು ಹಿರಿಯ ಸದಸ್ಯರಾದಂಥ ಬಂಗಾರಪ್ಪನವರು, ವೀರಪ್ಪಮೊಯಿಲಿಯವರು, ಕೆ.ಹೆಚ್. ಪಾಟೀಲರು, ಬಸವಲಿಂಗಪ್ಪನವರು, ಈ ಗಣ್ಯ ಮನುಷ್ಯರು ಅನೇಕ ವಿಚಾರಗಳನ್ನು ವ್ಯಕ್ತ ಮಾಡಿದ್ದರು. ಅವರು ವ್ಯಕ್ತ ಮಾಡಿದಂಥ ಮುಖ್ಯ ವಿಚಾರಗಳೆಂದರೆ, ಈ ಲೋಕಾಯುಕ್ತ ಮತ್ತು ಉಪಲೋಕಾಯುಕ್ತರಿಗೆ ಮುಖ್ಯ ನ್ಯಾಯಾಧೀಶರುಗಳು ಮತ್ತು ನ್ಯಾಯಾಧೀಶರುಗಳಿಗಿಂತ ಹೆಚ್ಚು ಸಂಭಾವನೆ ಕೊಡುವುದರಲ್ಲಿ ಅರ್ಥ ಇಲ್ಲ. ಅದ್ದರಿಂದಾಗಿ ನಾವು ಹೈಕೋರ್ಟ್‌ನ ಜಡ್ಜ್‌ರವರಿಗಿಂತ ಹೆಚ್ಚು ಎಂಬ ಭಾವನೆ ಬರುವಂತೆ ನಾನು ನಡೆದುಕೊಂಡ ಹಾಗೆ ಆಗುತ್ತದೆ ಎಂದು ಹೇಳಿದ್ದರು. ಈ ಹೆಚ್ಚಿಸುವಿಕೆ ಏನಿದೆ ಅದು ಸಂವಿಧಾನದ ಪರವಲ್ಲ, ಅದು ರಾಜ್ಯಾಂಗಕ್ಕೆ ವಿರೋಧ ಎಂಬ ಮಾತನ್ನು ಹೇಳಿದ್ದರು. ನೀವು ಇದನ್ನು ಹೆಚ್ಚಿಸಲಿಕ್ಕೆ ಹೊರಟಿರುವುದು ಯಾರನ್ನೋ ಸಂತೋಷಪಡಿಸಲಿಕ್ಕೆ ಎಂಬ ಮೂದಲಿಕೆಯ ಮಾತನ್ನು ಆಡಿದ್ದರು. ಇದಕ್ಕಿಂಥ ಭಾರಿ ಅನ್ಯಾಯ ಏನೂ ಇಲ್ಲ, ಎಂಬ ಮಾತನ್ನು ಹೇಳಿದ್ದರು. ಈಗ ಮಾನ್ಯ ಮುಖ್ಯ ಮಂತ್ರಿಗಳಾಗಿರತಕ್ಕಂಥವರು ಆಗ ಹೇಳಿದಂಥ ಕೆಲವು ವಿಚಾರಗಳನ್ನು ಮಾತ್ರ ಹೇಳುತ್ತೇನೆ. ಇದು ೧೯೮೬ನೇ ಮಾರ್ಚ್ ೧೭ನೇ ತಾರೀಖು ಅಂದು ಈ ತಿದ್ದುಪಡಿ ವಿಧೇಯಕದ ಈ ಸಭೆಯಲ್ಲಿ ಚರ್ಚೆಗೆ ಬಂದಂಥ ಸಂದರ್ಭದಲ್ಲಿ ಹೇಳಿದ್ದು. "ಇದು ಸಣ್ಣ ವಿಚಾರವಲ್ಲ, ಡೆಲಬರೇಟ್ ಎಂದರೆ ಸಂಬಳ ಜಾಸ್ತಿ ಕೊಟ್ಟು ಚೆನ್ನಾಗಿ ಕೆಲಸ ಮಾಡಬೇಕು ಎನ್ನುವ ಉದ್ದೇಶ ಇರಬಹುದೇ? ಪ್ರೆಸಿಡೆಂಟ್ ಆಫ್ ಇಂಡಿಯಾಗೆ ೧೦ ಸಾವಿರ ಇರುವಾಗ ಅವರಿಗಿಂತ ಹೆಚ್ಚು ಲೋಕಾಯುಕ್ತ ಉಪಲೋಕಾಯುಕ್ತರವರಿಗೆ ಕೊಟ್ಟರೆ ಅವರ ಘನತೆ ಏನು? ಪೆನ್‌ಷನ್ ಎಲ್ಲಾ ಸೇರಿ ೧೦ ಸಾವಿರಕ್ಕಿಂತ ಹೆಚ್ಚು ಮೊತ್ತವನ್ನು ಒಬ್ಬ ವ್ಯಕ್ತಿಗೆ ಕೊಡತಕ್ಕಂಥ ಅರ್ಥ ಏನು?"

ಮಾನ್ಯ ಶ್ರೀ ವೀರಪ್ಪ ಮೋಯಿಲಿಯವರು : "ಪೆನ್‌ಷನ್ ಒಂದು ಕಡೆ, ಸಂಬಳ ಒಂದು ಕಡೆ, ಈ ರೀತಿ ಎಲ್ಲೂ ಕಾಣಲಿಲ್ಲ two sets of benefits"

ಮಾನ್ಯ ಎಸ್. ಬಂಗಾರಪ್ಪನವರು ಹೇಳಿದಂಥ ಕೆಲವೇ ಮಾತುಗಳನ್ನು ಮಾತ್ರ ಹೇಳುತ್ತೇನೆ. "ಅಧ್ಯಕ್ಷರೇ ಇದು ಸಣ್ಣ ವಿಚಾರವಲ್ಲ. ಜನರ ತಲೆ ಬೋಳಿಸಲಿಕ್ಕೆ ವಿಚಾರ, ತಲೆ ಬೋಳಿಸಲಿಕ್ಕೆ ಮಾಡುವುದು ಸರಿಯಲ್ಲ" ಅವರು ಯಾವ ಪದಗಳನ್ನು ಉಪಯೋಗಿಸಿದ್ದಾರೆ ಆ ಪದಗಳನ್ನು ನಾನು ಹೇಳುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷಣೆಯವರೇ, ಕೊನೆಯದಾಗಿ "ಸರ್ಕಾರದ ಖಜಾನೆಯನ್ನು ತಮಗೆ ಇಷ್ಟ ಬಂದವರಿಗೆ ಇಷ್ಟ ಬಂದ ರೀತಿಯಲ್ಲಿ ದುರುಪಯೋಗಪಡಿಸಿಕೊಳ್ಳುತ್ತಿರುವುದನ್ನು ಪ್ರತಿಭಟಿಸಿ ನಮ್ಮ ಪಕ್ಷದ ಸದಸ್ಯರೆಲ್ಲರೂ ಸಭಾತ್ಯಾಗ ಮಾಡುತ್ತಿದ್ದೇವೆ." ಇದು ಈಗ ಮಾನ್ಯ ಮುಖ್ಯಮಂತ್ರಿಗಳಾಗಿರತಕ್ಕಂಥ ಶ್ರೀ ಎಸ್. ಬಂಗಾರಪ್ಪನವರು ಈ ಹಿಂದೆ ಇಂತಹ ತಿದ್ದುಪಡಿ ಬಂದಾಗ ಹೇಳಿದಂಥ ಮಾತುಗಳು. ನಾನು ಈಗ ಅವರ ವಿಶ್ವಾಸಾರ್ಹತೆಯನ್ನು ಪ್ರಶ್ನೆಮಾಡುತ್ತೇನೆ. ಈ ರೀತಿ ಹೇಳಿದಂತಹ ಮಾನ್ಯ ಮುಖ್ಯಮಂತ್ರಿಗಳು ಮತ್ತು ಅವರ ಸಹೋದ್ಯೋಗಿಗಳು ಏನು ಇದ್ದಾರೆ, ಇದ್ದಕ್ಕಿದ್ದ ಹಾಗೆ ಈ ಒಂದು ನಿಲುವನ್ನು ಬದಲಾಯಿಸಲಿಕ್ಕೆ ಏನು

ಎಂಬ ಮಾತನ್ನು ಹೇಳುತ್ತಿಲ್ಲ. ಜನತಂತ್ರ ವ್ಯವಸ್ಥೆಯಲ್ಲಿ ಯಾವುದೇ ಒಂದು ಪಕ್ಷ ಇರಬಹುದು, ಅಥವಾ ಪಕ್ಷದ ಪ್ರತಿನಿಧಿಗಳು ಇರಬಹುದು. ಪರಿಸ್ಥಿತಿಗೆ ಅನುಗುಣವಾಗಿ ತಮ್ಮ ಅಭಿಪ್ರಾಯಗಳನ್ನು ಬದಲಾಯಿಸಿಕೊಳ್ಳುವ ಹಕ್ಕು ಅವರಿಗೆ ಇದೆ. ಆದರೆ ಆ ಬದಲಾವಣೆಗೆ ಬೇಕಾದಂತಹ ವಿವರಣೆಯನ್ನು ಕೇಳುವ ಹಕ್ಕು ಈ ಕಡೆಯ ಸದಸ್ಯರಿಗೂ ಇದೆ ಎನ್ನುವ ಮಾತನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಈಗ ಏನು ಮಾಡಿದ್ದೀರಿ ಅಂದರೆ ಈಗಿರುವ ಲೋಕಾಯುಕ್ತಕ್ಕೆ ತಿದ್ದುಪಡಿ ತಂದು ಏನು ಏಳೂವರೆ ಸಾವಿರ ಮತ್ತು ಐದು ಸಾವಿರ ಇತ್ತು, ಅದಕ್ಕೆ ಬದಲಾಗಿ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಿಗೆ ಮತ್ತು ನ್ಯಾಯಾಧೀಶರಿಗೆ ಕ್ರಮವಾಗಿ ಕೊಡತಕ್ಕ ಸಂಭಾವನೆಯನ್ನು ಕೊಡಬೇಕು ಎನ್ನುವ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಹಾಗಾದರೆ ನಾನು ಕೇಳುತ್ತಿದ್ದೇನೆ. ಇವತ್ತಿನ ದಿವಸ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಿಗೆ ಒಂಭತ್ತು ಸಾವಿರ, ಬೇರೆ ನ್ಯಾಯಾಧೀಶರಿಗೆ ಎಂಟು ಸಾವಿರ ಬರುತ್ತಿದ್ದರೆ ಇವರಿಗೆ ನಾವು ಆ ಸಂಬಳವನ್ನು ಕೊಡುತ್ತಿದ್ದೇವೆ. ಮುಖ್ಯ ನ್ಯಾಯಾಧೀಶರಿಗೆ ಮತ್ತು ಇತರೇ ನ್ಯಾಯಾಧೀಶರಿಗೆ ಕೊಡತಕ್ಕ ಭತ್ಯವನ್ನು ಸಹ ಕೊಡಬೇಕೆಂಬ ವಿಷಯ ಈಗಾಗಲೇ ತಮ್ಮ ಕಾನೂನಿನಲ್ಲಿ ಇದೆ. ತುಟ್ಟಿಭತ್ಯವನ್ನು ಹೊರತು ಪಡಿಸಿ ಬೇರೆ ಭತ್ಯವನ್ನು ಕೊಡುವಂತಹ ಕಾನೂನು ಇದೆ. ಆದರೆ ಒಂದು ವಿಶೇಷವಾದ ಕಾರಣವನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಈಗಾಗಲೇ ಲೋಕಾಯುಕ್ತ ಮತ್ತು ಉಪಲೋಕಾಯುಕ್ತರಾಗಿ ನೇಮಕ ಆಗಬಹುದಾದಂತಹ ಮತ್ತು ಆಗಿರಬಹುದಾದಂತಹ ಅನೇಕ ಮುಖ್ಯ ನ್ಯಾಯಾಧೀಶರು ಇದ್ದಾರೆ. ಅವರು ಈಗಾಗಲೇ ನಿವೃತ್ತಿ ವೇತನವನ್ನು ಪಡೆಯುತ್ತಿದ್ದಾರೆ. ತಮಗೆ ಗೊತ್ತಿಗೆ ಯಾವುದಾದರೂ ಒಬ್ಬ ನಿವೃತ್ತಿ ಆದಂತಹ ವ್ಯಕ್ತಿ ಯಾವ ಒಂದು ಅಧಿಕಾರದ ಸ್ಥಾನವನ್ನು ವಹಿಸಿಕೊಂಡರೆ. ಆತನಿಗೆ ಯಾವ ಒಂದು ಸ್ಥಾನವನ್ನು ವಹಿಸಿಕೊಂಡಿದ್ದಾನೆ, ಆ ಸ್ಥಾನಕ್ಕೆ ಕೊಡಬೇಕಾದಂತಹ ಸಂಭಾವನೆಯಲ್ಲಿ ಈ ಹಿಂದೆ ಸೇವೆ ಮಾಡಿ ನಿವೃತ್ತಿ ವೇತನವನ್ನು ಪಡೆಯುತ್ತಿದ್ದರೆ, ಆ ನಿವೃತ್ತಿ ವೇತನವನ್ನು ವಜಾ ಮಾಡತಕ್ಕದ್ದು ಎಂಬುದನ್ನು ಸರ್ವೇಸಾಮಾನ್ಯವಾಗಿ ನಾವು ಅನುಸರಿಸಿಕೊಂಡು ಬಂದಂತಹ ಒಂದು ನೀತಿ. ಈ ಒಂದು ನೀತಿಯನ್ನು ಮೂಲತಃ ಇದ್ದಂತಹ ಲೋಕಾಯುಕ್ತ ಮಸೂದೆಯಲ್ಲಿ ಇತ್ತು. ಆ ನಿವೃತ್ತಿ ವೇತನವನ್ನು ವಜಾ ಮಾಡಬೇಕು ಎಂಬುದನ್ನು ತೆಗೆದರು. ತೆಗೆದಂತಹ ಸಂದರ್ಭದಲ್ಲಿ ಹೆಚ್ಚು ಕಡಿಮೆ ಅಂದು ಇದ್ದಂತಹ ಮುಖ್ಯ ನ್ಯಾಯಾಧೀಶರಿಗೆ ಮತ್ತು ನ್ಯಾಯಾಧೀಶರಿಗೆ ಕೊಡತಕ್ಕ ಸಂಭಾವನೆ ಮತ್ತು ಭತ್ಯೆ ಏನು ಇದೆ, ಅದಕ್ಕಿಂತ ಹೆಚ್ಚು ಆಗಬಾರದು ಎಂಬ ದೃಷ್ಟಿಯಿಂದ ಅಷ್ಟೇ ಮೊತ್ತದ ಹಣವನ್ನು ಅಂದರೆ ಆವತ್ತು ಏಳೂವರೆ ಸಾವಿರ ಮತ್ತು ಆರು ಸಾವಿರ ಎಂದು ನಿಗದಿ ಮಾಡಿದರು. ಆದರೆ ಇವತ್ತು ನೀವು ಒಂದು ಹೆಜ್ಜೆ ಮುಂದೆ ಹೋಗಿದ್ದೀರಿ. ಇದನ್ನು ಪದೇ ಪದೇ ತಿದ್ದುಪಡಿ ಮಾಡುವ ಅವಶ್ಯಕತೆ ಇರಲಿಲ್ಲ ಎನ್ನುವ ದೃಷ್ಟಿಯಿಂದ ತಾವು ಹಾಲಿ ಕೆಲಸ ಮಾಡುತ್ತಿರುವ ಹೈಕೋರ್ಟಿನ ಮುಖ್ಯನ್ಯಾಯಾಧೀಶರಿಗೆ ಕೊಡುವಂತಹ ಸಂಭಾವನೆ ಮತ್ತು ಭತ್ಯಗಳನ್ನು ತುಟ್ಟಿಭತ್ಯವನ್ನು ಹೊರತುಪಡಿಸಿ ಲೋಕಾಯುಕ್ತರಿಗೆ ಕೊಡಬೇಕು ಎಂತಲೂ ಮತ್ತು ಉಪಲೋಕಾಯುಕ್ತರಿಗೆ ಹಾಲಿ ಹೈಕೋರ್ಟಿನ ನ್ಯಾಯಾಧೀಶರಾಗಿ ಕೆಲಸ ಮಾಡುತ್ತಿರುವ ನ್ಯಾಯಾಧೀಶರಿಗೆ ಕೊಡುವಂತಹ ಸಂಭಾವನೆ ಮತ್ತು ಭತ್ಯಗಳನ್ನು ಇವರಿಗೆ ಕೊಡುವುದಕ್ಕೆ ನಾವು ಕಾನೂನನ್ನು ಮಾಡಿದ್ದೇವೆ. ಆದರೆ ಈಗ ಇರುವಂತಹ ತಿದ್ದುಪಡಿಯಲ್ಲಿ ಒಂದು ಮಾತನ್ನು ಈ ನಿವೃತ್ತಿ ವೇತನವನ್ನು ಏನು ಪಡೆಯುತ್ತಿದ್ದಾರೆ ಅದನ್ನು ವಜಾ ಮಾಡಿಕೊಳ್ಳಬೇಕೇ ಬೇಡವೇ ಎನ್ನುವುದರ ಬಗ್ಗೆ ಪ್ರಸ್ತಾಪ ಇಲ್ಲ. ಹಾಗಾದರೆ ಇವತ್ತಿನ ದಿವಸ ಲೋಕಾಯುಕ್ತರಿಗೆ ತಾವು ಕೊಡುವಂತಹ ಸಂಭಾವನೆ ಮತ್ತು

ತುಟ್ಟಿಭತ್ಯ ಹಾಲಿ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ಏನು ಪಡೆಯುತ್ತಿದ್ದಾರೆ ಅವರ ಸಂಬಳಕ್ಕಿಂತ ಬಹಳಷ್ಟು ಜಾಸ್ತಿ ಆಗುತ್ತದೆ. ಅದೇ ರೀತಿ ಉಪಲೋಕಾಯುಕ್ತರಿಗೂ ಸಹ ತಾವು ಕೊಡಬೇಕು ಎಂದು ಬಯಸಿರುವಂತಹ ಸಂಭಾವನೆ ಮತ್ತು ಭತ್ಯ ಏನು ಇದೆ ಅದು ಹಾಲಿ ಕೆಲಸ ಕೆಲಸ ಮಾಡುತ್ತಿರುವ ಜಡ್ಜ್‌ಗಳಿಗೆ ಕೊಡುವಂತಹ ಸಂಭಾವನೆಗಿಂದ ಹೆಚ್ಚು ಆಗುತ್ತದೆ. ತಾವು ಹೇಗೆ ಇದನ್ನು ಒಪ್ಪಿದಿರಿ? ತಾವು ಅಷ್ಟೊಂದು ಭಯಂಕರವಾಗಿ ಟೀಕೆ ಮಾಡಿದಂತಹ ಜನ, ಈ ತಿದ್ದುಪಡಿ ವಿಧೇಯಕವನ್ನು ವಿರೋಧಿಸಿ ಪ್ರತಿಭಟನೆ ಮಾಡಿದಂತಹ ತಮ್ಮ ವಿರೋಧವನ್ನು ಎಲ್ಲಾ ಮಾತುಗಳಿಂದ ಪ್ರತಿಭಟನೆ ಮಾಡಿದಂತಹ ಜನ, ಇವತ್ತಿನ ದಿವಸ ಇದರ ಬಗ್ಗೆ ತಾವು ತಮ್ಮ ಭಾವನೆಯನ್ನು ಬದಲಾಯಿಸಕೊಂಡಿದ್ದೀರಿ. ಇದಕ್ಕೆ ಕಾರಣ ಏನು? ಏಕೆ? ಅವತ್ತು ಇದ್ದಂತಹ ಲೋಕಾಯುಕ್ತರು ಮತ್ತು ಉಪಲೋಕಾಯುಕ್ತರು ತಮಗೂ ಬೇಕಾದವರು ಎಂದು ಅನಿಸಿರಲಿಲ್ಲವೇ? ಅಥವಾ ಇವತ್ತು ಏನು ಲೋಕಾಯುಕ್ತರು ಅಥವಾ ಉಪಲೋಕಾಯುಕ್ತರು ಇದ್ದಾರೆ, ಅವರು ತಮಗೆ ಬೇಕಾದವರು ಎಂದು ಅನಿಸಿದರೆ ಎಂಬ ಕಾರಣದಿಂದ ತಾವು ಏನಾದರೂ ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಾ? ತಾವು ಇದರ ಬಗ್ಗೆ ವಿವರಣೆ ಕೊಡಬೇಕಾಗಿದೆ. ಇದು ಯಾವುದೇ ಒಂದು ವ್ಯಕ್ತಿಯಲ್ಲಿರತಕ್ಕಂಥ ನಿಷ್ಠೆಯ ಪ್ರಶ್ನೆಯಲ್ಲ. ಇವೊತ್ತಿನ ದಿವಸ ನಿಮಗೆ ಲೋಕಾಯುಕ್ತ ಸಂಸ್ಥೆಯ ಮೇಲೆ ವಿಶ್ವಾಸ ಇದ್ದರೆ, ಒಂದೇ ತರಹವಾದಂಥ ಅಭಿಪ್ರಾಯವನ್ನು ತಾವುಗಳು ಹೊಂದಬೇಕಾಗುತ್ತದೆ. ಆದರೆ ಆ ಲೋಕಾಯುಕ್ತ ಯಾರು ನೇಮಕವಾಗಿದ್ದಾರೆ, ಅದರ ಆಧಾರದ ಮೇಲೆ ಅಥವಾ ವ್ಯಕ್ತಿಯ ಆಧಾರದ ಮೇಲೆ ತಮ್ಮ ಭಾವನೆಗಳನ್ನು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುವುದಾದರೆ, ಇದನ್ನು ನಾವು ಪ್ರತಿಭಟನೆ ಮಾಡಬೇಕಾಗುತ್ತದೆ. ಆದ್ದರಿಂದ ಅದಕ್ಕೆ ಸರಿಯಾದ ಕಾರಣಗಳನ್ನು ನಾವು ತಮ್ಮ ಕಡೆಯಿಂದ ತಿಳಿಯುವುದಕ್ಕೆ ಬಯಸುತ್ತೇನೆ. ಇಂತಹ ಒಂದು ಸಂಭಾವನೆಯನ್ನು ಮತ್ತು ಭತ್ಯೆಯನ್ನು ಬೇರೆ ಬೇರೆ ರಾಜ್ಯಗಳಲ್ಲಿರುವಂತಹ ಲೋಕಾಯುಕ್ತ ಮತ್ತು ಉಪಲೋಕಾಯುಕ್ತರುಗಳಿಗೆ ತಾವು ಕೊಟ್ಟಿರುವುದನ್ನು ಇಲ್ಲಿ ಉದಾಹರಿಸಬಲ್ಲಿರಾ? ಅದಕ್ಕಿಂತಲೂ ಹೆಚ್ಚಾಗಿ ನಾನು ತಮ್ಮಿಂದ ತಿಳಿಯ ಬಯಸುವುದೇನೆಂದರೆ, ಇವೊತ್ತಿನ ದಿವಸ ಈ ಮಸೂದೆಯ ತಿದ್ದುಪಡಿಯಲ್ಲಿ ಏನು ಹೇಳಿದ್ದಾರೆ, ಅದನ್ನು ಅನುಸರಿಸಿ ಸಂಭಾವನೆ ಮತ್ತು ತುಟ್ಟಿಭತ್ಯೆಯನ್ನು ಏನಾದರೂ ಈಗಿರುವಂಥ ಲೋಕಾಯುಕ್ತ ಮತ್ತು ಉಪಲೋಕಾಯುಕ್ತರಿಗೆ ಕೊಟ್ಟರೆ, ಅವರ ಒಟ್ಟು ಸಂಬಳ ಎಷ್ಟಾಗುತ್ತದೆ? ಅದನ್ನು ತಾವು ಹೇಳಬೇಕು ಮತ್ತು ಈಗಿರುವಂಥ ಗೌರ್ನರ್ ಏನಿದ್ದಾರೆ, ಅವರ ಸಂಬಳಕ್ಕಿಂತ ಜಾಸ್ತಿ ಆಗುತ್ತದೆಯೇ? ಈಗಿರುವಂಥ ಹೈಕೋರ್ಟಿನ ಮುಖ್ಯನ್ಯಾಯಾಧೀಶರು ಏನಿದ್ದಾರೆ, ಅಥವಾ ನ್ಯಾಯಾಧೀಶರು ಏನಿದ್ದಾರೆ, ಅವರ ಸಂಬಳ ಮತ್ತು ಸಂಭಾವನೆಗಿಂಥ ಜಾಸ್ತಿಯಾಗುತ್ತದೆಯೇ? ಆ ಒಂದು ವಿವರಣೆಯನ್ನು ನಾನು ತಮ್ಮಿಂದ ತಿಳಿಯ ಬಯಸುತ್ತೇನೆ. ಈ ಒಂದು ಸಂದರ್ಭದಲ್ಲಿ ಈ ಲೋಕಾಯುಕ್ತ ಹೇಗೆ ಕೆಲಸ ಮಾಡುತ್ತಿದೆ ಎಂಬುದನ್ನು ಯೋಚನೆ ಮಾಡಬೇಕು. ಅವರು ಸಂಬಳಕ್ಕಾದರೂ ಕೆಲಸ ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕೆಂದು ಚರ್ಚೆ ಕಾಲದಲ್ಲಿ ಆಗಿದ್ದ ಅನೇಕ ವಿರೋಧ ಪಕ್ಷದ ಸದಸ್ಯರು ಹೇಳಿದ್ದರು. ಇವೊತ್ತು ನಾವು ಲೋಕಾಯುಕ್ತವನ್ನು ಏನು ಸೃಷ್ಟಿ ಮಾಡಿಕೊಂಡಿದ್ದೇವೆ, ನಮ್ಮ ರಾಜ್ಯದಲ್ಲಿ ಅದನ್ನು ಜಾರಿ ಮಾಡಿಕೊಂಡಿದ್ದೇವೆ,

ಇದು ಯಾವ ಉದ್ದೇಶಕ್ಕೋಸ್ಕರವಾಗಿ ಸ್ಥಾಪನೆಯಾಯಿತೋ ಅದನ್ನು ಈಡೇರಿಸುವುದರಲ್ಲಿ ಎಷ್ಟರಮಟ್ಟಿಗೆ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತಿದೆ ಎಂಬುದರ ಬಗ್ಗೆ ಇವೊತ್ತು ತಾವುಗಳು ಬೆಳಕು ಚೆಲ್ಲಬೇಕಾಗಿದೆ. ತಮಗೆ ಗೊತ್ತಿರುವ ಹಾಗೆ ಈ ಲೋಕಾಯುಕ್ತದಲ್ಲಿ

ಮುಖ್ಯವಾದಂಥ ನಾಲ್ಕು ವಿಭಾಗಗಳು ಇವೆ. ಒಂದು ಆಡಳಿತ ವಿಭಾಗ, ಮತ್ತೊಂದು ತನಿಖಾ ವಿಭಾಗ, ಈ ತನಿಖಾ ವಿಭಾಗದಲ್ಲಿ ಪೋಲೀಸ್ ವಿಭಾಗವೂ ಒಂದು, ತಾಂತ್ರಿಕ ವಿಭಾಗವೂ ಮತ್ತೊಂದು. ತದನಂತರ ವಿಚಾರಣಾ ವಿಭಾಗ. ಹಿಂದೆ ವಿಜಿಲೆನ್ಸ್ ಕಮಿಶನ್ ಎಂದು ಏನಿತ್ತು, ಆ ಕಮಿಷನ್‌ನ ಎಲ್ಲಾ ಕೆಲಸವನ್ನು ಈ ಲೋಕಾಯುಕ್ತ ಮಾಡಬೇಕಾಗಿದೆ. ಅದಕ್ಕಿಂತ ಹೆಚ್ಚಾಗಿ ತನ್ನದೇ ಆದಂಥ ರೀತಿಯಲ್ಲಿ ಸಾರ್ವಜನಿಕ ನೌಕರರು ಎಂದು ಏನು ಹೇಳುತ್ತಾ ಇದ್ದೇವೆ, ಅದು ಮುಖ್ಯಮಂತ್ರಿಗಳು ಆಗಿರಬಹುದು, ಮಂತ್ರಿಗಳು ಆಗಿರಬಹುದು, ಶಾಸಕರು ಆಗಿರಬಹುದು ಮತ್ತು ಸರಕಾರಿ ನೌಕರರು ಆಗಿರಬಹುದು, ಯಾರು ಈ ಅರ್ಥವಿವರಣೆಯ ವ್ಯಾಪ್ತಿಯಲ್ಲಿ ಬರುತ್ತಾರೆ, ಅವರೆಲ್ಲರ ಮೇಲೆ ಎಲ್ಲೆಲ್ಲಿ ಭ್ರಷ್ಟಾಚಾರದ ಆರೋಪಗಳು ಬಂದಾಗ, ಅದರ ಬಗ್ಗೆ ತನಿಖೆ ಮಾಡುವ ಅಧಿಕಾರವನ್ನು ನಾವು ಈ ಲೋಕಾಯುಕ್ತಕ್ಕೆ ವಹಿಸಿಕೊಟ್ಟಿದ್ದೇವೆ. ಹಾಗಾದರೆ ಈ ಲೋಕಾಯುಕ್ತ ಸ್ಥಾಪನೆಯಾದ ಮೇಲೆ ಸಾರ್ವಜನಿಕ ನೌಕರರು ಎಂದು ಏನು ನಾವು ಕರೆಯುತ್ತೇವೆ, ಅವರ ಮೇಲೆ ಎಷ್ಟು ಆರೋಪಗಳನ್ನು ಈ ಲೋಕಾಯುಕ್ತ ವಿಚಾರಣೆ ಮಾಡಿದೆ? ಹಾಗೆಯೇ ವಿಚಾರಣೆ ಮಾಡಿದ ಮೇಲೆ ಎಷ್ಟು ಜನರನ್ನು ತಪ್ಪಿತಸ್ಥರು ಎಂದು ವರದಿ ಮಾಡಿದೆ ಎಂಬುದನ್ನು ನಾನು ಸಂಬಂಧಪಟ್ಟವರಿಂದ ಕೇಳಬಯಸುತ್ತೇನೆ. ಒಂದು ಪಕ್ಷ ಹಾಗೆ ಮಾಡಿದ್ದರೆ ಎಷ್ಟು ಜನರ ಮೇಲೆ ಸರಕಾರವು ಕ್ರಮವನ್ನು ತೆಗೆದುಕೊಂಡಿದೆ ಎಂಬ ವಿವರಣೆಯನ್ನು ಕೂಡ ಅವರು ಕೊಡಬೇಕು. ತದನಂತರ ಮುಖ್ಯವಾಗಿ ನಮ್ಮ ಆಡಳಿತದಲ್ಲಿ ಭ್ರಷ್ಟಾಚಾರ ಇದೆ ಎಂಬ ಮಾತನ್ನು ಹೇಳುತ್ತಾರೆ. ಆಡಳಿತದಲ್ಲಿರುವಂಥ ಭ್ರಷ್ಟಾಚಾರವನ್ನು ಆಡಳಿತಾತ್ಮಕವಾದಂಥ ವಿಧಾನಗಳಿಂದ ಬಗೆಹರಿಸಬೇಕೆಂಬುದು ಯಾವುದೇ ಜನತಂತ್ರ ಸರಕಾರದ ನೀತಿಯಾಗಿರುತ್ತದೆ. ಎಲ್ಲಿ ಅಧ್ಯಕ್ಷತೆ ಇದೆ, ಎಲ್ಲಿ ವಿಳಂಬತೆ ಇದೆ, ಅಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತದೆ. ಅಂಥ ಎಲ್ಲಾ ಪ್ರಕರಣಗಳಲ್ಲಿಯೂ ಸಹ ಸರಕಾರ ಯಾವುದಾದರೂ ದೂರು ಬಂದರೆ, ಅದನ್ನು ಲೋಕಾಯುಕ್ತಕ್ಕೆ ವಿಚಾರಣೆ ಮಾಡಲು ರೆಫರೆನ್ಸ್ ಕಳುಹಿಸಬಹುದಾಗಿದೆ. 1984ರಿಂದ ಅಥವಾ 1986ರಿಂದ ಏನು ಈ ಲೋಕಾಯುಕ್ತ ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡಿದೆ ಪ್ರಾರಂಭಮಾಡಿದಾಗಿನಿಂದ ಇಲ್ಲಿಯವರೆಗೆ ಎಷ್ಟು ರೆಫರೆನ್ಸ್‌ಗಳನ್ನು ಸರಕಾರ ಈ ಲೋಕಾಯುಕ್ತಕ್ಕೆ ಕಳುಹಿಸಿಕೊಟ್ಟಿದೆ? ಕಳುಹಿಸಿದಂಥ ರೆಫರೆನ್ಸ್‌ಗಳನ್ನು ಎಷ್ಟರಮಟ್ಟಿಗೆ ಈ ಲೋಕಾಯುಕ್ತ ವಿಚಾರಣೆ ಮಾಡಿದೆ? ವಿಚಾರಣೆ ಮಾಡಿದಲ್ಲಿ ವಿಚಾರಣೆ ವರದಿಯ ಸ್ಥೂಲವಾದಂತಹ ರೂಪು ರೇಷೆಗಳು ಏನು? ಎಷ್ಟು ಪ್ರಕರಣಗಳಲ್ಲಿ ಲೋಕಾಯುಕ್ತ, ಸಂಬಂಧಪಟ್ಟ ಅಧಿಕಾರಿಗಳು ಏನಿದ್ದಾರೆ, ಅಧಿಕಾರೇತರರು ಏನಿದ್ದಾರೆ, ಅವರು ತಪ್ಪಿತಸ್ಥರು ಎಂದು ಕಂಡುಬಂದ ಮೇಲೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಶಿಫಾರಸ್ಸು ಮಾಡಿದ ಮೇಲೆ ಅಂಥಾ ಶಿಫಾರಸ್ಸುಗಳನ್ನು ಕಾರ್ಯಗತ ಮಾಡುವುದಕ್ಕೆ ಸರಕಾರ ಏನಾದರೂ ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡಿದೆಯೇ, ಇಲ್ಲವೇ ಎಂಬ ಬಗ್ಗೆ ನಾನು ತಮ್ಮಿಂದ ವಿವರಣೆಗಳನ್ನು ತಿಳಿಯಬಯಸುತ್ತೇನೆ. ಈಗಾಗಲೇ ಒಂದು ವಾರ್ಷಿಕ ವರದಿಯನ್ನು ಲೋಕಾಯುಕ್ತ ಪ್ರತಿ ವರ್ಷವೂ ಕೊಡುತ್ತಾ ಇದೆ. ಅದನ್ನು ನೋಡಿದಾಗ ನಮಗನ್ನಿಸುತ್ತಾ ಇದೆ, ಇದು ಕೇವಲ ಒಂದು ವರದಿಯನ್ನು ಕೊಡುವ ಇಲಾಖೆಗಾಗಿ ಉಳಿದಿದೆ ಇದರಲ್ಲಿ ನಾವು ಹೆಚ್ಚಿನ ವಿವರಗಳನ್ನು ಕಾಣುವುದಕ್ಕೆ ಸಾಧ್ಯವಿಲ್ಲ. ಎಷ್ಟೆಷ್ಟು ವರ್ಷಗಳಿಂದ ಎಷ್ಟೆಷ್ಟು ಅಧಿಕಾರಿಗಳ ಮೇಲೆ ಯಾವ ಯಾವ ಪ್ರಕರಣಗಳು ಹಾಗೆಯೇ ನಿಂತಿವೆ. ಹಾಗೆ ನಿಂತಿದ್ದರೆ ಅದಕ್ಕೆ ಕಾರಣವೇನು? ಲೋಕಾಯುಕ್ತಕ್ಕೆ ವಿಚಾರಣೆಗಾಗಿ ಕಳುಹಿಸಿದ ವಿಚಾರಗಳು ಏನಿವೆ ಅಂಥ ವಿಚಾರಣಾ ಪ್ರಕ್ರಿಯೆಯನ್ನು ಆರಂಭಗೊಳಿಸುವುದಕ್ಕೆ ಅಲ್ಲಿ ಸರಿಯಾದಂಥ ಕೆಲಸವು ನಡೆಯುತ್ತಾ ಇಲ್ಲ.

ವಿಚಾರಣೆ ಮಾಡುವುದು ಇರಲಿ, ಅದನ್ನು ಆರಂಭ ಮಾಡದೇ ಇರುವಂಥ ಪರಿಸ್ಥಿತಿಯೇ ಹೆಚ್ಚಾಗಿದೆ. ಅದಕ್ಕೆ ಬೇಕಾದಂಥ ಸಹಾಯ ಮತ್ತು ಸಹಕಾರಗಳನ್ನು ಸರ್ಕಾರ ಕೊಡಬೇಕಾಗಿತ್ತು. ಡಿಸಿಪ್ಲಿನರಿ ಅಥಾರಿಟಿ ಎಂದು ಏನು ಹೇಳುತ್ತೇವೆ, ಅಥವಾ ಎನ್‌ಕ್ವೈರಿ ಆಫೀಸರ್ ಎಂದು ಏನು ಹೇಳುತ್ತೇನೆ, ಇವರನ್ನು ನೇಮಕ ಮಾಡುವುದಕ್ಕೂ ಸರ್ಕಾರ ಮೀನಮೇಷ ಎಣಿಸುತ್ತಿರುವುದನ್ನು ನಾವು ಕಂಡಿದ್ದೇವೆ. ಯಾವುದಾದರೂ ಒಂದು ಪ್ರಕರಣವನ್ನು ಲೋಕಾಯುಕ್ತಕ್ಕೆ ಕಳುಹಿಸಿದರೆ, ಆ ಪ್ರಕರಣವನ್ನು ವಿಚಾರಣೆ ಮಾಡಬೇಕಾದ ಅಧಿಕಾರಿಗಳನ್ನು ನೇಮಕ ಮಾಡಬೇಕಾದರೆ ಸರ್ಕಾರ ಅನೇಕ ಸಂದರ್ಭಗಳಲ್ಲಿ ಆರು ತಿಂಗಳು, ವರ್ಷ, ಎರಡು ವರ್ಷಗಳನ್ನು ತೆಗೆದುಕೊಂಡಿರತಕ್ಕ ಉದಾಹರಣೆಗಳು ನಾನು ಕೊಡಬಲ್ಲೆ. ಇದು ಏನು ತೋರಿಸುತ್ತದೆ, ಸರ್ಕಾರ ಯಾವ ಒಂದು ಉದ್ದೇಶಕ್ಕೋಸ್ಕರ ಈ ಲೋಕಾಯುಕ್ತವನ್ನು ಸ್ಥಾಪನೆ ಮಾಡಿದೆಯೋ, ಆ ಕೆಲಸವನ್ನು ಅದರಿಂದ ಮಾಡಿಕೊಳ್ಳುವುದಕ್ಕೆ ವಿಫಲವಾಗಿದೆ ಅಥವಾ ಅದಕ್ಕೆ ಬೇಕಾದಂಥ ಸಹಾಯ ಮತ್ತು ಸಹಕಾರವನ್ನು ಅದು ಕೊಡುತ್ತಿಲ್ಲ ಎಂಬ ಭಾವನೆ ಒಂದು ಕಡೆಗೆ ಇದೆ. ಮತ್ತೊಂದು ಕಡೆ ಲೋಕಾಯುಕ್ತದ ಆಡಳಿತದ ಅನಿರೀಕ್ಷಿತವಾದಂಥ ಅನಪೇಕ್ಷಿತವಾದಂಥ ಮಧ್ಯೆ ಪ್ರವೇಶ ಸರ್ಕಾರ ಮಾಡುತ್ತಿದೆ. ಅನೇಕ ಸಂದರ್ಭಗಳಲ್ಲಿ ಲೋಕಾಯುಕ್ತ ಏನು ಒಂದು ಶಿಫಾರಸ್ಸು ಮಾಡುತ್ತದೆ, ಮೇಲುನೋಟಕ್ಕೆ ರುಜುವಾತಾದಂಥ ಪ್ರಕರಣಗಳನ್ನು ಸಂಬಂಧಪಟ್ಟ ಅಧಿಕಾರಿಗಳನ್ನು ಏನಾದರೂ ಅಮಾನತ್ತಿನಲ್ಲಿ ಇಡಬೇಕು ಎಂದು ಹೇಳಿದರೆ, ಅಮಾನತ್ತಿನಲ್ಲಿ ಸರ್ಕಾರ ಇಡುವುದಿಲ್ಲ. ನಿಜವಾಗಿಯೂ ಈ ಸರ್ಕಾರಕ್ಕೆ ಏನಾದರೂ ಯೋಗ್ಯವಾದಂಥ, ದಕ್ಷತೆಯುಳ್ಳಂಥ, ಭ್ರಷ್ಟಾಚಾರದಿಂದ ಮುಕ್ತವಾದಂಥ ಆಡಳಿತವನ್ನು ಕೊಡಬೇಕು ಎಂದು ಮನಸ್ಸು ಇದ್ದರೆ, ಯಾವುದೇ ಅಧಿಕಾರಿ ಆಗಿರಲಿ, ಅವನು ಯಾವುದೇ ಜಾತಿಗೆ ಸಂಬಂಧಪಟ್ಟಿರಲಿ, ಇವತ್ತು ಅಂಥವರ ಮೇಲೆ ನೇರವಾದಂಥ, ನಿರ್ದಾಕ್ಷಿಣ್ಯವಾದಂತಹ, ನಿಷ್ಪಕ್ಷವಾದ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳಬೇಕಾದ್ದು ಸರ್ಕಾರದ ಕರ್ತವ್ಯ.

ಆ ಒಂದು ಕರ್ತವ್ಯವನ್ನು ಈಡೇರಿಸುವಲ್ಲಿ ಸರ್ಕಾರ ವಿಫಲಗೊಂಡಿದೆ. ಆಗಲೇ ನಾನು ಹೇಳಿದೆ, ಈ ಹಿಂದೆ ಮಾತನಾಡುತ್ತಿದ್ದಂಥ ಸಂದರ್ಭದಲ್ಲಿ ನಾನು ಹೇಳಿದೆ, ಅನೇಕ ಹಿರಿಯ ಅಧಿಕಾರಿಗಳ ಮೇಲೆ ನಾನು ಕೇವಲ ಹಿರಿಯ ಅಧಿಕಾರಿಗಳ ಬಗ್ಗೆ ನಾನು ಹೇಳುತ್ತಿದ್ದೇನೆ. ಏತಕ್ಕೆಂದರೆ..........

ಉಪಾಧ್ಯಕ್ಷಣೆಯವರು : ತಿದ್ದುಪಡಿಯನ್ನು ತಂದಿರುವುದು ಕೇವಲ........

ಶ್ರೀ ಹೆಚ್. ಏಕಾಂತಯ್ಯ : ಅದಕ್ಕೇ ಸಂಬಂಧಪಟ್ಟಿರುವುದು. ನಾನು ಹೇಳುತ್ತಿರುವ ವಿಚಾರವಿಷ್ಟೆ. ಇವತ್ತಿನ ದಿವಸ ಹೊಣೆಗಾರಿಕೆಯು ಮೇಲಕ್ಕೆ ಹೋಗುತ್ತಾ ಹೋಗುತ್ತಾ ಜಾಸ್ತಿಯಾಗುತ್ತದೆ. ಒಬ್ಬ ಕಿರಿಯ ಸಹಾಯಕನ ಹೊಣೆಗಾರಿಕೆಯನ್ನು ನಾವು ಹಿರಿಯ ಅಧಿಕಾರಿಗಳ ಹೊಣೆಗಾರಿಕೆಯೊಂದಿಗೆ ಹೋಲಿಕೆ ಮಾಡುವುದಕ್ಕೆ ಸಾಧ್ಯವಿಲ್ಲ.

ಆ ದೃಷ್ಟಿಯಲ್ಲಿ ನಾವು ನೋಡಿದಾಗ, ಅಧಿಕಾರ ಸ್ಥಾನದಲ್ಲಿ ಅದರಲ್ಲೂ ದೊಡ್ಡ ದೊಡ್ಡ ಸ್ಥಾನದಲ್ಲಿ ಇರುವ ಅಧಿಕಾರಿಗಳು ಮತ್ತು ಅಧಿಕಾರೇತರರು ಏನು ಇದ್ದಾರೆ, ಅವರು ಹೊಣೆಗಾರಿಕೆಯಿಂದ ವರ್ತನೆ ಮಾಡದಿದ್ದರೆ, ನಿರ್ಲಕ್ಷ್ಯತನದಿಂದ ವರ್ತನೆ ಮಾಡಿದ್ದರೆ ಅನ್ಯಾಯವಾಗಿ ಧನಾರ್ಜನೆ ಮಾಡುವ ದೃಷ್ಟಿಯಿಂದ ಅಥವಾ ಬೇರೆಯವರಿಗೆ ಲಾಭ ಮಾಡುವ ದೃಷ್ಟಿಯಿಂದ ಅಥವಾ ಸರ್ಕಾರಕ್ಕೆ ನಷ್ಟವಾಗುತ್ತದೆ ಎಂದು ಗೊತ್ತಿದ್ದರೂ ಸಹಾ ಅವರ ಮೇಲೆ ಕ್ರಮವನ್ನು ತೆಗೆದುಕೊಡವಂಥ ಸಂದರ್ಭದಲ್ಲಿ ನೇರವಾದಂಥ ಕ್ರಮವನ್ನು ಅವರ ಮೇಲೆ ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ಅಂಥ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಬದವಾದಾಗ ಮಾತ್ರ, ಅಂಥ ನೀತಿಯಲ್ಲಿ ಸರ್ಕಾರದ

ನಿಷ್ಠೆಯಿದ್ದಾಗ ಮಾತ್ರ, ಒಂದು ಭ್ರಷ್ಟಾಚಾರದಿಂದ ಮುಕ್ತವಾದಂಥ ಆಡಳಿತವನ್ನು ಕೊಡುವುದಕ್ಕೆ ಆಗ ಸಾಧ್ಯವಾಗುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ನಾವು ನೋಡುತ್ತಿದ್ದೇವೆ, ಸರ್ಕಾರ ಭ್ರಷ್ಟ ಅಧಿಕಾರಿಗಳ ರಕ್ಷಣೆಗೆ ನಿಂತಿದ್ದೆಯೇನೋ ಎಂಬ ರೀತಿಯಲ್ಲಿ ಕೆಲಸವನ್ನು ಮಾಡುತ್ತಿದೆ. ನಾನು ಕೇಳುತ್ತಿದ್ದೇನೆ, ಈ ಆಪಾದನೆಯನ್ನು ಮಾಡುವಾಗ ಕೆಲವು ವಿಚಾರಗಳನ್ನು ನಾನು ತಮ್ಮ ಮುಂದಿಡುವುದಕ್ಕೆ ಇಷ್ಟ ಪಡುತ್ತೇನೆ.

ಇವತ್ತಿನ ದಿವಸ ಲೋಕಾಯುಕ್ತದ ಮುಂದೆ ನಾವು ಹೋಗಬಹುದು. ಆ ರೀತಿ ಹೋದಾಗ ನಾವು ಒಂದು ದೂರನ್ನು ಕೊಟ್ಟರೆ ಆ ದೂರನ್ನು ಯಾವ ರೀತಿ ಕೊಡಬೇಕು ಎಂಬ ಒಂದು ನಿಯಮ ಇದೆ. ಆ ನಿಯಮದ ಪ್ರಕಾರ ನಾನು ಒಂದು ಅಫಿಡವಿಟ್ಟನ್ನು ಹಾಕಬೇಕು, ಎಲ್ಲವನ್ನೂ ಹೇಳಬೇಕು. ಒಂದು ಪಕ್ಷ ನಾನು ಹೇಳುವಂಥ ಆಪಾದನೆ ಸುಳ್ಳು ಎಂದು ಸಾಬೀತಾದರೆ ನನ್ನನ್ನು ಶಿಕ್ಷೆ ಮಾಡತಕ್ಕಂಥ ಅಧಿಕಾರ ಈ ಲೋಕಾಯುಕ್ತದ ಅಧಿನಿಯಮದಲ್ಲಿದೆ. ಆದರೆ ಇದು ಕೇವಲ ಸರ್ಕಾರದಲ್ಲಿ ಇರತಕ್ಕಂಥ ಭ್ರಷ್ಟತೆಯನ್ನು ನಿವಾರಣೆ ಮಾಡುವುದಕ್ಕೆ ಸಾರ್ವಜನಿಕರೊಬ್ಬರು ಮುಂದಾಗುವುದಕ್ಕಿಂತ ಹೆಚ್ಚಾಗಿ ಸರ್ಕಾರದವರು ಮುಂದಾಗಬೇಕು.

ಯಾವ ಯಾವ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತಂದಾಗ ಆ ಪ್ರಕರಣಗಳ ಬಾಬ್ತು ಲೋಕಾಯುಕ್ತದಿಂದ ನಿಷ್ಪಕ್ಷಪಾತತನದಿಂದ ತನಿಖೆಯನ್ನು ಮಾಡಿಸಿ ಸಂಬಂಧಪಟ್ಟವರ ಮೇಲೆ ಕ್ರಮವನ್ನು ತೆಗೆದುಕೊಳ್ಳತಕ್ಕಂಥ ರೀತಿಯಲ್ಲಿ ಸರ್ಕಾರದವರು ಆಲೋಚನೆಯನ್ನು ಮಾಡಬೇಕು. ಆದರೆ ಇವತ್ತಿನ ದಿವಸ ಅನೇಕ ಮೇಲುನೋಟಕ್ಕೆ ರುಜುವಾತಾದಂಥಾ ಪ್ರಕರಣಗಳು ಅದರಲ್ಲೂ ಸಹಾ ಮುಖ್ಯವಾಗಿ ಸರ್ಕಾರಕ್ಕೆ ಸಾರ್ವಜನಿಕರ ಹಿತಕ್ಕೆ ವಿರುದ್ಧವಾಗಿ ಕೆಲಸವಾಗುತ್ತಿದೆ ಎಂದು ಹೇಳತಕ್ಕಂಥ ಸಂದರ್ಭದಲ್ಲಿ ಅವುಗಳನ್ನು ನಾವು ಲೋಕಾಯುಕ್ತಕ್ಕೆ ಕಳುಹಿಸುವುದಿಲ್ಲ, ಹಾಗಾದರೆ ಲೋಕಾಯುಕ್ತವನ್ನು ಏತಕ್ಕೋಸ್ಕರ ಇಟ್ಟುಕೊಂಡಿದ್ದೀರಿ? ಎಲ್ಲೆಲ್ಲಿ ಸರ್ಕಾರಕ್ಕೆ ನಷ್ಟವಾಗಿದೆ, ಸಾರ್ವಜನಿಕ ಹಿತಕ್ಕೆ ವಿರುದ್ಧವಾಗಿದೆ, ಉದ್ದೇಶ ಪೂರ್ವಕವಾಗಿ ಬೇರೆಯವರಿಗೆ ಲಾಭ ಮಾಡುವ ದೃಷ್ಟಿಯಿಂದ ಕೆಲವು ಆದೇಶಗಳನ್ನು ಸಂಬಂಧಪಟ್ಟ ಮಂತ್ರಿಗಳು ಹೊರಡಿಸಿದ್ದಾರೆ ಎಂದು ಹೇಳಿದಾಗ, ಅಂತಹ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತಂದಾಗ ತಾವು ಅದನ್ನು ವಿಚಾರಣೆಗೋಸ್ಕರ ಲೋಕಾಯುಕ್ತಕ್ಕೆ ಕಳುಹಿಸದೇ ಇದ್ದರೆ ಈ ಲೋಕಾಯುಕ್ತ ಇರುವಂತಹ ಉದ್ದೇಶವೇನು? ಇವತ್ತಿನ ದಿವಸ ಯಾವ ಒಂದು ಮೂಲ ಉದ್ದೇಶಕ್ಕೋಸ್ಕರ ಲೋಕಾಯುಕ್ತದ ಮಸೂದೆಯಿಂದ ಲೋಕಾಯುಕ್ತವನ್ನು ಸ್ಥಾಪನೆ ಮಾಡಿದ್ದೇವೆ. ಆ ಉದ್ದೇಶ ಇವತ್ತಿನ ದಿವಸ ವಿಫಲವಾಗಿದೆ. ಮತ್ತು ಅದಕ್ಕೆ ಬೇಕಾದ ಸಹಾಯ ಮತ್ತು ಸಹಕಾರವನ್ನು ಸಂಬಂಧಪಟ್ಟವರು ಕೊಡುತ್ತಿಲ್ಲ, ಅದಕ್ಕಿಂತ ಹೆಚ್ಚಾಗಿ ಅದರ ಕಾರ್ಯನೀತಿಯಲ್ಲಿ ಮಧ್ಯೆ ಪ್ರವೇಶ ಮಾಡುತ್ತಿದ್ದಾರೆಂಬ ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಒಂದು ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅದೇನೆಂದರೆ ಅಲ್ಲಿದ್ದಂತಹ ಹಿರಿಯ ಅಧಿಕಾರಿಗಳನ್ನು ಯಾರು ಪೋಲೀಸ್ ಇಲಾಖೆಗೆ ಸೇರಿದಂತಹ ಅಧಿಕಾರಿಗಳು ಇದ್ದಾರೆ, ಅವರು ಲೋಕಾಯುಕ್ತದ ಇಚ್ಛೆಗೆ ಅನುಗುಣವಾಗಿ ಅವರನ್ನು ವರ್ಗಾವಣೆ ಮಾಡಿದೆ ಎಂಬ ಮಾತನ್ನು ಈ ಸಭೆಯಲ್ಲಿ ಹೇಳಿದರು. ಲೋಕಾಯುಕ್ತದವರು ಏನಾದರೂ ತಮಗೆ ಬರವಣಿಗೆಯಲ್ಲಿ ಈ ಒಂದು ಇರಾದೆಯನ್ನು, ಈ ಒಂದು ಆಶಯವನ್ನು ವ್ಯಕ್ತ ಮಾಡಿದ್ದಾರಾ ಅಥವಾ ಕೇವಲ ಮಾತಿನ ಮುಖಾಂತರ ಏನಾದರೂ ಹೇಳಿದ್ದಾರಾ? ಇದನ್ನು ನಾವು ಅವರಿಂದ ತಿಳಿಯಬಯಸುತ್ತೇನೆ.

ನಮಗೆ ಬೇಕಾದಂತಹ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುವ ಉದ್ದೇಶದಿಂದ ಬೇರೆಯವರ ಹೆಸರನ್ನು ನಾನು ಇಲ್ಲಿ ಹೇಳುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ. ಆದರೆ ಇವತ್ತಿನ ದಿವಸ ಅಲ್ಲಿ ಇದ್ದಂತಹ ಅಧಿಕಾರಿಗಳ ಬಗ್ಗೆ ತಮ್ಮದೇ ಆದಂತಹ ಸಂಶಯ ಈವತ್ತಿನ ದಿವಸ ಆಡಳಿತದಲ್ಲಿ ಹೋರಾಡುತ್ತಿರುವ ಜನಗಳಿಗೆ ಇತ್ತು, ಅವರನ್ನು ಅಲ್ಲಿಂದ ವರ್ಗ ಮಾಡುವ ಉದ್ದೇಶದಿಂದ ಅವರ ಹೆಸರನ್ನು ಉಪಯೋಗಿಸಿಕೊಂಡಿದ್ದಾರೆಂಬ ಆರೋಪವನ್ನು ನಾನು ಮಾಡಲಿಕ್ಕೆ ಇಷ್ಟಪಡುತ್ತೇನೆ.

ಅದಕ್ಕಿಂತ ಹೆಚ್ಚಾಗಿ, ಇವತ್ತಿನ ದಿವಸ ಈ ಲೋಕಾಯುಕ್ತದ ಮಸೂದೆಯ ಮುಖಾಂತರ ತಾವು ಕೆಲವು ತಿದ್ದುಪಡಿಗಳನ್ನು ತರಬಹುದಾಗಿತ್ತು. ಲೋಕಾಯುಕ್ತ ಒಂದು ಪಕ್ಷ ಯಾವುದೇ ಅಧಿಕಾರಿಯಾಗಲಿ, ಅಥವಾ ಅಧಿಕಾರೇತರರು ತಪ್ಪಿತಸ್ಥರೆಂದು ಕಂಡುಬಂದರೆ ಅವರನ್ನು ಆ ಸ್ಥಾನದಲ್ಲಿ ಮುಂದುವರಿಸದೇ ಇರಲಿಕ್ಕೆ ಅಥವಾ ಅನರ್ಹಗೊಳಿಸಲಿಕ್ಕೆ ಬೇಕಾದಂತಹ ತಿದ್ದುಪಡಿಯನ್ನು ತರಬೇಕೆಂದು ಹೇಳಿ, ಈ ಲೋಕಾಯುಕ್ತ ಮತ್ತು ಉಪಲೋಕಾಯುಕ್ತದ ಸಮಾವೇಶ ಏನು ಶಿಫಾರಸ್ಸು ಮಾಡಿತ್ತೋ ಆ ಶಿಫಾರಸ್ಸು ಜಾರಿಗೆ ಬಗ್ಗೆ ಈ ಸರ್ಕಾರ ಆಲೋಚನೆ ಮಾಡುತ್ತಿಲ್ಲ. ಅದಕ್ಕಿಂತ ಹೆಚ್ಚಾಗಿ ಈ ಕಾನೂನಿನ ಕೈಯಲ್ಲಿ ಲೋಕಾಯುಕ್ತ ತನ್ನ ಚಟುವಟಿಕೆಗಳ ಬಗ್ಗೆ ಏನು ವರದಿಯನ್ನು ಪ್ರತಿವರ್ಷ ಕೊಡಬೇಕಾಗಿತ್ತೋ ಆ ವರದಿಯನ್ನು ಸಂಬಂಧಪಟ್ಟವರಿಗೆ ಕಳುಹಿಸಿದ ಮೇಲೆ, ಆ ವರದಿಯನ್ನು ಸಭೆಯ ಮುಂದೆ ಇಡುವುದು ಅವಶ್ಯಕ. ಆದರೆ ಇದಕ್ಕೆ ಟೈಮ್ ಲಿಮಿಟ್ ಇಲ್ಲ. ಸಂಬಂಧಪಟ್ಟಂತಹ ಲೋಕಾಯುಕ್ತ ಮತ್ತು ಉಪಲೋಕಾಯುಕ್ತದ ಸಮಾವೇಶ ಇದನ್ನು ಪರಿಶೀಲನೆ ಮಾಡಿ ಒಂದು ನಿಗಧಿತವಾದಂತಹ ವೇಳೆಯಲ್ಲಿ ಇದನ್ನು ಶಾಸನಸಭೆಯಲ್ಲಿ ಇಡಬೇಕೆಂದು ಹೇಳುತ್ತೇನೆ. ಈ ಲೋಕಾಯುಕ್ತದ ಕಾರ್ಯಕ್ರಮ ಏನಿದೆ ಕಾರ್ಯನಿರ್ವಹಣೆ ಏನಿದೆ, ಇದರ ಬಗ್ಗೆ ಚರ್ಚೆಯಾಗಬೇಕು, ನಿಗಧಿತವಾದಂತಹ ಸಮಯದಲ್ಲಿ ಚರ್ಚೆಯಾಗಬೇಕು, ಅದರಲ್ಲಿರುವಂತಹ ಲೋಪದೋಷಗಳನ್ನು ಕಂಡುಹಿಡಿದು ಅದನ್ನು ಸರಿಪಡಿಸಬೇಕೆಂಬ ದೃಷ್ಟಿಯಿಂದ ಅನೇಕ ಉತ್ತಮವಾದಂತಹ ಶಿಫಾರಸ್ಸುಗಳನ್ನು ಈ ಲೋಕಾಯುಕ್ತ ಮತ್ತು ಉಪಲೋಕಾಯುಕ್ತ ಸಮಾವೇಶ ಹೇಳಿದೆ. ಅದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡಬೇಕೆಂಬ ಮಾತನ್ನು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಕೊನೆಯದಾಗಿ ನನ್ನ ಬೇಡಿಕೆ ಇಷ್ಟೆ. ಇವತ್ತಿನ ದಿವಸ ಅವರು ಹೇಳಿದಂತಹ ನೀತಿಗೆ ವಿರುದ್ಧವಾಗಿ ಈ ತಿದ್ದುಪಡಿಯ ಮುಖಾಂತರ ಲೋಕಾಯುಕ್ತ ಮತ್ತು ಉಪಲೋಕಾಯುಕ್ತರಿಗೆ ಈಗಿರುವ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು, ಮತ್ತು ನ್ಯಾಯಾಧೀಶರಿಗಿಂತ ಹೆಚ್ಚು ಸಂಭಾವನೆಯನ್ನು ಮತ್ತು ತುಟ್ಟಿಭತ್ಯೆವನ್ನು ಕೊಡುವುದರ ಮುಖಾಂತರ ಹೊಸದಾಗಿ ಒಂದು ಸಂಪ್ರದಾಯವನ್ನು ಮಾನ್ಯ ಮುಖ್ಯಮಂತ್ರಿಗಳ ಈ ಸರ್ಕಾರ ಪ್ರಯತ್ನ ಮಾಡುತ್ತಿದೆ. ಅದನ್ನು ನಾನು ವಿರೋಧ ಮಾಡುತ್ತೇನೆ ಮತ್ತು ಅದಕ್ಕಿಂತ ಹೆಚ್ಚಾಗಿ ಈ ಲೋಕಾಯುಕ್ತ ಮತ್ತು ಉಪಲೋಕಾಯುಕ್ತರ ಕಳೆದ ಅನೇಕ ವರ್ಷಗಳಿಂದ ಎಷ್ಟು ಪ್ರಕರಣಗಳಲ್ಲಿ ತನಿಖೆ ಮಾಡಿದ್ದಾರೆ, ಎಷ್ಟು ಪ್ರಕರಣಗಳಲ್ಲಿ ಅವರು ಶಿಫಾರಸ್ಸನ್ನು ಮಾಡಿದ್ದಾರೆ, ಎಷ್ಟು ಪ್ರಕರಣಗಳಲ್ಲಿ ಸರ್ಕಾರ ಶಿಫಾರಸ್ಸನ್ನು ಅಂಗೀಕಾರ ಮಾಡಿದೆ, ಅಂಗೀಕಾರ ಮಾಡಿದ ಮೇಲೆ ಇಲಾಖೆಯ ಕ್ರಮವನ್ನಾಗಲೀ ಅಥವಾ ಪ್ರಾಸಿಕ್ಯೂಷನ್ ಆಗಲಿ, ಎಷ್ಟು ಪ್ರಕ್ರಿಯೆಗಳನ್ನು ಆರಾಮಗೊಳಿಸಿದ್ದಾರೆ ಎಂಬುದರ ಬಗ್ಗೆ ಎಲ್ಲಾ ವಿವರಗಳನ್ನು ಒಳಗೊಂಡಂತೆ ಒಂದು ಶ್ವೇತ ಪತ್ರವನ್ನು ಅವರು ಹೊರಡಿಸಬೇಕು. ಈ ರಾಜ್ಯದ ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಈ ಸರ್ಕಾರ ತನ್ನ ಆಡಳಿತದಲ್ಲಿರುವ

ಭ್ರಷ್ಟತೆಯನ್ನು, ಅದಕ್ಷತೆಯನ್ನು ನಿವಾರಣೆ ಮಾಡಲು ಬೇಕಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕಾದರೆ ಇದು ಅವಶ್ಯಕ ಎಂಬ ಮಾತನ್ನು ಹೇಳಿ, ನನ್ನ ಮಾತನ್ನು ಪೂರೈಸುತ್ತೇನೆ ವಂದನೆಗಳು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಭಾಧ್ಯಕ್ಷಿಣಿಯವರೇ, ಲೋಕಾಯುಕ್ತರ ವೇತನವನ್ನು....

ಶ್ರೀ ಎಸ್. ಬಂಗಾರಪ್ಪ : ಒಂದು ನಿಮಿಷ ತಾವು ದಯಮಾಡಿ ಕುಳಿತುಕೊಂಡರೆ ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್ : ಕುಳಿತುಕೊಳ್ಳದಿದ್ದರೆ ಕೆಟ್ಟದು ಅಂತ ಅರ್ಥವೇ? ಕುಳಿತುಕೊಂಡರೆ ಒಳ್ಳೆಯದು ಅಂದರೆ ಕುಳಿತುಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಇದರಲ್ಲಿ ಬಂದಿರತಕ್ಕದ್ದು ಸ್ಯಾಲರಿ ವಿಚಾರ ಮಾತ್ರ. ಬೇರೆ ವಿಚಾರಗಳು ಇದರಲ್ಲಿ ಇಲ್ಲ, ಜನರಲ್ ಆಗಿ ಮಾತನಾಡಬೇಕಾದರೆ, ಜನರಲ್ ಆಗಿ ಆಕ್ಟ್‌ಗೆ ಅಮೆಂಡ್‌ಮೆಂಟ್ಸ್ ಏನಾದರೂ ತಂದಿದ್ದರೆ ಅಷ್ಟನ್ನು ಮಾಡುತ್ತಾ ಹೋಗಬಹುದು. I have no objection for discussion on other aspects. But the present amendment is only with respect to Salary and other facilities to Lokayuktha...... ಆ ರೀತಿ ಇಲ್ಲ, ಸ್ಯಾಲರಿ ಬಗ್ಗೆ ಮಾತ್ರ ಇರತಕ್ಕದ್ದು. ಒತಂದು ಕಾನೂನು ಮಾಡಬೇಕಾದರೆ ಪರವಾಗಿ, ವಿರೋಧವಾಗಿ ಅಭಿಪ್ರಾಯ ಕೊಟ್ಟು ಮಾತನಾಡಬೇಕಾಗಿದೆ. ಅಲ್ಲಿ ಸುಪ್ರೀಂ ಕೋರ್ಟ್ ಜಡ್ಜಸ್ ಮತ್ತು ಹೈಕೋರ್ಟ್ ಚೀಫ್ ಜಸ್ಟೀಸ್ ಅವರ ಸ್ಯಾಲರಿ ಬಗ್ಗೆ ಸ್ವಲ್ಪ ಚೇಂಜ್ ಆಗಿರುವುದರಿಂದ ಇಲ್ಲೂ ಅದಕ್ಕೆ ಅಮೆಂಡ್‌ಮೆಂಟ್ ತಂದು ಚೇಂಜ್ ಮಾಡಬೇಕಾಗಿದೆ. ಅಷ್ಟೇ ಬೇರೇನೂ ಇಲ್ಲ, ಇದನ್ನು ಬೇರೆ ರೀತಿ ಚರ್ಚೆ ಮಾಡಬೇಕಂದರೆ ನನ್ನ ಅಬ್‌ಜೆಕ್ಷನ್ ಏನೂ ಇಲ್ಲ, ಇನ್ನೊಂದು ದಿವಸ ಇಟ್ಟುಕೊಳ್ಳೋಣ. ನೀವು ಭಾಷಣ ಮಾಡುವುದಕ್ಕೆ ನನ್ನ ಅಬ್‌ಜೆಕ್ಷನ್ ಏನೂ ಇಲ್ಲ. ಎಲ್ಲಾ ವಿಚಾರಗಳನ್ನು ಭಾಷಣ ಮಾಡಿಕೊಂಡೇ ಹೋದರೆ ಕಷ್ಟವಾಗುತ್ತದೆ. ಆ ರೀತಿ ಅಮೆಂಡ್‌ಮೆಂಟನ್ನು ಆ ರೀತಿ ಇಲ್ಲಿಲ್ಲ, ಇದು ನಿಮ್ಮ ವಿವೇಚನೆಗೆ ಬಿಟ್ಟಿದ್ದು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ) : ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ಕೇವಲ ಲೋಕಾಯುಕ್ತ ಸಂಬಳಕ್ಕೆ ಸೀಮಿತವಾಗಿರುವಂಥದ್ದು, ಮಿಕ್ಕ ವಿಷಯವನ್ನು ಬೇರೆ ಸಂದರ್ಭದಲ್ಲಿ ಮಾತನಾಡೋಣ ಎಂದು ಮುಖ್ಯಮಂತ್ರಿಗಳು ಹೇಳಿದರು. ನನಗೆ ಒಂದು ವಿಷಯ ಕಾಡಿಸುತ್ತಿದೆ. ಸಂಬಳ ನಾವು ಏತಕ್ಕೆ ಕೊಡುತ್ತೇವೆ? ಸಂಬಳ ಏತಕ್ಕೆ ಹೆಚ್ಚು ಮಾಡುತ್ತೇವೆ? ನಾನು ಕರ್ನಾಟಕದ ಪ್ರಜೆಯಾಗಿ, ಈ ಲೋಕಾಯುಕ್ತ ಯಾವುದಾದರೂ ಒಂದು ಪ್ರಕರಣದಲ್ಲಿ ಮಾಡಿದಂಥ ತನಿಖೆಯ ಮೇಲೆ ಸರ್ಕಾರ ಕ್ರಮ ತೆಗೆದುಕೊಂಡಿದ್ದು ನನ್ನ ಕಣ್ಣಿಗೆ ಕಂಡಿಲ್ಲ, ಅದು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿರಬೇಕು. ಇದನ್ನು ನಾವು Scandinavia -- ದಿಂದ ಎರವಲು ಪಡೆದಿರುವಂಥ ಒಂದು ಇನ್‌ಸ್ಟಿಟ್ಯೂಷನ್. Ombudsman-- ಅನ್ನು ಆ ದೇಶದವರು Watch dog ಎಂದು ಕರೆಯುತ್ತಾರೆ. ಅಲ್ಲಿ watch dog ಗಳು, Ombudsman ಗಳು ಸರಿಯಾಗಿ ಕೆಲಸ ಮಾಡುತ್ತವೆ. ನಮ್ಮಲ್ಲಿ ಕೆಲಸ ಮಾಡಿರುವ ಕ್ರಮವನ್ನು ನೋಡಿದರೆ, ಈ watch dog ಗಳಲ್ಲಿ ಬಹಳ ಬ್ರೀಡ್‌ಗಳು ಇವೆ. ಉದಾಹರಣೆಗೆ, Labradar ಎಂದು ಒಂದು ಇದೆ. ಅದು ಬಹಳ ದೊಡ್ಡಕ್ಕೆ ಬೆಳೆಯುತ್ತದೆ. ದಿವಸಕ್ಕೆ ನಾಲ್ಕು ಕೆ.ಜಿ. ಮಾಂಸ ತಿನ್ನುತ್ತದೆ. ಆದರೆ ಬರೀ ಬಾಲ ಅಲ್ಲಾಡಿಸುತ್ತದೆ ಅಷ್ಟೇ. It is a pet dog. ಇದು ನೋಡುವುದಕ್ಕೆ

ದೊಡ್ಡದಾಗಿರುತ್ತದೆ. ಇಂಥ ಒಂದು ಕೆಲಸ ಮಾಡುವ ವಾಚ್ ಡಾಗ್ ನಮ್ಮ ರಾಜ್ಯದಲ್ಲಿ ಇರಬೇಕೇ ಎನ್ನುವುದು ಒಂದು. ಅದಕ್ಕೆ ಸಂಬಳ ಜಾಸ್ತಿ ಕೊಡಬೇಕೇ ಎನ್ನುವುದು ಇನ್ನೊಂದು. ಇದು ಸಂಬಳಕ್ಕೆ ನೇರವಾಗಿ ಸಂಬಂಧಪಟ್ಟಿರುವ ವಿಷಯ. ಮುಖ್ಯಮಂತ್ರಿಯವರು ಸಂಬಳದ ಬಗ್ಗೆ ಮಾತ್ರ ಮಾತನಾಡಿ ಎಂದು ಹೇಳಿದ್ದರಿಂದ ಮಾತನಾಡಿದ್ದೇನೆ ಅಷ್ಟೇ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ನಿಜ. ಪ್ರೊ. ನಂಜುಂಡಸ್ವಾಮಿಯವರು ಹೇಳಿದಹಾಗೆ, ಇದು ಕೇವಲ ಬಾಲ ಅಲ್ಲಾಡಿಸುವುದಕ್ಕೆ ಮಾತ್ರ ಸೀಮಿತವಾಗಿದೆಯೋ ಏನೋ ಎನ್ನುವಂಥ ಪರಿಸ್ಥಿತಿ ಉದ್ಭವವಾಗಿದೆ. ನನಗನಿಸುತ್ತದೆ ಈ ಲೋಕಾಯುಕ್ತ ನಮಗೆ ಬೇಕೇ ಎಂದು. ಇವತ್ತು ಈ ಲೋಕಾಯುಕ್ತದ ಕಾರ್ಯವ್ಯಾಪ್ತಿಗೆ ನಾವು ಎಷ್ಟರ ಮಟ್ಟಿಗೆ ಸ್ಪಂದಿಸುತ್ತೇವೆ? ಈ ಲೋಕಾಯುಕ್ತ ಎಷ್ಟು ಪ್ರಾಮುಖ್ಯವಾದಂಥ ಒಂದು ಸಂಸ್ಥೆ, ಆ ಸಂಸ್ಥೆಗೆ ಯಾವುದೇ ಸರ್ಕಾರವಾಗಲಿ ಹಸ್ತಕ್ಷೇಪ ಮಾಡಬಾರದು. ಇದಕ್ಕೆ ತನ್ನದೇ ಆದ ಸ್ವಾಯತ್ತತೆ ಇದೆ, ತನ್ನದೇ ಆದ ವಿಚಾರಗಳು ಇವೆ. ಈ ಲೋಕಾಯುಕ್ತದ ಕಾರ್ಯಾಚರಣೆಯಲ್ಲಿ ಸರ್ಕಾರದ ಹಸ್ತಕ್ಷೇಪವನ್ನು ನಾವು ನೋಡುತ್ತಲೇ ಇದ್ದೇವೆ. ಇದು ಪ್ರತಿನಿತ್ಯ ನಡೆಯುತ್ತಿದೆ. ಇನ್ನು ವರ್ಗಾವರ್ಗಿಗಳಲ್ಲಿ ತಮಗೆ ಗೊತ್ತಿದೆ ಅಧ್ಯಕ್ಷರೇ, ಅಲ್ಲಿರುವಂಥ ಅಧಿಕಾರಿಗಳನ್ನು ವರ್ಗ ಮಾಡಬೇಕಾದರೆ ಅದನ್ನು ಸರ್ಕಾರವೇ ಮಾಡುತ್ತದೆ. ಅಲ್ಲಿ ನಿಷ್ಠಾವಂತ ಅಧಿಕಾರಿಗಳನ್ನು ತೆಗೆದು ತಮಗೆ ಬೇಕಾದ ಅಧಿಕಾರಿಗಳನ್ನು ಹಾಕುತ್ತಾರೆ. ಮುಖ್ಯಮಂತ್ರಿಯವರು ಹೇಳುವವರನ್ನು, ಗೃಹ ಮಂತ್ರಿಯವರು ಹೇಳುವವರನ್ನು ಅಲ್ಲಿಗೆ ಹಾಕುತ್ತಾರೆ. ಇದರಿಂದ ಲೋಕಾಯುಕ್ತ ಸರ್ಕಾರದ ಹಿಡಿತದಲ್ಲಿ ಇರಬೇಕು ಎನ್ನುವ ಭಾವನೆ ಉದ್ಭವವಾಗುತ್ತದೆ. ಆದುದರಿಂದ ಇದು ಬಾಲ ಅಲ್ಲಾಡಿಸತಕ್ಕಂಥ ಒಂದು ಸಂಸ್ಥೆಯಾಗಿದೆ. ಈ ದೃಷ್ಟಿಯಲ್ಲಿ ನಾವೇ ತೆಗೆದುಕೊಂಡು ಹೋಗುತ್ತಿದ್ದೇವೆ ಅನ್ನತಕ್ಕಂಥಾದ್ದು ಇವೊತ್ತು ಮನಸ್ಸಿಗೆ ನೋವಾಗುತ್ತದೆ.

ಈ ಲೋಕಾಯುಕ್ತದ ಬಗ್ಗೆ ತಮಗೆ ನಾನು ಹೇಳುವುದಾದರೆ, ಪ್ರಾರಂಭದಿಂದ ಇಲ್ಲಿಯವರೆವಿಗೂ ಕೂಡಾ ಒಂದು ದೊಡ್ಡ ಕುಳಗಳನ್ನು, ತಿಮಿಂಗಲಗಳನ್ನು ಹಿಡಿದು ಅವರನ್ನು ಜೈಲಿಗೆ ಹಾಕುವಂಥ ಒಂದು ವ್ಯವಸ್ಥೆ ಇದುವರೆವಿಗೆ ನಡೆದಿದೆಯೇ? ನಡೆದಂತೆ ಕಾಣುವುದಿಲ್ಲ. ನಾನು ಲೋಕಾಯುಕ್ತ ವ್ಯವಸ್ಥೆ ಬಗ್ಗೆ ಬಯ್ಯುತ್ತಿಲ್ಲ. ಇದು ಇತ್ತೀಚಿನ ದಿನಗಳಲ್ಲಿ ಯಾರೋ ಕೆಲವು ಗುಮಾಸ್ತರುಗಳನ್ನು ಹಿಡಿದಿದ್ದು, ಅದೂ ಕೆಳಮಟ್ಟದಲ್ಲಿರುವವರನ್ನು ಹಿಡಿಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಪರಿಣಾಮಕಾರಿಯಾಗಿ ಭಾರಿ ಕುಳಗಳನ್ನು ಹಿಡಿಯತಕ್ಕಂಥ ವ್ಯವಸ್ಥೆ ಇದೆಯೇ? ಹಿಂದೆ ಇತಿಹಾಸದಲ್ಲಿ ಸಗಣಿಯನ್ನು ಮುಟ್ಟಿ ಸತ್ಯ ಮಾಡಿ ಪ್ರಮಾಣ ಮಾಡಿದರೆ ವೇದವಾಕ್ಯ ಎಂದು ಹೇಳುತ್ತಿದ್ದರು, ಗರಿಕೆ ಮುಟ್ಟಿ ಪ್ರಮಾಣ ಮಾಡಿದರೆ ವೇದವಾಕ್ಯ ಎಂದು ಹೇಳುತ್ತಿದ್ದರು. ಅಗ್ನಿ ಪರೀಕ್ಷೆ ತಾವು ಓದಿದ್ದೀರಿ, ಏನಾಯಿತು ಎಂಬುದು. ಈಗ ಅದನ್ನೆಲ್ಲಾ ದಾಟಿ ಒಂದು ಹೊಸ/ ಪರಂಪರೆ ಸೃಷ್ಟಿಯಾಗಿದೆ. ನಾವು ಇವೊತ್ತು ಒಂದು 15 ವರ್ಷದ ಕರ್ನಾಟಕದ /ಸಮಗ್ರ ರಾಜಕಾರಣಿಗಳ ಮೇಲೆ ಒಂದು ಸಮಗ್ರ ತನಿಖೆಯನ್ನು ಸತ್ಯದಿಂದ, ಪ್ರಾಮಾಣಿಕವಾಗಿ ನಡೆಸುವುದಾದರೆ, ಬಹಳ ತಿಮಿಂಗಲಗಳು ಒಳಗಡೆ ಬೀಳುತ್ತವೆ; ಆ ಧೈರ್ಯ ಯಾರಿಗಿದೆ? ಅದನ್ನು ಲೋಕಾಯುಕ್ತ ಮಾಡಬೇಕು. ಮಾಡುವುದಕ್ಕೆ ಸಾಧ್ಯವಿದೆಯೇ? ಸಾಧ್ಯವಾಗುವುದಿಲ್ಲ! ಕಾರಣ, ನಾನಾ ರೀತಿಯ ಒತ್ತಡಗಳ ಪರಿಸ್ಥಿತಿಗೆ ಒಳಗಾಗಿದೆ.

ನಾನು ಲೋಕಾಯುಕ್ತ ವ್ಯವಸ್ಥೆಯನ್ನು ಟೀಕೆ ಮಾಡುತ್ತಿಲ್ಲ. ಇದೊಂದು 'ಬಿಳಿ ಆನೆ'. ಈ ಬಿಳಿ ಆನೆಯನ್ನು ನಾವು ಸಾಕಬೇಕೆ? ಇವೊತ್ತು ಸಂಬಳವನ್ನು ಜಾಸ್ತಿ

ಮಾಡಬೇಕು, ನನ್ನ ಅಭ್ಯಂತರವಿಲ್ಲ. ಇದನ್ನು ನಾವು ಇಟ್ಟುಕೊಳ್ಳಬೇಕೇ? ಬೇಡವೇ? ಇದರ ಬಗ್ಗೆ ಒಂದು ಚಿಂತನೆಯಾಗಬೇಕು. ಯಾವುದೋ ಒಂದು ಕಾರ್ಯಾಲಯ ಲೋಕಾಯುಕ್ತ, ಉಪಲೋಕಾಯುಕ್ತ ಈ ದೊಡ್ಡ ವಿಶಿಷ್ಟವಾದಂಥ ವ್ಯವಸ್ಥೆ ಬೇಕೇ? ನಮ್ಮ ರಾಜ್ಯಕ್ಕೆ ಯಾವ ಉದ್ದೇಶಕ್ಕೋಸ್ಕರ ಇದು ಪ್ರಾರಂಭವಾಯಿತು, ಆ ಉದ್ದೇಶ ಈಡೇರದೆ ಇದ್ದಮೇಲೆ ಈ ಬಿಳಿ ಆನೆಯನ್ನು ನಾವು ಇಟ್ಟುಕೊಳ್ಳಬೇಕೇ ಎಂಬುದು ಒಂದು ಮೂಲಭೂತವಾದ ಪ್ರಶ್ನೆ. ಈ ಪ್ರಶ್ನೆ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. ಲೋಕಾಯುಕ್ತ ಇರಬೇಕೇ, ಬೇಡವೇ ಎಂಬುದರ ಕುರಿತು ಸರ್ಕಾರ ಚಿಂತನೆ ಮಾಡಬೇಕು. ನನಗೆ ಲೋಕಾಯುಕ್ತರವರ ವ್ಯವಸ್ಥೆ ಬಗ್ಗೆಯಾಗಲಿ, ಅವರನ್ನು ವೈಯಕ್ತಿಕವಾಗಿ ನಾನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಇದು ಇರಬೇಕೇ? ಬೇಡವೇ? ಎಂಬ ಪ್ರಶ್ನೆ ಬಂದಾಗ ಇವೊತ್ತು ನಾನು ಈ ವಿಧೇಯಕವನ್ನು ವಿರೋಧಿಸುತ್ತೇನೆ. ಅವರಿಗೆ ಸಂಬಳ ಕೊಡತಕ್ಕಂಥಾದ್ದು ಏನಿದೆ, ಅದರ ಬಗ್ಗೆ ನನ್ನ ಅಭ್ಯಂತರವಿಲ್ಲ. ನಾವು ಪ್ರತಿನಿತ್ಯ ನೋಡುತ್ತಿದ್ದೇವೆ, ತನಿಖೆ ಬಗ್ಗೆ ಅನೇಕ ಸಮಿತಿಗಳು ರಚನೆಯಾಗುತ್ತಿವೆ, ಅನೇಕ ಆಯೋಗಗಳು ರಚನೆಯಾದವು, ಅನೇಕ ಏಕ ಸದಸ್ಯ ನ್ಯಾಯಾಧೀಶರನ್ನು ನೇಮಕ ಮಾಡಿದೆವು. ಅವುಗಳಿಂದ ಬಂದಂಥ ವರದಿಗಳು ಏನಾಗಿದೆ? ಯಾವ ವರದಿ ಮೇಲೂ ಸಹಾ ಯಾರನ್ನು ನೇಣು ಹಾಕಿಲ್ಲ. ಎಷ್ಟು ವರದಿಗಳಿವೆ? ಹಿಂದಿನ ಸರ್ಕಾರದಿಂದ ತೆಗೆದುಕೊಂಡು ಬನ್ನಿ. 10-15 ದಿವಸಗಳಲ್ಲಿ ಅಂಕಿ-ಅಂಶಗಳನ್ನು ತಾವು ಈ ಸದನದ ಮುಂದಿಡಿ. ಎಷ್ಟೋ ಆಯೋಗಗಳು ರಚನೆಯಾದವು, ಎಷ್ಟೋ ಸಮಿತಿಗಳು ರಚನೆಯಾದವು. ಈ ಸಮಿತಿ ಆಯೋಗಗಳ ವರದಿಗಳು ಏನಾಯಿತು? ಯಾವ ವರದಿಗಲು ಸಹಾ ಕಾರ್ಯರೂಪಕ್ಕೆ ಬರಲಿಲ್ಲ. ವರದಿಗಳನ್ನು ಸರ್ಕಾರ ಒಪ್ಪಲಿಲ್ಲ. ಎಲ್ಲವನ್ನು ತಮ್ಮ ಮುಖದ ನೇರಕ್ಕೆ ನೋಡಿ, ಆಳುವ ಸರ್ಕಾರ ಇರಬಹುದು, ಯಾರಾದರೂ ಇರಬಹುದು, ಇತರ ಮುಖ್ಯಮಂತ್ರಿಗಳು ಇರಬಹುದು, ಹಿಂದೆ ಇದ್ದಂಥ ಮುಖ್ಯಮಂತ್ರಿಗಳು ಇರಬಹುದು, ನಾನು ಹೇಳತಕ್ಕಂಥಾದ್ದು ಒಂದು ಆಯೋಗವನ್ನು ರಚನೆ ಮಾಡಿದಾಗ, ಒಂದು ನ್ಯಾಯಾಂಗ ತನಿಖೆಗೆ ಒಪ್ಪಿಸಿದಾಗ, ಅದಕ್ಕೆ ಗೌರವ ಬರಬೇಕಾದರೆ, ಅವರು ಕೊಟ್ಟಂಥ ವರದಿಯನ್ನು ಒಪ್ಪಿಕೊಳ್ಳಬೇಕು. ಈ ಪರಿಸ್ಥಿತಿ ಇರುವಾಗ ಲೋಕಾಯುಕ್ತ ನಿಜವಾಗಲೂ ನನಗನಿಸುತ್ತದೆ, ಇದು ರಾಜ್ಯದ ಬೊಕ್ಕಸಕ್ಕೆ ಬಡ ಜನರು ಏನು ತೆರಿಗೆ ಕೊಡುತ್ತಿದ್ದಾರೆ, ಇದಕ್ಕೆ ನಾವು ಅಪಚಾರ ಮಾಡಿದಂತಾಗುತ್ತದೆ. ನಾನು ಹೇಳುತ್ತಿದ್ದೇನೆ ಸಂಬಳ ಜಾಸ್ತಿ ಮಾಡುವ ಬದಲು ಒಂದು ಸಮಗ್ರವಾದಂಥ ಚರ್ಚೆಗೆ ತಂದು ಲೋಕಾಯುಕ್ತವನ್ನು ರದ್ದು ಮಾಡತಕ್ಕಂಥ ತೀರ್ಮಾನಕ್ಕೆ ಸರ್ಕಾರ ಬರಲೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಏಕಾಂತಯ್ಯನವರು ವಿವರವಾಗಿ ಇದರ ಬಗ್ಗೆ ಹೇಳಿದ್ದಾರೆ. ಈ ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತರವರ ವೇತನದ ಹೆಚ್ಚಳದ ಬಗ್ಗೆ ಮಾತ್ರ ಈ ವಿಧೇಯಕ ಇದ್ದರೂ ಸಹಾ ಇಲ್ಲಿ ಯಾವ ಉದ್ದೇಶಕ್ಕಾಗಿ ಈ ಒಂದು ತಿದ್ದುಪಡಿಯನ್ನು ತಂದಿದ್ದಾರೆ, ಈ ಲೋಕಾಯುಕ್ತದ ಕರ್ತವ್ಯಗಳೇನು, ಅದರ ಮೂಲ ಉದ್ದೇಶ ಏನಿತ್ತು, ಅದರ ಒಂದು ಕಾರ್ಯ ವ್ಯಾಪ್ತಿ, ಯಾರು ಈ ಕಾನೂನನ್ನು ಮಾಡತಕ್ಕಂಥವರು? ಆ ಒಂದು ಮೂಲ ಉದ್ದೇಶಗಳಿಗೆ ಒಳಪಡಬೇಕೆನ್ನುವ ವಿಚಾರ ಇಟ್ಟುಕೊಂಡು ಮಾಡಿದ್ದರು.. ಈ ಲೋಕಾಯುಕ್ತ ಕಾನೂನಿನಿಂದ ತೆರಿಗೆ ಬರುವ ಪೂರ್ವದಲ್ಲಿ ಯಾರು ಅದನ್ನು ವಿರೋಧ ಮಾಡಿದ್ದರು, ಯಾರಿಗೆ ಈ ಲೋಕಾಯುಕ್ತದಲ್ಲಿ ವಿಶ್ವಾಸ ಇರಲಿಲ್ಲ, ಇಂಥವರು ಇವೊತ್ತು ಈ ಲೋಕಾಯುಕ್ತ ಬಲಶಾಲಿಯಾಗಿದ್ದು, ಒಂದು ನೀತಿ-ನೆಲೆಗಟ್ಟಿನ ಮೇಲೆ ನಿಲ್ಲುವುದಕ್ಕೆ ಸಾರ್ವಜನಿಕರ ಆಪಾದನೆಗಳನ್ನು ಇಲ್ಲಿ

ಸಿದ್ಧ ಮಾಡಲಿಕ್ಕೆ, ವೈಯಕ್ತಿಕವಾದ ಒಂದು ಲೋಪ-ದೋಷಗಳನ್ನು ಎತ್ತಿ ತೋರಿಸಲಿಕ್ಕೆ ಇದು ಮಹತ್ವದ ಸಂಸ್ಥೆಯಾಗಿದೆ ಎಂದು ಹೇಳುತ್ತಿದ್ದಾರೆ.

ಈಗ ಯಾರು ಅದರ ಮೇಲೆ ವಿಶ್ವಾಸವಿಲ್ಲದಂಥ ಜನ ಇದನ್ನು ಆಹ್ವಾನ ಮಾಡಿದರೋ, ಇದು ಲೋಕಾಯುಕ್ತದ ತಪ್ಪು ಎಂದು ಭಾವಿಸುತ್ತಿಲ್ಲ. ಇದಕ್ಕೆ ಸಹಾಯ ಮಾಡತಕ್ಕ ಸರ್ಕಾರ ಇದಕ್ಕೆ ಆಪಾದನೆಗಳನ್ನು ಸಲ್ಲಿಸತಕ್ಕ ಅಥವಾ ತಪ್ಪಿತಸ್ಥರನ್ನು ಭ್ರಷ್ಟರನ್ನು ಈ ಒಂದು ಲೋಕಾಯುಕ್ತದ ವಿಚಾರಣೆಗೆ ಒಳಪಡಿಸತಕ್ಕದ್ದು ಸರ್ಕಾರದ ಮುಖ್ಯವಾದ ಕೆಲಸ ಮತ್ತು ಕರ್ತವ್ಯ. ಅಂದರೆ ವೈಯಕ್ತಿಕವಾಗಿ ಕೆಲವರು ಕೊಡಬಹುದು. ಹೀಗಿದ್ದಾಗ ಸರ್ಕಾರ ಯಾವುದೇ ರೀತಿಯ ತಪ್ಪಿತಸ್ಥರನ್ನು ಭ್ರಷ್ಟರನ್ನು ಈ ಲೋಕಾಯುಕ್ತಕ್ಕೆ ವಿಚಾರಣೆಗೆ ಒಳಪಡಿಸಲು ಯಾವುದೇ ಪ್ರಯತ್ನವನ್ನು ಮಾಡದೇ ಇರುವಾಗ ಮತ್ತು ಇಂತಹ ಲೋಕಾಯುಕ್ತದಿಂದ ಬಂದಂತಹ ವರದಿಗಳನ್ನು ಧಿಕ್ಕರಿಸುತ್ತಿರುವುದು ತಮಗೆ ಈಗಾಗಲೇ ಗೊತ್ತಿದೆ. ಅನೇಕ ಹಿರಿಯ ಅಧಿಕಾರಿಗಳ ಮೇಲೆ ಲೋಕಾಯುಕ್ತದಿಂದ ಬಂದಿರತಕ್ಕಂತಹ ವರದಿಗಳನ್ನು ಸರ್ಕಾರ ಧಿಕ್ಕರಿಸಿ ಅದಕ್ಕೆ ಕವಡೆಯ ಕಿಮ್ಮತ್ತು ಇಲ್ಲದಂತೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳಿಗೆ ಪ್ರಮೋಷನ್ ಕೊಟ್ಟು ಮೇಲಿನ ಹುದ್ದೆಗೆ ಹೋಗುವಂತೆ ಮಾಡಿದೆ. ಹೀಗೆ ಅವರ ಹುದ್ದೆಯನ್ನು ಹೆಚ್ಚಳ ಮಾಡುವುದರಿಂದ ಯಾವ ಒಂದು ಮಹಾಕಾರ್ಯವನ್ನು ಸಾಧಿಸಲು ಆಗುವುದಿಲ್ಲ.

ಇದು ಕೇವಲ ಕೆಲವರ ಪ್ರೀತಿ ವಿಶ್ವಾಸವನ್ನು ಗಳಿಸಲು ಮಾಡಿರುವುದು ಎನ್ನತಕ್ಕ ಮಾತು ಸ್ಪಷ್ಟವಾಗಿ ಎದ್ದು ಕಾಣುತ್ತಿದೆ. ಸರ್ಕಾರ ಎರಡರಲ್ಲಿ ಒಂದನ್ನು ಪಾಲನೆ ಮಾಡಲಿ. ಲೋಕಾಯುಕ್ತದ ಬಗ್ಗೆ ಪ್ರೀತಿ ವಿಶ್ವಾಸವಿದ್ದರೆ, ಕಾನೂನಿನ ಚೌಕಟ್ಟಿನಲ್ಲಿ ಪ್ರೀತಿ ವಿಶ್ವಾಸವಿದ್ದರೆ ಸರ್ಕಾರದ ಅಧಿಕಾರಿಗಳಿರಲಿ ಸರ್ಕಾರೇತರ ಅಧಿಕಾರಿಗಳಿರಲಿ ಎಲ್ಲರನ್ನೂ ವಿಚಾರಣೆಗೆ ಒಳಪಡಿಸಬೇಕು. ಅಲ್ಲಿಂದ ಬಂದ ವರದಿಗಳಿಗೆ ಸರ್ಕಾರ ಮನ್ನಣೆಯನ್ನು ಕೊಡಬೇಕು. ಸಂಬಂಧಪಟ್ಟವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು ಅಥವಾ ಕಾನೂನಿನ ಪ್ರಕಾರ ಮುಂದಿನ ಕ್ರಮವನ್ನು ಜರುಗಿಸಬೇಕು ಎನ್ನುವ ನಿರ್ಧಾರ ಮಾಡಿದರೆ ಇದನ್ನು ಮುಂದುವರೆಸಬೇಕು. ಸಾರ್ವಜನಿಕರ ಅಪಾರ ಹಣವನ್ನು ವೆಚ್ಚ ಮಾಡಿ ನಡೆಸುತ್ತಿರತಕ್ಕ ಲೋಕಾಯುಕ್ತದಲ್ಲಿ ಮನಸ್ಸಿಲ್ಲದಿದ್ದರೆ, ವಿಶ್ವಾಸವಿಲ್ಲದಿದ್ದರೆ ಬರಿ ತೋರಿಕೆಗಾಗಿ ಲೋಕಾಯುಕ್ತವನ್ನು ಮುಂದುವರೆಸುವ ಅವಶ್ಯಕತೆ ಇಲ್ಲ. ಅದರ ಬಗ್ಗೆ ನಿಜವಾಗಿ ಕಳಕಳಿ ಇದ್ದರೆ, ಭ್ರಷ್ಟರನ್ನು, ತಪ್ಪಿತಸ್ಥರನ್ನು ಹಾಗೂ ಕಾನೂನನ್ನು ದುರುಪಯೋಗ ಮಾಡತಕ್ಕಂಥವರನ್ನು ಹೊರಗೆ ಎಳೆಯಬೇಕು. ಸುಧಾರಣೆಯನ್ನು ತರುವಂತಹ ಇಚ್ಛೆ ಸರ್ಕಾರಕ್ಕೆ ಇಲ್ಲದಿದ್ದರೆ ಅದನ್ನು ಮುಂದುವರೆಸಿಕೊಂಡು ಹೋಗುವುದು ಎಷ್ಟರಮಟ್ಟಿಗೆ ಸೂಕ್ತವೆಂಬುದನ್ನು ಅವರೇ ನಿರ್ಣಯಕ್ಕೆ ತೆಗೆದುಕೊಳ್ಳಬೇಕು.

ಇನ್ನು ವೇತನದ ವಿಚಾರ. ರಾಜ್ಯಾಂಗದಲ್ಲಿ ರಾಷ್ಟ್ರಪತಿಗಳಿಗಿಂತಲೂ ಹೆಚ್ಚಾಗಿ ಯಾರು ವೇತನವನ್ನು ಪಡೆಯಬಾರದು ಎನ್ನುವ ನಿರ್ಬಂಧವಿದ್ದರೂ ಈಗ ಅವರಿಗೆ ಕೊಡತಕ್ಕ ವೇತನವನ್ನು ಹೆಚ್ಚು ಮಾಡಿದರು. ಅವರು ಹೈಕೋರ್ಟ್‌ನ ಮುಖ್ಯನ್ಯಾಯಾಧೀಶರ ಮತ್ತು ಇತರ ನ್ಯಾಯಾಧೀಶರ ವೇತನಕ್ಕೆ ಸರಿಸಮಾನವಾದ ವೇತನವನ್ನು ಪಡೆಯುತ್ತಿದ್ದಾರೆ. ಈಗಾಗಲೇ ಅವರು ನಿವೃತ್ತಿ ವೇತನವನ್ನು ಪಡೆಯುತ್ತಿರುವುದರಿಂದ ಇದು ರಾಜ್ಯಾಂಗಕ್ಕೆ ವಿರುದ್ಧವಾಗುತ್ತದೆ. ವ್ಯತಿರಿಕ್ತವಾಗುತ್ತದೆ ಎನ್ನುವ ಮಾತು ಸ್ಪಷ್ಟ. ಈ ಒಂದು ತಿದ್ದುಪಡಿಯು ಸಿಂಧುವಾಗುವುದಿಲ್ಲವೆನ್ನುವ ಮಾತನ್ನು ಹೇಳುತ್ತಾ ಈ ಒಂದು ವಿಧೇಯಕವು ಕಾನೂನಿನ ಚೌಕಟ್ಟಿನಲ್ಲಿ, ರಾಜ್ಯಾಂಗದ ಚೌಕಟ್ಟಿನಲ್ಲಿ ಇಲ್ಲವೆನ್ನುವ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಸಚಿವರು) : ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ವಿರೋಧಪಕ್ಷದ ನಾಯಕರು ಹಾಗೂ ಮಾನ್ಯ ಏಕಾಂತಯ್ಯನವರು.....

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಕನ್ನಡದಲ್ಲಿ ಮಾತನಾಡಿ ಅವರಿಗೆ......

ಶ್ರೀ ವಾಟಾಳ್ ನಾಗರಾಜ್ : ಎಲ್ಲಕ್ಕಿಂತ ಮುಖ್ಯವಾಗಿ ಕನ್ನಡದ ಬಗ್ಗೆ ಕನ್ನಡ ಆಡಳಿತ ಭಾಷೆ ಎಂದು ನೀವು ಏನು ಹೇಳುತ್ತಿದ್ದೀರಿ ಅದರ ಬಗ್ಗೆ ಆತ್ಮಪೂರ್ವಕವಾದ ಅಭಿಮಾನ ಬರಲಿ. ಯಾರಿಗೆ ಗೊತ್ತಾಗುತ್ತೋ ಅಥವಾ ಬಿಡುತ್ತದೋ ಎಂಬ ಪ್ರಶ್ನೆಯನ್ನು ಆಮೇಲೆ ನೋಡೋಣ. ನೀವು ಹೇಳಿರುವುದನ್ನೆ ನೀವೇ ಮರೆತುಬಿಟ್ಟರೆ ನಾವೇನು ಮಾಡಲು ಸಾಧ್ಯ?

ಉಪಾಧ್ಯಕ್ಷಣಿಯರು : ಅವರು ಕನ್ನಡದಲ್ಲಿ ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಗೊತ್ತು, ನನಗೆ ಅವರು ಕನ್ನಡದಲ್ಲಿ ಮಾತನಾಡುವುದಕ್ಕೆ ಬರುತ್ತದೆ. ಮಧ್ಯಾಹ್ನ ನನ್ನ ಒಂದು ವಿಷಯದ ಬಗ್ಗೆ ಅವರು ಕನ್ನಡದಲ್ಲಿ ಓದಿದರು. ಅದಕ್ಕೆ ಸಂತೋಷ.

(ಗೊಂದಲ)

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಈ ಒಂದು ವಿಧೇಯಕದಲ್ಲಿರುವುದು ಬರೇ ಸಂಬಳದ ಬಗ್ಗೆ. ನಮ್ಮ ಕೇಂದ್ರ ಸರ್ಕಾರದವರು ಸುಪ್ರೀಮ್ ಕೋರ್ಟಿನ ಮತ್ತು ಹೈಕೋರ್ಟಿನ ಮುಖ್ಯನ್ಯಾಯಾಧೀಶರ ವೇತನವನ್ನು ಹೆಚ್ಚಿಸಿದ್ದಾರೆ. ಅದೇ ರೀತಿಯಲ್ಲಿ ಲೋಕಾಯುಕ್ತ ಮತ್ತು ಉಪಲೋಕಾಯುಕ್ತಗಳಿಗೂ ಸಹ ನಾವು ಅದೇ ವೇತನವನ್ನು ಈ ಒಂದು ತಿದ್ದುಪಡಿಯಲ್ಲಿ ಸೂಚಿಸಿದ್ದೇವೆ. ಅದೇ ರೀತಿ ರೂಲ್ಸ್ ಮಾಡುವುದರಲ್ಲಿ ರೆಟ್ರೂಸ್ಪೆಕ್ಟೀವ್ ಇಫೇಕ್ಟ್ ಕೊಡುವ ಒಂದು ಅಧಿಕಾರವನ್ನು ಈ ಅಮೆಂಡ್‌ಮೆಂಟ್‌ನಿಂದ ಕೊಟ್ಟಿದ್ದೇವೆ.

ಇದರಲ್ಲಿ ಕೆಲವರು ಈ ವೇತನ ಜಾಸ್ತಿಯಾಗುತ್ತದೆಂದು ಹೇಳಿದ್ದರು. ಲೋಕಾಯುಕ್ತದವರು, ಜಸ್ಟೀಸ್ ಚೀಫ್ ಜಸ್ಟೀಸ್ ರ್‍ಯಾಂಕ್‌ನವರಾಗಿರುತ್ತಾರೆ ಹಾಗೂ ಉಪ ಲೋಕಾಯುಕ್ತದವರು ಜಡ್ಜ್ ರ್‍ಯಾಂಕ್‌ನವರಾಗಿರುತ್ತಾರೆ. ನಾವು ಅವರಿಗೆ ಆಫೀಸ್‌ನ ಡಿಗ್ನಿಟಿ ಪ್ರಕಾರ ಅವರ ಸ್ಟೇಟಸ್ ಪ್ರಕಾರ ನಾವು ವೇತನವನ್ನು ಕೊಡಬೇಕಾಗುತ್ತದೆ. ಅದೇ ರೀತಿಯಲ್ಲಿ ನಾವು ಇಲ್ಲಿ ಸೂಚಿಸಿದ್ದೇವೆ. ಇನ್ನು ಸೆಕ್ಷನ್ ೩ (ಬಿ) ನಲ್ಲಿ ಏನಿದೆ ಅಂದರೆ, "A person to be appointed as an Upa-Lokayuktha shall be a person who hold the office of the Judge of the High Court shall be appointed on the advice of the Chief Minister in consultation with the Chief Justice of Karnataka High Court, Chairman, Karnataka Legislative Council, the Speaker, Karnataka Legislative Assembly, the Leader of the Opposition in the Karnataka Legislative Assembly and the Leader of the Opposition in the Karnataka Legislative Council.."

ನಮ್ಮ ಸನ್ಮಾನ್ಯ ಮುಖ್ಯಮಂತ್ರಿಯವರು ವಿರೋಧಪಕ್ಷದ ನಾಯಕರಿಗೆ ಪತ್ರವನ್ನು ಬರೆದು ಅವರ ಸೂಚನೆಯನ್ನು ಕೇಳಿದ್ದಾರೆ. ಅವರು ಸೂಚನೆಯನ್ನು ಕೊಡುವುದರ ಬದಲು ನಾನು ಸೂಚನೆ ಕೊಡುವುದಿಲ್ಲವೆಂದು ಅವರು ಉತ್ತರ ಕೊಟ್ಟಿರುವುದು ಸರಿಯಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ವಿರೋಧಪಕ್ಷದ ನಾಯಕರಿಂದ ನಾನು ಉತ್ತರ ಕೊಡುವುದಿಲ್ಲವೆಂದು ಪತ್ರ ಬಂದಿದೆಯೇ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜಾ : ಹೌದು ಅವರು ಹೇಳಿದ್ದಾರೆ. ಅವರು ಭಾಷಣ ಮಾಡುವಾಗ ನಾವು ಉತ್ತರ ಕೊಡುವುದಿಲ್ಲವೆಂದು ಪತ್ರ ಬರೆದಿದ್ದೇನೆಂದು ಹೇಳಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಸನ್ಮಾನ್ಯ ಉಪಸಭಾಧ್ಯಕ್ಷಿಣಿಯವರೇ, ಆ ರೀತಿ ವಿರೋಧಪಕ್ಷದ ನಾಯಕರಿಂದ ಉತ್ತರ ಕೊಡುವುದಿಲ್ಲವೆಂದು ಬಂದಿಲ್ಲ. ಇದನ್ನು ನಾವು ನೀವು ಭೇಟಿ ಮಾಡಿ ಕೆಲವೊಂದು ಕಾಗದಪತ್ರಗಳನ್ನು ಉಲ್ಲೇಖ ಮಾಡಿ, ಹೈಕೋರ್ಟ್ ನಿರ್ಣಯದೊಳಗೆ ಅವನ್ನು ಕೂಲಂಕುಷ ವಿಚಾರ ಮಾಡಿ ನಿರ್ಣಯ ತೆಗೆದುಕೊಳ್ಳೋಣ ಎಂದು ಹೇಳಿದ್ದಾರೆಯೇ ಹೊರತು ಅವರು ವಿರೋಧ ಮಾಡಿ ಅವರ ಅಭಿಪ್ರಾಯವನ್ನು ಕೊಡದೇ ಬಿಟ್ಟಿಲ್ಲ. ಚರ್ಚೆ ಮಾಡುವುದಕ್ಕೆ ನೀವು ಕರೆದಿಲ್ಲ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜಾ : ಅವರು ವಿರೋಧ ಮಾಡಿದ್ದಲ್ಲ. ಅವರಿಗೆ ನಮ್ಮ ಮುಖ್ಯಮಂತ್ರಿಗಳಿಗೆ ಅವರ ಸೂಚನೆಯನ್ನು ಕೇಳಿದ್ದಾರೆ. ಅದನ್ನು ಅವರು ಇಲ್ಲಿ ಹೇಳಿದರು. ಅದೊಂದು ಕಾನ್‌ಫಿಡೆನ್ಸಿಯಲ್ ಲೆಟರ್ ಆದ ಕಾರಣ ಅದನ್ನು ನಾನು ಓದುವುದಿಲ್ಲ, ಆದರೂ ಸಹ ನನ್ನ ಸೂಚನೆಯನ್ನು ನಾನು ಕೊಡುವುದಿಲ್ಲವೆಂದು ಅವರು ಇಲ್ಲಿ ಬಹಿರಂಗವಾಗಿ ಹೇಳಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಸನ್ಮಾನ್ಯ ಉಪಸಭಾಧ್ಯಕ್ಷಿಣಿಯವರೇ, ಇದು ಸತ್ಯಕ್ಕೆ ದೂರವಾದುದು. ನನ್ನ ಅಭಿಪ್ರಾಯವನ್ನು ಕೊಡುವುದಿಲ್ಲ ಅಂಥ ಹೇಳಿಲ್ಲ ಇದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ನಾಯಕರು ಏನು ಹೇಳಿದ್ದಾರೆಂದರೆ, ಕೆಲವೊಂದು ವಿಷಯಗಳ ಬಗ್ಗೆ ಗೌಪ್ಯವಾಗಿ ಚರ್ಚೆ ಮಾಡಿ ನನ್ನ ಅಭಿಪ್ರಾಯ ಕೊಡುತ್ತೇನೆಂದು ಹೇಳಿದ್ದಾರೆಯೇ ವಿನಃ ಅಭಿಪ್ರಾಯ ಕೊಡುವುದಿಲ್ಲವೆನ್ನುವ ಮಾತನ್ನು ಅವರು ಹೇಳಿಲ್ಲ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜಾ : ಸನ್ಮಾನ್ಯ ಉಪಸಭಾಧ್ಯಕ್ಷಣಿಯವರೇ, ಅದಕ್ಕಾಗಿ ಈ ಒಂದು ಕರ್ನಾಟಕದ ಲೋಕಾಯುಕ್ತ ತಿದ್ದುಪಡಿ ವಿಧೇಯಕ 1991 ನ್ನು ಪರ್ಯಾಲೋಚಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಉಪಸಭಾಧ್ಯಕ್ಷಿಣಿಯವರು : ಪ್ರಸ್ತಾಪವೇನೆಂದರೆ "ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ 1991ನ್ನು ಪರ್ಯಾಲೋಚಿಸುವುದು."

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 4ರವರೆಗೆ, ಎರಡೂ ಸೇರಿದಂತೆ,

ಉಪಾಧ್ಯಕ್ಷಿಣಿಯವರು : "ಖಂಡ 2ರಿಂದ 4ರವರೆಗೆ ಎರಡೂ ಸೇರಿದಂತೆ ಈ ವಿಧೇಯಕ ಅಂಗವಾಗಿರುತ್ತದೆ."

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 4ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂದ 1 ಇತ್ಯಾದಿ

ಉಪಾಧ್ಯಕ್ಷಿಣಿಯವರು : "ಪ್ರಸ್ತಾಪ ಏನೆಂದರೆ ಮೊದಲನೆ ಖಂಡ, ಹೆಸರು ಮತ್ತು ಅವತರಣಿಕೆ ಹಾಗೂ ಅಧಿನಿಯಮಗೊಳಿಸುವ ಸೂತ್ರ"

ಪ್ರಸ್ತಾಪವನ್ನು ಅಂಗೀಕರಿಸಲಾಯಿತು

(ಮೊದಲನೆ ಖಂಡ, ಹೆಸರು ಮತ್ತು ಅವತರಣಿಕೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ 1991ನೇ ಸಾಲಿನ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, "1991ನೇ ಸಾಲಿನ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಉಪಾಧ್ಯಕ್ಷರು : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ತಮ್ಮ ವಿಧೇಯಕವನ್ನು ಪರ್ಯಾಲೋಚಿಸಲು ಕೋರುವುದು.

ಶ್ರೀ ಆರ್.ವಿ. ದೇಶಪಾಂಡೆ : ಅಧ್ಯಕ್ಷರೇ, ಈ ಬಿಲ್ ನಾಳೆ ತೆಗೆದುಕೊಂಡರೆ ಒಳ್ಳೆಯದು ಎಂದು ಕಾಣುತ್ತದೆ. ಕಾವೇರಿ ಬಿಲ್ ಬೇಕಾದರೆ ಈಗ ತೆಗೆದುಕೊಳ್ಳಬಹುದು.

ಉಪಾಧ್ಯಕ್ಷಿಣಿಯವರು : ಮಂತ್ರಿಗಳು ಬೇರೆ ಯಾವುದೋ ಒಂದು ಮೀಟಿಂಗ್‌ನಲ್ಲಿದ್ದೇನೆಂದು ಒಂದು ಕಾಗದ ಕೊಟ್ಟು ಕಳುಹಿಸಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ಉಪಾಧ್ಯಕ್ಷಿಣಿಯವರೇ, ಇನ್ ಪ್ರಿನ್ಸಿಪಲ್ ಈ ಬಿಲ್ ಬಗ್ಗೆ ನಮ್ಮದು ವಿರೋಧ ಇಲ್ಲ. ನಾವು ಅಧಿಕಾರದಲ್ಲಿದ್ದಾಗ ಈ ಬಿಲ್ ತರಬೇಕೆಂದು ಮಾಡಿದ್ದೆವು. ಆದರೆ ಇಲ್ಲಿ ಏನು ಕಾಣಿಸುತ್ತದೆ ಅಂದರೆ ಈ ಬಿಲ್ ಇಂಪ್ಲಿಮೆಂಟ್ ಮಾಡಬೇಕಾದರೆ ಸ್ವಲ್ಪ ಪ್ರಾಬ್ಲಮ್ ಆಗಬಹುದು ಎಂದು ನನಗೆ ಕಾಣಿಸುತ್ತದೆ. ಅದರ ಸಲುವಾಗಿ ಹೇಳುತ್ತಿದ್ದೇನೆ.

ಉಪಾಧ್ಯಕ್ಷಿಣಿಯವರು : ತಾವು ಸಜೆಷನ್ ಕೊಡಿ.

ಶ್ರೀ ಆರ್.ವಿ. ದೇಶಪಾಂಡೆ : ಈಗ ಈವನ್ ಲೀಗಲಿ ಬಿಲ್ ಅನ್ನು ಕನ್‌ಸಿಡರೇಷನ್‌ಗೆ ತೆಗೆದುಕೊಳ್ಳಬೇಕಾದರೆ, after the bill is introduced, it should be taken atleast after two days. ನಿನ್ನೆ ಈ ಬಿಲ್ ಇಂಟ್ರಡಕ್ಷನ್ ಆಗಿದೆ. So, they have taken it after two days. It was introduced yesterday. Even as per rules, it has to come on the third day only.

ನಾನು ಆ ಪಾಯಿಂಟ್ ಹೇಳಿ ನಿಮಗೆ ತೆಗೆದುಕೊಳ್ಳಬೇಡಿ ಎಂದು ಹೇಳುತ್ತಿಲ್ಲ. ನಾನು ಏನು ಹೇಳುತ್ತಿದ್ದೇನೆಂದರೆ, ಕೆಲವೊಂದು ಟೆಕ್ನಿಕಲ್ ಪಾಯಿಂಟ್ಸ್ ಇದೆ. ಅದರ ಸಲುವಾಗಿ ನಾಳೆ ತೆಗೆದುಕೊಂಡರೆ ಏನೂ ತೊಂದರೆ ಇಲ್ಲ. I want to suggest it to refer it to some other Committee. We are not against it. In principle, I am not against this bill. I welcome it. ನಾವು ಮಾಡಬೇಕೆಂದು

ಈ ಕಾಯಿದೆಯನ್ನು ಇಂಪ್ಲಿಮೆಂಟ್ ಮಾಡುವಾಗ ಬರಬಹುದೆಂದು ಕಾಣಿಸುತ್ತದೆ. ಅದರ ಸಲುವಾಗಿ ಹೇಳುತ್ತಿದ್ದೇನೆ.

It is better to take it up tomorrow. If you introduce a bill, minimum two days time you have to give. It will come on the third day only. ನಾಳೆ ಅದು ಬರಬೇಕು. I am not going to harp on that technicality. It is a point. It is very clear in the rules.

ಶ್ರೀ ಎಸ್. ಬಂಗಾರಪ್ಪ : ನಾವು ಒಂದು ಮಸೂದೆಯನ್ನು ಒಪ್ಪಿಗೆಗಾಗಿ ಸದನದ ಮುಂದೆ ತಂದಾಗ, ಈ ತರಹದ ಉದಾಹರಣೆಗಳು ನಮ್ಮ ಮುಂದೆ ಬೇಕಾದಷ್ಟು ಇವೆ. ಈಗ ನಾವು ಇಂಟ್ರಡ್ಯೂಸ್ ಮಾಡತಕ್ಕಂಥಾದ್ದು ಆಮೇಲೆ ಕನ್‌ಸಿಡರೇಷನ್ ತೆಗೆದುಕೊಳ್ಳತಕ್ಕಂಥಾದ್ದು, second stage and then passing that is the final and third stage. ಅದಕ್ಕೆ ಬರತಕ್ಕಂತಾದ್ದು. ನಾವು ಅದೇ ದಿವಸ ಮಾಡಿಕೊಂಡಿರತಕ್ಕಂಥ ಪ್ರಕರಣಗಳು ನೂರಾರು ಇವೆ. ಒಂದೆರಡು ಅಲ್ಲ. ಈ ಸದನದ ಎಲ್ಲಾ ಪಕ್ಷಗಳು, ಎಲ್ಲರೂ ಕೂಡ ಒಂದೇ ಅಭಿಪ್ರಾಯವನ್ನು ನಾವು ಹೊಂದಿದ್ದೇವೆ. ಈಗ ಅನ್‌ಆಥರೈಸ್ಡ್ ಕನ್‌ಸ್ಟ್ರಕ್ಷನ್ ಏನೇನು ಇದ್ದಾವೆ, ಅದನ್ನು ರೆಗ್ಯುಲರೈಸ್ ಮಾಡಬೇಕು ಎನ್ನುವ ಬಗ್ಗೆ ನಾವು ಅಲ್ಲಿ ಕುಳಿತಾಗ ನಾವು ಹೋರಾಟ ಮಾಡಿದ್ದೇವೆ. ನೀವು ಇಲ್ಲಿ ಇದ್ದಾಗಲೂ ಕೂಡ ನೀವು ಏನೂ ವಿರೋಧ ಮಾಡಿಲ್ಲ ಈ ವಿಚಾರದಲ್ಲಿ, ಆದ್ದರಿಂದ ಅದರ ಬಗ್ಗೆ ಭಿನ್ನಾಭಿಪ್ರಾಯ ಏನೇನೂ ಇಲ್ಲ. ಈ ಬಿಲ್ಲಿನ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. In the question of implementation ವಿಚಾರದಲ್ಲಿ ಮಾತ್ರ ತಾವು ಹೇಳತಕ್ಕಂತಾದ್ದು ಇದೆ. ತಾವೂ ಕೂಡ ಹೆಚ್‌ಯುಡಿ ಮಿನಿಸ್ಟರ್ ಆಗಿದ್ದಂಥವರು. ಇಂಪ್ಲಿಮೆಂಟೇಷನ್ ಬಗ್ಗೆ ಏನು ಎನ್ನತಕ್ಕಂಥ ಸಲಹೆಯನ್ನು ತಾವು ಕೊಟ್ಟರೆ ಸರ್ಕಾರ ಅದನ್ನು ಗಮನದಲ್ಲಿಟ್ಟು ನಾವು ಅದನ್ನು ಜಾರಿಗೆ ತರತಕ್ಕಂಥ ವಿಚಾರದಲ್ಲಿ ನಾವು ಗಮನವನ್ನು ಹರಿಸುವುದಕ್ಕೆ ಅನುಕೂಲವಾಗುತ್ತದೆ. ಆ ದೃಷ್ಟಿಯಿಂದ ಬಿಲ್ ಇಂಟ್ರಡ್ಯೂಸ್ ಮಾಡೋಣ. ಬಿಲ್ ಕನ್‌ಸಿಡರೇಷನ್ ಚರ್ಚೆಗೆ ತೆಗೆದುಕೊಳ್ಳೋಣ, ನಾವು ಪಾಸ್ ಕೂಡ ಮಾಡತಕ್ಕಂಥ ವಿಚಾರದಲ್ಲಿ ಮುಂದಕ್ಕೆ ಹೋಗೋಣ. ನಾನು ಹೇಳುವಂತಾದ್ದು ಎಲ್ಲರಿಗೂ ಇದು ಒಳ್ಳೆಯದು. ಸಪ್ಪೋಸಿಂಗ್ ತಾವು ಏನು ಹೇಳಬಹುದು, ಟೆಕ್ನಿಕ್ಯಾಲಿಟೀಸ್ ಮತ್ತೊಂದು ಹೇಳಬಹುದು...

Sri R.V. DESHPANDE : I don't want to stand on the technicalities. The intention of the bill is good. I welcome it. In respect of unauthorised constructions, the amount of the penalty or the cost will be determined by the rules.

ರೂಲ್ಸ್‌ನಲ್ಲಿ ಪವರ್‌ನ್ನು ಡೆಲಿಗೇಟ್ ಮಾಡಿಕೊಳ್ಳುತ್ತಿದ್ದೀರಿ. ಆದರೆ ಇದರಲ್ಲಿ ಏನೂ ಇಲ್ಲ. ಯಾವರೀತಿ ಮಾಡುತ್ತೀರಿ? ಏನು ಮಾಡುತ್ತೀರಿ? Tomorrow, the Government may do anything. Whatever the Governments wants they will do it.

ಶ್ರೀ ಎಸ್. ಬಂಗಾರಪ್ಪ : ಇದಕ್ಕೆ ನಾನು ಏನು ಹೇಳುತ್ತಿದ್ದೇನೆಂದರೆ, ಇದನ್ನು ಒಂದು ವೇಳೆ ನಾವು ಈ ಮುಖ್ಯ ಬಿಲ್‌ನಲ್ಲೇ ಹಾಕಿದ್ದೇವೆಂದು ಇಟ್ಟುಕೊಂಡರೂ ಕೂಡ ಅದು ಸಿಕ್ಕಾಪಟ್ಟೆ ಜಾಸ್ತಿ ಅಥವಾ ಕಡಿಮೆ ಎಂದು ಮಾತುಗಳು ಬರಬಹುದು. ಆದುದರಿಂದ ನೀವು ಸಲಹೆಯನ್ನು ಕೊಟ್ಟರೆ ಅದನ್ನೂ ಕೂಡ ಈ ರೂಲ್ಸ್‌ನಲ್ಲಿ

ಹಿಂದೆ ನಾವು ಏನು ರೇಟನ್ನು ಫಿಕ್ಸ್ ಮಾಡಿದ್ದೆವು ಅದು ಸಿಕ್ಕಾಪಟ್ಟೆ ಜಾಸ್ತಿ ಎಂದು ಬಂತು. ಅದು ಬಂದಿದ್ದರಿಂದ ನಿಮ್ಮ ಅಭಿಪ್ರಾಯಗಳನ್ನು ಕೇಳಿ ನಂತರ ನಾವು ರೂಲ್ಸ್‌ನ್ನು ಮಾಡಬೇಕೆಂದು ಈ ಪವರ್ಸ್‌ನ್ನು ಹಾಗೇ ಇಟ್ಟಿದ್ದೇವೆ. ಇದರಲ್ಲಿ ಬೇರೆ ಯಾವ ಉದ್ದೇಶವೂ ಇಲ್ಲ. ರೇಟನ್ನು ಸಿಕ್ಕಾಪಟ್ಟೆ ಜಾಸ್ತಿ ಮಾಡತಕ್ಕದ್ದು ಬರುವುದಿಲ್ಲ. ಇದರ ಬಗ್ಗೆ ತಮಗೆ ಯಾವುದೇ ಅನುಮಾನವೂ ಬೇಡ. ಇದರಲ್ಲಿ ಟೆಕ್ನಿಕಲ್ ಪಾಯಿಂಟ್ಸ್ ಏನಾದರೂ ಇದ್ದರೆ....

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂತೆ ನಿಯಮ 83ರ ಪ್ರಕಾರ ಮಾನ್ಯ ಸಭಾಧ್ಯಕ್ಷಿಣಿಯವರು ಅನುಮತಿಯನ್ನು ಕೊಟ್ಟರೆ ಮಾಡಬಹುದು. ಇಲ್ಲ ಎಂದು ನಾನು ಹೇಳುವುದಿಲ್ಲ.

ಇನ್ನು ಎರಡನೆಯದಾಗಿ ಹೇಳುವುದಾದರೆ ಮಾನ್ಯ ದೇಶಪಾಂಡೆಯವರು ಹೇಳಿದಂತೆ ಏನು ಕಾನೂನನ್ನು ಮಾಡುತ್ತೀರಿ ಅದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ಅದನ್ನು ಮುಂದೆ ಜಾರಿ ಮಾಡುವಾಗ ಆಲೋಚನೆ ಮಾಡಬೇಕಾಗುತ್ತದೆ. ನಿನ್ನೆಯ ದಿವಸ ಇಂಟ್ರಡ್ಯೂಸ್ ಮಾಡಿರುವುದರಿಂದ ಇವತ್ತು ಇದನ್ನು ಪರಿಶೀಲನೆಗೆ ತೆಗೆದುಕೊಳ್ಳುತ್ತಿರುವುದರಿಂದ ಅನೇಕ ಮಾನ್ಯ ಸದಸ್ಯರಿಗೆ ಇದರ ಬಗ್ಗೆ ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟಂತಾಗುವುದಿಲ್ಲ, ಎಲ್ಲಾ ಸದಸ್ಯರಿಗೂ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕೆಂಬ ಉದ್ದೇಶದಿಂದ ನಾನು ಹೇಳುತ್ತಿದ್ದೇನೆ. ಇದನ್ನು ನಾಳೆ ತೆಗೆದುಕೊಳ್ಳೋಣ. ಈ ಬಿಲ್ಲಿಗೆ ನಮ್ಮ ಬೆಂಬಲ ಇದೆ. ಆದರೆ ಇದನ್ನು ಜಾರಿ ಮಾಡುವಾಗ ಒಂದು ನೀತಿಯನ್ನು ಅನುಸರಿಸಬೇಕೆಂದು ಕೆಲವು ವಿಚಾರಗಳನ್ನು ಹೇಳುತ್ತಿದ್ದೇವೆ. ಇದರ ಬಗ್ಗೆ ತಾವು ನಮಗೆ ಅವಕಾಶವನ್ನು ಕೊಟ್ಟರೆ ಪರಿಣಾಮಕಾರಿಯಾಗಿ ಆಲೋಚನೆ ಮಾಡಿ ಹೇಳಬಹುದು, Nothing else.

Sri S. BANGARAPPA : I most welcome the suggestion of the hon'ble member, Mr. Ekantaiah. The bill is already introduced that is what I have just learnt. The bill is now set down for consideration and also passing at a later stage. ನಾವು ಇದನ್ನು ಚರ್ಚೆಗೆ ತೆಗೆದುಕೊಳ್ಳೋಣ. ನಿಮ್ಮ ಅಭಿಪ್ರಾಯಗಳನ್ನು ಕೊಡಿ. ಅವುಗಳನ್ನು ನಾವು ತೆಗೆದುಕೊಳ್ಳುತ್ತೇವೆ ಎಂದು ನಾನು ಹೇಳಿದ್ದು. ಚರ್ಚೆ ಆಗದೇ ಇದನ್ನು ಪಾಸ್ ಮಾಡಬೇಕೆಂದು ನಾನು ಹೇಳುತ್ತಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಲೀಡರ್ ಆಫ್ ದಿ ಅಪೋಸಿಷನ್ ಏನು ಮಾಡಬೇಕು?

ಶ್ರೀ ಎಸ್. ಬಂಗಾರಪ್ಪ : ತಮ್ಮ ಅಭಿಪ್ರಾಯ ಬೇಕು, ಚರ್ಚೆ ಆಗದೇ ಪಾಸ್ ಮಾಡಬೇಕೆಂದು ನಾವು ಯಾರೂ ಹೇಳುತ್ತಿಲ್ಲ.

(ಬಿ) ಕರ್ನಾಟಕ ನಗರ ಪ್ರದೇಶದಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ವಿಧೇಯಕ 1991.

ಶ್ರೀ ಕೆ.ಜೆ. ಜಾರ್ಜ್ (ನಗರಾಭಿವೃದ್ಧಿ ಮತ್ತು ವಸತಿ ಖಾತೆ ಸಚಿವರು) : ಕರ್ನಾಟಕ ನಗರ ಪ್ರದೇಶದಲ್ಲಿರತಕ್ಕ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಹೇಳುತ್ತಾ, ಒಂದು ಮಾತನ್ನು ಹೇಳುವುದಾದರೆ ತಮಗೆ ಗೊತ್ತಿರುವಂತೆ 1982ನೇ ಇಸವಿಯಲ್ಲಿ ಈ ರೀತಿ ಅಕ್ರಮವಾಗಿ ಎಲ್ಲೆಲ್ಲಿ ಕಟ್ಟಡಗಳನ್ನು ಕಟ್ಟಿದ್ದಾರೆ ಅವುಗಳನ್ನು ಸಕ್ರಮಗೊಳಿಸಬೇಕೆಂದು ಹಿಂದಿನ ಸರ್ಕಾರ ಒಂದು ಆದೇಶವನ್ನು ಹೊರಡಿಸಿತ್ತು. ನಂತರ 1990 ರಲ್ಲಿ ಕೂಡ ಅಂದಿನ

ಸರ್ಕಾರದವರು ಒಂದು ಆದೇಶವನ್ನು ಹೊರಡಿಸಿದರು. ಅಷ್ಟೇ ಅಲ್ಲ ಒಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನೂ ಕೂಡ ಮಾಡಿದರು. ಬೆಂಗಳೂರು ಮತ್ತಿತರ ನಗರ ಪ್ರದೇಶಗಳಲ್ಲಿ ಸಾಕಷ್ಟು ಅನಧಿಕೃತ ಮನೆಗಳು ಅಂದರೆ ಸಾವಿರಾರು ಮನೆಗಳು ಬಂದುಬಿಟ್ಟಿದೆ. ನಾವು ಯಾವ ಪ್ಲಾನ್ ಪ್ರಕಾರ ಹೋಗಬೇಕಾಗಿತ್ತು ಆ ರೀತಿ ಹೋಗುವುದಕ್ಕೆ ಆಗುತ್ತಿಲ್ಲ. ಆ ಒಂದು ಪರಿಸ್ಥಿತಿ ಇವತ್ತು ಬಂದಿದೆ. ಈ ವಿಚಾರದಲ್ಲಿ ನಮ್ಮ ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ಹಾಗೂ ಕ್ಯಾಬಿನೆಟ್‌ನಲ್ಲಿ ಸಾಕಷ್ಟು ಚರ್ಚೆ ಮಾಡಿ ಇವತ್ತು ಯಾವ ಮನೆಗಳನ್ನು ಸಕ್ರಮಗೊಳಿಸಬೇಕೆಂದು ನಾವು ಒಂದು ಪಟ್ಟಿಯನ್ನು ಕೊಟ್ಟಿದ್ದೇವೆ. ಎಲ್ಲಾ ಕಟ್ಟಡಗಳನ್ನೂ ನಾವು ಸಕ್ರಮಗೊಳಿಸುವುದಕ್ಕಾಗುವುದಿಲ್ಲ. ಈ ಪಟ್ಟಿಯ ಪ್ರಕಾರ ಯಾವುದನ್ನು ಸಕ್ರಮಗೊಳಿಸಬೇಕು, ಯಾವುದನ್ನು ಸಕ್ರಮಗೊಳಿಸಬಾರದೆಂಬುದನ್ನು ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ಸಕ್ರಮಗೊಳಿಸುವುದು ಎನ್ನುವುದಕ್ಕೆ ವಿವರಣೆಯಲ್ಲಿ ಹೀಗೆ ಹೇಳಿದ್ದೇವೆ:

"ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಆದರೆ ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು, 4ನೇ ಪ್ರಕರಣದಲ್ಲಿ ನಿರ್ದಿಷ್ಟ ಪಡಿಸಲಾದವುಗಳನ್ನು ಹೊರತುಪಡಿಸಿ, 1990ರ ಮಾರ್ಚ್ ಮೂವತ್ತೊಂದನೇ ದಿನಾಂಕಕ್ಕೆ ಮುಂಚಿತವಾಗಿ ಯಾವೊಬ್ಬ ವ್ಯಕ್ತಿಯು:

ಅ) ರಾಜ್ಯಸರ್ಕಾರಕ್ಕೆ ಸೇರಿದ, ಅಥವಾ

ಆ) ಅವನ ಒಡೆತನದಲ್ಲಿರುವ ಒಂದು ರೆವಿನ್ಯೂ ನಿವೇಶನವಾಗಿರುವ ಅಥವಾ

ಇ) ಅವನಿಗೆ ಸೇರಿದ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 1976 ರ ಅಥವಾ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987ರ 17ನೇ ಪ್ರಕರಣದ ಅಡಿಯಲ್ಲಿ ಅಥವಾ ಕರ್ನಾಟಕ ಸುಧಾರಣಾ ಮಂಡಲಿಗಳ ಅಧಿನಿಯಮ 1976ರ 15ನೇ ಪ್ರಕರಣದ ಅಡಿಯಲ್ಲಿ ಒಂದು ಪ್ರಾಧಿಕಾರದ ಯಾವುದೇ ಅಭಿವೃದ್ಧಿ ಯೋಜನೆಯ ಸಂಬಂಧದಲ್ಲಿ ಅರ್ಜಿಸಬೇಕೆಂದು ಪ್ರಸ್ತಾವಿಸಲಾದ ಭೂಮಿಯ ಸಂಬಂಧದಲ್ಲಿ ಒಂದು ಅಧಿಸೂಚನೆಯನ್ನು ಪ್ರಕಟಿಸಲಾಗಿದ್ದು............

ಅಂದರೆ ನೋಟಿಫಿಕೇಷನ್ ಆಗಿರತಕ್ಕದ್ದು ಇಂಥ ವಿಚಾರದಲ್ಲಿ ಕೂಡ ರೆಗ್ಯುಲರೈಸ್ ಮಾಡಬೇಕೆಂದು ಈ ಒಂದು ಬಿಲ್ಲನ್ನು ನಾವು ತಂದಿದ್ದೇವೆ.

(ಶ್ರೀಮತಿ ಮೋಟಮ್ಮನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಇನ್ನು ಕೆಲವೊಂದಿದೆ, ಗ್ರೀನ್ ಬೆಲ್ಟ್ ಆಗಲಿ, ಟ್ಯಾಂಕ್‌ಬಂಡ್ ಆಗಲಿ ಅಥವಾ ರೈಲ್ವೆಗೆ ಬೇಕಾಗಿರುವ ಜಾಗವಾಗಲಿ, ಬೋರ್ಡ್ ಅರೇಂಜ್‌ಮೆಂಟ್ ಆಗಲಿ, ಫಾರೆಸ್ಟ್ ಜಾಗದಲ್ಲಿ ನಾವು ರೆಗ್ಯುಲರೈಸ್ ಮಾಡುವುದಕ್ಕೆ ಈ ಬಿಲ್ಲನ್ನು ತರುತ್ತಿಲ್ಲ, ಇನ್ನೊಂದು ಎರಡು ಅಂತಸ್ತಿಗಿಂತ ಹೆಚ್ಚಿರುವ ಹೈರೈಸ್ಡ್ ಬಿಲ್ಡಿಂಗ್ ನಾವು ರೆಗ್ಯುಲರೈಸ್ ಮಾಡುತ್ತಿಲ್ಲ. ಬಹುಶ: ಇದೊಂದು ಬಿಲ್ ಆಗದಿದ್ದರೆ ನಮ್ಮ ಯಾವನೀತಿ ಪ್ಲಾನ್ಡ್ ಆಗಿ ಇವತ್ತು ನಮ್ಮ ಟೌನ್ ಮತ್ತು ಸಿಟಿ ಬೆಳೆಯಬೇಕಾಗಿತ್ತೋ ಅದು ಆ ರೀತಿ ಬೆಳೆಯುತ್ತಿಲ್ಲ. ಮತ್ತೆ ನಮ್ಮ ನಗರ ಸಭೆಗಳಾಗಲಿ, ಪುರಸಭೆಗಳಗಾಗಲಿ ನಾವು ಸಾಕಷ್ಟು ಮೂಲ ಸೌಲಭ್ಯಗಳನ್ನು ಒದಗಿಸಿಕೊಡಬೇಕಾಗಿದೆ. ನಿಜವಾಗಿ ಅವರಿಗೆ ಏನೂ ಕಂದಾಯ ಬರುತ್ತಿಲ್ಲ. ಇವತ್ತು ಯಾವುದೇ ಪ್ರದೇಶಕ್ಕೆ ಹೋದರೂ ಸಹಿತ ನೀರಿಲ್ಲ, ಲೈಟಿಲ್ಲ, ದೀಪವಿಲ್ಲವೆಂದು ಹೇಳುತ್ತಾರೆ. ಹೊರಗಡೆಯಿಂದ ನೋಡಿದವರಿಗೆ ಲೇಔಟ್‌ಗಳಂತೆ ಕಾಣುತ್ತದೆ. ಅಲ್ಲಿಗೆ ಸಾಕಷ್ಟು ಹೆಲ್ತ್ ಡಿಪಾರ್ಟ್‌ಮೆಂಟ್‌ನಿಂದ ಸ್ವೀಪರ್ಸನ್ನು ಕಳುಹಿಸಲಿಕ್ಕೂ

ಸಹ ಸಾಧ್ಯವಾಗದಂಥ ಒಂದು ಪ್ರಸಂಗ ಬಂದಿದೆ. ಇವುಗಳೆಲ್ಲಾ ಅನ್‌ಆತರೈಸ್ಡ್ ಲೇಔಟ್‌ಗಳಾಗಿರುತ್ತವೆ.

ಇವುಗಳಿಂದ ನಮಗೆ ಆದಾಯವು ಬರುವುದಿಲ್ಲ, ಆದರೆ ಟೀಕೆಗಳು ಮಾತ್ರ ಸಾಕಷ್ಟು ಬರುತ್ತಿದೆ. ಆದ್ದರಿಂದ ಆದಷ್ಟು ಜಾಗ್ರತೆ ಇದನ್ನು ಸಕ್ರಮಗೊಳಿಸುವುದಿದ್ದರೆ ಬಹುಶ: ಯಾವುದೇ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಆಕ್ಟ್ ಇದೆ, ಅದರ ವಿರುದ್ಧವಾಗಿ ಇವತ್ತು ಹೋಗುವಂಥ ಪರಿಸ್ಥಿತಿ ಬಂದಿದೆ. ಮತ್ತೆ ನಾವು ಮಾನ್ಯ ದೇಶಪಾಂಡೆಯವರು ಹೇಳಿದ ಹಾಗೆ ಇವತ್ತು ಯಾವುದೇ ಒಂದು ದರವನ್ನು ಫಿಕ್ಸ್ ಮಾಡುವಾಗ ಅದರಲ್ಲಿರತಕ್ಕಂಥ ಪರಿಶಿಷ್ಟಜಾತಿ ಮತ್ತು ವರ್ಗದವರಿಗೆ ಸಾಕಷ್ಟು ಕನ್‌ಸೆಷನ್ ಕೊಡಬೇಕೆಂದು ನಾವು ಇದ್ದೇವೆ ಮತ್ತು ಯಾರು ಆರ್ಥಿಕವಾಗಿ ಎಕನಾಮಿಕಲಿ ವೀಕರ್‌ಸೆಕ್ಷನ್ ಇದ್ದಾರೆ ಅವರಿಗೆ ರಿಯಾಯಿತಿ ದರದಲ್ಲಿ ಕೊಡಬೇಕೆಂದರೆ ಒಂದು ಡೈಮೆನ್‌ಷನ್ ಅಂದರೆ ಅಷ್ಟು 30' x 40' ತನಕ ಕೊಡಬಹುದು ಮತ್ತೆ ದೊಡ್ಡ ದೊಡ್ಡದು ಅಂದರೆ ಯಾರು 50' x 40', 80' x 50' ಹೊಂದಿರುತ್ತಾರೆ. ಅವರು ನಿಜವಾಗಿಯೂ ಹಣ ಕೊಡಬೇಕಾಗುತ್ತದೆ. ಇವತ್ತು ಏನಾಗುತ್ತದೆ ನಾವು ಅದನ್ನು ರೆಗ್ಯುಲರೈಸ್ ಮಾಡಬಹುದು, ಆದರೆ ರೆಗ್ಯುಲರೈಸ್ ಮಾಡುವವರಿಗೆಲ್ಲಾ ನಾವು ಇವತ್ತು ಬೇಸಿಕ್ ಅಮಿನಿಟೀಸ್ ಕೊಡಬೇಕಾಗುತ್ತದೆ. ಅದಕ್ಕೆ ಸಾಕಷ್ಟು ದುಡ್ಡು ಬೇಕಾಗುತ್ತದೆ. ಇವತ್ತು ಫ್ರೀಯಾಗಿ ಯಾರಿಗೂ ಮಾಡಲಿಕ್ಕೆ ಆಗುವುದಿಲ್ಲ, ಆದರೂ ಸಮೇತ ಷೆಡ್ಯೂಲ್‌ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ನವರಿಗೆ ಎಕನಾಮಿಕಲಿ ವೀಕರ್‌ಸೆಕ್ಷನ್ ಇರುವವರಿಗೆ ಸಾಕಷ್ಟು ರಿಯಾಯಿತಿ ಕೊಡಬೇಕೆಂಬುದಾಗಿ ಈಗಾಗಲೇ ನಾವು ಆ ವಿಚಾರದಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಅದರ ವಿಚಾರದಲ್ಲಿ ತಮ್ಮ ಸಲಹೆಯನ್ನು ನಾವು ಸ್ವಾಗತ ಮಾಡುತ್ತೇನೆ. ಈ ವಿಚಾರ ಸುಮಾರು ೪-೫ ವರ್ಷದಿಂದ ಇದೊಂದು ಬಿಲ್ ಪೆಂಡಿಂಗ್ ಇತ್ತು. ನಾವು ಈ ಬಿಲ್ಲಿಗೆ ಹೊಸದಾಗಿ ಲಿಜಿಸ್ಲೇಷನ್ ತರದೇ ಇದ್ದರೆ ಸುಮಾರು ಹತ್ತು ಬಿಲ್‌ಗಳಿಗೆ ಇವತ್ತು ಅಮೆಂಡ್‌ಮೆಂಟ್ ತರಬೇಕಾದ ಅವಶ್ಯಕತೆ ಇತ್ತು. ಅದನ್ನು ಸಿಂಪ್ಲಿಫೈ ಮಾಡಲಿಕ್ಕೆ ಈ ಹೊಸ ಮಸೂದೆಯನ್ನು ತಂದಿದ್ದೇವೆ. ದಯವಿಟ್ಟು ಅದಕ್ಕೆ ತಮ್ಮ ಒಪ್ಪಿಗೆ ಮತ್ತು ಸಲಹೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : (ಹಳಿಯಾಳ) ಮಾನ್ಯ ಅಧ್ಯಕ್ಷಣೆಯವರೇ, ಈ ಮೂಲಕ ಒಂದು ಮಸೂದೆಯನ್ನು ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ತಂದಿದ್ದಾರೆ. ಅದಕ್ಕೆ ನಮ್ಮ ವಿರೋಧವಿಲ್ಲ, ನಮ್ಮ ಪಕ್ಷದ ವಿರೋಧ ಇಲ್ಲ, ನಮ್ಮ ಸರ್ಕಾರ ಇದ್ದಾಗ ನಾವು ಸಹ ಒಂದು ಪ್ರಾಮಾಣಿಕವಾದ ಪ್ರಯತ್ನದಿಂದ ಈ ಒಂದು ಮಸೂದೆಯನ್ನು ತರಬೇಕೆಂದು ಇದ್ದೆವು. ಈ ಸಮಸ್ಯೆ ಸಣ್ಣ ಸಣ್ಣ ಪಟ್ಟಣದಲ್ಲಿ ಅಷ್ಟು ಬರುವುದಿಲ್ಲವಾದರೂ ಬೆಂಗಳೂರು ಪಟ್ಟಣದಲ್ಲಿ ಬಹಳ ಜ್ವಲಂತ ಸಮಸ್ಯೆಯಾಗಿದೆ. ಆದ್ದರಿಂದ ಸಾಕಷ್ಟು ಪ್ರೆಷರ್ ಪ್ರತಿಯೊಂದು ಸರ್ಕಾರಕ್ಕೂ ರೆಗ್ಯುಲರೈಸ್ ಮಾಡಿ ಎಂದು ಬರುತ್ತಾ ಇದೆ. ಆದರೆ ನಾವು ಈ ಬಿಲ್ಲನ್ನು ತರಬೇಕಾದಂಥ ಒಂದು ವಿಚಾರ ಮಾಡಿದಾಗ ಆ ಸಮಯದಲ್ಲಿ ನಿಮ್ಮ ಅಧಿಕಾರಿಗಳು ಲಾ ಡಿಪಾರ್ಟ್‌ಮೆಂಟ್‌ನವರು ಬಹಳಷ್ಟು ಎನಾಕ್ಟ್‌ಮೆಂಟ್‌ಗೆ ನಾವು ಅಮೆಂಡ್‌ಮೆಂಟ್ ತರಬೇಕಾಗುತ್ತದೆ. ಅದು ಬೆಂಗಳೂರು ಡೆವಲಪ್‌ಮೆಂಟ್ ಅಥಾರಟಿ ಇರಬಹುದು, ಅರ್ಬನ್‌ಡೆವಲಪ್‌ಮೆಂಟ್ ಅಥಾರಟಿ ಇರಬಹುದು, ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಇರಬಹುದು. ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಇರಬಹುದು ಎಂದು ಹೇಳಿ ಈ ಮಸೂದೆ ಹಾಗೇ ನಿಂತಿತು. ಇವತ್ತು ಅದೇ ಲಾ ಡಿಪಾರ್ಟ್‌ಮೆಂಟ್ ಒಂದು 2- 3 ಕಾಯಿದೆಗೆ ಓವರ್ ಕಮ್ ಮಾಡಿ ಈ ಬಿಲ್ ಅನ್ನು ಇಂಟ್ರಡ್ಯೂಸ್

ಮಾಡಿದ್ದಾರೆ. ಬೆಂಗಳೂರು ಡೆವಲಪ್‌ಮೆಂಟ್ ಅಥಾರಟಿ, ಅರ್ಬನ್ ಡೆವಲಪ್‌ಮೆಂಟ್ ಅಥಾರಟಿ, ಕರ್ನಾಟಕ ಲ್ಯಾಂಡ್ ರೆವಿನ್ಯೂ ಆಕ್ಟ್‌ಗಳಿಗೆ . ಆದರೆ ಮಾನ್ಯ ಸಚಿವರ ಗಮನಕ್ಕೆ ನಾನು ಏನು ತರುತ್ತಿದ್ದೇನೆಂದರೆ ನಿಮ್ಮ ಇನ್‌ಟೆಷನ್ ಏನು ಇದೆ ಈ ಒಂದು ಬಿಲ್ ಮಸೂದೆ ಇವತ್ತು ಮನೆಯ ಸಹಕಾರದಿಂದ ಪಾಸ್ ಮಾಡಿಕೊಂಡು ಯಾವ ಬಡಜನ ಎಷ್ಟೋ ವರ್ಷದಿಂದ ಈ ಲ್ಯಾಂಡ್‌ನ್ನು ಎನ್‌ಕ್ರೋಚ್ ಮಾಡಿ ಅನ್ ಆತರೈಸ್ಡ್ ಕನ್‌ಸ್ಟ್ರಕ್ಷನ್ ಮಾಡಿದ್ದಾರೆ. ಅದನ್ನು ರೆಗ್ಯುಲರೈಸ್ ಮಾಡಬೇಕು. ಇದು ನಿಮ್ಮ ಉದ್ದೇಶ. ಈ ಉದ್ದೇಶ ಸಫಲವಾಗಬೇಕಾದರೆ, ಈ ಬಿಲ್‌ನಿಂದ ಆಗಲಿಕ್ಕೆ ಸಾಧ್ಯವಾಗುವುದಿಲ್ಲವೆಂದು ನನ್ನ ಪ್ರಾಮಾಣಿಕ ಅನಿಸಿಕೆ. ನಾನು ಮುಂದೆಲ್ಲಾ ಹೇಳುವುದಕ್ಕಿಂತ ಮುಂಚೆ ತಮ್ಮಲ್ಲಿ ನಾನು ವಿನಂತಿಕೊಳ್ಳುತ್ತಿದ್ದೇನೆ. ಈ ಬಿಲ್ಲನ್ನು ಈ ಫಾರಮ್‌ನಲ್ಲಿ ತಾವು ತೆಗೆದುಕೊಂಡು ಹೋದರೆ ಕೇವಲ ಯಾರು ಗೌವರ್ನಮೆಂಟ್ ಲ್ಯಾಂಡ್ ಮೇಲೆ ಯಾರು ಮನೆಗಳನ್ನು ಕಟ್ಟಿದ್ದಾರೆ. ಅಷ್ಟೇ ತಾವು ರೆಗ್ಯುಲರೈಸ್ ಮಾಡಬಹುದು. ಅಗ್ರಿಕಲ್ಚರ್ ಲ್ಯಾಂಡ್‌ಮೇಲೆ ಯಾರು ಮಾಡಿದ್ದಾರೋ ಅದನ್ನು ಮಾಡಲಿಕ್ಕೆ ಆಗುವುದಿಲ್ಲ. ಅಗ್ರಿಕಲ್ಚರ್ ಲ್ಯಾಂಡ್ ಮೇಲೆ ಯಾರು ಮನೆ ಕಟ್ಟಿದ್ದಾರೆ. ಅನ್ನು ರೆಗ್ಯುಲರೈಸ್ ಮಾಡುವುದಕ್ಕಾಗುವುದಿಲ್ಲ. ಪ್ರೈವೇಟ್ ಲ್ಯಾಂಡ್ ಮೇಲೆ ಯಾರು ಮನೆ ಕಟ್ಟಿದ್ದಾರೆ ಅದನ್ನು ರೆಗ್ಯುಲರೈಸ್ ಮಾಡುವುದಕ್ಕಾಗುವುದಿಲ್ಲ. ಬೆಂಗಳೂರು, ಬೆಳಗಾಂ, ಗುಲ್ಬರ್ಗಾ, ಮೈಸೂರು, ಮಂಗಳೂರಿನಂಥ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಅರ್ಬನ್ ಸೀಲಿಂಗ್ ಆ್ಯಕ್ಟ್ ಜಾರಿಯಲ್ಲಿದೆ. ಅಂಥ ಕಡೆ ಈ ಬಿಲ್ ಅನ್ನು ಇಂಪ್ಲಿಮೆಂಟ್ ಮಾಡುವುದಕ್ಕಾಗುವುದಿಲ್ಲ. ಹಾಗಾದರೆ ಈ ಬಿಲ್ಲಿನ ಉಪಯೋಗ ಏನು? ಏತಕ್ಕೆ ಇದನ್ನು ಮಾಡುತ್ತೀರಿ?

ಶ್ರೀ ಕೆ.ಹೆಚ್. ರಂಗನಾಥ್ : ಸರ್ಕಾರದ ಭೂಮಿ ಇಲ್ಲ, ಖಾಸಗಿ ಭೂಮಿ ಇಲ್ಲ ಅಂದ್ರೆಲ್ಲಾ ದಯವಿಟ್ಟು ಸಬ್‌ಕ್ಲಾಸ್ (೩)ನ್ನು ನೋಡಿ, ಅದರಲ್ಲಿ ಎಲ್ಲಾ ಇದೆ: You go through sub-clause (iii) - "land belonging to him which is proposed to be acquired in connection with any development scheme of an authority."

ಶ್ರೀ ಆರ್.ವಿ. ದೇಶಪಾಂಡೆ : ತಾವು ಏನು ಹೇಳಿದಿರಿ ಅದು ಮುಂದೆ ಬರುತ್ತದೆ. ಕ್ಲಾಸ್ ೪ರಲ್ಲಿ ಏನಿದೆ ಎಂದರೆ, Unauthorised constructions shall not be regularised. ಅದರಲ್ಲಿ ಏನು ಬರೆದಿರಿ - unauthorised constructions made in violation of Urban Land Ceiling Act. ಇದು ಬರುವುದಿಲ್ಲವೆಂದು ಬರೆದಿರಿ. ಕ್ಲಾಸ್-೪ ಮತ್ತು ಸಬ್‌ಕ್ಲಾಸ್-೭ ಏನಿದೆ, ಇದು ಸರಿ. ಹಾಗಾದರೆ ಈ ಅರ್ಬನ್ ಲ್ಯಾಂಡ್ ಎನಾಕ್ಟ್‌ಮೆಂಟ್ ಏನಿದೆ ಇದು ನಮ್ಮದು ಅಲ್ಲ, ನಿಮ್ಮದೂ ಅಲ್ಲ, ಅದು ಸೆಂಟ್ರಲ್ ಗವರ್ನಮೆಂಟ್‌ನ ಎನಾಕ್ಟ್‌ಮೆಂಟ್. ಯಾವ ಒಬ್ಬ ವ್ಯಕ್ತಿ ಅಥವಾ ಅಸೋಸಿಯೇಷನ್ ಈ ಆಕ್ಟನ್ನು ಉಲ್ಲಂಘನೆ ಮಾಡಿದ್ದರೆ ಅವನು ಕಟ್ಟಿದ ಕಟ್ಟಡವನ್ನು ರೆಗ್ಯುಲರೈಸ್ ಮಾಡುವುದಕ್ಕೆ ಬರುವುದಿಲ್ಲವೆಂದು ತಾವೇ ಒಪ್ಪಿಕೊಂಡಿರಿ. ಹಾಗಾದರೆ ಯಾವ ಲ್ಯಾಂಡನ್ನು ರೆಗ್ಯುಲರೈಸ್ ಮಾಡುತ್ತೀರಿ ಬೆಂಗಳೂರಿನಲ್ಲಿ? ಗವರ್ನಮೆಂಟ್ ಲ್ಯಾಂಡನ್ನು ಒಂದು ಕಡೆ ಬಿಡಿ. ಬೆಂಗಳೂರು, ಹುಬ್ಬಳ್ಳಿ, ಧಾರವಾಡ, ಮೈಸೂರು, ಮಂಗಳೂರಿನಲ್ಲೆಲ್ಲಾ ಅರ್ಬನ್ ಸೀಲಿಂಗ್ ಆಕ್ಟ್ ಜಾರಿಯಲ್ಲಿದೆ. ಮತ್ತೊಂದು ಪಾಯಿಂಟ್ ಹೇಳಿದಿರಿ,

"Unauthorised constructions made by any person on the lands belonging to any person over which former has no right."

ಅಂದರೆ ಒಂದು ಕಡೆ ತಾವು ಹೇಳಿದಿರಿ ಯಾರು ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಉಲ್ಲಂಘನೆ ಮಾಡಿದ್ದರೆ ರೆಗ್ಯುಲರೈಸ್ ಮಾಡುವುದಿಲ್ಲ ಎಂದು, ಅದು ಸರಿ. Your stand is currect. Suppose a land is of 'A' and 'B' has unauthorisedly constructed there that also will not be regularised, very good. ಆದರೆ ನಾನು ಏನು ಕೇಳುತ್ತೇನೆಂದರೆ, a person who is having lands in Bangalore, ಅಂತಹ ಕೇಸ್‌ಗಳನ್ನು ಏನು ಮಾಡುತ್ತೀರಿ? ಈವತ್ತು ೧೦-೨೦ ಎಕರೆ ಲ್ಯಾಂಡ್ ಇಟ್ಟುಕೊಂಡಿದ್ದಾರೆ. He has a Title. What has he done? To overcome the Land Reforms Act, he has made revenue sites. ರೆವಿನ್ಯೂ ಸೈಟ್ಸ್ ಮಾಡಿದ್ದಾರೆ. ಲಾಪುಲಿ ಬಡವ, ಮಿಡಲ್ ಕ್ಲಾಸ್‌ನವ, ಪರ್ಚೇಸ್ ಮಾಡಿದ್ದಾನೆ. ರಿಜಿಸ್ಟರ್ಡ್ ಸ್ಟ್ಯಾಂಪ್ ಕೂಡ ಆಗಿದೆ. ಹಾಗಾದರೆ he has made contravention of Urban Land Ceiling Act.

ಎರಡನೆಯದು ಏನೆಂದರೆ, the person who has unauthorisedly constructed there is with the permission of the owner only. He has no title. ಆ ಲ್ಯಾಂಡನ್ನು ಹೇಗೆ ರೆಗ್ಯುಲರೈಸ್ ಮಾಡುತ್ತೀರಿ? ಅಂಥ ಕೇಸಸ್ ಬಹಳ ಇವೆ. ಹಾಗಾಗಿ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್‌ಗೆ ಕೇಂದ್ರ ಸರ್ಕಾರ ತಿದ್ದುಪಡಿ ತರದಿದ್ದರೆ ನಿಮಗೆ ಸರಿಯಾಗಿ ಇಂಪ್ಲಿಮೆಂಟ್ ಮಾಡುವುದಕ್ಕಾಗುವುದಿಲ್ಲ, ಆ ಅಭಿಪ್ರಾಯವನ್ನು ಲಾ ಡಿಪಾರ್ಟ್‌ಮೆಂಟ್ ನಮಗೆ ಕೊಟ್ಟಿತ್ತು. Till the Urban Land Ceiling Act isamendedbytheGovernmentofIndiaನೀವು ಇಂಪ್ಲಿಮೆಂಟ್ ಮಾಡುವುದಕ್ಕಾಗುವುದಿಲ್ಲವೆಂದು ನಮಗೆ ಅಭಿಪ್ರಾಯ ಕೊಟ್ಟಿತ್ತು. ನಾನು ಹೇಳುತ್ತಿದ್ದೇನೆ, ಸರ್ಕಾರಿ ಲ್ಯಾಂಡ್‌ನಿಂದ ಏನು ತೊಂದರೆ ಇಲ್ಲ, ಮಾಡಿಸಿ. ಆದರೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಏನು ಸಮಸ್ಯೆ ಇದೆ ಅಲ್ಲಿ most of the areas are coming under the Urban Land Ceiling Act.

ಈ ಲ್ಯಾಂಡ್‌ನಲ್ಲಿ ಈ ಎಲ್ಲಾ ಎನ್‌ಕ್ರೋಚ್‌ಮೆಂಟ್ ಆಗಿದೆ. ಅನ್‌ಆಥರೈಸ್ಡ್ ಕನ್‌ಸ್ಟ್ರಕ್ಷನ್ ಆಗಿದೆ. ಕೈತೋಟ ಮಾಡಿದ್ದಾರೆ. ೪(೧) ನೋಟಿಫಿಕೇಷನ್ ಆದ ತಕ್ಷಣ ಹತ್ತು ಗುಡಿಸಲು ಹಾಕುತ್ತಾರೆ. ಹತ್ತು ವರ್ಷಗಳಿಂದ ಗುಡಿಸಲು ಇದೆ ಎಂದು, they go to court. They are doing it. Therefore, all those cases are coming to you now. All these cases will come up before the Screening Committee. There are persons who are staying on such unauthorised constructions for the last 10-20 years by constructing houses, huts etc. In such cases , your hands will be tied. You cannot regularise because the original owner has made contravention of the Urban Land Ceiling Act.

ajority of the cases fall under this category. What is the benefit of this legislation? That is why I am suggesting that this bill has to go before the Joint Select Committee if you want to have a thorough examination of this. You will also have to approach the Government of India for the amendment of Urban Land Ceiling Act since under that Act, you have no power to overcome it. No legislation can overcome the Urban Land Ceiling Act. You have left it out. My submission is, your intention is to regularise these unauthorised constructions but it is impracticable. Let us know what we are

doing. If your intention is to implement this legislation and benefit the poor people, who are waiting at your doors for the last 10-15 years, then, I think, this legislation will not help. Those who have contravened the Urban Land Ceiling Act, all those unauthorised constructions round about Bangalore, Mysore, Belgaum have come up in violation of Urban Land Ceiling Act..

No doubt, the present occupant has not made violation but the original owner has done it. The original owner who has filed the declaration was supposed to surrender the land to the Government under the Act. Actually he has distributed lands to few people and some huts or houses have come up. You cannot take into consideration the persons who are occupying the land. You have to see the original owner of the land who has made contravention. If he has made contravention, then naturally, the present occupant has no title.

SRI K.H. RANGANATH : Any regularisation under clause-3 is subject to clause-4, sub-clause (vii). Therefore, if construction has come up there on such lands, I don't think that he could get it regularised.

SRI R.V. DESHPANDE : I am saying the same point. The Government in drafting the Bill has rightly put clause-7. But what is the intention of the Government or the opposition sitting here - to help the poor people who have constructed houses, huts on such lands unauthorisedly. The legislation will not work in the present form. As far as the State Government lands are concerned, there is no problem. But, as far as private lands are concerned situated in Mangalore, Bangalore, Mysore, Belgaum, Gulbarga etc., they come under the Urban Land Ceiling Act. The original owners have made contravention of the Urban Land Ceiling Act and on these lands thousands of unauthorised construeions have come up. Naturally, the present occupant of the land has no ritle over the land. Therefore, he will not get anything. The screening committee will have to reject all applications. If the Government's intention is really to help these poor people, then this Bill has to be referred to the Joint Select Committee for through examination.

You will have to approach the Central Government also for the amendment of the Urban Ceiling Act saying that if the original owner also has owner committed the breach and if the poor people have constructed houses, there should be exemption to that.

ಶ್ರೀ ಕೆ.ಹೆಚ್. ರಂಗನಾಥ್ : ಸ್ಪಷ್ಟವಾಗಿ ಹೇಳಿಲ್ಲ. ಅರ್ಬನ್ ಲ್ಯಾಂಡ್ ಸೀಲಿಂಗ್‌ನಲ್ಲಿ ಅವನು ಜಮೀನು ಕಳೆದುಕೊಳ್ಳುತ್ತಾನೆಂದು ಹೇಳಿ ಅಲ್ಲಿ ಮನೆ ಕಟ್ಟುವುದಕ್ಕೆ ಅಥವಾ ಮಾರಾಟ ಮಾಡಿದ್ದರೆ ಅವನ ಮನೆಯನ್ನು ರೆಗ್ಯುಲರೈಸ್

ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದೀರಿ. because regularisation is subject to clause 4, sub-clause (vii) ಅಲ್ಲವೇ? ಮತ್ತೆ ತಾವು ಏನು ಹೇಳುತ್ತಿದ್ದೀರಿ? ಬಡವರಿಗೆ ಅನ್ಯಾಯವಾಗುತ್ತದೆಂದು ಹೇಳುತ್ತಿದ್ದೀರಿ. ಈಗ ಏನು ಆಗಬೇಕು? ಸೀಲಿಂಗ್ ಆಕ್ಟ್‌ನಲ್ಲಿಯಾದರೆ ಸರ್ಕಾರಕ್ಕೆ ಬರುತ್ತದೆ. ಸರ್ಕಾರ if he is really a poor man, it can re-convey the site to him.

ವಿಚಾರ ಮಾಡಬಹುದು. ತಾವು ಖಾಯಂ ಮಾಡಿ ಎಂದರೆ ಇದರ ಪ್ರಕಾರ ಅವನು ದುಡ್ಡು ಕೊಡಬೇಕಾಗುತ್ತದೆ. ತಪ್ಪು ಮಾಡುವವರು ಕಣ್ಣುಬಿಟ್ಟುಕೊಂಡು ತಪ್ಪು ಮಾಡಿದರೆ ನ್ಯಾಯ ಹೇಗೆ ದೊರೆಯುತ್ತದೆ? ಕೊಂಡುಕೊಳ್ಳುವವನು ಇನ್ನೋಸೆಂಟ್ ಇದ್ದಾನೆ, ಕೊಂಡುಕೊಂಡಿದ್ದಾನೆ. ಎಲ್ಲಾ ಆಗಿದೆ. What is the way out? You please suggest.

SRI R.V. DESHPANDE : When I was the Minister and wanted to introduce this bill, the very Officers who advised the Minister now, came up with the plea that the Urban Ceiling Act is coming in the way. So, rightly you have said that under clause-4, sub-clause (vii), those who have made contravention of the Urban Land Ceiling Act will not be regularised. What I am telling is that out of 1000 un-authorised constructions, in Belgaum, 999 are on the lands which come under the Urban Ceiling Act. Yes, it is a fact.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ದೇಶಪಾಂಡೆಯವರು ಒಂದು ಮಾತನ್ನು ಹೇಳುತ್ತಿದ್ದಾರೆ. ಇವತ್ತು ಯುಎಲ್‌ಸಿ ಆಕ್ಟ್ ಸೆಂಟ್ರಲ್ ಗೌರ್ನಮೆಂಟ್ ಆಕ್ಟ್ ಇದೆ, ಅದನ್ನು ವಯಲೇಟ್ ಮಾಡುವುದಕ್ಕೆ ನಾವು ಇಲ್ಲಿ ತಿದ್ದುಪಡಿ ತಂದರೆ ಅದು ಆಗುವುದಿಲ್ಲ. ಆದರೆ ಮಾನ್ಯ ದೇಶಪಾಂಡೆಯವರು ೧೦೦೦ದಲ್ಲಿ ಕೇಸಸ್ ೯೯೯ ವೆಂದು ಏನು ಹೇಳುತ್ತಿದ್ದಾರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಇವತ್ತು ನನಗೂ ಗೊತ್ತಿದೆ. ಬೆಂಗಳೂರಿನಲ್ಲಿ - ಸಾಕಷ್ಟು ಕೇಸ್‌ಗಳಲ್ಲಿ ಏನಾಗಿದೆ ಎಂದರೆ ಗೌರ್ನಮೆಂಟ್ ಲ್ಯಾಂಡ್, ಬಿಡಿಎ ನೋಟಿಫೈಡ್ ಲ್ಯಾಂಡ್, ಇದು ಬೇರೆ ಕಡೆ ಇಂತಹದ್ದು ಆಗಿದೆ. ಇವತ್ತು ಸೆಂಟ್ರಲ್ ಗೌರ್ನಮೆಂಟ್‌ನವರು ಯುಎಲ್‌ಸಿ ಆಕ್ಟ್‌ಗೆ ಅಮೆಂಡ್‌ಮೆಂಟ್ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದನ್ನು ನಾವು ಈಗ ಸ್ಟಾರ್ಟ್ ಮಾಡೋಣ. ಈ ಆಕ್ಟ್ ಪ್ರಕಾರ ಎಷ್ಟು ಮಾಡುವುದಕ್ಕೆ ಆಗುತ್ತದೆ ಎಷ್ಟು ಉಳಿಯುತ್ತದೆ ಎಂದು ನಮಗೆ ಗೊತ್ತಾಗುತ್ತದೆ. ಉಳಿದದ್ದರ ಬಗ್ಗೆ ಸೆಂಟ್ರಲ್ ಗೌರ್ನಮೆಂಟ್ ಜೊತೆ ಕುಳಿತು ಒಂದು ಸಲ್ಯೂಷನ್ ಮಾಡಬೇಕೇ ಹೊರತು ಈಗ ತಾವು ಹೇಳಿದ ಪ್ರಕಾರ ಜಾಯಿಂಟ್ ಸೆಲೆಕ್ಟ್ ಕಮಿಟಿ ಎಂದರೆ ಅದರಿಂದ ಆಗುವುದಿಲ್ಲ. ಪರಿಹಾರವನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿ ಕಂಡುಹಿಡಿಯುವುದಕ್ಕಾಗುವುದಿಲ್ಲ. ಈ ಆಕ್ಟ್‌ನಿಂದ ಎಷ್ಟು ಮಾಡುವುದಕ್ಕಾಗುತ್ತದೋ ಅಷ್ಟು ಮಾಡಬೇಕಾಗುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ : ಜಾಯಿಂಟ್ ಸೆಲೆಕ್ಟ್ ಕಮಿಟಿ ಬಗ್ಗೆ ನಾನು ಏಕೆ ಹೇಳಿದೆ? I first said that the Urban Ceiling Act is a Central Enactment and we have no right to amend it. It is the Central Government which has to amend it and we have to approach them. What I have said was, for a thorough examination as to how this bill should come and in what form. ಅಷ್ಟಕ್ಕೆ ನಾನು ಹೇಳಿದೆ. I know the Joint Select Committee cannot do anything under the Central legislation.

ಆದುದರಿಂದ ನಾನು ಏನು ಹೇಳುತ್ತಿದ್ದೇನೆಂದರೆ, ನಿಮ್ಮ ಇಂಟೆನ್‌ಷನ್ ಏನಿದೆ ಅದು ಫುಲ್‌ಫಿಲ್ ಆಗುವುದಿಲ್ಲ. ಎಲ್ಲರಿಗೂ ಸಹಾಯ ಮಾಡುವುದಕ್ಕಾಗುವುದಿಲ್ಲ. I am suggesting, all those original owners of the land who are no more owners now, ಖಾತಾ ಗೀತಾ ಎಲ್ಲಾ ಛೇಂಜ್ ಮಾಡಿದ್ದಾರೆ, ೧೯೭೬ರ ರೆಕಾರ್ಡ್ಸ್ ತೆಗೆದರೆ ಎಕ್ಸ್ "X" is the owner. But by lapse of time, they have taken undue advantage and they have made breach of the Urban Land Ceiling Act and some names are in the Khata but now you cannot see those names in the Khata. You have to go through the original title. A person who has no title cannot pass any title. Your intentions are good, but they cannot be implemented. That is my submission. Secondly, you said, the B.D.A., or the Urban Development Authority will issue Notification under section 4 (1) and you want to regularise all those lands and unauthorised constructions if there are. You tell me, till the final notification is done, and till the entire money is paid, neither the B.D.A., nor the Urban Development Authority is the owner of the land. Even when there is 4(1) Notification, who is the owner? The owner is the person whose name is in the Pahani or in the Record of Rights. Suppose that fellow, comes under the Land Reforms Act; how are you going to overcome? There is no provision here. You have said with regard to Clause 4, there is nothing so far as the Land reforms act is concerned. There are various persons who have made the breach of the Land Reforms Act and constructed un-authorised houses on various agricultural lands. How are you going to regularise those cases? You are mum on this. There is no amendment proposed to the Land Reforms Act or you do not want to over--ride any of the provisions of the Land Reforms Act.

There is nothing in the provision. Please enlighten me. Suppose a person has made the breach of the Land Reforms Act, how are you going to regularise? I am giving an example. Suppose, I have "A" class lands in Bangalore, and suppose I own 10 acres of land and another 15 acres of land and if I have already sold 15 acres of land; 5 acres should have come to the Government. How are you going to regularise those cases? The B.D.A., might have issued 4(1) Notification and the Urban Development Authority might have done something else. But there is already a breach of the provisions of the Urban Ceiling Act. So, anything which is irregular, anything which has no legal sanctity, the Government will not be able to do anything, because these things will be struck down by the High Court.

If somebody challenges this act, it will be struck down by the High Court. So, I am very honestly telling the Minister that there will be breach

of the Land Reforms Act, there will be breach of the Urban Land Ceiling Act which you will not be able to overcome. You have stated that you want to regularise the house which is unauthorisedly constructed. What about the vacant land? Suppose a person has constructed a small house of 10'x10' in a land of 20 guntas, what about that land? Are you going to take over or are you going to give it to him? The act is silent about that.

SRI H. EKANATHAIAH : Under the Urban Land Ceiling Act, what is the vacant land?

ಪರಿಮಿತಿಗಿಂತ ಹೆಚ್ಚಾಗಿ ಭೂಮಿ ಇದ್ದರೂ ಸಹ ಅದರಲ್ಲಿ ಅಕ್ರಮವಾಗಿ ಕಟ್ಟಡವನ್ನು ಕಟ್ಟಿದ್ದರೆ ಅದು ಅರ್ಬನ್ ಲ್ಯಾಂಡ್ ಸೀಲಿಂಗ್ ವ್ಯಾಪ್ತಿಗೆ ಬರುವುದಿಲ್ಲ. ವೇಕೆಂಟ್ ಲ್ಯಾಂಡ್ ಇದ್ದರೆ ಮಾತ್ರ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್‌ಗೆ ಬರುತ್ತದೆ. ಅನ್‌ಆಥರೈಸ್ಡ್ ಆಗಿ ದೊಡ್ಡ ದೊಡ್ಡ ಆಸ್ಪತ್ರೆಗಳನ್ನು ಕಟ್ಟಿದ್ದಾರೆ ಅದು ಬರುತ್ತದೆಯೇ? ಆಗ ಏನು ಮಾಡುತ್ತೀರಿ? There are so many other points. It is neither come under the Urban land nor in a vacant land, but it is an un-authorised construction. What provision of law does it attract?

ಶ್ರೀ ಆರ್.ವಿ. ದೇಶಪಾಂಡೆ : ನಾನು ಏನು ಹೇಳುತ್ತಿದ್ದೇನೆಂದರೆ, ತಾವು ನನಗೆ ಹೇಳಿ. ಈಗ ನಾನು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ಮನೆ ರೆಗ್ಯುಲರೈಸ್ ಮಾಡಬೇಕು ಸಂತೋಷ, ಮಾಡಿ. ಮನೆಯನ್ನು 100x100 ರಲ್ಲಿ ಕಟ್ಟಿರುತ್ತಾರೆ. ೨೦ಗುಂಟೆ ಭೂಮಿಯಲ್ಲಿ ಮನೆ ಕಟ್ಟಿರುತ್ತಾರೆ. ಆಗ ಏನು ಮಾಡುತ್ತೀರಿ?

you tell me, are you going to regularise that land also? Suppose your intention is that you do not want to regularise because he is taking undue advantage of it, what is there in the Act? There is nothing. You should have specifically stated that you will regularise the houses of a particular plinth level; if your intention is only to help a poor man, the common man. It is not there. You have said, "un-authorised constructions having more than two floors including ground floor." ಮಾನ್ಯ ಕಾಗೋಡು ತಿಮ್ಮಪ್ಪನವರೇ ಕೇಳಿ. ತಾವೇನು ಮಾಡಿದ್ದೀರಿ ಅಂದರೆ ರೆಗ್ಯುಲರೈಸ್ ಮಾಡಬೇಕೆಂದು ಇದ್ದೀರಿ. ನೀವು ಅದರ ಬಗ್ಗೆ ಚಿಂತನೆ ಮಾಡುತ್ತಿದ್ದೀರಿ. ಬಡವರ ಪರ ಸರ್ಕಾರವೆಂದು ಹೇಳುತ್ತೀರಿ.

ಶ್ರೀ ಹೆಚ್. ಏಕಾಂತಯ್ಯ : ನೀವು ಅದನ್ನೇ ಆಲೋಚನೆ ಮಾಡುತ್ತಿರಬಹುದು, ಆ ತರಹ ಹೇಳಿದ್ದೀರಿ. ಇಂತಹ ಅನೇಕ ವಿಚಾರಗಳು ಇರುವುದರಿಂದ ಇದರ ಬಗ್ಗೆ ಅವಸರವಾಗಿ ನೀವು ಕಾನೂನನ್ನು ಜಾರಿಗೆ ಮಾಡುವುದು ಬೇಡ. ಇದರ ಬಗ್ಗೆ ತಾವು ಆಲೋಚನೆ ಮಾಡಿ. ಇದರ ಬಗ್ಗೆ ನಮ್ಮದು ಎರಡನೆಯ ಅಭಿಪ್ರಾಯವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ತಾವು ಹೇಳುವ ಪ್ರಕಾರ, ಭೂಸುಧಾರಣೆಯ ಕಾನೂನು ಪ್ರಕಾರ ಜಮೀನು ಯಾರಿಗೆ ಖಾತೆಯಾಗಿದೆ ಆ ಜಮೀನಿನಲ್ಲಿ ಮನೆ

ಕಟ್ಟಿಕೊಂಡರೆ ಇದು ಬರುವುದಿಲ್ಲ. ಇದು ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ವಿಶೇಷವಾಗಿದೆ. ಅದೊಂದು ಭಾಗ ಇದರಲ್ಲಿ ಸೇರಿಸಬಹುದು. ಅರ್ಬನ್ ಲ್ಯಾಂಡ್ ಸೀಲಿಂಗ್ ಮಿತಿಯೊಳಗೆ ಇದ್ದರೆ ಆಗ ಅದು ಬರುವುದಿಲ್ಲ. ಅರ್ಬನ್‌ಗಿಂತ ಸೀಲಿಂಗ್ ಎಕ್ಸಸ್ ಇದ್ದರೆ ಡಿಕ್ಲೇರ್ ಮಾಡುವವರು ಯಾರು? ಸೆಂಟ್ರಲ್ ಗೌರ್ನಮೆಂಟ್ ಆಕ್ಟ್ ಪ್ರಕಾರವೇ ದೂಡಬೇಕಾಗುತ್ತದೆ. ಒಂದು ವೇಳೆ ಎಕ್ಸಸ್ ಲ್ಯಾಂಡ್ ಅವನ ಹೋಲ್ಡಿಂಗ್ ಬೇಸಿಸ್ ಮೇಲೆ ಅರ್ಬನ್ ಸೀಲಿಂಗ್ ಆಕ್ಟ್ ಪ್ರಕಾರ ಎಕ್ಸಸ್ ಅಂತ ಡಿಕ್ಲೇರ್ ಆದರೆ, ಅದು ಗೌರ್ನಮೆಂಟ್‌ಗೆ ವೇಸ್ಟ್ ಆಗಿಬಿಡುತ್ತದೆ. ಗೌರ್ನಮೆಂಟ್‌ಗೆ ವೇಸ್ಟ್ ಆದರೆ automatically under the normal circumstances we can regularise those sites.

ಅದಕ್ಕಾಗಿ ನಾನು ಏನು ಹೇಳುತ್ತಿದ್ದೇನೆ ಎಂದರೆ the most important thing you have pointed out is under the Land Reforms Act. ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಇದು ಬಹಳ ವರ್ಷಗಳಿಂದ ಕೊಳೆಯುತ್ತಿದೆ. ಎಷ್ಟು ಜನರಿಗೆ ಅನುಕೂಲ ಕೊಡುವುದಕ್ಕೆ ಸಾಧ್ಯವಾಗುತ್ತದೆ ಅಷ್ಟು ಕೊಡೋಣ. ತಾವು ತರುವುದಕ್ಕೆ ಪ್ರಯತ್ನ ಪಟ್ಟಿರಿ, ಆಗಲಿಲ್ಲ. ನಾವು ಎರಡು ವರ್ಷ ಕಾಲ ಕಳೆದೆವು. ಆಗಲಿಲ್ಲ. ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿ ಕರೆದು ಮಾಡಬೇಕು ಎಂದರೆ.......

ಶ್ರೀ ಹೆಚ್. ಏಕಾಂತಯ್ಯ : ನಾವು ಸ್ಪಷ್ಟವಾಗಿ ತಿಳಿಸಬಯಸುತ್ತೇವೆ. ಈಗ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಪ್ರಕಾರ which is the vacant land? You please see the definition. What is the urbanised land what is urban land and what is the vacant land? ಒಂದು ಪಕ್ಷ ಅನಧಿಕೃತವಾಗಿ ಭೂಮಿಯಲ್ಲಿ ಕಟ್ಟಡ ಕಟ್ಟಿದ್ದರೆ, ಎಲ್ಲೆಲ್ಲಿ ಬಿಲ್ಡಿಂಗ್‌ಗಳು ಇವೆ; it does not come under the provisions of the Urban Land Ceiling Act. ಅನಧಿಕೃತವಾಗಿ ಕಟ್ಟಡಗಳನ್ನು ಅಕ್ರಮವಾಗಿ ಕಟ್ಟಿದ್ದರೆ ಅದು ವೇಕೆಂಟ್ ಲ್ಯಾಂಡ್ ಆಗುವುದಿಲ್ಲ. ವೇಕೆಂಟ್ ಲ್ಯಾಂಡ್ ಆಗುವುದಿಲ್ಲ ಎಂದು ತಾವು ಒಂದು ಸಲ ತೀರ್ಮಾನ ಮಾಡಿದ್ದೇ ಆದರೆ ಖಂಡಿತವಾಗಿಯೂ ಸಹ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ವ್ಯಾಪ್ತಿಯಲ್ಲಿ ಅದು ಬರುವುದಿಲ್ಲ.

ಶ್ರೀ ಕೆ.ಜೆ. ಜಾರ್ಜ್ : ಅರ್ಬನ್ ಲ್ಯಾಂಡ್ ಸೀಲಿಂಗ್‌ನ್ನು ನಾವು ವಯಲೇಟ್ ಮಾಡಬಾರದು ಅಂತ ನಾವು ಇದನ್ನು ಮಾಡಿದ್ದು. ಅಲ್ಲಿ ಒಂದು ಸ್ಕ್ರೀನಿಂಗ್ ಕಮಿಟಿ ಮಾಡಿದ್ದೇವೆ. The Screening Committee will decide whether they are going to violate the Urban Land Ceiling Act or not.

ತಮ್ಮ ಪ್ರಕಾರ ಬಿಲ್ಡಿಂಗ್ ಇದ್ದುಬಿಟ್ಟು ಅರ್ಬನ್ ಲ್ಯಾಂಡ್ ಸೀಲಿಂಗ್ ವಯಲೇಟ್ ಆಗದಿದ್ದರೆ ಮತ್ತೆ ರೆಗ್ಯುಲರೈಸ್ ಮಾಡಬಹುದಲ್ಲಾ?

ಶ್ರೀ ಆರ್.ಎಲ್. ಜಾಲಪ್ಪ : ನಿಮ್ಮ ಆಕ್ಟ್ ಪ್ರಕಾರ ಸ್ಕ್ರೀನಿಂಗ್ ಕಮಿಟಿ ಮಾಡುತ್ತೀರಿ ವಿನಃ ಆಕ್ಟ್ ಬಿಟ್ಟು ಸ್ಕ್ರೀನಿಂಗ್ ಕಮಿಟಿಯವರು ಏನು ಸಜೆಸ್ಟ್ ಮಾಡುವುದಕ್ಕೂ ಆಗುವುದಿಲ್ಲ. ಆಕ್ಟ್‌ನಲ್ಲಿ there are lapses.

(interruptions)

ಶ್ರೀ ಕೆ.ಜೆ. ಜಾರ್ಜ್ : ಆಕ್ಟ್‌ನಲ್ಲಿ ಲ್ಯಾಪ್ಸ್‌ಸ್ ಇದೆ ಎಂದು ಶ್ರೀ ದೇಶಪಾಂಡೆಯವರು ಹೇಳುತ್ತಿಲ್ಲ. ಶ್ರೀ ದೇಶಪಾಂಡೆಯವರು ಏನು ಹೇಳುತ್ತಿದ್ದಾರೆ ಎಂದರೆ ಎಲ್ಲರಿಗೂ ನೀವು ರೆಗ್ಯುಲರೈಸ್ ಮಾಡುವುದಕ್ಕೆ ಆಗುವುದಿಲ್ಲ. ಅರ್ಬನ್

ಲ್ಯಾಂಡ್ ಸೀಲಿಂಗ್ ಆಕ್ಟನ್ನು ವಯಲೇಟ್ ಮಾಡಿದವರಿಗೆ ಮಾಡಬಾರದು ಅಂತ ಆಕ್ಟ್‌ನಲ್ಲಿದೆ. ಆದರಿಂದ ಎಲ್ಲರಿಗೂ ಸಿಗುವುದಿಲ್ಲ ಅಂತ ಹೇಳುತ್ತಿದ್ದಾರೆ. He is not telling that anything lapse in the Act.

ಶ್ರೀ ಆರ್.ವಿ. ದೇಶಪಾಂಡೆ : ನಾನು ಏನು ಹೇಳುತ್ತೇನೆ ಎಂದರೆ, ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಯಾರು ವಯಲೇಟ್ ಮಾಡಿದ್ದಾರೆ, ಅವರಿಗೆ ಮಾಡುವುದಿಲ್ಲ ಅಂತ ಹೇಳಿದಿರಿ. It is correct. What I am saying is because of this clause, your intention, your purpose of bringing this legislation will not be fulfilled. ಎಂದು ಒಂದು ಕಡೆ ಹೇಳಿದಿರಿ. ಶ್ರೀ ಕಾಗೋಡು ತಿಮ್ಮಪ್ಪನವರು ಒಂದು ಮಾತನ್ನು ಹೇಳಿದ್ದಾರೆ. Suppose somebody has given a declaration - he has to give declaration, wherever excess lands are there, the Government can take over. I do agree. Suppose in Bangalore I am having one acre of land. Naturally, I am entitled to retain 10 Guntas. So 30 Guntas you have to take over. What has happened? For the last 25 years, I have connived with the officials and everybody and I have disposed of all the 40 guntas. So there is no scope for the Government for taking over. What I am suggesting is that your purpose of helping will not be served. Secondly, there will be definitely breach of Land reforms Act which you have not covered here. Nowhere you have given protection for the breach of Land Reforms Act. Near about Bangalore, Belgaum and many cities, agricultural lands have been used for construction of unauthorised houses. So you have to take into consideration that aspect also.

ಮುಂದೆ ಏನು ತಮ್ಮ ಗಮನಕ್ಕೆ ತಂದೆ ಎಂದರೆ, ಒಂದು ಮನೆಯನ್ನು ರೆಗ್ಯುಲರೈಸ್ ಮಾಡಬೇಕಲ್ಲಾ ಮಾಡಿ. ಹತ್ತು ಗುಂಟೆ, ೨೦ ಗುಂಟೆ ಲ್ಯಾಂಡ್‌ನಲ್ಲಿ ನಾನು ನೂರು ಸ್ಕೇರ್ ಫೀಟ್ ಮನೆ ಕಟ್ಟುತ್ತೇನೆ. ಬೇರೆ ಲ್ಯಾಂಡ್ ಬಗ್ಗೆ I will cite as my back-yard. Where is that provision which says.

SRI K.J. GEORGE : We will make rules.

SRI R.V. DESHPANDE : You cannot do in the rules. When there is no provision in the Act, how can you do it?

ರೂಲ್ಸ್‌ನಲ್ಲಿ ಲ್ಯಾಂಡ್ ಎಷ್ಟು ಇರಬೇಕು ಎಂದು ಹೇಳಿಲ್ಲ. While you are getting delegation of powers, ಒಬ್ಬ ವ್ಯಕ್ತಿ ಕಡೆ ಲ್ಯಾಂಡ್ ಎಷ್ಟು ಇರಬೇಕು ಅಂತ ಡಿಸೈಡ್ ಮಾಡ್ತೀವಿ ಅಂತ ಎಲ್ಲೂ ಇಲ್ಲ. In powers to make rules, with regard to fixing of price, ಇದೆ, ಆದರೆ ಏರಿಯಾ ಇಲ್ಲ. That is not there. I request you to examine this. It will not help the purpose you have initiated. ಇವತ್ತು ತಾವು ಹೇಳಿದ್ದೀರಿ. "Unauthorised construction having more than 2 floors including ground floor."

4.35 ಪಿ.ಎಂ

ಅಂದರೆ, ಗ್ರೌಂಡ್ ಫ್ಲೋರ್ ಪ್ಲಸ್ ೨ ಫ್ಲೋರ್ಸ್, ಹೀಗೆ ಮಾಡುತ್ತೀರಾ? I

more than 2 floors including ground floor" ಅಂದರೆ ಏನು? ಜನರಲ್ಲಿ ಗ್ರೌಂಡ್ ಫ್ಲೋರ್ ಎಂದರೆ ಏನು ಹೇಳುತ್ತಾರೆ? ಗ್ರೌಂಡ್ ಪ್ಲಸ್ ೨ ಅಂದರೆ, ೨ ಫ್ಲೋರ್ ಆಯಿತು. You mean three floors or ground plus one When you reply, please explain. Your intention is to help the poor people. Is it not so? Unauthorised construction.

ಯಾರು ಮಾಡುತ್ತಾರೆ? ನಾವು ಯಾರಿಗೆ ಸಹಾಯ ಮಾಡಬೇಕು? ಹಳ್ಳಿಯ ಜನ ಬರುತ್ತಾರೆ, ಉದ್ಯೋಗಾವಕಾಶಕ್ಕಾಗಿ ಬರುತ್ತಾರೆ, ಹಳ್ಳಿಯಲ್ಲಿ ಉದ್ಯೋಗ ಇಲ್ಲ, ತೊಂದರೆ ಆದ್ದರಿಂದ ಇಲ್ಲಿಗೆ ಬರುತ್ತಾರೆ. ಆಗ, ಅವರಿಗೆ ಒಂದು ಮನೆ ಇರಬೇಕು, ಯಾವುದೋ ಒಂದು ಜಾಗ ತೆಗೆದುಕೊಳ್ಳುತ್ತಾರೆ, ಎನ್‌ಕ್ರೋಚ್ ಮಾಡುತ್ತಾರೆ, ಒಂದು ಮನೆ ಕಟ್ಟುತ್ತಾರೆ. ಅಂತಹವರಿಗೆ ಸಹಾಯ ಮಾಡಬೇಕು. ಅದು ಬಿಟ್ಟು, ಎರಡೆರಡು ಸ್ಟೋರೀಡ್ ಬಿಲ್ಡಿಂಗ್‌ಗಳನ್ನು ರೆಗ್ಯುಲರೈಸ್ ಮಾಡುತ್ತಾ ಹೋದರೆ ಏನಾಗಬಹುದು? ನಿಮ್ಮ ಉದ್ದೇಶ, ಗುರಿ ಏನಾಯಿತು? Your intention is not to help the poor your intention is to help rich people ಎಂಬುದು ಕ್ಲಿಯರ್ ಆಯಿತು. ದೊಡ್ಡ ದೊಡ್ಡ ಶ್ರೀಮಂತರು, ೬-೮ ಲಕ್ಷ ರೂಪಾಯಿ ಖರ್ಚು ಮಾಡಿ ಎರಡು ಸ್ಟೋರೀಡ್ ಬಿಲ್ಡಿಂಗ್‌ಗಳನ್ನು ಕಟ್ಟುತ್ತಾರೆ. ೨ ಸ್ಟೋರೀಡ್ ಬಿಲ್ಡಿಂಗ್ ಒಂದು ಲಕ್ಷ ಅಥವಾ ೧೦ ಸಾವಿರ ರೂಪಾಯಿನಲ್ಲಿ ಆಗುವುದಿಲ್ಲ. I request you to enlighten me and please think on this.

ಇದು ಬಡವರಿಗೆ ಆಗುವ ಶಾಸನ ಆಗುವುದಿಲ್ಲ, ಇದರ ಲಾಭ ಆರ್ಥಿಕವಾಗಿ ಸಂಪನ್ನತೆ ಇರತಕ್ಕ ಜನ ತೆಗೆದುಕೊಳ್ಳಬಹುದೆಂದು ನನ್ನ ಅನಿಸಿಕೆ. ಪುನಃ ತಾವು ಈ ಆಕ್ಟ್‌ನಲ್ಲಿ, Price fixation ಬಗ್ಗೆ ಏನೂ ಇಲ್ಲ. ತಾವು ಏನು ಹೇಳಿದ್ದೀರಿ ಎಂದರೆ, ನಾವು ರೂಲ್ಸ್ ಫ್ರೇಮ್ ಮಾಡಿ, ನಾವು ಡೆಲಿಗೇಷನ್ ಕೂಡಿ ನಾವು ಮಾಡುತ್ತೇವೆ ಎಂದು ಹೇಳಿದ್ದೀರಿ. ನಿಜವಾಗಿಯೂ ಹೇಳಬೇಕಾದರೆ, The House cannot give excessive delegation. That is bad in law. It will not stand the test of the Law Courts also because your intentions have to be clear. What are you going to do? So, what I am saying is you are taking blanket powers.

ತಾವು ಈ ಮನೆಗೆ ಹೇಳಬೇಕಾಗುತ್ತದೆ-ಯಾವಾಗ ರೂಲ್ ಮಾಡುತ್ತೇವೆ, ಯಾವ ಪ್ರಕಾರ ರೂಲ್ ಮಾಡುತ್ತೇವೆ ಮತ್ತು ಈ ಮನೆಗಳಿಗೆ ಏನು ಹಣ ನಿಗದಿ ಮಾಡುತ್ತೇವೆ, ಅದನ್ನು ಯಾವ ಪ್ರಕಾರವಾಗಿ ಮಾಡುತ್ತೇವೆ, ಏನಾದರೂ ಒಂದು ಐಡಿಯಾ ಈ ಮನೆಗೆ ಕೊಡಬೇಕಾಗುತ್ತದೆ. ಆದರೆ ಇಲ್ಲಿ ಯಾವುದೂ ಐಡಿಯಾ ಇಲ್ಲ, ನೀವು ಇಷ್ಟೇ ಹೇಳಿದ್ದೀರಿ. ಬೇರೆ ಬೇರೆ ಪಟ್ಟಣಕ್ಕೆ ಬೇರೆ ಬೇರೆ ರೇಟ್ ಮಾಡುತ್ತೇವೆಂದು ಹೇಳಿದ್ದೀರಿ. ಬೆಳಗಾಂಗೆ ಬೇರೆ ರೇಟ್, ಬೆಂಗಳೂರಿಗೇ ಬೇರೆ ರೇಟ್ ಎಂದು ಹೇಳಿದ್ದೀರಿ, ಅದು ಸರಿ. ಆದರೆ, there are semi-urban areas. My own place Haliyal is a semi-urban area. What is the rate for Haliyal? That blanket power, you have no right to take. You are taking excessive delegation from the House. Which is not correct. No legislation which was introduced in this House has taken such powers for making rules. We don't know your intentions.

೫ ರೂಪಾಯಿ

ರೂಪಾಯಿ ಮಾಡಬಹುದು. That will entail into loss to the Government. We should know because we are responsible for the legislation because we have given the blanket power. We should know what are you going to do. ಅದು ಇದರಲ್ಲಿ ಇಲ್ಲ.

ಶ್ರೀ ಹೆಚ್. ಏಕಾಂತಯ್ಯ : ಈ ಸದನಕ್ಕೆ ಏನು ಲೆಜಿಸ್ಲೇಟಿವ್ ಪವರ್ ಇದೆ, ಅದನ್ನು, that cannot be delegated to the Government.

ಶ್ರೀ ಆರ್.ವಿ. ದೇಶಪಾಂಡೆ : ನೀವು ಏನು ಹೇಳಿದ್ದೀರಿ, 'Power to make Rules' clause 9, (c) : "Any other matter for which rules have to be made or are necessary under this Act" What is this? Can you take such a blanket power? No. That is not correct. 'Whatever rules we want to make' ಅಂದರೆ ಏನು? This House should know what rules you want to make. You have said about price. I can understand but there is nothing here.

ಶ್ರೀ ಕೆ.ಜೆ. ಜಾರ್ಜ್ : ಆಲ್‌ರೆಡಿ ಇಲ್ಲೀಗಲ್ ಆಗಿ ಪವರ್ ತೆಗೆದುಕೊಂಡು ಕನ್‌ಸ್ಟ್ರಕ್ಟ್ ಮಾಡಿಯಾಗಿದೆ. ಇದನ್ನು ರೆಗ್ಯುಲರೈಸ್ ಮಾಡುವುದಕ್ಕೆ ಮಾತ್ರ ಕೇಳುತ್ತಿದ್ದೇವೆ. ಯಾವ ರೀತಿಯಲ್ಲಿ ಮಾಡಬೇಕೆಂಬುದಕ್ಕೆ ತಾವು ಸಲಹೆ ಕೊಡಿ, ಆ ಪ್ರಕಾರ ಮಾಡುತ್ತೇವೆ. ಜೊತೆಗೆ, ನಾವು ಯಾವ ರೀತಿಯಾಗಿ ಯೋಚನೆ ಮಾಡುತ್ತಿದ್ದೇವೆ ಎನ್ನುವುದನ್ನೂ ಹೇಳುವುದಕ್ಕೆ ನಾನು ರೆಡಿ ಇದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ : ನಾವು ಸಲಹೆ ಮಾಡುತ್ತೇವೆ, ನಾನು ಸಲಹೆ ಮಾಡಬಾರದೆಂದು ಇಲ್ಲ, ತಾವು ಒಂದು ಶಾಸನ ತಂದಾಗ, ಈ ಮನೆಯನ್ನು ವಿಶ್ವಾಸವನ್ನು ತೆಗೆದುಕೊಳ್ಳಬೇಕಾಗುತ್ತದೆ, ಈ ಮನೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಈ ಮನೆಯ ಸದಸ್ಯರಿಗೆ ಒಂದು ಐಡಿಯಾ ಹೇಳಬೇಕಾಗುತ್ತದೆ. ಯಾವ ಪ್ರಕಾರ ಸರ್ಕಾರದವರು ರೂಲ್ ಮಾಡುತ್ತಾರೆ ಎಂಬುದನ್ನು ನೀವು ಹೇಳಬೇಕು. ಇಲ್ಲಿ ನೀವು ಏನು ಹೇಳುತ್ತೀರಿ "Any other matter for which rules have to be made or are necessary under this Act" ನೀವು ಮನಸ್ಸು ಮಾಡುತ್ತಾ, ಮಾಡುತ್ತಾ ಹೋದರೆ, ಇದು ಎಲ್ಲಿಗೆ ಕೊನೆಯಾಗುತ್ತದೆ? There is no end. Please understand me. I am not telling anything personal. Pease understand. I am speaking to the Government. Your intention may be good. I don't challenge your intentions. What I am saying is that tomorrow your are not the Minister. Somebody comes and suppose he wants to misuse this Act, he can very well misuse it. So, there should be some restrictions somewhere. ಯಾವುದೇ ಒಂದು ರೂಲ್‌ಮೇಕಿಂಗ್ ಅಧಿಕಾರವನ್ನು ಲೆಜಿಸ್ಲೇಚರ್ ಸರಕಾರಕ್ಕೆ ಕೊಡುವಾಗ it cannot be excessive. It has to stand the test of the law. ಅದಕ್ಕಾಗಿ ನಾನು ಸಲಹೆ ಮಾಡುತ್ತಿದ್ದೇನೆ. ಈ ಪ್ರಕಾರ ಅಧಿಕಾರ ತೆಗೆದುಕೊಳ್ಳುವುದು ಸರಿ ಅಲ್ಲ. ಅದೇ ಪ್ರಕಾರ ತಾವು ಹೇಳಿದ್ದೀರಿ. ಬೆಂಗಳೂರಿಗೆ ಏನು ರೇಟ್ ಇರಬೇಕು, ಬೆಳಗಾಂಗೆ ಏನು ರೇಟ್ ಇರಬೇಕು ಅದನ್ನು ರೂಲ್‌ನಲ್ಲಿ ಮಾಡುತ್ತೇವೆಂದು ಹೇಳಿದ್ದೀರಿ. ನಾನು ಏನು ಸಜೆಸ್ಟ್ ಮಾಡುತ್ತಿದ್ದೇನೆ ಎಂದರೆ, ಬೆಂಗಳೂರು ಸಿಟಿ ಒಂದು ಕೆಟಗರಿ ಇರಬಹುದು. ಬೆಳಗಾಂ, ಹುಬ್ಬಳ್ಳಿ, ಧಾರವಾಡ ಒಂದು ಕೆಟಗರಿ ಇರಬಹುದು. But, there are some small towns - municipal and

semi-urban areas. There, while fixing the price, you have to be very reasonable.

ಅದಕ್ಕಾಗಿ ನಾನು ಏನು ಸಜೆಸ್ಟ್ ಮಾಡುತ್ತೇನೆ ಎಂದರೆ, ನೀವು ರೂಲ್ಸ್ ಮಾಡುತ್ತೀರಲ್ಲಾ, ಆ ರೂಲ್ಸ್ ಮಾಡುವುದಕ್ಕೆ ಮುಂಚೆ atleast you convene a meeting of some legislators, atleast from urban areas to take their views. Atleast we will have an opportunity to tell you. ಈಗ ಯಾವ ಪ್ರಕಾರ ರೇಟ್ ಇರಬೇಕು, ಏನು ಇರಬೇಕು ಎಂಬುದನ್ನು ನಮಗೆ ಹೇಳುವುದಕ್ಕೆ ಆಗುವುದಿಲ್ಲ, ಬೆಂಗಳೂರಿಗೆ ಈ ರೇಟ್ ಮಾಡಿರಿ, ಮೈಸೂರಿಗೆ ಈ ರೇಟ್ ಮಾಡಿರಿ ಎಂದು ಈಗ ಹೇಳುವುದಕ್ಕೆ ಆಗುವುದಿಲ್ಲ, because, I will not be able to tell it. I cannot tell here. It is not possible for me to tell. It requires sufficient time and I have to study that. While making this, you call all the legislators from urban areas and discuss with them. If not all, call a few legislators and discuss as to what should be done. ಈವತ್ತು Unauthorised construction ಆಗಿದೆ.

ಯಾರು ಮಾಡಿದ್ದಾರೆ, ಮೆಜಾರಿಟಿ ಬಡವರು ಈ ರೀತಿ ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಬಡವರಿಗೆ ಸಹಾಯ ಮಾಡುವುದಕ್ಕೆ ಈ ಲೆಜಿಸ್ಲೇಷನ್ ತಂದಿದ್ದೀರಿ ಎಂದೂ ನಾನು ತಿಳಿದುಕೊಂಡಿದ್ದೇನೆ. That was also our intention. ಒಂದುವೇಳೆ, ಎಸ್.ಸಿ. ಎಸ್.ಟಿ. ಗಳು, ಹರಿಜನ, ಗಿರಿಜನರು ಅನ್ ಆಥರೈಸ್ಡ್ ಆಗಿ ಕನ್‌ಸ್ಟ್ರಕ್ಷನ್ಸ್ ಮಾಡಿಕೊಂಡಿದ್ದರೆ, ಮನೆ ಕಟ್ಟಿದ್ದರೆ ತಾವು ಏನು ಇದರ ಬಗ್ಗೆ ರೇಟ್ ಫಿಕ್ಸ್ ಮಾಡುತ್ತೀರಲ್ಲಾ, ಅದರಲ್ಲಿ ಇವರಿಗೆ ೨೫ ಪರ್ಸೆಂಟ್ ಮಾಡಬೇಕೆಂದು ನಾನು ಸಜೆಸ್ಟ್ ಮಾಡುತ್ತಿದ್ದೇನೆ.

25% of the rate, I am suggesting to you. Those whose incomes are less than Rs.10,000/- or Rs.8,000/- that category also you have to make. Economically weaker sections, - they come from any community. They need not be backward; in forward community also, there are economically weaker sections. ಆ ಒಂದು ಕ್ಯಟಾಗರಿಯನ್ನು ತಾವು ಮಾಡಬೇಕಾಗುತ್ತದೆ. Then you have said, 'After screening committee gives an order, within two months they have to pay the money.' I feel that two months period is a very small period. ಎರಡು ತಿಂಗಳೊಳಗೆ ಹಣ ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ, ಇದು ಅಸಾಧ್ಯವಾದ ಮಾತು. Government may generate, if this legislation goes in a proper form. There are defects. If there are no defects. Your Governments could get more than Rs.100 crores. But, with the present type of legislation, I don't think you will be able to yield more than Rs.2 or 3 crores also. You will not be able to yield more than Rs.2 or 3 crores in the present form if you bring a legislation. ಅದರ ಸಲುವಾಗಿ ನಾನು ಹೇಳುತ್ತಿದ್ದೇನೆ. ಎಕನಾಮಿಕಲಿ ವೀಕರ್ ಸೆಕ್ಷನ್ಸ್‌ದು ಒಂದು ಕೆಟಾಗರಿ, ಎಸ್.ಸಿ - ಎಸ್.ಟಿ ದು ಒಂದು ಕೆಟಾಗರಿ ಈ ಪ್ರಕಾರ ರೇಟ್ ಫಿಕ್ಸ್ ಮಾಡಬೇಕೆಂದು ನಾನು ಸಲಹೆ ಮಾಡುತ್ತಿದ್ದೇನೆ. ಅದೇ ಪ್ರಕಾರ ತಾವು ಮತ್ತೊಂದು ಹೇಳಿದ್ದೀರಿ. Unauthorised construction

made in the areas specified in the green belt - ಅನ್ನು ರೆಗ್ಯುಲರೈಸೇಷನ್ ಮಾಡುವುದಿಲ್ಲ ಎಂದು ಹೇಳಿದ್ದೀರಿ.

"Unauthorised constructions made in the area specified as green belt in the comprehensive development plan........" ಅಂತ ಹೇಳಿದ್ದೀರಿ; ಇದು ಸರಿ. ಗ್ರೀನ್ ಬೆಲ್ಟ್‌ನಲ್ಲಿ ಕನ್‌ಸ್ಟ್ರಕ್ಷನ್ ಬರಬಾರದು ಅಂತ ಹೇಳುವಾಗ ಅಲ್ಲಿ ರೆಗ್ಯುಲರೈಸ್ ಮಾಡುವುದಕ್ಕೆ ಹೇಗೆ ಬರುತ್ತದೆ? You are perfectly right. But, what has happened? Is there any green belt now? Do you want to solve the problem, I am asking you. Yelahanka comes in green belt. What green belt been has remained there? Practical approach - Is there any green belt in Yelahanka? I want to know. I don't want to tell you to breach the green belt area. But, practically you take an outlook as to what should be a green belt, where should be a green belt and whether the green belt is there now. ಕಳೆದ ೧೫-೨೦ ವರ್ಷಗಳಲ್ಲಿ ಗ್ರೀನ್ ಬೆಲ್ಟ್ ಉಳಿದಿಲ್ಲ ಅಲ್ಲಿ. ಹಾಗಾಗಿ ಈ ಕ್ಲಾಸ್ ಹಾಕುವಾಗ you should have been more practical. ಆ ಒಂದು ಕ್ಲಾಸ್‌ನಿಂದ, your intention will not be fulfilled. So many constructions have happened. There is no green belt. All green belt has gone. To help the people you try to extend the green belt now which you would have thought earlier. Then there will a lot of serious problems in regularising the unauthorised constructions which have come in the green belt. ನಾನು ನಿಮಗೆ ಹೇಳುತ್ತೇನೆ ಈ ಎಲ್ಲಾ ಸಮಸ್ಯೆಗಳೂ ಇದೆ. ನಿಮ್ಮ ಇನ್‌ಟೆನ್‌ಷನ್ ಅನ್ನು ನೀವು ಫುಲ್‌ಫಿಲ್ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ತಾವು ದಯವಿಟ್ಟು for thorough exmination ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿದರೆ ಒಳ್ಳೆಯದು. ಅದರಿಂದ ನಿಮ್ಮ ಇನ್‌ಟೆನ್‌ಷನ್ ಫುಲ್‌ಫಿಲ್ ಆಗಬಹುದು ತಮಗೆ ಒಳ್ಳೆಯ ಹೆಸರು ಬರಬಹುದು. Otherwise this Act will not serve the purpose, It will not stand the test of law. ಮತ್ತೊಂದು ಪಾಯಿಂಟ್ ನಾನು ತಮಗೆ ಹೇಳುತ್ತೇನೆ. I said excessive powers cannot be delegated to the Government. In Kaul & Shakdhar it is said 'The legal position as regards the limitation of this power is, however, no longer in doubt. The delegation of powers is permissible only when the legislative policy and principle are adequately laid down and the delegate only comes out to carry out the subsidiary portion within the guideline laid down by the Legislature.' This means that your policy and principle should be clear and there should be guidelines. You please tell what are your guidelines as far as rates are concerned. It should be incorporated in the Act.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ದೇಶಪಾಂಡೆಯವರು ಇಷ್ಟೆಲ್ಲಾ ಹೇಳುತ್ತಾರೆ. ನಾವು ಇವತ್ತು ಒಂದು ಬಿಲ್ಲನ್ನು ಲೆಜಿಸ್ಲೇಷನ್ ಮುಂದೆ ತರಬೇಕೆಂದು ಮಾಡಿದ್ದೇವೆ. ೧೯೮೭ನೇ ಇಸವಿಯಲ್ಲಿ ಇವರ ಸರ್ಕಾರ ಇತ್ತು. ಆಗ ಜಿ.ಒ. ಮುಖಾಂತರ ರೆಗ್ಯುಲರೈಸ್ ಮಾಡಬೇಕೆಂದು ಜಿ.ಒ. ಪಾಸ್ ಮಾಡಿದ್ದಾರೆ. ಆದರೆ ನಾವು ಲೆಜಿಸ್ಲೇಷನ್ ಮುಂದೆ ತಂದು ಡಿಸ್‌ಕಸ್ ಮಾಡಬೇಕೆಂದು ಹೇಳುತ್ತಿದ್ದೇವೆ.

ಈಗ ಅನ್‌ಆಥರೈಸ್ಡ್ ಬಿಲ್ಡಿಂಗ್ಸ್ ಬಂದಿವೆ. ಆ ಕಾರಣಕ್ಕಾಗಿ ಏನಾದರೂ ಮಾಡಿದರೆ ಒಳ್ಳೆಯದು. ಅದಕ್ಕೆ ನಾವು ಈ ಸದನದಲ್ಲಿ ಇದನ್ನು ತಂದು ರೂಲ್ಸ್ ಫ್ರೇಮ್ ಮಾಡುತ್ತಿದ್ದೇವೆ. ಆಗ ಇದು ಯಾವ ರೀತಿ ರೇಟ್ ಇರಬೇಕು ಯಾವ ರೀತಿಯಲ್ಲಿ ಇದ್ದರೆ ಒಳ್ಳೆಯದು. ಯಾವ ರೀತಿ ಟೌನ್ ಶಿಫ್ ಮಾಡಬೇಕು, ಇದು ಕಾರ್ಪೊರೇಷನ್‌ನಲ್ಲಿ ಇರಬೇಕೇ, ಇವೆಲ್ಲಾ ವಿವರಗಳನ್ನು ನಾವು ಕೊಡುತ್ತೇವೆ. If you have got anything you can give a suggestion also.

ಶ್ರೀ ಆರ್.ವಿ. ದೇಶಪಾಂಡೆ : ನಮ್ಮ ಗೌರ್ನಮೆಂಟ್ ಇದ್ದಾಗ ನಾವು ಏತಕ್ಕೆ ಜಿ.ಓ. ಮಾಡಿದ್ದೆವು? ಜನರ ಹಿತದೃಷ್ಟಿಯಿಂದ. ಮಾನ್ಯ ವೀರೇಂದ್ರ ಪಾಟೀಲರ ಸರ್ಕಾರವಿದ್ದಾಗಲೂ ಸಹ ಜಿ.ಓ. ಮಾಡಿದ್ದರು. ಆಗ ಜಿ.ಓ. ಮಾಡಿದ ಇನ್‌ಟೆನ್‌ಷನ್ ಏನಿತ್ತು? Please understand. The intention was to help the people. Your intention is also to help the people. You have nothing more than that.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ವೀರೇಂದ್ರ ಪಾಟೀಲರ ಸರ್ಕಾರ ಜಿ.ಓ. ಮಾಡುವಾಗ ಏನು ಹೇಳಿದರು ಅಂದರೆ, ಇನ್ನು ಮುಂದೆ ಅನ್‌ಆಥರೈಸ್ಡ್ ಆಕ್ಯುಪೇಷನ್ ಬರದೇ ಇರುವ ಹಾಗೆ ಅವರು ಪ್ರಿವೆಂಟೀವ್ ಆಕ್ಷನ್ಸ್ ಅನ್ನು ಅವರು ತೆಗೆದುಕೊಂಡಿದ್ದಾರೆ. ಮತ್ತೆ ಅದಕ್ಕೆ ಒಂದು ಕ್ಯಾಬಿನೆಟ್ ಸಬ್ ಕಮಿಟಿ ಮಾಡಿ ಅಲ್ಲಿ ಡಿಸ್‌ಕಷನ್ ಮಾಡಿ ಲೆಜಿಸ್ಲೇಷನ್ ತೆಗೆದುಕೊಂಡು ಬರಬೇಕೆಂದು ಆ ಜಿ.ಓ. ನಲ್ಲಿರುವುದು. ಅದರ ಪ್ರಕಾರ ಕ್ಯಾಬಿನೆಟ್ ಸಬ್ ಕಮಿಟಿ ಪ್ರಕಾರ ಡಿಸ್‌ಕಸ್ ಮಾಡಿ ತೆಗೆದುಕೊಂಡು ಬಂದಿದ್ದೇವೆ. ಇವತ್ತು ಏನಾಗಿದೆ ನಾನು ಆಗಲೇ ಹೇಳಿದ ಪ್ರಕಾರ ಇದು ಅನ್ ಆಥರೈಸ್ಡ್ ಕನ್‌ಸ್ಟ್ರಕ್ಷನ್ಸ್ ರೆಗ್ಯುಲರೈಸ್ ಮಾಡುವುದು. ಯಾವುದಾದರೂ ಒಂದು ರೀತಿಯಲ್ಲಿ ಪ್ರಾರಂಭ ಮಾಡಿದರೆ, ಆಗ ಗ್ರೌಂಡ್ ರಿಯಾಲಿಟೀಸ್‌ನಲ್ಲಿ ಎಷ್ಟು ಕಷ್ಟ ಬರುತ್ತದೆ ಎಂಬುದು ಆಗ ಗೊತ್ತಾಗುತ್ತದೆ. ಇದರಲ್ಲಿ ಯಾವುದು ಪ್ರೈವೇಟ್ ಲ್ಯಾಂಡ್‌ನಲ್ಲಿ ಇದೆ, ಇದರಲ್ಲಿ ಎಷ್ಟು ಅರ್ಬನ್ ಲ್ಯಾಂಡ್ ಸೀಲಿಂಗ್ ಬರುತ್ತದೆ, ಇದೆಲ್ಲಾ ಆಗ ನಮಗೆ ಗೊತ್ತಾಗುತ್ತದೆ. ಈಗ ಯಾರಿಗೂ ಗೊತ್ತಿಲ್ಲ. ಅನ್‌ಆಥರೈಸ್ಡ್ ಎಷ್ಟು ಎಂಬುದು ಈಗ ಯಾರಿಗೂ ಗೊತ್ತಿಲ್ಲ. ಇದನ್ನು ಕರೆಕ್ಟಾಗಿ ಮಾಡಬೇಕಾದರೆ, there should be a beginning.

ಶ್ರೀ ಆರ್.ವಿ. ದೇಶಪಾಂಡೆ : ನಾನು ನಿಮಗೆ ಹೇಳುತ್ತೇನೆ. I am not trying to cast aspersions on the intentions of the Government. ನಾವು ಜಿ.ಓ. ಮಾಡಿದಾಗ ನಮ್ಮ intention was to regularise. ನೀವು ಬಿಲ್ ತಂದಾಗ ಇನ್‌ಟೆನ್‌ಷನ್ ಏನಿತ್ತು? Intention is to regularise. ಯಾವ ಫೈಲ್ ಮೇಲೆ ತಾವು ಎನ್ಯಾಕ್ಟ್‌ಮೆಂಟ್ ಮಾಡಿದ್ದೀರಿ, ಅದರ ಬಗ್ಗೆ I have presided over the meetings. The very Law Department has opened.

ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಇದೆ ಅದಕ್ಕೆ ಮಾಡುವುದಕ್ಕೆ ಬರುವುದಿಲ್ಲ ಅಂತ. I am telling you, that it is in the same file which you are now introducing the bill. ಲ್ಯಾಂಡ್ ರೀಫಾರ್ಮ್ ಆಕ್ಟ್‌ಗೆ ಅಮೆಂಡ್‌ಮೆಂಟ್ ತರಬೇಕೆಂದು ಹೇಳಿದರು. Please don't mistake me. You cannot make experiment while bringing a Legislation.

SRI K.J. GEORGE : I am sorry. I am not making an experience. ನಾನು ಏನು ಹೇಳುತಿದೇನೆಂದರೆ, ಈ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟನ್ನು ನಾವು

ಹೊರಗಡೆ ಇಟ್ಟಿದ್ದೇವೆ. ಅದರಲ್ಲಿ ಏನಾದರೂ ತೊಂದರೆ ಬಂದರೆ ನೋಡೋಣವೆಂದು ಹೇಳುತ್ತಿದ್ದೇನೆಯೇ ಹೊರತು ಬೇರೆ ಏನೂ ಅಲ್ಲ. ಮತ್ತೆ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ನಂ.೩ ನೋಡಿ : 'Notwithstanding anything contained in any law' we have taken care of it.

SRI R.V. DESHPANDE : No, I don't think. That will not be sufficient. No. Then, there will be a breach of Urban Land Ceiling Act. There will be a breach of tenancy law. There are so many thing. You have to be specified as you are in other legislations. As far as other legislations are concerned, like Bangalore Development Authority Act, you are specific. But, as far as Land Reforms Act is concerned, not a word 'Land' is there. I am not an expert here. But, I am stating this with my experience that this is bad in law. ನಾನು ನಿಮಗೆ ಹೇಳಿದೆ, as far as making rules are concerned, government has to be very specific, with regard to the legislative policy and principle and there should be guidelines. Legislative policy is not there. Guideline is not there. 'The Legislature, it must be borne in mind, cannot abdicate its authority and cannot pass on to some other body the obligation and the responsibility imposed on it by the Constitution, It can only utilise other bodies or authorise for the purpose of working out the details within the essential principles laid down by it.' So, this House also has limited power. It does not have a power to give you a power where you do anything. So, when you take authority from this House, when you take a right from this House, a delegation from this House with regard to framing of rules, your policy has to be very clear. Your guidelines will have to be very clear. ಇಲ್ಲಿ ಗೈಡ್‌ಲೈನ್ಸ್ ಏನು ಕ್ಲಿಯರ್ ಇದೆ? ಇಲ್ಲಿ ಯಾವ ತರಹದ್ದೂ ಇಲ್ಲ.

Atleast you would have had Zones, saying that Bangalore would come in 'A' Zone, Belgaum in someother zone and so on. If you remember in the Urban Vacant Land Act, we have done zones. Atleast you would have done it. That would have been a guideline. In this Act, if you have proposed some zones where you would have said that these are the urban areas coming in zone - 4, these are the areas coming in Zone - 3, these are the areas in Zone - 2, If you had done that atleast there would have been a guideline. ನಾಲ್ಕು, ಐದು ಜೋನ್ ಮಾಡಿದ್ದಾರೆ. ಆ ಪ್ರಕಾರ ಇವರು ರೇಟ್ ಚಾರ್ಜ್ ಮಾಡುತ್ತಾರೆ ಎಂದು ಹೇಳಬಹುದಾಗಿತ್ತು. That is also not there. You are totally silent. You have taken a blanket power from us, which this House, according to me - I am humbly submitting - has no authority to give you, because this is a blanket power, there are no guidelines. So, I earnestly, through the Speaker, request you to either withdraw this legislation and come thoroughly in the interest of the people who are waiting for years, or refer it to the Joint Select Committee for a thorough examination, and in the

meantime, approach the Central Government also for the amendment of the Urban Land Ceiling Act. And also please, in this very legislation, you have to spell out as to how you are going to overcome the Land Reforms Act. That Section 3 will not come to your aid, will not come to your help. Secondly also, what are you going to regularise? I have put a very specific question to you. Whether 10'x10' house constructed on 10 guntas, what are you going to do with it? So, there is nothing.

You may say 'I will make rules for that.' No. You cannot make rules for that, because there is no specific guideline. Somebody may challenge this Act and it will not stand the test of the law. Hence I am not opposing this legislation. I welcome this legislation. But, because these drawbacks are there, I am submitting that it may be withdrawn or referred to the Joint Select Committee.

ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರ್) : ಮಾನ್ಯ ಅಧ್ಯಕ್ಷರೆಯವರೇ, ಇಲ್ಲಿ ಹಿರಿಯರಾದ ದೇಶಪಾಂಡೆಯವರು ವಿವರವಾಗಿ ಹೇಳಿದ್ದಾರೆ. ಆದರೆ ಇಲ್ಲಿ ಇರತಕ್ಕಂಥಾದ್ದು, ಕಾನೂನನ್ನು ಶಾಸನ ಸಭೆಗಳಲ್ಲಿ ತರತಕ್ಕದ್ದು ಸಾರ್ವಜನಿಕರ ಹಿತದೃಷ್ಟಿಯಿಂದ, ಸಮಾಜದ ಹಿತದೃಷ್ಟಿಯಿಂದ, ಕಾನೂನು ಬದ್ಧವಾಗಿ ನಡೆದುಕೊಳ್ಳಬೇಕು ಎನ್ನುವ ದೃಷ್ಟಿಯಿಂದ, ಆದರೆ ದುರ್ದೈವದಿಂದ ನಾವು ಮಾಡತಕ್ಕಂಥ ಕಾನೂನು, ಯಾರು ಕಾನೂನು ಬಾಹಿರ ಕೆಲಸ ಮಾಡಿದ್ದಾರೋ, ಯಾರು ಕಾನೂನಿಗೆ ವ್ಯತಿರಿಕ್ತವಾಗಿ ನಡೆದುಕೊಂಡಿದ್ದಾರೋ, those who are not law abiding, ಕಾನೂನು ಬದ್ಧವಾಗಿ ಇಲ್ಲದಂಥ ಜನರಿಗೆ ನೆರವು ಕೊಡತಕ್ಕಂಥ ಕೆಲಸ ದಿನವಹಿ ನಾವು ಈ ಶಾಸನಸಭೆಯಲ್ಲಿ ಮಾಡುತ್ತಿದ್ದೇವೆ, ಯಾರು ಭೂಮಿಯನ್ನು ಒತ್ತುವರಿ ಮಾಡಿದ್ದಾರೆ ಅವರಿಗೆ ಖಾಯಂ ಮಾಡಲಿಕ್ಕೆ ಕಾನೂನು ಮಾಡುತ್ತಿದ್ದೇವೆ. ಯಾರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಾನೂನುಗಳನ್ನು ಧಿಕ್ಕರಿಸಿ ಇವತ್ತು ಅತಿಕ್ರಮಣ ಮಾಡಿದ್ದಾರೆ ಅಥವಾ ಸರ್ಕಾರದ ಆದೇಶ, ಕಾನೂನು, ರಾಜ್ಯ ಸರ್ಕಾರಗಳ, ನಿಯಮಾವಳಿಗಳನ್ನು ಧಿಕ್ಕರಿಸಿದಂಥ ಜನರಿಗೆ ಇವತ್ತು ಈ ಕಾನೂನು ಮಾಡಿ ಅವರು ಮಾಡಿದ್ದು ಸರಿ, ಯೋಗ್ಯ ಎಂದು ಹೇಳುವಂಥ ದುಸ್ಥಿತಿ ಬಂದಿದೆ. ಇದಕ್ಕೆ ಕಾರಣ ಸರ್ಕಾರದಲ್ಲಿ, ಯಾವುದೇ ಸರ್ಕಾರ ಇರಬಹುದು, ಬಿಗಿ ಆಡಳಿತ ಇಲ್ಲ.

ಇರತಕ್ಕ ಕಾನೂನನ್ನು ಸರಿಯಾಗಿ ಚಲಾವಣೆ ಮಾಡತಕ್ಕ ಆಡಳಿತ ವರ್ಗ ಇಲ್ಲ, ಅದನ್ನು ಸರಿಯಾದಂತಹ ಕಾನೂನುಬದ್ಧವಾಗಿ ಆಡಳಿತವನ್ನು ನಿರ್ವಹಿಸುವುದಕ್ಕೆ ಅಧಿಕಾರಿಗಳು ತಪ್ಪಿದಲ್ಲಿ ಯಾರು ಕಾನೂನನ್ನು ತಂದಿದ್ದಾರೆ, ಈ ಶಾಸನಸಭೆಯಲ್ಲಿ ಯಾರು ಜವಾಬ್ದಾರಿ ಆಗಿರುತ್ತಾರೆ, ಸರ್ಕಾರ ಅವರಿಗೆ ಕಾನೂನು ಪ್ರಕಾರವಾಗಿ ನಡೆದುಕೊಳ್ಳುವ ಇಚ್ಛೆ ಇಲ್ಲ. ಕಾನೂನಿನ ಚೌಕಟ್ಟಿನಿಂದ ತಪ್ಪಿಸಿಕೊಂಡು ಹೋಗಬೇಕು ಎನ್ನುವ ವಿಚಾರ ಇರುವುದರಿಂದ ಇಂತಹ ಕಾನೂನುಗಳ ಬೆಳವಣಿಗೆ ತಪ್ಪಿತಸ್ಥರಿಗೆ ರಕ್ಷಣೆ ಕೊಡತಕ್ಕ ಕಾನೂನು ತರತಕ್ಕದ್ದು. ಇದು ಪ್ರಜಾಪ್ರಭುತ್ವಕ್ಕೆ ಶೋಭೆಯನ್ನು ತರತಕದು ಅಲ್ಲ. ಯಾರು ಕಾನೂನಿಗೆ ಇವತ್ತು ಅತಿಕ್ರಮಣ ಮಾಡಿದ್ದಾರೆ ಎಂದು

ತಿಳಿದುಕೊಳ್ಳೋಣ. ಇರತಕ್ಕ ಅರ್ಬನ್ ಸೀಲಿಂಗ್ ಏರಿಯಾ ಅಥವಾ ನಮ್ಮ ಉಳಿದ ರಾಜ್ಯದ ಕಾನೂನಿಗೆ ಅನುಗುಣವಾಗಿ ಯಾರು ಅತಿಕ್ರಮಣ ಮಾಡಿಲ್ಲ, ಕಾನೂನು ಬದ್ಧರಾಗಿ ನಡೆದುಕೊಳ್ಳುತ್ತಾರೆ. ಅವರು ಇವತ್ತು ಶೋಷಣೆಗೆ ಒಳಗಾದರು. ಅವರಿಗೆ ಇವತ್ತು ತೊಂದರೆಗಳು ಆಗುತ್ತಿವೆ.

ಯಾರು ಕಾನೂನು ಪ್ರಕಾರ ನೀತಿ, ನಿಯಮ, ಧರ್ಮದ ಪ್ರಕಾರ ನಡೆದುಕೊಳ್ಳುವವರು ಇದ್ದಾರೆ, ಅವರಿಗೆ ಇವತ್ತು ರಾಜ್ಯದಲ್ಲಿ, ಸರ್ಕಾರದಲ್ಲಿ ಮನ್ನಣೆ ಇಲ್ಲ. ನೀತಿ ನಿಯಮ, ಕಾನೂನನ್ನು ಗಾಳಿಗೆ ತೂರಿ ಯಾರು ಇವತ್ತು ನಡೆದುಕೊಳ್ಳುತ್ತಾರೆ ಅಂತಹವರಿಗೆ ರಕ್ಷಣೆ ಕೊಡುವಂತಹ ಇಂತಹ ಕಾನೂನುಗಳನ್ನು ನಾವು ಎಷ್ಟರಮಟ್ಟಿಗೆ ಮಾಡುತ್ತಾ ಹೋಗುತ್ತೇವೆ, ರಕ್ಷಣೆಯನ್ನು ಕೊಟ್ಟು ಹೋಗುತ್ತಿದ್ದೇವೆ, ಅಲ್ಲಿಯವರೆಗೆ ಯಾವುದೇ ಸರ್ಕಾರದ ಆಜ್ಞೆ, ಆದೇಶ, ನಿಯಮ, ನೀತಿ ಕಾನೂನಿಗೆ ಈ ರಾಜ್ಯದಲ್ಲಿ ಬೆಲೆ ಬರಲಾರದು ಎಂದು ಸ್ಪಷ್ಟವಾದ ಮಾತಿನಲ್ಲಿ ಹೇಳಬೇಕಾಗಿದೆ. ಶಾಸಕರಾಗಿ ಈ ಶಾಸನಸಭೆಯಲ್ಲಿ ನಾವು ಮಾಡಿದಂತಹ ಕಾನೂನಿಗೆ ನಾವು, ನಮ್ಮ ಸರ್ಕಾರ ನಮ್ಮ ಜನ ಮನ್ನಣೆ ಕೊಡದೇ ಹೋದರೆ ಇದು ಸರ್ಕಾರ ಎಂದು ಹೇಳಬೇಕಾ? ಸರ್ಕಾರಕ್ಕೆ ಬೆಲೆ ಇದೆಯಾ? ಕಾನೂನು ಬದ್ಧವಾಗಿ ನಡೆದುಕೊಳ್ಳುವುದಕ್ಕೆ, ಇವತ್ತು ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಶಕ್ತಿ ಇಲ್ಲದೇ ಇದ್ದರೆ ಇಂತಹ ಕಾನೂನನ್ನು ದಿನವಹೀ ತರಬೇಕಾದೀತು. ಕಾನೂನಿನಲ್ಲಿ ಬಡವರ ಹೆಸರು ಹೇಳುತ್ತಿದ್ದೀರಿ. ಬಡವರಿಗೆ ಅನುಕೂಲ ಆಗುತ್ತದೆ, ಅದನ್ನು ಕೊಡಬೇಕು, ಇದನ್ನು ಕೊಡಬೇಕು ಎಂದು ಹೇಳುತ್ತೀರಿ. ಇಲ್ಲಿ ಏನು ಇದೆ? ಬಡವರ ಹೆಸರು ಎತ್ತಿರತಕ್ಕದ್ದು ಕೆಲವೇ ಜನ ಒಳ್ಳೆಯವರ ಹಿತವನ್ನು ಮಾಡಲಿಕ್ಕೆ ಎನ್ನುವ ಮಾತನ್ನು ಸ್ಪಷ್ಟವಾಗಿ ನಾನು ಹೇಳುತ್ತಿದ್ದೇನೆ. ಯಾರು ಭೂಮಿಯ ಮಾಲೀಕರು ಇದ್ದಾರೆ, ಅವರಿಗೆ ಸಹಾಯ ಮಾಡಲು ಮಾತ್ರ ಇಂತಹ ಕಾನೂನು ತರಲಾಗಿದೆ ಎಂದು ಹೇಳುತ್ತಿದ್ದೇನೆ.

Who is the owner of the land? ಈ ಭೂಮಿಯ ಮಾಲೀಕರು ಬೇರೆ ಇದ್ದಾರೆ. ಅವನಿಗೆ ಇದು ಸಿಗುವುದಿಲ್ಲ. ಬೇರೆಯವರ ಭೂಮಿ ಮೇಲೆ ಮನೆ ಕಟ್ಟಿದವರಿಗೆ ಇಲ್ಲಿ ಅವಕಾಶ ಇಲ್ಲ. ಸ್ಪಷ್ಟವಾಗಿ ಹೇಳಿದ್ದಾರೆ, ಇಲ್ಲಿ ಅವಕಾಶ ಇಲ್ಲ ಎಂದು. ಮೂರನೇ ಕಾಲಮ್‌ನಲ್ಲಿ ಹೇಳಿದ್ದಾರೆ. Belonging to the State Government. ಸರ್ಕಾರದ ಮಾಲೀಕರು ಇದ್ದಾರೆ ಅವರಿಗೆ ಸಿಗುತ್ತದೆ ಅಥವಾ ಕಂದಾಯ ಭೂಮಿ ಇದ್ದವರಿಗೆ ಸಿಗುತ್ತದೆ ಅಥವಾ ಅವನ ಮಾಲೀಕತ್ವೆಯಿಂದ ಇರಬೇಕು. ಇಲ್ಲಿ ಬೇರೆಯವರು ಬಂದು ಇನ್ನೊಬ್ಬರ ಭೂಮಿಯ ಮೇಲೆ ಕಟ್ಟಿದ್ದರೆ ಅವರಿಗೆ ಏನು ರಕ್ಷಣೆ? ಬಡವರಿಗೆ ರಕ್ಷಣೆ ಎಲ್ಲಿದೆ?

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಸದಸ್ಯರಾದ ಶ್ರೀಮಾನ್ ಬನ್ನಿಕೋಡ್ ಅವರು ಈ ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಟ್ಸ್ ಅಂಡ್ ರೀಸನ್ಸ್ ಏನು ಇದೆ ಅದನ್ನು ಓದಿದರೆ ಅವರಿಗೆ ಅರ್ಥವಾಗುತ್ತದೆ. ತಾವು ಹೇಳುವುದಕ್ಕೂ ಇಲ್ಲಿ ಉದ್ದೇಶಪೂರ್ವಕವಾಗಿ ಈ ಒಂದು ಮಸೂದೆಯನ್ನು ತಂದಿರತಕ್ಕದ್ದಕ್ಕೂ ಸಂಬಂಧಾನೇ ಇಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಹೇಳುತ್ತೇನೆ. ಯಾವ ಉದ್ದೇಶದಿಂದ ಇದನ್ನು ತಂದಿದ್ದೀರಿ ಎಂದು.

ಶ್ರೀ ಬಿ. ಬಸವಲಿಂಗಪ್ಪ : ನಾನು ಹೇಳಲೇ ಇಲ್ಲ. ನನ್ನ ಕ್ಷೇತ್ರದಲ್ಲಿ ಶ್ರೀಮಾನ್ ಎ.ಕೃಷ್ಣಪ್ಪನವರು ಸದಸ್ಯರು ಇದ್ದಾರೆ. ಸೌತ್ ತಾಲ್ಲೂಕಿನಲ್ಲಿ ರಮೇಶ್

ಅವರ ಕ್ಷೇತ್ರದಲ್ಲಿ ಏನು ಕಟ್ಟಡಗಳು ಇದ್ದಾವೆ, ಅವು ೨೦-೩೦ ವರ್ಷಗಳಿಂದ ಕಟ್ಟಿಕೊಂಡು ಇರುವುದು. ಇದಕ್ಕೆ ಯಾರೂ ಬದ್ಧರಲ್ಲ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕೂಡ ಇದನ್ನು ಪ್ರತಿಬಂಧಕ ಮಾಡುವುದಕ್ಕೆ ಆಗಲೇ ಇಲ್ಲ. ಮತ್ತೆ ಕಾರ್ಪೋರೇಷನ್ನಿಗೆ ಸಹ ಪ್ರತಿಬಂಧಕ ಮಾಡುವುದಕ್ಕೆ ಆಗಲಿಲ್ಲ. ಅಂಥಾದ್ದು ಇವು. ೨೦-೩೦ ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇವುಗಳನ್ನು ಒಡೆಯುವುದಕ್ಕೆ ಆಗುತ್ತದೆಯೇ? ಒಡೆಯುವುದಕ್ಕೆ ಆಗುವುದಿಲ್ಲ. ಎಲ್ಲಾ ಸೌಲಭ್ಯಗಳನ್ನು ನಾವು ಕೊಟ್ಟಿದ್ದೇವೆ. ಕಾರ್ಪೋರೇಷನ್‌ನವರು ಸೌಲಭ್ಯಗಳನ್ನು ಕೊಟ್ಟಿದ್ದಾರೆ. ಇದನ್ನು ಹಾಗೇನೇ ಬಿಟ್ಟುಬಿಡುವುದೇ? ಸುಮಾರು ಲಕ್ಷಾಂತರ ಮನೆಗಳು ಇಂತಹವು ಇದ್ದಾವೆ. ನಾವು ರೆಗ್ಯುಲರೈಸ್ ಮಾಡಿದರೆ, ಇದರಿಂದ ಆದಾಯ ಸರ್ಕಾರಕ್ಕೆ ಸಾಕಷ್ಟು ಬರುತ್ತದೆ. ಆದ್ದರಿಂದ ಇದನ್ನು ರೆಗ್ಯುಲರೈಸ್ ಮಾಡುವುದು ಅನಿವಾರ್ಯ ಎಂದು ಹೇಳಿ ಒಂದು ನಿರ್ಧಾರಕ್ಕೆ ಬಂದಿದ್ದೇವೆ. ಹಿಂದೆ ತಾವು ಕೂಡ ಮಾಡಿದ್ದಿರಿ. ಹಿಂದೆ ಶ್ರೀಮಾನ್ ರಾಮಕೃಷ್ಣ ಹೆಗಡೆ ಅವರು ಬಸವನಗುಡಿಯಲ್ಲಿದ್ದಾಗ ೨೦ ಬೂತ್‌ಗಳು ಇದ್ದಾವೆ. ನಾವು ಅಲ್ಲಿಗೆ ಹೋದಾಗ; ನಮಗೆ ಏನೂ ಬೇಡ, ನಾವು ಮನೆ ಕಟ್ಟಿಕೊಂಡಿದ್ದೇವೆ. ನಮಗೆ ರೆಗ್ಯುಲರೈಸ್ ಮಾಡಿ, ಸಿಟಿ ಕಾರ್ಪೋರೇಷನ್ನಿಗೆ ಸೇರಿಸಿಕೊಳ್ಳಿ. ಬೇಕಾದರೆ ನೀವು ಏನಾದರೂ ಚಾರ್ಜ್ ಮಾಡಿಕೊಳ್ಳಿ, ಅದನ್ನು ಕೊಡುವುದಕ್ಕೆ ತಯಾರಾಗಿದ್ದೇವೆಂದು ಚುನಾವಣಾ ಕಾಲದಲ್ಲಿ ಹೇಳಿದ್ದಾರೆ. ಶ್ರೀಮಾನ್ ಜಾರ್ಜ್ ಅವರ ಕ್ಷೇತ್ರದಲ್ಲಿ ಇರತಕ್ಕವು. ಅಲ್ಲಿ ಕೂಡ ಆಗಿದ್ದಾವೆ. ಹೊಸದಾಗಿ ಮಾಡತಕ್ಕದ್ದಲ್ಲ ಇದು.

ನೀವು ಬಗರ್‌ಹುಕುಂ ಅನ್ನು ಸಕ್ರಮ ಮಾಡುವುದಕ್ಕೆ ಕಾಯಿದೆಯನ್ನು ತರುತ್ತೀರಿ, ಎಂದಿದ್ದೀರಿ. ಅದಲ್ಲ ಇದು, ಇದು ಹತ್ತಾರು ವರ್ಷಗಳಿಂದ ಇರತಕ್ಕಂಥ ಕಟ್ಟಡಗಳು ಏನಿದ್ದಾವೆ, ಅವುಗಳನ್ನು ಅಕ್ರಮವಾಗಿ ಏನು ಕಟ್ಟಿಕೊಂಡಿದ್ದಾರೆ, ಅಂಥ ಕಟ್ಟಡಗಳನ್ನು ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ, ಆದ್ದರಿಂದ ಇದನ್ನು ಸಕ್ರಮ ಮಾಡಿ ಎಂದು ಬಿಲ್ ತಂದಿದ್ದೇವೆಯೇ ಹೊರತಾಗಿ ಬೇರೆ ಯಾವ ಉದ್ದೇಶವೂ ಇಲ್ಲ. Objects and Reasons ನಲ್ಲಿ ಎಲ್ಲಾ ಅಡಕವಾಗಿದೆ. ದಯಮಾಡಿ , ಅದನ್ನು ನೋಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಹಿರಿಯ ಸಚಿವರಾದ ಬಸವಲಿಂಗಪ್ಪನವರು ಹೇಳಿದಂಥ ವಿಚಾರಗಳಲ್ಲಿ ಕೆಲವೊಂದನ್ನು ಒಪ್ಪಬಹುದು. ಆದರೆ ಸಂಪೂರ್ಣವಾಗಿ ಒಪ್ಪಲಿಕ್ಕೆ ಆಗುವುದಿಲ್ಲ. ನೀವು ಬಡವರಿಗೆ ಸಹಾಯ ಮಾಡುವುದಾದರೆ ಅಥವಾ ಅನಧಿಕೃತವಾಗಿ ಕಟ್ಟಡಗಳನ್ನು ಕಟ್ಟಿದವರ ಬಗ್ಗೆ ನಿಮಗೆ ಅನುಕಂಪ ಇದ್ದರೆ ಅದನ್ನು ಮಾಡಿ. ಸಕ್ರಮಗೊಳಿಸತಕ್ಕಂಥ ವಿಚಾರವನ್ನು ನಾನು ಹೇಳಿದೆ, ಅದಕ್ಕೆ ಈಗಾಗಲೇ ಲಕ್ಷಾಂತರ ಮನೆಗಳನ್ನು ಕಟ್ಟಿಬಿಟ್ಟಿದ್ದಾರೆ, ಅಂದರೆ ರಾಜ್ಯದಲ್ಲಿ ಆಗ ಕಾನೂನು ಇರಲಿಲ್ಲವೇ?

ಶ್ರೀ ಕೆ.ಜೆ. ಜಾರ್ಜ್ : ಸನ್ಮಾನ್ಯ ಅಧ್ಯಕ್ಷರೇ, ಆಗ ಕೂಡ ಕಾನೂನು ಇತ್ತು. ಆದರೂ ಕೂಡ ಬುಲ್ಡೋಜರನ್ನು ಕಳುಹಿಸಿದರು. ಬುಲ್‌ಡೋಜರ್ ಕಳುಹಿಸುವ ಸಂದರ್ಭದಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದರು. ಆಗ ಜನರು ಗಲಾಟೆ ಮಾಡಿ, ಪ್ರತಿಭಟನೆ ಮಾಡಿ ವಾಪಸ್ ಕಳುಹಿಸಿದರು. ಅದಾದ ಮೇಲೆ ಒಂದು ಮೀಟಿಂಗ್ ಮಾಡಿ ೧೯೮೭ ರಲ್ಲಿ ಒಂದು ಆರ್ಡರ್ ಮಾಡಿದರು. ಇಂಥ ಅನ್‌ಆಥರೈಸ್ಡ್ ಕಟ್ಟಡಗಳನ್ನು ಎಲ್ಲಾ ರೆಗ್ಯುಲರೈಸ್ ಮಾಡಬೇಕೆಂದು. ಅದಕ್ಕೆ ಕಟ್ ಆಫ್ ಡೇಟ್ ೧೯೮೭ನೇ ಇಸವಿಯ ಮಾರ್ಚ್ ತಿಂಗಳು ಎಂದು ಹೇಳಿದರು. ಆದ್ದರಿಂದ ಅದು ಬಂದದ್ದರಿಂದ ಇನ್ನಷ್ಟು ಜಾಸ್ತಿ ಆಯಿತು.

ಶ್ರೀ ಆರ್.ವಿ. ದೇಶಪಾಂಡೆ : ಬುಲ್‌ಡೋಜರ್ ಹೋದ ವಿಚಾರ ಹೇಳಿದರು. ಅದು ನನಗೆ ಗೊತ್ತಿಲ್ಲ. Your statement saying that Sri Ramakrishna Hegde sent the buildozer is not correct. I request you to correct it yourself. ಮಾನ್ಯ ರಾಮಕೃಷ್ಣ ಹೆಗಡೆಯವರು ಬುಲ್‌ಡೋಜರ್ ಕಳುಹಿಸಿದ್ದರು ಎಂದು ಹೇಳುವುದು ಸರಿಯಲ್ಲ. It was Sri Ramakrishna Hegde's government which wanted to regularise, and you are getting credit for all the efforts made by Hegde's government.

ಶ್ರೀ ಕೆ.ಜೆ. ಜಾರ್ಜ್ : ನಾನು ಮಾನ್ಯ ರಾಮಕೃಷ್ಣ ಹೆಗಡೆಯವರು ಇದ್ದಾಗ ಮಾಡಿದ್ದರು ಎಂದು ಹೇಳಿದ್ದೆ. ನಾನು ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಎಂದು ಹೇಳಿದ್ದೆ. ಅವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಬಿಡಿಎ ದವರು ಕಳುಹಿಸಿದ್ದರು ಎಂದು ಹೇಳಿದ್ದೆ, ಮುಖ್ಯಮಂತ್ರಿಗಳು ಬುಲ್‌ಡೋಜರ್ ಕಳುಹಿಸುತ್ತಾರೆಯೇ? ಆಗ ಗಲಾಟೆ ಆಗಿ ಅವರು ನಿಮ್ಮ ಮಂತ್ರಿ ಮಂಡಲದಲ್ಲಿ ಒಂದು ಜಿ.ಓ. ಪಾಸ್ ಮಾಡಿದರು. ೧೯೮೭ ರಲ್ಲಿ ಎಲ್ಲಾ ಅನ್‌ಆಥರೈಸ್ಡ್ ಇರುವುದನ್ನು ರೆಗ್ಯುಲರೈಸ್ ಮಾಡಬೇಕೆಂದು ಹೇಳಿದರು. ಆದರೆ ಆಗ ಅದನ್ನು ರೆಗ್ಯುಲರೈಸ್ ಮಾಡಿ ಇಂಪ್ಲಿಮೆಂಟ್ ಮಾಡುವುದಕ್ಕೆ ಆಗಲಿಲ್ಲ. ಹತ್ತು ಆಕ್ಟ್‌ಗೆ ಅಮೆಂಡ್‌ಮೆಂಟ್ ತರಬೇಕೆಂದು ಆಯಿತು. ಅದಾದ ಮೇಲೆ ಶ್ರೀ ವೀರೇಂದ್ರಪಾಟೀಲ್‌ರವರು ಬಂದಮೇಲೆ ಕ್ಯಾಬಿನೆಟ್ ಸಬ್‌ಕಮಿಟಿ ಮಾಡಬೇಕೆಂದು ಹೇಳಿ, ಮೊನ್ನೆತಾನೆ ಕ್ಯಾಬಿನೆಟ್ ಸಬ್‌ಕಮಿಟಿಯಲ್ಲಿ ಡಿಸೈಡ್ ಮಾಡಿ ಲಾ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿ, ಅವರು ಅದನ್ನು ಸ್ಕೃಟನಿ ಮಾಡಿ ಇವೊತ್ತು ನಾವು ಬಿಲ್ ತಂದಿದ್ದೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷಿಣಿಯವರೇ, ನಾನು ಹೇಳತಕ್ಕಂಥ ವಿಷಯ ಬಹುಶ: ಸಚಿವರಿಗೆ ಸರಿ ಕಾಣಲಿಲ್ಲ ಎಂದು ಕಾಣುತ್ತದೆ. ಇವರು ತಂದಿರತಕ್ಕಂಥಾದ್ದರಲ್ಲಿ ೩೧-೩-೯೦ ರಂದು ಇಲ್ಲಿಯವರೆಗೆ ಯಾರು ಅತಿಕ್ರಮಣವಾಗಿ ಮಾಡಿಕೊಂಡಿದ್ದಾರೆ, ಕಟ್ಟಡಗಳನ್ನು ಕಟ್ಟಿದ್ದಾರೆ, ಅವೆಲ್ಲವನ್ನೂ ಸಕ್ರಮ ಮಾಡತಕ್ಕಂಥ ಒಂದು ಕಾನೂನನ್ನು ಈ ಸರಕಾರವು ತರಲು ಇಚ್ಛಿಸುತ್ತಾ ಇದೆ. ಇಲ್ಲಿ ಅವರದೇ ಆದ ಭೂಮಿಯಲ್ಲಿ ಕಟ್ಟಿರಬೇಕೆಂಬ ಮಾತನ್ನು ಹೇಳಿದ್ದೀರಿ. ಅವನ ಸ್ವಂತ ಭೂಮಿ ಇಲ್ಲದಿದ್ದರೆ, ಬೇರೆಯವರ ಭೂಮಿಯಲ್ಲಿ ಕಟ್ಟಿದ್ದರೆ, ಅವನಿಗೆ ಭೂಮಿಯ ಮಾಲೀಕತ್ವ ಇಲ್ಲದಿದ್ದರೆ, ಈ ಕಾನೂನಿನಲ್ಲಿ ಅವನಿಗೆ ಅನಧಿಕೃತವಾದುದನ್ನು ಅಧಿಕೃತ ಎಂದು ಹೇಳಲಿಕ್ಕೆ ಏನು ಅವಕಾಶ ಇದೆ? ಕಟ್ಟಡ ಕಟ್ಟಲು ಅವನು ಕಾನೂನುಬದ್ಧವಾಗಿ ಪರ್ಮಿಷನ್ ತೆಗೆದುಕೊಂಡಿಲ್ಲ, ಕಾನೂನು ಉಲ್ಲಂಘನೆ ಮಾಡಿ ಕಟ್ಟಿರುತ್ತಾನೆ. ಆ ಭೂಮಿಯೂ ಸಹಿತ ಅವನದಲ್ಲ. ಮೂಲ ಮಾಲೀಕ ಹಣವನ್ನು ಪಡೆದುಕೊಂಡು ಹೋಗಿಬಿಟ್ಟ.

ಈ ಭೂಮಿಯ ಮಾಲೀಕತ್ವ ಇವನಿಗೆ ಬರಲಿಲ್ಲ. ಅಂಥವರಿಗೆ ನಿಮ್ಮ ಕಾನೂನಿನಲ್ಲಿ ಏನು ಅವಕಾಶ ಇಟ್ಟಿದ್ದೀರಿ? ಯಾವುದೂ ಇಲ್ಲ? ಅಂಥವರೇ ಹೆಚ್ಚು ಜನರು ಇದ್ದಾರೆ. ಸ್ವತ: ತಮ್ಮ ಭೂಮಿಯಲ್ಲಿ ಮನೆಗಳನ್ನು ಕಟ್ಟಿಕೊಂಡವರು ಕಡಿಮೆ ಇದ್ದಾರೆ. The ownership is not conveyed to the person who has constructed the house at a particular place. What is the remedy in this Act? —ಯಾರದೇ ಭೂಮಿಯಾದರೂ ಸಹಿತ ಸರಕಾರದ ಭೂಮಿ ಎಂದು ಹೇಳುತ್ತೀರಲ್ಲಾ if it is a government land ಅದು ಮಾಲ್ಲಕೀಯ ಜಮೀನು ಇದ್ದರೂ ಸಹಿತ

ಯಾವ ವ್ಯಕ್ತಿ ಅಲ್ಲಿ ಮನೆಯನ್ನು ಕಟ್ಟುತ್ತಾನೆ, ಅವರಿಗೇ ಮಾಡುತ್ತೇವೆ ಎಂದು ಹೇಳಿದರೆ, ಆಗ ನಿಮ್ಮ ಸರಕಾರವು ಬಡವರ ಪರವಾಗಿ ಇದೆ, ದೀನದಲಿತರ ಪರವಾಗಿದೆ ಎಂದು ಹೇಳಬಹುದು. ದಯಮಾಡಿ ಅದನ್ನು ಮಾಡಿ. ಯಾಕೆಂದರೆ ಭೂಮಿಯ ಮಾಲೀಕರು ಈಗಾಗಲೇ ಅವರಿಂದ ಹಣವನ್ನು ಪಡೆದಿದ್ದಾರೆ. ಹಣ ಕೊಟ್ಟವರು ಮನೆ ಕಟ್ಟಿಕೊಂಡಿದ್ದಾರೆ.

ತನ್ನ ಜಮೀನಿನಲ್ಲಿ ಅಥವಾ ಸರಕಾರಿ ಜಮೀನಿನಲ್ಲಿ ಕಟ್ಟಿದ ಮನೆಗಳನ್ನು ಇವೊತ್ತು ರೆಗ್ಯುಲರೈಸ್ ಮಾಡುತ್ತಿದ್ದೀರಿ, ಆದರೆ ಒಬ್ಬ ಬೇರೆಯವರ ಭೂಮಿಯಲ್ಲಿ ಕಟ್ಟಿದ್ದರೆ, ಅದನ್ನು ಕಿತ್ತು ಹಾಕುತ್ತೀರಿ ಎನ್ನುತ್ತೀರಾ? ಈ ಶಾಸನವನ್ನು ಮಾಡುವಾಗ ಈ ಶಾಸನಸಭೆಯ ಶಾಸಕರ ಸಂಪೂರ್ಣವಾದ ಒಪ್ಪಿಗೆಯನ್ನು ಪಡೆಯಬೇಕು. ಅದನ್ನು ಮಾಡಲಿಲ್ಲ. ದಯಮಾಡಿ ಮಾಡಿ. ಭೂಮಿಯ ಮಾಲೀಕರು ಈಗಾಗಲೇ ಅವರಿಂದ ಹಣವನ್ನು ಪಡೆದಿದ್ದಾರೆ. ಅಲ್ಲಿ ಅನೇಕ ಜನರ ಕಷೆಯಿರದ ಹಣವನ್ನು ಪಡೆದು ಮನೆಯನ್ನು ಕಟ್ಟುವುದಕ್ಕೆ ಕೊಟ್ಟಿದ್ದಾರೆ. ಹಣವನ್ನು ಕೊಡದೇ ಇರತಕ್ಕಂಥವರು ಬಹಳ ವಿರಳ. ಇಲ್ಲದಿದ್ದರೆ ಆ ಮನೆಗಳನ್ನು ತಾವು ತೆಗೆದುಹಾಕುತ್ತೀರಾ? ಈಗ ನನ್ನ ಜಮೀನಿನಲ್ಲಿ ಅಥವಾ ಸರ್ಕಾರದಲ್ಲಿ ಕಟ್ಟುತ್ತಿರತಕ್ಕಂಥ ಮನೆಯನ್ನು ಇವತ್ತು ರೆಗ್ಯುಲರೈಸ್ ಮಾಡುತ್ತಿದ್ದೀರಿ. ಸಕ್ರಮ ಮಾಡುತ್ತಿದ್ದೀರಿ. ನನ್ನ ಭೂಮಿ ಅಲ್ಲದೇ ಇದ್ದಂಥವರು ಮತ್ತು ಬೇರೆಯವರ ಭೂಮಿಯಲ್ಲಿ ಕಟ್ಟಿದ್ದರೆ, ಆ ಬಡವರ ಮನೆಯನ್ನು, ಆ ಹುಲ್ಲಿನ ಚಪ್ಪರವನ್ನು, ಮಣ್ಣಿನ ಮನೆಯನ್ನು ಕಿತ್ತುಹಾಕುವ ಯೋಚನೆ ಸರ್ಕಾರಕ್ಕೆ ಇದೆಯೇ ಎಂದು ನಾನು ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಇದರಲ್ಲಿ ಸ್ಪಷ್ಟವಾದಂಥದ್ದು ಇಲ್ಲ.

ಅದೇ ರೀತಿ ಇವತ್ತು ಶಾಸನವನ್ನು ಮಾಡುವಾಗ ಶಾಸನಸಭೆಯ ಸದಸ್ಯರ ಸಂಪೂರ್ಣವಾದಂಥ ಒಪ್ಪಿಗೆಯನ್ನು ಪಡೆಯಬೇಕು. ಇವತ್ತು ಹಣವನ್ನು ಯಾವ ರೀತಿ ಹಳ್ಳಿಯಲ್ಲಿ ಎಷ್ಟು ಹಾಕಬೇಕು, ಇವತ್ತು ಬೆಂಗಳೂರು ನಗರದಲ್ಲಿ ಎಷ್ಟೊಂದು ಹಣವನ್ನು ಆಕರಣೆ ಮಾಡಬೇಕು, ಇವತ್ತು ಹುಬ್ಬಳ್ಳಿ-ಧಾರವಾಡದಲ್ಲಿ ಅಥವಾ ರಾಣೆಬೆನ್ನೂರಿನಲ್ಲಿ ಅಥವಾ ಮುನಿಸಿಪಾಲಿಟಿ ಏರಿಯಾದಲ್ಲಿ ಎಂಬುದರ ಬಗ್ಗೆ ಇದರಲ್ಲಿ ಇಲ್ಲ. ಶಾಸನವನ್ನು ಮಾಡುವಾಗ ಶಾಸಕಾಂಗದ ಸ್ಪಷ್ಟವಾದಂಥ ಅಭಿಪ್ರಾಯ ಈ ಕಾನೂನಿನಲ್ಲಿ ವ್ಯಕ್ತವಾಗಬೇಕು, ಆದರೆ ಇದನ್ನು ಸ್ಪಷ್ಟಪಡಿಸಿಲ್ಲ. ಇದನ್ನು ಸ್ಪಷ್ಟಪಡಿಸದೇ ಇರುವುದರಿಂದ ಕಾನೂನು ಮಾಡತಕ್ಕಂಥ ಅಧಿಕಾರವನ್ನು ಅಧಿಕಾರಿಗಳಿಗೆ ಈ ರೂಲ್ಸ್ ಮಾಡುವ ಮೂಲಕ, ನಿಯಮವನ್ನು ಮಾಡುವ ಮೂಲಕ ಕೊಟ್ಟಂತೆ ಆಗುತ್ತದೆ.

ಕೇವಲ ಪ್ರೊಸೀಜರ್ ನೀತಿ ನಿಯಮ ಇದೆ. ಅರ್ಜಿಗಳನ್ನು ಯಾವ ರೀತಿ ಕೊಡಬೇಕು, ನೀತಿ ನಿಯಮಗಳನ್ನು ಪ್ರೊಸೀಜರ್ ಮುಖಾಂತರ ಮಾಡಬಹುದೇ ವಿನಹಾ ಕಾನೂನನ್ನು ಸ್ಪಷ್ಟವಾಗಿ ಕಾನೂನಿನಲ್ಲಿ ಹೇಳದೆ ಅಧಿಕಾರಿಗಳಿಗೆ ಅಥವಾ ಸರ್ಕಾರಕ್ಕೆ ಈ ಅಧಿಕಾರವನ್ನು ಡೆಲಿಗೇಟ್ ಮಾಡಲಿಕ್ಕೆ ಅಥವಾ ಬ್ಲ್ಯಾಂಕ್ ಚೆಕ್ ಕೊಡಲಿಕ್ಕೆ ರಾಜ್ಯಾಂಗದಲ್ಲಿ ಅವಕಾಶ ಇಲ್ಲ, ಅಂಥ ಕಾನೂನನ್ನು ಮಾಡುವುದಕ್ಕೆ ನಿಮಗೆ ಅವಕಾಶ ಇಲ್ಲ. ಇವತ್ತು ನೀವು ಸರ್ಕಾರದ ಅಭಿಪ್ರಾಯವೇನು ಎಂಬುದನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಯಾವ ನಗರದಲ್ಲಿ ಎಷ್ಟು ಹಣವನ್ನು ಆಕರಣೆ ಮಾಡಬೇಕು ಎಂದು ಮಾಡಿದ್ದೀರಿ, ಇವತ್ತು ಬಡವರಿಗೆ ಎಷ್ಟು ಮಾಡಬೇಕೆಂದಿದ್ದೀರಿ, ಹಾಗೂ ಹಿಂದುಳಿದವರಿಗೆ ಎಷ್ಟು ಮಾಡಬೇಕು ಎಂದು ಯೋಚನೆ ಮಾಡಿದ್ದೀರಿ ಎಂಬುದನ್ನು ಈ ಶಾಸನಸಭೆಗೆ ತಿಳಿಸಬೇಕಾಗುತ್ತದೆ. ಈ ಶಾಸನಸಭೆ ಒಂದು ಒಪ್ಪಿಗೆಯನ್ನು ಕೊಡಬೇಕಾಗುತ್ತದೆ.

ಅದನ್ನು ಬಿಟ್ಟು ಈ ಶಾಸನಸಭೆಗೆ ಇದನ್ನು ತಿಳಿಸದೇ ಮಾಡುವುದು ಸರಿಯಲ್ಲ. ನಮ್ಮ ಗ್ರಾಮದಲ್ಲಿ ಹೇಳುತ್ತಾರೆ, "ಮುಸುಕಿನಲ್ಲಿ ದೊಣ್ಣೆ" ಎಂದು, ಆ ರೀತಿ ಯಾರಿಗೆ ಅನುಕೂಲ ಬೇಕೋ ಅವರಿಗೆ ಅನುಕೂಲವನ್ನು ಮಾಡುವುದು, ಯಾರಿಗೆ ಬೇಡ ಅವರಿಗೆ ಹೆಚ್ಚಿಗೆ ಮಾಡುವಂಥ ಈ ಒಂದು ವಿಚಾರ ಸರ್ಕಾರಕ್ಕೆ ಇದೆಯೇನೋ ಎನ್ನತಕ್ಕಂಥ ಶಂಕೆ ಇದರಿಂದ ಬರುತ್ತದೆ ಎನ್ನತಕ್ಕಂಥ ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಅದಕ್ಕಾಗಿಯೇ ಈ ಒಂದು ಕಾನೂನನ್ನು ಇಷ್ಟೊಂದು ತರಾತುರಿಯಿಂದ ಶಾಸನಸಬೆಯಲ್ಲಿ, ತರತಕ್ಕಂಥ ಪ್ರಯತ್ನವನ್ನು ಮಾಡಿದ್ದಾರೆ.

ಮುಂಜಾನೆ ಒಂದು ಬಿಲ್ಲನ್ನು ತಂದು ಮಧ್ಯಾಹ್ನ ನಾವು ಕನ್‌ಸಿಡರೇಷನ್ ಮಾಡಿ ಪಾಸ್ ಮಾಡಿದರೆ, ಲಕ್ಷಾಂತರ ಜನರ ಮೇಲೆ ಈ ಕಾನೂನಿನ ಪರಿಣಾಮವಾಗುತ್ತದೆ. ಅವರು ಯೋಚನೆಯನ್ನು ಮಾಡಲಿ. ಇದರ ಬಗ್ಗೆ ಯೋಚನೆ ಮಾಡಬೇಕಾದರೆ, ಕಾಲಾವಕಾಶ ಬೇಕಾಗುತ್ತದೆ. ಆದ್ದರಿಂದ ಇದನ್ನು ವಾಪಸ್ ತೆಗೆದುಕೊಂಡು ಮತ್ತೆ ವಿವರವಾದಂಥ ಕಾನೂನನ್ನು ತಂದರೆ ಒಳ್ಳೆಯದು. ಇಲ್ಲದಿದ್ದರೆ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಇದನ್ನು ಒಪ್ಪಿಸಿ. ಅಲ್ಲಿರತಕ್ಕಂಥ ನ್ಯೂನತೆಗಳನ್ನು ಸರಿಪಡಿಸಿ ಒಬ್ಬ ಬಡವರಿಗೆ ಅಥವಾ ಸಾರ್ವಜನಿಕರಿಗೆ ಉಪಯೋಗವಾಗತಕ್ಕಂಥದ್ದು ಅನಿವಾರ್ಯ ಎಂದು ಹೇಳುತ್ತೀರಿ. ಏತಕ್ಕೆ ಇದನ್ನು ಒಪ್ಪಬೇಕು? ಇದು ಅನಿವಾರ್ಯ ಎಂದು ಹೇಳಿ ಇರತಕ್ಕಂಥ ಅನಧಿಕೃತ ಕಟ್ಟಡಗಳನ್ನು ತೆಗೆದುಹಾಕುವುದಕ್ಕೆ ಸಾಧ್ಯವಿಲ್ಲ ಎಂದು ಸರ್ಕಾರ ಸ್ಪಷ್ಟವಾಗಿ ಹೇಳಿದಾಗ ಮತ್ತೆ ಆ ರೀತಿ ಪ್ರತಿದಿನವೂ ಮಾಡಬೇಕಾಗುತ್ತದೆ.

ಹೀಗೆಯೇ ಮುಂದುವರಿದರೆ, ಕಾನೂನು ಬಾಹಿರವಾಗಿ ನಡೆದುಕೊಳ್ಳುವುದು, ಅನಿವಾರ್ಯವಾಗುತ್ತದೆ. ಸರ್ಕಾರ ಯಾವುದೇ ಇರಲಿ, ಆಡಳಿತದಲ್ಲಿರತಕ್ಕಂಥ ಒಂದು ಲೋಪ ದೋಷವನ್ನು ಸರಿಪಡಿಸಲೇಬೇಕು. ಕಾನೂನುಬದ್ಧವಾಗಿ ಸರ್ಕಾರವನ್ನು ನಡೆಸತಕ್ಕಂಥವರು ತಾವೇ ಸರಿಯಾಗಿ ನಡೆಯದೇ ಹೋದರೆ, ಜನರನ್ನು ಕಾನೂನುಬದ್ಧವಾಗಿ ನಡೆಯಿರಿ ಎಂದು ಹೇಳುವುದಕ್ಕೆ ಶಕ್ತಿಯೇ ಉಳಿಯುವುದಿಲ್ಲ. ಅದಕ್ಕೆ ಇಂಥ ಕಾನೂನನ್ನು ಪಾಸ್ ಮಾಡಬೇಕಾಗಿದೆ. ಅದಕ್ಕಾಗಿ ಇದನ್ನು ವಾಪಸ್ ತೆಗೆದುಕೊಳ್ಳಿ, ಅಥವಾ ಜಾಯಿಂಟ್ ಕಮಿಟಿಗೆ ಒಪ್ಪಿಸಿ. ದಯವಿಟ್ಟು ನಿಜವಾಗಿ ಬಡವರಿಗೆ ಇದರಿಂದ ಉಪಯೋಗವಾಗಬೇಕೆಂಬ ಉದ್ದೇಶ ಇದ್ದರೆ ತೀವ್ರವಾಗಿ ಒಂದು ಸಮಯವನ್ನು ನಿರ್ದಿಷ್ಟಪಡಿಸಿ ಕೂಲಂಕುಷವಾಗಿ ವಿಚಾರವನ್ನು ಮಾಡಿ. ಈ ಒಂದು ಕಾನೂನನ್ನು ತಂದರೆ ಸದುಪಯೋಗವಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಅಧ್ಯಕ್ಷಿಣಿಯವರೇ, ನಾನು ಕೆಲವು ವಿವರಗಳನ್ನು ಮಾತ್ರ ಕೇಳುವುದಕ್ಕೆ ಇಷ್ಟಪಡುತ್ತೇನೆ. ಈ ಮಸೂದೆಯಲ್ಲಿ ಯಾರು ಕಟ್ಟಡಗಳನ್ನು ಕಟ್ಟಿಕೊಂಡಿದ್ದಾರೆ; ಅವರಿಗೆ ಮಾತ್ರ ಬಿಟ್ಟುಕೊಡುತ್ತಿಂತಹ ಒಂದು ನಿದರ್ಶನ ಇದರಲ್ಲಿ ಇದೆ. ಎರಡು ಕಟ್ಟಡಗಳ ಮಧ್ಯೆ ಇರುವಂತಹ ಖಾಲಿ ನಿವೇಶನಗಳನ್ನು ಮಾಡಿಕೊಂಡಂತಹ ನಾಗರಿಕನ ಗತಿ ಏನು? ಮೊದಲು ಸೈಟ್ ಮಾಡಿದ್ದು ತಪ್ಪು, ಆ ಸೈಟ್ ಮೇಲೆ ಮನೆಯನ್ನು ಕಟ್ಟಿದವನಿಗೆ ನಾವು ಕಾನೂನು ಬಾಹಿರವಾಗಿ ರಿಯಾಯತಿಯನ್ನು ಕೊಡುತ್ತಿದ್ದೇವೆ. ಅದೇ ವೇಕೆಂಟ್ ಸೈಟನ್ನು ಯಾವತ್ತಾದರೂ ಕಟ್ಟಿಕೊಳ್ಳೋಣವೆಂದು ಯಾರು ಉಳಿಸಿಕೊಂಡಿರುತ್ತಾನೆ ಅವನಿಗೆ ಈ ರಿಯಾಯಿತಿಯನ್ನು ತೋರಿಸಿರುವುದು ಕಾಣುತ್ತಿಲ್ಲ. ಇದು ಮೊದಲನೆಯದು.

ಎರಡನೆಯದು ಒಂದು ರಸ್ತೆಯಲ್ಲಿ ನಾಲ್ಕು ಸೈಟ್ ನಲ್ಲಿ ಕಟ್ಟಡವನ್ನು ಕಟ್ಟಿ, ಇನ್ನು 10 ಸೈಟ್‌ನಲ್ಲಿ ಕಟ್ಟಡ ಕಟ್ಟಿಲ್ಲ. ಅಂದರೆ, 10 ಜನಕ್ಕೆ ಇಲ್ಲ, ಈ 4 ಜನಕ್ಕೆ ಉಂಟು. ಯಾರು ಪ್ರಭಾವವನ್ನು ಹೆಚ್ಚು ಬೀರಿದ್ದಾರೆ. ಯಾರು ಜಬರ್ದಸ್ತಿ ಮಾಡಿದ್ದರೆ

ಜಾಸ್ತಿ ಅವರಿಗೆ ಕೊಡುತ್ತಾರೆ. ಉರ್ದು ಭಾಷೆಯಲ್ಲಿ ಒಂದು ಗಾದೆ ಇದೆ. "ಕಿಸಕೀ ಲಾಠಿ ಉಸ್ ಕೀ ಭೈಂಸ್" ಅಂತ. ಯಾರ ಕೈಯಲ್ಲಿ ಕೋಲು ಇದೆ, ಆ ಎಮ್ಮೆ ಅವನದು ಎಂದು ಯಾರು ಹೆಚ್ಚು ಜಬರ್ ದಸ್ತಿ ಮಾಡುತ್ತಾರೆ, ಅಂತಹವರ ಕಡೆಗೆ ನಮ್ಮ ಗಮನ ಹೆಚ್ಚು ಹೋಗುತ್ತದೆ. ರಿಯಾಯಿತಿ ಕೊಡುವುದಕ್ಕೆ ಒಂದು 40'x60' ಹಾಗೂ 30'x50' ಸೈಟಲ್ಲಿ ಒಬ್ಬ ಬಡಪಾಯಿ ಯಾವುದೋ ಒಂದು ಮೂಲೆಯಲ್ಲಿ ಸಣ್ಣ ಮನೆಯನ್ನು 2-3 ಚದರದಲ್ಲಿ ಕಟ್ಟಿಕೊಳ್ಳುತ್ತಾನೆ. ಭವಿಷ್ಯದಲ್ಲಿ ಮಕ್ಕಳು ದೊಡ್ಡವರಾದ ಮೇಲೆ ದುಡ್ಡಿನ ಅನುಕೂಲವಾದ ಮುಂದಕ್ಕೆ ಕಟ್ಟಿಕೊಳ್ಳೋಣ ಎಂದು ಜಾಗ ಬಿಟ್ಟುಕೊಂಡಿರುತ್ತಾನೆ. ಅವನ ಉಳಿದ ವೇಕೆಂಟ್ ಪೋರ್‌ಷನ್ ರಿಯಾಯಿತಿ ಕೊಡಲು ಸ್ಕೋಪ್ ಇರುವ ಹಾಗೆ ನನಗೆ ಇದರಲ್ಲಿ ಕಾಣುತ್ತಿಲ್ಲ.

ಮೂರನೆಯದು, ಸಣ್ಣ ಸೈಟ್‌ನಲ್ಲಿ ಮೊದಲನೆಯ ವರ್ಷದಲ್ಲಿ ಒಂದು ಗ್ರೌಂಡ್ ಫ್ಲೋರ್ ಮಾತ್ರ ಕಟ್ಟಿರುತ್ತಾನೆ. ಇನ್ನೊಂದು ಸಲ ಅದರ ಮೇಲೆ ಮಹಡಿ ಕಟ್ಟುತ್ತಾನೆ. ಮೂರನೆಯ ಸಲಕ್ಕೆ ಇನ್ನೊಂದು ಮಹಡಿಯನ್ನು ಕಟ್ಟುತ್ತಾನೆ. ಎರಡನೆಯ ಮಹಡಿ ಮತ್ತು ಅದಕ್ಕಿಂತ ಹೆಚ್ಚಾಗಿ ಕಟ್ಟಿದರೆ ಆತನಿಗೆ ರಿಯಾಯಿತಿ ಇಲ್ಲ, ಅನ್ನುತ್ತಾರೆ. ಇದರಲ್ಲಿ ಏನಾದರೂ ಒಂದು ರ್‍ಯಾಶನಾಲಿಟಿ ಇದೆಯಾ? ಎನ್ನುವುದು ನನ್ನ ಭಾವನೆ. ನಾವು ಯಾವುದೇ ಹೆಸರಿನಲ್ಲಿ ಏನು ಮಾಡಿದರೂ ಕೂಡ ಅಂತಿಮವಾಗಿ ನಮ್ಮ ಗಮನ ಯಾರ ಕಡೆ ಅಂದರೆ, ಆ ನಾಗರಿಕ ಬಡಪಾಯಿ ಯಾವರೀತಿ ತನ್ನ ವಸತಿ ಸೌಕರ್ಯವನ್ನು ಮಾಡಿಕೊಳ್ಳಬೇಕೆಂದು ಹೊರಡುತ್ತಾನೆ.

ಅವನಿಗೆ ವಸತಿ ಸೌಕರ್ಯ ಮಾಡಿಕೊಡುವುದಕ್ಕೆ ಅನುಕೂಲ ಮಾಡಿಕೊಡುವುದು ಪ್ರಾರಂಭದಲ್ಲೂ ಅಂತಿಮದಲ್ಲೂ ಅಥವಾ ಯಾವುದೋ ಒಂದು ಘಟ್ಟದಲ್ಲಿ ಅದನ್ನು ಮಾಡಬೇಕಾದರೆ ಆ ಸ್ಪಿರಿಟ್ ಅನ್ನು ನಾವು ಟ್ರಾನ್ಸ್‌ಸಲೇಟ್ ಮಾಡುತ್ತಿದ್ದೀರಾ ಆಕ್ಷನ್ ನಲ್ಲಿ ಎನ್ನುವುದು ಮುಖ್ಯವಾದ ವಿಷಯವಾಗಿದೆ. ಮತ್ತೊಂದು ವಿಷಯವನ್ನು ಹೇಳುತ್ತೇನೆ. ಕೆಲವು ಕಡೆಗಳಲ್ಲಿ ಬರೀ ಖಾಲಿ ಸೈಟ್ ಗಳೇ ಇರುತ್ತವೆ. ಕೇವಲ ಮನೆಗಳು ಬಂದಿರುತ್ತವೆ. ಹೆಚ್ಚು ಖಾಲಿ ಸೈಟ್ ಗಳೇ ಇರುತ್ತವೆ. ಅದನ್ನು ರೀಕನ್‌ವೇಯನ್ಸ್ ಮಾಡಬೇಕೆಂದು ಬಹಳ ಕಾಲದಿಂದ ಸೈಟ್ ಓನರ್ಸ್ ಕೇಳುತ್ತಿದ್ದಾರೆ. ರೆಗ್ಯುಲರೈಸೇಷನ್ ಪ್ರಶ್ನೆ ಇಲ್ಲ, ರೀಕನ್‌ವೇಯನ್ಸ್ ಅಂತ ಹೇಳಿ, ಅಕ್ವೈರ್ ಆಗಿ ಹಾಗೆಯೇ ಉಳಿದುಕೊಂಡಿರುತ್ತದೆ.

ಜನದ್ದೇ ಜಮೀನು, ಆ ವಿಷಯದಲ್ಲಿ ರೀಕನ್‌ವೇಯನ್ಸ್ ಮಾಡಬೇಕೆಂದು ಹೇಳಿ, ಬಿಡಿಎ ಯಿಂದ ರೆಸಲ್ಯೂಷನ್ ಮಾಡಿದ್ದರೆ, ಅದು ಕಾನೂನು ಬಾಹಿರವಾಗಿದೆ, ಬಿಡಿಎಗೆ ಪವರ್ಸ್ ಇಲ್ಲ ಎಂದು ಕೋರ್ಟ್ ತೀರ್ಮಾನ ಮಾಡಿದೆ. ಬಿಡಿಎ ಆಕ್ಟ್ ಅನ್ನು ಅಮೆಂಡ್ ಮಾಡಿಕೊಂಡಾಗ ಮಾತ್ರ ಅದಕ್ಕೆ ಪವರ್ಸ್ ಬರುತ್ತದೆ. ಪವರ್ಸ್ ಬಂದ ಮೇಲೆ ರೀಕನ್‌ವೇಯನ್ಸ್ ಮಾಡುವುದಕ್ಕೆ ಸಾಧ್ಯವುಂಟು. ಇಲ್ಲಿ ಲೆಗ್ಯುಲರೈಸೇಷನ್ನಿಗೂ ಸ್ಕೋಪ್ ಇಲ್ಲ, ರೀಕನ್‌ವೇಯನ್ಸ್ ಗೂ ಸ್ಕೋಪ್ ಇಲ್ಲ, ಅಂದಮೇಲೆ ಅವರ ಗತಿ ಏನಾಗಬೇಕು? ಅದಕ್ಕೆ ಅಮೆಂಡ್‌ಮೆಂಟ್ ಮಾಡಿ, ಪವರ್ಸ್ ಬಿಡಿಎಗೆ ಕೊಡಬೇಕಾಗಿದೆ. ಈ ರೀತಿಯಾದ ಕೆಲವು ನ್ಯೂನ್ಯತೆಗಳು ನನಗೆ ಕಾಣಬರುತ್ತಿದೆ. ಶ್ರೀಮಾನ್ ಬಸವಲಿಂಗಪ್ಪನವರು ಒಂದು ಮಾತನ್ನು ಹೇಳಿದರು, ಇದು ನನ್ನ ಕ್ಷೇತ್ರದಲ್ಲಿ ಒಂದೂ ಆಗಿಲ್ಲ, ನನ್ನದು ಬಿಡಿಎ ವ್ಯಾಪ್ತಿಗೆ ಆಗಲಿ, ರೆವಿನ್ಯೂ ವ್ಯಾಪ್ತಿಗೆ ಆಗಲಿ ಬರುವುದಿಲ್ಲ.

ಆದರೆ ಬೆಂಗಳೂರು ನಗರದಾದ್ಯಂತ ಜನರ ವಿಷಯವನ್ನು ನಾವು ಗಮನಕ್ಕೆ ತಂದರೆ ಬಹಳವಾಗಿ ಬಾರ್ಡರ್ ಏರಿಯಾದ ಬೆಂಗಳೂರು ನಗರದ ಶಾಸಕರಿಗೆ ಹಾಗೂ, ರೂರಲ್ ಏರಿಯಾದ ಶಾಸಕರಿಗೆ, ಅರ್ಬನ್ ಏರಿಯಾದ ಶಾಸಕರಿಗೆ

ಬರುತ್ತದೆ. ಅಲ್ಲಿ ಸಾವಿರಾರು ಕೇಸಸ್‌ಗಳು ಬಹಳ ಕಾಲಗಳಿಂದಲೂ ಇವೆ. ಮಾನ್ಯ ಬಸವಲಿಂಗಪ್ಪನವರು ಹೇಳಿದ ಹಾಗೆ 20-25 ವರ್ಷಗಳಿಂದ ಇರುವಂತಹದ್ದು ಇದೆ. ಇದನ್ನೆಲ್ಲಾ ತೆಗೆದುಕೊಂಡು ಸಮಗ್ರವಾದಂತಹ ತಿದ್ದುಪಡಿಯನ್ನು ತರಬೇಕಾಗುತ್ತದೆ. ಆ ತಿದ್ದುಪಡಿಯನ್ನು ತಂದು ಎಲ್ಲರಿಗೂ ಅನುಕೂಲವಾಗುವ ಕೆಲಸವನ್ನು ಮಾಡಬೇಕಾಗಿತ್ತು. ಅದನ್ನು ಯಾವ ಕಾರಣಕ್ಕೆ ಮಾಡಿಲ್ಲವೋ ಗೊತ್ತಿಲ್ಲ. ಇದನ್ನು ಕೇವಲ ಅಧಿಕಾರಿಗಳಿಗೆ ಕೊಟ್ಟು ಅವರೇ ಮಾಡಬೇಕೆಂದು ಹೇಳಿದರೆ ಅವರೇ ಕಛೇರಿಯಲ್ಲಿ ಕುಳಿತುಕೊಂಡು ಮಾಡುವಂತಹ ಕೆಲಸ ಮಾಡಿದರೆ ಈ ಕೆಲಸ ಪರಿಪೂರ್ಣವಾಗಿ ಆಗುವುದಿಲ್ಲವೆಂದು ನನ್ನ ಭಾವನೆಯಾಗಿದೆ.

ಸಣ್ಣಪುಟ್ಟ ಅಧಿಕಾರಿಗಳವರು ಬಿಟ್ಟು ಅವರು ತಮ್ಮದ್ದೇ ಆದಂತಹ ಒಂದು ನೋಟ್ ಅನ್ನು ಮಾಡಿಕೊಟ್ಟಿದ್ದು ಅವರ ಬೇಸಿಸ್ ಮೇಲೆ ಮಾಡಿದ್ದೇ ಆದರೆ ಅಲ್ಲಿ ಲೋಕಲ್ ಕಂಡೀಷನ್‌ಗೆ ಯಾವ ರೀತಿ ಅನುಕೂಲವಾಗಿದೆ, ಯಾರ ಪರ ಮಾಡಬೇಕು, ಯಾರಿಗೆ ವಿರೋಧ ಮಾಡಬೇಕು, ಯಾರನ್ನು ಹಾಗೆ ಕೈಬಿಡಬೇಕು ಎನ್ನುವ ತರಹ ಅವರ ಲೆಕ್ಕಾಚಾರ ಇಟ್ಟು ಈ ರೀತಿಯಾಗಿ ಬದಲಾವಣೆ ತೋರಿಸಿದರೆ, ಅದಕ್ಕೆ ಮೇಲೆ ಅಧಿಕಾರಿಗಳು ಒಪ್ಪಿಕೊಂಡರೆ ಬಹಳ ತೊಂದರೆಯಾಗುತ್ತದೆ. ನಾನಾ ದೃಷ್ಟಿಯಿಂದ ನೋಡಿದರೆ ಯಾರಿಗೆ ಹೆಚ್ಚು ಜೋರು ಮಾಡುವುದಕ್ಕೆ ಬರುವುದಿಲ್ಲ, ಹಾಗೂ ಯಾರು ಕಾನೂನನ್ನು ಹೆಚ್ಚು ಮುರಿಯುವುದಕ್ಕೆ ಇಷ್ಟ ಪಡುವುದಿಲ್ಲ, ಅವರಿಗೇ ತೊಂದರೆ ಆಗುತ್ತದೆ. ಇದನ್ನು ಮುಖ್ಯಮಂತ್ರಿಗಳು ಗಮನದಲ್ಲಿಟ್ಟುಕೊಂಡು ಮಧ್ಯೆ ಮಧ್ಯೆ ಎಲ್ಲೆಲ್ಲಿ ಸೈಟುಗಳು ಬಿಟ್ಟುಹೋಗಿವೆ, ಅದನ್ನೂ ರೆಗ್ಯುಲರೈಸ್ ಮಾಡುವಂತಹ ಕೆಲಸವನ್ನು ಮಾಡಬೇಕು.

It is a matter of technical expression. ಆದರೆ ಇದು ಆಗಬೇಕಾಗಿದೆ. ಮೂಲೆಯಲ್ಲಿ ಮನೆಯನ್ನು ಕಟ್ಟಿಕೊಂಡು ಖಾಲಿ ನಿವೇಶನವನ್ನು ಹೆಚ್ಚು ಬಿಟ್ಟುಕೊಂಡಿದ್ದಾನೆ ಎಂದರೆ, ಅದು 30'x40' ರಲ್ಲಿ, 20'x30' ರಲ್ಲಿ ಬರುವುದಿಲ್ಲವೆಂದು ಹೆಚ್ಚು ಹೇಳಿ ಅದನ್ನು ಬಿಡುಗಡೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದರೆ ಕಷ್ಟವಾಗುತ್ತದೆ. ಸಣ್ಣಪುಟ್ಟ ಮನೆಗಳಲ್ಲಿ ಎರಡು-ಮೂರು ಮಹಡಿಗಳನ್ನು ಕಟ್ಟಿಕೊಂಡವರೂ ಇದ್ದಾರೆ. ಸಣ್ಣ ಸೈಟ್‌ನಲ್ಲಿ ಹೆಚ್ಚು ಮಹಡಿ ಕಟ್ಟಿದ್ದಾನೆ ಎಂದು ಅವನನ್ನು ಬಿಡುವುದು ಸೂಕ್ತವಲ್ಲವೆಂದು ನಾನು ಭಾವಿಸುತ್ತೇನೆ. ಇದನ್ನೆಲ್ಲಾ ಸನ್ಮಾನ್ಯ ನಗರಾಭಿವೃದ್ಧಿ ಮಂತ್ರಿಯವರು ಗಮನದಲ್ಲಿಟ್ಟುಕೊಂಡು ಈ ಮಸೂದೆ ಏನಿದೆ, ಅದಕ್ಕೆ ತಾವು ಒಂದು ತಿದ್ದುಪಡಿಯನ್ನು ತರಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು ತಂದಿರುವಂಥ ತಿದ್ದುಪಡಿಯನ್ನು ನಾನು ಸ್ವಾಗತ ಮಾಡುತ್ತಾ, ಈ ರೆವಿನ್ಯೂ ನಿವೇಶನಗಳನ್ನು ಸಕ್ರಮಗೊಳಿಸಬೇಕಾದ ಸಮಸ್ಯೆ ಕಳೆದ 10-12 ವರ್ಷದಿಂದ ಇದೆ ಎಂದು ಹೇಳಬಯಸುತ್ತೇನೆ. ಇದರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪರವಾಗಿ ಅವಾರ್ಡ್ ಆಗಿರುವಂಥ ಜಾಗಗಳಲ್ಲಿ ಅನೇಕ ಮನೆಗಳು ಈಗಾಗಲೇ ಬಂದಿದೆ. ಅಂಥವನ್ನು ಸಕ್ರಮ ಮಾಡುವುದಕ್ಕೆ ಆಗುವುದಿಲ್ಲವೆಂದು ಸಕ್ರಮ ಮಾಡದೇ ಇರುವ ಕಲಂನಲ್ಲಿ ತೋರಿಸಲಾಗಿದೆ. ನಂದಿನಿ ಲೇಔಟ್ ನಲ್ಲಿ ಬಹುತೇಕ ಮನೆಗಳು ಅವಾರ್ಡ್ ಆದಮೇಲೆ ಕಟ್ಟಿರುವಂಥವು. ಈ ಲೇಔಟ್ ನಲ್ಲಿ ಮನೆಗಳು ಭರ್ತಿಯಾಗಿವೆ.

ಕಾಮಾಕ್ಷಿಪಾಳ್ಯ ಲೇಔಟ್‌ನಲ್ಲಿ ಕೂಡ ಇದೇ ರೀತಿ ಇದೆ. ಚಂದ್ರ ಲೇಔಟ್‌ನಲ್ಲಿ ಕೂಡ ಇದೇ ರೀತಿ ಇದೆ. ಈ ಲೇಔಟ್‌ಗಳಲ್ಲಿರುವಂಥ ಮನೆಗಳನ್ನು ಸಕ್ರಮ ಮಾಡದಿದ್ದರೆ, ಸುಮಾರು ಲಕ್ಷಾಂತರ ಮನೆಗಳನ್ನು ನೀವು ಒಡೆಯಬೇಕಾಗುತ್ತದೆ.

ಆದ್ದರಿಂದ ಮಾನ್ಯ ಮಂತ್ರಿಯವರು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಕೇಳುತ್ತೇನೆ. 4(1), 6(1) ಕ್ಕೆ ಮೊದಲು ಕಟ್ಟಿರುವುದನ್ನು ಸಕ್ರಮ ಮಾಡುತ್ತೇವೆಂದು ತೋರಿಸಿದ್ದಾರೆ. 4(1)ಕ್ಕೆ ಮೊದಲು ಆಗಿರುವಂಥದ್ದು ಬಹಳ ಕಡಿಮೆ. ಅವಾರ್ಡ್ ಆಗಿರುವಂಥ ಸ್ಥಳಗಳಲ್ಲಿ ಮನೆಗಳು ಜಾಸ್ತಿ ಇವೆ. ಒಂದು ಲಕ್ಷ 50 ಸಾವಿರ, 25 ಸಾವಿರ ರೂ.ಗಳನ್ನು ಖರ್ಚು ಮಾಡಿ ಮನೆಗಳನ್ನು ಕಟ್ಟಿದ್ದಾರೆ. ಕಳೆದ ಹತ್ತು ವರ್ಷದಿಂದ ಅಲ್ಲಿ ವಾಸವಾಗಿದ್ದಾರೆ. ಈ ಸಮಸ್ಯೆ 1979-80ರಿಂದ ಇದೆ. ಶ್ರೀಮಾನ್ ಗುಂಡೂರಾವ್ ರವರ ಸರ್ಕಾರ ಇದ್ದಾಗ, ಮತ್ತು ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಸರ್ಕಾರ ಇದ್ದಾಗ, ಇದನ್ನು ಒಡೆದು ಹಾಕಬೇಕೆಂದು ಯೋಚಿಸಲಾಗಿತ್ತು. ಈ ಸಮಸ್ಯೆಯನ್ನು ಯಾವ ರೀತಿ ಪರಿಹಾರ ಮಾಡುತ್ತೀರಿ ಎಂಬುದನ್ನು ಸಭೆಯ ಗಮನಕ್ಕೆ ತರಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಸಕ್ರಮ ಮಾಡುವಂಥ ಮನೆಗಳವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಅಲಾಟ್ ಮಾಡಿದ್ದಕ್ಕಿಂತ ಎರಡರಷ್ಟು ಹಣವನ್ನು ಕೊಡಬೇಕೆಂದು ತಾವು ಹೇಳುತ್ತಿದ್ದೀರಿ. ಆದರೆ ಅಭಿವೃದ್ಧಿ ಪ್ರಾಧಿಕಾರದ ಜಾಗದಲ್ಲಿರುವಂಥ ಮನೆಗಳಿಗೆ ಈ ರೀತಿ ಹಾಕಿದರೆ ಮಾತ್ರ ಕೊಡುವುದಕ್ಕೆ ಸಾಧ್ಯವಾಗಬಹುದು.

ಹೀಗಾದರೆ, ಅಭಿವೃದ್ಧಿ ಪ್ರಾಧಿಕಾರಕ್ಕೆ ಸಮೀಪ ಇರುವಂಥ ಮನೆಗಳವರು ಯಾರೂ ಸಹ ಅರ್ಜಿಯನ್ನು ಹಾಕುವುದಿಲ್ಲ, ಅವರಿಗೆ ಬೇಕಾಗಿಲ್ಲ, ಆದರೆ ನೀವು ನಗರಸಭೆಗೆ ಸೇರಿದಂಥ ಜಮೀನುಗಳಲ್ಲಿ ಇರುವಂಥ ಸೈಟುಗಳನ್ನು ಸಕ್ರಮ ಮಾಡಬೇಕಾಗಿದೆ. ಆದರೆ ಅದನ್ನು ತಾವು ಅಭಿವೃದ್ಧಿ ಕಾರ್ಯಗಳಿಗೆ ಅವಾರ್ಡ್ ಆಗಿರುವಂಥ ಜಾಗಗಳಿಗೆ ಕೊಡುವುದಿಲ್ಲವೆಂದರೆ, ಮತ್ತೆ ನೀವು ಲಕ್ಷಾಂತರ ಮನೆಗಳನ್ನು ಒಡೆಯಬೇಕಾಗುತ್ತದೆ. ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅರ್ಬನ್ ಸೀಲಿಂಗ್ ಇದ್ದಂಥ ಮನೆಗಳಿಗೆ ಸಕ್ರಮ ಮಾಡಲು ಆಗುವುದಿಲ್ಲವೆಂದು ಹೇಳಿದ್ದಾರೆ. ಅರ್ಬನ್ ಸೀಲಿಂಗ್ ನಲ್ಲಿ ಓವರ್ ಲುಕ್ ಆಗಿರುವಂಥದ್ದನ್ನು ಪರಿಮಿತಿ ಇಲ್ಲದೇ ಮಾರಿದ್ದಾರೆ. ಇದು 15 ವರ್ಷದಿಂದ ನಡೆದಿದೆ.

1976 ರಿಂದ ನಡೆದುಕೊಂಡು ಬಂದಿದೆ. ಇಂಥದ್ದೂ ಸಕ್ರಮ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಇವೆರಡನ್ನೂ ತಾವು ಗಮನದಲ್ಲಿಟ್ಟುಕೊಳ್ಳಬೇಕು. ಹಿಂದೆ 1960-62 ರಲ್ಲಿ ಮತ್ತು 1970 ರಲ್ಲಿ ದಿವಂಗತ ಶ್ರೀ ದೇವರಾಜ ಅರಸುರವರ ಕಾಲದಲ್ಲಿ ಮತ್ತು ಮಾನ್ಯ ಬಸವಲಿಂಗಪ್ಪನವರ ಕಾಲದಲ್ಲಿ ಮಂಜುನಾಥನಗರದಂಥ ನಗರಗಳು ಆಗಿವೆ. ಇದರಲ್ಲಿ ಈಗಾಗಲೇ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಇವುಗಳನ್ನು ರೀಕನ್ಸ್ಟೇ ಮಾಡಿ ಅವರಿಂದ ಇಂತಿಷ್ಟು ಎಂದು ಹಣವನ್ನು ತೆಗೆದುಕೊಂಡು ಅವರಿಗೆ ಮೊದಲು ಪ್ರೊಸಿಷನ್ ಸರ್ಟಿಫಿಕೇಟನ್ನು ಕೊಡುವಂಥಾಗಬೇಕು. ಇವರಿಗೆ ಯಾವ ರೀತಿ ಹಣವನ್ನು ಫಿಕ್ಸ್ ಮಾಡುತ್ತೀರಿ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇವರುಗಳು 1960ನೇ ಇಸವಿಯಲ್ಲಿ ತೆಗೆದುಕೊಂಡ ಸೈಟುಗಳು ಇವು. ಇವರಿಗೆ ಹಿಂದೆ ಅಲಾಟ್ ಮಾಡಿರುವಂಥ ರೇಟಿನ ಮೇಲೆ ಎರಡರಷ್ಟನ್ನು ಹಾಕುತ್ತೀರೋ ಅಥವಾ ಈಗಿನ ರೇಟಿನ ಮೇಲೆ ಎರಡರಷ್ಟನ್ನು ಹಾಕುತ್ತೀರೋ ಎಂದು ಮಾನ್ಯ ಸಚಿವರು ಸದನಕ್ಕೆ ತಿಳಿಸಬೇಕೆಂದು ಕೋರುತ್ತೇನೆ. ಬಹುತೇಕ ಅವಾರ್ಡ್ ಆಗಿರತಕ್ಕಂಥ ಜಾಗಗಳಲ್ಲಿ ಮನೆಗಳನ್ನು ಕಟ್ಟಿದ್ದಾರೆ. ಮತ್ತೆ ನೀವು ಅದನ್ನು ಕೊಡುವುದಿಲ್ಲವೆಂದು ಅಭಿವೃದ್ಧಿ ಪ್ರಾಧಿಕಾರದವರು ಏನಾದರೂ ಮಾಡಿದಲ್ಲಿ ಮತ್ತೆ ಮನೆಗಳನ್ನು ಒಡೆಯಬೇಕಾಗುತದೆ ಆದ್ದರಿಂದ, ಅದನ್ನು ತಾವು ಗಮನದಲ್ಲಿಟ್ಟುಕೊಂಡು, ಈ

ಸದನಕ್ಕೆ ತಿಳಿಸಬೇಕೆಂದು ನಾನು ಮಾನ್ಯ ಸಚಿವರನ್ನು ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ನಗರಾಭಿವೃದ್ಧಿ ಸಚಿವರು) : ಸನ್ಮಾನ್ಯ ಅಧ್ಯಕ್ಷಿಣಿಯವರೆ, ಈಗಾಗಲೇ ಸಾಕಷ್ಟು ಸಲಹೆಗಳು ಬಂದಿವೆ. ಬಹುಶಃ ಇದನ್ನು ನಾವು ಬಿಲ್ ಮಾಡುವ ಸಂದರ್ಭದಲ್ಲಿ ಇದನ್ನು ರೂಲ್ಸ್ ನಲ್ಲಿ ಹಾಕಿಬಿಟ್ಟಿದ್ದರೆ, ಸಾಕಷ್ಟು ತಿದ್ದುಪಡಿ ತರತಕ್ಕಂಥ ಸಂದರ್ಭ ಬರುತ್ತಿರಲಿಲ್ಲ. ಏಕೆಂದರೆ, ಇವೊತ್ತು ನಮ್ಮ ಸರ್ಕಾರದ ಉದ್ದೇಶವನ್ನು ತಿಳಿಸುತ್ತೇನೆ. ಇವೊತ್ತು ಯಾರು ಬಡವರಿದ್ದಾರೆ, ಅವರು ಇವೊತ್ತು 15x20 ಆಗಲಿ, 20x30 ಆಗಲಿ, 30x40 ಆಗಲಿ, ಇದರಲ್ಲೇ ತಮ್ಮ ಮನೆಗಳನ್ನು ಕಟ್ಟಿಕೊಳ್ಳುವುದು. ಅವರು ತಮಗೆ ಮನೆ ಕಟ್ಟಿಕೊಳ್ಳುವುದಕ್ಕೆ ಎಷ್ಟು ಜಾಗ ಕೇಳುತ್ತಾರೋ, ಅಷ್ಟನ್ನು ನಾವು ರೆಗ್ಯುಲರೈಸ್ ಮಾಡುತ್ತೇವೆ. ಅಥವಾ ಅವರು ನಮಗೆ 30x40 ಬೇಕೆಂದರೆ ನಾವು ಅಷ್ಟನ್ನೂ ರೆಗ್ಯುಲರೈಸ್ ಮಾಡುತ್ತೇವೆ. ನಾವು ಮ್ಯಾಕ್ಸಿಮಮ್ 80x50 ತನಕ ರೆಗ್ಯುಲರೈಸ್ ಮಾಡುತ್ತೇವೆ. ಅದಕ್ಕಿಂತ ಹೆಚ್ಚಿಗೆ ರೆಗ್ಯುಲರೈಸ್ ಮಾಡುವುದಕ್ಕೆ ಹೋಗುವುದಿಲ್ಲ.

ಇವೊತ್ತು ಮಾನ್ಯ ದೇಶಪಾಂಡೆಯವರು concession ಕೊಡಬೇಕೆಂದು ಹೇಳಿದರು. ಅವರು 25 ಪರ್ಸೆಂಟ್ concession ಕೊಡಬೇಕೆಂದು ಕೇಳುತ್ತಿದ್ದಾರೆ. ನಾವು ಇವೊತ್ತು ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಸುಮಾರು 75 ಪರ್ಸೆಂಟ್ concession ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ನಾವು ರೂಲ್ಸ್ ನಲ್ಲಿ ಹಾಕಿದ್ದೇವೆ. ನೀವು ಅದನ್ನು ನೋಡಿದರೆ ಗೊತ್ತಾಗುತ್ತದೆ. ರೂಲ್ಸ್‌ನಲ್ಲಿ "Different amount may be prescribed in respect of different urban areas or class or classes of persons" ಅದನ್ನು ರೂಲ್ಸ್ ನಲ್ಲಿ ಹಾಕಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಏನು ಹೇಳಿದ್ದೆ ಅಂದರೆ, Suppose the cost of the land is Rs.100, you recover Rs.25.

ಶ್ರೀ ಕೆ.ಜೆ. ಜಾರ್ಜ್ : ನಾನು ಅದೇ ರೀತಿಯಲ್ಲಿ ಹೇಳುತ್ತಿದ್ದೇನೆ. ನೀವು ಯಾವುದನ್ನು ಇಕನಾಮಿಕಲಿ ವೀಕರ್ ಸೆಕ್ಷನ್ ಎಂದು ಹೇಳಿದಿರಿ, ಈಗ 30x40 ತನಕ ಅಂದರೆ, 15x20, 20x30, 30x40 ಅಲ್ಲಿಯತನಕ ಇಕನಾಮಿಕಲ್ ವೀಕರ್ ಸೆಕ್ಷನ್‌ಗೆ 50 ಪರ್ಸೆಂಟ್ ಕನ್‌ಸೆಷನ್ ಕೊಡುತ್ತೇವೆ. ಆದರೆ, 60x40 ಮತ್ತು 80x50 ಯನ್ನು ಅವರು ತೆಗೆದುಕೊಂಡರೆ ಡಬಲ್ ರೇಟ್ ಕೊಡಬೇಕು. ನಾವು ಬೆಂಗಳೂರಿಗೆ ಎಂದು ಬಿಡಿಎ ರೇಟಿಗೆ ತೆಗೆದುಕೊಳ್ಳುತ್ತೇವೆ. ಮೈಸೂರಿಗೆ ಅರ್ಬನ್ ಡೆವಲಪ್‌ಮೆಟ್ ಅಥಾರಿಟಿ ಇದೆ, ಅವರ ರೇಟಿನಲ್ಲಿ ಕನ್‌ಸೆಷನ್ ತೆಗೆದುಕೊಳ್ಳುತ್ತೇವೆ.

ಇಲ್ಲಿ ಟೌನ್ ಮುನಿಸಿಪಾಲಿಟಿ, ಮತ್ತು ಸಿಟಿ ಮುನಿಸಿಪಾಲಿಟಿಗಳು ಇರುತ್ತವೆ. ನಾವು ಸ್ಕ್ರೀನಿಂಗ್ ಕಮಿಟಿಗೆ ಅಧಿಕಾರ ಕೊಟ್ಟಿದ್ದೇವೆ. ಏನೆಂದರೆ, ಅಲ್ಲಿಯ ರೇಟ್ ನೋಡಿಕೊಂಡು ಫಿಕ್ಸ್ ಮಾಡಿಯೆಂದು ಹೇಳಿದ್ದೇವೆ. ಸಿಟಿ ಮುನಿಸಿಪಲ್ ಕೌನ್ಸಿಲ್ ಪಕ್ಕದಲ್ಲಿ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿ ಇದ್ದರೆ 50 ಪರ್ಸೆಂಟ್ ತೆಗೆದುಕೊಳ್ಳಿ ಎಂದು ಹೇಳುತ್ತೇವೆ. ಈಗಾಗಲೇ ಡಿವಿಜನಲ್ ಕಮೀಷನರ್ ಅವರಿಗೆ ಅಪೀಲಿಂಗ್ ಪವರ್ ಕೊಟ್ಟಿದ್ದೇವೆ. ಅಪೀಲಿಂಗ್ ಪವರ್ಸ್ ಇಟ್ಟುಕೊಂಡು ಈ ತರಹ ಮಾಡಬೇಕಾಗುತ್ತದೆಂಬ ಉದ್ದೇಶದಿಂದ ನಾವು ಮಾಡುತ್ತಿದ್ದೇವೆ. ಒಳ್ಳೆಯ ಸಲಹೆಗಳು ಬಂದಿವೆ. ಮಾನ್ಯ ಶ್ರೀ ದೇಶಪಾಂಡೆಯವರು ಎಕ್ಸೆಸೀವ್ ಡೆಲಿಗೇಷನ್ ಆಗಿದೆಯೆಂದು

ಹೇಳಿದರು. ಎಕ್ಸೆಸೀವ್ ಡೆಲಿಗೇಷನ್ ಯಾವುದೂ ಕೂಡಾ ಆಗಿಲ್ಲ. ಇದರಲ್ಲಿ ಒಂಬತ್ತರಲ್ಲಿ ನೋಡಿದರೆ,

"The State Government may, by notification, after previous publication make rules for the purpose of carrying into effect the provisions of this Act" ಅಂತ ಇದೆ.

ನಾವು ಯಾವುದೇ ರೂಲ್ಸ್ ಮಾಡಬೇಕಾದರೂ, ಅದನ್ನು ಪಬ್ಲಿಕೇಷನ್ ಮಾಡುತ್ತೇವೆ. ಅಬ್ಜೆಕ್ಷನ್ ಕಾಲ್‌ಫರ್ ಮಾಡಿದ ನಂತರ ರೂಲ್ಸ್ ಮಾಡುವುದು. ನಾವು ಯಾವುದೇ ಎಕ್ಸೆಸೀವ್ ತೆಗೆದುಕೊಳ್ಳಲಿಲ್ಲ. ಇನ್ನೊಂದು ವಿಷಯವನ್ನು ಮಾನ್ಯ ದೇಶಪಾಂಡೆಯವರು ಲ್ಯಾಂಡ್ ರೆವಿನ್ಯೂ ಬಗ್ಗೆ ಹೇಳಿದ್ದಾರೆ. ನಾವು ರೆವಿನ್ಯೂ ಸೈಟ್ಸ್ definition ಕೊಟ್ಟಿದ್ದೇವೆ. ನೋಡಿದರೆ ಗೊತ್ತಾಗುತ್ತದೆ.

"Revenue site' means a site formed without approval under the relevant law relating to town and country planning or the erection of building on land which has not been diverted in accordance with section 95 of the Karnataka Land Revenue Act 1964."

ಮತ್ತೆ ರೆಗ್ಯುಲರೈಸೇಷನ್ ಸೆಕ್ಷನ್ ಓದಿ ನೋಡಿ. "Notwithstanding anything contained in any law, but subject to such rules as may be prescribed, any unauthorised constructions made in any urban area, except those specified in section 4, made prior to the Thirty first day of March 1990."

ನಾವು ಈಗಾಗಲೇ ಲಾ ಡಿಪಾರ್ಟ್‌ಮೆಂಟ್ ಜೊತೆ ಸಾಕಷ್ಟು ಸ್ಟಡಿ ಮಾಡಿ ರೂಲ್ಸ್ ಅನ್ನು ಫ್ರೇಮ್ ಮಾಡಿದ್ದೇವೆ. ರೂಲ್ಸ್ ಅನ್ನು 100 ಪರ್ಸೆಂಟ್ ಇಂಪ್ಲಿಮೆಂಟ್ ಮಾಡಲಿಕ್ಕಾಗಿ ಕ್ರಮ ಕೈಗೊಂಡಿದ್ದೇವೆ.

(ಉಪಾಧ್ಯಕ್ಷಿಣಿಯವರು ಪೀಠವನ್ನು ಅಲಂಕರಿಸಿದರು)

ಇವೆಲ್ಲಾ ಅನ್-ಆಥರೈಸ್ಡ್ ಕನ್‌ಸ್ಟ್ರಕ್ಷನ್‌ಗಳು ಇವುಗಳನ್ನು ರೆಗ್ಯುಲರೈಸ್ ಮಾಡಬೇಕಾಗುತ್ತದೆ. ಇವೊತ್ತು ಅನ್-ಆಥರೈಸ್ಡ್ ಆಗಿ ಎಲ್ಲೆಲ್ಲಿ ಬರುತ್ತದೆ, ಅದನ್ನು ರೆಗ್ಯುಲರೈಸ್ ಮಾಡಬೇಕಾಗುತ್ತದೆ. ಆದುದರಿಂದ, ನಾನು ಅರ್ಬನ್ ಲ್ಯಾಂಡ್ಸ್ ವಿಚಾರದಲ್ಲಿ ಹೇಳುತ್ತಿದ್ದೇನೆ. ಏಕೆಂದರೆ, ಅರ್ಬನ್ ಲ್ಯಾಂಡ್ ಸೀಲಿಂಗ್ಸ್ ಪ್ರಕಾರ ಎಷ್ಟು ಸೈಟ್ಸ್ ಹೊರಗಡೆ ಬರುತ್ತದೆ, ಎಷ್ಟು ಮನೆಗಳು ಬರುತ್ತವೆ, ಎಂಬುದು ನಮಗೆ ಗೊತ್ತಾಗುತ್ತಿಲ್ಲ. ಅದು ಅಪ್ಲಿಕೇಷನ್ಸ್ ಬಂದಾಗ ಮಾತ್ರ ಗೊತ್ತಾಗುತ್ತದೆ. ಆ ಸಮಯದಲ್ಲಿ ಸೆಂಟ್ರಲ್ ಗೌರ್ನಮೆಂಟ್‌ನವರೊಡನೆ ಡೀಲ್ ಮಾಡಬಹುದು. ಆದರೆ, ಇವೊತ್ತು ಶ್ರೀ ಲಕ್ಕಣ್ಣನವರು ಹೇಳಿದಂತೆ, ಬಿಡಿಎ ಲ್ಯಾಂಡ್ ಏನಿದೆ ಅವುಗಳನ್ನು ನಾವು ಅನ್-ಆಥರೈಸ್ಡ್ ಮಾಡಲಿಕ್ಕೆ ಬಿಟ್ಟರೆ, ನಾಳೆ ಯಾವ ಬಿಡಿಎ ಲ್ಯಾಂಡ್ ಉಳಿಯುವುದಿಲ್ಲ.

ಆದುದರಿಂದ, ನಾವು ಬಿಡಿಎ ಲ್ಯಾಂಡನ್ನು ಹೊರಗಡೆ ಬಿಟ್ಟಿದ್ದೇವೆ. ಯಾರು ಬಿಡಿಎ ಲ್ಯಾಂಡ್‌ನಲ್ಲಿ ಅವರ ಪೊಜಿಷನ್‌ಗೆ ಹಣ ಕೊಟ್ಟು ತೆಗೆದುಕೊಂಡಿದ್ದರೆ, ಅಂಥ ಲ್ಯಾಂಡ್‌ಗಳನ್ನು ನಾವು ರೆಗ್ಯುಲರೈಸ್ ಮಾಡುವುದಿಲ್ಲವೆಂದು ಹೇಳಿದ್ದೇವೆ. ಪಾರ್ಕ್‌ನಲ್ಲಿ ಮಾಡುವುದಿಲ್ಲವೆಂದು ಹೇಳಿದ್ದೇವೆ. ಗ್ರೀನ್ ಬೆಲ್ಟ್‌ನಲ್ಲಿ ಮಾಡುವುದಿಲ್ಲ. ಅದರ ಬಗ್ಗೆ ಮಾನ್ಯ ದೇಶಪಾಂಡೆಯವರು ಈಗ ಗ್ರೀನ್ ಬೆಲ್ಟ್ ಇಲ್ಲ ಎಂದು ಹೇಳಿದರು. ಇಲ್ಲ ಅಂದರೆ ಸಿಡಿಪಿನಲ್ಲಿ ಗ್ರೀನ್ ಬೆಲ್ಟ್ ನಾವು ಚೇಂಜ್ ಮಾಡಬೇಕೇ ಹೊರತು ಗ್ರೀನ್ ಬೆಲ್ಟ್ ತೆಗೆದುಹಾಕಿಬಿಟ್ಟು, ಅಲ್ಲಿ ಕನ್‌ಸ್ಟ್ರಕ್ಷನ್ ಗಳನ್ನು ನಾವು

ಅಲೋ ಮಾಡುವುದಕ್ಕೆ ನಮಗೆ ಯಾವುದೇ ಪವರ್ಸ್ ಇಲ್ಲ, ಇದೆಲ್ಲವನ್ನೂ ನಾವು ಗಮನಕ್ಕೆ ತೆಗೆದುಕೊಂಡೇ ಈ ಸಮಗ್ರವಾದ ಬಿಲ್ಲನ್ನು ತಂದಿದ್ದೇವೆ. ಇವೊತ್ತು ನಾವು ಮಾಡದೇ ಇದ್ದರೆ ಏನಾಗುತ್ತದೆಂದರೆ ಬಡಜನರಿಗೆ ಬಹಳ ತೊಂದರೆಯಾಗುತ್ತದೆ. ದಿನೇ ದಿನೇ ಬಡ ಜನರು ಕಷ್ಟದಲ್ಲಿ ಸಿಲುಕುತ್ತಿದ್ದಾರೆ. ಆದ್ದರಿಂದ, ದಯವಿಟ್ಟು ಈ ಬಿಲ್ಲನ್ನು ಪಾಸ್ ಮಾಡಿಕೊಡಬೇಕೆಂದು ತಮ್ಮ ಮೂಲಕ ಸದನಕ್ಕೆ ಕೇಳಿಕೊಳ್ಳುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ : ಉಪಾಧ್ಯಕ್ಷಿಣಿಯವರೇ, ಈ ಬಿಲ್ಲನ್ನು ಯಾರೂ ಕೂಡ ವಿರೋಧ ಮಾಡುತ್ತಿಲ್ಲ. ಇದು ಬಹಳ ಹಿಂದೆಯೇ ಆಗಬೇಕಾಗಿತ್ತು, ಈಗ ಮಾಡಿದ್ದೀರಿ. ಆದರೆ ಇದರಲ್ಲಿ ಕೆಲವು ನ್ಯೂನತೆಗಳು ನಮ್ಮ ಕಣ್ಣಿಗೆ ಕಾಣತಕ್ಕವನ್ನು ಜನರ ಪರವಾಗಿ ಬೇಡಿಕೊಳ್ಳುತ್ತಿದ್ದೇನೆ. ನಾವು ಈ ಖಾಲಿ ಸೈಟ್ಸ್ ಎಂದು ಏನು ಮಧ್ಯ, ಮಧ್ಯದಲ್ಲಿರುತ್ತದೆ ಅದರ ಬಗ್ಗೆ ಏನು ಹೇಳುತ್ತೀರಾ ಎಂದು ಕೇಳಿದೆ. ನನಗೆ ಜ್ಞಾಪಕವಿದ್ದಾಗೆ Subject to correction, ಅಕ್ರಮವಾದ ನಿರ್ಮಾಣವೇನಾದರೂ ನಗರಾಭಿವೃದ್ಧಿ ಮಂಡಳಿಯ ಕಾಲದಲ್ಲಿ even formation of a layout, unauthorisedly forming a road in whatever form it is and then laying out a site with four stones in also unauthorised construction. ಆವಾಗ ಹೇಳುತ್ತಿದ್ದುದು ನನಗೆ ಜ್ಞಾಪಕವಿದೆ. I would like to have a clarification from the Hon'ble Minister, whether the formation of a site or the formation of a road demarcating a site with construction of stones and all that is unauthorised construction of not? ದಯಮಾಡಿ ಅದನ್ನೊಂದನ್ನು ಕ್ಲಿಯರ್ ಮಾಡಬೇಕು. ಮತ್ತು ಈ ಸೈಟ್ಸ್‌ಗಳಲ್ಲಿರುವ ಕಟ್ಟಡಗಳ ಬಗ್ಗೆ ನನಗೆ ಗೊತ್ತಿದೆ. Construction means House Construction; construction is also road construction or drain construction ಇವೆಲ್ಲವುಗಳೂ ಇದೆ. ಕೆಲವು ಕಡೆ ಇದನ್ನು ಮಾಡಿಬಿಟ್ಟಿರುತ್ತಾರೆ.

ಆದುದರಿಂದ it was considered at that time that any road which is formed unauthorisedly, any site formed as against the road, facing that road unauthorisedly, any fixation of stones for demacrating the sites unauthorisedly is all unauthorised constructions comprehensively ಎಂಬುದು ನನ್ನ ಭಾವನೆ. ಅದು ಸರಿಯೇ, ಇಲ್ಲವೇ? ಎನ್ನುವುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಎರಡನೆಯದಾಗಿ ಏನು ಮಧ್ಯದಲ್ಲಿ ಎಲ್ಲೆಲ್ಲಿ ಸೈಟುಗಳು ಬಿಟ್ಟುಹೋಗಿರುತ್ತವೆ, ಮನೆಗಳನ್ನು ಯಾವಾಗಲೋ ಕಟ್ಬೋಣವೆಂದು ಹೇಳಿ ಆ ಸೈಟುಗಳ ಓನರ್‌ಗಳ ಗತಿ ಏನು? ಮತ್ತೊಂದು ದೊಡ್ಡ ಸೈಟ್ಸ್‌ನಲ್ಲಿ ಆಗಿರಲಿ, ತಾವು ಹೇಳಿದಂತೆ 50x80 ಸೈಟ್‌ನಲ್ಲಿ ಸಣ್ಣ ಮನೆಯನ್ನು ಕಟ್ಟಿರುತ್ತಾನೆ: ಆ ಮನೆಯ ಭಾಗವನ್ನು ಸೇರಿಸಿಕೊಂಡು ಪೂರ್ಣ ಸೈಟನ್ನು ಅಕ್ರಮವಾಗಿ ಕಟ್ಟಿರುವುದನ್ನು ಸಕ್ರಮಗೊಳಿಸುತ್ತೇವೆಂದು ಹೇಳುತ್ತಿದ್ದಾರಾ? ಇಲ್ಲದಿದ್ದರೆ ಅದಕ್ಕಿಂತ ದೊಡ್ಡ ಸೈಟ್‌ನಲ್ಲಿ ಎಲ್ಲೋ ಒಂದು ಮೂಲೆಯಲ್ಲಿ ಮನೆಯನ್ನು ಕಟ್ಟಿ, ಆ ಸೈಟ್‌ನ ಬೇರೆ ಭಾಗವು ರೋಡಿಗೆ ಬಂದು ಈ ಮನೆಯು ಹಿಂದಕ್ಕೆ ಇದ್ದರೆ ಯಾವ ಭಾಗವನ್ನು ಸಕ್ರಮಗೊಳಿಸುತ್ತೀರಾ? ದಯಮಾಡಿ ಈ ಪರಿಸ್ಥಿತಿಯನ್ನು ಕ್ಲಿಯರ್ ಮಾಡಬೇಕು.

ಶ್ರೀ ಕೆ.ಜೆ. ಜಾರ್ಜ್ : ಈಗ ಸಕ್ರಮಗೊಳಿಸುತ್ತಿರುವುದು unauthorised construction ಅನ್ನು. ಅಕ್ರಮ ನಿರ್ಮಾಣವೆಂದು ಹೇಳಿ ಅವರಲ್ಲಿ ಎಷ್ಟು ಭೂಮಿ ಇರುತ್ತದೋ ಅದಕ್ಕೆ ಒಂದು ಮಿತಿಯನ್ನು ಇಟ್ಟು ನಾವು ಮಾಡುತ್ತಿದ್ದೇವೆ. ಅವರ ಹತ್ತಿರ ಭೂಮಿ ಇಲ್ಲದಿದ್ದರೆ ನಾವು ಹೊಸದಾಗಿ ಭೂಮಿಯನ್ನು ಅವರಿಗೆ

ಹುಡುಕಲಾಗುವುದಿಲ್ಲ. ಅವರಿಗೆ ಎಷ್ಟು ಭೂಮಿ ಬೇಕು ಎಂದು ಹೇಳಿದರೆ ಅದು ಗರಿಷ್ಠವಾಗಿ 10 x 50 ಮಾಡಲು ಆಗುತ್ತದೆ. ಅಂದರೆ 80x50 ಹಾಗೂ 60x40 ಮಾಡಬೇಕಾದರೆ ಅವರು ಹೆಚ್ಚು ಹಣವನ್ನು ಕೊಡಬೇಕಾಗುತ್ತದೆ. ಬಡವರಾದರೆ, ಅವರು ಹಣ ಕಡಿಮೆ ಕೊಟ್ಟರೆ ಸಾಕು. ಮತ್ತೆ ಈಗ ಡೆಫನಿಷನ್ ಕರೆಕ್ಟಾಗಿದೆ. ಈಗ constructionsಗಳನ್ನೇ ಮಾಡುತ್ತಿರುವುದು. ಮತ್ತು ಮಾನ್ಯ ಅನಂತಕೃಷ್ಣರವರು ಏನು ಸಲಹೆಯನ್ನು ಮಾಡಿದ್ದಾರೆ, ಅದು ಒಳ್ಳೆಯ ಸಲಹೆ. ಈ ರೀತಿಯ ಸ್ಟೇಟ್‌ನ ವಿಚಾರವನ್ನು ಹೇಳಿದ್ದಾರೆ. ಅದನ್ನು ಸಹ ಪರಿಶೀಲನೆ ಮಾಡಿ ಅದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಸನ್ಮಾನ್ಯ ಉಪಾಧ್ಯಕ್ಷಿಣಿಯರೇ, ಮಾನ್ಯ ಸಚಿವರೇ ನಿಜವಾಗಿ ನಮ್ಮ ಪ್ರಶ್ನೆಗೆ ಉತ್ತರ ಬಂದಿಲ್ಲ. ಒಂದು ಮಾತನ್ನು ಮಾತ್ರ ಪ್ರಾಮಾಣಿಕವಾಗಿ ಒಪ್ಪಿಕೊಂಡಿದ್ದಾರೆ. ಅದೇನೆಂದರೆ ಎಲ್ಲೆಲ್ಲಿ ಲ್ಯಾಂಡ್ ಸೀಲಿಂಗ್ ಆಕ್ಟ್ ಪರ್‌ವ್ಯೂನಲ್ಲಿ ಎನ್‌ಕ್ರೋಚ್‌ಮೆಂಟ್ ಬಂದಿವೆ, ಅವುಗಳನ್ನು ರೆಗ್ಯುಲರೈಸ್ ಮಾಡಲು ಬರುವುದಿಲ್ಲವೆಂದು ಹೇಳಿದ್ದಾರೆ. ಈ ಬಿಲ್ ಪಾಸ್ ಆದರೆ ಇದರ ಪರಿಣಾಮ ಏನಾಗುತ್ತದೆ ಎಂಬುದನ್ನು ಹೇಳುತ್ತೇನೆ. ತಾವು ಸೆಕ್ಷನ್ 8ನ್ನು ನೋಡಿ "Unauthorised construction not regularised to be demolished" you would have given protection to them also ಅದಕ್ಕೆ ನಾನು ಇಲ್ಲಿ ಹೇಳಿದೆ, ಈ ಮಸೂದೆಯನ್ನು ಏನು ತರುತ್ತಿದ್ದೀರಿ ಅದು ಇಲ್ಲಿ ಪಾಸ್ ಆಗಿ ಇದರ ಮೇಲೆ ಸೀಲ್ ಬಿದ್ದ ಮೇಲೆ all those constructions which have come under the urban land ceiling will be demolished.

ಹೀಗಾದರೆ ನೀವು ಯಾವ ಜನರಿಗೆ ಸಹಾಯ ಮಾಡಬೇಕೆಂದು ಇಚ್ಛೆ ಇದೆ, ಅದನ್ನು ಮಾಡುವುದಕ್ಕೆ ಆಗುವುದಿಲ್ಲ. I leave it to you. It is your fate, how you decide. You have said all those constructions which come on the urban ceiling area will have to be demolished. Straight-away, your BDO & other Officers will go and demolish all those constructions which come under the purview of Urban Ceiling Act.

ಎರಡನೆಯದಾಗಿ ತಾವು ಏನು ಹೇಳಿದಿರಿ, ಹರಿಜನ ಗಿರಿಜನರಿಗೆ 22 ಪರ್ಸೆಂಟ್, ಎಕನಾಮಿಕ್ ವೀಕರ್ ಸೆಕ್ಷನ್‌ಗೆ 50 ಪರ್ಸೆಂಟ್ ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ ಅದು ಸಂತೋಷ. ಆದರೆ ಇದು ನಿಮ್ಮ ಆಕ್ಟ್‌ನಲ್ಲಿ ಇಲ್ಲ. ರೂಲ್ಸ್ ಮಾಡುತ್ತೇವೆಂದು ಹೇಳಿದಿರಿ, ನಿಮ್ಮ ಮನಸ್ಸಿನಲ್ಲಿರುವುದು ನಮಗೆ ಗೊತ್ತಾಗುವುದಿಲ್ಲ. ಅದರ ಸಲುವಾಗಿ ನಾವು ಹೇಳಿದ್ದೆ ಯಾವುದೇ ಒಂದು ಸರ್ಕಾರ ತಮ್ಮ ರೂಲ್ಸ್ ಮಾಡಲಿಕ್ಕೆ ಅಧಿಕಾರವಿರುವಾಗ I leave it to you fate. You decide how to do it.

ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈ ರೆವಿನ್ಯೂ ಲ್ಯಾಂಡ್ಸ್ ರೆಗ್ಯುಲರೈಸ್ ಮಾಡುವುದಕ್ಕೆ ಬಿಲ್ ತಂದರು. ಅಲ್ಲೂ ಅವರು ಕ್ಯಾಟಗರಿವೈಸ್‌ನಲ್ಲಿ ಎಸ್.ಸಿ. ಎಸ್.ಟಿ. ಇದ್ದರೆ ಈ ಪ್ರಕಾರ ಮಾಡುತ್ತೇವೆ, ಎಕಾನಮಿಕಲಿ ವೀಕರ್ ಸೆಕ್ಷನ್ ಇದ್ದರೆ ಈ ಪ್ರಕಾರ ಮಾಡುತ್ತೇವೆ. ಈ ಪ್ರಕಾರ ಇನ್‌ಸ್ಟಾಲ್‌ಮೆಂಟ್ಸ್ ಕೊಡುತ್ತೇವೆ. He gave the categories. All those guidelines are there.

ಇವತ್ತು ಅವರಿಗೆ ಗೈಡ್‌ಲೈನ್ಸ್ ಇಲ್ಲ. On the Floor you have orally told but that should have been in the Act. ಇವತ್ತು ಏನಾಗುತ್ತಿದೆಯೆಂದರೆ ಅಧಿಕಾರಿಗಳು ಮಿಸ್‌ಯೂಸ್ ಮಾಡುತ್ತಿದ್ದಾರೆ. ಇವತ್ತು cut off date is fixed as 31-3-1990.

What is the guideline for this? What is the basis? ನಾಳೆ ಒಂದು ಮನೆ ಕಟ್ಟುತ್ತಾರೆ 30-3-1991 ಎಂದು ಹೇಳುತ್ತಾರೆ.

What is the basis? What are the guidelines you have? There is no provision. It could be 31-3-91, 31-3-92 or 93 also. ರೂಲ್ಸ್ ನಲ್ಲಿ ನೀವು ಈ ಗೈಡ್ ಲೈನ್ಸ್ ಗೆ ಏನು ಪ್ರಾವಿಷನ್ ಮಾಡಿದಿರಿ? So, there will be no end if the legislation is passed in the present form.

ಅದರ ಸಲುವಾಗಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ನೀವು ಕಟ್ ಆಫ್ ಡೇಟ್ ಮಾಡುವಾಗ You have to put certain guidelines. ಯಾರು ಒಮ್ಮೆಲೆ ಮನೆ ಕಟ್ಟಿದ್ದಾರೆ. ರೆಗ್ಯುಲೈಸ್ ಮಾಡುವುದಕ್ಕೆ ಏನು ಅರ್ಜಿ ಕೊಟ್ಟಿದ್ದಾರೆ, ಫೆನಾಲ್ಟಿ ಕೊಟ್ಟಿದ್ದಾರೆ, Some document should be there. Some proof should be there : otherwise there will be no end to this litigatio. ಮತ್ತೊಂದು ತಮಗೆ ನಾನು ಸಲಹೆ ಮಾಡುತ್ತಿದ್ದೇನೆ. ಇವತ್ತು ಕೆಲವು ಟೌನ್ ಮುನಿಸಿಪಾಲಿಟಿಗಳು ಇವೆ. ಅದರ adjacent land 100 0r 200 ft. from their areas, comes under Mandal. Actually, that is an urban land but they come under Mandals. There are encroachments on those lands also. It is just adjacent to the urban areas. That also you have to take into consideration. ಅದರ ಬಗ್ಗೆ ತಾವು ಏನು ಮಾಡುತ್ತೀರಿ, ಒಂದು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. Regarding green belt, I don't say you should encourage constructions. I never said that you should allow constructions. You have rightly said about it. What you will do now? You are going extend the green belt; otherewise you will not be able to regularise. So, you should have taken a decision. You cannot do anything on the encroachments that have come in the green belt. You will have to demolish. If you want to help them, then, you have to again extent it. You should have taken a decision on the green belt first and then you got this legislation passed. I very humbly telling you that it is bad in law and it will not stand in the court of law and it will just be set-aside by any Court.

ಶ್ರೀ ಕೆ.ಜೆ. ಜಾರ್ಜ್(ವಸತಿ ಮತ್ತು ನಗರಾಭಿವೃದ್ಧಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ದೇಶಪಾಂಡೆಯವರು ಒಂದು ವಿಚಾರವನ್ನು ಹೇಳಿದರು. ಅರ್ಬನ್ ಲ್ಯಾಂಡ್ಸ್ ಸೀಲಿಂಗ್ ಆಕ್ಟನ್ನು ಹೊರಗಡೆ ಇಟ್ಟರೆ ಡೆಮಾಲಿಷ್ ಮಾಡುತ್ತಾರೆಂದರು. ಈ ಆಕ್ಟ್‌ಗೆ ಬರದಿದ್ದರೂ, ಅನ್ ಅಥರೈಸ್ಡ್ ಆಗಿ ಯಾವುದೇ ಬಿಲ್ಡಿಂಗ್ ಕಟ್ಟಿದರೂ ಅದನ್ನು ಡೆಮಾಲಿಷ್ ಮಾಡುವುದಕ್ಕೆ ಈಗಾಗಲೇ ಪವರ್ಸ್ ಇದೆ. ಯಾವುದೇ ಕಾನೂನು ಪ್ರಕಾರ ಕಂಟ್ರಿ ಮತ್ತು ಟೌನ್ ಆಕ್ಟನ ವಿರುದ್ಧವಾಗಿ ಯಾರಾದರೂ ಲೈಸನ್ಸ್ ತೆಗೆದುಕೊಳ್ಳದೆ ಕಟ್ಟಿದರೂ ಸಹ ಸಂಪೂರ್ಣವಾಗಿ ಡೆಮಾಲಿಷ್ ಮಾಡುವುದಕ್ಕೆ ಈಗಾಗಲೇ ಸರ್ಕಾರಕ್ಕೆ ಪವರ್ ಇದೆ.

SRI R.V. DESHAPANDE : Your intention is not to demolish. In the normal course of the law, You should demolish all these constructions. But

them you have brought. What are those poor people should do?

ಶ್ರೀ ಕೆ.ಜೆ. ಜಾರ್ಜ್ : ನಾನು ಏನು ಹೇಳುತ್ತಿದ್ದೇನೆಂದರೆ, ನಮ್ಮ ಕಾನೂನಿನ ಒಳಗಡೆ ನಾವು ಅವರಿಗೆ ರಕ್ಷಣೆ ಕೊಡಬಹುದು. ತಿದ್ದುಪಡಿ ತರಬಹುದು ಅಥವಾ ಹೊಸ ಲೆಜಿಸ್‌ಲೇಷನ್ ಮಾಡಬಹುದು. ಆದರೆ ಅರ್ಬನ್ ಸೀಲಿಂಗ್ ಆಕ್ಟ್ ಸೆಂಟ್ರಲ್ ಗೌರ್ನಮೆಂಟ್ ಆಕ್ಟ್. ಅದಕ್ಕೆ ನಾವು ಏನು ಮಾಡುವುದಕ್ಕಾಗುವುದಿಲ್ಲ. ಆದರೆ ನಮ್ಮ ವಿಧಾನ ಸಭೆಯಲ್ಲಿ ಯಾವುದು ಕಾನೂನು ಮಾಡುವುದಕ್ಕಾಗುತ್ತದೆ, ಅದರಲ್ಲಿ ರಕ್ಷಣೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಯಾವುದೇ ರೂಲ್ಸ್, ಪ್ರೀವಿಯಸ್ ಪಬ್ಲಿಕೇಷನ್ ಆಗಿರುವುದನ್ನು ನಾವು ಕಿತ್ತು ಹಾಕಿದ್ದೇವೆ. ಈಗ ಪಬ್ಲಿಕ್‌ಗೆ ಹೇಳುತ್ತೇವೆ. ಪೇಪರ್‌ನಲ್ಲಿ ಪಬ್ಲಿಕ್ ಮಾಡುತ್ತೇವೆ. ಅಬ್‌ಜೆಕ್ಷನ್ಸ್ ಕಾಲ್‌ಫಾರ್ ಮಾಡುತ್ತೇವೆ. ಅಬ್‌ಜೆಕ್ಷನ್ ಕಾಲ್‌ಫಾರ್ ನೋಡಿ ಇದನ್ನು ಮಾಡಬಹುದು.

ಇವತ್ತು ನಾವು ಇದನ್ನು ಆಕ್ಟ್‌ನಲ್ಲಿ ಸೇರಿಸಿದರೆ ನಾಳೆ ಅಬ್ಜಕ್ಷನ್ಸ್‌ನ್ನು ಕಾಲ್‌ಫಾರ್ ಮಾಡುವುದಕ್ಕಾಗುವುದಿಲ್ಲ, ಬದಲಾವಣೆಗಳನ್ನು ಮಾಡುವುದಕ್ಕಾಗುವುದಿಲ್ಲ. ಆಗ ಮತ್ತೆ ನಾವು ಇದನ್ನು ಅಸೆಂಬ್ಲಿ ಮುಂದೆಯೇ ತರಬೇಕಾಗುತ್ತದೆ. ಆದುದರಿಂದ ಸಾರ್ವಜನಿಕರಿಗೋಸ್ಕರ ಪಬ್ಲಿಷ್ ಮಾಡಿದ ಮೇಲೆ ರೂಲ್ಸ್ ಫೈನಲೈಸ್ ಮಾಡಲಿಕ್ಕಾಗುತ್ತದೆ. ಈ ರೀತಿ ಎಲ್ಲಾ ವಿಚಾರದಲ್ಲೂ ನಾವು ನಮ್ಮ ಇತಿಮತಿಯಲ್ಲಿ ತರುತ್ತಿದ್ದೇವೆ. ಹಿಂಗೆ ಮಾನ್ಯ ದೇಶಪಾಂಡೆಯವರ ಕಾಲದಲ್ಲಿ ಕೂಡ ಅನಧಿಕೃದ ಕಟ್ಟಡಗಳನ್ನು ಸಕ್ರಮಗೊಳಿಸಬೇಕೆಂದು ಸಾಕಷ್ಟು ಚರ್ಚೆಯಾಗಿ ಆದೇಷ ಕೂಡ ಆಗಿದೆ. ಆದುದರಿಂದ ಇದಕ್ಕೆ ಮಾನ್ಯ ಸಭೆಯು ತನ್ನ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

SRI D.B. CHANDRE GOWDA : The Principles involved in the Act, none of us questioned ಒಂದು Fool-proof legislation ಮಾಡಿ.. This is all the conceern. ಇವತ್ತು ನೀವ ಲೆಜಿಸ್ಲೇಷನ್ ಮಾಡತಕ್ಕದ್ದು ನಾಳೆ ಕೋರ್ಟ್‌ನಲ್ಲಿ ಅದನ್ನು ಹೊಡೆದು ಹಾಕತಕ್ಕ ಪ್ರಸಂಗ ಬರಬಾರದು. ನಿಮ್ಮ ಎದುರಿನಲಿ[Senior Minister ಇದ್ದಾರೆ ಅವರನ್ನು ಕೇಳಿ. Certain matters, we have brought to your notice. Where is the hurry? ಪತ್ರಿಕೆಯಲ್ಲಿ ಪ್ರಕಟಣೆ ಮಾಡುತ್ತೇವೆಂದು ತಾವು ಹೇಳುತ್ತೀರಿ. Court is not prepared to hear all those things; Unless it is built in the legislation itself, you cannot take the defence, there. Therefore, it should not got as a bad law to be struck down by the court of law. ನಿಮ್ಮ ಉದ್ದೇಶ ಒಳ್ಳೆಯದಿದೆ. ನಿಮ್ಮ ಉದ್ದೇಶವನ್ನು ಕೇವಲ ನಾವು ಸ್ವಾಗತ ಮಾಡತಕ್ಕದ್ದು ಅಷ್ಟೇ ಅಲ್ಲ, ಈ ಉದ್ದೇಶವನ್ನು ಈಡೇರಿಸುವುದಕ್ಕೆ ಹಿಂದಿನ ಸರ್ಕಾರ ಕೂಡ ಪ್ರಯಾತ್ನ ಮಾಡಿತ್ತು. ಆದರೆ ನೀವು ಈ ಬಿಲ್ಲು ಕಾಂಪ್ರೆಹಿನ್ಸಿವ್ ಆಗಿ ಇರಲಿಲ್ಲ ಎಂದು ಹೇಳಿದ ಕಾರಣಕ್ಕಾಗಿ better you have a re-look on this; bring a comprehensive legislation, fool-proof legislation and see that the very intention with which you have brought goes to the benefit of the people. That is all our concern.

ಶ್ರೀ ಕೆ.ಜೆ. ಜಾರ್ಜ್ : ಈಗಾಗಲೇ ಈ ವಿಚಾರದಲ್ಲಿ ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ಸಾಕಷ್ಟು ಚರ್ಚೆಯಾಗಿದೆ. ಇದರ ಬಗ್ಗೆ ಕಾನೂನು ಇಲಾಖೆಗಳ ಸಲಹೆಯನ್ನೂ ತೆಗೆದುಕೊಂಡಿದ್ದೇವೆ. ಕೋರ್ಟ್‌ನಲ್ಲಿ ಏನಾಗುತ್ತದೆಂದು ನಾವು ಈಗಾಗಲೇ ಹೇಳುವುದಕ್ಕೆ ಬರುವುದಿಲ್ಲ, But we have taken all precautions; as far as we

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಈ ಬಿಲ್ಲಿನ ಬಗ್ಗೆ ಮಾತನಾಡಲಿಲ್ಲ. ನಿಮ್ಮ ಉದ್ದೇಶ ಪಟ್ಟಣ ಪ್ರದೇಶದಲ್ಲಿ, ತಾಲ್ಲೂಕು ಮಟ್ಟದಲ್ಲಿ ಅಥವಾ ಗ್ರಾಮೀಣ ಪ್ರದೇಶಕ್ಕೆ ಸಂಬಂಧಪಟ್ಟಂತೆ ಇರಬಹುದು. ಬಹುಶಃ ನೀವು ಇದನ್ನು ಅರ್ಬನ್ ಏರಿಯಾಕ್ಕೆ ಲಿಮಿಟ್ ಮಾಡಿದ್ದೀರಿ ಎನಿಸುತ್ತದೆ. ಬಹಳ ವರ್ಷಗಳಿಂದ ನಾವು ಇದನ್ನು ಕೇಳುತ್ತಾ ಬಂದಿದ್ದೆವು. ಇದನ್ನು ಮಾಡಬೇಕು, ಕಡುಬಡವರಿಗೆ ಈ ರೀತಿ ನಗರ ಪ್ರದೇಶದಲ್ಲಿ ಮಾಡಿದ್ದೀರಿ ಎಂದು. ಆದರೆ ಇಲ್ಲಿ ನೀವು "ನೆಲಮಹಡಿಯೂ ಸೇರಿದಂತೆ 2ಕ್ಕಿಂತ ಹೆಚ್ಚು ಅಂತಸ್ತನ್ನು ಹೊಂದಿರುವವರಿಗೆ ಇದು ಬರುವುದಿಲ್ಲ." ಎಂದು ಹೇಳಿದ್ದೀರಿ. ಅಂದರೆ 2 ಅಂತಸ್ತು ಇರುವವರಿಗೆ ಇದು ಬರುತ್ತದೆ. ನೆಲಮಹಡಿಯೂ ಸೇರಿದಂತೆ 2ಕ್ಕಿಂತ ಹೆಚ್ಚು ಅಂತಸ್ತನ್ನು ಹೊಂದಿರುವ ಅನಧಿಕೃತ ನಿರ್ಮಾಣಕ್ಕೆ ಇದು ಬರುವುದಿಲ್ಲ.

SRI K.J. GEORGE : That means, ground plus 1,

SRI R.V. DESHAPANDE : What is the property value?

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಬೆಂಗಳೂರು ನಗರದಲ್ಲಾಗಲಿ, ಮೈಸೂರು ನಗರದಲ್ಲಾಗಲಿ ಮೊದಲನೇ ಮಹಡಿಯನ್ನು ಕಟ್ಟಿಕೊಳ್ಳಲು ಒಬ್ಬ ಸಾಮಾನ್ಯ ವ್ಯಕ್ತಿಗೆ ಸಾಧ್ಯವೇ? ನಿಜವಾಗಿ ಈ ಒಂದು ಕಾನೂನನ್ನು ತರುವುದರ ಮುಖಾಂತರ ಸಾಮಾನ್ಯ ಜನರಿಗೆ ಮಧ್ಯಮವರ್ಗದ ಜನರಿಗೆ ಅನುಕೂಲ ಆಗಬೇಕು. ಬಹಳ ವರ್ಷಗಳಿಂದ ಸಣ್ಣಪುಟ್ಟ ಗುಡಿಸಲುಗಳನ್ನು ಕಟ್ಟಿಕೊಂಡಿದ್ದಾರೆ, ಸಣ್ಣಪುಟ್ಟ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಎನ್ನತಕ್ಕ ಹಿನ್ನಲೆಯಲ್ಲಿ ಇದನ್ನು ತರಬೇಕೆಂದು ನಮ್ಮ ಅಪೇಕ್ಷೆ ಇತ್ತು. ದಯವಿಟ್ಟು ಇದನ್ನು ತೆಗೆದುಹಾಕಿ. ಯಾರನ್ನೋ ನೀವು ಕಣ್ಣು ಮುಂದಿಟ್ಟುಕೊಂಡು ಬಡವರ ಹೆಸರಿನಲ್ಲಿ ಮಧ್ಯಮವರ್ಗದವರ ಹೆಸರಿನಲ್ಲಿ ಅನುಕೂಲ ಮಾಡಿಕೊಡಬೇಕೆಂದು ನಿಮ್ಮ ದೃಷ್ಟಿಯಲ್ಲಿದೆ. ಇದು ಸ್ಪಷ್ಟವಾಗಿದೆ.

ಇನ್ನು ಎರಡನೆಯದಾಗಿ ನೀವು ಎಲ್ಲೂ ಕೂಡ ಬೆಲೆಯನ್ನು ನಿಗದಿಮಾಡಿಲ್ಲ. ನಾವು ರೂಲ್ಸ್‌ನ್ನು ಮಾಡುವಾಗ ಮಾಡುತ್ತೇವೆಂದು ನೀವು...

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಈಗ ಬಂದಿದ್ದಾರೆ. ನಾನು ಆಗಲೇ ಬೆಲೆ ವಿಚಾರದಲ್ಲಿ ಮಾತನಾಡಿದ್ದೇನೆ. ಪ್ರತಿಯೊಂದು ವಿಚಾರವನ್ನೂ ಕೂಡ ನಾನು ವಿವರಿಸಿ ಮಾತನಾಡಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಮಾತನಾಡಿದ್ದೀರಿ, ಇಲ್ಲ ಎಂದು ನಾನು ಹೇಳುವುದಿಲ್ಲ. ನಾನು ಈಗ ತಾನೇ ಬಂದಿದ್ದೇನೆ. ನೀವು ಹೇಳಿದರೆ ಕೇಳುತ್ತೇನೆ. ನಾನು ಈಗ ಬಂದರೂ ನೀವು ಏನು ಬಹಳ ವ್ಯವಸ್ಥಿತವಾಗಿ ಮಾಡುತ್ತಿದ್ದೀರೆಂಬುದು ನನಗೆ ಗೊತ್ತಿದೆ. ನಾವು ಮುಂದೆ ರೂಲ್ಸ್ ಮಾಡುವಾಗ ಮಾಡುತ್ತೇವೆಂದು ಹೇಳುತ್ತಿದ್ದೀರಿ. ನಾನು ತಮಗೆ ಹೇಳುತ್ತೇವೆ. ಈ ಸದನದಲ್ಲಿ ಈ ಬಿಲ್ಸ್‌ನ್ನು ಒಕ್ಕೊರಲಿನಿಂದ ಪಾಸ್ ಮಾಡಿಸಿಕೊಳ್ಳಬೇಕೆಂಬುದು ನಿಮಗಿದ್ದರೆ, ಯಾವ ದರ ನಿಗದಿ ಮಾಡುತ್ತೀರೆಂಬುದನ್ನು ತಿಳಿಸದೆ, ನಮ್ಮ ಕಣ್ಮುಂದೆ ಯಾವುದೂ ಸ್ಪಷ್ಟವಾಗಿಲ್ಲದೇ ರೂಲ್ಸ್ ಬಂದಾಗ ಮುಂದೆ ಮಾಡುತ್ತೇವೆಂದು ನೀವು ಹೇಳುವುದಾದರೆ, ಅದನ್ನು ಒಪ್ಪಿಕೊಂಡು ನಿಮಗೆ ಅನುಮತಿಯನ್ನು ನಾವು ಕೊಡುವುದಕ್ಕಾಗುವುದಿಲ್ಲ. ಅನಂತರ ನೀವು ನಿಮ್ಮ ಮನಸ್ಸಿಗೆ ಬಂದಂತೆ ರೂಲ್ಸ್ ಮಾಡಿಕೊಳ್ಳುವುದಕ್ಕೆ ನಾವು ನಿಮಗೆ ಅಧಿಕಾರವನ್ನು ಕೊಡಬೇಕೆ? ನೆಲ ಮಹಡಿ, ಮೊದಲನೇ ಅಂತಸ್ತು ಎಂದು ಸೇರಿಸಬೇಡಿ. ಇದರಿಂದ ದೊಡ್ಡವರಿಗೆ ಅನುಕೂಲ ಮಾಡಿದಂತಾಗುತ್ತದೆ ಮತ್ತು ಎರಡನೆಯಾಗಿದೆ ಬೆಲೆಯನ್ನು ಏನು ನಿಗದಿಮಾಡಬೇಕೆಂದಿದ್ದೀರಿ ಅದನ್ನು ಇಲ್ಲಿ ಸ್ಪಷ್ಟವಾಗಿ

ಹೇಳಿ. ಇದನ್ನು ನಾವು ಸಮಗ್ರವಾಗಿ ಚಿಂತನೆ ಮಾಡುವುದಕ್ಕೆ ಅವಕಾಶವನ್ನು ಕೊಡಿ. ತರಾತುರಿಯಲ್ಲಿ ಬಿಲ್ಲನ್ನು ಪಾಸ್ ಮಾಡಿಕೊಂಡು ಹೋಗುವ ಅಗತ್ಯವಿಲ್ಲ. ಯೋಚನೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಇದನ್ನು ಮುಂದೆ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ. ಮೊದಲು ಚರ್ಚೆಗೆ ಅವಕಾಶ ಕೊಟ್ಟು ಅನಂತರ ಬಿಲ್ಲನ್ನು ಪಾಸ್ ಮಾಡಿಸಿಕೊಳ್ಳಿ. ಇಲ್ಲದಿದ್ದರೆ ಸೆಲೆಕ್ಟ್ ಕಮಿಟಿಗೆ ಆದರೂ ಕಳುಹಿಸಿಕೊಡಿ. ಅಲ್ಲಾದರೂ ಯೋಚನೆ ಮಾಡೋಣ. ನಿಮಗೆ ಬಹುಮತ ಇದೆ ಪಾಸ್ ಮಾಡಿಕೊಂಡು ಹೋಗುತ್ತೇವೆನ್ನುವುದಾದರೆ ಮಾಡಿಕೊಂಡು ಹೋಗಿ; ಚಿಂತೆ ಇಲ್ಲ. ಇದರ ಉದ್ದೇಶ ಬಡವರಿಗೆ ಅನುಕೂಲವಾಗಬೇಕು. ಆದರೆ ಬಡವರ ಹೆಸರಿನಲ್ಲಿ ಶ್ರೀಮಂತರಿಗೂ ಅನುಕೂಲ ಮಾಡಿಕೊಡುವುದಕ್ಕೆ ಹೊರಟಿದ್ದೀರಿ. ಇವತ್ತು ಯಾರು ಈ ಬೆಂಗಳೂರಿನ ನಗರದಲ್ಲಿ ಒಂದು ಮಹಡಿಯನ್ನು ಹಾಕಿಕೊಂಡಿರುತ್ತಾನೆ. ಅದರ ಬೆಲೆ ಇವತ್ತು ಸುಮಾರು 7-8 ಲಕ್ಷ ಆಗುತ್ತದೆ. ಅವನಿಂದ ಯಾವ ಬೆಲೆಯನ್ನು ವಸೂಲ್ಮಾಡುತ್ತೀರಿ? ಅನಂತರ ದಲ್ಲಾಳಿಗಳು ಸೇರಿಕೊಳ್ಳುತ್ತಾರೆ. ಇದನ್ನು ಖಾಯಂ ಮಾಡಿಸಿ ಕೊಡುತ್ತೇವೆ, ಹೆಚ್ಚು ಕೊಡುತ್ತೀರಿ ಎಂದು ವ್ಯವಹಾರಗಳು ನಡೆಯುವುದಕ್ಕೆ ಶುರುವಾಗುತ್ತದೆ. ಇದರಿಂದ ನಿಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಆದುದರಿಂದ ಇದರ ಬಗ್ಗೆ ಸಮಗ್ರವಾಗಿ ಯೋಚನೆ ಮಾಡುವುದಕ್ಕಾಗಿ ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಡಿ ಎಂದು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಅಧ್ಯಕ್ಷಣಿಯವರೇ, ಈಗಾಗಲೇ ಮಾನ್ಯ ಯಡಿಯೂರಪ್ಪನವರು ಬರೇ ಹಣವಂತರಿಗೆ ಮಾತ್ರ ಸಹಾಯ ಮಾಡಲಿಕ್ಕೆ ಇದನ್ನು ತಂದಿದ್ದೇವೆ ಎಂದು ಹೇಳಿದರು. ಮೊದಲೇ ಅವರು ಇದ್ದಿದ್ದರೆ ಗೊತ್ತಾಗುತ್ತಿತ್ತು. ಇದು 1987ನೇ ಇಸವಿಯಲ್ಲಿ ಜಿ.ಓ. ಮಾಡಿದರು. 21-8-1990ರಲ್ಲಿ ಜಿ.ಓ. ಆರ್ಡರ್ ಇಷ್ಯೂ ಮಾಡಿದ್ದಾರೆ. ಮಾನ್ಯ ವೀರೇಂದ್ರ ಪಾಟೀಲ್‌ರವರ ಕಾಲದಲ್ಲಿ ಒಂದು ಡಿಸಿಷನ್ ತೆಗೆದುಕೊಂಡು ರೆಗ್ಯುಲರೈಸ್ ಮಾಡಬೇಕೆಂದು ಹೇಳಿದ್ದಾರೆ. ಇದರಲ್ಲಿ ಏನಾಗಿದೆ ಎಂದರೆ ಯಾರು ಬಹಳ ಬಡವರಿರುತ್ತಾರೆ ಅವರಿಗೆ ಕನ್‌ಸಿಷನ್ ಕೊಡುತ್ತಿದ್ದೇವೆ. ಆದರೆ ಯಾರು ಹಣವಂತರಿದ್ದಾರೆ ಅವರಿಗೆ ಡಬ್ಬಲ್ ಫೆನಾಲ್ಟಿ ಹಾಕಬೇಕೆಂದು ತೀರ್ಮಾನ ಮಾಡಿದ್ದೇವೆ. ಮತ್ತೆ ಏನು ಮಾಡಿದ್ದೇವೆಂದರೆ 80 ಅಡಿಗಿಂತ ಹೆಚ್ಚಿಗೆ ಯಾರು ಮನೆಯ ಜಾಗವನ್ನು ಇಟ್ಟುಕೊಂಡಿರುತ್ತಾರೆ ಅವರಿಗೆ ರೆಗ್ಯುಲರೈಸ್ ಮಾಡುವುದಕ್ಕೆ ಪ್ರಾವಿಷನ್ ಇರಲಿಲ್ಲ. ಇನ್ನೊಂದು ವಿಷಯ ಹೇಳಬೇಕೆಂದರೆ, ಗ್ರಾಂಡ್‌ಫ್ಲಸ್ ಒಂದು ಮಾಡಿದ್ದೇವೆ. ಸಣ್ಣ ಮನೆಯಲ್ಲಿ 20x30 ನಲ್ಲಿ ಒಂದು ಮಹಡಿ ಕಟ್ಟಬಹುದು. ಅಥವಾ 80x50 ರಲ್ಲಿ ಯಾರಾದರೂ ಡಬ್ಬಲ್ ಬಿಡಿಎ ರೇಟ್ ಕೊಟ್ಟು ರೆಗ್ಯುಲರೈಸ್ ಮಾಡುವಾಗ ಅದನ್ನು ಏನಾದರೂ ಒಡೆದುಹಾಕಬೇಕೆಂಬುದು ಸರಿಯಲ್ಲ. ನಾವು ಇದರಲ್ಲಿ ಸ್ಪಷ್ಟವಾಗಿ ಹೇಳಿದ್ದೇವೆ. 60x40, 80x50ಕ್ಕೆ ಡಬ್ಬಲ್ ಬಿ.ಡಿ.ಎ. ರೇಟ್ ಏನಿದೆ ಅದನ್ನು ಕೊಟ್ಟು ಅವರು ರೆಗ್ಯುಲರೈಸ್ ಮಾಡಿಕೊಳ್ಳಬೇಕೆಂದು ಹೇಳಿದ್ದೇವೆ. 30x40,20x30,15x20 ಇರುವವರಿಗೆ ಎಸ್‌ಸಿ.ಎಸ್‌ಟಿ ಗೆ 75 ಪರ್ಸೆಂಟ್ ಕನ್‌ಸೆಷನ್ ಕೊಡುತ್ತೇವೆ. ಏಕನಾಮಿಕಲಿ ವೀಕರ್‌ಸೆಕ್ಷನ್‌ಗೆ 50 ಪರ್ಸೆಂಟ್ ಕನ್‌ಸೆಷನ್ ಕೊಡುತ್ತಿದ್ದೇವೆ.

ಶ್ರೀ ಆರ್. ವಿ. ದೇಶಪಾಂಡೆ : ತಾವು ಈ ಮನೆಯನ್ನು ತಪ್ಪುದಾರಿಗೆ ಎಳೆಯುತ್ತಿದ್ದೀರಿ. ಏತಕ್ಕೆಂದರೆ ತಾವು - ಹೇಳಿದಿರಿ 50x80ಕ್ಕೆ ಬಿಡಿಎ ರೇಟ್ ಮಾಡುತ್ತೇವೆಂದು. ಡಬ್ಬಲ್ ಸ್ಟೋರೀಡ್‌ಗೆ ಇಷ್ಟು ಮಾಡುತ್ತೇವೆಂದು ಹೇಳುತ್ತಿದ್ದೀರಿ. ನೀವು ಈವತ್ತು ಹೇಳುತ್ತಿದ್ದೀರಿ ಆದರೆ ಈ ಬಿಲ್ಲಿನಲ್ಲಿ ಏನೂ ಇಲ್ಲ. ಈ ಬಿಲ್ಲನ್ನು ಓದಿಯಾರು -ಯಾರು ಮಾತನಾಡುತ್ತಾರಲ್ಲಾ, ಅದು ಗೊತ್ತಾಗುವುದಿಲ್ಲ. You have no right to tell it now. When rules have not been framed, you cannot say

today. I am telling you very very humbly, please don't mistake me. Now you have no right to say 50'x80' ಈ ರೇಟ್ ಮಾಡುತ್ತೇನೆ 30'x40' ಈ ರೇಟ್ ಮಾಡುತ್ತೇನೆ, ಎಸ್‌ಸಿ ಎಸ್‌ಟಿಗೆ ಮಾಡುತ್ತೇನೆ...

You cannot say today because you have said that rules will be published and objections will be called ನಾನು ಕೇಳುತ್ತಿದ್ದೇನೆ. ರೂಲ್ಸ್ ಮಾಡುವಾಗ ಪಬ್ಲಿಷ್ ಮಾಡುತ್ತೇನೆ ಎಂದು ಹೇಳಿದಿರಿ. ಯಾವುದರ ಬಗ್ಗೆ ರೂಲ್ ಮಾಡಬೇಕು? ಪಬ್ಲಿಕೇಷನ್ ಆಫ್ ರೂಲ್ಸ್‌ಗೆ ಏನು ಮಹತ್ವ ಬಂತು.

ಎರಡನೆಯದು ಮಾನ್ಯ ಯಡಿಯೂರಪ್ಪನವರು ಏನು ಪಾಯಿಂಟ್ ರೈಸ್ ಮಾಡಿದರು, ಅದನ್ನೇ ನಾನು ರೈಸ್ ಮಾಡಿದ್ದೆ. ಗ್ರಾಂಡ್+1 ಎಂದರೆ ordinary man cannot construct. I had raised that point and I had told him.

5-6-8 ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ: ಈಗ ಬೆಲೆಯನ್ನು ಕಾನೂನಿನಲ್ಲಿ ನಿಗದಿಪಡಿಸಬೇಕಾಗಿತ್ತು, ನಿಯಮಾವಳಿಯಲ್ಲಿ ಮಾಡಲಿಕ್ಕೆ ನಿಮಗೆ ಅವಕಾಶವಿಲ್ಲವೆಂದು ಹೇಳುತ್ತಿದ್ದೀರಿ.

ಶ್ರೀ ಆರ್. ವಿ. ದೇಶಪಾಂಡೆ : ನಾನು ಏನು ಹೇಳುತ್ತಿದ್ದೇನೆ ಇವತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಲ್ಯಾಂಡ್ ರೆವಿನ್ಯೂ ರೆಗ್ಯುಲರೈಸ್ ಬಿಲ್ ತಂದರು. ಅಲ್ಲಿ ಯಾವ ರೀತಿ ಲ್ಯಾಂಡ್ ರೆಗ್ಯುಲರೈಸ್ ಮಾಡುತ್ತೇವೆ ಎಷ್ಟು ಎಕ್ಸ್‌ಟೆಂಡ್ ಮಾಡುತ್ತೇವೆ, ಯಾವ ಯಾವ ಕ್ಯಾಟಗರಿಗೆ ಏನು ಕನ್‌ಸೆಷನ್ ಕೊಡುತ್ತೇವೆ ಎನ್ನುವ ಬಗ್ಗೆ ಅದರ ಗೈಡ್‌ಲೈನ್ಸ್ ಸ್ಪೆಸಿಫಿಕೇಷನ್ ಮಾಡಿದರು. ಇವತ್ತು ಇಲ್ಲಿ ಏನೇನೂ ಇಲ್ಲ, ಎಸ್‌ಸಿ. ಎಸ್‌ಟಿಗೂ ಏನೂ ಹೇಳಿಲ್ಲ, ಯಾವ ಸೈಜ್ ಪ್ಲಾಟ್ ಮಾಡುತ್ತೀರಿ ಎಂಬುದರ ಬಗ್ಗೆ ಕೂಡ ಏನೇನೂ ಹೇಳಿಲ್ಲ. without any guidelines, without any policy, he is taking a blanket power which is not permissible and even this legislature is not competent. What it is, I go a step further.

ಅವರು ಹೇಳುತ್ತಾರೆ, ರೂಲ್ಸ್ ಮಾಡುವಾಗ ಪಬ್ಲಿಷ್ ಮಾಡುತ್ತೇವೆ, ಅಬ್ಜಕ್ಷನ್ ಕಾಲ್‌ಫರ್ ಮಾಡುತ್ತೇವೆಂದು ಹೇಳಿದ್ದಾರೆ. but this will not stand the test of the court. What the legislature could delegate, there is a limit.

ಎರಡನೆಯದು, ಮಾನ್ಯ ಸಚಿವರು ಹೇಳಿದರು. ಈವತ್ತು 50x80 ಗೆ ಬಿ.ಡಿ.ಎ. ರೇಟ್ 30x40 ಕ್ಕೆ ಇಂಥ ರೇಟು, ಷೆಡ್ಯೂಲ್‌ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಇಂಥ ರೇಟ್, ಎಕನಾಮಿಕಲಿ ವೀಕರ್ ಸೆಕ್ಷನ್‌ಗೆ ಇಂಥ ರೇಟ್ ಮಾಡಿದ್ದೇವೆಂದು ಬಿಲ್‌ನಲ್ಲಿ ಇಲ್ಲ. How could you allow this?

ಶ್ರೀ ಕೆ.ಜೆ. ಜಾರ್ಜ್ : ಪಬ್ಲಿಕ್ ಮಾಡುತ್ತೇವೆಂದು ಹೇಳುತ್ತಿದ್ದೇವೆ. ಪಬ್ಲಿಷ್ ಮಾಡಿದ ಮೇಲೆ ಆ ವಿಚಾರದಲ್ಲಿ ಅಬ್‌ಜೆಕ್ಷನ್ ಕಾಲ್‌ಫಾರ್ ಮಾಡುತ್ತೇವೆ. ನಾಳೆ ಪತ್ರಿಕೆಯಲ್ಲಿ ಸರ್ಕಾರದ ನಿಲುವು 25x30 ಅಡಿ ಅಳತೆಯ ನಿವೇಶಕ್ಕೆ ಇಷ್ಟು 30x40 ಅಡಿ ಅಳತೆಯ ನಿವೇಶನಕ್ಕೆ ಇಷ್ಟು ಎಂದು ಗೊತ್ತು ಮಾಡಿ ಅಬ್‌ಜಕ್ಷನ್ ಕಾಲ್‌ಫಾರ್ ಮಾಡಿತ್ತೇವೆ. ಈಗ ಅದನ್ನೇ ನಾನು ಹೇಳುತ್ತಿರುವುದು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಶಾಸಕರ ಅಭಿಪ್ರಾಯ ಕಾನೂನು ಮೂಲಕ ವ್ಯಕ್ತವಾಗಬೇಕು. ಇಲ್ಲಿ ಯಾವುದೂ ಕಾನೂನಿನಲ್ಲಿ ವ್ಯಕ್ತವಾಗಿಲ್ಲ. ಆದ್ದರಿಂದ ಸರ್ಕಾರಕ್ಕೆ ರೂಲ್ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ದೇಶಪಾಂಡೆಯವರು ಈ ಸೆಕ್ಷನ್ ಅನ್ನು ಓದಲಿ, ಇದರಲ್ಲಿ ಎಲ್ಲಾ ಇದೆ.

Within two months form the date of the receipt of the order of regularisation from the screening committtee the person in whose favour such order is made shall pay the amount as may be prescribed. Different amount may be prescribed in respect of different urban areas or class or class of persons...

ಶ್ರೀ ಆರ್. ಎಲ್. ಜಾಲಪ್ಪ : ನಿಮ್ಮ ಅಧಿಕಾರಿಗಳಿಗೆ, ಸ್ಕ್ರೀನಿಂಗ್ ಕಮಿಟಿಯವರಿಗೆ ಹೇಗೆ ಹೇಗೆ ಮನಸ್ಸು ಬರುತ್ತದೋ ಹಾಗೆ ರೇಟ್ ಫಿಕ್ಸ್ ಮಾಡುತ್ತಾ ಹೋಗಬಹುದು.

(ಗೊಂದಲ)

SRI R.V. DESHPANDE : What is the Clause, what is the area?

ಶ್ರೀ ಕೆ.ಜೆ.ಜಾರ್ಜ್ :ನಾವು ಏನು ರೇಟ್ ಫಿಕ್ಸ್ ಮಾಡುತ್ತೇವೆ ಅದರ ಪ್ರಕಾರ ಅಧಿಕಾರಿಗಳು ಮಾಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಬಿಲ್ಲನ್ನು ಪಾಸ್ ಮಾಡಿಕೊಂಡು ಹೋಗಲಿ, ಚಿಂತೆ ಇಲ್ಲ, ಆದರೆ ನಮ್ಮ ಪ್ರಶ್ನೆ ಇಷ್ಟೆ ಕಂದಾಯ ಸಚಿವರು...

ಉಪಾಧ್ಯಕ್ಷಿಣಿಯವರು : ಈಗ ಉತ್ತರ ಕೊಟ್ಟು ಆಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಾಗೆ ನಾವು ಪಾಸ್ ಮಾಡುವುದಕ್ಕೆ ಬಿಡುವುದಿಲ್ಲ. ಮಾನ್ಯ ಕಂದಾಯ ಸಚಿವರು ಅನ್‌ಅಥರೈಸ್ಡ್ ಕಲ್ಟಿವೇಷನ್ ಕನ್‌ಫರ್ಮ್ ಮಾಡುವುದಕ್ಕೆ ಕಾನೂನು ತಂದರು. ಇಷ್ಟು ಎಕರೆ ಒಳಗೆ ಇದ್ದವರಿಗೆ ಕನ್‌ಫರ್ಮ್ ಮಾಡುತ್ತೇವೆಂದರು, ಅದಕ್ಕೆ ನಾವು ಒಪ್ಪಿಕೊಂಡೆವು. ಮೈಸೂರು, ಬೆಂಗಳೂರಿನಂತಹ ಮಹಾನಗರದಲ್ಲಿ 30x40 ಅಡಿ ಅಳತೆಯೊಳಗಿರತಕ್ಕ ನಿವೇಶನಗಳನ್ನು ರೆಗ್ಯುಲರೈಸ್ ಮಾಡುತ್ತೇವೆಂದರೆ ಒಪ್ಪಬಹುದು. ಆದರೆ 60x80 ಅಡಿ ಅಳತೆಯ ನಿವೇಶನ ಇದೆ, ಸುತ್ತ ಕಾಂಪೌಂಡ್ ಹಾಕಿ ಮನೆ ಕಟ್ಟಿರುತ್ತಾನೆ. ಅದರ ಬೆಲೆ ಹತ್ತು ಲಕ್ಷ ರೂಪಾಯಿ ಆಗುತ್ತದೆ. ಅಂಥದಕ್ಕೆ ನೀವು ನೀವೇ ಸೇರಿಕೊಂಡು ಬೆಲೆ ನಿಗದಿ ಮಾಡುತ್ತೀರಾ? 30x40 ಅಥವಾ 40x60 ಅಡಿ ಅಳತೆಯ ನಿವೇಶನದೊಳಗೆ ಮನೆ ಮನೆ ಕಟ್ಟಿದರೆ ಮಾತ್ರ ರೆಗ್ಯುಲರೈಸ್ ಮಾಡುತ್ತೇವೆಂದು ಒಂದು ಲಿಮಿಟ್ ಅನ್ನು ಗೊತ್ತು ಮಾಡಿ. ದೊಡ್ಡವರಿಗೆ ಇದನ್ನು ಕೊಡುವುದಿಲ್ಲ. ಸಾಮಾನ್ಯ ಜನರಿಗೆ ಸಿಕ್ಕಬೇಕೆನ್ನುವ ಉದ್ದೇಶ ಇದೆ ಎಂದು ಹೇಳಿ. ಬಡವರಿಗೆ ಮನೆ ಸಿಗಬೇಕೆಂದು ಹೇಳಿ. ಈ ಕಾನೂನಿನ ರಕ್ಷಣೆ ತೆಗೆದುಕೊಂಡು ಯಾರು 60 x 100 ಅಡಿ ಅಳತೆಯ ನಿವೇಶನದಲ್ಲಿ ಮಧ್ಯದಲ್ಲಿ ಒಂದು ಮನೆ ಕಟ್ಟಿಕೊಂಡು ಕಾಂಪೌಂಡ್ ಹಾಕಿಕೊಂಡಿರುವ ಶ್ರೀಮಂತನಿಗೆ ನಿಮಗೆ ಖುಷಿ ಬಂದ ಬೆಲೆಗೆ ಕಟ್ಟಕೊಡುವಂಥ ವ್ಯವಸ್ಥೆ ಇದು ಆಗುತ್ತದೆ. ಆದ್ದರಿಂದ ನಾನು ಹೇಳುತ್ತಿದ್ದೇನೆ. ಇದನ್ನು ಸಮಗ್ರವಾಗಿ ತನ್ನಿ, ಬಡವರಿಗೆ ಮಾತ್ರ ಇದರಿಂದ ಅನುಕೂಲವಾಗಬೇಕು. 30 x 40 ಅಡಿ ಅಳತೆಗಿಂತ ಹೆಚ್ಚಿನ ನಿವೇಶನದಲ್ಲಿ ಮನೆ ಹೊಂದಿದ್ದವರಿಗೆ ಇದು ಅನ್ವಯವಾಗುವುದಿಲ್ಲವೆಂದು ಮಾಡಿ. ನಾವು ರೂಲ್ಸ್ ಮಾಡಿದಾಗ ಮಾಡಿಕೊಳ್ಳುತ್ತೇವೆ ಎಂಬುದನ್ನು ನಾವು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ದಯಮಾಡಿ ಸೆಲೆಕ್ಟ್ ಕಮಿಟಿಗೆ ಇದನ್ನು ಕಳುಹಿಸಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಹರ್ಷಕುಮಾರ ಗೌಡ : ಈಗ ನಾವು ಆಕ್ಟ್‌ನಲ್ಲಿ ರೇಟ್ ಫಿಕ್ಸ್ ಮಾಡುವ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಈ ಸಂದರ್ಭದಲ್ಲಿ, ಮಂತ್ರಿಗಳ ಗಮನಕ್ಕೆ ತರಬಯಸುವುದೇನೆಂದರೆ, ಮೈಸೂರಿನ ಮೂಡಾದಲ್ಲಿ 1987ರಲ್ಲಿ ರೇಟ್ ಫಿಕ್ಸ್ ಮಾಡಿ ಸುಮಾರು 20 ಸಾವಿರ ಜನ ಅರ್ಜಿದಾರರು ಎಂದು ಐಡೆಂಟಿಫೈ ಮಾಡಿ ಒಂದು ಕೋಟಿ ರೂಪಾಯಿಗಳನ್ನು ಕಲೆಕ್ಟ್ ಮಾಡಿದ್ದಾರೆ. ಅಂಥವರ ಪರಿಸ್ಥಿತಿ ಏನಾಗುತ್ತದೆ ಈ ಆಕ್ಟ್‌ನಿಂದ ಮನೆಗಳು ಇದ್ದರೆ ಮಾತ್ರ ರೆಗ್ಯುಲರೈಸ್ ಮಾಡುತ್ತೇವೆಂದು ಆಕ್ಟ್‌ನಲ್ಲಿ ಹೇಳಿದ್ದೀರಿ. ಸುಮಾರು 22 ಸಾವಿರ ಅರ್ಜಿದಾರರಲ್ಲಿ 10 ಸಾವಿರ ಜನ ಮಾತ್ರ ಮನೆ ಕಟ್ಟಿದ್ದಾರೆ, ಇನ್ನು ಉಳಿದ 12 ಸಾವಿರ ಜನ ನಿವೇಶನದಾರರು ಮನೆಗಳನ್ನು ಕಟ್ಟಿಲ್ಲ. ಅವರಿಗೆ ಪರಿಹಾರ ಕೊಡದಿದ್ದರೆ ಅವರು ಈ ರಾಜ್ಯದಲ್ಲಿ ಜಸ್ಟ್ ಓಟರ್ಸ್ ಅಷ್ಟೆ. ಅವರಿಗೆ ರೇಷನ್ ಕಾರ್ಡ್ ಸಿಗುವುದಿಲ್ಲ, ನಾಗರೀಕ ಸೌಲಭ್ಯ, ನೀರಾವರಿ ಸೌಲಭ್ಯ, ಲೈಟ್ ಇತ್ಯಾದಿ ಸಿಗುವುದಿಲ್ಲ. ಇಂಥ ಪರಿಸ್ಥಿತಿ ಒಂದು ಕಡೆ. ಈ ಆ್ಯಕ್ಟ್ ಮಾಡಿದ ಮೇಲೆ ಅವರನ್ನು ಹಾಗೇ ಬಿಟ್ಟರೆ ಆಗುವುದಿಲ್ಲ. ಅವರಿಗೋಸ್ಕರ ಇನ್ನೊಂದು ಅಮೆಂಡ್‌ಮೆಂಟ್ ತರಬೇಕಾಗುತ್ತದೆ.

ಮತ್ತೆ 30-40 ಸಾವಿರ ಜನರ ಸಮಸ್ಯೆ ಮೈಸೂರು ನಗರದಲ್ಲಿ ಮತ್ತು ಇಡೀ ರಾಜ್ಯದಲ್ಲಿ ಎರಡು ಮೂರು ಲಕ್ಷ ಜನರ ವಸತಿ ಸಮಸ್ಯೆ ಇರುತ್ತದೆ. ಇದನ್ನು ಹಾಗೇ ಬಿಟ್ಟರೆ ಇದನ್ನು ಒಂದು ದಂದೆ ಮಾಡಿಕೊಳ್ಳುತ್ತಾರೆ, ಶೋಷಣೆ ಮಾಡುತ್ತಾರೆ. ವ್ಯಾಪಾರ ನಡೆಯುತ್ತದೆ. ದಳ್ಳಾಳಿಗಳು ಒಂದು ವ್ಯವಸ್ಥಿತವಾಗಿ ಶೋಷಣೆ ಮಾಡುತ್ತಾರೆ.

ಉಪಾಧ್ಯಕ್ಷರು : ಬೇಗ ಮುಗಿಸಬೇಕು.

ಶ್ರೀ ಕೆ. ಹರ್ಷಕುಮಾರ್ ಗೌಡ : ಅಧ್ಯಕ್ಷರೇ, ಅವಕಾಶ ಕೊಡಬೇಕು. ಇದು ಪ್ರಮುಖ ಸಮಸ್ಯೆ. ಆ ಜನ ಯಾರು? ಗ್ರಾಮಾಂತರ ಪ್ರದೇಶದಿಂದ ಶೋಷಣೆಯಾಗಿ ಹೊರಗೆ ಬಂದ ಜನ. ಅರ್ಬನ್ ಡೆನ್ಸಿಟಿಯಿಂದ ಹೊರಗಡೆ ಹೋದ ಜನ ಇವರು. ಈ ಆಕ್ಟ್‌ಅನ್ನು ಸ್ವಾಗತ ಮಾಡುತ್ತೇನೆ. ಇದರ ಜೊತೆಗೆ ಯಾವ ಸೈಟುಗಳನ್ನು ಕೂಡ ರೆಗ್ಯುಲರೈಸ್ ಮಾಡಬೇಕು ತುರ್ತಾಗಿ. ಈಗ ಒಂದು ಚರ್ಚೆ ನಡೆಯುತ್ತಿದೆ. ಈಗಾಗಲೇ ರೇಟ್ ನಮೂದು ಮಾಡಿ ಅದರ ಬಗ್ಗೆ ಫಿಕ್ಸ್ ಮಾಡಿ ಈಗಾಗಲೇ ಒಂದು ಕೋಟಿ ರೂಪಾಯಿಗಳನ್ನು ಮೈಸೂರು ನಗರದಲ್ಲಿ ದುಡ್ಡು ಕಲೆಕ್ಟ್ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಒಂದು ಪ್ರಶ್ನೆ. ಇದನ್ನು ಪ್ರತಿಷ್ಠೆ ಪ್ರಶ್ನೆಯಾಗಿ ಇಟ್ಟುಕೊಳ್ಳಬೇಡಿ. ಪಾಸ್ ಮಾಡಿಕೊಳ್ಳಲೇಬೇಕು ಎಂದರೆ ಮತದಾನದ ಪ್ರಕಾರ ಪಾಸ್ ಮಾಡಿಕೊಳ್ಳುತ್ತೀರಿ. – ಅದರಲ್ಲಿ ಅಭ್ಯಂತರ ಇಲ್ಲ. ಇಲ್ಲಿ ಅನೇಕ ಮೂಲಭೂತವಾದ ಪ್ರಶ್ನೆಗಳು ಉದ್ಭವವಾಗಿದೆ. ನಿಜವಾಗಿಯೂ ಅನೇಕ ಜನ ಸ್ನೇಹಿತರು ಹೇಳಿದ ಹಾಗೆ ಇಲ್ಲಿರತಕ್ಕ ಸಂಶಯಗಳು ನಮಗೆ ಕ್ಲಿಯರ್ ಆಗಬೇಕು. ಇದರ ಹಿಂದೆ ಏನೋ ಒಂದು ಉದ್ದೇಶ ಇದೆ. ಈ ಉದ್ದೇಶ ಏನು ಎಂಬ ಬಗ್ಗೆ ಸಮಗ್ರವಾಗಿ ವಿವರಣೆ ಕೊಡಬೇಕು. ತಾವು ವಿವರಣೆ ಕೊಟ್ಟಿಲ್ಲ. ಭಾಷಣ ಮಾಡುವಾಗ ಕೊಟ್ಟಿದ್ದೀರಿ.

ಶ್ರೀ ಕೆ.ಜೆ. ಜಾರ್ಜ್ : ಅಧ್ಯಕ್ಷಿಣಿಯವರೇ, ನಾನು ಸರ್ಕಾರದ ಪರವಾಗಿ ಹಲವಾರು ವಿವರಣೆಗಳನ್ನು ಕೊಟ್ಟಿದ್ದೇನೆ. ಅದು ರೆಕಾರ್ಡ್‌ಗೆ ಹೋಗಿದೆ. ಅದಕ್ಕೆ ವಿರುದ್ಧವಾಗಿ ನಾನು ಹೋಗುವುದಕ್ಕಾಗುವುದಿಲ್ಲ. ಪಬ್ಲಿಷ್ ಮಾಡಿದ ಮೇಲೆ ಕಡಿಮೆ ಮಾಡಬೇಕೇ ವಿನಾ ಅದಕ್ಕಿಂತ ಹೆಚ್ಚು ಮಾಡುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಈ ಮಸೂದೆ ಪ್ರಕಾರವೇ ಮೂಲತಃ ಅನುಕೂಲವಾಗುವುದಕ್ಕೆ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಅಕ್ರಮವಾಗಿ ಕಟ್ಟಿರತಕ್ಕ ಮನೆಗಳನ್ನು ಸಕ್ರಮ ಮಾಡತಕ್ಕ ಮಸೂದೆ ಇದು. ಅಂದರೆ ತೆರೆ ಮರೆಯಲ್ಲಿ

ಅಕ್ರಮವಾಗಿ ಮಾಡಿರುವವರಿಗೆ ನೀವು ಸಕ್ರಮ ಮಾಡುತ್ತೀರಿ. ಇದು ಮೂಲ ಉದ್ದೇಶ. ಇರಲಿ. ಅನೇಕ ಜನ ಬಡವರಿದ್ದಾರೆ, ಅನುಕೂಲವಾಗುತ್ತದೆ ಎಂದು ನೀವು ಹೇಳುತ್ತಿದ್ದೀರಿ. ಈ ಸಭೆಯಲ್ಲಿ ಕುಳಿತು ಅಕ್ರಮವಾಗಿ ಮನೆಗಳನ್ನು ಕಟ್ಟುವವರಿಗೆ ಸಕ್ರಮಗೊಳಿಸುತ್ತೇವೆ ಎಂದು ಮಸೂದೆ ತರುತ್ತಾ ಇರುವುದು ಇತಿಹಾಸದಲ್ಲೇ ಮೊದಲನೇ ಮಸೂದೆ. ಅಕ್ರಮ ಕಾರ್ಯ ಮಾಡುವವರಿಗೆ ಸಕ್ರಮ ಮಾಡುತ್ತೇವೆಂದು ಮಾಡುತ್ತಿದ್ದೀರಿ. ಇರಲಿ, ಬಡವರಿಗೆ ಅನುಕೂಲವಾಗುತ್ತದೆಂದು ಹೇಳಿದ್ದೀರಿ. ಆದರೆ ಅಳತೆ ಎಷ್ಟು? ಎಷ್ಟು ಸೈಜ್, ಎಲ್ಲೆಲ್ಲಿ ಯಾರು ಕಟ್ಟಿರಬೇಕು, ಎಷ್ಟು ವರ್ಷ ಆಗಿರಬೇಕು, ಯಾವ ಭೂಮಿ ಇದಾವುದೂ ಮಸೂದೆಯಲ್ಲಿ ಇಲ್ಲವಲ್ಲಾ ಸ್ವಾಮಿ.

ಶ್ರೀ ಕೆ.ಜೆ. ಜಾರ್ಜ್ : 1990ನೇ ಮಾರ್ಚಿಗಿಂತ ಮೊದಲು ಕಟ್ಟಿರಬೇಕು. ಅಲ್ಲದೆ 80 x 50ಕ್ಕಿಂತ ಜಾಸ್ತಿ ಇರುವುದನ್ನು ರೆಗ್ಯುಲರೈಸ್ ಮಾಡುವುದಕ್ಕಾಗುವುದಿಲ್ಲ. 50 x 20, 20 x 30, 30x40 ಅವರಿಗೆ, 75 ಪರ್ಸೆಂಟ್ ಎಸ್ ಸಿ, ಎಸ್ ಟಿಯವರಿಗೆ ಕನ್ಸೆಷನ್ ಕೊಡಬೇಕು, ಎಕನಾಮಿಕಲಿ ವೀಕರ್ ಸೆಕ್ಷನ್ಸ್‌ಗೆ 50 ಪರ್ಸೆಂಟ್ ಕನ್ಸೆಷನ್ ಕೊಡಬೇಕು....

ಶ್ರೀ ಬಿ.ಎಸ್. ಯಡಿಯೂರಪ್ಪ : ಎಸ್.ಸಿ. ಎಸ್.ಟಿ. ಹೆಸರು ಏತಕ್ಕೆ ತರುತ್ತೀರಿ? ಅವರು ಅನ್-ಆಥರೈಸ್ಡ್ ಕನ್‌ಸ್ಟ್ರಕ್ಷನ್ ಮಾಡದೇ ಇದ್ದರೆ ಎಲ್ಲಿ ಬರುತ್ತದೆ?

ಶ್ರೀ ಬಿ.ಹೆಚ್. ಬನ್ನಿಕೋಡ್ : ಈ ವಿಧೇಯಕದಲ್ಲಿ ಏನಿದೆ ಅದನ್ನು ನಾವು ಚರ್ಚೆ ಮಾಡುತ್ತಿದ್ದೇವೆಯೇ ವಿನಹಾ ಮಂತ್ರಿಗಳ ಮನಸ್ಸಿನಲ್ಲಿ, ಅಧಿಕಾರಿಗಳ ಮನಸ್ಸಿನಲ್ಲಿ ಏನಿದೆ ಅದನ್ನು ಚರ್ಚೆಮಾಡುತ್ತಿಲ್ಲ. ಈ ಬಿಲ್‌ನಲ್ಲಿ ಹೇಳಿದಂಥ ಮಾತನ್ನು ಹೇಳಬಹುದು. ಮನಸ್ಸಿನಲ್ಲಿದ್ದಂಥಾ ಮಾತನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ.ಜೆ. ಜಾರ್ಜ್ : I am declaring the policy decision. ಇನ್ನೊಂದು ಏನಾಗುತ್ತದೆ? ಮಾನ್ಯ ಯಡಿಯೂರಪ್ಪನವರು ಯಾರಿಗೋ ಒಬ್ಬರಿಗೆ ಮಾಡುತ್ತಿದ್ದೀರಿ ಎಂದು ಹೇಳಿದ್ದಾರೆ. ಕಾನೂನು ಪ್ರಕಾರ ಏನು ಮಾಡುವುದಕ್ಕೆ ಆಗುತ್ತದೋ ಅದು ಮಾಡುತ್ತೇವೆ. ರೂಲ್ಸ್‌ನಲ್ಲಿ 80 x 50, 60 x 40 ಇದ್ದರೆ, ಅದನ್ನು ರೆಗ್ಯುಲರೈಸ್ ಮಾಡಬೇಕಾದರೆ ಅವರು ಬಿಡಿಎ ರೇಟಿನ ಡಬ್ಬಲ್ ಕೊಡಬೇಕಾಗುತ್ತದೆ. ಅದಕ್ಕಿಂತ ಜಾಸ್ತಿ ಏನು ಮಾಡುವುದಕ್ಕಾಗುತ್ತದೆ? ನಾವೇನು ಹಣವಂತರಿಗೆ ಸಹಾಯ ಮಾಡುತ್ತಿದ್ದೇವಾ? 1985ನೇ ಇಸವಿಯಿಂದ ಇದೊಂದು ಪಿಡುಗಾಗಿದೆ. ಮೈಸೂರಿನಲ್ಲಿ ಆಗಲೀ ಬೆಂಗಳೂರಿನಲ್ಲಿ ಆಗಲೀ ಅನ್-ಆಥರೈಸ್ಡ್ ಕನ್‌ಸ್ಟ್ರಕ್ಷನ್ ಬಂದಿದೆ.

ಶ್ರೀ ವಾಟಾಳ್ ನಾಗರಾಜ್ : ಅದನ್ನು ತಪ್ಪಿಸುವುದಕ್ಕೆ ಮುಂದಿನ ಕಾರ್ಯಕ್ರಮಗಳೇನು?

ಶ್ರೀ ಕೆ.ಜೆ. ಜಾರ್ಜ್ : ತಪ್ಪಿಸುವುದಕ್ಕೆ ಈಗಾಗಲೇ 21-8-1990ರಲ್ಲಿ ನಮ್ಮ ಸರ್ಕಾರ ಬಂದ ಮೇಲೆ ಗೈಡ್ ಲೈನ್ಸ್ ಕೊಟ್ಟಿದ್ದೇವೆ. ಬೇಕಾದರೆ ಅದನ್ನು ಓದಿ ಹೇಳುತ್ತೇನೆ. ಭೂ ಸ್ವಾಧೀನ ಅಧಿನಿಯಮ 1980ರ ಮೇರೆಗೆ ಗೊತ್ತುಪಡಿಸಿದ ಕಾಲಮಿತಿಯ ಒಳಗಾಗಿ ಈ ಅಧಿನಿಯಮದ ಮೇರೆಗೆ ಪ್ರಾರಂಭಿಸಲಾದ ಭೂ ಸ್ವಾಧೀನ ವ್ಯವಹಾರಗಳನ್ನು ಶಾಸನಬದ್ಧವಾಗಿ ಪೂರ್ಣಗೊಳಿಸುವಂತೆ ಮಾಡುವುದು.

ಸರ್ಕಾರಿ ಏಜೆನ್ಸಿಗಳಾದ ಸಿಪಿಡಬ್ಲ್ಯುಡಿ, ಕೆಪಿಡಬ್ಲ್ಯುಡಿ, ಕೆಹೆಚ್‌ಬಿ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಲಿ ಇವುಗಳಿಗೆ ಮತ್ತು ರಾಜ್ಯ ಸರ್ಕಾರಿ ಇತರೆ ಸಂಸ್ಥೆಗಳಿಗೆ ಭೂಮಿ ಸಗಟು ಮಂಜೂರು ಕೊಡುವ, ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸಾಧ್ಯವಾಗಿಸುವುದು.

ಮತ್ತೊಂದು ಏನೆಂದರೆ,

ಸಂಬಂಧಿಸಿದ ಗ್ರಾಮಠಾಣ ಪರಿಮಿತಿಯೊಳಗೆ ಕಟ್ಟಡ ನಿರ್ಮಾಣ ಲೈಸೆನ್ಸಿಂಗ್ ಅಧಿಕಾರವನ್ನು ಕೂಡಲೇ ಜಾರಿಗೆ ತಂದು ಲೈಸೆನ್ಸ್ ನೀಡುವ ಅವುಗಳ ಅಧಿಕಾರವನ್ನು ಕೂಡಲೇ ಬರುವಂತೆ ಹಿಂತೆಗೆದುಕೊಳ್ಳಲು ಕ್ರಮ ತೆಗೆದುಕೊಳ್ಳುವುದು.

ಮೊದಲು ಏನಾಗುತ್ತಿತ್ತು ಎಂದರೆ, ಎಲ್ಲಾ ಪವರ್ಸ್ ಅವರಿಗೆ ಇತ್ತು. ಲೈಸೆನ್ಸ್ ಕೊಡುವ ಪವರ್ಸ್ ಹೆಚ್ ಎ ಎಲ್ ಸ್ಯಾನಿಟರಿ ಬೋರ್ಡಿಗೆ ಇತ್ತು, ಐಟಿಐ ನೋಟಿಫೈ ಏರಿಯಾಕ್ಕೆ ಪವರ್ಸ್ ಇತ್ತು. ಅದನ್ನು ತೆಗೆದು ಹಾಕಿದ್ದೇವೆ. ಹೌಸಿಂಗ್ ಬೋರ್ಡ್‌ಗಾಗಲೀ, ವಾಟರ್ ಸಪ್ಲೈನವರಿಗೆ ಇವತ್ತು ಹಾಗೇ ಕನೆಕ್ಷನ್ ಕೊಡುವುದಕ್ಕೆ, ಕೆಇಬಿಯವರು ಕರೆಂಟ್ ಸಪ್ಲೈ ಮಾಡುವುದಕ್ಕೆ ಆಗುವುದಿಲ್ಲ. ಈ ರೀತಿಯ ಕ್ರಮವನ್ನು 1990ರ ಆಗಸ್ಟ್‌ನಲ್ಲೇ ತೆಗೆದುಕೊಂಡಿದ್ದೇವೆ. 1990ರ ಮಾರ್ಚಿವರೆಗೆ ರೆಗ್ಯುಲರೈಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇವತ್ತು ಮಾತೆತ್ತಿದರೆ ಏನಾಗುತ್ತದೆ ಎಂದರೆ, ಇವತ್ತು ಬೆಂಗಳೂರು, ಮೈಸೂರು ಮುಂತಾದಲ್ಲಿ ನೀರು ಸಿಗುತ್ತಿಲ್ಲ ಕೊಳವೆ ಬಾವಿ ಹಾಕಿಸಿ ಎಂದು ಕೇಳುತ್ತಾರೆ. ಅವರು ಯಾರಿಗೂ ಟ್ಯಾಕ್ಸ್ ಕೊಡುತ್ತಿಲ್ಲ, ಆ ಬಡಾವಣೆಗಳು ಪ್ಲಾನ್ ಪ್ರಕಾರ ಅಭಿವೃದ್ಧಿಯಾಗಿಲ್ಲ. ಈ ರೀತಿಯ ತೊಂದರೆಗಳು ಆಗುತ್ತದೆ. ನಮ್ಮ ಸರ್ಕಾರ ಅಲ್ಲ ಹಿಂದಿನ ಸರ್ಕಾರ ಕೂಡಾ ಪ್ರಯತ್ನ ಮಾಡಿದೆ. ಇವತ್ತು ಒಂದು ಪ್ರಯತ್ನ ಮಾಡುತ್ತಿದ್ದೇವೆ. ಸಾಕಷ್ಟು ಕೂಗು ಜನರಿಂದ ಬಂದಿದೆ. ಯಾವುದೇ ದುರುದ್ದೇಶದಿಂದ ಇದನ್ನು ಮಾಡಿದ್ದಲ್ಲ, ಬೇರೆ ಯಾವ ದೃಷ್ಟಿಯಿಂದ ಮಾಡಿಲ್ಲ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "1991ನೇ ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 10 ರವರೆಗೆ ಎರಡೂ ಸೇರಿದಂತೆ,

ಉಪಾಧ್ಯಕ್ಷಿಣಿಯವರು : ಪ್ರಸ್ತಾವ ಏನೆಂದರೆ "ಖಂಡ 2ರಿಂದ 10ರವರೆಗೆ ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 10 ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ :

ಉಪಾಧ್ಯಕ್ಷಿಣಿಯವರು : ಪ್ರಸ್ತಾವ ಏನೆಂದರೆ, "ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು) : 1991 ನೇ ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷಿಣಿಯವರು : ಪ್ರಸ್ತಾವ ಏನೆಂದರೆ, "1991ನೇ ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲ್ಪಾಯಿತು

ಉಪಾಧ್ಯಕ್ಷಿಣಿಯವರು : ಈಗ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ...

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ನಿನ್ನೆ ಸಂಜೆ ಅಲ್ಪ ಕಾಲಾವಧಿ ಚರ್ಚೆ ನಡೆದಿದ್ದು ಅದಕ್ಕೆ ಉತ್ತರ ಕೊಡಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್ : ನೀರಾವರಿ ಸಚಿವರು ಇಲ್ಲಿ ಇಲ್ಲ.

ಉಪಾಧ್ಯಕ್ಷರು : ನೀರಾವರಿ ಸಚಿವರು ಬಂದು ಹೇಳಿ ಹೋಗಿದ್ದಾರೆ. ನಾಳೆ ದಿವಸ ಅವರ ಭಾಗದ್ದು ಉತ್ತರವನ್ನು ಕೊಡುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ : ಬೆಳಗಾಂ, ಹುಬ್ಬಳ್ಳಿಯಲ್ಲಿ ನಡೆದ ಘಟನೆಗಳ ಬಗ್ಗೆ ಮಾನ್ಯ ಗೃಹಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುತ್ತೇವೆಂದು ಹೇಳಿದ್ದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಗೃಹ ಸಚಿವರು ಮೇಲ್ಮನೆಯಲ್ಲಿ ಅವರ ಖಾತೆಗೆ ಸಂಬಂಧಪಟ್ಟ ಹಾಗೆ ಒಂದು 310ರ ಮೇರೆಗೆ ವಿಷಯದ ಬಗ್ಗೆ ಉತ್ತರ ಕೊಡಬೇಕಾಗಿರುವುದರಿಂದ ಅಲ್ಲಿಗೆ ಹೋಗಿದ್ದಾರೆ. ಅದು ಆದಮೇಲೆ ಅವರು ಇಲ್ಲಿಗೆ ಬರುತ್ತಾರೆ.

SRI S.S. JOSHI : Madam, the Hon. Minister for Health assured yesterday that he would make a statement to-day. Will he make the statement? Yesterday, he said that he is ready with the statement.

MADAM DEPUTY SPEAKER : Let the reply of the Hon.Minister for revenue be over and then let him make a statement tomorrow.

SRI S.S: JOSHI : He is ready with the statement.

(ಗೊಂದಲ)

ಉಪಾಧ್ಯಕ್ಷರು : ಈಗ ಮಾನ್ಯ ಕಂದಾಯ ಮಂತ್ರಿಗಳು ರಿಪ್ಲೈ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಅವರು ಹೇಳಿಕೆ ಕೊಡಲಿ ಅದಕ್ಕೆ ನನ್ನ ಅಭ್ಯಂತರವಿಲ್ಲ. ಕೊನೆಗೆ ನ್ಯಾಯಾಂಗ ತನಿಖೆಗೆ ಒಪ್ಪಿದ್ದೇನೆಂದು ಅವರು ಹೇಳಬೇಕು. ಅವರು ನ್ಯಾಯಾಂಗ ತನಿಖೆಗೆ ಒಪ್ಪಲಿಲ್ಲವೆಂದರೆ ಮತ್ತೆ ನಾವು ಪ್ರತಿಭಟನೆ ಮಾಡದೆ ವಿಧಿಯಿಲ್ಲ.

ವಿಷಯ : ಅತಿವೃಷ್ಟಿಯಿಂದ ಆಗಿರುವ ಅನಾಹುತಗಳ ಬಗ್ಗೆ ಚರ್ಚೆ (ಸನ್ಮಾನ್ಯ ಕಂದಾಯ ಸಚಿವರಿಂದ ಉತ್ತರ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಉತ್ತರ ಕೊಡುವುದಕ್ಕೆ ಮುಂಚೆ ನಾವು ಪ್ರತಿಭಟನೆ ಮಾಡುತ್ತೇವೆಂದರೆ ಅದು ಕಷ್ಟವಾಗುತ್ತದೆ. ನಿನ್ನೆ ಮತ್ತು ಹಿಂದೆ ಕೂಡ ಮಾನ್ಯ ಚಂದ್ರೇಗೌಡರು ಇದರ ಬಗ್ಗೆ ಪ್ರಸ್ತಾಪ ಮಾಡಿ ಹಲವಾರು ವಿಷಯಗಳ ಬಗ್ಗೆ ಈ ಸದನದಲ್ಲಿ ನಾವು ಚರ್ಚೆ ಮಾಡಿದ್ದೇವೆ. ಮಾನ್ಯ ಸದಸ್ಯರು ಅನೇಕ ಉಪಯುಕ್ತವಾದ ಸಲಹೆಗಳನ್ನು ಈವೊಂದು ಕೆಲಸದಲ್ಲಿ ಕಾರ್ಯದಲ್ಲಿ ಅವರು

ಹೇಳಿದ್ದಾರೆ. ಇವತ್ತು ಮುಖ್ಯವಾಗಿ ಈವೊಂದು ಫ್ಲಡ್ ನಲ್ಲಿ ಏನು ಅನಾಹುತವಾಗಿದೆ. ಈ ಅನಾಹುತವನ್ನು ಯಾವ ರೀತಿಯಾಗಿ ತಪ್ಪಿಸಬಹುದಾಗಿತ್ತು, ಯಾವ ರೀತಿಯಾಗಿ ಸಹಾಯ ಮಾಡಬಹುದಾಗಿತ್ತು ಮತ್ತು ಎಷ್ಟರ ಮಟ್ಟಿಗೆ ಸರ್ಕಾರ ಸಹಾಯ ಮಾಡಿದೆ ಎನ್ನುವ ಬಗ್ಗೆ ಬಹಳ ವಿವರವಾಗಿ ಅವರು ಹೇಳಿದ್ದಾರೆ. ನಾನು ಪುನಃ ಪ್ರತಿಯೊಂದನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಅವರಿಗೆ ಅದರ ಬಗ್ಗೆ ಸಾಕಷ್ಟು ಮಾಹಿತಿ ಇದೆ. ಒಂದು ಮಾತನ್ನು ಸದನದ ಗಮನಕ್ಕೆ ತರಬಯಸುತ್ತಿದ್ದೇನೆ. ಕಾರಣ ಇದು ಬಹಳ ಸೂಕ್ಷ್ಮವಾದ ವಿಷಯ. ಯಾವಾಗ ನಮ್ಮ ರೈತರು ಈವೊಂದು ಅತಿವೃಷ್ಟಿಯಿಂದ ತೊಂದರೆಗೆ ಒಳಪಡುತ್ತಾರೆ ಆಗ ಸಹಜವಾಗಿ ಮಾನ್ಯ ಸದಸ್ಯರ ಕಳವಳಿ, ಜನರ ಕಳವಳ ಅದರ ಬಗ್ಗೆ ಇರುತ್ತದೆ. ಆದರೆ ಅವರ ಜೊತೆಯಲ್ಲಿ ಸರ್ಕಾರ ಕೂಡ ಇದೆ. ಆದರೆ ಇಂತಹ ಒಂದು ಕಷ್ಟದ ಸಮಯದಲ್ಲಿ ತೊಂದರೆಯ ಸಮಯದಲ್ಲಿ ಸರ್ಕಾರ ಎಷ್ಟರಮಟ್ಟಿಗೆ ಸಹಾಯ ಮಾಡಬಹುದು ಎನ್ನತಕ್ಕದ್ದು ಕೂಡ ಇವತ್ತು ನಾವು ಗಮನದಲ್ಲಿಟ್ಟುಕೊಂಡಿದ್ದೇವೆ. ಇವತ್ತು ತಮಗೆ ಗೊತ್ತಿರುವ ಹಾಗೆ ರೆವಿನ್ಯೂ ಇಲ್ಲಾಖೆಯಿಂದ ಯಾವಾಗಲೂ ಸಹಾಯ ಮಾಡತಕ್ಕದ್ದು ರಿಲೀಫ್ ಮೆಜರ್ಸ್ ಹೊರತಾಗಿ ಸಂಪೂರ್ಣವಾಗಿ ಕಾಂಪನ್ಸೇಷನ್ ಕೊಡತಕ್ಕದ್ದು ಅಥವಾ ಇನ್ಸ್‌ರೆನ್ಸ್ ಕಂಪನಿಗಳು ಹೇಗೆ ಸಂಪೂರ್ಣ ಕಾಂಪನ್ಸೇಷನ್ ಕೊಡತಕ್ಕದ್ದು ಇದೆ. ಆ ರೀತಿ ಈ ಇಲಾಖೆಯಿಂದ ಕೊಡಲಿಕ್ಕೆ ಸಾಧ್ಯವಿಲ್ಲ, ಇದು ಇವತ್ತಿನದಲ್ಲ, ಸಾವಿರಾರು ವರ್ಷಗಳಿಂದ ಇಲಾಖೆ ಇರಬಹುದು, ಇತ್ತೀಚೆಗೆ ಹತ್ತಾರು ವರ್ಷಗಳಿಂದ ಸ್ವಲ್ಪಮಟ್ಟಿಗೆ ತನ್ನ ಅಧಿಕಾರ ಕಳೆದುಕೊಂಡರೂ ಯಾವ್ಯಾವ ಕಾರ್ಯದಲ್ಲಿ ಸಹಾಯ ಮಾಡಬೇಕು ಎನ್ನುವ ಬಗ್ಗೆ ನಿಯಮಗಳು ಕೂಡ ಇವೆ. ಕೇಂದ್ರ ಸರ್ಕಾರದ ಆದೇಶಗಳು ಕೂಡ ಇವೆ.

ನಾವೊಂದು ಗೈಡ್ ಲೈನ್ಸ್ ಹಾಕಿಕೊಂಡಿದ್ದೇವೆ. ನಮ್ಮ ಆದೇಶ ಕೂಡ ರಿಲೀಫ್ ಬಗ್ಗೆ ಇದೆ. ಅನೇಕ ಸದಸ್ಯರು ಈಗಿರತಕ್ಕ ರೂಲ್ಸ್ ಸರಿಯಿಲ್ಲ ಅದಕ್ಕೆ ತಿದ್ದುಪಡಿಯನ್ನು ತರಬೇಕು, ಇನ್ನು ಹೆಚ್ಚಿನ ರಿಲೀಫ್ ಕೊಡತಕ್ಕ ಕೆಲಸವನ್ನು ಮಾಡಬೇಕೆಂದು ಅವರು ಹೇಳಿದ್ದಾರೆ. ಆ ಸಲಹೆಗಳನ್ನು ನಾನು ಸ್ವಾಗತಿಸುತ್ತೇನೆ. ಆದರೆ ಈ ಇಲಾಖೆಯಲ್ಲಿರತಕ್ಕ ತೊಂದರೆ ಏನೆಂದರೆ ಇವತ್ತು ಕೇಂದ್ರ ಸರ್ಕಾರದಿಂದ ನಮಗೆ ನಿಗಧಿಯಾದ ಹಣ ಎಷ್ಟು ಅಂದರೆ 27 ಕೋಟಿ ರೂಪಾಯಿ. ಈ 27 ಕೋಟಿ ರೂಪಾಯಿಯಲ್ಲಿ ನಾವು ಬೆಂಕಿ ಅನಾಹುತವಾದರೆ ಕೊಡಬೇಕು. ಫ್ಲಡ್ ಬಂದರೆ ಕೊಡಬೇಕು. ಸ್ಕೇರ್ಸಿಟಿಗೆ ಕೊಡಬೇಕು. ಸ್ಕೇರ್‌ಸಿಟಿಯಲ್ಲಿ ಕುಡಿಯುವ ನೀರು, ಫಾಡರ್ ಈ ಎಲ್ಲಾ ರೀತಿಯಲ್ಲಿ ನ್ಯಾಚುರಲ್ ಕಲಾಮಿಟಿಗೆ ಇವತ್ತು ಕೇಂದ್ರದಿಂದ ಫಿಕ್ಸ್ ಮಾಡಿರತಕ್ಕ ಹಣ ಕೇವಲ 27 ಕೋಟಿ ರೂಪಾಯಿ. ಇದರಲ್ಲಿ ನಾಲ್ಕನೇ ಮೂರು ಭಾಗ ಅವರು ಕೊಡುತ್ತಾರೆ. ನಮ್ಮದು ನಾಲ್ಕನೇ ಒಂದು ಭಾಗ ಇರುತ್ತದೆ. 27 ಕೋಟಿಗಿಂತ ಹೆಚ್ಚಿಗೆ ಖರ್ಚು ಮಾಡಬೇಕಾದರೆ ಸರ್ಕಾರ ಕರ್ನಾಟಕ ರಾಜ್ಯದ ವಿವಿಧ ಇಲಾಖೆಗಳಿಂದ ಹಣವನ್ನು ಕಡಿತ ಮಾಡಿ ಕೊಡಬೇಕಾಗುತ್ತದೆ.

6.05 ಪಿ.ಎಂ

ಹೋದ ಸಲ ಕೂಡ ತಮಗೆ ಗೊತ್ತಿದೆ. ಸುಮಾರು 27 ಕೋಟಿ ರೂಪಾಯಿಗಳನ್ನು ನಿಗದಿಪಡಿಸಿದರೆ ನಾವು 41 ಕೋಟಿ ಖರ್ಚು ಮಾಡಿದ್ದೇವೆ. ಆಗ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್, ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ಬೇರೆ ಬೇರೆ ಇಲಾಖೆಗಳಿಂದ ಹಾಗೂ ಜವಾಹರ್ ರೋಜಗಾರ್ ಯೋಜನೆಯಿಂದ ಹಣವನ್ನು ತೆಗೆದುಕೊಂಡು ಈ ಒಂದು ಕೆಲಸಕ್ಕೆ ನಾವು ಕೊಟ್ಟೆವು. ಅದಕ್ಕೆ ಹೆಚ್ಚಿನ ಹಣ ಹೊರಗಿನಿಂದ ಬರುವುದಿಲ್ಲ. ಯಾವುದಾದರೂ ಕೆಲಸ ನಿಲ್ಲಿಸಿ ಇದನ್ನು ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಈ

27 ಕೋಟಿಯಲ್ಲಿ ಈಗಾಗಲೇ ಕೇಂದ್ರ ಸರ್ಕಾರ 16 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ.

ಅದರಲ್ಲಿ 11 ಕೋಟಿ ರೂಪಾಯಿಗಳನ್ನು ಈಗಾಗಲೇ ನಾವು ಪ್ರತಿಯೊಂದು ಜಿಲ್ಲೆಗಳಿಗೆ ವಿಲೇವಾರಿ ಮಾಡಿದ್ದೇವೆ. ಅವರಿಗೆ ಕಾಂಪನ್‌ಸೇಷನ್ ಕೊಡುವುದಕ್ಕೆ ಆಗಲಿ, ಬೇರೆ ಕೆಲಸಗಳಿಗೆ ಆಗಲಿ ಇದನ್ನು ಖರ್ಚು ಮಾಡಿಕೊಳ್ಳಬಹುದು ಎಂದು ಸ್ಪಷ್ಟವಾಗಿ ಅವರಿಗೆ ತಿಳಿಸಿದ್ದೇವೆ. ಆದರೆ ಕೆಲವು ಕಡೆ ಬಂದಂಥ ದೂರುಗಳು ಏನೆಂದರೆ, ನಾವು ಏನನ್ನು ಕೊಟ್ಟಿಲ್ಲ, ಇದು ಸರಿಯಲ್ಲ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದರು. ಆದರೆ ಒಂದು ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಇವತ್ತು ಎಷ್ಟು ಹಣ ನಾವು ಪ್ರತಿಯೊಂದು ಜಿಲ್ಲೆಗೆ ಕೊಟ್ಟಿದ್ದೇವೆ ಎನ್ನತಕ್ಕದ್ದನ್ನು ತಮ್ಮ ಗಮನಕ್ಕೆ ತರುತ್ತೇನೆ. ಪ್ರತಿ ಜಿಲ್ಲೆಯಲ್ಲಿ ಅಂಥಾದ್ದನ್ನು ನಾವು ಅನೆಕ್ಸರ್‌ನಲ್ಲಿ ಕೊಟ್ಟಿದ್ದೇವೆ. ಎಷ್ಟು ಲುಕ್ಸಾನು ಆಗಿದೆ, human lives, live stocks, house collapse, agriculture loss - ಪ್ರತಿಯೊಂದು ಕೂಡ ಸ್ಟೇಟ್‌ಮೆಂಟ್‌ನಲ್ಲಿ ಕೊಟ್ಟಿದ್ದೇವೆ.

ಸುಮಾರು 40 ಕೋಟಿ ರೂಪಾಯಿಗಳ ಲುಕ್ಸಾನು ಆಗಿದೆ ಎನ್ನತಕ್ಕದ್ದು ಕೂಡ ನಾವು ಹೇಳಿದ್ದೇವೆ. ಒಟ್ಟು 40 ಕೋಟಿ 52 ಲಕ್ಷ ರೂಪಾಯಿ. ಇದರಲ್ಲಿ human lives, live stock, house damage, agricultural land, building damage, roads, bridges, minor irrigation tanks, anti-sea-erosion works, drainage system ಇದೆಲ್ಲಾ ಸೇರಿ 43 ಕೋಟಿ 52 ಲಕ್ಷ ರೂಪಾಯಿ ನಷ್ಟವಾಗಿದೆ. ಇದರಲ್ಲಿ ಮೂರು ಪುಟ ಇದೆ. ಬಹಳಷ್ಟು ಜನ ಪೇಜ್ 1ನ್ನು ನೋಡಿ 12 ಕೋಟಿ ಎಂದು ಹೇಳಿದರು. ಒಂದನೇ ಪೇಜ್‌ನಲ್ಲಿ human lives, live stock, agriculture damage. 2ನೇ ಪೇಜ್‌ನಲ್ಲಿ ಪಿ.ಡಬ್ಲ್ಯೂ.ಡಿ. ಇದೆ. 3ನೇ ಪೇಜಿನಲ್ಲಿ ಹೀಗಿದೆ. ಅದನ್ನು ಬಹಳ ಜನ ನೋಡಿಲ್ಲ. ಒಂದನೇ ಪುಟ ನೋಡಿ ಅದನ್ನು ಹೇಳಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ : ಪ್ರತಿಯೊಂದು ಪೇಜಿನಲ್ಲಿ 12-12 ಕೋಟಿ ಮಾಡಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ನೀವು ಓದಿ ಎಂದರೆ ನಾನು ಓದುತ್ತೇನೆ. ಸುಮ್ಮನೆ ನಿಮ್ಮ ಸಮಯ ಹಾಳು ಮಾಡುವುದು ಬೇಡವೆಂದು ನಾನು ಹೇಳಿದೆ. ಅದಕ್ಕಾಗಿ ಡಿಸ್ಟ್ರಿಕ್ಟ್‌ವೈಸ್ ರಿಲೀಸ್ ಮಾಡಿದಂಥ ಅಮೌಂಟ್ ಎಷ್ಟು ಎನ್ನತಕ್ಕದ್ದನ್ನು ನಾನು ಹೇಳುತ್ತೇನೆ. ಬೆಂಗಳೂರು ನಗರ ಜಿಲ್ಲೆಗೆ ನಾವು ಫ್ಲಡ್‌ನಲ್ಲಿ ಕೊಡದೇ ಇದ್ದರೂ ಕೂಡ ನ್ಯಾಚುರಲ್ ಕಲಾಮಿಟಿ ಫಂಡ್ ನಿಂದ ಸುಮಾರು 43 ಲಕ್ಷ 50 ಸಾವಿರ ಕೊಟ್ಟಿದ್ದೇವೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ 37 ಲಕ್ಷ ಕೊಟ್ಟಿದ್ದೇವೆ. ಕೋಲಾರಕ್ಕೆ 36 ಲಕ್ಷ 50 ಸಾವಿರ ಕೊಟ್ಟಿದ್ದೇವೆ.

ತುಮಕೂರಿಗೆ 30 ಲಕ್ಷ ಕೊಟ್ಟಿದ್ದೇವೆ. ಚಿತ್ರದುರ್ಗಕ್ಕೆ 38 ಲಕ್ಷ ಕೊಟ್ಟಿದ್ದೇವೆ. ಶಿವಮೊಗ್ಗಕ್ಕೆ ಫ್ಲಡ್‌ನಲ್ಲಿ 30 ಲಕ್ಷ ಮತ್ತು ಇತರೆ ಬಾಬ್ತುನಲ್ಲಿ 21 ಲಕ್ಷ ಸೇರಿ 53 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮೈಸೂರಿಗೆ ಸುಮಾರು 40 ಲಕ್ಷ ಫ್ಲಡ್‌ನಲ್ಲಿ ಮತ್ತು ಉಳಿದಂಥ ಬಾಬತ್ತಿನಲ್ಲಿ ರೂರಲ್ ಡೆವಲಪ್‌ಮೆಂಟ್ ಸೇರಿಸಿ 84 ಲಕ್ಷ ಕೊಟ್ಟಿದ್ದೇವೆ. ಮಂಡ್ಯಕ್ಕೆ ಸುಮಾರು 68 ಲಕ್ಷ ಕೊಟ್ಟಿದ್ದೇವೆ. ಚಿಕ್ಕಮಗಳೂರಿಗೆ ಸುಮಾರು 69 ಲಕ್ಷ ಕೊಟ್ಟಿದ್ದೇವೆ. ಹಾಸನಕ್ಕೆ 65 ಲಕ್ಷ ಕೊಟ್ಟಿದ್ದೇವೆ. ಕೊಡಗು ಜಿಲ್ಲೆಗೆ 27 ಲಕ್ಷ ಕೊಟ್ಟಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆಗೆ 56 ಲಕ್ಷ ಕೊಟ್ಟಿದ್ದೇವೆ. ಗುಲ್ಬರ್ಗಾ ಜಿಲ್ಲೆಗೆ 90 ಲಕ್ಷ ಕೊಟ್ಟಿದ್ದೇವೆ. ಬೀದರ್‌ಗೆ 27 ಲಕ್ಷ ರಾಯಚೂರಿಗೆ 81 ಲಕ್ಷ ಲಕ್ಷ

ಕೊಟ್ಟಿದ್ದೇವೆ. ಬಳ್ಳಾರಿಗೆ 44 ಲಕ್ಷ, ಬೆಳಗಾವಿಗೆ 54 ಲಕ್ಷ ಕೊಟ್ಟಿದ್ದೇವೆ. ಬಿಜಾಪುರಕ್ಕೆ 62 ಲಕ್ಷ, ಧಾರವಾಡ ಜಿಲ್ಲೆಗೆ 95 ಲಕ್ಷ ಮತ್ತು ಉತ್ತರ ಕನ್ನಡ ಜಿಲ್ಲೆಗೆ 51 ಲಕ್ಷ ಕೊಟ್ಟಿ ದ್ದೇವೆ.

ಮತ್ತು ಡಿ.ವಿ.ಸಿ. ಹತ್ತಿರ ಉಳಿದಿರತಕ್ಕಂಥ ಬೆಂಕಿ ಅನಾಹುತ, ಇಂತಹವುಗಳನ್ನು ಸೇರಿಸಿದರೆ, ಅವರಿಗೆ 13 ಲಕ್ಷ ಕೊಟ್ಟಿದ್ದೇವೆ. ಹೀಗೆ ನ್ಯಾಚುರಲ್ ಕಲಾಮಿಟಿ ಫಂಡ್‌ನಿಂದ 11 ಕೋಟಿ 31 ಲಕ್ಷ ಇವತ್ತು ನಾವು ಬಿಡುಗಡೆ ಮಾಡಿದ್ದೇವೆ. ಇದರಲ್ಲಿ ಕೇವಲ ಫ್ಲಡ್‌ರಿಲೀಫ್‌ಗೆ ಮಾತ್ರ 4 ಕೋಟಿ 9 ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಹೀಗೆ ಪ್ರತಿಯೊಂದು ಜಿಲ್ಲೆಗೂ ಕೂಡ ಎಲ್ಲೆಲ್ಲಿ ಯಾವ ಯಾವ ಬಾಬತ್ತಿಗಾಗಿ ನಾವು ಕೊಡಬೇಕು, ಅದನ್ನು ನ್ಯಾಚುರಲ್ ಕಲಾಮಿಟಿ ಫಂಡ್‌ನಿಂದ ಕೊಟ್ಟಿದ್ದೇವೆ, ಕೆಲಸ ಕೂಡ ನಡೆದಿದೆ. ಕೆಲವು ಕಡೆ ಜಿಲ್ಲಾಧಿಕಾರಿಗಳು ಖರ್ಚು ಮಾಡಿಲ್ಲ ಮತ್ತು ಅವರು ಲೆಕ್ಕ ಕೂಡ ಕೊಟ್ಟಿಲ್ಲ.

ಈಗಾಗಲೇ ನಿನ್ನೆ ಧಾರವಾಡ ಜಿಲ್ಲೆ ಬಗ್ಗೆ ಹೇಳಿದರು. ಧಾರವಾಡ ಜಿಲ್ಲೆಯಲ್ಲಿ ಖರ್ಚುಮಾಡಿರುವ ಹಣ ಕಡಿಮೆ ಇದೆ: ಹಣವೇ ಇಲ್ಲ ಎಂಬ ಮಾತನ್ನು ಹೇಳುತ್ತಿದ್ದಾರೆಂದು ಹೇಳಿದರು. ಆದರೆ, ನಾವು ಬಿಡುಗಡೆ ಮಾಡಿರುವುದನ್ನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ಧಾರವಾಡ ಜಿಲ್ಲೆಗೆ ಸುಮಾರು 95 ಅಂದರೆ, ಫ್ಲಡ್‌ನಲ್ಲಿ 37 ಲಕ್ಷ ಕೊಟ್ಟಿದ್ದೇವೆ. ಇಷ್ಟಾದರೂ ಖರ್ಚು ಮಾಡಿ, ಅವರು ನಮಗೆ ಲೆಕ್ಕಪತ್ರವನ್ನು ಕೊಟ್ಟರೆ....

ಶ್ರೀ ಬಿ.ಹೆಚ್. ಬನ್ನಿಕೋಡ್ : ನೀವು ಇಷ್ಟು ಹಣವನ್ನು ಕೊಟ್ಟಿದ್ದೇವೆಂದು ಹೇಳುತ್ತೀರಿ. ಆದರೆ, ಅವರು ಅಷ್ಟು ಹಣವನ್ನು ಬಿಡುಗಡೆ ಮಾಡಿಲ್ಲ; ಇದ್ದ ಹಣವನ್ನೂ ಬಳಸಿಲ್ಲ. ನನ್ನ ತಾಲ್ಲೂಕಿನಲ್ಲಿ 46 ಲಕ್ಷ ರೂಪಾಯಿಗಳ ವರದಿ ಕೊಟ್ಟರೆ, ಹಣವನ್ನು ಬಿಡುಗಡೆ ಮಾಡಿಯೇ ಇಲ್ಲ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಈಗಾಗಲೇ ಹೇಳಿದ್ದೇನೆ. ಯಾವ ಜಿಲ್ಲಾಧಿಕಾರಿಗಳಾಗಲಿ, ತಹಶೀಲ್ದಾರರಾಗಲೀ, ಅವರಿಗೆ ಬಿಡುಗಡೆಯಾದ ಹಣವನ್ನು ಸಮರ್ಪಕವಾಗಿ, ಕಾನೂನು ಪ್ರಕಾರ, ರೂಲ್ಸ್ ಪ್ರಕಾರ ಖರ್ಚು ಮಾಡದೇ ಹೋದರೆ, ಖಂಡಿತವಾಗಿಯೂ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಏಕೆಂದರೆ, ನೊಂದಂಥ ಜನರಿಗೆ ನಾವು ಪರಿಹಾರ ಕೊಡುವುದೇ ಕಡಿಮೆ, ಇದು ಎಲ್ಲರೂ ಒಪ್ಪತಕ್ಕದ್ದು. ಏಕೆಂದರೆ, ಈ ಕಾನೂನು ನಾನು ಮಾಡಿದ್ದಲ್ಲ, ಎಲ್ಲರೂ ಕೂಡಿ ಮಾಡಿದ್ದೇವೆ. ಹಿಂದೆಯೂ ಇದೇ ಇತ್ತು. ಇವತ್ತು ನಿಜವಾಗಿಯೂ ಇದರಲ್ಲಿ ಇಂಪ್ರೂವ್‌ಮೆಂಟ್ ಮಾಡಿದ್ದೇವೆ. ಸಂಪೂರ್ಣವಾಗಿ ಇದರಿಂದ ಎಲ್ಲರಿಗೂ ಸಹಾಯ ಸಿಗುತ್ತದೆ ಎನ್ನತಕ್ಕ ಮಾತನ್ನು ಆಡುವುದಿಲ್ಲ, ಆದರೆ ಹೆಚ್ಚಿನ ರೀತಿಯಲ್ಲಿ ಅನುಕೂಲ ಮಾಡತಕ್ಕ ರೀತಿಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಮತ್ತು ಹಣವನ್ನು ಬಿಡುಗಡೆ ಮಾಡಿದ್ದೇವೆ. ಆದರೆ ನಮಗೆ ನಿರ್ದಿಷ್ಟವಾದ ಸೂಚನೆ ಇದೆ. ಅದು ಹೇಗೆ ಅಂದರೆ, ಕೇಂದ್ರ ಸರ್ಕಾರದಿಂದ ಬಂದಂಥ ಹಣವನ್ನು ಯಾವ ರೀತಿಯಾಗಿ ಖರ್ಚು ಮಾಡಬೇಕು, ಯಾವ ರೀತಿಯಾಗಿ ಅದನ್ನು ವಿತರಣೆ ಮಾಡಬೇಕು, ಎಂತೆಂಥ ಐಟಂಗಳಿಗೆ ಎಷ್ಟು ಖರ್ಚು ಮಾಡಬೇಕೆಂಬ ಬಗ್ಗೆ ನಿನ್ನೆ ಒಂದು ಟೆಲೆಕ್ಸ್ ಮೆಸೇಜ್ ಓದಿದೆ. ಬಹಳಷ್ಟು ಸದಸ್ಯರು ಸದನದ ಒಳಗಡೆಯಾಗಲೀ, ಸದನದ ಹೊರಗಡೆಯಾಗಲೀ, ಅನೇಕ ಮುಖಂಡರೂ ಕೂಡ ಮಾತನಾಡುತ್ತಾರೆ. ಯಾವ ಜಿ.ಓ., ಯಾವ ಆಧಾರದ ಮೇಲೆ ನೀವು ಹೇಳುತ್ತೀರಿ, ಎಲ್ಲರೂ ಇಷ್ಟೇ ಹಣವನ್ನು ಕೊಡಬೇಕೆಂದು, ಎಂಬುದಾಗಿ ಮಾತನಾಡುತ್ತಾರೆ. ನಾನು ನಿನ್ನೆ ತಮ್ಮ ಗಮನಕ್ಕೆ ತಂದಿದ್ದೆ, ಅದನ್ನು ಪುನಃ ಇಲ್ಲಿ ಹೇಳುತ್ತೇನೆ.

"Recommendations made by the 9th Finance Commission regarding revision in existing scheme of finance of relief expenditure accepted by Central Government. Commission recommended constitution of Calamity Relief Fund for each State with earmarked amount with effect from 1st April, 1990. 75% of this amount would be contributed by Government of India as non-plan grant. Balance 25% shall be contributed by State Government out of its own resources. Modalities for operation of this Calamity Relief Fund including norms for incurring expenditure on various items being worked out and would be communicated soon. Till such time fresh guidelines are issued, StatecGovernment is requested to continue to undertake relief operations on the basis of existing Central Norms/guidelines issued vide D.O.No.4-8/85-SR dated 18th June 1986. Expenditure so incurred on this basis with effect from 1.4.1990 would only be taken into account against proposed Calamity Relief Fund. Copy of the D.O.No.4-8/85 SR dated 18.6.86 along with its enclosures is sent herewith for ready references."

ಇದರೊಳಗೆ ಏನು ಹೇಳುತ್ತಾರೆ ಎಂದರೆ, ಸೆಂಟ್ರಲ್ ಗೌರ್ನಮೆಂಟ್ ಗೈಡ್ ಲೈನ್ಸ್ ಪ್ರಕಾರ ಯಾವ ಯಾವ ಐಟಂಗೆ ಏನು ಅವರು ನಿಗದಿ ಮಾಡಿದ್ದಾರೆ, ನಮಗೆ ಏನು ಗೊತ್ತು ಎಂಬ ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ಆದಕ್ಕಾಗಿ ಇದನ್ನು ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

"Ex-gratia payment to families of deceased persons : Government of India norms fixed Rs.5,000/- ex-gratia payment for loss of limb or both eyes: per head Rs. 2,500/- ex-gratia payment for injured persons per head 2,500/- relief for the old and infirm and destitute children per head per day 2/-per adult, 1/- per child, Relief Camps, per head per day, 4+ cost of territory Centre. Clothing and utensils for families 100+100, supplementary nutrition per head per day, So paise per head subject to the ceiling on actual average expenditure per head being incurred by the State Government under ICDS. Assistance to Artisans in handicraft sector by way of subsidy for repair/replacement of damaged equipment. per unit 200/- for raw material 250/- per unit, for handloom weavers repairs/replacement of looms, equipment and accessories per looms, 200 rupees, purchase of yarn & other material, per lomm Rs.200/--. de-silting etc, per hectare 25% and $33\frac{1}{3}$ % to small farmers and marginal farmers respectively on the basis of land development bank, Nabard, any relief agency's norms, de-silting, restoration, repairs of fish farms, Rs.1000 per hectare, Animal Husbandary, Assistance to small farmers, marginal farmers, agricultural labour for provision of fodder and veterinary care and fodder concentration, per animal per day- large animal Rs.3, small animal Rs.1.50.

Employment generation-ways and material component-per assistance at the 100 of the wages to be provided for 25 days per month. The State

Government should provide material component from their own resources. Assistance to Agriculturists. Agricultural input subsidy for agricultural crops, horticultural crops, and plantation crops, per hectare 200, limited to small and marginal farmers. Animal husbandary subsidy for replacement of bullocks animals and other drought animals for small and marginal farmers, agricultural labourers, pair of bullocks or milch animal as per IRD pattern subject to strict institutional finances and ceiling of subsidy per family $^{1}/_{4}$ and $^{1}/_{3}$ as subsidy of the cost followed by the NABARD, Sheep, Goat, Pig etc, per unit same pattern assistance of fisheries.....

ಇದೇ ರೀತಿಯಾಗಿ ಐಟಮ್ಸ್ ಇದೆ. ಇನ್ನೂ ಒಂದು ಪೇಜ್ ಆಗುತ್ತದೆ. ಅದಕ್ಕಾಗಿ ಇದರಲ್ಲಿ ಏನು ಗೈಡ್ ಲೈನ್ಸ್ ಕೊಟ್ಟಿದ್ದಾರೆ, ಅದರ ಆಧಾರದ ಮೇಲೆ ಹಿಂದಿನ ಸರಕಾರ ಕೂಡು ಒಂದು ಗೌರ್ನಮೆಂಟ್ ಆರ್ಡರ್ ಹೊರಡಿಸಿತ್ತು. ಅವರು ೮ ಜೂನ್ ೮೬ ರಲ್ಲಿ ಒಂದು ಜಿ.ಓ. ಹೊರಡಿಸಿದ್ದಾರೆ. ಅವರ ಲಿಮಿಟೇಷನ್ ಕೂಡಾ ಕೆಲವದರ ಬಗ್ಗೆ ಕಂಪೇರ್ ಮಾಡಿದರೆ ಅದಕ್ಕೂ ಇದಕ್ಕೂ ಸಿಮಿಲರ್ ಇದೆ. ಆದರೆ ಇದನ್ನೆಲ್ಲಾ ನಾನು ತಿಳಿದುಕೊಂಡು ಈಗ ಕೊಡುತ್ತಿರುವಂತಹದ್ದು ಬಹಳ ಕಡಿಮೆ ಇದೆ. ಏನಾದರೂ ಮಾಡಿ ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡಬೇಕು ತಮ್ಮ ಅಪೇಕ್ಷೆ ಪ್ರಕಾರ ಹೆಚ್ಚು ಆಗದೇ ಇರಬಹುದು. ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಗೌರ್ನಮೆಂಟ್ ಆರ್ಡರ್‌ನಲ್ಲಿರತಕ್ಕಂಥ ಗೌರ್ನಮೆಂಟ್ ಆಫ್ ಇಂಡಿಯಾ ಮತ್ತು ಹಿಂದಿನ ಸರ್ಕಾರ ಮಾಡಿದಂತಹ ಏನು ಗೌರ್ನಮೆಂಟ್ ಆರ್ಡರ್ ಇದೆ. ಅದರಲ್ಲಿ ಕಾಂಪನ್‌ಸೇಷನ್ ರಿಲೀಫ್ ಕೊಡತಕ್ಕಂಥಾದ್ದು ಬಹಳ ಕಡಿಮೆ ಇದೆ. ಅದಕ್ಕಾಗಿ ಹೆಚ್ಚು ಮಾಡಬೇಕು ಅಂತ ಹೇಳಿ ಸ್ವಲ್ಪ ಪ್ರಯತ್ನಪಟ್ಟು ಇವತ್ತು ನಾನು ಏನು ಮಾಡಿದ್ದೇನೆಂದರೆ Ex-gratia for families of the deceased persons. 5 ಸಾವಿರ ರೂಪಾಯಿಗಳು ಇದ್ದದ್ದು 8 ಸಾವಿರ ರೂಪಾಯಿಗಳಿಗೆ ಏರಿಸಿದ್ದೇವೆ. ಆಮೇಲೆ Ex-gratia for loss of limbs, Rs.2500/- ಇದು ಸೇಮ್ ಗೌರ್ನಮೆಂಟ್ ಆಫ್ ಇಂಡಿಯಾ ಫ್ಯಾಟ್ರನ್ ಅನ್ನು ತಾವು ಅಡಾಪ್ಟ್ ಮಾಡಿಕೊಂಡಿದ್ದೇವೆ. ಅವರು ಮನೆಗಳಿಗೆ ಕೊಡುತ್ತಿದ್ದಂತಹ 1200 ರೂಪಾಯಿಗಳನ್ನು ಹಿಂದಿನ ಸರ್ಕಾರ ಫಿಕ್ಸ್ ಮಾಡಿದ್ದರು. ಆದರೆ ಇವತ್ತು ನಾವು Rs.2950 including Rs.1200 materials ಎಂದು ಮಾಡಿದ್ದೇವೆ.

ಈ ರೀತಿಯಾಗಿ ಇದರಲ್ಲೂ ಕೂಡ 1500 ರೂಪಾಯಿಗಳನ್ನು ಹೆಚ್ಚು ಕಡಿಮೆ ಎನ್ಹಾನ್ಸ್ ಮಾಡುವಂತಾದ್ದು ಆಗಿದೆ. ಇದನ್ನು ಅದೂ ಅಲ್ಲದೇ ಅನಿಮಲ್ ಹಸ್ಬೆಂಡರಿಯಲ್ಲಿ ಬೇರೆ ಐಆರ್ ಡಿ ಫ್ಯಾಟ್ರನ್‌ನಲ್ಲಿತ್ತು. ನಾವು ಅವರ ಲಾಸ್ ಏನು ಆಗುತ್ತದೆ, ಮಿನಿಮಮ್ 25 ಪರ್ಸೆಂಟ್ ಆದರೂ ನಾವು ಕೊಡಬೇಕು ಎನ್ನತಕ್ಕಂಥ ಆಸೆ ಪಟ್ಟು ಈ ಪ್ರಕಾರ ಗೌರ್ನಮೆಂಟ್ ಆರ್ಡರ್ ಹೊರಡಿಸಿದ್ದೇವೆ. ಅದರಿಂದ ಎಷ್ಟು ಪ್ರಯೋಜನವಾಗಿದೆ ಎಷ್ಟು ಇಲ್ಲ ಎನ್ನತಕ್ಕಂಥ ವಾದ ವಿವಾದ ಇರಬಹುದು. ನಾನು ಇಲ್ಲವೆಂದು ಹೇಳುವುದಿಲ್ಲ ಆದರೆ ತಾವು 2-3 ಗೌರ್ನಮೆಂಟ್ ಆರ್ಡರ್‌ಗಳಿಗೆ ಹೋಲಿಸಿ ನೋಡಿದಾಗ ಗೈಡ್ ಲೈನ್ಸ್ ಎರಡನ್ನು ನೋಡಿದಾಗ ಶೀಘ್ರದಲ್ಲಿ ಹೆಚ್ಚಿನ ರಿಲೀಫ್ ಇದರಲ್ಲಿ ಸಿಕ್ಕುತ್ತದೆ. ತಾವು ನೋಡಲಿ ಎನ್ನತಕ್ಕಂಥಾದ್ದಕ್ಕೆ ನಾನು ತಮ್ಮ ಮುಂದೆ ಇಟ್ಟಿದ್ದೇನೆ. ಏಕೆಂದರೆ ಈ ಸದನದ ಹೊರಗೆ ಏನಾಗಿದೆ ಎಂದರೆ

ಗೌರ್ನಮೆಂಟ್ ಆಫ್ ಇಂಡಿಯಾ ಗೈಡ್ ಲೈನ್ಸ್ ಎಲ್ಲಿದೆ? ಎಲ್ಲಾ ಇವರೇ ಹೇಳುತ್ತಾರೆ. ಹಾಗಾದರೆ ಅದರ ಡೇಟ್ ಯಾವುದು, ಗೌರ್ನಮೆಂಟ್ ಆರ್ಡರ್ ಯಾವುದು ಇವೆಲ್ಲಾ ಹೇಳುವಾಗ, ನಾನು ಇದನ್ನು ಸ್ಪಷ್ಟಪಡಿಸಲೇಬೇಕಾಯಿತು. ಸ್ಪಷ್ಟಪಡಿಸತಕ್ಕಂಥ ಅವಶ್ಯಕತೆ ಇರಲಿಲ್ಲ. ತಮಗೆಲ್ಲರಿಗೂ ಗೊತ್ತಿದೆ, ತಮ್ಮ ಕಳಕಳಿ ಏನೆಂದರೆ ಅದು ಏನಾದರೂ ಇರಲಿ ಗೌರ್ನಮೆಂಟ್ ಆರ್ಡರ್ ಇರಲಿ ಗೈಡ್ ಲೈನ್ ಇರಲಿ ನೊಂದ ಜನಗಳಿಗೆ ಹೆಚ್ಚಿನ ರೀತಿಯಲ್ಲಿ ಪರಿಹಾರ ಕೊಡಬೇಕು. ಇದು ಸರ್ಕಾರದ ಕೆಲಸ ಇದೆ ಎನ್ನತಕ್ಕಂಥ ವಾದ ನಿಮ್ಮದು ಇದೆ.

ಆದರೆ ನನಗೆ ಇರತಕ್ಕಂಥ ಇತಿಮಿತಿಯಲ್ಲಿ ನಾವು ಇವತ್ತು ಕೆಲಸ ಮಾಡತಕ್ಕಂಥಾದ್ದಕ್ಕೆ ನಾವು ಮಾಡಿದ್ದೇವೆ. ಮತ್ತು ಅದೂ ಅಲ್ಲದೆ ಇವತ್ತು ಉಳಿದಂತಹ ಕೆಲವು ಜಿಲ್ಲೆಗಳಲ್ಲಿ ಪರ್ಟಿಕ್ಯುಲರ್ಲಿ ಮಂಡ್ಯ, ಮೈಸೂರು, ಹಾಸನ, ಚಿಕ್ಕಮಂಗಳೂರು, ನಾರ್ತ್ ಕೆನರಾ, ಶಿವಮೊಗ್ಗ, ಧಾರವಾಡ ಅಂತಹ ಜಿಲ್ಲೆಗಳಲ್ಲಿ ಹೆಚ್ಚು ಹಾನಿ ಆಗಿದೆ. ಅಂತಹ ಕಡೆ ಸರ್ಕಾರ ಹೆಚ್ಚು ಲಕ್ಷ್ಯ ಕೊಡಲಿಲ್ಲ ಎನ್ನತಕ್ಕಂಥ ಮಾತು ತಾವು ಹೇಳಿದ್ದೀರಿ. ಆದರೆ ಈಗಾಗಲೇ ನಾನು ಫಿಗರ್ಸ್ ಕೂಡ ಕೊಟ್ಟಿದ್ದೇನೆ. ಎಕ್ಸ್ ಪೆಂಡಿಚರ್ ಸ್ಟೇಟ್‌ಮೆಂಟ್ ನಮ್ಮ ಹತ್ತಿರ ಇನ್ನು ಬಂದಿಲ್ಲ, ಬಂದ ಮೇಲೆ ಅದನ್ನು ಕೂಡ ನಾನು ಬಹಿರಂಗ ಪಡಿಸುತ್ತೇನೆ.

ಮಾನ್ಯ ಅಧ್ಯಕ್ಷರೇ, ನಾವು ಇನ್ನು ಒಂದು ಸ್ಕೀಮ್ ತೆಗೆದುಕೊಳ್ಳಬೇಕು ಎನ್ನತಕ್ಕಂಥ ಯೋಜನೆ ಹಾಕಿಕೊಂಡಿದ್ದೇವೆ. ಎಲ್ಲಿ ಫ್ಲಡ್‌ನಲ್ಲಿ ಮನೆ ಬಿದ್ದಿದೆ ಅಥವಾ ಮನೆ ಕಳೆದುಕೊಂಡಿದ್ದಾರೆ ಅಂತಹ ಜನಗಳಿಗೆ ಹೌಸಿಂಗ್ ಬೋರ್ಡ್‌ನಿಂದ ಕ್ಯಾಷ್ ಲೋನ್ ಕೊಡಿಸಿ ಪಕ್ಕಾ ಮನೆಗಳನ್ನು ಏತಕ್ಕೆ ಕಟ್ಟಿಸಿಕೊಡಬಾರದು ಎನ್ನತಕ್ಕಂಥ ಒಂದು ವಿಚಾರ ಕೂಡ ಮಾಡುತ್ತಿದ್ದೇವೆ. ಇದರ ಬಗ್ಗೆ ಈಗಾಗಲೇ ಮೀಟಿಂಗ್ ಮಾಡಿದ್ದೇವೆ. ಮೈಸೂರು ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇವೆ. ಹೌಸಿಂಗ್ ಬೋರ್ಡ್ ಅಧ್ಯಕ್ಷರು ಕೂಡ ಚರ್ಚೆ ಮಾಡಿದ್ದಾರೆ. ಎಲ್ಲೆಲ್ಲಿ ಜಾಗ ಇದೆ ಅವೈಲಬಲ್ ಸೈಟ್ಸ್ ಇದೆ, ಅಂತಹ ಕಡೆ ಅವರಿಗೆ ಪಕ್ಕಾ ಮನೆ ಕಟ್ಟಿಸಿ ಕೊಡಬೇಕೆಂದು ತೀರ್ಮಾನ ಕೂಡ ನಾವು ತೆಗೆದುಕೊಂಡಿದ್ದೇವೆ. ಅವರಿಗೆ ಕೊಡತಕ್ಕಂಥ ಅಲ್ಪ ಹಣ 2150 ರೂಪಾಯಿಗಳು ಅದರಲ್ಲಿ ಅವರಿಗೆ ಸಂಪೂರ್ಣವಾಗಿ ಮನೆ ಕಟ್ಟಿಕೊಳ್ಳುವುದಕ್ಕಾಗುವುದಿಲ್ಲ.

ಅದನ್ನು ಅವರು ಯಾವುದಕ್ಕಾದರೂ ಖರ್ಚು ಮಾಡಿಕೊಂಡು ಪುನಃ ಅವರು ಬಯಲಿಗೆ ಬರುತ್ತಾರೆ. ಹಾಗೆ ಆಗಬಾರದು ಎನ್ನತಕ್ಕಂಥ ದೃಷ್ಟಿಯಿಂದ ಈ ಹಣ ಕೂಡ ಸೇರಿಸಿಕೊಟ್ಟು ಅವರಿಂದ ಸಾಲವನ್ನು ಪಡೆದು ನಾವು ಪಕ್ಕಾ ಮನೆಗಳನ್ನು ಕಟ್ಟಿಸಿಕೊಡಬೇಕು. ಆ ಎರಡು ಜಿಲ್ಲೆಗಳಲ್ಲಿ ಅಲ್ಲ, ಬೇರೆ ಎಲ್ಲೆಲ್ಲಿ ಈ ರೀತಿಯಾಗಿದೆ ಅಲ್ಲಿ ಎಲ್ಲಾ ಕಡೆ ಕೂಡ ಅವರಿಗೆ ಜಾಗ ಇದ್ದರೆ ಟೈಟಲ್ ಡೀಡ್ ಇದ್ದರೆ ಅದನ್ನು ತೆಗೆದುಕೊಂಡು ಕಟ್ಟಿಸಿಕೊಡಬೇಕೆನ್ನುವ ನಿರ್ಣಯ ನಾವು ಮಾಡಿದ್ದೇವೆ. ಇದರಿಂದ ಸಾಕಷ್ಟು ಬಡವರಿಗೆ ಅನುಕೂಲವಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದಾದ ಮೇಲೆ, ಮಾನ್ಯ ಅಧ್ಯಕ್ಷರೇ, ಈಗ ಪರಿಹಾರ ಇನ್ನು ಹೆಚ್ಚಿನ ರಿಲೀಫ್ ತಾವು ಕೊಡಬೇಕೆಂದು......

ಶ್ರೀ ಹಲಗೇಗೌಡ : ಮಾನ್ಯ ಅಧ್ಯಕ್ಷರೇ, ಮನೆ ಕಳೆದುಕೊಂಡವರಿಗೆ ರಾಸು ಕಳೆದುಕೊಂಡವರಿಗೆ ತಾವು ಕೆಲವು ಯೋಜನೆ ಹಾಕಿದ್ದೀರಿ. ಆದರೆ ಪ್ರವಾಹ ಪರಿಸ್ಥಿತಿಯಲ್ಲಿ ರೈತರ ಜಮೀನು ಎರೋಷನ್ ಆಗಿರುತ್ತದೆ. 4-5 ಅಡಿ ಮೇಲೆ ಮರಳು ಮಣ್ಣು ಬಿಟ್ಟು ಹೋಗಿರುತ್ತದೆ. ಒಂದು ಎಕರೆ ಅಥವಾ ಒಂದು ಹೆಕ್ಟೇರ್‌ಗೆ

ಮಣ್ಣು ಹಾಕಬೇಕಾದರೆ ಹತ್ತಾರು ಸಾವಿರ ರೂಪಾಯಿಗಳು ಬೇಕಾಗುತ್ತದೆ. ನಿಮ್ಮ ನಿಯಮದ ಪ್ರಕಾರ ಅಷ್ಟು ಹಣ ಕೊಡುವುದಕ್ಕೆ ಬರುವುದಿಲ್ಲ, ಆದ್ದರಿಂದ ಯಾರ ಜಮೀನಿನಲ್ಲಿ ನಷ್ಟವಾಗಿರುತ್ತದೆ ಅಂತಹವರಿಗೆ ಇಲಾಖೆಗಳ ವತಿಯಿಂದ ರಿಪೇರಿ ಮಾಡಿಸಿಕೊಡಲು ಪ್ರಯತ್ನ ಪಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ಈಗಾಗಲೇ ಹೇಳಿದೆ, ಅಂಥಾ ಪ್ರೈವೇಟ್ ಜಮೀನಿನಲ್ಲೂ ಕೂಡಾ ಆ ತರಹವಾದರೆ ಡೀಸಿಲ್ಟಿಂಗ್ ಮಾಡುವುದಕ್ಕೆ ಪ್ರಾವಿಷನ್ ಇದೆ, ಅನ್ನತಕ್ಕಂಥಾದ್ದನ್ನು ಹೇಳಿದ್ದೆ. ಹೆಚ್ಚಿನ ಹಣ ಕೊಡದೇ ಇರಬಹುದು. 25% of that expenditure ಅನ್ನು ರಿಲೀಫ್ ಎಂದು ಕೊಡಬಹುದೆಂದು ಈಗಾಗಲೇ ನಾನು ಹೇಳಿದ್ದೇನೆ.

ಶ್ರೀ ಹಲಗೇಗೌಡ : ಅಲ್ಲಾ ಅಲ್ಲ, ಅವರಿಗೆ ಜಾಸ್ತಿ ಹಣ ಕೊಡಲಿಕ್ಕೆ ಬರುವುದಿಲ್ಲ, ಆ ಕೆಲಸವನ್ನು ಇಲಾಖಾ ವತಿಯಿಂದ ಮಾಡಿಸಬೇಕು. ಆ ರೀತಿ ಸಹಾಯ ಮಾಡಬಹುದಷ್ಟೇ, ಇಲ್ಲವೆಂದರೆ ನೇರವಾಗಿ ಹಣ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದೂ ಅಲ್ಲದೆ ತಮಗೂ ಕೂಡಾ ಗೊತ್ತಿದೆ. ಈಗಾಗಲೇ ನಾನು ಎಲ್ಲಾ ಇಲಾಖೆಯವರ ಜೊತೆಗೆ ಮೀಟಿಂಗ್ ಮಾಡಿ ಒಂದು ಗೈಡ್ ಲೈನ್ಸ್ ಕೂಡಾ ಕೊಟ್ಟಿದ್ದೇವೆ. ಏನೆಂದರೆ, ರೆಗ್ಯುಲರ್ ಪ್ಲಾನ್‌ನಲ್ಲಿ ಯಾವ ಯಾವ ಬಡ್ಜೆಟೆಡ್ ವರ್ಕ್ ಅವರ ಹತ್ತಿರ ಇದೆ, ಅವುಗಳನ್ನು ಆದ್ಯತೆ ಮೇರೆಗೆ ಮೊದಲು ತೆಗೆದುಕೊಳ್ಳಬೇಕು ಅಥವಾ ಮೇನ್‌ಟೆನೆನ್ಸ್ ಗಾಗಿ ಹಣ ಇದ್ದರೆ, ಆ ಹಣವನ್ನು ಮೊದಲು ಖರ್ಚು ಮಾಡಬೇಕು. ಅದಕ್ಕೆ ಸಪ್ಲಿಮೆಂಟ್ ಆಗಿ ನಾವು ಕೊಡತಕ್ಕಂಥ ಹಣ ಕೂಡ ಖರ್ಚು ಮಾಡಿ ತಾತ್ಕಾಲಿಕವಾಗಿ ಎಲ್ಲಿ ರಿಪೇರಿ ಮಾಡತಕ್ಕಂಥಾದ್ದಾಗಲೀ, ಸಾಯಿಲ್ ಕನ್ಸರ್ವೇಷನ್ ಆಗಲೀ ಅಥವಾ ಡೀಸಿಲ್ಟಿಂಗ್ ಆಗಲೀ ಅಥವಾ ರೋಡ್ ರಿಪೇರಿಯಾಗಲೀ ಇದನ್ನು ತೆಗೆದುಕೊಳ್ಳಬಹುದು ಅನ್ನತಕ್ಕಂಥಾದ್ದನ್ನು ಸ್ಪಷ್ಟವಾಗಿ ನಾವು ಡೆಪ್ಯುಟಿ ಕಮೀಷನರ್‌ರವರಿಗೆ ಹೇಳಿದ್ದೇವೆ. ಆದರೆ, ಅದೇ ಪಿ.ಡಬ್ಲ್ಯೂ.ಡಿ. ಇಲಾಖೆಯವರು, ಮೈನರ್ ಇರಿಗೇಷನ್‌ನವರು ಸಾಯಿಲ್ ಕನ್ಸರ್ವೇಷನ್ ಡಿಪಾರ್ಟ್‌ಮೆಂಟಿನವರು, as it ರೆವಿನ್ಯೂ ಡಿಪಾರ್ಟ್‌ಮೆಂಟ್ ಡೆವಲಪ್‌ಮೆಂಟಲ್ ಡಿಪಾರ್ಟ್‌ಮೆಂಟ್ ಇದ್ದ ಹಾಗೆ, ಪ್ರತಿಯೊಂದು ನಮಗೇ ಕೊಡಿ ನಾವೇ ಮಾಡುತ್ತೇವೆ ಅನ್ನತಕ್ಕಂಥ ರೀತಿಯಲ್ಲಿ ಕೆಲವು ಕಡೆ ಕೇಳಿಬಂದಿದೆ. ಅದು ಸರಿಯಿಲ್ಲ, ನಮ್ಮಲ್ಲಿರತಕ್ಕಂಥ ಹಣ ನಿಮಗೆ ಕೊಡುತ್ತೇವೆ. ಆದರೆ, ಇದು ಸಪ್ಲಿಮೆಂಟ್ ಎಂದು ಹೇಳಿ ತಿಳಿದುಕೊಳ್ಳಿ, ನಿಮ್ಮಲ್ಲಿ ಏನು ಬಜೆಟ್ ಅಲೋಕೇಷನ್ ಆಗಿದೆ, ಆ ಹಣವನ್ನು ನೀವು ಮೊದಲು ಖರ್ಚು ಮಾಡಿ, ಅದರ ಜೊತೆಯಲ್ಲಿ ಇದನ್ನೂ ತೆಗೆದುಕೊಂಡು ಜನರಿಗೆ ಸಹಾಯ ಮಾಡತಕ್ಕಂಥ ರೀತಿಯಲ್ಲಿ ನಾವು ಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ.

ಅದು ಬಿಟ್ಟು ಹಣ ಇಲ್ಲ, ಅಥವಾ ಇಂತಹ ಕೆಲಸಕ್ಕೆ ಕೊಟ್ಟಿದ್ದಾರೆ, ಅದಕ್ಕೇ ಖರ್ಚು ಮಾಡುತ್ತೇವೆ ಎಂದು ಹೇಳುವುದು ಸರಿಯಿಲ್ಲ. ನಾನು ಹೇಳಿದ್ದೇನೆ ಏನಾದರೂ ಹಣ ಡೀವಿಯೇಟ್ ಮಾಡಬೇಕೆನ್ನತಕ್ಕಂಥಾದಿದ್ರೆ, ಒಂದು ಕೆಲಸಕ್ಕೆ ಅಲಾಟ್ ಆದ ಹಣ ಸದ್ಯಕ್ಕೆ ಅವಶ್ಯಕತೆ ಇಲ್ಲದೇ ಇದ್ದಾಗ ಯಾವುದು ಜರೂರು ಇದೆಯೋ ಅದಕ್ಕೆ ನೀವು ಖರ್ಚು ಮಾಡಿಕೊಳ್ಳುತ್ತೇವೆಂಥರೆ ಅದಕ್ಕೆ ಬೇಕಾದರೆ ನಾವು ನಮ್ಮ ಗೌರ್ನಮೆಂಟ್ ಲೆವಲ್‌ನಲ್ಲಿ ಮೀಟಿಂಗ್ ಮಾಡಿ ಅದಕ್ಕೆ ಪರವಾನಿಗೆಯನ್ನು ಕೊಡಿಸತಕ್ಕಂಥಾದ್ದನ್ನು ಕೂಡಾ ನಾವು ಮಾಡುತ್ತೇವೆ ಅನ್ನತಕ್ಕಂಥ ಮಾತನ್ನು ನಾನು

ಸ್ಯಾಂಕ್ಷನ್ ಕೊಟ್ಟಿದ್ದೇವೆ. ಮತ್ತು ಅದೇ ರೀತಿಯಾಗಿ ಅವರೆಲ್ಲರಿಗೂ ಕೂಡಾ ಅದ್ಯತೆ ಮೇರೆಗೆ ಕೆಲಸಗಳನ್ನು ನಿಮ್ಮ ನಿಮ್ಮ ಇಲಾಖೆಗಳಲ್ಲಿ ತೆಗೆದುಕೊಳ್ಳಬೇಕೆಂಬ ಆದೇಶ ಕೊಟ್ಟಿದ್ದೇನೆ. ಆದರೂ ಕೂಡಾ ಇನ್ನೂ ಕೆಲವು ಕಡೆ ಇನ್ನೂ ಚುರುಕುಗತಿಯಿಂದ ಇದು ನಡೆಯುತ್ತಿಲ್ಲ ಅನ್ನತಕ್ಕಂಥ ವಿಷಯ ನನ್ನ ಗಮನಕ್ಕೆ ಬಂದಿದೆ. ಪುನಃ ಇದರ ಬಗ್ಗೆ ಪರಿಶೀಲಿಸಿ ಅಧಿಕಾರಿಗಳನ್ನು ಕರೆಸಿ ಈ ಕೆಲಸಗಳನ್ನು ಮುಗಿಸತಕ್ಕಂಥ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಎರಡನೆದಾಗಿ ಕೆಲವು ಡೆಪ್ಯುಟಿ ಕಮೀಷನರ್‌ಗಳವರು ಹಣವನ್ನು ಡಿಸ್ಟ್ರಿಬ್ಯೂಟ್ ಮಾಡುವುದಕ್ಕೆ ತಾರತಮ್ಯ ಮಾಡಿದ್ದಾರೆ ಅನ್ನತಕ್ಕಂಥಾದ್ದು ಕೂಡಾ ಬಂದಿದೆ. ಅಂದರೆ ಯಾವ ಜಿಲ್ಲೆಯಲ್ಲಿ ಹಾನಿಯಾಗಿದೆ ಅಥವಾ ಈ ಒಂದು ಅತಿವೃಷ್ಟಿಗೆ ಒಳಗಾದಂಥ ತಾಲ್ಲೂಕಿಗೆ ಕಡಿಮೆ ಹಣ ಕೊಟ್ಟು ಎಲ್ಲಿ ಅತಿವೃಷ್ಟಿ ಆಗಿಲ್ಲ ಅಂಥಾ ಕಡೆ ಡೈವರ್ಟ್ ಮಾಡಿದ್ದಾರೆ ಅನ್ನತಕ್ಕಂಥಾದ್ದನ್ನು ಮಾನ್ಯ ಸದಸ್ಯರು ಕೆಲವರು ಹೇಳಿದ್ದಾರೆ. ಅದಕ್ಕೂ ಕೂಡಾ ಒಂದು ರಿಪೋರ್ಟ್ ತರಿಸಿಕೊಂಡಿದ್ದೇನೆ. ಮತ್ತು ಈ ಪ್ರವಾಹಕ್ಕೆ ಒಳಗಾದಂಥ ಪ್ರದೇಶಗಳಿಗೆ ಭೇಟಿ ಕೊಡಬೇಕೆಂದು ಹೇಳಿ, ಯಾವ ದಿವಸ ಈ ಘಟನೆ ನಡೆಯಿತೋ ಆ ತಕ್ಷಣವೇ ನಮ್ಮ ಸೆಕ್ರೆಟರಿಯೇಟ್‌ನಲ್ಲಿ ಮೂರು ಟೀಮ್ ಮಾಡಿ ಎಲ್ಲಾ ಡಿಸ್ಟ್ರಿಕ್ಟ್‌ಗಳಿಗೂ ನಾವು ಕಳುಹಿಸಿದ್ದೇವೆ. ಚಿಕ್ಕಮಗಳೂರು, ಹಾಸನ, ಸೌತ್ ಕೆನರಾ, ನಾರ್ತ್ ಕೆನರಾ, ಮಂಡ್ಯಾ, ಮೈಸೂರು ಈ ಎಲ್ಲಾ ಕಡೆ ನಮ್ಮ ಪ್ಲಾನಿಂಗ್ ಸೆಕ್ರೆಟರಿಯವರು, ರೆವಿನ್ಯೂ ಸೆಕ್ರೆಟರಿಯವರು, ಡೆವಲಪ್ ಮೆಂಟ್ ಸೆಕ್ರೆಟರಿಯಯವರು ಹೋಗಿಬಂದಿದ್ದಾರೆ.

ಅವರೂ ಕೂಡಾ ವರದಿ ಕೊಟ್ಟಿದ್ದಾರೆ. ಆ ಒಂದು ವರದಿ ಆಧಾರದ ಮೇಲೆ ಮತ್ತು ನಮ್ಮಲ್ಲಿರತಕ್ಕಂಥ ಡೆಪ್ಯುಟಿ ಕಮೀಷನರ್‌ಗಳು ಏನು ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದಾರೆ, ಅದರ ಆಧಾರದ ಮೇಲೆ ನಾವು ಇವತ್ತಿನ ದಿವಸ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಅವರಿಗೆ ಹೇಳಿದ್ದೇವೆ ಮತ್ತು ನಿಜವಾಗಲೂ ಹೇಳಬೇಕಾದರೆ ಕೆಲವು ಕಡೆಗಳಲ್ಲಿ ಡೆಪ್ಯುಟಿ ಕಮೀಷನರ್‌ರವರು ಬಹಳ ಒಳ್ಳೆಯ ರೀತಿಯಿಂದ ಕೆಲಸ ಮಾಡಿದ್ದಾರೆ. ಮಂಡ್ಯ ಆಗಲೀ, ಮೈಸೂರು ಆಗಲೀ, some extent ಹಾಸನ ಆಗಲಿ, ಚಿಕ್ಕಮಗಳೂರು ಆಗಲೀ, ಆದರೆ ಹಣದಲ್ಲಿ ತಾರತಮ್ಯವಾಗಿದೆ ಎನ್ನುವುದನ್ನು ಬಿಟ್ಟರೆ, ಏನು ಕಾನೂನು ಪ್ರಕಾರವಾಗಿ ಕೊಡಬೇಕಾಗಿತ್ತೋ ಅದನ್ನು ಕೊಟ್ಟಿದ್ದಾರೆ. ಮತ್ತು ಇನ್ನೂ ಒಂದು ಏನೆಂದರೆ, ಎರಡು ರೂಪಾಯಿ, ಮೂರು ರೂಪಾಯಿ ಕೊಟ್ಟಿದ್ದಾರೆ ಎಂಬುದನ್ನು ನನ್ನ ಗಮನಕ್ಕೆ ತಂದ ಮೇಲೆ, ಇದನ್ನು ಕೊಡಬೇಡಿ ಮಿನಿಮಮ್ ಹಂಡ್ರೆಡ್ ರುಪೀಸ್ ಕೊಡಿ ಎಂದು ತಕ್ಷಣ ನಾನು ಟೆಲೆಕ್ಸ್ ಕಳುಹಿಸಿ ಎಲ್ಲಾ ಕಡೆ ಈವತ್ತು ಹಂಡ್ರೆಡ್ ರುಪೀಸ್ ಕೊಡಿಸತಕ್ಕಂಥ ವ್ಯವಸ್ಥೆ ಮಾಡಿಸಿದ್ದೇನೆ. ಆದರೂ ಕೂಡಾ ಅಂದರೆ ಹಂಡ್ರೆಡ್ ರುಪೀಸ್ ಕೊಟ್ಟು ಕಳುಹಿಸಿದರೂ ಕೂಡ ಪುನಃ ಆ ಮೂರು ರೂಪಾಯಿ ಮೊದಲೇ ಕೊಟ್ಟಿದ್ದೇ ಇವತ್ತು ಕೂಡಾ ಹೇಳುತ್ತಿದ್ದಾರೆ. ಅದು ಬಂದಿದೆ. ನಮಗೆ ಕಷ್ಟ

ಇಲ್ಲಿ ಅದು ಆಗಿದ್ದು ಆಯಿತು, ಅದು ಮೂರು ಅಲ್ಲ, ನೂರು ಮಾಡಿದ್ದೇವೆ ಎಂದರೂ ನಮಗೆ ಬಿಡುವುದಿಲ್ಲ, ಅದು ಏನೇ ಇರಲಿ, ನಾನು ಸಂಬಂಧಪಟ್ಟ ಡೆಪ್ಯುಟಿ ಕಮೀಷನರ್ ಅವರನ್ನು ಕೇಳಿದೆ. ಏಕೆ ಚೆಕ್ ಕೊಡುವುದಕ್ಕೆ ಹೋದಿರಿ? ಇಲ್ಲ ಸಾರ್, ದುಡ್ಡು ಕೊಟ್ಟರೆ ಮಿಸ್ ಅಪ್ರೋಪ್ರಿಯೇಷನ್ ಮಾಡಿದ್ದಾರೆ ಎಂದು ಎನ್ನುತ್ತಾರೆ, ಅದಕ್ಕೆ ಎರಡು ರೂಪಾಯಿ, ಮೂರು ರೂಪಾಯಿ ಚೆಕ್ ತಹಶೀಲ್ದಾರ್ ಕೊಟ್ಟಿದ್ದಾರೆ, ಅವರು ತಪ್ಪು ಮಾಡಿದ್ದಾರೆ ಎನ್ನತಕ್ಕ ಮಾತನ್ನು ಅವರೂ ಹೇಳಿದರು. ಅದಕ್ಕೆ ಆ ತಪ್ಪನ್ನು ತಿದ್ದಿಕೊಳ್ಳಬೇಕು ಎನ್ನತಕ್ಕ ದೃಷ್ಟಿಯಿಂದ ತಕ್ಷಣ ನೂರು

ಅದನ್ನು ಅವರು ಹಂಚುತ್ತಿದ್ದಾರೆ. ಮತ್ತು ಕೆಲವು ಕಡೆ ಈ ನೂರು ರೂಪಾಯಿಗೋಸ್ಕರವಾಗಿ ಜಿಲ್ಲೆಗೆ ಅಥವಾ ತಾಲ್ಲೂಕು ಪ್ಲೇಸಿಗೆ ಬರಬಾರದು. ಅದಕ್ಕಾಗಿ ನಾನು ಹೇಳಿದ್ದೇನೆ, ಸಂಬಂಧಪಟ್ಟ ಡೆಪ್ಯುಟಿ ಕಮೀಷನರ್‌ರವರಿಗೆ, ಎಲ್ಲೆಲ್ಲಿ ಹಾಸಿಗೆ ಒಳಗಾದಂತಹ ಜನ ಇದ್ದಾರೆ, ನೊಂದಂತಹ ಜನ ಯಾರು ಇದ್ದಾರೆ, ಅವರ ಮನೆಯ ಬಾಗಿಲಿಗೆ ಹೋಗಿ ಹಣ ಕೊಡಬೇಕು ಎಂದು ಹೇಳಿದ್ದೇನೆ. ಒಂದು ವೇಳೆ ಕೊಡದೇ ಹೋದರೆ ಅವರ ಮೇಲೆ ಕಾನೂನಿನ ಕ್ರಮ ತೆಗೆದುಕೊಳ್ಳುತ್ತೇವೆ, ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನತಕ್ಕ ಮಾತನ್ನು ಮೊನ್ನೆ ದಿವಸ ಹೇಳಿದ್ದೇನೆ. ಇದು ಆಗದೇ ಇದ್ದರೆ ಏನಾಗುತ್ತದೆ, ಅವರು ಬಂದು ಪಟ್ಟಣದಲ್ಲಿ ಟ್ರೆಜರಿ ಆಫೀಸಿನಲ್ಲಿ ಚೆಕ್‌ಗೋಸ್ಕರ ಗೋಳಾಡತಕ್ಕದ್ದು, ಅಡ್ಡಾಡತಕ್ಕದ್ದು, ಖರ್ಚು ಮಾಡತಕ್ಕದ್ದು ಕೂಡ ತಪ್ಪಿ ಹೋಗುತ್ತದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಹೀಗೆ ಹಲವಾರು ಕಾರ್ಯಕ್ರಮಗಳನ್ನು ನಾವು ಹಾಕಿ ಕೆಲಸಗಳನ್ನು ಮಾಡುತ್ತಿದ್ದೇವೆ. ಅದಕ್ಕಾಗಿ ನಿಮ್ಮ ಸಹಕಾರ ಕೂಡ ಬೇಕಾಗುತ್ತದೆ. ತಾವು ಇನ್ನೂ ಒಂದು ಮಾತು ಹೇಳಿದ್ದೀರಿ. ಎಲ್ಲಾ ಕೊಟ್ಟಾಯಿತು. ನೀವು ಸೆಂಟ್ರಲ್ ಗೌರ್ನಮೆಂಟ್‌ನವರನ್ನು ಇದರ ಬಗ್ಗೆ ಕೇಳಲಿಲ್ಲ, ನೀವು ಒತ್ತಾಯ ಮಾಡಲಿಲ್ಲ, ಯಾವ ಮೆಮೊರೇಂಡಮನ್ನು ಅನ್ನೂ ಕೊಡಲಿಲ್ಲ ಎಂದು ನಿಮಗೆಲ್ಲಾ ಗೊತ್ತಿದೆ. ಏಕೆಂದರೆ ಹಿಂದೆ ನೈನ್ತ್ ಫೈನಾನ್ಸ್ ಕಮೀಷನ್‌ಅನ್ನು ಮಾನ್ಯ ವಿ.ಪಿ. ಸಿಂಗ್ ಅವರು ಮಾಡಿದ್ದು. ತದ ನಂತರ ಯಾವ ಸರ್ಕಾರ ಬಂದರೂ ಅದೇ ಕಮೀಷನ್ ಅಮಲಿನಲ್ಲಿ ಇದೆ. ಆದರೆ ಇವತ್ತು ಮೆಮೊರೇಂಡಮ್ ಕೊಟ್ಟರೂ ಕೂಡ ಅವರು ನಮಗೆ ಉತ್ತರ ಏನು ಬರೆಯುತ್ತಾರೆ, ನಿಮಗೆ 27 ಕೋಟಿ ರೂಪಾಯಿಗಳನ್ನು ನ್ಯಾಚುರಲ್ ಕೆಲಾಮಿಟೀಸ್ ಫಂಡ್‌ನಲ್ಲಿ ಅಲಾಟ್ ಮಾಡಿದ್ದೇವೆ.

ಇದಕ್ಕಿಂತ ಹೆಚ್ಚಿಗೆ ಛುಡ್ಡನ್ನು ಫಂಡ್‌ನಲ್ಲಿ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ತ್ರೂ ಔಟ್ ದಿ ಕಂಟ್ರಿ ಒಂದೇ ಪ್ಯಾಟರ್ನ್ ಅಡಾಪ್ಟ್ ಮಾಡಿಕೊಂಡಿದ್ದೇನೆ. 10 ವರ್ಷದಲ್ಲಿ ನಿಮ್ಮದು ಏನು ಲುಕ್ಸಾನು, ಆಗಿದೆ ಅದರ ಒಂದು ಆವರೇಜ್ ತೆಗೆದುಕೊಂಡು ನಿಮ್ಮ ನಿಮ್ಮ ರಾಜ್ಯಕ್ಕೆ ಫಿಕ್ಸ್ ಮಾಡಿದ್ದೇವೆ. ನಿಮ್ಮ ಹಾಗೆ ಉತ್ತರ ಪ್ರದೇಶಕ್ಕೆ ಫಿಕ್ಸ್ ಮಾಡಿದ್ದೇವೆ, ನಿಮ್ಮ ಹಾಗೆ ಮಧ್ಯಪ್ರದೇಶಕ್ಕೆ ಫಿಕ್ಸ್ ಮಾಡಿದ್ದೇವೆ. ನಿಮ್ಮ ಹಾಗೆ ತಮಿಳುನಾಡಿಗೆ ಫಿಕ್ಸ್ ಮಾಡಿದ್ದೇವೆ ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ. ಮತ್ತು ನಾನು ಪತ್ರವನ್ನೂ ಬರೆದಿದ್ದೇನೆ. ಅವರು ಉತ್ತರವನ್ನು ಕೂಡ ಕೊಟ್ಟಿದ್ದಾರೆ. ಮಾನ್ಯ ಬಲರಾಂಜಾಖಡ್ ಅವರೂ ಉತ್ತರ ಕೊಟ್ಟಿದ್ದಾರೆ. ಮಾನ್ಯ ಪ್ರಣಬ್ ಮುಖರ್ಜಿ ಅವರೂ ಉತ್ತರ ಕೊಟ್ಟಿದ್ದಾರೆ. ಮಾನ್ಯ ಪ್ರಧಾನಿ ನರಸಿಂಹರಾವ್ ಅವರಿಗೂ ಪತ್ರ ಬರೆದಿದ್ದೇನೆ, ಅವರೂ ಉತ್ತರ ಕೊಟ್ಟಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ : 27 ಕೋಟಿ ರೂಪಾಯಿಗಿಂತ ಹೆಚ್ಚು ಕೊಡುವುದಕ್ಕೆ ಆಗುವುದಿಲ್ಲ ಎಂದು ಅವರು ಹೇಳಿದ್ದಾರೆ. ನೀವು ಇದಕ್ಕಿಂತ ಹೆಚ್ಚು ಖರ್ಚು ಮಾಡಬೇಡಿ ಎಂದು ಹೇಳಿದ್ದಾರಾ? ನಾವು ಹೇಳಿದ್ದು ಸ್ಟೇಟ್ ಗೌರ್ನಮೆಂಟ್ ಕೊಡಬಹುದಲ್ಲಾ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹೋದ ಸಲ 27 ಕೋಟಿ ರೂಪಾಯಿ ಅವರು ಫಿಕ್ಸ್ ಮಾಡಿದ್ದರು, 41 ಕೋಟಿ ರೂಪಾಯಿ ನಾವು ಖರ್ಚು ಮಾಡಿದ್ದೇವೆ. ಈಗಾಗಲೇ ನಾನು ಹೇಳಿದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ : ಅದನ್ನು ಯಾಕೆ ಹೇಳುತ್ತಿದ್ದೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಏಕೆ ಹೇಳುತ್ತಿದ್ದೇನೆ ಎಂದರೆ ಈಗ ಎಲ್ಲಾದರೂ ಒಂದು ಕಡೆ ಕಟ್ ಮಾಡಬೇಕು, ಕೊಡಬೇಕು ಎಂಬ ಮಾತನ್ನು ನಾನು ಹೇಳಿದೆ. ನೀವು ಕೇಳಿಸಿಕೊಳ್ಳಲಿಲ್ಲ ಎಂದು ಕಾಣುತ್ತದೆ. ಈಗ ಇದನ್ನು ತಕ್ಷಣ ತೆಗೆದುಕೊಳ್ಳಬೇಕಾದರೆ ಮೈನರ್ ಇರಿಗೇಷನ್, ಇಂಡಸ್ಟ್ರಿ ಡಿಪಾರ್ಟ್‌ಮೆಂಟ್ ಯಾವುದಾದರೂ ಒಂದು ಇಲಾಖೆಯಿಂದ ಕಡಿತ ಮಾಡಿಕೊಂಡು ಇವತ್ತು ಈ ಒಂದು ಕೆಲಸವನ್ನು ಅವಶ್ಯಕತೆ ಬಂದಾಗ ಮಾಡೇ ಮಾಡುತ್ತೇವೆಂದು ಹೇಳಿದೆ. ನಾನು ಈ ಮಾತನ್ನು ಮುಂಚೆಯೇ ಹೇಳಿದ್ದೇನೆ. ನಮಗೆ 27 ಕೋಟಿ ರೂಪಾಯಿ ಫಿಕ್ಸ್ ಮಾಡಿದರೂ ಸಹ ಹೋದ ಸಲ ನಾವು 41 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಈವತ್ತು, ಅವಶ್ಯಕತೆ ಬಿದ್ದರೆ ಮಾಡುತ್ತೇವೆ. ಆದರೆ ಬೇರೆ ಇಲಾಖೆಯಿಂದ ಕಡಿತವನ್ನು ಮಾಡಿಕೊಂಡು ಮಾಡಬೇಕಾಗುತ್ತದೆ ಎನ್ನತಕ್ಕ ಮಾತು ಹೇಳಿದೆ. ಅದಕ್ಕಾಗಿ ನಾವು ಕೇಂದ್ರ ಸರ್ಕಾರಕ್ಕೆ ಮೆಮೊರೇಂಡಮ್ ಕೊಟ್ಟಿಲ್ಲ ಎನ್ನತಕ್ಕ ಭಾವನೆ ಬೇಡ.

ಎಲ್ಲಾ ಎಂಪಿಗಳಿಗೆ ಬರೆದಿದ್ದೇವೆ. ಎಲ್ಲಾ ಸದಸ್ಯರಿಗೆ ಮೆಮೊರೇಂಡಮ್ ಕೊಟ್ಟಿದ್ದೇವೆ. ಲೋಕಸಭೆಯ ಡೆಪ್ಯುಟಿ ಸ್ಪೀಕರ್ ಅವರನ್ನು ಹಿಡಿದುಕೊಂಡು ಮಾನ್ಯ ಬಲರಾಂ ಜಾಖಡ್ ಅವರನ್ನು ಹಿಡಿದುಕೊಂಡು, ಮಾನ್ಯ ಪ್ರಣಬ್ ಮುಖರ್ಜಿ ಅವರನ್ನು ಹಿಡಿದುಕೊಂಡು ಮಾನ್ಯ ಪ್ರಧಾನಿ ಪಿ.ವಿ. ನರಸಿಂಹರಾವ್ ತನಕ ಮೆಮೊರೇಂಡಮ್ ಕೊಟ್ಟಿದ್ದೇವೆ. ಅವರಿಂದ ಉತ್ತರ ಕೂಡ ಬಂದಿದೆ. ಅದಕ್ಕಾಗಿ ನಾವು ಪ್ರಯತ್ನವನ್ನು ಮಾಡಿದ್ದೇವೆ. ಆದರೆ ಅವರ ಡಿಫಿಕಲ್ಟಿ ಏನು ಇದೆ, ಅದನ್ನು ನಾನು ಹೇಳಬೇಕು. ಏಕೆಂದರೆ ಎಲ್ಲಾ ಸ್ಟೇಟಿಗೆ ಒಂದೇ ಮಾಡಿದ್ದಾರೆ. ನನ್ನ ಮಾತು ಸ್ವಲ್ಪ ಕೇಳಿ. ಇವತ್ತು ಇನ್ನೂ ಒಂದು ವಿಷಯ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಏನು ಅಂದರೆ ಬೇರೆ ರಾಜ್ಯಗಳಲ್ಲಿ ಯಾವ ರೀತಿ ಕೊಡುತ್ತಾರೆ, ಅದನ್ನೂ ನೋಡೋಣ.

ಏಕೆಂದರೆ ನಾವು ಒಬ್ಬರಿಗೊಬ್ಬರು ದ್ವೇಷ ಮಾಡಿಕೊಳ್ಳುವುದು ಬೇಡ. ಇವತ್ತು ಅಧಿಕಾರದಲ್ಲಿ ನಾವು ಇರಬಹುದು, ನಾಳೆ ನೀವು ಇರಬಹುದು. ಮತ್ತೊಬ್ಬರು ಮಂತ್ರಿ ಆಗಬಹುದು. ಆದರೆ ಬೇರೆ ರಾಜ್ಯದಲ್ಲಿ ಯಾವ ರೀತಿಯಾಗಿ ಕೊಡುತ್ತಾರೆ ನೋಡೋಣ. ಮಧ್ಯಪ್ರದೇಶದಲ್ಲಿ ಯಾವ ರೀತಿ ಕೊಡುತ್ತಾರೆ, ಗುಜರಾತ್‌ನಲ್ಲಿ ಯಾವ ರೀತಿಯಾಗಿ ಕೊಡುತ್ತಾರೆ, ತಮಿಳುನಾಡಿನಲ್ಲಿ ಯಾವ ರೀತಿಯಾಗಿ ಕೊಡುತ್ತಾರೆ, ಈ ಬಗ್ಗೆ ಹೇಳಲಾ? ಇದನ್ನೆಲ್ಲಾ ನಾನು ವಿವರ ತಂದಿದ್ದೇನೆ. ಏಕೆಂದರೆ ಅವರೂ ಸಹ ಸೆಂಟ್ರಲ್ ಗೌರ್ನಮೆಂಟಿನ ಗೈಡ್ ಲೈನ್ಸ್ ಏನು ಇದೆ, ಅದೇ ರೀತಿಯಾಗಿ ಅವರೂ ಕೂಡ ಕೊಡುತ್ತಾರೆ. ಅದಕ್ಕಾಗಿ ನಾನು ಹೇಳಿದೆ....

SRI R.L. JAALAPPA : Necessity knows no law. Don't mention all the States. ನಮಗೆ ಕಷ್ಟ ಇದೆ. ಸಹಾಯ ಮಾಡಿ ಎಂದು ಕೇಳಿದರೆ ಪಂಜಾಬ್‌ನಲ್ಲಿ ಮಾಡಲಿಲ್ಲ, ಹರಿಯಾಣದಲ್ಲಿ ಮಾಡಲಿಲ್ಲ ಎಂದರೆ ಏನು ಅರ್ಥ?..

6.35 ಪಿ.ಎಂ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವುಗಳು ಮಾತನಾಡಿಲ್ಲ; ಕೆಲವು ಜನರು ಮಾತನಾಡಿದ್ದಾರೆ. ಯಾರು ಮಾತನಾಡಿದ್ದಾರೆ, ಎಲ್ಲಿ ಮಾತನಾಡಿದ್ದಾರೆ, ಎಂಬುದು ತಮಗೆ ಗೊತ್ತಿದೆ. ಆದ್ದರಿಂದ ಇವೊತ್ತು ನಾನು ಸದನದ ಮುಖಾಂತರ ಹೇಳಬೇಕಾಗಿದೆ. ಯಾವುದಾದರೂ ಪಾಯಿಂಟನ್ನು ನಾನು ಕ್ಲಿಯರ್ ಮಾಡಬೇಕಾಗುತ್ತದೆ. ಯಾವುದಕ್ಕೆ ಎಷ್ಟು ಹೆಚ್ಚಿನ ಹಣವನ್ನು ಕೊಡಬೇಕೆಂಬುದನ್ನು ನಾನು ಹೇಳಬಲ್ಲೆ. ಕೊಡತಕ್ಕಂಥಾದ್ದು ಸಂಪೂರ್ಣವಾಗಿ ತೃಪ್ತಿಕರವಾಗಿಲ್ಲದೇ ಇರಬಹುದು. ಆದರೆ ಇರತಕ್ಕಂಥ ಗೈಡ್ ಲೈನ್‌ನಲ್ಲಿ ನಾನು ಇವೊತ್ತು ಹೆಚ್ಚಿಗೆ ಮಾಡಿ ಸಹಾಯ ಮಾಡುತ್ತಿದ್ದೇನೆ

ಇನ್ನೂ ಹೆಚ್ಚಿನ ಸಹಾಯವಾಗಬೇಕಾದರೆ ವಿವಿಧ ಇಲಾಖೆಗಳ ಜೊತೆಯಲ್ಲಿ ನಾನೂ ಚರ್ಚೆ ಮಾಡಿ, ಎಲ್ಲಿ ಕೆರೆಗಳು ಒಡೆದಿವೆ, ಎಲ್ಲಿ ರಸ್ತೆಗಳು ಹೋಗಿದೆ, ಎಲ್ಲಿ ಬ್ರಿಡ್ಜಸ್ ಹಾಳಾಗಿವೆ, ಇದರ ಬಗ್ಗೆಯೂ ಕೂಡ ನಾನು ಚರ್ಚೆ ಮಾಡಿ ಸಾಧ್ಯವಾದಷ್ಟು ಮಟ್ಟಿಗೆ ಅವರು ಬೇಗನೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆನ್ನುವುದರ ಬಗ್ಗೆ ನಾನು ಅವರಿಗೆ ಒಂದು ಸೂಚನೆಯನ್ನು ಕೊಡುತ್ತೇನೆ. ಇನ್ನು ವಿಶೇಷವಾಗಿ ಮ್ಯಾನ್ ಮೇಡ್ ಕೆಲಾಮಿಟಿ ಬಗ್ಗೆ ಸಾಕಷ್ಟು ಚರ್ಚೆ ಇಲ್ಲಿ ನಡೆದಿದೆ. ಈಗಾಗಲೇ ಅದರ ಬಗ್ಗೆ ನಮ್ಮ ಇರಿಗೇಷನ್ ಸಚಿವರು ಒಂದು ಸ್ಟೇಟ್‌ಮೆಂಟನ್ನು ತಯಾರು ಮಾಡಿದ್ದಾರೆ. ಅವರು ಕೂಡ ಅದರ ಬಗ್ಗೆ ವಿವರಗಳನ್ನು ಕೊಡುತ್ತಾರೆ. ಆ ಬಗ್ಗೆ ಒಂದು ಎನ್‌ಕ್ವಾಯರಿ ಕಮಿಟಿಯನ್ನು ಈಗಾಗಲೇ ಮಾಡಿದ್ದೇವೆ. ಅದರಲ್ಲಿ ಚೀಫ್ ಇಂಜಿನೀಯರ್; ಕೆ.ಆರ್. ಸಾಗರದಲ್ಲಿ ಇರತಕ್ಕಂಥವರು, ಇನ್ನು ಇಬ್ಬರು ಚೀಫ್ ಇಂಜಿನೀಯರ್ ಮತ್ತು ಡೆಪ್ಯುಟಿ ಕಮೀಷನರ್ - ಹೀಗೆ ಮೂವರ ಮಂದಿಯ ಸಮಿತಿಯು ಇದೆ. ಅದರ ಮೂಲಕ ಯಾಕೆ ಈ ರೀತಿಯಾಗಿ ಆಯಿತು, ಯಾಕೆ ಹೆಚ್ಚಿಗೆ ನೀರನ್ನು ಬಿಟ್ಟರು, ಆ ದಿವಸ ಅವರು ಅಲರ್ಟ್ ಇರಲಿಲ್ಲವೇನು, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ರಾಗಲಿ, ಸೂಪರಿಂಟೆಂಡೆಂಟ್ ಇಂಜಿನಿಯರ್‌ರಾಗಲಿ, ಏನು ಮಾಡುತ್ತಾ ಇದ್ದರು ಆ ದಿವಸ ಈ ಎಲ್ಲಾ ವಿಚಾರಗಳ ಬಗ್ಗೆ ಒಂದು ಸಮಗ್ರವಾದ ತನಿಖೆಯನ್ನು ಮಾಡಿ, ಕಳುಹಿಸಿ ಎಂಬ ಆದೇಶವನ್ನು ನಮ್ಮ ಇರಿಗೇಷನ್ ಮಂತ್ರಿಯವರು ಕೊಟ್ಟಿದ್ದಾರೆ. ಆ ರಿಪೋರ್ಟ್ ಬಂದ ಮೇಲೆ ಆ ರಿಪೋರ್ಟಿನ ಆಧಾರದ ಮೇಲೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಬಹುಶಃ ಮಾನ್ಯ ಸಚಿವರು ನಾವು ಹೇಳಿದ್ದನ್ನು ಅರ್ಥಮಾಡಿಕೊಂಡಿಲ್ಲ. ನಮ್ಮ ಮೂಲತಃ ಪ್ರಶ್ನೆ ಏನಿದೆ, ಅದು ನಿಮಗೆ ಸಂಬಂಧಪಟ್ಟದ್ದೂ ಅಲ್ಲ. ಹಾಸನ ಜಿಲ್ಲೆಯ ಜಿಲ್ಲಾಧ್ಯಕ್ಷರನ್ನು ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿ, ಈ ದೊಡ್ಡ ಪ್ರಮಾಣದಲ್ಲಿ ಆಗಿರತಕ್ಕಂಥ ಮ್ಯಾನ್ ಮೇಡ್ ಕಲಾಮಿಟಿ ಎಂಥ್ದು ನಾವೇನು ಪದೇ ಪದೇ ಹೇಳುತ್ತಾ ಇದ್ದೇವೆ, ಇದರ ತನಿಖೆಗೆ ಹಾಸನ ಜಿಲ್ಲಾ ಡಿ.ಸಿ.ಯವರು ಅಧ್ಯಕ್ಷರು. ಚೀಫ್ ಇಂಜಿನಿಯರ್ ಮತ್ತು ಕೆಆರ್‌ಎಸ್ ನಲ್ಲಿರತಕ್ಕಂಥ ಸೂಪರಿನ್‌ಟೆಂಡೆಂಟ್ ಇಂಜಿನಿಯರ್‌ರವರು ಸದಸ್ಯರು. ಇದು ಆಗುವುದಿಲ್ಲ, ಇದರಿಂದ ನಮಗೆ ಫಲ ಸಿಕ್ಕುವುದಿಲ್ಲ, ಅದಕ್ಕಾಗಿ ಒಂದು ನ್ಯಾಯಾಂಗ ತನಿಖೆ ಮಾಡಿ ಎಂಬುದು ನಮ್ಮ ಬೇಡಿಕೆಯಾಗಿದೆ. ಎರಡನೆಯದಾಗಿ ಇದು ನಿಮಗೆ ಸಂಬಂಧ ಇಲ್ಲ, ನೀವೇಕೆ ಪರಿಹಾರವನ್ನು ಕೊಡುತ್ತೀರಿ? ಇರಿಗೇಷನ್ ಇಲಾಖೆಯವರು ಮಾಡಿರತಕ್ಕಂಥ ಅಪರಾಧಕ್ಕೆ ಕಂದಾಯ ಇಲಾಖೆಯವರು ಏತಕ್ಕಾಗಿ ಪರಿಹಾರವನ್ನು ಕೊಡುತ್ತೀರಿ? ನೀವು ಪರಿಹಾರ ಕೊಡುವುದಕ್ಕೆ ಹೋಗಿದ್ದೀರಿ. ಹಾಗೆ ಪರಿಹಾರ ಕೊಡುವುದಕ್ಕೆ ಕಾರಣ ಏನು? ನನ್ನ ಆಪಾದನೆಯು ಇರಿಗೇಷನ್ ಇಲಾಖೆಯುವರಿಂದ ಆಗಿಗತಕ್ಕಂಥ ಅತ್ಯಂತ ದೊಡ್ಡ ದೋಷ. ಹಾಗೆಯೇ ನಮ್ಮ ಪ್ರಧಾನ ಮಂತ್ರಿಗಳು ಹೈದ್ರಾಬಾದ್ ನಲ್ಲಿ ಏನಾದರೂ ಆದರೆ ಹೋಗುತ್ತಾರೆ, ಬೇರೆ ಬೇರೆ ರಾಜ್ಯಗಳಲ್ಲಿ ಆಗಿದ್ದರೆ ಇಂಥ ಸಂದರ್ಭಗಳಲ್ಲಿ ಹೋಗುತ್ತಾರೆ. ಅವರನ್ನು ಇಲ್ಲಿಗೂ ಕೂಡ ಕರೆದು ಪರಿಸ್ಥಿತಿಯನ್ನು ತಿಳಿಸತಕ್ಕಂಥ ಒಂದು ಮನವಿಯನ್ನಾದರೂ ನೀವು ಮಾಡಿದ್ದೀರಾ?

ಎರಡನೇ ತಾರೀಖಿಗೆ ಬರುತ್ತಾರೆ ಎಂದು ಇದೆ, ಯಾವುದೋ ಒಂದು ಲೆಕ್ಕಕ್ಕೂ ಇಲ್ಲದ ಪುಕ್ಕಕ್ಕೂ ಇಲ್ಲದ ಆ ಒಂದು ಕಾರ್ಯಕ್ರಮಕ್ಕೆ ಬರುತ್ತಾರೆಂದು ಕಾಣುತ್ತದೆ; ಆ ಕಾರ್ಯಕ್ರಮದ ಬಗ್ಗೆ ಇಲ್ಲಿ ಕುಳಿತಿರತಕ್ಕಂಥ ಮಂತ್ರಿಗಳಿಗೇನಾದರೂ ಗೊತ್ತಿದೆಯೇ? ನಮ್ಮ ಇಂಡಸ್ಟ್ರೀ ಮಿನಿಸ್ಟರ್ ರವರಿಗೇ ಗೊತ್ತಿರದ ಕಾರ್ಯಕ್ರಮ ಅದು ಎಂದು ಕಾಣುತ್ತದೆ. ಆ ಕಾರ್ಯಕ್ರಮಕ್ಕೆ ಅವರು ಬರುತ್ತಾರೆ, ಇಲ್ಲಿ ದೇಶದ ಜನರು

ಕಷ್ಟದಲ್ಲಿರುವಾಗ, ಸಾಯುತ್ತಿರುವಾಗ ಬರಲಿಲ್ಲ ಎಂದು ನನ್ನ ಪ್ರಶ್ನೆ. ನಿನ್ನೆ ಕೂಡ ಈ ವಿಚಾರದಲ್ಲಿ ಗಲಾಟೆ ಆಗಿದೆ. I do not want to raise it again and again. Are you prepared to take up this issue and see that judicial enquiry is constituted for the faults committed by the engineers specially in respect of K.R.S and Hemavathi, or not? If you are not prepared there is no point in you replying to this question.

ಶ್ರೀ ಆರ್.ವಿ. ದೇಶಪಾಂಡೆ : ಹೇಮಾವತಿ ಮತ್ತು ಕೆ.ಆರ್.ಸಾಗರದ ಜ್ಯುಡಿಷಿಯಲ್ ಎನ್‌ಕ್ವಾಯರಿ ಮಾಡುವುದು ಒಂದು ವಿಚಾರ ಆಯಿತು. ಈಗಾಗಲೇ ಮಾನ್ಯ ನೀರಾವರಿ ಸಚಿವರು ಎನ್‌ಕ್ವಾಯರಿ ಮಾಡಿದ್ದಾರೆ, ಆ ಎನ್‌ಕ್ವಾಯರಿ ರಿಪೋರ್ಟನ್ನು ಟೇಬಲ್ ಮಾಡುತ್ತೀರಾ? ಈಗಾಗಲೇ ಹೇಮಾವತಿಯಲ್ಲಿ ಕೃಷ್ಣರಾಜದಿಂದ ಏಘು ವಾಟರ್ ರಿಲೀಸ್ ಮಾಡಿದ್ದಾರೆ, ಅದರಿಂದ ಅನಾಹುತವಾಯಿತು, ಮ್ಯಾನ್ ಮೇಡ್ ಫ್ಲಡ್ ಆಯಿತು. ಆ ಬಗ್ಗೆ ಸಚಿವರ ಆದೇಶದ ಪ್ರಕಾರ ಒಂದು ಎನ್‌ಕ್ವಾಯರಿ ಆಗಿದೆ. ಆ ಎನ್‌ಕ್ವಾಯರಿ ರಿಪೋರ್ಟನ್ನು ಏನಾದರೂ ನೀವು ಟೇಬಲ್ ಮುಂದೆ ಇಡುತ್ತೀರಾ? ಅದು ಚೀಫ್ ಇಂಜಿನಿಯರ್‌ದು ತಪ್ಪೋ, ಎಸ್.ಇ. ಅವರದು ತಪ್ಪೋ ಎನ್ನುವುದು ಗೊತ್ತಾಗುತ್ತದೆ. Atleast you place the report on the table of the House. Let us see what is the report.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ತಾವು ಹೇಳಿದ ಹಾಗೆ ಟಿ.ಎಸ್. ರುದ್ರಪ್ಪ ಇಂಜಿನಿಯರ್ ಇನ್ ಚೀಫ್ ಅಂಡ್ ಡೈರೆಕ್ಟರ್, ಕೆ.ಆರ್.ಎಸ್., ಎಂ. ಶಿವಾನಂದ, ಇಂಜಿನಿಯರ್ ಇನ್ ಚೀಫ್ ಅಂಡ್ ಪ್ರಾಜೆಕ್ಟ್ ಕೊ-ಆರ್ಡಿನೇಟರ್, ಕಾವೇರಿ ಬೇಸಿನ್ ಪ್ರಾಜೆಕ್ಟ್, ಮೈಸೂರು, ಆಮೇಲೆ ಎನ್. ಶಿವಶೈಲಂ, ಡೆಪ್ಯುಟಿ ಕಮೀಷನರ್, ಹಾಸನ ಡಿಸ್ಟ್ರಿಕ್ಟ್, ಹಾಸನ, ಈ ಮೂವರನ್ನೊಳಗೊಂಡಂತೆ ಒಂದು ಸಮಿತಿಯನ್ನು ಮಾಡಿ ಅದು ಎನ್‌ಕ್ವೈರಿ ರಿಪೋರ್ಟನ್ನು ಕಳುಹಿಸಿ ಎಂದು ಈಗಾಗಲೇ ಆದೇಶವನ್ನು ಇರಿಗೇಷನ್ ಮಿನಿಸ್ಟರ್ ರವರು ಕೊಟ್ಟಿದ್ದಾರೆ. ಆ ಎನ್‌ಕ್ವೈರಿ ರಿಪೋರ್ಟ್ ಬಂದ ಮೇಲೆ ಯಾರ್ಯಾರು ತಪ್ಪಿತಸ್ಥರು ಇದ್ದಾರೆ, ಅವರ ಮೇಲೆ ಆಕ್ಷನ್‌ನ್ನು ತೆಗೆದುಕೊಳ್ಳುತ್ತೇವೆ. ಅದರಲ್ಲಿ ಭಯಭೀತಿ ಏನೂ ಇಲ್ಲ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಈಗಾಗಲೇ ಆ ರಿಪೋರ್ಟ್ ಗೌರ್ನಮೆಂಟ್ ಮುಂದೆ ಇದೆ. ಆ ರಿಪೋರ್ಟನ್ನೇ ಇಡಿ ಎಂದು ಹೇಳುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರಿಪೋರ್ಟ್ ಬಂದ ಮೇಲೆ ರಿಪೋರ್ಟನ್ನು ಪರಿಶೀಲಿಸಿ ಯಾರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಕ್ರಮ ತೆಗೆದುಕೊಳ್ಳುವುದಲ್ಲ ನಮಗೆ ಬೇಕಾಗಿರುವುದು. ನೀವು ತೆಗೆದುಕೊಳ್ಳಬೇಕಾದ ಕ್ರಮ ಜನರಿಗೆ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸಿ ಎಂದು ನಾನು ಕೇಳುತ್ತಿರುವುದು. ನೀವು ಯಾರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೀರೋ ಬಿಡುತ್ತೀರೋ, I am least bothered about that. ನೀವು ಹೋಗಲಿಲ್ಲ, ದಯಮಾಡಿ ಕೇಳಿ. ಮಂಡಗೆರೆಗೆ ನಾನು ಹೋಗಿ ಬಂದಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಹೋಗಿಲ್ಲ ಎಂದು ಹೇಳುತ್ತಾರೆ ನೋಡಿ. ಬರಗಾಲದಲ್ಲಿ ಬಾಯಿ ಇದ್ದವರಿಗೆ ಛಾನ್ಸ್ ಎನ್ನುವ ಹಾಗೆ, ನಾವು ಸುಮ್ಮನೆ ಇರುತ್ತೇವೆ ಎಂದು ಹೀಗೆ ಹೇಳಿದರೆ ಹೇಗೆ?

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಹೇಳುತ್ತೇನೆ. ಕೇಳಿ. ಏಕೆಂದರೆ ಮಾನ್ಯ ನರಸಿಂಹಮೂರ್ತಿಯವರು ಹೋಗಿ ಅಲ್ಲಿ ದೋಣಿಗಳನ್ನು ಕೊಡುತ್ತೇವೆ ಎಂದು ಹೇಳಿ ರೈಲು ಬಿಟ್ಟುಬಂದರು. ಹಾಗೆ ಬಿಡುವುದು ಬೇಡ ಅಂತ. 24 ಘಂಟೆಯೊಳಗೆ ದೋಣಿಗಳನ್ನು ಕಳುಹಿಸುತ್ತೇವೆ, ಆಚೆ ಈಚೆಗೆ ಓಡಾಡುವುದಕ್ಕೆ ಎಂದು ಹೇಳಿ ಬಂದರು. ಇವತ್ತಿನವರೆಗೂ ಅಲ್ಲಿ ಬಿಟ್ಟಿದ್ದು ರೈಲೇ ಹೊರತು ಅಲ್ಲಿಗೆ ದೋಣಿ ಹೋಗಲಿಲ್ಲ. ಇಂಥದ್ದನ್ನು ಏತಕ್ಕೆ ಮಾಡುತ್ತೀರಿ? ನನಗೆ ಗೊತ್ತಿದೆ, ಆ ಡೆಪ್ಯುಟಿ ಕಮೀಷನರ್, ಆ ಮೂವರು ಜನರು ಸೇರಿ ಒಂದು ರಿಪೋರ್ಟನ್ನು ಕೊಡುವುದಕ್ಕೆ ಎಷ್ಟು ದಿವಸ ಬೇಕು? ಎಷ್ಟು ದಿವಸ ಬೇಕು, ರಿಪೋರ್ಟನ್ನು ಕೊಡುವುದಕ್ಕೆ? I know that you are in possession of the report. Why are you trying to hide?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರಿಪೋರ್ಟ್ ಬಂದಮೇಲೆ ರಿಪೋರ್ಟನ್ನು ಪರಿಶೀಲಿಸಿ ಆ್ಯಕ್ಷನ್ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೇನಲ್ಲಾ. ಹಿಂದೆ ಮುಂದೆ ನೋಡುವುದಿಲ್ಲ, ಯಾರು ತಪ್ಪಿತಸ್ಥರು ಇದ್ದಾರೆ, ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಉಳಿದಿರತಕ್ಕಂಥ ವ್ಯವಸ್ಥೆಯನ್ನು ಕೂಡಾ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ಈಗಾಗಲೇ ಅಲ್ಲಿ ಮನೆಯನ್ನು ಕಟ್ಟಿಸತಕ್ಕಂಥದ್ದು, ಕಾಂಪನ್‌ಸೇಷನ್ ಆಗಲೀ....

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ನಾಳೆ ಆ ರಿಪೋರ್ಟಿನಲ್ಲಿ ಏನು ಇದೆ ಎಂದು ಹೇಳುತ್ತೀರಾ? What is that report? Please place it on the table of the House. ಯಾವ ಆಫೀಸರ್ ಮೇಲೆ ಏನು ರೆಸ್ಪಾನ್ಸಿಬಿಲಿಟಿ, ಯಾರಿಂದ ತಪ್ಪಾಗಿದೆ, ಇದಕ್ಕೆ ಯಾರು ಜವಾಬ್ದಾರಿ ಎಂದು ಹೇಳುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ರಿಪೋರ್ಟ್ ಬಂದ ಮೇಲೆ ರಿಪೋರ್ಟ್‌ನಲ್ಲಿ ರೆಸ್ಪಾನ್ಸಿಬಿಲಿಟಿಯನ್ನು ಯಾರ್ಯಾರ ಮೇಲೆ ಫಿಕ್ಸ್ ಮಾಡುತ್ತಾರೋ, ಯಾರ್ಯಾರನ್ನು ತಪ್ಪಿತಸ್ಥರು ಎಂದು ಹೇಳುತ್ತಾರೋ, ಡೆಫನೇಟ್‌ಲಿ ಅವರ ಮೇಲೆ ಆ್ಯಕ್ಷನ್ ತೆಗೆದುಕೊಳ್ಳುತ್ತವೆ. ಏಕೆಂದರೆ ಇದು ಇವತ್ತಿನ ಪ್ರಶ್ನೆಯಲ್ಲ. ನಾವು ತೆಗೆದುಕೊಳ್ಳದೇ ಹೋದರೆ ನಾಳೆ ಕೂಡಾ ಇದೇ ಅಧಿಕಾರಿಗಳು ಇದೇ ರೀತಿಯಾಗಿ ಮಲಗುತ್ತಾರೆ. ಜನರಿಗೆ ತೊಂದರೆಯಾಗುತ್ತದೆ. ನಾವು ನೀವು ಇಲ್ಲಿ ಉತ್ತರವನ್ನು ಕೊಡಬೇಕು ಅಷ್ಟೆ. ಅವರು ಆರಾಮವಾಗಿ ಮಲಗುತ್ತಾರೆ. ಇದು ಆಗಬಾರದು ಎಂದು ಹೇಳಿ ಆ ರಿಪೋರ್ಟ್ ಬಂದ ತಕ್ಷಣ ಪರಿಶೀಲಿಸಿ ಆ್ಯಕ್ಷನ್ ತೆಗೆದುಕೊಳ್ಳಬೇಕು ಎನ್ನತಕ್ಕಂಥದ್ದೇ ನಮ್ಮ ಉದ್ದೇಶ.

ಶ್ರೀ ಡಿ.ಬಿ. ಚಂದ್ರೇಗೌಡ : ತಮಗೆ ನಾನು ಅದಕ್ಕೇ ಹೇಳಿದೆ. ನಿಮ್ಮ ಇಲಾಖೆಯಿಂದ ತಪ್ಪಾಗಿದೆ ಎಂದು ನಾವು ಹೇಳಲಿಲ್ಲ. ಇರಿಗೇಷನ್ ಇಲಾಖೆಯಿಂದ ಇದು ತಪ್ಪಾಗಿದೆ ಎಂದು ನಮ್ಮ ವಾದ. ಇದು ಇರಿಗೇಷನ್ ಇಲಾಖೆಯಿಂದ ತಪ್ಪಾಗಿದೆ ಎಂದು ಇದ್ದರೆ ನೀವು ಕೆಲಾಮಿಟಿ ರಿಲೀಫ್ ಫಂಡ್‌ನಲ್ಲಿ 27 ಕೋಟಿ ರೂಪಾಯಿಗಳ ವ್ಯಾಪ್ತಿಯಲ್ಲಿ ಏನು ಪರಿಹಾರವನ್ನು ರೈತರಿಗೆ ಕೊಡುತ್ತಿದ್ದೀರಿ, ಅದನ್ನು ಕೊಡುವುದಕ್ಕೆ ಬರುವುದಿಲ್ಲ. ಆ ಕಾರಣಕ್ಕಾಗಿ ನಾವು ಹೇಳಿದ್ದೇವೆ. ಇರಿಗೇಷನ್ ಇಲಾಖೆಯವರು ಅಪರಾಧವನ್ನು ಮಾಡಿದ್ದರೆ ಇರಿಗೇಷನ್ ಇಲಾಖೆಯಿಂದ ಕೊಡಿ. ನೀವು ಅದನ್ನು ಕೆಲಾಮಿಟಿ ರಿಲೀಫ್ ಫಂಡ್‌ನಿಂದ ಎಂದು ಕೊಟ್ಟು ನಮಗೆ ಬರಬೇಕಾಗಿರತಕ್ಕಂಥ ಹಣವನ್ನು ಏತಕ್ಕೆ ಕಡಿಮೆ ಮಾಡುತ್ತೀರಿ? This is my point.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮ್ಮದು ಫ್ಲಡ್ ರಿಲೀಫ್ ಇದರ ಮೇಲೆ ಹೋಗುತ್ತದೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ನಿಮ್ಮ ಫ್ಲಡ್ ಹಣವನ್ನು ಏತಕ್ಕೆ ಕೊಡುತ್ತೀರಿ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾರೇ ತಪ್ಪಿತಸ್ಥರು ಇರಲಿ, we are not going to shield them.

ಶ್ರೀ ಬಿ.ಹೆಚ್. ಬನ್ನಿಕೋಡ್ : ಆ ವರದಿ ಈಗಾಗಲೇ ಸರ್ಕಾರದ ಕಡೆಯಲ್ಲಿ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾಳೆ ಅಪ್ಪರ್ ಕೃಷ್ಣದಲ್ಲಿ ಮಾಡಬಹುದು, ನಾಡಿದ್ದು ಘಟಪ್ರಭಾ, ಮಲಪ್ರಭಾದಲ್ಲಿ ಮಾಡಬಹುದು. ನಾಳೆ ಏನಪ್ಪಾ ಯಾರೂ ಕೇಳುವವರು ಇಲ್ಲ ಎಂದು ಹೇಳುತ್ತಾರೆ. ಅದಕ್ಕೆ ರಿಪೋರ್ಟ್ ಬಂದಮೇಲೆ ಪರಿಶೀಲಿಸಿ ಯಾರು ತಪ್ಪಿತಸ್ಥರು ಇದ್ದಾರೆ we are going to take action against them. We are not going to shield anybody whosoever he may be. ಯಾರೇ ಇರಲಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ನಾವು ಹೇಳುತ್ತಿರತಕ್ಕಂಥದ್ದು ಏನೆಂದರೆ ರಿಪೋರ್ಟ್ ಬಂದಿದೆ ಎಂದು ಹೇಳುತ್ತಿದ್ದೇವೆ. ಅದನ್ನು ನೀವು ಇಡುವುದಿಲ್ಲ ಎಂದು ಹೇಳಿದರೆ ಯಾರನ್ನೋ ರಕ್ಷಣೆ ಮಾಡತಕ್ಕಂಥ ಕೆಲಸ ನಡೆದಿದೆ ಎನ್ನತಕ್ಕಂಥ ಶಂಕೆ ಬರುತ್ತದೆ. ರಿಪೋರ್ಟ್ ಈಗಾಗಲೇ ನೀರಾವರಿ ಸಚಿವರ ಹತ್ತಿರ ಇದೆ. ತಮ್ಮ ಹತ್ತಿರ ಅದು ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರಿಪೋರ್ಟ್ ಬಂದಮೇಲೆ ಪರಿಶೀಲಿಸಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಆಮೇಲೆ ಅವರು ಸ್ಟೇಟ್‌ಮೆಂಟ್ ಅನ್ನೂ ಕೂಡ ಮಾಡುತ್ತಾರೆ.

ಶ್ರೀ ಜಿ. ರಾಜೂಗೌಡ : ಕಂದಾಯ ಸಚಿವರನ್ನು ಒಂದು ಕ್ಲಾರಿಫಿಕೇಷನ್ ಕೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರವಾಹದಿಂದ ಸತ್ತವರಿಗೆ 8 ಸಾವಿರ, ಆನೆ ತುಳಿದು ಸತ್ತವರಿಗೆ 20 ಸಾವಿರ communal violence ನಲ್ಲಿ ಸತ್ತವರಿಗೆ 50 ಸಾವಿರ, ಏರೋಪ್ಲೇನ್ ಬಿದ್ದಂತಹವರಿಗೆ 5 ಲಕ್ಷ ಜೀವ ಅನ್ನತಕ್ಕದ್ದು ಒಂದೇ. ಉಸಿರು ಜೀವ ಅನ್ನತಕ್ಕದ್ದು ಎಲ್ಲರಿಗೂ ಒಂದೇ. ಇದು ಬಹಳ ಕಡಿಮೆ ಇದೆ. ಇದನ್ನು ಜಾಸ್ತಿ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ನಾನು ಹೇಳಿದ್ದೇನೆ. ಸೆಂಟ್ರಲ್ ಗೈಡ್ ಲೈನ್ಸ್, ನಮ್ಮ ಗೈಡ್ ಲೈನ್ಸ್, ಬೇರೆ ರಾಜ್ಯದ್ದು ಬೇಕಾದರೆ ಹೇಳು ಅಂದರೆ ಹೇಳುತ್ತೇನೆ. ನಾವು ಮಾಡಬೇಕೆಂದರೆ, ನೀವು ನಾವು ಸೇರಿ ಪಾರ್ಟಿಯಲ್ಲಿ ಒಂದು ತೀರ್ಮಾನ ತೆಗೆದುಕೊಂಡು ಎಲ್ಲರಿಗೂ ಐದೈದು ಲಕ್ಷ ಕೊಡಬೇಕು ಎಂದರೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ಈಗ ಇರತಕ್ಕ ಗೈಡ್ ಲೈನ್ಸ್ ಅನ್ನು ಹೇಳುತ್ತಿದ್ದೇನೆ. ಆ ಇತಿಮಿತಿಯಲ್ಲಿ ನಾನೇನು ಮಾಡಬಹುದು ಎಷ್ಟರಮಟ್ಟಿಗೆ ಸಹಾಯ ಮಾಡಬಹುದು ಅದನ್ನು ನಾನು ಹೇಳಿದ್ದೇನೆ. ಜಾಸ್ತಿ ಮಾಡಬೇಕೆಂದರೆ ನೀವು ನಾವು ಕುಳಿತು

ಶ್ರೀ ಬಸವರಾಜ ರಾಯರೆಡ್ಡಿ : ತಾವು 5 ಸಾವಿರ ಇದ್ದಿದ್ದನ್ನು 8 ಸಾವಿರ ಮಾಡಿದ್ದೀರಿ. ತಾವು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ಆದರೆ 8 ಸಾವಿರ ಕೊಟ್ಟರೆ ಆಗುತ್ತದೆಯೇ ಹೇಗೆ? ದಯವಿಟ್ಟು 25 ಸಾವಿರವನ್ನಾದರೂ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಜೀವ ಕಳೆದುಕೊಂಡವರಿಗೆ ನೀವು 5 ಲಕ್ಷ ಕೊಟ್ಟರೂ ಅದು ಕಾಂಪನ್‌ಸೇಷನ್ ಅಲ್ಲ.

SRI BASAVARAJA RAYA REDDY : Economic Criteria ಮಾಡಿ.

SRI M. MALLIKARJUNA KHARGE : We are going to give only relief.

ಶ್ರೀ ಆರ್.ಎಲ್. ಜಾಲಪ್ಪ : ಧಾರಣೆಗಳು ಹೆಚ್ಚಾಗಿರುವುದರಿಂದ 8 ಸಾವಿರ ಕೊಟ್ಟರೆ ತಿಥಿ ಮಾಡುವುದಕ್ಕಾಗುತ್ತದೆ. ಇನ್ನು ಯಾವುದಕ್ಕೂ ಸಾಕಾಗುವುದಿಲ್ಲ ಈ ಎರಟು ಸಾವಿರ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಚಂದ್ರೇಗೌಡರು, ಬನ್ನಿಕೋಡ್ ರವರು ಮತ್ತು ಬೈರೇಗೌಡರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಇದನ್ನು ಈಗಾಗಲೇ ಹೇಳಿದಹಾಗೆ ಇದನ್ನು ರಿವ್ಯೂ ಮಾಡಿ, ಎಲ್ಲೆಲ್ಲಿ ಕ್ರಮವನ್ನು ತೆಗೆದುಕೊಳ್ಳಬೇಕೋ ಅಲ್ಲಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮಾನ್ಯ ಬಾಬಾಗೌಡರು ಕೆಲವು ಲ್ಯಾಂಡ್‌ಗಳು ಟ್ಯಾಂಕ್‌ನಲ್ಲಿ ಮುಳುಗಡೆಯಾಗಿವೆ ಅವುಗಳನ್ನು ಅಕ್ವೈರ್ ಮಾಡಿಕೊಂಡಿಲ್ಲ, ಅದನ್ನು ಅಕ್ವೈರ್ ಮಾಡಿಕೊಳ್ಳಬೇಕೆಂಬ ಮಾತನ್ನು ಹೇಳಿದ್ದಾರೆ. ಅದಕ್ಕೆ ನಾನು ಈಗಾಗಲೇ ಅವರಿಗೆ ಪತ್ರವನ್ನು ಬರೆದಿದ್ದೇನೆ. ಅದು ಜಿಲ್ಲಾಪರಿಷತ್ ಟ್ಯಾಂಕ್ ಆಗಿದ್ದರಿಂದ, ನಾನು ಮಾನ್ಯ ಕೆ.ಹೆಚ್. ಪಾಟೀಲರಿಗೆ ನಾನು ಹೇಳಿ ಎಷ್ಟು ಲ್ಯಾಂಡ್ ಅದರಲ್ಲಿ ಮುಳುಗಡೆಯಾಗುತ್ತದೋ ಆ ಲ್ಯಾಂಡನ್ನು ಅಕ್ವೈರ್ ಮಾಡಿಸುವುದಕ್ಕೆ ಅವರಿಗೆ ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಅದೇ ರೀತಿಯಾಗಿ ಕಾಂಪನ್ಸೇಷನ್ನಿಗೆ ಪ್ರಾವಿಜನ್ ಮಾಡಬೇಕಾಗುತ್ತದೆ. ನಮ್ಮ ಜಿಲ್ಲಾ ಪರಿಷತ್‌ನವರಿಂದ ರಿಪೋರ್ಟನ್ನು ತರಿಸಿಕೊಂಡು ಎಷ್ಟು ಮುಳುಗಡೆಯಾಗುತ್ತದೆ, ಅದಕ್ಕೆ ಏನು ವ್ಯಾಲ್ಯುಯೇಷನ್ ಎಂಬುದನ್ನು ತಿಳಿದುಕೊಂಡು, ಲ್ಯಾಂಡ್ ಅಕ್ವಿಸಿಷನ್ ಕಾಂಪನ್ಸೇಷನ್ ಕೊಡಬೇಕಾಗುತ್ತದೆ.

ಇದನ್ನು ಸಂಬಂಧಪಟ್ಟಂತೆ ಮಾನ್ಯ ಕೆ.ಹೆಚ್. ಪಾಟೀಲರಿಗೆ ತಿಳಿಸಿ ಆ ಕೆಲಸವನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ದೇಶಪಾಂಡೆಯವರು ಅರೆಕಾನಟ್ ಪ್ಲಾಂಟೇಷನ್ ಬಗ್ಗೆ ಮಾತನಾಡಿದ್ದಾರೆ. ಇದು ನಮ್ಮ ಗೈಡ್ ಲೈನ್ಸ್‌ನಲ್ಲಿಯೂ ಇಲ್ಲ, ನಿಮ್ಮ ಗೈಡ್ ಲೈನ್ಸ್‌ನಲ್ಲಿಯೂ ಇಲ್ಲ, ಸೆಂಟ್ರಲ್ ಗೈಡ್ ಲೈನ್ಸ್‌ನಲ್ಲಿಯೂ ಇಲ್ಲ, ಕೇವಲ ನಮ್ಮಲ್ಲಿರತಕ್ಕ ಮಾರ್ಜಿನಲ್ ಮತ್ತು ಸ್ಮಾಲ್ ಫಾರ್ಮರ್ಸ್ ನಲ್ಲಿ ಕೊಡತಕ್ಕ ಒಂದು ವ್ಯವಸ್ಥೆ ಇದೆ.

ಈ ಸಂದರ್ಭದಲ್ಲಿ ಅದರ ಬಗ್ಗೆ ಹೆಚ್ಚಿಗೆ ಹೇಳತಕ್ಕ ಅವಶ್ಯಕತೆ ಇಲ್ಲ. ಮಾನ್ಯ ರಾಜೂಗೌಡರು ಹೇಳಿದಹಾಗೆ ಕಾಂಪನ್ಸೇಷನ್ ಅನ್ನು ಹೆಚ್ಚಿಗೆ ಕೊಡಬೇಕೆಂದು ಹೇಳಿದ್ದಾರೆ. ಸಧ್ಯಕ್ಕೆ ಈ ಒಂದು ಪರಿಸ್ಥಿತಿ ಇದ್ದ ಕಾರಣ, ಮೊನ್ನೆ ನಾವು ಎನ್‌ಹಾನ್ಸ್ ಮಾಡಿದ್ದೇವೆ. ಆ ಪ್ರಶ್ನೆ ಈಗ ಉದ್ಭವಿಸುವುದಿಲ್ಲ. ಮಾನ್ಯ ವಿಜಯಕುಮಾರ್ ರವರು ಐ.ಆರ್.ಡಿ.ಪಿ. ಪ್ಯಾಟ್ರನ್ ಮೇಲೆ ರಿಲೀಫ್ ಕೊಡುತ್ತಿದ್ದಾರೆ. ಇದು ಸರಿಯಲ್ಲ ಎಂದು ಹೇಳಿದ್ದಾರೆ. ಶ್ರೀಮತಿ ಮೋಟಮ್ಮನವರು ಕೂಡ ರಿಲೀಫ್ ವರ್ಕ್‌ನಲ್ಲಿ ತಾರತಮ್ಯವಾಗಿದೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕೆಂದು ಹೇಳಿದ್ದಾರೆ. ಮಾನ್ಯ ಹಲಗೇಗೌಡರು ಕೂಡ ಸಮರ್ಪಕವಾಗಿ ಕೆಲಸ ಆಗಿದೆ, ಆದರೆ ಇನ್ನೂ ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡಬೇಕೆನ್ನುವುದರ ಬಗ್ಗೆ ಅವರು ಕೂಡ ತಿಳಿಸಿದ್ದಾರೆ.

ಶ್ರೀಮತಿ ಸುಮಾವಸಂತರವರು ಕೂಡ ಹೇಳಿದ್ದಾರೆ. ಮಾನ್ಯ ಲಕ್ಷ್ಮಣಯ್ಯನವರು ಕೂಡ ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಎಲ್ಲಾ ಸಲಹೆಗಳ ಬಗ್ಗೆ ನಾನು ಕೂಲಂಕುಷವಾಗಿ ವಿಚಾರಮಾಡಿ ಎಲ್ಲೆಲ್ಲಿ ~~ಸಹಾಯ~~ ಮಾಡಬೇಕು ಅದರ ಬಗ್ಗೆ ಒಂದು ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಒಂದು ಮಾತನ್ನು ಹೇಳಿದರು, ದೆಹಲಿಗೆ ಹೋದಾಗ ನೆನಪು ಬಂತೊ ಗೊತ್ತಾಗಲಿಲ್ಲ. ಕೇಂದ್ರದ ಮಂತ್ರಿಗಳು ಒಬ್ಬರೂ ಬಂದಿಲ್ಲ. ಇದನ್ನು ನೋಡಲಿಲ್ಲ ಎನ್ನತಕ್ಕ ಮಾತನ್ನು ಹೇಳಿದರು. ನಮ್ಮ ಶಕ್ತಿಮೀರಿ ಪ್ರಯತ್ನ ಮಾಡುವಂತಹ ಪ್ರಯತ್ನವನ್ನು ಮಾಡಿದ್ದೇವೆ. ನಾನು ಒಬ್ಬ ಮಂತ್ರಿಯಾಗಿ ನಾನು ಮಾಡುವುದರಿಂದಲೇ ಎಲ್ಲಾ ಸರಿಯಾಗುತ್ತದೆಂದು ತಿಳಿದುಕೊಂಡಿಲ್ಲ. ಇಂತಹ ನ್ಯಾಚುರಲ್ ಕೆಲಾಮಿಟಿಸ್‌ನಲ್ಲಿ ವಿರೋಧ ಪಕ್ಷದವರೂ ಮಾಡಬೇಕಾಗುತ್ತದೆ. ಪ್ರೈವೇಟ್ ಆರ್ಗನೈಸೇಷನ್ಸ್‌ರವರು ಇನ್‌ವಾಲ್ವ್ ಆಗಬೇಕಾಗುತ್ತದೆ. ಎಲ್ಲಾ ಜನ ಇಂತಹ ಕೆಲಾಮಿಟಿಯಲ್ಲಿ ಒಗ್ಗಟ್ಟಾಗಿ ಸಹಾಯ ಮಾಡಿದರೆ ಜನ ಬದುಕುತ್ತಾರೆ. ಕೇವಲ ಸರ್ಕಾರದ ಪಾತ್ರ ವಹಿಸಿಕೊಂಡು ಎಲ್ಲವನ್ನೂ ಮಾಡಿದರೆ ಸರಿಹೋಗುತ್ತದೆ ಎಂದು ನಾನು ತಿಳಿದುಕೊಂಡಿಲ್ಲ. ಈವತ್ತು ಎಲ್ಲಾ ಕೆಲಸ ಆಗಬೇಕಾದರೆ, ನಾನು ಈ ಒಂದು ಸದನದ ಮುಖಾಂತರ ಅಪೀಲ್ ಮಾಡುತ್ತೇನೆ. ಶ್ರೀಮತಿ ನಾಗರತ್ನಮ್ಮನವರು ಮೈಸೂರಿಗೆ ಹೋದಾಗ ಅಲ್ಲಿನ ಲಯನ್ಸ್‌ಕ್ಲಬ್‌ನವರು ಹಾಗೂ ಜೈನ್ ಯುವಕ ಸಂಘದವರು ಸಾಕಷ್ಟು ಹಣ, ಯುಟೆನ್ಸಿಲ್ಸ್ ಬಟ್ಟೆ ಇತ್ಯಾದಿಯನ್ನು ಕೊಟ್ಟು ಫ್ಲಡ್ ಅಫೆಕ್ಟೆಡ್ ಜನರಿಗೆ ಸಹಾಯ ಮಾಡಲು ನೆರವು ಮಾಡಿದ್ದಾರೆ. ಇಂಥ ಕಷ್ಟದಲ್ಲಿರತಕ್ಕವರಿಗೆ ನಾವು ಹೆಚ್ಚಿನ ರೀತಿಯಲ್ಲಿ ಒಂದು ಪರಿಹಾರವನ್ನು ಹೆಚ್ಚಿನ ರೀತಿಯಲ್ಲಿ ಕೊಡಬಹುದು, ಸಹಾಯವನ್ನು ಮಾಡಬಹುದು ಎಂದು ಹೇಳಿ, ಕೇಂದ್ರದ ಮಂತ್ರಿಗಳು ಬರಲಿಲ್ಲವೆಂದು ತಾವು ಹೇಳಿದ್ದೀರಿ ಅದರ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ನಾವು, ನೀವು ಸಹಾಯ ಮಾಡತಕ್ಕ ಒಂದು ಪರಿಸ್ಥಿತಿಯಲ್ಲಿರುವಾಗ ಸುಮ್ಮನೆ ಕೇಂದ್ರದ ಮಂತ್ರಿಗಳ ಹೆಸರನ್ನು ಇಲ್ಲಿ ಎತ್ತತಕ್ಕದ್ದು ಬೇಡ ಎಂದು ನಾನು ಅವರಿಗೆ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ, ಸುಮ್ಮನೆ ಕಾಂಟ್ರೊವರ್ಸಿಗೆ ಅವರನ್ನು ಎಳೆಯುವಂಥದ್ದು ಬೇಡ.

ಶ್ರೀ ಪಿಜಿಆರ್ ಸಿಂಧ್ಯ ಈಗ ಕೇಂದ್ರದಲ್ಲಿ ಒಂದು ಸರ್ಕಾರ ಇದೆ. ನಮ್ಮ ರಾಜ್ಯದಲ್ಲಿ ನಮ್ಮ ಜನತೆಯಿಂದ ಚುನಾಯಿತರಾದ ಪಾರ್ಲಿಮೆಂಟ್ ಸದಸ್ಯರ ಪೈಕಿ ಐದು ಜನ ಗೌರವಾನ್ವಿತ ಮಂತ್ರಿಗಳು ಇದ್ದಾರೆ. ರಾಜ್ಯದಲ್ಲಿ 44 ಕೋಟಿ ರೂ.ಗಳು ನಷ್ಟವಾಗಿರುವಂಥ ಸಂದರ್ಭದಲ್ಲಿ, 133ಜನ ಸತ್ತಿರುವಂಥ ಸಂದರ್ಭದಲ್ಲಿ, ಆಂಧ್ರಪ್ರದೇಶದಲ್ಲಿ ಮತ್ತು ಒರಿಸ್ಸಾದಲ್ಲಿ ಅಲ್ಲಿರುವಂಥ ಲೋಕಸಭಾ ಸದಸ್ಯರು ಪ್ರಧಾನ ಮಂತ್ರಿಗಳನ್ನು ಕರೆದುಕೊಂಡು ಹೋಗಿ ತೋರಿಸಿದ್ದಾರೆ. ಹೀಗೆ ಪ್ರಧಾನ ಮಂತ್ರಿಗಳು ಬಂದರೆ ಹಣದ ಸಹಾಯವಾಗುವುದಿಲ್ಲವೇ ಎಂಬುದನ್ನು ಯೋಚನೆ ಮಾಡಿ ಕೇಳುತ್ತಿರುವುದು ಇದರಲ್ಲಿ ನೀವು ಫೇಲ್ ಆಗಿದ್ದೀರಲ್ಲಾ ಎಂದು ಹೇಳುತ್ತಿದ್ದೇನೆ.. ನಿಮ್ಮ ಸರ್ಕಾರ ಅಷ್ಟೇ ಅಲ್ಲ, ಕೇಂದ್ರದಲ್ಲಿ ಒಂದು ಸರ್ಕಾರ ಇದೆ.

ಅವರು ಏನಾದರೂ ಕಣ್ಣುಮುಚ್ಚಿಕೊಂಡು ಕುಳಿತಿದ್ದರೇ? ನಾನು ದೆಹಲಿಗೆ ಹೋದಾಗ ಅವರು ನನ್ನನ್ನು ಕರೆಯಲಿಲ್ಲ, ಮಾತನಾಡಿಸಲಿಲ್ಲ, ಅದರ ಬಗ್ಗೆ ನನಗೇನೂ ಕೋಪವಿಲ್ಲ. ಅದನ್ನು ನಾನು ಎಕ್ಸ್‌ಪೆಕ್ಟ್ ಮಾಡುವುದೂ ಇಲ್ಲ, ಇದಕ್ಕೆ ನನಗೆ ಬೇಸರ ಕೂಡ ಇಲ್ಲ. ಇಲ್ಲಿರುವಂಥ ಪ್ರಶ್ನೆ ಏನೆಂದರೆ, ನಮ್ಮ ರಾಜ್ಯದಲ್ಲಿ ಇಷ್ಟೊಂದು ದೊಡ್ಡ ಪ್ರವಾಹ ಆಗಿರುವಂಥ ಸಂದರ್ಭದಲ್ಲಿ, ನಮ್ಮ ಜನಗಳು ಸಂಕಷ್ಟದಲ್ಲಿ ಸಿಕ್ಕಿರುವಂಥ ಸಂದರ್ಭದಲ್ಲಿ, ನಿಮ್ಮ ಸರ್ಕಾರ, ಚುನಾಯಿತ ಲೋಕಸಭಾ ಸದಸ್ಯರು ಒಂದು ಸಾರಿ ಬಂದು ಏನು ಹಾನಿಯಾಗಿದೆ, ಎಷ್ಟು ಲುಕ್ಸಾನಾಗಿದೆ, ಇದನ್ನು

ಕೊಡಲು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೀರಾ ಎಂದು ಕೇಳುವ ಸೌಜನ್ಯ ಕೂಡ ಇಲ್ಲವಾಯಿತಲ್ಲಾ ಎಂದು ಹೇಳುತ್ತಿದ್ದೇನೆ. ಸುಮ್ಮನೆ ನಿಮ್ಮ ವಾದವನ್ನು ಏಕೆ ಡಿಫೆಂಡ್ ಮಾಡಿಕೊಳ್ಳುತ್ತೀರಿ? ಅದನ್ನು ಬಿಟ್ಟು ಬಿಡಿ.

ಶ್ರೀ ಆರ್.ಎಲ್. ಜಾಲಪ್ಪ : ಅವರಿಗೆ ಪುರಸೊತ್ತಿಲ್ಲ, ಲೀಡರ್ ಶಿಪ್ ಚೇಂಜ್ ಮಾಡುವುದರಲ್ಲಿ ಅವರು ತುಂಬಾ ಬಿಜಿಯಾಗಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ : ಇಷ್ಟು ಹೇಳುತ್ತಾ, ಇನ್ನು ಹೆಚ್ಚು ಹೇಳುವ ಅವಶ್ಯಕತೆ ಇಲ್ಲವೆಂದು ನಾನು ಭಾವಿಸುತ್ತೇನೆ. ನಾನು ಮಾತನಾಡಬೇಕಾದರೆ ತಾಲ್ಲೂಕ್ ವೈಸ್, ಜಿಲ್ಲಾವೈಸ್ ಡೀಟೈಲ್ಸನ್ನು ಹೇಳಬೇಕಾದರೆ, ಇನ್ನೂ ಎರಡು ದಿವಸ ಬೇಕಾಗುತ್ತದೆ. ನಾನು ನನ್ನ ಶಕ್ತಿಮೀರಿ ಕಷ್ಟದಲ್ಲಿರುವಂಥ ಹಾಗೂ ನೊಂದಿರುವಂಥ ಜನರಿಗೆ ಸಹಾಯ ಮಾಡುವಂಥ ಸರ್ವ ಪ್ರಯತ್ನವನ್ನು ಮಾಡುತ್ತೇನೆ. ಇನ್ನು ಎರಡು ಮೂರು ದಿನಗಳಲ್ಲಿ ಪುನಃ ಮೂರು ಕೋಟಿ ರೂ.ಗಳನ್ನು ಬಿಡುಗಡೆ ಮಾಡಿ ಯಾರ್ಯಾರು ತೊಂದರೆಗೆ ಒಳಗಾಗಿದ್ದಾರೋ ಅಂಥವರಿಗೆ ಸಹಾಯ ಮಾಡುವಂಥ ಕೆಲಸವನ್ನು ಮಾಡುತ್ತೇನೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷಿಣಿಯವರು : ಮಾನ್ಯ ಆರೋಗ್ಯ ಸಚಿವರು....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮಂತ್ರಿಯವರು ಮಾತನಾಡುವ ಸಂದರ್ಭದಲ್ಲಿ ನಾನು ಬೇರೆ ಕಾರಣದಿಂದ ಸದನದಲ್ಲಿ ಇರಲಿಲ್ಲ. ಪ್ರವಾಹದಿಂದ ತೊಂದರೆಯಾದವರಿಗೆ ಪರಿಹಾರವನ್ನು ಕೊಡುವಂಥ ಕೆಲಸವನ್ನು ಮಾಡುತ್ತಿದ್ದಾರೆ. ಆದರೆ ಶಿವಮೊಗ್ಗ ಜಿಲ್ಲಾಧಿಕಾರಿಗಳ ಜೊತೆ ಚರ್ಚೆ ಮಾಡಿ ತೆಗೆದುಕೊಂಡಿರುವ ಬರಗಾಲ ಕಾಮಗಾರಿ ಕೆಲಸಗಳಿಗೆ ಇನ್ನೂ ಪೇಮೆಂಟ್ ಆಗಿಲ್ಲ. ಕೆಲಸ ಅರ್ಧಂಬರ್ಧದಲ್ಲಿ ನಿಂತಿದೆ. ಇದರ ಬಗ್ಗೆ ತನಿಖೆ ಮಾಡಿಸಿ ವರದಿಯನ್ನು ತರಿಸಿಕೊಂಡ ಮೇಲೆ, ತೃಪ್ತಿಯಾದ ಮೇಲೆ, ಆಗಿರುವಂಥ ಕೆಲಸಕ್ಕಾದರೂ ಪೇಮೆಂಟ್ ಮಾಡಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

(ಉಪಾಧ್ಯಕ್ಷಿಣಿಯವರು ಪೀಠದಲ್ಲಿ ಉಪಸ್ಥಿತರಿದ್ದರು)

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷಿಣಿಯವರೇ, ನಾವು ಯಾವುದನ್ನು ಪ್ರಸ್ತಾಪ ಮಾಡಿದ್ದೇವೆ, ಅದಕ್ಕೆ ಉತ್ತರ ಬರಲಿಲ್ಲ, ನಾನು ಪ್ರಸ್ತಾಪ ಮಾಡಿರತಕ್ಕಂಥಾದ್ದು ಬಹಳ ಮುಖ್ಯವಾಗಿ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟಂತೆ ಅವರು ಉತ್ತರ ನೀಡಿದ್ದಾರೆ. ಆದರೆ ನೀರಾವರಿ ಇಲಾಖೆಗೆ ಸಂಬಂಧಪಟ್ಟಂತೆ ಉತ್ತರ ಕೊಡಲು ಮಂತ್ರಿಗಳಿಲ್ಲ. ಮಂತ್ರಿಗಳ ಉತ್ತರಕ್ಕೆ ನಾವಿನ್ನು ಎಷ್ಟು ದಿವಸಗಳು ಕಾಯಬೇಕು? ನಾವು ಕೇಳುತ್ತಿರತಕ್ಕಂಥಾದ್ದು, ಮುಖ್ಯವಾಗಿ ಒಂದು ಜ್ಯುಡಿಷಿಯಲ್ ತನಿಖೆಯಾಗಬೇಕು. ಅದನ್ನು ಅವರು ಮಾಡುವುದಕ್ಕೆ ತಯಾರಾಗಿಲ್ಲ, ನೀರಾವರಿ ಮಂತ್ರಿಗಳು ಬರುವ ತನಕ ನಾವು ಕಾಯುತ್ತಿರಬೇಕೇ? ನಾವು ಆ ಕೆಲಸ ಮಾಡುವುದಕ್ಕೆ ಇಲ್ಲಿ ಬಂದಿಲ್ಲ. ನಿಮಗೆ ನಾನು ಹೇಳುತ್ತಿದ್ದೇನೆ. ನೀವು ಸೆಮಿ-ಮಲೆನಾಡಿನಿಂದ ಬರತಕ್ಕಂಥವರು. ನಮಗೆ ಇದರಲ್ಲಿ ಆಗಿರತಕ್ಕಂಥ ಅನ್ಯಾಯ ಅಷ್ಟಿಷ್ಟಲ್ಲ. ರೈತರು ಒಂದು ದೊಡ್ಡ ಹಿಂಸೆಯಿಂದ ನರಳುತ್ತಿದ್ದಾರೆ. ನಿಮ್ಮ ಅಧಿಕಾರಿಗಳು ಮಾಡಿರತಕ್ಕಂಥ ಕೆಲಸದ ಜೊತೆಗೆ ಇರಿಗೇಷನ್ ಇಲಾಖೆಯವರು ತಪ್ಪು ಮಾಡಿದ್ದಾರೆ. ಆ ತಪ್ಪನ್ನು ಒಪ್ಪಿಕೊಳ್ಳುವುದಕ್ಕೆ ಅವರು ತಯಾರಾಗಿಲ್ಲ, ತಿದ್ದಿಕೊಳ್ಳುವುದಕ್ಕೂ ತಯಾರಾಗಿಲ್ಲ. ಈ ಉತ್ತರದಿಂದ ಸಮಾಧಾನವಾಗಿಲ್ಲ. ನನಗೆ ಸಮಾಧಾನವಾಗುತ್ತದೆಂದು ನಾವು ಏಳು ಘಂಟೆಯ ತನಕ ಕುಳಿತು ಉತ್ತರ ಕೇಳಿದೆವು. ನಿನ್ನೆ ಹೇಳಿದರು, ಇವೊತ್ತು ಉತರ ಕೊಡುತೇನೆಂದು.. ಈ ಪ್ರವತಿಯನು

ನಾನು ಪ್ರತಿಭಟಿಸಬೇಕಾಗುತ್ತದೆ. ನಾನು ಪ್ರತಿಭಟನೆ ಮಾಡುತ್ತಿದ್ದೇನೆ. ನಮ್ಮ ನಿರೀಕ್ಷೆಗೆ ತಕ್ಕ ಉತ್ತರ ಬಂದಿಲ್ಲ, ರೈತರ ಸಮಸ್ಯೆಗೆ ಪರಿಹಾರ ಮಾಡಿಲ್ಲ. ಆದುದರಿಂದ, ನಾನು ಈ ಸದನದಿಂದ ಹೊರಗಡೆ ಹೋಗುತ್ತಿದ್ದೇನೆ.

(ಈ ಸಮಯದಲ್ಲಿ ಶ್ರೀ ಡಿ.ಬಿ. ಚಂದ್ರೇಗೌಡರು, ಶ್ರೀ ಬಿ.ಹೆಚ್. ಬನ್ನಿಕೋಡ್ ರವರು, ಶ್ರೀ ಶಿವಾನಂದ ಹೆಚ್. ಕೌಜಲಗಿಯವರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಷ್ಟೆಲ್ಲಾ ಹೇಳಿ ಸಮಾಧಾನವಾಗಿಲ್ಲ ಎಂದರೆ ಅರ್ಥವೇನು?

ಉಪಾಧ್ಯಕ್ಷಿಣಿಯವರು : ನಿಮಗೆ ಏನು ಉತ್ತರ ಬೇಕೆಂಬುದನ್ನು ನಾಳೆ ದಿವಸ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳಿಂದ ಸ್ಟೇಟ್‌ಮೆಂಟ್ ಮಾಡಿಸೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಖರ್ಗೆಯವರು ಏನು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ, ಇದರ ಜೊತೆಗೆ ನಾನು ಬಹಳ ಮುಖ್ಯವಾಗಿ ಹೇಳಿದ್ದು, ಈ ತರಹ ಆದಾಗ ನೀವು ಒಂದು ಷಾಲಿಸಿ ಮಾಡಬೇಕು. ಅವರು ತನಿಖೆ ಮಾಡಿಲ್ಲ. ಬಹಳ ಮುಖ್ಯವಾಗಿ ನಾನು ಹೇಳುತ್ತಿರತಕ್ಕಂಥಾದ್ದು, ನಮ್ಮ ರಾಜ್ಯದಿಂದ ಕೇಂದ್ರ ಸರ್ಕಾರಕ್ಕೆ ಹೋಗಿರತಕ್ಕ ಮಂತ್ರಿಗಳು ಯಾರಿದ್ದಾರೆ, ಅವರ ಧೋರಣೆಯನ್ನು ನಾನು ಖಂಡಿಸುತ್ತಿದ್ದೇನೆ. ಅದಕ್ಕೋಸ್ಕರ ನಾನು ಸಭಾತ್ಯಾಗ ಮಾಡುತ್ತಿದ್ದೇನೆ. Atleast they should have come here.

(ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಸಭಾತ್ಯಾಗ ಮಾಡಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೆ, ಪ್ರವಾಹಕ್ಕೆ ಒಳಗಾದಂಥ ರೈತರಿಗೆ ಸಾಕಷ್ಟು ಪರಿಹಾರ ಕೊಟ್ಟಿಲ್ಲ. ಪರಿಹಾರ ಕೊಟ್ಟ ರೈತರನ್ನು ಉಳಿಸುವ ಕಳಕಳಿ ಸರ್ಕಾರಕ್ಕೆ ಇಲ್ಲ. ಇವೊತ್ತು ಇಪ್ಪತ್ತೇಳು ಕೋಟಿ ರೂಪಾಯಿಗಳನ್ನು ಇಡಲಾಗಿದೆ. ಸರ್ಕಾರದ ಮತ್ತೆ ಆ ಹಣಕ್ಕೆ ಸಾಕಷ್ಟು ಪರಿಹಾರ ಒದಗಿಸಿಕೊಡಬೇಕಾಗಿತ್ತು. ರಸ್ತೆಗಳು ರಿಪೇರಿಯಾಗಬೇಕಾಗಿತ್ತು. ಸತ್ತವರಿಗೆ ಕನಿಷ್ಟ ೨೫,೦೦೦ ರೂಪಾಯಿಗಳನ್ನು ಪರಿಹಾರ ಕೊಡಬೇಕಾಗಿತ್ತು. ರೈತರ ಹೊಲ ಗದ್ದೆಗಳು ಹಾಳಾಗಿದೆ. ಅವರಿಗೆ ಸರಿಯಾದ ನ್ಯಾಯವಾಗಿ ಒದಗಿಸಿಕೊಡುವಂಥ ಪ್ರಾಮಾಣಿಕ ಪ್ರಯತ್ನ ಮಾಡಿಲ್ಲ. ಆದುದರಿಂದ, ಈ ಸರ್ಕಾರದ ವೈಫಲ್ಯತೆಯನ್ನು ಪ್ರತಿಭಟನೆ ಮಾಡಿ, ಕೊಟ್ಟಿರತಕ್ಕಂಥ ಪರಿಹಾರ ಏನೇನೂ ಸಾಲದು ಎಂದು ಹೇಳುತ್ತಾ ನಾನು ಸದನದಿಂದ ವಾಕ್‌ಔಟ್ ಮಾಡುತ್ತಿದ್ದೇನೆ.

(ಶ್ರೀ ಬಿ.ಎಸ್. ಯಡಿಯೂರಪ್ಪ ಮತ್ತು ಶ್ರೀ ಕೆ.ಎಸ್. ಈಶ್ವರಪ್ಪನವರು ಸಭಾತ್ಯಾಗ ಮಾಡಿದರು)

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಒಂದು ಕ್ಲಾರಿಫಿಕೇಷನ್ ಕೇಳಬೇಕಾಗಿದೆ. ಬಾದಾಮಿ ತಾಲ್ಲೂಕಿನ ಕೆರೆ ಸಮಸ್ಯೆ ಇನ್ನು ಜೀವಂತವಾಗಿದೆ. ನಾನು ಈಗಲೂ ಪರಿಹಾರ ಕೇಳುತ್ತಿದ್ದೇನೆ. ಇದೇ ವರ್ಷದಲ್ಲಿ ಸುಮಾರು 120 ಕುಟುಂಬಗಳ ಭೂಮಿ ಸಂಪೂರ್ಣವಾಗಿ ಮುಳುಗಡೆಯಾಗಿದೆ. ಇದು ಹೊಸ ಕೆರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ನಾಲ್ಕು ವರ್ಷಗಳ ಹಿಂದೆ ಕಟ್ಟಿದ ಕೆರೆ. ನಾವು ಇವೊತ್ತು ಡಿ.ಸಿ.ಯವರಿಗೆ ಫೋನ್ ಮಾಡಿ ವರದಿ ತರಿಸಿದ್ದೇನೆ. ಬೇಕಾದರೆ ನೋಡಿ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ನಾನು ರೆವಿನ್ಯೂ ಅಧಿಕಾರಿಗಳಿಗೆ ರೈತರ ಪಟ್ಟಾಭೂಮಿ ಮುಳುಗಡೆಯಾಗಿದೆಯೆಂದು ರಿಪೋರ್ಟ್ ಕೊಟ್ಟಿದ್ದೇನೆ. ರೈತರು ಸಿಕ್ಕಾಪಟ್ಟೆ ಸಾಲ ಮಾಡಿ, ಸಬ್ ಮರ್ಸಿಬಲ್ ಪಂಪ್ ಸೆಟ್ ಹಾಕಿಸಿಕೊಂಡು ಬದುಕುತ್ತಿರುವಾಗ, ಭೂಮಿಯೆಲ್ಲಾ ಮುಳುಗಡೆಯಾಗಿ ಸಾಲ ತೀರಿಸುವುದಾದರೂ ಹೇಗೆ? ಅಲ್ಲದೆ, ಬೆಳೆಗಳು ಸಹಾ ಮುಳುಗಡೆಯಾಗಿದೆ. ಕ್ರಾಪ್ ಕಾಂಪನ್ಸೇಷನ್ ಆದರೂ ಮೊದಲು ಕೊಡುತ್ತೀರಾ?

ಉಪಾಧ್ಯಕ್ಷಿಣಿಯವರು : ಮಾನ್ಯ ಬಾಬಾಗೌಡರೇ, ಈಗ ಮಂತ್ರಿಗಳು ವಿವರವಾಗಿ ಉತ್ತರ ಕೊಟ್ಟಿದ್ದಾರೆ. ಮತ್ತೆ ನೀವು ಪ್ರತಿಯೊಂದು ವಿಷಯಕ್ಕೂ ಹೀಗೆ ಉತ್ತರ ಕೇಳುವುದು ಸಾಧ್ಯವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಈಗಾಗಲೇ ಅವರಿಗೆ ಎಷ್ಟು ಎಕರೆ ಮುಳುಗಡೆಯಾಗಿದೆ ಎನ್ನತಕ್ಕಂಥಾದ್ದರ ಬಗ್ಗೆ ರಿಪೋರ್ಟ್ ತರಿಸಿಕೊಂಡು ಅಕ್ವಿಸಿಷನ್ ಮಾಡಿಸುತ್ತೇನೆಂದು ಹೇಳಿದ್ದೇನೆ. ಹಾಗೆ ಹೇಳಿದ್ದರೂ ಸಮಾಧಾನವಾಗಿಲ್ಲ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ರೆವಿನ್ಯೂ ಅಧಿಕಾರಿಗಳ ರಿಪೋರ್ಟ್ ಕೊಟ್ಟಿದೆ. ಬೆಳೆ ಪರಿಹಾರ ಕೊಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಾನೂನಿನ ಪ್ರಕಾರ ಈಗ ಇರತಕ್ಕಂಥ ಗೈಡ್ ಲೈನ್ಸ್ ಪ್ರಕಾರ ಬೇರೆಯವರಿಗೆ ಏನು ಕೊಡುತ್ತೇವೆ, ಅದರಲ್ಲಿ ಬರತಕ್ಕಂಥಾದ್ದು ಏನೇನಿದೆ, ಅದನ್ನು ಕೊಡಿಸಿಕೊಡುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ : ಉಪಸಭಾಧ್ಯಕ್ಷಿಣಿಯವರೇ, ಈಗ ವಾರ್ಷಿಕ ವರಮಾನವು 6400 ಇರತಕ್ಕವರಿಗೆ they are not eligible for any relief ಎಂದು ಹೇಳಿದ್ದಾರೆ. ಆಮೇಲೆ ಜಿಲ್ಲಾಧಿಕಾರಿಗಳಿಗೆ ಇರತಕ್ಕ ಅಧಿಕಾರ ಕೇವಲ 1750ರ ವರೆಗೆ ಮಾತ್ರ. ಇದು ಯಾವುದೋ ಕಾಲಕ್ಕೆ ಸರಿಯಾಗಿರಬಹುದು. ಆದರೆ ಈ ದಿನ ದರಗಳಿಗೆ ಅನುಗುಣವಾಗಿ ಅದನ್ನು ಹೆಚ್ಚಿಸುತ್ತೀರಾ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ಅದು ಒಳ್ಳೆಯ ಸಲಹೆ, ಅದನ್ನು ಪರಿಶೀಲನೆ ಮಾಡುತ್ತೇನೆ.

ಉಪಾಧ್ಯಕ್ಷಿಣಿಯರು : ಸಭೆಯು ಈಗ ಮುಕ್ತಾಯಗೊಳ್ಳುತ್ತದೆ.

ಸದನವು 7-03ಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 27-9-91ರಂದು ಬೆಳಿಗ್ಗೆ 9-00 ಘಂಟೆಗೆ ಸೇರಲು ತೀರ್ಮಾನಿಸಿತು.

(+ ಈ ... ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂ...

KSA LIBRARY, B'lore
B020612
328.32402 548 LAD,1991
JJ47